~~Osmania University Library.~~
Salar Jung Memorial Collection
Accession No. 24017
Call No. 220.5
AUX

24017
Christianity

E 1136

THE

# HOLY BIBLE,

CONTAINING THE

## OLD AND NEW TESTAMENTS;

TRANSLATED OUT OF THE

ORIGINAL TONGUES INTO CANARESE.

BY A COMMITTEE OF MISSIONARIES OF THE GERMAN, LONDON, AND WESLEYAN MISSIONARY SOCIETIES;

FOR

The Madras Auxiliary Bible Society.

ಹಳೆ ಹೊಸ ಒಡಂಬಡಿಕೆಗಳು ಅಡಗಿರುವ

# ಸತ್ಯ ವೇದ.

BANGALORE:

PRINTED FOR THE MADRAS AUXILIARY BIBLE SOCIETY,
AT THE WESLEYAN MISSION PRESS.
1860.

(11)

220.5
AUX

Salar Jung Library
WESTERN
SECTION.



## THE BOOKS OF THE OLD TESTAMENT.

### ಹಳೇ ಒಡಂಬಡಿಕೆಯ ಪುಸ್ತುಕಗಳ ಕ್ರಮವು.

| | ಸಂಧಿಗಳು. |
|---|---|
| ಉತ್ಪತ್ತಿ | ೫೦. |
| ಹೊರಪೋಣವು | ೪೦. |
| ಲೇವಿಕವು | ೨೭. |
| ಅಂಕೆಗಳು | ೩೬. |
| ದ್ವಿತೀಯ ನ್ಯಾಯವು | ೩೪. |
| ಯೆಹೋಶುವನು | ೨೪. |
| ನ್ಯಾಯಾಧಿಪತಿಗಳು | ೨೧. |
| ರೂತಳು | ೪. |
| ೧ ಸಮುವೇಲನು | ೩೧. |
| ೨ ಸಮುವೇಲನು | ೨೪. |
| ೧ ಅರಸುಗಳು | ೨೨. |
| ೨ ಅರಸುಗಳು | ೨೫. |
| ೧ ದಿನಚರ್ಯೆಗಳು | ೨೯. |
| ೨ ದಿನಚರ್ಯೆಗಳು | ೩೬. |
| ಎಜ್ರನು | ೧೦. |
| ನೆಹೆಮಿಾಯನು | ೧೩. |
| ಎಸ್ತೇರಳು | ೧೦. |
| ಯೋಬನು | ೪೨. |
| ಕೀರ್ತನೆಗಳು | ೧೫೦. |
| ಸಾಮತಿಗಳು | ೩೧. |

| | ಸಂಧಿಗಳು. |
|---|---|
| ಪ್ರಸಂಗಿ | ೧೨. |
| ಸೊಲೊಮೋನನ ಗೀತವು | ೮. |
| ಯೆಶಾಯನು | ೬೬. |
| ಯೆರೆಮಿಾಯನು | ೫೨. |
| ಗೋಳಾಟಗಳು | ೫. |
| ಎಜೇಕಿಯೇಲನು | ೪೮. |
| ದಾನಿಯೇಲನು | ೧೨. |
| ಹೋಶೇಯನು | ೧೪. |
| ಯೋವೇಲನು | ೩. |
| ಆಮೋಸನು | ೯. |
| ಒಬದೀಯನು | ೧. |
| ಯೋನನು | ೪. |
| ಮಿಾಕನು | ೭. |
| ನಹೂಮನು | ೩. |
| ಹಬಕೂಕನು | ೩. |
| ಜೆಫನೀಯನು | ೩. |
| ಹಗ್ಗಾಯನು | ೨. |
| ಜೆಕರೀಯನು | ೧೪. |
| ಮಲಕೀಯನು | ೪. |

## THE BOOKS OF THE NEW TESTAMENT.

### ಹೊಸ ಒಡಂಬಡಿಕೆಯ ಪುಸ್ತುಕಗಳ ಕ್ರಮವು.

| | ಸಂಧಿಗಳು. |
|---|---|
| ಮತ್ತಾಯನು | ೨೮. |
| ಮಾರ್ಕನು | ೧೬. |
| ಲೂಕನು | ೨೪. |
| ಯೋಹಾನನು | ೨೧. |
| ಅಪೊಸ್ತಲರ ಕ್ರಿಯೆಗಳು | ೨೮. |
| ರೋಮಾಯರಿಗೆ ಬರೆದ ಪತ್ರಿಕೆ | ೧೬. |
| ೧ ಕೊರಿಂಥ್ಯರಿಗೆ | ೧೬. |
| ೨ ಕೊರಿಂಥ್ಯರಿಗೆ | ೧೩. |
| ಗಲಾತ್ಯರಿಗೆ | ೬. |
| ಎಫೆಸ್ಯರಿಗೆ | ೬. |
| ಫಿಲಿಪ್ಪಿಯರಿಗೆ | ೪. |
| ಕೊಲೊಸ್ಸೆಯರಿಗೆ | ೪. |
| ೧ ಥೆಸ್ಸಲೊನೀಕ್ಯರಿಗೆ | ೫. |
| ೨ ಥೆಸ್ಸಲೊನೀಕ್ಯರಿಗೆ | ೩. |

| | ಸಂಧಿಗಳು. |
|---|---|
| ೧ ತಿಮೊಥೆಯನಿಗೆ | ೬. |
| ೨ ತಿಮೊಥೆಯನಿಗೆ | ೪. |
| ತೀತನಿಗೆ | ೩. |
| ಫಿಲೆಮೋನನಿಗೆ | ೧. |
| ಇಬ್ರೀಯರಿಗೆ | ೧೩. |
| ಯಾಕೋಬನು | ೫. |
| ೧ ಪೇತ್ರನು | ೫. |
| ೨ ಪೇತ್ರನು | ೨. |
| ೧ ಯೋಹಾನನು | ೫. |
| ೨ ಯೋಹಾನನು | ೧. |
| ೩ ಯೋಹಾನನು | ೧. |
| ಯೂದನು | ೧. |
| ಪ್ರಕಟಣೆ | ೨೨. |

# GENESIS.

## ಉತ್ಪತ್ತಿ.

### ೧. ಸಂಧಿ.

೧ ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಸೃಷ್ಟಿಸಿದನು.

೨ ಭೂಮಿಯು ಹಾಳಾಗಿಯೂ ಬರಿದಾಗಿಯೂ ಇತ್ತು; ಅಗಾಧದ ಮೇಲೆ ಕತ್ತಲು ಇತ್ತು. ದೇವರ ಆತ್ಮವು ನೀರುಗಳ ಮೇಲೆ ಚಲಿಸುತ್ತಿತ್ತು.

೩ ೪ ಆಗ ದೇವರು ಬೆಳಕಾಗಲಿ ಅನ್ನಲು, ಬೆಳಕಾಯಿತು. ಮತ್ತು ದೇವರು ಆ ಬೆಳಕು ಒಳ್ಳೇದೆಂದು ನೋಡಿದನು; ಮತ್ತು ದೇವರು ಬೆಳಕನ್ನೂ ಕತ್ತಲನ್ನೂ ಬೇರೆ ಬೇರೆ ಮಾಡಿದನು;

೫ ಮತ್ತು ದೇವರು ಬೆಳಕಿಗೆ ಹಗಲೆಂದೂ ಕತ್ತಲೆಗೆ ರಾತ್ರಿ ಎಂದೂ ಹೆಸರಿಟ್ಟನು; ಹಾಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ, ಮೊದಲನೇ ದಿವಸವಾಯಿತು.

೬ ಆಗ ದೇವರು ನೀರುಗಳ ನಡುವೆ ವಿಶಾಲ ಉಂಟಾಗಿ, ನೀರು

೭ ಗಳಿಂದ ನೀರುಗಳನ್ನು ಬೇರೆ ಮಾಡಲಿ, ಅಂದನು. ಮತ್ತು ದೇವರು ವಿಶಾಲವನ್ನು ಉಂಟು ಮಾಡಿ, ವಿಶಾಲದ ಕೆಳಗಿರುವ ನೀರುಗಳನ್ನೂ, ವಿಶಾಲದ ಮೇಲಿರುವ ನೀರುಗಳನ್ನೂ ಬೇರೆ ಮಾಡಿ

೮ ದನು; ಅದು ಹಾಗೆ ಆಯಿತು. ಮತ್ತು ದೇವರು ವಿಶಾಲಕ್ಕೆ ಆಕಾಶವೆಂದು ಹೆಸರಿಟ್ಟನು. ಹಾಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ, ಎರಡನೇ ದಿವಸವಾಯಿತು.

೯ ಆಗ ದೇವರು ಆಕಾಶದ ಕೆಳಗಿರುವ ನೀರುಗಳು ಒಂದು ಸ್ಥಳದಲ್ಲಿ ಕೂಡಲಿ, ಒಣ ನೆಲ ಕಾಣಲ್ಪಡಲಿ, ಅಂದನು. ಅದು ಹಾ

೧೦ ಗೇ ಆಯಿತು. ಮತ್ತು ದೇವರು ಒಣ ನೆಲಕ್ಕೆ ಭೂಮಿಯೆಂದೂ, ನೀರುಗಳ ಕೂಟಕ್ಕೆ ಸಮುದ್ರಗಳೆಂದೂ ಹೆಸರಿಟ್ಟನು.

೧೧ ಮತ್ತು ದೇವರು ಅದು ಒಳ್ಳೇದೆಂದು ನೋಡಿದನು. ತರುವಾಯ ದೇವರು ಭೂಮಿಯ ಹುಲ್ಲನ್ನೂ, ಬೀಜ ಕೊಡುವ ಪಲ್ಯವನ್ನೂ, ತಮ್ಮೊಳಗೆ ಬೀಜ ಉಂಟಾಗಿರುವಂಥ, ತಮ್ಮ ಜಾತಿಯ ಪ್ರಕಾರ ಫಲಫಲಿಸುವ ಫಲ ಮರಗಳನ್ನೂ ಭೂಮಿಯು ಹೊಳಿಸಲಿ, ಎಂ

೧೨ ದು ಹೇಳಿದನು. ಅದು ಹಾಗೆಯೇ ಆಯಿತು. ಭೂಮಿಯು ಹುಲ್ಲನ್ನೂ, ತನ್ನ ಜಾತಿಯ ಪ್ರಕಾರ ಬೀಜವನ್ನು ಉಂಟು ಮಾಡುವ ಪಲ್ಯವನ್ನೂ, ತಮ್ಮ ಜಾತಿಯ ಪ್ರಕಾರ ತಮ್ಮೊಳಗೆ ಬೀಜ ಉಂಟಾಗಿರುವಂಥ, ಫಲಫಲಿಸುವ ಮರಗಳನ್ನೂ ಹೊರಗೆ ಬರ ಮಾಡಿತು; ಮತ್ತು ದೇವರು ಅದು ಒಳ್ಳೇದೆಂದು ನೋಡಿದನು.

೧೩ ಹಾಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ, ಮೂರನೇ ದಿವಸವಾಯಿತು.

೧೪ ಮತ್ತು ದೇವರು ಹಗಲನ್ನೂ ರಾತ್ರಿಯನ್ನೂ ಬೇರೆ ಮಾಡುವದಕ್ಕೆ ಆಕಾಶ ವಿಶಾಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಗುರುತುಗಳಿಗೋಸ್ಕರವೂ, ಸಮಯಗಳಿಗೋಸ್ಕರವೂ, ದಿವಸಗ

೧೫ ಳಿಗೋಸ್ಕರವೂ, ವರ್ಷಗಳಿಗೋಸ್ಕರವೂ ಇರಲಿ; ಅವು ಭೂಮಿಯ ಮೇಲೆ ಬೆಳಕು ಕೊಡುವದಕ್ಕೆ ಆಕಾಶ ವಿಶಾಲದಲ್ಲಿ ಬೆಳ

೧೬ ಕುಗಳಾಗಿರಲಿ, ಅಂದನು. ಅದು ಹಾಗೆಯೇ ಆಯಿತು. ಮತ್ತು ದೇವರು ಹಗಲಾಳುವದಕ್ಕೆ ದೊಡ್ಡ ಬೆಳಕನ್ನೂ, ರಾತ್ರಿ ಆಳುವದಕ್ಕೆ ಸಣ್ಣ ಬೆಳಕನ್ನೂ, ಆ ಎರಡು ದೊಡ್ಡ ಬೆಳಕುಗಳನ್ನೂ,

೧೭ ನಕ್ಷತ್ರಗಳನ್ನೂ ಸಹ ಉಂಟು ಮಾಡಿದನು. ಭೂಮಿಯ ಮೇಲೆ ಬೆಳಕು ಕೊಡುವದಕ್ಕೂ, ಹಗಲನ್ನೂ ರಾತ್ರಿಯನ್ನೂ ಆಳು

೧೮ ವದಕ್ಕೂ, ಬೆಳಕನ್ನೂ ಕತ್ತಲನ್ನೂ ಬೇರೆ ಮಾಡುವದಕ್ಕೂ, ದೇವರು ಅವುಗಳನ್ನು ಆಕಾಶ ವಿಶಾಲದಲ್ಲಿ ಇಟ್ಟನು; ಮತ್ತು ದೇ

೧೯ ವರು ಅದು ಒಳ್ಳೇದೆಂದು ನೋಡಿದನು. ಹಾಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ, ನಾಲ್ಕನೇ ದಿವಸವಾಯಿತು.

೨೦ ಮತ್ತು ದೇವರು ನೀರುಗಳು ಹರಿದಾಡುವ ಜೀವ ಜಂತುಗಳಿಂದ ತುಂಬಲಿ; ಪಕ್ಷಿಗಳು ಭೂಮಿಯ ಮೇಲೆ ಆಕಾಶ ವಿಶಾಲದಲ್ಲಿ ಹಾ

೨೧ ರಲಿ, ಅಂದನು. ಆಗ ದೇವರು ಸಮುದ್ರದ ಮಹಾ ಮೀನುಗಳನ್ನೂ, ನೀರಿನಲ್ಲಿ ತುಂಬಿರುವಂಥ, ತಮ್ಮ ತಮ್ಮ ಜಾತಿಗಳ ಪ್ರಕಾರ ಹರಿದಾಡುವಂಥ, ಎಲ್ಲಾ ಜೀವ ಜಂತುಗಳನ್ನೂ, ಆ ಆ ಜಾತಿಗಳ ಪ್ರಕಾರವಾದ ಎಲ್ಲಾ ಪಕ್ಷಿಗಳನ್ನೂ ಸೃಷ್ಟಿಸಿದನು; ಮತ್ತು ದೇವ

೨೨ ರು ಅದು ಒಳ್ಳೇದೆಂದು ನೋಡಿದನು. ಆಗ ದೇವರು ಅವುಗಳನ್ನು ಆಶೀರ್ವದಿಸಿ, ನೀವು ಅಭಿವೃದ್ಧಿಯಾಗಿ, ಹೆಚ್ಚಿ, ಸಮುದ್ರದ ನೀರಲ್ಲಿ ತುಂಬಿರಿ; ಪಕ್ಷಿಗಳು ಭೂಮಿಯಲ್ಲಿ ಹೆಚ್ಚಲಿ, ಅಂದ

೨೩ ನು. ಹಾಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ, ಐದನೇ ದಿವಸವಾಯಿತು.

೨೪ ಮತ್ತು ದೇವರು ಆ ಆ ಜಾತಿಯ ಪ್ರಕಾರವಾದ ಜೀವ ಜಂತುಗಳನ್ನೂ, ಆ ಆ ಜಾತಿಯ ಪ್ರಕಾರವಾದ ಪಶುಗಳನ್ನೂ, ಕ್ರಿಮಿಗಳನ್ನೂ, ಭೂಮಿಯ ಮೃಗಗಳನ್ನೂ, ಭೂಮಿಯು ಹೊ

೨೫ ರಗೆ ಬರ ಮಾಡಲಿ, ಅಂದನು; ಅದು ಹಾಗೆಯೇ ಆಯಿತು. ಮತ್ತು ದೇವರು ಭೂಮಿಯ ಮೃಗಗಳನ್ನು ಅವುಗಳ ಜಾತಿಯ ಪ್ರಕಾರವೂ, ಪಶುಗಳನ್ನು ಅವುಗಳ ಜಾತಿಯ ಪ್ರಕಾರವೂ, ಭೂಮಿಯ ಎಲ್ಲಾ ಕ್ರಿಮಿಗಳನ್ನು ಅವುಗಳ ಜಾತಿಯ ಪ್ರಕಾರವೂ ಉಂಟು ಮಾಡಿದನು; ಮತ್ತು ದೇವರು ಅದು ಒಳ್ಳೇದೆಂದು ನೋಡಿ

೨೬ ದನು. ಮತ್ತು ದೇವರು ಹೇಳಿದ್ದೇನಂದರೆ—ನಮ್ಮ ರೂಪವಾಗಿ, ನಮ್ಮ ಹೋಲಿಕೆಯ ಹಾಗೆ ಮನುಷ್ಯರನ್ನು ಉಂಟು ಮಾಡುವ; ಅವರು ಸಮುದ್ರದ ಮೀನುಗಳನ್ನೂ, ಆಕಾಶದ ಪಕ್ಷಿಗಳನ್ನೂ, ಪಶುಗಳನ್ನೂ, ಎಲ್ಲಾ ಭೂಮಿಯನ್ನೂ, ಭೂಮಿಯ ಮೇಲೆ

೨೭ ಹರಿದಾಡುವ ಎಲ್ಲಾ ಕ್ರಿಮಿಗಳನ್ನೂ, ಆಳಲಿ. ಮತ್ತು ದೇವರು ಮನುಷ್ಯನನ್ನು ತನ್ನ ರೂಪವಾಗಿ ಸೃಷ್ಟಿಸಿದನು, ದೇವರ ರೂಪವಾಗಿ ಅವನನ್ನು ಸೃಷ್ಟಿಸಿದನು, ಗಂಡು ಹೆಣ್ಣಾಗಿ ಅವರನ್ನು ಸೃ

೨೮ ಷ್ಟಿಸಿದನು. ಮತ್ತು ದೇವರು ಅವರನ್ನು ಆಶೀರ್ವದಿಸಿದನು. ಅವರಿಗೆ ದೇವರು ಹೇಳಿದ್ದೇನಂದರೆ—ಅಭಿವೃದ್ಧಿಯಾಗಿ, ಹೆಚ್ಚಿರಿ; ಭೂಮಿಯನ್ನು ತುಂಬಿ, ವಶ ಮಾಡಿ ಕೊಳ್ಳಿರಿ; ಸಮುದ್ರದ ಮೀನುಗಳನ್ನೂ, ಆಕಾಶದ ಪಕ್ಷಿಗಳನ್ನೂ, ಭೂಮಿಯಲ್ಲಿ ಹರಿದಾಡುವ ಎಲ್ಲಾ ಜಂತುಗಳನ್ನೂ, ಆಳಿರಿ.

೨೯ ಮತ್ತು ದೇವರು—ಇಗೋ, ಸಮಸ್ತ ಭೂಮಿಯ ಮೇಲೆ ಇರುವಂಥ, ಬೀಜವನ್ನು ಉಂಟು ಮಾಡುವಂಥ ಎಲ್ಲಾ ಪಲ್ಯಗಳನ್ನೂ,

ಬೀಜವನ್ನು ಉಂಟು ಮಾಡುವ ಮರದ ಫಲ ಉಂಟಾಗಿರುವಂಥ
ಎಲ್ಲಾ ಮರಗಳನ್ನೂ ನಿಮಗೆ ಕೊಟ್ಟಿದ್ದೇನೆ; ನಿಮಗೆ ಅವು ಆಹಾ
೩೦ ರಕ್ಕಾಗಿರುವವು. ಮತ್ತು ಭೂಮಿಯ ಎಲ್ಲಾ ಮೃಗಗಳಿಗೂ, ಆ
ಕಾಶದ ಎಲ್ಲಾ ಪಕ್ಷಿಗಳಿಗೂ, ಜೀವಿಸುವ ಪ್ರಾಣಿ ಉಂಟಾಗಿ ಭೂ
ಮಿಯ ಮೇಲೆ ಹರಿದಾಡುವ ಸಮಸ್ತಕ್ಕೂ ಎಲ್ಲಾ ಹಸರಾದ ಪಲ್ಯ
ಗಳನ್ನೂ ಆಹಾರಕ್ಕಾಗಿ ಕೊಟ್ಟಿದ್ದೇನೆ, ಅಂದನು. ಅದು ಹಾಗೆ
ಯೇ ಆಯಿತು. ಮತ್ತು ದೇವರು ತಾನು ಮಾಡಿದ್ದೆಲ್ಲಾ ನೋಡಲಾ
೩೧ ಗಿ, ಇಗೋ, ಅದು ಬಹು ಬಳ್ಳೇದಾಗಿತ್ತು—ಹಾಗೆ ಸಾಯಂಕಾಲ
ವೂ ಪ್ರಾತಃಕಾಲವೂ ಆಗಿ, ಆರನೇ ದಿವಸವಾಯಿತು.

## ೨. ಸಂಧಿ.

೧ ಹೀಗೆ ಆಕಾಶವೂ, ಭೂಮಿಯೂ, ಅವುಗಳ ಸೈನ್ಯವೆಲ್ಲವೂ
೨ ಪೂರ್ಣವಾಗಲಾಗಿ, ದೇವರು ಏಳನೇ ದಿವಸದಲ್ಲಿ ತಾನು ಮಾಡು
ವ ಕೆಲಸವನ್ನು ಪೂರ್ಣ ಮಾಡಿ, ಏಳನೇ ದಿವಸದಲ್ಲಿ ತಾನು
3 ಮಾಡಿದ ಕೆಲಸವೆಲ್ಲಾ ಬಿಟ್ಟು, ವಿಶ್ರಮಿಸಿ ಕೊಂಡನು. ಮತ್ತು ದೇ
ವರು ಏಳನೇ ದಿವಸವನ್ನು ಆಶೀರ್ವದಿಸಿ, ತಾನು ಉಂಟು ಮಾ
ಡಿ ಸೃಷ್ಟಿಸಿದ ತನ್ನ ಕೆಲಸವೆಲ್ಲಾ ಬಿಟ್ಟು, ಅದರಲ್ಲಿ ವಿಶ್ರಮಿಸಿ
ಕೊಂಡದರಿಂದ, ಅದನ್ನು ಪರಿಶುದ್ಧ ಮಾಡಿದನು.

೪ ಆಕಾಶವೂ ಭೂಮಿಯೂ ಸೃಷ್ಟಿಯಾದ ಚರಿತ್ರೆ ಇದೇ—
ಕರ್ತನಾದ ದೇವರು ಭೂಮಿಯನ್ನೂ ಆಕಾಶವನ್ನೂ ಉಂಟು
೫ ಮಾಡಿದ ದಿವಸದಲ್ಲಿ, ಹೊಲದ ಯಾವ ಗಿಡವಾದರೂ ಇನ್ನೂ
ಭೂಮಿಯಲ್ಲಿ ಇದ್ದಿಲ್ಲ; ಹೊಲದ ಯಾವ ಪಲ್ಯವಾದರೂ ಇ
ನ್ನೂ ಮೊಳೆಯಲಿಲ್ಲ; ಯಾಕಂದರೆ ಕರ್ತನಾದ ದೇವರು ಭೂ
ಮಿಯ ಮೇಲೆ ಮಳೆ ಗರಿಸಲಿಲ್ಲ, ಮತ್ತು ಭೂಮಿಯನ್ನು ಸೇವ
೬ ಸಾಯ ಮಾಡುವದಕ್ಕೆ ಮನುಷ್ಯನು ಇರಲಿಲ್ಲ; ಆದರೆ ಭೂ
ಮಿಯೊಳಗಿಂದ ಮಂಜು ಏರಿ ಬಂದು, ಭೂಮುಖವನ್ನೆಲ್ಲಾ
೭ ತೋಯಿಸುತ್ತಿತ್ತು.
ಮತ್ತು ಕರ್ತನಾದ ದೇವರು ಭೂಮಿಯ ಮಣ್ಣಿನಿಂದ ಮ
ನುಷ್ಯನನ್ನು ರೂಪಿಸಿ, ಅವನ ಮೂಗಿನಲ್ಲಿ ಜೀವದ ಉಸುರು
ಊದಿದನು; ಆಗ ಮನುಷ್ಯನು ಜೀವಿಸುವ ಪ್ರಾಣಿವಾದನು.

೮ ಮತ್ತು ಕರ್ತನಾದ ದೇವರು ಏದೆನಿನಲ್ಲಿ ಪೂರ್ವ ದಿಕ್ಕಿಗೆ
ತೋಟವನ್ನು ನೆಟ್ಟು, ತಾನು ರೂಪಿಸಿದ ಮನುಷ್ಯನನ್ನು ಅದ
೯ ರಲ್ಲಿ ಇಟ್ಟನು. ಮತ್ತು ಕರ್ತನಾದ ದೇವರು ನೋಟಕ್ಕೆ ರಮ್ಯ
ವಾದ ಊಟಕ್ಕೆ ಬಳ್ಳೆಯವುಗಳಾದ ಎಲ್ಲಾ ಮರಗಳನ್ನೂ,
ತೋಟದ ಮಧ್ಯದಲ್ಲಿ ಜೀವದ ಮರವನ್ನೂ, ಮೇಲು ಕೇಡುಗಳ
ತಿಳುವಿಕೆಯ ಮರವನ್ನೂ ಭೂಮಿಯೊಳಗಿಂದ ಮೊಳಿಸಿದನು.
೧೦ ಮತ್ತು ತೋಟವನ್ನು ತೋಯಿಸುವದಕ್ಕಿರುವ ನದಿಯು ಏದೆ
ನಿನೊಳಗಿಂದ ಹೊರಟು, ಅದರ ಆಜೆಯಲ್ಲಿ ಭಾಗಗಳಾಗಿ ನಾ
೧೧ ಲ್ಕು ಮುಖಗಳಾಯಿತು. ಬಂದರ ಹೆಸರು ಪೀಶೋನ್; ಅದು
ಹವಿಲಾ ದೇಶವನ್ನೆಲ್ಲಾ ಸುತ್ತುವಂಥಾದ್ದು; ಅದರಲ್ಲಿ ಭಂಗಾರ
೧೨ ಉಂಟು. ಆ ದೇಶದ ಭಂಗಾರವು ಬಳ್ಳೇದು; ಅದರಲ್ಲಿ ಬೆದೋ
೧೩ ಳಹೂ, ಗೋಮೇಧಿಕ ಕಲ್ಲೂ ಉಂಟು. ಮತ್ತು ಎರಡನೇ ನದಿ
ಯ ಹೆಸರು ಗೀಹೋನ್; ಅದು ಕೂಷ ದೇಶವನ್ನೆಲ್ಲಾ ಸುತ್ತು
೧೪ ವಂಥಾದ್ದು. ಮತ್ತು ಮೂರನೇ ನದಿಯ ಹೆಸರು ಹಿದ್ದೆಕೆಲ್; ಅ
ದು ಅಸ್ಯೂರಿಗೆ ಪೂರ್ವದಲ್ಲಿ ಹರಿಯುವಂಥಾದ್ದು. ಮತ್ತು ನಾ
ಲ್ಕನೇ ನದಿಯು ಫ್ರಾತು.

೧೫ ಆಗ ಕರ್ತನಾದ ದೇವರು ಮನುಷ್ಯನನ್ನು ಕರಕೊಂಡು,
ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯು
೧೬ ವದಕ್ಕೂ ಅದರಲ್ಲಿ ಇಟ್ಟನು. ಮತ್ತು ಕರ್ತನಾದ ದೇವರು ಮ
ನುಷ್ಯನಿಗೆ ಆಜ್ಞಾಪಿಸಿ ಹೇಳಿದ್ದೇನಂದರೆ—ತೋಟದ ಎಲ್ಲಾ ಮರ
೧೭ ಗಳಿಂದ ತಿನ್ನಬಹುದು; ಆದರೆ ಮೇಲು ಕೇಡುಗಳ ತಿಳುವಿಕೆಯ
ಮರದಿಂದ ತಿನ್ನಬಾರದು; ಯಾಕಂದರೆ ನೀನು ಅದರಿಂದ ತಿ
ನ್ನುವ ದಿವಸದಲ್ಲಿ ಸಾಯಲೇ ಸಾಯುವಿ.

೧೮ ಮತ್ತು ಕರ್ತನಾದ ದೇವರು—ಮನುಷ್ಯನು ಒಂಟಿಯಾಗಿರು
ವದು ಬಳ್ಳೇದಲ್ಲ; ಅವನಿಗೆ ತಕ್ಕ ಸಹಾಯವನ್ನು ಉಂಟು
೧೯ ಮಾಡುವೆನು, ಅಂದನು. ಮತ್ತು ಕರ್ತನಾದ ದೇವರು ಅಡವಿ
ಯ ಎಲ್ಲಾ ಮೃಗಗಳನ್ನೂ, ಆಕಾಶದ ಎಲ್ಲಾ ಪಕ್ಷಿಗಳನ್ನೂ ಮ
ಣ್ಣಿನಿಂದ ರೂಪಿಸಿ, ಆದಮನ ಬಳ್ಳಗೆ, ಅವುಗಳಿಗೆ ಏನು ಹೆಸರಿಡು
ವನೋ? ಎಂದು ನೋಡುವದಕ್ಕೆ ತಂದನು. ಮತ್ತು ಅವುಗಳಿಗೆ
೨೦ ಆದಮನು ಕರೆದದ್ದೇ ಆ ಜೀವಿಗಳಿಗೆ ಹೆಸರಾಯಿತು. ಮತ್ತು ಆ
ದಮನು ಎಲ್ಲಾ ಪಶುಗಳಿಗೂ, ಆಕಾಶದ ಪಕ್ಷಿಗಳಿಗೂ, ಅಡವಿಯ
ಎಲ್ಲಾ ಮೃಗಗಳಿಗೂ ಹೆಸರಿಡಲಾಗಿ, ಆದಮನಿಗೆ ತಕ್ಕ ಸಹಾ
ಯವು ಕಾಣಲ್ಪಡಲಿಲ್ಲ.

೨೧ ಆಗ ಕರ್ತನಾದ ದೇವರು ಆದಮನ ಮೇಲೆ ಗಾಢ ನಿದ್ದೆ ಬೀ
ಳ ಮಾಡಿದ್ದರಿಂದ, ಅವನು ನಿದ್ದೆ ಮಾಡಿದನು; ಆಗ ಅವನು ಅವನ
ಪಕ್ಕೆ ಎಲುವುಗಳಲ್ಲಿ ಒಂದನ್ನು ತಕ್ಕೊಂಡು, ಅದಕ್ಕೆ ಬದಲಾಗಿ
೨೨ ಮಾಂಸವನ್ನು ಮುಚ್ಚಿದನು. ಮತ್ತು ಕರ್ತನಾದ ದೇವರು ಆ
ದಮನಿಂದ ತಕ್ಕೊಂಡ ಪಕ್ಕೆ ಎಲುವನ್ನು ಸ್ತ್ರೀಯಾಗ ಮಾಡಿ,
೨೩ ಅವಳನ್ನು ಆದಮನ ಬಳ್ಳಗೆ ತಂದನು. ಆಗ ಆದಮನು—ಇವ
ಳು ಈಗ ನನ್ನ ಎಲುವುಗಳಿಂದ ತಕ್ಕೊಂಡ ಎಲುವೂ, ನನ್ನ
ಮಾಂಸದಿಂದ ತಕ್ಕೊಂಡ ಮಾಂಸವೂ ಆಗಿದ್ದಾಳೆ; ಇವಳು ಮ
ನುಷ್ಯನಿಂದ ತಕ್ಕೊಳ್ಳಲ್ಪಟ್ಟ ಕಾರಣ, ಮನುಷ್ಯಳೆಂದು ಹೇ
೨೪ ಳಲ್ಪಡುವಳು, ಅಂದನು. ಅದಕ್ಕೋಸ್ಕರ ಮನುಷ್ಯನು ತನ್ನ
ತಂದೆ ತಾಯಿಗಳನ್ನು ಬಿಟ್ಟು, ತನ್ನ ಹೆಂಡತಿಗೆ ಕೂಡಿ ಕೊಳ್ಳುವ
೨೫ ನು; ಅವರು ಒಂದೇ ಮಾಂಸವಾಗುವರು. ಇದಲ್ಲದೆ ಆದಮನೂ,
ಅವನ ಹೆಂಡತಿಯೂ, ಇಬ್ಬರು ಬೆತ್ತಲೆಯಾಗಿದ್ದರೂ, ನಾಚಿಕೆ
ಪಡಲಿಲ್ಲ.

## 3. ಸಂಧಿ.

೧ ಮತ್ತು ಕರ್ತನಾದ ದೇವರು ಮಾಡಿದ ಅಡವಿಯ ಎಲ್ಲಾ
ಮೃಗಗಳಿಗಿಂತ ಸರ್ಪವು ಯುಕ್ತಿಯುಳ್ಳದ್ದಾಗಿದ್ದು; ಸ್ತ್ರೀಗೆ
ಹೇಳ್ದದ್ದೇನಂದರೆ—ನೀವು ತೋಟದ ಎಲ್ಲಾ ಮರಗಳ ಫಲ ತಿನ್ನ
ಬಾರದೆಂದು, ದೇವರು ಹೇಳಿದ್ದುಂಟೇ? ಸ್ತ್ರೀಯು ಸರ್ಪಕ್ಕೆ,
೨ ತೋಟದ ಮರಗಳ ಫಲ ನಾವು ತಿನ್ನಬಹುದು, ಆದರೆ ತೋಟ
3 ದ ಮಧ್ಯದಲ್ಲಿರುವ ಮರದ ಫಲ ನೀವು ಸಾಯದ ಹಾಗೆ ತಿನ್ನ
ಲೂ, ಅದನ್ನು ಮುಟ್ಟಲೂ ಬಾರದೆಂದು, ದೇವರು ಹೇಳಿದ್ದಾನೆ,
೪ ಅಂದಳು. ಸರ್ಪವು ಸ್ತ್ರೀಗೆ—ನೀವು ಸಾಯಲೇ ಸಾಯುವದಿ
೫ ಲ್ಲ; ಆದರೆ ಅದನ್ನು ತಿಂದ ದಿವಸದಲ್ಲಿ ನಿಮ್ಮ ಕಣ್ಣುಗಳು ತೆರೆ
ಯಲ್ಪಡುವವೆಂದೂ, ನೀವು ಮೇಲೂ ಕೇಡೂ ಅರಿತವರಾಗಿ, ದೇ
ವರುಗಳ ಹಾಗಿರುವಿರೆಂದೂ, ದೇವರಿಗೆ ತಿಳಿದದೆ, ಅಂದಿತು.

೬ ಆಗ ಸ್ತ್ರೀಯು ಆ ಮರವು ತಿನ್ನುವದಕ್ಕೆ ಬಳ್ಳೇರೂ, ಕಣ್ಣು



ಗಳಿಗೆ ಇಷ್ಟವೂ, ಆ ಮರವು ಬುದ್ಧಿ ಹೊಂದಿಸುವದಕ್ಕೆ ರಮ್ಯ
ವೂ, ಎಂದು ನೋಡಿ, ಅದರ ಫಲ ತೆಗೆದು, ತಿಂದಳು; ಮತ್ತು ತ
ನ್ನ ಸಂಗಡ ಇರುವ ತನ್ನ ಗಂಡನಿಗೂ ಕೊಟ್ಟಳು; ಅವನು ತಿಂ
೭ ದನು. ಆಗ ಅವರಿಬ್ಬರ ಕಣ್ಣುಗಳು ತೆಗೆಯಲ್ಪಟ್ಟು, ತಾವು ಬೆ
ತ್ತಲೆಯಾಗಿದ್ದೇವೆಂದು ತಿಳುಕೊಂಡರು; ಮತ್ತು ಅವರು ಅಂಜೂ
ರದ ಎಲೆ ಹೊಲಿದು, ತಮಗೆ ಉಡಿಗೆಗಳನ್ನು ಮಾಡಿ ಕೊಂಡರು.

೮ ಆಗಲವರು ಹಗಲಿನ ತಂಗೂಳಿಯಲ್ಲಿ ತೋಟದೊಳಗೆ ತಿರು
ಗಾಡುವ ದೇವರಾದ ಕರ್ತನ ಶಬ್ದವನ್ನು ಕೇಳಲಾಗಿ, ಆದಮನೂ
ಅವನ ಹೆಂಡತಿಯೂ ದೇವರಾದ ಕರ್ತನಿಗೆ ವಿಮುಖರಾಗಿ ತೋ
೯ ಟದ ಮರಗಳ ನಡುವೆ ಅಡಗಿ ಕೊಂಡರು. ಆಗ ದೇವರಾದ ಕ
ರ್ತನು ಆದಮನನ್ನು ಕರೆದು, ಅವನಿಗೆ, ನೀನು ಎಲ್ಲಿ? ಅಂದಾಗ,
೧೦ ಅವನು, ನಿನ್ನ ಶಬ್ದವನ್ನು ತೋಟದಲ್ಲಿ ಕೇಳಿ, ನಾನು ಬೆತ್ತಲೆ
ಯಾಗಿರುವದರಿಂದ ಭಯ ಪಟ್ಟು, ಅಡಗಿ ಕೊಂಡೆನು, ಅಂದನು.
೧೧ ಅದಕ್ಕವನು—ನೀನು ಬೆತ್ತಲೆಯಾಗಿದ್ದೀ ಎಂದು ನಿನಗೆ ತಿಳಿಸಿದವ
ರ್ಯಾರು? ತಿನ್ನ ಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ
೧೨ ಫಲವನ್ನು ತಿಂದಿಯೋ? ಅನ್ನಲು. ಆದಮನು—ನೀನು ನನ್ನ
ಸಂಗಡಿರ ಕೊಟ್ಟ ಸ್ತ್ರೀ ಆ ಮರದ ಫಲ ನನಗೆ ಕೊಟ್ಟಳು; ನಾ
೧೩ ನು ತಿಂದೆನು, ಎಂದು ಹೇಳಿದನು. ದೇವರಾದ ಕರ್ತನು ಸ್ತ್ರೀಗೆ
—ನೀನು ಇದನ್ನು ಮಾಡಿದ್ದೇನು? ಅಂದಾಗ, ಸ್ತ್ರೀಯು—ಸರ್ಪ
ವು ನನ್ನನ್ನು ವಂಚಿಸಿದ್ದರಿಂದ, ತಿಂದೆನು, ಅಂದಳು.

೧೪ ಆಗ ದೇವರಾದ ಕರ್ತನು ಸರ್ಪಕ್ಕೆ ಹೇಳ್ದದ್ದೇನಂದರೆ—
ನೀನು ಇದನ್ನು ಮಾಡಿದ ಕಾರಣ, ಎಲ್ಲಾ ಪಶುಗಳಲ್ಲಿಯೂ,
ಎಲ್ಲಾ ಅಡವಿಯ ಮೃಗಗಳಲ್ಲಿಯೂ ನೀನು ಶಪಿಸಲ್ಪಟ್ಟದ್ದು,
ಮತ್ತು ನೀನು ಜೀವದಿಂದಿರುವ ದಿವಸಗಳೆಲ್ಲಾ ಹೊಟ್ಟೆಯಿಂದ
೧೫ ನಡೆದು, ಮಣ್ಣೇ ತಿನ್ನುವಿ. ಮತ್ತು ನಿನಗೂ ಸ್ತ್ರೀಗೂ, ನಿನ್ನ
ಬೀಜಕ್ಕೂ ಸ್ತ್ರೀಯ ಬೀಜಕ್ಕೂ ಹಗೆ ಇಡುವೆನು; ಅವನು ನಿ
ನ್ನ ತಲೆಯನ್ನು ಬಡಿಯುವನು, ಆದರೆ ನೀನು ಅವನ ಹಿಮ್ಮಡಿ
ಯನ್ನು ಬಡಿಯುವಿ.

೧೬ ಸ್ತ್ರೀಗೆ ಹೇಳ್ದದ್ದೇನಂದರೆ—ನಿನ್ನ ಬೇನೆಯನ್ನೂ, ನಿನ್ನ ಬ
ಸುರಾಸುವಿಕೆಯನ್ನೂ ಹೆಚ್ಚಿಸೇ ಹೆಚ್ಚಿಸುವೆನು, ಕಷ್ಟದಿಂದ ಮ
ಕ್ಕಳನ್ನು ಹೆರುವಿ, ಮತ್ತು ನಿನ್ನ ಗಂಡನ ಮೇಲೆ ನಿನ್ನ ಇಚ್ಛೆ
ಇರುವದು; ಅವನು ನಿನ್ನನ್ನು ಆಳುವನು.

೧೭ ಮತ್ತು ಆದಮನಿಗೆ ಹೇಳ್ದದ್ದೇನಂದರೆ—ನೀನು ನಿನ್ನ ಹೆಂಡ
ತಿಯ ಮಾತು ಕೇಳಿ, ತಿನ್ನ ಬಾರದೆಂದು ನಾನು ನಿನಗೆ ಆಜ್ಞಾಪಿ
ಸಿದ ಮರದ ಫಲ ತಿಂದ ಕಾರಣ, ನಿನಗೋಸ್ಕರ ಭೂಮಿ ಶಪಿಸ
ಲ್ಪಟ್ಟದ್ದಾಗಲಿ; ನಿನ್ನ ಜೀವದ ದಿವಸಗಳೆಲ್ಲಾ ಸಂಕಟ ಪಟ್ಟು, ಅ
೧೮ ದರ ಫಲ ತಿನ್ನುವಿ. ಮತ್ತು ಮುಳ್ಳುಗಳನ್ನೂ ದತ್ತೂರಿಗಳನ್ನೂ
೧೯ ನಿನಗೆ ಮೊಳಿಸುವದು; ಹೊಲದ ಪಲ್ಯಗಳನ್ನು ತಿನ್ನುವಿ. ಮಣ್ಣಿ
ಗೆ ತಿರುಗುವ ತನಕ ನಿನ್ನ ಮುಖದ ಬೆವರಿನಿಂದ ಕೊಟ್ಟೆ ತಿನ್ನು
ವಿ; ಯಾಕಂದರೆ ಅದಕೊಳಗಿಂದ ತೆಗೆಯಲ್ಪಟ್ಟೆ; ಯಾಕಂದ
ರೆ—ನೀನು ಮಣ್ಣು; ಮಣ್ಣಿಗೆ ತಿರುಗುವಿ.

೨೦ ಇದಲ್ಲದೆ ಆದಮನು, ಅವಳು ಜೀವವುಳ್ಳವಕೆಲ್ಲರಿಗೆ ತಾಯಾ
೨೧ ದದರಿಂದ, ತನ್ನ ಹೆಂಡತಿಗೆ ಹವ್ವಳೆಂದು ಹೆಸರಿಟ್ಟನು. ಮತ್ತು
ದೇವರಾದ ಕರ್ತನು ಆದಮನಿಗೂ, ಅವನ ಹೆಂಡತಿಗೂ ತೊಗ
ಲಿನ ಅಂಗಿಗಳನ್ನು ಮಾಡಿ, ಅವರಿಗೆ ತೊಡಿಸಿದನು.

೨೨ ಮತ್ತು ದೇವರಾದ ಕರ್ತನು—ಇಗೋ, ಆದಮನು ಮೇಲು
ಕೇಡುಗಳನ್ನು ತಿಳಿಯುವದಕ್ಕೆ ನಮ್ಮಲ್ಲಿ ಒಬ್ಬನ ಹಾಗೆ ಇದ್ದಾನೆ;
ಈಗ ಅವನು ಕೈಚಾಚಿ, ಜೀವವೃಕ್ಷದ ಫಲವನ್ನು ತೆಗೆದು, ತಿಂ
೨೩ ದು, ಎಂದೆಂದಿಗೂ ಬದುಕ ಬಾರದು, ಅಂದನು. ಮತ್ತು ದೇವ
ರಾದ ಕರ್ತನು, ಅವನನ್ನು ಯಾವದರಿಂದ ತೆಗೆದನೋ, ಆ
ಭೂಮಿ ವ್ಯವಸಾಯ ಮಾಡುವದಕ್ಕೆ ಏದೆನ್ ತೋಟದೊಳಗಿಂ
೨೪ ದ ಕಳುಹಿಸಿ, ಆದಮನನ್ನು ಹೊರಡಿಸಿ, ಏದೆನ್ ತೋಟದ ಪೂ
ರ್ವದಲ್ಲಿ ಕೆರೂಬಿಗಳನ್ನೂ, ಸುತ್ಯಾಡುವ ಕತ್ತಿಯ ಜ್ವಾಲೆಯ
ನ್ನೂ ಜೀವ ವೃಕ್ಷದ ದಾರಿ ಕಾಯುವದಕ್ಕೋಸ್ಕರ ಇರಿಸಿದನು.

## ೪. ಸಂಧಿ.

೧ ಮತ್ತು ಆದಮನು ತನ್ನ ಹೆಂಡತಿಯಾದ ಹವ್ವಳನ್ನು ಅರಿತ
ನು; ಮತ್ತು ಅವಳು ಬಸುರಾಗಿ ಕಾಯಿನನ್ನು ಹೆತ್ತು, ನಾನು ಕ
೨ ರ್ತನಿಂದ ಗಂಡನನ್ನು ಪಡಕೊಂಡಿದ್ದೇನೆ, ಅಂದಳು. ಇನ್ನು ಅ
ವನ ಸಹೋದರನಾದ ಹೇಬೆಲನನ್ನು ಹೆತ್ತಳು. ಹೇಬೆಲನು ಕುರಿ
ಕಾಯುವವನಾದನು; ಕಾಯಿನನು ವ್ಯವಸಾಯ ಮಾಡುವವ
ನಾದನು.

3 ಕಾಲಾಂತರದಲ್ಲಿ ಸಂಭವಿಸಿದ್ದೇನಂದರೆ—ಕಾಯಿನನು ಭೂಮಿ
ಯ ಫಲಗಳಲ್ಲಿ ಕೆಲವನ್ನು ಕರ್ತನಿಗೆ ಕಾಣಿಕೆಯಾಗಿ ತಂದನು.
೪ ಮತ್ತು ಹೇಬೆಲನು ಸಹ ತನ್ನ ಮಂದೆಯ ಚೊಚ್ಚಲಾದವುಗ
ಳಲ್ಲಿಯೂ ಕೊಬ್ಬಿದವುಗಳಲ್ಲಿಯೂ ಕೆಲವನ್ನು ತಂದನು. ಆ
ಗ ಕರ್ತನು ಹೇಬೆಲನನ್ನೂ, ಅವನ ಕಾಣಿಕೆಯನ್ನೂ ಲಕ್ಷ್ಯ
ಮಾಡಿ, ಕಾಯಿನನನ್ನೂ, ಅವನ ಕಾಣಿಕೆಯನ್ನೂ ಲಕ್ಷ್ಯಮಾಡಲಿ
ಲ್ಲ; ಆದಕಾರಣ ಕಾಯಿನನು ಬಹು ಕೋಪಗೊಂಡನು, ಅವನ
೫ ಮುಖವು ಕಳೆಗುಂದಿತು. ಆಗ ಕರ್ತನು ಕಾಯಿನನಿಗೆ, ಯಾಕೆ
೬ ಕೋಪ ಗೊಂಡಿ? ಯಾಕೆ ನಿನ್ನ ಮುಖವು ಕಳೆಗುಂದಿತು? ನೀನು
ಬಳ್ಳೇದನ್ನು ಮಾಡಿದರೆ, ಅಂಗೀಕಾರವಿಲ್ಲವೋ? ನೀನು ಬಳ್ಳೇ
ದನ್ನು ಮಾಡದೆ ಹೋದರೆ, ಬಾಗಲಲ್ಲಿ ಪಾಪವು ಮಲಗಿ ಅದೆ;
ಮತ್ತು ನಿನ್ನ ಮೇಲೆ ಅವನ ಇಚ್ಛೆ ಇರುವದು; ನೀನು ಅವನನ್ನು
ಆಳುವಿ.

೭ ಆಗ ಕಾಯಿನನು ತನ್ನ ತಮ್ಮನಾದ ಹೇಬೆಲನ ಸಂಗಡ ಮಾ
ತಾಡಿದನು; ಅವರು ಹೊಲದಲ್ಲಿರಲಾಗಿ, ಕಾಯಿನನು ತನ್ನ ತಮ್ಮ
ನಾದ ಹೇಬೆಲನಿಗೆ ವಿರೋಧವಾಗಿ ಎದ್ದು, ಅವನನ್ನು ಕೊಂದು ಹಾ
೯ ಕಿದನು. ಮತ್ತು ಕರ್ತನು ಕಾಯಿನನಿಗೆ—ನಿನ್ನ ತಮ್ಮನಾದ ಹೇ
ಬೆಲನು ಎಲ್ಲಿ? ಅಂದನು. ಅವನು, ನಾನರಿಯೆ; ನನ್ನ ತಮ್ಮನನ್ನು
೧೦ ಕಾಯುವವನು ನಾನೋ? ಅನ್ನಲು, ಅವನು—ನೀನು ಮಾಡಿದ್ದೇ
೧೧ ನು!—ನಿನ್ನ ತಮ್ಮನ ರಕ್ತದ ಶಬ್ದವು ಭೂಮಿಯೊಳಗಿಂದ ನನ
ಗೆ ಕೂಗುತ್ತದೆ. ಹಾಗಾದರೆ ಈಗ ನಿನ್ನ ತಮ್ಮನ ರಕ್ತವನ್ನು ನಿ
ನ್ನ ಕೈಯಿಂದ ಹೊಂದುವದಕ್ಕೆ ತನ್ನ ಬಾಯನ್ನು ತೆರೆದ
೧೨ ಭೂಮಿಯಿಂದ ನೀನು ಶಪಿಸಲ್ಪಟ್ಟವನು. ನೀನು ಭೂಮಿಯ
ನ್ನು ವ್ಯವಸಾಯ ಮಾಡುವಾಗ, ಅದು ತನ್ನ ಸಾರವನ್ನು ನಿನ
ಗೆ ಇನ್ನು ಮೇಲೆ ಕೊಡದು. ನೀನು ಭೂಮಿಯಲ್ಲಿ ಅಲೆಯುವ
೧೩ ವನಾಗಿಯೂ ಪಿಡುವವನಾಗಿಯೂ ಇರುವಿ, ಅಂದನು. ಆಗ ಕಾ
ಯಿನನು ಕರ್ತನಿಗೆ—ನನ್ನ ಅಕ್ರಮವು ತಾಳ್ಳ ಕೂಡದಷ್ಟು ದೊ
೧೪ ಡ್ಡದಾಗಿದೆ. ಇಗೋ, ಈ ಹೊತ್ತು ನನ್ನನ್ನು ಭೂಮಿಯ ಮೇ
ಲಿಂದ ಹೊರಡಿಸಿದಿ, ನಿನ್ನ ಮುಖಕ್ಕೆ ನಾನು ಮರೆಯಾಗ ಬೇಕು,

ಭೂಮಿಯಲ್ಲಿ ಅಲೆಯುವವನೂ ಓಡುವವನೂ ಆಗಿರ ಬೇಕು;
೧೫ ಮತ್ತು ಆಗುವದೇನಂದರೆ—ಕಂಡವರ್ಯಾರಾದರೂ ನನ್ನನ್ನು ಕೊ
ಲ್ಲುವರು, ಅಂದನು. ಆದರಿಂದ ಕರ್ತನು ಅವನಿಗೆ—ಕಾಯಿನನ
ನ್ನು ಕೊಲ್ಲುವವನು ಯಾವನೋ, ಅವನು ಏಳ್ಪಡ್ಡು ಮುಯ್ಯಿ
ಹೊಂದುವನು, ಎಂದು ಹೇಳಿದನು. ಮತ್ತು ಕರ್ತನು ಕಾಯಿನ
ನ ಮೇಲೆ, ಅವನನ್ನು ಕಂಡವರ್ಯಾವನಾದರೂ ಕೊಲ್ಲದ ಹಾಗೆ,
ಗುರುತಿಟ್ಟನು.

೧೬ ಮತ್ತು ಕಾಯಿನನು ಕರ್ತನ ಸನ್ನಿಧಿಯಿಂದ ಹೊರಟು,
ನೋದು ಎಂಬ ದೇಶದಲ್ಲಿ ಏಡೆನಿನ ಪೂರ್ವದಲ್ಲಿ ವಾಸಿಸಿದನು.
೧೭ ಮತ್ತು ಕಾಯಿನನು ತನ್ನ ಹೆಂಡತಿಯನ್ನು ಅರಿತನು; ಅವಳು ಬ
ಸುರಾಗಿ ಹನೋಕನನ್ನು ಹೆತ್ತಳು; ಆಗಲವನು ಬಂದು ಪಟ್ಣವ
ನ್ನು ಕಟ್ಟಿ, ತನ್ನ ಮಗನಾದ ಹನೋಕನ ಹೆಸರಿನ ಹಾಗೆ ಆ ಪ
ಟ್ಣಕ್ಕೆ ಹೆಸರಿಟ್ಟನು. ಮತ್ತು ಹನೋಕನಿಗೆ ಈರದನು ಹುಟ್ಟಿದ
ನು; ಈರದನು ಮೆಹೂಯಯೇಲನನ್ನು ಪಡೆದನು; ಮೆಹೂಯ
ಯೇಲನು ಮೆಥೂಶಯೇಲನನ್ನು ಪಡೆದನು; ಮೆಥೂಶಯೇಲ
ನು ಲೇಮೆಕನನ್ನು ಪಡೆದನು.

೧೯ ಲೇಮೆಕನು ಇಬ್ಬರು ಹೆಂಡರನ್ನು ತೆಗೆದು ಕೊಂಡನು; ಬ
೨೦ ಬ್ಬಳ ಹೆಸರು ಆದಾ, ಮತ್ತೊಬ್ಬಳ ಹೆಸರು ಚಿಲ್ಲಾ. ಆದಾ
೨೧ ಯೊಬಲನನ್ನು ಹೆತ್ತಳು; ಇವನು ಗುಡಾರಗಳಲ್ಲಿ ವಾಸಿಸುವ ಗೊ
ಲ್ಲರಿಗೆ ತಂದೆಯಾದನು. ಅವನ ಸಹೋದರನ ಹೆಸರು ಯೊಬ
ಲನು; ಇವನು ಕಿನ್ನರಿಯನ್ನೂ ಕೊಳಲನ್ನೂ ಹಿಡಿಯುವವರೆಲ್ಲ
೨೨ ರಿಗೆ ತಂದೆಯಾದನು. ಮತ್ತು ಚಿಲ್ಲಾ ಸಹ ತುಬಲ್ ಕಾಯಿನನ್ನು
ಹೆತ್ತಳು; ಅವನು ಹಿತ್ತಾಳೆ, ಕಬ್ಬಿಣ ಕೆಲಸ ಮಾಡುವವರೆಲ್ಲರಿಗೆ
೨೩ ಕಲಿಸುವವನಾಗಿದ್ದನು. ತುಬಲ್ ಕಾಯಿನನ ಸಹೋದರಿ ನಾಮಾ.
ಆಗ ಲೇಮೆಕನು ತನ್ನ ಹೆಂಡರಾದ ಆದಾಗೂ ಚಿಲ್ಲಾಗೂ ಹೇಳಿ
ದ್ದೇನಂದರೆ—ಲೇಮೆಕನ ಹೆಂಡರೇ, ನನ್ನ ಶಬ್ದವನ್ನು ಕೇಳಿರಿ; ನ
ನ್ನ ವಾಕ್ಯಕ್ಕೆ ಕಿವಿ ಕೊಡಿರಿ; ಯಾಕಂದರೆ ನನ್ನ ಘಾಯಕ್ಕಾಗಿ
ಪುರುಷನನ್ನೂ, ನನ್ನ ಬಾಧೆಗಾಗಿ ಯೌವನಸ್ಥನನ್ನೂ ಕೊಂ
೨೪ ದಿದ್ದೇನೆ. ಕಾಯಿನನಿಗೋಸ್ಕರ ಏಳ್ಪಡ್ಡು ಮುಯ್ಯಿ ಹೊಂದಿದ
ರೆ, ಲೇಮೆಕನಿಗೋಸ್ಕರ ಎಪ್ಪತ್ತೇಳ್ಪಡ್ಡು.

೨೫ ಇದಲ್ಲದೆ ಆದಮನು ತಿರಿಗಿ ತನ್ನ ಹೆಂಡತಿಯನ್ನು ಅರಿತದರಿಂ
ದ, ಅವಳು ಮಗನನ್ನು ಹೆತ್ತು, ಕಾಯಿನನು ಕೊಂದು ಹಾಕಿದ
ಹೇಬೆಲನಿಗೆ ಬದಲಾಗಿ, ದೇವರು ನನಗೆ ಬೇರೆ ಬೀಜವನ್ನು ಕೊಟ್ಟ
೨೬ ನೆಂದು, ಅವನಿಗೆ ಸೇಥನೆಂಬ ಹೆಸರು ಕರೆದಳು. ಮತ್ತು ಸೇಥನಿ
ಗೂ ಮಗ ಹುಟ್ಟಿದನು; ಅವನಿಗೆ ಏನೋಷ್ ಎಂಬ ಹೆಸರಿಟ್ಟನು;
ಆಗ ಮನುಷ್ಯರು ಕರ್ತನ ಹೆಸರನ್ನು ಕರೆಯುವದಕ್ಕೆ ಆರಂ
ಭಿಸಿದರು.

## ೫. ಸಂಧಿ.

೧ ಆದಮನ ವಂಶಾವಳಿಯು ಇದೇ—ದೇವರು ಆದಮನನ್ನು
ಸೃಷ್ಟಿಸಿದ ದಿವಸದಲ್ಲಿ ದೇವರ ಹೋಲ್ವಿಕೆಯಾಗಿ ಅವನನ್ನು
೨ ಉಂಟು ಮಾಡಿದನು. ಗಂಡು ಹೆಣ್ಣಾಗಿ ಅವರನ್ನು ಸೃಷ್ಟಿಸಿ,
ಅವರನ್ನು ಸೃಷ್ಟಿಸಿದ ದಿವಸದಲ್ಲಿ ಅವರನ್ನು ಆಶೀರ್ವದಿಸಿ, ಅ
ವರಿಗೆ ಆದಮನೆಂದು ಹೆಸರಿಟ್ಟನು.

3 ಆದಮನು ನೂರ ಮೂವತ್ತು ವರುಷದವನಾಗಿ, ತನ್ನ ಹೋ
ಲ್ವಿಕೆಯಾಗಿ, ತನ್ನ ರೂಪದ ಹಾಗೆ ಇರುವವನನ್ನು ಪಡೆದು, ಅ
೪ ವನಿಗೆ ಸೇಥನೆಂದು ಹೆಸರಿಟ್ಟನು. ಆದಮನ ದಿವಸಗಳು ಅವನು
ಸೇಥನನ್ನು ಪಡೆದ ಮೇಲೆ, ಎಂಟು ನೂರು ವರುಷಗಳಾಗಿದ್ದವು;
೫ ಅವನು ಕುಮಾರ ಕುಮಾರ್ತೆಗಳನ್ನು ಪಡೆದನು. ಮತ್ತು ಆ
ದಮನು ಬದುಕಿದ ದಿವಸಗಳೆಲ್ಲಾ ಒಂಭೈನೂರ ಮೂವತ್ತು ವ
ರುಷಗಳಾಗಿದ್ದವು; ಆಗ ಸತ್ತನು.

೬ ಸೇಥನು ನೂರ ಐದು ವರುಷ ಬದುಕಿ, ಎನೋಷನನ್ನು ಪ
೭ ಡೆದನು. ಮತ್ತು ಸೇಥನು ಎನೋಷನನ್ನು ಪಡೆದ ಮೇಲೆ, ಎಂ
ಟು ನೂರ ಏಳು ವರುಷ ಬದುಕಿ, ಕುಮಾರ ಕುಮಾರ್ತೆಗಳ
೮ ನ್ನು ಪಡೆದನು. ಮತ್ತು ಸೇಥನ ದಿವಸಗಳೆಲ್ಲಾ ಒಂಭೈನೂರ ಹ
ನ್ನೆರಡು ವರುಷಗಳಾಗಿದ್ದವು; ಆಗ ಸತ್ತನು.

೯ ಎನೋಷನು ತೊಂಭತ್ತು ವರುಷ ಬದುಕಿ, ಕೇನಾನನನ್ನು ಪ
೧೦ ಡೆದನು. ಮತ್ತು ಎನೋಷನು ಕೇನಾನನನ್ನು ಪಡೆದ ಮೇಲೆ, ಎಂ
ಟು ನೂರ ಹದಿನೈದು ವರುಷ ಬದುಕಿ, ಕುಮಾರ ಕುಮಾರ್ತೆಗ
೧೧ ಳನ್ನು ಪಡೆದನು. ಮತ್ತು ಎನೋಷನ ದಿವಸಗಳೆಲ್ಲಾ ಒಂಭೈ
ನೂರ ಐದು ವರುಷಗಳಾಗಿದ್ದವು ಆಗ ಸತ್ತನು.

೧೨ ಕೇನಾನನು ಎಪ್ಪತ್ತು ವರುಷ ಬದುಕಿ, ಮಹಲಲ್ಲೇಲನನ್ನು
೧೩ ಪಡೆದನು. ಮತ್ತು ಕೇನಾನನು ಮಹಲಲ್ಲೇಲನನ್ನು ಪಡೆದ ಮೇ
ಲೆ, ಎಂಟು ನೂರ ನಾಲ್ವತ್ತು ವರುಷ ಬದುಕಿ, ಕುಮಾರ ಕುಮಾ
೧೪ ರ್ತೆಗಳನ್ನು ಪಡೆದನು. ಮತ್ತು ಕೇನಾನನ ದಿವಸಗಳೆಲ್ಲಾ ಒಂಭೈ
ನೂರ ಹತ್ತು ವರುಷಗಳಾಗಿದ್ದವು; ಆಗ ಸತ್ತನು.

೧೫ ಮಹಲಲ್ಲೇಲನು ಅರವತ್ತೈದು ವರುಷ ಬದುಕಿ, ಯೇರೆದನ
೧೬ ನ್ನು ಪಡೆದನು. ಮತ್ತು ಮಹಲಲ್ಲೇಲನು ಯೇರೆದನನ್ನು ಪಡೆದ
ಮೇಲೆ, ಎಂಟು ನೂರ ಮೂವತ್ತು ವರುಷ ಬದುಕಿ, ಕುಮಾರ
೧೭ ಕುಮಾರ್ತೆಗಳನ್ನು ಪಡೆದನು. ಮತ್ತು ಮಹಲಲ್ಲೇಲನ ದಿವಸಗಳೆ
ಲ್ಲಾ ಎಂಟು ನೂರ ತೊಂಭತ್ತೈದು ವರುಷಗಳಾಗಿದ್ದವು; ಆಗ ಸ
ತ್ತನು.

೧೮ ಯೇರೆದನು ನೂರ ಅರವತ್ತೆರಡು ವರುಷ ಬದುಕಿ, ಹನೋ
೧೯ ಕನನ್ನು ಪಡೆದನು. ಮತ್ತು ಯೇರೆದನು ಹನೋಕನನ್ನು ಪಡೆದ
ಮೇಲೆ, ಎಂಟು ನೂರ ವರುಷ ಬದುಕಿ, ಕುಮಾರ ಕುಮಾರ್ತೆಗ
೨೦ ಳನ್ನು ಪಡೆದನು. ಯೇರೆದನ ದಿವಸಗಳೆಲ್ಲಾ ಒಂಭೈನೂರ ಅರವ
ತ್ತೆರಡು ವರುಷಗಳಾಗಿದ್ದವು; ಆಗ ಸತ್ತನು.

೨೧ ಹನೋಕನು ಅರವತ್ತೈದು ವರುಷ ಬದುಕಿ, ಮೆಥೂಸಿಲಹ
೨೨ ನನ್ನು ಪಡೆದನು. ಮತ್ತು ಹನೋಕನು ಮೆಥೂಸಿಲಹನನ್ನು
ಪಡೆದ ಮೇಲೆ, ಮುನ್ನೂರು ವರುಷ ದೇವರ ಸಂಗತ ನಡೆದು
೨೩ ಕೊಂಡು, ಕುಮಾರ ಕುಮಾರ್ತೆಗಳನ್ನು ಪಡೆದನು. ಮತ್ತು ಹ
ನೋಕನ ದಿವಸಗಳೆಲ್ಲಾ ಮುನ್ನೂರ ಅರವತ್ತೈದು ವರುಷಗಳಾ
೨೪ ಗಿದ್ದವು. ಹನೋಕನು ದೇವರ ಸಂಗತ ನಡೆಯುತ್ತಿರಲಾಗಿ, ಇಲ್ಲಿ
ವಾದನು; ಯಾಕಂದರೆ ದೇವರು ಅವನನ್ನು ತಕ್ಕೊಂಡನು.

೨೫ ಮೆಥೂಸಿಲಹನು ನೂರ ಎಂಭತ್ತೇಳು ವರುಷ ಬದುಕಿ, ಲೇ
೨೬ ಮೆಕನನ್ನು ಪಡೆದನು. ಮತ್ತು ಮೆಥೂಸಿಲಹನು ಲೇಮೆಕನನ್ನು
ಪಡೆದ ಮೇಲೆ, ಏಳು ನೂರ ಎಂಭತ್ತೆರಡು ವರುಷ ಬದುಕಿ, ಕು
೨೭ ಮಾರ ಕುಮಾರ್ತೆಗಳನ್ನು ಪಡೆದನು. ಮತ್ತು ಮೆಥೂಸಿಲಹನ
ದಿವಸಗಳೆಲ್ಲಾ ಒಂಭೈನೂರ ಅರವತ್ತೊಂಭತ್ತು ವರುಷಗಳಾಗಿದ್ದ
ವು; ಆಗ ಸತ್ತನು.

೨೮ ಲೇಮೆಕನು ನೂರ ಎಂಭತ್ತೆರಡು ವರುಷ ಬದುಕಿದ ಮೇಲೆ,



೨೯ ಮಗನನ್ನು ಪಡೆದು, ಅವನಿಗೆ ನೋಹನೆಂದು ಹೆಸರಿಟ್ಟು, ಹೇಳಿ
ದ್ದೇನಂದರೆ— ಇವನು ನಮ್ಮ ಕೆಲಸಕ್ಕೋಸ್ಕರವೂ, ಕರ್ತನು
ಶಪಿಸಿದ ಭೂಮಿಯಿಂದ ನಮ್ಮ ಕೈಗಳಿಗೆ ಆಗುವ ಕಷ್ಟಕ್ಕೋಸ್ಕ
೩೦ ರವೂ ನಮ್ಮನ್ನು ಆದರಿಸುವನು. ಮತ್ತು ಲೇಮೆಕನು ನೋ
ಹನನ್ನು ಪಡೆದ ಮೇಲೆ, ಐನೂರ ತೊಂಭತ್ತೈದು ವರುಷ ಬದು
೩೧ ಕಿ, ಕುಮಾರ ಕುಮಾರ್ತೆಗಳನ್ನು ಪಡೆದನು. ಮತ್ತು ಲೇಮೆ
ಕನ ದಿವಸಗಳೆಲ್ಲಾ ಏಳು ನೂರ ಎಪ್ಪತ್ತೇಳು ವರುಷಗಳಾಗಿದ್ದ
ವು; ಆಗ ಸತ್ತನು.

೩೨ ಮತ್ತು ನೋಹನು ಐನೂರು ವರುಷದವನಾಗಿದ್ದಾಗ, ಶೇಮ
ನನ್ನೂ, ಹಾಮನನ್ನೂ, ಯಾಫೆತನನ್ನೂ ಪಡೆದನು.

## ೬. ಸಂಧಿ.

೧ ಭೂಮಿಯ ಮೇಲೆ ಜನ ಹೆಚ್ಚುವದಕ್ಕೆ ಆರಂಭಿಸಿದಾಗ, ಅವರಿ
೨ ಗೆ ಕುಮಾರ್ತೆಗಳು ಹುಟ್ಟಿದರು. ಆಗ ದೇವರ ಕುಮಾರರು ಮ
ನುಷ್ಯರ ಕುಮಾರ್ತೆಗಳನ್ನು ನೋಡಿ, ಅವರು ಬಳ್ಳೆಯವರೆಂದು
ತಾವು ಆದುಕೊಂಡವರನ್ನು ತಮಗೆ ಹೆಂಡರಾಗಿ ತಕ್ಕೊಂಡರು.

3 ಆಗ ಕರ್ತನು, ನನ್ನ ಆತ್ಮವು ಮನುಷ್ಯನ ಸಂಗತ ಯಾವಾಗ
ಲೂ ವಿವಾದ ಮಾಡುವದಿಲ್ಲ; ಅವನು ಮಾಂಸವಷ್ಟೆ. ಅವನ ದಿವ
ಸಗಳು ನೂರ ಇಪ್ಪತ್ತು ವರುಷವಾಗಲಿ, ಅಂದನು.

೪ ಆ ದಿವಸಗಳಲ್ಲಿ ಭೂಮಿಯೊಳಗೆ ರಾಕ್ಷಸರು ಇದ್ದರು; ದೇ
ವರ ಕುಮಾರರು ಮನುಷ್ಯರ ಕುಮಾರ್ತೆಗಳ ಬಳಿಗೆ ಸೇರಿ ಕೊಂ
ಡು, ಇವರು ಅವರಿಗೆ ಹೆತ್ತ ಮೇಲೆ, ಆ ಹುಟ್ಟಿದವರೇ ಪೂರ್ವ
ಕಾಲದ ಪರಾಕ್ರಮಶಾಲಿಗಳೂ ಹೆಸರು ಗೊಂಡವರೂ ಆದರು.

೫ ಮತ್ತು ದೇವರು, ಮನುಷ್ಯನ ದುಷ್ಟತ್ವವು ಭೂಮಿಯಲ್ಲಿ
ಹೆಚ್ಚಿ ಕೆಂದೂ, ಅವನ ಹೃದಯದ ಆಲೋಚನೆಗಳ ಕಲ್ಪನೆ
೬ ಯೆಲ್ಲಾ ದಿನಾಲೂ ಕೆಟ್ಟದ್ದೇ ಎಂದೂ ನೋಡಿದನು. ಮತ್ತು ಕ
ರ್ತನು, ಭೂಮಿಯಲ್ಲಿ ಮನುಷ್ಯನನ್ನು ಉಂಟು ಮಾಡಿದ್ದ
ಕ್ಕೋಸ್ಕರ ಪಶ್ಚಾತ್ತಾಪ ಪಟ್ಟು, ತನ್ನ ಹೃದಯದಲ್ಲಿ ನೊಂ
೭ ದು ಕೊಂಡನು. ಮತ್ತು ಕರ್ತನು ಹೇಳಿದ್ದೇನಂದರೆ—ನಾನು
ಸೃಷ್ಟಿಸಿದ ಮನುಷ್ಯನನ್ನೂ ಮನುಷ್ಯನ ಸಂಗತ ಸಕಲ ಮೃ
ಗ, ಕ್ರಿಮಿ, ಆಕಾಶದ ಪಕ್ಷಿಗಳನ್ನೂ ಭೂಮುಖದಿಂದ ಅಳಿಸುವೆ
ನು; ಯಾಕಂದರೆ ಅವುಗಳನ್ನು ಉಂಟು ಮಾಡಿದ್ದಕ್ಕೆ ಪಶ್ಚಾತ್ತಾ
ಪ ಪಡುತ್ತೇನೆ.

೮ ಆದರೆ ನೋಹನಿಗೆ ಕರ್ತನ ದೃಷ್ಟಿಯಲ್ಲಿ ದಯ ದೊರಕಿ
೯ ತು. ನೋಹನ ವಂಶಾವಳಿಯು ಇದೇ—ನೋಹನು ತನ್ನ ಸಂತ
ತಿಯವರಲ್ಲಿ ನೀತಿವಂತನೂ ಸಂಪೂರ್ಣನೂ ಆಗಿದ್ದನು; ನೋ
೧೦ ಹನು ದೇವರ ಸಂಗತ ನಡೆದು ಕೊಳ್ಳುತ್ತಿದ್ದನು. ಮತ್ತು ನೋ
ಹನು, ಶೇಮ, ಹಾಮ, ಯಾಫೆತ ಎಂಬ ಮೂರು ಮಕ್ಕಳನ್ನು
೧೧ ಪಡೆದನು. ಇದಲ್ಲದೆ ಭೂಮಿಯು ದೇವರ ದೃಷ್ಟಿಗೆ ಕೆಟ್ಟು
ಹೋದದ್ದಾಗಿತ್ತು; ಭೂಮಿಯು ಬಲಾತ್ಕಾರಗಳಿಂದ ತುಂಬಿ ಇ
೧೨ ತ್ತು. ಮತ್ತು ದೇವರು ಭೂಮಿಯನ್ನು ನೋಡಲಾಗಿ, ಇಗೋ,
ಅದು ಕೆಟ್ಟು ಹೋದದ್ದಾಗಿತ್ತು; ಯಾಕಂದರೆ ಮಾಂಸವೆಲ್ಲಾ ಭೂ
ಮಿಯ ಮೇಲೆ ತನ್ನ ಮಾರ್ಗವನ್ನು ಕೆಡಿಸಿ ಬಿಟ್ಟಿತ್ತು.

೧೩ ಆಗ ದೇವರು ನೋಹನಿಗೆ ಹೇಳ್ದದ್ದೇನಂದರೆ—ಮಾಂಸವೆಲ್ಲಾ
ದರ ಅಂತ್ಯವು ನನ್ನ ಮುಂದೆ ಬಂತು; ಯಾಕಂದರೆ ಭೂಮಿ
ಯು ಅವರ ಮುಖಾಂತರ ಬಲಾತ್ಕಾರಗಳಿಂದ ತುಂಬಿ ಅದೆ. ಹೀ
ಗಿರುವದರಿಂದ, ಇಗೋ, ಭೂಮಿಯ ಸಂಗತ ಅವರನ್ನು ಕೆಡಿಸಿ
೧೪ ಬಿಡುತ್ತೇನೆ. ಗೋಫೆರ್ ಮರದ ನಾವೆಯನ್ನು ಮಾಡಿಕೋ; ಆ
ನಾವೆಯಲ್ಲಿ ಗೂಡುಗಳನ್ನು ಮಾಡು; ಅದರ ಹೊರ ಭಾಗಕ್ಕೂ,
೧೫ ಅದರ ಒಳ ಭಾಗಕ್ಕೂ ರಾಳವನ್ನು ಹಚ್ಚು. ನೀನು ಅದನ್ನು
ಮಾಡತಕ್ಕ ಕ್ರಮ ಇದೇ—ನಾವೆಯ ಉದ್ದ ಮುನ್ನೂರು ಮೊಳ;
೧೬ ಅದರ ಅಗಲವು ಐವತ್ತು ಮೊಳ; ಅದರ ಎತ್ತರವು ಮೂವತ್ತು
ಮೊಳ. ನಾವೆಗೆ ಕಿಟಿಕಿಯನ್ನು ಮಾಡತ ಬೇಕು. ಒಂದು ಮೊಳ
ದೊಳಗೆ ಅದನ್ನು ಮೇಲ್ಭಾಗದಲ್ಲಿ ಮುಗಿಸ ಬೇಕು; ಮತ್ತು
ಅದರ ಪಾರ್ಶ್ವದಲ್ಲಿ ನಾವೆಗೆ ಬಾಗಲನ್ನು ಇಡ ಬೇಕು; ಕೆಳಗ
ನದೂ, ಎರಡನೇದೂ, ಮೂರನೇದೂ, ಎಂಬ ಅಂತಸ್ತುಗಳನ್ನು
೧೭ ಮಾಡ ಬೇಕು. ಮತ್ತು, ಇಗೋ, ನಾನು ಆಕಾಶದ ಕೆಳಗೆ ಜೀ
ವದ ಶ್ವಾಸ ಉಂಟಾಗಿರುವ ಮಾಂಸವನ್ನೆಲ್ಲಾ ಕೆಡಿಸುವದಕ್ಕೆ
ಜಲಪ್ರಳಯವನ್ನು ಭೂಮಿಯ ಮೇಲೆ ಬರ ಮಾಡುತ್ತೇನೆ; ಭೂ
ಮಿಯಲ್ಲಿ ಇರುವಂಥಾದ್ದೆಲ್ಲಾ ಶೀರಿ ಹೋಗುವದು. ಆದರೆ ನಿನ್ನ
೧೮ ಸಂಗತ ನನ್ನ ಬದಂಬಡಿಕೆಯನ್ನು ಸ್ಥಾಪಿಸುತ್ತೇನೆ; ನೀನೂ, ನಿ
ನ್ನ ಸಂಗತ ನಿನ್ನ ಮಕ್ಕಳೂ, ನಿನ್ನ ಹೆಂಡತಿಯೂ, ನಿನ್ನ ಮ
೧೯ ಕ್ಕಳ ಹೆಂಡರೂ ನಾವೆಯೊಳಗೆ ಸೇರ ಬೇಕು. ಮತ್ತು ಜೀವವು
ಳ್ಳ ಎಲ್ಲವುಗಳಲ್ಲಿ, ಎಲ್ಲಾ ಮಾಂಸದಲ್ಲಿ, ಸಕಲವಾದವರಲ್ಲಿ ಎರಡೆ
ರಡನ್ನು, ನಿನ್ನ ಸಂಗತ ಬದುಕುವ ಹಾಗೆ, ನಾವೆಯೊಳಗೆ ತರ
೨೦ ಬೇಕು; ಅವು ಗಂಡು ಹೆಣ್ಣಾಗಿರ ಬೇಕು. ಜಾತ್ಯನುಸಾರವಾದ
ಪಕ್ಷಿಗಳಲ್ಲಿಯೂ, ಜಾತ್ಯನುಸಾರವಾದ ಮೃಗಗಳಲ್ಲಿಯೂ, ಜಾ
ತ್ಯನುಸಾರವಾಗಿ ಭೂಮಿಯಲ್ಲಿರುವ ಸಕಲ ಕ್ರಿಮಿಗಳಲ್ಲಿಯೂ,
ಎಲ್ಲಾದರಲ್ಲಿ, ಎರಡೆರಡು ಉಳ್ಳಿಯುವ ಹಾಗೆ ನಿನ್ನ ಬಳಿಗೆ ಬರುವ
೨೧ ವು. ಮತ್ತು ತಿನ್ನ ತಕ್ಕ ಎಲ್ಲಾ ಆಹಾರದಲ್ಲಿ ನಿನಗೆ ನೀನು ತ
ಕ್ಕೊಂಡು, ನಿನ್ನ ಬಳಿಗೆ ಕೂಡಿಸಿ ಕೊಳ್ಳ ಬೇಕು. ಅದು ನಿನ
ಗೂ ಅವುಗಳಿಗೂ ಆಹಾರವಾಗಿರುವದು.

೨೨ ನೋಹನು ಹಾಗೆ ಮಾಡಿದನು. ದೇವರು ತನಗೆ ಆಜ್ಞಾಪಿಸಿದ
ಎಲ್ಲವುಗಳ ಪ್ರಕಾರ ಮಾಡಿದನು.

## ೭. ಸಂಧಿ.

೧ ಆಗ ಕರ್ತನು ನೋಹನಿಗೆ ಹೇಳ್ದದ್ದು—ನೀನೂ, ನಿನ್ನ ಮನೆ
ಯವರೆಲ್ಲರೂ, ನಾವೆಯಲ್ಲಿ ಸೇರಿರಿ. ಯಾಕಂದರೆ ಈ ಸಂತತಿ
ಯಲ್ಲಿ ನೀನೇ ನನ್ನ ಮುಂದೆ ನೀತಿವಂತನೆಂದು ಕಂಡಿದ್ದೇನೆ.
೨ ಶುದ್ಧವಾದ ಎಲ್ಲಾ ಪಶುಗಳಲ್ಲಿ ನಿನಗೆ ಗಂಡು ಹೆಣ್ಣಾಗಿರುವ ಏಳೇ
ಳೂ, ಶುದ್ಧವಲ್ಲದ ಮೃಗಗಳಲ್ಲಿ ಗಂಡು ಹೆಣ್ಣಾದ ಎರಡೆರಡೂ
3 ತಕ್ಕೋ. ಆಕಾಶದ ಪಕ್ಷಿಗಳಲ್ಲಿಯೂ ಗಂಡು ಹೆಣ್ಣಾಗಿರುವ ಏಳೇ
ಳನ್ನು, ಭೂಮಿಯ ಮೇಲೆ ಬೀಜ ಉಳ್ಳಿಸುವದಕ್ಕೆ, ತಕ್ಕೊಳ್ಳ
೪ ಬೇಕು. ಯಾಕಂದರೆ, ಏಳು ದಿವಸಗಳ ಮೇಲೆ, ನಾನು ಭೂಮಿ
ಯ ಮೇಲೆ ನಾಲ್ವತ್ತು ದಿವಸ ನಾಲ್ವತ್ತು ರಾತ್ರಿ ಮಳೆ ಸುರಿಸು
ತ್ತೇನೆ. ಮತ್ತು ನಾನು ಉಂಟು ಮಾಡಿದ ಜೀವರಾಶಿಗಳನ್ನೆಲ್ಲಾ
ಭೂಮುಖದಿಂದ ಅಳಿಸುತ್ತೇನೆ.

೫ ನೋಹನು ಕರ್ತನು ತನಗೆ ಆಜ್ಞಾಪಿಸಿದ್ದನ್ನೆಲ್ಲಾ ಮಾಡಿದನು.
೬ ಆ ಜಲಪ್ರಳಯ ಭೂಮಿಯ ಮೇಲೆ ಉಂಟಾದಾಗ, ನೋಹ
೭ ನು ಆರು ನೂರು ವರುಷದವನಾಗಿದ್ದನು. ಆಗ ನೋಹನೂ, ಅ
ವನ ಮಕ್ಕಳೂ, ಅವನ ಹೆಂಡತಿಯೂ, ಅವನ ಮಕ್ಕಳ ಹೆಂಡ

ರೂ ಸಹಿತವಾಗಿ ಜಲಪ್ರಳಯಕ್ಕೋಸ್ಕರ ನಾವೆಯಲ್ಲಿ ಸೇರಿದರು.
೯ ಶುದ್ಧ ಮೃಗಗಳಲ್ಲಿಯೂ, ಅಶುದ್ಧ ಮೃಗಗಳಲ್ಲಿಯೂ, ಪಕ್ಷಿ
೯ ಗಳಲ್ಲಿಯೂ, ಹರಿದಾಡುವ ಎಲ್ಲವುಗಳಲ್ಲಿಯೂ, ಗಂಡು ಹೆಣ್ಣಾಗಿ
ರುವ ಎರಡೆರಡು, ದೇವರು ನೋಹನಿಗೆ ಆಜ್ಞಾಪಿಸಿದ ಪ್ರಕಾರ,
೧೦ ನೋಹನ ಬಳ್ಳಿಲಿ ನಾವೆಯಲ್ಲಿ ಸೇರಿದವು. ಏಳು ದಿವಸಗಳಾದ
ಮೇಲೆ, ಪ್ರಳಯದ ನೀರು ಭೂಮಿಯ ಮೇಲೆ ಬಂತು.

೧೧ ನೋಹನು ಬದುಕುವ ಆರು ನೂರನೇ ವರುಷದಲ್ಲಿ ಎರಡನೇ
ತಿಂಗಳಲ್ಲಿ ತಿಂಗಳಿನ ಹದಿನೇಳನೇ ದಿವಸದಲ್ಲಿ, ಅದೇ ದಿವಸದಲ್ಲಿ,
ಮಹಾ ಅಗಾಧದ ಬುಗ್ಗೆಗಳೆಲ್ಲಾ ಬಕೆದು, ಆಕಾಶದ ಕಿಟಿಕಿಗಳು
೧೨ ತೆಕೆಯಲ್ಪಟ್ಟವು. ಮತ್ತು ನಾಲ್ವತ್ತು ದಿವಸ ನಾಲ್ವತ್ತು ರಾತ್ರಿ
ಭೂಮಿಯ ಮೇಲೆಮಳೆ ಬಿತ್ತು. ಅದೇ ದಿವಸದಲ್ಲಿ ನೋಹನೂ,
ನೋಹನ ಮಕ್ಕಳಾದ ಶೇಮನೂ, ಹಾಮನೂ, ಯಾಫೆತನೂ,
ನೋಹನ ಹೆಂಡತಿಯೂ, ಅವನ ಮಕ್ಕಳ ಮೂವರು ಹೆಂಡರೂ
೧೪ ಸಹಿತವಾಗಿ ನಾವೆಯಲ್ಲಿ ಸೇರಿದರು. ಜಾತ್ಯನುಸಾರವಾದ ಎಲ್ಲಾ
ಮೃಗಗಳೂ, ಜಾತ್ಯನುಸಾರವಾದ ಎಲ್ಲಾ ಪಶುಗಳೂ, ಜಾತ್ಯ
ನುಸಾರವಾಗಿ ಭೂಮಿಯ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಗ
೧೫ ಳೂ, ಜಾತ್ಯನುಸಾರವಾದ ಎಲ್ಲಾ ಪಕ್ಷಿಗಳೂ, ರೆಕ್ಕೆಯುಳ್ಳ ಹ
ಕ್ಕಿಗಳೂ, ಅವರ ಸಂಗತ ಸೇರಿ, ಜೀವದ ಶ್ವಾಸ ಉಂಟಾಗಿರುವ
ಎಲ್ಲಾ ಮಾಂಸದಲ್ಲಿ ಎರಡೆರಡು ನೋಹನ ಬಳ್ಳಿಲಿ ನಾವೆಯಲ್ಲಿ
೧೬ ಸೇರಿದವು. ಆ ಸೇರಿದವುಗಳು, ದೇವರು ಅಪ್ಪಣೆ ಕೊಟ್ಟ ಪ್ರಕಾ
ರ, ಸಕಲ ಮಾಂಸದಲ್ಲಿ ಗಂಡು ಹೆಣ್ಣಾಗಿ ಬಂದವು. ಆಗ ಕರ್ತ
ನು ಅವನನ್ನು ಬಳ್ಳಗೆ ಮುಚ್ಚಿ ಇಟ್ಟನು.

೧೭ ಆ ಪ್ರಳಯವು ನಾಲ್ವತ್ತು ದಿವಸ ಭೂಮಿಯ ಮೇಲೆ ಇತ್ತು.
ಜಲ ಹೆಚ್ಚಲಾಗಿ ನಾವೆಯನ್ನು ಎತ್ತಿತು; ಅದು ಭೂಮಿಯಿಂದ
೧೮ ಎತ್ತಲ್ಪಟ್ಟಿತು. ಜಲ ಪ್ರಬಲವಾಗಿ, ಭೂಮಿಯಲ್ಲಿ ಬಹಳ ಹೆಚ್ಚಿ
ದಾಗ, ಆ ನಾವೆಯು ನೀರಿನ ಮೇಲೆ ನಡಿಯಿತು. ಮತ್ತು ಜಲವು
ಭೂಮಿಯ ಮೇಲೆ ಅತ್ಯಧಿಕವಾಗಿ ಪ್ರಬಲವಾದದರಿಂದ, ಆಕಾ
ಶಕ್ಕೆ ಕೆಳಗಿರುವ ಉನ್ನತವಾದ ಎಲ್ಲಾ ಬೆಟ್ಟಗಳು ಮುಚ್ಚಲ್ಪಟ್ಟಿ
೨೦ ವು. ಜಲವು ಬೆಟ್ಟಗಳನ್ನು ಮುಚ್ಚಿ, ಅವುಗಳ ಮೇಲೆ ಹದಿನೈದು
ಮೊಳ ಪರ್ಯಂತರ ಉಬ್ಬಿತು.

೨೧ ಆಗ ಪಕ್ಷಿ, ಪಶು, ಮೃಗ, ಭೂಮಿಯಲ್ಲಿ ಹರಿದಾಡುವ ಕ್ರಿಮಿ,
ಮನುಷ್ಯರೆಲ್ಲರು ಸಹಿತವಾಗಿ, ಭೂಮಿಯ ಮೇಲೆ ಸಂಚರಿಸುವ
೨೨ ಮಾಂಸವೆಲ್ಲಾ ಶೀರಿ ಹೋಯಿತು. ಬಣಗಿದ ನೆಲದಲ್ಲಿರುವಂಥ,
ತಮ್ಮ ಮೂಗುಗಳಲ್ಲಿ ಜೀವದ ಶ್ವಾಸ ಉಂಟಾಗಿರುವಂಥ, ಎಲ್ಲ
೨೩ ವುಗಳು ಸತ್ತವು. ಮತ್ತು ಮನುಷ್ಯರೂ, ಪಶುಗಳೂ, ಕ್ರಿಮಿ
ಗಳೂ, ಆಕಾಶದ ಪಕ್ಷಿಗಳೂ, ಭೂಮಿಯ ಮೇಲೆ ಇರುವ ಎಲ್ಲಾ
ಜೀವರಾಶಿಗಳೂ, ಅಳಿಸಲ್ಪಟ್ಟವು. ಅವು ಭೂಮಿಯೊಳಗಿಂದ
೨೪ ಅಳಿಸಲ್ಪಟ್ಟವು. ನೋಹನೂ, ಅವನ ಸಂಗತ ನಾವೆಯಲ್ಲಿದ್ದವ
ರೂ ಮಾತ್ರ ಉಳಿಸಲ್ಪಟ್ಟರು. ಮತ್ತು ಜಲವು ಭೂಮಿಯ ಮೇ
ಲೆ ನೂರ ಐವತ್ತು ದಿವಸ ಪ್ರಬಲವಾಗಿತ್ತು.

## ೮. ಸಂಧಿ.

೧ ಆಗ ದೇವರು ನೋಹನನ್ನೂ, ಅವನ ಸಂಗತ ನಾವೆಯಲ್ಲಿದ್ದ
ಎಲ್ಲಾ ಮೃಗಗಳನ್ನೂ, ಎಲ್ಲಾ ಪಶುಗಳನ್ನೂ ಜ್ಞಾಪಕ ಮಾಡಿ
ಕೊಂಡನು. ದೇವರು ಭೂಮಿಯ ಮೇಲೆ ಭೂಳಿಯನ್ನು ಬೀಸ
೨ ಮಾಡಲಾಗಿ, ಜಲವು ತಗ್ಗಿತು. ಮತ್ತು ಅಗಾಧದ ಬುಗ್ಗೆಗಳೂ, ಆಕಾ
ಶದ ಕಿಟಿಕಿಗಳೂ ಮುಚ್ಚಲ್ಪಟ್ಟವು. ಆಕಾಶದಿಂದ ಬೀಳುವ ಮ
೩ ಳೆಯು ನಿಂತಿತು. ಮತ್ತು ಜಲವು ಭೂಮಿಯ ಮೇಲಿನಿಂದ ಕ್ರ
ಮವಾಗಿ ತಗ್ಗಿ ಹೋಯಿತು. ನೂರ ಐವತ್ತು ದಿವಸಗಳಾದ
ಮೇಲೆ ಜಲವು ಕಡಿಮೆಯಾಯಿತು.

೪ ಏಳನೇ ತಿಂಗಳಲ್ಲಿ, ತಿಂಗಳಿನ ಹದಿನೇಳನೇ ದಿವಸದಲ್ಲಿ ನಾವೆ
೫ ಯು ಅರರಾಟ ಬೆಟ್ಟಗಳ ಮೇಲೆ ನೆಲೆಗೊಂಡಿತು. ಹತ್ತನೇ ತಿಂ
ಗಳಿನ ಪರ್ಯಂತರ ಜಲವು ಕಡಿಮೆ ಕಡಿಮೆಯಾಗುತ್ತಾ ಬಂತು.
ಹತ್ತನೇ ತಿಂಗಳಿನ ಮೊದಲನೇ ದಿವಸದಲ್ಲಿ ಬೆಟ್ಟಗಳ ತುದಿಗಳು
ಕಾಣ ಬಂದವು.

೬ ನಾಲ್ವತ್ತು ದಿವಸಗಳಾದ ತರುವಾಯ ಆದದ್ದೇನಂದರೆ, ನೋ
೭ ಹನು ತಾನು ಮಾಡಿದ ನಾವೆಯ ಕಿಟಿಕಿಯನ್ನು ತೆಕೆದು, ಕಾಗೆ
ಯನ್ನು ಕಳುಹಿಸಿದನು; ಅದು ಹೊರಟು ಭೂಮಿಯ ಮೇಲಿ
ನಿಂದ ಜಲವು ಆರಿ ಹೋಗುವ ಪರ್ಯಂತರ ಹೋಗುತ್ತಾ ಬರು
೮ ತ್ತಾ ಇತ್ತು. ಮತ್ತು ಭೂಮುಖದಲ್ಲಿ ಜಲವು ಕಡಿಮೆಯಾಯಿತೇ
ನೋ, ಎಂದು ನೋಡುವದಕ್ಕೆ ಪಾರಿವಾಳವನ್ನು ಕಳುಹಿಸಿದನು.
ಆದರೆ ಭೂಮುಖದಲ್ಲೆಲ್ಲಾ ನೀರು ಇರುವದರಿಂದ ಪಾರಿವಾಳಕ್ಕೆ
೯ ಅಂಗಾಲು ವಿಶ್ರಮಿಸಿ ಕೊಳ್ಳುವ ಸ್ಥಳವು ಸಿಕ್ಕದ ಕಾರಣ, ಅದು
ತಿರಿಗಿ ಅವನ ಬಳ್ಳಗೆ ನಾವೆಗೆ ಬಂತು. ಅವನು ಕೈಚಾಚಿ ಅದನ್ನು
೧೦ ತಕ್ಕೊಂಡು, ತನ್ನ ಬಳ್ಳಿಯ ನಾವೆಯಲ್ಲಿ ಸೇರಿಸಿದನು. ಮತ್ತು ಏ
ಳು ದಿವಸ ತಡೆದು, ತಿರಿಗಿ ನಾವೆಯೊಳಗಿಂದ ಪಾರಿವಾಳವನ್ನು ಕ
೧೧ ಳುಹಿಸಿದನು. ಸಾಯಂಕಾಲದಲ್ಲಿ ಪಾರಿವಾಳವು ಅವನ ಬಳ್ಳಗೆ ಬ
ರಲಾಗಿ, ಇಗೋ, ಕಿತ್ತ ಇಪ್ಪೇ ಎಲೆಯು ಅದರ ಬಾಯಲ್ಲಿ ಇತ್ತು;
ಆಗ ನೋಹನು ಭೂಮಿಯ ಮೇಲಿನಿಂದ ಜಲ ಕಡಿಮೆಯಾ
೧೨ ಯಿತೆಂದು ತಿಳುಕೊಂಡನು. ಇನ್ನು ಏಳು ದಿವಸ ತಡೆದು, ಪಾ
ರಿವಾಳವನ್ನು ಕಳುಹಿಸಿದಾಗ, ಅದು ಅವನ ಬಳ್ಳಗೆ ತಿರಿಗಿ ಬರಲಿಲ್ಲ.

೧೩ ಆರು ನೂರ ಒಂದನೇ ವರುಷದ ಮೊದಲನೇ ತಿಂಗಳಿನ ಮೊ
ದಲನೇ ದಿವಸದಲ್ಲಿ ಆದದ್ದೇನಂದರೆ, ಜಲವು ಭೂಮಿಯ ಮೇ
ಲಿನಿಂದ ಆರಿ ಹೋಗಿತ್ತು. ನೋಹನು ನಾವೆಯ ಮುಚ್ಚಳವನ್ನು
ತೆಗೆದು ನೋಡಲಾಗಿ, ಅಗೋ, ಭೂಮಿಯು ಆರಿ ಹೋಗಿತ್ತು.
೧೪ ಮತ್ತು ಎರಡನೇ ತಿಂಗಳಲ್ಲಿ ತಿಂಗಳಿನ ಇಪ್ಪತ್ತೇಳನೇ ದಿವಸದಲ್ಲಿ
ಭೂಮಿಯು ಬಣಗಿ ಇತ್ತು.

೧೫ ಆಗ ದೇವರು ನೋಹನಿಗೆ ಹೇಳಿದ್ದೇನಂದರೆ—
೧೬ ನೀನೂ, ನಿನ್ನ ಸಂಗತ ನಿನ್ನ ಹೆಂಡತಿಯೂ, ನಿನ್ನ ಮಕ್ಕಳೂ, ನಿನ್ನ ಮಕ್ಕಳ
೧೭ ಹೆಂಡರೂ ನಾವೆಯೊಳಗಿಂದ ಹೊರಗೆ ಬನ್ನಿರಿ. ಅವು ಭೂಮಿ
ಯ ಮೇಲೆ ಅಧಿಕವಾಗಿ ಜನ್ಮಿಸಿ, ಅಭಿವೃದ್ಧಿಯಾಗಿ, ಭೂಮಿಯ
ಲ್ಲಿ ಹೆಚ್ಚುವ ಹಾಗೆ, ಎಲ್ಲಾ ಮಾಂಸದಲ್ಲಿ ಪಕ್ಷಿಗಳೂ ಮೃಗಗಳೂ
ಭೂಮಿಯ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಗಳೂ ಆಗಿರುವಂ
ಥ, ನಿನ್ನ ಬಳ್ಳಿಯಲ್ಲಿರುವ, ಎಲ್ಲಾ ಜೀವ ಜಂತುಗಳನ್ನು ನಿನ್ನ
ಸಂಗತ ಹೊರಗೆ ಬರ ಮಾಡು. ಆಗ ನೋಹನೂ, ಅವನ ಸಂಗ
ತ ಅವನ ಮಕ್ಕಳೂ, ಅವನ ಹೆಂಡತಿಯೂ, ಅವನ ಮಕ್ಕಳ
೧೮ ಹೆಂಡರೂ, ಹೊರಟರು. ಎಲ್ಲಾ ಮೃಗಗಳು ಎಲ್ಲಾ ಕ್ರಿಮಿಗಳು
ಎಲ್ಲಾ ಪಕ್ಷಿಗಳು ಭೂಮಿಯಲ್ಲಿ ಹರಿದಾಡುವ ಎಲ್ಲವುಗಳು ತಮ್ಮು
ತಮ್ಮು ಜಾತ್ಯನುಸಾರವಾಗಿ ನಾವೆಯೊಳಗಿಂದ ಹೊರಟವು.

೧೯ ಮತ್ತು ನೋಹನು ಕರ್ತನಿಗೆ ಪೀಠವನ್ನು ಕಟ್ಟಿ, ಶುದ್ಧವಾ
ದ ಎಲ್ಲಾ ಪಶುಗಳಲ್ಲಿಯೂ, ಶುದ್ಧವಾದ ಎಲ್ಲಾ ಪಕ್ಷಿಗಳಲ್ಲಿಯೂ



ತೆಗೆದು, ಪೀಠದ ಮೇಲೆ ದಹನ ಬಲಿಗಳನ್ನು ಅರ್ಪಿಸಿದನು.
೨೦ ಆಗ ಕರ್ತನು ಸುವಾಸನೆಯನ್ನು ಮೂಸಿ ನೋಡಿದನು. ತನ್ನ
ಹೃದಯದಲ್ಲಿ ಕರ್ತನು ಹೇಳಿ ಕೊಂಡದ್ದೇನಂದರೆ—ಇನ್ನು
ಮೇಲೆ ನಾನು ಮನುಷ್ಯನಿಗೋಸ್ಕರ ಭೂಮಿಯನ್ನು ಶಪಿಸು
ವದಿಲ್ಲ; ಯಾಕಂದರೆ ಮನುಷ್ಯನ ಹೃದಯದ ಕಲ್ಪನೆ ಅವನ
೨೧ ಚಿಕ್ಕತನದಾರಭ್ಯ ಕೆಟ್ಟದ್ದು. ನಾನು ಮಾಡಿದ ಪ್ರಕಾರ ಇನ್ನು
ಮುಂದೆ ಜೀವಿಗಳನ್ನೆಲ್ಲಾ ಹೊಡೆಯುವದಿಲ್ಲ. ಭೂಮಿಯು ಇರು
ವ ಮಟ್ಟಿಗೂ ಬಿತ್ತುವ ಕಾಲವೂ, ಕೊಯ್ಯುವ ಕಾಲವೂ, ತಂಪೂ,
ಶೆಖೆಯೂ, ಬೇಸಿಗೆ ಕಾಲವೂ, ಹಿಮ ಕಾಲವೂ, ಹಗಲೂ, ರಾತ್ರಿ
ಯೂ, ನಿಂತು ಹೋಗವು.

## ೯. ಸಂಧಿ.

೧ ಇದಲ್ಲದೆ ದೇವರು ನೋಹನನ್ನೂ, ಅವನ ಮಕ್ಕಳನ್ನೂ
ಆಶೀರ್ವದಿಸಿ, ಅವರಿಗೆ ಹೇಳಿದ್ದೇನಂದರೆ—ಅಭಿವೃದ್ಧಿಯಾಗಿ, ಹೆ
೨ ಚ್ಚಿ, ಭೂಮಿಯನ್ನು ತುಂಬಿಸಿರಿ. ಮತ್ತು ನಿಮ್ಮ ಭಯವೂ, ನಿ
ಮ್ಮ ಹೆದರಿಕೆಯೂ ಭೂಮಿಯ ಎಲ್ಲಾ ಮೃಗಗಳ ಮೇಲೆಯೂ,
ಆಕಾಶದ ಎಲ್ಲಾ ಪಕ್ಷಿಗಳ ಮೇಲೆಯೂ, ಭೂಮಿಯಲ್ಲಿ ಹರಿದಾ
ಡುವ ಎಲ್ಲಾದರ ಮೇಲೆಯೂ, ಸಮುದ್ರದ ಎಲ್ಲಾ ಮೀನುಗಳ
ಮೇಲೆಯೂ ಇರುವವು; ನಿಮ್ಮ ಕೈಗಳಲ್ಲಿ ಅವು ಕೊಡಲ್ಪಟ್ಟಿ
೩ ವೆ. ಹರಿದಾಡುವ ಜೀವ ಜಂತುಗಳೆಲ್ಲಾ ನಿಮಗೆ ಆಹಾರಕ್ಕಾಗಿರಲಿ.
ಹಸರು ಪಲ್ಯಗಳ ಹಾಗೆ ಅವುಗಳನ್ನೆಲ್ಲಾ ನಿಮಗೆ ಕೊಟ್ಟಿದ್ದೇನೆ.
೪ ಆದರೆ ಮಾಂಸವನ್ನು ಅದರ ಪ್ರಾಣವಾದ ರಕ್ತದ ಸಂಗತ ನೀವು
ತಿನ್ನ ಬಾರದು. ಇದಲ್ಲದೆ ನಿಮ್ಮ ಪ್ರಾಣಗಳಿಗೋಸ್ಕರ ನಿಮ್ಮ
೫ ರಕ್ತ ವಿಚಾರಿಸುವೆನು. ಎಲ್ಲಾ ಮೃಗಗಳ ಬಳ್ಳಿಯಿಂದ ಅದನ್ನು
ವಿಚಾರಿಸುವೆನು. ಮನುಷ್ಯನ ಪ್ರಾಣವನ್ನು ಮನುಷ್ಯನ ಬಳ್ಳಿ
ಯಿಂದಲೂ, ಅವನವನ ಸಹೋದರನ ಬಳ್ಳಿಯಿಂದಲೂ ವಿಚಾರಿ
೬ ಸುವೆನು. ಮನುಷ್ಯನ ರಕ್ತವನ್ನು ಚೆಲ್ಲುವವನ್ಯಾವನೋ, ಅವ
ನ ರಕ್ತವು ಮನುಷ್ಯನಿಂದ ಚೆಲ್ಲಲ್ಪಟ್ಟವದು. ಯಾಕಂದರೆ ತ
ನ್ನ ಸ್ವರೂಪದಲ್ಲಿ ದೇವರು ಮನುಷ್ಯನನ್ನು ಉಂಟು ಮಾಡಿ
೭ ದನು. ನೀವೇ ವೃದ್ಧಿಯಾಗಿ ಹೆಚ್ಚಿರಿ; ಭೂಮಿಯಲ್ಲಿ ಅಧಿಕವಾಗಿ
ಜನ್ಮಿಸಿ, ಅದರಲ್ಲಿ ಹೆಚ್ಚಿರಿ.

೮ ಮತ್ತು ದೇವರು ನೋಹನಿಗೂ, ಅವನ ಸಂಗತಲಿರುವ ಅವನ
೯ ಮಕ್ಕಳಿಗೂ ಹೇಳಿದ್ದೇನಂದರೆ—ಇಗೋ, ನಾನು ನನ್ನ ಬಕಂಬ
ಡಿಕೆಯನ್ನು ನಿಮ್ಮ ಸಂಗತಲೂ, ನಿಮ್ಮ ತರುವಾಯ ನಿಮ್ಮ ಬೀ
೧೦ ಜದ ಸಂಗತಲೂ, ನಾವೆಯೊಳಗಿಂದ ಹೊರಟ ಎಲ್ಲವುಗಳು ಮೊ
ದಲ್ಗೊಂಡು, ಭೂಮಿಯ ಎಲ್ಲಾ ಜೀವಿಗಳ ಪರ್ಯಂತರ, ಪಕ್ಷಿಗ
ಳೂ ಪಶುಗಳೂ ಭೂಮಿಯ ಎಲ್ಲಾ ಮೃಗಗಳೂ ಆಗಿರುವಂಥ,
ನಿಮ್ಮ ಸಂಗತ ಇರುವಂಥ, ಎಲ್ಲಾ ಜೀವ ಜಂತುಗಳ ಸಂಗತಲೂ,
೧೧ ಸ್ಥಾಪಿಸುತ್ತೇನೆ. ನನ್ನ ಬಕಂಬಡಿಕೆಯನ್ನು ನಿಮ್ಮ ಸಂಗತ ಸ್ಥಾ
ಪಿಸುತ್ತೇನೆ. ಏನಂದರೆ ಇನ್ನು ಮೇಲೆ ಪ್ರಳಯದ ಜಲಗಳಿಂದ
ಮಾಂಸವೆಲ್ಲಾ ಕಡೆಯಲ್ಪಡದು; ಮತ್ತು ಭೂಮಿಯನ್ನು ಹಾ
ಳು ಮಾಡುವದಕ್ಕೆ ಇನ್ನು ಪ್ರಳಯವು ಇರದು.

೧೨ ಮತ್ತು ದೇವರು ಹೇಳಿದ್ದೇನಂದರೆ—ನನಗೂ, ನಿಮಗೂ, ನಿ
ಮ್ಮ ಸಂಗತ ಇರುವ ಎಲ್ಲಾ ಜೀವ ಜಂತುಗಳಿಗೂ ನಡುವೆಯಾಗಿ
ನಿತ್ಯ ತಲ ತಲಾಂತರಗಳ ಪರ್ಯಂತರ ನಾನು ಮಾಡುವ ಬ
೧೩ ಕಂಬಡಿಕೆಗೆ ಗುರುತು ಇದೇ— ನನ್ನ ಬಿಲ್ಲು ಮೇಘುಗಳಲ್ಲಿ ಇ
ಟ್ಟಿದ್ದೇನೆ. ಅದು ನನಗೂ ಭೂಮಿಗೂ ಉಂಟಾಗಿರುವ ಬಕಂಬಡಿ
೧೪ ಕೆಯ ಗುರುತಾಗಿರುವದು. ನಾನು ಭೂಮಿಯ ಮೇಲೆ ಮೇಘು
ಗಳನ್ನು ತರಿಸುವಾಗ, ಆ ಬಿಲ್ಲು ಮೇಘುಗಳಲ್ಲಿ ಕಾಣುವದು.

೧೫ ಆಗ ನಾನು ನನಗೂ ನಿಮಗೂ ಮಾಂಸವಾಗಿರುವ ಎಲ್ಲಾ
ಜೀವ ಜಂತುಗಳಿಗೂ ನಡುವೆಯಾಗಿರುವ ನನ್ನ ಬಕಂಬಡಿಕೆಯ
ನ್ನು ಜ್ಞಾಪಕ ಮಾಡಿ ಕೊಳ್ಳುವೆನು. ಮತ್ತು ಜಲವು ಇನ್ನು ಮಾಂ
೧೬ ಸವೆಲ್ಲಾ ಕೆಡಿಸುವ ಪ್ರಳಯವಾಗದೆ ಇರುವದು. ಆ ಬಿಲ್ಲು ಮೇ
ಘುಗಳಲ್ಲಿರುವಾಗ, ನಾನು ಅದನ್ನು ನೋಡಿ, ದೇವರಿಗೂ, ಭೂ
ಮಿಯ ಮೇಲೆ ಮಾಂಸವಾಗಿರುವ ಎಲ್ಲಾ ಜೀವ ಜಂತುಗಳಿಗೂ
ನಡುವೆಯಾಗಿರುವ ನಿತ್ಯವಾದ ಬಕಂಬಡಿಕೆಯನ್ನು ಜ್ಞಾಪಕ ಮಾ
೧೭ ಡಿ ಕೊಳ್ಳುವ ಹಾಗೆ ಅದನ್ನು ನೋಡುವೆನು. ಮತ್ತು ದೇವರು
ನೋಹನಿಗೆ ಹೇಳಿದ್ದೇನಂದರೆ, ನಾನು ನನಗೂ ಭೂಮಿಯ ಮೇ
ಲಿರುವ ಎಲ್ಲಾ ಮಾಂಸಕ್ಕೂ ನಡುವೆ ಮಾಡಿದ ಬಕಂಬಡಿಕೆಗೆ ಇ
ದೇ ಗುರುತು.

೧೮ ನಾವೆಯೊಳಗಿಂದ ಹೊರಟು ಬಂದ ನೋಹನ ಮಕ್ಕಳು
ಯಾರಂದರೆ, ಶೇಮನು, ಹಾಮನು, ಯಾಫೆತನು. ಹಾಮನೆಂಬ
೧೯ ವನು ಕನಾನನ ತಂದೆಯು. ಈ ಮೂವರು ನೋಹನ ಮಕ್ಕಳು.
ಇವರಿಂದ ಭೂಮಿಯೆಲ್ಲೆಲ್ಲಾ ಜನರು ವಿಸ್ತರಿಸಿದರು.

೨೦ ನೋಹನು ವ್ಯವಸಾಯ ಮಾಡುವವನಾಗ ಪ್ರಾರಂಭಿಸಿ, ದ್ರಾ
೨೧ ಕ್ಷೇ ತೋಟ ಮಾಡಿದನು. ಮತ್ತು ದ್ರಾಕ್ಷೇ ರಸವನ್ನು ಕುಡಿದು,
೨೨ ಅಮಲು ಹತ್ತಿ, ತನ್ನ ಗುಡಾರದಲ್ಲಿ ಬೆತ್ತಲೆಯಾಗಿದ್ದನು. ಕನಾನನ
ತಂದೆಯಾದ ಹಾಮನು ತನ್ನ ತಂದೆಯ ನಿರ್ವಾಣತ್ವವನ್ನು
೨೩ ನೋಡಿ, ಹೊರಗಿರುವ ತನ್ನ ಸಹೋದರರಿಬ್ಬರಿಗೆ ತಿಳ್ಳಿಸಿದನು.
ಆಗ ಶೇಮನೂ, ಯಾಫೆತನೂ ಬಟ್ಟೆಯನ್ನು ತಕ್ಕೊಂಡು, ತ
ಮ್ಮಿಬ್ಬರ ಹೆಗಲಲ್ಲಿ ಇಟ್ಟು ಕೊಂಡು, ಹಿಂಭಾಗವಾಗಿ ಹೋಗಿ, ತ
ಮ್ಮ ತಂದೆಯ ನಿರ್ವಾಣತ್ವವನ್ನು ಮುಚ್ಚಿದರು. ಅವರ ಮು
ಖಗಳು ಹಿಂಭಾಗವಾಗಿದ್ದದಂದ ತಮ್ಮ ತಂದೆಯ ನಿರ್ವಾಣ
ತ್ವವನ್ನು ನೋಡಲಿಲ್ಲ.

೨೪ ನೋಹನು ದ್ರಾಕ್ಷೇ ರಸವನ್ನು ಎಚ್ಚರವಾಗಿ, ತನ್ನ ಚಿಕ್ಕ ಮ
೨೫ಗನು ತನಗೆ ಮಾಡಿದ್ದನ್ನು ತಿಳ್ಳಿದು, ಹೇಳಿದ್ದೇನಂದರೆ—ಕನಾನನು
೨೬ ಶಾಪಗ್ರಸ್ತನಾಗಲಿ; ಅವನು ತನ್ನ ಸಹೋದರರಿಗೆ ದಾಸನು ದಾ
ಸನಾಗಿರಲಿ. ಮತ್ತು ಅವನು ಹೇಳಿದ್ದೇನಂದರೆ—ಶೇಮನ ದೇವ
ರಾದ ಕರ್ತನು ಸ್ತುತಿಸಲ್ಪಡಲಿ; ಕನಾನನು ಅವನಿಗೆ ದಾಸನಾಗಿ
೨೭ ರಲಿ. ಯಾಫೆತನನ್ನು ದೇವರು ವಿಸ್ತರಿಸಲಿ; ಅವನು ಶೇಮನ ಗು
ಡಾರಗಳಲ್ಲಿ ವಾಸವಾಗಿರಲಿ; ಕನಾನನು ಅವನಿಗೆ ದಾಸನಾಗಿರಲಿ.

೨೮ ಪ್ರಳಯವಾದ ಮೇಲೆ, ನೋಹನು ಮುನ್ನೂರ ಐವತ್ತು ವರು
ಷ ಬದುಕಿದನು. ನೋಹನ ದಿವಸಗಳೆಲ್ಲಾ ಒಂಭೈನೂರ ಐವ
ತ್ತು ವರುಷಗಳಾಗಿದ್ದವು. ಆಗ ಸತ್ತನು.

## ೧೦. ಸಂಧಿ.

೧ ನೋಹನ ಮಕ್ಕಳಾದ ಶೇಮನ, ಹಾಮನ, ಯಾಫೆತನ ವಂ
ಶಾವಳಿಯು ಇದೇ. ಪ್ರಳಯವಾದ ಮೇಲೆ ಅವರಿಗೆ ಮಕ್ಕಳು
೨ ಹುಟ್ಟಿದರು. ಯಾಫೆತನ ಮಕ್ಕಳು ಯಾರಂದರೆ, ಗೋಮೆರ್,
ಮಾಗೋಗ್, ಮಾದಯಿ, ಯಾವನ್, ತುಬಲ್, ಮೇಷಕ್, ತೀ
೩ ರಸ್. ಗೋಮೆರನ ಮಕ್ಕಳು ಯಾರಂದರೆ, ಅಶ್ಕೆನಸ್, ರೀಫಿ

೪ ತ್, ತೊಗರ್ಮಾ. ಯಾವಾನನ ಮಕ್ಕಳು ಯಾರಂದರೆ, ಎಲೀ
೫ ಷ, ತರ್ಷಿಷ್, ಕಿತ್ತೀಮ್, ದೊದನೀಮ್. ಇವರು ಜನಾಂಗಗಳ
ದ್ವೀಪಗಳಲ್ಲಿ, ಅವರವರ ದೇಶಗಳಲ್ಲಿ, ಅವರವರ ಭಾಷೆಗಳ ಹಾ
ಗೆ, ಅವರವರ ಕುಲಗಳ ಪ್ರಕಾರ, ಅವರವರ ಜನಾಂಗಗಳಲ್ಲಿ ವಿಸ್ತ
ರಿಸಲ್ಪಟ್ಟಿರು.

೬ ಹಾಮನ ಮಕ್ಕಳು ಯಾರಂದರೆ, ಕೂಷ, ಮಿಚ್ರಾಯೀ
೭ ಮ್, ಪೂತ್, ಕನಾನ್. ಕೂಷನ ಮಕ್ಕಳು ಯಾರಂದರೆ, ಸೇ
ಬಾ, ಹವೀಲಾ, ಸಬ್ತಾ, ರಾಘ್ಮಾ, ಸಬ್ತೆಕಾ. ರಾಘ್ಮನ ಮಕ್ಕಳು
ಯಾರಂದರೆ, ಶೇಬಾ, ದೇದನ್.

೮ ಇದಲ್ಲದೆ ಕೂಷನು ನಿಮ್ರೋದನನ್ನು ಪಡೆದನು. ಇವನು
೯ ಭೂಮಿಯಲ್ಲಿ ಶೂರನಾಗಲಾರಂಭಿಸಿ, ಕರ್ತನ ಮುಂದೆ ಬೇಟೆ
ಆಡುವದರಲ್ಲಿ ಶೂರನಾಗಿದ್ದನು. ಆದದರಿಂದ ಕರ್ತನ ಮುಂ
ದೆ ಬೇಟೆ ಆಡುವದರಲ್ಲಿ ನಿಮ್ರೋದನ ಹಾಗೆ ಶೂರನು, ಎಂಬ
ಮಾತು ಹುಟ್ಟಿತು. ಶಿನೆಯರ್ ದೇಶದಲ್ಲಿರುವ ಬಾಬೆಲ್, ಏರೆಕ್,
೧೦ ಅಕ್ಕದ್, ಕಲ್ನೆ, ಎಂಬ ಪಟ್ಟಣಗಳು ಅವನ ರಾಜ್ಯದ ಆರಂಭವಾಗಿ
೧೧ ದ್ದವು. ಆ ದೇಶದೊಳಗಿಂದ ಅಶೂರನು ಹೊರಟು, ನಿನೆವೆಯ
೧೨ ನ್ನೂ, ರೆಹೊಬೊತ್‌ಈರನ್ನೂ, ಕಾಲಹನ್ನೂ, ನಿನೆವೆಗೂ ಕಾಲ
ಹಿಗೂ ಮಧ್ಯದಲ್ಲಿರುವ ದೊಡ್ಡ ಪಟ್ಟಣವಾಗಿರುವ ರೆಸೆನನ್ನೂ ಕಟ್ಟಿ
ದನು.

೧೩ ಮಿಚ್ರಾಯೀಮನು ಲೂದ್ಯರನ್ನೂ, ಅನಾಮ್ಯರನ್ನೂ, ಲೆ
೧೪ ಹಾಬ್ಯರನ್ನೂ, ನಪ್ತೂಹ್ಯರನ್ನೂ, ಪತ್ರೂಸರನ್ನೂ, ಕಸ್ಲೂಹ್ಯ
ರನ್ನೂ, ಕಪ್ತೋರ್ಯರನ್ನೂ ಪಡೆದನು. ಕಸ್ಲೂಹ್ಯರದೆಸೆಯಿಂದ
ಫಿಲಿಷ್ಟ್ಯರು ಹೊರಟರು.

೧೫ ಕನಾನನು ತನ್ನ ಹೊಜ್ಜಲನಾದ ಚೇದೋನನನ್ನೂ, ಹೇತನ
೧೬ ನ್ನೂ, ಯೆಬೂಸಿಯನ್ನೂ, ಅಮೋರಿಯನನ್ನೂ, ಗಿರ್ಗಾಸಿಯ
೧೭ ನ್ನೂ, ಹಿವ್ವಿಯನ್ನೂ, ಅರ್ಕಿಯನ್ನೂ, ಸೀನಿಯನ್ನೂ, ಅ
೧೮ ರ್ವಾದಿಯನ್ನೂ, ಚೆಮಾರಿಯನ್ನೂ, ಹಮಾತಿಯನ್ನೂ ಪಡೆ
೧೯ ದನು. ಆ ಮೇಲೆ ಕನಾನ್ಯ ಕುಲಗಳು ವಿಸ್ತಾರವಾದವು. ಕನಾ
ನ್ಯನ ಮೇರೆಯು ಚೆದೋನಿನಿಂದ ಗೇರರ್ ಮಾರ್ಗವಾಗಿ ಗಾಜದ
ಪರ್ಯಂತರಕ್ಕೂ, ಸೊದೋಮ್, ಗಮೋರ, ಅದಮಾ, ಚೆ
ಬೋಯೀಮ್ ಮಾರ್ಗವಾಗಿ ಲಾಷದ ಪರ್ಯಂತರಕ್ಕೂ ಇರು
೨೦ ತ್ತದೆ. ಇವರು ತಮ್ಮ ಕುಲಗಳ, ತಮ್ಮ ಭಾಷೆಗಳ ಪ್ರಕಾರ, ತಮ್ಮ
ದೇಶಗಳಲ್ಲಿಯೂ, ಜನಾಂಗಗಳಲ್ಲಿಯೂ ಹಾಮನ ಮಕ್ಕಳು.

೨೧ ಇದಲ್ಲದೆ ಏಬೆರನ ಮಕ್ಕಳೆಲ್ಲರ ತಂದೆಯೂ, ದೊಡ್ಡ ಯಾ
೨೨ ಫೆತನ ತಮ್ಮನೂ ಆಗಿರುವ ಶೇಮನಿಗೆ ಸಂತತಿ ಹುಟ್ಟಿತು. ಶೇಮ
೨೩ ನ ಮಕ್ಕಳು ಯಾರಂದರೆ, ಏಲಾಮ್, ಅಶೂರ್, ಅರ್ಪಕ್ಷದ್, ಲೂ
ದ್, ಆರಮ್. ಆರಮನ ಮಕ್ಕಳು ಯಾರಂದರೆ, ಊಜ್, ಹೂ
೨೪ ಲ್, ಗೇತೆರ್, ಮಾಷ್. ಅರ್ಪಕ್ಷದನು ಶೇಲಹನನ್ನು ಪಡೆದನು. ಶೇ
೨೫ ಲಹನು ಏಬೆರನನ್ನು ಪಡೆದನು. ಏಬೆರನಿಗೆ ಇಬ್ಬರು ಮಕ್ಕಳು
ಹುಟ್ಟಿದರು. ಒಬ್ಬನ ಹೆಸರು ಬೇಲೆಗನು. ಯಾಕಂದರೆ ಅವನ ದಿ
ವಸಗಳಲ್ಲಿ ಭೂಮಿಯು ವಿಭಾಗಿಸಲ್ಪಟ್ಟಿತು. ಅವನ ಸಹೋದ
೨೬ ರನ ಹೆಸರು ಯೊಕ್ತಾನ್. ಯೊಕ್ತಾನನು ಅಲ್ಮೊದಾದನನ್ನೂ,
ಶೇಲೆಫನನ್ನೂ, ಹಚರ್ಮಾವೇತನನ್ನೂ, ಯೇರಹನನ್ನೂ, ಹ
೨೭ ದೋರಮನನ್ನೂ, ಊಜಲನನ್ನೂ, ದಿಕ್ಲನನ್ನೂ, ಓಬಲನನ್ನೂ,
೨೮ ಅಬಿಮಯೇಲನನ್ನೂ, ಶೇಬನನ್ನೂ, ಓಫಿರನನ್ನೂ, ಹವೀಲನ
೨೯ ನ್ನೂ, ಯೊಬಬನನ್ನೂ, ಪಡೆದನು. ಇವರೆಲ್ಲರು ಯೊಕ್ತಾನ
೩೦ ನ ಮಕ್ಕಳು. ಅವರ ನಿವಾಸವು ಮೇಷವು ಪೊದಲ್ಗೊಂಡು, ಪೂ
ರ್ವ ದಿಕ್ಕಿನ ಬೆಟ್ಟವಾಗಿರುವ ಸೇಫರಿನ ಪರ್ಯಂತರಕ್ಕೂ, ಇ
೩೧ ತ್ತು. ಇವರು ತಮ್ಮ ಕುಲಗಳ, ತಮ್ಮ ಭಾಷೆಗಳ ಪ್ರಕಾರ, ತಮ್ಮ
ದೇಶಗಳಲ್ಲಿ, ತಮ್ಮ ಜನಾಂಗಗಳ ಪ್ರಕಾರ ಶೇಮನ ಮಕ್ಕಳು. ಯಾ
೩೨ ವಾವ್ಯಗಳೂ, ಜನಾಂಗಗಳೂ ಅನುಸಾರವಾಗಿರುವ ನೋಹನ
ಮಕ್ಕಳ ಕುಲಗಳು ಇವೇ. ಇವುಗಳಿಂದ ಪ್ರಳಯದ ಮೇಲೆ ಜ
ನಾಂಗಗಳು ಭೂಮಿಯಲ್ಲಿ ವಿಸ್ತರಿಸಿದವು.

## ೧೧. ಸಂಧಿ.

೧ ಇದಲ್ಲದೆ ಭೂಮಿಯೆಲ್ಲಾ ಒಂದೇ ಭಾಷೆಯೂ, ಒಂದೇ ಮಾ
೨ ತೂ ಉಳ್ಳದ್ದಾಗಿತ್ತು. ಅವರು ಪೂರ್ವ ದಿಕ್ಕಿನಿಂದ ಹೊರಟು,
ಪ್ರಯಾಣ ಮಾಡುವಾಗ, ಶಿನೆಯರ್ ದೇಶದ ಬೈಲನ್ನು ಕಂಡು
ಕೊಂಡು, ಅಲ್ಲಿ ವಾಸ ಮಾಡಿದರು.

೩ ಮತ್ತು ಅವರು ಒಬ್ಬರಿಗೊಬ್ಬರು ಹೇಳಿ ಕೊಂಡದ್ದೇನಂದರೆ—
ಬನ್ನಿರಿ, ಇಟ್ಟಿಗೆಗಳನ್ನು ಮಾಡಿ ಕೊಂಡು, ಚನ್ನಾಗಿ ಸುಡುವ.
ಇಟ್ಟಿಗೆ ಅವರಿಗೆ ಕಲ್ಲಿಗಾಗಿಯೂ, ಜೇಡು ಅವರಿಗೆ ಸುಣ್ಣಕ್ಕಾಗಿ
೪ ಯೂ ಇತ್ತು. ಮತ್ತು ಅವರು ಹೇಳಿದ್ದೇನಂದರೆ—ಬನ್ನಿರಿ, ನಾ
ವು ಎಲ್ಲಾ ಭೂಮಿಯ ಮೇಲೆ ಚದರಿ ಹೋಗದ ಹಾಗೆ, ನಮಗೆ
ಪಟ್ಟಣವನ್ನೂ, ಗೋಪುರವನ್ನೂ ಕಟ್ಟಿ ಕೊಳ್ಳೋಣ; ಅದರ ತ
೫ ಲೆಯು ಆಕಾಶದಲ್ಲಿರಲಿ. ನಮಗೆ ಹೆಸರನ್ನು ಮಾಡಿ ಕೊಳ್ಳೋ
ಣ. ಆಗ ಕರ್ತನು ನರಪುತ್ರರು ಕಟ್ಟುವ ಪಟ್ಟಣವನ್ನೂ ಗೋಪುರ
೬ ವನ್ನೂ ನೋಡುವದಕ್ಕೆ ಇಳಿದು ಬಂದನು. ಮತ್ತು ಕರ್ತನು
ಹೇಳಿದ್ದೇನಂದರೆ—ಇಗೋ, ಜನವು ಒಂದೇ; ಅವರೆಲ್ಲರಿಗೆ ಒಂದೇ
ಭಾಷೆ, ಅವರು ಮಾಡಲಾರಂಭಿಸಿದ್ದು ಇದೇ. ಇನ್ನು ಮೇಲೆ ಅ
೭ ವರು ಮಾಡ ಯೋಚಿಸಿದ್ದೆಲ್ಲಾದಕ್ಕೆ ಅಡ್ಡಿಯಾಗದು. ಎಲೇ,
ನಾವು ಇಳಿದು, ಅವರು ಒಬ್ಬರ ಮಾತು ಒಬ್ಬರು ಕೇಳದ ಹಾ
೮ ಗೆ, ಅವರ ಮಾತನ್ನು ಅಲ್ಲಿ ಗಲಿಬಿಲಿ ಮಾಡುವ. ಹೀಗೆ ಕರ್ತನು
ಅವರನ್ನು ಅಲ್ಲಿಂದ ಎಲ್ಲಾ ಭೂಮಿಯ ಮೇಲೆ ಚದರ ಮಾಡಿದ
೯ ನು. ಮತ್ತು ಆ ಪಟ್ಟಣ ಕಟ್ಟುವದನ್ನು ನಿಲ್ಲಿಸಿ ಬಿಟ್ಟರು. ಅದಕ್ಕೋಸ್ಕರ
ಅದಕ್ಕೆ ಬಾಬೆಲ್ ಎಂಬ ಹೆಸರಾಯಿತು; ಯಾಕಂದರೆ ಅ
ಲ್ಲಿ ಕರ್ತನು ಎಲ್ಲಾ ಭೂಮಿಯ ಮಾತು ಗಲಿಬಿಲಿ ಮಾಡಿದನು;
ಅಲ್ಲಿಂದ ಕರ್ತನು ಅವರನ್ನು ಎಲ್ಲಾ ಭೂಮಿಯ ಮೇಲೆ ಚದ
ರ ಮಾಡಿದನು.

೧೦ ಶೇಮನ ವಂಶಾವಳಿಯು ಯಾವದಂದರೆ—ಶೇಮನು ನೂರು
ವರುಷದವನಾಗಿದ್ದಾಗ, ಪ್ರಳಯವಾದ ಎರಡು ವರುಷದ ಮೇಲೆ,
೧೧ ಅರ್ಪಕ್ಷದನನ್ನು ಪಡೆದನು. ಶೇಮನು ಅರ್ಪಕ್ಷದನನ್ನು ಪಡೆ
ದ ಮೇಲೆ, ಐನೂರು ವರುಷ ಬದುಕಿ, ಕುಮಾರ ಕುಮಾ
೧೨ ರ್ತೆಗಳನ್ನು ಪಡೆದನು. ಅರ್ಪಕ್ಷದನು ಮೂವತ್ತೈದು ವರುಷ
ಬದುಕಿ, ಶೇಲಹನನ್ನು ಪಡೆದನು. ಅರ್ಪಕ್ಷದನು ಶೇಲಹನನ್ನು
೧೩ ಪಡೆದ ಮೇಲೆ, ನಾನೂರ ಮೂರು ವರುಷ ಬದುಕಿ, ಕುಮಾರ
ಕುಮಾರ್ತೆಗಳನ್ನು ಪಡೆದನು. ಶೇಲಹನು ಮೂವತ್ತು ವರುಷ
೧೪ ಬದುಕಿ, ಏಬೆರನನ್ನು ಪಡೆದನು. ಶೇಲಹನು ಏಬೆರನನ್ನು ಪಡೆ
ದ ಮೇಲೆ ನಾನೂರ ಮೂರು ವರುಷ ಬದುಕಿ, ಕುಮಾರ ಕು
೧೫ ಮಾರ್ತೆಗಳನ್ನು ಪಡೆದನು. ಏಬೆರನು ಮೂವತ್ತು ನಾಲ್ಕು ವರು



೧೬ ಷದವನಾಗಿದ್ದು ಪೇಲೆಗನನ್ನು ಪಡೆದನು. ಏಬೆರನು ಪೇಲೆಗನನ್ನು
ಪಡೆದ ಮೇಲೆ, ನಾನೂರ ಮೂವತ್ತು ವರುಷ ಬದುಕಿ, ಕುಮಾ
೧೭ ರ ಕುಮಾರ್ತೆಗಳನ್ನು ಪಡೆದನು. ಪೇಲೆಗನು ಮೂವತ್ತು ವರು
೧೮ ಷದವನಾಗಿದ್ದು, ರೇಯುವನ್ನು ಪಡೆದನು. ಪೇಲೆಗನು ರೇಯು
ವನ್ನು ಪಡೆದ ಮೇಲೆ, ಇನ್ನೂರ ಒಂಭತ್ತು ವರುಷ ಬದುಕಿ,
೧೯ ಕುಮಾರ ಕುಮಾರ್ತೆಗಳನ್ನು ಪಡೆದನು. ರೇಯುವು ಮೂವ
೨೦ ತ್ತೆರಡು ವರುಷ ಬದುಕಿ, ಸೆರೂಗನನ್ನು ಪಡೆದನು. ರೇಯುವು
ಸೆರೂಗನನ್ನು ಪಡೆದ ಮೇಲೆ, ಇನ್ನೂರ ಏಳು ವರುಷ ಬದುಕಿ,
೨೧ ಕುಮಾರ ಕುಮಾರ್ತೆಗಳನ್ನು ಪಡೆದನು. ಸೆರೂಗನು ಮೂವ
೨೩ ತ್ತು ವರುಷ ಬದುಕಿ, ನಾಹೊರನನ್ನು ಪಡೆದನು. ಸೆರೂಗನು
ನಾಹೊರನನ್ನು ಪಡೆದ ಮೇಲೆ, ಇನ್ನೂರು ವರುಷ ಬದುಕಿ,
೨೪ ಕುಮಾರ ಕುಮಾರ್ತೆಗಳನ್ನು ಪಡೆದನು. ನಾಹೊರನು ಇಪ್ಪ
೨೫ ತ್ತೊಂಭತು ವರುಷ ಬದುಕಿ, ತೇರಹನನ್ನು ಪಡೆದನು. ನಾಹೊ
ರನು ತೇರಹನನ್ನು ಪಡೆದ ಮೇಲೆ, ನೂರ ಹತ್ತೊಂಭತ್ತು ವರು
೨೬ ಷ ಬದುಕಿ, ಕುಮಾರ ಕುಮಾರ್ತೆಗಳನ್ನು ಪಡೆದನು. ತೇರಹ
ನು ಎಪ್ಪತ್ತು ವರುಷ ಬದುಕಿ, ಅಬ್ರಾಮನನ್ನೂ, ನಾಹೊರನ
ನ್ನೂ, ಹಾರಾನನನ್ನೂ ಪಡೆದನು.

೨೭ ತೇರಹನ ವಂಶಾವಳಿ ಯಾವದಂದರೆ—ತೇರಹನು ಅಬ್ರಾಮ
ನನ್ನೂ, ನಾಹೊರನನ್ನೂ, ಹಾರಾನನನ್ನೂ ಪಡೆದನು. ಹಾರಾನ
೨೮ ನು ಲೋಟನನ್ನು ಪಡೆದನು. ಆದರೆ ಹಾರಾನನು ತನ್ನ ತಂ
ದೆಯಾದ ತೇರಹನ ಮುಂದೆ, ತಾನು ಹುಟ್ಟಿದ ಕೀಮೆಯಾಗಿ
೨೯ ರುವ ಕಸ್ದೀಯರ ಊರಿನಲ್ಲಿ, ಸತ್ತನು. ಅಬ್ರಾಮನೂ ನಾಹೊ
ರನೂ ತಮಗೆ ಹೆಂಡರನ್ನು ತಕ್ಕೊಂಡರು. ಅಬ್ರಾಮನ ಹೆಂಡತಿ
ಯ ಹೆಸರು ಸಾರ್ಯೆ; ನಾಹೊರನ ಹೆಂಡತಿಯ ಹೆಸರು ಮಿಲ್ಕಾ;
ಇವಳು ಮಿಲ್ಕಳಿಗೂ ಇಸ್ಕಳಿಗೂ ತಂದೆಯಾಗಿರುವ ಹಾರಾನನ
೩೦ ಮಗಳು. ಆದರೆ ಸಾರ್ಯೆ ಮಗುವಿಲ್ಲದೆ ಬಂಜೆಯಾಗಿದ್ದಳು.
೩೧ ಇದಲ್ಲದೆ ತೇರಹನು ತನ್ನ ಮಗನಾದ ಅಬ್ರಾಮನನ್ನೂ, ತನ್ನ
ಮೊಮ್ಮಗನೂ ಹಾರಾನನ ಮಗನೂ ಆಗಿರುವ ಲೋಟನನ್ನೂ,
ತನ್ನ ಸೊಸೆಯೂ ಅಬ್ರಾಮನ ಹೆಂಡತಿಯೂ ಆಗಿರುವ ಸಾರ್ಯೆ
ಯನ್ನೂ ಕರ ಕೊಂಡನು. ಇವರು ಕೂಡಾ ಕಾನಾನ್ ದೇಶಕ್ಕೆ
ಹೋಗುವದಕ್ಕೋಸ್ಕರ ಕಸ್ದೀಯರ ಊರನ್ನು ಬಿಟ್ಟು, ಹಾ
೩೨ ರಾನಿನ ಪರ್ಯಂತರ ಬಂದು, ಅಲ್ಲಿ ವಾಸವಾಗಿದ್ದರು. ತೇರಹ
ನ ದಿವಸಗಳು ಇನ್ನೂರ ಐದು ವರುಷಗಳಾಗಿದ್ದವು. ಆಗ ತೇ
ರಹನು ಹಾರಾನಿನಲ್ಲಿ ಸತ್ತನು.

## ೧೨. ಸಂಧಿ.

೧ ಮತ್ತು ಕರ್ತನು ಅಬ್ರಾಮನಿಗೆ ಹೇಳಿ ಇದ್ದದ್ದೇನಂದರೆ, ನಿನ್ನ
ದೇಶದೊಳಗಿಂದಲೂ ನಿನ್ನ ಬಂಧುಗಳ ಬಳಿಯಿಂದಲೂ, ನಿನ್ನ
೨ ತಂದೆಯ ಮನೆಯೊಳಗಿಂದಲೂ, ನಾನು ನಿನಗೆ ತೋರಿಸುವ
ದೇಶಕ್ಕೆ ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾ
ಗ ಮಾಡಿ, ನಿನ್ನನ್ನು ಆಶೀರ್ವದಿಸಿ, ನಿನ್ನ ಹೆಸರು ದೊಡ್ಡದಾಗ
೩ ಮಾಡುವೆನು; ನೀನು ಆಶೀರ್ವಾದವಾಗಿರುವಿ. ನಿನ್ನನ್ನು ಆಶೀ
ರ್ವದಿಸುವವರನ್ನು ಆಶೀರ್ವದಿಸುವೆನು, ನಿನ್ನನ್ನು ಶಪಿಸುವವ
ರನ್ನು ಶಪಿಸುವೆನು, ಭೂಮಿಯ ಕುಲಗಳೆಲ್ಲಾ ನಿನ್ನಲ್ಲಿ ಆಶೀರ್ವ
ದಿಸಲ್ಪಡುವವು.

೪ ಆಗ ಅಬ್ರಾಮನು, ಕರ್ತನು ತನಗೆ ಹೇಳಿದ ಪ್ರಕಾರ, ಹೋ
ದನು. ಲೋಟನು ಅವನ ಸಂಗಡ ಹೋದನು. ಅಬ್ರಾಮನು
ಹಾರಾನಿನಿಂದ ಹೊರಟಾಗ, ಎಪ್ಪತ್ತೈದು ವರುಷದವನಾಗಿದ್ದ
೫ ನು. ಇದಲ್ಲದೆ ಅಬ್ರಾಮನು ತನ್ನ ಹೆಂಡತಿಯಾದ ಸಾರ್ಯೆಯ
ನ್ನೂ, ತನ್ನ ಸಹೋದರನ ಮಗನಾದ ಲೋಟನನ್ನೂ, ಅವರು
ಸಂಪಾದಿಸಿದ ಎಲ್ಲಾ ಸಂಪತ್ತನ್ನೂ, ಹಾರಾನಿನಲ್ಲಿ ಅವರು ಸಂ
ಪಾದಿಸಿ ಕೊಂಡ ಪ್ರಾಣಿಗಳನ್ನೂ ತೆಗೆದು ಕೊಂಡನು. ಅವರು
ಕಾನಾನ್ ದೇಶಕ್ಕೆ ಹೋಗ ಹೊರಟು, ಕಾನಾನ್ ದೇಶಕ್ಕೆ ಸೇರಿ
ದರು.

೬ ಅಬ್ರಾಮನು ಆ ದೇಶದಲ್ಲಿ ಶಿಕೆಮೆಂಬ ಸ್ಥಳದ ಪರ್ಯಂತರ
ಕ್ಕೂ ಮೋರೆ ಎಂಬ ತೋಪಿನ ಪರ್ಯಂತರಕ್ಕೂ ಹಾದು
೭ ಹೋದನು. ಆಗ ಕನಾನ್ಯರು ದೇಶದಲ್ಲಿದ್ದರು. ಮತ್ತು ಕರ್ತ
ನು ಅಬ್ರಾಮನಿಗೆ ಕಾಣಿಸಿ ಕೊಂಡು ಹೇಳಿದ್ದೇನಂದರೆ—ನಿನ್ನ ಬೀ
ಜಕ್ಕೆ ಈ ದೇಶವನ್ನು ಕೊಡುವೆನು. ಆಗಲವನು ಅಲ್ಲಿ ತನಗೆ ಕಾ
ಣಿಸಿ ಕೊಂಡ ಕರ್ತನಿಗೆ ಬಲಿ ಪೀಠವನ್ನು ಕಟ್ಟಿದನು.

೮ ಅಲ್ಲಿಂದ ಅವನು ಬೇಥೆಲಿನ ಪೂರ್ವದ ಬೆಟ್ಟಕ್ಕೆ ಹೋಗಿ,
ಬೇಥೆಲು ಪಶ್ಚಿಮದಲ್ಲಿ, ಆಯಿಯು ಪೂರ್ವದಲ್ಲಿ, ಇರುವ ಹಾ
ಗೆ, ತನ್ನ ಗುಡಾರವನ್ನು ಹೊಡೆದು, ಅಲ್ಲಿ ಕರ್ತನಿಗೆ ಬಲಿ ಪೀಠ
೯ ವನ್ನು ಕಟ್ಟಿ, ಕರ್ತನ ಹೆಸರನ್ನು ಕರೆದನು. ಮತ್ತು ಅಬ್ರಾಮ
ನು ಪ್ರಯಾಣವಾಗಿ ದಕ್ಷಿಣ ಕಡೆಗೆ ಹೋಗುತ್ತಾ ಇದ್ದನು.

೧೦ ಮತ್ತು ಆ ದೇಶದಲ್ಲಿ ಬರ ಉಂಟಾಯಿತು. ಆಗ ಅಬ್ರಾಮ
ನು ಐಗುಪ್ತಕ್ಕೆ ಅಲ್ಲಿ ಪರವಾಸ ಮಾಡುವದಕ್ಕೆ ಇಳಿದು ಹೋದ
೧೧ ನು. ಯಾಕಂದರೆ ಆ ದೇಶದಲ್ಲಿ ಭಾರವಾಗಿತ್ತು. ಅವನು
ಐಗುಪ್ತಕ್ಕೆ ಸಮೀಪ ಬಂದಾಗ, ತನ್ನ ಹೆಂಡತಿಯಾದ ಸಾರ್ಯೆ
ಗೆ ಹೇಳಿದ್ದೇನಂದರೆ—ಇಗೋ, ನೀನು ಬಳ್ಳೇ ರೂಪವತಿ ಎಂದು
೧೨ ನನಗೆ ತಿಳಿದದೆ. ಹೀಗಿರುವದರಿಂದ ಐಗುಪ್ತ್ಯರು ನಿನ್ನನ್ನು ನೋ
ಡುವಾಗ, ಇವಳೇ ಅವನ ಹೆಂಡತಿ ಎಂದು ಹೇಳಿ, ನನ್ನನ್ನು ಕೊಂ
೧೩ ದು ಹಾಕಿ, ನಿನ್ನನ್ನು ಬದುಕಿಸ್ಯಾರು. ನಿನಗೋಸ್ಕರ ನನಗೆ
ಬಳ್ಳೇದು ಆಗುವ ಹಾಗೆಯೂ, ನಿನಗೋಸ್ಕರ ನನ್ನ ಪ್ರಾಣ ಬ
ದುಕುವ ಹಾಗೆಯೂ, ನೀನು ನನ್ನ ತಂಗಿ ಎಂದು ದಯ ಮಾಡಿ
ಹೇಳು.

೧೪ ಅಬ್ರಾಮನು ಐಗುಪ್ತಕ್ಕೆ ಬಂದಾಗ, ಐಗುಪ್ತ್ಯರು ಆ ಸ್ತ್ರೀಯ
ನ್ನು, ಅವಳು ಬಹಳ ಸಾಂದರ್ಯವುಳ್ಳ ವಳೆಂದು, ನೋಡಿದರು.
೧೫ ಫರೋನನ ಪ್ರಧಾನರು ಅವಳನ್ನು ನೋಡಿ, ಫರೋನನ ಮುಂ
ದೆ ಅವಳನ್ನು ಹೊಗಳಲಾಗಿ, ಆ ಸ್ತ್ರೀಯು ಫರೋನನ ಮನೆಗೆ
೧೬ ವೈಯ್ಯಲ್ಪಟ್ಟಳು. ಆದರೆ ಅಬ್ರಾಮನಿಗೆ ಅವಳೋಸ್ಕರ ಬ
ಳ್ಳೇದನ್ನು ಮಾಡಿದನು. ಅವನಿಗೆ ಕುರಿ, ದನ, ಕತ್ತೆಗಳೂ, ದಾ
ಸ ದಾಸಿಯರೂ, ಹೆಣ್ಣು ಕತ್ತೆಗಳೂ, ಒಂಟೆಗಳೂ ಅವನಿಗೆ ಉಂ
೧೭ ಟಾಗಿದ್ದವು. ಆದರೆ ಕರ್ತನು ಫರೋನನನ್ನೂ, ಅವನ ಮನೆ
ಯನ್ನೂ ಅಬ್ರಾಮನ ಹೆಂಡತಿಯಾದ ಸಾರ್ಯೆಗೋಸ್ಕರ ದೊ
ಡ್ಡ ಬಾಧೆಗಳಿಂದ ಬಾಧಿಸಿದನು. ಆಗ ಫರೋನನು ಅಬ್ರಾಮನನ್ನು
ಕರಸಿ, ಇದನ್ನು ನನಗೆ ಯಾಕೆ ಮಾಡಿದಿ! ಇವಳು ನಿನ್ನ ಹೆಂಡ
೧೮ ತಿ ಎಂದು ಯಾಕೆ ನನಗೆ ತಿಳಿಸಲಿಲ್ಲ! ಅವಳು ನನ್ನ ತಂಗಿ ಎಂದು
ಯಾಕೆ ಹೇಳಿದಿ! ಹೇಳಿದ್ದರಿಂದ ಅವಳನ್ನು ನನಗೆ ಹೆಂಡತಿಯಾ
ಗಿ ಇಟ್ಟು ಕೊಳ್ಳುತ್ತಿದ್ದೆನು. ಆದರೆ ಈಗ, ಇಗೋ, ನಿನ್ನ ಹೆಂಡ

೨೦ ತಿ, ಅವಳನ್ನು ತೆಗೆದು ಕೊಂಡು ಹೋಗು, ಅಂದನು. ಇದ
ಲ್ಲದೆ ಭಕೋನನು ಅವನಿಗೋಸ್ಕರ ಜನರಿಗೆ ಅಪ್ಪಣೆ ಕೊಟ್ಟನು.
ಅವರು ಅವನನ್ನೂ, ಅವನ ಹೆಂಡತಿಯನ್ನೂ, ಅವನಿಗಿದ್ದದ್ದೆಲ್ಲಾ
ನ್ನೂ ಕಳುಹಿಸಿದರು.

## ೧೩. ಸಂಧಿ.

೧ ಆಗ ಅಬ್ರಾಮನು ತನ್ನ ಹೆಂಡತಿಯ ಸಂಗಡಲೂ, ತನಗೆ ಉಂ
ಟಾಗಿದ್ದದ್ದೆಲ್ಲಾದರ ಸಂಗಡಲೂ, ಲೋಟನು ಸಹಿತವಾಗಿ, ಐಗುಪ್ತವ
೨ ನ್ನು ಬಿಟ್ಟು, ದಕ್ಷಿಣಕ್ಕೆ ಏರಿ ಬಂದನು. ಇದಲ್ಲದೆ ಅಬ್ರಾಮನು
ದನಗಳಿಂದಲೂ, ಬೆಳ್ಳಿ ಭಂಗಾರದಿಂದಲೂ, ಬಹು ಘನವುಳ್ಳ
೩ ವನಾಗಿದ್ದನು. ಮತ್ತು ತನ್ನ ಪ್ರಯಾಣಗಳಲ್ಲಿ ದಕ್ಷಿಣದಿಂದ ಬೇ
ಥೆಲಿಗೆ, ಆರಂಭದಲ್ಲಿ ಅವನ ಗುಡಾರವಿದ್ದಂಥ, ಬೆಥೆಲಿಗೂ ಆಯಿ
೪ ಗೂ ಮಧ್ಯದಲ್ಲಿರುವಂಥ ಸ್ಥಳಕ್ಕೆ, ಮೊದಲು ಅವನು ಮಾಡಿದ
ಬಲಿಪೀಠವಿದ್ದಂಥ ಸ್ಥಳಕ್ಕೆ, ಬಂದನು. ಅಲ್ಲಿ ಅಬ್ರಾಮನು ಕರ್ತ
ನ ಹೆಸರನ್ನು ಕರೆದನು.

೫ ಇದಲ್ಲದೆ ಅಬ್ರಾಮನ ಸಂಗಡ ಬಂದ ಲೋಟನಿಗೆ ಸಹಾ ಕುರಿ
೬ ದನಗಳೂ ಗುಡಾರಗಳೂ ಇದ್ದವು. ಮತ್ತು ಅವರು ಏಕವಾಗಿ
ವಾಸಿಸುವ ಹಾಗೆ ಭೂಮಿಯು ತಾಳಲಾರದೆ ಇತ್ತು. ಯಾಕಂ
ದರೆ ಅವರು ಏಕವಾಗಿ ವಾಸಿಸ ಕೂಡದ ಹಾಗೆ, ಅವರ ಸಂಪತ್ತು
೭ ಬಹಳವಾಗಿತ್ತು. ಮತ್ತು ಅಬ್ರಾಮನ ದನ ಕಾಯುವವರಿಗೂ,
ಲೋಟನ ದನ ಕಾಯುವವರಿಗೂ ಜಗಳವಾಯಿತು. ಕನಾನ್ಯರೂ
೮ ಪೆರಿಜ್ಯರೂ ಆಗ ದೇಶದಲ್ಲಿ ವಾಸವಾಗಿದ್ದರು. ಹೀಗಿರಲಾಗಿ, ಅ
ಬ್ರಾಮನು ಲೋಟನಿಗೆ ಹೇಳಿದ್ದೇನಂದರೆ—ನನಗೂ ನಿನಗೂ, ನ
ನ್ನ ದನ ಕಾಯುವವರಿಗೂ ನಿನ್ನ ದನ ಕಾಯುವವರಿಗೂ ಜಗಳ
೯ ವಿರಬಾರದು. ನಾವು ಸಹೋದರರಾದ ಜನರಲ್ಲವೋ! ಭೂಮಿ
ಯೆಲ್ಲಾ ನಿನ್ನ ಮುಂದೆ ಇರುತ್ತದಲ್ಲವೋ! ಹಾಗಾದರೆ, ನನ್ನ ಬ
ಳಿಯಿಂದ ತೊಲಗು; ನೀನು ಎತ ಕಡೆಗೆ ಹೋದರೆ, ನಾನು ಬಲ
ಕಡೆಗೆ ಹೋಗುವೆನು; ಬಲ ಕಡೆಗೆ ಹೋದರೆ, ನಾನು ಎತ ಕಡೆಗೆ
ಹೋಗುವೆನು.

೧೦ ಲೋಟನು ತನ್ನ ಕಣ್ಣುಗಳನ್ನು ಎತ್ತಿ, ಯೊರ್ದನಿನ ಸು
ತ್ತಲಿರುವ ದೇಶವನ್ನೆಲ್ಲಾ ನೋಡಿದನು. ಯಾಕಂದರೆ ಕರ್ತನು
ಸೊದೋಮನ್ನೂ ಗಮೋರವನ್ನೂ ಕೆಡಿಸುವದಕ್ಕಿಂತ ಮುಂ
ಚೆ, ಅದೆಲ್ಲಾ ಜೋವಾರಿನ ಪರ್ಯಂತರ ನೀರುಳ್ಳ ಪ್ರದೇಶವೂ,
ಕರ್ತನ ತೋಟದ ಹಾಗೆಯೂ, ಐಗುಪ್ತ ದೇಶದ ಹಾಗೆಯೂ
೧೧ ಇತ್ತು. ಹೀಗಿರಲಾಗಿ, ಲೋಟನು ಯೊರ್ದನಿನ ಸುತ್ತಲಿರುವ
ದೇಶವನ್ನೆಲ್ಲಾ ತನಗೆ ಆರಿಸಿ ತೆಗೆದು ಕೊಂಡನು; ಲೋಟನು ಮೂ
ರ್ಣಕ್ಕೆ ಹೊರಟನು; ಹೀಗೆ ಅವರು ಬಬ್ಬರಿಗೊಬ್ಬರು ಬೇರೆ
೧೨ ಯಾದರು. ಅಬ್ರಾಮನು ಕಾನಾನ್ ದೇಶದಲ್ಲಿ ವಸ್ತಿ ಮಾಡಿದನು.
ಲೋಟನು ಸೊದೋಮಿನ ಬಳಿಯ ಗುಡಾರಗಳನ್ನು ಹೊಡೆದು,
೧೩ ಸುತ್ತಲಿರುವ ಪಟ್ಟಣಗಳಲ್ಲಿ ವಸ್ತಿ ಮಾಡಿದನು. ಆದರೆ ಸೊದೋ
ಮಿನ ಮನುಷ್ಯರು ದುಷ್ಟರೂ, ಕರ್ತನಿಗೆ ವಿರೋಧವಾಗಿ ಬಹು
ಪಾಪಿಷ್ಠರೂ ಆಗಿದ್ದರು.

೧೪ ಇದಲ್ಲದೆ ಲೋಟನು ಅವನನ್ನು ಅಗಲಿದ ಮೇಲೆ, ಕರ್ತ
ನು ಅಬ್ರಾಮನಿಗೆ ಹೇಳಿದ್ದೇನಂದರೆ, ನಿನ್ನ ಕಣ್ಣುಗಳನ್ನು ಎತ್ತಿ
ನೀನಿರುವ ಸ್ಥಳದಿಂದ ಉತ್ತರಕ್ಕೂ ದಕ್ಷಿಣಕ್ಕೂ, ಪೂರ್ವಕ್ಕೂ
ಪಶ್ಚಿಮಕ್ಕೂ ನೋಡು. ಯಾಕಂದರೆ ನೀನು ನೋಡುವ ದೇಶ
೧೫ ವನ್ನೆಲ್ಲಾ ನಿನಗೂ ನಿನ್ನ ಬೀಜಕ್ಕೂ ನಿತ್ಯವಾಗಿ ಕೊಡುವೆನು.
೧೬ ಮತ್ತು ನಿನ್ನ ಬೀಜವನ್ನು ಭೂಮಿಯ ಧೂಳಿಯ ಹಾಗೆ ಮಾ
ಡುವೆನು. ಭೂಮಿಯ ಧೂಳನ್ನು ಬಬ್ಬನು ಎಣಿಸ ಬಹುದಾ
೧೭ ದರೆ, ನಿನ್ನ ಬೀಜವು ಸಹಾ ಎಣಿಸಲ್ಪಡುವದು. ಎದ್ದು, ಭೂ
ಮಿಯ ಉದ್ದಗಲದ ಪ್ರಕಾರ ಅದರಲ್ಲಿ ತಿರುಗಾಡು; ನಿನಗೆ ಅದ
೧೮ ನ್ನು ಕೊಡುವೆನು. ಆಗ ಅಬ್ರಾಮನು ಗುಡಾರ ತಕ್ಕೊಂಡು, ಹೆ
ಬ್ರೋನಿನಲ್ಲಿರುವ ಮಮ್ರೆ ತೋಪಿನಲ್ಲಿ ಬಂದು ವಾಸವಾಗಿದ್ದನು.
ಅಲ್ಲಿ ಕರ್ತನಿಗೆ ಪೀಠವನ್ನು ಕಟ್ಟಿದನು.

## ೧೪. ಸಂಧಿ.

೧ ಶಿನೆಯಾರಿನ ಅರಸನಾದ ಅಮ್ರಫೇಲನೂ, ಎಲ್ಲಸಾರಿನ ಅರಸ
ನಾದ ಅರಿಯೋಕನೂ, ಏಲಾಮಿನ ಅರಸನಾದ ಕೆದೊರ್ಲಾಪೋ
ಮೆರನೂ, ಜನಾಂಗಗಳ ಅರಸನಾದ ಥಿದಾಲನೂ, ಇವರ ದಿನಗ
೨ ಳಲ್ಲಿ ಆದದ್ದೇನಂದರೆ—ಇವರು ಸೊದೋಮಿನ ಅರಸನಾದ ಬೇ
ರನಿಗೂ, ಗಮೋರದ ಅರಸನಾದ ಬಿರ್ಷನಿಗೂ, ಅದ್ಮದ ಅರ
ಸನಾದ ಶಿನಾಬನಿಗೂ, ಜೆಬೋಯಿಮಿನ ಅರಸನಾದ ಶೆಮೇಬರ
ನಿಗೂ, ಬೇಲಾ ಎಂಬ ಜೋವರಿನ ಅರಸನಿಗೂ ವಿರೋಧವಾಗಿ
೩ ಯುದ್ಧ ಮಾಡಿದರು. ಇವರೆಲ್ಲರು ಉಪ್ಪಿನ ಸಮುದ್ರವಾಗಿರು
೪ ವ ಸಿದ್ದಿಮ್ ತಗ್ಗಿನಲ್ಲಿ ಕೂಡಿ ಬಂದರು. ಅವರು ಹನ್ನೆರಡು ವರು
ಷ ಕೆದೊರ್ಲಾಪೋಮೆರನಿಗೆ ಸೇವೆ ಮಾಡಿ, ಹದಿಮೂರನೇ ವರು
೫ ಷದಲ್ಲಿ ತಿರುಗ ಬಿದ್ದರು. ಹದಿನಾಲ್ಕನೇ ವರುಷದಲ್ಲಿ ಕೆದೊರ್ಲಾ
ಪೋಮೆರನೂ, ಅವನ ಸಂಗಡ ಇರುವ ಅರಸರೂ ಬಂದು, ಅ
ಷ್ಟೆರೋತ್ ಕರ್ನಾಯಿಮಲ್ಲಿ ರಾಫಾಯರನ್ನೂ, ಹಾಮಿನಲ್ಲಿ ಜೂ
ಜ್ಯರನ್ನೂ, ಶಾವೆಕಿರ್ಯಾತಾಯಿಮಿನಲ್ಲಿ ಏಮಿಯರನ್ನೂ,
೬ ಹೋರಿಯರನ್ನೂ ಅವರ ಬೆಟ್ಟವಾದ ಸೇಯಿರಿನಲ್ಲಿ ಅರಣ್ಯಕ್ಕೆ
ಸಮೀಪವಾದ ಎಲ್ಪಾರಾನಿನ ಪರ್ಯಂತರಕ್ಕೂ ಸಂಹರಿಸಿ, ತಿ
ರುಗಿ ಕೊಂಡು, ಕಾದೆಷ್ ಎಂಬ ಎನ್ಮಿಷ್ಪಾತಿಗೆ ಬಂದು, ಅಮಲೇಕಿ
ಯರ ಎಲ್ಲಾ ಬೈಲನ್ನೂ, ಹಚಚೋನ್ತಾಮರಿನಲ್ಲಿ ವಾಸವಾಗಿರು
೭ ವ ಅಮೋರ್ಯರನ್ನೂ ಸಂಹರಿಸಿದರು.

ಆಗ ಸೊದೋಮಿನ ಅರಸನೂ, ಗಮೋರದ ಅರಸನೂ,
ಅದ್ಮದ ಅರಸನೂ, ಜೆಬೋಯಿಮಿನ ಅರಸನೂ, ಜೋವಾರೆಂಬ
೮ ಬೇಲದ ಅರಸನೂ ಹೊರಟು, ಏಲಾಮಿನ ಅರಸನಾದ ಕೆದೊರ್ಲಾ
ಪೋಮೆರನಿಗೂ, ಜನಾಂಗಗಳ ಅರಸನಾದ ಥಿದಾಲನಿಗೂ, ಶಿನೆ
ಯಾರಿನ ಅರಸನಾದ ಅಮ್ರಫೇಲನಿಗೂ, ಎಲ್ಲಸಾರಿನ ಅರಸನಾ
ದ ಅರಿಯೋಕನಿಗೂ ವಿರೋಧವಾಗಿ ಯುದ್ಧ ಮಾಡಿದರು—
ನಾಲ್ವರಿಗೆ ವಿರೋಧವಾಗಿ ಐದು ಮಂದಿ ಅರಸರು. ಆದರೆ ಸಿದ್ದಿ
೯ ಮ್ ತಗ್ಗು ಜೇಡಿನ ಕುಣಿಗಳಿಂದ ತುಂಬಿ ಇತ್ತು. ಸೊದೋಮ್
ಗಮೋರಗಳ ಅರಸರು ಓಡಿ ಹೋಗುವಾಗ, ಅಲ್ಲಿ ಬಿದ್ದರು.
೧೦ ಉಳಿದವರು ಬೆಟ್ಟಕ್ಕೆ ಓಡಿ ಹೋದರು. ಆಗಲವರು ಸೊದೋ
ಮ ಗಮೋರಗಳ ಸಂಪತ್ತನ್ನೆಲ್ಲಾ, ಅವರ ಗ್ರಾಸವನ್ನೆಲ್ಲಾ, ತೆಗೆ
೧೧ ದು ಕೊಂಡು ಹೋದರು. ಅಬ್ರಾಮನ ಸಹೋದರನ ಮಗನೂ,
ಸೊದೋಮಿನಲ್ಲಿ ವಾಸವಾಗಿರುವವನೂ ಆದ ಲೋಟನನ್ನೂ,
ಅವನ ಸಂಪತ್ತನ್ನೂ ಸಹ ತೆಗೆದು ಕೊಂಡು ಹೋದರು.

೧೨ ತಪ್ಪಿಸಿ ಕೊಂಡವನೊಬ್ಬನು ಹೋಗಿ, ಇಬ್ರಿಯನಾದ ಅ



ಬ್ರಾಮನಿಗೆ ತಿಳಿಸಿದನು. ಇವನು ಎಷ್ಕೋಲನಿಗೂ ಅನೇರನಿಗೂ
ಸಹೋದರನಾಗಿರುವ, ಅಮೋರಿಯನಾದ ಮಂಮ್ರೆಯನ ತೋ
ಪಿನಲ್ಲಿ ವಾಸವಾಗಿರುತ್ತಿದ್ದನು. ಇವರಿಗೆ ಅಬ್ರಾಮನ ಸಂಗಡ ಬ
೧೪ ಂಬಂಧಿಕೆ ಇತ್ತು. ತನ್ನ ತಮ್ಮನು ಕೆಡೆಯಾಗ ವೈಯಲ್ಪಟ್ಟ
ನೆಂದು ಕೇಳಿ, ಅಬ್ರಾಮನು ತನ್ನ ಮನೆಯಲ್ಲಿ ಹುಟ್ಟಿದ ಶಿಕ್ಷಿತ
ರಾದ ಮುನ್ನೂರ ಹದಿನೆಂಟು ಮಂದಿ ದಾಸರನ್ನು ಯುದ್ಧಕ್ಕೆ
೧೫ ಸಿದ್ಧ ಮಾಡಿ, ದಾನಿನ ಪರ್ಯಂತರ ಹಿಂದಟ್ಟಿ, ರಾತ್ರಿಯಲ್ಲಿ ಅ
ವರಿಗೆ ವಿರೋಧವಾಗಿ ತನ್ನ ದಾಸರ ಸೈನ್ಯವನ್ನು ವಿಭಾಗಿಸಿ, ಅ
ವರನ್ನು ಹೊಪೆದು ದಮಸ್ಕದ ಬಲಕಡೆಯಲ್ಲಿರುವ ಹೋಬದ
೧೬ ಪರ್ಯಂತರ ಅವರನ್ನು ಹಿಂದಟ್ಟಿ, ಸಂಪತ್ತನ್ನೆಲ್ಲಾ ಹಿಂದಕ್ಕೆ
ತಕ್ಕೊಂಡು ಬಂದನು. ತನ್ನ ತಮ್ಮನಾದ ಲೋಟನನ್ನೂ ಅವ
ನ ಸಂಪತ್ತನ್ನೂ ಸಹ ಮತ್ತು ಹೆಂಗಸರನ್ನೂ ಜನರನ್ನೂ ತಿರಿಗಿ
ತಕ್ಕೊಂಡು ಬಂದನು.

೧೭ ಅವನು ಕೆದೊರ್ಲಾಪೋಮೆರನನ್ನೂ, ಅವನ ಸಂಗಡ ಇದ್ದ
ಅರಸರನ್ನೂ ಸಂಹರಿಸಿ, ತಿರಿಗಿ ಬಂದ ಮೇಲೆ ಸೊದೋಮಿನ ಅ
ರಸನು ಹೊರಟು, ಶಾವೆ ತಗ್ಗೆಂಬ ಅರಸಿನ ತಗ್ಗಿನ ಪರ್ಯಂತರ
೧೮ ಅವನನ್ನು ಎದುರುಗೊಳ್ಳ ಬಂದನು. ಮತ್ತು ಶಾಲೆಮಿನ ಅರ
ಸನಾದ ಮೆಲ್ಕಿಚೆದೆಕನು ರೊಟ್ಟಿಯನ್ನೂ ದ್ರಾಕ್ಷೇರಸವನ್ನೂ
೧೯ ಹೊರಗೆ ತಂದನು. ಅವನು ಮಹೋನ್ನತನಾದ ದೇವರ ಯಾ
ಜಕನು. ಇವನು ಅವನನ್ನು ಆಶೀರ್ವದಿಸಿ, ಹೇಳಿದ್ದೇನಂದರೆ—
ಅಬ್ರಾಮನು ಆಕಾಶವನ್ನೂ ಭೂಮಿಯನ್ನೂ ಹೊಂದಿರುವ ಮ
೨೦ ಹೋನ್ನತನಾದ ದೇವರಿಂದ ಆಶೀರ್ವದಿಸಲ್ಪಡಲಿ. ಮತ್ತು ನಿನ್ನ
ಶತ್ರುಗಳನ್ನು ನಿನ್ನ ಕೈಯಲ್ಲಿ ಒಪ್ಪಿಸಿದ ಮಹೋನ್ನತನಾದ
ದೇವರು ಆಶೀರ್ವದಿಸಲ್ಪಡಲಿ. ಆಗಲವನು ಅವನಿಗೆ ಎಲ್ಲಾದರ
ಲ್ಲಿ ಹತ್ತನೇ ಪಾಲನ್ನು ಕೊಟ್ಟನು.

೨೧ ಆ ಮೇಲೆ ಸೊದೋಮಿನ ಅರಸನು ಅಬ್ರಾಮನಿಗೆ ಪ್ರಾಣಗಳ
೨೦ ನ್ನು ನನಗೆ ಕೊಡು; ಸಂಪತ್ತನ್ನು ನೀನೇ ತಕ್ಕೋ, ಅಂದಾಗ, ಅ
೨೩ ಬ್ರಾಮನು ಸೊದೋಮಿನ ಅರಸನಿಗೆ ಹೇಳಿದ್ದೇನಂದರೆ—ನಿನ್ನವು
ಗಳಲ್ಲೆಲ್ಲಾ ನೂಲು ಮೊದಲುಗೊಂಡು ಕೆರದ ಬಾರಿನ ಪರ್ಯಂತ
ರವೂ ನಾನು ತಕ್ಕೊಳ್ಳುವದಿಲ್ಲವೆಂದು, ನನ್ನ ಕೈಯನ್ನು ಆಕಾ
ಶವನ್ನೂ ಭೂಮಿಯನ್ನೂ ಹೊಂದಿರುವ ಮಹೋನ್ನತ ದೇವ
ರಾಗಿರುವ ಕರ್ತನ ಕಡೆಗೆ ಎತ್ತಿದ್ದೇನೆ. ನಾನು ಅಬ್ರಾಮನನ್ನು
ಐಶ್ವರ್ಯವಂತನಾಗ ಮಾಡಿದೆನೆಂದು ನೀನು ಹೇಳ ಬಾರದು.
೨೪ ಯೌವನಸ್ಥರು ಉಂಡದ್ದೂ, ನನ್ನ ಸಂಗಡ ಹೋದ ಮನುಷ್ಯ
ರಾದ ಅನೇರ, ಎಷ್ಕೋಲ, ಮಂಮ್ರೆಯರ ಪಾಲೂ ಮಾತ್ರವಿ
ರಲಿ; ಇವರು ತಮ್ಮ ಪಾಲನ್ನು ತಕ್ಕೊಳ್ಳಲಿ.

## ೧೫. ಸಂಧಿ.

೧ ಈ ಕಾರ್ಯಗಳ ಬಳಿಕ ಕರ್ತನ ವಾಕ್ಯವು ಅಬ್ರಾಮನಿಗೆ
ದರ್ಶನದಲ್ಲಿ ಉಂಟಾಯಿತು, ಏನಂದರೆ—ಅಬ್ರಾಮನೇ, ಭಯ
ಪಡ ಬೇಡ; ನಾನೇ ನಿನಗೆ ಗುರಾಣಿಯೂ, ನಿನ್ನ ಬಹಳ ದೊಡ್ಡ
೨ ಫಲವೂ ಆಗಿದ್ದೇನೆ. ಅಬ್ರಾಮನು ನನ್ನ ಕರ್ತನಾದ ಯೆಹೋ
ವನೇ, ನಾನು ಮಕ್ಕಳಿಲ್ಲದವನಾಗಿರಲೂ, ಈ ದಮಸ್ಕದನಾದ
ಎಲಿಯೇಜರನು ನನ್ನ ಮನೆಯನ್ನು ಸಂಪಾದಿಸುವವನಾಗಿರಲೂ,
೩ ನನಗೆ ಏನು ಕೊಡುವಿ! ಅಂದನು. ಮತ್ತು ಅಬ್ರಾಮನು—ಇಗೋ,
ನೀನು ನನಗೆ ಬೀಜವನ್ನು ಕೊಡಲಿಲ್ಲ; ಇಗೋ, ನನ್ನ ಮನೆಯ
೪ ಮಗನು ನನಗೆ ಬಾಧ್ಯನಾಗಿರುವನು, ಅಂದಾಗ, ಅಗೋ, ಕರ್ತ
ನ ವಾಕ್ಯವು ಅವನಿಗೆ ಉಂಟಾಯಿತು; ಏನಂದರೆ—ಇವನು ನಿನ
ಗೆ ಬಾಧ್ಯನಾಗುವದಿಲ್ಲ; ನಿನ್ನ ಕರುಳುಗಳಿಂದ ಹೊರಗೆ ಬರುವವ
೫ ನೇ ನಿನಗೆ ಬಾಧ್ಯನಾಗುವನು. ಆಗಲವನು ಅವನನ್ನು ಹೊರಗೆ
ಕರಕೊಂಡು ಬಂದು—ಎಲಾ! ಆಕಾಶವನ್ನು ದೃಷ್ಟಿಸಿ, ಅವುಗಳ
ನ್ನು ಲೆಖ್ಖಿಸ ಶಕ್ತನಾದರೆ, ನಕ್ಷತ್ರಗಳನ್ನು ಲೆಖ್ಖ ಮಾಡು, ಎಂದು
ಹೇಳಿ, ಹಾಗೆಯೇ ನಿನ್ನ ಬೀಜವು ಆಗುವದೆಂದು ಅವನಿಗೆ ಹೇ
೬ ಳಿದನು. ಅವನು ಕರ್ತನಲ್ಲಿ ವಿಶ್ವಾಸವಿಟ್ಟನು; ಅವನು ಅದ
ನ್ನು ಅವನಿಗೆ ನೀತಿ ಎಂದು ಎಣಿಸಿದನು.

೭ ಮತ್ತು, ಈ ದೇಶವನ್ನು ಸ್ವತಂತ್ರಿಸಿ ಕೊಳ್ಳುವ ಹಾಗೆ, ನಿನಗೆ
ಕೊಡುವದಕ್ಕೆ ಕಸ್ದೀಯರ ಊರಿನಿಂದ ನಿನ್ನನ್ನು ಹೊರಗೆ ತಂ
೮ ದ ಕರ್ತನು ನಾನೇ ಎಂದು ಅವನಿಗೆ ಹೇಳಿದನು. ಅವನು, ನ
ನ್ನ ಕರ್ತನಾದ ಯೆಹೋವನೇ, ಅದನ್ನು ಸ್ವತಂತ್ರಿಸಿ ಕೊಳ್ಳು
ವೆನೆಂದು ಯಾವದರಿಂದ ತಿಳುಕೊಳ್ಳುವೆನು! ಅಂದಾಗ, ಅವನವ
೯ ನಿಗೆ, ಮೂರು ವರುಷದ ಕಡಸನ್ನೂ, ಮೂರು ವರುಷದ ಮೇಕೆ
ಯನ್ನೂ, ಮೂರು ವರುಷದ ಟಗರನ್ನೂ, ಬೆಳ್ಳವನ್ನೂ, ಪಾರಿ
೧೦ ವಾಳದ ಮರಿಯನ್ನೂ ತಕ್ಕೋ, ಅಂದನು. ಅವನು ಇವುಗಳ
ನ್ನೆಲ್ಲಾ ತೆಗೆದು ಕೊಂಡು, ನಡುವೆ ತುಂಡು ಮಾಡಿ, ತುಂಡು ತುಂ
ಡಿಗೆ ಎದುರಾಗಿ ಇಟ್ಟನು; ಆದರೆ ಪಕ್ಷಿಗಳನ್ನು ತುಂಡು ಮಾಡಲಿ
೧೧ ಲ್ಲ. ಹಕ್ಕಿಗಳು ಆ ಶವಗಳ ಮೇಲೆ ಇಳಿದು ಬಂದಾಗ, ಅಬ್ರಾ
ಮನು ಅವುಗಳನ್ನು ಓಡಿಸಿದನು.

೧೨ ಸೂರ್ಯನು ಅಸ್ತಮಿಸಲಾಗಿ, ಅಬ್ರಾಮನ ಮೇಲೆ ಗಾಢ
ನಿದ್ದೆ ಬಿತ್ತು. ಇಗೋ, ದಿಗುಲು, ಮಹಾ ಅಂಧಕಾರವು ಅವನ
೧೩ ಮೇಲೆ ಬಿತ್ತು. ಆಗಲವನು ಅಬ್ರಾಮನಿಗೆ ಹೇಳಿದ್ದೇನಂದರೆ—ನಿ
ನಗೆ ತಿಳಿಯ ತಕ್ಕದ್ದೆನಂದರೆ, ನಿನ್ನ ಬೀಜವಾದವರು ತಮ್ಮದಲ್ಲದ
ದೇಶದಲ್ಲಿ ಪರವಾಸವಾಗಿ ಅವರನ್ನು ಸೇವಿಸುವರು. ಅವರು ನಾ
ನೂರು ವರುಷ ಪರ್ಯಂತರ ಅವರನ್ನು ಕ್ರಮೆ ಪಡಿಸುವರು.
೧೪ ಮತ್ತು ಅವರು ಸೇವಿಸುವ ಜನಾಂಗಕ್ಕೆ ನಾನೇ ನ್ಯಾಯ ತೀರಿಸು
ವೆನು; ತರುವಾಯ ಮಹಾ ಸಂಪತ್ತು ಉಂಟಾದವರಾಗಿ ಹೊರಗೆ
೧೫ ಬರುವರು. ಆದರೆ ನೀನು ಸಮಾಧಾನದಿಂದ ನಿನ್ನ ತಂದೆಗಳ
ಹತ್ತರ ಬರುವಿ; ಬಳ್ಳೇ ಮುದಿ ಪ್ರಾಯದವನಾಗಿ ಹೂಣಲ್ಪಡು
೧೬ ವಿ. ಆದರೆ ನಾಲ್ಕನೇ ತರದಲ್ಲಿ ಅವರು ತಿರುಗಿ ಬರುವರು; ಯಾ
ಕಂದರೆ ಅಮೋರ್ಯರ ಅಕ್ರಮವು ಇನ್ನು ಪೂರ್ತಿಯಾಗಲಿ
೧೭ ಲ್ಲ. ಸೂರ್ಯನು ಮುಣುಗಿದ ಮೇಲೆ, ಕತ್ತಲಾದಾಗ, ಇಗೋ,
ಹೊಗೆ ಹಾಯುವ ಬಲೆಯೂ, ಉರಿಯುವ ದೀವಟಿಗೆಯೂ
ತುಂಡುಗಳ ನಡುವೆ ಹಾದು ಹೋದವು.

೧೮ ಅದೇ ದಿನದಲ್ಲಿ ಕರ್ತನು ಅಬ್ರಾಮನ ಸಂಗಡ ಬಹಂಬಂಧಿಕೆ
ಮಾಡಿ, ಹೇಳಿದ್ದೇನಂದರೆ—ಐಗುಪ್ತದ ನದಿಯಿಂದ ಮಹಾ ನದಿ
೧೯ ಯಾದ ಫ್ರಾತ ನದಿಯ ಪರ್ಯಂತರಕ್ಕಿರುವ ಈ ದೇಶವನ್ನು
೨೦ ಕೇನ್ಯರನ್ನೂ, ಕೆನಿಜ್ಜಿಯರನ್ನೂ, ಕದ್ಮೋನ್ಯರನ್ನೂ, ಹಿತ್ತಿಯ
೨೧ ರನ್ನೂ, ಪೆರಿಜ್ಜಿಯರನ್ನೂ, ರಾಫಾಯರನ್ನೂ, ಅಮೋರ್ಯರ
ನ್ನೂ, ಕನಾನ್ಯರನ್ನೂ, ಗಿರ್ಗಾಸ್ಯರನ್ನೂ, ಯೆಬೂಸ್ಯರ
ನ್ನೂ ನಿನ್ನ ಬೀಜಕ್ಕೆ ಕೊಡುತ್ತೇನೆ.

## ೧೬. ಸಂಧಿ.

೧ ಅಬ್ರಾಮನ ಹೆಂಡತಿಯಾದ ಸಾರೈ ಅವನಿಗೆ ಹೆರಲಿಲ್ಲ.
೨ ಅವಳಿಗೆ ಹಾಗರಳೆಂಬ ಐಗುಪ್ತ್ಯಳಾದ ಸೇವಕಳು ಇದ್ದಳು. ಹೀ
ಗಿರಲಾಗಿ ಸಾರೈ ಅಬ್ರಾಮನಿಗೆ, ಇಗೋ, ಹೆರದ ಹಾಗೆ, ಕರ್ತ
ನು ನನಗೆ ಅಡ್ಡಿ ಮಾಡಿದ್ದಾನೆ. ದಯ ಮಾಡಿ ನನ್ನ ಸೇವಕಳ
ಬಳ್ಳಿಗೆ ಹೋಗು. ಬಂದು ವೇಳೆ ಅವಳ ಮೂಲವಾಗಿ ನನ್ನ ಮ
ನೆ ಕಟ್ಟಲ್ಪಡುವದು, ಅಂದಳು. ಅಬ್ರಾಮನು ಸಾರೈಯ ಮಾ
೩ ತು ಕೇಳಿದನು. ಆಗ ಅಬ್ರಾಮನು ಕಾನಾನ್ ದೇಶದಲ್ಲಿ ಹತ್ತು
ವರುಷ ವಾಸಿಸಿದ ತರುವಾಯ, ಅಬ್ರಾಮನ ಹೆಂಡತಿಯಾದ ಸಾ
ರೈ ಐಗುಪ್ತ್ಯಳಾದ ತನ್ನ ಸೇವಕಳಾದ ಹಾಗರಳನ್ನು ತೆಗೆದು
ಕೊಂಡು, ಅವಳನ್ನು ತನ್ನ ಗಂಡನಾದ ಅಬ್ರಾಮನಿಗೆ ಹೆಂಡತಿ
೪ ಯಾಗಿ ಕೊಟ್ಟಳು. ಮತ್ತು ಅವನು ಹಾಗರಳ ಬಳ್ಳಿಗೆ ಹೋ
ದನು. ಅವಳು ಬಸುರಾಗಿ, ತಾನು ಬಸುರಾದೆನೆಂದು ನೋಡಿದಾ
೫ ಗ, ಅವಳ ಯಜಮಾನಿ ಉದಾಸೀನವಾದಳು. ಆಗ ಸಾರೈ ಅ
ಬ್ರಾಮನಿಗೆ, ನನಗೆ ಆದ ಅನ್ಯಾಯ ನಿನ್ನ ಮೇಲೆ ಇರಲಿ. ನಾನು
ನನ್ನ ಸೇವಕಳನ್ನು ನಿನ್ನ ಮಗ್ಗುಲಿಗೆ ಕೊಟ್ಟಿದ್ದೇನೆ. ಅವಳು ತಾನು
೬ ಬಸುರಾದೆನೆಂದು ನೋಡಿ, ನಾನು ಅವಳ ಕಣ್ಣುಗಳಿಗೆ ಉದಾಸೀ
ನವಾದೆನು. ಕರ್ತನು ನಿನಗೂ ನನಗೂ ನ್ಯಾಯ ತೀರಿಸಿತು. ಆ
ಗ ಅಬ್ರಾಮನು ಸಾರೈಗೆ—ಇಗೋ, ನಿನ್ನ ಸೇವಕಳು ನಿನ್ನ
ಕೈಯಲ್ಲಿ ಇದ್ದಾಳೆ; ನಿನಗೆ ಬಗ್ಗೇದೆಂದು ತೋಚುವ ಪ್ರಕಾರ,
ಅವಳಿಗೆ ಮಾಡು, ಅಂದನು. ಆಗ ಸಾರೈ ಅವಳನ್ನು ಶ್ರಮೆ
ಪಡಿಸಿದ್ದರಿಂದ, ಅವಳು ಅವಳ ಬಳ್ಳಿಯಿಂದ ಓಡಿ ಹೋದಳು.
೭ ಮತ್ತು ಕರ್ತನ ದೂತನು ಅರಣ್ಯದಲ್ಲಿ ಬಂದು ನೀರಿನ ಬು
ಗ್ಗೆಯ ಹತ್ತರ, ಶೂರಿನ ಮಾರ್ಗದಲ್ಲಿರುವ ಬುಗ್ಗೆಯ ಹತ್ತರ,
೮ ಅವಳನ್ನು ಕಂಡು, ಸಾರೈಯ ಸೇವಕಳಾದ ಹಾಗರಳೇ, ಎಲ್ಲಿಂ
ದ ಬಂದಿ? ಎಲ್ಲಿಗೆ ಹೋಗುತ್ತೀ! ಅಂದನು. ಅವಳು ನನ್ನ ಯ
ಜಮಾನಿಯಾದ ಸಾರೈಯ ಬಳ್ಳಿಯಿಂದ ಓಡಿ ಹೋಗುತ್ತಾ
೯ ಇದ್ದೇನೆ, ಅಂದಳು. ಕರ್ತನ ದೂತನು ಅವಳಿಗೆ, ನಿನ್ನ ಯಜ
ಮಾನಿಯ ಬಳ್ಳಿಗೆ ತಿರುಗು; ಅವಳ ಕೈ ಕೆಳಗೆ ನಿನ್ನನ್ನು ತಗ್ಗಿಸಿ
೧೦ ಕೋ, ಅಂದನು. ಮತ್ತು ಕರ್ತನ ದೂತನು ಅವಳಿಗೆ—ನಿನ್ನ
ಬೀಜವನ್ನು ಬಹಳವಾಗಿ ಹೆಚ್ಚಿಸುವೆನು; ಅದು ಹೆಚ್ಚಾಗಿರುವದರಿಂ
೧೧ ದ ಎಣಿಸಲ್ಪಡದು, ಅಂದನು. ಮತ್ತು ಕರ್ತನ ದೂತನು ಅ
ವಳಿಗೆ, ಇಗೋ, ಬಸುರಾಗಿದ್ದೀ; ಮಗನನ್ನು ಹೆರುವಿ; ಅವನಿಗೆ ಇ
ಶ್ಮಯೇಲನೆಂಬ ಹೆಸರಿಡ ಬೇಕು. ಯಾಕಂದರೆ ಕರ್ತನು ನಿನ್ನ
೧೨ ಶ್ರಮೆಯನ್ನು ಕೇಳಿದ್ದಾನೆ. ಅವನು ಕಾಡ ಮನುಷ್ಯನಾಗಿರುವ
ನು; ಎಲ್ಲರಿಗೆ ವಿರೋಧವಾಗಿ ಅವನ ಕೈ, ಅವನಿಗೆ ವಿರೋಧವಾಗಿ
ಎಲ್ಲರ ಕೈ; ತನ್ನ ಸಹೋದರಕೆಲ್ಲರ ಎದುರಿನಲ್ಲಿ ಅವನು ವಾಸ
೧೩ ವಾಗಿರುವನು. ಅವಳು ತನ್ನ ಸಂಗಡ ಮಾತಾಡಿದ ಕರ್ತನಿಗೆ—
ನನ್ನನ್ನು ನೋಡುವ ದೇವರು ನೀನೇ ಎಂದು, ಹೆಸರಿಟ್ಟಳು.
ಯಾಕಂದರೆ ನನ್ನನ್ನು ನೋಡುವವನನ್ನು ನಾನು ಇಲ್ಲಿ ನೋ
೧೪ ಡಿದ್ದುಂಟೇ! ಎಂದಂದು ಕೊಂಡಳು. ಆದಕಾರಣ ಆ ಭಾವಿಗೆ
ಬೆಯೇರ್ ಲಹೈಕೊಯಿಾ ಎಂದು ಹೆಸರುಂಟಾಯಿತು. ಇಗೋ,
೧೫ ಅದು ಕಾದೇಷಿಗೂ, ಬೇರೆದಿಗೂ ಮಧ್ಯದಲ್ಲಿ ಅದೆ. ತರುವಾ
ಯ ಹಾಗರಳು ಅಬ್ರಾಮನಿಗೆ ಮಗನನ್ನು ಹೆತ್ತಳು; ಅಬ್ರಾಮನು
ಹಾಗರಳು ತನಗೆ ಹೆತ್ತ ಮಗನಿಗೆ ಇಶ್ಮಯೇಲನೆಂಬ ಹೆಸರಿಟ್ಟ
೧೬ ನು. ಹಾಗರಳು ಅಬ್ರಾಮನಿಗೆ ಇಶ್ಮಯೇಲನನ್ನು ಹೆತ್ತಾಗ, ಅ
ಬ್ರಾಮನು ಎಂಭತ್ತಾರು ವರುಷದವನಾಗಿದ್ದನು.

## ೧೭. ಸಂಧಿ.

೧ ಅಬ್ರಾಮನು ತೊಂಭತ್ತೊಂಭತ್ತು ವರುಷದವನಾಗಿದ್ದಾಗ, ಕ
ರ್ತನು ಅಬ್ರಾಮನಿಗೆ ಕಾಣಿಸಿ ಕೊಂಡು— ನಾನೇ ಸರ್ವ ಶಕ್ತ
ನಾದ ದೇವರು; ನನ್ನ ಮುಂದೆ ನಡೆದು ಕೊಂಡು ಸಂಪೂರ್ಣವಾ
೨ ಗಿರು. ನನ್ನ ಬಡಂಬಡಿಕೆಯನ್ನು ನನಗೂ ನಿನಗೂ ಮಧ್ಯದಲ್ಲಿ
ಕೊಡುವೆನು, ಮತ್ತು ನಿನ್ನನ್ನು ಅತ್ಯಧಿಕವಾಗಿ ಹೆಚ್ಚಿಸುವೆನು ಎಂ
೩ ದು ಅವನಿಗೆ ಹೇಳಿದನು. ಆಗ ಅಬ್ರಾಮನು ಬೋರೆ ಕೆಳಗಾಗಿ
ಬಿದ್ದನು. ಮತ್ತು ದೇವರು ಅವನ ಸಂಗಡ ಮಾತಾಡಿದ್ದೇನಂ
೪ ದರೆ—ನಾನಾದರೆ, ಇಗೋ, ನನ್ನ ಬಡಂಬಡಿಕೆ ನನ್ನ ಸಂಗ
ಡ ಅದೆ, ಮತ್ತು ಜನಾಂಗಗಳ ಸಮೂಹಕ್ಕೆ ತಂದೆಯಾಗಿರುವಿ.
೫ ಮತ್ತು ನಿನ್ನ ಹೆಸರು ಇನ್ನು ಅಬ್ರಾಮನೆಂದಲ್ಲ, ಅಬ್ರಹಾಮನೆಂ
ದು ಕರೆಯಲ್ಪಡುವದು; ಯಾಕಂದರೆ ಜನಾಂಗಗಳ ಸಮೂಹ
೬ ಕ್ಕೆ ತಂದೆಯಾಗಿ ನಿನ್ನನ್ನು ಇಟ್ಟಿದ್ದೇನೆ. ಮತ್ತು ನಿನ್ನನ್ನು ಅ
ತ್ಯಧಿಕವಾಗಿ ವೃದ್ಧಿಯಾಗ ಮಾಡಿ, ನಿನ್ನನ್ನು ಜನಾಂಗಗಳಾಗ
೭ ಮಾಡುವೆನು; ಅರಸರು ನಿನ್ನಿಂದ ಹುಟ್ಟುವರು. ಮತ್ತು ನಿನ
ಗೂ, ನಿನ್ನ ಬಳಿಕ ನಿನ್ನ ಬೀಜಕ್ಕೂ ದೇವರಾಗಿರುವದಕ್ಕೆ, ನ
ನಗೂ, ನಿನಗೂ, ನಿನ್ನ ಬಳಿಕ ಅವರ ತಲತಲಾಂತರಗಳಲ್ಲಿ ನಿನ್ನ
ಬೀಜಕ್ಕೂ ಮಧ್ಯದಲ್ಲಿ ನನ್ನ ಬಡಂಬಡಿಕೆಯನ್ನು ನಿತ್ಯ ಬಡಂಬ
೮ ಡಿಕೆಯಾಗಿ ಸ್ಥಾಪಿಸುತ್ತೇನೆ. ಮತ್ತು ನಿನಗೂ, ನಿನ್ನ ಬಳಿಕ ನಿನ್ನ
ಬೀಜಕ್ಕೂ ನಿನಗೆ ಪರವಾಸ ದೇಶವಾದ ಕಾನಾನ್ ದೇಶವನ್ನೆಲ್ಲಾ
ನಿತ್ಯ ಸ್ವಾಸ್ತ್ಯವಾಗಿ ಕೊಡುತ್ತೇನೆ; ಮತ್ತು ಅವರಿಗೆ ದೇವರಾಗಿ
ರುವೆನು.
೯ ಇದಲ್ಲದೆ ದೇವರು ಅಬ್ರಹಾಮನಿಗೆ ಹೇಳಿದ್ದೇನಂದರೆ—ನೀನು
ನನ್ನ ಬಡಂಬಡಿಕೆಯನ್ನು ಕೈಕೊಳ್ಳ ಬೇಕು—ನೀನೂ, ಅವರ
೧೦ ತಲ ತಲಾಂತರಗಳಲ್ಲಿ ನಿನ್ನ ಬಳಿಕ ನಿನ್ನ ಬೀಜವೂ. ನನಗೂ, ನಿನ
ಗೂ, ನಿನ್ನ ಬಳಿಕ ನಿನ್ನ ಬೀಜಕ್ಕೂ ಮಧ್ಯದಲ್ಲಿ ನೀವು ಕೈಕೊ
ಳ್ಳ ತಕ್ಕ ನನ್ನ ಬಡಂಬಡಿಕೆ ಏನಂದರೆ—ನಿಮ್ಮಲ್ಲಿರುವ ಗಂಡಸ
೧೧ ಕೆಲ್ಲರಿಗೆ ಪರಿಛೇದನೆ ಆಗ ಬೇಕು. ನಿಮ್ಮ ಮುಂದೊಗಲಿನ
ಮಾಂಸವನ್ನು ಪರಿಛೇದಿಸ ಬೇಕು; ಅದು ನನಗೂ ನಿಮಗೂ ನ
೧೨ ಡುವೆ ಇರುವ ಬಡಂಬಡಿಕೆಗೆ ಗುರುತಾಗಿರುವದು. ನಿಮ್ಮ ತಲ ತ
ಲಾಂತರಗಳಲ್ಲಿ ಗಂಡಸಕೆಲ್ಲರು ಎಂಟು ದಿನ ಪ್ರಾಯದವರಾಗಿ ನಿ
ಮ್ಮಲ್ಲಿ ಪರಿಛೇದಿಸಲ್ಪಡ ಬೇಕು; ಮನೆಯಲ್ಲಿ ಹುಟ್ಟಿದವನಾಗಲಿ,
ನಿನ್ನ ಬೀಜದವನಲ್ಲದೆ, ಪರರ ಮಕ್ಕಳಿಂದ ಬೆಳ್ಳಿಗೆ ಸಂಪಾದಿಸ
೧೩ ಲ್ಪಟ್ಟವನಾಗಲಿ, ನಿನ್ನ ಮನೆಯಲ್ಲಿ ಹುಟ್ಟಿದವನೂ, ನಿನ್ನ
ಬೆಳ್ಳಿಗೆ ಸಂಪಾದಿಸಲ್ಪಟ್ಟವನೂ ಪರಿಛೇದಿಸೇ ಪರಿಛೇದಿಸಲ್ಪ
ಡ ಬೇಕು. ಹೀಗೆ ನನ್ನ ಬಡಂಬಡಿಕೆ ನಿಮ್ಮ ಮಾಂಸದಲ್ಲಿ ನಿ
೧೪ ತ್ಯವಾದ ಬಡಂಬಡಿಕೆಯಾಗಿರುವದು. ಮತ್ತು ತನ್ನ ಮುಂದೊ
ಗಲಿನ ಮಾಂಸವು ಪರಿಛೇದಿಸಲ್ಪಡದೆ ಮುಂದೊಗಲುಳ್ಳ ಗಂಡ
ಸಾದ ಪ್ರಾಣವು, ನನ್ನ ಬಡಂಬಡಿಕೆಯನ್ನು ಮೀರಿದ ಕಾರಣ,
ತನ್ನ ಜನಕೊಳಗಿಂದ ಕಡಿಯಲ್ಪಡ ಬೇಕು.
೧೫ ಮತ್ತು ದೇವರು ಅಬ್ರಹಾಮನಿಗೆ ಹೇಳಿದ್ದೇನಂದರೆ—ನಿನ್ನ



ಹೆಂಡತಿಯಾದ ಸಾರೈಯನ್ನು ಕುರಿತು ಇನ್ನು ಸಾರೈ ಎಂದು
ಅವಳ ಹೆಸರನ್ನು ಕರೆಯ ಬೇಕು; ಅವಳ ಹೆಸರು ಸಾರಳೇ.
೧೬ ಅವಳನ್ನು ಆಶೀರ್ವದಿಸುತ್ತೇನೆ. ಅವಳಿಂದ ನಿನಗೆ ಮಗನನ್ನು
ಕೊಡುತ್ತೇನೆ; ಅವಳು ಜನಾಂಗಗಳಾಗುವ ಹಾಗೆ ಅವಳನ್ನು ಆಶೀ
ರ್ವದಿಸುತ್ತೇನೆ. ಜನಾಂಗಗಳ ಅರಸರು ಅವಳಿಂದ ಹುಟ್ಟುವರು.
೧೭ ಆಗ ಅಬ್ರಹಾಮನು ಬೋರೆ ಕೆಳಗಾಗಿ ಬಿದ್ದು, ನಕ್ಕು, ನೂ
ರು ವರುಷದವನಿಗೆ ಹುಟ್ಟುವರುಂಟೇ? ತೊಂಭತ್ತೊಂಭತ್ತು ವರು
ಷದವಳಾದ ಸಾರಳು ಹೆರುವರುಂಟೇ! ಎಂದು, ತನ್ನ ಹೃದ
೧೮ ಯದಲ್ಲಿ ಹೇಳಿ ಕೊಂಡನು. ಮತ್ತು ಅಬ್ರಹಾಮನು ದೇವರಿಗೆ—
ಅಯ್ಯ! ಇಶ್ಮಯೇಲನು ನಿನ್ನ ಸನ್ನಿಧಿಯಲ್ಲಿ ಬದುಕಲಿ, ಅಂದಾಗ,
೧೯ ದೇವರು ಹೇಳಿದ್ದೇನಂದರೆ—ನಿಶ್ಚಯವಾಗಿ ನಿನ್ನ ಹೆಂಡತಿಯಾದ
ಸಾರಳು ನಿನಗೆ ಮಗನನ್ನು ಹೆರುವಳು; ಅವನಿಗೆ ಇಸಾಕನೆಂದು
ಹೆಸರಿಡ ಬೇಕು. ಅವನ ಸಂಗಡ, ನನ್ನ ಬಡಂಬಡಿಕೆಯನ್ನು ಅವ
ನ ಬಳಿಕ ಹುಟ್ಟುವ ಅವನ ಬೀಜಕ್ಕೆ, ನಿತ್ಯ ಬಡಂಬಡಿಕೆಯಾಗಿ
೨೦ ಸ್ಥಾಪಿಸುವೆನು. ಇಶ್ಮಯೇಲನ ವಿಷಯದಲ್ಲಿಯೂ ನಿನ್ನನ್ನು
ಕೇಳಿದ್ದೇನೆ; ಇಗೋ, ಅವನನ್ನು ಆಶೀರ್ವದಿಸಿ, ಅವನನ್ನು ಅಭಿ
ವೃದ್ಧಿ ಮಾಡಿ, ಅವನನ್ನು ಅತ್ಯಧಿಕವಾಗಿ ಹೆಚ್ಚಿಸುವೆನು. ಹನ್ನೆ
ರಡು ಪ್ರಭುಗಳನ್ನು ಅವನು ಪಡೆಯುವನು. ಮತ್ತು ಅವನನ್ನು
೨೧ ದೊಡ್ಡ ಜನಾಂಗವಾಗ ಮಾಡುವೆನು. ಆದರೆ ಬರುವ ವರುಷದ
ಈ ಕಾಲದಲ್ಲಿ ಸಾರಳು ನಿನಗೆ ಹೆರುವ ಇಸಾಕನ ಸಂಗಡ ನನ್ನ
ಬಡಂಬಡಿಕೆಯನ್ನು ಸ್ಥಾಪಿಸುವೆನು.
೨೨ ಆಗ ದೇವರು ಅವನ ಸಂಗಡ ಮಾತಾಡುವದನ್ನು ಮುಗಿಸಿ,
೨೩ ಅಬ್ರಹಾಮನ ಬಳಿಯಿಂದ ಏರಿ ಹೋದನು. ಮತ್ತು ಅಬ್ರಾಮ
ನು ತನ್ನ ಮಗನಾದ ಇಶ್ಮಯೇಲನನ್ನೂ, ತನ್ನ ಮನೆಯಲ್ಲಿ ಹು
ಟ್ಟಿದವಕೆಲ್ಲರನ್ನೂ, ತನ್ನ ಬೆಳ್ಳಿಗೆ ಕೊಳ್ಳಲ್ಪಟ್ಟವಕೆಲ್ಲರನ್ನೂ,
ಅಬ್ರಹಾಮನ ಮನೆಯವರಲ್ಲಿದ್ದ ಗಂಡಸಕೆಲ್ಲರನ್ನೂ ತಕ್ಕೊಂಡು,
ದೇವರು ತನಗೆ ಹೇಳಿದ ಹಾಗೆ ಅಂದೇ ಅವರ ಮುಂದೊಗಲಿನ
೨೪ ಮಾಂಸವನ್ನು ಪರಿಛೇದಿಸಿದನು. ಅಬ್ರಹಾಮನು ತನ್ನ ಮುಂದೊ
ಗಲಿನ ಮಾಂಸವನ್ನು ಪರಿಛೇದಿಸಿ ಕೊಂಡಾಗ, ತೊಂಭತ್ತೊಂಭ
೨೫ ತ್ತು ವರುಷದವನಾಗಿದ್ದನು. ಅವನ ಮಗನಾದ ಇಶ್ಮಯೇಲನು
ತನ್ನ ಮುಂದೊಗಲಿನ ಮಾಂಸವನ್ನು ಪರಿಛೇದಿಸಿ ಕೊಂಡಾಗ, ಹ
೨೬ ದಿಮೂರು ವರುಷದವನಾಗಿದ್ದನು. ಅಬ್ರಾಹಾಮನೂ, ಅವನ ಮಗ
ನಾದ ಇಶ್ಮಯೇಲನೂ ಅದೇ ದಿವಸದಲ್ಲಿ ಪರಿಛೇದಿಸಿ ಕೊಂಡರು.
೨೭ ಮತ್ತು ಅವನ ಮನೆಯ ಗಂಡಸಕೆಲ್ಲರು, ಮನೆಯಲ್ಲಿ ಹುಟ್ಟಿದವ
ರೂ, ಪರರ ಮಕ್ಕಳಿಂದ ಬೆಳ್ಳಿಗೆ ಕೊಳ್ಳಲ್ಪಟ್ಟವರೂ, ಅವನ
ಸಂಗಡ ಪರಿಛೇದಿಸಲ್ಪಟ್ಟರು.

## ೧೮. ಸಂಧಿ.

೧ ಮತ್ತು ಕರ್ತನು ಮಮ್ರೆ ಶೋಪಿನಲ್ಲಿ ಅವನಿಗೆ ಕಾಣಿಸಿ ಕೊಂ
ಡನು. ಹಗಲಿನ ಬಿಸಿಲಿನಲ್ಲಿ ಗುಡಾರದ ಬಾಗಲಲ್ಲಿ ಕೂತು ಕೊಂ
೨ ಡಾಗ, ತನ್ನ ಕಣ್ಣುಗಳನ್ನೆತ್ತಿ ನೋಡಲು, ಅಗೋ, ಮೂವರು ಮ
ನುಷ್ಯರು ಅವನ ಮುಂದೆ ನಿಂತಿದ್ದರು. ಅವನು ನೋಡಿ, ಅವ
ರಿಗೆದುರಾಗಿ ಗುಡಾರದ ಬಾಗಲಿಂದ ಓಡಿ ಬಂದು, ನೆಲದಲ್ಲಿ ಅಡ್ಡ
೩ ಬಿದ್ದು, ಹೇಳಿದ್ದೇನಂದರೆ—ನನ್ನ ಸ್ವಾಮಿಯೇ, ನಿನ್ನ ದೃಷ್ಟಿ
ಯಲ್ಲಿ ನನಗೆ ದಯೆ ದೊರಕಿತಾದರೆ, ನಿನ್ನ ದಾಸನ ಬಳಿಯಿಂದ
೪ ಹಾದು ಹೋಗ ಬೇಡ. ಸ್ವಲ್ಪ ನೀರು ತಕ್ಕೊಂಡು, ನಿಮ್ಮ
ಕಾಲುಗಳನ್ನು ತೊಳೆದು, ಮರದ ಕೆಳಗೆ ಬಿಶ್ರಮಿಸಿ ಕೊಳ್ಳಿರಿ.
೫ ನಾನು ಕೊಟ್ಟಿಯ ತುಂಡು ತರುವೆನು, ನಿಮ್ಮ ಹೃದಯಗಳನ್ನು
ಉದ್ಧಾರ ಮಾಡಿ ಕೊಳ್ಳಿರಿ. ಆ ಮೇಲೆ ಹಾದು ಹೋಗ ಬಹುದು.
ಅದಕ್ಕೋಸ್ಕರವೇ ನಿನ್ನು ದಾಸನ ಬಳ್ಳಿಗೆ ಬಂದಿರಲ್ಲ!
೬ ಅವರು ನೀನು ಹೇಳಿದ ಹಾಗೆ ಮಾಡು, ಅಂದರು. ಆಗ ಅ
ಬ್ರಹಾಮನು ತ್ವರೆಯಾಗಿ ಸಾರಳ ಬಳ್ಳಿಗೆ ಗುಡಾರಕ್ಕೆ ಹೋಗಿ
—ತ್ವರೆ ಪಟ್ಟು, ಮೂರು ಸೇರು ನಯವಾದ ಹಿಟ್ಟು ನಾದಿ, ಕೊ
ಟ್ಟಿಗಳನ್ನು ಮಾಡು, ಅಂದನು. ಮತ್ತು ದನದ ಮಂದೆಯ ಬಳ್ಳಿ
೭ ಗೆ ಅಬ್ರಹಾಮನು ಓಡಿ, ಎಳೇದಾದ ಬಳ್ಳೇ ಕರುವನ್ನು ತೆಗೆದು
ಕೊಂಡು, ಯಾವನಸ್ಥನಿಗೆ ಕೊಟ್ಟಿನು; ಅವನು ಅದನ್ನು ಪಕ್ವ
೮ ಮಾಡುವದಕ್ಕೆ ತ್ವರೆ ಪಟ್ಟನು. ತರುವಾಯ ಬೆಣ್ಣೆಯನ್ನೂ,
ಹಾಲನ್ನೂ, ಆ ಪಕ್ವ ಮಾಡಿದ ಕರುವನ್ನೂ ತೆಗೆದು ಕೊಂಡು,
ಅವರ ಮುಂದೆ ಇಟ್ಟನು; ಮತ್ತು ಮರದ ಕೆಳಗೆ ಅವರ ಮುಂದೆ
ನಿಂತು ಕೊಂಡನು; ಅವರು ಉಂಡರು.
೯ ನಿನ್ನ ಹೆಂಡತಿಯಾದ ಸಾರಳು ಎಲ್ಲಿ? ಎಂದು ಅವರು ಅವನ
ನ್ನು ಕೇಳಿದರು. ಅವನು—ಅಗೋ, ಗುಡಾರದಲ್ಲಿ, ಅಂದನು.
೧೦ ಆಗಲವನು ಜೀವೋತ್ಪತ್ತಿಯ ಕಾಲದಲ್ಲಿ ನಿಶ್ಚಯವಾಗಿ ತಿರಿಗಿ ನಿ
ನ್ನ ಬಳ್ಳಿಗೆ ಬರುತ್ತೇನೆ; ಆಗ, ಅಗೋ, ನಿನ್ನ ಹೆಂಡತಿಯಾದ ಸಾ
ರಳ್ಳಿಗೆ ಮಗನು ಇರುವನು, ಅಂದನು. ಸಾರಳು ಅವನ ಹಿಂದೆ
೧೧ ಇರುವ ಗುಡಾರದ ಬಾಗಲಲ್ಲಿ ಕೇಳುತ್ತಿದ್ದಳು. ಇದಲ್ಲದೆ ಅಬ್ರ
ಹಾಮನೂ ಸಾರಳೂ ದಿನ ಗತಿಸಿದವರಾಗಿ, ಮುದುಕರಾಗಿದ್ದರು;
ಸಾರಳ್ಳಿಗೆ ಹೆಂಗಸರ ಪ್ರಕಾರ ಆಗುವದು ನಿಂತು ಹೋಗಿತ್ತು.
೧೨ ಆಗ ಸಾರಳು ತನ್ನೊಳಗೆ ನಕ್ಕು—ನಾನು ವೃದ್ಧಳಾದ ಮೇಲೆ,
ನನ್ನ ಯಜಮಾನನು ಮುದುಕನಾಗಿದ್ದಾಗ, ನನಗೆ ಸಂಭ್ರಮ ಉಂ
೧೩ ಟಾಗುವದೋ! ಅಂದಳು. ಆಗ ಕರ್ತನು ಅಬ್ರಹಾಮನಿಗೆ—ಸಾ
ರಳು ಯಾಕೆ, ನಾನು ಮುದಿ ಪ್ರಾಯದವಳಾಗಿ ಹೆರುವದುಂಟೋ!
೧೪ ಎಂದು ಹೇಳಿ, ನಗುತ್ತಾಳೆ! ಕರ್ತನಿಂದಲಾಗದ ಆಶ್ಚರ್ಯ
ಉಂಟೋ! ಬರುವ ವರುಷ ಜೀವೋತ್ಪತ್ತಿಯ ಕಾಲದಲ್ಲಿ ನಿನ್ನ
ಬಳ್ಳಿಗೆ ತಿರಿಗಿ ಬರುವೆನು; ಆಗ ಸಾರಳ್ಳಿಗೆ ಮಗನು ಇರುವನು,
೧೫ ಅಂದನು. ಆದರೆ ಸಾರಳು ಭಯ ಪಟ್ಟು, ನಾನು ನಗಲಿಲ್ಲ ಎಂ
ದು ಬೊಂಕಿದಾಗ, ಅವನು ಹಾಗಲ್ಲ, ನೀನು ನಕ್ಕೆ, ಅಂದನು.
೧೬ ಆ ಮೇಲೆ ಆ ಮನುಷ್ಯರು ಅಲ್ಲಿಂದ ಎದ್ದು, ಸೊದೋಮಿನ
ಕಡೆಗೆ ದೃಷ್ಟಿ ಇಟ್ಟರು. ಅಬ್ರಾಹಾಮನು ಅವರನ್ನು ಸಾಗ ಕಳು
೧೭ ಹಿಸುವದಕ್ಕೆ ಅವರ ಸಂಗಡ ಹೋದನು. ಆಗ ಕರ್ತನು ಹೇಳಿ
ದ್ದೇನಂದರೆ—ನಾನು ಮಾಡುವದನ್ನು ಅಬ್ರಹಾಮನಿಗೆ ಮರೆ ಮಾ
೧೮ ರುವೆನೇ! ಅಬ್ರಾಹಾಮನು ನಿಶ್ಚಯವಾಗಿ ಬಲಳ್ಳುಳ್ಳ ದೊಡ್ಡ ಜನಾಂ
ಗವಾಗುವನು; ಭೂಮಿಯ ಜನಾಂಗಳೆಲ್ಲಾ ಅವನಿಂದ ಆಶೀರ್ವ
೧೯ ದಿಸಲ್ಪಡುವವು. ಯಾಕಂದರೆ ಕರ್ತನು ಅವನ ವಿಷಯ ನು
ಡಿದವುಗಳನ್ನು ಅಬ್ರಾಹಾಮನ ಮೇಲೆ ಬರ ಮಾಡುವ ಹಾಗೆ, ಅವ
ರು ನೀತಿ ನ್ಯಾಯಗಳನ್ನು ನಡಿಸುವದಕ್ಕೆ ಕರ್ತನ ಮಾರ್ಗವ
ನ್ನು ಕೈ ಕೊಳ್ಳುವ ಹಾಗೆ, ಅವನು ತನ್ನ ಮಕ್ಕಳಿಗೂ ತನ್ನ ಬ
ಳಿಕ ಇರುವ ತನ್ನ ಮನೆಗೂ ಆಜ್ಞೆ ಕೊಡುವನೆಂದು ನನಗೆ ತಿಳಿದದೆ.
೨೦ ಮತ್ತು ಕರ್ತನು ಹೇಳಿದ್ದೇನಂದರೆ — ಸೊದೋಮ್ ಗ
ಮೋರಗಳ ಕೂಗು ದೊಡ್ಡದಾಗಿರುವದರಿಂದಲೂ, ಅವರ ಪಾಪ

೨೧ ವು ಮಹಾ ಭಾರವಾಗಿರುವದರಿಂದಲೂ, ಎಲಾ, ನಾನು ಇಳಿದು
ಹೋಗಿ, ನನ್ನ ಬಳಿಗೆ ಬಂದ ಅದರ ಕೂಗಿನ ಪ್ರಕಾರ, ಅಹ್ವಾಗಿ
ಮಾಡಿದ್ದಾಕೋ! ಇಲ್ಲವೋ! ಎಂದು, ನೋಡಿ ತಿಳಿಸಿ ಕೊಳ್ಳುವೆ
೨೨ ನು. ಆಗ ಆ ಮನುಷ್ಯರು ಅಲ್ಲಿಂದ ತಿರುಗಿ ಕೊಂಡು, ಸೊದೋ
ಮಿನ ಕಡೆಗೆ ಹೋದರು. ಆದರೆ ಅಬ್ರಹಾಮನು ಇನ್ನು ಕರ್ತ
ನ ಮುಂದೆ ನಿಂತಿದ್ದನು.

೨೩ ಆಗ ಅಬ್ರಹಾಮನು ಹತ್ತರ ಬಂದು, ಹೇಳಿದ್ದೇನಂದರೆ—ದು
೨೪ ಷ್ಟನ ಸಂಗಡ ನೀತಿವಂತನನ್ನು ನಾಶನ ಮಾಡುವಿಯೋ! ಬಂ
ದು ವೇಳೆ ಆ ಪಟ್ಟಣದಲ್ಲಿ ಐವತ್ತು ನೀತಿವಂತರಿದ್ದರೆ, ಅದರೊಳಗಿ
ರುವ ಐವತ್ತು ನೀತಿವಂತರುಗೋಸ್ಕರ ಆ ಸ್ಥಳವನ್ನು ಕ್ಷಮಿಸದೆ,
೨೫ ನಾಶನ ಮಾಡುವಿಯೋ! ಆ ಪ್ರಕಾರ ಮಾಡಿ, ನೀತಿವಂತನನ್ನು
ದುಷ್ಟನ ಸಂಗಡ ಕೊಲ್ಲುವದು ನಿನಗೆ ದೂರವಾಗಿರಲಿ. ಹಾಗೆ
ನೀತಿವಂತನು ದುಷ್ಟನ ಪ್ರಕಾರವೇ ಇರುವನು; ಅದು ನಿನಗೆ
ದೂರವಾಗಿರಲಿ. ಭೂಮಿಯೆಲ್ಲಕ್ಕೆ ನ್ಯಾಯಾಧಿಪತಿಯಾಗಿ
೨೬ ರುವವನು ನ್ಯಾಯವನ್ನು ಮಾಡನೇ! ಆಗ ಕರ್ತನು—ನನ
ಗೆ ಸೊದೋಮಿನಲ್ಲಿ ಪಟ್ಟಣದೊಳಗೆ ಐವತ್ತು ಮಂದಿ ನೀತಿ
ವಂತರು ಸಿಕ್ಕಿದರೆ, ಅವರುಗೋಸ್ಕರ ಸ್ಥಳವೆಲ್ಲಾದಕ್ಕೆ ಮನಿಸಿ
೨೭ ಸುವೆನು, ಅಂದನು. ಆಗ ಅಬ್ರಹಾಮನು ಉತ್ತರ ಕೊಟ್ಟು—ಇ
ಗೋ, ಮಣ್ಣೂ ಬೂದಿಯೂ ಆಗಿರುವ ನಾನು ಕರ್ತನ ಸಂಗ
೨೮ ಡ ಮಾತಾಡ ಮುಂಗೊಂಡಿದ್ದೇನೆ. ಬಂದು ವೇಳೆ ಐವತ್ತು ನೀತಿ
ವಂತರಲ್ಲಿ ಐದು ಮಂದಿ ಕಡಿಮೆ ಇದ್ದಾರು. ಆ ಐದು ಮಂದಿ
ಗೋಸ್ಕರ ಆ ಪಟ್ಟಣವೆಲ್ಲಾ ನಾಶನ ಮಾಡುವಿಯೋ! ಅಂದ
ನು. ಅವನು—ನಾಲ್ವತ್ತೈದು ಮಂದಿ ಅಲ್ಲಿ ಸಿಕ್ಕಿದರೆ, ನಾನು
೨೯ ನಾಶನ ಮಾಡೆನು, ಅಂದನು. ಮತ್ತು ಅವನು ಅವನ ಸಂಗಡ
ಮಾತಾಡಿ—ಬಂದು ವೇಳೆ ಅಲ್ಲಿ ನಾಲ್ವತ್ತು ಮಂದಿ ಸಿಕ್ಕಾರು,
ಅಂದನು. ಅವನು—ನಾಲ್ವತ್ತು ಮಂದಿಗೋಸ್ಕರ ಅದನ್ನು
೩೦ ಮಾಡೆನು, ಅಂದನು. ಅವನು, ಕರ್ತನಿಗೆ ಕೋಪ ಬಾರದೆ ಇ
ರಲಿ; ಬಂದು ಮಾತನ್ನು ಹೇಳುತ್ತೇನೆ; ಬಂದು ವೇಳೆ ಅಲ್ಲಿ ಮೂ
ವತ್ತು ಮಂದಿ ಸಿಕ್ಕಾರು, ಅಂದಾಗ, ಅವನು—ನನಗೆ ಅಲ್ಲಿ ಮೂ
೩೧ ವತ್ತು ಮಂದಿ ಸಿಕ್ಕಿದರೆ, ಮಾಡೆನು ಅಂದನು. ಅವನು—ಇ
ಗೋ, ಕರ್ತನ ಸಂಗಡ ಮಾತಾಡ ಮುಂಗೊಂಡಿದ್ದೇನೆ. ಬಂದು
ವೇಳೆ ಇಪ್ಪತ್ತು ಮಂದಿ ಅಲ್ಲಿ ಸಿಕ್ಕಾರು, ಅಂದಾಗ, ಅವ
ನು—ಇಪ್ಪತ್ತು ಮಂದಿಗೋಸ್ಕರ ನಾನು ನಾಶನ ಮಾಡೆನು, ಅಂ
೩೨ ದನು. ಅವನು—ಕರ್ತನಿಗೆ ಕೋಪ ಬಾರದೆ ಇರಲಿ. ಇನ್ನು
ಬಂದೇ ಸಾರಿ ಮಾತಾಡುತ್ತೇನೆ—ಬಂದು ವೇಳೆ ಅಲ್ಲಿ ಹತ್ತು ಮಂ
ದಿ ಸಿಕ್ಕಾರು, ಅಂದಾಗ, ಅವನು—ಹತ್ತು ಮಂದಿಗೋಸ್ಕರ
೩೩ ನಾಶನ ಮಾಡೆನು, ಅಂದನು. ಕರ್ತನು ಅಬ್ರಹಾಮನ ಸಂಗ
ಡ ಮಾತಾಡುವದನ್ನು ಮುಗಿಸಿದ ಮೇಲೆ, ಹೋದನು. ಅಬ್ರಹಾ
ಮನು ತನ್ನ ಸ್ಥಳಕ್ಕೆ ತಿರುಗಿ ಕೊಂಡನು.

## ೧೯. ಸಂಧಿ.

೧ ಆ ದೂತರಿಬ್ಬರು ಸಾಯಂಕಾಲದಲ್ಲಿ ಸೊದೋಮಿಗೆ ಬಂದಾ
ಗ, ಲೋಟನು ಸೊದೋಮಿನ ಬಾಗಲಲ್ಲಿ ಕೂತು ಕೊಂಡಿದ್ದನು.
ಲೋಟನು ಅವರನ್ನು ನೋಡಿ, ಎದುರುಗೊಳ್ಳುವದಕ್ಕೆ ಎದ್ದು,
೨ ನೆಲದಲ್ಲಿ ಅಡ್ಡ ಬಿದ್ದು, ಹೇಳಿದ್ದೇನಂದರೆ—ಇಗೋ, ನನ್ನ ಸ್ವಾ
ಮಿಗಳೇ, ದಯ ಮಾಡಿ ನಿಮ್ಮ ದಾಸನ ಮನೆಯಲ್ಲಿ ಇಳಿದು ಕೊಂ
ಡು, ರಾತ್ರಿ ಕಳಿಯಿರಿ; ನಿಮ್ಮ ಕಾಲುಗಳನ್ನು ತೊಳಿ ಕೊಳ್ಳಿರಿ; ಬೆ
ಳಿಗ್ಯೆ ಎದ್ದು, ನಿಮ್ಮ ಮಾರ್ಗ ಹಿಡಿ ಕೊಂಡು ಹೋಗ ಬಹುದು.
ಅವರು—ಹಾಗಲ್ಲ, ಬೀದಿಯಲ್ಲಿ ರಾತ್ರಿ ಕಳಿಯುತ್ತೇವೆ, ಅಂದಾಗ,
3 ಅವನವರಿಗೆ ಬಹಳ ಬಲವಂತ ಮಾಡಿದ್ದರಿಂದ, ಅವರು ಅವನ ಬಳಿ
ಯಲ್ಲಿ ಇಳಿದು ಕೊಂಡರು. ಅವರು ಅವನ ಮನೆಗೆ ಬಂದಾಗ, ಅವ
ನು ಅವರಿಗೆ ಔತಣ ಮಾಡಿ, ಹುಳಿ ಇಲ್ಲದ ರೊಟ್ಟಿಗಳನ್ನು ಸು
ಟ್ಟನು. ಅವರು ಉಂಡರು.

೪ ಅವರು ಮಲಗುವದಕ್ಕಿಂತ ಮುಂಚೆ ಸೊದೋಮಿನ ಜನರಾ
ದ ಪಟ್ಟಣಿಗರು, ಹುಡುಗರು ಮೊದಲ್ಗೊಂಡು ಮುದುಕರ ಪ
ರ್ಯಂತರ, ಜನವೆಲ್ಲಾ ಕೂಡಿ, ಮನೆಯನ್ನು ಸುತ್ತಿ ಕೊಂಡು,
೫ ಲೋಟನನ್ನು ಕರೆದು, ಈ ರಾತ್ರಿಯಲ್ಲಿ ನಿನ್ನ ಬಳಿಗೆ ಬಂದ ಮ
ನುಷ್ಯರು ಎಲ್ಲಿ! ಅವರನ್ನು ನಮ್ಮ ಬಳಿಗೆ ಹೊರಗೆ ತೆಗೆದು ಕೊಂ
ಡು ಬಾ; ನಾವು ಅವರನ್ನು ತಿಳಿ ಕೊಳ್ಳುವೆವು ಎಂದು, ಅವನಿಗೆ
೬ ಹೇಳಿದರು. ಆಗ ಲೋಟನು ಅವರ ಬಳಿಗೆ ಹೊರಗೆ ಬಂದು,
೭ ಬಾಗಲನ್ನು ತನ್ನ ಹಿಂದೆ ಮುಚ್ಚಿ ಹೇಳಿದ್ದೆನಂದರೆ—ಎಲಾ, ನನ್ನ
ಸಹೋದರರೇ, ಕೇಡು ಮಾಡ ಬೇಡಿರಿ. ಇಗೋ, ಗಂಡನನ್ನರಿ
೮ ಯದ ಇಬ್ಬರು ಕುಮಾರ್ತೆಗಳು ನನಗೆ ಉಂಟು; ಅವರನ್ನು
ನಿಮ್ಮ ಬಳಿಗೆ ಹೊರಗೆ ತೆಗೆದು ಕೊಂಡು ಬರತಿ; ನಿಮಗೆ ಬಳ್ಳೇ
ದೆಂದು ಕಾಣಿಸುವ ಹಾಗೆ ಅವರಿಗೆ ಮಾಡಿರಿ; ಆ ಮನುಷ್ಯರಿಗೆ ಮಾ
ತ್ರ ಏನಾದರೂ ಮಾಡ ಬೇಡಿರಿ; ಯಾಕಂದರೆ ಅದಕ್ಕೋಸ್ಕರ
೯ ಅವರು ನನ್ನ ಮಾಳಿಗೆಯ ನೆರಳಿಗೆ ಬಂದಿದ್ದಾರೆ. ಆದರೆ ಅವ
ರು ಅಡ್ಡ ಬಿಡು ಎಂದು ಹೇಳಿ, ಈ ಒಬ್ಬನು ಪರವಾಸ ಮಾಡಲಿ
ಕ್ಕೆ ಬಂದು, ನ್ಯಾಯಾಧಿಪತಿಯಾಗ ಬೇಕೆಂದಿದ್ದಾನೆ. ಈಗ ನಿನ
ಗೆ ಅವರಿಗಿಂತ ಕೆಟ್ಟದ್ದನ್ನು ಮಾಡುತ್ತೇವೆಂದು, ಲೋಟನೆಂಬವನ
ನ್ನು ಬಹಳವಾಗಿ ಇರಿಕಿಸಿ, ಬಾಗಲನ್ನು ಬಡೆಯ ಸಮೀಪಕ್ಕೆ ಬಂ
೧೦ ದರು. ಆಗ ಆ ಮನುಷ್ಯರು ತಮ್ಮ ಕೈಗಳನ್ನು ಚಾಚಿ, ಲೋ
ಟನನ್ನು ತಮ್ಮ ಬಳಿಗೆ ಮನೆಯೊಳಗೆ ಸೇರಿಸಿ, ಬಾಗಲು ಮುಚ್ಚಿ,
೧೧ ಮನೆಯ ಹೊರಗಿರುವ ಮನುಷ್ಯರನ್ನು, ಕಿರಿಯರು ಮೊದ
ಲ್ಗೊಂಡು ಹಿರಿಯರ ಮಟ್ಟಿಗೂ, ಕುರುಡತನದಿಂದ ಹೊಡೆದರು.
ಆಗಲವರು ಬಾಗಲು ಕಂಡು ಕೊಳ್ಳುವದಕ್ಕೆ ದಣಿದರು.

೧೨ ಮತ್ತು ಆ ಮನುಷ್ಯರು ಲೋಟನಿಗೆ ಹೇಳಿದ್ದೇನಂದರೆ—
ಇಲ್ಲಿ ನಿನಗೆ ಇನ್ನು ಯಾರಾದರೂ ಇದ್ದಾರೋ! ಅಳಿಯರನ್ನೂ,
ಕುಮಾರರನ್ನೂ, ಕುಮಾರ್ತೆಗಳನ್ನೂ, ಪಟ್ಟಣದಲ್ಲಿ ನಿನಗಿರುವ ಎ
ಲ್ಲನ್ನೂ, ಈ ಸ್ಥಳದಿಂದ ಹೊರಗೆ ತೆಗೆದು ಕೊಂಡು ಬಾ.
೧೩ ಯಾಕಂದರೆ ಈ ಸ್ಥಳವನ್ನು, ಅವರ ಕೂಗು ಕರ್ತನ ಸನ್ನಿಧಿ
ಯಲ್ಲಿ ದೊಡ್ಡದಾಗಿರುವದರಿಂದ, ನಾಶನ ಮಾಡುತ್ತೇವೆ. ಅದ
ನ್ನು ನಾಶನ ಮಾಡುವದಕ್ಕೆ ಕರ್ತನು ನಮ್ಮನ್ನು ಕಳುಹಿಸಿದ್ದಾ
೧೪ ನೆ. ಆಗ ಲೋಟನು ಹೊರಟು, ತನ್ನ ಕುಮಾರ್ತೆಗಳನ್ನು ತ
ಕ್ಕೊಂಡ ತನ್ನ ಅಳಿಯಂದಿರ ಸಂಗಡ ಮಾತಾಡಿ, ಎದ್ದು, ಈ ಸ್ಥ
ಳದೊಳಗಿಂದ ಹೊರಡಿರಿ; ಯಾಕಂದರೆ ಕರ್ತನು ಈ ಪಟ್ಟಣ ವ
ನ್ನು ನಾಶನ ಮಾಡುವದಕ್ಕೆ ಇದ್ದಾನೆ, ಅಂದನು. ಆದರೆ ಅವನು
ತನ್ನ ಅಳಿಯಂದಿರಿಗೆ ಕುಚೋದ್ಯ ಮಾಡುವವನಾಗಿ ಕಾಣಿಸಿ
ದನು.

೧೫ ಅರುಣೋದಯವಾದಾಗ, ದೂತರು ಲೋಟನನ್ನು ತ್ವರೆ



ಪಡಿಸಿ—ನೀನು ಈ ಪಟ್ಟಣದ ಅಕ್ರಮದಿಂದ ನಾಶವಾಗದ ಹಾಗೆ ಎ
ದ್ದು, ನಿನ್ನ ಹೆಂಡತಿಯನ್ನೂ, ನಿನಗೆ ಸಿಕ್ಕಿದ ನಿನ್ನ ಇಬ್ಬರು
೧೬ ಕುಮಾರ್ತೆಗಳನ್ನೂ ತಕ್ಕೊಂಡು, ಅಂದರು. ಅವನು ತಡ ಮಾಡಿ
ದಾಗ, ಕರ್ತನು ಅವನನ್ನು ಕನಿಕರಿಸಿದ್ದರಿಂದ, ಆ ಮನುಷ್ಯರು
ಅವನ ಕೈಯನ್ನೂ, ಅವನ ಹೆಂಡತಿಯ ಕೈಯನ್ನೂ, ಅವನ
ಇಬ್ಬರು ಕುಮಾರ್ತೆಗಳ ಕೈಯನ್ನೂ ಹಿಡಿದು, ಅವನನ್ನು
೧೭ ಹೊರಗೆ ತಂದು, ಪಟ್ಟಣದ ಹೊರಗೆ ಬಿಟ್ಟರು. ಅವರನ್ನು ಹೊರ
ಗೆ ತಂದ ಮೇಲೆ ಆದದ್ದೇನಂದರೆ, ನಿನ್ನ ಪ್ರಾಣಕ್ಕೋಸ್ಕರ ತ
ಪ್ಪಿಸಿಕೋ; ನಿನ್ನ ಹಿಂದಕ್ಕೆ ನೋಡ ಬೇಡ; ಸುತ್ತಲಿರುವ ಸೀಮೆ
ಯಲ್ಲೆಲ್ಲಾ ನಿಂತು ಕೊಳ್ಳಬೇಡ; ನೀನು ನಾಶವಾಗದ ಹಾಗೆ ಬೆ
೧೮ ಟ್ಟಕ್ಕೆ ತಪ್ಪಿಸಿ ಕೊಂಡು ಹೋಗು, ಅಂದನು. ಲೋಟನು ಅವರಿ
ಗೆ, ಹಾಗಲ್ಲ, ಕರ್ತನೇ; ಇಗೋ, ನಿನ್ನ ದಾಸನಿಗೆ ನಿನ್ನ ದೃಷ್ಟಿ
೧೯ ಯಲ್ಲಿ ದಯ ದೊರಕಿದೆ. ನನ್ನ ಪ್ರಾಣವನ್ನು ಬದುಕಿಸುವ
ಹಾಗೆ ನೀನು ನನಗೆ ಮಾಡಿದ ಕೃಪೆ ಮಹಿಮೆ ಪಡಿಸಿದಿ; ಆದರೆ
ನಾನು ಬೆಟ್ಟಕ್ಕೆ ತಪ್ಪಿಸಿ ಕೊಂಡು, ಹೋಗಲಾರೆನು; ನಾನು ಸಾ
೨೦ ಯುವ ಹಾಗೆ, ಕೇಡು ನನಗೆ ಹತ್ತೀತು. ಇಗೋ, ಈ ಪ
ಟ್ಟಣವು, ಅದಕ್ಕೆ ಓಡಿ ಹೋಗುವ ಹಾಗೆ, ಸಮೀಪವಾಗಿದೆ. ಅದು
ಸಣ್ಣದು; ಅದಕ್ಕೆ ನಾನು ತಪ್ಪಿಸಿ ಕೊಂಡು ಹೋಗಲಿ; ಅದು ಸ
ಣ್ಣದಲ್ಲವೋ! ಹಾಗೆ ನನ್ನ ಪ್ರಾಣವು ಬದುಕುವದು, ಅಂದನು.
೨೧ ಅವನವನಿಗೆ, ಇಗೋ, ಈ ವಿಷಯದಲ್ಲಿಯೂ ನಿನ್ನ ಮುಖ ದಾ
ಕ್ಷಿಣ್ಯ ಮಾಡಿದ್ದೇನೆ; ನೀನು ಹೇಳಿದ ಪಟ್ಟಣವನ್ನು ಕೆಡವಿ ಹಾಕುವ
೨೨ ದಿಲ್ಲ. ತ್ವರೆ ಪಟ್ಟು ಅಲ್ಲಿಗೆ ತಪ್ಪಿಸಿ ಕೊಂಡು ಹೋಗು; ಯಾ
ಕಂದರೆ ನೀನು ಅಲ್ಲಿಗೆ ಬರುವ ತನಕ, ನಾನೇನೂ ಮಾಡಲಾರೆನು,
ಅಂದನು. ಆದದರಿಂದ ಆ ಪಟ್ಟಣಕ್ಕೆ ಜೋವರೆಂದು ಹೆಸರಾಯಿ
೨೩ ತು. ಭೂಮಿಯ ಮೇಲೆ ಸೂರ್ಯನು ಉದಯಿಸಿದಾಗ,
ಲೋಟನು ಜೋವರಿಗೆ ಬಂದನು.

೨೪ ಆಗ ಕರ್ತನು ಸೊದೋಮಿನ ಮೇಲೆಯೂ, ಗಮೋರದ
ಮೇಲೆಯೂ ಗಂಧಕವನ್ನೂ ಬೆಂಕಿಯನ್ನೂ ಕರ್ತನ ಕಡೆಯಿಂ
೨೫ ದ ಆಕಾಶದಿಂದ ಸುರಿಸಿ, ಆ ಪಟ್ಟಣಗಳನ್ನೂ, ಸುತ್ತಲಿರುವ ಸೀಮೆ
ಯೆಲ್ಲಾನ್ನೂ, ಪಟ್ಟಣಗಳ ನಿವಾಸಿಗಳನ್ನೂ, ಭೂಮಿಯ ಬೆಳೆಯ
೨೬ ನ್ನೂ ಹಾಳು ಮಾಡಿದನು. ಆದರೆ ಲೋಟನ ಹೆಂಡತಿ ತನ್ನ
ಹಿಂದಕ್ಕೆ ನೋಡಿದಳು. ಆದದರಿಂದ ಉಪ್ಪಿನ ಸ್ತಂಭವಾದಳು.
೨೭ ಅಬ್ರಹಾಮನು ತಾನು ಕರ್ತನ ಸನ್ನಿಧಿಯಲ್ಲಿ ನಿಂತಿದ್ದ ಸ್ಥಳಕ್ಕೆ
೨೮ ಬೆಳಿಗ್ಯೆ ಬಂದು, ಸೊದೋಮ್ ಗಮೋರಗಳ ಕಡೆಗೂ, ಸುತ್ತಲಿರು
ವ ಎಲ್ಲಾ ದೇಶದ ಕಡೆಗೂ ನೋಡಿದನು. ಅವನು ನೋಡಿದಾಗ,
ಇಗೋ, ಭೂಮಿಯ ಹೊಗೆಯು ಆವಿಗೆಯ ಹೊಗೆಯ ಹಾಗೆ
ಏರಿತು.

೨೯ ದೇವರು ಸುತ್ತಲಿರುವ ಪಟ್ಟಣಗಳನ್ನು ನಾಶ ಮಾಡುವಾಗ, ಆದ
ದ್ದೇನಂದರೆ, ದೇವರು ಅಬ್ರಹಾಮನನ್ನು ಜ್ಞಾಪಕ ಮಾಡಿ ಕೊಂ
ಡು, ಲೋಟನು ವಾಸ ಮಾಡಿದ ಪಟ್ಟಣಗಳನ್ನು ಹಾಳು ಮಾಡಿದಾ
ಗ, ಹಾಳಾದ ಆ ಸ್ಥಳದೊಳಗಿಂದ ಲೋಟನನ್ನು ಕಳುಹಿಸಿದನು.
೩೦ ಮತ್ತು ಲೋಟನು ಜೋವರಿಂದ ಏರಿ ಹೋಗಿ, ತನ್ನ ಇಬ್ಬರು
ಕುಮಾರ್ತೆಗಳ ಸಂಗಡ ಬೆಟ್ಟದಲ್ಲಿ ವಾಸ ಮಾಡಿದನು; ಯಾಕಂ
ದರೆ ಜೋವರಲ್ಲಿ ವಾಸವಾಗಿರುವದಕ್ಕೆ ಅವನು ಭಯ ಪಟ್ಟನು.
ಅವನೂ ಅವನ ಇಬ್ಬರು ಕುಮಾರ್ತೆಗಳೂ ಗವಿಯಲ್ಲಿ ವಾಸ
೩೦ ವಾಗಿದ್ದರು. ಆಗ ಹಿರಿಯಳು ಚಿಕ್ಕವಳಿಗೆ, ನಮ್ಮ ತಂದೆ ಮುದು
ಕನಾಗಿದ್ದಾನೆ. ಎಲ್ಲಾ ಭೂಮಿಯ ಮಾರ್ಗದ ಪ್ರಕಾರ ನಮ್ಮಲ್ಲಿ
೩೧ ಸೇರುವ ಹಾಗೆ, ಭೂಮಿಯಲ್ಲಿ ಗಂಡನು ಇಲ್ಲ. ಬಾ, ನಮ್ಮ ತಂದೆ
ಗೆ ದ್ರಾಕ್ಷೇರಸ ಕುಡಿಯ ಕೊಡುವ; ಮತ್ತು ಅವನ ಸಂಗಡ ಮಲ
ಗಿ ಕೊಳ್ಳುವ; ಹಾಗೆ ನಮ್ಮ ತಂದೆಯಿಂದ ಬೀಜವನ್ನು ಉಳಿಸು
೩೨ ವ. ಆ ರಾತ್ರಿಯಲ್ಲಿ ತಮ್ಮ ತಂದೆಗೆ ದ್ರಾಕ್ಷೇರಸವನ್ನು ಕುಡಿಸಿದ
ರು. ಮತ್ತು ಹಿರಿಯಳು ಬಂದು, ತನ್ನ ತಂದೆಯ ಸಂಗಡ ಮಲಗಿ
ಕೊಂಡಳು. ಅವಳು ಮಲಗಿ ಕೊಳ್ಳುವಾಗಲೂ, ಏಳುವಾಗಲೂ,
೩೪ ಅವನಿಗೆ ತಿಳಿಯಲಿಲ್ಲ. ಮರು ದಿವಸದಲ್ಲಿ ಆದದ್ದೇನಂದರೆ, ಹಿರಿ
ಯಳು ಚಿಕ್ಕವಳಿಗೆ, ಇಗೋ, ಹೋದ ರಾತ್ರಿ ನನ್ನ ತಂದೆಯ
ಸಂಗಡ ಮಲಗಿ ಕೊಂಡೆನು. ಈ ರಾತ್ರಿಯಲ್ಲಿಯೂ ಅವನಿಗೆ
ದ್ರಾಕ್ಷೇರಸವನ್ನು ಕುಡಿಸುವ; ಮತ್ತು ನೀನು ಬಂದು, ಅವನ ಸಂಗ
ಡ ಮಲಗಿಕೋ. ಹಾಗೆ ನಮ್ಮ ತಂದೆಯಿಂದ ಬೀಜವನ್ನು ಉಳಿ
೩೫ ಸುವೆವು; ಅಂದಳು. ಹಾಗೆ ಆ ರಾತ್ರಿಯಲ್ಲಿಯೂ ತಮ್ಮ ತಂದೆ
ಗೆ ದ್ರಾಕ್ಷೇರಸವನ್ನು ಕುಡಿಸಿದರು; ಮತ್ತು ಚಿಕ್ಕವಳು ಎದ್ದು, ಅವ
ನ ಸಂಗಡ ಮಲಗಿ ಕೊಂಡಳು. ಅವಳು ಮಲಗಿ ಕೊಳ್ಳುವಾಗಲೂ
೩೬ ಏಳುವಾಗಲೂ, ಅವನಿಗೆ ತಿಳಿಯಲಿಲ್ಲ. ಈ ಪ್ರಕಾರ ಲೋಟನ
ಇಬ್ಬರು ಕುಮಾರ್ತೆಗಳು ತಮ್ಮ ತಂದೆಯದೆಸೆಯಿಂದ ಬಸು
೩೭ ರಾದರು. ಹಿರಿಯಳು ಮಗನನ್ನು ಹೆತ್ತು, ಅವನಿಗೆ ಮೋವಬ್
ಎಂದು ಹೆಸರಿಟ್ಟಳು. ಇಂದಿನ ವರಿಗೂ ಇರುವ ಮೋವಬ್ಯರಿಗೆ ತಂ
೩೮ ದೆಯು ಇವನೇ. ಚಿಕ್ಕವಳು ಸಹ ಮಗನನ್ನು ಹೆತ್ತು, ಅವನಿಗೆ
ಬೆನಮ್ಮಿ ಎಂದು ಹೆಸರಿಟ್ಟಳು. ಇಂದಿನ ವರಿಗೂ ಇರುವ ಅಮ್ಮೋ
ನನ ಮಕ್ಕಳ ತಂದೆಯು ಇವನೇ.

## ೨೦. ಸಂಧಿ.

೧ ಆಗ ಅಬ್ರಹಾಮನು ಅಲ್ಲಿಂದ ಹೊರಟು, ದಕ್ಷಿಣ ದೇಶಕ್ಕೆ
ಹೋಗಿ, ಕಾದೇಷಿಗೂ ಷೂರಿಗೂ ಮಧ್ಯದಲ್ಲಿ ನಿವಸಿಸಿ, ಗೇರಾ
೨ ರಿನಲ್ಲಿ ಪರವಾಸವಾಗಿದ್ದನು. ಮತ್ತು ಅಬ್ರಹಾಮನು ತನ್ನ ಹೆಂಡ
ತಿಯಾದ ಸಾರಳನ್ನು ಕುರಿತು, ಅವಳು ನನ್ನ ತಂಗಿ ಎಂದು
ಹೇಳಿದ್ದರಿಂದ, ಗೇರಾರನ ಅರಸನಾದ ಅಬಿಮೇಲೆಕನು ಕಳುಹಿಸಿ,
ಸಾರಳನ್ನು ತಕ್ಕೊಂಡನು.

೩ ಆಗ ದೇವರು ರಾತ್ರಿಯ ಕನಸಿನಲ್ಲಿ ಅಬಿಮೇಲೆಕನ ಬಳಿಗೆ ಬಂ
ದು—ಇಗೋ, ನೀನು ತಕ್ಕೊಂಡ ಆ ಸ್ತ್ರೀಗೋಸ್ಕರ ನೀನು
ಸಾಯ ಬೇಕು. ಅವಳು ಮುತ್ತೈದೆ ಎಂದು ಅವನಿಗೆ ಹೇಳಿದ
೪ ನು. ಆದರೆ ಅಬಿಮೇಲೆಕನು ಅವಳ ಬಳಿಗೆ ಸೇರದೆ ಇದ್ದದರಿಂದ
—ಕರ್ತನೇ, ನೀತಿಯುಳ್ಳ ಜನಾಂಗವನ್ನು ಸಹಾ ಕೊಲ್ಲುವಿ
೫ ಯೋ! ಅವನು ನನಗೆ, ಅವಳು ನನ್ನ ತಂಗಿ ಎಂದು ಹೇಳಿಲಿಲ್ಲ
ವೋ! ಮತ್ತು ಅವಳೇ, ಅವನು ನನ್ನ ಅಣ್ಣನೆಂದು ಹೇಳಿದ್ದಾಳೆ.
ನಿರ್ಮಲವಾದ ಹೃದಯದಿಂದಲೂ, ಅಪರಾಧವಿಲ್ಲದ ಕೈಯಿಂ
೬ ದಲೂ, ಇದನ್ನು ಮಾಡಿದ್ದೇನೆ, ಅಂದನು. ದೇವರು ಅವನಿಗೆ
ಸ್ವಪ್ನದಲ್ಲಿ—ನೀನು ನಿರ್ಮಲವಾದ ಹೃದಯದಿಂದ ಇದನ್ನು
ಮಾಡಿದಿ ಎಂದು, ನನಗೂ ತಿಳಿದದೆ. ನಾನೂ, ನೀನು ನನಗೆ ವಿ
ರೋಧವಾಗಿ ಪಾಪ ಮಾಡದ ಹಾಗೆ, ನಿನ್ನನ್ನು ತಡೆದೆನು. ಆದ
ದರಿಂದ ನಾನು ಅವಳನ್ನು ಮುಟ್ಟುವದಕ್ಕೆ ನಿನ್ನನ್ನು ಬಿಡಲಿಲ್ಲ.
೭ ಈಗ ಆ ಮನುಷ್ಯನ ಹೆಂಡತಿಯನ್ನು ಹಿಂದಕ್ಕೆ ಕಳುಹಿಸು;

ಯಾಕಂದರೆ ಅವನು ಪ್ರವಾದಿಯಾಗಿದ್ದಾನೆ; ನೀನು ಬದುಕುವ
ಹಾಗೆ, ಅವನು ನಿನಗೋಸ್ಕರ ಪ್ರಾರ್ಥಿಸುವನು. ಹಿಂದಕ್ಕೆ
ಕಳುಹಿಸದಿದ್ದರೆ, ನೀನೂ ನಿನ್ನವರೆಲ್ಲರೂ ಸತ್ತೇ ಸಾಯುವಿರೆಂ
ದು, ತಿಳುಕೋ, ಅಂದನು.

೮ ಆಗ ಅಬಿಮೇಲೆಕನು ಬೆಳಿಗ್ಯೆ ಎದ್ದು, ತನ್ನ ಸೇವಕರೆಲ್ಲರನ್ನು
ಕರೇ ಕಳುಹಿಸಿ, ಈ ಮಾತುಗಳನ್ನೆಲ್ಲಾ ಅವರ ಕಿವಿಗಳಲ್ಲಿ ಹೇಳಿದ
೯ ನು. ಆ ಮನುಷ್ಯರು ಬಹಳವಾಗಿ ಭಯ ಪಟ್ಟರು. ಮತ್ತು ಅಬಿ
ಮೇಲೆಕನು ಅಬ್ರಹಾಮನನ್ನು ಕರೇ ಕಳುಹಿಸಿ, ಅವನಿಗೆ ಹೇಳ್ದಿದ್ದೇ
ನಂದರೆ—ನಮಗೆ ಏನು ಮಾಡಿದಿ! ನೀನು ನನ್ನ ಮೇಲೆಯೂ, ನ
ನ್ನ ರಾಜ್ಯದ ಮೇಲೆಯೂ ದೊಡ್ಡ ಪಾಪವನ್ನು ಬರ ಮಾಡುವ
ಹಾಗೆ, ನಿನಗೆ ಏನು ಪಾಪ ಮಾಡಿದ್ದೇನೆ? ಮಾಡ ಬಾರದ ಕೆಲಸ
೧೦ ಗಳನ್ನು ನನ್ನ ವಿಷಯದಲ್ಲಿ ಮಾಡಿದಿ. ಅಬಿಮೇಲೆಕನು ಅಬ್ರ
ಹಾಮನಿಗೆ—ನೀನು ಏನು ನೋಡಿ, ನನಗೆ ಈ ಕೆಲಸವನ್ನು ಮಾ
೧೧ ಡಿದಿ! ಅಂದಾಗ, ಅಬ್ರಹಾಮನು ಹೇಳ್ದಿದ್ದೇನಂದರೆ—ಈ ಸ್ಥಳದಲ್ಲಿ
ದೇವರ ಭಯವು ಏನೂ ಇಲ್ಲವೆಂದೂ, ನನ್ನ ಹೆಂಡತಿಗೋಸ್ಕರ
೧೨ ನನ್ನನ್ನು ಕೊಲ್ಲುವರೆಂದೂ, ಅಂದು ಕೊಂಡೆನು. ಇದಲ್ಲದೆ ನಿಜ
ಯವಾಗಿ ಅವಳು ನನ್ನ ತಂಗಿ, ಅವಳು ನನ್ನ ತಾಯ ಮಗ
ಳಲ್ಲ, ಆದರೆ ನನ್ನ ತಂದೆಯ ಮಗಳೇ; ಮತ್ತು ನನಗೆ ಹೆಂಡತಿ
೧೩ ಯಾದಳು. ದೇವರು ನನ್ನ ತಂದೆಯ ಮನೆಯೊಳಗಿಂದ ನನ್ನ
ನ್ನು ವಾಸಾಂತರ ಮಾಡಿಸಿದಾಗ, ನಾನು ಅವಳಿಗೆ—ನೀನು ನನಗೆ
ಮಾಡ ತಕ್ಕ ದಯವು ಇದೇ—ನಾವು ಯಾವ ಸ್ಥಳಕ್ಕೆ ಬಂದಾ
೧೪ ಗ್ಯೂ, ಅಲ್ಲಿ ಇವನು ನನಗೆ ಅಣ್ಣನೆಂದು ಹೇಳು, ಅಂದೆನು. ಆಗ
ಅಬಿಮೇಲೆಕನು ಕುರಿ ದನಗಳನ್ನೂ, ದಾಸ ದಾಸಿಯರನ್ನೂ ತ
ಕ್ಕೊಂಡು, ಅಬ್ರಹಾಮನಿಗೆ ಕೊಟ್ಟು, ಅವನ ಹೆಂಡತಿಯಾದ ಸಾ
೧೫ ರಳನ್ನು ಅವನಿಗೆ ತಿರಿಗಿ ಕೊಟ್ಟನು. ಮತ್ತು ಅಬಿಮೇಲೆಕನು—
ಇಗೋ, ನನ್ನ ದೇಶವು ನಿನ್ನ ಮುಂದೆ ಅದೆ; ನಿನಗೆ ಬಳ್ಳೇದಾಗಿ
೧೬ ಕಾಣಿಸುವ ಸ್ಥಳದಲ್ಲಿ ವಾಸ ಮಾಡು, ಅಂದನು. ಮತ್ತು ಸಾರಳಿ
ಗೆ—ಇಗೋ, ನಿನ್ನ ಅಣ್ಣನಿಗೆ ಸಾವಿರ ಹಣ ಕೊಟ್ಟಿದ್ದೇನೆ. ಇ
ಗೋ, ನಿನ್ನ ಸಂಗತ ಇರುವವರೆಲ್ಲರಿಗಾಗಿಯೂ, ಉಳ್ಳದವರೆಲ್ಲ
ರಿಗಾಗಿಯೂ, ಇದು ನಿನಗೆ ಮುಸುಕಾಗಿರಲಿ, ಅಂದನು. ಹಾಗೆ
೧೭ ಅವಳು ಗದರಿಸಲ್ಪಟ್ಟಳು. ಆಗ ಅಬ್ರಹಾಮನು ದೇವರಿಗೆ ಪ್ರಾ
ರ್ಥನೆ ಮಾಡಿದ್ದರಿಂದ, ದೇವರು ಅಬಿಮೇಲೆಕನನ್ನೂ, ಅವನ
ಹೆಂಡತಿಯನ್ನೂ, ಅವನ ದಾಸಿಯರನ್ನೂ ವಾಸಿ ಮಾಡಿದನು;
೧೮ ಮತ್ತು ಅವರು ಹೆತ್ತರು. ಯಾಕಂದರೆ ಕರ್ತನು ಅಬ್ರಹಾಮನ
ಹೆಂಡತಿಯಾದ ಸಾರಳಿಗೋಸ್ಕರ ಅಬಿಮೇಲೆಕನ ಮನೆಯಲ್ಲಿ
ಗರ್ಭಗಳನ್ನೆಲ್ಲಾ ಮುಚ್ಚೇ ಮುಚ್ಚೆ ಇದ್ದನು.

## ೨೧. ಸಂಧಿ.

೧ ಇದಲ್ಲದೆ ಕರ್ತನು ಸಾರಳ್ಳನ್ನು ತಾನು ಹೇಳ್ದಿದ ಹಾಗೆ, ದರ್ಶ
ಸಿದನು. ಕರ್ತನು ಸಾರಳ್ಳಿಗೆ, ತಾನು ಮಾತಾಡಿದ ಹಾಗೆ, ಮಾಡಿ
೨ ದನು. ಸಾರಳು ಬಸುರಾಗಿ, ಅಬ್ರಹಾಮನಿಗೆ, ಅವನ ಮುದಿ ಪ್ರಾ
ಯದಲ್ಲಿ, ಕರ್ತನು ಅವನಿಗೆ ಮಾತಾಡಿದ ಸಮಯದೊಳಗೆ, ಮ
೩ ಗನನ್ನು ಹೆತ್ತಳು. ಅಬ್ರಹಾಮನು ತನಗೆ ಹುಟ್ಟಿದಂಥ, ಸಾರಳು
೪ ತನಗೆ ಹೆತ್ತಂಥ, ಮಗನಿಗೆ ಇಸಾಕನೆಂದು ಹೆಸರಿಟ್ಟನು. ಮತ್ತು
ಅಬ್ರಹಾಮನು ತನ್ನ ಮಗನಾದ ಇಸಾಕನನ್ನು ಎಂಟನೇ ದಿವಸ
ದಲ್ಲಿ, ದೇವರು ತನಗೆ ಅಪ್ಪಣೆ ಕೊಟ್ಟ ಹಾಗೆ, ಪರಿಛೇದನೆ ಮಾ
೫ ಡಿದನು. ಅವನ ಮಗನಾದ ಇಸಾಕನು ಅವನಿಗೆ ಹುಟ್ಟಿದಾಗ,
೬ ಅಬ್ರಹಾಮನು ನೂರು ವರುಷದವನಾಗಿದ್ದನು. ಸಾರಳು—ದೇವ
ರು ನನಗೆ ನಗೆಯನ್ನು ಉಂಟು ಮಾಡಿದ್ದಾನೆ; ಕೇಳುವವರೆಲ್ಲಾ
ನನಗೋಸ್ಕರ ನಗುವರು, ಎಂದು ಹೇಳ್ದಿ, ಸಾರಳು ಮಕ್ಕಳಿಗೆ
ಮೊಲೆ ಕೊಡುವಳೆಂದು ಅಬ್ರಹಾಮನಿಗೆ ಯಾರು ಹೇಳ್ಯಾರು!
೮ ಯಾಕಂದರೆ ನಾನು ಅವನ ಮುದಿ ಪ್ರಾಯದಲ್ಲಿ ಮಗನನ್ನು
೯ ಹೆತ್ತೆನು, ಅಂದಳು. ಆ ಕೂಸು ದೊಡ್ಡದಾಗಿ, ಮೊಲೆ ಬಿಡಿಸಲ್ಪ
ಟ್ಟಿತು; ಇಸಾಕನನ್ನು ಮೊಲೆ ಬಿಡಿಸಿದ ದಿವಸದಲ್ಲಿ ಅಬ್ರಹಾಮನು
ದೊಡ್ಡ ಔತಣವನ್ನು ಮಾಡಿದನು.

೧೦ ಇದಲ್ಲದೆ ಸಾರಳು ಐಗುಪ್ತ್ಯಳಾದ ಹಾಗರಳು ಅಬ್ರಹಾಮನಿ
ಗೆ ಹೆತ್ತ ಮಗನು ನಗುವದನ್ನು ನೋಡಿ, ಅಬ್ರಹಾಮನಿಗೆ—ಈ
ದಾಸಿಯನ್ನೂ, ಅವಳ ಮಗನನ್ನೂ ಹೊರಗೆ ಹಾಕು; ಈ
ದಾಸಿಯ ಮಗನು ನನ್ನ ಮಗನಾದ ಇಸಾಕನ ಸಂಗತ ಬಾಧ್ಯ
೧೧ ನಾಗಿರ ಕೂಡದು, ಅಂದಳು. ಈ ಮಾತು ಅಬ್ರಹಾಮನಿಗೆ ಅವ
೧೨ ನ ಮಗನಿಗೋಸ್ಕರ ಬಹು ದುಃಖಕರವಾಗಿ ತೋರಿತು. ಆದರೆ
ದೇವರು ಅಬ್ರಹಾಮನಿಗೆ—ಹುಡುಗನಿಗೋಸ್ಕರವೂ ನಿನ್ನ ದಾಸಿ
ಗೋಸ್ಕರವೂ ನಿನಗೆ ದುಃಖಕರವಾಗಿ ತೋಚದೆ ಇರಲಿ; ಸಾ
ರಳು ನಿನಗೆ ಹೇಳ್ದಿದ ಸಮಸ್ತವನ್ನು ಕುರಿತು ಅವಳ ಶಬ್ದವನ್ನು
ಕೇಳು; ಯಾಕಂದರೆ ಇಸಾಕನಲ್ಲಿ ನಿನ್ನ ಬೀಜ ಕರೆಯಲ್ಪಡು
೧೩ ವದು. ಇದಲ್ಲದೆ ದಾಸಿಯ ಮಗನನ್ನು ಸಹ, ಅವನು ನಿನ್ನ
ಬೀಜವಾಗಿರುವದರಿಂದ, ಜನಾಂಗವಾಗ ಮಾಡುವೆನು, ಅಂದನು.
೧೪ ಆಗ ಅಬ್ರಹಾಮನು ಬೆಳಿಗ್ಯೆ ಎದ್ದು, ರೊಟ್ಟಿಯನ್ನೂ ನೀರಿನ ಶಿತ್ತಿ
ಯನ್ನೂ ತೆಗೆದು ಕೊಂಡು, ಹಾಗರಳಿಗೆ ಕೊಟ್ಟು, ಅವಳ ಹೆಗಲಿ
ನ ಮೇಲೆ ಹೊರಿಸಿ, ಆ ಹುಡುಗನ ಸಂಗತ ಅವಳನ್ನು ಕಳುಹಿಸಿ
ಬಿಟ್ಟನು. ಅವಳು ಹೋಗಿ, ಬೆರ್ಷೆಬದ ಕಾಡಿನಲ್ಲಿ ಮಾರ್ಗ
ತಪ್ಪಿ ತಿರುಗುತ್ತಿದ್ದಳು.
೧೫ ಆ ಶಿತ್ತಿಯೊಳಗೆ ನೀರು ಮುಗಿದಾಗ, ಅವಳು ಮಗುವನ್ನು
೧೬ ಗಿಡಗಳಲ್ಲಿ ಬಂದರ ಕೆಳಗೆ ಹಾಕಿ, ನಾನು ಮಗುವು ಸಾಯುವದ
ನ್ನು ನೋಡದೆ ಇರಲೆಂದು ಹೇಳ್ದಿ, ಹೋಗಿ, ಬಿಲ್ಲೆಸೆಸೆಯ
ದೂರದಲ್ಲಿ ಅವನಿಗೆದುರಾಗಿ ಕೂತು ಕೊಂಡಳು. ಎದುರಾ
೧೭ ಗಿ ಕೂತು ಕೊಂಡು, ತನ್ನ ಶಬ್ದವನ್ನೆತ್ತಿ ಅತ್ತಳು. ಆಗ ದೇವರು
ಆ ಹುಡುಗನ ಶಬ್ದವನ್ನು ಕೇಳ್ದಿದನು. ಮತ್ತು ದೇವರ ದೂತನು
ಆಕಾಶದೊಳಗಿಂದ ಹಾಗರಳ್ಳನ್ನು ಕರೆದು, ಹಾಗರಳ್ಳೇ, ನಿನಗೇನು!
ಅಂಜ ಬೇಡ; ಯಾಕಂದರೆ ದೇವರು ಹುಡುಗನ ಶಬ್ದವನ್ನು ಅವ
೧೮ ನು ಇದ್ದಲ್ಲಿಂದ ಕೇಳ್ದಿದ್ದಾನೆ. ಎದ್ದು, ಹುಡುಗನನ್ನು ಎತ್ತಿ, ನಿನ್ನ
ಕೈಯಿಂದ ಅವನನ್ನು ಹಿಡುಕೋ; ಯಾಕಂದರೆ ಅವನನ್ನು
೧೯ ದೊಡ್ಡ ಜನಾಂಗವಾಗ ಮಾಡುವೆನು, ಅಂದನು. ಆಗ ದೇವರು
ಅವಳ ಕಣ್ಣುಗಳನ್ನು ತೆಕೆದನು; ಅವಳು ನೀರಿನ ಭಾವಿಯನ್ನು
ನೋಡಿ, ಹೋಗಿ, ಆ ಶಿತ್ತಿಯಲ್ಲಿ ನೀರು ತುಂಬಿಸಿ, ಹುಡುಗನಿಗೆ
೨೦ ಕುಡಿಸಿದಳು. ಮತ್ತು ದೇವರು ಆ ಹುಡುಗನ ಸಂಗತ ಇದ್ದನು.
ಅವನು ಬೆಳೆದು, ಅರಣ್ಯದಲ್ಲಿ ವಾಸ ಮಾಡಿ, ಬಿಲ್ಲುಗಾರನಾದನು.
೨೧ ಅವನು ಹಾರಾನಿನ ಅರಣ್ಯದಲ್ಲಿ ವಾಸ ಮಾಡಿದನು. ಮತ್ತು ಅ
ವನ ತಾಯಿ ಅವನಿಗೋಸ್ಕರ ಐಗುಪ್ತ ದೇಶದೊಳಗಿಂದ ಹೆಂಡ
ತಿಯನ್ನು ತಕ್ಕೊಂಡಳು.



೨೨ ಆ ಕಾಲದಲ್ಲಿ ಆದದ್ದೇನಂದರೆ—ಅಬಿಮೇಲೆಕನೂ, ಅವನ ಸೈ
ನ್ಯದ ಅಧಿಪತಿಯಾದ ಪೀಕೊಲನೂ ಅಬ್ರಹಾಮನಿಗೆ ಹೇಳ್ದಿದ್ದೇನಂ
ದರೆ—ನೀನು ಮಾಡುವ ಎಲ್ಲಾದರಲ್ಲಿ ದೇವರು ನಿನ್ನ ಸಂಗತ ಇ
೨೩ ದ್ದಾನೆ. ಹೀಗಿರುವದರಿಂದ ನನಗೂ, ನನ್ನ ಮಗನಿಗೂ, ಮೊ
ಮ್ಮಗನಿಗೂ ವಂಚನೆ ಮಾಡುವದಿಲ್ಲವೆಂದು, ದೇವರ ಮೇಲೆ ಇ
ಲ್ಲಿ ನನಗೆ ಪ್ರಮಾಣ ಮಾಡು. ನಾನು ನಿನಗೆ ಮಾಡಿದ ಪ್ರಕಾರ,
ನೀನು ನನಗೂ, ನೀನು ಪರವಾಸವಾಗಿರುವ ದೇಶಕ್ಕೂ ಮಾಡ
೨೪ ಬೇಕು. ಅಬ್ರಹಾಮನು—ನಾನು ಪ್ರಮಾಣ ಮಾಡುತ್ತೇನೆ, ಅಂದ
೨೫ ನು. ಮತ್ತು ಅಬ್ರಹಾಮನು ಅಬಿಮೇಲೆಕನನ್ನು ಅಬಿಮೇಲೇಕನ
೨೬ ದಾಸರು ಬಲಾತ್ಕಾರವಾಗಿ ತಕ್ಕೊಂಡ ನೀರಿನ ಭಾವಿಯನ್ನು ಕು
ರಿತು ಗದರಿಸಿದಾಗ, ಅಬಿಮೇಲೆಕನು—ಈ ಕೆಲಸವನ್ನು ಯಾರು
ಮಾಡಿದರೆಂದು ನಾನರಿಯೆನು; ನೀನು ನನಗೆ ತಿಳ್ಳಿಸಲಿಲ್ಲ; ನಾನೂ
೨೭ ಈ ಹೊತ್ತಿನ ಮಟ್ಟಿಗೂ ಅದನ್ನು ಕೇಳ್ದಿಲ್ಲ, ಅಂದನು. ಆಗ
ಅಬ್ರಹಾಮನು ಕುರಿ ದನಗಳನ್ನು ತೆಗೆದು ಕೊಂಡು, ಅಬಿಮೇಲೆ
ಕನಿಗೆ ಕೊಟ್ಟನು; ಅವರಿಬ್ಬರು ಬತಂಬಡಿಕೆ ಮಾಡಿ ಕೊಂಡರು.
೨೮ ಮತ್ತು ಅಬ್ರಹಾಮನು ಹಿಂಡಿನ ಏಳು ಹೆಣ್ಣು ಕುರಿಮರಿಗಳನ್ನು ಬೇ
೨೯ ರೆಯಾಗಿ ನಿಲ್ಲಿಸಿದನು. ಅಬಿಮೇಲೆಕನು ಅಬ್ರಹಾಮನಿಗೆ—ನೀನು
ಬೇರೆಯಾಗಿ ನಿಲ್ಲಿಸಿದ ಆ ಏಳು ಹೆಣ್ಣು ಕುರಿ ಮರಿಗಳು ಯಾತ
೩೦ ಕ್ಕೆ! ಅಂದಾಗ, ಅವನು—ನಾನೇ ಆ ಭಾವಿಯನ್ನು ಅಗದಿದ್ದೇನೆಂ
ಬ ಸಾಕ್ಷಿಗೋಸ್ಕರ ಆ ಏಳು ಹೆಣ್ಣು ಕುರಿ ಮರಿಗಳನ್ನು ನನ್ನ
೩೧ ಕೈಯಿಂದ ತಕ್ಕೊಳ್ಳ ಬೇಕು, ಅಂದನು. ಆದದರಿಂದ ಅವರಿ
ಬ್ಬರು ಅಲ್ಲಿ ಪ್ರಮಾಣ ಮಾಡಿದ್ದರಿಂದ, ಆ ಸ್ಥಳಕ್ಕೆ ಬೇರ್ಷೆಬ
೩೨ ಎಂದು ಹೆಸರಿಟ್ಟನು. ಹಾಗೆ ಬೇರ್ಷೆಬದಲ್ಲಿ ಬತಂಬಡಿಕೆಯನ್ನು
ಮಾಡಿ ಕೊಂಡರು. ಮತ್ತು ಅಬಿಮೇಲೆಕನೂ, ಅವನ ಸೈನ್ಯಾಧಿ
ಪತಿಯಾದ ಪೀಕೊಲನೂ ಎದ್ದು, ಫಿಲಿಷ್ಟ್ಯರ ದೇಶಕ್ಕೆ ತಿರುಗಿ
ಹೋದರು.
33 ಇದಲ್ಲದೆ ಅಬ್ರಹಾಮನು ಬೇರ್ಷೆಬದಲ್ಲಿ ತೋಪು ನೆಟ್ಟು,
3೪ ನಿತ್ಯ ದೇವರಾಗಿರುವ ಕರ್ತನ ಹೆಸರನ್ನು ಕರೆದನು. ಅಬ್ರಹಾ
ಮನು ಫಿಲಿಷ್ಟ್ಯರ ದೇಶದಲ್ಲಿ ಬಹು ದಿವಸ ಪರವಾಸವಾಗಿದ್ದನು.

## ೨೨. ಸಂಧಿ.

೧ ಇವುಗಳಾದ ಮೇಲೆ ಆದದ್ದೇನಂದರೆ, ಕರ್ತನು ಅಬ್ರಹಾಮ
ನನ್ನು ಶೋಧಿಸಿದನು. ಅವನಿಗೆ—ಅಬ್ರಹಾಮನೇ, ಅಂದನು. ಅ
೨ ವನು—ಇಗೋ, ಇದ್ದೇನೆ, ಅಂದನು. ಆಗಲವನು—ನೀನು ಪ್ರೀತಿ
ಮಾಡುವ ನಿನ್ನ ಬಬ್ಬನೇ ಮಗನಾಗಿರುವ ಇಸಾಕನನ್ನು ತಕ್ಕೊಂಡು,
ಮೋರಿಯ ದೇಶಕ್ಕೆ ಹೋಗಿ, ಅಲ್ಲಿ ಅವನನ್ನು, ನಾನು ನಿನ
ಗೆ ಹೇಳುವ ಬಂದು ಬೆಟ್ಟದ ಮೇಲೆ, ಹೋಮವಾಗಿ ಅರ್ಪಿಸು,
ಅಂದನು.
3 ಆಗ ಅಬ್ರಹಾಮನು ಬೆಳಿಗ್ಯೆ ಎದ್ದು, ತನ್ನ ಕತ್ತೆಗೆ ತಡಿ ಕಟ್ಟಿ,
ತನ್ನ ಸೇವಕರಲಿ ಇಬ್ಬರನ್ನೂ, ತನ್ನ ಮಗನಾದ ಇಸಾಕನ
ನ್ನೂ ಕರ ಕೊಂಡು, ಬಲಿಯ ಕಟ್ಟಿಗೆಗಳನ್ನೂ ಕಡಿದು, ಎದ್ದು,
೪ ದೇವರು ತನಗೆ ಹೇಳ್ದಿದ ಸ್ಥಳಕ್ಕೆ ಹೋದನು. ಮೂರನೇ ದಿವಸ
ದಲ್ಲಿ ಅಬ್ರಹಾಮನು ತನ್ನ ಕಣ್ಣುಗಳನ್ನು ಎತ್ತಿ, ಆ ಸ್ಥಳವನ್ನು
೫ ದೂರದಿಂದ ನೋಡಿದನು. ಆಗ ಅಬ್ರಹಾಮನು ತನ್ನ ಸೇವಕ
ರಿಗೆ—ಕತ್ತೆಯ ಸಂಗತ ಇಲ್ಲಿ ನಿಂತು ಕೊಳ್ಳಿರಿ; ನಾನೂ ಹುಡುಗ
ನೂ ಅಲ್ಲಿಗೆ ಹೋಗಿ, ಆದ್ದ ಬಿದ್ದು, ನಿಮ್ಮ ಬಳಿಗೆ ತಿರಿಗಿ ಬರುತ್ತೇ
೬ ವೆ, ಅಂದನು. ಮತ್ತು ಅಬ್ರಹಾಮನು ಬಲಿಯ ಕಟ್ಟಿಗೆಗಳನ್ನು
ತಕ್ಕೊಂಡು, ತನ್ನ ಮಗನಾದ ಇಸಾಕನ ಮೇಲೆ ಇಟ್ಟು, ಬೆಂಕಿ
ಯನ್ನೂ ಕತ್ತಿಯನ್ನೂ ತನ್ನ ಕೈಯಲ್ಲಿ ತಕ್ಕೊಂಡನು. ಮತ್ತು
೭ ಅವರಿಬ್ಬರು ಕೂಡಾ ಹೋದರು. ಆಗ ಇಸಾಕನು ತನ್ನ ತಂದೆ
ಯಾದ ಅಬ್ರಹಾಮನಿಗೆ—ನನ್ನ ತಂದೆಯೇ, ಅಂದನು. ಅವನು
—ಇಗೋ, ಇದ್ದೇನೆ, ನನ್ನ ಮಗನೇ, ಅಂದನು. ಅವನು ಇಗೋ,
ಬೆಂಕಿಯೂ ಕಟ್ಟಿಗೆಯೂ ಉಂಟು; ಆದರೆ ಹೋಮಕ್ಕೋಸ್ಕ
ರ ಕುರಿಯು ಎಲ್ಲಿ! ಅಂದನು. ಅಬ್ರಹಾಮನು—ನನ್ನ ಮಗನೇ,
ದೇವರು ತನಗೆ ಹೋಮಕ್ಕೋಸ್ಕರ ಕುರಿಯನ್ನು ನೋಡಿ ಕೊ
ಳ್ಳುವನು, ಅಂದನು. ಹಾಗೆ ಅವರಿಬ್ಬರು ಕೂಡಾ ಹೋದರು.
೮ ದೇವರು ಅವನಿಗೆ ಹೇಳ್ದಿದ ಸ್ಥಳಕ್ಕೆ ಅವರು ಬಂದಾಗ, ಅಬ್ರ
ಹಾಮನು ಅಲ್ಲಿ ಪೀಠವನ್ನು ಕಟ್ಟಿ, ಕಟ್ಟಿಗೆಗಳನ್ನು ಬಟ್ಟಿ, ತನ್ನ
ಮಗನಾದ ಇಸಾಕನನ್ನು ಕಟ್ಟಿ, ಪೀಠದಲ್ಲಿ ಕಟ್ಟಿಗೆಗಳ ಮೇಲೆ ಇ
೧೦ ಟ್ಟನು. ಮತ್ತು ಅಬ್ರಾಮನು ಕೈ ಚಾಚಿ, ತನ್ನ ಮಗನನ್ನು ಕ
೧೧ ಡಿಯುವದಕ್ಕೆ ಕತ್ತಿ ತಕ್ಕೊಂಡನು. ಆಗ ಕರ್ತನ ದೂತನು ಆ
ಕಾಶದೊಳಗಿಂದ ಅವನನ್ನು ಕರೆದು—ಅಬ್ರಹಾಮನೇ, ಅಬ್ರಹಾ
ಮನೇ, ಅಂದನು. ಅವನು—ಇಗೋ, ಇದ್ದೇನೆ, ಅಂದನು. ಮ
ತ್ತು ಅವನು—ಹುಡುಗನ ಮೇಲೆ ಕೈ ಚಾಚ ಬೇಡ; ಅವನಿಗೆ ಏನೂ
ಮಾಡ ಬೇಡ; ಯಾಕಂದರೆ ನೀನು ದೇವರಿಗೆ ಭಯ ಪಡುತ್ತೀ
ಎಂದು ಈಗ ತಿಳ್ದಿದ್ದೇನೆ. ನಿನ್ನ ಬಬ್ಬನೇ ಮಗನನ್ನು ನನಗೆ
೧೨ ಕೊಡ ತಡೆಯಲಿಲ್ಲ, ಅಂದನು. ಆಗ ಅಬ್ರಾಹಮನು ತನ್ನ ಕಣ್ಣು
ಗಳನ್ನು ಎತ್ತಿ ನೋಡಿದನು; ಅಗೋ, ಅವನ ಹಿಂದೆ ಬಂದು ಕೊ
ಂಬು ಕೊಂಬುಗಳಿಂದ ಪೊದೆಯಲ್ಲಿ ಶಿಕ್ಕಿ ಕೊಂಡಿತ್ತು. ಅಬ್ರಾಹಾ
ಮನು ಹೋಗಿ, ಆ ಹೋತು ತೆಗೆದು ಕೊಂಡು, ಅದನ್ನು ತನ್ನ ಮಗ
ನಿಗೆ ಬದಲಾಗಿ ಹೋಮವಾಗಿ ಅರ್ಪಿಸಿದನು.
೧೩ ಅಬ್ರಾಹಮನು ಆ ಸ್ಥಳಕ್ಕೆ ಯೆಹೋವಯಿರೆ ಎಂಬ ಹೆಸ
ರನ್ನಿಟ್ಟದರಿಂದ, ಕರ್ತನ ಪರ್ವತದಲ್ಲಿ ನೋಡಲ್ಪಡುವದೆಂಬದ
ನ್ನು ಇಂದೂ ಹೇಳುತ್ತಾತೆ.
೧೪ ಇದ್ದಲ್ಲದೆ ಕರ್ತನ ದೂತನು ಆಕಾಶದೊಳಗಿಂದ ಎರಡನೇ
೧೫ ಸಾರಿ ಅಬ್ರಾಹಮನನ್ನು ಕರೆದು, ಹೇಳ್ದಿದ್ದೇನಂದರೆ, ನೀನು ಈ
ಕಾರ್ಯವನ್ನು ಮಾತಿ, ನಿನ್ನ ಬಬ್ಬನೇ ಮಗನನ್ನು ನನಗೆ
೧೬ ಕೊಡ ತಡೆಯದೆ ಇದ್ದದರಿಂದ, ನಿನ್ನನ್ನು ಆಶೀರ್ವದಿಸೇ ಆಶೀ
ರ್ವದಿಸುವೆನು; ನಿನ್ನ ಬೀಜವನ್ನು ಆಕಾಶದ ನಕ್ಷತ್ರಗಳ ಹಾಗೆ
ಯೂ, ಸಮುದ್ರದ ತೀರದಲ್ಲಿರುವ ಮರಳಿನ ಹಾಗೆಯೂ ಹೆಚ್ಚಿ
ಸೇ ಹೆಚ್ಚಿಸುವೆನು; ನಿನ್ನ ಬೀಜವು ತನ್ನ ಶತ್ರುಗಳ ಬಾಗಲನ್ನು
೧೭ ವಶ ಮಾಡಿ ಕೊಳ್ಳುವದು. ನೀನು ನನ್ನ ಶಬ್ದವನ್ನು ಕೇಳ್ದಿದ್ದರಿಂ
ದ, ಭೂಮಿಯ ಜನಾಂಗಗಳೆಲ್ಲಾ ನಿನ್ನ ಬೀಜದಿಂದ ಆಶೀರ್ವದಿ
ಸಲ್ಪಡುವವು ಎಂದು, ನನ್ನ ಮೇಲೆ ಆಣೆ ಇಟ್ಟು ಕೊಂಡಿದ್ದೇ
ನೆಂಬದಾಗಿ ಕರ್ತನು ಹೇಳ್ದಿದ್ದಾನೆ, ಅಂದನು.
೧೮ ಮತ್ತು ಅಬ್ರಾಹಮನು ತನ್ನ ಸೇವಕರ ಬಳಿಗೆ ತಿರಿಗಿ ಬಂದನು.
ಅವರು ಎದ್ದು, ಕೂಡಾ ಬೇರ್ಷೆಬಕ್ಕೆ ಹೋದರು. ಮತ್ತು
ಅಬ್ರಾಹಮನು ಬೇರ್ಷೆಬದಲ್ಲಿ ವಸ್ತಿಯಾಗಿದ್ದನು.
೨೦ ಇವುಗಳಾದ ಮೇಲೆ ಆದದ್ದೇನಂದರೆ, ಇಗೋ, ಮಿಲ್ಕಳು ಸಹ
ನಿನ್ನ ಸಹೋದರನಾದ ನಾಹೋರನಿಗೆ ಮಕ್ಕಳನ್ನು ಹೆತ್ತಿದ್ದಾಳೆಂ

೨೦ ದು ಅಬ್ರಹಾಮನಿಗೆ ತಿಳಿಸಲ್ಪಟ್ಟಿತು. ಅವರು ಯಾರಂದರೆ, ಅವನ
ಕೊಜ್ಜ ಲನಾದ ಊಚನು, ಅವನ ತಮ್ಮನಾಹ ಬೂಜನು, ಆರಮನ
೨೦ ತಂದೆಯಾದ ಕೆಮುವೇಲನು, ಕೇಸದನು, ಹಜೋವನು, ಪಿಲ್ದಾ
೨೩ ಷನು, ಯಿದ್ಲಾಫನು, ಬೆತುವೇಲನು. ಮತ್ತು ಬೆತುವೇಲನು ರೆಬೆ
ಕ್ಕಳನ್ನು ಪಡೆದನು. ಆ ಎಂಟು ಮಂದಿಯನ್ನು ಮಿಲ್ಕಳು ಅಬ್ರ
೨೪ ಹಾಮನ ಸಹೋದರನಾದ ನಾಹೊರನಿಗೆ ಹೆತ್ತಳು. ಮತ್ತು ಅವ
ನ ಉಪಪತ್ನಿಯಾದ ರೆಯೂಮಳೆಂಬವಳು ಸಹ ಟೇಬಹನನ್ನೂ,
ಗಹಮನನ್ನೂ, ತಹಷನನ್ನೂ, ಮಾಕನನ್ನೂ ಹೆತ್ತಳು.

## ೨೩. ಸಂಧಿ.

೧ ಸಾರಳ ಆಯುಸ್ಸು ನೂರ ಇಪ್ಪತ್ತೇಳು ವರುಷವಾಗಿತ್ತು,
೨ ಇವೇ ಸಾರಳ ಆಯುಸ್ಸಿನ ವರುಷಗಳು. ಮತ್ತು ಸಾರಳು ಕಾ
ನಾನ್ ದೇಶದಲ್ಲಿರುವ ಹೆಬ್ರೋನೆಂಬ ಕಿರ್ಯತರ್ಬದಲ್ಲಿ ಸತ್ತ
ಳು. ಮತ್ತು ಅಬ್ರಹಾಮನು ಸಾರಳಿಗೋಸ್ಕರ ಗೋಳಾಡುವದ
ಕ್ಕೂ ಅಳುವದಕ್ಕೂ ಬಂದನು.
೩ ಆ ಮೇಲೆ ಅಬ್ರಹಾಮನು ತನ್ನ ಹೆಣದ ಬಳಿಯಿಂದ ಎದ್ದು,
೪ ಹೇತನ ಮಕ್ಕಳ ಸಂಗಡ ಮಾತಾಡಿದ್ದೇನಂದರೆ—ನಾನು ನಿಮ್ಮ ಬ
ಳಿಯಲ್ಲಿ ಪರದೇಶಸ್ಥನೂ ಪರವಾಸಿಯೂ ಆಗಿದ್ದೇನೆ; ನನಗೆ ನಿಮ್ಮ
ಬಳಿಯಲ್ಲಿ ಸಮಾಧಿಯ ಸ್ವಾಸ್ಥ್ಯವನ್ನು ಕೊಡಿರಿ; ಆಗ ನನ್ನ
ಹೆಣವನ್ನು ನನ್ನ ಎದುರಿನಿಂದ ಹೂಣಿಸುವೆನು.
೫ ಹೇತನ ಮಕ್ಕಳು ಅಬ್ರಹಾಮನಿಗೆ ಉತ್ತರ ಕೊಟ್ಟು ಅವನಿಗೆ
೬ ಹೇಳಿದ್ದೇನಂದರೆ—ಸ್ವಾಮಿಯೇ, ನಮ್ಮ ಮಾತು ಕೇಳು; ನೀನು ನ
ಮ್ಮ ಮಧ್ಯದಲ್ಲಿ ದೇವರ ಪ್ರಭುವಾಗಿದ್ದೀ, ನಮ್ಮ ಸಮಾಧಿಗಳೊ
ಳಗೆ ಉತ್ತಮವಾದದರಲ್ಲಿ; ನಿನ್ನ ಹೆಣವನ್ನು ಹೂಣಿರಿ. ನೀನು
ನಿನ್ನ ಹೆಣವನ್ನು ಹೂಣಿಡದ ಹಾಗೆ, ನಮ್ಮಲ್ಲಿ ಯಾವನಾದರೂ
ತನ್ನ ಸಮಾಧಿಯನ್ನು ಕೊಡೆನು, ಅನ್ನುವದಿಲ್ಲ.
೭ ಆಗ ಅಬ್ರಹಾಮನು ಎದ್ದು, ಹೇತನ ಮಕ್ಕಳಾದ ಆ ದೇಶದ
೮ ಜನಕ್ಕೆ ಅಡ್ಡ ಬಿದ್ದು, ಅವರ ಸಂಗಡ ಮಾತಾಡಿದ್ದೇನಂದರೆ—ನಾ
ನು ನನ್ನ ಹೆಣವನ್ನು ನನ್ನ ಎದುರಿನಿಂದ ಹೂಣಿಡುವದು ನಿಮ್ಮ
ಮನಸ್ಸಿಗೆ ಸರಿಬಿದ್ದರೆ, ನನ್ನ ಮಾತು ಕೇಳಿ, ಜೋಹರನ ಮಗನಾ
೯ ದ ಎಫ್ರೋನನನ್ನು, ನನಗೋಸ್ಕರ ಬೇಡಿಕೊಳ್ಳಿರಿ. ಅವನು ತ
ನ್ನ ಹೊಲದ ಅಂಚಿನಲ್ಲಿರುವ ಮಕ್ಪೆಲ ಗವಿಯನ್ನು ನನಗೆ ಕೊ
ಡಲಿ; ತಕ್ಕ ಕ್ರಯಕ್ಕೆ ಅವನು ಅದನ್ನು ನಿಮ್ಮ ಮಧ್ಯದಲ್ಲಿ ಸ
ಮಾಧಿಯ ಸ್ವಾಸ್ಥ್ಯವಾಗಿ ನನಗೆ ಕೊಡಲಿ.
೧೦ ಇದಲ್ಲದೆ ಎಫ್ರೋನನು ಹೇತನ ಮಕ್ಕಳ ಮಧ್ಯದಲ್ಲಿ ವಾಸ
ವಾಗಿದ್ದನು. ಮತ್ತು ಹಿತ್ತಿಯನಾದ ಎಫ್ರೋನನು ಅಬ್ರಹಾಮನಿಗೆ
ಪ್ರತ್ಯುತ್ತರವಾಗಿ ಅವನ ಪಟ್ಟಣದ ಬಾಗಲಲ್ಲಿ ಸೇರುವವರಾದ, ಹೇ
೧೧ ತನ ಮಕ್ಕಳಾದ ಎಲ್ಲರ ಕಿವಿಗಳಲ್ಲಿ ಹೇಳಿದ್ದೇನಂದರೆ—ನನ್ನ
ಸ್ವಾಮಿಯೇ, ಹಾಗಲ್ಲ, ನನ್ನ ಮಾತು ಕೇಳು; ಆ ಹೊಲವನ್ನು ನಿ
ನಗೆ ಕೊಡುತ್ತೇನೆ; ಅದರಲ್ಲಿರುವ ಗವಿಯನ್ನೂ ನಿನಗೆ ಕೊಡುತ್ತೇ
ನೆ. ನನ್ನ ಜನರ ದೃಷ್ಟಿಯಲ್ಲಿ ನಿನಗೆ ಕೊಡುತ್ತೇನೆ; ನಿನ್ನ ಹೆ
ಣವನ್ನು ಹೂಣಿಡು.
೧೨ ಆಗ ಅಬ್ರಹಾಮನು ಆ ದೇಶದ ಜನದ ಮುಂದೆ ಅಡ್ಡ ಬಿದ್ದು,
ದೇಶದ ಜನದ ಕಿವಿಗಳಲ್ಲಿ ಎಫ್ರೋನನಿಗೆ ಹೇಳಿದ್ದೇನಂದರೆ—ನೀನು
೧೩ ನನಗೆ ದಯ ಮಾಡ ಬೇಕೆಂದಿದ್ದರೆ, ನನ್ನ ಮಾತು ಕೇಳು; ಹೊ
ಲದ ಕ್ರಯವನ್ನು ಕೊಡುತ್ತೇನೆ; ಅದನ್ನು ನನ್ನಿಂದ ತಕ್ಕೊಳ್ಳಿ;
ಆಗ ನನ್ನ ಹೆಣವನ್ನು ಅಲ್ಲಿ ಹೂಣಿಡುವೆನು.
೧೪ ಆಗ ಎಫ್ರೋನನು ಅಬ್ರಹಾಮನಿಗೆ ಪ್ರತ್ಯುತ್ತರ ಕೊಟ್ಟು, ಅ
೧೫ ವನಿಗೆ ಹೇಳಿದ್ದೇನಂದರೆ—ನನ್ನ ಸ್ವಾಮಿಯೇ, ನನ್ನ ಮಾತು ಕೇ
ಳು. ಆ ಭೂಮಿಯು ನಾನೂರು ರೂಪಾಯಿ ಬಾಳುವದು. ಅ
ದು ನನಗೂ ನಿನಗೂ ಏನು? ನಿನ್ನ ಹೆಣವನ್ನು ಹೂಣಿಡು.
೧೬ ಅಬ್ರಹಾಮನು ಎಫ್ರೋನನಿಗೆ ಕಿವಿ ಕೊಟ್ಟನು. ಮತ್ತು ಅಬ್ರ
ಹಾಮನು ಎಫ್ರೋನನು ಹೇತನ ಮಕ್ಕಳ ಕಿವಿಗಳಲ್ಲಿ ಹೇಳಿದ ಹ
ಣವಾದ ನಾನೂರು ಬೇಕೆಲುಗಳನ್ನು ಸಾವಕಾರರಲ್ಲಿ ಸಲ್ಲುವ
ಬೆಳ್ಳಿಯಿಂದ ತೂಕ ಮಾಡಿ ಕೊಟ್ಟನು. ಹಾಗೆ ಮಮ್ರೆಗೆ ಎದು
ರಾಗಿರುವ ಮಕ್ಪೆಲದಲ್ಲಿರುವ ಎಫ್ರೋನನ ಹೊಲವು ಆ ಹೊಲ
ವೂ, ಅದರಲ್ಲಿರುವ ಗವಿಯೂ, ಹೊಲದಲ್ಲಿರುವಂಥ, ಅದರ ಎ
ಲ್ಲಾ ಪ್ರಾಂತ್ಯದಲ್ಲಿ ಸುತ್ತಲಾಗಿರುವಂಥ ಮರಗಳೆಲ್ಲವೂ, ಹೇತನ
೧೮ ಮಕ್ಕಳ ಮುಂದೆಯೂ, ಅವನ ಪಟ್ಟಣದ ಬಾಗಲಲ್ಲಿ ಸೇರುವ ಎಲ್ಲರ
ಮುಂದೆಯೂ ಅಬ್ರಹಾಮನಿಗೆ ಆಸ್ತಿಯಾಗಿ ಸ್ಥಿರ ಮಾಡಲ್ಪಟ್ಟಿತು.
೧೯ ಇದು ಆದ ಮೇಲೆ ಅಬ್ರಹಾಮನು ತನ್ನ ಹೆಂಡತಿಯಾದ ಸಾರ
ಳನ್ನು ಕಾನಾನ್ ದೇಶದಲ್ಲಿ ಹೆಬ್ರೋನೆಂಬ ಮಮ್ರೆಗೆ ಎದುರಾಗಿ
೨೦ ರುವ ಮಕ್ಪೆಲ ಹೊಲದ ಗವಿಯಲ್ಲಿ ಹೂಣಿಟ್ಟನು. ಮತ್ತು ಆ
ಹೊಲವೂ, ಅದರಲ್ಲಿರುವ ಗವಿಯೂ ಹೇತನ ಮಕ್ಕಳಿಂದ ಅಬ್ರ
ಹಾಮನಿಗೆ ಸ್ವಂತ ಸಮಾಧಿ ಸ್ವಾಸ್ಥ್ಯವಾಗಿ ಸ್ಥಿರ ಮಾಡಲ್ಪ
ಟ್ಟಿತು.

## ೨೪. ಸಂಧಿ.

೧ ಅಬ್ರಹಾಮನು ಮುದುಕನೂ, ದಿನ ಗತಿಸಿದವನೂ ಆಗಿದ್ದನು.
ಕರ್ತನು ಅಬ್ರಹಾಮನನ್ನು ಎಲ್ಲಾದರಲ್ಲಿ ಆಶೀರ್ವದಿಸಿ ಇದ್ದ
೨ ನು. ಆಗ ಅಬ್ರಹಾಮನು ತನಗುಂಟಾದ ಎಲ್ಲವುಗಳನ್ನು ಆಳು
ವ ತನ್ನ ಮನೆಯ ಹಿರೀ ಸೇವಕನಿಗೆ ಹೇಳಿದ್ದೇನಂದರೆ—ನಿನ್ನ
೩ ಕೈಯನ್ನು ನನ್ನ ತೊಡೆಯಡಿಯಲ್ಲಿ ಇಡು. ನೀನು ನನ್ನ ಸು
ತ್ತಲು ವಾಸವಾಗಿರುವ ಕನಾನ್ಯರ ಮಕ್ಕಳಲ್ಲಿಂದ ನನ್ನ ಮಗನಿಗೆ
೪ ಹೆಂಡತಿಯನ್ನು ತಕ್ಕೊಳ್ಳುವದಿಲ್ಲವೆಂದೂ, ನನ್ನ ದೇಶಕ್ಕೂ
ಬಂಧುಗಳ ಬಳಿಗೂ ಹೋಗಿ, ನನ್ನ ಮಗನಾದ ಇಸಾಕನಿಗೆ ಹೆಂ
ಡತಿಯನ್ನು ತಕ್ಕೊಳ್ಳುವಿ ಎಂದೂ, ಆಕಾಶಕ್ಕೆ ದೇವರೂ, ಭೂ
ಮಿಗೆ ದೇವರೂ ಆಗಿರುವ ಕರ್ತನ ಮೇಲೆ ನಿನ್ನನ್ನು ಪ್ರಮಾಣ
ಮಾಡಿಸುತ್ತೇನೆ.
೫ ಸೇವಕನು ಅವನಿಗೆ, ಬಂದು ವೇಳೆ ನನ್ನನ್ನು ಹಿಂಬಾಲಿಸಿ ಈ
ದೇಶಕ್ಕೆ ಬರುವದಕ್ಕೆ ಆ ಸ್ತ್ರೀಗೆ ಮನಸ್ಸಿಲ್ಲದೆ ಇದ್ದೀತು; ಹಾ
ಗಾದರೆ, ನಿನ್ನ ಮಗನನ್ನು ನೀನು ಬಿಟ್ಟು ಬಂದ ದೇಶಕ್ಕೆ ತಿರಿಗಿ
ತಕ್ಕೊಂಡು ಹೋಗ ಬೇಕೋ! ಅಂದನು.
೬ ಅಬ್ರಹಾಮನು ಅವನಿಗೆ ಹೇಳಿದ್ದೇನಂದರೆ—ನನ್ನ ಮಗನ
ನ್ನು ತಿರಿಗಿ ಅಲ್ಲಿಗೆ ತಕ್ಕೊಂಡು ಹೋಗದ ಹಾಗೆ, ನೋಡಿಕೋ.
೭ ನನ್ನ ತಂದೆಯ ಮನೆಯಿಂದಲೂ ಬಂಧುಗಳ ದೇಶದಿಂದಲೂ
ನನ್ನನ್ನು ತೆಗೆದು ಕೊಂಡು, ನನ್ನ ಸಂಗಡ ಮಾತಾ
ಡಿ, ನಿನ್ನ ಬೀಜಕ್ಕೆ ಈ ದೇಶವನ್ನು ಕೊಡುವೆನೆಂದು ನನಗೆ ಪ್ರ
ಮಾಣ ಮಾಡಿದ, ಆಕಾಶದ ದೇವರಾದ ಕರ್ತನೇ ಅಲ್ಲಿಂದ ನ



ನ್ನ ಮಗನಿಗೆ ಹೆಂಡತಿಯನ್ನು ತೆಗೆದು ಕೊಳ್ಳುವ ಹಾಗೆ, ತನ್ನ
ದೂತನನ್ನು ನಿನ್ನ ಮುಂದೆ ಕಳುಹಿಸುವನು.
೮ ಆದರೆ ಆ ಸ್ತ್ರೀಗೆ ನಿನ್ನನ್ನು ಹಿಂಬಾಲಿಸಿ ಬರುವದಕ್ಕೆ ಮನ
ಸ್ಸಿಲ್ಲದಿದ್ದರೆ, ನನಗೆ ಮಾಡಿದ ಈ ಪ್ರಮಾಣದಿಂದ ಬಿಡುಗಡೆ
ಯಾಗುವಿ; ನನ್ನ ಮಗನನ್ನು ಅಲ್ಲಿಗೆ ತಿರಿಗಿ ತಕ್ಕೊಂಡು ಹೋ
೯ ಗ ಬೇಡ, ಅಷ್ಟೆ. ಆಗ ಆ ಸೇವಕನು ತನ್ನ ಕೈ ತನ್ನ ಯಜಮಾ
ನನಾದ ಅಬ್ರಹಾಮನ ತೊಡೆಯಡಿಯಲ್ಲಿ ಇಟ್ಟು, ಆ ವಿಷಯದ
ಲ್ಲಿ ಅವನಿಗೆ ಪ್ರಮಾಣ ಮಾಡಿದನು.
೧೦ ಇದಲ್ಲದೆ ಆ ಸೇವಕನು ತನ್ನ ಯಜಮಾನನ ಒಂಟೆಗಳಲ್ಲಿ
ಹತ್ತು ಒಂಟೆಗಳನ್ನು ತಕ್ಕೊಂಡು ಹೋದನು. ಅವನ ಯಜ
ಮಾನನ ಯಾವತ್ತು ಒಡವೆ ಅವನ ಕೈಯಲ್ಲಿ ಇತ್ತು. ಅವನು
ಎದ್ದು ನದಿಗಳ ನಡುವೆಯ ಆರಾಮದಲ್ಲಿರುವ ನಾಹೊರನ ಪಟ್ಟ
೧೧ ಣಕ್ಕೆ ಹೋದನು. ಮತ್ತು ಸಂಜೆ ವೇಳೆಯಲ್ಲಿ ನೀರು ಸೇದುವ
ಹೆಂಗಸರು ಹೊರಗೆ ಬರುವ ವೇಳೆಯಲ್ಲಿ ಪಟ್ಟಣದ ಹೊರಗೆ ನೀರಿ
೧೨ ನ ಭಾವಿಯ ಬಳಿಯಲ್ಲಿ ಒಂಟೆಗಳನ್ನು ಮಲಗಿಸಿ, ಹೇಳಿ ಕೊಂಡ
ದ್ದೇನಂದರೆ—

ನನ್ನ ಯಜಮಾನನಾದ ಅಬ್ರಹಾಮನ ದೇವರಾಗಿರುವ ಕ
ರ್ತನೇ, ದಯ ಮಾಡಿ ಈ ಹೊತ್ತು ನನಗೆ ಅನುಕೂಲವ
ನ್ನು ಉಂಟು ಮಾಡು; ನನ್ನ ಯಜಮಾನನಾದ ಅಬ್ರಹಾಮನಿ
೧೩ ಗೆ ಕೃಪೆ ಮಾಡು. ಇಗೋ, ನಾನು ನೀರಿನ ಬುಗ್ಗೆಯ ಬಳಿಯ
ಲ್ಲಿ ನಿಂತು ಕೊಂಡಿದ್ದೇನೆ; ಊರಿನ ಜನರ ಕುಮಾರ್ತೆಗಳು ನೀರು
೧೪ ಸೇದುವದಕ್ಕೆ ಹೊರಗೆ ಬರುತ್ತಾರೆ. ನಿನ್ನ ಕೊಡವನ್ನು ನಾನು
ಕುಡಿಯುವ ಹಾಗೆ, ದಯ ಮಾಡಿ ಇಳಿಸು ಎಂದು ನಾನು ಹೇಳಿ
ದ ಮೇಲೆ, ಯಾವ ಹುಡಿಗಿ, ನೀನು ಕುಡಿ, ನಿನ್ನ ಒಂಟೆಗಳಿಗೆ ಸ
ಹ ಕುಡಿಯ ಕೊಡುತ್ತೇನೆ ಎಂದು ಹೇಳುವಳೋ, ಅವಳನ್ನು ನಿ
ನ್ನ ಸೇವಕನಾದ ಇಸಾಕನಿಗೆ ನೇಮಿಸಿದ್ದೀ ಎಂಬುವದಾಗಲಿ, ನೀ
ನು ನನ್ನ ಯಜಮಾನನಿಗೆ ಕೃಪೆ ಮಾಡಿದಿ ಎಂದು, ಇದರಿಂದ
ತಿಳಿಯ ಕೊಳ್ಳುವೆನು.
೧೫ ಅವನು ಮಾತು ಮುಗಿಸುವದಕ್ಕಿಂತ ಮುಂಚೆ ಆದದ್ದೇನಂದ
ರೆ, ಅಗೋ, ಅಬ್ರಹಾಮನ ಸಹೋದರನಾದ ನಾಹೊರನ ಹೆಂಡ
ತಿಯಾಗಿರುವ ಮಿಲ್ಕಳ ಮಗನಾದ ಬೆತುವೇಲನಿಗೆ ಹುಟ್ಟಿದ ರೆ
ಬೆಕ್ಕಳು ಹೊರಗೆ ಬಂದಳು. ಅವಳ ಹೆಗಲಿನ ಮೇಲೆ ಅವಳ ಕೊ
೧೬ ಡವಿತ್ತು. ಆ ಹುಡಿಗಿ ನೋಟಕ್ಕೆ ಬಹು ಚಲುವೆಯಾಗಿ, ಗಂಡ
ನನ್ನು ಅರಿಯದ ಕನ್ಯೆಯಾಗಿದ್ದಳು. ಅವಳು ಬುಗ್ಗೆಯ ಹತ್ತರ
ಇಳಿದು ಹೋಗಿ, ತನ್ನ ಕೊಡವನ್ನು ತುಂಬಿ ಕೊಂಡು, ಮೇಲೆ ಬಂ
೧೭ ದಳು. ಆಗ ಆ ಸೇವಕನು ಅವಳೆದುರಿಗೆ ಓಡಿ, ದಯ ಮಾಡಿ ನಿನ್ನ
ಕೊಡದೊಳಗಿಂದ ಸ್ವಲ್ಪ ನೀರು ನನಗೆ ಕುಡಿಯ ಕೊಡು, ಅಂ
೧೮ ದನು. ಅವಳು, ಅಯ್ಯಾ, ಕುಡಿ ಎಂದು ಹೇಳಿ, ತ್ವರೆಪಟ್ಟು, ತ
ನ್ನ ಕೊಡವನ್ನು ಕೈಯ ಮೇಲೆ ಇಳಿಸಿ, ಅವನಿಗೆ ಕುಡಿಯ ಕೊ
೧೯ ಟ್ಟಳು. ಅವನಿಗೆ ಕುಡಿಯ ಕೊಟ್ಟಾದ ಮೇಲೆ, ಅವಳು, ನಿನ್ನ ಒಂ
ಟೆಗಳಿಗೂ, ಅವು ಕುಡಿದು ತೀರುವ ಪರ್ಯಂತರ, ಸೇದುತ್ತೇನೆ
೨೦ ಎಂದು ಹೇಳಿ, ತ್ವರೆಪಟ್ಟು, ತನ್ನ ಕೊಡವನ್ನು ದೋಣಿಯಲ್ಲಿ
ಹೊಯಿದು, ಮತ್ತೂ ಸೇದುವದಕ್ಕೆ ಭಾವಿಯ ಬಳಿಗೆ ಓಡಿ, ಅ
೨೧ ವನ ಎಲ್ಲಾ ಒಂಟೆಗಳಿಗೋಸ್ಕರ ಸೇದಿದಳು. ಆಗ ಆ ಮನುಷ್ಯ
ನು ಕರ್ತನು ತನ್ನ ಮಾರ್ಗವನ್ನು ಅನುಕೂಲ ಮಾಡಿದನೋ!
ಏನೋ! ಎಂದು ತಿಳಿಯುವದಕ್ಕೆ ಮಾತಾಡದೆ, ಅವಳ ಮೇಲೆ
ದೃಷ್ಟಿ ಇಟ್ಟನು.
೨೨ ಒಂಟೆಗಳು ಕುಡಿದಾದ ಮೇಲೆ, ಆ ಮನುಷ್ಯನು ಅರೆ ಬೇಕೆಲಿ
ನ ತೂಕದ ಚಿನ್ನದ ಮೂಗುತಿಯನ್ನೂ, ಹತ್ತು ಹೊನ್ನು ತೂಕ
ದ ಎರಡು ಕಡಗಗಳನ್ನೂ ತೆಗೆದು, ಅವಳ ಕೈಗಳಿಗೆ ಕೊಡಿಸಿ,
೨೩ ನೀನು ಯಾರ ಮಗಳು? ನನಗೆ ಹೇಳು; ನಿನ್ನ ತಂದೆಯ ಮನೆ
ಯಲ್ಲಿ ನಮಗೆ ಇಳುಕೊಳ್ಳುವ ಸ್ಥಳ ಉಂಟೋ! ಅಂದನು.
೨೪ ಅವಳವನಿಗೆ ನಾಹೊರನಿಗೆ ಮಿಲ್ಕಳು ಹೆತ್ತ ಬೆತುವೇಲನ ಮಗಳು
೨೫ ನಾನು, ಅಂದಳು. ಮತ್ತು ಹುಲ್ಲೂ, ಮೇವೂ ನಮ್ಮಲ್ಲಿ ಬಹಳ
ಉಂಟು. ಇಳುಕೊಳ್ಳುವದಕ್ಕೂ ಸ್ಥಳ ಉಂಟು ಎಂದು, ಅವನಿ
೨೬ ಗೆ ಹೇಳಿದಳು. ಆಗ ಆ ಮನುಷ್ಯನು ಬಾಗಿ, ಕರ್ತನಿಗೆ ಅಡ್ಡ
೨೭ ಬಿದ್ದು, ಹೇಳಿದ್ದೇನಂದರೆ—ನನ್ನ ಯಜಮಾನನಾದ ಅಬ್ರಹಾಮ
ನ ದೇವರಾದ ಕರ್ತನು ಆಶೀರ್ವದಿಸಲ್ಪಡಲಿ; ಅವನು ನನ್ನ
ಯಜಮಾನನಿಗೆ ಮಾತುವ ಕೃಪೆಯನ್ನೂ ಸತ್ಯವನ್ನೂ ಬಿಡ
ಲಿಲ್ಲ. ನಾನು ಮಾರ್ಗದಲ್ಲಿ ಇರಲಾಗಿ, ಕರ್ತನು ನನ್ನನ್ನು ನ
ನ್ನ ಯಜಮಾನನ ಸಹೋದರರ ಮನೆಗೆ ನಡಿಸಿದ್ದಾನೆ.
೨೮ ಆಗ ಆ ಹುಡಿಗಿ ಓಡಿ, ಈ ಮಾತುಗಳನ್ನು ತನ್ನ ತಾಯ ಮನೆ
೨೯ ಯಲ್ಲಿ ತಿಳಿಸಿದಳು. ಕೆಬೆಕ್ಕಳಿಗೆ ಲಾಬಾನನೆಂಬ ಸಹೋದರನು
ಇದ್ದನು. ಲಾಬಾನನು ಬುಗ್ಗೆಯ ಹತ್ತರ ಇರುವ ಆ ಮನುಷ್ಯ
೩೦ ನ ಬಳಿಗೆ ಹೊರಗೆ ಬಂದನು. ಅವನು ಮೂಗುತಿಯನ್ನೂ, ತ
ನ್ನ ಸಹೋದರಿಯ ಕೈಗಳಲ್ಲಿರುವ ಕಡಗಗಳನ್ನೂ ನೋಡಿದಾಗ,
ಆ ಮನುಷ್ಯನು ಹಾಗೆ ನನಗೆ ಹೇಳಿದನೆಂದನ್ನುವ ತನ್ನ ಸಹೋ
ದರಿಯಾದ ಕೆಬೆಕ್ಕಳ ಮಾತುಗಳನ್ನು ಕೇಳಿದಾಗ, ಆ ಮನುಷ್ಯ
ನ ಬಳಿಗೆ ಬಂದನು. ಅಗೋ, ಅವನು ಬುಗ್ಗೆಯ ಸಮೀಪದಲ್ಲಿ
೩೧ ಒಂಟೆಗಳ ಹತ್ತರ ನಿಂತಿದ್ದನು. ಅವನವನಿಗೆ—ಕರ್ತನಿಂದ ಆಶೀ
ರ್ವದಿಸಲ್ಪಟ್ಟವನೇ, ಬಾ, ಯಾಕೆ ಹೊರಗೆ ನಿಂತಿರುತ್ತೀ! ನಾನು
ಮನೆಯನ್ನೂ, ಒಂಟೆಗಳಿಗೆ ಸ್ಥಳವನ್ನೂ ಸಿದ್ಧ ಮಾಡಿದ್ದೇನೆ, ಅಂ
೩೨ ದನು. ಆಗ ಆ ಮನುಷ್ಯನು ಮನೆಗೆ ಬಂದನು. ಅವನು ಒಂಟೆ
ಗಳನ್ನು ಬಿಚ್ಚಿ, ಒಂಟೆಗಳಿಗೆ ಹುಲ್ಲನ್ನೂ ಮೇವನ್ನೂ, ಅವನ ಕಾ
ಲುಗಳನ್ನೂ ಅವನ ಸಂಗಡ ಇದ್ದ ಮನುಷ್ಯರ ಕಾಲುಗಳನ್ನೂ
೩೩ ತೊಳೆಯುವದಕ್ಕೆ ನೀರನ್ನೂ, ಕೊಟ್ಟನು. ಮತ್ತು ಊಟಕ್ಕೆ
ಅವನ ಮುಂದೆ ಇಟ್ಟಾಗ, ಅವನು—ನಾನು ನನ್ನ ಮಾತುಗಳನ್ನು
ಹೇಳುವ ಮಟ್ಟಿಗೂ ಉಣ್ಣುವದಿಲ್ಲ, ಅಂದನು. ಅವನು ಹೇಳು,
ಅಂದನು.
೩೪ ಅವನು ಹೇಳಿದ್ದೇನಂದರೆ—ನಾನು ಅಬ್ರಹಾಮನ ಸೇವಕನು.
೩೫ ಕರ್ತನು ನನ್ನ ಯಜಮಾನನನ್ನು ಬಹಳವಾಗಿ ಆಶೀರ್ವದಿಸಿದ್ದ
ರಿಂದ, ಅವನು ದೊಡ್ಡವನಾದನು. ಆತನು ಅವನಿಗೆ ಕುರಿ ದನಗಳ
ನ್ನೂ, ಬೆಳ್ಳಿ ಭಂಗಾರವನ್ನೂ, ದಾಸ ದಾಸಿಯರನ್ನೂ, ಒಂಟೆಗಳ
೩೬ ನ್ನೂ, ಕತ್ತೆಗಳನ್ನೂ ಕೊಟ್ಟಿದ್ದಾನೆ. ಮತ್ತು ನನ್ನ ಯಜಮಾನನ
ಹೆಂಡತಿಯಾದ ಸಾರಳು ಮುದಿಪ್ರಾಯದಲ್ಲಿ ನನ್ನ ಯಜಮಾನ
೩೭ ನಿಗೆ ಮಗನನ್ನು ಹೆತ್ತಿದ್ದಾಳೆ. ಇವನಿಗೆ ಅವನು ತನಗಿದ್ದದ್ದನ್ನೆಲ್ಲಾ
ಕೊಟ್ಟಿದ್ದಾನೆ. ಮತ್ತು ನನ್ನ ಯಜಮಾನನು, ನಾನು ಯಾರ ದೇ
ಶದಲ್ಲಿ ವಾಸ ಮಾಡುತ್ತೇನೋ, ಆ ಕನಾನ್ಯರ ಕುಮಾರ್ತೆಗಳಲ್ಲಿ
೩೮ ನನ್ನ ಮಗನಿಗೆ ಹೆಂಡತಿಯನ್ನು ತಕ್ಕೊಳ್ಳ ಬೇಡ. ಆದರೆ ನನ್ನ
ತಂದೇ ಮನೆಗೂ, ನನ್ನ ಬಂಧುಗಳ ಬಳಿಗೂ ಹೋಗಿ, ನನ್ನ ಮಗ
ನಿಗೆ ಹೆಂಡತಿಯನ್ನು ತಕ್ಕೊಳ್ಳ ಬೇಕು ಎಂದು, ನನ್ನನ್ನು ಪ್ರಮಾ

೩೯ ಣ ಮಾಡಿದ್ದಾನೆ. ನಾನು ನನ್ನ ಯಜಮಾನನಿಗೆ—ಬಂದು ಬೇಳೆ
೪೦ ಆ ಸ್ತ್ರೀ ನನ್ನನ್ನು ಹಿಂಬಾಲಿಸಳು, ಅಂದಾಗ, ಅವನು ನನಗೆ ಹೇ
ಳಿದ್ದೇನಂದರೆ—ನಾನು ಯಾವನ ಮುಂದೆ ನಡೆದು ಕೊಳ್ಳುತ್ತಾ
ಬಂದೆನೋ, ಆ ಕರ್ತನು ತನ್ನ ದೂತನನ್ನು ನಿನ್ನ ಸಂಗಡ ಕಳು
ಹಿಸಿ, ನೀನು ನನ್ನ ಬಂಧುಗಳೊಳಗಿಂದಲೂ, ನನ್ನ ತಂದೆಯ
ಮನೆಯೊಳಗಿಂದಲೂ, ನನ್ನ ಮಗನಿಗೋಸ್ಕರ ಹೆಂಡತಿಯನ್ನು
ತಕ್ಕೊಳ್ಳುವ ಹಾಗೆ, ನಿನ್ನ ಮಾರ್ಗವನ್ನು ಅನುಕೂಲ ಮಾಡು
೪೧ ವನು. ಆ ಪಕ್ಷದಲ್ಲಿ ನನ್ನ ಪ್ರಮಾಣದಿಂದ ಬಿಡುಗಡೆಯಾಗಿರುವಿ.
ನೀನು ನನ್ನ ಬಂಧುಗಳ ಬಳಿಗೆ ಬಂದಾಗ, ಅವರು ನಿನಗೆ ಕೊಡದೆ
೪೨ ಹೋದರೆ, ನನ್ನ ಪ್ರಮಾಣದಿಂದ ಬಿಡುಗಡೆಯಾಗಿರುವಿ. ಈ
ಮೇರೆಗೆ ನಾನು ಈ ಹೊತ್ತು ಬುಗ್ಗೆಯ ಬಳಿಗೆ ಬಂದಾಗ, ಹೇಳಿ
ಕೊಂಡದ್ದೇನಂದರೆ—ನನ್ನ ಯಜಮಾನನಾದ ಅಬ್ರಹಾಮನ ದೇ
ವರಾದ ಕರ್ತನೇ, ನಾನು ಹೋಗುವ ಮಾರ್ಗವನ್ನು ನೀನು ಅ
೪೩ ನುಕೂಲ ಮಾಡುವಿಯಾದರೆ, ಇಗೋ, ನಾನು ನೀರಿನ ಬುಗ್ಗೆಯ
ಬಳಿಯಲ್ಲಿ ನಿಂತಿದ್ದೇನೆ; ಹಾಗಾದರೆ, ಕನ್ನಿಕೆ ಶೇದುವದಕ್ಕೆ ಹೊರ
ಗೆ ಬರುವಾಗ, ದಯೆ ಮಾಡಿ ನಿನ್ನ ಕೊಡದೊಳಗಿಂದ ನನಗೆ ಸ್ವ
ಲ್ಪ ಕುಡಿಯ ಕೊಡೆಂದು ನಾನು ಹೇಳಿದ್ದಕ್ಕೆ, ನೀನೂ ಕುಡಿ, ನಿನ್ನ
೪೪ ಬಂಟೆಗಳಿಗೂ ಶೇದುತ್ತೇನೆ ಎಂದು, ನನಗೆ ಹೇಳಿದರೆ, ಅವಳೇ
ಕರ್ತನು ನನ್ನ ಯಜಮಾನನ ಮಗನಿಗೆ ಆದು ಕೊಂಡು ನೇಮಿಸಿ
೪೫ ರ ಹೆಂಡತಿಯಾಗಲಿ. ನಾನು ನನ್ನ ಹೃದಯದಲ್ಲಿ ಮಾತಾಡಿ
ಮುಗಿಸುವದಕ್ಕಿಂತ ಮುಂಚೆ, ಅಗೋ, ಕೆಬೆಕ್ಕಳು ಹೊರಗೆ ಬಂ
ದಳು; ಅವಳ ಹೆಗಲಿನ ಮೇಲೆ ಅವಳ ಕೊಡವಿತ್ತು. ಅವಳು ಬುಗ್ಗೆ
ಯ ಬಳಿಗೆ ಇಳಿದು, ಶೇದಿದಳು, ನನಗೆ ಕುಡಿಯ ಕೊಡ ಬೇಕೆಂ
೪೬ ದು, ಅವಳಿಗೆ ಹೇಳಿದೆನು. ಆಗ ಅವಳು ತ್ವರೆಕಟ್ಟು, ತನ್ನ ಕೊ
ಡವನ್ನಿಳಿಸಿ, ಕುಡಿ, ನಿನ್ನ ಬಂಟೆಗಳಿಗೂ ಕುಡಿಸುವೆನು, ಅಂದಳು.
೪೭ ನಾನು ಕುಡಿದೆನು; ಮತ್ತು ಬಂಟೆಗಳಿಗೂ ಅವಳು ಕುಡಿಸಿದಳು. ನೀ
ನು ಯಾರ ಮಗಳೆಂದು ಅವಳನ್ನು ಕೇಳಿದಾಗ, ಅವಳು ನಾಹೊ
ರನಿಗೆ ಮಿಲ್ಕಳು ಹೆತ್ತ ಮಗನಾದ ಬೆತುವೇಲನ ಮಗಳು, ಅಂ
ದಳು. ಆಗ ನಾನು ಅವಳ ಮೂಗಿಗೆ ಮೂಗುತಿಯನ್ನೂ, ಅ
೪೮ ವಳ ಕೈಗಳಿಗೆ ಕಡಗಗಳನ್ನೂ ಇಟ್ಟು, ಬೊಗ್ಗಿ ಕೊಂಡು, ಕರ್ತ
ನಿಗೆ ಅಡ್ಡಬಿದ್ದು, ನನ್ನ ಯಜಮಾನನ ಸಹೋದರನ ಮಗಳನ್ನು
ಅವನ ಮಗನಿಗೆ ಹೆಂಡತಿಯಾಗಿ ತಕ್ಕೊಳ್ಳುವದಕ್ಕೆ, ನನ್ನನ್ನು ಸ
ರಿಯಾದ ಮಾರ್ಗದಲ್ಲಿ ನಡಿಸಿದಂಥ, ನನ್ನ ಯಜಮಾನನಾದ
೪೯ ಅಬ್ರಹಾಮನ ದೇವರಾಗಿರುವ ಕರ್ತನನ್ನು ಹರಸಿದೆನು. ಹಾಗಾದ
ರೆ ಈಗ ನೀವು ನನ್ನ ಯಜಮಾನನಿಗೆ ಕೃಪೆಯನ್ನೂ ಸತ್ಯವ
ನ್ನೂ ನಡಿಸ ಬೇಕಂದರೆ, ನನಗೆ ತಿಳಿಸಿರಿ; ಇಲ್ಲದಿದ್ದರೆ, ನನಗೆ ತಿಳಿ
ಸಿರಿ. ಆಗ ನಾನು ಬಲ ಕಡೆಗಾದರೂ ಎಡ ಕಡೆಗಾದರೂ ತಿರುಗಿ
ಕೊಳ್ಳುವೆನು.

೫೦ ಲಾಬಾನನೂ ಬೆತುವೇಲನೂ ಪ್ರತ್ಯುತ್ತರವಾಗಿ ಹೇಳಿದ್ದೇನಂದ
ರೆ—ಕರ್ತನಿಂದ ಈ ಕಾರ್ಯವು ಉಂಟಾಯಿತು; ನಾವು ನಿನಗೆ
೫೧ ಕೆಟ್ಟದ್ದನ್ನಾದರೂ, ಬಳ್ಳೇದನ್ನಾದರೂ ಹೇಳಲಾರೆವು. ಇಗೋ,
ರೆಬೆಕ್ಕಳು ನಿನ್ನ ಮುಂದೆ ಇದ್ದಾಳೆ; ಅವಳನ್ನು ತಕ್ಕೊಂಡು ಹೋ
೫೨ ಗು. ಕರ್ತನು ಹೇಳಿದ ಹಾಗೆ, ಅವಳು ನಿನ್ನ ಯಜಮಾನನ ಮ
ಗನಿಗೆ ಹೆಂಡತಿಯಾಗಲಿ. ಅಬ್ರಹಾಮನ ಸೇವಕನು ಅವರ ಮಾ
೫೩ ತುಗಳನ್ನು ಕೇಳಿದಾಗ, ಕರ್ತನಿಗೆ ನೆಲದಲ್ಲಿ ಅಡ್ಡ ಬಿದ್ದನು. ಮ
ತ್ತು ಆ ಸೇವಕನು ಬೆಳ್ಳಿ ಬಡವೆಗಳನ್ನೂ, ಭಂಗಾರದ ಬಡವೆಗಳ
ನ್ನೂ, ವಸ್ತ್ರಗಳನ್ನೂ ಹೊರಗೆ ತಂದು, ರೆಬೆಕ್ಕಳಿಗೆ ಕೊಟ್ಟನು;
ಮತ್ತು ಅವಳ ಸಹೋದರನಿಗೂ, ತಾಯಿಗೂ ಪ್ರಿಯವಾದ ವಸ್ತು
ಗಳನ್ನು ಕೊಟ್ಟನು.

೫೪ ಅವನೂ, ಅವನ ಸಂಗಡ ಇದ್ದ ಮನುಷ್ಯರೂ ಉಂಡು, ಕು
ಡಿದು, ರಾತ್ರಿಯೆಲ್ಲಾ ಇದ್ದರು. ಬೆಳ್ಳಿಯ ಎದ್ದ ಮೇಲೆ, ಅವನು—
೫೫ ನನ್ನನ್ನು ನನ್ನ ಯಜಮಾನನ ಬಳಿಗೆ ಕಳುಹಿಸಿರಿ, ಅಂದನು. ಅ
ವಳ ಸಹೋದರನೂ, ಅವಳ ತಾಯಿಯೂ—ಹುಡಿಗಿಯು ಕೆಲವು
ದಿವಸ, ಹತ್ತು ದಿವಸವಾದರೂ ನಮ್ಮ ಬಳಿಯಲ್ಲಿ ಇರಲಿ; ಆ ಮೇ
೫೬ ಲೆ ಹೋಗಲಿ, ಅಂದಾಗ, ಅವನವರಿಗೆ—ನನ್ನನ್ನು ತಡೆಯ ಬೇಡಿರಿ;
ಕರ್ತನು ನನ್ನ ಮಾರ್ಗವನ್ನು ಅನುಕೂಲ ಮಾಡಿದ್ದಾನಲ್ಲ!
ನನ್ನ ಯಜಮಾನನ ಬಳಿಗೆ ಹೋಗುವ ಹಾಗೆ, ನನ್ನನ್ನು ಕಳುಹಿ
೫೭ ಸಿರಿ, ಅಂದನು. ಆಗಲವರು—ಹುಡಿಗಿಯನ್ನು ಕರೆದು, ಅವಳ
೫೮ ಬಾಯಿ ಮಾತನ್ನು ಕೇಳುವ, ಎಂದು, ರೆಬೆಕ್ಕಳನ್ನು ಕರೆದು, ಅ
ವಳಿಗೆ—ಈ ಮನುಷ್ಯನ ಸಂಗಡ ಹೋಗುವಿಯೋ? ಅಂದರು.
೫೯ ಅವಳು ಹೋಗುವೆನು, ಅಂದಳು. ಆಗಲವರು ತಮ್ಮ ಸಹೋ
ದರಿಯಾದ ರೆಬೆಕ್ಕಳನ್ನೂ, ಅವಳ ದಾದಿಯನ್ನೂ, ಅಬ್ರಹಾ
ಮನ ಸೇವಕನನ್ನೂ, ಅವನ ಮನುಷ್ಯರನ್ನೂ, ಕಳುಹಿಸಿದರು.
೬೦ ಇದಲ್ಲದೆ ರೆಬೆಕ್ಕಳನ್ನು ಆಶೀರ್ವದಿಸಿ, ಅವಳಿಗೆ ಹೇಳಿದ್ದೇನಂದ
ರೆ—ನಮ್ಮ ಸಹೋದರಿಯೇ, ನೀನು ಸಹಸ್ರ ಸಹಸ್ರಗಳಾಗು,
ನಿನ್ನ ಬೀಜವು ಅವರ ಹಗೆಯವರ ಬಾಗಲನ್ನು ಸ್ವತಂತ್ರಿಸಿ ಕೊ
ಳ್ಳಲಿ.
೬೧ ಆಗ ರೆಬೆಕ್ಕಳು ಎದ್ದು, ಅವಳೂ, ಅವಳ ದಾಸಿಗಳೂ, ಬಂಟೆ
ಗಳ ಮೇಲೆ ಹತ್ತಿ, ಆ ಮನುಷ್ಯನ ಹಿಂದೆ ಹೋದರು. ಆ ಸೇವ
೬೨ ಕನು ರೆಬೆಕ್ಕಳನ್ನು ಕರ ಕೊಂಡು ಹೋದನು. ಆದರೆ ಇಸಾಕನು
ಲಹೈರೊಯಿ ಎಂಬ ಭಾವಿಯ ಮಾರ್ಗವಾಗಿ ಬಂದನು. ಅವ
೬೩ ನು ದಕ್ಷಿಣ ದೇಶದಲ್ಲಿ ವಾಸವಾಗಿದ್ದನು. ಇಸಾಕನು ಸಾಯಂಕಾ
ಲದಲ್ಲಿ ಹೊಲದೊಳಗೆ ಧ್ಯಾನಿಸುವದಕ್ಕೆ ಹೋದಾಗ, ತನ್ನ ಕಣ್ಣು
೬೪ ಗಳನ್ನೆತ್ತಿ ನೋಡಲು, ಅಗೋ, ಬಂಟೆಗಳು ಬರುತ್ತಿದ್ದವು. ರೆಬೆಕ್ಕ
ಳು ತನ್ನ ಕಣ್ಣುಗಳನ್ನೆತ್ತಿ, ಇಸಾಕನನ್ನು ನೋಡಿದಾಗ, ಬಂಟೆ
೬೫ ಯಿಂದಿಳಿದು, ಆ ಸೇವಕನಿಗೆ, ಹೊಲದಲ್ಲಿ ನಮಗೆದುರಾಗಿ ಬರುವ
ಆ ಮನುಷ್ಯನು ಯಾರು? ಅಂದಳು. ಸೇವಕನು, ಅವನೇ ನನ್ನ
ಯಜಮಾನನು, ಅಂದಾಗ, ಅವಳು ಮುಸುಕು ಎತ್ತಿ ಹಾಕಿ ಕೊಂಡ
೬೬ ಳು. ಆಗ ಸೇವಕನು ಇಸಾಕನಿಗೆ ತಾನು ಮಾಡಿದ ಕಾರ್ಯಗಳನ್ನೆ
೬೭ ಲ್ಲಾ ತಿಳಿಸಿದನು. ಇಸಾಕನು ಅವಳನ್ನು ತನ್ನ ತಾಯಾದ ಸಾರ
ಳ ಗುಡಾರಕ್ಕೆ ಕರ ಕೊಂಡು ಹೋದನು. ಅವನು ರೆಬೆಕ್ಕಳನ್ನು
ಅಂಗೀಕರಿಸಿದನು. ಅವಳು ಅವನಿಗೆ ಹೆಂಡತಿಯಾದಳು. ಅವನು
ಅವಳನ್ನು ಪ್ರೀತಿ ಮಾಡಿದನು. ಹಾಗೆ ಇಸಾಕನು ತನ್ನ ತಾಯ
ವಿಷಯವಾಗಿ ಆದರಣೆ ಹೊಂದಿದನು.

## ೨೫. ಸಂಧಿ.

೧ ಇದಲ್ಲದೆ ಅಬ್ರಹಾಮನು ಇನ್ನೊಬ್ಬ ಹೆಂಡತಿಯನ್ನು ತಕ್ಕೊಂ
೨ ಡನು. ಅವಳ ಹೆಸರು ಕೆಟೂರಳು. ಅವಳು ಅವನಿಗೆ ಜೆಮ್ರಾನನ
ನ್ನೂ, ಯೊಕ್ಷಾನನನ್ನೂ, ಮೆದಾನನನ್ನೂ, ಮಿದ್ಯಾನನನ್ನೂ
೩ ಇಷ್ಬಾಕನನ್ನೂ, ಶೂಹನನ್ನೂ ಹೆತ್ತಳು. ಯೊಕ್ಷಾನನು ಶೇಬ



ನನ್ನೂ ದೆದಾನನನ್ನೂ ಪಡೆದನು. ದೆದಾನನ ಮಕ್ಕಳು ಅಶೂ
೪ ರ್ಯರೂ, ಲೆಟೂಷ್ಯರೂ, ಲೆಯೊಮ್ಯರೂ. ಮತ್ತು ಮಿದ್ಯಾ
ನನ ಮಕ್ಕಳು ಏಫನೂ, ಏಫರನೂ, ಹನೋಕನೂ, ಅಬೀದ
೫ ನೂ, ಎಲ್ದಾವನೂ. ಇವಕೆಲ್ಲಾ ಕೆಟೂರಳ ಮಕ್ಕಳು. ಆದರೆ
೬ ಅಬ್ರಹಾಮನು ತನಗಿದ್ದದ್ದೆಲ್ಲಾ ಇಸಾಕನಿಗೆ ಕೊಟ್ಟನು. ಮತ್ತು
ಅಬ್ರಹಾಮನಿಗೆ ಇದ್ದ ಉಪಪತ್ನಿಗಳ ಮಕ್ಕಳಿಗೆ ಅಬ್ರಹಾಮನು
ದಾನಗಳನ್ನು ಕೊಟ್ಟು, ಅವರನ್ನು ತಾನು ಇನ್ನು ಜೀವಿಸುತ್ತಿರ
ಲಾಗಿ, ತನ್ನ ಮಗನಾದ ಇಸಾಕನ ಬಳಿಯಿಂದ ಮೂಡಣಕ್ಕೆ,
ಪೂರ್ವದಿಕ್ಕಿನ ದೇಶಕ್ಕೆ ಕಳುಹಿಸಿದನು.

೭ ಅಬ್ರಹಾಮನು ಜೀವಿಸಿದ ಆಯುಷ್ಯದ ದಿವಸಗಳು ನೂರ
೮ ಎಪ್ಪತ್ತು ಐದು ವರುಷಗಳೇ. ಆಗ ಅಬ್ರಹಾಮನು ಬಳ್ಳೇ
ವೃದ್ಧಾಪ್ಯದಲ್ಲಿ ಮುದುಕನಾಗಿಯೂ, ತೃಪ್ತನಾಗಿಯೂ ಉಸು
ರು ಬಿಟ್ಟು, ಸತ್ತು, ತನ್ನ ಜನರ ಸಂಗಡ ಕೂಡಿಸಲ್ಪಟ್ಟನು.
೯ ಮತ್ತು ಅವನ ಮಕ್ಕಳಾದ ಇಸಾಕನೂ ಇಷ್ಮಯೇಲನೂ ಅ
ವನನ್ನು ಮಂಪ್ರೆಗೆ ಎದುರಾಗಿರುವಂಥ, ಹಿತ್ತಿಯನಾದ ಜೋ
ವರನ ಮಗನಾದ ಎಫ್ರೋನನ ಹೊಲದಲ್ಲಿರುವಂಥ, ಮಕ್ಪೆಲ
೧೦ ಎಂಬ ಗುಹೆಯಲ್ಲಿ ಹೂಣಿಟ್ಟರು. ಅಬ್ರಹಾಮನು ಹೇತನ ಮಕ್ಕ
ಳಿಂದ ತಕ್ಕೊಂಡ ಹೊಲದಲ್ಲಿ ಅಬ್ರಹಾಮನೂ, ಅವನ ಹೆಂಡತಿ
೧೧ ಯಾದ ಸಾರಳೂ ಹೂಣಲ್ಪಟ್ಟರು. ಅಬ್ರಹಾಮನು ಸತ್ತ ಮೇ
ಲೆ, ಆದದ್ದೇನಂದರೆ ದೇವರು ಅವನ ಮಗನಾದ ಇಸಾಕನನ್ನು
ಆಶೀರ್ವದಿಸಿದನು. ಮತ್ತು ಇಸಾಕನು ಲಹೈರೋಯಿ ಎಂಬ
ಭಾವಿಯ ಬಳಿಯಲ್ಲಿ ವಾಸ ಮಾಡಿದನು.

೧೨ ಸಾರಳ ದಾಸಿಯಾದ ಐಗುಪ್ತ್ಯಳಾದ ಹಾಗರಳು ಅಬ್ರಹಾ
ಮನಿಗೆ ಹೆತ್ತ ಅಬ್ರಹಾಮನ ಮಗನಾದ ಇಷ್ಮಯೇಲನ ವಂಶಾವ
೧೩ ಳಿ ಏನಂದರೆ—ಇಷ್ಮಯೇಲನ ಮಕ್ಕಳ ಹೆಸರುಗಳು, ಹೆಸರುಗ
ಳ ಪ್ರಕಾರವಾಗಿಯೂ, ವಂಶಾವಳಿಗಳ ಪ್ರಕಾರವಾಗಿಯೂ, ಯಾ
ವನೆಂದರೆ—ಇಷ್ಮಯೇಲನ ಹೊಚ್ಚಲನು ನೆಬಾಯೋತ್, ಕೆದ
೧೪ ರ್, ಅದ್ಬೇಲ್, ಮಿಬ್ಸಾಮ್, ಮಿಷ್ಮಾ, ದೂಮಾ, ಮಸ್ಸಾ, ಹದರ್,
೧೫ ತೇಮಾ, ಎಟ್ಟೂರ್, ನಫೀಷ್, ಕೇದ್ಮಾ. ಇವರೇ ಇಷ್ಮಯೇಲನ ಮಕ್ಕ
೧೬ ಳು. ಇವುಗಳೇ ಅವರ ಗ್ರಾಮಗಳ ಪ್ರಕಾರವಾಗಿಯೂ ಕೋಟೆಗ
ಳ ಪ್ರಕಾರವಾಗಿಯೂ ಅವರ ಹೆಸರುಗಳು. ಅವರು ತಮ್ಮ ಪ್ರಜೆ
೧೭ ಗಳ ಪ್ರಕಾರ ಹನ್ನೆರಡು ಮಂದಿ ಪ್ರಭುಗಳು. ಇಷ್ಮಯೇಲನು ಬ
ದುಕಿದ ವರುಷಗಳು ಎಷ್ಟೆಂದರೆ—ನೂರ ಮೂವತ್ತೇಳು ವರು
ಷ. ಮತ್ತು ಅವನು ಉಸುರು ಬಿಟ್ಟು ಸತ್ತು, ತನ್ನ ಜನರ ಸಂಗ
೧೮ ಡ ಕೂಡಿಸಲ್ಪಟ್ಟನು. ಇದಲ್ಲದೆ ಅವರು ಹವಿಲ ಮೊದಲ್ಗೊಂಡು
ಅಶೂರ್ಯಕ್ಕೆ ಹೋಗುವ ಮಾರ್ಗದಲ್ಲಿ ಐಗುಪ್ತಕ್ಕೆ ಮುಂ
ದಿನ ಶೂರಿನ ಮಟ್ಟಿಗೂ ವಾಸ ಮಾಡಿದರು. ಅವನು ತನ್ನ ಸ
ಹೋದರಕಲ್ಲರ ಮುಂದೆ ಸತ್ತನು.

೧೯ ಅಬ್ರಹಾಮನ ಮಗನಾದ ಇಸಾಕನ ವಂಶಾವಳಿ ಏನಂದರೆ—
೨೦ ಅಬ್ರಹಾಮನು ಇಸಾಕನನ್ನು ಪಡೆದನು. ಇಸಾಕನು ನಾಲ್ವತ್ತು
ವರುಷದವನಾದ್ದಾಗ, ಪದನಾರಾಮಿನಿಂದ ಅರಾಮ್ಯನಾದ ಬೆತು
ವೇಲನ ಮಗಳೂ ಅರಾಮ್ಯನಾದ ಲಾಬನನ ಸಹೋದರಿಯೂ
ಆಗಿರುವ ರೆಬೆಕ್ಕಳನ್ನು ಹೆಂಡತಿಯಾಗಿ ತಕ್ಕೊಂಡನು.
೨೧ ಆದರೆ ಇಸಾಕನು ತನ್ನ ಹೆಂಡತಿಗೋಸ್ಕರ, ಅವಳು ಬಂಜೆ
ಯಾಗಿದ್ದದರಿಂದ, ಕರ್ತನನ್ನು ಬೇಡಿ ಕೊಂಡನು. ಕರ್ತನು
ಅವನ ಬೇಡಿಕೆಯನ್ನು ಆಲೈಸಿದನು; ಆಗ ಅವನ ಹೆಂಡತಿಯಾದ
೨೨ ರೆಬೆಕ್ಕಳು ಬಸುರಾದಳು. ಇದಲ್ಲದೆ ಅವಳ ಗರ್ಭದಲ್ಲಿ ಮಕ್ಕಳು
ನೂಕಿ ಕೊಂಡಾಗ, ಅವಳು, ಹಾಗಿದ್ದರೆ, ನಾನು ಯಾಕೆ ಈ ಪ್ರಕಾ
ರವಿದ್ದೇನೆಂದು ಹೇಳಿ, ಕರ್ತನ ಬಳಿಗೆ ವಿಚಾರಿಸಿ ಕೊಳ್ಳುವದಕ್ಕೆ
ಹೋದಳು. ಕರ್ತನು ಅವಳಿಗೆ ಹೇಳ್ದದ್ದೇನಂದರೆ—
೨೩ ನಿನ್ನ ಹೊಟ್ಟೆಯಲ್ಲಿ ಎರಡು ಜಾಂಗಗಳು ಅವೆ. ನಿನ್ನ ಗರ್ಭ
ದೊಳಗಿಂದ ಎರಡು ಪ್ರಜೆಗಳು ಬೇರೆ ಆಗುವವು. ಬಂದು ಪ್ರಜೆ
ಗಿಂತ ಇನ್ನೊಂದು ಪ್ರಜೆ ಬಲಗೊಳ್ಳುವದು. ಮತ್ತು ಹಿರಿಯನು
ಕಿರಿಯನನ್ನು ಸೇವಿಸುವನು.

೨೪ ಅವಳು ಹೆರುವದಕ್ಕೆ ದಿನಗಳು ಪೂರ್ತಿಯಾದಾಗ, ಅಗೋ,
೨೫ ಅವಳ ಹೊಟ್ಟೆಯಲ್ಲಿ ಅವಳಿ ಮಕ್ಕಳು ಇದ್ದರು. ಮೊದಲನೆಯ
ವನು ಕೆಂಪಾಗಿಯೂ ಎಲ್ಲಾ ಕೂದಲ ವಸ್ತ್ರದ ಹಾಗೆ ಇರುವವನಾ
ಗಿಯೂ ಹೊರಗೆ ಬಂದಾಗ, ಅವನಿಗೆ ಏಸಾವನೆಂದು ಹೆಸರಿಟ್ಟ
೨೬ ರು. ಆ ಮೇಲೆ ಅವನ ತಮ್ಮನು ಏಸಾವನ ಹಿಮ್ಮಡಿಯನ್ನು ಕೈ
ಯಿಂದ ಹಿಡು ಕೊಂಡು ಹೊರಗೆ ಬಂದನು. ಅವನಿಗೆ ಯಾಕೋ
ಬನೆಂದು ಹೆಸರಿಟ್ಟರು. ಅವಳು ಇವರನ್ನು ಹೆರುವಾಗ, ಇಸಾಕನು
ಅರವತ್ತು ವರುಷದವನಾಗಿದ್ದನು.

೨೭ ಆ ಹುಡುಗರು ಬೆಳೆದಾಗ, ಏಸಾವನು ಬೇಟೆಯಲ್ಲಿ ಜಾಣನಾ
ಗಿಯೂ, ಅಡವಿಯ ಮನುಷ್ಯನಾಗಿಯೂ ಇದ್ದನು; ಯಾಕೋ
ಬನು ಸುಡಾಕಗಳಲ್ಲಿ ವಾಸ ಮಾಡುವ ಗುಣ ಸಂಪನ್ನನಾದ ಮ
೨೮ ನುಷ್ಯನಾಗಿದ್ದನು. ಮತ್ತು ಇಸಾಕನು ಅವನು ಬೇಟೆಯಾಡಿದ್ದ
ನ್ನು ತಿಂದದ್ದರಿಂದ, ಏಸಾವನನ್ನು ಪ್ರೀತಿ ಮಾಡಿದನು. ಆದರೆ
೨೯ ರೆಬೆಕ್ಕಳು ಯಾಕೋಬನನ್ನು ಪ್ರೀತಿ ಮಾಡಿದಳು. ಇದಲ್ಲದೆ
ಯಾಕೋಬನು ಬಂದು ಅಡಿಗೆಯನ್ನು ಅಟ್ಟಾಗ, ಏಸಾವನು ದ
೩೦ ಣಿದವನಾಗಿ, ಅಡವಿಯಿಂದ ಬಂದನು. ಏಸಾವನು ಯಾಕೋಬನಿ
ಗೆ ಆ ಕೆಂಪಾದ ಪದಾರ್ಥ ತಿನ್ನುವದಕ್ಕೆ ನನಗೆ ಕೊಡು; ಯಾ
ಕಂದರೆ ನಾನು ದಣಿದಿದ್ದೇನೆ, ಅಂದನು. ಆದದರಿಂದ, ಅವನಿಗೆ ಎ
೩೧ ದೋಮನೆಂದು ಹೆಸರಾಯಿತು. ಆಗ ಯಾಕೋಬನು—ಈ ಹೊ
೩೨ ತ್ತು ನಿನ್ನ ಹೊಚ್ಚಲತನವನ್ನು ನನಗೆ ಮಾರು, ಅಂದನು. ಏಸಾ
ವನು—ಇಗೋ, ನಾನು ಸಾಯುತ್ತಾ ಇದ್ದೇನೆ; ಹೊಚ್ಚಲತನವು
೩೩ ನನಗೆ ಯಾಕೆ! ಅಂದನು. ಯಾಕೋಬನು—ಈ ಹೊತ್ತು ನನ
ಗೆ ಪ್ರಮಾಣ ಮಾಡು, ಅಂದನು. ಅವನು ಅವನಿಗೆ ಪ್ರಮಾಣ
ಮಾಡಿ, ತನ್ನ ಹೊಚ್ಚಲತನವನ್ನು ಯಾಕೋಬನಿಗೆ ಮಾರಿದನು.
೩೪ ಮತ್ತು ಯಾಕೋಬನು ಏಸಾವನಿಗೆ ಕೊಟ್ಟಿಯನ್ನೂ, ಅಲ
ಸಂದಿ ತೊವೆಯನ್ನೂ ಕೊಟ್ಟನು. ಅವನು ಉಂಡು, ಕುಡಿದು, ಎ
ದ್ದು, ಹೋದನು. ಹಾಗೆ ಏಸಾವನು ಹೊಚ್ಚಲತನವನ್ನು ಉದಾ
ಸೀನ ಮಾಡಿದನು.

## ೨೬. ಸಂಧಿ.

೧ ಇದಲ್ಲದೆ ಅಬ್ರಹಾಮನ ದಿವಸಗಳಲ್ಲಿ ಇದ್ದ ಮೊದಲನೇ ಬರ
ವಲ್ಲದೆ, ದೇಶದಲ್ಲಿ ಮತ್ತೊಂದು ಉಂಟಾಯಿತು. ಆಗ ಇಸಾಕ
ನು ಫಿಲಿಷ್ಟ್ಯರ ಅರಸನಾದ ಅಬಿಮೇಲೆಕನ ಬಳಿಗೆ ಗೇರರಿಗೆ ಹೋ
ದನು.
೨ ಆಗ ಕರ್ತನು ಅವನಿಗೆ ಕಾಣಿಸಿ ಕೊಂಡು, ಹೇಳ್ದದ್ದೇನಂದರೆ,
ಐಗುಪ್ತಕ್ಕೆ ಇಳಿದು ಹೋಗ ಬೇಡ. ನಾನು ನಿನಗೆ ಹೇಳುವ ದೇ

೩ ಶದಲ್ಲಿ ವಸ್ತಿಯಾಗಿರು. ಈ ದೇಶದಲ್ಲಿ ಪರವಾಸನಾಗಿರು. ನಾನು
ನಿನ್ನ ಸಂಗತ ಇದ್ದು, ನಿನ್ನನ್ನು ಆಶೀರ್ವದಿಸುವೆನು; ಯಾಕಂ
ದರೆ ನಿನಗೂ ನಿನ್ನ ಬೀಜಕ್ಕೂ ಈ ದೇಶಗಳನ್ನೆಲ್ಲಾ ಕೊಡುವೆ
ನು. ನಿನ್ನ ತಂದೆಯಾದ ಅಬ್ರಹಾಮನಿಗೆ ನಾನು ಮಾಡಿದ ಪ್ರ
೪ ಮಾಣವನ್ನು ಸ್ಥಾಪಿಸುವೆನು. ನಿನ್ನ ಬೀಜವನ್ನು ಆಕಾಶದ ನಕ್ಷ
ತ್ರಗಳ ಹಾಗೆ ಬಹಳವಾಗ ಮಾಡುವೆನು. ನಿನ್ನ ಬೀಜಕ್ಕೆ ಈ ದೇ
ಶಗಳನ್ನೆಲ್ಲಾ ಕೊಡುವೆನು. ನಿನ್ನ ಬೀಜದಿಂದ ಭೂಮಿಯ ಜನಾಂ
೫ ಗಗಳೆಲ್ಲಾ ಆಶೀರ್ವದಿಸಲ್ಪಡುವವು. ಯಾಕಂದರೆ ಅಬ್ರಹಾಮ
ನು ನನ್ನ ಮಾತು ಕೇಳ್ದು, ನನ್ನ ನಿಷ್ಠೆಯನ್ನೂ, ಆಜ್ಞೆಗಳನ್ನೂ,
ನೇಮಕಗಳನ್ನೂ, ನ್ಯಾಯ ಪ್ರಮಾಣಗಳನ್ನೂ ಕೈ ಕೊಂಡನು.

೬ ಮತ್ತು ಇಸಾಕನು ಗೇರರಿನಲ್ಲಿ ವಾಸನಾಗಿದ್ದನು. ಆ ಸ್ಥಳದ
೭ ಮನುಷ್ಯರು ಅವನ ಹೆಂಡತಿಯನ್ನು ಕುರಿತು ವಿಚಾರಿಸಿದಾಗ, ಅ
ವನು, ಸ್ಥಳದ ಜನರು ಕೆಬೆಕ್ಕಳಿಗೋಸ್ಕರ, ಅವಳು ನೋಟ
ಕ್ಕೆ ಸೌಂದರ್ಯವಾಗಿರುವದರಿಂದ, ತನ್ನನ್ನು ಕೊಂದಾರೆಂದು,
ತನ್ನ ಹೆಂಡತಿ ಅನ್ನುವದಕ್ಕೆ ಅಂಜಿ, ಅವಳು ನನ್ನ ತಂಗಿ, ಅಂ
೮ ದನು. ಅವನು ಅಲ್ಲಿ ಬಹಳ ದಿವಸ ಇದ್ದ ಮೇಲೆ, ಆದದ್ದೇನಂದ
ರೆ, ಫಿಲಿಷ್ಟ್ಯರ ಅರಸನಾದ ಅಬಿಮೇಲೆಕನು ಕಿಟಕಿಯಿಂದ ನೋ
ಡುತ್ತಿದ್ದನು; ಅವನು ನೋಡುತ್ತಿರಲಾಗಿ, ಅಸೋ, ಇಸಾಕನು ತ
೯ ನ್ನ ಹೆಂಡತಿಯಾದ ಕೆಬೆಕ್ಕಳ ಸಂಗತ ನಗ್ಯಾಡುತ್ತಿದ್ದನು. ಆಗ
ಅಬಿಮೇಲೆಕನು ಇಸಾಕನನ್ನು ಕರೆದು—ಅಸೋ, ಅವಳು ನಿನ್ನ
ಹೆಂಡತಿಯಾಗಿದ್ದಾಳೆ. ಅವಳು ನನ್ನ ತಂಗಿ ಎಂದು, ಯಾಕೆ ಹೇ
ಳ್ದಿದಿ? ಅಂದನು. ಇಸಾಕನು ಅವನಿಗೆ—ನಾನು ಅವಳ ನಿಮಿತ್ತ ಸಾ
೧೦ ಯ ಬಾರದೆಂದು, ಹಾಗೆ ಹೇಳ್ದೆದೆ, ಅಂದನು. ಆಗ ಅಬಿಮೇಲೆ
ಕನು—ನೀನು ನಮಗೆ ಮಾಡಿದ್ದೇನು! ಜನರಲ್ಲಿ ಬಬ್ಬನು ನಿನ್ನ
ಹೆಂಡತಿಯ ಸಂಗತ ಮಲಗಿ ಕೊಳ್ಳುವದಕ್ಕೂ, ನೀನು ನಮ್ಮ ಮೇ
ಲೆ ಅಪರಾಧವನ್ನು ಬರ ಮಾಡುವದಕ್ಕೂ, ಸ್ವಲ್ಪ ತಪ್ಪಿತು, ಅಂ
೧೧ ದನು. ಮತ್ತು ಅಬಿಮೇಲೆಕನು ತನ್ನ ಜನರಿಗೆಲ್ಲಾ ಈ ಮನುಷ್ಯ
ನನ್ನಾದರೂ, ಅವನ ಹೆಂಡತಿಯನ್ನಾದರೂ ಮುಟ್ಟುವವನು ಸಾ
ಯಲೇ ಸಾಯ ಬೇಕೆಂದು, ಅಪ್ಪಣೆ ಕೊಟ್ಟನು.

೧೨ ಇದಲ್ಲದೆ ಇಸಾಕನು ಆ ದೇಶದಲ್ಲಿ ಬಿತ್ತಿ, ಆ ವರುಷದಲ್ಲಿ
ನೂರಪ್ಪು ಫಲ ಹೊಂದಿದನು. ಇದಲ್ಲದೆ ಕರ್ತನು ಅವನನ್ನು
೧೩ ಆಶೀರ್ವದಿಸಿದನು. ಮತ್ತು ಆ ಮನುಷ್ಯನು ದೊಡ್ಡವನಾಗಿ, ಬ
ಹಳ್ಳ ದೊಡ್ಡವನಾಗುವ ಪರ್ಯಂತರ ಬರ ಬರ ದೊಡ್ಡವನಾದನು.
೧೪ ಅವನಿಗೆ ಕುರಿ ಮಂದೆಗಳೂ, ದನ ಮಂದೆಗಳೂ, ಬಹಳ ದಾಸರೂ
ಇದ್ದರು. ಆದಕಾರಣ ಫಿಲಿಷ್ಟ್ಯರು ಅವನ ಮೇಲೆ ಹೊಟ್ಟೆಕಿಚ್ಚು
೧೫ ಪಟ್ಟರು. ಮತ್ತು ಅವನ ತಂದೆಯಾದ ಅಬ್ರಹಾಮನ ದಿವಸಗಳ
ಲ್ಲಿ ಅಬ್ರಹಾಮನ ದಾಸರು ಅಗೆದ ಭಾವಿಗಳನ್ನೆಲ್ಲಾ ಫಿಲಿಷ್ಟ್ಯರು
೧೬ ಮುಚ್ಚಿ, ಮಣ್ಣು ತುಂಬಿಸಿದರು. ಮತ್ತು ಅಬಿಮೇಲೆಕನು ಇಸಾ
ಕನಿಗೆ—ನಮ್ಮ ಬಳ್ಳಿಯಿಂದ ಹೋಗು; ಯಾಕಂದರೆ ನಮಗಿಂತ
ಬಲಿಷ್ಠನಾದಿ, ಅಂದನು.

೧೭ ಆಗ ಇಸಾಕನು ಅಲ್ಲಿಂದ ಹೋಗಿ, ಗೇರರ್ ತಗ್ಗಿನಲ್ಲಿ ಗುಡಾರ
೧೮ ಹಾಕಿ, ಅಲ್ಲಿ ವಾಸ ಮಾಡಿದನು. ಇದಲ್ಲದೆ ಇಸಾಕನು ತನ್ನ ತಂ
ದೆಯಾದ ಅಬ್ರಹಾಮನ ದಿವಸಗಳಲ್ಲಿ ಅಗೆದಂಥ, ಅಬ್ರಹಾಮನು
ಸತ್ತ ಮೇಲೆ ಫಿಲಿಷ್ಟ್ಯರು ಮುಚ್ಚಿದಂಥ ಭಾವಿಗಳನ್ನು ತಿರಿಗಿ ಅಗೆ
ದು, ಅವನ ತಂದೆ ಅವುಗಳಿಗೆ ಕೊಟ್ಟಿ ಹೆಸರುಗಳ ಪ್ರಕಾರ ಅವು
ಗಳಿಗೆ ಹೆಸರುಗಳನ್ನು ಕೊಟ್ಟನು.

೧೯ ಇಸಾಕನ ಸೇವಕರು ತಗ್ಗಿನಲ್ಲಿ ಅಗೆದಾಗ, ಅಲ್ಲಿ ಬರ್ತೆ ನೀರಿ
೨೦ ನ ಭಾವಿ ಅವರಿಗೆ ಸಿಕ್ಕಿತು. ಗೇರರಿನ ಮಂದೆ ಮೇಯಿಸುವವರು
ಇಸಾಕನ ಮಂದೆ ಮೇಯಿಸುವವರ ಸಂಗತ, ಈ ನೀರು ನಮ್ಮದು
ಎಂದು, ಜಗಳವಾಡಿದರು. ಅವರು ಅವನ ಸಂಗತ ಜಗಳವಾಡಿದ
ಕಾರಣ, ಅವನು ಆ ಭಾವಿಗೆ ಏಸೆಕ್ ಭಾವಿ ಎಂದು ಹೆಸರಿಟ್ಟನು.
೨೧ ಮತ್ತು ಅವರು ಇನ್ನೊಂದು ಭಾವಿಯನ್ನು ಅಗೆದರು; ಅದಕ್ಕೋಸ್ಕ
ರವೂ ಜಗಳವಾಡಿದಾಗ, ಅವನು ಅದಕ್ಕೆ ಸಿಟ್ನಾ ಎಂದು ಹೆ
೨೨ ಸರಿಟ್ಟನು. ಅಲ್ಲಿಂದ ಅವನು ಹೊರಟು, ಇನ್ನೊಂದು ಭಾವಿಯ
ನ್ನು ಅಗೆದನು; ಅದಕ್ಕೋಸ್ಕರ ಅವರು ಜಗಳವಾಡಲಿಲ್ಲ. ಅವ
ನು—ಈಗ ಕರ್ತನು ನಮಗೆ ಅಗಲವನ್ನು ಉಂಟು ಮಾಡಿದ್ದಾನೆ;
ನಾವು ದೇಶದಲ್ಲಿ ಅಭಿವೃದ್ಧಿಯಾಗುವೆವು, ಎಂದು ಹೇಳ್ದಿ, ಅದಕ್ಕೆ
ಕೆಹೊಬೋತ್ ಎಂದು ಹೆಸರಿಟ್ಟನು.

೨೩ ಅಲ್ಲಿಂದ ಅವನು ಬೇರ್ಷೆಬಕ್ಕೆ ಏರಿ ಹೋದನು. ಆ ರಾತ್ರಿ
೨೪ ಯಲ್ಲಿ ಕರ್ತನು ಅವನಿಗೆ ಕಾಣಿಸಿ ಕೊಂಡು, ಹೇಳ್ದಿದ್ದೇನಂದರೆ—
ನಿನ್ನ ತಂದೆಯಾದ ಅಬ್ರಹಾಮನ ದೇವರು ನಾನೇ; ಭಯ ಪಡ ಬೇ
ಡ; ಯಾಕಂದರೆ ನನ್ನ ದಾಸನಾದ ಅಬ್ರಹಾಮನಿಗೋಸ್ಕರ ನಾ
ನು ನಿನ್ನ ಸಂಗತಲಿದ್ದೇನೆ. ನಿನ್ನನ್ನು ಆಶೀರ್ವದಿಸಿ, ನಿನ್ನ ಬೀಜ
೨೫ ವನ್ನು ಹೆಚ್ಚಾಗ ಮಾಡುವೆನು. ಆಗ ಅವನು ಅಲ್ಲಿ ಬಲಿಪೀಠವನ್ನು
ಕಟ್ಟಿ, ಕರ್ತನ ಹೆಸರನ್ನು ಕರೆದು, ಅಲ್ಲಿ ತನ್ನ ಗುಡಾರವನ್ನು
ಹಾಕಿದನು. ಇಸಾಕನ ದಾಸರು ಅಲ್ಲಿ ಭಾವಿಯನ್ನು ಅಗೆದರು.

೨೬ ಮತ್ತು ಅಬಿಮೇಲೆಕನೂ, ಅವನ ಸ್ನೇಹಿತನಾದ ಅಹುಜ್ಜತ
ನೂ, ಅವನ ಸೈನ್ಯಾಧಿಪತಿಯಾದ ಫೀಕೊಲನೂ ಗೇರರಿಂದ ಅ
೨೭ ವನ ಬಳ್ಳಿಗೆ ಬಂದರು. ಇಸಾಕನು ಅವರಿಗೆ—ಯಾಕೆ ನನ್ನ ಬಳ್ಳಿ
ಗೆ ಬಂದಿರಿ? ನೀವು ನನ್ನನ್ನು ಹಗೆ ಮಾಡಿ, ನಿಮ್ಮ ಬಳ್ಳಿಯಿಂದ
೨೮ ನನ್ನನ್ನು ಕಳುಹಿಸಿದರಲ್ಲ? ಅಂದನು. ಅವರು—ಕರ್ತನು ನಿನ್ನ
ಸಂಗತ ಇದ್ದಾನೆಂದು, ಕಂಡೇ ಕಂಡು, ನಮಗೂ ನಿನಗೂ ನಮಪೆ
ಯಾಗಿ ಬಂದು ಪ್ರಮಾಣವಿರಲಿ; ನಿನ್ನ ಸಂಗತ ಬಹಂಬಡಿಕೆ ಮಾ
೨೯ ಡೋಣ, ಎಂದು ಅಂದು ಕೊಂಡೆವು. ಏನಂದರೆ, ನಾವು ನಿನ್ನನ್ನು
ಮುಟ್ಟದೆ, ನಿನಗೆ ಬಳ್ಳೇದನ್ನೇ ಮಾಡಿ, ನಿನ್ನನ್ನು ಸಮಾಧಾನದಿಂ
ದ ಕಳುಹಿಸಿದ ಹಾಗೆ, ನೀನು ನಮಗೆ ಕೇಡನ್ನು ಮಾಡ ಬಾರದು.
೩೦ ನೀನೇ ಕರ್ತನಿಂದ ಆಶೀರ್ವದಿಸಲ್ಪಟ್ಟವನು, ಅಂದರು. ಆಗಲ
೩೧ ವನು ಅವರಿಗೆ ಔತಣವನ್ನು ಮಾಡಿಸಿದನು. ಅವರು ಉಂಡು ಕುಡಿ
ದರು; ಬೆಳ್ಳಿಗ್ಯೆ ಎದ್ದು, ಬಬ್ಬರಿಗೊಬ್ಬರು ಪ್ರಮಾಣ ಮಾಡಿ
ಕೊಂಡರು. ಹಾಗೆ ಇಸಾಕನು ಅವರನ್ನು ಕಳುಹಿಸಿದನು. ಅವ
ರು ಸಮಾಧಾನವಾಗಿ ಅವನ ಬಳ್ಳಿಯಿಂದ ಹೋದರು.

೩೨ ಆ ದಿವಸದಲ್ಲಿ ಆದದ್ದೇನಂದರೆ, ಇಸಾಕನ ಸೇವಕರು ಬಂ
ದು, ತಾವು ಅಗೆದ ಭಾವಿಯ ವರ್ತಮಾನವನ್ನು ಅವನಿಗೆ ತಿಳಿಸಿ,
೩೩ ನೀರು ದೊರಕಿನಿ ಕೊಂಡೆವೆಂದು, ಅವನಿಗೆ ಹೇಳ್ದರು. ಅವನು ಅ
ದಕ್ಕೆ ಷೀಬ ಎಂದು ಹೆಸರಿಟ್ಟನು. ಆದದರಿಂದ ಇಂದಿನ ವರೆಗೂ
ಬೇರ್ಷೆಬ ಎಂದು, ಪಟ್ಟಣಕ್ಕೆ ಹೆಸರಾಯಿತು.

೩೪ ಎಸಾವನು ನಾಲ್ವತ್ತು ವರುಷದವನಾಗಿದ್ದಾಗ, ಹಿತ್ತಿಯನಾದ
ಬೇರಿಯ ಮಗಳಾದ ಯೆಹುದಿತ್ತಳನ್ನೂ ಎಲೋನನ ಮಗಳಾದ
ಬಾಸೌತ್ಮತಳನ್ನೂ ಹೆಂಡತಿಗಾಗಿ ತಕ್ಕೊಂಡನು. ಇವರು ಇಸಾಕನಿ
ಗೂ ಕೆಬೆಕ್ಕಳಿಗೂ ಅತ್ಮಕ್ಕೆ ಕಹಿಯಾಗಿದ್ದರು.



## ೨೭. ಸಂಧಿ.

೧ ಇಸಾಕನು ಮುದುಕನಾಗಿ, ಸೋಡದ ಹಾಗೆ ಅವನ ಕಣ್ಣುಗ
ಳು ಮೊಬ್ಬಾಗಿದ್ದಾಗ, ಅವನು ತನ್ನ ಹಿರೀ ಮಗನಾದ ಎಸಾವನ
ನ್ನು ಕರೆದು, ಅವನಿಗೆ, ನನ್ನ ಮಗನೇ, ಅಂದನು. ಅವನು ಅವನಿ
೨ ಗೆ, ಇಗೋ, ಇದ್ದೇನೆ, ಅಂದನು. ಆಗಲವನು, ಇಗೋ, ಮುದುಕ
೩ ನಾಗಿದ್ದೇನೆ; ನಾನು ಸಾಯುವ ದಿವಸವನ್ನರಿಯೆ. ಹಾಗಾದರೆ
ಈಗ ಆಯುಧಗಳನ್ನೂ, ನಿನ್ನ ಪೊದೆಯನ್ನೂ ಬಿಲ್ಲನ್ನೂ ತೆಗೆ
ದು ಕೊಂಡು, ಅತಿಬಗೆ ಹೋಗಿ, ನನಗೋಸ್ಕರ ಬೇಟೆಯಾಡಿ,
೪ ನಾನು ಮೆಚ್ಚುವ ಸವಿ ಉಟವನ್ನು ನನಗೋಸ್ಕರ ಸಿದ್ಧ ಮಾಡಿ,
ತಕ್ಕೊಂಡು ಬಾ; ಆಗ ನಾನು ಸಾಯುವದಕ್ಕಿಂತ ಮುಂಚೆ ನ
ನ್ನ ಪ್ರಾಣವು ನಿನ್ನನ್ನು ಆಶೀರ್ವದಿಸುವ ಹಾಗೆ, ಅದನ್ನು ಉ
೫ ಣ್ಣುವೆನು, ಅಂದನು. ಇಸಾಕನು ತನ್ನ ಮಗನಾದ ಎಸಾವನಿಗೆ
ಹೇಳ್ದಿದ್ದನ್ನು ಕೆಬೆಕ್ಕಳು ಕೇಳ್ದಿದಳು. ಎಸಾವನು ಬೇಟೆಯಾಡಿ,
ತಕ್ಕೊಂಡು ಬರುವದಕ್ಕೆ ಅತಿಬಗೆ ಹೋದನು.

೬ ಆದರೆ ಕೆಬೆಕ್ಕಳು ತನ್ನ ಮಗನಾದ ಯಾಕೋಬನಿಗೆ ಹೇಳ್
ದ್ದೇನಂದರೆ—ಇಗೋ, ನಿನ್ನ ತಂದೆ ನಿನ್ನ ಸಹೋದರನಾದ ಎಸಾ
೭ ವನಿಗೆ ನನಗೋಸ್ಕರ ಮೃಗ ಮಾಂಸವನ್ನು ತಕ್ಕೊಂಡು ಬಂ
ದು, ಸವಿ ಉಟವನ್ನು ಸಿದ್ಧ ಮಾಡು; ಆಗ ನಾನು ಸಾಯುವ
ದಕ್ಕಿಂತ ಮುಂಚೆ ಉಂಡು, ಕರ್ತನ ಸನ್ನಿಧಿಯಲ್ಲಿ ನಿನ್ನನ್ನು ಆ
೮ ಶೀರ್ವದಿಸುವೆನು, ಎಂದು ಹೇಳ್ದಿದ್ದನ್ನು ಕೇಳ್ದಿದ್ದೇನೆ. ಹಾಗಾದರೆ,
ನನ್ನ ಮಗನೇ, ನಾನು ನಿನಗೆ ಆಜ್ಞಾಪಿಸುವ ಮೇರೆಗೆ ನನ್ನ ಶಬ್ದವ
೯ ನ್ನು ದಯ ಮಾಡಿ ಕೇಳು. ಮಂದೆಯ ಬಳ್ಳಿಗೆ ಹೋಗಿ, ಅಲ್ಲಿಂ
ದ ನನಗೆ ಎರಡು ಬಳ್ಳೇ ಮೇಕೆ ಮರಿಗಳನ್ನು ತಕ್ಕೊಂಡು ಬಾ,
ಆಗ ನಾನು ಅವುಗಳನ್ನು ನಿನ್ನ ತಂದೆಗೋಸ್ಕರ ಅವನು ಪೆ
೧೦ ಚ್ಚುವ ಸವಿ ಉಟವನ್ನು ಸಿದ್ಧ ಮಾಡುವೆನು. ಆಗ ನೀನು ಅವು
ಗಳನ್ನು ನಿನ್ನ ತಂದೆಯ ಬಳ್ಳಿಗೆ ತಕ್ಕೊಂಡು ಹೋಗ ಬೇಕು.
ಅವನು ಸಾಯುವದಕ್ಕಿಂತ ಮುಂಚೆ ನಿನ್ನನ್ನು ಆಶೀರ್ವದಿಸು
ವ ಹಾಗೆ, ಉಣ್ಣಲಿ.

೧೧ ಯಾಕೋಬನು ತನ್ನ ತಾಯಾದ ಕೆಬೆಕ್ಕಳಿಗೆ, ಇಗೋ, ನನ್ನ
ಸಹೋದರನಾದ ಎಸಾವನು ಕೂದಲುಳ್ಳ ಮನುಷ್ಯನಾಗಿದ್ದಾ
೧೨ ನೆ. ನಾನು ನುಣುಪಾದ ಮನುಷ್ಯನು. ಬಂದು ಬೇಳೆ ನನ್ನ
ತಂದೆ ನನ್ನನ್ನು ಮುಟ್ಟಿದರೆ, ಅವನಿಗೆ ವಂಚಕನಾಗಿ ಕಾಣುವೆನು.
ಮತ್ತು ಆಶೀರ್ವಾದವನ್ನಲ್ಲ, ಶಾಪವನ್ನು ನನ್ನ ಮೇಲೆ ಬರ
೧೩ ಮಾಡಿ ಕೊಳ್ಳುವೆನು, ಅಂದನು. ಅವನ ತಾಯಿ ಅವನಿಗೆ, ನನ್ನ
ಮಗನೇ, ನಿನ್ನ ಶಾಪವು ನನ್ನ ಮೇಲೆ ಇರಲಿ; ನನ್ನ ಮಾತು
ಮಾತ್ರ ಕೇಳ್ದಿ, ಹೋಗಿ, ನನಗೆ ತಕ್ಕೊಂಡು ಬಾ, ಅಂದಳು.
೧೪ ಆಗಲವನು ಹೋಗಿ, ಅವುಗಳನ್ನು ತೆಗೆದು, ತನ್ನ ತಾಯಿಗೆ ತಂ
ದು ಕೊಟ್ಟನು. ಅವನ ತಾಯಿ ಅವನ ತಂದೆ ಮೆಚ್ಚುವ ಸವಿ ಉ
ಟವನ್ನು ಸಿದ್ಧ ಮಾಡಿದಳು.

೧೫ ಆ ಮೇಲೆ ಕೆಬೆಕ್ಕಳು ತನ್ನ ಸಂಗತ ಮನೆಯಲ್ಲಿದ್ದ ತನ್ನ ಹಿ
ರೀ ಮಗನಾದ ಎಸಾವನ ಬಳ್ಳೇ ವಸ್ತ್ರಗಳನ್ನು ತಕ್ಕೊಂಡು, ತ
೧೬ ನ್ನ ಕಿರೀ ಮಗನಾದ ಯಾಕೋಬನಿಗೆ ಉಡಿಸಿ, ಮೇಕೆಯ ಮರಿಗ
ಳ ತೊಗಲುಗಳನ್ನು ಅವನ ಕೈಗಳ ಮೇಲೆಯೂ, ಅವನ ಕೊರ
೧೭ ಳಿನ ನುಣ್ಣಾದದರ ಮೇಲೆಯೂ ಕಟ್ಟಿ, ತಾನು ಮಾಡಿದ್ದ ಸವಿ
ಉಟಿಗಳನ್ನೂ ಕೊಟ್ಟಿಯನ್ನೂ ತನ್ನ ಮಗನಾದ ಯಾಕೋಬ
ನ ಕೈಯಲ್ಲಿ ಕೊಟ್ಟಳು.

೧೮ ಅವನು ತನ್ನ ತಂದೆಯ ಬಳ್ಳಿಗೆ ಹೋಗಿ, ನನ್ನ ತಂದೆಯೇ,
ಅಂದನು. ಅವನು, ಇಗೋ, ಇದ್ದೇನೆ; ನನ್ನ ಮಗನೇ, ನೀನು
೧೯ ಯಾರು? ಅಂದನು. ಯಾಕೋಬನು ತನ್ನ ತಂದೆಗೆ, ನಾನು ನಿ
ನ್ನ ಹಿರಿಯ ಮಗನಾದ ಎಸಾವನು; ನೀನು ನನಗೆ ಹೇಳ್ದಿದ ಹಾಗೆ
ಮಾಡಿದ್ದೇನೆ; ಎದ್ದು, ಕೂತುಕೋ; ನಿನ್ನ ಪ್ರಾಣವು ನನ್ನನ್ನು ಆ
ಶೀರ್ವದಿಸುವ ಹಾಗೆ, ನನ್ನ ಮೃಗ ಮಾಂಸವನ್ನು ಉಣ್ಣು, ಅಂ
೨೦ ದನು. ಇಸಾಕನು ತನ್ನ ಮಗನಿಗೆ, ಇಷ್ಟು ಬೇಗ ನಿನಗೆ ಹ್ಯಾಗೆ
ಸಿಕ್ಕಿತು, ನನ್ನ ಮಗನೇ? ಅಂದನು. ಲವನು, ನಿನ್ನ ದೇವರಾದ ಕ
ರ್ತನು ಅದು ನನ್ನೆದುರಿಗೆ ಬರುವ ಹಾಗೆ ಮಾಡಿದನು, ಅಂದ
೨೧ ನು. ಆಗ ಇಸಾಕನು, ನನ್ನ ಮಗನೇ, ನೀನು ನನ್ನ ಮಗನಾದ
ಎಸಾವನೋ! ಅಲ್ಲವೋ? ಎಂದು, ನಿನ್ನನ್ನು ಮುಟ್ಟಿ ನೋಡುವ
೨೨ ಹಾಗೆ, ಹತ್ತರ ಬರ ಬೇಕು, ಅಂದನು. ಯಾಕೋಬನು ತನ್ನ
ತಂದೆಯಾದ ಇಸಾಕನ ಬಳ್ಳಿಗೆ ಬಂದನು. ಅವನು ಅವನನ್ನು
ಮುಟ್ಟಿ, ಶಬ್ದವು ಯಾಕೋಬನ ಶಬ್ದವೇ, ಕೈಗಳು ಎಸಾವನ
೨೩ ಕೈಗಳೇ ಎಂದು ಹೇಳ್ದಿ, ಅವನ ಕೈಗಳು ಅವನ ಅಣ್ಣನಾದ ಎ
ಸಾವನ ಕೈಗಳ ಹಾಗೆ ಕೂದಲುಳ್ಳವುಗಳಾಗಿದ್ದದರಿಂದ, ಅವನ
೨೪ ನ್ನು ತಿಳ್ಳಿಯದೆ, ಆಶೀರ್ವದಿಸಿದನು. ಅವನು, ನನ್ನ ಮಗನಾದ
ಎಸಾವನು ನೀನು ಹೌದೋ? ಅಂದಾಗ, ಅವನು, ನಾನೇ, ಅಂದ
೨೫ ನು. ಆಗಲವನು ನನ್ನ ಹತ್ತರ ತಕ್ಕೊಂಡು ಬಾ, ನನ್ನ ಪ್ರಾಣ
ವು ನಿನ್ನನ್ನು ಆಶೀರ್ವದಿಸುವ ಹಾಗೆ, ನನ್ನ ಮಗನ ಮೃಗ
ಮಾಂಸವನ್ನು ಉಣ್ಣುವೆನು, ಅಂದನು. ಅವನು ಹತ್ತರ ತಕ್ಕೊಂ
ಡು ಬಂದಾಗ, ಅವನು ಉಂಡನು; ದ್ರಾಕ್ಷೇರಸವನ್ನು ಅವನಿಗೆ ತ
೨೬ ಕ್ಕೊಂಡು ಬಂದಾಗ, ಅವನು ಕುಡಿದನು. ಅವನ ತಂದೆಯಾದ
ಇಸಾಕನು ಅವನಿಗೆ, ನನ್ನ ಮಗನೇ, ಹತ್ತರ ಬಂದು, ನನಗೆ ಮು
೨೭ ದ್ದಿಡು, ಅಂದನು. ಆಗಲವನು ಹತ್ತರ ಬಂದು, ಅವನಿಗೆ ಮುದ್ದಿಟ್ಟ
ನು. ಇಸಾಕನು ಅವನ ವಸ್ತ್ರಗಳ ವಾಸನೆಯನ್ನು ಮೂಸಿ ನೋ
ಡಿ, ಅವನನ್ನು ಆಶೀರ್ವದಿಸಿ, ಹೇಳ್ದಿದ್ದೇನಂದರೆ—

೨೮ ಇಗೋ, ನನ್ನ ಮಗನ ವಾಸನೆ ಕರ್ತನು ಆಶೀರ್ವದಿಸಿದ
ಹೊಲದ ವಾಸನೆಯ ಹಾಗಿದೆ. ದೇವರು ನಿನಗೆ ಆಕಾಶದ ಮಂಜಿ
ನಲ್ಲಿಯೂ, ಭೂಮಿಯ ಪುಷ್ಟಿಯಲ್ಲಿಯೂ ಪಾಲನ್ನೂ, ಧಾನ್ಯದ
ದ್ರಾಕ್ಷೇರಸದ ಪರಿಪೂರ್ಣತೆಯನ್ನೂ ಕೊಡಲಿ.

೨೯ ಜನಗಳು ನಿನ್ನನ್ನು ಸೇವಿಸಲಿ; ಪ್ರಜೆಗಳು ನಿನಗೆ ಅಡ್ಡ ಬೀಳಲಿ.
ನಿನ್ನ ಸಹೋದರರಿಗೆ ಧೊರೆಯಾಗಿರು. ನಿನ್ನ ತಾಯ ಮಕ್ಕಳು
ನಿನಗೆ ಅಡ್ಡ ಬೀಳಲಿ. ನಿನ್ನನ್ನು ಶಪಿಸುವವರಿಗೆ ಶಾಪವು, ನಿನ್ನ
ನ್ನು ಆಶೀರ್ವದಿಸುವವರಿಗೆ ಆಶೀರ್ವಾದವು, ಆಗಲಿ.

೩೦ ಇಸಾಕನು ಯಾಕೋಬನನ್ನು ಆಶೀರ್ವದಿಸಿ ತೀರಿಸಿದಾಗ,
ಯಾಕೋಬನು ತನ್ನ ತಂದೆಯಾದ ಇಸಾಕನ ಸಮುಖದಿಂದ
ಹೊರಟಾಗಲೇ, ಆದದ್ದೇನಂದರೆ, ಅವನ ಸಹೋದರನಾದ ಎಸಾ
೩೧ ವನು ಬೇಟೆಯಿಂದ ಬಂದನು. ಅವನು ಸಹ ಸವಿ ಉಟವನ್ನು
ಸಿದ್ಧ ಮಾಡಿ, ತಂದೆಯ ಬಳ್ಳಿಗೆ ತಂದು, ನನ್ನ ತಂದೆ ಎದ್ದು, ನಿನ್ನ
ಪ್ರಾಣವು ನನ್ನನ್ನು ಆಶೀರ್ವದಿಸುವ ಹಾಗೆ, ನಿನ್ನ ಮಗನ ಮೃ
೩೨ ಗ ಮಾಂಸವನ್ನು ಉಣ್ಣಲಿ, ಅಂದನು. ಅವನ ತಂದೆಯಾದ ಇ
ಸಾಕನು, ಅವನಿಗೆ, ನೀನು ಯಾರು? ಅಂದಾಗ, ಅವನು, ನಾನು

೩೩ ನಿನ್ನ ಜೊಜ್ಜಲ ಮಸನಾಥ ಎಸಾವನು, ಅಂದನು. ಆಗ ಇಸಾಕ
ನು ದೊಡ್ಡ ಹೆದರಿಕೆಯಿಂದ ಬಹಳವಾಗಿ ಹೆದರಿ, ಹೇಳಿದ್ದೇನಂದ
ರೆ—ನೀನು ಬರುವದಕ್ಕಿಂತ ಮುಂಚೆ ಬೇಟೆಯಾಡಿ, ನನಗೆ ತಂ
ದವನು ಯಾರೋ! ಎಲ್ಲಿಯೋ! ನಾನು ಎಲ್ಲಾ ಉಂಡು, ಅವನ
೩೪ ನ್ನು ಆಶೀರ್ವದಿಸಿದ್ದೇನೆ. ಅವನು ಆಶೀರ್ವದಿಸಲ್ಪಟ್ಟಿರಲಿ, ಅಂ
ದನು. ಎಸಾವನು ತನ್ನ ತಂದೆಯ ಮಾತುಗಳನ್ನು ಕೇಳಿದಾಗ,
ಬಹಳ ಕೂಗಾದ ದೊಡ್ಡ ಕೂಗಿನಿಂದ ಕೂಗಿ, ತನ್ನ ತಂದೆಗೆ,
ತಂದೆಯೇ, ನನ್ನನ್ನು, ನನ್ನನ್ನು ಕೂಡ ಆಶೀರ್ವದಿಸು, ಅಂದ
೩೫ ನು. ಅವನು, ನಿನ್ನ ಸಹೋದರನು ಮೋಸದಿಂದ ಬಂದು, ನಿನ್ನ
೩೬ ಆಶೀರ್ವಾದವನ್ನು ತಕ್ಕೊಂಡಿದ್ದಾನೆ, ಅಂದನು. ಮತ್ತು ಅವನು
ಹೇಳಿದ್ದೇನಂದರೆ—ಅವನಿಗೆ ಯಾಕೋಬನೆಂಬ ಹೆಸರು ಸರಿಯ
ಲ್ಲವೋ! ಈ ಎರಡು ಸಾರಿ ನನ್ನ ಹಿಮ್ಮಡಿಯನ್ನು ಹೊಡೆದಿದ್ದಾನೆ.
ನನ್ನ ಜೊಜ್ಜಲತನವನ್ನು ತಕ್ಕೊಂಡಿದ್ದಾನೆ; ಮತ್ತು, ಇಗೋ,
ಈಗ ನನ್ನ ಆಶೀರ್ವಾದವನ್ನು ತಕ್ಕೊಂಡಿದ್ದಾನೆ. ಮತ್ತು, ನೀ
ನು ನನಗೋಸ್ಕರ ಆಶೀರ್ವಾದವನ್ನು ಉಳಿಸಲಿಲ್ಲವೋ! ಅಂ
ದನು.

೩೭ ಇಸಾಕನು ಪ್ರತ್ಯುತ್ತರವಾಗಿ ಎಸಾವನಿಗೆ, ಇಗೋ, ಅವನನ್ನು
ನಿನಗೆ ಥೊರೆಯಾಗಿ ಇಟ್ಟು, ಅವನ ಸಹೋದರರೆಲ್ಲರನ್ನು ಅ
ವನಿಗೆ ಸೇವಕರಾಗಿ ಕೊಟ್ಟು, ಧಾನ್ಯದಿಂದಲೂ ದ್ರಾಕ್ಷೇರಸದಿಂ
ದಲೂ ಅವನನ್ನು ಉದ್ಧಾರ ಮಾಡಿದ್ದೇನೆ. ನನ್ನ ಮಗನೇ, ನಿನ
ಗೆ ಇನ್ನೇನು ಮಾಡಲಿ! ಅಂದನು.

೩೮ ಎಸಾವನು ತನ್ನ ತಂದೆಗೆ, ತಂದೆಯೇ, ಆ ಬಂದೇ ಆಶೀರ್ವಾ
ದ ನಿನಗುಂಟೋ! ತಂದೆಯೇ, ನನ್ನನ್ನು, ನನ್ನನ್ನು ಕೂಡ ಆ
ಶೀರ್ವದಿಸು, ಅಂದನು. ಮತ್ತು ಎಸಾವನು ತನ್ನ ಶಬ್ದವನ್ನೆ
೩೯ ತ್ತಿ, ಅತ್ತನು. ಅವನ ತಂದೆಯಾದ ಇಸಾಕನು ಪ್ರತ್ಯುತ್ತರವಾಗಿ
ಹೇಳಿದ್ದೇನಂದರೆ—

೪೦ ಇಗೋ, ನಿನ್ನ ನಿವಾಸವು ಭೂಮಿಯ ಪುಷ್ಟಿಯಿಂದಲೂ, ಮೇ
ಲಿನ ಆಕಾಶದ ಮಂಜಿನಿಂದಲೂ ಇರುವದು. ನಿನ್ನ ಕತ್ತಿಯಿಂದ
ಲೇ ಬದುಕಿ, ನಿನ್ನ ಸಹೋದರನಿಗೆ ಸೇವಕನಾಗಿರುವಿ; ಆದರೆ ನಿ
ನಗೆ ಯಜಮಾನತ್ವ ಉಂಟಾಗುವಾಗ, ಆಗುವದೇನಂದರೆ, ಅವನ
ನೊಗವನ್ನು ನಿನ್ನ ಕೊರಳಿನಿಂದ ಮುರಿದು ಹಾಕುವಿ.

೪೧ ಆದರೆ ಎಸಾವನು ಅವನ ತಂದೆ ಅವನಿಗೆ ಕೊಟ್ಟ ಆಶೀರ್ವಾ
ದಕ್ಕೋಸ್ಕರ ಯಾಕೋಬನನ್ನು ಹಗೆ ಮಾಡಿದನು. ಮತ್ತು
ಎಸಾವನು, ನನ್ನ ತಂದೆಗೋಸ್ಕರ ದುಃಖ ಪಡುವ ದಿವಸಗಳು ಸ
ಮೀಪವಾಗಿವೆ; ಆಗ ನನ್ನ ಸಹೋದರನಾದ ಯಾಕೋಬನನ್ನು
ಕೊಲ್ಲುವೆನೆಂದು, ತನ್ನ ಹೃದಯದಲ್ಲಿ ಅಂದು ಕೊಂಡನು.

೪೨ ಅವಳ ಹಿರೀ ಮಗನಾದ ಎಸಾವನ ಮಾತುಗಳು ರೆಬೆಕ್ಕಳಿಗೆ ತಿ
ಳಿಸಲ್ಪಟ್ಟಾಗ, ಅವಳು ತನ್ನ ಕಿರೀ ಮಗನಾದ ಯಾಕೋಬನನ್ನು
ಕರೇ ಕಳುಹಿಸಿ, ಅವನಿಗೆ ಹೇಳಿದ್ದೇನಂದರೆ—ಇಗೋ, ನಿನ್ನ ಸ
ಹೋದರನಾದ ಎಸಾವನು ನಿನ್ನನ್ನು ಕುರಿತು ತನ್ನನ್ನು ತಾನು
೪೩ ಸಂತೈಸಿ ಕೊಂಡು, ನಿನ್ನನ್ನು ಕೊಲ್ಲುವದಕ್ಕೆ ಇದ್ದಾನೆ. ಹಾಗಾ
ದರೆ, ಈಗ, ನನ್ನ ಮಗನೇ, ನನ್ನ ಮಾತು ಕೇಳಿ, ಎದ್ದು, ನನ್ನ ಸ
ಹೋದರನಾದ ಲಾಬಾನನ ಬಳಿಗೆ ಹಾರಾನಿಗೆ ಓಡಿ ಹೋಗು.
೪೪ ನಿನ್ನ ಸಹೋದರನ ಉರಿ ತೊಲಗುವ ಪರ್ಯಂತರ, ನಿನ್ನ ಸ
೪೫ ಹೋದರನ ಕೋಪವು ನಿನ್ನ ಬಳಿಯಿಂದ ತೊಲಗಿ ಹೋಗಿ, ನೀ
ನು ಅವನಿಗೆ ಮಾಡಿದ್ದನ್ನು ಅವನು ಮರೆಯುವ ಪರ್ಯಂತರ,
ಕೆಲವು ದಿನ ಅವನ ಸಂಗಡ ವಾಸ ಮಾಡು. ಆ ಮೇಲೆ ನಾನು ಕ
ಳುಹಿಸಿ, ನಿನ್ನನ್ನು ಅಲ್ಲಿಂದ ಕರಸುವೆನು. ನಾನು ನಿಮ್ಮಿಬ್ಬರನ್ನು
ಬಂದೇ ದಿವಸದಲ್ಲಿ ಕಳಕೊಳ್ಳುವದು ಯಾಕೆ!

೪೬ ಮತ್ತು ರೆಬೆಕ್ಕಳು ಇಸಾಕನಿಗೆ, ಹೇತನ ಕುಮಾರ್ತೆಗಳ ನಿಮಿ
ತ್ತ ನನ್ನ ಜೀವ ನನಗೆ ಬೇಸರಿಕೆಯಾಗಿದೆ; ಹೇತನ ಕುಮಾರ್ತೆಗ
ಳಲ್ಲಿ ಈ ದೇಶದ ಕುಮಾರ್ತೆಗಳ ಹಾಗಿರುವ ಬಬ್ಬಳನ್ನು ಯಾ
ಕೋಬನು ಹೆಂಡತಿಯಾಗಿ ತಕ್ಕೊಂಡರೆ, ನಾನು ಬದುಕುವದು
ಯಾಕೆ! ಅಂದಳು.

## ೨೮. ಸಂಧಿ.

೧ ಆದರೆ ಇಸಾಕನು ಯಾಕೋಬನನ್ನು ಕರೆದು, ಆಶೀರ್ವದಿಸಿ,
ಅವನಿಗೆ ಆಜ್ಞಾಪಿಸಿ, ಹೇಳಿದ್ದೇನಂದರೆ—ಕನಾನ್ಯರ ಕುಮಾರ್ತೆಗ
೨ ಳಲ್ಲಿ ಹೆಂಡತಿಯನ್ನು ತಕ್ಕೊಳ್ಳ ಬೇಡ; ಎದ್ದು, ಪದನಾರಾಮಿಗೂ,
ನಿನ್ನ ತಾಯ ತಂದೆಯಾದ ಬೆತುವೇಲನ ಬಳಿಗೂ ಹೋಗಿ, ಅ
ಲ್ಲಿಂದ ನಿನಗೆ ನಿನ್ನ ತಾಯ ಸಹೋದರನಾದ ಲಾಬಾನನ ಮಕ್ಕ
ಳಲ್ಲಿ ಹೆಂಡತಿಯನ್ನು ತಕ್ಕೋ.
೩ ಇದಲ್ಲದೆ ಸರ್ವಶಕ್ತನಾದ ದೇ
ವರು ನಿನ್ನನ್ನು ಆಶೀರ್ವದಿಸಿ, ನೀನು ಜನಗಳ ಸಮೂಹವಾಗು
೪ ವ ಹಾಗೆ ಅಭಿವೃದ್ಧಿ ಮಾಡಿ, ಹೆಚ್ಚಿಸಲಿ. ದೇವರು ಅಬ್ರಹಾಮನಿ
ಗೆ ಕೊಟ್ಟಂಥ, ನೀನು ಪರವಾಸವಾಗಿರುವಂಥ ದೇಶವನ್ನು ನೀನು
ಪಡಕೊಳ್ಳುವ ಹಾಗೆ, ಅವನು ನಿನಗೂ, ನಿನ್ನ ಸಂಗಡಲಿರುವ ನಿನ್ನ
ಬೀಜಕ್ಕೂ ಅಬ್ರಹಾಮನ ಆಶೀರ್ವಾದವನ್ನು ಕೊಡಲಿ. ಇಸಾ
೫ ಕನು ಯಾಕೋಬನನ್ನು ಕಳುಹಿಸಿದಾಗ, ಇವನು ಪದನಾರಾಮಿಗೆ,
ಯಾಕೋಬನಿಗೂ ಎಸಾವನಿಗೂ ತಾಯಾದ ರೆಬೆಕ್ಕಳ ಸಹೋ
ದರನಾದಂಥ, ಅರಾಮಿನವನಾದ ಬೆತುವೇಲನ ಮಗನಾದಂಥ, ಲಾ
ಬಾನನ ಬಳಿಗೆ ಹೋದನು.

೬ ಇಸಾಕನು ಯಾಕೋಬನನ್ನು ಆಶೀರ್ವದಿಸಿ, ಅಲ್ಲಿಂದ ಹೆಂ
ಡತಿಯನ್ನು ತಕ್ಕೊಳ್ಳುವ ಬಗ್ಯೆ, ಪದನಾರಾಮಿಗೆ ಕಳುಹಿಸಿದನೆಂ
ದೂ, ಅವನು ಅವನನ್ನು ಆಶೀರ್ವದಿಸುತ್ತಿರಲಾಗಿ, ಕನಾನ್ಯ ಮ
ಕ್ಕಳಲ್ಲಿ ಹೆಂಡತಿಯನ್ನು ತಕ್ಕೊಳ್ಳ ಬೇಡವೆಂತ ಅವನಿಗೆ ಆಜ್ಞಾ
೭ ಪಿಸಿದನೆಂದೂ, ಯಾಕೋಬನು ತನ್ನ ತಂದೆ ತಾಯಿಗಳ ಮಾತು
ಗಳನ್ನು ಕೇಳಿ, ಪದನಾರಾಮಿಗೆ ಹೋದನೆಂದೂ, ಎಸಾವನು
೮ ನೋಡಿದಾಗ, ಕನಾನ್ಯ ಕುಮಾರ್ತೆಗಳು ತನ್ನ ತಂದೆಯಾದ ಇ
೯ ಸಾಕನಿಗೆ ಹಿತರಲ್ಲವೆಂದು, ಎಸಾವನು ನೋಡಿದನು. ಆಗ ಎಸಾ
ವನು ಇಷ್ಮಯೇಲನ ಬಳಿಗೆ ಹೋಗಿ, ತನಗಿದ್ದ ಹೆಂಡತರ ಹೊ
ರ್ತಾಗಿ ಅಬ್ರಹಾಮನ ಮಗನಾದ ಇಷ್ಮಯೇಲನ ಮಗಳಾದಂಥ,
ನೆಬಾಯೋತನ ಸಹೋದರಿಯಾದಂಥ. ಮಹಲತ್ತಳನ್ನು ಹೆಂಡ
ತಿಯಾಗಿ ತಕ್ಕೊಂಡನು.

೧೦ ಇದಲ್ಲದೆ ಯಾಕೋಬನು ಬೇರ್ಷೆಬದಿಂದ ಹೊರಟು, ಹಾ
೧೧ ರಾನಿಗೆ ಹೋದನು. ಅವನು ಬಂದು ಸ್ಥಳಕ್ಕೆ ಸೇರಿ, ಸೂರ್ಯ
ನು ಮುಣುಗಿದ್ದರಿಂದ, ಅಲ್ಲಿ ಇಳು ಕೊಂಡು, ಅಲ್ಲಿ ಇದ್ದ ಕಲ್ಲು
ಗಳಲ್ಲಿ ಬಂದು ಕೆಗೆದು, ತನ್ನ ತಲೆಗಿಂಬಾಗಿ ಇಟ್ಟು ಕೊಂಡು, ಆ
೧೨ ಸ್ಥಳದಲ್ಲಿ ಮಲಗಿದನು. ಆಗಲವನು ಕನಸು ನೋಡಿದನು. ಅ
ಗೋ, ನಿಚ್ಚಣಿಕೆಗೆ ಭೂಮಿಯಲ್ಲಿ ನಿಲ್ಲಿಸಲ್ಪಟ್ಟಿತ್ತು. ಅದರ ತುದಿ
ಆಕಾಶಕ್ಕೆ ಮುಟ್ಟುತ್ತಿತ್ತು; ಮತ್ತು, ಅಗೋ, ದೇವದೂತರು ಅದ
೧೩ ರ ಮೇಲೆ ಏರುತ್ತಾ ಇಳಿಯುತ್ತಾ ಇದ್ದರು. ಮತ್ತು, ಅಗೋ,
ಕರ್ತನು ಅದರ ಮೇಲೆ ನಿಂತು ಕೊಂಡು, ಹೇಳಿದ್ದೇನಂದರೆ—ನಿ
ನ್ನ ತಂದೆಯಾದ ಅಬ್ರಹಾಮನ ದೇವರೂ ಇಸಾಕನ ದೇವರೂ
ಆಗಿರುವ ಕರ್ತನು ನಾನೇ; ನೀನು ಮಲಗಿರುವ ಭೂಮಿಯನ್ನು
೧೪ ನಿನಗೂ ನಿನ್ನ ಬೀಜಕ್ಕೂ ಕೊಡುವೆನು. ನಿನ್ನ ಬೀಜವು ಭೂ
ಮಿಯ ಧೂಳಿನ ಹಾಗೆ ಆಗುವದು; ನೀನು ಪಶ್ಚಿಮ, ಪೂರ್ವ, ಉ
ತ್ತರ, ದಕ್ಷಿಣಗಳಿಗೆ ವಿಸ್ತಾರವಾಗುವಿ; ನಿನ್ನಲ್ಲಿಯೂ ನಿನ್ನ ಬೀಜ
ದಲ್ಲಿಯೂ ಭೂಮಿಯ ಕುಲಗಳೆಲ್ಲಾ ಆಶೀರ್ವದಿಸಲ್ಪಡುವವು.
೧೫ ಮತ್ತು, ಇಗೋ, ನಾನು ನಿನ್ನ ಸಂಗಡ ಇದ್ದೇನೆ. ನೀನು ಹೋ
ಗುವ ಎಲ್ಲೆಲ್ಲಿಯೂ ನಿನ್ನನ್ನು ಕಾಪಾಡಿ, ಈ ದೇಶಕ್ಕೆ ತಿರಿಗಿ ಬರ
ಮಾಡುವೆನು; ಯಾಕಂದರೆ ನಾನು ನಿನಗೆ ಹೇಳಿದ್ದನ್ನು ಮಾಡು
ವ ಪರ್ಯಂತರ, ನಿನ್ನನ್ನು ಬಿಡುವದಿಲ್ಲ.

೧೬ ಆಗ ಯಾಕೋಬನು ನಿದ್ದೆ ಶಿಳಿದು—ನಿಶ್ಚಯವಾಗಿ ಈ ಸ್ಥಳ
ದಲ್ಲಿ ಕರ್ತನು ಇದ್ದಾನೆ; ಇದನ್ನು ನಾನು ಅರಿಯಲಿಲ್ಲವೆಂದು
೧೭ ಹೇಳಿ, ಭಯ ಪಟ್ಟು—ಈ ಸ್ಥಳವು ಎಷ್ಟೋ ಭಯಂಕರವಾದದ್ದು!
ಇದು ದೇವರ ಮನೆಯೇ ಹೊರ್ತು ಬೇರೆ ಅಲ್ಲ. ಇದೇ ಆಕಾಶ
ದ ಬಾಗಲು, ಅಂದು ಕೊಂಡನು.

೧೮ ಆಗ ಯಾಕೋಬನು ಬೆಳಿಗ್ಯೆ ಎದ್ದು, ತನ್ನ ತಲೆಗಿಂಬಾಗಿ ಇ
ಟ್ಟು ಕೊಂಡ ಕಲ್ಲು ಕೆಗೆದು, ಅದನ್ನು ಸ್ತಂಭವಾಗಿ ಇಟ್ಟು, ಅದರ
೧೯ ತುದಿಯ ಮೇಲೆ ಎಣ್ಣೆ ಹೊಯಿದು, ಆ ಸ್ಥಳಕ್ಕೆ ಬೇಥೆಲೆಂದು
ಹೆಸರಿಟ್ಟನು. ಆದರೆ ಆ ಪಟ್ಟಣಕ್ಕೆ ಮೊದಲು ಲೂಜ್ ಎಂದು, ಹೆ
೨೦ ಸರಿತ್ತು. ಆಗ ಯಾಕೋಬನು ಹರಿಕೆ ಮಾಡಿ, ಹೇಳಿದ್ದೇನಂದರೆ—
ದೇವರು ನನ್ನ ಸಂಗಡ ಇದ್ದು, ನಾನು ಹೋಗುವ ಈ ಮಾರ್ಗ
ದಲ್ಲಿ ನನ್ನನ್ನು ಕಾಪಾಡಿ, ಉಣ್ಣುವದಕ್ಕೆ ಕೊಟ್ಟಿಯನ್ನೂ, ಹೊ
೨೧ ದಿಯುವದಕ್ಕೆ ವಸ್ತ್ರವನ್ನೂ ನನಗೆ ಕೊಟ್ಟರೆ, ಮತ್ತು ನಾನು ಸ
ಮಾಧಾನವಾಗಿ ನನ್ನ ತಂದೆಯ ಮನೆಗೆ ತಿರಿಗಿ ಬಂದರೆ, ಆಗ ಕ
೨೨ ರ್ತನೇ ನನಗೆ ದೇವರಾಗಿರುವನು. ಮತ್ತು ಸ್ತಂಭವಾಗಿ ನಾನು
ಇಟ್ಟ ಈ ಕಲ್ಲು ದೇವರ ಮನೆಯಾಗಿರುವದು. ನೀನು ನನಗೆ ಕೊ
ಡುವದರಲ್ಲೆಲ್ಲಾ ಹತ್ತರಲ್ಲಿ ಬಂದನ್ನು ನಿನಗೆ ಕೊಡುವೆನು.

## ೨೯. ಸಂಧಿ.

೧ ಆ ಮೇಲೆ ಯಾಕೋಬನು ಹೊರಟು, ಪೂರ್ವ ದಿಕ್ಕಿನವರ
೨ ದೇಶಕ್ಕೆ ಬಂದನು. ಅವನು ನೋಡಲಾಗಿ, ಅಗೋ, ಹೊಲದಲ್ಲಿ
ಭಾವಿಯು. ಅಗೋ, ಅದರ ಸಮೀಪದಲ್ಲಿ ಮೂರು ಕುರಿ ಮಂದೆ
ಗಳು ಮಲಗಿ ಕೊಂಡಿದ್ದವು. ಯಾಕಂದರೆ ಆ ಭಾವಿಯೊಳಗಿಂದ
ಮಂದೆಗಳಿಗೆ ಕುಡಿಸುತ್ತಿದ್ದರು. ಭಾವಿಯ ಬಾಯಿ ಮೇಲೆ ದೊಡ್ಡ
3 ಕಲ್ಲು ಇತ್ತು. ಅಲ್ಲಿಗೆ ಮಂದೆಗಳೆಲ್ಲಾ ಕೂಡಿಸಲ್ಪಟ್ಟಾಗ, ಭಾವಿ
ಯ ಬಾಯಿಂದ ಕಲ್ಲು ಹೊರಳಿಸಿ, ಕುರಿಗಳಿಗೆ ಕುಡಿಸಿ, ಕಲ್ಲು ಅ
೪ ದರ ಸ್ಥಳಕ್ಕೆ ಭಾವಿಯ ಬಾಯಿಗೆ ತಿರಿಗಿ ಇಡುತ್ತಿದ್ದರು. ಯಾ
ಕೋಬನು ಅವರಿಗೆ—ನನ್ನ ಸಹೋದರರೇ, ನೀವು ಎಲ್ಲಿಯವರು!
೫ ಅಂದಾಗ, ಅವರು—ನಾವು ಹಾರಾನಿನವರು, ಅಂದರು. ಅವನವರು
ಗೆ—ನಾಹೋರನ ಮಗನಾದ ಲಾಬಾನನನ್ನು ಬಲ್ಲಿರೋ! ಅಂದಾಗ,
೬ ಅವರು—ಬಲ್ಲೆವು, ಅಂದರು. ಅವನವರಿಗೆ—ಕ್ಷೇಮವಾಗಿದ್ದಾನೋ!
ಅಂದಾಗ, ಅವರು—ಕ್ಷೇಮವಾಗಿದ್ದಾನೆ. ಅಗೋ, ಅವನ ಮಗಳಾದ
7 ರಾಹೆಲಳು ಕುರಿಗಳ ಸಂಗಡ ಬರುತ್ತಾಳೆ, ಅಂದರು. ಅವನು—
ಇಗೋ, ಇನ್ನು ಹೊತ್ತು ಬಹಳವದೆ; ಮಂದೆಗಳನ್ನು ಕೂಡಿಸುವ
ಸಮಯವಲ್ಲ. ಕುರಿಗಳಿಗೆ ಕುಡಿಸಿ, ಹೋಗಿ ಮೇಯಿಸಿರಿ, ಅಂದಾಗ,
೮ ಅವರು—ಮಂದೆಗಳನ್ನೆಲ್ಲಾ ಕೂಡಿಸುವ ಪರ್ಯಂತರ ಕೂಡದು.
ಆಗ ಭಾವಿಯ ಬಾಯಿಂದ ಕಲ್ಲನ್ನು ಹೊರಳಿಸುತ್ತಾರೆ. ಮತ್ತು
ಕುರಿಗಳಿಗೆ ಕುಡಿಸುತ್ತೇವೆ, ಅಂದರು.

೯ ಅವನು ಇನ್ನು ಅವರ ಸಂಗಡ ಮಾತಾಡುತ್ತಿರುವಾಗ, ಕುರಿ
ಮೇಯಿಸುವವಳಾಗಿದ್ದ ರಾಹೆಲಳು ತನ್ನ ತಂದೆಯ ಕುರಿಗಳ ಸಂ
೧೦ ಗಡ ಬಂದಳು. ಯಾಕೋಬನು ತನ್ನ ತಾಯ ಸಹೋದರ
ನಾದ ಲಾಬಾನನ ಮಗಳಾಗಿರುವ ರಾಹೆಲಳನ್ನೂ, ತನ್ನ ತಾಯ
ಸಹೋದರನಾದ ಲಾಬಾನನ ಕುರಿಗಳನ್ನೂ ನೋಡಿದಾಗ, ಅದ
ದ್ದೇನಂದರೆ, ಯಾಕೋಬನು ಹತ್ತರ ಬಂದು, ಭಾವಿಯ ಬಾ
ಯಿಂದ ಕಲ್ಲನ್ನು ಹೊರಳಿಸಿ, ತನ್ನ ತಾಯ ಸಹೋದರನಾದ
೧೧ ಲಾಬಾನನ ಕುರಿಗಳಿಗೆ ಕುಡಿಸಿದನು. ಆಗ ಯಾಕೋಬನು ರಾಹೆ
೧೨ ಲಳಿಗೆ ಮುದ್ದಿಟ್ಟು, ತನ್ನ ಶಬ್ದವನ್ನೆತ್ತಿ, ಅತ್ತನು. ಆಗ ಯಾಕೋ
ಬನು ರಾಹೆಲಳಿಗೆ, ತಾನು ಅವಳ ತಂದೆಯ ತಮ್ಮನೆಂದೂ, ಕೆಬೆ
ಕ್ಕಳ ಮಗನೆಂದೂ, ತಿಳಿಸಿದನು; ಅವಳು ಓಡಿ, ತನ್ನ ತಂದೆಗೆ ತಿ
ಳಿಸಿದಳು. ಲಾಬಾನನು ತನ್ನ ಸಹೋದರಿಯ ಮಗನಾದ ಯಾ
ಕೋಬನ ಸುದ್ದಿಯನ್ನು ಕೇಳಿದಾಗ, ಆದದ್ದೇನಂದರೆ, ಅವನೆದು
ರಿಗೆ ಓಡಿ, ಅಪ್ಪಿ ಕೊಂಡು, ಮುದ್ದಿಟ್ಟು, ಮನೆಗೆ ಕರ ಕೊಂಡು ಬಂ
ದನು. ಅವನು ಲಾಬಾನನಿಗೆ ಆ ಸಂಗತಿಗಳನ್ನೆಲ್ಲಾ ವಿವರಿಸಿದನು,
೧೩ ಆಗ ಲಾಬಾನನು ಅವನಿಗೆ—ನಿಶ್ಚಯವಾಗಿ, ನೀನು ನನ್ನ ಎಲುವೂ
ನನ್ನ ಮಾಂಸವೂ ಆಗಿದ್ದೀ ಅಂದನು. ಮತ್ತು ಅವನ ಸಂಗಡ
ಒಂದು ತಿಂಗಳು ವಾಸವಾಗಿದ್ದನು.

೧೪ ಆಗ ಲಾಬಾನನು ಯಾಕೋಬನಿಗೆ—ನೀನು ನನ್ನ ತಮ್ಮನಲ
ವೋ! ನನಗೆ ಸುಮ್ಮನೇ ಸೇವೆ ಮಾಡ ಬೇಕೋ! ನಿನ್ನ ಸಂಬ
೧೫ ಳ ಏನೆಂದು ನನಗೆ ತಿಳಿಸು, ಅಂದನು. ಇದಲ್ಲದೆ ಲಾಬಾನನಿಗೆ ಇಬ್ಬ
ರು ಕುಮಾರ್ತೆಗಳು ಇದ್ದರು. ಹಿರಿಯಳ ಹೆಸರು ಲೇಯಳು.
೧೬ ಕಿರಿಯಳ ಹೆಸರು ರಾಹೆಲಳು. ಲೇಯಳ ಕಣ್ಣುಗಳು ಮೃದುವಾ
೧೭ ಗಿದ್ದವು. ಆದರೆ ರಾಹೆಲಳು ಬಳ್ಳೇ ಆಕಾರದವಳೂ ಬಳ್ಳೇ
ರೂಪದವಳೂ ಆಗಿದ್ದಳು. ಹೀಗಿರುವದರಿಂದ ಯಾಕೋಬನು
ರಾಹೆಲಳನ್ನು ಪ್ರೀತಿ ಮಾಡಿ, ನಿನ್ನ ಕಿರೀ ಮಗಳಾದ ರಾಹೆಲಳಿ
ಗೋಸ್ಕರ ನಿನಗೆ ಏಳು ವರುಷ ಸೇವೆ ಮಾಡುವೆನು, ಅಂದನು.
೧೯ ಲಾಬಾನನು—ಅವಳನ್ನು ಬೇರೊಬ್ಬನಿಗೆ ಕೊಡುವದಕ್ಕಿಂತ ನಿನಗೆ
೨೦ ಕೊಡುವದೇ ಲೇಸು; ನನ್ನ ಸಂಗಡ ವಾಸವಾಗಿರು, ಅಂದನು. ಈ
ಪ್ರಕಾರ ಯಾಕೋಬನು ರಾಹೆಲಳಿಗೋಸ್ಕರ ಏಳು ವರುಷ ಸೇ
ವೆ ಮಾಡಿದನು. ಅವನು ಅವಳನ್ನು ಪ್ರೀತಿ ಮಾಡಿದ್ದರಿಂದ, ಅವು
ಗಳು ಅವನಿಗೆ ಸ್ವಲ್ಪ ದಿವಸಗಳಾಗಿ ತೋಚಿದವು.

೨೧ ಆಗ ಯಾಕೋಬನು ಲಾಬಾನನಿಗೆ—ನನ್ನ ದಿನಗಳು ಪೂರ್ತಿ
ಯಾದವು. ನಾನು ಅವಳ ಬಳಿಗೆ ಹೋಗುವ ಹಾಗೆ, ನನ್ನ ಹೆಂಡ
೨೨ ತಿಯನ್ನು ಕೊಡು, ಅಂದನು. ಆಗ ಲಾಬಾನನು ಆ ಸ್ಥಳದ ಮ
೨೩ ನುಷ್ಯರನ್ನೆಲ್ಲಾ ಕೂಡಿಸಿ, ಔತಣವನ್ನು ಮಾಡಿದನು. ಸಾಯಂಂ
ಕಾಲದಲ್ಲಿ ಆದದ್ದೇನಂದರೆ, ಅವನು ತನ್ನ ಮಗಳಾದ ಲೇಯಳ
ನ್ನು ಕೆಗೆದು ಕೊಂಡು, ಅವನ ಬಳಿಗೆ ತಂದನು. ಅವನು ಅವಳ
೨೪ ಬಳಿಗೆ ಪ್ರವೇಶಿಸಿದನು. ಮತ್ತು ಲಾಬಾನನು ತನ್ನ ದಾಸಿಯಾದ
ಬಿಲ್ಹಳಿಗೆನ್ನು ತನ್ನ ಮಗಳಾದ ಲೇಯಳಿಗೆ ದಾಸಿಯಾಗ ಕೊಟ್ಟ
೨೫ ನು. ಮತ್ತು ಬೆಳಿಗ್ಯೆ ಆದದ್ದೇನಂದರೆ, ಅಗೋ, ಅವಳು ಲೇಯ

ಳು; ಆಗಲವನು ಲಾಬಾನನಿಗೆ—ಇದೇನು ನನಗೆ ಮಾಡಿದ್ದಿ? ರಾಹೆ
ಲ್ಳಿಗೋಸ್ಕರ ನಿನಗೆ ಸೇವೆ ಮಾಡಿದೆನಲ್ಲ! ಯಾಕೆ ನನಗೆ ಮೋ
೨೯ ಸ ಮಾಡಿದ್ದಿ? ಅಂದನು. ಲಾಬಾನನು—ಹಿರಿಯಳ ಮುಂಚೆ ಕಿರಿ
೩೦ ಯಳನ್ನು ಕೊಡುವದು ನಮ್ಮ ಸ್ಥಳದಲ್ಲಿ ಮರ್ಯಾದೆ ಇಲ್ಲ. ಇ
ವಳ ವಾರವನ್ನು ಪೂರೈಸು, ಆಗ ನೀನು ನನಗೆ ಇನ್ನು ಬೇರೆ ಏ
ಳು ವರುಷಗಳ ಪರ್ಯಂತರ ಮಾತಲಿರುವ ಸೇವೆಗೋಸ್ಕರ
ಅವಳನ್ನು ಸಹ ನಿನಗೆ ಕೊಡುತ್ತೇವೆ, ಅಂದನು.

೨೮ ಯಾಕೋಬನು ಹಾಗೆ ಮಾಡಿ, ಅವಳ ವಾರವನ್ನು ಪೂರೈಸಿ
ದನು. ಆಗಲವನು ತನ್ನ ಮಗಳಾದ ರಾಹೆಲಳನ್ನು ಅವನಿಗೆ ಹೆಂ
೨೯ ಡತಿಯಾಗಿ ಕೊಟ್ಟನು. ಮತ್ತು ಲಾಬಾನನು ತನ್ನ ಮಗಳಾದ ರಾ
ಹೆಲ್ಳಿಗೆ ತನ್ನ ದಾಸಿಯಾದ ಬಿಲ್ಹಳನ್ನು ದಾಸಿಯಾಗಿ ಕೊಟ್ಟ
೩೦ ನು. ಇದಲ್ಲದೆ ಅವನು ರಾಹೆಲಳ ಬಳಿಗೂ ಪ್ರವೇಶಿಸಿ, ಲೇಯಳಿ
ಗಿಂತ ರಾಹೆಲಳನ್ನು ಪ್ರೀತಿ ಮಾಡಿ, ಇನ್ನು ಬೇರೆ ಏಳು ವರುಷ
ಅವನ ಬಳಿಯಲ್ಲಿ ಸೇವೆ ಮಾಡಿದನು.

೩೧ ಲೇಯಳು ಹಗೆ ಮಾಡಲ್ಪಟ್ಟವಳೆಂದು, ಕರ್ತನು ನೋಡಿ
ದಾಗ, ಅವಳ ಗರ್ಭವನ್ನು ತೆರೆದನು; ಆದರೆ ರಾಹೆಲಳು ಬಂ
೩೨ ಜೆಯಾಗಿದ್ದಳು. ಲೇಯಳು ಬಸುರಾಗಿ, ಮಗನನ್ನು ಹೆತ್ತು, ಕ
ರ್ತನು ನನ್ನ ದೀನ ಸ್ಥಿತಿಯನ್ನು ನೋಡಿದ್ದಾನೆ; ಈಗ ನನ್ನ ಗಂ
ಡನು ನನಗೆ ಪ್ರೀತಿ ಮಾಡುವನೆಂದು ಹೇಳಿ, ಅವನಿಗೆ ರೂಬೆನ್
೩೩ ಎಂದು ಹೆಸರಿಟ್ಟಳು. ಮತ್ತು ಬಸುರಾಗಿ, ಮಗನನ್ನು ಹೆತ್ತು, ನಾ
ನು ಹಗೆ ಮಾಡಲ್ಪಟ್ಟೆನೆಂದು, ಕರ್ತನು ಕೇಳಿ, ಇವನನ್ನು ನನ
ಗೆ ಕೊಟ್ಟಿದ್ದಾನೆಂದು ಹೇಳಿ, ಅವನಿಗೆ ಸಿಮಿಯೋನನೆಂದು ಹೆಸರಿ
೩೪ ಟ್ಟಳು. ಮತ್ತು ಬಸುರಾಗಿ, ಮಗನನ್ನು ಹೆತ್ತು—ಈಗಲಾದರೂ
ನನ್ನ ಗಂಡನು ನನಗೆ ಅನುಕೂಲವಾಗಿರುವನು; ಯಾಕಂದರೆ ಅ
ವನಿಗೆ ಮೂರು ಮಕ್ಕಳನ್ನು ಹೆತ್ತಿದ್ದೇನೆಂದು ಹೇಳಿದ್ದರಿಂದ, ಅವ
೩೫ ನಿಗೆ ಲೇವಿ ಎಂದು ಹೆಸರಾಯಿತು. ಮತ್ತು ಬಸುರಾಗಿ, ಮಗನ
ನ್ನು ಹೆತ್ತು, ಈ ಸಾರಿ ಕರ್ತನನ್ನು ಸ್ತುತಿಸುವೆನು ಎಂದು ಹೇ
ಳಿದ್ದರಿಂದ, ಅವನಿಗೆ ಯೆಹೂದನೆಂದು ಹೆಸರಿಟ್ಟಳು. ಆಗ ಅವಳು
ಹೆರುವದು ನಿಂತಿತು.

## ೩೦. ಸಂಧಿ

೧ ರಾಹೆಲಳು ತಾನು ಯಾಕೋಬನಿಗೆ ಹೆರುವದಿಲ್ಲವೆಂದು, ನೋ
ಡಿದಾಗ, ರಾಹೆಲಳು ತನ್ನ ಅಕ್ಕನ ಮೇಲೆ ಹೊಟ್ಟೆಕಿಚ್ಚು ಪಟ್ಟು,
ಯಾಕೋಬನಿಗೆ—ನನಗೆ ಮಕ್ಕಳನ್ನು ಕೊಡು; ಇಲ್ಲದಿದ್ದರೆ, ನಾ
೨ ನು ಸಾಯುತ್ತೇನೆ, ಅಂದಳು. ಆಗ ಯಾಕೋಬನು ರಾಹೆಲಳ
ಮೇಲೆ ಕೋಪ ಮಾಡಿ—ನಿನಗೆ ಗರ್ಭದ ಫಲವನ್ನು ಕೊಡದ ದೇ
೩ ವರಿಗೆ ನಾನು ಪ್ರತಿಯಾಗಿದ್ದೇನೋ! ಅಂದನು. ಅವಳು—ಇಗೋ,
ನನ್ನ ದಾಸಿಯಾದ ಬಿಲ್ಹಳು ಇದ್ದಾಳೆ. ಅವಳ ಬಳಿಗೆ ಹೋಗು.
ಅವಳು ನನ್ನ ತೊಡೆಗಳ ಮೇಲೆ ಹೆತ್ತಳೆ, ಅವಳಿಂದ ನನ್ನ ಮನೆ
೪ ಕಟ್ಟಲ್ಪಡುವದು, ಅಂದಳು. ಹಾಗೆ ಅವನಿಗೆ ತನ್ನ ದಾಸಿಯಾದ
ಬಿಲ್ಹಳನ್ನು ಹೆಂಡತಿಯಾಗಿ ಕೊಟ್ಟಳು. ಯಾಕೋಬನು ಅವಳ
೫ ಬಳಿಗೆ ಹೋದನು. ಬಿಲ್ಹಳು ಬಸುರಾಗಿ, ಯಾಕೋಬನಿಗೆ ಮಗ
೬ ನನ್ನು ಹೆತ್ತಳು. ಆಗ ರಾಹೆಲಳು—ದೇವರು ನನಗೆ ನ್ಯಾಯ ತೀ
ರಿಸಿ, ನನ್ನ ಶಬ್ದವನ್ನು ಕೇಳಿ, ನನಗೆ ಮಗನನ್ನು ಕೊಟ್ಟಿದ್ದಾನೆಂ
೭ ದು ಹೇಳಿದಳು. ಆದದರಿಂದ ಅವನಿಗೆ ದಾನನೆಂದು ಹೆಸರಿಟ್ಟ
ಳು. ರಾಹೆಲಳ ದಾಸಿಯಾದ ಬಿಲ್ಹಳು ತಿರಿಗಿ ಬಸುರಾಗಿ, ಯಾ
೮ ಕೋಬನಿಗೆ ಎರಡನೇ ಮಗನನ್ನು ಹೆತ್ತಾಗ, ರಾಹೆಲಳು—ಅಧಿಕ
ವಾದ ಹೋರಾಟಗಳಿಂದ ನನ್ನ ಅಕ್ಕನ ಸಂಗಡ ಹೋರಾಡಿ, ಜ
ಯಿಸಿದ್ದೇನೆಂದು ಹೇಳಿ, ಅವನಿಗೆ ನೆಪ್ತಲಿ ಎಂಬ ಹೆಸರಿಟ್ಟಳು.

೯ ಆಗ ಲೇಯಳು ತಾನು ಹೆರುವದು ನಿಂತಿತೆಂದು ನೋಡಿ, ತನ್ನ
ದಾಸಿಯಾದ ಜಿಲ್ಫಳನ್ನು ತಕ್ಕೊಂಡು, ಯಾಕೋಬನಿಗೆ ಹೆಂ
೧೦ ಡತಿಯಾಗಿ ಕೊಟ್ಟಳು. ಲೇಯಳ ದಾಸಿಯಾದ ಜಿಲ್ಫಳು ಯಾ
೧೧ ಕೋಬನಿಗೆ ಮಗನನ್ನು ಹೆತ್ತಾಗ, ಲೇಯಳು—ಸೈನ್ಯ ಬರುತ್ತದೆ
೧೨ ಎಂದು ಹೇಳಿ, ಅವನಿಗೆ ಗಾದನೆಂಬ ಹೆಸರಿಟ್ಟಳು. ಲೇಯಳ ದಾ
ಸಿಯಾದ ಜಿಲ್ಫಳು ಯಾಕೋಬನಿಗೆ ಎರಡನೇ ಮಗನನ್ನು ಹೆ
೧೩ ತ್ತಾಗ, ಲೇಯಳು—ನನ್ನ ಭಾಗ್ಯಕ್ಕೆ; ಯಾಕಂದರೆ ಸ್ತ್ರೀಯರು
ನನ್ನನ್ನು ಭಾಗ್ಯವಂತಳನ್ನುವರು, ಎಂದು ಹೇಳಿ, ಅವನಿಗೆ ಅ
ಶೇರನೆಂಬ ಹೆಸರಿಟ್ಟಳು.

೧೪ ಇದಲ್ಲದೆ ರೂಬೆನನು ಗೋಧಿ ಕೊಯ್ಯುವ ಕಾಲದಲ್ಲಿ ಹೋ
ಗಿ, ಹೊಲದಲ್ಲಿ ದುದಾಯಿಗಳನ್ನು ದೊರಕಿಸಿ ಕೊಂಡು, ತಾಯಾ
ದ ಲೇಯಳ ಬಳಿಗೆ ತಂದಾಗ, ರಾಹೆಲಳು ಲೇಯಳಿಗೆ ನಿನ್ನ ಮ
೧೫ ಗನ ದುದಾಯಿಗಳಲ್ಲಿ ಕೆಲವು ನನಗೆ ಕೊಡು, ಅಂದಳು. ಅವಳವ
ಳಿಗೆ—ನೀನು ನನ್ನ ಗಂಡನನ್ನು ತಕ್ಕೊಳ್ಳುವದು ಅಲ್ಪ ಕಾರ್ಯ
ವೋ! ನನ್ನ ಮಗನ ದುದಾಯಿಗಳನ್ನು ಸಹ ತಕ್ಕೊಳ್ಳುತ್ತೀ
ಯೋ! ಅಂದಾಗ, ರಾಹೆಲಳು, ಹಾಗಾದರೆ ಅವನು ನಿನ್ನ ಮಗನ
೧೬ ದುದಾಯಿಗಳಿಗೋಸ್ಕರ ಈ ರಾತ್ರಿ ನಿನ್ನ ಸಂಗಡ ಮಲಗಲಿ, ಅಂ
ದಳು. ಯಾಕೋಬನು ಸಾಯಂಕಾಲದಲ್ಲಿ ಹೊಲದಿಂದ ಬಂದಾ
ಗ, ಲೇಯಳು ಅವನೆದುರಿಗೆ ಹೊರಟು ಬಂದು—ನೀನು ನನ್ನ ಬ
ಳಿಗೆ ಬರ ಬೇಕು; ನನ್ನ ಮಗನ ದುದಾಯಿಗಳ ಬಾತಿಗೆಯಿಂದ
ನಿನ್ನನ್ನು ಸಂಪಾದಿಸಿ ಕೊಂಡಿದ್ದೇನೆ, ಅಂದಳು. ಆಗಲವನು ಆ
ರಾತ್ರಿಯಲ್ಲಿ ಅವಳ ಸಂಗಡ ಮಲಗಿದನು.

೧೭ ಮತ್ತು ದೇವರು ಲೇಯಳನ್ನು ಆಲೈಸಿದ್ದರಿಂದ, ಅವಳು ಬ
೧೮ ಸುರಾಗಿ, ಯಾಕೋಬನಿಗೆ ಐದನೇ ಮಗನನ್ನು ಹೆತ್ತಳು. ಆಗ
ಲೇಯಳು—ನಾನು ನನ್ನ ಗಂಡನಿಗೆ ನನ್ನ ದಾಸಿಯನ್ನು ಕೊಟ್ಟಿ
ರುಂದ ದೇವರು ನನಗೆ ಕೂಲಿಯನ್ನು ಕೊಟ್ಟಿದ್ದಾನೆ ಎಂದು, ಅ
೧೯ ವನಿಗೆ ಇಸ್ಸಾಕಾರನೆಂಬ ಹೆಸರಿಟ್ಟಳು. ಮತ್ತೊಂದು ಸಾರಿ ಲೇ
ಯಳು ಬಸುರಾಗಿ, ಯಾಕೋಬನಿಗೆ ಆರನೇ ಮಗನನ್ನು ಹೆತ್ತ
೨೦ ಳು. ಮತ್ತು ಲೇಯಳು—ದೇವರು ನನಗೆ ಬಳ್ಳೇ ವರವನ್ನು ಕೊ
ಟ್ಟಿದ್ದಾನೆ. ಈಗ, ನಾನು ಅವನಿಗೆ ಆರು ಮಕ್ಕಳನ್ನು ಹೆತ್ತದ್ದರಿಂದ
ನನ್ನ ಗಂಡನು ನನ್ನ ಸಂಗಡ ವಾಸವಾಗಿರುವನು ಎಂದು, ಅ
೨೧ ವನಿಗೆ ಜೆಬುಲೋನನೆಂಬ ಹೆಸರಿಟ್ಟಳು. ಆ ಮೇಲೆ ಅವಳು ಮಗ
ಳನ್ನು ಹೆತ್ತು, ಅವಳಿಗೆ ದೀನಳೆಂದು ಹೆಸರಿಟ್ಟಳು.

೨೨ ಆಗ ದೇವರು ರಾಹೆಲಳನ್ನು ಜ್ಞಾಪಕ ಮಾಡಿ ಕೊಂಡನು.
೨೩ ದೇವರು ಅವಳನ್ನು ಆಲೈಸಿ, ಅವಳ ಗರ್ಭವನ್ನು ತೆರೆದನು. ಅ
ವಳು ಬಸುರಾಗಿ, ಮಗನನ್ನು ಹೆತ್ತು, ದೇವರು ನನ್ನ ನಿಂದೆಯ
೨೪ ನ್ನು ತೆಗೆದು ಬಿಟ್ಟಿದ್ದಾನೆ, ಅಂದಳು. ಅವಳು, ಕರ್ತನು ನನಗೆ ಮ
ತ್ತೊಬ್ಬ ಮಗನನ್ನು ಕೊಡುವನೆಂದು, ಅವನಿಗೆ ಯೋಸೆಫನೆಂಬ
ಹೆಸರಿಟ್ಟಳು.

೨೫ ರಾಹೆಲಳು ಯೋಸೆಫನನ್ನು ಹೆತ್ತಾಗ, ಯಾಕೋಬನು ಲಾ
ಬಾನನಿಗೆ—ನನಗೆ ಅಪ್ಪಣೆ ಕೊಡು; ನನ್ನ ಸ್ಥಳಕ್ಕೂ ಸ್ವದೇಶ



೨೬ ಕ್ಕೂ ಹೋಗುತ್ತೇನೆ. ನಾನು ಯಾರಿಗೋಸ್ಕರ ನಿನಗೆ ಸೇವೆ
ಮಾಡಿದ್ದೇನೋ, ಆ ನನ್ನ ಹೆಂಡತಿಯನ್ನೂ, ನನ್ನ ಮಕ್ಕಳನ್ನೂ,
ನಾನು ಹೋಗುವ ಹಾಗೆ, ನನಗೆ ಕೊಡು. ಯಾಕಂದರೆ ನಾನು
೨೭ ನಿನಗೆ ಮಾಡಿದ ಸೇವೆಯನ್ನು ನೀನು ಬಲ್ಲಿ, ಅಂದನು.

೨೮ ಲಾಬಾನನು ಅವನಿಗೆ—ನಾನು ನಿನ್ನ ಕಣ್ಣುಗಳಲ್ಲಿ ದಯೆ ಹೊಂ
ದಿದ್ದಾದರೆ, ಕರ್ತನು ನಿನಗೋಸ್ಕರ ನನ್ನನ್ನು ಆಶೀರ್ವದಿ
೨೯ ಸುತ್ತಾನಂತ, ಶಿಳ್ಳುಕೊಳ್ಳುತ್ತೇನೆ ಎಂದು, ಹೇಳಿದನು. ಮತ್ತು ನಿ
ನ್ನ ಸಂಬಳವನ್ನು ನನಗೆ ನಿರ್ಣಯಿಸು; ಆಗ ನಾನು ಕೊಡುವೆ
ನು, ಅಂದನು.

೩೦ ಅವನವನಿಗೆ—ನಾನು ನಿನಗೆ ಮಾಡಿದ ಸೇವೆಯನ್ನೂ, ನಿನ್ನ
ಮಂದೆ ನನ್ನ ಬಳಿಯಲ್ಲಿ ಏನಾಗಿ ಇತ್ತೆಂಬುವದನ್ನೂ ನೀನು ಬ
೩೦ ಲ್ಲಿ. ಯಾಕಂದರೆ ನಾನು ಬರುವದಕ್ಕಿಂತ ಮುಂಚೆ ನಿನಗಿದ್ದದ್ದು
ಸ್ವಲ್ಪವೇ; ಅದು ಬಹಳವಾಗಿ ಹೆಚ್ಚಿತು. ನಾನು ಬಂದದ್ದು ಮೊ
ದಲ್ಗೊಂಡು ಕರ್ತನು ನಿನ್ನನ್ನು ಆಶೀರ್ವದಿಸಿದ್ದಾನೆ. ಈಗಾದರೆ
ಯಾವಾಗ ನಾನೂ ನನ್ನ ಮನೆಗೋಸ್ಕರ ಕೆಲಸ ಮಾಡುವೆನು?
ಅಂದನು.

೩೧ ಅವನು—ನಿನಗೆ ಏನು ಕೊಡಲಿ? ಅಂದಾಗ, ಯಾಕೋಬನು
ಹೇಳಿದ್ದೇನಂದರೆ—ನನಗೆ ಏನೂ ಕೊಡ ಬೇಡ; ಇದು ಮಾತ್ರ ನ
ನಗೆ ಮಾಡಿದರೆ, ನಾನು ತಿರಿಗಿ ನಿನ್ನ ಮಂದೆಯನ್ನು ಮೇಯಿಸಿ,
೩೨ ಕಾಯುವೆನು. ಈ ಹೊತ್ತು ನಿನ್ನ ಎಲ್ಲಾ ಮಂದೆಯ ಮಧ್ಯದಲ್ಲಿ
ಹಾದು ಹೋಗುವೆನು. ಅದರಲ್ಲಿ ಚುಕ್ಕೆಯೂ ಮಚ್ಚೆಯೂ ಉ
ಳ್ಳವುಗಳನ್ನೆಲ್ಲಾ, ಮರಿಗಳಲ್ಲಿ ಕಪ್ಪಾದವುಗಳನ್ನೆಲ್ಲಾ, ಮೇಕೆಗಳ
ಲ್ಲಿ ಚುಕ್ಕೆಯೂ ಮಚ್ಚೆಯೂ ಉಳ್ಳವುಗಳನ್ನೆಲ್ಲಾ ಬೇರೆ ಮಾಡು
೩೩ ವೆನು. ಅದೇ ನನ್ನ ಸಂಬಳವಾಗಿರಲಿ. ಹೀಗಿದ್ದರೆ, ಬರುವ ಕಾಲದ
ಲ್ಲಿ ನನ್ನ ಸಂಬಳದ ಮಾತು ನಿನ್ನ ಮುಂದೆ ಬಂದರೆ, ನನ್ನ ನೀತಿ
ನನಗೋಸ್ಕರ ಉತ್ತರ ಕೊಡುವದು. ಮೇಕೆಗಳಲ್ಲಿ ಚುಕ್ಕೆಯೂ
ಮಚ್ಚೆಯೂ, ಕುರಿಗಳಲ್ಲಿ ಕಪ್ಪೂ ಇಲ್ಲದವುಗಳೆಲ್ಲಾ ನನ್ನ ಬಳಿ
ಯಲ್ಲಿ ಕದ್ದವುಗಳಾಗಿರಲಿ.

೩೪ ಲಾಬಾನನು—ಇಗೋ, ನೀನು ಹೇಳಿದ ಹಾಗಾಗಲಿ ಎಂದು,
ಅಂದೇ ಕೇಪೆಯೂ ಮಚ್ಚೆಯೂ ಉಳ್ಳ ಹೋತುಗಳನ್ನೂ,
೩೫ ಚುಕ್ಕೆಯೂ ಮಚ್ಚೆಯೂ ಉಳ್ಳ ಎಲ್ಲಾ ಮೇಕೆಗಳನ್ನೂ, ಬಿಳೀ
ದು ಕಲಸಿರುವ ಎಲ್ಲವುಗಳನ್ನೂ, ಮರಿಗಳಲ್ಲಿ ಕರ್ರಗಿರುವ ಎಲ್ಲವು
೩೬ ಗಳನ್ನೂ ಬೇರೆ ಮಾಡಿ, ತನ್ನ ಮಕ್ಕಳ ಕೈಗೆ ಕೊಟ್ಟು, ತನಗೂ
ಯಾಕೋಬನಿಗೂ ಮಧ್ಯದಲ್ಲಿ ಮೂರು ದಿನ ಪ್ರಯಾಣದಷ್ಟು
ದೂರ ಬಿಟ್ಟನು. ಮತ್ತು ಯಾಕೋಬನು ಲಾಬಾನನ ಮಿಕ್ಕ
ಮಂದೆಯನ್ನು ಮೇಯಿಸಿದನು.

೩೭ ಆಗ ಯಾಕೋಬನು ಲಿಬ್ಬಿ, ಲೂಜ, ಅರ್ಮೋನ್ ಎಂಬ ಮ
ರಗಳ ಹಸೀ ಕೋಲುಗಳನ್ನು ತಕ್ಕೊಂಡು, ಕೋಲುಗಳಲ್ಲಿದ್ದ ಬಿ
೩೮ ಳುಪು ಕಾಣುವ ಹಾಗೆ, ಬಿಳೀ ಕೇಪೆಗಳನ್ನು ಮಾತ ಸುಲಿದು, ಅ
ವು ಕುಡಿಯುವದಕ್ಕೆ ಬರಲಾಗಿ ಸೂಲಾಗುವ ಹಾಗೆ ತಾನು ಸುಲಿದ
ಕೋಲುಗಳನ್ನು ಮಂದೆಗಳು ಕುಡಿಯುವದಕ್ಕೋಸ್ಕರ ಬರುವ
ನೀರಿನ ದೋಣಿಕೆಗಳಲ್ಲಿ ಮಂದೆಗಳ ಮುಂದೆ ಇಟ್ಟನು. ಅವು ಕುಡಿ
೩೯ ಯುವದಕ್ಕೆ ಬರಲಾಗಿ, ಮಂದೆಗಳು ಆ ಕೋಲುಗಳ ಸಮೀಪದಲ್ಲಿ
ಸೂಲಾಗಿ ಚುಕ್ಕೆ ಮಚ್ಚೆ ಕೇಪೆಗಳುಳ್ಳ ಮರಿಗಳನ್ನು ಈಯುತ್ತಿ
೪೦ ದ್ದವು. ಮತ್ತು ಯಾಕೋಬನು ಕುರಿಗಳನ್ನು ಬೇರೆ ಮಾಡಿ, ಲಾ
ಬಾನನ ಮಂದೆಯಲ್ಲಿರುವ ಕೇಪೆಯುಳ್ಳವುಗಳಿಗೆದುರಾಗಿಯೂ
ಕಪ್ಪಾದ ಎಲ್ಲವುಗಳಿಗೆದುರಾಗಿಯೂ ಕುರಿಗಳ ಮುಖಗಳನ್ನು ಇ
ಟ್ಟನು. ಅವನು ತನ್ನ ಮಂದೆಗಳನ್ನು ಲಾಬಾನನ ಮಂದೆಗಳ ಸಂಗ
೪೧ ಡ ಸೇರಿಸದೆ, ಅವುಗಳನ್ನು ಬೇರೆ ಇಟ್ಟು ಕೊಂಡನು. ಬಲವಾದ ಕು
ರಿಗಳು ಸೂಲಾಗುವಾಗ, ಯಾಕೋಬನು ಆ ಕುರಿಗಳು ಕೋಲು
ಗಳ ಮುಂದೆ ಸೂಲಾಗುವ ಹಾಗೆ, ಕೋಲುಗಳನ್ನು ಕುರಿಗಳ
೪೨ ಮುಂದೆ ದೋಣಿಗಳಲ್ಲಿ ಇಡುತ್ತಿದ್ದನು. ಆದರೆ ಕುರಿಗಳು ಬಲ
ಹೀನವಾಗಿದ್ದಾಗ, ಇಡಲಿಲ್ಲ. ಹಾಗೆ ಬಲಹೀನವಾದವುಗಳು ಲಾಬಾ
೪೩ ನನಿಗೆ, ಬಲವಾದವುಗಳು ಯಾಕೋಬನಿಗೆ ಆದವು. ಈ ಪ್ರಕಾರ
ಆ ಮನುಷ್ಯನು ಅತ್ಯಧಿಕವಾಗಿ ಅಭಿವೃದ್ಧಿಯಾದನು. ಬಹು
ಕುರಿಗಳೂ, ದಾಸ ದಾಸಿಯರೂ, ಒಂಟೆಗಳೂ ಕತ್ತೆಗಳೂ ಅವನಿ
ಗಿದ್ದವು.

## ೩೧. ಸಂಧಿ.

೧ ಆಗ, ಯಾಕೋಬನು ನಮ್ಮ ತಂದೆಗಿದ್ದವುಗಳನ್ನೆಲ್ಲಾ ತಕ್ಕೊ
ಳ್ಳುತ್ತಾನೆ; ನಮ್ಮ ತಂದೆಗಿದ್ದವುಗಳಿಂದ ಈ ಘನವನ್ನೆಲ್ಲಾ ಸಂಪಾ
ದಿಸಿ ಕೊಳ್ಳುತ್ತಾನೆ ಎಂಬುವ ಲಾಬಾನನ ಮಕ್ಕಳ ಮಾತುಗಳನ್ನು
೨ ಕೇಳಿದನು. ಇದಲ್ಲದೆ ಯಾಕೋಬನು ಲಾಬಾನನ ಮುಖವನ್ನು
ನೋಡಿದಾಗ, ಅಗೋ, ಅದು ಪೂರ್ವದಲ್ಲಿ ಇದ್ದ ಹಾಗೆ ತನ್ನ
ಕಡೆಗೆ ಇರಲಿಲ್ಲ.

೩ ಆಗ ಕರ್ತನು ಯಾಕೋಬನಿಗೆ ನಿನ್ನ ತಂದೆಗಳ ದೇಶಕ್ಕೂ,
ನಿನ್ನ ಬಂಧುಗಳ ಬಳಿಗೂ ತಿರಿಗಿ ಹೋಗು; ನಾನು ನಿನ್ನ ಸಂಗಡ
ಇರುವೆನು, ಅಂದನು.

೪ ಆಗ ಯಾಕೋಬನು ರಾಹೆಲಳನ್ನೂ, ಲೇಯಳನ್ನೂ ತನ್ನ
ಮಂದೆಯ ಬಳಿಗೆ ಹೊಲಕ್ಕೆ ಕರೇ ಕಳುಹಿಸಿ, ಅವರಿಗೆ ಹೇಳ್ದೇ
೫ ನಂದರೆ—ನಾನು ನಿಮ್ಮ ತಂದೆಯ ಮುಖವನ್ನು, ಅದು ನನ್ನ ಕ
ಡೆಗೆ ಪೂರ್ವದಲ್ಲಿ ಇದ್ದ ಹಾಗೆ ಇರುವದಿಲ್ಲವೆಂದು ನೋಡುತ್ತೇ
ನೆ. ಆದರೆ ನನ್ನ ತಂದೆಯ ದೇವರು ನನ್ನ ಸಂಗಡ ಇದ್ದನು.
೬ ಮತ್ತು ನಾನು ನನ್ನ ಪೂರ್ಣ ಬಲದಿಂದ ನಿಮ್ಮ ತಂದೆಗೆ ಸೇವೆ
೭ ಮಾಡಿದೆನೆಂದೂ, ನಿಮ್ಮ ತಂದೆ ನನಗೆ ವಂಚನೆ ಮಾಡಿ, ನನ್ನ
ಸಂಬಳವನ್ನು ಹತ್ತು ಸಾರಿ ಬೇರೆ ಮಾಡಿದನೆಂದೂ, ನೀವೇ ಬಲ್ಲಿ
ರಿ. ಆದಾಗ್ಯೂ ದೇವರು ಅವನನ್ನು ನನಗೆ ಕೇಡು ಮಾಡ ಗೊಡಿ
೮ ಸಲಿಲ್ಲ. ಅವನು, ಚುಕ್ಕೆಯುಳ್ಳದ್ದು ನಿನ್ನ ಸಂಬಳವಾಗಿರಲಿ,
ಅಂದರೆ, ಮಂದೆಯೆಲ್ಲಾ ಚುಕ್ಕೆಯುಳ್ಳದ್ದನ್ನೇ ಈಯುವದು;
ಕೇಪೆಯುಳ್ಳದ್ದು ನಿನ್ನ ಸಂಬಳವಾಗಿರಲಿ, ಅಂದರೆ, ಮಂದೆಯೆ
೯ ಲ್ಲಾ ಕೇಪೆಯುಳ್ಳದ್ದನ್ನೇ ಈಯುವದು. ಹೀಗೆ ದೇವರು ನಿಮ್ಮ ತಂ
೧೦ ದೆಯ ಪಶುಗಳನ್ನು ತೆಗೆದು, ನನಗೆ ಕೊಟ್ಟಿದ್ದಾನೆ. ಇದಲ್ಲದೆ ಕುರಿ
ಗಳು ಸೂಲಾಗುವ ಕಾಲದಲ್ಲಿ ಆದದ್ದೇನಂದರೆ, ನಾನು ನನ್ನ ಕ
ಣ್ಣುಗಳನ್ನೆತ್ತಿ ಸ್ವಪ್ನದಲ್ಲಿ ನೋಡಲಾಗಿ, ಅಗೋ, ಕುರಿಗಳ ಮೇ
ಲೆ ಏರುವ ಹೋತುಗಳು ಚುಕ್ಕೆಯೂ ಮಚ್ಚೆಯೂ ಕೇಪೆಯೂ
೧೧ ಉಳ್ಳವುಗಳಾಗಿದ್ದವು. ಆಗ ದೇವರ ದೂತನು ಸ್ವಪ್ನದಲ್ಲಿ ನ
ನಗೆ, ಯಾಕೋಬನೇ, ಅಂದನು. ನಾನು ಇದ್ದೇನೆ, ಅಂದೆನು.
೧೨ ಅವನು—ನಿನ್ನ ಕಣ್ಣುಗಳನ್ನು ಎತ್ತಿ, ಕುರಿಗಳ ಮೇಲೆ ಏರುವ ಎ
ಲ್ಲಾ ಹೋತುಗಳನ್ನು ನೋಡು; ಅವು ಚುಕ್ಕೆಯೂ ಮಚ್ಚೆಯೂ

ಕೇಳೆಯೊ ಉಳ್ಳವುಗಳಾಗಿವೆ. ಯಾಕಂದರೆ ಲಾಬಾನನು ನಿನ
೧೩ ಗೆ ಮಾಡಿದ್ದನ್ನೆಲ್ಲಾ ನೋಡಿದ್ದೇನೆ. ನೀನು ಸ್ತಂಭವನ್ನು ಅಭಿ
ಷೇಕಿಸಿ, ನನಗೆ ಹರಕೆಯನ್ನು ಇಟ್ಟು ಕೊಂಡ ಬೇಥೆಲಿನ ದೇವರು
ನಾನೇ. ಎದ್ದು, ಈ ದೇಶದೊಳಗಿಂದ ಹೊರಟು, ನಿನ್ನ ಬಂಧು
ಗಳ ದೇಶಕ್ಕೆ ತಿರಿಗಿ ಹೋಗು, ಅಂದನು.

೧೪ ಆಗ ರಾಹೆಲಳೂ ಲೇಯಳೂ ಉತ್ತರ ಕೊಟ್ಟು, ಅವನಿಗೆ ಹೇ
ಳ್ದಿದ್ದೇನಂದರೆ—ನಮ್ಮ ತಂದೆಯ ಮನೆಯಲ್ಲಿ ನಮಗೆ ಇನ್ನು ಭಾ
೧೫ ಗವೂ ಬಾಧ್ಯವೂ ಉಂಟೋ? ನಾವು ಅವನಿಗೆ ಅನ್ಯರೆಂದು ಎ
ಣಿಸಲ್ಪಟ್ಟವರಲ್ಲವೋ? ಅವನು ನಮ್ಮನ್ನು ಮಾರಿ, ನಮ್ಮ ಪೆಸೆ
೧೬ ಯನ್ನು ತಿಂದೇ ತಿಂದು ಬಿಟ್ಟಿಲ್ಲವೋ? ಯಾಕಂದರೆ ದೇವರು ನ
ಮ್ಮ ತಂದೆಯಿಂದ ತಕ್ಕೊಂಡ ಐಶ್ವರ್ಯವೆಲ್ಲಾ ನಮ್ಮದೂ ನ
ಮ್ಮ ಮಕ್ಕಳದೂ; ಈಗಾದರೆ ದೇವರು ನಿನಗೆ ಹೇಳ್ದನ್ನೆಲ್ಲಾ
ಮಾಡು.

೧೭ ಆಗ ಯಾಕೋಬನು ಎದ್ದು, ತನ್ನ ಮಕ್ಕಳನ್ನೂ ತನ್ನ
೧೮ ಹೆಂಡತನ್ನೂ ಬಂಟಿಗಳ ಮೇಲೆ ಏರಿಸಿ, ತನ್ನ ಎಲ್ಲಾ ಪಶುಗಳನ್ನೂ,
ತಾನು ಸಂಪಾದಿಸಿದ ಎಲ್ಲಾ ಸಂಪತ್ತನ್ನೂ, ಪದನಾರಾಮಿನಲ್ಲಿ ತಾ
ನು ಸಂಪಾದಿಸಿದಂಥ, ತನ್ನ ಆಸ್ತಿಯಾಗಿದ್ದಂಥ, ತನ್ನ ಪಶುಗಳ
ನ್ನೂ ತನ್ನ ತಂದೆಯಾದ ಇಸಾಕನ ಬಳ್ಳಿಗೆ ಕಾನಾನ್ ದೇಶಕ್ಕೆ
೧೯ ಹೋಗ ಬೇಕೆಂದು, ಪೈದನು. ಆದರೆ ಲಾಬಾನನು ತನ್ನ ಕುರಿಗ
ಳನ್ನು ಕತ್ತರಿಸುವದಕ್ಕೆ ಹೋಗಿದ್ದನು. ಮತ್ತು ರಾಹೆಲಳು ತ
೨೦ ನ್ನ ತಂದೆಯ ವಿಗ್ರಹಗಳನ್ನು ಕದ್ದು ಕೊಂಡಳು. ಆದರೆ ಯಾ
ಕೋಬನು ತಾನು ಓಡಿ ಹೋಗುವದನ್ನು ಅರಾಮ್ಯನಾದ ಲಾಬಾ
೨೧ ನನಿಗೆ ತಿಳಿಸದೆ, ಕಳ್ಳತನವಾಗಿ ಹೋದನು. ಹಾಗೆ ಅವನು ತನ
ಗಿದ್ದ ಎಲ್ಲಾದರ ಸಂಗಡ ಓಡಿ ಹೋದನು; ಮತ್ತು ಎದ್ದು, ಗಿಲ್ಯಾದ್
ಪರ್ವತಕ್ಕೆ ಅಭಿಮುಖವಾಗಿ ನದಿಯನ್ನು ದಾಟಿದನು.

೨೨ ಮೂರನೇ ದಿವಸದಲ್ಲಿ ಯಾಕೋಬನು ಓಡಿ ಹೋದನೆಂದು
೨೩ ಲಾಬಾನನಿಗೆ ತಿಳಿಸಲ್ಪಟ್ಟಾಗ, ಅವನು ತನ್ನ ಸಹೋದರರನ್ನು
ಕರ ಕೊಂಡು, ಏಳು ದಿವಸ ಪ್ರಯಾಣ ಅವನ ಹಿಂದೆ ಹತ್ತಿ, ಗಿ
೨೪ ಲ್ಯಾದ್ ಪರ್ವತದಲ್ಲಿ ಅವನನ್ನು ಕಲತನು. ಆಗ ದೇವರು ರಾತ್ರಿ
ಹೊತ್ತು ಸ್ವಪ್ನದಲ್ಲಿ ಅರಾಮಿನವನಾದ ಲಾಬಾನನ ಬಳ್ಳಿಗೆ ಬಂದು,
ನೀನು ಯಾಕೋಬನ ಸಂಗಡ ಬಳ್ಳೇದನ್ನಾಗಲಿ ಕೆಟ್ಟದ್ದನ್ನಾ
೨೫ ಗಲಿ ಮಾತಾಡದ ಹಾಗೆ ನೋಡಿಕೋ, ಅಂದನು. ಲಾಬಾನನು
ಯಾಕೋಬನನ್ನು ಕಲತಾಗ, ಯಾಕೋಬನು ಬೆಟ್ಟದಲ್ಲಿ ಗುಡಾ
ರವನ್ನು ಹಾಕಿ ಕೊಂಡಿದ್ದನು. ಲಾಬಾನನು ತನ್ನ ಸಹೋದರರ
ಸಂಗಡ ಗಿಲ್ಯಾದ್ ಪರ್ವತದಲ್ಲಿ ಗುಡಾರ ಹಾಕಿ ಕೊಂಡನು.

೨೬ ಲಾಬಾನನು ಯಾಕೋಬನಿಗೆ ಹೇಳ್ದಿದ್ದೇನಂದರೆ—ಏನು ಮಾ
ಡಿದಿ? ಕಳ್ಳತನವಾಗಿ ಹೋದಿ; ಮತ್ತು ನನ್ನ ಮಕ್ಕಳನ್ನು ಕತ್ತಿ
೨೭ಯಿಂದ ಸೆರೆ ಹಿಡಿದವರ ಹಾಗೆ ಪೈದಿ; ಯಾಕೆ ಮರೆಯಾಗಿ ಓ
ಡಿ ಹೋಗಿ, ನನಗೆ ಕಳ್ಳತನ ಮಾಡಿ, ನನಗೆ ತಿಳಿಸಲಿಲ್ಲ? ತಿಳಿಸಿದ
ರೆ, ಸಂತೋಷದಿಂದ ಹಾಡು, ತಾಳ, ವೀಣೆಗಳ ಸಂಗಡ ನಿನ್ನನ್ನು
೨೮ ಕಳುಹಿಸುತ್ತಿದ್ದೆನು. ಆದರೆ ನೀನು ನನ್ನನ್ನು ನನ್ನ ಕುಮಾರರಿ
ಗೂ ನನ್ನ ಕುಮಾರ್ತೆಗಳಿಗೂ ಮುದ್ದಿಡ ಗೊಡಿಸಲಿಲ್ಲ. ನೀನು
೨೯ ಮಾಡಿದ್ದು ಹುಚ್ಚು ಕೆಲಸವೇ ಸರಿ. ನಿಮಗೆ ಕೇಡು ಮಾಡ ನನ್ನ
ಕೈಯಲ್ಲಿ ಸಾಮರ್ಥ್ಯ ಉಂಟು. ಆದರೆ ನಿಮ್ಮ ತಂದೆಯ ದೇ
ವರು ನಿನ್ನೆ ರಾತ್ರಿ ನನ್ನ ಸಂಗಡ ಮಾತಾಡಿ—ನೀನು ಯಾಕೋ
ಬನಿಗೆ ಬಳ್ಳೇದನ್ನಾಗಲಿ ಕೆಟ್ಟದ್ದನ್ನಾಗಲಿ ಹೇಳಿದ ಹಾಗೆ ನೋಡಿ
೩೦ ಕೋ, ಅಂದನು. ಹಾಗಾದರೆ ನಿನ್ನ ತಂದೆಯ ಮನೆಯ ಮೇಲೆ
ಅಭಿಲಾಷೆ ಪಟ್ಟದರಿಂದ, ಬಂದು ಬಿಟ್ಟಿ; ಆದರೆ ನನ್ನ ದೇವರುಗ
ಳನ್ನು ಕದ್ದದ್ದು ಯಾಕೆ?

೩೧ ಆಗ ಯಾಕೋಬನು ಪ್ರತ್ಯುತ್ತರವಾಗಿ ಲಾಬಾನನಿಗೆ—ನಾನು
ಭಯ ಪಟ್ಟದರಿಂದ ಬಂದೆನು. ಯಾಕಂದರೆ, ಬಂದು ವೇಳೆ ನಿನ್ನ
ಕುಮಾರ್ತೆಗಳನ್ನು ನನ್ನಿಂದ ಹಿಂದೆಗೆಯುವಿ, ಅಂದು ಕೊಂಡೆನು.
೩೨ ಆದರೆ ಯಾವನ ಬಳ್ಳಿಯಲ್ಲಿ ನಿನ್ನ ದೇವರುಗಳನ್ನು ಕಂಡುಕೊ
ಳ್ಳುವಿಯೋ, ಅವನು ಬದುಕದೆ ಇರಲಿ; ನಮ್ಮ ಸಹೋದರರ
ಮುಂದೆ ನನ್ನ ಬಳ್ಳಿಯಲ್ಲಿ ನಿನ್ನದೇನಾದರೂ ಇದ್ದರೆ, ವಿಚಾರಿಸಿ,
ಅದನ್ನು ತೆಗೆದುಕೋ, ಅಂದನು. ಆದರೆ ರಾಹೆಲಳು ಅವುಗಳ
ನ್ನು ಕದ್ದು ಕೊಂಡಳೆಂದು, ಯಾಕೋಬನಿಗೆ ತಿಳಿಯಲಿಲ್ಲ.

33 ಆಗ ಲಾಬಾನನು ಯಾಕೋಬನ ಗುಡಾರದಲ್ಲಿಯೂ, ಲೇಯ
ಳ ಗುಡಾರದಲ್ಲಿಯೂ, ಆ ಇಬ್ಬರು ದಾಸಿಯರ ಗುಡಾರದಲ್ಲಿಯೂ
ಬಂದು, ಅವುಗಳನ್ನು ಕಂಡು ಕೊಳ್ಳಲಿಲ್ಲ. ಮತ್ತು ಲೇಯಳ ಗು
ಡಾರದಿಂದ ಹೊರಟು, ರಾಹೆಲಳ ಗುಡಾರದಲ್ಲಿ ಪ್ರವೇಶಿಸಿದನು.
೩೪ ಆದರೆ ರಾಹೆಲಳು ಬೊಂಬೆಗಳನ್ನು ತಕ್ಕೊಂಡು, ಒಂಟಿಗಳ ಸಾ
ಮ್ರಿಯಲ್ಲಿ ಇಟ್ಟು, ಅವುಗಳ ಮೇಲೆ ಕೂತು ಕೊಂಡಳು. ಲಾಬಾ
ನನು ಗುಡಾರವನ್ನೆಲ್ಲಾ ಮುಟ್ಟಿ ನೋಡಿ, ಅವುಗಳನ್ನು ಕಂಡು
೩೫ ಕೊಳ್ಳಲಿಲ್ಲ. ಆದರೆ ಅವಳು ತನ್ನ ತಂದೆಗೆ—ನಾನು ನಿನ್ನ ಮುಂದೆ
ಏಳಲಾರದ್ದರಿಂದ ನನ್ನ ಸ್ವಾಮಿಗೆ ಕೋಪ ಬಾರದೆ ಇರಲಿ. ಯಾ
ಕಂದರೆ ಹೆಂಗಸರ ಮರ್ಯಾದೆ ನನಗೆ ಅದೆ, ಅಂದಳು. ಹಾಗೆ
ಅವನು ಹುಡುಕಿ, ಆ ವಿಗ್ರಹಗಳನ್ನು ಕಂಡು ಕೊಳ್ಳಲಿಲ್ಲ.

೩೬ ಆಗ ಯಾಕೋಬನು ಕೋಪ ಮಾಡಿ, ಲಾಬಾನನ ಸಂಗಡ ವಾ
ದಿಸಿದನು. ಯಾಕೋಬನು ಲಾಬಾನನಿಗೆ ಉತ್ತರ ಕೊಟ್ಟು, ಹೇ
ಳ್ದಿದ್ದೇನಂದರೆ—ನೀನು ನನ್ನನ್ನು ಪೆನ್ನಟ್ಟಿ ಬರುವದಕ್ಕೆ ನನ್ನ ಅ
೩೭ ಪರಾಧ ಏನು? ನನ್ನ ಪಾಪ ಏನು? ನೀನು ನನ್ನ ಸಾಮಾನುಗ
ಳನ್ನೆಲ್ಲಾ ಮುಟ್ಟಿದ ಮೇಲೆ, ನಿನ್ನ ಮನೆಯ ಎಲ್ಲಾ ಸಾಮಾನುಗ
ಳಲ್ಲಿ ಏನು ಕಂಡು ಕೊಂಡಿ? ನನಗೂ ನಿನಗೂ ಸಹೋದರರಾಗಿ
ರುವವರ ಮುಂದೆ ಅದನ್ನು ಇಲ್ಲಿ ಇಡು; ಅವರೇ ನಮ್ಮಿಬ್ಬರಲ್ಲಿ
೩೮ ನ್ಯಾಯ ತೀರಿಸಲಿ. ಈ ಇಪ್ಪತ್ತು ವರುಷ ನಿನ್ನ ಸಂಗಡ ಇದ್ದೆ
ನು. ನಿನ್ನ ಕುರಿಗಳೂ ಮೇಕೆಗಳೂ ಕಂದು ಹಾಕಲಿಲ್ಲ. ನಿನ್ನ ಕು
೩೯ ರಿಪೋತುಗಳನ್ನು ನಾನು ತಿನ್ನಲಿಲ್ಲ. ಶೀಳಲ್ಪಟ್ಟದ್ದನ್ನು ನಿನಗೆ
ತರಲಿಲ್ಲ; ನಾನೇ ಬದಲು ಕೊಟ್ಟೆ. ಹಗಲಲ್ಲಿ ಕದ್ದದ್ದನ್ನೂ, ರಾತ್ರಿ
೪೦ ಯಲ್ಲಿ ಕದ್ದದ್ದನ್ನೂ, ನನ್ನ ಕೈಯಲ್ಲಿ ವಿಚಾರಿಸಿದಿ. ಹೀಗೆ ಇದ್ದೆನು.
ಹಗಲಲ್ಲಿ ಬಿಸಲೂ, ರಾತ್ರಿಯಲ್ಲಿ ಛಳಿಯೂ ನನ್ನನ್ನು ತಿಂದವು.
೪೧ ನಿದ್ದೆ ನನ್ನ ಕಣ್ಣುಗಳಿಗೆ ತಪ್ಪಿ ಹೋಯಿತು. ಈ ಪ್ರಕಾರ ಇಪ್ಪ
ತ್ತು ವರುಷ ನಿನ್ನ ಮನೆಯಲ್ಲಿ ಇದ್ದೆನು; ನಿನ್ನ ಮಕ್ಕಳಿಗೋಸ್ಕರ
ಹದಿನಾಲ್ಕು ವರುಷ, ನಿನ್ನ ಮಂದೆಗಳಿಗೋಸ್ಕರ ಆರು ವರು
ಷ ಸೇವೆ ಮಾಡಿದೆನು; ನೀನು ನನ್ನ ಸಂಬಳವನ್ನು ಹತ್ತು ಸಾರಿ
೪೨ ಬೇಕೆ ಮಾಡಿದಿ. ಅಬ್ರಹಾಮನ ದೇವರೂ, ಇಸಾಕನ ಹೆದರಿಕೆ
ಯೂ ಆಗಿರುವ ನನ್ನ ತಂದೆಯ ದೇವರು ನನ್ನ ಸಂಗಡ ಇಲ್ಲ
ದಿದ್ದರೆ, ನನ್ನನ್ನು ಈಗ ಬರಿದಾಗಿ ಕಳುಹಿಸುವಿ. ನನ್ನ ದೀನ ಸ್ಥಿ
ತಿಯನ್ನೂ, ನನ್ನ ಕೈಗಳ ಕಷ್ಟವನ್ನೂ ದೇವರು ನೋಡಿ, ನಿನ್ನೆ
ರಾತ್ರಿ ನಿನ್ನನ್ನು ಗದರಿಸಿದನು.



೪೩ ಲಾಬಾನನು ಉತ್ತರ ಕೊಟ್ಟು, ಯಾಕೋಬನಿಗೆ ಹೇಳ್ದಿದ್ದೇ
ನಂದರೆ—ಆ ಕುಮಾರ್ತೆಗಳು ನನ್ನ ಕುಮಾರ್ತೆಗಳೇ, ಆ ಮ
ಕ್ಕಳು ನನ್ನ ಮಕ್ಕಳೇ, ಮಂದೆಯು ನನ್ನ ಮಂದೆಯೇ, ನೀನು
ನೋಡುವದೆಲ್ಲಾ ನನ್ನದೇ; ಹಾಗಾದರೆ ನನ್ನ ಕುಮಾರ್ತೆಗಳಿಗಾ
ಗಲಿ, ಅವರು ಹೆತ್ತ ಅವರ ಮಕ್ಕಳಿಗಾಗಲಿ, ನಾನು ಈ ಹೊತ್ತು
೪೪ ಏನು ಮಾಡಲಿ! ಈಗ ಬಾ, ನಾನೂ ನೀನೂ ಬಡಂಬಡಿಕೆಯನ್ನು
ಮಾಡೋಣ; ಅದು ನನಗೂ ನಿನಗೂ ಮಧ್ಯದಲ್ಲಿ ಸಾಕ್ಷಿಯಾ
ಗಿರಲಿ.

೪೫ ಆಗ ಯಾಕೋಬನು ಕಲ್ಲು ತೆಗೆದು, ಸ್ತಂಭವಾಗಿ ನಿಲ್ಲಿಸಿದನು.
೪೬ ಮತ್ತು ಯಾಕೋಬನು ತನ್ನ ಸಹೋದರರಿಗೆ ಕಲ್ಲುಗಳನ್ನು ಕೂ
ಡಿಸಿರಿ, ಅಂದನು. ಅವರು ಕಲ್ಲುಗಳನ್ನು ತಕ್ಕೊಂಡು, ಕುಪ್ಪೆ ಮಾ
ಡಿದರು. ಅಲ್ಲಿ ಕುಪ್ಪೆಯ ಮೇಲೆ ಅವರು ಊಟ ಮಾಡಿದರು.
೪೭ ಆ ಕುಪ್ಪೆಗೆ ಲಾಬಾನನು ಯೇಗರ್ಸಹದೂತ ಎಂದು, ಹೆಸ
ರಿಟ್ಟನು. ಯಾಕೋಬನು ಗಲ್ಲೇದ್ ಎಂದು, ಹೆಸರಿಟ್ಟನು.

೪೮ ಆಗ ಲಾಬಾನನು—ಈ ಕುಪ್ಪೆ ಈ ಹೊತ್ತು ನಿನಗೂ ನನಗೂ
ಸಾಕ್ಷಿಯಾಗಿರ ಬೇಕು, ಅಂದನು. ಆದದರಿಂದ ಅದಕ್ಕೆ ಗಲ್ಲೇದ್
೪೯ ಎಂದೂ, ಮಿಚ್ಪೆಂದೂ ಹೆಸರಾಯಿತು. ಅದೇನಂದರೆ ಕರ್ತ
ನು ನನಗೂ ನಿನಗೂ ಮಧ್ಯದಲ್ಲಿ ನಾವು ಬಬ್ಬರಿಗೊಬ್ಬರು ಕಾಣಿ
೫೦ ಸದ ಸಮಯದಲ್ಲಿ ಕಾದಿರಲಿ. ನೀನು ನನ್ನ ಮಕ್ಕಳನ್ನು ಉಪದ್ರ
ವಪಡಿಸಿದರೆ, ನನ್ನ ಮಕ್ಕಳ ಹೊರ್ತಾಗಿ ಬೇರೆ ಹೆಂಡತನ್ನು ತ
ಕ್ಕೊಂಡರೆ, ಯಾವ ಮನುಷ್ಯನಾದರೂ ನಮ್ಮ ಸಂಗಡ ಇರು
ವದಿಲ್ಲ. ಇಗೋ, ನನಗೂ ನಿನಗೂ ನಡುವೆಯಾಗಿ ದೇವರೇ
೫೧ ಸಾಕ್ಷಿ, ಅಂದನು. ಆಗ ಲಾಬಾನನು ಯಾಕೋಬನಿಗೆ, ಇಗೋ,
ಈ ಕುಪ್ಪೆಯೂ ನಿನಗೂ ನನಗೂ ನಡುವೆಯಾಗಿ, ನಾನು ನಿಲ್ಲಿ
೫೨ ಸಿದ ಈ ಸ್ತಂಭವೂ, ನಾನು ಈ ಕುಪ್ಪೆಯನ್ನು ದಾಟಿ ನಿನ್ನ ಹ
ತ್ತರ ಬರುವದಿಲ್ಲ, ನೀನು ಈ ಕುಪ್ಪೆಯನ್ನೂ ಈ ಸ್ತಂಭವನ್ನೂ
ಕೇಡಿಗೋಸ್ಕರ ದಾಟುವದಿಲ್ಲ ಎಂಬುವದಕ್ಕೆ ಈ ಕುಪ್ಪೆಯೂ
೫೩ ಸಾಕ್ಷಿ, ಈ ಸ್ತಂಭವೂ ಸಾಕ್ಷಿ. ಅಬ್ರಹಾಮನ ದೇವರೂ, ನಾಹೋ
ರನ ದೇವರೂ, ಅವರ ತಂದೆಗಳ ದೇವರೂ ನಮಗೆ ನ್ಯಾಯ ತೀ
ರಿಸಲಿ. ಆಗ ಯಾಕೋಬನು ತನ್ನ ತಂದೆಯಾದ ಇಸಾಕನ ಹೆ
ದರಿಕೆಯಾಗಿರುವವನ ಆಣೆ ಇಟ್ಟು ಕೊಂಡನು.

೫೪ ಮತ್ತು ಯಾಕೋಬನು ಆ ಬೆಟ್ಟದಲ್ಲಿ ಬಲಿಯನ್ನು ಅರ್ಪಿಸಿ,
ತನ್ನ ಸಹೋದರರನ್ನು, ರೊಟ್ಟಿಯನ್ನು ಉಣ್ಣ ಬೇಕೆಂದು, ಕ
ರೇ ಕಳುಹಿಸಿದನು. ಅವರು ರೊಟ್ಟಿಯನ್ನು ಉಂಡು, ಬೆಟ್ಟದಲ್ಲಿ
೫೫ ಇಳಿಕೊಂಡರು. ಹೊತ್ತಾರೆ ಲಾಬಾನನು ಎದ್ದು, ತನ್ನ ಕುಮಾ
ರರಿಗೂ ಕುಮಾರ್ತೆಗಳಿಗೂ ಮುದ್ದಿಟ್ಟು, ಅವರನ್ನು ಆಶೀರ್ವದಿ
ಸಿದನು. ಮತ್ತು ಲಾಬಾನನು ಹೊರಟು, ತನ್ನ ಸ್ಥಳಕ್ಕೆ ತಿರಿಗಿ
ಹೋದನು.

## 3೨. ಸಂಧಿ.

೧ ಯಾಕೋಬನು ತನ್ನ ಮಾರ್ಗವಾಗಿ ಹೋಗುತ್ತಿರುವಾಗ,
೨ ದೇವರ ದೂತರು ಅವನೆದುರಿಗೆ ಬಂದರು. ಯಾಕೋಬನು ಅ
ವರನ್ನು ನೋಡಿದಾಗ, ಇದು ದೇವರ ದಂಡು ಎಂದು ಹೇಳಿ, ಆ
ಸ್ಥಳಕ್ಕೆ ಮಹನಾಯಿಮ್ ಎಂದು, ಹೆಸರಿಟ್ಟನು.

3 ಆಗ ಯಾಕೋಬನು ಎದೊಮೆಂಬ ದೇಶವಾದ ಸೇಯಿರ್ ಎಂ
ಬ ಭೂಮಿಯಲಿರುವ ತನ್ನ ಸಹೋದರನಾದ ಎಸಾವನ ಬಳ್ಳಿಗೆ
೪ ದೂತರನ್ನು ತನ್ನ ಮುಂದಾಗಿ ಕಳುಹಿಸಿ, ಅವರಿಗೆ ಆಜ್ಞಾಪಿಸಿ ಹೇ
ಳ್ದಿದ್ದೇನಂದರೆ—ನೀವು ನನ್ನ ಯಜಮಾನನಾದ ಎಸಾವನಿಗೆ ಹೇ
ಳ ಬೇಕಾದದ್ದು—ನಿನ್ನ ದಾಸನಾದ ಯಾಕೋಬನು ಹೇಳುವ
ದೇನಂದರೆ—ಲಾಬಾನನ ಸಂಗಡ ನಾನು ಈಗಾನ ಪರ್ಯಂತರ
ಪರವಾಸವಾಗಿ, ಕಾಲಕ್ಷೇಪ ಮಾಡಿ ಕೊಂಡೆನು. ಮತ್ತು ನನಗೆ ಎ
೫ ತ್ತು ಕತ್ತೆ ಕುರಿಗಳೂ, ದಾಸ ದಾಸಿಯರೂ ಉಂಟು. ನಾನು ನಿನ್ನ
ದೃಷ್ಟಿಯಲ್ಲಿ ದಯೆ ಹೊಂದುವ ಹಾಗೆ, ನನ್ನ ಯಜಮಾನನಿಗೆ
ತಿಳಿಸುವದಕ್ಕೆ ಕಳುಹಿಸಿದ್ದೇನೆ.

೬ ಆಗ ದೂತರು ಯಾಕೋಬನ ಬಳ್ಳಿಗೆ ತಿರಿಗಿ ಬಂದು, ನಾವು
ನಿನ್ನ ಸಹೋದರನಾದ ಎಸಾವನ ಬಳ್ಳಿಗೆ ಹೋಗಿ ಬಂದಿದ್ದೇವೆ;
ಅವನು ನಾನೂರು ಮಂದಿಯನ್ನು ಕರಕೊಂಡು, ನಿನ್ನೆದುರಿಗೆ
ಬರುತ್ತಾನೆ, ಅಂದರು.

೭ ಆಗ ಯಾಕೋಬನು ಬಹಳ ಭಯ ಪಟ್ಟು, ಸಂಕಟ ಪಟ್ಟು,
ತನ್ನ ಸಂಗಡ ಇದ್ದ ಜನರನ್ನೂ, ಕುರಿ ದನ ಬಂಟಿಗಳನ್ನೂ ಎರ
೮ ಡು ಗುಂಪುಗಳಾಗಿ ವಿಭಾಗಿಸಿದನು. ಏನಂದರೆ ಎಸಾವನು ಬಂದು
ಗುಂಪಿನ ಮೇಲೆ ಬಿದ್ದು, ಅದನ್ನು ಹೊಡೆದರೆ, ಉಳಿದ ಗುಂಪು
ತಪ್ಪಿಸಿ ಕೊಂಡು ಹೋದೀತೆಂದು, ಅಂದು ಕೊಂಡನು.

೯ ಮತ್ತು ಯಾಕೋಬನು ಹೇಳ್ದಿದ್ದೇನಂದರೆ—ನನ್ನ ತಂದೆಯಾ
ದ ಅಬ್ರಹಾಮನಿಗೆ ದೇವರಾಗಿಯೂ, ನನ್ನ ತಂದೆಯಾದ ಇಸಾಕ
ನಿಗೆ ದೇವರಾಗಿಯೂ ಇರುವ ಕರ್ತನೇ, ನಿನ್ನ ದೇಶಕ್ಕೂ ನಿನ್ನ
ಬಂಧುಗಳ ಬಳ್ಳಿಗೂ ತಿರಿಗಿ ಹೋಗು; ಆಗ ನಿನಗೆ ಬಳ್ಳೇದನ್ನು
೧೦ ಮಾಡುವೆನು ಎಂದು, ನನಗೆ ಹೇಳ್ದಿದವನೇ, ನೀನು ನಿನ್ನ ದಾಸನಿ
ಗೆ ಮಾಡಿದ ಎಲ್ಲಾ ಕೃಪೆಗಳಿಗೂ, ಎಲ್ಲಾ ಸತ್ಯಕ್ಕೂ ಅಪಾತ್ರ
ನಾಗಿದ್ದೇನೆ. ಯಾಕಂದರೆ ನನ್ನ ಕೋಲಿನಿಂದಲೇ ಈ ಯೊ
ರ್ದಾನನ್ನು ದಾಟಿ ಹೋದೆನು; ಮತ್ತು ಈಗ ಎರಡು ಗುಂಪಾ
೧೧ ದೆನು. ದಯೆ ಮಾಡಿ ನನ್ನ ಸಹೋದರನಾದ ಎಸಾವನ ಕೈಗೆ
ನನ್ನನ್ನು ತಪ್ಪಿಸು; ಯಾಕಂದರೆ ಅವನು ಬಂದು, ನನ್ನನ್ನೂ,
ಮಕ್ಕಳ ಸಂಗಡ ತಾಯನ್ನೂ ಹೊಡೆಯುವನೇನೋ! ಎಂದು,
೧೨ ಅವನಿಗೆ ಭಯ ಪಡುತ್ತೇನೆ. ನಿನಗೆ ಬಳ್ಳೇದನ್ನು ಮಾಡುವೆನೆಂ
ದೂ, ಬಾಹುಳ್ಯಕ್ಕೋಸ್ಕರ ಎಣಿಸ ಕೂಡದ ಸಮುದ್ರದ ಮ
ರಳಿನ ಹಾಗೆ ನಿನ್ನ ಬೀಜವನ್ನು ಮಾಡುವೆನೆಂದೂ ನೀನು ಹೇಳಿ
ದಿಯಲ್ಲ!

೧೩ ಯಾಕೋಬನು ಅಲ್ಲಿ ಆ ರಾತ್ರಿಯಲ್ಲಿ ಇಳು ಕೊಂಡು, ತಾ
ನು ತಕ್ಕೊಂಡು ಬಂದವುಗಳಲ್ಲಿ ತನ್ನ ಸಹೋದರನಾದ ಎಸಾ
೧೪ ವನಿಗೆ ಕಾಣಿಕೆ ತಕ್ಕೊಂಡನು. ಅದೇನಂದರೆ—ಇನ್ನೂರು ಮೇ
ಕೆಗಳು, ಇಪ್ಪತ್ತು ಹೋತುಗಳು, ಇನ್ನೂರು ಕುರಿಗಳು, ಇಪ್ಪ
ತ್ತು ಟಗರುಗಳು, ಹಾಲು ಕೊಡುವಂಥ ಮೂವತ್ತು ಬಂಟಿಗಳು,
೧೫ ಅವುಗಳ ಮರಿಗಳು, ನಾಲ್ವತ್ತು ದನಗಳು, ಹತ್ತು ಗೂಳಿಗಳು,
ಇಪ್ಪತ್ತು ಹೆಣ್ಣು ಕತ್ತೆಗಳು, ಹತ್ತು ಕತ್ತೆ ಮರಿಗಳು, ಇವುಗಳ
೧೬ ನ್ನು ಅವನು ಬಂದೊಂದು ಮಂದೆ ಪ್ರತ್ಯೇಕವಾಗಿ ತನ್ನ ಸೇವಕ
ರಿಗೆ ಬಿಪ್ಪಿಸಿ, ತನ್ನ ಸೇವಕರಿಗೆ, ನನ್ನ ಮುಂದೆ ನಡೆದು, ಮಂದೆ
೧೭ ಮಂದೆಗೂ ಮಧ್ಯದಲ್ಲಿ ಸ್ಥಳ ಬಿಡಿರಿ, ಅಂದನು. ಅವನು ಮೊದ
ಲನೆಯವನಿಗೆ, ನನ್ನ ಸಹೋದರನಾದ ಎಸಾವನು ನಿನ್ನೆದುರಿಗೆ
ಬಂದು, ನೀನು ಯಾರವನು? ಎಲ್ಲಿಗೆ ಹೋಗುತ್ತೀ? ಈ ನಿನ್ನ

೧೮ ಮುಂದೆ ಇರುವವುಗಳು ಯಾರವು! ಎಂದು ಕೇಳಿದರೆ, ನೀನು—
ಅವು ನಿನ್ನ ದಾಸನಾದ ಯಾಕೋಬನವುಗಳೇ; ಇದು ನನ್ನ ಯ
ಜಮಾನನಾದ ಎಸಾವನಿಗೆ ಕಳುಹಿಸಲ್ಪಟ್ಟ ಕಾಣಿಕೆ; ಇಗೋ, ಅ
ವನು ಸಹ ನಮ್ಮ ಹಿಂದೆ ಬರುತ್ತಾನೆ, ಅನ್ನ ಬೇಕೆಂದು, ಅಜ್ಞಾಪಿಸಿ
೧೯ ದನು. ಮತ್ತು ಎರಡನೆಯವನಿಗೂ, ಮೂರನೆಯವನಿಗೂ, ಮುಂದೆ
ಗಳ ಹಿಂದೆ ಹೋಗುವವರೆಲ್ಲರಿಗೂ, ನೀವು ಅವನನ್ನು ಕಂಡರೆ, ಎ
೨೦ ಸಾವನಿಗೆ ಹಾಗೇ ಹೇಳ ಬೇಕೆಂದೂ, ಮತ್ತು, ಇಗೋ, ನಿನ್ನ ದಾ
ಸನಾದ ಯಾಕೋಬನು ನಮ್ಮ ಹಿಂದೆ ಬರುತ್ತಾನೆಂದು, ಹೇಳ
ಬೇಕೆಂದೂ ಅಜ್ಞಾಪಿಸಿದನು. ಯಾಕಂದರೆ ನನ್ನ ಮುಂದೆ ಹೋ
ಗುವ ಕಾಣಿಕೆಯಿಂದ ಅವನನ್ನು ಸಮಾಧಾನ ಪಡಿಸುವೆನು; ಆ
ಮೇಲೆ ಅವನ ಮುಖವನ್ನು ನೋಡುವೆನು; ಅವನು ನನ್ನನ್ನು
ಅಂಗೀಕರಿಸುವನೇನೋ! ಅಂದು ಕೊಂಡನು.

೨೧ ಹಾಗೆ ಆ ಕಾಣಿಕೆ ಅವನ ಮುಂದೆ ದಾಟಿ ಹೋಯಿತು; ಆದ
೨೨ ರೆ ಅವನು ಆ ರಾತ್ರಿ ಗುಂಪಿನಲ್ಲಿ ಇಳ್ಳು ಕೊಂಡನು. ಮತ್ತು ಆ
ರಾತ್ರಿಯಲ್ಲಿ ಎದ್ದು, ತನ್ನ ಇಬ್ಬರು ಹೆಂಡತಿಯರನ್ನೂ, ತನ್ನ ಇಬ್ಬ
ರು ದಾಸಿಯರನ್ನೂ, ತನ್ನ ಹನ್ನೊಂದು ಮಂದಿ ಮಕ್ಕಳನ್ನೂ
೨೩ ತಕ್ಕೊಂಡು, ಯಾಬೋಕಿನ ದಾಟುವ ಸ್ಥಳದಲ್ಲಿ ದಾಟಿದನು. ಅ
ವನು ಅವರನ್ನು ತಕ್ಕೊಂಡು, ಹೊಳೆ ದಾಟಿಸಿ, ತನಗಿದ್ದದ್ದನ್ನೆ
ಲ್ಲಾ ದಾಟಿಸಿದನು.

೨೪ ಯಾಕೋಬನು ಬಬ್ಬನೇ ಉಳಿದಾಗ, ಬಬ್ಬ ಮನುಷ್ಯನು
ಉದಯವಾಗುವ ಪರ್ಯಂತರ ಅವನ ಸಂಗಡ ಹೋರಾಡಿದನು.
೨೫ ಅವನು ಅವನನ್ನು ಜೈಸಿದ್ದನ್ನು ನೋಡಿ, ಅವನ ತೊಡೆಯ ಕೀ
ಲು ಮುಟ್ಟಿದನು. ಹಾಗೆ ಅವನ ಸಂಗಡ ಹೋರಾಡುವಲ್ಲಿ ಯಾ
೨೬ ಕೋಬನ ತೊಡೆಯ ಕೀಲು ತಪ್ಪಿತು. ಅವನು ಅವನಿಗೆ—ಉದ
೨೭ ಯವಾಯಿತು; ನನ್ನನ್ನು ಹೋಗ ಗೊಡಿಸು, ಅಂದಾಗ, ಅವನು—
ನೀನು ನನ್ನನ್ನು ಆಶೀರ್ವದಿಸದರೆ ಹೊರ್ತು, ನಿನ್ನನ್ನು ಹೋ
ಗಲೀಸೆನು, ಅಂದನು. ಅವನು ಅವನಿಗೆ, ನಿನ್ನ ಹೆಸರೇನು! ಅಂದಾ
೨೮ ಗ, ಅವನು ಯಾಕೋಬನು, ಅಂದನು. ಅವನು—ನಿನಗೆ ಇನ್ನು
ಯಾಕೋಬನೆಂದಲ್ಲ, ಇಸ್ರಯೇಲನೆಂದು, ಹೆಸರಿಡ ಬೇಕು; ಯಾ
ಕಂದರೆ ನೀನು ದೇವರ ಸಂಗಡಲೂ ಮನುಷ್ಯರ ಸಂಗಡಲೂ
೨೯ ಹೋರಾಡಿ ಜೈಸಿದಿ, ಅಂದನು. ಯಾಕೋಬನು—ದಯ ಮಾಡಿ
ನಿನ್ನ ಹೆಸರನ್ನು ತಿಳಿಸು ಎಂದು ಹೇಳಿದಾಗ, ಅವನು—ನನ್ನ ಹೆಸ
ರನ್ನು ಯಾಕೆ ಕೇಳುತ್ತೀ! ಎಂದು ಹೇಳಿ, ಅವನನ್ನು ಅಲ್ಲಿ ಆಶೀ
೩೦ ರ್ವದಿಸಿದನು. ಆಗ ಯಾಕೋಬನು, ನಾನು ದೇವರನ್ನು ಮು
ಖಾಮುಖಿಯಾಗಿ ನೋಡಿದ್ದರೂ, ನನ್ನ ಪ್ರಾಣವು ತಪ್ಪಿಸಿಕೊಂ
ಡಿತು, ಎಂದು ಹೇಳಿ, ಆ ಸ್ಥಳಕ್ಕೆ ಪನೀಯೇಲೆಂದು, ಹೆಸರಿಟ್ಟನು.
೩೧ ಅವನು ಪನುವೇಲನ್ನು ದಾಟಿ ಹೋದಾಗ, ಅವನಿಗೆ ಸೂರ್ಯೋ
ದಯವಾಯಿತು; ಆದರೆ ಅವನು ತೊಡೆಯಲ್ಲಿ ಕುಂಟನಾಗಿದ್ದನು.
೩೨ ಆದದರಿಂದ ಅವನು ಯಾಕೋಬನ ತೊಡೆಯ ಕೀಲನ್ನು ಮು
ದುರಿದ ನರದಲ್ಲಿ ಮುಟ್ಟಿದ್ದರಿಂದ, ಇಸ್ರಯೇಲನ ಮಕ್ಕಳು ತೊ
ಡೆಯ ಕೀಲಿನ ಮೇಲಿರುವ ಮುದುರಿದ ನರವನ್ನು ಇಂದಿನ ಪ
ರ್ಯಂತರ ತಿನ್ನುವದಿಲ್ಲ.

## 33. ಸಂಧಿ.

೧ ಯಾಕೋಬನು ತನ್ನ ಕಣ್ಣುಗಳನ್ನೆತ್ತಿ ನೋಡಿದಾಗ, ಅಗೋ,
ಎಸಾವನು ನಾನೂರು ಮಂದಿ ಮನುಷ್ಯರ ಸಂಗಡ ಬರುತ್ತಿದ್ದ
ನು. ಆಗಲವನು ಮಕ್ಕಳನ್ನು ಲೇಯಳ ಸಂಗಡಲೂ, ರಾಹೆಲಳ
ಸಂಗಡಲೂ, ಇಬ್ಬರು ದಾಸಿಯರ ಸಂಗಡಲೂ ನಿಲ್ಲಿಸಿ, ಬೇಕಾ
೨ ಮಾಡಿದನು. ಮತ್ತು ದಾಸಿಯರನ್ನೂ ಅವರ ಮಕ್ಕಳನ್ನೂ ಮುಂ
ದಾಗಿಯೂ, ಲೇಯಳನ್ನೂ ಅವಳ ಮಕ್ಕಳನ್ನೂ ಹಿಂಭಾಗದಲ್ಲಿ
ಯೂ, ರಾಹೆಲಳನ್ನೂ ಯೋಸೆಫನನ್ನೂ ಕಡೆಯಲ್ಲಿಯೂ ಇ
೩ ಟ್ಟನು. ಮತ್ತು ಅವನು ಅವರ ಮುಂದೆ ಹೋಗಿ, ತನ್ನ ಸಹೋ
ದರನ ಬಳಿಗೆ ಬರುವ ಪರ್ಯಂತರ ಏಳು ಸಾರಿ ನೆಲದಲ್ಲಿ ಅಡ್ಡ
೪ ಬಿದ್ದನು. ಆಗ ಎಸಾವನು ಅವನೆದುರಾಗಿ ಓಡಿ ಬಂದು, ಅವನನ್ನು
ಅಪ್ಪಿ ಕೊಂಡು, ಅವನ ಕೊರಳಿನ ಮೇಲೆ ಬಿದ್ದು, ಅವನಿಗೆ ಮು
೫ ದ್ದಿಟ್ಟನು. ಅವರು ಅತ್ತರು. ಆಗಲವನು ತನ್ನ ಕಣ್ಣುಗಳನ್ನು ಎ
ತ್ತಿ, ಆ ಹೆಂಡತಿಯರನ್ನೂ ಮಕ್ಕಳನ್ನೂ ನೋಡಿ, ಇವರು ನಿನಗೆ ಏ
ನಾಗ ಬೇಕು! ಅಂದನು. ಅವನು, ದೇವರು ನಿನ್ನ ದಾಸನಿಗೆ ದಯ
ಮಾಡಿದ ಮಕ್ಕಳು, ಅಂದನು. ಆಗ ದಾಸಿಗಳೂ ಅವರ ಮಕ್ಕ
೬ ಳೂ ಹತ್ತರ ಬಂದು, ಅಡ್ಡ ಬಿದ್ದರು; ಮತ್ತು ಲೇಯಳು ಸಹ ತ
ನ್ನ ಮಕ್ಕಳ ಸಂಗಡ ಹತ್ತರ ಬಂದು, ಅಡ್ಡ ಬಿದ್ದಳು. ಆ ಮೇಲೆ
ಯೋಸೆಫನೂ ರಾಹೆಲಳೂ ಹತ್ತರ ಬಂದು, ಅಡ್ಡ ಬಿದ್ದರು.

೭ ಅವನು—ನನಗೆ ಎದರು ಬಂದ ಈ ಗುಂಪೆಲ್ಲಾ ನಿನಗೆ ಏನು!
ಅಂದಾಗ, ಅವನು—ನನ್ನ ಸ್ವಾಮಿಯ ದೃಷ್ಟಿಯಲ್ಲಿ ದಯ
೮ ದೊರಕುವ ಹಾಗೆ, ಅಂದನು. ಎಸಾವನು—ನನ್ನ ಸಹೋದರನೇ,
೯ ನನಗೆ ಬಹಳ ಉಂಟು, ನಿನ್ನದು ನಿನ್ನದಾಗಿರಲಿ, ಅಂದನು. ಆಗ
ಯಾಕೋಬನು—ಅಲ್ಲ; ನಿನ್ನ ದೃಷ್ಟಿಯಲ್ಲಿ ನಾನು ದಯ
ಹೊಂದಿದ್ದಾದರೆ, ನನ್ನ ಕಾಣಿಕೆಯನ್ನು ನನ್ನ ಕೈಯಿಂದ ತ
ಕ್ಕೊಳ್ಳ ಬೇಕು; ಯಾಕಂದರೆ ಇದಕ್ಕೋಸ್ಕರ ನಾನು ದೇವರ
೧೦ ಮುಖವನ್ನು ಕಂಡ ಹಾಗೆ, ನಿನ್ನ ಮುಖವನ್ನು ಕಂಡಿದ್ದೇನೆ. ಮತ್ತು
ನೀನು ನನ್ನನ್ನು ಮೆಚ್ಚಿದಿ. ನಿನಗೆ ತರಿಸಲ್ಪಟ್ಟ ನನ್ನ ಆಶೀರ್ವಾ
ದವನ್ನು ದಯ ಮಾಡಿ ತಕ್ಕೋ; ಯಾಕಂದರೆ ದೇವರು ನನಗೆ
ದಯ ಮಾಡಿದ್ದಾನೆ. ಎಲ್ಲಾ ನನಗುಂಟು, ಅಂದನು. ಹಾಗೆ ಅವನಿಗೆ
೧೧ ಬಲವಂತ ಮಾಡಿದ್ದರಿಂದ ಅವನು ತಕ್ಕೊಂಡನು. ಆಗಲವನು—
ನಾವು ಗುಡಾರಗಳನ್ನು ಬಿಚ್ಚಿ ಹೊಗೋಣ; ನಾನು ನಿನ್ನ ಮುಂ
೧೨ ದೆ ಹೋಗುತ್ತೇನೆ, ಅಂದನು. ಅವನು ಅವನಿಗೆ ಹೇಳಿದ್ದೇನಂದ
ರೆ—ಮಕ್ಕಳು ಎಳೆಯವರೆಂದೂ, ನನ್ನ ಸಂಗಡ ಸೂಲಾಗಿರುವ
ಕುರಿ ದನಗಳು ಅವೆ ಎಂದೂ, ನನ್ನ ಸ್ವಾಮಿಗೆ ತಿಳಿದದೆ. ಒಂದೇ
ದಿನ ಅವುಗಳನ್ನು ಅಧಿಕವಾಗಿ ಹೊಡೆದರೆ, ಮುಂದೆ ಎಲ್ಲಾ ಸತ್ತು
೧೪ ಹೋದೀತು. ನನ್ನ ಸ್ವಾಮಿ ದಯ ಮಾಡಿ, ತನ್ನ ದಾಸನ
ಮುಂದೆ ಹೋಗಲಿ; ಆದರೆ ನಾನು ನನ್ನ ಯಜಮಾನನ ಬಳಿ
ಗೆ ಸೇಯಿರಿಗೆ ಬರುವ ಮಟ್ಟಿಗೂ, ನನ್ನ ಮುಂದಿರುವ ಮಂದಿಗಳ
ನಡೆಗೂ ಮಕ್ಕಳ ನಡೆಗೂ ತಕ್ಕ ಹಾಗೆ ಮೆಲ್ಲಗೆ ನಡಿದು ಬರುವೆ
೧೫ ನು, ಅಂದನು. ಆಗ ಎಸಾವನು—ನನ್ನ ಬಳಿಯಲ್ಲಿರುವ ಜನರಲ್ಲಿ
ಕೆಲವರನ್ನು ನಿನ್ನ ಬಳಿಯಲ್ಲಿ ಬಿಡ ಗೊಡಿಸು, ಅಂದನು. ಅವ
ನು—ಅದು ಯಾಕೆ! ನನ್ನ ಸ್ವಾಮಿಯ ದೃಷ್ಟಿಯಲ್ಲಿ ನನಗೆ ದ
ಯ ದೊರಕಲಿ, ಅಂದನು.

೧೬ ಆಗ ಆ ದಿವಸದಲ್ಲಿ ಎಸಾವನು ತನ್ನ ಮಾರ್ಗವಾಗಿ ಸೇಯಿ
೧೭ ರಿಗೆ ತಿರಿಗಿ ಹೋದನು. ಮತ್ತು ಯಾಕೋಬನು ಪ್ರಯಾಣವಾಗಿ
ಸುಕೋತಿಗೆ ಹೋಗಿ, ಮನೆಯನ್ನು ಕಟ್ಟಿಸಿ ಕೊಂಡು, ತನ್ನ ಮಂ



ದೆಗಳಿಗೆ ಹಟ್ಟಿಗಳನ್ನು ಮಾಡಿಸಿದನು. ಆದದರಿಂದ ಆ ಸ್ಥಳಕ್ಕೆ
ಸುಕೋತೆಂದು ಹೆಸರಾಯಿತು.

೧೮ ಮತ್ತು ಯಾಕೋಬನು ಸುಖವಾಗಿ ಪದನಾರಾಮಿನಿಂದ ಬರಲು,
ಕಾನಾನ್ ದೇಶದಲ್ಲಿರುವ ಶಿಖೇಮನ ಪಟ್ಟಣವಾದ ಶಾಲೆಮೆಗೆ ಬಂದು,
೧೯ ಪಟ್ಟಣದ ಮುಂದೆ ಇಳ್ಳು ಕೊಂಡನು. ಮತ್ತು ತನ್ನ ಗುಡಾರ ಹಾಕಿ
ಇರುವ ಹೊಲದ ಭಾಗವನ್ನು ಶಿಖೇಮನ ತಂದೆಯಾದ ಹಮೋ
೨೦ ರನ ಕೈಯಿಂದ ನೂರು ರೂಪಾಯಿಗಳಿಗೆ ತಕ್ಕೊಂಡನು. ಮತ್ತು
ಅಲ್ಲಿ ಪೀಠವನ್ನು ನಿಲ್ಲಿಸಿ, ಅದಕ್ಕೆ ಇಸ್ರಯೇಲನ ದೇವರಾದ ದೇ
ವರ ಪೀಠವೆಂದು, ಹೆಸರಿಟ್ಟನು.

## 34. ಸಂಧಿ

೧ ಇದಲ್ಲದೆ ಲೇಯಳು ಯಾಕೋಬನಿಗೆ ಹೆತ್ತ ಮಗಳಾಗಿರುವ
ದೀನಳನ್ನು ದೇಶದ ಹೆಂಗಸರನ್ನು ನೋಡುವದಕ್ಕೆ ಹೊರಗೆ ಹೋ
೨ ದಾಗ, ದೇಶದ ಪ್ರಭುವಾಗಿರುವ ಹಿವ್ವಿಯನಾದ ಹಮೋರನ ಮ
ಗನಾದ ಶಿಖೇಮನು ಅವಳನ್ನು ನೋಡಿ, ಅವಳನ್ನು ತಕ್ಕೊಂಡು,
೩ ಅವಳ ಸಂಗಡ ಮಲಗಿ, ಅವಳನ್ನು ಭಂಗ ಪಡಿಸಿದನು. ಮತ್ತು ಅ
ವನ ಪ್ರಾಣವು ಯಾಕೋಬನ ಮಗಳಾದ ದೀನಳಿಗೆ ಅಂಟಿ ಕೊಂ
ಡಿತ್ತು. ಅವನು ಆ ಹುಡುಗಿಯನ್ನು ಪ್ರೀತಿ ಮಾಡಿ, ಹುಡುಗಿಯ
೪ ನ್ನು ಮನಗೊಳಿಸ ಮಾತಾಡಿದನು. ಮತ್ತು ಶಿಖೇಮನು ತನ್ನ
ತಂದೆಯಾದ ಹಮೋರನಿಗೆ—ಈ ಹುಡುಗಿಯನ್ನು ನನಗೆ ಹೆಂಡ
೫ ತಿಯಾಗಿ ತಕ್ಕೋ, ಅಂದನು. ಆದರೆ ಯಾಕೋಬನು ಅವನು
ತನ್ನ ಮಗಳಾದ ದೀನಳನ್ನು ಅಶುದ್ಧ ಮಾಡಿದನೆಂದು ಕೇಳಿದಾಗ,
ಅವನ ಮಕ್ಕಳು ಅವನ ದನಗಳ ಸಂಗಡ ಹೊಲದಲ್ಲಿದ್ದರು. ಅವ
ರು ಬರುವ ಪರ್ಯಂತರ ಯಾಕೋಬನು ಸುಮ್ಮನೇ ಇದ್ದನು.

೬ ಆಗ ಶಿಖೇಮನ ತಂದೆಯಾದ ಹಮೋರನು ಅವನ ಸಂಗಡ
೭ ಮಾತಾಡುವದಕ್ಕೆ, ಯಾಕೋಬನ ಬಳಿಗೆ ಹೊರಗೆ ಬಂದನು.
ಮತ್ತು ಯಾಕೋಬನ ಮಕ್ಕಳು ಅದನ್ನು ಕೇಳಿದಾಗ, ಹೊಲ
ದಿಂದ ಬಂದರು. ಅವನು ಯಾಕೋಬನ ಮಗಳ ಸಂಗಡ ಮಲ
ಗಿ, ಇಸ್ರಯೇಲಿನಲ್ಲಿ ಬುದ್ಧಿಹೀನತ್ವವನ್ನು ಮಾಡಿದ್ದರಿಂದ, ಆ
ಮನುಷ್ಯರು ವ್ಯಸನ ಪಟ್ಟು, ಬಹಳ ಉರಿ ಗೊಂಡರು. ಯಾ
ಕಂದರೆ ಹಾಗೆ ಮಾಡ ಬಾರದಿತ್ತು.

೮ ಹಮೋರನು ಅವರಿಗೆ ಹೇಳಿದ್ದೇನಂದರೆ—ನನ್ನ ಮಗನಾದ ಶಿ
ಖೇಮನ ಪ್ರಾಣವು ನಿಮ್ಮ ಮಗಳಲ್ಲಿ ಮೋಹವಾಗಿದೆ. ಅವಳನ್ನು
೯ ದಯ ಮಾಡಿ, ಅವನಿಗೆ ಹೆಂಡತಿಯಾಗಿ ಕೊಡಿರಿ. ಮತ್ತು ನಮಗೆ
ಬೀಗರಾಗಿರಿ; ನಿಮ್ಮ ಕುಮಾರ್ತೆಗಳನ್ನು ನಮಗೆ ಕೊಡಿರಿ; ನಮ್ಮ
೧೦ ಕುಮಾರ್ತೆಗಳನ್ನು ನಿಮಗೆ ತಕ್ಕೊಳ್ಳಿರಿ; ನಮ್ಮ ಸಂಗಡ ವಾಸ
ಮಾಡಿರಿ; ದೇಶವು ನಿಮ್ಮ ಮುಂದೆ ಅದೆ. ಅದರಲ್ಲಿ ವಾಸಿಸಿ, ವ್ಯಾ
೧೧ ಪಾರ ನಡಿಸಿ, ಸಂಪಾದನೆ ಮಾಡಿ ಕೊಳ್ಳಿರಿ. ಆಗ ಶಿಖೇಮನು
ಅವಳ ತಂದೆಗೂ ಸಹೋದರರಿಗೂ ಹೇಳಿದ್ದೇನಂದರೆ—ನಿಮ್ಮ ದೃ
ಷ್ಟಿಯಲ್ಲಿ ನನಗೆ ದಯ ದೊರಕಲಿ; ನೀವು ನನಗೆ ಹೇಳುವದನ್ನು
೧೨ ಕೊಡುವೆನು. ನನಗೆ ಬಹಳ ಕೆರವನ್ನೂ ಕಾಣಿಕೆಯನ್ನೂ ಹೇ
ಳಿರಿ. ನೀವು ನನಗೆ ಹೇಳುವ ಪ್ರಕಾರ ಕೊಡುವೆನು; ಆದರೆ ಆ ಹು
ಡುಗಿಯನ್ನು ನನಗೆ ಹೆಂಡತಿಯಾಗಿ ಕೊಡಿರಿ.

೧೩ ಆಗ ಯಾಕೋಬನ ಮಕ್ಕಳು ಶಿಖೇಮನಿಗೂ, ಅವನ ತಂದೆ
ಯಾದ ಹಮೋರನಿಗೂ, ವಂಚನೆಯಾದ ಉತ್ತರವನ್ನು ಕೊ
ಟ್ಟು, ಅವನು ತಮ್ಮ ತಂಗಿಯಾದ ದೀನಳನ್ನು ಅಶುದ್ಧ ಮಾಡಿ
೧೪ ದ್ದರಿಂದ ಹೇಳಿದ್ದೇನಂದರೆ—ನಾವು ಈ ಕಾರ್ಯವನ್ನು ಮಾಡ
ಲಾರೆವು. ಶಿಶ್ನೇದನೆ ಇಲ್ಲದ ಮನುಷ್ಯನಿಗೆ ನಮ್ಮ ತಂಗಿಯ
೧೫ ನ್ನು ಕೊಡಲಾರೆವು. ಅದು ನಮಗೆ ನಿಂದೆ. ಹೀಗೆ ಮಾತ್ರ ನಿ
ಮಗೆ ಬಪ್ಪುವೆವು—ನೀವು ನಮ್ಮ ಹಾಗಾದ್ದು, ನಿಮ್ಮಲ್ಲಿರುವ ಗಂಡ
೧೬ ಸರನ್ನೆಲ್ಲಾ ಪರಿಛೇದನೆ ಮಾಡಿದರೆ, ನಮ್ಮ ಕುಮಾರ್ತೆಗಳನ್ನು
ನಿಮಗೆ ಕೊಟ್ಟು, ನಿಮ್ಮ ಕುಮಾರ್ತೆಗಳನ್ನು ತಕ್ಕೊಳ್ಳುವೆವು.
೧೭ ಮತ್ತು ನಿಮ್ಮಲ್ಲಿ ವಾಸ ಮಾಡಿ, ಬಂದೇ ಜನವಾಗುವೆವು. ಆದರೆ
ನೀವು ನಮ್ಮ ಮಾತು ಕೇಳದೆ ಪರಿಛೇದನೆ ಮಾಡಿಸಿ ಕೊಳ್ಳದೆ
ಹೋದರೆ, ನಮ್ಮ ಮಗಳನ್ನು ತಕ್ಕೊಂಡು, ಹೋಗಿ ಬಿಡುತ್ತೇವೆಂ
ದು, ಅವರಿಗೆ ಹೇಳಿದರು.

೧೮ ಅವರ ಮಾತುಗಳು ಹಮೋರನಿಗೂ ಹಮೋರನ ಮಗನಾದ
೧೯ ಶಿಖೇಮನಿಗೂ ಬಳ್ಳೆಯವುಗಳೆಂದು ಕಾಣಿಸಿದವು. ಆ ಯೌವ
ನಸ್ಥನು ಯಾಕೋಬನ ಮಗಳನ್ನು ಮೆಚ್ಚಿದ್ದರಿಂದ ಆ ಕಾರ್ಯ
ವನ್ನು ಮಾಡುವದಕ್ಕೆ ತಡ ಮಾತಲಿಲ್ಲ. ಮತ್ತು ತನ್ನ ತಂದೆ
ಯ ಮನೆಯವರೆಲ್ಲರಿಗಂತ ಘನವುಳ್ಳವನಾಗಿದ್ದನು. ಆಗ ಹ
ಮೋರನೂ, ಅವನ ಮಗನಾದ ಶಿಖೇಮನೂ ತಮ್ಮ ಪಟ್ಟಣದ ಬಾ
ಗಿಲಿಗೆ ಬಂದು, ತಮ್ಮ ಪಟ್ಟಣದ ಜನರ ಸಂಗಡ ಮಾತಾಡಿ ಹೇಳಿ
೨೦ ದ್ದೇನಂದರೆ—ಈ ಮನುಷ್ಯರು ನಮಗೆ ಸಮಾಧಾನವಾದ್ದಾರೆ;
ಅವರು ದೇಶದಲ್ಲಿ ವಾಸ ಮಾಡಿ, ಅದರಲ್ಲಿ ವ್ಯಾಪಾರ ನಡಿಸಲಿ.
ಇಗೋ, ದೇಶವು ಅವರ ಮುಂದೆ ಎಡ ಬಲಕ್ಕೂ ವಿಸ್ತಾರವಾಗಿದೆ.
ಅವರ ಕುಮಾರ್ತೆಗಳನ್ನು ನಾವು ಹೆಂಡರಾಗಿ ತಕ್ಕೊಳ್ಳೋಣ,
೨೧ ನಮ್ಮ ಕುಮಾರ್ತೆಗಳನ್ನು ಅವರಿಗೆ ಕೊಡೋಣ. ಅವರು ಪರಿ
ಛೇದಿಸಲ್ಪಟ್ಟವರಾಗಿರುವ ಪ್ರಕಾರ, ನಮ್ಮಲ್ಲಿ ಗಂಡಸರೆಲ್ಲಾ ಪರಿ
ಛೇದಿಸಲ್ಪಟ್ಟರೆ, ಈ ಪಕ್ಷದಲ್ಲಿ ಮಾತ್ರ ಆ ಮನುಷ್ಯರು ನಮ್ಮ
ಸಂಗಡ ವಾಸ ಮಾಡುವದಕ್ಕೂ, ಬಂದೇ ಜನವಾಗುವದಕ್ಕೂ ನ
೨೩ ಮಗೆ ಬಪ್ಪುವರು. ಅವರ ಮಂದೆಗಳೂ, ಅವರ ಸಂಪತ್ತೂ, ಅ
ವರ ಎಲ್ಲಾ ದನಗಳೂ, ಅವು ನಮ್ಮವುಗಳಲ್ಲವೋ! ಅವರಿಗೆ ಬಪ್ಪಿ
೨೪ ಕೊಂಡರೆ ಮಾತ್ರ, ಅವರು ನಮ್ಮ ಸಂಗಡ ವಾಸಿಸುವರು. ಆಗ
ಪಟ್ಟಣದ ಬಾಗಲ್ಲಿ ಹೊರಡುವವರೆಲ್ಲಾ ಹಮೋರನೂ ಅವನ ಮ
ಗನಾದ ಶಿಖೇಮನೂ ಹೇಳಿದ ಮಾತು ಕೇಳಿ, ಅವನ ಪಟ್ಟಣದ
ಬಾಗಲ್ಲಿ ಹೊರಡುವ ಎಲ್ಲಾ ಗಂಡಸರು ಪರಿಛೇದನೆ ಹೊಂದಿ
ದರು.

೨೫ ತರುವಾಯ ಮೂರನೇ ದಿನಸದಲ್ಲಿ ಆದದ್ದೇನಂದರೆ—ಅವರಿಗೆ
ನೋವು ಉಂಟಾದಾಗ, ಯಾಕೋಬನ ಇಬ್ಬರು ಮಕ್ಕಳಾದಂ
ಥ, ದೀನಳ ಸಹೋದರರಾದಂಥ, ಸಿಮೆಯೋನನೂ ಲೇವಿಯೂ
ತಮ್ಮ ತಮ್ಮ ಕತ್ತಿಗಳನ್ನು ತಕ್ಕೊಂಡು, ಧೈರ್ಯವಾಗಿ ಪಟ್ಟಣಕ್ಕೆ
೨೬ ಬಂದು, ಗಂಡಸರೆಲ್ಲರನ್ನು ಕೊಂದು ಹಾಕಿದರು. ಹಮೋರನ
ನ್ನೂ, ಅವನ ಮಗನಾದ ಶಿಖೇಮನನ್ನೂ ಬಿಚ್ಚು ಕತ್ತಿಯಿಂದ
ಕೊಂದು ಹಾಕಿ, ದೀನಳನ್ನು ಶಿಖೇಮನ ಮನೆಯಿಂದ ತಕ್ಕೊಂ
೨೭ ಡು, ಹೊರಟರು. ಯಾಕೋಬನ ಮಕ್ಕಳು ಕೊಂದು ಹಾಕಲ್ಪ
ಟ್ಟವರ ಮೇಲೆ ಬಂದು, ಅವರು ತಮ್ಮ ಸಹೋದರಿಯನ್ನು ಅ
ಶುದ್ಧ ಮಾಡಿದ್ದರಿಂದ ಪಟ್ಟಣವನ್ನು ಕೊಳ್ಳೆ ಇಟ್ಟರು. ಅವರ ಕು
ರಿ ದನ ಕತ್ತೆಗಳನ್ನೂ, ಪಟ್ಟಣದಲ್ಲಿಯೂ ಹೊಲದಲ್ಲಿಯೂ ಇದ್ದವು
೨೮ ಗಳೆಲ್ಲವನ್ನೂ ತಕ್ಕೊಂಡರು. ಮತ್ತು ಅವರ ಆಸ್ತಿಯನ್ನೆಲ್ಲಾ,

ಅವರ ಮಕ್ಕಳನ್ನೆಲ್ಲಾ, ಅವರ ಹೆಂಡರನ್ನು ಸೆರೆ ಹಿಡಿದು, ಮನೆಯಲ್ಲಿದ್ದದ್ದನ್ನೆಲ್ಲಾ ಕೊಳ್ಳೆ ಇಟ್ಟರು.

೩೦ ಆಗ ಯಾಕೋಬನು—ಶಿಮೆಯೋನನಿಗೂ ಲೇವಿಗೂ ಹೇಳಿದ್ದೇನಂದರೆ—ನೀವು ನನ್ನನ್ನು ದೇಶದ ನಿವಾಸಿಗಳಾದ ಕನಾನ್ಯರಿಗೂ ಪೆರಿಜ್ಯರಿಗೂ ದುರ್ವಾಸನೆಯುಳ್ಳವನಾಗ ಮಾಡಿ, ತೊಂದರೆ ಪಡಿಸುತ್ತೀರಿ; ನಾನು ಸ್ವಲ್ಪ ಮಂದಿಯುಳ್ಳವನೇ. ಅವರು ನನಗೆ ವಿರೋಧವಾಗಿ ಕೂಡಿ ಕೊಂಡು, ನನ್ನನ್ನು ಹೊಡೆಯುವ

೩೧ ರು. ನಾನೂ ನನ್ನ ಮನೆಯವರೂ ಹಾಳಾಗುವೆವು. ಆದರೆ ಅವರು, ನಮ್ಮ ತಂಗಿಗೆ ಸೂಳೆಯ ಹಾಗೆ ಮಾಡ ಬಹುದೋ! ಅಂದರು.

## ೩೫. ಸಂಧಿ.

೧ ಆಗ ದೇವರು ಯಾಕೋಬನಿಗೆ, ಎದ್ದು, ಬೇಥೆಲಿಗೆ ಏರಿ ಹೋಗಿ, ಅಲ್ಲಿ ವಾಸ ಮಾಡು. ಮತ್ತು ನೀನು ನಿನ್ನ ಸಹೋದರನಾದ ಏಸಾವನ ಮುಂದಿನಿಂದ ಓಡಿ ಹೋದಾಗ, ನಿನಗೆ ಕಾಣಿಸಿ ಕೊಂ

೨ ಡ ದೇವರಿಗೆ ಅಲ್ಲಿ ಬಲಿ ಪೀಠವನ್ನು ಮಾಡು, ಅಂದನು. ಆಗ ಯಾಕೋಬನು ತನ್ನ ಮನೆಯವರಿಗೂ, ತನ್ನ ಸಂಗಡ ಇದ್ದವ ಕ್ಕೆಲ್ಲರಿಗೂ ಹೇಳ್ದಿದ್ದೇನಂದರೆ—ನಿಮ್ಮ ಮಧ್ಯದಲ್ಲಿರುವ ಅನ್ಯ ದೇವರುಗಳನ್ನು ತೆಗೆದು ಬಿಡಿರಿ; ಶುದ್ಧ ಮಾಡಿ ಕೊಳ್ಳಿರಿ; ಮತ್ತು

೩ ನಿಮ್ಮ ವಸ್ತ್ರಗಳನ್ನು ಬದಲು ಮಾಡಿರಿ. ಆಗ ನಾವು ಎದ್ದು ಬೇಥೆಲಿಗೆ ಏರಿ ಹೋಗುವೆವು. ನನಗೆ ಇಕ್ಕಟ್ಟು ಉಂಟಾದ ಸಮಯದಲ್ಲಿ ನನ್ನನ್ನು ಆಲೈಸಿ, ನಾನು ಹೋದ ಮಾರ್ಗದಲ್ಲಿ ನನ್ನ ಸಂಗಡ ಇದ್ದ ದೇವರಿಗೆ ಅಲ್ಲಿ ನಾನು ಬಲಿಪೀಠವನ್ನು ಮಾ

೪ ಡುವೆನು. ಆಗಲವರು ತಮ್ಮ ಕೈಗಳಲ್ಲಿದ್ದ ಎಲ್ಲಾ ಅನ್ಯ ದೇವರುಗಳನ್ನೂ, ತಮ್ಮ ಕಿವಿಗಳಲ್ಲಿದ್ದ ಮುರುವುಗಳನ್ನೂ ಯಾಕೋಬನಿಗೆ ಕೊಟ್ಟರು. ಯಾಕೋಬನು ಅವುಗಳನ್ನು ಶಿಖೆಮಿಗೆ ಸಮೀಪವಾಗಿರುವ ಏಲೋನ್ ಮರದ ಕೆಳಗೆ ಹೂಣಿಟ್ಟನು. ಆ ಮೇಲೆ

೫ ಅವರು ಪ್ರಯಾಣವಾಗಿ ಹೋದರು. ಮತ್ತು ದೇವರ ಅಂಜಿಕೆ ಸುತ್ತಲಿರುವ ಪಟ್ಟಣಗಳ ಮೇಲಿದ್ದದರಿಂದ, ಅವರು ಯಾಕೋಬನ ಮಕ್ಕಳ ಹಿಂದೆ ಹತ್ತಲಿಲ್ಲ.

೬ ಇದಲ್ಲದೆ ಯಾಕೋಬನು, ತನ್ನ ಸಂಗಡ ಇದ್ದ ಎಲ್ಲಾ ಜನರು ಸಹಿತವಾಗಿ, ಕಾನಾನ್ ದೇಶದಲ್ಲಿರುವ ಲೂಜಿಗೆ ಬಂದನು.

೭ ಅದೇ ಬೇಥೆಲು. ಅಲ್ಲಿ ಅವನು ಬಲಿಪೀಠವನ್ನು ಕಟ್ಟಿ, ತಾನು ತನ್ನ ಸಹೋದರನ ಸಮುಖದಿಂದ ಓಡಿ ಹೋದಾಗ, ಅಲ್ಲಿ ತನಗೆ ದೇವರು ಪ್ರತ್ಯಕ್ಷವಾದದರಿಂದ, ಆ ಸ್ಥಳಕ್ಕೆ ಏಲ್‌ಬೇಥೆಲ್ ಎಂದು ಹೆಸರಿಟ್ಟನು.

೮ ಆಗ ರೆಬೆಕ್ಕಳ ದಾದಿಯಾಗಿದ್ದ ದೆಬೋರಳು ಸತ್ತು, ಬೇಥೆಲಿನ ಕೆಳಗೆ ಅಲೋನ್ ಮರದ ಬುಡದಲ್ಲಿ ಹೂಣಿಡಲ್ಪಟ್ಟಳು. ಆ ಸ್ಥಳಕ್ಕೆ ಅಲೋನ್ ಬಖೂತ್ ಎಂದು, ಹೆಸರಾಯಿತು.

೯ ಇದಲ್ಲದೆ ಅವನು ಪದನಾರಾಮಿನಿಂದ ಬಂದಾಗ, ದೇವರು ಯಾಕೋಬನಿಗೆ, ಇನ್ನೊಂದು ಸಾರಿ ಪ್ರತ್ಯಕ್ಷವಾಗಿ, ಅವನನ್ನು ಆಶೀ

೧೦ ರ್ವದಿಸಿದನು. ದೇವರು ಅವನಿಗೆ—ಯಾಕೋಬನೆಂದು ನಿನಗೆ ಹೆಸರುಂಟು. ಇನ್ನು ಮೇಲೆ ಯಾಕೋಬನೆಂದು ನಿನಗೆ ಹೆಸರಿರಬಾರದು. ಇಸ್ರಯೇಲನೆಂದು ನಿನಗೆ ಹೆಸರಿರ ಬೇಕೆಂದು ಹೇಳಿ,

೧೧ ಅವನಿಗೆ ಇಸ್ರಯೇಲನೆಂದು ಹೆಸರಿಟ್ಟನು. ಮತ್ತು ದೇವರು ಅವನಿಗೆ ಹೇಳ್ದಿದ್ದೇನಂದರೆ—ಸರ್ವಶಕ್ತನಾದ ದೇವರು ನಾನೇ. ಅಭಿವೃದ್ಧಿಯಾಗಿ, ಹೆಚ್ಚಾಗು. ಜನಾಂಗವೂ ಜನಾಂಗಗಳ ಕೂಟವೂ

೧೨ ನಿನ್ನಿಂದ ಉಂಟಾಗುವವು. ಅರಸರು ನಿನ್ನ ತೊಡೆಗಳೊಳಗಿಂದ ಹೊರಡುವರು. ಮತ್ತು ಅಬ್ರಹಾಮನಿಗೂ ಇಸಾಕನಿಗೂ ನಾನು ಕೊಟ್ಟ ದೇಶವನ್ನು ನಿನಗೆ ಕೊಡುವೆನು. ನಿನ್ನ ಬಳಿಕ ಹುಟ್ಟುವ

೧೩ ಬೀಜಕ್ಕೂ ಆ ದೇಶವನ್ನು ಕೊಡುವೆನು. ಆಗ ದೇವರು ಅವನ

೧೪ ಸಂಗಡ ಮಾತಾಡಿದ್ದಲ್ಲಿ ಅವನ ಬಳಿಯಿಂದ ಏರಿ ಹೋದನು. ಆದರೆ ಯಾಕೋಬನು ಅವನು ತನ್ನ ಸಂಗಡ ಮಾತಾಡಿದ ಸ್ಥಳದಲ್ಲಿ ಸ್ತಂಭವನ್ನು ಕಲ್ಲಿನದಾದ ಸ್ತಂಭವನ್ನು ಸ್ಥಾಪಿಸಿ, ಹೊಯಿಕೆ

೧೫ ಯನ್ನು ಅದರ ಮೇಲೆ ಹೊಯಿದು, ಅದರ ಮೇಲೆ ಎಣ್ಣೆ ಹೊಯಿದನು. ಮತ್ತು ಯಾಕೋಬನು ದೇವರು ತನ್ನ ಸಂಗಡ ಮಾತಾಡಿದ ಸ್ಥಳಕ್ಕೆ ಬೇಥೆಲೆಂದು ಹೆಸರಿಟ್ಟನು.

೧೬ ಬೇಥೆಲಿಂದ ಅವರು ಪ್ರಯಾಣ ಮಾಡಿ ಎಫ್ರಾತಿಗೆ ಬರುವದಕ್ಕೆ ಇನ್ನು ಸ್ವಲ್ಪ ದೂರ ಇರುವಾಗ, ರಾಹೆಲಳು ಹೆತ್ತಳು; ಹೆರುವ

೧೭ ದರಲ್ಲಿ ಕಷ್ಟ ಪಡುತ್ತಿದ್ದಳು. ಹೆರುವದರಲ್ಲಿ ಅವಳು ಕಷ್ಟ ಪಡುವಾಗ, ಸೂಲಗಿತ್ತಿ ಅವಳಿಗೆ—ನೀನು ಭಯ ಪಡ ಬೇಡ; ಇವನು

೧೮ ಸಹ ನಿನಗೆ ಮಗನು, ಅಂದಳು. ಆದರೆ ಅವಳು ಸತ್ತು ಹೋದಳು. ಮತ್ತು ಅವಳ ಪ್ರಾಣವು ಹೊರಡುವಾಗ, ಅವನಿಗೆ ಬೆನೋನಿ ಎಂದು, ಹೆಸರಿಟ್ಟಳು. ಆದರೆ ಅವನ ತಂದೆ ಅವನಿಗೆ ಬೆನ್ಯಾ

೧೯ ಮೀನನೆಂದು ಕರೆದನು. ಆಗ ರಾಹೆಲಳು ಸತ್ತು, ಎಫ್ರಾತದ ಮಾ

೨೦ ರ್ಗದಲ್ಲಿ ಹೂಣಿಡಲ್ಪಟ್ಟಳು. ಅದೇ ಬೆಥ್ಲೆಹೇಮು. ಮತ್ತು ಯಾಕೋಬನು ಅವಳ ಸಮಾಧಿಯಲ್ಲಿ ಬಂದು ಸ್ತಂಭವನ್ನು ಸ್ಥಾಪಿಸಿದನು. ಅದೇ ಇಂದಿನ ಪರ್ಯಂತರ ರಾಹೆಲಳ ಸಮಾಧಿಯ ಸ್ತಂಭ.

೨೧ ಮತ್ತು ಇಸ್ರಯೇಲನು ಪ್ರಯಾಣ ಮಾಡಿ, ಏದೆರೆಂಬ ಗೋಪುರದ ಆಚೆಯಲ್ಲಿ ಗುಡಾರ ಹಾಕಿದನು.

೨೨ ಇಸ್ರಯೇಲನು ಆ ದೇಶದಲ್ಲಿ ವಾಸವಾಗಿರುವಾಗ, ಆದದ್ದೇನಂದರೆ, ರೂಬೆನನು ಹೋಗಿ, ತನ್ನ ತಂದೆಯ ಉಪಪತ್ನಿಯಾದ ಬಿಲ್ಹಳ ಸಂಗಡ ಮಲಗಿದನು. ಇಸ್ರಯೇಲನು ಅದನ್ನು ಕೇಳ್ದಿದನು.

೨೩ ಇದಲ್ಲದೆ ಯಾಕೋಬನ ಮಕ್ಕಳು ಹನ್ನೆರಡು ಮಂದಿಯಾಗಿದ್ದರು. ಲೇಯಳ ಮಕ್ಕಳು—ಯಾಕೋಬನ ಜೊಚ್ಚಲನಾದ ರೂ

೨೪ ಬೆನನೂ, ಸಿಮೆಯೋನನೂ, ಲೇವಿಯೂ, ಯೆಹೂದನೂ, ಇ

೨೫ ಸ್ಸಾಕಾರನೂ, ಜೆಬುಲೋನನೂ. ರಾಹೆಲಳ ಮಕ್ಕಳು—ಯೋಸೆ

೨೬ ಫನೂ, ಬೆನ್ಯಮೀನನೂ. ರಾಹೆಲಳ ದಾಸಿಯಾದ ಬಿಲ್ಹಳ ಮಕ್ಕ

೨೭ ಳು—ದಾನನೂ ನೆಪ್ತಲಿಯೂ. ಲೇಯಳ ದಾಸಿಯಾದ ಜಿಲ್ಪಳ ಮಕ್ಕಳು—ಗಾದನೂ ಆಸೇರನೂ. ಇವರೇ ಪದನಾರಾಮಿನಲ್ಲಿ ಯಾಕೋಬನಿಗೆ ಹುಟ್ಟಿದ ಮಕ್ಕಳು.

೨೮ ಆಗ ಯಾಕೋಬನು ತನ್ನ ತಂದೆಯಾದ ಇಸಾಕನ ಬಳಿಗೆ, ಮಮ್ರೆಗೆ, ಹೆಬ್ರೋನೆಂಬ ಕಿರ್ಯತರ್ಬಕ್ಕೆ, ಅಬ್ರಹಾಮ

೨೯ ನೂ ಇಸಾಕನೂ ಪರವಾಸವಾಗಿದ್ದಲ್ಲಿಗೆ ಬಂದನು. ಆದರೆ ಇಸಾ

೩೫ ಕನ ದಿನಗಳು ನೂರು ಎಂಭತ್ತು ವರುಷಗಳಾಗಿದ್ದವು. ಆಗ ಇಸಾಕನು ಮುದುಕನಾಗಿಯೂ ಆಯುಷ್ಯ ತುಂಬಿದವನಾಗಿಯೂ ತೀರಿ ಹೋಗಿ, ಸತ್ತು, ತನ್ನ ಜನರ ಸಂಗಡ ಕೂಡಿಸಲ್ಪಟ್ಟನು. ಅವನ ಮಕ್ಕಳಾದ ಏಸಾವನೂ ಯಾಕೋಬನೂ ಅವನನ್ನು ಹೂಣಿಟ್ಟರು.



## ೩೬. ಸಂಧಿ.

೧ ಎದೋಮನೆಂಬ ಏಸಾವನ ವಂಶಾವಳಿಯು ಇದೇ—ಏಸಾವ

೨ ನು ಕನಾನ್ಯರ ಕುಮಾರ್ತೆಗಳಲ್ಲಿ, ಹಿತ್ತಿಯನಾದ ಏಲೋನನ ಮಗಳಾದ ಆದಳನ್ನೂ, ಹಿವ್ವಿಯನಾದ ಚಿಬೋನನ ಮಗಳಾದ

೩ ಅನಳ ಮಗಳಾಗಿರುವ ಅಹೊಲೀಬಮಳನ್ನೂ, ಮತ್ತು ಇಷ್ಮಯೇಲನ ಮಗಳಾದಂಥ, ನೆಬಾಯೋತನ ಸಹೋದರಿಯಾದಂ

೪ ಥ, ಬಸ್ಮಥಳನ್ನೂ ತನ್ನ ಹೆಂಡರಾಗಿ ತಕ್ಕೊಂಡನು. ಆದಳು

೫ ಏಸಾವನಿಗೆ ಎಲಿಫಾಜನನ್ನು ಹೆತ್ತಳು. ಬಸ್ಮಥಳು ರೆಯುಏಲನನ್ನು ಹೆತ್ತಳು. ಅಹೊಲೀಬಮಳು ಯೆಯೂಷನನ್ನೂ, ಯೆಳಾಮನನ್ನೂ, ಕೋರಹನನ್ನೂ ಹೆತ್ತಳು. ಇವರು ಏಸಾವನಿಗೆ ಕಾನಾನ್ ದೇಶದಲ್ಲಿ ಹುಟ್ಟಿದ ಮಕ್ಕಳು.

೬ ಆ ಮೇಲೆ ಏಸಾವನು ತನ್ನ ಹೆಂಡರನ್ನೂ, ಕುಮಾರ ಕುಮಾರ್ತೆಗಳನ್ನೂ, ತನ್ನ ಮನೆಯಲ್ಲಿದ್ದ ಎಲ್ಲಾ ಮನುಷ್ಯರನ್ನೂ, ತನ್ನ ಹಿಂಡುಗಳನ್ನೂ, ತನ್ನ ಎಲ್ಲಾ ದನಗಳನ್ನೂ, ಕಾನಾನ್ ದೇಶದಲ್ಲಿ ತಾನು ಸಂಪಾದಿಸಿದ ಎಲ್ಲಾ ಸಂಪತ್ತನ್ನೂ ತಕ್ಕೊಂಡು, ತನ್ನ ಸಹೋದರನಾದ ಯಾಕೋಬನ ಮುಂದಿನಿಂದ, ಬಂದು

೭ ದೇಶಕ್ಕೆ ಹೋದನು. ಯಾಕಂದರೆ ಅವರು ಕೂಡಾ ನಿವಾಸವಾಗಿರ ಕೂಡದ ಹಾಗೆ, ಅವರ ಸಂಪತ್ತು ಬಹಳವಾಗಿತ್ತು. ಅವರ ಹಿಂಡುಗಳಿಗೋಸ್ಕರ ಅವರು ಪರವಾಸವಾಗಿರುವ ದೇಶವು ಅವರನ್ನು

೮ ಸಹಿಸಲಾರದೆ ಇತ್ತು. ಹೀಗೆ ಏಸಾವನು ಸೇಯಿರ್ ಪರ್ವತದಲ್ಲಿ ವಾಸವಾಗಿದ್ದನು. ಏಸಾವನು ಅಂದರೆ, ಅವನೇ ಎದೋಮನು.

೯ ಸೇಯಿರ್ ಪರ್ವತದಲ್ಲಿರುವ ಎದೋಮ್ಯರ ತಂದೆಯಾದ

೧೦ ಏಸಾವನ ವಂಶಾವಳಿಯು ಇದೇ—ಏಸಾವನ ಮಕ್ಕಳ ಹೆಸರುಗಳು ಯಾವವಂದರೆ, ಏಸಾವನ ಹೆಂಡತಿಯಾಗಿರುವ ಆದಳ ಮಗನಾಗಿರುವ ಎಲಿಫಾಜನು, ಏಸಾವನ ಹೆಂಡತಿಯಾದ ಬಸ್ಮಥಳ ಮ

೧೧ ಗನಾದ ರೆಯುವೇಲನು. ಎಲಿಫಾಜನ ಮಕ್ಕಳು ಯಾರಂದರೆ,

೧೨ ತೇಮನ್, ಓಮರ್, ಜೆಫೊ, ಗಾಟಮ್, ಕೇನಾಜ್. ಮತ್ತು ಥಿಮ್ನಳು ಏಸಾವನ ಮಗನಾದ ಎಲಿಫಾಜನಿಗೆ ಉಪಪತ್ನಿಯಾಗಿದ್ದು, ಎಲಿಫಾಜನಿಗೆ ಅಮಲೇಕನನ್ನು ಹೆತ್ತಳು. ಏಸಾವನ ಹೆಂಡತಿಯಾ

೧೩ ದ ಆದಳ ಮಕ್ಕಳು ಇವರೇ. ಮತ್ತು ರೆಯುವೇಲನ ಮಕ್ಕಳು ಯಾರಂದರೆ, ನಾಹಾತ್, ಜೇರಹ, ಷಮ್ಮಾ, ಮಿಜ್ಜ. ಏಸಾವನ

೧೪ ಹೆಂಡತಿಯಾದ ಬಸ್ಮಥಳ ಮಕ್ಕಳು ಇವರೇ. ಮತ್ತು ಏಸಾವನ ಹೆಂಡತಿಯಾದಂಥ, ಚಿಬೋನನ ಮಗಳಾಗಿರುವ ಅನಳ ಮಗಳಾದಂಥ ಅಹೊಲೀಬಮಳ ಮಕ್ಕಳು ಯಾರಂದರೆ, ಅವಳು ಏಸಾವನಿಗೆ ಯೆಯೂಷನನ್ನೂ, ಯೆಳಾಮನನ್ನೂ, ಕೋರಹನನ್ನೂ, ಹೆತ್ತಳು.

೧೫ ಏಸಾವನ ಮಕ್ಕಳ ಪ್ರಭುಗಳು ಯಾರಂದರೆ, ಏಸಾವನ ಜೊಚ್ಚಲನಾಗಿರುವ ಎಲಿಫಾಜನ ಮಕ್ಕಳಾದ ಥೇಮನ್ ಪ್ರಭು, ಓಮರ್ ಪ್ರಭು, ಜೆಫೊ ಪ್ರಭು, ಕೇನಾಜ್ ಪ್ರಭು, ಕೋರಹ ಪ್ರಭು,

೧೬ ಗಾಟಮ್‌ಪ್ರಭು, ಅಮಲೇಕ್ ಪ್ರಭು; ಎದೋಮ್ ದೇಶದಲ್ಲಿದ್ದಂಥ

೧೭ ಎಲಿಫಾಜನ ಪ್ರಭುಗಳು ಇವರೇ; ಇವರು ಆದಳ ಮಕ್ಕಳು. ಮತ್ತು ಏಸಾವನ ಮಗನಾದ ರೆಯುವೇಲನ ಮಕ್ಕಳು ಯಾರಂದರೆ, ನಾಹತ್ ಪ್ರಭು, ಜೇರಹ ಪ್ರಭು, ಷಮ್ಮಾ ಪ್ರಭು, ಮಿಜ್ಜ ಪ್ರಭು; ಎದೋಮ್ ದೇಶದಲ್ಲಿದ್ದಂಥ ರೆಯುವೇಲನ ಪ್ರಭುಗಳು ಇವರೇ; ಇವರು ಏಸಾವನ ಹೆಂಡತಿಯಾದ ಬಸ್ಮಥಳ ಮಕ್ಕಳು.

೧೮ ಮತ್ತು ಏಸಾವನ ಹೆಂಡತಿಯಾದ ಅಹೊಲೀಬಮಳ ಮಕ್ಕಳು ಯಾರಂದರೆ, ಯೆಯೂಷ ಪ್ರಭು, ಯೆಳಾಮ್ ಪ್ರಭು, ಕೋರಹ ಪ್ರಭು; ಇವರೇ ಏಸಾವನ ಹೆಂಡತಿಯಾದಂಥ, ಆನಳ ಮಗಳಾದಂಥ

೧೯ ಅಹೊಲೀಬಮಳ ಪ್ರಭುಗಳು. ಇವರು ಎದೋಮನೆಂಬ ಏಸಾವನ ಮಕ್ಕಳು; ಇವರೇ ಅವರ ಪ್ರಭುಗಳು.

೨೦ ಹೋರಿಯನಾದ ಸೇಯಿರನ ಮಕ್ಕಳೂ ದೇಶದ ನಿವಾಸಿಗಳೂ ಯಾರಂದರೆ—ಲೋಟಾನ್, ಶೋಬಾಲ್, ಚಿಬೋನ್, ಆ

೨೧ ನ, ದಿಶೋನ್, ಏಚೆರ್, ದೀಶಾನ್; ಇವರು ಎದೋಮ್ ದೇಶದಲ್ಲಿದ್ದಂಥ, ಸೇಯಿರನ ಮಕ್ಕಳಾದಂಥ ಹೋರಿಯರ ಪ್ರಭುಗಳು.

೨೨ ಮತ್ತು ಲೋಟಾನನ ಮಕ್ಕಳು ಯಾರಂದರೆ, ಹೋರಿ, ಹೇಮ

೨೩ ನ್, ಲೋಟಾನನ ಸಹೋದರಿಯಾದ ತಿಮ್ನಳು. ಮತ್ತು ಶೋಬಾಲನ ಮಕ್ಕಳು ಯಾರಂದರೆ, ಅಲ್ವಾನ್, ಮನಾಹತ್, ಏಬ

೨೪ ಲ್, ಶೆಫೊ, ಒನಾಮ್. ಚಿಬೋನನ ಮಕ್ಕಳು ಯಾರಂದರೆ, ಆಯನು, ಆನನು; ತನ್ನ ತಂದೆಯಾದ ಚಿಬೋನನ ಕತ್ತೆಗಳನ್ನು ಕಾಯುವಾಗ, ಅರಣ್ಯದಲ್ಲಿ ಬಿಸಿನೀರ ಬುಗ್ಗೆಗಳನ್ನು ಕಂಡು ಕೊಂ

೨೫ ಡ ಆನನು ಇವನೇ. ಮತ್ತು ಆನನ ಮಕ್ಕಳು ಯಾರಂದರೆ, ದಿ

೨೬ ಶೋನನು, ಆನನ ಮಗಳಾಗಿದ್ದ ಅಹೊಲೀಬಮಳು. ದೀಶಾನನ ಮಕ್ಕಳು ಯಾರಂದರೆ, ಹೆಮ್ದಾನ್, ಎಷ್ಬಾನ್, ಇತ್ರಾನ್, ಕೆ

೨೭ ರಾನ್. ಏಚೆರನ ಮಕ್ಕಳು ಯಾರಂದರೆ, ಬಿಲ್ಹಾನ್, ಜಾವಾನ್,

೨೮ ಅಕಾನ್, ದೀಶಾನನ ಮಕ್ಕಳು ಯಾರಂದರೆ, ಊಜ್, ಆರಾನ್.

೨೯ ಹೋರಿಯರ ಪ್ರಭುಗಳು ಯಾರಂದರೆ, ಲೋಟಾನ್ ಪ್ರಭು,

೩೦ ಶೋಬಾಲ್ ಪ್ರಭು, ಚಿಬೋನ್ ಪ್ರಭು, ಆನ ಪ್ರಭು, ದಿಶೋನ್ ಪ್ರಭು, ಏಚೆರ್ ಪ್ರಭು, ದೀಶಾನ್ ಪ್ರಭು; ಇವರು ಸೇಯಿರ್ ದೇಶದಲ್ಲಿ ಪ್ರಭುಗಳಾಗಿದ್ದ ಹೋರಿಯರ ಪ್ರಭುಗಳು.

೩೧ ಮತ್ತು ಇಸ್ರಯೇಲ ಮಕ್ಕಳನ್ನು ಅರಸನು ಆಳುವದಕ್ಕಿಂತ ಮುಂಚೆ ಎದೋಮ್ ದೇಶದಲ್ಲಿ ಆಳ್ದಿದ ಅರಸರು ಯಾರಂದರೆ,

೩೨ ಎದೋಮಿನಲ್ಲಿ ಬೆಯೊರನ ಮಗನಾದ ಬೇಲನು ಆಳ್ದಿದನು. ಅ

೩೩ ವನ ಪಟ್ಟಣದ ಹೆಸರು ದಿನ್ಹಬಾ. ಬೇಲನು ಸತ್ತಾಗ, ಅವನ ಬದಲಾಗಿ ಬೊಚ್ರದವನಾದ ಜೇರಹನ ಮಗನಾದ ಯೋಬಬನು ಆ

೩೪ ಳ್ದಿದನು. ಯೋಬಬನು ಸತ್ತಾಗ, ಅವನ ಬದಲಾಗಿ ತೆಮಾನ್ಯನಾದ ಹುಷಾಮನು ಆಳ್ದಿದನು. ಹುಷಾಮನು ಸತ್ತಾಗ, ಅವನ ಬ

೩೫ ದಲಾಗಿ ಬೇದಾದ್ ಹೊಲದಲ್ಲಿ ಮಿದ್ಯಾನನನ್ನು ಹೊಡೆದ ಬೆದಾದನ ಮಗನಾದ ಹದಾದನು ಆಳ್ದಿದನು. ಅವನ ಪಟ್ಟಣದ ಹೆಸರು

೩೬ ಅವೀಥ್. ಹದಾದನು ಸತ್ತಾಗ, ಅವನ ಬದಲಾಗಿ ಮಸ್ರೆಕದವನಾ

೩೭ ದ ಸಮ್ಲನು ಆಳ್ದಿದನು. ಸಮ್ಲನು ಸತ್ತಾಗ, ಅವನ ಬದಲಾಗಿ

೩೮ ನದಿಯ ಕೆಹೊಬೋತಿನವನಾದ ಸೌಲನು ಆಳ್ದಿದನು. ಸೌಲನು ಸತ್ತಾಗ, ಅವನ ಬದಲಾಗಿ ಅಕ್ಬೊರನ ಮಗನಾದ ಬಾಲ್‌ಹನಾನನು ಆಳ್ದಿದನು. ಅಕ್ಬೊರನ ಮಗನಾದ ಬಾಲ್‌ಹನಾನನು ಸತ್ತಾ

೩೯ ಗ, ಅವನ ಬದಲಾಗಿ ಹದಾರನು ಆಳ್ದಿದನು. ಅವನ ಪಟ್ಟಣದ ಹೆಸರು ಪಾವು. ಅವನ ಹೆಂಡತಿಯ ಹೆಸರು ಮೆಹೆಟಬೇಲಳು, ಮೇಜಹಬನ ಮಗಳಾದ ಮಟ್ರೆದನ ಮಗಳು.

೪೦ ಕುಲ, ಸ್ಥಳ, ನಾಮಗಳ ಪ್ರಕಾರವಾಗಿ, ಏಸಾವನ ಪ್ರಭುಗಳ

೪೧ ಹೆಸರುಗಳು ಯಾವವೆಂದರೆ, ತಿಮ್ನ ಪ್ರಭು, ಅಲ್ವಾ ಪ್ರಭು, ಯೆತೆತ್ ಪ್ರಭು, ಅಹೊಲೀಬಮ ಪ್ರಭು, ಏಲಾ ಪ್ರಭು, ಪೀನೊನ್

೪೦ ಪ್ರಭು, ಕೆನಾಜ್ ಪ್ರಭು, ಥೇಮನ್ ಪ್ರಭು, ಮಿಬ್ಜರ ಪ್ರಭು, ಮಗ್ದಿ
೪೩ ಯೇಲ್ ಪ್ರಭು, ಈರಮ್ ಪ್ರಭು, ತಮ್ಮ ಸ್ವಾಸ್ತ್ಯದ ದೇಶದಲ್ಲಿ ಅವರು ವಾಸವಾಗಿದ್ದ ಪ್ರಕಾರ ಎದೋಮನ ಪ್ರಭುಗಳು ಇವರೇ. ಎದೋಮನ ತಂದೆಯಾದ ಎಸಾವನು ಇವನೇ.

## ೩೭. ಸಂಧಿ.

೧ ಯಾಕೋಬನು ತನ್ನ ತಂದೆ ಪರವಾಸವಾಗಿದ್ದ ಕಾನಾನ್ ದೇಶದಲ್ಲಿ ವಾಸವಾಗಿದ್ದನು.

೨ ಯಾಕೋಬನ ವಂಶ ಚರಿತ್ರೆ ಇದೇ. ಯೋಸೆಫನು ಹದಿನೇಳು ವರುಷದವನಾಗಿದ್ದಾಗ, ತನ್ನ ಸಹೋದರರ ಸಂಗಡ ಮಂದೆಗಳನ್ನು ಮೇಯಿಸುತ್ತಿದ್ದನು. ಆ ಹುಡುಗನು ತನ್ನ ತಂದೆಯ ಹೆಂಡತಿಗಾದುವ ಬಿಲ್ಹಾಳ, ಜಿಲ್ಪಾಳ ಮಕ್ಕಳಿಗೆ ಸಂಗಡ ಇದ್ದನು. ಮತ್ತು ಯೋಸೆಫನು ಅವರ ಕೆಟ್ಟ ಸುದ್ದಿಯನ್ನು ಅವರ ತಂದೆಗೆ
3 ತಿಳಿಸುತ್ತಿದ್ದನು. ಆದರೆ ಇಸ್ರಯೇಲನು ಯೋಸೆಫನನ್ನು, ಅವನು ಮುದಿ ಪ್ರಾಯದಲ್ಲಿ ಹುಟ್ಟಿದ ಮಗನಾಗಿರುವದರಿಂದ, ತನ್ನ ಎಲ್ಲಾ ಮಕ್ಕಳಿಗಿಂತಲೂ ಹೆಚ್ಚು ಪ್ರೀತಿ ಮಾಡಿ, ಅವನಿಗೆ ಚಿತ್ರವ
೪ ರ್ಣದ ಅಂಗಿಯನ್ನು ಮಾಡಿಸಿದನು. ಅವನ ಸಹೋದರರು, ತಮ್ಮ ತಂದೆ ಅವನನ್ನು ಅವನ ಎಲ್ಲಾ ಸಹೋದರರಿಗಿಂತ ಹೆಚ್ಚು ಪ್ರೀತಿ ಮಾಡುತ್ತಾನೆಂದು ನೋಡಿ, ಅವನನ್ನು ಹಗೆ ಮಾಡಿ, ಅವನ ಸಂಗಡ ಸಮಾಧಾನವಾಗಿ ಮಾತಾಡಲಾರದೆ ಇದ್ದರು.

೫ ಯೋಸೆಫನು ಬಂದು ಕನಸು ಕಂಡು, ತನ್ನ ಸಹೋದರರಿಗೆ ತಿಳಿಸಿದಾಗ, ಅವನನ್ನು ಇನ್ನು ಹೆಚ್ಚಾಗಿ ಹಗೆ ಮಾಡಿದರು.
೬ ಅವನು ಅವರಿಗೆ ಹೇಳಿದ್ದೇನಂದರೆ—ನಾನು ಕಂಡ ಈ ಕನಸನ್ನು
೭ ದಯೆ ಮಾಡಿ ಕೇಳಿರಿ—ಇಗೋ, ನಾವು ಹೊಲದಲ್ಲಿ ಸೂಡುಗಳನ್ನು ಕಟ್ಟುತ್ತಾ ಇದ್ದೆವು. ಆಗ, ಇಗೋ, ನನ್ನ ಸೂಡು ಎದ್ದು ನಿಂತಿತು. ಮತ್ತು, ಇಗೋ, ನಿಮ್ಮ ಸೂಡುಗಳು ತಿರುಗಿ ಕೊಂಡು,
೮ ನನ್ನ ಸೂಡಿಗೆ ಅಡ್ಡ ಬಿದ್ದವು. ಆಗ ಅವನ ಸಹೋದರರು ಅವನಿಗೆ—ನೀನು ನಮ್ಮ ಮೇಲೆ ನಿಶ್ಚಯವಾಗಿ ಅರಸನಾಗ ಬೇಕೇ! ನಿಶ್ಚಯವಾಗಿ ನಮ್ಮನ್ನು ಆಳ ಬೇಕೇ! ಎಂದು ಹೇಳಿ, ಅವನ ಕನಸುಗಳಿಗೋಸ್ಕರವೂ ಮಾತುಗಳಿಗೋಸ್ಕರವೂ ಅವನನ್ನು ಇ
೯ ನ್ನು ಹೆಚ್ಚಾಗಿ ಹಗೆ ಮಾಡಿದರು. ಮತ್ತು ಅವನು ಬೇರೆ ಕನಸು ಕಂಡು, ತನ್ನ ಸಹೋದರರಿಗೆ ತಿಳಿಸಿ ಹೇಳಿದ್ದೇನಂದರೆ—ಇಗೋ, ಇನ್ನೊಂದು ಕನಸನ್ನು ಕಂಡಿದ್ದೇನೆ. ಇಗೋ, ಸೂರ್ಯನೂ, ಚಂದ್ರನೂ, ಹನ್ನೊಂದು ನಕ್ಷತ್ರಗಳೂ ನನಗೆ ಅಡ್ಡ ಬಿದ್ದವು.
೧೦ ಅವನು ತನ್ನ ತಂದೆಗೂ ತನ್ನ ಸಹೋದರರಿಗೂ ಅದನ್ನು ತಿಳಿಸಿದಾಗ, ಅವನ ತಂದೆ ಅವನನ್ನು ಗದರಿಸಿ, ಅವನಿಗೆ ನೀನು ಕಂಡ ಈ ಕನಸು ಏನು? ನಾನೂ, ನಿನ್ನ ತಾಯೂ, ನಿನ್ನ ಸಹೋದರರೂ ನಿನಗೆ ನೆಲದಲ್ಲಿ ಅಡ್ಡ ಬೀಳುವದಕ್ಕೆ ಬರ ಬೇಕೇ! ಅಂದ
೧೧ ನು. ಆಗಲವನ ಸಹೋದರರು ಅವನಲ್ಲಿ ಹೊಟ್ಟೆಕಿಚ್ಚು ಪಟ್ಟರು; ಆದರೆ ಅವನ ತಂದೆ ಆ ಮಾತನ್ನು ಮನಸಿನಲ್ಲಿಟ್ಟು ಕೊಂಡನು.

೧೨ ಮತ್ತು ಅವನ ಸಹೋದರರು ಶಿಖೇಮಿನಲ್ಲಿ ತಮ್ಮ ತಂದೆಯ
೧೩ ಮಂದೆಯನ್ನು ಮೇಯಿಸುವದಕ್ಕೆ ಹೋದರು. ಆಗ ಇಸ್ರಯೇಲನು ಯೋಸೆಫನಿಗೆ—ನಿನ್ನ ಸಹೋದರರು ಶಿಖೇಮಿನಲ್ಲಿ ಮೇಯಿಸುತ್ತಾರಲ್ಲ! ಅವರ ಬಳಿಗೆ ನಿನ್ನನ್ನು ಕಳುಹಿಸುತ್ತೇನೆ,
೧೪ ಹೋಗು, ಅಂದನು. ಅವನು ಇಗೋ, ನಾನು ಇದ್ದೇನೆ, ಅಂದನು. ಅವನು ಅವನಿಗೆ—ಹೋಗಿ, ನಿನ್ನ ಸಹೋದರರ ಕ್ಷೇಮ ಸಮಾಚಾರವನ್ನೂ ಮಂದೆಗಳ ಕ್ಷೇಮ ಸಮಾಚಾರವನ್ನೂ ತಿಳಿಕೊಂಡು, ನನಗೆ ಉತ್ತರ ತಕ್ಕೊಂಡು ಬಾ, ಎಂದು ಹೇಳಿ, ಹೆಬ್ರೊನ್ ತಗ್ಗಿನಿಂದ ಕಳುಹಿಸಿದನು. ಅವನು ಶಿಖೇಮಿಗೆ ಬಂದನು.
೧೫ ಒಬ್ಬ ಮನುಷ್ಯನು ಅವನನ್ನು ಕಂಡು ಕೊಂಡಾಗ, ಇಗೋ, ಅವನು ಹೊಲದಲ್ಲಿ ಅಲೆಯುತ್ತಿದ್ದನು. ಆ ಮನುಷ್ಯನು ಅವನಿ
೧೬ ಗೆ—ನೀನು ಹುಡುಕುವದೇನೆಂದು ಕೇಳಿದಾಗ, ಅವನು—ನನ್ನ ಸಹೋದರರನ್ನು ಹುಡುಕುತ್ತೇನೆ; ಅವರು ಎಲ್ಲಿ ಮೇಯಿಸುತ್ತಾ
೧೭ ರೆಂದು, ದಯೆ ಮಾಡಿ ನನಗೆ ಹೇಳು, ಅಂದನು. ಆ ಮನುಷ್ಯನು—ಇಲ್ಲಿಂದ ಹೊರಟು ಹೋದರು; ಯಾಕಂದರೆ, ದೋಥಾನಿಗೆ ಹೋಗೋಣ ಎಂದು ಅವರು ಹೇಳಿದ್ದನ್ನು ಕೇಳಿದೆನು, ಅಂದನು. ಆಗ ಯೋಸೆಫನು ತನ್ನ ಸಹೋದರರ ಹಿಂದೆ ಹೋಗಿ, ದೋಥಾನಿನಲ್ಲಿ ಅವರನ್ನು ಕಂಡು ಕೊಂಡನು.

೧೮ ಅವರು ದೂರದಿಂದ ಅವನನ್ನು ನೋಡಿದಾಗ, ಅವನು ಅವರ ಸಮೀಪಕ್ಕೆ ಬರುವದಕ್ಕಿಂತ ಮುಂಚೆ, ಅವನನ್ನು ಕೊಂದು
೧೯ ಹಾಕ ಬೇಕೆಂದು, ಅವನಿಗೆ ವಿರೋಧವಾಗಿ ಆಲೋಚನೆ ಮಾಡಿ
೨೦ ಕೊಂಡರು. ಅವರು—ಅಗೋ, ಆ ಕನಸಿನವನು ಬರುತ್ತಾನೆ. ಈಗ ಬನ್ನಿರಿ; ಅವನನ್ನು ಕೊಂದು, ಆ ಕೂಣಿಗಳ ಬಂದರಲ್ಲಿ ಹಾಕಿ, ಕಾಡು ಮೃಗ ಅವನನ್ನು ತಿಂದು ಬಿಟ್ಟಿತೆಂದು, ಹೇಳುವ. ಆ ಮೇಲೆ ಅವನ ಕನಸುಗಳು ಏನಾಗುವವೋ! ನೋಡುವೆ
೨೧ ವು ಎಂದು, ತಮ್ಮಲ್ಲಿ ಅಂದು ಕೊಂಡರು. ಆದರೆ ರೂಬೆನನು ಅದನ್ನು ಕೇಳಿ, ಅವನನ್ನು ಅವರ ಕೈಗಳಿಗೆ ತಪ್ಪಿಸಿ, ಅವನ
೨೨ ಪ್ರಾಣ ಸಂಹಾರ ಮಾಡದೆ ಇರುವ, ಅಂದನು. ರೂಬೆನನು, ಅವನನ್ನು ಅವರ ಕೈಗೆ ತಪ್ಪಿಸಿ, ತನ್ನ ತಂದೆಗೆ ತಿರಿಗಿ ತರುವ ಹಾಗೆ, ಅವರಿಗೆ, ರಕ್ತ ಚೆಲ್ಲ ಬೇಡಿರಿ; ಕಾಡಿನಲ್ಲಿರುವ ಈ ಕೂಣಿಯಲ್ಲಿ ಅವನನ್ನು ಹಾಕಿರಿ. ಆದರೆ ಅವನ ಮೇಲೆ ಕೈ ಹಾಕ ಬೇಡಿರಿ, ಅಂದನು.

೨೩ ಯೋಸೆಫನು ತನ್ನ ಸಹೋದರರ ಬಳಿಗೆ ಬಂದಾಗ, ಆದದ್ದೇನಂದರೆ, ಅವರು ಯೋಸೆಫನ ಅಂಗಿಯನ್ನು, ಅವನ ಮೇಲಿ
೨೪ ದ್ದ ಚಿತ್ರವರ್ಣದ ಅಂಗಿಯನ್ನು ತೆಗೆದು ಬಿಟ್ಟು, ಅವನನ್ನು ತಕ್ಕೊಂಡು, ಕೂಣಿಯಲ್ಲಿ ಹಾಕಿದರು. ಆ ಕೂಣಿಯು ನೀರಿಲ್ಲದೆ
೨೫ ಬರಿದಾಗಿತ್ತು. ಮತ್ತು ಅವರು ಊಟಕ್ಕೆ ಕೂತು ಕೊಂಡಾಗ, ತಮ್ಮ ಕಣ್ಣುಗಳನ್ನೆತ್ತಿ ನೋಡಲಾಗಿ, ಅಗೋ, ಇಷ್ಮಯೇಲ್ಯರ ಗುಂಪು ಗಿಲ್ಯಾದಿನಿಂದ ಬರುತ್ತಿತ್ತು; ಅವರ ಒಂಟೆಗಳು ಸಂಬಾರವನ್ನೂ, ಕೈಲವನ್ನೂ, ಲೋಬಾನವನ್ನೂ ಹೊರುತ್ತಿದ್ದವು. ಅವರು ಅ
೨೬ ದನ್ನು ಐಗುಪ್ತಕ್ಕೆ ತಕ್ಕೊಂಡು ಹೋಗುತ್ತಿದ್ದರು. ಆಗ ಯೆಹೂದನು ತನ್ನ ಸಹೋದರರಿಗೆ—ನಾವು ನಮ್ಮ ಸಹೋದರನನ್ನು ಕೊಂದು ಹಾಕಿ, ಅವನ ರಕ್ತವನ್ನು ಮರೆ ಮಾಡುವದರಲ್ಲಿ ಏನು
೨೭ ಪ್ರಯೋಜನ? ಬನ್ನಿರಿ, ಇಷ್ಮಯೇಲ್ಯರಿಗೆ ಅವನನ್ನು ಮಾರೋಣ; ನಮ್ಮ ಕೈ ಅವನಿಗೆ ವಿರೋಧವಾಗಿರ ಬಾರದು. ಯಾಕಂದರೆ ಅವನು ನಮ್ಮ ಸಹೋದರನೂ ನಮ್ಮ ಮಾಂಸವೂ ಆಗಿದ್ದಾನೆ,
೨೮ ಅಂದನು. ಅವನ ಸಹೋದರರು ಆ ಮಾತನ್ನು ಕೇಳಿದರು. ಈ ಮೇರೆಗೆ ಮಿದ್ಯಾನ್ಯರಾದ ವರ್ತಕರು ಹಾದು ಹೋಗುತ್ತಿರುವಾಗ, ಅವರು ಯೋಸೆಫನನ್ನು ಕೂಣಿಯೊಳಗಿಂದ ಮೇಲೆ ಎಳೆದು,



ಯೋಸೆಫನನ್ನು ಇಷ್ಮಯೇಲ್ಯರಿಗೆ ಇಪ್ಪತ್ತು ರುಪಾಯಿಗಳಿಗೆ ಮಾರಿದರು. ಅವರು ಯೋಸೆಫನನ್ನು ಐಗುಪ್ತಕ್ಕೆ ತಕ್ಕೊಂಡು
೨೯ ಹೋದರು. ರೂಬೆನನು ಕೂಣಿಗೆ ತಿರಿಗಿ ಬಂದಾಗ, ಯೋಸೆಫನು ಕೂಣಿಯಲ್ಲಿ ಇಲ್ಲದ ಕಾರಣ, ತನ್ನ ವಸ್ತ್ರಗಳನ್ನು ಹರಕೊಂಡು,
೩೦ ತನ್ನ ಸಹೋದರರ ಬಳಿಗೆ ತಿರಿಗಿ ಹೋಗಿ—ಆ ಹುಡುಗನಿಲ್ಲ; ಹಾಗಾದರೆ ನಾನು ಎಲ್ಲಿಗೆ ಹೋಗಲಿ! ಅಂದನು.

೩೧ ಆಗ ಅವರು ಯೋಸೆಫನ ಅಂಗಿಯನ್ನು ತಕ್ಕೊಂಡು, ಮೇಕೆಯ ಮರಿಯನ್ನು ಕೊಯಿದು, ಆ ಅಂಗಿಯನ್ನು ರಕ್ತದಲ್ಲಿ ಅದ್ದಿ,
೩೨ ಆ ಚಿತ್ರವರ್ಣದ ಅಂಗಿಯನ್ನು ಕಳುಹಿಸಿದರು. ತಮ್ಮ ತಂದೆಗೆ ತಂದು, ಇದೇ ನಮಗೆ ಸಿಕ್ಕಿತು; ಅದು ನಿನ್ನ ಮಗನ ಅಂಗಿ
33 ಯೋ! ಅಲ್ಲವೋ! ನೋಡು, ಎಂದು ಹೇಳಿದರು. ಅವನು ಅದನ್ನು ಗುರುತು ಹಿಡಿದು, ನನ್ನ ಮಗನ ಅಂಗಿ ಹಾಹುದು; ದುಷ್ಟ ಮೃಗವು ಅವನನ್ನು ತಿಂದು ಬಿಟ್ಟಿತು; ಯೋಸೆಫನು ಸಂದೇಹ
೩೪ ವಿಲ್ಲದೆ ಚೀಳ್ಳಲ್ಪಟ್ಟಿದ್ದಾನೆ, ಅಂದನು. ಆಗ ಯಾಕೋಬನು ತನ್ನ ವಸ್ತ್ರಗಳನ್ನು ಹರ ಕೊಂಡು, ತನ್ನ ನಡುವಿಗೆ ಗೋಣಿಯನ್ನು ಕಟ್ಟಿ ಕೊಂಡು, ತನ್ನ ಮಗನಿಗೋಸ್ಕರ ಬಹು ದಿವಸ ರು
೩೫ ಳ್ಳು ಪಟ್ಟನು. ಅವನ ಕುಮಾರರೆಲ್ಲರೂ ಕುಮಾರ್ತೆಗಳೆಲ್ಲರೂ ಅವನನ್ನು ಆದರಿಸುವದಕ್ಕೆ ನಿಂತು ಕೊಂಡಾಗ, ಅವನು ಆದರಣೆ ಹೊಂದಲೊಲ್ಲದೆ—ನನ್ನ ಮಗನ ಬಳಿಗೆ ಪಾತಾಳಕ್ಕೆ ದುಃಖದಿಂದಲೇ ಇಳಿದು ಹೋಗುವೆನು, ಅಂದನು. ಹೀಗೆ ಅವನ ತಂದೆ ಅವನಿಗೋಸ್ಕರ ಅತ್ತನು.

೩೬ ಇದಲ್ಲದೆ ಆ ಮಿದ್ಯಾನ್ಯರು ಅವನನ್ನು ಐಗುಪ್ತಕ್ಕೆ ನಪುಂಸಕನಾದಂಥ, ರಾಣುವೆಯವರ ಅಧಿಪತಿಯಾದಂಥ ಪೊಟಿಫರನಿಗೆ ಮಾರಿದರು.

## ೩೮. ಸಂಧಿ.

೧ ಆ ಕಾಲದಲ್ಲಿ ಆದದ್ದೇನಂದರೆ, ಯೆಹೂದನು ತನ್ನ ಸಹೋದರರ ಬಳಿಯಿಂದ ಇಳಿದು ಹೋಗಿ, ಹೀರನೆಂಬ ಬಬ್ಬ ಅದುಲಾ
೨ ಮ್ಯನ ಬಳಿಯ ಸೇರಿದನು. ಅಲ್ಲಿ ಯೆಹೂದನು ಶೂವನೆಂಬ ಬಬ್ಬ ಕನಾನ್ಯನ ಮಗಳನ್ನು ನೋಡಿ, ಅವಳನ್ನು ತಕ್ಕೊಂಡು,
3 ಅವಳ ಬಳಿಗೆ ಪ್ರವೇಶಿಸಿದನು. ಅವಳು ಬಸುರಾಗಿ ಮಗನನ್ನು ಪೆ
೪ ತ್ತಳು; ಅವನು ಅವನಿಗೆ ಏರನೆಂಬ ಹೆಸರಿಟ್ಟನು. ಅವಳು ತಿರಿಗಿ ಬಸುರಾಗಿ ಮಗನನ್ನು ಹೆತ್ತು, ಅವನಿಗೆ ಓನಾನನೆಂಬ ಹೆಸರಿಟ್ಟಳು.
೫ ಮತ್ತೊಂದು ಸಾರಿ ಅವಳು ಮಗನನ್ನು ಹೆತ್ತು, ಅವನಿಗೆ ಚೇಲಹನೆಂಬ ಹೆಸರಿಟ್ಟಳು. ಅವಳು ಇವನನ್ನು ಹೆತ್ತಾಗ, ಅವನು ಕೆಜೀಬಿನಲ್ಲಿ ಇದ್ದನು.

೬ ತರುವಾಯ ಯೆಹೂದನು ತನ್ನ ಜ್ಯೇಷ್ಠನಾದ ಏರನಿಗೆ ಹೆಂ
೭ ಡತಿಯನ್ನು ತಕ್ಕೊಂಡನು; ಅವಳ ಹೆಸರು ತಾಮರಳು. ಆದರೆ ಯೆಹೂದನ ಜ್ಯೇಷ್ಠನಾದ ಏರನು ಕರ್ತನ ದೃಷ್ಟಿಯಲ್ಲಿ ಕೆಟ್ಟವನಾಗಿ ಇದ್ದದರಿಂದ, ಕರ್ತನು ಅವನನ್ನು ಸಾಯಿಸಿದನು.
೮ ಆಗ ಯೆಹೂದನು ಓನಾನನಿಗೆ ನಿನ್ನ ಸಹೋದರನ ಹೆಂಡತಿಯ ಬಳಿಗೆ ಹೋಗಿ, ಅವಳನ್ನು ಮದುವೆ ಮಾಡಿ ಕೊಂಡು, ನಿನ್ನ ಅ
೯ ಣ್ಣನಿಗೆ ಬೀಜವನ್ನು ಉಂಟು ಮಾಡು, ಅಂದನು. ಆದರೆ ಓನಾನನು ಆ ಬೀಜ ತನ್ನದಾಗುವದಿಲ್ಲವೆಂದು ತಿಳಿಕೊಂಡು, ತನ್ನ ಅಣ್ಣನ ಹೆಂಡತಿಯ ಬಳಿಗೆ ಹೋದಾಗ, ತನ್ನ ಅಣ್ಣನಿಗೆ ಬೀಜವ
೧೦ ನ್ನು ಕೊಡದ ಹಾಗೆ, ಭೂಮಿಗೆ ಚೆಲ್ಲಿ ಬಿಟ್ಟನು. ಅವನು ಮಾಡಿದ್ದ ಕರ್ತನ ದೃಷ್ಟಿಯಲ್ಲಿ ಕೆಟ್ಟದ್ದಾಗಿದ್ದದರಿಂದ, ಇವನನ್ನೂ
೧೧ ಸಹ ಸಾಯಿಸಿದನು. ಆಗ ಯೆಹೂದನು ತನ್ನ ಸೊಸೆಯಾದ ತಾಮರಳಿಗೆ, ನನ್ನ ಮಗನಾದ ಚೇಲಹನು ದೊಡ್ಡವನಾಗುವ ಪರ್ಯಂತರ ವಿಧವೆಯಾಗಿದ್ದು, ನಿನ್ನ ತಂದೆಯ ಮನೆಯಲ್ಲಿರು, ಅಂದನು. ಯಾಕಂದರೆ ಇವನು ಸಹ ತನ್ನ ಸಹೋದರರ ಹಾಗೆ ಸತ್ತಾನೆಂದು ಅಂದು ಕೊಂಡನು. ಹಾಗೆ ತಾಮರಳು ಹೋಗಿ, ತನ್ನ ತಂದೆಯ ಮನೆಯಲ್ಲಿ ವಾಸ ಮಾಡಿದಳು.

೧೨ ಬಹಳ ದಿವಸಗಳು ಆದ ಮೇಲೆ ಯೆಹೂದನ ಹೆಂಡತಿಯಾಗಿದ್ದ ಶೂವನ ಮಗಳು ಸತ್ತು ಹೋದಳು. ಯೆಹೂದನು ಆದರಣೆ ಹೊಂದಿದ ಮೇಲೆ ತನ್ನ ಸ್ನೇಹಿತನಾದ ಅದುಲಾಮ್ಯನಾದ ಹೀರನ ಸಂಗಡ ತನ್ನ ಕುರಿಗಳನ್ನು ಉಣ್ಣೆ ಕತ್ತರಿಸುವವರ ಬಳಿಗೆ ತಿ
೧೩ ಮ್ನಾತಿಗೆ ಹೋದನು. ತಾಮರಳಿಗೆ—ಇಗೋ, ನಿನ್ನ ಮಾವನು ಕುರಿಗಳನ್ನು ಕತ್ತರಿಸುವದಕ್ಕೆ ತಿಮ್ನಾತಿಗೆ ಹೋಗುತ್ತಾನೆಂದು ತಿಳಿ
೧೪ ಸಲ್ಪಟ್ಟಾಗ, ಅವಳು ವಿಧವೆಯ ವಸ್ತ್ರಗಳನ್ನು ತೆಗೆದಿಟ್ಟು, ಮುಸುಕು ಹಾಕಿ ಮುಚ್ಚಿ ಕೊಂಡು, ತಿಮ್ನಾತಿನ ಮಾರ್ಗದಲ್ಲಿರುವ ಎನಾಯಿಮ್ ಬಾಗಲಲ್ಲಿ ಕೂತು ಕೊಂಡಳು; ಯಾಕಂದರೆ ಚೇಲಹನು ದೊಡ್ಡವನಾಗಿದ್ದರೂ, ತಾನು ಅವನಿಗೆ ಹೆಂಡತಿಯಾಗಿ
೧೫ ಕೊಡಲ್ಪಡಲಿಲ್ಲವೆಂದು ನೋಡಿದಳು. ಯೆಹೂದನು ಅವಳನ್ನು ನೋಡಿದಾಗ, ಅವಳು ಮುಖವನ್ನು ಮುಚ್ಚಿ ಕೊಂಡಿದ್ದದರಿಂದ, ಅ
೧೬ ವಳು ಸೂಳೆಯೆಂದು ನೆನಸಿ ಕೊಂಡು, ಮಾರ್ಗದ ಬಳಿಯಲ್ಲಿ ಅವಳ ಬಳಿಗೆ ತಿರುಗಿ ಕೊಂಡು, ನನ್ನನ್ನು ನಿನ್ನ ಬಳಿಗೆ ಬರ ಗೊಡಿಸು, ಅಂದನು. ಯಾಕಂದರೆ ಅವಳು ತನ್ನ ಸೊಸೆಯೆಂದು ಅವನಿಗೆ ತಿಳಿಯಲಿಲ್ಲ. ಅವಳು—ನೀನು ನನ್ನ ಬಳಿಗೆ ಬಂದರೆ, ನ
೧೭ ನಗೆ ಏನು ಕೊಡುತ್ತೀ? ಅಂದಳು. ಅವನು ಮಂದೆಯಿಂದ ನಿನಗೆ ಮೇಕೆ ಮರಿಯನ್ನು ಕಳುಹಿಸುತ್ತೇನೆ, ಅಂದನು. ಅವಳು ನೀನು
೧೮ ಕಳುಹಿಸುವ ಪರ್ಯಂತರ ಈಡು ಕೊಟ್ಟಿರೆ ಸರಿ, ಅಂದಳು. ಅವನು ನಿನಗೆ ಕೊಡ ತಕ್ಕ ಈಡು ಏನು! ಅಂದಾಗ, ಅವಳು, ನಿನ್ನ ಮುದ್ರೆಯೂ, ನಿನ್ನ ಮುದ್ರೆ ದಾರವೂ, ನಿನ್ನ ಕೈಯಲ್ಲಿರುವ ಕೋಲೂ, ಅಂದಳು. ಅವನು ಅವುಗಳನ್ನು ಅವಳಿಗೆ ಕೊಟ್ಟು,
೧೯ ಅವಳ ಬಳಿಗೆ ಹೋದನು. ಅವಳು ಅವನಿಂದ ಬಸುರಾದಳು. ಆ ಮೇಲೆ ಅವಳು ಎದ್ದು ಹೋಗಿ, ತನ್ನ ಮುಸುಕು ತೆಗೆದಿಟ್ಟು, ತನ್ನ
೨೦ ವಿಧವೆಯ ವಸ್ತ್ರಗಳನ್ನು ಹಾಕಿ ಕೊಂಡಳು. ಯೆಹೂದನು ಆ ಸ್ತ್ರೀಯ ಕೈಯಿಂದ ಈಡು ಈಸಿ ಕೊಳ್ಳುವದಕ್ಕೆ ತನ್ನ ಸ್ನೇಹಿತನಾದ ಅದುಲಾಮ್ಯನ ಕೈಯಿಂದ ಮೇಕೆಯ ಮರಿ ಕಳುಹಿಸಿದಾ
೨೧ ಗ, ಅವಳು ಶಿಕ್ಕಳಿಲ್ಲ. ಅವಳ ಊರಿನ ಮನುಷ್ಯರನ್ನು ಎನಾಯಿಮಿನಲ್ಲಿ ಮಾರ್ಗದ ಬಳಿಯಲ್ಲಿದ್ದ ಸೂಳೆ ಎಲ್ಲಿ? ಎಂದು ಕೇಳಿ
೨೨ ದಾಗ, ಅವರು ಇಲ್ಲಿ ಸೂಳೆ ಇರಲಿಲ್ಲ, ಅಂದರು. ಆಗಲವನು ಯೆಹೂದನ ಬಳಿಗೆ ತಿರಿಗಿ ಬಂದು, ಅವಳು ಶಿಕ್ಕಳಿಲ್ಲ; ಇದಲ್ಲದೆ ಆ ಸ್ಥಳದ ಮನುಷ್ಯರು ಅಲ್ಲಿ ಸೂಳೆ ಇರಲಿಲ್ಲ ಎಂದು ಹೇಳಿದರು,
೨೩ ಅಂದನು. ಆಗ ಯೆಹೂದನು—ನಾವು ಹಾಸ್ಯಕ್ಕೊಳಗಾಗದ ಹಾಗೆ, ಅವಳು ತಕ್ಕೊಂಡು ಹೋಗಲಿ. ಇಗೋ, ಈ ಮೇಕೆ ಮರಿ ಕಳುಹಿಸಿದೆನು; ಆದರೆ ಅವಳು ನಿನಗೆ ಶಿಕ್ಕಳಿಲ್ಲ, ಅಂದನು.

೨೪ ಹೆಚ್ಚು ಕಡಿಮೆ ಮೂರು ತಿಂಗಳು ಆದ ಮೇಲೆ, ಆದದ್ದೇನಂದರೆ, ಯೆಹೂದನಿಗೆ—ನಿನ್ನ ಸೊಸೆಯಾದ ತಾಮರಳು ಜಾರತ್ವ

ಮಾಡಿದ್ದಾಳೆ; ಇಗೋ, ಜಾರತ್ವದಿಂದ ಬಸುರಾಗಿದ್ದಾಳೆ ಎಂದು,
ತಿಳಿಸಲ್ಪಟ್ಟಿತು. ಯೆಹೂದನು—ಅವಳನ್ನು ಹೊರಗೆ ತನ್ನಿರಿ; ಅ
ವಳು ಸುಡಲ್ಪತಕ್ಕಿ, ಅಂದನು. ಅವಳು ಹೊರಗೆ ತರಲ್ಪಡುವಷ್ಟರ
೨೫ ಲ್ಲಿ ತನ್ನ ಮಾವನಿಗೆ—ಇವು ಯಾವನವುಗಳೋ, ಆ ಮನುಷ್ಯನಿಂ
ದತೇ ನಾನು ಬಸುರಾಗಿದ್ದೇನೆ; ಹಾಗಾದರೆ ಈ ಮುದ್ರಿಯೂ ಮು
ದ್ರೆದಾರವೂ ಕೋಲೂ ಯಾವನವುಗಳೆಂದು, ದಯೆ ಮಾಡಿ ತಿ
೨೬ ಳುಕೋ ಎಂದು, ಹೇಳಿ ಕಳುಹಿಸಿದಳು. ಆಗ ಯೆಹೂದನು ತಿ
ಳಿದು ಕೊಂಡು—ಅವಳು ನನಗಿಂತ ನೀತಿವಂತಳು; ಯಾಕಂದರೆ
ನಾನು ನನ್ನ ಮಗನಾದ ಷೇಲಹನಿಗೆ ಅವಳನ್ನು ಕೊಡಲಿಲ್ಲ, ಅಂ
ದನು. ಆದರೆ ಅವನು ಇನ್ನೂ ಅವಳನ್ನು ಅರಿಯಲಿಲ್ಲ.

೨೭ ಅವಳು ಹೆರುವ ಸಮಯದಲ್ಲಿ, ಅಗೋ, ಅವಳ ಮಕ್ಕಳು ಅ
ವಳ ಹೊಟ್ಟೆಯಲ್ಲಿದ್ದರು. ಅವಳು ಹೆತ್ತಾಗ, ಬಬ್ಬನು ಕೈಚಾಚಿ
೨೮ ದನು. ಸೂಲಗಿತ್ತಿ ಅದನ್ನು ತಕ್ಕೊಂಡು, ಅವನ ಕೈಗೆ ಲಾಲಿ ವ
ರ್ಣದ ನೂಲು ಕಟ್ಟಿ, ಇವನು ಮೊದಲು ಹೊರಗೆ ಬಂದನು,
೨೯ ಅಂದಳು. ಅವನು ತನ್ನ ಕೈಯನ್ನು ಹಿಂದಕ್ಕೆ ಎಳೆದಾಗ, ಅ
ಗೋ, ಅವನ ಸಹೋದರನು ಹೊರಗೆ ಬಂದನು. ಆಗ ಅವಳು—
ನೀನು ಹರುದು ಬಿಕುವದೇನು? ಹರಕು ನಿನ್ನ ಮೇಲಿರಲಿ ಎಂದು
೩೦ ಹೇಳಿದಳು. ಹಾಗೆ ಅವನಿಗೆ ಪೇರೆಹನೆಂದು ಹೆಸರಾಯಿತು. ಆ
ಮೇಲೆ ತನ್ನ ಕೈಯಲ್ಲಿ ಲಾಲಿ ನೂಲುಂಟಾದ ಅವನ ಸಹೋದ
ರನು ಹೊರಗೆ ಬಂದನು. ಅವನಿಗೆ ಜೇರಹನೆಂದು ಹೆಸರಾಯಿತು.

## ೩೯. ಸಂಧಿ.

೧ ಆದರೆ ಯೋಸೆಫನು ಐಗುಪ್ತಕ್ಕೆ ಪೈಯಲ್ಪಟ್ಟನು. ಅವನ
ನ್ನು ಅಲ್ಲಿಗೆ ಪೈದ ಇಷ್ಮಯೇಲ್ಯರ ಕೈಯಿಂದ ಐಗುಪ್ತ್ಯನೂ,
ರಾಣುವೆಯವರ ಅಧಿಪತಿಯೂ, ಫಕೋನನ ನಪುಂಸಕನೂ ಆಗಿ
೨ ರುವ ಪೊಟಿಫರನು ಅವನನ್ನು ಕೊಂಡು ಕೊಂಡನು. ಆದರೆ ಕ
ರ್ತನು ಯೋಸೆಫನ ಸಂಗಡ ಇದ್ದದರಿಂದ, ಅವನು ಸಫಲ ಹೊಂ
ದುವ ಮನುಷ್ಯನಾಗಿದ್ದನು. ಅವನು ಐಗುಪ್ತ್ಯನಾದ ತನ್ನ ಯಜ
೩ ಮಾನನ ಮನೆಯಲ್ಲಿರಲಾಗಿ, ಅವನ ಯಜಮಾನನು, ಕರ್ತನು ಅ
ವನ ಸಂಗಡ ಇದ್ದಾನೆಂದೂ, ಅವನು ಮಾಡುವದನ್ನೆಲ್ಲಾ ಕರ್ತನು
ಅವನ ಕೈಯಿಂದ ಸಫಲವಾಗ ಮಾಡುತ್ತಾನೆಂದೂ, ನೋಡಿದನು.
೪ ಆದದರಿಂದ ಯೋಸೆಫನು ಅವನ ದೃಷ್ಟಿಯಲ್ಲಿ ದಯೆ ಹೊಂದಿ,
ಅವನಿಗೆ ಸೇವಕನಾದನು. ಅವನು ಅವನನ್ನು ತನ್ನ ಮನೆಗೆ ವಿಚಾ
ರಣೆ ಕರ್ತನಾಗ ನೇಮಿಸಿ, ತನಗಿದ್ದದ್ದನ್ನೆಲ್ಲಾ ಅವನ ಕೈಯ
೫ ಲ್ಲಿ ಒಪ್ಪಿಸಿದನು. ಅವನನ್ನು ಮನೆಗೂ ಸಮಸ್ತ ಆಸ್ತಿಗೂ ವಿಚಾ
ರಣೆ ಕರ್ತನಾಗ ನೇಮಿಸಿದಂದಿನಿಂದ ಆದದ್ದೇನಂದರೆ, ಕರ್ತನು
ಆ ಐಗುಪ್ತ್ಯನ ಮನೆಯನ್ನು ಯೋಸೆಫನಿಗೋಸ್ಕರ ಆಶೀರ್ವದಿ
ಸಿದನು. ಮನೆಯಲ್ಲಿಯೂ ಹೊಲದಲ್ಲಿಯೂ ಅವನಿಗಿದ್ದ ಎಲ್ಲಾ
೬ ದರ ಮೇಲೆ ಕರ್ತನ ಆಶೀರ್ವಾದವಿತ್ತು. ಹೀಗಿರುವದರಿಂದ ಅ
ವನು ತನಗಿದ್ದದ್ದನ್ನೆಲ್ಲಾ ಯೋಸೆಫನ ಕೈಯಲ್ಲಿ ಒಪ್ಪಿಸಿ ಬಿಟ್ಟು,
ತಾನು ಉಣ್ಣುವ ಕೊಟ್ಟಿಯ ಹೊರ್ತು ಮತ್ತೇನು ತಿಳುಕೊಳ್ಳ
ಲಿಲ್ಲ. ಆದರೆ ಯೋಸೆಫನು ಬಳ್ಳೆ ರೂಪದವನೂ ಸೌಂದ
ರ್ಯವಾದ ಆಕಾರದವನೂ ಆಗಿದ್ದನು.

೭ ಇವುಗಳಾದ ತರುವಾಯ ಆದದ್ದೇನಂದರೆ, ಅವನ ಯಜಮಾ
ನನ ಹೆಂಡತಿ ಯೋಸೆಫನ ಮೇಲೆ ಕಣ್ಣಿಟ್ಟು, ನನ್ನ ಸಂಗಡ ಮಲ
೮ ಗು, ಅಂದಳು. ಆದರೆ ಅವನು ಒಲ್ಲದೆ, ತನ್ನ ಯಜಮಾನನ ಹೆ
ಂಡತಿಗೆ ಹೇಳಿದ್ದೇನಂದರೆ—ಇಗೋ, ನನ್ನ ಯಜಮಾನನು ಮನೆ
ಯಲ್ಲಿರುವದನ್ನು ತಿಳುಕೊಳ್ಳದೆ, ತನಗಿದ್ದದ್ದನ್ನೆಲ್ಲಾ ನನ್ನ ಕೈ
೯ ಯಲ್ಲಿ ಕೊಟ್ಟಿದ್ದಾನೆ. ಈ ಮನೆಯಲ್ಲಿ ನನಗಿಂತ ದೊಡ್ಡವನಿಲ್ಲ,
ನೀನು ಅವನ ಹೆಂಡತಿಯಾಗಿರುವದರಿಂದ ನಿನ್ನನ್ನಲ್ಲದೆ, ಅವನು
ಮತ್ತೇನೂ ನನಗೆ ಮರೆ ಮಾತಲಿಲ್ಲ. ಹಾಗಾದರೆ, ನಾನು ಈ ಹೊ
ಡ್ಡ ಕೇಡನ್ನು ಮಾಡಿ, ದೇವರಿಗೆ ಪಾಪ ಮಾಡುವದು ಹ್ಯಾಗೆ!
೧೦ ಅವಳು ದಿನಾಲೂ ಯೋಸೆಫನ ಸಂಗಡ ಮಾತಾಡಲಾಗಿ, ಅವನು
ಅವಳ ಬಳಿಯಲ್ಲಿ ಮಲಗುವದಕ್ಕೂ, ಅವಳ ಹತ್ತರ ಇರುವದ
೧೧ ಕ್ಕೂ ಅವಳನ್ನು ಕೇಳದೆ ಇರುವಾಗ, ಆ ಸಮಯದಲ್ಲಿ ಆದದ್ದೇ
ನಂದರೆ—

ಅವನು ತನ್ನ ಕೆಲಸ ಮಾಡುವದಕ್ಕೆ ಮನೆಯಲ್ಲಿ ಪ್ರವೇಶಿಸಿ
ದಾಗ, ಮನೆಯವರಲ್ಲಿ ಯಾವನಾದರೂ ಮನೆಯ ಆ ಕಡೆಯಲ್ಲಿ
೧೨ ಇರಲಿಲ್ಲ. ಆಗ ಅವಳು ಅವನ ವಸ್ತ್ರವನ್ನು ಹಿಡು ಕೊಂಡು, ನ
ನ್ನ ಸಂಗಡ ಮಲಗು, ಅಂದಳು. ಆದರೆ ಅವನು ತನ್ನ ವಸ್ತ್ರವ
ನ್ನು ಅವಳ ಕೈಯಲ್ಲಿ ಬಿಟ್ಟು ಬಿಟ್ಟು, ಹೊರಗೆ ಓಡಿ ಹೋದನು.
೧೩ ಅವನು ವಸ್ತ್ರವನ್ನು ತನ್ನ ಕೈಯಲ್ಲಿ ಬಿಟ್ಟು ಬಿಟ್ಟದ್ದನ್ನೂ,
೧೪ ಹೊರಗೆ ಓಡಿ ಹೋದದ್ದನ್ನೂ ಅವಳು ನೋಡಿದಾಗ, ತನ್ನ ಮ
ನೆಯ ಮನುಷ್ಯರನ್ನು ಕರೆದು, ಅವರಿಗೆ ಹೇಳಿದ್ದೇನಂದರೆ—ನೋ
ಡಿರಿ, ಅವನು ನಮಗೆ ಹಾಸ್ಯ ಮಾಡುವದಕ್ಕೆ ಇಬ್ರಿಯನಾದ ಮ
ನುಷ್ಯನನ್ನು ನಮಗೆ ತಂದಿದ್ದಾನೆ. ಅವನು ನನ್ನ ಸಂಗಡ ಮಲ
ಗುವದಕ್ಕೆ ನನ್ನ ಬಳಿಗೆ ಬಂದನು. ಆದರೆ ನಾನು ದೊಡ್ಡ ಶಬ್ದ
೧೫ ದಿಂದ ಕೂಗಿದೆನು. ನಾನು ನನ್ನ ಶಬ್ದವನ್ನೆತ್ತಿ ಕೂಗುವದನ್ನು ಅ
ವನು ಕೇಳಿದಾಗ, ತನ್ನ ವಸ್ತ್ರವನ್ನು ನನ್ನ ಬಳಿಯಲ್ಲಿ ಬಿಟ್ಟು, ಹೊ
೧೬ ರಗೆ ಓಡಿ ಹೋದನು. ಯಜಮಾನನು ಮನೆಗೆ ಬರುವ ಪ
ರ್ಯಂತರ ಅವಳು ಅವನ ವಸ್ತ್ರವನ್ನು ತನ್ನ ಬಳಿಯಲ್ಲಿ ಇಟ್ಟು
೧೭ ಕೊಂಡಳು. ಮತ್ತು ಅವನಿಗೆ ಅದೇ ಮಾತು ಹೇಳಿದಳು. ಏನಂ
ದರೆ—ನೀನು ನಮ್ಮ ಬಳಿಗೆ ತಂದ ಇಬ್ರಿಯನಾದ ದಾಸನು ನನಗೆ
೧೮ ಹಾಸ್ಯ ಮಾಡುವದಕ್ಕೆ ನನ್ನ ಬಳಿಗೆ ಬಂದನು. ಆದರೆ ನಾನು ನ
ನ್ನ ಶಬ್ದವನ್ನೆತ್ತಿ ಕೂಗಿದಾಗ, ಅವನು ತನ್ನ ವಸ್ತ್ರವನ್ನು ನನ್ನ
೧೯ ಬಳಿಯಲ್ಲಿ ಬಿಟ್ಟು, ಹೊರಗೆ ಓಡಿ ಹೋದನು. ನಿನ್ನ ದಾಸನು
ಹೀಗೆ ನನಗೆ ಮಾಡಿದನೆಂಬದಾಗಿ, ಅವಳು ತನಗೆ ಹೇಳಿದ ತನ್ನ
ಹೆಂಡತಿಯ ಮಾತುಗಳನ್ನು ಯಜಮಾನನು ಕೇಳಿದಾಗ, ಅವನ
೨೦ ಕೋಪ ಉರಿಯಿತು. ಆಗ ಯೋಸೆಫನ ಯಜಮಾನನು ಅವನ
ನ್ನು ತಕ್ಕೊಂಡು, ಅರಸನ ಶೆಕೆಯವರು ಕಟ್ಟಲ್ಪಟ್ಟಿರುವ ಶೆಕೆಮ
ನೆಯಲ್ಲಿ ಹಾಕಿದನು. ಅಲ್ಲಿ ಅವನು ಶೆಕೆಮನೆಯಲ್ಲಿ ಇದ್ದನು.

೨೧ ಆದರೆ ಕರ್ತನು ಯೋಸೆಫನ ಸಂಗಡ ಇದ್ದು, ಅವನ ಮೇಲೆ
ಕೃಪೆ ಇಟ್ಟು, ಶೆಕೆ ಮನೆಯ ಯಜಮಾನನ ಮುಂದೆ ಅವನಿಗೆ ದ
೨೨ ಯಾಸುವ ಹಾಗೆ ಮಾಡಿದನು. ಹೀಗಿರುವದರಿಂದ ಶೆಕೆಯ ಯ
ಜಮಾನನು ಶೆಕೆಮನೆಯಲ್ಲಿ ಕಟ್ಟಿ ಹಾಕಿರುವವಕೆಲ್ಲರನ್ನು ಯೋ
ಸೆಫನ ಕೈಯಲ್ಲಿ ಕೊಟ್ಟನು. ಅವರು ಅಲ್ಲಿ ಮಾಡುವದನ್ನೆಲ್ಲಾ
೨೩ ಅವನೇ ಮಾಡಿಸುವವನಾಗಿದ್ದನು. ಕರ್ತನು ಅವನ ಸಂಗಡ ಇ
ದ್ದದರಿಂದಲೂ, ಅವನು ಮಾಡುವದನ್ನು ಕರ್ತನು ಸಫಲವಾಗ
ಮಾಡಿದ್ದರಿಂದಲೂ, ಶೆಕೆ ಮನೆಯ ಯಜಮಾನನು ಅವನ ಕೈ
ಯಲ್ಲಿದ್ದ ಯಾವದನ್ನಾದರೂ ನೋಡದೆ ಇದ್ದನು.



## ೪೦. ಸಂಧಿ.

೧ ಇವುಗಳಾದ ಮೇಲೆ ಐಗುಪ್ತದ ಅರಸನ ಪಾನದಾಯಕನೂ
ಕೊಟ್ಟಿಗಾರನೂ ಐಗುಪ್ತದ ಅರಸನಾದ ತಮ್ಮ ಯಜಮಾನನಿಗೆ
೨ ಪಾಪ ಮಾಡಿದರು. ಆಗ ಫಕೋನನು ಪಾನದಾಯಕರಲ್ಲಿ
ಮುಖ್ಯಸ್ಥನೂ ಕೊಟ್ಟಿಗಾರರಲ್ಲಿ ಮುಖ್ಯಸ್ಥನೂ ಆಗಿರುವ ತನ್ನ
೩ ಇಬ್ಬರು ನಪುಂಸಕರ ಮೇಲೆ ಕೆಟ್ಟು ಮಾಡಿ, ಅವರನ್ನು ರಾಣು
ವೆಯವರ ಅಧಿಪತಿಯ ಮನೆಯಲ್ಲಿ, ಶೆಕೆಮನೆಯಲ್ಲಿ, ಯೋಸೆಫ
೪ ನು ಕಟ್ಟಲ್ಪಟ್ಟಿ ಸ್ಥಳದಲ್ಲಿ ಕಾವಲಿಯಾಗಿ ಇಟ್ಟನು. ರಾಣುವೆ
ಯವರ ಅಧಿಪತಿಯು ಯೋಸೆಫನಿಗೆ ಅವರ ವಿಚಾರವನ್ನು ಕೊ
ಟ್ಟದರಿಂದ, ಅವನು ಅವರಿಗೆ ಸೇವೆ ಮಾಡುತ್ತಿದ್ದನು; ಅವರು ಕೆ
ಲವು ದಿವಸ ಕಾವಲಿಯಲ್ಲಿ ಇದ್ದರು.

೫ ಆಗಲವರಿಬ್ಬರು, ಶೆಕೆಮನೆಯಲ್ಲಿ ಕಟ್ಟಿ ಹಾಕಿರುವ, ಐಗುಪ್ತ
ದ ಅರಸನ ಪಾನದಾಯಕನೂ ಕೊಟ್ಟಿಗಾರನೂ, ಬಂದೇ ರಾತ್ರಿ
ಯಲ್ಲಿ ಅವನವನು ತನ್ನ ತನ್ನ ಕನಸಿನ ಅರ್ಥದ ಪ್ರಕಾರ, ಕ
೬ ನಸು ಕಂಡರು. ಯೋಸೆಫನು ಬೆಳ್ಗೆಯ ಅವರ ಹತ್ತರ ಬಂದು,
ಅವರನ್ನು ನೋಡಿದಾಗ, ಅಗೋ, ಅವರು ಚಿಂತೆಯುಳ್ಳವರಾ
೭ ಗಿದ್ದರು. ಅವನು ತನ್ನ ಸಂಗಡ ತನ್ನ ಯಜಮಾನನ ಮನೆಯ
ಲ್ಲಿದ್ದ ಫಕೋನನ ನಪುಂಸಕರನ್ನು—ನಿಮ್ಮ ಮುಖಗಳು ಇಂದು ಕ
೮ ಳೆಯಿಲ್ಲದ್ದಾಗಿರುವದು ಯಾಕೆ? ಎಂದು ಕೇಳಿದನು. ಅವರು ಅವ
ನಿಗೆ, ಕನಸು ಕಂಡಿದ್ದೇವೆ; ಅದರ ಅರ್ಥ ಹೇಳುವವನಿಲ್ಲ, ಅಂದ
ರು. ಯೋಸೆಫನು ಅವರಿಗೆ, ಅರ್ಥ ಹೇಳುವದು ದೇವರದಲ್ಲ
ವೋ! ದಯೆ ಮಾಡಿ ನನಗೆ ಹೇಳಿರಿ, ಅಂದನು.

೯ ಆಗ ಪಾನದಾಯಕರ ಮುಖ್ಯಸ್ಥನು ತನ್ನ ಕನಸನ್ನು
ಯೋಸೆಫನಿಗೆ ತಿಳಿಸಿ, ಅವನಿಗೆ ಹೇಳಿದ್ದೇನಂದರೆ—ನನ್ನ ಕನಸಿನ
೧೦ ಲ್ಲಿ, ಅಗೋ, ನನ್ನ ಮುಂದೆ ಒಂದು ದ್ರಾಕ್ಷೇ ಗಿಡ; ಆ ದ್ರಾಕ್ಷೇ
೩ ಗಿಡದಲ್ಲಿ ಮೂರು ಬಳ್ಳಿಗಳು. ಅವು ಮೊಳಿತು, ಹೂವರಳಿತು;
೧೧ ಅದರ ಗೊಂಚಲುಗಳು ಹಣ್ಣಾದವು. ಮತ್ತು ಫಕೋನನ ಪಾ
ತ್ರೆ ನನ್ನ ಕೈಯಲ್ಲಿರಲಾಗಿ, ನಾನು ಆ ದ್ರಾಕ್ಷೇ ಹಣ್ಣುಗಳನ್ನು
ತೆಗೆದು, ಫಕೋನನ ಪಾತ್ರೆಯಲ್ಲಿ ಹಿಂಡಿ, ಆ ಪಾತ್ರೆಯನ್ನು
೧೨ ಫಕೋನನ ಕೈಯಲ್ಲಿ ಕೊಟ್ಟೆನು. ಯೋಸೆಫನು ಅವನಿಗೆ
ಹೇಳಿದ್ದೇನಂದರೆ, ಅದರ ಅರ್ಥ ಇದೇ—ಆ ಮೂರು ಬಳ್ಳಿಗ
೧೩ ಳು ಮೂರು ದಿನಗಳಾಗಿವೆ. ಇನ್ನು ಮೂರು ದಿನಗಳಾದ
ಮೇಲೆ, ಫಕೋನನು ನಿನ್ನ ತಲೆಯನ್ನು ಎತ್ತಿ, ನಿನ್ನನ್ನು ತಿರಿಗಿ
ನಿನ್ನ ಸ್ಥಳದಲ್ಲಿ ಇಡುವನು. ನೀನು, ಅವನ ಪಾನದಾಯಕನಾಗಿ
ದ್ದ ಮುಂಚಿನ ಮರ್ಯಾದೆಯ ಹಾಗೆ, ಫಕೋನನ ಪಾತ್ರೆ
೧೪ ಯನ್ನು ಅವನ ಕೈಯಲ್ಲಿ ಕೊಡುವಿ. ಆದರೆ ನೀನು ಸುಖ
ದಿಂದಿರುವಾಗ, ನನ್ನನ್ನು ಜ್ಞಾಪಕ ಮಾಡಿ ಕೊಂಡು, ನನಗೆ ಕೃಪೆ
ಮಾಡಿ, ಫಕೋನನ ಬಳಿಯಲ್ಲಿ ನನ್ನನ್ನು ತಿಳಿಯ ಮಾಡಿ, ಈ
ಮನೆಯೊಳಗಿಂದ ನನ್ನನ್ನು ಹೊರಗೆ ಬರ ಮಾಡ ಬೇಕು.
೧೫ ಯಾಕಂದರೆ ನಿಶ್ಚಯವಾಗಿ ಇಬ್ರಿಯರ ದೇಶದೊಳಗಿಂದ ನಾನು
ಕದಿಯಲ್ಪಟ್ಟಿನು. ಇಲ್ಲಿ ಸಹ ಅವರು ನನ್ನನ್ನು ಕುಣಿಯೊಳಗೆ
ಹಾಕುವದಕ್ಕೆ ನಾನು ಏನಾದರೂ ಮಾಡಿಲ್ಲ.

೧೬ ಅವನು ಬಳ್ಳೇ ಅರ್ಥ ಹೇಳಿದನೆಂದು, ಕೊಟ್ಟಿಗಾರರಲ್ಲಿ
ಮುಖ್ಯಸ್ಥನು ನೋಡಿದಾಗ, ಯೋಸೆಫನಿಗೆ, ನನ್ನ ಕನಸಿನಲ್ಲಿ
೧೭ ಯೂ, ಅಗೋ, ಮೂರು ಕೊಟ್ಟಿ ಪುಟ್ಟಿಗಳು ನನ್ನ ತಲೆಯ
ಮೇಲೆ ಇದ್ದವು. ಮೇಲಿನ ಪುಟ್ಟಿಯಲ್ಲಿ ಫಕೋನನಿಗೋಸ್ಕರ
ಕೊಟ್ಟಿಗಾರರು ಮಾಡುವ ಎಲ್ಲಾ ವಿಧವಾದ ಆಹಾರವಿತ್ತು. ಮತ್ತು
ನನ್ನ ತಲೆಯ ಮೇಲಿರುವ ಪುಟ್ಟಿಯೊಳಗಿಂದ ಪಕ್ಷಿಗಳು ಅದ
ನ್ನು ತಿಂದವು, ಅಂದನು. ಆಗ ಯೋಸೆಫನು ಪ್ರತ್ಯುತ್ತರವಾ
ಗಿ, ಅದರ ಅರ್ಥ ಇದೇ—ಆ ಮೂರು ಪುಟ್ಟಿಗಳು ಮೂರು
೧೯ ದಿನಗಳು. ಇನ್ನು ಮೂರು ದಿನಗಳಾದ ಮೇಲೆ, ಫಕೋನನು
ನಿನ್ನ ತಲೆಯನ್ನು ನಿನ್ನಿಂದ ಎತ್ತಿ, ನಿನ್ನನ್ನು ಮರದ ಮೇಲೆ
ತೂಗ ಹಾಕುವನು. ಮತ್ತು ಪಕ್ಷಿಗಳು ನಿನ್ನ ಮಾಂಸವನ್ನು ತಿಂ
ದು ಬಿಡುವವು, ಅಂದನು.

೨೦ ಫಕೋನನ ಜನನದ ದಿವಸವಾದ ಮೂರನೇ ದಿವಸದಲ್ಲಿ ಆದ
ದ್ದೇನಂದರೆ, ಅವನು ತನ್ನ ಸೇವಕರೆಲ್ಲರಿಗೆ ಔತಣವನ್ನು ಮಾ
ಡಿಸಿ, ಪಾನದಾಯಕರ ಮುಖ್ಯಸ್ಥನ ತಲೆಯನ್ನೂ, ಕೊಟ್ಟಿಗಾ
ರರಲ್ಲಿ ಮುಖ್ಯಸ್ಥನ ತಲೆಯನ್ನೂ ತನ್ನ ಸೇವಕರ ಮಧ್ಯದಲ್ಲಿ
೨೧ ಎತ್ತಿದನು. ಯೋಸೆಫನು ಅವರಿಗೆ ಅರ್ಥ ಹೇಳಿದ ಹಾಗೆಯೇ,
ಪಾನದಾಯಕರ ಮುಖ್ಯಸ್ಥನನ್ನು ತಿರಿಗಿ ಉದ್ಯೋಗದಲ್ಲಿ ಇರಿ
ಸಿದ್ದರಿಂದ, ಅವನು ಫಕೋನನ ಕೈಗೆ ಪಾತ್ರೆ ಕೊಡುವವನಾದ
೨೨ ನು. ಆದರೆ ಕೊಟ್ಟಿಗಾರನ ಮುಖ್ಯಸ್ಥನನ್ನು ತೂಗ ಹಾಕಿಸಿದ
೨೩ ನು. ಆದಾಗ್ಯೂ ಪಾನದಾಯಕರ ಮುಖ್ಯಸ್ಥನು ಯೋಸೆಫನ
ನ್ನು ಜ್ಞಾಪಕ ಮಾಡಿ ಕೊಳ್ಳದೆ, ಅವನನ್ನು ಮರತು ಬಿಟ್ಟನು.

## ೪೧. ಸಂಧಿ.

೧ ಎರಡು ವರುಷಗಳಾದ ಮೇಲೆ ಆದದ್ದೇನಂದರೆ, ಫಕೋನ
೨ ನು ಕನಸು ಕಂಡನು—ಅಗೋ, ಅವನು ನದಿಯ ಬಳಿಯಲ್ಲಿ ನಿಂ
ತಿರಲಾಗಿ, ಅಗೋ, ನದಿಯೊಳಗಿಂದ ಬಳ್ಳೇ ಆಕಾರವೂ ಕೊಬ್ಬಿ
ದ ಮಾಂಸವೂ ಉಳ್ಳ ಏಳು ಹಸಗಳು ಏರಿ ಬಂದು, ಹುಲ್ಲಿ
೩ ನಲ್ಲಿ ಮೇಯುತ್ತಿದ್ದವು. ಮತ್ತು, ಅಗೋ, ಕೆಟ್ಟ ಆಕಾರವುಳ್ಳ,
ಮಾಂಸ ಹೀನವಾದ ಬೇರೆ ಏಳು ಹಸಗಳು ಅವುಗಳ ಹಿಂದೆ ನದಿ
ಯೊಳಗಿಂದ ಏರಿ ಬಂದು, ಆ ಹಸಗಳ ಹತ್ತರ ನದೀತೀರದಲ್ಲಿ
೪ ನಿಂತಿದ್ದವು. ಮತ್ತು ಕೆಟ್ಟ ಆಕಾರವುಳ್ಳ, ಮಾಂಸ ಹೀನವಾದ ಹ
ಸಗಳು ಬಳ್ಳೇ ಆಕಾರವುಳ್ಳ, ಕೊಬ್ಬಿದ ಏಳು ಹಸಗಳನ್ನು
ತಿಂದು ಬಿಟ್ಟವು. ಆಗ ಫಕೋನನು ಎಚ್ಚತ್ತನು. ಮತ್ತು ಅವ
ನು ನಿದ್ದೆ ಮಾಡಿ ಎರಡನೇ ಸಾರಿ ಕನಸು ಕಂಡನು—ಅಗೋ, ಬಂ
ದೇ ದಂಟಿನಲ್ಲಿ ಏಳು ಬಳ್ಳೇ ಪುಷ್ಟಿಯಾದ ತೆನೆಗಳು ಎದ್ದವು;
೫ ಮತ್ತು, ಅಗೋ, ಅವುಗಳ ಹಿಂದೆ ಹೀನವಾದಂಥ, ಮೂಡಣ ಘಾ
೬ ಳಿಯಿಂದ ಬೀಸು ಹೋದಂಥ ಏಳು ತೆನೆಗಳು ಮೊಳಿತವು. ಆ ಹೀ
ನ ತೆನೆಗಳು ಪುಟ್ಟಿಯುಳ್ಳ, ತುಂಬಿದ ಏಳು ತೆನೆಗಳನ್ನು ನುಂಗಿ
ಬಿಟ್ಟವು. ಆಗ ಫಕೋನನು ಎಚ್ಚತ್ತು, ಅದು ಸ್ವಪ್ನವೆಂದು ತಿ
ಳುಕೊಂಡನು.

೮ ಬೆಳ್ಗೆಯ ಅವನ ಆತ್ಮವು ಕಳವಳ ಪಟ್ಟಿತು. ಆದದರಿಂದ ಅವ
ನು ಐಗುಪ್ತದ ಎಲ್ಲಾ ಮಂತ್ರಗಾರರನ್ನೂ, ಅದರ ಎಲ್ಲಾ ಜ್ಞಾನಿ
ಗಳನ್ನೂ ಕರೆಯ ಕಳುಹಿಸಿದನು. ಫಕೋನನು ಅವರಿಗೆ ತನ್ನ
ಕನಸು ತಿಳಿಸಿದಾಗ, ಅವುಗಳ ಅರ್ಥವನ್ನು ಫಕೋನನಿಗೆ ಹೇ
ಳುವನ್ಯಾವನೂ ಇರಲಿಲ್ಲ.

೯ ಆಗ ಪಾನದಾಯಕರ ಮುಖ್ಯಸ್ಥನು ಫಕೋನನಿಗೆ ಹೇಳಿದ್ದೇ

ನಂದರೆ—ಈ ಹೊತ್ತು ನನ್ನ ಬಾಧಗಳನ್ನು ಜ್ಞಾಪಕ ಮಾಡಿ
೧೦ ಕೊಳ್ಳುತ್ತೇನೆ. ಫರೋನನು ತನ್ನ ಸೇವಕರ ಮೇಲೆ ಕಿಟ್ಟು ಮಾ
ಡಿದಾಗ, ನನ್ನನೂ, ಕೊಟ್ಟಿಗಾರರ ಮುಖ್ಯಸ್ಥನನೂ ರಾಣುವೆ
೧೧ ಯವರ ಅಧಿಪತಿಯ ಮನೆಯಲ್ಲಿ ಕಾವಲಿಯಲ್ಲಿ ಇಟ್ಟನು. ಆಗ
ನಾನೂ ಅವನೂ ಒಂದೇ ರಾತ್ರಿಯಲ್ಲಿ ಕನಸನ್ನು ಕಂಡೆವು.
ಒಬ್ಬೊಬ್ಬನು ನಮ್ಮ ನಮ್ಮ ಸ್ವಪ್ನಾರ್ಥದ ಕನಸುಗಳನ್ನು
೧೨ ಕಂಡೆವು. ಅಲ್ಲಿ ರಾಣುವೆಯವರ ಅಧಿಪತಿಗೆ ದಾಸನಾಗಿದ್ದ ಇ
ಬ್ರಿಯನಾದ ಯಾವನಸ್ಥನು ನಮ್ಮ ಸಂಗತ ಇದ್ದನು. ಅವನಿಗೆ
ನಾವು ತಿಳಿಸಿದಾಗ, ಅವನು ನಮ್ಮಲ್ಲಿ ಒಬ್ಬೊಬ್ಬನು ಕಂಡ ಕನಸಿನ
೧೩ ಹಾಗೆ ನಮ್ಮ ಕನಸಿನ ಅರ್ಥಗಳನ್ನು ಹೇಳಿ ಕೊಟ್ಟನು. ಅವನು
ನಮಗೆ ಹೇಳಿದ ಅರ್ಥದ ಹಾಗೆಯೇ ಆಯಿತು. ನನ್ನನ್ನು ತಿರಿ
ಗಿ ಉದ್ಯೋಗದಲ್ಲಿ ಇರಿಸಿ, ಅವನನ್ನು ತೂಗ ಹಾಕಿಸಿದನು.

೧೪ ಆಗ ಫರೋನನು ಯೋಸೆಫನನ್ನು ಕರೆ ಕಳುಹಿಸಿದನು.
ಅವರು ಅವನನ್ನು ಕುಣಿಯೊಳಗಿಂದ ತ್ವರಿತಮಾಗಿ ಹೊರಗೆ
ತೆಗೆದರು. ಅವನು ಕ್ಷೌರ ಮಾಡಿಸಿ ಕೊಂಡು, ಬೇರೆ ವಸ್ತ್ರ ಹಾ
೧೫ ಕಿ ಕೊಂಡು, ಫರೋನನ ಬಳಿಗೆ ಬಂದನು. ಆಗ ಫರೋನನು
ಯೋಸೆಫನಿಗೆ, ಕನಸು ಕಂಡಿದ್ದೇನೆ; ಅದರ ಅರ್ಥ ಹೇಳುವವ
ನಿಲ್ಲ. ನೀನೇ ಕನಸು ಕೇಳಿ, ಅದರ ಅರ್ಥ ಹೇಳುತ್ತೀ ಎಂಬ
ಸಮಾಚಾರವನ್ನು ನಿನ್ನನ್ನು ಕುರಿತು ಕೇಳಿದ್ದೇನೆ, ಅಂದನು.

೧೬ ಯೋಸೆಫನು ಫರೋನನಿಗೆ ಪ್ರತ್ಯುತ್ತರವಾಗಿ, ಅದು ನ
ನ್ನಿಂದಾಗದು; ದೇವರು ಫರೋನನ ಕ್ಷೇಮಕ್ಕೆ ಉತ್ತರ ಕೊಡು
ವನು ಅಂದನು.

೧೭ ಆಗ ಫರೋನನು ಯೋಸೆಫನಿಗೆ ಹೇಳಿದ್ದೇನಂದರೆ—ನನ್ನ
ಕನಸಿಲ್ಲಿ, ಇಗೋ, ನದಿಯ ತೀರದಲ್ಲಿ ನಿಂತು ಕೊಂಡಿದ್ದೆನು.
೧೮ ಮತ್ತು, ಅಗೋ, ನದಿಯೊಳಗಿಂದ ಕೊಬ್ಬಿದ ಮಾಂಸವೂ ಬ
ಳ್ಳೇ ಆಕಾರವೂ ಉಳ್ಳ ಏಳು ಹಸಗಳು ಏರಿ ಬಂದು, ಹುಲ್ಲಿನ
೧೯ ಲ್ಲಿ ಮೇಯುತ್ತಿದ್ದವು. ಮತ್ತು, ಅಗೋ, ಬಹಳ ಕೆಟ್ಟ ಆಕಾರ
ವೂ ಮಾಂಸ ಹೀನವೂ ಆದ ಬೇರೆ ಏಳು ಬಡ ಹಸಗಳು ಅವುಗ
ಳ ಹಿಂದೆ ಏರಿ ಬಂದವು. ಅವುಗಳ ಹಾಗೆ ಕೆಟ್ಟವುಗಳನ್ನು ಐಗುಪ್ತ
೨೦ ದೇಶದಲ್ಲೆಲ್ಲಿಯೂ ನಾನು ನೋಡಿಲ್ಲ. ಆ ಹೀನವಾದ ಕೆಟ್ಟ ಹ
ಸಗಳು ಮೊದಲನೇ ಏಳು ಕೊಬ್ಬಿದ ಹಸಗಳನ್ನು ತಿಂದು ಬಿ
೨೧ ಟ್ಟವು. ಇವು ಅವುಗಳ ಹೊಟ್ಟೆಯಲ್ಲಿ ಸೇರಿದ ಮೇಲೆ, ಅವುಗಳ
ಹೊಟ್ಟೆಯಲ್ಲಿ ಸೇರಿದವೆಂದು ಕಾಣಲಿಲ್ಲ. ಅವುಗಳ ಆಕಾರವು ಆ
ರಂಭದಲ್ಲಿದ್ದ ಹಾಗೆಯೇ ಕೆಟ್ಟದ್ದಾಗಿತ್ತು. ಆ ಮೇಲೆ ಎಚ್ಚತ್ತೆನು
೨೨ ಮತ್ತು, ನಾನು ಕನಸು ಕಾಣಲಾಗಿ, ಅಗೋ, ಒಂದೇ ದಂಟಿನ
೨೩ ಲ್ಲಿ ಪುಷ್ಟಿಯುಳ್ಳ ಒಳ್ಳೇವಾದ ಏಳು ತೆನೆಗಳು ಎದ್ದವು. ಮತ್ತು,
ಅಗೋ, ಮೂಡಣ ಘೂಳಿಯಿಂದ ಕೀರು ಹೋದ, ಬಣಗಿದ, ಹೀ
೨೪ ನವಾದ ಏಳು ತೆನೆಗಳು ಅವುಗಳ ಮೇಲೆ ಮೊಳೆತವು. ಆ ಹೀನವಾ
ದ ತೆನೆಗಳು ಆ ಏಳು ಒಳ್ಳೇ ತೆನೆಗಳನ್ನು ನುಂಗಿದವು. ಅದನ್ನು
ಮಂತ್ರಗಾರರಿಗೆ ಹೇಳಿದಾಗ, ನನಗೆ ತಿಳಿಸಿದವನು ಯಾರೂ ಇಲ್ಲ.
೨೫ ಆಗ ಯೋಸೆಫನು ಫರೋನನಿಗೆ ಹೇಳಿದ್ದೇನಂದರೆ—ಫರೋ
ನನ ಕನಸು ಒಂದೇ. ದೇವರು ಮಾತಲಿಕ್ಕಿರುವದನ್ನು ಫರೋ
೨೬ ನನಿಗೆ ತಿಳಿಸಿದ್ದಾನೆ. ಆ ಏಳು ಒಳ್ಳೇ ಹಸಗಳು ಏಳು ವರುಷ
ಗಳು. ಆ ಏಳು ಒಳ್ಳೇ ತೆನೆಗಳು ಏಳು ವರುಷಗಳು. ಅದು
೨೭ ಒಂದೇ ಕನಸು. ಮತ್ತು ಅವುಗಳ ಮೇಲೆ ಏರಿ ಬಂದ ಹೀನವಾ
ದ ಕೆಟ್ಟ ಏಳು ಹಸಗಳು ಏಳು ವರ್ಷಗಳು. ಮತ್ತು ಮೂಡಣ
ಘೂಳಿಯಿಂದ ಕೀರು ಹೋದ ಏಳು ಬಡ ತೆನೆಗಳು ಬರುವು ಇರು
೨೮ ವ ಏಳು ವರುಷಗಳು. ನಾನು ಫರೋನನಿಗೆ ಹೇಳಿದ ಮಾತು
ಇದೇ. ದೇವರು ಮಾತಲಿಕ್ಕಿರುವದನ್ನು ಫರೋನನಿಗೆ ತಿಳಿಸಿದ್ದಾ
೨೯ ನೆ. ಇಗೋ, ಐಗುಪ್ತ ದೇಶದಲ್ಲೆಲ್ಲಾ ಮಹಾ ಸುಭಿಕ್ಷೆ ಇರುವ ಏಳು
೩೦ ವರುಷಗಳು ಬರುತ್ತವೆ. ಮತ್ತು ಅವುಗಳ ಹಿಂದೆ ಬರವುಳ್ಳ ಏಳು
ವರುಷಗಳು ಬರುತ್ತವೆ. ಐಗುಪ್ತದಲ್ಲಿದ್ದ ಸುಭಿಕ್ಷೆ ಎಲ್ಲಾ ಮರತು
ಹೋಗುವದು. ಮತ್ತು ಬರವು ದೇಶವನ್ನು ನಾಶ ಮಾಡುವದು.
೩೧ ಮತ್ತು ಹಿಂದೆ ಬರುವ ಆ ಬರಕ್ಕೋಸ್ಕರ, ಅದು ಮಹಾ ಕಠಿ
ಣವಾಗಿರುವದರಿಂದ, ಸುಭಿಕ್ಷೆಯು ದೇಶದಲ್ಲಿ ತಿಳಿಯಲ್ಪಡದೆ
೩೨ ಹೋಗುವದು. ಇದಲ್ಲದೆ ಆ ಕನಸು ಫರೋನನಿಗೆ ಎರಡು ಸಾ
ರಿ ಬಿದ್ದದರಿಂದ ಆ ಕಾರ್ಯವು ದೇವರಿಂದ ಸ್ಥಿರ ಪಡಿಸಲ್ಪಟ್ಟಿದೆ;
೩೩ ದೇವರು ಅದನ್ನು ಮಾಡ ತ್ವರೆ ಪಡುವನು. ಹೀಗಿರುವದರಿಂದ
ಈಗ ಫರೋನನು ವಿವೇಕಿಯಾದ, ಬುದ್ಧಿಯುಳ್ಳ ಮನುಷ್ಯನ
೩೪ ನ್ನು ನೋಡಿ ಕೊಂಡು, ಐಗುಪ್ತ ದೇಶದ ಮೇಲೆ ಇಡಲಿ. ಫರೋ
ನನು ವಿಚಾರಕರನ್ನು ನೇಮಿಸಿ, ದೇಶದ ಮೇಲಿಟ್ಟು, ಸುಭಿಕ್ಷೆಯ
ಏಳು ವರ್ಷಗಳಲ್ಲಿ ಐಗುಪ್ತ ದೇಶದಲ್ಲಿ ಐದರಲ್ಲಿ ಬಂದು ತ
೩೫ ಕ್ಕೊಳ್ಳಲಿ. ಅವರು ಬರುವ ಈ ಒಳ್ಳೇ ವರುಷಗಳ ಆಹಾರ
ವನ್ನೆಲ್ಲಾ ಕೂಡಿಸಿ, ಫರೋನನ ಕೈಕೆಳಗೆ ಧಾನ್ಯವನ್ನೂ ಪಟ್ಟ
ಗಳಲ್ಲಿ ಆಹಾರವನ್ನೂ ಇಟ್ಟು ಕೊಂಡು, ಕಾಯಲಿ. ಆ ಆಹಾರ
೩೬ ವು ಐಗುಪ್ತದಲ್ಲಿ ಬರಲಿಕ್ಕಿರುವ ಬರದ ಏಳು ವರ್ಷಗಳಿಗೋ
ಸ್ಕರ, ದೇಶವು ಬರದಿಂದ ಹಾಳಾಗದ ಹಾಗೆ, ದೇಶಕ್ಕೆ ಸಂಗ್ರಹ
ವಾಗಿರುವದು.

೩೭ ಈ ಮಾತು ಫರೋನನಿಗೂ ಅವನ ಸೇವಕರೆಲ್ಲರಿಗೂ ಬ
ಳ್ಳೇದೆಂದು ತೋಚಿತು. ಫರೋನನು ತನ್ನ ಸೇವಕರಿಗೆ, ಇವ
೩೮ ನ ಹಾಗೆ ದೇವಾತ್ಮವುಳ್ಳ ಮನುಷ್ಯನು ನಮಗೆ ಶಿಕ್ಕಾಯನೋ!
ಅಂದನು. ಆಗ ಫರೋನನು ಯೋಸೆಫನಿಗೆ—ದೇವರು ನಿನಗೆ
ಇವುಗಳನ್ನೆಲ್ಲಾ ತಿಳಿಸಿದ ಮೇಲೆ, ನಿನ್ನ ಹಾಗೆ ವಿವೇಕಿಯೂ ಬು
೪೦ ದ್ಧಿವಂತನೂ ಇಲ್ಲ. ನೀನೇ ನನ್ನ ಮನೆತನದ ಮೇಲಿರ ಬೇಕು.
ನಿನ್ನ ಮಾತಿನ ಹಾಗೆ ನನ್ನ ಜನರೆಲ್ಲಾ ನಡಿಯ ಬೇಕು. ಸಿಂಹಾ
ಸನದಲ್ಲಿ ಮಾತ್ರ ನಾನು ನಿನಗಿಂತ ಹೊದ್ದವನಾಗಿರುವೆನು, ಅಂ
೪೧ ದನು. ಮತ್ತು ಫರೋನನು ಯೋಸೆಫನಿಗೆ—ಇಗೋ, ನಿನ್ನ
ನ್ನು ಐಗುಪ್ತ ದೇಶವೆಲ್ಲಾದರ ಮೇಲೆ ಇಟ್ಟಿದ್ದೇನೆ, ಅಂದನು.
೪೨ ಆಗ ಫರೋನನು ತನ್ನ ಕೈಯೊಳಗಿನ ಉಂಗರವನ್ನು ತೆಗೆದು,
ಯೋಸೆಫನ ಕೈಯಲ್ಲಿ ಇಟ್ಟನು. ನಾರುಮಡಿಯ ವಸ್ತ್ರಗಳನ್ನು
ಅವನಿಗೆ ಹೊದ್ದಿಸಿ, ಚಿನ್ನದ ಸರಪಣಿಯನ್ನು ಅವನ ಕೊರಳಿ
೪೩ ಗೆ ಹಾಕಿ, ತನಗಿದ್ದ ಎರಡನೇ ರಥದ ಮೇಲೆ ಅವನನ್ನು ಏರಿಸಿದನು.
ಮತ್ತು ಮೊಣಕಾಲೂರಿರಿ, ಎಂದು, ಅವನ ಮುಂದೆ ಕೂಗಿದರು.
೪೪ ಹೀಗೆ ಎಲ್ಲಾ ಐಗುಪ್ತ ದೇಶದ ಮೇಲೆ ಅವನನ್ನು ಇಟ್ಟನು.
ಇದಲ್ಲದೆ ಫರೋನನು ಯೋಸೆಫನಿಗೆ—ನಾನೇ ಫರೋನನು, ನಿ
ನ್ನ ಅಪ್ಪಣೆ ಇಲ್ಲದೆ ಐಗುಪ್ತ ದೇಶದಲ್ಲೆಲ್ಲಾ ಯಾವನಾದರೂ
೪೫ ಕೈಯನ್ನಾಗಲಿ ಕಾಲನ್ನಾಗಲಿ ಎತ್ತ ಬಾರದು, ಅಂದನು. ಮ
ತ್ತು ಫರೋನನು ಯೋಸೆಫನಿಗೆ ಚಫ್ನಥಪನೇಯಹ ಎಂದು
ಹೆಸರಿಟ್ಟು, ಓನಿನ ಯಾಜಕನಾದ ಪೊಟಿಫರನ ಮಗಳಾಗಿರುವ
ಅಸ್ನಥಳನ್ನು ಹೆಂಡತಿಯಾಗಿ ಕೊಟ್ಟನು. ಆ ಮೇಲೆ ಯೋಸೆ
ಫನು ಐಗುಪ್ತ ದೇಶದ ಮೇಲೆ ಹೊರಟು ಹೋದನು.



೪೬ ಯೋಸೆಫನು ಐಗುಪ್ತದ ಅರಸನಾದ ಫರೋನನ ಮುಂದೆ
ನಿಂತಾಗ ಮೂವತ್ತು ವರುಷದವನಾಗಿದ್ದನು. ಅಮೇಲೆ ಯೋಸೆ
ಫನು ಫರೋನನ ಸನ್ನಿಧಿಯಿಂದ ಹೊರಟು, ಐಗುಪ್ತ ದೇಶವನ್ನೆ
೪೭ ಲ್ಲಾ ಹಾದು ಹೋದನು. ಅದರೆ ಆ ದೇಶವು ಸುಭಿಕ್ಷೆಯ ಏಳು
೪೮ ವರ್ಷಗಳಲ್ಲಿ ರಾಶಿಯಾಗಿ ಫಲ ಕೊಟ್ಟಿತು. ಹೀಗಿರಲಾಗಿ ಅವ
ನು ಐಗುಪ್ತ ದೇಶದಲ್ಲಿದ್ದ ಆ ಏಳು ವರುಷಗಳ ಆಹಾರವನ್ನೆಲ್ಲಾ
ಕೂಡಿಸಿ, ಆಹಾರವನ್ನು ಪಟ್ಟಣಗಳಲ್ಲಿ ಹಾಕಿದನು. ಒಂದೊಂದು
ಪಟ್ಟಣದ ಸುತ್ತಲಿರುವ ಆಹಾರವನ್ನು ಅದರದರಲ್ಲಿ ಇಟ್ಟನು.
೪೯ ಈ ಮೇರೆಗೆ ಯೋಸೆಫನು ಸಮುದ್ರದ ಮರಳಿನ ಹಾಗೆ ಬಹು
ಹೆಚ್ಚಾಗಿರುವ ಧಾನ್ಯವನ್ನು, ಅದು ಕೆಬ್ಬುವಿಲ್ಲದೆ ಎಣಿಸಲ್ಪಡ
ಕೂಡದ ಪರ್ಯಂತರ, ಕೂಡಿಸಿಟ್ಟನು.

೫೦ ಇದಲ್ಲದೆ ಬರದ ವರುಷಗಳು ಬರುವದಕ್ಕಿಂತ ಮುಂಚೆ,
ಯೋಸೆಫನಿಗೆ ಇಬ್ಬರು ಮಕ್ಕಳು ಹುಟ್ಟಿದರು. ಓನಿನ ಯಾಜ
ಕನಾದ ಪೊಟಿಫರನ ಮಗಳಾಗಿರುವ ಅಸ್ನಥಳು ಅವರನ್ನು ಅವ
೫೧ ನಿಗೆ ಹೆತ್ತಳು. ಯೋಸೆಫನು—ದೇವರು ನನ್ನನ್ನು ನನ್ನ ಎಲ್ಲಾ
ಕಷ್ಟವನೂಹ, ನನ್ನ ತಂದೆ ಮನೆಯೆಲ್ಲವನ್ನೂ ಮರೆಯ ಮಾ
ಡಿದ್ದಾನೆಂದು ಹೇಳಿ, ಜೊಚ್ಚಲನಿಗೆ ಮನಸ್ಸೆಯೆಂದು ಹೆಸರಿಟ್ಟ
೫೨ ನು. ಮತ್ತು ದೇವರು ನನ್ನನ್ನು ನನ್ನ ದೀನ ಸ್ಥಿತಿಯ ದೇಶದ
ಲ್ಲಿ ಅಭಿವೃದ್ಧಿಯಾಗ ಮಾಡಿದ್ದಾನೆಂದು ಹೇಳಿ, ಎರಡನೆಯವ
ನಿಗೆ ಎಫ್ರಾಯಿಮೆಂದು, ಹೆಸರಿಟ್ಟನು.

೫೩ ಐಗುಪ್ತ ದೇಶದಲ್ಲಿದ್ದ ಸುಭಿಕ್ಷೆಯ ಏಳು ವರುಷಗಳು ಮುಗಿ
೫೪ ದ ಮೇಲೆ, ಯೋಸೆಫನು ಹೇಳಿದ ಹಾಗೆ ಬರುವದಕ್ಕಿದ್ದ ಬರದ
ಏಳು ವರುಷಗಳು ಆರಂಭವಾದವು. ಎಲ್ಲಾ ದೇಶಗಳಲ್ಲಿ ಬರವಾ
೫೫ ಯಿತು; ಆದರೆ ಐಗುಪ್ತ ದೇಶದಲ್ಲೆಲ್ಲಾ ಕೊಟ್ಟಿ ಇತ್ತು. ಮತ್ತು
ಐಗುಪ್ತ ದೇಶವೆಲ್ಲಾ ಹಸಿದಿರಲು, ಜನರು ಕೊಟ್ಟಿಗೋಸ್ಕರ ಫ
ರೋನನ ಹತ್ತರ ಕೂಗಿದಾಗ, ಫರೋನನು ಎಲ್ಲಾ ಐಗುಪ್ತಕ್ಕೆ,
ಯೋಸೆಫನ ಬಳಿಗೆ ಹೋಗಿರಿ, ಅವನು ನಿಮಗೆ ಹೇಳುವದನ್ನು
೫೬ ಮಾಡಿರಿ, ಅಂದನು. ದೇಶವೆಲ್ಲಾದರ ಮೇಲೆ ಬರವಿದ್ದಾಗ, ಯೋ
ಸೆಫನು ಧಾನ್ಯವಿದ್ದ ಸ್ಥಳಗಳನ್ನೆಲ್ಲಾ ತೆರೆದು, ಐಗುಪ್ತ್ಯರಿಗೆ ಮಾ
೫೭ ರಿದನು. ಆಗ ಬರವು ಐಗುಪ್ತ ದೇಶದಲ್ಲಿ ಕಠಿಣವಾಗಿತ್ತು. ಇದಲ್ಲದೆ
ಎಲ್ಲಾ ಭೂಮಿಯ ಮೇಲೆ ಬರವು ಕಠಿಣವಾಗಿದ್ದದರಿಂದ, ಎಲ್ಲಾ
ದೇಶದವರು ಯೋಸೆಫನಿಂದ ಧಾನ್ಯ ಕೊಂಡು ಕೊಳ್ಳುವದಕ್ಕೆ
ಐಗುಪ್ತಕ್ಕೆ ಬಂದರು.

## ೪೨. ಸಂಧಿ.

೧ ಯಾಕೋಬನು ಐಗುಪ್ತದಲ್ಲಿ ಧಾನ್ಯ ಉಂಟೆಂದು ಕಂಡಾಗ,
ಯಾಕೋಬನು ತನ್ನ ಮಕ್ಕಳಿಗೆ, ನೀವು ಒಬ್ಬರನೊಬ್ಬರು
೨ ನೋಡಿ ಕೊಳ್ಳುವದೇನೆಂದು ಹೇಳಿ, ಇಗೋ, ಐಗುಪ್ತದಲ್ಲಿ ಧಾ
ನ್ಯ ಉಂಟೆಂದು ಕೇಳಿದ್ದೇನೆ; ಅಲ್ಲಿಗೆ ಇಳಿದು ಹೋಗಿ, ನಾವು
ಸಾಯದೆ ಬದುಕುವ ಹಾಗೆ, ನಮಗೆ ಅಲ್ಲಿಂದ ಧಾನ್ಯವನ್ನು ಕೊಂ
೩ ಡು ಕೊಳ್ಳಿರಿ, ಅಂದನು. ಆಗ ಯೋಸೆಫನ ಹತ್ತು ಮಂದಿ ಸ
ಹೋದರರು ಐಗುಪ್ತದಲ್ಲಿ ಧಾನ್ಯವನ್ನು ಕೊಂಡು ಕೊಳ್ಳುವದ
೪ ಕ್ಕೆ ಇಳಿದು ಹೋದರು. ಆದರೆ ಯೋಸೆಫನ ಸಹೋದರನಾ
ದ ಬೆನ್ಯಮಿನನನ್ನು, ಅವನಿಗೆ ಮೋಸ ಬಂದೀತೆಂದು ಹೇಳಿ,
ಯಾಕೋಬನು ಅವನ ಸಹೋದರರ ಸಂಗತ ಕಳುಹಿಸಲಿಲ್ಲ.

೫ ಈ ಮೇರೆಗೆ ಬರುವ ಜನರೊಳಗೆ ಇಸ್ರಯೇಲನ ಮಕ್ಕಳು
ಧಾನ್ಯ ಕೊಂಡು ಕೊಳ್ಳುವದಕ್ಕೆ ಬಂದರು; ಯಾಕಂದರೆ ಕಾ
೬ ನಾನ್ ದೇಶದಲ್ಲಿ ಬರವಿತ್ತು. ಆದರೆ ಯೋಸೆಫನು ದೇಶವೆಲ್ಲಾದ
ರ ಮೇಲೆ ಅಧಿಕಾರಿಯಾಗಿದ್ದನು. ದೇಶದ ಜನರೆಲ್ಲಾ ಧಾನ್ಯದ
ನ್ನು ಮಾರುವವನು ಅವನೇ. ಹೀಗಿರಲಾಗಿ ಯೋಸೆಫನ ಸಹೋ
೭ ದರರು ಬಂದು, ಅವನಿಗೆ ಅಡ್ಡ ಬಿದ್ದರು. ಯೋಸೆಫನು ತನ್ನ ಸ
ಹೋದರರನ್ನು ನೋಡಿ, ಅವರನ್ನು ತಿಳಿದು, ತಿಳಿಯದವನ ಹಾ
ಗೆ ಅವರಿಗೆ ನುಡಿಸಿ, ಅವರಿಗೆ ಕಠಿಣವಾದ ಮಾತುಗಳನ್ನಾಡಿ, ಅವ
ರಿಗೆ, ಎಲ್ಲಿಂದ ಬಂದಿರಿ! ಅಂದನು. ಅವರು, ಕಾನಾನ್ ದೇಶದಿಂದ,
೮ ಆಹಾರ ಕೊಂಡು ಕೊಳ್ಳುವದಕ್ಕೆ, ಅಂದರು. ಯೋಸೆಫನು ತನ್ನ
ಸಹೋದರರನ್ನು ತಿಳಿದಿದ್ದನು, ಆದರೆ ಅವರು ಅವನನ್ನು ತಿಳಿ
೯ ಯಲಿಲ್ಲ. ಆಗ ಯೋಸೆಫನು ತಾನು ಅವರನ್ನು ಕುರಿತು, ಕಂಡ
ಕನಸುಗಳನ್ನು ಜ್ಞಾಪಕ ಮಾಡಿ ಕೊಂಡು, ನೀವು ಚಾರರು; ದೇ
೧೦ ಶದ ಬತನವನ್ನು ನೋಡ ಬಂದಿರಿ, ಅಂದನು. ಅವರು ಅವ
ನಿಗೆ—ಅಲ್ಲ, ನನ್ನ ಸ್ವಾಮಿ, ನಿನ್ನ ದಾಸರು ಆಹಾರ ಕೊಂ
೧೧ ಡು ಕೊಳ್ಳುವದಕ್ಕೆ ಬಂದಿದ್ದಾರೆ. ನಾವೆಲ್ಲರು ಒಬ್ಬ ಮನುಷ್ಯ
ನ ಮಕ್ಕಳು. ನಾವು ಯಥಾರ್ಥರು. ನಿನ್ನ ದಾಸರು ಚಾರ
೧೨ ರಲ್ಲ, ಅಂದರು. ಆದರೆ ಅವನು ಅವರಿಗೆ—ಅಲ್ಲ, ದೇಶದ ಬತ
೧೩ ತನ ನೋಡ ಬಂದಿರಿ, ಅಂದನು. ಅವರು—ಹನ್ನೆರಡು ಮಂದಿ
ಯಾದ ನಿನ್ನ ದಾಸರಾಗಿರುವ ನಾವು ಕಾನಾನ್ ದೇಶದಲ್ಲಿರುವ
ಒಬ್ಬ ಮನುಷ್ಯನ ಮಕ್ಕಳು. ಇಗೋ, ಚಿಕ್ಕವನು ಈಗ
ನಮ್ಮ ತಂದೆಯ ಸಂಗತ ಇದ್ದಾನೆ. ಮತ್ತು ಒಬ್ಬನು ಇಲ್ಲ, ಎಂ
೧೪ ದು ಹೇಳಿದರು. ಆಗ ಯೋಸೆಫನು ಅವರಿಗೆ—ನೀವು ಚಾರರೆಂ
೧೫ ದು ನಾನು ನಿಮಗೆ ಹೇಳಿದ ಮಾತು ಇದೇ. ನೀವು ಪರೀಕ್ಷಿಸಲ್ಪ
ಡುವದು ಹ್ಯಾಗಂದರೆ—ನಿಮ್ಮ ಚಿಕ್ಕ ಸಹೋದರನು ಇಲ್ಲಿಗೆ ಬಂ
ದರೆ ಹೊರ್ತು, ಫರೋನನ ಜೀವದಾಣೆ, ನೀವು ಇಲ್ಲಿಂದ ಹೊರ
೧೬ ಗೆ ಹೋಗ ಕೂಡದು. ನಿಮ್ಮಲ್ಲಿಂದ ಒಬ್ಬನನ್ನು ಕಳುಹಿಸಿರಿ. ಅವ
ನು ನಿಮ್ಮ ಸಹೋದರನನ್ನು ಕರಕೊಂಡು ಬರಲಿ. ಆದರೆ ನೀವು
ಕಟ್ಟಲ್ಪಟ್ಟ ಬೇಕು; ಹಾಗೆ ನಿಮ್ಮಲ್ಲಿ ಸತ್ಯ ಉಂಟೋ! ಇಲ್ಲವೋ!
೧೭ ಎಂದು ನಿಮ್ಮ ಮಾತುಗಳು ಪರೀಕ್ಷಿಸಲ್ಪಡುವದು. ಇಲ್ಲದಿದ್ದರೆ
ನಿಶ್ಚಯವಾಗಿ ನೀವು, ಫರೋನನ ಜೀವದಾಣೆ, ಚಾರರು ಎಂದು
ಹೇಳಿ, ಅವರನ್ನು ಕೂಡ ಮೂರು ದಿನ ಕಾವಲಿಯಲ್ಲಿ ಇಟ್ಟನು.
೧೮ ಮೂರನೇ ದಿವಸದಲ್ಲಿ ಯೋಸೆಫನು ಅವರಿಗೆ—ಇದನ್ನು ಮಾ
೧೯ ಡಿ ಬದುಕಿರಿ. ನಾನು ದೇವರಿಗೆ ಭಯ ಪಡುವವನಾಗಿದ್ದೇನೆ. ನೀ
ವು ಯಥಾರ್ಥರಾಗಿದ್ದರೆ, ನಿಮ್ಮ ಸಹೋದರರಲ್ಲಿ ಒಬ್ಬನು
ನೀವು ಇದ್ದ ಕಾವಲಿ ಮನೆಯಲ್ಲಿ ಕಟ್ಟಲ್ಪಟ್ಟಿರಲಿ. ಆದರೆ ನೀವು
ಹೋಗಿ, ನಿಮ್ಮ ಮನೆಯ ಅವಶ್ಯಕ್ಕೆ ಧಾನ್ಯವನ್ನು ತಕ್ಕೊಂ
೨೦ ಡು ಹೋಗಿರಿ. ಮತ್ತು ನಿಮ್ಮ ತಮ್ಮನನ್ನು ನನ್ನ ಬಳಿಗೆ ಕರ
ಕೊಂಡು ಬನ್ನಿರಿ; ಆಗ ನಿಮ್ಮ ಮಾತುಗಳು ನಿಶ್ಚಯ ಮಾಡಲ್ಪ
ಡುವವು; ನೀವು ಸಾಯದೆ ಇರುವಿರಿ, ಅಂದನು. ಅವರು ಹಾಗೆ ಮಾ
೨೧ ಡಿದರು. ಆಗಲವರು ನಿಶ್ಚಯವಾಗಿ ನಮ್ಮ ಸಹೋದರನಿಗೋಸ್ಕ
ರ ನಮ್ಮ ಮೇಲೆ ಅಪರಾಧ ಉಂಟು. ಅವನು ನಮ್ಮನ್ನು ಬೇಡಿ
ಕೊಂಡಾಗ, ಅವನ ಪ್ರಾಣ ಸಂಕಟವನ್ನು ನೋಡಿ, ಆಲೈಸದೆ
ಹೋದೆವು. ಆದಕಾರಣ ಈ ಸಂಕಟ ನಮ್ಮ ಮೇಲೆ ಬಂತೆಂದು,
೨೨ ಅಂದು ಕೊಂಡರು. ಆಗ ರೂಬೆನನು ಅವರಿಗೆ ಪ್ರತ್ಯುತ್ತರವಾ

೧—ಹುಡುಗನ ವಿಷಯದಲ್ಲಿ ಪಾಪ ಮಾಡ ಬೇಡಿಕೆಂದು, ನಾನು
ನಿಮಗೆ ಹೇಳಲಿಲ್ಲವೋ! ಆದರೆ ನೀವು ಕೇಳಲಿಲ್ಲ. ಆದಕಾರಣ
೩ ಈಗ, ಇಗೋ, ಅವನ ರಕ್ತ ವಿಚಾರಿಸಲ್ಪಟ್ಟಿತೆ, ಅಂದನು. ಆದರೆ
ಯೋಸೆಫನು ಅದನ್ನು ಕೇಳುತ್ತಾನೆಂದು, ಅವರಿಗೆ ತಿಳಿಯಲಿಲ್ಲ;
ಯಾಕಂದರೆ ದ್ವಿಭಾಷಿ ಅವರ ಮಧ್ಯದಲ್ಲಿ ಇದ್ದನು. ಆಗ ಅವ
೪ ನು ಅವರ ಕಡೆಯಿಂದ ತೊಲಗಿ ಹೋಗಿ, ಅತ್ತನು. ಮತ್ತು ಅವ
ರ ಬಳಿಗೆ ತಿರಿಗಿ ಬಂದು, ಅವರ ಸಂಗಡ ಮಾತಾಡಿ, ಅವರಲ್ಲಿಂದ
ಸಿಮಿಯೋನನನ್ನು ತೆಗೆದು, ಅವರ ಮುಂದೆ ಕಟ್ಟಿ ಹಾಕಿಸಿದನು.
೫ ಆ ಮೇಲೆ ಯೋಸೆಫನು ಅವರ ಚೀಲಗಳಲ್ಲಿ ಧಾನ್ಯ ತುಂಬಿ
ಸ ಬೇಕೆಂದೂ, ಒಬ್ಬೊಬ್ಬನ ಚೀಲದಲ್ಲಿ ಅವನವನ ಹಣವ
ನ್ನು ತಿರಿಗಿ ಇಡ ಬೇಕೆಂದೂ, ಮಾರ್ಗಕ್ಕೋಸ್ಕರ ಅವರಿಗೆ ಆ
೬ ಹಾರ ಕೊಡ ಬೇಕೆಂದೂ, ಆಜ್ಞಾಪಿಸಿದನು. ಹಾಗೆಯೇ ಅವರಿಗೆ
ಮಾಡಿದನು. ಆಗಲವರು ತಮ್ಮ ಧಾನ್ಯವನ್ನು ಕತ್ತೆಗಳ ಮೇಲೆ
೭ ಹೇರಿಕೊಂಡು, ಅಲ್ಲಿಂದ ಹೋಗಿ ಬಿಟ್ಟರು. ಮತ್ತು ಒಬ್ಬನು ತ
ನ್ನ ಕತ್ತೆಗೆ ಆಹಾರ ಕೊಡುವದಕ್ಕೋಸ್ಕರ ಛತ್ರದಲ್ಲಿ ತನ್ನ ಚೀ
ಲವನ್ನು ಬಿಚ್ಚಿದಾಗ, ಅಗೋ, ಚೀಲದ ಬಾಯಲ್ಲಿ ಇಟ್ಟಿರುವತ
೮ ನ್ನ ಹಣವನ್ನು ಕಂಡನು. ಅವನು ತನ್ನ ಸಹೋದರರಿಗೆ, ನನ್ನ
ಹಣವು ಹಿಂದಕ್ಕೆ ಕೊಡಲ್ಪಟ್ಟಿದೆ; ಅಗೋ, ನನ್ನ ಚೀಲದಲ್ಲಿ
ಉಂಟು, ಅಂದಾಗ, ಅವರ ಧೈರ್ಯ ಹೋಯಿತು. ಅವರು ನಡು
೯ ಗಿ, ಒಬ್ಬರಿಗೊಬ್ಬರು, ದೇವರು ನಮಗೆ ಮಾಡಿದ್ದು ಇದೇನು!
ಅಂದರು.

೧೦ ಅವರು ತಮ್ಮ ತಂದೆಯಾದ ಯಾಕೋಬನ ಬಳಿಗೆ ಕಾನಾನ್
ದೇಶಕ್ಕೆ ಬಂದ ಮೇಲೆ, ತಮಗೆ ಸಂಭವಿಸಿದ್ದೆಲ್ಲಾ ಅವನಿಗೆ ತಿ
೩೦ ಳಿಸಿದರು. ಏನಂದರೆ, ದೇಶದ ಯಜಮಾನನಾಗಿರುವ ಮನು
ಷ್ಯನು ನಮ್ಮ ಸಂಗಡ ಕಠಿಣವಾಗಿ ಮಾತಾಡಿ, ದೇಶಕ್ಕೆ ಚಾರ
೩೧ ರಾಗಿ ನಮ್ಮನ್ನು ಎಣಿಸಿದನು. ನಾವು ಅವನಿಗೆ—ನಾವು ಚಾರರ
೩೨ ಲ್ಲ, ನಾವು ಯಥಾರ್ಥರು. ನಾವು ನಮ್ಮ ತಂದೆಗೆ ಹನ್ನಿರಡು
ಮಂದಿ ಮಕ್ಕಳಾದ ಸಹೋದರರಾಗಿದ್ದೇವೆ. ಒಬ್ಬನು ಇಲ್ಲ,
ಚಿಕ್ಕವನು ಇಂದು ನಮ್ಮ ತಂದೆಯ ಸಂಗಡ ಕಾನಾನ್ ದೇಶದ
೩೩ ಲ್ಲಿದ್ದಾನೆ, ಅಂದೆವು. ಆಗ ದೇಶದ ಯಜಮಾನನಾಗಿರುವ ಆ
ಮನುಷ್ಯನು, ನೀವು ಯಥಾರ್ಥರೋ! ಎಂದು, ಇದರಲ್ಲಿ ತಿ
ಳುಕೊಳ್ಳುವೆನು. ನಿಮ್ಮ ಸಹೋದರರಲ್ಲಿ ಒಬ್ಬನನ್ನು ನನ್ನ
ಬಳಿಯಲ್ಲಿ ಬಿಟ್ಟು, ನಿಮ್ಮ ಮನೆಗೆ ಅವಶ್ಯವಾದದ್ದನ್ನು ತಕ್ಕೊಂ
೩೪ ಡು ಹೋಗಿರಿ. ಮತ್ತು ನಿಮ್ಮ ಚಿಕ್ಕ ತಮ್ಮನನ್ನು ನನ್ನ ಬಳಿಗೆ
ತನ್ನಿರಿ. ಆಗ ನೀವು ಚಾರರಲ್ಲವೆಂದೂ, ಯಥಾರ್ಥರೆಂದೂ, ತಿ
ಳುಕೊಂಡು, ನಿಮ್ಮ ಸಹೋದರನನ್ನು ನಿಮಗೆ ಕೊಡುವೆನು.
ಆಗ ದೇಶದಲ್ಲಿ ವ್ಯಾಪಾರ ಮಾಡ ಬಹುದು, ಅಂದನು.

೩೫ ಇದಲ್ಲದೆ ಅವರು ತಮ್ಮ ಚೀಲಗಳನ್ನು ಬರಿದು ಮಾಡುವಾಗ,
ಆದದ್ದೇನಂದರೆ, ಅಗೋ, ಅವನವನ ಹಣದ ಗಂಟು ಅವನವನ
ಚೀಲದಲ್ಲಿ ಇತ್ತು. ಅವರೂ, ಅವರ ತಂದೆಯೂ ಆ ಹಣದ
೩೬ ಗಂಟುಗಳನ್ನು ನೋಡಿ, ಭಯ ಪಟ್ಟರು. ಆಗ ಅವರ ತಂದೆಯಾ
ದ ಯಾಕೋಬನು ಅವರಿಗೆ—ನನ್ನನ್ನು ಮಕ್ಕಳಿಲ್ಲದವನಾಗ
ಮಾಡಿದ್ದೀರಿ. ಯೋಸೆಫನೂ ಇಲ್ಲ, ಸಿಮಿಯೋನನೂ ಇಲ್ಲ,
೩೭ ಬೆನ್ಯಾಮಿನನನ್ನು ಕರ ಕೊಂಡು ಹೋಗುವದಕ್ಕೆ ಇದ್ದೀರಿ. ನ
ನ್ನ ಮೇಲೆ ಇದೆಲ್ಲಾ ಬಂತು, ಅಂದನು. ರೂಬೆನನು ತನ್ನ ತಂ
ದೆಗೆ—ನಾನು ಅವನನ್ನು ನಿನಗೆ ತಾರದೆ ಹೋದರೆ, ನನ್ನ ಇಬ್ಬ
ರು ಮಕ್ಕಳನ್ನು ಕೊಲ್ಲ ಬಹುದು. ನನ್ನ ಕೈಯಲ್ಲಿ ಅವನನ್ನು
ಒಪ್ಪಿಸು; ನಾನು ಅವನನ್ನು ನಿನಗೆ ತಿರಿಗಿ ತರುವೆನು, ಅಂದನು.
೩೮ ಆದರೆ ಅವನು—ನನ್ನ ಮಗನು ನಿಮ್ಮ ಸಂಗಡ ಇಳಿದು ಹೋಗ
ಬಾರದು. ಅವನ ಅಣ್ಣನು ಸತ್ತು ಹೋಗಿದ್ದಾನೆ; ಅವನೊಬ್ಬ
ನೇ ಉಳಿದಿದ್ದಾನೆ. ನೀವು ಹೋಗುವ ಮಾರ್ಗದಲ್ಲಿ ಅವನಿಗೆ
ನೋವು ಬಂದರೆ, ನನ್ನ ನರೇ ಕೂದಲುಗಳನ್ನು ದುಃಖದಿಂದ
ಪಾತಾಳಕ್ಕೆ ಇಳಿಸುವಿರಿ, ಅಂದನು.

## ೪೩. ಸಂಧಿ.

೧ ಇದಲ್ಲದೆ ದೇಶದಲ್ಲಿ ಬರವು ಭಾರವಾಯಿತು. ಮತ್ತು ಅವರು
ಐಗುಪ್ತದಿಂದ ತಂದ ಧಾನ್ಯವು ತೀರಿದ ಮೇಲೆ ಆದದ್ದೇನಂದರೆ,
೨ ಅವರ ತಂದೆ ಅವರಿಗೆ—ತಿರಿಗಿ ಹೋಗಿ, ನಮಗೆ ಸ್ವಲ್ಪ ಆಹಾ
ರ ಕೊಡುವ ಕೊಳ್ಳಿರಿ, ಅಂದನು. ಆಗ ಯೆಹೂದನು ಅವನಿಗೆ
ಹೇಳಿದ್ದೇನಂದರೆ—ಆ ಮನುಷ್ಯನು ನಮಗೆ—ನಿಮ್ಮ ಸಹೋದ
೩ ರನು ನಿಮ್ಮ ಸಂಗಡ ಇದ್ದರೆ ಹೊರ್ತು, ನನ್ನ ಮುಖವನ್ನು
ನೋಡ ಕೂಡದೆಂದು, ನಮಗೆ ದೃಢವಾಗಿ ನಿರ್ಣಯಿಸಿ, ಹೇಳಿ
ದನು. ನೀನು ನಮ್ಮ ತಮ್ಮನನ್ನು ನಮ್ಮ ಸಂಗಡ ಕಳುಹಿಸಿದ
೪ ರೆ, ನಾವು ಇಳಿದು ಹೋಗಿ, ನಿನಗೆ ಆಹಾರವನ್ನು ಕೊಂಡು
ಕೊಳ್ಳುತ್ತೇವೆ. ಅವನನ್ನು ಕಳುಹಿಸದೆ ಹೋದರೆ, ನಾವು ಹೋ
ಗುವದಿಲ್ಲ; ಯಾಕಂದರೆ ಆ ಮನುಷ್ಯನು—ನಿಮ್ಮ ತಮ್ಮನು ನಿ
ಮ್ಮ ಸಂಗಡ ಇದ್ದರೆ ಹೊರ್ತು, ನನ್ನ ಮುಖವನ್ನು ನೋಡ
ಕೂಡದು ಎಂದು, ನಮಗೆ ಹೇಳಿದ್ದಾನೆ.
೫ ಇಸ್ರಯೇಲನು—ಯಾಕೆ ಆ ಮನುಷ್ಯನಿಗೆ, ನಿಮಗೆ ಇನ್ನೊ
ಬ್ಬ ತಮ್ಮನಿದ್ದಾನೆಂದು ಹೇಳಿ, ನನಗೆ ಕೇಡು ಮಾಡಿದಿರಿ! ಅಂ
೬ ದಾಗ, ಅವರು—ಆ ಮನುಷ್ಯನು ನಮ್ಮನ್ನು ಕುರಿತೂ ನಮ್ಮ
ವಂಶವನ್ನು ಕುರಿತೂ ಕೇಳ್ಳೇ ಕೇಳ್ಳಿ, ನಿಮ್ಮ ತಂದೆ ಇನ್ನು ಬದು
ಕುತ್ತಾನೋ! ನಿಮಗೆ ತಮ್ಮನಿದ್ದಾನೋ! ಎಂದು ಹೇಳಿದನು
ಆಗ ಈ ಮಾತುಗಳಿಗೆ ತಕ್ಕ ಹಾಗೆ ಅವನಿಗೆ ತಿಳಿಸಿದೆವು. ನಿಮ್ಮ
೭ ತಮ್ಮನನ್ನು ಕರ ಕೊಂಡು ಬನ್ನಿರೆಂದು, ಅವನು ಹೇಳುವನು,
ಎಂಬದಾಗಿ ನಮಗೆ ನಿಶ್ಚಯವಾಗಿ ತಿಳಿದಿರುವದೋ! ಅಂದರು.
೮ ಮತ್ತು ಯೆಹೂದನು ತನ್ನ ತಂದೆಯಾದ ಇಸ್ರಯೇಲನಿಗೆ
ಹೇಳಿದ್ದೇನಂದರೆ—ಆ ಹುಡುಗನನ್ನು ನನ್ನ ಸಂಗಡ ಕಳುಹಿಸು,
ಆಗ ನಾವು ಎದ್ದು ಹೋಗುವೆವು. ಮತ್ತು ನಾವೂ, ನೀನೂ,
೯ ನಮ್ಮ ಮಕ್ಕಳೂ ಸಾಯದೆ ಬದುಕುವೆವು. ನಾನು ಅವನಿಗೋ
ಸ್ಕರ ಹೊಣೆಯಾಗಿರುವೆನು. ನನ್ನ ಬಳಿಯ ಅವನನ್ನು ಕೇಳ
ಬಹುದು. ನಾನು ಅವನನ್ನು ನಿನ್ನ ಬಳಿಗೆ ತಂದು, ನಿನ್ನ ಮುಂದೆ
ನಿಲ್ಲಿಸದೆ ಹೋದರೆ, ಎಂದೆಂದಿಗೂ ನಿನಗೆ ಅಪರಾಧಿಯಾಗಿರು
೧೦ ವೆನು. ಯಾಕಂದರೆ— ನಾವು ತಡ ಮಾಡದೆ ಇದ್ದರೆ, ಈಗ್ಯೆ ಎ
ರಡು ಸಾರಿ ಹೋಗಿ ಬರ ಬಹುದಾಗಿತ್ತು.
೧೧ ಆಗ ಅವರ ತಂದೆಯಾದ ಇಸ್ರಯೇಲನು ಅವರಿಗೆ ಹೇಳಿದ್ದೇ
ನಂದರೆ—ಹಾಗಿದ್ದರೆ ಇದನ್ನು ಮಾಡಿರಿ. ದೇಶದ ಉತ್ತಮವಾ
ದ ವಸ್ತುಗಳನ್ನು ನಿಮ್ಮ ಪಾತ್ರೆಗಳಲ್ಲಿ ತಕ್ಕೊಳ್ಳಿರಿ. ಸ್ವಲ್ಪ ತೈ
ಲ, ಸ್ವಲ್ಪ ಜೇನು, ಘರ್ಮಸಾಲೆ, ತೊಗಟು, ಬೊಟ್ಟಿಗಳ
ನ್ನೂ, ಬಾದಾಮಿಗಳನ್ನೂ, ಆ ಮನುಷ್ಯನಿಗೋಸ್ಕರ ಕಾಣಿಕೆ



೧೨ ಯಾಗಿ ತಕ್ಕೊಂಡು ಹೋಗಿರಿ. ಮತ್ತು ಎರಡಪಟ್ಟು ಹಣ ನಿಮ್ಮ
ಕೈಯಲ್ಲಿ ತಕ್ಕೊಳ್ಳಿರಿ. ನಿಮ್ಮ ಚೀಲಗಳ ಬಾಯಲ್ಲಿ ಹಾಕಿ,
ಹಿಂದಕ್ಕೆ ಕೊಟ್ಟ ಹಣವನ್ನು ತಿರಿಗಿ ನಿಮ್ಮ ಕೈಯಲ್ಲಿ ತಕ್ಕೊಂ
೧೩ ಡು ಹೋಗಿರಿ. ಒಂದು ವೇಳೆ ಅದು ತಪ್ಪಾಗಿದ್ದೀತ್ತು. ಮತ್ತು
ನಿಮ್ಮ ಸಹೋದರನನ್ನು ತಕ್ಕೊಂಡು, ಎದ್ದು, ಆ ಮನುಷ್ಯನ
೧೪ ಬಳಿಗೆ ತಿರಿಗಿ ಹೋಗಿರಿ. ಮತ್ತು ಸರ್ವಶಕ್ತನಾದ ದೇವರು,
ಆ ಮನುಷ್ಯನ ಸನ್ನಿಧಿಯಲ್ಲಿ, ನಿಮ್ಮ ಬೇರೆ ಸಹೋದರನನ್ನೂ
ಬೆನ್ಯಾಮಿನನನ್ನೂ ಅವನು ಕಳುಹಿಸಿ ಬಿಡುವ ಹಾಗೆ, ನಿಮಗೆ
ಅಂತ್ಯಕರುಣವನ್ನು ಕೊಡಲಿ. ನಾನು ಮಕ್ಕಳಿಲ್ಲದವನಾಗ ಬೇ
ಕಾದರೆ, ಆಗುತ್ತೇನೆ.
೧೫ ಆಗ ಆ ಮನುಷ್ಯರು ಆ ಕಾಣಿಕೆಯನ್ನು ತಕ್ಕೊಂಡು, ತ
ಮ್ಮ ಕೈಗಳಲ್ಲಿ ಎರಡಪಟ್ಟು ಹಣವನ್ನೂ ಬೆನ್ಯಾಮಿನನನ್ನೂ ತೆ
ಗೆದು ಕೊಂಡು, ಎದ್ದು, ಐಗುಪ್ತಕ್ಕೆ ಇಳಿದು ಹೋಗಿ, ಯೋ
೧೬ ಸೆಫನ ಮುಂದೆ ನಿಂತರು. ಯೋಸೆಫನು ಬೆನ್ಯಾಮಿನನನ್ನು
ಅವರ ಸಂಗಡ ಕಂಡಾಗ, ತನ್ನ ಮನೆಯ ಉಗ್ರಾಣದವನಿಗೆ,
ಈ ಮನುಷ್ಯರನ್ನು ಮನೆಗೆ ಕರಕೊಂಡು ಬಂದು, ಮಾಂಸ ಕೊ
ಯಿದು, ಸಿದ್ಧ ಮಾಡು. ಯಾಕಂದರೆ ಈ ಮನುಷ್ಯರು ಮ
೧೭ ಧ್ಯಾಹ್ನದಲ್ಲಿ ನನ್ನ ಸಂಗಡ ಉಣ್ಣ ಬೇಕು, ಅಂದನು. ಆ ಮ
ನುಷ್ಯನು ಯೋಸೆಫನು ಹೇಳಿದ ಹಾಗೆ ಮಾಡಿದನು. ಆ ಮ
ನುಷ್ಯನು ಆ ಮನುಷ್ಯರನ್ನು ಯೋಸೆಫನ ಮನೆಗೆ ಕರಕೊಂ
ಡು ಹೋದನು.
೧೮ ತಾವು ಯೋಸೆಫನ ಮನೆಗೆ ತರಲ್ಪಟ್ಟೆವೆಂದು ನೋಡಿ, ಆ
ಮನುಷ್ಯರು ಭಯ ಪಟ್ಟು, ನಮ್ಮನ್ನು ಹಿಡಿದು, ನಮ್ಮ ಮೇಲೆ
ಬಿದ್ದು, ನಮ್ಮನ್ನು ದಾಸರಾಗ ಮಾಡಿ, ನಮ್ಮ ಕತ್ತೆಗಳನ್ನು ತ
ಕ್ಕೊಳ್ಳುವ ಹಾಗೆ, ಮುಂಚೆ ನಮ್ಮ ಚೀಲಗಳಲ್ಲಿ ತಿರಿಗಿ ಸೇರಿದ
ಹಣಕ್ಕೋಸ್ಕರ ನಮ್ಮನ್ನು ತಂದರು ಎಂದು, ಅಂದು ಕೊಂ
೧೯ ಡರು. ಆಗಲವರು ಯೋಸೆಫನ ಮನೆಯ ಉಗ್ರಾಣದವನ ಬಳಿಗೆ
ಹೋಗಿ, ಮನೇ ಬಾಗಿಲಿನ ಮುಂದೆ ಅವನ ಸಂಗಡ ಮಾತಾಡಿ,
೨೦ ಓ ಅಯ್ಯಾ, ನಿಶ್ಚಯವಾಗಿ ಆಹಾರವನ್ನು ಕೊಂಡು ಕೊಳ್ಳುವ
೨೧ ದಕ್ಕೆ ಆರಂಭದಲ್ಲಿ ಇಳಿದು ಬಂದೆವು. ಹೀಗಿರಲಾಗಿ ನಾವು
ಛತ್ರಕ್ಕೆ ಬಂದು, ನಮ್ಮ ಚೀಲಗಳನ್ನು ತೆಗೆದಾಗ, ಅಗೋ, ಒ
ಬ್ಬೊಬ್ಬನ ಹಣವು, ಅದರದರ ತೂಕದ ಪ್ರಕಾರವಾದ ನಮ್ಮ
ಹಣವು, ಅವನವನ ಚೀಲದಲ್ಲಿ ಇತ್ತು. ನಮ್ಮ ಕೈಯಲ್ಲಿ ಅದ
೨೨ ನ್ನು ತಿರಿಗಿ ತಕ್ಕೊಂಡು ಬಂದಿದ್ದೇವೆ. ಮತ್ತು ಆಹಾರವನ್ನು
ಕೊಂಡು ಕೊಳ್ಳುವದಕ್ಕೆ ಬೇರೆ ಹಣವನ್ನು ತಕ್ಕೊಂಡು ಬಂ
ದಿದ್ದೇವೆ. ನಮ್ಮ ಹಣವನ್ನು ನಮ್ಮ ಚೀಲಗಳಲ್ಲಿ ಯಾರು ಇಟ್ಟ
೨೩ ರೆಂದು ನಮಗೆ ತಿಳಿಯದು, ಅಂದರು. ಅವನು, ನಿಮಗೆ ಸಮಾ
ಧಾನವಿರಲಿ; ಭಯ ಪಡ ಬೇಡಿರಿ. ನಿಮ್ಮ ದೇವರಾದ ನಿಮ್ಮ ತಂದೆ
ಯ ದೇವರು ನಿಮ್ಮ ಚೀಲಗಳಲ್ಲಿ ನಿಮಗೆ ದ್ರವ್ಯವನ್ನು ಕೊ
ಟ್ಟಿದ್ದಾನೆ. ನಿಮ್ಮ ಹಣವು ನನಗೆ ಸಂತು, ಎಂದು ಹೇಳಿ, ಅವರ
ಬಳಿಗೆ ಸಿಮಿಯೋನನನ್ನು ಹೊರಗೆ ತಕ್ಕೊಂಡು ಬಂದನು.
೨೪ ಮತ್ತು ಆ ಮನುಷ್ಯನು ಆ ಮನುಷ್ಯರನ್ನು ಯೋಸೆಫನ
ಮನೆಗೆ ಕರ ಕೊಂಡು ಬಂದು, ತಮ್ಮ ಕಾಲು ತೊಳೆಯುವದಕ್ಕೆ
ನೀರು ಕೊಟ್ಟನು. ಮತ್ತು ಅವರ ಕತ್ತೆಗಳಿಗೆ ಆಹಾರ ಕೊಟ್ಟನು.
೨೫ ಅಲ್ಲಿ ಅವರು ಊಟ ಮಾಡ ಬೇಕೆಂದು ಕೇಳಿದ್ದರಿಂದ, ಯೋಸೆ
ಫನು ಮಧ್ಯಾಹ್ನದಲ್ಲಿ ಬರುವ ಪರ್ಯಂತರ ಕಾಣಿಕೆಯನ್ನು ಸಿ
೨೬ ದ್ಧ ಮಾಡಿ ಕೊಂಡರು. ಯೋಸೆಫನು ಮನೆಗೆ ಬಂದ ಮೇಲೆ, ಅ
ವರು ತಮ್ಮ ಕೈಗಳಲ್ಲಿದ್ದ ಕಾಣಿಕೆಯನ್ನು ಮನೆಗೆ ತಕ್ಕೊಂಡು
೨೭ ಬಂದು, ಅವನ ಮುಂದೆ ನೆಲದಲ್ಲಿ ಅಡ್ಡ ಬಿದ್ದರು. ಅವನು ಅವರ
ಕ್ಷೇಮ ಸಮಾಚಾರವನ್ನು ಕೇಳ್ಳೆ—ನೀವು ಹೇಳಿದ ಮುದುಕನಾ
ದ ನಿಮ್ಮ ತಂದೆಗೆ ಕ್ಷೇಮ ಉಂಟೋ! ಇನ್ನು ಬದುಕುತ್ತಾನೋ!
೨೮ ಅಂದನು. ಅವರು—ನಿನ್ನ ದಾಸನಾದ ನಮ್ಮ ತಂದೆಗೆ ಕ್ಷೇಮ;
ಇನ್ನು ಬದುಕುತ್ತಾನೆ, ಎಂದು ಹೇಳ್ಳಿ, ಬೊಗ್ಗಿ ಕೊಂಡು, ಅಡ್ಡಬಿ
೨೯ ದ್ದರು. ಆಗಲವನು ತನ್ನ ಕಣ್ಣುಗಳನ್ನು ಎತ್ತಿ, ತನ್ನ ತಾಯ
ಮಗನಾದ ತನ್ನ ತಮ್ಮನಾದ ಬೆನ್ಯಾಮಿನನನ್ನು ನೋಡಿ—ನೀವು
ನನಗೆ ಹೇಳಿದ ನಿಮ್ಮ ಚಿಕ್ಕ ತಮ್ಮನು ಇವನೋ! ಎಂದು ಹೇ
ಳ್ಳಿ—ನನ್ನ ಮಗನೇ, ದೇವರು ನಿನಗೆ ದಯೆ ಮಾಡಲಿ, ಅಂದನು.
೩೦ ಆಗ ಯೋಸೆಫನು ಅವನ ಪಟ್ಟನು; ಯಾಕಂದರೆ ಅವನ
ಕರುಳುಗಳು ಅವನ ಸಹೋದರನ ಮೇಲೆ ಉಕ್ಕಿದವು. ಮತ್ತು
ಅಳುವದಕ್ಕೆ ಸ್ಥಳ ಹುಡಿಕಿ, ಕೊಠಡಿಯಲ್ಲಿ ಸೇರಿ, ಅಲ್ಲಿ ಅತ್ತನು.
೩೧ ಮತ್ತು ಮುಖವನ್ನು ತೊಳ್ಳಿಕೊಂಡು, ಹೊರಗೆ ಬಂದು, ಮನಸ್ಸು
ಬಿಗಿ ಹಿಡಿದು ಕೊಂಡು, ಕೊಟ್ಟಿ ಇಕ್ಕಿರಿ, ಅಂದನು. ಆಗ ಅವನಿ
ಗೆ ಬೇರೆಯಾಗಿ, ಅವರಿಗೆ ಬೇರೆಯಾಗಿ, ಅವನ ಸಂಗಡ ಉಣ್ಣು
ವ ಐಗುಪ್ತ್ಯರಿಗೆ ಬೇರೆಯಾಗಿ, ಇಕ್ಕಿದರು. ಯಾಕಂದರೆ ಐಗು
ಪ್ತ್ಯರಿಗೆ ಇಬ್ರಿಯರ ಸಂಗಡ ಊಟ ಮಾಡ ಕೂಡದು. ಅದು ಐ
೩೩ ಗುಪ್ತ್ಯರಿಗೆ ಅಸಹ್ಯವಾಗಿದೆ. ಇದಲ್ಲದೆ ಅವರು ಹೊಚ್ಚಲನು ತ
ನ್ನ ಹೊಚ್ಚಲತನದ ಪ್ರಕಾರವೂ, ಕಿರಿಯನು ತನ್ನ ಕಿರಿಯತನ
ದ ಪ್ರಕಾರವೂ ಅವನ ಮುಂದೆ ಕೂತಿರಲಾಗಿ, ಆ ಮನುಷ್ಯ
೩೪ ರು ತಮ್ಮ ತಮ್ಮೊಳಗೆ ಆಶ್ಚರ್ಯ ಪಟ್ಟರು. ಮತ್ತು ಅವನು ತ
ನ್ನ ಸನ್ನಿಧಿಯಿಂದ ಅವರಿಗೆ ಮಾನದ ಆಹಾರಗಳನ್ನು ಕಳುಹಿ
ಸಿದಾಗ, ಬೆನ್ಯಾಮಿನನ ಮಾನದ ಆಹಾರವು ಅವರೆಲ್ಲರ ಮಾನ
ದ ಆಹಾರಕ್ಕಿಂತ ಐದಡ್ಡು ದೊಡ್ಡದಾಗಿತ್ತು. ಮತ್ತು ಅವನ
ಸಂಗಡ ಕುಡಿದು, ತೃಪ್ತರಾದರು.

## ೪೪. ಸಂಧಿ.

೧ ಆಗಲವನು ತನ್ನ ಮನೇ ಉಗ್ರಾಣದವನಿಗೆ—ಈ ಮನುಷ್ಯರ
ಚೀಲಗಳಲ್ಲಿ ಹೊರ ಕೂಡುವಷ್ಟು ಆಹಾರ ತುಂಬಿಸಿ, ಒಬ್ಬೊ
೨ ಬ್ಬನ ಹಣವನ್ನು ಅವನವನ ಚೀಲದ ಬಾಯಲ್ಲಿ ಇಡು. ಮತ್ತು
ಬೆಳ್ಳಿಯ ಪಂಚಪಾತ್ರೆಯಾದ ನನ್ನ ಪಂಚಪಾತ್ರೆಯನ್ನು ಚಿಕ್ಕ
ವನ ಚೀಲದ ಬಾಯಲ್ಲಿ ಅವನ ಧಾನ್ಯದ ಹಣದ ಸಂಗಡ ಇಡು
ಎಂದು, ಆಜ್ಞಾಪಿಸಿದನು. ಯೋಸೆಫನು ಹೇಳಿದ ಮಾತಿನ ಹಾ
ಗೆಯೇ ಇವನು ಮಾಡಿದನು.
೩ ಉದಯದಲ್ಲಿ ಬೆಳಗಿದಾಗ ಆ ಮನುಷ್ಯರು, ತಮ್ಮ ಕತ್ತೆಗಳು
೪ ಸಹಿತವಾಗಿ, ಕಳುಹಿಸಲ್ಪಟ್ಟರು. ಅವರು ಪಟ್ಣವನ್ನು ಬಿಟ್ಟು, ದೂ
ರ ಹೋಗದ ಸಮಯದಲ್ಲಿ ಯೋಸೆಫನು ಮನೇಉಗ್ರಾಣದವನಿ
ಗೆ—ಎದ್ದು, ಆ ಮನುಷ್ಯರ ಹಿಂದೆ ಹತ್ತು. ಅವರು ಸಿಕ್ಕಿದಾಗ,
ಯಾಕೆ ನೀವು ಒಳ್ಳೇದಕ್ಕೆ ಪ್ರತಿಯಾಗಿ ಕೇಡನ್ನು ಮಾಡಿದಿರಿ!
೫ ಅದು ನನ್ನ ಸ್ವಾಮಿ ಕುಡಿಯುವಂಥಾದ್ದಲ್ಲವೋ! ಅದರಲ್ಲಿ ಅ
ವನು ಶಕುನ ನೋಡುತ್ತಾನಲ್ಲವೋ! ನೀವು ಹೀಗೆ ಮಾಡಿದ್ದರಿಂದ
೬ ಕೆಟ್ಟದ್ದನ್ನು ಮಾಡಿದ್ದೀರಿ, ಎಂದು ಹೇಳು, ಅಂದನು. ಅವರನ್ನು
೭ ಅವನು ಹಿಡಿದು, ಈ ಮಾತುಗಳನ್ನು ಅವರಿಗೆ ಹೇಳಿದನು. ಅವ
ರು ಅವನಿಗೆ—ನಮ್ಮ ಸ್ವಾಮಿ ಯಾಕೆ ಇಂಥ ಮಾತುಗಳನ್ನು ಆ

೪ ಕುತ್ತಾನೆ! ಈ ಪ್ರಕಾರ ಮಾಡುವದು ನಿನ್ನ ದಾಸರಿಗೆ ದೂರವಾಗ
ರಲಿ. ಇಗೋ, ನಮ್ಮ ಚೀಲಗಳ ಬಾಯಲ್ಲಿ ನಮಗೆ ಶಿಕ್ಕಿದ
ಹಣವನ್ನು ಕಾನಾನ್ ದೇಶದಿಂದ ನಿನಗೆ ತಂದೆವು. ಮತ್ತು ನಿನ್ನ
ಯಜಮಾನನ ಮನೆಯೊಳಗಿಂದ ಬೆಳ್ಳಿ ಭಂಗಾರವನ್ನು ಹ್ಯಾಗೆ
೯ ಕದ್ದು ಕೊಂಡೆವು! ಅದು ನಿನ್ನ ದಾಸರಲ್ಲಿ ಯಾವನ ಹತ್ತರ ಶಿ
ಕ್ಕುವದೋ, ಅವನು ಸಾಯಲಿ. ಮತ್ತು ನಾವು ಸಹ ನಮ್ಮ ಸ್ವಾ
೧೦ ಮಿಗೆ ದಾಸರಾಗಿರುವೆವು, ಅಂದರು. ಆಗ ಅವನು— ಆಗಲಿ. ನಿ
ಮ್ಮ ಮಾತುಗಳ ಪ್ರಕಾರವೇ ಆಗಲಿ. ಯಾವನ ಬಳಿಯಲ್ಲಿ ಅದು
ಶಿಕ್ಕುವದೋ, ಅವನು ನನಗೆ ದಾಸನಾಗಿರಲಿ; ಆದರೆ ನೀವು ನಿ
೧೧ರಪರಾಧಿಗಳಾಗಿರುವಿರಿ, ಅಂದನು. ಆಗಲವರು ತ್ವರೆಗೆ ಪಟ್ಟು, ತ
ಮ್ಮ ತಮ್ಮ ಗೋಣಿಗಳನ್ನು ನೆಲಕ್ಕೆ ಇಳಿಸಿ, ತಮ್ಮ ತಮ್ಮ ಚೀ
೧೨ ಲಗಳನ್ನು ತೆರೆದರು. ಅವನು ಹಿರಿಯನ ಮೊದಲ್ಗೊಂಡು ಕಿರಿ
ಯನ ಮಟ್ಟಿಗೂ ಶೋಧಿಸಲಾಗಿ, ಆ ಪಂಚಪಾತ್ರೆ ಬೆನ್ಯಮಿನಾ
ನನ ಚೀಲದಲ್ಲಿ ಶಿಕ್ಕಿತು.
೧೩ ಆಗಲವರು ತಮ್ಮ ವಸ್ತ್ರಗಳನ್ನು ಹರಕೊಂಡು, ತಮ್ಮ ತಮ್ಮ
೧೪ ಕತ್ತೆಗಳನ್ನು ಹೇರಿಸಿ, ಪಟ್ಟಣಕ್ಕೆ ತಿರಿಗಿ ಬಂದರು. ಯೆಹೂದನೂ
ಅವನ ಸಹೋದರರೂ ಯೋಸೆಫನ ಮನೆಗೆ, ಅವನು ಇನ್ನೂ ಅ
೧೫ ಲ್ಲಿ ಇದ್ದಾಗ, ಬಂದು ಅವನ ಮುಂದೆ ನೆಲದಲ್ಲಿ ಬಿದ್ದರು. ಯೋಸೆ
ಫನು ಅವರಿಗೆ—ನೀವು ಮಾಡಿದ ಈ ಕೆಲಸವೇನು! ನನ್ನಂಥ ಮ
ನುಷ್ಯನು ಶಕುನ ನೋಡ ಬಲ್ಲನೆಂದು ನಿಮಗೆ ತಿಳಿಯಲಿಲ್ಲವೋ!
೧೬ ಅಂದಾಗ, ಯೆಹೂದನು—ನಾವು ನಮ್ಮ ಸ್ವಾಮಿಗೆ ಏನು ಹೇ
ಳೋಣ! ಏನು ಮಾತಾಡೋಣ! ಹ್ಯಾಗೆ ನಮ್ಮನ್ನು ನೀತಿವಂ
ತರಾಗ ಮಾಡಿ ಕೊಳ್ಳೋಣ! ನಿನ್ನ ದಾಸರ ಅಕ್ರಮವನ್ನು ದೇ
ವರು ದೊರಕಿಸಿ ಕೊಂಡಿದ್ದಾನೆ. ಇಗೋ, ನಾವೂ, ಆ ಪಂಚಪಾ
ತ್ರೆ ಯಾವನ ಕೈಯಲ್ಲಿ ಶಿಕ್ಕಿತೋ, ಅವನೂ, ನನ್ನ ಸ್ವಾಮಿಗೆ
೧೭ ದಾಸರಾಗಿದ್ದೇವೆ, ಅಂದನು. ಆಗಲವನು—ಹಾಗೆ ಮಾಡುವದು
ನನಗೆ ದೂರವಾಗಿರಲಿ. ಯಾವನ ಬಳಿಯಲ್ಲಿ ಆ ಪಂಚಪಾತ್ರೆ
ಶಿಕ್ಕಿತೋ, ಅವನೇ ನನಗೆ ದಾಸನಾಗಿರಲಿ. ಆದರೆ ನೀವು ಸಮಾ
ಧಾನವಾಗಿ ನಿಮ್ಮ ತಂದೆಯ ಬಳಿಗೆ ಹೋಗಿರಿ, ಅಂದನು.
೧೮ ಆಗ ಯೆಹೂದನು ಅವನ ಸಮೀಪಕ್ಕೆ ಬಂದು ಹೇಳಿದ್ದೇನಂ
ದರೆ—ಸ್ವಾಮಿ, ನನ್ನ ಸ್ವಾಮಿಯ ಕಿವಿಗಳಲ್ಲಿ ಒಂದು ಮಾತನ್ನು
ಹೇಳುವದಕ್ಕೆ ನಿನ್ನ ದಾಸನಿಗೆ ಅಪ್ಪಣೆಯಾಗ ಬೇಕು. ನಿನ್ನ
ದಾಸನ ಮೇಲೆ ಕೋಪ ಉರಿಯದೆ ಇರಲಿ. ಯಾಕಂದರೆ ಫಕೋ
೧೯ನನ ಹಾಗೆ ನೀನು. ನನ್ನ ಸ್ವಾಮಿ, ನಿಮಗೆ ತಂದೆಯೂ ಸಹೋ
೨೦ದರನೂ ಉಂಟೋ! ಎಂದು ತನ್ನ ದಾಸರನ್ನು ಕೇಳಿಲು, ನಾ
ವು ನಮ್ಮ ಕರ್ತನಿಗೆ—ನಮಗೆ ಮುದುಕನಾದ ತಂದೆಯೂ, ಅವ
ನ ಮುದಿಪ್ರಾಯದಲ್ಲಿ ಹುಟ್ಟಿದ ಚಿಕ್ಕ ಮಗನೂ ಉಂಟು. ಅ
ವನ ಸಹೋದರನು ಸತ್ತು ಹೋಗಿದ್ದಾನೆ. ಅವನೊಬ್ಬನೇ ತ
ನ್ನ ತಾಯಿಗೆ ಉಳಿದಿದ್ದಾನೆ. ಮತ್ತು ಅವನ ತಂದೆ ಅವನನ್ನು
೨೧ ಪ್ರೀತಿ ಮಾಡುತ್ತಾನೆ, ಅಂದೆವು. ಆಗ ನೀನು ನಿನ್ನ ದಾಸರಿಗೆ—
ನಾನು ಅವನ ಮೇಲೆ ಕಣ್ಣಿರುವ ಹಾಗೆ, ಅವನನ್ನು ನನ್ನ ಬಳಿಗೆ
೨೨ ತನ್ನಿರಿ, ಅಂದಿ. ನಾವು ನಮ್ಮ ಸ್ವಾಮಿಗೆ—ಆ ಹುಡುಗನು ನಮ್ಮ
ತಂದೆಯನ್ನು ಬಿಟ್ಟು ಕೂಡದು; ತಂದೆಯನ್ನು ಬಿಟ್ಟರೆ, ಅವನು ಸಾ
೨೩ಯುವನು, ಅಂದೆವು. ಆಗ ನೀನು ನಿನ್ನ ದಾಸರಿಗೆ—ನಿಮ್ಮ ಚಿ
ಕ್ಕ ತಮ್ಮನು ನಿಮ್ಮ ಸಂಗಡ ಇಳಿದು ಬಾರದೆ ಇದ್ದರೆ, ಇನ್ನು
೨೪ ಮೇಲೆ ನನ್ನ ಮುಖವನ್ನು ನೋಡರಿ, ಅಂದಿ. ಹೀಗಿರಲಾಗಿ ನಾವು
ನಿನ್ನ ದಾಸನಾದ ನಮ್ಮ ತಂದೆಯ ಬಳಿಗೆ ಏರಿ ಹೋದಾಗ,
ಆದದ್ದೇನಂದರೆ, ನನ್ನ ಸ್ವಾಮಿಯ ಮಾತುಗಳನ್ನು ಅವನಿಗೆ
೨೫ ತಿಳಿಸಿದೆವು. ನಮ್ಮ ತಂದೆ—ನೀವು ತಿರಿಗಿ ಹೋಗಿ, ನಮಗೆ
೨೬ ಸ್ವಲ್ಪ ಆಹಾರ ಕೊಂಡು ಕೊಳ್ಳಿರಿ, ಅಂದಾಗ, ನಾವು—ನಮ್ಮ
ಚಿಕ್ಕ ತಮ್ಮನು ನಮ್ಮ ಸಂಗಡ ಇದ್ದರೆ ಹೊರ್ತು, ಆ ಮನು
ಷ್ಯನ ಮುಖವನ್ನು ನೋಡ ಕೂಡದ ಕಾರಣ, ನಾವು ಇಳಿದು
ಹೋಗ ಕೂಡದು. ನಮ್ಮ ಚಿಕ್ಕ ತಮ್ಮನು ನಮ್ಮ ಸಂಗಡ ಇ
೨೭ದ್ದರೆ, ಹೋಗುತ್ತೇವೆ, ಅಂದೆವು. ಆಗ ನಿನ್ನ ದಾಸನಾದ ನಮ್ಮ
ತಂದೆ ನಮಗೆ—ನನ್ನ ಹೆಂಡತಿ ನನಗೆ ಇಬ್ಬರನ್ನು ಹೆತ್ತಳೆಂದು,
೨೮ ನಿಮಗೆ ತಿಳಿದೆವೆ. ಒಬ್ಬನು ನನ್ನ ಬಳಿಯಿಂದ ಹೊರಟನು. ಅ
ವನು ಖೀಳೇ ಖೀಳಲ್ಪಟ್ಟನೆಂದು, ಹೇಳಿದೆನು. ಅವನನ್ನು ಇಂದಿ
೨೯ನ ವರಿಗೂ ನೋಡಲಿಲ್ಲ. ಇವನನ್ನು ಸಹ ನನ್ನ ಬಳಿಯಿಂದ ತ
ಕ್ಕೊಂಡು ಹೋಗುತ್ತೀರಿ. ಅವನಿಗೆ ಮೋಸ ಬಂದರೆ, ನನ್ನ ನ
ರೆ ಕೂದಲನ್ನು ಕೇಡಿನಿಂದ ಪಾತಾಳದಲ್ಲಿ ಇಳಿಯ ಮಾಡುವಿರಿ,
೩೦ ಅಂದನು. ಹೀಗಿರಲಾಗಿ, ನಾನು ನಿನ್ನ ದಾಸನಾದ ನನ್ನ ತಂದೆ
ಯ ಹತ್ತರ ಸೇರುವ ಸಮಯದಲ್ಲಿ ಅವನ ಪ್ರಾಣ ಹುಡುಗನ ಪ್ರಾ
ಣದ ಸಂಗಡ ಕಟ್ಟಲ್ಪಟ್ಟಿರುವದರಿಂದ ಹುಡುಗನು ನಮ್ಮ ಸಂಗಡ
೩೧ ಇರದೆ ಹೋದರೆ, ಆ ಹುಡುಗನಿಲ್ಲವೆಂದು ನೋಡಿದಾಗಲೇ, ಅ
ವನು ಸಾಯುವನು. ಮತ್ತು ನಿನ್ನ ದಾಸರು ನಿನ್ನ ದಾಸನಾಗಿ
ರುವ ನಮ್ಮ ತಂದೆಯ ನರೆ ಕೂದಲನ್ನು ದುಃಖದಿಂದ ಪಾತಾಳ
೩೨ ಕ್ಕೆ ಇಳಿಯ ಮಾಡುವರು. ಯಾಕಂದರೆ ನಿನ್ನ ದಾಸನಾದ ನಾ
ನು ಆ ಹುಡುಗನಿಗೋಸ್ಕರ ನನ್ನ ತಂದೆಯ ಬಳಿಯಲ್ಲಿ ಹೊಣೆ
ಯಾಗಿ— ಅವನನ್ನು ನಿನ್ನ ಬಳಿಗೆ ತಾರದೆ ಹೋದರೆ, ಎಂದೆಂ
ದಿಗೂ ನನ್ನ ತಂದೆಗೆ ಪಾಪಿಯಾಗುವೆನೆಂದು ಹೇಳಿ ಕೊಂಡಿ
33 ದ್ದೇನೆ. ಹಾಗಾದರೆ ಈಗ ಆ ಹುಡುಗನಿಗೆ ಬದಲಾಗಿ ನಿನ್ನ ದಾ
ಸನು ನನ್ನ ಸ್ವಾಮಿಗೆ ದಾಸನಾಗಿರಲಿ. ಹುಡುಗನು ತನ್ನ ಸ
೩೪ ಹೋದರರ ಸಂಗಡ ಹೋಗಿ ಬಿಡಲಿ. ಯಾಕಂದರೆ ಹುಡುಗನು
ನನ್ನ ಬಳಿಯಲ್ಲಿಲ್ಲದೆ, ನಾನು ಹ್ಯಾಗೆ ನನ್ನ ತಂದೆಯ ಬಳಿಗೆ
ಹೋಗಲಿ! ಹೋದರೆ, ನನ್ನ ತಂದೆಗೆ ಬರುವ ಕೇಡನ್ನು ನೋ
ಡ ಬೇಕಾದೀತು.

## ೪೪. ಸಂಧಿ.

೧ ಆಗ ಯೋಸೆಫನು ತನ್ನ ಸುತ್ತಲು ನಿಂತವರೆಲ್ಲರಿಗೋಸ್ಕರ
ಮನಸ್ಸು ಬಿಗಿ ಹಿಡು ಕೊಳ್ಳಲಾರದೆ, ಎಲ್ಲರನ್ನು ನನ್ನ ಬಳಿ
ಯಿಂದ ಹೊರಗೆ ಹೋಗ ಮಾಡಿರಿ ಎಂದು, ಕೂಗಿದನು. ಯೋ
ಸೆಫನು ತನ್ನ ಸಹೋದರರಿಗೆ ತನ್ನನ್ನು ತಿಳಿಸಿದಾಗ, ಯಾ
೨ ರೂ ಅವನ ಸಂಗಡ ನಿಲ್ಲಲಿಲ್ಲ. ಆಗಲವನು ತನ್ನ ಶಬ್ದವನ್ನೆತ್ತಿ,
ಅತ್ತನು. ಐಗುಪ್ತ್ಯರೂ ಫಕೋನನ ಮನೆಯವರೂ ಕೇಳಿದರು.
೩ ಮತ್ತು ಯೋಸೆಫನು ತನ್ನ ಸಹೋದರರಿಗೆ—ನಾನು ಯೋಸೆ
ಫನು. ನನ್ನ ತಂದೆ ಇನ್ನೂ ಬದುಕುತ್ತಾನೋ! ಅಂದನು. ಅವ
ನ ಸಹೋದರರು ಅವನಿಗೆ ಹೆಣ್ಣಾಗಿ ಪಟ್ಟದರಿಂದ, ಅವನಿಗೆ ಉತ್ತ
ರ ಕೊಡಲಾರದೆ ಹೋದರು.
೪ ಆಗ ಯೋಸೆಫನು ತನ್ನ ಸಹೋದರರಿಗೆ—ದಯೆ ಮಾಡಿ,
ನನ್ನ ಹತ್ತರ ಬನ್ನಿರಿ, ಅಂದನು. ಅವರು ಹತ್ತರ ಬಂದಾಗ, ಅ
ವನು ಹೇಳಿದ್ದೇನಂದರೆ—ನೀವು ಐಗುಪ್ತಕ್ಕೆ ಮಾರಿದ ನಿಮ್ಮ ಸ
ಹೋದರನಾದ ಯೋಸೆಫನು ನಾನೇ. ಆದರೆ ಈಗ ನೀವು ನ
೫ನ್ನನ್ನು ಇಲ್ಲಿಗೆ ಮಾರಿದ್ದಕ್ಕೋಸ್ಕರ ವ್ಯಸನ ಪಡಲೂ, ಕಣ್ಣು
ರಿಯಲೂ ಬಾರದು. ಯಾಕಂದರೆ ಪ್ರಾಣ ಸಂರಕ್ಷಣೆಗೋಸ್ಕ
ರ ದೇವರು ನನ್ನನ್ನು ನಿಮ್ಮ ಮುಂದೆ ಕಳುಹಿಸಿದ್ದಾನೆ. ಯಾಕಂ
೬ ದರೆ ಈ ಎರಡು ವರುಷ ಭೂಮಿಯಲ್ಲಿ ಬರ ಉಂಟು. ಮತ್ತು
ಇನ್ನು ಐದು ವರುಷಗಳು ಬಿತ್ತುವದೂ ಕೊಯ್ಯುವದೂ ಇಲ್ಲ
೭ ದೆ ಇರುವವು. ಹೀಗಿರುವದರಿಂದ ನಿಮ್ಮನ್ನು ಭೂಮಿಯಲ್ಲಿ ಉ
ಳಿಸುವದಕ್ಕೂ, ಬೊಹ್ದ ರಕ್ಷಣೆಯಿಂದ ನಿಮ್ಮ ಪ್ರಾಣಗಳನ್ನು
ರಕ್ಷಿಸುವದಕ್ಕೂ ದೇವರು ನನ್ನನ್ನು ನಿಮ್ಮ ಮುಂದೆ ಕಳುಹಿಸಿದ್ದಾ
೮ ನೆ. ಆದದರಿಂದ ಈಗ ನೀವಲ್ಲ, ದೇವರು ನನ್ನನ್ನು ಇಲ್ಲಿಗೆ ಕಳು
ಹಿಸಿದ್ದಾನೆ. ಅವನು ನನ್ನನ್ನು ಫಕೋನನಿಗೆ ತಂದೆಯಾಗಿಯೂ,
ಅವನ ಸಮಸ್ತ ಮನೆಗೆ ಯಜಮಾನನಾಗಿಯೂ, ಐಗುಪ್ತ ದೇಶ
೯ ದಲ್ಲೆಲ್ಲಾ ಅಧಿಕಾರಿಯಾಗಿಯೂ ಇಟ್ಟಿದ್ದಾನೆ. ನೀವು ಶೀಘ್ರವಾಗಿ
ನನ್ನ ತಂದೆಯ ಬಳಿಗೆ ಏರಿ ಹೋಗಿ, ಅವನಿಗೆ ಹೇಳ ಬೇಕಾದ
ದ್ದೇನಂದರೆ—ನಿನ್ನ ಮಗನಾದ ಯೋಸೆಫನು ಹೇಳುವದೇನಂದ
ರೆ—ದೇವರು ನನ್ನನ್ನು ಐಗುಪ್ತಕ್ಕೆಲ್ಲಾ ಯಜಮಾನನಾಗಿ ಇಟ್ಟಿ
೧೦ ದ್ದಾನೆ. ತಡ ಮಾಡದೆ ನನ್ನ ಬಳಿಗೆ ಇಳಿದು ಬಾ. ಗೋಷೆನ್ ದೇ
ಶದಲ್ಲಿ ನೀನು ವಾಸವಾಗಿದ್ದು, ನಿನ್ನ ಮಕ್ಕಳೂ, ಮೊಮ್ಮಕ್ಕ
ಳೂ, ದನ ಕುರಿಗಳೂ, ನಿನಗಿದ್ದದ್ದೆಲ್ಲವು ಸಹಿತವಾಗಿ, ನನ್ನ ಸ
೧೧ಮೀಪದಲ್ಲಿ ಇರಬೇಕು; ಅಲ್ಲಿ ನಿನ್ನನ್ನು ಸಂರಕ್ಷಿಸುವೆನು. ಯಾ
ಕಂದರೆ—ಇನ್ನು ಬರವುಳ್ಳ ಐದು ವರುಷಗಳಿವೆ. ನೀನೂ, ನಿನ್ನ
೧೨ ಮನೆಯೂ, ನಿನಗಿದ್ದದ್ದೆಲ್ಲವೂ ಬಡವಾಗ ಬಾರದು. ಇಗೋ,
ನಿಮ್ಮ ಸಂಗಡ ಮಾತಾಡುವ ಬಾಯಿ ನನ್ನದೇ ಎಂದು, ನಿಮ್ಮ
ಕಣ್ಣುಗಳೂ, ನನ್ನ ಸಹೋದರನಾದ ಬೆನ್ಯಮಿನಾನ ಕಣ್ಣುಗ
೧೩ಳೂ ನೋಡುತ್ತವೆ. ಹೀಗಿರಲಾಗಿ ನೀವು ಐಗುಪ್ತ ದೇಶದಲ್ಲಿ ನ
ನಗಿರುವ ಎಲ್ಲಾ ಘನತನ್ನೂ, ನೀವು ನೋಡಿದ ಸಮಸ್ತವನ್ನೂ
ನನ್ನ ತಂದೆಗೆ ತಿಳಿಸಿ, ನನ್ನ ತಂದೆಯನ್ನು ಶೀಘ್ರವಾಗಿ ಇಳಿ
ಸ ಬೇಕು.
೧೪ ಆಗಲವನು ತಮ್ಮವಾದ ಬೆನ್ಯಮಿನಾನ ಕುತ್ತಿಗೆಯ ಮೇಲೆ ಬಿ
ದ್ದು, ಅತ್ತನು. ಬೆನ್ಯಮಿನಾನು ಅವನ ಕುತ್ತಿಗೆಯ ಮೇಲೆ ಅತ್ತ
೧೫ನು. ಮತ್ತು ತನ್ನ ಸಹೋದರರೆಲ್ಲರಿಗೆ ಮುದ್ದಿಟ್ಟು, ಅವರ ಮೇಲೆ
ಬಿದ್ದು ಅತ್ತನು. ಆ ಮೇಲೆ ಅವನ ಸಹೋದರರು ಅವನ ಸಂಗಡ
ಮಾತಾಡಿದರು.
೧೬ ಇದಲ್ಲದೆ ಯೋಸೆಫನ ಸಹೋದರರು ಬಂದರೆಂಬ ಸುದ್ದಿ
ಯು ಫಕೋನನ ಮನೆಯಲ್ಲಿ ಕೇಳಲ್ಪಟ್ಟಾಗ, ಅದು ಫಕೋನ
ನ ಕಣ್ಣುಗಳಿಗೂ ಅವನ ಸೇವಕರ ಕಣ್ಣುಗಳಿಗೂ ಬಳ್ಳೇದಾಗಿ
೧೭ತ್ತು. ಮತ್ತು ಫಕೋನನು ಯೋಸೆಫನಿಗೆ ಹೇಳಿದ್ದೇನಂದರೆ—
ನಿನ್ನ ಸಹೋದರರಿಗೆ ಹೇಳ ಬೇಕಾದದ್ದೇನಂದರೆ, ಇದನ್ನು
೧೮ ಮಾಡಿರಿ. ನಿಮ್ಮ ಕತ್ತೆಗಳ ಮೇಲೆ ಹೇರನ್ನು ಹೇರಿ, ಕಾನಾನ್ ದೇ
ಶಕ್ಕೆ ಹೋಗಿ, ನಿಮ್ಮ ತಂದೆಯನ್ನೂ ಸಂಸಾರಗಳನ್ನೂ ತ
ಕ್ಕೊಂಡು, ಇಲ್ಲಿಗೆ ಬನ್ನಿರಿ. ಐಗುಪ್ತ ದೇಶದ ಉತ್ತಮವಾದದ್ದ
೧೯ನ್ನು ನಿಮಗೆ ಕೊಡುವೆನು. ದೇಶದ ಸಾರವನ್ನು ಉಣ್ಣುವಿರಿ. ನಿ
ನಗೆ ಅಪ್ಪಣೆ ಆಯಿತು; ಇದನ್ನು ಮಾಡಿರಿ. ಐಗುಪ್ತ ದೇಶ
ದೊಳಗಿಂದ ನಿಮ್ಮ ಚಿಕ್ಕವರಿಗೋಸ್ಕರವೂ ಹೆಂಡರಿಗೋಸ್ಕರ
ವೂ ರಥಗಳನ್ನು ತಕ್ಕೊಂಡು, ನಿಮ್ಮ ತಂದೆಯನ್ನು ಕರ ಕೊಂ
೨೦ ಡು ಬನ್ನಿರಿ. ನಿಮ್ಮ ಸಾಮಾನುಗಳಿಗೋಸ್ಕರ ಚಿಂತೆ ಪಡ ಬೇಡಿ
ರಿ. ಯಾಕಂದರೆ ಎಲ್ಲಾ ಐಗುಪ್ತ ದೇಶದಲ್ಲಿ ಉತ್ತಮವಾದದ್ದೇ
ನಿಮ್ಮದು.
೨೧ ಇಸ್ರಯೇಲನ ಮಕ್ಕಳು ಹಾಗೆ ಮಾಡಿದರು. ಯೋಸೆಫನು
ಅವರಿಗೆ ಫಕೋನನ ಅಪ್ಪಣೆಯ ಪ್ರಕಾರ ರಥಗಳನ್ನೂ, ಮಾ
೨೨ರ್ಗಕ್ಕೋಸ್ಕರ ಆಹಾರವನ್ನೂ ಕೊಟ್ಟನು. ಅವರೆಲ್ಲರಿಗೆ ಅ
ವನು ಬದಲು ವಸ್ತ್ರಗಳನ್ನೂ ಬೆನ್ಯಮಿನಾನಿಗೆ ಮುನ್ನೂರು
ರುಪಾಯಿಗಳನ್ನೂ, ಐದು ಬದಲು ವಸ್ತ್ರಗಳನ್ನೂ ಕೊಟ್ಟನು.
೨೩ ಮತ್ತು ತಂದೆಗೆ ಅವನು ಕಳುಹಿಸಿದ್ದೇನಂದರೆ, ಐಗುಪ್ತದ ಉತ್ತ
ಮವಾದದ್ದನ್ನು ಹೊರುವ ಹತ್ತು ಕತ್ತೆಗಳೂ, ಪ್ರಯಾಣಕ್ಕೋಸ್ಕ
ರ ತಂದೆಗೆ ಕಳುಹಿಸಿದ ಗೋಧಿ, ಕೊಟ್ಟಿ, ಆಹಾರಗಳನ್ನು
೨೪ ಹೊರುವ ಹತ್ತು ಹೆಣ್ಣು ಕತ್ತೆಗಳೂ. ಆಗಲವನು ತನ್ನ ಸಹೋ
ದರರಿಗೆ ಅಪ್ಪಣೆ ಕೊಟ್ಟು, ಮಾರ್ಗದಲ್ಲಿ ಜಗಳವಾಡ ಬೇಡಿಕೆಂ
ದು, ಅವರಿಗೆ ಹೇಳಿದ ಮೇಲೆ, ಅವರು ಹೊರಟರು.
೨೫ ಅವರು ಐಗುಪ್ತವನ್ನು ಬಿಟ್ಟು, ಏರಿ ಹೋಗಿ, ಕಾನಾನ್ ದೇ
೨೬ಶಕ್ಕೆ ತಂದೆಯಾದ ಯಾಕೋಬನ ಬಳಿಗೆ ಬಂದು, ಯೋಸೆ
ಫನು ಇನ್ನೂ ಜೀವದಿಂದಿದ್ದಾನೆ; ಅವನೇ ಐಗುಪ್ತ ದೇಶವನ್ನೆಲ್ಲಾ ಆ
ಳುತ್ತಾನೆಂದು, ಅವನಿಗೆ ತಿಳಿಸಿದಾಗ, ಅವನು ಅವರನ್ನು ನಂಬದೆ
೨೭ ಇದ್ದದರಿಂದ, ಅವನ ಹೃದಯವು ಕುಂದಿ ಹೋಯಿತು. ಆದರೆ
ಯೋಸೆಫನು ತಮಗೆ ಹೇಳಿದ ಎಲ್ಲಾ ಮಾತುಗಳನ್ನು ಅವರು ಅ
ವನಿಗೆ ಹೇಳಿದಾಗಲೂ, ಅವನನ್ನು ವೈಯುವದಕ್ಕೆ ಯೋಸೆಫನು
ಕಳುಹಿಸಿದ ರಥಗಳನ್ನು ಅವನು ನೋಡಿದಾಗಲೂ, ಅವರ ತಂದೆ
೨೮ ಯಾದ ಯಾಕೋಬನ ಆತ್ಮವು ಉಜ್ಜೀವಿಸಿತು. ಆಗ ಇಸ್ರಯೇ
ಲನು, ನನ್ನ ಮಗನಾದ ಯೋಸೆಫನು ಇನ್ನೂ ಜೀವದಿಂದಿರುವ
ದೇ ಸಾಕು. ನಾನು ಸಾಯುವದಕ್ಕಿಂತ ಮುಂಚೆ ಹೋಗಿ, ಅವ
ನನ್ನು ನೋಡುವೆನು, ಅಂದನು.

## ೪೬. ಸಂಧಿ.

೧ ಆಗ ಇಸ್ರಯೇಲನು ತನಗಿದ್ದದ್ದನ್ನೆಲ್ಲಾ ತಕ್ಕೊಂಡು, ಬೇ
ರ್ಷೆಬಕ್ಕೆ ಬಂದು, ತನ್ನ ತಂದೆಯಾದ ಇಸಾಕನ ದೇವರಿಗೆ
೨ ಬಲಿಗಳನ್ನು ಅರ್ಪಿಸಿದನು. ಮತ್ತು ದೇವರು ಇಸ್ರಯೇಲನಿಗೆ
ರಾತ್ರಿಯ ದರ್ಶನದಲ್ಲಿ—ಯಾಕೋಬನೇ, ಯಾಕೋಬನೇ,
3 ಅಂದನು. ಅವನು—ಇಗೋ, ಇದ್ದೇನೆ, ಅಂದನು. ಆಗಲವನು
—ನಿನ್ನ ತಂದೆಯ ದೇವರಾಗಿರುವ ದೇವರು ನಾನೇ. ಐಗುಪ್ತ
ಕ್ಕೆ ಇಳಿದು ಹೋಗುವದಕ್ಕೆ ಭಯ ಪಡ ಬೇಡ; ಯಾಕಂದರೆ
೪ ಅಲ್ಲಿ ನಿನ್ನನ್ನು ದೊಡ್ಡ ಜನಾಂಗವಾಗ ಮಾಡುವೆನು. ನಾನೇ ನಿ
ನ್ನ ಸಂಗಡ ಐಗುಪ್ತಕ್ಕೆ ಇಳಿದು ಹೋಗುವೆನು. ನಾನೇ ನಿಶ್ಚ
ಯವಾಗಿ ನಿನ್ನನ್ನು ಮೇಲೆ ಬರ ಮಾಡುವೆನು. ಮತ್ತು ಯೋಸೆ
೫ ಫನು ನಿನ್ನ ಕಣ್ಣುಗಳ ಮೇಲೆ ಕೈ ಇಡುವನು. ಆಗ ಯಾ
ಕೋಬನು ಬೇರ್ಷೆಬದಿಂದ ಎದ್ದು ಹೋದನು. ಇಸ್ರಯೇಲ
ನ ಮಕ್ಕಳು ತಮ್ಮ ತಂದೆಯಾದ ಯಾಕೋಬನನ್ನೂ, ತಮ್ಮ
ಚಿಕ್ಕವರನ್ನೂ, ತಮ್ಮ ಹೆಂಡರನ್ನೂ, ಅವನನ್ನು ಏರಿಸುವದ
ಕ್ಕೋಸ್ಕರ ಫಕೋನನು ಕಳುಹಿಸಿದ ರಥಗಳ ಮೇಲೆ ಏರಿಸಿ
೬ ಕೊಂಡು ಹೋದರು. ಅವರು ತಮ್ಮ ದನಗಳನ್ನೂ, ಕಾನಾನ್
ದೇಶದಲ್ಲಿ ತಾವು ಸಂಪಾದಿಸಿದ ಎಲ್ಲಾ ಸಂಪತ್ತನ್ನೂ ತಕ್ಕೊಂ

ರು ಐಗುಪ್ತಕ್ಕೆ ಬಂದರು. ಯಾಕೋಬನು ತನ್ನ ಎಲ್ಲಾ ಬೀಜ
೭ ದ ಸಂಗಡ ಬಂದನು. ತನ್ನ ಮಕ್ಕಳ್ಳನೂಪ್ಪ, ಮಕ್ಕಳ್ಳ ಮಕ್ಕಳ್ಳ
ನೂಪ್ಪ, ತನ್ನ ಕುಮಾರ್ತೆಗಳ್ಳನೂಪ್ಪ, ಮಕ್ಕಳ್ಳ ಕುಮಾರ್ತೆಗಳ್ಳ
ನೂಪ್ಪ, ತನ್ನ ಬೀಜವನ್ನೆಲ್ಲಾ ಐಗುಪ್ತಕ್ಕೆ ಕರ ಕೊಂಡು ಬಂದನು.
೮ ಐಗುಪ್ತಕ್ಕೆ ಬಂದ ಇಸ್ರಯೇಲನ ಮಕ್ಕಳ್ಳ ಹೆಸರುಗಳು ಯಾವ
ವಂದರೆ—ಯಾಕೋಬನೂ, ಅವನ ಮಕ್ಕಳ್ಳೂ—ಯಾಕೋಬನ
೯ ಜೊಚ್ಚಲನಾದ ರೂಬೆನನೂ, ರೂಬೆನನ ಮಕ್ಕಳ್ಳಾದ ಹನೋ
೧೦ ಕ, ಫಲ್ಲು, ಹೆಜ್ರೋನ್, ಕರ್ಮಿ ಎಂಬವರು. ಸಿಮೆಯೋನನ
ಮಕ್ಕಳ್ಳಾದ ಯೆಮುವೇಲ್, ಯಾಮಿನ್, ಒಹದ್, ಯಾಕಿನ್,
೧೧ ಜೋಹರ್, ಕನಾನಿಯಳ್ಳ ಮಗನಾದ ಸಾಲ ಎಂಬವರು. ಲೇವಿ
ಯ ಮಕ್ಕಳ್ಳಾದ ಗೆರ್ಶೋನ್, ಕಹಾತ್, ಮೆರಾರಿ ಎಂಬವರು
೧೨ ಯೆಹೂದನ ಮಕ್ಕಳ್ಳಾದ ಏರ್, ಓನಾನ್, ಷೇಲ, ಪೇರೆಚ್, ಜೇರ
ಹ ಎಂಬವರು. ಏರನೂ, ಓನಾನ್‌ನೂ ಕಾನಾನ್ ದೇಶದಲ್ಲಿ ಸತ್ತ
೧೩ ರು. ಹೆಜ್ರೋನ್, ಹಮುಲ್ ಪೇರೆಚನ ಮಕ್ಕಳ್ಳಾಗಿದ್ದರು. ಇಸ್ಸ
ಕಾರನ ಮಕ್ಕಳ್ಳಾದ ತೋಲ, ಪುವ, ಯೋಬ್, ಶಿಮ್ರೊನ್ ಎಂಬವ
೧೪ ರು. ಜೆಬುಲೋನನಮಕ್ಕಳ್ಳಾದ ಸೆರೆತ್, ಏಲೊನ್, ಯಹ್ಲೆಲ್,
೧೫ ಎಂಬವರು. ಇವರು ಲೇಯಳ್ಳ ಮಕ್ಕಳ್ಳು. ಇವರನ್ನೂಪ್ಪ, ಅವನ
ಮಗಳ್ಳಾದ ದೀನಳ್ಳನೂಪ್ಪ, ಅವಳ್ಳು ಪದನಾರಮನ್ನಲ್ಲಿ ಯಾಕೋಬ
ನಿಗೆ ಹೆತ್ತಳ್ಳು. ಅವನ ಕುಮಾರರೂ ಕುಮಾರ್ತೆಗಳ್ಳೂ ಎಲಾ
೧೬ ಮೂವತ್ತು ಮೂರು ಮಂದಿ. ಗಾದನ ಮಕ್ಕಳ್ಳಾದ ಜಿಫ್ಯೋನ್,
ಹಗ್ಗಿ, ಶೂನಿ, ಎಜ್ಬೊನ್, ಏರಿ, ಅರೋದಿ, ಅರೇಲಿ, ಎಂಬವ
೧೭ ರು. ಆಶೇರನ ಮಕ್ಕಳ್ಳಾದ ಯಿಮ್ನಾ, ಯಿಷ್ವಾ, ಯಿಷ್ವಿ,
ಬೆರಿಯ, ಅವರ ಸಹೋದರಿಯಾದ ಸೇರಳ್ಳೂ, ಬೆರಿಯನ ಮ
೧೮ ಕ್ಕಳ್ಳಾದ ಹೇಬೆರ್, ಮಲ್ಕಿಯೆಲ್ ಎಂಬವರು. ಲಾಬಾನನು ತನ್ನ
ಮಗಳ್ಳಾದ ಲೇಯಳ್ಳಿಗೆ ಕೊಟ್ಟ ಜಿಲ್ಪಳ ಮಕ್ಕಳ್ಳು ಇವರೇ. ಇ
ಪ್ಪತ್ತಾರು ಮಂದಿಯಾಗಿರುವ ಇವರನ್ನು ಯಾಕೋಬನಿಗೆ ಹೆ
೧೯ ತ್ತಳ್ಳು. ಯಾಕೋಬನ ಹೆಂಡತಿಯಾದ ರಾಹೆಲಳ್ಳ ಮಕ್ಕಳ್ಳಾದ
೨೦ ಯೋಸೆಫ್, ಬೆನ್ಯಮೀನ್ ಎಂಬವರು. ಮತ್ತು ಯೋಸೆಫನಿಗೆ ಐ
ಗುಪ್ತ ದೇಶದಲ್ಲಿ ಮಕ್ಕಳ್ಳು ಹುಟ್ಟಿದರು. ಓನಿನ ಯಾಜಕನಾಗಿ
ರುವ ಪೊಟಿಫೆರನ ಮಗಳ್ಳಾದ ಅಸ್ನಥಳ್ಳು ಮನಸ್ಸೆಯನ್ನೂಪ್ಪ
೨೧ ಎಫ್ರಾಯಿಮನನ್ನೂಪ್ಪ ಅವನಿಗೆ ಹೆತ್ತಳ್ಳು. ಬೆನ್ಯಮೀನನ ಮ
ಕ್ಕಳ್ಳಾದ ಬೇಲಾ, ಬೇಬೆರ್, ಅಶ್ಬೆಲ್, ಗೇರಾ, ನಾಮನ್, ಏಹೀ,
೨೨ ರೋಷ್, ಮುಪ್ಪಿಮ್, ಹುಪ್ಪಿಮ್, ಆರ್ದ್ ಎಂಬವರು. ಇವರು
ಯಾಕೋಬನಿಗೆ ಹುಟ್ಟಿದ ರಾಹೆಲಳ್ಳ ಮಕ್ಕಳ್ಳು. ಎಲ್ಲಾ ಕೂಡಿ
೨೩ ಹದಿನಾಲ್ಕು ಮಂದಿ. ದಾನನ ಮಗನಾದ ಹುಷಿಮನು. ನೆಫ್ತಲೀ
೨೪ ಮನ ಮಕ್ಕಳ್ಳಾದ ಯಾಹೆಲ್, ಗೂನಿ, ಯೇಜೆರ್, ಶಿಲ್ಲೆಮ್, ಎಂ
೨೫ ಬವರು. ಇವರು ಲಾಬಾನನು ತನ್ನ ಮಗಳ್ಳಾದ ರಾಹೆಲಳ್ಳಿಗೆ
ಕೊಟ್ಟ ಬಿಲ್ಹಳ್ಳ ಮಕ್ಕಳ್ಳು. ಇವರನ್ನು ಅವಳ್ಳು ಯಾಕೋಬನಿಗೆ
ಹೆತ್ತಳ್ಳು. ಎಲ್ಲಾ ಕೂಡಿ ಏಳ್ಳು ಮಂದಿ.
೨೬ ಯಾಕೋಬನ ಮಕ್ಕಳ್ಳ ಹೆಂಡರು ಹೊರತಾಗಿ ಯಾಕೋ
ಬನ ಸಂಗಡ ಐಗುಪ್ತಕ್ಕೆ ಬಂದವರೆಲ್ಲಾ, ಅವನ ತೊಡೆಯೊಳ್ಳ
೨೭ ಗಿಂದ ಬಂದವರು, ಎಲ್ಲಾ ಅರವತ್ತಾರು ಪ್ರಾಣಗಳ್ಳು. ಮತ್ತು
ಯೋಸೆಫನಿಗೆ ಐಗುಪ್ತದಲ್ಲಿ ಹುಟ್ಟಿದ ಮಕ್ಕಳ್ಳು ಎರಡು ಪ್ರಾಣ.
ಯಾಕೋಬನ ಮನೆಯವರಾಗಿ ಐಗುಪ್ತಕ್ಕೆ ಬಂದ ಪ್ರಾಣಗಳೆ
ಲ್ಲಾ ಎಪ್ಪತ್ತು.

೨೮ ಇದಲ್ಲದೆ ಗೋಷೆನಿಗೆ ಮಾರ್ಗವನ್ನು ತೋರಿಸುವ ಹಾಗೆ,
ಯೆಹೂದನನ್ನು ಮುಂದಾಗಿ ಯೋಸೆಫನ ಬಳ್ಳಿಗೆ ಕಳ್ಳಿಸಿದನು.
೨೯ ಮತ್ತು ಅವರು ಗೋಷೆನ್ ದೇಶಕ್ಕೆ ಬಂದರು. ಆಗ ಯೋಸೆಫ
ನು ತನ್ನ ರಥವನ್ನು ಸಿದ್ಧ ಮಾಡಿ ಕೊಂಡು ತನ್ನ ತಂದೆಯಾದ
ಇಸ್ರಯೇಲನಿಗೆದುರಾಗಿ ಗೋಷೆನಿಗೆ ಹೋಗಿ, ಅವನ ದರ್ಶನ
ಮಾಡಿ, ಅವನ ಕುತ್ತಿಗೆಯ ಮೇಲೆ ಬಿದ್ದು, ಅವನ ಕುತ್ತಿಗೆಯ
೩೦ ಮೇಲೆ ಬಹಳ್ಳವಾಗಿ ಅತ್ತನು. ಆಗ ಇಸ್ರಯೇಲನು ಯೋಸೆಫ
ನಿಗೆ, ನಿನ್ನ ಮುಖವನ್ನು ನೋಡಿದ ಮೇಲೆ, ಈಗ ನಾನು ಸಾ
ಯಲಿ; ಯಾಕಂದರೆ ನೀನು ಇನ್ನೂ ಜೀವದಿಂದಿರುತ್ತೀ, ಅಂದ
೩೧ ನು. ಆಗ ಯೋಸೆಫನು ತನ್ನ ಸಹೋದರರಿಗೂ ತನ್ನ ತಂದೆ
ಯ ಮನೆಯವರಿಗೂ ಹೇಳ್ದೇನಂದರೆ, ನಾನು ಮೇಲೆ ಹೋಗಿ
ಫರೋನನಿಗೆ ತಿಳ್ಳಿಸಿ, ಕಾನಾನ್ ದೇಶದಲ್ಲಿದ್ದ ನನ್ನ ಸಹೋದರ
ರೂ, ನನ್ನ ತಂದೆಯ ಮನೆಯವರೂ ನನ್ನ ಬಳ್ಳಿಗೆ ಬಂದಿದ್ದಾರೆ.
೩೨ ಅದರೆ ಆ ಮನುಷ್ಯರು ಕುರಿ ಕಾಯುವವರೂ ಮಂದೆ ಉಂಟಾ
ದವರೂ ಆಗಿದ್ದಾರೆ. ತಮ್ಮ ಕುರಿ ದನಗಳನ್ನೂಪ್ಪ ತಮಗಿದ್ದದ್ದೆ
ಲ್ಲವನ್ನೂಪ್ಪ ತಕ್ಕೊಂಡು ಬಂದಿದ್ದಾರೆಂದು, ಹೇಳ್ಳುವೆನು. ಮತ್ತು
ಫರೋನನು ನಿಮ್ಮನ್ನು ಕರಿಸಿ, ನಿಮ್ಮ ಕೆಲಸವೇನೆಂದು ಕೇಳ್ಳುವ
೩೩ ದಾದರೆ, ನೀವು ಗೋಷೆನ್ ದೇಶದಲ್ಲಿ ವಾಸವಾಗಿರುವ ಹಾಗೆ,
ಚಿಕ್ಕ ಪ್ರಾಯದಾರಭ್ಯ ಇಂದಿನ ವರೆಗೂ ನಿನ್ನ ದಾಸರಾದ
ನಾವೂ ನಮ್ಮ ತಂದೆಗಳೂ ಮಂದೆ ಕಾಯುವವರಾಗಿದ್ದೇವೆ, ಎಂ
ದನ್ನು ಹೇಳ್ಳು. ಯಾಕಂದರೆ ಕುರಿ ಕಾಯುವವರೆಲ್ಲಾ ಐಗುಪ್ತ್ಯ
ರಿಗೆ ಅಸಹ್ಯರಾಗಿದ್ದಾರೆ.

## ೪೭. ಸಂಧಿ.

೧ ಆಗ ಯೋಸೆಫನು ಬಂದು, ಫರೋನನಿಗೆ ತಿಳ್ಳಿಸಿ, ನನ್ನ ತಂ
ದೆಯೂ, ಸಹೋದರರೂ ತಮ್ಮ ಕುರಿ ದನಗಳನ್ನೂಪ್ಪ ತಮಗಿ
ದ್ದ ಎಲ್ಲವುಗಳನ್ನೂಪ್ಪ ತಕ್ಕೊಂಡು, ಕಾನಾನ್ ದೇಶದಿಂದ ಬಂದಿದ್ದಾ
೨ ರೆ. ಇಗೋ, ಗೋಷೆನ್ ದೇಶದಲ್ಲಿದ್ದಾರೆ, ಅಂದನು. ಮತ್ತು ತ
ನ್ನ ಸಹೋದರರೊಳ್ಳಗಿಂದ ಐದು ಮಂದಿಯನ್ನು ತಕ್ಕೊಂಡು,
ಫರೋನನ ಮುಂದೆ ನಿಲ್ಲಿಸಿದನು. ಫರೋನನು ಅವನ ಸಹೋ
೩ ದರರಿಗೆ, ನಿಮ್ಮ ಕೆಲಸವೇನು! ಅಂದಾಗ, ಅವರು ಫರೋನನಿಗೆ
ನಿನ್ನ ದಾಸರಾದ ನಾವೂ ನಮ್ಮ ತಂದೆಗಳೂ ಕುರಿ ಕಾಯುವವ
೪ ರಾಗಿ ಇದ್ದೇವೆ, ಅಂದರು. ಮತ್ತು ಫರೋನನಿಗೆ, ದೇಶದಲ್ಲಿ ವಾ
ಸ ಮಾಡ ಬಂದಿದ್ದೇವೆ; ಯಾಕಂದರೆ ಕಾನಾನ್ ದೇಶದಲ್ಲಿ ಬರ
ವು ಕಠಿಣವಾಗಿರುವದರಿಂದ, ನಿನ್ನ ದಾಸರ ಕುರಿಗಳಿಗೆ ಮೇಯು
ವ ಸ್ಥಳವಿಲ್ಲ. ಹೀಗಿರುವದರಿಂದ ನಿನ್ನ ದಾಸರು ಗೋಷೆನ್ ದೇ
ಶದಲ್ಲಿ ವಾಸವಾಗಿರುವದಕ್ಕೆ ಅಪ್ಪಣೆಯಾಗ ಬೇಕು, ಅಂದನು.
೫ ಆಗ ಫರೋನನು ಯೋಸೆಫನಿಗೆ ನಿನ್ನ ತಂದೆಯೂ ಸಹೋ
೬ ದರರೂ ನಿನ್ನ ಬಳ್ಳಿಗೆ ಬಂದಿದ್ದಾರೆ. ಐಗುಪ್ತ ದೇಶವು ನಿನ್ನ ಮುಂ
ದೆ ಅಸೆ. ದೇಶದ ಉತ್ತಮವಾದದರಲ್ಲಿ ನಿನ್ನ ತಂದೆಗೂ ಸಹೋ
ದರರಿಗೂ ನಿವಾಸವನ್ನು ಕೊಡು. ಗೋಷೆನ್ ದೇಶದಲ್ಲಿ ಅವರು
ವಾಸವಾಗಿರಲಿ. ಮತ್ತು ಅವರಲ್ಲಿ ಗಟ್ಟಿಗರು ಇದ್ದಾರೆಂದು, ನಿನ
ಗೆ ತಿಳ್ಳಿದರೆ, ಅವರನ್ನು ನನಗಿರುವ ಮಂದೆಗಳ ಮೇಲೆ ಯೆಜ
ಮಾನರಾಗಿ ಇರಿಸು, ಅಂದನು.



೭ ಆಗ ಯೋಸೆಫನು ತನ್ನ ತಂದೆಯಾದ ಯಾಕೋಬನನ್ನು
ತಕ್ಕೊಂಡು, ಫರೋನನ ಮುಂದೆ ನಿಲ್ಲಿಸಿದನು. ಯಾಕೋಬ
೮ ನು ಫರೋನನನ್ನು ಆಶೀರ್ವದಿಸಿದನು. ಫರೋನನು ಯಾ
ಕೋಬನಿಗೆ, ನಿನ್ನ ಜೀವದ ವರುಷದ ದಿನಗಳು ಎಷ್ಟು! ಅಂದಾ
೯ ಗ, ಯಾಕೋಬನು ಫರೋನನಿಗೆ, ನನ್ನ ಪರವಾಸದ ವರುಷ
ಗಳ ದಿನಗಳು ನೂರ ಮೂವತ್ತು ವರುಷ. ನನ್ನ ಜೀವದ ವರು
ಷಗಳ ದಿನಗಳು ಸ್ವಲ್ಪವೂ ಕೆಟ್ಟವೂ ಆಗಿದ್ದು, ನನ್ನ ತಂದೆಗ
ಳು ಪರವಾಸವಾಗಿದ್ದ ಜೀವದ ವರುಷಗಳ ದಿನಗಳಿಗೆ ಮುಟ್ಟಲಿ
೧೦ ಲ್ಲ, ಅಂದನು. ಆಗ ಯಾಕೋಬನು ಫರೋನನನ್ನು ಆಶೀರ್ವ
ದಿಸಿ, ಫರೋನನ ಸನ್ನಿಧಿಯಿಂದ ಹೊರಟನು.
೧೧ ಆಗ ಯೋಸೆಫನು ತನ್ನ ತಂದೆಗೂ ತನ್ನ ಸಹೋದರರಿ
ಗೂ ನಿವಾಸವನ್ನು ಕೊಟ್ಟು, ಫರೋನನ ಅಪ್ಪಣೆಯ ಪ್ರಕಾರ
ಐಗುಪ್ತ ದೇಶದ ಉತ್ತಮವಾದದರಲ್ಲಿ, ರಾಮೆಸೆನ್ ಭೀಮೆಯಲ್ಲಿ
೧೨ ಸ್ವಾಸ್ತ್ಯವನ್ನು ಕೊಟ್ಟನು. ಮತ್ತು ಯೋಸೆಫನು ತನ್ನ ತಂದೆ
ಯನ್ನೂಪ್ಪ, ತನ್ನ ಸಹೋದರರನ್ನೂಪ್ಪ, ತನ್ನ ತಂದೆಯ ಮನೆ
ಯವರೆಲ್ಲರನ್ನೂಪ್ಪ, ಮಕ್ಕಳ್ಳ ತೆಳ್ಳುವ ಪ್ರಕಾರ ಆಹಾರವನ್ನು ಕೊ
ಟ್ಟು, ಸಂರಕ್ಷಣೆ ಮಾಡಿದನು.
೧೩ ಅದರೆ ಬರವು ಅತಿ ಭಾರವಾಗಿದ್ದದರಿಂದ, ದೇಶದಲ್ಲೆಲ್ಲಿಯೂ
ಆಹಾರ ಇರಲಿಲ್ಲ. ಐಗುಪ್ತ ದೇಶವೂ ಕಾನಾನ್ ದೇಶವೂ ಬರ
೧೪ ದಿಂದ ಕ್ಷೀಣವಾದವು. ಆಗ ಯೋಸೆಫನು ಐಗುಪ್ತ ದೇಶದಲ್ಲಿ
ಯೂ ಕಾನಾನ್ ದೇಶದಲ್ಲಿಯೂ ಇದ್ದ ಹಣವನ್ನೆಲ್ಲಾ ಅವ
ರು ಕೊಂಡು ಕೊಂಡ ಧಾನ್ಯಕ್ಕೆ ಬದಲಾಗಿ ಕೂಡಿಸಿ, ಆ ಹಣ
೧೫ ವನ್ನು ಫರೋನನ ಮನೆಗೆ ತರಿಸಿದನು. ಐಗುಪ್ತ ದೇಶದಲ್ಲಿ
ಯೂ ಕಾನಾನ್ ದೇಶದಲ್ಲಿಯೂ ಹಣ ಮುಗಿದಾಗ, ಐಗುಪ್ತ್ಯರೆಲ್ಲ
ರು ಯೋಸೆಫನ ಬಳ್ಳಿಗೆ ಬಂದು—ನಮಗೆ ಕೊಟ್ಟೆ ಕೊಡು,
೧೬ ನಾವು ನಿನ್ನ ಮುಂದೆ ಸಾಯುವದು ಯಾಕೆ! ಯಾಕಂದರೆ ಹಣ
ತೀರಿತು, ಅಂದರು. ಆಗ ಯೋಸೆಫನು—ನಿಮ್ಮ ದನಗಳನ್ನು
ತನ್ನಿ; ಹಣ ತೀರಿದ್ದಾದರೆ ನಿಮ್ಮ ದನಗಳಿಗೋಸ್ಕರ ಕೊಡು
೧೭ ತ್ತೇನೆ, ಅಂದನು. ಆಗಲವರು ತಮ್ಮ ದನಗಳನ್ನು ಯೋಸೆಫನ
ಬಳ್ಳಿಗೆ ತಂದರು. ಯೋಸೆಫನು ಅವರಿಗೆ ಕುದುರೆಗಳ್ಳಿಗೋಸ್ಕರ
ವೂ, ಕುರಿ ದನ ಕತ್ತೆಗಳ್ಳಿಗೋಸ್ಕರವೂ ಕೊಟ್ಟೆ ಕೊಟ್ಟನು. ಆ
ವರುಷದಲ್ಲಿ ಅವರನ್ನು ಅವರ ಎಲ್ಲಾ ದನಗಳ್ಳಿಗೋಸ್ಕರ ಕೊ
ಟ್ಟೆಯಿಂದ ಸಾಕಿದನು.
೧೮ ಆ ವರುಷವಾದ ಮೇಲೆ, ಎರಡನೇ ವರುಷದಲ್ಲಿ ಅವನ ಬಳ್ಳಿ
ಗೆ ಬಂದು, ಹಣವೂ, ಪಶುಗಳ ಮಂದೆಗಳೂ ನಮ್ಮ ಸ್ವಾಮಿ
ಯ ವಶವಾಗಿ ಮುಗಿದಿರುವದರಿಂದ, ನಮ್ಮ ಶರೀರಗಳೂ ಭೂಮಿ
ಯೂ ಹೊರ್ತು ನಮ್ಮ ಸ್ವಾಮಿಯ ಸನ್ನಿಧಿಯಲ್ಲಿ ಏನೂ ಮಿ
೧೯ ಗಲಿಲ್ಲವೆಂದು, ನಮ್ಮ ಸ್ವಾಮಿಗೆ ಮರೆ ಮಾಡುವದಿಲ್ಲ; ನಾವೂ
ನಮ್ಮ ಭೂಮಿಯೂ ನಿನ್ನ ಕಣ್ಣುಗಳ ಮುಂದೆ ಸಾಯುವದು
ಯಾಕೆ! ನಮ್ಮನ್ನೂಪ್ಪ ನಮ್ಮ ಭೂಮಿಯನ್ನೂಪ್ಪ ಕೊಟ್ಟೆಗೆ ಕೊಂ
ಡುಕೋ. ಆಗ ನಾವೂ ನಮ್ಮ ಭೂಮಿಯೂ ಫರೋನನಿಗೆ ದಾ
ಸರಾಗಿರುವೆವು. ಮತ್ತು ಬೀಜವನ್ನು ಕೊಡು. ಆಗ ನಾವು ಸಾ
ಯದೆ ಬದುಕುವೆವು. ಮತ್ತು ಭೂಮಿಯು ಹಾಳ್ಳಾಗದೆ ಇರುವ
೨೦ ದು, ಅಂದರು. ಆಗ ಯೋಸೆಫನು ಐಗುಪ್ತ ದೇಶವನ್ನೆಲ್ಲಾ ಫ
ರೋನನಿಗೆ ಕೊಂಡು ಕೊಂಡನು; ಹ್ಯಾಗಂದರೆ ಬರವು ಅವರ
ಮೇಲೆ ಕಠಿಣವಾಗಿದ್ದದರಿಂದ, ಐಗುಪ್ತ್ಯರು ತಮ್ಮ ತಮ್ಮ ಹೊಲಗ
ಳನ್ನು ಮಾರಿ ಬಿಟ್ಟರು. ಹಾಗೆ ದೇಶವು ಫರೋನನದಾಯಿತು.
೨೧ ಮತ್ತು ಅವನು ಜನರನ್ನು ಐಗುಪ್ತದ ಈ ಪ್ರಾಂತ್ಯದಿಂದ ಆ
೨೨ ಪ್ರಾಂತ್ಯದ ಪರ್ಯಂತರಕ್ಕೂ ಪಟ್ಟಿಗಳಲ್ಲಿ ಸೇರಿಸಿದನು. ಯಾ
ಜಕರ ಭೂಮಿಯನ್ನು ಮಾತ್ರ ಅವನು ಕೊಂಡು ಕೊಳ್ಳಲಿಲ್ಲ.
ಯಾಕಂದರೆ ಯಾಜಕರಿಗೆ ಫರೋನನದೆಸೆಯಿಂದ ನೇಮಿತ್ತು.
ಅವರು ಫರೋನನು ತಮಗೆ ನೇಮಿಸಿ ಕೊಡುವದನ್ನು ಉಣ್ಣು
೨೩ ತ್ತಿದ್ದದರಿಂದ, ತನ್ನು ಭೂಮಿಯನ್ನು ಮಾರಲಿಲ್ಲ. ಆಗ ಯೋಸೆ
ಫನು ಜನರಿಗೆ—ಇಗೋ, ಇಂದು ನಿಮ್ಮನ್ನೂಪ್ಪ ನಿಮ್ಮ ಭೂಮಿಯ
ನ್ನೂಪ್ಪ ಫರೋನನಿಗೆ ಕೊಂಡು ಕೊಂಡಿದ್ದೇನೆ. ಇಗೋ, ಇಲ್ಲಿ ನಿ
೨೪ ಮಗೆ ಬೀಜ. ಭೂಮಿಗೆ ಬೀಜ ಹಾಕಿರಿ. ಬೈರು ಬಂದಾಗ, ಐದ
ನೇ ಪಾಲನ್ನು ಫರೋನನಿಗೆ ಕೊಡ ಬೇಕು. ನಾಲ್ಕು ಪಾಲು
ಹೊಲದ ಬೀಜಕ್ಕೋಸ್ಕರವೂ, ನಿಮ್ಮ ಆಹಾರಕ್ಕೋಸ್ಕರವೂ,
ನಿಮ್ಮ ಮನೆಗಳ್ಳಿಗೋಸ್ಕರವೂ, ನಿಮ್ಮ ಮಕ್ಕಳ್ಳ ಆಹಾರಕ್ಕೋಸ್ಕ
೨೫ ರವೂ ನಿಮಗಿರಲಿ, ಅಂದನು. ಆಗಲವರು—ನೀನೇ ನಮ್ಮನ್ನು
ಬದುಕಿಸಿದಿ. ನಮ್ಮ ಸ್ವಾಮಿಯ ಕಣ್ಣುಗಳ ಮುಂದೆ ನಮಗೆ ದ
೨೬ ಯೆ ದೊರಕಲಿ. ನಾವು ಫರೋನನ ದಾಸರಾಗಿರುವೆವು, ಅಂದರು.
ಹಾಗೆ ಯೋಸೆಫನು ಫರೋನನಿಗೆ ಐದನೇ ಪಾಲು ಆಗ ಬೇ
ಕೆಂಬುವದನ್ನು ಐಗುಪ್ತದ ಭೂಮಿಗೆ ಇಂದಿನ ಪರ್ಯಂತರಕ್ಕೂ
ನೇಮವಾಗಿ ಸ್ಥಾಪಿಸಿದನು. ಯಾಜಕರ ಭೂಮಿಯು ಮಾತ್ರ ಫ
ರೋನನದಾಗಲಿಲ್ಲ.
೨೭ ಆದರೆ ಇಸ್ರಯೇಲನವರು ಐಗುಪ್ತ ದೇಶದಲ್ಲಿ ಗೋಷೆನ್
ಭೀಮೆಯಲ್ಲಿ ವಾಸವಾಗಿದ್ದು, ಅದರಲ್ಲಿ ಸ್ಥಿತಿ ಉಂಟಾದವರಾಗಿ ಬೆ
೨೮ ಳ್ಳದು, ಬಹಳ್ಳ ಜೆಜ್ಜಿದರು. ಇದಲ್ಲದೆ ಯಾಕೋಬನು ಐಗುಪ್ತ ದೇ
ಶದಲ್ಲಿ ಹದಿನೇಳ್ಳು ವರುಷ ಬದುಕಿದನು. ಯಾಕೋಬನು ಬದು
೨೯ ಕಿದ ವರುಷಗಳ ದಿನಗಳು ನೂರನಾಲ್ವತ್ತೇಳ್ಳು ವರುಷ. ಇಸ್ರ
ಯೇಲನು ಸಾಯುವದಕ್ಕಿದ್ದ ದಿನಗಳು ಸಮೀಪಿಸಿದಾಗ, ಅವ
ನು ಮಗನಾದ ಯೋಸೆಫನನ್ನು ಕರಿಸಿ, ಅವನಿಗೆ ಹೇಳ್ದೇನಂದ
ರೆ—ನಿನ್ನ ಸನ್ನಿಧಿಯಲ್ಲಿ ನಾನು ದಯೆ ಹೊಂದಿದ್ದಾದರೆ, ನಿನ್ನ
ಕೈಯನ್ನು ನನ್ನ ಸೊಂಟದ ಕೆಳಗಿಡು. ನನಗೆ ಕೃಪೆಯನ್ನೂ
ಸತ್ಯವನ್ನೂ ಮಾಡು. ಐಗುಪ್ತದಲ್ಲಿ ನನ್ನನ್ನು ಹೂಣಿಡ ಬೇಡ.
೩೦ ನಾನು ನನ್ನ ತಂದೆಗಳ ಸಂಗಡ ಮಲಗ ಬೇಕು. ಐಗುಪ್ತದಿಂದ
ನನ್ನನ್ನು ವೈದು, ಅವರ ಸಮಾಧಿಯಲ್ಲಿ ಹೂಣಿಡು. ಅವನು—
೩೧ ನಿನ್ನ ಮಾತಿನ ಹಾಗೆ ನಾನು ಮಾಡುತ್ತೇನೆ, ಅಂದನು. ನನಗೆ ಪ್ರ
ಮಾಣ ಮಾಡು, ಅಂದಾಗ, ಅವನವನಿಗೆ ಪ್ರಮಾಣ ಮಾಡಿದನು.
ಆಗ ಇಸ್ರಯೇಲನು ಮಂಚದ ಮೇಲಾಭಾಗದಲ್ಲಿ ಅಡ್ಡ ಬಿದ್ದನು.

## ೪೮. ಸಂಧಿ.

೧ ಇವುಗಳ್ಳಾದ ಮೇಲೆ, ಯೋಸೆಫನಿಗೆ—ಇಗೋ, ನಿನ್ನ ತಂದೆ
ಕೋಗದಲ್ಲಿ ಬಿದ್ದಿದ್ದಾನೆಂದು, ದರ್ಶಮಾನ ಬಂತು. ಆಗಲವನು
ತನ್ನ ಇಬ್ಬರು ಮಕ್ಕಳ್ಳಾದ ಮನಸ್ಸೆಯನ್ನೂಪ್ಪ ಎಫ್ರಯಿಮನ
೨ ನ್ನೂಪ್ಪ ಕರ ಕೊಂಡು ಬಂದನು. ಯಾಕೋಬನಿಗೆ—ಇಗೋ, ನಿನ್ನ
ಮಗನಾದ ಯೋಸೆಫನು ನಿನ್ನ ಬಳ್ಳಿಗೆ ಬರುತ್ತಾನೆಂದು, ತಿಳ್ಳಿಸಿದಾ
ಗ, ಇಸ್ರಯೇಲನು ಬಲ ತಂದು ಕೊಂಡು, ಮಂಚದ ಮೇಲೆ ಕೂ
೩ ತು ಕೊಂಡನು. ಆಗ ಯಾಕೋಬನು ಯೋಸೆಫನಿಗೆ ಹೇಳ್ದೇ
ನಂದರೆ, ಸರ್ವಶಕ್ತನಾದ ದೇವರು ಕಾನಾನ್ ದೇಶದ ಲೂಜಿನ
ಲ್ಲಿ ನನಗೆ ಕಾಣಿಸಿ ಕೊಂಡು, ನನ್ನನ್ನು ಆಶೀರ್ವದಿಸಿದನು.

೪ ಅವನು ನನಗೆ—ಇಗೋ, ನಿನ್ನನ್ನು ಬೆಳೆಸಿ, ಹೆಚ್ಚಿಸಿ, ಜನ
ಗಳ ಕೂಟ ಮಾತಿ, ಈ ದೇಶವನ್ನು ನಿನ್ನ ತರುವಾಯ ಹುಟ್ಟು
ವ ನಿನ್ನ ಬೀಜಕ್ಕೆ ನಿತ್ಯ ಸ್ವಾಸ್ತ್ಯವಾಗಿ ಕೊಡುತ್ತೇನೆ ಎಂದು,
೫ ಹೇಳಿದನು. ಈಗ ನಾನು ನಿನ್ನ ಬಳಿಗೆ ಐಗುಪ್ತಕ್ಕೆ ಬರುವ ಪ
ರ್ಯಂತರ ಐಗುಪ್ತದಲ್ಲಿ ನಿನಗೆ ಹುಟ್ಟಿದ ಇಬ್ಬರು ಹಿರೇ ಮ
ಕ್ಕಳು ನನ್ನವರಾಗಿರ ಬೇಕು. ಎಫ್ರಯಿಮ್ ಮನಸ್ಸೆ ರೂ
೬ ಬೆನ್ ಸಿಮಿಯೋನರ ಹಾಗೆ ನನ್ನವರಾಗಿರ ಬೇಕು. ಆದರೆ
ಅವರ ಮೇಲೆ ನೀನು ಪಡೆದ ಸಂತಾನವು ನಿನ್ನದಾಗಿರಲಿ. ಅವ
ರು ತಮ್ಮು ತಮ್ಮು ಬಾಧ್ಯತೆಯಲ್ಲಿ ತಮ್ಮು ಸಹೋದರರ ಹೆಸರು
೭ ಗಳ ಪ್ರಕಾರ ಕರೆಯಲ್ಪಡಲಿ. ನಾನು ಪದ್ದನಾರಮಿನಿಂದ ಬಂದಾಗ,
ಕಾನಾನ್ ದೇಶದಲ್ಲಿ ಎಫ್ರಾತದಿಂದ ಸ್ವಲ್ಪ ದೂರವಾಗಿರುವಲ್ಲಿ,
ರಾಹೆಲಳು ನನ್ನ ಬಳಿಯಲ್ಲಿ ಸತ್ತು ಹೋದಳು. ಅಲ್ಲಿ ಬೇತ್ಲ
ಹೇಮೆಂಬ ಎಫ್ರಾತದ ಮಾರ್ಗದಲ್ಲಿ ಅವಳನ್ನು ಹೂಣಿಟ್ಟೆನು.

೮ ಆಗ ಇಸ್ರಯೇಲನು ಯೋಸೆಫನ ಮಕ್ಕಳನ್ನು ನೋಡಿ—
ಇವರ್ಯಾರು! ಅಂದಾಗ, ಯೋಸೆಫನು ತನ್ನ ತಂದೆಗೆ, ದೇವರು
೯ ಇಲ್ಲಿ ನನಗೆ ಕೊಟ್ಟ ನನ್ನ ಇಬ್ಬರು ಮಕ್ಕಳು, ಅಂದನು. ಆಗ
ಅವನು ಅವರನ್ನು ನನ್ನ ಬಳಿಗೆ ತಕ್ಕೊಂಡು ಬಾ, ಅವರನ್ನು
೧೦ ಆಶೀರ್ವದಿಸುತ್ತೇನೆ, ಅಂದನು. ಆದರೆ ಇಸ್ರಯೇಲನ ಕಣ್ಣು
ಗಳು ಮುದಿತನದಿಂದ, ಅವನು ನೋಡ ಕೂಡದ ಹಾಗೆ, ಮೊ
ಬ್ಬಾಗಿದ್ದವು. ಆಗಲವನು ಅವರನ್ನು ಅವನ ಬಳಿಗೆ ತಂದನು.
೧೧ ಅವನು ಅವರನ್ನು ಮುದ್ದಿಟ್ಟು, ಅಪ್ಪಿ ಕೊಂಡನು. ಇಸ್ರಯೇಲ
ನು ಯೋಸೆಫನಿಗೆ ನಿನ್ನ ಮುಖವನ್ನು ನೋಡುವೆನೆಂದು, ನಾ
ನು ನೆನಸಲಿಲ್ಲ. ಮತ್ತು, ಇಗೋ, ನಿನ್ನ ಬೀಜವನ್ನು ಸಹ ದೇವ
೧೨ ರು ನನ್ನನ್ನು ನೋಡ ಮಾಡಿದ್ದಾನೆ, ಅಂದನು. ಆಗ ಯೋಸೆ
ಫನು ಅವರನ್ನು ತನ್ನ ಮೊಣಕಾಲುಗಳ ಸಮೀಪದಿಂದ ದೂರ
೧೩ ಮಾಡಿ, ತನ್ನ ಮುಖವನ್ನು ನೆಲದಲ್ಲಿ ಬೊಗ್ಗಿಸಿ ಕೊಂಡನು. ಮ
ತ್ತು ಯೋಸೆಫನು ಅವರಿಬ್ಬರನ್ನು, ಎಫ್ರಯಿಮನನ್ನು ತನ್ನ
ಬಲಕೈಯಿಂದ ಇಸ್ರಯೇಲನ ಎಡಕೆಗೂ, ಮನಸ್ಸೆಯನ್ನು ತ
ನ್ನ ಎಡ ಕೈಯಿಂದ ಇಸ್ರಯೇಲನ ಬಲ ಕಡೆಗೂ, ತೆಗೆದು ಕೊಂ
೧೪ ಡು, ಅವನ ಬಳಿಗೆ ಬಂದನು. ಆಗ ಇಸ್ರಯೇಲನು ತನ್ನ ಬಲ
ಕೈಯನ್ನು ಚಾಚಿ, ಚಿಕ್ಕವನಾದ ಎಫ್ರಯಿಮನ ತಲೆಯ
ಮೇಲೆಯೂ, ಎಡ ಕೈಯನ್ನು ಮನಸ್ಸೆಯ ತಲೆಯ ಮೇಲೆ
ಯೂ, ಇಟ್ಟನು. ಮನಸ್ಸೆಯು ಹಿರಿಯವನಾಗಿದ್ದಾಗ್ಯೂ, ಬೇ
ಕೆಂದು ತನ್ನ ಕೈಗಳನ್ನು ಇಟ್ಟನು.

೧೫ ಆಗಲವನು ಯೋಸೆಫನನ್ನು ಆಶೀರ್ವದಿಸಿ, ಹೇಳಿದ್ದೇನಂದ
ರೆ—ನನ್ನ ತಂದೆಗಳಾದ ಅಬ್ರಹಾಮನೂ ಇಸಾಕನೂ ಯಾವ
ನ ಮುಂದೆ ನಡೆದರೋ, ಆ ದೇವರು, ನಾನು ಹುಟ್ಟಿದಂದಿನಿಂದ
೧೬ ಇಂದಿನ ಪರ್ಯಂತರ ನನ್ನನ್ನು ಕಾಪಾಡಿದ ದೇವರು, ಎಲ್ಲಾ
ಕೇಡಿನಿಂದ ನನ್ನನ್ನು ತಪ್ಪಿಸಿದ ದೂತನು ಈ ಹುಡುಗರನ್ನು
ಆಶೀರ್ವದಿಸಲಿ. ನನ್ನ ಹೆಸರೂ, ನನ್ನ ತಂದೆಗಳಾದ ಅಬ್ರಹಾ
ಮನ ಇಸಾಕನ ಹೆಸರೂ ಅವರಿಗೆ ಕರೆಯಲ್ಪಡಲಿ. ಅವರು ಭೂ
೧೭ ಮಧ್ಯದಲ್ಲಿ ಬಹಳವಾಗಿ ಹೆಚ್ಚಲಿ. ತನ್ನ ತಂದೆಯು ಎಫ್ರ
ಯಿಮನ ತಲೆಯ ಮೇಲೆ ಬಲ ಕೈ ಇಡುವದನ್ನು ಯೋಸೆಫನು
ನೋಡಿದಾಗ, ಅದು ಅವನ ದೃಷ್ಟಿಗೆ ಅಯುಕ್ತವಾಗಿತ್ತು. ಆದ
ರಿಂದ ತಂದೆಯ ಕೈಯನ್ನು ಹಿಡಿದು, ಎಫ್ರಯಿಮನ ತಲೆ
ಯಿಂದ ತೆಗೆದು, ಮನಸ್ಸೆಯ ತಲೆಯ ಮೇಲೆ ಇಡುವದಕ್ಕಿದ್ದ
೧೮ ನು. ಯೋಸೆಫನು ತನ್ನ ತಂದೆಗೆ, ಅಪ್ಪಾ, ಹಾಗಲ್ಲ; ಇವನೇ
ಜೊಚ್ಚಲನು; ಇವನ ತಲೆಯ ಮೇಲೆ ಬಲಗೈ ಇಡು, ಅಂದಾಗ,
೧೯ ಅವನ ತಂದೆಯು ಒಲ್ಲದೆ, ತಿಳಿಯಿತು, ಮಗನೇ, ತಿಳಿಯಿತು. ಅ
ವನು ಸಹ ಜನವಾಗುವನು; ಅವನು ಸಹ ದೊಡ್ಡವನಾಗುವನು.
ಆದಾಗ್ಯೂ ಅವನ ತಮ್ಮನು ಅವನಿಗಿಂತ ದೊಡ್ಡವನಾಗುವನು.
ಅವನ ಬೀಜವು ಜನಾಂಗಗಳ ಸಮೂಹವಾಗುವದು, ಅಂದನು.
೨೦ ಹಾಗೆ ಅವರನ್ನು ಆ ದಿವಸದಲ್ಲಿ ಆಶೀರ್ವದಿಸಿ, ನಿನ್ನಲ್ಲಿ ಇಸ್ರ
ಯೇಲ್ ಆಶೀರ್ವದಿಸಿ ಕೊಂಡು, ಎಫ್ರಯಿಮ್ ಮನಸ್ಸೆಯ
ರ ಹಾಗೆ ದೇವರು ನಿನ್ನನ್ನು ಮಾತಕೆಂಬದಾಗಿ ಹೇಳಿ ಕೊಳ್ಳುವ
ದೆಂದು ಹೇಳಿ, ಎಫ್ರಯಿಮನನ್ನು ಮನಸ್ಸೆಯ ಮುಂದೆ ಇರಿಸಿ
ದನು.

೨೧ ಆಗ ಇಸ್ರಯೇಲನು ಯೋಸೆಫನಿಗೆ, ಇಗೋ, ನಾನು ಸಾ
ಯುತ್ತೇನೆ. ಆದರೆ ದೇವರು ನಿಮ್ಮ ಸಂಗಡ ಇದ್ದು, ನಿಮ್ಮನ್ನು
೨೨ ನಿಮ್ಮ ತಂದೆಗಳ ದೇಶದಲ್ಲಿ ಹೇರಿಸುವನು. ಇದಲ್ಲದೆ ನಾನು ನ
ನ್ನ ಕತ್ತಿಯಿಂದಲೂ ಬಿಲ್ಲಿನಿಂದಲೂ ಅಮೊರ್ಯರ ಕೈಯಿಂದ
ತಕ್ಕೊಂಡ ಒಂದು ಪಾಲನ್ನು ನಿನ್ನ ಸಹೋದರರಿಗಿಂತ ಹೆ
ಚ್ಚಾಗಿ ನಿನಗೆ ಕೊಟ್ಟಿದ್ದೇನೆ, ಅಂದನು.

## ೪೯. ಸಂಧಿ.

೧ ಆಗ ಯಾಕೋಬನು ತನ್ನ ಮಕ್ಕಳನ್ನು ಕರಿಸಿ, ಅವರಿಗೆ
ಹೇಳಿದ್ದೇನಂದರೆ—ಕೂಡಿ ಕೊಳ್ಳಿರಿ. ಅಂತ್ಯ ದಿವಸಗಳಲ್ಲಿ ನಿಮ
ಗೆ ಸಂಭವಿಸುವದನ್ನು ನಿಮಗೆ ತಿಳಿಸುತ್ತೇನೆ.
೨ ಯಾಕೋಬನ ಮಕ್ಕಳೇ, ಕೂಡಿ ಕೊಂಡು ಕೇಳಿರಿ. ನಿಮ್ಮ
ತಂದೆಯಾದ ಇಸ್ರಯೇಲನಿಗೆ ಕಿವಿ ಕೊಡಿರಿ.
೩ ರೂಬೆನನೇ, ನೀನು ನನ್ನ ಜೊಚ್ಚಲನೂ, ನನ್ನ ಶಕ್ತಿಯೂ,
ನನ್ನ ಬಲದ ಆರಂಭವೂ, ಘನದ ಹೆಚ್ಚಿಗೆಯೂ, ಶ್ರಾಣದ ಹೆ
ಚ್ಚಿಗೆಯೂ ಆಗಿದ್ದೀ. ನೀರಿನ ಹಾಗೆ ಚಂಚಲನಾಗಿದ್ದು, ನೀನು
೪ ಶ್ರೇಷ್ಠನಾಗ ಬಾರದು. ಯಾಕಂದರೆ ನಿನ್ನ ತಂದೆಯ ಮಂಚ
ವನ್ನೇರಿ, ಅಪವಿತ್ರ ಮಾಡಿದಿ. ನನ್ನ ಹಾಸಿಗೆಯನ್ನು ಏರಿದನು.
೫ ಸಿಮಿಯೋನನೂ ಲೇವಿಯೂ ಅಣ್ಣ ತಮ್ಮಂದರು; ಅವರ ಕ
ತ್ತಿಗಳು ಬಲಾತ್ಕಾರದ ಯಂತ್ರಗಳು.
೬ ನನ್ನ ಪ್ರಾಣವೇ, ಅವರ ರಹಸ್ಯವಾದ ಸಭೆಯಲ್ಲಿ ಸೇರ ಬೇ
ಡ. ನನ್ನ ಘನವೇ, ಅವರ ಕೂಟದಲ್ಲಿ ಕೂಡ ಬೇಡ, ಯಾಕಂ
ದರೆ ತಮ್ಮು ಕೋಪದಲ್ಲಿ ಮನುಷ್ಯರನ್ನು ಕೊಂದರು. ತಮ್ಮು
೭ ಸ್ವೇಚ್ಛೆಯಲ್ಲಿ ಗೂಳಿಯ ನರಗಳನ್ನು ಕೊಯಿದರು. ಬಲವಾ
ಗಿರುವ ಅವರ ಕೋಪವೂ, ಕಠಿಣವಾಗಿರುವ ಅವರ ಉರಿಯೂ,
ಶಪಿಸಲ್ಪಡಲಿ. ಯಾಕೋಬನಲ್ಲಿ ಅವರನ್ನು ಭಾಗ ಮಾಡಿ, ಇ
ಸ್ರಯೇಲನಲ್ಲಿ ಅವರನ್ನು ಚದರ ಮಾಡುವೆನು.
೮ ಯೆಹೂದನೇ, ನಿನ್ನನ್ನು ನಿನ್ನ ಸಹೋದರರು ಹೊಗಳು
ವರು. ನಿನ್ನ ಕೈ ನಿನ್ನ ಶತ್ರುಗಳ ಹೆಕಿನ ಮೇಲೆ ಇರುವದು.
೯ ನಿನ್ನ ತಂದೆಯ ಮಕ್ಕಳು ನಿನಗೆ ಎರಗುವರು. ಯೆಹೂದನೇ
ಸಿಂಹದ ಮರಿಯಾಗಿದ್ದಾನೆ. ನನ್ನ ಮಗನೇ, ಕೊಳ್ಳೆಯಿಂದ ಏ
ರಿ ಬಂದಿ. ಸಿಂಹದ ಹಾಗೆಯೂ, ಹೆಣ್ಣು ಸಿಂಹದ ಹಾಗೆಯೂ
ಮುದುರಿ ಕೊಂಡು ಮಲಗಿದ್ದಾನೆ. ಅವನನ್ನು ಎಬ್ಬಿಸುವವರ್ಯಾ



೧೦ ರು? ದಂಡವು ಯೆಹೂದನಿಂದಲೂ, ಮುದ್ರೆಯ ಕೋಲು ಅವನ
ಕಾಲುಗಳ ನಡುವೆಯಿಂದಲೂ ಶಿಲೋ ಬರುವ ಪರ್ಯಂತರ
ತೊಲಗದು. ಜನಗಳ ವಿಧೇಯತ್ವವು ಅವನದಾಗಿರುವದು.
೧೧ ದ್ರಾಕ್ಷೇ ಗಿಡಕ್ಕೆ ತನ್ನ ಕತ್ತೆಯನ್ನೂ, ಶ್ರೇಷ್ಠ ದ್ರಾಕ್ಷೇ ಗಿಡಕ್ಕೆ
ತನ್ನ ಕತ್ತೆಯ ಮರಿಯನ್ನೂ, ಕಟ್ಟುತ್ತಾನೆ. ದ್ರಾಕ್ಷೇ ರಸದಲ್ಲಿ
ತನ್ನ ವಸ್ತ್ರವನ್ನೂ, ದ್ರಾಕ್ಷೇ ಹಣ್ಣುಗಳ ರಕ್ತದಲ್ಲಿ ತನ್ನ ಬಟ್ಟೆ
೧೨ ಯನ್ನೂ, ತೊಳೆಯುತ್ತಾನೆ. ದ್ರಾಕ್ಷೇ ರಸದಿಂದ ಅವನ ಕಣ್ಣುಗ
ಳು ಕೆಂಪಾಗಿವೆ. ಹಾಲಿನಿಂದ ಅವನ ಹಲ್ಲುಗಳು ಬಿಳುಪಾಗಿವೆ.
೧೩ ಜೆಬುಲೋನನು ಸಮುದ್ರ ತೀರದಲ್ಲಿಯೂ, ಹಡಗಳ ಕೇ
ವನಲ್ಲಿಯೂ ವಾಸವಾಗಿರುವನು. ಅವನ ಪಾರ್ಶ್ವವು ಸಿದೋ
ನಿಗೆ ಮುಟ್ಟುವದು.
೧೪ ಇಸ್ಸಾಕಾರನು ಹೇರುಗಳ ನಡುವೆ ಮಲಗಿ ಕೊಳ್ಳುವ ಎಲು
೧೫ ಬುಳ್ಳ ಕತ್ತೆ. ವಿಶ್ರಾಂತಿಯು ಒಳ್ಳೇದೆಂದೂ, ದೇಶವು ರಮ್ಯ
ವೆಂದೂ ನೋಡಿ, ಹೊರೆಗೆ ತನ್ನ ಹೆಗಲು ಬೊಗ್ಗಿಸಿ, ಬಿಟ್ಟಿಯ
ಸೇವೆ ಮಾಡುತ್ತಾನೆ.
೧೬ ದಾನನು ಇಸ್ರಯೇಲನ ಕುಲಗಳಲ್ಲಿ ಒಂದರ ಹಾಗೆ ತನ್ನ ಜನ
೧೭ ರಿಗೆ ನ್ಯಾಯ ತೀರಿಸುವನು. ದಾನನು ಮಾರ್ಗದಲ್ಲಿರುವ ಸರ್ಪ
ವೂ, ಹಾದಿಯಲ್ಲಿರುವ ಹಾವೂ ಆಗಿರುವನು. ಕುದುರೆಯ ಹಿ
ಮ್ಮಡಿಗಳನ್ನು ಕಚ್ಚಿದರೆ, ಹತ್ತಿದವನು ಬೋರ್ಲ ಬೀಳುವನು.
೧೮ ಕರ್ತನೇ, ನಿನ್ನ ರಕ್ಷಣೆಯನ್ನು ನಿರೀಕ್ಷಿಸಿದ್ದೇನೆ.
೧೯ ಗಾದನು, ಗುಂಪು ಅವನ ಮೇಲೆ ನೂಕಿ ಬರುವದು. ಆದರೆ
ಅವನು ನೂಕಿ ಕೊಂಡು, ಹಿಮ್ಮಡಿಯನ್ನು ಹಿಡಿಯುವನು.
೨೦ ಅಶೇರನಿಂದ ಕೊಬ್ಬಿದ ಆಹಾರ ಬರುವದು. ಅವನು ಅರ
ಸರ ಸವಿ ಊಟಗಳನ್ನು ಕೊಡುವನು.
೨೧ ನೆಫ್ತಾಲಿ ಬಿಡಲ್ಪಟ್ಟ ಜಿಂಕೆ, ಮೆಚ್ಚಿಗೆಯ ಮಾತುಗಳನ್ನು ಆ
ಡುತ್ತಾನೆ.
೨೨ ಯೋಸೆಫನು ಫಲ ಭರಿತವಾದ ಕೊಂಬೆ, ಬುಗ್ಗೆಯ ಸಮೀಪ
ದಲ್ಲಿರುವ ಫಲ ಭರಿತವಾದ ಕೊಂಬೆ. ಅದರ ಕವಲುಗಳು ಗೋ
೨೩ ಡೆ ದಾಟುತ್ತವೆ. ಬಿಲ್ಲಿನವರು ಅವನನ್ನು ತೊಂದರೆ ಪಡಿಸಿ, ಎಸೆ
೨೪ದು, ಕವಿದಿದ್ದಾರೆ. ಆದರೆ ಅವನ ಬಿಲ್ಲು ಭದ್ರವಾಗಿ ನಿಂತಿತು.
ಅವನ ಕೈ ತೋಳುಗಳು ಯಾಕೋಬನ ಪರಾಕ್ರಮಶಾಲಿಯ
ಕೈಯಿಂದ ಚುರುಕು ಮಾಡಲ್ಪಟ್ಟವು. ಇದರಿಂದ ಇಸ್ರಯೇಲ
೨೫ ನನ್ನು ಮೇಯಿಸುವವನೂ ಬಂಡೆಯೂ ಆಗಿದ್ದಾನೆ. ನಿನಗೆ ಸ
ಹಾಯ ಮಾಡುವ ನಿನ್ನ ತಂದೆಯ ದೇವರಿಂದಲೂ, ನಿನ್ನನ್ನು
ಆಶೀರ್ವದಿಸುವ ಸರ್ವ ಶಕ್ತನ ಕೈಯಿಂದಲೂ, ಮೇಲಿನ ಆ
ಕಾಶದ ಆಶೀರ್ವಾದಗಳೂ, ಕೆಳಗಿರುವ ಅಗಾಧದ ಆಶೀರ್ವಾ
ದಗಳೂ, ಮೊಲೆಗಳ, ಗರ್ಭದ ಆಶೀರ್ವಾದಗಳೂ, ಉಂಟಾ
೨೬ ಗುವವು. ನಿನ್ನ ತಂದೆಯ ಆಶೀರ್ವಾದಗಳು ನನ್ನ ಹೆತ್ತವರ ಆ
ಶೀರ್ವಾದಗಳನ್ನು, ನಿತ್ಯ ಗುಡ್ಡಗಳ ಅಭಿಲಾಷೆಯ ಮಟ್ಟಿಗೂ,
ಮೀರಿ ಅವೆ. ಯೋಸೆಫನ ತಲೆಯ ಮೇಲೆಯೂ, ತನ್ನ ಸಹೋ
ದರರಿಂದ ಪ್ರತ್ಯೇಕ ಮಾಡಲ್ಪಟ್ಟವನ ನೆತ್ತಿಯ ಮೇಲೆಯೂ ಅ
ವು ಬರಲಿ.
೨೭ ಬೆನ್ಯಮೀನನು ತೋಳವಾಗಿ ಕಿಳ್ಳುವನು. ಬೆಳಿಗ್ಗೆ ಸುಲಿಗೆ
ಯನ್ನು ತಿಂದು ಬಿಡುವನು. ಸಾಯಂಕಾಲದಲ್ಲಿ ಕೊಳ್ಳೆಯನ್ನು
ಪಾಲಿಕುವನು.
೨೮ ಇವೆಲ್ಲಾ ಇಸ್ರಯೇಲನ ಹನ್ನೆರಡು ಕುಲಗಳು. ಅವರ ತಂದೆ
ಅವರಿಗೆ ಹೇಳಿದ್ದು ಇದೇ. ಅವನು ಒಬ್ಬೊಬ್ಬನನ್ನು ಅವನವ
೨೯ ನ ಆಶೀರ್ವಾದದ ಪ್ರಕಾರ ಆಶೀರ್ವದಿಸಿದನು. ಮತ್ತು ಅವರಿ
ಗೆ ಆಜ್ಞಾಪಿಸಿ ಹೇಳಿದ್ದೇನಂದರೆ—ನಾನು ನನ್ನ ಜನರಿಗೆ ಕೂಡಿಸ
ಲ್ಪಡುತ್ತೇನೆ. ನನ್ನ ತಂದೆಗಳ ಸಂಗಡ ಹಿತ್ತಿಯನಾದ ಎಫ್ರೋನ
೩೦ ನ ಹೊಲದಲ್ಲಿರುವ ಗವಿಯಲ್ಲಿ, ಕಾನಾನ್ ದೇಶದಲ್ಲಿ ಮಮ್ರೆಗೆ ಎ
ದುರಾಗಿ ಮಕ್ಫೆಲ ಹೊಲದಲ್ಲಿರುವಂಥ, ಅಬ್ರಹಾಮನು ಹೊಲ
ದ ಸಂಗಡ, ಸ್ವಂತ ಸಮಾಧಿಗೋಸ್ಕರ ಹಿತ್ತಿಯನಾದ ಎಫ್ರೋ
ನನಿಂದ ಕೊಂಡು ಕೊಂಡಂಥ ಗವಿಯಲ್ಲಿ ನನ್ನನ್ನು ಹೂಣಿಡಿರಿ.
೩೧ ಅಲ್ಲಿ ಅಬ್ರಹಾಮನನ್ನೂ, ಅವನ ಹೆಂಡತಿಯಾದ ಸಾರಳನ್ನೂ
ಹೂಣಿಟ್ಟರು. ಅಲ್ಲಿ ಇಸಾಕನನ್ನೂ, ಅವನ ಹೆಂಡತಿಯಾದ
೩೨ ರೆಬೆಕ್ಕಳನ್ನೂ ಹೂಣಿಟ್ಟರು. ಅಲ್ಲಿ ಲೇಯಳನ್ನು ಹೂಣಿಟ್ಟ
ರು. ಆ ಹೊಲವೂ ಅದರಲ್ಲಿರುವ ಗವಿಯೂ ಹೇತನ ಮಕ್ಕಳಿಂದ
ಕೊಂಡು ಕೊಂಡದ್ದು.
33 ಯಾಕೋಬನು ತನ್ನ ಮಕ್ಕಳಿಗೆ ಆಜ್ಞಾಪಿಸಿ ಮುಗಿಸಿದ ಮೇ
ಲೆ, ತನ್ನ ಕಾಲುಗಳನ್ನು ಮಂಚದ ಮೇಲೆ ಮುದುರಿಸಿ ಕೊಂಡು,
ಶೀರಿ ಹೋಗಿ, ತನ್ನ ಜನರಿಗೆ ಕೂಡಿಸಲ್ಪಟ್ಟನು.

## ೫೦. ಸಂಧಿ.

೧ ಆಗ ಯೋಸೆಫನು ತನ್ನ ತಂದೆಯ ಮುಖದ ಮೇಲೆ ಬಿದ್ದು
೨ ಅವನ ಮೇಲೆ ಅತ್ತು, ಅವನಿಗೆ ಮುದ್ದಿಟ್ಟನು. ಮತ್ತು ಯೋಸೆಫ
ನು ತನ್ನ ತಂದೆಗೆ ಸುಗಂಧ ಹಾಕ ಬೇಕೆಂದು, ತನ್ನ ದಾಸರಾದ
3 ವೈದ್ಯರಿಗೆ ಅಪ್ಪಣೆ ಕೊಟ್ಟನು. ವೈದ್ಯರು ಇಸ್ರಯೇಲನಿಗೆ
ಸುಗಂಧ ಹಾಕಿದರು. ಮತ್ತು ನಾಲ್ವತ್ತು ದಿವಸಗಳು ಅವನಿಗೆ
ಸಂಪೂರ್ಣವಾದವು; ಯಾಕಂದರೆ ಸುಗಂಧ ತುಂಬಿಸಲ್ಪಡುವವ
೪ ರಿಗೆ ದಿವಸಗಳು ಹೀಗೆ ಸಂಪೂರ್ಣವಾಗ ಬೇಕು. ಇದಲ್ಲದೆ ಐ
ಗುಪ್ತ್ಯರು ಅವನಿಗೋಸ್ಕರ ಎಪ್ಪತ್ತು ದಿವಸ ಅತ್ತರು. ಅವನಿ
ಗೋಸ್ಕರ ಅಳುವ ದಿವಸಗಳು ಹೋದ ಮೇಲೆ, ಯೋಸೆಫನು
ಫರೋನನ ಮನೆಯವರಿಗೆ ಹೇಳಿದ್ದೇನಂದರೆ—ನಾನು ನಿಮ್ಮ ಕ
ಣ್ಣುಗಳ ಮುಂದೆ ದಯೆ ಹೊಂದಿದ್ದಾದರೆ, ಫರೋನನ ಕಿವಿಯ
೫ ಲ್ಲಿ ಈ ಮಾತು ಹೇಳ ಬೇಕು. ನನ್ನ ತಂದೆ—ಇಗೋ, ನಾನು
ಸಾಯುತ್ತೇನೆ. ನಾನು ಕಾನಾನ್ ದೇಶದಲ್ಲಿ ನನಗೋಸ್ಕರ ಅಗಿದ
ನನ್ನ ಸಮಾಧಿಯಲ್ಲಿಯೇ ನನ್ನನ್ನು ಹೂಣಿಡ ಬೇಕು ಎಂದು,
ನನ್ನನ್ನು ಪ್ರಮಾಣ ಮಾಡಿಸಿದ್ದಾನೆ. ಹೀಗಿರುವದರಿಂದ ನಾನು
ಮೇಲೆ ಹೋಗಿ, ನನ್ನ ತಂದೆಯನ್ನು ಹೂಣಿಟ್ಟು, ತಿರಿಗಿ ಬರುವ
೬ ಹಾಗೆ, ಅಪ್ಪಣೆಯಾಗ ಬೇಕು. ಆಗ ಫರೋನನು—ಮೇಲೆ
ಹೋಗಿ, ನಿನ್ನ ತಂದೆಯನ್ನು, ಅವನು ನಿನಗೆ ಪ್ರಮಾಣ ಮಾಡಿ
ಸಿದ ಹಾಗೆ, ಹೂಣಿಡು, ಅಂದನು.
೭ ಹೀಗೆ ಯೋಸೆಫನು ತನ್ನ ತಂದೆಯನ್ನು ಹೂಣಿಡುವದಕ್ಕೆ
ಮೇಲೆ ಹೋದನು. ಅವನ ಸಂಗಡ ಫರೋನನ ದಾಸಕೆಲ್ಲರೂ,
ಅವನ ಮನೆಯ ಹಿರಿಯರೂ, ಐಗುಪ್ತ ದೇಶದ ಹಿರಿಯರೆ
೮ ಲ್ಲರೂ, ಯೋಸೆಫನ ಮನೆಯವರೆಲ್ಲರೂ, ಅವನ ಸಹೋದ
ರರೂ, ಅವನ ತಂದೆಯ ಮನೆಯವರೂ, ಮೇಲೆ ಹೋದರು.
೯ ಅವರ ಮಕ್ಕಳನ್ನೂ ಕುರಿ ದನಗಳನ್ನೂ ಮಾತ್ರ ಗೋಷೆ
ದೇಶದಲ್ಲಿ ಬಿಟ್ಟರು. ಮತ್ತು ರಥಗಳೂ ರಾಹುತರೂ ಅವನ

೧೦ ಸಂಗತ ಮೇಲೆ ಹೋದರು. ಸಮೂಹ ಬಹಳ ದೊಡ್ಡದಾಗಿತ್ತು. ಅವರು ಯೋರ್ದನಿನ ಆಚೆಯಲ್ಲಿರುವ ಆಟದ ಕಣಕ್ಕೆ ಬಂದಾಗ, ಅಲ್ಲಿ ಅಧಿಕವಾದ ಮಹಾ ಕಣವಾದ ಗೋಳಾಟದಿಂದ ಗೋಳಾಡಿದರು. ಅವನು ತನ್ನ ತಂದೆಗೋಸ್ಕರ ಏಳು ದಿವಸ
೧೧ ಗೋಳಾಟ ಮಾಡಿದನು. ದೇಶದ ನಿವಾಸಿಗಳಾದ ಕನಾನ್ಯರು ಆಟದ ಕಣದಲ್ಲಿ ಆಗುವ ಗೋಳಾಟವನ್ನು ನೋಡಿದಾಗ—ಇದು ಐಗುಪ್ತ್ಯರಿಗೆ ಕಣವಾದ ಗೋಳಾಟವೆಂದು ಹೇಳಿದರು. ಆದದ ರಿಂದ ಅದಕ್ಕೆ ಆಬೆಲ್ಮಿಚ್ರಯೆಂದು ಹೆಸರಾಯಿತು. ಅದು ಯೋ
೧೨ ರ್ದನಿನ ಆಚೆಯಲ್ಲಿ ಅದೆ. ಆಗಲವನ ಮಕ್ಕಳು ಅವನು ಅವ
೧೩ ರಿಗೆ ಆಜ್ಞಾಪಿಸಿದ ಪ್ರಕಾರ ಅವನಿಗೆ ಮಾಡಿದರು. ಅವನ ಮಕ್ಕ ಳು ಅವನನ್ನು ಕಾನಾನ್ ದೇಶಕ್ಕೆ ತಕ್ಕೊಂಡು ಹೋಗಿ, ಅಬ್ರ ಹಾಮನು ಸ್ವಂತ ಸಮಾಧಿಗೋಸ್ಕರ ಹಿತ್ತಿಯನಾದ ಎಫ್ರೋನ ನಿಂದ ಕೊಂಡು ಕೊಂಡಂಥ, ಮಮ್ರೆಗೆ ಎದುರಾಗಿರುವಂಥ ಮಕ್ಫೆ
೧೪ ಲ ಹೊಲದ ಗವಿಯಲ್ಲಿ ಹೂಣಿಟ್ಟರು. ಆಗ ಯೋಸೇಫನು ತನ್ನ ತಂದೆಯನ್ನು ಹೂಣಿಟ್ಟ ಮೇಲೆ, ತನ್ನ ಸಹೋದರರ ಸಂಗತ ಲೂ, ತನ್ನ ತಂದೆಯನ್ನು ಹೂಣಿರುವದಕ್ಕೋಸ್ಕರ ಅವನ ಸಂಗತ ಮೇಲೆ ಹೋದವರೆಲ್ಲರ ಸಂಗಡಲೂ, ಐಗುಪ್ತಕ್ಕೆ ತಿರಿಗಿ ಬಂದನು.

೧೫ ತಮ್ಮ ತಂದೆ ಸತ್ತು ಹೋದದ್ದನ್ನು ಯೋಸೇಫನ ಸಹೋದ ರರು ನೋಡಿದಾಗ, ಒಂದು ವೇಳೆ ಯೋಸೇಫನು ನಮ್ಮನ್ನು ಹಗೆ ಮಾಡಿ, ನಾವು ಅವನಿಗೆ ಮಾಡಿದ ಎಲ್ಲಾ ಕೇಡಿಗೋಸ್ಕರ ಪ್ರತಿ
೧೬ ಮಾಡ್ಯಾನು ಎಂದು ಹೇಳಿ, ಯೋಸೇಫನಿಗೆ ಹೇಳಿ ಕಳುಹಿಸಿದ್ದೇ
೧೭ ನಂದಕೆ—ನಿನ್ನ ತಂದೆ ಸಾಯುವದಕ್ಕಿಂತ ಮುಂಚೆ, ನಿನ್ನ ಸ ಹೋದರರ ಅಪರಾಧವನ್ನೂ, ನಿನಗೆ ಕೇಡು ಮಾಡಿದ ಅವರ ಪಾ ಪವನ್ನೂ ದಯೆ ಮಾಡಿ ಮನ್ನಿಸು, ಎಂಬದಾಗಿ ಯೋಸೇಫನಿಗೆ ಹೇಳಿಕೆಂದು, ಅಪ್ಪಣೆ ಕೊಟ್ಟಿದ್ದಾನೆ. ಹೀಗಿರುವದರಿಂದ ನಿನ್ನ ತಂದೆಯ ದೇವರ ದಾಸರು ಮಾಡಿದ ಅಪರಾಧವನ್ನು ದಯೆ ಮಾ ಡಿ ಮನ್ನಿಸು. ಅವರು ಅವನ ಸಂಗತ ಮಾತಾಡುವಲ್ಲಿ ಯೋಸೆ
೧೮ ಫನು ಅತ್ತನು. ಅವನ ಸಹೋದರರು ಸಹ ಬಂದು, ಅವನ ಮುಂದೆ ಅಡ್ಡ ಬಿದ್ದು—ಇಗೋ, ನಿನ್ನ ದಾಸರಾಗಿದ್ದೇವೆ, ಅಂದ
೧೯ ರು. ಯೋಸೆಫನು ಅವರಿಗೆ—ಭಯ ಪಡ ಬೇಡಿರಿ; ನಾನು ದೇವ
೨೦ ರಿಗೆ ಅಧೀನನಾಗಿದ್ದೇನಲ್ಲ! ನೀವು ನನಗೆ ವಿರೋಧವಾಗಿ ಕೇಡ ನ್ನು ಆಲೋಚಿಸಿದಿರಿ. ಆದರೆ ದೇವರು, ಈಗ ಮಾಡಿದ ಹಾಗೆ, ಬಹು ಜನರನ್ನು ಬದುಕಿಸುವದಕ್ಕೋಸ್ಕರ ಮೇಲಿಗಾಗಿ ಆ
೨೧ ಲೋಚನೆ ಮಾಡಿದ್ದಾನೆ. ಈಗ ಭಯ ಪಡ ಬೇಡಿರಿ. ನಾನು ನಿಮ್ಮನ್ನೂ ನಿಮ್ಮ ಮಕ್ಕಳನ್ನೂ ಸಂರಕ್ಷಿಸುತ್ತೇನೆ ಎಂದು, ಅವ ರನ್ನು ಸಂತೈಸಿ, ಶಾಂತ ಪಡಿಸಿದನು.

೨೨ ಹಾಗೆ ಯೋಸೆಫನು, ತನ್ನ ತಂದೆಯ ಮನೆಯವರು ಸಹಿತ ವಾಗಿ, ಐಗುಪ್ತದಲ್ಲಿ ವಾಸವಾಗಿದ್ದನು. ಯೋಸೆಫನು ನೂರ ಹ
೨೩ ತ್ತು ವರುಷ ಬದುಕಿದನು. ಮತ್ತು ಯೋಸೆಫನು ಎಫ್ರಯಿಮು ನ ಮರಿ ಮಕ್ಕಳನ್ನು ನೋಡಿದನು. ಮನಸ್ಸೆಯ ಮಗನಾದ ಮಾಕಿರನ ಮಕ್ಕಳು ಸಹ ಯೋಸೆಫನ ತೊಡೆಯ ಮೇಲೆ ಹು ಟ್ಟಿದರು.

೨೪ ಇದಲ್ಲದೆ ಯೋಸೆಫನು ತನ್ನ ಸಹೋದರರಿಗೆ, ನಾನು ಸತ್ತ ಮೇಲೆ, ದೇವರು ನಿಶ್ಚಯವಾಗಿ ನಿಮ್ಮನ್ನು ಪರಾಮರಿಸಿ, ಈ ದೇ ಶದೊಳಗಿಂದ, ತಾನು ಅಬ್ರಹಾಮ, ಇಸಾಕ, ಯಾಕೋಬರಿಗೆ ಪ್ರಮಾಣ ಮಾಡಿದ ದೇಶಕ್ಕೆ ಏರಿ ಹೋಗ ಮಾಡುವನು, ಅಂ
೨೫ ದನು. ಮತ್ತು ಯೋಸೆಫನು ಇಸ್ರಯೇಲನ ಮಕ್ಕಳಿಗೆ, ದೇವ ರು ನಿಮ್ಮನ್ನು ನಿಶ್ಚಯವಾಗಿ ದರ್ಶಿಸುವನು. ಆಗ ನನ್ನ ಎಲು ವುಗಳನ್ನು ಇಲ್ಲಿಂದ ಮೇಲಕ್ಕೆ ತಕ್ಕೊಂಡು ಹೋಗಿರಿ ಎಂದು,
೨೬ ಪ್ರಮಾಣ ಮಾಡಿಸಿದನು. ಯೋಸೆಫನು ನೂರ ಹತ್ತು ವರುಷ ದವನಾಗಿ ಸತ್ತನು. ಅವರು ಅವನಿಗೆ ಸುಗಂಧಗಳನ್ನು ಹಾಕಿ, ಐಗುಪ್ತದಲ್ಲಿ ಪೆಟ್ಟಿಗೆಯೊಳಗೆ ಇಟ್ಟರು.

---

# EXODUS.

## ಹೊರಹೋಣವು.

### ೧. ಸಂಧಿ.

೧ ಯಾಕೋಬನ ಸಂಗತ ಐಗುಪ್ತಕ್ಕೆ ಬಂದಂಥ, ತಮ್ಮ ತಮ್ಮ ಮನೆಯವರ ಸಂಗತ ಬಂದಂಥ ಇಸ್ರಯೇಲ್ ಮಕ್ಕಳ ಹೆಸರು
೨ ಗಳು ಇವೇ. ರೂಬೆನ್, ಸಿಮಿಯೋನ್, ಲೇವಿ, ಯೆಹೂದ,
3, ೪ ಇಸ್ಸಾಕಾರ್, ಜೆಬುಲೋನ್, ಬೆನ್ಯಾಮೀನ್. ದಾನ್, ನಫ್ತಲಿ, ಗಾದ,
೫ ಅಶೇರ್. ಯಾಕೋಬನ ಸೊಂಟದಿಂದ ಹೊರಟ ಮಂದಿ ಎಲ್ಲಾ ಎಪ್ಪತ್ತು ಮಂದಿ. ಮತ್ತು ಯೋಸೆಫನು ಐಗುಪ್ತದಲ್ಲಿ ಇದ್ದನು.
೬ ಯೋಸೆಫನೂ ಅವನ ಸಹೋದರರೆಲ್ಲರೂ ಆ ಸಮಸ್ತ ಸಂತತಿ
೭ ಯೂ ಸತ್ತರು. ಆದರೆ ಇಸ್ರಯೇಲ್ ಮಕ್ಕಳು ಅತ್ಯಧಿಕವಾಗಿ ಅಭಿವೃದ್ಧಿಯಾಗಿ, ವಿಸ್ತಾರಪಟ್ಟು, ಹೆಚ್ಚಿ, ಬಲಗೊಂಡರು. ದೇ ಶವು ಅವರಿಂದ ತುಂಬಿತು.

೮ ಆಗ ಯೋಸೆಫನನ್ನು ಅರಿಯದ ಹೊಸ ಅರಸನು ಐಗುಪ್ತ
೯ ದಲ್ಲಿ ಎದ್ದನು. ಅವನು ತನ್ನ ಜನರಿಗೆ ಹೇಳಿದ್ದೇನಂದರೆ, ಇ ಗೋ, ಇಸ್ರಯೇಲ್ ಮಕ್ಕಳ ಜನರು ನಮಗಿಂತ ಬಹಳವೂ ಬ
೧೦ ಲವುಳ್ಳವರೂ ಆಗಿದ್ದಾರೆ. ಆಗಲಿ; ಅವರು ಹೆಚ್ಚದ ಹಾಗೆಯೂ ನಮಗೆ ಯುದ್ಧ ಉಂಟಾದರೆ, ನಮ್ಮ ಶತ್ರುಗಳ ಸಂಗತ ಕೂಡಿ ಕೊಂಡು ನಮಗೆ ವಿರೋಧವಾಗಿ ಯುದ್ಧ ಮಾಡಿ, ದೇಶವನ್ನು ಬಿಟ್ಟು ಹೋಗದ ಹಾಗೆಯೂ, ಅವರಿಗೆ ಯುಕ್ತಿಯುಳ್ಳವರಾಗಿ
೧೧ ರೋಣ. ಆಗ ಅವರನ್ನು ತಮ್ಮ ಬಿಟ್ಟಿಗಳಿಂದ ಶ್ರಮೆ ಪಡಿಸುವ ಹಾಗೆ ಬಿಟ್ಟಿ ಮಾಡಿಸುವ ಮುಖ್ಯಸ್ಥರನ್ನು ಅವರ ಮೇಲೆ ಇಟ್ಟ ರು. ಅವರು ಫರೋನನಿಗೆ, ಪೀಠೋಮ್, ರಾಮಸೆಸ್ ಎಂಬ ಉ
೧೨ ಗ್ರಾಣ ಪಟ್ಟಣಗಳನ್ನು ಕಟ್ಟಿದರು. ಆದರೆ ಇವರು ಅವರನ್ನು ಎ ಷ್ಟು ಶ್ರಮೆ ಪಡಿಸಿದರೋ, ಅಷ್ಟಧಿಕವಾಗಿ ಅವರು ಹೆಚ್ಚಿ, ವಿಸ್ತಾ ರವಾದರು. ಐಗುಪ್ತ್ಯರು, ಇಸ್ರಯೇಲ್ ಮಕ್ಕಳಿಗೆ ಅಸಹ್ಯ ಪ
೧೩ ಟ್ಟರು. ಹೀಗಿರುವದರಿಂದ ಐಗುಪ್ತ್ಯರು ಇಸ್ರಯೇಲ್ ಮಕ್ಕಳಿಂ
೧೪ ದ ಕಠಿಣವಾಗಿ ಸೇವೆ ಮಾಡಿಸಿ, ಜೇಡಿ ಮಣ್ಣಿನಲ್ಲಿಯೂ, ಇಟ್ಟಿ ಗೆಗಳಲ್ಲಿಯೂ, ಹೊಲದ ಎಲ್ಲಾ ಬೇಸಾಯದಲ್ಲಿಯೂ ಕಠಿಣವಾ ದ ಕಷ್ಟ ಮಾಡಿಸಿ, ಅವರ ಜೀವಗಳನ್ನು ಬೇಸರ ಮಾಡಿದರು. ಅವರು ಅವರಿಂದ ಮಾಡಿಸಿದ ಎಲ್ಲಾ ಸೇವೆಯೂ ಕಠಿಣವಾಗಿತ್ತು.

೧೫ ಇದಲ್ಲದೆ ಐಗುಪ್ತದ ಅರಸನು ಶಿಫ್ರಳೆಂದೂ ಪೂವಳೆಂದೂ ಹೆಸರುಳ್ಳ ಇಬ್ರೀಯ ಸೂಲಗಿತ್ತಿಯರ ಸಂಗತ ಮಾತಾಡಿದ
೧೬ ನು. ಅವನು ಹೇಳಿದ್ದೇನಂದರೆ, ನೀವು ಇಬ್ರೀಯ ಹೆಂಗಸರಿಗೆ ಸಹಾಯ ಮಾಡಿ, ಜನ್ನ ಪೀಠದಲ್ಲಿ ಅವರನ್ನು ಪರಾಮರಿಸುವಾ ಗ, ಗಂಡು ಮಗುವಾದರೆ, ಅವನನ್ನು ಕೊಂದು ಹಾಕಿರಿ; ಹೆಣ್ಣಾ
೧೭ ದರೆ, ಬದುಕಲಿ; ಆದರೆ ಸೂಲಗಿತ್ತಿಯರು ದೇವರಿಗೆ ಭಯ ಪ ಟ್ಟು, ಐಗುಪ್ತದ ಅರಸನು ತಮಗೆ ಹೇಳಿದ ಹಾಗೆ ಮಾಡದೆ, ಗಂ
೧೮ ಡು ಮಕ್ಕಳನ್ನು ಬದುಕಿಸಿದರು. ಆಗ ಐಗುಪ್ತದ ಅರಸನು ಸೂಲಗಿತ್ತಿಯರನ್ನು ಕರಿಸಿ, ಯಾಕೆ ಇಂಥಾ ಕೆಲಸ ಮಾಡಿ, ಗಂ
೧೯ ಡು ಮಕ್ಕಳನ್ನು ಬದುಕಿಸುತ್ತೀರಿ? ಅಂದನು. ಸೂಲಗಿತ್ತಿಯರು ಫರೋನನಿಗೆ, ಇಬ್ರೀಯರ ಸ್ತ್ರೀಯರು ಐಗುಪ್ತ ಹೆಂಗಸರ ಹಾ ಗಲ್ಲ, ಅವರು ಚುರುಕಾಗಿದ್ದಾರೆ; ಸೂಲಗಿತ್ತಿ ಅವರ ಹತ್ತರ ಬರು
೨೦ ವದಕ್ಕಿಂತ ಮುಂಚೆ, ಹೆರುತ್ತಾರೆ, ಅಂದರು. ಆಗ ದೇವರ ಸೂಲಗಿತ್ತಿಯರಿಗೆ ಒಳ್ಳೇದನ್ನು ಮಾಡಿದನು. ಇದಲ್ಲದೆ ಜನರು
೨೧ ಹೆಚ್ಚಿ ಬಹು ಬಲಗೊಂಡರು. ಸೂಲಗಿತ್ತಿಯರು ದೇವರಿಗೆ ಭಯ ಪಟ್ಟದರಿಂದ, ಅವನವರಿಗೆ ಮನೆಗಳನ್ನು ಉಂಟು ಮಾಡಿದನು.
೨೨ ಆದರೆ ಫರೋನನು ತನ್ನ ಜನರಿಗೆಲ್ಲಾ ಹುಟ್ಟುವ ಗಂಡು ಮಕ್ಕ ಳನ್ನೆಲ್ಲಾ ನದಿಯಲ್ಲಿ ಹಾಕ ಬೇಕು, ಹೆಣ್ಣು ಮಕ್ಕಳನ್ನೆಲ್ಲಾ ಬ ದುಕಿಸ ಬೇಕು, ಎಂದು ಅಪ್ಪಣೆ ಕೊಟ್ಟನು.

### ೨. ಸಂಧಿ.

೧ ಆಗ ಲೇವಿಯ ಮನೆಯವನಾದ ಒಬ್ಬ ಮನುಷ್ಯನು ಹೋ
೨ ಗಿ, ಲೇವಿಯ ಮಗಳನ್ನು ತಕ್ಕೊಂಡನು. ಆ ಸ್ತ್ರೀಯು ಗರ್ಭ ಧ ರಿಸಿ, ಮಗನನ್ನು ಹೆತ್ತು, ಅವನು ಚಲ್ವಿಕೆಯುಳ್ಳವನೆಂದು ನೋ
3 ಡಿ, ಮೂರು ತಿಂಗಳು ಬಚ್ಚಿಟ್ಟಿಳು. ಅವನನ್ನು ಇನ್ನು ಬಚ್ಚಿ ಡಲಾರದೆ ಇದ್ದಾಗ, ಅವನಿಗೆ ಆಪನ ಪೆಟ್ಟಿಗೆಯನ್ನು ತಕ್ಕೊಂಡು, ಜೇಡಿ ಮಣ್ಣನ್ನೂ ರಾಳವನ್ನೂ ಹಚ್ಚಿ, ಕೂಸನ್ನು ಅದರಲ್ಲಿ ಇಟ್ಟು, ನದಿಯ ಅಂಚಿನಲ್ಲಿ ಇರುವ ಹುಲ್ಲಿನಲ್ಲಿ ಮಡಗಿದಳು.
೪ ಮತ್ತು ಅದಕ್ಕೆ ಏನಾಗುವದೆಂದು ತಿಳಿಯ ಕೊಳ್ಳುವದಕ್ಕೆ, ದೂರ ದಲ್ಲಿ ಅದರ ಅಕ್ಕ ನಿಂತು ಕೊಂಡಳು.

೫ ಆಗ ಫರೋನನ ಮಗಳು ನದಿಯಲ್ಲಿ ಮಿಯ್ಯುವದಕ್ಕೆ ಇ ಳಿದು ಬಂದಳು; ಅವಳ ದಾಸಿಗಳು ನದಿಯ ಅಂಚಿನಲ್ಲಿ ನಡೆಯು ತ್ತಿದ್ದರು; ಅವಳು ಹುಲ್ಲಿನಲ್ಲಿ ಪೆಟ್ಟಿಗೆಯನ್ನು ನೋಡಿ, ತನ್ನ ದಾ
೬ ಸಿಯನ್ನು ಕಳುಹಿಸಿ, ಅದನ್ನು ತೆಗೆಸಿದಳು. ಅದನ್ನು ತೆಗೆದಾ ಗ, ಕೂಸನ್ನು ನೋಡಿದಳು; ಅಗೋ, ಕೂಸು ಅಳುತಿತ್ತು. ಆ ಗಲವಳು ಅದರ ಮೇಲೆ ಅಂತ್ಯಕರಣ ಪಟ್ಟು, ಇಬ್ರೀಯರ ಮ
೭ ಕ್ಕಳಲ್ಲಿ ಒಂದಾಗಿದ್ದೀತು, ಅಂದಳು. ಆಗ ಅದರ ಅಕ್ಕ, ಫ ರೋನನ ಮಗಳಿಗೆ, ನಾನು ಹೋಗಿ, ನಿನಗೋಸ್ಕರ ಈ ಕೂ ಸಿಗೆ ಮೊಲೆ ಕೊಡುವ ಹಾಗೆ, ಇಬ್ರೀಯ ಸ್ತ್ರೀಯರಿಂದ ದಾದಿಯ
೮ ನ್ನು ನಿನಗೆ ಕರ ಕೊಂಡು ಬರಲೋ! ಅಂದಳು. ಫರೋನನ ಮಗಳು ಅವಳಿಗೆ, ಹೋಗಂದಳು. ಆ ಹುಡಿಗಿ ಹೋಗಿ, ಕೂಸಿ
೯ ನ ತಾಯಿಯನ್ನು ಕರೆದಳು. ಫರೋನನ ಮಗಳು ಅವಳಿಗೆ, ಈ ಹುಡುಗನನ್ನು ತಕ್ಕೊಂಡು, ನನಗೋಸ್ಕರ ಸಾಕು, ನಿನ್ನ ಸಂ ಬಳವನ್ನು ಕೊಡುವೆನು, ಅಂದಳು. ಆಗ ಆ ಸ್ತ್ರೀಯು ಕೂಸ
೧೦ ನ್ನು ತಕ್ಕೊಂಡು, ಸಾಕಿದಳು. ಈ ಹುಡುಗನು ಬೆಳೆದಾಗ, ಅವ ನನ್ನು ಫರೋನನ ಮಗಳ ಬಳಿಗೆ ತಕ್ಕೊಂಡು ಹೋದಳು. ಅ ವನು ಅವಳಿಗೆ ಮಗನಾದನು. ನೀರೆಳಗಿಂದ ಅವನನ್ನು ಎಳೆ ದೆನೆಂದು ಹೇಳಿ, ಅವನಿಗೆ ಮೋಶೆ ಎಂಬ ಹೆಸರಿಟ್ಟಳು.

೧೧ ಆ ದಿನಗಳಲ್ಲಿ ಆದದ್ದೇನಂದರೆ, ಮೋಶೆ ದೊಡ್ಡವನಾದ ಮೇ ಲೆ, ತನ್ನ ಸಹೋದರರ ಬಳಿಗೆ ಹೊರಗೆ ಹೋಗಿ, ಅವರ ಬಿಟ್ಟಿಗ ಳನ್ನು ನೋಡಿದಾಗ, ಐಗುಪ್ತ್ಯನಾದ ಒಬ್ಬ ಮನುಷ್ಯನು ತನ್ನ ಸಹೋದರರಲ್ಲಿ ಒಬ್ಬನಾಗಿರುವ ಇಬ್ರೀಯ ಮನುಷ್ಯನನ್ನು
೧೨ ಹೊಡೆಯುವದನ್ನು ನೋಡಿದನು. ಅವನು ಈಚೆ ಆಚೆ ನೋಡಿ,

ಯಾರಿಲ್ಲವೆಂದು ಕಂಡಾಗ, ಐಗುಪ್ತ್ಯನನ್ನು ಹೊಪೆದು ಹಾತಿ, ಮ
೧೩ ರಳಿನಲ್ಲಿ ಮುಚ್ಚಿಟ್ಟನು. ಮರು ದಿವಸದಲ್ಲಿ ಹೊರಗೆ ಹೋದಾ
ಗ, ಅಗೋ, ಇಬ್ರೀಯರಾದ ಇಬ್ಬರು ಮನುಷ್ಯರು ಜಗಳವಾ
ಡಿದರು. ಅವನು ತಪ್ಪುಳ್ಳವನಿಗೆ, ಯಾಕೆ ನಿನ್ನ ಸೆಕೆಯವನನ್ನು
೧೪ ಹೊಪೆಯುತ್ತೀ! ಅಂದಾಗ, ಇವನು ಯಾರು ನಿನ್ನನ್ನು ನಮ್ಮ
ಮೇಲೆ ಮುಖ್ಯಸ್ಥನಾಗಿಯೂ ನ್ಯಾಯಾಧಿಪತಿಯಾಗಿಯೂ ಇ
ಟ್ಟಿದ್ದಾರೆ! ಆ ಐಗುಪ್ತ್ಯನನ್ನು ಕೊಂದು ಹಾಕಿದ ಹಾಗೆ, ನನ್ನ
ನ್ನು ಕೊಂದು ಹಾಕ ಬೇಕೆಂದು ಇದ್ದೀಯೋ? ಅಂದನು. ಆಗ
ಮೋಶೆ, ನಿಶ್ಚಯವಾಗಿ ಈ ಕಾರ್ಯ ತಿಳಿಯ ಬಂತು ಎಂದು
ಹೇಳಿ, ಭಯ ಪಟ್ಟನು.
೧೫ ಫರೋನನು ಆ ಮಾತನ್ನು ಕೇಳಿದಾಗ, ಮೋಶೆಯನ್ನು
ಕೊಂದು ಹಾಕುವದಕ್ಕೆ ಹುಡುಕಿದನು; ಆದರೆ ಮೋಶೆ ಫರೋ
ನನಿದುರಿನಿಂದ ಓಡಿ ಹೋಗಿ, ಮಿದ್ಯಾನ್ ದೇಶದಲ್ಲಿದ್ದು, ಬಂದು
೧೬ ಭಾವಿಯ ಬಳಿಯಲ್ಲಿ ಕೂತು ಕೊಂಡನು. ಇದಲ್ಲದೆ ಮಿದ್ಯಾನಿ
ನ ಯಾಜಕನಿಗೆ ಏಳು ಮಂದಿ ಕುಮಾರ್ತೆಗಳಿದ್ದರು. ಇವರು
ತಮ್ಮ ತಂದೆಯ ಕುರಿಗಳಿಗೆ ಕುಡಿಯ ಕೊಡುವದಕ್ಕೋಸ್ಕರ
೧೭ ನೀರು ಸೇದಿ, ಬೋಣಿಗೆಗಳನ್ನು ತುಂಬಿಸಿದರು. ಕುರುಬರು ಬಂ
ದು, ಅವರನ್ನು ಓಡಿಸಿದಾಗ, ಮೋಶೆ ಎದ್ದು ಅವರಿಗೆ ಸಹಾಯ
೧೮ ಮಾಡಿ, ಅವರ ಕುರಿಗಳಿಗೆ ಕುಡಿಯ ಕೊಟ್ಟನು. ಅವರು ತಮ್ಮ
ತಂದೆಯಾದ ರೆಯುವೇಲನ ಬಳಿಗೆ ಬಂದಾಗ, ಯಾಕೆ ಈ ಹೊ
೧೯ ತ್ತು ಬೇಗ ಬಂದಿರಿ! ಅಂದನು. ಅವರು ಐಗುಪ್ತ್ಯನಾದ ಒಬ್ಬ ಮ
ನುಷ್ಯನು ಕುರುಬರ ಕೈಗೆ ನಮ್ಮನ್ನು ತಪ್ಪಿಸಿ, ನಮಗೋಸ್ಕ
ರ ಸಾಕಾಗುವಷ್ಟು ನೀರು ಸೇದಿ, ಕುರಿಗಳಿಗೆ ಕುಡಿಯ ಕೊಟ್ಟ
೨೦ ನು, ಅಂದರು. ಅವನು ತನ್ನ ಕುಮಾರ್ತೆಗಳಿಗೆ, ಅವನು ಎಲ್ಲಿ!
ಯಾಕೆ ಆ ಮನುಷ್ಯನನ್ನು ಬಿಟ್ಟು ಬಂದಿರಿ. ಅವನನ್ನು ಕರೆ
೨೧ ಯಿರಿ; ಅವನು ಕೊಟ್ಟಿ ಶಿನ್ನಿಲಿ, ಅಂದನು. ಮೋಶೆ ಆ ಮನು
ಷ್ಯನ ಸಂಗತ ವಾಸ ಮಾಡುವದಕ್ಕೆ ಸಮ್ಮತಿಸಿದನು. ಅವನು
೨೨ ಮೋಶೆಗೆ ತನ್ನ ಮಗಳಾದ ಚಿಪೋರಳನ್ನು ಕೊಟ್ಟನು. ಇವ
ಳು ಮಗನನ್ನು ಹೆತ್ತಳು ಅವನು ಪರದೇಶದಲ್ಲಿ ಅನ್ಯಾಗಾರ್ಥೇ
ನೆಂದು ಹೇಳಿ, ಅವನಿಗೆ ಗೆರ್ಶೋಮನೆಂಬ ಹೆಸರಿಟ್ಟನು.
೨೩ ಈ ಮೇರೆಗೆ ಬಹಳ ದಿನಗಳು ಹೋದ ಮೇಲೆ, ಐಗುಪ್ತದ
ಅರಸನು ಸತ್ತನು. ಇಸ್ರಯೇಲ್ ಮಕ್ಕಳು ಸೇವೆಯ ಕಾರಣದಿಂ
ದ ನಿಟ್ಟುಸುರಿಟ್ಟು, ಕೂಗುತ್ತಿದ್ದರು. ಸೇವೆಯ ನಿಮಿತ್ತವಾದ ಆ
೨೪ ವರ ಕೂಗು ದೇವರ ಸನ್ನಿಧಿಗೆ ಏರಿ ಬಂತು. ದೇವರು ಅವರ
ಗೋಳಾಟವನ್ನು ಕೇಳಿದಾಗ, ದೇವರು ಅಬ್ರಹಾಮನ ಸಂಗತ
ಲೂ, ಇಸಾಕನ ಸಂಗತಲೂ, ಯಾಕೋಬನ ಸಂಗತಲೂ ತಾನು
೨೫ ಮಾಡಿದ ಒಡಂಬಡಿಕೆಯನ್ನು ಜ್ಞಾಪಕ ಮಾಡಿ ಕೊಂಡನು. ಆಗ
ದೇವರು ಇಸ್ರಯೇಲ್ ಮಕ್ಕಳನ್ನು ನೋಡಿದನು, ದೇವರು ಪ
ರಾಮರಿಸಿದನು.

## 3. ಸಂಧಿ.

೧ ಮೋಶೆ ತನ್ನ ಮಾವನಾಗಿರುವ ಮಿದ್ಯಾನಿನ ಯಾಜಕನಾದ
ಇತ್ರೋನನ ಮಂದೆಯನ್ನು ಮೇಯಿಸುತ್ತಿರಲಾಗಿ, ಮಂದೆಯ
ನ್ನು ಅರಣ್ಯದ ಹಿಂಭಾಗಕ್ಕೆ ನಡಿಸಿ ಕೊಂಡು ಹೋಗಿ, ಹೋರೆ
೨ ಬೆಂಬ ದೇವಗಿರಿಗೆ ಬಂದನು. ಆಗ ದೇವರ ದೂತನು ಪೊದೆಯೊ
ಳಗಿಂದ ಅಗ್ನಿ ಜ್ವಾಲೆಯಲ್ಲಿ ಅವನಿಗೆ ಕಾಣಿಸಿ ಕೊಂಡನು. ಅವ
ನು ನೋಡಿದಾಗ, ಅಗೋ, ಪೊದೆಯು ಬೆಂಕಿ ಉರಿಯುತಿತ್ತು.
3 ಆದಾಗ್ಯೂ ಪೊದೆಯು ದಹಿಸಲ್ಪಡಲಿಲ್ಲ. ಆಗ ಮೋಶೆ, ನಾನು
ಹೋಗಿ ಈ ದೊಡ್ಡ ನೋಟವನ್ನು, ಪೊದೆಯು ಯಾಕೆ ಸುಡ
೪ ಲ್ಪಡುವದಿಲ್ಲ ಎಂಬುವದನ್ನು ನೋಡುವೆನು, ಅಂದನು. ಅವನು
ನೋಡುವದಕ್ಕೆ ಹತ್ತರ ಬರುವದನ್ನು ಕರ್ತನು ನೋಡಿದಾಗ,
ದೇವರು ಪೊದೆಯೊಳಗಿಂದ ಅವನಿಗೆ, ಮೋಶೆಯೇ, ಮೋಶೆ
ಯೇ, ಎಂದು ಕರೆದನು; ಅವನು, ಇಗೋ, ಇದ್ದೇನೆ, ಅಂದನು.
೫ ಆಗಲವನು, ಇಲ್ಲಿ ಹತ್ತರ ಬರ ಬೇಡ; ನಿನ್ನ ಪಾದಗಳಿಂದ ಕೆರ
ಗಳನ್ನು ತೆಗೆದು ಹಾಕು; ಯಾಕಂದರೆ, ನೀನು ನಿಂತಿರುವ ಸ್ಥ
೬ ಳವು ಪರಿಶುದ್ಧ ಭೂಮಿಯೇ, ಅಂದನು. ಇದಲ್ಲದೆ ನಾನು ನಿನ್ನ
ತಂದೆಗಳ ದೇವರೂ, ಅಬ್ರಹಾಮನ ದೇವರೂ, ಇಸಾಕನ ದೇವ
ರೂ, ಯಾಕೋಬನ ದೇವರೂ ಆಗಿದ್ದೇನೆಂದು ಹೇಳಿದನು.
ಮೋಶೆ ದೇವರ ಮೇಲೆ ದೃಷ್ಟಿ ಇಡುವದಕ್ಕೆ ಭಯ ಪಟ್ಟು,
ಮೋಶೆ ಮುಚ್ಚಿ ಕೊಂಡನು.
೭ ಆಗ ಕರ್ತನು, ಐಗುಪ್ತದಲ್ಲಿರುವ ನನ್ನ ಜನರ ದೀನ ಸ್ಥಿತಿ
ಯನ್ನು ಕಂಡೇ ಕಂಡಿದ್ದೇನೆ; ತಿಪ್ಪಲು ಪಡಿಸುವವರಿಗೋಸ್ಕರ
ವಾದ ಅವರ ಕೂಗನ್ನು ಕೇಳಿದ್ದೇನೆ; ಅವರಿಗೆ ಆಗುವ ವ್ಯಸನ
೮ ವನ್ನು ಬಲ್ಲೆನು. ಹೀಗಿರುವದರಿಂದ ಐಗುಪ್ತ್ಯರ ಕೈಯಿಂದ ಅವರ
ನ್ನು ತಪ್ಪಿಸಿ, ಆ ದೇಶದೊಳಗಿಂದ ಏರ ಮಾಡಿ, ಒಳ್ಳೇ ಅಗ
ಲವಾದ ದೇಶಕ್ಕೆ ಹಾಲೂ ಜೇನೂ ಹರಿಯುವ ದೇಶಕ್ಕೆ, ಕನಾನ್ಯ
ರ, ಹಿತ್ತಿಯರ, ಅಮೋರ್ಯರ, ಪೆರಿಜ್ಜಿಯರ, ಹಿವ್ವಿಯರ,
ಯೆಬೂಸ್ಯರ ಸ್ಥಳಕ್ಕೆ, ಬರ ಮಾಡುವ ಹಾಗೆ, ಇಳಿದು ಬಂದಿ
೯ ದ್ದೇನೆ. ಈಗ, ಇಗೋ, ಇಸ್ರಯೇಲ್ ಮಕ್ಕಳ ಕೂಗು ನನ್ನ
ಬಳಿಗೆ ಬಂತು. ಮತ್ತು ಐಗುಪ್ತ್ಯರು ಅವರನ್ನು ಬಾಧಿಸುವ ಬಾಧೆ
೧೦ ಯನ್ನು ನಾನು ನೋಡಿದ್ದೇನೆ. ಹಾಗಾದರೆ, ಈಗ ಹೋಗು;
ಫರೋನನ ಬಳಿಗೆ ನಿನ್ನನ್ನು ಕಳುಹಿಸುತ್ತೇನೆ. ನೀನು ಇಸ್ರ
ಯೇಲ್ ಮಕ್ಕಳಾದ ನನ್ನ ಜನರನ್ನು ಐಗುಪ್ತದೊಳಗಿಂದ ಹೊ
ರಗೆ ಬರ ಮಾಡ ಬೇಕು.
೧೧ ಆಗ ಮೋಶೆ ದೇವರಿಗೆ ಫರೋನನ ಬಳಿಗೆ ಹೋಗುವ ಹಾಗೆ
ಯೂ, ಇಸ್ರಯೇಲ್ ಮಕ್ಕಳನ್ನು ಐಗುಪ್ತದೊಳಗಿಂದ ಹೊರ
ಗೆ ಬರ ಮಾಡುವ ಹಾಗೆಯೂ, ನಾನು ಯಾರು! ಅಂದನು.
೧೨ ಆಗಲವನು, ನಿಶ್ಚಯವಾಗಿ ನಿನ್ನ ಸಂಗತ ನಾನು ಇರುವೆನು. ಮ
ತ್ತು ನಾನು ನಿನ್ನನ್ನು ಕಳುಹಿಸುತ್ತೇನೆಂಬುವದಕ್ಕೆ ಇದೇ ನಿನಗೆ
ಗುರುತು—ನೀನು ಜನರನ್ನು ಐಗುಪ್ತದೊಳಗಿಂದ ಹೊರಗೆ ತ
ರುವ ಸಮಯದಲ್ಲಿ ಈ ಬೆಟ್ಟದ ಮೇಲೆ ದೇವರನ್ನು ಆರಾಧಿಸು
ವಿರಿ, ಅಂದನು.
೧೩ ಮೋಶೆ ಕರ್ತನಿಗೆ ಹೇಳಿದ್ದೇನಂದರೆ, ಇಗೋ, ನಾನು ಇಸ್ರ
ಯೇಲ್ ಮಕ್ಕಳ ಬಳಿಗೆ ಹೋಗಿ, ನಿಮ್ಮ ಪಿತೃಗಳ ದೇವರು ನ
ನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆಂದು ಹೇಳುವಾಗ, ಅವರು,
ಅವನ ಹೆಸರೇನೆಂದು, ನನ್ನನ್ನು ಕೇಳಿದರೆ, ನಾನವರಿಗೆ ಏನನ್ನು
ಬೇಕು.
೧೪ ಆಗ ದೇವರು ಮೋಶೆಗೆ, ಇರುವವನೇ ಆಗಿದ್ದೇನೆ, ಅಂದನು;
ಇರುವವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆಂದು ಹೇಳ
ಬೇಕಂದನು.
೧೫ ಮತ್ತು ದೇವರು ಮೋಶೆಗೆ ಹೇಳಿದ್ದೇನಂದರೆ, ನಿಮ್ಮ ಪಿತೃಗ





ಳ ದೇವರೂ, ಅಬ್ರಹಾಮನ ದೇವರೂ, ಇಸಾಕನ ದೇವರೂ
ಯಾಕೋಬನ ದೇವರೂ ಆಗಿರುವ ಕರ್ತನು ನನ್ನನ್ನು ನಿಮ್ಮ
ಬಳಿಗೆ ಕಳುಹಿಸಿದ್ದಾನೆಂದು, ಇಸ್ರಯೇಲ್ ಮಕ್ಕಳಿಗೆ ಹೇಳ ಬೇಕು,
ಇದೇ ಯುಗ ಯುಗಕ್ಕೂ ನನ್ನ ಹೆಸರೂ, ತಲ ತಲಾಂತರ
೧೬ ಕ್ಕೂ ನನ್ನ ಸ್ಮರಣೆಯೂ ಆಗಿದೆ. ನೀನು ಹೋಗಿ, ಇಸ್ರ
ಯೇಲಿನ ಹಿರಿಯರನ್ನು ಕೂಡಿಸಿ, ಅವರಿಗೆ ನಿಮ್ಮ ಪಿತೃಗಳ ದೇ
ವರೂ, ಅಬ್ರಹಾಮನ ದೇವರೂ, ಇಸಾಕನ ದೇವರೂ, ಯಾ
ಕೋಬನ ದೇವರೂ ಆಗಿರುವ ಕರ್ತನು ನನಗೆ ಕಾಣಿಸಿ ಕೊಂ
ಡು, ನಿಮ್ಮನ್ನು ಐಗುಪ್ತದಲ್ಲಿ ನಿಮಗೆ ಮಾಡಿದ್ದನ್ನು ಸರಿಯಾಗಿ
೧೭ ವಿಚಾರಿಸಿದ್ದೇನೆ. ಮತ್ತು ಐಗುಪ್ತದ ದೀನ ಸ್ಥಿತಿಯೊಳಗಿಂದ
ನಿಮ್ಮನ್ನು ಕನಾನ್ಯರ, ಹಿತ್ತಿಯರ, ಅಮೋರ್ಯರ, ಪೆರಿಜ್ಜಿಯ
ರ, ಹಿವ್ವಿಯರ, ಯೆಬೂಸ್ಯರ ದೇಶಕ್ಕೂ, ಹಾಲೂ ಜೇನೂ
ಹರಿಯುವ ದೇಶಕ್ಕೂ, ಮೇಲೆ ಬರ ಮಾಡುವೆನೆಂದು ಹೇಳಿದ್ದೇ
೧೮ ನೆಂಬದಾಗಿ ಹೇಳು. ಅವರು ನಿನ್ನ ಮಾತನ್ನು ಕೇಳುವರು. ಆ
ಗ ನೀನು ಇಸ್ರಯೇಲ್ ಜನರ ಹಿರಿಯರು ಸಹಿತವಾಗಿ ಐಗುಪ್ತ
ದ ಅರಸನ ಬಳಿಗೆ ಹೋಗಿ, ಅವನಿಗೆ ಹೇಳ ಬೇಕಾದದ್ದೇನಂದರ
ಕೆ, ಇಬ್ರೀಯರ ದೇವರಾದ ಕರ್ತನು ನಮಗೆ ಎದುರು ಬಂದಿ
ದ್ದಾನೆ. ಹೀಗಿರುವದರಿಂದ ನಾವು ಅರಣ್ಯದಲ್ಲಿ ಮೂರು ದಿವಸ
ಪ್ರಯಾಣ ಹೋಗಿ, ನಮ್ಮ ದೇವರಾದ ಕರ್ತನಿಗೆ ಬಲಿ ಅರ್ಪಿ
೧೯ ಸುವ ಹಾಗೆ ದಯೆ ಮಾಡ ಬೇಕು. ಆದಾಗ್ಯೂ ಐಗುಪ್ತದ
ಅರಸನು ನಿಮ್ಮನ್ನು ಬಲವಾದ ಕೈಯಿಂದಲಾದರೂ ಹೋಗ
೨೦ ಗೊಡಿಸುವದಿಲ್ಲವೆಂದು, ನನಗೆ ತಿಳಿದದೆ. ಹೀಗಿರುವದರಿಂದ ನ
ನ್ನ ಕೈಯನ್ನು ಚಾಚಿ, ನಾನು ಅದರೊಳಗೆ ಮಾಡುವ ನನ್ನ
ಎಲ್ಲಾ ಅದ್ಭುತಗಳಿಂದ ಐಗುಪ್ತವನ್ನು ಹೊಪೆಯುವೆನು; ಆ
೨೧ ಮೇಲೆ ನಿಮ್ಮನ್ನು ಕಳುಹಿಸಿ ಬಿಡುವನು. ಇದಲ್ಲದೆ ಈ ಜನರಿಗೆ
ಐಗುಪ್ತ್ಯರ ಸನ್ನಿಧಿಯಲ್ಲಿ ದಯೆ ಉಂಟಾಗುವ ಹಾಗೆ ಮಾಡುವೆ
ನು; ನೀವು ಹೋಗುವಾಗ, ಬರೆ ಗೈಯಾಗಿ ಹೋಗುವದಿಲ್ಲ.
೨೨ ಒಬ್ಬೊಬ್ಬ ಸ್ತ್ರೀಯು ತನ್ನ ನೆಕೆಯವಳಿಂದಲೂ, ಮನೆಯಲ್ಲಿ
ತಂಗುವವಳಿಂದಲೂ ಬೆಳ್ಳಿ ಭಂಗಾರದ ಸಾಮಾನುಗಳನ್ನೂ ವಸ್ತ್ರ
ಗಳನ್ನೂ ಕೇಳಿ ಕೊಳ್ಳ ಬೇಕು; ಅವುಗಳನ್ನು ನಿಮ್ಮ ಕುಮಾರ
ಕುಮಾರ್ತೆಗಳ ಮೇಲೆ ಇಟ್ಟು, ಐಗುಪ್ತ್ಯರನ್ನು ಸುಲು ಕೊಳ್ಳ
ಬೇಕು.

## ೪. ಸಂಧಿ.

೧ ಅದಕ್ಕೆ ಮೋಶೆ ಹೇಳಿದ್ದೇನಂದರೆ, ಆದರೆ, ಇಗೋ, ನನ್ನ
ನ್ನು ನಂಬರು, ನನ್ನ ಮಾತನ್ನು ಕೇಳರು; ಯಾಕಂದರೆ ಕರ್ತ
ನು ನಿನಗೆ ಕಾಣಿಸಿ ಕೊಳ್ಳಲಿಲ್ಲವೆಂದು ಹೇಳುವರು.
೨ ಕರ್ತನು ಅವನಿಗೆ, ಇದು ಏನು, ನಿನ್ನ ಕೈಯಲ್ಲಿ ಇರುವ
3 ದು! ಅಂದನು. ಅವನು, ಕೋಲು, ಅಂದನು. ಕರ್ತನು, ಅದ
ನ್ನು ನೆಲದಲ್ಲಿ ಹಾಕು, ಅಂದಾಗ, ಅದನ್ನು ನೆಲದಲ್ಲಿ ಹಾಕಿದನು.
ಆಗಲದು ಸರ್ಪವಾಯಿತು; ಮೋಶೆ ಅದರ ಎದುರಿನಿಂದ ಓಡಿ
೪ ಹೋದನು. ಕರ್ತನು ಮೋಶೆಗೆ, ನಿನ್ನ ಕೈ ಚಾಚಿ, ಅದರ
ಬಾಲವನ್ನು ಹಿಡಿ, ಅಂದಾಗ, ಅವನು ಕೈ ಚಾಚಿ, ಅದನ್ನು ಹಿ
೫ ಡಿದನು; ಆಗಲದು ಅವನ ಕೈಯಲ್ಲಿ ಕೋಲಾಯಿತು. ಅವರ
ಪಿತೃಗಳ ದೇವರೂ, ಅಬ್ರಹಾಮನ ದೇವರೂ, ಇಸಾಕನ ದೇ
ವರೂ, ಯಾಕೋಬನ ದೇವರೂ ಆಗಿರುವ ಕರ್ತನು ನಿನ
ಗೆ ಕಾಣಿಸಿ ಕೊಂಡಿದ್ದಾನೆಂದು, ಅವರು ನಂಬುವ ಹಾಗೆಯೇ.
೬ ಮತ್ತು ಕರ್ತನು ಅವನಿಗೆ ನಿನ್ನ ಕೈಯನ್ನು ಉಡಿಯಲಿ
ಹಾಕು, ಅಂದನು. ಅವನು ಕೈಯನ್ನು ಉಡಿಯಲ್ಲಿ ಹಾಕಿ, ಹೊ
ರಗೆ ತೆಗೆದಾಗ, ಅಗೋ, ಅವನ ಕೈ ಹಿಮದಂತೆ ಕುಷ್ಟರೋಗದಾ
೭ ಗಿತ್ತು. ನಿನ್ನ ಕೈಯನ್ನು ತಿರಿಗಿ ಉಡಿಯಲ್ಲಿ ಸೇರಿಸು, ಅಂದಾ
ಗ, ಅವನು ಕೈಯನ್ನು ಉಡಿಯಲ್ಲಿ ತಿರಿಗಿ ಸೇರಿಸಿ, ಉಡಿಯಿಂದ
ಹೊರಗೆ ತೆಗೆದನು. ಆಗ, ಅಗೋ, ಅದು ತಿರಿಗಿ ಅವನ ಬೇರೆ
೮ ಮಾಂಸದ ಹಾಗಿತ್ತು. ಅವರು ನಿನ್ನನ್ನು ನಂಬದೆ, ಮೊದಲನೇ
ಗುರುತಿನ ಶಬ್ದವನ್ನು ಕೇಳದೆ ಹೋದರೆ, ಕಡೆಯಾದ ಗುರು
೯ ತಿನ ಶಬ್ದವನ್ನು ನಂಬುವರು. ಆ ಎರಡು ಗುರುತುಗಳನ್ನೂ ಅ
ವರು ನಂಬದೆ, ನಿನ್ನ ಮಾತನ್ನು ಕೇಳದೆ ಹೋದರೆ, ನದಿಯ
ನೀರು ತೆಗೆದು, ಒಣಗಿದ ನೆಲದಲ್ಲಿ ಹೊಯ್ಯ ಬೇಕು. ಆಗ ನೀ
ನು ನದಿಯಿಂದ ತೆಗೆದ ನೀರು ಒಣಗಿದ ನೆಲದಲ್ಲಿ ರಕ್ತವಾಗುವ
ದು, ಅಂದನು.
೧೦ ಆಗ ಮೋಶೆ ಕರ್ತನಿಗೆ, ಅಯ್ಯೋ, ಕರ್ತನೇ, ನಾನು ನಿ
ನ್ನೆ ಮೊನ್ನೆಯೂ, ನೀನು ನಿನ್ನ ದಾಸನ ಸಂಗತ ಮಾತಾಡಿದಂ
ದಿನಿಂದಲೂ ಮಾತು ಬಲ್ಲನಲ್ಲ, ಮಂದ ಬಾಯಿಯವನೂ, ಮಂ
ದ ನಾಲಿಗೆಯವನೂ ಆಗಿದ್ದೇನೆ, ಅಂದನು.
೧೧ ಕರ್ತನು ಅವನಿಗೆ ಹೇಳಿದ್ದೇನಂದರೆ, ಮನುಷ್ಯರಿಗೆ ಬಾ
ಯಿ ಕೊಟ್ಟವನೂ, ಮೂಕರನ್ನೂ, ಕಿವುಡರನ್ನೂ ದೃಷ್ಟಿಯು
ಳ್ಳವರನ್ನೂ, ಕುರುಡರನ್ನೂ ಉಂಟು ಮಾಡಿದವನು ಯಾರು!
೧೨ ಕರ್ತನಾದ ನಾನಲ್ಲವೋ! ಹಾಗಾದರೆ, ಈಗ ಹೋಗು; ನಾನೇ
ನಿನ್ನ ಬಾಯಿಯ ಸಂಗತ ಇದ್ದು, ನೀನು ಮಾತಾಡ ತಕ್ಕದ್ದ
ನ್ನು ನಿನಗೆ ಬೋಧಿಸುವೆನು.
೧೩ ಅವನು, ಅಯ್ಯೋ, ಕರ್ತನೇ, ಕಳುಹಿಸ ತಕ್ಕವನ ಕೈ
ಯಿಂದ ದಯೆ ಮಾಡಿ ಕಳುಹಿಸು, ಅಂದಾಗ—
೧೪ ಕರ್ತನು ಮೋಶೆಯ ಮೇಲೆ ಕೋಪಗೊಂಡು ಹೇಳಿದ್ದೇನಂ
ದರೆ, ನಿನ್ನ ಸಹೋದರನಾದ ಲೇವಿಯನಾದ ಆರೋನನು ಇ
ದ್ದಾನಲ್ಲ! ಅವನು ಚನ್ನಾಗಿ ಮಾತಾಡುತ್ತಾನೆಂದು ಬಲ್ಲೆನು. ಇ
ಗೋ, ಅವನು ನಿನ್ನೆದುರಿಗೆ ಹೊರಗೆ ಬರುತ್ತಾನೆ; ನಿನ್ನನ್ನು
೧೫ ನೋಡಿದರೆ, ಹೃದಯದಲ್ಲಿ ಸಂತೋಷ ಪಡುವನು. ಅವನ
ಸಂಗತ ನೀನು ಮಾತಾಡಿ, ಅವನ ಬಾಯಿಯಲ್ಲಿ ಮಾತುಗಳನ್ನು
ಇಡ ಬೇಕು; ಮತ್ತು ನಿನ್ನ ಬಾಯಿಯ ಸಂಗತಲೂ, ಅವನ ಬಾ
ಯಿಯ ಸಂಗತಲೂ ನಾನಿದ್ದು, ನೀವು ಮಾತ ತಕ್ಕದ್ದನ್ನು ನಿಮ
೧೬ ಗೆ ತೋರಿಸುವೆನು. ಅವನು ನಿನಗೋಸ್ಕರ ಜನರ ಸಂಗತ
ಮಾತಾಡುವನು; ಅವನು ನಿನಗೆ ಬಾಯಿಯಾಗಿರುವನು; ನೀನು
೧೭ ಅವನಿಗೆ ದೇವರಾಗಿರುವಿ. ಮತ್ತು ಈ ಕೋಲನ್ನು ಕೈಯಲ್ಲಿ ತ
ಕ್ಕೊಳ್ಳ ಬೇಕು; ಇದರಿಂದ ಗುರುತುಗಳನ್ನು ಮಾಡುವಿ, ಅಂ
ದನು.
೧೮ ಆಗ ಮೋಶೆ ಹೋಗಿ, ಮಾವನಾದ ಇತ್ರೋನನ ಬಳಿಗೆ ತಿ
ರುಗಿ ಕೊಂಡು, ಅವನಿಗೆ, ಐಗುಪ್ತದಲ್ಲಿರುವ ನನ್ನ ಸಹೋದ
ರರ ಬಳಿಗೆ ತಿರಿಗಿ ಹೋಗಿ, ಅವರು ಇನ್ನು ಜೀವದಿಂದಿದ್ದಾರೋ!
ಎಂದು ನೋಡುವೆನು, ಅಂದನು. ಇತ್ರೋನನು ಮೋಶೆಗೆ, ಸ
ಮಾಧಾನವಾಗಿ ಹೋಗು, ಅಂದನು.

೧೯ ಇದಲ್ಲದೆ ಕರ್ತನು ಮಿದ್ಯಾನಿನಲ್ಲಿ ಪೋಶೆಗೆ, ಐಗುಪ್ತಕ್ಕೆ
ತಿರಿಗಿ ಹೋಗು; ಯಾಕಂದರೆ ನಿನ್ನ ಪ್ರಾಣವನ್ನು ಹುಡಿಕಿದ
೨೦ ಜನರೆಲ್ಲರು ಸತ್ತಿದ್ದಾರೆ, ಅಂದನು. ಆಗ ಪೋಶೆ ತನ್ನ ಹೆಂಡತಿ
ಯನ್ನೂ, ಮಕ್ಕಳನ್ನೂ ತಕ್ಕೊಂಡು, ಕತ್ತೆಯ ಮೇಲೆ ಏರಿಸಿ
ಐಗುಪ್ತ ದೇಶಕ್ಕೆ ತಿರುಗಿ ಕೊಂಡನು; ಮತ್ತು ಪೋಶೆ ದೇವರ
೨೧ ಕೋಲನ್ನು ಕೈಯಲ್ಲಿ ತಕ್ಕೊಂಡನು. ಆಗ ಕರ್ತನು ಪೋಶೆ
ಗೆ, ನೀನು ಐಗುಪ್ತಕ್ಕೆ ತಿರಿಗಿ ಹೋಗುವಾಗ, ನಾನು ನಿನ್ನ ಕೈ
ಯಲ್ಲಿಟ್ಟ ಲಕ್ಷಣಗಳನ್ನೆಲ್ಲಾ ಫರೋನನ ಮುಂದೆ ಮಾತುವ ಹಾ
ಗೆ ನೋಡು; ಆದಾಗ್ಯೂ ನಾನು ಅವನ ಹೃದಯವನ್ನು ಕಠಿಣ
೨೨ ಪಡಿಸುವೆನು; ಅವನು ಜನರನ್ನು ಕಳುಹಿಸುವದಿಲ್ಲ. ಆಗ ನೀನು
ಫರೋನನಿಗೆ ಹೇಳ್ಲ ಬೇಕಾದದ್ದೇನಂದರೆ, ಕರ್ತನು ಹೀಗೆ ಹೇ
೨೩ ಳುತ್ತಾನೆ—ಇಸ್ರಯೇಲ್ ನನ್ನ ಚೊಚ್ಚಲ ಮಗನು; ಹೀಗಿರುವದ
ರಿಂದ ಅವನು ನನಗೆ ಸೇವಿಸುವ ಹಾಗೆ ನನ್ನ ಮಗನನ್ನು ಕಳು
ಹಿಸು, ಎಂದು ನಿನಗೆ ಹೇಳುತ್ತೇನೆ; ಕಳುಹಿಸಕೊಳ್ಳದಿದ್ದರೆ, ಇ
ಗೋ, ನಾನು ನಿನ್ನ ಚೊಚ್ಚಲ ಮಗನನ್ನು ಕೊಲ್ಲುತ್ತೇನೆ, ಅಂ
ದನು.
೨೪ ಇದಲ್ಲದೆ ದಾರಿಯಲ್ಲಿ ಛತ್ರದಲ್ಲಿ ಆದದ್ದೇನಂದರೆ, ಕರ್ತನು
ಅವನೆದುರಿಗೆ ಬಂದು, ಅವನನ್ನು ಕೊಲ್ಲುವದಕ್ಕೆ ಹುಡಿಕಿದನು.
೨೫ ಆಗ ಜಿಪೋರಳು ಕತ್ತಿಯನ್ನು ತಕ್ಕೊಂಡು, ತನ್ನ ಮಗನ
ಮುಂದೊಗಲನ್ನು ಕೊಯಿದು, ಅವನ ಕಾಲುಗಳ ಮುಂದೆ ಹಾಕಿ,
೨೬ ನೀನು ನನಗೆ ರಕ್ತದ ಮದಲಿಂಗನು, ಅಂದಳು. ಆಗ ಅವನನ್ನು
ಬಿಟ್ಟನು. ಆ ಸಮಯದಲ್ಲಿ ಅವಳು ಸುಳ್ಳೆದನೆಯ ನಿಮಿತ್ತ ರಕ್ತ
೨೭ ದ ಮದಲಿಂಗನು, ಅಂದಳು.
ಇದಲ್ಲದೆ ಕರ್ತನು ಆರೋನನಿಗೆ, ಪೋಶೆಗೆ ಎದುರಾಗಿ
ಅರಣ್ಯಕ್ಕೆ ಹೋಗು, ಅಂದನು. ಅವನು ಹೋಗಿ, ದೇವಗಿರಿ
೨೮ ಯಲ್ಲಿ ಅವನನ್ನು ಎದುರು ಗೊಂಡು ಮುದ್ದಿಟ್ಟನು. ಆಗ ಪೋ
ಶೆ ಆರೋನನಿಗೆ, ತನ್ನನ್ನು ಕಳುಹಿಸಿದ ಕರ್ತನ ಎಲ್ಲಾ ಮಾ
ತುಗಳನ್ನೂ, ತನಗೆ ಅಪ್ಪಣೆ ಕೊಟ್ಟ ಎಲ್ಲಾ ಗುರುತುಗಳನ್ನೂ
ತಿಳಿಸಿದನು.
೨೯ ಆ ಮೇಲೆ ಪೋಶೆಯೂ ಆರೋನನೂ ಹೋಗಿ, ಇಸ್ರಯೇ
೩೦ ಲ್ ಮಕ್ಕಳ ಹಿರಿಯರನ್ನೆಲ್ಲಾ ಕೂಡಿಸಿದರು; ಕರ್ತನು ಪೋಶೆ
ಗೆ ಹೇಳ್ಲಿದ ಮಾತುಗಳನ್ನೆಲ್ಲಾ ಆರೋನನು ಹೇಳ್ಲಿ, ಜನರ ಕ
೩೧ ಣ್ಣುಗಳ ಮುಂದೆ ಗುರುತುಗಳನ್ನು ಮಾಡಿದನು. ಜನರು ನಂಬಿ
ದರು. ಕರ್ತನು ಇಸ್ರಯೇಲ್ ಮಕ್ಕಳನ್ನು ದರ್ಶಿಸಿ, ಅವರ
ದೀನ ಸ್ಥಿತಿಯನ್ನು ನೋಡಿದನೆಂದು, ಅವರು ಕೇಳ್ಲಿದಾಗ, ಬೊ
ಗ್ಗಿ ಕೊಂಡು, ಅಡ್ಡ ಬಿದ್ದರು.

## ೫. ಸಂಧಿ.

೧ ಆ ಮೇಲೆ ಪೋಶೆಯೂ ಆರೋನನೂ ಹೋಗಿ, ಫರೋನ
ನಿಗೆ, ಇಸ್ರಯೇಲಿನ ದೇವರಾದ ಯೆಹೋವ, ನನ್ನ ಜನರನ್ನು
ಅರಣ್ಯದಲ್ಲಿ ಹಬ್ಬವನ್ನಾಚರಿಸುವದಕ್ಕೆ ಕಳುಹಿಸು, ಎಂದು
೨ ಹೇಳ್ಲಿತ್ತಾನೆ, ಅಂದರು. ಫರೋನನು, ನಾನು ಅವನ ಮಾತ
ನ್ನು ಕೇಳ್ಲಿ, ಇಸ್ರಯೇಲನ್ನು ಕಳುಹಿಸುವದಕ್ಕೆ ಯೆಹೋವ
ಯಾರು? ಯೆಹೋವನನ್ನು ನಾನರಿಯೇ; ಇಸ್ರಯೇಲನ್ನು ಕ
೩ ಳುಹಿಸುವದಿಲ್ಲ, ಅಂದನು. ಆಗಲವರು ಇಬ್ರೀಯರ ದೇವರು ನ
ಮ್ಮನ್ನು ಎದುರು ಗೊಂಡಿದ್ದಾನೆ. ನಾವು ಅರಣ್ಯದಲ್ಲಿ ಮೂರು
ದಿವಸ ಪ್ರಯಾಣ ಹೋಗಿ ನಮ್ಮ ದೇವರಾದ ಕರ್ತನಿಗೆ ಬಲಿ
ಅರ್ಪಿಸೋಣ; ಇಲ್ಲವಾದರೆ, ಅವನು ವ್ಯಾಧಿಯಿಂದಲಾದರೂ
ಕತ್ತಿಯಿಂದಲಾದರೂ ನಮ್ಮ ಮೇಲೆ ಬಂದಾನು, ಅಂದರು. ಐ
೪ ಗುಪ್ತದ ಅರಸನು ಅವರಿಗೆ—ಪೋಶೆಯೇ, ಆರೋನನೇ, ಯಾ
ಕೆ ಜನರು ತಮ್ಮ ಕೆಲಸಗಳನ್ನು ಬಿಡುವ ಹಾಗೆ ಮಾಡುತ್ತೀರಿ.
೫ ನಿಮ್ಮ ಬಿಟ್ಟಿಗಳ ಬಳ್ಳಿಗೆ ಹೋಗಿರಿ, ಅಂದನು. ಮತ್ತು ಫರೋ
ನನು, ಇಗೋ, ಈಗ ದೇಶದಲ್ಲಿ ಜನವು ಬಹಳವಾಯಿತು; ಮ
ತ್ತು ನೀವು ಅವರನ್ನು ಬಿಟ್ಟಿಗಳಿಂದ ನಿಲ್ಲಿಸಿ ಬಿಡುತ್ತೀರಿ, ಅಂದ
ನು.
೬ ಆ ದಿವಸದಲ್ಲಿ ಫರೋನನು ಜನರನ್ನು ತಿಪ್ಪಲು ಪಡಿಸುವವ
ರಿಗೂ ಅವರ ಪಾರುಪತ್ಯಗಾರರಿಗೂ ಆಜ್ಞಾಪಿಸಿದ್ದೇನಂದರೆ,
೭ ನೀವು ಇನ್ನು ಜನರಿಗೆ ಇಟ್ಟಿಗೆಗಳನ್ನು ಮಾತುವದಕ್ಕೋಸ್ಕರ
ಪೂರ್ವದ ಹಾಗೆ ಹುಲ್ಲನ್ನು ಕೊಡ ಬೇಡಿರಿ; ಅವರೇ ಹೋಗಿ,
೮ ಹುಲ್ಲನ್ನು ಕೂಡಿಸಿ ಕೊಳ್ಳಲಿ. ಆದರೆ ಅವರು ಇದು ವರಗೂ
ಮಾತಿದ ಇಟ್ಟಿಗೆಗಳ ತೆಬ್ಬವನ್ನು ಏನೂ ಕಡಿಮೆ ಮಾಡಕೆ,
ಅವರಿಗೆ ನೇಮಿಸ ಬೇಕು; ಅವರು ಮೈಗಳ್ಳರೇ, ಆದಕಾರ
ಣ ನಾವು ಹೋಗಿ, ನಮ್ಮ ದೇವರಿಗೆ ಬಲಿ ಅರ್ಪಿಸೋಣ ಎಂ
೯ ದು, ಕೂಗುತ್ತಾರೆ. ಸೇವೆಯು ಈ ಜನರ ಮೇಲೆ ಕಠಿಣವಾಗಲಿ
ಅವರು ಅದರಲ್ಲಿ ಕಷ್ಟ ಪಡಲಿ; ಸುಳ್ಳು ಮಾತುಗಳಿಗೆ ಲಕ್ಷ್ಯಕೊಡ
ಬಾರದು.
೧೦ ಆಗ ಜನರನ್ನು ತಿಪ್ಪಲು ಪಡಿಸುವವರೂ ಪಾರುಪತ್ಯಗಾರ
ರೂ ಹೊರಗೆ ಹೋಗಿ, ಜನರಿಗೆ ಹೇಳ್ಲಿದ್ದೇನಂದರೆ, ಫರೋನ
೧೧ ನು, ನಾನು ನಿಮಗೆ ಹುಲ್ಲು ಕೊಡುವದಿಲ್ಲ, ಅನ್ನುತ್ತಾನೆ. ನೀವೇ
ಹೋಗಿ, ನಿಮಗೆ ಎಲ್ಲಿ ದೊರಕುವದೋ, ಅಲ್ಲಿ ನಿಮಗೆ ಹುಲ್ಲು
ತಕ್ಕೊಳ್ಳಿರಿ; ಆದಾಗ್ಯೂ ನಿಮ್ಮ ಸೇವೆಯಲ್ಲಿ ಏನೂ ಕಡಿಮೆ ಆ
೧೨ ಗುವದಿಲ್ಲ. ಆಗ ಜನರು ಹುಲ್ಲಿಗೋಸ್ಕರ ಕೂಳೆ ಕೂಡಿಸಿ ಕೊ
೧೩ ಳ್ಳುವದಕ್ಕೆ, ಐಗುಪ್ತ ದೇಶದಲ್ಲೆಲ್ಲಾ ಚದರಿ ಹೋದರು. ಇದಲ್ಲ
ದೆ ತಿಪ್ಪಲು ಪಡಿಸುವವರು, ನಿಮ್ಮ ಕೆಲಸಗಳನ್ನು ಹುಲ್ಲು ಇದ
ಸಮಯದಲ್ಲಿ ಮಾಡಿದ ಹಾಗೆ, ಒಂದೊಂದು ದಿವಸದ್ದನ್ನು ಆ
೧೪ ಆ ದಿವಸದಲ್ಲಿ ತೀರಿಸಿ ಬಿಡಿಕೆಂದು, ತ್ವರೆ ಪಡಿಸಿದರು. ಹೀಗಿರ
ಲಾಗಿ, ಮುಂಜಿನಂತೆ ನಿನ್ನೆ ಈ ಹೊತ್ತು ನಿಮ್ಮ ಇಟ್ಟಿಗೆಗಳ ಸೇ
ವೆಯನ್ನು ಯಾಕೆ ತೀರಿಸಲಿಲ್ಲವೆಂದು, ಫರೋನನ ಕಪೆಯ
ತಿಪ್ಪಲು ಪಡಿಸುವವರು ಇಸ್ರಯೇಲ್ ಮಕ್ಕಳ ಮೇಲೆ ಇಟ್ಟ ಪಾ
ರುಪತ್ಯಗಾರರೂ ಹೊಡೆಯಲ್ಪಟ್ಟರು.
೧೫ ಇಸ್ರಯೇಲ್ ಮಕ್ಕಳ ಪಾರುಪತ್ಯಗಾರರು ಹೋಗಿ, ಫ
ರೋನನ ಬಳ್ಳಿಯ ಕೂಗಿ, ಯಾಕೆ ನಿನ್ನ ದಾಸರಿಗೆ ಹೀಗೆ ಮಾ
೧೬ ಡುತ್ತೀ? ನಿನ್ನ ದಾಸರಿಗೆ ಏನೂ ಹುಲ್ಲು ಕೊಡದೆ, ಇಟ್ಟಿಗೆಗಳ
ನ್ನು ಮಾಡಿರೆಂದು, ನಮಗೆ ಅನ್ನುತ್ತಾರೆ. ಇಗೋ, ನಿನ್ನ ದಾಸ
ರು ಹೊಡೆಯಲ್ಪಡುತ್ತಿರಲಾಗಿ ನಿನ್ನ ಜನರಲ್ಲಿ ತಪ್ಪು ಉಂಟು,
೧೭ ಅಂದರು. ಆಗಲವನು, ನೀವು ಮೈಗಳ್ಳರು, ನೀವು ಮೈಗಳ್ಳ
ರು, ಆದಕಾರಣ, ನಾವು ಹೋಗಿ, ಕರ್ತನಿಗೆ, ಬಲಿ ಅರ್ಪಿಸೋ
೧೮ ಣ, ಅನ್ನುತ್ತೀರಿ. ಹಾಗಾದರೆ, ಈಗ ಹೋಗಿ, ಸೇವೆ ಮಾಡಿ
ರಿ; ಹುಲ್ಲು ನಿಮಗೆ ಕೊಡಲ್ಪಡುವದಿಲ್ಲ; ಆದರೂ ಇಟ್ಟಿಗೆಗಳ



೧೯ ನೇಮವನ್ನು ನೀವು ಕೊಡ ಬೇಕು, ಅಂದನು. ಆಗ ಇಸ್ರಯೇಲ್
ಮಕ್ಕಳ ಪಾರುಪತ್ಯಗಾರರು, ನೀವು ದಿನ ದಿನದ ನಿಮ್ಮ ಇ
ಟ್ಟಿಗೆಗಳಲ್ಲಿ ಏನೂ ಕಡಿಮೆ ಮಾಡ ಬಾರದೆಂಬ ಮಾತಿಗೋಸ್ಕರ
ತಾವು ಕೆಟ್ಟ ಸ್ಥಿತಿಯಲ್ಲಿ ಇದ್ದೇವೆಂದು, ನೋಡಿದರು.
೨೦ ಅವರು ಫರೋನನನ್ನು ಬಿಟ್ಟು ಹೊರಗೆ ಬಂದಾಗ, ತಮ್ಮನ್ನು
ಎದುರುಗೊಳ್ಳುವದಕ್ಕೆ ನಿಂತಿದ್ದ ಪೋಶೆಯನ್ನೂ ಆರೋನ
೨೧ ನನ್ನೂ ಕಲತು, ಅವರಿಗೆ, ಕರ್ತನು ನಿಮ್ಮನ್ನು ನೋಡಿ, ನಿಮಗೆ
ನ್ಯಾಯ ತೀರಿಸಲಿ; ನೀವೇ ಫರೋನನ ಸನ್ನಿಧಿಯಲ್ಲಿಯೂ ಅ
ವನ ದಾಸರ ಸನ್ನಿಧಿಯಲ್ಲಿಯೂ ನಮ್ಮನ್ನು ಅಸಹ್ಯ ಮಾಡಿ,
ನಮ್ಮನ್ನು ಕೊಲ್ಲುವದಕ್ಕೋಸ್ಕರ ಕತ್ತಿಯನ್ನು ಅವರ ಕೈ
ಯಲ್ಲಿ ಕೊಟ್ಟಿರಿ, ಅಂದರು.
೨೨ ಆಗ ಪೋಶೆ ಕರ್ತನ ಬಳ್ಳಿಗೆ ತಿರುಗಿ ಕೊಂಡು, ಕರ್ತನೇ,
ಯಾಕೆ ಈ ಜನರಿಗೆ ಕೇಡನ್ನು ಮಾಡಿದಿ! ಯಾಕೆ ನನ್ನನ್ನು ಕ
೨೩ ಳುಹಿಸಿದಿ! ನಾನು ಫರೋನನ ಬಳ್ಳಿಗೆ ಬಂದು, ನಿನ್ನ ಹೆಸರಿನ
ಲ್ಲಿ ಮಾತಾಡಿದಂದಿನಿಂದ ಈ ಜನರಿಗೆ ಕೇಡನ್ನು ಮಾಡುತ್ತಾನೆ;
ನೀನು ನಿನ್ನ ಜನರನ್ನು ತಪ್ಪಿಸಲೇ ಇಲ್ಲ, ಅಂದನು.

## ೬. ಸಂಧಿ.

೧ ಆಗ ಕರ್ತನು ಪೋಶೆಗೆ, ನಾನು ಫರೋನನಿಗೆ ಮಾಡುವದ
ನ್ನು ಈಗ ನೋಡುವಿ; ಬಲವಾದ ಹಸ್ತದಿಂದ ಅವರನ್ನು ಕಳುಹಿ
ಸಿ, ಬಲವಾದ ಕೈಯಿಂದ ತನ್ನ ದೇಶದೊಳಗಿಂದ ಹೊರಡಿಸುವ
ನು, ಅಂದನು.
೨ ಆಗ ದೇವರು ಪೋಶೆಯ ಸಂಗಡ ಮಾತಾಡಿ, ಅವನಿಗೆ ಹೇ
3 ಳ್ಲಿದ್ದೇನಂದರೆ, ನಾನೇ ಯೆಹೋವ. ನಾನು ಅಬ್ರಹಾಮನಿಗೂ,
ಇಸಾಕನಿಗೂ, ಯಾಕೋಬನಿಗೂ ಸರ್ವ ಶಕ್ತನಾದ ದೇವರೆಂ
ದು ಕಾಣಿಸಿ ಕೊಂಡೆನು; ಆದರೆ ಯೆಹೋವನೆಂಬ ನನ್ನ ಹೇಸ
೪ ರಿಂದ ನಾನು ಅವರಿಗೆ ತಿಳ್ಳಿಯಲ್ಪಡಲಿಲ್ಲ. ಮತ್ತು ಕಾನಾನ್ ದೇಶ
ವನ್ನು, ಅವರು ವಾಸವಾಗಿದ್ದ ಅವರ ಪರವಾಸದ ದೇಶವನ್ನು
ಅವಳಿಗೆ ಕೊಡುವೆನೆಂದು, ಅವರ ಸಂಗಡ ಬಡಂಬಡಿಕೆ ಮಾಡಿದೆ
೫ ನು. ಮತ್ತು ಐಗುಪ್ತ್ಯರು ದಾಸರಾಗ ಮಾಡಿರುವ ಇಸ್ರಯೇಲ್
ಮಕ್ಕಳ ಕೂಗನ್ನು ಕೇಳ್ಲಿ, ನನ್ನ ಬಡಂಬಡಿಕೆಯನ್ನು ಜ್ಞಾಪ
೬ ಕ ಮಾಡಿಕೊಂಡೆನು. ಆದದರಿಂದ ಇಸ್ರಯೇಲ್ ಮಕ್ಕಳಿಗೆ, ನಾ
ನೇ ಕರ್ತನು; ನಾನು ನಿಮ್ಮನ್ನು ಐಗುಪ್ತದ ಬಿಟ್ಟಿಗಳಿಂದ ಹೊ
ರಗೆ ಬರ ಮಾಡಿ, ಅವರ ದಾಸತ್ವದಿಂದ ನಿಮ್ಮನ್ನು ಬಿಡಿಸಿ, ಚಾ
ಚಿದ ತೋಳ್ಳಿಂದಲೂ ದೊಡ್ಡ ನ್ಯಾಯ ತೀರ್ಪುಗಳಿಂದಲೂ ನಿ
೭ ಮ್ಮನ್ನು ವಿಮೋಚಿಸಿ, ನಿಮ್ಮನ್ನು ನನಗೆ ಜನರಾಗಿ ತಕ್ಕೊಂ
ಡು, ನಿಮಗೆ ದೇವರಾಗಿರುವೆನು; ಐಗುಪ್ತದ ಬಿಟ್ಟಿಗಳೊಳಗಿಂದ
ನಿಮ್ಮನ್ನು ಹೊರಗೆ ಬರ ಮಾಡಿದ ಕರ್ತನಾಗಿರುವ ನಾನೇ ನಿ
೮ ಮ್ಮ ದೇವರಾಗಿದ್ದೇನೆಂದು, ನಿಮಗೆ ತಿಳ್ಳಿಯುವದು. ಮತ್ತು ಅಬ್ರ
ಹಾಮನಿಗೂ, ಇಸಾಕನಿಗೂ, ಯಾಕೋಬನಿಗೂ ನಾನು ಕೊ
ಡುವೆನೆಂದು, ನನ್ನ ಕೈಯನ್ನು ಎತ್ತಿದ ದೇಶದಲ್ಲಿ ನಿಮ್ಮನ್ನು
ಬರ ಮಾಡಿ, ಅದನ್ನು ನಿಮಗೆ ಸ್ವಾಸ್ತ್ಯವಾಗಿ ಕೊಡುವೆನು; ನಾ
ನೇ ಕರ್ತನು, ಎಂದು ಹೇಳ್ಲು.
೯ ಪೋಶೆ ಇಸ್ರಯೇಲ್ ಮಕ್ಕಳಿಗೆ ಹಾಗೆ ಹೇಳ್ಲಿದಾಗ, ಅವರು
ಅತ್ತ ಸಂಕಟಕ್ಕೋಸ್ಕರವೂ, ಕಠಿಣವಾದ ಸೇವೆಗೋಸ್ಕರವೂ
ಪೋಶೆಯ ಮಾತು ಕೇಳ್ಲಲಿಲ್ಲ.
೧೦ ಆಗ ಕರ್ತನು ಪೋಶೆಯ ಸಂಗಡ ಮಾತಾಡಿ, ನೀನು ಹೋ
೧೧ ಗಿ, ಅವನು ಇಸ್ರಯೇಲ್ ಮಕ್ಕಳನ್ನು ತನ್ನ ದೇಶದಿಂದ ಕಳು
ಹಿಸುವ ಹಾಗೆ, ಐಗುಪ್ತದ ಅರಸನಾದ ಫರೋನನ ಸಂಗಡ
೧೨ ಮಾತಾಡು, ಅಂದನು. ಆದರೆ ಪೋಶೆ ಕರ್ತನ ಸನ್ನಿಧಿಯಲ್ಲಿ,
ಇಗೋ, ಇಸ್ರಯೇಲ್ ಮಕ್ಕಳು ನನ್ನ ಮಾತು ಕೇಳ್ಲುವದಿಲ್ಲ;
ಮತ್ತು ಫರೋನನು ಹ್ಯಾಗೆ ಕೇಳ್ಲುವನು! ನಾನು ಪರಿಛೇದನೆ
೧೩ ಇಲ್ಲದ ತುಟಿಗಳುಳ್ಳವನು, ಅಂದನು. ಆಗ ಕರ್ತನು ಪೋ
ಶೆಯ ಸಂಗಡಲೂ ಆರೋನನ ಸಂಗಡಲೂ ಮಾತಾಡಿ, ಅವರಿಗೆ,
ಇಸ್ರಯೇಲ್ ಮಕ್ಕಳ ವಿಷಯವಾಗಿಯೂ, ಐಗುಪ್ತದ ಅರಸ
ನಾದ ಫರೋನನ ವಿಷಯವಾಗಿಯೂ, ಇಸ್ರಯೇಲ್ ಮಕ್ಕಳನ್ನು
ಐಗುಪ್ತದೊಳಗಿಂದ ಹೊರಗೆ ಬರ ಮಾಡ ಬೇಕೆಂಬ ಅ
ಪ್ಪಣೆಯನ್ನು ಕೊಟ್ಟನು.
೧೪ ಅವರ ತಂದೆಗಳ ಮನೆಯ ಮುಖ್ಯಸ್ಥರು ಇವರೇ—ಇಸ್ರಯೇ
ಲನ ಚೊಚ್ಚಲಾದ ರೂಬೆನನ ಮಕ್ಕಳು—ಹನೋಕ್, ಫಲ್ಲೂ, ಹೆ
೧೫ ಜ್ರೋನ್, ಕರ್ಮಿ; ಇವು ರೂಬೆನನ ಗೋತ್ರಗಳು. ಮತ್ತು ಸಿಮೆ
ಯೋನನ ಮಕ್ಕಳು—ಯೆಮುವೇಲ್, ಯಾಮಿನ್, ಓಹದ್, ಯಾ
ಕಿನ್, ಜೋಹರ್, ಮತ್ತು ಕನಾನ್ಯಳ ಮಗನಾದ ಶಾಲನು; ಇವು
ಸಿಮೆಯೋನನ ಗೋತ್ರಗಳು.
೧೬ ಮತ್ತು ತಮ್ಮ ತಮ್ಮ ವಂಶಾವಳ್ಳಿಗಳ ಪ್ರಕಾರವಾಗಿರುವ ಲೇವಿ
ಯ ಮಕ್ಕಳ ಹೆಸರುಗಳು ಇವೇ—ಗೆರ್ಶೋನ್, ಕೊಹತ್, ಮೆ
ರಾರಿ. ಲೇವಿಯ ಜೀವದ ವರುಷಗಳು ನೂರ ಮೂವತ್ತೇಳು ವ
೧೭ ರುಷ. ಗೆರ್ಶೋನನ ಮಕ್ಕಳು ಅವರ ಗೋತ್ರಗಳ ಅನುಸಾರ
ವಾಗಿ ಲಿಬ್ನಿಯೂ ಶಿಮಿಯೂ. ಕೊಹತನ ಮಕ್ಕಳು ಅಮ್ರಾ
೧೮ ಮ್, ಇಚಾರ್, ಹೆಬ್ರೋನ್, ಉಜ್ಜಿಯೇಲ್. ಕೊಹತನ ಜೀವದ ವ
ರುಷಗಳು ನೂರ ಮೂವತ್ತು ಮೂರು ವರುಷ. ಮತ್ತು ಮೆರಾ
ರಿಯ ಮಕ್ಕಳು—ಮಹ್ಲಿಯೂ ಮೂಷಿಯೂ. ಇವೇ ವಂಶಾವಳ್ಳಿ
೧೯ ಗಳ ಅನುಸಾರವಾದ ಲೇವಿಯ ಗೋತ್ರಗಳು. ಮತ್ತು ಅಮ್ರಾ
ಮನು ತನ್ನ ಸೋದರತ್ತೆಯಾದ ಯೊಕೆಬೆದಳನ್ನು ಹೆಂಡತಿ
ಯಾಗಿ ತಕ್ಕೊಂಡನು; ಇವಳು ಅವನಿಗೆ ಆರೋನನನ್ನೂ
ಪೋಶೆಯನ್ನೂ ಹೆತ್ತಳು. ಅಮ್ರಾಮನ ಜೀವದ ವರುಷಗಳು
೨೦ ನೂರ ಮೂವತ್ತೇಳು ವರುಷ. ಇಚಾರನ ಮಕ್ಕಳು—ಕೋರ
೨೧ ಹ, ನೆಫೆಗ, ಜಿಕ್ರಿ. ಉಜ್ಜಿಯೇಲನ ಮಕ್ಕಳು—ಮಿಷಯೇಲ್, ಎ
೨೨ ಲ್ಲಾಫಸ, ಸಿತ್ರಿ. ಇದಲ್ಲದೆ ಆರೋನನು ಅಮಿನದಾಬನ ಮಗಳಾ
ದ ನಾಶೋನನ ಸಹೋದರಿಯಾದ ಎಲಿಷೇಬಳನ್ನು ತಕ್ಕೊಂ
ಡನು; ಅವಳು ಅವನಿಗೆ ನಾದಬನನ್ನೂ, ಅಬೀಹುವನ್ನೂ, ಎಲೆ
೨೩ ಯಾಜರನನ್ನೂ, ಇಥಮಾರನನ್ನೂ ಹೆತ್ತಳು. ಮತ್ತು ಕೋ
ರಹನ ಮಕ್ಕಳು—ಅಸ್ಸಿರ್, ಎಲ್ಕಾನ, ಅಬಿಯಸಾಫ್; ಇವು
೨೪ ಕೋರಹಿ ಗೋತ್ರಗಳು. ಮತ್ತು ಆರೋನನ ಮಗನಾದ ಎಲೆ
ಯಾಜರನು ಪುಟಿಯೇಲನ ಮಕ್ಕಳಲ್ಲಿ ಒಬ್ಬಳನ್ನು ತನಗೆ ಹೆಂ
ಡತಿಯಾಗಿ ತಕ್ಕೊಂಡನು; ಇವಳು ಅವನಿಗೆ ಫಿನೆಹಾಸನನ್ನು
ಹೆತ್ತಳು. ಇವರು ಗೋತ್ರಗಳ ಅನುಸಾರವಾಗಿ ಲೇವ್ಯರ ತಂದೆಗ
ಳ ಮುಖ್ಯಸ್ಥರು.
೨೫ ಇಸ್ರಯೇಲ್ ಮಕ್ಕಳನ್ನು ಅವರ ಸೈನ್ಯಗಳ ಪ್ರಕಾರ ಐಗು
ಪ್ತದೊಳಗಿಂದ ಹೊರಗೆ ಬರ ಮಾಡಿರೆಂದು, ಕರ್ತನು ಯಾ

ರಿಗೆ ಹೇಳಿದನೋ, ಆ ಅಕೋನನೂ ಮೋಶೆಯೂ ಇವರೇ.
೨೭ ಐಗುಪ್ತದ ಅರಸನಾದ ಫರೋನನ ಸಂಗಡ, ಇಸ್ರಯೇಲ್ ಮ
ಕ್ಕಳನ್ನು ಹೊರಗೆ ತರುವದಕ್ಕೋಸ್ಕರ, ಮಾತಾಡಿದವರು ಇವ
ರೇ; ಮೋಶೆಯೂ ಅಕೋನನೂ ಇವರೇ.
೨೮ ಕರ್ತನು ಐಗುಪ್ತ ದೇಶದಲ್ಲಿ ಮೋಶೆಯ ಸಂಗಡ ಮಾತಾ
೨೯ ಡಿದ ದಿವಸದಲ್ಲಿ ಆದದ್ದೇನಂದರೆ, ಕರ್ತನು ಮಾತಾಡಿ ಮೋಶೆ
ಗೆ, ನಾನೇ ಕರ್ತನು; ನಾನು ನಿನಗೆ ಹೇಳುವದನ್ನೆಲ್ಲಾ ಐಗುಪ್ತ
೩೦ ದ ಅರಸನಾದ ಫರೋನನಿಗೆ ಹೇಳು, ಅಂದಾಗ, ಮೋಶೆ ಕರ್ತ
ನ ಸನ್ನಿಧಿಯಲ್ಲಿ, ಇಗೋ, ನಾನು ಪಟ್ಟಣದನೆ ಇಲ್ಲದ ತುಟಿಗ
ಳುಳ್ಳವನು; ಫರೋನನು ನನ್ನ ಮಾತು ಹ್ಯಾಗೆ ಕೇಳುವನು!
ಅಂದನು.

## ೭. ಸಂಧಿ.

೧ ಆಗ ಕರ್ತನು ಮೋಶೆಗೆ ಹೇಳಿದ್ದೇನಂದರೆ, ಇಗೋ, ನಿನ್ನ
ನ್ನು ಫರೋನನಿಗೆ ದೇವರಾಗಿ ಇಡುತ್ತೇನೆ; ಮತ್ತು ನಿನ್ನ ಸ
ಹೋದರನಾದ ಅಕೋನನು ನಿನ್ನ ಪ್ರವಾದಿಯಾಗಿರುವನು.
೨ ನಾನು ನಿನಗೆ ಆಜ್ಞಾಪಿಸುವದನ್ನೆಲ್ಲಾ ನೀನು ಮಾತಾಡ ಬೇಕು;
ಮತ್ತು ನಿನ್ನ ಸಹೋದರನಾದ ಅಕೋನನು ಫರೋನನ ಸಂ
ಗಡ, ಅವನು ಇಸ್ರಯೇಲ್ ಮಕ್ಕಳನ್ನು ತನ್ನ ದೇಶದೊಳಗಿಂ
3 ದ ಕಳುಹಿಸಿ ಬಿಡುವ ಹಾಗೆ, ಮಾತಾಡ ಬೇಕು. ಆದರೆ ನಾನು
ಫರೋನನ ಹೃದಯವನ್ನು ಕಠಿಣ ಪಡಿಸಿ, ನನ್ನ ಗುರುತುಗಳ
ನ್ನೂ ಲಕ್ಷಣಗಳನ್ನೂ ಐಗುಪ್ತ ದೇಶದಲ್ಲಿ ಬಹಳ ಮಾಡುವೆ
4 ನು. ಫರೋನನು ನಿಮ್ಮ ಮಾತು ಕೇಳುವದಿಲ್ಲ; ಮತ್ತು ನಾನು
ನನ್ನ ಕೈಯನ್ನು ಐಗುಪ್ತದ ಮೇಲೆ ಇಟ್ಟು, ಇಸ್ರಯೇಲ್ ಮ
ಕ್ಕಳೆಂಬ ನನ್ನ ಜನರಾಗಿರುವ ನನ್ನ ಸೈನ್ಯಗಳನ್ನು ದೊಡ್ಡ
ನ್ಯಾಯ ತೀರ್ಪಿಕೆಗಳಿಂದ ಐಗುಪ್ತ ದೇಶದೊಳಗಿಂದ ಹೊರಗೆ
5 ಬರ ಮಾಡುವೆನು. ನಾನು ಐಗುಪ್ತದ ಮೇಲೆ ನನ್ನ ಕೈಯ
ನ್ನಿಟ್ಟು, ಅವರೊಳಗಿಂದ ಇಸ್ರಯೇಲ್ ಮಕ್ಕಳನ್ನು ಹೊರಗೆ
ಬರ ಮಾಡುವಾಗ, ನಾನೇ ಕರ್ತನೆಂದು, ಐಗುಪ್ತ್ಯರಿಗೆ ತಿಳಿಯ
ಬರುವದು.
೬ ಆಗ ಮೋಶೆಯೂ ಅಕೋನನೂ ಕರ್ತನು ತಮಗೆ ಆಜ್ಞಾಪಿ
7 ಸಿದ ಪ್ರಕಾರ ಮಾತಿ, ಹಾಗೆಯೇ ಮಾಡಿದರು. ಅವರು ಫರೋ
ನನ ಹತ್ತರ ಮಾತಾಡುವಾಗ, ಮೋಶೆ ಎಂಭತ್ತು ವರುಷದವನಾಗಿ
ದ್ದನು; ಅಕೋನನು ಎಂಭತ್ತು ಮೂರು ವರುಷದವನಾಗಿದ್ದನು.
೮ ಆಗ ಕರ್ತನು ಮಾತಾಡಿ ಮೋಶೆಗೂ ಅಕೋನನಿಗೂ ಹೇಳಿ
೯ ದ್ದೇನಂದರೆ, ಫರೋನನು ನನಗೆ ನಿಮ್ಮ ನಿಮಿತ್ತ ಲಕ್ಷಣವನ್ನು
ಕೊಡಿರಿ, ಎಂದು ನಿಮಗೆ ಹೇಳುವಾಗ, ನೀನು ಅಕೋನನಿಗೆ, ನಿನ್ನ
ಕೋಲನ್ನು ತೆಗೆದುಕೊಂಡು, ಫರೋನನ ಮುಂದೆ ಬಿಸಾಡು; ಅದು
೧೦ ಸರ್ಪವಾಗಲಿ, ಅನ್ನ ಬೇಕು. ಆಗ ಮೋಶೆಯೂ ಅಕೋನನೂ
ಫರೋನನ ಬಳಿಗೆ ಹೋಗಿ, ಕರ್ತನು ತಮಗೆ ಆಜ್ಞಾಪಿಸಿದ ಹಾ
ಗೆಯೇ ಮಾಡಿದರು. ಅಕೋನನು ತನ್ನ ಕೋಲನ್ನು ಫರೋನ
ನ ಮುಂದೆಯೂ, ಅವನ ಸೇವಕರ ಮುಂದೆಯೂ ಬಿಸಾಡಿದಾಗ,
೧೧ ಅದು ಸರ್ಪವಾಯಿತು. ಆಗ ಫರೋನನು ಸಹ ಜ್ಞಾನಿಗಳ
ನ್ನೂ ಶೂನ್ಯಗಾರರನ್ನೂ ಕರೆಸಿದಾಗ, ಐಗುಪ್ತದ ಮಂತ್ರಗಾರ
೧೨ ರು ಸಹ ತಮ್ಮ ಮಾಟಗಳಿಂದ ಹಾಗೆಯೇ ಮಾಡಿದರು. ಅವರು
ತಮ್ಮ ತಮ್ಮ ಕೋಲುಗಳನ್ನು ಬಿಸಾಡಿದಾಗ, ಅವು ಸರ್ಪಗಳಾ
ದವು; ಆದರೆ ಅಕೋನನ ಕೋಲು ಅವರ ಕೋಲುಗಳನ್ನು ನುಂ
೧೩ ಗಿ ಬಿಟ್ಟಿತು. ಆಗ ಕರ್ತನು ಹೇಳಿದ ಹಾಗೆಯೇ ಫರೋನನ ಹೃ
ದಯವು ಕಠಿಣವಾಯಿತು; ಅವನು ಅವರ ಮಾತು ಕೇಳಲಿಲ್ಲ.
೧೪ ಆಗ ಕರ್ತನು ಮೋಶೆಗೆ ಹೇಳಿದ್ದೇನಂದರೆ, ಫರೋನನ ಹೃ
ದಯವು ಕಠಿಣವಾಯಿತು; ಅವನು ಜನರನ್ನು ಕಳುಹಿಸಿ ಬಿಡಕೊ
ಳ್ಳನು. ಬೆಳಿಗ್ಗೆ ಫರೋನನ ಬಳಿಗೆ ಹೋಗು; ಇಗೋ, ಅವನು
೧೫ ನೀರಿನ ಬಳಿಗೆ ಹೊರಗೆ ಹೋಗುವನು; ಆಗ ನದಿ ತೀರದಲ್ಲಿ ಅ
ವನ ಬಳಿಯಲ್ಲಿ ನಿಂತುಕೊಂಡು, ಸರ್ಪವಾಗಿ ಮಾಡಲ್ಪಟ್ಟ ಕೋ
ಲನ್ನು ನಿನ್ನ ಕೈಯ್ಯಲ್ಲಿ ಹಿಡುಕೊಂಡು, ಅವನಿಗೆ ಹೇಳ ಬೇಕಾ
೧೬ ದದ್ದೇನಂದರೆ, ಇಬ್ರೀಯರ ದೇವರಾದ ಕರ್ತನು ನನ್ನನ್ನು ನಿ
ನ್ನ ಬಳಿಗೆ ಕಳುಹಿಸಿ, ನನ್ನ ಜನರನ್ನು ಅರಣ್ಯದಲ್ಲಿ ನನಗೆ ಸೇ
ವೆ ಮಾಡುವ ಹಾಗೆ, ಕಳುಹಿಸೆಂದು ಹೇಳಿದ್ದಾನೆ. ಆದರೆ, ಇಗೋ,
೧೭ ಇಂದಿನ ಪರ್ಯಂತರ ನೀನು ಕೇಳಲಿಲ್ಲ. ಕರ್ತನು ಹೇಳುವ
ದೇನಂದರೆ, ನಾನೇ ಕರ್ತನೆಂದು, ಇದರಿಂದ ತಿಳುಕೊಳ್ಳುವಿ; ಇ
ಗೋ, ನನ್ನ ಕೈಯ್ಯಲ್ಲಿರುವ ಕೋಲಿನಿಂದ ನದಿಯಲ್ಲಿರುವ ನೀ
ರನ್ನು ಹೊಡೆಯುವೆನು; ಆಗ ಅದು ರಕ್ತವಾಗಿ ಮಾಡಲ್ಪಡುವ
೧೮ ದು. ನದಿಯಲ್ಲಿರುವ ಮೀನು ಸಾಯುವದು; ನದಿ ನಾರುವದು;
ನದಿಯಲ್ಲಿ ಕುಡಿಯುವದಕ್ಕೆ ಐಗುಪ್ತ್ಯರಿಗೆ ಅಸಹ್ಯವಾಗಿರುವದು.
೧೯ ಆಗ ಕರ್ತನು ಮೋಶೆಗೆ, ನೀನು ನಿನ್ನ ಕೋಲನ್ನು ತ
ಕ್ಕೊಂಡು, ಐಗುಪ್ತದ ನೀರುಗಳ ಮೇಲೆ, ಅದರ ನದಿಗಳ ಮೇ
ಲೆ, ಅದರ ಪ್ರವಾಹಗಳ ಮೇಲೆ, ಅದರ ಕೆರೆಗಳ ಮೇಲೆ, ಅದರ
ಎಲ್ಲಾ ನೀರಿನ ಕುಂಟೆಗಳ ಮೇಲೆ ಕೈ ಚಾಚು, ಆಗ ಅವು ರಕ್ತವಾ
ಗುವವು; ಮತ್ತು ಐಗುಪ್ತ ದೇಶದಲ್ಲೆಲ್ಲಾ, ಮರದ ಪಾತ್ರೆಗಳಲ್ಲಿ ಆ
ಗಲಿ, ಕಲ್ಲಿನ ಪಾತ್ರೆಗಳಲ್ಲಿ ಆಗಲಿ, ರಕ್ತವಿರುವದು ಎಂದು, ಅಕೋ
ನನಿಗೆ ಹೇಳು, ಅಂದನು.
೨೦ ಮೋಶೆಯೂ ಅಕೋನನೂ ಕರ್ತನು ಅವರಿಗೆ ಆಜ್ಞಾಪಿಸಿದ
ಹಾಗೆಯೇ ಮಾಡಿದರು. ಅವನು ಕೋಲನ್ನು ಎತ್ತಿ, ನದಿಯಲ್ಲಿ
ರುವ ನೀರನ್ನು ಫರೋನನ ಕಣ್ಣುಗಳ ಮುಂದೆಯೂ, ಅವನ
೨೧ ಸೇವಕರ ಕಣ್ಣುಗಳ ಮುಂದೆಯೂ ಹೊಡೆದನು. ನದಿಯಲ್ಲಿದ್ದ
ನೀರುಗಳೆಲ್ಲಾ ರಕ್ತವಾದವು. ನದಿಯಲ್ಲಿದ್ದ ಮೀನು ಸತ್ತು ಹೋ
ಯಿತು. ನದಿ ನಾರಿತು; ಐಗುಪ್ತ್ಯರು ನದಿಯ ನೀರು ಕುಡಿಯ
೨೨ ಲಾರದೆ ಹೋದರು; ಐಗುಪ್ತ ದೇಶದಲ್ಲೆಲ್ಲಾ ಆ ರಕ್ತವಿತ್ತು. ಐಗು
ಪ್ತದ ಮಂತ್ರಗಾರರು ತಮ್ಮ ಮಾಟಗಳಿಂದ ಹಾಗೆಯೇ ಮಾಡಿ
ದ್ದರಿಂದ, ಫರೋನನ ಹೃದಯವು ಕಠಿಣವಾಯಿತು; ಕರ್ತ
೨೩ ನು ಹೇಳಿದ ಹಾಗ ಅವನು ಅವರ ಮಾತು ಕೇಳಲಿಲ್ಲ. ಫರೋ
ನನು ತಿರುಗಿ ಕೊಂಡು, ತನ್ನ ಮನೆಗೆ ಬಂದು, ಇದಕ್ಕಾದರೂ
೨೪ ತನ್ನ ಮನಸ್ಸು ಇಡಲಿಲ್ಲ. ಆದರೆ ಐಗುಪ್ತ್ಯರೆಲ್ಲರೂ ನದಿ ನೀ
ರನ್ನು ಕುಡಿಯಲಾರದೆ, ಇದ್ದದರಿಂದ ಕುಡಿಯುವ ನೀರಿಗೋಸ್ಕ
೨೫ ರ ನದಿಯ ಸುತ್ತಲಾಗಿ ಅಗಿದರು. ಕರ್ತನು ನದಿಯನ್ನು
ಹೊಡೆದ ಮೇಲೆ ಏಳು ದಿವಸಗಳು ಪೂರ್ತಿಯಾದವು.

## ೮. ಸಂಧಿ.

೧ ಆಗ ಕರ್ತನು ಮೋಶೆಗೆ ಹೇಳಿದ್ದೇನಂದರೆ, ಫರೋನನ ಹತ್ತ
ರ ಹೋಗಿ, ಅವನಿಗೆ ಹೇಳ ಬೇಕಾದದ್ದು—ಕರ್ತನು ಹೀಗೆ ಹೇ





ಳುತ್ತಾನೆ—ನನ್ನ ಜನರನ್ನು, ನನ್ನನ್ನು ಸೇವಿಸುವ ಹಾಗೆ, ಕಳುಹಿ
೨ ಸು. ನೀನು ಕಳುಹಿಸಲೊಲ್ಲದಿದ್ದರೆ, ಇಗೋ, ನಾನು ನಿನ್ನ
3 ಮೇರೆಗಳನ್ನೆಲ್ಲಾ ಕಪ್ಪೆಗಳಿಂದ ಬಾಧಿಸುತ್ತೇನೆ. ನದಿ ಕಪ್ಪೆಗ
ಳನ್ನು ವಿಸ್ತಾರವಾಗಿ ಹುಟ್ಟಿಸುವದು; ಅವು ಏರಿ, ನಿನ್ನ ಮನೆಯ
ಲ್ಲಿಯೂ, ನಿನ್ನ ಮಲಗುವ ಕೊಠಡಿಯಲ್ಲಿಯೂ, ನಿನ್ನ ಮಂಚ
ದಲ್ಲಿಯೂ, ನಿನ್ನ ಸೇವಕರ ಮನೆಗಳಲ್ಲಿಯೂ, ನಿನ್ನ ಜನರಲ್ಲಿ
ಯೂ, ನಿನ್ನ ಒಲೆಗಳಲ್ಲಿಯೂ, ನಿನ್ನ ಹಿಟ್ಟಿನ ಕೊಣಬಿಗೆಗಳಲ್ಲಿ
4 ಯೂ ಬರುವವು. ನಿನ್ನ ಮೇಲೆಯೂ, ನಿನ್ನ ಜನರ ಮೇಲೆ
ಯೂ, ನಿನ್ನ ಎಲ್ಲಾ ಸೇವಕರ ಮೀಲೆಯೂ ಕಪ್ಪೆಗಳು ಏರಿ ಬ
ರುವವು.
೫ ಆಗ ಕರ್ತನು ಮೋಶೆಗೆ, ನಿನ್ನ ಕೋಲಿನ ಸಂಗಡ ನಿನ್ನ
ಕೈಯನ್ನು ನದಿಗಳ ಮೇಲೆಯೂ, ಪ್ರವಾಹಗಳ ಮೇಲೆಯೂ,
ಕೆರೆಗಳ ಮೇಲೆಯೂ ಚಾಚಿ, ಕಪ್ಪೆಗಳನ್ನು ಐಗುಪ್ತ ದೇಶದ
ಮೇಲೆ ಏರಿ ಬರ ಮಾಪೆಂದು, ಅಕೋನನಿಗೆ ಹೇಳು, ಅಂದನು.
೬ ಅಕೋನನು ಐಗುಪ್ತದ ನೀರುಗಳ ಮೇಲೆ ಕೈ ಚಾಚಿದಾಗ, ಕ
7 ಪ್ಪೆಗಳು ಏರಿ ಬಂದು, ಐಗುಪ್ತ ದೇಶವನ್ನು ಮುಚ್ಚಿದವು. ಆ
ದರೆ ಮಂತ್ರಗಾರರು ತಮ್ಮ ಮಾಟಗಳಿಂದ ಹಾಗೆ ಮಾಡಿ, ಕಪ್ಪೆ
ಗಳನ್ನು ಐಗುಪ್ತ ದೇಶದ ಮೇಲೆ ಬರ ಮಾಡಿದರು.
೮ ಆಗ ಫರೋನನು ಮೋಶೆಯನ್ನೂ ಅಕೋನನನ್ನೂ ಕರಿಸಿ,
ಅವನು ನನ್ನಿಂದಲೂ, ನನ್ನ ಜನರಿಂದಲೂ ಈ ಕಪ್ಪೆಗಳನ್ನು
ದೂರ ಮಾಡುವ ಹಾಗೆ, ಕರ್ತನನ್ನು ಬೇಡಿ ಕೊಳ್ಳಿರಿ; ಆಗ ಅವ
ರು ಕರ್ತನಿಗೆ ಬಲಿ ಅರ್ಪಿಸುವ ಹಾಗೆ ಜನರನ್ನು ಕಳುಹಿಸುವೆನೆಂ
೯ ದು ಹೇಳಿದನು. ಮೋಶೆ ಫರೋನನಿಗೆ, ಕಪ್ಪೆಗಳು ನಿನ್ನಿಂದಲೂ
ನಿನ್ನ ಮನೆಗಳಿಂದಲೂ ತೆಗೆದು ಹಾಕಲ್ಪಟ್ಟು, ನದಿಯಲ್ಲಿ ಮಾ
ತ್ರ ಉಳಿಯುವ ಹಾಗೆ, ನಾನು ನಿನಗೋಸ್ಕರವೂ, ನಿನ್ನ ಸೇವ
ಕರಿಗೋಸ್ಕರವೂ, ನಿನ್ನ ಜನರಿಗೋಸ್ಕರವೂ ಬೇಡಿಕೊಳ್ಳುವ ವೇ
೧೦ ಳೆಯನ್ನು ನನಗೆ ನೇಮಿಸು, ಅಂದನು. ಅವನು ನಾಳೆ ಅಂದನು.
ಆಗಲವನು, ನಮ್ಮ ದೇವರಾಗಿರುವ ಕರ್ತನ ಹಾಗೆ ಯಾವನು
ಇಲ್ಲವೆಂದು ನೀನು ತಿಳುಕೊಳ್ಳುವ ಹಾಗೆ, ನಿನ್ನ ಮಾತಿನ ಪ್ರಕಾರ
೧೧ ಆಗಲಿ. ಕಪ್ಪೆಗಳು ನಿನ್ನನ್ನೂ, ನಿನ್ನ ಮನೆಗಳನ್ನೂ, ನಿನ್ನ
ಸೇವಕರನ್ನೂ, ನಿನ್ನ ಜನರನ್ನೂ ಬಿಟ್ಟು ಹೋಗಿ, ನದಿಯಲ್ಲಿ
ಮಾತ್ರ ಉಳಿಯುವವು, ಅಂದನು.
೧೨ ಮೋಶೆಯೂ ಅಕೋನನೂ ಫರೋನನ್ನು ಬಿಟ್ಟು ಹೋದಾ
ಗ, ಮೋಶೆ ಫರೋನನ ಮೇಲೆ ಬರ ಮಾಡಿದ ಕಪ್ಪೆಗಳ ನಿಮಿತ್ತ
೧೩ ಕರ್ತನಿಗೆ ಮೊರೆ ಇಟ್ಟನು. ಮೋಶೆ ಹೇಳಿದ ಹಾಗೆ, ಕರ್ತನು
ಮಾಡಿದನು; ಮನೆಗಳಲ್ಲಿಯೂ ಕೊಠಡಿಗಳಲ್ಲಿಯೂ ಹೊಲಗಳಲ್ಲಿ
೧೪ ಯೂ ಇದ್ದ ಕಪ್ಪೆಗಳು ಸತ್ತವು. ಅವರು ಅವುಗಳನ್ನು ರಾಶಿ
೧೫ ರಾಶಿಗಳಾಗಿ ಕೂಡಿಸಿ ಇಟ್ಟದರಿಂದ, ದೇಶವು ನಾರಿತು. ಆದರೆ ಫ
ರೋನನು ಉಪಶಮನವಾಯಿತೆಂದು ನೋಡಿದಾಗ, ಕರ್ತನು
ಹೇಳಿದ ಹಾಗೆ ತನ್ನ ಹೃದಯವನ್ನು ಕಠಿಣ ಮಾಡಿಕೊಂಡು,
ಅವರ ಮಾತು ಕೇಳಲಿಲ್ಲ.
೧೬ ಆಗ ಕರ್ತನು ಮೋಶೆಗೆ, ನಿನ್ನ ಕೋಲನ್ನು ಎತ್ತಿ, ಅದು
ಐಗುಪ್ತ ದೇಶದಲ್ಲೆಲ್ಲಾ ಹೇನುಗಳಾಗುವ ಹಾಗೆ, ಭೂಮಿಯ ಧೂ
೧೭ ಳನ್ನು ಹೊಡೆ ಎಂದು, ಅಕೋನನಿಗೆ ಹೇಳು, ಅಂದನು. ಅವ
ರು ಹಾಗೆ ಮಾಡಿದರು; ಅಕೋನನು ಕೋಲುಳ್ಳ ಕೈಯನ್ನು
ಚಾಚಿ, ಭೂಮಿಯ ಧೂಳನ್ನು ಹೊಡೆದನು; ಆಗ ಮನುಷ್ಯ
ರಲ್ಲಿಯೂ, ಪಶುಗಳಲ್ಲಿಯೂ ಹೇನುಗಳಾದವು; ಸಮಸ್ತ ಐಗು
೧೮ ಪ್ತ ದೇಶದಲ್ಲಿ ಭೂಮಿಯ ಧೂಳೆಲ್ಲಾ ಹೇನುಗಳಾಯಿತು. ಮಂ
ತ್ರಗಾರರು ಹೇನುಗಳನ್ನು ತರಿಸುವದಕ್ಕೆ ತಮ್ಮ ಮಾಟಗಳಿಂದ
ಹಾಗೆ ಮಾಡಿದರು; ಆದರೆ ಮಾಡಲಾರದೆ ಹೋದರು. ಹಾಗೆ
ಹೇನುಗಳು ಮನುಷ್ಯರಲ್ಲಿಯೂ ಪಶುಗಳಲ್ಲಿಯೂ ಇದ್ದವು.
೧೯ ಆಗ ಮಂತ್ರಗಾರರು ಫರೋನನಿಗೆ, ಇದೇ ದೇವರ ಬೆರಳು, ಅಂ
ದರು. ಆದರೆ ಕರ್ತನು ಹೇಳಿದ ಹಾಗೆ ಫರೋನನ ಹೃದ
ಯವು ಕಠಿಣವಾಯಿತು; ಅವನು ಅವರ ಮಾತು ಕೇಳಲಿಲ್ಲ.
೨೦ ಆಗ ಕರ್ತನು ಮೋಶೆಗೆ ಹೇಳಿದ್ದೇನಂದರೆ, ಬೆಳಿಗ್ಗೆ ಎದ್ದು,
ಫರೋನನ ಮುಂದೆ ನಿಂತುಕೋ; ಇಗೋ, ಅವನು ನೀರಿನ ಬ
ಳಿಗೆ ಹೊರಗೆ ಬರುತ್ತಾನೆ; ನೀನು ಅವನಿಗೆ ಹೇಳ ಬೇಕಾದದ್ದೇ
ನಂದರೆ, ಕರ್ತನು ಹೀಗೆ ಹೇಳುತ್ತಾನೆ—ಅವರು ನನಗೆ ಸೇವೆ
೨೧ ಮಾಡುವ ಹಾಗೆ, ನನ್ನ ಜನರನ್ನು ಕಳುಹಿಸು; ನೀನು ನನ್ನ
ಜನರನ್ನು ಕಳುಹಿಸದೆ ಹೋದರೆ, ಇಗೋ, ನಾನು ನಿನ್ನ ಮೇ
ಲೆಯೂ, ನಿನ್ನ ಸೇವಕರ ಮೇಲೆಯೂ, ನಿನ್ನ ಜನರ ಮೇಲೆ
ಯೂ, ನಿನ್ನ ಮನೆಗಳ ಮೇಲೆಯೂ, ನೊಣಗಳನ್ನು ಕಳುಹಿಸು
ತ್ತೇನೆ; ಐಗುಪ್ತ್ಯರ ಮನೆಗಳೂ, ಅವರು ವಾಸವಾಗಿರುವ ಭೂಮಿ
೨೨ ಯೂ ನೊಣಗಳಿಂದ ತುಂಬಿರುವವು. ಆದರೆ ಆ ದಿವಸದಲ್ಲಿ ನಾ
ನೇ ಭೂಮಿಯೊಳಗೆ ಕರ್ತನೆಂದು ನೀನು ತಿಳುಕೊಳ್ಳುವ ಹಾಗೆ,
ನನ್ನ ಜನರು ನಿವಸಿಸುವ ಗೋಷೆನ್ ದೇಶವನ್ನು, ಅಲ್ಲಿ ನೊ
೨೩ ಣಗಳು ಇರದ ಹಾಗೆ, ಬೇರೆ ಮಾಡುವೆನು. ನನ್ನ ಜನಕ್ಕೂ
ನಿನ್ನ ಜನಕ್ಕೂ ವ್ಯತ್ಯಾಸ ಮಾಡುವೆನು; ನಾಳೆ ಈ ಗುರುತು
೨೪ ಉಂಟಾಗುವದು. ಕರ್ತನು ಹಾಗೆಯೇ ಮಾಡಿದನು; ಕಠಿಣವಾ
ದ ನೊಣಗಳು ಫರೋನನ ಮನೆಯಲ್ಲಿಯೂ ಅವನ ಸೇವಕರ
ಮನೆಗಳಲ್ಲಿಯೂ ಸಮಸ್ತ ಐಗುಪ್ತ ದೇಶದಲಿ ಬಂದವು. ನೊಣ
ಗಳಿಂದ ದೇಶವು ಕೆಟ್ಟಿತು.
೨೫ ಆಗ ಫರೋನನು ಮೋಶೆಯನ್ನೂ ಅಕೋನನನ್ನೂ ಕರಿ
ಸಿ, ನೀವು ಹೋಗಿ, ದೇಶದೊಳಗೆ ನಿಮ್ಮ ದೇವರಿಗೆ ಬಲಿ ಅರ್ಪಿ
೨೬ ಸಿರಿ, ಅಂದನು. ಆದರೆ ಮೋಶೆ, ಹಾಗೆ ಮಾಡುವದು ಸಮವಲ್ಲ;
ಯಾಕಂದರೆ ಐಗುಪ್ತ್ಯರ ಅಸಹ್ಯವನ್ನು ನಮ್ಮ ದೇವರಾದ ಕ
ರ್ತನಿಗೆ ಅರ್ಪಿಸ ಬೇಕು; ಇಗೋ, ಐಗುಪ್ತ್ಯರ ಅಸಹ್ಯವನ್ನು
ಅವರ ಕಣ್ಣುಗಳ ಮುಂದೆ ಅರ್ಪಿಸಿದರೆ, ಅವರು ನಮ್ಮನ್ನು ಕಲ್ಲೆ
೨೭ ಸೆಯುವರಲ್ಲ? ಮೂರು ದಿನದ ಪ್ರಯಾಣ ಅರಣ್ಯದಲ್ಲಿ ಹೋಗಿ,
ನಮ್ಮ ದೇವರಾದ ಕರ್ತನಿಗೆ, ಅವನು ನಮಗೆ ಹೇಳುವ ಪ್ರಕಾರ,
೨೮ ಅರ್ಪಿಸೋಣ, ಅಂದನು. ಆಗ ಫರೋನನು, ನಿಮ್ಮ ದೇವರಾ
ದ ಕರ್ತನಿಗೆ ಅರಣ್ಯದಲ್ಲಿ ಅರ್ಪಿಸುವ ಹಾಗೆ, ನಿಮ್ಮನ್ನು ಕಳು
ಹಿಸುತ್ತೇನೆ; ಆದರೆ ದೂರ ಹೋಗ ಬೇಡ; ನನಗೋಸ್ಕರ
೨೯ ಪ್ರಾರ್ಥನೆ ಮಾಡಿರಿ, ಅಂದನು. ಆಗ ಮೋಶೆ, ಇಗೋ, ನಾ
ನು ನಿನ್ನನ್ನು ಬಿಟ್ಟು ಹೋಗಿ, ಕರ್ತನಿಗೆ ಪ್ರಾರ್ಥನೆ ಮಾಡು
ವೆನು; ನುಸಿಯು ಫರೋನನನ್ನೂ ಅವನ ಸೇವಕರನ್ನೂ ಅವ
ನ ಜನರನ್ನೂ ನಾಳೆ ಬಿಟ್ಟು ಹೋಗುವದು; ಆದರೆ ಫರೋನ
ನು ಜನರನ್ನು ಕರ್ತನಿಗೆ ಅರ್ಪಿಸುವದಕ್ಕೆ ಕಳುಹಿಸದೆ, ಇ
ನ್ನು ಮೇಲೆ ವಂಚಿಸ ಬಾರದು, ಅಂದನು.
೩೦ ಹೀಗೆ ಮೋಶೆ ಫರೋನನ್ನು ಬಿಟ್ಟು ಹೋಗಿ, ಕರ್ತನಿಗೆ

೩೧ ಪ್ರಾರ್ಥನೆ ಮಾಡಿದನು. ಮೋಶೆ ಹೇಳಿದ ಹಾಗೆಯೇ ಕರ್ತ-
ನು ಮಾಡಿದನು; ನುನಿಯನ್ನು ಫರೋನನಿಗೂ ಅವನ ಸೇವಕ
೩೨ ರಿಗೂ ಅವನ ಜನರಿಗೂ ದೂರ ಮಾಡಿದನು; ಒಂದೂ ಉಳಿಯ
ಲಿಲ್ಲ. ಆದರೆ ಫರೋನನು ತನ್ನ ಹೃದಯವನ್ನು ಆ ವೇಳೆಗೂ
ಕಠಿಣ ಮಾಡಿಕೊಂಡು, ಜನರನ್ನು ಕಳುಹಿಸಿ ಬಿಡಲಿಲ್ಲ.

## ೯. ಸಂಧಿ.

೧ ಆಗ ಕರ್ತನು ಮೋಶೆಗೆ ಹೇಳಿದ್ದೇನಂದರೆ, ಫರೋನನ ಬ
ಳಿಗೆ ಹೋಗಿ, ಅವನಿಗೆ ಹೇಳ ಬೇಕಾದದ್ದು—ಇಬ್ರೀಯರ ದೇವರಾ
ದ ಕರ್ತನು ಹೀಗೆ ಹೇಳುತ್ತಾನೆ—ನನ್ನ ಜನರನ್ನು, ನನಗೆ ಸೇ
೨ ವಿಸುವ ಹಾಗೆ, ಕಳುಹಿಸು. ಅವರನ್ನು ಕಳುಹಿಸಲೊಲ್ಲದೆ ಇನ್ನೂ
೩ ಹಿಡು ಕೊಂಡರೆ, ಇಗೋ, ಕರ್ತನ ಕೈ ಹೊಲದಲ್ಲಿರುವ ನಿ
ನ್ನ ಪಶುಗಳ ಮೇಲೆ ಇರುವದು; ಕುದುರೆಗಳ, ಕತ್ತೆಗಳ, ಒಂಟೆ
ಗಳ, ದನಗಳ, ಕುರಿಗಳ ಮೇಲೆ ಮಹಾ ಕಠಿಣವಾದ ವ್ಯಾಧಿ ಇ
೪ ರುವದು. ಮತ್ತು ಕರ್ತನು ಇಸ್ರಯೇಲಿನ ಪಶುಗಳಿಗೂ ಐ
ಗುಪ್ತ್ಯರ ಪಶುಗಳಿಗೂ ಹೆಚ್ಚು ಕಡಿಮೆ ಮಾಡುವನು; ಇಸ್ರ
ಯೇಲ್ ಮಕ್ಕಳಿಗೆ ಉಂಟಾಗಿರುವ ಎಲ್ಲವುಗಳಲ್ಲಿ ಒಂದೂ ಸಾ
೫ ಯುವದಿಲ್ಲ. ಇದಲ್ಲದೆ ಕರ್ತನು ಸಮಯವನ್ನು ನಿರ್ಣಯಿಸಿ,
ನಾಳೆ ಕರ್ತನು ದೇಶದಲ್ಲಿ ಈ ಕಾರ್ಯವನ್ನು ಮಾಡುವನೆಂದು
ಹೇಳಿದನು.
೬ ಮರು ದಿವಸದಲ್ಲಿ ಕರ್ತನು ಆ ಕಾರ್ಯವನ್ನು ಮಾಡಿದ
ನು; ಐಗುಪ್ತ್ಯರ ಪಶುಗಳೆಲ್ಲಾ ಸತ್ತು ಹೋದವು; ಆದರೆ ಇಸ್ರ
೭ ಯೇಲ್ ಮಕ್ಕಳ ಪಶುಗಳಲ್ಲಿ ಒಂದೂ ಸಾಯಲಿಲ್ಲ. ಫರೋನ
ನು ಕಳುಹಿಸಿ ನೋಡಿದಾಗ, ಅಗೋ, ಇಸ್ರಯೇಲ್ಯರ ಪಶುಗಳಲ್ಲಿ
ಒಂದೂ ಸಾಯದೆ ಇತ್ತು; ಆದರೆ ಫರೋನನ ಹೃದಯವು ಕ
ಠಿಣವಾಗಿದ್ದದರಿಂದ, ಅವನು ಜನರನ್ನು ಕಳುಹಿಸಲಿಲ್ಲ.
೮ ಆಗ ಕರ್ತನು ಮೋಶೆಗೂ ಆರೋನನಿಗೂ ಹೇಳಿದ್ದೇನಂದ
ರೆ, ಕೈ ತುಂಬ ಬಲೆಯ ಬೂದಿಯನ್ನು ತಕ್ಕೊಳ್ಳಿರಿ; ಅದನ್ನು
೯ ಮೋಶೆ ಫರೋನನ ಕಣ್ಣುಗಳ ಮುಂದೆ ಆಕಾಶಕ್ಕೆ ಚೆಲ್ಲಲಿ. ಆ
ಗ ಅದು ಸಮಸ್ತ ಐಗುಪ್ತ ದೇಶದ ಮೇಲೆ ಧೂಳು, ಸಮಸ್ತ ಐ
ಗುಪ್ತ ದೇಶದಲ್ಲಿ ಮನುಷ್ಯರ ಮೇಲೆಯೂ ಮೃಗಗಳ ಮೇಲೆ
ಯೂ ವಿಸ್ತರಿಸುವ ಪೊಕ್ಕೆಗಳಾಗಿರುವ ಹುಣ್ಣೂ ಆಗುವದು.
೧೦ ಆಗಲವರು ಬಲೆಯ ಬೂದಿಯನ್ನು ತಕ್ಕೊಂಡು, ಫರೋನನ
ಮುಂದೆ ನಿಂತರು; ಮೋಶೆಯು ಅದನ್ನು ಆಕಾಶಕ್ಕೆ ಚೆಲ್ಲಿದನು
ಆಗಲು ಮನುಷ್ಯರಲ್ಲಿಯೂ ಮೃಗಗಳಲ್ಲಿಯೂ ಬಿಸ್ತರಿಸುವ
೧೧ ಪೊಕ್ಕೆಗಳಾಗಿರುವ ಹುಣ್ಣಾಯಿತು. ಇದಲ್ಲದೆ ಮಂತ್ರಗಾರರು
ಹುಣ್ಣಿನ ನಿಮಿತ್ತ ಮೋಶೆಯ ಮುಂದೆ ನಿಂತು ಕೊಳ್ಳಲಾರದೆ, ಇ
ದ್ದರು; ಯಾಕಂದರೆ ಹುಣ್ಣು ಮಂತ್ರಗಾರರಲ್ಲಿಯೂ ಐಗುಪ್ತ್ಯ
೧೨ ರಲ್ಲಿಯೂ ಇತ್ತು. ಆದರೆ ಕರ್ತನು ಫರೋನನ ಹೃದಯವ
ನ್ನು ಕಠಿಣ ಮಾಡಿದನು; ಕರ್ತನು ಮೋಶೆಗೆ ಹೇಳಿದ ಹಾಗೆ
ಯೇ ಅವನು ಅವರ ಮಾತು ಕೇಳಲಿಲ್ಲ.
೧೩ ಆಗ ಕರ್ತನು ಮೋಶೆಗೆ ಹೇಳಿದ್ದೇನಂದರೆ, ಬೆಳಿಗ್ಯೆ ಎದ್ದು,
ಫರೋನನ ಮುಂದೆ ನಿಂತು ಕೊಂಡು, ಅವನಿಗೆ ಹೇಳ ಬೇಕಾದ
ದ್ದು—ಇಬ್ರೀಯರ ದೇವರಾದ ಕರ್ತನು ಹೀಗೆ ಹೇಳುತ್ತಾನೆ—ನ
೧೪ ನ್ನ ಜನರನ್ನು ನನ್ನನ್ನು ಸೇವಿಸುವ ಹಾಗೆ ಕಳುಹಿಸು. ಯಾಕಂ
ದರೆ ಸಮಸ್ತ ಭೂಮಿಯಲ್ಲಿ ನನ್ನ ಹಾಗೆ ಯಾವನೂ ಇಲ್ಲವೆಂದು
ನೀನು ತಿಳಿಯ ಕೊಳ್ಳುವ ಹಾಗೆ, ಈ ಸಾರಿ ನನ್ನ ಎಲ್ಲಾ ಬಾಧೆಗ
ಳನ್ನು ನಿನ್ನ ಮೇಲೆಯೂ, ನಿನ್ನ ಸೇವಕರ ಮೇಲೆಯೂ, ನಿನ್ನ
೧೫ ಜನರ ಮೇಲೆಯೂ ಕಳುಹಿಸುತ್ತೇನೆ. ಯಾಕಂದರೆ ಈಗ ನನ್ನ
ಕೈ ಚಾಚಿ, ನಿನ್ನನ್ನೂ ನಿನ್ನ ಜನರನ್ನೂ, ನೀನು ಭೂಮಿಯೊ
ಳಗಿಂದ ನಿರ್ಮೂಲವಾಗುವ ಹಾಗೆ, ವ್ಯಾಧಿಯಿಂದ ಹೊಡೆಯು
೧೬ ವೆನು. ಆದರೆ ನಿಶ್ಚಯವಾಗಿ ನಿನಗೆ ನನ್ನ ಬಲವನ್ನು ತೋರಿಸುವ
ಹಾಗೆಯೂ, ನನ್ನ ಹೆಸರು ಸಮಸ್ತ ಭೂಮಿಯಲ್ಲಿ ತಿಳಿಸಲ್ಪಟು
ವ ಹಾಗೆಯೂ, ಇದಕ್ಕೋಸ್ಕರವೇ ನಿನ್ನನ್ನು ನಿಲ್ಲಿಸಿದ್ದೇನೆ.
೧೭ ಇನ್ನೂ ಅವರನ್ನು ಕಳುಹಿಸದೆ, ನನ್ನ ಜನರಿಗೆ ವಿರೋಧವಾಗಿ
೧೮ ನಿನ್ನನ್ನು ನೀನೇ ಹೆಚ್ಚಿಸಿ ಕೊಳ್ಳುತ್ತೀಯೋ! ಇಗೋ ನಾಳೆ
ಇಷ್ಟು ಹೊತ್ತಿಗೆ ಮಹಾ ಕಠಿಣವಾದ ಕಲ್ಲು ಮಳೆಯನ್ನು ಬೀಳ
ಮಾಡುತ್ತೇನೆ; ಅದರಂಥಾದ್ದು ಐಗುಪ್ತದಲ್ಲಿ, ಅದು ಸ್ಥಾಪಿಸಲ್ಪ
೧೯ ಟ್ಟಂದಿನಿಂದ ಇಂದಿನ ವರೆಗೂ ಇರಲಿಲ್ಲ. ಹೀಗಿರುವದರಿಂದ ಕ
ಳುಹಿಸಿ, ನಿನ್ನ ಪಶುಗಳನ್ನೂ, ಹೊಲದಲ್ಲಿ ನಿನಗಿರುವ ಎಲ್ಲವುಗ
ಳನ್ನೂ ಭದ್ರ ಮಾಡಿಸು; ಮನೆಗಳಿಗೆ ಕೂಡಿಸಲ್ಪಡದೆ ಹೊಲ
ದಲ್ಲಿ ಶಿಕ್ಕುವ ಮನುಷ್ಯಕೆಲ್ಲರು, ಪಶುಗಳು ಸಹಿತವಾಗಿ, ಆ ಕ
ಲ್ಲು ಮಳೆ ಅವರ ಮೇಲೆ ಬಿದ್ದರೆ, ಸಾಯುವರು.
೨೦ ಆಗ ಫರೋನನ ಸೇವಕರಲ್ಲಿ ಕರ್ತನ ವಾಕ್ಯಕ್ಕೆ ಭಯ ಪ
ಟ್ಟವರೆಲ್ಲರೂ ತಮ್ಮ ದಾಸರನ್ನೂ ಪಶುಗಳನ್ನೂ ಮನೆಗಳಿಗೆ ಓಡಿ
೨೧ ಬರ ಮಾಡಿದರು. ಆದರೆ ಕರ್ತನ ವಾಕ್ಯಕ್ಕೆ ಮನಸ್ಸಿನ್ನಿಡದವ
ರು ತಮ್ಮ ದಾಸರನ್ನೂ ಪಶುಗಳನ್ನೂ ಹೊಲದಲ್ಲಿ ಬಿಟ್ಟರು.
೨೨ ಆಗ ಕರ್ತನು ಮೋಶೆಗೆ, ಆಕಾಶಕ್ಕೆ ಕೈ ಚಾಚು; ಆಗ ಐ
ಗುಪ್ತ ದೇಶದಲ್ಲೆಲ್ಲಾ ಮನುಷ್ಯರ ಮೇಲೆಯೂ, ಪಶುಗಳ ಮೇಲೆ
ಯೂ, ಐಗುಪ್ತ ದೇಶದಲ್ಲಿರುವ ಎಲ್ಲಾ ಹೊಲದ ಗಿಡಗಳ ಮೇ
೨೩ ಯೂ ಕಲ್ಲು ಮಳೆ ಉಂಟಾಗುವದು, ಅಂದನು. ಆಗ ಮೋಶೆ
ಆಕಾಶಕ್ಕೆ ಕೋಲನ್ನು ಚಾಚಿದನು; ಕರ್ತನು ಗುಡುಗುಗಳ
ನ್ನೂ ಕಲ್ಲು ಮಳೆಯನ್ನೂ ಕೊಟ್ಟನು; ಅಗ್ನಿ ಭೂಮಿಗೆ ಇಳಿದು
ಬಂತು; ಕರ್ತನು ಐಗುಪ್ತ ದೇಶದ ಮೇತೆ ಕಲ್ಲು ಮಳೆಯನ್ನು
೨೪ ಸುರಿಸಿದನು. ಹೀಗೆ ಮಹಾ ಕಠಿಣವಾದ ಕಲ್ಲು ಮಳೆಯೂ, ಕಲ್ಲು
ಮಳೆಯ ಮಧ್ಯದಲ್ಲಿ ಕಲಕಿರುವ ಅಗ್ನಿಯೂ ಇದ್ದವು. ಅದರಂ
ಥಾದ್ದು ಐಗುಪ್ತ ದೇಶದಲ್ಲೆಲ್ಲಾ ಅದು ಜನಾಂಗವಾದಂದಿನಿಂದ
೨೫ ಆಗಲಿಲ್ಲ. ಆ ಕಲ್ಲು ಮಳೆ ಸಮಸ್ತ ಐಗುಪ್ತ ದೇಶದಲ್ಲಿ ಮನು
ಷ್ಯರು ಮೊದಲ್ಗೊಂಡು ಮೃಗಗಳ ವರೆಗೂ ಹೊಲದಲ್ಲಿದ್ದದ್ದ
ನ್ನೆಲ್ಲಾ ಹೊಡೆಯಿತು. ಹೊಲದ ಎಲ್ಲಾ ಗಿಡಗಳನ್ನು ಆ ಕಲ್ಲು
ಮಳೆ ಹೊಡೆಯಿತು; ಮತ್ತು ಹೊಲದ ಮರಗಳನ್ನೆಲ್ಲಾ ಮುರಿದು
೨೬ ಹಾಕಿತು. ಇಸ್ರಯೇಲ್ ಮಕ್ಕಳು ಇದ್ದ ಗೋಷೆನ್ ದೇಶದಲ್ಲಿ
ಮಾತ್ರ ಕಲ್ಲು ಮಳೆ ಇರಲಿಲ್ಲ.
೨೭ ಆಗ ಫರೋನನು ಮೋಶೆಯನ್ನೂ ಆರೋನನನ್ನೂ ಕರೇ
ಕಳುಹಿಸಿ, ಅವರಿಗೆ, ಈ ಸಾರಿ ನಾನು ಪಾಪ ಮಾಡಿದ್ದೇನೆ; ಕರ್ತ
ನು ನೀತಿವಂತನು, ಆದರೆ ನಾನೂ ನನ್ನ ಜನರೂ ದುಷ್ಟರಾಗಿದ್ದೇ
೨೮ ವೆ. ಕರ್ತನನ್ನು ಬೇಡಿ ಕೊಳ್ಳಿರಿ; ದೈವ ಶಬ್ದಗಳೂ ಕಲ್ಲು ಮಳೆ
ಯೂ ಸಾಕಾಗಿರಲಿ, ನಾನು ನಿಮ್ಮನ್ನು ಕಳುಹಿಸುವೆನು, ಇನ್ನು
೨೯ ಮೇಲೆ ನೀವು ನಿಲ್ಲ ಬಾರದು, ಅಂದನು. ಆಗ ಮೋಶೆ ಅವನಿಗೆ
ಹೇಳಿದ್ದೇನಂದರೆ, ನಾನು ಪಟ್ಟಣವನ್ನು ಬಿಟ್ಟು ಹೊರಟಾಗಲೇ, ಕ



ರ್ತನ ಕಡೆಗೆ ನನ್ನ ಕೈಗಳನ್ನು ಚಾಚುವೆನು; ಭೂಮಿಯು ಕ
ರ್ತನದೇ ಎಂದು, ನೀನು ತಿಳಿ ಕೊಳ್ಳುವ ಹಾಗೆ, ಗುಡುಗುಗಳು
೩೦ ಬಿಟ್ಟು ಹೋಗುವವು; ಕಲ್ಲು ಮಳೆಯೂ ಇನ್ನು ಇರದು. ಆದಾ
ಗ್ಯೂ ನೀನೂ ನಿನ್ನ ಸೇವಕರೂ ದೇವರಾದ ಕರ್ತನಿಗೆ ಇ
ನ್ನೂ ಭಯ ಪಡುವದಿಲ್ಲವೆಂದು ಬಲ್ಲೆನು.
೩೧ ಈ ಮೇರೆಗೆ, ಜವೆ ಗೋಧಿಗೆ ತೆನೆಗಳೂ ಸೂಜಿಗೆ ಮೊಗ್ಗೆಗ
ಳೂ ಇದ್ದದರಿಂದ, ಸಣಬೂ ಜವೆ ಗೋಧಿಯೂ ಹೊಡೆಯಲ್ಪ
೩೨ ಟ್ಟವು. ಆದರೆ ಗೋಧಿಯೂ ಸಾಮೆಯೂ ಮೆಲ್ಲಗೆ ಬೆಳೆಯುವ
ದರಿಂದ ಹೊಡೆಯಲ್ಪಡಲಿಲ್ಲ.
೩೩ ಮೋಶೆಯು ಫರೋನನನ್ನು ಬಿಟ್ಟು, ಪಟ್ಟಣದ ಹೊರಗೆ ಬಂ
ದಾಗ, ತನ್ನ ಕೈಗಳನ್ನು ಕರ್ತನ ಕಡೆಗೆ ಚಾಚಿದನು; ಆಗ
ಗುಡುಗುಗಳೂ ಕಲ್ಲು ಮಳೆಯೂ ನಿಂತು ಹೋದವು; ಮಳೆಯು
೩೪ ಭೂಮಿಯ ಮೇಲೆ ಇನ್ನೂ ಬೀಳದೆ ಹೋಯಿತು. ಮಳೆಯೂ,
ಕಲ್ಲು ಮಳೆಯೂ, ಗುಡುಗುಗಳೂ ನಿಂತಿರುವದನ್ನು ಫರೋನನ
ನು ನೋಡಿದಾಗ, ಅವನು ಇನ್ನೂ ಪಾಪ ಮಾಡಿ, ತನ್ನ ಸೇವ
ಕರು ಸಹಿತವಾಗಿ, ತನ್ನ ಹೃದಯವನ್ನು ಕಠಿಣ ಮಾಡಿ ಕೊಂ
೩೫ ಡನು. ಫರೋನನ ಹೃದಯವು ಕಠಿಣವಾಗಿ ಅವನು, ಕರ್ತನು
ಮೋಶೆಯ ಕೈಯಿಂದ ಹೇಳಿದ ಹಾಗೆಯೇ, ಇಸ್ರಯೇಲ್ ಮ
ಕ್ಕಳನ್ನು ಕಳುಹಿಸಿ ಬಿಡಲಿಲ್ಲ.

## ೧೦. ಸಂಧಿ.

೧ ಆ ಮೇರೆ ಕರ್ತನು ಮೋಶೆಗೆ ಹೇಳಿದ್ದೇನಂದರೆ, ಫರೋನ
ನ ಬಳಿಗೆ ಹೋಗು; ಯಾಕಂದರೆ ಈ ನನ್ನ ಗುರುತುಗಳನ್ನು
ಅವರೊಳಗೆ ಮಾಡುವ ಹಾಗೆಯೂ, ನಾನು ಐಗುಪ್ತ್ಯರಲ್ಲಿ ಮಾ
೨ ಡಿದ ಕ್ರಿಯೆಗಳನ್ನೂ, ಅವರಲ್ಲಿಟ್ಟ ನನ್ನ ಗುರುತುಗಳನ್ನೂ ನೀ
ನು ನಿನ್ನ ಮಗನಿಗೂ ಮೊಮ್ಮಗನಿಗೂ ಹೇಳಿ ತಿಳಿಸುವ ಹಾಗೆ
ಯೂ, ನಾನೇ ಕರ್ತನೆಂದು ನೀವು ತಿಳಿಯ ಕೊಳ್ಳುವ ಹಾಗೆಯೂ,
ನಾನು ಅವನ ಹೃದಯವನ್ನೂ ಅವನ ಸೇವಕರ ಹೃದಯಗ
ಳನ್ನೂ ಕಠಿಣ ಮಾಡಿದ್ದೇನೆ.
೩ ಆಗ ಮೋಶೆಯೂ ಆರೋನನೂ ಫರೋನನ ಬಳಿಗೆ ಬಂ
ದು, ಅವನಿಗೆ ಹೇಳಿದ್ದೇನಂದರೆ, ಇಬ್ರೀಯರ ದೇವರಾದ ಕರ್ತ
ನು ಹೀಗೆ ಹೇಳುತ್ತಾನೆ—ನನ್ನ ಸನ್ನಿಧಿಯಲ್ಲಿ ತಗ್ಗಿಸಿ ಕೊಳ್ಳುವದ
ಕ್ಕೆ, ಎಷ್ಟುವರೆಗೂ ಮನಸ್ಸಿಲ್ಲದೆ ಇರುವಿ! ನನ್ನ ಜನರನ್ನು, ನ
೪ ನಗೆ ಸೇವಿಸುವ ಹಾಗೆ, ಕಳುಹಿಸು. ಯಾಕಂದರೆ ನೀನು ನನ್ನ
ಜನರನ್ನು ಕಳುಹಿಸಲೊಲ್ಲದೆ ಇದ್ದರೆ, ಇಗೋ, ನಾಳೆ ನಿನ್ನ ಮೇ
೫ ರೆಯಲ್ಲಿ ಮಿಡಿತೆಗಳನ್ನು ತರಿಸುತ್ತೇನೆ. ಅವು ಭೂಮಿಯ ಮೇ
ಲ್ಭಾಗವನ್ನು ಮುಚ್ಚುವವು; ಭೂಮಿಯನ್ನು ನೋಡ ಕೂಡದೆ
ಇರುವದು; ಅವು ಕಲ್ಲು ಮಳೆಯಿಂದ ನಿಮಗೆ ಉಳಿಸಲ್ಪಟ್ಟ ಉ
ಳುಹಿನ ಮಿಕ್ಕದ್ದನ್ನೂ ತಿಂದು ಬಿಡುವವು; ಭೂಮಿಯೊಳಗಿಂ
೬ ದ ನಿಮಗೆ ಬೆಳೆಯುವ ಮರಗಳನ್ನೆಲ್ಲಾ ತಿಂದು ಬಿಡುವವು. ಅವು
ನಿನ್ನ ಮನೆಗಳನ್ನೂ, ನಿನ್ನ ಸೇವಕರ ಮನೆಗಳನ್ನೂ, ಐಗುಪ್ತ್ಯ
ರೆಲ್ಲರ ಮನೆಗಳನ್ನೂ ತುಂಬುವವು. ನಿನ್ನ ತಂದೆಗಳೂ, ನಿನ್ನ
ತಂದೆಗಳ ತಂದೆಗಳೂ, ಅವರು ಭೂಮಿಯ ಮೇಲೆ ಇದ್ದಂದಿನಿಂ
ದ ಇಂದಿನ ವರೆಗೂ, ಅಂಥಾದ್ದನ್ನು ನೋಡಲಿಲ್ಲ. ಆಗಲವನು ತಿ
ರುಗಿ ಕೊಂಡು ಫರೋನನ ಬಳಿಯಿಂದ ಹೊರಟನು.
೭ ಇದಲ್ಲದೆ ಫರೋನನ ಸೇವಕರು ಅವನಿಗೆ, ಇವನು ಎಷ್ಟುವ
ರೆಗೂ ನಮಗೆ ನೋಣಾಗಿರ ಬೇಕು! ಆ ಜನರನ್ನು, ತಮ್ಮ ದೇವ
ರಾದ ಕರ್ತನಿಗೆ ಸೇವೆ ಮಾಡುವ ಹಾಗೆ, ಕಳುಹಿಸು. ಐಗುಪ್ತವು
ನಾಶವಾಯಿತೆಂದು ನಿನಗೆ ಇನ್ನೂ ತಿಳಿಯುವದಿಲ್ಲವೋ! ಅಂದ
೮ ರು. ಮೋಶೆಯೂ ಆರೋನನೂ ಫರೋನನ ಬಳಿಗೆ ಹಿಂದಕ್ಕೆ
ಕರೆಯಲ್ಪಟ್ಟರು. ಅವನವರಿಗೆ, ನೀವು ಹೋಗಿ, ನಿಮ್ಮ ದೇವರಾ
ದ ಕರ್ತನಿಗೆ ಸೇವೆ ಮಾಡಿರಿ. ಹೋಗುವವರು ಯಾರ್ಯಾರು!
೯ ಅಂದನು. ಮೋಶೆ, ನಮ್ಮ ಚಿಕ್ಕವರನ್ನೂ, ಮುದುಕರನ್ನೂ ಕ
ರ ಕೊಂಡು ಹೋಗುತ್ತೇವೆ; ನಮ್ಮ ಕುಮಾರರನ್ನೂ, ಕುಮಾ
ರ್ತೆಗಳನ್ನೂ, ನಮ್ಮ ಕುರಿಗಳನ್ನೂ, ದನಗಳನ್ನೂ, ತಕ್ಕೊಂಡು
ಹೋಗುತ್ತೇವೆ; ಯಾಕಂದರೆ ಕರ್ತನ ಹಬ್ಬ ನಮಗಂಟು,
೧೦ ಅಂದನು. ಆಗಲವರಿಗೆ, ನಾನು ಹ್ಯಾಗೆ ನಿಮ್ಮನ್ನೂ ನಿಮ್ಮ ಮ
ಕ್ಕಳನ್ನೂ ಕಳುಹಿಸುವೆನೋ, ಹಾಗೆ ಕರ್ತನು ನಿಮ್ಮ ಸಂಗಡ
ಇರಲಿ, ನೋಡಿರಿ; ನಿಮ್ಮ ಮುಖದ ಮುಂದೆ ಕೇಡು ಅದೆ. ಹಾಗ
ಲ್ಲ; ಗಂಡಸರಾದ ನೀವು ಹೋಗಿ, ಕರ್ತನಿಗೆ ಸೇವೆ ಮಾಡಿರಿ;
ಯಾಕಂದರೆ ಇದನ್ನೇ ನೀವು ಹುಡುಕಿದಿರಿ, ಅಂದನು; ಆಗಲವರು
ಫರೋನನ ಸನ್ನಿಧಿಯಿಂದ ಹೊರಡಿಸಲ್ಪಟ್ಟರು.
೧೧ ಆಗ ಕರ್ತನು ಮೋಶೆಗೆ, ನಿನ್ನ ಕೈಯನ್ನು ಐಗುಪ್ತ ದೇಶದ
ಮೇಲೆ ಮಿಡತೆಗಳ ನಿಮಿತ್ತ ಚಾಚು; ಅವು ಐಗುಪ್ತದ ಮೇಲೆ ಏರಿ
ಬಂದು, ಭೂಮಿಯ ಹಸುರಾದದ್ದನ್ನೆಲ್ಲಾ ಕಲ್ಲು ಮಳೆಯು ಉಳಿ
೧೨ ಸಿದ್ದನ್ನೆಲ್ಲಾ ತಿಂದು ಬಿಡಲಿ, ಅಂದನು. ಮೋಶೆ ತನ್ನ ಕೋಲ
ನ್ನು ಐಗುಪ್ತ ದೇಶದ ಮೇಲೆ ಚಾಚಿದಾಗ, ಕರ್ತನು ಆ ದಿನವೆ
ಲ್ಲಾ, ರಾತ್ರಿಯೆಲ್ಲಾ ಮೂಡಣ ಘಾಳಿಯನ್ನು ಬರ ಮಾಡಿದನು;
ಉದಯವಾದಾಗ, ಆ ಮೂಡಣ ಘಾಳಿಯು ಮಿಡಿತೆಗಳನ್ನು ತ
೧೩ ಕ್ಕೊಂಡು ಬಂತು. ಹಾಗೆ ಮಿಡಿತೆಗಳು ಸಮಸ್ತ ಐಗುಪ್ತ ದೇಶದ
ಮೇಲೆ ಬಂದು, ಐಗುಪ್ತದ ಎಲ್ಲಾ ಮೇರೆಗಳಲ್ಲಿ ಬಹು ಸಮೂಹ
ವಾಗಿ ಇಳಿದು ಕೊಂಡವು. ಮುಂಚೆಯೂ ಅವರ ಹಾಗೆ ಮಿಡಿತೆಗಳು
೧೪ ಇದ್ದಿಲ್ಲ; ಆ ಮೇಲೆಯೂ ಹಾಗೆ ಇರುವದಿಲ್ಲ. ಅವು ಭೂಮಿಯ
ಮೇಲ್ಭಾಗವನ್ನೆಲ್ಲಾ ಮುಚ್ಚಿದ್ದರಿಂದ, ಭೂಮಿಯು ಕತ್ತಲಾಯಿ
ತು; ಅವು ಭೂಮಿಯ ಎಲ್ಲಾ ಹಸುರು ಗಿಡಗಳನ್ನೂ, ಕಲ್ಲು ಮ
ಳೆ ಉಳಿಸಿದ ಮರಗಳ ಎಲ್ಲಾ ಫಲವನ್ನೂ ತಿಂದು ಬಿಟ್ಟವು; ಮ
ರಗಳಲ್ಲಾದರೂ, ಹೊಲದ ಗಿಡಗಳಲ್ಲಾದರೂ ಹಸುರಾದದ್ದು ಸ
ಮಸ್ತ ಐಗುಪ್ತ ದೇಶದಲ್ಲಿ ಒಂದೂ ಉಳಿಯಲಿಲ್ಲ.
೧೬ ಆಗ ಫರೋನನು ಮೋಶೆಯನ್ನೂ ಆರೋನನನ್ನೂ ತ್ವರೆ
ಯಾಗಿ ಕರಿಸಿ, ನಾನು ನಿಮ್ಮ ದೇವರಾದ ಕರ್ತನಿಗೂ ನಿಮಗೂ
೧೭ ಪಾಪ ಮಾಡಿದ್ದೇನೆ. ಹೀಗಿರುವದರಿಂದ ಈ ಒಂದೇ ಸಾರಿ ನನ್ನ
ಪಾಪವನ್ನು ದಯೆ ಮಾಡಿ ಮನ್ನಿಸು; ಈ ಮರಣವನ್ನು ಮಾ
ತ್ರ ನನ್ನಿಂದ ತೊಲಗಿಸುವ ಹಾಗೆ, ನಿಮ್ಮ ದೇವರಾದ ಕರ್ತನ
೧೮ ನ್ನು ಬೇಡಿ ಕೊಳ್ಳಿರಿ, ಅಂದನು. ಆಗಲವನು ಫರೋನನನ್ನು ಬಿ
ಟ್ಟು ಹೋಗಿ, ಕರ್ತನನ್ನು ಬೇಡಿ ಕೊಂಡನು. ಕರ್ತನು ಮ
ಹಾ ಬಲವಾದ ಪಶ್ಚಿಮ ಘಾಳಿಯನ್ನು ಬೀಸ ಮಾಡಿದನು; ಅದು
ಮಿಡಿತೆಗಳನ್ನು ಎತ್ತಿ, ಆಪಿನ ಸಮುದ್ರದಲ್ಲಿ ಹಾಕಿತು; ಐಗುಪ್ತದ
೧೯ ಮೇರೆಗಳಲ್ಲೆಲ್ಲಾ ಒಂದು ಮಿಡಿತೆಯಾದರೂ ಉಳಿಯಲಿಲ್ಲ. ಆದ
ರೆ ಕರ್ತನು ಫರೋನನ ಹೃದಯವನ್ನು ಕಠಿಣ ಮಾಡಿದ್ದರಿಂ
ದ, ಅವನು ಇಸ್ರಯೇಲ್ ಮಕ್ಕಳನ್ನು ಕಳುಹಿಸಲಿಲ್ಲ.

೨೦ ಆಗ ಕರ್ತನು ಮೋಶೆಗೆ, ನಿನ್ನ ಕೈಯನ್ನು ಆಕಾಶಕ್ಕೆ
ಚಾಚು; ಕತ್ತಲನ್ನು ಮುಟ್ಟುವ ಹಾಗೆ, ಕತ್ತಲು ಸಮಸ್ತ ಐಗುಪ್ತ
೨೨ ದೇಶದ ಮೇಲೆ ಬರುವದು, ಅಂದನು. ಮೋಶೆ ಆಕಾಶಕ್ಕೆ ಕೈ
ಚಾಚಿದನು; ಆಗ ಸಮಸ್ತ ಐಗುಪ್ತ ದೇಶದಲ್ಲಿ ಮೂರು ದಿವಸ
೨೩ ಗಾಢ ಕತ್ತಲಾಯಿತು. ಮೂರು ದಿವಸಗಳ ಪರ್ಯಂತರ ಒಬ್ಬ
ರು ಒಬ್ಬರನ್ನು ನೋಡಲಿಲ್ಲ; ಯಾರೂ ತಮ್ಮ ಸ್ಥಳವನ್ನು ಬಿ
ಟ್ಟು ಏಳಲಿಲ್ಲ; ಆದರೆ ಇಸ್ರಯೇಲ್ ಮಕ್ಕಳಿಗೆಲ್ಲಾ ಅವರ ನಿವಾ
ಸಗಳಲ್ಲಿ ಬೆಳಕಿತ್ತು.

೨೪ ಆಗ ಫರೋನನು ಮೋಶೆಯನ್ನು ಕರಿಸಿ—ಹೋಗಿ, ಕರ್ತ
ನಿಗೆ ಸೇವೆ ಮಾಡಿರಿ; ನಿಮ್ಮ ಕುರಿ ದನಗಳು ಮಾತ್ರ ಹಿಂದೆ ಇರಲಿ;
೨೫ ನಿಮ್ಮ ಮಕ್ಕಳು ಸಹ ನಿಮ್ಮ ಸಂಗಡ ಹೋಗಲಿ, ಅಂದನು. ಆಗ
ಮೋಶೆ ಹೇಳಿದ್ದೇನಂದರೆ, ನಮ್ಮ ದೇವರಾದ ಕರ್ತನಿಗೆ ಅರ್ಪಿ
ಸುವದಕ್ಕೆ ನೀನು ನಮ್ಮ ಕೈಯಲ್ಲಿ ಬಲಿಗಳನ್ನೂ ಹೋಮಗಳ
೨೬ ನ್ನೂ ಸಹ ಕೊಡ ಬೇಕು. ಮತ್ತು ನಮ್ಮ ಪಶುಗಳು ಸಹ ನಮ್ಮ
ಸಂಗಡ ಹೋಗ ಬೇಕು; ಒಂದು ಗೊರಸೆಯಾದರೂ ಹಿಂದುಳಿ
ಯ ಬಾರದು; ಯಾಕಂದರೆ ನಮ್ಮ ದೇವರಾದ ಕರ್ತನಿಗೆ ಆರಾ
ಧನೆ ಮಾಡುವದಕ್ಕೆ ಅದರಿಂದಲೇ ತೆಗೆಯ ಬೇಕು. ಕರ್ತನಿಗೆ
ಏನು ಆರಾಧನೆ ಮಾಡ ಬೇಕೋ, ಎಂದು, ಅಲ್ಲಿಗೆ ಬರುವ ಪ
ರ್ಯಂತರ ನಮಗೆ ತಿಳಿಯುವದಿಲ್ಲ.

೨೭ ಆದರೆ ಕರ್ತನು ಫರೋನನ ಹೃದಯವನ್ನು ಕಠಿಣ ಮಾ
ಡಿದ್ದರಿಂದ, ಅವನು ಅವರನ್ನು ಕಳುಹಿಸಲೊಲ್ಲದೆ ಇದ್ದನು. ಆಗ
ಫರೋನನು ಮೋಶೆಗೆ; ನನ್ನನ್ನು ಬಿಟ್ಟು ಹೋಗು; ಇನ್ನು ನ
ನ್ನ ಮುಖವನ್ನು ನೋಡದ ಹಾಗೆ, ಜಾಗ್ರತೆಯಾಗಿರು; ಯಾಕಂ
ದರೆ ನನ್ನ ಮುಖವನ್ನು ನೋಡುವ ದಿವಸದಲ್ಲಿ ನೀನು ಸಾಯ
೨೯ ಬೇಕು, ಅಂದನು. ಮೋಶೆಯು ನೀನು ಸರಿಯಾಗಿ ಹೇಳಿದಿ;
ಇನ್ನು ಮೇಲೆ ನಾನು ನಿನ್ನ ಮುಖವನ್ನು ನೋಡುವದಿಲ್ಲ, ಅಂ
ದನು.

## ೧೧. ಸಂಧಿ.

೧ ಆದರೆ ಕರ್ತನು ಮೋಶೆಗೆ ಹೇಳಿದ್ದೇನಂದರೆ, ಇನ್ನು ಒಂ
ದೇ ಬಾಧೆಯನ್ನು ಫರೋನನ ಮೇಲೆಯೂ ಐಗುಪ್ತದ ಮೇಲೆ
ಯೂ ಬರ ಮಾಡುವೆನು. ಅದರ ತರುವಾಯ ಅವನು ನಿಮ್ಮನ್ನು
ಇಲ್ಲಿಂದ ಕಳುಹಿಸುವನು; ಕಳುಹಿಸಿದರೆ, ನಿಮ್ಮನ್ನು ಪೂರ್ಣ
೨ ವಾಗಿ ಇಲ್ಲಿಂದ ಹೊರಡಿಸೇ ಹೊರಡಿಸುವನು. ಒಬ್ಬೊಬ್ಬನು
ತನ್ನ ನೆರೆಯವನಿಂದಲೂ, ಒಬ್ಬೊಬ್ಬಳು ತನ್ನ ನೆರೆಯವಳಿಂ
ದಲೂ, ಬೆಳ್ಳಿ ಭಂಗಾರದ ಸಾಮಾನುಗಳನ್ನು ಕೇಳಿ ಕೊಳ್ಳುವ
೩ ಹಾಗೆ, ಜನರ ಕಿವಿಗಳಲ್ಲಿ ಮಾತಾಡ ಬೇಕು. ಇದಲ್ಲದೆ ಕರ್ತನು
ಐಗುಪ್ತ್ಯರ ಸನ್ನಿಧಿಯಲ್ಲಿ ಜನರಿಗೆ ದಯವಾಗುವ ಹಾಗೆ ಮಾಡಿ
ದನು. ಮೋಶೆ ಎಂಬವನು ಸಹ ಐಗುಪ್ತ ದೇಶದಲ್ಲಿಯೂ, ಫ
ರೋನನ ದಾಸರ ದೃಷ್ಟಿಯಲ್ಲಿಯೂ ಬಹು ದೊಡ್ಡವನಾಗಿ
ದ್ದನು.

೪ ಆಗ ಮೋಶೆ ಹೇಳಿದ್ದೇನಂದರೆ, ಕರ್ತನು ಹೀಗೆ ಹೇಳುತ್ತಾ
ನೆ—ಅರ್ಧ ರಾತ್ರಿಯಲ್ಲಿ ನಾನು ಐಗುಪ್ತರ ಮಧ್ಯದಲ್ಲಿ ಹೊರ
೫ ಡುತ್ತೇನೆ. ಆಗ ಐಗುಪ್ತ ದೇಶದಲ್ಲಿ ಸಿಂಹಾಸನದ ಮೇಲೆ ಕೂತಿ
ರುವ ಫರೋನನ ಚೊಚ್ಚಲ ಮಗನು ಮೊದಲುಗೊಂಡು, ಬೀಸು
ವ ಕಲ್ಲಿನ ಹಿಂದೆ ಇರುವ ದಾಸಿಯ ಚೊಚ್ಚಲಿನ ವರಿಗೂ ಚೊ
ಚ್ಚಲಾದವಕೆಲ್ಲರೂ ಸಾಯುವರು; ಪಶುಗಳಲ್ಲಿ ಚೊಚ್ಚಲಾದವು
೬ ಗಳು ಸಹ. ಮತ್ತು ಐಗುಪ್ತ ದೇಶದಲ್ಲೆಲ್ಲಾ ದೊಡ್ಡ ಕೂಗು ಇ
ರುವದು; ಅಂಥಾದ್ದು ಮುಂಚೆಯೂ ಇದ್ದಿಲ್ಲ; ಇನ್ನು ಮೇಲೆ
೭ ಯೂ ಇರುವದಿಲ್ಲ. ಆದರೆ ಕರ್ತನು ಐಗುಪ್ತ್ಯರಿಗೂ ಇಸ್ರ
ಯೇಲಿಗೂ ಹೆಚ್ಚು ಕಡಿಮೆ ಮಾಡುತ್ತಾನೆಂದು, ನೀವು ತಿಳಿ
ಕೊಳ್ಳುವ ಹಾಗೆ, ಇಸ್ರಯೇಲ್ ಮಕ್ಕಳೆಲ್ಲರ ಮೇಲೆ ಮನುಷ್ಯ
ರು ಮೊದಲು ಗೊಂಡು ಮೃಗಗಳ ಪರ್ಯಂತರತಕ್ಕೂ ಒಂದು
೮ ನಾಯಿಯಾದರೂ ನಾಲಿಗೆಯನ್ನು ಅಲ್ಲಾಡಿಸುವದಿಲ್ಲ. ಆಗ ನಿನ್ನ
ದಾಸರಾದ ಇವಕೆಲ್ಲರು ನನ್ನ ಬಳಿಗೆ ಇಳಿದು ಬಂದು, ನನಗೆ
ಅಡ್ಡ ಬಿದ್ದು, ನೀನೂ ನಿನ್ನ ಅಪ್ಪಣೆಯೊಳಗಿರುವ ಸಮಸ್ತ
ಜನರೂ ಹೊರಗೆ ಹೋಗಿರೆಂದು ಅನುವರು; ಆ ಮೇಲೆ ನಾನು
ಹೊರಗೆ ಹೋಗುವೆನು. ಹಾಗೆ ಮೋಶೆ ಕೋಪದ ಉರಿಗೊಂ
ಡು ಫರೋನನನ್ನು ಬಿಟ್ಟು ಹೋದನು.

೯ ಆದರೆ ಕರ್ತನು ಮೋಶೆಗೆ, ನನ್ನ ಲಕ್ಷಣಗಳು ಐಗುಪ್ತ ದೇ
ಶದಲ್ಲಿ ಬಹಳವಾಗುವ ಹಾಗೆ, ಫರೋನನು ನಿಮ್ಮನ್ನು ಕೇಳುವ
ದಿಲ್ಲ, ಅಂದನು.

೧೦ ಈ ಲಕ್ಷಣಗಳನ್ನೆಲ್ಲಾ ಮೋಶೆಯೂ ಆರೋನನೂ ಫರೋ
ನನ ಮುಂದೆ ಮಾಡಿದರು. ಆದರೆ ಕರ್ತನು ಫರೋನನ ಹೃ
ದಯವನ್ನು ಕಠಿಣ ಮಾಡಿದ್ದರಿಂದ, ಅವನು ಇಸ್ರಯೇಲ್ ಮ
ಕ್ಕಳನ್ನು ತನ್ನ ದೇಶದೊಳಗಿಂದ ಕಳುಹಿಸಿ ಬಿಡಲಿಲ್ಲ.

## ೧೨. ಸಂಧಿ.

೧ ಆಗ ಕರ್ತನು ಮೋಶೆಗೂ ಆರೋನನಿಗೂ ಐಗುಪ್ತ ದೇಶ
೨ ದಲ್ಲಿ ಮಾತಾಡಿ ಹೇಳಿದ್ದೇನಂದರೆ, ಈ ತಿಂಗಳು ನಿಮಗೆ ತಿಂಗ
ಳುಗಳ ಆರಂಭ—ವರುಷದ ತಿಂಗಳುಗಳಲ್ಲಿ ಇದೇ ನಿಮಗೆ ಮೊ
ದಲನೇದು.

3 ಇಸ್ರಯೇಲ್ ಕೂಟಕ್ಕೆಲ್ಲಾ ನೀವು ಹೇಳ ಬೇಕಾದದ್ದೇನಂದ
ರೆ, ಈ ತಿಂಗಳಿನ ಹತ್ತನೇ ದಿವಸದಲ್ಲಿ ಅವರು ತಮಗೆ ಒಂದೊ
ದು ಕುರಿ ಮರಿಯನ್ನು, ತಂದೆಗಳ ಮನೆಯ ಪ್ರಕಾರ, ಮನೆಗೆ ಒಂ
೪ ದು ಕುರಿ ಮರಿಯನ್ನು ತಕ್ಕೊಳ್ಳ ಬೇಕು. ಒಂದು ಕುರಿ ಮರಿ
ಬಳಸುವದಕ್ಕೆ ಮನೆ ಸಣ್ಣದಾದರೆ, ಅವನೂ, ಅವನ ಮನೆಗೆ ಸ
ಮೀಪವಾದ ನೆರೆಯವನೂ, ಪ್ರಾಣಗಳ ಲೆಖ್ಖದ ಪ್ರಕಾರ ಒಂದ
ನ್ನು ತಕ್ಕೊಳ್ಳಲಿ; ಒಬ್ಬೊಬ್ಬನು ಅವನು ಉಣ್ಣುವ ಮೇರೆಗೆ
೫ ಕುರಿ ಮರಿಯ ನಿಮಿತ್ತ ಎಣಿಸ ಬೇಕು.

ಪೂರ್ಣಾಂಗವಾಗಿರುವ ಒಂದು ವರುಷದ ಗಂಡು ಮರಿ ನಿ
ಮಗಿರ ಬೇಕು. ಕುರಿಗಳಿಂದಾಗಲಿ, ಮೇಕೆಗಳಿಂದಾಗಲಿ, ಅದನ್ನು
೬ ತಕ್ಕೊಳ್ಳ ಬೇಕು. ಅದನ್ನು ಈ ತಿಂಗಳಿನ ಹದಿನಾಲ್ಕನೇ ದಿ
ವಸದ ಪರ್ಯಂತರ ಇಟ್ಟು ಕೊಳ್ಳ ಬೇಕು; ಆ ಮೇಲೆ ಸಾ
ಯಂಕಾಲದಲ್ಲಿ ಇಸ್ರಯೇಲಿನ ಕೂಟದ ಸಭೆಯೆಲ್ಲಾ ಅದನ್ನು ಕೊ
ಲ್ಲ ಬೇಕು.

೭ ಮತ್ತು ರಕ್ತದಲ್ಲಿ ಸ್ವಲ್ಪ ತೆಗೆದು, ಅವರು ಅದನ್ನು ಉಣ್ಣು
ವ ಮನೆಗಳ ಎರಡು ನಿಲುವುಗಳಿಗೂ ಮೇಲಿನ ಪಟ್ಟಿಗೂ ಹಚ್ಚ
ಬೇಕು.

೮ ಆ ರಾತ್ರಿಯಲ್ಲಿಯೇ ಆ ಮಾಂಸವನ್ನು ಉಣ್ಣ ಬೇಕು;





ಬೆಂಕಿಯಲ್ಲಿ ಸುಟ್ಟು, ಅದನ್ನೂ ಹುಳಿ ಇಲ್ಲದ ಕೊಟ್ಟಿಗಳ
೯ ನ್ನೂ ಕಹಿಯಾದ ಪಲ್ಯಗಳ ಸಂಗಡ ಉಣ್ಣ ಬೇಕು. ಅದರಲ್ಲಿ
ಯಾವದನ್ನಾಗಲಿ ಹಸಿದಾಗಿಯೂ ನೀರಿನಲ್ಲಿ ಬೇಯಿಸಿದ್ದಾಗಿ
ಯೂ ಅದನ್ನು ಉಣ್ಣದೆ, ಅದರ ತಲೆ, ತೊಡೆ, ಒಳಗಿನವುಗಳು
ಸಹಿತವಾಗಿ ಬೆಂಕಿಯಲ್ಲಿ ಸುಟ್ಟದ್ದಾಗಿಯೇ ಅದನ್ನು ಉಣ್ಣ ಬೇ
೧೦ ಕು. ಅದರಲ್ಲಿ ಏನಾದರೂ ಉದಯದ ಪರ್ಯಂತರ ಉಳಿಸ
ಬೇಡಿರಿ; ಉದಯದ ಪರ್ಯಂತರ ಅದರಲ್ಲಿ ಉಳಿದದ್ದನ್ನು ಬೆಂ
೧೧ ಕಿಯಿಂದ ಸುಟ್ಟು ಬಿಡ ಬೇಕು. ನೀವು ಅದನ್ನು ಉಣ್ಣ ತಕ್ಕ
ರೀತಿ ಇದೇ—ನಡು ಕಟ್ಟಿ ಕೊಂಡು, ಕೆರ ಮೆಟ್ಟಿ ಕೊಂಡು, ಕೋ
ಲು ಹಿಡು ಕೊಂಡು, ತ್ವರೆಯಾಗಿ ಅದನ್ನು ಉಣ್ಣ ಬೇಕು.
ಅದು ಕರ್ತನ ಪಸ್ಕವು.

೧೨ ಯಾಕಂದರೆ ಈ ರಾತ್ರಿಯಲ್ಲಿಯೇ ನಾನು ಐಗುಪ್ತ ದೇಶವ
ನ್ನು ಹಾದು ಹೋಗಿ, ಐಗುಪ್ತ ದೇಶದಲ್ಲಿ ಇರುವ ಚೊಚ್ಚಲಾ
ದವುಗಳನ್ನೆಲ್ಲಾ ಮನುಷ್ಯರು ಮೊದಲುಗೊಂಡು ಪಶುಗಳ ಪ
ರ್ಯಂತರತಕ್ಕೂ, ಹೊಡೆಯುವೆನು; ಐಗುಪ್ತದ ಎಲ್ಲಾ ದೇವರು
೧೩ ಗಳಿಗೆ ನ್ಯಾಯ ತೀರಿಸುವೆನು; ನಾನೇ ಕರ್ತನು. ಆದರೆ ನೀವು
ಇರುವ ಎಲ್ಲಾ ಮನೆಗಳ ಮೇಲೆ ರಕ್ತವು ನಿಮಗೆ ಗುರುತಾಗಿರುವ
ದು. ಆ ರಕ್ತವನ್ನು ನಾನು ನೋಡುವಾಗ, ನಿಮ್ಮನ್ನು ಬಿಟ್ಟು
ಹೋಗುವೆನು; ಐಗುಪ್ತ ದೇಶವನ್ನು ನಾನು ಹೊಡೆಯುವ ಸಮ
ಯದಲ್ಲಿ, ನಾಶನಕ್ಕಾಗಿರುವ ಯಾವ ಬಾಧೆಯಾದರೂ ನಿಮ್ಮ
ಲ್ಲಿ ಇರದು.

೧೪ ಹೀಗಿರುವದರಿಂದ ಈ ದಿವಸವು ನಿಮಗೆ ಜ್ಞಾಪಕಾರ್ಥವಾಗಿ
ರ ಬೇಕು; ಅದನ್ನು ಕರ್ತನಿಗೆ ಹಬ್ಬವಾಗಿ ಆಚರಿಸ ಬೇಕು;
ನಿಮ್ಮ ತಲಾಂತರಗಳಿಗೆ ನಿತ್ಯ ನೇಮವಾಗಿ ಅದನ್ನು ಆಚರಿಸ
೧೫ ಬೇಕು. ಏಳು ದಿವಸ ನೀವು ಹುಳಿ ಇಲ್ಲದ ಕೊಟ್ಟಿಗಳನ್ನು ತಿ
ನ್ನ ಬೇಕು. ಮೊದಲನೇ ದಿವಸದಲ್ಲಿಯೇ ಹುಳಿ ಹಿಟ್ಟನ್ನು ನಿ
ಮ್ಮ ಮನೆಗಳೊಳಗಿಂದ ತೆಗೆದು ಹಾಕ ಬೇಕು. ಯಾಕಂದರೆ
ಮೊದಲನೇ ದಿವಸದಿಂದ ಏಳನೇ ದಿವಸದ ಪರ್ಯಂತರ ಹುಳಿ
ಕಲಸಿದ್ದನ್ನು ಉಣ್ಣುವವನ್ಯಾವನೋ, ಆ ಪ್ರಾಣವು ಇಸ್ರಯೇ
೧೬ ಲಿನೊಳಗಿಂದ ಕಡಿಯಲ್ಪಡ ಬೇಕು. ಇದಲ್ಲದೆ ಮೊದಲನೇ ದಿವ
ಸದಲ್ಲಿ ಪರಿಶುದ್ಧ ಪರಿಷೆಯೂ, ಏಳನೇ ದಿವಸದಲ್ಲಿ ಪರಿಶುದ್ಧ ಪರಿ
ಷೆಯೂ ನಿಮಗಿರ ಬೇಕು. ಯಾವ ಕೆಲಸವಾದರೂ ಅವುಗಳಲ್ಲಿ
ಆಗ ಬಾರದು. ಪ್ರತಿ ಮನುಷ್ಯನು ಉಣ್ಣುವಂಥಾದ್ದನ್ನು ಮಾ
೧೭ ತ್ರ ನೀವು ಸಿದ್ಧ ಮಾಡಿ ಕೊಳ್ಳ ಬಹುದು. ಈ ಮೇರೆಗೆ ಹುಳಿ
ಇಲ್ಲದ ಕೊಟ್ಟಿಯ ಹಬ್ಬವನ್ನು ಆಚರಿಸ ಬೇಕು. ಯಾಕಂದ
ರೆ ಆ ದಿವಸದಲ್ಲೇ ನಾನು ನಿಮ್ಮ ಸೈನ್ಯಗಳನ್ನು ಐಗುಪ್ತ ದೇ
ಶದೊಳಗಿಂದ ಹೊರಗೆ ಬರ ಮಾಡಿ ಇದ್ದೇನೆ; ಆದಕಾರಣ ಆ
ದಿವಸವನ್ನು ನಿಮ್ಮ ತಲಾಂತರಗಳಲ್ಲಿ ನಿತ್ಯ ನೇಮವಾಗಿ ಆಚರಿ
೧೮ ಸ ಬೇಕು. ಮೊದಲನೇ ತಿಂಗಳಲ್ಲಿ ತಿಂಗಳಿನ ಹದಿನಾಲ್ಕನೇ ದಿ
ವಸದ ಸಾಯಂಕಾಲದಲ್ಲಿ ನೀವು ತಿಂಗಳಿನ ಇಪ್ಪತ್ತೊಂದನೇ ದಿ
ವಸದ ಸಾಯಂಕಾಲದ ಪರ್ಯಂತರ ಹುಳಿ ಇಲ್ಲದ ಕೊಟ್ಟಿಗಳ
೧೯ ನ್ನು ತಿನ್ನ ಬೇಕು. ಏಳು ದಿವಸದ ಪರ್ಯಂತರ ಹುಳಿ ಹಿಟ್ಟು
ನಿಮ್ಮ ಮನೆಗಳಲ್ಲಿ ಶಿಕ್ಕ ಬಾರದು. ಯಾಕಂದರೆ ಹುಳಿ ಕಲಸಿ
ದ್ದನ್ನು ಯಾವನು ಉಣ್ಣುವನೋ, ಆ ಪ್ರಾಣವು ಪರದೇಶಿಯಾ
ಗಲಿ, ದೇಶಸ್ಥನಾಗಲಿ, ಇಸ್ರಯೇಲ್ ಕೂಟದೊಳಗಿಂದ ಕಡಿಯ
೨೦ ಲ್ಪಡ ಬೇಕು. ಹುಳಿ ಕಲಸಿದ್ದು ಯಾವದಾಗಲಿ ನೀವು ಉಣ್ಣ
ಬಾರದು; ನಿಮ್ಮ ಎಲ್ಲಾ ನಿವಾಸಗಳಲ್ಲಿ ಹುಳಿ ಇಲ್ಲದ ಕೊಟ್ಟಿಗಳ
ನ್ನು ತಿನ್ನ ಬೇಕು.

೨೧ ಆಗ ಮೋಶೆ ಇಸ್ರಯೇಲಿನ ಹಿರಿಯರೆಲ್ಲರನ್ನು ಕರೆದು, ಅವ
ರಿಗೆ ಹೇಳಿದ್ದೇನಂದರೆ—ನಿಮ್ಮ ಗೋತ್ರಗಳ ಪ್ರಕಾರ ಕುರಿಗಳನ್ನು
೨೨ ಹಿಡು ಕೊಂಡು, ಪಸ್ಕವನ್ನು ಕೊಯ್ಯಿರಿ. ಮತ್ತು ಹಿಸ್ಸೊಪ್ಪಿ
ನ ಕಟ್ಟನ್ನು ತಕ್ಕೊಂಡು ತಂಬಿಗೆಯಲ್ಲಿರುವ ರಕ್ತದಲ್ಲಿ ಅದ್ದಿ,
ಬಾಗಲ ಮೇಲಿನ ಪಟ್ಟಿಗೂ ಎರಡು ನಿಲುವುಗಳಿಗೂ ತಂಬಿಗೆಯಲ್ಲಿ
ರುವ ರಕ್ತವನ್ನು ಹಚ್ಚಿರಿ. ಮತ್ತು ನಿಮ್ಮಲ್ಲಿ ಯಾವನಾದರೂ
ಬೆಳಗಾಗುವ ಪರ್ಯಂತರ ಮನೆ ಬಾಗಲನ್ನು ಬಿಟ್ಟು ಹೋಗ
೨೩ ಬಾರದು. ಯಾಕಂದರೆ ಕರ್ತನು ಐಗುಪ್ತ್ಯರನ್ನು ಹೊಡೆಯು
ವದಕ್ಕೆ ಹಾದು ಹೋಗುವನು; ಅವನು ಬಾಗಲ ಮೇಲಿನ ಪಟ್ಟಿ
ಯ ಮೇಲೆಯೂ ಎರಡು ನಿಲುವುಗಳ ಮೇಲೆಯೂ ಇರುವ ರಕ್ತವ
ನ್ನು ನೋಡಿದರೆ, ಕರ್ತನು ಕೆಡಿಸುವವನನ್ನು ಬಾಧಿಸುವದ
ಕ್ಕೋಸ್ಕರ ನಿಮ್ಮ ಮನೆಗಳಿಗೆ ಬರ ಗೊಡಿಸದೆ, ಬಾಗಲನ್ನು ದಾ
೨೪ ಟಿ ಹೋಗುವನು. ಈ ಕಾರ್ಯವನ್ನು ನಿಮಗೂ ನಿಮ್ಮ ಮ
೨೫ ಕ್ಕಳಿಗೂ ನೇಮವಾಗಿ ನಿತ್ಯವಾಗಿ ಕೈ ಕೊಳ್ಳ ಬೇಕು. ಕರ್ತ
ನು ನಿಮಗೆ ಕೊಡಲಾಗಿರುವ ದೇಶಕ್ಕೆ, ಅವನು ಹೇಳಿದ ಹಾಗೆ
ನೀವು ಸೇರಿದಾಗ, ಈ ಆಚರಣೆಯನ್ನು ಕೈ ಕೊಳ್ಳ ಬೇಕು.
೨೬ ಇದಲ್ಲದೆ ನಿಮ್ಮ ಮಕ್ಕಳು, ಈ ಆಚರಣೆ ನಿಮಗೆ ಏನೆಂದು, ನಿಮ
೨೭ ಗೆ ಹೇಳಿದರೆ—ಐಗುಪ್ತ್ಯರನ್ನು ಬಾಧಿಸಿದಾಗ, ನಮ್ಮ ಮನೆಗಳ
ನ್ನು ಸಂರಕ್ಷಿಸಿ, ಐಗುಪ್ತದಲ್ಲಿ ಇಸ್ರಯೇಲ್ ಮಕ್ಕಳ ಮನೆಗಳ
ನ್ನು ದಾಟಿ ಹೋದ ಕರ್ತನ ಪಸ್ಕ ಹಬ್ಬವು ಇದೇ, ಎಂದು
ಹೇಳ ಬೇಕು. ಆಗ ಜನರು ಬೊಗ್ಗಿ, ಅಡ್ಡ ಬಿದ್ದರು.

೨೮ ಇಸ್ರಯೇಲ್ ಮಕ್ಕಳು ಹೋಗಿ, ಅದನ್ನು ಮಾಡಿದರು; ಕ
ರ್ತನು ಮೋಶೆಗೂ ಆರೋನನಿಗೂ ಆಜ್ಞಾಪಿಸಿದ ಹಾಗೆಯೇ
ಮಾಡಿದರು.

೨೯ ಅರ್ಧ ರಾತ್ರಿಯಲ್ಲಿ ಆದದ್ದೇನಂದರೆ, ಕರ್ತನು ಸಿಂಹಾಸನ
ದ ಮೇಲೆ ಕೂತು ಕೊಂಡ ಫರೋನನ ಚೊಚ್ಚಲು ಮಗನು ಮೊ
ದಲ್ಗೊಂಡು ಸೆರೆಮನೆಯಲ್ಲಿರುವ ಸೆರೆಯವನ ಚೊಚ್ಚಲು ಮಗನ
ಪರ್ಯಂತರತಕ್ಕೂ, ಐಗುಪ್ತ ದೇಶದಲ್ಲಿದ್ದ ಎಲ್ಲಾ ಚೊಚ್ಚಲು
ಮಕ್ಕಳನ್ನೂ, ಮತ್ತು ಪಶುಗಳಲ್ಲಿ ಚೊಚ್ಚಲಾದದ್ದೆಲ್ಲಾ ಹೊಡೆದ
೩೦ ನು. ಆಗ ಫರೋನನೂ, ಅವನ ಎಲ್ಲಾ ಸೇವಕರೂ, ಎಲ್ಲಾ ಐ
ಗುಪ್ತ್ಯರೂ ರಾತ್ರಿಯಲ್ಲಿ ಎದ್ದರು; ಸತ್ತ ಹೆಣವಿಲ್ಲದ ಮನೆ ಒಂ
ದೂ ಇರದ ಕಾರಣ, ಐಗುಪ್ತದಲ್ಲಿ ದೊಡ್ಡ ಕೂಗು ಆಯಿತು.
೩೧ ಅವನು ರಾತ್ರಿಯಲ್ಲಿ ಮೋಶೆಯನ್ನೂ ಆರೋನನನ್ನೂ ಕರಿಸಿ,
ನೀವು ಎದ್ದು, ನನ್ನ ಜನರನ್ನು ಬಿಟ್ಟು ಹೋಗಿರಿ; ನೀವು ಹೇಳಿ
ದ ಹಾಗೆ, ನೀವೂ ಇಸ್ರಯೇಲ್ ಮಕ್ಕಳೂ ಕರ್ತನನ್ನು ಆರಾ
೩೨ ಧಿಸ ಹೋಗಿರಿ. ನೀವು ಹೇಳಿದ ಹಾಗೆ, ನಿಮ್ಮ ಕುರಿಗಳನ್ನೂ
ದನಗಳನ್ನೂ ತಕ್ಕೊಂಡು ಹೋಗಿರಿ; ನನಗೂ ಆಶೀರ್ವಾದ
ಕೊಡಿರಿ, ಅಂದನು.

33 ಇದಲ್ಲದೆ ಐಗುಪ್ತ್ಯರು, ನಾವೆಲ್ಲರು ಸಾಯುತ್ತೇವೆಂದು ಹೇ
ಳಿ, ಅವರನ್ನು ತ್ವರೆಯಾಗಿ ದೇಶದೊಳಗಿಂದ ಕಳುಹಿಸುವ
೩೪ ಹಾಗೆ, ಜನರನ್ನು ಬಲಾತ್ಕಾರ ಮಾಡಿದರು. ಆಗ ಜನರು ಹಿ
ಟ್ಟನ್ನು, ಹುಳಿ ಹಾಕುವದಕ್ಕಿಂತ ಮುಂಚೆ, ಅಡಿಗೆ ಮಾಡುವ

ಚಾತ್ರೆಗಳ ಸಂಗಡ ಇಟ್ಟಿಗಳಲ್ಲಿ ಕಟ್ಟಿ, ಹಗಲಿನ ಮೇಲೆ ಹೊತ್ತು
೩೫ ಕೊಂಡು ಹೋದರು. ಮತ್ತು ಇಸ್ರಯೇಲ್ ಮಕ್ಕಳು ಮೋಶೆ
ಹೇಳಿದ ಹಾಗೆ ಮಾತಿ, ಬೆಳ್ಳಿ ಭಂಗಾರದ ಸಾಮಾನುಗಳನ್ನೂ
೩೬ ವಸ್ತ್ರಗಳನ್ನೂ ಐಗುಪ್ತ್ಯರಿಂದ ಕೇಳಿ ಕೊಂಡರು. ಮತ್ತು ಕ
ರ್ತನು ಐಗುಪ್ತ್ಯರ ಸನ್ನಿಧಿಯಲ್ಲಿ ಜನರಿಗೆ ಕೃಪೆ ಕೊಟ್ಟದರಿಂ
ದ, ಅವರು ಕೇಳಿದ್ದನ್ನು ಕೊಟ್ಟರು. ಹಾಗೆ ಅವರು ಐಗುಪ್ತ್ಯ
ರನ್ನು ಸುಲು ಕೊಂಡರು.

೩೭ ಆಗ ಇಸ್ರಯೇಲ್ ಮಕ್ಕಳು ಚಿಕ್ಕವರಲ್ಲದೆ, ಗಂಡಸರು ಮಾ
ತ್ರ ಅರು ಲಕ್ಷ ಕಾಲು ಬಲವಾಗಿ ರಾಮಸೆಸನ್ನು ಬಿಟ್ಟು ಸುಕ್ಕೋ
೩೮ ತಿಗೆ ಹೊರಟರು. ಪರದೇಶಿಗಳು ಸಹ ಬಹು ಸಮೂಹವೂ, ಕುರಿ
೩೯ ದನಗಳ ಬಹು ದೊಡ್ಡ ಹಿಂಡೂ ಅವರ ಸಂಗಡ ಬಂದವು. ಆಗ
ಅವರು ಐಗುಪ್ತದಿಂದ ಹೊರಡಿಸಲ್ಪಟ್ಟು, ತಡ ಮಾಡಲಾರದೆ, ಆ
ಹಾರವನ್ನು ತಮಗೆ ಮಾತಿ ಕೊಳ್ಳದ ಕಾರಣ, ಐಗುಪ್ತದಿಂದ
ತಂದ ಹಿಟ್ಟಿನ್ನು, ಅದು ಹುಳಿ ಇಲ್ಲದ್ದಾಗಿರುವದರಿಂದ, ಹುಳಿ ಇ
ಲ್ಲದ ಕೊಟ್ಟಿಗಳಾಗುವ ಹಾಗೆ, ಸುಟ್ಟರು.

೪೦ ಇದಲ್ಲದೆ ಇಸ್ರಯೇಲ್ ಮಕ್ಕಳು ಐಗುಪ್ತದಲ್ಲಿ ವಾಸವಾಗಿದ್ದ
೪೧ ನಿವಾಸದ ಕಾಲವು ನಾನೂರ ಮೂವತ್ತು ವರುಷವಾಗಿತ್ತು. ನಾ
ನೂರ ಮೂವತ್ತು ವರುಷ ತೀರಿದ ಮೇಲೆ, ಅದೇ ದಿವಸದಲ್ಲಿ
ವಿಸಾಯಿತಂದರೆ, ಕರ್ತನ ಸೈನ್ಯಗಳೆಲ್ಲಾ ಐಗುಪ್ತ ದೇಶವನ್ನು
ಬಿಟ್ಟು ಹೋದವು.

೪೨ ಅದೇ ಕರ್ತನಿಗೆ, ಅವನು ಅವರನ್ನು ಐಗುಪ್ತ ದೇಶದೊಳ್ಳ
ಗಿಂದ ಹೊರಗೆ ತಂದ ಕಾರಣ, ಕೈಕೊಳ್ಳ ತಕ್ಕ ರಾತ್ರೆಯಾ
ಗಿದೆ. ಇಸ್ರಯೇಲ್ ಮಕ್ಕಳೆಲ್ಲರು ಅವರ ತಲಾಂತರಗಳಲ್ಲಿ ಕ
ರ್ತನಿಗೆ ಕೈಕೊಳ್ಳ ತಕ್ಕ ರಾತ್ರಿ ಅದೇ.

೪೩ ಮತ್ತು ಕರ್ತನು ಮೋಶೆಗೂ ಆರೋನನಿಗೂ ಹೇಳ್ದಿದ್ದೇ
ನಂದರೆ, ಪಸ್ಕದ ನೇಮ ಇದೇ—ಪರರ ಮಕ್ಕಳಲ್ಲಿ ಯಾವನಾದ
೪೪ ರೂ ಅದನ್ನು ಉಣ್ಣ ಬಾರದು. ಆದರೆ ಹಣಕ್ಕೆ ತಕ್ಕೊಂಡ
ದಾಸಕಲ್ಲಾ, ಅವರನ್ನು ಪರಿಛೇದಿಸಿದ ಮೇಲೆ, ಅದನ್ನು ಉಣ್ಣ
೪೫ ಬಹುದು. ಪರವಾಸಿಯೂ ಕೂಲಿಯವನೂ ಅದನ್ನು ಉಣ್ಣ
೪೬ ಬಾರದು. ಒಂದೇ ಮನೆಯಲ್ಲಿ ಅದನ್ನು ಉಣ್ಣ ಬೇಕು; ಆ
ಮಾಂಸದಲ್ಲಿ ಸ್ವಲ್ಪವಾದರೂ ಮನೆಯ ಹೊರಗೆ ತಕ್ಕೊಂಡು
ಹೋಗ ಬಾರದು; ಅದರಲ್ಲಿ ಎಲುವನ್ನು ಮುರಿಯ ಬಾರದು.
೪೭ ಇಸ್ರಯೇಲಿನ ಕೂಟವೆಲ್ಲಾ ಅದನ್ನು ನಡಿಸ ಬೇಕು. ಪರನು ನಿ
೪೮ ನ್ನ ಬಳಿಯಲ್ಲಿ ಪರವಾಸ ಮಾತಿ, ಕರ್ತನಿಗೆ ಪಸ್ಕವನ್ನು ಆಚರಿ
ಸ ಬೇಕೆಂದಿದ್ದರೆ, ಅವನ ಬಳಿಯ ಗಂಡಸಕಲ್ಲಾ ಪರಿಛೇದಿಸಲ್ಪ
ಡಲಿ; ಆ ಮೇಲೆ ಅವನು ಅದನ್ನು ಆಚರಿಸುವದಕ್ಕೆ ಸಮೀಪ ಬ
ರಲಿ. ಆಗ ದೇಶಸ್ಥನ ಹಾಗೆ ಇರುವನು. ಆದರೆ ಪರಿಛೇದನೆ
೪೯ ಇಲ್ಲದವರಲ್ಲಿ ಒಬ್ಬನೂ ಅದನ್ನು ಉಣ್ಣ ಬಾರದು. ದೇಶಸ್ಥನಿ
ಗೂ ನಿನ್ನ ಮಧ್ಯದಲ್ಲಿ ಪರವಾಸವಾಗಿರುವ ಪರನಿಗೂ ಒಂದೇ
ನ್ಯಾಯಪ್ರಮಾಣವಿರಲಿ.

೫೦ ಇಸ್ರಯೇಲ್ ಮಕ್ಕಳೆಲ್ಲಾ ಕರ್ತನು ಮೋಶೆಗೂ ಆರೋನ
ನಿಗೂ ಆಜ್ಞಾಪಿಸಿದಂತೆ ಮಾತಿ, ಹಾಗೆಯೇ ಮಾತಿದರು.

೫೧ ಅದೇ ದಿವಸದಲ್ಲಿ ಕರ್ತನು ಇಸ್ರಯೇಲ್ ಮಕ್ಕಳನ್ನು ಆ
ವರ ಸೈನ್ಯಗಳ ಪ್ರಕಾರ ಐಗುಪ್ತ ದೇಶದೊಳ್ಳಗಿಂದ ಹೊರಗೆ
ಬರ ಮಾತಿದನು.

## ೧೩. ಸಂಧಿ.

೧, ೨ ಆಗ ಕರ್ತನು ಮೋಶಾತಿ ಮೋಶೆಗೆ ಹೇಳ್ದಿದ್ದೇನಂದರೆ—ಇ
ಸ್ರಯೇಲ್ ಮಕ್ಕಳಲ್ಲಿ, ಮನುಷ್ಯರಲ್ಲಿಯೂ ಪಶುಗಳಲ್ಲಿಯೂ,
ಗರ್ಭ ತೆಗೆಯುವ ಚೊಚ್ಚಲಾದದ್ದನ್ನೆಲ್ಲಾ ನನಗೆ ಪರಿಶುದ್ಧ
ಮಾತು; ಅದು ನನ್ನದೇ, ಅಂದನು.

೩ ಆಗ ಮೋಶೆ ಜನರಿಗೆ, ನೀವು ಐಗುಪ್ತದಿಂದ, ದಾಸತ್ವದ
ಮನೆಯಿಂದ, ಹೊರಟ ದಿವಸವನ್ನು ಜ್ಞಾಪಕ ಮಾತಿ ಕೊಳ್ಳಿರಿ
ಯಾಕಂದರೆ ಬಲವಾದ ಕೈಯಿಂದ ಕರ್ತನು ನಿಮ್ಮನ್ನು ಇಲ್ಲಿಂ
ದ ಹೊರಗೆ ಬರ ಮಾತಿದ್ದಾನೆ. ಹೀಗಿರುವದರಿಂದ ಹುಳಿ ಕೊ
೪ ಟ್ಟಿ ತಿನ್ನ ಬಾರದು. ಈ ಹೊತ್ತು ಅಬಿಬ್ ತಿಂಗಳಲ್ಲಿ ನೀವು
ಹೊರಗೆ ಬರುತ್ತೀರಲ್ಲ! ಹಾಗಾದರೆ ಕರ್ತನು ನಿನಗೆ ಕೊಡು
೫ ತ್ತೇನೆಂದು, ನಿನ್ನ ಪಿತೃಗಳಿಗೆ ಪ್ರಮಾಣ ಮಾತಿದ ದೇಶಕ್ಕೆ ಕ
ನಾನ್ಯರ, ಹಿತ್ತಿಯರ, ಅಮೋರ್ಯರ, ಹಿವ್ವಿಯರ, ಯೆಬೂಸ್ಯ
ರ ದೇಶಕ್ಕೆ, ಹಾಲೂ ಜೇನೂ ತುಂಬಿರುವ ದೇಶಕ್ಕೆ ನಿನ್ನನ್ನು
ತಕ್ಕೊಂಡು ಬಂದಾಗ, ಈ ಆಚರಣೆಯನ್ನು ಈ ತಿಂಗಳಲ್ಲಿ ಆ
೬ ಚರಿಸ ಬೇಕು. ಏಳು ದಿವಸ ಹುಳಿ ಇಲ್ಲದ ಕೊಟ್ಟಿಯನ್ನು ತಿ
ನ್ನ ಬೇಕು; ಮತ್ತು ಏಳನೇ ದಿವಸದಲ್ಲಿ ಕರ್ತನಿಗೆ ಹಬ್ಬ.
೭ ಆ ಏಳು ದಿವಸ ಹುಳಿ ಇಲ್ಲದ ಕೊಟ್ಟಿ ತಿನ್ನ ಬೇಕು; ನಿನ್ನ ಬ
ಳಿಯಲ್ಲಿ ಹುಳಿಯಾದದ್ದು ಕಾಣಿಸ ಬಾರದು; ಹುಳಿ ಹಿಟ್ಟು ನಿ
೮ ನ್ನ ಎಲ್ಲಾ ಮೇರೆಗಳಲ್ಲಿ ಕಾಣಿಸ ಬಾರದು. ಮತ್ತು ಆ ದಿವಸ
ದಲ್ಲಿ ನಿನ್ನ ಮಗನಿಗೆ ಹೀಳಿಸಿ ಹೇಳ ಬೇಕಾದದ್ದೇನಂದರೆ, ಕರ್ತ
ನು ನಾನು ಐಗುಪ್ತದಿಂದ ಹೊರಗೆ ಬಂದಾಗ, ನನಗೆ ಮಾತಿದ್ದ
೯ ಕ್ಕೋಸ್ಕರ ಇದು ಆಗುತ್ತದೆ. ಕರ್ತನ ನ್ಯಾಯಪ್ರಮಾಣ
ವು ನಿನ್ನ ಬಾಯಿಯಲ್ಲಿರುವ ಹಾಗೆ, ಅದು ನಿನಗೆ ನಿನ್ನ ಕೈಯ
ಮೇಲೆ ಗುರುತಾಗಿಯೂ ನಿನ್ನ ಕಣ್ಣುಗಳ ನಡುವೆ ಜ್ಞಾಪಕವಾಗಿ
೧೦ ಯೂ ಇರ ಬೇಕು. ಯಾಕಂದರೆ ಬಲವಾದ ಕೈಯಿಂದ ಕರ್ತ
ನು ನಿನ್ನನ್ನು ಐಗುಪ್ತದೊಳ್ಳಗಿಂದ ಹೊರಗೆ ಬರ ಮಾತಿದ್ದಾನೆ.
ಹೀಗಿರುವದರಿಂದ ಈ ನೇಮವನ್ನು ಅದರದರ ಕಾಲದಲ್ಲಿ ವರು
ಷ ವರುಷಕ್ಕೆ ಆಚರಿಸ ಬೇಕು.

೧೧ ಮತ್ತು ಕರ್ತನು ನಿನ್ನೂ ನಿನ್ನ ಪಿತೃಗಳಿಗೂ ಪ್ರಮಾಣ
ಮಾತಿದ ಹಾಗೆ, ನಿನ್ನನ್ನು ಕನಾನ್ಯರ ದೇಶದಲ್ಲಿ ಬರ ಮಾತಿ,
೧೨ ಅದನ್ನು ನಿನಗೆ ಕೊಟ್ಟಾಗ, ಗರ್ಭ ತೆಗೆಯುವಂಥಾದನ್ನೆಲ್ಲಾ,
ಮತ್ತು ನಿನಗಿದ್ದ ಪಶುಗಳಲ್ಲಿ ಮೊದಲು ಹುಟ್ಟಿದ್ದನ್ನೆಲ್ಲಾ ಪ್ರತ್ಯೇ
೧೩ ಕಿಸ ಬೇಕು; ಗಂಡುಗಳು ಕರ್ತನವುಗಳೇ. ಆದರೆ ಮೊದಲು ಹು
ಟ್ಟಿದ ಕತ್ತೆಗಳೆಲ್ಲಾ ಕುರಿಯಿಂದ ವಿಮೋಚನೆ ಮಾತ ಬೇಕು; ವಿ
ಮೋಚನೆ ಮಾತದೆ ಹೋದರೆ, ಅದರ ಕುತ್ತಿಗೆ ಮುರಿಯ ಬೇ
ಕು. ಆದರೆ ನಿನ್ನ ಮಕ್ಕಳಾದ ಮನುಷ್ಯ ಜಾತಿಯಲ್ಲಿ ಚೊ
ಚ್ಚಲಾದದ್ದನ್ನೆಲ್ಲಾ ವಿಮೋಚನೆ ಮಾತ ಬೇಕು.

೧೪ ಇದಲ್ಲದೆ ನಿನ್ನ ಮಗನು ಇನ್ನು ಮೇಲೆ ನಿನಗೆ, ಇದೇನು!
ಎಂದು ಕೇಳ್ದರೆ, ನೀನು ಅವನಿಗೆ ಹೇಳ್ದ ಬೇಕಾದದ್ದೇನಂದರೆ—
ಬಲವಾದ ಕೈಯಿಂದ ಕರ್ತನು ನಮ್ಮನ್ನು ಐಗುಪ್ತದೊಳ್ಳಗಿಂದ
೧೫ ದಾಸತ್ವದ ಮನೆಯಿಂದ ಹೊರಗೆ ಬರ ಮಾತಿದನು. ಆದರೆ
ಫರೋನನು ನಮ್ಮನ್ನು ಕಳುಹಿಸದೆ, ಕಠಿಣವಾಗಿದ್ದರಿಂದ, ಕ
ರ್ತನು ಐಗುಪ್ತ ದೇಶದಲ್ಲಿ ಚೊಚ್ಚಲಾದದ್ದನ್ನೆಲ್ಲಾ, ಮನುಷ್ಯ





ರ ಚೊಚ್ಚಲಾದದ್ದು ಮೊದಲೊಂಡು ಪಶುಗಳ ಚೊಚ್ಚಲಾದದ
ರ ಪರ್ಯಂತರ, ಕೊಂದು ಹಾಕಿದನು. ಆದದರಿಂದ ನಾನು
ಗರ್ಭ ತೆಗೆಯುವ ಗಂಡಾದವುಗಳನ್ನೆಲ್ಲಾ ಕರ್ತನಿಗೆ ಅರ್ಪ
ಸುತ್ತೇನೆ. ಮತ್ತು ನನ್ನ ಮಕ್ಕಳಲ್ಲಿ ಚೊಚ್ಚಲಾದವರೆಲ್ಲರನ್ನು
೧೬ ವಿಮೋಚನೆ ಮಾಡುತ್ತೇನೆ. ಇದು ನಿನ್ನ ಕೈ ಮೇಲೆ ಗುರುತಾ
ಗಿಯೂ, ನಿನ್ನ ಕಣ್ಣುಗಳ ನಡುವೆ ಹಣೆಕಟ್ಟಾಗಿಯೂ ಇರಲಿ;
ಯಾಕಂದರೆ ಬಲವಾದ ಕೈಯಿಂದ ಕರ್ತನು ನಮ್ಮನ್ನು ಐಗು
ಪ್ತದೊಳ್ಳಗಿಂದ ಹೊರಗೆ ಬರ ಮಾತಿದ್ದಾನೆ.

೧೭ ಫರೋನನು ಜನರನ್ನು ಕಳುಹಿಸಿ ಬಿಟ್ಟಾಗ, ದೇವನು ಅವರ
ನ್ನು ಫಿಲಿಷ್ಟ್ಯ ದೇಶದ ದಾರಿಯಲ್ಲಿ, ಅದು ಸಮೀಪವಾಗಿದ್ದಾ
ಗ್ಯೂ, ನಡಿಸಲಿಲ್ಲ; ಯಾಕಂದರೆ ಜನರು ಯುದ್ಧವನ್ನು ನೋ
ಡಿದರೆ, ಮನಸ್ಸು ಬೇಕೆ ಮಾತಿ ಕೊಂಡು, ಐಗುಪ್ತಕ್ಕೆ ತಿರುಗಿ
೧೮ ಕೊಂಡಾರೆಂದು, ದೇವರು ಹೇಳ್ದಿದನು. ಹೀಗಿರುವದರಿಂದ ಕರ್ತ
ನು ಜನರನ್ನು ಕೆಂಪು ಸಮುದ್ರದ ಅರಣ್ಯ ಮಾರ್ಗದಲ್ಲಿ
ಸುತ್ತಿ ಕೊಂಡು ಹೋಗ ಮಾತಿದನು. ಆದಾಗ್ಯೂ ಇಸ್ರಯೇ
ಲ್ ಮಕ್ಕಳು ಯುದ್ಧಕ್ಕೆ ಸಿದ್ಧರಾಗಿ ಐಗುಪ್ತ ದೇಶದೊಳ್ಳಗಿಂದ
೧೯ ಏರಿ ಹೋದರು. ಮತ್ತು ಮೋಶೆ ಯೋಸೆಫನ ಎಲುವುಗಳ
ನ್ನು ತಕ್ಕೊಂಡು ಹೋದನು; ಯಾಕಂದರೆ ಅವನು ಇಸ್ರಯೇ
ಲ್ ಮಕ್ಕಳಿಗೆ, ದೇವರು ನಿಶ್ಚಯವಾಗಿ ನಿಮ್ಮನ್ನು ದರ್ಶಿಸುವನು,
ಆಗ ನನ್ನ ಎಲುವುಗಳನ್ನು ಇಲ್ಲಿಂದ ತಕ್ಕೊಂಡು ಹೋಗ ಬೇ
ಕೆಂದು, ಖಂಡಿತವಾಗಿ ಪ್ರಮಾಣ ಮಾತಿಸಿ ಇದ್ದನು.

೨೦ ಈ ಮೇರೆಗೆ ಅವರು ಸುಕ್ಕೋತನ್ನು ಬಿಟ್ಟು, ಏಥಾಮಿನಲ್ಲಿ
೨೧ ಅರಣ್ಯದ ಅಂಚಿನಲ್ಲಿ ಇಳು ಕೊಂಡರು. ಇದಲ್ಲದೆ ಅವರು ಹ
ಗಲು ರಾತ್ರಿ ಹೋಗುವ ಹಾಗೆ, ಕರ್ತನು ಹಗಲಿನಲ್ಲಿ ಅವರಿಗೆ
ದಾರಿ ತೋರಿಸುವದಕ್ಕೆ ಮೇಘದ ಸ್ತಂಭದಲ್ಲಿಯೂ, ರಾತ್ರಿಯ
ಲ್ಲಿ ಅವರಿಗೆ ಬೆಳಕು ಕೊಡುವದಕ್ಕೆ ಬೆಂಕಿಯ ಸ್ತಂಭದಲ್ಲಿಯೂ
೨೨ ಅವರ ಮುಂದೆ ಹೋದನು. ಅವನು ಹಗಲಲ್ಲಿ ಮೇಘ ಸ್ತಂಭವ
ನೂ, ರಾತ್ರಿಯಲ್ಲಿ ಬೆಂಕಿಯ ಸ್ತಂಭವನೂ ಜನರ ಸಮುಖದಿಂ
ದ ತೆಗೆದು ಬಿಡಲಿಲ್ಲ.

## ೧೪. ಸಂಧಿ.

೧ ಆಗ ಕರ್ತನು ಮೋಶಾತಿ ಮೋಶೆಗೆ ಹೇಳ್ದಿದ್ದೇನಂದರೆ—
೨ ಇಸ್ರಯೇಲ್ ಮಕ್ಕಳ ಸಂಗಡ, ಅವರು ತಿರುಗಿ ಕೊಂಡು, ಪಿಹ
ಹಿರೋಥಿಗೆ ಎದುರಾಗಿ ಮಿಗ್ದೋಲಿಗೂ ಸಮುದ್ರಕ್ಕೂ ಮಧ್ಯದ
ಲ್ಲಿ ಬಳ್ಳೆಪೋನಿಗೆ ಎದುರಾಗಿ ಇಳು ಕೊಳ್ಳುವ ಹಾಗೆ ಮಾತಾನು.
ಅದಕ್ಕೆ ಎದುರಾಗಿ ನೀವು ಸಮುದ್ರ ತೀರದಲ್ಲಿ ಇಳು ಕೊಳ್ಳ ಬೇ
೩ ಕು. ಆಗ ಫರೋನನು ಇಸ್ರಯೇಲ್ ಮಕ್ಕಳ ವಿಷಯವಾಗಿ, ಅ
ವರು ದೇಶದಲ್ಲಿ ಕಿಕ್ಕಿ ಕೊಂಡರು; ಅರಣ್ಯವು ಅವರನ್ನು ಮು
೪ ಚ್ಚಿ ಬಿಟ್ಟಿತು, ಎಂದು ಹೇಳುವನು. ಮತ್ತು ನಾನು ಫರೋನನ
ಹೃದಯವನ್ನು, ಅವನು ಅವರನ್ನು ಹಿಂದಟ್ಟುವ ಹಾಗೆ, ಕಠಿ
ಣ ಮಾಡುವೆನು; ಮತ್ತು ಫರೋನನಲ್ಲಿಯೂ, ಅವನ ಎಲ್ಲಾ ಸೈ
ನ್ಯದಲ್ಲಿಯೂ ನನ್ನನ್ನು ಘನ ಪಡಿಸಿ ಕೊಳ್ಳುವೆನು; ಆಗ ಐ
ಗುಪ್ತ್ಯರು ನಾನೇ ಕರ್ತನೆಂದು ತಿಳಿಯುವರು.

೫ ಜನರು ಓಡಿ ಹೋದರೆಂದು, ಐಗುಪ್ತದ ಅರಸನಿಗೆ ತಿಳಿಯ
ಲ್ಪಟ್ಟಾಗ, ಫರೋನನ, ಅವನ ಸೇವಕರ ಮನಸ್ಸು ಜನರ ವಿಷ
ಯದಲ್ಲಿ ಬೇರೆ ಆಯಿತು. ನಾವು ಇಸ್ರಯೇಲನ್ನು, ನಮಗೆ ಸೇ
ವೆ ಮಾತದ ಹಾಗೆ, ಕಳುಹಿಸಿ ಬಿಟ್ಟು, ಏನು ಮಾತಿದೆವು? ಎಂದಂ
೬ ದು ಕೊಂಡರು. ಆಗಲವನು ತನ್ನ ರಥವನ್ನು ಕಟ್ಟಿಸಿ, ತನ್ನ ಜ
೭ ನರನ್ನು ತಕ್ಕೊಂಡು, ಶ್ರೇಷ್ಠವಾದ ಆರು ನೂರು ರಥಗಳನ್ನೂ,
ಐಗುಪ್ತದ ಎಲ್ಲಾ ರಥಗಳನ್ನೂ, ಎಲ್ಲವುಗಳ ಮೇಲೆ ಯುದ್ಧಸ
೮ ರನ್ನೂ ತಕ್ಕೊಂಡನು. ಕರ್ತನು ಐಗುಪ್ತದ ಅರಸನಾದ ಫ
ರೋನನ ಹೃದಯವನ್ನು ಕಠಿಣ ಮಾತಿದ್ದರಿಂದ, ಅವನು ಇ
ಸ್ರಯೇಲ್ ಮಕ್ಕಳನ್ನು ಹಿಂದಟ್ಟಿದನು; ಆದರೆ ಇಸ್ರಯೇಲ್
ಮಕ್ಕಳು ಉನ್ನತವಾದ ಕೈಯಿಂದ ಹೊರಕುವವರಾಗಿದ್ದರು.
೯ ಹೀಗೆ ಐಗುಪ್ತ್ಯರು ಅವರನ್ನು ಹಿಂದಟ್ಟಿದರು; ಅವರು ಸಮುದ್ರ
ತೀರದಲ್ಲಿ ಇಳುಕೊಂಡಿರುವಾಗ, ಫರೋನನ ಎಲ್ಲಾ ಕುದುರೆ
ರಥಗಳೂ, ಅವನ ರಥಿಕರೂ, ಅವನ ಸೈನ್ಯವೂ ಪಿಹಹಿರೋ
ಥಿನ ಸಮೀಪದಲ್ಲಿ ಬಳ್ಳೆಪೋನಿಗೆ ಎದುರಾಗಿ ಅವರನ್ನು ಕಲ
ತರು.

೧೦ ಫರೋನನು ಸಮೀಪ ಬಂದಾಗ, ಇಸ್ರಯೇಲ್ ಮಕ್ಕಳು ಕ
ಣ್ಣುಗಳನ್ನೆತ್ತಿದರು; ಅಗೋ, ಐಗುಪ್ತ್ಯರು ಅವರ ಹಿಂದೆ ಬರು
ತ್ತಿದ್ದರು; ಆಗ ಇಸ್ರಯೇಲ್ ಮಕ್ಕಳು ಬಹಳ ಭಯ ಪಟ್ಟು, ಕ
ರ್ತನಿಗೆ ಕೂಗಿ, ಮೋಶೆಗೆ, ಐಗುಪ್ತ್ಯದಲ್ಲಿ ಸಮಾಧಿಗಳಿಲ್ಲದ ಕಾ
ರಣ, ನಮ್ಮನ್ನು ಅರಣ್ಯದಲ್ಲಿ ಸಾಯುವ ಹಾಗೆ ಕರಕೊಂಡು
ಬಂದಿಯೋ! ಯಾಕೆ ನಮಗೆ ಈ ಪ್ರಕಾರ ಮಾತಿ, ನಮ್ಮನ್ನು ಐ
೧೨ ಗುಪ್ತ್ಯದಿಂದ ಹೊರಡಿಸಿದಿ? ನಮ್ಮನ್ನು ಬಿಡು; ನಾವು ಐಗುಪ್ತ್ಯ
ರಿಗೆ ಸೇವೆ ಮಾಡೋಣ; ಯಾಕಂದರೆ ಅರಣ್ಯದಲ್ಲಿ ಸಾಯು
ವದಕ್ಕಿಂತ, ನಾವು ಐಗುಪ್ತ್ಯರಿಗೆ ಸೇವೆ ಮಾಡುವದು ನಮಗೆ ಬ
ಳ್ಳೇದು ಎಂಬವಾಗಿ, ನಾವು ನಿನಗೆ ಐಗುಪ್ತ್ಯದಲ್ಲಿ ಹೇಳ್ದಿದ ಮಾ
ತು ಇದೇ ಅಲ್ಲವೋ!

೧೩ ಆಗ ಮೋಶೆ ಜನರಿಗೆ, ನೀವು ಭಯ ಪಡ ಬೇಡಿರಿ; ಕರ್ತನು
ನಿಮಗೆ ಈ ಹೊತ್ತು ಮಾಡುವ ರಕ್ಷಣೆಯನ್ನು ನಿಂತು ಕೊಂಡು
ನೋಡಿರಿ. ಯಾಕಂದರೆ ನೀವು ಈ ಹೊತ್ತು ನೋಡುವ ಐಗು
೧೪ ಪ್ತ್ಯರನ್ನು ಇನ್ನೆಂದಿಗೂ ನೋಡುವದಿಲ್ಲ. ಕರ್ತನು ನಿಮಗೋ
ಸ್ಕರ ಯುದ್ಧ ಮಾಡುವನು; ಆದರೆ ನೀವು ಸುಮ್ಮನಿರುವಿರಿ, ಅಂ
ದನು.

೧೫ ಆಗ ಕರ್ತನು ಮೋಶೆಗೆ ಹೇಳ್ದಿದ್ದೇನಂದರೆ, ನೀನು ಯಾಕೆ
ನನಗೆ ಕೂಗುತೀ! ಇಸ್ರಯೇಲ್ ಮಕ್ಕಳಿಗೆ, ಅವರು ಹೊರಡ
೧೬ ಬೇಕೆಂದು, ಹೇಳು. ಮತ್ತು ನೀನು ನಿನ್ನ ಕೋಲನ್ನು ಎತ್ತಿ, ನಿ
ನ್ನ ಕೈಯನ್ನು ಸಮುದ್ರದ ಮೇಲೆ ಚಾಚಿ, ಅದನ್ನು ವಿಭಾಗಿ
ಸು; ಆಗ ಇಸ್ರಯೇಲ್ ಮಕ್ಕಳು ಸಮುದ್ರದ ಮಧ್ಯದಲ್ಲಿ ಒ
೧೭ ಣಗಿದ ನೆಲದ ಮೇಲೆ ಬರುವರು. ಇದಲ್ಲದೆ ನಾನು, ಇಗೋ,
ನಾನು ಐಗುಪ್ತ್ಯರ ಹೃದಯವನ್ನು ಕಠಿಣ ಮಾತುತ್ತೇನೆ; ಅವ
ರು ಅವರನ್ನು ಹಿಂದಟ್ಟುವರು; ಮತ್ತು ಫರೋನನ ಮೇಲೆಯೂ,
ಅವನ ಎಲ್ಲಾ ಸೈನ್ಯದ ಮೇಲೆಯೂ, ಅವನ ರಥಗಳ ಮೇಲೆ
ಯೂ, ರಥಿಕರ ಮೇಲೆಯೂ ನನ್ನನ್ನು ಘನ ಪಡಿಸಿ ಕೊಳ್ಳು
೧೮ ವೆನು. ನಾನು ಫರೋನನ ಮೇಲೆಯೂ, ಅವನ ರಥಗಳ ಮೇ
ಲೆಯೂ, ರಥಿಕರ ಮೇಲೆಯೂ ನನ್ನನ್ನು ಘನ ಪಡಿಸಿ ಕೊ
ಳ್ಳುವಲ್ಲಿ, ನಾನೇ ಕರ್ತನೆಂದು ಐಗುಪ್ತ್ಯರು ತಿಳಿಯುವರು.

೧೯ ಆಗ ಇಸ್ರಯೇಲಿನ ದಂಡಿನ ಮುಂದೆ ನಡೆಯುವ ದೇವ ದೂ
ತನು ಹೊರಟು, ಅವರ ಹಿಂದಕ್ಕೆ ಹೋದನು; ಮೇಘ ಸ್ತಂಭ
ವು ಅವರ ಮುಂದಿನಿಂದ ಹೊರಟು, ಅವರ ಹಿಂಭಾಗದಲ್ಲಿ ನಿಂತು
೨೦ ಕೊಂಡಿತು. ಅದು ಐಗುಪ್ತ್ಯರ ದಂಡಿಗೂ ಇಸ್ರಯೇಲಿನ ದಂಡಿ
ಗೂ ನಡುವೆ ಬಂತು; ಅದು ಅವರಿಗೆ ಮೇಘವೂ ಕತ್ತಲೂ; ಇವ
ರಿಗೆ ರಾತ್ರಿಯಲ್ಲಿ ಬೆಳಕು ಕೊಡುವಂಥಾದ್ದೂ ಆಗಿದ್ದದರಿಂದ, ಸ
ಮಸ್ತ ರಾತ್ರಿಯಲ್ಲಿ ಅವರು ಇವರಿಗೆ ಸಮೀಪವಾಗಲಿಲ್ಲ.
೨೧ ಆಗ ಮೋಶೆ ಸಮುದ್ರದ ಮೇಲೆ ಕೈ ಚಾಚಲಾಗಿ, ಕರ್ತ
ನು ರಾತ್ರಿಯಲ್ಲೆಲ್ಲಾ ಬಲವಾದ ಮೂರ್ಣ ಘಾಳಿಯಿಂದ ಸಮು
ದ್ರವನ್ನು ತೊಲಗುವ ಹಾಗೆ ಮಾಡಿ, ಸಮುದ್ರವನ್ನು ಜಣಗಿದ
೨೨ ನೆಲ ಮಾಡಿದನು; ನೀರುಗಳು ಭೇದವಾದವು. ಹೀಗೆ ಇಸ್ರಯೇಲ್
ಮಕ್ಕಳು ಸಮುದ್ರದ ಮಧ್ಯದಲ್ಲಿ ಜಣಗಿದ ನೆಲದ ಮೇಲೆ ಬಂ
ದು ಬಿಟ್ಟರು; ನೀರು ಅವರಿಗೆ ಎಡ ಬಲದಲ್ಲಿ ಗೋಡೆಯಾಗಿತ್ತು.
೨೩ ಐಗುಪ್ತ್ಯರೂ, ಫರೋಹನ ಎಲ್ಲಾ ಕುದುರೆಗಳೂ, ಅವನ ರ
ಥಗಳೂ, ರಥಿಕರೂ ಅವರನ್ನು ಹಿಂದಟ್ಟಿ, ಅವರ ಹಿಂದೆ ಸಮು
೨೪ ದ್ರದ ಮಧ್ಯದಲ್ಲಿ ಹೋದರು. ಬೆಳಗಿನ ಝಾವದಲ್ಲಿ ಕರ್ತ
ನು ಅಗ್ನಿ ಮೇಘಗಳ ಸ್ತಂಭದೊಳಗಿಂದ ಐಗುಪ್ತ್ಯರ ದಂ
ಡಿನ ಮೇಲೆ ದೃಷ್ಟಿ ಇಟ್ಟು, ಐಗುಪ್ತ್ಯರ ದಂಡನ್ನು ತೊಂದರೆ
೨೫ ಪಡಿಸಿ, ಅವರ ರಥಗಳ ಗಾಲಿಗಳನ್ನು ಜಾರಿಸಿ, ಅವರನ್ನು ಕಷ್ಟ
ದಿಂದ ಹೋಗ ಮಾಡಿದನು. ಆಗ ಐಗುಪ್ತ್ಯರು, ಇಸ್ರಯೇಲಿನ
ಎದುರಿನಿಂದ ಪಿಡಿ ಹೋಗೋಣ; ಯಾಕಂದರೆ ಕರ್ತನು ಐಗು
ಪ್ತ್ಯರಿಗೆ ವಿರೋಧವಾಗಿ ಅವರೊಳಗೆ ಯುದ್ಧ ಮಾಡುತ್ತಾ
೨೬ ನೆಂದು, ಹೇಳಿ ಕೊಂಡರು. ಆಗ ಕರ್ತನು ಮೋಶೆಗೆ ಐಗುಪ್ತ್ಯ
ರ ಮೇಲೆಯೂ, ಅವರ ರಥಗಳ ಮೇಲೆಯೂ, ರಥಿಕರ ಮೇ
ಲೆಯೂ ನೀರು ತಿರುಗಿ ಬರುವ ಹಾಗೆ, ಸಮುದ್ರದ ಮೇಲೆ ಕೈ
೨೭ ಚಾಚು, ಅಂದನು. ಮೋಶೆ ಸಮುದ್ರದ ಮೇಲೆ ಕೈಚಾಚಲಾ
ಗಿ, ಸಮುದ್ರವು ಬೆಳಗಾಗುವಾಗಲೇ ಬಲವಾಗಿ ತಿರುಗಿ ಬಂತು,
ಐಗುಪ್ತ್ಯರು ಅದರ ಎದುರಿಗೆ ಓಡಿ ಹೋದರು; ಕರ್ತನು
ಐಗುಪ್ತ್ಯರನ್ನು ಸಮುದ್ರದ ಮಧ್ಯದಲ್ಲಿ ಹಾಕಿ ಬಿಟ್ಟನು. ನೀರು
೨೮ ತಿರುಗಿ ಬಂದು, ಫರೋಹನ ಸಮಸ್ತ ಸೈನ್ಯವಾಗಿರುವಂಥ,
ಅವರ ಹಿಂದೆ ಸಮುದ್ರದಲ್ಲಿ ಸೇರಿದಂಥ ರಥಗಳನ್ನೂ ರಥಿಕರ
ನ್ನೂ ಮುಚ್ಚಿದ್ದರಿಂದ, ಅವರಲ್ಲಿ ಒಬ್ಬನಾದರೂ ಉಳಿಯಲಿಲ್ಲ.
೨೯ ಆದರೆ ಇಸ್ರಯೇಲ್ ಮಕ್ಕಳು ಸಮುದ್ರದ ಮಧ್ಯದಲ್ಲಿ ಜಣ
ಗಿದ ನೆಲದ ಮೇಲೆ ನಡೆದು ಹೋದರು; ನೀರು ಅವರಿಗೆ ಎಡ
ಬಲದಲ್ಲಿ ಗೋಡೆಯಾಗಿತ್ತು.
೩೦ ಆ ದಿವಸದಲ್ಲಿ ಕರ್ತನು ಇಸ್ರಯೇಲನ್ನು ಐಗುಪ್ತ್ಯರ ಕೈಗೆ
ತಪ್ಪಿಸಿದನು; ಇಸ್ರಯೇಲ್ಯರು ಸಮುದ್ರ ತೀರದಲ್ಲಿ ಸತ್ತ ಐಗು
೩೧ ಪ್ತ್ಯರನ್ನು ನೋಡಿದರು. ಇಸ್ರಯೇಲರು ಕರ್ತನು ಐಗುಪ್ತ್ಯರ
ಲ್ಲಿ ಮಾಡಿದ ಆ ಮಹಾ ಕ್ರಿಯೆಯನ್ನು ನೋಡಿದಾಗ, ಜನರು ಕ
ರ್ತನಿಗೆ ಭಯ ಪಟ್ಟು, ಕರ್ತನಲ್ಲಿಯೂ ಅವನ ದಾಸನಾದ
ಮೋಶೆಯಲ್ಲಿಯೂ ವಿಶ್ವಾಸವಿಟ್ಟರು.

## ೧೫. ಸಂಧಿ.

೧ ಆಗ ಮೋಶೆಯೂ ಇಸ್ರಯೇಲ್ ಮಕ್ಕಳೂ ಈ ಹಾಡನ್ನು
ಕರ್ತನಿಗೆ ಹಾಡಿದರು; ಏನಂದರೆ,
ಕರ್ತನಿಗೆ ಹಾಡೋಣ; ಯಾಕಂದರೆ ಅವನು ಎತ್ತರವಾ
ದವನೇ—
ಕುದುರೆಯನ್ನೂ ಹತ್ತಿದವನನ್ನೂ ಸಮುದ್ರದಲ್ಲಿ ಕೊಬ್ಬಿ
ದ್ದಾನೆ.
೨ ನನ್ನ ಬಲವೂ ಕೀರ್ತನೆಯೂ ಕರ್ತನೇ;
ಅವನೇ ನನಗೆ ರಕ್ಷಣೆಯಾದವನು;
ಅವನೇ ನನ್ನ ದೇವರು; ಅವನನ್ನು ಕೊಂಡಾಡುವೆನು;
ನನ್ನ ತಂದೆಯ ದೇವರು; ಅವನನ್ನು ಉನ್ನತ ಮಾಡುವೆನು.
೩ ಕರ್ತನು ಯುದ್ಧಸ್ತನು; ಅವನ ಹೆಸರು ಯೆಹೋವನೇ.
೪ ಫರೋಹನ ರಥಗಳನ್ನೂ ಅವನ ಸೈನ್ಯವನ್ನೂ ಸಮುದ್ರ
ದಲ್ಲಿ ಕೊಬ್ಬಿದ್ದಾನೆ;
ಅವನ ಶ್ರೇಷ್ಠ ಯುದ್ಧಸ್ಥರು ಆಪಿನ ಸಮುದ್ರದಲ್ಲಿ ಮುಣಿಗಿ
ಹೋದರು.
೫ ಅಗಾಧಗಳು ಅವರನ್ನು ಮುಚ್ಚಿದವು;
೬ ಕಲ್ಲಿನಂತೆ ನೆಲೆಗೆ ಇಳಿದು ಹೋದರು.
ಕರ್ತನೇ, ನಿನ್ನ ಬಲಗೈ ಶಕ್ತಿಯಲ್ಲಿ ಘನವುಳ್ಳದ್ದು;
ಕರ್ತನೇ, ನಿನ್ನ ಬಲಗೈ ಶತ್ರುವನ್ನು ಹೊಡೆದು ಬಿಟ್ಟಿತು.
೭ ನಿನ್ನ ಘನತೆಯ ಬಾಹುಳ್ಯದಲ್ಲಿ ನಿನಗೆದುರು ನಿಲ್ಲುವವರನ್ನು
ನಿರ್ಮೂಲ ಮಾಡಿದಿ;
ನಿನ್ನ ಉಗ್ರವನ್ನು ಕಳುಹಿಸಲು, ಅದು ಕೂಳೆಯಂತೆ ಅವರನ್ನು
ತಿಂದು ಬಿಟ್ಟುತ್ತದೆ.
೮ ನಿನ್ನ ಮೂಗಿನ ಶ್ವಾಸದಿಂದ ನೀರುಗಳು ಕೂತಿ ಕೊಂಡವು;
ಜಲಗಳು ರಾಶಿಯಾಗಿ ನಿಂತವು;
೯ ಅಗಾಧಗಳು ಸಮುದ್ರದ ಮಧ್ಯದಲ್ಲಿ ಗಟ್ಟಿಯಾದವು.
ಶತ್ರುವು—ನಾನು ಹಿಂದಟ್ಟಿ, ಹಿಡಿದು,
ಕೊಳ್ಳೆಯನ್ನು ಪಾಲಿಡುವೆನು; ನನ್ನ ಪ್ರಾಣವು ಅವರಲ್ಲಿ ತೃ
ಪ್ತಿಯಾಗುವದು;
ನನ್ನ ಕತ್ತಿಯನ್ನು ಹಿರಿಯುವೆನು; ನನ್ನ ಕೈ ಅವರನ್ನು ಚದರ
ಬಡಿಯುವದೆಂದು ಹೇಳಿದನು.
೧೦ ನಿನ್ನ ಘಾಳಿಯಿಂದ ನೀನು ಊದಿದಾಗಲೇ, ಸಮುದ್ರವು ಅವರ
ನ್ನು ಮುಚ್ಚಿತು;
ಸೀಸದ ಹಾಗೆ ಮಹಾ ಜಲಗಳಲ್ಲಿ ಮುಣಿಗಿ ಹೋದರು.
೧೧ ಕರ್ತನೇ, ದೇವರುಗಳಲ್ಲಿ ನಿನ್ನ ಹಾಗೆ ಯಾರು!
ನಿನ್ನ ಹಾಗೆ ಪರಿಶುದ್ಧತ್ವದಲ್ಲಿ ಘನವುಳ್ಳವನೂ,
ಸ್ತೋತ್ರಗಳಲ್ಲಿ ಭಯಂಕರನೂ, ಅದ್ಭುತ ಮಾಡುವವನೂ
ಯಾರು!
೧೨ ನಿನ್ನ ಬಲಗೈ ಚಾಚಲು, ಭೂಮಿ ಅವರನ್ನು ನುಂಗಿತು.
೧೩ ನೀನು ವಿಮೋಚಿಸಿದ ಜನರನ್ನು ನಿನ್ನ ಕೃಪೆಯಿಂದ ನಡಿಸಿದಿ;
೧೪ ನಿನ್ನ ಬಲದಿಂದ ನಿನ್ನ ಪರಿಶುದ್ಧ ನಿವಾಸಕ್ಕೆ ಪೈದಿ.
ಜನಗಳು ಕೇಳಲು, ನಡುಗುವವು; ದಿಗುಲು ಫಿಲಿಷ್ಟ್ಯದ ನಿವಾಸಿಗ
ಳನ್ನು ಹಿಡಿಯುವದು.
೧೫ ಆಗ ಎದೋಮಿನ ಪ್ರಭುಗಳು ಹೆದರುವರು;
ಮೋವಾಬಿನ ಶ್ರೇಷ್ಠರನ್ನು ನಡುಗುವಿಕೆಯು ಹಿಡಿಯುವದು;
೧೬ ಕಾನಾನಿನ ನಿವಾಸಿಗಳೆಲ್ಲಾ ಕರಗಿ ಹೋಗುವರು.
ಅಂಜಿಕೆಯೂ ಭಯವೂ ಅವರ ಮೇಲೆ ಬೀಳುವವು;





ಕರ್ತನೇ, ನಿನ್ನ ಜನರು ಹಾದು ಹೋಗುವ ಪರ್ಯಂತರ,
ನೀನು ಕೊಂಡು ಕೊಂಡ ಜನರು ಹಾದು ಹೋಗುವ ಪರ್ಯಂ
ತರ,
ನಿನ್ನ ಕೈಯ ಮಹತ್ವದಿಂದ ಕಲ್ಲಿನಂತೆ ಸುಮ್ಮನೆ ಆಗುವರು.
೧೭ ನೀನು ಅವರನ್ನು ಬರ ಮಾಡಿ, ನಿನ್ನ ಸ್ವಾಸ್ಥ್ಯದ ಪರ್ವತದಲ್ಲಿ,
ಕರ್ತನಾದ ನೀನು ನಿನ್ನ ನಿವಾಸಕ್ಕೋಸ್ಕರ ಮಾಡಿದ ಸ್ಥಳ
ದಲ್ಲಿ, ಕರ್ತನೇ,
೧೮ ನಿನ್ನ ಕೈಗಳು ಸ್ಥಾಪಿಸಿದ ಪರಿಶುದ್ಧ ಸ್ಥಳದಲ್ಲಿ ನೆಡುವಿ.
ಕರ್ತನು ಯುಗ ಯುಗಾಂತರಗಳಿಗೂ ಆಳುವನು.
೧೯ ಯಾಕಂದರೆ ಫರೋಹನ ಕುದುರೆಗಳು ಅವನ ರಥಗಳ ಸಂ
ಗಡಲೂ ರಥಿಕರ ಸಂಗಡಲೂ ಸಮುದ್ರಕ್ಕೆ ಬಂದಾಗ, ಕರ್ತನು
ಸಮುದ್ರದ ನೀರನ್ನು ಅವರ ಮೇಲೆ ತಿರಿಗಿ ಬರ ಮಾಡಿದನು.
ಆದರೆ ಇಸ್ರಯೇಲ್ ಮಕ್ಕಳು ಸಮುದ್ರದ ಮಧ್ಯದಲ್ಲಿ ಜಣ
ಗಿದ ನೆಲದ ಮೇಲೆ ಹೋದರು.
೨೦ ಆಗ ಆರೋನನ ಸಹೋದರಿಯೂ, ಪ್ರವಾದಿನಿಯೂ ಆಗಿ
ರುವ ಮಿರಿಯಾಮಳು ಕೈತಾಳವನ್ನು ತಕ್ಕೊಂಡಳು; ಮತ್ತು
ಸ್ತ್ರೀಯರೆಲ್ಲರು ಕೈತಾಳಗಳನ್ನು ಹಿಡಿದು, ನಾಟ್ಯದಿಂದ ಅವಳ
೨೧ ನ್ನು ಹಿಂಬಾಲಿಸಿ, ಹೊರಟರು. ಮಿರಿಯಾಮಳು ಅವರಿಗೆ ಕೊಟ್ಟಿ
ಉತ್ತರ ಏನಂದರೆ—
ಕರ್ತನಿಗೆ ಹಾಡಿರಿ; ಯಾಕಂದರೆ ಅವನು ಮಹಿಮೆಯಾಗಿ
ಜಯಿಸಿದ್ದಾನೆ;
ಕುದುರೆಯನ್ನೂ ಹತ್ತಿದವನನ್ನೂ ಸಮುದ್ರದಲ್ಲಿ ಕೊಬ್ಬಿ
ದ್ದಾನೆ.
೨೨ ಆಗ ಮೋಶೆ ಇಸ್ರಯೇಲ್ ಮಕ್ಕಳನ್ನು ಆಪಿನ ಸಮುದ್ರದ
ಕಡೆಯಿಂದ ಹೊರತ ಮಾಡಿದನು; ಅವರು ಶೂರಿನ ಅರಣ್ಯಾ
ಕ್ಕೆ ಹೋಗಿ, ಅರಣ್ಯದಲ್ಲಿ ಮೂರು ದಿವಸ ಪ್ರಯಾಣ ಮಾಡಿ,
೨೩ ನೀರನ್ನು ಕಂಡು ಕೊಳ್ಳಲೆ ಹೋದರು. ಅವರು ಮಾರಕ್ಕೆ
ಬಂದ ಮೇಲೆ, ಮಾರದ ನೀರನ್ನು ಕುಡಿಯಲಾರದೆ ಇದ್ದರು;
ಯಾಕಂದರೆ ಅದು ಕಹಿಯಾಗಿತ್ತು. ಆದದರಿಂದ ಅದಕ್ಕೆ
೨೪ ಮಾರವೆಂದು ಹೆಸರಾಯಿತು. ಜನರು ಮೋಶೆಗೆ ವಿರೋಧವಾಗಿ
೨೫ ನಾವು ಏನು ಕುಡಿಯುವೆವೆಂದು ಗುಣಗುಟ್ಟಿದಾಗ, ಅವನು ಕ
ರ್ತನಿಗೆ ಕೂಗಿದನು; ಕರ್ತನು ಅವನಿಗೆ ಒಂದು ಮರವನ್ನು
ತೋರಿಸಿದನು; ಅದನ್ನು ನೀರಿನಲ್ಲಿ ಹಾಕಿದಾಗ, ನೀರು ಶೀಯಾ
ಯಿತು. ಅಲ್ಲಿ ಅವರಿಗೆ ನೇಮವನ್ನೂ ನ್ಯಾಯವನ್ನೂ ಇಟ್ಟು,
೨೬ ಅಲ್ಲಿ ಅವರನ್ನು ಶೋಧಿಸಿ, ಹೇಳಿದ್ದೇನಂದರೆ—ನೀನು ನಿಶ್ಚಯ
ವಾಗಿ ನಿನ್ನ ದೇವರಾದ ಕರ್ತನ ಮಾತನ್ನು ಕೇಳಿ, ಅವನ ದೃ
ಷ್ಟಿಗೆ ಸರಿಯಾದದ್ದನ್ನು ಮಾಡಿ, ಅವನ ಆಜ್ಞೆಗಳಿಗೆ ಕಿವಿ ಕೊ
ಟ್ಟು, ಅವನ ಎಲ್ಲಾ ನೇಮಗಳನ್ನು ಕೈಕೊಂಡರೆ, ಐಗುಪ್ತ್ಯರ
ಮೇಲೆ ನಾನು ಇಟ್ಟ ವ್ಯಾಧಿಗಳನ್ನೆಲ್ಲಾ ನಿನ್ನ ಮೇಲೆ ಇಡುವದಿ
ಲ್ಲ; ಯಾಕಂದರೆ ನಾನೇ ನಿನ್ನ ಸ್ವಸ್ಥ ಮಾಡುವ ಕರ್ತನು.
೨೭ ಆಗಲವರು ಎಲೀಮಿಗೆ ಬಂದರು. ಅಲ್ಲಿ ಹನ್ನೆರಡು ನೀರು
ಬುಗ್ಗೆಗಳೂ, ಎಪ್ಪತ್ತು ಖರ್ಜೂರ ಮರಗಳೂ ಇದ್ದದರಿಂದ,
ನೀರಿನ ಬಳಿಯಲ್ಲಿ ಇಳಿ ಕೊಂಡರು.

## ೧೬. ಸಂಧಿ.

೧ ಆಗ ಇಸ್ರಯೇಲ್ ಮಕ್ಕಳ ಕೂಟವೆಲ್ಲಾ ಎಲೀಮಿನಿಂದ ಹೊ
ರಟು, ಅವರು ಐಗುಪ್ತ ದೇಶದಿಂದ ಹೊರಟ ಎರಡನೇ ತಿಂಗಳ
ನ ಹದಿನೈದನೇ ದಿವಸದಲ್ಲಿ ಎಲೀಮಿಗೂ ಸೀನಾಯಿಗೂ ಮ
ಧ್ಯವಾಗಿರುವ ಸೀನೆಂಬ ಅರಣ್ಯಾಕ್ಕೆ ಬಂದರು. ಆಗ ಇಸ್ರಯೇ
ಲ್ ಮಕ್ಕಳ ಕೂಟವೆಲ್ಲಾ ಅರಣ್ಯದಲ್ಲಿ ಮೋಶೆಗೂ ಆರೋನ
೩ ನಿಗೂ ವಿರೋಧವಾಗಿ ಗುಣಗುಟ್ಟಿತು. ಇಸ್ರಯೇಲ್ ಮಕ್ಕಳು
ಅವರಿಗೆ, ನಾವು ಐಗುಪ್ತ ದೇಶದಲ್ಲಿ ಮಾಂಸದ ಪಾತ್ರೆಗಳ ಹತ್ತರ
ಕೂತು ಕೊಂಡು, ಸಾಕಾಗುವದ್ದು ಕೊಟ್ಟಿ ತಿಂದಾಗ, ಕರ್ತನ
ಕೈಯಿಂದ ಸತ್ತು ಹೋಗಿದ್ದರೆ, ಒಳ್ಳೇದಾಗಿತ್ತು; ಯಾಕಂದರೆ
ಈ ಸಮಸ್ತ ಸಭೆಯನ್ನು ಹಸಿವೆಯಿಂದ ಸಾಯಿಸುವ ಹಾಗೆ, ನ
ಮ್ಮನ್ನು ಈ ಅರಣ್ಯಾಕ್ಕೆ ಬರ ಮಾಡಿದಿರಿ, ಅಂದರು.
೪ ಆಗ ಕರ್ತನು ಮೋಶೆಗೆ, ಇಗೋ, ನಾನು ನಿಮಗೆ ಕೊಟ್ಟಿ
ಯನ್ನು ಆಕಾಶದೊಳಗಿಂದ ಸುರಿಸುತ್ತೇನೆ; ಅವರು ನನ್ನ ನ್ಯಾ
ಯಪ್ರಮಾಣದಲ್ಲಿ ನಡೆದು ಕೊಳ್ಳುವರೋ! ಇಲ್ಲವೋ! ಎಂದು,
ನಾನು ಅವರನ್ನು ಪರೀಕ್ಷಿಸುವ ಹಾಗೆ, ಜನರು ಹೊರಗೆ ಹೋಗಿ,
೫ ಒಂದೊಂದು ದಿನದ್ದನ್ನು ಆ ಆ ದಿನದಲ್ಲಿ ಕೂಡಿಸಲಿ. ಆರನೇ
ದಿವಸದಲ್ಲಿ ಅವರು ತಂದದ್ದನ್ನು ಸಿದ್ಧ ಮಾಡುವಾಗ, ದಿನ ದಿನದ
ಲ್ಲಿ ಕೂಡಿಸುವದಕ್ಕಿಂತ ಎರಡಾಗಿರುವದು, ಅಂದನು.
೬ ಆಗ ಮೋಶೆಯೂ ಆರೋನನೂ ಇಸ್ರಯೇಲ್ ಮಕ್ಕಳಿಗೆ
ಲ್ಲಾ, ಕರ್ತನು ನಿಮ್ಮನ್ನು ಐಗುಪ್ತ ದೇಶದೊಳಗಿಂದ ಹೊರಗೆ
ಬರ ಮಾಡಿದನೆಂದು, ಸಾಯಂಕಾಲದಲ್ಲಿ ನಿಮಗೆ ತಿಳಿದಿರುವದು.
೭ ಮತ್ತು ಬೆಳಗ್ಯೆ ಕರ್ತನ ಘನವನ್ನು ನೋಡುವಿರಿ; ಯಾಕಂದ
ರೆ ಕರ್ತನಿಗೆ ವಿರೋಧವಾಗಿ ನೀವು ಗುಣಗುಟ್ಟಿದ್ದನ್ನು ಅವನು
ಕೇಳುತ್ತಾನೆ; ನಮಗೆ ವಿರೋಧವಾಗಿ ನೀವು ಗುಣಗುಟ್ಟುವ ಹಾ
೮ ಗೆ, ನಾವು ಯಾರು! ಅಂದರು. ಆಗ ಮೋಶೆ, ಕರ್ತನು ನಿಮಗೆ
ಸಾಯಂಕಾಲದಲ್ಲಿ ಉಣ್ಣುವದಕ್ಕೆ ಮಾಂಸವನ್ನೂ, ಬೆಳ್ಳಗ್ಯೆ
ತೃಪ್ತಿಯಾಗುವದಕ್ಕೆ ಕೊಟ್ಟಿಯನ್ನೂ ಕೊಡುವದರಲ್ಲಿ ನೀವು
ಅವನಿಗೆ ವಿರೋಧವಾಗಿ ಮಾಡುವ ಗುಣಗುಟ್ಟುಗಳನ್ನು ಕೇಳು
ವದರಲ್ಲಿ ತಿಳಿಯ ಕೊಳ್ಳುವಿರಿ. ನಾವು ಯಾರು! ನಮಗೆ ವಿರೋಧ
ವಾಗಿ ಅಲ್ಲ, ಕರ್ತನಿಗೆ ವಿರೋಧವಾಗಿ ನಿಮ್ಮ ಗುಣಗುಟ್ಟುಗಳು
೯ ಅವೆ, ಅಂದನು. ಆಗ ಮೋಶೆ ಆರೋನನಿಗೆ, ನೀವು ಕರ್ತನ
ಸಮೀಪಕ್ಕೆ ಬರ ಪೇಳೆಂದೂ, ಅವನು ನಿಮ್ಮ ಗುಣಗುಟ್ಟುಗಳ
ನ್ನು ಕೇಳಿದನೆಂದೂ, ಇಸ್ರಯೇಲ್ ಮಕ್ಕಳ ಎಲ್ಲಾ ಕೂಟಕ್ಕೆ
ಹೇಳು, ಅಂದನು.
೧೦ ಆರೋನನು ಇಸ್ರಯೇಲ್ ಮಕ್ಕಳ ಎಲ್ಲಾ ಕೂಟದ ಸಂಗಡ
ಮಾತಾಡಿದಾಗ, ಅವರು ಅರಣ್ಯದ ಕಡೆಗೆ ತಿರುಗಿ ಕೊಂಡರು;
ಆಗ, ಅಗೋ, ಕರ್ತನ ಘನವು ಮೇಘದಲ್ಲಿ ಪ್ರತ್ಯಕ್ಷವಾಯಿ
೧೧ ತು. ಆಗ ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳಿದ್ದೇ
೧೨ ನಂದರೆ—ಇಸ್ರಯೇಲ್ ಮಕ್ಕಳ ಗುಣಗುಟ್ಟುಗಳನ್ನು ಕೇಳಿದ್ದೇ
ನೆ; ಅವರ ಸಂಗಡ ಮಾತಾಡಿ, ಸಾಯಂಕಾಲದಲ್ಲಿ ಮಾಂಸವನ್ನು
ಉಣ್ಣುವಿರಿ; ಬೆಳ್ಳಗ್ಯೆ ಕೊಟ್ಟಿಯಿಂದ ತೃಪ್ತಿಯಾಗುವಿರಿ; ನಾನೇ
ನಿಮ್ಮ ದೇವರಾದ ಕರ್ತನೆಂದು ತಿಳಿಯ ಕೊಳ್ಳುವಿರಿ, ಎಂದು
ಹೇಳು.
೧೩ ಸಾಯಂಕಾಲದಲ್ಲಿ ಆದದ್ದೇನಂದರೆ—ಲಾವಕ್ಕಿಗಳು ಏರಿ ಬಂ

ದು, ದಂಡನ್ನು ಮುಚ್ಚಿದವು; ಪೆಳಗ್ಯೆ ಮಂಜು ದಂಡಿನ ಸುತ್ತಲು
೧೪ ಇಳ್ಳಿದಿತ್ತು. ಇಳ್ಳದ ಮಂಜು ಎದ್ದ ಮೇಲೆ, ಅಗೋ, ಅರಣ್ಯದ
ಮೇಲ್ಬಾಗದಲ್ಲಿ ಸೂಕ್ಷ್ಮವಾದದ್ದೂ, ಗುಂಡಾದದ್ದೂ, ಭೂಮಿಯ
ಮೇಲಿರುವ ಕೆಂಡ ಹನಿಯ ಹಾಗೆ ಸೂಕ್ಷ್ಮವಾದದ್ದೂ ಬಿದ್ದಿತ್ತು.
೧೫ ಇಸ್ರಯೇಲ್ ಮಕ್ಕಳು ಅದನ್ನು ನೋಡಿದಾಗ, ಅದೇನೆಂದು ತಿ
ಳ್ಳಿಯೆವೆ, ಒಬ್ಬರಿಗೊಬ್ಬರು, ಇದೇನೆಂದು ಹೇಳ್ಳಿ ಕೊಂಡರು.
ಮೋಶೆ ಅವರಿಗೆ ಹೇಳ್ಳಿದ್ದೇನಂದರೆ—ಇದೇ ಕರ್ತನು ನಿಮಗೆ
೧೬ ತಿನ್ನುವದಕ್ಕೆ ಕೊಟ್ಟ ಕೊಟ್ಟಿ. ಕರ್ತನು ಆಜ್ಞಾಪಿಸಿದ ಮಾತು
ಏನಂದರೆ, ಇದರಲ್ಲಿ ಒಬ್ಬೊಬ್ಬರು ತಿನ್ನ ತಕ್ಕ ಹಾಗೆ, ನಿಮ್ಮು
ಪ್ರಾಣಗಳ ತೆಬ್ಬದ ಪ್ರಕಾರ ಒಬ್ಬೊಬ್ಬನಿಗೆ ಒಂದು ಓಮೆರನ್ನು
ಕೂಡಿಸಿರಿ; ಒಬ್ಬೊಬ್ಬನು ತನ್ನ ಗುಡಾರದಲ್ಲಿರುವವರಿಗೋ
೧೭ ಸ್ಕರ ತಕ್ಕೊಳ್ಳಿರಿ. ಇಸ್ರಯೇಲ್ ಮಕ್ಕಳು ಹಾಗೆ ಮಾಡಿ, ಕೆ
ಲವರು ಹೆಚ್ಚು, ಕೆಲವರು ಕಡಿಮೆ ಕೂಡಿಸಿದರು. ಓಮೆರಲ್ಲಿ ಅಳ
ತೆ ಮಾಡಿದಾಗ, ಹೆಚ್ಚು ಕೂಡಿಸಿದವನಿಗೆ ಮಿಗಲಿಲ್ಲ, ಕಡಿಮೆ ಕೂ
ಡಿಸಿದವನಿಗೆ ಕೊರತೆಯಾಗಲಿಲ್ಲ; ಒಬ್ಬೊಬ್ಬನು ಉಣ್ಣ ತಕ್ಕ
೧೯ ಷ್ಟು ಕೂಡಿಸಿದರು. ಮೋಶೆ ಅವರಿಗೆ, ಯಾವನಾದರೂ ಇದ
ರಲ್ಲಿ ಮರು ದಿವಸದ ಪರ್ಯಂತರ ಇಟ್ಟು ಕೊಳ್ಳಿ ಬಾರದೆಂದು
೨೦ ಹೇಳ್ಳಿದನು. ಆದರೆ ಅವರು ಮೋಶೆಯನ್ನು ಕೇಳ್ಳಿಲ್ಲಿ; ಕೆಲವ
ರು ಅದನ್ನು ಮರು ದಿವಸದ ಪರ್ಯಂತರ ಇಟ್ಟು ಕೊಂಡಾಗ,
ಹುಳ್ಳ ಬಿದ್ದು, ನಾರಿತು. ಮೋಶೆ ಅವರ ಮೇಲೆ ಕೋಪ್ರವುಳ್ಳವ
೨೧ ನಾಗಿದ್ದನು. ಹೀಗೆ ಅವರು ತಮ್ಮು ತಮ್ಮು ವೆಚ್ಚದ ಪ್ರಕಾರ ದಿನ
ದಿವದಲ್ಲಿ ಪೆಳಗ್ಯೆ ಅದನ್ನು ಕೂಡಿಸುತ್ತಿದ್ದರು; ಬಿಸಲು ಜಹಪ್ಪವಾ
ದಾಗ, ಅದು ಕರಗಿ ಹೋಯಿತು.

೨೨ ಆರನೇ ದಿವಸದಲ್ಲಿ ಅವರು ಎರಡಕ್ಕುಟ್ಟು ಆಹಾರವನ್ನು, ಒ
ಬ್ಬನಿಗೆ ಎರಡು ಓಮೆರನ್ನು ಕೂಡಿಸಿದ್ದರಿಂದ, ಕೂಟದ ಎಲ್ಲಾ
೨೩ ಕ್ರೋಡ್ಮರು ಬಂದು, ಮೋಶೆಗೆ ತಿಳ್ಳಿಸಿದರು. ಅವನವರಿಗೆ, ಇದೇ
ಕರ್ತನು ಹೇಳ್ಳಿದ ಮಾತು—ನಾಳೆ ಕರ್ತನಿಗೆ ವಿಶ್ರಾಂತಿಯಾದ
ಪರಿಶುದ್ಧ ಸಬ್ಬತ್ ದಿವಸವಾಗುತ್ತದೆ; ಸುಟ ಬೇಕಾದದ್ದನ್ನು ಸುಡಿ
ರಿ; ಬೇಯಿಸ ಬೇಕಾದದ್ದನ್ನು ಬೇಯಿಸಿರಿ; ಆದರೆ ಮಿಕ್ಕದ್ದನ್ನೆ
ಲ್ಲಾ ನಾಳೆ ದಿವಸದ ಪರ್ಯಂತರ ಇಟ್ಟು ಕೊಳ್ಳಿರಿ, ಅಂದನು.
೨೪ ಮೋಶೆ ಆಜ್ಞಾಪಿಸಿದ ಪ್ರಕಾರ ಅದನ್ನು ಮರು ದಿವಸದ ಪ
ರ್ಯಂತರ ಇಟ್ಟು ಕೊಂಡಾಗ, ಅದು ನಾರಲಿಲ್ಲ; ಅದರಲ್ಲಿ ಹು
೨೫ ಳ್ಳಗಳೂ ಇದ್ದದ್ದಿಲ್ಲ. ಆಗ ಮೋಶೆ ಈ ಹೊತ್ತು ಅದನ್ನು ಉ
ಣ್ಣಿರಿ; ಯಾಕಂದರೆ ಈ ಹೊತ್ತು ಕರ್ತನ ಸಬ್ಬತ್ ದಿವಸವಾಗಿ
೨೬ ದೆ. ಈ ಹೊತ್ತು ನಿಮಗೆ ಹೊಲದಲ್ಲಿ ಸಿಕ್ಕುವದಿಲ್ಲ. ಆರು ದಿ
ವಸ ಅದನ್ನು ಕೂಡಿಸ ಬೇಕು; ಎಳ್ಳನೇ ದಿವಸ ಸಬ್ಬತ್ ದಿವಸ;
೨೭ ಅದರಲ್ಲಿ ಅದು ಇರುವದಿಲ್ಲ, ಅಂದನು. ಏಳ್ಳನೇ ದಿವಸದಲ್ಲಿ ಆ
ದದ್ದೇನಂದರೆ—ಜನರಲ್ಲಿ ಕೆಲವರು ಕೂಡಿಸುವದಕ್ಕೆ ಹೊರಗೆ
೨೮ ಹೋದರು; ಆದರೆ ಅವರಿಗೆ ಸಿಕ್ಕಲಿಲ್ಲ. ಆಗ ಕರ್ತನು ಮೋ
ಶೆಗೆ ಹೇಳ್ಳಿದ್ದೇನಂದರೆ—ಎಷ್ಟು ಸಟ್ಟಿಗೂ ನನ್ನ ಕಟ್ಟಳೆಗಳ
ನ್ನೂ ನ್ಯಾಯ ಪ್ರಮಾಣವನ್ನೂ ಕೈ ಕೊಳ್ಳಲೊಲ್ಲದೆ ಇದ್ದೀ
೨೯ ರಿ! ನೋಡಿರಿ; ಕರ್ತನು ನಿಮಗೆ ಸಬ್ಬತ್ ದಿವಸವನ್ನು ಕೊಟ್ಟ
ದರಿಂದಲೇ ನಿಮಗೆ ಆರನೇ ದಿವಸದಲ್ಲಿ ಎರಡು ದಿವಸದ ಕೊಟ್ಟಿ
ಯನ್ನು ಕೊಡುತ್ತಾನೆ. ಒಬ್ಬೊಬ್ಬರು ನಿಮ್ಮು ನಿಮ್ಮು ಸ್ಥಳಗಳಲ್ಲಿ
ಇರಿ; ಏಳ್ಳನೇ ದಿವಸದಲ್ಲಿ ಯಾವನಾದರೂ ಸ್ಥಳ ಬಿಟ್ಟು ಹೋ
೩೦ ಗ ಬಾರದು. ಹೀಗೆ ಜನರು ಏಳ್ಳನೇ ದಿವಸದಲ್ಲಿ ವಿಶ್ರಮಿಸಿ ಕೊಂ
೩೧ ಡರು. ಆಗ ಇಸ್ರಯೇಲ್ ಮನೆಯವರು ಅದಕ್ಕೆ ಮನ್ನವೆಂದು
ಹೆಸರಿಟ್ಟರು. ಅದು ಬಿಳ್ಳಿ ಕೊತ್ತುಂಬರಿ ಬೀಜದ ಹಾಗಿತ್ತು; ಅದ
ರ ರುಚಿಯು ಜೇನು ಕಲಿಸಿದ ದೋಸೆಗಳ್ಳ ಹಾಗೆ ಇತ್ತು.

೩೨ ಆಗ ಮೋಶೆ ಹೇಳ್ಳಿದ್ದೇನಂದರೆ, ಕರ್ತನು ಆಜ್ಞಾಪಿಸಿದ ಕಾ
ರ್ಯ ಇದೇ—ಇದರಿಂದ ಒಂದು ಓಮೆರ್ ತುಂಬ ನಿಮ್ಮು ಸಂತತಿ
ಗಳ್ಳಿಗೋಸ್ಕರ, ಅವು, ನಾನು ನಿಮ್ಮನ್ನು ಐಗುತ್ತ ದೇಶಕ್ಕೊಳ್ಳಗಿಂ
ದ ಹೊರಡಿಸಿದಾಗ, ಅರಣ್ಯದಲ್ಲಿ ನಿಮಗೆ ತಿನ್ನಿಸಿದ ಕೊಟ್ಟಿಯ
ನ್ನು ನೋಡುವ ಹಾಗೆ, ಇಟ್ಟು ಕೊಳ್ಳ ಬೇಕು. ಮತ್ತು ಮೋಶೆ
೩೩ ಆರೋನನಿಗೆ, ಒಂದು ಪಾತ್ರೆಯನ್ನು ತಕ್ಕೊಂಡು, ಒಂದು ಓ
ಮೆರ್ ತುಂಬ ಮನ್ನವನ್ನು ಅದರಲ್ಲಿ ಇಟ್ಟು, ನಿಮ್ಮ ಸಂತತಿಗಳ್ಳ
ಗೆ ಇಟ್ಟು ಕೊಳ್ಳುವದಕ್ಕೋಸ್ಕರ ಕರ್ತನ ಮುಂದೆ ನಿಲ್ಲಿಸು,
೩೪ ಅಂದನು. ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆಯೇ ಆರೋ
ನನು ಅದನ್ನು ಕಾಪಾಡುವದಕ್ಕೋಸ್ಕರ ಸಾಕ್ಷಿಯ ಮುಂದೆ
ಇಟ್ಟನು. ಇಸ್ರಯೇಲ್ ಮಕ್ಕಳು ವಾಸಾಗಿರ ತಕ್ಕ ದೇಶಕ್ಕೆ
೩೫ ಬಂದ ಪರ್ಯಂತರ, ನಾಲ್ವತ್ತು ವರುಷ ಮನ್ನವನ್ನು ತಿಂದರು,
ಕಾನಾನ್ ದೇಶದ ಮೇರೆಗಳ್ಳಿಗೆ ಬಂದ ಪರ್ಯಂತರ ಮನ್ನವನ್ನು
೩೬ ಉಣ್ಣುತ್ತಿದ್ದರು. ಓಮೆರ್ ಅಂದರೆ, ಎಫದಲ್ಲಿ ಹತ್ತನೇ ಪಾಲು.

## ೧೭. ಸಂಧಿ.

೧ ಆಗ ಇಸ್ರಯೇಲ್ ಮಕ್ಕಳ ಕೂಟವೆಲ್ಲಾ, ಅವರವರು ಹೊರ
ಡುವ ಕ್ರಮದ ಪ್ರಕಾರ, ಕರ್ತನ ಅಪ್ಪಣೆಯ ಪ್ರಕಾರ, ಸೀನ್
ಅರಣ್ಯದಿಂದ ಹೊರಟು, ರೆಫಿದೀಮಿನಲ್ಲಿ ಇಳ್ಳಿ ಕೊಂಡರು; ಅ
೨ ಲ್ಲಿ ಜನರಿಗೆ ಕುಡಿಯುವದಕ್ಕೆ ನೀರು ಇರಲಿಲ್ಲ. ಆದಕಾರಣ ಜ
ನರು ಮೋಶೆಯ ಸಂಗಡ ವಿವಾದ ಮಾಡಿ, ನಾವು ಕುಡಿಯುವ
ಹಾಗೆ, ನಮಗೆ ನೀರನ್ನು ಕೊಡಿರಿ, ಅಂದಾಗ, ಮೋಶೆ ಅವರಿಗೆ,
ಯಾಕೆ ನನ್ನ ಸಂಗಡ ವಿವಾದ ಮಾಡುತ್ತೀರಿ! ಯಾಕೆ ಕರ್ತನ
೩ ನ್ನು ಶೋಧಿಸುತ್ತೀರಿ! ಅಂದನು. ಅಲ್ಲಿ ಜನರು ದಾಹ ಪಟ್ಟು,
ಮೋಶೆಗೆ ವಿರೋಧವಾಗಿ ಗುಣ ಗುಟ್ಟಿ, ನಮ್ಮನ್ನೂ, ನಮ್ಮ ಮ
ಕ್ಕಳ್ಳನ್ನೂ, ನಮ್ಮ ದನಗಳ್ಳನ್ನೂ ದಾಹದಿಂದ ಕೊಲ್ಲುವದ
ಕ್ಕೋಸ್ಕರ ಯಾಕೆ ನಮ್ಮನ್ನು ಐಗುಪ್ತದೊಳ್ಳಗಿಂದ ಮೇಲೆ ಬ
೪ ರ ಮಾಡಿದಿ! ಅಂದಾಗ.

೪ ಮೋಶೆ ಕರ್ತನಿಗೆ ಕೂಗಿ, ಈ ಜನರಿಗೆ ನಾನೇನು ಮಾತಲಿ!
೫ ಅವರು ನನ್ನನ್ನು ಕಲ್ಲೆಸೆಯುವ ಹಾಗೆ ಇದ್ದಾರೆ, ಅಂದನು. ಆ
ಗ ಕರ್ತನು ಮೋಶೆಗೆ ಜನರ ಸನ್ನಿಧಿಯಲ್ಲಿ ಹಾದು ಹೋಗಿ,
ಇಸ್ರಯೇಲಿನ ಹಿರಿಯರಲ್ಲಿ ಕೆಲವರನ್ನು ಕರಕೊಂಡು, ನೀನು ನ
ದಿಯನ್ನು ಬಡಿದ ಕೋಲನ್ನು ಕೈಯಲ್ಲಿ ತಕ್ಕೊಂಡು ಹೋ
೬ ಗು. ಇಗೋ, ನಾನು ಅಲ್ಲಿ ಹೋರೆಬಿನಲ್ಲಿ ಬಂಡೆಯ ಮೇಲೆ ನಿ
ನ್ನ ಮುಂದೆ ನಿಂತು ಕೊಳ್ಳುವೆನು; ನೀನು ಬಂಡೆಯನ್ನು ಹೊಡೆ
ಯುವಾಗ, ಅದರಿಂದ, ಜನರು ಕುಡಿಯುವ ಹಾಗೆ, ನೀರು ಹೊರ
ಗೆ ಬರುವದು. ಮೋಶೆ ಇಸ್ರಯೇಲಿನ ಹಿರಿಯರ ಕಣ್ಣುಗಳ
೭ ಮುಂದೆ ಆ ಪ್ರಕಾರವೇ ಮಾಡಿದನು. ಇಸ್ರಯೇಲ್ ಮಕ್ಕಳ ವಿ
ವಾದದ ನಿಮಿತ್ತವೂ, ಅವರು ಕರ್ತನನ್ನು ನಮ್ಮ ನಡುವೆ ಇದ್ದಾ
ನೋ! ಇಲ್ಲವೋ! ಎಂದು ಹೇಳ್ಳಿ, ಕರ್ತನನ್ನು ಶೋಧಿಸಿದ್ದರಿಂ
ದ ಆ ಸ್ಥಳಕ್ಕೆ ಮಸ್ಸಾವೂ ಮೆರೀಬವೂ ಎಂದು ಹೆಸರಾಯಿತು.



೮ ಆಗ ಅಮಲೇಕ್ಯರು ಬಂದು, ರೆಫಿದೀಮಿನಲ್ಲಿ ಇಸ್ರಯೇಲ್ಯರ
೯ ಸಂಗಡ ಯುದ್ಧ ಮಾಡಿದರು. ಆಗ ಮೋಶೆಯು ಯೆಹೋಶು
ವನಿಗೆ, ನಮಗೆ ಮನುಷ್ಯರನ್ನು ಆದು ಕೊಂಡು, ಅಮಲೇಕ್ಯರ
ಸಂಗಡ ಯುದ್ಧ ಮಾಡುವದಕ್ಕೆ ಹೊರಟು ಹೋಗು; ನಾಳೆ ನಾ
ನು ದೇವರ ಕೋಲನ್ನು ಕೈಯಲ್ಲಿ ಹಿಡು ಕೊಂಡು, ಗುಡ್ಡದ ತು
೧೦ ದಿಯಲ್ಲಿ ನಿಂತು ಕೊಳ್ಳುವೆನು, ಅಂದನು. ಯೆಹೋಶುವ ಅಮ
ಲೇಕ್ಯರ ಸಂಗಡ ಯುದ್ಧ ಮಾಡುವದಕ್ಕೆ, ಮೋಶೆ ತನಗೆ ಹೇಳ್ಳಿ
೯ ದ ಹಾಗೆಯೇ ಮಾಡಿದನು; ಮೋಶೆಯೂ, ಆರೋನನೂ, ಹೂ
ರನೂ ಗುಡ್ಡದ ತುದಿಗೆ ಏರಿ ಹೋದರು. ಆಗ ಮೋಶೆ ಕೈಯ
ನ್ನು ಎತ್ತಿದಾಗ, ಇಸ್ರಯೇಲ್ಯರು ಬಲವಾದರು; ಕೈಯನ್ನು ಇ
೧೧ ಳ್ಳಿಸಿದಾಗ, ಅಮಲೇಕ್ಯರು ಬಲವಾದರು. ಮೋಶೆಯ ಕೈಗಳು
ಭಾರವಾಗಿರಲಾಗಿ, ಅವರು ಕಲ್ಲನ್ನು ತಕ್ಕೊಂಡು, ಅವನ ಕೆಳಗೆ
ಇಟ್ಟಿರು; ಅವನು ಅದರ ಮೇಲೆ ಕೂತು ಕೊಂಡನು; ಆದರೆ ಆ
ರೋನನೂ, ಹೂರನೂ, ಒಬ್ಬನು ಈಚೆಯಲ್ಲಿ, ಒಬ್ಬನು ಆಚೆ
ಯಲ್ಲಿ, ಅವನ ಕೈಗಳ್ಳಿಗೆ ಆಧಾರ ಕೊಟ್ಟರು. ಹಾಗೆ ಸೂರ್ಯ
ನು ಮುಣುಗುವ ಪರ್ಯಂತರ ಅವನ ಕೈಗಳು ನೆಲೆಯಾಗಿದ್ದ
೧೩ ವು. ಹೀಗಿರಲಾಗಿ ಯೆಹೋಶುವ ಅಮಲೇಕನನ್ನೂ, ಅವನ
ಜನರನ್ನೂ ಕತ್ತಿಯ ಬಾಯಿಯಿಂದ ಮುರಿಯ ಬಿಡಿದನು.
೧೪ ಆಗ ಕರ್ತನು ಮೋಶೆಗೆ, ಇದನ್ನು ಜ್ಞಾಪಕಕ್ಕೋಸ್ಕರ ಪು
ಸ್ತಕದಲ್ಲಿ ಬರೆ; ಮತ್ತು ನಾನು ಅಮಲೇಕ್ಯರ ಜ್ಞಾಪಕವನ್ನು
ಆಕಾಶದ ಕೆಳಗನಿಂದ ಅಳ್ಳಿಸಿ ಬಿಡುವೆನೆಂದು, ಯೆಹೋಶುವನ ಕಿ
೧೫ ವಿಗಳ್ಳಲ್ಲಿ ಓದಿಸು, ಅಂದನು. ಇದಲ್ಲದೆ ಮೋಶೆ ಬಲಿ ಪೀಠವನ್ನು
೧೬ ಕಟ್ಟಿ, ಅದಕ್ಕೆ ಯೆಹೋವ ನಿಸ್ಸೀ ಎಂದು ಹೆಸರಿಟ್ಟನು. ಯಾ
ಕಂದರೆ ಕರ್ತನ ಸಿಂಹಾಸನದ ಆಣೆ, ಅಮಲೇಕನಿಗೆ ವಿರೋಧ
ವಾಗಿ ತಲ ತಲಾಂತರಕ್ಕೆ ಕರ್ತನಿಗೆ ಯುದ್ಧ ಉಂಟೆಂಬದಾಗಿ,
ಅಂದನು.

## ೧೮. ಸಂಧಿ.

೧ ಮಿದ್ಯಾನಿನ ಯಾಜಕನೂ, ಮೋಶೆಯ ಮಾವನೂ ಆಗಿ
ರುವ ಇತ್ರೋನನು, ದೇವರು ಮೋಶೆಗೂ ತನ್ನ ಜನರಾದ ಇ
ಸ್ರಯೇಲಿಗೂ ಮಾಡಿದವುಗಳ್ಳನ್ನೆಲ್ಲಾ, ಕರ್ತನು ಇಸ್ರಯೇಲ
ನ್ನು ಐಗುಪ್ತದೊಳ್ಳಗಿಂದ ಹೊರಡಿಸಿದನೆಂಬುವದನ್ನೂ ಕೇಳ್ಳಿ
೨ ದಾಗ, ಮೋಶೆಯ ಮಾವನಾದ ಇತ್ರೋನನು ಮೋಶೆಯ ಹೆಂ
ಡತಿಯಾದಂಥ, ಅವನು ಕಳ್ಳುಹಿಸಿ ಇದ್ದಂಥ, ಚಿಪ್ಪೋರಳ್ಳನ್ನೂ,
೩ ಅವಳ್ಳ ಎರಡು ಮಕ್ಕಳ್ಳನ್ನೂ ತಕ್ಕೊಂಡನು. ಇವರಲ್ಲಿ ಒಬ್ಬ
ನಿಗೆ, ನಾನು ಪರ ದೇಶದಲ್ಲಿ ಅನ್ಯನಾಗಿದ್ದೆನೆಂದು ಹೇಳ್ಳಿದ್ದರಿಂದ,
೪ ಗೆರ್ಶೋನೆಂದು ಹೆಸರಾಯಿತು. ಮತ್ತೊಬ್ಬನಿಗೆ, ನನ್ನ ತಂ
ದೆಯ ದೇವರು ನನಗೆ ಸಹಾಯವಾಗಿದ್ದು, ಫರೋನನ ಕತ್ತಿಗೆ ನ
ನ್ನನ್ನು ತಪ್ಪಿಸಿದನೆಂದು ಹೇಳ್ಳಿದ್ದರಿಂದ, ಎಲಿಯೇಜರನೆಂದು ಹೆ
೫ ಸರಾಯಿತು. ಹಾಗೆ ಮೋಶೆಯ ಮಾವನಾದ ಇತ್ರೋನನೂ, ಅ
ವನ ಮಕ್ಕಳ್ಳೂ, ಹೆಂಡತಿಯೂ ಮೋಶೆಯ ಬಳ್ಳಿಗೆ, ಅರಣ್ಯಕ್ಕೆ,
ಅವನು ಇಳ್ಳುಕೊಂಡಲ್ಲಿಗೆ, ದೇವರ ಪೆಟ್ಟಿದ ಬಳ್ಳಿಗೆ, ಬಂದರು.
೬ ಅವನು ಮೋಶೆಗೆ—ನಿನ್ನ ಮಾವನಾಗಿರುವ ಇತ್ರೋನನೆಂಬ ನಾ
ನು ನಿನ್ನ ಹೆಂಡತಿಯನ್ನೂ, ಅವಳ್ಳ ಇಬ್ಬರು ಮಕ್ಕಳ್ಳನ್ನೂ
ಕರ ಕೊಂಡು, ನಿನ್ನ ಬಳ್ಳಿಗೆ ಬಂದಿದ್ದೇನೆಂದು ಹೇಳ್ಳಿ ಕಳ್ಳುಹಿಸಿದಾ
೭ ಗ, ಮೋಶೆ ಮಾವನ ಎದುರಿಗೆ ಹೊರಟು, ಅಡ್ಡ ಬಿದ್ದು, ಅವನಿ
ಗೆ ಮುದ್ದಿಟ್ಟನು; ಅವರು ಒಬ್ಬೊಬ್ಬರ ಕ್ಷೇಮ ಸಮಾಚಾರವ
ನ್ನು ಕೇಳ್ಳಿ, ಗುಡಾರಕ್ಕೆ ಬಂದರು.

೮ ಕರ್ತನು ಫರೋನನಿಗೂ ಐಗುಪ್ತ್ಯರಿಗೂ ಇಸ್ರಯೇಲಿಗೋ
ಸ್ಕರ ಮಾಡಿದ ಎಲ್ಲವುಗಳ್ಳನ್ನೂ, ಅವರ ಮೇಲೆ ಬಿದ್ದ ಎಲ್ಲಾ
ಕಷ್ಟಗಳ್ಳನ್ನೂ, ಕರ್ತನು ಅವರನ್ನು ತಪ್ಪಿಸಿದನೆಂಬುವದನ್ನೂ
೯ ಮೋಶೆ ತನ್ನ ಮಾವನಿಗೆ ತಿಳ್ಳಿಸಿದನು. ಕರ್ತನು ಇಸ್ರಯೇಲಿಗೆ
ಮಾಡಿದ ಎಲ್ಲಾ ಉಪಕಾರಕ್ಕೋಸ್ಕರವೂ, ಅವನು ಅವರನ್ನು
ಐಗುಪ್ತ್ಯರ ಕೈಗೆ ತಪ್ಪಿಸಿದ್ದಕ್ಕೋಸ್ಕರವೂ, ಇತ್ರೋನನು
೧೦ ಸಂತೋಷ ಪಟ್ಟನು. ಇತ್ರೋನನು ಹೇಳ್ಳಿದ್ದೇನಂದರೆ—ಐಗು
ಪ್ತ್ಯರ ಕೈಗೂ ಫರೋನನ ಕೈಗೂ ನಿಮ್ಮನ್ನು ತಪ್ಪಿಸಿ, ಐಗು
ಪ್ತ್ಯರ ಅಧಿಕಾರದೊಳ್ಳಗಿಂದ ಜನರನ್ನು ತಪ್ಪಿಸಿದ ಕರ್ತನು
೧೧ ಹರಸಲ್ಪಡಲಿ. ಎಲ್ಲಾ ದೇವರುಗಳ್ಳಿಗಿಂತ ಕರ್ತನೇ ದೊಡ್ಡವ
ನೆಂದು, ಈಗ ತಿಳ್ಳಿ ಕೊಂಡಿದ್ದೇನೆ; ಯಾಕಂದರೆ ಅವರು ಗರ್ವ
೧೨ ಪಟ್ಟದ್ದರಲ್ಲಿ ಅವರ ಮೇಲೆ ಇದ್ದನು. ಆಗ ಮೋಶೆಯ ಮಾವ
ನಾದ ಇತ್ರೋನನು ಕರ್ತನಿಗೋಸ್ಕರ ಹೋಮವನ್ನೂ ಬಲಿ
ಗಳ್ಳನ್ನೂ ತಕ್ಕೊಂಡನು; ಆರೋನನೂ ಇಸ್ರಯೇಲಿನ ಹಿರಿಯ
ಕೆಲ್ಲರೂ ಮೋಶೆಯ ಮಾವನ ಸಂಗಡ ಕರ್ತನ ಸನ್ನಿಧಿಯಲ್ಲಿ
ತಿನ್ನುವದಕ್ಕೆ ಬಂದರು.

೧೩ ಮರು ದಿವಸದಲ್ಲಿ ಮೋಶೆ ಜನರಿಗೆ ನ್ಯಾಯ ತೀರಿಸುವದಕ್ಕೆ
ಕೂತು ಕೊಂಡಾಗ, ಜನರು ಉದಯ ಕಾಲದಿಂದ ಸಾಯಂಕಾಲ
೧೪ ದ ಪರ್ಯಂತರ ಮೋಶೆಯ ಹತ್ತರ ನಿಂತರು. ಮೋಶೆಯ
ಮಾವನು, ಅವನು ಜನರಿಗೆ ಮಾಡುವದೆಲ್ಲಾ ನೋಡಿದಾಗ—ಜನರಿ
ಗೆ ನೀನು ಮಾಡುವಂಥಾದ್ದು ಇದೇನು! ಯಾಕೆ ನೀನೊಬ್ಬನೇ
ಕೂತಿರಲಾಗಿ, ಜನರೆಲ್ಲಾ ಉದಯ ಕಾಲದಿಂದ ಸಾಯಂಕಾಲದ
೧೫ ಪರ್ಯಂತರ ನಿನ್ನ ಬಳ್ಳಿಯಲ್ಲಿ ನಿಂತಿದ್ದಾರೆ! ಅಂದನು. ಮೋ
ಶೆ ಮಾವನಿಗೆ—ಜನರು ದೇವರ ಬಳ್ಳಿಯಲ್ಲಿ ವಿಚಾರಿಸ ನನ್ನ ಬಳ್ಳಿ
೧೬ ಗೆ ಬರುತ್ತಾರೆ. ಅವರಿಗೆ ಒಂದು ಕಾರ್ಯವಿದ್ದರೆ, ನನ್ನ ಬಳ್ಳಿ
ಗೆ ಬರುತ್ತಾರೆ; ನಾನು ಒಬ್ಬರ ಸಂಗಡ ಒಬ್ಬರಿಗಿರುವ ನ್ಯಾಯ
ವನ್ನು ತೀರಿಸುತ್ತೇನೆ; ಮತ್ತು ದೇವರ ನೇಮಗಳ್ಳನ್ನೂ, ಅವನ
ನ್ಯಾಯ ಪ್ರಮಾಣಗಳ್ಳನ್ನೂ ಕಲಿಸಿ ಕೊಡುತ್ತೇನೆ, ಅಂದನು.
೧೭ ಮೋಶೆಯ ಮಾವನು ಅವನಿಗೆ ಹೇಳ್ಳಿದ್ದೇನಂದರೆ—ನೀನು
೧೮ ಮಾಡುವ ಈ ಕಾರ್ಯವು ಒಳ್ಳೇದಲ್ಲ. ನೀನೂ, ನಿನ್ನ ಸಂ
ಗಡ ಇರುವ ಜನರೂ ನಿಶ್ಚಯವಾಗಿ ಬಾಡಿ ಹೋಗುವಿರಿ; ಯಾ
ಕಂದರೆ ಈ ಕಾರ್ಯವು, ನೀನೊಬ್ಬನೇ ಅದನ್ನು ಮಾಡ
೧೯ ಕೂಡದ ಹಾಗೆ, ಭಾರವಾಗಿದೆ. ಈಗ ನನ್ನ ಮಾತನ್ನು ಕೇ
ಳ್ಳು; ನಿನಗೆ ಆಲೋಚನೆ ಹೇಳ್ಳುತ್ತೇನೆ; ದೇವರು ನಿನ್ನ ಸಂಗಡ
ಇರಲಿ; ನೀನು ಜನರಿಗೋಸ್ಕರ ದೇವರ ಪಕ್ಷದಲ್ಲಿ ಇರು; ಕಾ
೨೦ ರ್ಯಗಳ್ಳನ್ನು ದೇವರ ಮುಂದೆ ಬರ ಮಾಡು. ನೇಮಗಳ್ಳನ್ನೂ
ನ್ಯಾಯ ಪ್ರಮಾಣಗಳ್ಳನ್ನೂ ಅವರಿಗೆ ತಿಳ್ಳಿಸಿ, ಅವರು ಹೋಗ
ತಕ್ಕ ಮಾರ್ಗವನ್ನೂ, ಅವರು ಮಾಡ ತಕ್ಕ ಕ್ರಿಯೆಗಳ್ಳನ್ನೂ
೨೧ ಅವರಿಗೆ ತೋರಿಸ ಬೇಕು. ಮತ್ತು ನೀನು ಗಟ್ಟಿಗರನ್ನೂ, ದೇ
ವರಿಗೆ ಭಯ ಪಡುವವರನ್ನೂ, ಸತ್ಯವಂತರನ್ನೂ, ಲೋಭ ಹಗೆ
ಮಾಡುವವರನ್ನೂ ನೋಡಿ ಕೊಂಡು, ಅವರನ್ನು ಸಹಸ್ರಾಧಿಪ
ತಿಗಳ್ಳಾಗಿಯೂ, ಶತಾಧಿಪತಿಗಳ್ಳಾಗಿಯೂ, ಪಂಚಾಶತಾಧಿಪತಿಗಳ್ಳಾ

ಗಿಯೂ, ದಶಾಧಿಪತಿಗಳಾಗಿಯೂ, ಅವರ ಮೇಲೆ ಇತ ಬೇಕು.
೨೨ ಇವರು ಎಲ್ಲಾ ಕಾಲಗಳಲ್ಲಿ ಜನರಿಗೆ ನ್ಯಾಯ ತೀರಿಸಿ, ದೊಡ್ಡ
ಕಾರ್ಯಗಳನ್ನೆಲ್ಲಾ ನಿನ್ನ ಮುಂದೆ ತಂದು, ಸಣ್ಣ ಕಾರ್ಯಗ
ಳನ್ನು ತಾವೇ ತೀರಿಸುವರು; ಆಗ ನಿನಗೆ ಸುಲಭವಾಗುವರು; ಅ
೨೩ ವರು ನಿನ್ನ ಸಂಗತ ಭಾರ ಹೊರುವರು. ಈ ಕಾರ್ಯವನ್ನು
ದೇವರ ಅಪ್ಪಣೆಯಿಂದ ಮಾಡಿದರೆ, ನೀನು ನಿಲ್ಲಲಾಗುವದು;
ಈ ಸಮಸ್ತ ಜನರು ಕ್ಷೇಮವಾಗಿ ತಮ್ಮ ಸ್ಥಳಕ್ಕೆ ಸೇರುವರು.
೨೪ ಮೋಶೆ ತನ್ನ ಮಾವನ ಮಾತನ್ನು ಕೇಳಿ, ಅವನು ಹೇಳಿದ
೨೫ ವುಗಳೆನ್ನೆಲ್ಲಾ ಮಾಡಿದನು. ಮೋಶೆ ಸಮಸ್ತ ಇಸ್ರಯೇಲ್ಲಿನ ಗ
ಣ್ಯರನ್ನು ಆರಿಸಿ ಕೊಂಡು, ಜನರ ಮೇಲೆ ಮುಖ್ಯಸ್ಥರಾಗಿ, ಸ
ಹಸ್ರಾಧಿಪತಿಗಳಾಗಿಯೂ, ಶತಾಧಿಪತಿಗಳಾಗಿಯೂ, ಪಂಚಾಶ
೨೬ ತಾಧಿಪತಿಗಳಾಗಿಯೂ, ದಶಾಧಿಪತಿಗಳಾಗಿಯೂ ಇಟ್ಟನು. ಇ
ವರು ಎಲ್ಲಾ ಕಾಲಗಳಲ್ಲಿ ಜನರಿಗೆ ನ್ಯಾಯ ತೀರಿಸಿ, ಕಠಿಣ ಕಾ
ರ್ಯಗಳನ್ನು ಮೋಶೆಗೆ ತಂದು, ಸಣ್ಣ ಕಾರ್ಯಗಳನ್ನು ತಾ
೨೭ ವೇ ತೀರಿಸಿದರು. ಆಗ ಮೋಶೆ ತನ್ನ ಮಾವನನ್ನು ಕಳುಹಿಸಿ
ದನು; ಅವನು ಸ್ವದೇಶಕ್ಕೆ ಹೋದನು.

## ೧೯. ಸಂಧಿ.

೧ ಇಸ್ರಯೇಲ್ ಮಕ್ಕಳು ಐಗುತ್ತ ದೇಶವನ್ನು ಬಿಟ್ಟು ಮೂರ
ನೇ ತಿಂಗಳಲ್ಲಿ, ಅದೇ ದಿವಸದಲ್ಲಿ, ಅವರು ಸೀನಾಯಿ ಅರಣ್ಯಾ
೨ ಕ್ಕೆ ಬಂದರು. ಅವರು ಕೆಫಿದೀಮನ್ನು ಬಿಟ್ಟು, ಸೀನಾಯಿ ಅರ
ಣ್ಯಾಕ್ಕೆ ಬಂದು, ಅರಣ್ಯದಲ್ಲಿ ಇಳು ಕೊಂಡರು, ಇಸ್ರಯೇ
3 ಲ್ಯರು ಅಲ್ಲಿ ಬೆಟ್ಟಕ್ಕೆದುರಾಗಿ ಇಳು ಕೊಂಡರು. ಆದರೆ ಮೋ
ಶೆ ದೇವರ ಸನ್ನಿಧಿಗೆ ಏರಿ ಹೋದನು; ಆಗ ಕರ್ತನು ಪರ್ವತ
ದ ಮೇಲಿಂದ ಅವನಿಗೆ ಕೂಗಿ ಹೇಳ್ದೇನಂದರೆ—ನೀನು ಯಾ
ಕೋಬನ ಮನೆಗೆ ಹೀಗೆ ಹೇಳಿ, ಇಸ್ರಯೇಲ್ ಮಕ್ಕಳಿಗೆ ಶಿಳಿಸು.
೪ ನಾನು ಐಗುಪ್ತ್ಯರಿಗೆ ಮಾಡಿದ್ದನ್ನೂ, ನಿಮ್ಮನ್ನು ಹದ್ದಿನ ರೆಕ್ಕೆ
ಗಳ ಮೇಲೆ ಎತ್ತಿ, ನನ್ನ ಬಳಿಗೆ ಬರ ಮಾಡಿದ್ದನ್ನೂ, ನೋಡಿದಿ
೫ ರಿ; ಹಾಗಾದರೆ ಈಗ ನೀವು ನನ್ನ ಮಾತನ್ನು ಕೇಳಿ, ನನ್ನ ಒಡಂ
ಬಡಿಕೆಯನ್ನು ಕಾಪಾಡಿದರೆ, ಸಮಸ್ತ ಜನಗಳಲ್ಲಿ ನೀವು ನನಗೆ
ಸ್ವಾಸ್ತ್ಯವಾಗಿರುವಿರಿ; ಯಾಕಂದರೆ ಭೂಮಿಯೆಲ್ಲಾ ನನ್ನದೇ;
೬ ಮತ್ತು ನೀವು ನನಗೆ ಯಾಜಕರ ರಾಜ್ಯವೂ, ಪರಿಶುದ್ಧ ಜನವೂ
ಆಗಿರುವಿರಿ. ಇಸ್ರಯೇಲ್ ಮಕ್ಕಳಿಗೆ ನೀನು ಹೇಳ ಬೇಕಾದ
ಮಾತುಗಳು ಇವೇ.
೭ ಆಗ ಮೋಶೆ ಬಂದು, ಜನರ ಹಿರಿಯರನ್ನು ಕರೆದು, ಕರ್ತ
ನು ತನಗೆ ಆಜ್ಞಾಪಿಸಿದ ಈ ಮಾತುಗಳನ್ನೆಲ್ಲಾ ಅವರ ಮುಂದೆ
೮ ಇಟ್ಟನು. ಜನರೆಲ್ಲಾ ಏಕವಾಗಿ ಉತ್ತರ ಕೊಟ್ಟು, ಕರ್ತನು
ಹೇಳಿದವುಗಳನ್ನೆಲ್ಲಾ ಮಾಡುತ್ತೇವೆಂದು, ಹೇಳಿದರು. ಆಗ
ಮೋಶೆ ಜನರ ಮಾತುಗಳನ್ನು ಕರ್ತನಿಗೆ ತಿರಿಗಿ ಹೇಳಿದನು.
೯ ಕರ್ತನು ಮೊಶೆಗೆ—ಇಗೋ, ನಾನು ನಿನ್ನ ಸಂಗರ ಮಾತಾಡು
ವರನ್ನು ಜನರು ಕೇಳುವ ಹಾಗೆಯೂ, ಅವರು ನಿತ್ಯವಾಗಿ ನಿ
ನ್ನನ್ನು ನಂಬುವ ಹಾಗೆಯೂ, ಕತ್ತಲಾದ ಮೇಘದಲ್ಲಿ ನಿನ್ನ
ಬಳಿಗೆ ಬರುತ್ತೇನೆ, ಅಂದನು. ಮೋಶೆ ಜನರ ಮಾತುಗಳನ್ನು
೧೦ ಕರ್ತನಿಗೆ ಶಿಳಿಸಿದನು. ಆಗ ಕರ್ತನು ಮೋಶೆಗೆ ಹೇಳ್ದೇ
ನಂದರೆ—ಜನರ ಬಳಿಗೆ ಹೋಗಿ, ಈ ಹೊತ್ತು ನಾಳೆ ಅವರನ್ನು
ಪರಿಶುದ್ಧ ಮಾಡು; ಅವರು ತಮ್ಮ ವಸ್ತ್ರಗಳನ್ನು ತೊಳೆಕೊಂಡು,
೧೧ ಮೂರನೇ ದಿವಸಕ್ಕೆ ಸಿದ್ಧವಾಗಿರಲಿ; ಯಾಕಂದರೆ ಮೂರನೇ
ದಿವಸದಲ್ಲಿ ಕರ್ತನು ಸಮಸ್ತ ಜನರ ಕಣ್ಣೆದುರಿನಲ್ಲಿ ಸೀನಾಯಿ
೧೨ ಪರ್ವತಕ್ಕೆ ಇಳಿದು ಬರುವನು. ಮತ್ತು ಜನರಿಗೋಸ್ಕರ ಸು
ತ್ತಲಾಗಿ ಮೇರೆಯನ್ನು ಇರಿಸಿ, ಅವರಿಗೆ ಹೇಳ ತಕ್ಕದ್ದೇನಂದರೆ,
ನೀವು ಬೆಟ್ಟವನ್ನು ಏರದ ಹಾಗೆಯೂ, ಅದರ ಅಂತ್ಯವನ್ನು
ಮುಟ್ಟದ ಹಾಗೆಯೂ ಜಾಗ್ರತೆಯಾಗಿರ್ರಿ; ಬೆಟ್ಟವನ್ನು ಮುಟ್ಟಿ
೧೩ ದವಕೆಲ್ಲಾ ಸಾಯುತೇ ಸಾಯ ಬೇಕು. ಯಾವ ಕೈಯಾದ
ರೂ ಅದನ್ನು ಮುಟ್ಟ ಬಾರದು; ಮುಟ್ಟಿದ ಪಶುವಾಗಲಿ ಮನು
ಷ್ಯನಾಗಲಿ ಬದುಕದೆ ಕಲ್ಲೆಸೆಯಲ್ಪಡ ಬೇಕು, ಇಲ್ಲವೆ ಕಿವಿಯ
ಲ್ಪಡ ಬೇಕು. ದೀರ್ಘವಾಗಿ ತುತೂರಿ ಊದುವ ಸಮಯದ
ಲ್ಲಿ ಅವರು ಬೆಟ್ಟದ ಕಡೆಗೆ ಏರ ಬೇಕು.
೧೪ ಆಗ ಮೋಶೆ ಬೆಟ್ಟದಿಂದ ಇಳಿದು, ಜನರನ್ನು ಪರಿಶುದ್ಧ ಮಾ
೧೫ ಡಿದನು; ಅವರು ತಮ್ಮ ವಸ್ತ್ರಗಳನ್ನು ತೊಳೆ ಕೊಂಡರು. ಅವ
ನು ಜನರಿಗೆ—ಮೂರನೇ ದಿವಸಕ್ಕೋಸ್ಕರ ಸಿದ್ಧವಾಗಿರ್ರಿ; ಹೆಂಡ
ರ ಬಳಿಗೆ ಸೇರದಿರ್ರಿ, ಅಂದನು.
೧೬ ಮೂರನೇ ದಿವಸದಲ್ಲಿ ಉದಯವಾದಾಗ, ಬೆಟ್ಟದ ಮೇಲೆ
ಗುಡುಗುಗಳೂ, ಮಿಂಚುಗಳೂ, ಕತ್ತಲಾದ ಮೇಘವೂ ಉಂಟಾ
ಗಿ, ಬಹು ಬಲವಾದ ತುತೂರಿಯ ಶಬ್ದವಾಯಿತು; ದಂಡಿನಲ್ಲಿ
೧೭ ದ್ದ ಜನರೆಲ್ಲಾ ಹೆದರಿದರು. ಆಗ ಮೋಶೆ ಜನರನ್ನು ದಂಡಿನೊ
ಳಗಿಂದ, ದೇವರೆದುರಿಗೆ ಹೊರಗೆ ಬರ ಮಾಡಿದನು; ಅವರು ಬೆ
೧೮ ಟ್ಟದ ಕೆಳಗೆ ನಿಂತು ಕೊಂಡರು. ಆದರೆ ಸೀನಾಯಿ ಬೆಟ್ಟವೆಲ್ಲಾ,
ಕರ್ತನು ಬೆಂಕಿಯೊಳಗೆ ಅದರ ಮೇಲೆ ಇಳಿದ್ದರಿಂದ, ಹೊಗೆ
ಹಾಯುತ್ತಾ ಇತ್ತು; ಅದರ ಹೊಗೆ ಬಲೆಯ ಹೊಗೆಯ ಹಾಗೆ
ಏರಿ ಬರುತ್ತಾ ಇತ್ತು; ಬೆಟ್ಟವೆಲ್ಲಾ ಬಹಳವಾಗಿ ನಡುಗುತ್ತಾ ಇ
೧೯ ತ್ತು. ತುತೂರಿಯ ಶಬ್ದವು ಬರ ಬರ ಬಲವಾಗುತ್ತಾ ಇತ್ತು;
ಆಗ ಮೋಶೆ ಮಾತಾಡಿದನು, ಕರ್ತನು ಅವನಿಗೆ ಒಂದು ಶಬ್ದ
೨೦ ದಿಂದ ಉತ್ತರ ಕೊಟ್ಟನು. ಆಗ ಕರ್ತನು ಸೀನಾಯಿ ಬೆಟ್ಟದ
ಮೇಲೆ, ಬೆಟ್ಟದ ತುದಿಯ ಮೇಲೆ, ಇಳಿದು ಬಂದನು; ಕರ್ತನು
ಮೋಶೆಯನ್ನೂ, ಬೆಟ್ಟದ ತುದಿಗೆ ಬರ ಬೇಕೆಂದು, ಕರೆದನು;
ಮೋಶೆ ಏರಿ ಹೋದನು.
೨೧ ಕರ್ತನು ಮೋಶೆಗೆ—ನೀನು ಇಳಿದು ಹೋಗಿ, ಜನರನ್ನು,
ಅವರು ನೋಡುವದಕ್ಕೋಸ್ಕರ ಮೇರೆ ದಾಟಿ, ಕರ್ತನ ಬಳಿಗೆ
ಶೇರದ ಹಾಗೆಯೂ, ಅವರಲ್ಲಿ ಬಹಳ ಮಂದಿ ಸಾಯದ ಹಾಗೆ
೨೨ ಯೂ, ಎಚ್ಚರಿಸು. ಕರ್ತನ ಸನ್ನಿಧಾನಕ್ಕೆ ಬಂದ ಯಾಜಕರು
ಸಹ, ಕರ್ತನು ಅವರಲ್ಲಿ ನಾಶನವನ್ನು ಉಂಟು ಮಾಡದ ಹಾ
೨೩ ಗೆ, ತಮ್ಮನ್ನು ಪರಿಶುದ್ಧ ಮಾಡಿ ಕೊಳ್ಳಲಿ, ಅಂದನು. ಮೋಶೆ
ಕರ್ತನಿಗೆ—ಜನರು ಸೀನಾಯಿ ಬೆಟ್ಟವನ್ನು ಏರಲಾರರು; ಬೆಟ್ಟ
ಕ್ಕೆ ಮೇರೆ ಹಾಕಿ, ಅದನ್ನು ಪರಿಶುದ್ಧ ಮಾಡೆಂದು, ನೀನೇ ನ
೨೪ ಮ್ಮನ್ನು ಎಚ್ಚರಿಸಿದಿಯಲ್ಲವೋ! ಅಂದನು. ಆಗ ಕರ್ತನು ಅ
ವನಿಗೆ—ನೀನು ಇಳಿದು ಹೋಗಿ, ಆರೋನನನ್ನು ಕರ ಕೊಂ
ಡು, ಇಲ್ಲಿಗೆ ಬಾ; ಆದರೆ ಅವನು ಅವರಲ್ಲಿ ನಾಶನವನ್ನು ಉಂಟು
ಮಾಡದ ಹಾಗೆ, ಯಾಜಕರೂ ಜನರೂ ಕರ್ತನ ಬಳಿಗೆ, ಮೇರೆ
೨೫ ದಾಟಿ ಏರದೆ ಇರಲಿ, ಅಂದನು. ಮೋಶೆ ಜನರ ಬಳಿಗೆ ಇಳಿದು
ಹೋಗಿ, ಅವರಿಗೆ ಹೇಳ್ದನು.





## ೨೦. ಸಂಧಿ.

೧ ಆಗ ಕರ್ತನು ಈ ವಾಕ್ಯಗಳನ್ನೆಲ್ಲಾ ಹೇಳ್ದನು; ಏನಂ
ದರೆ—
೨ ನಿನ್ನನ್ನು ಐಗುಪ್ತ ದೇಶದೊಳಗಿಂದ, ದಾಸತ್ವದ ಮನೆಯಿಂ
ದ ಹೊರಗೆ ಬರ ಮಾಡಿದ ನಿನ್ನ ದೇವರಾದ ಯೆಹೋವ ನಾ
3 ನೇ. ನನ್ನ ಮುಂದೆ ನಿನಗೆ ಬೇರೆ ದೇವರುಗಳು ಇರ ಬಾರದು.
೪ ಮೇಲಿನ ಆಕಾಶದಲ್ಲಾಗಲಿ, ಕೆಳಗಿನ ಭೂಮಿಯಲ್ಲಾಗಲಿ, ಭೂ
ಮಿಯ ಕೆಳಗಿನ ನೀರುಗಳಲ್ಲಾಗಲಿ, ಇರುವಂಥವುಗಳ ಹಾಗೆ ವಿ
ಗ್ರಹವನ್ನೂ ಯಾವ ರೂಪವನ್ನೂ ನಿನಗೆ ಮಾಡಿ ಕೊಳ್ಳ ಬೇ
೫ ಡ. ಅವುಗಳಿಗೆ ಅಡ್ಡ ಬೀಳಲೂ, ಸೇವಿಸಲೂ ಬೇಡ; ಯಾಕಂದ
ರೆ ನಿನ್ನ ದೇವರಾದ ಯೆಹೋವನಾಗಿರುವ ನಾನು ಕೋಪವು
ಳ್ಳ ದೇವರಾಗಿದ್ದೇನೆ; ನನ್ನನ್ನು ಹಗೆ ಮಾಡುವವರಲ್ಲಿ ತಂದೆಗಳ
ಅಕ್ರಮವನ್ನು ಮಕ್ಕಳ ಮೇಲೆ, ಮೂರನೇ ನಾಲ್ಕನೇ ತಲಾಂತರ
೬ ದ ವರೆಗೂ, ವಿಚಾರಿಸುತ್ತೇನೆ; ಆದರೆ ನನ್ನನ್ನು ಪ್ರೀತಿ ಮಾಡಿ,
ನನ್ನ ಆಜ್ಞೆಗಳನ್ನು ಕಾಪಾಡುವವರಿಗೆ ಸಾವಿರಗಳ ಪರ್ಯಂತ
ರ ಕೃಪೆಯನ್ನು ತೋರಿಸುತ್ತೇನೆ.
೭ ನಿನ್ನ ದೇವರಾದ ಯೆಹೋವನ ಹೆಸರನ್ನು ವ್ಯರ್ಥವಾಗಿ
ಎತ್ತ ಬೇಡ; ಯಾಕಂದರೆ ಕರ್ತನು ತನ್ನ ಹೆಸರನ್ನು ವ್ಯರ್ಥ
ವಾಗಿ ಎತ್ತುವವನನ್ನು ನಿರ್ಮಲನೆಂದು ತೀರಿಸುವದಿಲ್ಲ.
೮ ಸಬ್ಬತ್ ದಿವಸವನ್ನು ಪರಿಶುದ್ಧ ಮಾಡುವ ಹಾಗೆ ಜ್ಞಾಪಕ
೯ ಮಾಡಿಕೋ. ಆರು ದಿನ ಕಷ್ಟ ಮಾಡಿ, ನಿನ್ನ ಕೆಲಸವನ್ನೆಲ್ಲಾ
೧೦ ಮಾಡ ಬೇಕು; ಆದರೆ ಏಳನೇ ದಿವಸವು ನಿನ್ನ ದೇವರಾದ ಕ
ರ್ತನ ಸಬ್ಬತ್ ದಿವಸ; ಅದರಲ್ಲಿ ನೀನೂ, ನಿನ್ನ ಮಗನೂ, ನಿ
ನ್ನ ಮಗಳೂ, ನಿನ್ನ ದಾಸನೂ, ನಿನ್ನ ದಾಸಿಯೂ, ನಿನ್ನ ದನ
ವೂ, ನಿನ್ನ ಬಾಗಲುಗಳಲ್ಲಿರುವ ಪರವಾಸಿಯೂ, ಯಾವ ಕೆಲಸ
೧೧ ವನ್ನಾದರೂ ಮಾಡ ಬಾರದು. ಯಾಕಂದರೆ ಆರು ದಿವಸಗಳ
ಲ್ಲಿ ಕರ್ತನು ಆಕಾಶವನ್ನೂ, ಭೂಮಿಯನ್ನೂ, ಸಮುದ್ರವ
ನ್ನೂ, ಅವುಗಳಲ್ಲಿರುವ ಎಲ್ಲವುಗಳನ್ನೂ ಉಂಟು ಮಾಡಿ, ಏ
ಳನೇ ದಿವಸದಲ್ಲಿ ವಿಶ್ರಮಿಸಿ ಕೊಂಡನು; ಆದದರಿಂದ ಕರ್ತನು
ಸಬ್ಬತ್ ದಿವಸವನ್ನು ಆಶೀರ್ವದಿಸಿ, ಪರಿಶುದ್ಧ ಮಾಡಿದನು.
೧೨ ನಿನ್ನ ದೇವರಾದ ಕರ್ತನು ನಿನಗೆ ಕೊಡುವ ದೇಶದಲ್ಲಿ ನಿ
ನ್ನ ದಿವಸಗಳು ಹೆಚ್ಚಾಗುವ ಹಾಗೆ, ನಿನ್ನ ತಂದೆಯನ್ನೂ ನಿನ್ನ
ತಾಯಿಯನ್ನೂ ಸನ್ಮಾನಿಸು.
೧3 ಕೊಲ್ಲ ಬೇಡ.
೧೪ ವ್ಯಭಿಚಾರ ಮಾಡ ಬೇಡ.
೧೫ ಕದಿಯ ಬೇಡ.
೧೬ ನಿನ್ನ ನೆಕೆಯವನಿಗೆ ವಿರೋಧವಾಗಿ ಅಪಸಾಕ್ಷಿ ಹೇಳ ಬೇಡ.
೧೭ ನಿನ್ನ ನೆಕೆಯವನ ಮನೆ ಆಶಿಸ ಬೇಡ; ನಿನ್ನ ನೆಕೆಯವನ
ಹೆಂಡತಿಯನ್ನೂ, ಅವನ ದಾಸನನ್ನೂ, ಅವನ ದಾಸಿಯನ್ನೂ,
ಅವನ ಎತ್ತನ್ನೂ, ಅವನ ಕತ್ತೆಯನ್ನೂ, ನಿನ್ನ ನೆಕೆಯವನಿಗೆ
ಇರುವ ಯಾವದನ್ನಾದರೂ ಆಶಿಸ ಬೇಡ.
೧೮ ಜನರೆಲ್ಲಾ ಗುಡುಗುಗಳನ್ನೂ, ಮಿಂಚುಗಳನ್ನೂ, ತುತೂರಿ
ಧ್ವನಿಯನ್ನೂ, ಬೆಟ್ಟ ಹೊಗೆ ಹಾಯುವದನ್ನೂ ನೋಡಿದರು;
ಜನರು ನೋಡಿದಾಗ, ತೊಳಗಿ ಹೋಗಿ, ದೂರದಲ್ಲಿ ನಿಂತರು.
೧೯ ಅವರು ಮೋಶೆಗೆ—ನೀನೇ ನಮ್ಮ ಸಂಗತ ಮಾತಾಡು, ಆಗ ಕೇ
ಳುವೆವು; ಆದರೆ, ನಾವು ಸಾಯದ ಹಾಗೆ, ದೇವರು ನಮ್ಮ ಸಂಗ
೨೦ ತ ಮಾತಾಡದೆ ಇರಲಿ, ಅಂದರು. ಆಗ ಮೋಶೆ ಜನರಿಗೆ—ನೀವು
ಭಯ ಪಡ ಬೇಡಿರಿ, ನಿಮ್ಮನ್ನು ಕೋಧಿಸುವದಕ್ಕೋಸ್ಕರವೂ,
ನೀವು ಪಾಪ ಮಾಡದ ಹಾಗೆ, ಅವನ ಭಯವು ನಿಮ್ಮ ಮುಂದೆ
ಇರುವದಕ್ಕೋಸ್ಕರವೂ, ದೇವರು ಬಂದಿದ್ದಾನೆ, ಅಂದನು.
೨೧ ಆಗ ಜನರು ದೂರದಲ್ಲಿ ನಿಂತರು; ಮೋಶೆ ದೇವರಿರುವ ಕಾರ್ಕ
ತ್ತಲೆಯ ಹತ್ತರ ಬಂದನು.
೨೨ ಆಗ ಕರ್ತನು ಮೋಶೆಗೆ ಹೇಳ್ದೇನಂದರೆ—ನೀನು ಇಸ್ರ
ಯೇಲ್ ಮಕ್ಕಳಿಗೆ ಹೀಗೆ ಹೇಳ ಬೇಕು—ನಾನು ಆಕಾಶದೊಳ
23 ಗಿಂದ ಮಾತಾಡಿದ್ದೇನೆಂದು ನೋಡಿದಿರಿ. ನನ್ನ ಹೊರ್ತಾಗಿ
ಬೆಳ್ಳಿಯ ದೇವರುಗಳನ್ನು ನಿಮಗೆ ಮಾಡಿ ಕೊಳ್ಳ ಬೇಡಿರಿ;
ಬಂಗಾರದ ದೇವರುಗಳನ್ನು ನಿಮಗೆ ಮಾಡಿ ಕೊಳ್ಳ ಬೇಡಿರಿ.
೨೪ ಮಣ್ಣಿನ ಪೀಠವನ್ನು ನನಗೆ ಮಾಡ ಬೇಕು; ಅದರ ಮೇಲೆ ನಿನ್ನ
ಹೋಮಗಳನ್ನೂ ಸಮಾಧಾನದ ಬಲಿಗಳನ್ನೂ, ಕುರಿ ದನಗಳ
ನ್ನೂ ಅರ್ಪಿಸ ಬೇಕು; ನಾನು ನನ್ನ ಹೆಸರನ್ನು ಜ್ಞಾಪಕ ಪ
ಡಿಸುವ ಎಲ್ಲಾ ಸ್ಥಳಗಳಲ್ಲಿ ನಿನ್ನ ಹತ್ತರ ಬಂದು, ನಿನ್ನನ್ನು ಆ
೨೫ ಶೀರ್ವದಿಸುವೆನು. ಮತ್ತು ಕಲ್ಲಿನ ಪೀಠವನ್ನು ನನಗೆ ಮಾಡಿದ
ರೆ, ಅವುಗಳನ್ನು ಕೆತ್ತಿ ಕಟ್ಟ ಬೇಡ; ಯಾಕಂದರೆ ಉಳಿಯನ್ನು
೨೬ ಅದರ ಮೇಲೆ ಎತ್ತಿದರೆ, ಅದನ್ನು ಅಪವಿತ್ರ ಮಾಡುವಿ. ನನ್ನ
ಪೀಠದ ಮೇಲೆ, ಅದರಲ್ಲಿ ನಿನ್ನ ನಾಚಿಕೆ ಕಾಣಿಸದ ಹಾಗೆ, ಪಾ
ವಟಿಗೆಗಳನ್ನು ಹತ್ತಿ ಏರ ಬೇಡ.

## ೨೧. ಸಂಧಿ.

೧ ಅವರ ಮುಂದೆ ನೀನು ಇತ ತಕ್ಕ ನ್ಯಾಯಗಳು ಇವೇ.
೨ ನೀನು ಇಬ್ರೀಯನಾದ ದಾಸನನ್ನು ಕೊಂಡು ಕೊಂಡರೆ, ಅ
ವನು ಆರು ವರುಷ ಸೇವೆ ಮಾಡ ಬೇಕು; ಏಳನೇ ವರುಷದಲ್ಲಿ
3 ಸುಮ್ಮನೆ ಬಿಡುಗಡೆಯಾಗಿ ಹೋಗಲಿ. ಅವನು ಒಬ್ಬನಾಗಿ ಬಂ
ದರೆ, ಒಬ್ಬನಾಗಿ ಹೋಗ ಬೇಕು; ಹೆಂಡತಿಯುಳ್ಳವನಾಗಿ ಬಂ
೪ ದರೆ, ಅವನ ಹೆಂಡತಿ ಅವನ ಸಂಗತ ಹೋಗ ಬೇಕು. ಯಜ
ಮಾನನು ಅವನಿಗೆ ಕೊಟ್ಟ ಹೆಂಡತಿಯು ಅವನಿಗೆ ಕುಮಾರರ
ನ್ನೂ ಕುಮಾರ್ತೆಗಳನ್ನೂ ಹೆತ್ತಿದ್ದರೆ, ಹೆಂಡತಿಯೂ ಅವಳ
ಮಕ್ಕಳೂ ಯಜಮಾನನವರಾಗಿರ ಬೇಕು; ಅವನು ಒಬ್ಬನಾಗಿ
೫ ಹೋಗ ಬೇಕು. ಆದರೆ ದಾಸನು—ನಾನು ನನ್ನ ಯಜಮಾನ
ನನ್ನೂ, ನನ್ನ ಹೆಂಡತಿಯನ್ನೂ, ನನ್ನ ಮಕ್ಕಳನ್ನೂ ಪ್ರೀತಿ
ಮಾಡುತ್ತೇನೆ, ಬಿಡುಗಡೆಯಾಗಿ ಹೋಗುವದಕ್ಕೆ ಮನಸ್ಸಿಲ್ಲ,
೬ ಎಂದು ಸ್ಪಷ್ಟವಾಗಿ ಹೇಳಿದರೆ; ಯಜಮಾನನು ಅವನ
ದೇವರ ಸನ್ನಿಧಿಗೆ ತರಿಸಿ, ಬಾಗಲ ಬಳಿಗಾದರೂ, ಕಂಭದ ಬಳಿ
ಗಾದರೂ ತರಿಸಿ, ಯಜಮಾನನು ಅವನ ಕಿವಿಯನ್ನು ಸಲಾಕೆ
ಯಿಂದ ಚುಚ್ಚ ಬೇಕು; ಅವನು ನಿತ್ಯವಾಗಿ ಅವನಿಗೆ ಸೇವೆ ಮಾ
ಡ ಬೇಕು.
೭ ಮತ್ತು ಒಬ್ಬನು ಮಗಳನ್ನು ದಾಸಿಯಾಗಿ ಮಾರಿದರೆ, ದಾ
೮ ಸರು ಹೋಗುವ ಹಾಗೆ ಅವಳು ಹೋಗಿ ಬಿಡ ಬಾರದು. ಅವಳ
ನ್ನು ನೇಮಿಸಿ ಕೊಂಡ ಯಜಮಾನನ ಕಣ್ಣುಗಳಿಗೆ ಅವಳು ಸರಿ
ಯಾಗದಿದ್ದರೆ, ಅವಳನ್ನು ವಿಮೋಚಿಸುವದಕ್ಕೆ ಅಪ್ಪಣೆ ಕೊ
ಡ ಬೇಕು; ಅವನು ಅವಳಿಗೆ ವಂಚನೆಯಾಗಿ ನಡಿಸಿದ್ದರಿಂದ, ಪರ

೯ ಜನಕ್ಕೆ ಅವಳನ್ನು ಮಾರುವದಕ್ಕೆ ಅವನಿಗೆ ಅಧಿಕಾರವಿಲ್ಲ. ಅವ
ನು ತನ್ನ ಮಗನಿಗೆ ಅವಳನ್ನು ನೇಮಿಸಿದ್ದಾದರೆ, ಮಕ್ಕಳ ನ್ಯಾ
೧೦ ಯದ ಪ್ರಕಾರ ಅವಳಿಗೆ ಮಾಡ ಬೇಕು. ಮತ್ತೊಬ್ಬಳನ್ನು ತ
ಕ್ಕೊಂಡರೆ, ಅವಳ ಅನ್ನ ವಸ್ತ್ರ ಸಹವಾಸಗಳನ್ನು ಕಡಿಮೆ ಮಾ
೧೧ ಡ ಬಾರದು. ಈ ಮೂರನ್ನು ಅವಳಿಗೆ ಮಾಡದೆ ಹೋದರೆ,
ಅವಳು ಸುಮ್ಮನೆ ಹಣವಿಲ್ಲದೆ ಬಿಡುಗಡೆಯಾಗಿ ಹೋಗಿ ಬಿಡ ಬ
ಹುದು.

೧೨ ಮನುಷ್ಯನನ್ನು ಸಾಯುವ ಹಾಗೆ ಹೊಡೆದವನು ಸಾಯ
೧೩ ಬೇ ಸಾಯ ಬೇಕು. ಅವನು ಹೊಂಚಿ ನೋಡದೆ ಇರಲಾಗಿ, ದೇ
ವರು ಅವನ ಕೈಗೆ ಸಿಕ್ಕ ಮಾಡಿದ್ದಾದರೆ, ಅವನು ಓಡಿ ಹೋಗು
೧೪ ವದಕ್ಕೋಸ್ಕರ ನಿನಗೆ ಸ್ಥಳವನ್ನು ನಿರ್ಣಯಿಸುವೆನು. ಆದ
ರೆ ಒಬ್ಬನು ತನ್ನ ನೆರೆಯವನನ್ನು ಯುಕ್ತಿಯಿಂದ ಕೊಂದು
ಹಾಕುವದಕ್ಕೋಸ್ಕರ ಗರ್ವವಾಗಿ ಅವನ ಮೇಲೆ ಬಿದ್ದರೆ, ಅ
ವನು ಸಾಯುವ ಹಾಗೆ, ಅವನನ್ನು ನನ್ನ ಬಲಿ ಪೀಠದಿಂದ ತೆಗೆ
೧೫ ಯ ಬೇಕು. ತಂದೆಯನ್ನೂ ತಾಯಿಯನ್ನೂ ಹೊಡೆಯುವವ
ನು ಸಾಯಲೇ ಸಾಯ ಬೇಕು.

೧೬ ಮನುಷ್ಯನನ್ನು ಕದ್ದು ಮಾರಿದವನಾಗಲಿ, ತನ್ನಲ್ಲಿ ಇಟ್ಟು
ಕೊಂಡವನಾಗಲಿ, ಸಾಯಲೇ ಸಾಯ ಬೇಕು.

೧೭ ತಂದೆಗಾದರೂ ತಾಯಿಗಾದರೂ ಶಾಪ ಕೊಟ್ಟವನು ಸಾಯ
ಲೇ ಸಾಯ ಬೇಕು.

೧೮ ಇಬ್ಬರು ಜಗಳವಾಡಲಾಗಿ, ಒಬ್ಬನು ಮತ್ತೊಬ್ಬನನ್ನು ಕ
ಲ್ಲಿನಿಂದಾಗಲಿ ಮುಷ್ಟಿಯಿಂದಾಗಲಿ ಹೊಡೆದ್ದರಿಂದ, ಅವನು ಸಾ
೧೯ ಯದೆ ಮಂಚದಲ್ಲಿ ಬಿದ್ದರೆ, ಅವನು ಎದ್ದು ಕೋಲೂರಿ ಕೊಂ
ಡು ತಿರುಗಾಡುವಾಗ, ಹೊಡೆದವನು ಅಪರಾಧವಿಲ್ಲದೆ ಹೋಗ
ಬೇಕು; ಹೋದ ಕಾಲಕ್ಕೋಸ್ಕರ ಮಾತ್ರ ಹಣ ಕೊಟ್ಟು, ಅ
ವನನ್ನು ಪೂರ್ಣ ಸ್ವಸ್ಥ ಮಾಡಿಸ ಬೇಕು.

೨೦ ಒಬ್ಬನು ದಾಸನನ್ನಾಗಲಿ, ದಾಸಿಯನ್ನಾಗಲಿ, ತನ್ನ ಕೈ ಕೆಳ
ಗೆ ಸಾಯುವ ಹಾಗೆ, ಕೋಲಿನಿಂದ ಹೊಡೆದರೆ, ಅವನಿಗೆ ನಿಶ್ಚಯ
೨೧ ವಾಗಿ ದಂಡನೆ ಆಗ ಬೇಕು. ಆದರೂ ಅವರು ಒಂದೆರಡು ದಿವ
ಸ ಉಳಿದರೆ, ದಂಡನೆ ಆಗ ಕೂಡದು; ಯಾಕಂದರೆ ಅವರು ಅ
ವನ ಹಣವೇ.

೨೨ ಇಬ್ಬರು ಜಗಳವಾಡಲಾಗಿ, ಗರ್ಭಿಣಿಯಾದ ಸ್ತ್ರೀಯನ್ನು,
ಅವಳ ಗರ್ಭವು ಹೋಗುವ ಹಾಗೆ ಹೊಡೆದರೆ, ನಷ್ಟ ಆಗದ
ಪಕ್ಷದಲ್ಲಿ, ಆ ಸ್ತ್ರೀಯ ಗಂಡನು ನೇಮಿಸಿದಷ್ಟು ದಂಡನೆ ಆಗ
೨೩ ಬೇಕು; ಅಧಿಪತಿಗಳ ಮಾತನ್ನು ಕೇಳಿ, ಕೊಡ ಬೇಕು. ನಷ್ಟ
೨೪ ವಾದ ಪಕ್ಷದಲ್ಲಿ, ಪ್ರಾಣಕ್ಕೆ ಪ್ರಾಣವನ್ನೂ, ಕಣ್ಣಿಗೆ ಕಣ್ಣ
ನ್ನೂ, ಹಲ್ಲಿಗೆ ಹಲ್ಲನ್ನೂ, ಕೈಗೆ ಕೈಯನ್ನೂ, ಕಾಲಿಗೆ ಕಾಲ
೨೫ ನ್ನೂ, ಸುಟ್ಟ ಘಾಯಕ್ಕೆ ಸುಟ್ಟ ಘಾಯವನ್ನೂ, ಕಡಿದ ಘಾ
ಯಕ್ಕೆ ಕಡಿದ ಘಾಯವನ್ನೂ, ಹೊಡೆದ ಘಾಯಕ್ಕೆ ಹೊಡೆ
ದ ಘಾಯವನ್ನೂ, ಕೊಡ ಬೇಕು.

೨೬ ಇದಲ್ಲದೆ ಒಬ್ಬನು ದಾಸನ ಕಣ್ಣನ್ನೂ ದಾಸಿಯ ಕಣ್ಣನ್ನೂ
ಹೊಡೆದು, ಕೆಡಿಸಿದರೆ, ಆ ಕಣ್ಣಿಗೋಸ್ಕರ ಅವನನ್ನು ಬಿಡುಗಡೆ
೨೭ ಯಾಗಿ ಕಳುಹಿಸ ಬೇಕು. ದಾಸನ ಹಲ್ಲನ್ನೂ ದಾಸಿಯ ಹಲ್ಲ
ನ್ನೂ ಉದರ ಬಡಿದರೆ, ಆ ಹಲ್ಲಿಗೋಸ್ಕರ ಬಿಡುಗಡೆಯಾಗಿ
ಕಳುಹಿಸ ಬೇಕು.

೨೮ ಇದಲ್ಲದೆ ಎತ್ತು ಗಂಡಸನ್ನಾಗಲಿ, ಹೆಂಗಸನ್ನಾಗಲಿ, ಸಾಯುವ
ಹಾಗೆ ಹಾಯಿದರೆ, ಆ ಎತ್ತನ್ನು ಕಲ್ಲೆಸೆಯ ಬೇಕು; ಅದರ
ಮಾಂಸವನ್ನು ತಿನ್ನ ಬಾರದು; ಆದರೆ ಎತ್ತಿನ ಯಜಮಾನನು
೨೯ ನಿರಪರಾಧಿಯಾಗಿರ ಬೇಕು. ಆದರೆ ಆ ಎತ್ತು ಮೊದಲಿಂದ ಹಾ
ಯುವಂಥಾದ್ದೆಂದು ಯಜಮಾನನಿಗೆ ತಿಳಿಯಲ್ಪಟ್ಟಾಗ್ಯೂ, ಅವ
ನು ಅದನ್ನು ಭದ್ರ ಮಾಡದೆ ಇದ್ದದರಿಂದ, ಅದು ಗಂಡಸನ್ನಾ
ಗಲಿ ಹೆಂಗಸನ್ನಾಗಲಿ ಕೊಂದು ಹಾಕಿದರೆ, ಎತ್ತನ್ನು ಕಲ್ಲೆಸೆಯ
೩೦ ಬೇಕು; ಯಜಮಾನನು ಸಾಯ ಬೇಕು. ಪ್ರಾಯಶ್ಚಿತ್ತವನ್ನು
ಅವನಿಗೆ ನೇಮಿಸಿದರೆ, ಅವನು ತನಗೆ ನೇಮಿಸಿದ್ದೆಲ್ಲಾ ಪ್ರಾಣ ವಿ
ಮೋಚನೆಗೋಸ್ಕರ ಕೊಡಲಿ. ಅದು ಮಗನನ್ನು ಹಾಯಿತಾದ
೩೧ ರೂ, ಮಗಳನ್ನು ಹಾಯಿತಾದರೂ, ಈ ನ್ಯಾಯದ ಪ್ರಕಾರ ಅ
ದಕ್ಕೆ ಮಾಡ ಬೇಕು. ದಾಸನನ್ನಾದರೂ ದಾಸಿಯನ್ನಾದರೂ
೩೨ ಎತ್ತು ಹಾಯಿದರೆ, ಅವರ ಯಜಮಾನನಿಗೆ ಮೂವತ್ತು ಬೆಕೆಲ್
ಬೆಳ್ಳಿಯನ್ನು ಕೊಡ ಬೇಕು; ಮತ್ತು ಎತ್ತನ್ನು ಕಲ್ಲೆಸೆಯ
ಬೇಕು.

೩೩ ಇದಲ್ಲದೆ ಗುಣಿಯನ್ನು ತೆಕೆದವನಾಗಲಿ, ಗುಣಿಯನ್ನು ಅಗಿ
ದವನಾಗಲಿ, ಅದನ್ನು ಮುಚ್ಚದೆ ಇದ್ದದರಿಂದ, ಎತ್ತಾದರೂ ಕತ್ತೆ
೩೪ ಯಾದರೂ ಗುಣಿಯಲ್ಲಿ ಬಿದ್ದರೆ, ಗುಣಿಯ ಯಜಮಾನನು
ಕ್ರಯ ಕೊಡ ಬೇಕು; ಅವುಗಳ ಯಜಮಾನನಿಗೆ ಹಣ ತೀರಿಸ
ಬೇಕು; ಆದರೆ ಸತ್ತ ಹೆಣ ಅವನದಾಗ ಬೇಕು.

೩೫ ಇದಲ್ಲದೆ ಒಬ್ಬನ ಎತ್ತು ಮತ್ತೊಬ್ಬನ ಎತ್ತನ್ನು ಹಾಯಿ
ದ್ದರಿಂದ ಅದು ಸತ್ತರೆ, ಜೀವದಿಂದಿರುವ ಎತ್ತನ್ನು ಮಾರಿ, ಅದ
ರ ಕ್ರಯವನ್ನು ಪಾಲು ಹಂಚ ಬೇಕು; ಸತ್ತ ಹೆಣವನ್ನು ಸಹ
೩೬ ಪಾಲು ಹಂಚ ಬೇಕು. ಆದರೆ ಆ ಎತ್ತು ಮೊದಲಿನಿಂದ ಹಾಯು
ವಂಥಾದ್ದೇ ಎಂದು ತಿಳಿದಿರಲಾಗಿ, ಯಜಮಾನನು ಅದನ್ನು
ಭದ್ರ ಮಾಡದೆ ಹೋಗಿದ್ದರೆ, ಎತ್ತಿಗೆ ಎತನ್ನು ಬದಲು ಕೊಡ
ಬೇಕು; ಆದರೆ ಸತ್ತ ಹೆಣವು ಅವನದಾಗ ಬೇಕು.

## ೨೨. ಸಂಧಿ.

೧ ಒಬ್ಬನು ಎತ್ತನ್ನಾಗಲಿ ಕುರಿಯನ್ನಾಗಲಿ ಕದ್ದು ಕೊಯಿದರೆ,
ಇಲ್ಲವೆ ಮಾರಿದರೆ, ಎತ್ತಿಗೆ ಐದು ಎತ್ತುಗಳನ್ನೂ, ಕುರಿಗೆ ನಾ
ಲ್ಕು ಕುರಿಗಳನ್ನೂ ಬದಲಾಗಿ ಕೊಡ ಬೇಕು.

೨ ಕಳ್ಳನು ಮನೆ ಮುರಿಯುವದರಲ್ಲಿ ಸಿಕ್ಕಿ, ಹೊಡೆಯಲ್ಪಟ್ಟು
ಸತ್ತರೆ, ಅವನಿಗೋಸ್ಕರ ರಕ್ತಾಪರಾಧವಿಲ್ಲ. ಅವನ ಮೇಲೆ
ಸೂರ್ಯ ಮೂಡಿದ್ದಾದರೆ, ಅವನಿಗೋಸ್ಕರ ರಕ್ತಾಪರಾಧ
ಉಂಟು; ಕದ್ದದ್ದನ್ನು ಅವನು ತಿರಿಗಿ ಕೊಡಲೇ ಕೊಡ ಬೇಕು;
ಅವನಿಗೆ ಏನು ಇಲ್ಲದಿದ್ದರೆ, ಕದ್ದದ್ದಕ್ಕೋಸ್ಕರ ಅವನನ್ನು ಮಾ
೪ ರ ಬೇಕು. ಕದ್ದದ್ದು ಎತ್ತಾಗಲಿ, ಕತ್ತೆಯಾಗಲಿ, ಕುರಿಯಾಗಲಿ,
ಜೀವದಿಂದ ಅವನ ಬಳಿಯಲ್ಲಿ ಸಿಕ್ಕಿದರೆ, ಅವನು ಎರಡುಪ್ಪು ತಿರಿ
ಗಿ ಕೊಡ ಬೇಕು.

೫ ಒಬ್ಬನು ತನ್ನ ಹಿಂಡನ್ನು ಕಳುಹಿಸಿ, ಮತ್ತೊಬ್ಬನ ಹೊಲ
ದಲ್ಲಿ ಮೇಯಿಸಿ, ಹೊಲವನ್ನಾಗಲಿ ದ್ರಾಕ್ಷೇ ತೋಟವನ್ನಾಗಲಿ
ಮೇಯಿಸಿ ಬಿಟ್ಟರೆ, ತನ್ನ ಹೊಲದ ಉತ್ತಮವಾದದರಿಂದಲೂ,
ತನ್ನ ದ್ರಾಕ್ಷೇ ತೋಟದ ಉತ್ತಮವಾದದರಿಂದಲೂ, ಬದಲು ಕೊ
ಡ ಬೇಕು.

೬ ಬೆಂಕಿ ವಿಸ್ತರಿಸಲ್ಪಟ್ಟು, ಮುಳ್ಳುಗಳನ್ನು ಹಿಡಿದ್ದರಿಂದ, ಸೂ





ಡುಗಳ ಬಣವೆ ಆಗಲಿ, ಬೆಳೆ ಆಗಲಿ, ಹೊಲವಾಗಲಿ, ಸುಡಲ್ಪಟ್ಟ
ರೆ, ಕಿಚ್ಚನ್ನು ಹಚ್ಚಿದವನು ನಿಶ್ಚಯವಾಗಿ ಬದಲು ಕೊಡ ಬೇಕು.

೭ ಒಬ್ಬನು ತನ್ನ ನೆರೆಯವನಿಗೆ ಹಣವನ್ನಾದರೂ ಸಾಮಾನು
ಗಳನ್ನಾದರೂ ಇಟ್ಟು ಕೊಳ್ಳುವದಕ್ಕೆ ಕೊಟ್ಟಾಗ, ಅದು ಇವನ
ಮನೆಯಿಂದ ಕಳ್ಳವಾಗಿ ಹೋದರೆ, ಕಳ್ಳನು ಸಿಕ್ಕಿದರೆ, ಅವನು
೮ ಎರಡುಪ್ಪು ಕೊಡ ಬೇಕು. ಕಳ್ಳನು ಸಿಕ್ಕದೆ ಹೋದರೆ, ಮನೇ
ಯಜಮಾನನು—ತಾನು ನೆರೆಯವನ ಸಾಮಾನುಗಳ ಮೇಲೆ ಕೈ
ಹಾಕಿಲ್ಲವೇನೋ! ಎಂದು ವಿಚಾರಿಸುವದಕ್ಕೆ ನ್ಯಾಯಾಧಿಪತಿ
೯ ಗಳ ಬಳಿಗೆ ತರಲ್ಪಡಲಿ. ಎತ್ತು ಕತ್ತೆ ಕುರಿ ವಸ್ತ್ರಗಳ ವಿಷಯವಾ
ದ ಎಲ್ಲಾ ಅಪರಾಧಕ್ಕೋಸ್ಕರವೂ, ಅದೇ ನನ್ನದೆಂದು ಹೇಳಿ
ಕೊಳ್ಳುವ, ಎಲ್ಲಾ ಕಳ್ಳ ಕೊಂಡ ಎಲ್ಲಾದಕ್ಕೋಸ್ಕರವೂ, ಇ
ಬ್ಬರ ಮಾತು ನ್ಯಾಯಾಧಿಪತಿಗಳ ಸನ್ನಿಧಿಗೆ ಬರಲಿ; ನ್ಯಾ
ಯಾಧಿಪತಿಗಳು ಯಾವನಿಗೆ ನಿರ್ಣಯ ತೀರಿಸುವರೋ, ಅವ
ನು ತನ್ನ ನೆರೆಯವನಿಗೆ ಎರಡುಪ್ಪು ಕೊಡ ಬೇಕು.

೧೦ ಒಬ್ಬನು ತನ್ನ ನೆರೆಯವನಿಗೆ ಕತ್ತೆಯನ್ನಾದರೂ, ಎತ್ತನ್ನಾ
ದರೂ, ಕುರಿಯನ್ನಾದರೂ, ಯಾವ ಪಶುವನ್ನಾದರೂ ಕಾಯು
ವದಕ್ಕೆ ಕೊಟ್ಟಾಗ ಅದು ಸತ್ತರೆ, ಇಲ್ಲವೆ ಊನವಾದರೆ, ಇಲ್ಲ
೧೧ ವೆ ಯಾರೂ ನೋಡದ ಸಮಯದಲ್ಲಿ ಪೈಮಲ್ಪಟ್ಟರೆ, ತಾನು
ತನ್ನ ನೆರೆಯವನ ವಸ್ತುವಿನ ಮೇಲೆ ಕೈ ಹಾಕಿಲ್ಲವೆಂಬ ಆಣೆ
ಯು ಕರ್ತನ ಸನ್ನಿಧಿಯಲ್ಲಿ ಅವರಿಬ್ಬರಿಗೆ ಉಂಟಾಗ ಬೇಕು;
ಅದನ್ನು ಯಜಮಾನನು ತಕ್ಕೊಳ್ಳಲಿ, ಅವನು ಬದಲು ಕೊ
೧೨ ಡದೆ ಇರಲಿ. ಆದರೆ ಅದು ಕಳ್ಳತನವಾಗಿ ಪೈಮಲ್ಪಟ್ಟಿದ್ದಾದ
೧೩ ರೆ, ಯಜಮಾನನಿಗೆ ಬದಲು ಕೊಡ ಬೇಕು. ಅದು ಅರಿಯಲ್ಪ
ಟ್ಟದ್ದಾದರೆ, ಅದನ್ನು ಸಾಕ್ಷಿಗೋಸ್ಕರ ತರಲಿ, ಹರಿಯಲ್ಪಟ್ಟದ್ದ
ಕ್ಕೆ ಬದಲು ಕೊಡದೆ ಇರಲಿ.

೧೪ ಒಬ್ಬನು ತನ್ನ ನೆರೆಯವನಿಂದ ಎರವು ಪೈದದ್ದು ಯಜ
ಮಾನನಿಲ್ಲದ ಸಮಯದಲ್ಲಿ ಊನವಾದರೆ, ಇಲ್ಲವೆ ಸತ್ತರೆ, ಬದ
೧೫ ಲು ಕೊಡ ಬೇಕು. ಯಜಮಾನನು ಅದರ ಸಂಗಡ ಇದ್ದರೆ, ಬ
ದಲು ಕೊಡದೆ ಇರಲಿ; ಅದು ಬಾಡಿಗೆಗೆ ತಕ್ಕೊಂಡದ್ದಾದರೆ, ಅ
ದರ ಬಾಡಿಗೆಗೆ ಬಂದಿರುವದು.

೧೬ ಇದಲ್ಲದೆ ಒಬ್ಬನು ನೇಮಕ ಮಾತಲ್ಪತದ ಕನ್ನಿಕೆಯನ್ನು
ಮೋಸಗೊಳ್ಳಿಸಿ, ಅವಳ ಸಂಗಡ ಮಲಗಿದರೆ, ಅವಳಿಗೆ ತನ್ನ ಹೆಂ
೧೭ ಡತಿಯಾಗುವ ಹಾಗೆ ತೆರವ ಕೊಡ ಬೇಕು. ಅವಳ ತಂದೆ ಅವಳ
ನ್ನು ಕೊಡ ಮನಸ್ಸಿಲ್ಲದೆ ಹೋದರೆ, ಕನ್ನಿಕೆಯರ ತೆರದ ಪ್ರ
ಕಾರ ಹಣ ಸಲ್ಲಿಸ ಬೇಕು.

೧೮ ಶಾನ್ಯಗಾರ್ತಿಯನ್ನು ಬದುಕ ಗೊಡಿಸ ಬೇಡ.

೧೯ ಮೃಗದ ಸಂಗಡ ಮಲಗುವವನು ಯಾವನಾದರೂ ಸಾಯ
ಲೇ ಸಾಯ ಬೇಕು.

೨೦ ಕರ್ತನೊಬ್ಬನಿಗೆ ಹೊರ್ತಾಗಿ, ಮತ್ತೊಬ್ಬ ದೇವರಿಗೆ ಅ
ರ್ಪಿಸುವವನು ಶಾಪದ ಸಂಗಡ ನಿರ್ಮೂಲವಾಗ ಬೇಕು.

೨೧ ಪರದೇಶಸ್ಥನನ್ನು ಉಪದ್ರ ಪಡಿಸ ಬೇಡ, ಬಾಧಿಸ ಬೇಡ;
ಯಾಕಂದರೆ ನೀವು ಐಗುಪ್ತ ದೇಶದಲ್ಲಿ ಪರದೇಶಿಗಳಾಗಿದ್ದಿರಿ.

೨೨ ಎಲ್ಲಾ ವಿಧವೆಯರನ್ನೂ ದಿಕ್ಕಿಲ್ಲದವರನ್ನೂ ಕುಂದಿಸ ಬೇಡ.

೨೩ ಅವರನ್ನು ಕುಂದಿಸೇ ಕುಂದಿಸಿದರೆ, ಅವರು ಹ್ಯಾಗೂ ನನಗೆ ಕೂ
೨೪ ಗಿದರೆ, ನಾನು ನಿಶ್ಚಯವಾಗಿ ಅವರ ಕೂಗು ಕೇಳುವೆನು. ಆಗ ನ
ನ್ನ ಕೋಪವು ಉರಿಯುವದು; ಕತ್ತಿಯಿಂದ ನಿಮ್ಮನ್ನು ಕೊಲ್ಲು
ವೆನು; ನಿಮ್ಮ ಹೆಂಡರು ವಿಧವೆಯರಾಗಿಯೂ ನಿಮ್ಮ ಮಕ್ಕಳು
ದಿಕ್ಕಿಲ್ಲದವರಾಗಿಯೂ ಆಗುವರು.

೨೫ ನಿನ್ನ ಬಳಿಯಲ್ಲಿ ಬಡವರಾಗಿರುವ ನನ್ನ ಜನರಿಗೆ ಹಣವನ್ನು
ಕೈಗಡ ಕೊಟ್ಟೆಯೆ, ಅವರಿಗೆ ಬಡ್ಡಿಗಾರನಾಗಿರದೆ, ಅವನ ಮೇಲೆ
೨೬ ಬಡ್ಡಿಯನ್ನಿಡ ಬೇಡ. ಹ್ಯಾಗಾದರೂ ನಿನ್ನ ನೆರೆಯವನ ಬಟ್ಟೆ
ಯನ್ನು ಅಡವಾಗಿ ತಕ್ಕೊಂಡರೆ, ಸೂರ್ಯನು ಮುಣುಗುವಾ
೨೭ ಗ, ಅವನಿಗೆ ಹಿಂದಕ್ಕೆ ಕೊಡ ಬೇಕು; ಯಾಕಂದರೆ ಅದು ಒಂ
ದೇ ಅವನಿಗೆ ಹೊದಿಕೆಯಾಗಿದೆ; ಅದೇ ಅವನ ಮೈಗೆ ವಸ್ತ್ರ;
ಯಾವದರಲ್ಲಿ ಅವನು ಮಲಗುವನು! ಅವನು ನನಗೆ ಕೂಗಿದರೆ,
ಕೇಳುವೆನು; ಯಾಕಂದರೆ ನಾನು ದಯವುಳ್ಳವನು.

೨೮ ದೇವರುಗಳನ್ನು ನಿಂದಿಸ ಬೇಡ; ನಿನ್ನ ಜನರಲ್ಲಿ ಅಧಿಪತಿ
ಯಾದವನನ್ನು ಶಪಿಸ ಬೇಡ.

೨೯ ನಿನ್ನ ಪಕ್ವ ಫಲಗಳ ವಿಷಯದಲ್ಲಿಯೂ ನಿನ್ನ ರಸ ವರ್ಗ
ಗಳ ವಿಷಯದಲ್ಲಿಯೂ ತಡ ಮಾಡ ಬೇಡ; ನಿನ್ನ ಮಕ್ಕಳಲ್ಲಿ
೩೦ ಜೊಚ್ಚಲನ್ನು ನನಗೆ ಕೊಡ ಬೇಕು. ಹಾಗೆಯೇ ನಿನ್ನ ಎತ್ತಿಗೂ
ಕುರಿಗೂ ಮಾಡ ಬೇಕು; ಅದು ಏಳು ದಿವಸ ತಾಯಿಯ ಹತ್ರ
ಇರಲಿ; ಎಂಟನೇ ದಿವಸದಲ್ಲಿ ನನಗೆ ಕೊಡ ಬೇಕು.

೩೧ ಮತ್ತು ನೀವು ನನಗೆ ಪರಿಶುದ್ಧ ಮನುಷ್ಯರಾಗಿರ ಬೇಕು;
ಹೊಲದಲ್ಲಿ ಹರಿಯಲ್ಪಟ್ಟ ಮಾಂಸವನ್ನು ಉಣ್ಣ ಬೇಡಿರಿ; ಅದ
ನ್ನು ನಾಯಿಗಳಿಗೆ ಹಾಕ ಬೇಕು.

## ೨೩. ಸಂಧಿ.

೧ ಸುಳ್ಳು ಸುದ್ದಿಯನ್ನು ಎತ್ತ ಬೇಡ, ಬಲಾತ್ಕಾರದ ಸಾಕ್ಷಿಯಾ
ಗಿರುವದಕ್ಕೆ ದುಷ್ಟನಿಗೆ ಕೈ ಜೋಡಿಸ ಬೇಡ. ಕೇಡಿಗೋಸ್ಕ
ರ ಬಹು ಮಂದಿಯನ್ನು ಹಿಂದಟ್ಟ ಬೇಡ; ಬಹು ಮಂದಿಯನ್ನು
ಹಿಂಬಾಲಿಸಿ, ನ್ಯಾಯವನ್ನು ತಪ್ಪಿಸುವದಕ್ಕೋಸ್ಕರ ವ್ಯಾಜ್ಯ
೩ ದಲ್ಲಿ ಉತ್ತರ ಕೊಡ ಬೇಡ. ದರಿದ್ರನಿಗಾದರೂ ವ್ಯಾಜ್ಯದಲ್ಲಿ
ದಾಕ್ಷಿಣ್ಯ ಮಾಡ ಬೇಡ.

೪ ನಿನ್ನ ಶತ್ರುವಿನ ಎತ್ತಾದರೂ ಕತ್ತೆಯಾದರೂ ತಪ್ಪಿ ಹೋ
ಗುವದಾಗಿ ಸಿಕ್ಕಿದರೆ, ಅದನ್ನು ಹಿಂದಕ್ಕೆ ಹೊಡ ಕೊಂಡು ಬರ
೫ ಬೇಕು. ನಿನ್ನ ಹಗೆಯವನ ಕತ್ತೆ ಹೊರೆಯ ಕೆಳಗೆ ಬಿದ್ದಿರುವದ
ನ್ನು ಕಂಡಾಗ, ಅವನಿಗೆ ಸಹಾಯ ಮಾಡದೆ ಹಿಂದೆಸೆಯುತ್ತಿದ್ದರೆ,
ಹ್ಯಾಗಾದರೂ ಅವನಿಗೆ ಸಹಾಯ ಮಾಡ ಬೇಕು.

೬ ಅವನ ವ್ಯಾಜ್ಯದಲ್ಲಿ ನಿನ್ನ ಬಡವನ ನ್ಯಾಯವನ್ನು ತಪ್ಪಿಸ
೭ ಬೇಡ. ಮೋಸದ ಮಾತಿಗೆ ದೂರವಾಗಿರ ಬೇಕು; ನಿರಪರಾಧಿ
ಯನ್ನೂ ನೀತಿವಂತನನ್ನೂ ಕೊಲ್ಲ ಬೇಡ; ಯಾಕಂದರೆ ನಾ
೮ ನು ದುಷ್ಟನನ್ನು ನೀತಿವಂತನೆಂದು ತೀರಿಸುವದಿಲ್ಲ. ಲಂಚ ತ
ಕ್ಕೊಳ್ಳ ಬೇಡ; ಯಾಕಂದರೆ ಲಂಚ ದೃಷ್ಟಿಯುಳ್ಳವರನ್ನು
ಕುರುಡ ಮಾಡಿ, ನೀತಿವಂತರ ಮಾತುಗಳನ್ನು ಕೊಂಕು ಮಾಡು
ತ್ತದೆ.

೯ ಪರದೇಶಸ್ಥನನ್ನು ಉಪದ್ರ ಪಡಿಸ ಬೇಡ; ಪರದೇಶಸ್ಥನ ಮ
ನಸ್ಸು ನಿಮಗೂ ತಿಳಿದದೆ; ಯಾಕಂದರೆ ಐಗುಪ್ತ ದೇಶದಲ್ಲಿ ಪ
ರದೇಶಸ್ಥರಾಗಿದ್ದಿರಿ.

೧೦ ಆರು ವರುಷ ನಿನ್ನ ಭೂಮಿಗೆ ಬೀಜ ಹಾಕಿ, ಅದರ ಬೆಳೆಯ

೧೧ ನನ್ನು ಕೂಡಿಸ ಬೇಕು. ಆದರೆ ಏಳನೇ ವರುಷದಲ್ಲಿ ಅದಕ್ಕೆ ವಿ
ಶ್ರಾಂತಿಯನ್ನು ಕೊಟ್ಟು, ಅದನ್ನು ಸುಮ್ಮನಿರ ಗೊಡಿಸ ಬೇಕು;
ಆಗ ನಿನ್ನ ಜನರಲ್ಲಿರುವ ಬಡವರು ತಿನ್ನಲಿ; ಅವರು ಉಳಿಸಿದ್ದ
ನ್ನು ಹೊಲದ ಮೃಗಗಳು ತಿನ್ನಲಿ; ಹಾಗೆ ನಿನ್ನ ದ್ರಾಕ್ಷೇ ತೋ
ಟದಲ್ಲಿಯೂ ಇಪ್ಪೇ ತೋಟದಲ್ಲಿಯೂ ಮಾಡ ಬೇಕು.
೧೦ ಆರು ದಿವಸ ನಿನ್ನ ಕೆಲಸಗಳನ್ನು ಮಾಡ ಬೇಕು; ಆದರೆ ಏಳ
ನೇ ದಿವಸದಲ್ಲಿ, ನಿನ್ನ ಎತ್ತೂ ಕತ್ತೆಯೂ ತೀರಿಕೆಯಾಗುವ ಹಾ
ಗೆಯೂ, ನಿನ್ನ ದಾಸಿಯ ಮಗನೂ ಪರದೇಶಸ್ಥನೂ ಸಂಪ್ರಾ
ಣಿಸಿ ಕೊಳ್ಳುವ ಹಾಗೆಯೂ ವಿಶ್ರಾಂತಿಯಾಗಿರ ಬೇಕು.
೧೩ ನಾನು ನಿಮಗೆ ಹೇಳಿದ್ದೆಲ್ಲಾ ಕೈ ಕೊಳ್ಳ ಬೇಕು; ಬೇರೆ ದೇ
ವರುಗಳ ಹೆಸರನ್ನು ಸ್ಮರಿಸ ಬೇಡ; ಅದು ನಿನ್ನ ಬಾಯಿಯಲ್ಲಿ
ಕೇಳಿಸ ಬೇಡ.
೧೪ ವರುಷಕ್ಕೆ ಮೂರು ಸಾರಿ ನನಗೆ ಹಬ್ಬ ಮಾಡ ಬೇಕು.
೧೫ ಹುಳಿಯಿಲ್ಲದ ಕೊಟ್ಟಿಗಳ ಹಬ್ಬವನ್ನು ಆಚರಿಸ ಬೇಕು; ಆಬಿಬ್
ತಿಂಗಳಿನ ನೇಮಕವಾದ ಸಮಯದಲ್ಲಿ, ಏಳು ದಿವಸಗಳ ಪ
ರ್ಯಂತರ ನಾನು ನಿನಗೆ ಆಜ್ಞಾಪಿಸಿದ ಪ್ರಕಾರ, ಹುಳಿಯಿಲ್ಲದ
ಕೊಟ್ಟಿಗಳನ್ನು ತಿನ್ನ ಬೇಕು; ಆ ತಿಂಗಳಲ್ಲೇ ಐಗುಪ್ತವನ್ನು ಬಿ
ಟ್ಟು ಹೋದಿಯಲ್ಲ! ಮತ್ತು ಒಬ್ಬರೂ ಬರಿ ಕೈಯಾಗಿ ನನ್ನ
೧೬ ಸನ್ನಿಧಿಗೆ ಕಾಣಿಸಿ ಕೊಳ್ಳ ಬಾರದು. ಮತ್ತು ನಿನ್ನ ಹೊಲದ
ಲ್ಲಿ ಬಿತ್ತಿದ ಬೆಳೆಯ ಪ್ರಥಮ ಫಲಗಳ ಹಬ್ಬವಾಗಿರುವ ಸುಗ್ಗಿ
ಹಬ್ಬವನ್ನೂ, ನಿನ್ನ ಬೆಳೆಯನ್ನು ಹೊಲದಿಂದ ಕೂಡಿಸಿದ
ಮೇಲೆ ವರುಷದ ಅಂತ್ಯದಲ್ಲಿ ಇರುವ ಕೂಡಿಸುವ ಹಬ್ಬವ
೧೭ ನ್ನೂ ಆಚರಿಸ ಬೇಕು. ವರುಷಕ್ಕೆ ಮೂರು ಸಾರಿ ನಿನ್ನ ಗಂ
ಡಸಕಲೆಲ್ಲಾ ದೇವರಾದ ಕರ್ತನ ಸನ್ನಿಧಿಯಲ್ಲಿ ಕಾಣಿಸಿ ಕೊಳ್ಳ
ಬೇಕು.
೧೮ ನನ್ನ ಬಲಿಯ ರಕ್ತವನ್ನು ಹುಳಿ ಹಿಟ್ಟಿನ ಸಂಗಡ ಅರ್ಪಿಸ
ಬೇಡ; ನನ್ನ ಹಬ್ಬದಲ್ಲಿ ಅರ್ಪಿಸಿದ ಕೊಬ್ಬು ಮರು ದಿವಸದ
ಪರ್ಯಂತರ ಇಟ್ಟಿರ ಬಾರದು.
೧೯ ನಿನ್ನ ಭೂಮಿಯ ಪ್ರಥಮ ಫಲಗಳಲ್ಲಿ ಮೊದಲನೇದನ್ನು ನಿ
ನ್ನ ದೇವರಾದ ಕರ್ತನ ಮನೆಗೆ ತರ ಬೇಕು.
ಮೇಕೆಯ ಮರಿಯನ್ನು ತಾಯಿಯ ಹಾಲಿನಲ್ಲಿ ಬೇಯಿಸ
ಬೇಡ.
೨೦ ಇಗೋ, ಮಾರ್ಗದಲ್ಲಿ ನಿನ್ನನ್ನು ಕಾಪಾಡುವದಕ್ಕೋಸ್ಕ
ರವೂ, ನಾನು ಸಿದ್ಧ ಮಾಡಿದ ಸ್ಥಳಕ್ಕೆ ನಿನ್ನನ್ನು ತರುವದ
ಕ್ಕೋಸ್ಕರವೂ, ನಾನು ದೂತನನ್ನು ನಿನ್ನ ಮುಂದೆ ಕಳುಹಿ
೨೧ ಸುತ್ತೇನೆ. ಅವನಿಗೆ ಜಾಗರೂಕತೆಯಾಗಿರು; ಅವನ ಮಾತನ್ನು ಕೇ
ಳು; ಅವನನ್ನು ಕೆಣಕ ಬೇಡ; ಯಾಕಂದರೆ ನನ್ನ ಹೆಸರು ಅವ
೨೨ ನಲ್ಲಿ ಇರುವದರಿಂದ, ನಿಮ್ಮ ದ್ರೋಹಗಳನ್ನು ಮನ್ನಿಸನು. ಅವ
ನ ಮಾತನ್ನು ನೀನು ನಿಶ್ಚಯವಾಗಿ ಕೇಳ್ಳಿ, ನಾನು ಹೇಳಿ
ದ್ದನ್ನೆಲ್ಲಾ ಮಾಡಿದರೆ, ನಿನ್ನ ಶತ್ರುಗಳಿಗೆ ನಾನು ಶತ್ರುವಾಗಿರು
೨೩ ವೆನು, ನಿನ್ನ ವೈರಿಗಳಿಗೆ ನಾನು ವೈರಿಯಾಗಿರುವೆನು. ಯಾ
ಕಂದರೆ ನನ್ನ ದೂತನು ನಿನ್ನ ಮುಂದೆ ಹೋಗಿ, ಅಮೋರ್ಯ
ರ, ಹಿತ್ತಿಯರ, ಪೆರಿಜ್ಜಿಯರ, ಕನಾನ್ಯರ, ಹಿವ್ವಿಯರ, ಯೆಬೂ
ಸ್ಯರ, ದೇಶಕ್ಕೆ ನಿನ್ನನ್ನು ಬರ ಮಾಡುವನು; ಮತ್ತು ಅವರನ್ನು
೨೪ ನಾನು ನಿರ್ಮೂಲ ಮಾಡುವೆನು. ಅವರ ದೇವರುಗಳಿಗೆ ಅಡ್ಡ
ಬೀಳಲೂ, ಅವುಗಳನ್ನು ಸೇವಿಸಲೂ, ಬೇಡ; ಅವರ ಕ್ರಿಯೆಗಳ
ಪ್ರಕಾರ ಮಾಡದೆ, ಅವರನ್ನು ನಿರ್ಮೂಲ ಮಾಡಿ ಬಿಟ್ಟು, ಅವ
೨೫ ರ ವಿಗ್ರಹಗಳನ್ನು ಪೂರ್ಣವಾಗಿ ಮುರಿಯ ಬೇಕು. ನಿಮ್ಮ ದೇ
ವರಾದ ಕರ್ತನಿಗೆ ಸೇವೆ ಮಾಡ ಬೇಕು; ಆಗ ಅವನು ನಿನ್ನ
ಕೊಟ್ಟಿಯನ್ನೂ ನೀರನ್ನೂ ಆಶೀರ್ವದಿಸುವನು; ರೋಗವನ್ನು
೨೬ ನಿನ್ನ ಮಧ್ಯದಲ್ಲಿಂದ ತೊಲಗ ಮಾಡುವನು. ಗರ್ಭ ಕರಸುವ
ವಳೂ ಬಂಜೆಯೂ ನಿನ್ನ ದೇಶದಲ್ಲಿ ಇರುವದಿಲ್ಲ; ನಿನ್ನ ದಿನಗ
೨೭ ಳ ಲೆಖ್ಖವನ್ನು ಪೂರ್ತಿ ಮಾಡುವೆನು. ನನ್ನ ಭಯವನ್ನು ನಿ
ನ್ನ ಮುಂದೆ ಕಳುಹಿಸುವೆನು; ನೀನು ಸೇರುವ ಜನರನ್ನೆಲ್ಲಾ ತೊಂ
ದರೆ ಪಡಿಸಿ, ನಿನ್ನ ಹಗೆಯವರನ್ನೆಲ್ಲಾ ನಿನಗೆ ಬೆನ್ನು ಕೊಡ ಮಾ
೨೮ ಡುವೆನು. ಮತ್ತು ಹಿವ್ವಿಯರನ್ನೂ, ಕನಾನ್ಯರನ್ನೂ, ಹಿತ್ತಿಯ
ರನ್ನೂ ನಿನ್ನ ಮುಂದೆ ಪಿಡಿಸುವ ಕುರುಟಿಗನ ಹುಳಗಳನ್ನು ನಿನ್ನ
೨೯ ಮುಂದಾಗಿ ಕಳುಹಿಸುತ್ತೇನೆ. ಭೂಮಿಯು ಹಾಳಾಗಿ, ಅಡವಿ ಮೃ
ಗಗಳು ನಿನಗೆ ವಿರೋಧವಾಗಿ ಹೆಚ್ಚಾಗದ ಹಾಗೆ, ಅವರನ್ನು ಬಂ
೩೦ ದೇ ವರುಷದಲ್ಲಿ ನಿನ್ನ ಮುಂದಾಗಿ ಹೊರಡಿಸದೆ, ನೀನು ಅಭಿ
ವೃದ್ಧಿಯಾಗಿ, ದೇಶವನ್ನು ಸ್ವತಂತ್ರಿಸಿ ಕೊಳ್ಳುವ ಪರ್ಯಂತ
ರ, ಸ್ವಲ್ಪ ಸ್ವಲ್ಪವಾಗಿ ಹೊರಡಿಸುವೆನು.
೩೧ ಮತ್ತು ಆಪಿನ ಸಮುದ್ರದಿಂದ ಫಿಲಿಷ್ಟ್ಯರ ಸಮುದ್ರದ ವರಿ
ಗೂ, ಅರಣ್ಯದಿಂದ ನದಿಯ ವರಿಗೂ, ನಿನ್ನ ಮೇರೆಗಳನ್ನು ನೇ
ಮಿಸುವೆನು; ಯಾಕಂದರೆ ದೇಶದ ನಿವಾಸಿಗಳನ್ನು ನಿಮ್ಮ ಕೈಗ
ಳಲ್ಲಿ ಕೊಡುವೆನು; ನೀನು ಅವರನ್ನು ನಿನ್ನ ಸನ್ನಿಧಿಯಿಂದ ಓಡಿ
೩೨ ಸಿ ಬಿಡುವಿ. ಅವರ ಸಂಗಡಲೂ ಅವರ ದೇವರುಗಳ ಸಂಗಡಲೂ
೩೩ ಬಡಂಬಡಿಕೆಯನ್ನು ಮಾಡ ಬೇಡ. ಅವರು ನಿನ್ನನ್ನು ನನಗೆ ವಿ
ರೋಧವಾಗಿ ಪಾಪ ಮಾಡಿಸದ ಹಾಗೆ, ನಿನ್ನ ದೇಶದಲ್ಲಿ ವಾಸ
ವಾಗಿರ ಕೂಡದು; ಯಾಕಂದರೆ ನೀನು ಅವರ ದೇವರುಗಳನ್ನು
ಸೇವಿಸಿದರೆ, ಅದು ನಿನಗೆ ನೇಣಾಗಿರುವದು.

## ೨೪. ಸಂಧಿ.

೧ ಮೋಶೆಗೆ ಅವನು ಹೇಳಿದ್ದೇನಂದರೆ—ನೀನೂ, ಆರೋನ
ನೂ, ನಾದಬನೂ, ಅಬೀಹುವೂ ಇಸ್ರಯೇಲಿನ ಹಿರಿಯರಲ್ಲಿ ಎ
ಪ್ಪತ್ತು ಮಂದಿಯೂ ಕರ್ತನ ಬಳಿಗೆ ಏರಿ ಬಂದು, ದೂರದಲ್ಲಿ
೨ ಅಡ್ಡ ಬೀಳ್ಳಿರಿ. ಆಗ ಮೋಶೆ ಒಬ್ಬನೇ ಕರ್ತನ ಸಮೀಪಕ್ಕೆ ಬ
ರಲಿ; ಆದರೆ ಅವರು ಸಮೀಪಕ್ಕೆ ಬರ ಕೂಡದು; ಜನರು ಅವ
ರ ಸಂಗಡ ಏರಿ ಬರ ಕೂಡದು.
3 ಆಗ ಮೋಶೆ ಬಂದು, ಕರ್ತನ ಮಾತುಗಳನ್ನೆಲ್ಲಾ, ನ್ಯಾ
ಯಗಳನ್ನೆಲ್ಲಾ, ಜನರಿಗೆ ತಿಳಿಸಿದನು; ಜನರೆಲ್ಲಾ ಒಂದೇ ಶಬ್ದದಿಂ
ದ ಉತ್ತರ ಕೊಟ್ಟು—ಕರ್ತನು ಹೇಳಿದ ಮಾತುಗಳನ್ನೆಲ್ಲಾ
ಮಾಡುತ್ತೇವೆ, ಅಂದರು.
೪ ಆಗ ಮೋಶೆ ಕರ್ತನ ಮಾತುಗಳನ್ನೆಲ್ಲಾ ಬರೆದು, ಬೇಗನೆ
ಎದ್ದು, ಬೆಟ್ಟದ ಕೆಳಗೆ ಬಲಿ ಪೀಠವನ್ನೂ, ಇಸ್ರಯೇಲಿನ ಹನ್ನೆ
ರಡು ಕುಲಗಳಿಗೆ ಹನ್ನೆರಡು ಸ್ತಂಭಗಳನ್ನೂ ಕಟ್ಟಿ, ಇಸ್ರಯೇ
೫ ಲ್ ಮಕ್ಕಳ ಯೌವನಸ್ಥರನ್ನು, ಕರ್ತನಿಗೆ ಹೋಮಗಳನ್ನು
ಅರ್ಪಿಸ, ಸಮಾಧಾನದ ಬಲಿಗಳಾದ ಎತ್ತುಗಳನ್ನು ಕೊಯ್ಯು
೬ ವ ಹಾಗೆ ಕಳುಹಿಸಿದನು. ಆಗ ಮೋಶೆ ರಕ್ತದ ಅರವಾಶಿಯನ್ನು
ತಕ್ಕೊಂಡು, ಬಟ್ಟಲುಗಳಲ್ಲಿ ಇಟ್ಟು, ರಕ್ತದ ಅರವಾಶಿಯನ್ನು ಬ





೭ ಲಿ ಪೀಠದ ಮೇಲೆ ಚಿಮಕಿಸಿದನು. ಮತ್ತು ಬಡಂಬಡಿಕೆಯ ಪುಸ್ತ
ಕವನ್ನು ತಕ್ಕೊಂಡು, ಜನರು ಕೇಳುವ ಹಾಗೆ ಓದಿದನು. ಅವ
ರು—ಕರ್ತನು ಹೇಳುವದನ್ನೆಲ್ಲಾ ನಾವು ಮಾಡಿ ವಿಧೇಯರಾಗಿ
೮ ರುವೆವು, ಅಂದರು. ಆಗ ಮೋಶೆ ರಕ್ತವನ್ನು ತಕ್ಕೊಂಡು, ಜ
ನರ ಮೇಲೆ ಚಿಮಕಿಸಿ—ಇಗೋ, ಈ ಎಲ್ಲಾ ಮಾತುಗಳ ವಿಷ
ಯದಲ್ಲಿ ಕರ್ತನು ನಿಮಗೆ ಮಾಡುವ ಬಡಂಬಡಿಕೆಯ ರಕ್ತವು,
೯ ಅಂದನು.
ಮತ್ತು ಮೋಶೆಯೂ, ಆರೋನನೂ, ನಾದಬನೂ, ಅಬೀ
ಹುವೂ, ಇಸ್ರಯೇಲಿನ ಹಿರಿಯರಲ್ಲಿ ಎಪ್ಪತ್ತು ಮಂದಿಯೂ ಏ
೧೦ ರಿ ಹೋಗಿ, ಇಸ್ರಯೇಲಿನ ದೇವರನ್ನು ನೋಡಿದರು; ಅವನ
ಪಾದಗಳ ಕೆಳಗೆ ನೀಲ ಕಲ್ಲಿನ ಕೆಲಸಕ್ಕೆ ಸಮಾನವಾದದ್ದೂ,
೧೧ ಆಕಾಶದ ಹಾಗೆಯೇ ನಿರ್ಮಲವಾದದ್ದೂ ಇತ್ತು. ಆದರೆ ಇಸ್ರ
ಯೇಲ್ ಮಕ್ಕಳ ಶ್ರೇಷ್ಠರ ಮೇಲೆ ಅವನು ಕೈ ಹಾಕಲಿಲ್ಲ; ಅವ
ರು ದೇವರನ್ನು ನೋಡಿ, ಉಂಡು ಕುಡಿದರು.
೧೨ ಆಗ ಕರ್ತನು ಮೋಶೆಗೆ—ಪರ್ವತವನ್ನೇರಿ ನನ್ನ ಬಳಿಗೆ
ಬಾ; ಅಲ್ಲೇ ಇರು; ಆಗ ನಿನಗೆ ಕಲ್ಲಿನ ಹಲಿಗೆಗಳನ್ನೂ, ಅವರಿಗೆ
ಬೋಧಿಸುವದಕ್ಕೋಸ್ಕರ ನಾನು ಬರೆದ ನ್ಯಾಯಪ್ರಮಾಣ
೧೩ ವನ್ನೂ, ಆಜ್ಞೆಯನ್ನೂ ಕೊಡುವೆನು, ಅಂದನು. ಆಗ ಮೋಶೆ
ಯೂ ಅವನ ಸೇವಕನಾದ ಯೆಹೋಶುವನೂ ಎದ್ದರು; ಮೋಶೆ
೧೪ ದೇವರ ಪರ್ವತವನ್ನೇರಿದನು. ಆದರೆ ಹಿರಿಯರಿಗೆ ಅವನು—
ನಾವು ನಿಮ್ಮ ಬಳಿಗೆ ತಿರಿಗಿ ಬರುವ ಪರ್ಯಂತರ, ಇಲ್ಲಿ ನಮ
ಗೋಸ್ಕರ ಕಾದು ಕೊಳ್ಳಿರಿ; ಇಗೋ, ಆರೋನನೂ ಹೂರ
ನೂ ನಿಮ್ಮ ಸಂಗಡ ಇರುತ್ತಾರೆ; ಮಾತು ಉಂಟಾದವರು ಅವರ
ಹತ್ತರ ಬರಲಿ, ಅಂದನು.
೧೫ ಹೀಗೆ ಮೋಶೆ ಪರ್ವತವನ್ನೇರಿ ಹೋದನು; ಮೇಘವು ಪ
೧೬ ರ್ವತವನ್ನು ಮುಟ್ಟಿತು. ಇದಲ್ಲದೆ ಕರ್ತನ ಘನವು ಸೀನಾಯಿ
ಪರ್ವತದ ಮೇಲೆ ನಿವಾಸವಾಗಿದ್ದದರಿಂದ, ಮೇಘವು ಅದನ್ನು
ಆರು ದಿವಸದ ಪರ್ಯಂತರ ಮುಚ್ಚಿ ಇತ್ತು; ಏಳನೇ ದಿವಸ
ದಲ್ಲಿ ಅವನು ಮೇಘದೊಳಗಿಂದ ಮೋಶೆಯನ್ನು ಕರೆದನು.
೧೭ ಇದಲ್ಲದೆ ಕರ್ತನ ಘನದ ರೂಪವು ಇಸ್ರಯೇಲ್ ಮಕ್ಕಳ ಕ
ಣ್ಣುಗಳ ಮುಂದೆ ಪರ್ವತದ ತುದಿಯಲ್ಲಿ ದಹಿಸುವ ಬೆಂಕಿಯ
೧೮ ಹಾಗಿತ್ತು. ಆಗ ಮೋಶೆ ಮೇಘದ ಮಧ್ಯದಲ್ಲಿ ಬಂದು, ಪರ್ವ
ತವನ್ನೇರಿದನು; ಮೋಶೆ ನಾಲ್ವತ್ತು ದಿವಸ, ನಾಲ್ವತ್ತು ರಾತ್ರಿ ಪ
ರ್ವತದಲ್ಲಿ ಇದ್ದನು.

## ೨೫. ಸಂಧಿ.

೧ ಆಗ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ,
೨ ಇಸ್ರಯೇಲ್ ಮಕ್ಕಳಿಗೆ; ಅವರು ನನಗೆ ಕಾಣಿಕೆಗಳನ್ನು ತಕ್ಕೊಂ
ಡು ಬರುವ ಹಾಗೆ ಮಾತಾಡು; ಸ್ವಂತ ಹೃದಯದಲ್ಲಿ ಪ್ರೇರೇಪಿ
ಸಲ್ಪಡುವ ಒಬ್ಬೊಬ್ಬ ಮನುಷ್ಯನಿಂದ ನೀವು ನನ್ನ ಕಾಣಿಕೆ
3 ಗಳನ್ನು ತಕ್ಕೊಳ್ಳ ಬೇಕು. ನೀವು ಅವರಿಂದ ತಕ್ಕೊಳ್ಳ ಬೇ
೪ ಕಾದ ಕಾಣಿಕೆಗಳು ಇವೇ—ಚಿನ್ನ, ಬೆಳ್ಳಿ, ತಾಂಬ್ರ, ನೀಲಿ, ರ
೫ ಕ್ತ ವರ್ಣ, ಲಾಕಿ ಬಣ್ಣ, ನಾರು, ಮೇಕೆಯ ಕೂದಲು, ಕೆಂಪು
ಅದ್ದಿದ ಟಗರುಗಳ ತೊಗಲುಗಳು, ತಾಹಷ್ ತೊಗಲುಗಳು, ಷಿ
೬ ಟ್ಟಿಮ್ ಮರಗಳು, ದೀಪಸ್ತಂಭಕ್ಕೋಸ್ಕರವಾದ ಎಣ್ಣೆ, ಅಭಿ
ಷೇಕಿಸುವ ಎಣ್ಣೆಗೋಸ್ಕರವೂ ಪರಿಮಳ ಧೂಪಕ್ಕೋಸ್ಕರವೂ
೭ ಸುಗಂಧಗಳು. ಎಪೊದಿಗೋಸ್ಕರವೂ ಪದಕಕ್ಕೋಸ್ಕರವೂ
೮ ಗೋಮೇಧಿಕಗಳೂ, ಕೆತ್ತಿಟ್ಟ ರತ್ನಗಳೂ. ಅವರು ನನಗೆ ಪರಿಶು
ದ್ಧ ಸ್ಥಳವನ್ನು ಮಾಡ ಬೇಕು; ಆಗ ಅವರ ಮಧ್ಯದಲ್ಲಿ ವಾಸವಾ
೯ ಗಿರುವೆನು. ಗುಡಾರದ ಮಾದರಿಯನ್ನೂ, ಅದರ ಎಲ್ಲಾ ಸಾ
ಮಾನುಗಳ ಮಾದರಿಯನ್ನೂ, ನಾನು ನಿನಗೆ ತೋರಿಸುವ ಹಾ
ಗೆಯೇ ಮಾಡ ಬೇಕು.
೧೦ ಇದಲ್ಲದೆ ಎರಡುವರೆ ಮೊಳ ಉದ್ದವೂ, ಒಂದುವರೆ ಮೊಳ
ಅಗಲವೂ, ಒಂದುವರೆ ಮೊಳ ಎತ್ತರವೂ, ಆಗಿರುವ ಪೆಟ್ಟಿಗೆಯ
೧೧ ನ್ನು ಷಿಟ್ಟಿಮ್ ಮರದಿಂದ ಮಾಡ ಬೇಕು. ಅದನ್ನು ಪರಿಶುದ್ಧ
ಭಂಗಾರದಿಂದ ಹೊದಗಿಸಿ, ಹೊರಗೂ ಒಳಗೂ ಹೊದಗಿಸ
ಬೇಕು; ಅದರಲ್ಲಿ ಸುತ್ತಲಾಗಿ ಭಂಗಾರದ ಜವೆಯನ್ನು ಮಾಡ ಬೇ
೧೨ ಕು. ಅದಕ್ಕೆ ಭಂಗಾರದ ನಾಲ್ಕು ಉಂಗರಗಳನ್ನು ಎರಕ ಹೊ
ಯಿದು, ಅದರ ನಾಲ್ಕು ಮೂಲೆಗಳಲ್ಲಿ, ಒಂದು ಕಡೆಯಲ್ಲಿ ಎರ
ಡು ಉಂಗರಗಳನ್ನೂ, ಮತ್ತೊಂದು ಕಡೆಯಲ್ಲಿ ಎರಡು ಉಂಗ
೧೩ ರಗಳನ್ನೂ ಇಡ ಬೇಕು. ಮತ್ತು ಷಿಟ್ಟಿಮ್ ಮರದ ಕೋಲು
೧೪ ಗಳನ್ನು ಮಾಡಿ, ಭಂಗಾರದಿಂದ ಹೊದಗಿಸ ಬೇಕು. ಮತ್ತು ಪೆ
ಟ್ಟಿಗೆಯನ್ನು ಹೊತ್ತು ಕೊಂಡು ಹೋಗುವದಕ್ಕೋಸ್ಕರ,
ಕೋಲುಗಳನ್ನು ಪೆಟ್ಟಿಗೆಯ ಪಾರ್ಶ್ವಗಳಲ್ಲಿ ಇರುವ ಉಂಗರ
೧೫ ಗಳಲ್ಲಿ ಸೇರಿಸ ಬೇಕು. ಪೆಟ್ಟಿಗೆಯ ಉಂಗರಗಳಲ್ಲಿಯೇ ಕೋ
ಲುಗಳು ಇರ ಬೇಕು; ಅವುಗಳೊಳಗಿಂದ ಅವುಗಳು ತೆಗೆಯಲ್ಪ
೧೬ ಡ ಕೂಡದು. ಮತ್ತು ಪೆಟ್ಟಿಗೆಯಲ್ಲಿ ನಾನು ನಿನಗೆ ಕೊಡುವ
ಸಾಕ್ಷಿಯನ್ನು ಇಡ ಬೇಕು.
೧೭ ಮತ್ತು ಎರಡುವರೆ ಮೊಳ ಉದ್ದವೂ, ಒಂದುವರೆ ಮೊಳ ಅ
ಗಲವೂ, ಆಗಿರುವ ಕೃಪಾಸನವನ್ನು ಶುದ್ಧ ಭಂಗಾರದಿಂದ ಮಾ
೧೮ ಡ ಬೇಕು. ಮತ್ತು ಭಂಗಾರದಿಂದ ಎರಡು ಕೆರೂಬಿಗಳನ್ನೂ ಮಾ
ಡ ಬೇಕು; ಕೃಪಾಸನದ ಎರಡು ಕೊನೆಗಳಲ್ಲಿ ಅವುಗಳನ್ನು
೧೯ ತರಣಿಯ ಕೆಲಸದಿಂದ ಮಾಡ ಬೇಕು. ಈ ಕೊನೆಯಲ್ಲಿ
ಒಂದು ಕೆರೂಬಿಯನ್ನೂ, ಆ ಕೊನೆಯಲ್ಲಿ ಒಂದು ಕೆರೂಬಿಯ
ನ್ನೂ ಮಾಡ ಬೇಕು; ಕೃಪಾಸನದಲ್ಲಿ ಅದರ ಎರಡು ಮೂಲೆ
೨೦ ಗಳಲ್ಲಿ ಕೆರೂಬಿಗಳನ್ನೂ ಮಾಡ ಬೇಕು. ಆ ಕೆರೂಬಿಗಳು ಮೇ
ಲಕ್ಕೆ ರೆಕ್ಕೆಗಳನ್ನು ಚಾಚುವವುಗಳಾಗಿಯೂ, ರೆಕ್ಕೆಗಳಿಂದ
ಕೃಪಾಸನವನ್ನು ಮುಚ್ಚುವವುಗಳಾಗಿಯೂ, ಒಂದರ ಕೆಳಗೆ
ಒಂದು ನೋಡುವವುಗಳಾಗಿಯೂ, ಇರ ಬೇಕು. ಕೆರೂಬಿಗಳ
೨೧ ಮುಖಗಳು ಕೃಪಾಸನದ ಕಡೆಗಿರ ಬೇಕು. ಕೃಪಾಸನವನ್ನು
ಪೆಟ್ಟಿಗೆಗೆ ಮೇಲಾಗಿ ಇಡ ಬೇಕು; ಮತ್ತು ಪೆಟ್ಟಿಗೆಯಲ್ಲಿ ನಾನು ನಿ
೨೨ ನಗೆ ಕೊಡುವ ಸಾಕ್ಷಿಯನ್ನು ಇಡ ಬೇಕು. ಆಗ ಅಲ್ಲಿ ನಿನ್ನ
ನ್ನು ಎದುರು ಗೊಂಡು, ಕೃಪಾಸನದ ಮೇಲಿನಿಂದ, ಸಾಕ್ಷಿ ಪೆ
ಟ್ಟಿಗೆಯ ಮೇಲಿರುವ ಎರಡು ಕೆರೂಬಿಗಳ ನಡುವೆಯಿಂದ, ನಾನು
ಇಸ್ರಯೇಲ್ ಮಕ್ಕಳ ವಿಷಯದಲ್ಲಿ ನಿನಗೆ ಆಜ್ಞಾಪಿಸುವವುಗಳ
ನ್ನೆಲ್ಲಾ ನಿನ್ನ ಸಂಗಡ ಮಾತಾಡುವೆನು.
೨೩ ಮತ್ತು ಎರಡು ಮೊಳ ಉದ್ದವೂ, ಒಂದು ಮೊಳ ಅಗಲವೂ,
ಒಂದುವರೆ ಮೊಳ ಎತ್ತರವೂ, ಆಗಿರುವ ಮೇಜನ್ನು ಷಿಟ್ಟಿಮ್
೨೪ ಮರದಿಂದ ಮಾಡ ಬೇಕು. ಶುದ್ಧ ಭಂಗಾರದಿಂದ ಅದನ್ನು ಹೊ
ದಗಿಸಿ, ಅದಕ್ಕೆ ಸುತ್ತಲಾಗಿ ಭಂಗಾರದ ಜವೆಯನ್ನು ಮಾಡ ಬೇ

೨೫ ಕು. ಮತ್ತು ಅದಕ್ಕೆ ಸುತ್ತಲಾಗಿ ಗೇಣುದ್ದ ಅಂಚನ್ನೂ ಮಾ
ತಿ, ಅಂಚಿಗೆ ಸುತ್ತಲಾಗಿ ಭಂಗಾರದ ಜವೆಯನ್ನೂ ಮಾಡ ಬೇಕು.
೨೬ ಮತ್ತು ಅದಕ್ಕೆ ಭಂಗಾರದ ನಾಲ್ಕು ಉಂಗರಗಳನ್ನೂ ಮಾಡಿ,
ಉಂಗರಗಳನ್ನು ಅದರ ನಾಲ್ಕು ಕಾಲುಗಳ್ಳಲ್ಲಿರುವ ನಾಲ್ಕು ಮೂ
೨೭ ಲೆಗಳ್ಳಲ್ಲಿ ಇಡ ಬೇಕು. ಅಂಚಿಗೆ ಸಮಾಪವಾಗಿ ಮೇಜನ್ನು ಹೊ
ರುವದಕ್ಕೋಸ್ಕರವಾದ ಕೋಲುಗಳ್ಳಿಗೆ ಮನೆಗಳ್ಳಾಗಿರುವ ಉಂ
೨೮ ಗರಗಳು ಇರ ಬೇಕು. ಮತ್ತು ಮೇಜನ್ನು ಹೊರುವದಕ್ಕೋಸ್ಕರ,
ಕೋಲುಗಳನ್ನು ಷಿಟ್ಟಿಮ್ ಮರದಿಂದ ಮಾಡಿ, ಭಂಗಾರ
೨೯ ದಿಂದ ಹೊದಗಿಸ ಬೇಕು. ಮತ್ತು ಅದರ ಹರವಾಣಗಳನ್ನೂ,
ಪಂಚಪಾತ್ರೆಗಳನ್ನೂ, ಕೂಜೆಗಳನ್ನೂ, ಬಟ್ಟಲುಗಳನ್ನೂ, ಹೊ
ಯ್ಯುವದಕ್ಕೋಸ್ಕರ ಮಾಡ ಬೇಕು; ಶುದ್ಧ ಭಂಗಾರದಿಂದ
೩೦ ಅವುಗಳನ್ನು ಮಾಡ ಬೇಕು. ಮತ್ತು ಮೇಜಿನ ಮೇಲೆ ಸಮುಖ
ದ ಕೊಟ್ಟಿಗಳನ್ನು ನಿತ್ಯವಾಗಿ ನನ್ನ ಮುಂದೆ ಇಡ ಬೇಕು.

೩೧ ಮತ್ತು ಶುದ್ಧ ಭಂಗಾರದ ದೀಪಸ್ತಂಭವನ್ನು ಮಾಡ ಬೇಕು.
ಆ ದೀಪಸ್ತಂಭವನ್ನು ತರಣಿ ಕೆಲಸದಿಂದ ಮಾಡ ಬೇಕು; ಅದ
ರ ಕಂಭವೂ, ಕೊಂಬೆಯೂ, ಹೂಣತೆಗಳೂ, ಗುಂಡುಗಳೂ, ಹೂ
೩೨ ವುಗಳೂ ಅದರಿಂದಲೇ ಉಂಟಾಗ ಬೇಕು. ಮತ್ತು ಅದರ ಒಂ
ದು ಪಾರ್ಶ್ವದಿಂದ ಮೂರು ದೀಪದ ಕೊಂಬೆಗಳೂ, ಮತ್ತೊಂ
ದು ಪಾರ್ಶ್ವದಿಂದ ಮೂರು ದೀಪದ ಕೊಂಬೆಗಳೂ ಅದರ
೩೩ ಪಾರ್ಶ್ವಗಳಿಂದ ಹೊರಗೆ ಬರ ಬೇಕು. ಬಾದಾಮಿ ಹೂವು
ಳ್ಳ ಮೂರು ಹೂಣತೆಗಳೂ, ಗುಂಡೂ, ಹೂವೂ; ಒಂದು ಕೊಂಬೆ
ಯಲ್ಲಿ, ಬಾದಾಮಿ ಹೂವುಳ್ಳ ಮೂರು ಹೂಣತೆಗಳೂ, ಗುಂ
ಡೂ, ಹೂವೂ, ಮತ್ತೊಂದು ಕೊಂಬೆಯಲ್ಲಿ, ಈ ಪ್ರಕಾರ ದೀಪ
ಸ್ತಂಭದಿಂದ ಹೊರಗೆ ಬರುವ ಆರು ಕೊಂಬೆಗಳ್ಳಿಗೆ ಇರ ಬೇಕು.
೩೪ ಮತ್ತು ದೀಪಸ್ತಂಭದಲ್ಲಿಯೇ ಗುಂಡುಗಳೂ ಹೂವುಗಳೂ ಕೂ
೩೫ ಡಿದ ಬಾದಾಮಿ ಹೂವುಳ್ಳ ನಾಲ್ಕು ಹೂಣತೆ ಇರ ಬೇಕು. ಮ
ತ್ತು ದೀಪಸ್ತಂಭಕ್ಕೆಳ್ಳಿಗಿಂದ ಹೊರಗೆ ಬರುವ ಆರು ಕೊಂಬೆಗ
ಳ ಪ್ರಕಾರ, ಅದರಿಂದ ಬರುವ ಎರಡೆರಡು ಕೊಂಬೆಗಳ್ ಕೆಳಗೆ
೩೬ ಒಂದೊಂದು ಗುಂಡು ಇರ ಬೇಕು. ಅದರ ಗುಂಡುಗಳೂ ಕೊಂಬೆ
ಗಳೂ ಅದರಿಂದಲೇ ಉಂಟಾಗ ಬೇಕು; ಅದೆಲ್ಲಾ ಶುದ್ಧ ಭಂಗಾರ
೩೭ ದ ಒಂದೇ ತರಣಿ ಕೆಲಸವಾಗಿ ಇರ ಬೇಕು. ಮತ್ತು ಅದರ ಏ
ಳು ದೀಪಗಳನ್ನೂ ಮಾಡಿ, ಅವು ಮುಂದು ಕಡೆಯಲ್ಲಿ ಪ್ರಕಾಶ
೩೮ ಕೊಡುವ ಹಾಗೆ, ಅದರ ದೀಪಗಳನ್ನು ಮುಟ್ಟಿಸ ಬೇಕು. ಇದ
ಲ್ಲದೆ ಅದರ ಚಿಮುಟಿಗಳೂ ಅಗ್ನಿ ಪಾತ್ರೆಗಳೂ ಶುದ್ಧ ಭಂಗಾರ
೩೯ ದಿಂದ ಉಂಟಾಗ ಬೇಕು. ಒಂದು ಮಣ ಶುದ್ಧ ಭಂಗಾರದಿಂದ
೪೦ ಅದನ್ನೂ, ಈ ಎಲ್ಲಾ ಸಾಮಾನುಗಳನ್ನೂ ಮಾಡ ಬೇಕು. ಬೆ
ಟ್ಟದಲ್ಲಿ ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಅವುಗಳ
ನ್ನು ಮಾಡುವ ಹಾಗೆ ನೋಡಿಕೋ.

## ೨೬. ಸಂಧಿ.

೧ ಮತ್ತು ವಾಸ ಸ್ಥಳವನ್ನು ಹತ್ತು ತೆಕೆಗಳ್ಳಿಂದ ಮಾಡ, ಬೇಕು;
ಹೊಸೆದ ನಾರಿನಿಂದಲೂ, ನೀಲಿ ರಕ್ತ ವರ್ಣ ಲಾಕೆಗಳ್ಳಿಂದಲೂ,
ಜಾಣರ ಚಿತ್ರ ಕೆಲಸವಾದ ಕೆರೂಬಿಗಳ್ಳಲ್ಲಿವುಗಳ್ಳಾಗಿ ಅವುಗ
೨ ಳನ್ನು ಮಾಡ ಬೇಕು. ಒಂದು ತೆಕೆಯ ಉದ್ದವು ಇಪ್ಪತ್ತೆಂಟು
ಮೊಳ, ಒಂದು ತೆಕೆಯ ಅಗಲವು ನಾಲ್ಕು ಮೊಳ; ಎಲ್ಲಾ ತೆಕೆಗ
೩ ಳಿಗೆ ಅದೇ ಅಳತೆ. ಐದು ತೆಕೆಗಳು ಒಂದಕ್ಕೊಂದು ಜೋಡಿಸ
ಲ್ಪಟ್ಟಿರ ಬೇಕು; ಬೇರೆ ಐದು ತೆಕೆಗಳು ಒಂದಕ್ಕೊಂದು ಜೋ
೪ ಡಿಸಲ್ಪಟ್ಟಿರ ಬೇಕು; ಮತ್ತು ಒಂದು ತೆಕೆಯ ಅಂಚಿನಲ್ಲಿ, ಅ
ದರ ಅಂತ್ಯದಲ್ಲಿ ಜೋಡಿಸುವ ಸ್ಥಳದಲ್ಲಿ ನೀಲಿ ನೂಲಿನ ಕುಣಿ
ಕೆಗಳನ್ನು ಮಾಡಿ, ಎರಡನೇ ಜೋಡಿಸುವಿಕೆಯ ಕಡೇ ತೆಕೆಯ
೫ ಅಂತ್ಯದಲ್ಲಿಯೂ ಹಾಗೆ ಮಾಡ ಬೇಕು. ಒಂದು ತೆಕೆಯ ಜೋ
ಡಿಸುವ ಸ್ಥಳದಲ್ಲಿರುವ ಇನ್ನೊಂದು ತೆಕೆಯ ಅಂತ್ಯದಲ್ಲಿ ಐವ
ತ್ತು ಕುಣಿಕೆಗಳನ್ನು ಮಾಡ ಬೇಕು; ಆ ಕುಣಿಕೆಗಳು ಒಂದ
೬ ಕ್ಕೊಂದು ಸರಿಯಾಗಿ ಇರ ಬೇಕು. ಮತ್ತು ಭಂಗಾರದ ಐವ
ತ್ತು ಕೊಂಡಿಗಳನ್ನು ಮಾಡಿ, ಆ ಕೊಂಡಿಗಳ್ಳಿಂದ ತೆಕೆಗಳನ್ನು
ಒಂದಕ್ಕೊಂದು ಜೋಡಿಸ ಬೇಕು. ಹಾಗೆ ವಾಸ ಸ್ಥಳವು ಒಂದೇ
ಆಗ ಬೇಕು.

೭ ಮತ್ತು ವಾಸ ಸ್ಥಳದ ಮೇಲೆ ಗುಡಾರಕ್ಕೋಸ್ಕರ ಮೇಕೆ ಕೂ
ದಲಿನ ತೆಕೆಗಳನ್ನು ಮಾಡಿ, ಹನ್ನೊಂದು ತೆಕೆಗಳ್ಳಾಗಿ ಅವುಗಳ
೮ ನ್ನು ಮಾಡ ಬೇಕು. ಒಂದು ತೆಕೆಯ ಉದ್ದವು ಮೂವತ್ತು ಮೊ
ಳ, ಒಂದು ತೆಕೆಯ ಅಗಲವು ನಾಲ್ಕು ಮೊಳ; ಹನ್ನೊಂದು ತೆಕೆ
೯ ಗಳ್ಳಿಗೆ ಅದೇ ಅಳತೆ. ಐದು ತೆಕೆಗಳನ್ನು ಬೇರೆಯಾಗಿಯೂ, ಆ
ರು ತೆಕೆಗಳನ್ನು ಬೇರೆಯಾಗಿಯೂ ಜೋಡಿಸಿ, ಆರನೇ ತೆಕೆಯ
೧೦ ನ್ನು ಗುಡಾರದ ಮುಖಾಗದಲ್ಲಿ ಇಮ್ಮಡಿಸ ಬೇಕು. ಮತ್ತು ಜೋ
ಡಿಸುವಲ್ಲಿ ಕಡೇದಾದ ಒಂದು ತೆಕೆಯ ಅಂಚಿನಲ್ಲಿ ಐವತ್ತು ಕುಣಿ
ಕೆಗಳನ್ನು, ಎರಡನೇ ಜೋಡಿಸುವಿಕೆಯಲ್ಲಿ ಇರುವ ತೆಕೆಯ ಅಂ
೧೧ ಚಿನಲ್ಲಿ ಐವತ್ತು ಕುಣಿಕೆಗಳನ್ನೂ ಮಾಡ ಬೇಕು. ಮತ್ತು ತಾಂ
ಬ್ರದ ಐವತ್ತು ಕೊಂಡಿಗಳನ್ನು ಮಾಡಿ, ಕೊಂಡಿಗಳನ್ನು ಕುಣಿ
ಕೆಗಳ್ಳಲ್ಲಿ ಸಿಕ್ಕಿಸಿ, ಗುಡಾರವನ್ನು, ಒಂದಾಗುವ ಹಾಗೆ, ಜೋಡಿಸ
೧೨ ಬೇಕು. ಮತ್ತು ಗುಡಾರದ ತೆಕೆಗಳ್ಳಿಲ್ಲಿ ಮಿಕ್ಕು ತೂಗಾಡುವಂ
ಥಾದ್ದು, ಮಿಕ್ಕಾಗಿರುವ ಅರ್ಧ ತೆಕೆ ಗುಡಾರದ ಹಿಂಭಾಗದಲ್ಲಿ
೧೩ ತೂಗಾಡಲಿ. ಮತ್ತು ಗುಡಾರದ ತೆಕೆಗಳ್ ಉದ್ದದೊಳ್ಳಗೆ ಈಚೆ
ಅಚೆಯಲ್ಲಿ ಮಿಕ್ಕಾಗಿರುವ ಮೊಳವು, ಗುಡಾರದ ಈಚೆ ಅಚೆಗಳ
ಲ್ಲಿ, ಅದನ್ನು ಮುಚ್ಚುವದಕ್ಕೋಸ್ಕರ, ತೂಗಾಡಲಿ.
೧೪ ಮತ್ತು ಕೆಂಪು ಅದ್ದಿದ ಟಗರು ತೊಗಲುಗಳ್ಳಿಂದ ಗುಡಾರಕ್ಕೆ
ಮುಚ್ಚಳ್ಳವನ್ನೂ, ತಾಹಷ್ ತೊಗಲುಗಳ್ಳಿಂದ ಮೇಲ್ಮುಚ್ಚಳ್ಳವ
ನ್ನೂ ಮಾಡ ಬೇಕು.

೧೫ ಮತ್ತು ವಾಸ ಸ್ಥಳಕ್ಕೆ ಹಲಿಗೆಗಳನ್ನು ಷಿಟ್ಟಿಮ್ ಮರದಿಂದ ನಿ
೧೬ ಲ್ಲುವಂಥವುಗಳ್ಳಾಗಿ ಮಾಡ ಬೇಕು. ಹಲಿಗೆಯ ಉದ್ದವು ಹತ್ತು
೧೭ ಮೊಳ, ಒಂದು ಹಲಿಗೆಯ ಅಗಲವು ಒಂದುವರೆ ಮೊಳ. ಒಂದು
ಹಲಿಗೆಗೆ ಒಂದಕ್ಕೊಂದು ಸರಿಯಾಗಿ ಇರುವ ಎರಡು ಕೈಗಳು
ಇರ ಬೇಕು; ಹಾಗೆ ಗುಡಾರದ ಎಲ್ಲಾ ಹಲಿಗೆಗಳ್ಳಿಗೆ ಮಾಡ ಬೇ
೧೮ ಕು. ಮತ್ತು ವಾಸ ಸ್ಥಳದ ಹಲಿಗೆಗಳನ್ನು, ದಕ್ಷಿಣ ಕಡೆಯಾಗಿ,
೧೯ ದಕ್ಷಿಣ ಪಾರ್ಶ್ವದಲ್ಲಿ ಇಪ್ಪತ್ತು ಹಲಿಗೆಗಳನ್ನು ಮಾಡಿ, ಇ
ಪ್ಪತ್ತು ಹಲಿಗೆಗಳ್ ಕೆಳಗೆ ನಾಲ್ವತ್ತು ಬೆಳ್ಳಿ ಕಾಲುಗಳನ್ನು, ಒಂ
ದೊಂದು ಹಲಿಗೆಯ ಕೆಳಗೆ ಅದರ ಎರಡು ಕೈಗಳ್ಳಿಗೋಸ್ಕರ ಎ
೨೦ ರಡೆರಡು ಕಾಲುಗಳನ್ನು ಮಾಡ ಬೇಕು. ಮತ್ತು ಉತ್ತರ ದಿಕ್ಕಿನ
ಲ್ಲಿ ಇರುವ ಅದರ ಮತ್ತೊಂದು ಪಾರ್ಶ್ವಕ್ಕೋಸ್ಕರ ಇಪ್ಪ
೨೧ ತ್ತು ಹಲಿಗೆಗಳನ್ನೂ; ಒಂದೊಂದು ಹಲಿಗೆಯ ಕೆಳಗೆ ಎರಡೆರಡು
೨೨ ಕಾಲುಗಳ್ಳಾಗಿ ನಾಲ್ವತ್ತು ಬೆಳ್ಳಿಯ ಕಾಲುಗಳನ್ನೂ; ಮತ್ತು





ವಾಸ ಸ್ಥಳದ ಪಶ್ಚಿಮ ಪಾರ್ಶ್ವದಲ್ಲಿ ಆರು ಹಲಿಗೆಗಳನ್ನೂ ಮಾಡಿ,
೨೩ ವಾಸ ಸ್ಥಳದ ಉಭಯ ಪಾರ್ಶ್ವದಲ್ಲಿರುವ ಮೂಲೆಗಳ್ಳಿಗೆ ಎರಡು
೨೪ ಹಲಿಗೆಗಳನ್ನು ಮಾಡ ಬೇಕು. ಇವು ಅಡಿಯಲ್ಲಿ ಜೋಡಿಸಿರ
ಬೇಕು; ಮತ್ತು ಮೇಲ್ಭಾಗದಲ್ಲಿ ಕೂಡಾ ಒಂದೇ ಉಂಗರಕ್ಕೆ
ಜೋಡಿಸಿ ಇರ ಬೇಕು; ಅವು ಎರಡಾಗಿದ್ದು, ಆ ಎರಡು ಮೂ
೨೫ ಲೆಗಳ್ಳಲ್ಲಿ ಇರ ಬೇಕು. ಹಾಗೆ ಎಂಟು ಹಲಿಗೆಗಳೂ, ಒಂದೊಂದು
ಹಲಿಗೆಯ ಕೆಳಗೆ ಎರಡೆರಡು ಕಾಲುಗಳ್ಳಿರುವದರಿಂದ, ಅವುಗಳ್ಳಿಗೆ
೨೬ ಹದಿನಾರು ಬೆಳ್ಳಿಯ ಕಾಲುಗಳು ಇರ ಬೇಕು. ಮತ್ತು ಷಿಟ್ಟಿಮ್
ಮರದಿಂದ ಅಗುಳ್ಳಿಗಳನ್ನೂ ಮಾಡ ಬೇಕು; ವಾಸ ಸ್ಥಳದ ಒಂದು
೨೭ ಪಾರ್ಶ್ವದ ಹಲಿಗೆಗಳ್ಳಿಗೆ ಐದು. ವಾಸ ಸ್ಥಳದ ಇನ್ನೊಂದು ಪಾ
ರ್ಶ್ವದ ಹಲಿಗೆಗಳ್ಳಿಗೆ ಐದು ಅಗುಳ್ಳಿಗಳನ್ನೂ, ವಾಸ ಸ್ಥಳದ ಹಿಂ
ಭಾಗದಲ್ಲಿ, ಪಶ್ಚಿಮ ಕಡೆಯಲ್ಲಿ, ಇರುವ ಹಲಿಗೆಗಳ್ಳಿಗೆ ಐದು ಅಗುಳ್ಳಿ
೨೮ ಗಳನ್ನೂ ಮಾಡ ಬೇಕು. ಮತ್ತು ಮಧ್ಯವಾದ ಅಗುಳ್ಳಿಯು
ಹಲಿಗೆಗಳ ನಡುವೆಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆ
೨೯ ಯ ಪರ್ಯಂತರಕ್ಕೂ ತೂರಿರ ಬೇಕು. ಆ ಹಲಿಗೆಗಳನ್ನೂ
ಭಂಗಾರದಿಂದ ಹೊದಗಿಸಿ, ಅಗುಳ್ಳಿಗಳ್ಳಿಗೆ ಮನೆಗಳ್ಳಾಗಿರುವ ಅವು
ಗಳ್ಳಿ ಉಂಗರಗಳ್ಳನ್ನು ಭಂಗಾರದಿಂದ ಮಾಡಿ, ಅಗುಳ್ಳಿಗಳ್ಳನ್ನು
ಭಂಗಾರದಿಂದ ಹೊದಗಿಸ ಬೇಕು.
೩೦ ಹಾಗೆ ವಾಸ ಸ್ಥಳವನ್ನು ಬೆಟ್ಟದ ಮೇಲೆ ನಿನಗೆ ತೋರಿಸಲ್ಪ
ಟ್ಟ ಅದರ ಕ್ರಮದ ಪ್ರಕಾರ ಕಟ್ಟ ಬೇಕು.
೩೧ ಮತ್ತು ನೀಲಿ, ರಕ್ತ ವರ್ಣ, ಲಾಕೆ ಬಣ್ಣ, ಹೊಸೆದ ನಾರುಗ
ಳಿಂದ ತೆಕೆಯನ್ನು ಮಾಡ ಬೇಕು; ಜಾಣರ ಚಿತ್ರ ಕೆಲಸ
೩೨ ದಿಂದ, ಕೆರೂಬಿಗಳ್ಳಲ್ಲಿವುಗಳ್ಳಾಗಿ ಅದನ್ನು ಮಾಡ ಬೇಕು. ಅದನ್ನು
ಭಂಗಾರದಿಂದ ಹೊದಗಿಸಲ್ಪಟ್ಟ, ಭಂಗಾರದ ಮೊಳೆಗಳ್ಳಲ್ಲಿ, ಬೆ
ಳ್ಳಿಯ ನಾಲ್ಕು ಕಾಲುಗಳ್ಳಲ್ಲಿ ಆರಿ ಕೊಂಡಿರುವ, ನಾಲ್ಕು ಷಿ
೩೩ ಟ್ಟಿಮ್ ಮರದ ಸ್ತಂಭಗಳ್ಳಲ್ಲಿ ತೂಗಿಸ ಬೇಕು. ಆ ತೆಕೆಯನ್ನು
ಕೊಂಡಿಗಳ ಕೆಳಗೆ ತೂಗಿಸಿ, ತೆಕೆಯೊಳ್ಳಗೆ ಸಾಕ್ಷಿಯ ಪೆಟ್ಟಿಗೆ
ಯನ್ನು ತರ ಬೇಕು; ಪರಿಶುದ್ಧ ಸ್ಥಳಕ್ಕೂ, ಅತಿ ಪರಿಶುದ್ಧ ಸ್ಥಳ
೩೪ ಕ್ಕೂ ಆ ತೆಕೆ ವಿಂಗಡ ಮಾಡ ಬೇಕು. ಮತ್ತು ಅತಿ ಪರಿಶುದ್ಧ
ಸ್ಥಳದಲ್ಲಿ ಸಾಕ್ಷಿಯ ಪೆಟ್ಟಿಗೆಯ ಮೇಲೆ ಕೃಪಾಸನವನ್ನು ಇಡ
೩೫ ಬೇಕು. ಮತ್ತು ತೆಕೆಯ ಹೊರಗೆ ಮೇಜನ್ನೂ, ಮೇಜಿಗೆದುರಾ
ಗಿ, ವಾಸ ಸ್ಥಳದ ದಕ್ಷಿಣ ಪಾರ್ಶ್ವದಲ್ಲಿ, ದೀಪ ಸ್ತಂಭವನ್ನೂ ಇ
ಡ ಬೇಕು; ಉತ್ತರ ಪಾರ್ಶ್ವದಲ್ಲಿ ಮೇಜನ್ನು ಇಡ ಬೇಕು.
೩೬ ಮತ್ತು ಗುಡಾರದ ಬಾಗಲಿಗೆ ನೀಲಿ, ರಕ್ತ ವರ್ಣ, ಲಾಕೆ ಬಣ್ಣ
ಹೊಸೆದ ನಾರುಗಳ್ಳಿಂದ ಚಿತ್ರವಾಗಿ ಹೊಲಿಯುವ ಕೆಲಸದ ತೆಕೆ
೩೭ ಯನ್ನು ಮಾಡ ಬೇಕು. ಆ ತೆಕೆಗೆ ಷಿಟ್ಟಿಮ್ ಮರದ ಐದು ಸ್ತಂ
ಭಗಳ್ಳನ್ನು ಮಾಡಿ, ಅವುಗಳ್ಳನ್ನು ಭಂಗಾರದಿಂದ ಹೊದಗಿಸ ಬೇ
ಕು; ಅವುಗಳ ಮೊಳೆಗಳು ಭಂಗಾರವಾಗಿರ ಬೇಕು; ಅವುಗಳ್ಳಿಗೆ
ತಾಂಬ್ರದ ಐದು ಕಾಲುಗಳ್ಳನ್ನು ಎರಕ ಹೊಯ್ಯ ಬೇಕು.

## ೨೭. ಸಂಧಿ.

೧ ಮತ್ತು ಷಿಟ್ಟಿಮ್ ಮರದಿಂದ ಬಲಿ ಪೀಠವನ್ನು ಐದು ಮೊಳ
ಉದ್ದವಾಗಿಯೂ, ಐದು ಮೊಳ ಅಗಲವಾಗಿಯೂ ಮಾಡ ಬೇಕು;
ಆ ಬಲಿ ಪೀಠವು ಚೌಕವಾಗಿರ ಬೇಕು; ಅದರ ಎತ್ತರವು ಮೂರು
೨ ಮೊಳ. ಮತ್ತು ಅದರ ನಾಲ್ಕು ಮೂಲೆಗಳ್ಳಲ್ಲಿ ಅದಕ್ಕೆ ಕೊಂಬು
ಗಳನ್ನು ಮಾಡ ಬೇಕು; ಅದರ ಕೊಂಬುಗಳು ಅದರಿಂದಲೇ ಉಂ
ಟಾಗಿರ ಬೇಕು; ಮತ್ತು ಅದನ್ನು ತಾಂಬ್ರದಿಂದ ಹೊದಗಿಸ ಬೇಕು.
೩ ಮತ್ತು ಅದರ ಬೂದಿಗೋಸ್ಕರ ಅದರ ಶಿಬ್ಬೆಗಳನ್ನೂ, ಅದರ ಸ
ಲಿಕೆಗಳನ್ನೂ, ಅದರ ಪಾತ್ರೆಗಳನ್ನೂ, ಅದರ ಮುಳ್ಳುಗಳನ್ನೂ,
ಅದರ ಅಗ್ನಿ ಪಾತ್ರೆಗಳನ್ನೂ, ಅದರ ಸಾಮಾನುಗಳನ್ನೆಲ್ಲಾ
೪ ತಾಂಬ್ರದಿಂದ ಮಾಡ ಬೇಕು. ಮತ್ತು ಅದಕ್ಕೆ ಬಲೆಯ ಕೆಲಸ
ವಾಗಿ ಇರುವ ತಾಂಬ್ರದ ಜಲ್ಲಡಿಯನ್ನೂ ಮಾಡಿ, ಆ ಬಲೆಗೆ
ಅದರ ನಾಲ್ಕು ಮೂಲೆಗಳ್ಳಿಗೆ ತಾಂಬ್ರದ ನಾಲ್ಕು ಉಂಗರಗಳ್ಳನ್ನು
೫ ಮಾಡ ಬೇಕು. ಆ ಬಲೆಯು ಬಲಿ ಪೀಠದ ನಡುವೆಯ ಮಟ್ಟಿ
ಗೂ ಬರುವ ಹಾಗೆ, ಅದನ್ನು ಕೆಳಗಿನ ಭಾಗದಲ್ಲಿ ಬಲಿ ಪೀಠದ
೬ ನಡುವೆಯಲ್ಲಿ ಸುತ್ತಿದ ಕೆಳಗೆ ಇಡ ಬೇಕು. ಮತ್ತು ಷಿಟ್ಟಿಮ್ ಮ
ರದಿಂದ ಬಲಿ ಪೀಠಕ್ಕೆ ಕೋಲುಗಳನ್ನು ಮಾಡಿ, ಆ ಕೋಲುಗಳ
೭ ನ್ನು ತಾಂಬ್ರದಿಂದ ಹೊದಗಿಸ ಬೇಕು. ಅದರ ಕೋಲುಗಳನ್ನು
ಉಂಗರಗಳ್ಳಲ್ಲೇ ಹೇರಿಸ ಬೇಕು; ಆ ಕೋಲುಗಳು ಬಲಿ ಪೀಠದ
ನ್ನು ಹೊರುವ ಸಮಯದಲ್ಲಿ ಅದರ ಎರಡು ಪಾರ್ಶ್ವಗಳ್ಳಲ್ಲಿ ಇರ
ಬೇಕು. ಹಲಿಗೆಗಳ್ಳಿಂದ ಟೊಳ್ಳಾಗಿ ಅದನ್ನು ಮಾಡ ಬೇಕು;
ಬೆಟ್ಟದಲ್ಲಿ ನಿನಗೆ ತೋರಿಸಿದ ಹಾಗೆಯೇ ಮಾಡ ಬೇಕು.
೮ ಮತ್ತು ವಾಸ ಸ್ಥಳದ ಅಂಗಳವನ್ನು ಮಾಡ ಬೇಕು; ಪ್ರಾಗಂ
ದಕೆ—ತೆಂಕಣ ಕಡೆಯಲ್ಲಿರುವ ದಕ್ಷಿಣದಲ್ಲಿ ಅಂಗಳಕ್ಕೋಸ್ಕರ
ಹೊಸೆದ ನಾರಿನ ಪರದೆಗಳನ್ನು ಮಾಡ ಬೇಕು; ಒಂದು ಕಡೆಯಲ್ಲಿ
೧೦ ಇರುವ ಅವುಗಳ ಉದ್ದವು ನೂರು ಮೊಳ. ಮತ್ತು ಅದರ ಸ್ತಂಭಗ
ಳು ಇಪ್ಪತ್ತು, ಅವುಗಳ ತಾಂಬ್ರದ ಕಾಲುಗಳು ಇಪ್ಪತ್ತು ಇರ ಬೇಕು;
ಸ್ತಂಭಗಳ ಮೊಳೆಗಳೂ ಕೋಲುಗಳೂ ಬೆಳ್ಳಿಯಿಂದುಂಟಾಗ
೧೧ ಬೇಕು. ಹಾಗೆಯೇ ಉದ್ದವಾದ ಉತ್ತರ ಪಾರ್ಶ್ವದಲ್ಲಿ ನೂರು
ಮೊಳ ಉದ್ದವಾಗಿರುವ ಪರದೆಗಳೂ, ಅವುಗಳ ಇಪ್ಪತ್ತು ಸ್ತಂಭ
ಗಳೂ, ಅವುಗಳ ಇಪ್ಪತ್ತು ತಾಂಬ್ರದ ಕಾಲುಗಳೂ ಇರ ಬೇಕು;
ಸ್ತಂಭಗಳ ಮೊಳೆಗಳೂ ಕೋಲುಗಳೂ ಬೆಳ್ಳಿಯಿಂದುಂಟಾಗ
೧೨ ಬೇಕು. ಮತ್ತು ಅಂಗಳದ ಅಗಲವಾದ ಪಶ್ಚಿಮ ಪಾರ್ಶ್ವದಲ್ಲಿ ಐ
ವತ್ತು ಮೊಳದ ಪರದೆಗಳೂ, ಅವುಗಳ ಹತ್ತು ಸ್ತಂಭಗಳೂ, ಹ
೧೩ ತ್ತು ಕಾಲುಗಳೂ, ಇರ ಬೇಕು; ಮತ್ತು ಅಂಗಳದ ಅಗಲವಾಗಿರು
ವ ಪೂರ್ವ ಕಡೆಯಲ್ಲಿ ಮೂಡಣದಲ್ಲಿ ಐವತ್ತು ಮೊಳವಿರ ಬೇ
೧೪ ಕು. ಒಂದು ಕಡೆಯಲ್ಲಿ ಹದಿನೈದು ಮೊಳದ ಪರದೆಗಳೂ, ಅವು
ಗಳ್ಳಿಗೆ ಮೂರು ಸ್ತಂಭಗಳೂ, ಮೂರು ಕಾಲುಗಳೂ ಇರ ಬೇಕು.
೧೫ ಮತ್ತೊಂದು ಕಡೆಯಲ್ಲಿ ಹದಿನೈದು ಮೊಳದ ಪರದೆಗಳೂ, ಅವು
ಗಳ್ಳಿಗೆ ಮೂರು ಸ್ತಂಭಗಳೂ, ಮೂರು ಕಾಲುಗಳೂ ಇರ ಬೇಕು.
೧೬ ಅಂಗಳದ ಬಾಗಲಲ್ಲಿ ನೀಲಿ, ರಕ್ತ ವರ್ಣ, ಲಾಕೆ ಬಣ್ಣ, ಹೊಸೆದ
ನಾರುಗಳ್ಳಿಂದ ಚಿತ್ರವಾಗಿ ಹೊಲಿಯಲ್ಪಟ್ಟ ಇಪ್ಪತ್ತು ಮೊಳದ ತೆ
ಕೆಯೂ, ಅದಕ್ಕೆ ನಾಲ್ಕು ಸ್ತಂಭಗಳೂ, ನಾಲ್ಕು ಕಾಲುಗಳೂ ಇ
೧೭ ರ ಬೇಕು. ಅಂಗಳದ ಸ್ತಂಭಗಳೆಲ್ಲಾ ಸುತ್ತಲಾಗಿ ಬೆಳ್ಳಿ ಕೋಲು
ಗಳ್ಳುಳ್ಳವುಗಳ್ಳಾಗಿರ ಬೇಕು; ಅವುಗಳ್ಳಿಗೆ ತಾಂಬ್ರದ ಕಾಲುಗಳು ಇರ
೧೮ ಬೇಕು. ಅಂಗಳದ ಉದ್ದವು ನೂರು ಮೊಳ, ಅಗಲವು ಐವತ್ತೈವ
ತ್ತು ಮೊಳ, ಅದರ ಎತ್ತರವು ಐದು ಮೊಳ, ಪರದೆಗಳು ಹೊಸೆದ
ನೂಲಿನಿಂದಲೂ, ಕಾಲುಗಳು ತಾಂಬ್ರದಿಂದಲೂ, ಉಂಟಾಗ ಬೇಕು.
೧೯ ವಾಸ ಸ್ಥಳದ ಎಲ್ಲಾ ಕೆಲಸಕ್ಕೆ ಬರುವ ಅದರ ಎಲ್ಲಾ ಸಾಮಾನು
ಗಳೂ, ಅದರ ಎಲ್ಲಾ ಗೂಟಗಳೂ, ಅಂಗಳದ ಎಲ್ಲಾ ಗೂಟಗ
ಳೂ, ತಾಂಬ್ರದಿಂದ ಉಂಟಾಗ ಬೇಕು.

೨೦ ಇವಲ್ಲದೆ ಬೇಕಿಗೋಸ್ಕರ, ನಿತ್ಯವಾಗಿ ದೀಪವನ್ನು ಇಡುವದ
ಕ್ಕೋಸ್ಕರ, ನಿರ್ಮಲವಾದ ಕುಟ್ಟಿದ ಇಪ್ಪೇ ಎಣ್ಣೆಯೆನ್ನು ನಿನಗೆ
ತರುವ ಹಾಗೆ, ಇಸ್ರಯೇಲ್ ಮಕ್ಕಳಿಗೆ ಅಪ್ಪಣೆ ಕೊಡ ಬೇಕು.
೨೧ ಸಭೆಯ ಗುಹಾರದಲ್ಲಿ ಸಾಕ್ಷಿಯ ಮುಂದೆ ಇರುವ ತೆರೆಯ ಹೊ
ರಗೆ ಆಕೋನನೂ ಅವನ ಮಕ್ಕಳೂ ಅದನ್ನು ಸಾಯಂಕಾಲದಿಂ
ದ ಉದಯದ ಪರ್ಯಂತರ ಕರ್ತನ ಮುಂದೆ ಇರುವ ಹಾಗೆ, ಸಿ
ದ್ಧ ಮಾಡ ಬೇಕು; ಇದೇ ಇಸ್ರಯೇಲ್ ಮಕ್ಕಳ ವಿಷಯದಲ್ಲಿ
ಅವರ ಸಂತತಿಗಳಿಗೆ ನಿತ್ಯವಾದ ಕಟ್ಟಳೆ.

## ೨೮. ಸಂಧಿ.

೧ ಇದಲ್ಲದೆ ನಿನ್ನ ಸಹೋದರನಾದ ಆಕೋನನನ್ನೂ, ಅವನ
ಸಂಗಡ ಅವನ ಮಕ್ಕಳನ್ನೂ ನನಗೆ ಯಾಜಕರಾಗುವ ಹಾಗೆ,
ಇಸ್ರಯೇಲ್ಲಿಂದ ನಿನ್ನ ಬಳಿಗೆ ಬರ ಮಾಡು. ಆಕೋನನನ್ನೂ,
ಆಕೋನನ ಮಕ್ಕಳಾದ ನಾದಬನನ್ನೂ, ಅಬೀಹುವನ್ನೂ, ಎಲೆ
ಯಾಜರನನ್ನೂ, ಇಥಮಾರನನ್ನೂ ನಿನ್ನ ಬಳಿಗೆ ಬರ ಮಾಡ
೨ ಬೇಕು. ಮತ್ತು ನಿನ್ನ ಸಹೋದರನಾದ ಆಕೋನನಿಗೆ ಘನ
ಕ್ಕೋಸ್ಕರವೂ ಸೌಂದರ್ಯಕ್ಕೋಸ್ಕರವೂ ಪರಿಶುದ್ಧ ವಸ್ತ್ರಗಳ
೩ ನ್ನು ಮಾಡಿಸ ಬೇಕು. ಮತ್ತು ನಾನು ಜ್ಞಾನದ ಆತ್ಮದಿಂದ ತುಂ
ಬಿಸಿದಂಥ, ಜ್ಞಾನದ ಹೃದಯವುಳ್ಳಂಥ, ಎಲ್ಲರ ಸಂಗಡ ಮಾ
ತಾಡ ಬೇಕು. ಆಕೋನನು ನನಗೆ ಯಾಜಕ ಸೇವೆ ಮಾಡುವ
ಹಾಗೆ, ಅವನನ್ನು ಪರಿಶುದ್ಧ ಮಾಡುವ ಬಗ್ಯೆ, ಅವರು ಅವನ ವ
೪ ಸ್ತ್ರಗಳನ್ನು ಮಾಡ ಬೇಕು. ಅವರು ಮಾಡ ತಕ್ಕ ವಸ್ತ್ರಗಳು
ಇವೇ—ಪದಕವೂ, ಎಫೋದೂ, ನಿಲುವಂಗಿಯೂ, ಚಿತ್ರವಾಗಿ ಹೊ
ಲಿದ ಅಂಗಿಯೂ, ಮುಂಡಾಸವೂ, ನಡುಕಟ್ಟೂ; ಹಾಗೆ ಅವರು
ನಿನ್ನ ಸಹೋದರನಾದ ಆಕೋನನಿಗೂ ಅವನ ಮಕ್ಕಳಿಗೂ, ನ
ನಗೆ ಯಾಜಕ ಸೇವೆ ಮಾಡುವ ಹಾಗೆ, ಪರಿಶುದ್ಧ ವಸ್ತ್ರಗಳನ್ನು
೫ ಮಾಡ ಬೇಕು. ಅವರು ಭಂಗಾರವನ್ನೂ, ನೀಲಿಯನ್ನೂ, ರಕ್ತ
ವರ್ಣವನ್ನೂ, ಆಕಿ ಬಣ್ಣವನ್ನೂ, ನಾರು ಮಡಿಯನ್ನೂ ತ
ಕ್ಕೊಳ್ಳ ಬೇಕು.
೬ ಎಫೋದನ್ನು ಅವರು ಭಂಗಾರದಿಂದಲೂ, ನೀಲಿಯಿಂದಲೂ, ರ
ಕ್ತ ವರ್ಣದಿಂದಲೂ, ಆಕಿ ಬಣ್ಣದಿಂದಲೂ, ಹೊಸೆದ ನಾರಿನಿಂದ
೭ ಲೂ, ಜಾಣರ ಚಿತ್ರ ಕೆಲಸವಾಗಿ ಮಾಡ ಬೇಕು. ಅದು ಜೊಡಿ
ಸಲ್ಪಡುವ ಹಾಗೆ, ಅದಕ್ಕೆ ಅದರ ಎರಡು ಅಂಚುಗಳಲ್ಲಿ ಎರಡು
೮ ಜೊಡಿಸಲ್ಪಟ್ಟ ಹೆಗಲು ಭಾಗಗಳು ಇರ ಬೇಕು. ಮತ್ತು ಅದರ
ಮೇಲಿರುವ ವಿಚಿತ್ರವಾದ ದಟ್ಟಿಯು ಅದೇ ಕೆಲಸದ್ದಾಗಿ, ಚಿನ್ನದ್ದಾ
ಗಿ, ನೀಲಿ, ರಕ್ತ ವರ್ಣ, ಆಕಿ ಬಣ್ಣ, ಹೊಸೆದ ನಾರುಗಳುಳ್ಳದ್ದಾ
೯ ಗಿ ಅದರಲ್ಲಿರ ಬೇಕು. ಮತ್ತು ಎರಡು ಗೋಮೇಧಿಕ ಕಲ್ಲುಗಳನ್ನು
೧೦ ತಕ್ಕೊಂಡು, ಇಸ್ರಯೇಲ್ ಮಕ್ಕಳ ಹೆಸರುಗಳನ್ನು ಒಂದು ಕಲ್ಲಿ
ನಲ್ಲಿ ಆರು ಹೆಸರುಗಳಾಗಿಯೂ, ಇನ್ನೊಂದು ಕಲ್ಲಿನಲ್ಲಿ ಮಿಕ್ಕಾದ
ಆರು ಹೆಸರುಗಳಾಗಿಯೂ, ಅವರ ವಂಶಗಳ ಪ್ರಕಾರ ಅವುಗಳ
೧೧ ಮೇಲೆ ಕೆತ್ತ ಬೇಕು. ಕಲ್ಲು ಕೆತ್ತುವವರ ಕೆಲಸದಿಂದ, ಮುದ್ರೆ ಕೆ
ತ್ತುವದರ ಪ್ರಕಾರ ಆ ಎರಡು ಕಲ್ಲುಗಳನ್ನು ಇಸ್ರಯೇಲ್ ಮಕ್ಕ
ಳ ಹೆಸರುಗಳ ಅನುಸಾರವಾಗಿ ಕೆತ್ತಿಸಿ, ಅವುಗಳನ್ನು ಭಂಗಾರದ
೧೨ ಜವೆಗಳಲ್ಲಿ ಹೊದಗಿಸಲ್ಪಟ್ಟವುಗಳಾಗಿ ಮಾಡ ಬೇಕು. ಆ ಎರ
ಡು ಕಲ್ಲುಗಳನ್ನು ಎಫೋದಿನ ಹೆಗಲು ಭಾಗಗಳ ಮೇಲೆ ಇಸ್ರ
ಯೇಲ್ ಮಕ್ಕಳ ಜ್ಞಾಪಕಾರ್ಥವಾದ ಕಲ್ಲುಗಳಾಗಿ ಇಡ ಬೇಕು;
ಆಕೋನನು ತನ್ನ ಎರಡು ಹೆಗಲುಗಳ ಮೇಲೆ ಅವರ ಹೆಸರುಗಳ
ನ್ನು ಕರ್ತನ ಸನ್ನಿಧಿಯಲ್ಲಿ ಜ್ಞಾಪಕಾರ್ಥವಾಗಿ ಹೊರ ಬೇಕು.
೧೩ ಮತ್ತು ಭಂಗಾರದ ಜವೆಗಳನ್ನೂ, ಶುದ್ಧ ಭಂಗಾರದ ಎರಡು ಸರಪ
೧೪ ಣಿಗಳನ್ನು ಮಾಡಿಸಿ, ಇವುಗಳನ್ನು ಹೆಣೆದ ಕೆಲಸದಿಂದ ನೂಲು
ಗಳ ಹಾಗೆ ಮಾಡ ಬೇಕು. ಆ ಹೆಣೆದ ಸರಪಣಿಗಳನ್ನು ಜವೆಗ
ಳಲ್ಲಿ ಕೇರಿಸ ಬೇಕು.
೧೫ ಮತ್ತು ನ್ಯಾಯದ ಪದಕವನ್ನು ಜಾಣರ ಚಿತ್ರ ಕೆಲಸದಿಂದ
ಮಾಡಿಸಿ, ಎಫೋದಿನ ಕೆಲಸದ ಹಾಗೆಯೇ ಮಾಡಿಸಿ, ಚಿನ್ನ, ನೀ
ಲಿ, ರಕ್ತ ವರ್ಣ, ಆಕಿ ಬಣ್ಣ, ಹೊಸೆದ ನೂಲುಗಳಿಂದ ಮಾಡಿ
೧೬ ಸ ಬೇಕು. ಅದು ಚೌಕವಾಗಿಯೂ, ಇಮ್ಮಡಿಸಿದ್ದಾಗಿಯೂ,
೧೭ ಗೇಣುದ್ದವಾಗಿಯೂ, ಗೇಣಗಲವಾಗಿಯೂ, ಇರ ಬೇಕು. ಅದ
ರಲ್ಲಿ ಕಲ್ಲುಗಳ ನಾಲ್ಕು ಸಾಲುಗಳಾಗಿ ಕಲ್ಲು ಜವೆಗಳನ್ನು ಮಾ
ಡ ಬೇಕು. ಮೊದಲನೇ ಸಾಲು ಅಕ್ಕೀಕ, ತಲುಕು ಪಡಿಕ, ಮಾ
೧೮ ಣಿಕ್ಯಗಳ ಸಾಲು. ಎರಡನೇ ಸಾಲು ಪಚ್ಚೆ, ನೀಲ, ಸಲೀಮ.
೧೯ ಮೂರನೇ ಸಾಲು ಪದ್ಮರಾಗ, ವೈಡೂರ್ಯ, ಸುಗಂಧಿ. ನಾಲ್ಕ
೨೦ ನೇ ಸಾಲು ಬೆರುಲ್ಲ, ಗೋಮೇಧಿಕ, ವಜ್ರ; ಇವು ಜವೆಗಳ ಚಿನ್ನ
೨೧ ದಲ್ಲಿ ಕೇರಿಸಿದವುಗಳಾಗಿರ ಬೇಕು. ಈ ಕಲ್ಲುಗಳು ಇಸ್ರಯೇಲ್
ಮಕ್ಕಳ ಹೆಸರುಗಳುಳ್ಳವುಗಳಾಗಿಯೂ, ಅವರ ಹೆಸರುಗಳ ಪ್ರಕಾ
ರ ಹನ್ನೆರಡಾಗಿಯೂ ಇರ ಬೇಕು; ಅವು ಒಂದೊಂದಕ್ಕೆ ಒಂ
ದೊಂದು ಹೆಸರಾಗಿ ಹನ್ನೆರಡು ಕುಲಗಳಿಗೋಸ್ಕರ ಮುದ್ರೆಗಳ
೨೨ ಹಾಗೆ ಕೆತ್ತಿರ ಬೇಕು. ಮತ್ತು ಪದಕಕ್ಕೆ ಶುದ್ಧ ಭಂಗಾರದಿಂದ ಹೆ
ಣೆದ ಕೆಲಸವಾಗಿರುವ, ನೂಲಿನ ಹಾಗೆ ಇರುವ ಸರಪಣಿಗಳನ್ನು
೨೩ ಮಾಡ ಬೇಕು. ಮತ್ತು ಪದಕದ ಮೇಲೆ ಭಂಗಾರದ ಎರಡು ಉಂ
ಗರಗಳನ್ನು ಮಾಡಿ, ಆ ಎರಡು ಉಂಗರಗಳನ್ನು ಪದಕದ ಎರ
೨೪ ಡು ಮೂಲೆಗಳಲ್ಲಿ ಇರಿಸಿ,—ಚಿನ್ನದ ಆ ಎರಡು ಹೆಣೆಕೆಗಳನ್ನು
ಪದಕದ ಮೂಲೆಗಳಲ್ಲಿರುವ ಎರಡು ಉಂಗರಗಳಲ್ಲಿ ಸಿಕ್ಕಿಸಿ, ಆ
೨೫ ಎರಡು ಹೆಣೆಕೆಗಳ ಎರಡು ಅಂತ್ಯಗಳನ್ನು ಆ ಎರಡು ಜವೆಗಳಲ್ಲಿ
ಕೇರಿಸಿ, ಎಫೋದಿನ ಹೆಗಲು ಭಾಗಗಳಲ್ಲಿ ಮುಂದು ಕಡೆಯಲ್ಲಿ ಇ
೨೬ ರಿಸ ಬೇಕು. ಮತ್ತು ಭಂಗಾರದ ಎರಡು ಉಂಗರಗಳನ್ನು ಮಾ
ಡಿ, ಪದಕದ ಎರಡು ಅಂಚುಗಳಲ್ಲಿ, ಎಫೋದಿನ ಕಡೆಗಿರುವ ಒಳ
೨೭ ಕಡೆಯಲ್ಲಿ ಹಾಕಿ, ಚಿನ್ನದ ಬೇರೆ ಎರಡು ಉಂಗರಗಳನ್ನು ಮಾ
ಡಿ, ಎಫೋದಿನ ಎರಡು ಹೆಗಲು ಭಾಗಗಳಲ್ಲಿ, ಕೆಳಗೆ ಮುಂದು ಕಡೆ
ಯಲ್ಲಿ, ಎಫೋದಿನ ದಟ್ಟಿಯ ಮೇಲೆ, ಅದನ್ನು ಜೊಡಿಸುವ ಸ್ಥಳ
೨೮ ಕ್ಕೆದುರಾಗಿ, ಇರಿಸ ಬೇಕು. ಆ ಪದಕವನ್ನು, ಅದು ಎಫೋದಿನ
ದಟ್ಟಿಯ ಮೇಲೆ ಇರುವ ಹಾಗೆಯೂ, ಪದಕವು ಎಫೋದನ್ನು
ಬಿಟ್ಟು ಅಲ್ಲಾಡದ ಹಾಗೆಯೂ, ಅದರ ಉಂಗರಗಳಿಂದ ಎಫೋ
೨೯ ದಿನ ಉಂಗರಗಳಿಗೆ ನೀಲಿ ನೂಲಿನಿಂದ ಕಟ್ಟ ಬೇಕು. ಹಾಗೆ ಆ
ಕೋನನು ಪರಿಶುದ್ಧ ಸ್ಥಳಕ್ಕೆ ಬರುವಾಗ, ಇಸ್ರಯೇಲ್ ಮಕ್ಕಳ
ಹೆಸರುಗಳನ್ನು, ಯಾವಾಗಲು ಕರ್ತನ ಮುಂದಿರುವ ಜ್ಞಾಪಕಾ
ರ್ಥವಾಗಿ, ನ್ಯಾಯದ ಪದಕದಲ್ಲಿ ತನ್ನ ಹೃದಯದ ಮೇಲೆ ಹೊ
ರ ಬೇಕು.
೩೦ ಮತ್ತು ನ್ಯಾಯದ ಪದಕದಲ್ಲಿ ಊರೀಮ್ ತುಮ್ಮೀಮ್ ಎಂಬು
ವುಗಳನ್ನು ಇಡ ಬೇಕು; ಆಕೋನನು ಕರ್ತನ ಸನ್ನಿಧಿಗೆ ಬರುವ
ಸಮಯದಲ್ಲಿ, ಅವು ಅವನ ಹೃದಯದ ಮೇಲೆ ಇರ ಬೇಕು.





ಹಾಗೆ ಆಕೋನನು ಕರ್ತನ ಮುಂದೆ ನಿತ್ಯವಾಗಿ ಇಸ್ರಯೇಲ್
ಮಕ್ಕಳ ನ್ಯಾಯವನ್ನು ತನ್ನ ಹೃದಯದ ಮೇಲೆ ಹೊರ ಬೇಕು.
೩೧ ಮತ್ತು ಎಫೋದಿನ ನಿಲುವಂಗಿಯನ್ನೆಲ್ಲಾ ನೀಲಿ ನೂಲಿನಿಂದ
೩೨ ಮಾಡ ಬೇಕು. ಅದರ ಮಧ್ಯದಲ್ಲಿ ತಲೆಗೋಸ್ಕರ ತೂತಿರ
ಬೇಕು. ಅದರ ತೂತಿನ ಸುತ್ತಲಾಗಿ ಜಾಣರ ಕೆಲಸವಾದ ಗೋ
ಟಿರ ಬೇಕು. ಅದು ಹರುಯದ ಹಾಗೆ, ಅದಕ್ಕೆ ಕವಚದ ತೂತಿನ
೩೩ ಹಾಗಿರ ಬೇಕು. ಮತ್ತು ಅದರ ಅಂಚಿನ ಮೇಲೆ ನೀಲಿ, ರಕ್ತವರ್ಣ,
ಆಕಿ ಬಣ್ಣಗಳ ದಾಳಿಂಬರಗಳನ್ನೂ, ಅದರ ಅಂಚಿನ ಸುತ್ತಲಾಗಿ
ಯೂ ಅವುಗಳ ಮಧ್ಯದ ಸುತ್ತಲಾಗಿಯೂ ಚಿನ್ನದ ಘಂಟೆಗಳ
೩೪ ನ್ನೂ ಮಾಡ ಬೇಕು. ಚಿನ್ನದ ಘಂಟೆ, ದಾಳಿಂಬರ, ಚಿನ್ನದ
ಘಂಟೆ, ದಾಳಿಂಬರ, ನಿಲುವಂಗಿಯ ಅಂಚಿನಲ್ಲಿ ಸುತ್ತಲಾಗಿ ಇರ
೩೫ ಬೇಕು. ಇದು ಆಕೋನನಿಗೆ ಸೇವೆಯ ನಿಮಿತ್ತ ಇರ ಬೇಕು; ಅ
ವನು ಕರ್ತನ ಸಮುಖದಲ್ಲಿ ಪರಿಶುದ್ಧ ಸ್ಥಳಕ್ಕೆ ಬರುತ್ತಾ ಹೋ
ಗುತ್ತಾ ಇರುವ ಸಮಯದಲ್ಲಿ, ಅವನು ಸಾಯದ ಹಾಗೆ, ಅವ
ನ ಶಬ್ದವು ಕೇಳ್ಳಿಸ ಬೇಕು.
೩೬ ಮತ್ತು ಶುದ್ಧ ಭಂಗಾರದ ತಗಡನ್ನು ಮಾಡಿ, ಮುದ್ರೆ ಕೆತ್ತುವ
ಪ್ರಕಾರ—ಕರ್ತನಿಗೆ ಪರಿಶುದ್ಧವು ಎಂದು ಅದರಲ್ಲಿ ಕೆತ್ತ ಬೇಕು.
೩೭ ಅದನ್ನು ನೀಲಿ ನೂಲಿಗೆ ಕಟ್ಟಿ ಬೇಕು; ಅದು ಮುಂಡಾಸದಲ್ಲಿ,
೩೮ ಮುಂಡಾಸದ, ಮುಂದಾಗಿಯೇ ಇರ ಬೇಕು. ಇಸ್ರಯೇಲ್ ಮಕ್ಕ
ಳು ತಮ್ಮ ಪರಿಶುದ್ಧ ದಾನಗಳೆಲ್ಲೆಲ್ಲಾ ಪರಿಶುದ್ಧ ಮಾಡುವ, ಪರಿ
ಶುದ್ಧ ಕಾರ್ಯಗಳ ಅಕ್ರಮವನ್ನು ಆಕೋನನು ಹೊರುವ ಹಾಗೆ,
ಅದು ಆಕೋನನ ಹಣೆಯ ಮೇಲಿರ ಬೇಕು; ಕರ್ತನ ಮುಂದೆ
ಅವುಗಳೆಲ್ಲಾ ಮೆಚ್ಚಿಗೆ ಆಗುವ ಹಾಗೆ, ಅದು ಯಾವಾಗಲೂ ಅ
ವನ ಹಣೆಯ ಮೇಲೆ ಇರ ಬೇಕು.
೩೯ ಮತ್ತು ಅಂಗಿಯನ್ನು ನಾರಿನಿಂದ ಸೀಯಿಸಿ, ನಾರಿನ ಮುಂಡಾ
ಸವನ್ನು ಮಾಡಿಸಿ, ಚಿತ್ರವಾಗಿ ಹೊಲಿಯುವ ಕೆಲಸದ ನಡುಕಟ್ಟು
ನ್ನು ಮಾಡಿಸ ಬೇಕು.
೪೦ ಮತ್ತು ಆಕೋನನ ಮಕ್ಕಳಿಗೆ ಅಂಗಿಗಳನ್ನು ಮಾಡಿಸಿ, ನಡು
ಕಟ್ಟುಗಳನ್ನು ಮಾಡಿಸಿ, ಅವರಿಗೆ ಘನ ಸೌಂದರ್ಯಕ್ಕಳಿ
೪೧ ಗೋಸ್ಕರ ಕುಲಾವಿಗಳನ್ನು ಮಾಡಿಸ ಬೇಕು. ಮತ್ತು ಅವುಗ
ಳನ್ನು ನಿನ್ನ ಸಹೋದರನಾದ ಆಕೋನನಿಗೂ, ಅವನ ಮಕ್ಕಳಿ
ಗೂ ಇಡಿಸಿ, ಅವರನ್ನು ಅಭಿಷೇಕಿಸಿ, ಅವರನ್ನು ಪ್ರತಿಷ್ಠೆ
ಮಾಡಿ, ಅವರು ನನಗೆ ಯಾಜಕ ಸೇವೆ ಮಾಡುವ ಹಾಗೆ, ಅವ
೪೨ ರನ್ನು ಪರಿಶುದ್ಧ ಮಾಡು. ಮತ್ತು ಅವರಿಗೆ ನಿರ್ವಾಣತ್ವವನ್ನು
ಮುಚ್ಚುವ ಹಾಗೆ, ಮಡಿಯ ಇಜಾರುಗಳನ್ನು ಮಾಡಿಸು; ಅವು
೪೩ ಸೊಂಟದಿಂದ ತೊಡೆಯ ಪರ್ಯಂತರ ಇರ ಬೇಕು. ಆಕೋನ
ನೂ ಅವನ ಮಕ್ಕಳೂ ಸಭೆಯ ಗುಹಾರಕ್ಕೆ ಬರುವ ಸಮಯದ
ಲ್ಲಿಯೂ, ಪರಿಶುದ್ಧ ಸ್ಥಳದಲ್ಲಿ ಸೇವೆ ಮಾಡುವದಕ್ಕೆ ಬಲಿ ಪೀಠಕ್ಕೆ
ಸಮೀಪ ಬರುವ ಸಮಯದಲ್ಲಿಯೂ, ಅವರು ಅಕ್ರಮವನ್ನು
ಹೊತ್ತು ಸಾಯದ ಹಾಗೆ, ಇವು ಅವರ ಮೇಲೆ ಇರ ಬೇಕು;
ಇದೇ ಅವನಿಗೂ, ಅವನ ಹಿಂದೆ ಅವನ ಬೀಜಕ್ಕೂ ನಿತ್ಯವಾದ
ಕಟ್ಟಳೆ.

## ೨೯. ಸಂಧಿ.

೧ ಅವರು ನನಗೆ ಯಾಜಕ ಸೇವೆ ಮಾಡುವ ಹಾಗೆ, ಅವರನ್ನು
ಪರಿಶುದ್ಧ ಮಾಡುವದಕ್ಕೆ ನೀನು ಅವರಿಗೆ ಮಾಡ ಬೇಕಾದ ಕಾ
ರ್ಯವೇನಂದರೆ—ಒಂದು ಹೋರಿ ಕರುವನ್ನೂ, ಪೂರ್ಣಾಂಗವಾ
೨ ದ ಎರಡು ಟಗರುಗಳನ್ನೂ, ಹುಳಿ ಇಲ್ಲದ ಕೊಟ್ಟಿಗಳನ್ನೂ, ಎ
ಣ್ಣೆ ಹೊಯಿದ ಹುಳಿ ಇಲ್ಲದ ಹೋಳಿಗೆಗಳನ್ನೂ, ಎಣ್ಣೆ ಹಚ್ಚಿ
ದ ಹುಳಿ ಇಲ್ಲದ ಕರುಬುಗಳನ್ನೂ ತಕ್ಕೊಳ್ಳ ಬೇಕು; ಗೋಧಿ
೩ ಯ ನಯವಾದ ಹಿಟ್ಟಿನಿಂದ ಅವುಗಳನ್ನು ಮಾಡ ಬೇಕು. ಇವು
ಗಳನ್ನು ಒಂದು ಪುಟ್ಟಿಯಲ್ಲಿ ಇಟ್ಟು, ಪುಟ್ಟಿಯಲ್ಲಿ ಆ ಹೋರಿ
೪ ಯ, ಎರಡು ಟಗರುಗಳ ಸಂಗಡ ತಕ್ಕೊಂಡು ಬರ ಬೇಕು. ಮ
ತ್ತು ಆಕೋನನನ್ನೂ ಅವನ ಮಕ್ಕಳನ್ನೂ, ಸಭೆಯ ಗುಹಾರದ
ಬಾಗಲ ಸಮೀಪಕ್ಕೆ ತಂದು, ನೀರಿನಲ್ಲಿ ತೊಳಿಸಿ, ಆ ವಸ್ತ್ರಗಳ
೫ ನ್ನು ತಕ್ಕೊಂಡು, ಆಕೋನನಿಗೆ ಅಂಗಿಯನ್ನೂ, ಎಫೋದಿನ ನಿಲು
ವಂಗಿಯನ್ನೂ, ಎಫೋದನ್ನೂ, ಪದಕವನ್ನೂ ತೊಡಿಸಿ, ಎಫೋ
೬ ದಿನ ದಟ್ಟಿಯನ್ನು ಅವನಿಗೆ ಕಟ್ಟಿ, ಅವನ ತಲೆಗೆ ಮುಂಡಾಸವ
೭ ನ್ನಿಟ್ಟು, ಮುಂಡಾಸದ ಮೇಲೆ ಪರಿಶುದ್ಧ ಕಿರೀಟವನ್ನು ಇರಿಸಿ, ಅಭಿ
ಷೇಕಿಸುವ ಎಣ್ಣೆಯನ್ನು ತಕ್ಕೊಂಡು, ಅವನ ತಲೆಯ ಮೇಲೆ
ಹೊಯಿದು, ಅವನನ್ನು ಅಭಿಷೇಕಿಸ ಬೇಕು.
೮ ಮತ್ತು ಅವನ ಮಕ್ಕಳನ್ನು ಹತ್ತರ ಕೇರಿಸಿ, ಅವರಿಗೆ ಅಂಗಿಗ
೯ ಳನ್ನು ತೊಡಿಸಿ, ಆಕೋನನಿಗೂ ಅವನ ಮಕ್ಕಳಿಗೂ ನಡುಕಟ್ಟು
ಗಳನ್ನು ಕಟ್ಟಿ, ಅವರಿಗೆ ಕುಲಾವಿಗಳನ್ನು ಇಡ ಬೇಕು; ಹಾಗೆ
ಅವರಿಗೆ ಯಾಜಕತ್ವವು ನಿತ್ಯವಾದ ಕಟ್ಟಳೆಯಾಗಿರುವದು;
ಮತ್ತು ಆಕೋನನನ್ನೂ ಅವನ ಮಕ್ಕಳನ್ನೂ ಪ್ರತಿಷ್ಠೆ ಮಾಡ
ಬೇಕು.
೧೦ ಇದಲ್ಲದೆ ಆ ಹೋರಿಯನ್ನು ಸಭೆಯ ಗುಹಾರದ ಮುಂದ
ಕ್ಕೆ ತರ ಬೇಕು; ಆಕೋನನೂ ಅವನ ಮಕ್ಕಳೂ ಹೋರಿಯ ತ
೧೧ ಲೆಯ ಮೇಲೆ ಕೈಗಳನ್ನು ಇಡ ಬೇಕು. ಆ ಮೇಲೆ ಆ ಹೋರಿ
ಯನ್ನು ಕರ್ತನ ಮುಂದೆ, ಸಭೆಯ ಗುಹಾರದ ಬಾಗಲಲ್ಲಿ, ಕೊ
೧೨ ಯಿದು, ಹೋರಿಯ ರಕ್ತದಲ್ಲಿ ತಕ್ಕೊಂಡು, ಬೆರಳಿನಿಂದ ಬಲಿ ಪೀಠ
ದ ಕೊಂಬುಗಳಿಗೆ ಹಚ್ಚಿ, ರಕ್ತವನ್ನೆಲ್ಲಾ ಬಲಿ ಪೀಠದ ಅಡಿಗೆ ಚೆ
೧೩ ಲ್ಲ ಬೇಕು. ಮತ್ತು ಕರುಳುಗಳನ್ನು ಮುಚ್ಚುವ ಎಲ್ಲಾ ಕೊಬ್ಬು
ನ್ನೂ, ಕಲಿಜೆಯ ಮೇಲೆ ಇರುವ ಪೊರೆಯನ್ನೂ, ಎರಡು ಕುರು
ಳಿ ಕಾಯಿಗಳನ್ನೂ, ಅವುಗಳ ಮೇಲಿರುವ ಕೊಬ್ಬನ್ನೂ ತಕ್ಕೊಂ
೧೪ ಡು, ಬಲಿ ಪೀಠದಲ್ಲಿ ಸುಡ ಬೇಕು. ಮತ್ತು ಹೋರಿಯ ಮಾಂಸ
ವನ್ನೂ, ಅದರ ತೊಗಲನ್ನೂ, ಸಗಣಿಯನ್ನೂ ದಂಡಿನ ಹೊರ
ಗೆ ಬೆಂಕಿಯಿಂದ ಸುಡ ಬೇಕು; ಅದು ಪಾಪದ ಬಲಿ.
೧೫ ಮತ್ತು ಆ ಟಗರುಗಳಲ್ಲಿ ಒಂದನ್ನು ತಕ್ಕೊಳ್ಳ ಬೇಕು; ಆ
ಕೋನನೂ ಅವನ ಮಕ್ಕಳೂ ಟಗರಿನ ತಲೆಯ ಮೇಲೆ ಕೈಗಳ
೧೬ ನ್ನು ಇಡ ಬೇಕು. ಆ ಮೇಲೆ ಆ ಟಗರನ್ನು ಕೊಯಿದು, ಅದರ
ರಕ್ತವನ್ನು ತಕ್ಕೊಂಡು, ಸುತ್ತಲಾಗಿ ಬಲಿ ಪೀಠದ ಮೇಲೆ ಚಿಮಿಕಿ
೧೭ ಸ ಬೇಕು. ಮತ್ತು ಆ ಟಗರನ್ನು ತುಂಡು ತುಂಡಾಗಿ ಕಡಿದು, ಅ
ದರ ಕರುಳುಗಳನ್ನೂ ಕಾಲುಗಳನ್ನೂ ತೊಳೆದು, ಅದರ ಭಾಗಗಳ
೧೮ ಮೇಲೆಯೂ ತಲೆಯ ಮೇಲೆಯೂ ಇಟ್ಟು, ಆ ಟಗರನ್ನೆಲ್ಲಾ ಬಲಿ
ಪೀಠದಲ್ಲಿ ಸುಟ್ಟು ಬಿಡ ಬೇಕು. ಅದು ಕರ್ತನಿಗೆ ಹೋಮವು;
ಅದು ಕರ್ತನಿಗೆ ಸುವಾಸನೆಯುಳ್ಳ ದಹನ ಬಲಿ.
೧೯ ಮತ್ತು ಆ ಎರಡನೇ ಟಗರನ್ನು ತೆಗೆದು ಕೊಳ್ಳ ಬೇಕು; ಆ
ಕೋನನೂ ಅವನ ಮಕ್ಕಳೂ ಟಗರಿನ ಮೇಲೆ ಕೈಗಳನ್ನು ಇಡ
೨೦ ಬೇಕು. ಆಗ ಆ ಟಗರನ್ನು ಕೊಯಿದು, ಅದರ ರಕ್ತದಲ್ಲಿ ಸ್ವಲ್ಪ

ದಿಂದ ಹೊದಗಿಸಿ, ಅದಕ್ಕೆ ಸುತ್ತಲಾಗಿ ಭಂಗಾರದ ಜಪೆಯನ್ನು
೪ ಮಾಡ ಬೇಕು. ಮತ್ತು ಅದರ ಜಪೆಯ ಕೆಳಗೆ, ಅದರ ಎರಡು ಪಾ
ರ್ಶ್ವಗಳಲ್ಲಿ, ಅದರ ಎರಡು ಮೂಲೆಗಳಲ್ಲಿ, ಅದಕ್ಕೆ ಭಂಗಾರದ ಎ
ರಡು ಉಂಗರಗಳನ್ನು ಮಾಡ ಬೇಕು; ಇವು ಅದನ್ನು ಹೊರುವ
೫ ದಕ್ಕೋಸ್ಕರವಾದ ಕೋಲುಗಳಿಗೆ ಮನೆಗಳಾಗಿರ ಬೇಕು. ಮತ್ತು
ಕೋಲುಗಳನ್ನು ಷಿಟ್ಟಿಮ್ ಮರದಿಂದ ಮಾಡಿ, ಭಂಗಾರದಿಂದ
೬ ಹೊದಗಿಸ ಬೇಕು. ಅದನ್ನು ಸಾಕ್ಷಿಯ ಮುಂದೆ ಇರುವ ತೆರೆಯ
ಮುಂದೆಯೂ, ನಾನು ನಿನ್ನನ್ನು ಕಲತು ಕೊಳ್ಳುವಲ್ಲಿ, ಸಾಕ್ಷಿಯ
೭ ಮೇಲಿರುವ ಕೃಪಾಸನದ ಮುಂದೆಯೂ, ಇಡ ಬೇಕು. ಅದರ
ಮೇಲೆ ಆಕೋನನು ಪರಿಮಳ ಧೂಪವನ್ನು ಸುಡ ಬೇಕು; ಪ್ರತಿ
ಉದಯದಲ್ಲಿ ದೀಪಗಳನ್ನು ಸರಿ ಮಾಡುವಾಗ, ಅದನ್ನು ಸುಡ ಬೇ
೮ ಕು. ಮತ್ತು ಆಕೋನನು ಸಾಯಂಕಾಲದಲ್ಲಿ, ದೀಪಗಳನ್ನು ಮೇ
ಲಿರುವ ಸಮಯದಲ್ಲಿ, ಅದರಲ್ಲಿ ಧೂಪ ಸುಡ ಬೇಕು; ಅದೇ ನಿ
೯ ತ್ಯ ಸಂತತಿಗಳಿಗೆ ಕರ್ತನ ಮುಂದೆ ನಿತ್ಯವಾದ ಧೂಪವು. ನೀವು
ಅದರ ಮೇಲೆ ಬೇರೆ ಧೂಪವನ್ನಾಗಲಿ, ಹೋಮವನ್ನಾಗಲಿ, ಕಾ
ಣಿಕೆಯನ್ನಾಗಲಿ, ಅರ್ಪಿಸ ಕೂಡದು; ಪಾನರ್ಪಣೆಯನ್ನು ಅ
೧೦ ದರ ಮೇಲೆ ಹೊಯ್ಯ ಕೂಡದು. ಮತ್ತು ಆಕೋನನು ಅದರ
ಕೊಂಬುಗಳಿಗೆ ವರುಷಕ್ಕೊಂದು ಸಾರಿ ಪಾಪ ಮುಚ್ಚುವ ಪಾ
ಪ ಬಲಿಯ ರಕ್ತದಿಂದ ಪಾಪ ಮುಚ್ಚ ಬೇಕು; ವರುಷಕ್ಕೊಂದು
ಸಾರಿ ನಿಮ್ಮ ಸಂತತಿಗಳಲ್ಲಿ ಅದಕ್ಕೋಸ್ಕರ ಪಾಪ ಮುಚ್ಚ ಬೇ
ಕು; ಅದು ಕರ್ತನಿಗೆ ಅತಿ ಪರಿಶುದ್ಧವಾದದ್ದು.

೧೧ ಆಗ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—ನೀನು
೧೨ ಇಸ್ರಯೇಲ್ ಮಕ್ಕಳ ಕೈಬ್ಬುವನ್ನು, ಕ್ರಮದಲ್ಲಿ ಎಣಿಸಲ್ಪಟ್ಟವರ
ಪ್ರಕಾರ, ಮಾಡಿದರೆ, ಅವರನ್ನು ಕ್ರಮವಾಗಿ ಎಣಿಸುವ ಸಮಯ
ದಲ್ಲಿ ಅವರಲ್ಲಿ ವ್ಯಾಧಿ ಉಂಟಾಗದ ಹಾಗೆ, ಅವರನ್ನು ಕ್ರಮವಾ
ಗಿ ಎಣಿಸುವ ಸಮಯದಲ್ಲಿ ಒಬ್ಬೊಬ್ಬನು ತನ್ನ ಪ್ರಾಣದ ವಿ
೧೩ ಮೋಚನೆ ಕ್ರಯವನ್ನು ಕರ್ತನಿಗೆ ಕೊಡ ಬೇಕು. ಕ್ರಮವಾಗಿ
ಎಣಿಸುವದರಲ್ಲಿ ಹಾದು ಹೋಗುವ ಪ್ರತಿ ಮನುಷ್ಯನು ಕೊಡ
ಬೇಕಾದದ್ದೇನಂದರೆ, ಷೆಕೆಲಿಗೆ ಇಪ್ಪತ್ತು ಗೇರಗಳ ಪ್ರಕಾರವಾಗಿರು
ವ ಪರಿಶುದ್ಧ ಸ್ಥಳದ ಷೆಕೆಲಿನ ಮೇರೆಗೆ ಅರೆ ಷೆಕೆಲು; ಕರ್ತನಿಗೆ ಎ
೧೪ ತ್ತುವ ಕಾಣಿಕೆ ಅರೆ ಷೆಕೆಲೇ. ಕ್ರಮವಾಗಿ ಎಣಿಸಲ್ಪಟ್ಟು ಹಾದು
ಹೋಗುವ ಪ್ರತಿ ಮನುಷ್ಯನು ಇಪ್ಪತ್ತು ವರುಷ ಮೊದಲ್ಗೊಂಡು
ಅದಕ್ಕೆ ಮೇಲಾದ ಪ್ರಾಯವುಳ್ಳವರು, ಕರ್ತನಿಗೆ ಎತ್ತುವ ಕಾಣಿ
೧೫ ಕೆಯನ್ನು ಕೊಡ ಬೇಕು. ನಿಮ್ಮ ಪ್ರಾಣಗಳಿಗೋಸ್ಕರ ಪಾಪ
ಮುಚ್ಚುವದಕ್ಕೆ ಕರ್ತನಿಗೆ ಎತ್ತುವ ಕಾಣಿಕೆಯನ್ನು ಕೊಡುವದ
ರಲ್ಲಿ ಅರೆ ಷೆಕೆಲಿಗಿಂತ ಐಶ್ವರ್ಯವಂತನು ಹೆಚ್ಚು ಕೊಡ ಕೂಡದು,
೧೬ ಬಡವನು ಕಡಿಮೆ ಕೊಡ ಕೂಡದು. ಪಾಪ ಮುಚ್ಚುವ ಹಣವನ್ನು
ಇಸ್ರಯೇಲ್ ಮಕ್ಕಳಿಂದ ಈಸಿ ಕೊಂಡು, ಸಭೆಯ ಗುಡಾರದ ಕೆಲ
ಸಕ್ಕೆ ಕೊಡ ಬೇಕು. ಇದೇ ಇಸ್ರಯೇಲ್ ಮಕ್ಕಳಿಗೆ ಕರ್ತನ ಮುಂ
ದಿರುವ ಜ್ಞಾಪಕಕ್ಕೋಸ್ಕರವೂ, ಅವರ ಪ್ರಾಣಗಳ ನಿಮಿತ್ತ ಪಾ
ಪ ಮುಚ್ಚುವದಕ್ಕೋಸ್ಕರವೂ, ಇರುವದು.

೧೭ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ,
೧೮ ತೊಳೆಯುವದಕ್ಕೋಸ್ಕರ ತಾಂಬ್ರದ ಗಂಗಾಳವನ್ನೂ, ಅದಕ್ಕೆ
ತಾಂಬ್ರದ ಕಾಲನ್ನು ಮಾಡಿ, ಅದನ್ನು ಸಭೆಯ ಗುಡಾರಕ್ಕೂ ಬ
ಲಿ ಪೀಠಕ್ಕೂ ಮಧ್ಯದಲ್ಲಿಟ್ಟು, ಅದರಲ್ಲಿ ನೀರು ಹೊಯ್ಯ ಬೇಕು.
೧೯ ಆಕೋನನೂ ಅವನ ಮಕ್ಕಳೂ ಅದರಲ್ಲಿ ಕೈಕಾಲುಗಳನ್ನು ತೊ
೨೦ ಳೆಯ ಬೇಕು; ಅವರು ಸಭೆಯ ಗುಡಾರದಲ್ಲಿ ಪ್ರವೇಶಿಸುವಾಗಲಾದ
ರೂ, ಸೇವೆ ಮಾಡುವದಕ್ಕೂ ಕರ್ತನಿಗೆ ದಹನ ಬಲಿಯನ್ನು ಸು
ಡುವದಕ್ಕೂ, ಬಲಿ ಪೀಠದ ಬಳಿಗೆ ಬರುವಾಗಲಾದರೂ ಸಾಯದ
೨೧ ಹಾಗೆ, ನೀರಿನಲ್ಲಿ ತೊಳೆ ,ಕೊಳ್ಳ ಬೇಕು. ಅವರು ಸಾಯದ
ಹಾಗೆ ಕೈ ಕಾಲುಗಳನ್ನು ತೊಳೆ ಕೊಳ್ಳ ಬೇಕು; ಇದೇ ಅವನಿ
ಗೂ ಅವನ ಬೀಜಕ್ಕೂ ಅವರ ತಲಾಂತರಗಳಲ್ಲಿ ನಿತ್ಯವಾದ ಕಟ್ಟ
ಳೆಯಾಗಿರ ಬೇಕು.

೨೨ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨೩ ಉತ್ತಮವಾದ ತೈಲಗಳನ್ನೂ, ಪರಿಶುದ್ಧ ಸ್ಥಳದ ಷೆಕೆಲಿನ ಮೇರೆಗೆ
ಸ್ವಚ್ಛವಾದ ಬೋಳದ ಐನೂರು ಸುಗಂಧವಾದ ಲವಂಗ ಪಟ್ಟೆ
ಯ ಅರವಾಸಿ, ಅಂದರೆ, ಇನ್ನೂರ ಐವತ್ತು ಸುಗಂಧವಾದ ಬಜೆ
೨೪ ಯ ಇನ್ನೂರ ಐವತ್ತೂ, ದಾಲ್ಚಿನ್ನಿಯ ಐನೂರೂ, ಇಪ್ಪೇ ಎ
ಣ್ಣೆಯ ಒಂದು ಹಿನ್ನಾನ್ನು ಸಹ ತಕ್ಕೊಂಡು; ಅದರಿಂದ ತೈಲಾಗಾರ
೨೫ ದ ವಿದ್ಯದ ಪ್ರಕಾರ, ಪರಿಶುದ್ಧವಾದ ಅಭಿಷೇಕಿಸುವ ತೈಲವನ್ನು
ಮಾಡು. ಅದೇ ಪರಿಶುದ್ಧವಾದ ಅಭಿಷೇಕಿಸುವ ತೈಲ. ಅದರಿಂದ
೨೬ ಸಭೆಯ ಗುಡಾರವನ್ನೂ, ಸಾಕ್ಷಿ ಪೆಟ್ಟಿಗೆಯನ್ನೂ, ಮೇಜನ್ನೂ,
೨೭ ಅದರ ಎಲ್ಲಾ ಸಾಮಾನುಗಳನ್ನೂ, ದೀಪಸ್ತಂಭವನ್ನೂ, ಅದರ
ಎಲ್ಲಾ ಸಾಮಾನುಗಳನ್ನೂ, ಧೂಪ ಪೀಠವನ್ನೂ, ಬಲಿ ಪೀಠವ
೨೮ ನ್ನೂ, ಅದರ ಎಲ್ಲಾ ಸಾಮಾನುಗಳನ್ನೂ, ಗಂಗಾಳವನ್ನೂ, ಅದರ
೨೯ ಕಾಲನ್ನೂ ಅಭಿಷೇಕಿಸಿ, ಅವು ಅತಿ ಪರಿಶುದ್ಧವಾಗುವ ಹಾಗೆ, ಪರಿ
ಶುದ್ಧ ಮಾಡು; ಅವುಗಳನ್ನು ಮುಟ್ಟುವದೆಲ್ಲಾ ಪರಿಶುದ್ಧವಾಗಿರ ಬೇ
೩೦ ಕು. ಮತ್ತು ಆಕೋನನನ್ನೂ, ಅವನ ಮಕ್ಕಳನ್ನೂ ಅಭಿಷೇಕಿಸಿ,
ಅವರು ನನಗೆ ಯಾಜಕ ಸೇವೆ ಮಾಡುವ ಹಾಗೆ, ಪರಿಶುದ್ಧ ಮಾ
೩೧ ಡು. ಮತ್ತು ಇಸ್ರಯೇಲ್ ಮಕ್ಕಳಿಗೆ ನೀನು ಹೇಳ ಬೇಕಾದದ್ದೇ
ನಂದರೆ—ಇದೇ ನಿಮ್ಮ ತಲಾಂತರಗಳಲ್ಲಿ ನನಗೆ ಪರಿಶುದ್ಧವಾದ ಅ
೩೨ ಭಿಷೇಕಿಸುವ ಎಣ್ಣೆಯಾಗಿರುವದು. ಅದನ್ನು ಮನುಷ್ಯರ ಮಾಂ
ಸದ ಮೇಲೆ ಹೊಯ್ಯ ಬಾರದು. ಅದರ ಮಾದರಿಯ ಹಾಗೆ ಅ
ದಕ್ಕೆ ಸಮಾನವಾದದ್ದನ್ನು ಮಾಡ ಬಾರದು; ಅದು ಪರಿಶುದ್ಧವಾ
೩೩ ದದ್ದು; ನಿಮಗೆ ಪರಿಶುದ್ಧವಾಗಿರ ಬೇಕು. ಅದರ ಹಾಗೆ ತೈಲ ಮಾ
ಡುವವನೂ, ಅದನ್ನು ಅನ್ಯನಿಗೆ ಕೊಡುವವನೂ, ತನ್ನ ಜನರೊ
ಳಗಿಂದ ಕಡಿಯಲ್ಪಡ ಬೇಕು.

೩೪ ಮತ್ತು ಕರ್ತನು ಮೋಶೆಗೆ ಹೇಳಿದ್ದೇನಂದರೆ—ನಿನಗೆ ಪರಿಮಳ
ಗಳನ್ನೂ, ನಾಟಫ, ಬೆಹೆಲೆತ್, ಬೆಲ್ಬನ್ ಎಂಬ ಪರಿಮಳಗಳನ್ನೂ,
ಶುದ್ಧವಾದ ಸಾಂಬ್ರಾಣಿಯನ್ನೂ ತಕ್ಕೋ; ಅವು ಸರಿಯಾದ
೩೫ ಪಾಲುಗಳಾಗಿರಲಿ; ಮತ್ತು ಅವುಗಳನ್ನು ತೈಲ ಮಾಡುವವರ ವಿ
ದ್ಯದಿಂದ ಕಲಿಸಿ, ಉಪ್ಪು ಹಾಕಿ, ಶುದ್ಧವಾದ ಪವಿತ್ರವಾದ ಧೂಪವ
೩೬ ನ್ನು ಮಾಡು. ಮತ್ತು ಅದರಲ್ಲಿ ಸ್ವಲ್ಪ ಹುಡಿ ಮಾಡಿ, ಸಭೆಯ
ಗುಡಾರದಲ್ಲಿ ನಾನು ನಿನಗೆ ಕಾಣಿಸಿ ಕೊಳ್ಳುವಲ್ಲಿ ಸಾಕ್ಷಿಯ
೩೭ ಮುಂದೆ ಇಡು; ಅದು ನಿಮಗೆ ಅತಿ ಪರಿಶುದ್ಧವಾಗಿರುವದು. ಮತ್ತು
ನೀನು ಮಾಡುವ ಧೂಪದ ಮಾದರಿಯ ಹಾಗೆ ನಿನಗೆ ಮಾಡಿ
ಕೊಳ್ಳ ಕೂಡದು. ಅದು ನಿನಗೆ ಕರ್ತನಿಗೋಸ್ಕರ ಪರಿಶುದ್ಧವಾ
೩೮ ಗಿರ ಬೇಕು. ಅದರ ವಾಸನೆ ನೋಡುವದಕ್ಕೆ ಅದರ ಹಾಗೆ ಮಾ
ಡಿದವನು ತನ್ನ ಜನರೊಳಗಿಂದ ಕಡಿಯಲ್ಪಡ ಬೇಕು.





ತಕ್ಕೊಂಡು, ಅಕೋನನ ಬಲ ಕಿವಿಯ ಕೊನೆಗೂ, ಅವನ ಮಕ್ಕ
ಳ ಬಲ ಕಿವಿಯ ಕೊನೆಗೂ, ಅವರ ಬಲ ಕೈಗಳ ಹೆಬ್ಬೆರಳುಗಳಿಗೂ,
ಅವರ ಬಲ ಕಾಲುಗಳ ಅಂಗುಷ್ಠಕ್ಕೂ ಹಚ್ಚಿ, ಆ ರಕ್ತವನ್ನು ಬಲಿ
ಪೀಠಕ್ಕೆ ಸುತ್ತಲಾಗಿ ಚೆಲ್ಲಿಸಿಸ ಬೇಕು. ಮತ್ತು ಪೀಠದ ಮೇಲಿರು
೨೦ ವ ರಕ್ತದಲ್ಲಿಯೂ, ಅಭಿಷೇಕಿಸುವ ಎಣ್ಣೆಯಲ್ಲಿಯೂ, ಸ್ವಲ್ಪ
ತಕ್ಕೊಂಡು, ಅಕೋನನ ಮೇಲೆಯೂ, ಅವನ ವಸ್ತ್ರಗಳ ಮೇಲೆ
ಯೂ, ಅವನ ಮಕ್ಕಳ ಮೇಲೆಯೂ, ಅವನ ಮಕ್ಕಳ ವಸ್ತ್ರಗಳ
ಮೇಲೆಯೂ, ಅವನೂ, ಅವನ ವಸ್ತ್ರಗಳೂ, ಅವನ ಮಕ್ಕಳೂ,
ಅವರ ವಸ್ತ್ರಗಳೂ ಪರಿಶುದ್ಧವಾಗುವ ಹಾಗೆ, ಚಿಮಿಕಿಸ ಬೇಕು.
೨೧ ಇದ್ದಲ್ಲದೆ ಆ ಟಗರನ ಕೊಬ್ಬನ್ನೂ, ಬಾಲವನ್ನೂ, ಕರುಳುಗಳ ಮೇ
ಲಿರುವ ಕೊಬ್ಬನ್ನೂ, ಕಲಿಜೆಯ ಮೇಲೆ ಇರುವ ಪೊಕರೆಯನ್ನೂ,
ಎರಡು ಹುರುಳಿ ಕಾಯಿಗಳನ್ನೂ, ಅವುಗಳ ಮೇಲಿರುವ ಕೊಬ್ಬ
ನ್ನೂ, ಬಲ ಮುಂದೊಡೆಯನ್ನೂ, ತಕ್ಕೊಳ್ಳ ಬೇಕು; ಯಾಕಂ
೨೩ ದರೆ ಅದು ಪ್ರತಿಷ್ಠೆಯ ಟಗರು. ಮತ್ತು ಕರ್ತನ ಮುಂದಿರುವ
ಹುಳಿ ಇಲ್ಲದ ಕೊಟ್ಟಿಯ ಪುಟ್ಟಿಯೊಳಗಿಂದ ಒಂದು ಕೊಟ್ಟಿಯ
ನೂ, ಎಣ್ಣೆ ಕೊಟ್ಟಿಯ ಒಂದು ಹೋಳಿಗೆಯನ್ನೂ, ಒಂದು ಕರು
೨೪ ಬನ್ನೂ ತಕ್ಕೊಂಡು, ಅವುಗಳನ್ನೆಲ್ಲಾ, ಆಕೋನನ, ಅವನ ಮಕ್ಕ
ಳ ಕೈಗಳಲ್ಲಿ ಇಟ್ಟು, ಕರ್ತನ ಮುಂದೆ ಅಲ್ಲಾಡಿಸುವ ಅರ್ಪಣೆ
೨೫ ಯಾಗಿ ಅಲ್ಲಾಡಿಸ ಬೇಕು. ಮತ್ತು ಅವುಗಳನ್ನು ಅವರ ಕೈಗ
ಳೊಳಗಿಂದ ತೆಗೆದು, ಬಲಿ ಪೀಠದಲ್ಲಿ ಹೋಮದ ಮೇಲೆ ಕರ್ತನ
ಮುಂದೆ ಸುವಾಸನೆಗೋಸ್ಕರ ಸುಡ ಬೇಕು; ಅದು ಕರ್ತನಿಗೆ
೨೬ ದಹನ ಬಲಿ. ಮತ್ತು ಆಕೋನನ ಪ್ರತಿಷ್ಠೆಯ ಟಗರನ ಎದೆ
ಯನ್ನು ತಕ್ಕೊಂಡು, ಕರ್ತನ ಮುಂದೆ ಅಲ್ಲಾಡಿಸುವ ಅರ್ಪಣೆ
೨೭ ಯಾಗಿ ಅಲ್ಲಾಡಿಸ ಬೇಕು. ಅದು ನಿನ್ನ ಪಾಲಾಗಿರುವದು. ಮ
ತ್ತು ಅಲ್ಲಾಡಿಸಿದ ಎದೆಯನ್ನೂ, ಎತ್ತಿದ ಬಲ ಮುಂದೊಡೆಯ
ನೂ, ಆಕೋನನ, ಅವನ ಮಕ್ಕಳ, ಪ್ರತಿಷ್ಠೆಯ ಟಗರಿನಲ್ಲಿ ಅ
೨೮ ಲ್ಲಾಡಿಸಿದ್ದನ್ನೂ ಎತ್ತಿದ್ದನ್ನೂ ಪರಿಶುದ್ಧ ಮಾಡು. ಅದು ಆಕೋ
ನನಿಗೂ ಅವನ ಮಕ್ಕಳಿಗೂ ಇಸ್ರಯೇಲ್ ಮಕ್ಕಳ ಕಡೆಯಿಂ
ದ ನಿತ್ಯ ಕಟ್ಟಳೆಯಾಗಿರ ಬೇಕು; ಅದು ಎತ್ತುವ ಅರ್ಪಣೆ ಇಸ್ರ
ಯೇಲ್ ಮಕ್ಕಳ ಕಡೆಯಿಂದ ಅದು ಎತ್ತುವ ಅರ್ಪಣೆಯು; ಅವ
ರ ಸಮಾಧಾನದ ಬಲಿಗಳಾದ ಅರ್ಪಣೆಗಳಿಂದ, ಅವರು ಕರ್ತನಿ
ಗೆ ಎತ್ತುವ ಅರ್ಪಣೆಯು ಆಗಿರ ಬೇಕು.

೨೯ ಇದ್ದಲ್ಲದೆ ಆಕೋನನಿಗಿದ್ದ ಪರಿಶುದ್ಧ ವಸ್ತ್ರಗಳು ಅವನ ತರು
ವಾಯ ಅವನ ಮಕ್ಕಳಿಗಾಗ ಬೇಕು; ಅವುಗಳನ್ನು ತೊಟ್ಟು
ಕೊಂಡು, ಅವರು ಅಭಿಷೇಕಿಸಲ್ಪಟ್ಟು, ಪ್ರತಿಷ್ಠೆಯಾಗ ಬೇಕು.
೩೦ ಅವನ ಮಕ್ಕಳೊಳಗೆ ಅವನಿಗೆ ಬದಲಾಗಿ ಯಾಜಕತ್ವ ನಡಿಸಿ,
ಪರಿಶುದ್ಧ ಸ್ಥಳದಲ್ಲಿ ಸೇವೆ ಮಾಡ ಬರುವವನು ಏಳು ದಿವಸ ಅವು
೩೧ ಗಳನ್ನು ತೊಟ್ಟು ಕೊಳ್ಳ ಬೇಕು. ಮತ್ತು ಪ್ರತಿಷ್ಠೆಯ ಟಗರ
ನ್ನು ತಕ್ಕೊಂಡು, ಅದರ ಮಾಂಸವನ್ನು ಪರಿಶುದ್ಧ ಸ್ಥಳದಲ್ಲಿ ಬೇ
೩೨ ಯಿಸು. ಆಕೋನನೂ ಅವನ ಮಕ್ಕಳೂ ಟಗರಿನ ಮಾಂಸವ
ನ್ನೂ, ಪುಟ್ಟಿಯೊಳಗಿನವ ಕೊಟ್ಟಿಯನ್ನೂ ಸಭೆಯ ಗುಡಾರದ
೩೩ ಬಾಗಲ ಬಳಿಯಲ್ಲಿ ಉಣ್ಣ ಬೇಕು. ಅವರನ್ನು ಪ್ರತಿಷ್ಠೆ ಮಾಡು
ವದಕ್ಕೋಸ್ಕರವೂ, ಅವರನ್ನು ಪರಿಶುದ್ಧ ಮಾಡುವದಕ್ಕೋಸ್ಕರ
ವೂ, ಅವರಿಗೋಸ್ಕರ ಪಾಪ ಮುಚ್ಚಿದವುಗಳನ್ನು ಅವರು ಉ
ಣ್ಣ ಬೇಕು; ಅನ್ಯರು ಉಣ್ಣ ಕೂಡದು; ಯಾಕಂದರೆ ಅವು ಪರಿ
೩೪ ಶುದ್ಧವಾದವುಗಳು. ಪ್ರತಿಷ್ಠೆಯ ಮಾಂಸದಲ್ಲಿ ದೂಡ ಕೊಳ್ಳದೆ
ಯಿಲ್ಲಿಯೂ ವಿವಾದದೂ ಮರು ದಿವಸದ ಪರ್ಯಂತರದ ಮಿಕ್ಕದ್ದು ಮಿ
ಕ್ಕದನ್ನು ಬೆಂಕಿಯಿಂದ ಸುಡ ಬೇಕು; ಅದು ಪರಿಶುದ್ಧವಾಗಿರುವದ
ರಿಂದ ಅದನ್ನು ಉಣ್ಣ ಕೂಡದು.

೩೫ ಹೀಗೆಯೇ ಆಕೋನನಿಗೂ ಅವನ ಮಕ್ಕಳಿಗೂ ನಾನು ನಿ
ನಗೆ ಅಜ್ಞಾಪಿಸಿದ ಎಲ್ಲವುಗಳ ಪ್ರಕಾರವೇ ಮಾಡಿ, ಏಳು ದಿವಸ ಅ
ವರನ್ನು ಪ್ರತಿಷ್ಠೆ ಮಾಡ ಬೇಕು. ಮತ್ತು ಪಾಪದ ಬಲಿಯಾದ
೩೬ ಹೋರಿಯನ್ನು ದಿನಾಲು ಪಾಪ ಮುಚ್ಚುವದಕ್ಕೆ ತಂದು, ಬಲಿಪೀ
ಠಕ್ಕೋಸ್ಕರ ಪಾಪ ಮುಚ್ಚಿ, ಅದರ ಪಾಪವನ್ನು ಪರಿಹರಿಸಿ, ಅ
ದನ್ನು ಪರಿಶುದ್ಧ ಮಾಡುವದಕ್ಕೆ ಅದನ್ನು ಅಭಿಷೇಕಿಸ ಬೇಕು.
೩೭ ಏಳು ದಿವಸ ಬಲಿಪೀಠಕ್ಕೋಸ್ಕರ ಪಾಪ ಮುಚ್ಚಿ, ಅದನ್ನು ಪರಿಶು
ದ್ಧ ಮಾಡ ಬೇಕು; ಆಗ ಬಲಿಪೀಠವು ಅತಿ ಪರಿಶುದ್ಧವಾಗಿರುವದು;
ಬಲಿಪೀಠವನ್ನು ಮುಟ್ಟುವದೆಲ್ಲಾ ಪರಿಶುದ್ಧವಾಗಿರ ಬೇಕು.

೩೮ ಇದ್ದಲ್ಲದೆ ಬಲಿಪೀಠದ ಮೇಲೆ ನೀನು ಅರ್ಪಿಸ ಬೇಕಾದ್ದು ಇ
ದೇ—ಒಂದು ವರುಷದ ಎರಡು ಕುರಿ ಮರಿಗಳು ನಿತ್ಯವಾಗಿ ದಿನಾ
ಲು ಆಗ ಬೇಕು. ಒಂದು ಕುರಿ ಮರಿಯನ್ನು ಬೆಳಿಗ್ಗೆ ಅರ್ಪಿಸಿ,
೩೯ ಮತ್ತೊಂದು ಕುರಿ ಮರಿಯನ್ನು ಸಾಯಂಕಾಲದಲ್ಲಿ ಅರ್ಪಿಸ ಬೇ
೪೦ ಕು. ಮತ್ತು ಹಿನ್ನಿನ ನಾಲ್ಕನೇ ಪಾಲದ್ದು ಕುಟ್ಟಿದ ಎಣ್ಣೆ ಹೊ
ಯಿದ ನಯವಾದ ಹಿಟ್ಟಿನ ಹತ್ತನೇ ಪಾಲೂ, ಹಿನ್ನಿನ ನಾಲ್ಕನೇ
ಪಾಲದ್ದು ದ್ರಾಕ್ಷೇ ರಸದ ಪಾನರ್ಪಣೆಯೂ, ಒಂದು ಕುರಿಮ
೪೧ ರಿಗೋಸ್ಕರ ಆಗ ಬೇಕು. ಎರಡನೇ ಕುರಿಮರಿಯನ್ನು ಸಾಯಂ
ಕಾಲದಲ್ಲಿ ಅರ್ಪಿಸ ಬೇಕು; ಮತ್ತು ಉದಯದ ಕಾಣಿಕೆಯ ಹಾ
ಗೆಯೂ, ಅದರ ಪಾನರ್ಪಣೆಯ ಹಾಗೆಯೂ, ಇದಕ್ಕೂ ಕ
ರ್ತನಿಗೆ ಸುವಾಸನೆಯಾಗಿರುವ ದಹನ ಬಲಿಗೋಸ್ಕರ ಕೊಡ ಬೇ
೪೨ ಕು. ನಿಮ್ಮ ತಲಾಂತರಗಳಲ್ಲಿ ನಿತ್ಯವಾಗಿ ಸಭೆಯ ಗುಡಾರದ
ಮುಂದೆ, ಕರ್ತನ ಸನ್ನಿಧಿಯಲ್ಲಿ, ನಾನು ನಿಮ್ಮ ಸಂಗಡ ಮಾತಾ
ಡುವದಕ್ಕೆ ನಿಮ್ಮನ್ನು ಕಲತು ಕೊಳ್ಳುವಲ್ಲಿ, ಇದೇ ನಿತ್ಯವಾದ
೪೩ ಹೋಮವು. ಅಲ್ಲಿ ನಾನು ಇಸ್ರಯೇಲ್ ಮಕ್ಕಳನ್ನು ಕಲತು ಕೊ
ಳ್ಳುವೆನು; ನನ್ನ ಘನದಿಂದ ಅದು ಪರಿಶುದ್ಧವಾಗುವದು. ಸಭೆಯ
೪೪ ಗುಡಾರವನ್ನೂ ಬಲಿಪೀಠವನ್ನೂ ಪರಿಶುದ್ಧ ಮಾಡುವೆನು; ಮತ್ತು
ಆಕೋನನನ್ನೂ ಅವನ ಮಕ್ಕಳನ್ನೂ, ನನಗೆ ಯಾಜಕ ಸೇವೆ
೪೫ ಮಾಡುವ ಹಾಗೆ, ಪರಿಶುದ್ಧ ಮಾಡುವೆನು. ಮತ್ತು ಇಸ್ರಯೇಲ್
ಮಕ್ಕಳೊಳಗೆ ವಾಸ ಮಾಡಿ, ಅವರಿಗೆ ದೇವರಾಗಿರುವೆನು; ಅವ
ರೊಳಗೆ ವಾಸವಾಗಿರುವದಕ್ಕೋಸ್ಕರ ಅವರನ್ನು ಐಗುಪ್ತ ದೇಶದೊ
ಳಗಿಂದ ಹೊರಗೆ ಬರ ಮಾಡಿದ ಅವರ ದೇವರಾದ ಕರ್ತನು ನಾ
ನೇ, ಎಂದು ಅವರಿಗೆ ತಿಳಿದಿರುವದು; ಅವರ ದೇವರಾದ ಕರ್ತನು
ನಾನೇ.

## ೩೦. ಸಂಧಿ.

೧ ಮತ್ತು ಧೂಪ ಸುಡುವ ಬಲಿಪೀಠವನ್ನು ಮಾಡ ಬೇಕು; ಷಿ
೨ ಟ್ಟಿಮ್ ಮರಗಳಿಂದ ಅದನ್ನು ಮಾಡ ಬೇಕು. ಅದರ ಉದ್ದವು
ಒಂದು ಮೊಳ, ಅಗಲವು ಒಂದು ಮೊಳ; ಚೌಕವಾಗಿರ ಬೇಕು; ಅ
ದರ ಎತ್ತರವು ಎರಡು ಮೊಳ; ಅದಕ್ಕೆ ಕೊಂಬುಗಳು ಅದರಿಂದ
೩ ಲೇ ಇರ ಬೇಕು. ಅದನ್ನು—ಅದರ ಮೇಲ್ಭಾಗವನ್ನೂ, ಸುತ್ತಿ
ರುವ ಪಾರ್ಶ್ವಗಳನ್ನೂ, ಕೊಂಬುಗಳನ್ನೂ—ಶುದ್ಧ ಭಂಗಾರ

## ೩೧. ಸಂಧಿ.

೧ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ಇಗೋ, ಯೆಹೂದ ಕುಲದವನಾದ ಹೂರನ ಮಗನಾದ ಊರಿ
೩ ಯ ಮಗನಾದ ಬೆಚಲೇಲನನ್ನು ಹೆಸರಾಗಿ ಕರೆದಿದ್ದೇನೆ; ಅವನ
ನ್ನು ನಾನು, ವಿಚಿತ್ರವಾದ ಕೆಲಸಗಳನ್ನು ಕಲ್ಪಿಸುವದಕ್ಕೂ,
೪ ಚಿನ್ನ ಬೆಳ್ಳಿ ತಾಂಬ್ರಗಳಲ್ಲಿಯೂ, ಕಲ್ಲುಗಳನ್ನು ಕೆತ್ತಿ ಹಾಕು
ವದರಲ್ಲಿಯೂ, ಮರ ಕಡೆಯುವದರಲ್ಲಿಯೂ, ಕೆಲಸ ಮಾಡುವ
೫ ದಕ್ಕೂ, ಸಕಲ ವಿಧವಾದ ಕೆಲಸ ಮಾಡುವದಕ್ಕೂ, ಜ್ಞಾನ,
ವಿವೇಕ, ತಿಳುವಿಕೆಗೋಸ್ಕರವೂ, ಎಲ್ಲಾ ಕೆಲಸಕ್ಕೋಸ್ಕರವೂ,
೬ ದೇವರ ಆತ್ಮದಿಂದ ತುಂಬಿಸಿದ್ದೇನೆ. ಮತ್ತು, ಇಗೋ, ನಾನು
ದಾನನ ಕುಲದವನಾದ, ಅಹಿಸಮಾಕನ ಮಗನಾದ, ಅಹೊಲಿ
ಯಾಬನನ್ನು ಅವನ ಸಂಗಡ ಕೊಟ್ಟಿದ್ದೇನೆ; ಮತ್ತು ಜ್ಞಾನದ
ಹೃದಯವುಳ್ಳವರೆಲ್ಲರಿಗೆ ನಾನು, ನಿನಗೆ ಆಜ್ಞಾಪಿಸಿದನ್ನೆಲ್ಲಾ
ಮಾಡುವ ಹಾಗೆ, ಹೃದಯದಲ್ಲಿ ಜ್ಞಾನವನ್ನು ಕೊಟ್ಟಿದ್ದೇನೆ.
೭ ಏನಂದರೆ—ಸಭೆಯ ಗುಡಾರವನ್ನೂ, ಸಾಕ್ಷಿಯ ಪೆಟ್ಟಿಗೆಯ
ನ್ನೂ, ಅದರ ಮೇಲಿರುವ ಕೃಪಾಸನವನ್ನೂ, ಗುಡಾರದ ಎಲ್ಲಾ
೮ ಸಾಮಾನುಗಳನ್ನೂ, ಮೇಜನ್ನೂ, ಅದರ ಸಾಮಾನುಗಳನ್ನೂ,
ಶುದ್ಧವಾದ ದೀಪಸ್ತಂಭವನ್ನೂ, ಅದರ ಎಲ್ಲಾ ಸಾಮಾನುಗಳ
೯ ನ್ನೂ, ಧೂಪ ಪೀಠವನ್ನೂ, ಬಲಿ ಪೀಠವನ್ನೂ, ಅದರ ಎಲ್ಲಾ
ಸಾಮಾನುಗಳನ್ನೂ, ಗಂಗಾಳವನ್ನೂ, ಅದರ ಕಾಲನ್ನೂ,
೧೦ ಯಾಜಕನಾದ ಅಹೋನನಿಗೋಸ್ಕರ ಉದ್ಯೋಗದ ವಸ್ತ್ರಗ
ಳನ್ನೂ, ಪರಿಶುದ್ಧ ವಸ್ತ್ರಗಳನ್ನೂ, ಅವನ ಮಕ್ಕಳಿಗೆ ಯಾಜ
೧೧ ಕ ಸೇವೆಗೋಸ್ಕರವಾಗಿರುವ ವಸ್ತ್ರಗಳನ್ನೂ, ಅಭಿಷೇಕಿಸುವ
ತೈಲವನ್ನೂ, ಪರಿಶುದ್ಧ ಸ್ಥಳಕ್ಕೋಸ್ಕರವಾದ ಪರಿಮಳದ ಧೂ
ಪವನ್ನೂ, ನಾನು ನಿನಗೆ ಆಜ್ಞಾಪಿಸಿದ ಎಲ್ಲವುಗಳ ಹಾಗೆಯೇ
ಮಾಡುವರು.
೧೨ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೧೩ ನೀನು ಇಸ್ರಯೇಲ್ ಮಕ್ಕಳಿಗೆ ಹೇಳ ಬೇಕಾದದ್ದೇನಂದರೆ—
ಹ್ಯಾಗೂ ನನ್ನ ಸಬ್ಬತ್ ದಿವಸಗಳನ್ನು ಕೈ ಕೊಳ್ಳ ಬೇಕು;
ಯಾಕಂದರೆ ನಿಮ್ಮನ್ನು ಪರಿಶುದ್ಧ ಮಾಡುವ ಕರ್ತನು ನಾನೇ,
ಎಂದು ನೀವು ತಿಳಿಯುವ ಬಗ್ಯೆ, ಇದೇ ನನಗೂ ನಿಮಗೂ ನಿ
೧೪ ಮ್ಮ ತಲಾಂತರಗಳಲ್ಲಿ ಗುರುತಾಗಿದೆ. ಹೀಗಿರುವದರಿಂದ ಸಬ್ಬ
ತ್ತನ್ನು ಕೈ ಕೊಳ್ಳ ಬೇಕು; ಅದು ನಿಮಗೆ ಪರಿಶುದ್ಧವಾದದ್ದು;
ಅದನ್ನು ಅಪವಿತ್ರ ಮಾಡುವವನು ಸಾಯಲೇ ಸಾಯ ಬೇಕು;
ಅದರಲ್ಲಿ ಕೆಲಸ ಮಾಡುವವನ್ಯಾವನೋ, ಆ ಪ್ರಾಣವು ತನ್ನ
೧೫ ಜನರೊಳಗಿಂದ ಕಡಿಯಲ್ಪಡ ಬೇಕು. ಆರು ದಿವಸ ಕೆಲಸ ಮಾ
ಡ ಬೇಕು; ಏಳನೇ ದಿವಸದಲ್ಲಿ ಕರ್ತನಿಗೆ ಪರಿಶುದ್ಧವಾದ ಮಹಾ
ವಿಶ್ರಾಂತಿಯ ಸಬ್ಬತ್ ದಿವಸವಾಗಿದೆ; ಸಬ್ಬತ್ ದಿವಸದಲ್ಲಿ ಕೆಲ
೧೬ ಸ ಮಾಡುವವರೆಲ್ಲಾ ಸಾಯಲೇ ಸಾಯ ಬೇಕು. ಹೀಗಿರಲಾಗಿ
ಇಸ್ರಯೇಲ್ ಮಕ್ಕಳು ಸಬ್ಬತ್ ದಿವಸವನ್ನು ತಮ್ಮ ತಲಾಂತರ
ಗಳಲ್ಲಿ ನಿತ್ಯ ಜಿಗಂಬಿತಿಕೆಯಾಗಿ ಆಚರಿಸುವದಕ್ಕೆ ಸಬ್ಬತ್ ದಿವ
೧೭ ಸವನ್ನು ಕೈ ಕೊಳ್ಳ ಬೇಕು. ನನಗೂ ಇಸ್ರಯೇಲ್ ಮಕ್ಕಳಿ
ಗೂ ಇದೇ ನಿತ್ಯವಾದ ಗುರುತು; ಯಾಕಂದರೆ ಆರು ದಿವಸಗಳ
ಲ್ಲಿ ಕರ್ತನು ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿ,
ಏಳನೇ ದಿವಸದಲ್ಲಿ ವಿಶ್ರಮಿಸಿ ಕೊಂಡು, ಸಂಪ್ರಾಣಿಸಿ ಕೊಂಡನು.
೧೮ ಅವನು ಮೋಶೆಯ ಸಂಗಡ ಸೀನಾಯಿ ಪರ್ವತದಲ್ಲಿ ಮಾ
ತಾಡಿ ತೀರಿಸಿದ ಮೇಲೆ, ಅವನಿಗೆ ಸಾಕ್ಷಿಯ ಎರಡು ಹಲಿಗೆಗಳನ್ನು
—ದೇವರ ಬೆರಳಿನಿಂದ ಬರೆದ ಕಲ್ಲಿನ ಹಲಿಗೆಗಳನ್ನು—ಕೊ
ಟ್ಟನು.

## ೩೨. ಸಂಧಿ.

೧ ಮೋಶೆ ಬೆಟ್ಟದಿಂದ ಇಳಿಯುವದರಲ್ಲಿ ತನವಾಗುತ್ತದೆಂದು
ಜನರು ನೋಡಿದಾಗ, ಜನರು ಅಹೋನನ ಬಳಿಗೆ ಕೂಡಿ ಕೊಂ
ಡು—ನೀನೆದ್ದು ನಮ್ಮ ಮುಂದೆ ಹೋಗುವ ದೇವರುಗಳನ್ನು ನ
ಮಗೆ ಮಾಡು; ಯಾಕಂದರೆ ಐಗುಪ್ತ ದೇಶದೊಳಗಿಂದ ನಮ್ಮ
ನ್ನು ಮೇಲೆ ಬರ ಮಾಡಿದ ಈ ಮೋಶೆ ಎಂಬವನಿಗೆ ಏನಾಯಿ
೨ ತೋ! ನಮಗೆ ತಿಳಿಯದು, ಅಂದರು. ಆಗ ಅಹೋನನು ಅವ
ರಿಗೆ—ನಿಮ್ಮ ಹೆಂಡತಿ, ನಿಮ್ಮ ಕುಮಾರ ಕುಮಾರ್ತೆಗಳ ಕಿವಿಗಳ
ಲ್ಲಿರುವ ಚಿನ್ನದ ಮುರುವುಗಳನ್ನು ಕಿತ್ತು, ನನಗೆ ತನ್ನಿರಿ, ಅಂ
೩ ದನು. ಆಗ ಜನರೆಲ್ಲಾ ತಮ್ಮ ಕಿವಿಗಳಲ್ಲಿದ್ದ ಚಿನ್ನದ ಮುರುವು
೪ ಗಳನ್ನು ಕಿತ್ತು, ಅಹೋನನ ಬಳಿಗೆ ತಂದರು. ಅವನು ಅವುಗಳ
ನ್ನು ಅವರ ಕೈಗಳಿಂದ ತೆಗೆದು ಕೊಂಡು, ಉಳಿಯಿಂದ ಕೂಟಿ
ಸಿ, ಎರಕ ಹೊಯಿದ ಕರುವಾಗ ಮಾಡಿದನು; ಆಗಲವರು—ಇ
ಸ್ರಯೇಲೇ, ನಿನ್ನನ್ನು ಐಗುಪ್ತ ದೇಶದೊಳಗಿಂದ ಮೇಲೆ ಬರ
೫ ಮಾಡಿದ ದೇವರುಗಳು ಇವರೇ, ಅಂದರು. ಅಹೋನನು ಅದ
ನ್ನು ನೋಡಿ, ಅದರ ಮುಂದೆ ಬಲಿ ಪೀಠವನ್ನು ಕಟ್ಟಿದನು; ಮ
ತ್ತು ಅಹೋನನು—ನಾಳೆ ಕರ್ತನಿಗೆ ಹಬ್ಬ ಎಂದು ಹೇಳಿ, ಕೂ
೬ ಗಿದನು. ಮರು ದಿವಸದಲ್ಲಿ ಅವರು ಬೆಳಿಗ್ಗೆ ಎದ್ದು, ಹೋಮಗಳ
ನ್ನು ಅರ್ಪಿಸಿ, ಸಮಾಧಾನ ಬಲಿಗಳನ್ನು ತಂದರು; ಆಗ ಜನ
ರು ಉಣ್ಣುವದಕ್ಕೂ, ಕುಡಿಯುವದಕ್ಕೂ ಕೂತು ಕೊಂಡು,
ಆಡುವದಕ್ಕೆ ಎದ್ದರು.

೭ ಆಗ ಕರ್ತನು ಮೋಶೆಗೆ ಹೇಳಿದ್ದೇನಂದರೆ—ನೀನು ಇಳಿದು
ಹೋಗು; ಯಾಕಂದರೆ ನೀನು ಐಗುಪ್ತ ದೇಶದೊಳಗಿಂದ ಮೇ
೮ ಲೆ ಬರ ಮಾಡಿದ ನಿನ್ನ ಜನರು ಕೆಟ್ಟು ಹೋದರು. ನಾನು ಅ
ವರಿಗೆ ಆಜ್ಞಾಪಿಸಿದ ಮಾರ್ಗವನ್ನು ಬೇಗ ಬಿಟ್ಟು, ತಮಗೆ ಎರ
ಕ ಹೊಯಿದ ಕರುವನ್ನು ಮಾಡಿ ಕೊಂಡು, ಅದಕ್ಕೆ ಅಡ್ಡ
ಬಿದ್ದು, ಅದಕ್ಕೆ ಬಲಿ ಅರ್ಪಿಸಿ—ಇಸ್ರಯೇಲೇ, ನಿನ್ನನ್ನು ಐಗು
ಪ್ತ ದೇಶದೊಳಗಿಂದ ಮೇಲೆ ಬರ ಮಾಡಿದ ನಿನ್ನ ದೇವರುಗಳು
೯ ಇವರೇ, ಎಂದು ಹೇಳುತ್ತಾರೆ. ಮತ್ತು ಕರ್ತನು ಮೋಶೆಗೆ
ಹೇಳಿದ್ದೇನಂದರೆ—ನಾನು ಈ ಜನರನ್ನು ನೋಡಿದ್ದೇನೆ; ಇಗೋ,
೧೦ ಇದು ಕಠಿಣ ಕುತ್ತಿಗೆಯುಳ್ಳ ಜನವೇ, ಹೀಗಿರುವದರಿಂದ ಈಗ
ನನ್ನನ್ನು ಬಿಡು; ಆಗ ನನ್ನ ಕೋಪವು ಅವರ ಮೇಲೆ ಉರಿಯು
ವದು; ನಾನು ಅವರನ್ನು ಮುಗಿಸಿ ಬಿಟ್ಟು, ನಿನ್ನನ್ನು ದೊಡ್ಡ
ಜನಾಂಗವಾಗ ಮಾಡುವೆನು.

೧೧ ಆಗ ಮೋಶೆ ತನ್ನ ದೇವರಾದ ಕರ್ತನ ಸನ್ನಿಧಿಯಲ್ಲಿ ಬೇ
ಡಿ ಕೊಂಡು ಹೇಳ್ದದ್ದೇನಂದರೆ—ಕರ್ತನೇ, ನೀನು ಮಹಾ ಶಕ್ತಿ
ಯಿಂದಲೂ ಬಲವುಳ್ಳ ಕೈಯಿಂದಲೂ ಐಗುಪ್ತ ದೇಶದೊಳಗಿಂ
ದ ಹೊರಗೆ ಬರ ಮಾಡಿದ ನಿನ್ನ ಜನರ ಮೇಲೆ ಯಾಕೆ ನಿನ್ನ
೧೨ ಕೋಪ ಉರಿಯುವದು? ಕೇಡಿನ ನಿಮಿತ್ತವೂ ಬೆಟ್ಟಿಗಳಲ್ಲಿ ಅವರ



ನ್ನು ಕೊಲ್ಲುವದಕ್ಕೂ, ಭೂಮಿಯ ಮೇಲಿನಿಂದ ಅವರನ್ನು
ಮುಗಿಸುವದಕ್ಕೂ, ಅವರನ್ನು ಹೊರಗೆ ಬರ ಮಾಡಿದ್ದಾನೆಂದು
ಐಗುಪ್ತ್ಯರು ಯಾಕೆ ಹೇಳ ಬೇಕು? ನಿನ್ನ ಕೋಪದ ಉರಿಯ
ನ್ನು ಬಿಟ್ಟು ತಿರುಗು; ನಿನ್ನ ಜನರಿಗೆ ವಿರೋಧವಾದ ಈ ಕೇಡಿನ
೧೩ ವಿಷಯ ಮಾನಸಾಂತರ ಪಡು. ಆಕಾಶದ ನಕ್ಷತ್ರಗಳ ಹಾಗೆ
ನಿಮ್ಮ ಬೀಜವನ್ನು ಹೆಚ್ಚಿಸಿ, ನಾನು ಹೇಳಿದ ಈ ದೇಶವನ್ನು ನಿ
ಮ್ಮ ಬೀಜಕ್ಕೆ, ಅದನ್ನು ನಿತ್ಯವಾಗಿ ಸ್ವತಂತ್ರಿಸಿ ಕೊಳ್ಳುವ
ಹಾಗೆ, ಕೊಡುವೆನೆಂದು, ಯಾರಿಗೆ ನಿನ್ನ ಆಣೆ ಇಟ್ಟು ಕೊಂಡು
ಪ್ರಮಾಣ ಮಾಡಿದಿಯೋ, ಆ ನಿನ್ನ ಸೇವಕರಾದ ಅಬ್ರಹಾಮ
ನನ್ನೂ ಇಸಾಕನನ್ನೂ ಇಸ್ರಯೇಲನನ್ನೂ ಜ್ಞಾಪಕ ಮಾಡಿ
೧೪ ಕೋ. ಆಗ ಕರ್ತನು ತನ್ನ ಜನರಿಗೆ ಮಾಡುತ್ತೇನೆಂದು, ಹೇಳಿ
ದ ಕೇಡಿನ ವಿಷಯ ಮಾನಸಾಂತರ ಪಟ್ಟನು.

೧೫ ಆಗ ಮೋಶೆ ತಿರುಗಿ ಕೊಂಡು, ಎರಡು ಕಡೆಯಲ್ಲಿ ಬರೆದಿರು
ವ ಹಲಿಗೆಗಳಾದ ಸಾಕ್ಷಿಯ ಎರಡು ಹಲಿಗೆಗಳನ್ನು ಕೈಯಲ್ಲಿ
ಹಿಡು ಕೊಂಡು, ಪೆಟ್ಟಿದಿಂದ ಇಳಿದನು; ಅವು ಈ ಪಕ್ಕೆ ಆ ಪಕ್ಕ
೧೬ ಯಲ್ಲಿ ಬರೆಯಲ್ಪಟ್ಟಿದ್ದವು. ಆ ಹಲಿಗೆಗಳು ದೇವರ ಕೃತ್ಯವೇ;
೧೭ ಆ ಬರಹವು ಹಲಿಗೆಗಳ ಮೇಲೆ ಕೆತ್ತಿದ ದೇವರ ಬರಹವೇ. ಯೆ
ಹೋಶುವನು ಉತ್ಸಾಹ ಧ್ವನಿ ಮಾಡುವ ಜನರ ಶಬ್ದವನ್ನು ಕೇ
ಳಿದಾಗ, ಮೋಶೆಗೆ—ದಂಡಿನಲ್ಲಿ ಯುದ್ಧ ಶಬ್ದ ಉಂಟೆಂದು, ಹೇಳಿ
೧೮ ದನು. ಅವನು—ಅದು ಜಯ ಧ್ವನಿ ಅಲ್ಲ, ಅಜಯ ಧ್ವನಿ ಅ
೧೯ ಲ್ಲ; ಗಾಯನ ಧ್ವನಿಯನ್ನು ಕೇಳುತ್ತೇನೆ, ಅಂದನು. ಅವನು
ದಂಡಿಗೆ ಸಮೀಪ ಬಂದು ಆ ಕರುವನ್ನೂ ನಾಟ್ಯಗಳನ್ನೂ ನೋ
ಡಿದಾಗ, ಮೋಶೆ ಕೋಪ ಗೊಂಡು, ಕೈಯಲ್ಲಿದ್ದ ಹಲಿಗೆಗಳನ್ನು
೨೦ ಬಿಸಾಟು, ಬೆಟ್ಟದ ಅಡಿಯಲ್ಲಿ ಒಡಿದು ಬಿಟ್ಟನು. ಅವರು ಮಾ
ಡಿದ ಕರುವನ್ನು ತಕ್ಕೊಂಡು, ಬೆಂಕಿಯಲ್ಲಿ ಸುಟ್ಟು, ಅದು ಹುಡಿ
ಯಾಗುವ ಪರ್ಯಂತರ ಅರಿಸಿ, ನೀರಿನ ಮೇಲೆ ಚೆಲ್ಲಿ, ಇಸ್ರ
ಯೇಲ್ ಮಕ್ಕಳಿಗೆ ಕುಡಿಯ ಕೊಟ್ಟನು.

೨೧ ಆಗ ಮೋಶೆಯು ಅಹೋನನಿಗೆ—ಈ ಜನರ ಮೇಲೆ ನೀನು
ದೊಡ್ಡ ಪಾಪವನ್ನು ಬರ ಮಾಡುವ ಹಾಗೆ, ಅವರು ನಿನಗೆ ಏನು
೨೨ ಮಾಡಿದರು? ಅಂದನು. ಅಹೋನನು ಹೇಳ್ದದ್ದೇನಂದರೆ—ನನ್ನ
ಸ್ವಾಮಿಯ ಕೋಪ ಉರಿಯದಿರಲಿ; ಕೇಡಿನ ಮೇಲೆ ಮನಸ್ಸಾ
೨೩ ಗಿದ್ದಾರೆಂದು, ಈ ಜನರನ್ನು ಬಲ್ಲೆ. ನಮ್ಮ ಮುಂದೆ ಹೋಗು
ವ ದೇವರುಗಳನ್ನು ನಮಗೆ ಮಾಡು; ಯಾಕಂದರೆ ಐಗುಪ್ತ ದೇ
ಶದೊಳಗಿಂದ ನಮ್ಮನ್ನು ಮೇಲೆ ಬರ ಮಾಡಿದ ಈ ಮೋಶೆ ಎಂ
೨೪ ಬವನಿಗೆ ಏನಾಯಿತೋ? ನಮಗೆ ತಿಳಿಯದೆಂದು, ಅವರು ನನಗೆ
೨೫ ಹೇಳಿದಾಗ, ನಾನು ಅವರಿಗೆ—ಚಿನ್ನ ಉಂಟಾದವನು ಅದನ್ನು
ಕಿತ್ತು ಕೊಳ್ಳಲೆಂದು ಹೇಳಿದೆನು. ಅವರು ನನಗೆ ಕೊಟ್ಟರು;
ನಾನು ಬೆಂಕಿಯಲ್ಲಿ ಹಾಕಿದಾಗ, ಈ ಕರು ಉಂಟಾಯಿತು.
೨೬ ಜನರು ಬೆತ್ತಲೆಯಾಗಿದ್ದರೆಂದೂ, ಅಹೋನನು ಅವರಿಗೆ ವಿ
ರೋಧವಾಗಿ ಏಳುವವರಿಂದ ಹೊಡೆಯಲ್ಪಡುವ ಹಾಗೆ, ಅವರ
೨೭ ನ್ನು ಬೆತ್ತಲೆ ಮಾಡಿದನೆಂದೂ, ಮೋಶೆ ನೋಡಿದಾಗ, ಮೋಶೆ
ದಂಡಿನ ಬಾಗಲಲ್ಲಿ ನಿಂತು ಕೊಂಡು—ಕರ್ತನ ಕಡೆಯವರು
ಯಾರು? ನನ್ನ ಬಳಿಗೆ ಬರಲಿ, ಅಂದನು. ಆಗ ಲೇವಿಯ ಮ
೨೮ ಕ್ಕಳೆಲ್ಲಾ ಅವನ ಕಡೆಗೆ ಕೂಡಿ ಕೊಂಡರು. ಅವನು ಅವರಿಗೆ
ಹೇಳ್ದದ್ದೇನಂದರೆ—ಇಸ್ರಯೇಲಿನ ದೇವರಾದ ಕರ್ತನು ಹೀಗೆ
ಹೇಳುತ್ತಾನೆ—ಎಲ್ಲರು ಕತ್ತಿಗಳನ್ನು ನಡುಗಳಿಗೆ ಕಟ್ಟಿ ಕೊಂಡು,
ಬಾಗಲಿಂದ ಬಾಗಲಿಗೆ ದಂಡಿನೊಳಗೆ ಹಾದು ಹೋಗಿ, ಅವನ
ವನು ತನ್ನ ಸಹೋದರನನ್ನೂ, ಅವನವನು ತನ್ನ ಜತೆಯವನ
ನ್ನೂ, ಅವನವನು ತನ್ನ ನೆರೆಯವನನ್ನೂ, ಕೊಂದು ಹಾಕಲಿ.
೨೯ ಲೇವಿಯ ಮಕ್ಕಳು ಮೋಶೆಯ ಮಾತಿನ ಹಾಗೆ ಮಾಡಿದ್ದರಿಂದ
ಆ ದಿವಸದಲ್ಲಿ ಜನರೊಳಗೆ ಹೆಚ್ಚು ಕಡಿಮೆ ಮೂರು ಸಾವಿರ
೩೦ ಮಂದಿ ಬಿದ್ದರು. ಆಗ ಮೋಶೆ—ಈ ದಿವಸ ಒಬ್ಬೊಬ್ಬನು ತ
ನ್ನ ಮಗನಿಗೋಸ್ಕರವೂ ತನ್ನ ಸಹೋದರನಿಗೋಸ್ಕರವೂ
ಕರ್ತನಿಗೆ ನಿಮ್ಮನ್ನು ಪ್ರತಿಷ್ಠೆ ಮಾಡಿ ಕೊಳ್ಳಿರಿ; ಆಗಲವನು ಈ
ದಿವಸದಲ್ಲಿ ನಿಮಗೆ ಆಶೀರ್ವಾದವನ್ನು ಕೊಡುವನು, ಅಂದನು.
೩೧ ಮರು ದಿವಸದಲ್ಲಿ ಆದದ್ದೇನಂದರೆ—ಮೋಶೆ ಜನರಿಗೆ—ನೀ
ವು ದೊಡ್ಡ ಪಾಪವನ್ನು ಮಾಡಿದಿರಿ; ಹಾಗಾದರೆ ಈಗ ಕರ್ತನ
ಬಳಿಗೆ ಏರಿ ಹೋಗುವೆನು; ಒಂದು ವೇಳೆ ನಿಮ್ಮ ಪಾಪಕ್ಕೆ ಮು
ಚ್ಚುವಿಕೆ ಮಾಡೇನು, ಅಂದನು. ಹಾಗೆ ಮೋಶೆ ಕರ್ತನ ಬಳಿಗೆ
೩೨ ತಿರಿಗಿ ಹೋಗಿ, ಹೇಳ್ದದ್ದೇನಂದರೆ—ಅಯ್ಯೋ! ಈ ಜನರು ದೊ
ಡ್ಡ ಪಾಪ ಮಾಡಿದ್ದಾರೆ; ಅವರು ತಮಗೆ ಚಿನ್ನದ ದೇವರುಗಳ
೩೩ ನ್ನು ಮಾಡಿ ಕೊಂಡಿದ್ದಾರೆ. ಆದರೆ ಈಗ ನೀನು ಅವರ ಪಾಪ
ವನ್ನು ಪರಿಹರಿಸಿದರೆ, ಒಳ್ಳೇದು; ಇಲ್ಲದಿದ್ದರೆ, ನೀನು ಬರೆದ
೩೪ ನಿನ್ನ ಪುಸ್ತಕದೊಳಗಿಂದ ನನ್ನನ್ನು ಅಳಿಸಿ ಬಿಡು. ಕರ್ತನು
ಮೋಶೆಗೆ ಹೇಳ್ದದ್ದೇನಂದರೆ—ನನಗೆ ಪಾಪ ಮಾಡಿದವನನ್ನೇ ನ
೩೫ ನ್ನ ಪುಸ್ತಕದೊಳಗಿಂದ ಅಳಿಸುವೆನು. ಆದರೆ ಈಗ ಹೋಗಿ,
ಜನರನ್ನು ನಾನು ನಿನಗೆ ಹೇಳ್ದಲ್ಲಿಗೆ ನಡಿಸಿ ಕೊಂಡು ಹೋ
ಗು; ನನ್ನ ದೂತನು ನಿನ್ನ ಮುಂದಾಗಿ ಹೋಗುವನು; ಆದಾ
ಗ್ಯೂ ನಾನು ವಿಚಾರಿಸುವ ದಿವಸದಲ್ಲಿ ಅವರ ಪಾಪವನ್ನು ಅವ
ರಲ್ಲಿ ವಿಚಾರಿಸುವೆನು.
೩೬ ಹೀಗೆ ಅವರು ಅಹೋನನು ಮಾಡಿದ ಕರುವನ್ನು ಮಾಡಿಸಿ
ದ್ದರಿಂದ, ಕರ್ತನು ಜನರನ್ನು ವೇದಿಸಿದನು.

## ೩೩. ಸಂಧಿ.

೧ ಆಗ ಕರ್ತನು ಮೋಶೆಗೆ ಹೇಳ್ದದ್ದೇನಂದರೆ—ನೀನು ಐಗು
ಪ್ತ ದೇಶದೊಳಗಿಂದ ಮೇಲೆ ಬರ ಮಾಡಿದ ಜನರ ಸಂಗಡ, ಈ
ಸ್ಥಳವನ್ನು ಬಿಟ್ಟು, ನಾನು ಅಬ್ರಹಾಮನಿಗೂ, ಇಸಾಕನಿಗೂ,
ಯಾಕೋಬನಿಗೂ—ನಿಮ್ಮ ಬೀಜಕ್ಕೆ ಅದನ್ನು ಕೊಡುವೆನೆಂದು
೨ ಹೇಳಿ, ಪ್ರಮಾಣ ಮಾಡಿದ ದೇಶಕ್ಕೆ ಹೋಗು. ನಾನು ನಿನ್ನ
ಮುಂದೆ ದೂತನನ್ನು ಕಳುಹಿಸಿ, ಕನಾನ್ಯರನ್ನೂ, ಅಮೋ
ರ್ಯರನ್ನೂ, ಹಿತ್ತಿಯರನ್ನೂ, ಪೆರಿಜ್ಜಿಯರನ್ನೂ, ಹಿವ್ವಿಯ
೩ ರನ್ನೂ, ಯೆಬೂಸ್ಯರನ್ನೂ, ಹೊರಡಿಸುವೆನು. ಹಾಲೂ ಜೇ
ನೂ ಹರಿಯುವ ದೇಶಕ್ಕೆ ಹೋಗು; ನಾನು ನಿನ್ನ ಮಧ್ಯದಲ್ಲಿ
ಏರಿ ಹೋಗುವದಿಲ್ಲ; ಯಾಕಂದರೆ ನೀನು ಕಠಿಣ ಕುತ್ತಿಗೆಯು
ಳ್ಳ ಜನವಾಗಿದ್ದಿ; ಮಾರ್ಗದಲ್ಲಿ ನಿನ್ನನ್ನು ಸಂಹರಿಸುವೆನಾ
ದೀತು.
೪ ಜನರು ಈ ಕಠಿಣವಾದ ಮಾತುಗಳನ್ನು ಕೇಳ್ದಾಗ, ಅವರು
ದುಃಖ ಪಟ್ಟರು; ಯಾವನಾದರೂ ತನ್ನ ಅಲಂಕಾರಗಳನ್ನು ಹಾಕಿ
೫ ಕೊಳ್ಳಲಿಲ್ಲ. ಯಾಕಂದರೆ ಕರ್ತನು ಮೋಶೆಗೆ ಹೇಳ್ದದ್ದೇನಂ
ದರೆ—ಇಸ್ರಯೇಲ್ ಮಕ್ಕಳಿಗೆ ಹೀಗೆ ಹೇಳು—ನೀವು ಕಠಿಣ

ಕುತ್ತಿಗೆಯುಳ್ಳ ಜನವೇ; ನಾನು ಕ್ಷಣ ಮಾತ್ರದಲ್ಲಿ ನಿಮ್ಮೊಳಗೆ
೧೯ ಏರಿ ಬಂದು, ನಿಮ್ಮನ್ನು ಸಂಹರಿಸುವೆನು; ಹೀಗಿರುವದರಿಂದ ಈ
ಗ ನಿಮ್ಮ ಅಲಂಕಾರಗಳನ್ನು ತೆಗೆದು ಬಿಡಿರಿ; ಆಗ ನಿಮಗೆ ಏನು
೬ ಮಾಡುವೆನೋ! ಎಂದು ನೋಡಿ ಕೊಳ್ಳುವೆನು. ಹಾಗೆ ಇಸ್ರ
ಯೇಲ್ ಮಕ್ಕಳು ಹೋರೆಬ್ ಬೆಟ್ಟವನ್ನು ಬಿಟ್ಟಾಗ, ತಮ್ಮ ಅ
ಲಂಕಾರಗಳನ್ನು ತೆಗೆದು ಬಿಟ್ಟರು.

೭ ಇದಲ್ಲದೆ ಮೋಶೆ ಗುಡಾರವನ್ನು ತೆಗೆದು, ದಂಡಿನ ಹೊರಗೆ,
ದಂಡಿಗೆ ದೂರವಾಗಿ, ಹಾಕಿ ಕೊಂಡು, ಅದಕ್ಕೆ ಸಭೆಯ ಗುಡಾ
ರವೆಂದು ಹೆಸರಿಟ್ಟನು. ಹಾಗೆ ಕರ್ತನನ್ನು ಹುಡುಕುವವರೆಲ್ಲಾ
ದಂಡಿನ ಹೊರಗಿರುವ ಸಭೆಯ ಗುಡಾರಕ್ಕೆ ಹೊರಡುತ್ತಿದ್ದರು.
೮ ಮತ್ತು ಮೋಶೆ ಗುಡಾರದ ಬಳಿಗೆ ಹೊರಗೆ ಹೋಗುತ್ತಿರುವಾಗ,
ಜನರೆಲ್ಲಾ ಎದ್ದು, ತಮ್ಮ ತಮ್ಮ ಗುಡಾರಗಳ ಬಾಗಲುಗಳಲ್ಲಿ ನಿಂತು
ಕೊಂಡು, ಮೋಶೆ ಗುಡಾರದಲ್ಲಿ ಪ್ರವೇಶಿಸುವ ಪರ್ಯಂತರ ಅವ
ನ ಹಿಂದೆ ನೋಡುತ್ತಿದ್ದರು.

೯ ಮೋಶೆ ಗುಡಾರದಲ್ಲಿ ಪ್ರವೇಶಿಸಿದಾಗ, ಮೇಘ ಸ್ತಂಭವು
ಇಳಿದು ಬಂದು, ಗುಡಾರದ ಬಾಗಲಲ್ಲಿ ನಿಂತಿತ್ತು; ಮೋಶೆಯ
೧೦ ಸಂಗಡ ಮಾತಾಡಿದನು. ಜನರೆಲ್ಲಾ ಗುಡಾರದ ಬಾಗಲಲ್ಲಿ ನಿಂತ
ಮೇಘ ಸ್ತಂಭವನ್ನು ನೋಡಿದಾಗ, ಜನರೆಲ್ಲಾ ಎದ್ದು, ತಮ್ಮ ತ
೧೧ ಮ್ಮ ಗುಡಾರಗಳ ಬಾಗಲುಗಳಲ್ಲಿ ಅಡ್ಡ ಬಿದ್ದರು. ಕರ್ತನು
ಮೋಶೆಯ ಸಂಗಡ ಮುಖಾ ಮುಖಿಯಾಗಿ, ಒಬ್ಬ ಮನುಷ್ಯ
ನು ತನ್ನ ಸ್ನೇಹಿತನ ಸಂಗಡ ಮಾತಾಡುವಂತೆ, ಮಾತಾಡಿದನು.
ಆ ಮೇಲೆ ಅವನು ದಂಡಿಗೆ ತಿರಿಗಿ ಹೋದನು; ಆದರೆ ಅವನ
ಸೇವಕನಾದ ನುನನ ಮಗನಾದ ಯೆಹೋಶುವ ಎಂಬ ಯಾ
ವನಸ್ಥನು ಗುಡಾರವನ್ನು ಬಿಟ್ಟು ಹೋಗಲಿಲ್ಲ.

೧೨ ಆಗ ಮೋಶೆ ಕರ್ತನಿಗೆ ಹೇಳಿದ್ದೇನಂದರೆ—ಇಗೋ, ಈ ಜ
ನರನ್ನು ಮೇಲೆ ಕರ ಕೊಂಡು ಹೋಗೆಂದು, ನನಗೆ ಹೇಳಿ, ಯಾ
ರನ್ನು ನನ್ನ ಸಂಗಡ ಕಳುಹಿಸುವಿಯೋ, ಎಂದು ನನಗೆ ತಿಳಿಸ
ಲಿಲ್ಲ. ಆದಾಗ್ಯೂ ಹೆಸರಾಗಿ ನಿನ್ನನ್ನು ತಿಳಿದಿದ್ದೇನೆ; ಮತ್ತು
ನನ್ನ ದೃಷ್ಟಿಯಲ್ಲಿ ನಿನಗೆ ದಯೆ ದೊರಕಿತೆಂದು, ನೀನು ಹೇಳಿದಿ
೧೩ ಯೆಲ್! ಹಾಗಾದರೆ, ಈಗ ನಿನ್ನ ದೃಷ್ಟಿಯಲ್ಲಿ ನನಗೆ ದಯೆ ದೊ
ರಕಿತಾದರೆ, ನಾನು ನಿನ್ನನ್ನು ತಿಳಿಯುವ ಹಾಗೆ, ನಿನ್ನ ಮಾರ್ಗ
ವನ್ನು ನನಗೆ ತೋರಿಸು; ಆಗ ನಿನ್ನ ದೃಷ್ಟಿಯಲ್ಲಿ ನನಗೆ ದ
ಯೆ ದೊರಕಿರುವದು; ಮತ್ತು ಈ ಜನಾಗ ನಿನ್ನ ಜನರೇ ಎಂದು
೧೪ ನೋಡು. ಆಗಲನು—ನನ್ನ ಮುಖವು ನಿನ್ನ ಸಂಗಡ ಹೋಗು
೧೫ ವದು; ನಾನು ನಿನಗೆ ವಿಶ್ರಾಂತಿ ಕೊಡುವೆನು, ಅಂದನು. ಅವನಿ
ಗೆ—ನಿನ್ನ ಮುಖವು ಹೋಗದಿದ್ದರೆ, ನಮ್ಮನ್ನು ಇಲ್ಲಿಂದ ಮೇ
೧೬ ಲಕ್ಕೆ ತಕ್ಕೊಂಡು ಹೋಗ ಬೇಡ. ನನಗೂ ನಿನ್ನ ಜನರಿಗೂ
ನಿನ್ನ ದೃಷ್ಟಿಯಲ್ಲಿ ದಯೆ ದೊರಕಿತೆಂದು, ಯಾವದರಿಂದ ತಿಳಿ
ಯ ಬರುವದು! ನೀನು ನಮ್ಮ ಸಂಗಡ ಹೋಗುವದರಿಂದಲ್ಲ
ವೋ! ಹಾಗೆ ನಾನೂ ನಿನ್ನ ಜನರೂ ಭೂಮಿಯ ಮೇಲಿರುವ
ಎಲ್ಲಾ ಜನರಿಂದ ಪ್ರತ್ಯೇಕವಾಗುವೆವು.

೧೭ ಆಗ ಕರ್ತನು ಮೋಶೆಗೆ—ನೀನು ಆಡಿದ ಈ ಮಾತನ್ನು
ಸಹ ನಾನು ಮಾಡುತ್ತೇನೆ; ಯಾಕಂದರೆ ನನ್ನ ದೃಷ್ಟಿಯಲ್ಲಿ
ನಿನಗೆ ದಯೆ ದೊರಕಿತು, ನಿನ್ನನ್ನು ಹೆಸರಾಗಿ ತಿಳಿದಿದ್ದೇನೆ,
೧೭ ಅಂದನು. ಅವನು—ನಿನ್ನ ಘನವನ್ನು ದಯೆ ಮಾಡಿ ನನಗೆ
೧೮ ತೋರಿಸು, ಅಂದನು. ಅವನು—ನಾನು ನನ್ನ ಒಳ್ಳೇತನವೆಲ್ಲಾ
ನಿನ್ನೆದುರಿಗೆ ಹಾದು ಹೋಗ ಮಾಡಿ, ಯೆಹೋವನ ಹೆಸರನ್ನು
ನಿನ್ನ ಮುಂದೆ ಪ್ರಕಟ ಮಾಡಿ, ಯಾವನಿಗೆ ದಯೆ ಮಾಡುವೆನೋ,
ಅವನಿಗೆ ದಯೆ ಮಾಡಿ, ಯಾವನನ್ನು ಕರುಣಿಸುವೆನೋ, ಅವ
೧೯ ನನ್ನು ಕರುಣಿಸುವೆನು, ಅಂದನು. ಆದರೆ—ನನ್ನ ಮುಖವನ್ನು
ನೋಡಲಾರಿ; ಯಾಕಂದರೆ ಮನುಷ್ಯನು ನನ್ನನ್ನು ನೋಡಿ, ಬ
೨೦ ದುಕನು, ಅಂದನು. ಇದಲ್ಲದೆ ಕರ್ತನು ಹೇಳಿದ್ದೇನಂದರೆ—ಇ
ಗೋ, ನನ್ನ ಬಳಿಯಲ್ಲಿ ಸ್ಥಳ ಉಂಟು; ಬಂಡೆಯ ಮೇಲೆ ನಿ
೨೧ ತುಕೋ. ಆಗ ನನ್ನ ಘನವು ಹಾದು ಹೋಗುವ ಸಮಯದ
ಲ್ಲಿ ನಿನ್ನನ್ನು ಬಂಡೆಯ ಬಿರುಕಿನಲ್ಲಿ ನಿಲ್ಲಿಸಿ, ನಾನು ಹಾದು
೨೩ ಹೋಗುವ ಪರ್ಯಂತರ ನಿನ್ನ ಮೇಲೆ ಕೈ ಮುಚ್ಚಿ, ಆ ಮೇ
ಲೆ ನನ್ನ ಕೈಯನ್ನು ತೆಗೆಯುವೆನು; ಆಗ ನನ್ನ ಹಿಂಭಾಗವನ್ನು
ನೋಡುವಿ; ಆದರೆ ನನ್ನ ಮುಖವನ್ನು ನೋಡ ಕೂಡದು.

## ೩೪. ಸಂಧಿ.

೧ ಆಗ ಕರ್ತನು ಮೋಶೆಗೆ ಹೇಳಿದ್ದೇನಂದರೆ—ಮೊದಲನೆಯ
ವುಗಳ ಹಾಗಿರುವ ಎರಡು ಕಲ್ಲಿನ ಹಲಿಗೆಗಳನ್ನು ನಿನಗೆ ಕತ್ತಿಸು;
ಆಗ ನೀನು ಒಡಿದ ಆ ಮೊದಲನೇ ಹಲಿಗೆಗಳ ಮೇಲೆ ಇದ್ದ ವಾ
೨ ಕ್ಯಗಳನ್ನು ಈ ಹಲಿಗೆಗಳ ಮೇಲೆ ಬರೆಯುವೆನು. ಮತ್ತು ಬೆ
ಳಿಗ್ಯೆ ಸಿದ್ಧವಾಗಿದ್ದು, ಬೆಳಿಗ್ಯೆ ಸೀನಾಯಿ ಬೆಟ್ಟವನ್ನೇರಿ, ಅಲ್ಲಿ ಬೆ
3 ಟ್ಟದ ತುದಿಯಲ್ಲಿ ನನಗೆ ಸಿದ್ಧವಾಗಿರು. ಆದರೆ ಯಾರೂ ನಿ
ನ್ನು ಸಂಗಡ ಏರಿ ಬರ ಬಾರದು; ಬೆಟ್ಟದಲ್ಲೆಲ್ಲಾ ಯಾರೂ ಕಾಣಿ
ಸ ಬಾರದು; ಆ ಬೆಟ್ಟದಲ್ಲಿ ಕುರಿ ದನಗಳು ಸಹ ಮೇಯ ಬಾ
ರದು.

೪ ಆಗ ಮೊದಲನೆಯವುಗಳ ಹಾಗೆ ಎರಡು ಕಲ್ಲಿನ ಹಲಿಗೆಗಳ
ನ್ನು ಕೆತ್ತಿಸಿದನು. ಮೋಶೆ ಬೆಳಿಗ್ಯೆ ಎದ್ದು, ಕರ್ತನು ತನಗೆ
ಆಜ್ಞಾಪಿಸಿದಂತೆ ಸೀನಾಯಿ ಬೆಟ್ಟವನ್ನೇರಿ, ಕಲ್ಲಿನ ಎರಡು ಹಲಿಗೆ
೫ ಗಳನ್ನು ಕೈಯಲ್ಲಿ ತಕ್ಕೊಂಡನು. ಕರ್ತನು ಆಗ ಮೇಘ
ದಲ್ಲಿ ಇಳಿದು ಬಂದು, ಅವನ ಸಂಗಡ ಅಲ್ಲಿ ನಿಂತು ಕೊಂಡು, ಕ
೬ ರ್ತನ ಹೆಸರನ್ನು ಪ್ರಕಟ ಮಾಡಿದನು. ಕರ್ತನು ಅವನೆದುರಿ
ಗೆ ಹಾದು ಹೋಗಿ—ಯೆಹೋವ, ದೇವರಾದ ಯೆಹೋವ ಅಂ
ತಃಕರಣವೂ ದಯವೂ ಉಳ್ಳವನೂ, ದೀರ್ಘಶಾಂತನೂ, ಬ
೭ ಹು ಕೃಪೆಯೂ ಸತ್ಯವೂ ಉಳ್ಳವನೂ, ಸಾವಿರಗಟ್ಲೆಗೋಸ್ಕ
ರ ಕೃಪೆಯನ್ನು ಕಾಪಾಡುವಂಥ, ಅಕ್ರಮ ದ್ರೋಹ ಪಾಪಗ
ಳನ್ನು ಮನ್ನಿಸುವಂಥ, ಹ್ಯಾಗೂ ನಿರ್ಮಲನೆಂದು ತೀರಿಸದಿ
ಥ, ತಂದೆಗಳ ಅಕ್ರಮವನ್ನು ಮಕ್ಕಳ ಬಳಿಯಲ್ಲಿಯೂ ಮೊಮ್ಮ
ಕ್ಕಳ ಬಳಿಯಲ್ಲಿಯೂ ಮೂರನೇ ನಾಲ್ಕನೇ ತಲಾಂತರಗಳ ಮ
೮ ಟ್ಟಿಗೂ ವಿಚಾರಿಸುವಥಾವನೂ, ಎಂದು ಕೂಗಿದನು. ಮೋಶೆ
೯ ತ್ವರೆ ಬಟ್ಟು, ನೆಲಕ್ಕೆ ಬೊಗ್ಗಿ ಕೊಂಡು, ಅಡ್ಡ ಬಿದ್ದು—ಕರ್ತ
ನೇ, ನಿನ್ನ ದೃಷ್ಟಿಯಲ್ಲಿ ನನಗೆ ದಯೆ ದೊರಕಿತಾದರೆ, ನನ್ನ
ಕರ್ತನು ನಮ್ಮ ಮಧ್ಯದಲ್ಲಿ ಹೋಗಲಿ; ಅದು ಕಠಿಣ ಕುತ್ತಿಗೆ
ಯುಳ್ಳ ಜನವೇ ಸರಿ; ಅದಾಗ್ಯೂ ನಮ್ಮ ಅಕ್ರಮವನ್ನೂ ಪಾ
ಪವನ್ನೂ ಮನ್ನಿಸಿ, ನಮ್ಮನ್ನು ಬಾಧ್ಯವಾಗಿ ತಕ್ಕೋ, ಅಂದನು.





೧೦ ಅವನು, ಇಗೋ—ನಾನು ಒಡಂಬಡಿಕೆಯನ್ನು ಮಾಡುತ್ತೇನೆ;
ಸಮಸ್ತ ಭೂಮಿಯಲ್ಲಿಯೂ ಎಲ್ಲಾ ಜನಾಂಗಗಳಲ್ಲಿಯೂ ಉಂ
ಟಾದ ಅದ್ಭುತಗಳನ್ನು ನಿನ್ನ ಎಲ್ಲಾ ಜನರ ಮುಂದೆ ಮಾಡುವೆ
ನು; ನೀನು ಯಾರ ಮಧ್ಯದಲ್ಲಿ ಇದ್ದೀಯೋ, ಆ ಜನರೆಲ್ಲಾ ಕ
ರ್ತನ ಕೃತ್ಯವನ್ನು ನೋಡುವರು; ನಾನು ನಿನಗೆ ಮಾಡುವಂ
೧೧ ಥದ್ದು ಭಯಂಕರವಾಗಿರುವದು. ನಾನು ಈ ಹೊತ್ತು ನಿನಗೆ ಆ
ಜ್ಞಾಪಿಸುವದನ್ನು ಕಾಪಾಡು; ಇಗೋ, ಅಮೋರ್ಯರನೂ,
ಕನಾನ್ಯರನೂ, ಹಿತ್ತಿಯರನೂ, ಪೆರಿಜ್ಜಿಯರನೂ, ಹಿವ್ವಿಯ
ರನೂ, ಯೆಬೂಸ್ಯರನೂ ನಿನ್ನ ಮುಂದೆ ಹೊರಡಿಸುತ್ತೇನೆ.
೧೨ ನೀನು ಸೇರುವ ದೇಶದ ನಿವಾಸಿಗಳ ಸಂಗಡ ಒಡಂಬಡಿಕೆಯನ್ನು
ಮಾಡದ ಹಾಗೆ ನೋಡಿಕೋ; ಮಾಡಿದರೆ, ಅವರು ನಿನ್ನ ಮಧ್ಯ
೧3 ದಲ್ಲಿ ಉರಲಾಹಾರು. ಅವರ ಬಲಿ ಪೀಠಗಳನ್ನು ನೀವು ಹಾಳು
ಮಾಡಿ, ಅವರ ವಿಗ್ರಹಗಳನ್ನು ಒಡಿದು, ಅವರ ತೋಪುಗಳನ್ನು
೧೪ ಕಡಿದು ಹಾಕ ಬೇಕು. ಯಾಕಂದರೆ ಕೋಪವುಳ್ಳವನೆಂದು
ಹೆಸರುಳ್ಳ ಕರ್ತನು ಕೋಪವುಳ್ಳ ದೇವರಾಗಿರುವದರಿಂದ,
೧೫ ನೀನು ಬೇರೆ ದೇವರಿಗೆ ಅಡ್ಡ ಬೀಳ ಕೂಡದು. ದೇಶ ನಿವಾಸಿಗಳ
ಸಂಗಡ ಒಡಂಬಡಿಕೆ ಮಾಡ ಬಾರದು; ಅವರು ತಮ್ಮ ದೇವರುಗ
ಳ ಹಿಂದೆ ಜಾರತ್ವ ಮಾಡಿ, ತಮ್ಮ ದೇವರುಗಳಿಗೆ ಅರ್ಪಿಸುವ
ಸಮಯದಲ್ಲಿ ನಿನ್ನನ್ನು ಕರೆದರೆ, ನೀನು ಅವರ ಬಲಿಯನ್ನು
೧೬ ಉಣ್ಣ ಬಾರದು. ಅವರ ಕುಮಾರ್ತೆಗಳನ್ನು ನಿನ್ನ ಕುಮಾರರಿ
ಗೋಸ್ಕರ ತಕ್ಕೊಳ್ಳ ಬಾರದು; ತಕ್ಕೊಂಡರೆ, ಅವರ ಕುಮಾರ
ರ್ತೆಗಳು ತಮ್ಮ ದೇವರುಗಳ ಹಿಂದೆ ಜಾರತ್ವ ಮಾಡಿಸಿ, ನಿಮ್ಮ
ಕುಮಾರರನ್ನು ತಮ್ಮ ದೇವರುಗಳ ಹಿಂದೆ ಜಾರರಾಗ ಮಾಡಿ
೧೭ ಯಾರು. ಎರಕ ಹೊಯಿದ ವಿಗ್ರಹಗಳನ್ನು ನಿನಗೆ ಮಾಡಿಸಿ
ಕೊಳ್ಳ ಬೇಡ.
೧೮ ಹುಳಿ ಇಲ್ಲದ ರೊಟ್ಟಿಗಳ ಹಬ್ಬವನ್ನು ಆಚರಿಸ ಬೇಕು.
ನಾನು ನಿನಗೆ ಆಜ್ಞಾಪಿಸಿದ ಹಾಗೆ, ಆಬೀಬ್ ತಿಂಗಳಿನ ಕಾಲದಲ್ಲಿ
ಏಳು ದಿವಸ ಹುಳಿ ಇಲ್ಲದ ರೊಟ್ಟಿಗಳನ್ನು ತಿನ್ನ ಬೇಕು; ಯಾ
ಕಂದರೆ ಆಬೀಬ್ ತಿಂಗಳಲ್ಲಿ ಐಗುಪ್ತ ದೇಶವನ್ನು ಬಿಟ್ಟು ಬಂದಿ.
೧೯ ಗರ್ಭ ತೆಕೆಯುವಂಥಾದ್ದೆಲ್ಲಾ ನನ್ನದೇ; ದನಗಳಲ್ಲಿಯೂ ಕುರಿಗ
ಳಲ್ಲಿಯೂ ಮೊದಲು ಹುಟ್ಟುವ ನಿನ್ನ ಗಂಡು ಪಶುಗಳೆಲ್ಲಾ ನ
೨೦ ನ್ನವೇ. ಕತ್ತೆಗಳಲ್ಲಿ ಗರ್ಭ ತೆಕೆಯುವಂಥಾದ್ದನ್ನು ಕುರಿಯಿಂದ
ವಿಮೋಚಿಸ ಬೇಕು; ವಿಮೋಚಿಸದೆ ಹೋದರೆ, ಅದರ ಕುತ್ತಿಗೆ
ಮುರಿಯ ಬೇಕು. ನಿನ್ನ ಮಕ್ಕಳಲ್ಲಿ ಹೊಚ್ಚಲಾದವುಗಳನ್ನೆಲ್ಲಾ
ವಿಮೋಚಿಸ ಬೇಕು. ನನ್ನ ಮುಖ ದರ್ಶನಕ್ಕೆ ಬರಿ ಕೈಯಾ
ಗಿ ಬರ ಬೇಡ.
೨೧ ಆರು ದಿವಸ ಕೆಲಸ ಮಾಡಿ, ಏಳನೇ ದಿವಸದಲ್ಲಿ ವಿಶ್ರಮಿಸಿ
ಕೊಳ್ಳ ಬೇಕು. ಬಿತ್ತುವ ಕಾಲದಲ್ಲಿಯೂ ಕೊಯ್ಯುವ ಕಾಲದ
ಲ್ಲಿಯೂ ವಿಶ್ರಮಿಸಿ ಕೊಳ್ಳ ಬೇಕು.
೨೨ ಮತ್ತು ವಾರಗಳ ಹಬ್ಬವನ್ನೂ, ಮೊದಲನೇ ಗೋಧಿ ಕೊ
ಯ್ಯುವ ಹಬ್ಬವನ್ನೂ, ಮಾಡಿ ಕೊಳ್ಳ ಬೇಕು.
೨3 ವರುಷಕ್ಕೆ ಮೂರು ಸಾರಿ ನಿನ್ನ ಗಂಡಸರೆಲ್ಲಾ ಇಸ್ರಯೇಲಿ
ನ ದೇವರಾದ ಕರ್ತನಾಗಿರುವ ಯೆಹೋವನ ಮುಖ ದರ್ಶನ
೨೪ ಕ್ಕೆ ಬರ ಬೇಕು. ಯಾಕಂದರೆ ನಾನು ಜನಾಂಗಗಳನ್ನು ನಿನ್ನ
ಸನ್ನಿಧಿಯಿಂದ ಹೊರಡಿಸಿ, ನಿನ್ನ ಮೇರೆಗಳನ್ನು ವಿಸ್ತಾರ ಮಾ
ಡುವೆನು; ನೀನು ವರುಷಕ್ಕೆ ಮೂರು ಸಾರಿ ನಿನ್ನ ದೇವರಾದ
ಕರ್ತನ ಮುಖ ದರ್ಶನಕ್ಕೆ ಏರಿ ಹೋಗುವ ಸಮಯದಲ್ಲಿ
ಯಾರೂ ನಿನ್ನ ದೇಶವನ್ನು ಆಶಿಸರು.
೨೫ ನನ್ನ ಬಲಿಯ ರಕ್ತವನ್ನು ಹುಳಿ ಹಿಟ್ಟಿನ ಸಂಗಡ ಅರ್ಪಿಸ
ಬೇಡ; ಪಸ್ಕ ಹಬ್ಬದ ಬಲಿ ಮರು ದಿವಸಕ್ಕೆ ಮಿಗ ಬಾರದು.
೨೬ ನಿನ್ನ ಭೂಮಿಯ ಪ್ರಥಮ ಫಲಗಳಲ್ಲಿ ಮೊದಲನೇದನ್ನು ನಿನ್ನ
ದೇವರಾದ ಕರ್ತನ ಮನೆಗೆ ತರ ಬೇಕು.
ಮೇಕೆಯ ಮರಿಯನ್ನು ತಾಯಿಯ ಹಾಲಿನಲ್ಲಿ ಬೇಯಿಸ
ಬೇಡ.
೨೭ ಆಗ ಕರ್ತನು ಮೋಶೆಗೆ—ಈ ವಾಕ್ಯಗಳನ್ನು ಬರೆದು ಬಿ
ಡು; ಯಾಕಂದರೆ ಈ ವಾಕ್ಯಗಳ ಪ್ರಕಾರವೇ ನಿನ್ನ ಸಂಗಡಲೂ
ಇಸ್ರಯೇಲಿನ ಸಂಗಡಲೂ ಒಡಂಬಡಿಕೆಯನ್ನು ಮಾಡಿದ್ದೇನೆ,
೨೮ ಅಂದನು. ಮೋಶೆ ನಾಲ್ವತ್ತು ದಿವಸ ನಾಲ್ವತ್ತು ರಾತ್ರಿ ಕೊ
ಟ್ಟಿಯನ್ನು ತಿನ್ನದೆ, ನೀರನ್ನು ಕುಡಿಯದೆ, ಅಲ್ಲಿ ಕರ್ತನ ಸಂ
ಗಡ ಇದ್ದನು. ಅವನು ಒಡಂಬಡಿಕೆಯ ವಾಕ್ಯಗಳಾದ ಹತ್ತು
ವಾಕ್ಯಗಳನ್ನು ಹಲಿಗೆಗಳ ಮೇಲೆ ಬರೆದನು.
೨೯ ಮೋಶೆ ಸಾಕ್ಷಿಯ ಎರಡು ಹಲಿಗೆಗಳನ್ನು ಕೈಯಲ್ಲಿ ಹಿಡಿದು
ಕೊಂಡು, ಸೀನಾಯಿ ಬೆಟ್ಟದಿಂದ ಇಳಿದಾಗ, ತಾನು ದೇವರ ಸಂಗಡ
ಮಾತಾಡಿದ್ದರಿಂದ ತನ್ನ ಮುಖದ ಚರ್ಮ ಪ್ರಕಾಶಿಸುತ್ತದೆಂದು,
3೦ ಅವನು ಬೆಟ್ಟದಿಂದ ಇಳಿದಾಗ, ಮೋಶೆಗೆ ತಿಳಿಯಲಿಲ್ಲ. ಆದರೆ
ಆಕೋನನೂ ಇಸ್ರಯೇಲ್ ಮಕ್ಕಳೆಲ್ಲರೂ ಮೋಶೆಯನ್ನು
ನೋಡಿದಾಗ, ಅಗೋ, ಅವನ ಮುಖದ ಚರ್ಮ ಪ್ರಕಾಶಿಸಿತು;
3೧ ಅವರು ಅವನ ಹತ್ತರ ಬರುವದಕ್ಕೆ ಭಯ ಪಟ್ಟರು. ಮೋಶೆ
ಅವರನ್ನು ಕರೆದಾಗ, ಆಕೋನನೂ ಸಭೆಯ ಮುಖ್ಯಸ್ಥರೆಲ್ಲ
ರೂ, ಅವನ ಬಳಿಗೆ ತಿರಿಗಿ ಬಂದರು; ಮೋಶೆ ಅವರ ಸಂಗಡ
3೨ ಮಾತಾಡಿದನು. ಆ ಮೇಲೆ ಇಸ್ರಯೇಲ್ ಮಕ್ಕಳೆಲ್ಲರೂ ಹತ್ತ
ರ ಬಂದರು; ಅವನು ಅವರಿಗೆ ಕರ್ತನು ತನಗೆ ಸೀನಾಯಿ ಬೆಟ್ಟ
33 ದಲ್ಲಿ ಹೇಳಿದವುಗಳನ್ನೆಲ್ಲಾ ಆಜ್ಞಾಪಿಸಿದನು. ಮೋಶೆ ಅವರ
ಸಂಗಡ ಮಾತಾಡಿ ಮುಗಿಸುವ ಮಟ್ಟಿಗೂ, ತನ್ನ ಮುಖದ ಮೇ
3೪ ಲೆ ಮುಸಕನ್ನು ಹಾಕಿ ಕೊಂಡನು. ಆದರೆ ಮೋಶೆ ಕರ್ತನ
ಸನ್ನಿಧಿಯಲ್ಲಿ, ಅವನ ಸಂಗಡ ಮಾತಾಡುವದಕ್ಕೆ ಪ್ರವೇಶಿಸುವಾ
ಗ, ಹೊರಗೆ ಬರುವ ಪರ್ಯಂತರ ಮುಸಕನ್ನು ತೆಗೆದನು. ಆ
ಮೇಲೆ ಹೊರಗೆ ಬಂದು, ತನಗೆ ಆಜ್ಞಾಪಿಸಿದ್ದನ್ನು ಇಸ್ರಯೇಲ್
3೫ ಮಕ್ಕಳಿಗೆ ಹೇಳಿದನು. ಆಗ, ಮೋಶೆಯ ಮುಖದ ಚರ್ಮ
ಪ್ರಕಾಶಿಸುತ್ತಿದೆಂದು, ಇಸ್ರಯೇಲ್ ಮಕ್ಕಳು ಮೋಶೆಯ ಮುಖ
ವನ್ನು ನೋಡುತ್ತಿದ್ದರು; ಮತ್ತು ಮೋಶೆ ದೇವರ ಸಂಗಡ ಮಾ
ತಾಡುವದಕ್ಕೆ ತಿರಿಗಿ ಹೋಗುವ ಪರ್ಯಂತರ, ಮುಖದ ಮೇಲೆ
ಮುಸುಕನ್ನು ಹಾಕಿ ಕೊಳ್ಳುತ್ತಿದ್ದನು.

## ೩೫. ಸಂಧಿ.

೧ ಆಗ ಮೋಶೆ ಇಸ್ರಯೇಲ್ ಮಕ್ಕಳ ಸಭೆಯನ್ನೆಲ್ಲಾ ಕೂಡಾ
ಕರೆದು, ಅವರಿಗೆ ಹೇಳಿದ್ದೇನಂದರೆ— ಮಾಡ ಬೇಕೆಂದು ಕರ್ತ
೨ ನು ಆಜ್ಞಾಪಿಸಿದ ವಾಕ್ಯಗಳು ಇವೇ, ಆರು ದಿವಸ ಕೆಲಸ ಮಾಡ
ಬೇಕು; ಆದರೆ ಏಳನೇ ದಿವಸದಲ್ಲಿ ನಿಮಗೆ ಕರ್ತನ ಮಹಾ
ವಿಶ್ರಾಂತಿಯ ಪರಿಶುದ್ಧ ಸಬ್ಬತ್ ದಿವಸವಾಗಿರ ಬೇಕು; ಅದರಲ್ಲಿ
3 ಕೆಲಸ ಮಾಡುವವರೆಲ್ಲರು ಸಾಯ ಬೇಕು. ಸಬ್ಬತ್ ದಿವಸದ
ಲ್ಲಿ ನಿಮ್ಮ ಎಲ್ಲಾ ಮನೆಗಳಲ್ಲಿ ಬೆಂಕಿ ಹೊತ್ತಿಸ ಬಾರದು.

೪ ಆಗ ಮೋಶೆ ಇಸ್ರಯೇಲ್ ಮಕ್ಕಳ ಸಭೆಗಲ್ಲಾ ಹೇಳಿದ್ದೇನಂ
ದರೆ—ಕರ್ತನು ಆಜ್ಞಾಪಿಸಿದ ವಾಕ್ಯ ಇದೇ; ಏನಂದರೆ—
೫ ಕರ್ತನಿಗೋಸ್ಕರ ನಿಮ್ಮಲ್ಲಿಂದ ಕಾಣಿಕೆಯನ್ನು ತಕ್ಕೊಳ್ಳಿರಿ;
ಮನಃಪೂರ್ವಕವಾದವರೆಲ್ಲಾ ಚಿನ್ನ, ಬೆಳ್ಳಿ, ತಾಂಬ್ರ, ನೀಲಿ,
೬ ರಕ್ತ ವರ್ಣ, ಲಾಕಿ ಬಣ್ಣ, ನಾರು, ಮೇಕೆಯ ಕೂದಲು, ಕೆಂಪು
೭ ಬಣ್ಣದ ಟಗರುಗಳ ತೊಗಲುಗಳು, ತಾಹಷ್ ತೊಗಲುಗಳು, ಷಿ
೮ ಟ್ಟಿಮ್ ಮರಗಳು, ದೀಪಸ್ತಂಭಕ್ಕೋಸ್ಕರವಾದ ಎಣ್ಣೆ, ಅಭಿ
ಷೇಕಿಸುವ ಎಣ್ಣೆಗೋಸ್ಕರವೂ ಪರಿಮಳದ ಧೂಪಕ್ಕೋಸ್ಕರ
೯ ವೂ ಸುಗಂಧಗಳು, ಎಫೋದಿಗೋಸ್ಕರವೂ ಪದಕಕ್ಕೋಸ್ಕರ
ವೂ ಗೋಮೇಧಿಕಗಳೂ, ಕೆತ್ತುವ ರತ್ನಗಳೂ, ಇವುಗಳನ್ನು
೧೦ ಕರ್ತನಿಗೆ ಉಚಿತವಾಗಿ ತರಲಿ. ಮತ್ತು ನಿಮ್ಮಲ್ಲಿ ಜ್ಞಾನದ ಪ್ರ
ಯವುಳ್ಳವರೆಲ್ಲರು ಬಂದು, ಕರ್ತನು ಆಜ್ಞಾಪಿಸಿದವುಗಳನ್ನೆಲ್ಲಾ
೧೧ ಮಾಡಲಿ. ಏನಂದರೆ—ವಾಸ ಸ್ಥಳವನೂ, ಅದರ ಗುಡಾರವ
ನೂ, ಅದರ ಮುಚ್ಚಳವನೂ, ಅದರ ಕೊಂಡಿಗಳನ್ನೂ, ಹಲಿ
ಗೆಗಳನ್ನೂ, ಅಗುಳ್ಳಿಗಳನ್ನೂ, ಸ್ತಂಭಗಳನ್ನೂ, ಕಾಲುಗಳನ್ನೂ,
೧೨ ಬೆಟ್ಟಿಗೆಯನ್ನೂ, ಅದರ ಕೋಲುಗಳನ್ನೂ ಕೃಪಾಸನವನ್ನೂ
೧೩ ಮರೆ ಮಾಡುವ ತೆರೆಯನ್ನೂ, ಮೇಜನ್ನೂ, ಅದರ ಕೋಲುಗ
ಳನ್ನೂ, ಅದರ ಎಲ್ಲಾ ಸಾಮಾನುಗಳನ್ನೂ, ಸಮುಖದ ರೊ
೧೪ ಟ್ಟಿಯನ್ನೂ, ದೀಪಸ್ತಂಭವನ್ನೂ, ಅದರ ಸಾಮಾನುಗಳ
ನ್ನೂ, ಅದರ ದೀಪಗಳನ್ನೂ, ದೀಪದ ಎಣ್ಣೆಯನ್ನೂ, ಧೂಪ
೧೫ ಪೀಠವನ್ನೂ, ಅದರ ಕೋಲುಗಳನ್ನೂ, ಅಭಿಷೇಕಿಸುವ ಎಣ್ಣೆ
ಯನ್ನೂ, ಪರಿಮಳ ಧೂಪವನ್ನೂ, ವಾಸ ಸ್ಥಳದ ಹೊರ ಬಾ
೧೬ ಗಲಿನ ತೆರೆಯನ್ನೂ, ಬಲಿಪೀಠವನ್ನೂ, ಅದರ ತಾಂಬ್ರದ ಜಲ್ಲ
ಡೆಯನ್ನೂ, ಅದರ ಕೋಲುಗಳನ್ನೂ, ಅದರ ಎಲ್ಲಾ ಸಾಮಾ
೧೭ ನುಗಳನ್ನೂ, ಗಂಗಾಳವನ್ನೂ, ಅದರ ಕಾಲನ್ನೂ, ಅಂಗಳದ ಪ
ರದೆಗಳನ್ನೂ, ಸ್ತಂಭಗಳನ್ನೂ, ಕಾಲುಗಳನ್ನೂ, ಅಂಗಳದ ಬಾ
೧೮ ಗಲಿನ ತೆರೆಯನ್ನೂ, ವಾಸ ಸ್ಥಳದ ಗೂಟಗಳನ್ನೂ, ಅಂಗಳದ
ಗೂಟಗಳನ್ನೂ, ಅವುಗಳ ಹಗ್ಗಗಳನ್ನೂ, ಪರಿಶುದ್ಧ ಸ್ಥಳದಲ್ಲಿ
೧೯ ಸೇವೆ ಮಾತುವದಕ್ಕೋಸ್ಕರ ಉದ್ಯೋಗ ವಸ್ತ್ರಗಳನ್ನೂ,
ಯಾಜಕನಾದ ಆರೋನನ ಪರಿಶುದ್ಧ ವಸ್ತ್ರಗಳನ್ನೂ, ಯಾಜ
ಕ ಸೇವೆಗೋಸ್ಕರ ಅವನ ಮಕ್ಕಳಿಗೆ ಷೇಕಾದ ವಸ್ತ್ರಗಳನ್ನೂ
ಮಾಡಲಿ.

೨೦ ಆಗ ಇಸ್ರಯೇಲ್ ಮಕ್ಕಳ ಸಭೆಯೆಲ್ಲಾ ಮೋಶೆಯ ಸಮು
೨೧ ಖವನ್ನು ಬಿಟ್ಟು ಹೋಯಿತು. ಮತ್ತು ತಮ್ಮ ಹೃದಯ ಪ್ರೇ
ರೇಪಿಸಿದವರೆಲ್ಲರೂ, ತಮ್ಮ ಆತ್ಮ ತಮ್ಮನ್ನು ಸಿದ್ಧ ಮಾಡಿದವರೆ
ಲ್ಲರೂ ಸಭೆಯ ಗುಡಾರದ ಕೆಲಸಕ್ಕೋಸ್ಕರವೂ, ಅದರ ಎಲ್ಲಾ
ಸೇವೆಗೋಸ್ಕರವೂ, ಪರಿಶುದ್ಧ ವಸ್ತ್ರಗಳಿಗೋಸ್ಕರವೂ ಕರ್ತ
೨೨ ನಿಗೆ ಕಾಣಿಕೆಗಳನ್ನು ತಕ್ಕೊಂಡು ಬಂದರು. ಗಂಡಸರು ಹೆಂಗ
ಸರು ಸಹಿತವಾಗಿ, ಮನಃಪೂರ್ವಕವಾದವರೆಲ್ಲಾ ಬಂದು, ಮೂ
ಗುತಿಗಳನ್ನೂ, ಮುರುವುಗಳನ್ನೂ, ಮುದ್ರೆಗಳನ್ನೂ, ಮಾಲೆಗ
ಳನ್ನೂ, ಚಿನ್ನದ ಎಲ್ಲಾ ವಿಧವಾದ ಸಾಮಾನುಗಳನ್ನೂ, ತಂದ
ರು; ಮತ್ತು ಅರ್ಪಿಸುವ ಜನರೆಲ್ಲಾ ಚಿನ್ನದ ಕಾಣಿಕೆಗಳನ್ನು
೨೩ ಕರ್ತನಿಗೆ ಅರ್ಪಿಸಿದರು. ಮತ್ತು ನೀಲಿ, ರಕ್ತ ವರ್ಣ, ಲಾಕಿ
ಬಣ್ಣ, ನಾರು ಮಡಿ, ಮೇಕೆ ಕೂದಲು, ಕೆಂಪು ಅದ್ದಿದ ಟಗರುಗ
ಳ ತೊಗಲುಗಳೂ, ತಾಹಷ್ ತೊಗಲುಗಳೂ ಯಾರ ಬಳಿಯ
೨೪ ಲ್ಲಿ ಇದ್ದವೋ, ಅವರವರು ತಂದರು. ಬೆಳ್ಳಿ ತಾಂಬ್ರಗಳ ಕಾಣಿ
ಕೆಯನ್ನು ಅರ್ಪಿಸ ಮನಸ್ಸುಳ್ಳವರೆಲ್ಲರು ಕರ್ತನಿಗೆ ಕಾಣಿಕೆ
ಯನ್ನು ತಂದರು; ಸೇವೆಯ ಎಲ್ಲಾ ಕೆಲಸಕ್ಕೋಸ್ಕರ ಷಿಟ್ಟಿಮ್
೨೫ ಮರಗಳು ಉಂಟಾದವರು ತಂದರು. ಮತ್ತು ಹೃದಯದಲ್ಲಿ
ಜ್ಞಾನವುಳ್ಳ ಹೆಂಗಸರೆಲ್ಲಾ ತಮ್ಮ ಕೈಗಳಿಂದ ನೂತು, ನೀಲಿ,
ರಕ್ತ ವರ್ಣ, ಲಾಕಿ ಬಣ್ಣ, ನಾರುಗಳ ನೂಲನ್ನು ತಂದರು.
೨೬ ಮತ್ತು ಜ್ಞಾನದಲ್ಲಿ ಹೃದಯ ತಮ್ಮನ್ನು ಪ್ರೇರೇಪಿಸಿದ ಹೆಂಗಸ
೨೭ ರೆಲ್ಲಾ ಮೇಕೆ ಕೂದಲುಗಳನ್ನು ನೂತರು. ಮತ್ತು ಮುಖ್ಯಸ್ಥ
ರು ಎಫೋದಿಗೋಸ್ಕರವೂ ಪದಕಕ್ಕೋಸ್ಕರವೂ ಗೋಮೇ
೨೮ ಧಿಕಗಳನ್ನೂ, ಕೆತ್ತುವದಕ್ಕೆ ಕಲ್ಲುಗಳನ್ನೂ, ದೀಪಸ್ತಂಭ
ಕ್ಕೋಸ್ಕರವೂ, ಅಭಿಷೇಕಿಸುವ ಎಣ್ಣೆಗೋಸ್ಕರವೂ, ಪರಿಮ
ಳ ಧೂಪಕ್ಕೋಸ್ಕರವೂ ಸುಗಂಧಗಳನ್ನೂ, ಎಣ್ಣೆಯನ್ನೂ
೨೯ ತಂದರು. ಮಾಡ ಬೇಕೆಂದು ಕರ್ತನು ಮೋಶೆಯ ಮುಖಾಂತ
ರವಾಗಿ ಆಜ್ಞಾಪಿಸಿದ ಎಲ್ಲಾ ಕೆಲಸಕ್ಕೋಸ್ಕರ ತರುವದಕ್ಕೆ ಮನ
ಃಪೂರ್ವಕವಾದ ಎಲ್ಲಾ ಗಂಡಸರೂ ಹೆಂಗಸರೂ ಆಗಿರುವ
ಇಸ್ರಯೇಲ್ ಮಕ್ಕಳು ಕರ್ತನಿಗೆ ಉಚಿತವಾದ ಕಾಣಿಕೆಯನ್ನು
ತಂದರು.

೩೦ ಆಗ ಮೋಶೆ ಇಸ್ರಯೇಲ್ ಮಕ್ಕಳಿಗೆ ಹೇಳಿದ್ದೇನಂದರೆ—
ನೋಡಿರಿ; ಕರ್ತನು ಯೆಹೂದ ಕುಲದವನಾದ ಹೂರನ ಮಗ
ನಾದ ಊರಿಯ ಮಗನಾದ ಬೆಚಲೇಲನನ್ನು ಹೆಸರಾಗಿ ಕರೆದು,
೩೧ ಯೋಚನೆಗಳನ್ನು ಯೋಚಿಸುವದಕ್ಕೂ, ಚಿನ್ನ ಬೆಳ್ಳಿ ತಾಂ
೩೨ ಬ್ರಗಳಲ್ಲಿಯೂ, ಕಲ್ಲುಗಳನ್ನು ಕೆತ್ತಿಸುವದರಲ್ಲಿಯೂ, ಮರ ಕ
ಡೆಯುವದರಲ್ಲಿಯೂ, ಕೆಲಸ ಮಾಡುವದಕ್ಕೂ, ಸಕಲ ವಿಧವಾ
ದ ಯೋಚನೆಯುಳ್ಳ ಕೆಲಸ ಮಾಡುವದಕ್ಕೂ, ಜ್ಞಾನ, ವಿವೇ
೩೩ ಕ, ತಿಳುವಿಕೆಗಳಲ್ಲಿಯೂ, ಎಲ್ಲಾ ಕೆಲಸದಲ್ಲಿಯೂ ದೇವರ ಆ
೩೪ ತ್ಮದಿಂದ ಅವನನ್ನು ತುಂಬಿಸಿದ್ದಾನೆ. ಮತ್ತು ಅವನ ಮನಸ್ಸಿನ
ಲ್ಲಿಯೂ, ದಾನನ ಕುಲದವನಾದ ಅಹಿಸಮಾಕನ ಮಗನಾದ ಅ
ಹೊಲಿಯಾಬನ ಮನಸ್ಸಿನಲ್ಲಿಯೂ ಕಲಿಸಿ ಕೊಡುವದಕ್ಕೆ ಇ
೩೫ ಟ್ಟಿದ್ದಾನೆ. ಸಕಲ ವಿಧವಾದ ಕೆಲಸಗಳನ್ನು ಮಾಡಿ, ಯೋಚನೆ
ಗಳನ್ನು ಯೋಚಿಸುವವರಾದ ಪಂಚಾಳನ, ಚಿತ್ರ ಕೆಲಸದವನ
ನೀಲಿ, ರಕ್ತ ವರ್ಣ, ಲಾಕಿ ಬಣ್ಣ, ನಾರು ಮಡಿಯಲ್ಲಿ ಚಿತ್ರವಾಗಿ
ಹೊಲಿಯುವವನ, ಜಾಡನ ಕೆಲಸವೆಲ್ಲಾ ಮಾಡುವದಕ್ಕೆ, ಇವರ
ನ್ನು ಹೃದಯದ ಜ್ಞಾನದಿಂದ ತುಂಬಿಸಿದ್ದಾನೆ.

## ೩೬. ಸಂಧಿ.

೧ ಆಗ ಬೆಚಲೇಲನೂ, ಅಹೊಲಿಯಾಬನೂ, ಪರಿಶುದ್ಧ ಸ್ಥಳ
ದ ಸೇವೆಗೋಸ್ಕರವಾದ ಕೆಲಸವೆಲ್ಲಾ ಮಾಡುವ ಕ್ರಮವನ್ನು ತಿಳಿ
ಯುವ ಹಾಗೆ, ಕರ್ತನಿಂದ ಜ್ಞಾನ ವಿವೇಕಗಳನ್ನು ಹೊಂದಿದ
ಜ್ಞಾನ ಹೃದಯವುಳ್ಳವರೆಲ್ಲರೂ, ಕರ್ತನು ಆಜ್ಞಾಪಿಸಿದ ಎಲ್ಲಾ
೨ ಪುಗಳ ಹಾಗೆ ಮಾಡಿದರು. ಮೋಶೆ ಬೆಚಲೇಲನನ್ನೂ, ಅಹೊ
ಲಿಯಾಬನನ್ನೂ, ಕರ್ತನು ಯಾರ ಹೃದಯಗಳಲ್ಲಿ ಜ್ಞಾನ
ಇಟ್ಟನೋ, ಆ ಜ್ಞಾನ ಹೃದಯವುಳ್ಳ ಎಲ್ಲಾ ಜನರನ್ನೂ ಅದ
ನ್ನು ಮಾಡುವ ಹಾಗೆ ತಮ್ಮ ಹೃದಯ ಪ್ರೇರೇಪಿಸಿದವರೆಲ್ಲ
೩ ರನ್ನೂ ಕೆಲಸಕ್ಕೆ ಬರ ಕರೆದನು. ಆಗಲವರು ಇಸ್ರಯೇಲ್
ಮಕ್ಕಳು ಪರಿಶುದ್ಧ ಸೇವೆಗೋಸ್ಕರವೂ, ಅದನ್ನು ಮಾಡಿಸು
ವದಕ್ಕೋಸ್ಕರವೂ ತಂದ ಕಾಣಿಕೆಗಳನ್ನೆಲ್ಲಾ ಮೋಶೆಯ ಬ
ಳಿಯಿಂದ ಈಸಿ ಕೊಂಡರು; ಇದಲ್ಲದೆ ಅವರು ಇನ್ನೂ ಪ್ರತಿ ಉ
ದಯದಲ್ಲಿ ಅವನಿಗೆ ಉಚಿತವಾದ ಕಾಣಿಕೆಗಳನ್ನು ತರುತ್ತಿದ್ದರು.
೪ ಆಗ ಪರಿಶುದ್ಧ ಸ್ಥಳದ ಕೆಲಸವನ್ನು ಮಾಡುವ ಜ್ಞಾನಿಗಳೆಲ್ಲರು
ಒಬ್ಬೊಬ್ಬನು ತನ್ನ ಕೆಲಸವನ್ನು ಬಿಟ್ಟು ಬಂದು; ಮೋಶೆಯ
೫ ಸಂಗಡ ಮಾತಾಡಿ ಹೇಳಿದ್ದೇನಂದರೆ—ಮಾಡ ಬೇಕೆಂದು ಕರ್ತ
ನು ಆಜ್ಞಾಪಿಸಿದ ಕೆಲಸವಾಗುವ ಸೇವೆಗೆ ಬೇಕಾಗಿರುವದಕ್ಕಿಂತ
೬ ಹೆಚ್ಚಾದದ್ದನ್ನು ಈ ಜನರು ತಕ್ಕೊಂಡು ಬರುತ್ತಾರೆ. ಆಗ
ಮೋಶೆ—ಇನ್ನು ಮೇಲೆ ಪರಿಶುದ್ಧ ಸ್ಥಳದ ಕಾಣಿಕೆಗೋಸ್ಕರ
ಗಂಡಸರಾದರೂ ಹೆಂಗಸರಾದರೂ ಕೆಲಸ ಮಾಡ ಬಾರದೆಂದು,
ದಂಡಿನಲ್ಲಿ ತಿಳಿಸ ಬೇಕೆಂಬದಾಗಿ ಆಜ್ಞಾಪಿಸಿದನು. ಹಾಗೆ ಜನ
೭ ರು ತರುವದು ನಿಲ್ಲಿಸಲ್ಪಟ್ಟಿತು. ಯಾಕಂದರೆ ಕೆಲಸವನ್ನೆಲ್ಲಾ
ಮಾಡುವದಕ್ಕೆ ಸಾಕಾಗಿ, ಮಿಗುವ ಹಾಗೆ ಸಾಮಾನು ಇತ್ತು.

೮ ಹೀಗಿರಲಾಗಿ ಕೆಲಸದವರಲ್ಲಿ ಜ್ಞಾನ ಹೃದಯವುಳ್ಳವರೆಲ್ಲ
ರು ವಾಸ ಸ್ಥಳವನ್ನು ಹತ್ತು ತೆರೆಗಳಿಂದ ಮಾಡಿ, ಹೊಸೆದ ನಾ
ರಿನಿಂದಲೂ, ನೀಲಿ, ರಕ್ತ ವರ್ಣ, ಲಾಕಿ ನೂಲಿನಿಂದಲೂ, ಚಿ
ತ್ರ ಕೆಲಸವಾದ ಅವುಗಳನ್ನು ಕೆರೂಬಿಗಳಾಗಿ ಮಾಡಿದರು.
೯ ಒಂದು ತೆರೆಯ ಉದ್ದವು ಇಪ್ಪತ್ತೆಂಟು ಮೊಳ, ಒಂದು ತೆರೆಯ
೧೦ ಅಗಲವು ನಾಲ್ಕು ಮೊಳ, ಎಲ್ಲಾ ತೆರೆಗಳಿಗೆ ಒಂದೇ ಅಳತೆ. ಮ
ತ್ತು ಐದೈದು ತೆರೆಗಳನ್ನು ಒಂದಕ್ಕೊಂದು ಜೋಡಿಸಿ, ಒಂದು
೧೧ ತೆರೆಯ ಮೇಲೆಯಲ್ಲಿ ಅದರ ಅಂಚಿನಲ್ಲಿ ಜೋಡಿಸುವ ಸ್ಥಳದಲ್ಲಿ
ನೀಲಿ ನೂಲಿನ ಕುಣಿಕೆಗಳನ್ನು ಮಾಡಿ, ಎರಡನೇ ಜೋಡಿಸುವಿ
೧೨ ಕೆಯ ಕಡೆ ತೆರೆಯ ಅಂಚಿನಲ್ಲಿಯೂ ಹಾಗೆ ಮಾಡಿದನು. ಒಂ
ದು ತೆರೆಯಲ್ಲಿ ಐವತ್ತು ಕುಣಿಕೆಗಳನ್ನು ಮಾಡಿ, ಜೋಡಿಸುವ
ಸ್ಥಳದಲ್ಲಿರುವ ಇನ್ನೊಂದು ತೆರೆಯ ಅಂಚಿನಲ್ಲಿ ಐವತ್ತು ಕುಣಿ
ಕೆಗಳನ್ನು, ಆ ಕುಣಿಕೆಗಳು ಒಂದಕ್ಕೊಂದು ಸರಿಯಾಗಿರುವ
೧೩ ಹಾಗೆ, ಮಾಡಿದನು. ಮತ್ತು ಭಂಗಾರದ ಐವತ್ತು ಕೊಂಡಿಗಳ
ನ್ನು ಮಾಡಿ, ಆ ಕೊಂಡಿಗಳಿಂದ ತೆರೆಗಳನ್ನು ಒಂದಕ್ಕೊಂದು
ಜೋಡಿಸಿದನು, ಹಾಗೆ ವಾಸ ಸ್ಥಳವು ಒಂದೇ ಆಯಿತು.

೧೪ ಮತ್ತು ವಾಸ ಸ್ಥಳದ ಮೇಲೆ ಗುಡಾರಕ್ಕೋಸ್ಕರ ಮೇಕೆ
ಕೂದಲಿನ ತೆರೆಗಳನ್ನು ಮಾಡಿ, ಹನ್ನೊಂದು ತೆರೆಗಳಾಗಿ ಅವು
೧೫ ಗಳನ್ನು ಮಾಡಿದನು. ಒಂದು ತೆರೆಯ ಉದ್ದವು ಮೂವತ್ತು
ಮೊಳ, ಒಂದು ತೆರೆಯ ಅಗಲವು ನಾಲ್ಕು ಮೊಳ, ಹನ್ನೊಂದು
೧೬ ತೆರೆಗಳಿಗೆ ಒಂದೇ ಅಳತೆ. ಮತ್ತು ಐದು ತೆರೆಗಳನ್ನು ಬೇರೆ
ಯಾಗಿಯೂ, ಆರು ತೆರೆಗಳನ್ನು ಬೇರೆಯಾಗಿಯೂ, ಜೋಡಿ
೧೭ ಸಿದನು. ಮತ್ತು ಜೋಡಿಸುವಲ್ಲಿ ಕಡೇದಾದ ತೆರೆಯ ಮೇಲೆಯ
ಲ್ಲಿ ಐವತ್ತು ಕುಣಿಕೆಗಳನ್ನೂ, ಎರಡನೇ ಜೋಡಿಸುವಿಕೆಯಲ್ಲಿರುವ
ಒಂದು ತೆರೆಯ ಮೇಲೆಯಲ್ಲಿ ಐವತ್ತು ಕುಣಿಕೆಗಳನ್ನೂ, ಮಾಡಿ
೧೮ ದನು. ಮತ್ತು ಅದು ಒಂದಾಗುವ ಹಾಗೆ, ಗುಡಾರವನ್ನು ಜೋ
ಡಿಸುವದಕ್ಕೋಸ್ಕರ ಐವತ್ತು ತಾಂಬ್ರದ ಕೊಂಡಿಗಳನ್ನು ಮಾ
ಡಿದನು.

೧೯ ಮತ್ತು ಕೆಂಪು ಅದ್ದಿದ ಟಗರುಗಳ ತೊಗಲುಗಳಿಂದ ಗುಡಾರ
ಕ್ಕೆ ಮುಚ್ಚಳವನ್ನೂ, ತಾಹಷ್ ತೊಗಲುಗಳಿಂದ ಮೇಲ್ಮುಚ್ಚಳ
ವನ್ನೂ, ಮಾಡಿದನು.

೨೦ ಮತ್ತು ವಾಸ ಸ್ಥಳಕ್ಕೆ ಹಲಿಗೆಗಳನ್ನು ಷಿಟ್ಟಿಮ್ ಮರದಿಂದ
೨೧ ನಿಲ್ಲುವಂಥವುಗಳಾಗಿ ಮಾಡಿದನು. ಹಲಿಗೆಯ ಉದ್ದವು ಹತ್ತು
೨೨ ಮೊಳ, ಒಂದು ಹಲಿಗೆಯ ಅಗಲವು ಒಂದುವರೆ ಮೊಳ. ಒಂ
ದೊಂದು ಹಲಿಗೆಗೆ ಒಂದಕ್ಕೊಂದು ಸರಿಯಾಗಿರುವ ಎರಡು ಕೈ
ಗಳನ್ನು ಹಾಗೆ ಗುಡಾರದ ಎಲ್ಲಾ ಹಲಿಗೆಗಳಿಗೆ ಮಾಡಿದನು.
೨೩ ಮತ್ತು ವಾಸ ಸ್ಥಳದ ಹಲಿಗೆಗಳನ್ನು, ದಕ್ಷಿಣ ಕಡೆಯಾಗಿರುವ
ದಕ್ಷಿಣ ಪಾರ್ಶ್ವದಲ್ಲಿ ಇಪ್ಪತ್ತು ಹಲಿಗೆಗಳನ್ನು, ಮಾಡಿದನು.
೨೪ ನಾಲ್ವತ್ತು ಬೆಳ್ಳಿ ಕಾಲುಗಳನ್ನು ಆ ಇಪ್ಪತ್ತು ಹಲಿಗೆಗಳ ಕೆಳ
ಗೆ ಒಂದೊಂದು ಹಲಿಗೆಯ ಕೆಳಗೆ ಅದರ ಎರಡೆರಡು ಕೈಗಳಿ
೨೫ ಗೋಸ್ಕರ ಎರಡೆರಡು ಕಾಲುಗಳನ್ನು ಮಾಡಿದನು. ಮತ್ತು ಉ
ತ್ತರ ದಿಕ್ಕಿನಲ್ಲಿ ಇರುವ ಅದರ ಮತ್ತೊಂದು ಪಾರ್ಶ್ವಕ್ಕೋಸ್ಕ
೨೬ ರ ಇಪ್ಪತ್ತು ಹಲಿಗೆಗಳನ್ನೂ, ಒಂದೊಂದು ಹಲಿಗೆಯ ಕೆಳಗೆ
ಎರಡೆರಡು ಕಾಲುಗಳಾಗಿ ನಾಲ್ವತ್ತು ಬೆಳ್ಳಿಯ ಕಾಲುಗಳನ್ನೂ
೨೭ ಮಾಡಿದನು. ಮತ್ತು ವಾಸ ಸ್ಥಳದ ಪಶ್ಚಿಮ ಪಾರ್ಶ್ವದಲ್ಲಿ ಆ
೨೮ ರು ಹಲಿಗೆಗಳನ್ನು ಮಾಡಿದನು. ಮತ್ತು ವಾಸ ಸ್ಥಳದ ಎರಡು
ಪಾರ್ಶ್ವಗಳಲ್ಲಿರುವ ಮೂಲೆಗಳಿಗೆ ಎರಡು ಹಲಿಗೆಗಳನ್ನು ಮಾ
೨೯ ಡಿದನು. ಇವು ಅಡಿಯಲ್ಲಿ ಜೋಡಿಸಲ್ಪಟ್ಟವು; ಮತ್ತು ಮೇ
ಲ್ಭಾಗದಲ್ಲಿ ಕೂಡಾ ಒಂದೇ ಉಂಗರಕ್ಕೆ ಜೋಡಿಸಲ್ಪಟ್ಟವು;
೩೦ ಎರಡಕ್ಕೂ ಆ ಎರಡು ಮೂಲೆಗಳಲ್ಲಿ ಹಾಗೆ ಮಾಡಿದನು. ಹಾಗೆ
ಎಂಟು ಹಲಿಗೆಗಳು ಇದ್ದವು; ಒಂದೊಂದು ಹಲಿಗೆಯ ಕೆಳಗೆ ಎ
ರಡೆರಡು ಕಾಲುಗಳಿರುವದರಿಂದ, ಅವುಗಳಿಗೆ ಹದಿನಾರು ಬೆಳ್ಳಿ
೩೧ ಯ ಕಾಲುಗಳು ಇದ್ದವು. ಮತ್ತು ಷಿಟ್ಟಿಮ್ ಮರದಿಂದ ಅಗುಳ್ಳಿ
ಗಳನ್ನು ಮಾಡಿ, ವಾಸ ಸ್ಥಳದ ಒಂದು ಪಾರ್ಶ್ವದ ಹಲಿಗೆಗಳ
೩೨ ಗೆ ಐದೂ, ವಾಸ ಸ್ಥಳದ ಇನ್ನೊಂದು ಪಾರ್ಶ್ವದ ಹಲಿಗೆಗಳ
ಗೆ ಐದು ಅಗುಳ್ಳಿಗಳನ್ನೂ, ವಾಸ ಸ್ಥಳದ ಹಿಂಭಾಗದಲ್ಲಿ ಪಶ್ಚಿಮ
ಕಡೆಯಲ್ಲಿರುವ ಹಲಿಗೆಗಳಿಗೆ ಐದು ಅಗುಳ್ಳಿಗಳನ್ನೂ, ಮಾಡಿದ
೩೩ ನು. ಮತ್ತು ಮಧ್ಯವಾದ ಅಗುಳ್ಳಿಯನ್ನು ಹಲಿಗೆಗಳ ನಡುವೆ
ಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಯ ಪರ್ಯಂತರ
೩೪ ಕ್ಕೂ ಹಾದು ಹೋಗುವ ಹಾಗೆ ಮಾಡಿದನು. ಆ ಹಲಿಗೆಗಳ
ನ್ನು ಭಂಗಾರದಿಂದ ಹೊದಗಿಸಿ, ಅಗುಳ್ಳಿಗೆ ಮನೆಗಳಾಗಿರುವ
ಅವುಗಳ ಉಂಗರಗಳನ್ನು ಭಂಗಾರದಿಂದ ಮಾಡಿ, ಅಗುಳ್ಳಿಗಳನ್ನು
ಭಂಗಾರದಿಂದ ಹೊದಗಿಸಿದನು.

೩೫ ಮತ್ತು ನೀಲಿ, ರಕ್ತ ವರ್ಣ, ಲಾಕಿ ಬಣ್ಣ ಹೊಸೆದ ನಾರುಗ
ಳಿಂದ ತೆರೆಯನ್ನು ಮಾಡಿ, ವಿಚಿತ್ರವಾದ ಕೆಲಸದಿಂದ ಕೆರೂಬಿ
೩೬ ಗಳುಳ್ಳದ್ದಾಗಿ ಅದನ್ನು ಮಾಡಿದನು. ಮತ್ತು ಅದಕ್ಕೆ ಷಿಟ್ಟಿಮ್
ಮರದ ನಾಲ್ಕು ಸ್ತಂಭಗಳನ್ನು ಮಾಡಿ, ಭಂಗಾರದಿಂದ ಅವುಗ
ಳನ್ನು ಹೊದಗಿಸಿದನು; ಅವುಗಳ ಮೊಳೆಗಳು ಭಂಗಾರದವುಗ
ಳಾಗಿದ್ದವು. ಅವನು ಅವುಗಳಿಗೆ ಬೆಳ್ಳಿಯ ನಾಲ್ಕು ಕಾಲುಗಳ
ನ್ನು ಎರಕ ಹೊಯಿದನು.

೩೭ ಮತ್ತು ಬಾಗಲಿಗೆ ನೀಲಿ, ರಕ್ತ ವರ್ಣ, ಲಾಕಿ ಬಣ್ಣ, ಹೊ
ಸೆದ ನಾರುಗಳಿಂದ ಚಿತ್ರವಾಗಿ ಹೊಲಿಯುವ ಕೆಲಸದ ತೆರೆಯ
೩೮ ನ್ನೂ, ಅದರ ಐದು ಸ್ತಂಭಗಳನ್ನೂ, ಅವುಗಳ ಮೊಳೆಗಳನ್ನೂ
ಮಾಡಿ, ಅವುಗಳ ತಲೆಗಳನ್ನೂ ಕೋಲುಗಳನ್ನೂ, ಭಂಗಾರ
ದಿಂದ ಹೊದಗಿಸಿದನು. ಅವುಗಳ ಐದು ಕಾಲುಗಳು ತಾಂಬ್ರದ
ವುಗಳಾಗಿದ್ದವು.

## ೩೭. ಸಂಧಿ.

೧ ಮತ್ತು ಬೆಜಲೇಲನು ಎರಡುವರೆ ಮೊಳ ಉದ್ದವೂ, ಒಂದು
ವರೆ ಮೊಳ ಅಗಲವೂ, ಒಂದುವರೆ ಮೊಳ ಎತ್ತರವೂ ಆಗಿರುವ
೨ ಚೆಟ್ಟಿಗೆಯನ್ನು ಷಿಟ್ಟಿಮ್ ಮರದಿಂದ ಮಾಡಿ, ಅದನ್ನು ಶುದ್ಧ
ಭಂಗಾರದಿಂದ ಹೊರಗೂ ಒಳಗೂ ಹೊದಗಿಸಿ, ಅದರಲ್ಲಿ ಸುತ್ತ
೩ ಲಾಗಿ ಭಂಗಾರದ ಜವೆಯನ್ನು ಮಾಡಿದನು. ಅದರ ನಾಲ್ಕು
ಮೂಲೆಗಳಲ್ಲಿ, ಒಂದೊಂದು ಕಡೆಯಲ್ಲಿ ಎರಡೆರಡು ಉಂಗರಗಳಾ
ಗಿ, ಭಂಗಾರದ ನಾಲ್ಕು ಉಂಗರಗಳನ್ನು ಅದಕ್ಕೆ ಎರಕ ಹೊ
೪ ಯಿದನು. ಷಿಟ್ಟಿಮ್ ಮರದ ಕೋಲುಗಳನ್ನು ಮಾಡಿ, ಭಂಗಾ
೫ ರದಿಂದ ಹೊದಗಿಸಿದನು. ಚೆಟ್ಟಿಗೆಯನ್ನು ಎತ್ತಿ ಕೊಂಡು ಹೋ
ಗುವದಕ್ಕೋಸ್ಕರ ಕೋಲುಗಳನ್ನು ಚೆಟ್ಟಿಗೆಯ ಪಾರ್ಶ್ವಗಳ
ಲ್ಲಿರುವ ಉಂಗರಗಳಲ್ಲಿ ಸೇರಿಸಿದನು.

೬ ಮತ್ತು ಎರಡುವರೆ ಮೊಳ ಉದ್ದವೂ, ಒಂದುವರೆ ಮೊಳ ಅ
ಗಲವೂ ಆಗಿರುವ ಕೃಪಾಸನವನ್ನು ಶುದ್ಧ ಭಂಗಾರದಿಂದ ಮಾ
೭ ಡಿ, ಭಂಗಾರದಿಂದ ಎರಡು ಕೆರೂಬಿಗಳನ್ನು ಮಾಡಿದನು; ಕೃಪಾ
ಸನದ ಎರಡು ಮೇರೆಗಳಲ್ಲಿ ಅವುಗಳನ್ನು ತರಣೆ ಕೆಲಸದಿಂ
೮ ದ ಮಾಡಿದನು. ಈ ಮೇರೆಯಲ್ಲಿ ಒಂದು ಕೆರೂಬಿಯನ್ನೂ, ಆ
ಮೇರೆಯಲ್ಲಿ ಒಂದು ಕೆರೂಬಿಯನ್ನೂ ಮಾಡಿ, ಕೃಪಾಸನದ
ಲ್ಲಿ ಅದರ ಎರಡು ಮೇರೆಗಳಲ್ಲಿ ಕೆರೂಬಿಗಳನ್ನು ಮಾಡಿದನು.
೯ ಆ ಕೆರೂಬಿಗಳು ಮೇಲಕ್ಕೆ ರೆಕ್ಕೆಗಳನ್ನು ಚಾಚುವುಗಳಾಗಿ
ಯೂ, ರೆಕ್ಕೆಗಳಿಂದ ಕೃಪಾಸನವನ್ನು ಮುಚ್ಚುವುಗಳಾಗಿ
ಯೂ, ಒಂದರ ಕಡೆಗೆ ಒಂದು ನೋಡುವುಗಳಾಗಿಯೂ, ಇ
ದ್ದವು; ಕೃಪಾಸನದ ಕಡೆಗೆ ಕೆರೂಬಿಗಳ ಮುಖಗಳಿದ್ದವು.

೧೦ ಮತ್ತು ಎರಡು ಮೊಳ ಉದ್ದವೂ, ಒಂದು ಮೊಳ ಅಗಲವೂ,
ಒಂದುವರೆ ಮೊಳ ಎತ್ತರವೂ ಆಗಿರುವ ಮೇಜನ್ನು ಷಿಟ್ಟಿಮ್
೧೧ ಮರದಿಂದ ಮಾಡಿದನು. ಶುದ್ಧ ಭಂಗಾರದಿಂದ ಹೊದಗಿಸಿ, ಅ
೧೨ ದಕ್ಕೆ ಸುತ್ತಲಾಗಿ ಭಂಗಾರದ ಜವೆಯನ್ನು ಮಾಡಿ, ಅದಕ್ಕೆ
ಸುತ್ತಲಾಗಿ ಗೇಣುದ್ದ ಅಂಚನ್ನು ಮಾಡಿ, ಅಂಚಿನ ಸುತ್ತಲಾಗಿ
೧೩ ಭಂಗಾರದ ಜವೆಯನ್ನು ಮಾಡಿದನು. ಅದಕ್ಕೆ ಭಂಗಾರದ ನಾ
ಲ್ಕು ಉಂಗರಗಳನ್ನು ಎರಕ ಹೊಯಿದು, ಉಂಗರಗಳನ್ನು ಅ
ದರ ನಾಲ್ಕು ಕಾಲುಗಳಲ್ಲಿರುವ ನಾಲ್ಕು ಮೂಲೆಗಳಲ್ಲಿ ಇಟ್ಟನು.
೧೪ ಮೇಜನ್ನು ಹೊರುವದಕ್ಕೋಸ್ಕರವಾದ ಕೋಲುಗಳಿಗೆ ಮನೆಗ
೧೫ ಳಾಗಿರುವ ಉಂಗರಗಳು ಅಂಚೆಗೆ ಸಮೀಪವಾಗಿದ್ದವು. ಮತ್ತು
ಮೇಜನ್ನು ಹೊರುವದಕ್ಕೋಸ್ಕರ ಕೋಲುಗಳನ್ನು ಷಿಟ್ಟಿಮ್
೧೬ ಮರದಿಂದ ಮಾಡಿ, ಭಂಗಾರದಿಂದ ಹೊದಗಿಸಿದನು. ಮತ್ತು
ಮೇಜಿನ ಮೇಲಿರ ತಕ್ಕ ಸಾಮಾನುಗಳನ್ನೂ, ಅದರ ಪರಿವಾಣ
ವನ್ನೂ, ಪಂಚೆಪಾತ್ರೆಗಳನ್ನೂ, ಹೊಯ್ಯುವ ಬಟ್ಟಲುಗಳನ್ನೂ,
ಕೂಜೆಗಳನ್ನೂ, ಶುದ್ಧ ಭಂಗಾರದಿಂದ ಮಾಡಿದನು.

೧೭ ಮತ್ತು ಅವನು ಶುದ್ಧ ಭಂಗಾರದ ದೀಪಸ್ತಂಭವನ್ನು ಮಾಡಿ
ದನು; ಆ ದೀಪಸ್ತಂಭವನ್ನು ತರಣೆ ಕೆಲಸದಿಂದ ಮಾಡಿದನು;
ಅದರ ಕಂಭವೂ, ಕೊಂಬೆಯೂ, ಹೂಣತೆಗಳೂ, ಗುಂಡುಗಳೂ,
೧೮ ಹೂವುಗಳೂ ಅದರಿಂದಲೇ ಉಂಟಾಗಿದ್ದವು. ಮತ್ತು ಅದರ
ಒಂದು ಪಾರ್ಶ್ವದಿಂದ ಮೂರು ದೀಪದ ಕೊಂಬೆಗಳೂ, ಮ
ತ್ತೊಂದು ಪಾರ್ಶ್ವದಿಂದ ಮೂರು ದೀಪದ ಕೊಂಬೆಗಳೂ;
ಈ ಮೇರೆಗೆ ಆರು ಕೊಂಬೆಗಳು ಅದರ ಪಾರ್ಶ್ವಗಳಿಂದ ಹೊ
೧೯ ರಗೆ ಬರುತ್ತಿದ್ದವು. ಒಂದು ಕೊಂಬೆಯಲ್ಲಿ, ಬಾದಾಮಿ ಹೂವು
ವುಳ್ಳ ಮೂರು ಹೂಣತೆಗಳೂ, ಗುಂಡೂ, ಹೂವೂ; ಮತ್ತೊಂ
ದು ಕೊಂಬೆಯಲ್ಲಿ, ಬಾದಾಮಿ ಹೂವುವುಳ್ಳ ಮೂರು ಹೂಣತೆಗ
ಳೂ, ಗುಂಡೂ, ಹೂವೂ; ಈ ಪ್ರಕಾರ ದೀಪಸ್ತಂಭದಿಂದ ಹೊರ
೨೦ ಗೆ ಬರುವ ಆರು ಕೊಂಬೆಗಳಲ್ಲಿ ಇತ್ತು. ಮತ್ತು ದೀಪಸ್ತಂಭದ
ಲ್ಲಿ ಗುಂಡುಗಳೂ ಹೂವುಗಳೂ ಕೂಡಿದ ಬಾದಾಮಿ ಹೂವುವು
೨೧ ಳ್ಳ ನಾಲ್ಕು ಹೂಣತೆಗಳೂ. ಮತ್ತು ದೀಪಸ್ತಂಭದೊಳಗಿಂದ
ಹೊರಗೆ ಬರುವ ಆರು ಕೊಂಬೆಗಳಿಗೆ ಅದರಿಂದ ಬರುವ ಎರಡು
೨೨ ರಡು ಕೊಂಬೆಗಳ ಕೆಳಗೆ ಒಂದೊಂದು ಗುಂಡು. ಅದರ ಗುಂಡು
ಗಳೂ ಕೊಂಬೆಗಳೂ ಅದರಿಂದಲೇ ಉಂಟಾಗಿದ್ದವು; ಅವೆಲ್ಲಾ
೨೩ ಶುದ್ಧ ಭಂಗಾರದ ಬಂದೇ ತರಣೆ ಕೆಲಸ. ಮತ್ತು ಅದರ ಏಳು
ದೀಪಗಳನ್ನೂ, ಅದರ ಚಿಮಟಿಗಳನ್ನೂ, ಅಗ್ನಿ ಪಾತ್ರೆಗಳನ್ನೂ
೨೪ ಶುದ್ಧ ಭಂಗಾರದಿಂದ ಮಾಡಿ, ಒಂದು ಮಣ ಶುದ್ಧ ಭಂಗಾರದಿಂ
ದ ಅದನ್ನೂ, ಅದರ ಎಲ್ಲಾ ಸಾಮಾನುಗಳನ್ನೂ, ಮಾಡಿ
ದನು.

೨೫ ಮತ್ತು ಧೂಪ ಪೀಠವನ್ನು ಷಿಟ್ಟಿಮ್ ಮರಗಳಿಂದ ಮಾಡಿದ
ನು; ಅದರ ಉದ್ದವು ಒಂದು ಮೊಳ, ಅಗಲವು ಒಂದು ಮೊಳ,
ಚೌಕವೇ; ಅದರ ಎತ್ತರವು ಎರಡು ಮೊಳ, ಅದಕ್ಕೆ ಕೊಂಬು
೨೬ ಗಳಿದ್ದವು. ಅದರ ಮೇಲ್ಭಾಗವನ್ನೂ, ಸುತ್ತಿರುವ ಪಾರ್ಶ್ವ
ಗಳನ್ನೂ, ಕೊಂಬುಗಳನ್ನೂ, ಶುದ್ಧ ಭಂಗಾರದಿಂದ ಹೊದಗಿಸಿ,
೨೭ ಅದಕ್ಕೆ ಸುತ್ತಲಾಗಿ ಭಂಗಾರದ ಜವೆಯನ್ನು ಮಾಡಿದನು. ಮ
ತ್ತು ಅದರ ಜವೆಯ ಕೆಳಗೆ ಅದರ ಎರಡು ಪಾರ್ಶ್ವಗಳಲ್ಲಿ
ಅದರ ಎರಡು ಮೂಲೆಗಳಲ್ಲಿ ಅದನ್ನು ಹೊರುವದಕ್ಕೋಸ್ಕ
ರವಾದ ಕೋಲುಗಳಿಗೆ ಮನೆಗಳಾದ ಭಂಗಾರದ ಎರಡು ಉಂ
೨೮ ಗರಗಳನ್ನು ಅದಕ್ಕೆ ಮಾಡಿದನು. ಷಿಟ್ಟಿಮ್ ಮರದಿಂದ ಕೋ
೨೯ ಲುಗಳನ್ನು ಮಾಡಿ, ಭಂಗಾರದಿಂದ ಹೊದಗಿಸಿದನು. ಮತ್ತು
ಪರಿಶುದ್ಧವಾದ ಅಭಿಷೇಕಿಸುವ ಎಣ್ಣೆಯನ್ನೂ, ಪರಿಶುದ್ಧ ವಾ
ದ ಪರಿಮಳ ಧೂಪವನ್ನೂ, ತೈಲಗಾರರ ಕೆಲಸದಿಂದ ಮಾಡಿ
ದನು.

## ೩೮. ಸಂಧಿ.

೧ ಮತ್ತು ಹೋಮದ ಪೀಠವನ್ನು, ಷಿಟ್ಟಿಮ್ ಮರದಿಂದ ಐದು
ಮೊಳ ಉದ್ದವಾಗಿಯೂ, ಐದು ಮೊಳ ಅಗಲವಾಗಿಯೂ, ಚೌ
೨ ಕವಾಗಿ, ಮೂರು ಮೊಳ ಎತ್ತರವಾಗಿ ಮಾಡಿದನು. ಅದರ ನಾ
ಲ್ಕು ಮೂಲೆಗಳಲ್ಲಿ ಅದಕ್ಕೆ ಕೊಂಬುಗಳನ್ನು ಮಾಡಿದನು; ಅ
ದರ ಕೊಂಬುಗಳು ಅದರಿಂದಲೇ ಉಂಟಾಗಿದ್ದವು; ಮತ್ತು ಅದ
೩ ನ್ನು ತಾಂಬ್ರದಿಂದ ಹೆ ದಗಿಸಿದನು. ಮತ್ತು ಬಲಿಪೀಠದ ಎಲ್ಲಾ
ಸಾಮಾನುಗಳನ್ನೂ, ಪಿಬ್ಬೆಗಳನ್ನೂ, ಸಲಿಕೆಗಳನ್ನೂ, ಪಾತ್ರೆ
ಗಳನ್ನೂ, ಮುಳ್ಳುಗಳನ್ನೂ, ಅಗ್ನಿ ಪಾತ್ರೆಗಳನ್ನೂ, ಅದರ
೪ ಎಲ್ಲಾ ಸಾಮಾನುಗಳನ್ನೂ, ತಾಂಬ್ರದಿಂದ ಮಾಡಿದನು. ಮ
ತ್ತು ಬಲಿಪೀಠಕ್ಕೆ, ಅದರ ಸುತ್ತಿನ ಕೆಳಗೆ, ಅದರ ನಡುವೆಯ ಪ
೫ ರ್ಯಂತರ, ಬಲೆಯ ಕೆಲಸವಾಗಿರುವ ಜಲ್ಲಡೆಯನ್ನು ತಾಂಬ್ರ
ದಿಂದ ಮಾಡಿದನು. ಮತ್ತು ತಾಂಬ್ರದ ಜಲ್ಲಡೆಯ ನಾಲ್ಕು ಮೂ



ಲೆಗಳಲ್ಲಿ ಕೋಲುಗಳಿಗೆ ಮನೆಗಳಾಗಿರುವ ನಾಲ್ಕು ಉಂಗರಗಳ
೬ ನ್ನು ಎರಕ ಹೊಯಿದನು. ಷಿಟ್ಟಿಮ್ ಮರದಿಂದ ಕೋಲುಗಳ
೭ ನ್ನು ಮಾಡಿ, ತಾಂಬ್ರದಿಂದ ಹೊದಗಿಸಿದನು. ಮತ್ತು ಅದನ್ನು
ಹೊರುವದಕ್ಕೋಸ್ಕರ ಬಲಿಪೀಠದ ಎರಡು ಪಾರ್ಶ್ವಗಳಲ್ಲಿ
ಕೋಲುಗಳನ್ನು ಉಂಗರಗಳಲ್ಲಿ ಸೇರಿಸಿದನು; ಹಲಿಗೆಗಳಿಂದ
೮ ಟೊಳ್ಳಾಗಿ ಬಲಿಪೀಠವನ್ನು ಮಾಡಿದನು. ಮತ್ತು ಗಂಗಾಳವ
ನ್ನು ತಾಂಬ್ರದಿಂದ, ಅದರ ಕಾಲನ್ನು ತಾಂಬ್ರದಿಂದ, ಸಭೆಯ
ಗುಡಾರದ ಹೊರಗೆ ಕೂಡಿ ಕೊಳ್ಳುವ ಸ್ತ್ರೀಯರ ಕನ್ನಡಿಗಳಿಂ
ದ ಮಾಡಿದನು.

೯ ಮತ್ತು ಅಂಗಳವನ್ನು ಮಾಡಿದನು. ಹ್ಯಾಗಂದರೆ—ತೆಂಕಣ
ಕಡೆಯಲ್ಲಿರುವ ದಕ್ಷಿಣದಲ್ಲಿ ಅಂಗಳದ ಪರದೆಗಳು ಹೊಸೆದ ನಾ
೧೦ ರನವುಗಳಾಗಿ, ನೂರು ಮೊಳವಾಗಿದ್ದವು. ಮತ್ತು ಅವುಗಳ ಸ್ತಂ
ಭಗಳು ಇಪ್ಪತ್ತು, ಅವುಗಳ ತಾಂಬ್ರದ ಕಾಲುಗಳು ಇಪ್ಪತ್ತು
ಇದ್ದವು; ಸ್ತಂಭಗಳ ಮೊಳೆಗಳೂ ಕೋಲುಗಳೂ ಬೆಳ್ಳಿಯಿಂ
೧೧ ದುಂಟಾಗಿದ್ದವು. ಮತ್ತು ಉತ್ತರ ಪಾರ್ಶ್ವದಲ್ಲಿ ನೂರು ಮೊ
ಳ, ಅವುಗಳ ಸ್ತಂಭಗಳು ಇಪ್ಪತ್ತು, ಅವುಗಳ ತಾಂಬ್ರದ ಕಾ
ಲುಗಳು ಇಪ್ಪತ್ತು ಇದ್ದವು; ಸ್ತಂಭಗಳ ಮೊಳೆಗಳೂ ಕೋಲು
೧೨ ಗಳೂ ಬೆಳ್ಳಿಯಿಂದುಂಟಾಗಿದ್ದವು. ಮತ್ತು ಪಶ್ಚಿಮ ಪಾರ್ಶ್ವ
ದಲ್ಲಿ ಐವತ್ತು ಮೊಳದ ಪರದೆಗಳಿದ್ದವು; ಅವುಗಳ ಸ್ತಂಭಗಳು
ಹತ್ತು, ಕಾಲುಗಳು ಹತ್ತು ಇದ್ದವು; ಸ್ತಂಭಗಳ ಮೊಳೆಗಳೂ
೧೩ ಕೋಲುಗಳೂ ಬೆಳ್ಳಿಯಿಂದುಂಟಾಗಿದ್ದವು. ಮತ್ತು ಪೂರ್ವ ಕ
೧೪ ಡೆಯಾಗಿ ಮೂಡಣದಲ್ಲಿ ಐವತ್ತು ಮೊಳ. ಒಂದು ಕಡೆಯಲ್ಲಿ
ಹದಿನೈದು ಮೊಳದ ಪರದೆಗಳು; ಅವುಗಳಿಗೆ ಮೂರು ಸ್ತಂಭಗ
೧೫ ಳೂ, ಮೂರು ಕಾಲುಗಳೂ ಇದ್ದವು. ಮತ್ತೊಂದು ಕಡೆಯಲ್ಲಿ
ಅಂಗಳದ ಬಾಗಲಿನ ಈಚೆ ಅಡೆಯಲ್ಲಿಯೂ, ಹದಿನೈದು ಮೊಳ
ದ ಪರದೆಗಳೂ, ಅವುಗಳಿಗೆ ಮೂರು ಸ್ತಂಭಗಳೂ, ಮೂರು ಕಾ
೧೬ ಲುಗಳೂ, ಇದ್ದವು. ಅಂಗಳದ ಪರದೆಗಳೆಲ್ಲಾ ಸುತ್ತಲಾಗಿ ಹೊಸೆ
ದ ನಾರಿನಿಂದ ಉಂಟಾಗಿದ್ದವು ಸ್ತಂಭಗಳ ಕಾಲುಗಳು ತಾಂಬ್ರವಾ
೧೭ ಗಿದ್ದವು. ಸ್ತಂಭಗಳ ಮೊಳೆಗಳೂ ಅವುಗಳ ಕೋಲುಗಳೂ ಬೆ
ಳ್ಳಿಯಾಗಿಯೂ, ಅವುಗಳ ತಲೆಗಳು ಬೆಳ್ಳಿ ಹೊದಗಿಸಿದವುಗ
ಳಾಗಿಯೂ, ಅಂಗಳದ ಎಲ್ಲಾ ಸ್ತಂಭಗಳು ಬೆಳ್ಳಿಯ ಕೋಲು
೧೮ ಳ್ಳವುಗಳಾಗಿಯೂ, ಇದ್ದವು. ಮತ್ತು ಅಂಗಳದ ಬಾಗಲಿನ ತೆಕೆ
ಯು ನೀಲಿ, ರಕ್ತ ವರ್ಣ, ಲಾಕಿ ಬಣ್ಣ, ಹೊಸೆದ ನಾರುಗಳಿಂದ
ಚಿತ್ರವಾಗಿ ಹೊಲಿದದ್ದಾಗಿತ್ತು; ಅದರ ಉದ್ದವು ಇಪ್ಪತ್ತು ಮೊಳ,
ಅದರ ಎತ್ತರವಾದ ಅಗಲವು ಅಂಗಳದ ಪರದೆಗಳ ಹಾಗೆ, ಐದು
೧೯ ಮೊಳ. ಅದಕ್ಕೆ ನಾಲ್ಕು ಸ್ತಂಭಗಳೂ, ತಾಂಬ್ರದ ನಾಲ್ಕು ಕಾ
ಲುಗಳೂ ಇದ್ದವು; ಅವುಗಳ ಮೊಳೆಗಳು ಬೆಳ್ಳಿಯವುಗಳು, ಅ
ವುಗಳ ತಲೆಗಳು ಬೆಳ್ಳಿ ಹೊದಗಿಸಿದವುಗಳು, ಅವುಗಳ ಕೋಲು
೨೦ ಗಳು ಬೆಳ್ಳಿಯವುಗಳು. ಮತ್ತು ವಾಸ ಸ್ಥಳಕ್ಕೂ ಅಂಗಳಕ್ಕೂ
ಸುತ್ತಲಾಗಿ ಇರುವ ಗೂಟಗಳೆಲ್ಲಾ ತಾಂಬ್ರದವುಗಳು.

೨೧ ಮೋಶೆಯ ಅಪ್ಪಣೆಯಿಂದ ಲೇವ್ಯರ ಸೇವೆಯಿಂದ, ಆರೋ
ನನ ಮಗನಾದ ಯಾಜಕನಾದ ಇಥಮಾರನ ಕೈಯಿಂದ, ಸಾ
ಕ್ಷಿಯ ನಿವಾಸವಾಗಿರುವ ವಾಸ ಸ್ಥಳವನ್ನು ಕುರಿತು ಮಾಡಿದ ಲೆ
೨೨ ಖ್ಖವು ಇದೇ. ಕರ್ತನು ಮೋಶೆಗೆ ಆಜ್ಞಾಪಿಸಿದ್ದನ್ನೆಲ್ಲಾ ಯೆಹೂ
ದ ಕುಲದವನಾದ ಹೂರನ ಮಗನಾದ, ಊರಿಯ ಮಗನಾದ ಬೆ
೨೩ ಚಲೇಲನು ಮಾಡಿದನು. ಅವನ ಸಂಗಡ ದಾನನ ಕುಲದವನಾದ
ಅಹಿಸಮಾಕನ ಮಗನಾದ ಅಹೊಲಿಯಾಬನು ಪಂಚಾಳನಾಗಿ
ಯೂ, ಚಿತ್ರ ಕೆಲಸದವನಾಗಿಯೂ, ನೀಲಿ, ರಕ್ತ ವರ್ಣ, ಲಾಕಿ
ಬಣ್ಣ, ನಾರುಗಳಿಂದ ಚಿತ್ರವಾಗಿ ಹೊಲಿಯುವವನಾಗಿಯೂ
ಇದ್ದನು.

೨೪ ಪರಿಶುದ್ಧ ಸ್ಥಳದ ಎಲ್ಲಾ ಕೆಲಸದಲ್ಲಿ ಕೆಲಸಕ್ಕೆ ಪ್ರಯೋಗಿಸಿದ
ಭಂಗಾರವೆಲ್ಲಾ ಉಚಿತವಾಗಿ ಕೊಟ್ಟಿ ಭಂಗಾರವು, ಪರಿಶುದ್ಧ ಶೆಕೆ
ಲಿನ ಮೇರೆಗೆ ಇಪ್ಪತ್ತೊಂಭತ್ತು ಮಣ ಏಳು ನೂರು ಮೂವತ್ತು
ಶೆಕೆಲುಗಳಾಗಿತ್ತು.

೨೫ ಸಭೆಯಲ್ಲಿ ಎಣಿಸಲ್ಪಟ್ಟವರ ಬೆಳ್ಳಿಯು ಪರಿಶುದ್ಧ ಶೆಕೆಲಿನ
ಮೇರೆಗೆ ನೂರು ಮಣ ಸಾವಿರದ ಏಳು ನೂರ ಎಪ್ಪತ್ತೈದು ಶೆಕೆ
೨೬ ಲುಗಳಾಗಿತ್ತು. ಹ್ಯಾಗಂದರೆ ಇಪ್ಪತ್ತು ವರುಷ ಮೊದಲ್ಗೊಂಡು
ಅದಕ್ಕೆ ಮೇಲಾದ ಪ್ರಾಯವುಳ್ಳ, ಎಣಿಸಲ್ಪಡುವದಕ್ಕೆ ಬಂದವ
ರಾದ, ಆರು ಲಕ್ಷ ಮೂರು ಸಾವಿರದ, ಐನೂರ ಐವತ್ತು ಮಂದಿ
ಯಲ್ಲಿ ಒಬ್ಬೊಬ್ಬನಿಗೋಸ್ಕರ ಪರಿಶುದ್ಧ ಶೆಕೆಲಿನ ಮೇರೆಗೆ ಅ
ರ್ಧ ಶೆಕೆಲಾಗಿರುವ ಬೇಕ ಬಂತು. ನೂರು ಶೆಕೆಲ್ ಬೆಳ್ಳಿಯು
ಪರಿಶುದ್ಧ ಸ್ಥಳದ ಕಾಲುಗಳನ್ನೂ, ತೆರೆಯ ಕಾಲುಗಳನ್ನೂ ಎರ
ಕ ಹೊಯ್ಯುವದಕ್ಕೆ ಆಯಿತು; ಒಂದು ಕಾಲಿಗೆ ಒಂದು ಶೆಕೆಲಿನ
೨೭ ಪ್ರಕಾರ ನೂರು ಕಾಲುಗಳಿಗೆ ನೂರು ಶೆಕೆಲುಗಳು. ಮತ್ತು ಆ
ಸಾವಿರದ ಏಳು ನೂರ ಇಪ್ಪತ್ತೈದು ಶೆಕೆಲುಗಳಿಂದ ಸ್ತಂಭಗಳಿಗೆ
ಮೊಳೆಗಳನ್ನು ಮಾಡಿ, ಅವುಗಳ ತಲೆಗಳನ್ನು ಹೊದಗಿಸಿ, ಅವು
ಗಳಿಗೆ ಕೋಲುಗಳನ್ನು ಕೊಟ್ಟಿನು.

೨೮ ಉಚಿತವಾಗಿ ಕೊಟ್ಟಿ ತಾಂಬ್ರವು ಎಪ್ಪತ್ತು ಮಣ ಎರಡು ಸಾ
೩೦ ವಿರದ ನಾನೂರು ಶೆಕೆಲುಗಳಾಗಿತ್ತು. ಅದರಿಂದ ಅವನು ಸಭೆಯ
ಗುಡಾರದ ಬಾಗಲಿನ ಕಾಲುಗಳನ್ನೂ, ತಾಂಬ್ರದ ಬಲಿ ಪೀಠವನ್ನೂ
ಅದರ ತಾಂಬ್ರದ ಜಲ್ಲಡೆಯನ್ನೂ, ಬಲಿ ಪೀಠದ ಎಲ್ಲಾ ಸಾಮಾ
೩೧ ನುಗಳನ್ನೂ, ಸುತ್ತಲಾಗಿರುವ ಅಂಗಳದ ಕಾಲುಗಳನ್ನೂ, ಅಂಗ
ಳದ ಬಾಗಲಿನ ಕಾಲುಗಳನ್ನೂ, ವಾಸ ಸ್ಥಳದ ಎಲ್ಲಾ ಗೂಟಗಳ
ನ್ನೂ, ಸುತ್ತಲಾಗಿರುವ ಅಂಗಳದ ಎಲ್ಲಾ ಗೂಟಗಳನ್ನೂ, ಮಾ
ಡಿದನು.

## ೩೯. ಸಂಧಿ.

೧ ಮತ್ತು ಆ ನೀಲಿ, ರಕ್ತ ವರ್ಣ, ಲಾಕಿ ಬಣ್ಣಗಳಿಂದ ಅವರು
ಪರಿಶುದ್ಧ ಸ್ಥಳದ ಸೇವೆಗೋಸ್ಕರವಾದ ಉಡ್ಯೋಗ ವಸ್ತ್ರಗಳ
ನ್ನು ಮಾಡಿ, ಅಕೋನನ ಪರಿಶುದ್ಧ ವಸ್ತ್ರಗಳನ್ನು ಕರ್ತನು
ಮೋಶೆಗೆ ಆಜ್ಞಾಪಿಸಿದ ಪ್ರಕಾರ, ಮಾಡಿದರು.

೨ ಅವನು ಎಫೋದನ್ನು ಭಂಗಾರದಿಂದಲೂ ನೀಲಿ, ರಕ್ತ ವರ್ಣ,
3 ಲಾಕಿ ಬಣ್ಣ, ಹೊಸೆದ ನಾರುಗಳಿಂದಲೂ ಮಾಡಿದನು. ಅವರು
ಭಂಗಾರದ ತಗಡುಗಳನ್ನು ತೆಳ್ಳಗೆ ಹೊಡೆದು, ನೀಲಿ, ರಕ್ತ ವ
ರ್ಣ, ಲಾಕಿ ಬಣ್ಣ, ನಾರುಗಳ ಮಧ್ಯದಲ್ಲಿ ಚಿತ್ರ ಕೆಲಸದವರ ಮ
ರ್ಯಾದೆಯ ಪ್ರಕಾರ ಅದನ್ನು ಪ್ರಯೋಗಿಸುವದಕ್ಕೆ ಸರಿಗೆ
೪ ಳಾಗಿ ಕತ್ತರಿಸಿದರು. ಜೋಡಿಸಲ್ಪಟ್ಟಿ ಹೆಗಲು ಭಾಗಗಳನ್ನು ಅ
ದಕ್ಕೆ ಮಾಡಿದರು. ಅದರ ಎರಡು ಅಂಚುಗಳಲ್ಲಿ ಅದು ಜೋಡಿ
೫ ಸಲ್ಪಟ್ಟಿತು. ಮತ್ತು ಅದರ ಮೇಲಿರುವ ವಿಚಿತ್ರವಾದ ದಟ್ಟಿಯು

ಅದೇ ಕೆಲಸದ್ದಾಗಿ ಭಂಗಾರ, ನೀಲಿ, ರಕ್ತ ವರ್ಣ, ಲಾಕಿ ಬಣ್ಣ, ಹೊಸೆದ ನಾರುಗಳುಳ್ಳದ್ದಾಗಿ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಇತ್ತು.

೬ ಮತ್ತು ಗೋಮೇಧಿಕ ಕಲ್ಲುಗಳನ್ನು ಭಂಗಾರದಲ್ಲಿ ಕೆತ್ತಿಟ್ಟವುಗಳಾಗಿಯೂ, ಮುದ್ರೆ ಕೆತ್ತುವ ಪ್ರಕಾರ ಕೆತ್ತಿದವುಗಳಾಗಿಯೂ,
೭ ಇಸ್ರಯೇಲ್ ಮಕ್ಕಳ ಹೆಸರುಗಳ ಪ್ರಕಾರ ಮಾಡಿದರು. ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆಯೇ ಅವನು ಅವುಗಳನ್ನು ಎಫೋದಿನ ಹೆಗಲ ಭಾಗಗಳ ಮೇಲೆ, ಇಸ್ರಯೇಲ್ ಮಕ್ಕಳ ಜ್ಞಾಪಕಾರ್ಥವಾದ ಕಲ್ಲುಗಳಾಗಿ ಇಟ್ಟನು.

೮ ಮತ್ತು ಪದಕವನ್ನು ಚಿತ್ರ ಕೆಲಸದಿಂದ, ಎಫೋದಿನ ಕೆಲಸದ ಹಾಗೆಯೇ ಭಂಗಾರ ನೀಲಿ, ರಕ್ತ ವರ್ಣ, ಲಾಕಿ ಬಣ್ಣ, ಹೊಸೆ
೯ ದ ನಾರುಗಳಿಂದ ಮಾಡಿದನು. ಅದು ಚೌಕವಾಗಿತ್ತು; ಪದಕವನ್ನು ಇಮ್ಮಡಿಸಿದ್ದಾಗಿ ಮಾಡಿದರು; ಗೇಣುದ್ದವಾಗಿಯೂ ಗೇಣ
೧೦ ಗಲವಾಗಿಯೂ ಇಮ್ಮಡಿಸಿದ್ದಾಗಿತ್ತು. ಮತ್ತು ಅದರಲ್ಲಿ ಕಲ್ಲುಗಳನ್ನು ನಾಲ್ಕು ಸಾಲುಗಳಾಗಿ ಕೆತ್ತಿಟ್ಟರು; ಮೊದಲನೇ ಸಾಲು ಅ
೧೧ ಕ್ಕೀಕ, ತಲುಕು ಪಚಿಕ, ಮಾಣಿಕ್ಯಗಳ ಸಾಲು. ಎರಡನೇ ಸಾ
೧೨ ಲು ಪಚ್ಚೆ, ನೀಲ, ಸಲೀಮ. ಮೂರನೇ ಸಾಲು ಪದ್ಮರಾಗ, ಸೈ
೧೩ ರೂರ್ಯ, ಸುಗಂಧಿ. ನಾಲ್ಕನೇ ಸಾಲು ಬೆರುಲ್ಲ, ಗೋಮೇಧಿಕ, ವಜ್ರ, ಅವು ಕೆತ್ತಿಸಲ್ಪಟ್ಟ ಚಿನ್ನದಲ್ಲಿ ಶೇರಿಸಲ್ಪಟ್ಟವುಗಳಾಗಿ
೧೪ ದ್ದವು. ಆ ಕಲ್ಲುಗಳು ಇಸ್ರಯೇಲ್ ಮಕ್ಕಳ ಹೆಸರುಗಳ ಪ್ರಕಾರ ಹನ್ನೆರಡಾಗಿ, ಅವರ ಹೆಸರುಗಳ ಅನುಸಾರವಾಗಿ ಇದ್ದವು; ಒಂ
ದೊಂದಕ್ಕೆ ಒಂದೊಂದು ಹೆಸರಾಗಿ, ಹನ್ನೆರಡು ಕುಲಗಳಿಗೋಸ್ಕರ
೧೫ ಮುದ್ರೆಗಳ ಹಾಗೆ ಕೆತ್ತಿದವುಗಳಾಗಿದ್ದವು. ಮತ್ತು ಪದಕಕ್ಕೆ ಕೊನೆಗಳಲ್ಲಿ ಶುದ್ಧ ಭಂಗಾರದಿಂದ ಹೆಣೆದ ಕೆಲಸವಾಗಿರುವ ನೂ
೧೬ ಲಿನ ಹಾಗಿರುವ ಸರಪಣಿಗಳನ್ನು ಮಾಡಿದರು. ಮತ್ತು ಭಂಗಾರದ ಎರಡು ಜವಿಗಳನ್ನು ಮಾಡಿ, ಆ ಎರಡು ಉಂಗರಗಳನ್ನು ಪ
೧೭ ದಕದ ಎರಡು ಕೊನೆಗಳಲ್ಲಿ ಶೇರಿಸಿದರು. ಮತ್ತು ಭಂಗಾರದ ಆ ಎರಡು ಸರಪಣಿಗಳನ್ನು ಪದಕದ ಕೊನೆಗಳಲ್ಲಿರುವ ಎರಡು ಉಂ
೧೮ ಗರಗಳಲ್ಲಿ ಶೇರಿಸಿದರು. ಆ ಎರಡು ಹೆಣೆತ ಸರಪಣಿಗಳ ಎರಡು ಅಂತ್ಯಗಳನ್ನು ಆ ಎರಡು ಜವಿಗಳಲ್ಲಿ ಶಿಕ್ಕಿಸಿ, ಎಫೋದಿನ ಹೆಗಲ
೧೯ ಭಾಗಗಳಲ್ಲಿ ಮುಂದುಗಡೆಯಲ್ಲಿ ಇರಿಸಿದರು ಮತ್ತು ಭಂಗಾರದ ಎರಡು ಉಂಗರಗಳನ್ನು ಮಾಡಿ, ಪದಕದ ಎರಡು ಅಂಚುಗಳಲ್ಲಿ,
೨೦ ಎಫೋದಿನ ಕಡೆಗಿರುವ ಒಳ ಕಡೆಯಲ್ಲಿ ಹಾಕಿದರು. ಚಿನ್ನದ ಬೇಕೆ ಎರಡು ಉಂಗರಗಳನ್ನು ಮಾಡಿ, ಎಫೋದಿನ ಎರಡು ಹೆಗ
ಲ ಭಾಗಗಳಲ್ಲಿ ಕೆಳಗೆ ಮುಂದುಗಡೆಯಲ್ಲಿ ಎಫೋದಿನ ವಿಚಿತ್ರವಾದ ದಟ್ಟಿಯ ಮೇಲೆ, ಅದನ್ನು ಜೋಡಿಸುವ ಸ್ಥಳಕ್ಕೆದುರಾಗಿ,
೨೧ ಇರಿಸಿದರು. ಆ ಪದಕವನ್ನು ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ ಅದು ಎಫೋದಿನ ವಿಚಿತ್ರವಾದ ದಟ್ಟಿಯ ಮೇಲೆ ಇರುವ ಹಾಗೆಯೂ, ಪದಕವು ಎಫೋದಿನನ್ನು ಬಿಟ್ಟು ಅಲ್ಲಾಡದ ಹಾಗೆ
ಯೂ ಅದರ ಉಂಗರಗಳ ಮೂಲವಾಗಿ ನೀಲಿ ನೂಲಿನಿಂದ ಎಫೋದಿನ ಉಂಗರಗಳಿಗೆ ಕಟ್ಟಿದರು.

೨೨ ಮತ್ತು ಎಫೋದಿನ ನಿಲುವಂಗಿಯನ್ನೆಲ್ಲಾ ಜಾಣರ ಕೆಲಸದಿಂದ
೨೩ ನೀಲಿಯಿಂದ ಮಾಡಿದನು. ನಿಲುವಂಗಿಯ ತೂತು ಕವಚದ ತೂತಿನ ಹಾಗೆ ಅದರ ಮಧ್ಯದಲ್ಲಿ ಇತ್ತು; ಆ ತೂತಿನ ಸುತ್ತಲಾಗಿ,
೨೪ ಅದು ಹರಿಯದ ಹಾಗೆ ಗೋಟು ಇತ್ತು. ಮತ್ತು ನಿಲುವಂಗಿಯ ಅಂಚಿನ ಮೇಲೆ ಹೊಸೆದ ನೀಲಿ, ರಕ್ತ ವರ್ಣ, ಲಾಕಿ ಬಣ್ಣಗಳಿಂ
೨೫ ದ ದಾಳಿಂಬರಗಳನ್ನು ಮಾಡಿ, ಶುದ್ಧ ಭಂಗಾರದ ಘಂಟೆಗಳನ್ನು ಮಾಡಿ, ಘಂಟೆಗಳನ್ನು ದಾಳಿಂಬಗಳ ನಡುವೆ, ನಿಲುವಂಗಿಯ
ಅಂಚಿನಲ್ಲಿ ಸುತ್ತಲಾಗಿ ದಾಳಿಂಬಗಳ ನಡುವೆಯೇ ಇರಿಸಿದರು.
೨೬ ಸೇವೆಗೋಸ್ಕರವಾದ ನಿಲುವಂಗಿಯ ಅಂಚಿನಲ್ಲಿ ಸುತ್ತಲಾಗಿ ಒಂ
ದು ಘಂಟೆ ಒಂದು ದಾಳಿಂಬ, ಒಂದು ಘಂಟೆ ಒಂದು ದಾಳಿಂಬ
ಈ ಮೇಕೆಗೆ ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆಯೇ ಇತ್ತು.

೨೭ ಮತ್ತು ಆಕೋನನಿಗೂ ಅವನ ಮಕ್ಕಳಿಗೂ ನಾರು ನೂಲಿನಿಂ
೨೮ ದಾದ ಜಾಣರ ಕೆಲಸವಾದ ಅಂಗಿಗಳನ್ನೂ, ನಾರಿನ ಮುಂಡಾಸವನ್ನೂ ಸಾಂದರ್ಯವುಳ್ಳ ನಾರಿನ ಕುಲಾವಿಗಳನ್ನೂ, ಹೊಸೆದ
೨೯ ನಾರು ಮಡಿಯಾದ ಇಜಾರುಗಳನ್ನೂ, ಹೊಸೆದ ನಾರು, ನೀಲಿ, ರಕ್ತ ವರ್ಣ, ಲಾಕಿ ಬಣ್ಣಗಳಿಂದಲೂ ಚಿತ್ರವಾಗಿ ಹೊಲಿಯುವ ಕೆಲಸವಾದ ನಡು ಕಟ್ಟನ್ನೂ ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆಯೇ ಮಾಡಿದರು.

೩೦ ಮತ್ತು ಪರಿಶುದ್ಧ ಕಿರೀಟವಾಗಿರುವ ತಗಡನ್ನು ಶುದ್ಧ ಭಂಗಾರದಿಂದ ಮಾಡಿ—ಕರ್ತನಿಗೆ ಪರಿಶುದ್ಧವೆಂದು, ಮುದ್ರೆ ಕೆತ್ತುವವರ
೩೧ ಬರಹದಿಂದ ಅದರ ಮೇಲೆ ಬರೆದು, ಅದನ್ನು ಮುಂಡಾಸದ ಮೇಲೆ ಇರಿಸುವದಕ್ಕೋಸ್ಕರ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಅದಕ್ಕೆ ನೀಲಿ ನೂಲಿನಿಟ್ಟರು.

೩೨ ಈ ಪ್ರಕಾರ ಸಭೆಯ ಗುಡಾರವಾದ ವಾಸ ಸ್ಥಳದ ಕೆಲಸವೆಲ್ಲಾ ಶೀರಿತು; ಕರ್ತನು ಮೋಶೆಗೆ ಆಜ್ಞಾಪಿಸಿದವುಗಳನ್ನೆಲ್ಲಾ ಇಸ್ರಯೇಲ್ ಮಕ್ಕಳು ಮಾಡಿ, ಹಾಗೆಯೇ ಮಾಡಿದರು.

೩೩ ಆಗಲವರು ಮೋಶೆಯ ಬಳಿಗೆ ತಂದದ್ದೇನಂದರೆ—ಗುಡಾರವೂ, ಅದರ ಎಲ್ಲಾ ಸಾಮಾನುಗಳೂ, ಕೊಂಡಿಗಳೂ, ಹಲಿಗೆಗಳೂ,
೩೪ ಅಗುಳಿಗಳೂ, ಸ್ತಂಭಗಳೂ, ಕಾಲುಗಳೂ, ಕೆಂಪು ಅದ್ದಿದ ಟಗರುಗಳ ತೊಗಲುಗಳ ಮುಚ್ಚಳವೂ, ತಾಹಷ ತೊಗಲುಗಳ ಮುಚ್ಚ
೩೫ ಳವೂ, ಮಕರೆಯ ತೆಕೆಯೂ, ಸಾಕ್ಷಿ ಪೆಟ್ಟಿಗೆಯೂ, ಅದರ ಕೋಲುಗಳೂ, ಕೃಪಾಸನವೂ, ಮೇಜಾ, ಅದರ ಎಲ್ಲಾ ಸಾಮಾನು
೩೬ ಗಳೂ, ಸಮುಖದ ಕೊಟ್ಟಿಗಳೂ, ಶುದ್ಧವಾದ ದೀಪಸ್ತಂಭವೂ, ಅದರ ದೀಪಗಳೂ, ಕ್ರಮವಾಗಿರುವ ದೀಪಗಳೂ, ಅದರ ಎಲ್ಲಾ
೩೭ ಸಾಮಾನುಗಳೂ, ದೀಪಸ್ತಂಭದ ಎಣ್ಣೆಯೂ, ಚಿನ್ನದ ಬಲಿಪೀಠವೂ, ಅಭಿಷೇಕಿಸುವ ಎಣ್ಣೆಯೂ, ಪರಿಮಳ ಧೂಪವೂ, ಗು
೩೮ ಡಾರದ ಬಾಗಲಿನ ತೆಕೆಯೂ, ಹಿತ್ತಾಳೆಯ ಬಲಿಪೀಠವೂ, ಅದಕ್ಕಿರುವ ತಾಂಬ್ರದ ಜಲ್ಲಡೆಯೂ, ಅದರ ಕೋಲುಗಳೂ, ಅದರ
೩೯ ಎಲ್ಲಾ ಸಾಮಾನುಗಳೂ, ಗಂಗಾಳವೂ, ಅದರ ಕಾಲೂ, ಅಂಗಳದ ಬಟಬೆಗಳೂ, ಅದರ ಸ್ತಂಭಗಳೂ, ಕಾಲುಗಳೂ, ಅಂಗಳದ ಬಾ
ಗಲಿನ ತೆಕೆಯೂ, ಅದರ ಹಗ್ಗಗಳೂ, ಗೂಟಿಗಳೂ, ವಾಸ ಸ್ಥಳವೆಂಬ ಸಭೆಯ ಗುಡಾರದ ಸೇವೆಗೆ ಬೇಕಾದ ಎಲ್ಲಾ ಸಾಮಾನು
೪೦ ಗಳೂ, ಪರಿಶುದ್ಧ ಸ್ಥಳದ ಸೇವೆಗೋಸ್ಕರವಾದ ಉಪ್ಯೋಗದ ವಸ್ತ್ರಗಳೂ, ಯಾಜಕನಾದ ಆಕೋನನ ಪರಿಶುದ್ಧ ವಸ್ತ್ರಗಳೂ, ಅವನ ಮಕ್ಕಳಿಗೆ ಯಾಜಕ ಸೇವೆಗೋಸ್ಕರ ಬೇಕಾದ ವಸ್ತ್ರಗ
೪೧ ಳೂ. ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆಯೇ ಇಸ್ರಯೇಲ್
೪೨ ಮಕ್ಕಳು ಈ ಕೆಲಸವನ್ನೆಲ್ಲಾ ಮಾಡಿದರು. ಮೋಶೆ ಆ ಕೆಲಸವನ್ನೆಲ್ಲಾ ನೋಡಿದಾಗ, ಇಗೋ, ಕರ್ತನು ಆ ಜ್ಞಾಪಿಸಿದ ಪ್ರಕಾರವೇ ಅದನ್ನು ಮಾಡಿದ್ದರು; ಆಗ ಮೋಶೆ ಅವರನ್ನು ಆಶೀರ್ವದಿಸಿದನು.



## ೪೦. ಸಂಧಿ.

೧ ಆಗ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ, ಮೊ
೨ ದಲನೇ ತಿಂಗಳಿನ ಮೊದಲನೇ ದಿವಸದಲ್ಲಿ ಸಭೆಯ ಗುಡಾರವೆಂಬ
೩ ವಾಸ ಸ್ಥಳವನ್ನು ನಿಲ್ಲಿಸಿ, ಸಾಕ್ಷಿಯ ಪೆಟ್ಟಿಗೆಯನ್ನು ಒಳಗಿಟ್ಟು, ಪೆ
೪ ಟ್ಟಿಗೆಯ ಮುಂದೆ ತೆಕೆಯನ್ನು ತೂಗ ಹಾಕಿ, ಮೇಜನ್ನು ತಂದು, ಅದರ ಮೇಲೆ ಇಡ ತಕ್ಕದ್ದನ್ನೆಲ್ಲಾ ಸಿದ್ಧ ಮಾಡಿ, ದೀಪಸ್ತಂಭವನ್ನು
೫ ತಂದು, ಅದರ ದೀಪಗಳನ್ನು ಹತ್ತಿಸಿ, ಧೂಪಕ್ಕೋಸ್ಕರವಾದ ಚಿನ್ನದ ಬಲಿ ಪೀಠವನ್ನು ಸಾಕ್ಷಿಯ ಪೆಟ್ಟಿಗೆಗೆ ಎದುರಾಗಿಟ್ಟು,
೬ ವಾಸ ಸ್ಥಳದ ಬಾಗಲಿನ ತೆಕೆಯನ್ನು ಇರಿಸಿ, ಹೋಮದ ಪೀಠವನ್ನು ಸಭೆಯ ಗುಡಾರವೆಂಬ ವಾಸ ಸ್ಥಳದ ಬಾಗಲಿಗೆ ಎದುರಾ
೭ ಗಿಟ್ಟು, ಸಭೆಯ ಗುಡಾರಕ್ಕೂ ಬಲಿ ಪೀಠಕ್ಕೂ ಮಧ್ಯದಲ್ಲಿ ಗಂ
೮ ಗಾಳವನ್ನಿಟ್ಟು, ಅದರಲ್ಲಿ ನೀರನ್ನು ಹೊಯಿದು, ಸುತ್ತಲಾಗಿ ಅಂ
೯ ಗಳವನ್ನು ನಿಲ್ಲಿಸಿ, ಅಂಗಳದ ಬಾಗಲಿನ ತೆಕೆಯನ್ನು ಇರಿಸಿ, ಅಭಿಷೇಕಿಸುವ ಎಣ್ಣೆಯನ್ನು ತಕ್ಕೊಂಡು, ವಾಸ ಸ್ಥಳವನ್ನು ಅದರಲ್ಲಿರುವ ಎಲ್ಲವುಗಳನ್ನೂ ಅಭಿಷೇಕಿಸಿ, ಅದನ್ನು ಅದರ ಎಲ್ಲಾ
೧೦ ಸಾಮಾನುಗಳನ್ನೂ, ಪರಿಶುದ್ಧವಾಗುವ ಹಾಗೆ, ಪರಿಶುದ್ಧ ಮಾಡಿ, ಹೋಮದ ಪೀಠವನ್ನೂ ಅದರ ಎಲ್ಲಾ ಸಾಮಾನುಗಳನ್ನೂ
೧೧ ಅಭಿಷೇಕಿಸಿ, ಬಲಿ ಪೀಠವನ್ನು, ಅದು ಮಹಾ ಪರಿಶುದ್ಧ ಬಲಿ ಪೀ
೧೨ ಠವಾಗುವ ಹಾಗೆ, ಪರಿಶುದ್ಧ ಮಾಡಿ, ಗಂಗಾಳವನ್ನೂ ಅದರ
೧೩ ಕಾಲನ್ನೂ ಅಭಿಷೇಕಿಸಿ, ಪರಿಶುದ್ಧ ಮಾಡ ಬೇಕು. ಆಕೋನನನ್ನೂ ಅವನ ಮಕ್ಕಳನ್ನೂ ಸಭೆಯ ಗುಡಾರದ ಬಾಗಲಿಗೆ ಸಮೀಪ ಬರ ಮಾಡಿ, ನೀರಿನಿಂದ ತೊಳೆಸಿ, ಆಕೋನನಿಗೆ ಪರಿಶುದ್ಧ ವ
೧೪ ಸ್ತ್ರ ತೊಡಿಸಿ, ಅವನನ್ನು ಅಭಿಷೇಕಿಸಿ, ನನಗೆ ಯಾಜಕ ಸೇವೆ ಮಾಡುವ ಹಾಗೆ ಪರಿಶುದ್ಧ ಮಾಡಿ, ಅವನ ಮಕ್ಕಳನ್ನು ಸಮೀ
೧೫ ಪ ಬರ ಮಾಡಿ, ಅವರಿಗೆ ಅಂಗಿಗಳನ್ನು ತೊಡಿಸಿ, ಅವರ ತಂದೆಯನ್ನು ಅಭಿಷೇಕಿಸಿದ ಪ್ರಕಾರ, ಅವರು ನನಗೆ ಯಾಜಕ ಸೇವೆ ಮಾಡುವ ಹಾಗೆ, ಅವರನ್ನು ಅಭಿಷೇಕಿಸ ಬೇಕು; ಅವರ ಅಭಿ
ಷೇಕವು ಅವರಿಗೆ ಅವರ ಸಂತತಿಗಳಲ್ಲಿ ನಿತ್ಯ ಯಾಜಕ ಸೇವೆ
೧೬ ಗಾಗಿರುವದು.

೧೭ ಮೋಶೆ ಹಾಗೆ ಮಾಡಿದನು; ಕರ್ತನು ತನಗೆ ಆಜ್ಞಾಪಿಸಿದ ಎ
೧೮ ಲ್ಲವುಗಳ ಪ್ರಕಾರವೇ ಮಾಡಿದನು. ಎರಡನೇ ವರುಷದ ಮೊದಲನೇ ತಿಂಗಳಿನ ಮೊದಲನೇ ದಿವಸದಲ್ಲಿ ವಾಸ ಸ್ಥಳವು ನಿಲ್ಲಿಸಲ್ಪಟ್ಟಿ
೧೯ ತು. ಮೋಶೆ ವಾಸ ಸ್ಥಳವನ್ನು ನಿಲ್ಲಿಸಿ, ಅದರ ಕಾಲುಗಳನ್ನಿಟ್ಟು, ಹಲಿಗೆಗಳನ್ನಿರಿಸಿ, ಅಗುಳಿಗಳನ್ನು ಕೊಟ್ಟು, ಸ್ತಂಭಗಳನ್ನು ನಿಲ್ಲಿ
೨೦ ಸಿ, ವಾಸ ಸ್ಥಳದ ಮೇಲೆ ಗುಡಾರವನ್ನು ಹೊದಿಸಿ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ ಗುಡಾರದ ಮುಚ್ಚಳವನ್ನು ಮೇಲಾಗಿಟ್ಟನು.

೨೧ ಸಾಕ್ಷಿಯನ್ನು ತಕ್ಕೊಂಡು, ಪೆಟ್ಟಿಗೆಯಲ್ಲಿ ಇಟ್ಟು, ಪೆಟ್ಟಿಗೆಗೆ ಕೋಲುಗಳನ್ನು ಕೊಟ್ಟು, ಪೆಟ್ಟಿಗೆಯ ಮೇಲಾಗಿ ಕೃಪಾಸನವ
೨೨ ನ್ನು ಇಟ್ಟು, ಪೆಟ್ಟಿಗೆಯನ್ನು ವಾಸ ಸ್ಥಳಕ್ಕೆ ತಂದು, ಮಕರೆ ಮಾಡುವ ತೆಕೆಯನ್ನಿರಿಸಿ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ ಸಾಕ್ಷಿಯ ಪೆಟ್ಟಿಗೆಯನ್ನು ಮುಚ್ಚಿದನು.

೨೩ ಸಭೆಯ ಗುಡಾರದಲ್ಲಿ ವಾಸ ಸ್ಥಳದ ಉತ್ತರ ಪಾರ್ಶ್ವದಲ್ಲಿ ತೆ
೨೪ ಕೆಯ ಹೊರಗೆ ಮೇಜನ್ನಿಟ್ಟು, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಅದರ ಮೇಲೆ ಕೊಟ್ಟಿಯನ್ನು ಕರ್ತನ ಸನ್ನಿಧಿಯಲ್ಲಿ ಸಿದ್ಧವಾಗಿ ಸುಟ್ಟನು.

೨೫ ಸಭೆಯ ಗುಡಾರದಲ್ಲಿ ಮೇಜಿಗೆದುರಾಗಿ ವಾಸ ಸ್ಥಳದ ದಕ್ಷಿಣ
೨೬ ಪಾರ್ಶ್ವದಲ್ಲಿ ದೀಪಸ್ತಂಭವನ್ನಿಟ್ಟು, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಕರ್ತನ ಸನ್ನಿಧಿಯಲ್ಲಿ ದೀಪಗಳನ್ನು ಹತ್ತಿಸಿದನು.

೨೭ ಚಿನ್ನದ ಪೀಠವನ್ನು ಸಭೆಯ ಗುಡಾರದಲ್ಲಿ ತೆಕೆಯ ಮುಂದೆ
೨೮ ಇಟ್ಟು, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಅದರ ಮೇಲೆ ಪರಿಮಳಗಳ ಧೂಪವನ್ನು ಇಟ್ಟನು.

೨೯ ವಾಸ ಸ್ಥಳದ ಬಾಗಲಿನ ತೆಕೆಯನ್ನು ಇಟ್ಟು, ಸಭೆಯ ಗು
೩೦ ಡಾರವೆಂಬ ವಾಸ ಸ್ಥಳದ ಹೊರಗೆ ಹೋಮದ ಪೀಠವನ್ನಿಟ್ಟು, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಅದರ ಮೇಲೆ ಹೋಮವನ್ನೂ ಅರ್ಪಣೆಯನ್ನೂ ಅರ್ಪಿಸಿದನು.

೩೧ ಸಭೆಯ ಗುಡಾರಕ್ಕೂ ಬಲಿ ಪೀಠಕ್ಕೂ ಮಧ್ಯವಾಗಿ ಗಂಗಾಳ
೩೨ ವನ್ನಿಟ್ಟು, ಅದರಲ್ಲಿ ತೊಳೆಯುವ ನೀರನ್ನು ಹೊಯಿದನು. ಮೋಶೆಯೂ, ಆಕೋನನೂ, ಅವನ ಮಕ್ಕಳೂ ಅದರಲ್ಲಿ ಕೈ ಕಾಲುಗಳನ್ನು ತೊಳೆ ಕೊಂಡರು; ಅವರು ಸಭೆಯ ಗುಡಾರದಲ್ಲಿ ಶೇರುವ ಸಮಯದಲ್ಲಿಯೂ, ಬಲಿ ಪೀಠಕ್ಕೆ ಸಮೀಪ ಬರುವ ಸಮಯದಲ್ಲಿಯೂ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ತೊಳೆ
ಕೊಂಡರು.

೩೩ ಮತ್ತು ವಾಸ ಸ್ಥಳಕ್ಕೂ ಬಲಿ ಪೀಠಕ್ಕೂ ಸುತ್ತಲಾಗಿ ಅಂಗಳವನ್ನು ನಿಲ್ಲಿಸಿ, ಅಂಗಳದ ಬಾಗಲಿನ ತೆಕೆಯನ್ನು ತೂಗ ಹಾ
ಕಿದನು. ಈ ಪ್ರಕಾರ ಮೋಶೆ ಆ ಕೆಲಸವನ್ನು ಶೀರಿಸಿದನು.

೩೪ ಆಗ ಮೇಘವು ಸಭೆಯ ಗುಡಾರವನ್ನು ಮುಚ್ಚಿತು; ಕರ್ತನ
೩೫ ಘನವು ವಾಸ ಸ್ಥಳವನ್ನು ತುಂಬಿತು. ಮೋಶೆ ಸಭೆಯ ಗುಡಾರದಲ್ಲಿ ಅದರ ಮೇಲೆ ಮೇಘವು ನೆಲೆಯಾಗಿದ್ದದರಿಂದಲೂ, ಕರ್ತನ
ಘನವು ವಾಸ ಸ್ಥಳವನ್ನು ತುಂಬಿಸಿದ್ದರಿಂದಲೂ, ಪ್ರವೇಶಿಸಲಾರದೆ
೩೬ ಇದ್ದನು. ಮೇಘವು ವಾಸ ಸ್ಥಳವನ್ನು ಬಿಟ್ಟು ಎತ್ತಲ್ಪಟ್ಟಾಗ, ಇಸ್ರಯೇಲ್ ಮಕ್ಕಳು ತಮ್ಮ ಎಲ್ಲಾ ಪ್ರಯಾಣಗಳಿಗೆ ಹೊರಡು
೩೭ ತ್ತಿದ್ದರು. ಆದರೆ ಮೇಘವು ಎತ್ತಲ್ಪತಕೆ ಇರುವಾಗ, ಅದು ಎತ್ತ
೩೮ ಲ್ಪಡುವ ದಿವಸದ ಪರ್ಯಂತರ ಹೊರಡಲಿಲ್ಲ. ಯಾಕಂದರೆ, ಇಸ್ರಯೇಲ್ ಮನೆಯವರೆಲ್ಲರ ಕಣ್ಣುಗಳ ಮುಂದೆ, ಅವರ ಎಲ್ಲಾ ಪ್ರಯಾಣಗಳಲ್ಲಿ ಹಗಲು ಹೊತ್ತು ಕರ್ತನ ಮೇಘವು ವಾಸ ಸ್ಥಳದ ಮೇಲಿತ್ತು; ರಾತ್ರಿ ಹೊತ್ತು; ಬೆಂಕಿ ಅದರ ಮೇಲೆ ಇತ್ತು.

# LEVITICUS.

## ಲೇವಿಕವು.

### ೧. ಸಂಧಿ.

೧ ೧ ಮತ್ತು ಕರ್ತನು ಮೋಶೆಯನ್ನು ಕರೆದು, ಸಭೆಯ ಗುಡಾ
ರದೊಳಗಿಂದ ಅವನ ಸಂಗಡ ಮಾತಾಡಿ ಹೇಳಿದ್ದೇನಂದರೆ—ನೀ
ನು ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ ಹೇಳ
ಬೇಕಾದದ್ದೇನಂದರೆ—ನಿಮ್ಮಲ್ಲಿ ಒಬ್ಬ ಮನುಷ್ಯನು ಕರ್ತನಿ
ಗೆ ಅರ್ಪಣೆಯನ್ನು ತಂದರೆ, ಪಶುಗಳಲ್ಲಿಯೂ, ದನಗಳಲ್ಲಿ
ಯೂ, ಆಡುಗಳಲ್ಲಿಯೂ, ನಿಮ್ಮ ಅರ್ಪಣೆಯನ್ನು ತಕ್ಕೊಂ
ಡು ಅರ್ಪಿಸ ಬೇಕು.
೩ ಅವನ ಅರ್ಪಣೆ ದನಗಳಲ್ಲಿ ಒಂದು ಹೋಮವಾಗಿದ್ದರೆ,
ಅವನು ಕರ್ತನ ಸನ್ನಿಧಿಯಲ್ಲಿ ತನಗೆ ಮೆಚ್ಚಿಗೆ ಉಂಟಾಗುವ
ಹಾಗೆ, ಗಂಡಾದದ್ದನ್ನು ಪೂರ್ಣಾಂಗವಾಗಿ ತರಲಿ. ಸಭೆಯ ಗು
೪ ಡಾರದ ಬಾಗಲ ಬಳಿಯಲ್ಲಿ ತಂದು, ಹೋಮದ ತಲೆಯ ಮೇಲೆ
ಕೈ ಇಡ ಬೇಕು. ಅದು ಅವನಿಗೋಸ್ಕರ ಪಾಪ ಮುಚ್ಚುವದ
೫ ಕ್ಕೆ ಅಂಗೀಕಾರವಾಗುವದು. ಆ ಎತ್ತನ್ನು ಕರ್ತನ ಮುಂದೆ ಕೊ
ಯಿದ ಮೇಲೆ, ಆರೋನನ ಮಕ್ಕಳಾದ ಯಾಜಕರು ರಕ್ತವ
ನ್ನು ತಂದು, ಆ ರಕ್ತವನ್ನು ಸಭೆಯ ಗುಡಾರದ ಹೊರಗಿರುವ
೬ ಬಲಿಪೀಠದ ಸುತ್ತಲಾಗಿ ಚಿಮಿಕಿಸ ಬೇಕು. ಮತ್ತು ಆ ಹೋಮ
ದ ತೊಗಲನ್ನು ಸುಲಿದು, ಅದನ್ನು ತಕ್ಕ ತುಂಡುಗಳಾಗ ಮಾ
೭ ಡಿದ ಮೇಲೆ, ಯಾಜಕನಾದ ಆರೋನನ ಮಕ್ಕಳು ಬಲಿಪೀಠದ
೮ ಮೇಲೆ ಬೆಂಕಿ ಇಟ್ಟು, ಬೆಂಕಿಗೆ ಕಟ್ಟಿಗೆ ಇಟ್ಟು, ಆರೋನನ ಮ
ಕ್ಕಳಾದ ಯಾಜಕರು ಆ ತುಂಡುಗಳನ್ನೂ, ತಲೆಯನ್ನೂ,
ಕೊಬ್ಬನ್ನೂ, ಬಲಿಪೀಠದ ಮೇಲಿರುವ ಬೆಂಕಿಯಲ್ಲಿ ಇರುವ ಕ
೯ ಟ್ಟಿಗೆಯ ಮೇಲೆ ಇಡ ಬೇಕು. ಅದರ ಕರುಳುಗಳನ್ನೂ ಕಾಲು
ಗಳನ್ನೂ ನೀರಲ್ಲಿ ತೊಳೆದ ಮೇಲೆ, ಯಾಜಕನು ಸಮಸ್ತವನ್ನು
ಬಲಿಪೀಠದಲ್ಲಿ, ಕರ್ತನಿಗೆ ಸುವಾಸನೆಯ ದಹನವಾದ ಹೋಮ
ವಾಗಿ ಸುಡ ಬೇಕು.
೧೦ ಅವನ ಅರ್ಪಣೆ, ಕುರಿಗಳಲ್ಲಾಗಲಿ ಮೇಕೆಗಳಲ್ಲಾಗಲಿ, ಆಡು
ಜಾತಿಯ ಹೋಮವಾಗಿದ್ದರೆ, ಪೂರ್ಣಾಂಗವಾದ ಗಂಡಾದದ್ದ
೧೧ ನ್ನು ತಂದು ಬಲಿಪೀಠದ ಉತ್ತರ ಪಾರ್ಶ್ವದಲ್ಲಿ ಕರ್ತನ ಸ
ನ್ನಿಧಿಯಲ್ಲಿ ಕೊಯ್ಯ ಬೇಕು; ಆರೋನನ ಮಕ್ಕಳಾದ ಯಾ
ಜಕರು ಅದರ ರಕ್ತವನ್ನು ಬಲಿಪೀಠದಲ್ಲಿ ಸುತ್ತಲಾಗಿ ಚಿಮಿಕಿಸ
೧೨ ಬೇಕು. ಮತ್ತು ಅದನ್ನು ತಕ್ಕ ತುಂಡುಗಳಾಗಿ ಮಾಡಿದ ಮೇ
ಲೆ, ಯಾಜಕನು ಅವುಗಳನ್ನೂ, ಅದರ ತಲೆಯನ್ನೂ, ಕೊಬ್ಬ
ನ್ನೂ, ಬಲಿಪೀಠದ ಮೇಲಿರುವ ಬೆಂಕಿಯಲ್ಲಿರುವ ಕಟ್ಟಿಗೆಯ ಮೇ
೧೩ ಲೆ ಇಡ ಬೇಕು. ಕರುಳುಗಳನ್ನೂ, ಕಾಲುಗಳನ್ನೂ, ನೀರಿನಲ್ಲಿ
ತೊಳೆದ ಮೇಲೆ ಯಾಜಕನು ಸಮಸ್ತವನ್ನು ತಂದು, ಬಲಿಪೀಠ
ದಲ್ಲಿ ಸುಡ ಬೇಕು; ಅದು ಕರ್ತನಿಗೆ ಸುವಾಸನೆಯ ದಹನವಾದ
ಹೋಮವು.
೧೪ ಮತ್ತು ಅವನು ಕರ್ತನಿಗೆ ಅರ್ಪಿಸುವಂಥಾದ್ದು ಪಕ್ಷಿ ಜಾತಿ
ಯಲ್ಲಿ ಒಂದು ಹೋಮವಾಗಿದ್ದರೆ, ಅವನು ಬೆಳವಗಳಲ್ಲಿ ಆಗಲಿ
ಪಾರಿವಾಳಗಳಲ್ಲಿ ಆಗಲಿ, ತನ್ನ ಅರ್ಪಣೆಯನ್ನು ತರಲಿ.
೧೫ ಯಾಜಕನು ಅದನ್ನು ಬಲಿಪೀಠಕ್ಕೆ ತಂದು, ಅದರ ತಲೆಯನ್ನು
ನುಲಿದು ಬಿಟ್ಟು, ಅದನ್ನು ಬಲಿಪೀಠದಲ್ಲಿ ಸುಡಲಿ; ಅದರ ರಕ್ತವು
೧೬ ಬಲಿಪೀಠದ ಗೋಡೆಯಲ್ಲಿ ಹಿಂಡಲ್ಪಡಲಿ. ಅದರ ಆಹಾರ ಜೀ
ಲವನ್ನೂ ಗರಿಗಳನ್ನೂ ಬೇರೆ ಮಾಡಿ, ಬಲಿಪೀಠದ ಹತ್ತರ ಪೂ
೧೭ ರ್ವ ದಿಕ್ಕಿನಲ್ಲಿ ಬೂದಿಯ ಸ್ಥಳದಲ್ಲಿ ಹಾಕಿ, ಅದರ ರೆಕ್ಕೆಗಳ
ನ್ನು ಹರಿದು, ಭಾಗ ಮಾಡದೆ, ಯಾಜಕನು ಅದನ್ನು ಬಲಿಪೀಠ
ದಲ್ಲಿ ಬೆಂಕಿಯಲ್ಲಿ ಇರುವ ಕಟ್ಟಿಗೆಗಳ ಮೇಲೆ ಸುಡ ಬೇಕು; ಅದು
ಕರ್ತನಿಗೆ ಸುವಾಸನೆಯ ದಹನವಾದ ಹೋಮವು.

### ೨. ಸಂಧಿ.

೧ ೧ ಮತ್ತು ಯಾರಾದರೂ ಕರ್ತನಿಗೆ ಕಾಣಿಕೆಯಾದ ಅರ್ಪಣೆ
ಯನ್ನು ತರ ಮನಸ್ಸಾಗಿದ್ದರೆ, ಅವನ ಅರ್ಪಣೆಯು ನಯವಾ
ದ ಹಿಟ್ಟಾಗಿರಲಿ; ಅದರ ಮೇಲೆ ಎಣ್ಣೆಯನ್ನು ಹೊಯಿದು, ಅ
ದಕ್ಕೆ ಸಾಂಬ್ರಾಣಿಯನ್ನಿಟ್ಟು, ಆರೋನನ ಮಕ್ಕಳಾದ ಯಾ
೨ ಜಕರಿಗೆ ತರಲಿ; ಯಾಜಕನು ನಯವಾದ ಹಿಟ್ಟಿನಲ್ಲಿಯೂ, ಎಣ್ಣೆ
ಯಲ್ಲಿಯೂ, ಬಂದು ಹಿಡಿ, ಅದರ ಎಲ್ಲಾ ಸಾಂಬ್ರಾಣಿಯ ಸಂಗಡ
ತೆಗೆದು, ಅದನ್ನು ಜ್ಞಾಪಕಕ್ಕೋಸ್ಕರ ಬಲಿಪೀಠದ ಮೇಲೆ ಕ
೩ ರ್ತನಿಗೆ ಸುವಾಸನೆಯಾದ ದಹನವಾಗಿ ಸುಡ ಬೇಕು. ಕಾಣಿಕೆಯ
ಲ್ಲಿ ಮಿಕ್ಕದ್ದು ಆರೋನನಿಗೂ ಅವನ ಮಕ್ಕಳಿಗೂ ಆಗ ಬೇಕು;
ಅದು ಕರ್ತನ ದಹನ ಬಲಿಗಳಲ್ಲಿ ಅತಿ ಪರಿಶುದ್ಧವಾದದ್ದು.
೪ ಮತ್ತು ಒಲೆಯಲ್ಲಿ ಸುಟ್ಟದ್ದನ್ನು ಕಾಣಿಕೆಯಾದ ಅರ್ಪಣೆ
ಯಾಗಿ ತಂದರೆ, ಎಣ್ಣೆ ಹೊಯಿದ ನಯವಾದ ಹಿಟ್ಟಿನ ಹುಳಿ
ಇಲ್ಲದ ಹೋಳಿಗೆಗಳಾಗಲಿ, ಎಣ್ಣೆ ಹಾಕಿದ ಹುಳಿ ಇಲ್ಲದ ಕರು
ಬುಗಳಾಗಲಿ, ಇರ ಬೇಕು.
೫ ಮತ್ತು ನಿನ್ನ ಅರ್ಪಣೆ ಬಾಂಡ್ಲೆಗೆ ಮೇಲಿನ ಕಾಣಿಕೆಯಾ
ಗಿದ್ದರೆ, ಅದು ಎಣ್ಣೆ ಹೊಯಿದ ಹುಳಿ ಇಲ್ಲದ ನಯವಾದ ಹಿ
೬ ಟ್ಟಾಗಿರಲಿ. ಅದನ್ನು ಮುರುಕುಗಳಾಗಿ ಮುರಿದು, ಅದರ ಮೇಲೆ
ಎಣ್ಣೆ ಹೊಯ್ಯ ಬೇಕು; ಆಗ ಕಾಣಿಕೆಯಾಗಿರುವದು.
೭ ಮತ್ತು ನಿನ್ನ ಅರ್ಪಣೆಯು ಹುರಿ ಹಂಚಿನ ಕಾಣಿಕೆಯಾ
ಗಿದ್ದರೆ, ನಯವಾದ ಹಿಟ್ಟಿನಿಂದ ಎಣ್ಣೆಯಲ್ಲಿ ಅದನ್ನು ಮಾಡ
೮ ಬೇಕು. ಮತ್ತು ಇವುಗಳಿಂದ ಮಾಡಿದ ಕಾಣಿಕೆಯನ್ನು ಕರ್ತನಿ
ಗೆ ತಂದು, ಯಾಜಕನಿಗೆ ತಂದು ಕೊಡ ಬೇಕು; ಅವನು ಅದನ್ನು
ಬಲಿಪೀಠದ ಮೇಲೆ ತರಬೇಕು. ಯಾಜಕನು ಕಾಣಿಕೆಯಿಂದ
೯ ಜ್ಞಾಪಕಾರ್ಥವಾದ ಭಾಗವನ್ನು ಎತ್ತಿ, ಕರ್ತನಿಗೆ ಸುವಾಸನೆಯ
ದಹನ ಬಲಿಗೋಸ್ಕರ ಬಲಿಪೀಠದಲ್ಲಿ ಸುಡ ಬೇಕು. ಕಾಣಿಕೆ
೧೦ ಯಲ್ಲಿ ಮಿಕ್ಕದ್ದು ಆರೋನನಿಗೂ ಅವನ ಮಕ್ಕಳಿಗೂ ಆಗ ಬೇ
ಕು; ಅದು ಕರ್ತನ ದಹನ ಬಲಿಗಳಲ್ಲಿ ಅತಿ ಪರಿಶುದ್ಧವಾದದ್ದು.
೧೧ ನೀವು ಕರ್ತನಿಗೆ ಅರ್ಪಿಸುವ ಕಾಣಿಕೆಗಳಲ್ಲಿ ಯಾವದನ್ನಾ
ದರೂ ಹುಳಿ ಹಿಟ್ಟಿನಿಂದ ಮಾಡ ಬೇಡಿರಿ; ಯಾಕಂದರೆ ಹುಳಿ
ಹಿಟ್ಟನ್ನೂ ಜೇನನ್ನೂ ಹ್ಯಾಗಾದರೂ ಕರ್ತನಿಗೆ ದಹನವಾಗಿ
ಸುಡ ಕೂಡದು.

24017



೧೨ ಪ್ರಥಮ ಫಲಗಳನ್ನು ಅರ್ಪಣೆಯಾಗಿ ಕರ್ತನಿಗೆ ಅ
ರ್ಪಿಸ ಬಹುದು, ಆದರೆ ಸುವಾಸನೆಗೋಸ್ಕರ ಬಲಿಪೀಠದ ಮೇ
ಲೆ ಸುಡಲ್ಪಡ ಬಾರದು.
೧೩ ಮತ್ತು ಕಾಣಿಕೆಯಾಗಿರುವ ನಿನ್ನ ಅರ್ಪಣೆಗಳನ್ನೆಲ್ಲಾ ಉ
ಪ್ಪು ಹಾಕಿ ಮಾಡ ಬೇಕು; ನಿನ್ನ ದೇವರ ಒಡಂಬಡಿಕೆಯ ಉಪ್ಪ
ನ್ನು ನಿನ್ನ ಕಾಣಿಕೆಯಲ್ಲಿ ಹಿಂದೆಗೆಯ ಬೇಡ; ನಿನ್ನ ಎಲ್ಲಾ ಅ
ರ್ಪಣೆಗಳ ಮೇಲೆ ಉಪ್ಪನ್ನು ಅರ್ಪಿಸ ಬೇಕು.
೧೪ ಮತ್ತು ಕರ್ತನಿಗೆ ಪ್ರಥಮ ಫಲಗಳ ಕಾಣಿಕೆಯನ್ನು ಅರ್ಪಿ
ಸಿದರೆ, ಬೆಂಕಿಯಲ್ಲಿ ಸುಟ್ಟ ತೆನೆಗಳಿಂದಲೂ, ತುಂಬಾದ ತೆನೆಯಿಂದ
ಹೊಡೆದ ಕಾಳುಗಳಿಂದಲೂ ನಿನ್ನ ಪ್ರಥಮ ಫಲದ ಕಾಣಿಕೆಯನ್ನು
ಅರ್ಪಿಸ ಬೇಕು.
೧೫ ಅದರ ಸಂಗಡ ಎಣ್ಣೆಯನ್ನು ಕೊಟ್ಟು, ಅದರ ಸಂಗಡ ಸಾಂ
ಬ್ರಾಣಿಯನ್ನು ಇಡ ಬೇಕು; ಅದೇ ಕಾಣಿಕೆ.
೧೬ ಆ ಮೇಲೆ ಯಾಜಕನು ಕಾಳುಗಳಲ್ಲಿಯೂ ಎಣ್ಣೆಯಲ್ಲಿಯೂ
ಅದರ ಜ್ಞಾಪಕಾರ್ಥವಾದ ಭಾಗವನ್ನು ಎಲ್ಲಾ ಸಾಂಬ್ರಾಣಿಯ
ಸಂಗಡ ಕರ್ತನಿಗೆ ದಹನವಾಗಿ ಸುಡ ಬೇಕು.

### ೩. ಸಂಧಿ.

೧ ೧ ಮತ್ತು ಅವನ ಅರ್ಪಣೆ ಸಮಾಧಾನ ಬಲಿಯಾಗಿದ್ದರೆ, ಅ
ವನು ದನಗಳಿಂದ ಅರ್ಪಿಸಿದರೆ; ಪೂರ್ಣಾಂಗವಾದ ಗಂಡನ್ನಾ
ಗಲಿ, ಹೆಣ್ಣನ್ನಾಗಲಿ, ಕರ್ತನ ಸನ್ನಿಧಿಯಲ್ಲಿ ಅರ್ಪಿಸಲಿ. ಮತ್ತು
೨ ತನ್ನ ಅರ್ಪಣೆಯ ತಲೆಯ ಮೇಲೆ ಕೈ ಇಟ್ಟು, ಅದನ್ನು ಸ
ಭೆಯ ಗುಡಾರದ ಬಾಗಲಲ್ಲಿ ಕೊಯ್ಯ ಬೇಕು; ಆರೋನನ ಮ
ಕ್ಕಳಾದ ಯಾಜಕರು ಆ ರಕ್ತವನ್ನು ಸುತ್ತಲಾಗಿ ಬಲಿಪೀಠದ
೩ ಮೇಲೆ ಚಿಮಿಕಿಸ ಬೇಕು. ಮತ್ತು ಅವನು ಸಮಾಧಾನದ ಬಲಿಯ
ಲ್ಲಿ ಕರುಳುಗಳನ್ನು ಮುಚ್ಚುವ ಕೊಬ್ಬನ್ನೂ, ಕರುಳುಗಳಲ್ಲಿರು
೪ ವ ಎಲ್ಲಾ ಕೊಬ್ಬನ್ನೂ, ಎರಡು ಹುರುಳಿ ಕಾಯಿಗಳನ್ನೂ, ಅವು
ಗಳ ಮೇಲೆಯೂ, ಸೊಂಟಗಳ ಮೇಲೆಯೂ, ಇರುವ ಕೊಬ್ಬ
ನ್ನೂ, ಹುರುಳಿಕಾಯಿಗಳ ಮೇಲೆ, ಕಲಿಜೆಯ ಮೇಲೆ ಇರುವ ಪೊ
ಕೆಯನ್ನೂ ತೆಗೆದು, ಕರ್ತನಿಗೆ ದಹನವಾಗಿ ಅರ್ಪಿಸ ಬೇಕು.
೫ ಆರೋನನ ಮಕ್ಕಳು ಅದನ್ನು ಬಲಿಪೀಠದ ಮೇಲೆ, ಬೆಂಕಿಯ
ಲ್ಲಿ ಇರುವ ಕಟ್ಟಿಗೆಗಳ ಮೇಲಿನ ಹೋಮದಲ್ಲಿ, ಕರ್ತನಿಗೆ ಸು
ವಾಸನೆಯಾದ ದಹನವಾಗಿ ಸುಡ ಬೇಕು.
೬ ಮತ್ತು ಕರ್ತನಿಗೆ ಸಮಾಧಾನದ ಬಲಿಗೋಸ್ಕರವಾದ ಅವ
ನ ಅರ್ಪಣೆಯು ಆಡು ಜಾತಿಯದಾದರೆ, ಅವನು ಪೂರ್ಣಾಂ
೭ ಗವಾದ ಗಂಡನ್ನಾಗಲಿ ಹೆಣ್ಣನ್ನಾಗಲಿ ಅರ್ಪಿಸಲಿ. ಅವನು ಅ
ರ್ಪಣೆಗೋಸ್ಕರ ಕುರಿಯನ್ನು ಅರ್ಪಿಸಿದರೆ, ಅದನ್ನು ಕರ್ತ
೮ ನ ಸನ್ನಿಧಿಗೆ ತಂದು. ತನ್ನ ಅರ್ಪಣೆಯ ತಲೆಯ ಮೇಲೆ ಕೈ
ಇಟ್ಟು, ಅದನ್ನು ಸಭೆಯ ಗುಡಾರದ ಮುಂದೆ ಕೊಯ್ಯಲಿ; ಆ
ರೋನನ ಮಕ್ಕಳು ಅದರ ರಕ್ತವನ್ನು ಬಲಿಪೀಠಕ್ಕೆ ಸುತ್ತಲಾ
೯ ಗಿ ಚಿಮಿಕಿಸಲಿ. ಮತ್ತು ಸಮಾಧಾನದ ಬಲಿಯಲ್ಲಿ ಅದರ ಕೊ
ಬ್ಬನ್ನೂ, ಬೆನ್ನು ಎಲುಬಿನಿಂದ ಸಮಸ್ತ ಬಾಲವನ್ನೂ, ಕರುಳುಗ
ಳನ್ನು ಮುಚ್ಚುವ ಕೊಬ್ಬನ್ನೂ, ಕರುಳುಗಳ ಮೇಲಿರುವ ಎ
೧೦ ಲ್ಲಾ ಕೊಬ್ಬನ್ನೂ, ಎರಡು ಹುರುಳಿಕಾಯಿಗಳನ್ನೂ, ಅವು
ಗಳ ಮೇಲೆಯೂ ಸೊಂಟಗಳ ಮೇಲೆಯೂ ಇರುವ ಕೊಬ್ಬ
ನ್ನೂ, ಹುರುಳಿಕಾಯಿಗಳ ಮೇಲೆ ಕಲಿಜೆಯ ಮೇಲೆ ಇರುವ ಪೊ
ಕೆಯನ್ನೂ ತೆಗೆದು, ಕರ್ತನಿಗೆ ದಹನವಾಗಿ ಅರ್ಪಿಸ ಬೇಕು.
೧೧ ಯಾಜಕನು ಅದನ್ನು ಬಲಿಪೀಠದಲ್ಲಿ ಸುಡ ಬೇಕು; ಅದು ಕ
ರ್ತನಿಗೆ ದಹನವಾದ ಆಹಾರವು.
೧೨ ಅವನ ಅರ್ಪಣೆ ಮೇಕೆಯಾಗಿದ್ದರೆ, ಅದನ್ನು ಕರ್ತನ ಸ
ನ್ನಿಧಿಯಲ್ಲಿ ತಂದು, ಅದರ ತಲೆಯ ಮೇಲೆ ಕೈ ಇಟ್ಟು, ಸಭೆ
೧೩ ಯ ಗುಡಾರದ ಮುಂದೆ ಕೊಯ್ಯಲಿ; ಆರೋನನ ಮಕ್ಕಳು ಅ
ದರ ರಕ್ತವನ್ನು ಬಲಿ ಪೀಠಕ್ಕೆ ಸುತ್ತಲಾಗಿ ಚೆಲ್ಲಲಿ. ಮತ್ತು ಅ
ದರಲ್ಲಿ ತನ್ನ ಅರ್ಪಣೆಯಾಗಿ ಕರುಳುಗಳನ್ನು ಮುಚ್ಚುವ ಕೊ
೧೪ ಬ್ಬನ್ನೂ, ಕರುಳುಗಳ ಮೇಲಿರುವ ಎಲ್ಲಾ ಕೊಬ್ಬನ್ನೂ, ಎರ
ಡು ಹುರುಳಿಕಾಯಿಗಳನ್ನೂ, ಅವುಗಳ ಮೇಲೆಯೂ, ಸೊಂಟ
ಗಳ ಮೇಲೆಯೂ ಇರುವ ಕೊಬ್ಬನ್ನೂ, ಹುರುಳಿಕಾಯಿಗಳ
ಮೇಲೆ ಕಲಿಜೆಯ ಮೇಲೆ ಇರುವ ಪೊಕೆಯನ್ನೂ ತೆಗೆದು, ಕ
೧೫ ರ್ತನಿಗೆ ದಹನವಾಗಿ ಅರ್ಪಿಸ ಬೇಕು. ಯಾಜಕನು ಅವುಗಳ
ನ್ನು ಬಲಿ ಪೀಠದ ಮೇಲೆ ಸುವಾಸನೆಯ ಸುಡುವಿಕೆಯ ಆಹಾರ
೧೬ ವಾಗಿ ಸುಡ ಬೇಕು. ಕೊಬ್ಬೆಲ್ಲಾ ಕರ್ತನದೇ. ಇದೇ ನಿಮ್ಮ
ಸಂತತಿಗಳಿಗೆ ನಿಮ್ಮ ಎಲ್ಲಾ ನಿವಾಸಗಳಲ್ಲಿ ನಿತ್ಯವಾದ ಕಟ್ಟಳೆ—
ಯಾವ ಕೊಬ್ಬನ್ನೂ, ಯಾವ ರಕ್ತವನ್ನೂ ಉಣ್ಣ ಬೇಡಿರಿ.

### ೪. ಸಂಧಿ.

೧ ೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳಿದ್ದೇ
ನಂದರೆ—ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ ಹೀಗೆ ಹೇ
ಳು—ಮಾಡ ಬಾರದೆಂಬುವ ಕರ್ತನ ಎಲ್ಲಾ ಆಜ್ಞೆಗಳಿಗೆ ವಿರೋ
ಧವಾಗಿ ಯಾವನಾದರೂ ತಪ್ಪಾ ಪಾಪ ಮಾಡಿ, ಅಂಥವುಗಳ
೩ ಲ್ಲಿ ಏನಾದರೂ ಮಾಡಿ ಇದ್ದರೆ, ಅಭಿಷೇಕಿಸಿದ ಯಾಜಕನು,
ಜನರ ಅಪರಾಧದ ಪ್ರಕಾರ ಪಾಪ ಮಾಡಿದ ಪಕ್ಷದಲ್ಲಿ, ಅವನು
ಮಾಡಿದ ಪಾಪಕ್ಕೋಸ್ಕರ ಪೂರ್ಣಾಂಗವಾದ ಗಂಡು ಕರುವ
೪ ನ್ನು ಕರ್ತನಿಗೆ ಪಾಪ ಬಲಿಯಾಗಿ ತಂದು, ಆ ಹೋರಿಯ
ನ್ನು ಕರ್ತನ ಸನ್ನಿಧಿಗೆ ಸಭೆಯ ಗುಡಾರದ ಬಾಗಲಿಗೆ ತಂದು,
ಹೋರಿಯ ತಲೆಯ ಮೇಲೆ ಕೈಯನ್ನಿಟ್ಟು, ಹೋರಿಯನ್ನು ಕ
೫ ರ್ತನ ಸನ್ನಿಧಿಯಲ್ಲಿ ಕೊಯ್ಯ ಬೇಕು. ಆ ಮೇಲೆ ಅಭಿಷೇಕಿ
ಸಿದ ಯಾಜಕನು ಹೋರಿಯ ರಕ್ತದಲ್ಲಿ ಸ್ವಲ್ಪ ತಕ್ಕೊಂಡು,
೬ ಅದನ್ನು ಸಭೆಯ ಗುಡಾರಕ್ಕೆ ತರಲಿ. ಮತ್ತು ಯಾಜಕನು ಬೆ
ರಳನ್ನು ರಕ್ತದಲ್ಲಿ ಅದ್ದಿ, ಆ ರಕ್ತವನ್ನು ಏಳು ಸಾರಿ ಕರ್ತನ
೭ ಮುಂದೆ, ಪರಿಶುದ್ಧ ತೆರೆಯ ಮುಂದೆ, ಚಿಮಿಕಿಸಲಿ. ಮತ್ತು ಯಾ
ಜಕನು ಸಭೆಯ ಗುಡಾರದಲ್ಲಿ, ಕರ್ತನ ಸನ್ನಿಧಿಯಲ್ಲಿ, ಇರುವ
ಪರಿಮಳ ಧೂಪ ಪೀಠದ ಕೊಂಬುಗಳಿಗೆ ಆ ರಕ್ತವನ್ನು ಹಚ್ಚಿ,
ಹೋರಿಯ ರಕ್ತವನ್ನೆಲ್ಲಾ ಸಭೆಯ ಗುಡಾರದ ಹೊರಗಿರುವ
೮ ದಹನ ಬಲಿ ಪೀಠದ ಅಡಿಯಲ್ಲಿ ಹೊಯ್ಯ ಬೇಕು. ಮತ್ತು ಪಾ
ಪ ಬಲಿಗೋಸ್ಕರವಾದ ಹೋರಿಯ ಎಲ್ಲಾ ಕೊಬ್ಬನ್ನೂ, ಕ
ರುಳುಗಳನ್ನು ಮುಚ್ಚುವ ಎಲ್ಲಾ ಕೊಬ್ಬನ್ನೂ, ಕರುಳುಗಳ
೯ ಮೇಲಿರುವ ಎಲ್ಲಾ ಕೊಬ್ಬನ್ನೂ, ಎರಡು ಹುರುಳಿಕಾಯಿಗಳ
ನ್ನೂ, ಅವುಗಳ ಮೇಲೆಯೂ ಸೊಂಟಗಳ ಮೇಲೆಯೂ ಇರು
ವ ಕೊಬ್ಬನ್ನೂ, ಹುರುಳಿಕಾಯಿಗಳ ಮೇಲೆ ಕಲಿಜೆಯ ಮೇ
೧೦ ಲೆ ಇರುವ ಪೊಕೆಯನ್ನೂ, ಸಮಾಧಾನದ ಬಲಿಗಳ ಎತ್ತಿನಿಂದ

ತೆಗೆಯುವ ಪ್ರಕಾರ, ಇದರಿಂದಲೂ ತೆಗೆದು ಎತ್ತ ಬೇಕು; ಯಾ
೧೧ ಜಕನು ಅವುಗಳನ್ನು ಬಲಿ ಪೀಠದಲ್ಲಿ ಸುಡ ಬೇಕು. ಮತ್ತು
ಹೋರಿಯ ತೊಗಲನ್ನೂ, ಅದರ ಎಲ್ಲಾ ಮಾಂಸವನ್ನೂ, ಅ
ದರ ತಲೆಯನ್ನೂ, ಕಾಲುಗಳನ್ನೂ, ಅದರ ಕರುಳುಗಳನ್ನೂ,
೧೨ ಸಗಣಿಯನ್ನೂ, ಹೋರಿಯನ್ನೆಲ್ಲಾ ದಂಡಿನ ಹೊರಗೆ ಶುದ್ಧ
ವಾದ ಸ್ಥಳಕ್ಕೆ, ಬೂದಿ ಹಾಕುವಲ್ಲಿಗೆ ತಕ್ಕೊಂಡು ಹೋಗಿ, ಕ
ಟ್ಟಿಗೆಯ ಮೇಲೆ ಬೆಂಕಿಯಲ್ಲಿ ಸುಡ ಬೇಕು; ಬೂದಿ ಹಾಕುವಲ್ಲಿ
ಯೇ ಸುಡ ಬೇಕು.

೧೩ ಮತ್ತು ಕೂಟಕ್ಕೆ ತಿಳಿಯದೆ ಇಸ್ರಯೇಲಿನ ಸಭೆಯೆಲ್ಲಾ ತ
ಪ್ಪಿ, ಮಾಡ ಬಾರದೆಂಬುವ ಕರ್ತನ ಯಾವ ಯಾವ ಆಜ್ಞೆಗಳಿ
೧೪ ಗೆ ವಿರೋಧವಾಗಿ ಏನಾದರೂ ಮಾಡಿ ಅಪರಾಧಸ್ಥರಾದರೆ, ಅವ
ರು ಮಾಡಿದ ಪಾಪವು ತಿಳಿಯ ಬಂದ ಪಕ್ಷದಲ್ಲಿ, ಸಭೆಯು ಪಾಪ
ಬಲಿಗೋಸ್ಕರ ಗಂಡು ಕರುವನ್ನು ಅರ್ಪಿಸಿ, ಅದನ್ನು ಸಭೆಯ
೧೫ ಗುಡಾರದ ಮುಂದೆ ತರಲಿ. ಸಭೆಯ ಹಿರಿಯರು ಕರ್ತನ ಸನ್ನಿಧಿ
ಯಲ್ಲಿ ತಮ್ಮು ಕೈಗಳನ್ನು ಆ ಹೋರಿಯ ತಲೆಯ ಮೇಲೆ, ಇಟ್ಟಾ
ಗ ಆ ಹೋರಿಯನ್ನು ಕರ್ತನ ಸನ್ನಿಧಿಯಲ್ಲಿ ಕೊಯ್ಯ ಬೇಕು.
೧೬ ಆಗ ಅಭಿಷೇಕಿಸಿದ ಯಾಜಕನು ಹೋರಿಯ ರಕ್ತದಲ್ಲಿ ಸ್ವಲ್ಪ
೧೭ ಸಭೆಯ ಗುಡಾರಕ್ಕೆ ತರ ಬೇಕು. ಮತ್ತು ಯಾಜಕನು ಬೆರಳ
ನ್ನು ರಕ್ತದಲ್ಲಿ ಅದ್ದಿ, ಏಳು ಸಾರಿ ಕರ್ತನ ಮುಂದೆ ತೆಗೆಯ
೧೮ ಮುಂದೆ ಚೆಲ್ಲಿಕಿಸಿ, ಸಭೆಯ ಗುಡಾರದಲ್ಲಿ, ಕರ್ತನ ಸನ್ನಿಧಿ
ಯಲ್ಲಿ, ಇರುವ ಧೂಪ ಪೀಠದ ಕೊಂಬುಗಳಿಗೆ ಆ ರಕ್ತವನ್ನು
೧೯ ಹಚ್ಚಿ, ರಕ್ತವನ್ನೆಲ್ಲಾ ಸಭೆಯ ಗುಡಾರದ ಹೊರಗಿರುವ ಹೋ
ಮ ಪೀಠದ ಅಡಿಗೆ ಹೊಯಿದು, ಅದರ ಕೊಬ್ಬನ್ನೆಲ್ಲಾ ಅದ
೨೦ ರಿಂದ ಎತ್ತಿ, ಬಲಿ ಪೀಠದಲ್ಲಿ ಸುಟ್ಟು, ಪಾಪ ಬಲಿಯ ಹೋರಿ
ಯ ವಿಷಯದಲ್ಲಿ ಮಾಡುವ ಪ್ರಕಾರವೇ ಈ ಹೋರಿಯ ವಿಷ
ಯದಲ್ಲಿ ಮಾಡ ಬೇಕು; ಈ ಪ್ರಕಾರ ಯಾಜಕನು ಅವರಿಗೋ
ಸ್ಕರ ಪಾಪ ಮುಚ್ಚ ಬೇಕು; ಆಗ ಅವರಿಗೆ ಮನ್ನಿಸಲ್ಪಡುವ
೨೧ ರು. ಆ ಮೇಲೆ ಆ ಹೋರಿಯನ್ನು ದಂಡಿನ ಹೊರಗೆ ತಕ್ಕೊಂ
ಡು ಹೋಗಿ, ಆ ಮೊದಲನೇ ಹೋರಿಯನ್ನು ಸುಟ್ಟ ಹಾಗೆ,
ಅದನ್ನು ಸುಡ ಬೇಕು; ಇದೇ ಸಭೆಗೋಸ್ಕರವಾದ ಪಾಪ ಬ
ಲಿಯು.

೨೨ ಒಬ್ಬ ಪ್ರೇಮ್ಯನು ಪಾಪ ಮಾಡಿ, ಮಾಡ ಬಾರದೆಂಬುವ ತ
ನ್ನ ದೇವರಾಗಿರುವ ಕರ್ತನ ಯಾವ ಯಾವ ಆಜ್ಞೆಗಳಿಗೆ ವಿ
ರೋಧವಾಗಿ ಏನಾದರೂ ತಪ್ಪಾಗಿ ಮಾಡಿ, ಅಪರಾಧಿಯಾದ
೨೩ ಪಕ್ಷದಲ್ಲಿ; ಅವನು ಮಾಡಿದ ಪಾಪವು ಅವನಿಗೆ ತಿಳಿಯಲ್ಪಟ್ಟ
ರೆ, ಅವನು ಪೂರ್ಣಾಂಗವಾದ ಗಂಡಾದ ಮೇಕೆ ಹೋತನ್ನು
೨೪ ತನ್ನ ಅರ್ಪಣೆಯಾಗಿ ತಂದು, ಆ ಹೋತನ ತಲೆಯ ಮೇಲೆ
ಕೈ ಇಟ್ಟು, ಕರ್ತನ ಸನ್ನಿಧಿಯಲ್ಲಿ, ಹೋಮವನ್ನು ಕೊ
ಯ್ಯುವ ಸ್ಥಳದಲ್ಲಿ ಅದನ್ನು ಕೊಯ್ಯ ಬೇಕು; ಅದು ಪಾಪ ಬ
೨೫ ಲಿಯು. ಮತ್ತು ಯಾಜಕನು ಪಾಪ ಬಲಿಯ ರಕ್ತವನ್ನು ಬೆರಳಿ
ನಿಂದ ತಕ್ಕೊಂಡು, ಹೋಮ ಪೀಠದ ಕೊಂಬುಗಳಿಗೆ ತಗಲಿಸಿ,
೨೬ ಅದರ ರಕ್ತವನ್ನು ಹೋಮ ಪೀಠದ ಅಡಿಗೆ ಚೆಲ್ಲಿ, ಅದರ ಎ
ಲ್ಲಾ ಕೊಬ್ಬನ್ನು ಸಮಾಧಾನದ ಬಲಿಯ ಕೊಬ್ಬಿನ ಹಾಗೆ ಬ
ಲಿ ಪೀಠದಲ್ಲಿ ಸುಡ ಬೇಕು; ಈ ಪ್ರಕಾರ ಯಾಜಕನು ಅವನ ಪಾ
ಪ ಮುಚ್ಚ ಬೇಕು; ಆಗ ಅವನಿಗೆ ಮನ್ನಿಸಲ್ಪಡುವದು.

೨೭ ಮತ್ತು ನೇತದ ಜನರಲ್ಲಿ ಯಾವನಾದರೂ ತಪ್ಪಿ ಪಾಪ ಮಾಡಿ,
ಮಾಡ ಬಾರದೆಂಬ ಕರ್ತನ ಆಜ್ಞೆಗಳಿಗೆ ವಿರೋಧವಾಗಿ ಏನಾದ
೨೮ ರೂ ಮಾಡಿ, ಅಪರಾಧಿಯಾದ ಪಕ್ಷದಲ್ಲಿ; ಅವನು ಮಾಡಿದ
ಪಾಪವು ಅವನಿಗೆ ತಿಳಿಯಲ್ಪಟ್ಟರೆ, ಅವನು ಮಾಡಿದ ಪಾಪಕ್ಕೋಸ್ಕರ
ಪೂರ್ಣಾಂಗವಾದ, ಹೆಣ್ಣಾದ, ಆಡು ಜಾತಿ ಮೇಕೆಯ
೨೯ ನ್ನು ಅರ್ಪಣೆಯಾಗಿ ತಂದು, ಪಾಪ ಬಲಿಯ ತಲೆಯ ಮೇ
ಲೆ ಕೈ ಇಟ್ಟು, ಹೋಮ ಅರ್ಪಿಸುವ ಸ್ಥಳದಲ್ಲಿ ಪಾಪ ಬಲಿಯ
೩೦ ನ್ನು ಕೊಯ್ಯ ಬೇಕು. ಯಾಜಕನು ಅದರ ರಕ್ತವನ್ನು ಬೆರ
ಳಿನಿಂದ ತೆಗೆದು, ಬಲಿ ಪೀಠದ ಕೊಂಬುಗಳಿಗೆ ಹಚ್ಚಿ, ಅದರ
೩೧ ಎಲ್ಲಾ ರಕ್ತವನ್ನು ಬಲಿ ಪೀಠದ ಅಡಿಗೆ ಚೆಲ್ಲಲಿ. ಮತ್ತು ಸಮಾ
ಧಾನದ ಬಲಿಯಿಂದ ಕೊಬ್ಬನ್ನು ಎತ್ತಿದ ಹಾಗೆ, ಅದರ ಎಲ್ಲಾ
ಕೊಬ್ಬನ್ನೂ ಎತ್ತಿ, ಯಾಜಕನು ಕರ್ತನಿಗೆ ಸುವಾಸನೆಗೋ
ಸ್ಕರ ಬಲಿ ಪೀಠದಲ್ಲಿ ಸುಡ ಬೇಕು; ಈ ಪ್ರಕಾರ ಯಾಜಕನು ಅ
ವನಿಗೋಸ್ಕರ ಪಾಪ ಮುಚ್ಚ ಬೇಕು; ಆಗ ಅವನಿಗೆ ಮನ್ನಿಸಲ್ಪ
ಡುವದು.

೩೨ ಅವನು ಪಾಪಕ್ಕೋಸ್ಕರವಾದ ಅರ್ಪಣೆಯಾಗಿ ಕುರಿ ಮ
ರಿಯನ್ನು ತಂದರೆ, ಪೂರ್ಣಾಂಗವಾದ ಹೆಣ್ಣನ್ನು ತರಲಿ. ಮ
೩೩ ತ್ತು ಪಾಪ ಬಲಿಯ ತಲೆಯ ಮೇಲೆ ಕೈ ಇಟ್ಟು, ಹೋಮ ಕೊ
ಯ್ಯುವ ಸ್ಥಳದಲ್ಲಿ ಅದನ್ನು ಪಾಪ ಬಲಿಯಾಗಿ ಕೊಯ್ಯಲಿ.
೩೪ ಆಗ ಯಾಜಕನು ಪಾಪ ಬಲಿಯ ರಕ್ತವನ್ನು ಬೆರಳಿನಿಂದ ತೆಗೆ
ದು, ಹೋಮ ಪೀಠದ ಕೊಂಬುಗಳಿಗೆ ಹಚ್ಚಿ, ಅದರ ಎಲ್ಲಾ
೩೫ ರಕ್ತವನ್ನು ಬಲಿ ಪೀಠದ ಅಡಿಗೆ ಚೆಲ್ಲಲಿ; ಮತ್ತು ಸಮಾಧಾನದ
ಬಲಿಯಲ್ಲಿ ಕುರಿಯ ಕೊಬ್ಬನ್ನು ಎತ್ತುವ ಪ್ರಕಾರ, ಅದರ ಎ
ಲ್ಲಾ ಕೊಬ್ಬನ್ನು ಎತ್ತಿ, ಯಾಜಕನು ಬಲಿ ಪೀಠದಲ್ಲಿ ಕರ್ತನಿಗೆ
ದಹನವಾಗಿ ಸುಡ ಬೇಕು; ಈ ಪ್ರಕಾರ ಯಾಜಕನು ಅವನು ಮಾ
ಡಿದ ಪಾಪ ವಿಷಯದಲ್ಲಿ ಅವನಿಗೋಸ್ಕರ ಪಾಪ ಮುಚ್ಚ ಬೇಕು;
ಆಗ ಅವನಿಗೆ ಮನ್ನಿಸಲ್ಪಡುವದು.

## ೫. ಸಂಧಿ.

೧ ಮತ್ತು ಯಾವನಾದರೂ ಆಣೆಯ ಶಬ್ದವನ್ನು ಕೇಳಿ, ಸಾಕ್ಷಿ
ಯಾಗಿದ್ದು, ಪಾಪ ಮಾಡಿದರೆ, ಅವನು ಅದನ್ನು ನೋಡಿದ ಮೇ
ಲೆ ಆಗಲಿ, ತಿಳಿದ ಮೇಲೆ ಆಗಲಿ, ತಿಳಿಸದೆ ಹೋದರೆ, ತನ್ನ ಅ
೨ ಕ್ರಮವನ್ನು ಹೊರ ಬೇಕು. ಇಲ್ಲವೆ ಯಾವನಾದರೂ ಅಶುದ್ಧ
ಪದಾರ್ಥವನ್ನಾಗಲಿ, ಅಶುದ್ಧವಾದ ಕಾಡ ಮೃಗದ ಹೆಣವನ್ನಾ
ಗಲಿ, ಅಶುದ್ಧವಾದ ಪಶುವಿನ ಹೆಣವನ್ನಾಗಲಿ, ಅಶುದ್ಧವಾದ ಕ್ರಿ
ಮಿಯ ಹೆಣವನ್ನಾಗಲಿ, ತಿಳಿಯದೆ ಮುಟ್ಟಿದ್ದರೆ, ಅವನು ಅಶುದ್ಧ
೩ ನಾಗಿ ಅಪರಾಧಿಯಾಗಿರುವನು. ಇಲ್ಲವೆ ಒಬ್ಬ ಮನುಷ್ಯನ ಅ
ಶುದ್ಧತ್ವವನ್ನು ಅವನು ಅಶುದ್ಧವಾಗುವ, ಯಾವ ಅಶುದ್ಧತ್ವ
ವನ್ನಾಗಲಿ, ತಿಳಿಯದೆ ಮುಟ್ಟಿದ್ದರೆ, ಅವನು ತಿಳಿದ ಮೇಲೆ ಅಪ
೪ ರಾಧಿಯಾಗಿರುವನು. ಇಲ್ಲವೆ ಯಾವನಾದರೂ ಜನರು ಪ್ರಮಾ
ಣ ಮಾಡಿ ಹರಟುವ ಎಲ್ಲಾ ವಿಷಯದಲ್ಲಿ, ಬಳ್ಳೇದನ್ನು ಮಾ
ಡುವದಕ್ಕಾಗಲಿ, ಕೆಟ್ಟದ್ದನ್ನು ಮಾಡುವದಕ್ಕಾಗಲಿ, ತಿಳಿಯದೆ, ಬಾ
ಯಿ ಬಿಟ್ಟು ಆಣೆ ಇಟ್ಟು ಕೊಂಡರೆ, ಅವನು ತಿಳಿದ ಮೇಲೆ ಇ
೫ ವುಗಳ ಒಂದರಲ್ಲಿ ಅಪರಾಧಿಯಾಗಿರುವನು. ಅವನು ಇವುಗಳ
ಒಂದರಲ್ಲಿ ಅಪರಾಧಿಯಾದಾಗ, ಮಾಡಿದ ಪಾಪವನ್ನು ಅರಿಕೆ
೬ ಮಾಡಿ, ಕರ್ತನಿಗೆ ತಾನು ಮಾಡಿದ ಪಾಪಕ್ಕೋಸ್ಕರ ಅಪರಾಧ ಬ





ಲಿಯಾಗಿ ಮಂದೆಯಿಂದ ಹೆಣ್ಣು ಕುರಿಯನ್ನಾಗಲಿ, ಮೇಕೆ ಹೋ
ತನ್ನಾಗಲಿ ಪಾಪ ಬಲಿಯಾಗಿ ತರಲಿ; ಆಗ ಅವನ ಪಾಪದ ವಿಷ
ಯದಲ್ಲಿ ಯಾಜಕನು ಅವನ ಪಾಪ ಮುಚ್ಚ ಬೇಕು.

೭ ಕುರಿ ತರುವದಕ್ಕೆ ಗತಿ ಇಲ್ಲದಿದ್ದರೆ, ಅವನು ಮಾಡಿದ ಪಾಪ
ಕ್ಕೋಸ್ಕರವಾದ ಅಪರಾಧ ಬಲಿಯಾಗಿ ಎರಡು ಬೆಳವಗಳ
ನ್ನಾಗಲಿ, ಎರಡು ಪಾರಿವಾಳ ಮರಿಗಳನ್ನಾಗಲಿ, ಒಂದು ಪಾಪ ಬಲಿ
೮ ಯಾಗಿ, ಒಂದು ಹೋಮವಾಗಿ, ಕರ್ತನ ಬಳಿಗೆ ತರಲಿ. ಅವ
ನು ಅವುಗಳನ್ನು ಯಾಜಕನ ಬಳಿಗೆ ತರಲಿ; ಇವನು ಪಾಪ ಬಲಿ
ಯಾದದ್ದನ್ನು ಮೊದಲು ತಂದು, ಅದರ ತಲೆಯನ್ನು ಕುತ್ತಿಗೆ
೯ ಯಿಂದ ನುಲಿದು ಬಿಟ್ಟು, ಅದನ್ನು ಭಾಗ ಮಾಡದೆ, ಪಾಪ ಬಲಿ
ಯ ರಕ್ತದಲ್ಲಿ ಸ್ವಲ್ಪ ಬಲಿಪೀಠದ ಗೋಡೆಗೆ ಚೆಮಿಕಿಸ ಬೇಕು;
ರಕ್ತದಲ್ಲಿ ಮಿಕ್ಕದ್ದು ಬಲಿಪೀಠದ ಅಡಿಯಲ್ಲಿ ಹಿಂಡಲ್ಪತಲಿ; ಅದು
೧೦ ಪಾಪ ಬಲಿಯು. ಆ ಮತ್ತೊಂದನ್ನು ನ್ಯಾಯದ ಪ್ರಕಾರ ಹೋ
ಮ ಮಾಡ ಬೇಕು; ಆ ಮೇಲೆ ಅವನು ಮಾಡಿದ ಪಾಪದ ವಿಷಯ
ಯಾಜಕನು ಅವನಿಗೋಸ್ಕರ ಪಾಪ ಮುಚ್ಚ ಬೇಕು; ಆಗ ಅವ
ನಿಗೆ ಮನ್ನಿಸಲ್ಪಡುವದು.

೧೧ ಮತ್ತು ಎರಡು ಬೆಳವಗಳನ್ನಾದರೂ ಎರಡು ಪಾರಿವಾಳ ಮ
ರಿಗಳನ್ನಾದರೂ ತರುವದಕ್ಕೆ ಅವನಿಗೆ ಗತಿ ಇಲ್ಲದೆ ಹೋದರೆ,
ಅವನು ಮಾಡಿದ ಪಾಪಕ್ಕೋಸ್ಕರ ಅರ್ಪಣೆಯಾಗಿ ಎಫದ
ಹತ್ತನೇ ಪಾಲು ನುಮೆವಾದ ಹಿಟ್ಟನ್ನು ಪಾಪ ಬಲಿಯಾಗಿ ತರ
ಲಿ; ಅದರ ಮೇಲೆ ಎಣ್ಣೆ ಇಡ ಬಾರದು, ಅದಕ್ಕೆ ಸಾಂಬ್ರಾಣಿ
೧೨ ಕೊಡ ಬಾರದು; ಯಾಕಂದರೆ ಅದು ಪಾಪ ಬಲಿ. ಅವನು ಅದ
ನ್ನು ಯಾಜಕನ ಬಳಿಗೆ ತರಲಿ; ಯಾಜಕನು ಅದರಲ್ಲಿ ಜ್ಞಾಪಕಾ
ರ್ಥವಾಗಿ ಭಾಗವಾದ ಹಿಡಿಯನ್ನು ತೆಗೆದು, ಕರ್ತನಿಗೆ ದಹನ
೧೩ ವಾಗಿ ಬಲಿ ಪೀಠದ ಮೇಲೆ ಸುಡಲಿ; ಅದು ಪಾಪ ಬಲಿಯು. ಆ
ಮೇಲೆ ಅವನು ಇವುಗಳ ಒಂದರಲ್ಲಿ ಮಾಡಿದ ಪಾಪದ ವಿಷಯ
ಯಾಜಕನು ಅವನಿಗೋಸ್ಕರ ಪಾಪ ಮುಚ್ಚ ಬೇಕು; ಆಗ ಅವ
ನಿಗೆ ಮನ್ನಿಸಲ್ಪಡುವದು; ತರುವಾಯ ಅದು ಕಾಣಿಕೆಯ ಹಾಗೆ,
ಯಾಜಕನದಾಗಿರುವದು.

೧೪ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೧೫ ಯಾರಾದರೂ ಅಕೃತ್ಯ ಮಾಡಿ ಕರ್ತನ ಪರಿಶುದ್ಧವಾದುವ
ಳ್ಳಿಲ್ಲಿ ತಪ್ಪಾಗಿ ಪಾಪ ಮಾಡಿದರೆ, ಅವನು ತನ್ನ ಅಪರಾಧ ಬಲಿ
ಯಾಗಿ ಮಂದೆಯಿಂದ ಒಂದು ಪೂರ್ಣಾಂಗವಾದ ಟಗರನ್ನೂ,
ಅಪರಾಧ ಬಲಿಗೋಸ್ಕರ ಪರಿಶುದ್ಧ ಷೆಕೆಲಿನ ಮೇರೆಗೆ ನಿನ್ನ ಎ
೧೬ ಣಿಕೆಯ ಪ್ರಕಾರ ಬೆಳ್ಳಿಯ ಷೆಕೆಲುಗಳನ್ನೂ ತರ ಬೇಕು. ಮ
ತ್ತು ಪರಿಶುದ್ಧವಾದದರಲ್ಲಿ ಅವನು ಪಾಪ ಮಾಡಿದ್ದಕ್ಕೆ ಬದಲು
ಕೊಟ್ಟು, ಅದರ ಐದನೇ ಪಾಲು ಹೆಚ್ಚು ಕೊಡ ಬೇಕು; ಅವನು
ಅದನ್ನು ಯಾಜಕನಿಗೆ ಕೊಡಲಿ; ಆಗ ಯಾಜಕನು ಪಾಪ ಮು
ಚ್ಚಿಕೆಯ ಟಗರಿನಿಂದ ಅವನಿಗೋಸ್ಕರ ಪಾಪ ಮುಚ್ಚ ಬೇಕು;
ಆಗ ಅವನಿಗೆ ಮನ್ನಿಸಲ್ಪಡುವದು.

೧೭ ಮತ್ತು ಯಾವನಾದರೂ ಪಾಪ ಮಾಡಿ, ಮಾಡ ಬಾರದೆಂಬುವ
ಕರ್ತನ ಆಜ್ಞೆಗಳಿಗೆ ವಿರೋಧವಾಗಿ ಏನಾದರೂ ತಿಳಿಯದೆ ಮಾ
ಡಿದ್ದರೆ, ಅದನ್ನು ಅಪರಾಧಿಯಾಗಿ, ತನ್ನ ಅಕ್ರಮವನ್ನು ಹೊ
೧೮ ರುವನು. ಅವನು ಮಂದೆಯಿಂದ ಒಂದು ಪೂರ್ಣಾಂಗವಾದ ಟ
ಗರನ್ನೂ, ನಿನ್ನ ಎಣಿಕೆಯ ಸಂಗತ ಅಪರಾಧ ಬಲಿಯಾಗಿ
ಯಾಜಕನಿಗೆ ತರಲಿ; ಆಗ ಯಾಜಕನು ಅವನು ತಿಳಿಯದೆ ತಪ್ಪಿ
ಹೋದ ತಪ್ಪಿನ ವಿಷಯ ಅವನಿಗೋಸ್ಕರ ಪಾಪ ಮುಚ್ಚ
೧೯ ಬೇಕು; ಆಗ ಅವನಿಗೆ ಮನ್ನಿಸಲ್ಪಡುವದು. ಅದೇ ಅಪರಾಧ ಬ
ಲಿಯು; ಅವನು ನಿಶ್ಚಯವಾಗಿ ಕರ್ತನಿಗೆ ಅಪರಾಧ ಮಾಡಿ
ದ್ದಾನೆ.

## ೬. ಸಂಧಿ.

೧, ೨ ಮತ್ತು ಕರ್ತನು ಮೋಶೆಗೆ ಹೇಳಿದ್ದೇನಂದರೆ—ಯಾವನಾ
ದರೂ ತನ್ನ ವಶವಾಗಿ ಇಡಲ್ಪಟ್ಟದರಲ್ಲಾಗಲಿ, ವ್ಯಾಪಾರದಲ್ಲಾ
ಗಲಿ, ಕೊಳ್ಳೆಯಲ್ಲಾಗಲಿ, ತನ್ನ ನೆಕೆಯವನಿಗೆ ಮೋಸ ಮಾಡು
ವದರಲ್ಲಾಗಲಿ, ತನ್ನ ನೆಕೆಯವನಿಗೆ ಸುಳ್ಳು ಹೇಳಿ, ಪಾಪ ಮಾ
೩ ಡಿ, ಕರ್ತನಿಗೆ ವಿರೋಧವಾಗಿ ಅಕೃತ್ಯ ಮಾಡಿದ್ದರೆ, ಇಲ್ಲವೆ ಕ
ಳ್ಳ ಕೊಂಡದ್ದನ್ನು ಕಂಡು, ಅದರ ನಿಮಿತ್ತ ಸುಳ್ಳು ಹೇಳಿ, ಅಬದ್ಧ
ವಾಗಿ ಪ್ರಮಾಣ ಮಾಡಿದ್ದರೆ, ಒಬ್ಬ ಮನುಷ್ಯನು ಪಾಪ ಮಾ
೪ ಡಿ ನಡಿಸುವ ಎಲ್ಲವುಗಳಲ್ಲಿ ಒಂದರ ವಿಷಯವಾಗಿ, ಅವನು ಪಾ
ಪ ಮಾಡಿ, ಅಪರಾಧಿಯಾಗಿರುವದರಿಂದ ಬಲಾತ್ಕಾರವಾಗಿ ತೆಗೆದ
ದ್ದನ್ನಾಗಲಿ, ಮೋಸವಾಗಿ ತೆಗೆದದ್ದನ್ನಾಗಲಿ, ತನ್ನ ಬಳಿಯಲ್ಲಿ
ಇಡಲ್ಪಟ್ಟದ್ದನ್ನಾಗಲಿ, ಕಳ್ಳ ಕೊಂಡ ಮೇಲೆ ತನಗೆ ಸಿಕ್ಕಿದ್ದನ್ನಾಗ
೫ ಲಿ, ಇಲ್ಲವೆ ಯಾವದಕ್ಕೋಸ್ಕರ ಸುಳ್ಳು ಪ್ರಮಾಣ ಮಾಡಿದ
ನೋ, ಅದನ್ನಾಗಲಿ, ಹಿಂದಕ್ಕೆ ಕೊಡಲಿ; ಅದರ ಮೂಲ ಕ್ರಯ
ಕ್ಕೆ ಐದನೇ ಪಾಲು ಕೂಡಿಸಿ, ತೀರಿಸಿ ಬಿಡ ಬೇಕು; ಅಪರಾಧ
ಬಲಿ ಅರ್ಪಿಸುವ ದಿನದಲ್ಲಿ ಅದನ್ನು ಅದರ ಯಜಮಾನನಿಗೆ ಕೊ
೬ ಡ ಬೇಕು. ಮತ್ತು ತನ್ನ ಅಪರಾಧ ಬಲಿಯಾಗಿ ಕರ್ತನಿಗೆ ಮಂದೆ
ಯಿಂದ ಪೂರ್ಣಾಂಗವಾದ ಟಗರನ್ನು, ನಿನ್ನ ಎಣಿಕೆಯ ಸಂಗ
೭ ತ, ಅಪರಾಧ ಬಲಿಯಾಗಿ ಯಾಜಕನ ಬಳಿಗೆ ತರ ಬೇಕು. ಆ
ಮೇಲೆ ಯಾಜಕನು ಅವನಿಗೋಸ್ಕರ ಕರ್ತನ ಸನ್ನಿಧಿಯಲ್ಲಿ
ಪಾಪ ಮುಚ್ಚ ಬೇಕು; ಆಗ ಅವನು ಯಾವವುಗಳನ್ನು ಮಾಡಿ,
ಅಪರಾಧಿಯಾದನೋ, ಅವುಗಳಲ್ಲಿ ಒಂದೊಂದರ ವಿಷಯ ಅವ
ನಿಗೆ ಮನ್ನಿಸಲ್ಪಡುವದು.

೮ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೯ ಅಹೋನನಿಗೂ ಅವನ ಮಕ್ಕಳಿಗೂ ಆಜ್ಞಾಪಿಸಿ, ಹೇಳ ಬೇಕಾ
ದದ್ದೇನಂದರೆ—ಹೋಮದ ನ್ಯಾಯ ಪ್ರಮಾಣವು ಇದೇ—ಅ
ಹೋಮವು ಬಲಿ ಪೀಠದ ಮೇಲೆ ರಾತ್ರಿಯೆಲ್ಲಾ ಉದಯದ ಪ
ರ್ಯಂತರ ಸುಡುವ ಸ್ಥಳದಲ್ಲಿ ಇರ ಬೇಕು; ಬಲಿ ಪೀಠದ ಬೆಂಕಿ
೧೦ ಯು ಅದರ ಸಂಗತ ಉರಿಯ ಬೇಕು. ಮತ್ತು ಯಾಜಕನು ತ
ನ್ನ ಮತಿ ವಸ್ತ್ರವನ್ನು ಹಾಕಿ ಕೊಂಡು, ಮತಿಯ ಇಜಾರುಗಳ
ನ್ನು ತನ್ನ ಮಾಂಸಕ್ಕೆ ಉಟ್ಟು ಕೊಂಡು, ಬೆಂಕಿ ಹೋಮವನ್ನು
ಬಲಿ ಪೀಠದಲ್ಲಿ ದಹಿಸಿದ ಮೇಲೆ ಮಿಕ್ಕ ಬೂದಿಯನ್ನು ಎತ್ತಿ,
೧೧ ಬಲಿಪೀಠದ ಪೂರ್ವದಲ್ಲಿ ಇಟ್ಟು, ತನ್ನ ವಸ್ತ್ರಗಳನ್ನು ತೆಗೆದು
ಹಾಕಿ, ಬೇರೆ ವಸ್ತ್ರಗಳನ್ನು ಹಾಕಿ ಕೊಂಡು, ಬೂದಿಯನ್ನು
ದಂಡಿನ ಹೊರಗೆ ಶುದ್ಧ ಸ್ಥಳಕ್ಕೆ ತಕ್ಕೊಂಡು ಹೋಗ ಬೇಕು.
೧೨ ಮತ್ತು ಬಲಿ ಪೀಠದ ಮೇಲಿನ ಬೆಂಕಿಯು ಅದರಲ್ಲಿ ಆರದೆ ಉರಿ
ಯ ಬೇಕು. ಯಾಜಕನು ಪ್ರತಿ ಉದಯದಲ್ಲಿ ಅದರಲ್ಲಿ ಕಟ್ಟಿಗೆ
ಯನ್ನು ಸುಟ್ಟು, ಅದರ ಮೇಲೆ ಹೋಮವನ್ನು ಸಿದ್ಧ ಮಾಡಿ,
೧೩ ಸಮಾಧಾನ ಬಲಿಗಳ ಕೊಬ್ಬನ್ನು ಸುಡ ಬೇಕು. ಬೆಂಕಿಯು
ಬಲಿಪೀಠದ ಮೇಲೆ ಆರದೆ ನಿತ್ಯವಾಗಿ ಉರಿಯುತ್ತಿರ ಬೇಕು.

೧೪ ಮತ್ತು ಕಾಣಿಕೆಯ ಕಟ್ಟಳೆ ಇದೇ—ಆರೋನನ ಮಕ್ಕಳು
ಅದನ್ನು ಕರ್ತನ ಸನ್ನಿಧಿಗೆ ಬಲಿ ಪೀಠದ ಮುಂದೆ ಅರ್ಪಿಸ ಬೇ
೧೫ ಕು. ಮತ್ತು ಕಾಣಿಕೆಯ ನಯವಾದ ಹಿಟ್ಟಿನಲ್ಲಿಯೂ, ಎಣ್ಣೆಯ
ಲ್ಲಿಯೂ, ಹಿಡಿಯನ್ನು ಕಾಣಿಕೆಯ ಮೇಲಿರುವ ಸಮಸ್ತ ಸಾಂ
ಬ್ರಾಣಿಯ ಸಂಗಡ ಅದರಿಂದ ಎತ್ತಿ, ಕರ್ತನಿಗೆ ಜ್ಞಾಪಕ ಭಾಗ
೧೬ ವಾಗಿರುವ ಸುವಾಸನೆಯಾಗಿ ಬಲಿ ಪೀಠದಲ್ಲಿ ಸುಡ ಬೇಕು. ಅದ
ರಲ್ಲಿ ಮಿಕ್ಕದ್ದನ್ನು ಆರೋನನೂ ಅವನ ಮಕ್ಕಳೂ ಉಣ್ಣ
ಬೇಕು; ಹುಳಿ ಇಲ್ಲದೆ ಪರಿಶುದ್ಧ ಸ್ಥಳದಲ್ಲಿ ಅದನ್ನು ಉಣ್ಣ ಬೇ
ಕು; ಸಭೆಯ ಗುಡಾರದ ಅಂಗಳದಲ್ಲಿ ಅದನ್ನು ಉಣ್ಣ ಬೇಕು.
೧೭ ಅದನ್ನು ಹುಳಿ ಕಲಸಿ, ರೊಟ್ಟಿ ಮಾಡ ಬಾರದು; ನನ್ನ ದಹನ
ಗಳಲ್ಲಿ ಅವರ ಪಾಲಾಗಿ, ಅದನ್ನು ಕೊಟ್ಟಿದ್ದೇನೆ. ಅದು ಪಾಪ
ಬಲಿಯ ಹಾಗೂ ಅಪರಾಧ ಬಲಿಯ ಹಾಗೂ ಮಹಾ ಪರಿಶುದ್ಧ
೧೮ ವಾಗಿದೆ. ಆರೋನನ ಮಕ್ಕಳಲ್ಲಿರುವ ಗಂಡಸರೆಲ್ಲಾ ಅದನ್ನು
ಉಣ್ಣ ಬೇಕು; ಇದೇ ಕರ್ತನ ದಹನಗಳಲ್ಲಿ ನಿತ್ತು ಸಂತತಿಗ
ಳಿಗೆ ನಿತ್ಯವಾದ ನೇಮವು; ಅವುಗಳನ್ನು ಮುಟ್ಟುವವರೆಲ್ಲಾ ಪರಿ
ಶುದ್ಧರಾಗಿರ ಬೇಕು.
೧೯ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨೦ ಆರೋನನೂ ಅವನ ಮಕ್ಕಳೂ ಅವನು ಅಭಿಷೇಕಸಲ್ಪಟುವ
ದಿವಸದಲ್ಲಿ ಕರ್ತನಿಗೆ ಅರ್ಪಿಸ ತಕ್ಕ ಅರ್ಪಣೆ ಇದೇ—ನ
ಯವಾದ ಹಿಟ್ಟಿನಲ್ಲಿ ಎಳದ ಹತ್ತನೇ ಪಾಲು, ಅರೆವಾಸಿ ಬೆಳಿಗ್ಯೆ,
೨೧ ಅರೆವಾಸಿ ಸಾಯಂಕಾಲದಲ್ಲಿ ನಿತ್ಯವಾದ ಕಾಣಿಕೆಯೇ. ಬಾಣ್ಲೆ
ಯಲ್ಲಿ ಎಣ್ಣೆಯ ಸಂಗಡ ಅದನ್ನು ಮಾಡ ಬೇಕು; ಎಣ್ಣೆಯಲ್ಲಿ
ಕರಿದೆದ್ದಾಗ ಅದನ್ನು ತರ ಬೇಕು; ಸುಟ್ಟ ಮುರುಕುಗಳ್ಳಾಗಿರು
ವ ಕಾಣಿಕೆಯಾಗಿ ಅದನ್ನು ಕರ್ತನಿಗೆ ಸುವಾಸನೆಯೋಸ್ಕರ ಅ
೨೨ ರ್ಪಿಸ ಬೇಕು. ಮತ್ತು ಅವನ ಬದಲಾಗಿ ಅವನ ಮಕ್ಕಳಲ್ಲಿ ಅ
ಭಿಷೇಕಸಲ್ಪಟ್ಟ ಯಾಜಕನು ಅದನ್ನು ಮಾಡ ಬೇಕು; ಅದು
ಕರ್ತನಿಗೆ ನಿತ್ಯವಾದ ನೇಮ; ಅದು ಪೂರ್ಣವಾಗಿ ಸುಡಲ್ಪಡ
೨೩ ಬೇಕು. ಯಾಜಕನ ಕಾಣಿಕೆಯನ್ನೆಲ್ಲಾ ಪೂರ್ಣವಾಗಿ ಸುಡ
ಬೇಕು; ಅದನ್ನು ಉಣ್ಣ ಬಾರದು.
೨೪ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨೫ ಆರೋನನಿಗೂ ಅವನ ಮಕ್ಕಳಿಗೂ ಮಾತಾಡಿ ಹೇಳ ಬೇಕಾ
ದದ್ದೇನಂದರೆ—ಇದೇ ಪಾಪ ಬಲಿಯ ನ್ಯಾಯ ಪ್ರಮಾಣವು;
ಹೋಮವನ್ನು ಕೊಯ್ಯುವ ಸ್ಥಳದಲ್ಲಿ ಪಾಪ ಬಲಿಯನ್ನು ಕ
ರ್ತನ ಸನ್ನಿಧಿಯಲ್ಲಿ ಕೊಯ್ಯ ಬೇಕು; ಅದು ಮಹಾ ಪರಿಶು
೨೬ ದ್ಧವಾದದ್ದು. ಪಾಪ ಬಲಿಯನ್ನು ಅರ್ಪಿಸುವ ಯಾಜಕನು ಅ
ದನ್ನು ಉಣ್ಣ ಬೇಕು; ಪರಿಶುದ್ಧ ಸ್ಥಳದಲ್ಲಿ, ಸಭೆಯ ಗುಡಾರದ
೨೭ ಅಂಗಳದಲ್ಲಿ ಅದನ್ನು ಉಣ್ಣ ಬೇಕು. ಅದರ ಮಾಂಸವನ್ನು
ಮುಟ್ಟುವವರೆಲ್ಲಾ ಪರಿಶುದ್ಧರಾಗಿರ ಬೇಕು; ಅದರ ರಕ್ತದಲ್ಲಿ ಸ್ವ
ಲ್ಪವಾದದ್ದು ವಸ್ತ್ರದ ಮೇಲೆ ಚೆಮಿಕಿಸಲ್ಪಟ್ಟರೆ, ಚೆಮಿಕಿಸಲ್ಪಟ್ಟ
೨೮ ದ್ದನ್ನು ಪರಿಶುದ್ಧ ಸ್ಥಳದಲ್ಲಿ ಬಗೆಯ ಬೇಕು. ಅದು ಬೇಯಿಸಿದ
ಮಣ್ಣಿನ ಪಾತ್ರೆಯನ್ನು ಒಡೆಯ ಬೇಕು; ತಾಂಬ್ರದ ಪಾತ್ರೆಯ
ಲ್ಲಿ ಬೇಯಿಸಿದ್ದಾದರೆ, ಅದನ್ನು ಬೆಳಗಿ, ನೀರಿನಿಂದ ತೊಳೆಯ
೨೯ ಬೇಕು. ಯಾಜಕರಲ್ಲಿ ಇರುವ ಗಂಡಸರೆಲ್ಲಾ ಅದನ್ನು ಉಣ್ಣ
೩೦ ಬೇಕು; ಅದು ಮಹಾ ಪರಿಶುದ್ಧವಾದದ್ದು. ಮತ್ತು ಪರಿಶುದ್ಧ ಸ್ಥ
ಳದಲ್ಲಿ ಪಾಪ ಮುಚ್ಚುವದಕ್ಕೋಸ್ಕರ ಸಭೆಯ ಗುಡಾರಕ್ಕೆ ತ
ರಲ್ಪಡುವ ಯಾವ ಪಾಪ ಬಲಿಯ ರಕ್ತವನ್ನಾದರೂ ಉಣ್ಣ ಬಾ
ರದು; ಅದನ್ನು ಬೆಂಕಿಯಲ್ಲಿ ಸುಡ ಬೇಕು.

## ೭. ಸಂಧಿ.

೧ ಮತ್ತು ಅಪರಾಧ ಬಲಿಯ ನ್ಯಾಯ ಪ್ರಮಾಣ ಇದೇ—ಅದು
೨ ಮಹಾ ಪರಿಶುದ್ಧವಾದದ್ದು. ಹೋಮವನ್ನು ಕೊಯ್ಯುವ ಸ್ಥಳ
ದಲ್ಲಿ ಅಪರಾಧ ಬಲಿಯನ್ನು ಕೊಯಿದು, ಅದರ ರಕ್ತವನ್ನು ಬ
ಲಿಪೀಠಕ್ಕೆ ಸುತ್ತಲಾಗಿ ಚೆಮಿಕಿಸಿ, ಅದರ ಎಲ್ಲಾ ಕೊಬ್ಬನ್ನೂ,
೩ ಬಾಲವನ್ನೂ, ಕರುಳುಗಳ ಮೇಲಿರುವ ಕೊಬ್ಬನ್ನೂ, ಎರಡು
೪ ಹುರುಳ್ಳಿಕಾಯಿಗಳನ್ನೂ, ಅವುಗಳ ಮೇಲೆಯೂ, ಸೊಂಟಗಳ
ಮೇಲೆಯೂ ಇರುವ ಕೊಬ್ಬನ್ನೂ, ಹುರುಳ್ಳಿಕಾಯಿಗಳ ಮೇ
ಲೆಯೂ ಕಲಿಜೆಯ ಮೇಲೆಯೂ ಪೊರೆಯನ್ನೂ ತೆಗೆದು, ಅ
೫ ರ್ಪಿಸ ಬೇಕು. ಯಾಜಕನು ಅವುಗಳನ್ನು ಬಲಿ ಪೀಠದಲ್ಲಿ, ಕ
ರ್ತನಿಗೆ ದಹನವಾಗಿ, ಸುಡ ಬೇಕು; ಅದೇ ಅಪರಾಧ ಬಲಿಯು
೬ ಯಾಜಕರಲ್ಲಿ ಗಂಡಸರೆಲ್ಲಾ ಅದನ್ನು ಉಣ್ಣ ಬೇಕು; ಪರಿಶುದ್ಧ
ಸ್ಥಳದಲ್ಲಿ ಅದನ್ನು ಉಣ್ಣ ಬೇಕು; ಅದು ಮಹಾ ಪರಿಶುದ್ಧವಾ
ದದ್ದು.
೭ ಪಾಪ ಬಲಿಗೂ ಅಪರಾಧ ಬಲಿಗೂ ಒಂದೇ ನ್ಯಾಯ ಪ್ರಮಾ
ಣ; ಅದರಿಂದ ಪಾಪ ಮುಚ್ಚುವ ಯಾಜಕನಿಗೆ ಅವು ಆಗ ಬೇ
೮ ಕು. ಮತ್ತು ಒಬ್ಬನ ಹೋಮವನ್ನು ಅರ್ಪಿಸುವ ಯಾಜಕ
ನಾದರೆ, ಅವನು ಅರ್ಪಿಸಿದ ಹೋಮದ ತೊಗಲು ಆ ಯಾಜ
ಕನದಾಗಿರ ಬೇಕು. ಮತ್ತು ಒಲೆಯಲ್ಲಿ ಸುಟ್ಟದ್ದಾಗಲಿ, ಹಂಚಿನ
೯ ಲ್ಲಿಯೂ ಬಾಣ್ಲೆಯಲ್ಲಿಯೂ ಅಟ್ಟದ್ದಾಗಲಿ, ಕಾಣಿಕೆಯೆಲ್ಲಾ ಅ
ದನ್ನು ಅರ್ಪಿಸಿದ ಯಾಜಕನದಾಗಿರ ಬೇಕು. ಮತ್ತು ಎಣ್ಣೆ
೧೦ ಹೊಯಿದದ್ದಾಗಲಿ, ಬಣಗಿದ್ದಾಗಲಿ, ಇರುವ ಕಾಣಿಕೆಯೆಲ್ಲಾ
ಆರೋನನ ಮಕ್ಕಳೆಲ್ಲರಿಗೆ ಒಬ್ಬೊಬ್ಬರಿಗೆ ಸಮವಾಗಿ ಸೇರ
ಬೇಕು.
೧೧ ಮತ್ತು ಕರ್ತನಿಗೆ ಅರ್ಪಿಸುವ ಸಮಾಧಾನದ ಬಲಿಯ ನ್ಯಾ
೧೨ ಯ ಪ್ರಮಾಣ ಇದೇ—ಸ್ತುತಿಗಾಗಿ ಅದನ್ನು ಅರ್ಪಿಸಿದರೆ, ಸ್ತು
ತಿ ಬಲಿಯ ಸಂಗಡ ಎಣ್ಣೆ ಹೊಯಿದ ಹುಳಿ ಇಲ್ಲದ ಹೋಳ್ಳಿಗೆ
ಗಳನ್ನೂ, ಎಣ್ಣೆ ಕಲಿಸಿದ ಹುಳಿ ಇಲ್ಲದ ಕರುಬುಗಳನ್ನೂ, ನ
ಯವಾದ ಹಿಟ್ಟಿನಿಂದ ಮಾಡಿದಂಥಾ, ಎಣ್ಣೆ ಹೊಯಿದು, ಕಲಿಸಿದಂ
೧೩ ಥ ಹೋಳ್ಳಿಗೆಗಳನ್ನೂ, ಅರ್ಪಿಸ ಬೇಕು. ಹೋಳ್ಳಿಗೆಗಳ ಸಂಗ
ಡ ಹುಳಿ ರೊಟ್ಟಿಯನ್ನು ಸಮಾಧಾನದ ಬಲಿಯಾದ ಸ್ತುತಿ ಬಲಿ
೧೪ ಅರ್ಪಣೆಯಾಗಿ ಅರ್ಪಿಸ ಬೇಕು. ಆಗ, ಸಮಸ್ತ ಅರ್ಪಣೆ
ಯಲ್ಲಿ ಒಂದನ್ನು ಎತ್ತುವ ಬಲಿಯಾಗಿ ಕರ್ತನಿಗೆ ಅರ್ಪಿಸಿದ
ಮೇಲೆ, ಅದು ಸಮಾಧಾನದ ಬಲಿಗಳ ರಕ್ತವನ್ನು ಚೆಮಿಕಿಸಿದ
೧೫ ಯಾಜಕನದಾಗಿರ ಬೇಕು. ಆದರೆ ಸಮಾಧಾನ ಬಲಿಯಾದ
ಸ್ತುತಿ ಬಲಿಯ ಮಾಂಸವನ್ನು ಮರು ದಿವಸ ಹೊತಾರೆಗೆ ಮಿಗಿಸಿ
೧೬ ಡದೆ, ಅರ್ಪಿಸಿದ ದಿನದಲ್ಲೇ ಉಣ್ಣ ಬೇಕು. ಇದಲ್ಲದೆ ಅರ್ಪ
ಣೆಯು ಹರಿಕೆಯಾದರೂ, ಉಚಿತ ಬಲಿಯಾದರೂ, ಆಗಿದ್ದರೆ,
ಬಲಿಯನ್ನು ಅರ್ಪಿಸುವ ದಿನದಲ್ಲಿ ಉಂಡು, ಮರು ದಿವಸದಲ್ಲಿ
೧೭ ಮಿಕ್ಕದ್ದನ್ನು ಉಣ್ಣ ಬಹುದು. ಆದರೆ ಬಲಿಯ ಮಾಂಸದಲ್ಲಿ
ಮಿಕ್ಕದ್ದನ್ನು ಮೂರನೇ ದಿವಸದಲ್ಲಿ ಬೆಂಕಿಯಿಂದ ಸುಡ ಬೇ
೧೮ ಕು. ಮೂರನೇ ದಿವಸದಲ್ಲಿ ಸಮಾಧಾನ ಬಲಿಯ ಮಾಂಸ





ಎಷ್ಟು ಮಾತ್ರ ಉಂಡರೆ, ಅದು ಸಮರ್ಪಕವಾಗುವದಿಲ್ಲ; ಅರ್ಪಿ
ಸಿದವನಿಗೆ ಅದು ಎಣಿಸಲ್ಪಡದೆ, ಅಸಹ್ಯವಾಗಿರುವದು; ಮತ್ತು
೧೯ ಅದನ್ನು ಉಂಡವನು ತನ್ನ ಅಪರಾಧವನ್ನು ಹೊರುವನು. ಇ
ದಲ್ಲದೆ ಅಶುದ್ಧವಾದ ಯಾವದಕ್ಕಾದರೂ ತಗಲಿದ ಮಾಂಸವ
ನ್ನು ಉಣ್ಣದೆ, ಬೆಂಕಿಯಲ್ಲಿ ಸುಡ ಬೇಕು; ಬೇರೆ ಮಾಂಸವನ್ನು
೨೦ ಶುದ್ಧವಾದವರೆಲ್ಲರೂ ಉಣ್ಣ ಬಹುದು. ಆದರೆ ಕರ್ತನ ಸ
ಮಾಧಾನ ಬಲಿಯ ಮಾಂಸವನ್ನು ತಾನು ಅಶುದ್ಧನಾಗಿ ಉಂಡ
ವನ್ಯಾವನೋ, ಆ ಪ್ರಾಣವು ತನ್ನ ಜನರೊಳಗಿಂದ ಕಡಿಯ
೨೧ ಲ್ಪಡ ಬೇಕು. ಮತ್ತು ಯಾವನಾದರೂ ಮನುಷ್ಯನ ಅಶುದ್ಧ
ತ್ವವಾಗಲಿ, ಅಶುದ್ಧವಾದ ಮೃಗವಾಗಲಿ, ಅಶುದ್ಧವಾಗಿರುವ ಯಾ
ವ ಅಸಹ್ಯವಾಗಲಿ, ಅಶುದ್ಧವಾದದ್ದೇನಾಗಲಿ ಮುಟ್ಟಿ, ಕರ್ತನ
ಸಮಾಧಾನ ಬಲಿಯ ಮಾಂಸ ಉಂಡರೆ, ಆ ಪ್ರಾಣವು ತನ್ನ
ಜನರೊಳಗಿಂದ ಕಡಿಯಲ್ಪಡ ಬೇಕು.
೨೨ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨೩ ಇಸ್ರಯೇಲ್ ಮಕ್ಕಳಿಗೆ ಹೇಳ ಬೇಕಾದದ್ದೇನಂದರೆ—ಎತ್ತು,
೨೪ ಕುರಿ, ಮೇಕೆಗಳ ಕೊಬ್ಬನ್ನೆಲ್ಲಾ ನೀವು ಉಣ್ಣ ಬೇಡಿರಿ. ಸತ್ತ
ಮೃಗದ ಕೊಬ್ಬನ್ನೂ, ಸೀಳಿದ ಮೃಗದ ಕೊಬ್ಬನ್ನೂ,
ಯಾವ ಕೆಲಸಕ್ಕಾದರೂ ಬಳಸ ಬಹುದು; ಆದರೆ ಉಣ್ಣಲೇ ಉ
೨೫ ಣ್ಣ ಬೇಡಿರಿ. ಯಾಕಂದರೆ ಕರ್ತನಿಗೆ ದಹನವಾಗಿ ಅರ್ಪಿಸುವ
ಮೃಗಗಳ ಕೊಬ್ಬನ್ನು ಉಣ್ಣುವವನ್ಯಾವನೋ, ಅದನ್ನು ಉ
ಣ್ಣುವ ಪ್ರಾಣವು ತನ್ನ ಜನರೊಳಗಿಂದ ಕಡಿಯಲ್ಪಡ ಬೇಕು.
೨೬ ಇದಲ್ಲದೆ ಯಾವ ರಕ್ತವನ್ನಾದರೂ, ಪಕ್ಷಿಗಳದನ್ನೂ ಮೃಗಗ
೨೭ ಳದನ್ನೂ ನಿಮ್ಮ ಎಲ್ಲಾ ನಿವಾಸಗಳಲ್ಲಿ ಉಣ್ಣ ಬೇಡಿರಿ. ಯಾವ
ರಕ್ತವನ್ನಾದರೂ ಉಣ್ಣುವವನ್ಯಾವನೋ, ಆ ಪ್ರಾಣವು ತನ್ನ
ಜನರೊಳಗಿಂದ, ಕಡಿಯಲ್ಪಡ ಬೇಕು.
೨೮ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨೯ ಇಸ್ರಯೇಲ್ ಮಕ್ಕಳಿಗೆ ನೀನು ಹೇಳ ಬೇಕಾದದ್ದೇನಂದರೆ—ಕ
ರ್ತನಿಗೆ ಸಮಾಧಾನ ಬಲಿಯನ್ನು ಅರ್ಪಿಸುವವನು ತನ್ನ ಸ
ಮಾಧಾನ ಬಲಿಯಲ್ಲಿ ಕರ್ತನಿಗೆ ತನ್ನ ಅರ್ಪಣೆಯನ್ನು ತರ
೩೦ ಬೇಕು. ತನ್ನ ಕೈಗಳಿಂದ ಕರ್ತನಿಗೆ ದಹನವನ್ನು ತರ ಬೇಕು;
ಎದೆಯನ್ನು ಕರ್ತನ ಮುಂದೆ ಅಲ್ಲಾಡಿಸುವ ಬಲಿಯಾಗಿ ಅಲ್ಲಾ
೩೧ ಡಿಸುವದಕ್ಕೆ, ಎದೆಯ ಸಂಗಡ ಕೊಬ್ಬನ್ನು ತರ ಬೇಕು. ಮ
ತ್ತು ಕೊಬ್ಬನ್ನು ಯಾಜಕನು ಬಲಿಪೀಠದಲ್ಲಿ ಸುಡ ಬೇಕು; ಆ
ದರೆ ಎದೆಯು ಆರೋನನಿಗೂ ಅವನ ಮಕ್ಕಳಿಗೂ ಆಗ ಬೇ
೩೨ ಕು. ಮತ್ತು ಬಲ ಮುಂದೊಡೆಯನ್ನು ನಿಮ್ಮ ಸಮಾಧಾನ ಬಲಿ
೩೩ ಗಳಿಂದ ಯಾಜಕನಿಗೆ ಎತ್ತುವ ಬಲಿಯಾಗಿ ಕೊಡ ಬೇಕು. ಆ
ರೋನನ ಮಕ್ಕಳಲ್ಲಿ ಯಾವನು ಸಮಾಧಾನ ಬಲಿಗಳ ರಕ್ತವ
ನ್ನೂ ಕೊಬ್ಬನ್ನೂ ಅರ್ಪಿಸುತ್ತಾನೋ, ಅವನಿಗೆ ಬಲ ಮುಂ
೩೪ ದೊಡೆ ತನ್ನ ಪಾಲಾಗಿ ಸೇರ ಬೇಕು. ಯಾಕಂದರೆ ಅಲ್ಲಾಡಿಸು
ವ ಎದೆಯನ್ನೂ, ಎತ್ತುವ ಮುಂದೊಡೆಯನ್ನೂ ನಾನು ಇಸ್ರ
ಯೇಲ್ ಮಕ್ಕಳಿಂದ, ಅವರ ಸಮಾಧಾನ ಬಲಿಗಳಿಂದ ತೆಗೆದು,
ಯಾಜಕನಾದ ಆರೋನನಿಗೂ ಅವನ ಮಕ್ಕಳಿಗೂ ಇಸ್ರಯೇ
೩೫ ಲ್ ಮಕ್ಕಳ ಕಡೆಯಿಂದ ನಿತ್ಯ ನೇಮವಾಗಿ ಕೊಟ್ಟಿದ್ದೇನೆ. ಕರ್ತ
ನಿಗೆ ಯಾಜಕ ಸೇವೆ ಮಾಡುವದಕ್ಕೆ ಅವರನ್ನು ಅರ್ಪಿಸಿದ ದಿ
ವಸದಲ್ಲಿ ಆರೋನನಿಗೂ ಅವನ ಮಕ್ಕಳಿಗೂ ಕರ್ತನ ದಹನ
೩೬ ಗಳಲ್ಲಿ ಆಗುವ ಅಭಿಷೇಕ ಭಾಗವು ಇದೇ. ಅವರನ್ನು ಅಭಿಷೇ
ಕಿಸಿದ ದಿವಸದಲ್ಲಿ ಇದೇ ಅವರಿಗೆ ಇಸ್ರಯೇಲ್ ಮಕ್ಕಳ ಕಡೆ
ಯಿಂದ ಅವರ ಸಂತತಿಗಳಲ್ಲಿ ನಿತ್ಯ ನೇಮವಾಗಿ ಕೊಡಲ್ಪಡ
ಬೇಕೆಂದು, ಕರ್ತನು ಆಜ್ಞಾಪಿಸಿದನು.
೩೭ ಹೋಮಕ್ಕೂ, ಕಾಣಿಕೆಗೂ, ಪಾಪ ಬಲಿಗೂ, ಅಪರಾಧ ಬ
ಲಿಗೂ, ಪ್ರತಿಷ್ಠೆ ಬಲಿಗೂ, ಸಮಾಧಾನ ಬಲಿಗೂ, ಇದೇ ನ್ಯಾ
೩೮ ಯ ಪ್ರಮಾಣ. ಸೀನಾಯಿ ಅರಣ್ಯದಲ್ಲಿ ಕರ್ತನಿಗೆ ತನ್ನು ಅ
ರ್ಪಣೆಗಳನ್ನು ಅರ್ಪಿಸ ಬೇಕೆಂದು, ಇಸ್ರಯೇಲ್ ಮಕ್ಕಳಿಗೆ
ಆಜ್ಞಾಪಿಸಿದ ದಿವಸದಲ್ಲಿ, ಕರ್ತನು ಮೋಶೆಗೆ ಸೀನಾಯಿ ಪರ್ವ
ತದಲ್ಲಿ ಆಜ್ಞಾಪಿಸಿದ್ದು ಇದೇ.

## ೮. ಸಂಧಿ.

೧ ಆಗ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ಆರೋನನನನ್ನೂ, ಅವನ ಮಕ್ಕಳನ್ನೂ, ಅವನ ವಸ್ತ್ರಗಳ
ನ್ನೂ, ಅಭಿಷೇಕಿಸುವ ಎಣ್ಣೆಯನ್ನೂ, ಪಾಪ ಬಲಿಯ ಹೋರಿ
ಯನ್ನೂ, ಆ ಎರಡು ಟಗರುಗಳನ್ನೂ, ಹುಳಿ ಇಲ್ಲದ ರೊಟ್ಟಿಗ
೩ ಳ ಪುಟ್ಟಿಯನ್ನೂ ತಕ್ಕೊಂಡು, ಸಭೆಯನ್ನೆಲ್ಲಾ ಸಭೆಯ ಗುಡಾ
೪ ರದ ಬಾಗಲಲ್ಲಿ ಕೂಡಿ ಬರ ಮಾಡು. ಮೋಶೆ ಕರ್ತನು ತನಗೆ
ಆಜ್ಞಾಪಿಸಿದ ಹಾಗೆ ಮಾಡಿದನು; ಸಭೆಯ ಗುಡಾರದ ಬಾಗಲ
ಲ್ಲಿ ಸಭೆ ಕೂಡಿ ಬಂತು.
೫ ಆಗ ಮೋಶೆ ಸಭೆಗೆ—ಕರ್ತನು ಮಾತಲಾಜ್ಞಾಪಿಸಿದ ಕಾ
೬ ರ್ಯ ಇದೇ, ಅಂದನು. ಮೋಶೆ ಆರೋನನನನ್ನೂ ಅವನ ಮ
ಕ್ಕಳನ್ನೂ ಹತ್ತರ ಸೇರಿಸಿ, ನೀರಿನಲ್ಲಿ ಅವರನ್ನು ತೊಳಿಸಿದ ಮೇ
೭ ಲೆ, ಅವನಿಗೆ ಅಂಗಿಯನ್ನು ಇಟ್ಟು, ನಡು ಕಟ್ಟನ್ನು ಕಟ್ಟಿ, ನಿಲು
ವಂಗಿಯನ್ನು ತೊಡಿಸಿ, ಎಫೋದನ್ನು ಅವನ ಮೇಲೆ ಇಟ್ಟು,
೮ ಎಫೋದಿನ ದಟ್ಟಿಯನ್ನು ಕಟ್ಟಿ, ಅದನ್ನು ಅವನಿಗೆ ಸುತ್ತಿ, ಪದ
ಕವನ್ನು ಅವನ ಮೇಲೆ ಇಟ್ಟು, ಪದಕದಲ್ಲಿ ಊರೀಮ್ ತುಮ್ಮಿ
೯ ಮ್ ಎಂಬುವುಗಳನ್ನು ಇಟ್ಟು, ಅವನ ತಲೆಯ ಮೇಲೆ ಮುಂಡಾಸ
ವನ್ನು ಇರಿಸಿ, ಮುಂಡಾಸದ ಮೇಲೆ, ಅವನ ಮುಖಕ್ಕೆ ಸರಿಯಾ
ಗಿ, ಪರಿಶುದ್ಧ ಕಿರೀಟವಾಗಿರುವ ಚಿನ್ನದ ತಗಡನ್ನು ಇಟ್ಟು, ಕ
ರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ ಮಾಡಿದನು.
೧೦ ಮತ್ತು ಮೋಶೆ ಅಭಿಷೇಕಿಸುವ ಎಣ್ಣೆಯನ್ನು ತಕ್ಕೊಂಡು,
ವಾಸ ಸ್ಥಳವನ್ನೂ, ಅದರಲ್ಲಿರುವ ಎಲ್ಲವುಗಳನ್ನೂ ಅಭಿಷೇಕಿಸಿ,
೧೧ ಪರಿಶುದ್ಧ ಮಾಡಿದನು. ಮತ್ತು ಅದನ್ನು ಏಳು ಸಾರಿ ಬಲಿಪೀಠ
ಕ್ಕೆ ಚೆಮಿಕಿಸಿ, ಬಲಿಪೀಠವನ್ನೂ, ಅದರ ಎಲ್ಲಾ ಸಾಮಾನುಗಳ
ನ್ನೂ, ಗಂಗಾಳವನ್ನೂ, ಅದರ ಕಾಲನ್ನೂ ಅಭಿಷೇಕಿಸಿ, ಪರಿಶು
೧೨ ದ್ಧ ಮಾಡಿದನು. ಮತ್ತು ಅಭಿಷೇಕಿಸುವ ಎಣ್ಣೆಯನ್ನು ಆರೋ
ನನ ತಲೆಯ ಮೇಲೆ ಹೊಯಿದು, ಅವನನ್ನು ಅಭಿಷೇಕಿಸಿ, ಪರಿ
೧೩ ಶುದ್ಧ ಮಾಡಿದನು. ಮತ್ತು ಮೋಶೆ ಆರೋನನ ಮಕ್ಕಳನ್ನು
ಹತ್ತರ ಸೇರಿಸಿ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಅವರಿ
ಗೆ ಅಂಗಿಗಳನ್ನು ತೊಡಿಸಿ, ನಡುಕಟ್ಟನ್ನು ಕಟ್ಟಿ, ಕುಲಾವಿಗಳ
ನ್ನು ಅವರಿಗೆ ಇಟ್ಟನು.
೧೪ ಆ ಮೇಲೆ ಅವನು ಪಾಪ ಬಲಿಯ ಹೋರಿಯನ್ನು ತಂದನು;
ಆರೋನನನೂ ಅವನ ಮಕ್ಕಳೂ ಪಾಪ ಬಲಿಯ ಹೋರಿಯ
೧೫ ತಲೆಯ ಮೇಲೆ ಕೈಗಳನ್ನು ಇಟ್ಟರು. ಅದನ್ನು ಕೊಯಿದ

ಮೇಲೆ, ಮೋಶೆ ರಕ್ತವನ್ನು ತಕ್ಕೊಂಡು, ಬಲಿಪೀಠದ ಕೊಂಬುಗ್ಗಳಿಗೆ ಸುತ್ತಲಾಗಿ ತನ್ನ ಬೆರಳಿನಿಂದ ಹಚ್ಚಿ, ಬಲಿಪೀಠಕ್ಕೆ ಪಾಪ ವಿಮೋಚನೆ ಮಾಡಿ, ರಕ್ತವನ್ನು ಬಲಿಪೀಠದ ಅಡಿಗೆ ಹೊಯಿದು, ಅದರ ಪಾಪ ಮುಚ್ಚುವದಕ್ಕೆ ಅದನ್ನು ಪರಿಶುದ್ಧ ಮಾ
೧೬ ಡಿದನು. ಮತ್ತು ಕರುಳುಗಳ ಮೇಲಿದ್ದ ಎಲ್ಲಾ ಕೊಬ್ಬನ್ನೂ, ಕಲಿಜೆಯ ಪೊರೆಯನ್ನೂ, ಎರಡು ಹುರುಳಿಕಾಯಿಗಳನ್ನೂ, ಅವುಗಳ ಕೊಬ್ಬನ್ನೂ, ಮೋಶೆ ತಕ್ಕೊಂಡು ಬಲಿಪೀಠದಲ್ಲಿ ಸು
೧೭ ಟ್ಟನು. ಆದರೆ ಹೋರಿಯನ್ನೂ, ಅದರ ತೊಗಲನ್ನೂ, ಮಾಂಸವನ್ನೂ, ಸಗಣಿಯನ್ನೂ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ದಂಡಿನ ಹೊರಗೆ ಬೆಂಕಿಯಿಂದ ಸುಟ್ಟನು.

೧೮ ಆಗ ಹೋಮದ ಟಗರನ್ನು ಅರ್ಪಿಸಿದನು; ಆರೋನನೂ ಅವನ ಮಕ್ಕಳೂ ತಮ್ಮ ಕೈಗಳನ್ನು ಆ ಟಗರಿನ ತಲೆಯ ಮೇ
೧೯ ಲೆ ಇಟ್ಟರು. ಅದನ್ನು ಕೊಯಿದ ಮೇಲೆ, ಮೋಶೆ ರಕ್ತವನ್ನು
೨೦ ಸುತ್ತಲಾಗಿ ಬಲಿಪೀಠಕ್ಕೆ ಚಿಮಿಕಿಸಿದನು. ಮತ್ತು ಟಗರನ್ನು ತುಂಡುಗಳಾಗ ಮಾಡಿದ ಮೇಲೆ, ಮೋಶೆ ತಲೆಯನ್ನೂ, ತುಂಡು
೨೧ ಗಳನ್ನೂ, ಕೊಬ್ಬನ್ನೂ ಸುಟ್ಟನು. ಆದರೆ ಕರುಳುಗಳನ್ನೂ ಕಾಲುಗಳನ್ನೂ ನೀರಿನಲ್ಲಿ ತೊಳೆದನು; ಹಾಗೆ ಮೋಶೆ ಆ ಟಗರನ್ನೆಲ್ಲಾ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಬಲಿಪೀಠದ
೨೨ ಹೋಮವಾಗಿಯೂ, ಸುವಾಸನೆಯಾಗಿಯೂ, ಕರ್ತನಿಗಾದ ದಹನವಾಗಿಯೂ, ಸುಟ್ಟು ಬಿಟ್ಟನು.

೨೩ ಮತ್ತು ಪ್ರತಿಷ್ಠೆಯ ಟಗರಾಗಿರುವ ಆ ಎರಡನೇ ಟಗರನ್ನು ಅರ್ಪಿಸಿದ ಮೇಲೆ, ಆರೋನನೂ ಅವನ ಮಕ್ಕಳೂ ಆ ಟಗರಿ
೨೪ ನ ತಲೆಯ ಮೇಲೆ ಕೈಗಳನ್ನು ಇಟ್ಟರು. ಅದನ್ನು ಕೊಯಿದ ಮೇಲೆ ಮೋಶೆ ಅದರ ರಕ್ತವನ್ನು ತಕ್ಕೊಂಡು, ಆರೋನನ ಬ
ಲ ಕಿವಿಯ ಕೊನೆಗೂ, ಬಲಗೈಯ ಹೆಬ್ಬೆರಳಿಗೂ, ಬಲ ಕಾಲಿನ
೨೫ ಹೆಬ್ಬೆರಳಿಗೂ ಹಚ್ಚಿದನು. ಮತ್ತು ಆರೋನನ ಮಕ್ಕಳನ್ನು ಹತ್ತರ ಬರ ಮಾಡಿದ ಮೇಲೆ, ಮೋಶೆ ಆ ರಕ್ತವನ್ನು ಅವರ ಬಲ
ಕಿವಿಗಳ ಕೊನೆಗೂ, ಬಲ ಕೈಯ ಹೆಬ್ಬೆರಳಿಗೂ, ಬಲ ಕಾಲಿನ
ಹೆಬ್ಬೆರಳಿಗೂ, ಹಚ್ಚಿದನು; ಮೋಶೆ ರಕ್ತವನ್ನು ಬಲಿಪೀಠಕ್ಕೆ
೨೬ ಸುತ್ತಲಾಗಿ ಚಿಮಿಕಿಸಿದನು. ಮತ್ತು ಕೊಬ್ಬನ್ನೂ, ಬಾಲವನ್ನೂ, ಕರುಳುಗಳ ಮೇಲಿರುವ ಎಲ್ಲಾ ಕೊಬ್ಬನ್ನೂ, ಕಲಿಜೆ
ಯ ಪೊರೆಯನ್ನೂ, ಎರಡು ಹುರುಳಿಕಾಯಿಗಳನ್ನೂ, ಅವುಗ
೨೭ ಳ ಕೊಬ್ಬನ್ನೂ, ಬಲ ಮುಂದೊಡೆಯನ್ನೂ ತಕ್ಕೊಂಡು, ಕರ್ತನ ಸನ್ನಿಧಿಯಲ್ಲಿ ಇರುವ ಹುಳಿ ಇಲ್ಲದ ಕೊಟ್ಟಿಯ ಪುಟ್ಟಿ
ಯೊಳಗಿಂದ ಹುಳಿ ಇಲ್ಲದ ಹೋಳಿಗೆ ಒಂದು, ಎಣ್ಣೆ ಕೊಟ್ಟಿ
ಯ ಹೋಳಿಗೆ ಒಂದು, ಕಡುಬು ಒಂದು ತಕ್ಕೊಂಡು, ಆ ಕೊ
ಬ್ಬಿನ ತುಂಡುಗಳ ಮೇಲೆಯೂ ಬಲಮುಂದೊಡೆಯ ಮೇಲೆಯೂ
೨೮ ಇಟ್ಟು, ಅದನ್ನೆಲ್ಲಾ ಆರೋನನ ಕೈಗಳಲ್ಲಿಯೂ ಅವನ ಮಕ್ಕಳ ಕೈಗಳಲ್ಲಿಯೂ ಕೊಟ್ಟು, ಕರ್ತನ ಮುಂದೆ ಅಲ್ಲಾಡಿಸುವ ಬ
೨೯ ಲಿಯಾಗಿ ಅಲ್ಲಾಡಿಸಿದನು. ಆ ಮೇಲೆ ಮೋಶೆ ಅದನ್ನು ಅವರ ಕೈಗಳಿಂದ ತೆಗೆದು, ಬಲಿಪೀಠದಲ್ಲಿ ಹೋಮದ ಮೇಲೆ ಸುಟ್ಟನು; ಅದೇ ಸುವಾಸನೆಯಾದ ಪ್ರತಿಷ್ಠೆಯ ಅರ್ಪಣೆ; ಅದೇ ಕರ್ತ
೩೦ ನಿಗೆ ದಹನ. ಮತ್ತು ಮೋಶೆ ಎಡೆಯನ್ನು ತಕ್ಕೊಂಡು, ಕರ್ತನ ಮುಂದೆ ಅಲ್ಲಾಡಿಸುವ ಬಲಿಯಾಗಿ ಅಲ್ಲಾಡಿಸಿದನು; ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಪ್ರತಿಷ್ಠೆಯ ಟಗರಿನಲ್ಲಿ ಅದೇ ಮೋಶೆಯ ಪಾಲಾಯಿತು.

೩೧ ಇದಲ್ಲದೆ ಮೋಶೆ ಅಭಿಷೇಕಿಸುವ ಎಣ್ಣೆಯನ್ನೂ, ಬಲಿಪೀಠದ ಮೇಲಿದ್ದ ರಕ್ತವನ್ನೂ ತಕ್ಕೊಂಡು, ಆರೋನನ ಮೇಲೆಯೂ ಅವನ ವಸ್ತ್ರಗಳ ಮೇಲೆಯೂ, ಅವನ ಮಕ್ಕಳ ಮೇಲೆಯೂ, ಅವನ ಸಂಗಡ ಇರುವ ಅವನ ಮಕ್ಕಳ ವಸ್ತ್ರಗಳ ಮೇಲೆಯೂ, ಚಿಮಿಕಿಸಿ, ಆರೋನನನ್ನೂ, ಅವನ ವಸ್ತ್ರಗಳನ್ನೂ, ಅವನ ಮಕ್ಕಳನ್ನೂ, ಅವನ ಸಂಗಡ ಇರುವ ಅವನ ಮಕ್ಕಳ ವಸ್ತ್ರಗಳನ್ನೂ ಪರಿಶುದ್ಧ ಮಾಡಿದನು.

೩೨ ಆಗ ಮೋಶೆ ಆರೋನನಿಗೂ ಅವನ ಮಕ್ಕಳಿಗೂ ಹೇಳಿದ್ದೇನಂದರೆ—ಮಾಂಸವನ್ನು ಸಭೆಯ ಗುಡಾರದ ಹೊರಗೆ ಬೇಯಿಸಿರಿ; ಅಲ್ಲಿ ಅದನ್ನೂ, ಪ್ರತಿಷ್ಠೆಯ ಪುಟ್ಟಿಯಲ್ಲಿ ಇರುವ ಕೊಟ್ಟಿಯನ್ನೂ ಉಣ್ಣಬೇಕು; ಆರೋನನೂ ಅವನ ಮಕ್ಕಳೂ
೩೩ ಅದನ್ನು ಉಣ್ಣಬೇಕೆಂದು, ನಾನು ಅಪ್ಪಣೆ ಕೊಟ್ಟೆನಲ್ಲ! ಮತ್ತು ಮಾಂಸದಲ್ಲಿಯೂ ಕೊಟ್ಟಿಯಲ್ಲಿಯೂ ಮಿಕ್ಕದ್ದನ್ನು ಬೆಂ
ಕಿಯಿಂದ ಸುಡಬೇಕು. ಇದಲ್ಲದೆ ಏಳು ದಿವಸಗಳ ಪರ್ಯಂ
ತರಕ್ಕೂ, ನಿಮ್ಮ ಪ್ರತಿಷ್ಠೆಯ ದಿನಗಳು ತೀರುವ ಪರ್ಯಂತ
ರಕ್ಕೂ, ಸಭೆಯ ಗುಡಾರದ ಬಾಗಲನ್ನು ಬಿಟ್ಟು ಹೋಗ ಬೇಡಿ
ರಿ; ಏಳು ದಿವಸ ಅವನು ನಿಮ್ಮನ್ನು ಪ್ರತಿಷ್ಠೆ ಮಾಡುವನು. ಈ
ದಿವಸದಲ್ಲಿ ಮಾಡಿದ ಹಾಗೆ, ನಿಮ್ಮ ಪಾಪ ಮುಚ್ಚುವದಕ್ಕೋ
೩೪ ಸ್ಕರ ಮಾಡ ಬೇಕೆಂದು, ಕರ್ತನು ಆಜ್ಞಾಪಿಸಿದ್ದಾನೆ. ಆದದ
ರಿಂದ ಸಭೆಯ ಗುಡಾರದ ಬಾಗಲ ಬಳಿಯಲ್ಲಿ ಹಗಲು ರಾತ್ರಿ ಏ
ಳು ದಿವಸ ಇದ್ದು, ಕರ್ತನ ಕಾಯಿದೆಯನ್ನು, ನೀವು ಸಾಯದ
೩೫ ಹಾಗೆ, ಕಾಪಾಡ ಬೇಕು; ಹಾಗೆ ನನಗೆ ಅಪ್ಪಣೆ ಆಯಿತು. ಆ
ರೋನನೂ ಅವನ ಮಕ್ಕಳೂ ಕರ್ತನು ಮೋಶೆಯ ಕೈಯಿಂ
ದ ಆಜ್ಞಾಪಿಸಿದ ಕಾರ್ಯಗಳನ್ನೆಲ್ಲಾ ಮಾಡಿದರು.

## ೯. ಸಂಧಿ.

೧ ಎಂಟನೇ ದಿವಸದಲ್ಲಿ ಆದದ್ದೇನಂದರೆ, ಮೋಶೆ ಆರೋನನನ್ನೂ, ಅವನ ಮಕ್ಕಳನ್ನೂ, ಇಸ್ರಾಯೇಲಿನ ಹಿರಿಯರನ್ನೂ
೨ ಕರೆದು, ಆರೋನನಿಗೆ ಹೇಳಿದ್ದೇನಂದರೆ—ನಿನಗೆ ಪಾಪ ಬಲಿ
ಗೋಸ್ಕರ ದನದ ಕರುವನ್ನೂ, ಹೋಮಕ್ಕೋಸ್ಕರ ಟಗರನ್ನೂ ಪೂರ್ಣಾಂಗದವುಗಳಾಗಿ ತಕ್ಕೊಂಡು, ಅವುಗಳನ್ನು
೩ ಕರ್ತನ ಸನ್ನಿಧಿಗೆ ಅರ್ಪಿಸು. ಮತ್ತು ಇಸ್ರಾಯೇಲ್ ಮಕ್ಕಳಿಗೆ ನೀನು ಹೇಳ ಬೇಕಾದದ್ದೇನಂದರೆ—ಕರ್ತನ ಸನ್ನಿಧಿಯಲ್ಲಿ ಅ
ರ್ಪಿಸುವದಕ್ಕೋಸ್ಕರ, ಪಾಪ ಬಲಿಗೋಸ್ಕರ ಮೇಕೆಗಳ
ಹೋತನ್ನೂ, ಹೋಮಕ್ಕೋಸ್ಕರ ಪೂರ್ಣಾಂಗವಾದ ಒಂ
ದು ವರುಷದ ಕರುವನ್ನೂ, ಕುರಿ ಹುರಿಯನ್ನೂ, ಸಮಾಧಾನ
೪ ಬಲಿಗೋಸ್ಕರ ಎತ್ತನ್ನೂ, ಟಗರನ್ನೂ, ಎಣ್ಣೆ ಹೊಯಿದ ಕಾಣಿಕೆಯ ಸಹಿತವಾಗಿ ತಕ್ಕೊಳ್ಳಿರಿ; ಯಾಕಂದರೆ ಈ ಹೊತ್ತು ಕರ್ತನು ನಿಮಗೆ ಕಾಣಿಸಿ ಕೊಳ್ಳುವನು.

೫ ಆಗ ಅವರು ಮೋಶೆಯು ಆಜ್ಞಾಪಿಸಿದ್ದನ್ನು ಸಭೆಯ ಗುಡಾರದ ಮುಂದೆ ತಕ್ಕೊಂಡು ಬಂದರು; ಸಭೆಯೆಲ್ಲಾ ಹತ್ತರ ಬಂದು
೬ ಕರ್ತನ ಮುಂದೆ ನಿಂತಿತು. ಆಗ ಮೋಶೆ—ಕರ್ತನು ಆಜ್ಞಾಪಿಸಿದ ಕಾರ್ಯ ಇದೇ; ಅದನ್ನು ಮಾಡಿರಿ; ಆಗ ಕರ್ತನ ಘನವು ನಿಮಗೆ ಕಾಣಿಸಿ ಕೊಳ್ಳುವದು, ಅಂದನು.





೭ ಮತ್ತು ಮೋಶೆ ಆರೋನನಿಗೆ—ಬಲಿಪೀಠದ ಸಮೀಪಕ್ಕೆ ಬಂದು, ಕರ್ತನು ಆಜ್ಞಾಪಿಸಿದ ಹಾಗೆ ನಿನ್ನ ಪಾಪ ಬಲಿಯನ್ನೂ, ನಿನ್ನ ಹೋಮವನ್ನೂ ಮಾಡಿ, ನಿನಗೋಸ್ಕರವೂ ಜನರಿಗೋಸ್ಕರವೂ ಪಾಪ ಮುಚ್ಚಿ, ಜನರ ಅರ್ಪಣೆಯನ್ನು ಮಾಡಿ, ಅ
ವರಿಗೋಸ್ಕರವೂ ಪಾಪ ಮುಚ್ಚು, ಅಂದನು.

೮ ಆಗ ಆರೋನನು ಬಲಿಪೀಠದ ಸಮೀಪಕ್ಕೆ ಹೋಗಿ, ತನ
೯ ಗೋಸ್ಕರವಾದ ಪಾಪ ಬಲಿಯ ಕರುವನ್ನು ಕೊಯಿದನು. ಆ
ರೋನನ ಮಕ್ಕಳು ರಕ್ತವನ್ನು ಅವನ ಬಲಗೆ ತಂದಾಗ, ಅವನು
ರಕ್ತದಲ್ಲಿ ಬೆರಳನ್ನು ಅದ್ದಿ, ಬಲಿಪೀಠದ ಕೊಂಬುಗ್ಗಳಿಗೆ ಹಚ್ಚಿ,
೧೦ ಆ ರಕ್ತವನ್ನು ಬಲಿಪೀಠದ ಅಡಿಗೆ ಹೊಯಿದನು. ಮತ್ತು ಪಾ
ಪ ಬಲಿಯಲ್ಲಿ ಕೊಬ್ಬನ್ನೂ ಹುರುಳಿಕಾಯಿಗಳನ್ನೂ ಕಲಿಜೆಯ
ಪೊರೆಯನ್ನೂ, ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ, ಬಲಿ
೧೧ ಪೀಠದಲ್ಲಿ ಸುಟ್ಟನು. ಆದರೆ ಮಾಂಸವನ್ನೂ ತೊಗಲನ್ನೂ
೧೨ ದಂಡಿನ ಹೊರಗೆ ಬೆಂಕಿಯಲ್ಲಿ ಸುಟ್ಟನು. ಮತ್ತು ಹೋಮವನ್ನು ಕೊಯಿದನು, ಆರೋನನ ಮಕ್ಕಳು ರಕ್ತವನ್ನು ಅವನಿಗೆ ತಂದು ಕೊಟ್ಟರು; ಅವನು ಅದನ್ನು ಬಲಿಪೀಠಕ್ಕೆ ಸುತ್ತಲಾಗಿ
೧೩ ಚಿಮಿಕಿಸಿದನು. ತುಂಡುಗಳಾಗಿರುವ ಹೋಮವನ್ನೂ ತಲೆಯ
ನ್ನೂ ಅವನಿಗೆ ತಂದು ಕೊಟ್ಟ ಮೇಲೆ, ಅವನು ಅವುಗಳನ್ನು
೧೪ ಬಲಿಪೀಠದಲ್ಲಿ ಸುಟ್ಟು ಬಿಟ್ಟನು. ಮತ್ತು ಕರುಳುಗಳನ್ನೂ ಕಾಲುಗಳನ್ನೂ ತೊಳೆದು, ಆ ಹೋಮದ ಮೇಲೆ ಬಲಿಪೀಠದಲ್ಲಿ
೧೫ ಸುಟ್ಟು ಬಿಟ್ಟನು. ಆ ಮೇಲೆ ಜನರ ಅರ್ಪಣೆಯನ್ನು ತಂದು, ಜನರಿಗೋಸ್ಕರವಾದ ಪಾಪ ಬಲಿಯ ಹೋತನ್ನು ತಕ್ಕೊಂಡು, ಕೊಯಿದು,
೧೬ ಮೊದಲಿನದರ ಹಾಗೆ ಪಾಪ ಬಲಿಯಾಗಿ ಅರ್ಪಿಸಿದನು. ಮತ್ತು ಹೋಮವನ್ನು ಅರ್ಪಿಸಿ, ನ್ಯಾಯದ ಪ್ರಕಾರ ಮಾಡಿದನು.
೧೭ ಮತ್ತು ಕಾಣಿಕೆಯನ್ನು ತಂದು, ಅದರಲ್ಲಿ ಕೈ ತುಂಬ ತಕ್ಕೊಂ
ತು, ಹೊತ್ತಾರೆಯ ಹೋಮದ ಹೊರ್ತಾಗಿ ಅದನ್ನು ಬಲಿಪೀ
೧೮ ಠದಲ್ಲಿ ಸುಟ್ಟನು. ಮತ್ತು ಆ ಎತ್ತನ್ನೂ ಟಗರನ್ನೂ ಜನರಿಗೋಸ್ಕರ ಸಮಾಧಾನ ಬಲಿಯಾಗಿ ಕೊಯಿದನು; ಆರೋನನ ಮ
ಕ್ಕಳು ಅವನಿಗೆ ರಕ್ತವನ್ನು ಕೊಟ್ಟ ಮೇಲೆ, ಅದನ್ನು ಬಲಿಪೀಠ
೧೯ ಕ್ಕೆ ಸುತ್ತಲಾಗಿ ಚಿಮಿಕಿಸಿದನು. ಮತ್ತು ಎತ್ತಿನ ಟಗರಿನ ಕೊ
ಬ್ಬು ತುಂಡುಗಳನ್ನೂ, ಬಾಲವನ್ನೂ, ಕರುಳುಗಳ ಮುಚ್ಚಳವ
ನ್ನೂ, ಹುರುಳಿಕಾಯಿಗಳನ್ನೂ ಕಲಿಜೆಯ ಪೊರೆಯನ್ನೂ ಕೊ
೨೦ ಟ್ಟರು. ಆ ಕೊಬ್ಬು ತುಂಡುಗಳನ್ನು ಅವರು ಎದೆಗಳ ಮೇಲೆ ಇಟ್ಟರು; ಅವನು ಆ ಕೊಬ್ಬು ತುಂಡುಗಳನ್ನು ಬಲಿಪೀಠದಲ್ಲಿ
೨೧ ಸುಟ್ಟು ಬಿಟ್ಟನು. ಮತ್ತು ಆ ಎದೆಗಳನ್ನೂ ಬಲ ಮುಂದೊಡೆಯನ್ನೂ ಆರೋನನು ಕರ್ತನ ಸನ್ನಿಧಿಯಲ್ಲಿ ಅಲ್ಲಾಡಿಸುವ ಬಲಿಯಾಗಿ, ಮೋಶೆ ಆಜ್ಞಾಪಿಸಿದ ಹಾಗೆ, ಅಲ್ಲಾಡಿಸಿದನು.

೨೨ ಆಗ ಆರೋನನು ಪಾಪ ಬಲಿಯನ್ನೂ, ಹೋಮವನ್ನೂ, ಸಮಾಧಾನ ಬಲಿಯನ್ನೂ ಕೊಟ್ಟ ಮೇಲೆ, ತನ್ನ ಕೈಗಳನ್ನು ಜನರ ಮೇಲೆ ಎತ್ತಿ, ಅವರನ್ನು ಆಶೀರ್ವದಿಸಿ, ಇಳಿದು ಬಂದ
೨೩ ನು. ಮತ್ತು ಮೋಶೆಯೂ ಆರೋನನೂ ಸಭೆಯ ಗುಡಾರದಲ್ಲಿ ಪ್ರವೇಶಿಸಿ, ಹೊರಗೆ ಬಂದು, ಜನರನ್ನು ಆಶೀರ್ವದಿಸಿದರು;
೨೪ ಆಗ ಕರ್ತನ ಘನವು ಜನರೆಲ್ಲರ ಕಡೆಗೆ ಕಾಣಬಂತು. ಆಗ ಬೆಂಕಿ ಕರ್ತನ ಸನ್ನಿಧಿಯಿಂದ ಹೊರಟು, ಬಲಿಪೀಠದ ಮೇಲೆ ಹೋಮವನ್ನೂ ಕೊಬ್ಬು ತುಂಡುಗಳನ್ನೂ ದಹಿಸಿ ಬಿಟ್ಟಿತು; ಜನರೆಲ್ಲಾ ನೋಡಿ, ಉತ್ಸಾಹ ಧ್ವನಿ ಮಾಡಿ, ಮೋಶೆ ಕಳ್ಳಗಾಗಿ ಬಿದ್ದರು.

## ೧೦. ಸಂಧಿ.

೧ ಇದಲ್ಲದೆ ಆರೋನನ ಮಕ್ಕಳಾದ ನಾದಬನೂ ಅಬೀಹುವೂ ತಮ್ಮ ತಮ್ಮ ಅಗ್ನಿ ಪಾತ್ರೆಗಳನ್ನು ತಕ್ಕೊಂಡು, ಅವುಗಳಲ್ಲಿ ಬೆಂ
ಕಿಯನ್ನು ಮಡಗಿ, ಧೂಪವನ್ನು ಮೇಲಿಟ್ಟು, ಕರ್ತನು ತಮಗೆ ಆಜ್ಞಾಪಿಸದ ಬೇರೆ ಬೆಂಕಿಯನ್ನು ಕರ್ತನ ಸನ್ನಿಧಿಗೆ ಅರ್ಪಿಸಿದ
೨ ರು. ಆಗ ಕರ್ತನ ಸನ್ನಿಧಿಯಿಂದ ಬೆಂಕಿ ಹೊರಟು, ಅವರನ್ನು
೩ ತಿಂದು ಬಿಟ್ಟಿತು; ಅವರು ಕರ್ತನ ಮುಂದೆ ಸತ್ತರು. ಆಗ ಮೋಶೆ ಆರೋನನಿಗೆ ಹೇಳಿದ್ದೇನಂದರೆ—ಕರ್ತನು ಹೇಳಿದ್ದು ಇದೇ.
ಏನಂದರೆ, ನನಗೆ ಸಮೀಪಿಸುವದರಲ್ಲಿ ಪರಿಶುದ್ಧ ಮಾಡಲ್ಪಡುವೆನು;
ಸಮಸ್ತ ಜನರ ಸನ್ನಿಧಿಯಲ್ಲಿ ಘನ ಪಡುವೆನು. ಆರೋನನು ಸು
ಮ್ಮನಿದ್ದನು. ಆಗ ಮೋಶೆ ಆರೋನನ ಚಿಕ್ಕಪ್ಪನಾದ ಉಜ್ಜಿಯೇ
೪ ಲನ ಮಕ್ಕಳಾಗಿರುವ ಮಿಶಾಯೇಲನನ್ನೂ ಎಲ್ಶಾಫನನನ್ನೂ ಕರೆದು—ಸಮೀಪ ಬನ್ನಿರಿ; ನಿಮ್ಮ ಸಹೋದರರನ್ನು ಪರಿಶುದ್ಧ ಸ್ಥ
ಳದೊಳಗಿಂದ ದಂಡಿನ ಹೊರಗೆ ತಕ್ಕೊಂಡು ಹೋಗಿರಿ, ಅಂದನು.
೫ ಅವರು ಸಮೀಪ ಬಂದು, ಅಂಗಿಗಳನ್ನು ತೊಟ್ಟು ಕೊಂಡವರಾದ ಅವರನ್ನು ಎತ್ತಿ, ಮೋಶೆ ಆಜ್ಞಾಪಿಸಿದ ಹಾಗೆ, ದಂಡಿನ ಹೊರಗೆ
ತಕ್ಕೊಂಡು ಹೋದರು.

೬ ಮತ್ತು ಮೋಶೆ ಆರೋನನಿಗೂ, ಅವನ ಮಕ್ಕಳಾದ ಎಲೆಯಾಜರನಿಗೂ, ಇಥಮಾರನಿಗೂ ಹೇಳಿದ್ದೇನಂದರೆ—ನೀವು ಸಾ
ಯದ ಹಾಗೆಯೂ, ಸಭೆ ಎಲ್ಲಾದರ ಮೇಲೆ ಕೌದ್ರು ಬಾರದ ಹಾಗೆ
ಯೂ, ನಿಮ್ಮ ತಲೆಗಳನ್ನು ಬರಿದು ಮಾಡ ಬೇಡಿರಿ; ನಿಮ್ಮ ವ
ಸ್ತ್ರಗಳನ್ನು ಹರಿದು ಬಿಡ ಬೇಡಿರಿ; ಆದರೆ ನಿಮ್ಮ ಸಹೋದರರಾ
ಗಿರುವ ಇಸ್ರಯೇಲ್ ಮಕ್ಕಳ ಮನೆಯೆಲ್ಲಾ ಕರ್ತನು ಉರಿಯು
೭ ಮಾಡಿದ ಈ ಉರಿಯ ನಿಮಿತ್ತ ಅಳ ಬಹುದು. ಆದರೆ, ನೀವು ಸಾಯದ ಹಾಗೆ, ಸಭೆಯ ಗುಡಾರದ ಬಾಗಲನ್ನು ಬಿಟ್ಟು ಹೋ
ಗ ಬಾರದು; ಯಾಕಂದರೆ ಕರ್ತನ ಅಭಿಷೇಕಿಸುವ ಎಣ್ಣೆ ನಿಮ್ಮ ಮೇಲೆ ಅದೆ. ಮೋಶೆ ಹೇಳಿದ ಹಾಗೆ ಅವರು ಮಾಡಿದರು.

೮ ಆಗ ಕರ್ತನು ಮಾತಾಡಿ ಆರೋನನಿಗೆ ಹೇಳಿದ್ದೇನಂದರೆ—
೯ ನೀವು ಸಾಯದ ಹಾಗೆ, ದ್ರಾಕ್ಷೇ ರಸವನ್ನೂ ಮದ್ಯಪಾನವನ್ನೂ ನೀನೂ ನಿನ್ನ ಮಕ್ಕಳೂ, ಸಭೆಯ ಗುಡಾರಕ್ಕೆ ಬರುವ ಸಮಯ
೧೦ ದಲ್ಲಿ, ಕುಡಿಯ ಬೇಡಿರಿ; ಪರಿಶುದ್ಧವಾದದ್ದಕ್ಕೂ ಹೊಲೆಯಾದದ್ದಕ್ಕೂ, ಅಪವಿತ್ರವಾದದ್ದಕ್ಕೂ ಶುದ್ಧವಾದದ್ದಕ್ಕೂ ಹೆಚ್ಚು ಕಡಿಮೆ
೧೧ ಮಾಡುವ ಹಾಗೆಯೂ, ಕರ್ತನು ಮೋಶೆಯ ಕೈಯಿಂದ ಹೇಳಿದ ನೇಮಗಳನ್ನೆಲ್ಲಾ ನೀವು ಇಸ್ರಯೇಲ್ ಮಕ್ಕಳಿಗೆ ಬೋಧಿಸುವ ಹಾಗೆಯೂ, ಇದೇ ನಿಮ್ಮ ಸಂತತಿಗಳಿಗೆ ನಿತ್ಯವಾದ ನೇಮ.

೧೨ ಆಗ ಮೋಶೆ ಆರೋನನಿಗೂ ಉಳಿದ ಅವನ ಮಕ್ಕಳಾಗಿರುವ ಎಲೆಯಾಜರನಿಗೂ ಇಥಮಾರನಿಗೂ ಹೇಳಿದ್ದೇನಂದರೆ—ಕ
ರ್ತನ ದಹನಗಳಲ್ಲಿ ಮಿಕ್ಕ ಕಾಣಿಕೆಯನ್ನು ತಕ್ಕೊಂಡು, ಬಲಿ
ಪೀಠದ ಬಳಿಯಲ್ಲಿ ಹುಳಿ ಇಲ್ಲದೆ ಉಣ್ಣಿರಿ; ಯಾಕಂದರೆ ಅದು
೧೩ ಮಹಾ ಪರಿಶುದ್ಧವಾದದ್ದು. ಪರಿಶುದ್ಧ ಸ್ಥಳದಲ್ಲಿ ಅದನ್ನು ಉಣ್ಣಬೇಕು; ಯಾಕಂದರೆ ಕರ್ತನ ದಹನಗಳಲ್ಲಿ ಇದೇ ನಿನಗೂ ನಿನ್ನ ಮ

೧೪ ಕೈಗಳಿಗೂ ನೇಮವಾಗಿವೆ; ಹಾಗೆ ಅಪ್ಪಣೆ ಹೊಂದಿದ್ದೇನೆ. ಮತ್ತು
ಅಲ್ಲಾಡಿಸುವ ಎದೆಯನ್ನೂ, ಎತ್ತುವ ಮುಂದೊಡೆಯನ್ನೂ ನೀ
ನು ನಿನ್ನ ಕುಮಾರ ಕುಮಾರ್ತೆಗಳ ಸಂಗಡ ಪರಿಶುದ್ಧ ಸ್ಥಳದಲ್ಲಿ
ಉಣ್ಣಬೇಕು; ಯಾಕಂದರೆ ಇದೇ ಇಸ್ರಯೇಲ್ ಮಕ್ಕಳ ಸಮಾ
ಧಾನ ಬಲಿಗಳಲ್ಲಿ ನಿನಗೂ ನಿನ್ನ ಮಕ್ಕಳಿಗೂ ನೇಮವಾಗಿ ಕೊ
೧೫ ಡಲ್ಪಟ್ಟಿದೆ. ಎತ್ತುವ ಮುಂದೊಡೆಯನ್ನೂ ಅಲ್ಲಾಡಿಸುವ ಎದೆಯ
ನ್ನೂ, ಅವರು ಸುಡ ತಕ್ಕ ಕೊಬ್ಬು ತುಂಡುಗಳ ಸಂಗಡ, ಕರ್ತನ
ಮುಂದೆ ಅಲ್ಲಾಡಿಸುವದಕ್ಕೆ ತರಬೇಕು; ಕರ್ತನು ಆಜ್ಞಾಪಿಸಿದ
ಹಾಗೆ, ಅವು ನಿನಗೂ ನಿನ್ನ ಸಂಗಡ ಇರುವ ನಿನ್ನ ಮಕ್ಕಳಿಗೂ
ನಿತ್ಯ ನೇಮವಾಗಿ ಸಿಕ್ಕಬೇಕು.

೧೬ ಇದಲ್ಲದೆ ಮೋಶೆ ಪಾಪ ಬಲಿಯ ಹೋತನ್ನು ಹುಡುಕಿದಾಗ,
ಅಗೋ, ಅದು ಸುಟ್ಟು ಹೋಗಿತ್ತು; ಅವನು ಆರೋನನ ಉಳಿದ
ಮಕ್ಕಳಾಗಿರುವ ಎಲೆಯಾಜರನಿಗೂ ಇಥಮಾರನಿಗೂ ಕೋಪ
೧೭ ಮಾಡಿ ಹೇಳ್ದೆನಂದರೆ—ಯಾಕೆ ನೀವು ಪಾಪ ಬಲಿಯನ್ನು ಪ
ರಿಶುದ್ಧ ಸ್ಥಳದಲ್ಲಿ ಉಣ್ಣಲಿಲ್ಲ! ಅದು ಮಹಾ ಪರಿಶುದ್ಧವಾದದ್ದು;
ಸಭೆಯ ಅಕ್ರಮವನ್ನು ಹೊತ್ತು ಕೊಳ್ಳುವದಕ್ಕೋಸ್ಕರವೂ, ಕ
ರ್ತನ ಸನ್ನಿಧಿಯಲ್ಲಿ ಅವರ ಪಾಪ ಮುಚ್ಚುವದಕ್ಕೋಸ್ಕರವೂ,
೧೮ ಅದನ್ನು ನಿಮಗೆ ಕೊಟ್ಟಿದ್ದಾನೆ. ಇಗೋ, ಅದರ ರಕ್ತವು ಪರಿಶು
ದ್ಧ ಸ್ಥಳಕ್ಕೆ, ಸನ್ನಿಧಾನಕ್ಕೆ, ತರಲ್ಪಡಲಿಲ್ಲ; ನಾನು ಅಪ್ಪಣೆ ಕೊ
ಟ್ಟ ಹಾಗೆ ಪರಿಶುದ್ಧ ಸ್ಥಳದಲ್ಲಿ ಅದನ್ನು ಉಣ್ಣಬೇಕಾಗಿತ್ತು.
೧೯ ಮತ್ತು ಆರೋನನು ಮೋಶೆಗೆ—ಇಗೋ, ಈ ಹೊತ್ತು ತಮ್ಮ
ಪಾಪ ಬಲಿಯನ್ನೂ ಹೋಮವನ್ನೂ ಕರ್ತನ ಸನ್ನಿಧಿಗೆ ತಂದಾ
ಗ, ನನಗೆ ಇಂಥವುಗಳು ಸಂಭವಿಸಿದವು; ನಾನು ಈ ಹೊತ್ತು ಪಾ
೨೦ ಪ ಬಲಿಯನ್ನು ಉಂಡರೆ, ಕರ್ತನ ದೃಷ್ಟಿಗೆ ಚನ್ನಾಗಿರುವ
ದೋ! ಅಂದನು. ಮೋಶೆ ಕೇಳಿದಾಗ, ಅವನ ದೃಷ್ಟಿಗೆ ಚನ್ನಾ
ಗಿತ್ತು.

## ೧೧. ಸಂಧಿ.

೧ ಇದಲ್ಲದೆ ಕರ್ತನು ಮೋಶೆಗೂ ಆರೋನನಿಗೂ ಮಾತಾಡಿ
೨ ಹೇಳ್ದೆನಂದರೆ—ಇಸ್ರಯೇಲ್ ಮಕ್ಕಳಿಗೆ ನೀವು ಹೀಗೆ ಮಾತಾ
ಡಬೇಕು—ಭೂಮಿಯ ಮೇಲಿರುವ ಸಮಸ್ತ ಮೃಗಗಳಲ್ಲಿ ನೀ
೩ ವು ತಿನ್ನ ತಕ್ಕ ಜೀವಿಗಳು ಇವೇ. ಮೃಗ ಜಾತಿಯಲ್ಲಿ ಗೊರಿ
ಕೆಯನ್ನು ಭೇದಿಸಿ, ನಖವನ್ನು ವಿಭಾಗಿಸಿ, ನೆಮರು ಹಾಕುವಂಥಾ
೪ ದ್ದು ಯಾವದೋ, ಅದನ್ನು ತಿನ್ನ ಬಹುದು. ಆದರೆ ನೆಮರು
ಹಾಕುವವುಗಳಲ್ಲಿಯೂ, ಗೊರಿಕೆಯನ್ನು ಭೇದಿಸುವವುಗಳಲ್ಲಿ
ಯೂ ಇವುಗಳನ್ನು ತಿನ್ನ ಬಾರದು—ಒಂಟೆಯನ್ನು; ಯಾಕಂ
ದರೆ ಅದು ನೆಮರು ಹಾಕಿದರೂ, ಗೊರಿಕೆಯನ್ನು ಭೇದಿಸುವದಿಲ್ಲ;
೫ ಅದು ನಿಮಗೆ ಅಶುದ್ಧ. ಮತ್ತು ಕುಶಿ ಪೊಲವನ್ನು; ಅದು ನೆಮ
ರು ಹಾಕಿದರೂ, ಗೊರಿಕೆಯನ್ನು ಭೇದಿಸುವದಿಲ್ಲ; ಅದು ನಿಮಗೆ
೬ ಅಶುದ್ಧ. ಮತ್ತು ಪೊಲವನ್ನು; ಅದು ನೆಮರು ಹಾಕಿದರೂ, ಗೊ
೭ ರಿಕೆಯನ್ನು ಭೇದಿಸುವದಿಲ್ಲ; ಅದು ನಿಮಗೆ ಅಶುದ್ಧ. ಮತ್ತು ಹಂ
ದಿಯನ್ನು; ಅದು ಗೊರಿಕೆಯನ್ನು ಭೇದಿಸಿ, ನಖವನ್ನು ವಿಭಾಗಿಸಿ
ದರೂ, ನೆಮರು ಹಾಕುವದಿಲ್ಲ; ಅದು ನಿಮಗೆ ಅಶುದ್ಧ. ಅವುಗ
ಳ ಮಾಂಸವನ್ನು ತಿನ್ನ ಬಾರದು, ಅವುಗಳ ಹೆಣವನ್ನು ಮುಟ್ಟ
ಬಾರದು; ಅವು ನಿಮಗೆ ಅಶುದ್ಧವಾಗಿವೆ.

೮ ನೀರಿನೊಳಗಿರುವ ಎಲ್ಲವುಗಳಲ್ಲಿ ಇವುಗಳನ್ನು ತಿನ್ನ ಬಹುದು
—ನೀರಿನಲ್ಲಿಯೂ, ಸಮುದ್ರಗಳಲ್ಲಿಯೂ, ನದಿಗಳಲ್ಲಿಯೂ ರೆ
೯ ಕ್ಕೆಯೂ ಪಿಪ್ಪೆಯೂ ಉಳ್ಳವುಗಳಲ್ಲೆಲ್ಲಾ ತಿನ್ನ ಬಹುದು. ನೀರಿನ
ಲ್ಲಿ ಹರಿದಾಡುವ ಎಲ್ಲವುಗಳಲ್ಲಿಯೂ, ನೀರಿನಲ್ಲಿ ಇರುವ ಎಲ್ಲಾ
ಪ್ರಾಣಿಗಳಲ್ಲಿಯೂ, ಸಮುದ್ರಗಳಲ್ಲಿ ಆಗಲಿ, ನದಿಗಳಲ್ಲಿ ಆಗಲಿ,
೧೦ ರೆಕ್ಕೆಯೂ ಪಿಪ್ಪೆಯೂ ಇಲ್ಲದವುಗಳು ನಿಮಗೆ ಅಸಹ್ಯವು. ಅವು
ನಿಮಗೆ ಅಸಹ್ಯವಾಗಿರ ಬೇಕು; ಅವುಗಳ ಮಾಂಸವನ್ನು ತಿನ್ನ
೧೧ ಬಾರದು; ಅವುಗಳ ಹೆಣಗಳಿಗೆ ಅಸಹ್ಯ ಪಡ ಬೇಕು. ನೀರಿನಲ್ಲಿ
ರೆಕ್ಕೆಯೂ ಪಿಪ್ಪೆಯೂ ಇಲ್ಲದೆ ಇರುವಂಥಾದ್ದೆಲ್ಲಾ ನಿಮಗೆ ಅಸ
ಹ್ಯವು.

೧೨ ಪಕ್ಷಿ ಜಾತಿಯಲ್ಲಿ ಇವುಗಳಿಗೆ ಅಸಹ್ಯ ಪಡ ಬೇಕು; ಅವು ಅ
ಸಹ್ಯವಾಗಿರುವದರಿಂದ, ಅವುಗಳನ್ನು ತಿನ್ನ ಬಾರದು; ಯಾವದಂ
೧೩ ದರೆ—ಹದ್ದೂ, ನೀರು ಹದ್ದೂ, ಕೊರಕಂಚೆಯೂ, ಜಾತ್ಯನು
ಸಾರವಾದ ಭೈರಿಯೂ, ಗಿಡುಗವೂ, ಜಾತ್ಯನುಸಾರವಾದ ಸಕಲ
೧೪ ಕಾಗೆಯೂ, ಉಸ್ಟ್ರಪಕ್ಷಿಯೂ, ಗೂಗೆಯೂ, ಕಕಲ್ ಕಾಗೆ
೧೫ ಯೂ, ಜಾತ್ಯನುಸಾರವಾದ ಪ್ಯಾಗೆಯೂ, ಇಟ್ಟೀರಿಯೂ, ಬೆ
೧೬ ಳ್ಳಕ್ಕಿಯೂ, ಗುಡ್ಡ ಗೂಗೆಯೂ. ಕೊಕ್ಕರೆಯೂ, ನೀರು ಕೋ
೧೭ ಳಿಯೂ, ಹೊಣ ಹದ್ದೂ, ನೀರು ಕೊಕ್ಕರೆಯೂ ಜಾತ್ಯನುಸಾ
೧೮ ರವಾದ ಬಕವೂ, ಬುಡ್ಡ ಕೋಳಿಯೂ, ರಾತ್ರಿ ಗೀಜುಗವೂ.

೧೯ ರೆಕ್ಕೆಗಳುಳ್ಳಂಥ, ನಾಲ್ಕು ಕಾಲಾಗಿ ನಡಿಯುವಂಥ ಕ್ರಿಮಿಗಳೆ
೨೦ ಲ್ಲಾ ನಿಮಗೆ ಅಸಹ್ಯ. ಆದರೆ ರೆಕ್ಕೆಗಳುಳ್ಳಂಥ, ನಾಲ್ಕು ಕಾಲಾಗಿ
ನಡಿಯುವಂಥ, ಸಕಲ ಕ್ರಿಮಿಗಳಲ್ಲಿ ಇವುಗಳನ್ನು ತಿನ್ನ ಬಹುದು.
ಯಾವದೆಂದರೆ, ಕಾಲುಗಳ ಮೇಲ್ಭಾಗದಲ್ಲಿ, ಭೂಮಿಯ ಮೇಲೆ
೨೧ ಹಾರುವದಕ್ಕೋಸ್ಕರ, ತೊಡೆಯುಳ್ಳವುಗಳೇ. ಅವುಗಳಲ್ಲಿ ತಿ
ನ್ನ ತಕ್ಕವುಗಳು ಇವೇ—ಅರ್ಬೆ ಜಾತಿಯೂ, ಸೋಳ್ಳಮ ಜಾ
೨೨ ತಿಯೂ, ಹರ್ಗೋಲ್ ಜಾತಿಯೂ, ಹಾಗಬ ಜಾತಿಯೂ. ಆದ
ರೆ ನಾಲ್ಕು ಕಾಲುಳ್ಳ ರೆಕ್ಕೆಯುಳ್ಳ ಬೇರೆ ಕ್ರಿಮಿಗಳೆಲ್ಲಾ ನಿಮಗೆ
೨೩ ಅಸಹ್ಯ. ಇವುಗಳಿಂದ ನೀವು ಅಶುದ್ಧರಾಗುವಿರಿ; ಅವುಗಳ ಹೆಣ
ವನ್ನು ಮುಟ್ಟುವವನು ಸಾಯಂಕಾಲದ ಪರ್ಯಂತರ ಅಶುದ್ಧ
೨೪ ನಾಗಿರುವನು. ಮತ್ತು ಅವುಗಳ ಹೆಣವನ್ನು ಹೊರುವವೆಲ್ಲಾ
ವಸ್ತ್ರಗಳನ್ನು ಒಗೆದು ಕೊಂಡು, ಸಾಯಂಕಾಲದ ಪರ್ಯಂತರ
ಅಶುದ್ಧರಾಗಿರುವರು.

೨೫ ಸಮಸ್ತ ಮೃಗ ಜಾತಿಯಲ್ಲಿ ಗೊರಿಕೆಯನ್ನು ಭೇದಿಸಿ, ನಖ
ವನ್ನು ವಿಭಾಗಿಸದೆ, ನೆಮರು ಹಾಕದೆ ಇರುವಂಥಾದ್ದೆಲ್ಲಾ ನಿಮಗೆ
ಅಶುದ್ಧ; ಅವುಗಳನ್ನು ಮುಟ್ಟುವವರೆಲ್ಲಾ ಅಶುದ್ಧರಾಗುವರು.
೨೬ ಮತ್ತು ನಾಲ್ಕು ಕಾಲಾಗಿ ನಡಿಯುವಂಥ, ಕೈಯಾಗಿ ಹೋಗು
ವಂಥ, ಸಮಸ್ತ ಜೀವಿಗಳು ಅದೇ ನಿಮಗೆ ಅಶುದ್ಧವಾಗಿವೆ; ಅವು
ಗಳ ಹೆಣಗಳನ್ನು ಮುಟ್ಟುವವರೆಲ್ಲಾ ಸಾಯಂಕಾಲದ ಪರ್ಯಂ
೨೭ ತ ಅಶುದ್ಧರಾಗಿರುವರು. ಅವುಗಳ ಹೆಣವನ್ನು ಹೊರುವವನು
ವಸ್ತ್ರಗಳನ್ನು ಒಗೆದು ಕೊಂಡು, ಸಾಯಂಕಾಲದ ಪರ್ಯಂತರ
ಅಶುದ್ಧನಾಗಿರುವನು; ಅವು ನಿಮಗೆ ಅಶುದ್ಧವಾದವುಗಳೇ.

೨೮ ಮತ್ತು ಭೂಮಿಯ ಮೇಲೆ ಹರಿದಾಡುವ ಜಂತುಗಳಲ್ಲಿ ಇವೇ
ನಿಮಗೆ ಅಶುದ್ಧವಾಗಿವೆ—ಅಂಥಕ ಜಂತೂ, ಇಲಿಯೂ, ಜಾತ್ಯನು
೩೦ ಸಾರವಾದ ಕೂರ್ಮವೂ, ಅರಣಿಯೂ, ಹೊಸ್ಲೆಕಟಿವೂ, ಹ
೩೧ ಲ್ಲಿಯೂ, ನರ್ಕೆಯೂ, ಹಸುರು ಓತಿಯೂ, ಸಮಸ್ತ ಜಂತು





ಗಳಲ್ಲಿ ಇವೇ ನಿಮಗೆ ಅಶುದ್ಧವಾಗಿವೆ. ಸತ್ತು ಹೋಗಿರುವ ಇವು
ಗಳನ್ನು ಮುಟ್ಟುವವರೆಲ್ಲಾ ಸಾಯಂಕಾಲದ ಪರ್ಯಂತರ ಅಶು
೩೨ ದ್ಧರಾಗಿರುವರು. ಮತ್ತು ಇವುಗಳಲ್ಲಿ ಒಂದು ಸತ್ತು ಹೋಗಿ,
ಯಾವದರ ಮೇಲೆ ಬೀಳುವದೋ, ಅದೆಲ್ಲಾ ಅಶುದ್ಧವಾಗ ಬೇ
ಕು; ಮರದ ಸಾಮಾನಾಗಲಿ, ಬಟ್ಟೆಯಾಗಲಿ, ಚರ್ಮವಾಗಲಿ,
ಗೋಣಿಯಾಗಲಿ, ಕೆಲಸ ಮಾಡುವ ಯಾವ ಸಾಮಾನಾಗಲಿ,
ನೀರಿನಲ್ಲಿ ಇಡಲ್ಪಟ್ಟು, ಸಾಯಂಕಾಲದ ಪರ್ಯಂತರ ಅಶುದ್ಧ
೩೩ ವಾಗಿರ ಬೇಕು; ಆ ಮೇಲೆ ಶುದ್ಧವಾಗಿರುವದು. ಮತ್ತು ಇವುಗಳ
ಲ್ಲಿ ಒಂದು ಯಾವದೊಂದು ಮಣ್ಣಿನ ಪಾತ್ರೆಯಲ್ಲಿ ಬಿದ್ದರೆ, ಆ
ಪಾತ್ರೆಯಲ್ಲಿ ಇರುವಂಥಾದ್ದೆಲ್ಲಾ ಅಶುದ್ಧವಾಗಿರುವದು; ಪಾತ್ರೆ
೩೪ ಯನ್ನು ಸಹ ಒಡಿದು ಹಾಕ ಬೇಕು. ಅಂಥ ಪಾತ್ರೆಯ ನೀರು
ತಿನ್ನ ತಕ್ಕ ಯಾವ ಆಹಾರದ ಮೇಲೆ ಬರುವದೋ, ಆ ಆಹಾರ
ಅಶುದ್ಧವಾಗಿರುವದು; ಅಂಥ ಪಾತ್ರೆಗಳೆಲ್ಲವುಗಳಿಂದ ಕುಡಿಯುವ
೩೫ ಪಾನವೆಲ್ಲಾ ಅಶುದ್ಧವಾಗಿರುವದು. ಮತ್ತು ಅವುಗಳ ಹೆಣದಲ್ಲಿ
ಏನಾದರೂ ಯಾವದರ ಮೇಲೆ ಬೀಳುವದೋ, ಅದು ಅಶುದ್ಧವಾ
ಗಿರುವದು; ಒಲೆಯಾಗಲಿ, ಕಣತಲೆಯಾಗಲಿ, ಒಡಿಯಲ್ಪಡ ಬೇ
೩೬ ಕು; ಅವು ಅಶುದ್ಧವೇ; ನಿಮಗೆ ಅಶುದ್ಧವಾಗಿರ ಬೇಕು. ಆದಾ
ಗ್ಯೂ ನೀರು ಕೂಡಿ ಕೊಳ್ಳುವ ಸ್ಥಳಗಳಾಗಿರುವ ಬುಗ್ಗೆಗಳೂ
ಕುಂಟೆಗಳೂ ಶುದ್ಧವಾಗಿರುವವು; ಆದರೆ ಅವುಗಳ ಹೆಣವನ್ನು ಮು
೩೭ ಟ್ಟಿದ್ದ ಅಶುದ್ಧವಾಗಿರುವದು. ಇದಲ್ಲದೆ ಇವುಗಳ ಹೆಣದಲ್ಲಿ ಏನಾ
ದರೂ ಬಿತ್ತ ಬೇಕಾದ ಯಾವ ಬೀಜದ ಮೇಲಾದರೂ ಬಿದ್ದರೆ,
೩೮ ಅದು ಶುದ್ಧವಾಗಿರುವದು. ಆದರೆ ಆ ಬೀಜಕ್ಕೆ ನೀರು ಹಾಕಿದ
ಮೇಲೆ, ಅವುಗಳ ಹೆಣದಲ್ಲಿ ಏನಾದರೂ ಅದರ ಮೇಲೆ ಬಿದ್ದರೆ,
ಅದು ನಿಮಗೆ ಅಶುದ್ಧವಾಗಿರುವದು.

೩೯ ಇದಲ್ಲದೆ ನಿಮಗೆ ಆಹಾರಕ್ಕಾಗಿರುವ ಪಶುಗಳಲ್ಲಿ ಯಾವದಾ
ಗಲಿ ಸತ್ತರೆ, ಅದರ ಹೆಣವನ್ನು ಮುಟ್ಟಿದವನು ಸಾಯಂಕಾಲದ
೪೦ ಪರ್ಯಂತರ ಅಶುದ್ಧನಾಗಿರುವನು. ಮತ್ತು ಅದರ ಹೆಣ ತಿಂದ
ವನು ವಸ್ತ್ರವನ್ನು ಒಗೆದು ಕೊಂಡು, ಸಾಯಂಕಾಲದ ಪರ್ಯಂ
ತರ ಅಶುದ್ಧನಾಗಿರ ಬೇಕು; ಅದರ ಹೆಣವನ್ನು ಹೊತ್ತವನು ವ
ಸ್ತ್ರಗಳನ್ನು ಒಗೆದು ಕೊಂಡು, ಸಾಯಂಕಾಲದ ಪರ್ಯಂತರ ಅ
ಶುದ್ಧನಾಗಿರ ಬೇಕು.

೪೧ ಇದಲ್ಲದೆ ಭೂಮಿಯ ಮೇಲೆ ಹರಿದಾಡುವ ಜಂತುಗಳೆಲ್ಲಾ ಅ
೪೨ ಸಹ್ಯವಾಗಿವೆ; ಅವುಗಳನ್ನು ತಿನ್ನ ಬಾರದು. ಭೂಮಿಯ ಮೇಲೆ
ಹರಿದಾಡುವ ಸಕಲ ಜಂತುಗಳಲ್ಲಿ ಹೊಟ್ಟೆಯಿಂದ ನಡಿಯುವಂಥ
ವುಗಳೆಲ್ಲವೂ, ನಾಲ್ಕು ಕಾಲಾಗಿ ನಡಿಯುವಂಥವುಗಳೆಲ್ಲವೂ, ಹೆ
ಚ್ಚು ಕಾಲುಳ್ಳವುಗಳೆಲ್ಲವೂ, ಇವುಗಳನ್ನು ನೀವು ತಿನ್ನ ಬಾರದು;
೪೩ ಯಾಕಂದರೆ ಅವು ಅಸಹ್ಯವಾಗಿವೆ. ಹರಿದಾಡುವ ಯಾವ ಜಂ
ತುಗಳಿಂದಲಾದರೂ ನಿಮ್ಮ ಪ್ರಾಣಗಳನ್ನು ಅಸಹ್ಯ ಮಾಡಿ
ಕೊಳ್ಳ ಬಾರದು; ನೀವು ಅಶುದ್ಧರಾಗದ ಹಾಗೆ ಅವುಗಳಿಂದ ಅಶು
೪೪ ದ್ಧ ಮಾಡಿ ಕೊಳ್ಳ ಬಾರದು. ಯಾಕಂದರೆ ನಿಮ್ಮ ದೇವರಾಗಿ
ರುವ ಕರ್ತನು ನಾನೇ; ನಾನು ಪರಿಶುದ್ಧನಾಗಿರುವದರಿಂದ, ನೀವೂ
ಭೂಮಿಯ ಮೇಲೆ ಹರಿದಾಡುವ ಯಾವ ಜಂತುವಿನಿಂದಲಾದರೂ
ನಿಮ್ಮ ಪ್ರಾಣಗಳನ್ನು ಅಶುದ್ಧ ಮಾಡಿ ಕೊಳ್ಳದೆ, ನಿಮ್ಮನ್ನು ಪ
ರಿಶುದ್ಧ ಮಾಡಿ ಕೊಂಡು, ಪರಿಶುದ್ಧರಾಗಿರ ಬೇಕು. ನಿಮಗೆ ದೇವ
೪೫ ರಾಗಿರುವ ಹಾಗೆ, ನಿಮ್ಮನ್ನು ಐಗುಪ್ತ ದೇಶದೊಳಗಿಂದ ಮೇಲೆ
ಬರ ಮಾಡಿದ ಕರ್ತನು ನಾನೇ; ಅದಕಾರಣ, ನಾನು ಪರಿಶುದ್ಧ
ನಾಗಿರುವದರಿಂದ, ನೀವೂ ಪರಿಶುದ್ಧರಾಗಿರ್ರಿ.

೪೬ ಮೃಗಗಳೂ, ಪಕ್ಷಿಗಳೂ, ಜಲಗಳಲ್ಲಿ ಹರಿದಾಡುವ ಸಕಲ
ಪ್ರಾಣಿಗಳೂ, ಭೂಮಿಯಲ್ಲಿ ಹರಿದಾಡುವ ಸಕಲ ಪ್ರಾಣಿಗಳೂ,
೪೭ ಇವುಗಳ ವಿಷಯದಲ್ಲಿ ಅಶುದ್ಧವಾದದ್ದಕ್ಕೂ, ಶುದ್ಧವಾದದ್ದಕ್ಕೂ,
ತಿನ್ನ ತಕ್ಕ ಜೀವಿಗೂ, ತಿನ್ನ ಬಾರದ ಜೀವಿಗೂ ಹೆಚ್ಚು ಕಡಿಮೆ
ಮಾಡುವ ಬಗ್ಗೆ, ಇದೇ ನ್ಯಾಯ ಪ್ರಮಾಣ.

## ೧೨. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳ್ದೆನಂ
೨ ದರೆ—ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ ಇದನ್ನು ಹೇಳು
—ಒಬ್ಬ ಸ್ತ್ರೀ ಗರ್ಭವತಿಯಾಗಿ, ಗಂಡು ಕೂಸನ್ನು ಹೆತ್ತರೆ, ಅ
ವಳು ತನ್ನ ರಜಸ್ಸಿನ ನಿಮಿತ್ತವಾದ ಮುಟ್ಟಿನ ದಿನಗಳ ಮೇರೆಗೆ
೩ ಏಳು ದಿನ ಅಶುದ್ಧಳಾಗಿರ ಬೇಕು. ಎಂಟನೇ ದಿನದಲ್ಲಿ ಅವನ
೪ ಮುಂದೊಗಲಿನ ಮಾಂಸವನ್ನು ಪರಿಛೇದಿಸ ಬೇಕು; ಮತ್ತು ಮೂ
ವತ್ತು ಮೂರು ದಿನ ಅವಳು ಅಶುದ್ಧಳಾಗಿರುವ ದಿನಗಳು ಪೂರ್ತಿ
ಯಾಗುವ ಪರ್ಯಂತರ, ಪರಿಶುದ್ಧವಾದದ್ದನ್ನು ಮುಟ್ಟಿ ಬಾರದು;
೫ ಪರಿಶುದ್ಧ ಸ್ಥಳಕ್ಕೆ ಬರ ಬಾರದು. ಅವಳು ಹೆಣ್ಣನ್ನು ಹೆತ್ತರೆ,
ಎರಡು ವಾರಗಳ ಪರ್ಯಂತರ ತನ್ನ ಮುಟ್ಟಿನ ಹಾಗೆ ಅಶುದ್ಧಳಾ
ಗಿದ್ದು, ಶುದ್ಧಳಾಗುವ ರಕ್ತದ ನಿಮಿತ್ತ ಅರುವತ್ತಾರು ದಿವಸ ಮ
ನೆಯಲ್ಲಿ ಇರ ಬೇಕು.

೬ ಮತ್ತು ಮಗನಿಗೋಸ್ಕರವಾಗಲಿ, ಮಗಳಿಗೋಸ್ಕರವಾಗಲಿ,
ಅವಳು ಶುದ್ಧಳಾಗುವ ದಿವಸಗಳು ಪೂರ್ತಿಯಾದ ಮೇಲೆ, ಅವ
ಳು ಹೋಮಕ್ಕೆ ಒಂದು ವರುಷದ ಕುರಿಮರಿಯನ್ನೂ, ಪಾಪ
ಬಲಿಯಾದ ಪಾರಿವಾಳದ ಮರಿಯನ್ನೂ, ಇಲ್ಲವೆ ಬೆಳವನ್ನೂ
೭ ಸಭೆಯ ಗುಡಾರದ ಬಾಗಲಿಗೆ, ಯಾಜಕನಿಗೆ ತರ ಬೇಕು. ಅವ
ನು ಅದನ್ನು ಕರ್ತನ ಸನ್ನಿಧಿಯಲ್ಲಿ ಅರ್ಪಿಸಿ, ಅವಳಿಗೋಸ್ಕರ
ಪಾಪ ಮುಚ್ಚಲಿ; ಆಗ ಅವಳು ತನ್ನ ರಕ್ತದ ಜಲೆಯಿಂದ ಶುದ್ಧಳಾ
ಗುವಳು. ಗಂಡನ್ನಾಗಲಿ ಹೆಣ್ಣನ್ನಾಗಲಿ ಹೆತ್ತವಳ ನ್ಯಾಯ ಪ್ರ
೮ ಮಾಣ ಇದೇ. ಆದರೆ ಕುರಿ ತಕ್ಕೊಳ್ಳುವದಕ್ಕೆ ಅವಳಿಗೆ ಗತಿ
ಇಲ್ಲದಿದ್ದರೆ, ಅವಳು ಎರಡು ಬೆಳವಗಳನ್ನೂ, ಇಲ್ಲವೆ ಎರಡು ಪಾ
ರಿವಾಳ ಮರಿಗಳನ್ನು ಹೋಮಕ್ಕೆ ಒಂದನ್ನೂ, ಪಾಪ ಬಲಿಗೆ ಒಂ
ದನ್ನೂ ತಕ್ಕೊಳ್ಳಲಿ, ಯಾಜಕನು ಅವಳಿಗೋಸ್ಕರ ಪಾಪ
ಮುಚ್ಚಲಿ; ಆಗ ಅವಳು ಶುದ್ಧಳಾಗಿರುವಳು.

## ೧೩. ಸಂಧಿ.

೧ ಮತ್ತು ಕರ್ತನು ಮೋಶೆಗೂ ಆರೋನನಿಗೂ ಮಾತಾಡಿ
೨ ಹೇಳ್ದೆನಂದರೆ—ಒಬ್ಬ ಮನುಷ್ಯನಿಗೆ ಅವನ ಮಾಂಸದ ತೊಗ
ಲಿನಲ್ಲಿ ಬಾವು ಆಗಲಿ, ಮರಕೆ ಆಗಲಿ, ಕಲೆ ಆಗಲಿ, ಉಂಟಾಗಿ,
ಅವನ ಮಾಂಸದ ತೊಗಲಿನಲ್ಲಿ ಕುಷ್ಠದ ಬಾಧೆ ಆದರೆ, ಅವನನ್ನು
ಯಾಜಕನಾದ ಆರೋನನ ಬಳಿಗೆ, ಇಲ್ಲವೆ ಯಾಜಕರಾದ ಅವ
೩ ನ ಮಕ್ಕಳಲ್ಲಿ ಒಬ್ಬನ ಬಳಿಗೆ ತಕ್ಕೊಂಡು ಬರ ಬೇಕು; ಯಾಜ
ಕನು ಅವನ ಮಾಂಸದ ತೊಗಲಿನಲ್ಲಿರುವ ಬಾಧೆಯನ್ನು ನೋ
ಡ ಬೇಕು; ಆ ಬಾಧೆಯಲ್ಲಿ ಇರುವ ಕೂದಲು ಮಾರ್ಪಟ್ಟು ಬಿ
ಳುಪಾಗಿದ್ದರೆ, ಆ ಬಾಧೆಯ ನೋಟವು ಅವನ ಮಾಂಸದ ತೊ
ಗಲಿಗಿಂತ ತಗ್ಗಾಗಿ ಕಾಣಿಸಿದರೆ, ಅದೇ ಕುಷ್ಠದ ಬಾಧೆ; ಯಾಜ

ಕನು ಅದನ್ನು ನೋಡಿ, ಅವನನ್ನು ಅಶುದ್ಧನೆಂದು ನಿರ್ಣಯಿಸ
೪ ಬೇಕು. ಆದರೆ ಅವನ ಮಾಂಸದ ತೊಗಲಲ್ಲಿ ಬಿಳ್ಳೇ ಕಲೆ ಉಂ
ಟಾಗಿ, ನೋಟಕ್ಕೆ ತೊಗಲಿಗಿಂತ ತಗ್ಗಾಗಿರದೆ, ಅದರ ಕೂದಲು
ಮಾರ್ಪಡದೆ, ಬಿಳುಪಾಗಿ ಹೋಗದೆ ಇದ್ದರೆ, ಯಾಜಕನು ಆ
೫ ಬಾಧೆ ಉಂಟಾದವನನ್ನು ಏಳು ದಿವಸ ಮುಚ್ಚಿಡಬೇಕು. ಏಳ
ನೇ ದಿವಸದಲ್ಲಿ ಯಾಜಕನು ಅವನನ್ನು ನೋಡಬೇಕು; ಅಗೋ,
ಆ ಬಾಧೆ ನಿಂತ ಪ್ರಕಾರ ಕಾಣಿಸಿದರೆ, ಆ ಬಾಧೆ ತೊಗಲಲ್ಲಿ ಹಬ್ಬ
ದಿದ್ದರೆ, ಯಾಜಕನು ಎರಡನೇ ಸಾರಿ ಏಳು ದಿವಸ ಅವನನ್ನು
೬ ಮುಚ್ಚಿಡಬೇಕು. ಆ ಏಳನೇ ದಿವಸದಲ್ಲಿ ಯಾಜಕನು ಅವನ
ನ್ನು ಎರಡನೇ ಸಾರಿ ನೋಡಬೇಕು; ಅಗೋ, ಆ ಬಾಧೆ ವರ್ಣ
ವಾಗಿ ಹೋಗಿದ್ದರೆ, ಆ ಬಾಧೆ ತೊಗಲಲ್ಲಿ ಹಬ್ಬದೆ ಇದ್ದರೆ, ಯಾ
ಜಕನು ಅವನನ್ನು ಶುದ್ಧನೆಂದು ನಿರ್ಣಯಿಸಬೇಕು; ಅದು ಮರ
೭ ಕೆಯೇ; ಅವನು ತನ್ನ ವಸ್ತ್ರಗಳನ್ನು ಬಗೆದು ಕೊಂಡು ಶುದ್ಧನಾ
ಗಿರುವನು. ಆದರೆ ಅವನು ಶುದ್ಧನಾಗುವ ಬಗ್ಗೆ, ಯಾಜಕನಿಗೆ
ಕಾಣಿಸಿ ಕೊಂಡ ಮೇಲೆ, ಆ ಮರಕೆ ತೊಗಲಲ್ಲಿ ಬಹಳ ಹಬ್ಬಿದ
ರೆ, ಅವನು ಯಾಜಕನಿಗೆ ಎರಡನೇ ಸಾರಿ ಕಾಣಿಸಿ ಕೊಳ್ಳಬೇ
೮ ಕು. ಯಾಜಕನು ನೋಡಲಾಗಿ, ಅಗೋ, ಆ ಮರಕೆಯು ತೊ
ಗಲಲ್ಲಿ ಹಬ್ಬಿದ್ದಾದರೆ, ಯಾಜಕನು ಅವನನ್ನು ಅಶುದ್ಧನೆಂದು ನಿ
ರ್ಣಯಿಸಬೇಕು; ಅದು ಕುಷ್ಠವೇ.

೯ ಕುಷ್ಠದ ಬಾಧೆ ಒಬ್ಬ ಮನುಷ್ಯನಲ್ಲಿ ಇರಲಾಗಿ, ಅವನು ಯಾ
೧೦ ಜಕನ ಬಳ್ಳಿಗೆ ತರಲ್ಪಟ್ಟಾಗ, ಯಾಜಕನು ಅವನನ್ನು ನೋಡ
ಬೇಕು. ಅಗೋ, ತೊಗಲಲ್ಲಿ ಬಿಳ್ಳಾದ ಬಾವು ಉಂಟಾಗಿದ್ದು,
ಕೂದಲನ್ನು ಬಿಳುಪಾಗುವ ಹಾಗೆ ಮಾರ್ಪಡಿಸಿ ಇದ್ದರೆ, ಮತ್ತು
೧೧ ಆ ಬಾವಿನಲ್ಲಿ ಹಸಿ ಮಾಂಸವಿದ್ದರೆ, ಅದು ಅವನ ಮಾಂಸದ ತೊ
ಗಲಲ್ಲಿ ಹಳೇ ಕುಷ್ಠವು; ಯಾಜಕನು ಅವನನ್ನು ಮುಚ್ಚಿಡದೆ, ಅ
೧೨ ಶುದ್ಧನೆಂದು ನಿರ್ಣಯಿಸಬೇಕು; ಅವನು ಅಶುದ್ಧನೇ. ಆದರೆ ಆ
ಕುಷ್ಠವು ತೊಗಲಲ್ಲಿ ಬಹಳ ವಿಸ್ತರಿಸಿದರೆ, ಕುಷ್ಠವು ಬಾಧೆ ಉಂ
ಟಾದವನ ತೊಗಲನ್ನೆಲ್ಲಾ, ತಲೆ ಮೊದಲು ಗೊಂಡು ಕಾಲುಗಳ ಪ
ರ್ಯಂತರ, ಯಾಜಕನ ಕಣ್ಣುಗಳಿಗೆ ಕಾಣುವದನ್ನೆಲ್ಲಾ ಮುಚ್ಚಿ
೧೩ ದರೆ, ಯಾಜಕನು ನೋಡಬೇಕು; ಅಗೋ, ಆ ಕುಷ್ಠವು ಅವನ
ಮಾಂಸವನ್ನೆಲ್ಲಾ ಮುಚ್ಚಿದ್ದಾದರೆ, ಅವನು ಬಾಧೆ ಉಂಟಾದವನ
ನ್ನು ಶುದ್ಧನೆಂದು ನಿರ್ಣಯಿಸಬೇಕು; ಎಲ್ಲಾ ಬಿಳುಪಾಗಿ ಮಾ
೧೪ ರ್ಪಟ್ಟಿ ವಕ್ಷದಲ್ಲಿ, ಅವನು ಶುದ್ಧನೇ. ಆದರೆ ಅವನಲ್ಲಿ ಹಸಿ ಮಾಂ
೧೫ ಸವು ಕಾಣಿಸುವಾಗಲೇ, ಅವನು ಅಶುದ್ಧನಾಗುವನು. ಯಾಜಕ
ನು ಹಸಿ ಮಾಂಸವನ್ನು ನೋಡುವಾಗ, ಅವನನ್ನು ಅಶುದ್ಧನೆಂದು
ನಿರ್ಣಯಿಸಬೇಕು; ಆ ಹಸಿ ಮಾಂಸವು ಅಶುದ್ಧ; ಅದು ಕುಷ್ಠ
೧೬ ವೇ. ಇದಲ್ಲದೆ ಆ ಹಸಿ ಮಾಂಸವು ಭೇದವಾಗಿ, ಮಾರ್ಪಟ್ಟು ಬಿ
೧೭ ಳುಪಾದರೆ, ಅವನು ಯಾಜಕನ ಬಳ್ಳಿಗೆ ಬರಲಿ; ಯಾಜಕನು
ಅವನನ್ನು ನೋಡಬೇಕು; ಅಗೋ, ಬಾಧೆ ಮಾರ್ಪಟ್ಟು ಬಿಳು
ಪಾಗಿದ್ದರೆ, ಯಾಜಕನು ಆ ಬಾಧೆ ಉಂಟಾದವನನ್ನು ಶುದ್ಧನೆಂ
ದು ನಿರ್ಣಯಿಸಬೇಕು; ಅವನು ಶುದ್ಧನೇ.

೧೮ ಮತ್ತು ಅವನ ಮಾಂಸದ ತೊಗಲಲ್ಲಿ ಹುಣ್ಣು ಉಂಟಾಗಿ,
೧೯ ವಾಸಿಯಾದ ಮೇಲೆ, ಆ ಹುಣ್ಣಿನ ಸ್ಥಳದಲ್ಲಿ ಬಿಳ್ಳೇ ಬಾವು ಆಗ
ಲಿ, ಕೆಂಪಗೆ ಬಿಳುಪಾದ ಕಲೆಯಾಗಲಿ, ಉಂಟಾದರೆ, ಅವನು
೨೦ ಯಾಜಕನಿಗೆ ಕಾಣಿಸಿ ಕೊಳ್ಳಬೇಕು. ಯಾಜಕನು ನೋಡ
ಲಾಗಿ, ಅಗೋ, ಅದರ ನೋಟವು ತೊಗಲಿಗಿಂತ ತಗ್ಗಾಗಿ, ಅದ
ರ ಕೂದಲು ಮಾರ್ಪಟ್ಟು ಬಿಳುಪಾಗಿ ಇದ್ದರೆ, ಯಾಜಕನು ಅ
ವನನ್ನು ಅಶುದ್ಧನೆಂದು ನಿರ್ಣಯಿಸಬೇಕು; ಅದು ಹುಣ್ಣಿನಲ್ಲಿ
೨೧ ಜಿಗಿತ ಕುಷ್ಠದ ಬಾಧೆ. ಆದರೆ ಯಾಜಕನು ಅದನ್ನು ನೋಡಲಾ
ಗಿ, ಅಗೋ, ಅದರಲ್ಲಿ ಬಿಳ್ಳೇ ಕೂದಲು ಏನೂ ಇಲ್ಲದೆ, ಅದು ತೊ
ಗಲಿಗಿಂತ ತಗ್ಗಾಗಿರದೆ, ವರ್ಣವಾಗಿದ್ದರೆ, ಯಾಜಕನು ಅವನ
೨೨ ನ್ನು ಏಳು ದಿವಸ ಮುಚ್ಚಿಡಬೇಕು. ಅದು ತೊಗಲಿನಲ್ಲಿ ಬಹಳ
ಹಬ್ಬಿದರೆ, ಯಾಜಕನು ಅವನನ್ನು ಅಶುದ್ಧನೆಂದು, ನಿರ್ಣಯಿಸ
೨೩ ಬೇಕು. ಅದು ಬಾಧೆಯೇ. ಆದರೆ ಆ ಕಲೆ ಹಬ್ಬದೆ, ಇದ್ದಲ್ಲಿ
ಯೇ ಇದ್ದರೆ, ಅದು ಉರಿಯುವ ಹುಣ್ಣೇ; ಯಾಜಕನು ಅವನ
ನ್ನು ಶುದ್ಧನೆಂದು ನಿರ್ಣಯಿಸಬೇಕು.

೨೪ ಇಲ್ಲವೆ ಅವನ ಮಾಂಸದ ತೊಗಲಲ್ಲಿ ಬೆಂಕಿಯ ಬೊಬ್ಬೆ
ಉಂಟಾಗಿ, ಆ ಬೊಬ್ಬೆ ಹಸಿ ಮಾಂಸವು ಕೆಂಪಗೆ ಬಿಳುಪಾದ, ಇ
೨೫ ಲ್ಲವೆ ಬಿಳುಪಾದ ಕಲೆಯಾಗಿದರೆ, ಯಾಜಕನು ಅದನ್ನು ನೋ
ಡಬೇಕು; ಅಗೋ, ಆ ಕಲೆಯಲ್ಲಿ ಕೂದಲು ಮಾರ್ಪಟ್ಟು, ಬಿ
ಳುಪಾಗಿ, ಅದರ ಆಕಾರವು ತೊಗಲಿಗಿಂತ ತಗ್ಗಾಗಿದ್ದರೆ, ಅದು
ಬೊಬ್ಬೆಯಲ್ಲಿ ಜಿಗಿತ ಕುಷ್ಠವೇ; ಯಾಜಕನು ಅವನನ್ನು ಅಶು
೨೬ ದ್ಧನೆಂದು ನಿರ್ಣಯಿಸಬೇಕು; ಅದು ಕುಷ್ಠದ ಬಾಧೆಯೇ. ಆದ
ರೆ ಯಾಜಕನು ಅವನನ್ನು ನೋಡಲಾಗಿ, ಅಗೋ, ಆ ಕಲೆಯ
ಲ್ಲಿ ಕೂದಲು ಬಿಳುಪಾಗದೆ, ಅದು ತೊಗಲಿಗಿಂತ ತಗ್ಗಾಗದೆ, ವ
ರ್ಣವಾಗಿದ್ದರೆ; ಯಾಜಕನು ಅವನನ್ನು ಏಳು ದಿವಸ ಮುಚ್ಚಿ
೨೭ ಡಬೇಕು; ಏಳನೇ ದಿವಸದಲ್ಲಿ ಯಾಜಕನು ಅವನನ್ನು ನೋಡ
ಬೇಕು; ಅದು ತೊಗಲಲ್ಲಿ ಬಹು ಹಬ್ಬಿದರೆ, ಯಾಜಕನು ಅವ
ನನ್ನು ಅಶುದ್ಧನೆಂದು ನಿರ್ಣಯಿಸಬೇಕು; ಅದು ಕುಷ್ಠದ ಬಾಧೆ
೨೮ ಯೇ. ಆದರೆ ಕಲೆ ಇದ್ದಲ್ಲಿಯೇ ಇದ್ದು, ತೊಗಲಲ್ಲಿ ಹಬ್ಬದೆ, ವ
ರ್ಣವಾಗಿದ್ದರೆ, ಅದು ಉರಿಯುವ ಬೊಬ್ಬೆ; ಯಾಜಕನು ಅವ
ನನ್ನು ಶುದ್ಧನೆಂದು ನಿರ್ಣಯಿಸಬೇಕು; ಅದು ಬೊಬ್ಬೆಯ ಉ
ರಿಯೇ.

೨೯ ಇದಲ್ಲದೆ ಗಂಡಸಿನಿಗಾದರೂ, ಹೆಂಗಸಿಗಾದರೂ, ತಲೆಯಲ್ಲಾಗ
೩೦ ಲಿ, ಗಡ್ಡದಲ್ಲಾಗಲಿ, ಬಾಧೆ ಇದ್ದರೆ, ಯಾಜಕನು ಆ ಬಾಧೆಯನ್ನು
ನೋಡಬೇಕು; ಅಗೋ, ಅದರ ನೋಟವು ತೊಗಲಿಗಿಂತ ತಗ್ಗಾ
ಗಿ, ಅದರಲ್ಲಿ ಹಳದಿ ವರ್ಣದ ಸಣ್ಣದಾದ ಕೂದಲು ಇದ್ದರೆ, ಯಾ
ಜಕನು ಅವನನ್ನು ಅಶುದ್ಧನೆಂದು ನಿರ್ಣಯಿಸಬೇಕು; ಅದು ಇ
ಸಬಾಗಿದೆ; ಅದು ತಲೆಯಲ್ಲಾಗಲಿ, ಗಡ್ಡದಲ್ಲಾಗಲಿ ಇರುವ ಕುಷ್ಠ
೩೧ ವೇ. ಮತ್ತು ಯಾಜಕನು ಆ ಇಸಬಿನ ಬಾಧೆ ನೋಡಲಾಗಿ,
ಅಗೋ, ಅದರ ನೋಟವು ತೊಗಲಿಗಿಂತ ತಗ್ಗಾಗಿದ್ದರೆ, ಅದಾ
ಗ್ಯೂ ಕಪ್ಪು ಕೂದಲು ಅದರಲ್ಲಿ ಇರದಿದ್ದರೆ, ಯಾಜಕನು ಆ
ಇಸಬಿನ ಬಾಧೆಯುಳ್ಳವನನ್ನು ಏಳು ದಿವಸ ಮುಚ್ಚಿಡಬೇಕು.
೩೨ ಏಳನೇ ದಿವಸದಲ್ಲಿ ಯಾಜಕನು ಆ ಬಾಧೆಯುಳ್ಳವನನ್ನು ನೋ
ಡಬೇಕು; ಅಗೋ, ಆ ಇಸಬು ಹಬ್ಬದೆ, ಅದರಲ್ಲಿ ಹಳದಿ ವರ್ಣ
ಕೂದಲು ಉಂಟಾಗದೆ, ಇಸಬಿನ ನೋಟವು ತೊಗಲಿಗಿಂತ ತಗ್ಗಾ
೩೩ ಗದೆ ಇದ್ದರೆ, ಅವನು ಕ್ಷೌರ ಮಾಡಿಸಿ ಕೊಳ್ಳಲಿ; ಆದರೆ ಆ ಇ
ಸಬನ್ನು ಕ್ಷೌರ ಮಾಡಿಸಿ ಕೊಳ್ಳಬಾರದು; ಆಗ ಯಾಜಕನು
೩೪ ಆ ಇಸಬು ಉಂಟಾದವನನ್ನು ಎರಡನೇ ಸಾರಿ ಏಳು ದಿವಸ
ಮುಚ್ಚಿಡಬೇಕು. ಇಸಬನ್ನು ಯಾಜಕನು ಏಳನೇ ದಿವಸದಲ್ಲಿ



ನೋಡಬೇಕು; ಅಗೋ, ಆ ಇಸಬು ತೊಗಲಲ್ಲಿ ಹಬ್ಬದೆ, ಅದರ
ನೋಟವು ತೊಗಲಿಗಿಂತ ತಗ್ಗಾಗದೆ ಇದ್ದರೆ, ಯಾಜಕನು ಅವನ
ನ್ನು ಶುದ್ಧನೆಂದು ನಿರ್ಣಯಿಸಬೇಕು; ಅವನು ತನ್ನ ವಸ್ತ್ರಗಳ
೩೫ ನ್ನು ಬಗೆದು ಕೊಂಡು, ಶುದ್ಧನಾಗಿರಲಿ. ಆದರೆ ಅವನು ಶುದ್ಧನಾ
ದ ಮೇಲೆ, ಆ ಇಸಬು ತೊಗಲಲ್ಲಿ ಬಹಳ ಹಬ್ಬಿದರೆ, ಯಾಜಕ
೩೬ ನು ಅವನನ್ನು ನೋಡಬೇಕು; ಅಗೋ, ಆ ಇಸಬು ತೊಗಲಲ್ಲಿ
ಹಬ್ಬಿದ್ದಾದರೆ, ಯಾಜಕನು ಹಳದಿ ವರ್ಣದ ಕೂದಲಿನ ವಿಷಯ
೩೭ ವಿಚಾರಿಸಬೇಕಿಲ್ಲ; ಅವನು ಅಶುದ್ಧನೇ. ಆದರೆ ಆ ಇಸಬು ನಿಂತ
ಪ್ರಕಾರ ಅವನಿಗೆ ಕಾಣಿಸಿದರೆ, ಕಪ್ಪು ಕೂದಲು ಅದರಲ್ಲಿ ಬೆಳೆದಿ
ದ್ದರೆ, ಆ ಇಸಬು ಸ್ವಸ್ಥವಾಯಿತು; ಅವನು ಶುದ್ಧನಾಗಿದ್ದಾನೆ;
ಯಾಜಕನು ಅವನನ್ನು ಶುದ್ಧನೆಂದು ನಿರ್ಣಯಿಸಲಿ.

೩೮ ಇದಲ್ಲದೆ ಒಬ್ಬ ಗಂಡಸಿನ, ಇಲ್ಲವೆ ಹೆಂಗಸಿನ ಮಾಂಸದ ತೊ
೩೯ ಗಲಲ್ಲಿ ಇಲ್ಲಿ ಅಲ್ಲಿ ಬಿಳ್ಳೇ ಕಲೆಗಳು ಇದ್ದರೆ, ಯಾಜಕನು ನೋಡ
ಬೇಕು; ಅಗೋ, ಅವರ ಮಾಂಸದ ತೊಗಲಲ್ಲಿ ವಿವರ್ಣವಾದ
ಬಿಳ್ಳೇ ಕಲೆಗಳಿದ್ದರೆ, ಅದು ತೊಗಲಲ್ಲಿ ಮೊಳಿತ ಹಿಬ್ಬು; ಅವನು
ಶುದ್ಧನಾಗಿದ್ದಾನೆ.

೪೦ ಮತ್ತು ಒಬ್ಬ ಗಂಡಸನ ತಲೆ ಕೂದಲು ಉದರಿ ಹೋದರೆ, ಅವ
೪೧ ನು ಬೋಳ್ಳ ತಲೆಯವನು; ಅವನು ಶುದ್ಧನಾಗಿದ್ದಾನೆ. ಮತ್ತು ಅ
ವನ ಮುಖದ ಕಡೆಗೆ ಅವನ ಕೂದಲು ಉದರಿ ಹೋದರೆ, ಅವನು
೪೨ ಪಟ್ಟಿದಲೆಯವನು; ಅವನು ಶುದ್ಧನಾಗಿದ್ದಾನೆ. ಆದರೆ ಅವನ ಬೋ
ಳ್ಳ ತಲೆಯಲ್ಲಿ ಆಗಲಿ, ಪಟ್ಟಿಯಲ್ಲಿ ಆಗಲಿ, ಕೆಂಪಗೆ ಬಿಳುಪಾದ
ಬಾಧೆ ಇದ್ದರೆ, ಅದೇ ಅವನ ಬೋಳ್ಳ ತಲೆಯಲ್ಲಿ ಆಗಲಿ, ಪಟ್ಟಿಯ
೪೩ ಲ್ಲಿ ಆಗಲಿ, ಜಿಗಿಸುವ ಕುಷ್ಠವೇ. ಯಾಜಕನು ಅದನ್ನು ನೋಡ
ಬೇಕು; ಅಗೋ, ಅವನ ಬೋಳ್ಳ ತಲೆಯಲ್ಲಾಗಲಿ, ಪಟ್ಟಿಯಲ್ಲಾ
ಗಲಿ, ಮಾಂಸದ ತೊಗಲಲ್ಲಿ ಇರುವ ಕುಷ್ಠದ ಹಾಗೆ ಕಾಣುವ
೪೪ ಕೆಂಪಗೆ ಬಿಳುಪಾದ ಬಾಧೆಯು ಎದ್ದಿದ್ದರೆ, ಆ ಮನುಷ್ಯನು ಕು
ಷ್ಠರೋಗಿಯಾಗಿ ಅಶುದ್ಧನಾಗಿದ್ದಾನೆ; ಯಾಜಕನು ಅವನನ್ನು
ಅಶುದ್ಧನೇ ಅಶುದ್ಧನೆಂದು ನಿರ್ಣಯಿಸಬೇಕು; ಅವನ ತಲೆಯಲ್ಲಿ
ಅವನ ಬಾಧೆ ಉಂಟು.

೪೫ ಮತ್ತು ಬಾಧೆ ಉಂಟಾಗಿರುವ ಕುಷ್ಠ ರೋಗಿಯು ಯಾವ
ನೋ, ಅವನ ವಸ್ತ್ರಗಳು ಹರಿಯಲ್ಪಟ್ಟು, ತಲೆ ಬರಿದು ಆಗಿರ ಬೇ
ಕು; ಅವನು ಮೇಲ್ದುಟ್ಟಿಯನ್ನು ಮುಚ್ಚಿ ಕೊಂಡು, ಅಶುದ್ಧನು,
೪೬ ಅಶುದ್ಧನು, ಎಂದು ಕೂಗುತ್ತಿರ ಬೇಕು. ಆ ಬಾಧೆ ಅವನಲ್ಲಿ
ರುವ ದಿನಗಳೆಲ್ಲಾ ಅವನು ಅಶುದ್ಧನಾಗಿರ ಬೇಕು; ಅವನು ಅಶು
ದ್ಧನೇ; ಏಕಾಂತವಾಗಿ ವಾಸವಾಗಿರ ಬೇಕು; ದಂಡಿನ ಹೊರಗೆ ಅವ
ನ ನಿವಾಸ.

೪೭ ಇಇಲ್ಲದೆ ವಸ್ತ್ರದಲ್ಲಿ ಕುಷ್ಠದ ಬಾಧೆ ಇದ್ದರೆ, ಉಣ್ಣೆಯ ವ
೪೮ ಸ್ತ್ರದಲ್ಲಿ ಆಗಲಿ, ನಾರಿನ ವಸ್ತ್ರದಲ್ಲಿ ಆಗಲಿ, ನಾರಿನ, ಇಲ್ಲವೆ ಉ
ಣ್ಣೆಯ ಹಾಸಿನಲ್ಲಾಗಲಿ, ಹೊಕ್ಕಿನಲ್ಲಾಗಲಿ, ಚರ್ಮದಲ್ಲಾಗಲಿ, ಚ
೪೯ ರ್ಮದಿಂದ ಮಾಡಿದ ಯಾವ ಸಾಮಾನಲ್ಲಾಗಲಿ, ಹಸರಾದರೂ,
ಕೆಂಪಾದರೂ ಇರುವ ಆ ಬಾಧೆ ವಸ್ತ್ರದಲ್ಲಿ, ಇಲ್ಲವೆ ಚರ್ಮದಲ್ಲಿ
ಆಗಲಿ, ಹಾಸಿನಲ್ಲಿ ಆಗಲಿ, ಹೊಕ್ಕಿನಲ್ಲಿ ಆಗಲಿ, ಚರ್ಮದ ಯಾವ
ಸಾಮಾನಲ್ಲಿ ಆಗಲಿ ಇದ್ದರೆ, ಅದು ಕುಷ್ಠದ ಬಾಧೆಯೇ; ಅದ
೫೦ ನು ಯಾಜಕನಿಗೆ ತೋರಿಸ ಬೇಕು; ಯಾಜಕನು ಆ ಬಾಧೆಯ
ನ್ನು ನೋಡಿ, ಬಾಧೆಯಾದದ್ದನ್ನು ಏಳು ದಿವಸ ಮುಚ್ಚಿಡ ಬೇಕು;
೫೧ ಏಳನೇ ದಿವಸದಲ್ಲಿ ಅವನು ಆ ಬಾಧೆಯನ್ನು ನೋಡ ಬೇಕು;—
ಆ ಬಾಧೆಯು ವಸ್ತ್ರದಲ್ಲಿ—ಹಾಸಿನಲ್ಲಿ ಆಗಲಿ, ಹೊಕ್ಕಿನಲ್ಲಿ ಆಗ
ಲಿ, ಚರ್ಮದಲ್ಲಿ ಆಗಲಿ, ಚರ್ಮದಿಂದ ಮಾಡುವ ಯಾವ ಸಾ
ಮಾನಲ್ಲಿ ಆಗಲಿ ಹಬ್ಬಿದ್ದರೆ, ಆ ಬಾಧೆ ಕೆಟ್ಟ ಕುಷ್ಠವೇ; ಅದು
೫೨ ಅಶುದ್ಧವಾಗಿದೆ. ಆಗ ಬಾಧೆ ಉಂಟಾಗಿರುವ ವಸ್ತ್ರವನ್ನೂ—ಅದು
ಉಣ್ಣೆಯದಾಗಲಿ, ನಾರಿನದಾಗಲಿ, ಹಾಸನ್ನೂ, ಹೊಕ್ಕನ್ನೂ,
ಚರ್ಮದ ಎಲ್ಲಾ ಸಾಮಾನುಗಳನ್ನೂ, ಸುಡ ಬೇಕು; ಅದು ಕೆಟ್ಟ
ಕುಷ್ಠವೇ; ಬೆಂಕಿಯಿಂದ ಅದನ್ನು ಸುಡ ಬೇಕು.

೫೩ ಆದರೆ ಯಾಜಕನು ನೋಡುವಾಗ, ಅಗೋ, ಆ ಬಾಧೆಯು
ವಸ್ತ್ರದಲ್ಲಿ, ಹಾಸಿನಲ್ಲಾಗಲಿ, ಹೊಕ್ಕಿನಲ್ಲಾಗಲಿ, ಚರ್ಮದ ಯಾ
೫೪ ವ ಸಾಮಾನಲ್ಲಾಗಲಿ, ಹಬ್ಬದೆ ಇದ್ದರೆ, ಯಾಜಕನು ಆ ಬಾಧೆ
ಇದ್ದದ್ದನ್ನು ತೊಳೆಯುವ ಹಾಗೆ ಅಪ್ಪಣೆ ಕೊಟ್ಟು, ಅದನ್ನು
೫೫ ಎರಡನೇ ಸಾರಿ ಏಳು ದಿವಸ ಮುಚ್ಚಿಡ ಬೇಕು. ತೊಳೆದ ಮೇಲೆ
ಯಾಜಕನು ಆ ಬಾಧೆಯನ್ನು ನೋಡ ಬೇಕು; ಅಗೋ, ಆ
ಬಾಧೆಯು ವರ್ಣವನ್ನು ಬದಲು ಮಾಡದೆ, ಆ ಬಾಧೆ ಹಬ್ಬದೆ
ಇದ್ದರೆ, ಅದು ಶುದ್ಧವಾಗಿದೆ, ಅದನ್ನು ಬೆಂಕಿಯಿಂದ ಸುಡ ಬೇಕು.
ಅದು ಹಿಂಭಾಗದಲ್ಲಿ ಆಗಲಿ, ಮುಂಭಾಗದಲ್ಲಿ ಆಗಲಿ ತಗ್ಗಾದದ್ದು;
೫೬ ಆದರೆ ಯಾಜಕನು ನೋಡುವಾಗ, ಅಗೋ, ಆ ಬಾಧೆಯು ತೊ
ಳೆದ ಮೇಲೆ ವಿವರ್ಣವಾಗಿದ್ದರೆ, ಅದನ್ನು ಆ ವಸ್ತ್ರದಿಂದಾಗಲಿ,
ಚರ್ಮದಿಂದಾಗಲಿ, ಹಾಸಿನಿಂದಾಗಲಿ, ಹೊಕ್ಕಿನಿಂದಾಗಲಿ, ಕಿತ್ತು
೫೭ ಹಾಕ ಬೇಕು. ಆದರೆ ಅದು ವಸ್ತ್ರದಲ್ಲಾಗಲಿ, ಹಾಸಿನಲ್ಲಾಗಲಿ,
ಹೊಕ್ಕಿನಲ್ಲಾಗಲಿ, ಚರ್ಮದ ಯಾವ ಸಾಮಾನಲ್ಲಾಗಲಿ, ಇನ್ನು
ಕಾಣ ಬಂದರೆ, ಅದು ಚಿಗುರುವ ಕುಷ್ಠವೇ; ಆ ಬಾಧೆಯುಳ್ಳದ್ದ
೫೮ ನ್ನು ಬೆಂಕಿಯಿಂದ ಸುಡ ಬೇಕು. ಆದರೆ ತೊಳೆದ ಮೇಲೆ, ಯಾ
ವದರಿಂದ ಆ ಬಾಧೆ ಹೋಯಿತೋ, ಆ ವಸ್ತ್ರವನ್ನೂ, ಹಾಸ
ನ್ನೂ, ಹೊಕ್ಕನ್ನೂ, ಚರ್ಮದ ಎಲ್ಲಾ ಸಾಮಾನನ್ನೂ, ಇ
ನ್ನೊಂದು ಸಾರಿ ತೊಳೆಯ ಬೇಕು; ಆಗ ಶುದ್ಧವಾಗಿರುವದು.

೫೯ ಉಣ್ಣೆಯಾಗಲಿ, ನಾರಾಗಲಿ ಇರುವ ವಸ್ತ್ರದ, ಹಾಸಿನ, ಹೊ
ಕ್ಕಿನ, ಚರ್ಮದಿಂದ ಉಂಟಾದ ಎಲ್ಲಾ ಸಾಮಾನಿನ, ಕುಷ್ಠ ಬಾ
ಧೆಯ ವಿಷಯದಲ್ಲಿ ಅದನ್ನು ಶುದ್ಧವಾಗಲಿ, ಅಶುದ್ಧವಾಗಲಿ, ನಿರ್ಣ
ಯಿಸುವ ನ್ಯಾಯ ಪ್ರಮಾಣ ಇದೇ.

## ೧೪. ಸಂಧಿ.

೧ ಇದಲ್ಲದೆ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ಕುಷ್ಠ ರೋಗಿಯ ನ್ಯಾಯ ಪ್ರಮಾಣವು, ಅವನನ್ನು ಶುದ್ಧ
ಮಾಡುವ ದಿವಸದಲ್ಲಿ, ಇದೇ—ಅವನನ್ನು ಯಾಜಕನ ಬಳ್ಳಿಗೆ
೩ ತರ ಬೇಕು. ಮತ್ತು ಯಾಜಕನು ದಂಡಿನ ಹೊರಗೆ ಹೋಗಲಿ,
ಕುಷ್ಠದ ಬಾಧೆ ಕುಷ್ಠ ರೋಗಿಯನ್ನು ಬಿಟ್ಟು ಸ್ವಸ್ಥವಾಯಿತೆಂ
೪ ದು ಯಾಜಕನು ನೋಡಿದರೆ, ಶುದ್ಧ ಮಾಡಿಸಿ ಕೊಳ್ಳುವವನಿ
ಗೋಸ್ಕರ ಜೀವವುಳ್ಳ ಎರಡು ಶುದ್ಧ ಪಕ್ಷಿಗಳನ್ನೂ, ದೇವದಾ
ರು ಕಟ್ಟಿಗೆಯನ್ನೂ, ಲಾಕಿ ಬಣ್ಣವನ್ನೂ, ಹಿಸ್ಸೊಪ್ಪನ್ನೂ;
೫ ತರುವ ಹಾಗೆ ಯಾಜಕನು ಆಜ್ಞಾಪಿಸ ಬೇಕು. ಇದಲ್ಲದೆ ಆ ಪ
ಕ್ಷಿಗಳಲ್ಲಿ ಒಂದನ್ನು ಹರಿಯುವ ನೀರಿನ ಬಳ್ಳಿಯಲ್ಲಿ, ಮಣ್ಣಿನ
ಪಾತ್ರೆಯಲ್ಲಿ ಕೊಯ್ಯುವ ಹಾಗೆ, ಯಾಜಕನು ಆಜ್ಞಾಪಿಸ ಬೇ
೬ ಕು. ಜೀವವುಳ್ಳ ಪಕ್ಷಿಯನ್ನೂ, ಮತ್ತು ಆ ದೇವದಾರು ಕಟ್ಟಿಗೆ,

ಲಾಕಿ ಬ್ಣ್ಣಾ, ಹಿಸ್ಸೊಪ್ಪುಗಳನ್ನೂ ತಕ್ಕೊಂಡು, ಇವುಗಳ
ನ್ನೂ, ಆ ಜೀವವುಳ್ಳ ಪಕ್ಷಿಯನ್ನೂ ಹರಿಯುವ ನೀರಿನ ಬಳಿ
೭ ಯಲ್ಲಿ ಕೊಯಿದ ಆ ಪಕ್ಷಿಯ ರಕ್ತದಲ್ಲಿ ಅದ್ದಿ, ಕುಷ್ಠದಿಂದ
ಶುದ್ಧ ಮಾಡಿಸಿ ಕೊಂಬುವವನ ಮೇಲೆ ಏಳು ಸಾರಿ ಚಿಮಿಕಿಸಿ, ಅ
ವನನ್ನು ಶುದ್ಧನೆಂದು ನಿರ್ಣಯಿಸಿ, ಆ ಜೀವವುಳ್ಳ ಪಕ್ಷಿಯ
ನ್ನು ಕಾತಿಗೆ ಬಿಟ್ಟು ಬಿಡ ಬೇಕು.

೮ ಆದರೆ ಶುದ್ಧ ಮಾಡಿಸಿ ಕೊಳ್ಳುವವನು ತನ್ನ ವಸ್ತ್ರಗಳನ್ನು
ಬಗೆದು ಕೊಂಡು, ತನ್ನ ಕೂದಲನೆಲ್ಲಾ ಬೋಳಿಸಿ ಕೊಂಡು,
ನೀರಿನಲ್ಲಿ ತೊಳೆದು ಕೊಳ್ಳಲಿ; ಆಗ ಶುದ್ಧನಾಗಿರುವನು; ಆ
ಮೇಲೆ ದಂಡಿಗೆ ಬರ ಬಹುದು; ಆದಾಗ್ಯೂ ಏಳು ದಿವಸ ತನ್ನ
೯ ಗುಡಾರದ ಹೊರಗೆ ವಾಸವಾಗಿರ ಬೇಕು. ಏಳನೇ ದಿವಸದಲ್ಲಿ
ಅವನು ತನ್ನ ಕೂದಲನೆಲ್ಲಾ ಬೋಳಿಸಿ ಕೊಳ್ಳ ಬೇಕು; ತನ್ನ
ತಲೆಯನ್ನೂ, ಗಡ್ಡವನ್ನೂ, ಹುಬ್ಬುಗಳನ್ನೂ, ತನ್ನ ಎಲ್ಲಾ
ಕೂದಲನ್ನೂ, ಬೋಳಿಸಿ ಕೊಂಡು, ತನ್ನ ವಸ್ತ್ರಗಳನ್ನು ಬಗೆ
ದು ಕೊಂಡು, ತನ್ನ ಮಾಂಸವನ್ನು ನೀರಿನಲ್ಲಿ ತೊಳೆದು ಕೊ
ಳ್ಳ ಬೇಕು; ಆಗ ಶುದ್ಧನಾಗಿರುವನು.

೧೦ ಮತ್ತು ಎಂಟನೇ ದಿವಸದಲ್ಲಿ ಅವನು ಪೂರ್ಣಾಂಗವಾದ ಎ
ರಡು ಕುರಿಗಳನ್ನೂ, ಒಂದು ವರುಷದ ಪೂರ್ಣಾಂಗವಾದ ಒಂ
ದು ಹೆಣ್ಣು ಕುರಿ ಮರಿಯನ್ನೂ, ಎಣ್ಣೆ ಹೊಯಿದ ಗೋಧಿ ಹಿ
ಟ್ಟಿನ ಮೂರು ದಶಾಂಶಗಳನ್ನೂ, ಎಣ್ಣೆಯ ಒಂದು ಲೋಗ
೧೧ ನ್ನೂ ತಕೊಳ್ಳ ಬೇಕು. ಆಗ ಶುದ್ಧ ಮಾಡುವ ಯಾಜಕನು
ಶುದ್ಧ ಮಾಡಿಸಿ ಕೊಳ್ಳುವ ಮನುಷ್ಯನನ್ನೂ, ಇವುಗಳನ್ನೂ, ಸ
೧೨ ಭೆಯ ಗುಡಾರದ ಬಾಗಲಲ್ಲಿ ಕರ್ತನ ಮುಂದೆ ನಿಲ್ಲಿಸ ಬೇಕು; ಮ
ತ್ತು ಯಾಜಕನು ಆ ಕುರಿ ಮರಿಗಳನ್ನು ತಕ್ಕೊಂಡು, ಆ ಎಣ್ಣೆ
ಯ ಲೋಗಿನ ಸಂಗಡ ಅಪರಾಧ ಬಲಿಯಾಗಿ ಅರ್ಪಿಸಿ, ಕರ್ತ
ನ ಸನ್ನಿಧಿಯಲ್ಲಿ ಅಲ್ಲಾಡಿಸುವ ಬಲಿಯಾಗಿ ಅಲ್ಲಾಡಿಸ ಬೇಕು;
೧೩ ಮತ್ತು ಆ ಕುರಿ ಮರಿಯನ್ನೂ ಪರಿಶುದ್ಧ ಸ್ಥಳದಲ್ಲಿ, ಪಾಪ ಬಲಿ
ಯನ್ನೂ ಹೋಮವನ್ನೂ ಕೊಯ್ಯುವ ಸ್ಥಳದಲ್ಲಿ, ಕೊಯ್ಯ
ಬೇಕು; ಯಾಕಂದರೆ ಪಾಪ ಬಲಿಯ ಹಾಗೆ ಅಪರಾಧ ಬಲಿಯೂ
೧೪ ಯಾಜಕನದಾಗಿದೆ; ಅದು ಅತಿ ಪರಿಶುದ್ಧವಾಗಿದೆ. ಮತ್ತು ಯಾ
ಜಕನು ಅಪರಾಧ ಬಲಿಯ ರಕ್ತವನ್ನು ತಕ್ಕೊಳ್ಳಲಿ; ಯಾಜಕ
ನು ಅದನ್ನು ಶುದ್ಧ ಮಾಡಿಸಿ ಕೊಳ್ಳುವವನ ಬಲ ಕಿವಿಯ ಕೊನೆ
ಗೂ, ಅವನ ಬಲ ಕೈಯ ಅಂಗುಷ್ಠಕ್ಕೂ, ಬಲ ಕಾಲಿನ ಹೆಬ್ಬೆ
೧೫ ರಳಿಗೂ, ಹಚ್ಚ ಬೇಕು. ಮತ್ತು ಯಾಜಕನು ಆ ಎಣ್ಣೆಯ
ಲೋಗಿನಿಂದ ಸ್ವಲ್ಪ ತಕ್ಕೊಂಡು, ತನ್ನ ಎಡ ಕೈಯಲ್ಲಿ ಹೊ
೧೬ ಯ್ಯ ಬೇಕು; ಮತ್ತು ಯಾಜಕನು ಎಡ ಕೈಯಲ್ಲಿರುವ ಎಣ್ಣೆ
ಯಲ್ಲಿ ಬಲ ಕೈ ಬೆರಳುಗಳನ್ನು ಅದ್ದಿ, ಆ ಎಣ್ಣೆಯನ್ನು ಕರ್ತನ
೧೭ ಮುಂದೆ ಏಳು ಸಾರಿ ತನ್ನ ಬೆರಳಿನಿಂದ ಚಿಮಿಕಿಸ ಬೇಕು. ಮ
ತ್ತು ಅವನ ಅಂಗೈಯಲ್ಲಿ ಮಿಕ್ಕ ಎಣ್ಣೆಯನ್ನು ಯಾಜಕನು ಶು
ದ್ಧ ಮಾಡಿಸಿ ಕೊಳ್ಳುವವನ ಬಲ ಕಿವಿಯ ಕೊನೆಗೂ, ಅವನ ಬ
ಲ ಕೈಯ ಅಂಗುಷ್ಠಕ್ಕೂ, ಬಲ ಕಾಲಿನ ಹೆಬ್ಬೆರಳಿಗೂ, ಅಪ
೧೮ ರಾಧ ಬಲಿಯ ರಕ್ತದಿದ್ದಲ್ಲಿ, ಹಚ್ಚ ಬೇಕು. ಮತ್ತು ಯಾಜಕನ
ಅಂಗೈಯಲ್ಲಿ ಮಿಕ್ಕ ಎಣ್ಣೆಯನ್ನು ಅವನು ಶುದ್ಧ ಮಾಡಿಸಿ ಕೊ
ಳ್ಳುವವನ ತಲೆಯ ಮೇಲೆ ಹಾಕ ಬೇಕು; ಹಾಗೆ ಯಾಜಕನು ಕ
೧೯ ರ್ತನ ಮುಂದೆ ಅವನ ಪಾಪ ಮುಚ್ಚ ಬೇಕು. ಇದಲ್ಲದೆ ಯಾ
ಜಕನು ಪಾಪ ಬಲಿಯನ್ನು ಅರ್ಪಿಸಿ, ಅವನ ಅಶುದ್ಧತ್ವದ ನಿಮಿ
ತ್ತ ಶುದ್ಧ ಮಾಡಿಸಿ ಕೊಳ್ಳುವವನ ಪಾಪ ಮುಚ್ಚಿ, ಆ ಮೇಲೆ
೨೦ ಹೋಮವನನ್ನು ಕೊಯ್ಯ ಬೇಕು. ಮತ್ತು ಯಾಜಕನು ಹೋ
ಮವನ್ನೂ ಕಾಣಿಕೆಯನ್ನೂ ಬಲಿಪೀಠದ ಮೇಲೆ ಏರಿಸ ಬೇಕು;
ಯಾಜಕನು ಅವನಿಗೋಸ್ಕರ ಪಾಪ ಮುಚ್ಚಿದ ಬಳಿಕ ಅವನು
ಶುದ್ಧನಾಗಿರುವನು.

೨೧ ಆದರೆ ಅವನು ಬಡವನಾಗಿ ಅದ್ದಕ್ಕೆ ಗತಿ ಇಲ್ಲದವನಾದರೆ,
ಅವನು ಅಪರಾಧ ಬಲಿಯಾಗಿ, ಅಲ್ಲಾಡಿಸುವ ಬಲಿಯಾಗಿ ತನ್ನ
ಪಾಪ ಮುಚ್ಚುವದಕ್ಕೋಸ್ಕರ ಒಂದು ಕುರಿ ಮರಿಯನ್ನೂ, ಕಾ
ಣಿಕೆಯಾಗಿ ಎಣ್ಣೆ ಹೊಯಿದ ಗೋಧಿ ಹಿಟ್ಟಿನ ಒಂದು ದಶಾಂ
೨೨ ಶವನ್ನೂ, ಎಣ್ಣೆಯ ಒಂದು ಲೋಗನ್ನೂ, ಮತ್ತು ತನ್ನಿಂದ
ಆಗುವ ಮೇಕೆಗೆ, ಎರಡು ಬೆಳವಗಳನ್ನು, ಇಲ್ಲವೆ ಎರಡು ಪಾರಿ
ವಾಳ ಮರಿಗಳನ್ನು, ತಕ್ಕೊಳ್ಳ ಬೇಕು; ಇವುಗಳಲ್ಲಿ ಒಂದು ಪಾ
ಪ ಬಲಿಗೋಸ್ಕರವೂ, ಒಂದು ಹೋಮಕ್ಕೋಸ್ಕರವೂ ಇರುವ
೨೩ ದು. ಇವುಗಳನ್ನು ಅವನು ಶುದ್ಧನಾದ ಮೇಲೆ, ಎಂಟನೇ ದಿವ
ಸದಲ್ಲಿ ಯಾಜಕನಿಗೆ, ಸಭೆಯ ಸುಡಾರದ ಬಾಗಲಿಗೆ, ಕರ್ತನ
೨೪ ಸನ್ನಿಧಿಗೆ ತರ ಬೇಕು. ಆಗ ಯಾಜಕನು ಅಪರಾಧ ಬಲಿಯ ಕು
ರಿ ಮರಿಯನ್ನೂ, ಆ ಎಣ್ಣೆಯ ಲೋಗನ್ನೂ ತಕ್ಕೊಳ್ಳ ಬೇ
ಕು; ಯಾಜಕನು ಅವುಗಳನ್ನು ಕರ್ತನ ಮುಂದೆ ಅಲ್ಲಾಡಿಸುವ
೨೫ ಬಲಿಯಾಗಿ ಅಲ್ಲಾಡಿಸ ಬೇಕು; ಮತ್ತು ಅಪರಾಧ ಬಲಿಯ ಕುರಿ
ಮರಿಯನ್ನು ಕೊಯಿದ ಮೇಲೆ, ಯಾಜಕನು ಅಪರಾಧ ಬಲಿಯ
ರಕ್ತವನ್ನು ತಕ್ಕೊಂಡು, ಶುದ್ಧ ಮಾಡಿಸಿ ಕೊಳ್ಳುವವನ ಬಲ ಕಿ
ವಿಯ ಕೊನೆಗೂ, ಅವನ ಬಲಗೈಯ ಅಂಗುಷ್ಠಕ್ಕೂ, ಅವನ ಬ
೨೬ ಲ ಕಾಲಿನ ಹೆಬ್ಬೆರಳಿಗೂ, ಹಚ್ಚ ಬೇಕು; ಮತ್ತು ಯಾಜಕನು
ಆ ಎಣ್ಣೆಯಲ್ಲಿ ಸ್ವಲ್ಪ ತನ್ನ ಎಡ ಕೈಯಲ್ಲಿ ಹೊಯ್ಯ ಬೇ
೨೭ ಕು; ಮತ್ತು ಯಾಜಕನು ತನ್ನ ಬಲ ಕೈ ಬೆರಳಿನಿಂದ ತನ್ನ ಎ
ಡ ಕೈಯಲ್ಲಿರುವ ಎಣ್ಣೆಯಲ್ಲಿ ಸ್ವಲ್ಪ ಏಳು ಸಾರಿ ಕರ್ತನ ಸ
೨೮ ನ್ನಿಧಿಯಲ್ಲಿ ಚಿಮಿಕಿಸ ಬೇಕು; ಮತ್ತು ಯಾಜಕನು ತನ್ನ ಕೈ
ಯಲ್ಲಿರುವ ಎಣ್ಣೆಯಲ್ಲಿ ಸ್ವಲ್ಪ ಶುದ್ಧ ಮಾಡಿಸಿ ಕೊಳ್ಳುವವನ
ಬಲ ಕಿವಿಯ ಕೊನೆಗೂ, ಅವನ ಬಲಗೈಯ ಅಂಗುಷ್ಠಕ್ಕೂ, ಬ
ಲ ಕಾಲಿನ ಹೆಬ್ಬೆರಳಿಗೂ, ಅಪರಾಧ ಬಲಿಯ ರಕ್ತದಿದ್ದಲ್ಲಿ,
೨೯ ಹಚ್ಚ ಬೇಕು. ಮತ್ತು ಯಾಜಕನ ಕೈಯಲ್ಲಿದ್ದ ಎಣ್ಣೆಯಲ್ಲಿ ಮಿ
ಕ್ಕದ್ದನ್ನು ಅವನು ಶುದ್ಧ ಮಾಡಿಸಿ ಕೊಳ್ಳುವವನ ತಲೆಗೆ ಹಾಕಿ,
ಈ ಪ್ರಕಾರ ಅವನಿಗೋಸ್ಕರ ಕರ್ತನ ಸನ್ನಿಧಿಯಲ್ಲಿ ಪಾಪ
೩೦ ಮುಚ್ಚ ಬೇಕು. ಆ ಮೇಲೆ ಅವನಿಂದಲಾಗುವ ಮೇಕೆಗೆ ತಂದ
ಬೆಳವಗಳಲ್ಲಿ ಆಗಲಿ, ಪಾರಿವಾಳ ಮರಿಗಳಲ್ಲಿ ಆಗಲಿ, ಒಂದನ್ನು
೩೧ ಅರ್ಪಿಸಲಿ; ಅವನಿಂದಲಾಗುವ ಮೇಕೆಗೆ ತಂದವುಗಳಲ್ಲಿ ಒಂದ
ನ್ನು ಪಾಪ ಬಲಿಯಾಗಿ, ಒಂದನ್ನು ಹೋಮವಾಗಿ, ಕಾಣಿಕೆಯ
ಹೊರ್ತಾಗಿ ಅರ್ಪಿಸಲಿ; ಹಾಗೆ ಯಾಜಕನು ಶುದ್ಧ ಮಾಡಿಸಿ
ಕೊಳ್ಳುವವನಿಗೋಸ್ಕರ ಕರ್ತನ ಸನ್ನಿಧಿಯಲ್ಲಿ ಪಾಪ ಮುಚ್ಚ
ಬೇಕು.

೩೨ ಕುಷ್ಠದ ಬಾಧೆಯುಳ್ಳವನಾಗಿ ಶುದ್ಧ ಮಾಡಿಸಿ ಕೊಳ್ಳುವದ
ಕ್ಕೆ ಗತಿ ಇಲ್ಲದವನಿಗೆ ಇದೇ ನ್ಯಾಯ ಪ್ರಮಾಣ.

೩೩ ಮತ್ತು ಕರ್ತನು ಮಾತಾಡಿ ಮೋಶೆಗೂ ಆರೋನನಿಗೂ
೩೪ ಹೇಳಿದ್ದೇನಂದರೆ—ನಿಮಗೆ ಸ್ವಾಸ್ಥ್ಯವಾಗಿ ಕೊಡುವ ಕಾನಾನ್



ದೇಶಕ್ಕೆ ನೀವು ಬರಲಾಗಿ, ನಾನು ನಿಮ್ಮ ಸ್ವಾಸ್ಥ್ಯ ದೇಶದ ಒಂ
ದು ಮನೆಯಲ್ಲಿ ಕುಷ್ಠದ ಬಾಧೆಯನ್ನು ಉಂಟು ಮಾಡಿದರೆ,
೩೫ ಆ ಮನೆ ಉಂಟಾದವನು ಬಂದು—ಮನೆಯಲ್ಲಿ ನನಗೆ ಬಾಧೆಯ
೩೬ ಹಾಗೆ ಕಾಣುತ್ತದೆ ಎಂದು, ಯಾಜಕನಿಗೆ ತಿಳಿಸ ಬೇಕು. ಆಗ
ಮನೆಯಲ್ಲಿದ್ದದ್ದೆಲ್ಲಾ ಅಶುದ್ಧವಾಗದ ಹಾಗೆ, ಯಾಜಕನು ಆ
ಬಾಧೆಯನ್ನು ನೋಡ ಬರುವದಕ್ಕಿಂತ ಮುಂಚೆ, ಆ ಮನೆಯ
ನ್ನು ಖಾಲಿ ಮಾಡ ಬೇಕೆಂದು, ಯಾಜಕನು ಅಪ್ಪಣೆ ಕೊಡ
ಬೇಕು; ಆ ಮೇಲೆ ಯಾಜಕನು ಆ ಮನೆಯನ್ನು ನೋಡುವದ
೩೭ ಕ್ಕೆ ಬರಲಿ, ಅವನು ಆ ಬಾಧೆಯನ್ನು ನೋಡಲಾಗಿ, ಅಗೋ,
ಆ ಬಾಧೆ ಮನೆಯ ಗೋಡೆಗಳಲ್ಲಿ ಹಸುರಾಗಿಯಾದರೂ, ಕೆಂಪ
ಗಾದರೂ, ಗೋಡೆಗಿಂತ ತಗ್ಗಾಗಿ ಕಾಣುವ ತಗ್ಗಿನ ಸ್ಥಳಗಳು
೩೮ ಇದ್ದರೆ, ಯಾಜಕನು ಮನೆಯಿಂದ ಹೊರಟು, ಮನೆ ಬಾಗಲಿಗೆ
ಬಂದು, ಆ ಮನೆಯನ್ನು ಏಳು ದಿನ ಮುಚ್ಚ ಬೇಕು; ಏಳನೇ
ದಿವಸದಲ್ಲಿ ಯಾಜಕನು ತಿರಿಗಿ ಬಂದು, ನೋಡ ಬೇಕು; ಅಗೋ,
೩೯ ಆ ಬಾಧೆ ಮನೆಯ ಗೋಡೆಗಳಲ್ಲಿ ಹಬ್ಬಿದ್ದಾದರೆ, ಆ ಬಾಧೆ
ಉಂಟಾದ ಕಲ್ಲುಗಳನ್ನು ಕಿತ್ತು, ಪಟ್ಟಣದ ಹೊರಗೆ ಅಶುದ್ಧ ಸ್ಥಳ
ಕ್ಕೆ ಹಾಕ ಬೇಕೆಂದೂ, ಆ ಮನೆಯನ್ನು ಸುತ್ತಲಾಗಿ ತಿಕ್ಕಿಸಿ,
೪೦ ಆ ತಿಕ್ಕಿದ ಧೂಳನ್ನು ಪಟ್ಟಣದ ಹೊರಗೆ ಅಶುದ್ಧ ಸ್ಥಳಕ್ಕೆ ಹಾ
೪೧ ಕ ಬೇಕೆಂದೂ, ಬೇರೆ ಕಲ್ಲುಗಳನ್ನು ತಕ್ಕೊಂಡು, ಆ ಕಲ್ಲುಗ
ಳ ಬದಲಾಗಿ ಇಡ ಬೇಕೆಂದೂ, ಬೇರೆ ಸುಣ್ಣ ತಕ್ಕೊಂಡು, ಆ
ಮನೆಗೆ ಹಚ್ಚ ಬೇಕೆಂದೂ, ಯಾಜಕನು ಅಪ್ಪಣೆ ಕೊಡ ಬೇಕು.
೪೨ ಕಲ್ಲುಗಳನ್ನು ಕಿತ್ತ ಮೇಲೆಯೂ, ಮನೆಯನ್ನು ತಿಕ್ಕಿದ ಮೇಲೆ
ಯೂ, ಸುಣ್ಣ ಹಚ್ಚಿದ ಮೇಲೆಯೂ, ಆ ಬಾಧೆ ತಿರಿಗಿ ಬಂದು,
೪೩ ಮನೆಯಲ್ಲಿ ಚಿಗಿತರೆ, ಯಾಜಕನು ಬಂದು ನೋಡ ಬೇಕು;
ಅಗೋ, ಆ ಬಾಧೆಯು ಮನೆಯಲ್ಲಿ ಚಿಗಿತದ್ದಾದರೆ, ಅದು ಮನೆ
೪೪ ಯಲ್ಲಿ ಇರುವ ಕೆಟ್ಟ ಕುಷ್ಠವೇ; ಅದು ಅಶುದ್ಧವಾಗಿದೆ. ಹೀಗಿ
ರುವದರಿಂದ ಆ ಮನೆಯನ್ನು ಒಡಿದು ಹಾಕಿ, ಅದರ ಕಲ್ಲುಗಳ
ನ್ನೂ, ಮರಗಳನ್ನೂ, ಆ ಮನೆಯ ಎಲ್ಲಾ ಧೂಳನ್ನೂ ಪಟ್ಟಣದ
೪೫ ಹೊರಗೆ ಅಶುದ್ಧ ಸ್ಥಳಕ್ಕೆ ವೈಯ ಬೇಕು. ಇದಲ್ಲದೆ ಆ ಮನೆ
ಯೊಳಗೆ, ಅದು ಮುಚ್ಚಿರುವ ಎಲ್ಲಾ ದಿನಗಳಲ್ಲಿ ಬಂದವನು ಸಾ
೪೬ ಯಂಕಾಲದ ಪರ್ಯಂತರ ಅಶುದ್ಧನಾಗಿರುವನು. ಮತ್ತು ಮನೆ
ಯಲ್ಲಿ ಮಲಗಿದವನು ತನ್ನ ವಸ್ತ್ರಗಳನ್ನು ಬಗೆದು ಕೊಳ್ಳ
ಬೇಕು; ಮನೆಯಲ್ಲಿ ಉಂಡವನು ತನ್ನ ವಸ್ತ್ರಗಳನ್ನು ಬಗೆದು
ಕೊಳ್ಳ ಬೇಕು.

೪೭ ಆದರೆ ಯಾಜಕನು ಬಂದು ನೋಡಲಾಗಿ, ಅಗೋ, ಮನೆಗೆ
ಸುಣ್ಣ ಹಚ್ಚಿದ ಮೇಲೆ ಆ ಬಾಧೆ ಮನೆಯಲ್ಲಿ ಹಬ್ಬಲಿಲ್ಲ ಇದ್ದರೆ,
ಯಾಜಕನು ಆ ಮನೆಯನ್ನು ಶುದ್ಧವೆಂದು ನಿರ್ಣಯಿಸ ಬೇ
೪೮ ಕು; ಯಾಕಂದರೆ ಆ ಬಾಧೆ ವಾಸಿಯಾಯಿತು. ಆಗ ಆ ಮನೆ
ಯ ನಿಮಿತ್ತ ಪಾಪ ಬಲಿ ಅರ್ಪಿಸುವ ಬಗ್ಯೆ, ಎರಡು ಪಕ್ಷಿಗಳ
ನ್ನೂ, ದೇವದಾರು ಮರವನ್ನೂ, ಲಾಕಿ ಬ್ಣ್ಣವನ್ನೂ, ಹಿಸ್ಸೊ
೪೯ ಪ್ಪನ್ನೂ ತಕ್ಕೊಂಡು, ಆ ಪಕ್ಷಿಗಳಲ್ಲಿ ಒಂದನ್ನು ಹರಿಯುವ
೫೦ ನೀರಿನ ಬಳಿಯಲ್ಲಿ ಮಣ್ಣಿನ ಪಾತ್ರೆಯ ಮೇಲೆ ಕೊಯಿದು, ಆ
ದೇವದಾರು ಮರವನ್ನೂ, ಹಿಸ್ಸೊಪ್ಪನ್ನೂ, ಲಾಕಿ ಬ್ಣ್ಣವ
ನ್ನೂ, ಜೀವದಿಂದಿರುವ ಪಕ್ಷಿಯನ್ನೂ ತಕ್ಕೊಂಡು, ಕೊಯಿದ
ಪಕ್ಷಿಯ ರಕ್ತದಲ್ಲಿಯೂ, ಆ ಹರಿಯುವ ನೀರಿನಲ್ಲಿಯೂ ಅದ್ದಿ,
೫೧ ಮನೆಯ ಕಡೆಗೆ ಏಳು ಸಾರಿ ಚಿಮಿಕಿಸಿ, ಹಾಗೆ ಪಕ್ಷಿಯ ರಕ್ತದಿಂ
ದಲೂ, ಹರಿಯುವ ನೀರಿನಿಂದಲೂ, ಜೀವವುಳ್ಳ ಪಕ್ಷಿ, ದೇವದಾ
ರು, ಹಿಸ್ಸೊಪ್ಪು, ಲಾಕಿ ಬ್ಣ್ಣಗಳಿಂದಲೂ, ಆ ಮನೆಯ ನಿಮಿತ್ತ
೫೨ ಪಾಪ ಬಲಿ ಅರ್ಪಿಸಿ, ಆ ಜೀವದಿಂದಿರುವ ಪಕ್ಷಿಯನ್ನು ಪಟ್ಟಣದ
ಹೊರಗೆ ಕಾಡಿನ ಕಡೆಗೆ ಬಿಟ್ಟು ಬಿಟ್ಟು, ಆ ಮನೆಯ ನಿಮಿತ್ತ ಪಾ
ಪ ಮುಚ್ಚ ಬೇಕು; ಆಗ ಅದು ಶುದ್ಧವಾಗುವದು.

೫೩, ೫೪ ಇದೇ ಕುಷ್ಠದ ಎಲ್ಲಾ ಬಾಧೆಗೂ, ಇಸಬಿಗೂ, ವಸ್ತ್ರದಲ್ಲಿ
೫೫ ಯೂ ಮನೆಯಲ್ಲಿಯೂ ಇರುವ ಕುಷ್ಠಕ್ಕೂ, ಬಾವಿಗೂ, ಮರ
೫೬ ಕೆಗೂ, ಕಲೆಗೂ ನ್ಯಾಯ ಪ್ರಮಾಣ; ಅದು ಯಾವಾಗ ಅಶುದ್ಧ
ವಾಗಿದೆಯೋ, ಯಾವಾಗ ಶುದ್ಧವಾಗಿದೆಯೋ, ಎಂದು ಬೋ
ಧಿಸುವ ಬಗ್ಯೆ ಕುಷ್ಠದ ನ್ಯಾಯಪ್ರಮಾಣ ಇದೇ.

## ೧೫. ಸಂಧಿ.

೧ ಮತ್ತು ಕರ್ತನು ಮಾತಾಡಿ, ಮೋಶೆಗೂ ಆರೋನನಿಗೂ
೨ ಹೇಳಿದ್ದೇನಂದರೆ—ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವ
ರಿಗೆ ಹೇಳ ಬೇಕಾದದ್ದೇನಂದರೆ—ಯಾವನಾದರೂ ತನ್ನ ಮಾಂ
ಸದಲ್ಲಿ ಮೇಹವುಳ್ಳವನಾದರೆ, ತನ್ನ ಮೇಹದ ನಿಮಿತ್ತ ಅಶುದ್ಧ
೩ ನಾಗಿರುವನು. ಅವನ ಮೇಹದ ಅಶುದ್ಧತ್ವವು ಯಾವದೆಂದ
ರೆ—ಅವನ ಮಾಂಸದಿಂದ ಮೇಹವು ಹರಿದರೂ, ಅಡಗಿ ಇದ್ದ
೪ ರೂ, ಅವನಿಗೆ ಅಶುದ್ಧತ್ವ ಉಂಟು. ಮೇಹವುಳ್ಳವನು ಮಲಗಿ
ರುವ ಮಂಚಗಳೆಲ್ಲಾ ಅಶುದ್ಧವಾಗುವವು; ಅವನು ಕೂತು ಕೊ
೫ ಳ್ಳುವ ಸಾಮಾನುಗಳೆಲ್ಲಾ ಅಶುದ್ಧವಾಗುವವು. ಮತ್ತು ಅವನ
ಮಂಚವನ್ನು ಮುಟ್ಟಿದವರೆಲ್ಲಾ ತಮ್ಮ ವಸ್ತ್ರಗಳನ್ನೆಲ್ಲಾ ಬಗೆದು
ಕೊಂಡು, ನೀರಿನಲ್ಲಿ ತೊಳೆದು ಕೊಂಡು, ಸಾಯಂಕಾಲದ ಪ
೬ ರ್ಯಂತರ ಅಶುದ್ಧರಾಗಿರ ಬೇಕು. ಮತ್ತು ಮೇಹವುಳ್ಳವನು
ಕೂತು ಕೊಂಡ ಸಾಮಾನಿನ ಮೇಲೆ ಕೂತು ಕೊಂಡವನು ತನ್ನ
ವಸ್ತ್ರಗಳನ್ನು ಬಗೆದು ಕೊಂಡು, ನೀರಿನಲ್ಲಿ ತೊಳೆದು ಕೊಂಡು,
೭ ಸಾಯಂಕಾಲದ ಪರ್ಯಂತರ ಅಶುದ್ಧನಾಗಿರ ಬೇಕು. ಮತ್ತು
ಮೇಹವುಳ್ಳವನ ಶರೀರವನ್ನು ಮುಟ್ಟಿದವನು ತನ್ನ ವಸ್ತ್ರಗಳ
ನ್ನು ಬಗೆದು ಕೊಂಡು, ನೀರಿನಲ್ಲಿ ತೊಳೆದು ಕೊಂಡು, ಸಾಯಂ
೮ ಕಾಲದ ಪರ್ಯಂತರ ಅಶುದ್ಧವಾಗಿರ ಬೇಕು. ಮತ್ತು ಮೇಹ
ವುಳ್ಳವನು ಶುದ್ಧನಾದವನ ಮೇಲೆ ಉಗುಳಿದರೆ, ಅವನು ತನ್ನ
ವಸ್ತ್ರಗಳನ್ನು ಬಗೆದು ಕೊಂಡು, ನೀರಿನಲ್ಲಿ ತೊಳೆದು ಕೊಂಡು,
೯ ಸಾಯಂಕಾಲದ ಪರ್ಯಂತರ ಅಶುದ್ಧನಾಗಿರ ಬೇಕು. ಮತ್ತು
ಮೇಹವುಳ್ಳವನು ಹತ್ತಿದ ಜೀನುಗಳೆಲ್ಲಾ ಅಶುದ್ಧವಾಗಿರ ಬೇಕು;
೧೦ ಅವನ ಕೆಳಗೆ ಇದ್ದದ್ದೇನಾದರೂ ಮುಟ್ಟಿದವರೆಲ್ಲಾ ಸಾಯಂಕಾ
ಲದ ಪರ್ಯಂತರ ಅಶುದ್ಧರಾಗಿರ ಬೇಕು; ಅಂಥವುಗಳನ್ನು
ಹೊತ್ತವರು ವಸ್ತ್ರಗಳನ್ನು ಬಗೆದು ಕೊಂಡು, ನೀರಿನಲ್ಲಿ ತೊಳೆ
ದು ಕೊಂಡು, ಸಾಯಂಕಾಲದ ಪರ್ಯಂತರ ಅಶುದ್ಧರಾಗಿರ
೧೧ ಬೇಕು. ಮತ್ತು ಮೇಹವುಳ್ಳವನು ಕೈಗಳನ್ನು ನೀರಿನಲ್ಲಿ ತೊಳೆ
ಯದೆ ಮುಟ್ಟಿದವರೆಲ್ಲಾ, ತಮ್ಮ ವಸ್ತ್ರಗಳನ್ನು ಬಗೆದು ಕೊಂಡು,
ನೀರಿನಲ್ಲಿ ತೊಳೆದು ಕೊಂಡು, ಸಾಯಂಕಾಲದ ಪರ್ಯಂತರ
೧೨ ಅಶುದ್ಧರಾಗಿರ ಬೇಕು. ಮತ್ತು ಮೇಹವುಳ್ಳವನು ಮುಟ್ಟಿದ
ಮಣ್ಣಿನ ಪಾತ್ರೆಗಳನ್ನೆಲ್ಲಾ ಒಡೆದು ಹಾಕ ಬೇಕು; ಮರದ ಪಾ
೧೩ ತ್ರೆಗಳನ್ನೆಲ್ಲಾ ನೀರಿನಲ್ಲಿ ತೊಳೆಯ ಬೇಕು. ಮೇಹವುಳ್ಳವನು

ತನ್ನ ಮೇಲೆ ಕಳೆದು ಶುದ್ಧನಾದರೆ, ಅವನು ಶುದ್ಧ ಮಾಡಿಸಿ
ಕೊಳ್ಳಬೇಕದಕ್ಕೆ ಏಳು ದಿವಸಗಳನ್ನು ಎಣಿಸಿ, ತನ್ನ ವಸ್ತ್ರಗಳ
ನ್ನು ಒಗೆದು ಕೊಂಡು, ಹರಿಯುವ ನೀರಿನಲ್ಲಿ ತನ್ನ ಮಾಂಸ
೧೪ ತೊಳೆದು ಕೊಂಡು, ಶುದ್ಧವಾಗ ಬೇಕು. ಎಂಟನೇ ದಿವಸದಲ್ಲಿ
ಎರಡು ಬೆಳೆವಗಳನ್ನಾಗಲಿ, ಪಾರಿವಾಳದ ಎರಡು ಮರಿಗಳನ್ನಾ
ಗಲಿ, ತಕ್ಕೊಂಡು, ಕರ್ತನ ಸನ್ನಿಧಿಗೆ, ಸಭೆಯ ಗುಡಾರದ ಬಾಗ
೧೫ ಲಿಗೆ, ಬಂದು, ಅವುಗಳನ್ನು ಯಾಜಕನಿಗೆ ಕೊಡ ಬೇಕು. ಯಾ
ಜಕನು ಅವುಗಳನ್ನು ಪಾಪ ಬಲಿಯಾಗಿ ಒಂದನ್ನೂ, ಹೋ
ಮವಾಗಿ ಒಂದನ್ನೂ, ಅರ್ಪಿಸ ಬೇಕು; ಹಾಗೆ ಯಾಜಕನು ಅವ
ನ ಮೇಹದ ನಿಮಿತ್ತ ಕರ್ತನ ಮುಂದೆ ಅವನ ಪಾಪ ಮುಚ್ಚ
ಬೇಕು.

೧೬ ಮತ್ತು ಒಬ್ಬನಿಗೆ ವೀರ್ಯ ಹೋದರೆ, ಅವನು ತನ್ನ
ಮಾಂಸವನೆಲ್ಲಾ ನೀರಿನಲ್ಲಿ ತೊಳೆದು, ಸಾಯಂಕಾಲದ ಪರ್ಯಂ
೧೭ ತರ ಅಶುದ್ಧವಾಗಿರ ಬೇಕು. ಮತ್ತು ವೀರ್ಯವು ಬಿದ್ದ ಎಲ್ಲಾ
ವಸ್ತ್ರಗಳನ್ನೂ, ತೊಗಲುಗಳನ್ನೂ ನೀರಿನಲ್ಲಿ ತೊಳೆಯ ಬೇಕು;
ಅವು ಸಾಯಂಕಾಲದ ಪರ್ಯಂತರ ಅಶುದ್ಧವಾಗಿರ ಬೇಕು.
೧೮ ಮತ್ತು ಸ್ತ್ರೀಯ ಸಂಗಡ ಒಬ್ಬನು ಮಲಗಿ, ವೀರ್ಯ ಬಿಟ್ಟಿದ್ದ
ರೆ, ಅವರು ನೀರಿನಲ್ಲಿ ತೊಳೆದು ಕೊಂಡು, ಸಾಯಂಕಾಲದ
ಪರ್ಯಂತರ ಅಶುದ್ಧರಾಗಿರ ಬೇಕು.

೧೯ ಇದಲ್ಲದೆ ಒಬ್ಬ ಸ್ತ್ರೀಯು, ತನ್ನ ಮಾಂಸದಲ್ಲಿ ರಕ್ತ ಹರಿ
ದು, ರಜಸ್ವಲೆಯಾದರೆ, ಅವಳು ಏಳು ದಿವಸ ಪರ್ಯಂತರ
ಮುಟ್ಟಾಗಿರ ಬೇಕು; ಅವಳನ್ನು ಮುಟ್ಟಿದವರೆಲ್ಲಾ ಸಾಯಂಕಾಲ
೨೦ ದ ಪರ್ಯಂತರ ಅಶುದ್ಧರಾಗಿರ ಬೇಕು. ಅವಳು ಮುಟ್ಟಾಗಿರು
ವಾಗ, ಮಲಗಿದ್ದೆಲ್ಲಾ ಅಶುದ್ಧವಾಗಿರ ಬೇಕು; ಕೂತು ಕೊಂಡದ್ದೆ
೨೧ ಲ್ಲಾ ಅಶುದ್ಧವಾಗಿರ ಬೇಕು. ಅವಳ ಹಾಸಿಗೆಯನ್ನು ಮುಟ್ಟಿದವ
ರೆಲ್ಲಾ ತಮ್ಮ ವಸ್ತ್ರಗಳನ್ನು ಒಗೆದು ಕೊಂಡು, ನೀರಿನಲ್ಲಿ ತೊಳೆ
ದು ಕೊಂಡು, ಸಾಯಂಕಾಲದ ಪರ್ಯಂತರ ಅಶುದ್ಧರಾಗಿರ
೨೨ ಬೇಕು. ಅವಳು ಕೂತು ಕೊಂಡ ಯಾವ ಸಾಮಾನಾದರೂ
ಮುಟ್ಟಿದವರೆಲ್ಲಾ ತಮ್ಮ ವಸ್ತ್ರಗಳನ್ನು ಒಗೆದು ಕೊಂಡು, ನೀರಿ
ನಲ್ಲಿ ತೊಳೆದು ಕೊಂಡು, ಸಾಯಂಕಾಲದ ಪರ್ಯಂತರ ಅಶು
೨೩ ದ್ಧರಾಗಿರ ಬೇಕು. ಇದಲ್ಲದೆ ಹಾಸಿಗೆಯ ಮೇಲಾಗಲಿ, ಅವಳು
ಕೂತು ಕೊಂಡ ಯಾವದರ ಮೇಲಾಗಲಿ, ಇರುವಂಥಾದ್ದನ್ನು
ಮುಟ್ಟಿದವನು ಸಾಯಂಕಾಲದ ಪರ್ಯಂತರ ಅಶುದ್ಧನಾಗಿರ
೨೪ ಬೇಕು. ಇದಲ್ಲದೆ ಒಬ್ಬ ಮನುಷ್ಯನು ಹ್ಯಾಗೂ ಅವಳ ಸಂಗ
ಡ ಮಲಗಲು, ಅವಳ ಹೊಲೆ ಅವನಿಗೆ ತಗಲಿದರೆ, ಅವನು ಏಳು
ದಿವಸ ಅಶುದ್ಧನಾಗಿರ ಬೇಕು; ಅವನು ಮಲಗಿ ಕೊಳ್ಳುವ ಹಾಸಿಗೆ
ಎಲ್ಲಾ ಅಶುದ್ಧವಾಗಿರ ಬೇಕು.

೨೫ ಇದಲ್ಲದೆ ಒಬ್ಬ ಸ್ತ್ರೀಯಲ್ಲಿ ಮುಟ್ಟು ಇಲ್ಲದ ಕಾಲದಲ್ಲಿ
ಅದರೂ, ಮುಟ್ಟಿನ ಮೇಲಾದರೂ, ರಕ್ತ ಪ್ರವಾಹವು ಅನೇಕ ದಿ
ವಸ ಹರಿದರೆ, ಅವಳ ಅಶುದ್ಧತ್ವವು ಹರಿಯುವ ದಿನಗಳೆಲ್ಲಾ
ಅವಳು, ಮುಟ್ಟಿನ ಕಾಲದಲ್ಲಿದ್ದ ಹಾಗೆ, ಅಶುದ್ಧಳಾಗಿರ ಬೇಕು.
೨೬ ಅವಳ ರಕ್ತ ಪ್ರವಾಹದ ದಿನಗಳೆಲ್ಲಾ ಅವಳು ಮಲಗಿದ ಎಲ್ಲಾ
ಹಾಸಿಗೆಗಳು, ಅವಳಿಗೆ ಅವಳ ಮುಟ್ಟಿನ ಹಾಸಿಗೆಯ ಹಾಗೆ ಇರ
ಬೇಕು; ಮತ್ತು ಅವಳು ಕೂತು ಕೊಂಡ ಸಾಮಾನುಗಳೆಲ್ಲಾ,
ಅವಳ ಮುಟ್ಟಿನ ಅಶುದ್ಧತ್ವದಲ್ಲಿ ಆದ ಹಾಗೆ, ಅಶುದ್ಧವಾಗಿರ
೨೭ ಬೇಕು. ಇವುಗಳನ್ನು ಮುಟ್ಟಿದವರೆಲ್ಲಾ ಅಶುದ್ಧರಾಗ ಬೇಕು;
ಅವರು ತಮ್ಮ ವಸ್ತ್ರಗಳನ್ನು ಒಗೆದು ಕೊಂಡು, ನೀರಿನಲ್ಲಿ ತೊಳೆ
ದು ಕೊಂಡು, ಸಾಯಂಕಾಲದ ಪರ್ಯಂತರ ಅಶುದ್ಧರಾಗಿರ
೨೮ ಬೇಕು. ಇದಲ್ಲದೆ ಅವಳು ತನ್ನ ಪ್ರವಾಹದಿಂದ ಶುದ್ಧಳಾದರೆ,
ಅವಳು ಏಳು ದಿವಸಗಳನ್ನು ಎಣಿಸಿ ಕೊಂಡು, ಆ ಮೇಲೆ ಶುದ್ಧ
೨೯ ಳಾಗಿರ ಬೇಕು; ಆದರೆ ಎಂಟನೇ ದಿವಸದಲ್ಲಿ ಅವಳು ಎರಡು ಬೆಳೆ
ವಗಳನ್ನಾಗಲಿ, ಪಾರಿವಾಳದ ಎರಡು ಮರಿಗಳನ್ನಾಗಲಿ, ತಕ್ಕೊಂ
ಡು, ಯಾಜಕನ ಹತ್ತರ ಸಭೆಯ ಗುಡಾರದ ಬಾಗಲಿಗೆ ತರ
೩೦ ಬೇಕು. ಯಾಜಕನು ಅವುಗಳನ್ನು, ಪಾಪ ಬಲಿಯಾಗಿ ಒಂದ
ನ್ನೂ, ಹೋಮವಾಗಿ ಒಂದನ್ನೂ, ಅರ್ಪಿಸ ಬೇಕು; ಹಾಗೆ
ಯಾಜಕನು ಅವಳ ಅಶುದ್ಧ ಪ್ರವಾಹದ ನಿಮಿತ್ತ ಕರ್ತನ ಮುಂ
ದೆ ಅವಳ ಪಾಪ ಮುಚ್ಚ ಬೇಕು.

೩೧ ಈ ಪ್ರಕಾರ ನೀವು ಇಸ್ರಯೇಲ್ ಮಕ್ಕಳನ್ನು, ಅವರ ಅಶು
ದ್ಧತ್ವಕ್ಕೆ ಪ್ರತ್ಯೇಕ ಮಾಡ ಬೇಕು; ಆಗಲವರು ತಮ್ಮ ಮಧ್ಯ
ದಲ್ಲಿ ಇರುವ ನನ್ನ ಗುಡಾರವನ್ನು ಅಶುದ್ಧ ಮಾಡಿ, ತಮ್ಮ ಅಶು
ದ್ಧತ್ವದಿಂದ ಸಾಯುವದಿಲ್ಲ.

೩೨ ಮೇಹವುಳ್ಳವನಿಗೂ, ವೀರ್ಯ ಬಿಟ್ಟು, ಅಶುದ್ಧತ್ವ ಹೊಂ
ದಿದವನಿಗೂ, ಮುಟ್ಟು ಎಂಬ ರೋಗವುಳ್ಳವಳಿಗೂ, ಪ್ರವಾಹವು
ಳ್ಳ ಗಂಡಸಿಗೂ, ಹೆಂಸಿಗೂ, ಅಶುದ್ಧವಾದವಳ ಸಂಗಡ ಮಲ
ಗಿದ ಮನುಷ್ಯನಿಗೂ, ಇದೇ ನ್ಯಾಯ ಪ್ರಮಾಣ.

## ೧೬. ಸಂಧಿ.

೧ ಇದಲ್ಲದೆ ಆಕೋನನ ಇಬ್ಬರು ಮಕ್ಕಳು ಸತ್ತ ಮೇಲೆ, ಅ
ವರು ಕರ್ತನ ಸನ್ನಿಧಿಗೆ ಬಂದು ಸತ್ತಾಗ, ಕರ್ತನು ಮೋಶೆ
೨ ಯ ಸಂಗಡ ಮಾತಾಡಿದನು. ಕರ್ತನು ಮೋಶೆಗೆ ಹೇಳಿದ್ದೇ
ನಂದರೆ—ಅವನು ಸಾಯದ ಹಾಗೆ ಯಾವಾಗಲೂ ತೆರೆಯೊಳಗಿ
ರುವ ಪರಿಶುದ್ಧ ಸ್ಥಳಕ್ಕೆ, ಪೆಟ್ಟಿಗೆಯ ಮೇಲಿರುವ ಕೃಪಾಸನದ
ಸಮೀಪಕ್ಕೆ, ಎಲ್ಲಾ ಕಾಲಗಳಲ್ಲಿ ಬರ ಬಾರದೆಂದು, ನಿನ್ನ ಸಹೋ
ದರನಾದ ಆಕೋನನಿಗೆ ಹೇಳು; ಯಾಕಂದರೆ ಕೃಪಾಸನದ
3 ಮೇಲೆ ನಾನು ಮೇಘದಲ್ಲಿ ಪ್ರತ್ಯಕ್ಷವಾಗುವೆನು. ಆಕೋನನು
ಪರಿಶುದ್ಧ ಸ್ಥಳಕ್ಕೆ ಹ್ಯಾಗೆ ಬರ ಬೇಕಂದರೆ—ಪಾಪ ಬಲಿಯಾಗಿ
೪ ಗಂಡು ಕರುವೂ, ಹೋಮವಾಗಿ ಟಗರೂ, ಆಗ ಬೇಕು. ಅವನು
ಮಡಿಯ ಪರಿಶುದ್ಧ ಅಂಗಿಯನ್ನು ತೊಟ್ಟು ಕೊಳ್ಳ ಬೇಕು; ಮ
ಡಿಯ ಇಜಾರುಗಳು ಅವನ ಮಾಂಸದ ಮೇಲೆ ಇರ ಬೇಕು; ಮ
ಡಿಯ ನಡುಕಟ್ಟನ್ನು ಕಟ್ಟಿ ಕೊಳ್ಳ ಬೇಕು; ಮಡಿಯ ಮುಂಡಾ
ಸವನ್ನು ಇಟ್ಟು ಕೊಳ್ಳ ಬೇಕು; ಇವೇ ಪರಿಶುದ್ಧ ವಸ್ತ್ರಗಳು;
ನೀರಿನಿಂದ ತನ್ನ ಮಾಂಸವನ್ನು ತೊಳೆ ಕೊಂಡು, ಅವುಗಳನ್ನು
೫ ಹಾಕಿ ಕೊಳ್ಳ ಬೇಕು. ಮತ್ತು ಇಸ್ರಯೇಲ್ ಮಕ್ಕಳ ಸಭೆಯ
ಕಡೆಯಿಂದ ಅವನು ಪಾಪ ಬಲಿಯಾಗಿ ಮೇಕೆಗಳ ಎರಡು ಹೋ
ತುಗಳನ್ನೂ, ಹೋಮವಾಗಿ ಒಂದು ಟಗರನ್ನೂ ತಕ್ಕೊಳ್ಳ
ಬೇಕು.

೬ ಮತ್ತು ಆಕೋನನು ತನಗಿರುವ ಪಾಪ ಬಲಿಯ ಹೋರಿಯ
ನ್ನು ಅರ್ಪಿಸಿ, ತನಗೋಸ್ಕರವೂ, ತನ್ನ ಮನೆಗೋಸ್ಕರವೂ
೭ ಪಾಪ ಮುಚ್ಚ ಬೇಕು. ಮತ್ತು ಆ ಎರಡು ಹೋತುಗಳನ್ನು
ತಕ್ಕೊಂಡು, ಕರ್ತನ ಮುಂದೆ ಸಭೆಯ ಗುಡಾರದ ಬಾಗಲಲ್ಲಿ



೮ ನಿಲ್ಲಿಸ ಬೇಕು. ಮತ್ತು ಆಕೋನನು ಆ ಎರಡು ಹೋತುಗಳ
ನಿಮಿತ್ತ ಚೀಟುಗಳನ್ನು ಹಾಕ ಬೇಕು; ಒಂದು ಚೀಟು ಕರ್ತನಿ
೯ ಗೋಸ್ಕರ, ಮತ್ತೊಂದು ಚೀಟು ಬಿಡುಗಡೆಗೋಸ್ಕರ. ಕರ್ತ
ನ ಚೀಟು ಯಾವದರ ಮೇಲೆ ಬಿತ್ತೋ, ಆ ಹೋತನ್ನು ಆ
೧೦ ಕೋನನು ತಂದು, ಪಾಪ ಬಲಿಯಾಗಿ ಅರ್ಪಿಸ ಬೇಕು. ಆದ
ರೆ ಬಿಡುಗಡೆಯ ಚೀಟು ಯಾವದರ ಮೇಲೆ ಬಿತ್ತೋ, ಆ ಹೋ
ತನ್ನು, ಅದರಿಂದ ಪಾಪ ಮುಚ್ಚುವದಕ್ಕೆ, ಅದನ್ನು ಬಿಡುಗಡೆ
ಯಾಗಿ ಅರಣ್ಯಕ್ಕೆ ಕಳುಹಿಸುವ ಬಗ್ಯೆ, ಜೀವವುಳ್ಳದ್ದಾಗಿ ಕ
ರ್ತನ ಸನ್ನಿಧಿಯಲ್ಲಿ ನಿಲ್ಲಿಸ ಬೇಕು.

೧೧ ಈ ಪ್ರಕಾರ ಆಕೋನನು ತನಗಿರುವ ಪಾಪ ಬಲಿಯ ಹೋ
ರಿಯನ್ನು ತಂದು, ತನಗೋಸ್ಕರವೂ ತನ್ನ ಮನೆಗೋಸ್ಕರ
ವೂ ಪಾಪ ಮುಚ್ಚಿ, ತನಗಿರುವ ಪಾಪ ಬಲಿಯ ಹೋರಿಯನ್ನು
೧೨ ಕೋಯಿದು, ಕರ್ತನ ಸನ್ನಿಧಿಯಲ್ಲಿರುವ ಬಲಿಪೀಠದಿಂದ ಅಗ್ನಿ
ಪಾತ್ರೆ ತುಂಬ ಉರಿ ಕೆಂಡಗಳನ್ನೂ, ಎರಡು ಹಿಡಿ ತುಂಬ ಕುಟ್ಟಿದ
೧೩ ಪರಿಮಳ ಧೂಪವನ್ನೂ ತಕ್ಕೊಂಡು, ತೆರೆಯೊಳಗೆ ತಂದು, ಆ
ಧೂಪವನ್ನು ಕರ್ತನ ಸನ್ನಿಧಿಯಲ್ಲಿ ಬೆಂಕಿಯ ಮೇಲೆ ಇಟ್ಟು,
ಧೂಪದ ಮೇಘದಿಂದ ಸಾಕ್ಷಿಯ ಮೇಲೆ ಇರುವ ಕೃಪಾಸನವ
೧೪ ನ್ನು, ತಾನು ಸಾಯದ ಹಾಗೆ, ಮುಚ್ಚಿ, ಆ ಹೋರಿಯ ರಕ್ತದ
ಲ್ಲಿ ಸ್ವಲ್ಪ ತೆಗೆದು, ಕೃಪಾಸನದ ಕಡೆಗೆ ಮೂಡಣಕ್ಕೆ ಬೆರಳಿ
ನಿಂದ ಚಿಮಿಕಿಸ ಬೇಕು; ಕೃಪಾಸನದ ಮುಂದೆ ಆ ರಕ್ತವನ್ನು
ಏಳು ಸಾರಿ ಬೆರಳಿನಿಂದ ಚಿಮಿಕಿಸ ಬೇಕು.

೧೫ ಮತ್ತು ಜನರಿಗೋಸ್ಕರವಾದ ಪಾಪ ಬಲಿಯ ಹೋತನ್ನು
ಕೊಯಿದು, ಅದರ ರಕ್ತವನ್ನು ತೆರೆಯೊಳಗೆ ತಕ್ಕೊಂಡು ಹೋ
ಗಿ, ಹೋರಿಯ ರಕ್ತದಿಂದ ಮಾಡಿದ್ದನ್ನು ಇದರ ರಕ್ತದಿಂದ
ಮಾಡಿ, ಅದನ್ನು ಕೃಪಾಸನದ ಮೇಲೆಯೂ, ಕೃಪಾಸನದ
೧೬ ಮುಂದೆಯೂ, ಚಿಮಿಕಿಸಿ, ಇಸ್ರಯೇಲ್ ಮಕ್ಕಳ ಅಶುದ್ಧತ್ವ
ಗಳ ನಿಮಿತ್ತವೂ, ಅವರ ಸಮಸ್ತ ಪಾಪಗಳಲ್ಲಿ ಉಂಟಾಗುವ ಅ
ವರ ದ್ರೋಹಗಳ ನಿಮಿತ್ತವೂ, ಪರಿಶುದ್ಧ ಸ್ಥಳಕ್ಕೆ ಪಾಪ ಮುಚ್ಚ
ಬೇಕು; ಅದರ ಅಶುದ್ಧತ್ವಗಳ ನಡುವೆ ಅದರಲ್ಲಿ ನಿವಾಸವಾಗಿ
೧೭ ರುವ ಸಭೆಯ ಗುಡಾರಕ್ಕೆ ಹಾಗೆ ಮಾಡ ಬೇಕು. ಇದಲ್ಲದೆ ಅ
ವನು ಪರಿಶುದ್ಧ ಸ್ಥಳದಲ್ಲಿ ಪಾಪ ಮುಚ್ಚುವದಕ್ಕೆ ಪ್ರವೇಶಿಸುವಾ
ಗ, ಅವನು ತನಗೋಸ್ಕರವೂ, ತನ್ನ ಮನೆಗೋಸ್ಕರವೂ, ಇ
ಸ್ರಯೇಲಿನ ಸಮಸ್ತ ಸಭೆಗೋಸ್ಕರವೂ, ಪಾಪ ಮುಚ್ಚಿ, ಹೊ
ರಗೆ ಬರುವ ಪರ್ಯಂತರ, ಯಾವ ಮನುಷ್ಯನಾದರೂ ಸಭೆ
೧೮ ಯ ಗುಡಾರದಲ್ಲಿ ಇರ ಬಾರದು. ಆ ಮೇಲೆ ಅವನು ಕರ್ತನ
ಸನ್ನಿಧಿಯಲ್ಲಿರುವ ಬಲಿಪೀಠದ ಹತ್ತರ ಹೊರಗೆ ಬಂದು, ಅದ
ಕ್ಕೋಸ್ಕರವೂ ಪಾಪ ಮುಚ್ಚಿ, ಹೋರಿಯ ರಕ್ತದಲ್ಲಿಯೂ,
ಹೋತಿನ ರಕ್ತದಲ್ಲಿಯೂ, ಸ್ವಲ್ಪ ತಕ್ಕೊಂಡು, ಬಲಿಪೀಠದ
೧೯ ಕೊಂಬುಗಳ್ಳಾಗೆ ಸುತ್ತಲಾಗಿ ಹಚ್ಚಿ, ಬೆರಳಿನಿಂದ ಆ ರಕ್ತವನ್ನು
ಏಳು ಸಾರಿ ಅದರ ಮೇಲೆ ಚಿಮಿಕಿಸಿ, ಅದನ್ನು ಶುಚಿ ಮಾಡಿ,
ಇಸ್ರಯೇಲ್ ಮಕ್ಕಳ ಅಶುದ್ಧತ್ವಗಳನ್ನು ಕಳೆದು, ಪರಿಶುದ್ಧ
ಮಾಡ ಬೇಕು.

೨೦ ಪರಿಶುದ್ಧ ಸ್ಥಳಕ್ಕೂ, ಸಭೆಯ ಗುಡಾರಕ್ಕೂ, ಬಲಿಪೀಠಕ್ಕೂ
ಪಾಪ ಮುಚ್ಚಿ ಆದ ಮೇಲೆ, ಅವನು ಆ ಜೀವದಿಂದಿರುವ ಹೋ
೨೧ ತನ್ನು ತರ ಬೇಕು. ಮತ್ತು ಆಕೋನನು ಜೀವದಿಂದಿರುವ
ಹೋತಿನ ತಲೆಯ ಮೇಲೆ ತನ್ನ ಎರಡು ಕೈಗಳನ್ನಿಟ್ಟು, ಅದರ
ಮೇಲೆ ಇಸ್ರಯೇಲ್ ಮಕ್ಕಳ ಎಲ್ಲಾ ಅಕ್ರಮಗಳನ್ನೂ, ಅವರ
ಎಲ್ಲಾ ಪಾಪಗಳಲ್ಲಿರುವ ಅವರ ಎಲ್ಲಾ ದ್ರೋಹಗಳನ್ನೂ, ಅರಿ
ಕೆ ಮಾಡಿ, ಅವುಗಳನ್ನು ಹೋತಿನ ತಲೆಯ ಮೇಲೆ ಇಟ್ಟು,
ಅದನ್ನು ಯಾವನೊಬ್ಬ ಮನುಷ್ಯನ ಕೈಯಿಂದ ಕಾಡಿಗೆ ಕಳು
೨೨ ಹಿಸಿ ಬಿಡ ಬೇಕು. ಆ ಹೋತು ತನ್ನ ಮೇಲೆ ಅವರ ಎಲ್ಲಾ
ಅಕ್ರಮಗಳನ್ನು ಹಾಳು ದೇಶಕ್ಕೆ ತಕ್ಕೊಂಡು ಹೋಗುವ ಹಾಗೆ,
ಆ ಹೋತನ್ನು ಕಾಡಿಗೆ ಕಳುಹಿಸ ಬೇಕು.

೨೩ ಆ ಮೇಲೆ ಆಕೋನನು ಸಭೆಯ ಗುಡಾರಕ್ಕೆ ಹೋಗಿ, ತಾ
ನು ಪರಿಶುದ್ಧ ಸ್ಥಳಕ್ಕೆ ಬಂದಾಗ ಧರಿಸಿ ಕೊಂಡ ಮಡಿಯ ವಸ್ತ್ರ
೨೪ ಗಳನ್ನು ತೆಗೆದಿಟ್ಟು, ಅಲ್ಲಿ ಬಿಡ ಬೇಕು. ಮತ್ತು ಪರಿಶುದ್ಧ ಸ್ಥಳದ
ಲ್ಲಿ ತನ್ನ ಮಾಂಸವನ್ನು ನೀರಿನಿಂದ ತೊಳೆ ಕೊಂಡು, ತನ್ನ
ವಸ್ತ್ರಗಳನ್ನು ಧರಿಸಿ ಕೊಂಡು, ಹೊರಗೆ ಹೋಗಿ, ತನ್ನ ಹೋ
ಮವನ್ನೂ, ಜನರ ಹೋಮವನ್ನೂ ಅರ್ಪಿಸಿ, ತನಗೋಸ್ಕರ
೨೫ ವೂ ಜನರಿಗೋಸ್ಕರವೂ ಪಾಪ ಮುಚ್ಚ ಬೇಕು. ಮತ್ತು ಪಾ
ಪ ಬಲಿಯ ಕೊಬ್ಬನ್ನು ಬಲಿಪೀಠದಲ್ಲಿ ಸುಡ ಬೇಕು.

೨೬ ಇದಲ್ಲದೆ ಹೋತನ್ನು ಬಿಡುಗಡೆಯಾಗಿ ಕಳುಹಿಸಿ ಬಿಟ್ಟವನು
ತನ್ನ ವಸ್ತ್ರಗಳನ್ನು ಒಗೆದು ಕೊಂಡು, ತನ್ನ ಮಾಂಸವನ್ನು
ನೀರಿನಲ್ಲಿ ತೊಳೆ ಕೊಂಡು, ಆ ಮೇಲೆ ದಂಡಿಗೆ ಬರ ಬಹುದು.
೨೭ ಮತ್ತು ಪರಿಶುದ್ಧ ಸ್ಥಳಕ್ಕೋಸ್ಕರ ಪಾಪ ಮುಚ್ಚುವ ಬಗ್ಯೆ,
ಯಾವವುಗಳ ರಕ್ತವು ತರಲ್ಪಟ್ಟಿತೋ, ಆ ಪಾಪ ಬಲಿಯ
ಹೋರಿಯನ್ನೂ, ಪಾಪ ಬಲಿಯ ಹೋತನ್ನೂ, ದಂಡಿನ ಹೊ
ರಗೆ ತಕ್ಕೊಂಡು ಹೋಗಿ, ಅವುಗಳ ತೊಗಲನ್ನೂ, ಮಾಂಸವ
೨೮ ನ್ನೂ, ಸಗಣಿಯನ್ನೂ, ಬೆಂಕಿಯಿಂದ ಸುಡ ಬೇಕು. ಅವುಗಳ
ನ್ನು ಸುಟ್ಟವನು ವಸ್ತ್ರಗಳನ್ನು ಒಗೆದು ಕೊಂಡು, ತನ್ನ ಮಾಂ
ಸವನ್ನು ನೀರಿನಲ್ಲಿ ತೊಳೆದು ಕೊಳ್ಳ ಬೇಕು; ಆ ಮೇಲೆ ದಂ
ಡಿಗೆ ಬರ ಬಹುದು.

೨೯ ಇದೇ ನಿಮಗೆ ನಿತ್ಯವಾದ ನೇಮವಾಗಿರ ಬೇಕು—ಏಳನೇ
ತಿಂಗಳಲ್ಲಿ, ತಿಂಗಳಿನ ಹತ್ತನೇ ದಿವಸದಲ್ಲಿ, ನೀವು, ದೇಶಸ್ಥರೂ,
ನಿಮ್ಮಲ್ಲಿ ಪರವಾಸವಾಗಿರುವ ಪರರೂ, ನಿಮ್ಮ ಪ್ರಾಣಗಳನ್ನು
ಕುಂದಿಸಿ ಕೊಂಡು, ಯಾವ ಕೆಲಸವನ್ನೂ ಮಾಡದೆ ಇರ ಬೇಕು.
೩೦ ಯಾಕಂದರೆ ಈ ದಿವಸದಲ್ಲಿ ನಿಮಗೋಸ್ಕರ ಪಾಪ ಮುಚ್ಚಿ,
ನಿಮ್ಮನ್ನು ಶುದ್ಧ ಮಾಡ ಬೇಕು; ನಿಮ್ಮ ಎಲ್ಲಾ ಪಾಪಗಳನ್ನು
೩೧ ಕಳೆದು, ನೀವು ಕರ್ತನ ಸನ್ನಿಧಿಯಲ್ಲಿ ಶುದ್ಧರಾಗ ಬೇಕು. ಇದೇ
ನಿಮಗೆ ವಿಶ್ರಾಂತಿಯಾದ ಸಬ್ಬತ್ತಿ ದಿನವು; ನೀವು ನಿಮ್ಮ ಪ್ರಾಣ
ಗಳನ್ನು ಕುಂದಿಸಿ ಕೊಳ್ಳ ಬೇಕು; ಅದು ನಿತ್ಯವಾದ ನೇಮ.
೩೨ ಯಾವನಿಗೆ ಅಭಿಷೇಕವಾಯಿತೋ, ತನ್ನ ತಂದೆಗೆ ಬದಲಾಗಿ
ಯಾಜಕನಾಗುವದಕ್ಕೆ ಯಾವನು ಪ್ರತಿಷ್ಠೆ ಮಾಡಲ್ಪಟ್ಟನೋ,
ಆ ಯಾಜಕನು ಪರಿಶುದ್ಧ ವಸ್ತ್ರಗಳಾಗಿರುವ ಮತಿ ವಸ್ತ್ರಗಳನ್ನು
33 ಹಾಕಿ ಕೊಂಡು, ಪಾಪ ಮುಚ್ಚ ಬೇಕು. ಅವನು ಪರಿಶುದ್ಧ ಸ್ಥ
ಳಕ್ಕೋಸ್ಕರ ಪಾಪ ಮುಚ್ಚಿ, ಸಭೆಯ ಗುಡಾರಕ್ಕೋಸ್ಕರವೂ
ಬಲಿಪೀಠಕ್ಕೋಸ್ಕರವೂ ಪಾಪ ಮುಚ್ಚಿ, ಯಾಜಕರಿಗೋಸ್ಕರ
ವೂ ಸಭೆಯ ಎಲ್ಲಾ ಜನರಿಗೋಸ್ಕರವೂ ಪಾಪ ಮುಚ್ಚ ಬೇಕು.
೩೪ ಇಸ್ರಯೇಲ್ ಮಕ್ಕಳಿಗೋಸ್ಕರ ಅವರ ಎಲ್ಲಾ ಪಾಪಗಳ ನಿಮಿ

ತ್ತ ವರುಷಕ್ಕೆ ಒಂದು ಸಾರಿ ಪಾಪ ಮುಚ್ಚುವ ಹಾಗೆ, ಇದು ನಿ
ಮಗೆ ನಿತ್ಯ ನೇಮವಾಗಿರ ಬೇಕು.
೨೪ ಮೋಶೆಗೆ ಕರ್ತನು ಆಜ್ಞಾಪಿಸಿದ ಹಾಗೆ, ಅವನು ಮಾಡಿದನು.

## ೧೭. ಸಂಧಿ.

೧ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ನೀನು ಆರೋನನ ಸಂಗಡಲೂ, ಅವನ ಮಕ್ಕಳ ಸಂಗಡಲೂ,
ಸಮಸ್ತ ಇಸ್ರಯೇಲ್ ಮಕ್ಕಳ ಸಂಗಡಲೂ ಮಾತಾಡಿ ಅವರಿಗೆ
ಹೇಳ ಬೇಕಾದದ್ದೇನಂದರೆ—ಕರ್ತನು ಆಜ್ಞಾಪಿಸಿದ ಕಾರ್ಯ
೩ ಇದೇ; ಏನಂದರೆ—ಇಸ್ರಯೇಲ್ ಮನೆಯಲ್ಲಿ ಯಾವನು ಎತ್ತನ್ನಾ
ಗಲಿ, ಕುರಿಮರಿಯನ್ನಾಗಲಿ, ಮೇಕೆಯನ್ನಾಗಲಿ, ದಂಡಿನಲ್ಲಿ ಕೊ
೪ ಯಿದು, ಇಲ್ಲವೆ ದಂಡಿನ ಹೊರಗೆ ಕೊಯಿದು, ಅದನ್ನು ಕರ್ತ
ನ ನಿವಾಸದ ಮುಂದೆ ಕರ್ತನಿಗೆ ಅರ್ಪಣೆಯಾಗಿ ಸಲ್ಲಿಸುವ
ದಕ್ಕೆ ಸಭೆಯ ಗುಡಾರದ ಬಾಗಲಲ್ಲಿ ತಾರದೆ ಇರುವನೋ, ಆ
ಮನುಷ್ಯನಿಗೆ ರಕ್ತಾಪರಾಧ ಎಣಿಸಲ್ಪಡುವದು; ಅವನು ರಕ್ತ
ವನ್ನು ಚೆಲ್ಲಿ ಇರುವನು; ಆ ಮನುಷ್ಯನು ತನ್ನ ಜನರೊಳಗಿಂ
೫ ದ ಕಡಿಯಲ್ಪಡುವನು. ಯಾಕಂದರೆ ಇಸ್ರಯೇಲ್ ಮಕ್ಕಳು
ತಾವು ಬೈಲಿನಲ್ಲಿ ಕೊಯ್ಯುವ ಬಲಿಗಳನ್ನು ಕರ್ತನಿಗೆ, ಸಭೆ
ಯ ಗುಡಾರದ ಬಾಗಲಿಗೆ, ಯಾಜಕನ ಬಳ್ಳಿಗೆ ತಂದು, ಕರ್ತನಿ
೬ ಗೆ ಅವುಗಳನ್ನು ಸಮಾಧಾನ ಬಲಿಗಳಾಗಿ ಅರ್ಪಿಸ ಬೇಕು. ಆಗ
ಯಾಜಕನು ರಕ್ತವನ್ನು ಕರ್ತನ ಬಲಿಪೀಠದ ಮೇಲೆ ಸಭೆಯ
ಗುಡಾರದ ಹೊರಗೆ ಚಿಮಿಕಿಸಿ, ಕೊಬ್ಬನ್ನು ಕರ್ತನಿಗೆ ಸುವಾ
೭ ಸನೆಯಾಗಿ ಸುಡ ಬೇಕು. ಈ ಮೇಕೆಗೆ ಅವರು ಯಾರನ್ನು
ಅನುಸರಿಸಿ ಜಾರತ್ವ ಮಾಡಿದರೋ, ಆ ಹೋತು ರೂಪ ದೆವ್ವ
ಗಳಿಗೆ ಇನ್ನು ಮೇಲೆ ತಮ್ಮ ಬಲಿಗಳನ್ನು ಅರ್ಪಿಸ ಬಾರದು;
ಇದೇ ಅವರಿಗೆ ಅವರ ಸಂತತಿಗಳಲ್ಲಿ ನಿತ್ಯ ನೇಮವಾಗಿರ ಬೇಕು.
೮ ಮತ್ತು ಅವರಿಗೆ ಹೇಳ ಬೇಕಾದದ್ದು—ಇಸ್ರಯೇಲ್ ಮನೆಯ
ವರಲ್ಲಿಯೂ, ಅವರೊಳಗೆ ಪರವಾಸವಾಗಿರುವ ಪರರಲ್ಲಿಯೂ,
ಯಾವನೂ ಹೋಮವನ್ನಾಗಲಿ, ಬಲಿಯನ್ನಾಗಲಿ ಅರ್ಪಿಸುವಾ
೯ ಗ, ಅದನ್ನು ಕರ್ತನಿಗೆ ಅರ್ಪಿಸುವದಕ್ಕೆ ಸಭೆಯ ಗುಡಾರದ
ಬಾಗಲಿಗೆ ತಾರದೆ ಇರುವನೋ, ಆ ಮನುಷ್ಯನು ತನ್ನ ಜನ
ರೊಳಗಿಂದ ಕಡಿಯಲ್ಪಡುವನು.
೧೦ ಮತ್ತು ಇಸ್ರಯೇಲ್ ಮನೆಯವರಲ್ಲಿಯೂ, ಅವರೊಳಗೆ ಪ
ರವಾಸವಾಗಿರುವ ಪರರಲ್ಲಿಯೂ, ಯಾವನು ಯಾವ ರಕ್ತವನ್ನಾ
ದರೂ ಉಣ್ಣುವನೋ, ರಕ್ತವನ್ನು ಉಣ್ಣುವ ಪ್ರಾಣಕ್ಕೆ ವಿ
ರೋಧವಾಗಿ ನನ್ನ ಮುಖವನ್ನಿಟ್ಟು, ಅವನನ್ನು ಅವನ ಜನ
೧೧ ರೊಳಗಿಂದ ಕಡಿದು ಹಾಕುವೆನು. ಯಾಕಂದರೆ ಮಾಂಸದ ಪ್ರಾ
ಣ ರಕ್ತದಲ್ಲಿ ಅದೆ; ಮತ್ತು ನಿಮ್ಮ ಪ್ರಾಣಗಳಿಗೋಸ್ಕರ ಪಾಪ
ಮುಚ್ಚುವ ಬಗ್ಯೆ, ಅದನ್ನು ನಿಮಗೆ ಬಲಿಪೀಠದ ಮೇಲೆ ಕೊಟ್ಟಿ
ದ್ದೇನೆ; ಹ್ಯಾಗಂದರೆ ಪ್ರಾಣದ ಪಾಪ ಮುಚ್ಚುವಂಥಾದ್ದು ರಕ್ತ
೧೨ ವೇ. ಆದದರಿಂದ ನಾನು ಇಸ್ರಯೇಲ್ ಮಕ್ಕಳಿಗೆ ಹೇಳುವದೇ
ನಂದರೆ—ನಿಮ್ಮಲ್ಲಿ ಯಾವನಾದರೂ ರಕ್ತವನ್ನು ಉಣ್ಣ ಬಾರ
ದು; ನಿಮ್ಮೊಳಗೆ ಪರವಾಸವಾಗಿರುವ ಪರನು ಸಹ ರಕ್ತವನ್ನು
ಉಣ್ಣ ಬಾರದು.
೧೩ ಮತ್ತು ಇಸ್ರಯೇಲ್ ಮಕ್ಕಳಲ್ಲಿಯೂ, ಅವರೊಳಗೆ ಪರವಾ
ಸವಾಗಿರುವ ಪರರಲ್ಲಿಯೂ ಯಾರು ಬೇಟೆಯ ಮೃಗವನ್ನು,
ಇಲ್ಲವೆ, ಪಿನ್ನ ತಕ್ಕ ಪಕ್ಷಿಯನ್ನು ಬೇಟೆಯಾಡುತ್ತಾರೋ, ಅವ
ರು ಅದರ ರಕ್ತವನ್ನು ಹೊಯಿದು ಬಿಟ್ಟು, ಮಣ್ಣಿನಿಂದ ಮುಚ್ಚ
೧೪ ಬೇಕು. ಯಾಕಂದರೆ ಎಲ್ಲಾ ಮಾಂಸದ ಪ್ರಾಣವಾದರೆ—ಅದ
ರ ರಕ್ತವೇ ಅದರ ಪ್ರಾಣ; ಆದದರಿಂದ ನಾನು ಇಸ್ರಯೇಲ್
ಮಕ್ಕಳಿಗೆ ಹೇಳುವದೇನಂದರೆ—ಎಲ್ಲಾ ಮಾಂಸದ ರಕ್ತವನ್ನು
ನೀವು ಪಿನ್ನ ಬೇಡಿರಿ; ಯಾಕಂದರೆ ಎಲ್ಲಾ ಮಾಂಸದ ಪ್ರಾಣವು
ಅದರ ರಕ್ತವೇ; ಅದನ್ನು ಪಿನ್ನುವ ಪ್ರಾಣಗಳೆಲ್ಲಾ ಕಡಿಯಲ್ಪ
ಡ ಬೇಕು.
೧೫ ಮತ್ತು ದೇಶಸ್ಥನಾಗಲಿ, ಪರನಾಗಲಿ, ಸತ್ತು ಬಿದ್ದದ್ದನ್ನೂ ಪೀ
ಳಿದ್ದನ್ನೂ ಪಿನ್ನುವ ಪ್ರಾಣ ಯಾವನೋ, ಅವನು ವಸ್ತ್ರಗಳ
ನ್ನು ಬಗೆದು ಕೊಂಡು, ನೀರಿನಲ್ಲಿ ತೊಳೆ ಕೊಂಡು, ಸಾಯಂ
ಕಾಲದ ಪರ್ಯಂತರ ಅಶುದ್ಧನಾಗಿರ ಬೇಕು; ಆ ಮೇಲೆ ಶುದ್ಧ
೧೬ ನಾಗಿರುವನು. ಅವನು ವಸ್ತ್ರಗಳನ್ನು ಬಗೆಯದೆ, ತನ್ನ ಮಾಂ
ಸವನ್ನು ತೊಳೆ ಕೊಳ್ಳದೆ ಹೋದರೆ, ತನ್ನ ಅಕ್ರಮವನ್ನು
ಹೊರ ಬೇಕು.

## ೧೮. ಸಂಧಿ.

೧ ಇದಲ್ಲದೆ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ ಹೇಳ ಬೇಕಾ
ದದ್ದೇನಂದರೆ—ನಿಮ್ಮ ದೇವರಾದ ಕರ್ತನು ನಾನೇ. ನೀವು
೩ ವಾಸವಾಗಿದ್ದ ಐಗುಪ್ತ ದೇಶದ ಕೃತ್ಯದ ಪ್ರಕಾರ ಮಾಡ ಬೇಡಿ
ರಿ; ನಾನು ನಿಮ್ಮನ್ನು ತರುವ ಕಾನಾ ದೇಶದ ಕೃತ್ಯದ ಪ್ರ
ಕಾರ ಮಾಡ ಬೇಡಿರಿ; ಅವರ ನೇಮಗಳಲ್ಲಿ ನಡೆಯ ಬೇಡಿರಿ.
೪ ನನ್ನ ನ್ಯಾಯಗಳನ್ನು ಮಾಡಿ, ನನ್ನ ನೇಮಗಳನ್ನು ಕಾಪಾಡಿ,
ಅವುಗಳಲ್ಲಿ ನಡಿಯ ಬೇಕು; ನಿಮ್ಮ ದೇವರಾಗಿರುವ ಕರ್ತನು
೫ ನಾನೇ. ಹೀಗಿರಲಾಗಿ ನನ್ನ ನೇಮಗಳನ್ನೂ ನನ್ನ ನ್ಯಾಯಗ
ಳನ್ನೂ ಕಾಪಾಡ ಬೇಕು; ಅವುಗಳನ್ನು ಯಾವನಾದರೂ ಮಾ
ಡಿದರೆ, ಅವುಗಳಿಂದ ಬದುಕುವನು; ನಾನೇ ಕರ್ತನು.
೬ ಯಾವನಾದರೂ ತನ್ನ ಬೆತ್ತಲೆತನವನ್ನು ಕಾಣಿಸ ಮಾಡು
ವದಕ್ಕೆ, ತನ್ನ ನೆಂಟರಾದವರ ಬಳ್ಳಿಗೆ ಪ್ರವೇಶಿಸ ಬಾರದು; ನಾನೇ
೭ ಕರ್ತನು. ನಿನ್ನ ತಂದೆಯ ಬೆತ್ತಲೆತನವನ್ನು ಕಾಣಿಸ ಮಾಡ
ಯ ಬೆತ್ತಲೆತನವನ್ನೂ ಕಾಣಿಸ ಮಾಡ ಬೇಡ; ಅವಳು ನಿನ್ನ
೮ ತಾಯಿಯೇ; ಅವಳ ಬೆತ್ತಲೆತನ ಕಾಣಿಸ ಮಾಡ ಬೇಡ. ನಿನ್ನ
ತಂದೆಯ ಹೆಂಡತಿಯ ಬೆತ್ತಲೆತನ ಕಾಣಿಸ ಮಾಡ ಬೇಡ; ಅದು
೯ ನಿನ್ನ ತಂದೆಯ ಬೆತ್ತಲೆತನವೇ. ಅವಳು ನಿನ್ನ ತಂದೆಯ ಮಗ
ಳಾಗಲಿ, ನಿನ್ನ ತಾಯಿಯ ಮಗಳಾಗಲಿ, ಮನೆಯಲ್ಲಿ ಹುಟ್ಟಿದವ
ಳಾಗಲಿ, ಹೊರಗೆ ಹುಟ್ಟಿದವಳಾಗಲಿ, ನಿನ್ನ ಸಹೋದರಿಯ
೧೦ ಬೆತ್ತಲೆತನ ಕಾಣಿಸ ಮಾಡ ಬೇಡ. ನಿನ್ನ ಮಗನ ಮಗಳ ಬೆ
ತ್ತಲೆತನವಾಗಲಿ, ನಿನ್ನ ಮಗಳ ಮಗಳ ಬೆತ್ತಲೆತನವಾಗಲಿ ಕಾಣಿಸ
ಮಾಡ ಬೇಡ; ಯಾಕಂದರೆ ಅವು ನಿನ್ನ ಬೆತ್ತಲೆತನವೇ. ನಿನ್ನ
೧೧ ತಂದೆಗೆ ಹುಟ್ಟಿದಂಥ, ನಿನ್ನ ತಂದೆಯ ಹೆಂಡತಿಯ ಮಗಳು ನಿನ್ನ
ಸಹೋದರಿಯಾಗಿರುವದರಿಂದ, ಅವಳ ಬೆತ್ತಲೆತನ ಕಾಣಿಸ
೧೨ ಮಾಡ ಬೇಡ. ನಿನ್ನ ತಂದೆಯ ಸಹೋದರಿಯ ಬೆತ್ತಲೆತನ ಕಾ
೧೩ ಣಿಸ ಮಾಡ ಬೇಡ; ಅವಳು ನಿನ್ನ ತಂದೆಯ ನೆಂಟಳೇ. ನಿನ್ನ
ತಾಯಿಯ ಸಹೋದರಿಯ ಬೆತ್ತಲೆತನ ಕಾಣಿಸ ಮಾಡ ಬೇಡ;





೧೪ ಅವಳು ನಿನ್ನ ತಾಯಿಯ ನೆಂಟಳೇ. ನಿನ್ನ ತಂದೆಯ ಸಹೋ
ದರನ ಬೆತ್ತಲೆತನ ಕಾಣಿಸ ಮಾಡ ಬೇಡ; ಅವನ ಹೆಂಡತಿಯ
೧೫ ಬಳ್ಳಿಗೆ ಪ್ರವೇಶಿಸ ಬೇಡ; ಅವಳು ನಿನ್ನ ದೊಡ್ಡಮ್ಮನು. ನಿನ್ನ
ಸೊಸೆಯ ಬೆತ್ತಲೆತನ ಕಾಣಿಸ ಮಾಡ ಬೇಡ; ಅವಳು ನಿನ್ನ ಮ
೧೬ಗನ ಹೆಂಡತಿ; ಅವಳ ಬೆತ್ತಲೆತನ ಕಾಣಿಸ ಮಾಡ ಬೇಡ. ನಿನ್ನ
ಸಹೋದರನ ಹೆಂಡತಿಯ ಬೆತ್ತಲೆತನ ಕಾಣಿಸ ಮಾಡ ಬೇಡ;
೧೭ ಅದು ನಿನ್ನ ಸಹೋದರನ ಬೆತ್ತಲೆತನ. ಬಬ್ಬ ಹೆಂಗಸಿನ ಬೆತ್ತ
ಲೆತನವನ್ನೂ ಅವಳ ಮಗಳ ಬೆತ್ತಲೆತನವನ್ನೂ ಕಾಣಿಸ ಮಾಡ
ಬೇಡ; ಅವಳ ಬೆತ್ತಲೆತನ ಕಾಣಿಸ ಮಾಡುವ ಹಾಗೆ, ಅವಳ ಮಗ
ಳ ಮಗಳನ್ನೂ, ಮಗನ ಮಗಳನ್ನೂ, ತಕ್ಕೊಳ್ಳ ಬೇಡ; ಅವ
೧೮ ಳ ನೆಂಟರಾಗಿದ್ದಾಳೆ; ಅದು ದುಷ್ಕರ್ಮ. ಇದಲ್ಲದೆ ಅವಳಿಗೆ
ವೈರಿಯಾಗುವ ಹಾಗೆ, ಬಬ್ಬ ಹೆಂಡತಿಗೆ ಮತ್ತೊಬ್ಬ ಹೆಂಡತಿ
ಯನ್ನು ತಕ್ಕೊಳ್ಳ ಬೇಡ; ಬಬ್ಬಳು ಜೀವದಿಂದಿರುವ ವೇಳೆಯು
ಲ್ಲಿ ಮತ್ತೊಬ್ಬಳ ಬೆತ್ತಲೆತನ ಕಾಣಿಸ ಮಾಡ ಬೇಡ.
೧೯ ಅವಳ ಬೆತ್ತಲೆತನ ಕಾಣಿಸ ಮಾಡುವ ಹಾಗೆ, ಮುಟ್ಟಿನ ಅಶು
೨೦ ದ್ಧತ್ವದಲ್ಲಿ ಇರುವ ಸ್ತ್ರೀಯ ಬಳ್ಳಿಗೆ, ಪ್ರವೇಶಿಸ ಬೇಡ. ಮತ್ತು
ಅವಳಿಂದ ಅಶುದ್ಧವಾಗದ ಹಾಗೆ, ನಿನ್ನ ನೆರೆಯವನ ಹೆಂಡತಿಯ
೨೧ ಸಂಗಡ ಸಂಗಮ ಮಾಡ ಬೇಡ. ಮತ್ತು, ನಿನ್ನ ದೇವರಾದ ಕ
ರ್ತನ ಹೆಸರನ್ನು ಅಪವಿತ್ರ ಮಾಡದ ಹಾಗೆ, ನಿನ್ನ ಬೀಜದಲ್ಲಿ
ಯಾರನ್ನಾದರೂ ಪೊಳೊಕನಿಗೆ ದಾಟಿಸುವದಕ್ಕೆ ಕೊಡ ಬೇ
೨೨ ಡ; ನಾನೇ ಕರ್ತನು. ಮತ್ತು ಹೆಂಗಸಿನ ಸಂಗಡ ಮಲಗಿ ಕೊ
ಳ್ಳುವ ಪ್ರಕಾರ, ಗಂಡಸಿನ ಸಂಗಡ ಮಲಗಿ ಕೊಳ್ಳ ಬೇಡ; ಅದು
೨೩ ಅಸಹ್ಯ. ಮತ್ತು ಯಾವ ಪಶುವಿನ ಸಂಗಡಲಾದರೂ ಸಂಗಮ
ಮಾಡದೆ, ಅದರಿಂದ ಅಶುದ್ಧನಾಗ ಬೇಡ; ಮತ್ತು ಸ್ತ್ರೀಯು, ಅ
ದರ ಸಂಗಡ ಕೂಡಿ ಕೊಳ್ಳುವ ಬಗ್ಯೆ, ಪಶುವಿನ ಮುಂದೆ ನಿಂತು
ಕೊಳ್ಳ ಬಾರದು; ಅದು ಗಲಿಬಿಲಿ.
೨೪ ಇವೆಲ್ಲವುಗಳಿಂದ ನೀವು ಅಶುದ್ಧರಾಗ ಬೇಡಿರಿ; ಯಾಕಂದರೆ
ನಾನು ನಿಮ್ಮೆದುರಿನಿಂದ ಕಳುಹಿಸಿ ಬಿಡುವ ಜನಾಂಗಗಳು ಇವೆಲ್ಲ
೨೫ ವುಗಳಿಂದ ತಮ್ಮನ್ನು ಅಶುದ್ಧ ಮಾಡಿ ಕೊಂಡವು. ದೇಶವು ಅ
ಶುದ್ಧವಾದದ್ದರಿಂದ, ನಾನು ಅದರ ಅಕ್ರಮವನ್ನು ಅದರ ಬಲಿ
ಯಲ್ಲಿ ವಿಚಾರಿಸುತ್ತೇನೆ; ದೇಶವು ಅದರ ನಿವಾಸಿಗಳನ್ನು ಕಾರಿ ಬಿ
೨೬ ಡುತ್ತದೆ. ಹೀಗಿರುವದರಿಂದ ನೀವು ನನ್ನ ನೇಮಗಳನ್ನೂ, ನ್ಯಾ
ಯಗಳನ್ನೂ ಕಾಪಾಡಿ, ದೇಶಸ್ಥರೂ, ನಿಮ್ಮೊಳಗೆ ಪರವಾಸವಾ
ಗಿರುವ ಪರರೂ, ಈ ಎಲ್ಲಾ ಅಸಹ್ಯಗಳಲ್ಲಿ ಒಂದನ್ನಾದರೂ
೨೭ ಮಾಡ ಬೇಡಿರಿ. ಯಾಕಂದರೆ ಈ ಎಲ್ಲಾ ಅಸಹ್ಯಗಳನ್ನು ನಿ
ಮಗೆ ಮುಂಚೆ ಇದ್ದ ದೇಶ ನಿವಾಸಿಗಳು ಮಾಡಿದ್ದರಿಂದ, ದೇಶವು
೨೮ ಅಶುದ್ಧವಾಯಿತು. ನೀವು ಅದನ್ನು ಅಶುದ್ಧ ಮಾಡಿದರೆ, ಅದು
ನಿಮಗೆ ಮುಂಚೆ ಇದ್ದ ಜನಾಂಗಗಳನ್ನು ಕಾರಿದಂತೆ ನಿಮ್ಮನ್ನೂ
೨೯ ಕಾರುವದಾದೀತು. ಯಾಕಂದರೆ ಈ ಎಲ್ಲಾ ಅಸಹ್ಯಗಳಲ್ಲಿ ಏ
ನಾದರೂ ಮಾಡುವವರ್‍ಯಾರೋ, ಮಾಡುವ ಆ ಪ್ರಾಣಗಳು ತ
೩೦ ಮ್ಮ ಜನರೊಳಗಿಂದ ಕಡಿಯಲ್ಪಡುವವು. ಹೀಗಿರುವದರಿಂದ ನಿ
ಮಗೆ ಮುಂಚೆ ನಡೆದ ಈ ಅಸಹ್ಯವಾದ ಮರ್‍ಯಾದೆಗಳಲ್ಲಿ
ನೀವು ಏನಾದರೂ ಮಾಡದೆ, ಅವುಗಳಿಂದ ಅಶುದ್ಧರಾಗದ ಹಾಗೆ,
ನನ್ನ ಕಾಯಿದೆಯನ್ನು ಕಾಪಾಡಿರಿ; ನಿಮ್ಮ ದೇವರಾದ ಕರ್ತ
ನು ನಾನೇ.

## ೧೯. ಸಂಧಿ.

೧ ಇದಲ್ಲದೆ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ನೀನು ಇಸ್ರಯೇಲ್ ಮಕ್ಕಳ ಸಮಸ್ತ ಸಭೆಯ ಸಂಗಡ ಮಾತಾ
ಡಿ, ಅವರಿಗೆ ಹೇಳ ಬೇಕಾದದ್ದೇನಂದರೆ—ನೀವು ಪರಿಶುದ್ಧರಾಗಿರ
ಬೇಕು; ಯಾಕಂದರೆ ನಿಮ್ಮ ದೇವರಾಗಿರುವ ಕರ್ತನಾದ ನಾನು
ಪರಿಶುದ್ಧನೇ.
೩ ಎಲ್ಲರು ನಿಮ್ಮ ನಿಮ್ಮ ತಂದೆ ತಾಯಿಗಳಿಗೆ ಭಯ ಪಟ್ಟು, ನ
ನ್ನ ಸಬ್ಬತುಗಳನ್ನು ಕಾಪಾಡ ಬೇಕು; ನಿಮ್ಮ ದೇವರಾಗಿರುವ
ಕರ್ತನು ನಾನೇ.
೪ ನೀವು ಸುಳ್ಳು ದೇವರುಗಳ ಕಡೆಗೆ ತಿರುಗಿ ಕೊಳ್ಳದೆ, ಎರಕ
ಹೊಯಿದ ದೇವರುಗಳನ್ನು ನಿಮಗೆ ಮಾಡಿ ಕೊಳ್ಳ ಬೇಡಿರಿ; ನಿ
ಮ್ಮ ದೇವರಾಗಿರುವ ಕರ್ತನು ನಾನೇ.
೫ ಮತ್ತು ನೀವು ಕರ್ತನಿಗೆ ಸಮಾಧಾನ ಬಲಿಯನ್ನು ಅರ್ಪಿ
ಸಿದರೆ, ನಿಮ್ಮಲ್ಲಿ ಮೆಚ್ಚಿಗೆ ಆಗುವ ಹಾಗೆ, ಅದನ್ನು ಅರ್ಪಿಸ
೬ ಬೇಕು. ಅರ್ಪಿಸಿದ ದಿನದಲ್ಲಿಯೂ ಮರು ದಿನದಲ್ಲಿಯೂ ಅ
ದನ್ನು ತಿನ್ನ ಬೇಕು; ಮೂರನೇ ದಿನದ ಪರ್ಯಂತರ ಬಿಕ್ಕ
೭ ದ್ದನ್ನು ಬೆಂಕಿಯಲ್ಲಿ ಸುಟ್ಟು ಬಿಡ ಬೇಕು. ಅದನ್ನು ಹ್ಯಾಗಾದ
ರೂ ಮೂರನೇ ದಿವಸದಲ್ಲಿ ತಿಂದರೆ, ಅದು ಅಸಹ್ಯವೇ; ಮೆಚ್ಚಿ
೮ ಗೆ ಆಗುವದಿಲ್ಲ. ಅದನ್ನು ತಿಂದವನು ತನ್ನ ಅಕ್ರಮವನ್ನು ಹೊ
ರುವನು; ಯಾಕಂದರೆ ಅವನು ಕರ್ತನ ಪರಿಶುದ್ಧವಾದದ್ದನ್ನು
ಅಪವಿತ್ರ ಮಾಡಿದ್ದಾನೆ; ಆ ಪ್ರಾಣ ತನ್ನ ಜನರೊಳಗಿಂದ ಕಡಿ
ಯಲ್ಪಡ ಬೇಕು.
೯ ಇದಲ್ಲದೆ ನಿಮ್ಮ ಭೂಮಿಯ ಬೈರನ್ನು ಕೊಯ್ಯುವಾಗ, ಹೊ
ಲದ ಮೂಲೆಯನ್ನು ಪೂರ್ಣವಾಗಿ ಕೊಯ್ಯ ಬೇಡ; ಬೈರ
೧೦ ನ್ನು ಕೊಯಿದ ಮೇಲೆ ಹಕ್ಕಲಾಯ ಬೇಡ. ಮತ್ತು ನಿನ್ನ ದ್ರಾ
ಕ್ಷೇ ತೋಟದಲ್ಲಿ ಮಿಕ್ಕದ್ದನ್ನು ಹುಡುಕದೆ, ನಿನ್ನ ದ್ರಾಕ್ಷೇ ತೋ
ಟದಲ್ಲಿ ಚದರಿ ಹೋದ ಪಣ್ಣುಗಳನ್ನು ಕೂಡಿಸ ಬೇಡ; ಅವುಗ
ಳನ್ನು ಬಡವನಿಗೂ ಪರನಿಗೂ ಬಿಡ ಬೇಕು; ನಿಮ್ಮ ದೇವರಾಗಿ
ರುವ ಕರ್ತನು ನಾನೇ.
೧೧ ನೀವು ಕಳ್ಳತನ ಮಾಡ ಬೇಡಿರಿ; ಬಬ್ಬರಿಗೊಬ್ಬರು ಸುಳ್ಳು
೧೨ ಹೇಳಿ, ಮೋಸ ಮಾಡ ಬೇಡಿರಿ. ನನ್ನ ಹೆಸರಿನಿಂದ ಸುಳ್ಳು ಪ್ರ
ಮಾಣ ಮಾಡಿ, ನಿಮ್ಮ ದೇವರ ಹೆಸರನ್ನು ಅಪವಿತ್ರ ಮಾಡ ಬೇ
ಡ; ನಾನೇ ಕರ್ತನು. ನಿನ್ನ ನೆರೆಯವನಿಗೆ ಬಲಾತ್ಕಾರ ಮಾಡ
ಬೇಡ; ಸುಲು ಕೊಳ್ಳ ಬೇಡ; ಕೂಲಿಗಾರನ ಕೂಲಿ ಮರು ದಿವಸ
ದ ಪರ್ಯಂತರ ನಿನ್ನ ಬಳ್ಳಿಯಲ್ಲಿ ಇರ ಬಾರದು.
೧೪ ಕಿವುಡನನ್ನು ಬೈಯ್ಯ ಬೇಡ; ಕುರುಡನ ಮುಂದೆ ಎಡತಡೆ
ಯನ್ನು ಇಡ ಬೇಡ, ನಿನ್ನ ದೇವರಿಗೆ ಭಯ ಪಡ ಬೇಕು; ನಾನೇ
ಕರ್ತನು.
೧೫ ನ್ಯಾಯ ತೀರ್ಪಿಕೆಯಲ್ಲಿ ದರಿದ್ರನ ಮುಖದಾಕ್ಷಿಣ್ಯ ನೋ
ಡಿ, ದೊಡ್ಡವನ ಮುಖವನ್ನು ಸನ್ಮಾನಿಸಿ, ಅನ್ಯಾಯ ಮಾಡ ಬೇ
ಡಿರಿ; ನೀತಿಯಿಂದ ನಿನ್ನ ನೆರೆಯವನಿಗೆ ನ್ಯಾಯ ತೀರಿಸ ಬೇಕು.
೧೬ ಚಾಡಿಗಾರನಾಗಿ ನಿನ್ನ ಜನರಲ್ಲಿ ನಡೆದು ಕೊಳ್ಳ ಬೇಡ; ನಿ
ನ್ನ ನೆರೆಯವನ ರಕ್ತಕ್ಕೆ ವಿರೋಧವಾಗಿ ನಿಂತು ಕೊಳ್ಳ ಬೇಡ;
ನಾನೇ ಕರ್ತನು.

೧೭ ನಿನ್ನ ಸಹೋದರನನ್ನು ನಿನ್ನ ಹೃದಯದಲ್ಲಿ ಹಗೆ ಮಾಡ
ಬೇಡ; ನೀನು ಅವನ ನಿಮಿತ್ತ ಪಾಪವನ್ನು ಹೊರದ ಹಾಗೆ, ನಿನ್ನ
೧೮ ನೆರೆಯವನನ್ನು ಗದರಿಸಲೇ ಗದರಿಸ ಬೇಕು. ನಿನ್ನ ಜನರ ಮ
ಕ್ಕಳ ಮೇಲೆ ಮುಯ್ಯಿಗೆ ಮುಯ್ಯಿ ತೀರಿಸುವವನಾಗಿಯೂ,
ಕೋಪ ಇಟ್ಟು ಕೊಳ್ಳುವವನಾಗಿಯೂ, ಇರ ಬೇಡ; ನಿನ್ನ ನೆರೆ
ಯವನನ್ನು ನಿನ್ನ ಹಾಗೆ ಪ್ರೀತಿ ಮಾಡ ಬೇಕು; ನಾನೇ ಕರ್ತ
೧೯ ನು. ನನ್ನ ನೇಮಗಳನ್ನು ನೀವು ಕಾಪಾಡ ಬೇಕು.
ನಿನ್ನ ಪಶುಗಳನ್ನು ಬೇರೆ ಜಾತಿಗೆ ಕೂಡಿ ಕೊಳ್ಳ ಸೊಡಿಸ
ಬೇಡ; ನಿನ್ನ ಹೊಲದಲ್ಲಿ ಎರಡು ಜಾತಿ ಬೀಜ ಹಾಕ ಬೇಡ; ಮ
ತ್ತು ನಾರು ಉಣ್ಣೆ ಕೂಡಿಸಿದ ಎರಡು ಜಾತಿಯ ವಸ್ತ್ರ ನಿನ್ನ
ಮೇಲೆ ಬರ ಬಾರದು.
೨೦ ಒಬ್ಬ ಮನುಷ್ಯನು ಸ್ತ್ರೀಯ ಸಂಗಡ ಸಂಗಮವಾಗಿ ಮ
ಲಗಿದರೆ, ಅವಳು ಬಿಡುಗಡೆ ಆಗದಂಥ, ವಿನೋಚನೆಯನ್ನು
ಹೊಂದದಂಥ, ಗಂಡನಿಗೆ ನೇಮಕ ಮಾಡಿದಂಥ, ದಾಸಿಯಾಗಿದ್ದ
ರೆ, ದಂಡನೆ ಆಗ ಬೇಕು; ಅವರು ಕೊಲ್ಲಲ್ಪಡ ಬಾರದು; ಯಾ
೨೧ ಕಂದರೆ ಅವಳು ಬಿಡುಗಡೆಯಾಗಿರಲಿಲ್ಲ. ಅವನು ಅಪರಾಧ ಬಲಿ
ಯ ಹೋತಾಗಿರುವ ತನ್ನ ಅಪರಾಧ ಬಲಿಯನ್ನು ಕರ್ತನಿ
೨೨ ಗೆ, ಸಭೆಯ ಗುಡಾರದ ಬಾಗಲಿಗೆ, ತರ ಬೇಕು. ಆಗ ಯಾಜಕ
ನು ಅವನು ಮಾಡಿದ ಪಾಪದ ನಿಮಿತ್ತ ಅವನಿಗೋಸ್ಕರ ಅಪರಾ
ಧ ಬಲಿಯ ಹೋತಿನಿಂದ ಕರ್ತನ ಸನ್ನಿಧಿಯಲ್ಲಿ ಪಾಪ ಮುಚ್ಚ
ಬೇಕು; ಆ ಮೇಲೆ ಅವನು ಮಾಡಿದ ಪಾಪವು ಅವನಿಗೆ ಮನ್ನಿಸ
ಲ್ಪಡುವದು.
೨೩ ಮತ್ತು ನೀವು ಆ ದೇಶದಲ್ಲಿ ಸೇರಿ, ಎಲ್ಲಾ ವಿಧವಾದ ಫಲ ವೃ
ಕ್ಷಗಳನ್ನು ನೆಟ್ಟಿ ಮೇಲೆ, ಅವುಗಳ ಫಲವನ್ನು ಪರಿಛೇದನೆ ಇಲ್ಲ
ದ್ದೆಂದು ಎಣಿಸ ಬೇಕು; ಮೂರು ವರುಷ ಅವು ನಿಮಗೆ ಪರಿಛೇ
ದನೆ ಇಲ್ಲದವುಗಳಾಗಿರ ಬೇಕು; ಅವುಗಳನ್ನು ತಿನ್ನ ಬಾರದು.
೨೪ ಆದರೆ ನಾಲ್ಕನೇ ವರುಷದಲ್ಲಿ ಅವುಗಳ ಫಲಗಳೆಲ್ಲಾ ಕರ್ತನ
೨೫ ಸ್ತೋತ್ರಗಳಿಗಾಗಿ ಪರಿಶುದ್ಧವಾಗಿರುವವು. ಮತ್ತು ಐದನೇ ವ
ರುಷದಲ್ಲಿ ಅವುಗಳ ಫಲಗಳನ್ನು ತಿಂದು, ಅವುಗಳ ಆದಾಯ
ವನ್ನು ನಿಮಗೆ ಕೂಡಿಸಿ ಕೊಳ್ಳ ಬಹುದು; ನಿಮ್ಮ ದೇವರಾಗಿರು
ವ ಕರ್ತನು ನಾನೇ.
೨೬ ರಕ್ತ ಸಹಿತವಾಗಿ ಯಾವದನ್ನಾದರೂ ತಿನ್ನ ಬೇಡಿರಿ; ಸರ್ಪ
೨೭ ಮಂತ್ರವನ್ನೂ ಮೇಳು ಮಂತ್ರವನ್ನೂ ಮಾಡ ಬೇಡಿರಿ. ನಿಮ್ಮ
ತಲೆಯ ಮೂಲೆಗಳನ್ನು ಬಟುವಾಗಿ ಕತ್ತರಿಸ ಬೇಡ; ಮತ್ತು ನಿ
೨೮ ನ್ನ ಗಡ್ಡದ ಮೂಲೆಯನ್ನು ಕೆಡಿಸ ಬೇಡ. ಸತ್ತವನಿಗೋಸ್ಕರ
ನಿಮ್ಮ ಮಾಂಸವನ್ನು ಕೊಯಿದು ಕೊಳ್ಳ ಬೇಡಿರಿ; ಹಚ್ಚೆ ಚು
ಚ್ಚಿದ ಬರಹವನ್ನು ನಿಮ್ಮಲ್ಲಿ ಮಾಡಿ ಕೊಳ್ಳ ಬೇಡಿರಿ; ನಾನೇ ಕ
ರ್ತನು.
೨೯ ದೇಶವು ಜಾರತ್ವ ಮಾಡುವದರಿಂದ, ದುರ್ಮಾರ್ಗದಿಂದ ದೇ
ಶವು ತುಂಬಾಗದ ಹಾಗೆ, ನಿನ್ನ ಮಗಳನ್ನು, ಜಾರತ್ವ ಮಾಡಿಸು
ವ ಹಾಗೆ, ಅಪವಿತ್ರ ಮಾಡ ಬೇಡ.
೩೦ ನನ್ನ ಸಬ್ಬತುಗಳನ್ನು ಕಾಪಾಡ ಬೇಕು; ನನ್ನ ಪರಿಶುದ್ಧ
ಸ್ಥಳಕ್ಕೆ ಭಯ ಪಡ ಬೇಕು; ನಾನೇ ಕರ್ತನು.
೩೧ ಯಕ್ಷಿಣಿಗಾರರ ಕಡೆಗೂ ಮಂತ್ರಜ್ಞರ ಕಡೆಗೂ ತಿರುಗಿ ಕೊ
ಳ್ಳ ಬೇಡಿರಿ; ಅವರಲ್ಲಿ ವಿಚಾರಿಸಿ, ಅವರಿಂದ ಅಶುದ್ಧರಾಗ ಬೇಡಿ
ರಿ; ನಿಮ್ಮ ದೇವರಾಗಿರುವ ಕರ್ತನು ನಾನೇ.
೩೨ ನರೆ ಕೂದಲುಳ್ಳವರ ಮುಂದೆ ಏಳ ಬೇಕು; ಮುದುಕನನ
ನಿಘಾನವನ್ನು ಸನ್ಮಾನಿಸಿ, ನಿನ್ನ ದೇವರಿಗೆ ಭಯ ಪಡ ಬೇಕು;
ನಾನೇ ಕರ್ತನು.
೩೩ ಮತ್ತು ಪರನು ನಿನ್ನ ಸಂಗಡ ನಿಮ್ಮ ದೇಶದಲ್ಲಿ ವಾಸವಾಗಿ
ದ್ದರೆ, ಅವನಿಗೆ ಉಪದ್ರ ಕೊಡ ಬೇಡಿರಿ. ನಿಮ್ಮಲ್ಲಿ ಹುಟ್ಟಿದ
೩೪ ದೇಶಸ್ಥನ ಹಾಗೆಯೇ ನಿಮ್ಮಲ್ಲಿ ವಾಸವಾಗಿರುವ ಪರನು ನಿಮಿ
ರ ಬೇಕು; ನಿನ್ನ ಹಾಗೆ ಅವನನ್ನು ಪ್ರೀತಿ ಮಾಡ ಬೇಕು; ಯಾ
ಕಂದರೆ ಐಗುಪ್ತದಲ್ಲಿ ನೀವೇ ಪರರಾಗಿದ್ದಿರಿ; ನಿಮ್ಮ ದೇವರಾಗಿರು
ವ ಕರ್ತನು ನಾನೇ.
೩೫ ನ್ಯಾಯದಲ್ಲಿ, ಅಳತೆಯಲ್ಲಿ, ತೂಕದಲ್ಲಿ, ಅನ್ಯಾಯ ಮಾಡ
೩೬ ಬೇಡಿರಿ. ನೀತಿಯಾದ ತ್ರಾಸು, ನೀತಿಯಾದ ಕಲ್ಲುಗಳು, ನೀತಿ
ಯಾದ ಎಫದು, ನೀತಿಯಾದ ಹಿನ್ನು ನಿಮಗಿರ ಬೇಕು; ನಿಮ್ಮ
ನ್ನು ಐಗುಪ್ತ ದೇಶಕೊಳಗಿಂದ ಹೊರಗೆ ಬರ ಮಾಡಿದ ನಿಮ್ಮ
೩೭ ದೇವರಾಗಿರುವ ಕರ್ತನು ನಾನೇ. ಹೀಗೆ ನನ್ನ ಎಲ್ಲಾ ನೇಮಗ
ಳನ್ನೂ, ನನ್ನ ಎಲ್ಲಾ ನ್ಯಾಯಗಳನ್ನೂ ಕಾಪಾಡಿ, ಮಾಡ ಬೇ
ಕು; ನಾನೇ ಕರ್ತನು.

## ೨೦. ಸಂಧಿ.

೧ ಇದಲ್ಲದೆ ಕರ್ತನು ಮೋಶೆಗೆ ಹೇಳಿದ್ದೇನಂದರೆ—
೨ ಇಸ್ರಯೇಲ್ ಮಕ್ಕಳಿಗೆ ನೀನು ಮತ್ತೆ ಹೇಳ ಬೇಕಾದದ್ದೇನಂದ
ರೆ—ಇಸ್ರಯೇಲ್ ಮಕ್ಕಳಲ್ಲಿಯೂ ಇಸ್ರಯೇಲಿನಲ್ಲಿ ವಾಸವಾಗಿ
ರುವ ಪರರಲ್ಲಿಯೂ ತನ್ನ ಬೀಜದಲ್ಲಿ ಯಾರನ್ನಾದರೂ ಮೊ
ಳೊಕನಿಗೆ ಕೊಟ್ಟವನ್ನಾವನೋ, ಅವನು ಕೊಲ್ಲಲೇ ಕೊಲ್ಲಲ್ಪಡ
ಬೇಕು; ದೇಶದ ಜನರು ಅವನನ್ನು ಕಲ್ಲೆಸೆಯ ಬೇಕು. ಅವನು
೩ ತನ್ನ ಬೀಜದಲ್ಲಿ ಯಾರನ್ನಾದರೂ ಮೊಳೊಕನಿಗೆ ಕೊಟ್ಟು, ನ
ನ್ನ ಪರಿಶುದ್ಧ ಸ್ಥಳವನ್ನು ಅಶುದ್ಧ ಮಾಡಿ, ನನ್ನ ಪರಿಶುದ್ಧ ಹೆ
ಸರನ್ನು ಅಪವಿತ್ರ ಮಾಡಿದ್ದರಿಂದ, ಆ ಮನುಷ್ಯನಿಗೆ ವಿರೋಧ
ವಾಗಿ ನನ್ನ ಮುಖವನಿಟ್ಟು, ಅವನನ್ನು ನನ್ನ ಜನರೊಳಗಿಂದ
೪ ಕಡಿದು ಬಿಡುವೆನು ತನ್ನ ಬೀಜದಲ್ಲಿ ಯಾರನ್ನಾದರೂ ಮೊ
ಳೊಕನಿಗೆ ಕೊಟ್ಟು ಆ ಮನುಷ್ಯನಿಗೋಸ್ಕರ ದೇಶದ ಜನರು
ಹ್ಯಾಗೂ ಕಣ್ಣುಗಳನ್ನು ಮುಚ್ಚಿ ಕೊಂಡು, ಅವನನ್ನು ಕೊಂ
೫ ದು ಹಾಕದಿದ್ದರೆ, ನಾನೇ ಆ ಮನುಷ್ಯನಿಗೂ ಅವನ ಮಂ
ಕ್ಕೂ ವಿರೋಧವಾಗಿ ನನ್ನ ಮುಖವನಿಟ್ಟು, ಅವನನ್ನೂ, ಅವ
ನನ್ನು ಅನುಸರಿಸಿ, ಮೊಳೊಕನನ್ನು ಅನುಸರಿಸಿ ಜಾರತ್ವ ಮಾ
ಡುವವರೆಲ್ಲರನ್ನೂ ಅವರ ಜನರೊಳಗಿಂದ ಕಡಿದು ಬಿಡುವೆನು.
೬ ಮತ್ತು ಯಕ್ಷಿಣಿಗಾರರ ಕಡೆಗೂ, ಮಂತ್ರಜ್ಞರ ಕಡೆಗೂ ತಿರುಗಿ
ಕೊಂಡು, ಅವರನ್ನು ಅನುಸರಿಸಿ, ಜಾರತ್ವ ಮಾಡುವವನ್ನಾವ
ನೋ, ಆ ಪ್ರಾಣಕ್ಕೆ ವಿರೋಧವಾಗಿ ನನ್ನ ಮುಖವನಿಟ್ಟು,
೭ ಅವನನ್ನು ತನ್ನ ಜನರೊಳಗಿಂದ ಕಡಿದು ಬಿಡುವೆನು. ಹೀಗಿರು
ವದರಿಂದ, ನಿಮ್ಮನ್ನು ನೀವು ಪರಿಶುದ್ಧ ಮಾಡಿ ಕೊಂಡು, ಪರಿ
ಶುದ್ಧರಾಗಿರ್ರಿ—ಯಾಕಂದರೆ ನಾನೇ ನಿಮ್ಮ ದೇವರಾಗಿರುವ ಕ
೮ ರ್ತನು. ನೀವು ನನ್ನ ನೇಮಗಳನ್ನು ಕೈ ಕೊಂಡು, ಅವುಗ
ಳನ್ನು ಮಾಡ ಬೇಕು; ನಿಮ್ಮನ್ನು ಪರಿಶುದ್ಧ ಮಾಡುವ ಕರ್ತ
ನು ನಾನೇ.
೯ ತನ್ನ ತಂದೆಗೂ ತಾಯಿಗೂ ಶಾಪ ಕೊಟ್ಟವನ್ನಾವನಾದರೂ
ಸಾಯಲೇ ಸಾಯ ಬೇಕು; ತಂದೆಗೂ ತಾಯಿಗೂ ಶಾಪ ಕೊ
ಟ್ಟಿದ್ದಾನೆ, ಅವನ ಮೇಲೆ ಅವನ ರಕ್ತವು ಆಗಲಿ.





೧೦ ಮತ್ತು ಮುತ್ತೈದೆಯ ಸಂಗಡ ವ್ಯಭಿಚಾರ ಮಾಡುವವನ್ನಾ
ವನೋ, ನೆರೆಯವನ ಹೆಂಡತಿಯ ಸಂಗಡ ವ್ಯಭಿಚಾರ ಮಾಡು
ವವನ್ನಾವನೋ, ವ್ಯಭಿಚಾರ ಮಾಡಿದವನೂ ಮಾಡಿದವಳೂ
ಕೊಂದೇ ಕೊಲ್ಲಲ್ಪಡ ಬೇಕು.
೧೧ ಮತ್ತು ಯಾವನಾದರೂ ತನ್ನ ತಂದೆಯ ಹೆಂಡತಿಯ ಸಂಗಡ
ಮಲಗಿದರೆ, ತನ್ನ ತಂದೆಯ ಪೆತ್ತಲೆತನ ಕಾಣಿಸ ಮಾಡಿದ್ದರಿಂದ,
ಅವರಿಬ್ಬರೂ ಕೊಂದೇ ಕೊಲ್ಲಲ್ಪಡ ಬೇಕು; ಅವರ ಮೇಲೆ ಅ
ವರ ರಕ್ತವು ಆಗಲಿ.
೧೨ ಯಾವನಾದರೂ ತನ್ನ ಸೊಸೆಯ ಸಂಗಡ ಮಲಗಿದರೆ, ಅ
ವರಿಬ್ಬರು ಕೊಂದೇ ಕೊಲ್ಲಲ್ಪಡ ಬೇಕು; ಅವರು ಗಲಿಬಿಲಿ ಮಾ
ಡಿದ್ದಾರೆ; ಅವರ ಮೇಲೆ ಅವರ ರಕ್ತವು ಆಗಲಿ.
೧೩ ಮತ್ತು ಯಾವನಾದರೂ ಹೆಂಗಸಿನ ಸಂಗಡ ಮಲಗುವ ಪ್ರ
ಕಾರ, ಗಂಡಸಿನ ಸಂಗಡ ಮಲಗಿದರೆ, ಅವರಿಬ್ಬರು ಅಸಹ್ಯ
ಮಾಡಿದ್ದರಿಂದ, ಕೊಲ್ಲಲ್ಪಡ ಬೇಕು; ಅವರ ಮೇಲೆ ಅವರ ರಕ್ತ
ವು ಆಗಲಿ.
೧೪ ಮತ್ತು ಯಾವನಾದರೂ ಒಬ್ಬ ಹೆಂಗಸನ್ನೂ, ಅವಳ ತಾ
ಯಿಯನ್ನೂ ಇಟ್ಟು ಕೊಂಡರೆ, ಅದು ದುರ್ಮಾರ್ಗ; ಅವನ
ನ್ನೂ ಅವರಿಬ್ಬರನ್ನೂ ಬೆಂಕಿಯಲ್ಲಿ ಸುಟ್ಟು ಬಿಡ ಬೇಕು; ನಿ
ಮ್ಮ ಮಧ್ಯದಲ್ಲಿ ದುರ್ಮಾರ್ಗ ಇರ ಬಾರದು.
೧೫ ಮತ್ತು ಯಾವನಾದರೂ ಪಶುವಿನ ಸಂಗಡ ಸಂಗಮ ಮಾಡಿ
ದರೆ, ಕೊಂದೇ ಕೊಲ್ಲಲ್ಪಡ ಬೇಕು; ಆ ಪಶುವನ್ನು ಕೊಂದು
೧೬ ಹಾಕ ಬೇಕು. ಮತ್ತು ಯಾವಳಾದರೂ ಅದರ ಸಂಗಡ ಕೂಡಿ
ಕೊಳ್ಳುವದಕ್ಕೆ ಪಶುವಿಗೆ ಸಮೀಪಿಸಿದರೆ, ಆ ಸ್ತ್ರೀಯನ್ನೂ ಪ
ಶುವನ್ನೂ ಕೊಂದು ಹಾಕ ಬೇಕು; ಅವರು ಕೊಂದೇ ಕೊಲ್ಲಲ್ಪ
ಡ ಬೇಕು; ಅವರ ಮೇಲೆ ಅವರ ರಕ್ತವು ಆಗಲಿ.
೧೭ ಮತ್ತು ಯಾವನಾದರೂ ತನ್ನ ತಂದೆಯ, ಇಲ್ಲವೆ ತನ್ನ ತಾ
ಯಿಯ ಮಗಳಾಗಿರುವ ತನ್ನ ಸಹೋದರಿಯನ್ನು ತಕ್ಕೊಂಡ
ರೆ, ಅವನು ಅವಳ ಪೆತ್ತಲೆತನವನ್ನೂ, ಅವಳು ಅವನ ಪೆತ್ತಲೆತ
ನವನ್ನೂ ನೋಡಿದರೆ, ಅದು ದುರ್ಮಾರ್ಗವೇ; ಅವರು ತಮ್ಮ
ಜನರ ಸನ್ನಿಧಿಯಲ್ಲಿ ಕಡಿಯಲ್ಪಡ ಬೇಕು; ಅವನು ತನ್ನ ಸ
ಹೋದರಿಯ ಪೆತ್ತಲೆತನ ಕಾಣಿಸ ಮಾಡಿದ್ದರಿಂದ, ತನ್ನ ಅಕ್ರ
೧೮ ಮವನ್ನು ಹೊರ ಬೇಕು. ಯಾವನಾದರೂ ರಜಸ್ಸುಳ್ಳ ಸ್ತ್ರೀ
ಯ ಸಂಗಡ ಮಲಗಿ, ಅವಳ ಪೆತ್ತಲೆತನ ಕಾಣಿಸ ಮಾಡಿ ಅವಳ
ಜಲೆಯನ್ನು ಬಯಿಲು ಪಡಿಸಿದರೆ, ಅವಳು ತನ್ನ ರಕ್ತದ ಜಲೆಯ
ನ್ನು ಕಾಣಿಸ ಮಾಡಿದರೆ, ಅವರಿಬ್ಬರು ತಮ್ಮ ಜನರೊಳಗಿಂದ
ಕಡಿಯಲ್ಪಡ ಬೇಕು.
೧೯ ನಿನ್ನ ತಾಯಿಯ ಸಹೋದರಿಯ, ನಿನ್ನ ತಂದೆಯ ಸಹೋ
ದರಿಯ ಪೆತ್ತಲೆತನ ಕಾಣಿಸ ಮಾಡ ಬೇಡ; ಕಾಣಿಸ ಮಾಡಿದವ
ನು ನೆಂಟರನ್ನು ಪೆತ್ತಲೆ ಮಾಡಿದ್ದಾನೆ; ಅವರು ತಮ್ಮ ಅಕ್ರಮವ
೨೦ ನ್ನು ಹೊರುವರು. ಮತ್ತು ಚಿಕ್ಕಪ್ಪನ ಹೆಂಡತಿಯ ಸಂಗಡ
ಮಲಗಿದವನು, ಚಿಕ್ಕಪ್ಪನ ಪೆತ್ತಲೆತನ ಕಾಣಿಸ ಮಾಡಿದ್ದರಿಂದ,
ಅವರು ತಮ್ಮ ಪಾಪವನ್ನು ಹೊತ್ತು, ಮಕ್ಕಳಿಲ್ಲದೆ ಸಾಯುವ
೨೧ ರು. ಮತ್ತು ಯಾವನಾದರೂ ತನ್ನ ಸಹೋದರನ ಹೆಂಡತಿಯ
ನ್ನು ತಕ್ಕೊಂಡರೆ, ಅದು ಅಶುದ್ಧ ಕಾರ್ಯವೇ; ಅವನು ತನ್ನ
ಸಹೋದರನ ಪೆತ್ತಲೆತನ ಕಾಣಿಸ ಮಾಡಿದ್ದರಿಂದ, ಮಕ್ಕಳಿಲ್ಲ
ದೆ ಇರುವರು.
೨೨ ಈ ಮೇರೆಗೆ, ಅದರಲ್ಲಿ ವಾಸ ಮಾಡುವದಕ್ಕೆ, ನಾನು ನಿಮ್ಮ
ನ್ನು ತಕ್ಕೊಂಡು ಹೋಗುವ ದೇಶವು ನಿಮ್ಮನ್ನು ಕಾರಿ ಬಿಡದ
ಹಾಗೆ, ನನ್ನ ಎಲ್ಲಾ ನೇಮಗಳನ್ನೂ ನನ್ನ ಎಲ್ಲಾ ನ್ಯಾಯಗಳ
೨೩ ನ್ನೂ ಕೈ ಕೊಂಡು ಮಾಡ ಬೇಕು. ನಾನು ನಿಮ್ಮ ಮುಂದಾಗಿ
ಹೊರಡಿಸಿ ಬಿಡುವ ಜನಾಂಗಗಳ ನೇಮಗಳಲ್ಲಿ ನಡೆದು ಕೊಳ್ಳ
ಬೇಡಿರಿ; ಯಾಕಂದರೆ ಇವುಗಳನ್ನು ಅವರು ಮಾಡಿದ್ದರಿಂದ, ನಾ
೨೪ ನು ಅವರಿಗೆ ಅಸಹ್ಯ ಪಟ್ಟೆನು. ಆದರೆ ನಿಮಗೆ—ನೀವು ಅವರ
ದೇಶವನ್ನು ಸ್ವತಂತ್ರಿಸಿ ಕೊಳ್ಳುವಿರಿ; ಅದನ್ನು ಸ್ವತಂತ್ರಿಸಿ ಕೊ
ಳ್ಳ, ಹಾಲೂ ಜೇನೂ ಹರಿಯುವ ದೇಶವಾಗಿರುವ ಆ ದೇಶವನ್ನು
ನಿಮಗೆ ನಾನು ಕೊಡುವೆನೆಂದು ಹೇಳಿದ್ದೇನೆ. ಜನರೊಳಗಿಂದ
ನಿಮ್ಮನ್ನು ಬೇರೆ ಮಾಡಿದ ನಿಮ್ಮ ದೇವರಾಗಿರುವ ಕರ್ತನು
ನಾನೇ.
೨೫ ಹೀಗಿರುವದರಿಂದ ಶುದ್ಧ ಪಶುಗಳಿಗೂ ಅಶುದ್ಧವಾದವುಗಳಿ
ಗೂ, ಅಶುದ್ಧ ಪಕ್ಷಿಗಳಿಗೂ ಶುದ್ಧವಾದವುಗಳಿಗೂ ಹೆಚ್ಚು ಕಡಿ
ಮೆ ಮಾಡಿ, ಅಶುದ್ಧವಾದದ್ದೆಂದು, ನಾನು ನಿಮಗೆ ಪ್ರತ್ಯೇಕಿಸಿದ ಪ
ಶುಗಳಿಂದಲೂ, ಹಕ್ಕಿಗಳಿಂದಲೂ, ಭೂಮಿಯ ಎಲ್ಲಾ ಕ್ರಿಮಿಗಳಿಂ
ದಲೂ ನಿಮ್ಮ ಪ್ರಾಣಗಳನ್ನು ಅಸಹ್ಯ ಮಾಡಿ ಕೊಳ್ಳ ಬೇಡಿರಿ.
೨೬ ಕರ್ತನಾದ ನಾನು ಪರಿಶುದ್ಧನಾಗಿರುವದರಿಂದಲೂ, ನೀವು ನನ್ನ
ವರಾಗುವ ಹಾಗೆ, ಜನರೊಳಗಿಂದ ನಿಮ್ಮನ್ನು ಬೇರೆ ಮಾಡಿ
ಕೊಂಡದರಿಂದಲೂ, ನೀವು ನನಗೆ ಪರಿಶುದ್ಧರಾಗಿರ ಬೇಕು.
೨೭ ಮತ್ತು ಒಬ್ಬ ಗಂಡಸಿನ ಬಳಿಯಲ್ಲಾಪರೂ, ಹೆಂಗಸಿನ ಬಳಿಯ
ಲ್ಲಾದರೂ ಯಕ್ಷಿಣಿಗಾರನಾಗಲಿ, ಮಂತ್ರಜ್ಞನಾಗಲಿ ಇದ್ದರೆ, ಅವ
ರು ಕೊಲ್ಲಲೇ ಕೊಲ್ಲಲ್ಪಡ ಬೇಕು; ಅವರನ್ನು ಕಲ್ಲೆಸೆಯ ಬೇಕು;
ಅವರ ಮೇಲೆ ಅವರ ರಕ್ತವು ಆಗಲಿ.

## ೨೧. ಸಂಧಿ.

೧ ಮತ್ತು ಕರ್ತನು ಮೋಶೆಗೆ ಹೇಳಿದ್ದೇನಂದರೆ—ಆರೋನನ ಮ
ಕ್ಕಳಾದ ಯಾಜಕರ ಸಂಗಡ ಮಾತಾಡಿ, ಅವರಿಗೆ ಹೇಳ ಬೇಕಾ
ದದ್ದೇನಂದರೆ—ಸತ್ತವನ ನಿಮಿತ್ತ ಯಾವನಾದರೂ ತನ್ನ ಜನರಲ್ಲಿ
೨ ತನ್ನನ್ನು ಅಪವಿತ್ರ ಮಾಡಿ ಕೊಳ್ಳ ಬಾರದು. ತನ್ನ ಸಮೀಪ
ವಾಗಿರುವ ನೆಂಟರಾದ ತಾಯಿಗೋಸ್ಕರವೂ, ತಂದೆಗೋಸ್ಕರ
ವೂ, ಮಗನಿಗೋಸ್ಕರವೂ, ಮಗಳಿಗೋಸ್ಕರವೂ, ಸಹೋದ
೩ ರನಿಗೋಸ್ಕರವೂ, ಕನ್ನಿಕೆಯಾಗಿರುವಂಥ, ತನ್ನ ಸಮೀಪದ
ಲ್ಲಿರುವಂಥ, ಗಂಡನನ್ನು ಹೊಂದದೆ ಇರುವಂಥ ಸಹೋದರಿಗೋ
೪ ಸ್ಕರವೂ ಅವನು ಅಶುದ್ಧನಾಗ ಬಹುದು. ಆದರೆ ತನ್ನ ಜನಾಂ
ಗಕೊಳಗೆ ಯಜಮಾನನಾಗಿದ್ದು, ತನ್ನನ್ನು ಅಪವಿತ್ರ ಮಾಡಿ
೫ ಕೊಂಡು, ಅಶುದ್ಧನಾಗ ಬಾರದು. ಅವರು ತಲೆಯಲ್ಲಿ ಪಟ್ಟೆಯಾ
ಗಿ ಬೋಳಿಸಿ ಕೊಳ್ಳ ಬಾರದು; ತಮ್ಮ ಗಡ್ಡದ ಮೂಲೆಯನ್ನು
ಕ್ಷೌರ ಮಾಡಿ ಕೊಳ್ಳ ಬಾರದು; ತಮ್ಮ ಮಾಂಸದಲ್ಲಿ ಗೆಕೆಗಳ
೬ ನ್ನು ಕೊಯಿದು ಕೊಳ್ಳ ಬಾರದು. ಅವರು ತಮ್ಮ ದೇವರಿಗೆ
ಪರಿಶುದ್ಧರಾಗಿರ ಬೇಕು; ತಮ್ಮ ದೇವರ ಹೆಸರನ್ನು ಅಪವಿತ್ರ ಮಾ
ಡ ಬಾರದು; ಕರ್ತನ ದಹನ ಬಲಿಗಳನ್ನೂ ತಮ್ಮ ದೇವರ ಕೊ
ಟ್ಟಿಯನ್ನೂ ಅರ್ಪಿಸುತ್ತಿರುವದರಿಂದ, ಅವರು ಪರಿಶುದ್ಧರಾಗಿರ
ಬೇಕು.

೭ ಸೂಳೆಯೂ ಅಪವಿತ್ರಳೂ ಆಗಿರುವ ಹೆಂಗಸನ್ನು ಅವರು
ಇಟ್ಟು ಕೊಳ್ಳ ಬಾರದು; ಗಂಡನು ಕಳುಹಿಸಿ ಬಿಟ್ಟ ಹೆಂಗಸನ್ನು
ತಕ್ಕೊಳ್ಳ ಬಾರದು; ಯಾಕಂದರೆ ಅವರು ತಮ್ಮ ದೇವರಿಗೆ ಪರಿ
೮ ಶುದ್ಧರೇ. ನೀನು ಅವನನ್ನು ಪರಿಶುದ್ಧ ಮಾಡ ಬೇಕು; ಯಾ
ಕಂದರೆ ನಿನ್ನ ದೇವರ ಕೊಟ್ಟಿಯನ್ನು ಅರ್ಪಿಸುವವನಾಗಿದ್ದಾ
ನೆ; ನಿನಗೆ ಪರಿಶುದ್ಧನಾಗಿರ ಬೇಕು; ಯಾಕಂದರೆ ನಿಮ್ಮನ್ನು ಪರಿ
೯ ಶುದ್ಧ ಮಾಡುವ ಕರ್ತನಾಗಿರುವ ನಾನೇ ಪರಿಶುದ್ಧನು. ಮತ್ತು
ಯಾಜಕನಾದ ಮನುಷ್ಯನ ಮಗಳು ಸೂಳೆಯಾಗ ಪ್ರಾರಂಭಿ
ಸಿದರೆ, ತಂದೆಯನ್ನು ಅಪವಿತ್ರ ಮಾಡುತ್ತಾಳೆ; ಅವಳನ್ನು ಬೆಂಕಿ
ಯಿಂದ ಸುಡ ಬೇಕು.
೧೦ ಮತ್ತು ತನ್ನ ಸಹೋದರಕೊಳ್ಳಗೆ ಯಾವನ ತಲೆಯ ಮೇ
ಲೆ ಅಭಿಷೇಕಿಸುವ ಎಣ್ಣೆ ಹೊಯ್ಯಲ್ಪಟ್ಟಿದೆಯೋ, ಆ ವಸ್ತ್ರ
ಗಳನ್ನು ತೊಟ್ಟು ಕೊಳ್ಳುವದಕ್ಕೆ ಯಾವನು ಪ್ರತಿಜ್ಞೆ ಮಾಡ
ಲ್ಪಟ್ಟಿನೋ, ಆ ಪ್ರಧಾನ ಯಾಜಕನು ತನ್ನ ತಲೆಯನ್ನು ಬರಿ
ದು ಮಾಡ ಬಾರದು; ತನ್ನ ವಸ್ತ್ರಗಳನ್ನು ಹರ ಕೊಳ್ಳ ಬಾರ
೧೧ ದು; ಯಾವ ಸತ್ತ ಹೆಣದ ಬಳ್ಳಗೆ ಸೇರ ಬಾರದು; ತಂದೆ ತಾಯಿ
೧೨ ಗಳ ನಿಮಿತ್ತ ಅಶುದ್ಧನಾಗ ಬಾರದು. ಪರಿಶುದ್ಧ ಸ್ಥಳದೊಳಗಿಂ
ದ ಹೊರತ ಬಾರದು; ತನ್ನ ದೇವರ ಪರಿಶುದ್ಧ ಸ್ಥಳವನ್ನು ಅಪ
ವಿತ್ರ ಮಾಡ ಬಾರದು; ಯಾಕಂದರೆ ತನ್ನ ದೇವರ ಅಭಿಷೇಕದ
ಎಣ್ಣೆಯ ಕಿರೀಟಿ ಅವನ ಮೇಲೆ ಉಂಟು; ನಾನೇ ಕರ್ತನು.
೧೩ ಅವನು ಕನ್ನಿಕೆಯಾಗಿರುವ ಹೆಂಡತಿಯನ್ನು ತಕ್ಕೊಳ್ಳ ಬೇಕು;
೧೪ ವಿಧವೆಯನ್ನೂ, ಕಳುಹಿಸಿ ಬಿಟ್ಟಿದ್ದನ್ನೂ, ಅಪವಿತ್ರಳಾದ ಸೂ
ಳೆಯನ್ನೂ, ಇಂಥವರನ್ನು ತಕ್ಕೊಳ್ಳ ಬಾರದು; ತನ್ನ ಜನ
ಕೊಳ್ಳಗೆ ಒಬ್ಬ ಕನ್ನಿಕೆಯನ್ನು ಹೆಂಡತಿಯಾಗಿ ತಕ್ಕೊಳ್ಳ ಬೇ
೧೫ ಕು. ಮತ್ತು ತನ್ನ ಜನರಲ್ಲಿ ತನ್ನ ಬೀಜವನ್ನು ಅಪವಿತ್ರ ಮಾ
ಡಿ ಕೊಳ್ಳ ಬಾರದು; ಯಾಕಂದರೆ ಅವನನ್ನು ಪರಿಶುದ್ಧ ಮಾಡು
ವ ಕರ್ತನು ನಾನೇ.
೧೬ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೧೭ ಆಕೋನನಿಗೆ ನೀನು ಮಾತಾಡಿ, ಹೇಳ ಬೇಕಾದದ್ದೇನಂದರೆ—ನಿ
ನ್ನ ಬೀಜದ ತಲಾಂತರಗಳಲ್ಲಿ ಊನತೆ ಉಂಟಾಗಿರುವ ಯಾವ
ನಾದರೂ ಸಮೀಪ ಬಂದು, ತನ್ನ ದೇವರ ಕೊಟ್ಟಿಯನ್ನು ಅ
೧೮ ರ್ಪಿಸ ಬಾರದು. ಹ್ಯಾಗಂದರೆ ಊನತೆ ಉಂಟಾದವನ್ನಾವನೂ
ಸಮೀಪಿಸ ಬಾರದು; ಕುರುಡನೂ, ಕುಂಟನೂ, ಮುಕ್ಕಡಿ ಮೂ
೧೯ ಗಿನವನೂ, ಹೆಚ್ಚು ಅಂಗಗಳುಳ್ಳವನೂ, ಮುರಿದ ಕಾಲುಳ್ಳವ
೨೦ ನೂ, ಮುರಿದ ಕೈಯುಳ್ಳವನೂ, ಗೂನನೂ, ಗಿಡ್ಡನೂ, ಹೂ
ಗ್ಗಣ್ಣವನೂ, ಹುರುಕಿನವನೂ, ತುರಿಯವನೂ, ಬೀಜ ಹೊಡೆದ
೨೧ ವನೂ, ಯಾಜಕನಾದ ಆಕೋನನ ಬೀಜದಲ್ಲಿ ಊನತೆ ಉಂ
ಟಾದವನು ಯಾವನಾದರೂ ಕರ್ತನ ದಹನ ಬಲಿಗಳನ್ನು ಅ
ರ್ಪಿಸುವದಕ್ಕೆ, ಹತ್ತರ ಬರ ಬಾರದು; ಅವನು ಊನತೆ ಉಂ
೨೨ ಟಾದವನು; ತನ್ನ ದೇವರ ಕೊಟ್ಟಿಯನ್ನು ಅರ್ಪಿಸುವದಕ್ಕೆ
ಹತ್ತರ ಬರ ಬಾರದು. ತನ್ನ ದೇವರ ಕೊಟ್ಟಿಯಾಗಿರುವ ಮ
ಹಾ ಪರಿಶುದ್ಧವಾದದ್ದನ್ನೂ, ಪರಿಶುದ್ಧವಾದದ್ದನ್ನೂ, ಅವನು ತಿ
೨೩ ನ್ನ ಬಹುದು. ಆದರೆ ತೆರೆಯೊಳಗೆ ಅವನು ಬರ ಬಾರದು,
ಬಲಿಪೀಠದ ಹತ್ತರ ಬರ ಬಾರದು; ಅವನಲ್ಲಿ ಊನತೆ ಉಂಟಿ
ಲ್ಲ! ಅವನು ನನ್ನ ಪರಿಶುದ್ಧವಾದವುಗಳನ್ನು ಅಪವಿತ್ರ ಮಾಡ
ಬಾರದು; ಅವುಗಳನ್ನು ಪರಿಶುದ್ಧ ಮಾಡುವ ಕರ್ತನು ನಾನೇ.
೨೪ ಆಗ ಮೋಶೆ ಆಕೋನನಿಗೂ, ಅವನ ಮಕ್ಕಳಿಗೂ, ಇಸ್ರಾ
ಯೇಲ್ ಮಕ್ಕಳಿಗೂ ಅದನ್ನು ಹೇಳಿದನು.

## ೨೨. ಸಂಧಿ.

೧ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ಆಕೋನನ ಸಂಗಡಲೂ ಅವನ ಮಕ್ಕಳ ಸಂಗಡಲೂ ಮಾತಾ
ಡು; ಅವರು ನನ್ನ ಪರಿಶುದ್ಧ ಹೆಸರನ್ನು ಅಪವಿತ್ರ ಮಾಡದ ಹಾ
ಗೆ, ಇಸ್ರಾಯೇಲ್ ಮಕ್ಕಳು ನನಗೆ ಪರಿಶುದ್ಧ ಮಾಡುವ ಪರಿಶುದ್ಧ
3 ವಾದವುಗಳಿಗೆ ದೂರವಾಗಿರ ಬೇಕು; ನಾನೇ ಕರ್ತನು. ಅವರಿ
ಗೆ ಹೇಳ ಬೇಕಾದದ್ದೇನಂದರೆ—ನಿಮ್ಮ ತಲಾಂತರಗಳಲ್ಲಿ ನಿಮ್ಮ
ಎಲ್ಲಾ ಬೀಜದಲ್ಲಿ ಯಾವ ಮನುಷ್ಯನು, ಅಶುದ್ಧತ್ವ ಉಂಟಾಗಿ,
ಇಸ್ರಾಯೇಲ್ ಮಕ್ಕಳು ಕರ್ತನಿಗೆ ಪರಿಶುದ್ಧ ಮಾಡುವ ಪರಿಶು
ದ್ಧವಾದವುಗಳ ಬಳ್ಳಗೆ ಬರುವನೋ, ಆ ಪ್ರಾಣಿ ನನ್ನ ಸನ್ನಿಧಿ
೪ ಯಿಂದ ಕಡಿಯಲ್ಪಡ ಬೇಕು; ನಾನೇ ಕರ್ತನು. ಆಕೋನನ
ಬೀಜದಲ್ಲಿ ಯಾವನಾದರೂ ಕುಷ್ಠವಾಗಲಿ, ಮೇಹವಾಗಲಿ ಉಳ್ಳ
ವನಾಗಿದ್ದರೆ, ಅವನು ಶುದ್ಧನಾಗುವ ಪರ್ಯಂತರ, ಪರಿಶುದ್ಧವಾ
ದವುಗಳನ್ನು ತಿನ್ನ ಬಾರದು. ಹೆಣದಿಂದ ಅಶುದ್ಧವಾದದ್ದನ್ನು
೫ ಮುಟ್ಟಿದವನೂ, ಇಂದ್ರಿಯ ನಷ್ಟನೂ, ಅಶುದ್ಧ ಮಾತುವ ಯಾ
ವ ಜಾತಿಯ ಕ್ರಿಮಿಯನ್ನಾಗಲಿ, ಯಾವ ಯಾವ ಅಶುದ್ಧತ್ವದಿಂ
ದ ಅಶುದ್ಧ ಮಾತುವ ಮನುಷ್ಯನನ್ನಾಗಲಿ, ಮುಟ್ಟಿದವನೂ—
೬ ಅಂಥಾದ್ದನ್ನು ಮುಟ್ಟಿದ ಪ್ರಾಣಿ ಸಾಯಂಕಾಲದ ಪರ್ಯಂತರ
ಅಶುದ್ಧವಾಗಿ, ಪರಿಶುದ್ಧವಾದದ್ದನ್ನು ತಿನ್ನದೆ, ನೀರಿನಿಂದ ತನ್ನ
೭ ಮಾಂಸವನ್ನು ತೊಳ್ಳ ಕೊಳ್ಳ ಬೇಕು. ಸೂರ್ಯ ಅಸ್ತಮಿಸಿ
ದ ಮೇಲೆ, ಅವನು ಶುದ್ಧನಾಗಿರುವನು; ಆ ಮೇಲೆ ಪರಿಶುದ್ಧವಾ
೮ ದದ್ದನ್ನು ತಿನ್ನಲಿ; ಯಾಕಂದರೆ ಅದೇ ಅವನ ಆಹಾರ. ಸತ್ತು
ಬಿದ್ದದನ್ನೂ ಳೀಳಿದ್ದನ್ನೂ ತಿಂದು, ಅಶುದ್ಧನಾಗ ಬಾರದು; ನಾ
೯ ನೇ ಕರ್ತನು. ಹಾಗೆ ಅದನ್ನು ಅಪವಿತ್ರ ಮಾಡಿದ್ದರಿಂದ ಪಾ
ಪವನ್ನು ಹೊತ್ತು, ಅದರಿಂದ ಸಾಯದ ಹಾಗೆ, ಅವರು ನನ್ನ
ಕಾಯಿದೆಯನ್ನು ಕಾಪಾಡ ಬೇಕು; ಅವರನ್ನು ಪರಿಶುದ್ಧ ಮಾ
ಡುವ ಕರ್ತನು ನಾನೇ.
೧೦ ಯಾವ ಅನ್ಯನಾಗಲಿ ಪರಿಶುದ್ಧವಾದದ್ದನ್ನು ತಿನ್ನ ಬಾರದು;
ಯಾಜಕನ ಬಳ್ಳಯಲ್ಲಿ ಪರವಾಸ ಮಾಡುವವನೂ ಕೂಲಿ ಕೆಲಸ
೧೧ ಮಾಡುವವನೂ ಪರಿಶುದ್ಧವಾದದ್ದನ್ನು ತಿನ್ನ ಬಾರದು. ಆದರೆ
ಯಾಜಕನು ಹಣಕ್ಕೆ ಒಂದು ಅಳ್ಳನ್ನು ಕೊಂಡು ಕೊಂಡರೆ, ಅ
ವನು ಅದನ್ನು ತಿನ್ನ ಬಹುದು; ಅವನ ಮನೆಯಲ್ಲಿ ಹುಟ್ಟಿದವ
೧೨ ನು ಸಹ; ಇವರು ಅವನ ಕೊಟ್ಟಿ ತಿನ್ನ ಬಹುದು. ಯಾಜಕನ
ಮಗಳು ಅನ್ಯನಾದ ಗಂಡನಿಗಾದ ಮೇಲೆ, ಪರಿಶುದ್ಧವಾದ ಅರ್ಪ
೧೩ ಣೆಯನ್ನು ತಿನ್ನ ಬಾರದು. ಆದರೆ ಯಾಜಕನ ಮಗಳು ಬೀಜ
ಲ್ಲದೆ ವಿಧವೆಯಾದರೆ, ಇಲ್ಲವೆ ಕಳುಹಿಸಲ್ಪಟ್ಟರೆ, ಅವಳು ತನ್ನ
ಚಿಕ್ಕತನದಲ್ಲಿ ಇದ್ದ ಹಾಗೆ ತಂದೆಯ ಮನೆಗೆ ತಿರಿಗಿ ಬಂದಿದ್ದರೆ,
ತಂದೆಯ ಆಹಾರವನ್ನು ತಿನ್ನ ಬಹುದು; ಆದರೆ ಯಾವ ಅನ್ಯ
೧೪ ನಾದರೂ ಅದನ್ನು ತಿನ್ನ ಬಾರದು. ಇದಲ್ಲದೆ ಯಾವನಾದ
ರೂ ತಪ್ಪಾಗಿ ಪರಿಶುದ್ಧವಾದದ್ದನ್ನು ತಿಂದರೆ, ಅವನು ಅದರ
ಐದನೇ ಪಾಲನ್ನು ಕೂಡಿಸಿ, ಯಾಜಕನಿಗೆ ಪರಿಶುದ್ಧವಾದದ್ದನ್ನು





೧೫ ತಿರಿಗಿ ಕೊಡ ಬೇಕು. ಇಸ್ರಾಯೇಲ್ ಮಕ್ಕಳ ಪರಿಶುದ್ಧವಾದದ
ನ್ನು ಅವರು ಕರ್ತನಿಗೆ ಎತ್ತುವಂಥಾದ್ದನ್ನೂ, ಅಪವಿತ್ರ ಮಾಡ ಬಾ
೧೬ ರದು; ಅವರ ಪರಿಶುದ್ಧವಾದವುಗಳನ್ನು ತಿನ್ನುವದರಿಂದ ಅಪರಾ
ಧವಾದ ಆಕ್ರಮವನ್ನು ಹೊತ್ತು ಕೊಳ್ಳ ಬಾರದು; ಯಾಕಂದರೆ
೧೭ ಅವರನ್ನು ಪರಿಶುದ್ಧ ಮಾಡುವ ಕರ್ತನು ನಾನೇ. ಇದಲ್ಲದೆ ಕ
೧೮ ರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ, ಆಕೋನನ ಸಂಗ
ಡಲೂ, ಅವನ ಮಕ್ಕಳ ಸಂಗಡಲೂ, ಇಸ್ರಾಯೇಲ್ ಮಕ್ಕಳೆಲ್ಲರ ಸಂ
ಗಡಲೂ ಮಾತಾಡಿ, ಹೇಳ ಬೇಕಾದದ್ದೇನಂದರೆ—ಇಸ್ರಾಯೇಲ್ ಮ
ನೆಯವರಲ್ಲಿಯೂ, ಇಸ್ರಾಯೇಲಿನಲ್ಲಿರುವ ಪರದೇಶಿಯೂ, ಯಾ
ವನಾದರೂ ಕರ್ತನಿಗೆ ಹೋಮವಾಗಿ ಅರ್ಪಿಸುವ ಎಲ್ಲಾ ಪರಿಕೆಗ
ಳಲ್ಲಿಯೂ, ಉಚಿತವಾದ ಅರ್ಪಣೆಗಳಲ್ಲಿಯೂ, ಅರ್ಪಣೆಯ
ನ್ನು ಅರ್ಪಿಸಿದರೆ, ಅದು ನಿಮ್ಮಲ್ಲಿ ಮೆಚ್ಚಿಗೆ ಆಗುವ ಹಾಗೆ,
೧೯ ಇರ ಬೇಕು. ಪಶು, ಕುರಿ, ಮೇಕೆ ಜಾತಿಗಳಲ್ಲಿ ಪೂರ್ಣಾಂ
೨೦ ಗವಾದ ಗಂಡಾಗಿರ ಬೇಕು. ಊನತೆ ಉಂಟಾದ ಯಾವದನ್ನೂ
ಅರ್ಪಿಸ ಬೇಡಿರಿ; ಯಾಕಂದರೆ ಅದು ಮೆಚ್ಚಿಗೆ ಆಗುವದಿಲ್ಲ.
೨೧ ಮತ್ತು ಯಾವನಾದರೂ ಕರ್ತನಿಗೆ ಹರಕೆ ಸಲ್ಲಿಸುವದಕ್ಕಾಗ
ಲಿ, ಉಚಿತವಾದ ಅರ್ಪಣೆ ಕೊಡುವದಕ್ಕಾಗಲಿ, ಪಶುಗಳ
ಲ್ಲಾದರೂ ಆಡುಗಳಲ್ಲಾದರೂ ಸಮಾಧಾನ ಬಲಿಯನ್ನು ಅರ್ಪಿ
ಸಿದರೆ, ಅದು ಮೆಚ್ಚಿಗೆಯಾಗುವ ಹಾಗೆ, ಪೂರ್ಣಾಂಗವಾಗಿರ
೨೨ ಬೇಕು; ಯಾವ ಊನತೆಯು ಅದರಲ್ಲಿ ಇರ ಬಾರದು. ಕುರು
ಡಾದದ್ದೂ, ಮುರಿದದ್ದೂ, ಘಾಯವಾದದ್ದೂ, ಪೊಕ್ಕಳುಳ್ಳ
ದ್ದೂ, ಗಜ್ಜಿಯುಳ್ಳದ್ದೂ, ತುರಿಯುಳ್ಳದ್ದೂ, ಇಂಥವುಗಳನ್ನು ಕ
ರ್ತನಿಗೆ ಅರ್ಪಿಸ ಬೇಡಿರಿ! ಅವುಗಳಿಂದ ಕರ್ತನಿಗೆ ಬಲಿಪೀಠದ
೨3 ಮೇಲೆ ದಹನ ಬಲಿ ಕೊಡ ಬೇಡಿರಿ. ಹೆಚ್ಚು ಅಂಗಗಳುಳ್ಳದ್ದಾಗ
ಲಿ, ಗಿಡ್ಡಾದದ್ದಾಗಲಿ ಇರುವ ಹೋರಿಯನ್ನೂ ಕುರಿಯನ್ನೂ ಉ
ಚಿತವಾಗಿ ತರ ಬಹುದು; ಆದರೆ ಹರಕೆಯಾಗಿ ಅದು ಮೆಚ್ಚಿಗೆ
೨೪ ಆಗುವದಿಲ್ಲ. ಆದರೆ ಹೊಡೆದದ್ದನ್ನೂ, ಕುಟ್ಟಿದ್ದನ್ನೂ, ಕಿತ್ತ
ದ್ದನ್ನೂ, ಕೊಯಿದದ್ದನ್ನೂ, ಕರ್ತನ ಸಮೀಪಕ್ಕೆ ತರ ಬೇಡಿರಿ;
೨೫ ಅಂಥವುಗಳನ್ನು ನಿಮ್ಮ ದೇಶದಲ್ಲಿ ಅರ್ಪಿಸ ಬೇಡಿರಿ. ಮತ್ತು ಅ
ನ್ಯ ದೇಶಿಯ ಮಗನ ಕೈಯೊಳಗಿಂದಲೂ ಅಂಥವುಗಳಲ್ಲಿ ಯಾ
ವದನ್ನಾದರೂ ನಿಮ್ಮ ದೇವರಿಗೆ ಆಹಾರವಾಗಿ ಅರ್ಪಿಸ ಬೇಡಿರಿ;
ಯಾಕಂದರೆ ಅವುಗಳಲ್ಲಿ ಕೇಡೂ, ಅವುಗಳಲ್ಲಿ ಊನತೆಯೂ
ಉಂಟು; ಅವು ನಿಮಗೋಸ್ಕರ ಮೆಚ್ಚಿಗೆಯಾಗುವದಿಲ್ಲ.
೨೬ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—ಹೋ
೨೭ ರಿಯೂ, ಕುರಿಯೂ, ಮೇಕೆಯೂ ಹುಟ್ಟಿದ ಮೇಲೆ, ಏಳು ದಿವ
ಸ ತನ್ನ ತಾಯಿಯ ಕೆಳಗಿರಲಿ; ಎಂಟನೇ ದಿವಸ ಮೊದಲುಗೊಂ
ಡು ಅದು ಕರ್ತನಿಗೆ ದಹನವಾಗುವ ಅರ್ಪಣೆಯಾಗಿ ಮೆಚ್ಚಿಗೆ
೨೮ ಯಾಗುವದು. ಆದರೆ ದನವನ್ನಾಗಲಿ ಕುರಿಯನ್ನಾಗಲಿ ಅದರ
ಮರಿಯ ಸಂಗಡ ಒಂದೇ ದಿವಸದಲ್ಲಿ ಕೊಯ್ಯ ಬೇಡಿರಿ.
೨೯ ಮತ್ತು ಸ್ತುತಿ ಬಲಿಯನ್ನು ಕರ್ತನಿಗೆ ಅರ್ಪಿಸಿದರೆ, ನಿಮ್ಮ
3೦ ಮೇಲೆ ಮೆಚ್ಚಿಗೆಯಾಗುವ ಹಾಗೆ, ಅರ್ಪಿಸ ಬೇಕು. ಆ ದಿನದ
ಲ್ಲೇ ಅದನ್ನು ತಿನ್ನ ಬೇಕು; ಮರು ದಿವಸಕ್ಕೆ ಏನೂ ಉಳಿಸ ಬೇ
ಡಿರಿ; ನಾನೇ ಕರ್ತನು.
3೧ ಹಾಗೆ ನನ್ನ ಆಜ್ಞೆಗಳನ್ನು ಕೈ ಕೊಂಡು ಮಾಡಿರಿ; ನಾನೇ ಕ
3೨ ರ್ತನು. ನಾನು ಇಸ್ರಾಯೇಲ್ ಮಕ್ಕಳಲ್ಲಿ ಪರಿಶುದ್ಧ ಮಾಡಲ್ಪಡು
ವ ಹಾಗೆ, ನನ್ನ ಪರಿಶುದ್ಧ ಹೆಸರನ್ನು ಅಪವಿತ್ರ ಮಾಡ ಬೇಡಿರಿ;
33 ನಿಮ್ಮನ್ನು ಪರಿಶುದ್ಧ ಮಾಡುವ ಕರ್ತನು ನಾನೇ. ನಾನು ನಿಮ
ಗೆ ದೇವರಾಗುವದಕ್ಕೆ ನಿಮ್ಮನ್ನು ಐಗುಪ್ತ ದೇಶಕೊಳಗಿಂದ ಹೊರ
ಗೆ ಬರ ಮಾಡಿದ್ದೇನೆ ನಾನೇ ಕರ್ತನು.

## ೨3. ಸಂಧಿ.

೧ ಇದಲ್ಲದೆ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ಇಸ್ರಾಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ ಹೇಳ ಬೇಕಾ
ದದ್ದೇನಂದರೆ—ನೀವು ಪರಿಶುದ್ಧ ಪರಿಕೆಗಳಾಗಿ ಸಾರ ಬೇಕಾದ ಕ
ರ್ತನ ಹಬ್ಬಗಳು, ಇವೇ ನನ್ನ ಹಬ್ಬಗಳು.
3 ಆರು ದಿವಸ ಕೆಲಸ ಮಾಡ ಬೇಕು, ಆದರೆ ಏಳನೇ ದಿವಸದ
ಲ್ಲಿ ಕರ್ತನ ಮಹಾ ವಿಶ್ರಾಂತಿಯ ಸಬ್ಬತ ದಿವಸವಾದ ಪರಿಶು
ದ್ಧ ಪರಿಕೆಯಾಗಿದೆ; ಅದರಲ್ಲಿ ಯಾವ ಕೆಲಸವನ್ನಾದರೂ ಮಾ
ಡ ಬೇಡಿರಿ; ಅದು ನಿಮ್ಮ ಎಲ್ಲಾ ನಿವಾಸಗಳಲ್ಲಿ ಕರ್ತನ ಸಬ್ಬತ
೪ ದಿವಸವೇ.
೫ ತಕ್ಕ ಸಮಯದಲ್ಲಿ ನೀವು ಸಾರ ಬೇಕಾದ ಕರ್ತನ ಹಬ್ಬಗ
ಳಾಗಿರುವ ಪರಿಶುದ್ಧ ಪರಿಕೆಗಳು ಇವೇ.
೬ ಮೊದಲನೇ ತಿಂಗಳಲ್ಲಿ, ತಿಂಗಳಿನ ಹದಿನಾಲ್ಕನೇ ದಿವಸದ ಸಾ
ಯಂಕಾಲದಲ್ಲಿ, ಕರ್ತನ ಪಸ್ಕವು. ಅದೇ ತಿಂಗಳಿನ ಹದಿನೈದನೇ
ದಿವಸದಲ್ಲಿ ಕರ್ತನಿಗೆ ಹುಳಿ ಇಲ್ಲದ ರೊಟ್ಟಿಗಳ ಹಬ್ಬವದೆ; ನೀವು
7 ಏಳು ದಿವಸ ಹುಳಿ ಇಲ್ಲದ ರೊಟ್ಟಿಗಳನ್ನು ತಿನ್ನ ಬೇಕು. ಮೊದಲ
ನೇ ದಿವಸದಲ್ಲಿ ನಿಮಗೆ ಪರಿಶುದ್ಧ ಪರಿಕೆ ಇರ ಬೇಕು; ಕಡ್ಡವಾದ
೮ ಯಾವ ಕೆಲಸವನ್ನೂ ನೀವು ಮಾಡ ಬೇಡಿರಿ. ಮತ್ತು ಏಳು ದಿವ
ಸ ಕರ್ತನಿಗೆ ದಹನ ಬಲಿಯನ್ನು ಅರ್ಪಿಸ ಬೇಕು; ಏಳನೇ ದಿವಸ
ದಲ್ಲಿ ಪರಿಶುದ್ಧ ಪರಿಕೆ; ನೀವು ಕಡ್ಡವಾದ ಯಾವ ಕೆಲಸವನ್ನು ಮಾ
೯ ಡ ಬೇಡಿರಿ. ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದ
೧೦ ರೆ, ನೀನು ಇಸ್ರಾಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ
ಹೇಳ ಬೇಕಾದದ್ದೇನಂದರೆ—ನಾನು ನಿಮಗೆ ಕೊಡುವ ದೇಶದಲ್ಲಿ
ನೀವು ಕೇರಿದ ಮೇಲೆ, ಅದರ ಬೈರನ್ನು ಕೊಯಿದರೆ, ನಿಮ್ಮ
ಬೈರಿನ ಮೊದಲನೇ ಸೂಡನ್ನು ಯಾಜಕನ ಬಳ್ಳಗೆ ತರ ಬೇಕು.
೧೧ ಅವನು ಆ ಸೂಡನ್ನು, ನಿಮ್ಮಲ್ಲಿ ಮೆಚ್ಚಿಗೆ ಆಗುವ ಹಾಗೆ, ಕರ್ತನ
ಸನ್ನಿಧಿಯಲ್ಲಿ ಅಲ್ಲಾಡಿಸ ಬೇಕು; ಸಬ್ಬತಿನ ಮರು ದಿವಸದಲ್ಲಿ
೧೨ ಯಾಜಕನು ಅದನ್ನು ಅಲ್ಲಾಡಿಸ ಬೇಕು. ಆ ಸೂಡನ್ನು ಅಲ್ಲಾ
ಡಿಸುವ ದಿನದಲ್ಲಿ ಕರ್ತನಿಗೆ ಹೋಮವಾಗಿ ಒಂದು ವರುಷದ
೧3 ಪೂರ್ಣಾಂಗವಾದ ಕುರಿ ಮರಿಯನ್ನು ಅರ್ಪಿಸ ಬೇಕು. ಅದಕ್ಕೆ
ತಕ್ಕ ಕಾಣಿಕೆಯು ಎಣ್ಣೆ ಹೊಯಿದ ಗೋಧಿ ಹಿಟ್ಟಿನ ಎರಡು
ದಶಾಂಶಗಳೂ; ಅದೇ ಕರ್ತನಿಗೆ ಸುವಾಸನೆಯಾಗಿರುವ ದಹ
ನ ಬಲಿ; ಅದಕ್ಕೆ ತಕ್ಕ ಪಾನದ ಅರ್ಪಣೆ ದ್ರಾಕ್ಷೇರಸವಾಗಿರಲಿ.
೧೪ ಆ ದಿನದ ವರಿಗೂ, ನೀವು ನಿಮ್ಮ
ದೇವರಿಗೆ ಅರ್ಪಣೆಯನು ತರುವ ವರಿಗೂ ಕೊಟ್ಟಿಯನ್ನೂ,
ಹುರಿದದ್ದನ್ನೂ, ಹಸಿ ತೆನೆಯನ್ನೂ ತಿನ್ನ ಬೇಡಿರಿ; ಅದೇ ನಿಮ್ಮ
ಎಲ್ಲಾ ನಿವಾಸಗಳಲ್ಲಿ ನಿಮ್ಮ ತಲಾಂತರಗಳಿಗೆ ನಿತ್ಯವಾದ ನೇಮ.
೧೫ ಸಬ್ಬತಿನ ಮರು ದಿವಸದಿಂದ, ನೀವು ಅಲ್ಲಾಡಿಸುವ ಸೂಡನ್ನು
ತಂದ ದಿವಸದಿಂದ, ಪೂರ್ಣವಾದ ಏಳು ವಾರಗಳಾಗುವ ಹಾಗೆ
೧೬ ಲೆಕ್ಕ ಮಾಡ ಬೇಕು. ಏಳನೇ ಸಬ್ಬತಿನ ಮರು ದಿವಸದ ಪರ್ಯಂ

ತರ ಐವತ್ತು ದಿವಸಗಳನ್ನು ಎಣಿಸ ಬೇಕು; ಆಗ ಕರ್ತನಿಗೆ ಹೊ
೧೭ ಸ ಕಾಣಿಕೆಯನ್ನು ಅರ್ಪಿಸ ಬೇಕು. ನಿಮ್ಮ ನಿವಾಸಗಳೊಳಗಿಂ
ದ ಅಲ್ಲಾಡಿಸುವ ಕೊಟ್ಟಿಗಳನ್ನು ತರ ಬೇಕು; ಗೋಧಿಯ ಎರ
ಡು ದಶಾಂಶಗಳಿಂದ ಎರಡನ್ನು ಮಾಡ ಬೇಕು; ಹುಳಿ ಕಲಿಸಿ, ಅ
ವುಗಳನ್ನು ಸುಡ ಬೇಕು; ಅವು ಕರ್ತನಿಗೆ ಪ್ರಥಮ ಫಲಗಳು.
೧೮ ಮತ್ತು ಕೊಟ್ಟಿಯ ಸಂಗಡ ಕರ್ತನಿಗೆ ಹೋಮವಾಗಿ ಪೂರ್ಣಾಂ
ಗವಾದ ಒಂದು ವರುಷದ ಏಳು ಕುರಿ ಮರಿಗಳನ್ನೂ, ಒಂದು
ಗಂಡು ಕರುವನ್ನೂ, ಎರಡು ಟಗರುಗಳನ್ನೂ, ಅವುಗಳಿಗೆ ತಕ್ಕ
ಕಾಣಿಕೆಯನ್ನೂ, ಪಾನದ ಅರ್ಪಣೆಯನ್ನೂ, ಕರ್ತನಿಗೆ ಸುವಾ
೧೯ ಸನೆಯಾದ ದಹನ ಬಲಿಯಾಗಿ ಅರ್ಪಿಸ ಬೇಕು. ಮತ್ತು ಒಂದು
ಮೇಕೆ ಹೋತನ್ನು ಪಾಪ ಬಲಿಯಾಗಿಯೂ, ಒಂದು ವರುಷದ
ಎರಡು ಕುರಿ ಮರಿಗಳನ್ನು ಸಮಾಧಾನ ಬಲಿಯಾಗಿಯೂ, ತರ
೨೦ ಬೇಕು. ಯಾಜಕನು ಆವುಗಳನ್ನು ಆ ಪ್ರಥಮ ಫಲದ ಕೊಟ್ಟಿ
ಯ ಸಂಗಡಲೂ ಎರಡು ಕುರಿ ಮರಿಗಳ ಸಂಗಡಲೂ ಕರ್ತನ ಸ
ನ್ನಿಧಿಯಲ್ಲಿ ಅಲ್ಲಾಡಿಸುವ ಬಲಿಯಾಗಿ ಅಲ್ಲಾಡಿಸ ಬೇಕು; ಅವು
೨೧ ಕರ್ತನಿಗೆ ಪರಿಶುದ್ಧವಾಗಿದ್ದು, ಯಾಜಕನಿಗೆ ಆಗ ಬೇಕು. ಮತ್ತು
ನಿಮಗೆ ಪರಿಶುದ್ಧ ಪರಿಷೆ ಎಂದು ಅದೇ ದಿವಸದಲ್ಲಿ ಸಾರ ಬೇಕು;
ಕಟ್ಟುವಾದ ಯಾವ ಕೆಲಸವನ್ನೂ ಮಾಡ ಬೇಡಿರಿ; ಅದೇ ನಿಮ್ಮ
ಎಲ್ಲಾ ನಿವಾಸಗಳಲ್ಲಿ ನಿಮ್ಮ ತಲಾಂತರಗಳಿಗೆ ನಿತ್ಯವಾದ ನೇಮವು.
೨೨ ಇದಲ್ಲದೆ ನಿಮ್ಮ ಭೂಮಿಯ ಬೈರನ್ನು ಕೊಯ್ಯುವಾಗ, ಹೊ
ಲದ ಮೂಲೆಯನ್ನು ಪೂರ್ಣವಾಗಿ ಕೊಯ್ಯ ಬೇಡ; ಕೊಯಿದ
ಮೇಲೆ ಹಕ್ಕಲಾಯ ಬೇಡ; ದೀನನಿಗೂ ಪರನಿಗೂ ಅದನ್ನು ಬಿಡ
ಬೇಕು; ನಿಮ್ಮ ದೇವರಾದ ಕರ್ತನು ನಾನೇ.
೨೩ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨೪ ನೀನು ಇಸ್ರಯೇಲ್ ಮಕ್ಕಳಿಗೆ ಹೇಳ ಬೇಕಾದ್ದೇನಂದರೆ—ಏಳನೇ
ತಿಂಗಳಲ್ಲಿ ತಿಂಗಳಿನ ಮೊದಲನೇ ದಿವಸದಲ್ಲಿ ನಿಮಗೆ ತುತೂರಿ
ಶಬ್ದದ ನೆನಪಾಗಿರುವ ಸಬ್ಬತೂ, ಪರಿಶುದ್ಧ ಪರಿಷೆಯೂ, ಇರ ಬೇ
೨೫ ಕು. ಕಟ್ಟುವಾದ ಯಾವ ಕೆಲಸವನ್ನಾದರೂ ನೀವು ಮಾಡದೆ,
ಕರ್ತನಿಗೆ ದಹನ ಬಲಿಯನ್ನು ಅರ್ಪಿಸ ಬೇಕು.
೨೬ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨೭ ಮತ್ತು ಆ ಏಳನೇ ತಿಂಗಳಿನ ಹತ್ತನೇ ದಿವಸದಲ್ಲಿ ಪಾಪ ಮುಚ್ಚು
ವ ದಿನ ಅದೇ; ನಿಮಗೆ ಪರಿಶುದ್ಧ ಪರಿಷೆ ಇರ ಬೇಕು; ನೀವು ನಿ
ಮ್ಮ ಪ್ರಾಣಗಳನ್ನು ಕುಂದಿಸಿ ಕೊಳ್ಳ ಬೇಕು; ಮತ್ತು ಕರ್ತನಿ
೨೮ ಗೆ ದಹನ ಬಲಿಯನ್ನು ಅರ್ಪಿಸ ಬೇಕು. ಮತ್ತು ಯಾವ ಕೆಲಸ
ವನ್ನೂ ಆ ದಿವಸದಲ್ಲಿ ಮಾಡ ಬೇಡಿರಿ; ಯಾಕಂದರೆ ಅದು ನಿ
ಮ್ಮ ದೇವರಾದ ಕರ್ತನ ಮುಂದೆ ನಿಮಗೋಸ್ಕರ ಪಾಪ ಮು
೨೯ ಚ್ಚುವಂಥ, ಪಾಪ ಮುಚ್ಚಿಕೆಯ ದಿನವೇ. ಆ ದಿವಸದಲ್ಲಿ ತಮ್ಮ
ನ್ನು ಕುಂದಿಸಿ ಕೊಳ್ಳದ ಪ್ರಾಣಗಳೆಲ್ಲಾ ತಮ್ಮ ಜನರೊಳಗಿಂ
೩೦ ದ ಕಡಿಯಲ್ಪಡ ಬೇಕು. ಮತ್ತು ಆ ದಿವಸದಲ್ಲಿ ಯಾವ ಕೆಲಸ
ವನ್ನಾದರೂ ಮಾಡುವವನ್ನಾವನೋ, ಆ ಪ್ರಾಣವನ್ನು ತನ್ನ ಜ
೩೧ ನರೊಳಗಿಂದ ನಾಶ ಮಾಡುವೆನು. ಯಾವ ಕೆಲಸವನ್ನಾದರೂ
ನೀವು ಮಾಡ ಬೇಡಿರಿ; ಇದೇ ನಿಮ್ಮ ಎಲ್ಲಾ ನಿವಾಸಿಗಳಲ್ಲಿ ನಿಮ್ಮ
೩೨ ತಲಾಂತರಗಳಿಗೆ ನಿತ್ಯವಾದ ನೇಮ. ಅದು ನಿಮಗೆ ಮಹಾ ವಿಶ್ರಾಂ
ತಿ ಸಬ್ಬತಾಗಿರಲಿ, ನಿಮ್ಮ ಪ್ರಾಣಗಳನ್ನು ಕುಂದಿಸಿ ಕೊಳ್ಳ ಬೇಕು;
ತಿಂಗಳಿನ ಬಂಥತ್ತನೇ ದಿವಸದ ಸಾಯಂಕಾಲದಲ್ಲಿ, ಸಾಯಂಕಾ
ಲದಾರಭ್ಯ ಸಾಯಂಕಾಲದ ವರಿಗೂ, ನಿಮ್ಮ ಸಬ್ಬತನ್ನು ಆಚ
ರಿಸ ಬೇಕು.
೩೩ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೩೪ ಇಸ್ರಯೇಲ್ ಮಕ್ಕಳಿಗೆ ನೀನು ಹೇಳ ಬೇಕಾದ್ದೇನಂದರೆ—ಏಳನೇ
ತಿಂಗಳಿನ ಹದಿನೈದನೇ ದಿವಸದಲ್ಲಿ ಅದೇ ಏಳು ದಿವಸಗಳ ಪ
೩೫ ರ್ಯಂತರ ಕರ್ತನಿಗೆ ಪರ್ಣಶಾಲೆಗಳ ಹಬ್ಬ. ಮೊದಲನೇ ದಿವಸ
ದಲ್ಲಿ ಪರಿಶುದ್ಧ ಪರಿಷೆ; ಕಟ್ಟುವಾದ ಯಾವ ಕೆಲಸವನ್ನೂ ನೀವು
೩೬ ಮಾಡ ಬೇಡಿರಿ. ಏಳು ದಿವಸಗಳ ಪರ್ಯಂತರ ಕರ್ತನಿಗೆ ದಹ
ನ ಬಲಿಯನ್ನು ಅರ್ಪಿಸ ಬೇಕು; ಎಂಟನೇ ದಿವಸದಲ್ಲಿ ನಿಮಗೆ ಪ
ರಿಶುದ್ಧ ಪರಿಷೆ ಇರ ಬೇಕು; ನೀವು ಕರ್ತನಿಗೆ ದಹನ ಬಲಿಯನ್ನು
ಅರ್ಪಿಸ ಬೇಕು; ಅದು ಘನ ಸಂಗವೇ; ಕಟ್ಟುವಾದ ಯಾವ ಕೆಲ
ಸವನ್ನಾದರೂ ಅದರಲ್ಲಿ ಮಾಡ ಬೇಡಿರಿ. ಪರಿಶುದ್ಧ ಪರಿಷೆಗಳಾಗಿ
೩೭ ಸಾರ ತಕ್ಕ ಕರ್ತನ ಹಬ್ಬಗಳು ಇವೇ. ಇವುಗಳ ಒಂದೊಂದು
ದಿವಸದಲ್ಲಿ ಕರ್ತನಿಗೆ ದಹನ ಬಲಿಯನ್ನೂ, ಹೋಮವನ್ನೂ,
ಕಾಣಿಕೆಯನ್ನೂ, ಬಲಿಯನ್ನೂ, ಪಾನದ ಅರ್ಪಣೆಗಳನ್ನೂ,
೩೮ ಕರ್ತನ ಸಬ್ಬತುಗಳ ಹೊರ್ತಾಗಿಯೂ, ನಿಮ್ಮ ದಾನಗಳ ಹೊ
ರ್ತಾಗಿಯೂ, ನಿಮ್ಮ ಎಲ್ಲಾ ಹರಕೆಗಳ ಹೊರ್ತಾಗಿಯೂ, ನೀವು
ಕರ್ತನಿಗೆ ಕೊಡುವ ಎಲ್ಲಾ ಉಚಿತವಾದ ಕಾಣಿಕೆಗಳ ಹೊರ್ತಾ
೩೯ ಗಿಯೂ, ಅರ್ಪಿಸ ಬೇಕು. ಮತ್ತು ಏಳನೇ ತಿಂಗಳಿನ ಹದಿನೈದ
ನೇ ದಿವಸದಲ್ಲಿ ನೀವು ಭೂಮಿಯ ಹುಟ್ಟುವಳಿ ಕೂಡಿಸಿದಾಗ, ಕ
ರ್ತನಿಗೆ ಏಳು ದಿವಸದ ಹಬ್ಬವನ್ನು ಆಚರಿಸ ಬೇಕ ;ಮೊದಲನೇ
೪೦ ದಿವಸದಲ್ಲಿ ಸಬ್ಬತೂ, ಎಂಟನೇ ದಿವಸದಲ್ಲಿ ಸಬ್ಬತೂ; ಮತ್ತು ಮೊ
ದಲನೇ ದಿವಸದಲ್ಲಿ ತಾಳೇ ಮರಗಳ ಕೆಂಪೆಗಳನ್ನೂ ಸಾಂದರ್ಯ
ವಾದ ಮರಗಳ ಕೊಂಪೆಗಳನ್ನೂ, ಹಳ್ಳದ ನೀರವಂಜಿ ಮರಗಳ
ನ್ನೂ ತಕ್ಕೊಂಡು, ನಿಮ್ಮ ದೇವರಾಗಿರುವ ಕರ್ತನ ಸನ್ನಿಧಿಯ
೪೧ ಲ್ಲಿ ಏಳು ದಿವಸ ಸಂತೋಷ ಪಡ ಬೇಕು. ಇದನ್ನು ನೀವು ಕರ್ತ
ನಿಗೆ ಹಬ್ಬವಾಗಿ ವರುಷಕ್ಕೆ ಏಳು ದಿವಸ ಆಚರಿಸ ಬೇಕು; ಅದು
ನಿಮ್ಮ ತಲಾಂತರಗಳಿಗೆ ನಿತ್ಯ ನೇಮವೇ; ಏಳನೇ ತಿಂಗಳಲ್ಲಿ ಈ
೪೨ ಹಬ್ಬವಾಗ ಬೇಕು. ಏಳು ದಿವಸ ಪರ್ಣ ಶಾಲೆಗಳಲ್ಲಿ ವಾಸವಾಗಿರ
ಬೇಕು; ಇಸ್ರಯೇಲಿನಲ್ಲಿರುವ ದೇಶಸ್ಥರೆಲ್ಲಾ ಪರ್ಣ ಶಾಲೆಗಳಲ್ಲಿ
೪೩ ವಾಸ ಮಾಡ ಬೇಕು. ಯಾಕಂದರೆ ನಾನು ಇಸ್ರಯೇಲ್ ಮಕ್ಕ
ಳನ್ನು ಐಗುಪ್ತ ದೇಶದೊಳಗಿಂದ ಹೊರಗೆ ಬರ ಮಾಡಿದಾಗ, ಪ
ರ್ಣ ಶಾಲೆಗಳಲ್ಲಿ ಅವರನ್ನು ವಾಸ ಮಾಡಿಸಿದೆನೆಂದೂ, ನಿಮ್ಮ ತ
ಲಾಂತರಗಳಿಗೆ ತಿಳಿದಿರ ಬೇಕು; ನಿಮ್ಮ ದೇವರಾಗಿರುವ ಕರ್ತನು
ನಾನೇ.
೪೪ ಈ ಪ್ರಕಾರ ಮೋಶೆ ಕರ್ತನ ಹಬ್ಬಗಳನ್ನು ಇಸ್ರಯೇಲ್ ಮ
ಕ್ಕಳಿಗೆ ತಿಳಿಸಿದನು.

## ೨೫. ಸಂಧಿ.

೧ ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ಬೆಳಕಿಗೂ ನಿತ್ಯವಾಗಿ ದೀಪವನ್ನು ಹಚ್ಚುವದಕ್ಕೂ ನಿನಗೆ ಶು
ದ್ಧವಾದ ಕುಟ್ಟಿದ ಇಪ್ಪ ಎಣ್ಣೆಯನ್ನು ತೆಗೆದು ಕೊಡ ಬೇಕೆಂ
೩ ದು, ಇಸ್ರಯೇಲ್ ಮಕ್ಕಳಿಗೆ ಆಜ್ಞಾಪಿಸು. ಸಾಕ್ಷಿಯ ತೆರೆಯ
ಹೊರಗೆ, ಸಭೆಯ ಗುಡಾರದಲ್ಲಿ, ಆರೋನನು ಅದನ್ನು ಸಾ
ಯಂಕಾಲದಿಂದ ಉದಯದ ವರಿಗೂ ಕರ್ತನ ಮುಂದೆ ನಿತ್ಯವಾ



ಗಿ ಸಿದ್ಧ ಮಾಡ ಬೇಕು; ಇದೇ ನಿಮ್ಮ ತಲಾಂತರಗಳಿಗೆ ನಿತ್ಯವಾ
೪ ದ ಕಟ್ಟಳೆ. ಶುದ್ಧವಾದ ದೀಪಸ್ತಂಭದ ಮೇಲೆ ಅವನು ದೀಪಗಳ
ನ್ನು ಕರ್ತನ ಮುಂದೆ ನಿತ್ಯವಾಗಿ ಸಿದ್ಧ ಮಾಡ ಬೇಕು.
೫ ಮತ್ತು ಗೋಧಿ ಹಿಟ್ಟನ್ನು ತಕ್ಕೊಂಡು, ಹನ್ನೆರಡು ಹೋಳಿ
ಗೆಗಳನ್ನು ಸುಡ ಬೇಕು; ಎರಡು ದಶಾಂಶಗಳಿಂದ ಒಂದು ಹೋ
೬ ಳಿಗೆ ಉಂಟಾಗ ಬೇಕು. ಮತ್ತು ಅವುಗಳನ್ನು, ಸಾಲಿಗೆ ಆರು ಇ
ರುವ ಪ್ರಕಾರ, ಎರಡು ಸಾಲುಗಳಾಗಿ ಕರ್ತನ ಮುಂದಿರುವ ಶು
೭ ದ್ಧ ಮೇಜಿನ ಮೇಲೆ ಇಡ ಬೇಕು. ಮತ್ತು ಆ ಸಾಲಿನ ಮೇಲೆ
ಕೊಟ್ಟಿಯ ಸಂಗಡ ಜ್ಞಾಪಕ ಭಾಗವಾಗಿಯೂ, ಕರ್ತನಿಗೆ ದಹ
ನವಾಗಿಯೂ ಇರುವ ಹಾಗೆ, ಶುದ್ಧವಾದ ಧೂಪವನ್ನು ಕೂಡ
೮ ಬೇಕು. ಪ್ರತಿ ಸಬ್ಬತ್ತಿ ದಿವಸದಲ್ಲಿ ಅದನ್ನು ನಿತ್ಯವಾಗಿ ಕರ್ತ
ನ ಮುಂದೆ ಸಿದ್ಧ ಮಾಡ ಬೇಕು; ಇದು ಇಸ್ರಯೇಲ್ ಮಕ್ಕಳ
೯ ಕಡೆಯಿಂದ ನಿತ್ಯವಾದ ಒಡಂಬಡಿಕೆಯೇ. ಅದು ಆರೋನನಿ
ಗೂ ಅವನ ಮಕ್ಕಳಿಗೂ ಆಗ ಬೇಕು; ಅವರು ಪರಿಶುದ್ಧ ಸ್ಥಳದ
ಲ್ಲಿ ಅದನ್ನು ತಿನ್ನ ಬೇಕು; ಯಾಕಂದರೆ ಅದು ಕರ್ತನ ದಹ
ನಗಳಲ್ಲಿ ಅವನಿಗೆ ಮಹಾ ಪರಿಶುದ್ಧವಾದದ್ದು; ನಿತ್ಯವಾದ ನೇ
ಮವೇ.
೧೦ ಇದಲ್ಲದೆ ಇಸ್ರಯೇಲಿನವಳಾದ ಒಬ್ಬ ಸ್ತ್ರೀಗೂ ಐಗುಪ್ತ
ನಾದ ಪುರುಷನಿಗೂ ಹುಟ್ಟಿದ ಮಗನು ಇಸ್ರಯೇಲ್ ಮಕ್ಕಳ
ಮಧ್ಯದಲ್ಲಿ ಹೊರಗೆ ಬಂದನು; ಆ ಇಸ್ರಯೇಲಿನವಳ ಮಗನೂ,
ಇಸ್ರಯೇಲಿನವನಾದ ಒಬ್ಬ ಮನುಷ್ಯನೂ, ದಂಡಿನಲ್ಲಿ ಜಗಳ
೧೧ ವಾಡಿ ಕೊಂಡರು. ಆ ಇಸ್ರಯೇಲಿನವಳಾದ ಸ್ತ್ರೀಯ ಮಗನು
ಪರಿಶುದ್ಧ ಹೆಸರನ್ನು ಬೈದು ದೂಷಿಸಿದ್ದರಿಂದ, ಅವನನ್ನು
ಮೋಶೆಯ ಬಳಿಗೆ ತಂದರು. ಅವನ ತಾಯಿಯ ಹೆಸರು ದಾನನ
೧೨ ಕುಲದವನಾದ ದಿಬ್ರಿಯ ಮಗಳಾದ ಶೆಲೋಮಿಥಳು. ಕರ್ತ
ನ ಅಪ್ಪಣೆಯ ಪ್ರಕಾರ ಉತ್ತರ ಆಗುವ ಹಾಗೆ, ಅವನನ್ನು ಕಾ
೧೩ ವಲಿಯಲ್ಲಿ ಇಟ್ಟರು. ಆಗ ಕರ್ತನು ಮಾತಾಡಿ ಮೋಶೆಗೆ ಹೇ
೧೪ ಳಿದ್ದೇನಂದರೆ—ಆ ದೂಷಿಸಿದವನನ್ನು ದಂಡಿನ ಹೊರಗೆ ತರ
ಬೇಕು; ಕೇಳಿದವರೆಲ್ಲರು ಅವನ ತಲೆಯ ಮೇಲೆ ಕೈ ಇಡ ಬೇ
೧೫ ಕು; ಸಭೆಯೆಲ್ಲಾ ಅವನನ್ನು ಕಲ್ಲೆಸೆಯ ಬೇಕು. ಮತ್ತು ಇಸ್ರ
ಯೇಲ್ ಮಕ್ಕಳ ಸಂಗಡ ಮಾತಾಡಿ, ನೀನು ಹೇಳ ಬೇಕಾದ್ದೇ
ನಂದರೆ—ಯಾವನಾದರೂ ತನ್ನ ದೇವರನ್ನು ದೂಷಿಸಿದರೆ, ತ
೧೬ ನ್ನ ಪಾಪವನ್ನು ಹೊರ ಬೇಕು. ಮತ್ತು ಕರ್ತನ ಹೆಸರನ್ನು
ಬೈದವನು ಸಾಯಲೇ ಸಾಯ ಬೇಕು; ಸಭೆಯೆಲ್ಲಾ ಅವನನ್ನು
ಕಲ್ಲೆಸೆಯ ಬೇಕು; ಅನ್ಯನಾಗಲಿ ದೇಶಸ್ಥನಾಗಲಿ ಹೆಸರನ್ನು ಬೈ
ದರೆ, ಸಾಯ ಬೇಕು.
೧೭ ಮತ್ತು ಒಬ್ಬನು ಯಾವ ಮನುಷ್ಯನ ಪ್ರಾಣವನ್ನಾದರೂ
೧೮ ಹೊಡೆದರೆ, ಸಾಯಲೇ ಸಾಯ ಬೇಕು. ಮತ್ತು ಪಶುವಿನ ಪ್ರಾ
ಣವನ್ನು ಹೊಡೆದವನು ಅದಕ್ಕೆ ಬದಲು ಕೊಡ ಬೇಕು; ಪ್ರಾ
೧೯ ಣಕ್ಕೆ ಪ್ರಾಣ. ಮತ್ತು ಯಾವನಾದರೂ ತನ್ನ ನೆಕೆಯವನಿಗೆ
ಊನತೆಯನ್ನು ಉಂಟು ಮಾಡಿದರೆ, ಅವನು ಮಾಡಿದ ಹಾಗೆ,
೨೦ ಅವನಿಗೆ ಮಾಡ ಬೇಕು. ಮುರತಕ್ಕೆ ಮುರತ, ಕಣ್ಣಿಗೆ ಕಣ್ಣು,
ಹಲ್ಲಿಗೆ ಹಲ್ಲು; ಅವನು ಆ ಮನುಷ್ಯನಿಗೆ ಊನತೆ ಉಂಟು ಮಾ
೨೧ ಡಿದ ಹಾಗೆಯೇ ಅವನಿಗೆ ಮಾಡ ಬೇಕು. ಪಶುವನ್ನು ಹೊಡೆ
ದವನು ಬದಲು ಕೊಡ ಬೇಕು; ಮನುಷ್ಯನನ್ನು ಹೊಡೆದವ
೨೨ ನು ಸಾಯ ಬೇಕು. ಒಂದೇ ನ್ಯಾಯ ನಿಮಗಿರ ಬೇಕು; ಪರನಿ
ಗೂ ದೇಶಸ್ಥನಿಗೂ ಸಮವಿರ ಬೇಕು. ಯಾಕಂದರೆ ನಾನೇ ನಿ
ಮ್ಮ ದೇವರಾಗಿರುವ ಕರ್ತನಾಗಿದ್ದೇನೆ.
೨೩ ಆಗ ಮೋಶೆ ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿದನು;
ಅವರು ಆ ದೂಷಿಸಿದವನನ್ನು ದಂಡಿನ ಹೊರಗೆ ತಕ್ಕೊಂಡು
ಹೋಗಿ, ಕಲ್ಲೆಸೆದರು. ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗೆ,
ಇಸ್ರಯೇಲ್ ಮಕ್ಕಳು ಮಾಡಿದರು.

## ೨೫. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಸೀನಾಯಿ ಬೆಟ್ಟದಲ್ಲಿ
೨ ಮಾತಾಡಿ ಹೇಳ್ದಿದ್ದೇನಂದರೆ—ನೀನು ಇಸ್ರಯೇಲ್ ಮಕ್ಕಳ ಸಂ
ಗಡ ಮಾತಾಡಿ, ಅವರಿಗೆ ಹೇಳ ಬೇಕಾದ್ದೇನಂದರೆ—ನಾನು ನಿ
ಮಗೆ ಕೊಡುವ ದೇಶದಲ್ಲಿ ನೀವು ಬಂದಾಗ, ಆ ದೇಶವು ಕರ್ತ
3 ನಿಗೆ ಒಂದು ಸಬ್ಬತನ್ನು ಶೀರಿಸ ಬೇಕು. ಆರು ವರುಷ ನಿನ್ನ
ಹೊಲಕ್ಕೆ ಬೀಜ ಹಾಕಿ, ಆರು ವರುಷ ನಿನ್ನ ದ್ರಾಕ್ಷೇ ತೋಟವ
ನ್ನು ಕೊಯಿದು, ಅದರ ಹುಟ್ಟುವಳಿಯನ್ನು ಕೂಡಿಸ ಬಹುದು.
೪ ಆದರೆ ಏಳನೇ ವರುಷದಲ್ಲಿ ಭೂಮಿಗೆ ಕರ್ತನ ಸಬ್ಬತಾಗಿರುವ
ಮಹಾ ವಿಶ್ರಾಂತಿ ಆಗ ಬೇಕು; ನಿನ್ನ ಹೊಲಕ್ಕೆ ಬೀಜ ಹಾಕ ಬೇ
೫ ಡ; ನಿನ್ನ ದ್ರಾಕ್ಷೇ ತೋಟವನ್ನು ಕೊಯ್ಯ ಬೇಡ. ನಿಮ್ಮ ಬೈ
ರಿನಿಂದ ಬೆದ್ದು ಹೋಗಿ ಬೆಳೆದದ್ದನ್ನು ಕೊಯ್ಯ ಬೇಡ; ಬಳ್ಳಿ
ಕೊಯ್ಯದೆ, ಬೆಳೆದ ದ್ರಾಕ್ಷೇ ಹಣ್ಣುಗಳನ್ನು ಕೂಡಿಸ ಬೇಡ;
೬ ಭೂಮಿಗೆ ಮಹಾ ವಿಶ್ರಾಂತಿಯ ವರುಷವಿರ ಬೇಕು. ಭೂಮಿಯ
ಸಬ್ಬತು ನಿನಗೂ, ನಿನ್ನ ದಾಸನಿಗೂ, ನಿನ್ನ ದಾಸಿಗೂ, ನಿನ್ನ
ಕೂಲಿ ಆಳಿಗೂ, ನಿನ್ನ ಬಳಿಯಲ್ಲಿ ವಾಸ ಮಾಡುವ ಪರನಿಗೂ,
7 ಆಹಾರಕ್ಕಾಗಿರ ಬೇಕು. ನಿನ್ನ ದನಗಳಿಗೂ ನಿನ್ನ ದೇಶದಲ್ಲಿ
ರುವ ಕಾಡ ಮೃಗಗಳಿಗೂ, ಅದರ ಹುಟ್ಟುವಳಿಯೆಲ್ಲಾ ಆಹಾರ
ಕ್ಕಾಗಿರ ಬೇಕು.
೮ ಮತ್ತು ಏಳು ಸಾರಿ ಏಳು ವರುಷಗಳ ಪ್ರಕಾರ, ಏಳು ಸಬ್ಬ
ತ್ತಿ ವರುಷಗಳನ್ನು ಎಣಿಸಿ ಕೊಳ್ಳ ಬೇಕು; ಆ ಏಳು ಸಬ್ಬತ್ತಿ
೯ ವರುಷಗಳು ನಾಲ್ವತ್ತೊಂಭತ್ತು ವರುಷಗಳಾಗಿರುವವು. ಆಗ
ಏಳನೇ ತಿಂಗಳಲ್ಲಿ, ತಿಂಗಳಿನ ಹತ್ತನೇ ದಿವಸದಲ್ಲಿ; ತುತೂರಿ ಧ್ವ
ನಿ ಗೈಯ್ಯ ಬೇಕು; ಪಾಪ ಮುಚ್ಚುವ ದಿವಸದಲ್ಲಿ ನಿಮ್ಮ ದೇಶದ
೧೦ ಲ್ಲೆಲ್ಲಾ ತುತೂರಿ ಧ್ವನಿ ಗೈಯ್ಯ ಬೇಕು. ಹಾಗೆ ಐವತ್ತನೇ ವರು
ಷವನ್ನು ಪರಿಶುದ್ಧ ಮಾಡಿ, ದೇಶದಲ್ಲಿ ಅದರ ಎಲ್ಲಾ ನಿವಾಸಿಗಳಿ
ಗೆ ಬಿಡುಗಡೆಯನ್ನು ಸಾರ ಬೇಕು; ಅದು ನಿಮಗೆ ಸಂಭ್ರಮವಾಗಿ
ರ ಬೇಕು; ಎಲ್ಲರು ನಿಮ್ಮ ನಿಮ್ಮ ಸ್ವಾಸ್ತ್ಯಗಳ ಬಳಿಗೂ, ಎಲ್ಲ
೧೧ ರು ನಿಮ್ಮ ನಿಮ್ಮ ವಂಶಗಳ ಬಳಿಗೂ ತಿರುಗ ಬೇಕು. ಸಂಭ್ರಮ
ವಾಗಿಯೇ ಈ ಐವತ್ತನೇ ವರುಷ ನಿಮಗಿರ ಬೇಕು; ಬೀಜ ಹಾಕ
ಬೇಡ; ತನಷಟ್ಟಕ್ಕೆ ತಾನೇ ಬೆಳೆದದ್ದನ್ನು ಕೊಯ್ಯ ಬೇಡ;
೧೨ ಕೊಯ್ಯದ ಬಳ್ಳಿಯಿಂದ ಕೂಡಿಸ ಬೇಡ. ಯಾಕಂದರೆ ಅದು
ಸಂಭ್ರಮವೇ; ನಿಮಗೆ ಪರಿಶುದ್ಧವಾಗಿರ ಬೇಕು. ಹೊಲದಲ್ಲಿಂದ
೧೩ ಅದರ ಹುಟ್ಟುವಳಿಯನ್ನು ತಿನ್ನ ಬೇಕು. ಈ ಸಂಭ್ರಮ ವರುಷ
೧೪ ದಲ್ಲಿ ಎಲ್ಲರು ನಿಮ್ಮ ನಿಮ್ಮ ಸ್ವಾಸ್ತ್ಯಗಳಿಗೆ ತಿರುಗ ಬೇಕು. ಮ
ತ್ತು ನೆಕೆಯವನಿಗೆ ಏನಾದರೂ ಕ್ರಯಕ್ಕೆ ಮಾರಿದ್ದರೆ, ಇಲ್ಲವೆ
ನೆಕೆಯವನಿಂದ ತಕ್ಕೊಂಡಿದ್ದರೆ, ಒಬ್ಬರನ್ನೊಬ್ಬರು ಉಪದ್ರ

೧೫ ಪಡಿಸ ಬೇಕಿರಿ; ಸಂಭ್ರಮ ವರುಷದ ಮೇಲೆ ವರುಷಗಳ ಲೆಕ್ಕದ
ಪ್ರಕಾರ, ನಿನ್ನ ನೆಲೆಯವನಿಗೆ ಕ್ರಯ ಕೊಡಬೇಕು; ಹುಟ್ಟುವಳ್ಳಿ
ವರುಷಗಳ ಲೆಕ್ಕದ ಪ್ರಕಾರ, ಅವನು ನಿನಗೆ ಮಾರಬೇಕು.
೧೬ ವರುಷಗಳು ಹೆಚ್ಚಿರುವ ಮೇರೆಗೆ ಕ್ರಯವನ್ನು ಹೆಚ್ಚು ಮಾಡ
ಬೇಕು; ವರುಷಗಳು ಕಡಿಮೆ ಇರುವ ಮೇರೆಗೆ ಕ್ರಯವನ್ನು ಕಡಿ
ಮೆ ಮಾಡಬೇಕು; ಯಾಕಂದರೆ ಹುಟ್ಟುವಳ್ಳಿಯ ಲೆಕ್ಕವನ್ನು
ಅವನು ನಿನಗೆ ಮಾರುತ್ತಾನೆ.
೧೭ ಒಬ್ಬರನ್ನೊಬ್ಬರು ಉಪದ್ರ ಪಡಿಸಬೇಡಿರಿ; ನಿನ್ನ ದೇವ
ರಿಗೆ ಭಯ ಪಡಬೇಕು; ಯಾಕಂದರೆ; ನಿಮ್ಮ ದೇವರಾಗಿರುವ ಕ
೧೮ ರ್ತನು ನಾನೇ. ಹಾಗೆ ನನ್ನ ನೇಮಗಳನ್ನು ಮಾಡಿ, ನನ್ನ ನ್ಯಾ
ಯಗಳನ್ನು ಕೈಕೊಂಡು, ಮಾಡಬೇಕು; ಆಗ ದೇಶದಲ್ಲಿ ಭ
೧೯ ದ್ರವಾಗಿ ವಾಸವಾಗಿರುವಿರಿ. ಮತ್ತು ದೇಶವು ಅದರ ಫಲವನ್ನು
ಕೊಡುವದು; ನೀವು ಉಂಡು ತೃಪ್ತಿಯಾಗುವಿರಿ; ಭದ್ರವಾಗಿ ಅ
ದರಲ್ಲಿ ವಾಸ ಮಾಡುವಿರಿ.
೨೦ ಇದಲ್ಲದೆ ಏಳನೇ ವರುಷದಲ್ಲಿ—ಇಗೋ, ನಾವು ಬಿತ್ತುವದಿ
ಲ್ಲ, ನಮ್ಮ ಹುಟ್ಟುವಳ್ಳಿಯನ್ನು ಕೂಡಿಸುವದಿಲ್ಲ, ಹಾಗಾದರೆ, ಏ
೨೧ ನು ಉಣ್ಣುವೆವು? ಅಂದರೆ, ನಾನು ಆರನೇ ವರುಷದಲ್ಲಿ, ಅದು
ಮೂರು ವರುಷಗಳಿಗೆ ಹುಟ್ಟುವಳ್ಳಿ ಉಂಟು ಮಾಡುವ ಹಾಗೆ,
೨೨ ನನ್ನ ಆಶೀರ್ವಾದವನ್ನು ಆಜ್ಞಾಪಿಸುವೆನು. ಮತ್ತು ಎಂಟನೇ
ವರುಷದಲ್ಲಿ ನಿವು ಬೀಜ ಹಾಕಿದರೆ, ಒಂಭತ್ತನೇ ವರುಷದ
ಪರ್ಯಂತರ ಹಳೇ ಹುಟ್ಟುವಳ್ಳಿಯದನ್ನು ಉಣ್ಣುವಿರಿ; ಇದರ
ಹುಟ್ಟುವಳ್ಳಿ ಬರುವ ತನಕ, ಹಳೇದನ್ನು ಉಣ್ಣುವಿರಿ.
೨೩ ಇದಲ್ಲದೆ ಭೂಮಿಯನ್ನು ಶುದ್ಧ ಕ್ರಯಕ್ಕೆ ಮಾರ ಬೇಡ;
ಯಾಕಂದರೆ ಭೂಮಿ ನನ್ನದೇ; ನನ್ನ ಬಳಿಯಲ್ಲಿ ನೀವು ಅ
೨೪ ನ್ಯರೂ ಪರವಾಸಿಗಳಾಗಿದ್ದೀರಿ. ಹೀಗಿರುವದರಿಂದ ನಿಮ್ಮು
ದೇಶದ ಸ್ವಾಸ್ತ್ಯದಲ್ಲೆಲ್ಲಾ ಭೂಮಿಗೆ ವಿಮೋಚನೆಯನ್ನು ಕೊ
೨೫ ಡಬೇಕು. ನಿನ್ನ ಸಹೋದರನು ಬಡವನಾಗಿ, ನಿನ್ನ ಸ್ವಾಸ್ತ್ಯ
ದಲ್ಲಿ ಏನಾದರೂ ಮಾರಿದ ಮೇಲೆ, ಅವನಿಗೆ ನೆಂಟನಾಗಿರುವ ವಿ
ಮೋಚಕನು ಬಂದರೆ, ಸಹೋದರನು ಮಾಡಿದ್ದನ್ನು ಅವನು ವಿ
೨೬ ಮೋಚಿಸ ಬಹುದು. ಮತ್ತು ವಿಮೋಚಕನಿಲ್ಲದ ಒಬ್ಬನಿಗೆ ಸಾ
೨೭ ಕಾದಷ್ಟು ಸ್ಥಿತಿ ಉಂಟಾಗಿ, ವಿಮೋಚಿಸುವಷ್ಟು ಶಕ್ತಿಕಾದರೆ, ಅವ
ನು ಮಾರಿದ ವರುಷಗಳನ್ನು ಎಣಿಸಿ, ಯಾರಿಗೆ ಮಾರಿದನೋ,
ಅವನಿಗೆ ಮಿಕ್ಕಾದದ್ದನ್ನು ಕೊಟ್ಟು, ತನ್ನ ಸ್ವಾಸ್ತ್ಯಕ್ಕೆ ತಿರುಗ
೨೮ ಬಹುದು. ಆದರೆ ತಿರಿಗಿ ಕೊಡುವದಕ್ಕೆ ಅವನಿಗೆ ಸಾಲದೆ ಹೋ
ದರೆ, ಅವನು ಮಾರಿದ್ದು ಸಂಭ್ರಮ ವರುಷದ ಪರ್ಯಂತರ ತ
ಕ್ಕೊಂತವನ ಕೈಯಲ್ಲಿ ಇರಬೇಕು; ಸಂಭ್ರಮ ವರುಷದಲ್ಲಿ
ಅದು ಬಿಡುಗಡೆಯಾಗುವದು; ಅವನು ಸ್ವಾಸ್ತ್ಯದಲ್ಲಿ ತಿರಿಗಿ ಸೇ
೨೯ ರಬೇಕು.
ಇದಲ್ಲದೆ ಒಬ್ಬನು ಗೋಡೆಯುಳ್ಳ ಪಟ್ಟಣದಲ್ಲಿ ನಿವಾಸದ ಮ
ನೆಯನ್ನು ಮಾರಿದರೆ, ಮಾರಿದ ವರುಷದ ಅಂತ್ಯದ ಪರ್ಯಂ
ತರ ಅದರ ವಿಮೋಚನೆ ಆಗ ಬಹುದು; ಒಂದು ಪೂರ್ಣ ವ
೩೦ ರುಷದ ವರೆಗೂ ಅದರ ವಿಮೋಚನೆ ಆಗ ಬಹುದು. ಆದರೆ
ಪೂರ್ಣ ವರುಷವು ತುಂಬುವ ಪರ್ಯಂತರ ಅದು ವಿಮೋಚಿ
ಸಲ್ಪಡದಿದ್ದರೆ, ಆ ಗೋಡೆಯುಳ್ಳ ಪಟ್ಟಣದಲ್ಲಿರುವ ಮನೆ, ಸಂಭ್ರ
ಮ ವರುಷದಲ್ಲಿ ಬಿಡುಗಡೆಯಾಗದೆ, ತಕ್ಕೊಂಡವನಿಗೆ ಅವನ ತ
೩೧ ಲಾಂತರಗಳಿಗೂ ಸ್ಥಿರವಾಗಿ ಉಂಟಾಗ ಬೇಕು. ಆದರೆ ಸುತ್ತ
ಲಾಗಿ ಗೋಡೆ ಇಲ್ಲದ ಊರುಗಳಲ್ಲಿರುವ ಮನೆಗಳು ನೇತ
ಭೂಮಿಯ ಸಂಗತಿ ಎಣಿಸಲ್ಪತ ಬೇಕು; ಅವುಗಳಿಗೆ ವಿಮೋಚ
ನೆ ಇರಬೇಕು; ಅವು ಸಂಭ್ರಮ ವರುಷದಲ್ಲಿ ಬಿಡುಗಡೆಯಾಗ ಬೇ
೩೨ ಕು. ಇದಲ್ಲದೆ ಲೇವ್ಯರ ಪಟ್ಟಣಗಳ ವಿಷಯವಾಗಿಯೂ, ಅವರ
ಸ್ವಾಸ್ತ್ಯದ ಪಟ್ಟಣಗಳ ಮನೆಗಳ ವಿಷಯವಾಗಿಯೂ, ಲೇವ್ಯರಿಗೆ
೩೩ ನಿತ್ಯವಾದ ವಿಮೋಚನೆ ಇರ ಬೇಕು. ಮತ್ತು ಲೇವ್ಯರಿಂದ ಏ
ನಾದರೂ ತಕ್ಕೊಂಡ ಪಕ್ಷದಲ್ಲಿ, ತಕ್ಕೊಂಡ ಮನೆಯೂ, ಸ್ವಾ
ಸ್ತ್ಯದ ಪಟ್ಟಣವೂ, ಸಂಭ್ರಮದ ವರುಷದಲ್ಲಿ ಬಿಡುಗಡೆಯಾಗ ಬೇ
ಕು; ಯಾಕಂದರೆ ಲೇವ್ಯರ ಪಟ್ಟಣಗಳ ಮನೆಗಳು ಇಸ್ರಯೇಲ್ ಮ
ಕ್ಕಳ ಮಧ್ಯದಲ್ಲಿ ಅವರ ಸ್ವಾಸ್ತ್ಯವಾಗಿದೆ. ಅವರ ಪಟ್ಟಣದ ಅ
೩೪ ಗ್ರಹಾರದ ಹೊಲಗಳನ್ನು ಸಹ ಮಾರ ಬಾರದು; ಯಾಕಂದರೆ
ಅದು ಅವರಿಗೆ ನಿತ್ಯವಾದ ಸ್ವಾಸ್ತ್ಯವೇ.
೩೫ ಮತ್ತು ನಿನ್ನ ಸಹೋದರನು ಬಡವನಾಗಿ, ಅವನ ಸಂಪತ್ತು
ನಿನ್ನ ಬಳಿಯಲ್ಲಿ ಕಡಿಮೆಯಾಗಿ ಹೋದರೆ, ಅವನು ಅನ್ಯನಾಗಿ
ಯೂ ಪರವಾಸಿಯಾಗಿಯೂ ಇದ್ದರೂ, ನಿನ್ನ ಬಳಿಯಲ್ಲಿ ಬದು
೩೬ ಕುವ ಹಾಗೆ, ಅವನಿಗೆ ಸಹಾಯ ಮಾಡ ಬೇಕು. ಅವನಿಂದ
ಬಡ್ಡಿಯನ್ನೂ ತಲೆವಾಸಿಯನ್ನೂ ತಕ್ಕೊಳ್ಳ ಬೇಡ; ನಿನ್ನ ಸ
ಹೋದರನು ನಿನ್ನ ಬಳಿಯಲ್ಲಿ ಬದುಕುವ ಹಾಗೆ, ನಿನ್ನ ದೇವ
೩೭ ರಿಗೆ ಭಯ ಪಡ ಬೇಕು. ಅವನಿಗೆ ನಿನ್ನ ಹಣವನ್ನು ಬಡ್ಡಿಗೆ
ಕೊಡ ಬೇಡ; ನಿನ್ನ ಆಹಾರವನ್ನು ತಲೆವಾಸಿಗೆ ಕೊಡ ಬೇಡ.
೩೮ ಕಾರ್ಣಾ ದೇಶವನ್ನು ನಿನಗೆ ಕೊಡುವ ಹಾಗೆಯೂ, ನಿನಗೆ ದೇ
ವರಾಗಿರುವ ಹಾಗೆಯೂ, ಇಗುತ್ತ ದೇಶದೊಳಗಿಂದ ನಿಮ್ಮನ್ನು
ಹೊರಗೆ ಬರ ಮಾಡಿದ ನಿಮ್ಮ ಕರ್ತನಾಗಿರುವ ದೇವರು ನಾನೇ.
೩೯ ಇದಲ್ಲದೆ ನಿನ್ನ ಸಹೋದರನು ನಿನ್ನ ಬಳಿಯಲ್ಲಿ ಬಡವನಾಗಿ
ನಿನಗೆ ಮಾರಲ್ಪಟ್ಟಿದೆ, ದಾಸನ ಕೆಲಸವನ್ನು ಅವನಿಂದ ಮಾಡಿಸಿ
೪೦ ಕೊಳ್ಳ ಬೇಡ; ಕೂಲಿಯವನಾಗಿಯೂ ಪರವಾಸಿಯಾಗಿಯೂ
ಅವನು ನಿನ್ನ ಬಳಿಯಲ್ಲಿ ಇರ ಬೇಕು; ಸಂಭ್ರಮ ವರುಷದ ಪ
೪೧ ರ್ಯಂತರ ನಿನ್ನ ಬಳಿಯಲ್ಲಿ ಸೇವೆ ಮಾಡ ಬೇಕು. ಆಗ ಅವ
ನು ತನ್ನ ಮಕ್ಕಳ ಸಂಗತ ನಿನ್ನನ್ನು ಬಿಟ್ಟು ಹೋಗಿ, ತನ್ನ
ಗೋತ್ರದ ಬಳಿಗೂ ತನ್ನ ಪಿತೃಗಳ ಸ್ವಾಸ್ತ್ಯದ ಬಳಿಗೂ ತಿರಿ
೪೨ ಗಿ ಹೋಗ ಬಹುದು. ಅವರು ನಾನೇ ಇಗುತ್ತ ದೇಶದೊಳಗಿಂದ
ಹೊರಗೆ ಬರ ಮಾಡಿದ ನನ್ನ ದಾಸರಾಗಿದ್ದಾರೆ; ಅವರನ್ನು ದಾ
೪೩ ಸರ ಹಾಗೆ ಕ್ರಯಕ್ಕೆ ಮಾರ ಕೂಡದು. ಕಠಿಣವಾಗಿ ಅವನ
ಮೇಲೆ ದೊರೆತನ ಮಾಡ ಬೇಡ; ನಿನ್ನ ದೇವರಿಗೆ ಭಯ ಪಡ
೪೪ ಬೇಕು. ನಿನಗಿರ ತಕ್ಕ ದಾಸ ದಾಸಿಯರು ಯಾಕಂದರೆ—ನಿಮ್ಮು
ಸುತ್ತಲಾಗಿರುವ ಜನಾಂಗಗಳೊಳಗಿಂದಲೇ ದಾಸ ದಾಸಿಯರನ್ನು
೪೫ ತಕ್ಕೊಳ್ಳ ಬಹುದು. ಮತ್ತು ಅನ್ಯರಾಗಿ ನಿಮ್ಮ ಬಳಿಯಲ್ಲಿರು
ವ ಪರವಾಸಿಗಳೊಳಗಿಂದಲೂ, ನಿಮ್ಮ ಬಳಿಯಲ್ಲಿರುವಂಥ, ನಿ
ಮ್ಮ ದೇಶದಲ್ಲಿ ಅವರಿಗೆ ಹುಟ್ಟಿದಂಥ ಅವರ ಗೋತ್ರದಿಂದಲೂ
ತಕ್ಕೊಳ್ಳ ಬಹುದು; ಅವರು ನಿಮಗೆ ಸ್ವಾಸ್ತ್ಯವಾಗಿರ ಬಹುದು.
೪೬ ಅವರನ್ನು ನಿಮ್ಮ ತರುವಾಯ ಹುಟ್ಟುವ ನಿಮ್ಮ ಮಕ್ಕಳಿಗೆ ಸ್ವಾ
ಸ್ತ್ಯವಾಗಿ ಹೊಂದುವ ಬಾಧ್ಯತೆಯಾಗಿ ಕೊಟ್ಟು ಬಿಡ ಬಹುದು;
ಅವರು ನಿತ್ಯವಾಗಿ ನಿಮಗೆ ದಾಸರಾಗಿರ ಬಹುದು; ಆದರೆ ಇಸ್ರ
ಯೇಲ್ ಮಕ್ಕಳಾದ ನಿಮ್ಮ ಸಹೋದರರಲ್ಲಿ ಒಬ್ಬರ ಮೇಲೊ
ಬ್ಬರು ಕಠಿಣವಾದ ದೊರೆತನವನ್ನು ಮಾಡ ಬೇಡಿರಿ.





೪೭ ಮತ್ತು ನಿನ್ನ ಬಳಿಯಲ್ಲಿರುವ ಅನ್ಯನ, ಪರವಾಸಿಯ ಸಂಪ
ತ್ತು ಹೆಚ್ಚಲಾಗಿ, ನಿನ್ನ ಸಹೋದರನು ಅವನ ಬಳಿಯಲ್ಲಿ ಬಡ
ವನಾಗಿ, ನಿನ್ನ ಬಳಿಯಲ್ಲಿರುವ ಅನ್ಯನಾದ ಪರವಾಸಿಗಾದರೂ,
ಅನ್ಯನ ಗೋತ್ರದಲ್ಲಿ ಹುಟ್ಟಿದವನಿಗಾದರೂ ತನ್ನನ್ನು ಮಾರಿ
೪೮ ಕೊಂಡರೆ, ಅವನು ತನ್ನನ್ನು ಮಾರಿ ಕೊಂಡ ಮೇರೆ, ಅವನಿಗೆ
ವಿಮೋಚನೆ ಆಗ ಬಹುದು; ಅವನ ಸಹೋದರರಲ್ಲಿ ಒಬ್ಬನು
೪೯ ಅವನನ್ನು ವಿಮೋಚಿಸ ಬಹುದು. ಅವನ ಚಿಕ್ಕಪ್ಪನಾಗಲಿ,
ಚಿಕ್ಕಪ್ಪನ ಮಗನಾಗಲಿ, ಅವನ ಗೋತ್ರದಲ್ಲಿ ಸಮೀಪವಾಗಿರು
ವ ನೆಂಟರಾಗಲಿ, ಅವನನ್ನು ವಿಮೋಚಿಸ ಬಹುದು; ಇಲ್ಲವೆ ಸಂ
೫೦ ಪತ್ತು ಹೆಚ್ಚಿದರೆ, ತಾನೇ ವಿಮೋಚಿಸಿ ಕೊಳ್ಳಲಿ. ಅವನು ತನ್ನ
ನ್ನು ಕೊಂಡು ಕೊಂಡವನ ಸಂಗತ ಮಾರಿದ ವರುಷ ಮೊದಲು
ಗೊಂಡು ಸಂಭ್ರಮ ವರುಷದ ಪರ್ಯಂತರ ಲೆಕ್ಕ ಮಾಡ ಬೇ
ಕು; ಅವನ ವಿಕ್ರಯದ ಹಣ ವರುಷ ಲೆಕ್ಕದ ಮೇರೆಗೆ ಇರ ಬೇ
ಕು; ಕೂಲಿ ಲೆಕ್ಕನ ಸಮಯದ ಹಾಗೆ ಅವನ ಬಳಿಯಲ್ಲಿರ ಬೇಕು.
೫೧ ಇನ್ನು ಬಹಳ ವರುಷವಿದ್ದರೆ, ಅವುಗಳ ಪ್ರಕಾರ ತನ್ನ ವಿಕ್ರಯ
೫೨ ದ ಹಣದಲ್ಲಿ ವಿಮೋಚನೆಯನ್ನು ಸಲ್ಲಿಸ ಬೇಕು. ಸಂಭ್ರಮ
ವರುಷದ ಪರ್ಯಂತರ ಕೆಲವು ವರುಷಗಳು ಮಾತ್ರ ಮಿಕ್ಕರೆ,
ಅವನಿಗೆ ಎಣಿಸ ಬೇಕು; ಅವನ ವರುಷಗಳ ಮೇರೆಗೆ ತನ್ನ ವಿ
೫೩ ಮೋಚನೆಯನ್ನು ಸಲ್ಲಿಸ ಬೇಕು. ಕೂಲಿಯವನ ಹಾಗೆ ವರು
ಷ ವರುಷ ಅವನ ಬಳಿಯಲ್ಲಿರ ಬೇಕು; ಆದರೆ ಅವನು ನಿನ್ನ
ಸನ್ನಿಧಿಯಲ್ಲಿ ಅವನ ಮೇಲೆ ಕಠಿಣವಾದ ದೊರೆತನ ಮಾಡ ಬಾ
೫೪ ರದು. ಅವನು ಈ ಪ್ರಕಾರ ವಿಮೋಚಿಸಲ್ಪಡದಿದ್ದರೆ, ಸಂಭ್ರಮ
ವರುಷದಲ್ಲಿ ತನ್ನ ಮಕ್ಕಳ ಸಹಿತವಾಗಿ ಬಿಡುಗಡೆಯಾಗ ಬೇಕು.
೫೫ ಯಾಕಂದರೆ ಇಸ್ರಯೇಲ್ ಮಕ್ಕಳು ನನ್ನ ದಾಸರೇ, ಇಗುತ್ತ
ದೇಶದೊಳಗಿಂದ ನಾನು ಹೊರಗೆ ಬರ ಮಾಡಿದ ನನ್ನ ದಾಸರೇ;
ಕರ್ತನಾದ ನಾನೇ ನಿಮ್ಮ ದೇವರಾಗಿದ್ದೇನೆ.

## ೨೬. ಸಂಧಿ.

೧ ನಿಮಗೆ ಬೊಂಬೆಗಳನ್ನು ಮಾಡಿಸಿ ಕೊಳ್ಳ ಬೇಡಿರಿ; ವಿಗ್ರಹವ
ನ್ನೂ ಸ್ತಂಭವನ್ನೂ ನಿಮಗೆ ನಿಲ್ಲಿಸಿ ಕೊಳ್ಳ ಬೇಡಿರಿ; ರೂಪದ
ಕಲ್ಲನ್ನು ನಿಮ್ಮ ದೇಶದಲ್ಲಿ ಇಟ್ಟು ಕೊಂಡು, ಅದಕ್ಕೆ ಅಡ್ಡ ಬೀಳ
ಬೇಡಿರಿ; ಯಾಕಂದರೆ ನಾನೇ ನಿಮ್ಮ ದೇವರಾಗಿರುವ ಕರ್ತನು.
೨ ನನ್ನ ಸಬ್ಬತುಗಳನ್ನು ಕಾಪಾಡ ಬೇಕು; ನನ್ನ ಪರಿಶುದ್ಧ ಸ್ಥ
ಳಕ್ಕೆ ಭಯ ಪಡ ಬೇಕು, ನಾನೇ ಕರ್ತನು.
೩ ನೀವು ನನ್ನ ನೇಮಗಳಲ್ಲಿ ನಡೆದು ಕೊಂಡು, ನನ್ನ ನ್ಯಾಯ
೪ ಗಳನ್ನು ಕೈಕೊಂಡು ಅವುಗಳನ್ನು ಮಾಡಿದರೆ, ನಿಮ್ಮ ಮಳೆ
ಯನ್ನು ತಕ್ಕ ಕಾಲದಲ್ಲಿ ಕಳುಹಿಸುವೆನು; ಭೂಮಿಯು ಅದರ ಬೆ
ಳೆಯನ್ನು ಕೊಡುವದು, ಭೂಮಿಯ ಮರಗಳು ಅವುಗಳ ಫಲವ
೫ ನ್ನು ಕೊಡುವವು. ಮತ್ತು ದ್ರಾಕ್ಷೆ ಕೂಡಿಸುವ ಕಾಲದ ಪರ್ಯಂತ
ರ ಕಣ ತುಳಿಯುವ ಕಾಲವೂ, ಬೀಜ ಹಾಕುವ ಕಾಲದ ಪರ್ಯಂ
ತರ ದ್ರಾಕ್ಷೆ ಕೂಡಿಸುವ ಕಾಲವೂ, ನಿಮಗಿರುವದು. ನೀವು ನಿಮ್ಮ
ಕೊಟ್ಟಿಯನ್ನು ತಿಂದು, ತೃಪ್ತಿ ಹೊಂದಿ, ಭದ್ರವಾಗಿ ನಿಮ್ಮ ದೇ
೬ ಶದಲ್ಲಿ ವಾಸ ಮಾಡುವಿರಿ. ನಾನು ದೇಶದಲ್ಲಿ ಸಮಾಧಾನವನ್ನು
ಕೊಡುವೆನು; ಯಾರ ಭಯವಿಲ್ಲದೆ ಮಲಗಿ ಕೊಳ್ಳುವಿರಿ; ದುಷ್ಟ
ಮೃಗಗಳನ್ನು ದೇಶದಲ್ಲಿ ಇಲ್ಲದ ಹಾಗೆ ಮಾಡುವೆನು; ಕತ್ತಿ ನಿ
೭ ಮ್ಮ ದೇಶದಲ್ಲಿ ಹಾರು ಹೋಗದೆ ಇರುವದು. ನೀವು ನಿಮ್ಮ
ಶತ್ರುಗಳನ್ನು ಹಿಂದಟ್ಟುವಾಗ, ಅವರು ಕತ್ತಿಯಿಂದ ನಿಮ್ಮ ಮುಂ
೮ ದೆ ಬೀಳುವರು. ನಿಮ್ಮಲ್ಲಿ ಐದು ಮಂದಿ ನೂರು ಮಂದಿಯನ್ನು
ಓಡಿಸುವರು; ನೂರು ಮಂದಿ ಹತ್ತು ಸಾವಿರ ಮಂದಿಯನ್ನು ಓಡಿ
ಸುವರು; ನಿಮ್ಮ ಶತ್ರುಗಳು ನಿಮ್ಮ ಮುಂದೆ ಕತ್ತಿಯಿಂದ ಬೀಳು
೯ ವರು. ನಾನು ನಿಮ್ಮ ಜಳಿಗೆ ತಿರುಗಿ ಕೊಂಡು, ನಿಮ್ಮನ್ನು ಅಭಿ
ವೃದ್ಧಿ ಮಾಡಿ, ನಿಮ್ಮನ್ನು ಹೆಚ್ಚಿಸಿ, ನಿಮ್ಮ ಸಂಗತ ನನ್ನ ಒಡಂ
೧೦ ಬಡಿಕೆಯನ್ನು ಸ್ಥಾಪಿಸುವೆನು. ನೀವು ಹಳೇ ಧಾನ್ಯವನ್ನು ಉಂ
೧೧ ಡು, ಹೊಸದು ಬಂದದರಿಂದ ಹಳೇದನ್ನು ತೆಗೆದು ಹಾಕುವಿರಿ. ಇದ
ಲ್ಲದೆ ನಾನು ನನ್ನ ನಿವಾಸವನ್ನು ನಿಮ್ಮ ಮಧ್ಯದಲ್ಲಿ ಮಾಡುವೆ
೧೨ ನು; ನನ್ನ ಪ್ರಾಣವು ನಿಮ್ಮನ್ನು ಅಸಂಹಿಸದೆ ಇರುವದು. ನಾನು
ನಿಮ್ಮ ಮಧ್ಯದಲ್ಲಿ ನಡೆದು ಕೊಂಡು, ನಿವುಗೆ ದೇವರಾಗಿರುವೆನು;
೧೩ ನೀವು ನನಗೆ ಜನರಾಗಿರುವಿರಿ. ಐಗುತ್ತ ದೇಶದೊಳಗಿಂದ, ಅವರು
ಗೆ ದಾಸರಾಗಿರದ ಹಾಗೆ, ನಿಮ್ಮನ್ನು ಹೊರಗೆ ಬರ ಮಾಡಿ,
ನಿಮ್ಮ ನೊಗದ ಕಟ್ಟನ್ನು ಮುರಿದು, ನಿಮ್ಮನ್ನು ನೆಟ್ಟಗೆ ನಡಿಯ
ಮಾಡಿದ ನಿಮ್ಮ ದೇವರಾದ ಕರ್ತನು ನಾನೇ.
೧೪ ಆದರೆ ನೀವು ನನ್ನ ಮಾತನ್ನು ಕೇಳದೆ, ಈ ಆಜ್ಞೆಗಳನ್ನೆಲ್ಲಾ
೧೫ ಮಾಡದೆ ಹೋದರೆ, ನನ್ನ ನೇಮಗಳಲ್ಲಿ ಮನನ್ನಿಸದೆ, ನನ್ನ ನ್ಯಾ
ಯಗಳಲ್ಲಿ ನಿಮ್ಮ ಪ್ರಾಣ ಅಸಹ್ಯ ಪಟ್ಟರೆ, ನೀವು ನನ್ನ ಒಡಂ
ಬಡಿಕೆಯನ್ನು ಮೀರಿ, ನನ್ನ ಎಲ್ಲಾ ಆಜ್ಞೆಗಳನ್ನು ಮಾಡದೆ
೧೬ ಹೋದರೆ, ನಾನು ಸಹ ಇದನ್ನು ನಿಮಗೆ ಮಾಡುವೆನು—ನಿಮ್ಮ
ಮೇಲೆ ತಲ್ಲಣವನ್ನೂ, ಕಣ್ಣುಗಳನ್ನು ಕ್ಷೀಣಿಸ ಮಾಡುವಂಥ,
ಪ್ರಾಣವನ್ನು ಕುಗ್ಗಿ ಹೋಗ ಮಾಡುವಂಥ, ಕ್ಷಯ ರೋಗವ
ನ್ನೂ, ಝಳ್ಳಿ ಜ್ವರವನ್ನೂ ಕಳುಹಿಸುವೆನು; ನೀವು ವ್ಯರ್ಥವಾಗಿ
ನಿಮ್ಮ ಬೀಜವನ್ನು ಬಿತ್ತುವಿರಿ; ಯಾಕಂದರೆ ನಿಮ್ಮ ಶತ್ರುಗಳು
೧೭ ಅದನ್ನು ತಿಂದು ಬಿಡುವರು. ನನ್ನ ಮುಖವನ್ನು ನಿಮಗೆ ವಿರೋ
ಧವಾಗಿ ಇಡುವೆನು; ನಿಮ್ಮ ಶತ್ರುಗಳಿಂದ ಬಡಿಯಲ್ಪಡುವಿರಿ; ನಿಮ್ಮ
ಹಗೆಯವರು ನಿಮ್ಮ ಮೇಲೆ ದೊರೆತನ ಮಾಡುವರು; ಓಡಿಸುವವ
ನಿಲ್ಲದೆ ಓಡಿ ಹೋಗುವಿರಿ.
೧೮ ಹ್ಯಾಗೂ ನನ್ನ ಮಾತನ್ನು ಕೇಳದೆ ಹೋದರೆ, ನಾನು ನಿಮ್ಮ
೧೯ ಪಾಪಗಳ ನಿಮಿತ್ತ ನಿಮ್ಮನ್ನು ಇನ್ನು ಏಳ್ಪಟ್ಟಾಗಿ ಶಿಕ್ಷಿಸಿ, ನಿಮ್ಮ
ಬಲದ ಗರ್ವವನ್ನು ಮುರಿದು ಹಾಕಿ, ನಿಮ್ಮ ಆಕಾಶವನ್ನು ಕಬ್ಬಿ
ಣದ ಹಾಗೆಯೂ, ನಿಮ್ಮ ಭೂಮಿಯನ್ನು ತಾಮ್ರದ ಹಾಗೆಯೂ,
೨೦ ಮಾಡುವೆನು. ಆಗ ನಿಮ್ಮ ಶಕ್ತಿ ವ್ಯರ್ಥವಾಗಿ ಮುಗಿದು ಹೋ
ಗುವದು; ಯಾಕಂದರೆ ನಿಮ್ಮ ಭೂಮಿ ತನ್ನ ಪೈಳೆಯನ್ನು ಕೊ
ಡದೆ ಇರುವದು; ಭೂಮಿಯ ಮರಗಳು ತಮ್ಮ ಫಲವನ್ನು ಕೊಡದೆ
ಇರುವವು.
೨೧ ಮತ್ತು ನನ್ನ ಮಾತನ್ನು ಕೇಳಲೊಲ್ಲದೆ, ನನಗೆ ವಿರೋಧವಾ
ಗಿ ನಡೆದರೆ, ನಾನು ನಿಮ್ಮ ಪಾಪಗಳ ಪ್ರಕಾರ ನಿಮ್ಮನ್ನು ಇನ್ನು
೨೨ ಏಳ್ಪಟ್ಟಾಗಿ ಹೊಡೆಯುವೆನು. ಮತ್ತು ಕಾಡ ಮೃಗಗಳನ್ನು ನಿ
ಮ್ಮ ಮೇಲೆ ಕಳುಹಿಸುವೆನು; ಅವು ನಿಮ್ಮನ್ನು ಮಕ್ಕಳಿಲ್ಲದವರಾಗ
ಮಾಡಿ, ನಿಮ್ಮ ದನಗಳನ್ನು ತಿಂದು ಬಿಡುವವು; ಮತ್ತು ನಿಮ್ಮನ್ನು
ಸ್ವಲ್ಪ ಮಂದಿಯಾಗ ಮಾಡುವವು; ನಿಮ್ಮ ದಾರಿಗಳು ಸಹ ಅಡ
ವಿಯಾಗುವವು.
೨೩ ಇವುಗಳಿಂದ ನೀವು ನನಗೆ ಶಿಕ್ಷಿತರಾಗದೆ, ನನಗೆ ವಿರೋಧವಾ
೨೪ ಗಿ ನಡೆದರೆ, ನಾನು ಸಹ ನಿಮಗೆ ವಿರೋಧವಾಗಿ ನಡೆದು, ನಾನು

ಸಹ ನಿಮ್ಮ ಪಾಪಗಳ ನಿಮಿತ್ತ ನಿಮ್ಮನ್ನು ಬಿಳಿಚ್ಚಾಗಿ ಹೂಡೆ
೨೫ ಯುವೆನು. ಮತ್ತು ಒಡಂಬಡಿಕೆಯ ನಿಮಿತ್ತ ಮುಯ್ಯಿಗೆ ಮು
ಯ್ಯಿ ತೀರಿಸುವ ಕತ್ತಿಯನ್ನು ನಿಮ್ಮ ಮೇಲೆ ತರಿಸುವೆನು; ನೀವು
ನಿಮ್ಮ ಪಟ್ಟಣಗಳಿಗೆ ಕೂಡಿ ಬಂದಾಗ, ವ್ಯಾಧಿಯನ್ನು ನಿಮ್ಮೊಳಗೆ
೨೬ ಕಳಿಹಿಸುವೆನು; ನೀವು ಶತ್ರುಬಿನ ಕೈಗೆ ಒಪ್ಪಿಸಲ್ಪಡುವಿರಿ. ನಾನು
ನಿಮ್ಮ ಅನ್ನಾಧಾರವನ್ನು ಮುರಿದು ಹಾಕುವದರಿಂದ, ಹತ್ತು ಹೆಂ
ಗಸರು ನಿಮ್ಮ ರೊಟ್ಟಿಯನ್ನು ಒಂದೇ ಬಲೆಯಲ್ಲಿ ಸುಟ್ಟು, ತೂ
ಕದ ಪ್ರಕಾರ ನಿಮಗೆ ರೊಟ್ಟಿಯನ್ನು ಕೊಡುವರು; ನೀವು ಉಣ್ಣಾ
ಲು, ನಿಮಗೆ ತೃಪ್ತಿಯಾಗುವದಿಲ್ಲ.
೨೭ ಹ್ಯಾಗೂ ನನ್ನ ಮಾತನ್ನು ಕೇಳದೆ, ನನಗೆ ವಿರೋಧವಾಗಿ
೨೮ ನಡೆದರೆ, ನಾನು ಉರಿಯಿಂದ ನಿಮಗೆ ವಿರೋಧವಾಗಿ ನಡೆದು,
ನಾನೇ ನಿಮ್ಮ ಪಾಪಗಳ ನಿಮಿತ್ತ ನಿಮ್ಮನ್ನು ಬಿಳಿಚ್ಚಾಗಿ ಶಿಕ್ಷಿಸುವೆ
೨೯ ನು. ನೀವು ನಿಮ್ಮ ಕುಮಾರರ ಮಾಂಸವನ್ನು ತಿನ್ನುವಿರಿ; ನಿಮ್ಮ
೩೦ ಕುಮಾರ್ತೆಗಳ ಮಾಂಸವನ್ನು ತಿನ್ನುವಿರಿ. ಇದಲ್ಲದೆ ನಾನು ನಿಮ್ಮ
ಪೀಠಗಳನ್ನು ಹಾಳು ಮಾತಿ, ನಿಮ್ಮ ಸೂರ್ಯ ಸ್ತಂಭಗಳನ್ನು
ಕಡಿದು ಹಾಕಿ, ನಿಮ್ಮ ಹೆಣಗಳನ್ನು ನಿಮ್ಮ ಮಣ್ಣು ದೇವರುಗ
ಳ ಹೆಣಗಳ ಮೇಲೆ ಹಾಕುವೆನು; ಮತ್ತು ನನ್ನ ಪ್ರಾಣವು ನಿಮ್ಮ
೩೧ ನ್ನು ಹೇಸುವದು. ಮತ್ತು ನಿಮ್ಮ ಪಟ್ಟಣಗಳನ್ನು ಕೆಡವಿ ಹಾಕಿ, ನಿ
ಮ್ಮ ಪರಿಶುದ್ಧ ಸ್ಥಳಗಳನ್ನು ಹಾಳು ಮಾಡಿ, ನಿಮ್ಮ ಸುವಾಸನೆಗ
೩೨ ಳನ್ನು ಮೂಸಿ ನೋಡದೆ ಇರುವೆನು. ನಾನು ನೇಶವನ್ನು ಹಾಳು
ಮಾಡುವೆನು; ಅದರಲ್ಲಿ ವಾಸವಾಗುವ ನಿಮ್ಮ ಶತ್ರುಗಳು ಅದಕ್ಕೆ
೩೩ ಆಶ್ಚರ್ಯ ಪಡುವರು. ಮತ್ತು ನಿಮ್ಮನ್ನು ಜನಾಂಗಗಳಲ್ಲಿ ಚದ
ರ ಮಾಡಿ, ನಿಮ್ಮ ಹಿಂದೆ ಕತ್ತಿಯನ್ನು ಬೀಸುವೆನು; ನಿಮ್ಮ ಭೂ
೩೪ ಮಿ ಹಾಳಾಗಿರುವದು; ನಿಮ್ಮ ಪಟ್ಟಣಗಳು ನಾಶನವಾಗಿರುವವು. ಆಗ
ಭೂಮಿ ಹಾಳಾಗಿರುವ ಎಲ್ಲಾ ದಿನಗಳಲ್ಲಿಯೂ, ನೀವು ನಿಮ್ಮ ಶ
ತ್ರುಗಳ ದೇಶದಲ್ಲಿ ಇರುವ ವರೆಗೂ ತನ್ನ ಸಬ್ಬತುಗಳನ್ನು ಅನು
೩೫ ಭವಿಸುವದು; ಆಗ ಭೂಮಿ ವಿಶ್ರಮಿಸಿ ಕೊಂಡು, ತನ್ನ ಸಬ್ಬತುಗ
ಳನ್ನು ಅನುಭವಿಸುವದು. ನೀವು ಅದರಲ್ಲಿ ವಾಸಿಸಿದ ಸಮಯದ
ಲ್ಲಿ ನಿಮ್ಮ ಸಬ್ಬತುಗಳಲ್ಲಿ ಅದು ಹೊಂದದ ವಿಶ್ರಾಂತಿಯನ್ನು ಹಾ
ಳಾಗಿರುವ ದಿವಸಗಳಲ್ಲೆಲ್ಲಾ ಹೊಂದುವದು.
೩೬ ಮತ್ತು ನಿಮ್ಮ ಉಳಿದವರ ಮೇಲೆ ಅವರ ಹೃದಯಗಳಲ್ಲಿ ಅ
ವರ ಶತ್ರುಗಳ ದೇಶದಲ್ಲಿ ಅಧೈರ್ಯವನ್ನು ಕೊಡುವೆನು; ಬಡಿ
ದಾಡುವ ಎಲೆಯ ಶಬ್ದವು ಅವರನ್ನು ಓಡಿಸುವದು; ಕತ್ತಿಗೆ ಓಡಿ
ಹೋದ ಹಾಗೆ, ಓಡಿ ಹೋಗುವರು; ಓಡಿಸುವವನಿಲ್ಲದೆ, ಬೀಳುವ
೩೭ ರು. ಓಡಿಸುವವನಿಲ್ಲದೆ, ಒಬ್ಬರ ಮೇಲೊಬ್ಬರು, ಕತ್ತಿಯ ಭಯ
ದಿಂದಾದ ಹಾಗೆ, ಬೀಳುವರು; ನಿಮ್ಮ ಶತ್ರುಗಳಿದುರಾಗಿ ನಿಂತು
೩೮ ಕೊಳ್ಳುವದು ನಿಮ್ಮಿಂದಲಾಗದು. ಜನಾಂಗಗಳೊಳಗೆ ನಾಶವಾಗು
೩೯ ವಿರಿ, ನಿಮ್ಮ ಶತ್ರುಗಳ ದೇಶವು ನಿಮ್ಮನ್ನು ತಿಂದು ಬಿಡುವದು. ನಿಮ್ಮ
ಲ್ಲಿ ಉಳಿದವರು ತಮ್ಮ ಅಕ್ರಮಗಳಿಂದ ನಿಮ್ಮ ಶತ್ರುಗಳ ದೇಶ
ದಲ್ಲಿ ಕ್ಷೀಣವಾಗುವರು; ಮತ್ತು ತಮ್ಮ ಪಿತೃಗಳ ಅಕ್ರಮಗಳಿಂ
೪೦ ದ ಅವರ ಸಂಗಡ ಕ್ಷೀಣವಾಗುವರು. ಆಗಲವರು ನನಗೆ ಮಾಡಿ
ದ ತಮ್ಮ ದುಷ್ಕೃತ್ಯದಲ್ಲಿರುವ ತಮ್ಮ ಅಕ್ರಮವನ್ನೂ, ತಮ್ಮ ಪಿ
ತೃಗಳ ಅಕ್ರಮವನ್ನೂ, ಮತ್ತು ತಾವು ನನಗೆ ವಿರೋಧವಾಗಿ
೪೧ ನಡೆದು ಕೊಂಡದ್ದನ್ನೂ, ನಾನು ಸಹಾ ಅವರಿಗೆ ವಿರೋಧವಾಗಿ ನ
ಡೆದು ಕೊಂಡು, ಅವರನ್ನು ತಮ್ಮ ಶತ್ರುಗಳ ದೇಶದಲ್ಲಿ ಬರ ಮಾ
ಡಿದ್ದನ್ನೂ, ಅಂಥೆ ಮಾಡಿದಕೆ; ಆಗಲೇ ಪರಿಚ್ಛೇದನೆ ಇಲ್ಲದ ಅವರ
ಹೃದಯವು ತಗ್ಗಿಸಲ್ಪಟ್ಟಿತೆ, ಆಗ ಅವರು ತಮ್ಮ ಅಕ್ರಮವನ್ನು
೪೨ ಅನುಭವಿಸಿದರೆ, ನಾನು ಯಾಕೋಬನಿಗೆ ಮಾಡಿದ ನನ್ನ ಒಡಂಬ
ಡಿಕೆಯನ್ನೂ, ಇಸಾಕನಿಗೆ ಮಾಡಿದ ನನ್ನ ಒಡಂಬಡಿಕೆಯನ್ನೂ
ಜ್ಞಾಪಕ ಮಾಡಿ ಕೊಂಡು, ಅಬ್ರಹಾಮನಿಗೆ ಮಾಡಿದ ನನ್ನ ಒಡಂ
ಬಡಿಕೆಯನ್ನು ಸಹ ಜ್ಞಾಪಕ ಮಾಡಿ ಕೊಂಡು, ದೇಶವನ್ನು ಜ್ಞಾಪ
ಕ ಮಾಡಿ ಕೊಳ್ಳುವೆನು.
೪೩ ಮತ್ತು ದೇಶವು ಅವರಿಂದ ಬಿಡಲ್ಪಟ್ಟು, ಅವರಿಲ್ಲದೆ ಹಾಳಾದ
ವೇಳೆಯಲ್ಲಿ ತನ್ನ ಸಬ್ಬತುಗಳನ್ನು ಅನುಭವಿಸುವದು; ಮತ್ತು
ಅವರು ತಮ್ಮ ಅಕ್ರಮವನ್ನು ಅನುಭವಿಸುವರು; ಅದು ಯಾತಕ್ಕೆ!
ಯಾಕಂದರೆ, ಅವರು ನನ್ನ ನ್ಯಾಯಗಳನ್ನು ಹೇಸಿ, ತಮ್ಮ
೪೪ ಪ್ರಾಣಗಳಲ್ಲಿ ನನ್ನ ನೇಮಗಳನ್ನು ಅಸಹಿಸಿದ್ದರಿಂದಲೇ. ಆ
ದಾಗ್ಯೂ ಅವರು ತಮ್ಮ ಶತ್ರುಗಳ ದೇಶದಲ್ಲಿರುವಾಗ, ಅವರನ್ನು
ಹೇಸದೆ, ಅವರನ್ನು ಅಸಂಹಿಸದೆ, ಅವರನ್ನು ಮುಗಿಸದೆ, ಅವರ
ಸಂಗಡ ಇರುವ ನನ್ನ ಒಡಂಬಡಿಕೆಯನ್ನು ಮುರಿಯದೆ ಇರುವೆ
ನು; ಯಾಕಂದರೆ ಅವರ ದೇವರಾಗಿರುವ ಕರ್ತನು ನಾನೇ.
೪೫ ನಾನು ಅವರಿಗೆ ದೇವರಾಗಿರುವ ಹಾಗೆ, ನಾನು ಜನಾಂಗಗಳ ಮುಂ
ದೆ ಐಗುಪ್ತ ದೇಶದಿಂದ ಹೊರಗೆ ಬರ ಮಾಡಿದ ಅವರ ಪಿತೃಗ
ಳ ಒಡಂಬಡಿಕೆಯನ್ನು ಅವರಿಗೋಸ್ಕರ ಜ್ಞಾಪಕ ಮಾಡಿ ಕೊಳ್ಳು
ವೆನು; ನಾನೇ ಕರ್ತನು.
೪೬ ಕರ್ತನು ಸೀನಾಯಿ ಬೆಟ್ಟದಲ್ಲಿ ಮೋಶೆಯ ಕೈಯಿಂದ ತ
ನಗೂ ಇಸ್ರಯೇಲ್ ಮಕ್ಕಳಿಗೂ ನಡುವೆಯಾಗಿ ಇಟ್ಟ ನೇಮಗ
ಳೂ, ನ್ಯಾಯಗಳೂ, ನ್ಯಾಯ ಪ್ರಮಾಣಗಳೂ ಇವೇ.

## ೨೭. ಸಂಧಿ

೧ ಇದಲ್ಲದೆ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೨ ಇಸ್ರಯೇಲ್ ಮಕ್ಕಳ ಸಂಗಡ ನೀನು ಮಾತಾಡಿ, ಅವರಿಗೆ ಹೇಳ
ಬೇಕಾದದ್ದೇನಂದರೆ—ಒಬ್ಬನು ತನ್ನ ಹರಿಕೆಯನ್ನು ಮಾಡಿ ಕೊಂ
ಡರೆ, ನೀನು ನೇಮಿಸಿದ ಕ್ರಯದ ಪ್ರಕಾರ ಜನರು ಕರ್ತನಿಗೆ ಇರ
3 ಬೇಕು. ನೀನು ನೇಮಿಸ ಬೇಕಾದ ಕ್ರಯವೇನಂದರೆ—ಇಪ್ಪತ್ತು
ವರುಷದವನು ಮೊದಲುಗೊಂಡು ಅರುವತ್ತು ವರುಷದವನ ಪ
ರ್ಯಂತರ ನೀನು ನೇಮಿಸುವ ಕ್ರಯವು, ಪರಿಶುದ್ಧ ಬೆಕೆಲಿನ
೪ ಮೇರೆಗೆ, ಐವತ್ತು ಬೆಳ್ಳಿ ಬೆಕೆಲುಗಳಾಗಿರ ಬೇಕು. ಹೆಣ್ಣಾದ
ರೆ, ನೀನು ನೇಮಿಸುವ ಕ್ರಯವು ಮೂವತ್ತು ಬೆಕೆಲುಗಳಾಗಿರ ಬೇ
ಕು. ಐದು ವರುಷದವನು ಮೊದಲುಗೊಂಡು ಇಪ್ಪತ್ತು ವರುಷದ
೫ ವನ ಪರ್ಯಂತರವಾದರೆ, ಗಂಡಸಿನ ಕ್ರಯವು ಇಪ್ಪತ್ತು ಬೆಕೆಲು
ಗಳೂ, ಹೆಂಗಸಿನ ಕ್ರಯವು ಹತ್ತು ಬೆಕೆಲುಗಳೂ, ಆಗಿರ ಬೇ
೬ ಕು. ಒಂದು ತಿಂಗಳಿನವನು ಮೊದಲುಗೊಂಡು ಐದು ವರುಷದವ
ನ ಪರ್ಯಂತರವಾಗಿದ್ದರೆ, ಗಂಡಸಿನ ಕ್ರಯವು ಐದು ಬೆಳ್ಳಿ ಬೆ
ಕೆಲುಗಳೂ, ಹೆಣ್ಣಿನ ಕ್ರಯವು ಮೂರು ಬೆಳ್ಳಿ ಬೆಕೆಲುಗಳೂ
೭ ಆಗಿರ ಬೇಕು. ಮತ್ತು ಅರುವತ್ತು ವರುಷವೂ ಅದಕ್ಕೆ ಹೆಚ್ಚಾದ
ಪ್ರಾಯವೂ ಉಳ್ಳ ಗಂಡಸಾಗಿದ್ದರೆ, ನಿನ್ನ ಕ್ರಯವು ಹದಿನೈ
ದು ಬೆಕೆಲುಗಳೂ, ಹೆಂಗಸಿಗೆ ಹತ್ತು ಬೆಕೆಲುಗಳೂ, ಆಗಿರ ಬೇ
೮ ಕು. ಅದರೆ ನಿನ್ನ ಕ್ರಯವನ್ನು ಕೊಡ ಕೂಡದ ಹಾಗೆ, ಅವನು
ಬಡವನಾಗಿದ್ದರೆ, ಅವನನ್ನು ಯಾಜಕನ ಮುಂದೆ ನಿಲ್ಲಿಸ ಬೇಕು;





ಯಾಜಕನು ಅವನಿಗೆ ಕ್ರಯವನ್ನು ನೇಮಿಸ ಬೇಕು; ಹರಿಕೆ
ಮಾಡಿದವನ ಸಂಪತ್ತಿಗೆ ಸರಿಯಾಗಿ ಯಾಜಕನು ಅವನಿಗೆ ಕ್ರಯ
ಮಾಡ ಬೇಕು.
೯ ಆದರೆ ಕರ್ತನಿಗೆ ಅರ್ಪಣೆಯಾಗಿ ತರುವ ಪಶುಗಳ ಜಾತಿ
ಯಲ್ಲಿ ಯಾವದಾಗಿದ್ದರೆ, ಅವುಗಳಲ್ಲಿ ಕರ್ತನಿಗೆ ಕೊಡುವಂಥಾ
೧೦ ದ್ದೆಲ್ಲಾ ಪರಿಶುದ್ಧವಾಗಿರ ಬೇಕು. ಅದನ್ನು ಒಳ್ಳೇದಕ್ಕೆ ಕೆಟ್ಟದ್ದ
ನಾಗಲಿ, ಕೆಟ್ಟದ್ದಕ್ಕೆ ಒಳ್ಳೇದನಾಗಲಿ, ಬದಲು ಮಾಡ ಬಾರ
ದು, ಮಾರ್ಪಡಿಸ ಬಾರದು; ಹ್ಯಾಗಾದರೂ ಒಂದು ಪಶುವಿಗೆ
ಮತ್ತೊಂದನ್ನು ಬದಲು ಮಾಡಿದರೆ, ಅದೂ ಅದರ ಬದಲೂ
೧೧ ಪರಿಶುದ್ಧವಾಗಿರ ಬೇಕು. ಅದು ಕರ್ತನಿಗೆ ಅರ್ಪಣೆಯಾಗಿ
ತಾರದ ಯಾವ ಅಶುದ್ಧ ಮೃಗವಾಗಿದ್ದರೆ, ಆ ಮೃಗವನ್ನು
೧೨ ಯಾಜಕನ ಮುಂದೆ ನಿಲ್ಲಿಸ ಬೇಕು; ಆಗ ಯಾಜಕನು ಅದಕ್ಕೆ,
ಒಳ್ಳೇದಾಗಲಿ, ಕೆಟ್ಟದ್ದಾಗಲಿ, ಕ್ರಯ ಮಾಡ ಬೇಕು; ಯಾಜಕ
೧೩ ನಾದ ನೀನು ಮಾಡಿದ ಕ್ರಯವೇ ನಡೆಯ ಬೇಕು. ಅದನ್ನು
ವಿಮೋಚಿಸ ಮನಸ್ಸಾಗಿದ್ದರೆ, ಮಾಡಿದ ಕ್ರಯದ ಮೇಲಾಗಿ
ಐದನೇ ಪಾಲನ್ನು ಕೊಡ ಬೇಕು.
೧೪ ಮತ್ತು ಒಬ್ಬನು ತನ್ನ ಮನೆಯನ್ನು, ಕರ್ತನಿಗೆ ಪರಿಶುದ್ಧ
ವಾಗಲೆಂದು, ಪರಿಶುದ್ಧ ಮಾಡಿದರೆ, ಯಾಜಕನು ಅದಕ್ಕೆ ಒಳ್ಳೇ
ದಾಗಲಿ, ಕೆಟ್ಟದ್ದಾಗಲಿ, ಕ್ರಯವನ್ನು ಮಾಡ ಬೇಕು; ಯಾಜಕ
ನು ಕ್ರಯ ಮಾಡಿದ ಪ್ರಕಾರವೇ ಅದು ಸ್ಥಿರವಾಗಿರ ಬೇಕು.
೧೫ ಆದರೆ ಪರಿಶುದ್ಧ ಮಾಡಿದವನು ತನ್ನ ಮನೆಯನ್ನು ವಿಮೋಚಿ
ಸಿದರೆ, ನೀನು ಮಾಡಿದ ಕ್ರಯಕ್ಕೆ ಮೇಲಾಗಿ ಐದನೇ ಪಾಲ
ನ್ನು ಕೊಡಲಿ; ಆಗ ಅವನದಾಗಿರುವದು.
೧೬ ಮತ್ತು ಒಬ್ಬನು ತನ್ನ ಸ್ವಾಸ್ತ್ಯದ ಹೊಲದಲ್ಲಿ ಏನಾದ
ರೂ ಕರ್ತನಿಗೆ ಪರಿಶುದ್ಧ ಮಾಡಿದರೆ, ನೀನು ಅದರ ಬೀಜದ
ಪ್ರಕಾರ ಕ್ರಯ ಮಾಡ ಬೇಕು; ಜವೆ ಗೋಧಿಯ ಒಂದು ಹೋ
೧೭ ಮರಕ್ಕು ಬೀಜಕ್ಕೆ ಐವತ್ತು ಬೆಳ್ಳಿ ಬೆಕೆಲುಗಳು. ಸಂಭ್ರಮ
ವರುಷ ಮೊದಲಾಗಿ ಅವನು ತನ್ನ ಹೊಲವನ್ನು ಪರಿಶುದ್ಧ
ಮಾಡಿದರೆ, ನೀನು ಮಾಡುವ ಕ್ರಯದ ಪ್ರಕಾರ ಅದು ಸ್ಥಿರವಾ
೧೮ ಗಿರ ಬೇಕು. ಆದರೆ ಸಂಭ್ರಮ ವರುಷದ ಮೇಲೆ ತನ್ನ ಹೊಲ
ವನ್ನು ಪರಿಶುದ್ಧ ಮಾಡಿದರೆ, ಸಂಭ್ರಮ ವರುಷದ ಪರ್ಯಂತ
ರ ಮಿಕ್ಕ ವರುಷಗಳ ಲೆಖ್ಖದ ಪ್ರಕಾರ ಯಾಜಕನು ಅವನಿಗೆ
ಹಣವನ್ನು ಎಣಿಸಿ, ನೀನು ಮಾಡಿದ ಕ್ರಯದಿಂದ ಕಳೆಯ
೧೯ ಬೇಕು. ಇದಲ್ಲದೆ ಆ ಹೊಲವನ್ನು ಪರಿಶುದ್ಧ ಮಾಡಿದವನು
ಅದನ್ನು ವಿಮೋಚಿಸ ಬೇಕೆಂದಿದ್ದರೆ, ಅವನು ನೀನು ಮಾಡಿದ
ಕ್ರಯಕ್ಕೆ ಮೇಲಾಗಿ ಐದನೇ ಪಾಲನ್ನು ಕೊಡ ಬೇಕು; ಆಗಲ
೨೦ ವನಿಗೆ ಸ್ಥಿರವಾಗಿರುವದು. ಆದರೆ ಅವನು ಹೊಲವನ್ನು ವಿಮೋ
ಚಿಸದೆ, ಮತ್ತೊಬ್ಬನಿಗೆ ಆ ಹೊಲವನ್ನು ಮಾರಿದ್ದಾದರೆ, ಅದ
೨೧ ನ್ನು ಇನ್ನು ಮೇರೆ ವಿಮೋಚಿಸ ಕೂಡದು. ಮತ್ತು ಆ ಹೊ
ಲವು ಸಂಭ್ರಮ ವರುಷದಲ್ಲಿ ಬಿಡುಗಡೆಯಾಗುವಾಗ, ಆಣೆಯಿಂದ
ಒಪ್ಪಿಸಲ್ಪಟ್ಟ ಹೊಲದ ಹಾಗೆ ಕರ್ತನಿಗೆ ಪರಿಶುದ್ಧವಾಗಿರ
ಬೇಕು; ಅದರ ಸ್ವಾಸ್ತ್ಯವು ಯಾಜಕನಿಗೆ ಆಗ ಬೇಕು.
೨೨ ಆದರೆ ತನ್ನ ಸ್ವಾಸ್ತ್ಯದ ಹೊಲದಲ್ಲಿ ಕೀರದಂಥ, ತಾನು
ತಕ್ಕೊಂಡಂಥ ಹೊಲವನ್ನು ಒಬ್ಬನು ಕರ್ತನಿಗೆ ಪರಿಶುದ್ಧ
೨೩ ಮಾಡಿದರೆ, ಯಾಜಕನು ಅವನಿಗೆ ನೀನು ನೇಮಿಸಿದ ಕ್ರಯದ
ಹಣವನ್ನು ಸಂಭ್ರಮ ವರುಷದ ಪರ್ಯಂತರ ಎಣಿಸ ಬೇಕು.
ಅವರು ಆ ದಿವಸದಲ್ಲಿ ನೀನು ನೇಮಿಸಿದ ಕ್ರಯವನ್ನು ಕರ್ತನಿ
೨೪ ಗೆ ಪರಿಶುದ್ಧವಾಗಿ ಕೊಡ ಬೇಕು. ಸಂಭ್ರಮ ವರುಷದಲ್ಲಿ ಆ ಹೊ
ಲವು ಭೂಮಿಯ ಸ್ವಾಸ್ತ್ಯ ಉಂಟಾದವನಿಗೆ, ಇವನು ಯಾವ
ನಿಂದ ಕೊಂಡು ಕೊಂಡನೋ, ಅವನಿಗೆ ತಿರಿಗಿ ಆಗ ಬೇಕು.
೨೫ ನೀನು ನೇಮಿಸುವ ಕ್ರಯವೆಲ್ಲಾ ಪರಿಶುದ್ಧ ಬೆಕೆಲಿನ ಮೇರೆಗೆ ಇ
ರ ಬೇಕು; ಬೆಕೆಲಿಗೆ ಇಪ್ಪತ್ತು ಗೇರಗಳಾಗ ಬೇಕು.
೨೬ ಆದರೆ ಮೊದಲಾಗಿ ಹುಟ್ಟಿದ್ದರಿಂದ ಕರ್ತನಿಗೆ ಪರಿಶುದ್ಧವಾ
ಗಿರುವ ಜೊಜ್ಜಲಾದ ಪಶುಗಳನ್ನು ಯಾವನಾದರೂ ಪರಿಶುದ್ಧ
ಮಾಡ ಬಾರದು; ಅವು ಎತ್ತಾಗಲಿ, ಕುರಿಯಾಗಲಿ, ಕರ್ತನವುಗ
೨೭ ಳಾಗಿವೆ. ಆದರೆ ಅಶುದ್ಧ ಮೃಗಗಳಲ್ಲಿ ಯಾವದಾಗಿದ್ದರೆ, ನೀ
ನು ನೇಮಿಸಿದ ಕ್ರಯದ ಪ್ರಕಾರ, ಅದಕ್ಕೆ ಮೇಲಾಗಿ ಐದನೇ
ಪಾಲನ್ನು ಕೊಟ್ಟು, ವಿಮೋಚಿಸ ಬೇಕು; ವಿಮೋಚಿಸದೆ ಇದ್ದ
ರೆ, ನೀನು ನೇಮಿಸಿದ ಕ್ರಯದ ಪ್ರಕಾರ ಮಾರ ಬೇಕು.
೨೮ ಆದರೆ ಮನುಷ್ಯನನ್ನಾಗಲಿ, ಪಶುವನ್ನಾಗಲಿ, ಸ್ವಾಸ್ತ್ಯದ
ಹೊಲವನ್ನಾಗಲಿ, ತನಗಿದ್ದದ್ದೇನಾದರೂ ಒಬ್ಬ ಮನುಷ್ಯನು
ಆಣೆ ಇಟ್ಟು ಕೊಂಡು ಕರ್ತನಿಗೆ ಒಪ್ಪಿಸಿದರೆ, ಅದನ್ನು ಮಾರ
ಬಾರದು, ವಿಮೋಚಿಸ ಬಾರದು; ಆಣೆಯಿಂದ ಒಪ್ಪಿಸಿದ್ದು ಕ
೨೯ ರ್ತನಿಗೆ ಮಹಾ ಪರಿಶುದ್ಧವಾದದ್ದೇ. ಮನುಷ್ಯರಲ್ಲಿ ಕರ್ತನಿಗೆ
ಆಣೆಯಿಂದ ಒಪ್ಪಿಸಲ್ಪಟ್ಟವರೆಲ್ಲಾ ವಿಮೋಚಿಸಲ್ಪಡದೆ ಕೊಲ್ಲ
ಲೇ ಕೊಲ್ಲಲ್ಪಡ ಬೇಕು.
೩೦ ಮತ್ತು ಭೂಮಿಯ ಬೀಜದಲ್ಲಿಯೂ, ಮರದ ಫಲದಲ್ಲಿಯೂ,
ಹತ್ತನೇ ಪಾತೆಲ್ಲಾ ಕರ್ತನದೇ; ಅದು ಕರ್ತನಿಗೆ ಪರಿಶುದ್ಧವಾ
೩೧ ದದ್ದು. ಯಾವನಾದರೂ ತನ್ನ ಹತ್ತನೇ ಪಾಲನ್ನು ವಿಮೋಚಿ
ಸ ಬೇಕೆಂದಿದ್ದರೆ, ಅದಕ್ಕೆ ಮೇಲಾಗಿ ಅದರ ಐದನೇ ಪಾಲನ್ನು
೩೨ ಕೊಡ ಬೇಕು. ಇದಲ್ಲದೆ ದನ ಕುರಿಗಳಲ್ಲಿಯೂ, ಕೋಲಿನ ಕೆ
ಳಗೆ ದಾಟುವ ಎಲ್ಲಾದರಲ್ಲಿಯೂ, ಹತ್ತನೇ ಪಾಲು, ಹತ್ತರಲ್ಲಿ ಒಂ
೩೩ ದು ಕರ್ತನಿಗೆ ಪರಿಶುದ್ಧವಾಗಿರುವದು. ಅದು ಕೆಟ್ಟದ್ದೋ! ಒ
ಳ್ಳೇದೋ! ಎಂದು ವಿಚಾರಿಸ ಬಾರದು; ಅದನ್ನು ಬದಲು ಮಾಡ
ಬಾರದು; ಹ್ಯಾಗಾದರೂ ಬದಲು ಮಾಡಿದರೆ, ಅದೂ ಬದಲು
ಮಾಡಿದ್ದೂ ಪರಿಶುದ್ಧವಾಗಿರ ಬೇಕು; ಅದನ್ನು ವಿಮೋಚಿಸ
ಕೂಡದು.
೩೪ ಕರ್ತನು ಸೀನಾಯಿ ಬೆಟ್ಟದಲ್ಲಿ ಮೋಶೆಗೆ ಇಸ್ರಯೇಲ್ ಮ
ಕ್ಕಳಿಗೋಸ್ಕರ ಕೊಟ್ಟ ಆಜ್ಞೆಗಳು ಇವೇ.

# NUMBERS.

## ಅಂಕೆಗಳು.

### ೧. ಸಂಧಿ.

೧ ಅವರು ಐಗುಪ್ತ ದೇಶದಿಂದ ಹೊರಟ ಎರಡನೇ ವರುಷದ ಎರಡನೇ ತಿಂಗಳಿನ ಮೊದಲನೇ ದಿವಸದಲ್ಲಿ ಕರ್ತನು ಸೀನಾಯಿ ಅರಣ್ಯದಲ್ಲಿ ಸಭೆಯ ಗುಡಾರದೊಳಗೆ ಮೋಶೆಯ ಸಂಗ
೨ ಡ ಮಾತಾಡಿ, ಹೇಳಿದ್ದೇನಂದರೆ. ಇಸ್ರಯೇಲ್ ಮಕ್ಕಳ ಸಮಸ್ತ ಸಭೆಯ ಲೆಖ್ಖವನ್ನು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಗಂಡಸರೆಲ್ಲರ ಹೆಸ
೩ ರುಗಳ ಎಣಿಕೆಯಿಂದ ತಲೆ ತಲೆಗೂ ತಕ್ಕೊಳ್ಳಿರಿ. ಇಸ್ರಯೇಲಿನಲ್ಲಿ ಯುದ್ಧಕ್ಕೆ ಹೊರಡುವವರನೆಲ್ಲಾ, ಇಪ್ಪತ್ತು ವರುಷದವರನ್ನೂ ಅದಕ್ಕೆ ಹೆಚ್ಚಾದ ಪ್ರಾಯವುಳ್ಳವರನ್ನೂ, ಅವರ ಸೈ
೪ ನ್ಯಗಳ ಪ್ರಕಾರ, ನೀನೂ ಆರೋನನೂ ಲೆಖ್ಖ ಮಾಡಿರಿ. ತನ್ನ ತಂದೆಗಳ ಮನೆಗೆ ಮುಖ್ಯಸ್ಥನಾದ ಒಬ್ಬೊಬ್ಬನು ಒಂದೊಂದು ಕುಲಕ್ಕೋಸ್ಕರ ನಿಮ್ಮ ಸಂಗಡ ಇರಲಿ.

೫ ನಿಮ್ಮ ಸಂಗಡ ನಿಲ್ಲಬೇಕಾದ ಮನುಷ್ಯರ ಹೆಸರುಗಳು ಇವೇ. ರೂಬೆನನಿಗೆ ಶೆದೆಯೂರನ ಮಗನಾದ ಎಲೀಚೂರನು
೬ ಸಿಮೆಯೋನನಿಗೆ ಚುರೀಷದಾಯನ ಮಗನಾದ ಶೆಲುಮಿಯೇಲ
೭ ನು. ಯೆಹೂದನಿಗೆ ಅಮಿನದಾಬನ ಮಗನಾದ ನಾಶೋನನು.
೮, ೯ ಇಸ್ಸಾಕಾರನಿಗೆ ಚುವಾರನ ಮಗನಾದ ನೆಥಾನಿಯೇಲನು. ಜೆಬು
೧೦ ಲೋನನಿಗೆ ಹೆಲೋನನ ಮಗನಾದ ಎಲಿಯಾಬನು. ಯೋಸೆಫನ ಮಕ್ಕಳಾದ ಎಫ್ರಯಿಮನಿಗೆ ಅಮಿಹೂದನ ಮಗನಾದ ಎಲೀಷಮನು. ಮನಸ್ಸೆಗೆ ಪೆದಚೂರನ ಮಗನಾದ ಗಮಾಲಿಯೇ
೧೧ ಲನು. ಬೆನ್ಯಮಿನನಿಗೆ ಗಿದ್ಯೋನಿಯ ಮಗನಾದ ಅಬಿದಾನ
೧೨ ನು. ದಾನನಿಗೆ ಅಮ್ಮಿಶದಾಯನ ಮಗನಾದ ಅಹಿಯೇಜರನು.
೧೩, ೧೪ ಆಶೇರನಿಗೆ ಒಕ್ರಾನನ ಮಗನಾದ ಪಗಿಯೇಲನು. ಗಾದನಿಗೆ ದೆ
೧೫ ಯುವೇಲನ ಮಗನಾದ ಎಲ್ಯಾಸಾಫನು. ನೆಫ್ತಾಲಿಗೆ ಏನಾನನ ಮ
೧೬ ಗನಾದ ಅಹೀರನು. ಸಭೆಯೊಳಗಿಂದ ಕರೆಯಲ್ಪಟ್ಟವರೂ, ತಮ್ಮ ತಂದೆಗಳ ಕುಲಗಳ ಪ್ರಭುಗಳೂ, ಇಸ್ರಯೇಲಿನ ಸಹಸ್ರಗಳ ಮುಖ್ಯಸ್ಥರೂ ಇವರೇ.

೧೭ ಹೆಸರುಗಳು ಹೇಳಲ್ಪಟ್ಟ ಈ ಮನುಷ್ಯರನ್ನು ಮೋಶೆ
೧೮ ಯೂ ಆರೋನನೂ ತಕ್ಕೊಂಡರು. ಮತ್ತು ಸಮಸ್ತ ಸಭೆಯನ್ನು ಎರಡನೇ ತಿಂಗಳಿನ ಮೊದಲನೇ ದಿವಸದಲ್ಲಿ ಕೂಡಿಸಿದರು; ಅವರು ತಮ್ಮ ಗೋತ್ರಗಳ ಅನುಸಾರವಾಗಿ, ತಂದೆ ಮನೆಗಳ ಪ್ರಕಾರ, ಹೆಸರುಗಳ ಲೆಖ್ಖದಿಂದ ಇಪ್ಪತ್ತು ವರುಷದವರೂ ಅದಕ್ಕೆ ಹೆಚ್ಚಾದ ಪ್ರಾಯವುಳ್ಳವರೂ ತಲೆ ತಲೆಯಾಗಿ ಜನ್ಮ
೧೯ ಪತ್ರಿಕೆ ಬರೆಸಿದರು. ಕರ್ತನು ಮೋಶೆಗೆ ಆಜ್ಞಾಪಿಸಿದ ಹಾಗಯೇ ಅವನು ಸೀನಾಯಿ ಅರಣ್ಯದಲ್ಲಿ ಅವರನ್ನು ಲೆಖ್ಖ ಮಾಡಿದನು.

೨೦ ಇಸ್ರಯೇಲನ ಜೊಚ್ಚಲ ಮಗನಾದ ರೂಬೆನನ ಮಕ್ಕಳು, ಅವರ ಸಂತತಿಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ,
೨೧ ಇಪ್ಪತ್ತು ವರುಷದವರೂ ಅದಕ್ಕೆ ಹೆಚ್ಚಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವ ಗಂಡಸರೆಲ್ಲರು, ತಲೆ ತಲೆಯಾಗಿ ರೂಬೆನನ ಕುಲದಲ್ಲಿ ಎಣಿಸಲ್ಪಟ್ಟವರು, ನಾಲ್ವತ್ತಾರು ಸಾವಿರದ ಐನೂರು.
೨೨ ಸಿಮೆಯೋನನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂ
೨೩ ಶಾವಳಿ ಹೆಸರುಗಳ ಲೆಖ್ಖದಿಂದ ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವ ಗಂಡಸರೆಲ್ಲರು, ಸಿಮೆಯೋನನ ಕುಲದಲ್ಲಿ ಎಣಿಸಲ್ಪಟ್ಟವರು, ಐವತ್ತೊಂಭತ್ತು ಸಾವಿರದ ಮುನ್ನೂರು.
೨೪ ಗಾದನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವವರೆ
೨೫ ಲ್ಲರು, ಗಾದನ ಕುಲದಲ್ಲಿ ಎಣಿಸಲ್ಪಟ್ಟವರು, ನಾಲ್ವತ್ತೈದು ಸಾವಿರದ ಆರುನೂರ ಐವತ್ತು.
೨೬ ಯೆಹೂದನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವ
೨೭ ವರೆಲ್ಲರು, ಯೆಹೂದನ ಕುಲದಲ್ಲಿ ಎಣಿಸಲ್ಪಟ್ಟವರು, ಎಪ್ಪತ್ತು ನಾಲ್ಕು ಸಾವಿರದ ಆರು ನೂರು.
೨೮ ಇಸ್ಸಾಕಾರನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವ
೨೯ ವರೆಲ್ಲರು, ಇಸ್ಸಾಕಾರನ ಕುಲದಲ್ಲಿ ಎಣಿಸಲ್ಪಟ್ಟವರು, ಇಪ್ಪತ್ತು ನಾಲ್ಕು ಸಾವಿರದ ನಾನೂರು.
೩೦ ಜೆಬುಲೋನನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ ಅದಕ್ಕಿಂತ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವ
೩೧ ವರೆಲ್ಲರು, ಜೆಬುಲೋನನ ಕುಲದಲ್ಲಿ ಎಣಿಸಲ್ಪಟ್ಟವರು, ಐವತ್ತೇಳು ಸಾವಿರದ ನಾನೂರು.
೩೨ ಯೋಸೆಫನ ಮಕ್ಕಳಾದ ಎಫ್ರಯಿಮನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವವರೆಲ್ಲರು, ಎಫ್ರಯಿಮನ ಕುಲದಲ್ಲಿ
೩೩ ಎಣಿಸಲ್ಪಟ್ಟವರು, ನಾಲ್ವತ್ತು ಸಾವಿರದ ಐನೂರು.
೩೪ ಮನಸ್ಸೆಯ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ ಅವರ ವಂಶಾ





ವಳಿ, ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ, ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವವರೆಲ್ಲ
೩೫ ರು, ಮನಸ್ಸೆಯ ಕುಲದಲ್ಲಿ ಎಣಿಸಲ್ಪಟ್ಟವರು, ಮೂವತ್ತೆರಡು ಸಾವಿರದ ಇನ್ನೂರು.
೩೬ ಬೆನ್ಯಮಿನನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ, ಅದಕ್ಕಿಂತ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವ
೩೭ ವರೆಲ್ಲರು, ಬೆನ್ಯಮಿನನ ಕುಲದಲ್ಲಿ ಎಣಿಸಲ್ಪಟ್ಟವರು ಮೂವತ್ತೈದು ಸಾವಿರದ ನಾನೂರು.
೩೮ ದಾನನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವವರೆಲ್ಲರು,
೩೯ ದಾನನ ಕುಲದಲ್ಲಿ ಎಣಿಸಲ್ಪಟ್ಟವರು ಅರವತ್ತೆರಡು ಸಾವಿರದ ಏಳು ನೂರು.
೪೦ ಆಶೇರನ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವವರೆ
೪೧ ಲ್ಲರು, ಆಶೇರನ ಕುಲದಲ್ಲಿ ಎಣಿಸಲ್ಪಟ್ಟವರು, ನಾಲ್ವತ್ತೊಂದು ಸಾವಿರದ ಐನೂರು.
೪೨ ನೆಫ್ತಾಲಿಯ ಮಕ್ಕಳು, ಅವರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಅವರ ವಂಶಾವಳಿ ಹೆಸರುಗಳ ಲೆಖ್ಖದಿಂದ, ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಯುದ್ಧಕ್ಕೆ ಹೊರಡುವವರೆಲ್ಲ
೪೩ ರು, ನೆಫ್ತಾಲಿಯ ಕುಲದಲ್ಲಿ ಎಣಿಸಲ್ಪಟ್ಟವರು ಐವತ್ತು ಮೂರು ಸಾವಿರದ ನಾನೂರು.
೪೪ ಮೋಶೆಯೂ, ಆರೋನನೂ, ಇಸ್ರಯೇಲಿನ ಮುಖ್ಯಸ್ಥರೂ ಎಣಿಸಿದವರು ಇವರೇ. ಅವರು, ತಮ್ಮ ತಮ್ಮ ತಂದೆ ಮನೆಗಳಿಗೆ ಒಬ್ಬೊಬ್ಬನಾಗಿ, ಹನ್ನೆರಡು ಮಂದಿಯಾಗಿದ್ದರು.
೪೫ ಹೀಗೆ ಇಸ್ರಯೇಲ್ ಮಕ್ಕಳಲ್ಲಿ ಎಣಿಸಲ್ಪಟ್ಟವರೆಲ್ಲರು, ಅವರ ತಂದೆ ಮನೆಗಳ ಪ್ರಕಾರ, ಇಪ್ಪತ್ತು ವರುಷದವರೂ ಅದಕ್ಕೆ ಅಧಿಕವಾದ ಪ್ರಾಯವುಳ್ಳವರೂ, ಇಸ್ರಯೇಲಿನಲ್ಲಿ ಯುದ್ಧಕ್ಕೆ
೪೬ ಹೊರಡುವವರೆಲ್ಲರು, ಎಣಿಸಲ್ಪಟ್ಟವರೆಲ್ಲರು, ಆರು ಲಕ್ಷದ, ಮೂರು ಸಾವಿರದ ಐನೂರೈವತ್ತು ಮಂದಿಯಾಗಿದ್ದರು.
೪೭ ಆದರೆ ಲೇವ್ಯರು ತಮ್ಮ ತಂದೆಗಳ ಕುಲದ ಪ್ರಕಾರ ಅವರೊ
೪۸ ಳಗೆ ಎಣಿಸಲ್ಪಡಲಿಲ್ಲ. ಇದಲ್ಲದೆ ಕರ್ತನು ಮಾತಾಡಿ ಮೋಶೇ
೪೯ ಗೆ ಹೇಳಿದ್ದೇನಂದರೆ, ಲೇವಿ ಕುಲವನ್ನು ಮಾತ್ರ ಇಸ್ರಯೇಲ್ ಮಕ್ಕಳೊಳಗೆ ಎಣಿಸದೆ, ಅವರ ಲೆಖ್ಖವನ್ನು ತಕ್ಕೊಳ್ಳಬೇಡ.
೫೦ ಆದರೆ ನೀನು ಲೇವ್ಯರನ್ನು ಸಾಕ್ಷಿಯ ನಿವಾಸಕ್ಕೋಸ್ಕರವೂ, ಅದರ ಎಲ್ಲಾ ಸಾಮಾನುಗಳಿಗೋಸ್ಕರವೂ, ಅದಕ್ಕೆ ಬೇಕಾದ ಎಲ್ಲವುಗಳಿಗೋಸ್ಕರವೂ, ನೇಮಿಸು. ಅವರು, ನಿವಾಸವನ್ನೂ, ಅದರ ಎಲ್ಲಾ ಸಾಮಾನುಗಳನ್ನೂ ಹೊತ್ತು ಕೊಳ್ಳಬೇಕು; ಇದಕ್ಕೆ ಸೇವೆ ಮಾಡಿ, ನಿವಾಸದ ಸುತ್ತ ಮುತ್ತ ಇಳಿದು ಕೊಳ್ಳಬೇಕು.
೫೧ ನಿವಾಸವು ಹೊರಡುವಾಗ, ಲೇವ್ಯರು ಅದನ್ನು ತೆಗೆಯಲಿ; ನಿವಾಸವು ಇಳಿಯುವಾಗ, ಲೇವ್ಯರು ಅದನ್ನು ನಿಲ್ಲಿಸಲಿ; ಪರನು ಸ
೫೨ ಮೀಪಿಸಿದರೆ ಸಾಯಬೇಕು. ಇಸ್ರಯೇಲ್ ಮಕ್ಕಳು ತಮ್ಮ ತಮ್ಮ ಸೈನ್ಯಗಳ ಪ್ರಕಾರ, ಒಬ್ಬೊಬ್ಬನು ತನ್ನ ದಂಡಿನ ಬಳಿಯಲ್ಲಿಯೂ, ಒಬ್ಬೊಬ್ಬನು ತನ್ನ ಧ್ವಜದ ಬಳಿಯಲ್ಲಿ
೫೩ ಯೂ, ಇಳಿದು ಕೊಳ್ಳಬೇಕು. ಆದರೆ ಲೇವ್ಯರು ಸಾಕ್ಷಿಯ ನಿವಾಸದ ಸುತ್ತಲು ಇಳಿದು ಕೊಳ್ಳಬೇಕು; ಹೀಗೆ ಇಸ್ರಯೇಲ್ ಮಕ್ಕಳಿಗೆ ಸಭೆಯ ಮೇಲೆ ಕೋಪ ಬಾರದಿರುವದು; ಲೇವ್ಯರು
೫೪ ಸಾಕ್ಷಿಯ ನಿವಾಸದ ಕಾಯಿದೆಯನ್ನು ಕಾಯಲಿ ಇಸ್ರಯೇಲ್ ಮಕ್ಕಳು ಹಾಗೆ ಮಾಡಿದರು; ಕರ್ತನು ಮೋಶೆಗೆ ಆಜ್ಞಾಪಿಸಿದ ಎಲ್ಲವುಗಳ ಪ್ರಕಾರವೇ ಅವರು ಮಾಡಿದರು.

### ೨. ಸಂಧಿ.

೧ ಕರ್ತನು ಮಾತಾಡಿ ಮೋಶೆಗೂ ಆರೋನನಿಗೂ ಹೇಳಿ
೨ ದ್ದೇನಂದರೆ—ಇಸ್ರಯೇಲ್ ಮಕ್ಕಳು ಒಬ್ಬೊಬ್ಬರಾಗಿ ತಮ್ಮ ತಂದೆ ಮನೆಗಳ ಗುರುತುಗಳ ಪ್ರಕಾರ, ತಮ್ಮ ತಮ್ಮ ಧ್ವಜಗಳ ಬಳಿಯಲ್ಲಿ ಇಳಿದು ಕೊಳ್ಳಬೇಕು; ಅವರು ಸಭೆಯ ಗುಡಾರದ ಎದುರಿನಲ್ಲಿ ಸುತ್ತ ಮುತ್ತಲು ಇಳಿದು ಕೊಳ್ಳಬೇಕು.
೩ ಮೂತಲಾದ ಪೂರ್ವ ದಿಕ್ಕಿನಲ್ಲಿ ಇಳಿದು ಕೊಳ್ಳುವವರು ಅವರವರ ಸೈನ್ಯಗಳ ಪ್ರಕಾರ ಯೆಹೂದನ ದಂಡಿನ ಧ್ವಜವು; ಯೆಹೂದನ ಮಕ್ಕಳಿಗೆ ಪ್ರಭುವು ಅಮಿನದಾಬನ ಮಗನಾದ ನಾ
೪ ಶೋನನು. ಅವನ ಸೈನ್ಯವೂ ಎಣಿಸಲ್ಪಟ್ಟವರೂ ಎಪ್ಪತ್ತು
೫ ನಾಲ್ಕು ಸಾವಿರದ ಆರು ನೂರು. ಅವನ ಬಳಿಯಲ್ಲಿ ಇಳಿದು ಕೊಳ್ಳುವವರು ಇಸ್ಸಾಕಾರನ ಕುಲವು; ಇಸ್ಸಾಕಾರನ ಮಕ್ಕಳಿಗೆ ಪ್ರಭುವು ಚುವಾರನ ಮಗನಾದ ನೆಥಾನಿಯೇಲನು. ಅವನ ಸೈನ್ಯವೂ
೬ ಎಣಿಸಲ್ಪಟ್ಟವರೂ ಐವತ್ತು ನಾಲ್ಕು ಸಾವಿರದ ನಾನೂರು. ಜೆಬುಲೋನನ ಕುಲವು—ಜೆಬುಲೋನನ ಮಕ್ಕಳಿಗೆ ಪ್ರಭುವು ಹೆಲೋ
೭ ನನ ಮಗನಾದ ಎಲಿಯಾಬನು. ಅವನ ಸೈನ್ಯವೂ ಎಣಿಸಲ್ಪ
೮ ಟ್ಟವರೂ ಐವತ್ತೇಳು ಸಾವಿರದ ನಾನೂರು. ಯೆಹೂದನ ದಂಡಿಗೆ ಎಣಿಸಲ್ಪಟ್ಟವರೆಲ್ಲರು ಅವರ ಸೈನ್ಯಗಳ ಪ್ರಕಾರ ಲಕ್ಷದ ಎಂಭತ್ತಾರು ಸಾವಿರದ ನಾನೂರು. ಅವರು ಮೊದಲು ಹೊರಡತಕ್ಕವರು.
೯ ರೂಬೆನನ ದಂಡಿನ ಧ್ವಜವು ಅವರವರ ಸೈನ್ಯಗಳ ಪ್ರಕಾರ ತೆಂಕಣದಲ್ಲಿರುವದು; ರೂಬೆನನ ಮಕ್ಕಳಿಗೆ ಪ್ರಭುವು ಶೆದೆಯೂರನ ಮಗನಾದ ಎಲೀಚೂರನು. ಅವನ ಸೈನ್ಯವೂ ಎಣಿಸಲ್ಪಟ್ಟ
೧೦ ವರೂ ನಾಲ್ವತ್ತಾರು ಸಾವಿರದ ಐನೂರು. ಅವನ ಬಳಿಯಲ್ಲಿ ಇಳಿದು ಕೊಳ್ಳುವವರು ಸಿಮೆಯೋನನ ಕುಲವು; ಸಿಮೆಯೋನನ ಮ
೧೧ ಕ್ಕಳಿಗೆ ಪ್ರಭುವು ಚುರೀಷದಾಯನ ಮಗನಾದ ಶೆಲುಮಿಯೇಲನು. ಅವನ ಸೈನ್ಯವೂ ಎಣಿಸಲ್ಪಟ್ಟವರೂ ಐವತ್ತೊಂಭತ್ತು ಸಾವಿರದ ಮುನ್ನೂರು. ಆ ಮೇಲೆ ಗಾದನ ಕುಲವು; ಗಾದನ ಮಕ್ಕ
೧೪ ಳಿಗೆ ಪ್ರಭುವು ರೂಯೇಲನ ಮಗನಾದ ಎಲ್ಯಾಸಾಫನು. ಅವನ ಸೈನ್ಯವೂ ಎಣಿಸಲ್ಪಟ್ಟವರೂ ನಾಲ್ವತ್ತೈದು ಸಾವಿರದ ಆರು
೧೫ ನೂರಾ ಐವತ್ತು. ರೂಬೆನನ ದಂಡಿಗೆ ಎಣಿಸಲ್ಪಟ್ಟವರೆಲ್ಲರು, ಅವರ ಸೈನ್ಯಗಳ ಪ್ರಕಾರ, ಲಕ್ಷದ ಐವತ್ತೊಂದು ಸಾವಿರದ ನಾನೂರ ಐವತ್ತು ಅವರು ಎರಡನೆಯವರಾಗಿ ಹೊರಡತಕ್ಕವರು.

೧೫ ತರುವಾಯ ಸಭೆಯ ಗುಡಾರವೂ ಲೇವಿಯರ ದಂಡೂ ದಂ
ಡುಗಳ ಮಧ್ಯದಲ್ಲಿ ಹೊರಡ ಬೇಕು; ಅವರು ಇಳಿಯ ಕೊಳ್ಳುವ
ಪ್ರಕಾರವೇ, ತಮ್ಮ ತಮ್ಮ ಕಡೆಯಲ್ಲಿಯೂ ತಮ್ಮ ತಮ್ಮ ಧ್ವಜಗ
ಳ ಪ್ರಕಾರವೂ ಹೊರಡ ಬೇಕು.

೧೯ ಎಫ್ರಯಿಮಾನ ದಂಡಿನ ಧ್ವಜವು ಅವರ ಸೈನ್ಯಗಳ ಪ್ರಕಾ
ರ ಪಡುವಲಲ್ಲಿರುವದು; ಎಫ್ರಯಿಮಾನ ಮಕ್ಕಳಿಗೆ ಪ್ರಭುವು ಅ
೧೯ ಮೀಹೂದನ ಮಗನಾದ ಎಲೀಷಮನು. ಅವನ ಸೈನ್ಯವೂ ಎ
೨೦ ಣಿಸಲ್ಪಟ್ಟವರೂ ನಾಲ್ವತ್ತು ಸಾವಿರದ ಐನೂರು. ಅವನ ಬಳಿ
ಯಲ್ಲಿ ಮನಸ್ಸೆಯ ಕುಲವು—ಮನಸ್ಸೆಯ ಮಕ್ಕಳಿಗೆ ಪ್ರಭುವು ಪೆ
೨೧ ದಹೂರನ ಮಗನಾದ ಗಮಲಿಯೇಲನು. ಅವನ ಸೈನ್ಯವೂ
೨೦ ಎಣಿಸಲ್ಪಟ್ಟವರೂ ಮೂವತ್ತೆರಡು ಸಾವಿರದ ಇನ್ನೂರು. ತರು
ವಾಯ ಬೆನ್ಯಮಿನನ ಕುಲವು—ಬೆನ್ಯಮಿನನ ಮಕ್ಕಳಿಗೆ ಪ್ರಭು
೨೩ ವು ಗಿದ್ಯೋನಿಯ ಮಗನಾದ ಅಬೀದಾನನು. ಅವನ ಸೈನ್ಯವೂ
೨೪ ಎಣಿಸಲ್ಪಟ್ಟವರೂ ಮೂವತ್ತೈದು ಸಾವಿರದ ನಾನೂರು. ಎಫ್ರ
ಯಿಮಾನ ದಂಡಿಗೆ ಎಣಿಸಲ್ಪಟ್ಟವಕೆಲ್ಲರು, ಅವರ ಸೈನ್ಯಗಳ
ಪ್ರಕಾರವಾಗಿ, ಲಕ್ಷದ ಎಂಟು ಸಾವಿರದ ನೂರು. ಇವರು ಮೂ
ರನೆಯವರಾಗಿ ಹೊರಡ ತಕ್ಕವರು.

೨೫ ದಾನನ ದಂಡಿನ ಧ್ವಜವು ಅವರವರ ಸೈನ್ಯಗಳ ಪ್ರಕಾರವಾ
ಗಿ ಬಡಗಲಾಗಿರುವದು; ದಾನನ ಮಕ್ಕಳಿಗೆ ಪ್ರಭುವು ಅಮ್ಮಿಶಾ
೨೬ ದಾಯನ ಮಗನಾದ ಅಹಿಯೇಜರನು. ಅವನ ಸೈನ್ಯವೂ ಎ
೨೭ ಣಿಸಲ್ಪಟ್ಟವರೂ ಅರವತ್ತೆರಡು ಸಾವಿರದ ಏಳುನೂರು. ಅವನ
ಬಳಿಯಲ್ಲಿ ಇಳುಕೊಳ್ಳುವವರು ಅಶೇರನ ಕುಲವು—ಅಶೇರನ ಮ
೨೮ ಕ್ಕಳಿಗೆ ಪ್ರಭುವು ಒಕ್ರಾನನ ಮಗನಾದ ಪಗಿಯೇಲನು. ಅವನ
ಸೈನ್ಯವೂ ಎಣಿಸಲ್ಪಟ್ಟವರೂ ನಾಲ್ವತ್ತೊಂದು ಸಾವಿರದ
೨೯ ಐನೂರು. ತರುವಾಯ ನೆಫ್ತಲಿ ಕುಲವು—ನೆಫ್ತಲಿ ಮಕ್ಕಳಿಗೆ ಪ್ರ
೩೦ ಭುವು ಏನನ ಮಗನಾದ ಅಹೀರನು. ಅವನ ಸೈನ್ಯವೂ ಎಣಿ
೩೧ ಸಲ್ಪಟ್ಟವರೂ ಐವತ್ತು ಮೂರು ಸಾವಿರದ ನಾನೂರು. ದಾನನ
ದಂಡಿಗೆ ಎಣಿಸಲ್ಪಟ್ಟವಕೆಲ್ಲರು ಲಕ್ಷದ ಐವತ್ತೇಳು ಸಾವಿರದ
ಆರು ನೂರು. ಅವರು ತಮ್ಮ ಧ್ವಜಗಳ ಪ್ರಕಾರ ಕಡೆಯವರಾಗಿ
ಹೊರಡ ತಕ್ಕವರು.

೩೨ ಇಸ್ರಯೇಲ್ ಮಕ್ಕಳಲ್ಲಿ ತಮ್ಮ ತಂದೆ ಮನೆಗಳ ಪ್ರಕಾರವಾಗಿ
ಎಣಿಸಲ್ಪಟ್ಟಿರುವ ಇವರೇ; ದಂಡುಗಳೊಳಗೆ ಅವರವರ ಸೈನ್ಯ
ಗಳ ಪ್ರಕಾರ ಎಣಿಸಲ್ಪಟ್ಟವಕೆಲ್ಲರು ಆರು ಲಕ್ಷದ ಮೂರು ಸಾ
೩೩ ವಿರದ ಐನೂರ ಐವತ್ತು. ಆದರೆ ಕರ್ತನು ಮೋಶೆಗೆ ಆಜ್ಞಾಪಿಸಿ
ದ ಪ್ರಕಾರ, ಲೇವಿಯರು ಇಸ್ರಯೇಲ್ ಮಕ್ಕಳೊಳಗೆ ಎಣಿಸಲ್ಪ
೩೪ ಡಲಿಲ್ಲ. ಇಸ್ರಯೇಲ್ ಮಕ್ಕಳು ಕರ್ತನು ಮೋಶೆಗೆ ಆಜ್ಞಾಪಿಸಿ
ದ್ದೆಲ್ಲವರ ಪ್ರಕಾರ ಮಾಡಿ, ತಮ್ಮ ಧ್ವಜಗಳ ಪ್ರಕಾರವೂ, ತ
ಮ್ಮ ತಮ್ಮ ವಂಶಗಳ ಪ್ರಕಾರವೂ, ತಮ್ಮ ತಂದೆ ಮನೆಗಳ ಪ್ರಕಾರ
ವೂ ಇಳುಕೊಳ್ಳುತ್ತಾ, ಹೊರಡುತ್ತಾ ಇದ್ದರು.

## 3. ಸಂಧಿ.

೧ ಕರ್ತನು ಸೀನಾಯಿ ಪರ್ವತದಲ್ಲಿ ಮೋಶೆಯ ಸಂಗಡ ಮಾ
ತಾಡಿದ ದಿವಸದಲ್ಲಿ, ಆಕೋನನ ಮೋಶೆಯ ಸಂತತಿಗಳು ಇ
೨ ವೇ. ಆಕೋನನ ಮಕ್ಕಳ ಹೆಸರುಗಳು ಇವೇ—ಚೊಚ್ಚಲನು
ನಾದಬನು, ತರುವಾಯ ಅಬೀಹು, ಎಲೆಯಾಜರನು, ಇಥಮಾರ
3 ನು. ಅಭಿಷೇಕಿಸಿದ ಯಾಜಕರಾದ ಆಕೋನನ ಮಕ್ಕಳ ಹೆಸ
ರುಗಳು ಇವೇ; ಇವರನ್ನು ಯಾಜಕ ಉದ್ಯೋಗ ಮಾಡುವದ
೪ ಕ್ಕೆ ಪ್ರತಿಷ್ಠೆ ಮಾಡಿದನು. ಆದರೆ ನಾದಬನೂ ಅಬೀಹುವೂ,
ಸೀನಾಯಿ ಅರಣ್ಯದಲ್ಲಿ ಕರ್ತನ ಸಮುಖದಲ್ಲಿ ಅನ್ಯ ಬೆಂಕಿಯ
ನ್ನು ಅರ್ಪಿಸುವಾಗ, ಕರ್ತನ ಮುಂದೆ ಸತ್ತರು—ಅವರಿಗೆ ಮಕ್ಕ
ಳು ಇದ್ದಿಲ್ಲ; ಹೀಗೆ ಎಲೆಯಾಜರನೂ ಇಥಮಾರನೂ ತಮ್ಮ ತಂ
ದೆಯಾದ ಆಕೋನನ ಸನ್ನಿಧಿಯಲ್ಲಿ ಯಾಜಕ ಉದ್ಯೋಗವ
ನ್ನು ಮಾಡಿದರು.

೫ ಇದಲ್ಲದೆ ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳಿದ್ದೇ
೬ ನಂದರೆ—ಲೇವಿಯ ಕುಲವನ್ನು ಹತ್ತಿರ ಸೇರಿಸಿ, ಯಾಜಕನಾದ
ಆಕೋನನ ಮುಂದೆ ನಿಲ್ಲಿಸು; ಅವರು ಅವನಿಗೆ ಸೇವೆ ಮಾಡಲಿ
೭ ಇದಲ್ಲದೆ ಅವರು ಅವನ ಕಾಯಿದೆಯನ್ನೂ, ಸಮಸ್ತ ಸಭೆಯ
ಕಾಯಿದೆಯನ್ನೂ, ಸಭೆಯ ಗುಡಾರದ ಮುಂದೆ ಕಾಪಾಡಲಿ; ನಿ
೮ ವಾಸದ ಸೇವೆಯನ್ನು ಮಾಡಲಿ. ಅವರು ಸಭೆಯ ಗುಡಾರದ
ಎಲ್ಲಾ ಸಾಮಾನುಗಳನ್ನೂ, ಇಸ್ರಯೇಲ್ ಮಕ್ಕಳ ಕಾಯಿದೆಯ
ನ್ನೂ, ಕಾಪಾಡಿ, ನಿವಾಸದ ಸೇವೆಯನ್ನು ಮಾಡ ಬೇಕು. ಮ
೯ ತ್ತು ಲೇವಿಯರನ್ನು ಆಕೋನನಿಗೂ ಅವನ ಮಕ್ಕಳಿಗೂ ಕೊಡ
ಬೇಕು; ಅವರು ಇಸ್ರಯೇಲ್ ಮಕ್ಕಳೊಳಗಿಂದ ಅವನಿಗೆ ಪೂ
೧೦ ರ್ಣವಾಗಿ ಕೊಡಲ್ಪಟ್ಟವರೇ. ಇದಲ್ಲದೆ ಆಕೋನನನ್ನೂ ಅವ
ನ ಮಕ್ಕಳನ್ನೂ ಲೆಖ್ಖ ಮಾಡು; ಅವರು ತಮ್ಮ ಯಾಜಕತ್ವವ
ನ್ನು ಕಾಪಾಡಲಿ; ಪರನು ಸಮೀಪಿಸಿದರೆ, ಸಾಯ ಬೇಕು.

೧೧ ಇದಲ್ಲದೆ ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳಿ
೧೨ ದ್ದೇನಂದರೆ—ಇಗೋ, ನಾನು ಇಸ್ರಯೇಲ್ ಮಕ್ಕಳಲ್ಲಿ ಗರ್ಭ
ತೆಗೆಯುವಂಥ ಎಲ್ಲಾ ಚೊಚ್ಚಲಾದವರ್ಗಕ್ಕೆ ಬದಲಾಗಿ ಲೇವಿಯ
ರನ್ನು ಇಸ್ರಯೇಲ್ ಮಕ್ಕಳೊಳಗಿಂದ ತಕ್ಕೊಂಡಿದ್ದೇನೆ; ಲೇವಿ
೧೩ ಯರು ನನ್ನವರಾಗಿರ ಬೇಕು. ಯಾಕಂದರೆ ಚೊಚ್ಚಲಾದದ್ದೆ
ಲ್ಲಾ ನನ್ನದು; ನಾನು ಐಗುಪ್ತ ದೇಶದಲ್ಲಿ ಚೊಚ್ಚಲಾದವರ್ಗಳ
ನ್ನೆಲ್ಲಾ ಹೊಡೆದ ದಿವಸದಲ್ಲಿ ನಾನು ಇಸ್ರಯೇಲಿನಲ್ಲಿ ಮನುಷ್ಯ
ರು ಮೊದಲುಗೊಂಡು ದನಗಳ ಪರ್ಯಂತರಕ್ಕಿರುವ ಚೊಚ್ಚ
ಲಾದದ್ದನ್ನೆಲ್ಲಾ ನನಗೆ ಪರಿಶುದ್ಧ ಮಾಡಿದ್ದೇನೆ; ಅದು ನನ್ನದಾ
ಗಿರ ಬೇಕು; ನಾನೇ ಕರ್ತನು.

೧೪ ಮತ್ತು ಕರ್ತನು ಸೀನಾಯಿ ಅರಣ್ಯದಲ್ಲಿ ಮೋಶೆಯ ಸಂ
೧೫ ಗತ ಮಾತಾಡಿ ಹೇಳಿದ್ದೇನಂದರೆ—ಲೇವಿಯ ಮಕ್ಕಳನ್ನು ಅವ
ರ ತಂದೆಗಳ ಮನೆಯ ಪ್ರಕಾರವಾಗಿಯೂ ಅವರ ಗೋತ್ರಗಳ ಪ್ರ
ಕಾರವಾಗಿಯೂ ಎಣಿಸು; ತಿಂಗಳಾದ, ಅದಕ್ಕೆ ಅಧಿಕವಾದ ಪ್ರಾ
೧೬ ಯವುಳ್ಳ ಎಲ್ಲಾ ಗಂಡಸರನ್ನು ಎಣಿಸು. ಆಗ ಮೋಶೆ ಕರ್ತ
ನು ಆಜ್ಞಾಪಿಸಿದ ಅಪ್ಪಣೆಯ ಪ್ರಕಾರ ಅವರನ್ನು ಎಣಿಸಿದನು.
೧೭ ಲೇವಿಯ ಮಕ್ಕಳು ತಮ್ಮ ಹೆಸರುಗಳಿಂದ ಯಾರಂದರೆ, ಗೆರ್ಶೋ
೧೮ ನನೂ, ಕೊಹತನೂ, ಮೆರಾರಿಯೂ. ಮತ್ತು ಗೆರ್ಶೋನನ
ಮಕ್ಕಳ ಹೆಸರುಗಳು ತಮ್ಮ ಗೋತ್ರಗಳ ಪ್ರಕಾರ—ಲಿಬ್ನಿಯೂ
೧೯ ಶಿಮ್ಯೆಯೂ. ಕೊಹತನ ಮಕ್ಕಳು ತಮ್ಮ ಗೋತ್ರಗಳ ಪ್ರಕಾ
ರ—ಅಮ್ರಾಮನೂ, ಇಚಾರನೂ, ಹೆಬ್ರೋನನೂ, ಉಜಿಯೇಲ
೨೦ ನೂ. ಮೆರಾರಿಯ ಮಕ್ಕಳು ತಮ್ಮ ಗೋತ್ರಗಳ ಪ್ರಕಾರ—
ಮಹ್ಲಿಯೂ, ಮೂಶೆಯೂ. ಇವು ತಂದೆ ಮನೆಗಳ ಪ್ರಕಾರವಾ
ದ ಲೇವಿಯ ಗೋತ್ರಗಳು.





೨೧ ಗೆರ್ಶೋನನಿಗೆ ಸೇರಿದವುಗಳು ಲಿಬ್ನಿಯ ಗೋತ್ರವೂ ಶಿ
ಮ್ಯೆಯ ಗೋತ್ರವೂ; ಇವು ಗೆರ್ಶೋನಿಕ ಗೋತ್ರಗಳು.
೨೨ ತಿಂಗಳಾದ, ಅದಕ್ಕೆ ಅಧಿಕವಾದ ಪ್ರಾಯವುಳ್ಳ ಅವರ ಎಲ್ಲಾ ಗಂ
ಡಸರು, ಲೆಖ್ಖದಲ್ಲಿ ಎಣಿಸಲ್ಪಟ್ಟವರು, ಏಳು ಸಾವಿರದ ಐನೂರು
೨೩ ಮಂದಿ. ಗೆರ್ಶೋನಿಕ ಗೋತ್ರಗಳು ನಿವಾಸದ ಹಿಂದಾಗಿ ಪ
೨೪ ಡುವಲಾಗಿ ಇಳುಕೊಳ್ಳ ಬೇಕು. ಮತ್ತು ಲಾಯೇಲನ ಮಗ
ನಾದ ಎಲ್ಯಸಾಫನು ಗೆರ್ಶೋನ್ಯರ ತಂದೆ ಮನೆಗೆ ಪ್ರಭುವು
೨೫ ಸಭೆಯ ಗುಡಾರದಲ್ಲಿ ಗೆರ್ಶೋನನ ಮಕ್ಕಳ ಕಾವಲಿ ಏನಂದ
ರೆ—ನಿವಾಸವೂ, ಗುಡಾರವೂ, ಅದರ ಮುಚ್ಚಳವೂ, ಸಭೆಯ ಗು
೨೬ ಡಾರದ ಬಾಗಿಲಿನ ತೆರೆಯೂ, ನಿವಾಸಕ್ಕೂ ಬಲಿಪೀಠಕ್ಕೂ ಸು
ತ್ತಲಿರುವ ಅಂಗಳದ ಪರದೆಗಳೂ, ಅಂಗಳದ ಬಾಗಿಲಿನ ತೆರೆ
ಯೂ, ಅದರ ಸಮಸ್ತ ಸೇವೆಗೆ ಬೇಕಾದ ಹಗ್ಗಗಳೂ.
೨೭ ಕೊಹತನಿಗೆ ಅಮ್ರಾಮಿಯ ಗೋತ್ರವೂ, ಇಚಾರಿಯ ಗೋ
ತ್ರವೂ, ಹೆಬ್ರೋನಿನ ಗೋತ್ರವೂ, ಉಜಿಯೇಲನ ಗೋತ್ರವೂ,
೨೮ ಇವು ಕೊಹತನ ಗೋತ್ರಗಳು. ಪರಿಶುದ್ಧ ಕಾಯಿದೆಯನ್ನು
ಕಾಪಾಡುವವರ ಲೆಖ್ಖ—ತಿಂಗಳಾದ, ಅದಕ್ಕೆ ಅಧಿಕವಾದ ಪ್ರಾ
೨೯ ಯವುಳ್ಳ ಗಂಡಸರೆಲ್ಲರು ಎಂಟು ಸಾವಿರದ ಆರು ನೂರು. ಕೊ
ಹತನ ಮಕ್ಕಳ ಗೋತ್ರಗಳು ನಿವಾಸದ ಬಳಿಯಲ್ಲಿ ತೆಂಕಲಾಗಿ
೩೦ ಇಳುಕೊಳ್ಳ ಬೇಕು. ಮತ್ತು ಉಜಿಯೇಲನ ಮಗನಾದ ಎಲಿ
ಚಫಾನನು ಕೊಹತನ ಗೋತ್ರಗಳ ತಂದೆ ಮನೆಗೆ ಪ್ರಭುವು.
೩೧ ಅವರ ಕಾಯಿದೆ ಏನಂದರೆ—ಪೆಟ್ಟಿಗೆಯೂ, ಮೇಜೂ, ದೀಪ
ಸ್ತಂಭವೂ, ಬಲಿಪೀಠಗಳೂ, ಸೇವೆ ಮಾಡುವ ಪರಿಶುದ್ಧ ಸಾಮಾ
೩೨ ನುಗಳೂ, ತೆರೆಯೂ, ಅವುಗಳ ಎಲ್ಲಾ ಸೇವೆಯೂ. ಇದಲ್ಲದೆ
ಯಾಜಕನಾಗಿರುವ ಆಕೋನನ ಮಗನಾದ ಎಲೆಯಾಜರನು ಲೇ
ವ್ಯರ ಪ್ರಭುಗಳ ಪ್ರಭುವೂ, ಪರಿಶುದ್ಧ ಸ್ಥಳದ ಕಾವಲಿಯನ್ನು
ಕಾಯುವವರ ವಿಚಾರಕನೂ ಆವನೇ.
೩೩ ಮೆರಾರಿಗೆ ಮಹ್ಲಿಯರ ಗೋತ್ರವೂ, ಮೂಶಿಯರ ಗೋತ್ರ
೩೪ ವೂ, ಇವು ಮೆರಾರಿಯ ಗೋತ್ರಗಳು. ಅವರಲ್ಲಿ ಎಣಿಸಲ್ಪಟ್ಟವ
ರು, ತಿಂಗಳಾದ, ಅದಕ್ಕೆ ಅಧಿಕವಾದ ಪ್ರಾಯವುಳ್ಳ ಗಂಡಸರೆಲ್ಲ
೩೫ ರ ಲೆಖ್ಖದ ಪ್ರಕಾರ, ಆರು ಸಾವಿರದ ಇನ್ನೂರು. ಮತ್ತು ಅಬಿ
ಹಾಯಿಲನ ಮಗನಾದ ಚುರಿಯೇಲನು, ಮೆರಾರಿಯ ಗೋತ್ರ
ಗಳ ತಂದೆ ಮನೆಗೆ ಪ್ರಭುವು; ಅವರು ನಿವಾಸದ ಬಳಿಯಲ್ಲಿ ಬಡ
೩೬ ಗಲಾಗಿ ಇಳುಕೊಳ್ಳ ಬೇಕು. ಇದಲ್ಲದೆ ಮೆರಾರಿಯ ಮಕ್ಕ
ಳ ವಿಚಾರವೂ ಕಾಯಿದೆಯೂ ಏನಂದರೆ—ನಿವಾಸದ ಹಲಿಗೆ
ಗಳೂ, ಅದರ ಅಗ್ಗಳಿಗಳೂ, ಅದರ ಕಂಭಗಳೂ, ಅದರ ಕಾಲುಗ
ಳೂ, ಅದರ ಎಲ್ಲಾ ಸಾಮಾನುಗಳೂ, ಅದರ ಸಕಲ ಸೇವೆಯೂ,
೩೭ ಅಂಗಳದ ಸುತ್ತು ಮುತ್ತುಲಿರುವ ಕಂಭಗಳೂ, ಅವುಗಳ ಕಾಲು
ಗಳೂ, ಅವುಗಳ ಗೂಟಗಳೂ, ಅವುಗಳ ಹಗ್ಗಗಳೂ.
೩೮ ಆದರೆ ನಿವಾಸದ ಎದುರಿನಲ್ಲಿ ಮೂಡಲಾಗಿ, ಸಭೆಯ ಗುಡಾ
ರದ ಮುಂದೆ, ಪೂರ್ವ ದಿಕ್ಕಿಗೆ ಇಳುಕೊಳ್ಳುವವರು ಮೋಶೆ
ಯೂ, ಆಕೋನನೂ, ಅವನ ಮಕ್ಕಳೂ; ಇವರು ಇಸ್ರಯೇ
ಲಿನ ಮಕ್ಕಳಿಗಾಗಿ ಪರಿಶುದ್ಧ ಕಾಯಿದೆಯನ್ನು ಕಾಯುವವರು;
೩೯ ಪರನು ಸಮೀಪಿಸಿದರೆ, ಸಾಯ ಬೇಕು. ಮೋಶೆಯೂ ಆಕೋ
ನನೂ ಕರ್ತನ ಅಪ್ಪಣೆಯಂತೆ ಗೋತ್ರಗಳ ಪ್ರಕಾರ ಲೆಖ್ಖ ಮಾ
ಡಿದ ಎಲ್ಲಾ ಲೇವ್ಯರೂ, ತಿಂಗಳಾದ, ಅದಕ್ಕೆ ಅಧಿಕವಾದ ಪ್ರಾ
ಯವುಳ್ಳ ಗಂಡಸರೆಲ್ಲರೂ, ಇಪ್ಪತ್ತೆರಡು ಸಾವಿರ ಮಂದಿ.
೪೦ ಇದಲ್ಲದೆ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದ
ರೆ—ಇಸ್ರಯೇಲ್ ಮಕ್ಕಳಲ್ಲಿರುವ ಚೊಚ್ಚಲ ಗಂಡಸರನ್ನೆಲ್ಲಾ,
ತಿಂಗಳಾದ, ಅದಕ್ಕೆ ಅಧಿಕವಾದ ಪ್ರಾಯವುಳ್ಳವರನ್ನು ಎಣಿಸಿ,
೪೧ ಅವರ ಹೆಸರುಗಳ ಲೆಖ್ಖವನ್ನು ತಕ್ಕೊಳ್ಳೋ—ಮತ್ತು ಇಸ್ರಯೇಲ್
ಮಕ್ಕಳಲ್ಲಿರುವ ಸಕಲ ಚೊಚ್ಚಲಾದವರಿಗೆ ಬದಲಾಗಿ ಲೇವ್ಯರ
ನ್ನೂ, ಇಸ್ರಯೇಲ್ ಮಕ್ಕಳ ದನಗಳಲ್ಲಿರುವ ಸಕಲ ಚೊಚ್ಚಲಾ
ದವುಗಳಿಗೆ ಬದಲಾಗಿ ಲೇವ್ಯರ ದನಗಳನ್ನೂ ಕರ್ತನಾಗಿರುವ
೪೨ ನನಗೋಸ್ಕರ ತಕ್ಕೊಳ್ಳೋ. ಆಗ ಮೋಶೆ ಕರ್ತನು ಆಜ್ಞಾಪಿಸಿ
ದ ಹಾಗೆ, ಇಸ್ರಯೇಲ್ ಮಕ್ಕಳಲ್ಲಿ ಚೊಚ್ಚಲಾದವರೆಲ್ಲರನ್ನು
೪೩ ಎಣಿಸಿದನು. ತಿಂಗಳಾದ, ಅದಕ್ಕೆ ಅಧಿಕವಾದ ಪ್ರಾಯವುಳ್ಳ
ಗಂಡಸರಾದ ಸಮಸ್ತ ಚೊಚ್ಚಲಿನವರು, ಹೆಸರುಗಳ ಲೆಖ್ಖದಲ್ಲಿ
ಎಣಿಸಲ್ಪಟ್ಟವರು, ಇಪ್ಪತ್ತೆರಡು ಸಾವಿರದ ಇನ್ನೂರ ಎಪ್ಪ
ತ್ತು ಮೂರು ಮಂದಿಯಾಗಿದ್ದರು.
೪೪ ಇದಲ್ಲದೆ ಕರ್ತನು ಮಾತಾಡಿ ಮೋಶೆಗೆ ಹೇಳಿದ್ದೇನಂದರೆ—
೪೫ ಇಸ್ರಯೇಲ್ ಮಕ್ಕಳಲ್ಲಿ ಸಕಲ ಚೊಚ್ಚಲಾದವರಿಗೆ ಬದಲಾಗಿ ಲೇ
ವ್ಯರನ್ನೂ, ಅವರ ದನಗಳಿಗೆ ಬದಲಾಗಿ ಲೇವ್ಯರ ದನಗಳ
ನ್ನೂ, ತಕ್ಕೊಳ್ಳೋ; ಲೇವ್ಯರು ನನ್ನವರಾಗಲಿ; ನಾನೇ ಕರ್ತನು.
೪೬ ಮತ್ತು ಇಸ್ರಯೇಲ್ ಮಕ್ಕಳಲ್ಲಿ ಚೊಚ್ಚಲಿನವರಲ್ಲಿ, ಲೇವ್ಯರಿಗೆ ಹೆ
ಚ್ಚಾಗಿರುವ ಇನ್ನೂರ ಎಪ್ಪತ್ತು ಮೂರು ಮಂದಿಯ ವಿಮೋ
೪೭ ಚನೆ ಕ್ರಯವಾಗಿ ತಲೆ ತಲೆಗೆ ಐದು ಶೆಕೆಲುಗಳನ್ನು ತಕ್ಕೊಳ್ಳೋ;
ಪರಿಶುದ್ಧ ಶೆಕೆಲಿನ ಮೇರೆಗೆ, ಶೆಕೆಲಿಗೆ ಇಪ್ಪತ್ತು ಗೇರ, ಈ ಪ್ರ
೪೮ ಕಾರ ತಕ್ಕೊಳ್ಳ ಬೇಕು. ಮತ್ತು ಅವರೊಳಗೆ ಹೆಚ್ಚಾಗಿರುವ
ವರ ವಿಮೋಚನೆ ಕ್ರಯವಾದ ಆ ಬೆಳ್ಳಿಯನ್ನು ಆಕೋನನಿಗೂ
೪೯ ಅವನ ಮಕ್ಕಳಿಗೂ ನೀನು ಕೊಡ ಬೇಕು. ಹೀಗೆ ಮೋಶೆ ಲೇ
ವ್ಯರಿಂದ ವಿಮೋಚಿಸಲ್ಪಟ್ಟವರಿಗೆ ಹೆಚ್ಚು ಜನರ ವಿಮೋಚನೆ
೫೦ ಕ್ರಯವಾದ ಬೆಳ್ಳಿಯನ್ನು ತಕ್ಕೊಂಡನು. ಇಸ್ರಯೇಲ್ ಮಕ್ಕ
ಳ ಚೊಚ್ಚಲಿನವರಿಂದ ಪರಿಶುದ್ಧ ಶೆಕೆಲಿನ ಮೇರೆಗೆ ಸಾವಿರದ
ಮುನ್ನೂರ ಐವತ್ತೈದು ಶೆಕೆಲುಗಳ ಬೆಳ್ಳಿಯನ್ನು ತಕ್ಕೊಂ
೫೧ ಡನು; ಕರ್ತನು ಮೋಶೆಗೆ ಆಜ್ಞಾಪಿಸಿದಂತೆ, ವಿಮೋಚನೆಯ ಬೆಳ್ಳಿ
ಯನ್ನು ಆಕೋನನಿಗೂ ಅವನ ಮಕ್ಕಳಿಗೂ ಕೊಟ್ಟನು.

## ೪. ಸಂಧಿ.

೧ ಕರ್ತನು ಮೋಶೆಯ ಸಂಗಡಲೂ ಆಕೋನನ ಸಂಗಡಲೂ
೨ ಮಾತಾಡಿ ಹೇಳಿದ್ದೇನಂದರೆ, ಲೇವಿಯ ಮಕ್ಕಳೊಳಗಿಂದ ಅವ
ರ ಗೋತ್ರಗಳ ಪ್ರಕಾರವಾಗಿಯೂ, ಅವರ ತಂದೆ ಮನೆಗಳ ಪ್ರ
3 ಕಾರವಾಗಿಯೂ, ಮೂವತ್ತು ವರುಷವಾದ, ಅದಕ್ಕೆ ಅಧಿಕವಾದ
ಪ್ರಾಯವುಳ್ಳವರನ್ನು, ಐವತ್ತು ವರುಷದವರ ಪರ್ಯಂತರ,
ಸಭೆಯ ಗುಡಾರದಲ್ಲಿ ಕೆಲಸ ಮಾಡುವದಕ್ಕೆ ಕ್ರಮದಲ್ಲಿ ಸೇರು
ವವರನ್ನೆಲ್ಲಾ, ಎಣಿಸಿ, ಕೊಹತನ ಮಕ್ಕಳ ಲೆಖ್ಖವನ್ನು ತಕ್ಕೊಳ್ಳಿರಿ.
೪ ಸಭೆಯ ಗುಡಾರದಲ್ಲಿ ಕೊಹತನ ಮಕ್ಕಳ ಸೇವೆ ಯಾವದಂ
೫ ದರೆ—ಅತಿ ಪರಿಶುದ್ಧವಾದವುಗಳೇ. ದಂಡು ಹೊರಡುವಾಗ, ಆ
ಕೋನನೂ ಅವನ ಮಕ್ಕಳೂ ಒಳಗೆ ಹೋಗಿ, ತೆರೆಯನ್ನು
೬ ಇಳಿಸಿ, ಅದರಿಂದ ಸಾಕ್ಷಿಯ ಪೆಟ್ಟಿಗೆಯನ್ನು ಮುಚ್ಚಿ, ಅದರ

ಮೇಲೆ ತಾಹಷ್ ತೊಗಲಿನ ಮುಚ್ಚಳವನ್ನೂ ಇಟ್ಟು, ಅದರ ಮೇ
ಲ್ಭಾಗದಲ್ಲಿ ಪೂರ್ಣವಾದ ನೀಲಿ ವಸ್ತ್ರವನ್ನೂ ಹಾಸಿ, ಅದರ
೩ ಕೋಲುಗಳನ್ನು ಇಡ ಬೇಕು. ಮತ್ತು ಸಮುಖದ ಮೇಜಿನ
ಮೇಲೆ ಅವರು ನೀಲಿ ವಸ್ತ್ರವನ್ನು ಹಾಸಿ, ಅದರ ಮೇಲೆ ಹರಿವಾ
ಣಗಳನ್ನೂ, ಪಂಚ ಪಾತ್ರೆಗಳನ್ನೂ, ಮತ್ತು ಪಾನದ ಅರ್ಪಣೆ
ಯ ಕೂಜೆಗಳನ್ನೂ ಇಡ ಬೇಕು; ಮತ್ತು ನಿತ್ಯವಾದ ರೊಟ್ಟಿ
೪ ಅದರ ಮೇಲೆ ಇರ ಬೇಕು. ಮತ್ತು ಅನ್ನೆಲ್ಲವುಗಳ ಮೇಲೆ ಲಾಕಿ
ಬಣ್ಣದ ವಸ್ತ್ರವನ್ನು ಹಾಸಿ, ಅದನ್ನು ತಾಹಷ್ ತೊಗಲಿನ ಮು
ಚ್ಚಳದಿಂದ ಮುಚ್ಚಿಸಿ, ಅದರ ಕೋಲುಗಳನ್ನೂ ಇಡ ಬೇಕು.
೫ ಇದಲ್ಲದೆ ಅವರು ನೀಲದ ವಸ್ತ್ರವನ್ನು ತಕ್ಕೊಂಡು, ಅದರಿಂದ
ದೀಪಸ್ತಂಭವನ್ನೂ, ಅದರ ದೀಪಗಳನ್ನೂ, ಅದರ ಚಿಮುಟಿಗಳ
ನ್ನೂ, ತಟ್ಟೆಗಳನ್ನೂ, ಅದಕ್ಕೆ ಸೇವೆ ಮಾಡುವ ಸಕಲ ಎಣ್ಣೆ
೬ ಯ ಪಾತ್ರೆಗಳನ್ನೂ ಮುಚ್ಚ ಬೇಕು. ಅದನ್ನೂ, ಅದರ ಎ
ಲ್ಲಾ ಸಾಮಾನುಗಳನ್ನೂ ತಾಹಷ್ ತೊಗಲಿನ ಮುಚ್ಚಳದೊಳಗೆ
ಇಟ್ಟು, ಅತ್ತ ದಂಡೆಯ ಮೇಲೆ ಹಾಕ ಬೇಕು. ಇದಲ್ಲದೆ ಭಂಗಾರ
೭ ದ ಬಲಿಪೀಠದ ಮೇಲೆ ಅವರು ನೀಲ ವಸ್ತ್ರವನ್ನು ಹಾಸಿ, ಅದನ್ನು
ತಾಹಷ್ ತೊಗಲಿನ ಮುಚ್ಚಳದಿಂದ ಮುಚ್ಚಿ, ಅದರ ಕೋಲುಗ
ಳನ್ನು ಇಡ ಬೇಕು. ಮತ್ತು ಪರಿಶುದ್ಧ ಸ್ಥಳದಲ್ಲಿ ಸೇವೆ ಮಾಡುವ
೮ ಸೇವೆಯ ಎಲ್ಲಾ ಸಾಮಾನುಗಳನ್ನು ಅವರು ತಕ್ಕೊಂಡು, ನೀಲ
ವಸ್ತ್ರದೊಳಗೆ ಕಟ್ಟಿ, ಅದನ್ನು ತಾಹಷ್ ತೊಗಲಿನ ಮುಚ್ಚಳದ
೯ ಲ್ಲಿ ಮುಚ್ಚಿ, ಅತ್ತದಂಡೆ ಮೇಲೆ ಹಾಕ ಬೇಕು. ಮತ್ತು ಬಲಿಪೀ
ಠದ ಬೂದಿ ತೆಗೆದು, ಅದರ ಮೇಲೆ ರಕ್ತ ವರ್ಣದ ವಸ್ತ್ರವನ್ನು
೧೦ ಹಾಸಿ, ಅದರ ಮೇಲೆ ಸೇವೆ ಮಾಡುವ ಎಲ್ಲಾ ಸಾಮಾನುಗಳ
ನ್ನೂ, ಅಗ್ನಿ ಪಾತ್ರೆಗಳನ್ನೂ, ಮುಳ್ಳುಗಳನ್ನೂ, ಸಲಿಕೆಗಳ
ನ್ನೂ, ಪಾತ್ರೆಗಳನ್ನೂ, ಬಲಿಪೀಠದ ಎಲ್ಲಾ ಸಾಮಾನುಗಳನ್ನೂ
ಅದರ ಮೇಲಿಟ್ಟು, ತಾಹಷ್ ತೊಗಲಿನ ಮುಚ್ಚಳವನ್ನೂ ಹಾಸಿ,
೧೩ ಅದರ ಕೋಲುಗಳನ್ನು ಇಡ ಬೇಕು. ಆಕೋನನೂ ಅವನ ಮ
ಕ್ಕಳೂ ಪರಿಶುದ್ಧ ಸ್ಥಳವನ್ನೂ, ಪರಿಶುದ್ಧ ಸ್ಥಳದ ಎಲ್ಲಾ ಸಾ
ಮಾನುಗಳನ್ನೂ ಮುಚ್ಚಿ ಅದ ಮೇಲೆ, ದಂಡು ಹೊರಡುವಾಗ,
ಕೊಹತನ ಮಕ್ಕಳು ಅದನ್ನು ವೈಯ್ಯುವದಕ್ಕೆ ಪ್ರವೇಶಿಸ ಬೇ
ಕು; ಅದರೆ ಅವರು ಸಾಯದ ಹಾಗೆ, ಪರಿಶುದ್ಧವಾದದ್ದನ್ನು ಮು
ಟ್ಟ ಬಾರದು; ಇದು ಸಭೆಯ ಗುಡಾರದಲ್ಲಿ ಕೊಹತನ ಮಕ್ಕಳ
ಹೊರೆಯು.

೧೬ ಮತ್ತು ಯಾಜಕನಾದ ಆಕೋನನ ಮಗನಾದ ಎಲೆಯಾಜ
ರನ ವಿಚಾರವೇನಂದರೆ—ದೀಪದ ಎಣ್ಣೆಯೂ, ಸುಗಂಧ ದೂಪ
ವೂ, ನಿತ್ಯ ಕಾಣಿಕೆಯೂ, ಅಭಿಷೇಕದ ಎಣ್ಣೆಯೂ, ಸಮಸ್ತ
ನಿವಾಸವೂ, ಅದರಲ್ಲಿರುವ ಸಕಲವೂ, ಪರಿಶುದ್ಧ ಸ್ಥಳವೂ, ಅದ
ರ ಸಾಮಾನುಗಳೂ.

೧೭ ಇದಲ್ಲದೆ ಕರ್ತನು ಮೋಶೆಯ, ಆಕೋನನ ಸಂಗಡ ಮಾ
೧೮ ತಾಡಿ ಹೇಳ್ದೆನೆಂದರೆ—ನೀವು ಲೇವ್ಯರೊಳಗಿಂದ ಕೊಹತಿಯ
೧೯ ರ ವಂಶಗಳ ಕುಲವನ್ನು ಕಡಿದು ಹಾಕ ಬೇಡಿರಿ. ಅವರು ಅತಿ
ಪರಿಶುದ್ಧವಾದವುಗಳಿಗೆ ಸಮೀಪಿಸುವಾಗ ಸಾಯದೆ ಬದುಕುವ
ಹಾಗೆ, ಅವರಿಗೆ ಮಾಡ ಬೇಕಾದದ್ದೇನಂದರೆ—ಆಕೋನನೂ ಅ
ವನ ಮಕ್ಕಳೂ ಪ್ರವೇಶಿಸಿ, ಅವರಲ್ಲಿ ಒಬ್ಬೊಬ್ಬನನ್ನು ಅವನ
೨೦ ಕೆಲಸಕ್ಕೂ ಅವನ ಹೊರೆಗೂ ಇಡ ಬೇಕು. ಆದರೆ ಅವರು
ಸಾಯದ ಹಾಗೆ, ಪರಿಶುದ್ಧವಾದದ್ದನ್ನು ಮುಚ್ಚುವ ಸಮಯದಲ್ಲಿ
ನೋಡಲಿಕ್ಕೆ ಬರ ಬೇಡ.

೧೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳ್ದೆನಂ
೨೦ ದರೆ—ಗೆರ್ಶೋನನ ಮಕ್ಕಳ ತೆಬ್ಬುವನ್ನೂ ಸಹ, ಅವರ ತಂದೆ ಮ
ನೆಗಳ ಪ್ರಕಾರವಾಗಿಯೂ ಅವರ ಗೋತ್ರಗಳ ಪ್ರಕಾರವಾಗಿಯೂ,
೨೩ ತಕ್ಕೋ—ಮೂವತ್ತು ವರುಷವಾದ, ಅದಕ್ಕೆ ಅಧಿಕವಾದ ಪ್ರಾ
ಯವುಳ್ಳವರನ್ನೂ, ಐವತ್ತು ವರುಷದವರ ಪರ್ಯಂತರ ಸಭೆಯ
ಗುಡಾರದಲ್ಲಿ ಸೇವೆ ಮಾಡುವ ಕ್ರಮದಲ್ಲಿ ಶೇರುವವರೆಲ್ಲರನ್ನೂ, ಎ
೨೪ ಣಿಸು. ಗೆರ್ಶೋನಿಕ ಗೋತ್ರಗಳ ಸೇವೆಯೂ ಹೊರೆಯೂ
೨೫ ಏನಂದರೆ—ಅವರು ನಿವಾಸದ ತೆರೆಗಳನ್ನೂ, ಸಭೆಯ ಗುಡಾರ
ನ್ನೂ, ಅದರ ಮುಚ್ಚಳವನ್ನೂ, ಅದರ ಮೇಲಾಗಿರುವ ತಾಹಷ್
ತೊಗಲಿನ ಮುಚ್ಚಳವನ್ನೂ, ಸಭೆಯ ಗುಡಾರದ ಬಾಗಲಿನ ತೆರೆಯ
೨೬ ನ್ನೂ, ಅಂಗಳದ ಪರದೆಗಳನ್ನೂ ನಿವಾಸವೂ ಬಲಿಪೀಠವೂ ಇ
ವುಗಳಿಗೆ ಸುತ್ತಲಿರುವ ಅಂಗಳದ ಬಾಗಲಿನ ತೆರೆಯನ್ನೂ, ಇವು
ಗಳ ಹಗ್ಗಗಳನ್ನೂ, ಇವುಗಳ ಸಾಹಿತ್ಯದ ಎಲ್ಲಾ ಸಾಮಾನುಗ
ಳನ್ನೂ ಹೊತ್ತು ಕೊಳ್ಳ ಬೇಕು; ಅವುಗಳಿಗೆ ಮಾಡ ತಕ್ಕ ಎ
೨೭ ಲ್ಲಾ ಸೇವೆಯನ್ನು ಅವರು ಮಾಡ ಬೇಕು. ಆಕೋನನೂ ಅವ
ನ ಮಕ್ಕಳೂ ಆಜ್ಞಾಪಿಸುವ ಹಾಗೆಯೇ ಗೆರ್ಶೋನನ ಮಕ್ಕ
ಳ ಸೇವೆಯೆಲ್ಲಾ, ಅವರು ಹೊರ ತಕ್ಕದ್ದೆಲ್ಲಾ, ಮಾಡ ತಕ್ಕದ್ದೆ
ಲ್ಲಾ ಆಗ ಬೇಕು; ಮತ್ತು ನೀವು ಅವರ ಸಮಸ್ತ ಹೊರೆಯನ್ನು
೨೮ ಕಾಯಿದೆಯ ಪ್ರಕಾರ ಅವರಿಗೆ ನೇಮಿಸ ಬೇಕು. ಗೆರ್ಶೋನ
ನ ಮಕ್ಕಳು ಸಭೆಯ ಗುಡಾರದಲ್ಲಿ ಮಾಡುವ ಸೇವೆ ಇದೇ—ಅ
ವರ ಕಾಯಿದೆ ಯಾಜಕನಾದ ಆಕೋನನ ಮಗನಾದ ಇಥಮಾ
ರನ ಕೈ ಕೆಳಗೆ ಇರ ಬೇಕು.

೨೯ ಮೆರಾರಿಯ ಮಕ್ಕಳನ್ನು ಅವರ ಗೋತ್ರಗಳ ಪ್ರಕಾರವಾಗಿ
ಯೂ, ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಎಣಿಸ ಬೇ
೩೦ ಕು. ಮೂವತ್ತು ವರುಷವಾದ, ಅದಕ್ಕೆ ಅಧಿಕವಾದ ಪ್ರಾಯವು
ಳ್ಳವರನ್ನೂ, ಐವತ್ತು ವರುಷದವರ ಪರ್ಯಂತರ ಸಭೆಯ ಗು
ಡಾರದ ಸೇವೆ ಮಾಡುವವರ ಕ್ರಮದಲ್ಲಿ ಶೇರುವವರನ್ನೂ, ಎಣಿ
೩೧ ಸ ಬೇಕು. ಸಭೆಯ ಗುಡಾರದಲ್ಲಿ ಅವರು ಮಾಡ ತಕ್ಕ ಸಮಸ್ತ
ಸೇವೆಯ ಪ್ರಕಾರ, ಅವರ ಹೊರೆಯೂ ಕಾಯಿದೆಯೂ ಏನಂದ
ರೆ—ನಿವಾಸದ ಹಲಿಗೆಗಳೂ, ಅದರ ಅತ್ತ ತೊಲೆಗಳೂ, ಅದರ
೩೨ ಕುಂಭಗಳೂ, ಅದರ ಕಾಲುಗಳೂ, ಮತ್ತು ಸುತ್ತಲಿರುವ ಅಂಗಳ
ದ ಕಂಭಗಳೂ, ಅದರ ಕಾಲುಗಳೂ, ಅದರ ಗೂಟಿಗಳೂ, ಅವು
ಗಳ ಹಗ್ಗಗಳೂ, ಅವುಗಳ ಎಲ್ಲಾ ಸಾಮಾನುಗಳ ಪ್ರಕಾರವಾಗಿ
ಯೂ, ಅವುಗಳ ಸಮಸ್ತ ಸಾಹಿತ್ಯದ ಪ್ರಕಾರವಾಗಿಯೂ, ಅವ
ರ ಹೊರೆಯೂ ಕಾಯಿದೆಯೂ ಆಗಿರುವ ಸಾಮಾನನ್ನು ನೀ
೩೩ ವು ಹೆಸರಾಗಿ ಎಣಿಸ ಬೇಕು. ಮೆರಾರಿ ಮಕ್ಕಳ ಗೋತ್ರಗಳ
ಸೇವೆಯೂ ಸಭೆಯ ಗುಡಾರದಲ್ಲಿ ಅವರು ಮಾಡುವ ಸಮಸ್ತ
ಸೇವೆಯೂ ಇದೇ; ಅದು ಯಾಜಕನಾದ ಆಕೋನನ ಮಗನಾ
ದ ಇಥಮಾರನ ಕೈ ಕೆಳಗೆ ಇರ ಬೇಕು.

೩೪ ಆಗ ಮೋಶೆಯೂ, ಆಕೋನನೂ, ಸಭೆಯ ಪ್ರಭುಗಳೂ
ಕೊಹತನ ಮಕ್ಕಳನ್ನು ಅವರ ಗೋತ್ರಗಳ ಪ್ರಕಾರವಾಗಿಯೂ,
೩೫ ಅವರ ತಂದೆ ಮನೆಗಳ ಪ್ರಕಾರವಾಗಿಯೂ, ಮೂವತ್ತು ವರುಷ
ವಾದ, ಅದಕ್ಕೆ ಅಧಿಕವಾದ ಪ್ರಾಯವುಳ್ಳವರನ್ನು ಐವತ್ತು ವರು



ಷದವರ ಪರ್ಯಂತರ ಸಭೆಯ ಗುಡಾರದಲ್ಲಿ ಸೇವೆಗಾಗಿ ಕ್ರಮ
೩೬ ದಲ್ಲಿ ಶೇರುವವರೆಲ್ಲರನ್ನೂ, ಎಣಿಸಿದರು. ಗೋತ್ರಗಳ ಪ್ರಕಾ
ರ ಅವರಲ್ಲಿ ಎಣಿಸಲ್ಪಟ್ಟವರು ಎರಡು ಸಾವಿರದ ಏಳು ನೂರ
೩೭ ಐವತ್ತು ಮಂದಿಯಾಗಿದ್ದರು. ಮೋಶೆಯ ಕೈಯಿಂದ ಕರ್ತ
ನು ಅಪ್ಪಣೆ ಮಾಡಿದ ಹಾಗೆ, ಮೋಶೆಯೂ ಆಕೋನನೂ ಎ
ಣಿಸಿದ ಕೊಹತಿಯರ ಗೋತ್ರಗಳಲ್ಲಿ ಎಣಿಸಲ್ಪಟ್ಟವರೂ, ಆ
ಚಾರದ ಗುಡಾರದಲ್ಲಿ ಸೇವೆ ಮಾಡುವವರೆಲ್ಲರೂ, ಇವರೇ.

೩೮ ಗೆರ್ಶೋನನ ಮಕ್ಕಳಲ್ಲಿ ಅವರ ಗೋತ್ರಗಳ ಪ್ರಕಾರವಾಗಿ
ಯೂ, ಅವರ ತಂದೇ ಮನೆಗಳ ಪ್ರಕಾರವಾಗಿಯೂ, ಎಣಿಸಲ್ಪ
೩೯ ಟ್ಟವರು. ಮೂವತ್ತು ವರುಷವಾದ, ಅದಕ್ಕೆ ಅಧಿಕವಾದ ಪ್ರಾಯ
ವುಳ್ಳವರು, ಐವತ್ತು ವರುಷದವರ ಪರ್ಯಂತರ ಸಭೆಯ ಗು
೪೦ ಡಾರದಲ್ಲಿ ಸೇವಿಸುವದಕ್ಕಾಗಿ ಕ್ರಮದಲ್ಲಿ ಶೇರುವವರೆಲ್ಲರು. ಅ
ವರ ಗೋತ್ರಗಳ ಪ್ರಕಾರವೂ, ಅವರ ತಂದೇ ಮನೆಗಳ ಪ್ರಕಾರ
ವೂ, ಅವರಲ್ಲಿ ಎಣಿಸಲ್ಪಟ್ಟವರು, ಎರಡು ಸಾವಿರದ ಆರು ನೂರ
೪೧ ಮೂವತ್ತು ಮಂದಿಯಾಗಿದ್ದರು. ಕರ್ತನ ಅಪ್ಪಣೆಯ ಹಾಗೆ
ಮೋಶೆಯೂ ಆಕೋನನೂ ಎಣಿಸಿದ ಗೆರ್ಶೋನನ ಮಕ್ಕ
ಳ ಗೋತ್ರಗಳಲ್ಲಿ ಎಣಿಸಲ್ಪಟ್ಟವರೂ, ಸಭೆಯ ಗುಡಾರದಲ್ಲಿ ಸೇ
ವೆ ಮಾಡುವವರೆಲ್ಲರೂ, ಇವರೇ.

೪೨ ಮೆರಾರಿಯ ಮಕ್ಕಳಲ್ಲಿ ಅವರ ಗೋತ್ರಗಳ ಪ್ರಕಾರವಾಗಿ
ಯೂ, ಅವರ ತಂದೇ ಮನೆಗಳ ಪ್ರಕಾರವಾಗಿಯೂ, ಎಣಿಸಲ್ಪ
೪೩ ಟ್ಟವರು: ಮೂವತ್ತು ವರುಷವಾದ, ಅದಕ್ಕೆ ಅಧಿಕವಾದ ಪ್ರಾ
ಯವುಳ್ಳವರು ಐವತ್ತು ವರುಷದವರ ಪರ್ಯಂತರ ಸಭೆಯ
೪೪ ಗುಡಾರದಲ್ಲಿ ಸೇವಿಸುವದಕ್ಕಾಗಿ ಕ್ರಮದಲ್ಲಿ ಶೇರುವವರೆಲ್ಲರು.
ಅವರ ಗೋತ್ರಗಳ ಪ್ರಕಾರ ಅವರಲ್ಲಿ ಎಣಿಸಲ್ಪಟ್ಟವರು, ಮೂ
೪೫ ರು ಸಾವಿರದ ಇನ್ನೂರು ಮಂದಿಯಾಗಿದ್ದರು. ಮೋಶೆಯ ಕೈ
ಯಿಂದ ಕರ್ತನು ಅಪ್ಪಣೆ ಮಾಡಿದ ಹಾಗೆ, ಮೋಶೆಯೂ ಆ
ಕೋನನೂ ಎಣಿಸಿದ ಮೆರಾರಿ ಗೋತ್ರಗಳಲ್ಲಿ ಎಣಿಸಲ್ಪಟ್ಟವ
ರು ಇವರೇ.

೪೬ ಮೋಶೆಯೂ ಆಕೋನನೂ ಇಸ್ರಯೇಲ್ಯರ ಪ್ರಭುಗಳೂ
ಎಣಿಸಿದ ಸಮಸ್ತ ಲೇವ್ಯರು ಅವರ ಗೋತ್ರಗಳ ಪ್ರಕಾರವಾಗಿ
ಯೂ, ಅವರ ತಂದೇ ಮನೆಗಳ ಪ್ರಕಾರವಾಗಿಯೂ, ಮೂವತ್ತು
೪೭ ವರುಷವಾದ, ಅದಕ್ಕೆ ಅಧಿಕವಾದ ಪ್ರಾಯವುಳ್ಳವರು ಐವತ್ತು
ವರುಷದವರ ಪರ್ಯಂತರ, ಸಭೆಯ ಗುಡಾರದಲ್ಲಿ ಕೆಲಸ ಮಾ
ಡುವದಕ್ಕಾಗಿಯೂ, ಹೊರುವದಕ್ಕಾಗಿಯೂ, ಬರುವವರೆಲ್ಲ
೪೮ ರು; ಅವರಲ್ಲಿ ಎಣಿಸಲ್ಪಟ್ಟವರು—ಎಂಟು ಸಾವಿರದ ಐನೂರ
೪೯ ಎಂಭತ್ತು ಮಂದಿ. ಮೋಶೆಯ ಕೈಯಿಂದ ಕರ್ತನು ಅಪ್ಪಣೆ
ಮಾಡಿದ ಹಾಗೆ, ಅವರನ್ನು ಅವರವರ ಸೇವೆಗಾಗಿಯೂ, ಅವರ
ವರ ಹೊರೆಗಾಗಿಯೂ ಅವರನ್ನು ಎಣಿಸಿದರು.

## ೫. ಸಂಧಿ.

೧ ಇದಲ್ಲದೆ ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳಿ
೨ ದ್ದೇನಂದರೆ, ಕುಷ್ಠವುಳ್ಳವರೆಲ್ಲರನ್ನೂ ಮೇಹವುಳ್ಳವರೆಲ್ಲರ
ನ್ನೂ ಹೆಣದಿಂದ ಅಶುಚಿಯಾದವರೆಲ್ಲರನ್ನೂ ದಂಡಿನೊಳಗಿಂ
ದ ಕಳುಹಿಸ ಬೇಕೆಂದು, ಇಸ್ರಯೇಲ್ ಮಕ್ಕಳಿಗೆ ಆಜ್ಞಾಪಿಸು.
೩ ಗಂಡಸಾಗಲಿ, ಹೆಂಗಸಾಗಲಿ, ನೀವು ಹೊರಗೆ ಕಳುಹಿಸ ಬೇಕು;
ನಾನು ಅವರ ಮಧ್ಯದಲ್ಲಿ ವಾಸ ಮಾಡುವ ಅವರ ದಂಡನ್ನು
ಅವರು ಅಶುಚಿ ಮಾಡದ ಹಾಗೆ, ನೀವು ಅವರನ್ನು ದಂಡಿನ ಹೊ
೪ ರಗೆ ಕಳುಹಿಸ ಬೇಕು. ಇಸ್ರಯೇಲ್ ಮಕ್ಕಳು ಹಾಗೆ ಮಾಡಿ, ಅ
ವರನ್ನು ದಂಡಿನೊಳಗಿಂದ ಹೊರಗೆ ಕಳುಹಿಸಿದರು. ಕರ್ತನು
ಮೋಶೆಗೆ ಹೇಳ್ದದ ಹಾಗೆ ಇಸ್ರಯೇಲ್ ಮಕ್ಕಳು ಮಾಡಿದರು.

೫ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳ್ದೇ
೬ ನಂದರೆ, ಇಸ್ರಯೇಲ್ ಮಕ್ಕಳ ಸಂಗಡ ಮಾತಾಡ ಬೇಕಾದದ್ದೇ
ನಂದರೆ—ಪುರುಷನಾದರೂ, ಸ್ತ್ರೀಯಾದರೂ, ಮನುಷ್ಯರು
ಮಾಡುವ ಯಾವದೊಂದು ಪಾಪ ಮಾಡಿ, ಕರ್ತನಿಗೆ ಬಿಕ್ಕೋ
ಧವಾಗಿ ಅಕೃತ್ಯ ಮಾಡಿದರೆ, ಅಂಥವನು ಅಪರಾಧಿಯಾದರೆ,
೭ ಅವರು ಮಾಡಿದ ಪಾಪವನ್ನು ಅರಿಕೆ ಮಾಡ ಬೇಕು; ಅಪರಾಧ
ದ ಸರಿ ಸಾಟಿ ಕೊಟ್ಟು, ಅದರ ಸಂಗಡ ಅದರ ಐದನೇ ಪಾಲ
ನ್ನು ಕೂಡಿಸಿ, ಯಾರಿಗೆ ಅಪರಾಧ ಮಾಡಿದರೋ, ಅವರಿಗೆ ಕೊ
೮ ಡ ಬೇಕು. ಆದರೆ ಅಪರಾಧವನ್ನು ಹಿಂದೆ ಕೊಡಲಿಕ್ಕೆ ಆ ಮ
ನುಷ್ಯನಿಗೆ ಬಂಧು ಇಲ್ಲದಿದ್ದರೆ, ಆ ಸಲ್ಲಿಸಿದ ಅಪರಾಧವು, ಅ
ವನ ನಿಮಿತ್ತ ಪಾಪ ಮುಚ್ಚುವ ಟಗರಿನ ಹೊರ್ತಾಗಿ, ಕರ್ತನ
೯ ದೂ ಯಾಜಕನದೂ ಆಗಿರ ಬೇಕು. ಇದಲ್ಲದೆ ಇಸ್ರಯೇಲ್
ಮಕ್ಕಳು ತರುವ ಸಕಲ ಪರಿಶುದ್ಧವಾದವುಗಳಲ್ಲಿ ಎತ್ತುವ ಬಲಿಗ
೧೦ ಳೆಲ್ಲಾ ಯಾಜಕನಿಗೆ ಆಗ ಬೇಕು. ಪ್ರತಿ ಮನುಷ್ಯನ ಪರಿಶುದ್ಧ
ವಾದವುಗಳು ಅವನಿಗೆ ಆಗ ಬೇಕು; ಅವನವನು ಯಾಜಕನಿಗೆ
ಕೊಟ್ಟದ್ದೂ ಅವನಿಗಾಗ ಬೇಕು.

೧೧ ಇದಲ್ಲದೆ ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳ್ದೇ
೧೨ ನಂದರೆ, ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ
ಹೇಳ್ಳ ಬೇಕಾದದ್ದೇನಂದರೆ—ಯಾವನೊಬ್ಬನ ಹೆಂಡತಿ ಜಾರಿ,
೧೩ ಅವನಿಗೆ ಅಕೃತ್ಯ ಮಾಡಿದ್ದರೆ, ಒಬ್ಬನು ಅವಳ ಸಂಗಡ ಮಲ
ಗಿ, ಸಂಗಮ ಮಾಡಿದ್ದು, ಅವಳ ಗಂಡನ ಕಣ್ಣುಗಳಿಗೆ ಮರೆಯಾ
ಗಿದ್ದರೆ, ಅವಳು ಅಶುದ್ಧವಾದಳೆಂಬ ಮಾತು ಅತಿಗೆ ಇದ್ದರೆ;
ಅವಳ ಬಳಿಯಲ್ಲಿ ಸಾಕ್ಷಿ ಇಲ್ಲದೆ, ಅವಳು ಹಿಡಿಯಲ್ಪಡದೆ ಇದ್ದ
೧೪ ರೆ; ಗಂಡನ ಮೇಲೆ ಕೋಪದ ಆತ್ಮ ಬಂದು, ಅವನು ಅಶುದ್ಧ
ಳಾದ ತನ್ನ ಹೆಂಡತಿಯ ಮೇಲೆ ಕೋಪ ಪಟ್ಟರೆ, ಇಲ್ಲವೇ
ಕೋಪದ ಆತ್ಮವು ಅವನ ಮೇಲೆ ಬಂದು, ಅಶುದ್ಧಳಾಗದೆ ಇರು
೧೫ ವ ತನ್ನ ಹೆಂಡತಿಯ ಮೇಲೆ ಕೋಪ ಪಟ್ಟರೆ, ಆ ಪುರುಷ
ನು ತನ್ನ ಹೆಂಡತಿಯನ್ನು ಯಾಜಕನ ಬಳಿಗೆ ತಂದು, ಅವಳ
ಗೋಸ್ಕರ ಕಾಣಿಕೆಯಾಗಿ ಏಫದ ಹತ್ತನೇ ಪಾಲು ಜವೆ ಗೋ
ಧಿ ಹಿಟ್ಟನ್ನು ತರ ಬೇಕು. ಅದರ ಮೇಲೆ ಎಣ್ಣೆಯನ್ನಾದರೂ
ಸಾಂಬ್ರಾಣಿಯನ್ನಾದರೂ ಹಾಕ ಬಾರದು; ಯಾಕಂದರೆ ಅದು
ಕೋಪದ ಕಾಣಿಕೆಯೂ, ಅಪರಾಧವನ್ನು ಜ್ಞಾಪಕಕ್ಕೆ ತರುವಂ
ಥ ಕಾಣಿಕೆಯೂ, ಆಗಿದೆ.

೧೬ ಮತ್ತು ಯಾಜಕನು ಅವಳನ್ನು ಸಮೀಪಕ್ಕೆ ಕರೆದು, ಕರ್ತ
೧೭ ನ ಸಮುಖದಲ್ಲಿ ನಿಲ್ಲಿಸ ಬೇಕು. ಮತ್ತು ಯಾಜಕನು ಪವಿತ್ರ
ವಾದ ನೀರನ್ನು ಮಣ್ಣಿನ ಗಡಿಗೆಯಲ್ಲಿ ತಕ್ಕೊಳ್ಳ ಬೇಕು; ನಿವಾ
ಸದ ನೆಲದಲ್ಲಿರುವ ಧೂಳನ್ನು ಯಾಜಕನು ತಕ್ಕೊಂಡು, ಆ ನೀ
೧೮ ರೊಳಗೆ ಹಾಕ ಬೇಕು. ಮತ್ತು ಯಾಜಕನು ಆ ಸ್ತ್ರೀಯನ್ನು
ಕರ್ತನ ಸಮುಖದಲ್ಲಿ ನಿಲ್ಲಿಸಿ, ಸ್ತ್ರೀಯ ತಲೆಯನ್ನು ಬಿಚ್ಚಿ
ಮಾಡಿ, ಅವಳ ಕೈಗಳಲ್ಲಿ ಕೋಪದ ಕಾಣಿಕೆಯಾಗಿರುವ ಜ್ಞಾಪ

ಕದ ಕಾಣಿಕೆಯನ್ನು ಇಡ ಬೇಕು; ಆದರೆ ಯಾಜಕನ ಕೈಯಲ್ಲಿ
೧೯ ತಪಿಸುವಂಥ ಕಹಿಯಾದ ನೀರು ಇರ ಬೇಕು. ಆಗ ಯಾಜಕ
ನು ಅವಳನ್ನು ಪ್ರಮಾಣ ಮಾಡಿಸಿ, ಸ್ತ್ರೀಗೆ ಹೇಳ ಬೇಕಾದ
ದ್ದು—ಒಬ್ಬ ಪುರುಷನು ನಿನ್ನ ಸುಗತ ಸಂಗಮ ಮಾಡದೆ, ನೀ
ನು ಅಪವಿತ್ರಳಾಗಿ ನಿನ್ನ ಗಂಡನನ್ನು ಬಿಟ್ಟು ಜಾರತ್ವ ಮಾಡದೆ
೨೦ ಇದ್ದರೆ, ತಪಿಸುವಂಥ ಈ ಕಹಿಯಾದ ನೀರಿಗೆ ನಿರಪರಾಧಿಯಾಗು.
ಆದರೆ ನೀನು ನಿನ್ನ ಗಂಡನನ್ನು ಬಿಟ್ಟು, ಜಾರತ್ವ ಮಾಡಿ, ಅಶು
ದ್ಧಳಾಗಿದ್ದರೆ, ನಿನ್ನ ಗಂಡನ ಹೊರ್ತಾಗಿ ಮತ್ತೊಬ್ಬನು ನಿನ್ನ
೨೧ ಸಂಗಡ ಸಂಗಮ ಮಾಡಿದ್ದರೆ—ಯಾಜಕನು ಆ ಸ್ತ್ರೀಗೆ ಹೇಳ
ಬೇಕಾದದ್ದೇನಂದರೆ—ಕರ್ತನು ನಿನ್ನ ತೊಡೆಯನ್ನು ಕ್ಷೀಣಿಸ
ಲೂ, ನಿನ್ನ ಹೊಟ್ಟೆಯನ್ನು ಉಬ್ಬಿಸಲೂ ಮಾಡುವದರಿಂದ
ಕರ್ತನು ನಿನ್ನನ್ನು ನಿನ್ನ ಜನರೊಳಗೆ ಶಾಪಕ್ಕಾಗಿಯೂ ಪ್ರ
೨೨ ಮಾಣಕ್ಕಾಗಿಯೂ ಇಡಲಿ. ತಪಿಸುವಂಥ ಈ ನೀರು ಹೊಟ್ಟೆ
ಯನ್ನು ಉಬ್ಬಿಸುವದಕ್ಕೂ ತೊಡೆಯನ್ನು ಕ್ಷೀಣಿಸ ಮಾಡುವ
ದಕ್ಕೂ ನಿನ್ನ ಕರುಳುಗಳೊಳಗೆ ಹೋಗುವದು; ಈ ಪ್ರಕಾರ
ಯಾಜಕನು ಆ ಸ್ತ್ರೀಯನ್ನು ಶಾಪದ ಆಣೆಯಿಂದ ಪ್ರಮಾಣ
ಮಾಡಿಸ ಬೇಕು; ಇದಕ್ಕೆ ಆ ಸ್ತ್ರೀಯು ಹಾಗಾಗಲಿ, ಹಾಗಾಗಲಿ,
೨೩ ಅನ್ನ ಬೇಕು. ಇದಲ್ಲದೆ ಯಾಜಕನು ಈ ಶಾಪವನ್ನು ಪುಸ್ತಕ
೨೪ ದಲ್ಲಿ ಬರೆದು, ಕಹಿಯಾದ ನೀರಿನಿಂದ ಅಳಿಸಿ, ಆ ಸ್ತ್ರೀಗೆ ತಪಿ
ಸುವಂಥ ಕಹಿಯಾದ ನೀರನ್ನು ಕುಡಿಸ ಬೇಕು; ಆಗ ತಪಿಸುವಂ
ಥ ನೀರು ಅವಳೊಳಗೆ ಶೇರಿ ಕಹಿಯಾಗುವದು.

೨೫ ಇದಲ್ಲದೆ ಯಾಜಕನು ಆ ಸ್ತ್ರೀಯ ಕೈಯಿಂದ ಕೋಪದ
ಕಾಣಿಕೆಯನ್ನು ತಕ್ಕೊಂಡು, ಆ ಕಾಣಿಕೆಯನ್ನು ಕರ್ತನ ಸ
ಮುಖದಲ್ಲಿ ಅಲ್ಲಾಡಿಸಿ, ಬಲಿಪೀಠದ ಸಮೀಪಕ್ಕೆ ತರ ಬೇಕು.
೨೬ ಆಗ ಯಾಜಕನು ಕಾಣಿಕೆಯಿಂದ ಜ್ಞಾಪಕ ಭಾಗವಾಗಿ, ಒಂದು
ಹಿಡಿ ತಕ್ಕೊಂಡು, ಬಲಿಪೀಠದ ಮೇಲೆ ಸುಟ್ಟು, ಸ್ತ್ರೀಗೆ ಆ ನೀರ
ನ್ನು ಕುಡಿಸ ಬೇಕು.

೨೭ ಅವಳಿಗೆ ಆ ನೀರನ್ನು ಕುಡಿಸಿದ ಮೇಲೆ, ಅವಳು ಅಶುದ್ಧ
ಳಾಗಿ, ತನ್ನ ಗಂಡನಿಗೆ ಅಕೃತ್ಯ ಮಾಡಿದ್ದಾದರೆ, ತಪಿಸುವ ನೀ
ರು ಅವಳೊಳಗೆ ಶೇರಿ, ಕಹಿಯಾಗುವದು; ಅವಳ ಹೊಟ್ಟೆ ಉ
ಬ್ಬಿ, ಅವಳ ತೊಡೆ ಕ್ಷೀಣವಾಗುವದು. ಆ ಸ್ತ್ರೀ ತನ್ನ ಜನರ
೨೮ ಮಧ್ಯದಲ್ಲಿ ಶಾಪಕ್ಕಾಗುವಳು. ಆದರೆ ಆ ಸ್ತ್ರೀ ಅಶುದ್ಧಳಲ್ಲ,
ಶುದ್ಧಳಾಗಿದ್ದರೆ, ಅವಳು ನಿರಪರಾಧಿಯಾಗಿದ್ದು, ಬೀಜ ಹೊಂ
ದುವಳು. ಕೋಪಕ್ಕೆ ನ್ಯಾಯವು ಇನೇ.

೨೯ ಒಬ್ಬ ಹೆಂಡತಿ ತನ್ನ ಗಂಡನನ್ನು ಬಿಟ್ಟು, ಜಾರತ್ವ ಮಾಡಿ,
೩೦ ಅಶುದ್ಧಳಾದರೆ; ಅಥವಾ ಪುರುಷನ ಮೇಲೆ ಕೋಪದ ಆತ್ಮ
ಬಂದು, ಅವನು ತನ್ನ ಹೆಂಡತಿಯ ಮೇಲೆ ಕೋಪ ಪಟ್ಟರೆ,
ಅವನು ಹೆಂಡತಿಯನ್ನು ಕರ್ತನ ಸಮುಖದಲ್ಲಿ ನಿಲ್ಲಿಸಲಿ; ಯಾ
ಜಕನು ಅವಳಿಗೆ ಈ ಸಮಸ್ತ ಆಜ್ಞೆಯ ಪ್ರಕಾರ ಮಾಡುವನು.
೩೧ ಆಗ ಗಂಡನು ನಿರಪರಾಧಿಯಾಗಿರುವನು, ಆದರೆ ಹೆಂಡತಿ ತನ್ನ
ಅಕ್ರಮವನ್ನು ಹೊತ್ತು ಕೊಳ್ಳುವಳು.

## ೬. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳಿದ್ದೇ
೨ ನಂದರೆ, ನೀನು ಇಸ್ರಯೇಲ್ ಮಕ್ಕಳಲ್ಲಿ ಸಂಗಡ ಮಾತಾಡ ಬೇ
ಕಾದದ್ದೇನಂದರೆ—ಪುರುಷನಾದರೂ ಸ್ತ್ರೀಯಾದರೂ ಕರ್ತನಿ
ಗೆ ಪ್ರತ್ಯೇಕಿಸಿ ಕೊಳ್ಳುವ ಹಾಗೆ, ನಜೀರನ ವಿಶೇಷವಾದ ಹರಿಕೆ
ಯನ್ನು ಮಾಡಿದರೆ, ದ್ರಾಕ್ಷೇ ರಸಕ್ಕೂ ಮದ್ಯಪಾನಕ್ಕೂ
ದೂರವಾಗಿದ್ದು, ದ್ರಾಕ್ಷೇ ರಸದ ಹುಳಿಯನ್ನೂ ಮದ್ಯಪಾನದ
ಹುಳಿಯನ್ನೂ ಕುಡಿಯದೆ, ದ್ರಾಕ್ಷೆಯಿಂದ ಮಾಡಿದ ಯಾವ
ಪಾನವನ್ನಾದರೂ ಕುಡಿಯದೆ, ಹಸಿದಾಗಲಿ, ಒಣಗಿದ್ದಾಗಲಿ,
೪ ದ್ರಾಕ್ಷೇ ಹಣ್ಣು ತಿನ್ನದೆ ಇರ ಬೇಕು. ತನ್ನ ನಜೀರತನದ ದಿವ
ಸಗಳೆಲ್ಲಾ ದ್ರಾಕ್ಷೆಯ ಬೀಜವು ಕೊದಲುಗೊಂಡು ಸಿಪ್ಪೆಯ
ಪರ್ಯಂತರಕ್ಕೂ ದ್ರಾಕ್ಷೆಯ ಬಳ್ಳಿಯಿಂದುಂಟಾದದರಲ್ಲಿ
೫ ಯಾವದನ್ನಾದರೂ ತಿನ್ನ ಬಾರದು. ಅವನ ನಜೀರತನದ
ಹರಿಕೆಯ ದಿವಸಗಳೆಲ್ಲಾ ಕ್ಷೌರ ಕತ್ತಿ ಅವನ ತಲೆಯ ಮೇಲೆ
ಬರ ಬಾರದು; ಅವನು ಕರ್ತನಿಗೆ ತನ್ನನ್ನು ಪ್ರತ್ಯೇಕಿಸಿ ಕೊಂ
ಡ ದಿವಸಗಳು ಪೂರ್ತಿಯಾಗುವ ಪರ್ಯಂತರ, ಅವನು ಪರಿಶು
ದ್ಧನಾಗಿರುವನು; ತನ್ನ ತಲೆಯ ಕೂದಲನ್ನು ಬೆಳ್ಳಸ ಬೇಕು.
೬ ಅವನು ಕರ್ತನಿಗೆ ತನ್ನನ್ನು ಪ್ರತ್ಯೇಕಿಸಿ ಕೊಂಡ ದಿವಸಗಳೆ
೭ ಲ್ಲಾ ಸತ್ತವನ ಬಳಿಗೆ ಬರ ಬಾರದು. ಅವನ ತಂದೆ ತಾಯಿ ಸ
ಹೋದರ ಸಹೋದರಿ ಸತ್ತರೂ, ಅವನು ಅವರಿಗೋಸ್ಕರ
ಅಪವಿತ್ರನಾಗ ಬಾರದು; ಯಾಕಂದರೆ ಅವನ ದೇವರ ನಜೀರತ
೮ ನವು ಅವನ ತಲೆಯ ಮೇಲದೆ. ಅವನ ನಜೀರತನದ ದಿವಸಗಳೆ
ಲ್ಲಾ ಅವನು ಕರ್ತನಿಗೆ ಪರಿಶುದ್ಧನಾಗಿದ್ದಾನೆ. ಮತ್ತು ಅವನ
ಬಳಿಯಲ್ಲಿ ಒಬ್ಬನು ಅಕಸ್ಮಾತ್ತಾಗಿ ಸತ್ತದರಿಂದ ಅವನ ನಜೀ
ರತನದ ತಲೆ ಅಶುದ್ಧವಾದರೆ, ಅವನು ಶುದ್ಧವಾಗುವ ದಿವಸದಲ್ಲಿ
ತನ್ನ ತಲೆಯನ್ನು ಬೋಳಿಸ ಬೇಕು. ಏಳನೇ ದಿವಸದಲ್ಲಿ
೧೦ ಬೋಳಿಸ ಬೇಕು. ಮತ್ತು ಎಂಟನೇ ದಿವಸದಲ್ಲಿ ಅವನು ಯಾ
ಜಕನ ಬಳಿಗೆ ಸಭೆಯ ಗುಡಾರದ ಬಾಗಲಿಗೆ ಎರಡು ಬೆಳವಗಳ
ನ್ನು, ಇಲ್ಲವೆ ಎರಡು ಪಾರಿವಾಳ ಮರಿಗಳನ್ನು ತರ ಬೇಕು.
೧೧ ಮತ್ತು ಯಾಜಕನು ಒಂದನ್ನು ಪಾಪದ ಬಲಿಯಾಗಿಯೂ,
ಬಂದನ್ನು ಹೋಮವಾಗಿಯೂ, ಅರ್ಪಿಸಿ, ಅವನು ಸತ್ತವನಲ್ಲಿ
ಪಾಪ ಮಾಡಿದ್ದರಿಂದ ಅವನಿಗೋಸ್ಕರ ಪಾಪ ಮುಚ್ಚಿ, ಆ ದಿವ
೧೨ ಸದಲ್ಲಿ ಅವನ ತಲೆಯನ್ನು ಪರಿಶುದ್ಧ ಮಾಡ ಬೇಕು. ಮತ್ತು
ಅವನು ತನ್ನ ಹರಿಕೆಯ ದಿವಸಗಳನ್ನು ಕರ್ತನಿಗೆ ಪ್ರತ್ಯೇಕಿಸಿ,
ಅಪರಾಧ ಬಲಿಯಾಗಿ ಒಂದು ವರುಷದ ಕುರಿ ಮರಿಯನ್ನು ತ
ರ ಬೇಕು; ಆದರೆ ಮೊದಲಿನ ದಿವಸಗಳು ವ್ಯರ್ಥವಾಗುವವು;
ಯಾಕಂದರೆ ಅವನ ಹರಿಕೆ ಅಶುದ್ಧವಾಯಿತು.

೧೩ ಇದು ನಜೀರನ ನೇಮವು; ಅವನ ನಜೀರತನದ ದಿವಸಗಳು
ಪೂರ್ಣವಾದ ಮೇಲೆ, ಅವನನ್ನು ಸಭೆಯ ಗುಡಾರದ ಬಾಗಲಿನ
೧೪ ಬಳಿಗೆ ತರ ಬೇಕು. ಮತ್ತು ಅವನು ಕರ್ತನಿಗೆ ತನ್ನ ಅರ್ಪ
ಣೆಯನ್ನು ಅರ್ಪಿಸ ಬೇಕು; ಅದೇನಂದರೆ ಹೋಮವಾಗಿ ಒಂ
ದು ವರುಷದ ಪೂರ್ಣಾಂಗವಾದ ಒಂದು ಗಂಡು ಕುರಿ ಮರಿ,
ಪಾಪ ಬಲಿಯಾಗಿ ಒಂದು ವರುಷದ ಪೂರ್ಣಾಂಗವಾದ ಒಂ
ದು ಹೆಣ್ಣು ಕುರಿ ಮರಿ, ಸಮಾಧಾನ ಬಲಿಯಾಗಿ ಪೂರ್ಣಾಂಗ
೧೫ ವಾದ ಒಂದು ಟಗರು. ಮತ್ತು ಎಣ್ಣೆಯಲ್ಲಿ ಹಾಕಿದ ನಯವಾದ
ಹಿಟ್ಟಿನಿಂದ ಮಾಡಿದ ಹುಳಿ ಇಲ್ಲದ ಹೋಳಿಗೆಗಳ ಒಂದು ಪುಟ್ಟಿ;
ಮತ್ತು ಎಣ್ಣೆ ಹಚ್ಚಿದ ನಯವಾದ ಹುಳಿ ಇಲ್ಲದ ಕಡುಬುಗಳು;
ಅವುಗಳಿಗೆ ತಕ್ಕ ಕಾಣಿಕೆಯೂ, ಪಾನದ ಅರ್ಪಣೆಯೂ,





೧೬ ಇವುಗಳನ್ನು ಯಾಜಕನು ಕರ್ತನ ಸಮುಖಕ್ಕೆ ತಂದು, ಅವ
ನ ಪಾಪ ಬಲಿಯನ್ನೂ ಅವನ ಹೋಮವನನ್ನೂ ಅರ್ಪಿಸ ಬೇ
೧೭ ಕು. ಮತ್ತು ಆ ಟಗರನ್ನು ಹುಳಿ ಇಲ್ಲದ ಹೋಳಿಗೆಗಳ ಪುಟ್ಟಿ
ಯ ಸಂಗಡ ಕರ್ತನಿಗೆ ಸಮಾಧಾನ ಬಲಿಯಾಗಿ, ಅರ್ಪಿಸ
ಬೇಕು; ಇದಲ್ಲದೆ ಯಾಜಕನು ಅವನ ಕಾಣಿಕೆಯನ್ನೂ ಹೊ
೧೮ ಯಿಕೆಯನ್ನೂ ಅರ್ಪಿಸ ಬೇಕು. ಇದಲ್ಲದೆ ನಜೀರನು ಸಭೆ
ಯ ಗುಡಾರದ ಬಾಗಲಿನ ಮುಂದೆ ತನ್ನ ನಜೀರತನದ ತಲೆಯ
ನ್ನು ಬೋಳಿಸಿ, ತನ್ನ ನಜೀರತನದ ತಲೆಯ ಕೂದಲನ್ನು ತ
ಕ್ಕೊಂಡು, ಸಮಾಧಾನ ಬಲಿಗಳ ಕೆಳಗಿರುವ ಬೆಂಕಿಯ ಮೇಲೆ
೧೯ ಇಡ ಬೇಕು. ಮತ್ತು ಯಾಜಕನು ಆ ಟಗರಿನ ಬೇಯಿಸಿದ
ಮುಂಗೊಪೆಯನ್ನೂ, ಆ ಪುಟ್ಟಿಯೊಳಗಿಂದ ಹುಳಿ ಇಲ್ಲದ ಒಂ
ದು ಹೋಳಿಗೆಯನ್ನೂ, ಹುಳಿ ಇಲ್ಲದ ಒಂದು ಕಡುಬನ್ನೂ, ತ
ಕ್ಕೊಂಡು, ಆ ನಜೀರನ ಕೈಗಳಲ್ಲಿ, ಅವನ ನಜೀರತನದ ಕೂದ
೨೦ ಲು ಬೋಳಿಸಿದ ಮೇಲೆ, ಇಡ ಬೇಕು. ಯಾಜಕನು ಅವುಗಳ
ನ್ನು ಅಲ್ಲಾಡಿಸುವ ಅರ್ಪಣೆಯಾಗಿ ಕರ್ತನ ಸಮುಖದಲ್ಲಿ ಅ
ಲ್ಲಾಡಿಸ ಬೇಕು; ಇದೇ ಅಲ್ಲಾಡಿಸುವ ಎದೆಯ ಸಂಗಡಲೂ ಎತ್ತು
ವ ಮುಂಗೊಪೆಯ ಸಂಗಡಲೂ ಯಾಜಕನಿಗೆ ಪರಿಶುದ್ಧವಾಗಿದೆ;
ಆ ಮೇಲೆ ನಜೀರನು, ದ್ರಾಕ್ಷೇ ರಸವನ್ನು ಕುಡಿಯ ಬಹುದು.
೨೧ ಹರಿಕೆ ಮಾಡಿ ಕೊಂಡ ನಜೀರನ ನ್ಯಾಯ ಪ್ರಮಾಣ ಇದೇ; ಅ
ವನ ಕೈಗೆ ದೊರಕಿದ್ದಲ್ಲದೆ, ಅವನು ತನ್ನ ನಜೀರತನದ ನಿಮಿ
ತ್ತ ಕರ್ತನಿಗೆ ಅರ್ಪಿಸ ತಕ್ಕದ್ದು ಇದೇ; ಅವನು ಹರಿಕೆ ಮಾಡಿ
ಕೊಂಡ ಮೇರೆಗೆ ತನ್ನ ನಜೀರತನದ ನ್ಯಾಯ ಪ್ರಮಾಣದಂತೆ
ಮಾಡ ಬೇಕು.

೨೨ ಇದಲ್ಲದೆ ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳಿ
೨೩ ದ್ದೇನಂದರೆ—ನೀನು ಆರೋನನ ಸಂಗಡಲೂ ಅವನ ಮಕ್ಕಳ
ಸಂಗಡಲೂ, ಮಾತಾಡಿ ಹೇಳ ಬೇಕಾದದ್ದೇನಂದರೆ—ನೀವು ಇಸ್ರ
ಯೇಲ್ ಮಕ್ಕಳನ್ನು ಆಶೀರ್ವದಿಸುವಾಗ, ಈ ಪ್ರಕಾರ ಅವರಿಗೆ
ಹೇಳ ಬೇಕು.

೨೪ ಕರ್ತನು ನಿನ್ನನ್ನು ಆಶೀರ್ವದಿಸಿ, ಕಾಪಾಡಲಿ;
೨೫ ಕರ್ತನು ತನ್ನ ಮುಖವನ್ನು ನಿನ್ನ ಕಡೆಗೆ ಪ್ರಕಾಶಿಸ ಮಾ
ಡಿ, ನಿನಗೆ ದಯೆ ಮಾಡಲಿ;
೨೬ ಕರ್ತನು ತನ್ನ ಮುಖವನ್ನು ನಿನ್ನ ಕಡೆಗೆ ಎತ್ತಿ, ನಿನಗೆ ಸ
ಮಾಧಾನವನ್ನು ಕೊಡಲಿ.

೨೭ ಅವರು ನನ್ನ ಹೆಸರನ್ನು ಇಸ್ರಯೇಲ್ ಮಕ್ಕಳ ಮೇಲೆ ಇ
ಡ ಬೇಕು; ನಾನೇ ಅವರನ್ನು ಆಶೀರ್ವದಿಸುವೆನು.

## ೭. ಸಂಧಿ.

೧ ಮತ್ತು ಮೋಶೆಯು ನಿವಾಸ ನಿಲ್ಲಿಸಿ ತೀರಿಸಿದ ದಿವಸದಲ್ಲಿ, ಅ
ವನು ಅದನ್ನು ಅಭಿಷೇಕಿಸಿ, ಪರಿಶುದ್ಧ ಮಾಡಿ, ಅದರ ಎಲ್ಲಾ
ಸಾಮಾನುಗಳನ್ನೂ, ಬಲಿಪೀಠವನ್ನೂ, ಅದರ ಎಲ್ಲಾ ಸಾಮಾ
ನುಗಳನ್ನೂ, ಅಭಿಷೇಕಿಸಿ, ಪರಿಶುದ್ಧ ಮಾಡಿದ ಮೇಲೆ ಆದದ್ದೇ
೨ ನಂದರೆ—ಇಸ್ರಯೇಲಿನ ಪ್ರಭುವುಗಳೂ, ತಮ್ಮ ತಂದೆ ಮನೆಗಳ
ಶ್ರೇಷ್ಠರೂ, ಕುಲಗಳ ಪ್ರಭುಗಳೂ ಎಣಿಸಲ್ಪಟ್ಟವರಿಗೆ ಮುಖ್ಯ
3 ಸ್ಥರಾದವರೂ ಅರ್ಪಿಸಿದರು. ಅವರು ಕರ್ತನ ಸಮುಖಕ್ಕೆ
ತಂದ ಅರ್ಪಣೆ ಏನಂದರೆ—ಮುಚ್ಚಿದ ಛಾಯಗಳೂ ಹನ್ನೆರಡು
ಎತ್ತುಗಳೂ, ಇಬ್ಬರಿಬ್ಬರು ಪ್ರಭುಗಳು ಒಂದೊಂದು ಛಾಯ, ಒ
ಬ್ಬೊಬ್ಬನ್ನು ಬಂದೊಂದು ಎತ್ತು, ಇವುಗಳನ್ನು ನಿವಾಸದ ಮುಂ
೪ ದೆ ತಂದರು. ಮತ್ತು ಕರ್ತನು ಮಾತಾಡಿ ಮೋಶೆಗೆ ಹೇಳ್ದದ್ದೇ
೫ ನಂದರೆ—ಅವುಗಳನ್ನು ಅವರಿಂದ ತಕ್ಕೊಳ್ಳಿ; ಅವು ಸಭೆಯ ಗು
ಡಾರದ ಸೇವೆ ಮಾಡುವದಕ್ಕೆ ಇರಲಿ; ಮತ್ತು ಅವುಗಳನ್ನು ಲೇ
ವ್ಯರಿಗೆ ಅವನವನ ಸೇವೆಯ ಪ್ರಕಾರ ಕೊಡ ಬೇಕು. ಆಗ ಮೋ
೬ ಶೆ ಆ ಛಾಯಗಳನ್ನೂ ಎತ್ತುಗಳನ್ನೂ ತಕ್ಕೊಂಡು, ಲೇವ್ಯರಿಗೆ
೭ ಕೊಟ್ಟನು. ಎರಡು ಛಾಯಗಳನ್ನೂ ನಾಲ್ಕು ಎತ್ತುಗಳನ್ನೂ
ಗೆರ್ಷೋನನ ಮಕ್ಕಳಿಗೆ ಅವರ ಸೇವೆಯ ಪ್ರಕಾರವಾಗಿ ಕೊ
೮ ಟ್ಟನು. ನಾಲ್ಕು ಛಾಯಗಳನ್ನೂ ಎಂಟು ಎತ್ತುಗಳನ್ನೂ, ಮೆ
ರಾರಿಯ ಮಕ್ಕಳಿಗೆ ಯಾಜಕನಾದ ಆರೋನನ ಮಗನಾಗಿರುವ
ಇಥಮಾರನ ಕೈ ಕೆಳಗಿರುವ ಅವರ ಸೇವೆಯ ಪ್ರಕಾರ ಕೊಟ್ಟ
೯ ನು. ಆದರೆ ಕೋಹಾತನ ಮಕ್ಕಳಿಗೆ ಏನೂ ಕೊಡಲಿಲ್ಲ; ಯಾ
ಕಂದರೆ ಪರಿಶುದ್ಧ ಸ್ಥಳದ ಸೇವೆ ಅವರ ಮೇಲೆ ಇತ್ತು; ಏನಂದ
ರೆ ಅವರು ಹೆಗಲ ಮೇಲೆ ಹೊರುತ್ತಿದ್ದರು.

೧೦ ಮತ್ತು ಪ್ರಭುಗಳು ಬಲಿಪೀಠದ ಪ್ರತಿಷ್ಠೆಯನ್ನು, ಅದನ್ನು ಅ
ಭಿಷೇಕಿಸಿದ ದಿವಸದಲ್ಲಿ ಅರ್ಪಿಸಿದರು; ಪ್ರಭುಗಳು ಬಲಿಪೀಠದ
ಮುಂದೆ ತಮ್ಮ ಅರ್ಪಣೆಯನ್ನು ಅರ್ಪಿಸಿದರು. ಕರ್ತನು
೧೧ ಮೋಶೆಯ ಸಂಗಡ ಮಾತಾಡಿ ಹೇಳ್ದದ್ದೇನಂದರೆ—ಒಬ್ಬೊಬ್ಬ
ಪ್ರಭು ತನ್ನ ತನ್ನ ದಿವಸದಲ್ಲಿ ಅವರು ಬಲಿಪೀಠದ ಪ್ರತಿಷ್ಠೆಗಾಗಿ
ತಮ್ಮ ಅರ್ಪಣೆಯನ್ನು ಅರ್ಪಿಸಲಿ.

೧೨ ಮೊದಲನೇ ದಿವಸದಲ್ಲಿ ತನ್ನ ಅರ್ಪಣೆಯನ್ನು ಅರ್ಪಿಸಿದ
ವನು ಯೆಹೂದ ಕುಲಕ್ಕೆ ಪ್ರಭುವಾದ ಅಮಿನದಾಬನ ಮಗನಾ
೧೩ ದ ನಾಶೋನನು. ಅವನ ಅರ್ಪಣೆ ಏನಂದರೆ—ನೂರ ಮೂ
ವತ್ತು ಬೆಕೆಲು ತೂಕವಾದ ಬೆಳ್ಳಿಯ ಒಂದು ಹರಿವಾಣವು, ಪರಿ
ಶುದ್ಧ ಬೆಕೆಲಿನ ಪ್ರಕಾರ ಎಪ್ಪತ್ತು ಬೆಕೆಲು ತೂಕವಾದ ಬೆಳ್ಳಿಯ
ಒಂದು ಪಾತ್ರೆ; ಈ ಎರಡು ಕಾಣಿಕೆಗಾಗಿ ಎಣ್ಣೆ ಹೊಯಿದ
೧೪ ಗೋಧಿ ಹಿಟ್ಟಿನಿಂದ ತುಂಬಿದ್ದವು. ಧೂಪದಿಂದ ತುಂಬಿದ ಹತ್ತು
೧೫ ಬೆಕೆಲು ತೂಕವಾದ ಛಂಗಾರದ ಒಂದು ಸಾಟು; ಹೋಮ
ಕ್ಕಾಗಿ ಒಂದು ಹೋರಿ, ಒಂದು ಟಗರು, ವರುಷದ ಒಂದು ಗಂ
೧೬ ಡು ಕುರಿ ಮರಿ; ಪಾಪ ಬಲಿಗಾಗಿ ಆಡುಗಳಲ್ಲಿ ಒಂದು ಹೋ
೧೭ ತು. ಮತ್ತು ಸಮಾಧಾನ ಬಲಿಗಾಗಿ ಎರಡು ಎತ್ತುಗಳು, ಐದು
ಟಗರುಗಳು; ಐದು ಹೋತುಗಳು, ವರುಷದ ಐದು ಗಂಡು
ಕುರಿ ಮರಿಗಳು; ಇದು ಅಮಿನದಾಬನ ಮಗನಾದ ನಾಶೋನನ
ಅರ್ಪಣೆ.

೧೮ ಎರಡನೇ ದಿವಸದಲ್ಲಿ ಇಸ್ಸಾಕಾರನ ಕುಲಕ್ಕೆ ಪ್ರಭುವಾಗಿರು
೧೯ ವ ಚುವಾರನ ಮಗನಾದ ನೆಥಾನಿಯೇಲನು ಅರ್ಪಿಸಿದನು. ಅ
ವನು ಅರ್ಪಿಸಿದ ಅರ್ಪಣೆ ಏನಂದರೆ—ನೂರ ಮೂವತ್ತು ಬೆ
ಕೆಲು ತೂಕವಾದ ಬೆಳ್ಳಿಯ ಒಂದು ಹರಿವಾಣವು; ಪರಿಶುದ್ಧ ಬೆ
ಕೆಲಿನ ಪ್ರಕಾರ ಎಪ್ಪತ್ತು ಬೆಕೆಲು ತೂಕವಾದ ಬೆಳ್ಳಿಯ ಒಂದು
ಪಾತ್ರೆಯು; ಈ ಎರಡು ಕಾಣಿಕೆಗಾಗಿ ಎಣ್ಣೆ ಹೊಯಿದ ಗೋ
೨೦ ಧಿ ಹಿಟ್ಟಿನಿಂದ ತುಂಬಿದ್ದವು; ಧೂಪದಿಂದ ತುಂಬಿದ ಹತ್ತು ಬೆಕೆ
೨೧ ಲು ತೂಕವಾದ ಛಂಗಾರದ ಒಂದು ಸಾಟು; ಹೋಮಕ್ಕಾಗಿ ಒಂ
ದು ಹೋರಿ, ಒಂದು ಟಗರು, ವರುಷದ ಒಂದು ಗಂಡು ಕುರಿ
೨೨ ಮರಿ. ಪಾಪ ಬಲಿಗಾಗಿ ಆಡುಗಳಲ್ಲಿ ಒಂದು ಹೋತು; ಮತ್ತು
೨೩ ಸಮಾಧಾನ ಬಲಿಗಾಗಿ ಎರಡು ಎತ್ತುಗಳು, ಐದು ಟಗರುಗಳು,

ಐದು ಹೋತುಗಳು, ವರುಷದ ಐದು ಗಂಡು ಕುರಿ ಮರಿಗಳು;
ಇದು ಚುವಾರನ ಮಗನಾದ ನೆಥಾನಿಯೇಲನ ಅರ್ಪಣೆ.

೨೮ ೨೯ ಮೂರನೇ ದಿವಸದಲ್ಲಿ ಜೆಬುಲೋನನ ಮಕ್ಕಳಿಗೆ ಪ್ರಭುವಾಗಿ
ರುವ ಹೆಲೋನನ ಮಗನಾದ ಎಲಿಯಾಬನು. ಅವನ ಅರ್ಪಣೆ
ಏನಂದರೆ—ನೂರ ಮೂವತ್ತು ಶೆಕೆಲು ತೂಕವಾದ ಬೆಳ್ಳಿಯ
ಒಂದು ಹರಿವಾಣವು; ಪರಿಶುದ್ಧ ಶೆಕೆಲಿನ ಪ್ರಕಾರ ಎಪ್ಪತ್ತು ಶೆ
ಕೆಲು ತೂಕವಾದ ಬೆಳ್ಳಿಯ ಒಂದು ಪಾತ್ರೆಯು; ಈ ಎರಡು
ಕಾಣಿಕೆಗಾಗಿ ಎಣ್ಣೆ ಹೊಯಿದ ಗೋಧಿ ಹಿಟ್ಟಿನಿಂದ ತುಂಬಿದ್ದ
೩೦ ೩೧ ವು. ಧೂಪದಿಂದ ತುಂಬಿದ ಹತ್ತು ಶೆಕೆಲು ತೂಕವಾದ ಭಂಗಾ
ರದ ಒಂದು ಸಾಟು. ಹೋಮಕ್ಕಾಗಿ ಒಂದು ಹೋರಿ, ಒಂದು
೩೨ ೩೩ ಟಗರು, ವರುಷದ ಒಂದು ಗಂಡು ಕುರಿ ಮರಿ; ಪಾಪ ಬಲಿಗಾಗಿ
೩೪ ಆಡುಗಳಲ್ಲಿ ಒಂದು ಹೋತು; ಮತ್ತು ಸಮಾಧಾನ ಬಲಿಗಾಗಿ ಎ
ರಡು ಎತ್ತುಗಳು, ಐದು ಟಗರುಗಳು, ಐದು ಹೋತುಗಳು,
ವರುಷದ ಐದು ಗಂಡು ಕುರಿ ಮರಿಗಳು; ಇದು ಹೆಲೋನನ ಮ
ಗನಾದ ಎಲಿಯಾಬನ ಅರ್ಪಣೆ.

೩೫ ೩೬ ನಾಲ್ಕನೇ ದಿವಸದಲ್ಲಿ ರೂಬೆನನ ಮಕ್ಕಳಿಗೆ ಪ್ರಭುವಾಗಿರುವ
ಶೆದೆಯೂರನ ಮಗನಾದ ಎಲೀಚೂರನು; ಅವನ ಅರ್ಪಣೆ ಏ
ನಂದರೆ—ನೂರ ಮೂವತ್ತು ಶೆಕೆಲು ತೂಕವಾದ ಬೆಳ್ಳಿಯ ಒಂ
ದು ಹರಿವಾಣವು ಪರಿಶುದ್ಧ ಶೆಕೆಲಿನ ಪ್ರಕಾರ ಎಪ್ಪತ್ತು ಶೆಕೆಲು
ತೂಕವಾದ ಬೆಳ್ಳಿಯ ಒಂದು ಪಾತ್ರೆಯು; ಈ ಎರಡು ಕಾಣಿಕೆ
೩೭ ೩೮ ಗಾಗಿ ಎಣ್ಣೆ ಹೊಯಿದ ಗೋಧಿ ಹಿಟ್ಟಿನಿಂದ ತುಂಬಿದ್ದವು. ಧೂ
ಪದಿಂದ ತುಂಬಿದ ಹತ್ತು ಶೆಕೆಲು ತೂಕವಾದ ಭಂಗಾರದ ಒಂದು
೩೯ ೪೦ ೪೧ ೪೨ ೪೩ ೪೪ ೪೫ ೪೬ ೪೭ ೪೮ ೪೯ ೫೦ ೫೧ ೫೨ ೫೩ ೫೪ ೫೫ ೫೬ ೫೭ ೫೮ ೫೯ ೬೦ ೬೧ ೬೨ ೬೩ ೬೪ ೬೫ ೬೬ ೬೭ ೬೮ ೬೯ ೭೦ ೭೧ ೭೨ ೭೩ ೭೪ ೭೫ ೭೬ ೭೭ ೭೮ ೭೯ ೮೦ ೮೧ ೮೨ ೮೩ ೮೪ ೮೫ ೮೬ ೮೭ ೮೮ ೮೯ ೯೦ ೯೧ ೯೨ ೯೩ ೯೪ ೯೫ ೯೬ ೯೭ ೯೮ ೯೯ ೧೦೦ ೧೦೧ ೧೦೨ ೧೦೩ ೧೦೪ ೧೦೫ ೧೦೬ ೧೦೭ ೧೦೮ ೧೦೯ ೧೧೦ ೧೧೧ ೧೧೨ ೧೧೩ ೧೧೪ ೧೧೫ ೧೧೬ ೧೧೭ ೧೧೮ ೧೧೯ ೧೨೦ ೧೨೧ ೧೨೨ ೧೨೩ ೧೨೪ ೧೨೫ ೧೨೬ ೧೨೭ ೧೨೮ ೧೨೯ ೧೩೦ ೧೩೧ ೧೩೨ ೧೩೩ ೧೩೪ ೧೩೫ ೧೩೬ ೧೩೭ ೧೩೮ ೧೩೯ ೧೪೦ ೧೪೧ ೧೪೨ ೧೪೩ ೧೪೪ ೧೪೫ ೧೪೬ ೧೪೭ ೧೪೮ ೧೪೯ ೧೫೦ ೧೫೧ ೧೫೨ ೧೫೩ ೧೫೪ ೧೫೫ ೧೫೬ ೧೫೭ ೧೫೮ ೧೫೯ ೧೬೦ ೧೬೧ ೧೬೨ ೧೬೩ ೧೬೪ ೧೬೫ ೧೬೬ ೧೬೭ ೧೬೮ ೧೬೯ ೧೭೦ ೧೭೧ ೧೭೨ ೧೭೩ ೧೭೪ ೧೭೫ ೧೭೬ ೧೭೭ ೧೭೮ ೧೭೯ ೧೮೦ ೧೮೧ ೧೮೨ ೧೮೩ ೧೮೪ ೧೮೫ ೧೮೬ ೧೮೭ ೧೮೮ ೧೮೯ ೧೯೦ ೧೯೧ ೧೯೨ ೧೯೩ ೧೯೪ ೧೯೫ ೧೯೬ ೧೯೭ ೧೯೮ ೧೯೯ ೨೦೦ ೨೦೧ ೨೦೨ ೨೦೩ ೨೦೪ ೨೦೫ ೨೦೬ ೨೦೭ ೨೦೮ ೨೦೯ ೨೧೦ ೨೧೧ ೨೧೨ ೨೧೩ ೨೧೪ ೨೧೫ ೨೧೬ ೨೧೭ ೨೧೮ ೨೧೯ ೨೨೦ ೨೨೧ ೨೨೨ ೨೨೩ ೨೨೪ ೨೨೫ ೨೨೬ ೨೨೭ ೨೨೮ ೨೨೯ ೨೩೦ ೨೩೧ ೨೩೨ ೨೩೩ ೨೩೪ ೨೩೫ ೨೩೬ ೨೩೭ ೨೩೮ ೨೩೯ ೨೪೦ ೨೪೧ ೨೪೨ ೨೪೩ ೨೪೪ ೨೪೫ ೨೪೬ ೨೪೭ ೨೪೮ ೨೪೯ ೨೫೦ ೨೫೧ ೨೫೨ ೨೫೩ ೨೫೪ ೨೫೫ ೨೫೬ ೨೫೭ ೨೫೮ ೨೫೯ ೨೬೦ ೨೬೧ ೨೬೨ ೨೬೩ ೨೬೪ ೨೬೫ ೨೬೬ ೨೬೭ ೨೬೮ ೨೬೯ ೨೭೦ ೨೭೧ ೨೭೨ ೨೭೩ ೨೭೪ ೨೭೫ ೨೭೬ ೨೭೭ ೨೭೮ ೨೭೯ ೨೮೦ ೨೮೧ ೨೮೨ ೨೮೩ ೨೮೪ ೨೮೫ ೨೮೬ ೨೮೭ ೨೮೮ ೨೮೯ ೨೯೦ ೨೯೧ ೨೯೨ ೨೯೩ ೨೯೪ ೨೯೫ ೨೯೬ ೨೯೭ ೨೯೮ ೨೯೯ ೩೦೦ ೩೦೧ ೩೦೨ ೩೦೩ ೩೦೪ ೩೦೫ ೩೦೬ ೩೦೭ ೩೦೮ ೩೦೯ ೩೧೦ ೩೧೧ ೩೧೨ ೩೧೩ ೩೧೪ ೩೧೫ ೩೧೬ ೩೧೭ ೩೧೮ ೩೧೯ ೩೨೦ ೩೨೧ ೩೨೨ ೩೨೩ ೩೨೪ ೩೨೫ ೩೨೬ ೩೨೭ ೩೨೮ ೩೨೯ ೩೩೦ ೩೩೧ ೩೩೨ ೩೩೩ ೩೩೪ ೩೩೫ ೩೩೬ ೩೩೭ ೩೩೮ ೩೩೯ ೩೪೦ ೩೪೧ ೩೪೨ ೩೪೩ ೩೪೪ ೩೪೫ ೩೪೬ ೩೪೭ ೩೪೮ ೩೪೯ ೩೫೦ ೩೫೧ ೩೫೨ ೩೫೩ ೩೫೪ ೩೫೫ ೩೫೬ ೩೫೭ ೩೫೮ ೩೫೯ ೩೬೦ ೩೬೧ ೩೬೨ ೩೬೩ ೩೬೪ ೩೬೫ ೩೬೬ ೩೬೭ ೩೬೮ ೩೬೯ ೩೭೦ ೩೭೧ ೩೭೨ ೩೭೩ ೩೭೪ ೩೭೫ ೩೭೬ ೩೭೭ ೩೭೮ ೩೭೯ ೩೮೦ ೩೮೧ ೩೮೨ ೩೮೩ ೩೮೪ ೩೮೫ ೩೮೬ ೩೮೭ ೩೮೮ ೩೮೯ ೩೯೦ ೩೯೧ ೩೯೨ ೩೯೩ ೩೯೪ ೩೯೫ ೩೯೬ ೩೯೭ ೩೯೮ ೩೯೯ ೪೦೦ ೪೦೧ ೪೦೨ ೪೦೩ ೪೦೪ ೪೦೫ ೪೦೬ ೪೦೭ ೪೦೮ ೪೦೯ ೪೧೦ ೪೧೧ ೪೧೨ ೪೧೩ ೪೧೪ ೪೧೫ ೪೧೬ ೪೧೭ ೪೧೮ ೪೧೯ ೪೨೦ ೪೨೧ ೪೨೨ ೪೨೩ ೪೨೪ ೪೨೫ ೪೨೬ ೪೨೭ ೪೨೮ ೪೨೯ ೪೩೦ ೪೩೧ ೪೩೨ ೪೩೩ ೪೩೪ ೪೩೫ ೪೩೬ ೪೩೭ ೪೩೮ ೪೩೯ ೪೪೦ ೪೪೧ ೪೪೨ ೪೪೩ ೪೪೪ ೪೪೫ ೪೪೬ ೪೪೭ ೪೪೮ ೪೪೯ ೪೫೦ ೪೫೧ ೪೫೨ ೪೫೩ ೪೫೪ ೪೫೫ ೪೫೬ ೪೫೭ ೪೫೮ ೪೫೯ ೪೬೦ ೪೬೧ ೪೬೨ ೪೬೩ ೪೬೪ ೪೬೫ ೪೬೬ ೪೬೭ ೪೬೮ ೪೬೯ ೪೭೦ ೪೭೧ ೪೭೨ ೪೭೩ ೪೭೪ ೪೭೫ ೪೭೬ ೪೭೭ ೪೭೮ ೪೭೯ ೪೮೦ ೪೮೧ ೪೮೨ ೪೮೩ ೪೮೪ ೪೮೫ ೪೮೬ ೪೮೭ ೪೮೮ ೪೮೯ ೪೯೦ ೪೯೧ ೪೯೨ ೪೯೩ ೪೯೪ ೪೯೫ ೪೯೬ ೪೯೭ ೪೯೮ ೪೯೯ ೫೦೦ ೫೦೧ ೫೦೨ ೫೦೩ ೫೦೪ ೫೦೫ ೫೦೬ ೫೦೭ ೫೦೮ ೫೦೯ ೫೧೦ ೫೧೧ ೫೧೨ ೫೧೩ ೫೧೪ ೫೧೫ ೫೧೬ ೫೧೭ ೫೧೮ ೫೧೯ ೫೨೦ ೫೨೧ ೫೨೨ ೫೨೩ ೫೨೪ ೫೨೫ ೫೨೬ ೫೨೭ ೫೨೮ ೫೨೯ ೫೩೦ ೫೩೧ ೫೩೨ ೫೩೩ ೫೩೪ ೫೩೫ ೫೩೬ ೫೩೭ ೫೩೮ ೫೩೯ ೫೪೦ ೫೪೧ ೫೪೨ ೫೪೩ ೫೪೪ ೫೪೫ ೫೪೬ ೫೪೭ ೫೪೮ ೫೪೯ ೫೫೦ ೫೫೧ ೫೫೨ ೫೫೩ ೫೫೪ ೫೫೫ ೫೫೬ ೫೫೭ ೫೫೮ ೫೫೯ ೫೬೦ ೫೬೧ ೫೬೨ ೫೬೩ ೫೬೪ ೫೬೫ ೫೬೬ ೫೬೭ ೫೬೮ ೫೬೯ ೫೭೦ ೫೭೧ ೫೭೨ ೫೭೩ ೫೭೪ ೫೭೫ ೫೭೬ ೫೭೭ ೫೭೮ ೫೭೯ ೫೮೦ ೫೮೧ ೫೮೨ ೫೮೩ ೫೮೪ ೫೮೫ ೫೮೬ ೫೮೭ ೫೮೮ ೫೮೯ ೫೯೦ ೫೯೧ ೫೯೨ ೫೯೩ ೫೯೪ ೫೯೫ ೫೯೬ ೫೯೭ ೫೯೮ ೫೯೯ ೬೦೦ ೬೦೧ ೬೦೨ ೬೦೩ ೬೦೪ ೬೦೫ ೬೦೬ ೬೦೭ ೬೦೮ ೬೦೯ ೬೧೦ ೬೧೧ ೬೧೨ ೬೧೩ ೬೧೪ ೬೧೫ ೬೧೬ ೬೧೭ ೬೧೮ ೬೧೯ ೬೨೦ ೬೨೧ ೬೨೨ ೬೨೩ ೬೨೪ ೬೨೫ ೬೨೬ ೬೨೭ ೬೨೮ ೬೨೯ ೬೩೦ ೬೩೧ ೬೩೨ ೬೩೩ ೬೩೪ ೬೩೫ ೬೩೬ ೬೩೭ ೬೩೮ ೬೩೯ ೬೪೦ ೬೪೧ ೬೪೨ ೬೪೩ ೬೪೪ ೬೪೫ ೬೪೬ ೬೪೭ ೬೪೮ ೬೪೯ ೬೫೦ ೬೫೧ ೬೫೨ ೬೫೩ ೬೫೪ ೬೫೫ ೬೫೬ ೬೫೭ ೬೫೮ ೬೫೯ ೬೬೦ ೬೬೧ ೬೬೨ ೬೬೩ ೬೬೪ ೬೬೫ ೬೬೬ ೬೬೭ ೬೬೮ ೬೬೯ ೬೭೦ ೬೭೧ ೬೭೨ ೬೭೩ ೬೭೪ ೬೭೫ ೬೭೬ ೬೭೭ ೬೭೮ ೬೭೯ ೬೮೦ ೬೮೧ ೬೮೨ ೬೮೩ ೬೮೪ ೬೮೫ ೬೮೬ ೬೮೭ ೬೮೮ ೬೮೯ ೬೯೦ ೬೯೧ ೬೯೨ ೬೯೩ ೬೯೪ ೬೯೫ ೬೯೬ ೬೯೭ ೬೯೮ ೬೯೯ ೭೦೦ ೭೦೧ ೭೦೨ ೭೦೩ ೭೦೪ ೭೦೫ ೭೦೬ ೭೦೭ ೭೦೮ ೭೦೯ ೭೧೦ ೭೧೧ ೭೧೨ ೭೧೩ ೭೧೪ ೭೧೫ ೭೧೬ ೭೧೭ ೭೧೮ ೭೧೯ ೭೨೦ ೭೨೧ ೭೨೨ ೭೨೩ ೭೨೪ ೭೨೫ ೭೨೬ ೭೨೭ ೭೨೮ ೭೨೯ ೭೩೦ ೭೩೧ ೭೩೨ ೭೩೩ ೭೩೪ ೭೩೫ ೭೩೬ ೭೩೭ ೭೩೮ ೭೩೯ ೭೪೦ ೭೪೧ ೭೪೨ ೭೪೩ ೭೪೪ ೭೪೫ ೭೪೬ ೭೪೭ ೭೪೮ ೭೪೯ ೭೫೦ ೭೫೧ ೭೫೨ ೭೫೩ ೭೫೪ ೭೫೫ ೭೫೬ ೭೫೭ ೭೫೮ ೭೫೯ ೭೬೦ ೭೬೧ ೭೬೨ ೭೬೩ ೭೬೪ ೭೬೫ ೭೬೬ ೭೬೭ ೭೬೮ ೭೬೯ ೭೭೦ ೭೭೧ ೭೭೨ ೭೭೩ ೭೭೪ ೭೭೫ ೭೭೬ ೭೭೭ ೭೭೮ ೭೭೯ ೭೮೦ ೭೮೧ ೭೮೨ ೭೮೩ ೭೮೪ ೭೮೫ ೭೮೬ ೭೮೭ ೭೮೮ ೭೮೯ ೭೯೦ ೭೯೧ ೭೯೨ ೭೯೩ ೭೯೪ ೭೯೫ ೭೯೬ ೭೯೭ ೭೯೮ ೭೯೯ ೮೦೦ ೮೦೧ ೮೦೨ ೮೦೩ ೮೦೪ ೮೦೫ ೮೦೬ ೮೦೭ ೮೦೮ ೮೦೯ ೮೧೦ ೮೧೧ ೮೧೨ ೮೧೩ ೮೧೪ ೮೧೫ ೮೧೬ ೮೧೭ ೮೧೮ ೮೧೯ ೮೨೦ ೮೨೧ ೮೨೨ ೮೨೩ ೮೨೪ ೮೨೫ ೮೨೬ ೮೨೭ ೮೨೮ ೮೨೯ ೮೩೦ ೮೩೧ ೮೩೨ ೮೩೩ ೮೩೪ ೮೩೫ ೮೩೬ ೮೩೭ ೮೩೮ ೮೩೯ ೮೪೦ ೮೪೧ ೮೪೨ ೮೪೩ ೮೪೪ ೮೪೫ ೮೪೬ ೮೪೭ ೮೪೮ ೮೪೯ ೮೫೦ ೮೫೧ ೮೫೨ ೮೫೩ ೮೫೪ ೮೫೫ ೮೫೬ ೮೫೭ ೮೫೮ ೮೫೯ ೮೬೦ ೮೬೧ ೮೬೨ ೮೬೩ ೮೬೪ ೮೬೫ ೮೬೬ ೮೬೭ ೮೬೮ ೮೬೯ ೮೭೦ ೮೭೧ ೮೭೨ ೮೭೩ ೮೭೪ ೮೭೫ ೮೭೬ ೮೭೭ ೮೭೮ ೮೭೯ ೮೮೦ ೮೮೧ ೮೮೨ ೮೮೩ ೮೮೪ ೮೮೫ ೮೮೬ ೮೮೭ ೮೮೮ ೮೮೯ ೮೯೦ ೮೯೧ ೮೯೨ ೮೯೩ ೮೯೪ ೮೯೫ ೮೯೬ ೮೯೭ ೮೯೮ ೮೯೯ ೯೦೦ ೯೦೧ ೯೦೨ ೯೦೩ ೯೦೪ ೯೦೫ ೯೦೬ ೯೦೭ ೯೦೮ ೯೦೯ ೯೧೦ ೯೧೧ ೯೧೨ ೯೧೩ ೯೧೪ ೯೧೫ ೯೧೬ ೯೧೭ ೯೧೮ ೯೧೯ ೯೨೦ ೯೨೧ ೯೨೨ ೯೨೩ ೯೨೪ ೯೨೫ ೯೨೬ ೯೨೭ ೯೨೮ ೯೨೯ ೯೩೦ ೯೩೧ ೯೩೨ ೯೩೩ ೯೩೪ ೯೩೫ ೯೩೬ ೯೩೭ ೯೩೮ ೯೩೯ ೯೪೦ ೯೪೧ ೯೪೨ ೯೪೩ ೯೪೪ ೯೪೫ ೯೪೬ ೯೪೭ ೯೪೮ ೯೪೯ ೯೫೦ ೯೫೧ ೯೫೨ ೯೫೩ ೯೫೪ ೯೫೫ ೯೫೬ ೯೫೭ ೯೫೮ ೯೫೯ ೯೬೦ ೯೬೧ ೯೬೨ ೯೬೩ ೯೬೪ ೯೬೫ ೯೬೬ ೯೬೭ ೯೬೮ ೯೬೯ ೯೭೦ ೯೭೧ ೯೭೨ ೯೭೩ ೯೭೪ ೯೭೫ ೯೭೬ ೯೭೭ ೯೭೮ ೯೭೯ ೯೮೦ ೯೮೧ ೯೮೨ ೯೮೩ ೯೮೪ ೯೮೫ ೯೮೬ ೯೮೭ ೯೮೮ ೯೮೯ ೯೯೦ ೯೯೧ ೯೯೨ ೯೯೩ ೯೯೪ ೯೯೫ ೯೯೬ ೯೯೭ ೯೯೮ ೯೯೯ ೧೦೦೦ ೧೦೦೧ ೧೦೦೨ ೧೦೦೩ ೧೦೦೪ ೧೦೦೫ ೧೦೦೬ ೧೦೦೭ ೧೦೦೮ ೧೦೦೯ ೧೦೧೦ ೧೦೧೧ ೧೦೧೨ ೧೦೧೩ ೧೦೧೪ ೧೦೧೫ ೧೦೧೬ ೧೦೧೭ ೧೦೧೮ ೧೦೧೯ ೧೦೨೦ ೧೦೨೧ ೧೦೨೨ ೧೦೨೩ ೧೦೨೪ ೧೦೨೫ ೧೦೨೬ ೧೦೨೭ ೧೦೨೮ ೧೦೨೯ ೧೦೩೦ ೧೦೩೧ ೧೦೩೨ ೧೦೩೩ ೧೦೩೪ ೧೦೩೫ ೧೦೩೬ ೧೦೩೭ ೧೦೩೮ ೧೦೩೯ ೧೦೪೦ ೧೦೪೧ ೧೦೪೨ ೧೦೪೩ ೧೦೪೪ ೧೦೪೫ ೧೦೪೬ ೧೦೪೭ ೧೦೪೮ ೧೦೪೯ ೧೦೫೦ ೧೦೫೧ ೧೦೫೨ ೧೦೫೩ ೧೦೫೪ ೧೦೫೫ ೧೦೫೬ ೧೦೫೭ ೧೦೫೮ ೧೦೫೯ ೧೦೬೦ ೧೦೬೧ ೧೦೬೨ ೧೦೬೩ ೧೦೬೪ ೧೦೬೫ ೧೦೬೬ ೧೦೬೭ ೧೦೬೮ ೧೦೬೯ ೧೦೭೦ ೧೦೭೧ ೧೦೭೨ ೧೦೭೩ ೧೦೭೪ ೧೦೭೫ ೧೦೭೬ ೧೦೭೭ ೧೦೭೮ ೧೦೭೯ ೧೦೮೦ ೧೦೮೧ ೧೦೮೨ ೧೦೮೩ ೧೦೮೪ ೧೦೮೫ ೧೦೮೬ ೧೦೮೭ ೧೦೮೮ ೧೦೮೯ ೧೦೯೦ ೧೦೯೧ ೧೦೯೨ ೧೦೯೩ ೧೦೯೪ ೧೦೯೫ ೧೦೯೬ ೧೦೯೭ ೧೦೯೮ ೧೦೯೯ ೧೧೦೦ ೧೧೦೧ ೧೧೦೨ ೧೧೦೩ ೧೧೦೪ ೧೧೦೫ ೧೧೦೬ ೧೧೦೭ ೧೧೦೮ ೧೧೦೯ ೧೧೧೦ ೧೧೧೧ ೧೧೧೨ ೧೧೧೩ ೧೧೧೪ ೧೧೧೫ ೧೧೧೬ ೧೧೧೭ ೧೧೧೮ ೧೧೧೯ ೧೧೨೦ ೧೧೨೧ ೧೧೨೨ ೧೧೨೩ ೧೧೨೪ ೧೧೨೫ ೧೧೨೬ ೧೧೨೭ ೧೧೨೮ ೧೧೨೯ ೧೧೩೦ ೧೧೩೧ ೧೧೩೨ ೧೧೩೩ ೧೧೩೪ ೧೧೩೫ ೧೧೩೬ ೧೧೩೭ ೧೧೩೮ ೧೧೩೯ ೧೧೪೦ ೧೧೪೧ ೧೧೪೨ ೧೧೪೩ ೧೧೪೪ ೧೧೪೫ ೧೧೪೬ ೧೧೪೭ ೧೧೪೮ ೧೧೪೯ ೧೧೫೦ ೧೧೫೧ ೧೧೫೨ ೧೧೫೩ ೧೧೫೪ ೧೧೫೫ ೧೧೫೬ ೧೧೫೭ ೧೧೫೮ ೧೧೫೯ ೧೧೬೦ ೧೧೬೧ ೧೧೬೨ ೧೧೬೩ ೧೧೬೪ ೧೧೬೫ ೧೧೬೬ ೧೧೬೭ ೧೧೬೮ ೧೧೬೯ ೧೧೭೦ ೧೧೭೧ ೧೧೭೨ ೧೧೭೩ ೧೧೭೪ ೧೧೭೫ ೧೧೭೬ ೧೧೭೭ ೧೧೭೮ ೧೧೭೯ ೧೧೮೦ ೧೧೮೧ ೧೧೮೨ ೧೧೮೩ ೧೧೮೪ ೧೧೮೫ ೧೧೮೬ ೧೧೮೭ ೧೧೮೮ ೧೧೮೯ ೧೧೯೦ ೧೧೯೧ ೧೧೯೨ ೧೧೯೩ ೧೧೯೪ ೧೧೯೫ ೧೧೯೬ ೧೧೯೭ ೧೧೯೮ ೧೧೯೯ ೧೨೦೦ ೧೨೦೧ ೧೨೦೨ ೧೨೦೩ ೧೨೦೪ ೧೨೦೫ ೧೨೦೬ ೧೨೦೭ ೧೨೦೮ ೧೨೦೯ ೧೨೧೦ ೧೨೧೧ ೧೨೧೨ ೧೨೧೩ ೧೨೧೪ ೧೨೧೫ ೧೨೧೬ ೧೨೧೭ ೧೨೧೮ ೧೨೧೯ ೧೨೨೦ ೧೨೨೧ ೧೨೨೨ ೧೨೨೩ ೧೨೨೪ ೧೨೨೫ ೧೨೨೬ ೧೨೨೭ ೧೨೨೮ ೧೨೨೯ ೧೨೩೦ ೧೨೩೧ ೧೨೩೨ ೧೨೩೩ ೧೨೩೪ ೧೨೩೫ ೧೨೩೬ ೧೨೩೭ ೧೨೩೮ ೧೨೩೯ ೧೨೪೦ ೧೨೪೧ ೧೨೪೨ ೧೨೪೩ ೧೨೪೪ ೧೨೪೫ ೧೨೪೬ ೧೨೪೭ ೧೨೪೮ ೧೨೪೯ ೧೨೫೦ ೧೨೫೧ ೧೨೫೨ ೧೨೫೩ ೧೨೫೪ ೧೨೫೫ ೧೨೫೬ ೧೨೫೭ ೧೨೫೮ ೧೨೫೯ ೧೨೬೦ ೧೨೬೧ ೧೨೬೨ ೧೨೬೩ ೧೨೬೪ ೧೨೬೫ ೧೨೬೬ ೧೨೬೭ ೧೨೬೮ ೧೨೬೯ ೧೨೭೦ ೧೨೭೧ ೧೨೭೨ ೧೨೭೩ ೧೨೭೪ ೧೨೭೫ ೧೨೭೬ ೧೨೭೭ ೧೨೭೮ ೧೨೭೯ ೧೨೮೦ ೧೨೮೧ ೧೨೮೨ ೧೨೮೩ ೧೨೮೪ ೧೨೮೫ ೧೨೮೬ ೧೨೮೭ ೧೨೮೮ ೧೨೮೯ ೧೨೯೦ ೧೨೯೧ ೧೨೯೨ ೧೨೯೩ ೧೨೯೪ ೧೨೯೫ ೧೨೯೬ ೧೨೯೭ ೧೨೯೮ ೧೨೯೯ ೧೩೦೦ ೧೩೦೧ ೧೩೦೨ ೧೩೦೩ ೧೩೦೪ ೧೩೦೫ ೧೩೦೬ ೧೩೦೭ ೧೩೦೮ ೧೩೦೯ ೧೩೧೦ ೧೩೧೧ ೧೩೧೨ ೧೩೧೩ ೧೩೧೪ ೧೩೧೫ ೧೩೧೬ ೧೩೧೭ ೧೩೧೮ ೧೩೧೯ ೧೩೨೦ ೧೩೨೧ ೧೩೨೨ ೧೩೨೩ ೧೩೨೪ ೧೩೨೫ ೧೩೨೬ ೧೩೨೭ ೧೩೨೮ ೧೩೨೯ ೧೩೩೦ ೧೩೩೧ ೧೩೩೨ ೧೩೩೩ ೧೩೩೪ ೧೩೩೫ ೧೩೩೬ ೧೩೩೭ ೧೩೩೮ ೧೩೩೯ ೧೩೪೦ ೧೩೪೧ ೧೩೪೨ ೧೩೪೩ ೧೩೪೪ ೧೩೪೫ ೧೩೪೬ ೧೩೪೭ ೧೩೪೮ ೧೩೪೯ ೧೩೫೦ ೧೩೫೧ ೧೩೫೨ ೧೩೫೩ ೧೩೫೪ ೧೩೫೫ ೧೩೫೬ ೧೩೫೭ ೧೩೫೮ ೧೩೫೯ ೧೩೬೦ ೧೩೬೧ ೧೩೬೨ ೧೩೬೩ ೧೩೬೪ ೧೩೬೫ ೧೩೬೬ ೧೩೬೭ ೧೩೬೮ ೧೩೬೯ ೧೩೭೦ ೧೩೭೧ ೧೩೭೨ ೧೩೭೩ ೧೩೭೪ ೧೩೭೫ ೧೩೭೬ ೧೩೭೭ ೧೩೭೮ ೧೩೭೯ ೧೩೮೦ ೧೩೮೧ ೧೩೮೨ ೧೩೮೩ ೧೩೮೪ ೧೩೮೫ ೧೩೮೬ ೧೩೮೭ ೧೩೮೮ ೧೩೮೯ ೧೩೯೦ ೧೩೯೧ ೧೩೯೨ ೧೩೯೩ ೧೩೯೪ ೧೩೯೫ ೧೩೯೬ ೧೩೯೭ ೧೩೯೮ ೧೩೯೯ ೧೪೦೦ ೧೪೦೧ ೧೪೦೨ ೧೪೦೩ ೧೪೦೪ ೧೪೦೫ ೧೪೦೬ ೧೪೦೭ ೧೪೦೮ ೧೪೦೯ ೧೪೧೦ ೧೪೧೧ ೧೪೧೨ ೧೪೧೩ ೧೪೧೪ ೧೪೧೫ ೧೪೧೬ ೧೪೧೭ ೧೪೧೮ ೧೪೧೯ ೧೪೨೦ ೧೪೨೧ ೧೪೨೨ ೧೪೨೩ ೧೪೨೪ ೧೪೨೫ ೧೪೨೬ ೧೪೨೭ ೧೪೨೮ ೧೪೨೯ ೧೪೩೦ ೧೪೩೧ ೧೪೩೨ ೧೪೩೩ ೧೪೩೪ ೧೪೩೫ ೧೪೩೬ ೧೪೩೭ ೧೪೩೮ ೧೪೩೯ ೧೪೪೦ ೧೪೪೧ ೧೪೪೨ ೧೪೪೩ ೧೪೪೪ ೧೪೪೫ ೧೪೪೬ ೧೪೪೭ ೧೪೪೮ ೧೪೪೯ ೧೪೫೦ ೧೪೫೧ ೧೪೫೨ ೧೪೫೩ ೧೪೫೪ ೧೪೫೫ ೧೪೫೬ ೧೪೫೭ ೧೪೫೮ ೧೪೫೯ ೧೪೬೦ ೧೪೬೧ ೧೪೬೨ ೧೪೬೩ ೧೪೬೪ ೧೪೬೫ ೧೪೬೬ ೧೪೬೭ ೧೪೬೮ ೧೪೬೯ ೧೪೭೦ ೧೪೭೧ ೧೪೭೨ ೧೪೭೩ ೧೪೭೪ ೧೪೭೫ ೧೪೭೬ ೧೪೭೭ ೧೪೭೮ ೧೪೭೯ ೧೪೮೦ ೧೪೮೧ ೧೪೮೨ ೧೪೮೩ ೧೪೮೪ ೧೪೮೫ ೧೪೮೬ ೧೪೮೭ ೧೪೮೮ ೧೪೮೯ ೧೪೯೦ ೧೪೯೧ ೧೪೯೨ ೧೪೯೩ ೧೪೯೪ ೧೪೯೫ ೧೪೯೬ ೧೪೯೭ ೧೪೯೮ ೧೪೯೯ ೧೫೦೦ ೧೫೦೧ ೧೫೦೨ ೧೫೦೩ ೧೫೦೪ ೧೫೦೫ ೧೫೦೬ ೧೫೦೭ ೧೫೦೮ ೧೫೦೯ ೧೫೧೦ ೧೫೧೧ ೧೫೧೨ ೧೫೧೩ ೧೫೧೪ ೧೫೧೫ ೧೫೧೬ ೧೫೧೭ ೧೫೧೮ ೧೫೧೯ ೧೫೨೦ ೧೫೨೧ ೧೫೨೨ ೧೫೨೩ ೧೫೨೪ ೧೫೨೫ ೧೫೨೬ ೧೫೨೭ ೧೫೨೮ ೧೫೨೯ ೧೫೩೦ ೧೫೩೧ ೧೫೩೨ ೧೫೩೩ ೧೫೩೪ ೧೫೩೫ ೧೫೩೬ ೧೫೩೭ ೧೫೩೮ ೧೫೩೯ ೧೫೪೦ ೧೫೪೧ ೧೫೪೨ ೧೫೪೩ ೧೫೪೪ ೧೫೪೫ ೧೫೪೬ ೧೫೪೭ ೧೫೪೮ ೧೫೪೯ ೧೫೫೦ ೧೫೫೧ ೧೫೫೨ ೧೫೫೩ ೧೫೫೪ ೧೫೫೫ ೧೫೫೬ ೧೫೫೭ ೧೫೫೮ ೧೫೫೯ ೧೫೬೦ ೧೫೬೧ ೧೫೬೨ ೧೫೬೩ ೧೫೬೪ ೧೫೬೫ ೧೫೬೬ ೧೫೬೭ ೧೫೬೮ ೧೫೬೯ ೧೫೭೦ ೧೫೭೧ ೧೫೭೨ ೧೫೭೩ ೧೫೭೪ ೧೫೭೫ ೧೫೭೬ ೧೫೭೭ ೧೫೭೮ ೧೫೭೯ ೧೫೮೦ ೧೫೮೧ ೧೫೮೨ ೧೫೮೩ ೧೫೮೪ ೧೫೮೫ ೧೫೮೬ ೧೫೮೭ ೧೫೮೮ ೧೫೮೯ ೧೫೯೦ ೧೫೯೧ ೧೫೯೨ ೧೫೯೩ ೧೫೯೪ ೧೫೯೫ ೧೫೯೬ ೧೫೯೭ ೧೫೯೮ ೧೫೯೯ ೧೬೦೦ ೧೬೦೧ ೧೬೦೨ ೧೬೦೩ ೧೬೦೪ ೧೬೦೫ ೧೬೦೬ ೧೬೦೭ ೧೬೦೮ ೧೬೦೯ ೧೬೧೦ ೧೬೧೧ ೧೬೧೨ ೧೬೧೩ ೧೬೧೪ ೧೬೧೫ ೧೬೧೬ ೧೬೧೭ ೧೬೧೮ ೧೬೧೯ ೧೬೨೦ ೧೬೨೧ ೧೬೨೨ ೧೬೨೩ ೧೬೨೪ ೧೬೨೫ ೧೬೨೬ ೧೬೨೭ ೧೬೨೮ ೧೬೨೯ ೧೬೩೦ ೧೬೩೧ ೧೬೩೨ ೧೬೩೩ ೧೬೩೪ ೧೬೩೫ ೧೬೩೬ ೧೬೩೭ ೧೬೩೮ ೧೬೩೯ ೧೬೪೦ ೧೬೪೧ ೧೬೪೨ ೧೬೪೩ ೧೬೪೪ ೧೬೪೫ ೧೬೪೬ ೧೬೪೭ ೧೬೪೮ ೧೬೪೯ ೧೬೫೦ ೧೬೫೧ ೧೬೫೨ ೧೬೫೩ ೧೬೫೪ ೧೬೫೫ ೧೬೫೬ ೧೬೫೭ ೧೬೫೮ ೧೬೫೯ ೧೬೬೦ ೧೬೬೧ ೧೬೬೨ ೧೬೬೩ ೧೬೬೪ ೧೬೬೫ ೧೬೬೬ ೧೬೬೭ ೧೬೬೮ ೧೬೬೯ ೧೬೭೦ ೧೬೭೧ ೧೬೭೨ 

ಮಕ್ಕಳ ಬಳಿಯಿಂದ ಕರ್ತನ ಸಮುಖಕ್ಕೆ ಅಲ್ಲಾಡಿಸುವ ಅರ್ಪ-
ಣೆಯಾಗಿ ಅಲ್ಲಾಡಿಸ ಬೇಕು, ಆಗಲವರು ಕರ್ತನ ಸೇವೆಯ
೧೦ ನ್ನು ಮಾತಲಿಕ್ಕೆ ಇರುವರು. ಮತ್ತು ಲೇವ್ಯರು ತಮ್ಮ ಕೈಗಳ
ನ್ನು ಆ ಹೋರಿಗಳ ತಲೆಯ ಮೇಲೆ ಇಡ ಬೇಕು; ಆಗ ನೀನು
ಲೇವ್ಯರಿಗೋಸ್ಕರ ಪಾಪ ಮುಚ್ಚುವದಕ್ಕೆ ಕರ್ತನಿಗೆ ಒಂದು
ಹೋರಿಯನ್ನು ಪಾಪ ಬಲಿಯಾಗಿಯೂ, ಮತ್ತೊಂದನ್ನು
ಹೋಮವಾಗಿಯೂ, ಮಾಡ ಬೇಕು.
೧೩ ತರುವಾಯ ನೀನು ಲೇವ್ಯರನ್ನು ಆರೋನನ ಸಮುಖದಲ್ಲಿ
ಯೂ ಅವನ ಮಕ್ಕಳ ಸಮುಖದಲ್ಲಿಯೂ ನಿಲ್ಲಿಸಿ, ಅವರನ್ನು
ಕರ್ತನಿಗೆ ಅಲ್ಲಾಡಿಸುವ ಅರ್ಪಣೆಯಾಗಿ ಅಲ್ಲಾಡಿಸ ಬೇಕು.
೧೪ ಹಾಗೆ ನೀನು ಲೇವ್ಯರನ್ನು ಇಸ್ರಯೇಲ್ ಮಕ್ಕಳೊಳಗಿಂದ
೧೫ ಪ್ರತ್ಯೇಕಿಸ ಬೇಕು, ಲೇವ್ಯರು ನನ್ನವರಾಗಿರ ಬೇಕು. ಇದರ
ತರುವಾಯ ಲೇವ್ಯರು ಸೇವೆ ಮಾಡುವದಕ್ಕೆ ಸಭೆಯ ಗುಡಾರ
ದೊಳಗೆ ಪ್ರವೇಶಿಸುವರು; ನೀನು ಅವರನ್ನು ಪವಿತ್ರ ಮಾಡಿ,
೧೬ ಅಲ್ಲಾಡಿಸುವ ಅರ್ಪಣೆಯಾಗಿ ಅಲ್ಲಾಡಿಸ ಬೇಕು. ಯಾಕಂದ
ರೆ ಅವರು ಇಸ್ರಯೇಲ್ ಮಕ್ಕಳೊಳಗಿಂದ ನನಗೆ ಕೊಡಲ್ಪಟ್ಟಿ
ದವರೇ. ಇಸ್ರಯೇಲ್ ಮಕ್ಕಳಲ್ಲಿರುವ ಎಲ್ಲಾ ಗರ್ಭಗಳನ್ನು
ತೆರೆಯುವಂಥಾದ್ದಕ್ಕೂ ಜೊಜ್ಜಲಿನವರೆಲ್ಲರಿಗೂ ಬದಲಾಗಿ ಅ
೧೭ ವರನ್ನು ನನಗೋಸ್ಕರ ತೆಗೆದು ಕೊಂಡಿದ್ದೇನೆ. ಯಾಕಂದರೆ
ಇಸ್ರಯೇಲ್ ಮಕ್ಕಳಲ್ಲಿ, ಮನುಷ್ಯರದಾದರೂ ದನಗಳದಾದ
ರೂ, ಜೊಜ್ಜಲಾದದ್ದೆಲ್ಲಾ ನನ್ನದು; ನಾನು ಐಗುಪ್ತ ದೇಶದಲ್ಲಿ
ಎಲ್ಲಾ ಜೊಜ್ಜಲುಗಳನ್ನು ಹೊಡೆದ ದಿವಸದಲ್ಲಿ ಅವರನ್ನು ನನ
೧೮ ಗೆ ಪರಿಶುದ್ಧ ಮಾಡಿದೆನು. ಮತ್ತು ನಾನು ಇಸ್ರಯೇಲ್ ಮಕ್ಕಳ
ಲ್ಲಿರುವ ಎಲ್ಲಾ ಜೊಜ್ಜಲುಗಳಿಗೆ ಬದಲಾಗಿ ಲೇವ್ಯರನ್ನು ತೆಗೆದು
೧೯ ಕೊಂಡೆನು. ಅವರು ಸಭೆಯ ಗುಡಾರದಲ್ಲಿ ಇಸ್ರಯೇಲ್ ಮಕ್ಕ
ಳ ಸೇವೆಯನ್ನು ಮಾಡುವದಕ್ಕೂ, ಪರಿಶುದ್ಧ ಸ್ಥಳಕ್ಕೆ ಇಸ್ರ
ಯೇಲ್ ಮಕ್ಕಳು ಸಮೀಪಿಸುವಾಗ, ಇಸ್ರಯೇಲ್ ಮಕ್ಕಳೊಳಗೆ
ಬಾಧೆ ಆಗದ ಹಾಗೆ ಇಸ್ರಯೇಲ್ ಮಕ್ಕಳಿಗೋಸ್ಕರ ಪಾಪ
ಮುಚ್ಚುವಿಕೆಯಾಗುವದಕ್ಕೂ, ನಾನು ಲೇವ್ಯರನ್ನು ಇಸ್ರಯೇ
ಲ್ ಮಕ್ಕಳೊಳಗಿಂದ ಆರೋನನಿಗೂ ಅವನ ಮಕ್ಕಳಿಗೂ
ಕೊಟ್ಟು ಬಿಟ್ಟಿದ್ದೇನೆ.
೨೦ ಆಗ ಮೋಶೆಯೂ ಆರೋನನೂ ಇಸ್ರಯೇಲ್ ಮಕ್ಕಳ ಸ
ಮಸ್ತ ಸಭೆಯೂ ಕರ್ತನು ಮೋಶೆಗೆ ಲೇವ್ಯರ ವಿಷಯದಲ್ಲಿ
ಆಜ್ಞಾಪಿಸಿದ್ದೆಲ್ಲಾದರ ಪ್ರಕಾರ ಲೇವ್ಯರಿಗೆ ಮಾಡಿದರು; ಇಸ್ರಯೇ
೨೧ ಲ್ ಮಕ್ಕಳು ಅವರಿಗೆ ಹಾಗೆಯೇ ಮಾಡಿದರು. ಲೇವ್ಯರು ತ
ಮ್ಮನ್ನು ಪವಿತ್ರ ಮಾಡಿ ಕೊಂಡು, ತಮ್ಮ ವಸ್ತ್ರಗಳನ್ನು ತೊಳೆ
ಕೊಂಡರು; ಮತ್ತು ಆರೋನನು ಅವರನ್ನು ಕರ್ತನ ಮುಂದೆ
ಅಲ್ಲಾಡಿಸುವ ಅರ್ಪಣೆಯಾಗಿ ಅಲ್ಲಾಡಿಸಿದನು; ಅವರು ಪವಿತ್ರ
ರಾಗುವ ಹಾಗೆ, ಆರೋನನು ಅವರಿಗೋಸ್ಕರ ಪಾಪ ಮುಚ್ಚಿದ
೨೨ ನು. ತರುವಾಯ ಲೇವ್ಯರು ಸಭೆಯ ಗುಡಾರದಲ್ಲಿ ಆರೋನನ
ಮುಂದೆಯೂ ಅವನ ಮಕ್ಕಳ ಮುಂದೆಯೂ ತಮ್ಮ ಸೇವೆ ಮಾ
ಡುವದಕ್ಕೆ ಪ್ರವೇಶಿಸಿದರು; ಕರ್ತನು ಮೋಶೆಗೆ ಲೇವ್ಯರ ವಿಷ
ಯವಾಗಿ ಹ್ಯಾಗೆ ಆಜ್ಞಾಪಿಸಿದನೋ, ಹಾಗೆಯೇ ಅವರಿಗೆ ಮಾಡಿ
ದರು.
೨೩ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳಿದ್ದೇ
೨೪ ನಂದರೆ, ಲೇವ್ಯರಿಗೆ ಹೇಳ ಬೇಕಾದದ್ದೇನಂದರೆ, ಇಪ್ಪತ್ತೈದು
ವರುಷವಾದ, ಅದಕ್ಕೆ ಅಧಿಕವಾದ ಪ್ರಾಯವುಳ್ಳವರು ಸಭೆಯ
೨೫ ಗುಡಾರದ ಸೇವೆಗಾಗಿ ಕ್ರಮದಲ್ಲಿ ಕೇರಲಿಕ್ಕೆ ಬರುವರು. ಅದರ
ಐವತ್ತು ವರುಷದವರಾಗಿ ಸೇವೆಯ ಕ್ರಮವನ್ನು ಬಿಟ್ಟು, ಇನ್ನು
೨೬ ಮೇಲೆ ಸೇವೆ ಮಾಡರು. ಆದರೆ ಅವರು ಸಭೆಯ ಗುಡಾರದಲ್ಲಿ
ಕಾಯಿದೆಯನ್ನು ಕಾದು, ತಮ್ಮ ಸಹೋದರರಿಗೆ ಊಳಿಗ ಮಾ
ಡಲಿ; ಸೇವೆಯನ್ನು ಮಾತ್ರ ಮಾಡ ಬಾರದು; ಈ ಪ್ರಕಾರ ನೀ
ನು ಲೇವ್ಯರಿಗೆ ಅದರ ಕಾಯಿದೆಯ ವಿಷಯದಲ್ಲಿ ಮಾಡ
ಬೇಕು.

## ೯. ಸಂಧಿ.

೧ ಅವರು ಐಗುಪ್ತ ದೇಶದಿಂದ ಹೊರಟ ಎರಡನೇ ವರುಷದ
ಮೊದಲನೇ ತಿಂಗಳಲ್ಲಿ, ಕರ್ತನು ಸೀನಾಯಿ ಅರಣ್ಯದಲ್ಲಿ
೨ ಮೋಶೆಯ ಸಂಗಡ ಮಾತಾಡಿ, ಹೇಳಿದ್ದೇನಂದರೆ, ಇಸ್ರಯೇಲ್
ಮಕ್ಕಳು ಪಸ್ಕವನ್ನು ನೇಮಿಸಿದ ಸಮಯದಲ್ಲಿ ಆಚರಿಸ ಬೇ
3 ಕು. ಈ ತಿಂಗಳಿನ ಹದಿನಾಲ್ಕನೇ ದಿವಸದ ಸಾಯಂಕಾಲದಲ್ಲಿ
ಅದನ್ನು ಅದರ ಸಮಯದಲ್ಲಿ ಆಚರಿಸ ಬೇಕು; ಅದರ ಸಮಸ್ತ
ಕಟ್ಟಳೆಗಳ ಪ್ರಕಾರವಾಗಿಯೂ, ಅದರ ಸಮಸ್ತ ನೇಮಗಳ ಪ್ರ
೪ ಕಾರವಾಗಿಯೂ, ಅದನ್ನು ಆಚರಿಸಿರಿ. ಆಗ ಮೋಶೆ ಪಸ್ಕವ
ನ್ನು ಆಚರಿಸುವದಕ್ಕೆ ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ
ದನು. ಹೀಗೆ ಅವರು ಮೊದಲನೇ ತಿಂಗಳಿನ ಹದಿನಾಲ್ಕನೇ ದಿ
೫ ವಸದ ಸಾಯಂಕಾಲದಲ್ಲಿ ಸೀನಾಯಿ ಅರಣ್ಯದಲ್ಲಿ ಪಸ್ಕವನ್ನು
ಆಚರಿಸಿದರು; ಕರ್ತನು ಮೋಶೆಗೆ ಆಜ್ಞಾಪಿಸಿದ್ದೆಲ್ಲಾದರ ಪ್ರಕಾ
ರ ಇಸ್ರಯೇಲ್ ಮಕ್ಕಳು ಮಾಡಿದರು.
೬ ಆಗ ಮನುಷ್ಯನ ಹೇಣಕ್ಕೋಸ್ಕರ ಅಶುದ್ಧರಾಗಿ ಪಸ್ಕವ
ನ್ನು ಆ ದಿವಸದಲ್ಲಿ ಆಚರಿಸ ಕೂಡದ ಮನುಷ್ಯರಿದ್ದರು; ಅವ
ರು ಆ ದಿವಸದಲ್ಲಿ ಮೋಶೆಯ ಆರೋನನ ಮುಂದೆ ಬಂದರು.
೭ ಆ ಮನುಷ್ಯರು ಅವನ ಸಂಗಡ ಹೇಳ್ದದ್ದೇನಂದರೆ—ನಾವು ಮ
ನುಷ್ಯನ ಹೇಣದಿಂದ ಅಶುದ್ಧರಾದೆವು; ನಾವು ಇಸ್ರಯೇಲ್ ಮಕ್ಕ
ಳ ಮಧ್ಯದಲ್ಲಿ ಕರ್ತನ ಅರ್ಪಣೆಯನ್ನು ಅದರ ಸಮಯದ
ಲ್ಲಿ ಅರ್ಪಿಸದ ಹಾಗೆ, ನಮಗೆ ಯಾಕೆ ಅಡ್ಡಿ ಆಗ ಬೇಕು!
೮ ಮೋಶೆ ಅವರ ಸಂಗಡ ಹೇಳ್ದದ್ದೇನಂದರೆ, ನಿಲ್ಲಿರಿ; ಕರ್ತನು ನಿ
ಮಗೆ ಏನು ಆಜ್ಞಾಪಿಸುವನೋ, ನಾನು ಕೇಳುತ್ತೇನೆ.
೯ ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳ್ದದ್ದೇನಂದರೆ,
೧೦ ಇಸ್ರಯೇಲ್ ಮಕ್ಕಳಿಗೆ ಹೀಗೆ ಹೇಳು; ನಿಮ್ಮಲ್ಲಿಯೂ ನಿಮ್ಮ
ಸಂತತಿಯಲ್ಲಿಯೂ ಯಾವನಾದರೂ ಹೇಣದಿಂದ ಅಶುದ್ಧನಾಗಿ
ದ್ದರೂ, ಇಲ್ಲವೆ ದೂರ ಪ್ರಯಾಣದಲ್ಲಿ ಇದ್ದರೂ, ಕರ್ತನಿಗೆ
೧೧ ಪಸ್ಕವನ್ನು ಆಚರಿಸ ಬೇಕು. ಅವರು ಎರಡನೇ ತಿಂಗಳಿನ ಹದಿ
ನಾಲ್ಕನೇ ದಿವಸದ ಸಾಯಂಕಾಲದಲ್ಲಿ ಆಚರಿಸಲಿ; ಅದನ್ನು ಹುಳಿ
ಇಲ್ಲದ ರೊಟ್ಟಿಗಳ ಸಂಗಡಲೂ ಕಹಿಯಾದವುಗಳ ಸಂಗಡಲೂ
೧೨ ಉಣ್ಣ ಬೇಕು. ಅವರು ಅದರಿಂದ ಮರು ದಿವಸಕ್ಕೆ ಏನು ಉಳಿ
ಸ ಬಾರದು; ಅದರಲ್ಲಿ ಒಂದು ಎಲುವನ್ನಾದರೂ ಮುರಿಯ ಬಾರ
ದು; ಪಸ್ಕದ ಸಮಸ್ತ ಕಟ್ಟಳೆಯ ಪ್ರಕಾರವಾಗಿ ಅದನ್ನು ಆಚ
೧೩ ರಿಸ ಬೇಕು. ಆದರೆ ಪವಿತ್ರ ಮನುಷ್ಯನೂ ಮಾರ್ಗಸ್ಥನಲ್ಲದ
ವನೂ ಪಸ್ಕವನ್ನು ಆಚರಿಸಲಿಕ್ಕೆ ತಪ್ಪಿದರೆ, ಆ ಪ್ರಾಣಿ ತನ್ನ
ಜನರೊಳಗಿಂದ ಕಡಿಯಲ್ಪಡ ಬೇಕು; ಅವನು ಕರ್ತನ ಅರ್ಪ-





ಣೆಯನ್ನು ಅದರ ಸಮಯದಲ್ಲಿ ಅರ್ಪಿಸದ ಕಾರಣ, ಆ ಮ
೧೪ ನುಷ್ಯನು ತನ್ನ ಪಾಪವನ್ನು ಹೊತ್ತು ಕೊಳ್ಳ ಬೇಕು. ಮತ್ತು
ಪರದೇಶಿ ನಿಮ್ಮ ಸಂಗಡ ವಾಸ ಮಾಡಿ, ಕರ್ತನಿಗೆ ಪಸ್ಕವನ್ನು
ಆಚರಿಸದೆ, ಪಸ್ಕದ ಕಟ್ಟಳೆಯ ಪ್ರಕಾರವಾಗಿಯೂ ಅದರ
ನ್ಯಾಯದ ಪ್ರಕಾರವಾಗಿಯೂ ಮಾಡ ಬೇಕು; ನಿಮಗೂ ಪರ
ದೇಶಿಗೂ, ದೇಶಸ್ಥನಿಗೂ, ಒಂದೇ ಕಟ್ಟಳೆ ಇರ ಬೇಕು.
೧೫ ಮತ್ತು ನಿವಾಸವನ್ನು ಎತ್ತಿದ ದಿವಸದಲ್ಲಿ ಮೇಘವು ನಿವಾಸ
ವನ್ನು, ಸಾಕ್ಷಿಯ ಗುಡಾರದ ಕಡೆಗೆ, ಮುಚ್ಚಿತು; ಮತ್ತು ಸಾಯಂ
ಕಾಲದಲ್ಲಿ ಉದಯದ ಪರ್ಯಂತರ ಅದು ಬೆಂಕಿಯ ಆಕಾರ
೧೬ ದಿಂದ ನಿವಾಸದ ಮೇಲೆ ಇತ್ತು. ಈ ಪ್ರಕಾರ ಯಾವಾಗಲೂ ಇ
ತ್ತು; ಮೇಘವೂ, ರಾತ್ರಿಯಲ್ಲಿ ಬೆಂಕಿಯ ಆಕಾರವೂ, ಅದನ್ನು
೧೭ ಮುಚ್ಚುತ್ತಿತ್ತು. ಆ ಮೇಘವು ಗುಡಾರದ ಮೇಲಿನಿಂದ ಏರುವ
ಪ್ರಕಾರ ಇಸ್ರಯೇಲ್ ಮಕ್ಕಳು ಹೊರಟರು; ಮತ್ತು ಮೇಘ ಇ
೧೮ ಳಿದ ಸ್ಥಳದಲ್ಲಿ ಇಸ್ರಯೇಲ್ ಮಕ್ಕಳು ಇಳು ಕೊಂಡರು. ಕ
ರ್ತನ ಆಜ್ಞೆಯ ಪ್ರಕಾರ ಇಸ್ರಯೇಲ್ ಮಕ್ಕಳು ಹೊರಟರು;
ಕರ್ತನ ಆಜ್ಞೆಯ ಪ್ರಕಾರ ಇಳು ಕೊಂಡರು; ಮೇಘವು ನಿವಾ
ಸದ ಮೇಲೆ ಕೂತ್ರುವ ದಿವಸಗಳೆಲ್ಲಾ ಇಳು ಕೊಂಡಿದ್ದರು.
೧೯ ಮತ್ತು ಮೇಘವು ನಿವಾಸದ ಮೇಲೆ ಅನೇಕ ದಿವಸಗಳು ತಡ
ಮಾಡಿದಾಗ, ಇಸ್ರಯೇಲ್ ಮಕ್ಕಳು ಹೊರಡದೆ, ಕರ್ತನ ಕಾ
೨೦ ಯಿದೆಯನ್ನು ಕಾಯುತ್ತಿದ್ದರು. ಇದಲ್ಲದೆ ಮೇಘವು ನಿವಾಸದ
ಮೇಲೆ ಸ್ವಲ್ಪ ದಿವಸಗಳು ಇರುತ್ತಿರುವಾಗ, ಅವರು ಕರ್ತನ
ಆಜ್ಞೆಯ ಪ್ರಕಾರ ಇಳು ಕೊಂಡು, ಕರ್ತನ ಆಜ್ಞೆಯ ಪ್ರಕಾರ
೨೧ ಹೊರಡುತ್ತಿದ್ದರು. ಮತ್ತು ಮೇಘವು ಸಾಯಂಕಾಲದಿಂದ ಉದ
ಯಕಾಲದ ಪರ್ಯಂತರ ಇದ್ದು, ಬೆಳ್ಗಿಯ ಏರಿದರೆ, ಅವರು ಹೊ
ರಡುತ್ತಿದ್ದರು; ಇಲ್ಲವೆ ಹಗಲು ರಾತ್ರಿ ಇದ್ದು, ಮೇಘವು ಏರಿದರೆ,
೨೨ ಅವರು ಹೊರಡುತ್ತಿದ್ದರು. ಅಥವ ಆ ಮೇಘವು ಎರಡು ದಿವಸ
ವಾದರೂ, ಒಂದು ತಿಂಗಳಾದರೂ, ಅಧಿಕವಾದರೂ, ನಿವಾಸದ
ಮೇಲೆ ತಡ ಮಾಡಿ, ಅದರ ಮೇಲೆ ನೆಲೆಯಾಗಿದ್ದರೆ, ಇಸ್ರಯೇ
ಲ್ ಮಕ್ಕಳು ಹೊರಡದೆ, ಇಳು ಕೊಂಡಿದ್ದರು; ಅದು ಏರುವಾ
೨೩ ಗಲೇ ಹೊರಡುತ್ತಿದ್ದರು. ಕರ್ತನ ಆಜ್ಞೆಯ ಪ್ರಕಾರ ಇಳು ಕೊ
ಳ್ಳುತ್ತಾ, ಕರ್ತನ ಆಜ್ಞೆಯ ಪ್ರಕಾರ ಹೊರಡುತ್ತಾ, ಇದ್ದರು.
ಮೋಶೆಯ ಬಾಯಿಯಿಂದ ಕರ್ತನು ಆಜ್ಞಾಪಿಸಿದಂತೆ ಕರ್ತನ
ಕಾಯಿದೆಯನ್ನು ಕಾಯುತ್ತಿದ್ದರು.

## ೧೦. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳ್ದದ್ದೇ
೨ ನಂದರೆ—ಬೆಳ್ಳಿಯಿಂದ ಎರಡು ತುತೂರಿಗಳನ್ನು ಮಾಡಿಸಿಕೋ;
ತಕಣಿ ಕೆಲಸದಿಂದ ಅವುಗಳನ್ನು ಮಾಡಿಸ ಬೇಕು; ಅವು ಸಭೆ
ಯನ್ನು ಕೂಡಿಸುವದಕ್ಕಾಗಿಯೂ, ದಂಡುಗಳನ್ನು ಹೊರಡಿ
3 ಸುವದಕ್ಕಾಗಿಯೂ ನಿನಗಿರ ಬೇಕು. ಅವುಗಳಲ್ಲಿ ಊದುವಾಗ,
ಸಭೆಯೆಲ್ಲಾ ನಿನ್ನ ಬಳಿಗೆ ಆಕಾರದ ಗುಡಾರದ ಬಾಗಿಲಿನ ಮುಂ
೪ ದೆ ಕೂಡಿ ಬರ ಬೇಕು. ಒಂದರೊಳಗೆ ಊದುವಾಗ, ಇಸ್ರಯೇ
ಲಿನ ಸಹಸ್ರಗಳ ಪ್ರೇಷ್ಠರಾದ ಪ್ರಭುಗಳು ನಿನ್ನ ಬಳಿಗೆ ಕೂಡಿ,
೫ ಬರ ಬೇಕು. ನೀವು ಜಯ ಧ್ವನಿಯಂತೆ ಊದುವಾಗ, ಮೂಡ
ಲ್ಲಿ ಇಳು ಕೊಳ್ಳುವ ದಂಡುಗಳು ಹೊರಡ ಬೇಕು. ನೀವು ಎ
ರಡನೇ ಸಾರಿ ಜಯ ಧ್ವನಿಯಂತೆ ಊದುವಾಗ, ತೆಂಕಲ್ಲಿ ಇ
ಳು ಕೊಳ್ಳುವ ದಂಡುಗಳು ಹೊರಡ ಬೇಕು; ಅವರ ಹೊರಡೋ
೬ ಣಕ್ಕೆ ಜಯ ಧ್ವನಿಯಂತೆ ಊದ ಬೇಕು. ಆದರೆ ಸಭೆಯ
ನ್ನು ಕೂಡಿಸುವಾಗ, ನೀವು ಮೆಲ್ಲಗೆ ಊದಿ, ಜಯ ಧ್ವನಿ ಮಾಡ
೭ ಬೇಡಿರಿ. ಮತ್ತು ಯಾಜಕರಾಗಿರುವ ಆರೋನನ ಮಕ್ಕಳು ತು
ತೂರಿಗಳಲ್ಲಿ ಊದ ಬೇಕು; ಇವು ನಿಮ್ಮ ಸಂತತಿಗಳಲ್ಲಿ ನಿಮಗೆ
೮ ನಿತ್ಯ ಕಟ್ಟಳೆಯಾಗಿರ ಬೇಕು. ನೀವು ನಿಮ್ಮ ದೇಶದಲ್ಲಿ ನಿಮ್ಮ
ನ್ನು ಇಕ್ಕಟ್ಟು ಪಡಿಸುವ ವೈರಿಗೆ ವಿರೋಧವಾಗಿ ಯುದ್ಧಕ್ಕೆ
ಹೊರಡುವಾಗ, ನೀವು ತುತೂರಿಗಳೊಳಗೆ ಒತ್ತಿ, ಊದ ಬೇಕು.
ಆಗಲು ನಿಮ್ಮ ದೇವರಾದ ಕರ್ತನ ಸಮುಖದಲ್ಲಿ ನೀವು ಜ್ಞಾಪಕ
೯ ಮಾತಲ್ಪಟ್ಟು, ನಿಮ್ಮ ಶತ್ರುಗಳಿಂದ ರಕ್ಷಿಸಲ್ಪಡುವಿರಿ. ಮತ್ತು ನಿ
ಮ್ಮ ಸಂತೋಷದ ದಿವಸದಲ್ಲಿಯೂ, ನಿಮ್ಮ ಹಬ್ಬಗಳಲ್ಲಿಯೂ,
ನಿಮ್ಮ ಅಮಾವಾಸ್ಯೆಗಳಲ್ಲಿಯೂ, ತುತೂರಿಗಳಲ್ಲಿ ಊದ ಬೇಕು;
ನಿಮ್ಮ ಹೋಮಗಳ ಮೇಲೆಯೂ ನಿಮ್ಮ ಸಮಾಧಾನ ಬಲಿಗಳ
ಮೇಲೆಯೂ, ಅವುಗಳಲ್ಲಿ ಊದ ಬೇಕು; ಇವು ನಿಮಗೆ ನಿಮ್ಮ
ದೇವರ ಸಮುಖದಲ್ಲಿ ಜ್ಞಾಪಕಕ್ಕಾಗಿರ ಬೇಕು; ನಿಮ್ಮ ದೇವರಾಗಿ
ರುವ ಕರ್ತನು ನಾನೇ.
೧೦ ಎರಡನೇ ವರುಷದ ಎರಡನೇ ತಿಂಗಳಿನ ಇಪ್ಪತ್ತನೇ ದಿವಸದ
ಲ್ಲಿ ಮೇಘವು ಸಾಕ್ಷಿಯ ನಿವಾಸದ ಮೇಲಿನಿಂದ ಎತ್ತಲ್ಪಟ್ಟಿತು.
೧೧ ಆಗ ಇಸ್ರಯೇಲ್ ಮಕ್ಕಳು ತಮ್ಮ ಕ್ರಮಗಳ ಪ್ರಕಾರ ಸೀನಾಯಿ
ಅರಣ್ಯದಿಂದ ಹೊರಟರು; ಮತ್ತು ಮೇಘವು ಪಾರಾನೆಂಬ ಅ
೧೨ ರಣ್ಯದಲ್ಲಿ ಇಳಿಯಿತು. ಆಗಲವರು ಮೊದಲನೇ ಸಾರಿ ಕ
ರ್ತನು ಮೋಶೆಯ ಕೈಯಿಂದ ಆಜ್ಞಾಪಿಸಿದ ಪ್ರಕಾರ ಹೊರ
ಟರು.
೧೩ ಯೆಹೂದನ ಮಕ್ಕಳ ದಂಡಿನ ಧ್ವಜವು ಅವರ ಸೈನ್ಯಗಳ
ಪ್ರಕಾರ ಮೊದಲು ಹೊರಟಿತು; ಅವರ ಸೈನ್ಯದ ಮೇಲೆ ಅಮ್ಮಿ
೧೪ ನಾದಾಬನ ಮಗನಾದ ನಾಶೋನನು ಇದ್ದನು. ಇಸ್ಸಕಾರನ
ಮಕ್ಕಳ ಕುಲದ ಸೈನ್ಯದ ಮೇಲೆ ಚುವಾರನ ಮಗನಾದ ನೆಥಾ
೧೫ ನಿಯೇಲನು ಇದ್ದನು. ಜೆಬುಲೋನನ ಮಕ್ಕಳ ಕುಲದ ಸೈನ್ಯ
೧೬ ದ ಮೇಲೆ ಹೆಲೋನನ ಮಗನಾದ ಎಲಿಯಾಬನು ಇದ್ದನು. ಆ
ಗ ನಿವಾಸವನ್ನು ಇಳಿಸಿದರು; ಮತ್ತು ಗೆರ್ಶೋನನ ಮಕ್ಕಳೂ
ಮೆರಾರಿಯ ಮಕ್ಕಳೂ ನಿವಾಸವನ್ನು ಹೊತ್ತು ಕೊಂಡು, ಹೊರ
೧೭ ಟರು. ಮತ್ತು ರೂಬೆನನ ದಂಡಿನ ಧ್ವಜವು ಅವರ ಸೈನ್ಯಗಳ
ಪ್ರಕಾರವಾಗಿ ಹೊರಟಿತು; ಅವನ ಸೈನ್ಯದ ಮೇಲೆ ಶೆದೆಯೂರ
೧೮ ನ ಮಗನಾದ ಎಲೀಚೂರನು ಇದ್ದನು. ಮತ್ತು ಸಿಮೆಯೋನನ
ಮಕ್ಕಳ ಕುಲದ ಸೈನ್ಯದ ಮೇಲೆ ಚುರೀಷದಾಯನ ಮಗನಾ
೧೯ ದ ಶೆಲುಮಿಯೇಲನು ಇದ್ದನು. ಗಾದನ ಮಕ್ಕಳ ಕುಲದ ಸೈ
ನ್ಯದ ಮೇಲೆ ದೆಯುವೇಲನ ಮಗನಾದ ಎಲ್ಯಾಸಾಫನು ಇದ್ದನು.
೨೦ ಮತ್ತು ಪರಿಶುದ್ಧವಾದದ್ದನ್ನು ವೈಯುವ ಕೊಹತ್ಯರು ಹೊರ
ಟರು; ಇವರು ಬರುವ ತನಕ ಅವರು ನಿವಾಸವನ್ನು ನಿಲ್ಲಿಸಿದರು.
೨೧ ಮತ್ತು ಎಫ್ರಯಿಮನ ಮಕ್ಕಳ ದಂಡಿನ ಧ್ವಜವು ಅವನ ಸೈ
ನ್ಯಗಳ ಪ್ರಕಾರ ಹೊರಟಿತು; ಅವರ ಸೈನ್ಯದ ಮೇಲೆ ಅಮ್ಮಿ
೨೨ ಹೂದನ ಮಗನಾದ ಎಲೀಷಮನು ಇದ್ದನು. ಮನಸ್ಸೆಯ ಮ
ಕ್ಕಳ ಕುಲದ ಸೈನ್ಯದ ಮೇಲೆ ಪೆದಚೂರನ ಮಗನಾದ ಗ
೨೩ ಮಾಲಿಯೇಲನು ಇದ್ದನು. ಮತ್ತು ಬೆನ್ಯಮೀನನ ಮಕ್ಕಳ ಕು

ಲದ ಸೈನ್ಯದ ಮೇಲೆ ಗಿಬ್ಯೋನಿಯ ಮಗನಾದ ಅಬಿದಾನನು
೨೫ ಇದ್ದನು. ಮತ್ತು ದಾನನ ಮಕ್ಕಳ ದಂಡಿನ ಧ್ವಜವು ಸಮಸ್ತ
ದಂಡುಗಳಿಗೆ ಹಿಂದಾಗಿ ಅವರ ಸೈನ್ಯಗಳ ಪ್ರಕಾರ ಹೊರಟಿತು.
ಅವನ ಸೈನ್ಯದ ಮೇಲೆ ಅಮ್ಮಿಷದಾಯನ ಮಗನಾದ ಅಹಿ
೨೬ ಯೇಜರನು ಇದ್ದನು. ಅಶೇರನ ಮಕ್ಕಳ ಕುಲದ ಸೈನ್ಯದ
೨೭ ಮೇಲೆ ಒಕ್ರಾನನ ಮಗನಾದ ಪಗಿಯೇಲನು ಇದ್ದನು. ಮತ್ತು
ನಿಫ್ತಾಲಿಯ ಮಕ್ಕಳ ಕುಲದ ಸೈನ್ಯದ ಮೇಲೆ ಏನನ ಮಗನಾ
೨೮ ದ ಅಹೀರನು ಇದ್ದನು. ಈ ಪ್ರಕಾರ ಇಸ್ರಯೇಲ್ ಮಕ್ಕಳು ತ
ಮ್ಮ ಸೈನ್ಯಗಳ ಪ್ರಕಾರ ಪ್ರಯಾಣವಾಗಿ ಹೊರಡುತ್ತಿದ್ದರು.

೨೯ ಇದಲ್ಲದೆ ಮೋಶೆ ಮಿದ್ಯಾನ್ಯನಾದ ತನ್ನ ಮಾವನಾದ ರೂ
ವೇಲನ ಮಗನಾದ ಹೊಬಾಬನ ಸಂಗಡ ಹೇಳಿದ್ದೇನಂದರೆ—ನಿ
ಮಗೆ ಕೊಡುತ್ತೇನೆಂದು, ಕರ್ತನು ಹೇಳಿದ ದೇಶಕ್ಕೆ ಹೊರಡು
ತ್ತೇವೆ; ನಮ್ಮ ಸಂಗಡ ಬಾ; ನಾವು ನಿನಗೆ ಒಳ್ಳೇದನ್ನು ಮಾಡು
ವೆವು; ಯಾಕಂದರೆ ಕರ್ತನು ಇಸ್ರಯೇಲ್ಯರನ್ನು ಕುರಿತು ಒ
೩೰ ಳ್ಳೇದನ್ನು ಹೇಳಿದ್ದಾನೆ. ಅವನು ಅವನಿಗೆ—ನಾನು ಹೋಗುವ
ದಿಲ್ಲ; ನನ್ನ ದೇಶಕ್ಕೂ ನನ್ನ ಬಂಧುಗಳ ಬಳಿಗೂ ಹೋಗುತ್ತೇ
೩೧ ನೆ, ಅಂದನು. ಮೋಶೆ ಹೇಳಿದ್ದು—ನಮ್ಮನ್ನು ಬಿಟ ಬೇಡ; ಯಾ
ಕಂದರೆ ನಾವು ಅರಣ್ಯದಲ್ಲಿ ಎಲ್ಲಿ ಇಳಿಯ ಬೇಕೋ, ನೀನು ಕ
೩೨ ಣ್ಣಿ; ನೀನು ನಮಗೆ ಕಣ್ಣಾಗಿರುವಿ. ನೀನು ನಮ್ಮ ಸಂಗಡ ಹೋ
ದರೆ, ಕರ್ತನು ನಮಗೆ ಮಾಡುವದಕ್ಕಿರುವ ಒಳ್ಳೇದನ್ನು ನಾ
ವು ನಿನಗೆ ಮಾಡುವೆವು.

೩೩ ಮತ್ತು ಅವರು ಕರ್ತನ ಪರ್ವತದ ಬಳಿಯಿಂದ ಮೂರು
ದಿವಸಗಳ ಪ್ರಯಾಣ ಹೋದರು. ಮತ್ತು ಕರ್ತನ ಒಡಂಬಡಿಕೆ
ಯ ಪೆಟ್ಟಿಗೆಯು ಅವರಿಗೆ ಇಳಿ ಕೊಳ್ಳುವ ಸ್ಥಳವನ್ನು ಹುಡುಕು
ವದಕ್ಕೆ ಅವರ ಮುಂದಾಗಿ ಮೂರು ದಿವಸಗಳ ಪ್ರಯಾಣ
೩೪ ಹೋಯಿತು. ಮತ್ತು ಅವರು ದಂಡಿನಿಂದ ಹೊರಡುವಾಗ, ಕ
ರ್ತನ ಮೇಘವು ಹಗಲಿನಲ್ಲಿ ಅವರ ಮೇಲೆ ಇತ್ತು.

೩೫ ಇದಲ್ಲನೆ ಪೆಟ್ಟಿಗೆ ಹೊರಡುವಾಗ, ಮೋಶೆ ಹೇಳಿದ್ದೇನಂದ
ರೆ—ಕರ್ತನೇ, ಏಳು. ನಿನ್ನ ಶತ್ರುಗಳು ಚದರಿ ಹೋಗಲಿ, ನಿನ್ನ
ನ್ನು ಹಗೆ ಮಾಡುವವರು ನಿನ್ನ ಸಮುಖದಿಂದ ಓಡಿ ಹೋಗಲಿ.
೩೬ ಅದು ಇಳಿಯುವಾಗ, ಅವನು ಹೇಳಿದ್ದೇನಂದರೆ, ಕರ್ತನೇ, ಇ
ಸ್ರಯೇಲಿನ ಸಹಸ್ರ ಸಹಸ್ರಗಳ ಬಳಿಗೆ ತಿರುಗು.

## ೧೧. ಸಂಧಿ.

೧ ಆದರೆ ಜನರು ಅಂಗಲಾಚಿದಾಗ, ಅದು ಕರ್ತನ ಕಿವಿಗಳಲ್ಲಿ
ಕೆಟ್ಟದ್ದಾಗಿತ್ತು; ಕರ್ತನು ಇದನ್ನು ಕೇಳಿದಾಗ, ಅವನ ಕೋಪ
ವು ಉರಿಯಿತು; ಮತ್ತು ಕರ್ತನ ಬೆಂಕಿ ಅವರಲ್ಲಿ ಹತ್ತಿ, ದಂಡಿನ
೨ ಅಂಚಿನಲ್ಲಿ ದಹಿಸುತ್ತಾ ಇತ್ತು. ಆಗ ಜನರು ಮೋಶೆಗೆ ಕೂಗಿ
ದರು; ಮೋಶೆ ಕರ್ತನಿಗೆ ಪ್ರಾರ್ಥನೆ ಮಾಡಿದನು; ಆಗ ಬೆಂಕಿ
೩ ಆರಿ ಹೋಯಿತು. ಮತ್ತು ಕರ್ತನ ಬೆಂಕಿಯು ಅವರಲ್ಲಿ ಉರಿ
ದ್ದರಿಂದ ಆ ಸ್ಥಳಕ್ಕೆ ತಬೇರ ಎಂದು ಹೆಸರಿಟ್ಟರು.

೪ ಆಗ ಅವರೊಳಗೆ ಇದ್ದ ಮಿಶ್ರವಾದ ಗುಂಪಿನ ಜನರು ಆಶೆಯ
ನ್ನು ಆಶಿಸಿದರು; ಮತ್ತು ಇಸ್ರಯೇಲ್ ಮಕ್ಕಳು ಶಿರಿಗಿ ಅತ್ತು,
ಹೇಳಿದ್ದೇನಂದರೆ—ನಮಗೆ ಮಾಂಸ ತಿನ್ನ ಕೊಡುವವರು ಯಾರು!
೫ ನಾವು ಐಗುಪ್ತ ದೇಶದಲ್ಲಿ ಸುಮ್ಮನೆ ಉಂಡ ಮೀನನ್ನೂ, ಸೌತೆ
ಕಾಯಿಯನ್ನೂ, ಕಕಬೂಜಗಳನ್ನೂ, ಕಾರುಳ್ಳಿ, ನೀರುಳ್ಳಿ, ಬೆ
೬ ಳ್ಳುಳ್ಳಿಗಳನ್ನೂ, ಜಲ್ಲಕ ಮಾಡುತ್ತೇವೆ. ಆದರೆ ಈಗ ನಮ್ಮ
ಪ್ರಾಣವು ಒಣಗಿತು; ಈ ಮನ್ನವು ಹೊರ್ತಾಗಿ, ಮತ್ತೇನಾದ
೭ ರೂ ನಮ್ಮ ಕಣ್ಣುಗಳ ಮುಂದೆ ಇರುವದಿಲ್ಲ. ಆ ಮನ್ನವು
ಕೊತ್ತಂಬರಿ ಬೀಜದ ಹಾಗೆ ಇತ್ತು; ಅದರ ವರ್ಣವು ಬೆದೋಳ್ಳ
೮ ಹು ಅಂಟಿನ ಹಾಗಿತ್ತು. ಜನರು ತಿರುಗಾಡಿ, ಅದನ್ನು ಕೂಡಿಸಿ,
ಬೀಸುವ ಕಲ್ಲುಗಳಿಂದ ಬೀಸಿ, ಇಲ್ಲವೆ ಒರಳಿನಲ್ಲಿ ಕುಟ್ಟಿ, ಗಡಿಗೆಗ
ಳಲ್ಲಿ ಅಟ್ಟು, ಹೋಳಿಗೆಗಳನ್ನು ಮಾಡುತ್ತಿದ್ದರು; ಅದರ ರುಚಿ
೯ ಯು ಎಣ್ಣೆಯ ಹೋಳಿಗೆಯ ರುಚಿಯ ಹಾಗಿತ್ತು. ರಾತ್ರಿಯ
ಲ್ಲಿ ಮಂಜು ದಂಡಿನ ಮೇಲೆ ಇಳಿಯುವಾಗ, ಮನ್ನವು ಅದರ ಸಂ
ಗಡ ಇಳಿಯುತ್ತಿತ್ತು.

೧೦ ಇದಲ್ಲದೆ ಜನರು ತಮ್ಮ ಗೋತ್ರಗಳ ಪ್ರಕಾರವಾಗಿ ಒಬ್ಬೊ
ಬ್ಬನು ತನ್ನ ಗುಡಾರದ ಬಾಗಲಿನ ಹತ್ತರ ಅಳುವದನ್ನು ಮೋಶೆ
ಕೇಳಿದನು; ಆದಕಾರಣ ಕರ್ತನ ಕೋಪವು ಬಹಳವಾಗಿ ಉರಿಯಿ
ತು; ಮತ್ತು ಮೋಶೆಯ ಕಣ್ಣುಗಳಲ್ಲಿ ಅದು ಬೇಸರವಾಗಿತ್ತು.
೧೧ ಆದದರಿಂದ ಮೋಶೆ ಕರ್ತನ ಸಂಗಡ ಹೇಳಿದ್ದೇನಂದರೆ—ಈ ಸಮ
ಸ್ತ ಜನರ ಭಾರವನ್ನು ನನ್ನ ಮೇಲೆ ಹಾಕುವದಕ್ಕೆ ನೀನು ನಿನ್ನ
ಸೇವಕನಿಗೆ ಯಾಕೆ ಉಪದ್ರವ ಮಾಡಿದ್ದೀ! ನನಗೆ ನಿನ್ನ ಕಣ್ಣುಗ
೧೨ ಳಲ್ಲಿ ದಯವು ಯಾಕೆ ದೊರಕಲಿಲ್ಲ! ದಾದಿ ಮೊಲೆ ಕೂಸನ್ನು
ಎತ್ತುವಂತೆ, ನೀನು ಈ ಜನರನ್ನು ಉಡಿಯೊಳಗಿಟ್ಟು, ಅವರ ತಂ
ದೆಗಳ ಬಳಿಯ ನಾನು ಪ್ರಮಾಣ ಮಾಡಿದ ದೇಶಕ್ಕೆ ಪೈ ಎಂದು,
ನನಗೆ ನೀನು ಹೇಳುವದಕ್ಕೆ ನಾನೇ ಈ ಸಮಸ್ತ ಜನರನ್ನು ಗರ್ಭ
೧೩ ಧರಿಸಿ ಕೊಂಡೆನೋ! ನಾನೇ ಅವರನ್ನು ಹೆತ್ತೆನೋ! ಈ ಸಮಸ್ತ
ಜನರಿಗೆ ಕೊಡುವದಕ್ಕೆ ಮಾಂಸವು ನನಗೆ ಎಲ್ಲಿಂದ ದೊರಕುವದು!
ಯಾಕಂದರೆ ನಾವು ತಿನ್ನುವ ಹಾಗೆ, ನಮಗೆ ಮಾಂಸವನ್ನು
೧೪ ಕೊಡು ಎಂದು, ನನ್ನ ಬಳಿಯಲ್ಲಿ ಅಳುತ್ತಾರೆ. ಈ ಸಮಸ್ತ ಜನ
ರನ್ನು ಹೊತ್ತು ಕೊಳ್ಳುವದು ನನ್ನೊಬ್ಬನಿಂದ ಆಗುವದಿಲ್ಲ; ಅ
೧೫ ದು ನಾನು ಕಾಳಲಾರದ ಭಾರವಾಗಿದೆ. ನೀನು ಈ ಪ್ರಕಾರ ನನ
ಗೆ ಮಾಡಿದರೆ, ನಿನ್ನ ಕಣ್ಣುಗಳಲ್ಲಿ ನನಗೆ ದಯವು ದೊರಕಿದ್ದರೆ,
ನನ್ನ ಕೇಡನ್ನು ನಾನು ನೋಡದ ಹಾಗೆ ದಯ ಮಾಡಿ, ನನ್ನನ್ನು
ಕೊಂದೇ ಕೊಂದು ಹಾಕು.

೧೬ ಮತ್ತು ಕರ್ತನು ಮೋಶೆಗೆ ಹೇಳಿದ್ದೇನಂದರೆ—ಜನರ ಹಿರಿಯ
ರೆಂದೂ ಅವರ ಪಾರುಪತ್ಯಗಾರರೆಂದೂ ನೀನು ತಿಳಿದು ಕೊಂಡಂ
ಥ ಇಸ್ರಯೇಲ್ಯರ ಹಿರಿಯೆಕೊಳ್ಳಗಿಂದ ನನಗೆ ಎಪ್ಪತ್ತು ಮಂದಿ
ಯನ್ನು ಕೂಡಿಸಿ, ಅವರನ್ನು ಸಭೆಯ ಗುಡಾರದ ಕಡೆಗೆ ಕರ
೧೭ ಕೊಂಡು ಬಾ; ಅವರು ಅಲ್ಲಿ ನಿನ್ನ ಸಂಗಡ ನಿಂತಿರಲಿ. ಆಗ ನಾ
ನು ಇಳಿದು, ಅಲ್ಲಿ ನಿನ್ನ ಸಂಗಡ ಮಾತಾಡುವೆನು; ಮತ್ತು ನಿನ್ನ
ಮೇಲೆ ಇರುವ ಆತ್ಮದಿಂದ ತೆಗೆದು, ಅವರ ಮೇಲೆ ಇಡುವೆನು;
ಆಗ ನೀನೊಬ್ಬನೇ ಅದನ್ನು ಹೊತ್ತು ಕೊಳ್ಳದ ಹಾಗೆ, ಅವರು
೧೮ ನಿನ್ನ ಸಂಗಡ ಜನರ ಭಾರವನ್ನು ಹೊರುವರು. ಮತ್ತು ಜನರಿಗೆ
ನೀನು ಹೇಳ ಬೇಕಾದದ್ದೇನಂದರೆ—ನಾಳೆಗೆ ನಿಮ್ಮನ್ನು ಪರಿಶುದ್ಧ
ಮಾಡಿ ಕೊಳ್ಳಿರಿ; ಆಗ ಮಾಂಸವನ್ನು ತಿನ್ನುವಿರಿ; ಯಾಕಂದರೆ
—ನಮಗೆ ಯಾವನು ಮಾಂಸವನ್ನು ತಿನ್ನ ಕೊಡುವನು! ಏನಂ
ದರೆ ಐಗುಪ್ತ ದೇಶದಲ್ಲಿ ನಮಗೆ ಒಳ್ಳೇದು ಇತ್ತೆಂದು ಹೇಳಿ, ಕರ್ತ
ನ ಕಿವಿಗಳೊಳಗೆ ಅತ್ತಿರಿ; ಆದಕಾರಣ ಕರ್ತನು ನಿಮಗೆ ತಿನ್ನುವ





೧೯ ದಕ್ಕೆ ಮಾಂಸವನ್ನು ಕೊಡುವನು. ಒಂದು ದಿನವಲ್ಲ, ಎರಡು
ದಿನವಲ್ಲ, ಐದು ದಿನವಲ್ಲ, ಹತ್ತು ದಿನವಲ್ಲ, ಇಪ್ಪತ್ತು ದಿನವಲ್ಲ,
೨೦ ಅದು ನಿಮ್ಮ ಮೂಗಿನಿಂದ ಬಂದು, ನಿಮಗೆ ಅಸಹ್ಯವಾಗುವ ಪ
ರ್ಯಂತರ, ಒಂದು ಪೂರ್ಣ ತಿಂಗಳ ತನಕ ಮಾಂಸವನ್ನು,
ತಿನ್ನುವಿರಿ; ನಿಮ್ಮ ಮಧ್ಯದಲ್ಲಿರುವ ಕರ್ತನನ್ನು ನೀವು ಅಲಕ್ಷ್ಯ
ಮಾಡಿ, ಅವನ ಮುಂದೆ ಅತ್ತು, ಯಾಕೆ ಐಗುಪ್ತ ದೇಶದಿಂದ
೨೧ ಹೊರಟೆವೆಂದು, ಹೇಳಿದಿರಲ್ಲ! ಆಗ ಮೋಶೆ ಹೇಳಿದ್ದೇನಂದ
ರೆ—ನನ್ನ ಸಂಗಡ ಇರುವ ಜನರು ಆರು ಲಕ್ಷ ಕಾಲಾಳು. ಮತ್ತು—
ಅವರು ಒಂದು ಪೂರ್ಣ ತಿಂಗಳ ತನಕ ಭಕ್ಷಿಸುವ ಹಾಗೆ ಅವರಿ
೨೨ ಗೆ ಮಾಂಸವನ್ನು ಕೊಡುವೆನೆಂದು ನೀನು ಹೇಳಿದಿ. ಅವರಿಗೆ ಸಾ
ಕಾಗುವ ಹಾಗೆ, ಕುರಿ ದನಗಳನ್ನು ಅವರಿಗೋಸ್ಕರ ಕೊ
ಯ್ಯ ಬೇಕೋ! ಅವರಿಗೆ ಸಾಕಾಗುವ ಹಾಗೆ, ಸಮುದ್ರದ
೨೩ ಮೀನುಗಳೆಲ್ಲಾ ಕೂಡಿಸಿ ತರ ಬೇಕೋ! ಆಗ ಕರ್ತನು ಮೋ
ಶೆಯ ಸಂಗಡ ಹೇಳಿದ್ದೇನಂದರೆ—ಕರ್ತನ ಕೈ ಕುಂದಿತೋ! ನ
ನ್ನ ಮಾತು ನಿನಗೆ ಈಡೇರುವದೋ, ಇಲ್ಲವೋ, ಎಂದು ಈಗ
ನೋಡುವಿ.

೨೪ ಆಗ ಮೋಶೆ ಹೊರಟು, ಕರ್ತನ ಮಾತುಗಳನ್ನು ಜನರಿಗೆ
ಹೇಳಿ, ಜನರ ಹಿರಿಯರಿಂದ ಎಪ್ಪತ್ತು ಮಂದಿಯನ್ನು ಕೂಡಿಸಿ,
೨೫ ಗುಡಾರದ ಸುತ್ತಲು ನಿಲ್ಲಿಸಿದನು. ಮತ್ತು ಕರ್ತನು ಮೇಘ
ದೊಳಗೆ ಇಳಿದು, ಅವನ ಸಂಗಡ ಮಾತಾಡಿ, ಅವನ ಮೇಲಿರುವ
ಆತ್ಮದಿಂದ ತೆಗೆದು, ಹಿರಿಯರಾದ ಎಪ್ಪತ್ತು ಮಂದಿಯ ಮೇಲೆ
ಇಟ್ಟನು; ಆದದರಿಂದ ಆತ್ಮವು ಅವರ ಮೇಲೆ ನೆಲೆಯಾಗಿದ್ದಾಗ,
೨೬ ಅವರು ಪ್ರವಾದನೆ ಹೇಳುತ್ತಿದ್ದರು; ಮತ್ತೇ ಹೇಳಲಿಲ್ಲ. ಆದರೆ
ಇಬ್ಬರು ಮನುಷ್ಯರು ದಂಡಿನಲ್ಲಿ ಉಳಿದರು; ಒಬ್ಬನ ಹೆಸರು
ಎಲ್ದಾದನು, ಮತ್ತೊಬ್ಬನ ಹೆಸರು ಮೆದಾದನು; ಇವರು ಬಳಿ
ಯಲ್ಪಟ್ಟವರೊಳಗಿದ್ದು, ಗುಡಾರಕ್ಕೆ ಹೊರಟು ಹೋಗದೆ ಇ
ದ್ದರು; ಇವರ ಮೇಲೆಯೂ ಆತ್ಮವು ನೆಲೆಯಾಯಿತು; ಅವರು
೨೭ ದಂಡಿನಲ್ಲಿ ಪ್ರವಾದನೆಯನ್ನು ಹೇಳುತ್ತಿದ್ದರು. ಆಗ ಒಬ್ಬ ಹು
ಡುಗನು ಓಡಿ ಬಂದು, ಮೋಶೆಗೆ ತಿಳಿಸಿ, ಹೇಳಿದ್ದೇನಂದರೆ—ಎ
ಲ್ದಾದನೂ ಮೆದಾದನೂ ದಂಡಿನಲ್ಲಿ ಪ್ರವಾದನೆ ಹೇಳುತ್ತಾರೆ,
೨೮ ಅದಕ್ಕೆ ತನ್ನ ಚಿಕ್ಕತನದಿಂದ ಮೋಶೆಯ ಸೇವಕನಾಗಿದ್ದ
ನೂನನ ಮಗನಾದ ಯೆಹೋಶುವನು ಪ್ರತ್ಯುತ್ತರವಾಗಿ ಹೇಳಿ
ದ್ದೇನಂದರೆ—ನನ್ನ ಸ್ವಾಮಿಯಾದ ಮೋಶೆಯೇ, ಅವರನ್ನು ಗ
೨೯ ದರಿಸ ಬೇಕು. ಮೋಶೆ ಅವನಿಗೆ ಹೇಳಿದ್ದೇನಂದರೆ—ನನಗೋ
ಸ್ಕರ ಹೊಟ್ಟೇ ಕಿಚ್ಚು ಪಡುತ್ತೀಯೋ! ಕರ್ತನ ಜನರೆಲ್ಲಾ ಪ್ರ
ವಾದಿಗಳಾಗಿದ್ದರೆ, ಕರ್ತನು ತನ್ನ ಆತ್ಮವನ್ನು ಅವರಲ್ಲಿ ಇಟ್ಟ
೩೰ ರೆ, ಎಷ್ಟೋ ಒಳ್ಳೇದು! ಆಗ ಮೋಶೆಯೂ ಇಸ್ರಯೇಲ್ ಹಿ
ರಿಯರೂ ದಂಡಿನ ಕಡೆಗೆ ಬಂದು, ಸೇರಿದರು.

೩೧ ಮತ್ತು ಕರ್ತನ ಕಡೆಯಿಂದ ಒಂದು ಘಾಳಿ ಹೊರಟು, ಸ
ಮುದ್ರದಿಂದ ಲಾವಕ್ಕಿಗಳನ್ನು ತಂದು, ದಂಡಿನ ಈಚೆಯಲ್ಲಿ
ಯೂ ಒಂದು ದಿವಸದ ಹಾದಿ, ಆಚೆಯಲ್ಲಿಯೂ ಒಂದು ದಿವ
ಸದ ಹಾದಿ, ಈ ಪ್ರಕಾರ ದಂಡಿನ ಸುತ್ತಲು ಎರಡು ಮೊಳ ಎ
೩೨ ತ್ತರವಾಗಿ ಭೂಮಿಯ ಮೇಲೆ ಇಳ್ಳಿಸಿ ಬಿಟ್ಟಿತು. ಮತ್ತು ಜನರು
ಎದ್ದು, ಆ ದಿವಸವೆಲ್ಲಾ, ಆ ರಾತ್ರಿಯೆಲ್ಲಾ, ಮರು ದಿವಸವೆಲ್ಲಾ,
ಲಾವಕ್ಕಿಗಳನ್ನು ಕೂಡಿಸಿದರು; ಕಡಿಮೆ ಕೂಡಿಸಿದವನು ಹತ್ತು
ಹೊಮೆರಗಳನ್ನು ಕೂಡಿಸಿದನು; ಅವರು ದಂಡಿನ ಸುತ್ತಲು ಅ
೩೩ ವುಗಳನ್ನು ಹರವಿ ಕೊಂಡರು. ಆದರೆ ಮಾಂಸವು ಇನ್ನೂ ಅ
ವರ ಹಲ್ಲುಗಳ ನಡುವೆ ಇದ್ದಾಗ, ಅದು ಕಡಿಯಲ್ಪಡುವದಕ್ಕಿಂ
ತ ಮುಂಚೆ, ಕರ್ತನ ಕೋಪವು ಜನರ ಮೇಲೆ ಉರಿಯಿತು; ಕ
ರ್ತನು ಜನರನ್ನು ಮಹಾ ಪೊಡ್ಡ ಬಾಧೆಯಿಂದ ಹೊಡೆದನು.
೩೪ ಆಸಿದ ಜನರನ್ನು ಅಲ್ಲಿ ಹೂಳಿಟ್ಟದರಿಂದ, ಆ ಸ್ಥಳಕ್ಕೆ ಕಿ
ಬ್ರೋತ್ ಹತ್ತಾವ ಎಂದು ಹೆಸರಾಯಿತು.

೩೫ ಕಿಬ್ರೋತ್ ಹತ್ತಾವದಿಂದ ಜನರು ಹಜೆರೋತಿಗೆ ಹೊರಟು,
ಹಜೆರೋತಿನಲ್ಲಿ ಇದ್ದರು.

## ೧೨. ಸಂಧಿ.

೧ ಇದಲ್ಲದೆ ಮಿರ್ಯಾಮಳೂ ಆರೋನನೂ ಮೋಶೆ ತಕ್ಕೊಂಡ
ಕೂಷ್ಯಳಾದ ಹೆಂಡತಿಯ ನಿಮಿತ್ತ ಅವನಿಗೆ ವಿರೋಧವಾಗಿ ಮಾ
ತಾಡಿದರು. ಯಾಕಂದರೆ ಅವನು ಕೂಷ್ಯಳಾದ ಸ್ತ್ರೀಯನ್ನು
೨ ತಕ್ಕೊಂಡಿದ್ದನು. ಅವರು ಹೇಳಿದ್ದೇನಂದರೆ—ಕರ್ತನು ಮೋಶೆ
ಯಿಂದ ಮಾತ್ರವೇ ಮಾತಾಡಿದ್ದಾನೋ! ಅವನು ನಮ್ಮಿಂದಲೂ
೩ ಮಾತಾಡಲಿಲ್ಲವೋ! ಕರ್ತನು ಇದನ್ನು ಕೇಳಿದನು. ಆದರೆ ಮೋ
ಶೆ ಎಂಬ ಮನುಷ್ಯನು ಭೂಮಿಯ ಮುಖದ ಮೇಲಿರುವ ಸಕಲ
೪ ಮನುಷ್ಯರಿಗಿಂತ ಅಧಿಕ ದೀನ ಮನಸ್ಸುಳ್ಳವನಾಗಿದ್ದನು. ಆಗ
ಕರ್ತನು ಅಕಸ್ಮಿಕವಾಗಿ ಮೋಶೆಗೂ, ಆರೋನನಿಗೂ, ಮಿರ್ಯಾ
ಮಳಿಗೂ, ಹೇಳಿದ್ದೇನಂದರೆ—ನೀವು ಮೂರು ಮಂದಿ ಸಭೆಯ ಗು
ಡಾರದ ಬಳಿಗೆ ಬನ್ನಿರಿ; ಅವರು ಮೂವರು ಹೊರಟರು. ಆಗ
೫ ಕರ್ತನು ಮೇಘ ಸ್ತಂಭದಲ್ಲಿ ಇಳಿದು, ಗುಡಾರದ ಬಾಗಲಿನ ಬಳಿ
ಯಲ್ಲಿ ನಿಂತು, ಆರೋನನನ್ನೂ, ಮಿರ್ಯಾಮಳನ್ನೂ ಕರೆದನು;
ಅವರಿಬ್ಬರು ಹೊರಟರು. ಅವನು ಹೇಳಿದ್ದೇನಂದರೆ—ನನ್ನ ಮಾತು
೬ ಗಳನ್ನು ಈಗ ಕೇಳಿರಿ—ನಿಮ್ಮಲ್ಲಿ ಒಬ್ಬ ಪ್ರವಾದಿ ಇದ್ದರೆ, ಕರ್ತ
ನಾದ ನಾನು ದರ್ಶನದಲ್ಲಿಯೂ ಅವನಿಗೆ ನನ್ನನ್ನು ತಿಳಿಯ ಪ
ಡಿಸುವೆನು, ಸ್ವಪ್ನದಲ್ಲಿಯೂ ಅವನ ಸಂಗಡ ಮಾತಾಡುವೆನು
೭ ನನ್ನ ಸೇವಕನಾದ ಮೋಶೆ ಹಾಗಲ್ಲ; ಅವನು ನನ್ನ ಮನೆಯೆಲ್ಲಾ
೮ ದರಲ್ಲಿ ನಂಬಿಕೆಯುಳ್ಳವನಾಗಿದ್ದಾನೆ. ಒಗಟುಗಳಿಂದ ಅಲ್ಲ, ಮು
ಖಾಮುಖಿಯಾಗಿಯೂ ಪ್ರತ್ಯಕ್ಷವಾಗಿಯೂ ಅವನ ಸಂಗಡ
ಮಾತಾಡುತ್ತೇನೆ, ಅವನು ಕರ್ತನ ರೂಪವನ್ನು ನೋಡುತ್ತಾನೆ;
ಹಾಗಾದರೆ ನೀವು ನನ್ನ ಸೇವಕನಾದ ಮೋಶೆಗೆ ವಿರೋಧವಾಗಿ
೯ ಮಾತಾಡುವದಕ್ಕೆ ಯಾಕೆ ಭಯ ಪಡಲಿಲ್ಲ! ಆಗ ಕರ್ತನ
೧೦ ಕೋಪವು ಅವರ ಮೇಲೆ ಉರಿಯಿತು; ಅವನು ಹೋದನು. ಮ
ತ್ತು ಮೇಘವು ಗುಡಾರದ ಮೇಲಿನಿಂದ ತೊಲಗಿ ಹೋಯಿತು; ಆ
ಗ, ಇಗೋ, ಮಿರ್ಯಾಮಳು ಹಿಮದ ಹಾಗೆ ಕುಷ್ಠವುಳ್ಳವಳಾ
ದಳು; ಆರೋನನು ಮಿರ್ಯಾಮಳ ಕಡೆಗೆ ತಿರುಗಿದಾಗ, ಅ
೧೧ ಗೋ, ಅವಳು ಕುಷ್ಠವುಳ್ಳವಳು. ಆಗ ಆರೋನನು ಮೋಶೆಯ
ಸಂಗಡ ಹೇಳಿದ್ದು—ಅಯ್ಯೋ! ನನ್ನ ಸ್ವಾಮಿಯೇ, ನಾವು ಬು
ದ್ಧಿಯಿಲ್ಲದೆ ಮಾಡಿದ ಈ ಪಾಪವನ್ನು ನಮ್ಮ ಮೇಲೆ ಹಾಕ ಬೇ
೧೨ ಡ. ತನ್ನ ತಾಯಿಯ ಗರ್ಭದಿಂದ ಹೊರಡುವಾಗಲೇ ಅರ್ಧ
ಮಾಂಸ ಕೊಳೆತು ಹೋದಂಥ, ತವಾಗಿ ಹುಟ್ಟಿದಂಥ, ಕೂಸಿನ
೧೩ ಹಾಗೆ ಅವಳು ಆಗದಿರಲಿ. ಆ ಮೇಲೆ ಮೋಶೆ ಕರ್ತನ ಕಡೆಗೆ
ಕೂಗಿ, ಹೇ ದೇವರೇ, ಅವಳನ್ನು ಸ್ವಸ್ಥ ಮಾಡ ಬೇಕು, ಅಂದನು.

೧೪ ಆಗ ಕರ್ತನು ಮೋಶೆಯ ಸಂಗಡ ಹೇಳಿದ್ದೇನಂದರೆ—ಅವಳ ತಂ
ದೆ ಅವಳ ಮುಖದ ಮೇಲೆ ಉಗುಳು ಇದ್ದರೆ, ಅವಳು ಏಳು ದಿವಸ
ನಾಚಿಕೆ ಪಡುವದಿಲ್ಲವೋ! ಅವಳು ಏಳು ದಿವಸ ದಂಡಿನ ಹೊರ
೧೫ಗೆ ಮುಚ್ಚಿಕಲ್ಪಟ್ಟು, ತರುವಾಯ ಕೀಳಕಲ್ಪಡಲಿ. ಹಾಗೆಯೇ ಮಿ
ರ್ಯಾಮಳನ್ನು ದಂಡಿನ ಹೊರಗೆ ಏಳು ದಿವಸ ಮುಚ್ಚಿಟ್ಟಿರು.
ಮಿರ್ಯಾಮಳು ತಿರಿಗಿ ಕೀಳಕಲ್ಪಡುವ ಪರ್ಯಂತರ ಜನರು ಹೊ
ರಡಲಿಲ್ಲ.
೧೬ ತರುವಾಯ ಜನರು ಹಜೆರೋತಿನಿಂದ ಹೊರಟು, ಪಾರಾನಿಂ
ದ ಅರಣ್ಯದಲ್ಲಿ ಇಳು ಕೊಂಡರು.

## ೧೩. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ ಹೇಳಿದ್ದೇನಂ
೨ದರೆ—ನಾನು ಇಸ್ರಯೇಲ್ ಮಕ್ಕಳಿಗೆ ಕೊಡುವ ಕಾನಾನ್ ದೇಶ
ವನ್ನು ಪಾಳ್ಳತಿ ನೋಡುವ ಹಾಗೆ, ಮನುಷ್ಯರನ್ನು ಕಳುಹಿಸು;
ಅವಳವನ ತಂದೆಯ ಕುಲಕ್ಕೋಸ್ಕರ ಒಬ್ಬೊಬ್ಬನನ್ನೂ, ಅವರೆಲಾ
೩ ಳಗೆ ಪ್ರಭುಗಳಾದವರನ್ನೂ, ಕಳುಹಿಸ ಬೇಕು. ಆಗ ಮೋಶೆ ಕ
ರ್ತನ ಆಜ್ಞೆಯಂತೆ ಪಾರಾನ್ ಅರಣ್ಯದಿಂದ ಅವರನ್ನು ಕಳುಹಿ
ಸಿದನು; ಅವರೆಲ್ಲರು ಇಸ್ರಯೇಲ್ ಮಕ್ಕಳ ಪ್ರೇಮ್ಯರಾಗಿದ್ದರು.
೪ ಅವರ ಹೆಸರುಗಳು ಇವೇ—ರೂಬೆನನ ಕುಲಕ್ಕೆ ಜಕ್ಕೂರನ ಮ
೫ಗನಾದ ಶಮ್ಮೂವನು. ಸಿಮೆಯೋನನ ಕುಲಕ್ಕೆ, ಹೋರಿಯ
೬ ಮಗನಾದ ಶಾಪಾಟನು. ಯೆಹೂದನ ಕುಲಕ್ಕೆ, ಯೆಫುನ್ನೆಯ
೭ ಮಗನಾದ ಕಾಲೆಬನು. ಇಸ್ಸಕಾರನ ಕುಲಕ್ಕೆ, ಯೋಸೆಫನ ಮ
೮ಗನಾದ ಇಗಾಲನು. ಎಫ್ರಯಿಮನ ಕುಲಕ್ಕೆ, ನೂನನ ಮಗ
೯ನಾದ ಹೋಶುವ. ಬೆನ್ಯಾಮಾನನ ಕುಲಕ್ಕೆ, ರಫೂವನ ಮಗನಾದ
೧೦ಪಲ್ತಿಯು. ಜೆಬುಲೋನನ ಕುಲಕ್ಕೆ, ಸೋದಿಯ ಮಗನಾದ ಗ
೧೧ಡ್ಡಿಯೆಲನು. ಯೋಸೆಫನ ಕುಲವಾಗಿರುವ ಮನಸ್ಸೆ ಕುಲಕ್ಕೆ,
೧೨ ಸೂಸಿಯ ಮಗನಾದ ಗದ್ದಿಯು. ದಾನನ ಕುಲಕ್ಕೆ, ಗೆಮಲ್ಲಿಯ
೧೩ ಮಗನಾದ ಅಮ್ಮಿಯೇಲನು. ಆಶೇರನ ಕುಲಕ್ಕೆ, ಮಿಕಾಯೇಲ
೧೪ನ ಮಗನಾದ ಸೆತೂರನು. ನೆಫ್ತಾಲಿಯ ಕುಲಕ್ಕೆ, ಬಿಚ್ಚಿಯ ಮ
೧೫ಗನಾದ ನಾಭಿಯು. ಗಾದನ ಕುಲಕ್ಕೆ, ಮಾಕಿಯ ಮಗನಾದ
೧೬ಗೆಯುವೇಲನು. ಮೋಶೆ ದೇಶವನ್ನು ಪಾಳ್ಳತಿ ನೋಡುವದಕ್ಕೆ
ಕಳುಹಿಸಿದ ಮನುಷ್ಯರ ಹೆಸರುಗಳು ಇವೇ; ಮತ್ತು ಮೋಶೆ
ನೂನನ ಮಗನಾದ ಹೋಶುವನಿಗೆ ಯೆಹೋಶುವನೆಂದು ಹೆಸರಿ
ಟ್ಟನು.
೧೭ ಮೋಶೆ ಕಾನಾನ್ ದೇಶವನ್ನು ಪಾಳ್ಳತಿ ನೋಡುವದಕ್ಕೆ ಅವರ
ನ್ನು ಕಳುಹಿಸಿದಾಗ, ಅವರಿಗೆ ಹೇಳಿದ್ದೇನಂದರೆ—ಇಲ್ಲಿ ದಕ್ಷಿಣ
೧೮ ಕಡೆಯಲ್ಲಿ ಮೇಲೆ ಹೋಗಿ, ಬೆಟ್ಟವನ್ನೇರಿ, ಆ ದೇಶವು ಎಂಥಾ
ದ್ದೋ, ಅದರಲ್ಲಿ ನಿವಾಸಿಗುವ ಜನರು ಬಲವುಳ್ಳವರೋ! ಬಲಹೀ
೧೯ನರೋ! ಬಹಳರೋ! ಸ್ವಲ್ಪರೋ! ಎಂದೂ, ಆ ಜನರು ವಾಸಿಸು
ವ ದೇಶವು ಎಂಥಾದ್ದೋ! ಒಳ್ಳೇದೋ! ಕೆಟ್ಟದ್ದೋ! ಅವರು ವಾ
ಸಿಸುವ ಪಟ್ಟಣಗಳು ಎಂಥಾವೋ! ಗುಡಾರಗಳೋ! ಕೋಟೆಗ
೨೦ಳೋ! ಎಂದೂ, ಭೂಮಿಯು ಎಂಥಾದ್ದೋ! ರಸವುಳ್ಳದ್ದೋ!
ರಸವಿಲ್ಲದ್ದೋ! ಅದರಲ್ಲಿ ಮರಗಳು ಇರುತ್ತವೋ! ಇಲ್ಲವೋ!
ಎಂದು ನೋಡಿರಿ; ಧೈರ್ಯವುಳ್ಳವರಾಗಿದ್ದು, ಆ ದೇಶದ ಫಲ ಸ್ವ
ಲ್ಪ ತೆಗೆದು ಕೊಳ್ಳಿರಿ; ಅದರೆ ಆ ಕಾಲದಲ್ಲಿ ಪ್ರಥಮ ದ್ರಾಕ್ಷೆಯ
ಹಣ್ಣುಗಳ ದಿವಸಗಳಿದ್ದವು.
೨೧ ಆಗ ಅವರು ಏರಿ ಹೋಗಿ, ಜೀನೆಬು ಅರಣ್ಯದಿಂದ ಹಾಮಥಿ
ನ ಕಡೆಯಲ್ಲಿರುವ ರೆಹೋಬಿನ ಪರ್ಯಂತರಕ್ಕೂ ದೇಶವನ್ನು
೨೨ ಪಾಳ್ಳತಿ ನೋಡಿದರು. ಅವರು ದಕ್ಷಿಣ ಕಡೆಯಲ್ಲಿ ಏರುವಾಗ,
ಹೆಬ್ರೋನಿನ ಪರ್ಯಂತರ ಬಂದರು; ಅಲ್ಲಿ ಅನಕನ ಮಕ್ಕಳಾದ ಅ
ಹಿಮಾನನೂ ಶೆಷಾಯನೂ ತಲ್ಮಾಯನೂ ಇದ್ದರು. ಹೆಬ್ರೋನು
ಐಗುಪ್ತ ದೇಶದ ಜೋವನಿಗಿಂತ ಏಳು ವರ್ಷ ಮುಂಚೆ ಕಟ್ಟಲ್ಪ
೨೩ಟ್ಟಿತು. ಮತ್ತು ಅವರು ಎಷ್ಕೋಲೆಂಬ ಹಳ್ಳದ ಪರ್ಯಂತರಕ್ಕೂ
ಬಂದು, ಅಲ್ಲಿ ದ್ರಾಕ್ಷೇ ಹಣ್ಣುಗಳ ಗೊಂಚಲಿನ ಕೊಂಬೆಯನ್ನು
ಕೊಯಿದು, ಅದನ್ನು ಅದ್ದೆಯ ಮೇಲೆ ಇಬ್ಬರಿಬ್ಬರಾಗಿ ಹೈದರು,
೨೪ ಇದಲ್ಲದೆ ದಾಳಿಂಬು, ಅಂಜೀರ ಹಣ್ಣುಗಳನ್ನೂ ಹೈದರು. ಇಸ್ರ
ಯೇಲ್ ಮಕ್ಕಳು ಅಲ್ಲಿ ಕೊಯಿದ ದ್ರಾಕ್ಷೇ ಗೊಂಚಲಿನ ಕಾರಣ,
ಆ ಸ್ಥಳಕ್ಕೆ ಎಷ್ಕೋಲ್ ಹಳ್ಳವೆಂದು ಹೆಸರಿಟ್ಟರು.
೨೫ ಅವರು ದೇಶವನ್ನು ಪಾಳ್ಳತಿ ನೋಡಿ, ನಾಲ್ವತ್ತು ದಿವಸಗಳ
೨೬ ಮೇಲೆ ತಿರಿಗಿ ಬಂದರು. ಮತ್ತು ಅವರು ಹೋಗಿ, ಮೋಶೆಯ
ಬಳಿಗೂ, ಆರೋನನ ಬಳಿಗೂ, ಇಸ್ರಯೇಲ್ ಮಕ್ಕಳ ಸಮಸ್ತ
ಸಭೆಯ ಬಳಿಗೂ ಪಾರಾನ್ ಅರಣ್ಯದಲ್ಲಿರುವ ಕಾದೆಸಿಗೆ ಬಂದು,
ಅವರಿಗೂ ಸಮಸ್ತ ಸಭೆಗೂ ವೃತ್ತಾಂತವನ್ನು ವಿವರಿಸಿ, ಆ ದೇ
೨೭ ಶದ ಫಲಗಳನ್ನು ಅವರಿಗೆ ತೋರಿಸಿದರು. ಅವರು ಅವನಿಗೆ ವಿವ
ರಿಸಿ, ಹೇಳಿದ್ದೇನಂದರೆ—ನೀನು ನಮ್ಮನ್ನು ಕಳುಹಿಸಿದ ದೇಶಕ್ಕೆ
ಕೇರಿದೆವು; ಅದು ಹಾಲೂ ಜೇನೂ ಹರಿಯುವ ದೇಶವು ಸರ; ಅದ
೨೮ರ ಫಲವು ಇದೇ. ಆದರೆ ಆ ದೇಶದಲ್ಲಿ ವಾಸವಾಗಿರುವ ಜನರು
ಬಲವುಳ್ಳವರು; ಪಟ್ಟಣಗಳು ಥದ್ರವಾಗಿಯೂ ಮಹಾ ದೊಡ್ಡವು
ಗಳಾಗಿಯೂ ಅವೆ; ಮತ್ತು ಅನಕನ ಮಕ್ಕಳನ್ನು ಅಲ್ಲಿ ಕಂಡೆ
೨೯ವು. ಅಮಲೇಕ್ಯರು ದೇಶದ ದಕ್ಷಿಣದಲ್ಲಿ ವಾಸವಾಗಿದ್ದಾರೆ; ಮ
ತ್ತು ಹಿತ್ತಿಯರೂ, ಯೆಬೂಸ್ಯರೂ, ಅಮೋರ್ಯರೂ, ಪರ್ವತ
ಗಳಲ್ಲಿಯೂ, ಕನಾನ್ಯರೂ ಸಮುದ್ರದ ಬಳಿಯಲ್ಲಿಯೂ ಯೊರ್ದ
೩೦ನಿನ ತೀರದಲ್ಲಿಯೂ ವಾಸವಾಗಿದ್ದಾರೆ.
ಆದರೆ ಕಾಲೆಬನು ಮೋಶೆಯ ಸನ್ನಿಧಿಯಲ್ಲಿ ಜನರನ್ನು ಸು
ಮ್ಮನಿರಿಸಿ, ನಾವು ಏರಿ, ಏರಿ, ಅದನ್ನು ಸ್ವಾಧೀನ ಮಾಡಿ ಕೊಳ್ಳೋಣ.
ಯಾಕಂದರೆ ಅದನ್ನು ಜಯಿಸುವದು ನಿಶ್ಚಯಂದಾಗುವದು, ಅಂ
೩೧ದನು. ಆದರೆ ಅವನ ಸಂಗಡ ಏರಿ ಹೋದ ಮನುಷ್ಯರು ಆ ಜನರ
ಬಳಿಗೆ ಏರುವದಕ್ಕೆ ನಿಶ್ಚಯಂದಲಾಗರು; ಅವರು ನಮಗಿಂತ ಬಲವುಳ್ಳ
೩೨ವರಾಗಿದ್ದಾರೆ ಎಂದು ಹೇಳಿ, ತಾವು ಪಾಳ್ಳತಿ ನೋಡಿದ ದೇಶದ ಮೇ
ಲೆ ಇಸ್ರಯೇಲಿ ಮಕ್ಕಳಿಗೆ ಕೆಟ್ಟ ಸುದ್ದಿ ತಂದು, ಹೇಳಿದ್ದೇನಂದರೆ—
ನಾವು ಪಾಳ್ಳತಿ ನೋಡುವದಕ್ಕೆ ಹಾದು ಹೋದ ದೇಶವು, ತನ್ನ
ನಿವಾಸಿಗಳನ್ನು ತಿಂದು ಬಿಡುವ ದೇಶವಾಗಿದೆ; ನಾವು ಅದರಲ್ಲಿ
೩೩ ನೋಡಿದ ಜನರೆಲ್ಲಾ ಪ್ರಮಾಣ ಮೀರಿದ ಮನುಷ್ಯರು. ಮತ್ತು
ಅಲ್ಲಿ ರಾಕ್ಷಸರನ್ನೂ ರಾಕ್ಷಸ ಸಂತಾನವಾದ ಅನಕನ ಮಕ್ಕಳ
ನ್ನೂ ಕಂಡೆವು; ಮತ್ತು ನಮ್ಮ ಕಣ್ಣುಗಳಿಗೆ ನಾವು ಮಿಡಿತೆಗಳ
ಹಾಗೆ ಇದ್ದೆವು; ಅದೇ ಪ್ರಕಾರ ಅವರ ಕಣ್ಣುಗಳಿಗೆ ಇದ್ದೆವು.

## ೧೪. ಸಂಧಿ.

೧ ಆಗ ಸಭೆಯೆಲ್ಲಾ ಗುಲ್ಲೆಬ್ಬಿಸಿ, ತನ್ನ ಶಬ್ದವನ್ನೆತ್ತಿತು; ಆ ರಾ
೨ತ್ರಿಯೆಲ್ಲಾ ಜನರು ಅತ್ತರು. ಮತ್ತು ಇಸ್ರಯೇಲ್ ಮಕ್ಕಳೆಲ್ಲರು





ಮೋಶೆಗೂ ಆರೋನನಿಗೂ ವಿರೋಧವಾಗಿ ಗುಣು ಗುಟ್ಟಿದರು.
ಸಭೆಯೆಲ್ಲಾ ಅವರಿಗೆ ಹೇಳಿದ್ದೇನಂದರೆ—ನಾವು ಐಗುಪ್ತ ದೇಶದಲ್ಲಿ
ಸತ್ತಿದ್ದರೆ, ಇಲ್ಲವೆ ಈ ಅರಣ್ಯದಲ್ಲಿ ಸತ್ತರೆ, ನಮಗೆ ಉತ್ತಮ.
೩ ನಾವು ಕತ್ತಿಯಿಂದ ಬೀಳುವ ಹಾಗೆ, ನಮ್ಮ ಹೆಂಡರೂ ಮಕ್ಕಳೂ
ಸುಲಿಗೆಯಾಗುವ ಹಾಗೆ, ಕರ್ತನು ನಮ್ಮನ್ನು ಈ ದೇಶಕ್ಕೆ
ಯಾಕೆ ಬರ ಮಾಡಿದ್ದಾನೆ! ಐಗುಪ್ತ ದೇಶಕ್ಕೆ ತಿರುಗುವದು ನ
೪ ಮಗೆ ಉತ್ತಮವಲ್ಲವೋ! ಮುಖ್ಯಸ್ಥನನ್ನಿಟ್ಟು ಕೊಂಡು, ಐಗು
ಪ್ತ ದೇಶಕ್ಕೆ ತಿರುಗುವ, ಬನ್ನಿರಿ, ಎಂದು, ಬಬ್ಬರಿಗೊಬ್ಬರು ಹೇಳಿ
ಕೊಂಡರು.
೫ ಆಗ ಮೋಶೆಯೂ ಆರೋನನೂ ಇಸ್ರಯೇಲ್ ಮಕ್ಕಳ ಸ
೬ ಮಸ್ತ ಸಭೆಯ ಕೂಟದ ಮುಂದೆ ಅಡ್ಡ ಬಿದ್ದರು. ಇದಲ್ಲದೆ ದೇಶ
ವನ್ನು ಪಾಳ್ಳತಿ ನೋಡಿದವರಲ್ಲಿದ್ದ ನೂನನ ಮಗನಾದ ಯೆಹೋ
ಶುವನೂ ಯೆಫುನ್ನೆಯ ಮಗನಾದ ಕಾಲೆಬನೂ ತಮ್ಮ ವಸ್ತ್ರಗ
೭ ಳನ್ನು ಹರ ಕೊಂಡು, ಇಸ್ರಯೇಲ್ ಮಕ್ಕಳ ಸಮಸ್ತ ಸಭೆಯ
ಕೂಟಕ್ಕೆ ಹೇಳಿದ್ದೇನಂದರೆ—ಪಾಳ್ಳತಿ ನೋಡುವದಕ್ಕೆ ನಾವು ದಾ
೮ಟಿ ಹೋದ ದೇಶವು ಅತ್ಯುತ್ತಮವಾದ ದೇಶವೇ. ಕರ್ತನು ನ
ಮ್ಮಲ್ಲಿ ಇಷ್ಟ ಪಟ್ಟಿರೆ, ಹಾಲೂ ಜೇನೂ ಹರಿಯುವಂಥ ದೇಶವಾಗಿ
ರುವ ಆ ದೇಶಕ್ಕೆ ನಮ್ಮನ್ನು ಬರ ಮಾಡಿ, ಅದನ್ನು ನಮಗೆ ಕೊ
೯ ಡುವನು. ನೀವಾದರೆ ಕರ್ತನಿಗೆ ತಿರುಗ ಬೀಳ ಬೇಡಿರಿ; ಮತ್ತು
ಆ ದೇಶದ ಜನರಿಗೆ ಭಯ ಪಡ ಬೇಡಿರಿ; ಯಾಕಂದರೆ ಅವರು
ನಮಗೆ ಕೊಟ್ಟಿಯಾಗಿದ್ದಾರೆ; ಅವರ ಆಶ್ರಯವು ಅವರ ಬಳಿ
ಯಿಂದ ಹೋಯಿತು; ಮತ್ತು ಕರ್ತನು ನಮ್ಮ ಸಂಗಡ ಇದ್ದಾನೆ;
೧೦ ಅವರಿಗೆ ಭಯ ಪಡ ಬೇಡಿರಿ. ಆಗ ಸಭೆಯವರೆಲ್ಲರು, ಅವರನ್ನು
ಕಲ್ಲೆಸೆಯ ಬೇಕಂದರು.
ಆಗ ಕರ್ತನ ಘನವು ಸಭೆಯ ಗುಡಾರದಲ್ಲಿ ಇಸ್ರಯೇಲ್ ಮ
೧೧ ಕ್ಕಳಿಗೆಲ್ಲಾ ಪ್ರತ್ಯಕ್ಷವಾಯಿತು. ಕರ್ತನು ಮೋಶೆಯ ಸಂಗಡ
ಹೇಳಿದ್ದು—ಈ ಜನರು ಎಷ್ಟು ಮಟ್ಟಿಗೂ ನನ್ನನ್ನು ಅಲಕ್ಷ್ಯ
ಮಾಡುವರು! ಮತ್ತು ನಾನು ಅವರ ಮಧ್ಯದಲ್ಲಿ ಮಾಡಿದ ಸಕ
ಲ ಗುರುತುಗಳ ದೆಸೆಯಿಂದ ನನ್ನಲ್ಲಿ ಎಷ್ಟು ಮಟ್ಟಿಗೂ ನಂಬದೆ
೧೨ ಇರುವರು! ನಾನು ಅವರನ್ನು ವ್ಯಾಧಿಯಿಂದ ಹೊಡೆದು, ನಿರ್ಮೂ
ಲ ಮಾಡುವೆನು, ಮತ್ತು ನಿನ್ನನ್ನು ಇವರಿಗಿಂತ ದೊಡ್ಡದಾದ ಬಲ
ವುಳ್ಳ ಜನಾಂಗವನ್ನು ಮಾಡುವೆನು.
೧೩ ಆಗ ಮೋಶೆ ಕರ್ತನಿಗೆ ಹೇಳಿದ್ದು—ಹಾಗಾದರೆ ಐಗುಪ್ತ್ಯರು
ಅದನ್ನು ಕೇಳುವರು; ನೀನು ಈ ಜನರನ್ನು ನಿನ್ನ ಶಕ್ತಿಯಿಂದ ಅ
೧೪ ವರ ಮಧ್ಯದಲ್ಲಿಂದ ಮೇಲೆ ಬರ ಮಾಡಿದಿಯಲ್ಲೆ! ಅವರು ಈ
ದೇಶದ ನಿವಾಸಿಗಳಿಗೆ ಅದನ್ನು ಹೇಳುವರು; ಯಾಕಂದರೆ ಕರ್ತ
ನಾದ ನೀನೇ ಈ ಜನರ ಸಂಗಡ ಇದ್ದೀ ಎಂದೂ, ಕರ್ತನಾದ ನೀ
ನೇ ಮುಖಾ ಮುಖಿಯಾಗಿ ಕಾಣಿಸಿ ಕೊಳ್ಳುತ್ತೀ ಎಂದೂ, ನಿನ್ನ
ಮೇಘವು ಅವರ ಮೇಲೆ ನಿಂತದೆ ಎಂದೂ ನೀನು ಹಗಲು ಹೊ
ತ್ತು ಮೇಘ ಸ್ತಂಭದಲ್ಲಿಯೂ ರಾತ್ರಿ ಹೊತ್ತು ಅಗ್ನಿ ಸ್ತಂಭದಲ್ಲಿ
ಯೂ ಅವರ ಮುಂದೆ ನಡೆಯುತ್ತೀ ಎಂದೂ, ಅವರು ಕೇಳಿದ್ದಾ
೧೫ ರೆ. ಈಗ ನೀನು ಈ ಜನರನ್ನು ಬಬ್ಬ ಮನುಷ್ಯನ ಹಾಗೆ ಕೊಂ
ದು ಹಾಕಿದರೆ, ನಿನ್ನ ಸುದ್ದಿಯನ್ನು ಕೇಳಿದ ಜನಾಂಗಗಳು ಹೇ
೧೬ ಳುವದೇನಂದರೆ—ಕರ್ತನು ಈ ಜನರನ್ನು ಅವರಿಗೆ ಪ್ರಮಾಣ
ಮಾಡಿದ ದೇಶಕ್ಕೆ ತರಲಾರದ ಕಾರಣ, ಅವರನ್ನು ಅರಣ್ಯದಲ್ಲಿ
೧೭ ಕೊಂದು ಹಾಕಿದನು. ಆದಕಾರಣ, ಕರ್ತನೇ, ನನ್ನ ಕರ್ತನ ಶ
ಕ್ತಿ ದೊಡ್ಡದಾಗಿರಲಿ. ಕರ್ತನು ದೀರ್ಘಶಾಂತನೂ, ಮಹಾ ಕೃ
ಪೆಯುಳ್ಳವನೂ, ಅಕ್ರಮವನ್ನೂ ದ್ರೋಹವನ್ನೂ ಮನ್ನಿಸುವ
ವನೂ, ಅಪರಾಧಿಯನ್ನು ನಿರಾಪರಾಧಿ ಎಂದು ತೀರಿಸದವನೂ,
ಮೂರನೇ ನಾಲ್ಕನೇ ತರಗಳ ಪರ್ಯಂತರಕ್ಕೂ ತಂದೆಗಳ ಅ
ಕ್ರಮವನ್ನು ಮಕ್ಕಳಲ್ಲಿ ವಿಚಾರಿಸುವವನೂ, ಎಂದು ನೀನು ಹೇಳಿ
೧೮ ದಿಯಲ್ಲ! ನಿನ್ನ ಕೃಪೆ ದೊಡ್ಡದಾಗಿರುವ ಪ್ರಕಾರವೂ, ನೀನು
ಐಗುಪ್ತದಿಂದ ಇಲ್ಲಿಯ ತನಕ ಈ ಜನರಿಗೆ ಮನ್ನಿಸಿದ ಪ್ರಕಾರವೂ,
ಈ ಜನರ ಅಕ್ರಮವನ್ನು ದಯೆ ಮಾಡಿ, ಮನ್ನಿಸು.
೧೯ ಮತ್ತು ಕರ್ತನು ಹೇಳಿದ್ದೇನಂದರೆ—ನಿನ್ನ ಮಾತಿನ ಪ್ರಕಾರ ಮ
೨೦ನ್ನಿಸುತ್ತೇನೆ. ಆದರೆ ಭೂಮಿಯೆಲ್ಲಾ ಕರ್ತನ ಘನದಿಂದ ತುಂ
೨೧ ಬಿರುವದು, ನನ್ನ ಜೀವದಾಣೆ. ನನ್ನ ಘನವನ್ನೂ, ಐಗುಪ್ತ ದೇಶ
ದಲ್ಲಿಯೂ ಅರಣ್ಯದಲ್ಲಿಯೂ ನಾನು ಮಾಡಿದ ಗುರುತುಗಳ
ನ್ನೂ ನೋಡಿದ ಸಕಲ ಮನುಷ್ಯರು ನನ್ನನ್ನು ಈಗ ಹತ್ತು ಸಾ
೨೨ರ ಕೋಧಿಸಿ, ನನ್ನ ಶಬ್ದವನ್ನು ಕೇಳದೆ ಹೋದದರಿಂದ, ನಾನು
ಅವರ ತಂದೆಗಳಿಗೆ ಪ್ರಮಾಣ ಮಾಡಿದ ದೇಶವನ್ನು ನಿಶ್ಚಯವಾ
ಗಿ ನೋಡುವದಿಲ್ಲ; ನನ್ನನ್ನು ಅಲಕ್ಷ್ಯ ಮಾಡಿದವರೆಲ್ಲರು ಅದ
೨೪ನ್ನು ನೋಡುವದಿಲ್ಲ. ಆದರೆ ನನ್ನ ಸೇವಕನಾದ ಕಾಲೆಬನಲ್ಲಿ
ಬೇರೆ ಆತ್ಮವಿದ್ದದರಿಂದಲೂ, ಅವನು ನನ್ನನ್ನು ಪೂರ್ಣವಾಗಿ ಹಿಂಬಾ
ಲಿಸಿದದರಿಂದಲೂ, ಅವನನ್ನು ಅವನು ಪ್ರವೇಶಿಸಿದ ದೇಶಕ್ಕೆ ತರುವೆ
೨೫ನು; ಅವನ ಬೀಜವು ಅದನ್ನು ಸ್ವತಂತ್ರಿಸಿ ಕೊಳ್ಳುವದು—ಆದರೆ
ಅಮಲೇಕ್ಯರೂ ಕನಾನ್ಯರೂ ತಗ್ಗಿನಲ್ಲಿ ವಾಸ ಮಾಡುತ್ತಿದ್ದರು—
ನಾಳೆ ತಿರುಗಿ ಕೊಂಡು, ಕೆಂಪು ಸಮುದ್ರದ ಹಾದಿಯಾಗಿ ಅರ
ಣ್ಯಕ್ಕೆ ಹೊರಡಿರಿ.
೨೬ ಮತ್ತು ಕರ್ತನು ಮಾತಾಡಿ, ಮೋಶೆಗೂ ಆರೋನನಿಗೂ ಹೇ
೨೭ಳಿದ್ದೇನಂದರೆ—ಈ ಕೆಟ್ಟ ಸಭೆ ನನಗೆ ವಿರೋಧವಾಗಿ ಗುಣು ಗು
ಟ್ಟುವದು ಎಷ್ಟು ಮಟ್ಟಿಗೂ! ಇಸ್ರಯೇಲ್ ಮಕ್ಕಳು ನನಗೆ ವಿ
ರೋಧವಾಗಿ ಗುಣು ಗುಟ್ಟಿದ ದೂರನ್ನು ನಾನು ಕೇಳಿದ್ದೇನೆ.
೨೮ ಅವರಿಗೆ ಹೇಳುವದೇನಂದರೆ—ನನ್ನ ಜೀವದಾಣೆ, ನೀವು ನನ್ನ ಕಿವಿಗ
ಳಲ್ಲಿ ಮಾತಾಡಿದ ಪ್ರಕಾರವೇ ನಿಮಗೆ ಮಾಡುವೆನು, ಎಂದು ಕ
೨೯ ರ್ತನು ಹೇಳುತ್ತಾನೆ. ಈ ಅರಣ್ಯದಲ್ಲಿ ನಿಮ್ಮ ಹೆಣಗಳು ಬೀಳು
ವವು; ನನಗೆ ವಿರೋಧವಾಗಿ ಗುಣು ಗುಟ್ಟಿದವರೆಲ್ಲರೂ, ನಿಮ್ಮ ಲೆ
ಖ್ಖದ ಪ್ರಕಾರ ಎಣಿಸಿದ ಇಪ್ಪತ್ತು ವರುಷದವರೂ, ಅದಕ್ಕೆ ಅಧಿಕ
ವಾದ ಪ್ರಾಯವುಳ್ಳವರೂ, ಆಗಿರುವ ನೀವೇ. ಯೆಫುನ್ನೆಯ ಮ
೩೦ ಗನಾದ ಕಾಲೆಬನೂ ನೂನನ ಮಗನಾದ ಯೆಹೋಶುವನೂ,
ಹೊರತಾಗಿ, ನಾನು ನಿಮ್ಮನ್ನು ವಾಸ ಮಾಡಿಸುವದಕ್ಕೆ ಪ್ರಮಾ
ಣ ಮಾಡಿದ ದೇಶದಲ್ಲಿ ಕೇರದಿರುವಿರಿ. ಆದರೆ, ಸುಲಿಗೆಯಾಗು
೩೧ವೆಂದು, ನೀವು ಹೇಳಿದ ನಿಮ್ಮ ಮಕ್ಕಳನ್ನು ಅಲ್ಲಿಗೆ ತರುವೆನು;
ನೀವು ಅಲಕ್ಷ್ಯ ಮಾಡಿದ ದೇಶವನ್ನು ಅವರು ತಿಳಿದು ಕೊಳ್ಳುವ
೩೨ರು. ಆದರೆ ನಿಮ್ಮ ಹೆಣಗಳು ಈ ಅರಣ್ಯದಲ್ಲಿ ಬೀಳುವವು.
೩೩ ಇದಲ್ಲದೆ ನಿಮ್ಮ ಮಕ್ಕಳು ನಾಲ್ವತ್ತು ವರುಷ ಅರಣ್ಯದಲ್ಲಿ ಕು
ರುಬರಾಗಿದ್ದು, ನಿಮ್ಮ ಹೆಣಗಳು ಅರಣ್ಯದಲ್ಲಿ ತೀರಿ ಹೋಗುವ
೩೪ ಪರ್ಯಂತರ, ನಿಮ್ಮ ಜಾರತ್ವಗಳನ್ನು ಹೊತ್ತಿರುವರು. ನೀವು
ಆ ದೇಶವನ್ನು ಪಾಳ್ಳತಿ ನೋಡಿದ ನಾಲ್ವತ್ತು ದಿವಸಗಳ ಲೆಖ್ಖದ
ಪ್ರಕಾರ ಒಂದು ದಿನಕ್ಕೆ ಒಂದು ವರುಷವಾಗಿ, ಈ ಪ್ರಕಾರ ನಾ

ಲ್ವತ್ತು ವರುಷ ನಿಮ್ಮ ಅಕ್ರಮಗಳನ್ನು ಅನುಭವಿಸುವಿರಿ; ಮತ್ತು
೩೫ ನಾನು ಕೈ ಬಿಡುತ್ತೇನೆಂದು ನೀವು ತಿಳಿದು ಕೊಳ್ಳುವಿರಿ. ಕರ್ತ
ನಾದ ನಾನು ಇದನ್ನು ಮಾತಾಡಿದ್ದೇನೆ; ನನಗೆ ವಿರೋಧವಾಗಿ
ಕೂಡಿ ಕೊಂಡಿರುವ ಈ ಕೆಟ್ಟ ಸಭೆಗೆಲ್ಲಾ ಇದನ್ನು ನಿಶ್ಚಯವಾ
ಗಿ ಮಾಡುವೆನು; ಈ ಅರಣ್ಯದಲ್ಲಿ ಅವರು ತೀರಿ ಹೋಗಿ, ಅದ
ಕ್ಕೆಲ್ಲೇ ಸಾಯುವರು.

೩೬ ಇದಲ್ಲದೆ ದೇಶವನ್ನು ಪೋಳ್ಳತಿ ನೋಡುವದಕ್ಕೆ ಮೋಶೆಯ ಅ
ಪ್ಪಣೆಯಿಂದ ಹೋಗಿ ಬಂದು, ಆ ದೇಶದ ಮೇಲೆ ಕೆಟ್ಟ ಸುದ್ದಿಯ
ನ್ನು ಎಬ್ಬಿಸಿ, ಸಮಸ್ತ ಸಭೆಯನ್ನು ಮೋಶೆಗೆ ವಿರೋಧವಾಗಿ ಗು
೩೭ ಣುಗುಟ್ಟು ಮಾಡಿದ ಆ ಮನುಷ್ಯರು, ದೇಶದ ಅವಗುಣಕ್ಕೆ ಕೆಟ್ಟ
ಸುದ್ದಿಯನ್ನು ಎಬ್ಬಿಸಿದ ಮನುಷ್ಯರು ಕರ್ತನ ಸನ್ನಿಧಿಯಲ್ಲಿ ವ್ಯಾ
೩೮ ಧಿಯಿಂದ ಸತ್ತರು. ಆದರೆ ದೇಶವನ್ನು ಪೋಳ್ಳತಿ ನೋಡುವದಕ್ಕೆ
ಹೋದ ಮನುಷ್ಯರೊಳಗೆ ಇಬ್ಬರಾದ ನೂನನ ಮಗನಾದ ಯೆ
ಹೋಶುವನೂ, ಯೆಫುನ್ನೆಯ ಮಗನಾದ ಕಾಲೆಬನೂ, ಬದುಕಿ
ದರು.

೩೯ ಮತ್ತು ಮೋಶೆ ಇಸ್ರಯೇಲ್ ಮಕ್ಕಳೆಲ್ಲರಿಗೆ ಈ ಮಾತುಗಳ
ನ್ನು ಹೇಳಿದನು; ಆದದರಿಂದ ಜನರು ಬಹಳವಾಗಿ ದುಃಖ ಪಟ್ಟರು.
೪೦ ಮತ್ತು ಮರು ದಿವಸ ಬೆಳಗ್ಗೆ ಅವರು ಎದ್ದು, ಬೆಟ್ಟದ ತುದಿಯ
ಮೇಲಕ್ಕೇರಿ, ಹೇಳಿದ್ದು—ಇಗೋ, ಕರ್ತನು ಹೇಳಿದ ಸ್ಥಳಕ್ಕೆ ಏರಿ
ಹೋಗಲಿಕ್ಕೆ ಸಿದ್ಧವಾಗಿದ್ದೇವೆ; ಯಾಕಂದರೆ ನಾವು ಪಾಪ ಮಾ
೪೧ ಡಿದ್ದೇವೆ. ಆಗ ಮೋಶೆ ಹೇಳಿದ್ದು—ನೀವು ಯಾಕೆ ಈ ಪ್ರಕಾರ
ಕರ್ತನ ಆಜ್ಞೆಯನ್ನು ಮೀರುತ್ತೀರಿ! ಅದು ಅನುಕೂಲವಾಗುವದಿ
೪೨ ಲ್ಲ. ನೀವು ನಿಮ್ಮ ಶತ್ರುಗಳ ಮುಂದೆ ಹೊಡೆಯಲ್ಪಡದ ಹಾಗೆ
ಏರಿ ಹೋಗ ಬೇಡಿರಿ; ಯಾಕಂದರೆ ಕರ್ತನು ನಿಮ್ಮ ಸಂಗಡ ಇ
೪೩ ರುವದಿಲ್ಲ. ಯಾಕಂದರೆ ಅಮಲೇಕ್ಯರೂ ಕನಾನ್ಯರು ಅಲ್ಲಿ ನಿ
ಮ್ಮ ಮುಂದೆ ಇದ್ದಾರೆ; ನೀವು ಕತ್ತಿಯಿಂದ ಬೀಳುವಿರಿ; ನೀವು
ಕರ್ತನ ಕಡೆಯಿಂದ ತಿರುಗಿದ ಕಾರಣ, ಕರ್ತನು ನಿಮ್ಮ ಸಂಗಡ
ಇರುವದಿಲ್ಲ.

೪೪ ಆದರೆ ಅವರು ಗರ್ವಿಷ್ಠರಾಗಿ, ಬೆಟ್ಟದ ತುದಿಯ ಮೇಲಕ್ಕೇರಿ
ಹೋದರು; ಆದಾಗ್ಯೂ ಕರ್ತನ ಒಡಂಬಡಿಕೆಯ ಪೆಟ್ಟಿಗೆಯೂ
೪೫ ಮೋಶೆಯೂ ದಂಡಿನೊಳಗಿಂದ ಹೊರಡಲಿಲ್ಲ. ಆಗ ಆ ಬೆಟ್ಟದ
ಲ್ಲಿ ವಾಸವಾಗಿದ್ದ ಅಮಲೇಕ್ಯರೂ ಕನಾನ್ಯರೂ ಇಳಿದು, ಅವರ
ನ್ನು ಹೊಡೆದು, ಹೊರ್ಮದ ಪರ್ಯಂತರಕ್ಕೂ ಅವರನ್ನು ಸಂ
ಹರಿಸಿದರು.

## ೧೫. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳಿದ್ದೇನಂ
೨ ದರೆ—ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ ಹೇಳ
ಬೇಕಾದದ್ದೇನಂದರೆ—ನಾನು ನಿಮ್ಮಗೆ ಕೊಡುವ ನಿಮ್ಮ ನಿವಾಸಗ
೩ ಳ ದೇಶಕ್ಕೆ ನೀವು ಬಂದ ಮೇಲೆ, ಪಶುಗಳಿಂದಲಾದರೂ ಕುರಿಗ
ಳಿಂದಲಾದರೂ ಕರ್ತನಿಗೆ ಸುವಾಸನೆಯನ್ನು ಮಾಡುವದಕ್ಕೆ ಉ
ಚಿತವಾಗಿಯಾದರೂ ನಿಮ್ಮ ನೇಮದ ಹಬ್ಬಗಳಲ್ಲಿಯಾದರೂ
ಕರ್ತನಿಗೆ ಹೋಮವಾಗಲಿ, ವಿಶೇಷವಾದ ಹರಕೆಗೋಸ್ಕರವಾದ
೪ ಬಲಿಯಾಗಲಿ, ಒಂದು ದಹನ ಬಲಿಯನ್ನು ಅರ್ಪಿಸುವಾಗ, ಕರ್ತ
ನಿಗೆ ತನ್ನ ಅರ್ಪಣೆಯನ್ನು ತರುವವನು ತರ ಬೇಕಾದದ್ದೇನಂದ
ರೆ—ಆಹಾರದ ಅರ್ಪಣೆಯಾಗಿ ಹೀನಿನ ನಾಲ್ಕನೇ ಭಾಲದ್ದು ಎ
೫ ಣ್ಣೆ ಹೊಯಿದ ನಯವಾದ ಹಿಟ್ಟಿನ ದಶಾಂಶವನ್ನೂ, ಪಾನದ
ಅರ್ಪಣೆಯಾಗಿ ಹೋಮದ ಸಂಗಡಲೂ ಬಲಿಯ ಸಂಗಡಲೂ
ಒಂದೊಂದು ಕುರಿ ಮರಿಗೋಸ್ಕರ ಕಾಲು ಹೀನಿನ ದ್ರಾಕ್ಷೇ ರಸವ
೬ ನ್ನೂ, ಅರ್ಪಿಸ ಬೇಕು. ಇದಲ್ಲದೆ ಟಗರುಗೋಸ್ಕರ ಆಹಾರದ
ಅರ್ಪಣೆಯಾಗಿ ಹೀನಿನ ಮೂರನೇ ಭಾಲು ಎಣ್ಣೆ ಹೊಯಿದ
ಗೋಧಿ ಹಿಟ್ಟಿನ ಎರಡು ದಶಾಂಶಗಳನ್ನು ಅರ್ಪಿಸ ಬೇಕು.
೭ ಪಾನದ ಅರ್ಪಣೆಯಾಗಿ ಕರ್ತನಿಗೆ ಸುವಾಸನೆಯಾಗಿ ಹೀನಿನ
೮ ಮೂರನೇ ಭಾಲು ದ್ರಾಕ್ಷೇ ರಸವನ್ನು ಅರ್ಪಿಸ ಬೇಕು. ಮತ್ತು
ನೀನು ಕರ್ತನಿಗೆ ಹರಕೆಯನ್ನು ಇಲ್ಲವೆ ಸಮಾಧಾನ ಬಲಿಯ
ನ್ನು ಅರ್ಪಿಸುವದಕ್ಕೆ ಕರುವನ್ನು ಹೋಮವಾಗಿ, ಇಲ್ಲವೆ ಬಲಿ
ಯಾಗಿ ಅರ್ಪಿಸಿದರೆ, ಕರುವಿನ ಸಂಗಡ ಆಹಾರದ ಅರ್ಪಣೆಯಾ
೯ ಗಿ ಅರ್ಧ ಹೀನಿನ ಎಣ್ಣೆ ಹೊಯಿದ ಗೋಧಿ ಹಿಟ್ಟಿನ ಮೂರು ದ
೧೦ ಶಾಂಶಗಳನ್ನು ಅರ್ಪಿಸ ಬೇಕು. ಮತ್ತು ಪಾನದ ಅರ್ಪಣೆಯಾ
ಗಿ ಅರ್ಧ ಹೀನಿನ ದ್ರಾಕ್ಷೇ ರಸವನ್ನು ಅರ್ಪಿಸ ಬೇಕು; ಇದು ಕ
೧೧ ರ್ತನಿಗೆ ಸುವಾಸನೆಯ ದಹನವು. ಎತ್ತಿಗೋಸ್ಕರವೂ, ಟಗರು
ಗೋಸ್ಕರವೂ, ಕುರಿಗೋಸ್ಕರವೂ, ಮೇಕೆಗೋಸ್ಕರವೂ, ಮಾ
೧೨ ಡ ತಕ್ಕ ಕ್ರಮ ಇದೇ. ನೀವು ಅರ್ಪಿಸುವ ಬಲಿಗಳ ಲೆಖ್ಖದ ಪ್ರ
ಕಾರ, ನೀವು ಒಂದೊಂದಕ್ಕೋಸ್ಕರ ಲೆಖ್ಖಾನುಸಾರವಾಗಿ ಮಾ
೧೩ ಡ ಬೇಕು. ಕರ್ತನಿಗೆ ಸುವಾಸನೆಯ ದಹನವನ್ನು ಅರ್ಪಿಸುವ
ಬಗ್ಯೆ, ದೇಶಸ್ಥರೆಲ್ಲರು ಇವುಗಳನ್ನು ಹಾಗೆಯೇ ಮಾಡ ಬೇಕು
೧೪ ಮತ್ತು ನಿಮ್ಮ ಸಂಗಡ ವಾಸಿಸುವ ಪರದೇಶಿಯಾಗಲಿ, ಮುಂದಿ
ನ ನಿಮ್ಮ ಸಂತತಿಗಳ ಸಂಗಡ ಇರುವವರ್ಯಾರಾಗಲಿ, ಕರ್ತನಿಗೆ
ಸುವಾಸನೆಯ ದಹನವನ್ನು ಅರ್ಪಿಸುವಾಗ, ನೀವು ಹ್ಯಾಗೆ ಮಾ
೧೫ ಡುತ್ತೀರೋ, ಹಾಗೆಯೇ ಅವನು ಮಾಡಲಿ. ಸಮಸ್ತ ಸಭೆಗೆ, ನಿ
ಮಗೂ, ವಸ್ತಿಯಾದ ಪರದೇಶಿಗೂ, ಒಂದೇ ಕಟ್ಟಳೆ; ನಿಮ್ಮ ಸಂ
ತಾನಗಳಿಗೆ ನಿತ್ಯವಾದ ಕಟ್ಟಳೆ; ಕರ್ತನಿಗೆದುರಾಗಿ ನೀವು ಇರುವ
೧೬ ಪ್ರಕಾರವೇ ಪರದೇಶಿ ಇರ ಬೇಕು. ನಿಮಗೂ ನಿಮ್ಮ ಬಳಿಯಲ್ಲಿ
ವಾಸಿಸುವ ಪರದೇಶಿಗೂ ಒಂದೇ ಪ್ರಮಾಣವೂ, ಒಂದೇ ನ್ಯಾಯ
ವೂ, ಇರ ಬೇಕು.

೧೭ ಇದಲ್ಲದೆ ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳಿದ್ದೇ
೧೮ ನಂದರೆ—ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ ಹೇಳ
ಬೇಕಾದದ್ದೇನಂದರೆ—ನಾನು ನಿಮ್ಮನ್ನು ತರುವ ದೇಶಕ್ಕೆ ನೀ
೧೯ ವು ಬಂದು, ಆ ದೇಶದ ಕೊಟ್ಟಿಯನ್ನು ತಿನ್ನುವಾಗ, ನೀವು ಕ
೨೦ ರ್ತನಿಗೆ ಎತ್ತುವ ಅರ್ಪಣೆಯನ್ನು ಅರ್ಪಿಸ ಬೇಕು. ನಿಮ್ಮ ಪ್ರ
ಥಮವಾದ ಹಿಟ್ಟಿನ ಹೋಳಿಗೆಯನ್ನು ಎತ್ತುವ ಅರ್ಪಣೆಯಾಗಿ
ಅರ್ಪಿಸ ಬೇಕು, ನಿಮ್ಮ ಕಣದ ಎತ್ತುವ ಅರ್ಪಣೆಯಂತೆ ಅದ
೨೧ ನ್ನು ಎತ್ತ ಬೇಕು. ನಿಮ್ಮ ಸಂತತಿಗಳ ಪರ್ಯಂತರಕ್ಕೂ ನಿಮ್ಮ
ಹಿಟ್ಟಿನ ಪ್ರಥಮವಾದದರಿಂದ ಕರ್ತನಿಗೆ ಎತ್ತುವ ಅರ್ಪಣೆಯನ್ನು
ಅರ್ಪಿಸ ಬೇಕು.

೨೨ ಮತ್ತು ನೀವು ತಪ್ಪಿ, ಕರ್ತನು ಮೋಶೆಗೆ ಹೇಳಿದ ಈ ಸಕಲ
೨೩ ಆಜ್ಞೆಗಳ ಪ್ರಕಾರ ಮಾಡದೆ ಇದ್ದರೆ, ಆತನು ನಿಮಗೆ ಆಜ್ಞೆಗಳನ್ನು
ಕೊಟ್ಟ ದಿವಸವು ಮೊದಲುಗೊಂಡು ನಿಮ್ಮ ಸಂತತಿಗಳ ವರಿಗೂ
ಕರ್ತನು ಮೋಶೆಯ ಕೈಯಿಂದ ನಿಮಗೆ ಆಜ್ಞಾಪಿಸಿದ್ದನೆಲ್ಲಾ ಮಾ
೨೪ ಡದೆ ಹೋದರೆ, ಅದು ಸಭೆಗೆ ತಿಳಿಯದೆ, ತಪ್ಪು ಆಗಿರುವ ಪಕ್ಷದ



ಲ್ಲಿ, ಸಮಸ್ತ ಸಭೆಯು ಕರ್ತನಿಗೆ ಸುವಾಸನೆಯಾದ ಹೋಮವಾ
ಗಿ, ಒಂದು ಹೋರಿಯನ್ನೂ, ನ್ಯಾಯದ ಪ್ರಕಾರವಾದ ಆದರ ಅ
ಹಾರದ ಅರ್ಪಣೆಯನ್ನೂ, ಪಾನದ ಅರ್ಪಣೆಯನ್ನೂ, ಪಾಪ
ದ ಬಲಿಯಾಗಿ ಮೇಕೆಗಳಿಂದ ಒಂದು ಹೋತನ್ನೂ ಅರ್ಪಿಸ ಬೇ
೨೫ ಕು. ಮತ್ತು ಯಾಜಕನು ಇಸ್ರಯೇಲ್ ಮಕ್ಕಳ ಸಮಸ್ತ ಸಭೆ
ಗೋಸ್ಕರ, ಅವರಿಗೆ ಕ್ಷಮೆಯಾಗುವ ಹಾಗೆ, ಪಾಪ ಮುಚ್ಚ ಬೇ
ಕು; ಯಾಕಂದರೆ ಅದು ತಪ್ಪಾಗಿತ್ತು; ಆದಾಗ್ಯೂ ಅವರು ಕರ್ತ
ನಿಗೆ ದಹನ ಬಲಿಯಾಗಿ ತಮ್ಮ ಅರ್ಪಣೆಯನ್ನೂ, ತಮ್ಮ ತಪ್ಪಿ
ಗೋಸ್ಕರ ಪಾಪ ಬಲಿಯನ್ನೂ, ಕರ್ತನ ಮುಂದೆ ತರ ಬೇಕು.
೨೬ ಆಗ ಇಸ್ರಯೇಲ್ ಮಕ್ಕಳ ಸಮಸ್ತ ಸಭೆಗೂ ಅವರೊಳಗೆ ವಾ
ಸಿಸುವ ಪರದೇಶಿಗೂ ಪರಿಹಾರವಾಗುವದು; ಯಾಕಂದರೆ ಸಮ
ಸ್ತ ಜನರು ತಪ್ಪಿನಲ್ಲಿ ಇದ್ದರು.

೨೭ ಆದರೆ ಒಬ್ಬೇ ಪ್ರಾಣ ತಪ್ಪಿ, ಪಾಪ ಮಾಡುವ ಪಕ್ಷದಲ್ಲಿ ಪಾ
ಪದ ಬಲಿಗಾಗಿ ಒಂದು ವರುಷದ ಮೇಕೆಯನ್ನು ಅರ್ಪಿಸ ಬೇಕು.
೨೮ ಮತ್ತು ಯಾಜಕನು ಕರ್ತನ ಮುಂದೆ ತಪ್ಪಿ ಪಾಪ ಮಾಡಿದಂಥ
ಆ ತಪ್ಪಿದ ಪ್ರಾಣಿಗೋಸ್ಕರ ಪಾಪ ಮುಚ್ಚ ಬೇಕು; ಅದಕ್ಕೆ ಪರಿ
ಹಾರವಾಗುವ ಹಾಗೆ ಅದಕ್ಕೋಸ್ಕರ ಪಾಪ ಮುಚ್ಚ ಬೇಕು.
೨೯ ಇಸ್ರಯೇಲ್ ಮಕ್ಕಳಲ್ಲಿರುವ ದೇಶಸ್ಥರಿಗೂ, ಅವರೊಳಗೆ ವಾಸಿ
ಸುವ ಪರದೇಶಿಗೂ, ನಿಮ್ಮೆಲ್ಲರಿಗೂ, ತಪ್ಪಿ ಕರ್ಮ ಮಾಡಿದವನಿಗೆ
ಒಂದೇ ನ್ಯಾಯ ಇರ ಬೇಕು.

೩೦ ಆದರೆ ಯಾವ ಪ್ರಾಣಾದರೂ, ದೇಶಸ್ಥನಾಗಲಿ, ಪರದೇಶಿ
ಯಾಗಲಿ, ಎತ್ತಿದ ಕೈಯಿಂದ ಪಾಪ ಮಾಡಿದರೆ, ಅವನು ಕರ್ತ
ನನ್ನು ನಿಂದಿಸುತ್ತಾನೆ; ಆ ಪ್ರಾಣ ತನ್ನ ಜನರ ಮಧ್ಯದಲ್ಲಿಂದ ಕ
೩೧ ಡಿಯಲ್ಪಡ ಬೇಕು. ಅವನು ಕರ್ತನ ವಾಕ್ಯವನ್ನು ಅಲಕ್ಷ್ಯ ಮಾ
ಡಿ, ಅವನ ಆಜ್ಞೆಗಳನ್ನು ಮೀರಿದ್ದರಿಂದ, ಆ ಪ್ರಾಣ ನಿಶ್ಚಯವಾ
ಗಿ ಕಡಿಯಲ್ಪಡ ಬೇಕು; ಅವನ ಅಕ್ರಮವು ಅವನ ಮೇಲೆ ಇರು
ವದು.

೩೨ ಇಸ್ರಯೇಲ್ ಮಕ್ಕಳು ಅರಣ್ಯದಲ್ಲಿರುವಾಗ, ಅವರು ಸಬ್ಬಾ
ತ ದಿವಸದಲ್ಲಿ ಕಟ್ಟಿಗೆಗಳನ್ನು ಕೂಡಿಸುವ ಮನುಷ್ಯನನ್ನು ಕಂ
೩೩ ಡರು. ಆಗ ಕಟ್ಟಿಗೆಗಳನ್ನು ಕೂಡಿಸುವದರಲ್ಲಿ ಅವನನ್ನು ಕಂಡು
ಕೊಂಡವರು ಅವನನ್ನು ಮೋಶೆ ಅಹೋನರ ಬಳಿಗೂ ಸಮಸ್ತ
೩೪ ಸಭೆಯವರ ಬಳಿಗೂ ತಂದು, ಅವನಿಗೆ ಏನು ಮಾಡ ಬೇಕೆಂದು
೩೫ ಸ್ಪಷ್ಟವಾಗಿ ತಿಳಿಯದ ಕಾರಣ, ಕಾವಲಿಯಲ್ಲಿ ಹಾಕಿದರು. ಆಗ
ಕರ್ತನು ಮೋಶೆಗೆ ಹೇಳಿದ್ದು—ಆ ಮನುಷ್ಯನು ಸಾಯಲೇ ಸಾ
ಯ ಬೇಕು; ಸಭೆಯೆಲ್ಲಾ ದಂಡಿನ ಹೊರಗೆ ಅವನನ್ನು ಕಲ್ಲೆಸೆ
೩೬ ಯ ಬೇಕು. ಆಗ ಸಭೆಯೆಲ್ಲಾ ಅವನನ್ನು ದಂಡಿನ ಹೊರಗೆ ತ
ಕ್ಕೊಂಡು ಹೋಗಿ, ಕರ್ತನು ಮೋಶೆಗೆ ಆಜ್ಞಾಪಿಸಿದ ಪ್ರಕಾರ, ಅ
ವನು ಸಾಯುವ ಹಾಗೆ, ಅವನನ್ನು ಕಲ್ಲೆಸೆದರು.

೩೭ ಮತ್ತು ಕರ್ತನು ಮಾತಾಡಿ, ಮೋಶೆಗೆ ಹೇಳಿದ್ದೇನಂದರೆ—
೩೮ ನೀನು ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ ಹೇಳ
ಬೇಕಾದದ್ದೇನಂದರೆ—ಅವರು ತಮ್ಮ ತಲಾಂತರಗಳಲ್ಲಿ ತಮ್ಮ ವ
ಸ್ತ್ರಗಳ ಸೆರಗುಗಳ ಮೇಲೆ ಗೊಂಡೆಗಳನ್ನು ಮಾಡಿ ಕೊಳ್ಳ ಬೇ
ಕು; ಮತ್ತು ತರಗಿನ ಗೊಂಡೆಯ ಮೇಲೆ ನೀಲಧಾರವನ್ನು ಹಾಕ
೩೯ ಬೇಕು. ಇದನ್ನು ನೀವು ಗೊಂಡೆಯಾಗಿ ಇಟ್ಟು ಕೊಂಡು, ಅದ
ನ್ನು ನೋಡುವಾಗ, ಕರ್ತನ ಸಕಲ ಆಜ್ಞೆಗಳನ್ನು ನೆನಸಿ, ಅವುಗ
ಳ ಪ್ರಕಾರ ಮಾಡಿ, ನಿಮ್ಮ ಹೃದಯವನ್ನೂ, ನಿಮ್ಮ ಕಣ್ಣುಗಳ
ನ್ನೂ, ಅವುಗಳ ಅನುಸಾರವಾಗಿ ಜಾರತ್ವ ಮಾಡಲಿಕ್ಕೆ, ಹಿಂಬಾ
೪೦ ಲಿಸದೆ ಇರುವಿರಿ. ನೀವು ನನ್ನ ಆಜ್ಞೆಗಳನ್ನೆಲ್ಲಾ ನೆನಸಿ, ಅವುಗಳ
ಪ್ರಕಾರ ಮಾಡಿ, ನಿಮ್ಮ ದೇವರಿಗೆ ಪರಿಶುದ್ಧವಂತರಾಗುವ ಹಾಗೆ
೪೧ ಯೇ. ನಿಮಗೆ ದೇವರಾಗಿರುವ ಹಾಗೆ ನಿಮ್ಮನ್ನು ಐಗುತ್ತ ದೇವ
ಕೊಳ್ಳಗಿಂದ ಹೊರಗೆ ತಂದ ನಿಮ್ಮ ದೇವರಾಗಿರುವ ಕರ್ತನು ನಾ
ನೇ. ನಿಮ್ಮ ದೇವರಾಗಿರುವ ಕರ್ತನು ನಾನೇ.

## ೧೬. ಸಂಧಿ.

೧ ಆಗ ಲೇವಿಯ ಮಗನಾದ ಕೊಹತನ ಮಗನಾದ ಇಚಾರನ
ಮಗನಾದ ಕೋರಹನೂ, ರೂಬೆನ್ ಕುಲದವರಾದ ಎಲಿಯಾಬ
ನ ಮಕ್ಕಳಾದ ದಾಥಾನನೂ, ಅಬೀರಮನೂ, ಮತ್ತು ಪೆಲೆತನ
೨ ಮಗನಾದ ಓನನೂ, ಇವರು ಜನರನ್ನು ತಕ್ಕೊಂಡು, ಇಸ್ರ
ಯೇಲ್ ಮಕ್ಕಳೊಳಗಿಂದ ಸಭೆಯ ಹಿರಿಯರಾಗಿಯೂ, ಸಭೆಯ
ಘನವುಳ್ಳವರಾಗಿಯೂ, ಹೆಸರುಳ್ಳವರಾಗಿಯೂ, ಇರುವ ಇ
ನ್ನೂರ ಐವತ್ತು ಜನರ ಸಂಗಡ ಮೋಶೆಯ ಮುಂದೆ ಎದ್ದರು.
೩ ಅವರು ಮೋಶೆಗೂ ಆರೋನನಿಗೂ ವಿರೋಧವಾಗಿ ಕೂಡಿ
ಕೊಂಡು, ಅವರಿಗೆ ಹೇಳ್ತಿದ್ದೇನಂದರೆ—ನೀವು ಹೆಚ್ಚು ಅಧಿಕಾರ
ತಕ್ಕೊಳ್ಳುತ್ತೀರಿ; ಯಾಕಂದರೆ ಸಭೆಯೆಲ್ಲಾ, ಅವೆಲ್ಲರು ಪರಿಶು
ದ್ಧರು; ಕರ್ತನು ಅವರ ಮಧ್ಯದಲ್ಲಿ ಇದ್ದಾನೆ; ಹೀಗಿದ್ದರೆ, ನೀ
ವು ಕರ್ತನ ಸಭೆಯ ಮೇಲೆ ನಿಮ್ಮನ್ನು ಹೆಚ್ಚಿಸಿ ಕೊಳ್ಳುವದು
ಯಾತಕ್ಕೆ!

೪ ಮೋಶೆ ಇದನ್ನು ಕೇಳಿದಾಗ, ತನ್ನ ಮೋರೆ ಕೆಳಗಾಗಿ ಬಿದ್ದ
೫ ನು. ಮತ್ತು ಕೋರಹನಿಗೂ, ಅವನ ಸಮಸ್ತ ಸಮೂಹಕ್ಕೂ,
ಅವನು ಹೇಳ್ತಿದ್ದೇನಂದರೆ—ಕರ್ತನು ತನ್ನ ಹತ್ತರ ಬರ ಮಾ
ಡಿ ಕೊಳ್ಳುವ ಹಾಗೆ, ತನಗೆ ಸ್ವತೇಯನೂ ಪರಿಶುದ್ಧನೂ
ಯಾರೆಂದು, ನಾಳೆ ತಿಳಿಸುವನು; ಮತ್ತು ಯಾವನನ್ನು ಆರಿ
ಕೊಳ್ಳುವನೋ, ಅವನನ್ನೇ ಹತ್ತರ ಬರ ಮಾಡಿ ಕೊಳ್ಳುವನು.
೬ ನೀವು ಇದನ್ನು ಮಾಡಿರಿ, ಕೋರಹನೂ ಅವನ ಸಮೂಹವೆಲ್ಲ
೭ ವೂ ಧೂಪಾರ್ತಿಗಳನ್ನು ತಕ್ಕೊಂಡು, ನಾಳೆ ಅವುಗಳಲ್ಲಿ ಬೆಂ
ಕಿಯನ್ನು ಇಟ್ಟು, ಅವುಗಳ ಮೇಲೆ ಧೂಪವನ್ನು ಕರ್ತನ
ಮುಂದೆ ಹಾಕಿರಿ; ಆಗ ಕರ್ತನು ಯಾವನನ್ನು ಆರಿ ಕೊಳ್ಳುವ
ನೋ, ಅವನೇ ಪರಿಶುದ್ಧನಾಗಿರುವನು; ಲೇವಿಯ ಮಕ್ಕಳೇ, ನೀ
ವು ಹೆಚ್ಚು ಅಧಿಕಾರ ತಕ್ಕೊಳ್ಳುತ್ತೀರಿ.

೮ ಮತ್ತು ಮೋಶೆ ಕೋರಹನ ಸಂಗಡ ಹೇಳಿದ್ದು—ಲೇವಿಯ
೯ ಮಕ್ಕಳೇ, ಈಗ ಕೇಳಿರಿ. ಕರ್ತನ ನಿವಾಸದ ಸೇವೆಯನ್ನು
ಮಾತುವದಕ್ಕೂ, ಸಭೆಯ ಮುಂದಿರುವ ಅವನ ಆಚರಣೆಯಲ್ಲಿ
ನಿಲ್ಲುವದಕ್ಕೂ, ಇಸ್ರಯೇಲ್ ದೇವರು ನಿಮ್ಮನ್ನು ಹತ್ತರ ಬರ
ಮಾಡಿ ಕೊಳ್ಳುವ ಬಗ್ಯೆ, ಇಸ್ರಯೇಲ್ಯರ ಸಭೆಯೊಳಗಿಂದ
೧೦ ನಿಮ್ಮನ್ನು ಪ್ರತ್ಯೇಕಿಸಿದ್ದು ನಿಮಗೆ ಅಲ್ಪವಾಗಿದೆಯೋ! ಅವನು
ನಿನ್ನನ್ನೂ, ನಿನ್ನ ಸಂಗಡ ಲೇವಿಯ ಮಕ್ಕಳಾದ ನಿನ್ನ ಸಹೋ
ದರಕಲ್ಲರನ್ನೂ ತನ್ನ ಹತ್ತರ ಬರ ಮಾಡಿ ಕೊಂಡಿದ್ದಾನೆ; ನೀ
ವು ಯಾಜಕತ್ವವನ್ನು ಸಹ ಹುಡುಕುತ್ತೀರೋ! ಈ ಕಾರಣದಿಂ
೧೧ ದ ನೀನೂ ನಿನ್ನ ಸಮಸ್ತ ಗುಂಪೂ, ಕರ್ತನಿಗೆ ವಿರೋಧವಾಗಿ
ಕೂಡಿ ಕೊಂಡಿರಿ; ಮತ್ತು ನೀವು ಅವನಿಗೆ ವಿರೋಧವಾಗಿ ಗುಣು
ಗುಟ್ಟುವ ಹಾಗೆ, ಆರೋನನು ಯಾರು!

೧೨ ಆಗ ಮೋಶೆ ಎಲಿಯೋಬನ ಮಕ್ಕಳಿಗಾದ ದಾಥಾನನನೂ, ಅ
ಬೀರಮನನೂ ಕರೇ ಕಳಹಿಸಿದನು; ಅದರೆ ಅವರು—ನಾವು
೧೩ ಬರುವದಿಲ್ಲ, ನೀನು ಅರಣ್ಯದಲ್ಲಿ ನಮ್ಮನ್ನು ಸಾಯಿಸುವ
ದಕ್ಕೆ, ಹಾಲೂ ಜೇನೂ ಹರಿಯುವ ದೇಶಕ್ಕೆಳಗಿಂದ ನಮ್ಮ
ನ್ನು ಪೈದದ್ದು ಅಲ್ಪವಾಯಿತೋ! ಮತ್ತು ನೀನು ಅರಸನಾಗಿ
೧೪ ನಮ್ಮನ್ನು ಆಳ ಬೇಕೋ! ಇದಲ್ಲದೆ ನೀನು ನಮ್ಮನ್ನು ಹಾಲೂ
ಜೇನೂ ಹರಿಯುವ ದೇಶಕ್ಕೆ ತಕ್ಕೊಂಡು ಬರಲಿಲ್ಲ: ಹೊಲಗಳ
ನೂ ದ್ರಾಕ್ಷೇ ತೋಟಗಳನೂ ನಮಗೆ ಸ್ವಾಸ್ತ್ಯವಾಗಿ ಕೊಡ
ಲಿಲ್ಲ; ಈ ಮನುಷ್ಯರ ಕಣ್ಣುಗಳನ್ನು ಕಿತ್ತು ಬಿಡುವಿಯೋ! ನಾ
ವು ಬರುವದಿಲ್ಲ, ಅಂದರು.

೧೫ ಆಗ ಮೋಶೆಗೆ ಕೋಪ ಬಹಳ ಉರಿದು, ಅವನು ಕರ್ತನಿಗೆ
ಹೇಳಿದ್ದು—ಅವರ ಬಲಿಯ ಕಡೆಗೆ ನೀನು ದೃಷ್ಟಿ ಇಡ ಬೇಡ;
ನಾನು ಅವರಿಂದ ಒಂದು ಕತ್ತೆಯನ್ನಾದರೂ ತಕ್ಕೊಳ್ಳಲಿಲ್ಲ; ಅ
೧೬ ವರಲ್ಲಿ ಒಬ್ಬನಿಗಾದರೂ ಕೇಡು ಮಾಡಲಿಲ್ಲ. ಮತ್ತು ಕೋರಹನಿ
ಗೆ ಮೋಶೆ ಹೇಳಿದ್ದು—ನೀನೂ ನಿನ್ನ ಸಮೂಹವೆಲ್ಲೂ ಕರ್ತನ
ಸಮುಖದಲ್ಲಿ ಇರಿ; ನೀನೂ, ಅವರೂ, ಆಕೋನನೂ ನಾಳೆ ಬಂ
೧೭ ದು, ಒಬ್ಬೊಬ್ಬನು ತನ್ನ ಧೂಪಾರ್ತಿಯನ್ನು ತಕ್ಕೊಂಡು,
ಅವುಗಳ ಮೇಲೆ ಧೂಪವನಿಟ್ಟು, ಒಬ್ಬನಿಗೆ ಒಂದರ ಪ್ರಕಾರ
ಇನ್ನೂರ ಐವತ್ತು ಧೂಪಾರ್ತಿಗಳಾದ ನಿಮ್ಮ ಧೂಪಾರ್ತಿಗಳ
ನ್ನು ಕರ್ತನ ಸಮುಖಕ್ಕೆ ತನ್ನಿರಿ; ನೀನೂ, ಆಕೋನನೂ
ಸಹ ನಿಮ್ಮ ನಿಮ್ಮ ಧೂಪಾರ್ತಿಗಳನ್ನು ತನ್ನಿರಿ.

೧೮ ಆಗ ಅವರು ತಮ್ಮ ತಮ್ಮ ಧೂಪಾರ್ತಿಗಳನ್ನು ತಕ್ಕೊಂ
ಡು, ಅವುಗಳ ಮೇಲೆ ಬೆಂಕಿಯನ್ನು ಇಟ್ಟು, ಧೂಪವನ್ನು ಹಾಕಿ,
ಸಭೆಯ ಗುಡಾರದ ಬಾಗಲಿನ ಮುಂದೆ, ಮೋಶೆಯು, ಆಕೋನ
೧೯ ನ ಸಂಗಡ ನಿಂತರು. ಮತ್ತು ಕೋರಹನು ಅವರಿಗೆದುರಾಗಿ ಸ
ಮಸ್ತ ಸಮೂಹವನ್ನು ಗುಡಾರದ ಬಾಗಲಿನ ಹತ್ತರ ಕೂಡಿಸಿದ
ನು; ಆಗ ಕರ್ತನ ಘನವು ಸಮಸ್ತ ಸಭೆಗೆ ಕಾಣ ಬಂತು.

೨೦ ಮತ್ತು ಕರ್ತನು ಮೋಶೆಯು, ಆಕೋನನ ಸಂಗಡ ಮಾತಾ
೨೧ ಡಿ, ಹೇಳ್ದೇನಂದರೆ—ನೀವು ಈ ಸಭೆಯ ಮಧ್ಯದೊಳಗಿಂದ
ಪ್ರತ್ಯೇಕವಾಗಿರಿ; ನಾನು ಅವರನ್ನು ಕ್ಷಣದಲ್ಲಿ ತೀರಿಸಿ ಬಿಡುತ್ತೀ
೨೨ ನೆ. ಆಗ ಅವರು ತಮ್ಮ ಮೋಶೆ ಕೆಳಗಾಗಿ ಬಿದ್ದು. ಹೇಳ್ದೇನಂ
ದರೆ— ಸರ್ವ ಮಾಂಸದ ಆತ್ಮಗಳ ದೇವರಾದ ದೇವರೇ, ಒ
ಬ್ಬ ಮನುಷ್ಯನು ಪಾಪ ಮಾಡುವಾಗ, ನೀನು ಸಮಸ್ತ ಸಭೆಯ
೨೩ ಮೇಲೆ ಕೋಪಿಸುತ್ತೀಯೋ! ಆಗ ಕರ್ತನು ಮೋಶೆಯು ಸಂಗ
೨೪ ತ ಮಾತಾಡಿ, ಹೇಳ್ದೇನಂದರೆ—ನೀನು ಸಭೆಯ ಸುಗಡ ಕೋ
ರಹನ, ದಾಥಾನನ, ಅಬೀರಮನ ನಿವಾಸದ ಸುತ್ತಲಿಂದ ಮೇಲೆ
ಹೋಗಿರಿ, ಎಂದು ಹೇಳು.

೨೫ ಮತ್ತು ಮೋಶೆ ಎದ್ದು, ದಾಥಾನನ ಅಬೀರಮನ ಬಳಿಗೆ
ಹೋದನು; ಇಸ್ರಯೇಲ್ಯರ ಹಿರಿಯರು ಅವನ ಹಿಂದೆ ಹೋದ
೨೬ ರು. ಅವರು ಸಭೆಯ ಸಂಗಡ ಹೇಳ್ದೇನಂದರೆ—ನೀವು ಈ ದು
ಷ್ಟ ಮನುಷ್ಯರ ಗುಡಾರಗಳ ಬಳಿಯಿಂದ ತೊಲಗಿ ಹೋಗಿರಿ.
ಮತ್ತು ನೀವು ಅವರ ಎಲ್ಲಾ ಪಾಪಗಳಲ್ಲಿ ನಾಶನವಾದ ಹಾಗೆ ಅ
೨೭ ವರಿಗಂಟಾದವುಗಳನ್ನು ಮುಟ್ಟದೆ ಇರ್ರಿ; ಆಗಲವರು ಕೋರಹ
ನ, ದಾಥಾನನ, ಅಬೀರಮನ ನಿವಾಸದ ಸುತ್ತಲಿಂದ ಮೇಲೆ ಹೋ
ದರು; ಮತ್ತು ದಾಥಾನನೂ, ಅಬೀರಮನೂ, ತಮ್ಮ ಹೆಂಡರೂ
ಮಕ್ಕಳೂ, ಚಿಕ್ಕವರೂ ಹೊರಟು ತಮ್ಮ ಗುಡಾರಗಳ ಬಾಗಲಿ
೨೮ ನಲ್ಲಿ ನಿಂತು ಕೂಂದರು. ಮತ್ತು ಮೋಶೆ ಹೇಳ್ದದ್ದು—ಈ ಕಾ
ರ್ಯಗಳನ್ನೆಲ್ಲಾ ಮಾಡಲಿಕ್ಕೆ ಕರ್ತನು ನನ್ನನ್ನು ಕಳುಹಿಸಿ
ದ್ದಾನೆ; ಅವುಗಳು ನನ್ನ ಹೃದಯದಿಂದ ಉಂಟಾದವುಗಳಲ್ಲವೆಂ
೨೯ ದು, ನೀವು ಇದರಿಂದ ತಿಳಿದು ಕೊಳ್ಳಬಹುದು. ಏನಂದರೆ—ಇವರು
ಎಲ್ಲಾ ಮನುಷ್ಯರ ಹಾಗೆ ಸತ್ತರೆ, ಎಲ್ಲಾ ಮನುಷ್ಯರ ಶಿಕ್ಷೆ ಇ
೩೦ ವರಿಗೂ ಪ್ರಾಪ್ತಿಸಿದರೆ, ಕರ್ತನು ನನ್ನನ್ನು ಕಳುಹಿಸಲಿಲ್ಲ. ಅ
ದರೆ ಕರ್ತನು ಹೊಸದ್ದನ್ನು ಮಾಡಿ, ಭೂಮಿ ತನ್ನ ಬಾಯಿಯ
ನ್ನು ತೆರೆದು, ಇವರನ್ನೂ, ಇವರಿಗುಂಟಾಗಿದ್ದವುಗಳನ್ನೂ
ನುಂಗಿದರೆ, ಅವರು ಜೀವಿತರಾಗಿ ಪಾತಾಳಕ್ಕೆ ಇಳಿಯುವವರಾದ
ರೆ, ಈ ಮನುಷ್ಯರು ಕರ್ತನನ್ನು ಉದಾಸೀನ ಮಾಡಿದ್ದಾರೆಂ
೩೧ ದು ನೀವು ತಿಳಿದು ಕೊಳ್ಳಬಹುದು. ಅವನು ಇವುಗಳನ್ನೆಲ್ಲಾ ಮಾತಾ
೩೨ ಡಿ, ಮುಗಿಸಿದಾಗಲೇ, ಅದದ್ದೇನಂದರೆ, ಅವರ ಕಳಗಿರುವ ನೆಲವು
ಬಿಳ್ಳಿ, ಭೂಮಿ ತನ್ನ ಬಾಯಿಯನ್ನು ತೆರೆದು, ಅವರನ್ನೂ ಅವರ
ಮನೆಗಳನ್ನೂ, ಕೋರಹನ ಕಡೆಯ ಸಕಲ ಮನುಷ್ಯರನ್ನೂ,
ಅವರ ಸಮಸ್ತ ಸ್ಥಿತಿಯನ್ನೂ ನುಂಗಿತು. ಅವರು ತಮಗಂಟಾ
೩೩ ದ ಎಲ್ಲಾದರ ಸಂಗಡ ಜೀವಿತರಾಗಿ ಪಾತಾಳಕ್ಕೆ ಇಳಿದರು; ಮ
ತ್ತು ಭೂಮಿ ಅವರ ಮೇಲೆ ಮುಚ್ಚಿ ಕೊಂಡಿತು; ಅವರು ಸಭೆಯ
ಮಧ್ಯದೊಳಗಿಂದ ನಾಶವಾದರು. ಆಗ ಅವರ ಸುತ್ತಲಿದ್ದ ಇ
೩೪ ಸ್ರಯೇಲ್ಯರೆಲ್ಲರು ಅವರ ಶಬ್ದಕ್ಕೆ ಓಡಿ ಹೋದರು; ಯಾಕಂ
ದರೆ ಭೂಮಿಯು ನಮ್ಮನ್ನು ಸಹ ನುಂಗಿ ಬಿಟ್ಟೀತೆಂದು, ಹೇಳಿದ
೩೫ ರು. ಮತ್ತು ಬೆಂಕಿ ಕರ್ತನ ಬಳಿಯಿಂದ ಹೊರಟು, ಧೂಪವ
ನ್ನು ಅರ್ಪಿಸಿದ ಆ ಇನ್ನೂರ ಐವತ್ತು ಮಂದಿಯನ್ನು ದಹಿಸಿ
ಬಿಟ್ಟಿತು.

೩೬ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳ್ದೇ
೩೭ ನಂದರೆ—ಯಾಜಕನಾದ ಆಕೋನನ ಮಗನಾದ ಎಲೆಯಾಜ
ನಿಗೆ ಹೇಳ ಬೇಕಾದದ್ದೇನಂದರೆ—ಅವನು ಧೂಪಾರ್ತಿಗಳ
ನ್ನು, ಪರಿಶುದ್ಧವಾಗಿರುವದರಿಂದ, ದಹನದ ಮಧ್ಯದಿಂದ ಎತ್ತ
ಬೇಕು; ಆ ಬೆಂಕಿಯನ್ನು ನೀನು ದೂರಕ್ಕೆ ಹೆಚ್ಚು. ಅವು ತಮ್ಮ
೩೮ ಪ್ರಾಣಕ್ಕೆ ಪಾಪ ಮಾಡಿದ ಆ ಮನುಷ್ಯರ ಧೂಪಾರ್ತಿ
ಗಳನ್ನು ಬಿರಿಬೀಳ ಮುಚ್ಚ ತಕ್ಕ ಅಗಲವಾದ ತಗಡುಗಳಾಗಿ
ಮಾಡ ಬೇಕು; ಯಾಕಂದರೆ ಅವುಗಳನ್ನು ಕರ್ತನ ಸಮು
ಖಕ್ಕೆ ಅರ್ಪಿಸಿದ ಕಾರಣ, ಅವು ಪರಿಶುದ್ಧವಾದವು; ಮತ್ತು ಇ
೩೯ ಸ್ರಯೇಲ್ ಮಕ್ಕಳಿಗೆ ಅವು ಗುರುತಿಗಾಗಿರ ಬೇಕು. ಆಗ ಯಾ
ಜಕನಾದ ಎಲೆಯಾಜರನು ಸುಟ್ಟು ಹೋದವರು ತಂದ ಹಿತ್ತಾಳೆ
ಯ ಧೂಪಾರ್ತಿಗಳನ್ನು ತಕ್ಕೊಂಡು, ಬಲಿಪೀಠಕ್ಕೆ ಮುಚ್ಚು
ವದಕ್ಕಾಗಿ ಅವುಗಳನ್ನು ತಗಡುಗಳಾಗಿ ಮಾಡಿದನು. ಆಕೋ
ನನ ಬೀಜವಲ್ಲದ ಅನ್ಯನು ಕರ್ತನ ಸಮುಖಕ್ಕೆ ಧೂಪವರ್ಪಿ
ಸುವದಕ್ಕೆ ಸಮೀಪಿಸದ ಹಾಗೆಯೂ, ಕೋರಹನೂ ಅವನ ಸ
ಮೂಹವೂ ಇದ್ದ ಪ್ರಕಾರ ಇರದ ಹಾಗೆಯೂ, ಕರ್ತನು ಮೋ
ಶೆಯಿಂದ ಹೇಳ್ಳಿಸಿದ ಪ್ರಕಾರ ಇಸ್ರಯೇಲ್ ಮಕ್ಕಳಿಗೆ ಇದೇ ಜ್ಞಾ
ಪಕ.

೪೦ ಆದರೆ ಮರು ದಿವಸದಲ್ಲಿ ಇಸ್ರಯೇಲ್ ಮಕ್ಕಳ ಸಭೆಯೆಲ್ಲಾ
ಮೋಶೆಯ ಮೇಲೆಯೂ ಆಕೋನನ ಮೇಲೆಯೂ ಗುಣಾ ಗುಟ್ಟಿ,
೪೧ ನೀವು ಕರ್ತನ ಜನರನ್ನು ಕೊಂದು ಹಾಕಿದ್ದೀರಿ, ಅಂದರು. ಮ





ತ್ತು ಸಭೆಯು ಮೋಶೆಗೂ ಆಕೋನನಿಗೂ ವಿರೋಧವಾಗಿ ಕೂ
ಡಿ ಕೊಂಡಾಗ, ಅದದ್ದೇನಂದರೆ, ಅವರು ಅಚಾರದ ಗುಡಾರಕ್ಕೆ
ತಿರುಗಿದಾಗ, ಅಗೋ, ಮೇಘವು ಅದನ್ನು ಮುಚ್ಚಿ, ಕರ್ತನ
೪೩ ಘನವು ಕಾಣ ಬಂತು. ಮತ್ತು ಮೋಶೆಯೂ ಆಕೋನನೂ
೪೪ ಸಭೆಯ ಗುಡಾರದ ಮುಂದೆ ಬಂದರು. ಆಗ ಕರ್ತನು ಮೋ
೪೫ ಶೆಯ ಸಂಗಡ ಮಾತಾಡಿ, ನೀವು ಈ ಸಭೆಯ ಮಧ್ಯದಲ್ಲಿಂದ
ಎದ್ದು ಬನ್ನಿರಿ; ನಾನು ಅವರನ್ನು ಕ್ಷಣದಲ್ಲಿ ತೀರಿಸುತ್ತೇನೆ, ಅಂ
ದನು. ಆಗಲವರು ಮೋಶೆ ಕೆಳಗಾಗಿ ಬಿದ್ದರು.

೪೬ ಮತ್ತು ಮೋಶೆ ಆಕೋನನಿಗೆ ಹೇಳ್ದದ್ದೇನಂದರೆ—ಧೂಪಾ
ರ್ತಿಯನ್ನು ತಕ್ಕೊಂಡು, ಅದರ ಮೇಲೆ ಬಲಿಪೀಠದ ಮೇಲಿನಿಂ
ದ ಬೆಂಕಿಯನ್ನು ಇಟ್ಟು, ಧೂಪವನ್ನು ಹಾಕಿ, ಶೀಘ್ರವಾಗಿ ಸಭೆ
ಯೊಳಗೆ ಹೋಗಿ, ಅವರಿಗೋಸ್ಕರ ಪಾಪ ಮುಚ್ಚು; ಯಾಕಂ
ದರೆ ಕರ್ತನ ಸಮುಖದಿಂದ ಕೋಪವು ಹೊರಟಿತು; ವ್ಯಾಧಿ ಆ
೪೭ ರಂಭವಾಯಿತು. ಆಗ ಆಕೋನನು ಮೋಶೆ ಹೇಳಿದ ಹಾಗೆ ತ
ಕ್ಕೊಂಡು, ಸಭೆಯ ಮಧ್ಯಕ್ಕೆ ಓಡಿ ಬಂದನು; ಆಗ, ಇಗೋ,
ವ್ಯಾಧಿ ಜನರೊಳಗೆ ಆರಂಭವಾಗಿತ್ತು; ಅವನು ಧೂಪವನ್ನು ಇ
೪೮ ಟ್ಟು, ಜನರಿಗೋಸ್ಕರ ಪಾಪ ಮುಚ್ಚಿದನು. ಅವನು ಸತ್ತವರಿ
ಗೂ ಜೀವವುಳ್ಳವರಿಗೂ ಮಧ್ಯವಾಗಿ ನಿಂತು ಕೊಂಡದರಿಂದ
೪೯ ವ್ಯಾಧಿಗೆ ಅಡ್ಡಿ ಆಯಿತು. ಆದರೆ ಕೋರಹನ ನಿಮಿತ್ತ ಸತ್ತು
ಹೋದವರು ಹೊರತಾಗಿ, ವ್ಯಾಧಿಯಲ್ಲಿ ಸತ್ತವರು ಹದಿನಾ
೫೦ ಲ್ಕು ಸಾವಿರದ ಏಳು ನೂರು ಮಂದಿಯಾಗಿದ್ದರು. ಆಗ ಆಕೋ
ನನು ಮೋಶೆಯ ಬಳಿಗೆ, ಸಭೆಯ ಗುಡಾರದ ಬಾಗಲಿಗೆ, ತಿರು
ಗಿದನು. ಮತ್ತು ವ್ಯಾಧಿ ನಿಂತು ಹೋಗಿತ್ತು.

## ೧೭. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳ್ದೇ
೨ ನಂದರೆ—ನೀನು ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವ
ರ ಕೈಯಿಂದ ಅವರ ತಂದೇ ಮನೆಗಳ ಪ್ರಕಾರ, ಅವರ ಪ್ರಭುಗಳೆ
ಲ್ಲರ ಕಡೆಯಿಂದ ಕುಲ ಕುಲಕ್ಕೆ ಒಂದೊಂದು ಕೋಲಾಗಿ ಹನ್ನೆ
ರಡು ಕೋಲುಗಳನ್ನು ತಕ್ಕೊಂಡು, ಒಬ್ಬೊಬ್ಬನ ಹೆಸರನ್ನು
೩ ಅವನವನ ಕೋಲಿನ ಮೇಲೆ ಬರೆ. ಮತ್ತು ಆಕೋನನ ಹೆಸರ
ನ್ನು ಲೇವಿಯ ಕೋಲಿನ ಮೇಲೆ ಬರೆಯ ಬೇಕು. ಯಾಕಂದರೆ
ಅವರ ತಂದೇ ಮನೆಗಳ ಮುಖ್ಯಸ್ಥನಿಗೆ ಒಂದು ಕೋಲು ಇರ ಬೇ
೪ ಕು. ಅವುಗಳನ್ನು ಸಭೆಯ ಗುಡಾರದಲ್ಲಿ ನಾನು ನಿಮ್ಮ ಸಂಗಡ
೫ ಕೂಡಿ ಕೊಳ್ಳುವ ಸಾಕ್ಷಿಯ ಮುಂದೆ ಇರ ಬೇಕು. ಆಗ ಏನಾ
ಗುವದಂದರೆ—ನಾನು ಯಾವನನ್ನು ಆದು ಕೊಳ್ಳುತ್ತೇನೋ,
ಅವನ ಕೋಲು ಚಿಗುರುವದು; ಹೀಗೆ ನಾನು ಇಸ್ರಯೇಲ್ ಮ
ಕ್ಕಳು ನಿಮ್ಮ ಮೇಲೆ ಆರುವ ಗುಣುಗುಟ್ಟನ್ನು ನನ್ನ ಕಡೆಯಿಂ
ದ ನಿಲ್ಲಿಸಿ ಬಿಡುವೆನು.

೬ ಹಾಗೆಯೇ ಮೋಶೆ ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ
ದನು; ಅವರ ಪ್ರಭುಗಳೆಲ್ಲರು ತಮ್ಮ ತಂದೇ ಮನೆಗಳ ಪ್ರಕಾರ ಒ
ಬ್ಬೊಬ್ಬ ಪ್ರಭುವಿಗೋಸ್ಕರ ಒಂದೊಂದು ಕೋಲಿನ ಪ್ರಕಾರ
ಹನ್ನೆರಡು ಕೋಲುಗಳನ್ನು ಅವನಿಗೆ ಕೊಟ್ಟರು, ಆಕೋನನ
೭ ಕೋಲು ಸಹ ಅವರ ಕೋಲುಗಳ ಮಧ್ಯದಲ್ಲಿತ್ತು. ಆಗ ಮೋ
ಶೆ ಆ ಕೋಲುಗಳನ್ನು ಸಾಕ್ಷಿಯ ಗುಡಾರದೊಳಗೆ ಕರ್ತನ ಸ
ಮುಖದಲ್ಲಿ ಇಟ್ಟನು.

೮ ಮರು ದಿವಸದಲ್ಲಿ ಆದದ್ದೇನಂದರೆ—ಮೋಶೆ ಸಾಕ್ಷಿಯ ಗು
ಡಾರದೊಳಗೆ ಪ್ರವೇಶಿಸುವಾಗ, ಅಗೋ, ಶೇಖಿಯ ಮನೆಯ
ಕೋಲಾದ ಆಕೋನನ ಕೋಲು ಚಿಗಿತು, ಮೊಗ್ಗೆ ಬಿಟ್ಟು, ಹೂ
ವರಳಿ, ಬಾದಾಮಿ ಹಣ್ಣುಗಳನ್ನು ಫಲಿಸಿತು. ಆಗ ಮೋಶೆ ಎಲ್ಲಾ
ಕೋಲುಗಳನ್ನು ಕರ್ತನ ಸನ್ನಿಧಿಯಿಂದ ಇಸ್ರಯೇಲ್ ಮಕ್ಕ
ಳೆಲ್ಲರಿಗೆ ತೋರಿಸ ಹೊರಗೆ ತಂದನು; ಆಗಲವರು ನೋಡಿ, ತ
ಮ್ಮ ತಮ್ಮ ಕೋಲನ್ನು ತಕ್ಕೊಂಡರು.

೧೦ ಮತ್ತು ಕರ್ತನು ಮೋಶೆಗೆ ಹೇಳ್ದದ್ದೇನಂದರೆ—ಆಕೋನನ
ಕೋಲನ್ನು ಅವಿಧೇಯತ್ವದ ಮಕ್ಕಳಿಗೆ ಗುರುತಾಗಿ ಇಟ್ಟು
ಕೊಳ್ಳುವದಕ್ಕೆ ಸಾಕ್ಷಿಯ ಮುಂದೆ ತಿರಿಗಿ ಇರಿಸು; ಹೀಗೆ ಅವರು
ಸಾಯದ ಹಾಗೆ ಅವರು ನನ್ನ ಮುಂದೆ ಮಾಡುವ ಗುಣಾ ಗುಟ್ಟ
೧೧ ನ್ನು ನೀನು ತೀರಿಸ ಬೇಕು. ಮೋಶೆ ಹಾಗೆ ಮಾಡಿದನು; ಕರ್ತ
ನು ತನಗೆ ಆಜ್ಞಾಪಿಸಿದ ಪ್ರಕಾರ ಮಾಡಿದನು.

೧೨ ಆಗ ಇಸ್ರಯೇಲ್ ಮಕ್ಕಳು ಮೋಶೆಯ ಸಂಗಡ ಮಾತಾಡಿ,
ಹೇಳ್ದದ್ದೇನಂದರೆ—ಇಗೋ, ಸಾಯುತ್ತೇವೆ. ನಾಶವಾಗುತ್ತೇನೆ;
೧೩ ನಾವೆಲ್ಲರು ನಾಶವಾಗುತ್ತೇವೆ. ಕರ್ತನ ನಿವಾಸಕ್ಕೆ ಸಮೀಪ ಬ
ರುವವರೆಲ್ಲರು ಸಾಯುವರು; ಸಾಯುವದರಿಂದ ನಾವು ಮುಗಿ
ದು ಹೋಗ ಬೇಕೋ!

## ೧೮. ಸಂಧಿ.

೧ ಮತ್ತು ಕರ್ತನು ಆಕೋನನಿಗೆ ಹೇಳ್ದದ್ದೇನಂದರೆ—ನೀನೂ
ನಿನ್ನ ಮಕ್ಕಳೂ, ನಿನ್ನ ತಂದೆಯ ಮನೆಯೂ, ಪರಿಶುದ್ಧ ಸ್ಥಳ
ದ ಅಕ್ರಮವನ್ನು ಹೊತ್ತು ಕೊಳ್ಳ ಬೇಕು; ಮತ್ತು ನೀನು, ನಿ
ನ್ನ ಮಕ್ಕಳೂ ಸಹಿತವಾಗಿ, ನಿಮ್ಮ ಯಾಜಕತ್ವದ ಅಕ್ರಮವನ್ನು
೨ ಹೊತ್ತು ಕೊಳ್ಳ ಬೇಕು. ಮತ್ತು ನಿನ್ನ ತಂದೆಯಾದ ಲೇವಿ
ಯ ಕುಲದವರಾದ ನಿನ್ನ ಸಹೋದರರನ್ನು ಸಹ ನಿನ್ನ ಸಂಗ
ಡ ಸೇರಿಸಿಕೋ; ಯಾಕಂದರೆ ಅವರು ನಿನ್ನ ಕೂಡ ಇದ್ದು, ನಿ
೩ ನಗೆ ಸೇವೆ ಮಾಡ ಬೇಕು. ಆದರೆ ನೀನು, ನಿನ್ನ ಮಕ್ಕಳೂ ಸ
ಹಿತವಾಗಿ ಸಾಕ್ಷಿಯ ಗುಡಾರದ ಮುಂದೆ ಇರ ಬೇಕು; ಅವರು
ನಿನ್ನ ಕಾಯಿದೆಯನ್ನೂ ಗುಡಾರವೆಲ್ಲಾದರ ಕಾಯಿದೆಯನ್ನೂ
ಕಾಯ ಬೇಕು; ಪರಿಶುದ್ಧ ಸ್ಥಳದ ಸಾಮಾನುಗಳಿಗೂ, ಬಲಿಪೀಠ
ಕ್ಕೂ ಮಾತ್ರ, ಅವರೂ ನೀವೂ ಸಾಯದ ಹಾಗೆ, ಅವರು ಸ
೪ ಮೀಪ ಬರ ಬಾರದು. ಆದರೆ ಅವರು ನಿನ್ನ ಸಹಾಯಕರಾಗಿ
ದ್ದು, ಗುಡಾರದ ಎಲ್ಲಾ ಸೇವೆಗೋಸ್ಕರ ಸಭೆಯ ಗುಡಾರದ ಕಾ
ಯಿದೆಯನ್ನು ಕಾಯ ಬೇಕು; ಮತ್ತು ಅನ್ಯರು ನಿಮ್ಮ ಸಮೀಪ
೫ ಕ್ಕೆ ಬರ ಬಾರದು. ಇಸ್ರಯೇಲ್ ಮಕ್ಕಳ ಮೇಲೆ ಇನ್ನು ಕೋಪ
ಬಾರದ ಹಾಗೆ ಪರಿಶುದ್ಧ ಕಾಯಿದೆಯನ್ನೂ, ಬಲಿಪೀಠದ ಕಾಯಿ
೬ ದೆಯನ್ನೂ, ನೀವು ಕಾಯ ಬೇಕು. ಮತ್ತು, ಇಗೋ, ನಾನು
ನಿಮ್ಮ ಸಹೋದರರಾದ ಲೇವ್ಯರನ್ನು ಇಸ್ರಯೇಲ್ ಮಕ್ಕಳೊಳ
ಗಿಂದ ತಕ್ಕೊಂಡಿದ್ದೇನೆ. ಸಭೆಯ ಗುಡಾರದ ಸೇವೆಯನ್ನು
ಮಾಡುವದಕ್ಕೆ ಅವರು ಕರ್ತನಿಗೆ ಸ್ವಕೀಯರಾಗಿ ನಿಮಗೆ ಕೊ
ಡಲ್ಪಟ್ಟವರಾಗಿದ್ದಾರೆ. ಆದದರಿಂದ ನೀನು, ನಿನ್ನ ಮಕ್ಕಳೂ ಸಹಿ
೭ ತವಾಗಿ, ನಿಮ್ಮ ಯಾಜಕತ್ವವನ್ನು ಬಲಿಪೀಠದ ಸಮಸ್ತ ಕಾರ್ಯ
ಕ್ಕೋಸ್ಕರವೂ, ಪರದೆಯ ಒಳಗಿನ ನಿವಾಸಕ್ಕೋಸ್ಕರವೂ,

ಕಾದು, ಸೇವೆ ಮಾಡ ಬೇಕು; ನಿಮ್ಮ ಯಾಜಕತ್ವವನ್ನು ದಾನದ ಸೇವೆಯಾಗಿ ನಿಮಗೆ ಕೊಟ್ಟಿದ್ದೇನೆ; ಸಮೀಪಕ್ಕೆ ಬರುವ ಅನ್ಯನು ಸಾಯ ಬೇಕು.

೮ ಮತ್ತು ಕರ್ತನು ಮಾತಾಡಿ, ಆರೋನನಿಗೆ ಹೇಳಿದ್ದೇನಂದರೆ—ಇಗೋ, ನಾನು ನಿನಗೆ ನನ್ನ ಎತ್ತುವ ಅರ್ಪಣೆಗಳ ಕಾಯಿದೆಯನ್ನು ಕೊಟ್ಟಿದ್ದೇನೆ; ಇಸ್ರಯೇಲ್ ಮಕ್ಕಳು ಪರಿಶುದ್ಧ ಮಾಡುವ ಎಲ್ಲಾದರಲ್ಲಿ ನಾನು ಅವುಗಳನ್ನು ಅಭಿಷೇಕಕ್ಕೋಸ್ಕರ ನಿನಗೂ ನಿನ್ನ ಮಕ್ಕಳಿಗೂ ನಿತ್ಯಕಟ್ಟಳೆಯಾಗಿ ಕೊಟ್ಟಿದ್ದೇನೆ.
೯ ಬೆಂಕಿಗೆ ಒಳಗಾದ ಪರಿಶುದ್ಧವಾದವುಗಳಲ್ಲಿ ನಿನಗಾಗ ಬೇಕಾದವುಗಳು ಯಾವವಂದರೆ—ಅವರ ಅರ್ಪಣೆಗಳೆಲ್ಲಾ ಅವರು ನನಗೆ ತರುವ ಕಾಣಿಕೆಗಳೆಲ್ಲಾ ಪಾಪ ಬಲಿಗಳೆಲ್ಲಾ ಅಪರಾಧ ಬಲಿಗಳೆಲ್ಲಾ ಅತಿ ಪರಿಶುದ್ಧವಾದವುಗಳಾಗಿ ನಿನಗೂ ನಿನ್ನ ಮಕ್ಕಳಿಗೂ ಇರಬೇಕು. ಪರಿಶುದ್ಧ ಸ್ಥಳದಲ್ಲಿ ನೀನು ಅದನ್ನು ಉಣ್ಣಬೇಕು; ಎಲ್ಲಾ ಗಂಡಸರು ಅದನ್ನು ಉಣ್ಣಬೇಕು; ಅದು ನಿನಗೆ ಪರಿಶುದ್ಧವಾಗಿರುವದು. ನಿನ್ನದು ಇದೇ; ಅವರು ಕೊಟ್ಟ ಎತ್ತುವ ಅರ್ಪಣೆಯೂ, ಇಸ್ರಯೇಲ್ ಮಕ್ಕಳು ಅಲ್ಲಾಡಿಸುವ ಎಲ್ಲಾ ಅರ್ಪಣೆಗಳೂ, ನಾನು ಅವುಗಳನ್ನು ನಿನಗೂ ನಿನ್ನ ಕುಮಾರರಿಗೂ ನಿನ್ನ ಕುಮಾರ್ತೆಗಳಿಗೂ ನಿತ್ಯ ಕಟ್ಟಳೆಗಾಗಿ ಕೊಟ್ಟಿದ್ದೇನೆ; ನಿನ್ನ ಮನೆಯಲ್ಲಿರುವ ಪವಿತ್ರರೆಲ್ಲರು ಅದನ್ನು ಉಣ್ಣಬಹುದು.
೧೨ ಎಣ್ಣೆಯ ಉತ್ತಮವಾದದ್ದೆಲ್ಲವೂ ದ್ರಾಕ್ಷೇ ರಸ ಧಾನ್ಯಗಳ ಉತ್ತಮವಾದದ್ದೆಲ್ಲವೂ, ಅವರು ಕರ್ತನಿಗೆ ಕೊಡುವ ಅವುಗಳ
೧೩ ಪ್ರಥಮ ಫಲಗಳನ್ನೂ, ನಿತಿಗೆ ಕೊಟ್ಟಿದ್ದೇನೆ. ಅವರು ಕರ್ತನಿಗೆ ತರುವಂಥ ಅವರ ದೇಶದಲ್ಲಿರುವ ಎಲ್ಲವುಗಳ ಪ್ರಥಮ ಫಲಗಳು ನಿನ್ನವಾಗಿರುವವು. ನಿನ್ನ ಮನೆಯಲ್ಲಿರುವ ಪವಿತ್ರರೆಲ್ಲರು ಅದನ್ನು ಉಣ್ಣಬಹುದು.
೧೪ ಇಸ್ರಯೇಲ್ಯರಲ್ಲಿ ಆಣೆಯ ಸಂಗತಿ ಒಪ್ಪಿಸಿದ್ದೆಲ್ಲಾ ನಿನ್ನದಾಗಿರಬೇಕು. ಮನುಷ್ಯರಲ್ಲಾಗಲಿ, ದನಗಳಲ್ಲಾಗಲಿ, ಕರ್ತನಿಗೆ ತರುವ ಎಲ್ಲಾ ಮಾಂಸದಲ್ಲಿ ಚೊಚ್ಚಲಾದದ್ದೆಲ್ಲಾ ನಿನ್ನದಾಗಿರ ಬೇಕು; ಆದರೆ ಮನುಷ್ಯನ ಚೊಚ್ಚಲನೂ, ಅಪವಿತ್ರವಾದ ಮೃಗಗಳ ಚೊಚ್ಚಲನೂ ಸಹ ನೀನು
೧೬ ಬಿಡಿಸಿ ಕೊಳ್ಳ ಬೇಕು. ಮತ್ತು ಬಿಡಿಸ ತಕ್ಕವುಗಳನ್ನು ಒಂದು ತಿಂಗಳಿನ ಪ್ರಾಯದಿಂದ ಇಪ್ಪತ್ತು ಗೇರಗಳ ಪ್ರಕಾರವಾದ ಪರಿಶುದ್ಧ ಶೆಕಲಿನ ಮೇರೆಗೆ ನಿನ್ನ ಎಣಿಕೆಯಲ್ಲಿ ಐದು ಶೆಕೆಲುಗಳ
೧೭ ಬೆಳ್ಳಿಯಿಂದ ಬಿಡಿಸಿ ಕೊಳ್ಳ ಬೇಕು. ಆದರೆ ಪಶುವಿನ ಚೊಚ್ಚಲನಾದರೂ, ಕುರಿಯ ಚೊಚ್ಚಲನಾದರೂ, ಮೇಕೆಯ ಚೊಚ್ಚಲನಾದರೂ, ನೀನು ಬಿಡಿಸಿ ಕೊಳ್ಳ ಬೇತ; ಅವು ಪರಿಶುದ್ಧವಾಗಿವೆ; ಅವುಗಳ ರಕ್ತವನ್ನು ಬಲಿಪೀಠದ ಮೇಲೆ ಚೆಲ್ಲ ಬೇಕು; ಅವುಗಳ ಕೊಬ್ಬನ್ನು ಕರ್ತನಿಗೆ ದಹನವಾಗಿ ಸುವಾಸ
೧೮ ನೆಗಾಗಿ ಸುಡ ಬೇಕು. ಮತ್ತು ಎತ್ತುವ ಬಲಿಯ ಎದೆಯೂ, ಬಲ ಮುಂದೊಡೆಯೂ, ನಿನ್ನವಾಗಿರುವ ಪ್ರಕಾರ, ಅವುಗಳ ಮಾಂ
೧೯ ಸವು ನಿನ್ನದಾಗಿರ ಬೇಕು. ಇಸ್ರಯೇಲ್ ಮಕ್ಕಳು ಕರ್ತನಿಗೆ ಎತ್ತುವ ಪರಿಶುದ್ಧವಾದ ಎತ್ತುವ ಅರ್ಪಣೆಗಳನ್ನೆಲ್ಲಾ ನಿನಗೂ, ನಿನ್ನ ಕುಮಾರರಿಗೂ, ನಿನ್ನ ಕುಮಾರ್ತೆಗಳಿಗೂ ನಿತ್ಯ ಕಟ್ಟಳೆಗಾಗಿ ಕೊಟ್ಟಿದ್ದೇನೆ; ಇದು ಕರ್ತನ ಮುಂದೆ ನಿನಗೂ, ನಿನ್ನ ಸಂಗಡ ಇರುವ ನಿನ್ನ ಬೀಜಕ್ಕೂ, ನಿತ್ಯವಾದ ಉಪ್ಪಿನ ಬರಂಬಡಿಕೆಯಾಗಿರ ಬೇಕು.

೨೦ ಮತ್ತು ಕರ್ತನು ಮಾತಾಡಿ—ಆರೋನನಿಗೆ ಹೇಳಿದ್ದೇನಂದರೆ ನೀನು ಅವರ ದೇಶದಲ್ಲಿ ಸ್ವತಂತ್ರಿಸಿ ಕೊಳ್ಳ ಬೇಡ; ನಿನಗೆ ಅವರ ಮಧ್ಯದಲ್ಲಿ ಪಾಲು ಇರ ಬಾರದು; ನಾನು ಇಸ್ರಯೇಲ್ ಮಕ್ಕಳ ಮಧ್ಯದಲ್ಲಿ ನಿನ್ನ ಪಾಲೂ ನಿನ್ನ ಸ್ವಾಸ್ತ್ಯವೂ ಆಗಿದ್ದೆನೆ.
೨೧ ಮತ್ತು, ಇಗೋ, ನಾನು ಲೇವಿಯ ಮಕ್ಕಳಿಗೆ ಅವರು ಸಭೆಯ ಗುಡಾರದ ಸೇವೆಯನ್ನು ಮಾಡುವದರಿಂದ, ಅವರ ಸೇವೆಗೋಸ್ಕರ ಇಸ್ರಯೇಲ್ಯರಲ್ಲಿ ಹತ್ತನೇದನ್ನೆಲ್ಲಾ ಸ್ವಾಸ್ತ್ಯಕ್ಕಾಗಿ
೨೨ ಕೊಟ್ಟಿದ್ದೇನೆ. ಮತ್ತು ಇಸ್ರಯೇಲ್ ಮಕ್ಕಳು ಪಾಪವನ್ನು ಹೊತ್ತು ಕೊಂಡು, ಸಾಯದ ಹಾಗೆ, ಇನ್ನು ಮೇಲೆ ಸಭೆಯ ಗುಡಾರ
೨೩ ಕ್ಕೆ ಸಮೀಪ ಬರ ಬಾರದು. ಅದರೆ ಲೇವ್ಯರೇ ಸಭೆಯ ಗುಡಾರದ ಸೇವೆಯನ್ನು ಮಾಡ ಬೇಕು; ಅವರು ಅವರ ಅಕ್ರಮವನ್ನು ಹೊತ್ತು ಕೊಳ್ಳ ಬೇಕು; ಇದು ನಿಮ್ಮ ಸಂತತಿಗಳಿಗೆ ನಿತ್ಯ ಕಟ್ಟಳೆಯಾಗಿದೆ—ಇಸ್ರಯೇಲ್ ಮಕ್ಕಳ ಮಧ್ಯದಲ್ಲಿ ಅವರು ಸ್ವಾಸ್ತ್ಯವನ್ನು ಸ್ವತಂತ್ರಿಸಿ ಕೊಳ್ಳ ಬಾರದು.
೨೪ ಯಾಕಂದರೆ ಇಸ್ರಯೇಲ್ ಮಕ್ಕಳು ಕರ್ತನಿಗೆ ಎತ್ತಿ, ಅರ್ಪಿಸುವ ಕಾಣಿಕೆಯಾದ ಹತ್ತನೇ ಪಾಲನ್ನು ಲೇವ್ಯರಿಗೆ ಸ್ವಾಸ್ತ್ಯಕ್ಕಾಗಿ ಕೊಟ್ಟಿದ್ದೇನೆ; ಆದಕಾರಣ ಅವರು ಇಸ್ರಯೇಲ್ ಮಕ್ಕಳ ಮಧ್ಯದಲ್ಲಿ ಸ್ವಾಸ್ತ್ಯವನ್ನು ಸ್ವತಂತ್ರಿಸಿ ಕೊಳ್ಳ ಬಾರದೆಂದು. ಅವರಿಗೆ ಹೇಳಿದ್ದೇನೆ.

೨೫ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳಿದ್ದೇ
೨೬ ನಂದರೆ—ನೀನು ಲೇವ್ಯರ ಸಂಗಡ ಮಾತಾಡಿ, ಅವರಿಗೆ ಹೇಳ ಬೇಕಾದದ್ದೇನಂದರೆ—ನೀವು ಇಸ್ರಯೇಲ್ ಮಕ್ಕಳ ಕಡೆಯಿಂದ ನಾನು ಅವರ ಕಡೆಯಿಂದ ನಿಮಗೆ ಸ್ವಾಸ್ತ್ಯಕ್ಕಾಗಿ ಕೊಟ್ಟ ಹತ್ತನೇದನ್ನು ತಕ್ಕೊಂಡರೆ, ನೀವು ಅದರಲ್ಲಿ ಕರ್ತನಿಗೆ ಹತ್ತನೇದರಿಂದ ಹತ್ತನೇದನ್ನು ಕಾಣಿಕೆಯಾಗಿ ಅರ್ಪಿಸ ಬೇಕು.
೨೭ ಮತ್ತು ಇದು ನಿಮಗೆ ಕೂಡಿದ ಧಾನ್ಯದ ಹಾಗೆಯೂ, ದ್ರಾಕ್ಷೇ ಆಲೆಯ ಪರಿಪೂರ್ಣತೆಯ ಹಾಗೆಯೂ, ನಿಮ್ಮ ಕಾಣಿಕೆಯಾಗಿ
೨۸ ಎಣಿಸಲ್ಪಡುವದು. ಈ ಪ್ರಕಾರ ನೀವು ಸಹ ಇಸ್ರಯೇಲ್ ಮಕ್ಕಳ ಕಡೆಯಿಂದ ತಕ್ಕೊಳ್ಳುವ ನಿಮ್ಮ ಎಲ್ಲಾ ಹತ್ತನೆಯವುಗಳಿಂದ ಕರ್ತನಿಗೆ ಎತ್ತುವ ಕಾಣಿಕೆಯನ್ನು ಅರ್ಪಿಸ ಬೇಕು; ಮತ್ತು ನೀವು ಅದರಿಂದ ಕರ್ತನಿಗೆ ಎತ್ತುವ ಅರ್ಪಣೆಯನ್ನು
೨۹ ಯಾಜಕನಾದ ಆರೋನನಿಗೆ ಕೊಡ ಬೇಕು. ನಿಮ್ಮ ಎಲ್ಲಾ ಕಾಣಿಕೆಗಳಲ್ಲಿ ಅದರ ಒಂದೊಂದರ ಉತ್ತಮವಾದದ್ದನ್ನು ಅದರೊಳಗಿನ ಪರಿಶುದ್ಧವಾದದ್ದನ್ನು ಕರ್ತನಿಗೆ ಎತ್ತುವ ಅರ್ಪಣೆಯಾಗಿ
೩೦ ಅರ್ಪಿಸ ಬೇಕು. ಮತ್ತು ನೀನು ಅವರಿಗೆ ಹೇಳ ಬೇಕಾದದ್ದೇನಂದರೆ—ನೀವು ಆದರಲ್ಲಿ ಉತ್ತಮವಾದದ್ದನ್ನು ಎತ್ತಿದಾಗ, ಅದು ಲೇವ್ಯರಿಗೆ ಕೂಡಿದ ಆದಾಯದ ಹಾಗೆಯೂ, ದ್ರಾಕ್ಷೇ ಆಲೆಯ ಆದಾಯದ ಹಾಗೆಯೂ, ಎಣಿಸಲ್ಪಡುವದು.
೩೧ ಮತ್ತು ನೀವೂ ನಿಮ್ಮ ಮನೆಯವರೂ ಅದನ್ನು ಸಕಲ ಸ್ಥಳಗಳಲ್ಲಿ ಉಣ್ಣ ಬಹುದು. ಯಾಕಂದರೆ ಇದು ಸಭೆಯ ಗುಡಾರದಲ್ಲಿ ನೀವು
೩೨ ಮಾಡುವ ಸೇವೆಗೋಸ್ಕರ ನಿಮಗೆ ಸಂಬಳವಾಗಿದೆ. ಆದಕಾರಣ ನೀವು ಅದರಲ್ಲಿಂದ ಅದರ ಉತ್ತಮವಾದದ್ದನ್ನು ಎತ್ತಿ, ಅರ್ಪಿಸಿದಾಗ, ನೀವು ಅದರ ದೆಸೆಯಿಂದ ಪಾಪವನ್ನು ಹೊತ್ತು ಕೊಳ್ಳವದಿಲ್ಲ; ಇಸ್ರಯೇಲ್ ಮಕ್ಕಳ ಪರಿಶುದ್ಧವಾದವುಗಳನ್ನು ಅಪವಿತ್ರ ಮಾಡದೆ, ಸಾಯುವದಿಲ್ಲ.





## ೧೯. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡಲೂ, ಆರೋನನ ಸಂ
೨ ಗಡಲೂ, ಮಾತಾಡಿ ಹೇಳಿದ್ದೇನಂದರೆ—ಕರ್ತನು ಅಜ್ಞಾಪಿಸಿದ ನ್ಯಾಯಪ್ರಮಾಣದ ಕಟ್ಟಳೆ ಏನಂದರೆ—ನೀನು ಇಸ್ರಯೇಲ್ ಮಕ್ಕಳ ಸಂಗಡ, ಅವರು ನಿನಗೆ ಊಣತೆ ಇಲ್ಲದಂಥ, ನೊಗವನ್ನು ಎಂದೂ ಹೊರದಂಥ, ಪೂರ್ಣಾಂಗವಾದ, ಕೆಂಪಾದ ಹಸು
3 ವನ್ನು ತಂದು ಕೊಡುವ ಹಾಗೆ, ಮಾತಾಡು. ನೀವು ಅದನ್ನು ಯಾಜಕನಾದ ಎಲೆಯಾಜರನಿಗೆ ಕೊಡ ಬೇಕು; ಅವನು ಅದನ್ನು ದಂಡಿನ ಹೊರಗೆ ತಕ್ಕೊಂಡು ಹೋಗಿ, ತನ್ನ ಮುಂದೆ ಕೊ
೪ ಯಿಸ ಬೇಕು. ಮತ್ತು ಯಾಜಕನಾದ ಎಲೆಯಾಜರನು ತನ್ನ ಬೆರಳಿನಿಂದ ಅದರ ರಕ್ತದಲ್ಲಿ ಸ್ವಲ್ಪ ಬೆಗೆದು ಕೊಂಡು, ಅದನ್ನು ಏಳು ಸಾರಿ ಸಭೆಯ ಗುಡಾರದ ಮುಂಭಾಗಕ್ಕೆ ಸರಿಯಾಗಿ ಚಿ
೫ ಮಿಕಿಸ ಬೇಕು. ಮತ್ತು ಹಸುವನ್ನು ಅವನ ಕಣ್ಣುಗಳಿಗೆದುರಾಗಿ ಸುಡಿಸ ಬೇಕು; ಅದರ ತೊಗಲನ್ನೂ, ಮಾಂಸವನ್ನೂ, ರಕ್ತವ
೬ ನ್ನೂ, ಅದರ ಸಗಣಿ ಕೂಡ ಸುಡ ಬೇಕು. ಮತ್ತು ಯಾಜಕನು ದೇವದಾರು ಕಟ್ಟಿಗೆಯನ್ನೂ, ಇಸ್ಸೋಪನನ್ನೂ, ಲಾಕಿ ಬಣ್ಣವನ್ನೂ, ತಕ್ಕೊಂಡು, ಹಸುವಿನ ದಹನದಲ್ಲಿ ಹಾಕ ಬೇಕು.
೭ ಆಗ ಯಾಜಕನು ತನ್ನ ವಸ್ತ್ರಗಳನ್ನು ಒಗೆದು, ತನ್ನ ಮಾಂಸವನ್ನು ನೀರಿನಲ್ಲಿ ತೊಳೆಯ ಬೇಕು; ಆ ಮೇಲೆ ದಂಡಿನೊಳಗೆ ಬರ ಬೇಕು; ಮತ್ತು ಯಾಜಕನು ಸಾಯಂಕಾಲದ ಪರ್ಯಂತರ
೮ ಅಪವಿತ್ರನಾಗಿರುವನು. ಮತ್ತು ಅದನ್ನು ಸುಡುವವನು ತನ್ನ ವಸ್ತ್ರಗಳನ್ನು ನೀರಿನಲ್ಲಿ ಒಗೆದು, ತನ್ನ ಮಾಂಸವನ್ನು ನೀರಿನಲ್ಲಿ ತೊಳೆದು, ಸಾಯಂಕಾಲದ ಪರ್ಯಂತರ ಅಪವಿತ್ರನಾಗಿರುವನು.
೯ ಮತ್ತು ಪವಿತ್ರನಾದವನೊಬ್ಬನು ಹಸುವಿನ ಬೂದಿಯನ್ನು ಕೂಡಿಸಿ ಕೊಂಡು, ದಂಡಿನ ಹೊರಗೆ ಪವಿತ್ರವಾದ ಸ್ಥಳದಲ್ಲಿ ಹಾಕ ಬೇಕು; ಅದು ಅಲ್ಲಿ ಇಸ್ರಯೇಲ್ ಮಕ್ಕಳ ಸಭೆಗೆ ಅಪವಿತ್ರತ್ವದ ನೀ
೧೦ ರಾಗಿ ಇಡಲ್ಪಡ ಬೇಕು; ಇದು ಪಾಪ ಕಳೆಯ ತಕ್ಕದ್ದು. ಮತ್ತು ಹಸುವಿನ ಬೂದಿಯನ್ನು ಕೂಡಿಸಿದವನು ತನ್ನ ವಸ್ತ್ರಗಳನ್ನು ಒಗೆದು, ಸಾಯಂಕಾಲದ ಪರ್ಯಂತರ ಅಪವಿತ್ರನಾಗಿರ ಬೇಕು; ಇಸ್ರಯೇಲ್ ಮಕ್ಕಳಿಗೂ ಅವರ ಮಧ್ಯದಲ್ಲಿ ವಾಸಿಸುವ ಪರದೇಶಿಗೂ, ಇದು ನಿತ್ಯ ಕಟ್ಟಳೆಯಾಗಿರ ಬೇಕು.

೧೧ ಯಾವ ಮನುಷ್ಯನ ಹೆಣವನ್ನೂ ಮುಟ್ಟಿದವನು ಏಳು ದಿವ
೧೨ ಸ ಅಪವಿತ್ರನಾಗಿರ ಬೇಕು. ಅವನು ಇದರಿಂದ ಮೂರನೇ ದಿವಸದಲ್ಲಿ ತನ್ನ ಪಾಪ ಕಳೆ ಕೊಂಡು, ಏಳನೇ ದಿವಸದಲ್ಲಿ ಪವಿತ್ರನಾಗ ಬೇಕು; ಆದರೆ ಅವನು ಮೂರನೇ ದಿವಸದಲ್ಲಿ ತನ್ನ ಪಾಪ
೧3 ಕಳೆ ಕೊಳ್ಳದಿದ್ದರೆ, ಏಳನೇ ದಿವಸದಲ್ಲಿ ಪವಿತ್ರನಾಗಲಾರನು. ಸತ್ತ ಮನುಷ್ಯನ ಹೆಣವನ್ನು ಮುಟ್ಟಿ, ಪವಿತ್ರ ಮಾಡಿ ಕೊಳ್ಳದವನ್ಯಾವನಾದರೂ ಕರ್ತನ ನಿವಾಸವನ್ನು ಅಪವಿತ್ರ ಮಾಡುತ್ತಾನೆ; ಆ ಪ್ರಾಣ ಇಸ್ರಯೇಲಿನವರೊಳಗಿಂದ ಕೊಯ್ಯಲ್ಪಡಲಿ; ಅಪವಿತ್ರತ್ವದ ನೀರು ಅವನ ಮೇಲೆ ಚಲ್ಲಲ್ಪಡದ ಕಾರಣ, ಅವನು ಅಪವಿತ್ರನಾಗಿದ್ದಾನೆ; ಅವನ ಅಪವಿತ್ರತ್ವವು ಇನ್ನೂ ಅವನಲ್ಲಿ
೧೪ ಉಂಟು. ಒಬ್ಬ ಮನುಷ್ಯನು ಗುಡಾರದಲ್ಲಿ ಸತ್ತರೆ, ಅವನ ವಿಷಯವಾದ ನ್ಯಾಯಪ್ರಮಾಣವೇನಂದರೆ—ಆ ಗುಡಾರದೊಳಗೆ ಪ್ರವೇಶಿಸುವವರೆಲ್ಲರೂ, ಗುಡಾರದಲ್ಲಿರುವವರೆಲ್ಲರೂ, ಏಳು ದಿವ
೧೫ ಸ ಅಪವಿತ್ರನಾಗಿರ ಬೇಕು. ಮತ್ತು ಮುಚ್ಚಳವಿಟ್ಟದ ತೆರದಿರುವ
೧೬ ಸಾಮಾನುಗಳೆಲ್ಲಾ ಅಪವಿತ್ರವಾಗಿರ ಬೇಕು; ಇದಲ್ಲದೆ ಹೊಲದಲ್ಲಿ ಕತ್ತಿಯಿಂದ ಕೊಲ್ಲಲ್ಪಟ್ಟವನನ್ನಾದರೂ, ಸತ್ತವನನ್ನಾದರೂ, ಮನುಷ್ಯನ ಎಲುವನ್ನಾದರೂ, ಸಮಾಧಿಯನ್ನಾದರೂ ಮುಟ್ಟಿದವಕೆಲ್ಲರು ಏಳು ದಿವಸ ಅಪವಿತ್ರರಾಗಿರ ಬೇಕು.
೧೭ ಅಪವಿತ್ರನಾದವನಿಗೋಸ್ಕರ ಸುಟ್ಟಲ್ಪಟ್ಟ ಪಾಪ ಕಳೆಯುವ ಹಸುವಿನ ಬೂದಿಯನ್ನು ತಕ್ಕೊಂಡು, ಒಂದು ಪಾತ್ರೆಯೊಳಗಿಟ್ಟು, ಅದರ ಮೇಲೆ ಹರಿಯುವ ನೀರನ್ನು ಹಾಕ ಬೇಕು. ಮತ್ತು ಪವಿತ್ರನಾದವನೊಬ್ಬನು ಇಸ್ಸೋಪನನ್ನು ತಕ್ಕೊಂಡು, ನೀರಿನಲ್ಲಿ ಅದ್ದಿ, ಆ ಗುಡಾರದ ಮೇಲೆಯೂ, ಸಮಸ್ತ ಸಾಮಾನುಗಳ ಮೇಲೆಯೂ, ಅದರಲ್ಲಿರುವ ಪ್ರಾಣಗಳ ಮೇಲೆಯೂ, ಎಲುವನ್ನಾದರೂ ಕೊಲ್ಲಲ್ಪಟ್ಟವನನ್ನಾದರೂ, ಸತ್ತವನನ್ನಾದರೂ, ಸಮಾಧಿಯನ್ನಾದರೂ ಮುಟ್ಟಿದವನ ಮೇಲೆಯೂ, ಚಿಮಿಕಿಸ ಬೇಕು.
೧೯ ಮತ್ತು ಪವಿತ್ರನಾದವನು ಅಪವಿತ್ರನಾದವನ ಮೇಲೆ ಮೂರನೇ ದಿವಸದಲ್ಲಿಯೂ ಏಳನೇ ದಿವಸದಲ್ಲಿಯೂ ಚಿಮಿಕಿಸಲಿ; ಏಳನೇ ದಿವಸದಲ್ಲಿ ಅವನು ತನ್ನನ್ನು ಪವಿತ್ರ ಮಾಡಿ ಕೊಂಡು, ತನ್ನ ವಸ್ತ್ರಗಳನ್ನು ಒಗೆದು, ನೀರಿನಲ್ಲಿ ತೊಳೆದು ಕೊಳ್ಳಲಿ; ಹೀಗೆ ಸಾ
೨೦ ಯಂಕಾಲದಲ್ಲಿ ಪವಿತ್ರನಾಗುವನು. ಆದರೆ ಅಪವಿತ್ರನಾಗಿದ್ದು, ತನ್ನ ಪಾಪವನ್ನು ಕಳೆ ಕೊಳ್ಳದವನ್ಯಾವನೋ, ಆ ಪ್ರಾಣ ಸಭೆಯ ಮಧ್ಯದಿಂದ ಕೊಯ್ಯಲ್ಪಡಲಿ; ಯಾಕಂದರೆ ಅವನು ಕರ್ತನ ಪರಿಶುದ್ಧ ಸ್ಥಳವನ್ನು ಅಪವಿತ್ರ ಮಾಡಿದ್ದಾನೆ; ಅಪವಿತ್ರತ್ವದ ನೀರು ಅವನ ಮೇಲೆ ಚಿಮಿಕಿಸಲ್ಪಟಲಿಲ್ಲ; ಅವನು ಅಪವಿತ್ರನೇ. ಇದು ಅವರಿಗೆ ನಿತ್ಯ ಕಟ್ಟಳೆಯಾಗಿರ ಬೇಕು; ಅಪವಿತ್ರತ್ವದ ನೀರನ್ನು ಚಿಮಿಕಿಸುವವನು ತನ್ನ ವಸ್ತ್ರಗಳನ್ನು ಒಗೆಯ ಬೇಕು; ಮತ್ತು ಅಪವಿತ್ರತ್ವದ ನೀರನ್ನು ಮುಟ್ಟಿದವನು ಸಾಯಂಕಾಲದ ಪರ್ಯಂತರ ಅಪವಿತ್ರನಾಗಿರ ಬೇಕು.
೨೧ ಇದಲ್ಲದೆ ಅಪವಿತ್ರನಾದವನು ಮುಟ್ಟುವಂಥದ್ದೆಲ್ಲಾ ಅಪವಿತ್ರವಾಗುವದು; ಅವನನ್ನು ಮುಟ್ಟಿದ ಪ್ರಾಣ ಸಾಯಂಕಾಲದ ಪರ್ಯಂತರ ಅಪವಿತ್ರನಾಗಿರ ಬೇಕು.

## ೨೦. ಸಂಧಿ.

೧ ಮತ್ತು ಇಸ್ರಯೇಲ್ ಮಕ್ಕಳ ಸಭೆಯೆಲ್ಲಾ ಚೀನಿಂಬ ಅರಣ್ಯಕ್ಕೆ ಮೊದಲನೇ ತಿಂಗಳಿನಲ್ಲಿ ಬಂದರು; ಜನರು ಕಾದೆಷಿನಲ್ಲಿ ವಾಸಿ
೨ ಸುವಾಗ, ಅಲ್ಲಿ ಮಿರ್ಯಾಮಳು ಸತ್ತು, ಅಲ್ಲೇ ಹೂಳಲ್ಪಟ್ಟಳು.
೩ ಆಗ ಸಭೆಗೆ ನೀರು ಇಲ್ಲದೆ ಇರಲಾಗಿ, ಅವರು ಮೋಶೆಗೂ ಆ
3 ರೋನನಿಗೂ ವಿರೋಧವಾಗಿ ಕೂಡಿ ಕೊಂಡರು. ಮತ್ತು ಜನರು ಮೋಶೆಯ ಸಂಗಡ ವ್ಯಾಜ್ಯವಾಡಿ, ಹೇಳಿದ್ದೇನಂದರೆ—ಅಯ್ಯೋ, ನಮ್ಮ ಸಹೋದರರು ಕರ್ತನ ಮುಂದೆ ಸತ್ತು ಹೋದಾ
೪ ಗಲೇ, ನಾವು ಸಹ ಸತ್ತು ಹೋಗಿದ್ದರೆ ಚನ್ನಾಗಿತ್ತು. ನಾವೂ ನಮ್ಮ ದನಗಳೂ ಸಾಯುವ ಹಾಗೆ, ನೀವು ಯಾಕೆ ಕರ್ತನ ಸ
೫ ಭೆಯನ್ನು ಈ ಅರಣ್ಯಕ್ಕೆ ತಂದಿರಿ! ಮತ್ತು ಈ ಕೆಟ್ಟ ಸ್ಥಳಕ್ಕೆ ನಮ್ಮನ್ನು ತರಲಿಕ್ಕೆ ಯಾಕೆ ನಮ್ಮನ್ನು ಐಗುಪ್ತ ದೇಶಕೊಳಗಿಂದ ಮೇಲಕ್ಕೆ ಕರಕೊಂಡು ಬಂದಿರಿ! ಈ ಸ್ಥಳದಲ್ಲಿ ಬೀಜವಾದರೂ, ಅಂಜೂರವಾದರೂ, ದ್ರಾಕ್ಷೇ ತೋಟವಾದರೂ, ದಾಳಿಂಬರ ಹಣ್ಣಾದರೂ ಇಲ್ಲ; ಕುಡಿಯಲಿಕ್ಕೆ ಸಹ ನೀರು ಇಲ್ಲ.

೬ ಆಗ ಮೋಕೆಯೂ ಅಕೋನನೂ ಸಭೆಯ ಎದುರಿನಿಂದ ಸಭೆ
ಯ ಗುಡಾರದ ಬಾಗಲಿನೊಳಗೆ ಹೋಗಿ, ಮೋಕೆ ಕೆಳಗಾಗಿ ಬಿ
೭ ದ್ದರು; ಮತ್ತು ಕರ್ತನ ಘನವು ಅವರಿಗೆ ಕಾಣಿ ಬಂತು. ಆಗ ಕ
೮ ರ್ತನು ಮೋಕೆಯ ಸಂಗಡ ಮಾತಾಡಿ, ಹೇಳಿದ್ದೇನಂದರೆ—ಕೋ
ಲನ್ನು ತಕ್ಕೊಂಡು, ನೀನೂ ನಿನ್ನ ಸಹೋದರನಾದ ಅಕೋನ
ನೂ ಸಭೆಯನ್ನು ಕೂಡಿಸಿ ಕೊಂಡು, ಅವರ ಕಣ್ಣುಗಳ ಮುಂದೆ
ಬಂಡೆಯ ಸಂಗಡ ಮಾತಾಡಿರಿ; ಅದು ತನ್ನ ನೀರನ್ನು ಕೊಡುವ
ದು; ಮತ್ತು ನೀನು ಅವರಿಗೋಸ್ಕರ ಬಂಡೆಯೊಳಗಿಂದ ನೀರನ್ನು
ಹೊರಗೆ ತರುವಿ; ಸಭೆಗೂ ಅವರ ದನಗಳಿಗೂ ನೀನು ಕುಡಿಯ
ಕೊಡುವಿ.
೯ ಆಗ ಮೋಶೆ ಕರ್ತನ ಸನ್ನಿಧಿಯಿಂದ, ಅವನು ತನಗೆ ಆಜ್ಞಾ
೧೦ ಪಿಸಿದ ಹಾಗೆ, ಕೋಲನ್ನು ತಕ್ಕೊಂಡನು. ಮತ್ತು ಮೋಶೆಯೂ
ಅಕೋನನೂ ಸಭೆಯನ್ನು ಬಂಡೆಯ ಮುಂದೆ ಕೂಡಿಸಿ, ಅವರಿಗೆ
ಹೇಳಿದ್ದೇನಂದರೆ—ಶಿರುಗ ಬಿದ್ದವರೇ, ಕೇಳಿರಿ; ನಾವು ನಿಮಗೋ
ಸ್ಕರ ಈ ಬಂಡೆಯೊಳಗಿಂದ ನೀರನ್ನು ಹೊರಡಿಸ ಬೇಕೋ!
೧೧ ಮತ್ತು ಮೋಶೆ ತನ್ನ ಕೈಯನ್ನು ಎತ್ತಿ, ತನ್ನ ಕೋಲಿನಿಂದ ಬಂ
ಡೆಯನ್ನು ಎರಡು ಸಾರಿ ಬಡಿದನು; ಆಗ ಬಹಳ ನೀರು ಹೊರಗೆ
ಬಂತು; ಮತ್ತು ಸಭೆಯೂ ಅವರ ದನಗಳೂ ಕುಡಿದವು.
೧೨ ಆಗ ಕರ್ತನು ಮೋಶೆಯ ಸಂಗಡಲೂ ಅಕೋನನ ಸಂಗಡ
ಲೂ ಮಾತಾಡಿ, ಹೇಳಿದ್ದೇನಂದರೆ—ನೀವು ಇಸ್ರಯೇಲ್ ಮಕ್ಕಳ
ಕಣ್ಣುಗಳ ಮುಂದೆ ನನ್ನನ್ನು ಪರಿಶುದ್ಧ ಮಾಡಲಿಕ್ಕೆ ನನ್ನಲ್ಲಿ ವಿ
ಶ್ವಾಸಿಸದೆ ಇದ್ದ ಕಾರಣ, ನೀವು ಸಭೆಯನ್ನು ನಾನು ಅವರಿಗೆ
ಕೊಟ್ಟ ದೇಶದಲ್ಲಿ ಸೇರಿಸುವದಿಲ್ಲ.
೧೩ ಇಸ್ರಯೇಲ್ ಮಕ್ಕಳು ಕರ್ತನ ಸಂಗಡ ವ್ಯಾಜ್ಯವಾಡಿದಾಗ,
ಅವನು ಅವರಲ್ಲಿ ತನ್ನನ್ನು ಪರಿಶುದ್ಧ ಮಾಡಿ ಕೊಂಡ ಮೆರೀಬ
ದ ನೀರು ಇದೇ.
೧೪ ಇದಲ್ಲದೆ ಮೋಶೆಯು ಕಾದೆಷಿನಿಂದ ಎದೋಮಿನ ಅರಸನ ಬ
ಳಿಗೆ ದೂತರನ್ನು ಕಳುಹಿಸಿ, ಹೇಳಿದ್ದೇನಂದರೆ—ನಿನ್ನ ಸಹೋದ
ರನಾದ ಇಸ್ರಯೇಲನು ಹೇಳುವದೇನಂದರೆ—ನಮಗೆ ಉಂಟಾದ
೧೫ ಸಕಲ ಆಯಾಸವನ್ನು ನೀನು ಅರಿತಿದ್ದೀ. ಏನಂದರೆ, ನಮ್ಮ ತಂ
ದೆಗಳು ಐಗುತ್ತಕ್ಕೆ ಇಳಿದು ಹೋದರು; ಐಗುತ್ತದಲ್ಲಿ ಅನೇಕ ದಿ
ವಸ ವಾಸವಾಗಿದ್ದೆವು; ಮತ್ತು ಐಗುತ್ತದವರು ನಮಗೂ ನಮ್ಮ
೧೬ ತಂದೆಗಳಿಗೂ ಕೇಡನ್ನು ಮಾಡಿದರು. ಆದಕಾರಣ ನಾವು ಕರ್ತ
ನಿಗೆ ಕೂಗಿದೆವು; ಅವನು ನಮ್ಮ ಶಬ್ದವನ್ನು ಕೇಳಿ, ದೂತನನ್ನು
ಕಳುಹಿಸಿ, ನಮ್ಮನ್ನು ಐಗುತ್ತದೊಳಗಿಂದ ಹೊರಗೆ ತಂದನು; ಮ
ತ್ತು, ಇಗೋ, ನಾವು ನಿನ್ನ ಮೇರೆಯ ಕಡೇ ಊರಾದ ಕಾದೆಷಿ
೧೭ ನಲ್ಲಿ ಇದ್ದೇವೆ. ನಮ್ಮನ್ನು ನಿನ್ನ ದೇಶದಿಂದ ದಾಟಿ ಹೋಗ ಗೊ
ಡಿಸು; ನಾವು ಹೊಲವನ್ನಾದರೂ, ದ್ರಾಕ್ಷೇ ತೋಟವನ್ನಾದರೂ,
ದಾಟಿ ಹೋಗುವದಿಲ್ಲ; ಭಾವಿಯ ನೀರನ್ನು ನಾವು ಕುಡಿಯುವ
ದಿಲ್ಲ; ರಾಜ ಮಾರ್ಗದಲ್ಲಿ ಮಾತ್ರ ಹೋಗುತ್ತೇವೆ; ನಿನ್ನ ಮೇರೆ
ಯನ್ನು ನಾವು ದಾಟುವ ಪರ್ಯಂತರ ಬಲಗಡೆಗಾದರೂ ಎಡಗ
೧೮ ಡೆಗಾದರೂ ನಾವು ತಿರುಗುವದಿಲ್ಲ. ಎದೋಮನು ಅವನಿಗೆ ಹೇ
ಳಿದ್ದೇನಂದರೆ—ನೀನು ನನ್ನ ಕಡೆಯಲ್ಲಿ ದಾಟಿ ಹೋಗ ಬೇಡ;
ಹೋದಡೆ, ನಾನು ಕತ್ತಿಯಿಂದ ನಿನಗೆದುರಾಗಿ ಹೊರಡುವೆನು.
೧೯ ಆಗ ಇಸ್ರಯೇಲ್ ಮಕ್ಕಳು ಅವನಿಗೆ ಹೇಳಿದ್ದೇನಂದರೆ—ನಾವು
ರಾಜ ಮಾರ್ಗದಲ್ಲಿ ನಡೆಯುತ್ತೇವೆ; ಮತ್ತು ನಾವಾದರೂ ನಮ್ಮ
ದನಗಳಾದರೂ ನಿನ್ನ ನೀರು ಕುಡಿದಡೆ, ಅದರ ಕ್ರಯವನ್ನು ಕೊ
ಡುತ್ತೇವೆ; ನಮ್ಮ ಕಾಲುಗಳಿಂದ ದಾಟಿ ಹೋಗುವದೇ ಹೊರ್ತು,
೨೦ ಮತ್ತೇನು ಕಾರ್ಯವಿಲ್ಲ. ಅದಕೆ ಅವನು ಹೇಳಿದ್ದು—ನೀನು ದಾಟಿ
ಬೇಡ; ಮತ್ತು ಎದೋಮನು ಬಹು ಜನದಿಂದಲೂ ಬಲವುಳ್ಳ ಕೈ
೨೧ ಯಿಂದಲೂ ಅವರಿಗೆದುರಾಗಿ ಹೊರಟನು. ಈ ಪ್ರಕಾರ ಎದೋ
ಮನು ಇಸ್ರಯೇಲ್ಯರನ್ನು ತನ್ನ ಮೇರೆಯಲ್ಲಿ ದಾಟ ಗೊಡಿಸಲಿ
ಲ್ಲ; ಆದಕಾರಣ ಇಸ್ರಯೇಲ್ಯರು ಅವನ ಕಡೆಯಿಂದ ವಾಕೆಯಾ
ಗಿ ಹಾದು ಹೋದರು.
೨೨ ಮತ್ತು ಇಸ್ರಯೇಲ್ ಮಕ್ಕಳ ಸಮಸ್ತ ಸಭೆಯು ಕಾದೆಷಿನಿಂ
ದ ಹೊರಟು, ಹೋರ್ ಎಂಬ ಬೆಟ್ಟದ ಬಳಿಗೆ ಬಂದರು.
೨೩ ಆಗ ಕರ್ತನು ಎದೋಮ ದೇಶದ ಮೇರೆಯ ಮೇಲಿರುವ
ಹೋರ್ ಎಂಬ ಬೆಟ್ಟದಲ್ಲಿ ಮೋಶೆಯ ಸಂಗಡಲೂ ಅಕೋನನ
೨೪ ಸಂಗಡಲೂ ಮಾತಾಡಿ, ಹೇಳಿದ್ದೇನಂದರೆ—ಅಕೋನನು ತನ್ನ ಜ
ನರ ಸಂಗಡ ಕೂಡಿಸಲ್ಪಡುವನು; ಯಾಕಂದರೆ ನೀವು ಮೆರೀಬ
ನೀರಿನ ಹತ್ರ ನನ್ನ ಮಾತು ಮೀರಿದ್ದರಿಂದ ನಾನು ಇಸ್ರಯೇಲ್
೨೫ ಮಕ್ಕಳಿಗೆ ಕೊಟ್ಟ ದೇಶಕ್ಕೆ ಅವನು ಬರುವದಿಲ್ಲ. ಅಕೋನನ
ನೂ ಅವನ ಮಗನಾದ ಎಲೆಯಾಜರನನ್ನೂ ತಕ್ಕೊಂಡು, ಅ
೨೬ ವರನ್ನು ಹೋರ್ ಬೆಟ್ಟವನ್ನು ಏರ ಮಾಡು. ಮತ್ತು ಅಕೋನ
ನ ವಸ್ತ್ರಗಳನ್ನು ತೆಗೆದು, ಅವುಗಳನ್ನು ಅವನ ಮಗನಾದ ಎಲೆ
ಯಾಜರನಿಗೆ ತೊಡಿಸು; ಮತ್ತು ಅಕೋನನು ಕೂಡಿಸಲ್ಪಟ್ಟು
೨೭ ಅಲ್ಲಿಯೇ ಸಾಯ ಬೇಕು. ಮೋಶೆ ಕರ್ತನು ಆಜ್ಞಾಪಿಸಿದ ಪ್ರ
ಕಾರ ಮಾಡಿದನು; ಅವರು ಸಮಸ್ತ ಸಭೆಯ ಕಣ್ಣುಗಳಿಗೆದುರಾಗಿ
೨೮ ಹೋರ್ ಬೆಟ್ಟವನ್ನೇರಿದರು. ಮತ್ತು ಮೋಶೆ ಅಕೋನನ ವಸ್ತ್ರ
ಗಳನ್ನು ತೆಗೆದು, ಅವನ ಮಗನಾದ ಎಲೆಯಾಜರನಿಗೆ ತೊಡಿಸಿದ
ನು; ಆಗ ಅಕೋನನು ಅಲ್ಲಿ ಬೆಟ್ಟದ ತುದಿಯಲ್ಲಿ ಸತ್ತನು; ಮ
೨೯ ತ್ತು ಮೋಶೆಯೂ ಎಲೆಯಾಜರನೂ ಬೆಟ್ಟದಿಂದ ಇಳಿದರು. ಅ
ಕೋನನು ಶೀರಿ ಹೋದನೆಂದು ಸಭೆಯೆಲ್ಲಾ ನೋಡಿದಾಗ, ಇಸ್ರ
ಯೇಲ್ಯರ ಮನೆಯವಕೆಲ್ಲರು ಅಕೋನನಿಗೋಸ್ಕರ ಮೂವತ್ತು
ದಿವಸ ಅತ್ತರು.

## ೨೧. ಸಂಧಿ.

೧ ಇದಲ್ಲದೆ ದಕ್ಷಿಣದಲ್ಲಿ ವಾಸಿಸುವ ಕನಾನ್ಯ ಅರಸನಾದ ಆರ
ದನು—ಇಸ್ರಯೇಲ್ಯರು ಪಾಳಿತಿ ನೋಡುವ ಮಾರ್ಗದಿಂದ
ಬರುತ್ತಾರೆಂದು ಕೇಳಿ, ಅವರ ಸಂಗಡ ಯುದ್ಧ ಮಾಡಿ, ಅವರಲ್ಲಿ
೨ ಕೆಲವರನ್ನು ಸೆರೆಯಾಗಿ ಪೈದನು. ಆಗ ಇಸ್ರಯೇಲ್ಯರು
ಕರ್ತನಿಗೆ ಹರಕೆ ಮಾಡಿ, ಹೇಳಿದ್ದೇನಂದರೆ—ನೀನು ಈ ಜನವ
ನ್ನು ನನ್ನ ಕೈಯಲ್ಲಿ ಒಪ್ಪಿಸಿ ಕೊಟ್ಟರೆ, ನಾನು ಅವರ ಪಟ್ಟಣ
3 ಗಳನ್ನು ಶಾಪ ಕೊಟ್ಟು ನಿರ್ಮೂಲ ಮಾಡುವೆನು. ಆಗ ಕರ್ತ
ನು ಇಸ್ರಯೇಲ್ಯರ ಶಬ್ದವನ್ನು ಕೇಳಿ, ಕನಾನ್ಯರನ್ನು ಕೊಟ್ಟು
ಬಿಟ್ಟನು; ಇಸ್ರಯೇಲ್ಯರು ಅವರನ್ನೂ ಅವರ ಪಟ್ಟಣಗಳನ್ನೂ
ಶಾಪ ಕೊಟ್ಟು, ನಿರ್ಮೂಲ ಮಾಡಿ, ಆ ಸ್ಥಳಕ್ಕೆ ಹೊರ್ಮ
ಎಂದು ಹೆಸರಿಟ್ಟರು.
೪ ಮತ್ತು ಅವರು ಹೋರ್ ಎಂಬ ಬೆಟ್ಟದಿಂದ ಹೊರಟು, ಎ
ದೋಮ್ ದೇಶವನ್ನು ಸುತ್ತಿ ಕೊಂಡು ಹೋಗುವದಕ್ಕೆ ಕೆಂಪು





ಸಮುದ್ರದ ಮಾರ್ಗವಾಗಿ ನಡೆದರು; ಆದರೆ ಜನರ ಪ್ರಾಣವು
೫ ಮಾರ್ಗದಿಂದ ಕುಂದಿ ಹೋಯಿತು. ಆದಕಾರಣ ಜನರು ದೇ
ವರಿಗೂ ಮೋಶೆಗೂ ವಿರೋಧವಾಗಿ ಮಾತಾಡಿ, ಹೇಳಿದ್ದೇನಂದ
ರೆ—ನಾವು ಅರಣ್ಯದಲ್ಲಿ ಸಾಯುವ ಹಾಗೆ ನಮ್ಮನ್ನು ಐಗುಪ್ತ
ದೇಶದಿಂದ ಯಾಕೆ ಮೇಲೆ ಬರ ಮಾಡಿದ್ದೀ? ಯಾಕಂದರೆ ಇಲ್ಲಿ
ಕೊಟ್ಟಿ ಇಲ್ಲ, ನೀರು ಇಲ್ಲ; ನಮ್ಮ ಪ್ರಾಣವು ಈ ನಿಸ್ಸಾರವಾ
ದ ಕೊಟ್ಟಿಯಲ್ಲಿ ಅಸಹ್ಯ ಪಡುತ್ತದೆ.
೬ ಆಗ ಕರ್ತನು ಜನರೊಳಗೆ ಉರಿ ಸರ್ಪಗಳನ್ನು ಕಳುಹಿಸಿ
ದನು; ಅವು ಜನರನ್ನು ಕಚ್ಚಿದ್ದರಿಂದ ಇಸ್ರಯೇಲ್ಯರಲ್ಲಿ ಬಹು
೭ ಜನರು ಸತ್ತು ಹೋದರು. ಆದದರಿಂದ ಜನರು ಮೋಶೆಯ
ಬಳಿಗೆ ಬಂದು, ಹೇಳಿದ್ದೇನಂದರೆ—ನಾವು ಕರ್ತನಿಗೂ ನಿನಗೂ
ವಿರೋಧವಾಗಿ ಮಾತಾಡಿ, ಪಾಪ ಮಾಡಿದ್ದೇವೆ; ಅವನು ನಮ್ಮ
ಮೇಲಿಂದ ಸರ್ಪಗಳನ್ನು ದೂರ ಮಾಡುವ ಹಾಗೆ, ಅವನಿಗೆ
ಪ್ರಾರ್ಥನೆ ಮಾಡು; ಆಗ ಮೋಶೆ ಜನರಿಗೋಸ್ಕರ ಪ್ರಾರ್ಥ
೮ ನೆ ಮಾಡಿದನು. ಆಗ ಕರ್ತನು ಮೋಶೆಯ ಸಂಗಡ ಹೇಳಿದ್ದೇ
ನಂದರೆ, ಒಂದು ಉರಿ ಸರ್ಪವನ್ನು ಮಾಡಿಸಿ ಕೊಂಡು, ಒಂದು
ಗಸೆಯ ಮೇಲೆ ಇಡು; ಆಗ ಕಚ್ಚಲ್ಪಟ್ಟವಕೆಲ್ಲರು ಅದರ ಮೇ
೯ ಲೆ ದೃಷ್ಟಿ ಇಟ್ಟರೆ, ಬದುಕುವರು. ಆಗ ಮೋಶೆಯು ಹಿತ್ತಾಳಿ
ಯ ಸರ್ಪವನ್ನು ಮಾಡಿ, ಗಸೆಯ ಮೇಲೆ ಇಟ್ಟನು; ಮತ್ತು
ಸರ್ಪವು ಒಬ್ಬನನ್ನು ಕಚ್ಚಿದ ಮೇಲೆ ಅವನು ಹಿತ್ತಾಳಿಯ ಸ
ರ್ಪದ ಕಡೆಗೆ ನೋಡಿದರೆ, ಬದುಕಿದನು.
೧೦ ಮತ್ತು ಇಸ್ರಯೇಲ್ ಮಕ್ಕಳು ಹೊರಟು, ಒಬೋಥಿನಲ್ಲಿ
೧೧ ಇಳು ಕೊಂಡರು. ಮತ್ತು ಒಬೋಥಿನಿಂದ ಹೊರಟು, ಮೋ
ವಾಬ್ ದೇಶಕ್ಕೆದುರಾಗಿ ಸೂರ್ಯೋದಯದ ಕಡೆಯಲ್ಲಿರುವ
ಅರಣ್ಯವನ್ನಲ್ಲಿರುವ ಇಯ್ಯೊಅಬರೀಮಿನಲ್ಲಿ ಇಳುಕೊಂಡರು.
೧೨ ಅಲ್ಲಿಂದ ಅವರು ಹೊರಟು, ಜಾರೆಕೆಂಬ ಪಳ್ಳದ ಬಳಿಯಲ್ಲಿ
೧೩ ಇಳು ಕೊಂಡರು. ಅಲ್ಲಿಂದ ಹೊರಟು, ಅಮೋರ್ಯರ ಮೇ
ರೆಯಿಂದ ಹೊರಗೆ ಬರುವ ಅರಣ್ಯದಲ್ಲಿರುವ ಅರ್ನೋನೆಂಬ
ನದಿಯ ಈಚೆಯಲ್ಲಿ ಇಳು ಕೊಂಡರು; ಯಾಕಂದರೆ ಅರ್ನೋ
ನ್ ನದಿ ಮೋವಾಬಿಗೂ ಅಮೋರ್ಯರಿಗೂ ಮಧ್ಯವಾದ ಮೋ
ವಾಬಿನ ಮೇರೆಯಾಗಿದೆ.
೧೪ ಆದಕಾರಣ ಕರ್ತನ ಯುದ್ಧಗಳ ಪುಸ್ತಕದಲ್ಲಿ ಹೇಳಿದ್ದೇನಂ
ದರೆ—
ಸೂಫದಲ್ಲಿರುವ ವಾಹೆಬೂ,
ಅರ್ನೋನಿನ ಹಳ್ಳಗಳೂ,
೧೫ ಆರಿನ ನಿವಾಸಕ್ಕೆ ಶಿರುಗಿ,
ಮೋವಾಬಿನ ಮೇರೆಗೆ ಬರಗಿರುವ ಹಳ್ಳಗಳ ಪ್ರವಾಹವೂ.
೧೬ ಮತ್ತು ಅಲ್ಲಿಂದ ಬೇರಕ್ಕೆ ಬಂದರು; ಜನರನ್ನು ಕೂಡಿಸಿ
ಕೋ; ನಾನು ಅವರಿಗೆ ನೀರನ್ನು ಕೊಡುವೆನೆಂದು ಕರ್ತನು
ಮೋಶೆಗೆ ಹೇಳಿದ ಭಾವಿ ಅದೇ.
೧೭ ಆಗ ಇಸ್ರಯೇಲ್ಯರು ಈ ಕೀರ್ತನೆಯನ್ನು ಹಾಡಿದರು; ಏನಂ
ದರೆ—ಭಾವಿಯೇ, ಊರು; ಅದಕ್ಕೆ ಹಾಡಿರಿ.
೧೮ ಪ್ರಭುಗಳು ಈ ಭಾವಿಯನ್ನು ಅಗಿದರು;
ಜನರ ಅಧಿಪತಿಗಳು ನ್ಯಾಯಾಧಿಪತಿಯ ಸಂಗಡ ತಮ್ಮ ಕೋ
ಲುಗಳಿಂದ ಅದನ್ನು ತೋಡಿದರು.
ಇದಲ್ಲದೆ ಅರಣ್ಯದಿಂದ ಮತ್ತಾನಕ್ಕೆ ಬಂದರು.
೧೯ ಮತ್ತಾನದಿಂದ ನಾಹಾಲಿಯೇಲಕ್ಕೆ ಬಂದರು. ನಾಹಾಲಿಯೇಲ
೨೦ ದಿಂದ ಬಾಮೊಥಿಗೆ ಬಂದರು. ಬಾಮೊಥಿನಿಂದ ಮೋವಾಬ್ ದೇಶ
ದ ಬೈಲಿನಲ್ಲಿರುವ ತಗ್ಗಿಗೆ ಪಿಸ್ಗಕೆಂಬ ಬೆಟ್ಟದ ತುದಿಗೆ ಬಂದರು;
ಇದು ಯೆಶಿಮೋನಿನ ಕಡೆಗೆ ಕಾಣಿಸುತ್ತದೆ.
೨೧ ಆಗ ಇಸ್ರಯೇಲ್ಯರು ಅಮೋರ್ಯರ ಅರಸನಾದ ಸೀ
ಹೋನನ ಬಳಿಗೆ ದೂತರನ್ನು ಕಳುಹಿಸಿ, ಹೇಳಿದ್ದೇನಂದರೆ—
೨೨ ನಾವು ನಿನ್ನ ದೇಶದಲ್ಲಿ ದಾಟಿ ಹೋಗ ಬೇಕು; ನಾವು ಹೊಲದ
ಲ್ಲಾದರೂ ದ್ರಾಕ್ಷೇ ತೋಟದಲ್ಲಾದರೂ ತೊಲಗದೆ, ಭಾವಿಯ ನೀ
ರನ್ನು ಕುಡಿಯದೆ, ನಿನ್ನ ಮೇರೆಯನ್ನು ದಾಟುವ ಪರ್ಯಂತರ
೨೩ ರಾಜ ಮಾರ್ಗದಲ್ಲಿ ನಡೆಯುತ್ತೇವೆ. ಆದರೆ ಸೀಹೋನನು
ಇಸ್ರಯೇಲ್ಯರನ್ನು ತನ್ನ ಮೇರೆಯಲ್ಲಿ ದಾಟಿ ಗೊಡಿಸದೆ, ತನ್ನ
ಜನರೆಲ್ಲರನ್ನು ಕೂಡಿಸಿ ಕೊಂಡು, ಇಸ್ರಯೇಲ್ಯರಿಗೆದುರಾಗಿ ಅ
ರಣ್ಯಕ್ಕೆ ಹೊರಟನು; ಮತ್ತು ಅವನು ಯಾಹಚಕ್ಕೆ ಬಂದು,
೨೪ ಇಸ್ರಯೇಲ್ಯರ ಸಂಗಡ ಯುದ್ಧ ಮಾಡಿದನು. ಆದರೆ ಇಸ್ರ
ಯೇಲ್ಯರು ಅವನನ್ನು ಕತ್ತಿ ಬಾಯಿಯಿಂದ ಹೊಡೆದು, ಅವನ
ದೇಶವನ್ನು ಅರ್ನೋನ್ ನದಿಯಿಂದ ಯಾಬೊಕ್ ನದಿಯ
ವರೆಗೆ, ಅಮ್ಮೋನನ ಮಕ್ಕಳ ಪರ್ಯಂತರ ಸ್ವತಂತ್ರಿಸಿ ಕೊಂ
ಡರು; ಯಾಕಂದರೆ ಅಮ್ಮೋನನ ಮಕ್ಕಳ ಮೇರೆ ಬಲವುಳ್ಳ
೨೫ ದ್ದಾಗಿತ್ತು. ಮತ್ತು ಇಸ್ರಯೇಲ್ಯರು ಆ ಪಟ್ಟಣಗಳನ್ನೆಲ್ಲಾ ತೆಗೆ
ದು ಕೊಂಡರು; ಇಸ್ರಯೇಲ್ಯರು ಅಮೋರ್ಯರ ಸಮಸ್ತ ಪ
ಟ್ಟಣಗಳಲ್ಲಿ ಹೆಷ್ಬೊನಿನಲ್ಲಿಯೂ ಅದರ ಸಮಸ್ತ ಗ್ರಾಮಗಳಲ್ಲಿ
೨೬ ಯೂ ವಾಸ ಮಾಡಿದರು. ಏನಂದರೆ, ಹೆಷ್ಬೊನು ಅಮೋ
ರ್ಯರ ಅರಸನಾದ ಸೀಹೋನನ ಪಟ್ಟಣವಾಗಿತ್ತು; ಅವನು ಮೋ
ವಾಬ್ ದೇಶದ ಪೂರ್ವದ ಅರಸನ ಸಂಗಡ ಯುದ್ಧ ಮಾಡಿ, ಅ
ವನ ಸಮಸ್ತ ದೇಶವನ್ನು ಅರ್ನೋನ್ ನದಿಯ ಪರ್ಯಂತರ
೨೭ ಅವನ ಕೈಯೊಳಗಿಂದ ತಕ್ಕೊಂಡಿದ್ದನು. ಆದಕಾರಣ ಕವೀಶ್ವ
ರರು ಹೇಳುವದೇನಂದರೆ—
ಹೆಷ್ಬೊನಿಗೆ ಬನ್ನಿರಿ;
ಸೀಹೋನನ ಪಟ್ಟಣವು ಕಟ್ಟಲ್ಪಟ್ಟು, ಭದ್ರವಾಗಲಿ;
೨೮ ಯಾಕಂದರೆ ಬೆಂಕಿ ಹೆಷ್ಬೊನಿನಿಂದಲೂ,
ಜ್ವಾಲೆಯು ಸೀಹೋನನ ಪಟ್ಟಣದಿಂದಲೂ ಹೊರಟು,
ಮೋವಾಬಿನ ಆರ್ ಎಂಬ ಪಟ್ಟಣವನ್ನೂ,
ಅರ್ನೋನಿನ ಎತ್ತರ ಸ್ಥಳಗಳ ಪ್ರಭುಗಳನ್ನೂ, ಸಿಂದು
ಬಿಟ್ಟಿತು.
೨೯ ಮೋವಾಬೇ, ನಿನಗೆ ಅಯ್ಯೋ!
ಕೇಮೊಷನ ಜನವೇ, ನೀನು ನಾಶನವಾಗಿ ಹೋದಿ;
ಅವನು ತನ್ನ ಕುಮಾರರನ್ನು ಪಿಡಿ ಹೋಗುವದಕ್ಕೂ,
ತನ್ನ ಕುಮಾರ್ತೆಗಳನ್ನು ಅಮೋರ್ಯರ ಅರಸನಾದ ಸೀ
ಹೋನನ
ಕೆಗೂ, ಕೊಟ್ಟನು.
೩೦ ನಾವು ಅವರ ಮೇಲೆ ಎಸೆದೆವು;
ಹೆಷ್ಬೊನು ದೀಬೋನಿನ ಪರ್ಯಂತರ ನಾಶನವಾಯಿತು;
ಮತ್ತು ನಾವು ಅವರನ್ನು ಮೆದೆಬಕ್ಕೆ ಮುಟ್ಟುವ
ನೋಫದ ಮಟ್ಟಿಗೂ ಹಾಳು ಮಾಡಿದೆವು
೩೧ ಹಾಗೆ ಇಸ್ರಯೇಲ್ಯರು ಅಮೋರ್ಯರ ದೇಶದಲ್ಲಿ ವಾಸ

೩೦ ಮಾಡಿದರು. ಇದಲ್ಲದೆ ಮೋಶೆ ಯೊಹೆರನ್ನು ಪಾಳೆತಿ ನೋಡುವದಕ್ಕೆ ಕಳುಹಿಸಿದನು; ಮತ್ತು ಅವರು ಅವರ ಗ್ರಾಮಗಳನ್ನು ತಕ್ಕೊಂಡು, ಅಲ್ಲಿರುವ ಅಮೋರ್ಯರನ್ನು ಹೊರಡಿಸಿದರು.

33 ಆಗ ಅವರು ತಿರಿಗಿ, ಬಾಷಾನಿನ ಹಾದಿಯಲ್ಲಿ ಏರಿದರು; ಮತ್ತು ಬಾಷಾನಿನ ಅರಸನಾದ ಓಗನು ಎದ್ರೈಯಲ್ಲಿ ಯುದ್ಧ ಮಾಡುವದಕ್ಕೆ ತನ್ನ ಸಮಸ್ತ ಜನರ ಸಂಗಡ ಅವರಿಗೆದುರಾಗಿ ಹೊ
೩೪ ರಟನು. ಆಗ ಕರ್ತನು ಮೋಶೆಯ ಸಂಗಡ ಹೇಳಿದ್ದೇನಂದರೆ—ನೀನು ಅವನಿಗೆ ಭಯ ಪಡ ಬೇಡ; ಯಾಕಂದರೆ ನಿನ್ನ ಕೈಯೊಳಗೆ ನಾನು ಅವನನ್ನೂ, ಅವನ ಸಮಸ್ತ ಜನರನ್ನೂ, ಅವನ ದೇಶವನ್ನೂ ಕೊಟ್ಟೆನು; ಹೆಷ್ಬೋನಿನಲ್ಲಿ ವಾಸ ಮಾಡಿದ ಅಮೋರ್ಯರ ಅರಸನಾದ ಸೀಹೋನನಿಗೆ ಮಾಡಿದ ಪ್ರಕಾರ,
೩೫ ಅವನಿಗೆ ಮಾಡ ಬೇಕು. ಈ ಪ್ರಕಾರ ಅವರು ಅವನನ್ನೂ, ಅವನ ಮಕ್ಕಳನ್ನೂ ಅವನ ಸಮಸ್ತ ಜನರನ್ನೂ, ಅವನಿಗೆ ಒಬ್ಬನಾದರೂ ಉಳಿಯದ ಮಟ್ಟಿಗೂ ಹೊಡೆದು, ಅವನ ದೇಶವನ್ನು ವತ ಮಾಡಿ ಕೊಂಡರು.

## ೨೨. ಸಂಧಿ.

೧ ಮತ್ತು ಇಸ್ರಾಯೇಲ್ ಮಕ್ಕಳು ಹೊರಟು, ಯೊರ್ದನಿನ ಈಚೆಯಲ್ಲಿರುವ ಮೋವಾಬಿನ ಬೈಲುಗಳಲ್ಲಿ, ಯೆರಿಕೋ ಪಟ್ಟಣಕ್ಕೆದುರಾಗಿ, ಇಳಿ ಕೊಂಡರು.

೨ ಆದರೆ ಚಿಪ್ಪೋರನ ಮಗನಾದ ಬಾಲಾಕನು ಇಸ್ರಾಯೇಲ್ಯರು
3 ಅಮೋರ್ಯರಿಗೆ ಮಾಡಿದ್ದನ್ನೆಲ್ಲಾ ನೋಡಿದನು. ಇದಲ್ಲದೆ ಮೋವಾಬಿನವರು ಆ ಜನರಿಗೆ, ಅವರು ಬಹಳ ಮಂದಿಯಾಗಿರುವದರಿಂದ, ಬಹಳವಾಗಿ ಅಂಜಿದರು; ಮೋವಾಬಿನವರು ಇಸ್ರಾಯೇಲ್
೪ ಮಕ್ಕಳಿಗೆ ಹೆದರಿದರು. ಆದದರಿಂದ ಮೋವಾಬ್ಯರು ಮಿದ್ಯಾನ್ಯರ ಹಿರಿಯರಿಗೆ ಹೇಳಿದ್ದೇನಂದರೆ—ಈಗ ಈ ಸಮೂಹವು ನಮ್ಮ ಸುತ್ತಮಿರುವದನ್ನೆಲ್ಲಾ, ಎತ್ತು ಅಡವಿಯ ಹುಲ್ಲನ್ನು ಮೇಯುವಂತೆ, ಮೇಯುವದು. ಆದರೆ ಆ ಕಾಲದಲ್ಲಿ ಚಿಪ್ಪೋರನ ಮಗನಾದ ಬಾ
೫ ಲಾಕನು ಮೋವಾಬ್ಯರ ಅರಸನಾಗಿದ್ದನು. ಇವನು ತನ್ನ ಜನರ ದೇಶದಾದ ನದೀ ತೀರದಲ್ಲಿ ಇರುವ ಬೆತೋರಿಗೆ ದೂತರನ್ನು ಕಳುಹಿಸಿ, ಬೆಯೋರನ ಮಗನಾದ ಬಿಳಾಮನನ್ನೂ ಕರಿಸಿ, ಹೇಳಿದ್ದೇನಂದರೆ—ಇಗೋ, ಒಂದು ಜನ ಐಗುಪ್ತದಿಂದ ಹೊರಟಿತು; ಇಗೋ, ಅದು ದೇಶದ ಮೇಲ್ಭಾಗವನ್ನು, ಮುಚ್ಚಿ, ನನಗೆದುರಾಗಿ
೬ ವಾಸಿಸುತ್ತದೆ. ಈಗ ನೀನು ದಯೆ ಮಾಡಿ ಬಂದು, ಈ ಜನವನ್ನು ನನಗೆ ಶಪಿಸು; ಯಾಕಂದರೆ ಅದು ನನಗಿಂತ ಬಲವುಳ್ಳದ್ದಾಗಿದೆ; ಬಂದು ಬೇಳೆ ನಾನು ಗೆದ್ದೇನು, ನಾವು ಅವರನ್ನು ಹೊಡೆದೇವು; ನಾನು ಅವನ್ನು ದೇಶದೊಳಗಿಂದ ಹೊರಡಿಸೇನು; ಯಾಕಂದರೆ ನೀನು ಯಾವನನ್ನು ಆಶೀರ್ವದಿಸುತ್ತೀಯೋ, ಅವನು ಆಶೀರ್ವದಿಸಲ್ಪಟ್ಟಿರುವನೆ; ನೀನು ಯಾವನನ್ನು ಶಪಿಸುತ್ತೀಯೋ, ಅ
೭ ವನು ಶಪಿಸಲ್ಪಟ್ಟಿರುವನೆ, ಎಂದು ಬಲ್ಲೆನು. ಆಗ ಮೋವಾಬಿನ ಹಿರಿಯರೂ ಮಿದ್ಯಾನಿನ ಹಿರಿಯರೂ ಕಣಿ ಹೇಳುವದರ ಕಾಣಿಕೆಗಳನ್ನು ತಕ್ಕೊಂಡು ಹೋದರು; ಬಿಳಾಮನ ಬಳಿಗೆ ಬಂದು, ಅವನಿ
೮ ಗೆ ಬಾಲಾಕನ ಮಾತುಗಳನ್ನು ಹೇಳಿದರು. ಅವನು ಅವರಿಗೆ ಹೇಳಿದ್ದು—ಈ ರಾತ್ರಿ ಇಲ್ಲಿ ಇಳು ಕೊಳ್ಳಿರಿ; ಆಗ ಕರ್ತನು ನನಗೆ ಹೇಳುವ ಪ್ರಕಾರ ನಿಮಗೆ ಉತ್ತರವನ್ನು ಕೊಡುವೆನು; ಆದಕಾರಣ ಮೋವಾಬಿನ ಪ್ರಭುಗಳು ಬಿಳಾಮನ ಸಂಗಡ ಇದ್ದು ಕೊಂಡರು.

೯ ಮತ್ತು ದೇವರು ಬಿಳಾಮನ ಬಳಿಗೆ ಬಂದು, ನಿನ್ನ ಸಂಗಡ ಇ
೧೦ ರುವ ಈ ಮನುಷ್ಯರು ಯಾರು? ಅಂದನು. ಬಿಳಾಮನು ದೇವರಿಗೆ ಹೇಳಿದ್ದೇನಂದರೆ—ಚಿಪ್ಪೋರನ ಮಗನಾಗಿಯೂ ಮೋವಾಬಿನ ಅರಸನಾಗಿಯೂ ಇರುವ ಬಾಲಾಕನು ನನ್ನ ಬಳಿಗೆ ಕಳುಹಿಸಿದ್ದೇನಂದರೆ—ಇಗೋ, ಐಗುಪ್ತ ದೇಶದಿಂದ ಹೊರಟಿರುವ ಜನ
೧೧ ದೇಶದ ಮೇಲ್ಭಾಗವನ್ನು ಮುಚ್ಚುತ್ತದೆ; ಈಗ ನೀನು ಬಂದು, ನನಗೋಸ್ಕರ ಅದನ್ನು ಶಪಿಸು; ಒಂದುವೇಳೆ ಅದರ ಸಂಗಡ ಯುದ್ಧ ಮಾಡಿ, ಅದನ್ನು ಹೊರಗೆ ಹಾಕುವದಕ್ಕೆ ನಾನು ಸಮ
೧೨ ರ್ಥನಾದೇನು. ಆಗ ದೇವರು ಬಿಳಾಮನಿಗೆ ಹೇಳಿದ್ದೇನಂದರೆ—ನೀನು ಅವರ ಸಂಗಡ ಹೋಗ ಬೇಡ; ನೀನು ಆ ಜನವನ್ನು ಶಪಿಸ ಬೇಡ; ಯಾಕಂದರೆ ಅದು ಆಶೀರ್ವದಿಸಲ್ಪಟ್ಟಿದೆ.

೧೩ ಆಗ ಬಿಳಾಮನು ಉದಯದಲ್ಲಿ ಎದ್ದು, ಬಾಲಾಕನ ಪ್ರಭುಗಳಿಗೆ, ನಿಮ್ಮ ದೇಶಕ್ಕೆ ಹೋಗಿರಿ; ಯಾಕಂದರೆ ಕರ್ತನು ನಿಮ್ಮ ಸಂಗಡ ಹೋಗಲಿಕ್ಕೆ ನನಗೆ ಅಪ್ಪಣೆ ಕೊಡುವದಿಲ್ಲ, ಅಂದನು.
೧೪ ಆದಕಾರಣ ಮೋವಾಬಿನ ಪ್ರಭುಗಳು ಎದ್ದು, ಬಾಲಾಕನ ಬಳಿಗೆ ಬಂದು—ಬಿಳಾಮನು ನಮ್ಮ ಸಂಗಡ ಬರಲೊಲ್ಲನು, ಅಂದರು.

೧೫ ಆದರೆ ಬಾಲಾಕನು ತಿರಿಗಿ ಇವರಿಗಿಂತ ಅನೇಕರಾದ ಘನವುಳ್ಳವರಾದ ಪ್ರಭುಗಳನ್ನು ಕಳುಹಿಸಿದನು. ಅವರು ಬಿಳಾಮನ ಬ
೧೬ ಳಿಗೆ ಬಂದು, ಅವನಿಗೆ ಹೇಳಿದ್ದೇನಂದರೆ—ಚಿಪ್ಪೋರನ ಮಗನಾದ ಬಾಲಾಕನು ಹೀಗೆ ಹೇಳುತ್ತಾನೆ—ನೀನು ದಯೆ ಮಾಡಿ, ನನ್ನ
೧೭ ಬಳಿಗೆ ಬರುವದಕ್ಕೆ ತಡೆಯಲ್ಪಡ ಬೇಡ. ಯಾಕಂದರೆ ನಾನು ನಿನ್ನನ್ನು ಬಹಳವಾಗಿ ಘನ ಪಡಿಸುವೆನು; ಮತ್ತು ನೀನು ನನಗೆ ಹೇಳುವದನ್ನೆಲ್ಲಾ ನಾನು ಮಾಡುವೆನು; ಆದಕಾರಣ ನೀನು ದಯೆ
೧೮ ಮಾಡಿ ಬಂದು, ಈ ಜನವನ್ನು ನನಗೆ ಶಪಿಸು. ಬಿಳಾಮನು ಪ್ರತ್ಯುತ್ತರವಾಗಿ ಬಾಲಾಕನ ಸೇವಕರಿಗೆ ಹೇಳಿದ್ದೇನಂದರೆ—ಬಾಲಾಕನು ನನಗೆ ತನ್ನ ಮನೆ ತುಂಬ ಬೆಳ್ಳಿಯನ್ನೂ ಭಂಗಾರವನ್ನೂ ಕೊಟ್ಟಿರೂ, ನಾನು ನನ್ನ ದೇವರಾಗಿರುವ ಕರ್ತನ ಆಜ್ಞೆಯನ್ನು ಮೀರಿ, ಸಣ್ಣದನ್ನಾಗಲಿ ದೊಡ್ಡದನ್ನಾಗಲಿ ಮಾಡಲಾರೆನು.
೧೯ ಆದರೆ ಈಗ, ಕರ್ತನು ನನಗೆ ಮತ್ತೇನು ಹೇಳುವನೆಂದು, ನಾನು ತಿಳುಕೊಳ್ಳುವ ಹಾಗೆ, ನೀವು ಸಹ ದಯೆ ಮಾಡಿ, ಈ ರಾತ್ರಿ ಇಲ್ಲಿ ಇಳು ಕೊಳ್ಳಿರಿ.

೨೦ ಆಗ ದೇವರು ಬಿಳಾಮನ ಬಳಿಗೆ ರಾತ್ರಿಯಲ್ಲಿ ಬಂದು, ಅವನಿಗೆ ಹೇಳಿದ್ದೇನಂದರೆ—ಈ ಮನುಷ್ಯರು ನಿನ್ನನ್ನು ಕರೆಯಲಿಕ್ಕೆ ಬಂದಿದ್ದರೆ, ನೀನು ಎದ್ದು, ಅವರ ಸಂಗಡ ಹೋಗು; ಆದರೆ ನಾನು ನಿನಗೆ ಹೇಳುವ ಮಾತೇ ನೀನು ಮಾಡ ಬೇಕು.

೨೧ ಬಿಳಾಮನು ಬೆಳ್ಗೆ ಎದ್ದು, ತನ್ನ ಕತ್ತೆಯನ್ನು ಕಟ್ಟಿ, ಮೋ
೨೨ ವಾಬಿನ ಪ್ರಭುಗಳ ಸಂಗಡ ಹೋದನು. ಆದರೆ ಅವನು ಹೋದದರಿಂದ ದೇವರ ಕೋಪವು ಉರಿಯಿತು, ಕರ್ತನ ದೂತನು ಅವನಿಗೆ ಎದುರಾಳಿಯಾಗಿ ಮಾರ್ಗದಲ್ಲಿ ನಿಂತು ಕೊಂಡನು; ಆದರೆ ಅವನು ತನ್ನ ಕತ್ತೆಯ ಮೇಲೆ ಹತ್ತಿ ಕೊಂಡಿದ್ದನು; ಅವನ ಇಬ್ಬರು
೨೩ ಆಳುಗಳು ಅವನ ಸಂಗಡ ಇದ್ದರು. ಮತ್ತು ಕತ್ತೆಯು ಮಾರ್ಗದಲ್ಲಿ ನಿಂತಿದ್ದ ಕರ್ತನ ದೂತನನ್ನೂ, ಅವನ ಕೈಯಲ್ಲಿರುವ ಬಿ



ಚ್ಚು ಕತ್ತಿಯನ್ನೂ ನೋಡಿ, ಮಾರ್ಗದಿಂದ ವಾಕೆಯಾಗಿ ಹೊ
೨೪ ಲಕೊಳ್ಳಗೆ ಹಾಯಿತು; ಆಗ ಬಿಳಾಮನು ಕತ್ತೆಯನ್ನು ಮಾರ್ಗ ಹೊಳ್ಳಗೆ ತಿರುಗಿಸುವದಕ್ಕೆ ಅದನ್ನು ಹೊಡೆದನು. ಆದರೆ ಕರ್ತನ
೨೫ ದೂತನು ದ್ರಾಕ್ಷೇ ತೋಟಗಳ ಹಾದಿಯಲ್ಲಿ, ಈಚೆ ಆಚೆ ಗೋಡೆ ಇದ್ದಲ್ಲಿ, ನಿಂತನು. ಮತ್ತು ಕತ್ತೆಯು ಕರ್ತನ ದೂತನನ್ನು ನೋಡಿ, ಗೋಡೆಗೆ ಒತ್ತಿ ಕೊಂಡು, ಬಿಳಾಮನ ಕಾಲನ್ನು ಗೋಡೆಗೆ ಒತ್ತಿ ಹಾಕಿತು; ಅವನು ಅದನ್ನು ಹೆಚ್ಚಾಗಿ ಹೊಡೆದನು
೨೬ ಆಗ ಕರ್ತನ ದೂತನು ಮುಂದೆ ಹೋಗಿ, ಬಲಕ್ಕೂ ಎಡಕ್ಕೂ ತಿ
೨೭ ರುಗಲಿಕ್ಕೆ ಮಾರ್ಗವಿಲ್ಲದ ಇಕ್ಕಟ್ಟಿನ ಸ್ಥಳದಲ್ಲಿ ನಿಂತನು. ಕತ್ತೆಯು ಕರ್ತನ ದೂತನನ್ನು ನೋಡಿ, ಬಿಳಾಮನು ಕೆಳಗೆ ಬಿತ್ತು; ಆದಕಾರಣ ಬಿಳಾಮನು ಕೋಪಿಸಿ ಕೊಂಡು, ಕತ್ತೆಯನ್ನು
೨೮ ಪೆತ್ತದಿಂದ ಹೊಡೆದನು. ಆಗ ಕರ್ತನು ಕತ್ತೆಯ ಬಾಯಿಯನ್ನು ತೆರೆದನು; ಅದು ಬಿಳಾಮನಿಗೆ, ಈಗ ನನ್ನನ್ನು ಮೂರು ಸಾರಿ ಹೊಡೆಯುವ ಹಾಗೆ, ನಾನು ನಿನಗೆ ಏನು ಮಾಡಿದೆನೆಂದು, ಹೇಳಿ
೨೯ ತು. ಬಿಳಾಮನು ಕತ್ತೆಗೆ, ನೀನು ನನಗೆ ಹಾಸ್ಯ ಮಾಡಿದಿಯಲ್ಲ! ನನ್ನ ಕೈಯಲ್ಲಿ ಕತ್ತಿ ಇದ್ದರೆ, ನಾನು ಈಗಲೇ ನಿನ್ನನ್ನು ಕೊಂ
೩೦ ದು ಹಾಕುವೆನು, ಅಂದನು. ಕತ್ತೆಯು ಬಿಳಾಮನಿಗೆ ಹೇಳಿದ್ದು—ನಾನು ನಿನ್ನದಾದಂದಿಲಿಂದ ಈ ದಿವಸದ ಪರ್ಯಂತರ ನೀನು ಹತ್ತಿ ಕೊಂಡ ನಿನ್ನ ಕತ್ತೆಯು ನಾನಲ್ಲವೋ! ನಾನು ಎಂದಾದರೂ ನಿನಗೆ ಈ ಪ್ರಕಾರ ಮಾಡಿದೆನೋ! ಅದಕ್ಕವನು, ಇಲ್ಲ, ಅಂದನು.
೩೧ ಆಗ ಕರ್ತನು ಬಿಳಾಮನ ಕಣ್ಣುಗಳನ್ನು ತೆರೆದನು; ಅವನು ಮಾರ್ಗದಲ್ಲಿ ನಿಂತಿದ್ದ ಕರ್ತನ ದೂತನನ್ನೂ, ಅತನ ಕೈಯಲ್ಲಿರುವ ಬಿಚ್ಚು ಕತ್ತಿಯನ್ನೂ ನೋಡಿ, ಎರಗಿ, ಮೊಗೆ ಕೆಳಗಾಗಿ ಬಿ
೩೨ ದ್ದನು. ಮತ್ತು ಕರ್ತನ ದೂತನು ಅವನಿಗೆ ಹೇಳಿದ್ದು—ನಿನ್ನ ಕತ್ತೆಯನ್ನು ಈಗ ಮೂರು ಸಾರಿ ಹೊಡೆದ್ದು ಯಾಕೆ! ಇಗೋ, ಈ ಮಾರ್ಗ ನನ್ನ ಮುಂದೆ ಸೊಟ್ಟಿಯಾಗಿರುವದರಿಂದ ನಾ
೩೩ ನು ಎದುರಾಳಿಯಾಗಿ ಹೊರಟೆನು. ಆ ಕತ್ತೆ ನನ್ನನ್ನು ನೋಡಿ, ನನ್ನ ಮುಂದೆ ಈಗ ಮೂರು ಸಾರಿ ವಾಕೆಗೆ ಹೋಯಿತು; ಅದು ನನ್ನ ಮುಂದೆ ವಾಕೆಗೆ ಹೋಗದಿದ್ದರೆ, ನಿಶ್ಚಯವಾಗಿ ಆಗಲೇ ನಿನ್ನ
೩೪ ನ್ನು ಕೊಂದು ಹಾಕಿ, ಅದನ್ನು ಪ್ರಾಣದಿಂದ ಉಳಿಸಿರುವೆನು. ಆಗ ಬಿಳಾಮನು ಕರ್ತನ ದೂತನಿಗೆ ಹೇಳಿದ್ದು—ನಾನು ಪಾಪ ಮಾಡಿದ್ದೇನೆ; ಯಾಕಂದರೆ ನೀನು ನನಗೆದುರಾಗಿ ಮಾರ್ಗದಲ್ಲಿ ನಿಂತಿದ್ದಿ ಎಂದು, ನನಗೆ ತಿಳಿಯಲಿಲ್ಲ; ಹೀಗಿರಲಾಗಿ ಅದು ನಿನ್ನ ದೃಷ್ಟಿ
೩೫ ಯಲ್ಲಿ ಕೆಟ್ಟದ್ದಾದರೆ, ನಾನು ಹಿಂದಕ್ಕೆ ಹೋಗುತ್ತೇನೆ. ಆದರೆ ಕರ್ತನ ದೂತನು ಬಿಳಾಮನಿಗೆ ಹೇಳಿದ್ದೇನಂದರೆ—ಈ ಮನುಷ್ಯರ ಸಂಗಡ ಹೋಗು; ಹೋದರೂ, ನಾನು ನಿನಗೆ ಹೇಳುವದನ್ನೇ ಹೇಳ ಬೇಕು. ಹಾಗೆ ಬಿಳಾಮನು ಬಾಲಾಕನ ಪ್ರಭುಗಳ ಸಂಗಡ ಹೋದನು.

೩೬ ಬಿಳಾಮನು ಬಂದನೆಂದು, ಬಾಲಾಕನು ಕೇಳಿದಾಗ, ಅವನು ಕಡೇ ಮೇರೆಯಲ್ಲಿರುವ ಅರ್ನೋನಿನ ಅಚೆಯಲ್ಲಿದ್ದ ಮೋವಾಬಿನ
೩೭ ಪಟ್ಟಣಕ್ಕೆ ಅವನಿಗೆದುರಾಗಿ ಹೊರಟನು. ಬಾಲಾಕನು ಬಿಳಾಮನಿಗೆ ಹೇಳಿದ್ದೇನಂದರೆ—ನಾನು ನಿನ್ನನ್ನು ಅವಶ್ಯವಾಗಿ ಕರೆ ಕಳುಹಿಸಲಿಲ್ಲವೋ! ನೀನು ನನ್ನ ಬಳಿಗೆ ಯಾಕೆ ಬರಲಿಲ್ಲ! ನಾನು ನಿನ್ನನ್ನು ಘನಪಡಿಸ ನಿಶ್ಚಯವಾಗಿ ಸಾಮರ್ಥ್ಯವುಳ್ಳವನಲ್ಲವೋ!
೩೮ ಬಿಳಾಮನು ಬಾಲಾಕನಿಗೆ ಹೇಳಿದ್ದು, ಇಗೋ, ನಿನ್ನ ಬಳಿಗೆ ಬಂದಿದ್ದೇನೆ; ಈಗ ಏನಾದರೂ ಹೇಳುವದಕ್ಕೆ ನನ್ನಿಂದಾಗುವದೋ! ದೇವರು ನನ್ನ ಬಾಯಿಯಲ್ಲಿರುವ ಮಾತನ್ನೇ ಹೇಳುವೆನು. ಆಗ
೩೯ ಬಿಳಾಮನು ಬಾಲಾಕನ ಸಂಗಡ ಹೋದನು; ಇಬ್ಬರು ಕಿರ್ಯಾತ್ ಹುಚೋಶಿಗೆ ಬಂದರು. ಮತ್ತು ಬಾಲಾಕನು ಎತ್ತುಗಳನ್ನೂ ಕುರಿಗಳನ್ನೂ ಅರ್ಪಿಸಿ, ಬಿಳಾಮನಿಗೂ ಅವನ ಸಂಗಡ ಇದ್ದ
೪೦ ಪ್ರಭುಗಳಿಗೂ, ಕಳುಹಿಸಿದನು.

೪೧ ಮರು ದಿವಸದಲ್ಲಿ ಬಾಲಾಕನು ಬಿಳಾಮನನ್ನು ತಕ್ಕೊಂಡು, ಬಾಳನ ಪೀಠಗಳ ಬಳಿಗೆ ಏರಿಸಿದನು; ಅಲ್ಲಿಂದ ಅವನು ಜನರ ಕಡೇ ಭಾಗವನ್ನು ನೋಡಿದನು.

## ೨೩. ಸಂಧಿ.

೧ ಆಗ ಬಿಳಾಮನು ಬಾಲಾಕನಿಗೆ—ಇಲ್ಲಿ ನನಗೆ ಏಳು ಬಲಿಪೀಠಗಳನ್ನು ಕಟ್ಟಿ, ನನಗೆ ಇಲ್ಲಿ ಏಳು ಹೋರಿಗಳನ್ನೂ ಏಳು ಟಗರುಗಳನ್ನೂ ಸಿದ್ಧ ಮಾಡು, ಅಂದನು. ಬಿಳಾಮನು ಹೇಳಿದ
೨ ಪ್ರಕಾರ ಬಾಲಾಕನು ಮಾಡಿದನು; ಬಾಲಾಕನೂ ಬಿಳಾಮನೂ ಒಂದೊಂದು ಬಲಿಪೀಠದ ಮೇಲೆ ಒಂದೊಂದು ಹೋರಿಯನ್ನೂ
3 ಒಂದೊಂದು ಟಗರನ್ನೂ ಅರ್ಪಿಸಿದರು. ಆಗ ಬಿಳಾಮನು ಬಾಲಾಕನಿಗೆ, ನಿನ್ನ ಹೋಮದ ಹತ್ತರ ನಿಂತುಕೋ; ನಾನು ಹೋಗುತ್ತೇನೆ; ಒಂದು ವೇಳೆ ಕರ್ತನು ನನಗೆ ಎದುರಾಗಿ ಬರುವನು. ಅವನು ನನಗೆ ತೋರಿಸುವ ಮಾತನ್ನು ನಿನಗೆ ತಿಳಿಸುವೆನೆಂದು
೪ ಹೇಳಿ, ಒಂದು ಮೇಟನ್ನು ಏರಿ ಹೋದನು ದೇವರು ಬಿಳಾಮನಿಗೆ ಎದುರಾಗಿ ಬಂದನು; ಇವನು ಅವನಿಗೆ—ನಾನು ಏಳು ಬಲಿಪೀಠಗಳನ್ನು ಸಿದ್ಧ ಮಾಡಿ, ಒಂದೊಂದು ಬಲಿಪೀಠದ ಮೇಲೆ ಒಂದೊಂದು ಹೋರಿಯನ್ನೂ ಒಂದೊಂದು ಟಗರನ್ನೂ ಅರ್ಪಿಸಿದ್ದೇನೆ, ಅಂದನು. ಕರ್ತನು ಬಿಳಾಮನ ಬಾಯಿಯೊಳಗೆ ಮಾತನ್ನು
೫ ಇಟ್ಟು, ನೀನು ಬಾಲಾಕನ ಬಳಿಗೆ ತಿರಿಗಿ ಹೋಗಿ, ಈ ಪ್ರಕಾರ ಮಾತಾಡ ಬೇಕು, ಅಂದನು. ಆಗಲವನು ಬಾಲಾಕನ ಬಳಿಗೆ ತಿರುಗಿದನು; ಅಗೋ, ಬಾಲಾಕನೂ ಮೋವಾಬಿನ ಸಕಲ ಪ್ರಭುಗಳೂ
6 ಅವನು ಮಾಡಿದ ಹೋಮದ ಹತ್ತರ ನಿಂತಿದ್ದರು. ಆಗಲವನು ತನ್ನ ನಾಮ್ಯವನ್ನು ಎತ್ತಿ, ಹೇಳಿದ್ದೇನಂದರೆ—

ಮೋವಾಬಿನ ಅರಸನಾದ ಬಾಲಾಕನು ನನ್ನನ್ನು ಅರಾಮಿನಿಂದಲೂ,
ಪೂರ್ವ ಪರ್ವತಗಳಿಂದಲೂ, ಕರಿಸಿ,
ನನಗೋಸ್ಕರ ಯಾಕೋಬನನ್ನು ಶಪಿಸ ಬಾ;
ಇಸ್ರಯೇಲನ್ನು ಆಕ್ರೋಧಿಸ ಬಾ, ಎಂದು ನನಗೆ ಹೇಳಿದ್ದಾನೆ.
೮ ದೇವರು ಶಪಿಸದವನನ್ನು ನಾನು ಹ್ಯಾಗೆ ಶಪಿಸಲಿ!
ಕರ್ತನು ಆಕ್ರೋಧಿಸದವನನ್ನು ನಾನು ಹ್ಯಾಗೆ ಆಕ್ರೋಧಿಸಲಿ!
೯ ಯಾಕಂದರೆ ಬಂಡೆಗಳ ತುದಿಯಿಂದ ಅವನನ್ನು ನೋಡುತ್ತೇನೆ;
ಗುಡ್ಡಗಳಿಂದ ಅವನನ್ನು ದೃಷ್ಟಿಸಿದ್ದೇನೆ;
ಇಗೋ, ಆ ಜನ ಒಂಟಿಯಾಗಿ ವಾಸಿಸುವದು,
ಜನಾಂಗಗಳಲ್ಲಿ ಎಣಿಸಲ್ಪಡುವದಿಲ್ಲ.
೧೦ ಯಾಕೋಬನ ಧೂಳಿನನ್ನೂ,
ಇಸ್ರಯೇಲಿನ ಕಾಲು ಭಾಗವನ್ನೂ ಲೆಕ್ಕಿಸ ಬಾರದವನ್ಯಾರು!
ನನ್ನ ಪ್ರಾಣವು ನೀಟ್ಟಾಯವರ ಸ್ಥಾವಿನ ಹಾಗೆ ಸಾಯಲಿ;
ನನ್ನ ಅಂತ್ಯವು ಅವನವರ ಹಾಗೆ ಆಗಲಿ.

೧೧ ಆಗ ಬಾಲಾಕನು ಬಿಳಾಮನ ಸಂಗಡ, ನೀನು ನನಗೆ ಏನು ಮಾ
ಡಿದಿ! ನನ್ನ ಶತ್ರುಗಳನ್ನು ಶಪಿಸುವದಕ್ಕೆ ನಿನ್ನನ್ನು ಕರಿಸಿದೆನು;
ಮತ್ತು, ಇಗೋ, ನೀನು ಆಶೀರ್ವದಿಸೇ ಆಶೀರ್ವದಿಸಿದಿ, ಅಂದನು.
೧೨ ಅದಕ್ಕವನು ಪ್ರತ್ಯುತ್ತರವಾಗಿ—ಕರ್ತನು ನನ್ನ ಬಾಯಿಯೊಳಗೆ
ಇಡುವದನ್ನು ಹೇಳುವದಕ್ಕೆ ನಾನು ಜಾಗ್ರತೆಯಾಗಿರ ಬೇಕಲ್ಲ
೧೩ ವೋ! ಅಂದನು. ಮತ್ತು ಬಾಲಾಕನು ಅವನಿಗೆ ಹೇಳಿದ್ದೇನಂದರೆ—
ನೀನು ಅವರನ್ನು ನೋಡ ತಕ್ಕ ಮತ್ತೊಂದು ಸ್ಥಳಕ್ಕೆ ಬಾ, ಅವ
ರನ್ನೆಲ್ಲಾ ನೋಡದೆ, ಅವರ ಅಂತ್ಯ ಭಾಗವನ್ನು ಮಾತ್ರ ನೋ
೧೪ ಡುವಿ; ಅಲ್ಲಿಂದ ಅವರನ್ನು ನನಗೋಸ್ಕರ ಶಪಿಸು. ಹಾಗೆ ಬಾಲಾಕ
ನು ಬಿಳಾಮನನ್ನು ಪಿಸ್ಗದ ತುದಿಗೆ ಹೊಳಿಮನ ಬೈಲಿಗೆ, ಕರ
ಕೊಂಡು ಹೋಗಿ, ಏಳು ಬಲಿಪೀಠಗಳನ್ನು ಕಟ್ಟಿ, ಒಂದೊಂದು ಬಲಿ
ಪೀಠದ ಮೇಲೆ ಒಂದೊಂದು ಹೋರಿಯನ್ನೂ ಒಂದೊಂದು ಟಗರ
೧೫ ನ್ನೂ ಅರ್ಪಿಸಿದನು. ಆಗಲವನು ಬಾಲಾಕನಿಗೆ, ಇಲ್ಲಿ ನಿನ್ನ ಹೋ
೧೬ ಮದ ಹತ್ತರ ನಿಂತುಕೋ; ನಾನು ಅಲ್ಲಿ ಎದುರುಗೊಳ್ಳುವೆನು,
ಅಂದನು. ಮತ್ತು ಕರ್ತನು ಬಿಳಾಮನ ಎದುರಿಗೆ ಬಂದು, ಅವನ
ಬಾಯಿಯೊಳಗೆ ವಾಕ್ಯವನಿಟ್ಟು, ಹೇಳಿದ್ದೇನಂದರೆ—ನೀನು ಬಾ
೧೭ ಲಾಕನ ಬಳಿಗೆ ತಿರಿಗಿ ಹೋಗಿ, ಈ ಪ್ರಕಾರ ಮಾತಾಡು. ಇವನು
ಅವನ ಬಳಿಗೆ ಬಂದಾಗ, ಇಗೋ, ಅವನೂ ಅವನ ಸಂಗಡ ಮೋ
ವಾಬಿನ ಪ್ರಭುಗಳೂ ಅವನ ಹೋಮದ ಹತ್ತರ ನಿಂತು ಕೊಂಡಿದ್ದ
೧೮ ರು; ಮತ್ತು ಬಾಲಾಕನು ಅವನಿಗೆ, ಕರ್ತನು ಏನು ಹೇಳಿದ್ದಾನೆ!
ಅಂದನು. ಅವನು ತನ್ನ ಸಾಮ್ಯವನ್ನು ಎತ್ತಿ, ಹೇಳಿದ್ದೇನಂದರೆ—

ಬಾಲಾಕನೇ, ಎದ್ದು, ಕೇಳು;
ಚಿಪ್ಪೋರನ ಮಗನೇ, ನನಗೆ ಕಿವಿ ಕೊಡು.
೧೯ ದೇವರು ಸುಳ್ಳು ಹೇಳುವ ಹಾಗೆ ಮನುಷ್ಯನಲ್ಲ;
ಪಶ್ಚಾತ್ತಾಪ ಪಡುವ ಹಾಗೆ ನರಪುತ್ರನಲ್ಲ;
ಅವನು ನುಡಿದು, ಮಾಡನೇ!
ಮಾತಾಡಿ, ಅದನ್ನು ಸ್ಥಾಪಿಸನೇ!
೨೦ ಇಗೋ, ಆಶೀರ್ವದಿಸಲಿಕ್ಕೆ ಮಾತು ಹೊಂದಿದ್ದೇನೆ;
ಅವನು ಆಶೀರ್ವದಿಸುತ್ತಿದ್ದಾನೆ; ನಾನು ಅದನ್ನು ಬದಲು ಮಾಡ
ಲಾರೆನು.
೨೧ ಅವನು ಯಾಕೋಬನಲ್ಲಿ ಪಾತಕವನ್ನು ಕಾಣಲಿಲ್ಲ;
ಇಸ್ರಯೇಲಿನಲ್ಲಿ ಕಾಟವನ್ನು ನೋಡಲಿಲ್ಲ;
ಅವನ ದೇವರಾದ ಕರ್ತನು ಅವನ ಸಂಗಡ ಇದ್ದಾನೆ;
ಅರಸನ ಜಯ ಧ್ವನಿ ಅವನಲ್ಲಿ ಉಂಟು.
೨೨ ದೇವರು ಅವರನ್ನು ಐಗುಪ್ತದೊಳಗಿಂದ ಹೊರಡಿಸಿದ್ದಾನೆ;
ಅವನಿಗೆ ಕಾಡ ಕೋಣದಂತೆ ಬಲ ಉಂಟು.
೨೩ ನಿಶ್ಚಯವಾಗಿ ಯಾಕೋಬನಿಗೆ ವಿರೋಧವಾಗಿ ಶಕುನವಿಲ್ಲ;
ಇಸ್ರಯೇಲನಿಗೆ ವಿರೋಧವಾಗಿ ಕಣಿ ಇಲ್ಲ;
ತತ್ಕಾಲದಲ್ಲಿ ದೇವರು ಏನು ಮಾಡಿದನೆಂದು, ಯಾಕೋಬನ
ವಿಷಯವಾಗಿಯೂ,
ಇಸ್ರಯೇಲಿನ ವಿಷಯವಾಗಿಯೂ ಹೇಳುವರು.
೨೪ ಇಗೋ, ಜನ ಸಿಂಹದ ಹಾಗೆ ಏಳುವದು;
ಸಿಂಹದ ಮರಿಯ ಹಾಗೆ ಎದ್ದು ಕೊಳ್ಳುವದು;
ಅದು ಕೊಲ್ಲೆಯನ್ನು ತಿಂದು,
ಹತವಾದವರ ರಕ್ತವನ್ನು ಕುಡಿಯುವ ಪರ್ಯಂತರ ಮಲಗದು.

೨೫ ಆಗ ಬಾಲಾಕನು ಬಿಳಾಮನಿಗೆ—ಅವರನ್ನು ಶಪಿಸಲೂ ಬೇಡ;
೨೬ ಆಶೀರ್ವದಿಸಲೂ ಬೇಡ, ಅಂದನು. ಬಿಳಾಮನು ಪ್ರತ್ಯುತ್ತರವಾಗಿ
ಬಾಲಾಕನಿಗೆ, ಕರ್ತನು ಹೇಳುವದನ್ನೆಲ್ಲಾ ನಾನು ಮಾಡುವೆನೆಂದು,
ನಿನಗೆ ಹೇಳಲಿಲ್ಲವೋ! ಅಂದನು.
೨೭ ಆಗ ಬಾಲಾಕನು ಬಿಳಾಮನ ಸಂಗಡ ಹೇಳಿದ್ದೇನಂದರೆ—ದಯ
ಮಾಡಿ ಬಾ, ನಾನು ನಿನ್ನನ್ನು ಬೇರೆ ಒಂದು ಸ್ಥಳಕ್ಕೆ ಕರ ಕೊಂ
ಡು ಹೋಗುವೆನು; ನೀನು ಅಲ್ಲಿಂದ ನನಗೋಸ್ಕರ ಅವರನ್ನು ಶಪಿ
ಸುವದು ಒಂದು ವೇಳೆ ದೇವರ ಕಣ್ಣುಗಳಲ್ಲಿ ಯುಕ್ತವಾಗಿದ್ದೀತು.
೨೮ ಅದಕಾರಣ ಬಾಲಾಕನು ಬಿಳಾಮನನ್ನು ಕಾಡಿಗೆದುರಾಗಿರುವ ಪೆ
೨೯ ಯೋರಿನ ತುದಿಗೆ ಕರ ಕೊಂಡು ಹೋದನು. ಬಿಳಾಮನು ಬಾ
ಲಾಕನಿಗೆ—ನನಗೆ ಇಲ್ಲಿ ಏಳು ಬಲಿಪೀಠಗಳನ್ನು ಕಟ್ಟು, ಇಲ್ಲಿ ನನಗೆ
ಏಳು ಹೋರಿಗಳನ್ನೂ ಏಳು ಟಗರುಗಳನ್ನೂ ಸಿದ್ಧ ಮಾಡು, ಅಂ
೩೦ ದನು. ಬಿಳಾಮನು ಹೇಳಿದ ಪ್ರಕಾರ ಬಾಲಾಕನು ಮಾಡಿ, ಬಲಿಪೀ
ಠದ ಮೇಲೆ ಒಂದೊಂದು ಹೋರಿಯನ್ನೂ ಒಂದೊಂದು ಟಗರ
ನ್ನೂ ಅರ್ಪಿಸಿದನು.

## ೨೪. ಸಂಧಿ.

೧ ಆದರೆ ಇಸ್ರಯೇಲನ್ನು ಆಶೀರ್ವದಿಸುವದಕ್ಕೆ ಕರ್ತನ
ದೃಷ್ಟಿಗೆ ಒಳ್ಳೇದೆಂದು, ಬಿಳಾಮನು ನೋಡಿದಾಗ, ಅವನು
ಮುಂಜಿನ ಹಾಗೆ ಶಕುನಗಳನ್ನು ಕಂಡು ಕೊಳ್ಳುವದಕ್ಕೆ ಹೋ
೨ ಗದೆ, ತನ್ನ ಮುಖವನ್ನು ಅರಣ್ಯದ ಕಡೆಗೆ ಇಟ್ಟನು. ಬಿಳಾಮ
ನು ತನ್ನ ಕಣ್ಣುಗಳನ್ನೆತ್ತಿ, ಇಸ್ರಯೇಲು ತನ್ನ ಕುಲಗಳ ಪ್ರಕಾ
ರ ವಾಸವಾಗಿರುವದನ್ನು ನೋಡಿದಾಗ, ದೇವರ ಆತ್ಮವು ಅವನ
೩ ಮೇಲೆ ಬಂತು. ಆಗ ಅವನು ತನ್ನ ಸಾಮ್ಯವನ್ನು ಎತ್ತಿ, ಹೇ
ಳಿದ್ದೇನಂದರೆ—

ಬೆಯೋರನ ಮಗನಾದ ಬಿಳಾಮನು ಹೇಳಿದ್ದು,
ತೆರೆದ ಕಣ್ಣುಳ್ಳ ಪುರುಷನು ಹೇಳಿದ್ದು,
೪ ದೇವರ ಮಾತುಗಳನ್ನು ಕೇಳಿದವನೂ,
ಸರ್ವ ಶಕ್ತನ ಪ್ರಕಟನೆಯನ್ನು ನೋಡಿದವನೂ,
ಬಿದ್ದಿದ್ದು, ತೆರೆದ ಕಣ್ಣುಳ್ಳವನೂ ಹೇಳಿದ್ದು—
೫ ಯಾಕೋಬನೇ, ನಿನ್ನ ಗುಡಾರಗಳೂ,
ಇಸ್ರಯೇಲೇ, ನಿನ್ನ ನಿವಾಸಗಳೂ, ಎಷ್ಟು ಉತ್ತಮವಾಗಿವೆ!
೬ ಅವು ಹಳ್ಳಗಳ ಹಾಗೆ ವಿಸ್ತರಿಸಿ ಅವೆ,
ನದೀ ತೀರದಲ್ಲಿರುವ ತೋಟಗಳ ಹಾಗೆಯೂ,
ಕರ್ತನು ನೆಟ್ಟ ಅಗರು ಮರಗಳ ಹಾಗೆಯೂ,
ನೀರಿನ ಬಳಿಯಲ್ಲಿರುವ ದೇವದಾರುಗಳ ಹಾಗೆಯೂ, ಇರುತ್ತವೆ.
೭ ತನ್ನ ಕಪಿಲೆಯಿಂದ ನೀರು ಹರಿಯ ಮಾಡುವನು;
ಅವನ ಬೀಜವು ಅನೇಕ ಜಲಗಳಲ್ಲಿ ಇರುವದು;
ಅವನ ಅರಸನು ಅಗಾಗನಿಗಿಂತ ಉನ್ನತವಾಗಿರುವನು;
ಅವನ ರಾಜ್ಯವು ಎದ್ದಿರುವದು.
೮ ದೇವರು ಅವನನ್ನು ಐಗುಪ್ತದಿಂದ ಹೊರಡ ಮಾಡಿದನು;
ಕಾಡ ಕೋಣದ ಬಲ ಅವನಿಗೆ ಉಂಟು.
ಅವನು ತನ್ನ ವೈರಿಗಳಾಗಿರುವ ಜನಾಂಗಗಳನ್ನು ತಿಂದು,
ಅವರ ಎಲುಬುಗಳನ್ನು ಚೂರು ಮಾಡಿ,
ತನ್ನ ಬಾಣಗಳಿಂದ ಘಾಯ ಮಾಡುವನು.





೯ ಅವನು ಸಿಂಹದ ಹಾಗೆಯೂ,
ಸಿಂಹಿಯ ಹಾಗೆಯೂ, ಬಾಗಿ ಮಲಗುತ್ತಾನೆ; ಅವನನ್ನು ಎಬ್ಬಿ
ಸುವವರು ಯಾರು!
ನಿನ್ನನ್ನು ಆಶೀರ್ವದಿಸುವವರಿಗೆ ಆಶೀರ್ವಾದ,
ನಿನ್ನನ್ನು ಶಪಿಸುವವರಿಗೆ ಶಾಪ ಉಂಟು.
೧೦ ಆಗ ಬಾಲಾಕನು ಬಿಳಾಮನ ಮೇಲೆ ಕೋಪಗೊಂಡು, ಚಪ್ಪ
ಳಿ ಇಟ್ಟನು; ಬಾಲಾಕನು ಬಿಳಾಮನಿಗೆ ಹೇಳಿದ್ದು—ನನ್ನ ಶತ್ರುಗ
ಳನ್ನು ಶಪಿಸುವದಕ್ಕೆ ನಿನ್ನನ್ನು ಕರೆದೆನು; ಆದರೆ, ಇಗೋ, ನೀ
೧೧ ನು ಈ ಮೂರು ಸಾರಿ ಆಶೀರ್ವದಿಸೇ ಆಶೀರ್ವದಿಸಿದಿ. ಈಗ
ನಿನ್ನ ಸ್ಥಳಕ್ಕೆ ಓಡಿ ಹೋಗು; ನಾನು ನಿನ್ನನ್ನು ಬಹು ಘನ
ಪಡಿಸುವೆನೆಂದು, ಹೇಳಿ ಕೊಂಡೆನು; ಆದರೆ, ಇಗೋ, ಕರ್ತನು
ನಿನಗೆ ಘನವನ್ನು ತಡೆದಿದ್ದಾನೆ.
೧೨ ಬಿಳಾಮನು ಬಾಲಾಕನಿಗೆ ಹೇಳಿದ್ದೇನಂದರೆ—ನೀನು ನನ್ನ ಬ
೧೩ ಳಿಗೆ ಕಳುಹಿಸಿದ ದೂತರಿಗೆ, ಬಾಲಾಕನು ನನಗೆ ತನ್ನ ಮನೆ
ತುಂಬ ಬೆಳ್ಳಿ ಭಂಗಾರಗಳನ್ನು ಕೊಟ್ಟರೂ, ನನ್ನ ಹೃದಯ
ದಿಂದ ಒಳ್ಳೇದನ್ನಾದರೂ ಕೆಟ್ಟದ್ದನ್ನಾದರೂ ಮಾಡುವದಕ್ಕೆ
ಕರ್ತನ ಆಜ್ಞೆಯನ್ನು ಮೀರಲಾರೆನು; ಕರ್ತನು ಏನು ಹೇಳು
ತ್ತಾನೋ, ಅದನ್ನು ಹೇಳುವೆನೆಂದು, ನಾನು ಹೇಳಿಲ್ಲವೋ!
೧೪ ಈಗ, ಇಗೋ, ನನ್ನ ಜನರ ಬಳಿಗೆ ಹೋಗುತ್ತೇನೆ; ಬಾ, ಈ
ಜನರು ನಿನ್ನ ಜನರಿಗೆ ಕಡೇ ದಿವಸಗಳಲ್ಲಿ ಏನು ಮಾಡುವರೋ,
೧೫ ಅದನ್ನು ನಿನಗೆ ತಿಳಿಸುವೆನು. ಆಗ ಅವನು ತನ್ನ ಸಾಮ್ಯವ
ನ್ನೆತ್ತಿ, ಹೇಳಿದ್ದೇನಂದರೆ—

ಬೆಯೋರನ ಮಗನಾದ ಬಿಳಾಮನು ಹೇಳಿದ್ದು—
ತೆರೆದ ಕಣ್ಣುಳ್ಳ ಮನುಷ್ಯನು ಹೇಳಿದ್ದು,
೧೬ ದೇವರ ಮಾತುಗಳನ್ನು ಕೇಳಿದವನೂ,
ಮಹೋನ್ನತನ ಜ್ಞಾನವನ್ನು ತಿಳಿದವನೂ,
ಸರ್ವ ಶಕ್ತನ ಪ್ರಕಟನೆಯನ್ನು ನೋಡಿದವನೂ,
ಬಿದ್ದಿದ್ದು, ತೆರೆದ ಕಣ್ಣುಳ್ಳವನೂ, ಹೇಳಿದ್ದು—
೧೭ ನಾನು ಅವನನ್ನು ನೋಡುವೆನು; ಈಗಲ್ಲ;
ಅವನನ್ನು ದೃಷ್ಟಿಸುವೆನು, ಸಮೀಪವಲ್ಲಿ ಅಲ್ಲ;
ಯಾಕೋಬನಿಂದ ನಕ್ಷತ್ರ ಉದಯಿಸುವದು;
ಇಸ್ರಯೇಲಿನಿಂದ ಕೋಲು ಏಳುವದು;
ಅದು ಮೋವಾಬಿನ ಕೊನೆಗಳನ್ನು ಮುರಿದು,
ಸೇಥನ ಸಕಲ ಮಕ್ಕಳನ್ನು ಸಂಹರಿಸುವದು.
೧೮ ಮತ್ತು ಎದೋಮು ಸ್ವಾಸ್ತ್ಯವಾಗುವದು;
ಸೇಯಿರು ತನ್ನ ಶತ್ರುಗಳಿಗೆ ಸ್ವಾಸ್ತ್ಯವಾಗುವದು;
ಆದರೆ ಇಸ್ರಯೇಲು ಪರಾಕ್ರಮ ಕಾರ್ಯ ಮಾಡುವದು,
೧೯ ಯಾಕೋಬನೊಳಗಿಂದ ಒಬ್ಬನು ಬಂದು, ಆಳುವನು;
ಅವನು ಪಟ್ಟಣದಲ್ಲಿ ಉಳಿದದ್ದನ್ನು ನಾಶನ ಮಾಡುವನು.
೨೦ ಆಗ ಅವನು ಅಮಲೇಕ್ಯರನ್ನು ನೋಡಿ, ತನ್ನ ಸಾಮ್ಯವ
ನ್ನು ಎತ್ತಿ, ಹೇಳಿದ್ದೇನಂದರೆ—
ಜನಾಂಗಗಳಲ್ಲಿ ಶ್ರೇಷ್ಠನೇ ಅಮಲೇಕನು;
ಆದರೆ ಅವನ ಅಂತ್ಯವು ಸದಾಕಾಲಕ್ಕೆ ನಾಶವಾಗುವದು.
೨೧ ಮತ್ತು ಕೇನ್ಯರನ್ನು ನೋಡಿ, ತನ್ನ ಸಾಮ್ಯವನ್ನೆತ್ತಿ, ಹೇಳಿ
ದ್ದೇನಂದರೆ—
ನಿನ್ನ ನಿವಾಸವು ಸ್ಥಿರವಾಗಿದೆ;
ನಿನ್ನ ಗೂಡನ್ನು ಬಂಡೆಯಲ್ಲಿ ಹಾಕಿದಿ.
೨೨ ಆದಾಗ್ಯೂ ಅಶೂರನು ನಿನ್ನನ್ನು ಶೆರೆಯಾಗಿ ವೈಯುವ ಪ
ರ್ಯಂತರ,
ಕೇನ್ಯನನ್ನು ಕ್ಷಯ ಮಾಡುವದಕ್ಕೆ ಒಬ್ಬನು ಇರುವನು.
೨೩ ಮತ್ತು ಅವನು ತನ್ನ ಸಾಮ್ಯವನ್ನೆತ್ತಿ, ಹೇಳಿದ್ದೇನಂದರೆ—
ಅಯ್ಯೋ! ದೇವರು ಅದನ್ನು ಮಾಡುವಾಗ, ಯಾರು ಬದುಕು
ವರು!
೨೪ ಕಿತ್ತಿಮನ ತೀರದಿಂದ ಹಡಗಗಳು ಬಂದು,
ಅಶೂರನನ್ನೂ ಏಬರನನ್ನೂ ತ್ರಮೆ ಪಡಿಸುವವು;
ಅವನು ಸಹ ನಾಶವಾಗುವನು.
೨೫ ಆಗ ಬಿಳಾಮನು ಎದ್ದು, ತನ್ನ ಸ್ಥಳಕ್ಕೆ ತಿರಿಗಿ ಹೋದನು,
ಬಾಲಾಕನು ಸಹ ತನ್ನ ಮಾರ್ಗವಾಗಿ ಹೋದನು.

## ೨೫. ಸಂಧಿ.

೧ ಆಗ ಇಸ್ರಯೇಲು ಶಿಟ್ಟಿಮವನ್ನಲ್ಲಿ ವಾಸ ಮಾಡಿದಾಗ, ಜನರು
ಮೋವಾಬಿನ ಕುಮಾರ್ತೆಗಳ ಸಂಗಡ ಜಾರತ್ವ ಮಾತಲಾರಂಭಿ
೨ ಸಿದರು. ಯಾಕಂದರೆ ಇವರು ಜನರನ್ನು ತಮ್ಮ ದೇವರುಗಳ
ಬಲಿಗಳಿಗೆ ಕರೆದರು; ಮತ್ತು ಜನರು ಊಟ ಮಾತಿ, ಅವರ ದೇ
3 ವರುಗಳಿಗೆ ಅಡ್ಡ ಬಿದ್ದರು. ಮತ್ತು ಇಸ್ರಯೇಲು ಬಾಳ್‌ಪೆಯೋ
ರಿಗೆ ಕೂಡಿ ಕೊಂಡದ್ದರಿಂದ ಕರ್ತನ ಕೋಪವು ಇಸ್ರಯೇಲಿನ
೪ ಮೇಲೆ ಉರಿಯಿತು. ಕರ್ತನು ಮೋಶೆಯ ಸಂಗಡ ಹೇಳಿದ್ದು—
ಕರ್ತನ ಕೋಪ ಜ್ವಾಲೆಯು ಇಸ್ರಯೇಲಿನಿಂದ ತಿರುಗುವ ಹಾ
ಗೆ, ನೀನು ಜನರ ಹಿರಿಯರೆಲ್ಲರನ್ನು ತಕ್ಕೊಂಡು, ಅವರನ್ನು
೫ ಸೂರ್ಯನಿಗೆದುರಾಗಿ ಕರ್ತನಿಗೆ ತೂಗ ಹಾಕು. ಮತ್ತು
ಮೋಶೆ ಇಸ್ರಯೇಲಿನ ನ್ಯಾಯಾಧಿಪತಿಗಳಿಗೆ ನೀವು ಒಬ್ಬೊ
ಬ್ಬನು ಬಾಳ್‌ಪೆಯೋರಿಗೆ ಕೂಡಿ ಕೊಂಡಿರುವ ತನ್ನ ಮನುಷ್ಯ
ರನ್ನು ಕೊಲ್ಲಿರಿ, ಅಂದನು.
೬ ಮತ್ತು, ಅಗೋ, ಇಸ್ರಯೇಲ್ ಮಕ್ಕಳಲ್ಲಿ ಒಬ್ಬನು ಬಂದು,
ಮೋಶೆಗೂ ಸಭೆಯ ಗುಡಾರದ ಮುಂದೆ ಅಳ್ತಿರುವ ಇಸ್ರ
ಯೇಲ್ ಮಕ್ಕಳ ಸಮಸ್ತ ಸಭೆಗೂ, ಕಾಣುವ ಹಾಗೆ, ತನ್ನ
ಸಹೋದರರೊಳಗೆ ಒಬ್ಬ ಮಿದ್ಯಾನ್ಯಳನ್ನು ತಂದನು.
೭ ಅಹರೋನನ ಮಗನಾಗಿದ್ದ ಎಲೆಯಾಜರನ ಮಗನಾದ ಫಿನೆಹಾ
ಸೆಂಬ ಯಾಜಕನು ಅದನ್ನು ನೋಡಿ, ಸಭೆಯ ಮಧ್ಯದಿಂದ
೮ ಎದ್ದು, ಭಲ್ಲೆಯನ್ನು ಹಿಡು ಕೊಂಡು, ಇಸ್ರಯೇಲಿನವನಾದ ಆ
ಮನುಷ್ಯನ ಹಿಂದೆ ಮಲಗುವ ಕೋಣೆಯೊಳಗೆ ಪ್ರವೇಶಿಸಿ, ಇಸ್ರ
ಯೇಲಿನವನನ್ನೂ, ಆ ಸ್ತ್ರೀಯನ್ನೂ, ಇಬ್ಬರನ್ನು ಹೊಟ್ಟೆ
ಯೊಳಗೆ ತಿವಿದನು; ಆಗ ಇಸ್ರಯೇಲ್ ಮಕ್ಕಳ ಮೇಲಿನಿಂದ
೯ ವ್ಯಾಧಿ ನಿಂತು ಹೋಯಿತು. ಆದರೆ ವ್ಯಾಧಿಯಿಂದ ಸತ್ತವರು
ಇಪ್ಪತ್ತು ನಾಲ್ಕು ಸಾವಿರ ಮಂದಿಯಾಗಿದ್ದರು.
೧೦ ಆಗ ಕರ್ತನು ಮೋಶೆಯ ಸಂಗಡ ಹೇಳಿದ್ದೇನಂದರೆ—
೧೧ ಅಹರೋನನ ಮಗನಾದ ಎಲೆಯಾಜರನ ಮಗನಾದ ಯಾಜಕನಾ
ಗಿರುವ ಫಿನೆಹಾನು ಇಸ್ರಯೇಲಿನ ಮಕ್ಕಳಲ್ಲಿ ನನಗೋಸ್ಕರ

ಆಸಕ್ತನಾಗಿದ್ದು, ನಾನು ನನ್ನ ಕೋಪದಿಂದ ಅವರನ್ನು ತೀರಿಸಿ
ಬಿಡದ ಹಾಗೆ, ನನ್ನ ಉರಿಯನ್ನು ಅವರ ಮೇಲಿನಿಂದ ತಿರುಗಿಸಿ
೧೨ ಬಿಟ್ಟಿದ್ದಾನೆ. ಆದಕಾರಣ ನೀನು ಹೇಳ್ಳ ಪೇಕಾದದ್ದೇನಂದರೆ—
ಇಗೋ, ನಾನು ಅವನಿಗೆ ನನ್ನ ಸಮಾಧಾನದ ಒಡಂಬಡಿಕೆಯ
೧೩ ನ್ನು ಕೊಡುತ್ತೇನೆ. ಅವನು ತನ್ನ ದೇವರಿಗೋಸ್ಕರ ಅಸಕ್ತ
ನಾಗಿದ್ದು, ಇಸ್ರಯೇಲಿನ ಮಕ್ಕಳಿಗೋಸ್ಕರ ಪಾಪ ಮುಚ್ಚಿದ್ದ
ರಿಂದ ಅವನಿಗೂ ಅವನ ಹಿಂದೆ ಬರುವ ಅವನ ಬೀಜಕ್ಕೂ ನಿತ್ಯ
೧೪ ಯಾಜಕತ್ವದ ಒಡಂಬಡಿಕೆಯಾಗಿರುವದು. ಆದರೆ ಮಿದ್ಯಾ
ನ್ಯಳ ಸಂಗಡ ಹೊಡೆಯಲ್ಪಟ್ಟ ಆ ಇಸ್ರಯೇಲಿನವನ ಹೆಸರು
ಜಿಮ್ರಿ, ಅವನು ಸಲೂಮನ ಮಗನು; ಸಿಮೆಯೋನ್ಯರ ತಂದೇ
೧೫ ಮನೆಯ ಪ್ರಭು. ಮತ್ತು ಮಿದ್ಯಾನ್ಯಳಾದ ಆ ಹೊಡೆಯಲ್ಪ
ಟ್ಟ ಸ್ತ್ರೀಯ ಹೆಸರು ಕೊಸ್ಬಿ; ಅವಳು ಮಿದ್ಯಾನ್ಯರಲ್ಲಿ ಪ್ರಜೆ
ಯ ಮುಖ್ಯಸ್ಥನೂ, ಒಂದು ತಂದೇ ಮನೆಗೆ ಯಜಮಾನನೂ ಆ
ಗಿರುವ ಚೂರನ ಮಗಳಾಗಿದ್ದಳು.

೧೬ ಮತ್ತು ಕರ್ತನು ಮೋಶೆಯ ಸಂಗಡ ಹೇಳ್ಳಿದ್ದೇನಂದರೆ,
ಮಿದ್ಯಾನ್ಯರಿಗೆ ಉಪದ್ರ ಕೊಟ್ಟು, ಅವರನ್ನು ಹೊಡೆಯಿರಿ.
೧೭ ಯಾಕಂದರೆ ಅವರು ಬೆಯೋರಿನ ಕಾರ್ಯದಲ್ಲಿಯೂ,
೧೮ ಬೆಯೋರಿಗೋಸ್ಕರ ವ್ಯಾಧಿಯ ದಿವಸದಲ್ಲಿ ಹೊಡೆಯಲ್ಪಟ್ಟ
ತಮ್ಮ ಸಹೋದರಿಯಾಗಿಯೂ, ಮಿದ್ಯಾನ್ಯರ ಪ್ರಭುವಿನ ಮಗ
ಳಾಗಿಯೂ ಇದ್ದ ಕೊಸ್ಬಿಯ ಕಾರ್ಯದಲ್ಲಿಯೂ, ನಿಮಗೆ
ಮಾಡಿದ ಮೋಸಗಳಿಂದ ನಿಮಗೆ ಉಪದ್ರ ಕೊಡುತ್ತಾರೆ.

## ೨೬. ಸಂಧಿ.

೧ ಆದರೆ ವ್ಯಾಧಿಯ ತರುವಾಯ ಕರ್ತನು ಮೋಶೆಯ ಸಂಗ
ಡಲೂ, ಆರೋನನ ಮಗನೂ ಯಾಜಕನೂ ಆಗಿರುವ ಎಲೆ
೨ ಯಾಜರನ ಸಂಗಡಲೂ, ಹೇಳ್ಳಿದ್ದೇನಂದರೆ—ಇಸ್ರಯೇಲ್ ಮ
ಕ್ಕಳ ಸಮಸ್ತ ಸಭೆಯ ಲೆಖ್ಖವನ್ನು ಇಪ್ಪತ್ತು ವರುಷದವರು
ಮೊದಲೊಗ್ಗಾಂದು ಇಸ್ರಯೇಲ್ಯರಲ್ಲಿ ಯುದ್ಧಕ್ಕೆ ಹೊರಡುವವರೆ
ಲ್ಲರ ಲೆಖ್ಖವನ್ನು ಅವರ ತಂದೇ ಮನೆಗಳ ಪ್ರಕಾರ ತಕೊಳ್ಳಿರಿ.
3 ಆಗ ಮೋಶೆಯೂ ಯಾಜಕನಾದ ಎಲೆಯಾಜರನೂ ಮೋವಾ
ಬಿನ ಬೈಲುಗಳಲ್ಲಿ ಯೆರಿಕೋವಿಗೆದುರಾಗಿ, ಯೊರ್ದನಿನ ಹತ್ತ
೪ ರ, ಅವರ ಸಂಗಡ ಮಾತಾಡಿ, ಹೇಳ್ಳಿದ್ದೇನಂದರೆ—ಕರ್ತನು
ಮೋಶೆಗೂ, ಐಗುಪ್ತ ದೇಶದಿಂದ ಹೊರಟೆದ್ದ ಇಸ್ರಯೇಲ್ ಮ
ಕ್ಕಳಿಗೂ, ಆಜ್ಞಾಪಿಸಿದ ಪ್ರಕಾರ ಇಪ್ಪತ್ತು ವರುಷದವರನ್ನೂ
ಅದಕ್ಕೆ ಅಧಿಕವಾದ ಪ್ರಾಯದವ್ಳರನ್ನೂ ಎಣಿಸ ಬೇಕು.

೫ ಇಸ್ರಯೇಲ್ ಜೊಚ್ಚಲ ಮಗನಾದ ರೂಬೆನನೂ, ರೂಬೆನ
ನ ಮಕ್ಕಳೂ; ಹನೋಕನು; ಇವನಿಂದ ಹನೋಕ್ಯರ ಗೋತ್ರ
೬ ಫಲ್ಲುವಿನಿಂದ ಫಲ್ಲುವಿಯರ ಗೋತ್ರ. ಹೆಜ್ರೋನನಿಂದ ಹೆ
ಜ್ರೋನ್ಯರ ಗೋತ್ರ; ಕರ್ಮಿಯಿಂದ ಕರ್ಮ್ಯರ ಗೋತ್ರ. ಇ
೭ ವೇ ರೂಬೆನಿಕ ಗೋತ್ರಗಳು, ಅವರಲ್ಲಿ ಎಣಿಸಲ್ಪಟ್ಟವರು ನಾಲ್ವ
ತ್ತು ಮೂರು ಸಾವಿರದ ಏಳು ನೂರ ಮೂವತ್ತು ಮಂದಿ. ಫಲ್ಲು
೮ ವಿನ ಮಕ್ಕಳು; ಎಲಿಯಾಬನು. ಎಲಿಯಾಬನ ಮಕ್ಕಳು; ನೆಮು
ವೇಲನು, ದಾಥಾನನು, ಅಬೀರಾಮನು; ಈ ದಾಥಾನನೂ ಅಬೀ
ರಾಮನೂ ಸಭೆಯ ಯಜಮಾನರಾಗಿದ್ದು, ಕೋರಹನ ಗುಂಪಿನ
ಲ್ಲಿ ಇವರು ಕರ್ತನಿಗೆ ವಿರೋಧವಾಗಿ ಹೋರಾಡಿದಾಗ, ಮೋಶೆ
೧೦ ಮೂ ಆರೋನನಿಗೂ ವಿರೋಧವಾಗಿ ಹೋರಾಡಿದರು. ಮತ್ತು
ಭೂಮಿಯು ತನ್ನ ಬಾಯಿಯನ್ನು ತೆಕೆದು, ಅವರನ್ನೂ ಕೋ
ರಹನನ್ನೂ ನುಂಗಿತು; ಹಾಗೆ ಗುಂಪಿನವರು ಸತ್ತರು; ಬೆಂಕಿಯು
ಇನ್ನೂಕೈವತ್ತು ಮಂದಿಯನ್ನು ಭಕ್ಷಿಸಿತು; ಮತ್ತು ಅವರು ಗು
೧೧ ರುತಾದರು. ಆದಾಗ್ಯೂ ಕೋರಹನ ಮಕ್ಕಳು ಸಾಯಿಲಿಲ್ಲ.

೧೨ ಗೋತ್ರಾನುಸಾರವಾದ ಸಿಮೆಯೋನನ ಮಕ್ಕಳು; ನೆಮುವೇ
ಲನಿಂದ ನೆಮುವೇಲ್ಯರ ಗೋತ್ರ; ಯಾಮೀನನಿಂದ ಯಾಮೀ
೧೩ ನ್ಯರ ಗೋತ್ರ; ಯಾಕೀನನಿಂದ ಯಾಕೀನ್ಯರ ಗೋತ್ರ; ಜೆರ
ನಿಂದ ಜೆರಾಹ್ಯರ ಗೋತ್ರ; ಸಾಲನಿಂದ ಸಾಲ್ಯರ ಗೋತ್ರ
೧೪ ಸಿಮೆಯೋನನ ಗೋತ್ರಗಳು ಇವೇ—ಇಪ್ಪತ್ತೆರಡು ಸಾವಿರದ
ಇನ್ನೂರು ಮಂದಿ.

೧೫ ಗೋತ್ರಾನುಸಾರವಾದ ಗಾದನ ಮಕ್ಕಳು; ಜೆಫೋನನಿಂದ
ಜೆಫೋನ್ಯರ ಗೋತ್ರ; ಹಗ್ಗಿಯಿಂದ ಹಗ್ಗಿಯರ ಗೋತ್ರ; ಶೂ
೧೬ನಿಯಿಂದ ಶೂನ್ಯರ ಗೋತ್ರ; ಒಜ್ನಿಯಿಂದ ಒಜ್ನಿಯರ ಗೋ
೧೭ ತ್ರ; ಏರಿಯಿಂದ ಏರಿಯ ಗೋತ್ರ; ಅರೋದನಿಂದ ಅರೋ
೧೮ ದ್ಯರ ಗೋತ್ರ, ಅರೇಲಿಯಿಂದ ಅರೇಲ್ಯರ ಗೋತ್ರ. ಗಾದನ
ಮಕ್ಕಳ ಗೋತ್ರಗಳು ಇವೇ. ಅವರಲ್ಲಿ ಎಣಿಸಲ್ಪಟ್ಟವರು ನಾ
ಲ್ವತ್ತು ಸಾವಿರದ ಐನೂರು ಮಂದಿ.

೧೯ ಯೆಹೂದನ ಮಕ್ಕಳು ಏರನೂ, ಓನಾನನೂ; ಆದರೆ ಏರ
೨೦ ನೂ ಓನಾನನೂ ಕಾನಾನ್ ದೇಶದಲ್ಲಿ ಸತ್ತರು. ಗೋತ್ರಾನುಸಾ
ರವಾದ ಯೆಹೂದನ ಮಕ್ಕಳು—ಶೆಲಹನಿಂದ ಶೆಲಹ್ಯರ ಗೋ
೨೧ ತ್ರ; ಪೇರೆಚನಿಂದ ಫರ್ಚ್ಯರ ಗೋತ್ರ; ಜೇರಹನಿಂದ ಜರ್ಹಿ
ಯರ ಗೋತ್ರ; ಪೇರೆಚನ ಮಕ್ಕಳು; ಹೆಜ್ರೋನನಿಂದ ಹೆಜ್ರೊ
೨೨ ನ್ಯರ ಗೋತ್ರ; ಹಮುಲನಿಂದ ಹಮುಲ್ಯರ ಗೋತ್ರ. ಯೆಹೂ
ದನ ಗೋತ್ರಗಳು ಇವೇ; ಅವರಲ್ಲಿ ಎಣಿಸಲ್ಪಟ್ಟವರು ಎಪ್ಪತ್ತಾ
ರು ಸಾವಿರದ ಐನೂರು ಮಂದಿ

೨೩ ಗೋತ್ರಾನುಸಾರವಾದ ಇಸ್ಸಾಕಾರನ ಮಕ್ಕಳು—ತೋಲನಿಂದ
ತೋಲಾಯರ ಗೋತ್ರ; ಪೂವನಿಂದ ಪೂವಿಯರ ಗೋತ್ರ
೨೪ ಯಾಕೂಬನಿಂದ ಯಾಕೂಬ್ಯರ ಗೋತ್ರ; ಶಿಮ್ರೋನನಿಂದ ಶಿ
೨೫ ಮ್ರೋನ್ಯರ ಗೋತ್ರ. ಇಸ್ಸಾಕಾರನ ಸಂತತಿಗಳು ಇವೇ; ಅವ
ರಲ್ಲಿ ಎಣಿಸಲ್ಪಟ್ಟವರು ಅರುವತ್ತು ನಾಲ್ಕು ಸಾವಿರದ ಮುನ್ನೂ
ರು ಮಂದಿ.

೨೬ ಗೋತ್ರಾನುಸಾರವಾದ ಜೆಬುಲೋನನ ಮಕ್ಕಳು—ಸೆರೆದ
ನಿಂದ ಸರ್ದ್ಯರ ಗೋತ್ರ; ಏಲೋನನಿಂದ ಏಲೋನ್ಯರ
೨೭ ಗೋತ್ರ; ಯಹ್ಲೆಲನಿಂದ ಯಹ್ಲೆಲ್ಯರ ಗೋತ್ರ. ಜೆಬುಲೋನಿಕ
ಗೋತ್ರಗಳು ಇವೇ; ಅವರಲ್ಲಿ ಎಣಿಸಲ್ಪಟ್ಟವರು ಅರುವತ್ತು ಸಾ
ವಿರದ ಐನೂರು ಮಂದಿ.

೨೮ ಗೋತ್ರಾನುಸಾರವಾದ ಯೋಸೆಫನ ಮಕ್ಕಳು—ಮನಸ್ಸೆ
ಯೂ ಎಫ್ರಯಿಮನೂ. ಮನಸ್ಸೆಯ ಮಕ್ಕಳು; ಮಕೀರನಿಂ
೨೯ ದ ಮಕೀರ್ಯರ ಸಂತತಿ. ಮಕೀರನು ಗಿಲ್ಯಾದನನ್ನು ಪಡೆದ
೩೦ ನು; ಗಿಲ್ಯಾದನಿಂದ ಗಿಲ್ಯಾದ್ಯರ ಗೋತ್ರ; ಗಿಲ್ಯಾದನ ಮಕ್ಕಳು
ಇವರೇ. ಇಯೇಜೆರನಿಂದ ಇಯೇಜೆರಿಯರ ಗೋತ್ರ; ಹೇಲೆಕ
೩೧ ನಿಂದ ಹೆಲೇಕ್ಯರ ಗೋತ್ರ; ಅಸ್ರಿಯೇಲನಿಂದ ಅಸ್ರಿಯೇಲ್ಯರ
೩೨ ಗೋತ್ರ; ಶೆಕೆಮನಿಂದ ಶೆಕ್ಕಿಯರ ಗೋತ್ರ; ಶೆಮಿದಾದನಿಂದ ಶೆಮಿ
೩೩ ದಾಯರ ಗೋತ್ರ; ಹೇಫೆರನಿಂದ ಹೆಫ್ರಿಯರ ಗೋತ್ರ. ಹೇಫೆ



ರನ ಮಗನಾದ ಜೆಲೊಫಾದನಿಗೆ ಕುಮಾರರಿಲ್ಲ, ಕುಮಾರ್ತೆ
ಗಳು ಇದ್ದರು; ಜೆಲೊಫಾದನ ಕುಮಾರ್ತೆಗಳ ಹೆಸರುಗಳು
೩೪ ಮಾಹಲ, ನೋವ, ಹೊಗ್ಲ, ಮಿಲ್ಕ, ತಿರ್ಚ. ಮನಸ್ಸೆಯ ಗೋ
ತ್ರಗಳು ಇವೇ; ಅವರಲ್ಲಿ ಎಣಿಸಲ್ಪಟ್ಟವರು ಐವತ್ತೆರಡು ಸಾವಿ
ರದ ಏಳು ನೂರು ಮಂದಿ.

೩೫ ಗೋತ್ರಾನುಸಾರವಾದ ಎಫ್ರಯಿಮನ ಮಕ್ಕಳು; ಶುಥೇ
ಲಹನಿಂದ ಶುಥೆಲ್ಯರ ಗೋತ್ರ; ಬೆಕೆರನಿಂದ ಬಕ್ರಿಯರ ಗೋ
೩೬ ತ್ರ; ಥಹನನಿಂದ ಥಹನ್ಯರ ಗೋತ್ರ. ಶುಥೇಲಹನ ಮಕ್ಕಳು;
೩೭ ಏರಾನನಿಂದ ಏರಾನ್ಯರ ಗೋತ್ರ. ಎಫ್ರಯಿಮನ ಮಕ್ಕಳ
ಗೋತ್ರಗಳು ಇವೇ; ಅವರಲ್ಲಿ ಎಣಿಸಲ್ಪಟ್ಟವರು ಮೂವತ್ತೆರಡು
ಸಾವಿರದ ಐನೂರು ಮಂದಿ. ಗೋತ್ರಾನುಸಾರವಾದ ಯೋಸೆ
ಫನ ಮಕ್ಕಳು ಇವರೇ.

೩೮ ಗೋತ್ರಾನುಸಾರವಾದ ಬೆನ್ಯಮೀನನ ಮಕ್ಕಳು; ಬೇಲನಿಂ
ದ ಬಲ್ಯರ ಗೋತ್ರ; ಅಷ್ಬೇಲನಿಂದ ಅಷ್ಬೇಲ್ಯರ ಗೋತ್ರ;
೩೯ ಅಹೀರಮನಿಂದ ಅಹಿರಮ್ಯರ ಗೋತ್ರ; ಶುಫಾಮನಿಂದ ಶು
ಫಾಮ್ಯರ ಗೋತ್ರ; ಹುಫಾಮನಿಂದ ಹುಫಾಮ್ಯರ ಗೋತ್ರ.
೪೦ ಬೇಲನ ಮಕ್ಕಳು ಅರ್ದನೂ ನಾಮಾನನೂ. ಅರ್ದನಿಂದ
ಅರ್ದ್ಯರ ಗೋತ್ರ; ನಾಮಾನನಿಂದ ನಾಮಿಯ ಗೋತ್ರ.
೪೧ ಗೋತ್ರಾನುಸಾರವಾದ ಬೆನ್ಯಮೀನನ ಮಕ್ಕಳು ಇವರೇ; ಅ
ವರಲ್ಲಿ ಎಣಿಸಲ್ಪಟ್ಟವರು ನಾಲ್ವತ್ತೈದು ಸಾವಿರದ ಆರು ನೂರು
ಮಂದಿ.

೪೨ ಗೋತ್ರಾನುಸಾರವಾದ ದಾನನ ಮಕ್ಕಳು; ಶೂಹಾಮನಿಂದ
ಶೂಹಾಮ್ಯರ ಗೋತ್ರ; ಗೋತ್ರಾನುಸಾರವಾದ ದಾನನ ಗೋ
೪೩ ತ್ರಗಳು ಇವೇ. ಶೂಹಾಮ್ಯರ ಸಮಸ್ತ ಗೋತ್ರಗಳು, ಅವುಗ
ಳಲ್ಲಿ ಎಣಿಸಲ್ಪಟ್ಟವರು ಅರವತ್ತು ನಾಲ್ಕು ಸಾವಿರದ ನಾನೂ
ರು ಮಂದಿ.

೪೪ ಗೋತ್ರಾನುಸಾರವಾದ ಅಶೇರನ ಮಕ್ಕಳು; ಇಮ್ನಾಹನಿಂ
ದ ಇಮ್ನಾಹ್ಯರ ಗೋತ್ರ; ಇಶ್ವಿಯಿಂದ ಇಶ್ವಿಯರ ಗೋತ್ರ;
೪೫ ಬೆರೀಯನಿಂದ ಬೆರೀಯರ ಗೋತ್ರ. ಬೇಯ ಮಕ್ಕಳು;
ಹೇಬೆರನಿಂದ ಹೆಬ್ರಿಯರ ಗೋತ್ರ; ಮಲ್ಕಿಯೇಲನಿಂದ ಮಲ್ಕಿ
೪೬ ಯೇಲ್ಯರ ಗೋತ್ರ. ಅಶೇರನ ಮಗಳ ಹೆಸರು ಸಾರಳು.
೪೭ ಲೆಖ್ಖನುಸಾರವಾದ ಅಶೇರನ ಮಕ್ಕಳ ಗೋತ್ರಗಳು ಇವೇ;
ಅವರು ಐವತ್ತು ಮೂರು ಸಾವಿರದ ನಾನೂರು ಮಂದಿ.

೪೮ ಗೋತ್ರಾನುಸಾರವಾದ ನೆಫ್ತಾಲಿಯ ಮಕ್ಕಳು; ಯಹ್ಸೇಲನಿಂ
ದ ಯಹ್ಸೇಲ್ಯರ ಗೋತ್ರ; ಗೂನಿಯಿಂದ ಗೂನ್ಯರ ಗೋತ್ರ.
೪೯ ಯೇಚೆರನಿಂದ ಇಚ್ರಿಯರ ಗೋತ್ರ; ಶಿಲ್ಲೇಮನಿಂದ ಶಿಲ್ಲೇಮ್ಯ
೫೦ ರ ಗೋತ್ರ. ಗೋತ್ರಾನುಸಾರವಾದ ನೆಫ್ತಾಲಿಯ ಗೋತ್ರಗಳು
ಇವೇ; ಅವರಲ್ಲಿ ಎಣಿಸಲ್ಪಟ್ಟವರು ನಾಲ್ವತ್ತೈದು ಸಾವಿರದ ನಾ
ನೂರು ಮಂದಿ.

೫೧ ಇಸ್ರಯೇಲ್ ಮಕ್ಕಳಲ್ಲಿ ಎಣಿಸಲ್ಪಟ್ಟವರು ಇವರೇ; ಆರು
ಲಕ್ಷದ ಸಾವಿರದ ಏಳು ನೂರು ಮೂವತ್ತು ಮಂದಿ.

೫೨ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳ್ಳಿದ್ದೇ
೫೩ ನಂದರೆ—ಇವರಿಗೆ ದೇಶವನ್ನು ಹೆಸರುಗಳ ಲೆಖ್ಖದ ಪ್ರಕಾರ
೫೪ ಸ್ವಾಧ್ಯವಾಗಿ ಹಂಚಿ ಕೊಡ ಬೇಕು. ಬಹು ಜನರಿಗೆ ಬಹು
ಸ್ವಾಧ್ಯವನ್ನು ಕೊಡ ಬೇಕು, ಸ್ವಲ್ಪ ಜನರಿಗೆ ಸ್ವಲ್ಪ ಸ್ವಾ
ಧ್ಯವನ್ನು ಕೊಡ ಬೇಕು; ಒಬ್ಬೊಬ್ಬನಿಗೆ ತನ್ನ ಲೆಖ್ಖದ ಪ್ರ
೫೫ ಕಾರ ಅವನವನ ಸ್ವಾಧ್ಯವನ್ನು ಕೊಡ ಬೇಕು. ಇದಲ್ಲದೆ
ಚೀಟು ಹಾಕುವದರಿಂದ ದೇಶವನ್ನು ಪಾಲು ಮಾಡ ಬೇಕು; ತ
ಮ್ಮ ತಂದೆಗಳ ಕುಲಗಳ ಹೆಸರುಗಳ ಪ್ರಕಾರ ಅವರು ಸ್ವತಂತ್ರಿ
೫೬ ಸಿ ಕೊಳ್ಳ ಬೇಕು. ಹೆಚ್ಚಾದ ಜನಕ್ಕೂ ಕಡಮೆಯಾದ ಜನ
ಕ್ಕೂ ಅವರ ಸ್ವಾಧ್ಯವು ಚೀಟಿನ ಪ್ರಕಾರ ಪಾಲಾಗ ಬೇಕು.

೫೭ ಲೇವ್ಯರಲ್ಲಿ ಗೋತ್ರಾನುಸಾರವಾಗಿ ಎಣಿಸಲ್ಪಟ್ಟವರು ಇವರೇ.
ಗೆರ್ಷೋನನಿಂದ ಗೆರ್ಷೋನ್ಯರ ಗೋತ್ರ; ಕೊಹಾತನಿಂದ
ಕೊಹಾತ್ಯರ ಗೋತ್ರ; ಮೆರಾರಿಯಿಂದ ಮೆರಾರಿಕರ ಗೋತ್ರ.
೫೮ ಲೇವ್ಯರ ಗೋತ್ರಗಳು ಇವೇ—ಲಿಬ್ನಿಯರ ಗೋತ್ರ; ಹೆಬ್ರೋ
ನ್ಯರ ಗೋತ್ರ; ಮಹ್ಲಿಯರ ಗೋತ್ರ; ಮುಷಿಯರ ಗೋತ್ರ;
ಕೊರಹಿಯರ ಗೋತ್ರ. ಆದರೆ ಕೊಹಾತನು ಅಮ್ರಾಮನನ್ನು
೫೯ ಹುಟ್ಟಿಸಿದನು. ಅಮ್ರಾಮನ ಹೆಂಡತಿಯ ಹೆಸರು ಯೊಕೆಬೆದ
ಳು; ಅವಳು ಐಗುಪ್ತದಲ್ಲಿ ಲೇವಿಗೆ ಹುಟ್ಟಿದ ಮಗಳು. ಮತ್ತು ಅ
ವಳು ಅಮ್ರಾಮನಿಗೆ ಆರೋನನನ್ನೂ, ಮೋಶೆಯನ್ನೂ, ಅವ
೬೦ ರ ಸಹೋದರಿಯಾದ ಮಿರ್ಯಾಮಳನ್ನೂ ಹೆತ್ತಳು. ಮತ್ತು
ಆರೋನನಿಗೆ ನಾದಬನೂ, ಅಬೀಹೂ, ಎಲೆಯಾಜರನೂ, ಇಥ
೬೧ ಮಾರನೂ, ಹುಟ್ಟಿದರು. ಆದರೆ ನಾದಬನೂ ಅಬೀಹೂ ಕರ್ತ
ನ ಮುಂದೆ ಅನ್ಯ ಅಗ್ನಿಯನ್ನು ಅರ್ಪಿಸುವದರಲ್ಲಿ ಸತ್ತರು.
೬೨ ಇವರಲ್ಲಿ ಎಣಿಸಲ್ಪಟ್ಟವರು ಒಂದು ತಿಂಗಳಾದ, ಅದಕ್ಕೆ ಅಧಿಕ
ವಾದ, ಪ್ರಾಯದವ್ಳಗಂಡಸಕ್ಕಲ್ಲರು ಇಪ್ಪತ್ತು ಮೂರು ಸಾವಿರ
ಮಂದಿಯಾಗಿದ್ದರು; ಇವರಿಗೆ ಇಸ್ರಯೇಲ್ ಮಕ್ಕಳಲ್ಲಿ ಸ್ವಾ
ಧ್ಯವು ಕಿಕ್ಕದ ಕಾರಣ, ಅವರು ಇಸ್ರಯೇಲ್ ಮಕ್ಕಳೊಳಗೆ ಎ
ಣಿಸಲ್ಪಟ್ಟಿಲ್ಲ.

೬೩ ಎಣಿಸಲ್ಪಟ್ಟವರಾದ ಇವರನ್ನು ಮೋಶೆಯೂ, ಯಾಜಕನಾದ
ಎಲೆಯಾಜರನೂ, ಇಸ್ರಯೇಲ್ ಮಕ್ಕಳಲ್ಲಿ ಯೆರಿಕೋ ಪಟ್ಟಣಕ್ಕೆ
ದುರಾಗಿ ಯೊರ್ದನ್ ನದಿಯ ಮೇಲಿರುವ ಮೋವಾಬಿನ ಬೈ
೬೪ ಲುಗಳಲ್ಲಿ ಎಣಿಸಿದರು. ಆದರೆ ಮೋಶೆಯೂ ಯಾಜಕನಾದ
ಆರೋನನೂ ಸೀನಾಯಿ ಅರಣ್ಯದಲ್ಲಿ ಇಸ್ರಯೇಲ್ ಮಕ್ಕಳ
ನ್ನು ಎಣಿಸಿದಾಗ, ಎಣಿಸಲ್ಪಟ್ಟವರಲ್ಲಿ ಒಬ್ಬನಾದರೂ ಇವರ ಲೆಖ್ಖ
೬೫ ದಲ್ಲಿ ಶೇರಲಿಲ್ಲ. ಯಾಕಂದರೆ, ಅವರು ಅರಣ್ಯದಲ್ಲಿ ಸತ್ತೇ ಸಾ
ಯಿರಿ ಎಂದು, ಅವರನ್ನು ಕುರಿತು ಕರ್ತನು ಹೇಳ್ಳಿ ಇದ್ದನು;
ಈ ಪ್ರಕಾರ ಯೆಫುನ್ನೆಯ ಮಗನಾದ ಕಾಲೆಬನೂ, ನೂನನ ಮ
ಗನಾದ ಯೆಹೋಶುವನೂ ಇವರನ್ನು ಬಿಟ್ಟು, ಒಬ್ಬನಾದರೂ
ಉಳ್ಳಿಯಲಿಲ್ಲ.

## ೨೭. ಸಂಧಿ.

೧ ಆಗ ಯೋಸೆಫನ ಮಗನಾದ ಮನಸ್ಸೆಯ ಗೋತ್ರಗಳಲ್ಲಿದ್ದ
ಮನಸ್ಸೆಯ ಮಗನಾದ, ಮಕೀರನ ಮಗನಾದ, ಗಿಲ್ಯಾದನ ಮ
ಗನಾದ, ಹೇಫೆರನ ಮಗನಾದ, ಜೆಲೊಫಾದನ ಕುಮಾರ್ತೆಗ
೨ ಳಾದ ಮಾಹಲ, ನೋವ, ಹೊಗ್ಲ, ಮಿಲ್ಕ, ತಿರ್ಚ, ಇವರು ಸ
ಮೀಪಕ್ಕೆ ಬಂದು, ಮೋಶೆಯೂ ಯಾಜಕನಾದ ಎಲೆಯಾಜರ
ನೂ ಅಧಿಕಾರಿಗಳೂ ಸಮಸ್ತ ಸಭೆಯೂ ಇವರ ಮುಂದೆ ಸಭೆ
ಯ ಗುಡಾರದ ಬಾಗಿಲಿನ ಹತ್ತರ ನಿಂತು, ಹೇಳ್ಳಿದ್ದೇನಂದರೆ—
3 ನಮ್ಮ ತಂದೆ ಅರಣ್ಯದಲ್ಲಿ ಸತ್ತನು; ಅವನು ಕೋರಹನ ಗುಂಪಿ

ನಲ್ಲಿ ಕರ್ತನಿಗೆ ವಿಕೋಧವಾಗಿ ಕೂಡಿ ಕೊಂಡವರ ಗುಂಪಿನೊ
ಳಗಿರನೆ. ತನ್ನ ಪಾಪದಲ್ಲಿಯೇ ಸತ್ತನು; ಮತ್ತು ಅವನಿಗೆ ಕು
೪ ಮಾರು ಇದ್ದಿಲ್ಲ. ಹಾಗಾದರೆ ನಮ್ಮ ತಂದೆಗೆ ಮಗನಿಲ್ಲದಿರುವ
ದರಿಂದ ಅವನ ಹೆಸರು ತನ್ನ ಗೋತ್ರದೊಳಗಿಂದ ಕಡಿಮೆಯಾ
ಗ ಬೇಕೋ! ನೀನು ನಮಗೆ ನಮ್ಮ ತಂದೆಯ ಸಹೋದರರ
ಮಧ್ಯದಲ್ಲಿ ಒಂದು ಸ್ವಾಸ್ತ್ಯವನ್ನು ಕೊಡು.

೫ ಮೋಶೆಯು ಅವರ ನ್ಯಾಯವನ್ನು ಕರ್ತನ ಮುಂದೆ ತಂದ
೬ ನು. ಆಗ ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳಿದ್ದೇ
೭ ನಂದರೆ—ಜೆರೊಫಾದನ ಕುಮಾರ್ತೆಗಳು ಹೇಳಿದ್ದು ಸರಿ; ನೀ
ನು ಅವರಿಗೆ ಅವರ ತಂದೆಯ ಸಹೋದರರ ಮಧ್ಯದಲ್ಲಿ ಒಂದು
ಸ್ವಾಸ್ತ್ಯವನ್ನು ಕೊಡತಲೇ ಕೊಡ ಬೇಕು; ಮತ್ತು ಅವರ ತಂದೆ
೮ ಯ ಸ್ವಾಸ್ತ್ಯವನ್ನು ಅವರಿಗೆ ಕೇರಿಸ ಬೇಕು. ಮತ್ತು ಇಸ್ರ
ಯೇಲ್ ಮಕ್ಕಳಿಗೆ ಸಂಗಡ ಮಾತಾಡಿ, ನೀನು ಹೇಳಿ ಬೇಕಾದದ್ದೇ
ನಂದರೆ—ಒಬ್ಬನು ಮಗನಿಲ್ಲದೆ ಸತ್ತರೆ, ನೀವು ಅವನ ಸ್ವಾ
೯ ಸ್ತ್ಯವನ್ನು ಅವನ ಮಗಳಿಗೆ ಕೇರಿಸ ಬೇಕು. ಆದರೆ ಅವನಿಗೆ ಮ
೧೦ ಗಳು ಇಲ್ಲದಿದ್ದರೆ, ನೀವು ಅವನ ಸ್ವಾಸ್ತ್ಯವನ್ನು ಅವನ ಸ
ಹೋದರರಿಗೆ ಕೊಡ ಬೇಕು. ಮತ್ತು ಅವನಿಗೆ ಸಹೋದರರು
ಇಲ್ಲದಿದ್ದರೆ, ನೀವು ಅವನ ಸ್ವಾಸ್ತ್ಯವನ್ನು ಅವನ ತಂದೆಯ ಸ
೧೧ ಹೋದರರಿಗೆ ಕೊಡ ಬೇಕು. ಆದರೆ ಅವನ ತಂದೆಗೆ ಸಹೋದ
ರರು ಇಲ್ಲದಿದ್ದರೆ, ಅವನ ಸಂತತಿಯೊಳಗೆ ಅವನಿಗೆ ಹೆಚ್ಚಾಗಿ ಸ
ಮೀಪವಾದ ಬಂಧುವಿಗೆ ಅವನ ಸ್ವಾಸ್ತ್ಯವನ್ನು ಕೊಡ ಬೇ
ಕು; ಅವನೇ ಅದನ್ನು ಸ್ವತಂತ್ರಿಸಿ ಕೊಳ್ಳಲಿ. ಕರ್ತನು ಮೋ
ಶೆಗೆ ಆಜ್ಞಾಪಿಸಿದ ಪ್ರಕಾರ, ಇದು ಇಸ್ರಯೇಲ್ ಮಕ್ಕಳಿಗೆ ನ್ಯಾ
ಯದ ಕಟ್ಟಳೆಯಾಗಿರ ಬೇಕು.

೧೨ ಆಗ ಕರ್ತನು ಮೋಶೆಯ ಸಂಗಡ ಹೇಳಿದ್ದೇನಂದರೆ—ನೀ
ನು ಈ ಅಬರೀಮ್ ಪರ್ವತದ ಮೇಲೆ ಏರಿ, ನಾನು ಇಸ್ರಯೇಲ್
೧೩ ಮಕ್ಕಳಿಗೆ ಕೊಟ್ಟಿ ದೇಶವನ್ನು ನೋಡು. ಅದನ್ನು ನೋಡಿದ
ಮೇಲೆ, ನೀನು ಸಹ ನಿನ್ನ ಸಹೋದರನಾದ ಆರೋನನ ಪ್ರ
೧೪ ಕಾರ ನಿನ್ನ ಜನರ ಸಂಗಡ ಕೂಡಿಸಲ್ಪಡುವಿ. ಯಾಕಂದರೆ ನೀ
ವು ಚೀನೆಂಬ ಅರಣ್ಯದಲ್ಲಿಯೂ, ಸಭೆಯ ವಾಗ್ವಾದದಲ್ಲಿ
ಯೂ, ಅವರ ಕಣ್ಣುಗಳಿಗೆದುರಾಗಿ ನೀರಿನ ಬಳಿಯಲ್ಲಿ ನನ್ನನ್ನು
ಪರಿಶುದ್ಧ ಮಾಡದೆ, ನನ್ನ ಆಜ್ಞೆಯನ್ನು ಮೀರಿದಿರಿ. ಆ ನೀರು
ಅಂದರೆ, ಚೀನೆಂಬ ಅರಣ್ಯದ ಕಾದೆಸಿನಲ್ಲಿರುವ ಮೆರೀಬದ
೧೫ ನೀರು. ಮತ್ತು ಮೋಶೆಯು ಕರ್ತನ ಸಂಗಡ ಮಾತಾಡಿ, ಹೇ
೧೬ ಳಿದ್ದೇನಂದರೆ—ಸಮಸ್ತ ಮಾಂಸದ ಆತ್ಮಗಳ ದೇವರಾದ ಕರ್ತ
ನು ಈ ಸಭೆಯ ಮೇಲೆ ಒಬ್ಬ ಮನುಷ್ಯನನ್ನು ಇಡಲಿ. ಅವ
೧೭ ನು ಅವರ ಮುಂದಾಗಿ ಹೋಗಲಿ; ಅವರ ಮುಂದಾಗಿ ಬರಲಿ;
ಅವರನ್ನು ಕರ ಕೊಂಡು ಹೋಗಲಿ; ಅವರನ್ನು ಕರಕೊಂಡು
ಬರಲಿ; ಕರ್ತನ ಸಭೆಯು ಕುರುಬನಿಲ್ಲದ ಕುರಿಗಳ ಹಾಗೆ ಇರ
ಬಾರದು.

೧೮ ಆಗ ಕರ್ತನು ಮೋಶೆಯ ಸಂಗಡ ಹೇಳಿದ್ದು—ಆತ್ಮವುಳ್ಳ
ಮನುಷ್ಯನಾಗಿರುವ ನೂನನ ಮಗನಾದ ಯೆಹೋಶುವನನ್ನು
೧೯ ತಕ್ಕೊಂಡು, ನಿನ್ನ ಕೈಯನ್ನು ಅವನ ಮೇಲೆ ಇಟ್ಟು, ಅವನ
ನ್ನು ಯಾಜಕನಾದ ಎಲೆಯಾಜರನ ಮುಂದೆಯೂ, ಸಮಸ್ತ ಸ
ಭೆಯ ಮುಂದೆಯೂ ನಿಲ್ಲಿಸಿ, ಅವರ ಕಣ್ಣುಗಳಿಗೆದುರಾಗಿ ಅವ
೨೦ ನನ್ನು ನೇಮಿಸು. ಮತ್ತು ಇಸ್ರಯೇಲ್ ಮಕ್ಕಳ ಸಮಸ್ತ ಸಭೆ
ಯು ಅವನ ಮಾತನ್ನು ಕೇಳುವ ಹಾಗೆ, ಅವನ ಮೇಲೆ ನಿನ್ನ
೨೧ ಮಹಿಮೆಯ ಪಾಲನ್ನು ಇಡು. ಮತ್ತು ಅವನು ಯಾಜಕನಾದ
ಎಲೆಯಾಜರನ ಮುಂದೆ ನಿಲ್ಲ ಬೇಕು; ಇವನು ಕರ್ತನ ಮುಂದೆ
ಉರೀಮಿನ ನ್ಯಾಯದಿಂದ ಅವನಿಗೋಸ್ಕರ ವಿಚಾರಿಸ ಬೇಕು;
ಅವನ ಆಜ್ಞೆಯ ಪ್ರಕಾರವೇ ಅವನೂ, ಅವನ ಸಂಗಡ ಇರುವ
ಸಮಸ್ತ ಇಸ್ರಯೇಲ್ ಮಕ್ಕಳೂ, ಸಮಸ್ತ ಸಭೆಯೂ ಹೋಗು
ತ್ತಾ ಬರುತ್ತಾ ಇರ ಬೇಕು.

೨೨ ಮತ್ತು ಮೋಶೆ ಕರ್ತನು ಅವನಿಗೆ ಆಜ್ಞಾಪಿಸಿದ ಪ್ರಕಾರ
ಮಾಡಿ, ಯೆಹೋಶುವನನ್ನು ತಕ್ಕೊಂಡು, ಅವನನ್ನು ಯಾಜ
ಕನಾದ ಎಲೆಯಾಜರನ ಮುಂದೆಯೂ, ಸಮಸ್ತ ಸಭೆಯ ಮುಂ
೨೩ದೆಯೂ ನಿಲ್ಲಿಸಿ, ಅವನ ಮೇಲೆ ತನ್ನ ಕೈಗಳನ್ನು ಇಟ್ಟು, ಕ
ರ್ತನು ಮೋಶೆಯ ಕೈಯಿಂದ ಹೇಳಿದ ಪ್ರಕಾರ ಅವನನ್ನು
ನೇಮಿಸಿದನು.

## ೨೮. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳಿದ್ದೇ
೨ ನಂದರೆ—ನೀನು ಇಸ್ರಯೇಲ್ ಮಕ್ಕಳಿಗೆ ಆಜ್ಞಾಪಿಸಿ, ಹೇಳಿ ಬೇ
ಕಾದದ್ದೇನಂದರೆ—ನನ್ನ ಸುವಾಸನೆಯ ದಹನ ಬಲಿಗಳೋ
ಸ್ಕರವಾಗಿರುವ ನನ್ನ ಕೊಟ್ಟಿಯ ಅರ್ಪಣೆಯನ್ನು ಅದರ ನೇ
ಮಕವಾದ ಸಮಯದಲ್ಲಿ ನನಗೆ ಅರ್ಪಿಸುವದಕ್ಕೆ ನೋಡಿ ಕೊ
ಳ್ಳಿರಿ.

3 ಮತ್ತು ಅವರಿಗೆ ಹೇಳಿ ಬೇಕಾದದ್ದು—ನೀವು ಕರ್ತನಿಗೆ ಅ
ರ್ಪಿಸ ಬೇಕಾದ ಅರ್ಪಣೆ ಏನಂದರೆ—ನಿತ್ಯ ಹೋಮಕ್ಕಾಗಿ
ದಿನಕ್ಕೆ ಪೂರ್ಣಾಂಗವಾದ ಒಂದು ವರುಷದ ಎರಡು ಕುರಿ ಮ
೪ರಿಗಳು. ಒಂದು ಕುರಿ ಮರಿಯನ್ನು ಉದಯದಲ್ಲಿಯೂ, ಮ
೫ ತ್ತೊಂದು ಸಾಯಂಕಾಲದಲ್ಲಿಯೂ, ಅರ್ಪಿಸ ಬೇಕು. ಮತ್ತು
ಆಹಾರದ ಅರ್ಪಣೆಗಾಗಿ ಹಿನ್ನಿನ ನಾಲ್ಕನೇ ಪಾಲು ಕುಟ್ಟಿದ
೬ ಎಣ್ಣೆ ಕಲಿಸಿದ ನಯವಾದ ಹಿಟ್ಟಿನ ಏಫದ ಹತ್ತನೇ ಪಾಲು. ಇ
ದು ಸೀನಾಯಿ ಪರ್ವತದಲ್ಲಿ ಕರ್ತನಿಗೆ ಸುವಾಸನೆಯ ದಹನ
೭ ಬಲಿಗಾಗಿ ಅರ್ಪಿಸಿದ ನಿತ್ಯ ಹೋಮವು. ಮತ್ತು ಒಂದು ಕುರಿ
ಮರಿಗೆ ತಕ್ಕ ಪಾನದ ಅರ್ಪಣೆ ಹಿನ್ನಿನ ನಾಲ್ಕನೇ ಪಾಲು, ಪರಿ
ಶುದ್ಧ ಸ್ಥಳದಲ್ಲಿ ದ್ರಾಕ್ಷೇ ರಸದ ಪಾನದ ಅರ್ಪಣೆಯನ್ನು ಕ
೮ ರ್ತನಿಗೆ ಹೊಯಿಸ ಬೇಕು. ಮತ್ತು ಎರಡನೇ ಕುರಿ ಮರಿಯ-
ನ್ನು ಸಾಯಂಕಾಲದಲ್ಲಿ ಅರ್ಪಿಸ ಬೇಕು; ಅದರ ಆಹಾರದ ಅ
ರ್ಪಣೆಯನ್ನೂ, ಪಾನದ ಅರ್ಪಣೆಯನ್ನೂ, ಉದಯದಲ್ಲಿ
ಮಾಡಿದ ಹಾಗೆ, ಕರ್ತನಿಗೆ ಸುವಾಸನೆಯ ದಹನವಾಗಿ ಅರ್ಪಿ
ಸ ಬೇಕು.

೯ ಆದರೆ ಸಬ್ಬಾತ್ ದಿವಸದಲ್ಲಿ ಆಹಾರದ ಅರ್ಪಣೆಯಾಗಿ
ಪೂರ್ಣಾಂಗವಾದ ಒಂದು ವರುಷದ ಎರಡು ಕುರಿ ಮರಿಗಳ
ನ್ನೂ, ಎಣ್ಣೆ ಕಲಿಸಿದ ನಯವಾದ ಹಿಟ್ಟಿನ ಎರಡು ದಶಾಂಶಗಳ
೧೦ ನ್ನೂ, ಅದಕ್ಕೆ ತಕ್ಕ ಪಾನದ ಅರ್ಪಣೆಯನ್ನೂ, ನಿತ್ಯ
ಹೋಮದ ಹೊರ್ತು, ಪ್ರತಿ ಸಬ್ಬಾತಿಗೆ ತಕ್ಕ ಹೋಮವೂ,
ಅದರ ಪಾನದ ಅರ್ಪಣೆಯೂ ಇದೇ.



೧೧ ನಿಮ್ಮ ತಿಂಗಳುಗಳ ಆರಂಭದಲ್ಲಿ ನೀವು ಕರ್ತನಿಗೆ ಅರ್ಪಿಸ
ಬೇಕಾದ ಹೋಮ ಎರಡು ಹೋರಿಗಳೂ, ಒಂದು ಟಗರೂ,
ಪೂರ್ಣಾಂಗವಾದ ಒಂದು ವರುಷದ ಏಳು ಕುರಿ ಮರಿಗಳೂ;
೧೨ ಮತ್ತು ಒಂದೊಂದು ಹೋರಿಗೆ ಆಹಾರದ ಅರ್ಪಣೆಯಾಗಿ ಎ
ಣ್ಣೆ ಕಲಿಸಿದ ಹಿಟ್ಟಿನ ಮೂರು ದಶಾಂಶಗಳು, ಒಂದೊಂದು ಟಗ
ರಿಗೆ ಆಹಾರದ ಅರ್ಪಣೆಯಾಗಿ ಎಣ್ಣೆ ಕಲಿಸಿದ ಹಿಟ್ಟಿನ ಎರಡು
೧೩ ದಶಾಂಶಗಳು. ಒಂದೊಂದು ಕುರಿ ಮರಿಗೆ ಆಹಾರದ ಅರ್ಪಣೆ
ಯಾಗಿ ಎಣ್ಣೆ ಕಲಿಸಿದ ಹಿಟ್ಟಿನ ಒಂದು ದಶಾಂಶವು, ಕರ್ತನಿಗೆ
೧೪ ಸುವಾಸನೆಯ ಹೋಮವಾದ ದಹನ ಬಲಿ ಇದೇ. ಇವುಗಳಿಗೆ
ತಕ್ಕ ಪಾನದ ಅರ್ಪಣೆಗಳು ಹೋರಿಗೆ ಅರ್ಧ ಹಿನ್ನಿನ ದ್ರಾಕ್ಷೇ
ರಸವು; ಟಗರಿಗೆ ಹಿನ್ನಿನ ಮೂರನೇ ಪಾಲು ದ್ರಾಕ್ಷೇ ರಸವು; ಕು
ರಿ ಮರಿಗೆ ಕಾಲು ಹಿನ್ನಿನ ದ್ರಾಕ್ಷೇ ರಸ ಇರ ಬೇಕು; ಇದು ವರು
ಷಕ್ಕಿರುವ ತಿಂಗಳುಗಳಲ್ಲಿ ಒಂದೊಂದಕ್ಕೆ ತಕ್ಕ ಹೋಮವು
೧೫ ಇದಲ್ಲದೆ ನಿತ್ಯ ಹೋಮದ ಹೊರ್ತು, ಕರ್ತನಿಗೆ ಪಾಪ ಬಲಿ
ಗಾಗಿ ಒಂದು ಮೇಕೇ ಮರಿಯನ್ನೂ, ಅದಕ್ಕೆ ತಕ್ಕ ಪಾನದ
ಅರ್ಪಣೆಯನ್ನೂ ಅರ್ಪಿಸ ಬೇಕು.

೧೬ ಆದರೆ ಮೊದಲನೇ ತಿಂಗಳಿನ ಹದಿನಾಲ್ಕನೇ ದಿವಸವು ಕ
೧೭ ರ್ತನ ಪಸ್ಕವೇ. ಮತ್ತು ತಿಂಗಳಿನ ಹದಿನೈದನೇ ದಿವಸವು ಹ
ಬ್ಬವಾಗಿರೆ; ಏಳು ದಿವಸ ಹುಳಿಯಿಲ್ಲದ ರೊಟ್ಟಿಯನ್ನು ತಿನ್ನ
೧೮ ಬೇಕು. ಮೊದಲನೇ ದಿವಸದಲ್ಲಿ ಪರಿಶುದ್ಧ ಪರಿಷೆ ಆಗ ಬೇಕು;
೧೯ ಸೇವೆಯ ಕೆಲಸವೇನಾದರೂ ನೀವು ಮಾಡ ಬೇಡಿರಿ. ಮತ್ತು
ನೀವು ಕರ್ತನಿಗೆ ಹೋಮವಾಗಿ ದಹನ ಬಲಿಯನ್ನು ಅರ್ಪಿಸ
ಬೇಕು. ಯಾವದಂದರೆ—ಎರಡು ಹೋರಿಗಳು, ಒಂದು ಟಗ
ರು, ವರುಷದ ಏಳು ಕುರಿ ಮರಿಗಳು; ನಿಮಗೆ ಇವು ಪೂರ್ಣಾಂ
೨೦ ಗಗಳಾಗಿರ ಬೇಕು. ಅವುಗಳ ಆಹಾರದ ಅರ್ಪಣೆ ಎಣ್ಣೆ ಕಲಿ
ಸಿದ ಹಿಟ್ಟು; ಹೋರಿಗೆ ಮೂರು ದಶಾಂಶಗಳನ್ನೂ, ಟಗರಿಗೆ ಎ
೨೧ ರಡು ದಶಾಂಶಗಳನ್ನೂ ಹಾಕ ಬೇಕು. ಏಳು ಕುರಿ ಮರಿಗಳಲ್ಲಿ
೨೨ ಒಂದೊಂದಕ್ಕೆ ದಶಾಂಶವನ್ನು ಹಾಕ ಬೇಕು. ಮತ್ತು ನಿನ
ಗೋಸ್ಕರ ಪಾಪ ಮುಚ್ಚುವದಕ್ಕೆ ಪಾಪ ಬಲಿಗಾಗಿ ಒಂದು ಮೇ
೨೩ ಕೇ ಮರಿ. ಇವುಗಳನ್ನು ನಿತ್ಯವಾದ ಹೋಮವಾಗಿರುವ ಉದ
೨೪ಯದ ಹೋಮದ ಹೊರ್ತಾಗಿ ನೀವು ಅರ್ಪಿಸ ಬೇಕು. ಈ
ಪ್ರಕಾರ ನೀವು ಏಳು ದಿವಸಗಳ ಮಟ್ಟಿಗೂ ದಿನ ದಿನಕ್ಕೆ ಕರ್ತ
ನಿಗೆ ಸುವಾಸನೆಗಾಗಿ ದಹನ ಬಲಿಯ ಆಹಾರವನ್ನು ಅರ್ಪಿಸ
ಬೇಕು; ಅದನ್ನೂ, ಅದಕ್ಕೆ ತಕ್ಕ ಪಾನದ ಅರ್ಪಣೆಯನ್ನೂ,
೨೫ ನಿತ್ಯವಾದ ಹೋಮದ ಹೊರ್ತಾಗಿ ಅರ್ಪಿಸ ಬೇಕು. ಮತ್ತು
ಏಳನೇ ದಿವಸದಲ್ಲಿ ನಿಮಗೆ ಪರಿಶುದ್ಧವಾದ ಪರಿಷೆ ಆಗ ಬೇಕು;
ಸೇವೆಯ ಕೆಲಸವೇನಾದರೂ ನೀವು ಮಾಡ ಬೇಡಿರಿ.

೨೬ ಮತ್ತು ಪ್ರಥಮ ಫಲಗಳ ದಿವಸದಲ್ಲಿ, ನೀವು ಕರ್ತನಿಗೆ ನಿ
ಮ್ಮ ವಾರಗಳಲ್ಲಿ ಹೊಸ ಆಹಾರದ ಅರ್ಪಣೆಯನ್ನು ಅರ್ಪಿ
ಸುವಾಗ, ನಿಮಗೆ ಪರಿಶುದ್ಧವಾದ ಪರಿಷೆ ಆಗ ಬೇಕು; ಸೇವೆಯ
೨೭ ಕೆಲಸವೇನಾದರೂ ಮಾಡ ಬೇಡಿರಿ. ಮತ್ತು ನೀವು ಕರ್ತನಿಗೆ
ಸುವಾಸನೆಯುಳ್ಳ ಹೋಮವಾಗಿ ಎರಡು ಹೋರಿಗಳನ್ನೂ, ಒಂ
೨೮ ದು ಟಗರನ್ನೂ, ವರುಷದ ಏಳು ಕುರಿ ಮರಿಗಳನ್ನೂ, ಅವುಗ
ಳ ಆಹಾರದ ಅರ್ಪಣೆಗಾಗಿ ಎಣ್ಣೆ ಕಲಿಸಿದ ಹಿಟ್ಟಿನ್ನೂ, ಹೋ
ರಿಗೆ ಮೂರು ದಶಾಂಶಗಳನ್ನೂ ಟಗರಿಗೆ ಎರಡು ದಶಾಂಶಗಳ
೨೯ ನ್ನೂ, ಏಳು ಕುರಿ ಮರಿಗಳಲ್ಲಿ ಒಂದೊಂದಕ್ಕೆ ದಶಾಂಶವನ್ನೂ,
೩೦ ನಿಮಗೋಸ್ಕರ ಪಾಪ ಮುಚ್ಚುವದಕ್ಕೆ ಮೇಕೇ ಮರಿಯನ್ನೂ,
೩೧ ಅರ್ಪಿಸ ಬೇಕು. ನಿತ್ಯವಾದ ಹೋಮವನ್ನೂ, ಅದರ ಆಹಾ
ರದ ಅರ್ಪಣೆಯನ್ನೂ ಹೊರ್ತಾಗಿ, ನೀವು ಪೂರ್ಣಾಂಗ
ವಾದ ಇವುಗಳನ್ನೂ, ಅವುಗಳಿಗೆ ತಕ್ಕ ಪಾನದ ಅರ್ಪಣೆಗಳ
ನ್ನೂ ಅರ್ಪಿಸ ಬೇಕು.

## ೨೯. ಸಂಧಿ.

೧ ಮತ್ತು ಏಳನೇ ತಿಂಗಳಿನ ಮೊದಲನೇ ದಿವಸದಲ್ಲಿ ನಿಮಗೆ ಪ
ರಿಶುದ್ಧ ಪರಿಷೆ ಆಗ ಬೇಕು, ಸೇವೆಯ ಕೆಲಸವೇನಾದರೂ ನೀ
ವು ಮಾಡ ಬೇಡಿರಿ; ಅದು ನಿಮಗೆ ತುತೂರಿ ಧ್ವನಿಯ ದಿವಸವಿರುವ
೨ ದು. ಮತ್ತು ನೀವು ಕರ್ತನಿಗೆ ಸುವಾಸನೆಗಾಗಿ ಪೂರ್ಣಾಂಗ
ವಾದ ಒಂದು ಹೋರಿಯನ್ನೂ, ಒಂದು ಟಗರನ್ನೂ, ವರುಷದ
ಏಳು ಕುರಿ ಮರಿಗಳನ್ನೂ, ದಹನ ಬಲಿಯಾಗಿ ಅರ್ಪಿಸ ಬೇ
3 ಕು. ಮತ್ತು ಅವುಗಳ ಆಹಾರದ ಬಲಿಯು ಎಣ್ಣೆಯಿಂದ ಕಲಿಸಿ
ದ ಹಿಟ್ಟು, ಹೋರಿಗೆ ಮೂರು ದಶಾಂಶಗಳು, ಟಗರಿಗೆ ಎರಡು ದ
೪ ಶಾಂಶಗಳು, ಆ ಏಳು ಕುರಿ ಮರಿಗಳಲ್ಲಿ ಒಂದೊಂದಕ್ಕೆ ಒಂದು
೫ ದಶಾಂಶ. ಮತ್ತು ನಿಮಗೋಸ್ಕರ ಪ್ರಾಯಶ್ಚಿತ್ತ ಮಾಡುವದ
೬ ಕ್ಕೆ ಪಾಪ ಬಲಿಗಾಗಿ ಒಂದು ಆಡು ಮರಿ. ತಿಂಗಳಿನ ದಹನ ಬ
ಲಿಯನ್ನೂ, ಅದರ ಆಹಾರ ಬಲಿಯನ್ನೂ, ನಿತ್ಯವಾದ ದಹನ
ಬಲಿಯನ್ನೂ, ಅದರ ಆಹಾರ ಬಲಿಯನ್ನೂ, ಅವುಗಳಿಗೆ ತಕ್ಕ
ಪಾನ ಬಲಿಗಳನ್ನೂ ಹೊರ್ತಾಗಿ, ಕರ್ತನಿಗೆ ಸುವಾಸನೆಯ
ಸುಡುವಿಕೆಯಾಗಿ ಇವುಗಳನ್ನೂ ಅರ್ಪಿಸ ಬೇಕು.

೭ ಮತ್ತು ಈ ಏಳನೇ ತಿಂಗಳಿನ ಹತ್ತನೇ ದಿವಸದಲ್ಲಿ ನಿಮಗೆ ಪ
ರಿಶುದ್ಧ ಪರಿಷೆ ಆಗ ಬೇಕು; ಅದರಲ್ಲಿ ನಿಮ್ಮ ಆತ್ಮಗಳನ್ನು ಕಷ್ಟ
೮ ಪಡಿಸಿ, ಯಾವ ಕೆಲಸವನ್ನಾದರೂ ಮಾಡದೆ, ಕರ್ತನಿಗೆ ಸುವಾ
ಸನೆಯ ಸುಡುವಿಕೆಯಾಗಿ ಪೂರ್ಣಾಂಗವಾದ ಒಂದು ಹೋರಿ
ಯನ್ನೂ, ಒಂದು ಟಗರನ್ನೂ, ವರುಷದ ಏಳು ಕುರಿ ಮರಿಗಳ
೯ ನ್ನೂ, ಅವುಗಳ ಆಹಾರ ಬಲಿಯಾಗಿ ಎಣ್ಣೆ ಕಲಿಸಿದ ಹಿಟ್ಟಿ
ನ್ನೂ, ಹೋರಿಗೆ ಮೂರು ದಶಾಂಶಗಳನ್ನೂ, ಟಗರಿಗೆ ಎರಡು
೧೦ ದಶಾಂಶಗಳನ್ನೂ, ಏಳು ಕುರಿ ಮರಿಗಳಲ್ಲಿ ಒಂದೊಂದಕ್ಕೆ ಒಂ
೧೧ ದು ದಶಾಂಶವನ್ನೂ, ಪಾಪ ಬಲಿಯಾಗಿ ಒಂದು ಮೇಕೇ ಮರಿ
ಯನ್ನೂ, ಪಾಪ ಮುಚ್ಚುವ ಪಾಪ ಬಲಿಯೂ, ನಿತ್ಯ ಹೋಮ
ವೂ ಅದರ ಆಹಾರದ ಬಲಿಯೂ, ಅವುಗಳಿಗೆ ತಕ್ಕ ಪಾನ ಬಲಿ
ಗಳೂ ಹೊರ್ತಾಗಿ, ಅರ್ಪಿಸ ಬೇಕು.

೧೨ ಏಳನೇ ತಿಂಗಳಿನ ಹದಿನೈದನೇ ದಿವಸದಲ್ಲಿ ನಿಮಗೆ ಪರಿಶು
ದ್ಧ ಪರಿಷೆ ಆಗ ಬೇಕು; ಸೇವೆಯ ಕೆಲಸವೇನಾದರೂ ಮಾಡದೆ,
೧೩ ಕರ್ತನಿಗೆ ಏಳು ದಿವಸ ಹಬ್ಬ ಮಾಡಿ, ಕರ್ತನಿಗೆ ಸುವಾಸನೆ
ಯ ದಹನವಾಗಿ ಹೋಮವನ್ನು ಅರ್ಪಿಸ ಬೇಕು; ಏನಂದರೆ—
ಹದಿಮೂರು ಹೋರಿಗಳನ್ನೂ, ಎರಡು ಟಗರುಗಳನ್ನೂ, ವರು
ಷದ ಹದಿನಾಲ್ಕು ಕುರಿ ಮರಿಗಳನ್ನೂ, ಅವು ಪೂರ್ಣಾಂಗವಾ
೧೪ಗಿರ ಬೇಕು ಮತ್ತು ಅವುಗಳ ಆಹಾರದ ಅರ್ಪಣೆ ಎಣ್ಣೆ ಕಲಿ
ಸಿದ ಹಿಟ್ಟು ಹದಿಮೂರು ಹೋರಿಗಳಲ್ಲಿ ಒಂದೊಂದಕ್ಕೆ ಮೂ
ರು ದಶಾಂಶಗಳು, ಎರಡು ಟಗರುಗಳಲ್ಲಿ ಒಂದೊಂದಕ್ಕೆ ಎರಡು
೧೫ ದಶಾಂಶಗಳು. ಮತ್ತು ಹದಿನಾಲ್ಕು ಕುರಿ ಮರಿಗಳಲ್ಲಿ ಒಂದೊಂ

೧೬ ದಕ್ಕೆ ಒಂದು ದಶಾಂತ. ಮತ್ತು ಪಾಪ ಬಲಿಗೆ ಒಂದು ಮೇಕೇ
ಮರಿ; ನಿತ್ಯ ಹೋಮವನ್ನೂ ಅದರ ಆಹಾರವ ಅರ್ಪಣೆಯ
ನ್ನೂ, ಪಾನದ ಅರ್ಪಣೆಯನ್ನೂ ಹೊರ್ತಾಗಿ, ಇವುಗಳನ್ನು
ಅರ್ಪಿಸ ಬೇಕು

೧೭ ಮತ್ತು ಎರತನೇ ದಿವಸದಲ್ಲಿ ಪೂರ್ಣಾಂಗವಾದ ಹನ್ನೆರಡು
ಹೋರಿಗಳನ್ನೂ, ಎರಡು ಟಗರುಗಳನ್ನೂ, ವರುಷದ ಹದಿನಾ
೧೮ ಲ್ಕು ಕುರಿ ಮರಿಗಳನ್ನೂ, ಹೋರಿಗಳಿಗೆ, ಟಗರುಗಳಿಗೆ, ಮತ್ತು
ಕುರಿ ಮರಿಗಳಿಗೆ, ಅವುಗಳ ಲೆಖ್ಖದ ಪದ್ಧತಿಯ ಪ್ರಕಾರ, ಅವುಗಳ
೧೯ ಆಹಾರ ಪಾನಗಳ ಅರ್ಪಣೆಗಳನ್ನು, ಪಾಪ ಬಲಿಯಾಗಿ ಒಂ
ದು ಮೇಕೇ ಮರಿಯನ್ನೂ ನಿತ್ಯ ಹೋಮವೂ ಅದರ ಆಹಾರ
ಪಾನ ಅರ್ಪಣೆಗಳೂ ಹೊರ್ತಾಗಿ, ಅರ್ಪಿಸ ಬೇಕು.

೨೦ ಮೂರನೇ ದಿವಸದಲ್ಲಿ ಪೂರ್ಣಾಂಗವಾದ ಹನ್ನೊಂದು ಹೋ
ರಿಗಳನ್ನೂ ಎರಡು ಟಗರುಗಳನ್ನೂ ವರುಷದ ಹದಿನಾಲ್ಕು ಕು
೨೧ ರಿ ಮರಿಗಳನ್ನೂ, ಹೋರಿಗಳಿಗೆ, ಟಗರುಗಳಿಗೆ, ಮತ್ತು ಕುರಿ ಮರಿ
ಗಳಿಗೆ ಅವುಗಳ ಲೆಖ್ಖದ ಪದ್ಧತಿಯ ಪ್ರಕಾರ, ಅವುಗಳ ಆಹಾರ
೨೨ ಪಾನಗಳ ಅರ್ಪಣೆಗಳನ್ನೂ, ಪಾಪ ಬಲಿಯಾಗಿ ಒಂದು ಮೇ
ಕೇ ಮರಿಯನ್ನೂ, ನಿತ್ಯ ಹೋಮವೂ ಅದರ ಆಹಾರ ಪಾನ
ಅರ್ಪಣೆಗಳೂ ಹೊರ್ತಾಗಿ, ಅರ್ಪಿಸ ಬೇಕು.

೨೩ ನಾಲ್ಕನೇ ದಿವಸದಲ್ಲಿ ಪೂರ್ಣಾಂಗವಾದ ಹತ್ತು ಹೋರಿಗ
ಳನ್ನೂ ಎರಡು ಟಗರುಗಳನ್ನೂ ವರುಷದ ಹದಿನಾಲ್ಕು ಕುರಿ
೨೪ ಮರಿಗಳನ್ನೂ, ಹೋರಿಗಳಿಗೆ, ಟಗರುಗಳಿಗೆ, ಮತ್ತು ಕುರಿ ಮರಿ
ಗಳಿಗೆ ಅವುಗಳ ಲೆಖ್ಖದ ಪದ್ಧತಿಯ ಪ್ರಕಾರ, ಅವುಗಳ ಆಹಾರ
೨೫ ಪಾನಗಳ ಅರ್ಪಣೆಗಳನ್ನೂ, ಪಾಪ ಬಲಿಯಾಗಿ ಒಂದು ಮೇ
ಕೆ ಮರಿಯನ್ನೂ ನಿತ್ಯ ಹೋಮವೂ ಅದರ ಆಹಾರ ಪಾನ
ಅರ್ಪಣೆಗಳೂ ಹೊರ್ತಾಗಿ, ಅರ್ಪಿಸ ಬೇಕು.

೨೬ ಐದನೇ ದಿವಸದಲ್ಲಿ ಪೂರ್ಣಾಂಗವಾದ ಒಂಭತ್ತು ಹೋರಿ
ಗಳನ್ನೂ, ಎರಡು ಟಗರುಗಳನ್ನೂ ವರುಷದ ಹದಿನಾಲ್ಕು ಕು
೨೭ ರಿ ಮರಿಗಳನ್ನೂ, ಹೋರಿಗಳಿಗೆ, ಟಗರುಗಳಿಗೆ, ಮತ್ತು ಕುರಿ ಮ
ರಿಗಳಿಗೆ ಅವುಗಳ ಲೆಖ್ಖದ ಪದ್ಧತಿಯ ಪ್ರಕಾರ, ಅವುಗಳ ಆಹಾರ
೨೮ ಪಾನ ಬಲಿಗಳನ್ನೂ, ಪಾಪ ಬಲಿಯಾಗಿ ಒಂದು ಆಡು ಮರಿ
ಯನ್ನೂ ನಿತ್ಯ ಹೋಮವೂ ಅದರ ಆಹಾರ ಪಾನ ಅರ್ಪ
ಣೆಗಳೂ ಹೊರ್ತಾಗಿ, ಅರ್ಪಿಸ ಬೇಕು.

೨೯ ಆರನೇ ದಿವಸದಲ್ಲಿ ಪೂರ್ಣಾಂಗವಾದ ಎಂಟು ಹೋರಿಗಳ
ನ್ನೂ, ಎರಡು ಟಗರುಗಳನ್ನೂ, ವರುಷದ ಹದಿನಾಲ್ಕು ಕುರಿ
೩೦ ಮರಿಗಳನ್ನೂ, ಹೋರಿಗಳಿಗೆ, ಟಗರುಗಳಿಗೆ, ಮತ್ತು ಕುರಿ ಮರಿ
ಗಳಿಗೆ ಅವುಗಳ ಲೆಖ್ಖದ ಪದ್ಧತಿಯ ಪ್ರಕಾರ, ಅವುಗಳ ಆಹಾರ
೩೧ ಪಾನಗಳ ಅರ್ಪಣೆಗಳನ್ನೂ, ಪಾಪ ಬಲಿಯಾಗಿ ಒಂದು ಮೇ
ಕೇ ಮರಿಯನ್ನೂ ನಿತ್ಯ ಹೋಮವೂ ಅದರ ಆಹಾರ ಪಾನ
ಅರ್ಪಣೆಗಳೂ ಹೊರ್ತಾಗಿ, ಅರ್ಪಿಸ ಬೇಕು.

೩೨ ಏಳನೇ ದಿವಸದಲ್ಲಿ ಪೂರ್ಣಾಂಗವಾದ ಏಳು ಹೋರಿಗಳ
ನ್ನೂ, ಎರಡು ಟಗರುಗಳನ್ನೂ, ವರುಷದ ಹದಿನಾಲ್ಕು ಕುರಿ
೩೩ ಮರಿಗಳನ್ನೂ, ಹೋರಿಗಳಿಗೆ, ಟಗರುಗಳಿಗೆ, ಮತ್ತು ಕುರಿ ಮ
ರಿಗಳಿಗೆ ಅವುಗಳ ಲೆಖ್ಖದ ಪದ್ಧತಿಯ ಪ್ರಕಾರ, ಅವುಗಳ ಆಹಾ
೩೪ ರ ಪಾನಗಳ ಅರ್ಪಣೆಗಳನ್ನೂ, ಪಾಪ ಬಲಿಯಾಗಿ ಒಂದು
ಮೇಕೇ ಮರಿಯನ್ನೂ ನಿತ್ಯ ಹೋಮವೂ ಅದರ ಆಹಾರ ಪಾ
ನ ಅರ್ಪಣೆಗಳೂ ಹೊರ್ತಾಗಿ, ಅರ್ಪಿಸ ಬೇಕು.

೩೫ ಎಂಟನೇ ದಿವಸದಲ್ಲಿ ನಿಮಗೆ ಹಬ್ಬದ ಸಭೆಯಾಗ ಬೇಕು;
೩೬ ಸೇವೆಯ ಕಲಸವೇನಾದರೂ ನೀವು ಮಾಡದೆ, ಕರ್ತನಿಗೆ ಸು
ವಾಸನೆಯ ದಹನ ಬಲಿಯಾದ ಹೋಮವಾಗಿ ಪೂರ್ಣಾಂಗವಾ
ದ ಒಂದು ಹೋರಿಯನ್ನೂ, ಒಂದು ಟಗರನ್ನೂ, ವರುಷದ ಏ
೩೭ ಳು ಕುರಿ ಮರಿಗಳನ್ನೂ, ಹೋರಿಗೆ, ಟಗರಿಗೆ, ಮತ್ತು ಕುರಿ ಮ
ರಿಗಳಿಗೆ, ಅವುಗಳ ಲೆಖ್ಖದ ಪದ್ಧತಿಯ ಪ್ರಕಾರ, ಅವುಗಳ ಆಹಾರ
೩೮ ಪಾನಗಳ ಅರ್ಪಣೆಗಳನ್ನೂ, ಪಾಪ ಬಲಿಯಾಗಿ ಒಂದು ಮೇ
ಕೇ ಮರಿಯನ್ನೂ, ನಿತ್ಯ ಹೋಮವೂ ಅದರ ಆಹಾರ ಪಾನ
ಅರ್ಪಣೆಗಳೂ ಹೊರ್ತಾಗಿ, ಅರ್ಪಿಸ ಬೇಕು.

೩೯ ನಿಮ್ಮ ಹರಿಕೆಗಳನ್ನೂ, ನಿಮ್ಮ ಉಚಿತವಾದ ಬಲಿಗಳನ್ನೂ,
ನಿಮ್ಮ ಹೋಮಗಳನ್ನೂ, ನಿಮ್ಮ ಆಹಾರ ಪಾನ ಅರ್ಪಣೆಗಳ
ನ್ನೂ ನಿಮ್ಮ ಸಮಾಧಾನ ಬಲಿಗಳನ್ನೂ ಹೊರ್ತಾಗಿ, ನಿಮ್ಮ
ಹಬ್ಬಗಳಲ್ಲಿ ನೀವು ಕರ್ತನಿಗೆ ಮಾಡ ತಕ್ಕ ಅರ್ಪಣೆಗಳು
೪೦ ಇವೇ. ಮೋಶೆ ಕರ್ತನು ತನಗೆ ಆಜ್ಞಾಪಿಸಿದ್ದೆಲ್ಲಾದರ ಪ್ರಕಾರ
ಇಸ್ರಯೇಲ್ ಮಕ್ಕಳಿಗೆ ಹೇಳಿದನು.

## ೩೦. ಸಂಧಿ.

೧ ಮತ್ತು ಮೋಶೆ ಇಸ್ರಯೇಲ್ ಮಕ್ಕಳ ಕುಲಗಳ ಯಜಮಾನ
ರ ಸಂಗತ ಹೇಳ್ದೆದ್ದೇನಂದರೆ—ಕರ್ತನು ಆಜ್ಞಾಪಿಸಿದ ವಾಕ್ಯವು
೨ ಇದೇ—ಒಬ್ಬನು ಕರ್ತನಿಗೆ ಹರಿಕೆಯನ್ನು ಮಾಡಿದರೆ, ಇಲ್ಲ
ವೆ ಕಟ್ಟಳೆಯಿಂದ ತನ್ನ ಪ್ರಾಣ ಬಾಧಿಸುವ ಆಣೆ ಇಟ್ಟು ಕೊಂ
ಡರೆ, ಅವನು ತನ್ನ ಮಾತನ್ನು ತಪ್ಪಿಸ ಬಾರದು; ಬಾಯಿಯಿಂ
ದ ಹೊರಟ ಎಲ್ಲಾದರ ಪ್ರಕಾರ ಮಾಡ ಬೇಕು.

೩ ಮತ್ತು ಸ್ತ್ರೀಯು ಕರ್ತನಿಗೆ ಹರಿಕೆ ಮಾಡಿ, ತನ್ನ ಕನ್ಯಾ
೪ ವಸ್ಥೆಯಲ್ಲಿ ತಂದೆಯ ಮನೆಯಲ್ಲಿ ಬಂಧಿಸಿ ಕೊಂಡರೆ, ಅವಳ
ತಂದೆ ಅವಳ ಹರಿಕೆಯನ್ನೂ, ಅವಳು ತನ್ನ ಪ್ರಾಣದ ಮೇಲೆ
ಮಾಡಿದ ಅವಳ ಕಟ್ಟಳೆಯನ್ನೂ ಕೇಳ್ದು, ಅದಕ್ಕೆ ಮೌನವಾಗಿ
ರುವ ಪಕ್ಷದಲ್ಲಿ ಅವಳ ಹರಿಕೆಯೆಲ್ಲವೂ, ಅವಳು ತನ್ನ ಪ್ರಾಣದ
೫ ಮೇಲೆ ಮಾಡಿದ ಕಟ್ಟಳೆ ಎಲ್ಲವೂ ನಿಲ್ಲುವವು. ಆದರೆ ಅವಳ
ತಂದೆ ಕೇಳ್ದ ದಿವಸದಲ್ಲಿ ಅವಳನ್ನು ತಡದರೆ, ಅವಳ ಎಲ್ಲಾ
ಹರಿಕೆಗಳೂ, ಅವಳು ತನ್ನ ಪ್ರಾಣದ ಮೇಲೆ ಇಟ್ಟು ಕೊಂಡ
ಎಲ್ಲಾ ಕಟ್ಟಳೆಗಳೂ, ನಿಲ್ಲವು; ಅವಳ ತಂದೆ ಅವಳಿಗೆ ತಡೆದ ಕಾ
ರಣ, ಕರ್ತನು ಅವಳಿಗೆ ಕ್ಷಮಿಸುವನು.

೬ ಆದರೆ ಅವಳಿಗೆ ಗಂಡನಿರುವ ವೇಳೆಯಲ್ಲಿ ಅವಳ ಮೇಲೆ ಹ
ರಿಕೆಗಳು, ಇಲ್ಲವೆ ಪ್ರಾಣವನ್ನು ಬಂಧಿಸುವ ಬಾಯಿ ಹಾರಿದ
ಮಾತು ಇದ್ದರೆ, ಅವಳ ಗಂಡನು ಅದನ್ನು ಕೇಳ್ದು, ಕೇಳ್ದ ದಿ
೭ ವಸದಲ್ಲಿ ಅವಳಿಗೆ ಸುಮ್ಮನಿದ್ದ ಪಕ್ಷದಲ್ಲಿ ಅವಳ ಹರಿಕೆಗಳೂ,
ಅವಳು ತನ್ನ ಪ್ರಾಣದ ಮೇಲೆ ಮಾಡಿದ ಕಟ್ಟಳೆಗಳೂ ನಿಲ್ಲುವ
೮ ವು. ಆದರೆ ಅವಳ ಗಂಡನು ಅದನ್ನು ಕೇಳ್ದ ದಿವಸದಲ್ಲಿ ಅವ
ಳನ್ನು ತಡದು, ಅವಳ ಮೇಲೆ ಇರುವ ಅವಳ ಹರಿಕೆಯನ್ನೂ,
ಪ್ರಾಣದ ಮೇಲೆ ಅವಳು ಬಂಧಿಸಿ ಕೊಂಡ ಬಾಯಿ ಹಾರಿದ ಮಾ
ತನ್ನೂ, ನಿರರ್ಥಕ ಮಾಡಿದ ಪಕ್ಷದಲ್ಲಿ ಕರ್ತನು ಅವಳಿಗೆ ಕ್ಷ
ಮಿಸುವನು.

೯ ಇದಲ್ಲದೆ ವಿಧವೆಯಾದರೂ, ಪರಿತ್ಯಾಗ ಮಾಡಲ್ಪಟ್ಟವಳಾದ
ರೂ, ತಮ್ಮ ಪ್ರಾಣಗಳನ್ನು ಬಂಧಿಸಿದ ಒಂದೊಂದು ಹರಿಕೆ ಅ
ವರ ಮೇಲೆ ನಿಲ್ಲುವದು.





೧೦ ಮತ್ತು ಅವಳು ತನ್ನ ಗಂಡನ ಮನೆಯಲ್ಲಿ ಹರಿಕೆ ಮಾಡಿದರೆ,
೧೧ ಇಲ್ಲವೆ ಆಣೆಯಿಂದ ತನ್ನ ಪ್ರಾಣವನ್ನು ಬಂಧಿಸಿದರೆ, ಅವಳ
ಗಂಡನು ಅದನ್ನು ಕೇಳ್ದು, ಅದಕ್ಕೆ ಮೌನವಾಗಿದ್ದು, ಅವಳನ್ನು
ತಡೆಯದ ಪಕ್ಷದಲ್ಲಿ, ಅವಳ ಸಮಸ್ತ ಹರಿಕೆಗಳೂ, ಅವಳು ತನ್ನ
ಪ್ರಾಣವನ್ನು ಬಂಧಿಸಿದ ಸಮಸ್ತ ಕಟ್ಟಳೆಗಳೂ, ನಿಲ್ಲುವವು.
೧೨ ಆದರೆ ಅವಳ ಗಂಡನು ಅವುಗಳನ್ನು ಕೇಳ್ದ ದಿವಸದಲ್ಲೇ, ತೆ
ವುಗಳನ್ನು ಪೂರ್ಣವಾಗಿ ನಿರರ್ಥಕ ಮಾಡಿದ ಪಕ್ಷದಲ್ಲಿ, ಅವ
ಳ ಹರಿಕೆಗಳಿಗೋಸ್ಕರವೂ ಅವಳ ಪ್ರಾಣದ ಕಟ್ಟಳೆಗೋಸ್ಕರ
ವೂ, ಅವಳ ತುಟಿಗಳಿಂದ ಹೊರಟದ್ದು ಯಾವದಾಗಲಿ ನಿಲ್ಲದು,
ಅವಳ ಗಂಡನು ಅವುಗಳನ್ನು ನಿರರ್ಥಕ ಮಾಡಿದ್ದಾನೆ; ಮತ್ತು
೧೩ ಕರ್ತನು ಅವಳಿಗೆ ಕ್ಷಮಿಸುವನು. ಸಮಸ್ತ ಹರಿಕೆಗಳನ್ನೂ,
ಪ್ರಾಣವನ್ನೂ ಕುಂದಿಸುವ ಕಟ್ಟಳೆಯ ಸಮಸ್ತ ಆಣೆಗಳನ್ನೂ
ಅವಳ ಗಂಡನು ನಾರ್ಥಕ ಮಾಡ ಬಹುದು, ಅವಳ ಗಂಡನು
೧೪ ನಿರರ್ಥಕ ಮಾಡ ಬಹುದು. ಆದರೆ ಅವಳ ಗಂಡನು ಅದಕ್ಕೆ
ದಿನ ದಿನಕ್ಕೆ ಪೂರ್ಣವಾಗಿ ಸುಮ್ಮನಿದ್ದರೆ, ಅವನು ಅವಳ ಸ
ಮಸ್ತ ಹರಿಕೆಗಳನ್ನೂ ಅವಳ ಮೇಲಿರುವ ಸಮಸ್ತ ಕಟ್ಟಳೆಗಳ
ನ್ನೂ ಸ್ಥಾಪಿಸುತ್ತಾನೆ; ಅವನು ಕೇಳ್ದ ದಿವಸದಲ್ಲಿ ಅವಳಿಗೆ ಸು
೧೫ ಮ್ಮನಿರುವದರಿಂದ ಅವುಗಳನ್ನು ಸ್ಥಾಪಿಸಿದ್ದಾನೆ. ಆದರೆ ಅವನು
ಕೇಳ್ದ ತರುವಾಯ ಅವುಗಳನ್ನು ನಿರರ್ಥಕ ಮಾಡಿದರೆ, ಅ
ವಳ ಅಕ್ರಮವನ್ನು ಹೊರ ಬೇಕು.

೧೬ ಗಂಡ ಹೆಂಡರ ವಿಷಯದಲ್ಲಿಯೂ ತಂದೆಯೂ, ತಂದೇ ಮನೆ
ಯಲ್ಲಿ ಕನ್ಯಾವಸ್ತೆಯಾಗಿರುವ ಮಗಳೂ, ಇವರ ವಿಷಯದಲ್ಲಿ
ಯೂ ಕರ್ತನು ಮೋಶೆಗೆ ಆಜ್ಞಾಪಿಸಿದ ನೇಮಗಳು ಇವೇ.

## ೩೧. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗತ ಮಾತಾಡಿ ಹೇಳ್ದೆದ್ದೇ
೨ ನಂದರೆ, ನೀನು ಮಿದ್ಯಾನ್ಯರ ಕಡೆಯಿಂದ ಇಸ್ರಯೇಲ್ ಮಕ್ಕ
ಳ ಮುಯ್ಯನ್ನು ತೀರಿಸು, ತರುವಾಯ ನಿನ್ನ ಜನರ ಸಂಗತ
ಕೂಡಿಸಲ್ಪಡುವಿ.

೩ ಆಗ ಮೋಶೆ ಜನರ ಸಂಗತ ಹೇಳ್ದೆದ್ದೇನಂದರೆ—ನಿಮ್ಮೊಳ
ಗಿಂದ ಮನುಷ್ಯರು ಯುದ್ಧಕ್ಕೆ ಸಿದ್ಧ ಮಾತಿ ಕೊಳ್ಳಲಿ; ಅವ
ರು ಮಿದ್ಯಾನ್ಯರ ಮೇಲೆ ಕರ್ತನ ಮುಯ್ಯನ್ನು ತೀರಿಸ ಬೇ
೪ ಕು. ಇಸ್ರಯೇಲ್ಯರ ಸಮಸ್ತ ಕುಲಗಳೊಳಗೆ ಒಂದೊಂದು ಕು
ಲದಿಂದ ಸಾವಿರ ಮಂದಿಯನ್ನು ಯುದ್ಧಕ್ಕೆ ಕಳಹಿಸ ಬೇಕು.
೫ ಆಗ ಇಸ್ರಯೇಲ್ಯರ ಸಹಸ್ರಗಳಿಂದ ಒಂದೊಂದು ಕುಲದಿಂದ
ಸಾವಿರ ಮಂದಿಯಾಗಿ ಯುದ್ಧಕ್ಕೆ ಸಿದ್ಧವಾದ ಹನ್ನೆರಡು ಸಾವಿ
೬ ರ ಮನುಷ್ಯರು ಪ್ರತ್ಯೇಕಿಸಲ್ಪಟ್ಟರು. ಮೋಶೆ ಒಂದೊಂದು
ಕುಲದಿಂದ ಸಾವಿರ ಮಂದಿಯಾಗಿರುವ ಅವರನ್ನು ಯಾಜಕನಾ
ದ ಎಲೆಯಾಜರನ ಮಗನಾದ ಫಿನೆಹಾಸನನ್ನೂ, ಪರಿಶುದ್ಧ ಸಾ
ಮಾನುಗಳ ಸಂಗತಲೂ, ಜಯ ಧ್ವನಿಯ ತುತೂರಿಗಳ ಸಂಗತ
೭ ಲೂ ಯುದ್ಧಕ್ಕೆ ಕಳಹಿಸಿದನು. ಕರ್ತನು ಮೋಶೆಗೆ ಆಜ್ಞಾ
ಪಿಸಿದ ಪ್ರಕಾರ ಅವರು ಮಿದ್ಯಾನ್ಯರ ಮೇಲೆ ಯುದ್ಧ ಮಾತಿ,
೮ ಗಂಡಸಿಲ್ಲೆಗರನ್ನು ಕೊಂದು ಹಾಕಿದರು. ಈ ಕೊಲ್ಲಲ್ಪಟ್ಟವರ
ಲ್ಲದೆ ಮಿದ್ಯಾನಿನ ಅರಸರನ್ನು ಕೊಂದು ಹಾಕಿದರು. ಯಾರಂ
ದರೆ ಮಿದ್ಯಾನಿನ ಐದು ಮಂದಿ ಅರಸರಾಗಿರುವ ಎವಿಯನ್ನೂ,
ರೇಕೆಮನನ್ನೂ, ಚೂರನನ್ನೂ, ಹೂರನನ್ನೂ, ರೇಬನನ್ನೂ,
ಬೆಯೋರನ ಮಗನಾದ ಬಿಳಾಮನನ್ನೂ ಕತ್ತಿಯಿಂದ ಕೊಂದು
೯ ಹಾಕಿದರು. ಮತ್ತು ಇಸ್ರಯೇಲ್ ಮಕ್ಕಳು ಮಿದ್ಯಾನ್ಯರ ಸ್ತ್ರೀ
ಯರನ್ನೂ, ಅವರ ಮಕ್ಕಳನ್ನೂ, ಕೆಕೆಪ್ಪೆದು, ಅವರ ಸಮಸ್ತ
ದನಗಳನ್ನೂ ಅವರ ಸಮಸ್ತ ಹಿಂಡುಗಳನ್ನೂ ಅವರ ಸಮಸ
೧೦ ಸ್ಥಿತಿಯನ್ನೂ ಸುಲು ಕೊಂಡರು. ಅವರು ವಾಸ ಮಾಡಿದ ಸಮ
ಸ್ತ ಪಟ್ಟಣಗಳನ್ನೂ ಅವರ ಸಮಸ್ತ ಕೋಟೆಗಳನ್ನೂ ಬೆಂಕಿಯಿಂ
೧೧ ದ ಸುಟ್ಟರು. ಮನುಷ್ಯರಲ್ಲಿಯೂ, ದನಗಳಲ್ಲಿಯೂ, ಸಮಸ್ತ
೧೨ ಸುಲಿಗೆಯನ್ನೂ, ಸಮಸ್ತ ಲೂಟೆಯನ್ನೂ ತಕ್ಕೊಂಡರು. ಅವ
ರು ಕೆಕೆಯನ್ನೂ ಲೂಟೆಯನ್ನೂ ಸುಲಿಗೆಯನ್ನೂ ಮೋಶೆ
ಯೂ ಯಾಜಕನಾದ ಎಲೆಯಾಜರನೂ ಇಸ್ರಯೇಲ್ ಮಕ್ಕಳ
ಸಭೆಯೂ ಇವರ ಬಳಿಗೆ ಯೆರಿಕೋ ಪಟ್ಟಣಕ್ಕೆದುರಾಗಿ ಯೋ
ರ್ದನ್ ನದಿಯ ಮೇಲೆ ಇರುವ ಮೋವಾಬಿನ ಬೈಲುಗಳಲ್ಲಿ ಇದ್ದ
ದಂಡಿನೊಳಗೆ ತಂದರು.

೧೩ ಮೋಶೆಯೂ, ಯಾಜಕನಾದ ಎಲೆಯಾಜರನೂ, ಸಭೆಯ
ಯಜಮಾನರೆಲ್ಲರೂ, ಅವರಿಗೆದುರಾಗಿ ದಂಡಿನ ಹೊರಗೆ ಹೋ
೧೪ ದರು. ಆದರೆ ಮೋಶೆ ಯುದ್ಧದಿಂದ ಬಂದ ಸಹಸ್ರಾಧಿಪತಿಗಳೂ
ಶತಾಧಿಪತಿಗಳೂ ಆಗಿರುವ ದಂಡಿನ ಮುಖ್ಯಸ್ಥರ ಮೇಲೆ ಕೋಪ
೧೫ ಮಾಡಿ, ಅವರಿಗೆ ಹೇಳ್ದೆದ್ದೇನಂದರೆ—ಹೆಂಗಸರನ್ನೆಲ್ಲಾ ಉಳಿಸಿದಿ
೧೬ ರೋ! ಇಗೋ, ಇವರೇ ಬಿಳಾಮನ ಮಾತಿನಿಂದ ಬೆಯೋರನ
ಕಾರ್ಯದಲ್ಲಿ ಕರ್ತನಿಗೆ ವಿರೋಧವಾಗಿ ದ್ರೋಹ ಮಾಡುವದಕ್ಕೆ
ಇಸ್ರಯೇಲ್ ಮಕ್ಕಳಿಗೆ ಕಾರಣವಾಗಿದ್ದರು. ಮತ್ತು ಕರ್ತನ ಸ
೧೭ ಭೆಯೊಳಗೆ ವ್ಯಾಧಿಯಾಯಿತು. ಆದಕಾರಣ ಈಗ ಚಿಕ್ಕವರೊಳ
ಗೆ ಎಲ್ಲಾ ಗಂಡಸರನ್ನು ಕೊಂದು, ಪುರುಷನನ್ನು ಸಂಗಮ
೧೮ ವಾಗಿ ಅರಿತಿರುವ ಎಲ್ಲಾ ಸ್ತ್ರೀಯರನ್ನೂ ಕೊಂದು ಹಾಕಿರಿ. ಆ
ದರೆ ಪುರುಷನನ್ನು ಸಂಗಮವಾಗಿ ಅರಿಯದ ಎಲ್ಲಾ ಹೆಣ್ಣು ಮ
ಕ್ಕಳನ್ನು ನಿಮಗೆ ಬದುಕಿಸಿ ಕೊಳ್ಳಿರಿ. ಇದಲ್ಲದೆ ಪ್ರಾಣವನ್ನು
ಕೊಂದವರೆಲ್ಲರೂ, ಕೊಲ್ಲಲ್ಪಟ್ಟವನನ್ನು ಮುಟ್ಟಿದವರೆಲ್ಲರೂ
ಏಳು ದಿವಸ ದಂಡಿನ ಹೊರಗೆ ಇಳಿಯ ಬೇಕು; ನೀವು ನಿಮ್ಮ ಶೆ
ಕೆಯವರೂ ಮೂರನೇ ಏಳನೇ ದಿವಸಗಳಲ್ಲಿ ನಿಮ್ಮನ್ನು ಪವಿತ್ರ
೧೯ ಮಾತಿ ಕೊಳ್ಳ ಬೇಕು. ಮತ್ತು ಎಲ್ಲಾ ಬಟ್ಟೆಗಳನ್ನೂ ಎಲ್ಲಾ
ತೊಗಲಿನ ಸಾಮಾನನ್ನೂ ಮೇಕೆ ಕೂದಲಿನಿಂದ ಮಾಡಿದ್ದೆಲ್ಲವ
ನ್ನೂ, ಕಟ್ಟಿಗೆ ಸಾಮಾನೆಲ್ಲವನ್ನೂ, ಪವಿತ್ರ ಮಾಡ ಬೇಕು.

೨೦ ಮತ್ತು ಯಾಜಕನಾದ ಎಲೆಯಾಜರನು ಯುದ್ಧಕ್ಕೆ ಹೋ
ದ ದಂಡಿನ ಮನುಷ್ಯರಿಗೆ ಹೇಳ್ದೆದ್ದೇನಂದರೆ—ಕರ್ತನು ಮೋಶೆ
೨೧ ಗೆ ಆಜ್ಞಾಪಿಸಿದ ನ್ಯಾಯದ ಕಟ್ಟಳೆ ಇದೇ—ಭಂಗಾರವನ್ನೂ, ಬೆ
ಳ್ಳಿಯನ್ನೂ, ತಾಮ್ರವನ್ನೂ, ಕಬ್ಬಿಣವನ್ನೂ, ತವರವನ್ನೂ, ಸೀ
೨೨ ಸವನ್ನೂ, ಬೆಂಕಿ ತಾಳುವ ವಸ್ತುಗಳನ್ನೆಲ್ಲಾ ನೀವು ಬೆಂಕಿಯಿಂ
ದ ದಾಟಿಸ ಬೇಕು; ಆಗ ಅವು ಶುದ್ಧವಾಗುವವು; ಅಪವಿತ್ರತ್ವದ
ನೀರಿನಿಂದ ಮಾತ್ರ ಅವುಗಳು ಪವಿತ್ರವಾಗ ಬೇಕು; ಆದರೆ ಬೆಂ
ಕಿ ತಾಳ್ದದ ಸಮಸ್ತವನ್ನು ನೀವು ನೀರಿನಿಂದ ದಾಟಿಸ ಬೇಕು.
೨೩ ಮತ್ತು ಏಳನೇ ದಿವಸದಲ್ಲಿ ನೀವು ನಿಮ್ಮ ಬಟ್ಟೆಗಳನ್ನು ಒಗೆದು
ಕೊಂಡು, ಶುದ್ಧರಾಗ ಬೇಕು; ತರುವಾಯ ದಂಡಿನೊಳಗೆ ಬರ
ಬೇಕು.

೨೪ ಮತ್ತು ಕರ್ತನು ಮೋಶೆಯ ಸಂಗತ ಮಾತಾಡಿ ಹೇಳ್ದೆದ್ದೇ

೨೬ ನಂದರೆ—ನೀನೂ ಯಾಜಕನಾದ ಎಲೆಯಾಜರನೂ, ಸಭೆಯ
ಮುಖ್ಯ ಯಜಮಾನರೂ, ಮನುಷ್ಯರಲ್ಲಿಯೂ ದನಗಳಲ್ಲಿ
ಯೂ, ಪೈಯಲ್ಪಟ್ಟ ಸುಲಿಗೆಯ ಲೆಖ್ಖವನ್ನು ತಕ್ಕೊಳ್ಳಿರಿ. ಆ
೨೭ ಸುಲಿಗೆಯನ್ನು ಯುದ್ಧಕ್ಕೆ ಹೊರಟ ಯುದ್ಧಸ್ಥರಿಗೂ, ಸಮಸ್ತ
೨೮ ಸಭೆಗೂ ಎರಡು ಪಾಲು ಮಾಡ ಬೇಕು. ಮತ್ತು ಮನುಷ್ಯರಿಂದ
ಲೂ, ಪಶುಗಳಿಂದಲೂ, ಕತ್ತೆಗಳಿಂದಲೂ, ಕುರಿಗಳಿಂದಲೂ, ಐನೂ
ರರಲ್ಲಿ ಒಂದು ಪ್ರಾಣವನ್ನು ಯುದ್ಧಕ್ಕೆ ಹೊರಟ ಯುದ್ಧಸ್ಥ
೨೯ ರ ಕಡೆಯಿಂದ ಕರ್ತನಿಗೆ ಸುತ್ತಿಗೆಯಾಗಿ ಎತ್ತ ಬೇಕು. ಅವರ
ಅರ್ಧ ಪಾಲಿನಿಂದ ಅದನ್ನು ತಕ್ಕೊಂಡು, ಕರ್ತನಿಗೆ ಎತ್ತುವ
ಅರ್ಪಣೆಯಾಗಿ ಯಾಜಕನಾದ ಎಲೆಯಾಜರನಿಗೆ ಕೊಡ ಬೇ
೩೦ ಕು. ಮತ್ತು ಇಸ್ರಯೇಲ್ ಮಕ್ಕಳ ಅರ್ಧ ಪಾಲಿನಿಂದ ಮನು
ಷ್ಯರಿಂದಲೂ, ಪಶುಗಳಿಂದಲೂ, ಕತ್ತೆಗಳಿಂದಲೂ, ಕುರಿಗಳಿಂದ
ಲೂ, ಸಮಸ್ತ ದನಗಳಿಂದಲೂ, ಐವತ್ತರಲ್ಲಿ ಒಂದು ಪಾಲು
ತಕ್ಕೊಂಡು, ಅವುಗಳನ್ನು ಕರ್ತನ ನಿವಾಸದ ಕಾಯಿದೆಯ
೩೧ ನ್ನು ಕಾಯುವ ಲೇವ್ಯರಿಗೆ ಕೊಡ ಬೇಕು. ಆಗ ಮೋಶೆಯೂ,
ಯಾಜಕನಾದ ಎಲೆಯಾಜರನೂ, ಕರ್ತನು ಮೋಶೆಗೆ ಆಜ್ಞಾ
ಪಿಸಿದ ಪ್ರಕಾರ ಮಾಡಿದರು.

೩೨ ಮತ್ತು ಯುದ್ಧಸ್ಥರು ಪೈದ ಲೂಟಿಯಲ್ಲಿ ಉಳಿದ ಸುಲಿಗೆ ಎ
೩೩ ಪ್ಪತ್ತೆಂದರೆ—ಆರು ಲಕ್ಷದ ಐವತ್ತೈದು ಸಾವಿರ ಕುರಿಗಳು, ಎಪ್ಪ
೩೪ ತ್ತೆರಡು ಸಾವಿರ ದನಗಳು, ಅರವತ್ತೊಂದು ಸಾವಿರ ಕತ್ತೆಗಳು,
೩೫ ಪುರುಷರನ್ನು ಸಂಗಡವಾಗಿ ಅರಿಯದ ಸ್ತ್ರೀಯರು ಮೂವತ್ತೆ
ರಡು ಸಾವಿರ ಮಂದಿ.

೩೬ ಮತ್ತು ಯುದ್ಧಕ್ಕೆ ಹೊರಟಿದವರ ಅರವಾಸಿಯ ಲೆಖ್ಖವು ಮೂ
೩೭ ರು ಲಕ್ಷದ ಮೂವತ್ತೇಳು ಸಾವಿರದ ಐನೂರು ಕುರಿಗಳು; ಮತ್ತು
ಕುರಿಗಳಿಂದ ಕರ್ತನಿಗೆ ಕೊಡಲ್ಪಟ್ಟ ಸುತ್ತಿಗೆಯು ಆರು ನೂರ
೩೮ ಎಪ್ಪತ್ತೈದು, ದನಗಳು ಮುವ್ವತ್ತಾರು ಸಾವಿರ; ಅವುಗಳಿಂದ ಕ
೩೯ ರ್ತನಿಗೆ ಉಂಟಾದ ಸುತ್ತಿಗೆ ಎಪ್ಪತ್ತೆರಡು. ಕತ್ತೆಗಳು ಮೂವತ್ತು
ಸಾವಿರದ ಐನೂರು; ಅವುಗಳಿಂದ ಕರ್ತನಿಗೆ ಉಂಟಾದ ಸುತ್ತಿ
೪೦ ಗೆ ಅರವತ್ತೊಂದು. ಜನರು ಹದಿನಾರು ಸಾವಿರ; ಅವರಿಂದ ಕರ್ತ
೪೧ ನಿಗೆ ಉಂಟಾದ ಸುತ್ತಿಗೆ ಮೂವತ್ತೆರಡು ಜನ. ಆದರೆ ಮೋಶೆ
ಕರ್ತನಿಗೆ ಎತ್ತುವ ಅರ್ಪಣೆಯಾಗಿರುವ ಸುತ್ತಿಗೆಯನ್ನು ಯಾ
ಜಕನಾದ ಎಲೆಯಾಜರನಿಗೆ, ಕರ್ತನು ಮೋಶೆಗೆ ಆಜ್ಞಾಪಿಸಿದ
ಪ್ರಕಾರ ಕೊಟ್ಟನು.

೪೨ ಮತ್ತು ಮೋಶೆ ಯುದ್ಧಕ್ಕೆ ಹೋದ ಮನುಷ್ಯರಿಂದ ತ
ಕ್ಕೊಂಡು, ಇಸ್ರಯೇಲ್ ಮಕ್ಕಳಿಗೆ ಹಂಚಿದ ಅರವಾಸಿ ಎಷ್ಟುಂದ
೪೩ ರೆ—ಕುರಿಗಳಿಂದ ಸಭೆಯ ಅರವಾಸಿ, ಮೂರು ಲಕ್ಷದ ಮೂವ
೪೪ ತ್ತೇಳು ಸಾವಿರದ ಐನೂರು ಕುರಿಗಳು; ಮೂವತ್ತಾರು ಸಾವಿರ
೪೫ ದನಗಳು; ಮೂವತ್ತು ಸಾವಿರದ ಐನೂರು ಕತ್ತೆಗಳು; ಹದಿ
೪೬ ನಾರು ಸಾವಿರ ಜನರು. ಮತ್ತು ಮೋಶೆ ಇಸ್ರಯೇಲ್ ಮ
೪೭ ಕ್ಕಳ ಅರ್ಧದಿಂದ ಮನುಷ್ಯರಲ್ಲಿಯೂ, ಪಶುಗಳಲ್ಲಿಯೂ,
ಐವತ್ತರಲ್ಲಿ ಒಂದು ಪಾಲನ್ನು ತಕ್ಕೊಂಡು, ಕರ್ತನು ಮೋಶೆ
ಗೆ ಆಜ್ಞಾಪಿಸಿದ ಪ್ರಕಾರ, ಕರ್ತನ ನಿವಾಸದ ಕಾಯಿದೆಯನ್ನು
ಕಾಯುವ ಲೇವ್ಯರಿಗೆ ಕೊಟ್ಟನು.

೪೮ ಆಗ ಯುದ್ಧಸ್ಥರ ಸಹಸ್ರಗಳಿಗೆ ಯಜಮಾನರಾದ ಸಹಸ್ರಾಧಿ
೪೯ ಪತಿಗಳೂ, ಶತಾಧಿಪತಿಗಳೂ, ಮೋಶೆಯ ಬಳಿಗೆ ಬಂದು, ಮೋ
ಶೆಗೆ ಹೇಳಿದ್ದೇನಂದರೆ—ನಿನ್ನ ಸೇವಕರಾದ ನಾವು ನಮ್ಮ ಕೈಯ
ಲ್ಲಿದ್ದ ಯುದ್ಧಸ್ಥರ ಲೆಖ್ಖವನ್ನು ತಕ್ಕೊಂಡೆವು; ಅವರಲ್ಲಿಗೆ ಒಬ್ಬ
೫೦ ನಾದರೂ ಕಡಮೆಯಾಗಲಿಲ್ಲ. ಆದದರಿಂದ ಕರ್ತನ ಸಮುಖ
ದಲ್ಲಿ ನಮ್ಮ ಪ್ರಾಣಗಳಿಗೋಸ್ಕರ ಪಾಪ ಮುಚ್ಚುವ ಹಾಗೆ ನಾ
ವು ಒಬ್ಬೊಬ್ಬನಿಗೆ ಸಿಕ್ಕಿದಂಥ ಭಂಗಾರದ ವಸ್ತುಗಳಾದ ಕಡಗ
ಗಳನ್ನೂ ಸರಪಣಿಗಳನ್ನೂ ಉಂಗರಗಳನ್ನೂ ವಾಲೆಗಳನ್ನೂ
ಬಿರುದಿನ ಕೆಂಪೆಗಳನ್ನೂ ಕರ್ತನಿಗೆ ಕಾಣಿಕೆಯಾಗಿ ತಂದಿದ್ದೇ
೫೧ ವೆ. ಹಾಗೆ ಮೋಶೆಯೂ ಯಾಜಕನಾದ ಎಲೆಯಾಜರನೂ ವಿ
ಚಿತ್ರ ಕೆಲಸವಾಗಿರುವ ಭಂಗಾರವನ್ನೆಲ್ಲಾ ಅವರಿಂದ ತಕ್ಕೊಂಡ
೫೨ ರು. ಸಹಸ್ರಾಧಿಪತಿಗಳೂ, ಶತಾಧಿಪತಿಗಳೂ, ಕರ್ತನಿಗೆ ಅರ್ಪಿ
ಸಿದ ಕಾಣಿಕೆಯ ಚಿನ್ನವೆಲ್ಲಾ ಹದಿನಾರು ಸಾವಿರದ ಏಳುನೂ
೫೩ ರ ಐವತ್ತು ಶೆಕೆಲುಗಳಾಗಿತ್ತು. ಯಾಕಂದರೆ ಯುದ್ಧದ ಜನರು
೫೪ ಒಬ್ಬೊಬ್ಬನು ತನಗೆ ತಾನೇ ಸುಲುಕೊಂಡಿದ್ದನು. ಆಗ ಮೋಶೆ
ಯೂ, ಯಾಜಕನಾದ ಎಲೆಯಾಜರನೂ, ಸಹಸ್ರಾಧಿಪತಿಗಳ
ಶತಾಧಿಪತಿಗಳ ಕೈಯಿಂದ ಭಂಗಾರವನ್ನು ತಕ್ಕೊಂಡು, ಕರ್ತ
ನ ಸಮುಖದಲ್ಲಿ ಇಸ್ರಯೇಲ್ ಮಕ್ಕಳಿಗೆ ಜ್ಞಾಪಕಕ್ಕಾಗಿ ಸಭೆಯ
ಗುಡಾರದೊಳಗೆ ತಂದರು.

## ೩೨. ಸಂಧಿ.

೧ ಇದಲ್ಲದೆ ರೂಬೆನನ ಮಕ್ಕಳಿಗೂ, ಗಾದನ ಮಕ್ಕಳಿಗೂ,
ಬಹಳ ಅಧಿಕವಾದ ದನಗಳು ಇದ್ದವು; ಅವರು ಯಾಜೆರೂ ಗಿ
ಲ್ಯಾದೂ ಎಂಬ ದೇಶಗಳನ್ನು ನೋಡಿದಾಗ, ಅಗೋ, ಆ ಸ್ಥಳ
ವು ದನಗಳ ಸ್ಥಳವಾಗಿತ್ತು. ಆದದರಿಂದ ಗಾದನ ಮಕ್ಕಳೂ, ರೂ
೨ ಬೆನನ ಮಕ್ಕಳೂ ಬಂದು, ಮಾತಾಡಿ, ಮೋಶೆಗೂ ಯಾಜಕನಾ
ದ ಎಲೆಯಾಜರನಿಗೂ ಸಭೆಯ ಪ್ರಭುಗಳಿಗೂ ಹೇಳಿದ್ದೇನಂದರೆ
—ಅತಕೋಥ್, ದೀಬೋನ್, ಯಾಜೆರ್, ನಿಮ್ರ, ಹೆಷ್ಬೋನ್, ಎಲೆ
೩ ಯಾಲೆ, ಸೆಬಾಮ್, ನೆಬೋ ಬೆಯೋನ್ ಎಂಬವುಗಳೂ, ಕರ್ತ
೪ ನು ಇಸ್ರಯೇಲ್ಯರ ಸಭೆಯ ಮುಂದೆ ಹೊಡೆದ ದೇಶವೂ, ದನಗ
ಳ ದೇಶವಾಗಿದೆ; ನಿನ್ನ ಸೇವಕರಿಗೆ ದನಗಳು ಉಂಟು. ಆದದರಿಂ
೫ ದ ನಮಗೆ ನಿಮ್ಮ ದೃಷ್ಟಿಯಲ್ಲಿ ದಯವು ಸಿಕ್ಕಿದ್ದಾದರೆ, ಈ ದೇ
ಶವನ್ನು ನಿಮ್ಮ ಸೇವಕರಿಗೆ ಸ್ವಾಸ್ಥ್ಯಕ್ಕಾಗಿ ಕೊಡ ಬೇಕು; ನ
ಮ್ಮನ್ನು ಯೊರ್ದನ್ ನದಿಯಆಚೆಗೆ ತಕ್ಕೊಂಡು ಹೋಗ ಬೇ
ಡಿರಿ, ಅಂದರು.

೬ ಆಗ ಮೋಶೆ ಗಾದನ ಮಕ್ಕಳಿಗೂ ರೂಬೆನನ ಮಕ್ಕಳಿಗೂ
ಹೇಳಿದ್ದೇನಂದರೆ—ನಿಮ್ಮ ಸಹೋದರರು ಯುದ್ಧಕ್ಕೆ ಹೋಗಲಾಗಿ,
೭ ನೀವು ಇಲ್ಲಿ ಕೂತಿರ ಬೇಕೋ! ಕರ್ತನು ಅವರಿಗೆ ಕೊಟ್ಟ ದೇ
ಶಕ್ಕೆ ದಾಟದ ಹಾಗೆ, ನೀವು ಇಸ್ರಯೇಲ್ ಮಕ್ಕಳ ಹೃದಯಗ
೮ ಳನ್ನು ಅಧೈರ್ಯ ಪಡಿಸುವದು ಯಾಕೆ! ನಿಮ್ಮ ತಂದೆಗಳು
ನಾನು ಅವರನ್ನು ದೇಶವನ್ನು ನೋಡುವದಕ್ಕೆ ಕಾದೆಷ್ ಬರ್ನೇ
೯ ಯದಿಂದ ಕಳುಹಿಸಿದಾಗ, ಹಾಗೆಯೇ ಮಾಡಿದರು. ಹ್ಯಾಗಂದರೆ
ಅವರು ಎಷ್ಕೋಲೆಂಬ ಹಳ್ಳದ ಪರ್ಯಂತರ ಬಂದು, ದೇಶವನ್ನು
ನೋಡಿದಾಗ, ಇಸ್ರಯೇಲ್ ಮಕ್ಕಳ ಹೃದಯವನ್ನು, ಕರ್ತ
೧೦ ನು ಅವರಿಗೆ ಕೊಟ್ಟ ದೇಶದೊಳಗೆ ಹೋಗದ ಹಾಗೆ, ಅಧೈರ್ಯ
ಪಡಿಸಿದರು. ಮತ್ತು ಕರ್ತನು ಆ ದಿವಸದಲ್ಲಿ ಕೋಪಿಸಿ ಕೊಂಡು,
೧೧ ಪ್ರಮಾಣ ಮಾಡಿ, ಹೇಳಿದ್ದೇನಂದರೆ—ಅವರು ನನ್ನನ್ನು ಪೂರ್ಣ





ವಾಗಿ ಹಿಂಬಾಲಿಸದೆ ಇರುವದರಿಂದ, ನಾನು ಅಬ್ರಹಾಮ ಈಸಾಕ
ಯಾಕೋಬರಿಗೆ ಪ್ರಮಾಣ ಮಾಡಿದ ದೇಶವನ್ನು ಐಗುಪ್ತದೊ
ಳಗಿಂದ ಏರಿ ಬಂದ ಇಪ್ಪತ್ತು ವರುಷವಾದ ಅಕಿಕ್ಕಿಂತ ಅಧಿಕವಾದ
೧೨ ಪ್ರಾಯವುಳ್ಳ ಜನರಲ್ಲಿ ಕೆನಿಜಿಯನಾದ ಯೆಫುನ್ನೆಯ ಮ
ಗನಾಗಿರುವ ಕಾಲೆಬನೂ, ನೂನನ ಮಗನಾದ ಯೆಹೋಶು
ವನೂ, ಹೊರ್ತು, ಒಬ್ಬನಾದರೂ ನೋಡುವದಿಲ್ಲ; ಯಾಕಂ
೧೩ ದರೆ ಇವರೇ ಕರ್ತನನ್ನು ಪೂರ್ಣವಾಗಿ ಹಿಂಬಾಲಿಸಿದ್ದಾರೆ. ಹಾ
ಗೆ ಕರ್ತನು ಇಸ್ರಯೇಲ್ಯರ ಮೇಲೆ ಕೋಪಿಸಿ ಕೊಂಡದರಿಂದ, ಅವ
ನ ಕಣ್ಣುಗಳಲ್ಲಿ ಕೆಟ್ಟತನವನ್ನು ಮಾಡಿದ ಸಮಸ್ತ ಸಂತತಿಯು
ತೀರುವ ಪರ್ಯಂತರ ಅವರನ್ನು ಅರಣ್ಯದಲ್ಲಿ ನಾಲ್ವತ್ತು ವರು
೧೪ ಷ ಅಲೆಯ ಮಾಡಿದನು. ಇಗೋ, ಕರ್ತನ ಕೋಪವು ಇಸ್ರ
ಯೇಲ್ ಕಡೆಗೆ ಇನ್ನು ಹೆಚ್ಚಾಗು ವಹಾಗೆ, ನೀವು ನಿಮ್ಮ ತಂದೆಗ
ಳಿಗೆ ಬದಲಾಗಿ ಪಾಪಿಗಳಾದ ಮನುಷ್ಯರ ಅಭಿವೃದ್ಧಿಯಾಗಿ ನಿಂ
೧೫ ತಿದ್ದೀರಿ. ಯಾಕಂದರೆ ನೀವು ಅವನ ಕಡೆಯಿಂದ ತಿರುಗಿದರೆ, ಅ
ವನು ಇನ್ನೂ ಹೆಚ್ಚಾಗಿ ಅವರನ್ನು ಅರ್ಯಾದಲ್ಲಿ ಇರಿಸಿ ಬಿಡುವ
ನು; ಮತ್ತು ನೀವು ಈ ಸಮಸ್ತ ಜನವನ್ನು ಕೆಡಿಸುವಿರಿ.

೧೬ ಆಗ ಅವರು ಅವನ ಬಳಿಗೆ ಬಂದು, ಹೇಳಿದ್ದೇನಂದರೆ—ನಾವು
ಇಲ್ಲಿ ನಮ್ಮ ದನಗಳಿಗೋಸ್ಕರ ಹಟ್ಟಿಗಳನ್ನೂ, ನಮ್ಮ ಮಕ್ಕಳಿ
೧೭ ಗೋಸ್ಕರ ಊರುಗಳನ್ನೂ ಕಟ್ಟುವೆವು. ಆದರೆ ನಾವು ಇಸ್ರ
ಯೇಲ್ ಮಕ್ಕಳ ಮುಂದೆ ಅವರನ್ನು ಅವರ ಸ್ಥಳದೊಳಗೆ ಕೇರಿಸು
ವ ಪರ್ಯಂತರ ಯುದ್ಧಕ್ಕೆ ಸಿದ್ಧವಾಗಿ ಓಡುವೆವು; ನಮ್ಮ ಮಕ್ಕ
ಳು ಮಾತ್ರ ಈ ದೇಶದ ನಿವಾಸಿಗಳ ದೆಸೆಯಿಂದ ಭದ್ರವಾದ ಊ
೧೮ ರುಗಳಲ್ಲಿ ವಾಸವಾಗಿರ ಬೇಕು. ಇಸ್ರಯೇಲ್ ಮಕ್ಕಳಲ್ಲಿ ಬಬ್ಬೊ
ಬ್ಬನು ತನ್ನ ಸ್ವಾಸ್ಥ್ಯವನ್ನು ಹೊಂದಿ ಕೊಳ್ಳುವ ಪರ್ಯಂತರ,
೧೯ ನಾವು ನಮ್ಮ ಮನೆಗಳಿಗೆ ತಿರುಗುವದಿಲ್ಲ. ಯಾಕಂದರೆ ನಾವು
ಯೊರ್ದನ್ ನದಿಯ ಆಚೆಯಲ್ಲಿ ಅವರ ಸಂಗಡ ಸ್ವಾಸ್ಥ್ಯವ
ನ್ನು ತಕ್ಕೊಳ್ಳುವದಿಲ್ಲ. ಯಾಕಂದರೆ ನಮ್ಮ ಸ್ವಾಸ್ಥ್ಯವು ನ
ಮಗೆ ಯೊರ್ದನ್ ನದಿಯ ಈಚೆಯಲ್ಲಿ ಮೂಡಲ ಕಡೆಯಲ್ಲಿ
ಬಂತು.

೨೦ ಆಗ ಮೋಶೆ ಇವರ ಸಂಗಡ ಹೇಳಿದ್ದೇನಂದರೆ—ನೀವು ಈ
ಕಾರ್ಯವನ್ನು ಮಾಡಿದರೆ, ನೀವು ಕರ್ತನ ಮುಂದೆ ಯುದ್ಧಕ್ಕೆ
೨೧ ಸಿದ್ಧವಾಗಿದ್ದರೆ, ಮತ್ತು ನಿಮ್ಮಲ್ಲಿ ಯುದ್ಧಕ್ಕೆ ಸಿದ್ಧವಾದವರೆಲ್ಲರು
ಕರ್ತನು ತನ್ನ ಶತ್ರುಗಳನ್ನು ತನ್ನ ಸನ್ನಿಧಿಯಿಂದ ಹೊರಡಿಸು
ವ ಪರ್ಯಂತರ ಕರ್ತನ ಮುಂದೆ ಯೊರ್ದನ್ ನದಿಯನ್ನು ದಾ
೨೨ ಟಿದರೆ, ದೇಶವು ಕರ್ತನ ಮುಂದೆ ವಶವಾದ ತರುವಾಯ, ನೀವು
ಕರ್ತನಿಂದಲೂ ಇಸ್ರಯೇಲ್ಯರಿಂದಲೂ ನಿರಪರಾಧಿಗಳಾಗಿದ್ದು, ತಿ
ರುಗಿ ಕೊಳ್ಳ ಬಹುದು; ಈ ದೇಶವು ನಿಮಗೆ ಕರ್ತನ ಮುಂದೆ ಸ್ವಾ
೨೩ ಸ್ಥ್ಯಕ್ಕಾಗುವದು. ಆದರೆ ನೀವು ಈ ಪ್ರಕಾರ ಮಾಡದಿದ್ದರೆ, ಇ
ಗೋ, ಕರ್ತನಿಗೆದುರಿನಲ್ಲಿ ಪಾಪ ಮಾಡುವಿರಿ; ಮತ್ತು ನಿಮ್ಮ ಪಾ
೨೪ ಪ ನಿಮ್ಮನ್ನು ದೊರಕಿಸಿ ಕೊಳ್ಳುವದೆಂದು, ತಿಳಿಕೊಳ್ಳಿರಿ. ನಿ
ಮ್ಮ ಮಕ್ಕಳಿಗೋಸ್ಕರ ಊರುಗಳನ್ನೂ, ನಿಮ್ಮ ದನಗಳಿಗೋ
ಸ್ಕರ ಹಟ್ಟಿಗಳನ್ನೂ ಕಟ್ಟಿ, ನಿಮ್ಮ ಬಾಯಿಯಿಂದ ಹೊರಟದ್ದ
ನ್ನು ಮಾಡಿರಿ.

೨೫ ಆಗ ಗಾದನ ಮಕ್ಕಳೂ ರೂಬೆನನ ಮಕ್ಕಳೂ ಮೋಶೆಯ
ಸಂಗಡ ಮಾತಾಡಿ, ಹೇಳಿದ್ದೇನಂದರೆ—ನಮ್ಮ ಸ್ವಾಮಿ ಆಜ್ಞಾಪಿ
೨೬ ಸಿದ ಪ್ರಕಾರ ನಿನ್ನ ಸೇವಕರು ಮಾಡುವರು. ನಮ್ಮ ಮಕ್ಕಳೂ
ನಮ್ಮ ಹೆಂಡರೂ ನಮ್ಮ ಸಂಪತ್ತೂ ನಮ್ಮ ದನಗಳೆಲ್ಲಾ ಅಲ್ಲಿ ಗಿ
೨೭ ಲ್ಯಾದಿನ ಊರುಗಳಲ್ಲಿ ಇರಲಿ. ಆದರೆ ನಿನ್ನ ಸೇವಕರು, ಯು
ದ್ಧಕ್ಕೆ ಸಿದ್ಧವಾದವರೆಲ್ಲರು, ನಮ್ಮ ಸ್ವಾಮಿ ಹೇಳಿದ ಪ್ರಕಾರ
ಕರ್ತನ ಮುಂದೆ ಯುದ್ಧಕ್ಕೆ ದಾಟಿ ಹೋಗುವರು.

೨೮ ಆಗ ಮೋಶೆ ಅವರ ವಿಷಯವಾಗಿ ಯಾಜಕನಾದ ಎಲೆಯಾ
ಜರನಿಗೂ, ನೂನನ ಮಗನಾದ ಯೆಹೋಶುವನಿಗೂ, ಇಸ್ರ
ಯೇಲ್ ಮಕ್ಕಳ ಕುಲಗಳ ಯಜಮಾನರಿಗೂ ಆಜ್ಞೆ ಮಾಡಿದನು.
೨೯ ಮೋಶೆ ಅವರಿಗೆ ಹೇಳಿದ್ದೇನಂದರೆ—ಗಾದನ ಮಕ್ಕಳೂ ರೂಬೆನ
ನ ಮಕ್ಕಳೂ ಎಲ್ಲರು ಯುದ್ಧಕ್ಕೆ ಸಿದ್ಧವಾಗಿದ್ದು, ನಿಮ್ಮ ಸಂಗ
ಡ ಯೊರ್ದನ್ ನದಿಯನ್ನು ಕರ್ತನ ಮುಂದೆ ದಾಟಿದರೆ,
ದೇಶವು ನಿಮ್ಮ ಮುಂದೆ ವಶವಾದ್ದಾಗ, ನೀವು ಅವರಿಗೆ ಗಿಲ್ಯಾದ್
೩೦ ದೇಶವನ್ನು ಸ್ವಾಸ್ಥ್ಯಕ್ಕಾಗಿ ಕೊಡ ಬೇಕು. ಆದರೆ ಅವರು
ಯುದ್ಧಕ್ಕೆ ಸಿದ್ಧವಾಗಿ ನಿಮ್ಮ ಸಂಗಡ ದಾಟದಿದ್ದರೆ, ಅವರು ನಿ
ಮ್ಮೊಳಗೆ ಕಾನಾನ್ ದೇಶದಲ್ಲಿ ಸ್ವಾಸ್ಥ್ಯವನ್ನು ಹೊಂದ ಬೇಕು.
೩೧ ಆಗ ಗಾದನ ಮಕ್ಕಳೂ ರೂಬೆನನ ಮಕ್ಕಳೂ ಪ್ರತ್ಯುತ್ತರವಾ
ಗಿ ಹೇಳಿದ್ದೇನಂದರೆ—ಕರ್ತನು ನಿನ್ನ ಸೇವಕರಿಗೆ ಹೇಳಿದ್ದನ್ನು
೩೨ ನಾವು ಮಾಡುವೆವು. ನಾವು ಯುದ್ಧಕ್ಕೆ ಸಿದ್ಧವಾಗಿ ಕರ್ತನ
ಮುಂದೆ ಕಾನಾನ್ ದೇಶಕ್ಕೆ ದಾಟಿ ಹೋಗುವೆವು; ಆದರೆ ಯೊ
ರ್ದನ್ ನದಿಯ ಈಚೆಯಲ್ಲಿರುವ ನಮ್ಮ ಸ್ವಾಸ್ಥ್ಯದ ಭಾಗವೇ
ನಮಗಿರಲಿ.

೩೩ ಹಾಗೆಯೇ ಮೋಶೆ ಗಾದನ ಮಕ್ಕಳಿಗೂ ರೂಬೆನನ ಮಕ್ಕ
ಳಿಗೂ ಯೋಸೆಫನ ಮಗನಾದ ಮನಸ್ಸೆಯ ಅರ್ಧ ಕುಲ
ಕ್ಕೂ, ಅಮೋರ್ಯರ ಅರಸನಾದ ಸೀಹೋನನ ರಾಜ್ಯವ
ನ್ನೂ, ಬಾಶಾನಿನ ಅರಸನಾದ ಓಗನ ರಾಜ್ಯವನ್ನೂ, ಅದರ
ಭೂಮಿಯನ್ನೂ, ಅದರ ಮೇರೆಗಳಲ್ಲಿ ಸುತ್ತ ಮುತ್ತಲ ಊರುಗ
೩೪ ಳನ್ನೂ ಕೊಟ್ಟನು. ಆಗ ಗಾದನ ಮಕ್ಕಳು ದೀಬೋನ್, ಅತ
೩೫ ರೊಥ್, ಅರೋವೆರ್, ಅತರೋಥ್, ಶೋಫಾನ್, ಯಾಜೆರ್, ಯೊ
ಗ್ಬೆಹಾ ಬೆತ್ನಿಮ್ರ, ಬೇತ್ ಹಾರನ್ ಎಂಬ ಭದ್ರವಾದ ಊರುಗಳ
ನ್ನೂ ಕುರಿಗಳಿಗೆ ಹಟ್ಟಿಗಳನ್ನೂ ಕಟ್ಟಿದರು.

೩೬ ಮತ್ತು ರೂಬೆನನ ಮಕ್ಕಳು ಹೆಷ್ಬೋನ್, ಎಲೆಯಾಲೆ,
೩೭ ಕಿರ್ಯಾತೈಮ್, ನೆಬೋ, ಬಾಲ್ಮೆಯೋನ್ ಎಂದು ಬೇರೆ ಹೆಸರು
ಹೊಂದಿದ ಈ ಪಟ್ಟಣಗಳನ್ನೂ ಸಿಬ್ಮನನ್ನೂ ಕಟ್ಟಿ, ತಾವು ಕಟ್ಟಿ
ದ ಊರುಗಳಿಗೆ ಹೆಸರುಗಳನ್ನು ಇಟ್ಟರು.

೩೯ ಮತ್ತು ಮನಸ್ಸೆಯ ಮಗನಾದ ಮಕೀರನ ಮಕ್ಕಳು ಗಿಲ್ಯಾ
ದ್ ದೇಶಕ್ಕೆ ಹೋಗಿ, ಅದನ್ನು ತಕ್ಕೊಂಡು, ಅದರಲ್ಲಿದ್ದ ಅಮೋ
೪೦ ರ್ಯರನ್ನು ಹೊರಡಿಸಿದರು. ಮತ್ತು ಮೋಶೆ ಗಿಲ್ಯಾದನ್ನು
ಮನಸ್ಸೆಯ ಮಗನಾದ ಮಕೀರನಿಗೆ ಕೊಟ್ಟದರಿಂದ ಅವನು
೪೧ ಅದರಲ್ಲಿ ವಾಸಿಸಿದನು. ಆದರೆ ಮನಸ್ಸೆಯ ಮಗನಾದ ಯಾ
ಯಿರನು ಹೋಗಿ, ಅವರ ಹಳ್ಳಿಗಳನ್ನು ತಕ್ಕೊಂಡು,
೪೨ ಅವುಗಳಿಗೆ ಯಾಯಿರನ ಹಳ್ಳಿಗಳೆಂದು ಹೆಸರಿಟ್ಟನು. ಮತ್ತು
ನೊಬಾಹನು ಹೋಗಿ, ಕೇನತೆಂಬ ಪಟ್ಟಣವನ್ನು ಅದರ ಗ್ರಾಮ
ಗಳನ್ನೂ ತಕ್ಕೊಂಡು, ಅದಕ್ಕೆ ತನ್ನ ಹೆಸರಿನ ಹಾಗೆ ನೊ
ಬಾಹ ಎಂಬ ಹೆಸರಿಟ್ಟನು.

## 33. ಸಂಧಿ.

೧ ಮೋಶೆ ಅಹೋನನ ಕೈಯಲ್ಲಿ ಐಗುಪ್ತ ದೇಶದೊಳಗಿಂದ
ತಮ್ಮ ಸೈನ್ಯಗಳ ಪ್ರಕಾರ ಹೊರಟ ಇಸ್ರಯೇಲ್ ಮಕ್ಕಳ ಪ್ರ
೨ ಯಾಣಗಳು ಇವೇ. ಮೋಶೆ ಕರ್ತನ ಆಜ್ಞೆಯ ಪ್ರಕಾರ ಅವ
ರ ಪ್ರಯಾಣಗಳ ಹೊರದೋಣಗಳನ್ನು ಬರೆದನು.

3 ಅವರ ಪ್ರಯಾಣಗಳ ಹೊರದೋಣಗಳು ಯಾವವಂದ
ರೆ—ಅವರು ಮೊದಲನೇ ತಿಂಗಳಿನ ಹದಿನೈದನೇ ದಿವಸದಲ್ಲಿ ಪಸ್ಕ
ಹಬ್ಬದ ಮರು ದಿವಸದಲ್ಲಿ ರಾಮೆಸೆಸಿಂದ ಹೊರಟರು; ಇಸ್ರಯೇ
ಲ್ ಮಕ್ಕಳು ಸಮಸ್ತ ಐಗುಪ್ತ್ಯರಿಗೆ ಪ್ರತ್ಯಕ್ಷವಾಗಿ ಎತ್ತಿದ ಕೈಯಿಂ
೪ ದ ಹೊರಟು ಹೊದರು. ಹ್ಯಾಗಂದರೆ ಐಗುಪ್ತ್ಯರು ಕರ್ತನು
ಅವರಲ್ಲಿ ಹೊಡೆದ ಸಮಸ್ತ ಚೊಚ್ಚಲ ಮನುಷ್ಯರನ್ನು ಹೂಣಿಟ್ಟರು;
ಮತ್ತು ಕರ್ತನು ಅವರ ದೇವರುಗಳ್ಳಲ್ಲಿಯೂ ಶಿಕ್ಷೆಗಳನ್ನು ಮಾಡಿ
೫ ದನು. ಇಸ್ರಯೇಲ್ ಮಕ್ಕಳು ರಾಮೆಸೆಸಿಂದ ಹೊರಟು, ಸುಕ್ಕೋ
೬ ತಿನಲ್ಲಿ ಇಳಿದರು. ಸುಕ್ಕೋತಿನಿಂದ ಹೊರಟು, ಅರಣ್ಯದ ಮೇ
೭ ರೆಯಲ್ಲಿರುವ ಎಥಾಮಿನಲ್ಲಿ ಇಳಿದರು. ಎಥಾಮಿನಿಂದ ಹೊರಟು,
ಬಸ್ಕೈಜೋನಿಗೆದುರಾಗಿರುವ ಪಿಹಹಿರೋಥಿಗೆ ತಿರುಗಿ ಕೊಂಡು,
೮ ಮಿಗ್ದೋಲಿಗೆದುರಾಗಿ ಇಳಿದರು. ಪಿಹಹಿರೋಥಿನಿಂದ ಹೊರಟು,
ಸಮುದ್ರದೊಳಗಿಂದ ಅರಣ್ಯಕ್ಕೆ ದಾಟಿದರು; ಆಗ ಅವರು ಮೂ
ರು ದಿವಸದ ಪ್ರಯಾಣ ಎಥಾಮೆಂಬ ಅರಣ್ಯದಲ್ಲಿ ನಡೆದು, ಮಾ
೯ ರದಲ್ಲಿ ಇಳಿದರು. ಮಾರದಿಂದ ಹೊರಟು, ಎಲೀಮಿಗೆ ಬಂದರು;
ಎಲೀಮಿನಲ್ಲಿ ಹನ್ನೆರಡು ಭಾವಿಗಳೂ, ಎಪ್ಪತ್ತು ಖರ್ಜೂರ ಮರಗ
೧೦ ಳೂ ಇದ್ದದರಿಂದ ಅಲ್ಲಿ ಇಳಿದರು. ಎಲೀಮಿನಿಂದ ಹೊರಟು, ಕೆಂ
೧೧ ಪು ಸಮುದ್ರದ ಬಳಿಯಲ್ಲಿ ಇಳಿದರು. ಕೆಂಪು ಸಮುದ್ರದಿಂದ ಹೊ
೧೨ ರಟು, ಸೀನೆಂಬ ಅರಣ್ಯದಲ್ಲಿ ಇಳಿದರು. ಸೀನೆಂಬ ಅರಣ್ಯದಿಂದ
೧೩ ಹೊರಟು, ದೊಪ್ಕದಲ್ಲಿ ಇಳಿದರು. ದೊಪ್ಕದಿಂದ ಹೊರಟು, ಅ
೧೪ ಲೂಷದಲ್ಲಿ ಇಳಿದರು. ಅಲೂಷದಿಂದ ಹೊರಟು, ರೆಫಿದೀಮಿನ
ಲ್ಲಿ ಇಳಿದರು; ಅದರಿಂದ ಅಲ್ಲಿ ಜನರಿಗೆ ಕುಡಿಯುವದಕ್ಕೆ ನೀರು ಇ
೧೫ ದ್ದಿಲ್ಲ. ರೆಫಿದೀಮಿನಿಂದ ಹೊರಟು, ಸೀನಾಯಿ ಅರಣ್ಯದಲ್ಲಿ ಇಳಿ
೧೬ ದರು. ಸೀನಾಯಿ ಅರಣ್ಯದಿಂದ ಹೊರಟು, ಕಿಬ್ರೋತ್ ಹತ್ತಾ
೧೭ ವದಲ್ಲಿ ಇಳಿದರು. ಕಿಬ್ರೋತ್ ಹತ್ತಾವದಿಂದ ಹೊರಟು, ಹಚೆ
೧೮ ರೋತಿನಲ್ಲಿ ಇಳಿದರು. ಹಚೆರೋತಿನಿಂದ ಹೊರಟು, ರಿತ್ತದಲ್ಲಿ
೧೯ ಇಳಿದರು. ರಿತ್ತದಿಂದ ಹೊರಟು, ರಿಮ್ಮೊನ್ಪಾರೆಚದಲ್ಲಿ ಇಳಿದರು.
೨೦,೨೧ ರಿಮ್ಮೋನ್ಪಾರೆಚದಿಂದ ಹೊರಟು, ಲಿಬ್ನದಲ್ಲಿ ಇಳಿದರು. ಲಿಬ್ನ
೨೨ ದಿಂದ ಹೊರಟು, ರಿಸ್ಸದಲ್ಲಿ ಇಳಿದರು. ರಿಸ್ಸದಿಂದ ಹೊರಟು,
೨೩ ಕೆಹೆಲಾತಿನಲ್ಲಿ ಇಳಿದರು. ಕೆಹೆಲಾತಿನಿಂದ ಹೊರಟು, ಶಾಫೆರ ಪ
೨೪ ರ್ವತದಲ್ಲಿ ಇಳಿದರು. ಶಾಫೆರ್ ಪರ್ವತದಿಂದ ಹೊರಟು, ಹರಾದ
೨೫ ದಲ್ಲಿ ಇಳಿದರು. ಹರಾದದಿಂದ ಹೊರಟು, ಮಖೇಲೋತಿನಲ್ಲಿ ಇ
೨೬ ಳಿದರು. ಮಖೇಲೋತಿನಿಂದ ಹೊರಟು, ತಾಹತಿನಲ್ಲಿ ಇಳಿದರು.
೨೭, ೨೮ ತಾಹತಿನಿಂದ ಹೊರಟು, ತಾರಹಿನಲ್ಲಿ ಇಳಿದರು. ತಾರಹಿನಿಂದ
೨೯ ಹೊರಟು, ಮಿತ್ಕಾದಲ್ಲಿ ಇಳಿದರು. ಮಿತ್ಕದಿಂದ ಹೊರಟು, ಹಷ್ಮೋ
೩೦ ನದಲ್ಲಿ ಇಳಿದರು. ಹಷ್ಮೋನದಿಂದ ಹೊರಟು, ಮೊಸೆರೋತಿನ
೩೧ ಲ್ಲಿ ಇಳಿದರು. ಮೊಸೆರೋತಿನಿಂದ ಹೊರಟು, ಬೆನ್ನೆಯಾಕನಿನಲ್ಲಿ
೩೨ ಇಳಿದರು. ಬೆನೆಯಾಕನಿನಿಂದ ಹೊರಟು, ಹೋರ್ ಹಗಿದ್ಗಾದಿನ
೩೩ ಲ್ಲಿ ಇಳಿದರು. ಹೋರ್ ಹಗಿದ್ಗಾದಿನಿಂದ ಹೊರಟು, ಯೊಟ್ಬಾತದ
೩೪ ಲ್ಲಿ ಇಳಿದರು. ಯೊಟ್ಬಾತದಿಂದ ಹೊರಟು, ಎಬ್ರೂನದಲ್ಲಿ ಇಳಿ
೩೫ ದರು. ಎಬ್ರೂನದಿಂದ ಹೊರಟು, ಎಜ್ಯೊನ್ಗೆಬರಿನಲ್ಲಿ ಇಳಿದರು.
೩೬ ಎಜ್ಯೊನ್ಗೆಬರಿನಿಂದ ಹೊರಟು, ಕಾದೆಸೆಂಬ ಚೀನ್ ಅರಣ್ಯದಲ್ಲಿ
೩೭ ಇಳಿದರು. ಕಾದೆಸಿನಿಂದ ಹೊರಟು, ಎದೋಮ್ ದೇಶದ ಅಂತ್ಯ
ದಲ್ಲಿರುವ ಹೋರ್ ಗುಡ್ಡದಲ್ಲಿ ಇಳಿದರು.

೩೮ ಆಗ ಯಾಜಕನಾದ ಅಹೋನನು ಕರ್ತನ ಆಜ್ಞೆಯ ಪ್ರಕಾರ
ಹೋರ್ ಗುಡ್ಡದ ಮೇಲೆ ಏರಿ, ಅಲ್ಲಿ, ಇಸ್ರಯೇಲ್ ಮಕ್ಕಳು ಐಗು
ಪ್ತ ದೇಶದಿಂದ ಹೊರಟು ನಾಲ್ವತ್ತನೇ ವರುಷದ ಐದನೇ ತಿಂಗಳಿನ
೩೯ ಮೊದಲನೇ ದಿವಸದಲ್ಲಿ ಸತ್ತನು. ಅಹೋನನು ಹೋರ್ ಗುಡ್ಡದ
ಲ್ಲಿ ಸಾಯುವಾಗ, ಅವನು ನೂರ ಇಪ್ಪತ್ತು ಮೂರು ವರುಷದ
ವನಾಗಿದ್ದನು.

೪೦ ಆಗ ಕಾನಾನ್ ದೇಶದ ದಕ್ಷಿಣದಲ್ಲಿ ವಾಸವಾಗಿದ್ದ ಕನಾನ್ಯರಿಗೆ
ಅರಸನಾದ ಅರದನು ಇಸ್ರಯೇಲ್ ಮಕ್ಕಳು ಬರುವದನ್ನು ಕೇಳಿ
ದನು.

೪೧ ಹೋರ್ ಗುಡ್ಡದಿಂದ ಅವರು ಹೊರಟು, ಚಲ್ಮೋನದಲ್ಲಿ ಇಳಿ
೪೨ ದರು. ಚಲ್ಮೋನದಿಂದ ಹೊರಟು, ಪೂನೋನಿನಲ್ಲಿ ಇಳಿದರು
೪೩ ಪೂನೋನಿನಿಂದ ಹೊರಟು, ಒಬೋತಿನಲ್ಲಿ ಇಳಿದರು. ಒಬೋ
೪೪ ತಿನಿಂದ ಹೊರಟು, ಮೋವಾಬಿನ ಮೇರೆಯಲ್ಲಿರುವ ಇಯ್ಯೇ
೪೫ ಅಬರೀಮಿನಲ್ಲಿ ಇಳಿದರು. ಇಯ್ಯಾಮಿನಿಂದ ಹೊರಟು, ದೀಬೋ
೪೬ ನ್ಗಾದಿನಲ್ಲಿ ಇಳಿದರು. ದೀಬೋನ್ಗಾದಿನಿಂದ ಹೊರಟು, ಅಲ್ಮೋ
೪೭ ನ್ ದಿಬ್ಲತಾಯಿಮಿನಲ್ಲಿ ಇಳಿದರು. ಅಲ್ಮೋನ್ ದಿಬ್ಲತಾಯಿಮಿನಿಂ
ದ ಹೊರಟು, ನೆಬೋಗೆದುರಾಗಿರುವ ಅಬರೀಮ್ ಗುಡ್ಡಗಳ್ಳಲ್ಲಿ ಇ
೪೮ ಳಿದರು. ಅಬರೀಮ್ ಗುಡ್ಡಗಳಿಂದ ಹೊರಟು, ಯೆರಿಕೋವಿಗೆದು
ರಾಗಿ ಯೊರ್ದನಿನ ತೀರದಲ್ಲಿರುವ ಮೋವಾಬಿನ ಬೈಲುಗಳ್ಳಲ್ಲಿ ಇ
೪೯ ಳಿದರು. ಮತ್ತು ಅವರು ಯೊರ್ದನ್ ನದಿಯ ಬಳಿಯಲ್ಲಿರುವ
ಬೆಥ್ ಯೆಶಿಮೊಥಿನಿಂದ ಮೋವಾಬಿನ ಬೈಲುಗಳ್ಳಲ್ಲಿರುವ ಆಬೆಲ್
ಶಿತ್ತೀಮಿನ ಪರ್ಯಂತರಕ್ಕೂ ಇಳಿದರು.

೫೦ ಮತ್ತು ಕರ್ತನು ಯೆರಿಕೋವಿಗೆದುರಾಗಿ ಯೊರ್ದನಿನ ತೀರದ
ಲ್ಲಿರುವ ಮೋವಾಬಿನ ಬೈಲುಗಳ್ಳಲ್ಲಿ ಮೋಶೆಯ ಸಂಗಡ ಮಾತಾ
ಡಿ, ಹೇಳ್ಳಿದ್ದೇನಂದರೆ—ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ,
೫೧ ಅವರಿಗೆ ಹೇಳ್ಳ ಬೇಕಾದದ್ದೇನಂದರೆ—ನೀವು ಯೊರ್ದನನ್ನು ದಾ
ಟಿ, ಕಾನಾನ್ ದೇಶಕ್ಕೆ ಬರುವಾಗ, ನೀವು ನಿಮ್ಮ ಮುಂದೆ ಆ ದೇ
೫೨ ಶದ ಸಮಸ್ತ ನಿವಾಸಿಗಳನ್ನು ಹೊರಡಿಸಿ, ಅದರ ಪ್ರತಿಮೆಗಳ
೫೩ ನ್ನೂ ಅದರ ಕೆತ್ತಿದ ವಿಗ್ರಹಗಳನ್ನೂ ನಾಶನ ಮಾಡಿ, ಅವರ
ಸಮಸ್ತ ಮೇರುಗಳ್ಳನ್ನೂ ಹಾಳು ಮಾಡ ಬೇಕು. ಮತ್ತು ನೀವು
೫೪ ಆ ದೇಶವನ್ನು ತಕ್ಕೊಂಡು, ಅದರಲ್ಲಿ ವಾಸ ಮಾಡಿರಿ; ಯಾಕಂ
ದರೆ ಅದನ್ನು ಸ್ವತಂತ್ರಿಸಿ ಕೊಳ್ಳುವದಕ್ಕೆ ಆ ದೇಶವನ್ನು ನಿಮ
೫೫ ಗೆ ಕೊಟ್ಟಿದ್ದೇನೆ. ಮತ್ತು ನೀವು ದೇಶವನ್ನು ನಿಮ್ಮ ಗೋತ್ರಗಳ
ಪ್ರಕಾರ ಚೀಟಿನಿಂದ ಸ್ವತಂತ್ರಿಸಿ ಕೊಳ್ಳ ಬೇಕು; ಹೆಚ್ಚಾದವರಿಗೆ
ಸ್ವಾಸ್ಥ್ಯವನ್ನು ಹೆಚ್ಚಿಸಿ, ಕಡಿಮೆಯಾದವರಿಗೆ ಸ್ವಾಸ್ಥ್ಯವನ್ನು
ಕಡಿಮೆ ಮಾಡ ಬೇಕು; ಒಬ್ಬೊಬ್ಬನಿಗೆ ಚೀಟು ಎಲ್ಲಿ ಬೀಳುವ
ದೋ, ಅದೇ ಅವನಿಗಾಗ ಬೇಕು; ನಿಮ್ಮ ತಂದೆಗಳ ಕುಲಗಳ ಪ್ರ
೫೬ ಕಾರ ನೀವು ಸ್ವತಂತ್ರಿಸಿ ಕೊಳ್ಳ ಬೇಕು. ಅದರೆ ನೀವು ದೇಶದ
ನಿವಾಸಿಗಳನ್ನು ಹೊರಡಿಸದಿದ್ದರೆ, ನೀವು ಉಳಿಸಿದವರು ನಿಮ್ಮ ಕ
ಣ್ಣುಗಳ್ಳಲ್ಲಿ ಮುಳ್ಳುಗಳಾಗಿಯೂ, ನಿಮ್ಮ ಪಾರ್ಶ್ವಗಳ್ಳಲ್ಲಿ ಕಂಟ
ಗಳಾಗಿಯೂ, ಇರುವರು; ಮತ್ತು ನೀವು ವಾಸಿಸುವ ದೇಶದಲ್ಲಿ
೫೭ ಅವರು ನಿಮ್ಮನ್ನು ಶ್ರಮೆ ಪಡಿಸುವರು. ಇದಲ್ಲದೆ ನಾನು ಅವರಿ
ಗೆ ಮಾಡ ಬೇಕೆಂದಿದ್ದ ಹಾಗೆ ನಿಮಗೆ ಮಾಡುವೆನು.

## 34. ಸಂಧಿ.

೧ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳ್ಳಿದ್ದೇ
೨ ನಂದರೆ—ನೀನು ಇಸ್ರಯೇಲ್ ಮಕ್ಕಳ್ಳಿಗೆ ಆಜ್ಞಾಪಿಸಿ, ಅವರಿಗೆ ಹೇ
ಳ್ಳ ಬೇಕಾದದ್ದೇನಂದರೆ—ನೀವು ಕಾನಾನ್ ದೇಶದೊಳ್ಳಗೆ ಬರುವಾ
ಗ, ನಿಮಗೆ ಸ್ವಾಸ್ಥ್ಯಕ್ಕಾಗಿ ಬೀಳ್ಳುವ ಕಾನಾನ್ ದೇಶವು ಅದರ
ಮೇರೆಗಳ್ಳ ಪ್ರಕಾರ ಹೀಗಿರ ಬೇಕು.

3 ಹ್ಯಾಗಂದರೆ ನಿಮ್ಮ ದಕ್ಷಿಣ ಕಡೆಯು ಚೀನ್ ಅರಣ್ಯದಿಂದ ಎ
ದೋಮಿಗೆ ಅನುಸಾರವಾಗಿರ ಬೇಕು; ಮತ್ತು ನಿಮ್ಮ ದಕ್ಷಿಣ ಮೇ
ರೆಯು ಉಪ್ಪಿನ ಸಮುದ್ರದ ಪೂರ್ವದ ಮೂಲೆಯಿಂದ ಆರಂಭಿಸ
೪ ಬೇಕು. ಮತ್ತು ನಿಮ್ಮ ಮೇರೆಯು ದಕ್ಷಿಣದಿಂದ ಅಕ್ರಬ್ಬಿ ದಿ
ನ್ನೆಗೆ ತಿರುಗಿ, ಚೀನಿಗೆ ಹಾದು, ಕಾದೆಷ್ ಬರ್ನೇಯಕ್ಕೆ ದಕ್ಷಿಣ
ದಲ್ಲಿ ಮುಗಿದು, ಅಲ್ಲಿಂದ ಹಚರದ್ದಾರಿಗೆ ಹೊರಟು, ಅಚ್ಮೋನಿಗೆ
೫ ಹಾದು ಹೋಗ ಬೇಕು. ಮತ್ತು ಮೇರೆ ಅಚ್ಮೋನಿನಿಂದ ಐಗು
ಪ್ತದ ಹಳ್ಳಕ್ಕೆ ತಿರುಗಿ, ಸಮುದ್ರ ತೀರದಲ್ಲಿ ಮುಗಿಯ ಬೇಕು.

೬ ಮತ್ತು ಪಶ್ಚಿಮ ಮೇರೆಯಾದರೆ, ದೊಡ್ಡ ಸಮುದ್ರವೇ ನಿಮಗೆ
ಮೇರೆಯಾಗಿರ ಬೇಕು; ಇದೇ ನಿಮ್ಮ ಪಶ್ಚಿಮ ಮೇರೆಯಾಗಿರು
೭ ವದು. ನಿಮ್ಮ ಉತ್ತರ ಮೇರೆ ಯಾವದಂದರೆ—ನೀವು ದೊಡ್ಡ ಸ
ಮುದ್ರದಿಂದ ಹೋರ್ ಪರ್ವತದ ಪರ್ಯಂತರಕ್ಕೂ ಸಾಲು ಮಾ
೮ ಡಿ ಕೊಂಡು, ಹೋರ್ ಪರ್ವತದಿಂದ ನೀವು ಹಮಾತಿನ ಪ್ರವೇಶ
ದ ಪರ್ಯಂತರ ಸಾಲು ಮಾಡಿರಿ; ಮತ್ತು ಮೇರೆಯು ಜೆದಾದಿ
೯ ಗೆ ಹೊರಟು, ಜಿಫ್ರೋನಿಗೆ ಹೋಗಿ, ಹಚರೇನಾನಿನಲ್ಲಿ ಮುಗಿ
ಯಲಿ; ಇದು ನಿಮ್ಮ ಉತ್ತರ ಮೇರೆ.

೧೦ ಮತ್ತು ಪೂರ್ವದ ಮೇರೆಗೋಸ್ಕರ ಹಚರೇನಾನಿನಿಂದ ಶೆಫಾ
೧೧ ಮಿಗೆ ಸಾಲು ಮಾಡಿ ಕೊಳ್ಳಿರಿ. ಮತ್ತು ಶೆಫಾಮಿನಿಂದ ಮೇರೆ
ಅಯಿನಿನ ಪೂರ್ವದಲ್ಲಿರುವ ರಿಬ್ಲಕ್ಕೆ ಇಳಿದು, ಕಿನ್ನೆರೆತ್ ಸ
೧೨ ಮುದ್ರದ ಪೂರ್ವ ತೀರವನ್ನು ಮುಟ್ಟಲಿ. ಮತ್ತು ಅಲ್ಲಿಂದ
ಮೇರೆಯು ಯೊರ್ದನ್ ನದಿಗೆ ಅನುಸಾರವಾಗಿ ಇಳಿದು, ಉ
ಪ್ಪಿನ ಸಮುದ್ರದಲ್ಲಿ ಮುಗಿಯುವದು; ಇದು ಅದರ ಸುತ್ತ ಮು
೧೩ ತ್ತಲ ಮೇರೆಗಳ ಪ್ರಕಾರ ನಿಮ್ಮ ದೇಶವಾಗಿರ ಬೇಕು. ಮತ್ತು
ಮೋಶೆ ಇಸ್ರಯೇಲ್ ಮಕ್ಕಳ್ಳಿಗೆ ಆಜ್ಞಾಪಿಸಿ, ಹೇಳ್ಳಿದ್ದೇನಂದರೆ—
ನೀವು ಚೀಟಿನಿಂದ ಸ್ವತಂತ್ರಿಸಿ ಕೊಳ್ಳ ಬೇಕಾದ ದೇಶವು, ಒಂ
ಭತ್ತು ವರೆ ಕುಲಗಳ್ಳಿಗೆ ಕೊಡ ಬೇಕೆಂದು, ಕರ್ತನು ಆಜ್ಞಾಪಿಸಿ
೧೪ ದ ದೇಶವು ಇದೇ. ಯಾಕಂದರೆ ರೂಬೆನನ ಮಕ್ಕಳ ಕುಲವೂ,
ಗಾದನ ಮಕ್ಕಳ ಕುಲವೂ, ಮನಸ್ಸೆಯ ಅರ್ಧ ಕುಲವೂ, ತ
ಮ್ಮ ತಂದೆಗಳ ಮನೆಯ ಪ್ರಕಾರವಾಗಿ ತಮ್ಮ ಸ್ವಾಸ್ಥ್ಯವನ್ನು
೧೫ ತಕ್ಕೊಂಡಿದ್ದಾರೆ. ಎರಡು ವರೆ ಕುಲಗಳು ತಮ್ಮ ಸ್ವಾಸ್ಥ್ಯವ
ನ್ನು ಯೊರ್ದನಿನ ಈಚೆಯಲ್ಲಿ ಯೆರಿಕೋವಿಗ ಮೂಡಲಲ್ಲಿ
ತಕ್ಕೊಂಡಿದ್ದಾರೆ.

೧೬ ಮತ್ತು ಕರ್ತನು ಮೋಶೆಯ ಸಂಗಡ ಮಾತಾಡಿ, ಹೇಳ್ಳಿದ್ದೇ
ನಂದರೆ—ದೇಶವನ್ನು ನಿಮಗೆ ಹಂಚ ಬೇಕಾದ ಮನುಷ್ಯರ ಹೆ
ಸರುಗಳು ಇವೇ—ಯಾಜಕನಾದ ಎಲೆಯಾಜರನೂ, ನೂನನ
೧೭ ಮಗನಾದ ಯೆಹೋಶುವನೂ. ಮತ್ತು ಹೇಳವನ್ನು ಭಾಗ ಮಾ
ಡುವದಕ್ಕೆ ನೀವು ಒಂದೊಂದು ಕುಲದಿಂದ ಒಬ್ಬೊಬ್ಬ ಪ್ರಭು
೧೮ ವನ್ನು ತಕ್ಕೊಳ್ಳಿರಿ. ಈ ಮನುಷ್ಯರ ಹೆಸರುಗಳು ಇವೇ—
೧೯ ಯೊಹೂದನ ಕುಲಕ್ಕೆ ಯೆಫುನ್ನೆಯ ಮಗನಾದ ಕಾಲೆಬನೂ,
೨೦ ಸಿಮೆಯೋನನ ಕುಲಕ್ಕೆ ಅಮ್ಮಿಹೂದನ ಮಗನಾದ ಶೆಮುವೇಲ
೨೧ ನೂ. ಬೆನ್ಯಮಿನನ ಕುಲಕ್ಕೆ ಕಿಸ್ಲೋನನ ಮಗನಾದ ಎಲಿದಾ
ದನು.

೨೨ ದಾನನ ಕುಲದ ಯಜಮಾನನು ಯೊಗ್ಲಿಯ ಮಗನಾದ ಬು
೨೩ ಕ್ಕಿ. ಯೋಸೆಫನ ಮಕ್ಕಳಾದ ಮನಸ್ಸೆಯ ಕುಲದ ಯಜ
೨೪ ಮಾನನು ಎಫ್ರೋದನ ಮಗನಾದ ಹನ್ನಿಯೇಲನು. ಎಫ್ರಯಿಮ
ನ ಕುಲದ ಯಜಮಾನನು ಶಿಫ್ತಾನನ ಮಗನಾದ ಕಮುವೇಲ
೨೫ ನು. ಜೆಬುಲೋನನ ಕುಲದ ಯಜಮಾನನು ಫರ್ನಾಕನ ಮಗ
೨೬ ನಾದ ಎಲಿಚಫಾನನು. ಇಸ್ಸಕಾರನ ಕುಲದ ಯಜಮಾನನು
೨೭ ಅಜ್ಜಾನನ ಮಗನಾದ ಪಲ್ತಿಯೇಲನು. ಆಶೇರನ ಕುಲದ ಯಜ
೨೮ ಮಾನನು ಶೆಲೋಮಿಯ ಮಗನಾದ ಅಹೀಹೂದನು. ನೆಫ್ತಲಿಯ
ಕುಲದ ಯಜಮಾನನು ಅಮ್ಮಿಹೂದನ ಮಗನಾದ ಪೆದಹೇ
ಲನು.

೨೯ ಕಾನಾನ್ ದೇಶದಲ್ಲಿ ಇಸ್ರಯೇಲ್ ಮಕ್ಕಳ್ಳಿಗೆ ಸ್ವಾಸ್ಥ್ಯವನ್ನು
ಹಂಚುವದಕ್ಕೆ ಕರ್ತನು ನೇಮಿಸಿದ ಮನುಷ್ಯರು ಇವರೇ.

## 35. ಸಂಧಿ.

೧ ಮತ್ತು ಕರ್ತನು ಯೆರಿಕೋವಿಗೆದುರಾಗಿ ಯೊರ್ದನಿನ ಬ
ಳ್ಳಿಯಲ್ಲಿರುವ ಮೋವಾಬಿನ ಬೈಲುಗಳ್ಳಲ್ಲಿ ಮೋಶೆಯ ಸಂಗಡ
೨ ಮಾತಾಡಿ, ಹೇಳ್ಳಿದ್ದೇನಂದರೆ—ಇಸ್ರಯೇಲ್ ಮಕ್ಕಳ್ಳಿಗೆ ಆಜ್ಞಾಪಿ
ಸ ಬೇಕಾದದ್ದೇನಂದರೆ—ಅವರು ತಮ್ಮ ಸ್ವಾಸ್ಥ್ಯದ ಭಾಗದಿಂ
ದ ಲೇವ್ಯರಿಗೆ ವಾಸ ಮಾಡುವದಕ್ಕೆ ಊರುಗಳ್ಳನ್ನು ಕೊಡ ಬೇ
ಕು; ಮತ್ತು ಊರುಗಳ್ಳ ಸುತ್ತ ಮುತ್ತಲಿರುವ ಬೇಟೆಗಳ್ಳನ್ನು ನೀ
೩ ವು ಲೇವ್ಯರಿಗೆ ಕೊಡ ಬೇಕು ಊರುಗಳು ಅವರಿಗೆ ವಾಸ ಮಾ
ಡುವದಕ್ಕೂ, ಅವುಗಳ್ಳ ಬೇಟೆಗಳು ಅವರ ದನಗಳ್ಳಿಗೋಸ್ಕರ
ವೂ ಅವರ ಸಮಸ್ತ ಸಂಪತ್ತಿಗೋಸ್ಕರವೂ ಅವರ ಸಮಸ್ತ ಪ
೪ ಶುಗಳ್ಳಿಗೋಸ್ಕರವೂ ಇರ ಬೇಕು. ನೀವು ಲೇವ್ಯರಿಗೆ ಕೊಡ
ಬೇಕಾದ ಊರುಗಳ್ಳ ಬೇಟೆಗಳು ಊರಿನ ಗೋಡೆಯಿಂದ ಸುತ್ತ
೫ ಲು ಸಾವಿರ ಮೊಳ ಅಗಲವಾಗಿರ ಬೇಕು. ಮತ್ತು ನೀವು ಊರಿನ
ಹೊರಗೆ ಪೂರ್ವ ಕಡೆಯಲ್ಲಿ ಎರಡು ಸಾವಿರ ಮೊಳ, ದಕ್ಷಿಣ
ಕಡೆಯಲ್ಲಿ ಎರಡು ಸಾವಿರ ಮೊಳ, ಪಶ್ಚಿಮ ಕಡೆಯಲ್ಲಿ ಎರಡು
ಸಾವಿರ ಮೊಳ, ಉತ್ತರ ಕಡೆಯಲ್ಲಿ ಎರಡು ಸಾವಿರ ಮೊಳ, ಅ
ಳಿಯ ಬೇಕು; ಮಧ್ಯದಲ್ಲಿ ಪಟ್ಟಣವಿರ ಬೇಕು; ಹೀಗೆ ಅವರ
೬ ಊರುಗಳ್ಳ ಬೇಟೆಗಳು ಇರ ಬೇಕು. ಮತ್ತು ನೀವು ಲೇವ್ಯರಿಗೆ
ಕೊಡುವ ಊರುಗಳ್ಳೊಳ್ಳಗೆ, ಕೊಲ್ಲುವವನು ಅಲ್ಲಿಗೆ ಪಿಡುವ ಹಾ
ಗೆ ಆರು ಆಶ್ರಯದ ಊರುಗಳ್ಳನ್ನು ನೇಮಿಸ ಬೇಕು; ಅವುಗಳ
ಹೊರ್ತು, ನೀವು ನಾಲ್ವತ್ತೆರಡು ಊರುಗಳ್ಳನ್ನು ಕೊಡ ಬೇಕು.
೭ ನೀವು ಲೇವ್ಯರಿಗೆ ಕೊಡ ಬೇಕಾದ ಸಮಸ್ತ ಊರುಗಳು ಅವುಗ
ಳ ಬೇಟೆಗಳ ಸಂಗಡ ನಾಲ್ವತ್ತೆಂಟು ಊರುಗಳಾಗಿರ ಬೇಕು.
೮ ಮತ್ತು ನೀವು ಇಸ್ರಯೇಲ್ ಮಕ್ಕಳ ಸ್ವಾಸ್ಥ್ಯದಿಂದ ಕೊಡುವ
ಊರುಗಳನ್ನು ಹೆಚ್ಚಾದವರ ಕಡೆಯಿಂದ ಹೆಚ್ಚಾಗಿ ತಕ್ಕೊಳ್ಳ

ಬೇಕು; ಕಡಿಮೆಯಾದವರ ಕಡೆಯಿಂದ ಕಡಿಮೆಯಾಗಿ ತಕ್ಕೊಳ್ಳ ಬೇಕು; ಒಬ್ಬೊಬ್ಬನು ತಾನು ಹೊಂದುವ ಸ್ವಾಸ್ಥ್ಯಕ್ಕಾನುಸಾರವಾಗಿ ತನ್ನ ಊರುಗಳೊಳಗಿಂದ ಲೇವ್ಯರಿಗೆ ಕೊಡಬೇಕು.

೯ ಮತ್ತು ಕರ್ತನು ಪೋಶೆಯ ಸಂಗಡ ಮಾತಾಡಿ, ಹೇಳಿದ್ದೇ
೧೦ ನಂದರೆ—ನೀನು ಇಸ್ರಯೇಲ್ ಮಕ್ಕಳ ಸಂಗಡ ಮಾತಾಡಿ, ಅವರಿಗೆ ಹೇಳ ಬೇಕಾದದ್ದೇನಂದರೆ—ನೀವು ಯೊರ್ದನನ್ನು ದಾ
೧೧ ಟಿ, ಕಾನಾನ್ ದೇಶಕ್ಕೆ ಬರುವಾಗ, ಕೈ ತಪ್ಪಿ ಒಬ್ಬನನ್ನು ಕೊಂದವನು ಅಲ್ಲಿಗೆ ಓಡಿ ಹೋಗುವ ಹಾಗೆ, ನಿಮಗೆ ಆಶ್ರಯ
೧೨ ಕ್ಕಾಗಿ ಊರುಗಳನ್ನು ಆದು ಕೊಳ್ಳ ಬೇಕು. ಕೊಂದವನು ಸಭೆಯ ಮುಂದೆ ನ್ಯಾಯತೀರ್ಪಿಕೆಗೆ ನಿಲ್ಲುವ ಪರ್ಯಂತರ ಕೂಡ, ಸಾಯದ ಹಾಗೆ, ಅವು ನಿಮಗೆ ರಕ್ತ ವಿಚಾರಕನ ದೆಸೆ
೧೩ ಯಿಂದ ಆಶ್ರಯದ ಊರುಗಳಾಗಿರ ಬೇಕು. ನೀವು ಕೊಡುವ ಊರುಗಳೊಳಗೆ ಆರು ಆಶ್ರಯದ ಊರುಗಳು ಇರ ಬೇಕು.
೧೪ ಯೊರ್ದನಿನ ಈಚೆಯಲ್ಲಿ ಮೂರು ಊರುಗಳನ್ನೂ ಕಾನಾನ್ ದೇಶದಲ್ಲಿ ಮೂರು ಊರುಗಳನ್ನೂ ಆಶ್ರಯದ ಊರುಗಳಾಗಿ
೧೫ ಕೊಡ ಬೇಕು. ಕೈ ತಪ್ಪಿ ಪ್ರಾಣ ಹತ್ಯ ಮಾಡುವವರೆಲ್ಲರು ಅಲ್ಲಿಗೆ ಓಡಿ ಹೋಗುವದಕ್ಕೆ ಈ ಆರು ಊರುಗಳು ಇಸ್ರಯೇಲ್ ಮಕ್ಕಳಿಗೂ ಪರದೇಶಸ್ಥರಿಗೂ ಅವರಲ್ಲಿ ವಾಸ ಮಾಡುವವರಿಗೂ ಆಶ್ರಯಕ್ಕಾಗಿ ಇರ ಬೇಕು.

೧೬ ಒಬ್ಬನು ಕಬ್ಬಿಣದ ಸಾಮಾನಿನಿಂದ ಮತ್ತೊಬ್ಬನನ್ನು ಸಾಯುವ ಹಾಗೆ ಹೊಡೆದರೆ, ಅವನು ಕೊಲೆ ಪಾತಕನು; ಆ
೧೭ ಕೊಲೆಪಾತಕನು ಸಾಯಲೇ ಸಾಯ ಬೇಕು. ಮತ್ತು ಒಬ್ಬನು ಮರಣಕರವಾದ ಕಲ್ಲನ್ನು ಎಸೆದು, ಒಬ್ಬನನ್ನು ಸಾಯುವ ಹಾಗೆ ಹೊಡೆದರೆ, ಅವನು ಕೊಲೆ ಪಾತಕನು; ಆ ಕೊಲೆಪಾತ
೧೮ ಕನು ಸಾಯಲೇ ಸಾಯ ಬೇಕು. ಇಲ್ಲವೆ ಮರಣಕರವಾದ ಕಟ್ಟಿಗೆಯ ಸಾಮಾನನ್ನು ಎಸೆದು, ಒಬ್ಬನನ್ನು ಸಾಯುವ ಹಾಗೆ ಹೊಡೆದರೆ, ಅವನು ಕೊಲೆಪಾತಕನು; ಆ ಕೊಲೆಪಾತಕನು ಸಾ
೧೯ ಯಲೇ ಸಾಯ ಬೇಕು. ರಕ್ತ ವಿಚಾರಕನು ಕೊಲೆಪಾತಕನನ್ನು
೨೦ ಕೊಲ್ಲ ಬೇಕು; ಕಂಡು ಕೊಳ್ಳುವಾಗಲೇ ಅವನನ್ನು ಕೊಲ್ಲ ಬೇಕು ಒಬ್ಬನು ಮತ್ತೊಬ್ಬನನ್ನು ಹಗೆ ಮಾಡಿ, ಸಾಯುವ ಹಾಗೆ ಹೊ
ಡೆದರೆ, ಇಲ್ಲವೆ ಕಪಟದಿಂದ ಅವನ ಮೇಲೆ ಏನಾದರೂ ಎಸೆದರೆ,
೨೧ ಇಲ್ಲವೆ ಶತ್ರುತ್ವ ಮಾಡಿ, ಅವನು ಸಾಯುವ ಹಾಗೆ ತನ್ನ ಕೈಯಿಂದ ಹೊಡೆದರೆ, ಅವನು ಕೊಲೆಪಾತಕನೇ; ಹೊಡೆದವನು ಸಾಯಲೇ ಸಾಯ ಬೇಕು; ರಕ್ತ ವಿಚಾರಕನು ಕಂಡು ಕೊಳ್ಳುವಾಗಲೇ ಆ ಕೊಲೆಪಾತಕನನ್ನು ಕೊಲ್ಲ ಬೇಕು.
೨೨ ಆದರೆ ಶತ್ರುತ್ವವಿಲ್ಲದೆ ಅಕಸ್ಮಾತ್ತಾಗಿ ಅವನನ್ನು ಹೊಡೆದರೆ, ಇಲ್ಲವೆ ಕಪಟವಿಲ್ಲದೆ ಒಂದಾನೊಂದು ಸಾಮಾನನ್ನು ಎಸೆದ
೨೩ ರೆ, ಇಲ್ಲವೆ ಶತ್ರುತ್ವವಿಲ್ಲದೆ ಅವನ ಕೇಡು ಹುಡುಕದೆ, ಅವನನ್ನು ನೋಡದೆ, ಮರಣಕರವಾದ ಒಂದಾನೊಂದು ಕಲ್ಲನ್ನು, ಅವನು
೨೪ ಸಾಯುವ ಹಾಗೆ ಅವನ ಮೇಲೆ ಬೀಳ್ಳ ಮಾಡಿದರೆ, ಆಗ ಸಭೆಯು ಈ ನ್ಯಾಯಗಳ ಪ್ರಕಾರ ಕೊಲ್ಲುವವನಿಗೂ ರಕ್ತ ವಿಚಾ
೨೫ ರಕನಿಗೂ ನ್ಯಾಯ ತೀರಿಸ ಬೇಕು. ಮತ್ತು ಸಭೆಯು ಕೊಂದವನನ್ನು ರಕ್ತ ವಿಚಾರಕನ ಕೈಯಿಂದ ತಪ್ಪಿಸಿ, ಅವನು ಓಡಿ ಹೊದ ಆಶ್ರಯದ ಊರಿಗೆ ತಿರಿಗಿ ಕೇರಿಸ ಬೇಕು; ಅಲ್ಲೇ ಅವನು ಪರಿಶುದ್ಧ ಎಣ್ಣೆಯಿಂದ ಅಭಿಷೇಕಿಸಲ್ಪಟ್ಟ ಪ್ರಧಾನ ಯಾಜಕನು ಸಾಯುವ ಪರ್ಯಂತರಕ್ಕೂ ವಾಸ ಮಾತಲಿ.
೨೬ ಆದರೆ ಕೊಲೆಪಾತಕನು ತಾನು ಓಡಿ ಹೋದ ಆಶ್ರಯದ
೨೭ ಊರಿನ ಮೇರೆಯನ್ನು ವಿಾರಿ ಹೊರಟರೆ, ಮತ್ತು ರಕ್ತ ವಿಚಾರಕನು ಅವನನ್ನು ತನ್ನ ಆಶ್ರಯದ ಊರಿನ ಮೇರೆಯ ಹೊರಗೆ ಕೊರಕಿಸಿ ಕೊಂಡು, ಕೊಲೆಪಾತಕನನ್ನು ಕೊಂದರೆ, ಅವನಿ
೨೮ ಗೆ ರಕ್ತದ ಅಪರಾಧವಿಲ್ಲ. ಯಾಕಂದರೆ ಅವನು ತನ್ನ ಆಶ್ರಯದ ಊರಿನಲ್ಲಿ ಪ್ರಧಾನ ಯಾಜಕನು ಸಾಯುವ ಪರ್ಯಂತರಕ್ಕೂ ವಾಸ ಮಾತ ಬೇಕಾಗಿತ್ತು; ಪ್ರಧಾನ ಯಾಜಕನ ಮರಣದ ತರುವಾಯ ಕೊಲೆಪಾತಕನು ತನ್ನ ಸ್ವಾಸ್ಥ್ಯದ ದೇಶಕ್ಕೆ ತಿರುಗ ಬಹುದು.

೨೯ ಇವು ನಿಮ್ಮ ಸಮಸ್ತ ನಿವಾಸಗಳಲ್ಲಿ ನಿಮ್ಮ ಸಂತತಿಗಳಿಗೆ ನ್ಯಾಯದ ಕಟ್ಟಳೆಯಾಗಿರ ಬೇಕು.

30 ಪ್ರಾಣ ಹತ್ಯ ಮಾಡುವ ಕೊಲೆಪಾತಕನನ್ನು ಸಾಕ್ಷಿಗಳ ಬಾಯಿಯ ಪ್ರಕಾರ ಕೊಲ್ಲ ಬೇಕು; ಒಬ್ಬನೇ ಸಾಕ್ಷಿಯು ಒಂದು ಪ್ರಾಣಕ್ಕೆ ವಿರೋಧವಾಗಿ ಸಾಯುವ ಹಾಗೆ ಉತ್ತರ ಕೊ
31 ಡ ಬಾರದು. ಸಾಯ ತಕ್ಕ ಕೊಲೆಪಾತಕನ ಪ್ರಾಣಕ್ಕೋಸ್ಕರ ಈಡನ್ನು ತಕ್ಕೊಳ್ಳ ಬೇಡಿರಿ; ಯಾಕಂದರೆ ಅವನು ಸಾಯ
32 ಲೇ ಸಾಯ ಬೇಕು. ಮತ್ತು ತನ್ನ ಆಶ್ರಯದ ಊರಿಗೆ ಓಡಿ ಹೋದವನಿಗೋಸ್ಕರ, ಅವನು ತಿರಿಗಿ ಬಂದು, ಯಾಜಕನು ಸಾಯುವ ಪರ್ಯಂತರ ಸ್ವದೇಶದಲ್ಲಿ ವಾಸ ಮಾಡುವ ಹಾಗೆ, ಈಡನ್ನು ತಕ್ಕೊಳ್ಳ ಬೇಡಿರಿ.

33 ನೀವು ಇರುವ ದೇಶವನ್ನು ನೀವು ಅಪವಿತ್ರ ಮಾತ ಬೇಡಿರಿ; ಯಾಕಂದರೆ ದೇಶವನ್ನು ಅಪವಿತ್ರ ಮಾಡುವಂಥಾದ್ದು ರಕ್ತವೇ ಮತ್ತು ಅದರಲ್ಲಿ ಚೆಲ್ಲಲ್ಪಟ್ಟ ರಕ್ತದ ನಿಮಿತ್ತ ಅದನ್ನು ಚೆಲ್ಲಿದ
34 ವನ ರಕ್ತದಿಂದಲ್ಲದೆ ದೇಶಕ್ಕೆ ಪಾಪ ಮುಚ್ಚಲ್ಪಡುವದಿಲ್ಲ. ನೀವು ವಾಸ ಮಾಡುವ ದೇಶವನ್ನು ನೀವು ಅಶುದ್ಧ ಮಾತ ಬೇಡಿರಿ; ಯಾಕಂದರೆ ನಾನು ಅದರೊಳಗೆ ವಾಸಿಸುತ್ತೇನೆ; ಕರ್ತನಾಗಿರುವ ನಾನೇ ಇಸ್ರಯೇಲ್ ಮಕ್ಕಳ ಮಧ್ಯದಲ್ಲಿ ವಾಸಿಸುತ್ತೇನೆ.

## ೩೬. ಸಂಧಿ.

೧ ಆಗ ಯೋಸೆಫನ ಗೋತ್ರಗಳವರಾದ ಮನಸ್ಸೆಯ ಮಗನಾಗಿರುವ ಮಕೀರನ ಮಗನಾದ ಗಿಲ್ಯಾದನ ಮಕ್ಕಳ ಗೋತ್ರಗಳ ಯಜಮಾನರು ಸಮೂಹಕ್ಕೆ ಬಂದು, ಮೋಶೆಯ ಮುಂದೆಯೂ ಇಸ್ರಯೇಲ್ ಮಕ್ಕಳ ಕುಟುಂಬಗಳ ಯಜಮಾನರಾಗಿರುವ ಪ
೨ ಭುಗಳ ಮುಂದೆಯೂ ಮಾತಾಡಿ, ಹೇಳಿದ್ದೇನಂದರೆ—ಇಸ್ರಯೇಲ್ ಮಕ್ಕಳಿಗೆ ಚೀಟಿನಿಂದ ಸ್ವಾಸ್ಥ್ಯಕ್ಕಾಗಿ ದೇಶವನ್ನು ಕೊಡುವದಕ್ಕೆ ಕರ್ತನು ನಮ್ಮ ಸ್ವಾಮಿಗೆ ಆಜ್ಞಾಪಿಸಿದನು; ಮತ್ತು ನಮ್ಮ ಸಹೋದರನಾದ ಚೆಲೊಫಾದನ ಸ್ವಾಸ್ಥ್ಯವನ್ನು ಅವನ ಕುಮಾರ್ತೆಗಳಿಗೆ ಕೊಡುವದಕ್ಕೆ ನಮ್ಮ ಸ್ವಾಮಿ ಕರ್ತ
3 ನಿಂದ ಆಜ್ಞೇ ಹೊಂದಿದನು. ಆದರೆ ಅವರು ಇಸ್ರಯೇಲ್ ಮಕ್ಕಳ ಕುಲಗಳ ಮಕ್ಕಳಲ್ಲಿ ಒಬ್ಬರಿಗೆ ಹೆಂಡತಿಗಳಾದರೆ, ಅವರ ಸ್ವಾಸ್ಥ್ಯವು ನಮ್ಮ ತಂದೆಗಳ ಸ್ವಾಸ್ಥ್ಯದಿಂದ ಕಡಿಮೆಯಾಗಿ, ಅವರನ್ನು ಹೆಂಡತಿಗಳಾಗಿ ತಕ್ಕೊಳ್ಳುವವರ ಕುಲದ ಸ್ವಾಸ್ಥ್ಯಕ್ಕೆ ಕೂಡಿಸಲ್ಪಡುವದು; ಮತ್ತು ನಮ್ಮ ಸ್ವಾಸ್ಥ್ಯದ ಭಾಗದಿಂ
4 ದ ಅದು ಕಡಿಮೆಯಾಗಿ ಹೋಗುವದು. ಇಸ್ರಯೇಲ್ ಮಕ್ಕಳಿಗೆ ಸಂಭ್ರಮ ವರುಷವಾದರೂ, ಅವರ ಸ್ವಾಸ್ಥ್ಯವು ಅವರನ್ನು



ಹೆಂಡತಿಗಳಾಗಿ ತಕ್ಕೊಳ್ಳುವವರ ಕುಲದ ಸ್ವಾಸ್ಥ್ಯಕ್ಕೆ ಕೂಡಿಸಲ್ಪಡುವದು. ಹಾಗೆ ಅವರ ಸ್ವಾಸ್ಥ್ಯವು ನಮ್ಮ ತಂದೆಗಳ ಕುಲದ ಸ್ವಾಸ್ಥ್ಯದಿಂದ ಅಗಲಿ ಹೋಗುವದು.

೫ ಆಗ ಮೋಶೆ ಕರ್ತನ ಆಜ್ಞೆಯಂತೆ ಇಸ್ರಯೇಲ್ ಮಕ್ಕಳಿಗೆ ಆಜ್ಞಾಪಿಸಿ, ಹೇಳಿದ್ದೇನಂದರೆ—ಯೋಸೆಫನ ಮಕ್ಕಳ ಕುಲವು ಸರಿ
6 ಯಾಗಿ ಮಾತಾಡುತ್ತಾರೆ. ಕರ್ತನು ಚೆಲೊಫಾದನ ಕುಮಾರ್ತೆಗಳ ವಿಷಯದಲ್ಲಿ ಆಜ್ಞಾಪಿಸಿದ ಮಾತು ಏನಂದರೆ—ಅವರ ತಮ್ಮ ಮನಸ್ಸು ಬಂದವರಿಗೆ ಹೆಂಡತಿಗಳಾಗಲಿ; ಆದರೆ ತಮ್ಮ ತಂದೆಯ ಕುಲದ ಗೋತ್ರದವರಿಗೆ ಮಾತ್ರ ಹೆಂಡತಿಗಳಾಗ ಬೇ
7 ಕು. ಮತ್ತು ಇಸ್ರಯೇಲ್ ಮಕ್ಕಳ ಸ್ವಾಸ್ಥ್ಯವು ಒಂದು ಕುಲದಿಂದ ಮತ್ತೊಂದು ಕುಲಕ್ಕೆ ತಿರುಗಿಸಲ್ಪಡ ಬಾರದು; ಯಾಕಂದರೆ ಇಸ್ರಯೇಲ್ ಮಕ್ಕಳು ಒಬ್ಬೊಬ್ಬನು ತನ್ನ ತಂದೆಗ
8 ಳ ಕುಲದ ಸ್ವಾಸ್ಥ್ಯಕ್ಕೆ ಹತ್ತಿರ ಬೇಕು. ಮತ್ತು ಇಸ್ರಯೇಲ್ ಮಕ್ಕಳಲ್ಲಿ ಒಬ್ಬೊಬ್ಬನು ತನ್ನ ತಂದೆಗಳ ಸ್ವಾಸ್ಥ್ಯವನ್ನು ಸ್ವತಂತ್ರಿಸಿ ಕೊಳ್ಳುವ ಹಾಗೆ, ಇಸ್ರಯೇಲ್ ಮಕ್ಕಳ ಕುಲಗಳೊಳಗೆ ಸ್ವಾಸ್ಥ್ಯವನ್ನು ಹೊಂದಿರುವ ಒಬ್ಬೊಬ್ಬ ಕುಮಾರ್ತೆಯು ತನ್ನ ತಂದೆಯ ಕುಲದ ಗೋತ್ರದಲ್ಲಿ ಒಬ್ಬೊಬ್ಬನಿಗೆ
9 ಹೆಂಡತಿಯಾಗ ಬೇಕು. ಮತ್ತು ಒಂದು ಸ್ವಾಸ್ಥ್ಯವು ಒಂದು ಕುಲದಿಂದ ಮತ್ತೊಂದು ಕುಲಕ್ಕೆ ತಿರುಗಿಸಲ್ಪಡ ಬಾರದು; ಆದರೆ ಇಸ್ರಯೇಲ್ ಮಕ್ಕಳ ಕುಲಗಳಲ್ಲಿ ಒಬ್ಬೊಬ್ಬನು ತನ್ನ ಸ್ವಾಸ್ಥ್ಯಕ್ಕೆ ಹತ್ತಿರ ಬೇಕು.
10 ಕರ್ತನು ಮೋಶೆಗೆ ಆಜ್ಞಾಪಿಸಿದ ಪ್ರಕಾರ ಚೆಲೊಫಾದನು
11 ಕುಮಾರ್ತೆಗಳು ಮಾಡಿದರು. ಮತ್ತು ಚೆಲೊಫಾದನ ಕುಮಾರ್ತೆಗಳಾದ ಮಹಲ, ತಿರ್ಚ, ಹೊಗ್ಲ, ಮಿಲ್ಕಾ, ನೋವ, ತ
12 ಮ್ಮು ಚಿಕ್ಕಪ್ಪಂದಿರ ಕುಮಾರರಿಗೆ ಹೆಂಡತಿಗಳಾದರು. ಯೋಸೆಫನ ಮಗನಾದ ಮನಸ್ಸೆಯ ಮಕ್ಕಳವರಿಗೆ ಅವರು ಹೆಂಡತಿಗಳಾದರು. ಈ ಪ್ರಕಾರ ಅವರ ಸ್ವಾಸ್ಥ್ಯವು ತಮ್ಮ ತಂದೆಯ ಕುಲದ ಬಳಿಯಲ್ಲಿ ನಿಲ್ಲುವ ಹಾಗಾಯಿತು.

13 ಕರ್ತನು ಯೆರಿಕೋವಿಗೆದುರಾಗಿ ಯೊರ್ದನಿನ ತೀರದಲ್ಲಿರುವ ಮೋವಾಬಿನ ಬೈಲುಗಳಲ್ಲಿ ಮೋಶೆಯ ಮೂಲಕವಾಗಿ ಇಸ್ರಯೇಲ್ ಮಕ್ಕಳಿಗೆ ಆಜ್ಞಾಪಿಸಿದ ಆಜ್ಞೆಗಳೂ, ನ್ಯಾಯಗಳೂ, ಇವೇ.

# DEUTERONOMY.

## ದ್ವಿತೀಯ ನ್ಯಾಯವು.

### ೧ ಸಂಧಿ.

೧ ಮೋಶೆ ಸಮಸ್ತ ಇಸ್ರಯೇಲಿಗೆ ಯೊರ್ದನಿನ ಈಚೆಯಲ್ಲಿ,
ಅರಣ್ಯದಲ್ಲಿ, ಕೆಂಪು ಸಮುದ್ರಕ್ಕೆ ಎದುರಾಗಿರುವ ಬೈಲಿನಲ್ಲಿ,
ಪಾರಾನ್, ತೊಫೆಲ್, ಲಾಬಾನ್, ಹಾಜೆರೋತ್, ದೀಜಹಬ್, ಎಂ
೨ ಬುವುಗಳ ನಡುವೆಯಲ್ಲಿ ಹೇಳಿದ ಮಾತುಗಳು ಇವೇ. ಹೋರೆ
ಬಿನಿಂದ ಕಾದೆಷ್ ಬರ್ನೇಯಕ್ಕೆ ಸೇಯಿರ್ ಬೆಟ್ಟದ ಮಾರ್ಗವಾಗಿ
೩ ಹನ್ನೊಂದು ದಿವಸ ಪ್ರಯಾಣ. ನಾಲ್ವತ್ತನೇ ವರುಷದಲ್ಲಿ
ಹನ್ನೊಂದನೇ ತಿಂಗಳಿನ ಮೊದಲನೇ ದಿವಸದಲ್ಲಿ, ಆದದ್ದೇನಂದ
ರೆ—ಮೋಶೆ ಇಸ್ರಯೇಲ್ ಮಕ್ಕಳಿಗೆ, ಕರ್ತನು ಅವನಿಗೆ ಅವರ
೪ ವಿಷಯ ಆಜ್ಞಾಪಿಸಿದ್ದೆಲ್ಲಾದರ ಪ್ರಕಾರ ಮಾತಾಡಿದನು. ಅವನು
ಹೆಷ್ಬೋನಿನಲ್ಲಿ ವಾಸ ಮಾಡಿದ ಅಮೋರ್ಯರ ಅರಸನಾದ ಸೀ
ಹೋನನನೂಹ, ಅಷ್ಟರೋಥಿನಲ್ಲಿ, ಎದ್ರೈಮಲ್ಲಿ, ವಾಸ ಮಾಡಿ
ದ ಬಾಷಾನಿನ ಅರಸನಾದ ಓಗನನೂಹ, ಕೊಂದ ಮೇಲೆ.

೫ ಮೋಶೆ ಯೊರ್ದನಿನ ಈಚೆಯಲ್ಲಿ, ಮೋವಾಬಿನ ದೇಶದಲ್ಲಿ,
ಈ ನ್ಯಾಯಪ್ರಮಾಣವನ್ನು ವಿವರಿಸುವದಕ್ಕೆ ಆರಂಭ ಮಾಡಿ,
೬ ಹೇಳಿದ್ದೇನಂದರೆ—ನಮ್ಮ ದೇವರಾದ ಕರ್ತನು ಹೋರೆಬಿನಲ್ಲಿ ನ
ಮಗೆ ಹೇಳಿದ್ದೇನಂದರೆ—ನೀವು ಈ ಬೆಟ್ಟದಲ್ಲಿ ವಾಸ ಮಾಡಿದ್ದು
೭ ಸಾಕು; ತಿರುಗಿ ಕೊಂಡು, ಹೊರಟು, ಅಮೋರ್ಯರ ಬೆಟ್ಟಕ್ಕೂ,
ಅವರ ಸಮೀಪದಲ್ಲಿ ಬೈಲಿನಲ್ಲಿಯೂ, ಗುಡ್ಡದಲ್ಲಿಯೂ, ತಗ್ಗಿನ
ಲ್ಲಿಯೂ, ದಕ್ಷಿಣದಲ್ಲಿಯೂ, ಸಮುದ್ರ ತೀರದಲ್ಲಿಯೂ, ಇರುವ
ಎಲ್ಲಾ ಸ್ಥಳಗಳಿಗೂ, ಕನಾನ್ಯರ ದೇಶಕ್ಕೂ, ಲೆಬನೋನಿಗೂ,
೮ ಫ್ರಾತು ನದಿ ಎಂಬ ಮಹಾ ನದಿಯ ಬಳಿಗೂ, ಹೋಗಿರಿ. ಇ
ಗೋ, ದೇಶವನ್ನು ನಿಮ್ಮ ಮುಂದೆ ಇಟ್ಟಿದ್ದೇನೆ; ಹೋಗಿ, ಕರ್ತ
ನು ನಿಮ್ಮ ಪಿತೃಗಳಾದ ಅಬ್ರಹಾಮನಿಗೂ, ಇಸಾಕನಿಗೂ,
ಯಾಕೋಬನಿಗೂ, ಅವರಿಗೂ, ಅವರ ತರುವಾಯ ಹುಟ್ಟುವ
ಅವರ ಬೀಜಕ್ಕೂ, ಕೊಡುತ್ತೇನೆಂದು ಪ್ರಮಾಣ ಮಾಡಿದ ದೇ
ಶವನ್ನು ಸ್ವತಂತ್ರಿಸಿ ಕೊಳ್ಳಿರಿ.

೯ ಆ ಕಾಲದಲ್ಲಿ ನಾನು ನಿಮಗೆ ಹೇಳಿದ್ದೇನಂದರೆ—ನಾನೊಬ್ಬನೇ
೧೦ ನಿಮ್ಮನ್ನು ಹೊರಲಾರೆನು. ನಿಮ್ಮ ದೇವರಾದ ಕರ್ತನು ನಿಮ್ಮನ್ನು
ಹೆಚ್ಚಿಸಿದ್ದಾನೆ. ಇಗೋ, ನೀವು ಈ ಹೊತ್ತು ಲಕಾಸದ ನಕ್ಷತ್ರ
೧೧ ಗಳ ಹಾಗೆ ಬಹಳವಾಗಿದ್ದೀರಿ. ನಿಮ್ಮ ಪಿತೃಗಳ ದೇವರಾದ
ಕರ್ತನು ನೀವು ಇದ್ದದ್ದಕ್ಕಿಂತ ನಿಮ್ಮನ್ನು ಸಾವಿರಮ್ಮಟ್ಟು ಮಾಡಿ,
೧೨ ನಿಮಗೆ ಹೇಳಿದ ಹಾಗೆ ಅಭೀವರ್ದಿಸಲಿ. ನಿಮ್ಮ ಉಪದ್ರವ
ನೂಹ, ಭಾರವನೂಹ, ವ್ಯಾಜ್ಯವನೂಹ, ನಾನೊಬ್ಬನೇ ಹ್ಯಾಗೆ
೧೩ ಹೊರಲಿ! ನಿಮ್ಮ ಕುಲಗಳಲ್ಲಿ ಪ್ರಸಿದ್ಧರಾದ ಜ್ಞಾನವೂ, ಬುದ್ಧಿ
ಯೂ, ಉಳ್ಳ ಮನುಷ್ಯರನ್ನು ತಂದು ಕೊಳ್ಳಿರಿ; ಆಗ ಅವ
೧೪ ರನ್ನು ನಿಮಗೆ ಮುಖ್ಯಸ್ಥರಾಗ ಮಾಡುವೆನು. ಅದಕ್ಕೆ ನೀವು
ನನಗೆ ಕೊಟ್ಟು ಉತ್ತರವೇನಂದರೆ—ನೀನು ಹೇಳಿದ ಮಾತು ಮಾ
೧೫ ಡುವದಕ್ಕೆ ಒಳ್ಳೇದು. ಆಗ ನಾನು ನಿಮ್ಮ ಕುಲಗಳ ಮುಖ್ಯಸ್ಥ
ರಾದ ಜ್ಞಾನಿಗಳಾದ ಪ್ರಸಿದ್ಧ ಮನುಷ್ಯರನ್ನು ತಕ್ಕೊಂಡು, ನಿ
ಮ್ಮ ಮೇಲೆ ಮುಖ್ಯಸ್ಥರಾಗಿರುವ ಸಹಸ್ರಾಧಿಪತಿಗಳಾಗಿಯೂ,
ಶತಾಧಿಪತಿಗಳಾಗಿಯೂ, ಪಂಚಾಶತಾಧಿಪತಿಗಳಾಗಿಯೂ, ದಶಾ
೧೬ ಧಿಪತಿಗಳಾಗಿಯೂ, ನಿಮ್ಮ ಕುಲಗಳಿಗೆ ಅಧಿಕಾರಿಗಳಾಗಿಯೂ
ಮಾಡಿದೆನು. ಆ ಕಾಲದಲ್ಲಿ ನಿಮ್ಮ ನ್ಯಾಯಾಧಿಪತಿಗಳಿಗೆ ಕೊ
ಟ್ಟಿ ಅಪ್ಪಣೆ ಏನಂದರೆ—ನಿಮ್ಮ ಸಹೋದರರು ತಮ್ಮಲ್ಲಿ ಮಾಡು
ವ ವ್ಯಾಜ್ಯಗಳನ್ನು ಕೇಳಿ, ಒಬ್ಬೊಬ್ಬನಿಗೂ, ಅವನ ಸಹೋದ
೧೭ ರನಿಗೂ, ಅವನ ಪರವಾಸಿಗೂ, ನೀತಿಯಾಗಿ ನ್ಯಾಯ ತೀರಿಸಿರಿ.
ನ್ಯಾಯದಲ್ಲಿ ನೀವು ಮುಖದಾಕ್ಷಿಣ್ಯ ನೋಡ ಬೇಡಿರಿ; ಹಿರಿಯ
ನನ್ನು ಹ್ಯಾಗೋ, ಹಾಗೆ ಕಿರಿಯನನ್ನು ಕೇಳ ಬೇಕು; ಮನು
ಷ್ಯನ ಮುಖಕ್ಕೆ ಹೆದರ ಬೇಡಿರಿ; ಯಾಕಂದರೆ ನ್ಯಾಯ ತೀರ್ಪು
ಕೆಯು ದೇವರದೇ; ಮತ್ತು ನಿಮಗೆ ಕಠಿಣವಾದ ಮಾತನ್ನು ನನ್ನ
೧೮ ಮುಂದೆ ತನ್ನಿರಿ; ಆಗ ನಾನು ಅದನ್ನು ಕೇಳುವೆನು. ಆ ಸಮ
ಯದಲ್ಲಿ ನೀವು ಮಾಡ ತಕ್ಕ ಕಾರ್ಯಗಳನ್ನೆಲ್ಲಾ ನಿಮಗೆ ಆಜ್ಞಾ
ಪಿಸಿದೆನು.

೧೯ ಆಗ ನೀವು ಹೋರೆಬಿನಿಂದ ಹೊರಟು, ನಮ್ಮ ದೇವರಾದ
ಕರ್ತನು ನಮಗೆ ಆಜ್ಞಾಪಿಸಿದ ಪ್ರಕಾರ, ನೀವು ಅಮೋರ್ಯರ
ಬೆಟ್ಟದ ಮಾರ್ಗದಲ್ಲಿ ನೋಡಿದ ಆ ದೊಡ್ಡ ಭಯಂಕರವಾದ
೨೦ ಅರಣ್ಯವನ್ನೆಲ್ಲಾ ದಾಟಿ, ಕಾದೆಷ್ ಬರ್ನೇಯಕ್ಕೆ ಬಂದೆವು. ಆಗ
ನಾನು ನಿಮಗೆ ಹೇಳಿದ್ದೇನಂದರೆ—ನಮ್ಮ ದೇವರಾದ ಕರ್ತನು ನ
೨೧ ಮಗೆ ಕೊಡುವ ಅಮೋರ್ಯರ ಬೆಟ್ಟಕ್ಕೆ ಬಂದಿರಿ. ಇಗೋ, ನಿನ್ನ
ದೇವರಾದ ಕರ್ತನು ದೇಶವನ್ನು ನಿನ್ನ ಮುಂದೆ ಇಟ್ಟಿದ್ದಾನೆ;
ನಿನ್ನ ಪಿತೃಗಳ ದೇವರಾದ ಕರ್ತನು ನಿನಗೆ ಹೇಳಿದ ಪ್ರಕಾರ ಏರಿ,
ಅದನ್ನು ಸ್ವತಂತ್ರಿಸಿ ಕೊಳ್ಳು; ಭಯ ಪಡ ಬೇಡ, ಹೆದರ ಬೇಡ.

೨೨ ಆಗ ನೀವೆಲ್ಲರು ನನ್ನ ಬಳಿಗೆ ಬಂದು, ಹೇಳಿದ್ದೇನಂದರೆ—ನಮ್ಮ
ಮುಂದಾಗಿ ಮನುಷ್ಯರನ್ನು ಕಳುಹಿಸೋಣ, ಅವರು ನಮಗೆ
ದೇಶವನ್ನು ಪಾಳತಿ ನೋಡಿ, ನಾವು ಮೇಲೆ ಹೋಗ ತಕ್ಕ ಮಾ
ರ್ಗದ ವಿಷಯವೂ, ನಾವು ಪ್ರವೇಶಿಸುವ ಪಟ್ಟಣಗಳ ವಿಷಯವೂ,
೨೩ ನಮಗೆ ಸಮಾಚಾರವನ್ನು ತರಲಿ. ಆ ಮಾತು ನನಗೆ ಒಳ್ಳೇ
ದೆಂದು ತೋಚಿತು; ನಾನು ನಿಮ್ಮಲ್ಲಿ, ಕುಲಕ್ಕೆ ಒಬ್ಬನ ಪ್ರಕಾರ,
೨೪ ಹನ್ನೆರಡು ಮಂದಿ ಮನುಷ್ಯರನ್ನು ತಕ್ಕೊಂಡೆನು. ಅವರು
ಹೋಗಿ, ಬೆಟ್ಟವನ್ನೇರಿ, ಎಷ್ಕೋಲೆಂಬ ಹಳ್ಳದ ಬಳಿಗೆ ಬಂದು,
೨೫ ಅದನ್ನು ಹೊಂಚಿ ನೋಡಿ, ದೇಶದ ಫಲದಲ್ಲಿ ಕೆಲವನ್ನು ಕೈಯ
ಲ್ಲಿ ತಕ್ಕೊಂಡು, ನಮ್ಮ ಬಳಿಗೆ ತಂದು, ನಮಗೆ ಸಮಾಚಾರವ
ನ್ನು ತಂದು—ನಮ್ಮ ದೇವರಾದ ಕರ್ತನು ನಮಗೆ ಕೊಡುವ ದೇ
ಶವು ಒಳ್ಳೇದು, ಅಂದರು.

೨೬ ಆದರೆ ನೀವು ಮೇಲೆ ಹೋಗುವದಕ್ಕೆ ಮನಸ್ಸಿಲ್ಲದೆ, ನಿಮ್ಮ
೨೭ ದೇವರಾದ ಕರ್ತನ ಅಪ್ಪಣೆಗೆ ತಿರುಗ ಬಿದ್ದು, ನಿಮ್ಮ ಗುಡಾರಗ
ಳಲ್ಲಿ ಗುಣುಗುಟ್ಟಿ, ಹೇಳಿದ್ದೇನಂದರೆ—ಕರ್ತನು ನಮ್ಮನ್ನು ಹಗೆ
ಮಾಡಿದ್ದರಿಂದ ನಮ್ಮನ್ನು ಅಮೋರ್ಯರ ಕೈಗೆ ಒಪ್ಪಿಸಿ, ನಮ್ಮ
ನ್ನು ನಾಶನ ಮಾಡುವದಕ್ಕೆ ನಮ್ಮನ್ನು ಐಗುಪ್ತ ದೇಶದೊಳಗಿಂ
೨೮ ದ ಹೊರಗೆ ಬರ ಮಾಡಿದ್ದಾನೆ. ನಾವು ಎಲ್ಲಿಗೆ ಏರಿ ಹೋಗೋ
ಣ! ನಮ್ಮ ಸಹೋದರರು—ಆ ಜನರು ನಮಗಿಂತ ದೊಡ್ಡವ

ರೂ, ಉದ್ದವಾದವರೂ; ಪಟ್ಟಣಗಳು ದೊಡ್ಡವುಗಳೂ, ಆಕಾಶದ ಮ
ಟ್ಟಿಗೂ ಗೋಡೆಯುಳ್ಳವುಗಳೂ; ಇದಲ್ಲದೆ ಅನಾಕ್ಯರ ಮಕ್ಕಳ
ನ್ನು ಅಲ್ಲಿ ನೋಡಿದೆವು, ಎಂದು ಹೇಳಿ, ನಮ್ಮ ಹೃದಯಗಳನ್ನು
ಅಧೈರ್ಯ ಪಡಿಸಿದ್ದಾರೆ.

೨೯ ಆಗ ನಾನು ನಿಮಗೆ ಹೇಳಿದ್ದೇನಂದರೆ—ಅಂಜ ಬೇಡಿರಿ; ಅವರಿ
೩೦ ಗೆ ಭಯ ಪಡ ಬೇಡಿರಿ. ನಿಮ್ಮ ಮುಂದೆ ಹೋಗುವ ನಿಮ್ಮ ದೇ
ವರಾದ ಕರ್ತನು ಅವನೇ, ಐಗುಪ್ತದಲ್ಲಿ ನಿಮ್ಮ ಕಣ್ಣುಗಳ ಮುಂ
ದೆಯೂ ಅರಣ್ಯದಲ್ಲಿಯೂ ನಿಮಗೆ ಮಾಡಿದ ಎಲ್ಲಾದರ ಪ್ರಕಾ
೩೧ ರ, ನಿಮಗೋಸ್ಕರ ಯುದ್ಧ ಮಾಡುವನು. ಈ ಅರಣ್ಯದಲ್ಲಿ.
ನಿನ್ನ ದೇವರಾದ ಕರ್ತನು, ತಂದೆ ಮಗನನ್ನು ಹೊತ್ತು ಕೊಳ್ಳು
ವ ಪ್ರಕಾರ, ನಿನ್ನನ್ನು ನೀವು ಹೋದ ಮಾರ್ಗದಲ್ಲೆಲ್ಲಾ, ನೀವು
ಈ ಸ್ಥಳಕ್ಕೆ ಬರುವ ಪರ್ಯಂತರ, ಹೊತ್ತು ಕೊಂಡನೆಂದು,
ನೋಡಿದಿಯಲ್ಲ!

೩೨ ಆದರೆ ಈ ಕಾರ್ಯದಲ್ಲಿ ನೀವು ನಿಮ್ಮ ದೇವರಾದ ಕರ್ತನ
೩೩ ನ್ನು ನಂಬಲಿಲ್ಲ. ಅವನೇ ಇಳಿ ಕೊಳ್ಳುವದಕ್ಕೆ ನಿಮಗೆ ಸ್ಥಳವ
ನ್ನು ವಿಚಾರಿಸಲೂ, ನೀವು ಹೋಗ ತಕ್ಕ ಮಾರ್ಗವನ್ನು ನಿಮ
ಗೆ ತೋರಿಸಲೂ, ರಾತ್ರಿ ಹೊತ್ತು ಬೆಂಕಿಯಲ್ಲಿಯೂ, ಹಗಲು
ಹೊತ್ತು ಮೇಘದಲ್ಲಿಯೂ, ಮಾರ್ಗದಲ್ಲಿ ನಿಮ್ಮ ಮುಂದೆ ಹೋ
ದನು.

೩೪ ಕರ್ತನು ನಿಮ್ಮ ಮಾತುಗಳ ಶಬ್ದವನ್ನು ಕೇಳಿ, ಕೋಪಿಸಿ
೩೫ ಕೊಂಡು, ಪ್ರಮಾಣ ಮಾಡಿ, ಹೇಳಿದ್ದೇನಂದರೆ—ನಿಶ್ಚಯವಾಗಿ ಕೆ
ಟ್ಟ ಸಂತತಿಯಾದ ಈ ಮನುಷ್ಯರಲ್ಲಿ ಒಬ್ಬನಾದರೂ ನಾನು
ನಿಮ್ಮ ಪಿತೃಗಳಿಗೆ ಕೊಡುತ್ತೇನೆಂದು ಪ್ರಮಾಣ ಮಾಡಿದ ಆ
೩೬ ಒಳ್ಳೇ ದೇಶವನ್ನು ನೋಡುವದಿಲ್ಲ. ಯೆಫುನ್ನೆಯ ಮಗನಾದ
ಕಾಲೆಬನು ಮಾತ್ರ ಅದನ್ನು ನೋಡುವನು. ಅವನು ಕರ್ತನನ್ನು
ಪೂರ್ಣವಾಗಿ ಹಿಂಬಾಲಿಸಿದ್ದರಿಂದ ಅವನು ಮೆಟ್ಟಿದ ದೇಶವನ್ನು
೩೭ ಅವನಿಗೂ, ಅವನ ಮಕ್ಕಳಿಗೂ, ಕೊಡುವೆನು. ನನ್ನ ಮೇಲೆ
ಯೂ ಕರ್ತನು ನಿಮ್ಮ ವಿಷಯ ಕೋಪ ಮಾಡಿ, ಹೇಳಿದ್ದೇನಂದ
೩೮ ರೆ—ನೀನು ಸಹ ಅದರಲ್ಲಿ ಪ್ರವೇಶಿಸುವದಿಲ್ಲ. ಆದರೆ ನಿನ್ನ ಮುಂ
ದೆ ನಿಂತಿರುವಂಥ, ನೂನನ ಮಗನಾದ ಯೆಹೋಶುವ ಅವನೇ
ಅದರಲ್ಲಿ ಪ್ರವೇಶಿಸುವನು; ಅವನಿಗೆ ಧೈರ್ಯ ಕೊಡು; ಅವನೇ
೩೯ ಅದನ್ನು ಇಸ್ರಯೇಲಿಗೆ ಸ್ವಾಸ್ತ್ಯವಾಗಿ ಕೊಡುವನು. ಇದಲ್ಲದೆ
ಸುಲಿಗೆ ಆಗುವೆನೆಂದು, ನೀವು ಹೇಳಿದ ನಿಮ್ಮ ಚಿಕ್ಕವರೂ, ಈ
ಹೊತ್ತು ಮೇಲು ಕೇಡು ಅರಿಯದ ನಿಮ್ಮ ಮಕ್ಕಳೂ, ಅವರೇ
ಅದರಲ್ಲಿ ಪ್ರವೇಶಿಸುವರು; ಅವರಿಗೆ ಅದನ್ನು ಕೊಡುವೆನು; ಅವರು
೪೦ ಅದನ್ನು ಸ್ವತಂತ್ರಿಸಿ ಕೊಳ್ಳುವರು. ನೀವಾದರೆ, ತಿರುಗಿ ಕೊಂ
ಡು, ಕೆಂಪು ಸಮುದ್ರದ ಮಾರ್ಗವಾಗಿ ಅರಣ್ಯಕ್ಕೆ ಹೊರಟು
ಹೋಗಿರಿ.

೪೧ ಆಗ ನೀವು ಉತ್ತರ ಕೊಟ್ಟು, ನನಗೆ ಹೇಳಿದ್ದೇನಂದರೆ—
ಕರ್ತನಿಗೆ ಪಾಪ ಮಾಡಿದ್ದೇವೆ; ನಮ್ಮ ದೇವರಾದ ಕರ್ತನು ನಮ
ಗೆ ಆಜ್ಞಾಪಿಸಿದ್ದೆಲ್ಲಾದರ ಪ್ರಕಾರ ನಾವು ಏರಿ, ಯುದ್ಧ ಮಾಡು
ತ್ತೇವೆ; ನೀವೆಲ್ಲರು ನಿಮ್ಮ ಯುದ್ಧದ ಆಯುಧಗಳನ್ನು ಕಟ್ಟಿ
ಕೊಂಡ ಮೇಲೆ, ಬೆಟ್ಟಕ್ಕೆ ಏರಿ ಹೋಗುವದು ಸುಲಭ ಕೆಲಸವೆಂದು
೪೨ ನೆನಸಿದಿರಿ. ಆದರೆ ಕರ್ತನು ನನಗೆ ಹೇಳಿದ್ದೇನಂದರೆ—ಏರಿ ಹೋ
ಗ ಬೇಡಿರಿ; ಯುದ್ಧ ಮಾಡ ಬೇಡಿರಿ; ಯಾಕಂದರೆ ನಾನು ನಿಮ್ಮ
ಮಧ್ಯದಲ್ಲಿ ಇರುವದಿಲ್ಲ; ನೀವು ನಿಮ್ಮ ಶತ್ರುಗಳಿಂದ ಹೊಡಿಯ
೪೩ ಲ್ಪಟ್ಟೀರಿ, ಎಂದು ಅವರಿಗೆ ಹೇಳು. ನಾನು ನಿಮಗೆ ಹೇಳಿದಾಗ,
ನೀವು ಕೇಳದೆ, ಕರ್ತನ ಅಪ್ಪಣೆಗೆ ತಿರುಗ ಬಿದ್ದು, ವ್ಯರ್ಥ ಧೈ
ರ್ಯ ಮಾಡಿ, ಬೆಟ್ಟವನ್ನೇರಿದಿರಿ. ಆಗ ಆ ಬೆಟ್ಟದಲ್ಲಿ ವಾಸ
೪೪ ಮಾಡುವ ಅಮೋರ್ಯರು ನಿಮ್ಮೆದುರಿಗೆ ಹೊರಟು, ತುಂಬಿಗಳು
ಮಾಡುವಂತೆ ನಿಮ್ಮ ಬೆನ್ನು ಹತ್ತಿ, ಸೇಯಿರಿನಲ್ಲಿ ಹೊರ್ಮಾದ
ಪರ್ಯಂತರ ನಿಮ್ಮನ್ನು ಸಂಹಾರ ಮಾಡಿದರು. ಆಗ ನೀವು
೪೫ ತಿರುಗಿ ಕೊಂಡು, ಕರ್ತನ ಮುಂದೆ ಅತ್ತಿರಿ; ಆದರೆ ಕರ್ತನು ನಿಮ್ಮ
ಶಬ್ದವನ್ನು ಕೇಳದೆ, ನಿಮಗೆ ಕಿವಿ ಕೊಡಲಿಲ್ಲ. ಆ ಮೇಲೆ ನೀವು
೪೬ ಕಾದೆಸಿನಲ್ಲಿ ವಾಸವಾಗಿದ್ದ ಕಾಲದ ಪ್ರಕಾರ ಬಹಳ ದಿವಸ ವಾ
ಸವಾಗಿದ್ದಿರಿ.

## ೨. ಸಂಧಿ.

೧ ಆಗ ನಾವು ತಿರುಗಿ ಕೊಂಡು, ಕರ್ತನು ನನಗೆ ಹೇಳಿದ
ಪ್ರಕಾರ ಕೆಂಪು ಸಮುದ್ರದ ಮಾರ್ಗವಾಗಿ ಅರಣ್ಯಕ್ಕೆ ಹೊ
ರಟು, ಅನೇಕ ದಿವಸಗಳು ಸೇಯಿರ್ ಬೆಟ್ಟವನ್ನು ಸುತ್ತಿ ಕೊಂಡೆ
೨ ವು. ಆ ಮೇಲೆ ಕರ್ತನು ನನಗೆ ಹೇಳಿದ್ದೇನಂದರೆ—ನೀವು ಈ
3 ಬೆಟ್ಟವನ್ನು ಸುತ್ತಿ ಕೊಂಡದ್ದು ಸಾಕು, ಉತ್ತರಕ್ಕೆ ತಿರುಗಿ ಕೊ
೪ ಳ್ಳಿರಿ. ಮತ್ತು ನೀವು ಜನರಿಗೆ ಆಜ್ಞಾಪಿಸ ಬೇಕಾದದ್ದೇನಂದರೆ—
ನೀವು ಸೇಯಿರಿನಲ್ಲಿ ವಾಸ ಮಾಡುವ ನಿಮ್ಮ ಸಹೋದರರಾದ
ಎಸಾವನ ಮಕ್ಕಳ ಮೇರೆಯನ್ನು ದಾಟ ಬೇಕು; ಅವರು ನಿಮ
ಗೆ ಭಯ ಪಡುವರು; ಆದದರಿಂದ ನೀವು ಬಹಳ ಜಾಗ್ರತೆಯಿಂದಿ
೫ ರ ಬೇಕು. ಅವರ ಸಂಗಡ ಜಗಳವಾಡ ಬೇಡಿರಿ. ಯಾಕಂದರೆ
ನಾನು ನಿಮಗೆ ಅವರ ದೇಶದಲ್ಲಿ ಪಾದದಷ್ಟು ಕೊಡುವದಿಲ್ಲ;
ಸೇಯಿರ್ ಬೆಟ್ಟವನ್ನು ಎಸಾವನಿಗೆ ಸ್ವಾಸ್ತ್ಯವಾಗಿ ಕೊಟ್ಟಿದ್ದೆನಲ್ಲ!
೬ ನೀವು ಉಣ್ಣುವ ಹಾಗೆ ಆಹಾರವನ್ನು ಅವರಿಂದ ಹಣಕ್ಕೆ ತ
ಕ್ಕೊಳ್ಳ ಬೇಕು; ಕುಡಿಯುವ ಹಾಗೆ ನೀರನ್ನು ಸಹ ಅವರಿಂದ
೭ ಹಣಕ್ಕೆ ತಕ್ಕೊಳ್ಳ ಬೇಕು. ಯಾಕಂದರೆ ನಿನ್ನ ದೇವರಾದ
ಕರ್ತನು ನಿನ್ನ ಎಲ್ಲಾ ಕೈ ಕೆಲಸದಲ್ಲಿ ನಿನ್ನನ್ನು ಆಶೀರ್ವದಿ
ಸಿದ್ದಾನೆ; ನೀನು ಈ ದೊಡ್ಡ ಅರಣ್ಯದಲ್ಲಿ ಸಂಚಾರ ಮಾಡಿದ್ದ
ನ್ನು ಅವನು ಬಲ್ಲನು; ಈ ನಾಲ್ವತ್ತು ವರುಷ ನಿನ್ನ ದೇವರಾದ
ಕರ್ತನು ನಿನ್ನ ಸಂಗಡ ಇದ್ದಾನೆ; ನಿನಗೆ ಏನು ಕಡಿಮೆ
ಆಗಲಿಲ್ಲ.

೮ ಈ ಪ್ರಕಾರ ನಾವು ಸೇಯಿರಿನಲ್ಲಿ ವಾಸ ಮಾಡುವ ನಮ್ಮ ಸ
ಹೋದರರಾದ ಎಸಾವನ ಮಕ್ಕಳ ಕಡೆಯಿಂದ ಬೈಶಿನ ಮಾ
ರ್ಗವಾಗಿ ಏಲತ್, ಎಜ್ಯೊನ್ಗೆಬರ್ ಎಂಬ ಪಟ್ಟಣಗಳ ಮುಂದಾಗಿ
ದಾಟಿ, ತಿರುಗಿ ಕೊಂಡು, ಮೋವಾಬಿನ ಅರಣ್ಯದ ಮಾರ್ಗವಾ
೯ ಗಿ ಹಾದು ಹೋದೆವು. ಆಗ ಕರ್ತನು ನನಗೆ ಹೇಳಿದ್ದೇನಂದ
ರೆ—ಮೋವಾಬ್ಯರಿಗೆ ಉಪದ್ರವ ಕೊಡ ಬೇಡ; ಅವರ ಸಂಗಡ ಜಗ
ಳವಾಡಿ, ಯುದ್ಧ ಮಾಡ ಬೇಡ; ಯಾಕಂದರೆ ನಾನು ಅವರ ದೇ
ಶದಲ್ಲಿ ನಿನಗೆ ಸ್ವಾಸ್ತ್ಯವನ್ನು ಕೊಡುವದಿಲ್ಲ; ನಾನು ಅರನ್ನು
೧೦ ಲೋಟನ ಮಕ್ಕಳಿಗೆ ಸ್ವಾಸ್ತ್ಯವಾಗಿ ಕೊಟ್ಟಿದ್ದೆನಲ್ಲ! ಅದರೊಳಗೆ
ಪೂರ್ವದಲ್ಲಿ ಏಮ್ಯರು ವಾಸವಾಗಿದ್ದರು. ಅವರು ಅನಾಕ್ಯರ
ಹಾಗೆ ದೊಡ್ಡವರಾಗಿಯೂ ಬಹಳವಾದವರಾಗಿಯೂ ಉದ್ದವಾದ
೧೧ ವರಾಗಿಯೂ ಇರುವ ಜನರು. ಅವರು ಅನಾಕ್ಯರ ಹಾಗೆ ರಾಕ್ಷ



ಸರನ್ನಿಸಿ ಕೊಂಡರು; ಮೋವಾಬ್ಯರು ಅವರನ್ನು ಏಮ್ಯರೆಂದು
೧೦ ಕರೆದರು. ಹೋರ್ಯರು ಸಪ ಪೂರ್ವದಲ್ಲಿ ಸೇಯಿರಿನಲ್ಲಿ
ವಾಸ ಮಾಡಿದರು; ಆದರೆ ಎಸಾವನ ಮಕ್ಕಳು ಅವರನ್ನು
ಹೊರಡಿಸಿ, ತಮ್ಮ ಮುಂದಾಗಿ ಸಂಹರಿಸಿ, ಇಸ್ರಯೇಲ್ಯರು
ಕರ್ತನು ತಮಗೆ ಕೊಟ್ಟ ಸ್ವಾಸ್ತ್ಯದ ದೇಶದಲ್ಲಿ ಮಾಡಿದ
೧೩ ಹಾಗೆ ಅವರ ಬದಲಾಗಿ ವಾಸ ಮಾಡಿದರು. ಈಗ ಎದ್ದು, ಜೇ
ರೆದ್ ಹಳ್ಳವನ್ನು ದಾಟಿರಿ, ಅಂದ ಮೇಲೆ, ನಾವು ಜೇರೆದ್ ಹಳ್ಳವ
ನ್ನು ದಾಟಿದೆವು.

೧೪ ನಾವು ಕಾದೆಷ್ ಬರ್ನೇಯವನ್ನು ಬಿಟ್ಟಂದಿನಿಂದ ಜೇರೆದ್ ಹ
ಳ್ಳವನ್ನು ದಾಟಿದ ಪರ್ಯಂತರ ಹೋದ ಕಾಲವು ಮೂವ
ತ್ತೆಂಟು ವರುಷ; ಕರ್ತನು ಅವರಿಗೆ ಪ್ರಮಾಣ ಮಾಡಿದ ಪ್ರಕಾ
ರ ಯುದ್ಧಸ್ಥರ ಸಂತತಿ ಎಲ್ಲಾ ಸೈನ್ಯದೊಳಗಿಂದ ಮುಗಿದು
೧೫ ಹೋಗುವ ಪರ್ಯಂತರ ತಡವಾಯಿತು. ಅವರು ಮುಗಿದು
ಹೋಗುವ ಪರ್ಯಂತರ ಅವರನ್ನು ಸೈನ್ಯದೊಳಗಿಂದ ನಿ
ರ್ಮೂಲ ಮಾಡುವದಕ್ಕೆ ಕರ್ತನ ಕೈ ಸಹ ಅವರ ಮೇಲಿತ್ತು.

೧೬ ಯುದ್ಧಸ್ಥರೆಲ್ಲರು ಜನರೊಳಗಿಂದ ಸತ್ತು, ಮುಗಿದು ಹೋದ
೧೭ ಮೇಲೆ, ಕರ್ತನು ನನಗೆ ಹೇಳಿದ್ದೇನಂದರೆ—ಇಂದು ನೀನು
೧೮ ಮೋವಾಬಿನ ಮೇರೆಯಾದ ಆರನ್ನು ದಾಟ ಬೇಕು. ಮತ್ತು ಅ
೧೯ ಮ್ಮೋನನ ಮಕ್ಕಳೆದುರಿಗೆ ನೀನು ಬಂದರೆ, ಅವರಿಗೆ ಉಪದ್ರವ ಕೊ
ಡ ಬೇಡ; ಅವರ ಸಂಗಡ ಜಗಳವಾಡ ಬೇಡ; ಯಾಕಂದರೆ ನಾನು
ಅಮ್ಮೋನನ ಮಕ್ಕಳ ದೇಶದಲ್ಲಿ ನಿನಗೆ ಸ್ವಾಸ್ತ್ಯವನ್ನು ಕೊ
ಡುವದಿಲ್ಲ, ನಾನು ಅದನ್ನು ತೋಟನ ಮಕ್ಕಳಿಗೆ ಸ್ವಾಸ್ತ್ಯವಾಗಿ
೨೦ ಕೊಟ್ಟಿದ್ದೆನಲ್ಲ! ಇದು ಸಹ ರಾಕ್ಷಸರ ದೇಶವನ್ನಿಸಿ ಕೊಂಡಿತ್ತು; ರಾ
ಕ್ಷಸರು ಪೂರ್ವದಲ್ಲಿ ಅದರಲ್ಲಿ ವಾಸ ಮಾಡಿದರು; ಅಮ್ಮೋನ್ಯ
೨೧ ರು ಅವರಿಗೆ ಜಂಜುಮ್ಮಿಯರೆಂದು ಕರೆದರು. ಅವರು ಅನಾಕ್ಯರ
ಹಾಗೆ ದೊಡ್ಡವರೂ, ಬಹಳವಾದವರೂ ಉದ್ದವಾದವರೂ, ಆಗಿ
ರುವ ಜನರು; ಆದರೆ ಕರ್ತನು ಅವರನ್ನು ಇವರ ಮುಂದೆ ನಾ
ಶ ಮಾಡಿದ್ದರಿಂದ, ಇವರು ಅವರನ್ನು ಹೊರಡಿಸಿ, ಅವರ ಬದ
೨೨ ಲಾಗಿ ವಾಸಿಸಿದರು. ಕರ್ತನು ಸೇಯಿರಿನಲ್ಲಿ ವಾಸವಾಗಿರುವ
ಎಸಾವನ ಮಕ್ಕಳಿಗೆ ಮಾಡಿದ ಹಾಗಾಯಿತು. ಅವನು ಅವರ
ಮುಂದೆ ಹೋರ್ಯರನ್ನು ನಾಶನ ಮಾಡಿದಾಗ, ಅವರು ಇವರ
ನ್ನು ಹೊರಡಿಸಿ, ಇವರ ಬದಲಾಗಿ ಇಂದಿನ ಪರ್ಯಂತರಕ್ಕೂ
೨೩ ವಾಸಿಸಿದರಲ್ಲ! ಹಾಗೆ ಹಪೆರೀಮಿನಲ್ಲಿ ಅಜ್ಜದ ಪರ್ಯಂತರ
ವಾಸವಾಗಿದ್ದ ಅವ್ವಿಯರನ್ನು ಕಫ್ತೋರಿಂದ ಹೊರಟ ಕಫ್ತೋ
೨೪ ರ್ಯರು ನಾಶ ಮಾಡಿ, ಅವರ ಬದಲಾಗಿ ವಾಸಿಸಿದರು. ಏಳ್ಳಿ
ರಿ, ಹೊರಡಿರಿ; ಅರ್ನೋನ್ ನದಿಯನ್ನು ದಾಟಿರಿ; ಇಗೋ, ಹೆ
ಷ್ಬೋನಿನ ಅರಸನಾದ ಅಮೋರ್ಯನಾದ ಸೀಹೋನನನ್ನೂ
ಅವನ ದೇಶವನ್ನೂ ನಿನ್ನ ಕೈಯಲ್ಲಿ ಕೊಟ್ಟಿದ್ದೇನೆ, ಸ್ವತಂತ್ರಿ
ಸಿ ಕೊಳ್ಳುವದಕ್ಕೆ ಆರಂಭ ಮಾಡು, ಅವನ ಸಂಗಡ ಜಗಳವಾಡಿ,
೨೫ ಯುದ್ಧ ಮಾಡು. ಇದೇ ದಿವಸ ಆಕಾಶವೆಲ್ಲಾದರ ಕೆಳಗಿರುವ
ಜನಾಂಗಗಳ ಮೇಲೆ ನಿನ್ನ ಹೆದರಿಕೆಯನ್ನೂ, ನಿನ್ನ ಭಯವ
ನ್ನೂ, ಇಡಲಾರಂಭಿಸುತ್ತೇನೆ. ಅವರು ನಿನ್ನ ಸುದ್ದಿಯನ್ನು
ಕೇಳಿ, ನಿನಗೋಸ್ಕರ ನಡುಗಿ, ಅಂಜುವರು.

೨೬ ಆಗ ನಾನು ಕೆದೆಮೋತೆಂಬ ಅರಣ್ಯದಿಂದ ಹೆಷ್ಬೋನಿನ
ಅರಸನಾದ ಸೀಹೋನನಿಗೆ ಸಮಾಧಾನದ ಮಾತುಳ್ಳ ದೂತರ
೨೭ ನ್ನು ಕಳುಹಿಸಿ, ಹೇಳಿದ್ದೇನಂದರೆ—ನಾನು ನಿನ್ನ ದೇಶವನ್ನು ದಾ
ಟಿ ಹೋಗಲಿ; ನಾನು ರಾಜ ಮಾರ್ಗದಿಂದಲೇ ಹೋಗುತ್ತೇನೆ;
೨೮ ಎಡಕ್ಕೂ, ಬಲಕ್ಕೂ, ವಾಕೆ ಹೋಗುವದಿಲ್ಲ. ನೀನು ಹಣ
ಕ್ಕೋಸ್ಕರ ನನಗೆ ಮಾರುವ ಆಹಾರವನ್ನು ಉಣ್ಣುತ್ತೇನೆ;
ಹಣಕ್ಕೋಸ್ಕರ ನನಗೆ ಕೊಡುವ ನೀರನ್ನು ಕುಡಿಯುತ್ತೇನೆ;
೨೯ ಕಾಲ್ಕಡೆಯಾಗಿ ಹಾದು ಹೋಗುತ್ತೇನಷ್ಟೆ. ಸೇಯಿರಿನಲ್ಲಿ ವಾ
ಸ ಮಾಡುವ ಎಸಾವನ ಮಕ್ಕಳೂ, ಆರನಲ್ಲಿ ವಾಸ ಮಾಡುವ
ಮೋವಾಬ್ಯರೂ ನನಗೆ ಮಾಡಿದ ಹಾಗೆ ನಾನು ಯೊರ್ದನಿನ ಆ
ಚೆಗೆ ನಮ್ಮ ದೇವರಾದ ಕರ್ತನು ನಮಗೆ ಕೊಡುವ ದೇಶಕ್ಕೆ
೩೦ ಹೋಗುವ ಪರ್ಯಂತರ, ನನಗೆ ಮಾಡು. ಆದರೆ ಹೆಷ್ಬೋನಿ
ನ ಅರಸನಾದ ಸೀಹೋನನು ನಮ್ಮನ್ನು ತನ್ನ ಬಳಿಯಿಂದ
ದಾಟಗೊಡಿಸಲಿಕ್ಕೆ ಮನಸ್ಸಾಗಿರಲಿಲ್ಲ; ಯಾಕಂದರೆ, ಅವನ
ನ್ನು ನಿನ್ನ ಕೈಯಲ್ಲಿ ಬಪ್ಪಿಸುವ ಹಾಗೆ, ನಿನ್ನ ದೇವರಾದ
ಕರ್ತನು ಅವನ ಆತ್ಮವನ್ನು ಕಠಿಣ ಮಾಡಿ, ಅವನ ಹೃದಯ
ವನ್ನು ಘಟ್ಟಿ ಮಾಡಿದನೆಂದು, ಈಗಲೇ ಪ್ರಸಿದ್ಧವಾಗಿದೆ.

೩೧ ಇದಲ್ಲದೆ ಕರ್ತನು ನನಗೆ ಹೇಳಿದ್ದೇನಂದರೆ—ಇಗೋ, ಸೀ
ಹೋನನನ್ನೂ, ಅವನ ದೇಶವನ್ನೂ ನಿನ್ನ ಮುಂದೆ ಬಪ್ಪಿಸು
ವದಕ್ಕೆ ಆರಂಭ ಮಾಡಿದ್ದೇನೆ; ಅವನ ದೇಶವನ್ನು ಸ್ವಾಸ್ತ್ಯವಾ
ಗಿ ಹೊಂದುವ ಹಾಗೆ ಸ್ವತಂತ್ರಿಸಿ ಕೊಳ್ಳುವದಕ್ಕೆ ಆರಂಭ
೩೨ ಮಾಡು. ಆಗ ಸೀಹೋನನು ತನ್ನ ಜನರೆಲ್ಲರ ಸಂಗಡ ಯು
ದ್ಧಕ್ಕೆ, ಯಾಹಚೆನ ಸಮೀಪಕ್ಕೆ ನಮ್ಮೆದುರಿಗೆ ಹೊರಟನು.
೩೩ ನಮ್ಮ ದೇವರಾದ ಕರ್ತನು ಅವನನ್ನು ನಮ್ಮ ಮುಂದೆ ಕೊಟ್ಟು
ಬಿಟ್ಟಿದ್ದರಿಂದ, ಅವನನ್ನೂ, ಅವನ ಮಕ್ಕಳನ್ನೂ, ಅವನ ಜನ
೩೪ ರೆಲ್ಲರನ್ನೂ ಹೊಡೆದೆವು. ಆ ಕಾಲದಲ್ಲಿ ಅವನ ಪಟ್ಟಣಗಳನ್ನೆಲ್ಲಾ
ತಕ್ಕೊಂಡು, ಪಟ್ಟಣ ಪಟ್ಟಣದಲ್ಲಿ ಗಂಡಸರನ್ನೂ, ಹೆಂಗಸರನ್ನೂ,
ಚಿಕ್ಕವರನ್ನೂ, ಎಲ್ಲಾ ನಿರ್ಮೂಲ ಮಾಡಿ, ಒಬ್ಬರನ್ನೂ ಉಳಿ
೩೫ ಸಲಿಲ್ಲ. ಹಿಂಡುಗಳನ್ನು ಮಾತ್ರ ನಮಗೆ ಸುಲಕೊಂಡು, ಪಟ್ಟಣಗ
೩೬ ಳ್ಳೆಯನ್ನು ಹಿಡಿದೆವು. ಅರ್ನೋನಿನ ತೀರದಲ್ಲಿರುವ ಅ
ರೋವೆರೂ, ಆ ಹಳ್ಳದ ಪಟ್ಟಣವೂ, ಪೊದಲ್ಗೊಂಡು ಗಿಲ್ಯಾದಿನ
ಪರ್ಯಂತರಕ್ಕೂ ಒಂದು ಪಟ್ಟಣವಾದರೂ ನಮಗೆ ಅಸಾಧ್ಯವಾ
ಗಿರಲಿಲ್ಲ; ನಮ್ಮ ದೇವರಾದ ಕರ್ತನು ಅವುಗಳನ್ನೆಲ್ಲಾ ನಮ್ಮ
೩೭ ಮುಂದಾಗಿ ಕೊಟ್ಟು ಬಿಟ್ಟನು. ಅಮ್ಮೋನ್ಯರ ಮಕ್ಕಳ ದೇಶ
ಕ್ಕೂ, ಯಬ್ಬೊಕ ಹಳ್ಳದ ಯಾವದೊಂದು ಪಕ್ಕಕ್ಕೂ,
ಪರ್ವತ ಪಟ್ಟಣಗಳಿಗೂ, ನಮ್ಮ ದೇವರಾದ ಕರ್ತನು ನಮಗೆ
ಬೇಡಂದ ಯಾವ ಸ್ಥಳಕ್ಕೂ ಮಾತ್ರ ನೀನು ಹತ್ತರ ಬರಲಿಲ್ಲ.

## 3. ಸಂಧಿ.

೧ ಆಗ ನಾವು ತಿರುಗಿ ಕೊಂಡು, ಬಾಷಾನಿನ ಕಡೆಗೆ ಏರಿ ಹೋ
ದೆವು; ಆಗ ಬಾಷಾನಿನ ಅರಸನಾದ ಓಗನು ತನ್ನ ಎಲ್ಲಾ ಜನರ
ಸಂಗಡ ನಮ್ಮೆದುರಿಗೆ ಎದ್ರೈಗೆ ಯುದ್ಧ ಮಾಡುವದಕ್ಕೆ ಹೊರ
೨ ಟನು. ಕರ್ತನು ನನಗೆ ಹೇಳಿದ್ದೇನಂದರೆ—ಅವನಿಗೆ ಭಯ
ಪಡ ಬೇಡ; ಯಾಕಂದರೆ ಅವನನ್ನೂ, ಅವನ ಜನರೆಲ್ಲರನ್ನೂ,
ಅವನ ದೇಶವನ್ನೂ ನಿನ್ನ ಕೈಯಲ್ಲಿ ಬಪ್ಪಿಸುತ್ತೇನೆ; ನೀನು
ಹೆಷ್ಬೋನಿನಲ್ಲಿ ವಾಸವಾಗಿದ್ದ ಅಮೋರ್ಯರ ಅರಸನಾದ
3 ಸೀಹೋನನಿಗೆ ಮಾಡಿದ ಪ್ರಕಾರ ಅವನಿಗೆ ಮಾಡ ಬೇಕು. ಈ

ಪ್ರಕಾರ ನಮ್ಮ ದೇವರಾದ ಕರ್ತನು ಬಾಷಾನಿನ ಅರಸನಾದ
ಓಗನನೂಹ, ಅವನ ಜನರೆಲ್ಲರನೂಹ ಸಹ ನಮ್ಮ ಕೈಗಳಲ್ಲಿ
ಒಪ್ಪಿಸಿದನು; ಒಬ್ಬನಾದರೂ ತಪ್ಪಿಸಿ ಕೊಂಡು, ಅವನಿಗೆ ಉ
೪ ಳಿಯದೆ ಹೋಗುವ ಪರ್ಯಂತರ ಅವನನ್ನು ಹೊಡೆದೆವು. ಆ
ಕಾಲದಲ್ಲಿ ಅವನ ಪಟ್ಟಣಗಳನ್ನೆಲ್ಲಾ ಹಿಡಿದೆವು; ನಾವು ಅವರಿಂದ
ತಕ್ಕೊಳ್ಳದ ಪಟ್ಟಣವು ಇದ್ದಿಲ್ಲ. ಅರ್ಗೋಬಿನ ಸುತ್ತಲಿನ ದೇ
ಶವೆಲ್ಲಾ ಅರವತ್ತು ಪಟ್ಟಣಗಳು; ಇವೇ ಬಾಷಾನಿನಲ್ಲಿ ಓಗನ
೫ ರಾಜ್ಯವು. ಆ ಪಟ್ಟಣಗಳೆಲ್ಲಾ ಉದ್ದವಾದ ಗೋಡೆ, ಬಾಗಲು, ಲಾಳ
ವಂತಿಗೆಗಳಿಂದ ಭದ್ರವಾಗಿದ್ದವು; ಅವುಗಳಲ್ಲದೆ ಬೈಲು ಸೀಮೆಯ
೬ ಪಟ್ಟಣಗಳು ಬಹಳ ಇದ್ದವು. ನಾವು ಹೆಷ್ಬೋನಿನ ಅರಸನಾದ
ಸೀಹೋನನಿಗೆ ಮಾಡಿದ ಪ್ರಕಾರ ಅವುಗಳನ್ನೆಲ್ಲಾ ಶಾಪ ಕೊ
ಟ್ಟು ನಿರ್ಮೂಲ ಮಾಡಿದೆವು; ಗಂಡಸರನೂಹ, ಹೆಂಗಸರನೂಹ,
ಮಕ್ಕಳನೂಹ, ಪಟ್ಟಣದಲ್ಲಿ ಶಾಪ ಕೊಟ್ಟು ನಿರ್ಮೂಲ
೭ ಮಾಡಿದೆವು. ಆದರೆ ಎಲ್ಲಾ ಪಶುಗಳನೂಹ, ಪಟ್ಟಣಗಳ ಕೊಳ್ಳೆ
೮ ಯನೂಹ, ನಮಗೆ ಸುಲಿಗೆಯಾಗಿ ತಕ್ಕೊಂಡೆವು. ಆ ಕಾಲ
ದಲ್ಲಿ ನಾವು ಯೊರ್ದನಿನ ಈಚೆಯಲ್ಲಿ, ಅರ್ನೋನ ಹಳ್ಳದಿಂ
ದ ಹೆರ್ಮೋನ ಬೆಟ್ಟದ ಪರ್ಯಂತರವಿರುವ ದೇಶವನ್ನು ಅ
ಮೋರ್ಯರ ಇಬ್ಬರು ಅರಸರ ಕೈಯಿಂದ ತಕ್ಕೊಂಡೆವು.
೯ ಆ ಹೆರ್ಮೋನಿಗೆ ಸಿದೋನ್ಯರು ಶಿರಿಯೋನೆಂದೂ, ಅಮೋ
೧೦ ರ್ಯರು ಶೆನಿರೆಂದೂ, ಅನ್ನುತ್ತಾರೆ. ಬೈಲು ಸೀಮೆಯ
ಎಲ್ಲಾ ಪಟ್ಟಣಗಳನೂಹ, ಎಲ್ಲಾ ಗಿಲ್ಯಾದನೂಹ, ಬಾಷಾನಿನಲ್ಲಿ ಓ
ಗನ ರಾಜ್ಯದಲ್ಲಿ ಪಟ್ಟಣಗಳಾದ ಸಲ್ಕಾದ ಎದ್ರೈಯ ಪರ್ಯಂತರ
೧೧ ಎಲ್ಲಾ ಬಾಷಾನನೂಹ, ತಕ್ಕೊಂಡೆವು. ಯಾಕಂದರೆ ರಾಕ್ಷಸರ
ಉಳಿಹಿನಲ್ಲಿ ಬಾಷಾನಿನ ಅರಸನಾದ ಓಗನು ಮಾತ್ರ ಉಳಿದ
ನು; ಅಗೋ, ಅವನ ಮಂಚವು ಕಬ್ಬಿಣದ ಮಂಚ; ಅದು
ಅಮ್ಮೋನನ ಮಕ್ಕಳ ರಬ್ಬಾತಿನಲ್ಲಿ ಉಂಟಲ್ಲವೋ! ಅದರ ಉ
ದ್ದವು ಪುರುಷನ ಕೈಯಳತೆಯ ಪ್ರಕಾರ ಒಂಭತ್ತು ಮೊಳ, ಅಗ
ಲವು ನಾಲ್ಕು ಮೊಳ.

೧೨ ಆ ಕಾಲದಲ್ಲಿ ನಾವು ಸ್ವತಂತ್ರಿಸಿ ಕೊಂಡ ದೇಶವನ್ನು, ಅ
ರ್ನೋನ್ ಹಳ್ಳದ ಸಮೀಪದಲ್ಲಿರುವ ಅರೋಯೆರಿನಿಂದ ಮೊದ
ಲ್ಗೊಂಡು ಅರ್ಧ ಗಿಲ್ಯಾದ ಬೆಟ್ಟವನೂಹ, ಅದರ ಪಟ್ಟಣಗಳ
೧೩ ನೂಹ, ರೂಬೆನನ ವರಿಗೂ ಗಾದನ ವರಿಗೂ ಕೊಟ್ಟೆನು. ಮತ್ತು
ಮಿಕ್ಕ ಗಿಲ್ಯಾದನೂಹ, ಓಗನ ರಾಜ್ಯವಾದ ಎಲ್ಲಾ ಬಾಷಾನ
ನೂಹ, ಮನಸ್ಸೆಯ ಅರ್ಧ ಕುಲಕ್ಕೆ ಕೊಟ್ಟೆನು; ಅರ್ಗೋಬಿ
ನ ಸಮಸ್ತ ಶೀಮೆಯನೂಹ, ರಾಕ್ಷಸರ ದೇಶವೆಂದು ಹೇಳಲ್ಪಟ್ಟ
೧೪ ಸಮಸ್ತ ಬಾಷಾನನೂಹ ಅವರಿಗೆ ಕೊಟ್ಟೆನು. ಮನಸ್ಸೆಯ ಪುಗ
ನಾದ ಯಾಯಿರನು ಅರ್ಗೋಬಿನ ದೇಶವನ್ನೆಲ್ಲಾ ಗೆದೂ
ರ್ಯರ, ಮಾಕಾತ್ಯರ ಮೇರೆಯ ಪರ್ಯಂತರ ತಕ್ಕೊಂಡು,
ಆ ಬಾಷಾನಿಗೆ ತನ್ನ ಹೆಸರಿನ ಪ್ರಕಾರ ಇಂದಿನ ವರಿಗೂ ಹ
೧೫ ವ್ವೋತ್ ಯಾಯಿರೆಂದು ಹೆಸರಿಟ್ಟನು. ಮತ್ತು ಗಿಲ್ಯಾದನ್ನು
೧೬ ಮಾಕೀರಿಗೆ ಕೊಟ್ಟೆನು. ಮತ್ತು ರೂಬೆನನ ವರಿಗೂ, ಗಾದನ ವ
ರಿಗೂ, ಗಿಲ್ಯಾದು ಮೊದಲ್ಗೊಂಡು ಅರ್ನೋನ್ ಹಳ್ಳದ
೧೭ ಪರ್ಯಂತರ ಕೊಟ್ಟೆನು. ಮತ್ತು ಬೈಲನೂಹ, ಯೊರ್ದನ
ನೂಹ, ಅದರ ಶೀಮೆಯನೂಹ, ಕಿನೆರೆತ ಮೊದಲ್ಗೊಂಡು ಪೂ
ರ್ವದಲ್ಲಿರುವ ಅಸ್ಡೋದ್ ಪಿಸ್ಗದ ಕೆಳಗಿರುವ ಉಪ್ಪಿನ ಸಮು
೧೮ ದ್ರವಾದ ಬೈಲು ಸಮುದ್ರದ ಪರ್ಯಂತರ ಕೊಟ್ಟೆನು. ಆ ಕಾ
ಲದಲ್ಲಿ ನಾನು ನಿಮಗೆ ಆಜ್ಞಾಪಿಸಿದ್ದೇನಂದರೆ—ನಿಮ್ಮ ದೇವರಾದ
ಕರ್ತನು ನಿಮಗೆ ಈ ದೇಶವನ್ನು ಸ್ವಾಸ್ತ್ಯವಾಗಿ ಕೊಟ್ಟಿದ್ದಾನೆ;
ಯುದ್ಧಸ್ಥರಾಗಿರುವ ನೀವೆಲ್ಲರು ನಿಮ್ಮ ಸಹೋದರರಾದ ಇಸ್ರ
ಯೇಲ್ ಮಕ್ಕಳ ಮುಂದೆ ಆಯುಧ ಧರಿಸಿ ಕೊಂಡು, ಹಾದು
೧೯ ಹೋಗ ಬೇಕು. ನಿಮ್ಮ ಹೆಂಡರೂ, ಮಕ್ಕಳೂ, ದನಗಳೂ,
ಮಾತ್ರ—ನಿಮಗೆ ಬಹಳ ದನಗಳೆಂದು ನನಗೆ ಶಿಳಿಯಿತಲ್ಲ!
೨೦ ಕರ್ತನು ನಿಮಗಾದ ಹಾಗೆ ನಿಮ್ಮ ಸಹೋದರರಿಗೂ, ಶಾಂತಿ
ಕೊಡುವ ಪರ್ಯಂತರಕ್ಕೂ, ನಿಮ್ಮ ದೇವರಾದ ಕರ್ತನು ಯೊ
ರ್ದನಿನ ಆಚೆಯಲ್ಲಿ ಅವರಿಗೆ ಕೊಟ್ಟ ದೇಶವನ್ನು ಅವರು
ಸ್ವತಂತ್ರಿಸಿ ಕೊಳ್ಳುವ ಪರ್ಯಂತರ, ನಾನು ನಿಮಗೆ ಕೊಟ್ಟ
ಪಟ್ಟಣಗಳಲ್ಲಿ ವಾಸವಾಗಿರ ಬೇಕು; ಆ ಮೇಲೆ ನಾನು ನಿಮಗೆ ಕೊಟ್ಟ
ನಿಮ್ಮ ನಿಮ್ಮ ಸ್ವಾಸ್ತ್ಯಗಳಿಗೆ ತಿರುಗ ಬಹುದು.

೨೧ ಆ ಕಾಲದಲ್ಲಿ ನಾನು ಯೆಹೋಶುವನಿಗೆ ಆಜ್ಞಾಪಿಸಿದ್ದೇನಂ
ದರೆ—ನಿಮ್ಮ ಕರ್ತನಾದ ದೇವರು ಆ ಇಬ್ಬರು ಅರಸರಿಗೆ
ಮಾಡಿದ್ದನ್ನೆಲ್ಲಾ ನಿನ್ನ ಕಣ್ಣುಗಳು ನೋಡಿದವು. ನೀನು ಹಾದು
ಹೋಗುವ ಎಲ್ಲಾ ರಾಜ್ಯಗಳಿಗೆ ಕರ್ತನು ಹಾಗೆ ಮಾಡುವನು.
೨೨ ನೀವು ಅವುಗಳಿಗೆ ಭಯ ಪಡ ಬೇಡಿರಿ; ಯಾಕಂದರೆ ನಿಮ್ಮ ದೇ
ವರಾದ ಕರ್ತನು ಅವನೇ ನಿಮಗೋಸ್ಕರ ಯುದ್ಧ ಮಾಡು
ತ್ತಾನೆ.

೨೩ ಆ ಕಾಲದಲ್ಲಿ ನಾನು ಕರ್ತನಿಗೆ ಮಾಡಿದ ಬಿನ್ನಹವೇನಂದ
೨೪ ರೆ—ನನ್ನ ಕರ್ತನಾದ ಯೆಹೋವನೇ, ನೀನು ನಿನ್ನ ಸೇವಕ
ನಿಗೆ ನಿನ್ನ ಮಹಿಮೆಯನೂಹ, ನಿನ್ನ ಬಲವಾದ ಕೈಯನೂಹ,
ತೋರಿಸುವದಕ್ಕೆ ಆರಂಭ ಮಾಡಿದಿ; ನಿನ್ನ ಕೃತ್ಯಗಳ ಹಾಗ
ಯೂ, ನಿನ್ನ ಪರಾಕ್ರಮದ ಹಾಗೆಯೂ, ಮಾಡ ಶಕ್ತನಾದ ದೇ
ವರು ಆಕಾಶದಲ್ಲಾದರೂ ಭೂಮಿಯಲ್ಲಾದರೂ, ಯಾರು! ನಾ
೨೫ ನು ದಾಟಿ ಹೋಗಿ, ಯೊರ್ದನಿನ ಆಚೆಯಲ್ಲಿರುವ ಆ ಒಳ್ಳೇ
ದೇಶವನೂಹ, ಆ ಒಳ್ಳೇ ಬೆಟ್ಟವನೂಹ, ಲೆಬನೋನನೂಹ,
೨೬ ನೋಡುವದಕ್ಕೆ ಅಪ್ಪಣೆಯಾಗ ಬೇಕು. ಆದರೆ ಕರ್ತನು ನಿ
ಮಗೋಸ್ಕರ ನನ್ನ ಮೇಲೆ ಕೋಪ ಮಾಡಿ, ನನ್ನನು ಕೇಳಲಿ
ಲ್ಲ; ಕರ್ತನು ನನಗೆ ಹೇಳಿದ್ದೇನಂದರೆ—ನಿನಗೆ ಸಾಕು; ಈ ವಿ
೨೭ ಷಯದಲ್ಲಿ ನನ್ನ ಸಂಗತಿ ಇನ್ನೂ ಮಾತಾಡ ಬೇಡ. ಪಿಸ್ಗದ
ತುದಿಗೆ ಏರಿ, ಪಶ್ಚಿಮಕ್ಕೂ, ಉತ್ತರಕ್ಕೂ, ದಕ್ಷಿಣಕ್ಕೂ, ಪೂ
ರ್ವಕ್ಕೂ, ಕಣ್ಣುಗಳನೆತ್ತಿ, ಅದನ್ನು ಕಣ್ಣಾರೆ ನೋಡು; ಆ
೨೮ ದರೆ ಈ ಯೊರ್ದನನ್ನು ನೀನು ದಾಟಿ ಹೋಗುವದಿಲ್ಲ. ಆದರೆ
ಯೆಹೋಶುವನಿಗೆ ಆಜ್ಞಾಪಿಸಿ, ಅವನಿಗೆ ಧೃಢ ಮಾಡಿ, ಬಲ ಪಡಿ
ಸು; ಯಾಕಂದರೆ ಅವನು ಈ ಜನರ ಮುಂದೆ ದಾಟಿ ಹೋಗಿ,
ನೀನು ನೋಡುವ ದೇಶವನ್ನು ಅವರಿಗೆ ಸ್ವಾಸ್ತ್ಯವಾಗಿ ಪಾಲಿಸು
೨೯ ವನು. ಹಾಗೆ ಬೇತ್ಪೆಯೋರಿಗೆ ಎದುರಾಗಿರುವ ತಗ್ಗಿನಲ್ಲಿ ವಾಸ
ವಾಗಿದ್ದೆವು.

## ೪. ಸಂಧಿ.

೧ ಹೀಗಿರುವದರಿಂದ ಈಗ ಇಸ್ರಯೇಲೇ, ನೀವು ಬದುಕಿ, ನಿಮ್ಮ
ಪಿತೃಗಳ ದೇವರಾದ ಕರ್ತನು ನಿಮಗೆ ಕೊಡುವ ದೇಶವನ್ನು
ಪ್ರವೇಶಿಸಿ, ಸ್ವತಂತ್ರಿಸಿ ಕೊಳ್ಳುವ ಹಾಗೆ, ನಾನು ನಿಮಗೆ ಬೋ



೨ ಧಿಸುವ ನೇಮಗಳನೂಹ, ನ್ಯಾಯಗಳನೂಹ ಕೇಳಿ, ಮಾಡಿರಿ.
ನಾನು ನಿಮಗೆ ಆಜ್ಞಾಪಿಸುವ ವಾಕ್ಯದ ಸಂಗತಿ ಎನೂ ಕೂಡಿಸ
ಬೇಡಿರಿ; ಅದರಿಂದ ಏನೂ ಕಳಿಯ ಬೇಡಿರಿ; ನಾನು ನಿಮಗೆ ಆ
ಜ್ಞಾಪಿಸುವಂಥ ನಿಮ್ಮ ದೇವರಾದ ಕರ್ತನ ಆಜ್ಞೆಗಳನ್ನು ಕೈ
೩ ಕೊಳ್ಳ ಬೇಕು. ಬಾಳಿಪೆಯೋರನ ವಿಷಯದಲ್ಲಿ ಕರ್ತನು ಮಾ
ಡಿದವುಗಳನ್ನು ನಿಮ್ಮ ಕಣ್ಣುಗಳು ನೋಡಿದವು; ಬಾಳಿಪೆಯೋ
ರನನ್ನು ಹಿಂಬಾಲಿಸಿದ ಮನುಷ್ಯರನ್ನೆಲ್ಲಾ ನಿನ್ನ ದೇವರಾದ ಕ
೪ ರ್ತನು ನಿನ್ನ ಮಧ್ಯದಲ್ಲಿಂದ ನಾಶನ ಮಾಡಿದನಲ್ಲ! ಆದರೆ
ನಿಮ್ಮ ದೇವರಾದ ಕರ್ತನಿಗೆ ಹತ್ತಿದವರಾದ ನೀವು, ನೀವೆಲ್ಲರು
ಇಂದು ಬದುಕುತ್ತೀರಿ;

೫ ಇಗೋ, ನೀವು ಹೋಗಿ, ಸ್ವತಂತ್ರಿಸಿ ಕೊಳ್ಳುವ ದೇಶದಲ್ಲಿ
ನೀವು ಮಾಡ ಬೇಕೆಂದು, ನನ್ನ ದೇವರಾದ ಕರ್ತನು ನನಗೆ ಆ
ಜ್ಞಾಪಿಸಿದಂತೆ ನೇಮಗಳನ್ನೂ ನ್ಯಾಯಗಳನ್ನೂ ನಿಮಗೆ ಬೋ
೬ ಧಿಸಿದ್ದೇನೆ. ಹೀಗಿರುವದರಿಂದ ನೀವು ಕೈ ಕೊಂಡು ಮಾಡಿರಿ;
ಯಾಕಂದರೆ ಜನಾಂಗಗಳಿಗೆದುರಾಗಿ ಇದೇ ನಿಮ್ಮ ಜ್ಞಾನವೂ ನಿ
ಮ್ಮ ವಿವೇಕವೂ; ಅವು ಈ ನೇಮಗಳನ್ನೆಲ್ಲಾ ಕೇಳಿ—ನಿಶ್ಚಯ
ವಾಗಿ ಈ ದೊಡ್ಡ ಜನಾಂಗವು ಜ್ಞಾನವೂ ವಿವೇಕವೂ ಉಳ್ಳ ಜ
೭ ನವಾಗಿದೆ, ಅನ್ನುವರು. ಯಾಕಂದರೆ ನಾವು ಅವನನ್ನು ಕ
ರೆಯುವ ಎಲ್ಲಾ ವಿಷಯಗಳಲ್ಲಿ ನಮ್ಮ ದೇವರಾದ ಕರ್ತನು
ನಮಗಿರುವ ಪ್ರಕಾರ ಸಮೀಪವಾದ ದೇವರುಳ್ಳ ದೊಡ್ಡ ಜನಾಂ
೮ ಗ ಯಾವದು! ಇದಲ್ಲದೆ ನಾನು ಈ ಹೊತ್ತು ನಿಮ್ಮ ಮುಂದೆ ಇ
ರುವ ಈ ಎಲ್ಲಾ ನ್ಯಾಯಪ್ರಮಾಣದ ಪ್ರಕಾರ ನೀತಿಯುಳ್ಳ
ನೇಮ ನ್ಯಾಯಗಳುಳ್ಳ ದೊಡ್ಡ ಜನಾಂಗ ಯಾವದು!

೯ ನಿನ್ನ ಕಣ್ಣುಗಳು ನೋಡಿದ ಕಾರ್ಯಗಳನ್ನು ನೀನು ಮ
ರೆಯದ ಹಾಗೆಯೂ, ನೀನು ಬದುಕುವ ದಿನಗಳೆಲ್ಲಾ ಅವು ನಿ
ನ್ನ ಹೃದಯಕ್ಕೆ ದೂರವಾಗದ ಹಾಗೆಯೂ, ಕೇವಲ ಜಾಗ್ರತೆ
ಯಾಗಿದ್ದು, ನಿನ್ನ ಪ್ರಾಣವನ್ನು ಬಹಳವಾಗಿ ಕಾಪಾಡು; ಅವು
ಗಳನ್ನು ನಿನ್ನ ಮಕ್ಕಳಿಗೂ ನಿನ್ನ ಮಕ್ಕಳ ಮಕ್ಕಳಿಗೂ ಬೋ
೧೦ ಧಿಸು. ನೀನು ಹೋರೆಬಿನಲ್ಲಿ ಕರ್ತನ ಮುಂದೆ ನಿಂತ ದಿವಸ
ಉಂಟಲ್ಲ? ಆಗ ಕರ್ತನು ನನಗೆ ಹೇಳಿದ್ದೇನಂದರೆ—ಜನರ
ನ್ನು ನನಗೆ ಕೂಡಿಸು; ಅವರು ಭೂಮಿಯ ಮೇಲೆ ಬದುಕುವ ದಿ
ವಸಗಳೆಲ್ಲಾ ನನಗೆ ಭಯ ಪಡುವದನ್ನು ಕಲಿತು, ತಮ್ಮ ಮಕ್ಕ
ಳಿಗೂ ಬೋಧಿಸುವ ಹಾಗೆ ಅವರಿಗೆ ನನ್ನ ವಾಕ್ಯಗಳನ್ನು ಕೇಳ
೧೧ ಕೊಡುವೆನು. ಆಗ ನೀವು ಹತ್ತರ ಬಂದು, ಬೆಟ್ಟದ ಕೆಳಗೆ ನಿಂ
ತಿರಿ; ಆ ಬೆಟ್ಟವು, ಕತ್ತಲೆಯೂ ಮೇಘಗಳೂ ಗಾಢಾಂಧಕಾರ
ವೂ ಉಂಟಾಗಿ ಆಕಾಶ ಮಧ್ಯದ ಪರ್ಯಂತರ ಬೆಂಕಿಯಿಂದ
೧೨ ಉರಿಯುತ್ತಿತ್ತು. ಬೆಂಕಿಯ ಮಧ್ಯದೊಳಗಿಂದ ಕರ್ತನು ನಿ
ಮ್ಮ ಸಂಗತಿ ಮಾತಾಡಿದನು; ವಾಕ್ಯಗಳ ಶಬ್ದವನ್ನು ನೀವು ಕೇ
ಳಿದಿರಿ; ಆದರೆ ಆಕಾರವನ್ನು ನೋಡಲಿಲ್ಲ; ಶಬ್ದವನ್ನು ಮಾತ್ರ
೧೩ ಕೇಳಿದಿರಿ. ಅವನು ಹತ್ತು ವಾಕ್ಯಗಳೆಂಬ ತನ್ನ ಬಡಬಡಿಕೆಯ
ನ್ನು ನಿಮಗೆ ಶಿಳಿಸಿ, ಅದನ್ನು ಮಾಡ ಬೇಕೆಂದು ನಿಮಗೆ ಆಜ್ಞಾ
ಪಿಸಿ, ಅವುಗಳನ್ನು ಕಲ್ಲಿನ ಎರಡು ಹಲಿಗೆಗಳ ಮೇಲೆ ಬರೆದನು.
೧೪ ನೀವು ದಾಟಿ ಹೋಗಿ, ಸ್ವತಂತ್ರಿಸಿ ಕೊಳ್ಳುವ ದೇಶದಲ್ಲಿ ಮಾ
ಡ ತಕ್ಕ ನೇಮ ನ್ಯಾಯಗಳನ್ನು ನಿಮಗೆ ಬೋಧಿಸ ಬೇಕೆಂದು,
ಆಗಲೇ ಕರ್ತನು ನನಗೆ ಆಜ್ಞಾಪಿಸಿದನು.

೧೫ ಆದದರಿಂದ ನಿಮ್ಮ ಪ್ರಾಣಗಳಲ್ಲಿ ಬಹಳ ಜಾಗ್ರತೆಯಾಗಿ
ರಿ; ಕರ್ತನು ಹೋರೆಬಿನಲ್ಲಿ ಬೆಂಕಿಯೊಳಗಿಂದ ನಿಮ್ಮ ಸಂಗ
ತಿ ಮಾತಾಡಿದಾಗ, ನೀವು ಯಾವ ಆಕಾರವನ್ನೂ ನೋಡಿಲ್ಲವ
೧೬ ಲ್ಲ! ನೀವು ಕೆಟ್ಟು ಹೋಗಿ, ನಿಮಗೆ ಯಾವದೊಂದು ಆಕಾರ
ದ ರೂಪವಾದ ವಿಗ್ರಹವನ್ನೂ, ಗಂಡು ಇಲ್ಲವೆ ಹೆಣ್ಣು ಹೋಲಿ
೧೭ ಕೆಯನ್ನೂ, ಭೂಮಿಯ ಮೇಲಿರುವ ಯಾವದೊಂದು ಮೃಗದ
ಹೋಲಿಕೆಯನ್ನೂ, ಆಕಾಶದಲ್ಲಿ ಹಾರುವಂಥ ಕೆಕ್ಕಯುಳ್ಳ
ಯಾವದೊಂದು ಪಕ್ಷಿಯ ಹೋಲಿಕೆಯನ್ನೂ, ಭೂಮಿಯ ಮೇ
೧೮ ಲೆ ಹರದಾಡುವಂಥ ಯಾವದೊಂದರ ಹೋಲಿಕೆಯನ್ನೂ, ಭೂ
ಮಿಯ ಕೆಳಗಿನ ನೀರುಗಳಲ್ಲಿರುವ ಯಾವದೊಂದು ಮೀನಿನ
೧೯ ಹೋಲಿಕೆಯನ್ನೂ, ಮಾತಾಡ ಹಾಗೆಯೂ, ನೀನು ನಿನ್ನ ಕ
ಣ್ಣುಗಳನ್ನು ಆಕಾಶಕ್ಕೆ ಎತ್ತಿ, ಸೂರ್ಯ, ಚಂದ್ರ, ನಕ್ಷತ್ರಗ
ಳೆಂಬ ಆಕಾಶ ಸೈನ್ಯವನ್ನೆಲ್ಲಾ ನೋಡಲಾಗಿ, ನಿನ್ನ ದೇವರಾದ
ಕರ್ತನು ಆಕಾಶದೊಳಗಿರುವ ಎಲ್ಲಾ ಜನಾಂಗಗಳಿಗೆ ಹಂಚಿ
ಕೊಟ್ಟ ಇವುಗಳಿಗೆ ಅಡ್ಡ ಬಿದ್ದು, ಇವುಗಳನ್ನು ಸೇವಿಸುವದಕ್ಕೆ
೨೦ ಮೋಸ ಹೋಗದ ಹಾಗೆಯೂ, ನೋಡಿ ಕೊಳ್ಳಿರಿ. ನಿಮ್ಮನ್ನೋ
ಕರ್ತನು ತಕ್ಕೊಂಡು, ನೀವು ಇಂದು ಇರುವ ಪ್ರಕಾರ ತನಗೆ
ಸ್ವಾಸ್ತ್ಯವಾದ ಜನವಾಗುವ ಹಾಗೆ ಐಗುಪ್ತದಿಂದ, ಕಬ್ಬಿಣದ ಒ
ಲೆಯೊಳಗಿಂದ, ಹೊರಗೆ ಬರ ಮಾಡಿದ್ದಾನೆ.

೨೧ ನಾನು ಯೊರ್ದನಿನ ಆಚೆಗೆ ಹೋಗದ ಹಾಗೆಯೂ, ನಿ
ನ್ನ ದೇವರಾದ ಕರ್ತನು ನಿನಗೆ ಸ್ವಾಸ್ತ್ಯವಾಗಿ ಕೊಡುವ ಒ
ಳ್ಳೇ ದೇಶದಲ್ಲಿ ಪ್ರವೇಶಿಸದ ಹಾಗೆಯೂ, ನಿಮ್ಮ ನಿಮಿತ್ತ ಕರ್ತ
ನು ನನ್ನ ಮೇಲೆ ಕೋಪ ಮಾಡಿ, ಪ್ರಮಾಣ ಮಾಡಿದನು.
೨೨ ನಾನು ಈ ದೇಶದಲ್ಲಿ ಸಾಯುತ್ತೇನೆ. ಯೊರ್ದನಿನ ಆಚೆಗೆ
ಹೋಗುವದಿಲ್ಲ; ಆದರೆ ನೀವು ಆಚೆಗೆ ಹೋಗಿ, ಆ ಒಳ್ಳೇ
ದೇಶವನ್ನು ಸ್ವತಂತ್ರಿಸಿ ಕೊಳ್ಳುವಿರಿ.

೨೩ ನಿಮ್ಮ ದೇವರಾದ ಕರ್ತನು ನಿಮ್ಮ ಸಂಗತಿ ಮಾಡಿದ ಒಡಂ
ಬಡಿಕೆಯನ್ನು ಮರೆತು, ನಿನ್ನ ದೇವರಾದ ಕರ್ತನು ಬೇಡೆಂದ
ಯಾವದೊಂದರ ರೂಪದ ವಿಗ್ರಹವನ್ನು ಮಾಡಿ ಕೊಳ್ಳದ ಹಾ
೨೪ ಗೆ ಜಾಗ್ರತೆಯಾಗಿರ್ರಿ. ಯಾಕಂದರೆ ನಿನ್ನ ದೇವರಾದ ಕರ್ತ
ನು ದಹಿಸುವ ಅಗ್ನಿಯೂ, ಕೋಪವುಳ್ಳ ದೇವರೂ, ಆಗಿ
ದ್ದಾನೆ.

೨೫ ನೀನು ಮಕ್ಕಳನ್ನೂ, ಮೊಮ್ಮಕ್ಕಳನ್ನೂ ಹುಟ್ಟಿಸಿದ ಮೇ
ಲೆ, ನೀವು ಬಹು ಕಾಲ ದೇಶದಲ್ಲಿ ಇದ್ದ ಮೇಲೆ, ನೀವು ಕೆಟ್ಟದ್ದ
ನ್ನು ಮಾಡಿ, ಯಾವದೊಂದರ ರೂಪವಾದ ವಿಗ್ರಹವನ್ನು ಮಾ
ಡಿ, ನಿನ್ನ ದೇವರಾದ ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾ
೨೬ ಡಿ, ಅವನಿಗೆ ಕಠಕಠೆ ಎಬ್ಬಿಸಿದರೆ, ನಾನು ಇಂದು ಆಕಾಶವ
ನ್ನೂ ಭೂಮಿಯನ್ನೂ ಸಾಕ್ಷಿಗೆ ಕರೆದು, ನಿಮಗೆ ಹೇಳುವದೇ
ನಂದರೆ—ನೀವು ಯೊರ್ದನನ್ನು ದಾಟಿ, ಸ್ವತಂತ್ರಿಸಿ ಕೊಳ್ಳು
ವ ದೇಶದಲ್ಲಿಂದ ಬೇಗನೇ ಹಾಳಾಗಿ ಹೋಗುವಿರಿ. ನಿಮ್ಮ
೨೭ ದಿವಸಗಳು ಅದರಲ್ಲಿ ಬಹಳವಾಗುವದಿಲ್ಲ, ನಶಿಸೇ ನಶಿಸುವಿರಿ.
ಆಗ ಕರ್ತನು ನಿಮ್ಮನ್ನು ಜನಾಂಗಗಳಲ್ಲಿ ಚದರಿಸುವನು; ಕರ್ತ
ನು ನಿಮ್ಮನ್ನು ನಡಿಸುವಲ್ಲಿ, ಜನಗಳ ಮಧ್ಯದಲ್ಲಿ ಸ್ವಲ್ಪ ಮಂ
೨೮ ದಿಯಾಗಿ ಉಳಿಯುವಿರಿ. ಅಲ್ಲಿ ನೀವು ಮನುಷ್ಯರ ಕೈ ಕೆಲ
ಸಗಳಾದಂಥ, ನೋಡದೆ, ಕೇಳದೆ, ಉಣ್ಣದೆ, ಮೂಸಿ ನೋಡದೆ

ಇರುವಂಥ, ಮರ ಕಲ್ಲುಗಳಾದಂಥ, ದೇವರುಗಳನ್ನೂ, ಸೇವಿಸುವಿರಿ.

೫ ಆದರೆ ಅಲ್ಲಿಂದ ನಿನ್ನ ದೇವರಾದ ಕರ್ತನನ್ನು ಹುಡುಕಿದರೆ, ಅವನನ್ನು ನಿನ್ನ ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ ಹುಡುಕಿದರೆ, ಅವನನ್ನು ಕೊರಕಿನಿ ಕೊಳ್ಳುವಿ. ನಿನಗೆ ಇಕ್ಕಟ್ಟು ಇರುವಾಗ, ಈ ಮಾತುಗಳೆಲ್ಲಾ ನಿನಗೆ ಸಂಭವಿಸಿದಾಗ, ಕಡೇ ದಿವಸಗಳಲ್ಲಿ ನಿನ್ನ ದೇವರಾದ ಕರ್ತನ ಕಡೆಗೆ ತಿರುಗಿ ಕೊಂಡು, ಅವನ ಮಾತನ್ನು ಕೇಳಿದರೆ, ನಿಶ್ಚಯವಾಗಿ ನಿನ್ನ ದೇವರಾದ ಕರ್ತನು ಕರುಣೆಯುಳ್ಳ ದೇವರೇ; ಅವನು ನಿನ್ನನ್ನು ಬಿಡುವದಿಲ್ಲ; ಕೆಡಿಸುವದಿಲ್ಲ; ನಿನ್ನ ಪಿತ್ರುಗಳಿಗೆ ಪ್ರಮಾಣ ಮಾಡಿದ ಒಡಂಬಡಿಕೆಯನ್ನು ಮರೆಯುವದಿಲ್ಲ.

೩೨ ನಿನ್ನ ಮುಂದೆ ಇದ್ದ ಪೂರ್ವ ದಿವಸಗಳನ್ನು, ದೇವರು ಭೂಮಿಯ ಮೇಲೆ ಮನುಷ್ಯನನ್ನು ಸೃಷ್ಟಿಸಿದಂದಿನಿಂದ ವಿಚಾರಿಸು, ಆಕಾಶದ ಈ ಕಡೆಯಿಂದ ಅದರ ಆ ಕಡೆಯ ವರೆಗೂ, ವಿಚಾರಿಸು; ಇದರಂಥೆ ದೊಡ್ಡ ಕಾರ್ಯ ಉಂಟಾಯಿತೇ! ಇದರಂತೆ ಕೇಳಲ್ಪಟ್ಟಿತೇ! ನೀನು ಕೇಳಿದಂತೆ, ಬೆಂಕಿಯೊಳಗಿಂದ ಮಾತಾಡುವ ದೇವರ ಶಬ್ದವನ್ನು ಕೇಳಿ, ಬದುಕಿದ ಜನ ಉಂಟೇ! ಇಲ್ಲವೆ ನಿಮ್ಮ ದೇವರಾದ ಕರ್ತನು ಐಗುಪ್ತದಲ್ಲಿ ನಿನ್ನ ಕಣ್ಣುಗಳ ಮುಂದೆ ನಿಮಗೆ ಮಾಡಿದ್ದೆಲ್ಲಾದರ ಹಾಗೆ, ದೇವರು ಬಂದು, ಬಂದು ಜನಾಂಗವನ್ನು ಮತ್ತೊಂದು ಜನಾಂಗದ ಮಧ್ಯದಿಂದ ಶೋಧನೆ, ಗುರುತು, ಅತ್ಯಾಶ್ಚರ್ಯಗಳ ಮೂಲವಾಗಿಯೂ, ಬಲವಾದ ಕೈಯಿಂದಲೂ, ಚಾಚಿದ ತೋಳಿನಿಂದಲೂ, ದೊಡ್ಡ ಭಯಗಳಿಂದಲೂ, ತಕ್ಕೊಳ್ಳುವದಕ್ಕೆ ಪ್ರಯತ್ನ ಮಾಡಿದನೋ! ಯೆಹೋವನೇ ದೇವರೆಂದು, ನೀನು ತಿಳಿಯ ಕೊಳ್ಳುವ ಹಾಗೆ, ಅವು ನಿನಗೆ ತೋರಿಸಲ್ಪಟ್ಟವು; ಅವನಲ್ಲದೆ, ಮತ್ತೊಬ್ಬನಿಲ್ಲ. ಅವನು ನಿನ್ನನ್ನು ಶಿಕ್ಷಿಸುವ ಹಾಗೆ ಆಕಾಶದೊಳಗಿಂದ ತನ್ನ ಶಬ್ದವನ್ನು ನಿನಗೆ ಕೇಳ್ಪಡಿಸಿದನು; ಭೂಮಿಯ ಮೇಲೆ ತನ್ನ ದೊಡ್ಡ ಬೆಂಕಿಯನ್ನು ನಿನಗೆ ತೋರಿಸಿದನು; ಬೆಂಕಿಯೊಳಗಿಂದ ಅವನ ಮಾತುಗಳನ್ನು ಕೇಳ್ದಿ. ಅವನು ನಿನ್ನ ಪಿತೃಗಳನ್ನು ಪ್ರೀತಿ ಮಾಡಿದ್ದರಿಂದ ಅವರ ತರುವಾಯ ಅವರ ಬೀಜವನ್ನು ಆದು ಕೊಂಡು, ನಿನ್ನನ್ನು ತನ್ನ ಸಮುಖದಲ್ಲಿ ತನ್ನ ದೊಡ್ಡ ಬಲದಿಂದ ಐಗುಪ್ತದೊಳಗಿಂದ ಹೊರಗೆ ಬರ ಮಾಡಿದನು. ನಿನಗಿಂತ ದೊಡ್ಡವಾದ, ನಿನಗಿಂತ ಬಲಿಷ್ಠವಾದ, ಜನಾಂಗಗಳನ್ನು ನಿನ್ನ ಮುಂದೆ ಓಡಿಸಿ, ನಿನ್ನನ್ನು ಪ್ರವೇಶಿಸ ಮಾಡಿ, ಇಂದು ಆಗುವಂತೆ ನಿನಗೆ ಅವರ ದೇಶವನ್ನು ಸ್ವಾಸ್ತ್ಯವಾಗಿ ಕೊಡುವ ಹಾಗೆಯೇ.

೩೯ ಹೀಗಿರುವದರಿಂದ ಮೇಲಿನ ಆಕಾಶದಲ್ಲಿಯೂ, ಕೆಳಗಿನ ಭೂಮಿಯಲ್ಲಿಯೂ ಯೆಹೋವನೇ ದೇವರೆಂದೂ, ಮತ್ತೊಬ್ಬನಿಲ್ಲವೆಂದೂ, ಈ ಹೊತ್ತು ತಿಳಿಯ ಕೊಂಡು, ಮನಸ್ಸಿಗೆ ತಾ. ನಿನಗೂ, ನಿನ್ನ ತರುವಾಯ ನಿನ್ನ ಮಕ್ಕಳಿಗೂ, ಒಳ್ಳೇದಾಗುವ ಹಾಗೆಯೂ, ನಿನ್ನ ದೇವರಾದ ಕರ್ತನು ನಿನಗೆ ಸದಾ ಕಾಲಕ್ಕೆ ಕೊಡುವ ಭೂಮಿಯ ಮೇಲೆ ನೀನು ಬಹಳ ದಿವಸವಿರುವ ಹಾಗೆಯೂ, ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಅವನ ನೇಮಗಳನ್ನೂ, ಆಜ್ಞೆಗಳನ್ನೂ, ಕಾಪಾಡು.

೪೦ ಆಗ ಮೋಶೆ ಯೊರ್ದನಿನ ಈಚೆಯಲ್ಲಿ, ಮೂಡಣ ದೇಶದ
೪೧ ಲ್ಲಿ, ಮೂರು ಪಟ್ಟಣಗಳನ್ನು ಪ್ರತ್ಯೇಕ ಮಾಡಿದನು. ಶಿಳಿಯದೆ, ಮುಂಚೆ ಹಗೆ ಮಾಡದೆ, ತನ್ನ ನೆರೆಯವನನ್ನು ಕೊಂದು ಹಾಕಿದ ಕೊಲೆಪಾತಕನು ಓಡಿ ಹೋಗುವ ಹಾಗೆ, ಅವುಗಳನ್ನು ಬೇಕ ಮಾಡಿದನು. ಅವನು ಆ ಪಟ್ಟಣಗಳಲ್ಲಿ ಒಂದಕ್ಕೆ ಓಡಿ ಹೋದರೆ,
೪೨ ಬದುಕುವನು. ಅವು ಯಾವವಂದರೆ—ರೂಬೆನ್ಯರಿಗೆ ಅರಣ್ಯದಲ್ಲಿ, ಬೈಲಿನಲ್ಲಿ, ಇರುವ ಬೇಜೆರು; ಗಾದವರಿಗೆ ಗಿಲ್ಯಾದಿನಲ್ಲಿರುವ ರಾಮವು; ಮನಸ್ಸೆಯವರಿಗೆ ಬಾಶಾನಿನಲ್ಲಿರುವ ಗೋಲಾನು.

೪೪ ಮೋಶೆ ಇಸ್ರಯೇಲ್ ಮಕ್ಕಳ ಮುಂದೆ ಇಟ್ಟ ನ್ಯಾಯಪ್ರ
೪೫ ಮಾಣವು ಇದೇ—ಇಸ್ರಯೇಲ್ ಮಕ್ಕಳು ಐಗುಪ್ತದೊಳಗಿಂದ
೪೬ ಹೊರಟ ಮೇಲೆ, ಯೊರ್ದನಿನ ಈಚೆಯಲ್ಲಿ, ಬೆತ್ಪೆಯೋರಿಗೆ ಎದುರಾಗಿರುವ ತಗ್ಗಿನಲ್ಲಿ, ಹೆಷ್ಬೋನಿನಲ್ಲಿ ವಾಸ ಮಾಡಿದ ಅಮೋರ್ಯರ ಅರಸನಾದ ಸೀಹೋನನ ದೇಶದಲ್ಲಿ ಮೋಶೆ ಇಸ್ರಯೇಲ್ ಮಕ್ಕಳಿಗೆ ನುಡಿದ ಸಾಕ್ಷಿಗಳೂ, ನೇಮಗಳೂ, ನ್ಯಾಯಗಳೂ, ಇವೇ. ಆ ಸೀಹೋನನನ್ನು ಮೋಶೆಯೂ, ಇಸ್ರಯೇಲ್
೪೭ ಮಕ್ಕಳೂ, ಐಗುಪ್ತದೊಳಗಿಂದ ಹೊರಟ ಮೇಲೆ, ಹೊಡೆದರು.
೪೮ ಅವನ ದೇಶವನ್ನೂ, ಬಾಶಾನಿನ ಅರಸನಾದ ಓಗನ ದೇಶವನ್ನೂ, ಯೊರ್ದನಿನ ಈಚೆಯಲ್ಲಿ, ಮೂಡಣ ದಿಕ್ಕಿನಲ್ಲಿ, ಇರುವ ಅಮೋರ್ಯರ ಇಬ್ಬರು ಅರಸರ ದೇಶವನ್ನೂ, ಅರ್ನೋನ್
೪೯ ದಿಮೆ ತೀರದಲ್ಲಿರುವ ಅಕ್ರೋವೆರು ಮೊದಲ್ಗೊಂಡು ಹೆರ್ಮೋನ್ ಬಸೀರ್ ಪರ್ವತದ ಪರ್ಯಂತರ, ಯೊರ್ದನಿನ ಈಚೆ
೫ ಯಲ್ಲಿ, ಮೂಡಣ ದಿಕ್ಕಿನಲ್ಲಿ, ಇರುವ ಎಲ್ಲಾ ಬೈಲುಗಳನ್ನೂ ಸಹ, ಪಿಸ್ಗದ ಅಡಿಯಲ್ಲಿರುವ ಬೈಲಿನ ಸಮುದ್ರದ ಪರ್ಯಂತರ ಸ್ವತಂತ್ರಿಸಿ ಕೊಂಡರು.

## ೫. ಸಂಧಿ.

೧ ಆಗ ಮೋಶೆ ಇಸ್ರಯೇಲನ್ನೆಲ್ಲಾ ಕರೆದು, ಅವರಿಗೆ ಹೇಳಿದ್ದೇನಂದರೆ—ಇಸ್ರಯೇಲೇ, ನಾನು ಈ ಹೊತ್ತು ನಿಮ್ಮ ಕಿವಿಗಳಲ್ಲಿ ಹೇಳುವ ನೇಮಗಳನ್ನೂ, ನ್ಯಾಯಗಳನ್ನೂ ಕೇಳು; ಅವುಗಳನ್ನು ಕಲಿತು, ಕೈ ಕೊಂಡು, ಮಾಡ ಬೇಕು. ನಮ್ಮ ದೇವರಾದ
೨ ಕರ್ತನು ಹೋರೆಬಿನಲ್ಲಿ ನಮ್ಮ ಸಂಗಡ ಒಡಂಬಡಿಕೆಯನ್ನು ಮಾಡಿದನು. ಕರ್ತನು ಆ ಒಡಂಬಡಿಕೆಯನ್ನು ನಮ್ಮ ಪಿತೃಗಳ
೩ ಸಂಗಡ ಅಲ್ಲ, ನಮ್ಮ ಸಂಗಡಲೇ ಮಾಡಿದನು. ನಾವೆಲ್ಲರೂ ಈ ಹೊತ್ತು ಇಲ್ಲಿ ಜೀವಿತರಾಗಿದ್ದೇವೆ.
೪ ಮುಖಾಮುಖಿಯಾಗಿ ಕರ್ತನು ನಿಮ್ಮ ಸಂಗಡ ಬೆಟ್ಟದಲ್ಲಿ ಬೆಂಕಿಯೊಳಗಿಂದ ಮಾತಾಡಿದನು. ಆ ಕಾಲದಲ್ಲಿ ನಾನು ಕರ್ತನ ವಾಕ್ಯವನ್ನು ನಿಮಗೆ ತಿಳಿಸುವ ಹಾಗೆ ಕರ್ತನಿಗೂ, ನಿಮಗೂ, ನಡುವೆ ನಿಂತಿದ್ದೆನು; ಯಾಕಂದರೆ ನೀವು ಆ ಬೆಂಕಿಗೆ ಭಯ ಪಟ್ಟು, ಬೆಟ್ಟದ ಮೇಲೆ ಏರಲಿಲ್ಲ, ಅವನು ಹೇಳಿದ್ದೇನಂದರೆ—

೬ ನಿನ್ನನ್ನು ಐಗುಪ್ತ ದೇಶದೊಳಗಿಂದ, ದಾಸತ್ವದ ಮನೆಯೊ
ಳಗಿಂದ, ಹೊರಗೆ ಬರ ಮಾಡಿದ, ನಿನ್ನ ದೇವರಾದ ಕರ್ತನು
೭ ನಾನೇ. ನನ್ನ ಹೊರ್ತಾಗಿ ನಿನಗೆ ಬೇರೆ ದೇವರುಗಳು ಇರ ಬಾ
೮ ರದು. ಮೇಲಿನ ಆಕಾಶದಲ್ಯಾಗಲಿ, ಕೆಳಗಿನ ಭೂಮಿಯಲ್ಯಾಗಲಿ,
ಭೂಮಿಯ ಕೆಳಗಿನ ನೀರುಗಳಲ್ಯಾಗಲಿ, ಇರುವಂಥವುಗಳ ಯಾ
ವದೊಂದು ರೂಪದ ವಿಗ್ರಹವನ್ನೂ ನಿನಗೆ ಮಾಡಿ ಕೊಳ್ಳ ಬೇ
೯ ಕ. ಅವುಗಳಿಗೆ ಅಡ್ಡ ಬೀಳಲೂ, ಸೇವಿಸಲೂ, ಬೇಡ. ಯಾಕಂ



ದರೆ ನಿನ್ನ ದೇವರಾದ ಕರ್ತನಾಗಿರುವ ನಾನು ಕೋಪಪುಳ್ಳ ದೇವರಾಗಿದ್ದೇನೆ. ನನ್ನನ್ನು ಹಗೆ ಮಾಡುವವರಲ್ಲಿ ತಂದೆಗಳ ಅಕ್ರಮವನ್ನು ಮಕ್ಕಳ ಮೇಲೆ, ಮೂರನೇ ನಾಲ್ಕನೇ ತಲಾಂತರದ
೧೦ ಪರ್ಯಂತರ ವಿಚಾರಿಸುತ್ತೇನೆ. ಆದರೆ ನನ್ನನ್ನು ಪ್ರೀತಿ ಮಾಡಿ, ನನ್ನ ಆಜ್ಞೆಗಳನ್ನು ಕೈ ಕೊಳ್ಳುವವರಿಗೆ ಸಾವಿರಗಳ ಪರ್ಯಂತರ ವಿಚಾರಿಸುತ್ತೇನೆ.

೧೧ ನಿನ್ನ ದೇವರಾದ ಕರ್ತನ ಹೆಸರನ್ನು ವ್ಯರ್ಥವಾಗಿ ಎತ್ತ ಬೇಡ; ಯಾಕಂದರೆ ಕರ್ತನು ತನ್ನ ಹೆಸರನ್ನು ವ್ಯರ್ಥವಾಗಿ ಎತ್ತುವವನನ್ನು ನಿರ್ಮಲನೆಂದು ತೀರಿಸುವದಿಲ್ಲ.

೧೨ ನಿನ್ನ ದೇವರಾದ ಕರ್ತನು ನಿನಗೆ ಆಜ್ಞಾಪಿಸಿದಂತೆ, ಅದನ್ನು
೧೩ ಪರಿಶುದ್ಧ ಮಾಡುವದಕ್ಕೆ, ಸಬ್ಬತ್ ದಿವಸವನ್ನು ಕಾಪಾಡು. ಆರು ದಿವಸ ಕಡ್ಡ ಮಾಡಿ, ನಿನ್ನ ಕೆಲಸವನ್ನೆಲ್ಲಾ ಮಾಡ ಬೇಕು.
೧೪ ಆದರೆ ಏಳನೇ ದಿವಸವು ನಿನ್ನ ದೇವರಾದ ಕರ್ತನ ಸಬ್ಬತ್ ದಿವಸವೇ; ಅದರಲ್ಲಿ ನೀನೂ, ನಿನ್ನ ಮಗನೂ, ನಿನ್ನ ಮಗಳೂ, ನಿನ್ನ ದಾಸನೂ, ನಿನ್ನ ದಾಸಿಯೂ, ನಿನ್ನ ಎತ್ತೂ, ನಿನ್ನ ಕತ್ತೆಯೂ, ನಿನ್ನ ಎಲ್ಲಾ ದನಗಳೂ, ನಿನ್ನ ಬಾಗಲುಗಳಲ್ಲಿರುವ ಪರವಾಸಿಯೂ, ಯಾವ ಕೆಲಸವನ್ನೂ ಮಾಡ ಬಾರದು. ನಿನ್ನ ದಾಸ
೧೫ ನೂ, ದಾಸಿಯೂ, ನಿನ್ನ ಹಾಗೆ ವಿಶ್ರಮಿಸಿ ಕೊಳ್ಳ ಬೇಕು. ನೀನು ಐಗುಪ್ತ ದೇಶದಲ್ಲಿ ದಾಸನಾಗಿದ್ದಿ ಎಂದೂ, ನಿನ್ನ ದೇವರಾದ ಕರ್ತನು ನಿನ್ನನ್ನು ಅಲ್ಲಿಂದ ಬಲವಾದ ಕೈಯಿಂದಲೂ, ಚಾಚಿದ ತೋಳಿನಿಂದಲೂ, ಹೊರಗೆ ಬರ ಮಾಡಿದನೆಂದೂ, ಜ್ಞಾಪಕ ಮಾಡಿ ಕೊಳ್ಳ ಬೇಕು. ಆದಕಾರಣ ನಿನ್ನ ದೇವರಾದ ಕರ್ತನು ನಿನಗೆ ಸಬ್ಬತ್ ದಿವಸವನ್ನು ಆಚರಿಸ ಬೇಕೆಂದು, ಆಜ್ಞಾಪಿಸಿದ್ದಾನೆ.

೧೬ ನಿನ್ನ ದಿವಸಗಳು ಹೆಚ್ಚಾಗುವ ಹಾಗೆಯೂ, ನಿನ್ನ ದೇವರಾದ ಕರ್ತನು ನಿನಗೆ ಕೊಡುವ ಭೂಮಿಯಲ್ಲಿ ನಿನಗೆ ಒಳ್ಳೇದಾಗುವ ಹಾಗೆಯೂ, ನಿನ್ನ ದೇವರಾದ ಕರ್ತನು ಆಜ್ಞಾಪಿಸಿದಂತೆ ನಿನ್ನ ತಂದೆಯನ್ನೂ, ನಿನ್ನ ತಾಯಿಯನ್ನೂ, ಸನ್ಮಾನಿಸು.

೧೭ ಕೊಲ್ಲ ಬೇಡ.

೧೮ ವ್ಯಭಿಚಾರ ಮಾಡ ಬೇಡ.

೧೯ ಕದಿಯ ಬೇಡ.

೨೦ ನಿನ್ನ ನೆರೆಯವನ ಮೇಲೆ ಅಬದ್ಧಸಾಕ್ಷಿ ಹೇಳ ಬೇಡ.

೨೧ ನಿನ್ನ ನೆರೆಯವನ ಹೆಂಡತಿಯನ್ನು ಆಶಿಸ ಬೇಡ. ನಿನ್ನ ನೆರೆಯವನ ಮನೆಯನ್ನೂ, ಹೊಲವನ್ನೂ, ದಾಸ ದಾಸಿಯರನ್ನೂ, ದನ ಕತ್ತೆಗಳನ್ನೂ, ನಿನ್ನ ನೆರೆಯವನಿಗೆ ಇರುವ ಎಲ್ಲವುಗಳನ್ನೂ ಆಶಿಸ ಬೇಡ.

೨೨ ಈ ಮಾತುಗಳನ್ನು ಕರ್ತನು ಬೆಂಕಿಯ ಮೇಘದ ಕತ್ತಲೆಯ ಮಧ್ಯದಲ್ಲಿಂದ, ದೊಡ್ಡ ಶಬ್ದದಿಂದ, ಬೆಟ್ಟದಲ್ಲಿ ನಿಮ್ಮ ಸಭೆಗೆಲ್ಲಾ ಹೇಳಿದನು; ಹೆಚ್ಚು ಹೇಳಿಲ್ಲ; ಇವುಗಳನ್ನು ಕಲ್ಲಿನ ಎರ
೨೩ ಡು ಹಲಿಗೆಗಳಲ್ಲಿ ಬರೆದು, ನನಗೆ ಕೊಟ್ಟನು. ಆ ಬೆಟ್ಟವು ಬೆಂಕಿಯಿಂದ ಉರಿಯುತ್ತಿರಲಾಗಿ, ನೀವು ಕತ್ತಲೆಯಲ್ಲಿಂದ ಆ ಶಬ್ದವನ್ನು ಕೇಳಿದಾಗ, ನಿಮ್ಮ ಕುಲಗಳ ಮುಖ್ಯಸ್ಥರೂ, ನಿಮ್ಮ ಹಿರಿ
೨೪ ಯರೂ, ನನ್ನ ಬಳಿಗೆ ಬಂದು, ನನಗೆ ಹೇಳಿದ್ದೇನಂದರೆ—ಇಗೋ, ನಮ್ಮ ದೇವರಾದ ಕರ್ತನು ತನ್ನ ಘನವನ್ನೂ ತನ್ನ ಮಹಿಮೆಯನ್ನೂ ನಮಗೆ ತೋರಿಸಿದ್ದಾನೆ; ಅವನ ಶಬ್ದವನ್ನು ಬೆಂಕಿಯೊ
೨೫ ಳಗಿಂದ ಕೇಳಿದ್ದೇವೆ; ದೇವರು ಮನುಷ್ಯರ ಸಂಗಡ ಮಾತಾಡಲು, ಅವರು ಬದುಕುತ್ತಾರೆಂದು, ಈ ಹೊತ್ತು ನೋಡಿದ್ದೇವೆ. ಹಾಗಾದರೆ, ಈಗ ನಾವು ಯಾಕೆ ಸಾಯ ಬೇಕು! ಈ ದೊಡ್ಡ ಬೆಂಕಿಯು ನಿಶ್ಚಯವಾಗಿ ನಮ್ಮನ್ನು ತಿಂದು ಬಿಡುವದು; ನಾವು ಇನ್ನೂ ನಮ್ಮ ದೇವರಾದ ಕರ್ತನ ಶಬ್ದವನ್ನು ಕೇಳ್ದರೆ, ಸಾ
೨೬ ಯುತ್ತೇವೆ. ಯಾಕಂದರೆ ಸಮಸ್ತ ಮಾಂಸದಲ್ಲಿ ಯಾರು ನಮ್ಮ ಹಾಗೆ ಬೆಂಕಿಯೊಳಗಿಂದ ಮಾತಾಡುವ ಜೀವವುಳ್ಳ ದೇವರ
೨೭ ಶಬ್ದವನ್ನು ಕೇಳಿ, ಬದುಕಿದರು! ನೀನೇ ಸಮೀಪಕ್ಕೆ ಹೋಗಿ, ನಮ್ಮ ದೇವರಾದ ಕರ್ತನು ಹೇಳುವದನ್ನೆಲ್ಲಾ ಕೇಳಿ, ನಮ್ಮ ದೇವರಾದ ಕರ್ತನು ನಿನಗೆ ಹೇಳಿದ್ದನ್ನೆಲ್ಲಾ ನೀನೇ ನಮಗೆ ಹೇಳು; ಆಗ ನಾವು ಕೇಳಿ, ಅದನ್ನು ಮಾಡುವೆವು.

೨೮ ನೀವು ನನ್ನ ಹತ್ತರ ಮಾತಾಡಿದಾಗ, ಕರ್ತನು ನಿಮ್ಮ ಮಾತುಗಳ ಶಬ್ದವನ್ನು ಕೇಳಿ, ನನಗೆ ಹೇಳಿದ್ದೇನಂದರೆ—ಈ ಜನರು ನಿನಗೆ ಹೇಳಿದ ಮಾತುಗಳ ಶಬ್ದವನ್ನು ಕೇಳಿದ್ದೇನೆ; ಅವರು ಹೇಳಿ
೨೯ ದ್ದೆಲ್ಲಾ ಒಳ್ಳೇದು. ಅವರು ನನಗೆ ಭಯ ಪಟ್ಟು, ನನ್ನ ಆಜ್ಞೆಗಳನ್ನೆಲ್ಲಾ ಎಂದೆಂದಿಗೂ ಕೈ ಕೊಳ್ಳುವ ಹಾಗೆ, ಅವರಲ್ಲಿ ಹೃದಯವಿದ್ದರೆ, ಎಷ್ಟೋ ಒಳ್ಳೇದು; ಆಗ ಅವರಿಗೂ, ಅವರ ಮಕ್ಕ
೩೦ ಳಿಗೂ, ಎಂದೆಂದಿಗೂ ಒಳ್ಳೇದಾಗಿರುವದು. ನೀನು ಹೋಗಿ, ಅವರಿಗೆ ತಮ್ಮ ಗುಡಾರಗಳಿಗೆ ತಿರುಗಿ ಕೊಳ್ಳ ಬೇಕೆಂದು, ಹೇ
೩೧ ಳು. ಆದರೆ ನೀನು ಇಲ್ಲಿ ನನ್ನ ಸಂಗಡ ನಿಂತುಕೋ; ಆಗ ನೀನು ಅವರಿಗೆ ಬೋಧಿಸ ತಕ್ಕಂಥ, ನಾನು ಅವರಿಗೆ ಸ್ವಾಸ್ತ್ಯವಾಗಿ ಕೊಡುವ ದೇಶದಲ್ಲಿ ಅವರು ಮಾಡ ತಕ್ಕಂಥ, ಎಲ್ಲಾ ಆಜ್ಞೆ,
೩೨ ನೇಮ, ನ್ಯಾಯಗಳನ್ನೂ, ನಿನಗೆ ಹೇಳುವೆನು. ಹೀಗಿರುವದರಿಂದ ನಿಮ್ಮ ದೇವರಾದ ಕರ್ತನು ನಿಮಗೆ ಆಜ್ಞಾಪಿಸಿದಂತೆ ಕೈ ಕೊಂಡು, ಮಾಡ ಬೇಕು; ಎಡಕ್ಕಾದರೂ, ಬಲಕ್ಕಾದರೂ, ತೊಲಗ
೩೩ ಬೇಡಿರಿ. ನೀವು ಬದುಕುವ ಹಾಗೆಯೂ, ನಿಮಗೆ ಒಳ್ಳೇದಾಗುವ ಹಾಗೆಯೂ, ನೀವು ಸ್ವತಂತ್ರಿಸಿ ಕೊಳ್ಳುವ ದೇಶದಲ್ಲಿ ನಿಮ್ಮ ದಿವಸಗಳು ಬಹಳವಾಗುವ ಹಾಗೆಯೂ, ನಿಮ್ಮ ದೇವರಾದ ಕರ್ತನು ನಿಮಗೆ ಆಜ್ಞಾಪಿಸಿದ ಮಾರ್ಗದಲ್ಲೆಲ್ಲಾ ನಡ ಕೊಳ್ಳ ಬೇಕು.

## ೬. ಸಂಧಿ.

೧ ನೀವು ಸ್ವತಂತ್ರಿಸಿ ಕೊಳ್ಳುವದಕ್ಕೆ ದಾಟಿ ಹೋಗುವ ದೇಶದ
೨ ಲ್ಲಿ ಮಾಡುವ ಹಾಗೆಯೂ, ನೀನು ನಿನ್ನ ದೇವರಾದ ಕರ್ತನಿಗೆ ಭಯ ಪಟ್ಟು, ನಾನು ನಿನಗೆ ಆಜ್ಞಾಪಿಸುವ ಅವನ ಎಲ್ಲಾ ನೇಮಗಳನ್ನೂ, ಆಜ್ಞೆಗಳನ್ನೂ, ನೀನೂ ನಿನ್ನ ಮಗನೂ ನಿನ್ನ ಮೊಮ್ಮಗನೂ ನಿನ್ನ ಜೀವದ ದಿವಸಗಳೆಲ್ಲಾ ಕೈ ಕೊಳ್ಳುವ ಹಾಗೆಯೂ, ನಿನ್ನ ದಿವಸಗಳು ಬಹಳವಾಗುವ ಹಾಗೆಯೂ, ನಿಮಗೆ ಬೋಧಿಸ ಬೇಕೆಂದು, ನಿಮ್ಮ ದೇವರಾದ ಕರ್ತನು ಆಜ್ಞಾಪಿಸಿದ ಆಜ್ಞೆ, ನೇಮ, ನ್ಯಾಯಗಳೂ, ಇವೇ.

೩ ಹೀಗಿರುವದರಿಂದ, ಇಸ್ರಯೇಲೇ, ನಿನ್ನ ಪಿತೃಗಳ ದೇವರಾದ ಕರ್ತನು ಹೇಳಿದ ಪ್ರಕಾರ, ಹಾಲು, ಜೇನು, ಹರಿಯುವ ದೇಶದಲ್ಲಿ ನಿನಗೆ ಒಳ್ಳೇದಾಗುವ ಹಾಗೆಯೂ, ನೀವು ಬಹಳವಾಗಿ ಹೆಚ್ಚುವ ಹಾಗೆಯೂ, ಕೇಳಿ, ಕೈ ಕೊಂಡು ಮಾಡು.

೪ ಇಸ್ರಯೇಲೇ, ಕೇಳು; ನಮ್ಮ ದೇವರಾದ ಕರ್ತನು ಒಬ್ಬನೇ
೫ ಕರ್ತನು. ನಿನ್ನ ದೇವರಾದ ಕರ್ತನಿಗೆ ನಿನ್ನ ಎಲ್ಲಾ ಹೃದಯ

ದಿಂದಲೂ, ನಿನ್ನ ಎಲ್ಲಾ ಪ್ರಾಣದಿಂದಲೂ, ನಿನ್ನ ಎಲ್ಲಾ ಸಾಮ
೬ ರ್ಥ್ಯದಿಂದಲೂ, ಪ್ರೀತಿ ಮಾಡ ಬೇಕು. ನಾನು ಈ ಹೊತ್ತು
ನಿನಗೆ ಆಜ್ಞಾಪಿಸುವ ಈ ಮಾತುಗಳು ನಿನ್ನ ಹೃದಯದಲ್ಲಿ ಇರ
೭ ಬೇಕು. ಅವುಗಳನ್ನು ನಿನ್ನ ಮಕ್ಕಳಿಗೆ ಅಭ್ಯಾಸ ಮಾಡಿಸಿ, ನಿ
ನ್ನ ಮನೆಯಲ್ಲಿ ಕೂತಿರುವಾಗಲೂ, ಮಾರ್ಗದಲ್ಲಿ ಹೋಗುವಾಗ
ಲೂ, ಮಲಗುವಾಗಲೂ, ಏಳುವಾಗಲೂ, ಅವುಗಳ ವಿಷಯವಾಗಿ
೮ ಮಾತಾಡ ಬೇಕು. ಅವುಗಳನ್ನು ಗುರುತಾಗಿ ನಿನ್ನ ಕೈಗಳ ಮೇ
ಲೆ ಕಟ್ಟ ಬೇಕು; ಅವು ನಿನ್ನ ಕಣ್ಣುಗಳ ನಡುವೆ ಹಣೆ ಕಟ್ಟಾಗಿ
೯ ರ ಬೇಕು. ಅವುಗಳನ್ನು ನಿನ್ನ ಮನೆಯ ಕಂಭಗಳ ಮೇಲೆಯೂ
ನಿನ್ನ ಬಾಗಲುಗಳ ಮೇಲೆಯೂ ಬರೆಯ ಬೇಕು.

೧೦ ಇದಲ್ಲದೆ ನಿನ್ನ ದೇವರಾದ ಕರ್ತನು ನಿನ್ನ ಪಿತೃಗಳಾದ ಅ
ಬ್ರಹಾಮ್, ಇಸಾಕ್, ಯಾಕೋಬರಿಗೆ ಪ್ರಮಾಣ ಮಾಡಿದ ದೇ
ಶದಲ್ಲಿ ನಿನ್ನನ್ನು ಸೇರಿಸಿ, ನೀನು ಕಟ್ಟದ ದೊಡ್ಡ ಒಳ್ಳೇ ಪಟ್ಟಣಗಳ
೧೧ ನ್ನೂ, ನೀನು ತುಂಬಿಸದ ಎಲ್ಲಾ ಬದುಕು ತುಂಬಿರುವ ಮನೆಗಳ
ನ್ನೂ, ನೀನು ಅಗಿಯದ ಅಗಿದಿರುವ ಭಾವಿಗಳನ್ನೂ, ನೀನು ನೆಡ
ದ ದ್ರಾಕ್ಷೇ ತೋಟಗಳನ್ನೂ, ಇಬ್ಬೇ ತೋಟಗಳನ್ನೂ, ನಿನಗೆ
೧೨ ಕೊಡಲಾಗಿ, ನೀನು ಉಂಡು ತೃಪ್ತಿಯಾದರೆ, ಐಗುಪ್ತ ದೇಶ
ದೊಳಗಿಂದ ದಾಸತ್ವದ ಮನೆಯೊಳಗಿಂದ ನಿನ್ನನ್ನು ಹೊರಗೆ ಬ
೧೩ ರ ಮಾಡಿದ ಕರ್ತನನ್ನು ಮರಿಯದ ಹಾಗೆ ನೋಡಿಕೋ. ನಿನ್ನ
ದೇವರಾದ ಕರ್ತನಿಗೆ ಭಯ ಪಡ ಬೇಕು; ಅವನನ್ನು ಸೇವಿಸ
೧೪ ಬೇಕು; ಅವನ ಹೆಸರಿನಲ್ಲಿ ಆಣೆ ಇಟ್ಟು ಕೊಳ್ಳ ಬೇಕು. ನಿಮ್ಮ
ಸುತ್ತಲಿರುವ ಜನಗಳ ದೇವರುಗಳಾದ ಅನ್ಯ ದೇವರುಗಳನ್ನು ಹಿಂ
೧೫ ಬಾಲಿಸ ಬೇಡಿರಿ. ಯಾಕಂದರೆ ನಿನ್ನ ದೇವರಾದ ಕರ್ತನು ನಿನ್ನ
ಮಧ್ಯದಲ್ಲಿ ಕೋಪವುಳ್ಳ ದೇವರೇ; ನಿನ್ನ ದೇವರಾದ ಕರ್ತನ
ಕೋಪವು ನಿನ್ನ ಮೇಲೆ ಉರಿಯಲು, ಅವನು ನಿನ್ನನ್ನು ಭೂಮಿ
ಯ ಮೇಲಿನಿಂದ ನಾಶ ಮಾಡುವನಾದೀತು.

೧೬ ಮಸ್ಸದಲ್ಲಿ ಕೋಪಿಸಿದ ಹಾಗೆ ನಿಮ್ಮ ದೇವರಾದ ಕರ್ತನನ್ನು
೧೭ ಕೋಪಿಸ ಬೇಡಿರಿ. ನಿಮ್ಮ ದೇವರಾದ ಕರ್ತನ ಆಜ್ಞೆಗಳನ್ನೂ,
ಅವನು ನಿನಗೆ ಆಜ್ಞಾಪಿಸಿದ ಆಜ್ಞೆ ನೇಮಗಳನ್ನೂ, ಕೈ ಕೊಳ್ಳಲೇ
೧೮ ಕೈ ಕೊಳ್ಳ ಬೇಕು. ನಿನಗೆ ಒಳ್ಳೇದಾಗುವ ಹಾಗೆಯೂ, ಕರ್ತ
ನು ನಿನ್ನ ಪಿತೃಗಳಿಗೆ ಪ್ರಮಾಣ ಮಾಡಿದ ಆ ಒಳ್ಳೇ ದೇಶವ
೧೯ ನ್ನು ನೀನು ಪ್ರವೇಶಿಸಿ, ಸ್ವತಂತ್ರಿಸಿ ಕೊಂಡು, ಕರ್ತನು ಹೇಳಿದ
ಪ್ರಕಾರ ನಿನ್ನ ಎಲ್ಲಾ ಶತ್ರುಗಳನ್ನು ನಿನ್ನ ಮುಂದೆ ಹಳ್ಳಿ ಹಾಕು
ವ ಹಾಗೆಯೂ, ಕರ್ತನ ಸಮುಖದಲ್ಲಿ ನೆಟ್ಟಿನೆಯಾದದ್ದನ್ನೂ,
ಒಳ್ಳೇದನ್ನೂ ಮಾಡ ಬೇಕು.

೨೦ ಮುಂದಿನ ಕಾಲದಲ್ಲಿ ನಿನ್ನ ಮಗನು—ನಮ್ಮ ದೇವರಾದ ಕರ್ತ
ನು ಆಜ್ಞಾಪಿಸಿದ ಸಾಕ್ಷಿ, ನೇಮ, ನ್ಯಾಯಗಳು ಏನೆಂದು ನಿನ್ನ
೨೧ ನ್ನು ಕೇಳ್ಳದರೆ, ನಿನ್ನ ಮಗನಿಗೆ ಹೇಳ ಶಕ್ಕದ್ದೇನಂದರೆ—ನಾವು
ಐಗುಪ್ತದಲ್ಲಿ ಫರೋನನಿಗೆ ದಾಸರಾಗಿದ್ದೆವು; ಕರ್ತನು ನಮ್ಮನ್ನು
ಬಲವಾದ ಕೈಯಿಂದ ಐಗುಪ್ತದೊಳಗಿಂದ ಹೊರಗೆ ಬರ ಮಾಡಿ
೨೨ ದನು. ಕರ್ತನು ನಮ್ಮ ಕಣ್ಣುಗಳ ಮುಂದೆ ಐಗುಪ್ತದಲ್ಲಿ ಫರೋ
ನನ ಮೇಲೆಯೂ, ಅವನ ಎಲ್ಲಾ ಮನೆಯ ಮೇಲೆಯೂ, ಕಟ್ಟ
ವಾದ ದೊಡ್ಡ ಗುರುತುಗಳನ್ನೂ, ಲಕ್ಷಣಗಳನ್ನೂ ಕೊಟ್ಟನು.
೨೩ ಅವನು ನಮ್ಮ ಪಿತೃಗಳಿಗೆ ಪ್ರಮಾಣ ಮಾಡಿದ ದೇಶವನ್ನು ನ
ಮಗೆ ಕೊಟ್ಟು, ನಮ್ಮನ್ನು ಪ್ರವೇಶಿಸ ಮಾಡುವ ಹಾಗೆ ಅಲ್ಲಿಂದ
೨೪ ನಮ್ಮನ್ನು ಹೊರಗೆ ಬರ ಮಾಡಿದನು. ನಮಗೆ ಎಂದೆಂದಿಗೂ ಒ
ಳ್ಳೇದಾಗುವ ಹಾಗೆಯೂ, ಈ ಹೊತ್ತಿನಂತೆ ನಾವು ಬದುಕುವ
ಹಾಗೆಯೂ, ನಾವು ಈ ನೇಮಗಳನ್ನೆಲ್ಲಾ ಮಾಡಿ, ನಮ್ಮ ದೇವ
ರಾದ ಕರ್ತನಿಗೆ ಭಯ ಪಡ ಬೇಕೆಂದು, ಕರ್ತನು ನಮಗೆ ಆಜ್ಞಾ
೨೫ ಪಿಸಿದ್ದಾನೆ. ಅವನು ನಮಗೆ ಆಜ್ಞಾಪಿಸಿದಂತೆ ನಮ್ಮ ದೇವರಾದ
ಕರ್ತನ ಮುಂದೆ ಈ ಎಲ್ಲಾ ಆಜ್ಞೆಯನ್ನು ಕೈ ಕೊಂಡು ಮಾಡಿ
ದರೆ, ನಮಗೆ ನೀತಿ ಉಂಟಾಗುವದು.

## ೭. ಸಂಧಿ.

೧ ನಿನ್ನ ದೇವರಾದ ಕರ್ತನು ನೀನು ಸ್ವತಂತ್ರಿಸಿ ಕೊಳ್ಳುವದಕ್ಕೆ
ಹೋಗುವ ದೇಶದಲ್ಲಿ ನಿನ್ನನ್ನು ಬರ ಮಾಡಿದಾಗ, ಅವನು ನಿನ
ಗಿಂತ ಹೆಚ್ಚಾದವರೂ ಬಲಿಷ್ಟರೂ ಆದ ಏಳು ಜನಾಂಗಗಳನ್ನು—
ಹಿತ್ತಿಯರನ್ನೂ, ಗಿರ್ಗಾಸ್ಯರನ್ನೂ, ಅಮೋರ್ಯರನ್ನೂ, ಕ
ನಾನ್ಯರನ್ನೂ, ಪೆರಿಜ್ಜಿಯರನ್ನೂ, ಹಿವ್ವಿಯರನ್ನೂ, ಯೆಬೂ
ಸ್ಯರನ್ನೂ, ಈ ಪ್ರಕಾರ ಬಹಳ ಜನಾಂಗಗಳನ್ನು ನಿನ್ನ ಮುಂದೆ
೨ ಹೊರಡಿಸಲು, ನಿನ್ನ ದೇವರಾದ ಕರ್ತನು ಅವರನ್ನು ನಿನ್ನ ಮುಂ
ದೆ ಕೊಡಲು, ನೀನು ಅವರನ್ನು ಹೊಡೆದು, ಅವರನ್ನು ಶಾಪ
ಕೊಟ್ಟು, ನಿರ್ಮೂಲ ಮಾಡ ಬೇಕು; ಅವರ ಸಂಗಡ ಒಡಂಬಡಿ
೩ ಕೆ ಮಾಡ ಬೇಡ; ಅವರಿಗೆ ದಯೆ ಮಾಡ ಬೇಡ. ಅವರ ಸಂಗಡ
ಮದುವೆ ಮಾಡಿ ಕೊಳ್ಳ ಬೇಡ; ನಿನ್ನ ಕುಮಾರ್ತೆಗಳನ್ನು ಅವ
ರ ಕುಮಾರರಿಗೆ ಕೊಡ ಬೇಡ; ನಿನ್ನ ಕುಮಾರರಿಗೆ ಅವರ ಕು
೪ ಮಾರ್ತೆಗಳನ್ನು ತಕ್ಕೊಳ್ಳ ಬೇಡ. ಯಾಕಂದರೆ ಅವರು ನಿನ್ನ
ಮಕ್ಕಳನ್ನು ಬೇರೆ ದೇವರುಗಳಿಗೆ ಸೇವಿಸುವ ಹಾಗೆ ನನ್ನಿಂದ
ತೊಲಗಿಸ್ಯಾರು. ಆಗ ಕರ್ತನ ಕೋಪವು ನಿಮ್ಮ ಮೇಲೆ ಉರಿ
೫ ಯಲು, ಅವನು ನಿನ್ನನ್ನು ಬೇಗ ನಾಶನ ಮಾಡ್ಯಾನು. ಅವರಿ
ಗೆ ಮಾಡ ಬೇಕಾದದ್ದೇನಂದರೆ—ಅವರ ಬಲಿಪೀಠಗಳನ್ನು ಒಡೆದು
ಹಾಕ ಬೇಕು; ಅವರ ಸ್ತಂಭಗಳನ್ನು ಮುರಿದು ಹಾಕ ಬೇಕು;
ಅವರ ತೋಪುಗಳನ್ನು ಕಡಿದು ಹಾಕ ಬೇಕು; ಅವರ ವಿಗ್ರಹ
ಗಳನ್ನು ಬೆಂಕಿಯಿಂದ ಸುಡ ಬೇಕು.

೬ ಯಾಕಂದರೆ ನೀನು ನಿನ್ನ ದೇವರಾದ ಕರ್ತನಿಗೆ ಪರಿಶುದ್ಧ ಜ
ನವೇ; ನಿನ್ನ ದೇವರಾದ ಕರ್ತನು ನಿನ್ನನ್ನು ಭೂಮಿಯ ಮೇಲಿರು
ವ ಎಲ್ಲಾ ಜನಗಳೊಳಗಿಂದ ತನಗೆ ಸ್ವಂತ ಜನವಾಗುವ ಹಾಗೆ ಆ
೭ ದು ಕೊಂಡಿದ್ದಾನೆ. ನೀವು ಎಲ್ಲಾ ಜನಗಳಿಗಿಂತ ಹೆಚ್ಚಾಗಿರುವ
ಕಾರಣ, ಕರ್ತನು ನಿಮ್ಮನ್ನು ಬಯಸಿ, ಆದು ಕೊಳ್ಳಲಿಲ್ಲ; ನೀವು
೮ ಎಲ್ಲಾ ಜನಗಳಿಗಿಂತ ಕಡಿಮೆಯುಳ್ಳವರೋ! ಕರ್ತನು ನಿಮ್ಮನ್ನು ಪ್ರೀ
ತಿ ಮಾಡುವದರಿಂದಲೂ, ನಿಮ್ಮ ಪಿತೃಗಳಿಗೆ ಮಾಡಿದ ಪ್ರಮಾಣ
ವನ್ನು ಕಾಪಾಡುವದರಿಂದಲೂ, ಕರ್ತನು ನಿಮ್ಮನ್ನು ಬಲವಾದ ಕೈ
ಯಿಂದ ಹೊರಗೆ ಬರ ಮಾಡಿ, ನಿನ್ನನ್ನು ದಾಸತ್ವದ ಮನೆಯಿಂ
ದಲೂ, ಐಗುಪ್ತದ ಅರಸನಾದ ಫರೋನನ ಕೈಯಿಂದಲೂ, ತಪ್ಪಿ
ಸಿದನು.

೯ ಹೀಗಿರುವದರಿಂದ ನಿನ್ನ ದೇವರಾದ ಕರ್ತನು ಅವನೇ ದೇವ
ರು; ಅವನೇ ನಂಬಿಗೆಯುಳ್ಳ ದೇವರು; ಅವನೇ ತನ್ನನ್ನು ಪ್ರೀ
ತಿ ಮಾಡಿ, ತನ್ನ ಆಜ್ಞೆಗಳನ್ನು ಕೈ ಕೊಳ್ಳುವವರಿಗೆ ಒಡಂಬಡಿಕೆ
ಯನ್ನೂ ಕೃಪೆಯನ್ನೂ ಸಾವಿರ ತಲಾಂತರಗಳ ವರಿಗೂ ಕಾ
೧೦ ಪಾಡಿ, ತನ್ನನ್ನು ಹಗೆ ಮಾಡುವವರಿಗೆ ಮುಖಾಮುಖಿಯಾಗಿ
ಮುಯ್ಯಿಗೆ ಮುಯ್ಯಿ ಕೊಟ್ಟು, ಅವರನ್ನು ನಾಶನ ಮಾಡುತ್ತಾ
ನೆ; ಅವನು ತನ್ನ ಹಗೆಯವರಿಗೆ ತಡ ಮಾಡದೆ, ಮುಖಾಮುಖಿ
ಯಾಗಿ ಮುಯ್ಯಿಗೆ ಮುಯ್ಯಿ ಕೊಡುತ್ತಾನೆ, ಎಂದು ತಿಳಿಕೋ.
೧೧ ಹೀಗಿರುವದರಿಂದ ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಆಜ್ಞೆ,
ನೇಮ, ನ್ಯಾಯಗಳನ್ನು ಕಾಪಾಡಿ, ಮಾಡ ಬೇಕು.

೧೨ ನೀವು ಈ ನ್ಯಾಯಗಳನ್ನು ಕೇಳ್ಳಿ, ಕಾಪಾಡಿ, ಮಾಡಿದರೆ,
ನಿನ್ನ ದೇವರಾದ ಕರ್ತನು ನಿನ್ನ ಪಿತೃಗಳಿಗೆ ಪ್ರಮಾಣ ಮಾಡಿ
ದ ಒಡಂಬಡಿಕೆಯನ್ನೂ, ಕೃಪೆಯನ್ನೂ, ನಿನಗೋಸ್ಕರ ಕಾಪಾ
೧೩ ಡುವನು. ಅವನು ನಿನ್ನನ್ನು ಪ್ರೀತಿ ಮಾಡಿ, ನಿನಗೆ ಆಶೀರ್ವಾದ
ಕೊಟ್ಟು, ನಿನ್ನನ್ನು ಹೆಚ್ಚಿಸುವನು; ನಿನಗೆ ಕೊಡುತ್ತೇನೆಂದು, ಅ
ವನು ನಿನ್ನ ಪಿತೃಗಳಿಗೆ ಪ್ರಮಾಣ ಮಾಡಿದ ಭೂಮಿಯಲ್ಲಿ ನಿ
ನ್ನ ಗರ್ಭದ ಫಲವನ್ನೂ ಭೂಮಿಯ ಹುಟ್ಟುವಳ್ಳಿಯನ್ನೂ ನಿ
ನ್ನ ಗೋಧಿಯನ್ನೂ ದ್ರಾಕ್ಷೇ ರಸವನ್ನೂ ಎಣ್ಣೆಯನ್ನೂ ದನಗ
ಳ ಹೆಚ್ಚಿಗೆಯನ್ನೂ ಕುರಿಗಳ ಮಂದೆಗಳನ್ನೂ ಆಶೀರ್ವದಿಸು
ವನು.

೧೪ ಎಲ್ಲಾ ಜನಗಳಿಗಿಂತಲೂ ನೀನು ಆಶೀರ್ವದಿಸಲ್ಪಟ್ಟವನಾಗಿರು
ವಿ; ನಿನ್ನಲ್ಲಿ ಗೊಡ್ಡಾದವನೂ ಬಂಜೆಯೂ ಇರುವದಿಲ್ಲ; ನಿನ್ನ ಪ
೧೫ ಶುಗಳಲ್ಲಿ ಹಾಗೆಯೇ. ಕರ್ತನು ಎಲ್ಲಾ ರೋಗಗಳನ್ನು ನಿನ್ನಿಂದ
ತೊಲಗ ಮಾಡುವನು; ನಿನಗೆ ತಿಳಿದಿರುವ ಐಗುಪ್ತದ ಕೆಟ್ಟ ರೋ
ಗಗಳನ್ನೆಲ್ಲಾ ನಿನ್ನ ಮೇಲೆ ಇಡದೆ, ನಿನ್ನ ಹಗೆಯವರ್ಕಲ್ಲರಿಗೆ ಅವು
ಗಳನ್ನು ಕೊಡುವನು.

೧೬ ನಿನ್ನ ದೇವರಾದ ಕರ್ತನು ನಿನಗೆ ಕೊಡುವ ಜನಗಳನ್ನೆಲ್ಲಾ
ಸಂಹರಿಸಿ ಬಿಡುವಿ; ಅವರ ಮೇಲೆ ಕಟಾಕ್ಷವಿಡ ಬೇಡ; ಅವರ ದೇವ
ರುಗಳಿಗೆ ಸೇವೆ ಮಾಡ ಬೇಡ; ಯಾಕಂದರೆ ಇದೇ ನಿನಗೆ ಉ
೧೭ ರ್ಲು. ಈ ಜನಾಂಗಗಳು ನಿನಗಿಂತ ಹೆಚ್ಚಾದವರಾಗಿದ್ದಾರೆ; ನಾ
ನು ಹ್ಯಾಗೆ ಅವರನ್ನು ವಶ ಪಡಿಸಿ ಕೊಳ್ಳ ಬಹುದೆಂದು, ನಿನ್ನ
೧೮ ಹೃದಯದಲ್ಲಿ ಅಂದು ಕೊಂಡರೆ, ಅವರಿಗೆ ಭಯ ಪಡ ಬೇಡ;
ನಿನ್ನ ದೇವರಾದ ಕರ್ತನು ಫರೋನನಿಗೂ ಎಲ್ಲಾ ಐಗುಪ್ತಕ್ಕೂ
೧೯ ಮಾಡಿದ್ದನ್ನೂ, ನಿನ್ನ ಕಣ್ಣುಗಳು ನೋಡಿದ ದೊಡ್ಡ ಪರೀಕ್ಷೆಗಳ
ನ್ನೂ, ನಿನ್ನ ದೇವರಾದ ಕರ್ತನು ನಿನ್ನನ್ನು ಹೊರಗೆ ಬರ ಮಾ
ಡಿದಾಗ ಉಂಟಾದ ಗುರುತುಗಳನ್ನೂ ಲಕ್ಷಣಗಳನ್ನೂ, ಬಲವಾ
ದ ಕೈಯನ್ನೂ, ಚಾಚಿದ ತೋಳ್ಳನ್ನೂ, ನೆನಪಿಲೇ ನೆನಪ ಬೇಕು;
ನೀನು ಯಾವ ಜನಗಳಿಗೆ ಭಯ ಪಡುತ್ತೀಯೋ, ಆ ಜನಗಳಿಗೆ
೨೦ ಲ್ಲಾ ನಿನ್ನ ಕರ್ತನಾದ ದೇವರು ಹಾಗೆಯೇ ಮಾಡುವನು. ಇದ
ಲ್ಲದೆ ಉಳಿಸಿದವರೂ ನಿನ್ನ ಮುಖಕ್ಕೆ ಅಡಗಿ ಕೊಂಡವರೂ ನಾಶ
ವಾಗುವ ತನಕ ನಿನ್ನ ದೇವರಾದ ಕರ್ತನು ಕುರುಟಿಗ ಹುಳವನ್ನು
೨೧ ಅವರಲ್ಲಿ ಕಳುಹಿಸುವನು. ಅವರಿಗೆ ಹೆದರ ಬೇಡ, ಯಾಕಂದರೆ
ನಿನ್ನ ದೇವರಾದ ಯೆಹೋವ ದೊಡ್ಡ ಭಯಂಕರನಾದ ದೇವರಾ
೨೨ ಗಿ ನಿನ್ನ ಮಧ್ಯದಲ್ಲಿದ್ದಾನೆ. ನಿನ್ನ ದೇವರಾದ ಕರ್ತನು ಆ ಜ
ನಾಂಗಗಳನ್ನು ನಿನ್ನ ಮುಂದೆ ಸ್ವಲ್ಪ ಸ್ವಲ್ಪವಾಗಿ ಓಡಿಸುವನು.
ಅಡವಿಯ ಮೃಗಗಳು ನಿನ್ನ ಮೇಲೆ ಹೆಚ್ಚಿದ ಹಾಗೆ ಅವುಗಳ
೨೩ ನ್ನು ಶ್ವಾಕೆಯಾಗಿ ಸಂಹರಿಸಿ ಬಿಡ ಕೂಡದು. ಆದರೂ ನಿನ್ನ
ದೇವರಾದ ಕರ್ತನು ಅವುಗಳನ್ನು ನಿನ್ನ ಮುಂದೆ ಕೊಟ್ಟು ಬಿಡು
ವನು; ಅವರು ನಾಶವಾಗುವ ತನಕ ಅತ್ಯಧಿಕವಾಗಿ ಅವರನ್ನು
೨೪ ಚದರಿಸುವನು. ಅವರ ಅರಸುಗಳನ್ನು ನಿನ್ನ ಕೈಯಲ್ಲಿ ಕೊಡು
ವನು; ನೀನು ಅವರ ಹೆಸರನ್ನು ಆಕಾಶದ ಕೆಳಗೆ ಇಲ್ಲದ ಹಾಗೆ
ನಾಶನ ಮಾಡುವಿ; ನೀನು ಅವರನ್ನು ನಿರ್ಮೂಲ ಮಾಡುವ ತನ
೨೫ ಕ ಒಬ್ಬನಾದರೂ ನಿನ್ನ ಮುಂದೆ ನಿಲ್ಲಲಾರನು. ಅವರ ದೇವರು
ಗಳ ವಿಗ್ರಹಗಳನ್ನು ಬೆಂಕಿಯಿಂದ ಸುಡ ಬೇಕು; ಅವುಗಳ ಮೇ
ಲಿರುವ ಬೆಳ್ಳಿ ಬಂಗಾರವನ್ನು ಆಶಿಸಿ, ನಿನಗೆ ತಕ್ಕೊಳ್ಳ ಬೇಡ;
ಅದು ನಿನಗೆ ಉರ್ಲಾದೀತು; ಯಾಕಂದರೆ ಅದು ನಿನ್ನ ದೇವರಾ
೨೬ ದ ಕರ್ತನಿಗೆ ಅಸಹ್ಯವೇ. ನೀನು ಅದರಂತೆ ಶಾಪಕ್ಕೊಳಗಾಗದ
ಹಾಗೆ, ಅಸಹ್ಯವನ್ನು ನಿನ್ನ ಮನೆಗೆ ತಕ್ಕೊಂಡು ಬರ ಬೇಡ;
ಅದನ್ನು ಹೇಸಲೇ ಹೇಸಿ, ಅಸಹ್ಯಿಸಲೇ ಅಸಹ್ಯಿಸ ಬೇಕು; ಯಾ
ಕಂದರೆ ಅದು ಶಪಿಸಲ್ಪಟ್ಟದ್ದೇ.

## ೮. ಸಂಧಿ.

೧ ನೀನು ಬದುಕಿ, ಹೆಚ್ಚಿ, ಕರ್ತನು ನಿಮ್ಮ ಪಿತೃಗಳಿಗೆ ಪ್ರಮಾ
ಣ ಮಾಡಿದ ದೇಶದಲ್ಲಿ ಪ್ರವೇಶಿಸಿ, ಅದನ್ನು ಸ್ವತಂತ್ರಿಸಿ ಕೊ
ಳ್ಳುವ ಹಾಗೆ, ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಆಜ್ಞೆಗ
೨ ಳೆಲ್ಲಾ ಕಾಪಾಡಿ, ಮಾಡ ಬೇಕು. ನಿನ್ನನ್ನು ತಗ್ಗಿಸುವ ನಿಮಿ
ತ್ತವೂ ನಿನ್ನ ಹೃದಯದಲ್ಲಿ ಏನು ಉಂಟೋ! ನೀನು ಅವನ ಆ
ಜ್ಞೆಗಳನ್ನು ಕಾಪಾಡುವಿಯೋ! ಇಲ್ಲವೋ! ಎಂದು ತಿಳಿಕೊಳ್ಳ
ವದಕ್ಕೆ ನಿನ್ನ ದೇವರಾದ ಕರ್ತನು ನಿನ್ನನ್ನು ಈ ನಾಲ್ವತ್ತು ವ
ರುಷ ಅರಣ್ಯದಲ್ಲಿ ನಡಿಸಿದ ಮಾರ್ಗವನ್ನೆಲ್ಲಾ ಜ್ಞಾಪಕ ಮಾಡ
೩ ಬೇಕು. ಅವನು ನಿನ್ನನ್ನು ಕುಂದಿಸಿ, ನಿನ್ನನ್ನು ಹಸಿಯ ಮಾಡಿ
ದನು. ಕೊಟ್ಟಿ ಮಾತ್ರದಿಂದ ಮನುಷ್ಯನು ಬದುಕುವದಿಲ್ಲವೆಂ
ದೂ, ಕರ್ತನ ಬಾಯಿಯೊಳಗಿಂದ ಹೊರಡುವ ಎಲ್ಲಾದರಿಂದ ಮ
ನುಷ್ಯನು ಬದುಕುತ್ತಾನೆಂದೂ, ನಿನಗೆ ತಿಳಿಸುವ ಹಾಗೆ, ನೀನು
ತಿಳಿಯದಂಥ, ನಿನ್ನ ಪಿತೃಗಳು ತಿಳಿಯದಂಥ, ಮನ್ನವನ್ನು
೪ ನಿನಗೆ ಉಣ್ಣ ಕೊಟ್ಟೆನು. ಈ ನಾಲ್ವತ್ತು ವರುಷ ನಿನ್ನ ಮೇ
ಲಿರುವ ವಸ್ತ್ರಗಳು ಜೀರ್ಣವಾಗಲಿಲ್ಲ; ನಿನ್ನ ಕಾಲುಗಳು ಬಾತು
೫ ಹೋಗಲಿಲ್ಲ. ಇದಲ್ಲದೆ ಒಬ್ಬನು ತನ್ನ ಮಗನನ್ನು ಶಿಕ್ಷಿಸುವ
ಪ್ರಕಾರ, ನಿನ್ನ ದೇವರಾದ ಕರ್ತನು ನಿನ್ನನ್ನು ಶಿಕ್ಷಿಸುತ್ತಾನೆಂದು,
೬ ನಿನ್ನ ಹೃದಯದಲ್ಲಿ ತಿಳಿಕೊಳ್ಳ ಬೇಕು. ಹೀಗಿರುವದರಿಂದ
ನಿನ್ನ ದೇವರಾದ ಕರ್ತನ ಆಜ್ಞೆಗಳನ್ನು ಕೈಕೊಂಡು, ಅವನ
ಮಾರ್ಗಗಳಲ್ಲಿ ನಡೆದು ಕೊಂಡು, ಅವನಿಗೆ ಭಯ ಪಡ ಬೇಕು.

೭ ಯಾಕಂದರೆ ನಿನ್ನ ದೇವರಾದ ಕರ್ತನು ನಿನ್ನನ್ನು ಒಳ್ಳೇ
ದೇಶಕ್ಕೆ ಬರ ಮಾಡುತ್ತಾನೆ; ಅದು ನೀರಿನ ಹಳ್ಳಗಳೂ ತಗ್ಗುಗಳಲ್ಲಿ
ಯೂ ಬೆಟ್ಟದಲ್ಲಿಯೂ ಹೊರಗೆ ಬರುವ ಬುಗ್ಗೆಗಳೂ ಉಳ್ಳ
೮ ದೇಶವೇ. ಗೋಧಿಯೂ, ಜವೆಯೂ, ದ್ರಾಕ್ಷೇ ಗಿಡವೂ, ಅಂಜೂ
ರ, ದಾಳಿಂಬರಗಳೂ ಉಳ್ಳ ದೇಶವೇ; ಎಣ್ಣೆಯ ಇಪ್ಪೆಯೂ,
ಜೇನೂ ಉಳ್ಳ ದೇಶವೇ. ನೀನು ಬತಶನವಿಲ್ಲದೆ ಕೊಟ್ಟಿ ಉಣ್ಣು
೯ ವ ದೇಶ; ಅದರಲ್ಲಿ ಯಾವದರ ಕೊರತೆ ನಿನಗೆ ಆಗದು; ಅದರ
ಕಲ್ಲುಗಳು ಕಬ್ಬಿಣವಾಗಿರುವಂಥ, ಅದರ ಬೆಟ್ಟಗಳೊಳಗಿಂದ ತಾ
ಮ್ರವನ್ನು ಅಗಿಯ ತಕ್ಕಂಥ ದೇಶವು.

೧೦ ನೀನು ಉಂಡು, ತೃಪ್ತಿ ಹೊಂದಿದಾಗ, ನಿನ್ನ ದೇವರಾದ ಕರ್ತ
ನನ್ನು ಅವನು ನಿನಗೆ ಕೊಡುವ ಒಳ್ಳೇ ದೇಶದಲ್ಲಿ ಹರಸ ಬೇಕು.
೧೧ ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಅವನ ಆಜ್ಞೆ ನ್ಯಾಯ
ನೇಮಗಳನ್ನು ಕಾಪಾಡದೆ, ನಿನ್ನ ದೇವರಾದ ಕರ್ತನನ್ನು ಮರೆ

೧೨ ಯೆದ ಹಾಗೆ ನೋಡಿಕೋ. ನೀನು ಉಂಡು, ತೃಪ್ತಿ ಹೊಂದಿದಾ
ಗಲೂ; ಒಳ್ಳೇ ಮನೆಗಳನ್ನು ಕಟ್ಟಿ, ಅವುಗಳಲ್ಲಿ ವಾಸ ಮಾಡು
೧೩ ವಾಗಲೂ; ನಿನ್ನ ದನ ಕುರಿಗಳು ಹೆಚ್ಚಿದಾಗಲೂ; ಬೆಳ್ಳಿ ಭಂಗಾ
ರ ನಿನಗೆ ಹೆಚ್ಚಿದಾಗಲೂ, ನಿನಗಿರುವಥಾದ್ದೆಲ್ಲಾ ಹೆಚ್ಚಿದಾಗಲೂ;
೧೪ ನಿನ್ನ ಹೃದಯವು ಎಬ್ಬಿಸಿ ಕೊಳ್ಳದ ಹಾಗೆಯೂ, ನಿನ್ನನ್ನು
ಐಗುತ್ತ ದೇಶದೊಳಗಿಂದ ದಾಸತ್ವದ ಮನೆಯೊಳಗಿಂದ ಹೊರಗೆ
೧೫ ಬರ ಮಾಡಿದಂಥ, ಅಗ್ನಿ ಸರ್ಪಗಳೂ, ಚೇಳುಗಳೂ, ಬರವೂ
ಉಳ್ಳ ನೀರಿಲ್ಲದ ಆ ದೊಡ್ಡ ಭಯಂಕರವಾದ ಅರಣ್ಯದಲ್ಲಿ ನಿನ್ನ
ನ್ನು ನಡಿಸಿದಂಥ, ಬಿಳೀ ಕಲ್ಲಿನ ಬಂಡೆಯೊಳಗಿಂದ ನಿನಗೆ ನೀರು
೧೬ ತರಿಸಿದಂಥ, ನಿನ್ನನ್ನು ಕಂದಿಸಿ, ಕೊಥಿಸಿ, ಕಡೆಯಲ್ಲಿ ನಿನಗೆ
ಒಳ್ಳೇದನ್ನು ಮಾಡುವಂತೆ, ನಿನ್ನ ಪಿತೃಗಳು ಅರಿಯದ ಮನ್ನವ
ನ್ನು ಅರಣ್ಯದಲ್ಲಿ ನಿನಗೆ ಉಣ್ಣಿಸಿದಂಥ, ನಿನ್ನ ದೇವರಾದ ಕರ್ತ
೧೭ ನನ್ನು ಮರೆತು, ನನ್ನ ಬಲವೇ ನನ್ನ ಕೈಯ ಸಾಮರ್ಥ್ಯವೇ
ನನಗೆ ಈ ಆಸ್ತಿಯನ್ನು ಸಂಪಾದಿಸಿತೆಂದು, ಹೇಳಿ ಕೊಳ್ಳದ
೧೮ ಹಾಗೆಯೂ ನೋಡಿಕೋ. ನಿನ್ನ ದೇವರಾದ ಕರ್ತನನ್ನು ಜ್ಞಾ
ಪಕ ಮಾಡ ಬೇಕು; ಅವನೇ ನಿನ್ನ ಪಿತೃಗಳಿಗೆ ಪ್ರಮಾಣ
ಮಾಡಿದ ತನ್ನ ಒಡಂಬಡಿಕೆಯನ್ನು ಈ ಹೊತ್ತು ಅಗುವಂತೆ
ಸ್ಥಾಪಿಸುವ ಹಾಗೆ, ಆಸ್ತಿಯನ್ನು ಸಂಪಾದಿಸುವ ಬಲವನ್ನು ನಿನ
ಗೆ ಕೊಡುತ್ತಾನೆ.

೧೯ ನೀನು ಹ್ಯಾಗಾದರೂ ನಿನ್ನ ದೇವರಾದ ಕರ್ತನನ್ನು ಮರೆತು,
ಬೇರೆ ದೇವರುಗಳನ್ನು ಹಿಂಬಾಲಿಸಿ, ಅವುಗಳನ್ನು ಸೇವಿಸಿ, ಅವು
ಗಳಿಗೆ ಅಡ್ಡ ಬಿದ್ದರೆ, ನೀವು ನಶಿಸಲೇ ನಶಿಸುವಿರೆಂದು, ನಿಮಗೆ ಈ
೨೦ ಹೊತ್ತು ಸಾಕ್ಷಿ ಹೇಳುತ್ತೇನೆ. ನೀವು ನಿಮ್ಮ ದೇವರಾದ ಕರ್ತನ
ಮಾತನ್ನು ಕೇಳದ ಕಾರಣ, ಕರ್ತನು ನಿಮ್ಮ ಮುಂದೆ ನಾಶ ಮಾ
ಡುವ ಜನಾಂಗಗಳ ಹಾಗೆಯೇ ನಾಶವಾಗುವಿರಿ.

## ೯. ಸಂಧಿ.

೧ ಇಸ್ರಯೇಲೇ, ಕೇಳು; ನೀನು ಪ್ರವೇಶಿಸಿ, ನಿನಗಿಂತ ದೊಡ್ಡ ಬಲಿ
ಷ್ಠ ಜನಾಂಗಗಳನ್ನೂ, ಆಕಾಶದ ಪರ್ಯಂತರ ಭದ್ರ ಮಾಡಿದ
೨ ದೊಡ್ಡ ಪಟ್ಟಣಗಳನ್ನೂ, ಅನಾಕ್ಯರ ಮಕ್ಕಳ ಮುಂದೆ ಯಾರು
ನಿಲ್ಲಲಾರೆಂದು, ನೀನು ಕೇಳಿ, ತಿಳಿಕೊಂಡಂಥ, ಆ ದೊಡ್ಡ ಎತ್ತರ
ವಾದ ಜನವಾಗಿರುವ ಅನಾಕ್ಯರ ಮಕ್ಕಳನ್ನು ಸ್ವತಂತ್ರಿಸಿ ಕೊ
೩ ಳ್ಳುವದಕ್ಕೆ ಈ ಹೊತ್ತು ಯೊರ್ದನನ್ನು ದಾಟುತ್ತೀ. ಹೀಗಿರುವ
ದರಿಂದ ನೀನು ಈ ಹೊತ್ತು ತಿಳುಕೊಳ್ಳ ತಕ್ಕದ್ದೇನಂದರೆ—ನಿನ್ನ
ದೇವರಾದ ಕರ್ತನೇ ನಿನ್ನ ಮುಂದೆ ದಾಟಿ ಹೋಗುತ್ತಾನೆ; ಅವ
ನು ದಹಿಸುವ ಅಗ್ನಿಯಾಗಿ ಅವರನ್ನು ನಾಶನ ಮಾಡುವನು;
ಅವನು ಅವರನ್ನು ನಿನ್ನ ಮುಂದೆ ಬೊಗ್ಗ ಮಾಡುವನು; ಈ
ಪ್ರಕಾರ ಅವರನ್ನು ಸ್ವತಂತ್ರಿಸಿ ಕೊಂಡು, ಕರ್ತನು ನಿನಗೆ ಹೇಳಿ
ದ ಹಾಗೆ, ಅವರನ್ನು ಬೇಗ ನಾಶನ ಮಾಡುವಿ.

೪ ನಿನ್ನ ದೇವರಾದ ಕರ್ತನು ಅವರನ್ನು ನಿನ್ನ ಮುಂದೆ ಶಳ್ಳಿ
ಹಾಕಿದಾಗ, ನನ್ನ ನೀತಿಯ ನಿಮಿತ್ತ ಕರ್ತನು ನನ್ನನ್ನು ಈ ದೇ
ಶವನ್ನು ಸ್ವತಂತ್ರಿಸಿ ಕೊಳ್ಳುವ ಹಾಗೆ, ಕರ ಕೊಂಡು ಬಂದಿದ್ದಾ
ನೆಂದು, ನಿನ್ನ ಹೃದಯದಲ್ಲಿ ಹೇಳಿ ಕೊಳ್ಳ ಬೇಡ; ಆ ಜನಾಂ
೫ ಗಗಳ ಕೆಟ್ಟತನದ ನಿಮಿತ್ತ ಕರ್ತನು ಅವರನ್ನು ನಿನ್ನ ಮುಂದೆ
ಹೊರಡಿಸುತ್ತಾನೆ. ನಿನ್ನ ನೀತಿಗೋಸ್ಕರವೂ ನಿನ್ನ ಹೃದಯದ
ನೆಟ್ಟಗಿತನಕ್ಕೋಸ್ಕರವೂ ನೀನು ಅವರ ದೇಶವನ್ನು ಸ್ವತಂತ್ರಿಸಿ
ಕೊಳ್ಳುವದಕ್ಕೆ ಬರುವದಿಲ್ಲ; ಆ ಜನಾಂಗಗಳ ಕೆಟ್ಟತನಕ್ಕೋಸ್ಕ
ರವೂ, ಕರ್ತನು ನಿನ್ನ ಪಿತೃಗಳಾದ ಅಬ್ರಹಾಮ, ಇಸಾಕ್,
ಯಾಕೋಬರಿಗೆ ಮಾಡಿದ ಪ್ರಮಾಣವನ್ನು ಪೂರೈಸುವ ಹಾ
ಗೆಯೂ, ನಿನ್ನ ಸೇವರಾದ ಕರ್ತನು ಅವರನ್ನು ನಿನ್ನ ಮುಂದೆ
ಹೊರಡಿಸುತ್ತಾನೆ.

೬ ಹೀಗಿರುವದರಿಂದ ನಿನ್ನ ನೀತಿಗೋಸ್ಕರ ನಿನ್ನ ದೇವರಾದ ಕ
ರ್ತನು ನಿನಗೆ ಈ ಒಳ್ಳೇ ದೇಶವನ್ನು ಸ್ವತಂತ್ರಿಸಿ ಕೊಳ್ಳುವದಕ್ಕೆ
ಕೊಡುವದಿಲ್ಲವೆಂದು, ತಿಳುಕೊಳ್ಳ ಬೇಕು; ಯಾಕಂದರೆ ನೀನು
೭ ಕಠಿಣವಾದ ಕುತ್ತಿಗೆಯುಳ್ಳ ಜನವೇ. ನೀನು ಅರಣ್ಯದಲ್ಲಿ ನಿ
ನ್ನ ದೇವರಾದ ಕರ್ತನಿಗೆ ಕೋಪವೆಬ್ಬಿಸಿದ್ದನ್ನು ಜ್ಞಾಪಕ ಮಾಡಿ,
ಮರೆಯ ಬೇಡ; ನೀನು ಐಗುತ್ತ ದೇಶದಿಂದ ಹೊರಟ ದಿವಸ
ಮೊದಲ್ಗೊಂಡು, ಈ ಸ್ಥಳಕ್ಕೆ ಬರುವ ಪರ್ಯಂತರ, ಕರ್ತನಿಗೆ
೮ ತಿರುಗ ಬೀಳುತ್ತಿದ್ದಿರಿ. ಹೋರೆಬಿನಲ್ಲಿಯೂ ಕರ್ತನಿಗೆ ಕೋಪ
ವೆಬ್ಬಿಸಿದಿರಿ; ಕರ್ತನು ನಿಮ್ಮನ್ನು ನಾಶನ ಮಾಡುವ ಹಾಗೆ ನಿಮ್ಮ
ಮೇಲೆ ಪಿಟ್ಟು ಮಾಡಿದನು.

೯ ಆ ಕಲ್ಲಿನ ಹಲಿಗೆಗಳನ್ನು, ಕರ್ತನು ನಿಮ್ಮ ಸಂಗಡ ಮಾಡಿ
ದ ಒಡಂಬಡಿಕೆಯ ಹಲಿಗೆಗಳನ್ನು, ಈಸಿ ಕೊಳ್ಳುವದಕ್ಕೆ ನಾನು
ಬೆಟ್ಟದ ಮೇಲೆ ಏರಿದಾಗ, ನಾಲ್ವತ್ತು ದಿವಸ ನಾಲ್ವತ್ತು ರಾತ್ರಿ
೧೦ ಬೆಟ್ಟದಲ್ಲಿದ್ದೆನು; ಕೊಟ್ಟಿ ತಿನ್ನಲಿಲ್ಲ; ನೀರು ಕುಡಿಯೆಲಿಲ್ಲ; ಆಗ
ಕರ್ತನು ನನಗೆ ದೇವರ ಬೆರಳಿನಿಂದ ಬರೆದ ಆ ಎರಡು ಕಲ್ಲಿನ ಹ
ಲಿಗೆಗಳನ್ನು ಕೊಟ್ಟನು; ಕರ್ತನು ನಿಮ್ಮ ಸಂಗಡ ಬೆಟ್ಟದಲ್ಲಿ
ಬೆಂಕಿಯೊಳಗಿಂದ ಕೂಟದ ದಿವಸದಲ್ಲಿ ಆಡಿದ ಮಾತುಗಳೆಲ್ಲಾ
೧೧ ಅವುಗಳಲ್ಲಿದ್ದವು. ನಾಲ್ವತ್ತು ದಿವಸ ನಾಲ್ವತ್ತು ರಾತ್ರಿಗಳಾದ
ಮೇಲೆ, ಕರ್ತನು ನನಗೆ ಒಡಂಬಡಿಕೆಯ ಹಲಿಗೆಗಳಾದ ಆ ಎರಡು
೧೨ ಕಲ್ಲಿನ ಹಲಿಗೆಗಳನ್ನು ಕೊಟ್ಟನು. ಆಗ ಕರ್ತನು ನನಗೆ ಹೇಳಿ
ದ್ದೇನಂದರೆ—ಎದ್ದು, ಇಲ್ಲಿಂದ ಬೇಗ ಇಳಿದು ಹೋಗು; ಯಾಕಂ
ದರೆ ನೀನು ಐಗುತ್ತ ದೇಶದೊಳಗಿಂದ ಮೇಲೆ ಬರ ಮಾಡಿದ
ನಿನ್ನ ಜನರು ಕೆಟ್ಟು ಹೋದರು; ನಾನು ಅವರಿಗೆ ಆಜ್ಞಾಪಿಸಿದ
ಮಾರ್ಗವನ್ನು ಬಿಟ್ಟು, ತಮಗೆ ಎರಕ ಹೊಯಿದ ವಿಗ್ರಹವನ್ನು
ಮಾಡಿ ಕೊಂಡರು.

೧೩ ಮತ್ತು ಕರ್ತನು ನನಗೆ ಹೇಳಿದ್ದೇನಂದರೆ—ನಾನು ಈ ಜನವ
ನ್ನು ನೋಡಿದ್ದೇನೆ; ಇಗೋ, ಇದು ಕಠಿಣ ಕುತ್ತಿಗೆಯುಳ್ಳ ಜನ
೧೪ ವೇ. ನನ್ನನ್ನು ಬಿಡು; ಆಗ ಅವರನ್ನು ನಾಶನ ಮಾಡಿ, ಅವರ
ಹೆಸರನ್ನು ಆಕಾಶದ ಕೆಳಗಿಂದ ಅಳಿಸಿ ಬಿಟ್ಟು, ನಿನ್ನನ್ನು ಅವರು
೧೫ ಗಿಂತ ಬಲವಾದ ಹೆಚ್ಚಾದ ಜನಾಂಗವಾಗ ಮಾಡುವೆನು. ಆಗ ನಾ
ನು ತಿರುಗಿ ಕೊಂಡು, ಬೆಟ್ಟದಿಂದ ಇಳಿದೆನು; ಆ ಬೆಟ್ಟವು ಬೆಂಕಿ
ಯಿಂದ ಉರಿಯುತ್ತಿತ್ತು; ಒಡಂಬಡಿಕೆಯ ಎರಡು ಹಲಿಗೆಗಳು ನ
೧೬ ನ್ನ ಎರಡು ಕೈಗಳಲ್ಲಿ ಇದ್ದವು. ನಾನು ನೋಡಿದಾಗ, ಅಗೋ,
ನೀವು ನಿಮ್ಮ ದೇವರಾದ ಕರ್ತನಿಗೆ ಪಾಪ ಮಾಡಿ, ಎರಕ ಹೊ
ಯಿದ ಕರುವನ್ನು ನಿಮಗೆ ಮಾಡಿ ಕೊಂಡು, ಕರ್ತನು ನಿಮಗೆ
೧೭ ಆಜ್ಞಾಪಿಸಿದ ಮಾರ್ಗವನ್ನು ಬೇಗ ಬಿಟ್ಟು ಹೋಗಿದ್ದಿರಿ. ಆಗ
ನಾನು ಆ ಎರಡು ಹಲಿಗೆಗಳನ್ನು ತಕ್ಕೊಂಡು, ನನ್ನ ಎರಡು ಕೈ
ಗಳೊಳಗಿಂದ ಬಿಸಾಟು, ನಿಮ್ಮ ಮುಂದೆ ಒಡೆದು ಹಾಕಿದೆನು.
೧೮ ಆ ಮೇಲೆ ನೀವು ಮಾಡಿದ ಎಲ್ಲಾ ಪಾಪಗಳ ನಿಮಿತ್ತವೂ, ನೀವು
ಕರ್ತನ ದೃಷ್ಟಿಯಲ್ಲಿ ಕೆಟ್ಟದ್ದನ್ನು ಮಾಡಿ, ಅವನಿಗೆ ಕರ ಕರೆ





ಯನ್ನು ಎಬ್ಬಿಸಿದ ನಿಮಿತ್ತವೂ, ಮುಂಚೆನಂತೆ ನಾಲ್ವತ್ತು ದಿವಸ
ನಾಲ್ವತ್ತು ರಾತ್ರಿ ಕೊಟ್ಟಿ ತಿನ್ನದೆ, ನೀರು ಕುಡಿಯದೆ, ಕರ್ತನ
೧೯ ಮುಂದೆ ಬಿದ್ದಿದ್ದೆನು. ಯಾಕಂದರೆ ಕರ್ತನು ನಿಮ್ಮನ್ನು ನಾಶನ
ಮಾಡುವ ಹಾಗೆ, ನಿಮ್ಮ ಮೇಲೆ ಮಾಡುವ ಕೋಪ ರೌದ್ರಗಳಿಗೆ
ಹೆದರಿದೆನು; ಅದರೆ ಆ ಸಾರಿ ಕೂಡ ಕರ್ತನು ನನ್ನನ್ನು ಕೇಳಿದ
೨೦ ನು. ಆಕೋನನ ಮೇಲೆಯೂ ಕರ್ತನು ಅವನನ್ನು ನಾಶನ
ಮಾಡುವ ಹಾಗೆ, ಬಹಳ ಕೋಪ ಮಾಡಿದನು; ಆದದರಿಂದ ಆ
ಕೋನನಿಗೋಸ್ಕರವೂ ಆ ಸಮಯದಲ್ಲಿ ಪ್ರಾರ್ಥನೆ ಮಾಡಿದೆ
೨೧ ನು. ಇದಲ್ಲದೆ ನೀವು ಮಾಡಿದ ಪಾಪವಾಗಿರುವ ಆ ಕರುವನ್ನು
ತಕ್ಕೊಂಡು, ಬೆಂಕಿಯಲ್ಲಿ ಸುಟ್ಟು, ಒಡೆದು, ಅದು ಧೂಳಿನಂತೆ ಪು
ಡಿಯಾಗುವ ಪರ್ಯಂತರ ಚನ್ನಾಗಿ ಅರೆದು, ಅದರ ಧೂಳನ್ನು
ಬೆಟ್ಟದಿಂದಿಳಿಯುವ ಹಳ್ಳದಲ್ಲಿ ಹಾಕಿದೆನು.

೨೨ ತಾಬೇರದಲ್ಲಿಯೂ, ಮಸ್ಸದಲ್ಲಿಯೂ, ಕಿಬ್ರೋತ್ ಹತ್ತಾವ
೨೩ ದಲ್ಲಿಯೂ, ಕರ್ತನಿಗೆ ಪಿಟ್ಟು ಎಬ್ಬಿಸಿದವರಾದಿರಿ. ಇದಲ್ಲದೆ ಕ
ರ್ತನು ನಿಮ್ಮನ್ನು ಕಾದೆಷ್ ಬರ್ನೇಯದಿಂದ ಕಳುಹಿಸಿ, ನೀವು
ಮೇಲೆ ಹೋಗಿ, ನಾನು ನಿನಗೆ ಕೊಡುವ ದೇಶವನ್ನು ಸ್ವತಂತ್ರಿಸಿ
ಕೊಳ್ಳಿರೆಂದು ಹೇಳಿದಾಗ, ನೀವು ನಿಮ್ಮ ದೇವರಾದ ಕರ್ತನ ಅ
ಪ್ಪಣೆಗೆ ತಿರುಗಿ ಬಿದ್ದು, ಅವನನ್ನು ನಂಬಲಿಲ್ಲ, ಅವನ ಮಾತನ್ನು
೨೪ ಕೇಳಲಿಲ್ಲ. ನಾನು ನಿಮ್ಮನ್ನು ತಿಳಿದಂದಿನಿಂದ ಕರ್ತನಿಗೆ ತಿರುಗ
ಬೀಳುವವರಾಗಿದ್ದಿರಿ.

೨೫ ಹೀಗಿರಲಾಗಿ, ಕರ್ತನು, ನಿಮ್ಮನ್ನು ನಾಶನ ಮಾಡುತ್ತೇನೆಂದು
ಹೇಳಿದ್ದರಿಂದ, ನಾನು ಮುಂಚೆ ಬಿದ್ದು ಕೊಂಡ ಹಾಗೆ, ಮತ್ತು ನಾ
ಲ್ವತ್ತು ದಿವಸ ನಾಲ್ವತ್ತು ರಾತ್ರಿ ಕರ್ತನ ಮುಂದೆ ಬಿದ್ದಿದ್ದೆನು.
೨೬ ನಾನು ಕರ್ತನಿಗೆ ಪ್ರಾರ್ಥನೆ ಮಾಡಿ, ಹೇಳಿದ್ದೇನಂದರೆ—ಕರ್ತ
ನಾದ ಯೆಹೋವನೇ, ನಿನ್ನ ಜನವನ್ನೂ, ನೀನು ನಿನ್ನ ದೊಡ್ಡ
ಸ್ತಿಕೆಯಿಂದ ವಿಮೋಚಿಸಿ, ಬಲವಾದ ಕೈಯಿಂದ ಐಗುತ್ತದೊಳ
ಗಿಂದ ಹೊರಗೆ ಬರ ಮಾಡಿದ ನಿನ್ನ ಸ್ವಾಸ್ತ್ಯವನ್ನೂ ಕೆಡಿಸ
೨೭ ಬೇಡ. ನಿನ್ನ ದಾಸರಾದ ಅಬ್ರಹಾಮ, ಇಸಾಕ್, ಯಾಕೋಬ
ರನ್ನು ಜ್ಞಾಪಕ ಮಾಡು; ಈ ಜನರ ಕಾಠಿಣ್ಯದ ಮೇಲೆಯೂ
ಅವರ ದುಷ್ಟತ್ವದ ಮೇಲೆಯೂ, ಅವರ ಪಾಪದ ಮೇಲೆಯೂ
೨೮ ದೃಷ್ಟಿ ಇಡ ಬೇಡ. ನಮ್ಮನ್ನು ಎಲ್ಲಿಂದ ಹೊರಗೆ ಬರ ಮಾಡಿದಿ
ಯೋ, ಆ ದೇಶದವರು—ಕರ್ತನು ಅವರಿಗೆ ಹೇಳಿದ ದೇಶದಲ್ಲಿ
ಅವರನ್ನು ಬರ ಮಾಡಲಾರದೆ ಇದ್ದದರಿಂದಲೂ, ಅವರನ್ನು ಹಗೆ
ಮಾಡಿದ್ದರಿಂದಲೂ, ಅರಣ್ಯದಲ್ಲಿ ಅವರನ್ನು ಕೊಂದು ಹಾಕುವ
ಹಾಗೆ, ಅವರನ್ನು ಹೊರಗೆ ಬರ ಮಾಡಿದನೆಂದು ಹೇಳ್ಳ ಬಾರದು.
೨೯ ಆದಾಗ್ಯೂ ನೀನು ನಿನ್ನ ದೊಡ್ಡ ಕತ್ತಿಯಿಂದಲೂ, ನಿನ್ನ ಚಾಚಿ
ದ ಕೈಯಿಂದಲೂ, ಹೊರಗೆ ಬರ ಮಾಡಿದ ನಿನ್ನ ಜನವೂ, ನಿನ್ನ
ಸ್ವಾಸ್ತ್ಯವೂ ಇವರೇ.

## ೧೦. ಸಂಧಿ.

೧ ಆ ಕಾಲದಲ್ಲಿ ಕರ್ತನು ನನಗೆ ಹೇಳ್ಳಿದ್ದೇನಂದರೆ—ಆ ಮುಂಚಿ
ನವುಗಳ ಹಾಗೆ ಎರಡು ಕಲ್ಲಿನ ಹಲಿಗೆಗಳನ್ನು ನಿನಗೆ ಕೆತ್ತಿ ಕೊಂ
ಡು, ಬೆಟ್ಟವನ್ನೇರಿ, ನನ್ನ ಬಳಿಗೆ ಬಾ; ಮತ್ತು ಮರದ ಬೆಟ್ಟಿಗೆ
೨ ಯನ್ನು ನಿನಗೆ ಮಾಡಿ ಕೊಳ್ಳ ಬೇಕು. ಆಗ ನೀನು ಒಡೆದ ಆ
ಮೊದಲಿನ ಹಲಿಗೆಗಳ ಮೇಲಿದ್ದ ಮಾತುಗಳನ್ನು ಈ ಹಲಿಗೆಗಳ
೩ ಮೇಲೆ ಬರೆಯುವೆನು; ಆ ಮೇಲೆ ನೀನು ಅವುಗಳನ್ನು ಬೆಟ್ಟಿಗೆಯ
ಲ್ಲಿ ಇಡ ಬೇಕು. ಈ ಪ್ರಕಾರ ನಾನು ಶಿಟ್ಟೀಮ್ ಮರದ ಬೆಟ್ಟಿಗೆ
ಯನ್ನು ಮಾಡಿ, ಕಲ್ಲಿನ ಎರಡು ಹಲಿಗೆಗಳನ್ನು ಮುಂಚೆವುಗ
ಳ ಹಾಗೆ ಕೆತ್ತಿ, ಆ ಎರಡು ಹಲಿಗೆಗಳನ್ನು ಕೈಯಲ್ಲಿ ಹಿಡು ಕೊಂ
೪ ಡು ಬೆಟ್ಟವನ್ನೇರಿದೆನು. ಆ ಹಲಿಗೆಗಳ ಮೇಲೆ ಕರ್ತನು ಮುಂ
ಚೆ ಬರೆದದರ ಹಾಗೆ, ಕರ್ತನು ನಿಮಗೆ ಬೆಟ್ಟದಲ್ಲಿ ಬೆಂಕಿಯೊಳಗಿಂ
ದ ಸಭೆಯ ದಿವಸದಲ್ಲಿ ಹೇಳ್ಳಿದ ಹತ್ತು ವಾಕ್ಯಗಳನ್ನು ಬರೆದು,
೫ ನನಗೆ ಕೊಟ್ಟನು. ತರುವಾಯ ನಾನು ತಿರುಗಿ ಕೊಂಡು, ಬೆಟ್ಟ
ದಿಂದ ಇಳ್ಳಿದು, ಆ ಹಲಿಗೆಗಳನ್ನು ನಾನು ಮಾಡಿದ ಬೆಟ್ಟಿಗೆಯ
ಲ್ಲಿ ಇಟ್ಟಿನು. ಕರ್ತನು ನನಗೆ ಆಜ್ಞಾಪಿಸಿದ ಹಾಗೆ ಅವು ಅಲ್ಲಿಯೇ
ಇರುತ್ತವೆ.

೬ ಇದಲ್ಲದೆ ಇಸ್ರಯೇಲ್ ಮಕ್ಕಳು ಯಾಕಾನನ ಮಕ್ಕಳ ಬೇ
ಕೋಥನ್ನು ಬಿಟ್ಟು, ಮೋಸೆರಕ್ಕೆ ಹೊರಟಾಗ, ಆಕೋನನು ಅ
ಲ್ಲಿ ಸತ್ತನು; ಅಲ್ಲೇ ಅವನನ್ನು ಹೂಳಿಟ್ಟಿವು; ಅವನ ಮಗನಾ
೭ ದ ಎಲೆಯಾಜರನು ಅವನ ಬದಲಾಗಿ ಯಾಜಕನಾದನು. ಅಲ್ಲಿಂ
ದ ಗುದ್ದೊದಕ್ಕೂ, ಗುದ್ದೊದದಿಂದ ನೀರಿನ ಪ್ರವಾಹಗಳುಳ್ಳ ದೇ
ಶವಾದ ಯೊತ್ಬಥಿಗೂ ಹೊರಟಿವು.

೮ ಆ ಕಾಲದಲ್ಲಿ ಕರ್ತನು ಲೇವಿ ಕುಲವನ್ನು, ಕರ್ತನ ಒಡಂಬಡಿಕೆ
ಯ ಪೆಟ್ಟಿಗೆಯನ್ನು ಹೊರುವದಕ್ಕೂ, ಕರ್ತನ ಮುಂದೆ ನಿಂತು
ಕೊಂಡು, ಅವನಿಗೆ ಸೇವೆ ಮಾಡಿ, ಅವನ ಹೆಸರಿನಲ್ಲಿ ಹರಸುವದ
೯ ಕ್ಕೂ, ಈ ದಿನದ ಮಟ್ಟಿಗೂ ಬೇರೆ ಮಾಡಿದನು. ಆದದರಿಂದ
ಲೇವಿಗೆ ಅವನ ಸಹೋದರರ ಸಂಗಡ ಪಾಲೂ, ಸ್ವಾಸ್ತ್ಯವೂ
ಉಂಟಾಗಲಿಲ್ಲ; ಅವನ ದೇವರಾದ ಕರ್ತನು ಅವನಿಗೆ ಹೇಳ್ಳಿದಂತೆ,
ಕರ್ತನೇ ಅವನ ಸ್ವಾಸ್ತ್ಯವು.

೧೦ ಇದಲ್ಲದೆ ನಾನು ಮುಂಚಿನ ದಿವಸಗಳ ಹಾಗೆ ನಾಲ್ವತ್ತು ದಿವ
ಸ ನಾಲ್ವತ್ತು ರಾತ್ರಿ ಬೆಟ್ಟದಲ್ಲಿ ನಿಂತೆನು; ಕರ್ತನು ಆ ಕಾಲದಲ್ಲಿ
ಸಹ ನನ್ನ ಮಾತು ಕೇಳ್ಳಿದನು; ನಿನ್ನನ್ನು ಕೆಡಿಸುವದಕ್ಕೆ ಕರ್ತ
೧೧ ನು ಚಿತ್ತ ಪಾಡಲಿಲ್ಲ. ಮತ್ತು ಕರ್ತನು ನನಗೆ ಹೇಳ್ಳಿದ್ದೇನಂದ
ರೆ—ಎದ್ದು, ಜನರ ಮುಂದೆ ಹೊರಡು; ಅವರು ಹೋಗಿ, ನಾನು
ಅವರ ಪಿತೃಗಳಿಗೆ ಕೊಡುತ್ತೇನೆಂದು, ಪ್ರಮಾಣ ಮಾಡಿದ ದೇಶ
ವನ್ನು ಸ್ವತಂತ್ರಿಸಿ ಕೊಳ್ಳಲಿ.

೧೨ ಹಾಗಾದರೆ ಈಗ, ಇಸ್ರಯೇಲೇ, ನಿನ್ನ ಕರ್ತನಾದ ದೇವರಿಗೆ
ಭಯ ಪಟ್ಟು, ಅವನ ಎಲ್ಲಾ ಮಾರ್ಗಗಳಲ್ಲಿ ನಡೆದು ಕೊಂಡು,
ಅವನನ್ನು ಪ್ರೀತಿ ಮಾಡಿ, ನಿನ್ನ ಕರ್ತನಾದ ದೇವರಿಗೆ ನಿನ್ನ
ಎಲ್ಲಾ ಹೃದಯದಿಂದಲೂ ನಿನ್ನ ಎಲ್ಲಾ ಪ್ರಾಣದಿಂದಲೂ ಸೇವೆ
೧೩ ಮಾಡಿ, ನಾನು ಈ ಹೊತ್ತು ನಿನ್ನ ಮೇಲಿಗಾಗಿ ನಿನಗೆ ಆಜ್ಞಾಪಿ
ಸುವ ಕರ್ತನ ಆಜ್ಞೆಗಳನ್ನೂ, ಅವನ ನೇಮಗಳನ್ನೂ, ಕಾಪಾಡು
ವದೇ ಹೊರ್ತು, ಮತ್ತೇನು ನಿನ್ನ ದೇವರಾಗಿರುವ ಕರ್ತನು ನಿ
೧೪ನ್ನಿಂದ ಕೇಳುತ್ತಾನೆ? ಇಗೋ, ಆಕಾಶವೂ, ಆಕಾಶದಾಕಾಶವೂ,
ಭೂಮಿಯೂ, ಅದರಲ್ಲಿರುವಂಥಾದ್ದೆಲ್ಲವೂ, ನಿನ್ನ ದೇವರಾಗಿರು
೧೫ ವ ಕರ್ತನವೇ. ಆದರೂ ನಿನ್ನ ಪಿತೃಗಳ ಮೇಲೆ ಕರ್ತನು ಮ
ನಸ್ಸಿಟ್ಟು, ಅವರನ್ನು ಪ್ರೀತಿ ಮಾಡಿ, ಅವರ ಬೀಜವಾಗಿರುವ
ನಿಮ್ಮನ್ನು, ಈ ಹೊತ್ತು ಇರುವ ಪ್ರಕಾರ, ಎಲ್ಲಾ ಜನಗಳೊಳ
೧೬ ಗಿಂದ ಆರಿಸಿ ಕೊಂಡನು. ಹೀಗಿರುವದರಿಂದ ನಿಮ್ಮ ಹೃದಯಗ
ಳ ಮುಂದೊಗಲನ್ನು ಪರಿಛೇದಿಸಿ ಕೊಂಡು, ಇನ್ನು ಮೇಲೆ ಕಠಿ

೧೭ ಣ ಕುತ್ತಿಗೆಯುಳ್ಳವರಾಗಿರ ಬೇಡಿರಿ. ಯಾಕಂದರೆ ನಿಮ್ಮ ದೇ
ವರಾದ ಕರ್ತನು ಅವನೇ ದೇವರುಗಳ ದೇವರು, ಕರ್ತರ ಕರ್ತ
ನು, ಮಹಾ ದೇವರು, ಪರಾಕ್ರಮವುಳ್ಳವನು, ಭಯಂಕರವಾದ
ವನು; ಅವನು ಮುಖದಾಕ್ಷಿಣ್ಯ ನೋಡುವದಿಲ್ಲ, ಲಂಚ ತಕ್ಕೊ
೧೮ ಳ್ಳುವದಿಲ್ಲ. ಅವನು ತಂದೆ ಇಲ್ಲದವರಿಗೂ ವಿಧವೆಯರಿಗೂ ನ್ಯಾ
ಯ ತೀರಿಸುತ್ತಾನೆ; ಪರದೇಶಿಯನ್ನು ಪ್ರೀತಿ ಮಾಡಿ, ಅನ್ನ ವ
೧೯ ಸ್ತ್ರ ಕೊಡುತ್ತಾನೆ. ಹೀಗಿರುವದರಿಂದ ನೀವು ಪರದೇಶಿಯನ್ನು
ಪ್ರೀತಿ ಮಾಡ ಬೇಕು; ಯಾಕಂದರೆ ಐಗುಪ್ತದಲ್ಲಿ ಪರದೇಶಿಗಳಾ
೨೦ ಗಿದ್ದಿರಿ. ನಿನ್ನ ಕರ್ತನಾದ ದೇವರಿಗೆ ಭಯ ಪಡ ಬೇಕು; ಅವನಿ
ಗೆ ಸೇವೆ ಮಾಡಿ, ಅವನಿಗೆ ಅಂಜಿ ಕೊಂಡು, ಅವನ ಹೆಸರಿನಲ್ಲಿ
೨೧ ಪ್ರಮಾಣ ಮಾಡ ಬೇಕು. ನಿನ್ನ ಕಣ್ಣುಗಳು ನೋಡಿದ ಆ ದೊ
ಡ್ಡ ಭಯಂಕರವಾದ ಕಾರ್ಯಗಳನ್ನು ನಿನಗೆ ಮಾಡಿದ ಅವನೇ
ನಿನ್ನ ಸ್ತೋತ್ರವು, ಅವನೇ ನಿನ್ನ ದೇವರು. ಎಪ್ಪತ್ತು ಮಂದಿ
ಯಾಗಿ ನಿನ್ನ ಪಿತೃಗಳು ಐಗುಪ್ತಕ್ಕೆ ಇಳಿದು ಹೋದರು; ಮ
ತ್ತು ಈಗ ನಿನ್ನ ದೇವರಾದ ಕರ್ತನು ನಿನ್ನನ್ನು ಆಕಾಶದ ನಕ್ಷತ್ರ
ಗಳ ಹಾಗೆ ಬಹಳ ಮಾಡಿದ್ದಾನೆ.

## ೧೧. ಸಂಧಿ.

೧ ಹೀಗಿರುವದರಿಂದ ನಿನ್ನ ದೇವರಾದ ಕರ್ತನನ್ನು ಪ್ರೀತಿ ಮಾ
ಡಿ, ಅವನ ಕಾಯಿದೆ, ನೇಮ, ನ್ಯಾಯ, ಆಜ್ಞೆಗಳನ್ನು, ಯಾ
ವಾಗಲೂ ಕೈ ಕೊಳ್ಳ ಬೇಕು.

೨ ನಿಮಗೆ ಈ ಹೊತ್ತು ತಿಳಿದಿರ ಬೇಕು; ಏನಂದರೆ—ನಿಮ್ಮ ದೇ
ವರಾದ ಕರ್ತನು ಮಾಡಿದ ಶಿಕ್ಷೆಯನ್ನೂ, ಅವನ ದೊಡ್ಡಸ್ತಿಕೆಯ
3 ನ್ನೂ, ಬಲವಾದ ಕೈಯನ್ನೂ, ಚಾಚಿದ ತೋಳನ್ನೂ, ಅವನು
ಐಗುಪ್ತದ ಮಧ್ಯದಲ್ಲಿ ಐಗುಪ್ತದ ಅರಸನಾದ ಫರೋನನಿಗೂ,
ಅವನ ಎಲ್ಲಾ ದೇಶಕ್ಕೂ, ಮಾಡಿದ ಗುರುತುಗಳನ್ನೂ, ಕೃತ್ಯ
೪ ಗಳನ್ನೂ, ಐಗುಪ್ತದ ಸೈನ್ಯಕ್ಕೆ ಅವರ ಕುದುರೆಗಳಿಗೂ ರಥಗ
ಳಿಗೂ ಮಾಡಿದ್ದನ್ನೂ, ಅವರು ನಿಮ್ಮ ಬೆನ್ನು ಹತ್ತುವಾಗ ಕೆಂ
ಪು ಸಮುದ್ರದ ನೀರು ಅವರ ಮೇಲೆ ಹರಿಯ ಮಾಡಿದ್ದನ್ನೂ,
ಕರ್ತನು ಇಂದಿನ ಪರ್ಯಂತರ ಅವರನ್ನು ನಾಶನ ಮಾಡಿದ
೫ ನ್ನೂ, ನೀವು ಈ ಸ್ಥಳಕ್ಕೆ ಬರುವ ಪರ್ಯಂತರ ಕರ್ತನು ಅರ
೬ ಣ್ಯದಲ್ಲಿ ನಿಮಗೆ ಮಾಡಿದ್ದನ್ನೂ, ಅವನು ರೂಬೆನನ ಮಗನಾ
ದ ಎಲಿಯಾಬನ ಮಕ್ಕಳಿಗಾಗಿರುವ ದಾಥಾನನಿಗೂ, ಅಬೀರಮನಿ
ಗೂ ಮಾಡಿದ್ದನ್ನೂ, ಭೂಮಿಯು ತನ್ನ ಬಾಯಿಯನ್ನು ತೆಗೆದು,
ಅವರ ಮನೆಗಳನ್ನೂ ಗುಡಾರಗಳನ್ನೂ ಅವರಿಗುಂಟಾದ ಎಲ್ಲಾ
ಅಸ್ತಿಯನ್ನೂ, ಸಮಸ್ತ ಇಸ್ರಯೇಲ್ ಮಧ್ಯದಲ್ಲಿ ನುಂಗಿದ್ದನ್ನೂ
ನೋಡದೆ, ತಿಳಿಯದೆ, ಇರುವ ನಿಮ್ಮ ಮಕ್ಕಳ ಸಂಗಡ ನಾನು
೭ ಮಾತಾಡುವದಿಲ್ಲ. ಆದರೆ ನಿಮ್ಮ ಕಣ್ಣುಗಳು ಕರ್ತನು ಮಾಡಿ
೮ ದ ದೊಡ್ಡ ಕೃತ್ಯಗಳನ್ನೆಲ್ಲಾ ನೋಡಿದವು. ಹೀಗಿರುವದರಿಂದ
ನೀವು ಬಲಗೊಳ್ಳುವ ಹಾಗೆಯೂ, ನೀವು ಸ್ವತಂತ್ರಿಸಿ ಕೊಳ್ಳುವ
ದಕ್ಕೆ ದಾಟಿ ಹೋಗುವ ದೇಶದಲ್ಲಿ ಪ್ರವೇಶಿಸಿ, ಅದನ್ನು ಸ್ವತಂ
೯ ತ್ರಿಸಿ ಕೊಳ್ಳುವ ಹಾಗೆಯೂ, ಕರ್ತನು ನಿಮ್ಮ ಪಿತೃಗಳಿಗೂ,
ಅವರ ಬೀಜಕ್ಕೂ, ಕೊಡುತ್ತೇನೆಂದು, ಪ್ರಮಾಣ ಮಾಡಿದ ಭೂ
ಮಿಯಾಗಿರುವ ಆ ಹಾಲೂ, ಜೇನೂ ಹರಿಯುವ ದೇಶದಲ್ಲಿ ನಿ
ಮ್ಮ ದಿನಗಳು ಬಹಳವಾಗುವ ಹಾಗೆಯೂ, ನಾನು ಈ ಹೊತ್ತು
ನಿನಗೆ ಆಜ್ಞಾಪಿಸುವ ಆಜ್ಞೆಯನ್ನೆಲ್ಲಾ ಕೈ ಕೊಳ್ಳ ಬೇಕು.

೧೦ ಯಾಕಂದರೆ ನೀನು ಸ್ವತಂತ್ರಿಸಿ ಕೊಳ್ಳುವದಕ್ಕೆ ಹೋಗುವ
ದೇಶವು ನೀವು ಹೊರಟು ಐಗುತ್ತ ದೇಶದ ಹಾಗಲ್ಲ; ಅಲ್ಲಿ ನೀನು
ನಿನ್ನ ಬೀಜವನ್ನು ಬಿತ್ತಿ, ಕಲ್ಯಾಣ ತೋಟಕ್ಕೆ ಮಾಡುವ ಹಾಗೆ
೧೧ ಕಾಲಿನಿಂದ ನೀರು ಹಣಿಸಿದಿಯಲ್ಲ! ಆದರೆ ನೀವು ಸ್ವತಂತ್ರಿಸಿ
ಕೊಳ್ಳುವದಕ್ಕೆ ದಾಟಿ ಹೋಗುವ ದೇಶವು ಬೆಟ್ಟಗಳೂ ತಗ್ಗುಗ
ಳೂ ಉಳ್ಳ ದೇಶವೇ; ಅದು ಆಕಾಶದ ಮಳೆಯಿಂದ ನೀರು ಕು
೧೨ ಡಿಯುತ್ತದೆ; ಅದು ನಿನ್ನ ದೇವರಾದ ಕರ್ತನು ಪರಾಮರಿಸುವ
ದೇಶವೇ; ವರುಷದ ಆರಂಭದಿಂದ ವರುಷದ ಅಂತ್ಯದ ಪರ್ಯಂ
ತರ ಯಾವಾಗಲೂ ನಿನ್ನ ದೇವರಾದ ಕರ್ತನ ಕಣ್ಣುಗಳು ಅದ
ರ ಮೇಲೆ.

೧೩ ಹಾಗಾದರೆ ನಾನು ಈ ಹೊತ್ತು ನಿಮಗೆ ಆಜ್ಞಾಪಿಸುವ ನನ್ನ
ಆಜ್ಞೆಗಳನ್ನು ನೀವು ಕೇಳಿ, ನಿಮ್ಮ ದೇವರಾದ ಕರ್ತನನ್ನು ಪ್ರೀತಿ
ಮಾಡಿ, ನಿಮ್ಮ ಎಲ್ಲಾ ಹೃದಯದಿಂದಲೂ ನಿಮ್ಮ ಎಲ್ಲಾ ಪ್ರಾಣ
೧೪ ದಿಂದಲೂ ಅವನಿಗೆ ಸೇವೆ ಮಾಡಿದರೆ, ನೀನು ನಿನ್ನ ಗೋಧಿಯ
ನ್ನೂ ದ್ರಾಕ್ಷೇ ರಸವನ್ನೂ ಎಣ್ಣೆಯನ್ನೂ ಕೂಡಿಸುವ ಹಾಗೆ,
ನಿಮ್ಮ ಭೂಮಿಗೆ ಬೇಕಾಗಿರುವ ಮಳೆಯನ್ನೂ, ಮುಂಗಾರಿ ಹಿಂ
೧೫ ಗಾರಿಯನ್ನೂ, ಕೊಡುವೆನು. ಮತ್ತು ನಿನ್ನ ಪಶುಗಳಿಗೆ ಹುಲ್ಲ
ನ್ನು ನಿನ್ನ ಹೊಲದಲ್ಲಿ ಕೊಡುವೆನು; ನೀನು ಉಂಡು, ತೃಪ್ತಿಯಾ
ಗುವಿ.

೧೬ ನಿನ್ನ ಹೃದಯವು ಮರುಳುಗೊಳ್ಳದ ಹಾಗೆಯೂ, ನೀವು
ವಾಕೆ ಹೋಗಿ, ಬೇರೆ ದೇವರುಗಳನ್ನು ಸೇವಿಸಿ, ಅಡ್ಡ ಬೀಳದ ಹಾ
ಗೆಯೂ, ಕರ್ತನ ಕೋಪವು ನಿಮ್ಮ ಮೇಲೆ ಉರಿಯಲು, ಅವ
೧೭ ನು ಮಳೆಯಾಗದಂತೆ, ಭೂಮಿಯು ತನ್ನ ಹುಟ್ಟುವಳ್ಳಿ ಕೊಡ
ದಂತೆ ಆಕಾಶವನ್ನು ಮುಚ್ಚಿ ಬಿಡದ ಹಾಗೆಯೂ, ಕರ್ತನು ನನ
ಗೆ ಕೊಡುವ ಆ ಒಳ್ಳೇ ದೇಶದಲ್ಲಿಂದ ನೀವು ಬೇಗ ನಾಶನವಾಗ
ದ ಹಾಗೆಯೂ, ಎಚ್ಚರಿಕೆಯಾಗಿರಿ.

೧೮ ಮತ್ತು ಆ ನನ್ನ ಮಾತುಗಳನ್ನು ನಿಮ್ಮ ಹೃದಯಗಳಲ್ಲಿ
ಯೂ, ಪ್ರಾಣಗಳಲ್ಲಿಯೂ, ಇಟ್ಟು ಕೊಳ್ಳಿರಿ; ಅವುಗಳನ್ನು ಗು
ರುತಾಗಿ ನಿಮ್ಮ ಕೈಗಳಿಗೆ ಕಟ್ಟಿ ಕೊಳ್ಳಿರಿ; ಅವು ನಿಮ್ಮ ಕಣ್ಣು
ಗಳ ನಡುವೆ ಹಣೆ ಕಟ್ಟಾಗಿರಲಿ. ನಿಮ್ಮ ಮನೆಯಲ್ಲಿ ಕೂತಿರುವಾ
ಗಲೂ, ಮಾರ್ಗದಲ್ಲಿ ನಡಿಯುವಾಗಲೂ, ಮಲಗುವಾಗಲೂ, ಏ
ಳುವಾಗಲೂ, ಅವುಗಳ ವಿಷಯ ಮಾತಾಡಿ, ಅವುಗಳನ್ನು ನಿ
ಮ್ಮ ಮಕ್ಕಳಿಗೆ ಕಲಿಸ ಬೇಕು. ನಿನ್ನ ಮನೆಯ ಕಂಭಗಳ ಮೇ
ಲೆಯೂ, ನಿನ್ನ ಬಾಗಲುಗಳಲ್ಲಿಯೂ, ಅವುಗಳನ್ನು ಬರೆಯ ಬೇ
೨೦ ಕು. ನಿಮ್ಮ ದಿವಸಗಳೂ ನಿಮ್ಮ ಮಕ್ಕಳ ದಿವಸಗಳೂ, ಭೂಮಿ
ಯಲ್ಲಿ ಆಕಾಶದ ದಿವಸಗಳ ಪ್ರಕಾರ, ಕರ್ತನು ನಿಮ್ಮ ಪಿತೃಗಳಿ
ಗೆ, ಕೊಡುತ್ತೇನೆಂದು, ಪ್ರಮಾಣ ಮಾಡಿದ ದೇಶದಲ್ಲಿ ಹೆಚ್ಚುವ
ಹಾಗೆಯೇ.

೨೧ ಯಾಕಂದರೆ ನಾನು ನಿಮಗೆ ಆಜ್ಞಾಪಿಸುವ ಈ ಆಜ್ಞೆಯನ್ನೆ
ಲ್ಲಾ ನೀವು ಕಾಪಾಡೇ ಕಾಪಾಡಿ, ಅದನ್ನು ಮಾಡಿ, ನಿಮ್ಮ ದೇ
ವರಾದ ಕರ್ತನನ್ನು ಪ್ರೀತಿ ಮಾಡಿ, ಅವನ ಎಲ್ಲಾ ಮಾರ್ಗಗಳಲ್ಲಿ
೨೩ ನಡೆದು, ಅವನನ್ನು ಅಂಟಿ ಕೊಂಡರೆ, ಕರ್ತನು ಆ ಜನಾಂಗಗಳನ್ನೆ
ಲ್ಲಾ ನಿಮ್ಮ ಮುಂದೆ ಹೊರಡಿಸುವನು; ನೀವು ನಿಮಗಿಂತ ಬಲವು
೨೪ ಳ್ಳ ದೊಡ್ಡ ಜನಾಂಗಗಳನ್ನು ಸ್ವತಂತ್ರಿಸಿ ಕೊಳ್ಳುವಿರಿ. ನಿಮ್ಮ



ಅಂಗಾಲು ನಡಿಯುವ ಸ್ಥಳವೆಲ್ಲಾ ನಿಮ್ಮದಾಗುವದು; ಅರಣ್ಯದಿಂ
ದ ಲೆಬನೋನಿನ ಪರ್ಯಂತರಕ್ಕೂ, ಫ್ರಾತ್ ಎಂಬ ನದಿಯಿಂದ
ಪ್ರತಿಮ ಸಮುದ್ರದ ಪರ್ಯಂತರಕ್ಕೂ, ನಿಮ್ಮ ಮೇರೆ ಇರುವದು.
೨೫ ಯಾವನಾದರೂ ನಿಮ್ಮ ಮುಂದೆ ನಿಲ್ಲುವದಿಲ್ಲ; ನಿಮ್ಮ ದೇವರಾ
ದ ಕರ್ತನು ನಿಮಗೆ ಹೇಳಿದ ಹಾಗೆ ನಿಮ್ಮ ಹೆದರಿಕೆಯನ್ನೂ, ದಿ
ಗುಲನ್ನೂ, ನೀವು ಸಂಚಾರ ಮಾಡುವ ಸಮಸ್ತ ದೇಶದ ಮೇಲೆ
ಇಡುವನು.

೨೬ ಇಗೋ, ನಾನು ಈ ಹೊತ್ತು ಆಶೀರ್ವಾದವನ್ನೂ ಶಾಪವ
೨೭ ನ್ನೂ ನಿಮ್ಮ ಮುಂದೆ ಇಡುತ್ತೇನೆ. ನಾನು ಈ ಹೊತ್ತು ನಿಮಗೆ
ಆಜ್ಞಾಪಿಸುವಂಥ, ನಿಮ್ಮ ದೇವರಾದ ಕರ್ತನ ಆಜ್ಞೆಗಳನ್ನು ಕೇ
೨೮ ಳಿದರೆ, ಆಶೀರ್ವಾದ; ನಿಮ್ಮ ದೇವರಾದ ಕರ್ತನ ಆಜ್ಞೆಗಳನ್ನು
ಕೇಳದೆ, ನಾನು ಈ ಹೊತ್ತು ನಿಮಗೆ ಆಜ್ಞಾಪಿಸುವ ಮಾರ್ಗ
ಕ್ಕೆ ವಾಕೆ ಹೋಗಿ, ನೀವು ಶಿಳಿಯದ ಬೇರೆ ದೇವರುಗಳನ್ನು ಹಿಂ
ಬಾಲಿಸಿದರೆ, ಶಾಪ.

೨೯ ನೀವು ಸ್ವತಂತ್ರಿಸಿ ಕೊಳ್ಳುವದಕ್ಕೆ ಪ್ರವೇಶಿಸುವ ದೇಶದಲ್ಲಿ ನಿ
ನ್ನ ದೇವರಾದ ಕರ್ತನು ನಿನ್ನನ್ನು ಕೇರಿಸಿದಾಗ, ನೀನು ಗೆರಿಜ್ಜಿಮ
ಬೆಟ್ಟದ ಮೇಲೆ ಆಶೀರ್ವಾದವನ್ನೂ ಏಬಲ್ ಬೆಟ್ಟದ ಮೇಲೆ ಶಾಪ
೩೦ ವನ್ನೂ ಕೊಡ ಬೇಕು. ಇವು ಯೊರ್ದನಿನ ಆಚೆಯಲ್ಲಿ, ಸೂ
ರ್ಯನು ಅಸ್ತಮಿಸುವ ದಿಕ್ಕಿನಲ್ಲಿ, ಗಿಲ್ಗಾಲಿಗೆ ಎದುರಾಗಿರುವ ಬೈ
ಲಿನೊಳ್ಳಗೆ, ಮೋರೆ ಎಂಬ ತೊಪಿನ ಸಮಾಪ ವಾಸ ಮಾಡುವ
೩೧ ಕನಾನ್ಯರ ದೇಶದಲ್ಲಿ ಉಂಟು ಅಲ್ಲವೋ! ಯಾಕಂದರೆ ನಿಮ್ಮ
ದೇವರಾದ ಕರ್ತನು ನಿಮಗೆ ಕೊಡುವ ದೇಶವನ್ನು ಕೇರಿ, ಸ್ವತಂ
ತ್ರಿಸಿ ಕೊಳ್ಳುವದಕ್ಕೆ ನೀವು ಯೊರ್ದನನ್ನು ದಾಟಿ ಹೋಗ ಬೇ
ಕು; ಆಗ ಅದನ್ನು ಸ್ವತಂತ್ರಿಸಿ ಕೊಂಡು, ಅದರಲ್ಲಿ ವಾಸ ಮಾ
೩೨ ಡುವಿರಿ. ಮತ್ತು ನಾನು ಈ ಹೊತ್ತು ನಿಮ್ಮ ಮುಂದೆ ಇಡುವ ಎ
ಲ್ಲಾ ನೇಮ ನ್ಯಾಯಗಳನ್ನು ಕಾಪಾಡಿ ಮಾಡ ಬೇಕು.

## ೧೨. ಸಂಧಿ.

೧ ನಿನ್ನ ಪಿತೃಗಳ ದೇವರಾದ ಕರ್ತನು ನಿನಗೆ ಸ್ವತಂತ್ರಿಸಿ ಕೊ
ಳ್ಳುವದಕ್ಕೆ ಕೊಡುವ ದೇಶದಲ್ಲಿ ನೀವು ಭೂಮಿಯ ಮೇಲೆ ಬದುಕು
ವ ದಿವಸಗಳೆಲ್ಲಾ ಕಾಪಾಡಿ ಮಾಡ ತಕ್ಕ ನೇಮ ನ್ಯಾಯಗಳು
ಇವೇ.

೨ ನೀವು ಸ್ವತಂತ್ರಿಸಿ ಕೊಳ್ಳುವ ಜನಾಂಗಗಳು ತಮ್ಮ ದೇವರು
ಗಳಿಗೆ ಸೇವೆ ಮಾಡಿದ ಸ್ಥಳಗಳನ್ನು ಎತ್ತರವಾದ ಬೆಟ್ಟಗಳ ಮೇ
ಲೆಯೂ, ಗುಡ್ಡಗಳ ಮೇಲೆಯೂ, ಹಸುರಾದ ಎಲ್ಲಾ ಮರಗಳ
3 ಕೆಳಗೂ, ಪೂರ್ಣವಾಗಿ ನಾಶ ಮಾಡ ಬೇಕು. ಅವರ ಬಲಿಪೀ
ಠಗಳನ್ನು ಕೆಡವಿ ಹಾಕಿ, ಅವರ ಸ್ತಂಭಗಳನ್ನು ಬಡೆದು, ಅವರ
ತೋಪುಗಳನ್ನು ಬೆಂಕಿಯಿಂದ ಸುಟ್ಟು, ಅವರ ದೇವರುಗಳ ವಿಗ್ರ
ಹಗಳನ್ನು ಕೊಯಿದು ಹಾಕಿ, ಅವರ ಹೆಸರುಗಳನ್ನು ಆ ಸ್ಥಳಗ
ಳೊಳಗಿಂದ ನಾಶ ಮಾಡ ಬೇಕು.

೪ ನೀವು ನಿಮ್ಮ ಕರ್ತನಾದ ದೇವರಿಗೆ ಹಾಗೆ ಮಾಡ ಬೇಡಿರಿ.
೫ ಆದರೆ ನಿಮ್ಮ ದೇವರಾದ ಕರ್ತನು ತನ್ನ ಹೆಸರನ್ನು ಇಡುವದಕ್ಕೆ
ನಿಮ್ಮ ಎಲ್ಲಾ ಕುಲಗಳೊಳಗಿಂದ ಆದು ಕೊಂಡ ಸ್ಥಳದಲ್ಲಿ ಅವನ
6 ನಿವಾಸದಲ್ಲಿ ನೀವು ವಿಚಾರಿಸಿ, ಅಲ್ಲಿಗೆ ಬರ ಬೇಕು. ಅಲ್ಲಿಗೆ ನಿ
ಮ್ಮ ಹೋಮಗಳನ್ನೂ, ಬಲಿಗಳನ್ನೂ, ನಿಮ್ಮ ಕೈಗಳು ಎತ್ತುವ
ಹತ್ತನೇ ಪಾಲುಗಳನ್ನೂ, ನಿಮ್ಮ ಹರಿಕೆಗಳನ್ನೂ, ಉಚಿತವಾದ
ಕಾಣಿಕೆಗಳನ್ನೂ ನಿಮ್ಮ ದನ ಕುರಿಗಳ ಹೊಚ್ಚಲಾದವುಗಳನ್ನೂ
7 ತರ ಬೇಕು. ಅಲ್ಲಿ ನೀವು ನಿಮ್ಮ ದೇವರಾದ ಕರ್ತನ ಮುಂದೆ
ಉಂಡು, ನಿಮ್ಮ ಕುಟುಂಬಗಳ ಸಂಗಡ ನಿಮ್ಮ ದೇವರಾದ ಕರ್ತ
ನು ನಿಮ್ಮನ್ನು ಆಶೀರ್ವದಿಸಿದ ಎಲ್ಲಾ ಕೈ ಕೆಲಸದಲ್ಲಿ ಸಂತೋಷ
ಪಡ ಬೇಕು.

೮ ನಾವು ಈಗ ಇಲ್ಲಿ, ಒಬ್ಬೊಬ್ಬನಿಗೆ ಒಳ್ಳೇದೆಂದು ತೋರುವ
ಪ್ರಕಾರ, ಮಾಡುವಂತೆ ನೀವು ಮಾಡ ಬೇಡಿರಿ. ಯಾಕಂದರೆ
ನಿನ್ನ ದೇವರಾದ ಕರ್ತನು ನಿನಗೆ ಕೊಡುವ ವಿಶ್ರಾಂತಿಯಲ್ಲಿ
೧೦ ಯೂ, ಸ್ವಾಸ್ತ್ಯದಲ್ಲಿಯೂ, ನೀವು ಇನ್ನು ಕೇರಲಿಲ್ಲ. ಆದರೆ
ನೀವು ಯೊರ್ದನನ್ನು ದಾಟಿದ ಮೇಲೆ ನಿಮ್ಮ ದೇವರಾದ ಕರ್ತನು
ನಿಮಗೆ ಸ್ವಾಸ್ತ್ಯವಾಗಿ ಕೊಡುವ ದೇಶದಲ್ಲಿ ವಾಸ ಮಾಡುವಾಗ,
ಅವನು ಸುತ್ತಲಿರುವ ಎಲ್ಲಾ ಶತ್ರುಗಳಿಂದ ತಪ್ಪಿಸಿ ನಿಮಗೆ ವಿಶ್ರಾಂ
೧೧ ತಿ ಕೊಟ್ಟು ಮೇಲೆ, ನೀವು ಭರವಸವಾಗಿ ವಾಸಿಸುವಾಗ, ನಿಮ್ಮ
ದೇವರಾದ ಕರ್ತನು ತನ್ನ ಹೆಸರನ ನಿವಾಸಕ್ಕೆ ಆದು ಕೊಳ್ಳುವ
ಸ್ಥಳವಿರುವದು; ಅಲ್ಲಿಗೆ ನಾನು ನಿಮಗೆ ಆಜ್ಞಾಪಿಸುವದನ್ನೆಲ್ಲಾ—
ನಿಮ್ಮ ಹೋಮಗಳನ್ನೂ ಬಲಿಗಳನ್ನೂ ನಿಮ್ಮ ಹತ್ತನೇ ಪಾಲು
ಗಳನ್ನೂ ನಿಮ್ಮ ಕೈ ಎತ್ತುವ ಅರ್ಪಣೆಗಳನ್ನೂ ನೀವು ಕರ್ತ
೧೨ ನಿಗೆ ಮಾಡುವ ಎಲ್ಲಾ ಶ್ರೇಷ್ಠ ಹರಿಕೆಗಳನ್ನೂ ತರ ಬೇಕು. ಅ
ಲ್ಲಿ ನೀವು ನಿಮ್ಮ ದೇವರಾದ ಕರ್ತನ ಮುಂದೆ ಸಂತೋಷವಾಗಿ
ರ ಬೇಕು; ನೀವೂ ನಿಮ್ಮ ಕುಮಾರ ಕುಮಾರ್ತೆಗಳೂ ನಿಮ್ಮ
ದಾಸರೂ ನಿಮ್ಮ ದಾಸಿಗಳೂ ನಿಮ್ಮ ಬಾಗಲುಗಳಲ್ಲಿರುವ ಲೇ
ವ್ಯನೂ ಸಹ; ಯಾಕಂದರೆ ಅವನಿಗೆ ನಿಮ್ಮ ಸಂಗಡ ಪಾಲೂ
ಸ್ವಾಸ್ತ್ಯವೂ ಇಲ್ಲ.

೧೩ ನೀನು ಕಂಡ ಎಲ್ಲಾ ಸ್ಥಳಗಳಲ್ಲಿ ನಿನ್ನ ಹೋಮಗಳನ್ನು ಅ
೧೪ ರ್ಪಿಸದ ಹಾಗೆ ನೋಡಿಕೋ; ಕರ್ತನು ನಿನ್ನ ಕುಲಗಳ ಒಂದರ
ಲ್ಲಿ ಆದು ಕೊಳ್ಳುವ ಸ್ಥಳದಲ್ಲೇ ನಿನ್ನ ಹೋಮಗಳನ್ನು ಅರ್ಪಿಸ
ಬೇಕು; ಅಲ್ಲೇ ನಾನು ನಿನಗೆ ಆಜಾ ಪಿಸುವದನ್ನೆಲ್ಲಾ ಮಾಡ
ಬೇಕು.

೧೫ ಆದರೂ ನಿನ್ನ ದೇವರಾದ ಕರ್ತನು ನಿನಗೆ ಕೊಟ್ಟ ಆಶೀರ್ವಾ
ದದ ಪ್ರಕಾರ ನಿನಗೆ ಮನಸ್ಸಿದ್ದಷ್ಟು ಮಾಂಸ ನಿನ್ನ ಎಲ್ಲಾ ಬಾಗ
ಲುಗಳಲ್ಲಿ ಕೊಯಿದು, ಉಣ್ಣ ಬಹುದು; ಜಿಂಕೆ ಕಡವೆಗಳ ಹಾಗೆ,
೧೬ ಶುದ್ಧನೂ, ಅಶುದ್ಧನೂ ಅದನ್ನು ತಿನ್ನ ಬಹುದು. ರಕ್ತವನ್ನು
ಮಾತ್ರ ತಿನ್ನ ಬೇಡಿರಿ; ಅದನ್ನು ನೀರಿನಂತೆ ನೆಲಕ್ಕೆ ಚೆಲ್ಲ ಬೇಕು.

೧೭ ನಿನ್ನ ಗೋಧಿ ದ್ರಾಕ್ಷೇ ರಸ ಎಣ್ಣೆಗಳ ಹತ್ತನೇ ಪಾಲನ್ನೂ,
ನಿನ್ನ ದನ ಕುರಿಗಳ ಹೊಚ್ಚಲಾದವುಗಳನ್ನೂ, ನೀನು ಮಾಡುವ
ಎಲ್ಲಾ ಹರಿಕೆಗಳನ್ನೂ, ನಿನ್ನ ಉಚಿತವಾದ ಕಾಣಿಕೆಗಳನ್ನೂ, ನಿ
ನ್ನ ಕೈ ಎತ್ತುವ ಅರ್ಪಣೆಗಳನ್ನೂ, ನಿನ್ನ ಬಾಗಲುಗಳಲ್ಲಿ ಉಣ್ಣ
೧೮ ಬೇಡ. ಅವುಗಳನ್ನು ನಿನ್ನ ದೇವರಾದ ಕರ್ತನ ಮುಂದೆ ನಿನ್ನ
ದೇವರಾದ ಕರ್ತನು ಆದು ಕೊಳ್ಳುವಲ್ಲಿ, ನೀನೂ ನಿನ್ನ ಮಗ
ನೂ ನಿನ್ನ ಮಗಳೂ ನಿನ್ನ ದಾಸನೂ ನಿನ್ನ ದಾಸಿಯೂ ನಿನ್ನ
ಬಾಗಲುಗಳಲ್ಲಿರುವ ಲೇವ್ಯನೂ ಉಣ್ಣ ಬೇಕು; ಆಗ ನಿನ್ನ ಎಲ್ಲಾ
ಕೈ ಕೆಲಸದಲ್ಲಿ ನಿನ್ನ ದೇವರಾದ ಕರ್ತನ ಮುಂದೆ ಸಂತೋಷ
ಪಡ ಬೇಕು. ನೀನು ಭೂಮಿಯ ಮೇಲಿರುವ ದಿವಸಗಳೆಲ್ಲಾ ಲೇ
ವ್ಯನನ್ನು ಬಿಟ್ಟು ಬಿಡದ ಹಾಗೆ ನೋಡಿಕೋ.

೨೦ ನಿನ್ನ ದೇವರಾದ ಕರ್ತನು ನಿನಗೆ ಹೇಳಿದ ಹಾಗೆ ನಿನ್ನ ಮೇರೆ
ಯನ್ನು ವಿಸ್ತಾರ ಮಾಡುವಾಗ, ನಿನ್ನ ಪ್ರಾಣ ಮಾಂಸ ಉ
ಣ್ಣಬೇಕೆಂದು ಹೇಳಿ, ಮಾಂಸವನ್ನು ಉಣ್ಣುವದಕ್ಕೆ ಅಪೇಕ್ಷಿಸಿದರೆ,
೨೧ ನಿನಗೆ ಮನಸ್ಸಿದ್ದಷ್ಟು ಮಾಂಸ ಉಣ್ಣಬಹುದು. ನಿನ್ನ ದೇವರಾದ
ಕರ್ತನು ತನ್ನ ಹೆಸರನ್ನು ಇಡುವದಕ್ಕೆ ಆದು ಕೊಂಡ ಸ್ಥಳವು ನಿ
ನಗೆ ದೂರವಾದರೆ, ಕರ್ತನು ನಿನಗೆ ಕೊಟ್ಟ ನಿನ್ನ ದನ ಕುರಿಗಳ
ಲ್ಲಿ ನಾನು ನಿನಗೆ ಆಜ್ಞಾಪಿಸಿದಂತೆ ಕೊಯಿದು, ನಿನ್ನ ಬಾಗಲುಗಳ
೨೨ ಲ್ಲಿ ನಿನಗೆ ಮನಸ್ಸಿದ್ದಷ್ಟು ಉಣ್ಣಬಹುದು. ಆದರೆ ಜಿಂಕೆ ಕಡವೆ
ಗಳನ್ನು ಉಣ್ಣುವ ಹಾಗೆ ಅದನ್ನು ಉಣ್ಣಬೇಕು; ಶುದ್ಧನೂ ಅ
೨೩ ಶುದ್ಧನೂ ಕೂಡಾ ಅದನ್ನು ಉಣ್ಣಲಿ. ರಕ್ತವನ್ನು ಮಾತ್ರ ಉ
ಣ್ಣದ ಹಾಗೆ ಜಾಗ್ರತೆಯಾಗಿರು; ಯಾಕಂದರೆ ರಕ್ತವು ಪ್ರಾಣ
೨೪ ವೇ; ಮತ್ತು ಪ್ರಾಣವನ್ನು ಮಾಂಸದ ಸಂಗಡ ಉಣ್ಣಬೇಡ.
ಅದನ್ನು ಉಣ್ಣದೆ, ನೀರಿನಂತೆ ಭೂಮಿಯ ಮೇಲೆ ಹೊಯ್ಯಬೇ
೨೫ ಕು. ನೀನು ಕರ್ತನ ಮುಂದೆ ನೆಟ್ಟಗೆಯಾದದ್ದನ್ನು ಮಾಡುವದ
ರಿಂದ ನಿನಗೂ ನಿನ್ನ ಮುಂದಿರುವ ಮಕ್ಕಳಿಗೂ ಒಳ್ಳೇದಾಗುವ
ಹಾಗೆ, ಅದನ್ನು ಉಣ್ಣಬೇಡ.

೨೬ ನಿನಗಿರುವ ಪರಿಶುದ್ಧವಾದವುಗಳನ್ನೂ ನಿನ್ನ ಹರಿಕೆಗಳನ್ನೂ
ಮಾತ್ರ ಕರ್ತನು ಆದು ಕೊಳ್ಳುವ ಸ್ಥಳಕ್ಕೆ ತಕ್ಕೊಂಡು ಬರಬೇ
೨೭ ಕು. ಆಗ ನಿನ್ನ ಹೋಮಗಳನ್ನೂ ರಕ್ತವನ್ನೂ ನಿನ್ನ ದೇವ
ರಾದ ಕರ್ತನ ಬಲಿಪೀಠದ ಮೇಲೆ ಅರ್ಪಿಸಬೇಕು; ಆದರೆ ನಿನ್ನ
ಬಲಿಗಳ ರಕ್ತವನ್ನು ನಿನ್ನ ದೇವರಾದ ಕರ್ತನ ಬಲಿಪೀಠದ ಮೇಲೆ
ಹೊಯ್ಯಬೇಕು; ಅವುಗಳ ಮಾಂಸವನ್ನು ಉಣ್ಣಬಹುದು.

೨೮ ನೀನು ನಿನ್ನ ದೇವರಾದ ಕರ್ತನ ಮುಂದೆ ಒಳ್ಳೇದನ್ನೂ ನೆ
ಟ್ಟಗೆಯಾದದ್ದನ್ನೂ ಮಾಡುವದರಿಂದ, ನಿನಗೂ ನಿನ್ನ ಮುಂದೆ
ಇರುವ ನಿನ್ನ ಮಕ್ಕಳಿಗೂ ಎಂದೆಂದಿಗೂ ಒಳ್ಳೇದಾಗುವ ಹಾಗೆ,
ನಾನು ನಿನಗೆ ಆಜ್ಞಾಪಿಸುವ ಈ ಮಾತುಗಳನ್ನೆಲ್ಲಾ ಕೇಳಿ, ಕಾ
ಪಾಡು.

೨೯ ನೀನು ಸ್ವತಂತ್ರಿಸಿ ಕೊಳ್ಳುವದಕ್ಕೆ ಹೋಗುವ ಆ ಜನಾಂ
ಗಗಳನ್ನು ನಿನ್ನ ದೇವರಾದ ಕರ್ತನು ನಿನ್ನ ಮುಂದೆ ಕಡಿದು ಬಿ
ಡುವಾಗ, ನೀನು ಅವುಗಳನ್ನು ಸ್ವತಂತ್ರಿಸಿ ಕೊಂಡು, ಅವುಗಳ
೩೦ ದೇಶದಲ್ಲಿ ವಾಸ ಮಾಡುವಾಗ, ಅವು ನಿನ್ನ ಮುಂದೆ ನಾಶನಾ
ದ ಮೇಲೆ ನೀನು ಅವುಗಳನ್ನು ಅನುಸರಿಸಿ ಬಲೆಯಲ್ಲಿ ಕಿಕ್ಕಿ
ಬ್ಬಿಳದ ಹಾಗೆಯೂ, ಆ ಜನಾಂಗಗಳು ತಮ್ಮ ದೇವರುಗಳಿಗೆ
ಹ್ಯಾಗೆ ಸೇವಿಸಿದವೋ, ನಾನೂ ಹಾಗೆ ಮಾಡುತ್ತೇನೆಂದು ಹೇ
ಳಿ, ಅವರ ದೇವರುಗಳನ್ನು ಕುರಿತು ವಿಚಾರಿಸದ ಹಾಗೆಯೂ,
೩೧ ನೋಡಿಕೋ. ನಿನ್ನ ದೇವರಾದ ಕರ್ತನಿಗೆ ಹಾಗೆ ಮಾಡಬೇ
ಡ; ಯಾಕಂದರೆ ಕರ್ತನು ಅಸಹ್ಯಪಿಸಿ ಹಗೆ ಮಾಡುವದೆಲ್ಲಾ ಅವ
ರು ತಮ್ಮ ದೇವರುಗಳಿಗೆ ಮಾಡಿದ್ದಾರೆ; ತಮ್ಮ ಕುಮಾರ ಕು
ಮಾರ್ತೆಗಳನ್ನು ಸಹ ತಮ್ಮ ದೇವರುಗಳಿಗೆ ಬೆಂಕಿಯಲ್ಲಿ ಸು
೩೨ ಟ್ಟು ಬಿಟ್ಟಿದ್ದಾರೆ. ನಾನು ನಿನಗೆ ಆಜ್ಞಾಪಿಸುವ ಮಾತನ್ನೆಲ್ಲಾ
ಕಾಪಾಡಿ, ಮಾಡಬೇಕು; ಅದಕ್ಕೆ ಕೂಡಿಸಬೇಡ; ಕಡಿಮೆ ಮಾ
ಡಬೇಡ.

## ೧೩. ಸಂಧಿ.

೧ ಒಬ್ಬ ಪ್ರವಾದಿಯಾಗಲಿ, ಕನಸುಗಳನ್ನು ಕಾಣುವವನಾಗಲಿ,
ನಿನ್ನ ಮಧ್ಯದಲ್ಲಿ ಎದ್ದು, ನಿನಗೆ ಗುರುತನ್ನಾದರೂ ಲಕ್ಷಣ
೨ ನ್ನಾದರೂ ಕೊಟ್ಟರೆ, ನೀನು ಶಿಳ್ಳೆಯದ ಬೇರೆ ದೇವರುಗಳ
ನ್ನು ಅನುಸರಿಸಿ, ಅವರಿಗೆ ಸೇವೆ ಮಾಡೋಣ, ಎಂದು ಹೇಳಿ,
3 ಅವನು ನಿನಗೆ ಹೇಳಿದ ಗುರುತೂ ಲಕ್ಷಣವೂ ಸಂಭವಿಸಿದರೆ, ಆ
ಪ್ರವಾದಿಯ, ಇಲ್ಲವೆ ಕನಸು ಕಾಣುವವನ, ಮಾತುಗಳನ್ನು ಕೇ
ಳಬೇಡ. ಯಾಕಂದರೆ ನಿಮ್ಮ ದೇವರಾದ ಕರ್ತನು ನಿಮ್ಮನ್ನು
ಕೋಧಿಸಿ, ನೀವು ನಿಮ್ಮ ಪೂರ್ಣ ಹೃದಯದಿಂದಲೂ ನಿಮ್ಮ ಪೂ
ರ್ಣ ಪ್ರಾಣದಿಂದಲೂ ನಿಮ್ಮ ದೇವರಾದ ಕರ್ತನನ್ನು ಪ್ರೀತಿ
ಮಾಡುತ್ತೀರೇನೋ! ಎಂದು ಪರೀಕ್ಷಿಸುತ್ತಾನೆ. ನಿಮ್ಮ ದೇವರಾದ
ಕರ್ತನನ್ನೇ ಅನುಸರಿಸಿ, ಅವನಿಗೆ ಭಯ ಪಟ್ಟು, ಅವನ ಆಜ್ಞೆಗ
ಳನ್ನು ಕಾಪಾಡಿ, ಅವನ ಶಬ್ದವನ್ನು ಕೇಳಿ, ಅವನಿಗೆ ಸೇವೆ ಮಾ
ಡಿ, ಅವನಿಗೆ ಅಂಟಿ ಕೊಳ್ಳಬೇಕು. ಮತ್ತು ಆ ಪ್ರವಾದಿಯಾಗಾ
೫ ದರೂ ಕನಸು ಕಾಣುವವನಾದರೂ ಕೊಂದು ಹಾಕಬೇಕು;
ಯಾಕಂದರೆ ಐಗುಪ್ತ ದೇಶದೊಳಗಿಂದ ನಿನ್ನನ್ನು ಹೊರಗೆ ಬರ
ಮಾಡಿ, ದಾಸತ್ವದ ಮನೆಯೊಳಗಿಂದ ನಿನ್ನನ್ನು ಏಪೋಚಿಸಿದ
ನಿನ್ನ ಕರ್ತನಾದ ದೇವರಿಗೆ ವಿರೋಧವಾದ ದ್ರೋಹವನ್ನು, ನಿ
ನ್ನ ದೇವರಾದ ಕರ್ತನು ನಿನಗೆ ನಡೆಯಲಾಜ್ಞಾಪಿಸಿದ ಮಾರ್ಗ
ದಿಂದ ನಿನ್ನನ್ನು ತಪ್ಪಿಸುವದಕ್ಕೆ, ಮಾತಾಡಿದ್ದಾನೆ. ಕೆಟ್ಟದ್ದನ್ನು
ನಿನ್ನ ಮಧ್ಯದಲ್ಲಿಂದ ತೆಗೆದು ಹಾಕಬೇಕು.

೬ ನಿನ್ನ ತಾಯಿಯ ಮಗನಾದ ನಿನ್ನ ಸಹೋದರನಾಗಲಿ, ನಿ
ನ್ನ ಮಗನಾಗಲಿ, ನಿನ್ನ ಮಗಳಾಗಲಿ, ನಿನ್ನ ಮಗ್ಗುಲಲ್ಲಿರುವ
ಹೆಂಡತಿಯಾಗಲಿ, ನಿನ್ನ ಪ್ರಾಣದಂತೆ ನಿನಗಿರುವ ಸ್ನೇಹಿತನಾಗ
ಲಿ, ನೀನೂ ನಿನ್ನ ಪಿತೃಗಳೂ ಶಿಳ್ಳೆಯದ ಬೇರೆ ದೇವರುಗಳ
೭ ನ್ನು—ನಿನಗೆ ಸಖಾಪವಾಗಲಿ ನಿನಗೆ ದೂರವಾಗಲಿ ಭೂಮಿಯ
ಒಂದು ಕಡೆಯಿಂದ ಅದರ ಮತ್ತೊಂದು ಕಡೆಯ ಪರ್ಯಂತರ ನಿ
ನ್ನ ಸುತ್ತಲಿರುವ ಜನಗಳ ದೇವರುಗಳನ್ನು ಹೋಗಿ ಸೇವಿಸೋ
೮ ಣ ಎಂದು, ನಿನ್ನನ್ನು ಅಂತರಂಗದಲ್ಲಿ ಪ್ರೇರೇಪಿಸಿದರೆ, ನೀನು
ಅವನಿಗೆ ಸಮ್ಮತಿಸಬೇಡ; ಅವನ ಮಾತು ಕೇಳಬೇಡ; ನಿನ್ನ
ಕಣ್ಣು ಅವನನ್ನು ಕರುಣಿಸಬಾರದು; ನೀನು ಅವನನ್ನು ಕನಿಕ
೯ ರಿಸಬೇಡ; ಬಚ್ಚಿಡಬೇಡ. ಅವನನ್ನು ಕೊಂದೇ ಕೊಂದು ಹಾ
ಕಬೇಕು; ಅವನನ್ನು ಕೊಲ್ಲುವ ಹಾಗೆ ಮೊದಲು ನಿನ್ನ ಕೈ,
೧೦ ಆ ಮೇಲೆ ಎಲ್ಲಾ ಜನರ ಕೈ, ಅವನ ಮೇಲಿರಬೇಕು. ಐಗುಪ್ತ
ದೇಶದೊಳಗಿಂದಲೂ ದಾಸತ್ವದ ಮನೆಯೊಳಗಿಂದಲೂ ನಿನ್ನ
ನ್ನು ಹೊರಗೆ ಬರ ಮಾಡಿದ ನಿನ್ನ ದೇವರಾದ ಕರ್ತನ ಬಲಿಯಿಂ
ದ ನಿನ್ನನ್ನು ಜಾರಿಸುವದಕ್ಕೆ ಅವನು ಪ್ರಯತ್ನ ಮಾಡಿದ್ದರಿಂದ
೧೧ ಅವನು ಸಾಯುವ ಹಾಗೆ ಅವನನ್ನು ಕಲ್ಲೆಸೆಯ ಬೇಕು. ಇಸ್ರ
ಯೇಲೆಲ್ಲಾ ಕೇಳಿ, ಭಯ ಪಟ್ಟು, ಇನ್ನು ಮೇಲೆ ನಿನ್ನ ಮಧ್ಯದ
ಲ್ಲಿ ಇಂಥಾ ಕೆಟ್ಟ ಕಾರ್ಯವನ್ನು ಮಾಡರು.

೧೨ ನಿನ್ನ ದೇವರಾದ ಕರ್ತನು ನಿನಗೆ ವಾಸ ಮಾಡುವದಕ್ಕೆ ಕೊ
೧೩ ಡುವ ನಿನ್ನ ಪಟ್ಟಣಗಳ ಬಂದರಲ್ಲಿ ನೀನು—ಬೆಲಿಯಾಳನ ಮಕ್ಕಳಾ
ದ ಮನುಷ್ಯರು ನಿನ್ನ ಮಧ್ಯದಿಂದ ಹೊರಟು, ನೀವು ಶಿಳ್ಳೆಯದ
ಬೇರೆ ದೇವರುಗಳನ್ನು ಹೋಗಿ ಸೇವಿಸೋಣ ಎಂದು ಹೇಳಿ, ತ
೧೪ ಮ್ಮ ಪಟ್ಟಣದ ನಿವಾಸಿಗಳನ್ನು ಜಾರಿಸಿದ್ದಾರೆಂದು ಕೇಳಿದರೆ, ನೀನು
ಹುಡುಕಿ, ಶೋಧಿಸಿ, ಚನಾಗಿ ವಿಚಾರಣೆ ಮಾಡಬೇಕು; ಆ ಕಾ
ರ್ಯವು ನಿಶ್ಚಯವಾಗಿ ಸತ್ಯವಾದರೆ, ಅಂಥ ಅಸಹ್ಯವು ನಿಮ್ಮಲ್ಲಿ



೧೫ ನಡೆದದ್ದಾದರೆ, ಆ ಪಟ್ಟಣ ನಿವಾಸಿಗಳನ್ನು ಕತ್ತೀ ಬಾಯಿಯಿಂದ
ಹೊಡೆದೇ ಹೊಡೆದು, ಅದನ್ನೂ ಅದರಲ್ಲಿರುವ ಎಲ್ಲವನ್ನೂ ಅದ
ರ ಪಶುಗಳನ್ನು ಸಹ ಶಾಪ ಕೊಟ್ಟು, ಕತ್ತೀ ಬಾಯಿಯಿಂದ ನಿ
೧೬ ರ್ಮೂಲ ಮಾಡಬೇಕು. ಇದಲ್ಲದೆ ಅದರ ಎಲ್ಲಾ ಕೊಳ್ಳೆಯ
ನ್ನೂ ಅದರ ಬೀದಿಯ ಮಧ್ಯದಲ್ಲಿ ಕೂಡಿಸಿ, ಆ ಪಟ್ಟಣವನ್ನೂ
ಅದರ ಎಲ್ಲಾ ಕೊಳ್ಳೆಯನ್ನೂ ಸಂಪೂರ್ಣವಾಗಿ ನಿನ್ನ ದೇವ
ರಾದ ಕರ್ತನಿಗೆ ಬೆಂಕಿಯಿಂದ ಸುಟ್ಟು ಬಿಡಬೇಕು; ಅದು ಎಂದಿ
ಗೂ ದಿಬ್ಬೆಯಾಗಬೇಕು; ಇನ್ನು ಮೇಲೆ ಅದನ್ನು ಕಟ್ಟಬಾರ
೧೭ ದು. ಇದಲ್ಲದೆ ನೀನು ನಿನ್ನ ದೇವರಾದ ಕರ್ತನ ಶಬ್ದವನ್ನು ಕೇ
ಳಿ, ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಅವನ ಎಲ್ಲಾ ಆ
ಜ್ಞೆಗಳನ್ನು ಕಾಪಾಡಿ, ನಿನ್ನ ದೇವರಾದ ಕರ್ತನ ದೃಷ್ಟಿಯಲ್ಲಿ
೧೮ ನೆಟ್ಟಗೆಯಾದದ್ದನ್ನು ಮಾಡಲಾಗಿ, ಕರ್ತನು ತನ್ನ ಕೋಪದ
ಉರಿಯನ್ನು ಬಿಟ್ಟು, ಶಿರುಗಿ, ನಿನಗೆ ಅಂತಃಕರಣವನ್ನು ತೋರಿ
ಸಿ, ನಿನ್ನ ಮೇಲೆ ಅಂತಃಕರಣ ಪಟ್ಟು, ಅವನು ನಿನ್ನ ಪಿತೃಗಳಿಗೆ
ಪ್ರಮಾಣ ಮಾಡಿದಂತೆ ನಿನ್ನನ್ನು ಹೆಚ್ಚಿಸುವ ಹಾಗೆ, ಆ ಶಾ
ಪ ಹೊಂದಿದ್ದರಲ್ಲಿ ಏನಾದರೂ ನಿನ್ನ ಕೈಗೆ ಅಂಟಿ ಕೊಳ್ಳಬಾ
ರದು.

## ೧೪. ಸಂಧಿ.

೧ ನೀವು ನಿಮ್ಮ ದೇವರಾದ ಕರ್ತನ ಮಕ್ಕಳೇ: ನೀವು ಸತ್ತವರಿ
ಗೋಸ್ಕರ ಘಾಯ ಮಾಡಿ ಕೊಳ್ಳಬೇಡಿರಿ; ನಿಮ್ಮ ಕಣ್ಣುಗಳ
೨ ನಡುವೆ ಬೋಳಿಸಿ ಕೊಳ್ಳಬೇಡಿರಿ. ಯಾಕಂದರೆ ನೀನು ನಿನ್ನ
ದೇವರಾದ ಕರ್ತನಿಗೆ ಪರಿಶುದ್ಧ ಜನವೇ; ನಿನ್ನನ್ನು ಕರ್ತನು ತನ
ಗೆ ಸ್ವಂತ ಜನವಾಗುವ ಹಾಗೆ ಭೂಮಿಯ ಮೇಲಿರುವ ಎಲ್ಲಾ ಜ
ನಗಳೊಳಗಿಂದ ಆದು ಕೊಂಡಿದ್ದಾನೆ.

3, ೪ ಅಸಹ್ಯವಾದ ಯಾವದನ್ನಾದರೂ ತಿನ್ನಬೇಡಿರಿ. ನೀವು ತಿ
೫ ನ್ನತಕ್ಕ ಪ್ರಾಣಿಗಳು ಇವೇ—ಎತ್ತು, ಕುರಿ, ಮೇಕೆ, ಕಡವೆ, ಜಿಂ
ಕೆ, ಬಿಳಿಕೇಪ ಸಾರಂಗ, ಕಾಡಾಡು, ಕೆಂದ ಜಿಂಕೆ, ಕಾಡ ಕೋಣ,
೬ ಸಂಬರ. ಮೃಗ ಜಾತಿಯಲ್ಲಿ ಗೊರಕೆಯನ್ನು ಛೇದಿಸಿ ಕೊಂಡು,
ಆ ಛೇದವನ್ನು ಎರಡು ಗೊರಕೆಗಳಾಗಿ ವಿಭಾಗಿಸಿ ಕೊಂಡು, ನೆಮ
೭ ರು ಹಾಕುವಂಥ, ಮೃಗಗಳನ್ನೆಲ್ಲಾ ನೀವು ತಿನ್ನಬಹುದು. ಆದ
ರೆ ನೆಮರು ಹಾಕಿ ನಖವುಳ್ಳ ಗೊರಕೆಯನ್ನು ಛೇದಿಸಿ ಕೊಂಡಿರು
ವವುಗಳಲ್ಲಿ ಇವುಗಳನ್ನು ನೀವು ತಿನ್ನಬಾರದು; ಯಾವವಂದರೆ
ಒಂಟೆಯನ್ನು, ಮೊಲವನ್ನು, ಕಾಣಿ ಮೊಲವನ್ನು; ಯಾಕಂದರೆ
ಅವು ನೆಮರು ಹಾಕಿದರೂ, ಗೊರಕೆಯನ್ನು ಛೇದಿಸುವದಿಲ್ಲ; ಅವು
೮ ನಿಮಗೆ ಅಶುದ್ಧವಾಗಿವೆ. ಹಂದಿಯನ್ನು ತಿನ್ನಬಾರದು; ಯಾಕಂ
ದರೆ ಅದು ಗೊರಕೆ ಛೇದಿಸಿದರೂ, ನೆಮರು ಹಾಕುವದಿಲ್ಲ; ಅದು
ನಿಮಗೆ ಅಶುದ್ಧವೇ; ಅವುಗಳ ಮಾಂಸವನ್ನು ತಿನ್ನಬೇಡಿರಿ; ಅವು
ಗಳ ಹೆಣವನ್ನು ಮುಟ್ಟಬೇಡಿರಿ.

೯ ನೀರಿನಲ್ಲಿರುವ ಎಲ್ಲವುಗಳಲ್ಲಿ ನೀವು ಇವುಗಳನ್ನು ತಿನ್ನಬಹು
ದು—ಕಕ್ಕೆಯೂ ಪಿಚ್ಚೆಯೂ ಉಳ್ಳವುಗಳನ್ನೆಲ್ಲಾ ತಿನ್ನಬಹುದು.
೧೦ ಆದರೆ ಕಕ್ಕೆಯೂ ಪಿಚ್ಚೆಯೂ ಇಲ್ಲದವುಗಳನ್ನೆಲ್ಲಾ ತಿನ್ನಬೇಡಿ
ರಿ; ಅವು ನಿಮಗೆ ಅಶುದ್ಧವಾಗಿವೆ.

೧೧, ೧೨ ಶುದ್ಧವಾದ ಎಲ್ಲಾ ಪಕ್ಷಿಗಳನ್ನು ತಿನ್ನಬಹುದು. ಪಕ್ಷಿ ಜಾತಿ
ಯಲ್ಲಿ ನೀವು ತಿನ್ನಬಾರದವುಗಳು ಯಾವವಂದರೆ—ಹದ್ದೂ, ನೀ
೧೩ ರು ಹದ್ದೂ, ಕೊರಕಂಚಿಯೂ, ಗಿಡುಗವೂ, ಭೈರಿಯೂ, ಜಾ
೧೪ ತ್ಯಾನುಸಾರವಾದ ಕಣಹದ್ದೂ, ಜಾತ್ಯಾನುಸಾರವಾದ ಸಕಲ
೧೫ ಕಾಗೆಯೂ, ಉಬ್ಬ್ರ ಪಕ್ಷಿಯೂ, ಗೂಗೆಯೂ, ಕಡಲ್ಕಾಗೆ
೧೬ ಯೂ, ಜಾತ್ಯಾನುಸಾರವಾದ ಜೇಗೆಯೂ, ಇಟ್ಟಿಗಿಯೂ, ಗು
ಡ್ಡ ಗೂಗೆಯೂ, ಕೋಕಕೆಯೂ, ನೀರು ಕೋಳಿಯೂ, ಹೆಣಹ
೧೭ ದ್ದೂ, ಬೆಳ್ಳಕ್ಕಿಯೂ, ನೀರು ಕೋಕಕೆಯೂ, ಜಾತ್ಯಾನುಸಾರ
೧೮ ವಾದ ಬಕವೂ, ಬುತ್ತ ಗೋಳಿಯೂ, ರಾತ್ರಿ ಗೀಜುಕವೂ. ಇದಲ್ಲ
೧೯ ದೆ ಹಾರುವ ಎಲ್ಲಾ ಹುಳಗಳು ನಿಮಗೆ ಅಶುದ್ಧವೇ; ಅವುಗಳನ್ನು ತಿ
೨೦ ನ್ನಬಾರದು. ಶುದ್ಧವಾದ ಎಲ್ಲಾ ಪಕ್ಷಿಗಳನ್ನು ತಿನ್ನಬಹುದು.

೨೧ ತಾನೇ ಸತ್ತ ಯಾವದನ್ನಾದರೂ ತಿನ್ನಬೇಡಿರಿ; ನಿಮ್ಮ ಬಾಗ
ಲುಗಳಲ್ಲಿರುವ ಅನ್ಯನಿಗೆ, ಅವನು ತಿನ್ನುವ ಹಾಗೆ, ಕೊಡಬೇಕು;
ಇಲ್ಲವೆ ಪರದೇಶದವನಿಗೆ ಮಾರಬಹುದು; ಯಾಕಂದರೆ ನೀನು
ನಿನ್ನ ದೇವರಾದ ಕರ್ತನಿಗೆ ಪರಿಶುದ್ಧ ಜನವೇ. ಮೇಕೆಯ ಮರಿ
ಯನ್ನು ತಾಯಿಯ ಹಾಲಿನಲ್ಲಿ ಕುದಿಸಬೇಡ.

೨೨ ನೀನು ಬಿತ್ತುವದರಿಂದ, ಹೊಲದಲ್ಲಿ ವರುಷ ವರುಷಕ್ಕೆ ಬರು
೨೩ ವ ಹುಟ್ಟುವಳ್ಳಿಯಿಂದ ಹತ್ತರಷ್ಟೊಂದು ತಪ್ಪದೆ, ಕೊಡಬೇಕು.
ನೀನು ನಿನ್ನ ದೇವರಾದ ಕರ್ತನಿಗೆ ಎಂದೆಂದಿಗೂ ಭಯ ಪಡುವದ
ನ್ನು ಕಲಿಯುವ ಹಾಗೆ, ನಿನ್ನ ಗೋಧಿ, ದ್ರಾಕ್ಷೇ ರಸ, ಎಣ್ಣೆಗಳ
ಹತ್ತನೇ ಪಾಲನ್ನು, ನಿನ್ನ ಕುರಿಗಳ ಜೊಚ್ಚಲುಗಳನ್ನೂ, ನಿನ್ನ
ದೇವರಾದ ಕರ್ತನ ಮುಂದೆ, ಅವನು ತನ್ನ ಹೆಸರನ್ನು ಇರಿಸುವ
ದಕ್ಕೆ ಆದು ಕೊಂಡ ಸ್ಥಳದಲ್ಲಿ, ತಿನ್ನಬೇಕು.

೨೪ ನೀನು ಅವುಗಳನ್ನು ವೈಯ ಕೂಡದ ಹಾಗೆ, ನಿನಗೆ ಹಾದಿ
ದೂರವಾದರೆ, ಇಲ್ಲವೆ ನಿನ್ನ ದೇವರಾದ ಕರ್ತನು ತನ್ನ ಹೆಸರ
ನ್ನು ಇರಿಸುವದಕ್ಕೆ ಆದು ಕೊಂಡ ಸ್ಥಳವು ನಿನಗೆ ದೂರವಾದರೆ,
೨೫ ನಿನ್ನ ದೇವರಾದ ಕರ್ತನು ನಿನ್ನನ್ನು ಆಶೀರ್ವದಿಸಿದ ಮೇಲೆ, ಅ
ವುಗಳ ಹಣವನ್ನು ಕೊಟ್ಟು, ಆ ಹಣವನ್ನು ನಿನ್ನ ಕೈಯಲ್ಲಿ ಕ
ಟ್ಟಿ ಕೊಂಡು, ನಿನ್ನ ದೇವರಾದ ಕರ್ತನು ಆದು ಕೊಳ್ಳುವ ಸ್ಥಳ
ಕ್ಕೆ ಹೋಗಬೇಕು. ಆಗ ಆ ಹಣವನ್ನು ನಿನಗೆ ಮನಸ್ಸು ಬಂ
ದದ್ದೆಲ್ಲಾದಕ್ಕೆ, ದನ, ಕುರಿ, ದ್ರಾಕ್ಷೇ ರಸ, ಮದ್ಯಪಾನಗಳಿಗೋಸ್ಕ
ರವೂ ನಿನ್ನ ಪ್ರಾಣವು ಆಶಿಸುವ ಎಲ್ಲವುಗಳಿಗೋಸ್ಕರವೂ ವೆಚ್ಚ
ಮಾಡಬೇಕು; ಆ ಮೇಲೆ ನೀನೂ ನಿನ್ನ ಮನೆಯವರೂ ಅಲ್ಲಿ ನಿ
ನ್ನ ದೇವರಾದ ಕರ್ತನ ಮುಂದೆ ಉಂಡು, ಸಂತೋಷಪಡಬೇಕು.
೨೭ ಮತ್ತು ನಿನ್ನ ಬಾಗಲುಗಳಲ್ಲಿರುವ ಲೇವ್ಯನನ್ನು ಕೈ ಬಿಡಬೇಡ;
ಯಾಕಂದರೆ ಅವನಿಗೆ ನಿನ್ನ ಸಂಗಡ ಪಾಲೂ ಸ್ವಾಸ್ತ್ಯವೂ ಇಲ್ಲ.

೨೮ ಮೂರು ವರುಷಗಳ ಅಂತ್ಯದಲ್ಲಿ ಆ ವರುಷದಲ್ಲಿ ನಿನಗೆ ಶಿ
ಕ್ಕಿರ ಹುಟ್ಟುವಳ್ಳಿಯ ಹತ್ತನೇ ಪಾಲನ್ನೆಲ್ಲಾ ಹೊರಗೆ ತಂದು, ನಿ
ನ್ನ ಬಾಗಲುಗಳಲ್ಲಿ ಇಟ್ಟು ಬಿಡಬೇಕು. ಆಗ ನಿನ್ನ ಸಂಗಡ
ಪಾಲನ್ನೂ ಸ್ವಾಸ್ತ್ಯವನ್ನೂ ಹೊಂದದ ಲೇವ್ಯನೂ, ನಿನ್ನ ಬಾ
ಗಲುಗಳಲ್ಲಿರುವ ಅನ್ಯ ದೇಶಿಯೂ, ವಿಕ್ಕಿಲ್ಲದವನೂ, ವಿಧವೆ
ಯೂ ಬಂದು, ನಿನ್ನ ದೇವರಾದ ಕರ್ತನು ನಿನ್ನನ್ನು ನೀನು
ಮಾಡುವ ಎಲ್ಲಾ ಕೈ ಕೆಲಸದಲ್ಲಿ ಆಶೀರ್ವದಿಸುವ ಹಾಗೆ, ಉಂ
ಡು, ತೃಪ್ತಿಯಾಗಲಿ.

## ೧೫. ಸಂಧಿ.

೧ ಏಳು ಏಳು ವರುಷಗಳ ಅಂತ್ಯದಲ್ಲಿ ಬಿಡುಗಡೆಯನ್ನು ಮಾ
೨ ಡಬೇಕು. ಬಿಡುಗಡೆಯ ಕ್ರಮವೇನಂದರೆ—ಸಾಲ ಕೊಟ್ಟವರೆ

ಲ್ಲರೂ ತಮ್ಮು ನೆಕೆಯವರಿಗೆ ಕೊಟ್ಟು ಸಾಲವನ್ನು ಬಿಟ್ಟು ಬಿಡ ಬೇ
ಕು; ಅದು ಕರ್ತನ ಬಿಡುಗಡೆ ಎಂದು ಕರೆಯಲ್ಪಟ್ಟ ಕಾರಣ, ತಮ್ಮ
ನೆಕೆಯವನಿಂದಲೂ, ಸಹೋದರನಿಂದಲೂ, ಸಾಲ ಈಸಿ ಕೊಳ್ಳ
೩ ಬಾರದು. ಅನ್ಯನಿಂದ ಈಸಿಕೊಳ್ಳ ಬಹುದು; ಆದರೆ ನಿನ್ನ ಸ
ಹೋದರನ ಬಳಿಯಲ್ಲಿ ನಿನಗಿರುವದನ್ನು ನಿನ್ನ ಕೈ ಬಿಟ್ಟು ಬಿಡ
೪ ಬೇಕು. ಬಡವನು ಮಾತ್ರ ನಿನ್ನ ಮಧ್ಯದಲ್ಲಿರ ಬಾರದು; ಯಾ
ಕಂದರೆ ನಿನ್ನ ದೇವರಾದ ಕರ್ತನು ನಿನಗೆ ಸ್ವತಂತ್ರಿಸಿ ಕೊಳ್ಳುವ
ದಕ್ಕೆ ಸ್ವಾಸ್ತ್ಯವಾಗಿ ಕೊಡುವ ದೇಶದಲ್ಲಿ ಕರ್ತನು ನಿನ್ನನ್ನು
೫ ಆಶೀರ್ವದಿಸಲೇ ಆಶೀರ್ವದಿಸುವನು. ನೀನು ನಿನ್ನ ದೇವರಾದ ಕ
ರ್ತನ ಮಾತನ್ನು ಕೇಳಲೇ, ಕೇಳಿ, ನಾನು ಈ ಹೊತ್ತು ನಿನಗೆ ಆ
ಜ್ಞಾಪಿಸುವ ಈ ಎಲ್ಲಾ ಆಜ್ಞೆಯನ್ನು ಕಾಪಾಡಿ, ಮಾಡಿದರೆ,
೬ ನಿಶ್ಚಯವಾಗಿ ನಿನ್ನ ದೇವರಾದ ಕರ್ತನು, ನಿನಗೆ ಹೇಳಿದ ಹಾಗೆ,
ನಿನ್ನನ್ನು ಆಶೀರ್ವದಿಸುವನು; ನೀನು ಸಾಲ ತಕ್ಕೊಳ್ಳದೆ, ಅನೇ
ಕ ಜನಾಂಗಗಳಿಗೆ ಸಾಲ ಕೊಡುವಿ; ಅನೇಕ ಜನಾಂಗಗಳನ್ನು ಆ
ಳುವಿ; ಅವರು ನಿನ್ನನ್ನು ಆಳುವದಿಲ್ಲ.

೭ ನಿನ್ನ ದೇವರಾದ ಕರ್ತನು ನಿನಗೆ ಕೊಡುವ ನಿನ್ನ ದೇಶದಲ್ಲಿ,
ನಿನ್ನ ಬಾಗಲುಗಳ ಒಂದರಲ್ಲಿ, ನಿನ್ನ ಸಹೋದರರಲ್ಲಿ ಒಬ್ಬನಾಗಿ
ರುವ ಬಡವನು ನಿನ್ನಲ್ಲಿದ್ದರೆ, ನಿನ್ನ ಹೃದಯವನ್ನು ಕಠಿಣ ಮಾ
ಡಿ ಕೊಳ್ಳಬೇಡ; ನಿನ್ನ ಕೈಯನ್ನು ನಿನ್ನ ಬಡ ಸಹೋದರನಿಗೆ
೮ ಮುಚ್ಚಿ ಕೊಳ್ಳ ಬೇಡ. ನಿನ್ನ ಕೈಯನ್ನು ಅವನಿಗೆ ತೆಕೆದೇ ತೆ
ಕೆಯ ಬೇಕು; ಅವನಿಗೆ ಬೇಕಾಗುವದರಲ್ಲಿ ಬೇಕಾದಷ್ಟು ಸಾಲ
೯ ಅವನಿಗೆ ಕೊಡ ಬೇಕು. ಬಿಡುಗಡೆಯ ವರುಷದ ಏಳನೇ ವರು
ಷವು ಸಮೀಪವಾಯಿತೆಂಬ ಆಲೋಚನೆ ನಿನ್ನ ದುಷ್ಟ ಹೃದಯ
ದಲ್ಲಿ ಹುಟ್ಟಿ, ನಿನ್ನ ಬಡ ಸಹೋದರನ ಮೇಲೆ ನಿನ್ನ ಕಣ್ಣು ಕೆಟ್ಟ
ದ್ದಾಗಿ, ನೀನು ಅವನಿಗೆ ಏನೂ ಕೊಡದೆ, ಇರುವದರಿಂದ, ಅವನು
ನಿನಗೆ ವಿರೋಧವಾಗಿ ಕರ್ತನಿಗೆ ಕೂಗುವಾಗ, ನಿನ್ನಲ್ಲಿ ಪಾಪ
೧೦ ಉಂಟಾಗದ ಹಾಗೆ ನೋಡಿಕೋ. ಅವನಿಗೆ ಕೊಟ್ಟೇ ಕೊಡ ಬೇ
ಕು; ಅವನಿಗೆ ಕೊಡುವಾಗ, ನಿನ್ನ ಹೃದಯದಲ್ಲಿ ದುಖ್ಖವಾಗ
ಬಾರದು; ಯಾಕಂದರೆ ಇದಕ್ಕೋಸ್ಕರವೇ ನಿನ್ನ ದೇವರಾದ ಕ
ರ್ತನು ನಿನ್ನನ್ನು ನಿನ್ನ ಎಲ್ಲಾ ಕೆಲಸಗಳಲ್ಲಿಯೂ, ನೀನು ಕೈ
೧೧ ಹಾಕುವಬೆಲ್ಲಾದರಲ್ಲಿಯೂ ಆಶೀರ್ವದಿಸುವನು. ಯಾಕಂದರೆ
ಬಡವರು ದೇಶದಲ್ಲಿ ಇಲ್ಲದೆ ಹೋಗುವದಿಲ್ಲ: ಆದದರಿಂದ—ನಿನ್ನ
ಸಹೋದರನಿಗೂ ನಿನ್ನ ದರಿದ್ರನಿಗೂ ನಿನ್ನ ಬಡವನಿಗೂ ನಿನ್ನ
ದೇಶದಲ್ಲಿ ನಿನ್ನ ಕೈಯನ್ನು ತೆಕೆದೇ ತೆಕೆಯ ಬೇಕೆಂದು, ನಾನು
ನಿನಗೆ ಆಜ್ಞಾಪಿಸುತ್ತೇನೆ.

೧೨ ನಿನ್ನ ಸಹೋದರನಾದ ಇಬ್ರೀಯನಾಗಲಿ, ಒಬ್ಬ ಇಬ್ರೀಯ
ಳಾಗಲಿ, ನಿನಗೆ ಮಾರಲ್ಪಟ್ಟು, ಆರು ವರುಷ ನಿನಗೆ ಸೇವೆ ಮಾ
ಡಿದ್ದರೆ, ಏಳನೇ ವರುಷದಲ್ಲಿ ಅವನನ್ನು ಬಿಡುಗಡೆಯಾಗಿ ಕಳು
೧೩ ಹಿಸ ಬೇಕು. ಅವನನ್ನು ಬಿಡುಗಡೆಯಾಗಿ ಕಳುಹಿಸಿ ಬಿಡುವಾ
೧೪ ಗ, ಬರೀ ಕೈಯಾಗಿ ಕಳುಹಿಸಿ ಬಿಡ ಬೇಡ. ನಿನ್ನ ಕುರಿ ಮಂದೆ
ಯಿಂದಲೂ ಕಣದಿಂದಲೂ ಆಲೆಯಿಂದಲೂ ಅವನಿಗೆ ರಾಶಿ ಕೊ
ಡ ಬೇಕು; ನಿನ್ನ ದೇವರಾದ ಕರ್ತನು ನಿನಗೆ ಆಶೀರ್ವಾದವಾಗಿ
೧೫ ಕೊಟ್ಟದರಲ್ಲಿ ಅವನಿಗೆ ಕೊಡ ಬೇಕು. ನೀನು ಐಗುಪ್ತ ದೇಶದ
ಲ್ಲಿ ದಾಸನಾಗಿದ್ದಿ ಎಂದೂ, ನಿನ್ನ ದೇವರಾದ ಕರ್ತನು ನಿನ್ನನ್ನು
ವಿಮೋಚಿಸಿದನೆಂದೂ, ಜ್ಞಾಪಕ ಮಾಡಿ ಕೊಳ್ಳ ಬೇಕು; ಆದ
ದರಿಂದ ನಾನು ಈ ಹೊತ್ತು ಈ ಕಾರ್ಯವನ್ನು ನಿನಗೆ ಆಜ್ಞಾಪಿ
ಸುತ್ತೇನೆ.

೧೬ ಇದಲ್ಲದೆ ಅವನು ನಿನ್ನನ್ನೂ ನಿನ್ನ ಮನೆಯನ್ನೂ ಪ್ರೀತಿ
ಮಾಡುವದರಿಂದಲೂ, ನಿನ್ನ ಬಳಿಯಲ್ಲಿ ಸುಖವಾಗಿರುವದರಿಂದ
ಲೂ, ನಾನು ನಿನ್ನನ್ನು ಬಿಟ್ಟು ಹೋಗುವದಿಲ್ಲವೆಂದು ಹೇಳಿದರೆ,
೧೭ ನೀನು ಸಲಾಕೆಯನ್ನು ತಕ್ಕೊಂಡು, ಅವನ ಕಿವಿಯನ್ನು ಬಾಗಲಿ
ಗೆ ತಗಲಿಸಿ ಚುಚ್ಚ ಬೇಕು; ಆಗಲವನು ನಿತ್ಯವಾಗಿ ನಿನ್ನ ದಾಸನಾ
೧೮ ಗಿರುವನು; ನಿನ್ನ ದಾಸಿಗೂ ಹಾಗೆ ಮಾಡ ಬೇಕು. ಅವನನ್ನು
ನಿನ್ನಿಂದ ಬಿಡುಗಡೆಯಾಗಿ ಕಳುಹಿಸುವದು ನಿನಗೆ ಕಠಿಣವೆಂದು
ಕಾಣಿಸ ಬಾರದು; ಯಾಕಂದರೆ ಅವನು ಆರು ವರುಷ ನಿನ್ನ ದಾ
ಸನಾಗಿದ್ದದರಿಂದ, ಸಂಬಳದ ಸೇವಕನಿಗಿಂತ ಎರಡುಪ್ಪಾಗಿದ್ದನು;
ಹೀಗೆ ನಿನ್ನ ದೇವರಾದ ಕರ್ತನು ನೀನು ಮಾಡುವಲೆಲ್ಲಾದರಲ್ಲಿ
ನಿನ್ನನ್ನು ಆಶೀರ್ವದಿಸುವನು.

೧೯ ನಿನ್ನ ದನ ಕುರಿಗಳಲ್ಲಿ ಹುಟ್ಟುವ ಹೊಚ್ಚಲು ಗಂಡುಗಳ
ನ್ನೆಲ್ಲಾ ನಿನ್ನ ದೇವರಾದ ಕರ್ತನಿಗೆ ಪರಿಶುದ್ಧ ಮಾಡ ಬೇಕು; ನಿ
ನ್ನ ಹೋರಿಯ ಹೊಚ್ಚಲನ್ನು ಕಟ್ಟು ಪಡಿಸ ಬೇಡ; ನಿನ್ನ ಹೊ
೨೦ ಚ್ಚಲಲ್ಲಿ ಕುರಿಯ ಉಣ್ಣೆ ಕತ್ತರಿಸ ಬೇಡ. ನಿನ್ನ ದೇವರಾದ ಕ
ರ್ತನ ಮುಂದೆ, ಕರ್ತನು ಆದು ಕೊಳ್ಳುವ ಸ್ಥಳದಲ್ಲಿ ನೀನು, ನಿ
ನ್ನ ಮನೆಯವರು ಸಹಿತವಾಗಿ, ಅವುಗಳನ್ನು ವರುಷ ವರುಷಕ್ಕೆ
ಉಣ್ಣಾ ಬೇಕು.

೨೧ ಆದರೆ ಅದರಲ್ಲಿ ಏನಾದರೂ ಊನತೆ ಇದ್ದರೆ, ಅದು ಕುಂಟಾ
ಗಲಿ, ಕುರುಡಾಗಲಿ, ಏನಾದರೂ ಕೆಟ್ಟ ಊನತೆ ಉಳ್ಳದ್ದಾದರೆ,
೨೨ ಅದನ್ನು ನಿನ್ನ ದೇವರಾದ ಕರ್ತನಿಗೆ ಅರ್ಪಿಸ ಬೇಡ. ನಿನ್ನ ಬಾ
ಗಲುಗಳಲ್ಲಿ ಶುದ್ಧರೂ ಅಶುದ್ಧರೂ ಕೂತ, ಅದನ್ನು ಕಡವೆ ಜಿಂಕೆ
೨೩ ಗಳ ಹಾಗೆ ಉಣ್ಣ ಬೇಕು. ಅದರ ರಕ್ತವನ್ನು ಮಾತ್ರ ಉಣ್ಣ
ದೆ, ನೀರಿನಂತೆ ಭೂಮಿಯಲ್ಲಿ ಚೆಲ್ಲ ಬೇಕು.

## ೧೬. ಸಂಧಿ.

೧ ಅಬೀಬ್ ತಿಂಗಳನ್ನು ಆಚರಿಸು; ಅದರಲ್ಲಿ ನಿನ್ನ ದೇವರಾದ
ಕರ್ತನಿಗೆ ಪಸ್ಕವನ್ನು ಮಾಡ ಬೇಕು; ಯಾಕಂದರೆ ಅಬೀಬ್
ತಿಂಗಳಿನಲ್ಲಿ ನಿನ್ನ ದೇವರಾದ ಕರ್ತನು ನಿನ್ನನ್ನು ರಾತ್ರಿ ಕಾಲದ
ಲ್ಲಿ ಐಗುಪ್ತದೊಳಗಿಂದ ಹೊರಗೆ ಬರ ಮಾಡಿದನು. ಹೀಗಿರುವ
೨ ದರಿಂದ ಕರ್ತನು ತನ್ನ ಹೆಸರನ್ನು ಇರಿಸುವದಕ್ಕೆ ಆದು ಕೊಳ್ಳು
ವ ಸ್ಥಳದಲ್ಲಿ ನಿನ್ನ ದೇವರಾದ ಕರ್ತನಿಗೆ ಕುರಿ ದನಗಳ ಪಸ್ಕವ
೩ ನ್ನು ಕೊಯ್ಯ ಬೇಕು. ಅದರಲ್ಲಿ ಏಳು ದಿವಸ ಹುಳಿ ಕೊಟ್ಟಿ
ಯನ್ನು ತಿನ್ನ ಬೇಡ; ಹುಳಿ ಇಲ್ಲದ ರೊಟ್ಟಿಯ ಕೊಟ್ಟಿಗಳನ್ನು ಅ
ದರಲ್ಲಿ ತಿನ್ನ ಬೇಕು; ಯಾಕಂದರೆ ತ್ವರೆಯಾದ ಓಟದಿಂದ ಐ
ಗುಪ್ತ ದೇಶದೊಳಗಿಂದ ಹೊರಗೆ ಬಂದಿ; ಆದದರಿಂದ ನೀನು ಐಗು
ಪ್ತ ದೇಶದೊಳಗಿಂದ ಹೊರಗೆ ಬಂದ ದಿವಸವನ್ನು ನೀನು ಜೀವ
೪ ಸುವ ದಿವಸಗಳೆಲ್ಲಾ ಜ್ಞಾಪಕ ಮಾಡ ಬೇಕು. ಏಳು ದಿವಸ ಹುಳಿ
ಕಲಸಿದ ಕೊಟ್ಟಿ ನಿನ್ನ ಮೇರೆಗಳೆಲ್ಲೆಲ್ಲಾ ಕಾಣ ಬಾರದು; ಮೊದಲ
ನೇ ದಿವಸದ ಸಾಯಂಕಾಲದಲ್ಲಿ ನೀನು ಕೊಯಿದ ಮಾಂಸದಲ್ಲಿ
ಏನಾದರೂ ಮರು ದಿವಸದ ಪರ್ಯಂತರ ಉಳಿಯ ಬಾರದು.
೫ ನಿನ್ನ ದೇವರಾದ ಕರ್ತನು ನಿನಗೆ ಕೊಡುವ ಬಾಗಲುಗಳ ಯಾವ
ದೊಂದರಲ್ಯಾದರೂ ನೀನು ಪಸ್ಕವನ್ನು ಕೊಯ್ಯ ಕೂಡದು.





೬ ನಿನ್ನ ದೇವರಾದ ಕರ್ತನು ತನ್ನ ಹೆಸರನ್ನು ಇರಿಸುವದಕ್ಕೆ ಆದು
ಕೊಳ್ಳುವ ಸ್ಥಳದಲ್ಲೇ ನೀನು ಪಸ್ಕವನ್ನು ಸಾಯಂಕಾದಲ್ಲಿ, ಸೂ
ರ್ಯನು ಅಸ್ತಮಿಸುವಾಗ, ನೀನು ಐಗುಪ್ತವನ್ನು ಬಿಟ್ಟು ಹೋ
೭ ದ ಸಮಯದಲ್ಲಿ, ಕೊಯ್ಯ ಬೇಕು. ನಿನ್ನ ದೇವರಾದ ಕರ್ತನು
ಆದು ಕೊಳ್ಳುವ ಸ್ಥಳದಲ್ಲಿ ಆದನ್ನು ಬೇಯಿಸಿ, ಉಣ್ಣ ಬೇಕು;
ಮರು ದಿವಸದಲ್ಲಿ ತಿರುಗಿ ಕೊಂಡು, ನಿನ್ನ ಗುಡಾರಗಳಿಗೆ ಹೋ
೮ ಗ ಬೇಕು; ಆರು ದಿವಸ ಹುಳಿ ಇಲ್ಲದ ಕೊಟ್ಟಿಗಳನ್ನು ತಿನ್ನ
ಬೇಕು; ಏಳನೇ ದಿವಸದಲ್ಲಿ ನಿನ್ನ ದೇವರಾದ ಕರ್ತನ ಘನ ಸಂ
ಘ ಉಂಟು; ಅದರಲ್ಲಿ ಕೆಲಸ ಮಾಡ ಬೇಡ.

೯ ಏಳು ವಾರಗಳನ್ನು ಎಣಿಸಿ ಕೊಳ್ಳ ಬೇಕು; ಕೈಯಿನಲ್ಲಿ ಕುಡ
ಗೋಲು ಮೊದಲು ಹಾಕುವದಿನಿಂದ ಏಳು ವಾರಗಳನ್ನು ಎಣಿಸಿ
೧೦ ಕೊಳ್ಳ ಬೇಕು. ಆಗ ನಿನ್ನ ದೇವರಾದ ಕರ್ತನು ನಿನ್ನನ್ನು ಆಶೀ
ರ್ವದಿಸಿದ ಪ್ರಕಾರ, ನೀನು ಕೊಡುವ ನಿನ್ನ ಕೈಯ ಉಚಿತವಾದ
೧೧ ಕಾಣಿಕೆಯ ಮೇರೆಗೆ ನಿನ್ನ ದೇವರಾದ ಕರ್ತನಿಗೆ ವಾರಗಳ ಹಬ್ಬ
ಮಾಡ ಬೇಕು. ಆಗ ನೀನೂ ನಿನ್ನ ಮಗನೂ, ನಿನ್ನ ಮಗಳೂ,
ನಿನ್ನ ದಾಸನೂ, ನಿನ್ನ ದಾಸಿಯೂ, ನಿನ್ನ ಬಾಗಲುಗಳಲ್ಲಿರುವ
ಲೇವ್ಯನೂ, ನಿನ್ನ ಮಧ್ಯದಲ್ಲಿರುವ ಅನ್ಯನೂ, ದಿಕ್ಕಿಲ್ಲದವನೂ,
ವಿಧವೆಯೂ, ನಿನ್ನ ದೇವರಾದ ಕರ್ತನು ತನ್ನ ಹೆಸರನ್ನು ಇರಿಸು
ವದಕ್ಕೆ ಆದು ಕೊಳ್ಳುವ ಸ್ಥಳದಲ್ಲಿ ನಿನ್ನ ದೇವರಾದ ಕರ್ತನ ಮುಂ
೧೨ ದೆ ಸಂತೋಷ ಪಡ ಬೇಕು. ನೀನು ಐಗುಪ್ತದಲ್ಲಿ ದಾಸನಾಗಿದ್ದಿ
ಎಂದು, ಜ್ಞಾಪಕ ಮಾಡಿ ಕೊಂಡು, ಈ ನೇಮಗಳನ್ನು ಕೈ ಕೊಂ
ಡು, ಮಾಡ ಬೇಕು.

೧೩ ನಿನ್ನ ಕಣದ, ನಿನ್ನ ಆಲೆಯ ಆದಾಯವನ್ನು ಕೂಡಿಸಿದ
೧೪ ಮೇಲೆ, ಏಳು ದಿವಸ ಗುಡಾರಗಳ ಹಬ್ಬ ಮಾಡ ಬೇಕು. ಆ ನಿ
ನ್ನ ಹಬ್ಬದಲ್ಲಿ ನೀನೂ ನಿನ್ನ ಮಗನೂ, ನಿನ್ನ ಮಗಳೂ, ನಿನ್ನ
ದಾಸನೂ, ನಿನ್ನ ದಾಸಿಯೂ, ನಿನ್ನ ಬಾಗಲುಗಳಲ್ಲಿರುವ ಲೇವ್ಯ
ನೂ, ಅನ್ಯನೂ, ದಿಕ್ಕಿಲ್ಲದವನೂ, ವಿಧವೆಯೂ, ಸಂತೋಷ ಪ
೧೫ ಡ ಬೇಕು. ಏಳು ದಿವಸ ನಿನ್ನ ದೇವರಾದ ಕರ್ತನಿಗೆ, ಕರ್ತನು
ಆದು ಕೊಳ್ಳುವ ಸ್ಥಳದಲ್ಲಿ, ಹಬ್ಬ ಮಾಡ ಬೇಕು; ನಿನ್ನ ದೇವ
ರಾದ ಕರ್ತನು ನಿನ್ನನ್ನು ನಿನ್ನ ಎಲ್ಲಾ ಆದಾಯದಲ್ಲಿಯೂ,
ನಿನ್ನ ಎಲ್ಲಾ ಕೈ ಕೆಲಸದಲ್ಲಿಯೂ, ಆಶೀರ್ವದಿಸುವದರಿಂದ ನೀನು
ಸಂತೋಷವಾಗಿಯೇ ಇರ ಬೇಕು.

೧೬ ವರುಷಕ್ಕೆ ಮೂರು ಸಾರಿ ನಿನ್ನ ಗಂಡಸಕ್ಕೆಲ್ಲರು ನಿನ್ನ ದೇ
ವರಾದ ಕರ್ತನ ಮುಂದೆ, ಅವನು ಆದು ಕೊಳ್ಳುವ ಸ್ಥಳದಲ್ಲಿ
ಕಾಣಿಸಿ ಕೊಳ್ಳ ಬೇಕು; ಹುಳಿ ಇಲ್ಲದ ಕೊಟ್ಟಿಗಳ ಹಬ್ಬದಲ್ಲಿ,
ವಾರಗಳ ಹಬ್ಬದಲ್ಲಿ, ಗುಡಾರಗಳ ಹಬ್ಬದಲ್ಲಿ, ಇದ್ದಲ್ಲದೆ ಅವರು
೧೭ ಕರ್ತನ ಸಮುಖಕ್ಕೆ ಬರೀ ಕೈಯಾಗಿ ಬರ ಬಾರದು. ನಿನ್ನ
ದೇವರಾದ ಕರ್ತನು ನಿನಗೆ ಕೊಡುವ ಆಶೀರ್ವಾದದ ಪ್ರಕಾರ
ಒಬ್ಬೊಬ್ಬನು ತನ್ನ ಕೈಯಿಂದ ಆಗುವದಷ್ಟು ಕೊಡ ಬೇಕು.

೧೮ ಕರ್ತನು ನಿನಗೆ ನಿನ್ನ ಕುಲಗಳ ಪ್ರಕಾರ ಕೊಡುವ ನಿನ್ನ ಎ
ಲ್ಲಾ ಬಾಗಲುಗಳಲ್ಲಿ ನಿನಗೆ ನ್ಯಾಯಾಧಿಪತಿಗಳನ್ನೂ, ಅಧಿಕಾರಿ
ಗಳನ್ನೂ ಇಟ್ಟು ಕೊಳ್ಳ ಬೇಕು; ಅವರು ಜನಕ್ಕೆ ನೀತಿಯಿಂದ
೧೯ ನ್ಯಾಯ ತೀರಿಸ ಬೇಕು. ನ್ಯಾಯವನ್ನು ವಾಕೆ ಮಾಡ ಬೇಡ;
ಮುಖದಾಕ್ಷಿಣ್ಯ ನೋಡ ಬೇಡ; ಲಂಚ ತಕ್ಕೊಳ್ಳ ಬೇಡ;
ಯಾಕಂದರೆ ಲಂಚವು ಜ್ಞಾನಿಗಳ ಕಣ್ಣುಗಳನ್ನು ಕುರುಡ ಮಾ
೨೦ ಡಿ, ನೀತಿವಂತರ ಮಾತುಗಳನ್ನು ಹೊಂಕು ಮಾಡುತ್ತದೆ. ನೀನು
ಬದುಕಿ, ನಿನ್ನ ದೇವರಾದ ಕರ್ತನು ನಿನಗೆ ಕೊಡುವ ದೇಶವನ್ನು
ಸ್ವತಂತ್ರಿಸಿ ಕೊಳ್ಳುವ ಹಾಗೆ, ನೀತಿಯನ್ನು, ನೀತಿಯನ್ನೇ ಹಿಂ
ದಟ್ಟಿ ಬೇಕು.

೨೦ ನೀನು ನಿನಗೆ ಮಾಡಿ ಕೊಳ್ಳುವ ನಿನ್ನ ಕರ್ತನಾದ ದೇವರ
ಬಲಿಪೀಠದ ಸಮೀಪದಲ್ಲಿ ಯಾವ ಮರಗಳ ಕೋಪನ್ನಾದರೂ
೨೨ ನೆಡ ಬೇಡ. ಮತ್ತು ಸ್ತಂಭವನ್ನು ನಿಲ್ಲಿಸ ಬೇಡ; ಇದನ್ನು ನಿನ್ನ
ದೇವರಾದ ಕರ್ತನು ಹಗೆ ಮಾಡುತ್ತಾನೆ.

## ೧೭. ಸಂಧಿ.

೧ ಊನತೆಯೂ, ಯಾವದೊಂದು ಅಪಲಕ್ಷಣವೂ ಉಳ್ಳ
ಹೋರಿಯನ್ನಾಗಲಿ, ಕುರಿಯನ್ನಾಗಲಿ, ನಿನ್ನ ದೇವರಾದ ಕರ್ತ
ನಿಗೆ ಅರ್ಪಿಸ ಬೇಡ; ಯಾಕಂದರೆ ಅದು ನಿನ್ನ ದೇವರಾದ ಕ
ರ್ತನಿಗೆ ಅಸಹ್ಯವೇ.

೨ ನಿನ್ನ ದೇವರಾದ ಕರ್ತನ ಮುಂದೆ ಕೆಟ್ಟದ್ದನ್ನು ಮಾಡಿ, ಅವ
೩ ನ ಒಡಂಬಡಿಕೆಯನ್ನು ಮೀರಿ, ಹೋಗಿ, ಸೂರ್ಯನನ್ನಾಗಲಿ,
ಚಂದ್ರನನ್ನಾಗಲಿ, ಆಕಾಶದ ಎಲ್ಲಾ ಸೈನ್ಯವನ್ನಾಗಲಿ, ಬೇರೆ ದೇ
ವರುಗಳನ್ನು ನನ್ನ ಆಜ್ಞೆಗೆ ವಿರೋಧವಾಗಿ ಸೇವಿಸಿ, ಅವುಗಳಿಗೆ
ಅಡ್ಡ ಬಿದ್ದ ಗಂಡಸಾದರೂ, ಹೆಂಗಸಾದರೂ, ನಿನ್ನ ದೇವರಾದ ಕ
ರ್ತನು ನಿನಗೆ ಕೊಡುವ ನಿನ್ನ ಬಾಗಲುಗಳ ಒಂದರಲ್ಲಿ ನಿನ್ನ ಬ
೪ ಳಿಯಲ್ಲಿ ಶಿಕ್ಕಿದರೆ, ಇದು ನಿನಗೆ ತಿಳಿಯ ಬಂದದರಿಂದ ನೀನು ಕೇ
ಳಿ, ಚನ್ನಾಗಿ ವಿಚಾರಿಸಿದ ಮೇಲೆ, ಇಗೋ, ಈ ಕಾರ್ಯವು ನಿ
ಶ್ಚಯವಾಗಿ ಸತ್ಯವಾದರೆ, ಈ ಅಸಹ್ಯವು ಇಸ್ರಯೇಲಿನಲ್ಲಿ ನಡೆ
೫ ದದ್ದಾದರೆ, ನೀನು ಆ ಗಂಡಸನ್ನಾಗಿದರೂ, ಹೆಂಗಸನ್ನಾದರೂ, ಆ
ಕೆಟ್ಟ ಕಾರ್ಯವನ್ನು ಮಾಡಿದ ಗಂಡಸನ್ನಾದರೂ, ಹೆಂಗಸನ್ನಾ
ದರೂ, ನಿನ್ನ ಬಾಗಲುಗಳ ಬಳಿಗೆ ಹೊರಗೆ ತಂದು, ಅವರು ಸಾ
ಯುವ ಹಾಗೆ ಅವರನ್ನು ಕಲ್ಲೆಸೆಯ ಬೇಕು.

೬ ಇಬ್ಬರು ಸಾಕ್ಷಿಗಳ, ಇಲ್ಲವೆ ಮೂವರು ಸಾಕ್ಷಿಗಳ ಮಾತಿನಿಂ
ದ ಆ ಸಾಯ ತಕ್ಕವನು ಸಾಯ ಬೇಕು; ಒಬ್ಬ ಸಾಕ್ಷಿಯ ಮಾ
೭ ತಿನಿಂದ ಅವನು ಸಾಯ ಬಾರದು ಅವನನ್ನು ಕೊಲ್ಲುವದಕ್ಕೆ
ಮೊದಲು, ಸಾಕ್ಷಿಗಳ ಕೈ, ಆ ಮೇಲೆ ಎಲ್ಲಾ ಜನರ ಕೈ, ಅವನ
ಮೇಲೆ ಇರ ಬೇಕು; ಕೆಟ್ಟದ್ದನ್ನು ನಿನ್ನ ಮಧ್ಯದಲ್ಲಿಂದ ತೆಗೆದು
ಹಾಕ ಬೇಕು.

೮ ನಿನ್ನ ಬಾಗಲುಗಳಲ್ಲಿ ಉಂಟಾದ ವಿವಾದಗಳ ವಿಷಯವಾಗಿ ರ
ಕ್ತಾಪರಾಧದ ವ್ಯಾಜ್ಯವಾಗಲಿ, ವಾದಿ ಪ್ರತಿವಾದಿ ವ್ಯಾಜ್ಯವಾಗಲಿ,
ಬಡಿದಾಟದ ವ್ಯಾಜ್ಯವಾಗಲಿ, ನೀನು ನ್ಯಾಯ ತೀರಿಸ ಕೂಡದ ಕ
ಠಿಣವಾದ ಕಾರ್ಯ ಉಂಟಾದರೆ, ನೀನು ಎದ್ದು, ನಿನ್ನ ದೇವರಾ
ದ ಕರ್ತನು ಆದು ಕೊಳ್ಳುವ ಸ್ಥಳಕ್ಕೆ ಏರಿ ಹೋಗಿ, ಯಾಜಕ
೯ ರ, ಲೇವ್ಯರ ಬಳಿಗೂ ಆ ದಿವಸದಲ್ಲಿ ನ್ಯಾಯಾಧಿಪತಿಯಾದವ
ನ ಬಳಿಗೂ ಹೋಗಿ, ವಿಚಾರಿಸ ಬೇಕು; ಅವರು ನಿನಗೆ ಆ ನ್ಯಾ
೧೦ ಯದ ಕಾರ್ಯವನ್ನು ತಿಳಿಸುವರು. ಅವರು ನಿನಗೆ ಕರ್ತನು
ಆದು ಕೊಳ್ಳುವ ಆ ಸ್ಥಳದಿಂದ ತಿಳಿಸುವ ಮಾತಿನ ಪ್ರಕಾರ ನೀನು
ಮಾಡಿ, ಅವರು ನಿನಗೆ ಬೋಧಿಸುವಂಥಾದ್ದೆಲ್ಲಾ ಕಾಪಾಡಿ, ಮಾ
೧೧ ಡ ಬೇಕು. ಅವರು ನಿನಗೆ ಬೋಧಿಸುವ ನ್ಯಾಯಪ್ರಮಾಣದ
ಪ್ರಕಾರವೂ, ಅವರು ನಿನಗೆ ಹೇಳುವ ನ್ಯಾಯದ ಪ್ರಕಾರವೂ,

ಮಾಡ ಬೇಕು; ಅವರು ನಿನಗೆ ತಿಳಿಸುವ ವಾಕ್ಯವನ್ನು ಬಿಟ್ಟು,
೧೨ ಎಡಕ್ಕಾದರೂ ಬಲಕ್ಕಾದರೂ ತೊಲಗ ಬೇಡ. ಅಲ್ಲಿ ನಿನ್ನ ದೇವ
ರಾದ ಕರ್ತನಿಗೆ ಸೇವೆ ಮಾಡುವದಕ್ಕೆ ನಿಂತ ಯಾಜಕನ ಮಾ
ತಾದರೂ ನ್ಯಾಯಾಧಿಪತಿಯ ಮಾತಾದರೂ ಕೇಳದೆ, ಅಹಂಕಾ
ರದಿಂದ ಏನಾದರೂ ಮಾಡುವ ಮನುಷ್ಯನು, ಆ ಮನುಷ್ಯನು
೧೩ ಸಾಯ ಬೇಕು; ಕೆಟ್ಟದ್ದನ್ನು ಇಸ್ರಯೇಲಿನಲ್ಲಿಂದ ತೆಗೆದು ಹಾಕ
ಬೇಕು. ಜನರೆಲ್ಲಾ ಕೇಳಿ, ಭಯ ಪಟ್ಟು, ಇನ್ನು ಮೇಲೆ ಅಹಂ
ಕಾರದಿಂದ ಏನೂ ಮಾಡರು.

೧೪ ನಿನ್ನ ದೇವರಾದ ಕರ್ತನು ನಿನಗೆ ಕೊಡುವ ದೇಶಕ್ಕೆ ನೀನು
ಬಂದು, ಅದನ್ನು ಸ್ವತಂತ್ರಿಸಿ ಕೊಂಡು, ಅದರಲ್ಲಿ ವಾಸವಾಗಿರುವಾ
ಗ, ನನ್ನ ಸುತ್ತಲಾಗಿರುವ ಎಲ್ಲಾ ಜನಾಂಗಗಳ ಹಾಗೆ ನನಗೆ ಅರ
ಸನ್ನು ಇಟ್ಟು ಕೊಳ್ಳುತ್ತೇನೆಂದು ಹೇಳಿದರೆ, ಹ್ಯಾಗಾದರೂ ನಿ
೧೫ ನ್ನ ದೇವರಾದ ಕರ್ತನು ಆದು ಕೊಳ್ಳುವವನನ್ನು ನಿನಗೆ ಅರಸ
ನಾಗಿ ಇಟ್ಟು ಕೊಳ್ಳ ಬೇಕು; ನಿನ್ನ ಸಹೋದರರಲ್ಲಿಂದ ಒಬ್ಬನ
ನ್ನು ನಿನಗೆ ಅರಸನಾಗಿ ಇಟ್ಟು ಕೊಳ್ಳ ಬೇಕು; ನಿನ್ನ ಸಹೋ
ದರನಲ್ಲದ ಅನ್ಯನಾದ ಮನುಷ್ಯನನ್ನು ನಿನ್ನ ಮೇಲೆ ಇಟ್ಟು ಕೊ
೧೬ ಳ್ಳ ಕೂಡದು. ಆದರೆ ಕುದುರೆಗಳನ್ನು ಅವನು ಹೆಚ್ಚಿಸಿ ಕೊಳ್ಳ
ಬಾರದು; ಕುದುರೆಗಳನ್ನು ಹೆಚ್ಚಿಸಿ ಕೊಳ್ಳುವ ಹಾಗೆ ಜನವನ್ನು
ಐಗುಪ್ತ ದೇಶಕ್ಕೆ ತಿರುಗಿಸ ಬಾರದು; ಆ ಮಾರ್ಗವಾಗಿ ನೀವು ಇ
ನ್ನು ತಿರಿಗಿ ಹೋಗ ಬಾರದೆಂದು, ಕರ್ತನು ನಿಮಗೆ ಹೇಳಿದನಲ್ಲ!
೧೭ ಮತ್ತು ಅವನ ಹೃದಯವು ತೊಲಗದ ಹಾಗೆ ಅವನು ತನಗೆ ಹೆಂ
ಡರನ್ನು ಹೆಚ್ಚಿಸಿ ಕೊಳ್ಳ ಬಾರದು; ಅವನು ತನಗೆ ಬೆಳ್ಳಿ ಭಂಗಾ
೧೮ ರವನ್ನು ಬಹಳವಾಗಿ ಹೆಚ್ಚಿಸಿ ಕೊಳ್ಳ ಬಾರದು. ಅವನು ತನ್ನ
ರಾಜ್ಯದ ಸಿಂಹಾಸನದಲ್ಲಿ ಕೂತು ಕೊಳ್ಳುವಾಗ, ಲೇವ್ಯರಾದ
ಯಾಜಕರ ಮುಂದಿರುವ ಪುಸ್ತಕದಿಂದ ತನಗೆ ಈ ನ್ಯಾಯ ಪ್ರ
೧೯ ಮಾಣದ ಪ್ರತಿಯನ್ನು ಬರಿಸಿ ಕೊಳ್ಳಲಿ. ಅದು ಅವನ ಸಂಗಡ
ಇರ ಬೇಕು; ಅವನು ತನ್ನ ದೇವರಾದ ಕರ್ತನಿಗೆ ಭಯ ಪಟ್ಟು,
ಈ ನ್ಯಾಯಪ್ರಮಾಣದ ಎಲ್ಲಾ ಮಾತುಗಳನ್ನೂ ಈ ನೇಮ
ಗಳನ್ನೂ ಕಾಪಾಡಿ, ಮಾಡುವದಕ್ಕೆ ಕಲಿಯುವ ಹಾಗೆಯೂ,
೨೦ ಅವನ ಹೃದಯವು ಅವನ ಸಹೋದರರ ಮೇಲೆ ಎಬ್ಬಿಸಿ ಕೊಳ್ಳ
ದ ಹಾಗೆಯೂ, ಅವನು ಆಜ್ಞೆಯನ್ನು ಬಿಟ್ಟು, ಎಡಕ್ಕಾದರೂ
ಬಲಕ್ಕಾದರೂ ತೊಲಗದ ಹಾಗೆಯೂ, ಅವನಿಗೂ ಅವನ ಮಕ್ಕ
ಳಿಗೂ ಇಸ್ರಯೇಲಿನ ಮಧ್ಯದಲ್ಲಿ ಅವನ ರಾಜ್ಯದಲ್ಲಿ ದಿನಗಳು
ಹೆಚ್ಚುವ ಹಾಗೆಯೂ, ಆದರಲ್ಲಿ ತನ್ನ ಜೀವದ ದಿನಗಳೆಲ್ಲಾ ಓದ
ಬೇಕು.

## ೧೮. ಸಂಧಿ.

೧ ಯಾಜಕರಾದ ಲೇವ್ಯರಿಗೂ ಅವನ ಮಕ್ಕಳಿಗೂ ಇಸ್ರಯೇ
ಲಿನ ಸಂಗಡ ಪಾಲೂ ಸ್ವಾಸ್ತ್ಯವೂ ಇರ ಬಾರದು; ಅವರು ಕರ್ತ
ನ ದಹನ ಬಲಿಗಳನ್ನೂ ಅವನ ಸ್ವಾಸ್ತ್ಯವನ್ನೂ ಉಣ್ಣ ಬೇಕು.
೨ ಅವರಿಗೆ ಅವರ ಸಹೋದರರ ಮಧ್ಯದಲ್ಲಿ ಸ್ವಾಸ್ತ್ಯವಿರ ಬಾರದು;
ಕರ್ತನು ಅವರಿಗೆ ಹೇಳಿದ ಹಾಗೆ, ಅವನೇ ಅವರ ಸ್ವಾಸ್ತ್ಯವು.
೩ ಹೋರಿಯಾಗಲಿ, ಕುರಿಯಾಗಲಿ, ಒಂದು ಬಲಿಯನ್ನು ಅರ್ಪ
ಸುವವರ ಕಡೆಯಿಂದ, ಜನರ ಕಡೆಯಿಂದ ಯಾಜಕರಿಗೆ ಬರ ಶಕ್ಕ
ದ್ದು ಇದೇ—ಮುಂದೊಡೆಯನ್ನೂ ಎರಡು ದವಡೆಗಳನ್ನೂ ಕೋ
೪ ಡ್ಡುವನ್ನೂ ಯಾಜಕನಿಗೆ ಕೊಡ ಬೇಕು. ನಿನ್ನ ಗೋಧಿ, ದ್ರಾಕ್ಷೇ
ರಸ, ಎಣ್ಣೆಗಳ ಮೊದಲನೇದನ್ನೂ, ನಿನ್ನ ಕುರಿಗಳ ಉಣ್ಣೆಯಲ್ಲಿ
ಮೊದಲನೇದನ್ನೂ, ಅವನಿಗೆ ಕೊಡ ಬೇಕು. ಯಾಕಂದರೆ ಅವ
ನೂ ಅವನ ಮಕ್ಕಳೂ ನಿತ್ಯವಾಗಿ ಕರ್ತನ ಹೆಸರಿನಲ್ಲಿ ಸೇವಿಸು
ತ್ತಾ ನಿಂತಿರುವ ಹಾಗೆ, ಅವನನ್ನು ನಿನ್ನ ದೇವರಾದ ಕರ್ತನು ನಿನ್ನ
ಎಲ್ಲಾ ಕುಲಗಳೊಳಗಿಂದ ಆದು ಕೊಂಡಿದ್ದಾನೆ.
೫ ಇದಲ್ಲದೆ ಲೇವ್ಯನು ಸಮಸ್ತ ಇಸ್ರಯೇಲಿನಲ್ಲಿರುವ ನಿನ್ನ ಬಾ
ಗಲುಗಳ ಒಂದರಲ್ಲಿಂದ, ಅವನು ಪರವಾಸವಾಗಿರುವ ಸ್ಥಳದಿಂದ,
ಬಂದು, ತನ್ನ ಪ್ರಾಣದ ಪೂರ್ಣಾಪೇಕ್ಷೆಯಾಗಿ ಕರ್ತನು ಆದು
೬ ಕೊಳ್ಳುವ ಸ್ಥಳಕ್ಕೆ ಬಂದರೆ, ಅಲ್ಲಿ ಕರ್ತನ ಮುಂದೆ ನಿಂತು ಕೊ
ಳ್ಳುವ ಅವನ ಸಹೋದರರಾದ ಲೇವ್ಯರೆಲ್ಲರ ಹಾಗೆ, ಅವನು ತನ್ನ
ದೇವರಾದ ಕರ್ತನ ಹೆಸರಿನಲ್ಲಿ ಸೇವೆ ಮಾಡ ಬಹುದು. ತಂದೆ
೭ ಯೆ ಆಸ್ತಿಯನ್ನು ಮಾರಿದ್ದಲ್ಲದೆ, ಅವರು ಸಮವಾದ ಭಾಗ
ಗಳನ್ನು ಉಣ್ಣ ಬೇಕು.
೮ ನಿನ್ನ ದೇವರಾದ ಕರ್ತನು ನಿನಗೆ ಕೊಡುವ ದೇಶಕ್ಕೆ ನೀನು
ಬಂದಾಗ, ಆ ಜನಾಂಗಗಳು ಮಾಡುವ ಅಸಹ್ಯಗಳ ಪ್ರಕಾರ
೯ ಮಾಡುವದಕ್ಕೆ ಕಲಿಯ ಬೇಡ. ತನ್ನ ಮಗನನ್ನಾದರೂ ಮಗ
ಳನ್ನಾದರೂ ಬೆಂಕಿ ದಾಟಿಸುವವನೂ, ಕಣಿ ಹೇಳುವವನೂ,
ಮೇಘ ಮಂತ್ರದವನೂ, ಸರ್ಪ ಮಂತ್ರದವನೂ, ಕೂನ್ಯಗಾರ
೧೦ ನೂ, ಗಾರಡಿಗಾರನೂ, ಯಕ್ಷಿಣಿಗಾರನೂ, ಮಂತ್ರಜ್ಞನೂ, ಸತ್ತ
೧೧ ವರ ಹತ್ತರ ವಿಚಾರಿಸುವವನೂ, ನಿನ್ನಲ್ಲಿ ಸಿಕ್ಕ ಬಾರದು. ಯಾ
ಕಂದರೆ ಇಂಥವುಗಳನ್ನು ಮಾಡುವವರೆಲ್ಲಾ ಕರ್ತನಿಗೆ ಅಸಹ್ಯ;
ಈ ಅಸಹ್ಯಗಳ ನಿಮಿತ್ತ ನಿನ್ನ ದೇವರಾದ ಕರ್ತನು ಅವರನ್ನು
೧೨ ನಿನ್ನ ಮುಂದೆ ಹೊರಡಿಸುತ್ತಾನೆ. ನೀನು ನಿನ್ನ ದೇವರಾದ ಕರ್ತ
೧೩ ನ ಸನ್ನಿಧಿಯಲ್ಲಿ ಸಂಪೂರ್ಣನಾಗಿರ ಬೇಕು. ನೀನು ಸ್ವತಂತ್ರಿಸಿ
ಕೊಳ್ಳುವ ಆ ಜನಾಂಗಗಳು ಮೇಘ ಮಂತ್ರದವರ ಕಣಿ ಹೇಳು
ವವರ ಮಾತು ಕೇಳುತ್ತಿದ್ದರು; ಆದರೆ ನಿನ್ನನ್ನು ನಿನ್ನ ದೇವರಾದ
ಕರ್ತನು ಹಾಗೆ ಮಾಡ ಗೊಡಿಸಲಿಲ್ಲ.
೧೫ ನನ್ನ ಹಾಗಿರುವ ಪ್ರವಾದಿಯನ್ನು ನಿನ್ನ ದೇವರಾದ ಕರ್ತ
ನು ನಿನಗೆ ನಿನ್ನ ಮಧ್ಯದಲ್ಲಿಂದ ನಿನ್ನ ಸಹೋದರರೊಳಗಿಂದ
೧೬ ಎಬ್ಬಿಸುವನು; ಅವನ ಮಾತು ನೀವು ಕೇಳ ಬೇಕು. ನೀನು ಹೋ
ರೆಬಿನಲ್ಲಿ ಕೂಟದ ದಿವಸದಲ್ಲಿ ನಿನ್ನ ದೇವರಾದ ಕರ್ತನಿಂದ ಬೇಡಿ
ಕೊಂಡ ಎಲ್ಲಾದರ ಪ್ರಕಾರ ಆಗುವದು; ನಾನು ಸಾಯದ ಹಾಗೆ
ಇನ್ನು ಮೇಲೆ ನನ್ನ ದೇವರಾದ ಕರ್ತನ ಶಬ್ದವನ್ನು ಕೇಳುವದಿ
ಲ್ಲ; ಈ ದೊಡ್ಡ ಬೆಂಕಿಯನ್ನು ನೋಡುವದಿಲ್ಲವೆಂದು, ಹೇಳಿದಿ
೧೭ ಯಲ್ಲ! ಆಗ ಕರ್ತನು ನನಗೆ ಹೇಳಿದ್ದೇನಂದರೆ—ಅವರು ಹೇಳಿ
೧೮ ದ್ದನ್ನು ಚನಾಗಿ ಹೇಳಿದ್ದಾರೆ. ನಿನ್ನ ಹಾಗಿರುವ ಪ್ರವಾದಿಯ
ನ್ನು ಅವರ ಸಹೋದರರಲ್ಲಿಂದ ಅವರಿಗೆ ಎಬ್ಬಿಸುವೆನು; ನನ್ನ
ವಾಕ್ಯಗಳನ್ನು ಅವನ ಬಾಯಿಯಲ್ಲಿ ಕೊಡುವೆನು; ನಾನು ಅವ
೧೯ ನಿಗೆ ಆಜ್ಞಾಪಿಸುವದನ್ನೆಲ್ಲಾ ಅವನು ಅವರಿಗೆ ಹೇಳುವನು. ಅವ
ನು ನನ್ನ ಹೆಸರಿನಿಂದ ಹೇಳುವ ನನ್ನ ವಾಕ್ಯಗಳನ್ನು ಕೇಳದ ಮ
ನುಷ್ಯನು ಯಾವನೋ, ಅವನನ್ನು ನಾನು ವಿಚಾರಿಸುವೆನು.
೨೦ ಆದರೆ ನಾನು ಮಾತಾಡ ಆಜ್ಞಾಪಿಸದೆ ಇರುವದನ್ನು ನನ್ನ
ಹೆಸರಿನಿಂದ ಮಾತಾಡುವದಕ್ಕೆ ಅಹಂಕರಿಸುವ ಪ್ರವಾದಿಯೂ,
ಬೇರೆ ದೇವರುಗಳ ಹೆಸರಿನಿಂದ ಮಾತಾಡುವವನೂ, ಆದ ಆ



೨೧ ಪ್ರವಾದಿ ಸಾಯ ಬೇಕು. ಇದಲ್ಲದೆ ಕರ್ತನು ಹೇಳಿದ ವಾಕ್ಯವು
ನಮಗೆ ಹ್ಯಾಗೆ ತಿಳಿದೀತೆಂದು, ನೀನು ನಿನ್ನ ಹೃದಯದಲ್ಲಿ ಅಂದು
೨೨ ಕೊಂಡರೆ, ಪ್ರವಾದಿಯು ಕರ್ತನ ಹೆಸರಿನಲ್ಲಿ ಹೇಳಿದ ಮೇಲೆ,
ಆಗದೆ ಸಂಭವಿಸದೆ ಇರುವಂಥ ಕಾರ್ಯವು, ಅದೇ ಕರ್ತನು ಹೇ
ಳದಂಥ, ಮಾತಾಡದಂಥ, ಕಾರ್ಯವು; ಪ್ರವಾದಿಯೂ ಅಹಂಕ
ರಿಸಿ, ಅದನ್ನು ಮಾತಾಡಿದ್ದಾನೆ; ಅವನಿಗೆ ಭಯ ಪಡ ಬೇಡ.

## ೧೯. ಸಂಧಿ.

೧ ನಿನ್ನ ದೇವರಾದ ಕರ್ತನು ನಿನಗೆ ಕೊಡುವ ದೇಶದ ಜನಾಂಗ
ಗಳನ್ನು ನಿನ್ನ ದೇವರಾದ ಕರ್ತನು ಕಡಿದು ಬಿಟ್ಟ ತರುವಾಯ,
ನೀನು ಅವುಗಳನ್ನು ಸ್ವತಂತ್ರಿಸಿ ಕೊಂಡು, ಅವುಗಳ ಪಟ್ಟಣಗಳಲ್ಲಿ
೨ ಯೂ ಮನೆಗಳಲ್ಲಿಯೂ ವಾಸ ಮಾಡುವಾಗ, ನಿನ್ನ ದೇವರಾದ
ಕರ್ತನು ನಿನಗೆ ಸ್ವತಂತ್ರಿಸಿ ಕೊಳ್ಳುವದಕ್ಕೆ ಕೊಡುವ ನಿನ್ನ ದೇ
3 ಶದಲ್ಲಿ ಮೂರು ಪಟ್ಟಣಗಳನ್ನು ನಿನಗೆ ಪ್ರತ್ಯೇಕಿಸ ಬೇಕು. ಕೊ
ಲೆ ಮಾಡುವವರೆಲ್ಲರು ಅಲ್ಲಿಗೆ ಓಡಿ ಹೋಗುವ ಹಾಗೆ, ನಿನ್ನ ದೇವ
ರಾದ ಕರ್ತನು ನಿನಗೆ ಸ್ವಾಸ್ತ್ಯವಾಗಿ ಕೊಡುವ ದೇಶದ ಮೇಲೆ
ಯನ್ನು ಮೂರು ಭಾಗ ಮಾಡಿ, ನಿನಗೆ ಮಾರ್ಗವನ್ನು ಸಿದ್ಧ
೪ ಮಾಡಿ ಕೊಳ್ಳ ಬೇಕು. ಬದುಕುವ ಹಾಗೆ ಅಲ್ಲಿಗೆ ಓಡಿ ಹೋಗ
ತಕ್ಕ ಕೊಲೆ ಪಾತಕನ ವಿವರವೇನಂದರೆ—ತಿಳಿಯದೆ, ಪೂರ್ವ
೫ ಕಾಲದಲ್ಲಿ ಹಗೆ ಮಾಡದೆ, ತನ್ನ ನೆರೆಯವನನ್ನು ಹೊಡೆದವನೇ.
ಹ್ಯಾಗಂದರೆ—ಒಬ್ಬನು ತನ್ನ ನೆರೆಯವನ ಸಂಗಡ ಕಟ್ಟಿಗೆ ಕಡಿ
ಯುವದಕ್ಕೆ ಅಡವಿಗೆ ಹೋಗಲಾಗಿ, ಕೊಡ್ಲಿ ಹಿಡಿದ ಅವನ ಕೈ
ಮರವನ್ನು ಕಡಿಯುವದಕ್ಕೆ ಚಾಚಿ ಇರುವಲ್ಲಿ, ಆ ಕಬ್ಬಿಣವು
ಕಾವನ್ನು ಬಿಟ್ಟು, ಜಾರಿ, ಅವನ ನೆರೆಯವನಿಗೆ ಇವನು ಸಾಯು
೬ ವ ಹಾಗೆ ತಗಲಿದರೆ, ರಕ್ತ ವಿಚಾರಕನು ತನ್ನ ಹೃದಯ ಉರಿ
ಯುತ್ತಿರುವಾಗ, ಕೊಲೆಪಾತಕನನ್ನು ಹಿಂದಟ್ಟಿ, ಮಾರ್ಗ ದೂರ
ವಾಗಿರುವ ಕಾರಣ, ಅವನನ್ನು ಹಿಡಿದು, ಪೂರ್ವ ಕಾಲದಲ್ಲಿ ಹಗೆ
ಮಾಡದೆ ಇದ್ದದರಿಂದ ಮರಣಕ್ಕೆ ಪಾತ್ರನಾಗದ ಇವನನ್ನು ಕೊಂ
ದು ಹಾಕದ ಹಾಗೆ, ಅವನು ಆ ಪಟ್ಟಣಗಳಲ್ಲಿ ಒಂದಕ್ಕೆ ಓಡಿ ಹೋ
ಗಿ, ಬದುಕ ಬೇಕು.
೭ ಅದಕಾರಣ ನಾನು ನಿನಗೆ ಆಜ್ಞಾಪಿಸುವದೇನಂದರೆ—ಮೂರು
ಪಟ್ಟಣಗಳನ್ನು ನಿನಗೆ ಪ್ರತ್ಯೇಕಿಸ ಬೇಕು. ಇದಲ್ಲದೆ ನಾನು ಈ
ಹೊತ್ತು ನಿನಗೆ ಆಜ್ಞಾಪಿಸುವ ಈ ಆಜ್ಞೆಯನ್ನೆಲ್ಲಾ ನೀನು ಕಾ
ಪಾಡಿ, ಮಾಡಿ, ನಿನ್ನ ದೇವರಾದ ಕರ್ತನನ್ನು ಪ್ರೀತಿ ಮಾಡಿ,
೮ ಎಂದೆಂದಿಗೂ ಅವನ ಮಾರ್ಗಗಳಲ್ಲಿ ನಡೆಯಲಾಗಿ, ಕರ್ತನು
ನಿನ್ನ ಪಿತೃಗಳಿಗೆ ಪ್ರಮಾಣ ಮಾಡಿದಂತೆ ನಿನ್ನ ಮೇರೆಯನ್ನು
ವಿಸ್ತಾರ ಮಾಡಿ, ನಿನ್ನ ಪಿತೃಗಳಿಗೆ ಕೊಡುತ್ತೇನೆಂದು, ಹೇಳಿದ
೯ ದೇಶವನ್ನೆಲ್ಲಾ ನಿನಗೆ ಕೊಟ್ಟರೆ, ನಿನ್ನ ದೇವರಾದ ಕರ್ತನು ನಿನಗೆ
ಸ್ವಾಸ್ತ್ಯವಾಗಿ ಕೊಡುವ ನಿನ್ನ ದೇಶದಲ್ಲಿ ಅಪರಾಧವಿಲ್ಲದ ರಕ್ತ
ವು ಚೆಲ್ಲಲ್ಪಟ್ಟದರಿಂದ ರಕ್ತಾಪರಾಧವು ನಿನ್ನ ಮೇಲೆ ಬಾರದ ಹಾಗೆ,
ನೀನು ಈ ಮೂರು ಪಟ್ಟಣಗಳಿಗೆ ಇನ್ನೂ ಮೂರು ಪಟ್ಟಣಗಳನ್ನು
೧೦ ಕೂಡಿಸ ಬೇಕು.
ಆದರೆ ಒಬ್ಬನು ತನ್ನ ನೆರೆಯವನನ್ನು ಹಗೆ ಮಾಡಿ, ಅವನ
ನ್ನು ಹೊಂಚಿ ಕೊಂಡು, ಅವನಿಗೆ ವಿರೋಧವಾಗಿ ಎದ್ದು, ಅವನ
ನ್ನು ಪ್ರಾಣದ ಮಟ್ಟಿಗೂ ಹೊಡೆದು, ಇವನು ಸತ್ತದರಿಂದ ಆ ಪ
೧೧ ಟ್ಟಣಗಳಲ್ಲಿ ಒಂದಕ್ಕೆ ಓಡಿ ಹೋದರೆ, ಅವನ ಊರಿನ ಹಿರಿಯರು
ಕಳುಹಿಸಿ, ಅವನನ್ನು ಅಲ್ಲಿಂದ ತೆಗೆಸಿ, ಅವನು ಸಾಯುವ ಹಾ
೧೨ ಗೆ ರಕ್ತ ವಿಚಾರಕನ ಕೈಗೆ ಒಪ್ಪಿಸ ಬೇಕು. ನಿನ್ನ ಕಣ್ಣು ಅವನ
ನ್ನು ಕರುಣಿಸ ಬಾರದು; ನಿನಗೆ ಒಳ್ಳೇದಾಗುವ ಹಾಗೆ, ಅಪರಾ
ಧವಿಲ್ಲದ ರಕ್ತದ ದೋಷವನ್ನು ಇಸ್ರಯೇಲಿನಿಂದ ತೆಗೆದು ಹಾಕ
ಬೇಕು.
೧೪ ನಿನ್ನ ದೇವರಾದ ಕರ್ತನು ನಿನಗೆ ಸ್ವತಂತ್ರಿಸಿ ಕೊಳ್ಳುವದ
ಕ್ಕೆ ಕೊಡುವ ದೇಶದೊಳಗೆ ನೀನು ಹೊಂದುವ ಸ್ವಾಸ್ತ್ಯದಲ್ಲಿ
ಹಿರಿಯರು ಇಟ್ಟಂಥ ನಿನ್ನ ನೆರೆಯವನ ಮೇರೆಯನ್ನು ತಪ್ಪಿಸ
ಬೇಡ.
೧೫ ಎಲ್ಲಾ ಅಕ್ರಮದ ನಿಮಿತ್ತವೂ, ಅವನು ಮಾಡುವ ಎಲ್ಲಾ ಪಾ
ಪದ ನಿಮಿತ್ತವೂ, ಒಬ್ಬ ಮನುಷ್ಯನಿಗೆ ವಿರೋಧವಾಗಿ ಒಬ್ಬ ಸಾಕ್ಷಿ
ನಿಂತು ಕೊಳ್ಳ ಬಾರದು; ಇಬ್ಬರು ಸಾಕ್ಷಿಗಳ, ಇಲ್ಲವೆ ಮೂವ
ರು ಸಾಕ್ಷಿಗಳ ಮಾತಿನಿಂದ ಕಾರ್ಯವೆಲ್ಲಾ ಸ್ಥಿರವಾಗುವದು. ಬಲ
ತ್ಕಾರದ ಸಾಕ್ಷಿಯು ಒಬ್ಬ ಮನುಷ್ಯನ ಮೇಲೆ ಅವನಿಗೆ ವಿರೋ
೧೭ ಧವಾಗಿ ಸುಳ್ಳು ಸಾಕ್ಷಿ ಕೊಡುವದಕ್ಕೆ ಎದ್ದರೆ, ವ್ಯಾಜ್ಯವಾಡುವ
ಆ ಇಬ್ಬರು ಮನುಷ್ಯರು ಕರ್ತನ ಮುಂದೆಯೂ, ಆ ದಿನಗಳಲ್ಲಿ
ರುವ ಯಾಜಕರ ನ್ಯಾಯಾಧಿಪತಿಗಳ ಮುಂದೆಯೂ, ನಿಂ
ತು ಕೊಳ್ಳ ಬೇಕು. ನ್ಯಾಯಾಧಿಪತಿಗಳು ಒಳ್ಳೇ ವಿಚಾರಣೆ
ಮಾಡ ಬೇಕು; ಆಗ, ಅಗೋ, ಆ ಸಾಕ್ಷಿ ಸುಳ್ಳು ಸಾಕ್ಷಿಯಾಗಿ
೧೯ ದ್ದರೆ, ಅವನು ತನ್ನ ಸಹೋದರನ ಮೇಲೆ ಸುಳ್ಳು ಹೇಳಿದ್ದರೆ,
ಅವನು ತನ್ನ ಸಹೋದರನಿಗೆ ಮಾಡುವದಕ್ಕೆ ಯೋಚಿಸಿದ ಪ್ರ
ಕಾರ ಅವನಿಗೆ ಮಾಡಿ, ಕೆಟ್ಟದ್ದನ್ನು ನಿಮ್ಮ ಮಧ್ಯದಲ್ಲಿಂದ ತೆಗೆ
೨೦ ದು ಹಾಕ ಬೇಕು. ಉಳಿದವರು ಕೇಳಿ, ಭಯ ಪಟ್ಟು, ಆ ಕೆಟ್ಟ
ಕೃತ್ಯದಂತೆ ಇನ್ನು ಮೇಲೆ ನಿನ್ನ ಮಧ್ಯದಲ್ಲಿ ಮಾಡರು. ನಿನ್ನ
೨೧ ಕಣ್ಣು ಕರುಣಿಸ ಬಾರದು; ಪ್ರಾಣಕ್ಕೆ ಪ್ರಾಣ; ಕಣ್ಣಿಗೆ ಕಣ್ಣು;
ಹಲ್ಲಿಗೆ ಹಲ್ಲು; ಕೈಗೆ ಕೈ; ಕಾಲಿಗೆ ಕಾಲು.

## ೨೦. ಸಂಧಿ.

೧ ನೀನು ನಿನ್ನ ಶತ್ರುಗಳಿಗೆ ವಿರೋಧವಾಗಿ ಯುದ್ಧಕ್ಕೆ ಹೊರ
ಟು, ಕುದುರೆಗಳನ್ನೂ ರಥಗಳನ್ನೂ ನಿನಗಿಂತ ಹೆಚ್ಚಾದ ಜನರ
ನ್ನೂ ನೋಡಿದರೆ, ಅವರಿಗೆ ಭಯ ಪಡ ಬೇಡ; ಯಾಕಂದರೆ ಐ
ಗುಪ್ತ ದೇಶದೊಳಗಿಂದ ನಿನ್ನನ್ನು ಮೇಲೆ ಬರ ಮಾಡಿದ ನಿನ್ನ
೨ ದೇವರಾದ ಕರ್ತನು ನಿನ್ನ ಸಂಗಡ ಇದ್ದಾನೆ. ನೀವು ಯುದ್ಧಕ್ಕೆ
ಸಮೀಪ ಬಂದಾಗ, ಯಾಜಕನು ಹತ್ತರ ಬಂದು, ಜನರ ಸಂಗಡ
3 ಮಾತಾಡಿ, ಅವರಿಗೆ ಹೇಳ ಬೇಕಾದದ್ದೇನಂದರೆ—ಇಸ್ರಯೇಲೇ,
ಕೇಳು; ನೀವು ಈ ಹೊತ್ತು ನಿಮ್ಮ ಶತ್ರುಗಳಿಗೆ ವಿರೋಧವಾದ
ಯುದ್ಧಕ್ಕೆ ಸಮೀಪ ಬಂದಿದ್ದೀರಿ; ನಿಮ್ಮ ಹೃದಯಗಳು ಮೆತ್ತ
ಗೆ ಆಗ ಬಾರದು; ನೀವು ಭಯ ಪಡ ಬೇಡಿರಿ; ನಡುಗ ಬೇಡಿರಿ;
೪ ಅವರಿಗೆ ಹೆದರ ಬೇಡಿರಿ. ಯಾಕಂದರೆ ನಿಮ್ಮ ಶತ್ರುಗಳ ಸಂಗಡ
ನಿಮಗೋಸ್ಕರ ಯುದ್ಧ ಮಾಡಿ, ನಿಮ್ಮನ್ನು ರಕ್ಷಿಸುವದಕ್ಕೆ ನಿ
ಮ್ಮ ದೇವರಾದ ಕರ್ತನೇ ನಿಮ್ಮ ಸಂಗಡ ಹೋಗುತ್ತಾನೆ.
೫ ಆಗ ಅಧಿಕಾರಿಗಳು ಜನಕ್ಕೆ ಹೇಳ ಬೇಕಾದದ್ದೇನಂದರೆ—ಹೊಸ
ಮನೆಯನ್ನು ಕಟ್ಟಿ, ಗೃಹ ಶಾಂತಿಯನ್ನು ಮಾಡದ ಮನುಷ್ಯ
ನು ಯಾವನು? ಅವನು ಯುದ್ಧದಲ್ಲಿ ಸಾಯಲಾಗಿ, ಮತ್ತೊಬ್ಬ

ನು ಗೃಹ ಶಾಂತಿ ಮಾಡದ ಹಾಗೆ, ಅವನು ತಿರುಗಿ ಕೊಂಡು, ತ
೬ ನ್ನ ಮನೆಗೆ ಹೋಗಲಿ. ದ್ರಾಕ್ಷೇ ತೋಟವನ್ನು ನೆಟ್ಟು, ಅದರ
ಫಲ ತಕ್ಕೊಳ್ಳದ ಮನುಷ್ಯನು ಯಾವನು! ಅವನು ಯುದ್ಧದ
ಲ್ಲಿ ಸಾಯಲಾಗಿ, ಮತ್ತೊಬ್ಬನು ಅದರ ಫಲ ತಕ್ಕೊಳ್ಳದ ಹಾ
೭ ಗೆ, ಅವನು ತಿರುಗಿ ಕೊಂಡು, ತನ್ನ ಮನೆಗೆ ಹೋಗಲಿ. ಹೆಂಡತಿ
ಯನ್ನು ನೇಮಿಸಿ ಕೊಂಡು, ತಕ್ಕೊಳ್ಳದ ಮನುಷ್ಯನು ಯಾವ
ನು! ಅವನು ಯುದ್ಧದಲ್ಲಿ ಸಾಯಲಾಗಿ, ಮತ್ತೊಬ್ಬನು ಅವಳ
ನ್ನು ತಕ್ಕೊಳ್ಳದ ಹಾಗೆ, ಅವನು ತಿರುಗಿ ಕೊಂಡು, ತನ್ನ ಮನೆಗೆ
೮ ಹೋಗಲಿ. ಇದಲ್ಲದೆ ಅಧಿಕಾರಿಗಳು ಜನಕ್ಕೆ ಮತ್ತೇ ಹೇಳ ಬೇ
ಕಾದದ್ದೇನಂದರೆ—ಭಯಸ್ತನಾಗಿ, ಹೃದಯ ಮೆತ್ತಗೆಯಾದ
ಮನುಷ್ಯನು ಯಾವನು! ಅವನ ಸಹೋದರರ ಹೃದಯವು
ಅವನ ಹೃದಯದಂತೆ ಕರಗಿ ಹೋಗದ ಹಾಗೆ, ಅವನು ತಿರುಗಿ
೯ ಕೊಂಡು, ತನ್ನ ಮನೆಗೆ ಹೋಗಲಿ. ಅಧಿಕಾರಿಗಳು ಜನರ ಸಂಗಡ
ಮಾತಾಡಿ, ಮುಗಿಸಿದಾಗ, ಜನರ ಮುಂದೆ ನಡಿಯ ತಕ್ಕ ಸೈನ್ಯಾ
ಧಿಪತಿಗಳನ್ನು ನೇಮಿಸ ಬೇಕು.

೧೦ ನೀನು ಅದರ ಮೇಲೆ ಯುದ್ಧ ಮಾಡುವ ನಿಮಿತ್ತ ಒಂದು ಪಟ್ಟಣ
ದ ಹತ್ತರ ಬಂದರೆ, ಸಮಾಧಾನದ ಬಗ್ಯೆ ಅದನ್ನು ಕರೆಯ ಬೇಕು.
೧೧ ಆ ಪಟ್ಟಣವು ನಿನಗೆ ಸಮಾಧಾನದ ಉತ್ತರ ಕೊಟ್ಟು, ಬಾಗಲನ್ನು
ತೆರೆದರೆ, ಅದರಲ್ಲಿರುವ ಜನರೆಲ್ಲರು ನಿನಗೆ ಕಪ್ಪ ಕೊಟ್ಟು, ಸೇವಿ
೧೨ ಸ ಬೇಕು. ಅದು ನಿನ್ನ ಸಂಗಡ ಸಮಾಧಾನವಾಗಕೊಲ್ಲದೆ, ನಿ
ನ್ನ ಸಂಗಡ ಯುದ್ಧ ಮಾಡಿದರೆ, ಅದಕ್ಕೆ ಮುತ್ತಿಗೆ ಹಾಕ ಬೇಕು.
೧೩ ನಿನ್ನ ದೇವರಾದ ಕರ್ತನು ಅದನ್ನು ನಿನ್ನ ಕೈಗೆ ಕೊಟ್ಟರೆ, ಅದ
ರ ಗಂಡಸರೆಲ್ಲರನ್ನು ಕತ್ತಿಯ ಬಾಯಿಯಿಂದ ಹೊಡೆಯ ಬೇಕು.
೧೪ ಆದರೆ ಹೆಂಗಸರನೂ ಚಿಕ್ಕವರನೂ ದನಗಳನೂ ಪಟ್ಟಣದಲ್ಲಿ
ರುವ ಎಲ್ಲವನೂ ಅದರ ಎಲ್ಲಾ ಕೊಳ್ಳೆಯನೂ ನಿನಗೆ ಸುಲು
ಕೊಳ್ಳ ಬೇಕು; ನಿನ್ನ ದೇವರಾದ ಕರ್ತನು ನಿನಗೆ ಕೊಡುವಂಥ
ನಿನ್ನ ಶತ್ರುಗಳ ಕೊಳ್ಳೆಯನ್ನು ತಿಂದು ಬಿಡ ಬೇಕು.

೧೫ ಇಲ್ಲಿರುವ ಈ ಜನಾಂಗಗಳ ಪಟ್ಟಣಗಳಲ್ಲದಂಥ ನಿನಗೆ ದೂರ
೧೬ ವಾಗಿರುವ ಪಟ್ಟಣಗಳಿಗೆಲ್ಲಾ ಹಾಗೆ ಮಾಡ ಬೇಕು. ನಿನ್ನ ದೇವರಾ
ದ ಕರ್ತನು ನಿನಗೆ ಸ್ವಾಸ್ತ್ಯವಾಗಿ ಕೊಡುವ ಈ ಜನಗಳ ಪಟ್ಟಣ
ಗಳಲ್ಲಿ ಮಾತ್ರ ಶ್ವಾಸವುಳ್ಳ ಯಾವದನ್ನಾದರೂ ಉಳಿಸ ಬೇ
೧೭ ಕ. ಆದರೆ ಹಿತ್ತಿಯರನೂ, ಅಮೋರ್ಯರನೂ, ಕನಾನ್ಯರ
ನೂ, ಪೆರಿಜ್ಜಿಯರನೂ, ಹಿವ್ವಿಯರನೂ, ಯೆಬೂಸ್ಯರನೂ,
೧೮ ಅವರು ತಮ್ಮ ದೇವರುಗಳಿಗೆ ಮಾಡಿದ ಎಲ್ಲಾ ಅಸಹ್ಯಗಳನ್ನು
ಮಾಡುವದಕ್ಕೆ ನಿಮಗೆ ಕಲಿಸದ ಹಾಗೆಯೂ, ನೀವು ನಿಮ್ಮ ದೇ
ವರಾದ ಕರ್ತನಿಗೆ ಪಾಪ ಮಾಡದ ಹಾಗೆಯೂ, ನಿನ್ನ ದೇವರಾ
ದ ಕರ್ತನು ನಿನಗೆ ಅಜ್ಞಾಪಿಸಿದ ಹಾಗೆ, ಶಾಪ ಕೊಟ್ಟು, ನಿರ್ಮೂ
ಲ ಮಾಡ ಬೇಕು.

೧೯ ನೀನು ಒಂದು ಪಟ್ಟಣಕ್ಕೆ ಯುದ್ಧ ಮಾಡಿ, ಅದನ್ನು ಹಿಡಿಯು
ವ ಹಾಗೆ, ಬಹಳ ದಿವಸ ಮುತ್ತಿಗೆ ಹಾಕಿದರೆ, ಮರಗಳನ್ನು ಕೊ
ಡ್ಲಿ ಕಾಕಿಸಿ, ಕೆಡಿಸ ಬೇಡ. ಯಾಕಂದರೆ ಅವುಗಳಿಂದ ನೀನು ಉ
ಣ್ಣಬಹುದು, ಅವುಗಳನ್ನು ಮುತ್ತಿಗೆಯಲ್ಲಿ ನಿನಗೆ ಸಹಾಯವಾ
ಗುವದಕ್ಕೋಸ್ಕರ ಕಡಿದು ಹಾಕ ಬೇಡ; ಯಾಕಂದರೆ ಹೊಲದ
೨೦ ಮರಗಳು ಮನುಷ್ಯರ ಉಪಕಾರಕ್ಕಾಗಿವೆ. ಅಹಾರಕ್ಕಾಗದ
ಮರಗಳೆಂದು, ನಿನಗೆ ತಿಳಿದಿರುವ ಮರಗಳನ್ನು ಮಾತ್ರ ಕೆಡಿಸಿ,
ಕಡಿದು ಹಾಕಿ, ನಿನ್ನ ಸಂಗಡ ಯುದ್ಧ ಮಾಡುವ ಪಟ್ಟಣಕ್ಕೆ ವಿರೋ
ಧವಾಗಿ, ಅದು ಬೀಳುವ ತನಕ, ಮುತ್ತಿಗೆ ಹಾಕ ಬಹುದು.

## ೨೧. ಸಂಧಿ

೧ ನಿನ್ನ ದೇವರಾದ ಕರ್ತನು ನಿನಗೆ ಸ್ವಾಸ್ತ್ಯವಾಗಿ ಕೊಡುವ
ದೇಶದಲ್ಲಿ ಹೊಲದಲ್ಲಿ ಬಿದ್ದಿರುವ ಹತವಾದವನು ಶಿಕ್ಕಲಾಗಿ, ಅವ
೨ ನನ್ನು ಯಾರು ಹೊಡೆದರೆಂದು ತಿಳಿಯದೆ ಹೋದರೆ, ನಿನ್ನ ಹಿ
ರಿಯರೂ ನ್ಯಾಯಾಧಿಪತಿಗಳೂ ಹೊರಗೆ ಹೋಗಿ, ಆ ಹತವಾ
ದವನ ಸುತ್ತಲಿರುವ ಊರುಗಳ ವರಿಗೂ ಅಳತೆ ಮಾಡ ಬೇಕು.
೩ ಹತವಾದವನಿಗೆ ಸಮೀಪವಾದ ಊರು ಯಾವದೋ, ಆ ಊರಿನ
ಹಿರಿಯರು ಕಟ್ಟು ಮಾಡದಂಥ, ನೊಗದಲ್ಲಿ ಎಳೆಯದಂಥ, ಒಂ
೪ ದು ಕಡಸನ್ನು ತಕ್ಕೊಳ್ಳ ಬೇಕು. ಆ ಮೇಲೆ ಆ ಊರಿನ ಹಿರಿಯ
ರು ಆ ಕಡಸನ್ನು ನಿತ್ಯ ಹರಿಯುವ ಹಳ್ಳದ ಬಳಿಗೆ ಬೇಸಾಯ
ವಾಗದಂಥ, ಬೀಜ ಹಾಕದಂಥ ಸ್ಥಳಕ್ಕೆ ತಕ್ಕೊಂಡು ಹೋಗಿ,
ಅಲ್ಲಿ ಹಳ್ಳದಲ್ಲಿ ಕಡಸಿನ ಕುತ್ತಿಗೆಯನ್ನು ಕೊಯ್ಯ ಬೇಕು.
೫ ಆ ಮೇಲೆ ಲೇವಿಯ ಮಕ್ಕಳಾದ ಯಾಜಕರು ಹತ್ತರ ಬರ ಬೇಕು;
ಯಾಕಂದರೆ ಅವರನ್ನು ನಿನ್ನ ದೇವರಾದ ಕರ್ತನು ತನಗೆ ಸೇವೆ
ಮಾಡುವದಕ್ಕೂ ಕರ್ತನ ಹೆಸರಿನಲ್ಲಿ ಆಶೀರ್ವಾದ ಕೊಡುವದ
ಕ್ಕೂ ಆದು ಕೊಂಡಿದ್ದಾನೆ; ಅವರ ಬಾಯಿಯಿಂದ ಎಲ್ಲಾ ವಿವಾದ
೬ ಗಳಿಗೂ ಎಲ್ಲಾ ಪೆಟ್ಟುಗಳಿಗೂ ತೀರ್ಪು ಆಗ ಬೇಕು. ಆ ಮೇ
ಲೆ ಹತವಾದವನಿಗೆ ಸಮೀಪವಾಗಿರುವ ಆ ಊರಿನ ಹಿರಿಯರೆಲ್ಲರು
ಹಳ್ಳದಲ್ಲಿ ಕೊಯಿದ ಕಡಸಿನ ಮೇಲೆ ಕೈಗಳನ್ನು ತೊಳಕೊಂಡು,
೭ ಉತ್ತರ ಕೊಟ್ಟು, ಹೇಳ ತಕ್ಕದ್ದೇನಂದರೆ—ನಮ್ಮ ಕೈಗಳು ಈ
ರಕ್ತವನ್ನು ಚೆಲ್ಲಲಿಲ್ಲ; ನಮ್ಮ ಕಣ್ಣುಗಳು ಅದನ್ನು ನೋಡಲಿಲ್ಲ.
೮ ಕರ್ತನೇ, ನೀನು ವಿಮೋಚಿಸಿದ ನಿನ್ನ ಜನವಾದ ಇಸ್ರಯೇಲಿಗೆ
ಪಾಪ ಮುಚ್ಚು; ನಿನ್ನ ಜನವಾದ ಇಸ್ರಯೇಲಿನಲ್ಲಿ ರಕ್ತಾಪರಾಧ
ವನ್ನು ಇರಿಸ ಬೇಡ; ಆಗ ಆ ರಕ್ತದ ಪಾಪ ಅವರಿಗೆ ಮುಚ್ಚಲ್ಪ
ಡುವದು. ಈ ಪ್ರಕಾರ ನೀನು ಕರ್ತನ ಮುಂದೆ ನೆಟ್ಟನೆಯಾದ
೯ ದ್ದನ್ನು ಮಾಡಿದರೆ, ರಕ್ತಾಪರಾಧವನ್ನು ನಿನ್ನಲ್ಲಿಂದ ತೆಗೆದು
ಹಾಕುವಿ.

೧೦ ನೀನು ನಿನ್ನ ಶತ್ರುಗಳಿಗೆ ವಿರೋಧವಾಗಿ ಯುದ್ಧಕ್ಕೆ ಹೊರಡ
ಲು, ನಿನ್ನ ದೇವರಾದ ಕರ್ತನು ಅವರನ್ನು ನಿನ್ನ ಕೈಗೆ ಒಪ್ಪಿಸು
೧೧ ವದರಿಂದ ನೀನು ಅವರನ್ನು ಕೆಡೆ ಹಿಡಿದಾಗ, ಆ ಕೆಲೆಯವರಲ್ಲಿ
ಒಳ್ಳೇ ಸೌಂದರ್ಯವಾದ ಸ್ತ್ರೀಯನ್ನು ನೋಡಿ, ಅವಳನ್ನು ನಿ
ನಗೆ ಹೆಂಡತಿಯಾಗಿ ತಕ್ಕೊಳ್ಳುವ ಹಾಗೆ ಅವಳ ಮೇಲೆ ಅಪೇಕ್ಷೆ
ಯನ್ನಿಟ್ಟರೆ, ಅವಳನ್ನು ನಿನ್ನ ಮನೆಯೊಳಗೆ ತರ ಬೇಕು; ಅವ
೧೨ ಳು ತಲೆ ಬೋಳಿಸಿ ಕೊಂಡು, ಉಗುರುಗಳನ್ನು ಕತ್ತರಿಸಿಕೊಂಡು,
೧೩ ತನ್ನ ಕೆಲೆಯ ವಸ್ತ್ರವನ್ನು ತೆಗದಿಟ್ಟು, ನಿನ್ನ ಮನೆಯಲ್ಲಿ ವಾಸ
ವಾಗಿದ್ದು, ತನ್ನ ತಂದೆ ತಾಯಿಗಳ ನಿಮಿತ್ತ ಪೂರ್ಣ ತಿಂಗಳು ಅ
ಳಲಿ; ಆ ಮೇಲೆ ನೀನು ಅವಳ ಬಳಿಗೆ ಹೋಗಿ, ಅವಳಿಗೆ ಗಂಡನಾ
೧೪ ಗ ಬಹುದು; ಅವಳು ನಿನಗೆ ಹೆಂಡತಿಯಾಗಿರುವಳು. ಆದರೆ ನೀ
ನು ಅವಳನ್ನು ಮೆಚ್ಚದೆ ಹೋದರೆ, ಅವಳನ್ನು ಅವಳ ಮನಸ್ಸಿದ್ದ
ಲ್ಲಿಗೆ ಕಳುಹಿಸಿ ಬಿಡ ಬೇಕು; ಹ್ಯಾಗಾದರೂ ಹಣಕ್ಕೆ ಮಾರ ಬೇ
೧೫ ಡ; ನೀನು ಅವಳನ್ನು ಕುಂದಿಸಿದ್ದರಿಂದ, ಅವಳಿಗೆ ದಾಸಿಯ ಹಾಗೆ
ನಡಿಸ ಬೇಡ.



೧೫ ಒಬ್ಬ ಮನುಷ್ಯನಿಗೆ ಪ್ರೀತಿ ಮಾಡಲ್ಪಟ್ಟ ಒಬ್ಬಳೂ, ಹಗೆ
ಮಾಡಲ್ಪಟ್ಟ ಒಬ್ಬಳೂ, ಇಬ್ಬರು ಹೆಂಡರು ಇರಲಾಗಿ, ಪ್ರೀತಿ ಮಾ
ಡಲ್ಪಟ್ಟವಳೂ ಹಗೆ ಮಾಡಲ್ಪಟ್ಟವಳೂ ಅವನಿಗೆ ಮಕ್ಕಳನ್ನು ಹೆ
ತ್ತಿರುವಲ್ಲಿ, ಹಗೆ ಮಾಡಲ್ಪಟ್ಟವಳ ಮಗನು ಹೊಚ್ಚಲಾಗಿದ್ದರೆ,
೧೬ ಅವನು ತನ್ನ ಮಕ್ಕಳಿಗೆ ತನಗೆ ಉಂಟಾದದ್ದನ್ನು ಸ್ವಾಸ್ತ್ಯವಾಗಿ
ಕೊಡುವ ದಿವಸದಲ್ಲಿ, ಹೊಚ್ಚಲಾಗಿರುವ ಹಗೆ ಮಾಡಲ್ಪಟ್ಟವಳ
ಮಗನಿಗೆ ಬದಲಾಗಿ ಪ್ರೀತಿ ಮಾಡಲ್ಪಟ್ಟವಳ ಮಗನನ್ನು ಹೊ
೧೭ ಚ್ಚಲ ಮಾಡ ಕೂಡದು. ಅವನು ಹಗೆ ಮಾಡಲ್ಪಟ್ಟವಳ ಮಗ
ನಿಗೆ ತನ್ನ ಬಳಿಯಲ್ಲಿ ಉಂಟಾದ ಎಲ್ಲವುಗಳಲ್ಲಿ ಎರಡು ಪಾಲುಗ
ಳನ್ನು ಕೊಟ್ಟು, ಅವನೇ ಹೊಚ್ಚಲನೆಂದು ಒಪ್ಪಿ ಕೊಳ್ಳ ಬೇಕು;
ಯಾಕಂದರೆ ಅವನೇ ಅವನ ಬಲದ ಆರಂಭವು; ಅವನಿಗೆ ಹೊ
ಚ್ಚಲತನದ ನ್ಯಾಯ ಉಂಟು.

೧೮ ಒಬ್ಬ ಮನುಷ್ಯನಿಗೆ ಮಾರ್ಕಲೆವನಾದ ತಿರುಗ ಬೀಳುವ ಮ
ಗನಿದ್ದರೆ, ಅವನು ತಂದೆಯ ಮಾತನೂ ತಾಯಿಯ ಮಾತ
ನೂ ಕೇಳದೆ, ಅವರು ಅವನನ್ನು ಶಿಕ್ಷಿಸಿ ಹೇಳುವ ಮಾತು ಕೇಳ
೧೯ ದೆ ಹೋದರೆ, ಅವನ ತಂದೆ ತಾಯಿಗಳು ಅವನನ್ನು ಹಿಡಿದು, ಪ
ಟ್ಟಣದ ಹಿರಿಯರ ಬಳಿಗೂ, ಅವನ ಸ್ಥಳದ ಬಾಗಲಿನ ಬಳಿಗೂ, ಹೊ
೨೦ ರಗೆ ತಂದು, ಪಟ್ಟಣದ ಹಿರಿಯರಿಗೆ ಹೇಳ ಬೇಕಾದದ್ದೇನಂದರೆ—ಈ
ನಮ್ಮ ಮಗನು ಮಾರ್ಕಲೆವನೂ, ತಿರುಗ ಬೀಳುವವನೂ, ನ
ಮ್ಮ ಮಾತು ಕೇಳದವನೂ, ಹೊಟ್ಟೆಬಾಕನೂ, ಕುಡಿಯುವವ
೨೧ ನೂ ಆಗಿದ್ದಾನೆ. ಆಗ ಅವನ ಪಟ್ಟಣದ ಜನರೆಲ್ಲರು, ಅವನು ಸಾ
ಯುವ ಹಾಗೆ, ಅವನನ್ನು ಕಲ್ಲೆಸೆಯ ಬೇಕು; ಕೆಟ್ಟದ್ದನ್ನು ನಿನ್ನ
ಮಧ್ಯದಲ್ಲಿಂದ ತೆಗೆದು ಹಾಕ ಬೇಕು; ಇಸ್ರಯೇಲೆಲ್ಲಾ ಇದನ್ನು
ಕೇಳಿ ಭಯ ಪಡುವರು.

೨೨ ಇದಲ್ಲದೆ ಒಬ್ಬ ಮನುಷ್ಯನ ಮೇಲೆ ಮರಣಕ್ಕೆ ಪಾತ್ರ
ವಾದ ಪಾಪವಿರುವದರಿಂದ ಅವನನ್ನು ಕೊಂದು ಹಾಕಿ, ಮರ
೨೩ ಕ್ಕೆ ತೂಗ ಹಾಕಿದ್ದಾದರೆ, ಅವನ ಹೇನವು ರಾತ್ರಿಯಲ್ಲಿ ಮರದ
ಮೇಲಿರ ಬಾರದು; ಅವನನ್ನು ಹ್ಯಾಗಾದರೂ ಅದೇ ದಿವಸದಲ್ಲಿ
ಹೂಣಿಡ ಬೇಕು; ಯಾಕಂದರೆ ತೂಗಾಡುವವನು ದೇವರಿಂದ
ಶಾಪಗ್ರಸ್ಥನಾಗಿದ್ದಾನೆ; ಆದರೆ ನಿನ್ನ ದೇವರಾದ ಕರ್ತನು ನಿನ
ಗೆ ಸ್ವಾಸ್ತ್ಯವಾಗಿ ಕೊಡುವ ಭೂಮಿಯು ಅಶುದ್ಧವಾಗ ಬಾ
ರದು.

## ೨೨. ಸಂಧಿ.

೧ ನಿನ್ನ ಸಹೋದರನ ಎತ್ತಾಗಲಿ ಕುರಿಯಾಗಲಿ ಮಾರ್ಗ ತಪ್ಪಿ
ದ್ದನ್ನು ನೋಡಿ, ಅವುಗಳನ್ನು ಅಲಕ್ಷ್ಯ ಮಾಡ ಬೇಡ; ಹ್ಯಾಗಾ
ದರೂ ಅವುಗಳನ್ನು ನಿನ್ನ ಸಹೋದರನಿಗೆ ತಿರುಗಿಸಿ ಕೊಡ ಬೇ
೨ ಕು. ಆದರೆ ನಿನ್ನ ಸಹೋದರನು ನಿನಗೆ ಸಮೀಪವಾಗದೆ ಹೋ
ದರೆ, ಇಲ್ಲದೆ ಅವನ ಗುರುತು ನಿನಗೆ ತಿಳಿಯದೆ ಇದ್ದರೆ, ತಪ್ಪಿ
ಹೋದದ್ದನ್ನು ನಿನ್ನ ಮನೆಗೆ ಪೈಯ ಬೇಕು; ನಿನ್ನ ಸಹೋದರ
ನು ಅದನ್ನು ಹುಡುಕುವ ಪರ್ಯಂತರ ಅದು ನಿನ್ನ ಸಂಗಡ ಇರ
೩ ಬೇಕು; ಆಗ ಅದನ್ನು ಹಿಂದಕ್ಕೆ ಕೊಡ ಬೇಕು. ಅವನ ಕತ್ತೆಗೆ
ಹಾಗೆ ಮಾಡ ಬೇಕು; ಅವನ ವಸ್ತ್ರಕ್ಕೆ ಹಾಗೆ ಮಾಡ ಬೇಕು; ನಿ
ನ್ನ ಸಹೋದರನು ಕಳೆದಾಗ ನಿನಗೆ ಶಿಕ್ಕಿದ ಎಲ್ಲಕ್ಕೂ ಹಾಗೆ
೪ ಮಾಡ ಬೇಕು; ನೀನು ಅಲಕ್ಷ್ಯ ಮಾಡ ಕೂಡದು. ನಿನ್ನ ಸಹೋ
ದರನ ಕತ್ತೆಯಾಗಲಿ, ಎತ್ತಾಗಲಿ, ಮಾರ್ಗದಲ್ಲಿ ಬಿದ್ದಿರುವದನ್ನು
ನೋಡಿದರೆ, ಅಲಕ್ಷ್ಯ ಮಾಡ ಬೇಡ; ಹ್ಯಾಗಾದರೂ ಅವುಗಳ
ನ್ನು ಎಬ್ಬಿಸುವದಕ್ಕೆ ಅವನಿಗೆ ಸಹಾಯ ಮಾಡ ಬೇಕು.

೫ ಸ್ತ್ರೀಗೆ ಪುರುಷನ ಉಡಿಕೆ ಇರ ಬಾರದು; ಪುರುಷನು ಸ್ತ್ರೀ
ವಸ್ತ್ರ ಹಾಕಿ ಕೊಳ್ಳ ಬಾರದು; ಯಾಕಂದರೆ ಇವುಗಳನ್ನು ಮಾ
ಡುವವರೆಲ್ಲಾ ಕರ್ತನಿಗೆ ಅಸಹ್ಯ.

೬ ನಿನಗೆ ಮಾರ್ಗದಲ್ಲಿ, ಯಾವದೊಂದು ಗಿಡದಲ್ಲಾಗಲಿ, ನೆಲದ
ಲ್ಲಾಗಲಿ, ಮರಿಗಳುಳ್ಳ ಇಲ್ಲವೆ ತತ್ತಿಗಳುಳ್ಳ ಪಕ್ಷಿಯ ಗೂಡು
ಶಿಕ್ಕಿದರೆ, ಮರಿಗಳ ಮೇಲೆಯಾಗಲಿ, ತತ್ತಿಗಳ ಮೇಲೆಯಾಗಲಿ,
ತಾಯಿ ಕೂತು ಕೊಂಡಿದ್ದರೆ, ಮರಿಗಳ ಸಂಗಡ ತಾಯಿಯನ್ನು
೭ ತಕ್ಕೊಳ್ಳ ಬೇಡ; ನಿನಗೆ ಒಳ್ಳೇದಾಗುವ ಹಾಗೆಯೂ, ನಿನಗೆ
ದಿನ ಹೆಚ್ಚುವ ಹಾಗೆಯೂ, ಹ್ಯಾಗಾದರೂ ತಾಯಿಯನ್ನು ಕ
ಳುಹಿಸಿ ಬಿಟ್ಟು, ಮರಿಗಳನ್ನು ತಕ್ಕೊಳ್ಳ ಬೇಕು.

೮ ನೀನು ಹೊಸ ಮನೆಯನ್ನು ಕಟ್ಟಿದರೆ, ಯಾವನೊಬ್ಬನು ಅ
ದರ ಮೇಲಿನಿಂದ ಬೀಳುವ ಪಕ್ಷದಲ್ಲಿ ನೀನು ನಿನ್ನ ಮನೆಗೆ ರಕ್ತಾ
ಪರಾಧ ಹೊರಿಸದ ಹಾಗೆ ನಿನ್ನ ಮಾಳಿಗೆಗೆ ಕಟಾಂಜನ ಕಟ್ಟ
ಬೇಕು.

೯ ನಿನ್ನ ದ್ರಾಕ್ಷೇ ತೋಟದಲ್ಲಿ ಎರಡು ತರವಾದ ಬೀಜ ಬಿತ್ತ ಬೇ
ಡ; ಬಿತ್ತಿದರೆ, ನೀನು ಬಿತ್ತಿದ ಬೀಜದ ಬೈರೂ, ದ್ರಾಕ್ಷೇ ತೋ
೧೦ ಟದ ಹುಟ್ಟುವಳ್ಳಿಯೂ, ಪರಿಶುದ್ಧವಾಗುವವು. ಎತ್ತನ್ನೂ ಕತ್ತೆ
೧೧ ಯನ್ನೂ ಕೂಡ ಹೂಡ ಬೇಡ. ಉಣ್ಣೆಯೂ ಸಣಬೂ ಕೂಡಿ
ಸಿ ಮಾಡಿದ ವಸ್ತ್ರವನ್ನು ಹೊದಿಯ ಬೇಡ.

೧೨ ನೀನು ಹೊದ್ದು ಕೊಳ್ಳುವ ಕಲ್ಯದ ನಾಲ್ಕು ಮೂಲೆಗಳಿಗೆ
ಗೊಂಡೆಗಳನ್ನು ಮಾಡಿಸಿ ಕೊಳ್ಳ ಬೇಕು.

೧೩ ಒಬ್ಬನು ಹೆಂಡತಿಯನ್ನು ತಕ್ಕೊಂಡು, ಅವಳ ಬಳಿಗೆ ಬಂದ
೧೪ ಮೇಲೆ, ಅವಳನ್ನು ಹಗೆ ಮಾಡಿ, ಅವಳಿಗೆ ವಿರೋಧವಾದ ಕೆಟ್ಟ
ಮಾತಿಗೆ ಆಸ್ಪದ ಕೊಟ್ಟು, ಅವಳ ಹೆಸರನ್ನು ಕೆಡಿಸಿ, ಈ ಹೆಂಗ
ಸನ್ನು ನಾನು ತಕ್ಕೊಂಡು, ಅವಳ ಬಳಿಗೆ ಬಂದಾಗ, ಅವಳು ಕ
೧೫ ನ್ಯಾಸ್ತ್ರೀ ಅಲ್ಲವೆಂದು ಕಂಡೆನೆಂಬದಾಗಿ ಹೇಳ್ಳದರೆ, ಆ ಹುಡುಗಿಯ
ತಂದೆಯೂ ತಾಯಿಯೂ ಆ ಹುಡುಗಿಯ ಕನ್ಯಾ ಭಾವದ ಲಕ್ಷ
ಣಗಳನ್ನು ತಕ್ಕೊಂಡು, ಪಟ್ಟಣದ ಹಿರಿಯರಿಗೆ ಬಾಗಲಿನ ಬಳಿಗೆ
೧೬ ಹೊರಗೆ ತರ ಬೇಕು. ಆ ಮೇಲೆ ಹುಡುಗಿಯ ತಂದೆಯು ಹಿರಿಯ
ರಿಗೆ ಹೇಳ ತಕ್ಕದ್ದೇನಂದರೆ—ನನ್ನ ಮಗಳನ್ನು ಈ ಮನುಷ್ಯನಿಗೆ
ಹೆಂಡತಿಯಾಗಿ ಕೊಟ್ಟಿದ್ದೇನೆ; ಅವನು ಅವಳನ್ನು ಹಗೆ ಮಾಡಿ
೧೭ ದ್ದಾನೆ; ಮತ್ತು, ಇಗೋ, ಅವನು, ನಿನ್ನ ಮಗಳು ಕನ್ಯಾಸ್ತ್ರೀ ಅ
ಲ್ಲವೆಂದು ಕಂಡೆನೆಂಬದಾಗಿ ಅವಳಿಗೆ ವಿರೋಧವಾದ ಕೆಟ್ಟ ಮಾತಿಗೆ
ಆಸ್ಪದ ಕೊಟ್ಟಿದ್ದಾನೆ; ಆದರೂ ಇದೇ ನನ್ನ ಮಗಳ ಕನ್ಯಾಭಾ
ವದ ಲಕ್ಷಣವು. ಮತ್ತು ಅವರು ಪಟ್ಟಣದ ಹಿರಿಯರ ಮುಂದೆ ಬಟ್ಟೆ
೧೮ ಯನ್ನು ಹಾಸ ಬೇಕು. ಆಗ ಪಟ್ಟಣದ ಹಿರಿಯರು ಆ ಮನುಷ್ಯನ
೧೯ ನ್ನು ತಕ್ಕೊಂಡು, ಅವನನ್ನು ಶಿಕ್ಷಿಸ ಬೇಕು. ಅವನು ಇಸ್ರಯೇ
ಲಿನಲ್ಲಿ ಒಬ್ಬ ಕನ್ಯಾಸ್ತ್ರೀಯ ಹೆಸರನ್ನು ಕೆಡಿಸಿದ್ದರಿಂದ ಅವನಿಗೆ ಪೆ
ಳ್ಳಿಯ ನೂರು ಹಣಗಳನ್ನು ಅವಾಧ ತಕ್ಕೊಂಡು, ಆ ಹುಡುಗಿ
ಯ ತಂದೆಗೆ ಕೊಡ ಬೇಕು; ಇದಲ್ಲದೆ ಅವಳು ಅವನಿಂದ ಹೆಂಡತಿ
ಯಾಗ ಬೇಕು; ಅವನು ಬದುಕುವ ದಿವಸಗಳೆಲ್ಲಾ ಅವಳನ್ನು
೨೦ ಕಳುಹಿಸ ಬಿಡ ಕೂಡದು. ಆದರೆ ಆ ಮಾತು ಸತ್ಯವಾಗಿದ್ದರೆ, ಆ

೨೦ ಹುಡುಗಿಯಲ್ಲಿ ಕನ್ಯಾಭಾವದ ಲಕ್ಷಣ ಕಾಣದೆ ಇದ್ದರೆ, ಆ ಹುಡುಗಿಯನ್ನು ಅವಳ ತಂದೆಯ ಮನೆಯ ಬಾಗಲಿಗೆ ತರ ಬೇಕು; ಅವಳ ಪಟ್ಟಣದ ಮನುಷ್ಯರು ಅವಳನ್ನು ಸಾಯುವ ಹಾಗೆ ಕಲ್ಲೆಸೆಯ ಬೇಕು; ಯಾಕಂದರೆ ಅವಳು ತಂದೆಯ ಮನೆಯಲ್ಲಿ ಸೂಳೆತನ ಮಾಡಿ, ಇಸ್ರಯೇಲಿನಲ್ಲಿ ಹುಚ್ಚುತನವನ್ನು ಮಾಡಿದ್ದಾಳೆ. ಕೆಟ್ಟದ್ದನ್ನು ನಿನ್ನ ಮಧ್ಯದಲ್ಲಿಂದ ತೆಗೆದು ಹಾಕ ಬೇಕು.

೨೨ ಒಬ್ಬ ಮನುಷ್ಯನು ಮುತ್ತೈದೆಯ ಸಂಗಡ ಮಲಗಿ ಕೊಂಡವನಾಗಿ ಕಿಕ್ಕಿದರೆ, ಆ ಸ್ತ್ರೀಯ ಸಂಗಡ ಮಲಗಿ ಕೊಂಡ ಮನುಷ್ಯನೂ ಆ ಸ್ತ್ರೀಯೂ, ಅವರಿಬ್ಬರು ಸಾಯ ಬೇಕು; ಕೆಟ್ಟದ್ದನ್ನು ಇಸ್ರಯೇಲಿನಲ್ಲಿಂದ ತೆಗೆದು ಹಾಕ ಬೇಕು.

೨೩ ಕನ್ಯಾಸ್ತ್ರೀಯಾದ ಒಬ್ಬ ಹುಡುಗಿ ಒಬ್ಬ ಮನುಷ್ಯನಿಗೆ ನೇಮಿಸಲ್ಪಟ್ಟಿರಲಾಗಿ, ಮತ್ತೊಬ್ಬ ಮನುಷ್ಯನು ಆ ಪಟ್ಟಣದಲ್ಲಿ ಅವಳನ್ನು ಕಂಡು, ಅವಳ ಸಂಗಡ ಮಲಗಿದರೆ, ಅವರಿಬ್ಬರನ್ನು ಆ ಪಟ್ಟಣದ ಬಾಗಲಿನ ಹೊರಗೆ ತಂದು, ಅವರು ಸಾಯುವ ಹಾಗೆ ಕಲ್ಲೆಸೆಯ ಬೇಕು; ಆ ಹುಡುಗಿಯನ್ನು, ಅವಳು ಪಟ್ಟಣದಲ್ಲಿ ಇದ್ದಾಗ್ಯೂ ಕೂಗದೆ ಇದದ್ದರಿಂದ, ಆ ಮನುಷ್ಯನನ್ನು ಅವನು ತನ್ನ ನೆರೆಯವನ ಹೆಂಡತಿಯನ್ನು ಕುಂದಿಸಿದ್ದರಿಂದ. ಈ ಪ್ರಕಾರ ಕೆಟ್ಟದ್ದನ್ನು ನಿನ್ನ ಮಧ್ಯದಲ್ಲಿಂದ ತೆಗೆದು ಹಾಕ ಬೇಕು.

೨೫ ಆದರೆ ಆ ಮನುಷ್ಯನು ನೇಮಿಸಿರುವ ಹುಡುಗಿಯನ್ನು ಹೊಲದಲ್ಲಿ ಕಂಡು, ಅವಳನ್ನು ಹಿಡಿದು, ಅವಳ ಸಂಗಡ ಮಲಗಿದರೆ, ಅವಳ ಸಂಗಡ ಮಲಗಿದ ಮನುಷ್ಯನು ಮಾತ್ರ ಸಾಯ ಬೇಕು.

೨೬ ಆದರೆ ಆ ಹುಡುಗಿಗೆ ಏನೂ ಮಾಡ ಬೇಡ; ಆ ಹುಡುಗಿಯಲ್ಲಿ ಮರಣಕ್ಕೆ ಪಾತ್ರವಾದ ಪಾಪವಿಲ್ಲ; ಆ ಕಾರ್ಯವು ಒಬ್ಬನು ತನ್ನ ನೆರೆಯವನಿಗೆ ವಿರೋಧವಾಗಿ ಎದ್ದು, ಅವನ ಪ್ರಾಣ ಕೊಂದು ಹಾಕಿದ ಹಾಗೆಗೆ. ಯಾಕಂದರೆ ಅವನು ಹೊಲದಲ್ಲಿ ಅವಳನ್ನು ಕಂಡನು; ನೇಮಿಸಲ್ಪಟ್ಟಿರುವ ಆ ಹುಡುಗಿ ಕೂಗಿದಳು; ಆದರೆ ರಕ್ಷಿಸುವವನು ಅವಳಿಗೆ ಯಾರೂ ಇಲ್ಲ.

೨೯ ಒಬ್ಬ ಮನುಷ್ಯನು ನೇಮಿಸದೆ ಇರುವ ಕನ್ಯಾಸ್ತ್ರೀಯಾದ ಹುಡುಗಿಯನ್ನು ಕಂಡು, ಅವಳನ್ನು ಹಿಡಿದು, ಅವಳ ಸಂಗಡ ಮಲಗುವಲ್ಲಿ, ಅವರು ಸಿಕ್ಕಿದರೆ, ಅವಳ ಸಂಗಡ ಮಲಗಿದ ಮನುಷ್ಯನು ಆ ಹುಡುಗಿಯ ತಂದೆಗೆ ಐವತ್ತು ಬೆಳ್ಳಿ ಹಣಗಳನ್ನು ಕೊಡ ಬೇಕು; ಮತ್ತು ಅವಳು ಅವನಿಗೆ ಹೆಂಡತಿಯಾಗ ಬೇಕು; ಅವನು ಅವಳನ್ನು ಕುಂದಿಸಿದ್ದರಿಂದ, ಬದುಕುವ ದಿವಸಗಳೆಲ್ಲಾ ಅವಳನ್ನು ಕಳುಹಿಸಿ ಬಿಡ ಕೂಡದು.

೩೦ ಒಬ್ಬನು ತನ್ನ ತಂದೆಯ ಹೆಂಡತಿಯನ್ನು ತಕ್ಕೊಳ್ಳ ಕೂಡದು; ತನ್ನ ತಂದೆಯ ವಸ್ತ್ರದ ಶರಗನ್ನು ತೆರೆಯ ಕೂಡದು.

## ೨೩. ಸಂಧಿ.

೧ ಬೀಜದಲ್ಲಿ ಘಾಯವುಳ್ಳವನೂ ರಹಸ್ಯಾಂಗ ಕೊಯ್ಯಲ್ಪಟ್ಟವನೂ ಕರ್ತನ ಸಭೆಯಲ್ಲಿ ಸೇರ ಬಾರದು. ಜಾರತೆಯ ಮಗನು ಕರ್ತನ ಸಭೆಯಲ್ಲಿ ಸೇರ ಬಾರದು; ಹತ್ತನೇ ತಲಾಂತರವಾದರೂ,
3 ಅವನು ಕರ್ತನ ಸಭೆಯಲ್ಲಿ ಸೇರ ಬಾರದು. ಅಮ್ಮೋನ್ಯರೂ, ಮೋವಾಬ್ಯರೂ, ಕರ್ತನ ಸಭೆಯಲ್ಲಿ ಸೇರ ಬಾರದು; ಹತ್ತನೇ ತಲಾಂತರವಾದರೂ, ಅವರು ಎಂದಿಗೂ ಕರ್ತನ ಸಭೆಯಲ್ಲಿ ಸೇರ
೪ ಬಾರದು. ಯಾಕಂದರೆ ನೀವು ಐಗುಪ್ತವನ್ನು ಬಿಟ್ಟು ಬರುವಾಗ, ಅವರು ನಿಮಗೆ ಕೊಟ್ಟಿಯನ್ನೂ ನೀರನ್ನೂ ಕೊಡ ಎದುರಾಗಿ ಬರಲಿಲ್ಲ; ಮತ್ತು ನಿಮ್ಮನ್ನು ಶಪಿಸುವದಕ್ಕೆ ಎದಿಗಳ್ಳ ನಾಡುವೆಯ ಅರಾಮನಲ್ಲಿರುವ ಬೆತ್ತೂರಿನಿಂದ ಬೆಯೋರನ ಮಗನಾದ ಬಿಳಾಮನನ್ನು ಕೂಲಿ ಕೊಟ್ಟನು, ನಿಮಗೆ ವಿರೋಧವಾಗಿ ತರಿಸಿದರು. ಆದರೆ
೫ ನಿನ್ನ ದೇವರಾದ ಕರ್ತನು ಬಿಳಾಮನನ್ನು ಕೇಳಲೊಲ್ಲದೆ ಇದನು; ನಿನ್ನ ದೇವರಾದ ಕರ್ತನು ಆ ಶಾಪವನ್ನು ನಿನಗೆ ಆಶೀರ್ವಾದಕ್ಕೆ ತಿರುಗಿಸಿದನು; ಯಾಕಂದರೆ ನಿನ್ನ ದೇವರಾದ ಕರ್ತನು ನಿನ್ನನ್ನು
೬ ಪ್ರೀತಿ ಮಾಡಿದನು. ನೀನಿರುವ ತನಕ, ಎಂದಿಗೂ ಅವರ ಸಮಾಧಾನವನ್ನೂ ಅವರ ಮೇಲನ್ನೂ ಹುಡುಕ ಬೇಡ. ಎದೋಮ್ಯನನ್ನು ಅಸಂಹಿಸ ಬೇಡ; ಯಾಕಂದರೆ ಅವನು ನಿನ್ನ
೭ ಸಹೋದರನು; ಐಗುಪ್ತ್ಯನನ್ನು ಅಸಂಹಿಸ ಬೇಡ; ಯಾಕಂದರೆ ಅವನ ದೇಶದಲ್ಲಿ ಪರವಾಸಿಯಾಗಿದ್ದಿ. ಅವರಿಗೆ ಹುಟ್ಟುವ ಮಕ್ಕಳು ಮೂರನೇ ತಲಾಂತರದಲ್ಲಿ ಕರ್ತನ ಸಭೆಯಲ್ಲಿ ಸೇರ ಬಹುದು.

೮ ನೀನು ನಿನ್ನ ಶತ್ರುಗಳಿಗೆ ವಿರೋಧವಾಗಿ ಸೈನ್ಯವಾಗಿ ಹೊರಟರೆ, ಕೆಟ್ಟ ಕಾರ್ಯಗಳನ್ನೆಲ್ಲಾ ಬಿಡ ಎಚ್ಚರಿಕೆಯಾಗಿರ ಬೇಕು.
೧೦ ರಾತ್ರಿಯಲ್ಲಿ ಸಂಭವಿಸಿದ ಕಾರ್ಯದ ದೆಸೆಯಿಂದ ಶುದ್ಧವಲ್ಲದ ಮನುಷ್ಯನು ನಿನ್ನಲ್ಲಿದ್ದರೆ, ಅವನು ದಂಡಿನ ಹೊರಗೆ ಹೋಗ ಬೇಕು; ದಂಡಿನ ಒಳಗೆ ಬರ ಬಾರದು.
೧೧ ಸಂಜೆ ಆಗುತ್ತಿರುವಾಗ ಅವನು ನೀರಿನಲ್ಲಿ ತೊಳೆ ಕೊಳ್ಳಲಿ; ಸೂರ್ಯನು ಮುಣುಗಿದಾಗ, ದಂಡಿನ ಒಳಗೆ ಬರಲಿ.
೧೨ ಇದಲ್ಲದೆ ನೀನು ಹೊರಕಡೆ ಹೋಗುವದಕ್ಕೆ
೧೩ ನಿನಗೆ ದಂಡಿನ ಹೊರಗೆ ಸ್ಥಳವಿರ ಬೇಕು. ಮತ್ತು ನಿನ್ನ ಆಯುಧದಲ್ಲಿ ನಿನಗೆ ಕೊಳೆ ಇರ ಬೇಕು; ನೀನು ಹೊರಗೆ ಕೂತು ಕೊಂಡಾಗ, ಅದರಿಂದ ಆಗದು, ನಿನ್ನಿಂದ ಹೊರಕಡೆ ಹೋಗುವದನ್ನು ಮುಚ್ಚ ಬೇಕು.
೧೪ ಯಾಕಂದರೆ ನಿನ್ನ ದೇವರಾದ ಕರ್ತನು ನಿನ್ನನ್ನು ರಕ್ಷಿಸುವದಕ್ಕೂ, ನಿನ್ನ ಶತ್ರುಗಳನ್ನು ನಿನ್ನ ಮುಂದೆ ಕೊಟ್ಟು ಬಿಡುವದಕ್ಕೂ, ದಂಡಿನ ಮಧ್ಯದಲ್ಲಿ ಸಂಚಾರ ಮಾಡುತ್ತಾನೆ; ಅವನು ನಿನ್ನಲ್ಲಿ ನಾಚಿಕೆಯಾದ ಕಾರ್ಯವನ್ನು ನೋಡಿ, ನಿನ್ನನ್ನು ಬಿಟ್ಟು, ತಿರುಗದ ಹಾಗೆ, ನಿನ್ನ ದಂಡು ಪರಿಶುದ್ಧವಾಗಿರ ಬೇಕು.

೧೫ ತನ್ನ ಯಜಮಾನನನ್ನು ಬಿಟ್ಟು, ನಿನ್ನ ಬಳಿಗೆ ತಪ್ಪಿಸಿ ಕೊಂಡು ಬಂದ ದಾಸನನ್ನು ಯಜಮಾನನಿಗೆ ಒಪ್ಪಿಸಿ ಬಿಡ ಬೇಕ.
೧೬ ಅವನು ನಿನ್ನ ಸಂಗಡ ನಿನ್ನ ಮಧ್ಯದಲ್ಲಿ, ಅವನು ಆದು ಕೊಂಡಲ್ಲಿ, ನಿನ್ನ ಬಾಗಲುಗಳ ಒಂದರಲ್ಲಿ, ಅವನಿಗೆ ಒಳ್ಳೇಕೆಂದು ತೋಚಿದಲ್ಲಿ, ವಾಸವಾಗಿರ ಬೇಕು; ಅವನನ್ನು ಉಪದ್ರ ಪಡಿಸ ಬೇಡ.

೧೭ ಇಸ್ರಯೇಲಿನ ಕುಮಾರ್ತೆಗಳಲ್ಲಿ ಸೂಳೆ ಇರ ಬಾರದು; ಇಸ್ರಯೇಲಿನ ಕುಮಾರರಲ್ಲಿ ಪುರುಷ ಸಂಗಮನು ಇರ ಬಾರದು.
೧೮ ಸೂಳೆಯ ಕೊಕ್ಕವನ್ನೂ ನಾಯಿಯ ಕ್ರಯವನ್ನೂ ಯಾವದೊಂದು ಹರಿಕೆಯಾಗಿ ನಿನ್ನ ದೇವರಾದ ಕರ್ತನ ಮನೆಗೆ ತರ ಬೇಡ; ಯಾಕಂದರೆ ಅವು ಎರಡು ನಿನ್ನ ದೇವರಾದ ಕರ್ತನಿಗೆ ಅಸಹ್ಯ.

೧೯ ನಿನ್ನ ಸಹೋದರನಿಗೆ ಹಣವನ್ನಾಗಲಿ, ಊಟವನ್ನಾಗಲಿ, ಬಡ್ಡಿಗೆ ಕೊಡುವ ಯಾವದನ್ನಾಗಲಿ, ಬಡ್ಡಿಗೆ ಕೊಡ ಬೇಡ.
೨೦ ಪರನಿಗೆ ಬಡ್ಡಿಕೋಸ್ಕರ ಕೊಡ ಬಹುದು; ಆದರೆ ನಿನ್ನ ಸಹೋದರನಿಗೆ, ನೀನು ಸ್ವತಂತ್ರಿಸಿ ಕೊಳ್ಳ ಹೋಗುವ ದೇಶದಲ್ಲಿ ನಿನ್ನ ದೇವರಾದ ಕರ್ತನು ನಿನ್ನನ್ನು ನಿನ್ನ ಎಲ್ಲಾ ಕೈ ಕೆಲಸದಲ್ಲಿ ಆಶೀರ್ವದಿಸುವ ಹಾಗೆ, ಬಡ್ಡಿಗೆ ಕೊಡ ಬೇಡ.



೨೧ ನೀನು ನಿನ್ನ ದೇವರಾದ ಕರ್ತನಿಗೆ ಹರಿಕೆ ಹೇಳಿದ ಮೇಲೆ ಅದನ್ನು ಸಲ್ಲಿಸುವದಕ್ಕೆ ತಡ ಮಾಡ ಬೇಡ; ಯಾಕಂದರೆ ನಿನ್ನ ದೇವರಾದ ಕರ್ತನು ಅದನ್ನು ಹ್ಯಾಗಾದರೂ ನಿನ್ನ ಬಳಿಯಲ್ಲಿ ವಿಚಾ
೨೨ ರಿಸುವನು; ಅದು ನಿನ್ನಲ್ಲಿ ಪಾಪವಾಗಿರುವದು. ಆದರೆ ನೀನು ಮೊದಲು ಹರಿಕೆ ಹೇಳದಿದ್ದರೆ, ನಿನ್ನ ಮೇಲೆ ಪಾಪವಿರುವದಿಲ್ಲ.
೨೩ ನಿನ್ನ ತುಟಿಗಳಿಂದ ಹೊರಟದ್ದನ್ನು ಕಾಪಾಡಿ, ನೀನು ಉಚಿತವಾಗಿ ನಿನ್ನ ದೇವರಾದ ಕರ್ತನಿಗೆ ಹರಿಕೆ ಹೇಳಿದಂತೆ, ನಿನ್ನ ಬಾಯಿಯಿಂದ ಮಾತಾಡಿದಂತೆ, ಮಾಡ ಬೇಕು.

೨೪ ನಿನ್ನ ನೆರೆಯವನ ದ್ರಾಕ್ಷೇ ತೋಟಕ್ಕೆ ಬಂದರೆ, ನಿನಗೆ ಮನಸ್ಸು ಬಂದ ಹಾಗೆ ತೃಪ್ತಿಯಾಗುವ ಪರ್ಯಂತರ ಹಣ್ಣುಗಳನ್ನು
೨೫ ತಿನ್ನ ಬಹುದು; ಆದರೆ ನಿನ್ನ ಚೀಲದಲ್ಲಿ ಹಾಕ ಬೇಡ. ನಿನ್ನ ನೆರೆಯವನ ಪೈರಿಗೆ ಬಂದರೆ, ಕೈಯಿಂದ ತೆಪೆಗಳನ್ನು ಕೀಳ ಬಹುದು; ಆದರೆ ನಿನ್ನ ನೆರೆಯವನ ಪೈರಿನಲ್ಲಿ ಕುಡುಗೋಲಾಡಿಸ ಬೇಡ.

## ೨೪. ಸಂಧಿ.

೧ ಒಬ್ಬನು ಹೆಂಡತಿಯನ್ನು ತಕ್ಕೊಂಡು, ಅವಳಿಗೆ ಗಂಡನಾದ ಮೇಲೆ, ಅವಳಲ್ಲಿ ನಾಚಿಕೆಯಾದ ಕಾರ್ಯವನ್ನು ನೋಡುವದರಿಂದ, ಅವಳಿಗೆ ಅವನಿಂದ ಕಟುಕ್ಷವಾಗದಿದ್ದರೆ, ಅವಳಿಗೆ ತ್ಯಾಗಪತ್ರವನ್ನು ಬರೆದು, ಅವಳ ಕೈಯಲ್ಲಿ ಕೊಟ್ಟು, ಅವಳನ್ನು ತನ್ನ
೨ ಮನೆಯಿಂದ ಕಳುಹಿಸಿ ಬಿಡ ಬೇಕು ಅವಳು ಅವನ ಮನೆಯನ್ನು ಬಿಟ್ಟು ಹೋದ ಮೇಲೆ, ಮತ್ತೊಬ್ಬ ಗಂಡನಿಗೆ ಆಗ ಬಹುದು.
3 ಆ ಮತ್ತೊಬ್ಬ ಗಂಡನು ಅವಳನ್ನು ಹಗೆ ಮಾಡಿ, ತ್ಯಾಗ ಪತ್ರವನ್ನು ಬರೆದು, ಅವಳ ಕೈಯಲ್ಲಿ ಕೊಟ್ಟು, ತನ್ನ ಮನೆಯಿಂದ ಕಳುಹಿಸಿ ಬಿಟ್ಟರೆ, ಇಲ್ಲವೆ ಅವಳನ್ನು ಹೆಂಡತಿಯಾಗಿ ತಕ್ಕೊಂಡ
೪ ಆ ಮತ್ತೊಬ್ಬ ಗಂಡನು ಸತ್ತರೆ, ಅವಳನ್ನು ಕಳುಹಿಸಿ ಬಿಟ್ಟ ಮೊದಲನೇ ಗಂಡನು, ಅವಳು ಅಶುದ್ಧವಾದ ಮೇಲೆ, ಅವಳನ್ನು ತಿರಿಗಿ ತನ್ನ ಹೆಂಡತಿಯಾಗಿ ತಕ್ಕೊಳ್ಳ ಕೂಡದು; ಅದು ಕರ್ತನ ಮುಂದೆ ಅಸಹ್ಯವೇ. ನಿನ್ನ ದೇವರಾದ ಕರ್ತನು ನಿನಗೆ ಸ್ವಾಸ್ತ್ಯವಾಗಿ ಕೊಡುವ ದೇಶದ ಮೇಲೆ ಪಾಪವನ್ನು ತರ ಬೇಡ.

೫ ಒಬ್ಬನು ಹೊಸದಾಗಿ ಹೆಂಡತಿಯನ್ನು ತಕ್ಕೊಂಡರೆ, ಯುದ್ಧಕ್ಕೆ ಹೊರಡ ಬಾರದು; ಅವನಿಂದ ಯಾವದೊಂದು ಕೆಲಸವನ್ನು ಮಾಡಿಸ ಬಾರದು; ಅವನು ಒಂದು ವರುಷ ಬಿಡುಗಡೆಯಾಗಿ ತನ್ನ ಮನೆಯಲ್ಲಿದ್ದು, ತಾನು ತಕ್ಕೊಂಡ ಹೆಂಡತಿಯನ್ನು ಸಂತೋಷ ಪಡಿಸ ಬೇಕು.

೬ ಬೀಸುವ ಕಲ್ಲಿನಲ್ಲಿ ಅಡಿ ಕಲ್ಲಾದರೂ ಮೇಲ್ಕಲ್ಲಾದರೂ ಒತ್ತೆಯಾಗಿ ತಕ್ಕೊಳ್ಳ ಬಾರದು; ಹಾಗೆ ಮಾಡಿದರೆ, ಪ್ರಾಣವನ್ನು ಒತ್ತೆಯಾಗಿ ತಕ್ಕೊಂಡ ಹಾಗಿರುವದು.

೭ ಒಬ್ಬನು ತನ್ನ ಸಹೋದರರಾದ ಇಸ್ರಯೇಲ್ ಮಕ್ಕಳಲ್ಲಿ ಒಂದು ಪ್ರಾಣವನ್ನು ಕದ್ದು, ವ್ಯಾಪಾರ ಮಾಡಿ, ಮಾರಿದವನಾಗಿ ಕಿಕ್ಕಿದರೆ, ಆ ಕಳ್ಳನು ಸಾಯ ಬೇಕು; ಕೆಟ್ಟದ್ದನ್ನು ನಿನ್ನ ಮಧ್ಯದಲ್ಲಿಂದ ತೆಗೆದು ಹಾಕ ಬೇಕು.

೮ ಕುಷ್ಠದ ಬಾಧೆಯಲ್ಲಿ ಜೇಗ್ರವಾದ ಯಾಜಕರು ನಿಮಗೆ ಬೋಧಿಸುವದನ್ನೆಲ್ಲಾ ಜಾಗ್ರತೆಯಿಂದ ಕಾಪಾಡಿ, ಮಾಡುವ ಹಾಗೆ ನೋಡಿಕೊಳ್ಳ; ನಾನು ಅವರಿಗೆ ಆಜ್ಞೆ ಕೊಟ್ಟ ಹಾಗೆ ನೀವು ಕಾಪಾಡಿ, ಮಾಡ ಬೇಕು. ನಿನ್ನ ದೇವರಾದ ಕರ್ತನು ಮಿರ್ಯಾಮಳಿಗೆ
೯ ಮಾರ್ಗದಲ್ಲಿ, ನೀವು ಐಗುಪ್ತದಿಂದ ಹೊರಗೆ ಬರುವಾಗ ಮಾಡಿದ್ದನ್ನೂ ಜ್ಞಾಪಕ ಮಾಡಿಕೋ.

೧೦ ನೀನು ನಿನ್ನ ನೆರೆಯವನಿಗೆ ಯಾವದೊಂದು ಕೈಗಡ ಕೊಟ್ಟರೆ, ಅವನ ಒತ್ತೆಯನ್ನು ಕೇಳುವ ಹಾಗೆ, ಅವನ ಮನೆಯಲ್ಲಿ ಪ್ರ
೧೧ ವೇಶಿಸ ಬೇಡ. ನೀನು ಹೊರಗೆ ನಿಂತಿರ ಬೇಕು; ನೀನು ಕೈಗಡ ಕೊಟ್ಟ ಮನುಷ್ಯನು ಒತ್ತೆಯನ್ನು ನಿನಗೆ ಹೊರಗೆ ತರ ಬೇಕು.
೧೨ ಆದರೆ ಅವನು ದೀನನಾದರೆ, ಅವನ ಒತ್ತೆ ಇಟ್ಟು ಕೊಂಡು, ಮಲ
೧೩ ಗ ಬೇಡ. ಸೂರ್ಯನು ಮುಣುಗುವಾಗ, ಹ್ಯಾಗಾದರೂ ಅವನಿಗೆ ಒತ್ತೆಯನ್ನು ಹಿಂದಕ್ಕೆ ಕೊಡ ಬೇಕು; ಆಗಲವನು ತನ್ನ ವಸ್ತ್ರದಲ್ಲಿ ಮಲಗಿ ಕೊಂಡು, ನಿನ್ನನ್ನು ಆಶೀರ್ವದಿಸುವನು; ಮತ್ತು ನಿನಗೆ ದೇವರಾದ ಕರ್ತನ ಮುಂದೆ ನೀತಿ ಉಂಟಾಗುವದು.

೧೪ ನಿನ್ನ ಸಹೋದರರಲ್ಲಿ ಆಗಲಿ, ನಿನ್ನ ದೇಶದಲ್ಲಿಯೂ ನಿನ್ನ ಬಾಗಲುಗಳಲ್ಲಿಯೂ ಇರುವ ಪರರಲ್ಲಿ ಆಗಲಿ, ದೀನನಾದ ಬಡ
೧೫ ಕೂಲಿಯವನನ್ನು ಬಲಾತ್ಕಾರ ಮಾಡ ಬೇಡ. ದಿನದಿನಕ್ಕೆ ಅವನ ಕೂಲಿ ಕೊಡ ಬೇಕು; ಅದನ್ನು ಕೊಡದೆ, ಸೂರ್ಯನು ಮುಣುಗ ಬಾರದು; ಯಾಕಂದರೆ ಅವನು ದೀನನೇ; ಅದರ ಮೇಲೆಯೇ ತನ್ನ ಮನಸ್ಸು ಇಟ್ಟಿದ್ದಾನೆ; ಕೊಡದಿದ್ದರೆ, ಅವನು ನಿನಗೆ ವಿರೋಧವಾಗಿ ಕರ್ತನ ಕಡೆಗೆ ಕೂಗುವನು; ಆಗ ನಿನ್ನ ಮೇಲೆ ಪಾಪವಿರುವದು.

೧೬ ತಂದೆಗಳು ಮಕ್ಕಳ ನಿಮಿತ್ತವೂ, ಮಕ್ಕಳು ತಂದೆಗಳ ನಿಮಿತ್ತವೂ, ಕೊಲ್ಲಲ್ಪಡ ಬಾರದು; ಬಲ್ಯೊಬ್ಬನು ತನ್ನ ಪಾಪದ ನಿಮಿತ್ತ ಕೊಲ್ಲಲ್ಪಡ ಬೇಕು.

೧೭ ಪರನಿಗೂ ದಿಕ್ಕಿಲ್ಲದವನಿಗೂ ನ್ಯಾಯವನ್ನು ತಪ್ಪಿಸ ಬೇಡ;
೧೮ ವೆಧವೆಯ ವಸ್ತ್ರವನ್ನು ಒತ್ತೆಯಾಗಿ ತಕ್ಕೊಳ್ಳ ಬೇಡ. ನೀನು ಐಗುಪ್ತದಲ್ಲಿ ದಾಸನಾಗಿದ್ದಿ ಎಂದೂ, ನಿನ್ನ ದೇವರಾದ ಕರ್ತನು ನಿನ್ನನ್ನು ಅಲ್ಲಿಂದ ವಿಮೋಚಿಸಿದನೆಂದೂ ಜ್ಞಾಪಕ ಮಾಡಿ ಕೊಳ್ಳ ಬೇಕು; ಆದದರಿಂದ ಈ ಕಾರ್ಯವನ್ನು ಮಾಡ ಬೇಕೆಂದು ನಾನು ನಿನಗೆ ಆಜ್ಞಾಪಿಸುತ್ತೇನೆ.

೧೯ ಹೊಲದಲ್ಲಿ ನಿನ್ನ ಪೈರನ್ನು ಕೊಯ್ಯುವಾಗ, ಹೊಲದಲ್ಲಿ ಸೂಡನ್ನು ಮರತು ಬಿಟ್ಟಿರೆ, ಅದನ್ನು ತಕ್ಕೊಳ್ಳುವದಕ್ಕೆ ತಿರುಗಿ ಕೊಳ್ಳ ಬೇಡ; ನಿನ್ನ ದೇವರಾದ ಕರ್ತನು ನಿನ್ನ ಎಲ್ಲಾ ಕೈ ಕೆಲಸದಲ್ಲಿ ನಿನ್ನನ್ನು ಆಶೀರ್ವದಿಸುವ ಹಾಗೆ, ಅದು ಪರನಿಗೂ, ದಿ
೨೦ ಕ್ಕಿಲ್ಲದವನಿಗೂ, ವೆಧವೆಗೂ ಇರಲಿ. ನಿನ್ನ ಇಪ್ಪೆಗಳನ್ನು ಬಡೆದರೆ, ಮಿಕ್ಕದ್ದನ್ನು ಆರಿಸ ಬೇಡ; ಅದು ಪರನಿಗೂ, ದಿಕ್ಕಿಲ್ಲದವನಿ
೨೧ ಗೂ, ವೆಧವೆಗೂ ಇರಲಿ. ನಿನ್ನ ದ್ರಾಕ್ಷೇ ತೋಟದಲ್ಲಿ ಕೊಯಿದರೆ, ಮಿಕ್ಕದ್ದನ್ನು ಆರಿಸ ಬೇಡ; ಅದು ಪರನಿಗೂ, ದಿಕ್ಕಿಲ್ಲದವನಿ
೨೨ ಗೂ, ವೆಧವೆಗೂ ಇರಲಿ. ನೀನು ಐಗುಪ್ತ ದೇಶದಲ್ಲಿ ದಾಸನಾಗಿದ್ದಿ ಎಂದು, ಜ್ಞಾಪಕ ಮಾಡಿ ಕೊಳ್ಳ ಬೇಕು; ಆದದರಿಂದ ಈ ಕಾರ್ಯವನ್ನು ಮಾಡ ಬೇಕೆಂದು, ನಾನು ನಿನಗೆ ಆಜ್ಞಾಪಿಸುತ್ತೇನೆ.

## ೨೫. ಸಂಧಿ.

೧ ಜನರಿಗೆ ವ್ಯವಹಾರವಿರಲಾಗಿ, ಅವರು ನ್ಯಾಯ ತೀರ್ಪಿಕೆ ಹೊಂದುವ ಹಾಗೆ ನ್ಯಾಯಕ್ಕೆ ಬಂದರೆ, ನೀತಿವಂತನನ್ನು ನೀತಿವಂತನೆಂ
೨ ದೂ, ದುಷ್ಟನನ್ನು ದುಷ್ಟನೆಂದೂ, ತೀರಿಸ ಬೇಕು. ಇದಲ್ಲದೆ ಆ ದುಷ್ಟನು ಹೊಡೆಯಲ್ಪಡತಕ್ಕವನಾದರೆ, ನ್ಯಾಯಾಧಿಪತಿಯು

ಅವನನ್ನು ನೆಲಕ್ಕೆ ಬೀಳಿಸಿ, ಅವನ ದುಷ್ಟತ್ವದ ಪ್ರಕಾರ ಅವನಿಗೆ
೩ ಲೆಪ್ಪದಿಂದ ಹೊಡಿಸ ಬೇಕು. ನಾಲ್ವತ್ತು ಬೆಪ್ಪೆ ಅವನಿಗೆ ಹೊಡಿಸ
ಬಹುದು; ಹೆಚ್ಚಲ್ಲ; ಇದಕ್ಕಿಂತ ಹೆಚ್ಚು ಅವನಿಗೆ ಬಹಳ ಬೆಪ್ಪೆಗ
ಳನ್ನು ಹೊಡೆದರೆ, ನಿನ್ನ ಸಹೋದರನು ನಿನ್ನ ಕಣ್ಣುಗಳಿಗೆ ನೀಚ
ನೆಂದು ಕಾಣಿಸ್ಯಾನು.

೪ ಕಣ ತುಳಿಯುವಾಗ, ಎತ್ತಿನ ಬಾಯಿ ಕಟ್ಟ ಬೇಡ.

೫ ಸಹೋದರರು ಕೂಡ ವಾಸ ಮಾಡುವಾಗ, ಅವರಲ್ಲಿ ಒಬ್ಬನು
ಮಕ್ಕಳಿಲ್ಲದೆ ಸತ್ತರೆ, ಆ ಸತ್ತವನ ಹೆಂಡತಿ ಮನೆ ಬಿಟ್ಟು, ಅನ್ಯನ
ಹೆಂಡತಿಯಾಗ ಬಾರದು; ಗಂಡನ ಸಹೋದರನು ಅವಳ ಬಳಿಗೆ
ಬಂದು, ಅವಳನ್ನು ಹೆಂಡತಿಯಾಗಿ ತಕ್ಕೊಂಡು, ಗಂಡನ ಸಹೋ
೬ ದರನಿಗೆ ತಕ್ಕ ಹಾಗೆ ಅವಳಿಗೆ ನಡಿಸ ಬೇಕು. ಆಗ ಅವಳು ಹೆ
ರುವ ಹೊಚ್ಚಲ ಮಗನು ಸತ್ತವನಾದ ಅವನ ಸಹೋದರನ ಹೆಸ
ರಿಗೆ, ಇವನ ಹೆಸರು ಇಸ್ರಯೇಲಿನಲ್ಲಿಂದ ಅಳಿಸಲ್ಪಡದ ಹಾಗೆ,
೭ ನಿಲ್ಲ ಬೇಕು. ಆದರೆ ಆ ಮನುಷ್ಯನು ತನ್ನ ಅತ್ತಿಗೆಯನ್ನು ತ
ಕ್ಕೊಳ್ಳ ಮನಸ್ಸಿಲ್ಲದಿದ್ದರೆ, ಅತ್ತಿಗೆಯು ಬಾಗಿಲಿನ ಬಳಿಗೆ ಹಿರಿ
ಯರ ಹತ್ತರ ಬಂದು, ಹೇಳ ತಕ್ಕದ್ದೇನಂದರೆ—ನನ್ನ ಗಂಡನ ಸ
ಹೋದರನು ತನ್ನ ಸಹೋದರನಿಗೆ ಇಸ್ರಯೇಲಿನಲ್ಲಿ ಹೆಸರನ್ನು
ಎಬ್ಬಿಸ ಮನಸ್ಸಿಲ್ಲದೆ, ನನಗೆ ಗಂಡನ ಸಹೋದರನಾಗಿ ನಡಿಸ
೮ ಮನಸ್ಸಿಲ್ಲದೆ ಇದ್ದಾನೆ. ಆಗ ಅವನ ಪಟ್ಟಣದ ಹಿರಿಯರು ಅವನ
ನ್ನು ಕರೆದು, ಅವನ ಸಂಗಡ ಮಾತಾಡ ಬೇಕು; ಅವನು ನಿಂತು
ಕೊಂಡು, ಅವಳನ್ನು ತಕ್ಕೊಳ್ಳವದಕ್ಕೆ ನನಗೆ ಮನಸ್ಸಿಲ್ಲವೆಂದು
೯ ಹೇಳಿದರೆ, ಅವನ ಅತ್ತಿಗೆ ಹಿರಿಯರ ಮುಂದೆ ಅವನ ಬಳಿಗೆ ಬಂ
ದು, ಕೆರವನ್ನು ಅವನ ಪಾದದಿಂದ ಬಿಡಿಸಿ, ಅವನ ಮುಖದಲ್ಲಿ ಉ
ಗುಳಿ, ಉತ್ತರ ಕೊಟ್ಟು, ಹೇಳ ತಕ್ಕದ್ದೇನಂದರೆ—ತನ್ನ ಸಹೋ
೧೦ ದರನ ಮನೆಯನ್ನು ಕಟ್ಟದವನಿಗೆ ಹೀಗೆಯೇ ಮಾಡ ಬೇಕು. ಆ
ಮೇಲೆ ಅವನಿಗೆ ಇಸ್ರಯೇಲಿನಲ್ಲಿ ಕೆರ ಬಿಡಿಸಿ ಕೊಂಡವನ ಮನೆ
ಎಂದು ಹೆಸರಾಗ ಬೇಕು.

೧೧ ಇಬ್ಬರು ಮನುಷ್ಯರು ಒಬ್ಬನ ಸಂಗಡ ಒಬ್ಬನು ಹೋರಾಡು
ವಾಗ, ಒಬ್ಬನ ಹೆಂಡತಿ ತನ್ನ ಗಂಡನನ್ನು ಹೊಡೆಯುವವನ ಕೈ
ಯಿಂದ ಬಿಡಿಸುವದಕ್ಕೆ ಸಮೀಪ ಬಂದು, ಕೈ ಚಾಚಿ, ಅವನ ಮಾ
೧೨ ನಸ್ಥಾನವನ್ನು ಹಿಡಿದರೆ, ಅವಳ ಕೈಯನ್ನು ಕಡಿದು ಹಾಕ ಬೇಕು;
ನಿನ್ನ ಕಣ್ಣು ಕರುಣಿಸ ಬಾರದು.

೧೩ ನಿನ್ನ ಚೀಲದಲ್ಲಿ, ದೊಡ್ಡದು ಒಂದು, ಸಣ್ಣದು ಒಂದು, ಎರಡು
೧೪ ತೂಕಗಳು ನಿನಗಿರ ಬಾರದು. ನಿನ್ನ ಮನೆಯಲ್ಲಿ, ದೊಡ್ಡದು ಒಂ
೧೫ ದು, ಸಣ್ಣದು ಒಂದು, ಎರಡು ಅಳತೆಗಳು ನಿನಗಿರ ಬಾರದು. ಸಂ
ಪೂರ್ಣವಾದ ನೀತಿಯಾದ ತೂಕ ನಿನಗಿರ ಬೇಕು; ಸಂಪೂರ್ಣ
ವಾದ ನೀತಿಯಾದ ಅಳತೆ ನಿನಗಿರ ಬೇಕು; ಆಗ ನಿನ್ನ ದೇವರಾ
ದ ಕರ್ತನು ನಿನಗೆ ಕೊಡುವ ಭೂಮಿಯ ಮೇಲೆ ನಿನ್ನ ದಿನಗಳು
೧೬ ಹೆಚ್ಚಾಗುವವು. ಯಾಕಂದರೆ ಅಂಥವುಗಳನ್ನು ಮಾಡುವವರೆಲ್ಲ
ರೂ ಅನ್ಯಾಯ ಮಾಡುವವರೆಲ್ಲರೂ ನಿನ್ನ ದೇವರಾದ ಕರ್ತನಿ
ಗೆ ಅಸಹ್ಯ.

೧೭ ನೀವು ಐಗುಪ್ತವನ್ನು ಬಿಟ್ಟು ಬರುವ ಮಾರ್ಗದಲ್ಲಿ ಅಮಲೇ
೧೮ ಕನು ನಿನಗೆ ಮಾಡಿದ್ದನ್ನು ಜ್ಞಾಪಕ ಮಾಡಿಕೋ. ಅವನು ಮಾ
ರ್ಗದಲ್ಲಿ ನಿನಗೆ ಎದುರುಗೊಂಡು, ದೇವರಿಗೆ ಭಯ ಪಡದೆ, ನೀನು
ಆಯಾಸವುಳ್ಳವನೂ ದಣಿದವನೂ ಆಗಿರುವ ಸಮಯದಲ್ಲಿ ನಿ
ನ್ನ ಹಿಂದೆ ಬಿದ್ದ ಬಲಹೀನರೆಲ್ಲರನ್ನು ನಿನ್ನ ಹಿಂಭಾಗದಲ್ಲಿ ಸಂಹಾ
೧೯ ರ ಮಾಡಿದನು. ಆದದರಿಂದ ನಿನ್ನ ದೇವರಾದ ಕರ್ತನು ನಿನಗೆ
ವಶ ಮಾಡಿ ಕೊಳ್ಳುವದಕ್ಕೆ ಸ್ವಾಸ್ತ್ಯವಾಗಿ ಕೊಡುವ ದೇಶದಲ್ಲಿ
ಸುತ್ತಲಾಗಿರುವ ಶತ್ರುಗಳಿಂದ ನಿನ್ನ ದೇವರಾದ ಕರ್ತನು ನಿನ್ನ
ನ್ನು ಬಿಡಿಸಿ, ವಿಶ್ರಾಂತಿ ಕೊಟ್ಟ ಮೇಲೆ, ಅಮಲೇಕನ ಜ್ಞಾಪಕವ
ನ್ನು ಆಕಾಶದ ಕೆಳಗಿಂದ ಅಳಿಸಿ ಬಿಡ ಬೇಕು; ಇದನ್ನು ಮರೆಯ
ಬೇಡ.

## ೨೬. ಸಂಧಿ.

೧ ಇದಲ್ಲದೆ ನಿನ್ನ ದೇವರಾದ ಕರ್ತನು ನಿನಗೆ ಸಾಸ್ತ್ಯವಾಗಿ ಕೊ
ಡುವ ದೇಶಕ್ಕೆ ನೀನು ಬಂದು ಅದನ್ನು ಸ್ವತಂತ್ರಿಸಿ ಕೊಂಡು, ಅ
೨ ದರಲ್ಲಿ ವಾಸ ಮಾಡುವಾಗ, ನಿನ್ನ ದೇವರಾದ ಕರ್ತನು ನಿನಗೆ
ಕೊಡುವ ನಿನ್ನ ದೇಶದಿಂದ ನೀನು ತರ ತಕ್ಕ ಎಲ್ಲಾ ಭೂಮಿಯ
ಹುಟ್ಟುವಳ್ಳಿಯ ಪ್ರಥಮ ಫಲವನ್ನು ತಕ್ಕೊಂಡು, ಪುಟ್ಟಿಯಲ್ಲಿಟ್ಟು,
ನಿನ್ನ ದೇವರಾದ ಕರ್ತನು ತನ್ನ ಹೆಸರನ್ನು ಇರಿಸುವದಕ್ಕೆ ಆದು
ಕೊಳ್ಳುವ ಸ್ಥಳಕ್ಕೆ ಹೋಗ ಬೇಕು. ಅಲ್ಲಿ ಆ ಕಾಲದಲ್ಲಿರುವ
೩ ಯಾಜಕನ ಬಳಿಗೆ ಹೋಗಿ, ಅವನಿಗೆ ಹೇಳ ತಕ್ಕದ್ದೇನಂದರೆ—
ಕರ್ತನು ನಮ್ಮ ಪಿತೃಗಳಿಗೆ, ಕೊಡುತ್ತೇನೆಂದು ಪ್ರಮಾಣ ಮಾ
ಡಿದ ದೇಶದಲ್ಲಿ ನಾನು ಶೇರಿದ್ದೇನೆಂದು, ಈ ಹೊತ್ತು ನಿನ್ನ ದೇವರಾ
೪ ದ ಕರ್ತನಿಗೆ ಅರಿಕೆ ಮಾಡುತ್ತೇನೆ. ಆಗ ಯಾಜಕನು ಪುಟ್ಟಿಯ
ನ್ನು ನಿನ್ನ ಕೈಯಿಂದ ತೆಗೆದು, ನಿನ್ನ ದೇವರಾದ ಕರ್ತನ ಬಲಿ
ಪೀಠದ ಮುಂದೆ ಇಡ ಬೇಕು.

೫ ಆ ಮೇಲೆ ನೀನು ಉತ್ತರ ಕೊಟ್ಟು, ನಿನ್ನ ದೇವರಾದ ಕರ್ತನ
ಮುಂದೆ ಹೇಳ ತಕ್ಕದ್ದೇನಂದರೆ—ನನ್ನ ತಂದೆ ನಾಶವಾಗುವ ಅರಾ
ಮ್ಯನಾಗಿ ಐಗುಪ್ತಕ್ಕೆ ಇಳಿದು ಹೋಗಿ, ಅಲ್ಲಿ ಸ್ವಲ್ಪ ಮಂದಿಯ
ಸಂಗಡ ಪರವಾಸವಾಗಿದ್ದು, ಅಲ್ಲಿ ಕೊಡ್ಡದಾದ, ಬಲಿಷ್ಠವಾದ,
೬ ಅಧಿಕವಾದ ಜನಾಂಗವಾದನು. ಆದರೆ ಐಗುಪ್ತ್ಯರು ನಮಗೆ ಕೇಡ
ನ್ನು ಮಾಡಿ, ನಮ್ಮನ್ನು ಕುಂದಿಸಿ, ಕಠಿಣವಾದ ಸೇವೆಯನ್ನು ನ
೭ ಮ್ಮ ಮೇಲೆ ಇಟ್ಟರು. ಆಗ ನಾವು ನಮ್ಮ ಪಿತೃಗಳ ದೇವರಾದ
ಕರ್ತನ ಕಡೆಗೆ ಕೂಗಿದೆವು; ಕರ್ತನು ನಮ್ಮ ಶಬ್ದವನ್ನು ಕೇಳಿ,
ನಮ್ಮ ದೀನ ಸ್ಥಿತಿಯನ್ನೂ ಕಾಟವನ್ನೂ ಬಾಧೆಯನ್ನೂ ನೋಡಿ
೮ ದನು. ಆದದರಿಂದ ಕರ್ತನು ನಮ್ಮನ್ನು ಬಲವಾದ ಕೈಯಿಂದಲೂ,
ಚಾಚಿದ ತೋಳಿನಿಂದಲೂ, ಮಹಾ ಭಯದಿಂದಲೂ, ಗುರುತು ಗ
ಳಿಂದಲೂ, ಲಕ್ಷಣಗಳಿಂದಲೂ, ಐಗುಪ್ತದಿಂದ ಹೊರಗೆ ಬರ ಮಾ
೯ ಡಿ, ನಮ್ಮನ್ನು ಈ ಸ್ಥಳಕ್ಕೆ ಕರಕೊಂಡು ಬಂದು, ಹಾಲೂ ಜೇನೂ
ಹರಿಯುವ ದೇಶವಾಗಿರುವ ಈ ದೇಶವನ್ನು ನಮಗೆ ಕೊಟ್ಟಿದ್ದಾನೆ.
ಹೀಗಿರುವದರಿಂದ, ಇಗೋ, ಕರ್ತನೇ, ನೀನು ನನಗೆ ಕೊಟ್ಟ
ಭೂಮಿಯ ಪ್ರಥಮ ಫಲವನ್ನು ತಂದಿದ್ದೇನೆ.

೧೦ ಆಗ ಅದನ್ನು ನಿನ್ನ ದೇವರಾದ ಕರ್ತನ ಮುಂದೆ ಇಟ್ಟು, ನಿ
೧೧ ನ್ನ ದೇವರಾದ ಕರ್ತನ ಮುಂದೆ ಅಡ್ಡ ಬೀಳ ಬೇಕು. ಮತ್ತು ನಿನ್ನ
ದೇವರಾದ ಕರ್ತನು ನಿನಗೂ ನಿನ್ನ ಮನೆಗೂ ಕೊಡುವ ಎಲ್ಲಾ
ಒಳ್ಳೇ ವಸ್ತುಗಳಲ್ಲಿ ನೀನೂ ಲೇವ್ಯನೂ ನಿನ್ನ ಸಂಗಡ ಇರುವ
ಪರವಾಸಿಯೂ ಸಂತೋಷ ಪಡ ಬೇಕು.

೧೨ ಹತ್ತನೇ ಪಾಲನ್ನು ಕೊಡುವ ವರುಷವಾಗಿರುವ ಮೂರನೇ
ವರುಷದಲ್ಲಿ ನೀನು ನಿನ್ನ ಎಲ್ಲಾ ಹುಟ್ಟುವಳ್ಳಿಯ ಹತ್ತನೇ ಪಾಲ



ನ್ನು ಕೊಟ್ಟು, ತೀರಿಸಿದ ಮೇಲೆ, ಲೇವ್ಯನಿಗೂ, ಪರವಾಸಿಗೂ,
ದಿಕ್ಕಿಲ್ಲದವನಿಗೂ, ವೆಧವೆಗೂ ಕೊಡ ಬೇಕು; ಅವರು ನಿನ್ನ ಬಾ
೧೩ ಗಲುಗಳಲ್ಲಿ ಉಂಡು, ತೃಪ್ತಿ ಹೊಂದಲಿ. ಆಗ ನೀನು ನಿನ್ನ ದೇವ
ರಾದ ಕರ್ತನ ಮುಂದೆ ಹೇಳ ತಕ್ಕದ್ದೇನಂದರೆ—ನಾನು ಪರಿಶುದ್ಧ
ವಾದದ್ದನ್ನು ನನ್ನ ಮನೆಯೊಳಗಿಂದ ತಕ್ಕೊಂಡು, ನೀನು ನನಗೆ
ಆಜ್ಞಾಪಿಸಿದ ಹಾಗೆಯೇ ಲೇವ್ಯನಿಗೂ ಪರವಾಸಿಗೂ, ದಿಕ್ಕಿಲ್ಲದ
ವನಿಗೂ, ವೆಧವೆಗೂ ಕೊಟ್ಟಿದ್ದೇನೆ; ನಿನ್ನ ಅಜ್ಞೆಗಳನ್ನು ಮೀರ
೧೪ ಲಿಲ್ಲ, ಮರೆಯಲಿಲ್ಲ. ದುಃಖದಲ್ಲಿರುವಾಗ, ಅದರಿಂದ ಉಣ್ಣಲಿಲ್ಲ;
ಅದರಿಂದ ತಕ್ಕೊಂಡು, ಅಶುದ್ಧವಾದದರಲ್ಲಿ ಕಲಿಸಲಿಲ್ಲ; ಅದರಿಂದ
ಏನೂ ಸತ್ತಪಿಗೋಸ್ಕರ ಕೊಡಲಿಲ್ಲ; ನನ್ನ ದೇವರಾದ ಕರ್ತನ
ಮಾತನ್ನು ಕೇಳಿದ್ದೇನೆ; ನೀನು ನನಗೆ ಆಜ್ಞಾಪಿಸಿದ್ದೆಲ್ಲದರ ಪ್ರಕಾ
೧೫ರ ಮಾಡಿದ್ದೇನೆ. ಆಕಾಶದೊಳಗಿಂದ, ನಿನ್ನ ಪರಿಶುದ್ಧ ನಿವಾಸದೊ
ಳಗಿಂದ, ಕಣ್ಣಿಡು; ನಿನ್ನ ಜನರಾದ ಇಸ್ರಯೇಲನ್ನೂ, ನೀನು ನ
ಮ್ಮ ಪಿತೃಗಳಿಗೆ ಪ್ರಮಾಣ ಮಾಡಿದ ಪ್ರಕಾರ ನಮಗೆ ಕೊಟ್ಟಿಂ
ಥ, ಹಾಲು ಜೇನು ಹರಿಯುವ ದೇಶವಾಗಿರುವಂಥ ದೇಶವನ್ನೂ
ಆಶೀರ್ವದಿಸು.

೧೬ ಈ ನೇಮ ನ್ಯಾಯಗಳನ್ನು ಮಾಡ ಬೇಕೆಂದು, ನಿನ್ನ ದೇವ
ರಾದ ಕರ್ತನು ಈ ಹೊತ್ತು ನಿನಗೆ ಆಜ್ಞಾಪಿಸುತ್ತಾನೆ; ಆದದರಿಂದ
ನಿನ್ನ ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ
೧೭ ಕಾಪಾಡಿ, ಮಾಡ ಬೇಕು. ನೀನು ಈ ಹೊತ್ತು ಕರ್ತನಿಗೆ, ಅವ
ನು ನಿನಗೆ ದೇವರಾಗ ಬೇಕೆಂದೂ, ಅವನ ಮಾರ್ಗಗಳಲ್ಲಿ ನಡೆದು,
ಅವನ ನೇಮ, ಅಜ್ಞೆ, ನ್ಯಾಯಗಳನ್ನು ಕಾಪಾಡಿ, ಅವನ ಶಬ್ದ
೧೮ ಕೇಳುತ್ತೇನೆಂದೂ, ದೃಢವಾಗಿ ಹೇಳಿದಿ. ಕರ್ತನು ಈ ಹೊತ್ತು
ನಿನಗೆ, ತಾನು ನಿನಗೆ ಹೇಳಿದಂತೆ, ನೀನು ಅವನಿಗೆ ಸ್ವಂತ ಜನವಾ
ಗ ಬೇಕೆಂದೂ, ಅವನ ಎಲ್ಲಾ ಅಜ್ಞೆಗಳನ್ನು ಕಾಪಾಡ ಬೇಕೆಂದೂ,
೧೯ ಅವನು ಮಾಡಿದ ಎಲ್ಲಾ ಜನಾಂಗಗಳ ಮೇಲೆ ಸ್ತೋತ್ರದಲ್ಲಿ
ಯೂ ಹೆಸರಿನಲ್ಲಿಯೂ ಸೌಂದರ್ಯದಲ್ಲಿಯೂ ನೀನು ಉನ್ನ
ತವಾಗ ಬೇಕೆಂದೂ, ನೀನು ನಿನ್ನ ದೇವರಾದ ಕರ್ತನಿಗೆ ಅವ
ನು ಹೇಳಿದಂತೆ ಪರಿಶುದ್ಧ ಜನವಾಗ ಬೇಕೆಂದೂ, ದೃಢವಾಗಿ ಹೇ
ಳಿದ್ದಾನೆ.

## ೨೭. ಸಂಧಿ.

೧ ಇದಲ್ಲದೆ ಮೋಶೆ ಇಸ್ರಯೇಲಿನ ಹಿರಿಯರ ಸಂಗಡ ಜನರಿಗೆ
ಆಜ್ಞಾಪಿಸಿದ್ದೇನಂದರೆ—ನಾನು ನಿಮಗೆ ಈ ಹೊತ್ತು ಆಜ್ಞಾಪಿಸುವ
೨ ಅಜ್ಞೆಯನ್ನೆಲ್ಲಾ ಕಾಪಾಡ ಬೇಕು. ನೀವು ಯೊರ್ದನನ್ನು ದಾ
ಟಿ, ನಿನ್ನ ದೇವರಾದ ಕರ್ತನು ನಿನಗೆ ಕೊಡುವ ದೇಶಕ್ಕೆ ಬರುವ
ದಿವಸದಲ್ಲಿ, ದೊಡ್ಡ ಕಲ್ಲುಗಳನ್ನು ನಿಲ್ಲಿಸಿ, ಅವುಗಳಿಗೆ ಸುಣ್ಣ
೩ ಹಚ್ಚಿ, ನೀನು ದಾಟಿ ಹೋದ ಮೇಲೆ ನಿನ್ನ ಪಿತೃಗಳ ದೇವರಾದ
ಕರ್ತನು ನಿನಗೆ ಹೇಳಿದ ಪ್ರಕಾರ, ನಿನ್ನ ದೇವರಾದ ಕರ್ತನು ನಿ
ನಗೆ ಕೊಡುವಂಥ, ಹಾಲೂ ಜೇನೂ ಹರಿಯುವಂಥ ದೇಶಕ್ಕೆ
ನೀನು ಬರುವ ಹಾಗೆ, ಅವುಗಳ ಮೇಲೆ ಈ ನ್ಯಾಯಪ್ರಮಾಣ
೪ ದ ಮಾತುಗಳನ್ನೆಲ್ಲಾ ಬರೆಯ ಬೇಕು. ಆದದರಿಂದ ನೀವು
ಯೊರ್ದನನ್ನು ದಾಟಿದ ಮೇಲೆ, ನಾನು ಈ ಹೊತ್ತು ನಿಮಗೆ ಆ
ಜ್ಞಾಪಿಸುವ ಕಲ್ಲುಗಳನ್ನು ಏಬಲ್ ಬೆಟ್ಟದಲ್ಲಿ ನಿಲ್ಲಿಸಿ, ಅವುಗಳಿಗೆ
೫ ಸುಣ್ಣ ಹಚ್ಚ ಬೇಕು. ಅಲ್ಲಿ ನಿನ್ನ ದೇವರಾದ ಕರ್ತನಿಗೆ ಬಲಿಪೀ
ಠವನ್ನು ಕಟ್ಟ ಬೇಕು; ಕಲ್ಲಿನ ಬಲಿಪೀಠವನ್ನೇ ಆ ಕಲ್ಲುಗಳಿಗೆ ಕ
೬ ಬ್ಬಿಣವನ್ನು ತಗಲಿಸ ಬೇಡ. ನಿನ್ನ ದೇವರಾದ ಕರ್ತನ ಬಲಿಪೀಠ
ವನ್ನು ಹುಟ್ಟು ಕಲ್ಲುಗಳಿಂದ ಕಟ್ಟ ಬೇಕು; ಅದರ ಮೇಲೆ ನಿನ್ನ ದೇ
೭ ವರಾದ ಕರ್ತನಿಗೆ ಹೋಮಗಳನ್ನು ಅರ್ಪಿಸ ಬೇಕು. ಮತ್ತು
ಸಮಾಧಾನದ ಬಲಿಗಳನ್ನು ಅರ್ಪಿಸಿ, ಅಲ್ಲಿ ಉಂಡು, ನಿನ್ನ ದೇವ
೮ ರಾದ ಕರ್ತನ ಮುಂದೆ ಸಂತೋಷ ಪಡ ಬೇಕು. ಇದಲ್ಲದೆ ಆ
ಕಲ್ಲುಗಳಲ್ಲಿ ಈ ನ್ಯಾಯಪ್ರಮಾಣದ ಮಾತುಗಳನ್ನೆಲ್ಲಾ ಬರೆ
ಯ ಬೇಕು; ಚನಾಗಿ ಕೆತ್ತ ಬೇಕು.

೯ ಆಗ ಮೋಶೆಯೂ ಲೇವ್ಯರಾದ ಯಾಜಕರೂ ಸಮಸ್ತ ಇಸ್ರ
ಯೇಲಿನ ಸಂಗಡ ಮಾತಾಡಿ, ಹೇಳಿದ್ದೇನಂದರೆ—ಇಸ್ರಯೇಲೇ,
ಸುಮ್ಮನಿದ್ದು, ಕೇಳು—ಈ ಹೊತ್ತು ನಿನ್ನ ದೇವರಾದ ಕರ್ತನಿಗೆ
೧೦ ಜನವಾದಿ. ಹೀಗಿರುವದರಿಂದ ನಿನ್ನ ದೇವರಾದ ಕರ್ತನ ಮಾತ
ನ್ನು ಕೇಳಿ, ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಅವನ ಅ
ಜ್ಞೆಗಳನ್ನೂ ನೇಮಗಳನ್ನೂ ಕೈಕೊ.

೧೧ ಇದಲ್ಲದೆ ಮೋಶೆ ಅದೇ ದಿವಸದಲ್ಲಿ ಜನರಿಗೆ ಆಜ್ಞಾಪಿಸಿದ್ದೇನಂ
೧೨ ದರೆ—ನೀವು ಯೊರ್ದನನ್ನು ದಾಟಿದ ಮೇಲೆ ಜನರನ್ನು ಆಶೀ
ರ್ವದಿಸುವದಕ್ಕೆ ಗೆರಿಜ್ಜಿಮ್ ಬೆಟ್ಟದಲ್ಲಿ ನಿಲ್ಲ ತಕ್ಕವ್ಯಾರಂದರೆ—ಸಿ
ಮೆಯೋನ್, ಲೇವಿ, ಯೆಹೂದ, ಇಸ್ಸಾಕಾರ್, ಯೋಸೆಫ್, ಬೆನ್ಯ
೧೩ ಮೀನ್. ಮತ್ತು ಶಪಿಸುವದಕ್ಕೆ ಏಬಲ್ ಬೆಟ್ಟದಲ್ಲಿ ನಿಲ್ಲ ತಕ್ಕವ್ಯಾ
ರಂದರೆ—ರೂಬೆನ್, ಗಾದ್, ಆಶೇರ್, ಜೆಬುಲೋನ್, ದಾನ್, ನೆಫ್ತಲಿ.
೧೪ ಆಗ ಲೇವ್ಯರು ಉತ್ತರ ಕೊಟ್ಟು, ಇಸ್ರಯೇಲ್ ಜನರೆಲ್ಲರಿಗೆ ಉ
ನ್ನತ ಶಬ್ದದಿಂದ ಹೇಳ ಬೇಕಾದ್ದೇನಂದರೆ—

೧೫ ಕರ್ತನಿಗೆ ಅಸಹ್ಯವಾಗಿರುವ ವಿಗ್ರಹವನ್ನಾಗಲಿ, ಎರಕ ಹೊ
ಯಿದದ್ದನ್ನಾಗಲಿ, ಮಾಡಿ ಕೊಂಡು, ಕಂಚಾಳನ ಕೈಯಿಂದ ಮಾ
ಡಿಸಿ, ಅಂತರಂಗದಲ್ಲಿ ನಿಲ್ಲಿಸುವವನಿಗೆ ಶಾಪ. ಜನವೆಲ್ಲಾ ಉತ್ತ
ರ ಕೊಟ್ಟು, ಆಮೆನ್, ಎಂದು ಹೇಳಿರಿ. ತನ್ನ ತಂದೆ ತಾಯಿಗಳ
ನ್ನು ತಾತ್ಸಾರ ಮಾಡುವವನಿಗೆ ಶಾಪ. ಜನವೆಲ್ಲಾ, ಆಮೆನ್, ಎಂ
೧೭ ದು ಹೇಳಿರಿ. ನೆರೆಯವನ ಮೇರೆ ತಪ್ಪಿಸುವವನಿಗೆ ಶಾಪ. ಜನವೆ
ಲ್ಲಾ, ಆಮೆನ್, ಎಂದು ಹೇಳಿರಿ. ಕುರುಡನನ್ನು ದಾರಿ ತಪ್ಪಿಸುವ
೧೮ ವನಿಗೆ ಶಾಪ. ಜನವೆಲ್ಲಾ, ಆಮೆನ್, ಎಂದು ಹೇಳಿರಿ. ಪರವಾಸಿಗೂ,
ದಿಕ್ಕಿಲ್ಲದವನಿಗೂ, ವೆಧವೆಗೂ, ನ್ಯಾಯ ತಪ್ಪಿಸುವವನಿಗೂ ಶಾ
೧೯ ಪ. ಜನವೆಲ್ಲಾ, ಆಮೆನ್, ಎಂದು ಹೇಳಿರಿ. ತನ್ನ ತಂದೆಯ ಹೆಂಡ
ತಿಯ ಸಂಗಡ ಮಲಗಿ, ತನ್ನ ತಂದೆಯ ವಸ್ತ್ರದ ಕರಗನ್ನು ತೆಕೆ
೨೦ದವನಿಗೆ ಶಾಪ. ಜನವೆಲ್ಲಾ, ಆಮೆನ್, ಎಂದು ಹೇಳಿರಿ. ಯಾವ
ದೊಂದು ಪಶುವಿನ ಸಂಗಡ ಮಲಗುವವನಿಗೆ ಶಾಪ. ಜನವೆಲ್ಲಾ,
೨೧ ಆಮೆನ್, ಎಂದು ಹೇಳಿರಿ. ತನ್ನ ತಂದೆಗಾಗಲಿ, ತಾಯಿಗಾಗಲಿ,
ಮಗಳಾಗಿರುವ ಸಹೋದರಿಯ ಸಂಗಡ ಮಲಗುವವನಿಗೆ ಶಾಪ.
೨೨ ಜನವೆಲ್ಲಾ, ಆಮೆನ್, ಎಂದು ಹೇಳಿರಿ. ತನ್ನ ಅತ್ತೆಯ ಸಂಗಡ
ಮಲಗುವವನಿಗೆ ಶಾಪ. ಜನವೆಲ್ಲಾ, ಆಮೆನ್, ಎಂದು ಹೇಳಿರಿ.
೨೩ ತನ್ನ ನೆರೆಯವನನ್ನು ಅಂತರಂಗದಲ್ಲಿ ಹೊಡೆಯುವವನಿಗೆ ಶಾ
೨೪ ಪ. ಜನವೆಲ್ಲಾ, ಆಮೆನ್, ಎಂದು ಹೇಳಿರಿ. ಅಪರಾಧವಿಲ್ಲದ ಪ್ರಾ
ಣವನ್ನು ಕೊಲ್ಲುವ ಹಾಗೆ, ಲಂಚ ತೆಗೆದು ಕೊಳ್ಳುವವನಿಗೆ
ಶಾಪ. ಜನವೆಲ್ಲಾ, ಆಮೆನ್, ಎಂದು ಹೇಳಿರಿ. ಈ ನ್ಯಾಯಪ್ರ
೨೬ ಮಾಣದ ಮಾತುಗಳನ್ನು ಸ್ಥಾಪಿಸದೆ, ಮಾಡದೆ ಇರುವವನಿಗೆ
ಶಾಪ. ಜನವೆಲ್ಲಾ, ಆಮೆನ್, ಎಂದು ಹೇಳಿರಿ.

## ೨೮. ಸಂಧಿ.

೧ ಇದಲ್ಲದೆ ನೀನು ನಿನ್ನ ದೇವರಾದ ಕರ್ತನ ಮಾತನ್ನು ಕೇಳೇ
ಕೇಳಿ, ನಾನು ಈ ಹೊತ್ತು ನಿನಗೆ ಅಜ್ಞಾಪಿಸುವ ಅವನ ಎಲ್ಲಾ
ಆಜ್ಞೆಗಳನ್ನು ಕಾಪಾಡಿ, ಮಾಡಿದರೆ, ನಿನ್ನ ದೇವರಾದ ಕರ್ತನು
ನಿನ್ನನ್ನು ಭೂಮಿಯ ಎಲ್ಲಾ ಜನಾಂಗಗಳಿಗಿಂತ ಉನ್ನತ ಮಾ
೨ ಡುವನು. ನೀನು ನಿನ್ನ ದೇವರಾದ ಕರ್ತನ ಮಾತನ್ನು ಕೇಳಿದ
ರೆ, ಈ ಎಲ್ಲಾ ಆಶೀರ್ವಾದಗಳು ನಿನ್ನ ಮೇಲೆ ಬಂದು, ನಿನಗೆ ಪ್ರಾ
೩ ಪ್ತವಾಗುವವು. ಪಟ್ಟಣದಲ್ಲಿ ನಿನಗೆ ಆಶೀರ್ವಾದ; ಹೊಲದಲ್ಲಿ ನಿನಗೆ
೪ ಆಶೀರ್ವಾದ. ನಿನ್ನ ಗರ್ಭದ ಫಲಕ್ಕೂ, ನಿನ್ನ ಭೂಮಿಯ ಫಲ
ಕ್ಕೂ, ಪಶುಗಳ ಫಲಕ್ಕೂ, ದನಗಳ ಹೆಜ್ಜೆಗೆಗೂ, ಕುರಿಗಳ ಮಂ
೫ ದೆಗಳಿಗೂ, ಆಶೀರ್ವಾದ. ನಿನ್ನ ಪುಟ್ಟಿಗೂ ಕಣಜಕ್ಕೂ ಆಶೀ
೬ ರ್ವಾದ. ಬರುವಾಗ, ನಿನಗೆ ಆಶೀರ್ವಾದ; ಹೊರಡುವಾಗ, ನಿನಗೆ
೭ ಆಶೀರ್ವಾದ. ನಿನಗೆ ವಿರೋಧವಾಗಿ ಏಳುವ ನಿನ್ನ ಶತ್ರುಗಳನ್ನು
ಕರ್ತನು ನಿನ್ನ ಮುಂದೆ ಹೊಡೆದು ಕೊಡುವನು; ಅವರು ಒಂದೇ
ಮಾರ್ಗದಲ್ಲಿ ನಿನಗೆ ವಿರೋಧವಾಗಿ ಹೊರಟು, ಏಳು ಮಾರ್ಗ
೮ ಗಳಲ್ಲಿ ನಿನ್ನ ಮುಂದೆ ಓಡಿ ಹೋಗುವರು. ನಿನ್ನ ಕಣಜಗಳಲ್ಲಿ
ಯೂ, ನೀನು ಕೈ ಹಾಕುವ ಎಲ್ಲಾದರಲ್ಲಿಯೂ, ನಿನಗೆ ಆಶೀ
ರ್ವಾದ ಬರುವ ಹಾಗೆ ಕರ್ತನು ಅಪ್ಪಣೆ ಕೊಡುವನು; ನಿನ್ನ ದೇ
ವರಾದ ಕರ್ತನು ನಿನಗೆ ಕೊಡುವ ಭೂಮಿಯಲ್ಲಿ ನಿನಗೆ ಆಶೀ
೯ ರ್ವಾದ ಕೊಡುವನು. ನೀನು ನಿನ್ನ ದೇವರಾದ ಕರ್ತನ ಆಜ್ಞೆಗ
ಳನ್ನು ಕಾಪಾಡಿ, ಅವನ ಮಾರ್ಗಗಳಲ್ಲಿ ನಡೆದರೆ, ಕರ್ತನು ನಿನ
ಗೆ ಆಣೆ ಇಟ್ಟ ಹಾಗೆ ನಿನ್ನನ್ನು ತನಗೆ ಪರಿಶುದ್ಧ ಜನವಾಗಿ ಸ್ಥಾ
೧೦ ಪಿಸುವನು. ಆಗ ಭೂಮಿಯ ಜನಗಳೆಲ್ಲಾ, ಕರ್ತನ ಹೆಸರು ನಿನ್ನ
೧೧ ಮೇಲೆ ಕರೆದಿರುವದನ್ನು ನೋಡಿ, ನಿನಗೆ ಭಯ ಪಡುವವು. ಇ
ದಲ್ಲದೆ, ನಿನಗೆ ಕೊಡುತ್ತೇನೆಂದು, ನಿನ್ನ ಪಿತೃಗಳಿಗೆ ಆಣೆ ಇಟ್ಟ
ಭೂಮಿಯ ಮೇಲೆ ಕರ್ತನು ನಿನ್ನನ್ನು ಗರ್ಭದ ಫಲವೂ, ಪಶು
ಗಳ ಫಲವೂ, ಭೂಮಿಯ ಫಲವೂ, ಹೊದಲಾದ ಬಳ್ಳೋದರಿಂದ
೧೨ ಸಮೃದ್ಧಿ ಹೊಂದ ಮಾಡುವನು. ಕರ್ತನು ಆಕಾಶವೆಂಬ ತನ್ನ
ಬಳ್ಳೋ ಉಗ್ರಾಣವನ್ನು ನಿನಗೆ ತೆರೆದು, ನಿನ್ನ ಭೂಮಿಗೆ ತಕ್ಕ
ಕಾಲದಲ್ಲಿ ಮಳೆಯನ್ನು ಕೊಟ್ಟು, ನಿನ್ನ ಕೈ ಕೆಲಸವನ್ನೆಲ್ಲಾ ಆ
ಶೀರ್ವದಿಸುವನು; ನೀನು ಸಾಲ ತಕ್ಕೊಳ್ಳದೆ, ಬಹಳ ಜನಾಂಗ
೧೩ ಗಳಿಗೆ ಸಾಲ ಕೊಡುವಿ. ನಾನು ಈ ಹೊತ್ತು ನಿನಗೆ ಆಜ್ಞಾಪಿಸು
ವ ನಿನ್ನ ದೇವರಾದ ಕರ್ತನ ಆಜ್ಞೆಗಳನ್ನು ನೀನು ಕೇಳಿ, ಕಾಪಾ
ಡಿ, ಮಾಡಿದರೆ, ಕರ್ತನು ನಿನ್ನನ್ನು ಬಾಲವಲ್ಲ, ತಲೆ ಮಾಡುವ
೧೪ನು; ನೀನು ಕೆಳಗಲ್ಲ, ಮೇಲೆಯೇ ಇರುವಿ. ಹೀಗಿರುವದರಿಂದ,
ಬೇರೆ ದೇವರುಗಳನ್ನು ಹಿಂಬಾಲಿಸಿ, ಸೇವಿಸುವದಕ್ಕೆ ನಾನು ಈ
ಹೊತ್ತು ನಿನಗೆ ಆಜ್ಞಾಪಿಸುವ ಮಾತುಗಳನ್ನೆಲ್ಲಾ ಬಿಟ್ಟು, ಎಡ
ಕ್ಕಾದರೂ ಬಲಕ್ಕಾದರೂ ತೊಲಗ ಬೇಡ.

೧೫ ಆದರೆ ನೀನು ನಿನ್ನ ದೇವರಾದ ಕರ್ತನ ಮಾತನ್ನು ಕೇಳದೆ,
ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಅವನ ಎಲ್ಲಾ ಆಜ್ಞೆಗಳ
ನ್ನು ಕಾಪಾಡದೆ, ಮಾಡದೆ ಹೋದರೆ, ಈ ಎಲ್ಲಾ ಶಾಪಗಳು ನಿ
೧೬ ನ್ನ ಮೇಲೆ ಬಂದು, ನಿನಗೆ ಪ್ರಾಪ್ತವಾಗುವವು. ಪಟ್ಟಣದಲ್ಲಿ ನಿನಗೆ
೧೭ ಶಾಪ; ಹೊಲದಲ್ಲಿ ನಿನಗೆ ಶಾಪ ನಿನ್ನ ಪುಟ್ಟಿಗೂ, ಕಣಜಕ್ಕೂ
೧೮ ಶಾಪ. ನಿನ್ನ ಗರ್ಭದ ಫಲಕ್ಕೂ, ನಿನ್ನ ಭೂಮಿಯ ಫಲಕ್ಕೂ,
ದನಗಳ ಹೆಜ್ಜೆಗೆಗೂ, ಕುರಿಗಳ ಮಂದೆಗಳಿಗೂ ಶಾಪ ಬರುವಾ
೧೯ ಗ, ನಿನಗೆ ಶಾಪ; ಹೊರಡುವಾಗ, ನಿನಗೆ ಶಾಪ. ನೀನು ನನ್ನನ್ನು
ಬಿಟ್ಟು ನಿನ್ನ ದುಷ್ಕ್ರಿಯೆಗಳ ಕಟ್ಟಿತನದ ನಿಮಿತ್ತ, ಕರ್ತನು ನಿನ್ನ
ಮೇಲೆ ನೀನು ನಾಶವಾಗುವ ವರಿಗೂ, ಶೀಘ್ರವಾಗಿ ಕೆಟ್ಟು ಹೋ
ಗುವ ವರಿಗೂ, ನೀನು ಮಾಡುವ ಎಲ್ಲಾ ಕೈ ಕೆಲಸದಲ್ಲಿ ಶಾಪ
ವನ್ನೂ ಗಾಬರಿಯನ್ನೂ ಗದರಿಕೆಯನ್ನೂ ನಿನ್ನ ಮೇಲೆ ಕಳು
೨೦ ಹಿಸುವನು. ನಿನ್ನನ್ನು ನೀನು ಸ್ವತಂತ್ರಿಸಿಕೊಳ್ಳುವದಕ್ಕೆ ಹೋ
ಗುವ ದೇಶದಲ್ಲಿಂದ ಶೀಘ್ರಿಸಿ ಬಿಡುವ ಪರ್ಯಂತರ, ಕರ್ತನು ವ್ಯಾಧಿ
೨೧ ಯನ್ನು, ನಿನಗೆ ಹತ ಮಾಡುವನು. ಕರ್ತನು ಕ್ಷಯ ರೋಗ
ದಿಂದಲೂ, ಜ್ವರದಿಂದಲೂ, ಉರಿವಾತದಿಂದಲೂ, ಮಹಾ ತಾಪದಿಂ
ದಲೂ, ಕತ್ತಿಯಿಂದಲೂ, ಕಾಡಿಗೆಯಿಂದಲೂ, ಬಾಣತೆ ರೋಗದಿಂ
ದಲೂ ನಿನ್ನನ್ನು ಹೊಡೆಯುವನು; ನೀನು ನಾಶವಾಗುವ ಪರ್ಯಂ
೨೩ ತರ ಅವು ನಿನ್ನನ್ನು ಹಿಂದಟ್ಟುವವು. ನಿನ್ನ ತಲೆಯ ಮೇಲಿರುವ ಆ
ಕಾಶವು ತಾಮ್ರವಾಗಿ, ನಿನ್ನ ಕೆಳಗಿರುವ ಭೂಮಿಯು ಕಬ್ಬಿಣವಾ
೨೪ ಗಿಯೂ ಇರುವವು. ಕರ್ತನು ನಿನ್ನ ದೇಶದ ಮಳೆಯನ್ನು ಹುಡಿ
ಯೂ ಧೂಳೂ ಆಗ ಮಾಡುವನು; ನೀನು ನಾಶನವಾಗುವ ಪ
ರ್ಯಂತರ ಅದು ಆಕಾಶದಿಂದ ನಿನ್ನ ಮೇಲೆ ಇಳಿದು ಬರುವದು.
೨೫ ಕರ್ತನು ನಿನ್ನನ್ನು ನಿನ್ನ ಶತ್ರುಗಳ ಮುಂದೆ ಹೊಡೆದು ಕೊಡು
ವನು; ನೀನು ಒಂದೇ ಮಾರ್ಗದಲ್ಲಿ ಅವರಿಗೆ ವಿರೋಧವಾಗಿ ಹೊ
ರಟು, ಏಳು ಮಾರ್ಗಗಳಲ್ಲಿ ಅವರ ಮುಂದೆ ಓಡಿ ಹೋಗಿ, ಭೂ
೨೬ ಮಿಯ ಎಲ್ಲಾ ರಾಜ್ಯಗಳಿಗೆ ತೊಲಗಿ ಹೋಗುವಿ. ನಿಮ್ಮ ಹೆಣ
ಗಳು ಆಕಾಶದ ಎಲ್ಲಾ ಪಕ್ಷಿಗಳಿಗೂ ಭೂಮಿಯ ಮೃಗಗಳಿಗೂ
ಆಹಾರವಾಗುವವು; ಯಾರೂ ಅವುಗಳನ್ನು ಬೆದರಿಸುವದಿಲ್ಲ.
೨೭ ಕರ್ತನು ನಿನ್ನನ್ನು ಐಗುಪ್ತದ ಹುಣ್ಣುಗಳಿಂದಲೂ, ಮೂಲ ವ್ಯಾ
ಧಿಯಿಂದಲೂ, ಗಜ್ಜಿಯಿಂದಲೂ, ಇಸಬಿನಿಂದಲೂ ನೀನು ವಾಸಿ
೨೮ ಯಾಗ ಕೂಡದ ಹಾಗೆ ಹೊಡೆಯುವನು. ಕರ್ತನು ನಿನ್ನನ್ನು
ಹುಚ್ಚು ತನದಿಂದಲೂ ಕುರುಡುತನದಿಂದಲೂ ಹೃದಯದ ಬಿಸ್ಮ
೨೯ ಯದಿಂದಲೂ ಹೊಡೆಯುವನು. ಕುರುಡನು ಕತ್ತಲಲ್ಲಿ ತಡವುವಂ
ತೆ ಮಧ್ಯಾಹ್ನದಲ್ಲಿ ತಡವುತ್ತಾ ಇರುವಿ; ನಿನ್ನ ಮಾರ್ಗ ಅನುಕೂ
ಲವಾಗುವದಿಲ್ಲ; ನೀನು ಯಾವಾಗಲೂ ಕಷ್ಟಿಸುವವನಿಲ್ಲದೆ ಬಲಾ
೩೦ ತ್ಕಾರವನ್ನೂ ಸುಲಿಗೆಯನ್ನೂ ಅನುಭವಿಸುವವನಾಗುವಿ. ಹೆಂಡತಿ
ಯನ್ನು ಸೇವಿಸಿ ಕೊಂಡರೆ, ಮತ್ತೊಬ್ಬನು ಅವಳನ್ನು ಮದುವೆ
ಮಾಡಿ ಕೊಳ್ಳುವನು; ಮನೆಯನ್ನು ಕಟ್ಟಿದರೆ, ಅದರಲ್ಲಿ ವಾಸ
ಮಾಡುವದಿಲ್ಲ; ದ್ರಾಕ್ಷೇ ತೋಟವನ್ನು ನೆಟ್ಟರೆ, ಅದರ ಫಲ
೩೧ ನ್ನು ಕೊಂದುವದಿಲ್ಲ. ನಿನ್ನ ಎತ್ತು ನಿನ್ನ ಕಣ್ಣುಗಳ ಮುಂದೆ
ಕೊಯ್ಯಲ್ಪಡಲಾಗಿ, ನೀನು ಅದರಲ್ಲಿ ಉಣ್ಣುವದಿಲ್ಲ; ನಿನ್ನ ಕತ್ತೆ
ನಿನ್ನ ಕಣ್ಣುಗಳ ಮುಂದೆ ಪೈಯಲ್ಪಟ್ಟು, ನಿನಗೆ ಮತ್ತೆ ಸಿಕ್ಕುವ
ದಿಲ್ಲ; ನಿನ್ನ ಕುರಿಗಳು ನಿನ್ನ ಶತ್ರುವಿಗೆ ಕೊಡಲ್ಪಡುವವು, ನಿನ್ನ ರಕ್ಷ
೩೨ ಕನು ಇರುವದಿಲ್ಲ. ನಿನ್ನ ಕುಮಾರ ಕುಮಾರ್ತೆಗಳು ಬೇರೆ ಜ
ನಕ್ಕೆ ಕೊಡಲ್ಪಟ್ಟಿರಲಾಗಿ, ನಿನ್ನ ಕಣ್ಣುಗಳು ಅದನ್ನು ನೋಡಿ,
ಅವುಗಳ ನಿಮಿತ್ತ ಕ್ಷೀಣಿಸುತ್ತಾ ಇರಲಾಗಿ, ನಿನ್ನ ಕೈಯಲ್ಲಿ ಏನೂ
೩೩ ಕ್ರಾಣಿಲ್ಲದೆ ಇರುವದು. ನಿನ್ನ ಭೂಮಿಯ ಫಲವನ್ನೂ ನಿನ್ನ
ಎಲ್ಲಾ ಅದಾಯವನ್ನೂ ನೀನರಿಯದ ಜನವು ತಿಂದು ಬಿಡುವದು;
ನೀನು ಯಾವಾಗಲೂ ಬಲಾತ್ಕಾರವನ್ನೂ ಶಿಕ್ಷೆಯನ್ನೂ ಪಡುತ್ತಾ
೩೪ ಇರುವಿ. ನಿನ್ನ ಕಣ್ಣುಗಳು ನೋಡುವ ನೋಟದಿಂದ ಹುಚ್ಚನಾ



೩೫ ಗುವಿ. ಕರ್ತನು ನಿನ್ನನ್ನು ಮೊಣಕಾಲುಗಳಲ್ಲಿಯೂ ತೊಡೆಗಳ
ಲ್ಲಿಯೂ, ವಾಸಿ ಮಾಡ ಕೂಡದ ಕೆಟ್ಟ ಉರಿ ಹುಣ್ಣಿನಿಂದ, ಅಂ
ಗಾಲು ಮೊದಲ್ಗೊಂಡು ನೆತ್ತಿಯ ಪರ್ಯಂತರ, ಹೊಡೆಯುವನು.
೩೬ ಕರ್ತನು ನಿನ್ನನ್ನೂ, ನೀನು ನಿನ್ನ ಮೇಲೆ ಇರಿಸಿ ಕೊಳ್ಳುವ ಅರ
ಸನನ್ನೂ, ನೀನೂ ನಿನ್ನ ಪಿತೃಗಳೂ ಅರಿಯದ ಜನಾಂಗದ ಬ
ಳಿಗೆ ಹೋಗ ಮಾಡುವನು; ಅಲ್ಲಿ ಮರವೂ ಕಲ್ಲೂ ಆಗಿರುವ
೩೭ ಬೇರೆ ದೇವರುಗಳನ್ನೂ ಸೇವಿಸುವಿ. ಇದಲ್ಲದೆ ದೇವರು ನಿನ್ನನ್ನು
ನಡಿಸುವ ಎಲ್ಲಾ ಜನಾಂಗಗಳಲ್ಲಿ ಬಿಸ್ಮಯಕ್ಕೂ ಗಾದೆಗೂ ಹಾಸ್ಯ
೩೮ ಕ್ಕೂ ಗುರಿಯಾಗುವಿ. ಬಹಳ ಬೀಜವನ್ನು ಹೊಲಕ್ಕೆ ತಂದು,
ಸ್ವಲ್ಪ ಕೂಡಿಸುವಿ; ಯಾಕಂದರೆ ಮಿಡತೆ ಅದನ್ನು ತಿಂದು ಬಿಡುವ
೩೯ ದು. ದ್ರಾಕ್ಷೇ ತೋಟಗಳನ್ನು ನೆಟ್ಟು, ರಕ್ಷಿಸುವಿ; ಆದರೆ ದ್ರಾಕ್ಷೇ
ರಸವನ್ನು ಕುಡಿಯುವದಿಲ್ಲ, ಹಣ್ಣು ಕೂಡಿಸುವದಿಲ್ಲ; ಯಾಕಂ
೪೦ ದರೆ ಹುಳಿ ಅದನ್ನು ತಿಂದು ಬಿಡುವದು. ಇಪ್ಪೇ ತೋಟಗಳು ನಿನ್ನ
ಎಲ್ಲಾ ಮೇರೆಗಳಲ್ಲಿ ಇರುವವು; ಆದರೆ ನೀನು ಎಣ್ಣೆ ಹಚ್ಚಿ ಕೊ
ಳ್ಳುವದಿಲ್ಲ; ಯಾಕಂದರೆ ನಿನ್ನ ಇಪ್ಪೇ ಗಿಡಗಳು ಉದುರುವವು.
೪೧ ಕುಮಾರ ಕುಮಾರ್ತೆಗಳನ್ನು ಪಡೆಯುವಿ; ಆದರೆ ಅವರು ನಿನ
೪೨ ಗೆ ಇರುವದಿಲ್ಲ; ಯಾಕಂದರೆ ಶೆರೆಯಾಗಿ ಹೋಗುವರು. ನಿನ್ನ
ಮರಗಳನ್ನೂ ನಿನ್ನ ಹೊಲದ ಬೈರನ್ನೂ ಎಲ್ಲಾ ಮಿಡತೆ ತಿಂ
೪೩ ದು ಬಿಡುವದು ನಿನ್ನ ಮಧ್ಯದಲ್ಲಿರುವ ಪರವಾಸಿ ಮೇಲ ಮೇಲಕ್ಕೆ
೪೪ ನಿನ್ನ ಮೇಲೆ ಏರುವನು; ಆದರೆ ನೀನು ಕೆಳ ಕೆಳಗೆ ಇಳಿಯುವಿ.
ಅವನು ನಿನಗೆ ಸಾಲ ಕೊಡುವನು; ನೀನು ಅವನಿಗೆ ಸಾಲ ಕೊ
ಡುವದಿಲ್ಲ. ಅವರು ತಲೆಯಾಗುವರು; ನೀನು ಬಾಲವಾಗುವಿ.

೪೫ ನೀನು ನಿನ್ನ ದೇವರಾದ ಕರ್ತನ ಮಾತನ್ನು ಕೇಳದೆ, ಅವನ
ಆಜ್ಞೆಗಳನ್ನೂ ಅವನು ನಿನಗೆ ಆಜ್ಞಾಪಿಸಿದ ನೇಮಗಳನ್ನೂ, ಕಾ
ಪಾಡದೆ ಇದ್ದದರಿಂದ, ಈ ಶಾಪಗಳೆಲ್ಲಾ ನಿನ್ನ ಮೇಲೆ ಬಂದು,
ನಿನ್ನನ್ನು ನಾಶನ ಮಾಡುವ ವರಿಗೂ, ನಿನ್ನನ್ನು ಹಿಂದಟ್ಟಿ, ನಿನಗೆ
೪೬ ಪ್ರಾಪ್ತವಾಗುವವು. ಅವು ನಿನ್ನ ಮೇಲೆಯೂ ನಿನ್ನ ಬೀಜದ ಮೇ
೪೭ ಲೆಯೂ ನಿತ್ಯವಾಗಿ ಗುರುತೂ ಲಕ್ಷಣವೂ ಆಗಿರುವವು. ನೀನು
ಎಲ್ಲವುಗಳ ಪೂರ್ತಿಯಲ್ಲಿ ನಿನ್ನ ದೇವರಾದ ಕರ್ತನಿಗೆ ಸಂತೋ
ಷದಿಂದಲೂ ಮನಸ್ಸಿನ ಸಾಖ್ಯದಿಂದಲೂ ಸೇವಿಸದೆ ಇದ್ದದರಿಂದ,
೪೮ ಹಸಿವೆಯಲ್ಲಿ, ದಾಹದಲ್ಲಿ, ಬೆತ್ತಲೆಯಲ್ಲಿ, ಎಲ್ಲವುಗಳ ಕೊರತೆ
ಯಲ್ಲಿ ದೇವರು ನಿನ್ನ ಮೇಲೆ ಕಳುಹಿಸುವ ನಿನ್ನ ಶತ್ರುಗಳನ್ನು
ಸೇವಿಸ ಬೇಕು; ಅವನು ನಿನ್ನನ್ನು ನಾಶನ ಮಾಡುವ ಪರ್ಯಂ
ತರ ಕಬ್ಬಿಣದ ನೊಗವನ್ನು ನಿನ್ನ ಕುತ್ತಿಗೆಯ ಮೇಲೆ ಇಡುವನು.
೪೯ ಕರ್ತನು ದೂರದಿಂದ, ಭೂಮಿಯ ಅಂತ್ಯದಿಂದ, ಹಾರುವ ಹದ್ದಿ
ಗೆ ಸಮಾನವಾದ ಜನಾಂಗವನ್ನು, ನಿನಗೆ ತಿಳಿಯದ ಭಾಷೆಯ
೫೦ ಜನಾಂಗವನ್ನು, ಮುದುಕರ ಮುಖ ದಾಕ್ಷಿಣ್ಯ ನೋಡದೆ, ಚಿಕ್ಕ
ವರಿಗೆ ದಯೆ ಮಾಡದೆ, ಇರುವಂಥ ಕಠಿಣ ಮುಖವುಳ್ಳ ಜನಾಂಗ
೫೧ ವನ್ನು, ನಿನ್ನ ಮೇಲೆ ಕಳುಹಿಸುವನು. ಅದು ನಿನ್ನ ಪಶುಗಳ ಫಲ
ವನ್ನೂ ನಿನ್ನ ಭೂಮಿಯ ಫಲವನ್ನೂ, ನೀನು ನಾಶನವಾಗುವ
ಪರ್ಯಂತರ, ತಿಂದು ಬಿಡುವದು; ಅದು ನಿನ್ನನ್ನು ಕೆಡಿಸುವ ಪ
ರ್ಯಂತರ ಗೋಧಿ ದ್ರಾಕ್ಷೇ ರಸ ಎಣ್ಣೆಗಳನ್ನೂ ದನಗಳ ಹೆಜ್ಜೆ
೫೨ ಗೆಯನ್ನೂ, ಕುರಿಗಳ ಮಂದೆಗಳನ್ನೂ ನಿನಗೆ ಉಳಿಸದು. ನಿನ್ನ
ದೇಶದಲ್ಲೆಲ್ಲಾ ನೀನು ನಂಬಿ ಕೊಂಡಿರುವ ಉದ್ದವಾದ ಭದ್ರವಾದ ನಿ
ನ್ನ ಗೋಡೆಗಳೆಲ್ಲಾ ಬೀಳುವ ಪರ್ಯಂತರ, ನಿನ್ನ ಎಲ್ಲಾ ಬಾಗ
ಲುಗಳಲ್ಲಿ ನಿನಗೆ ಮುತ್ತಿಗೆ ಹಾಕುವದು; ನಿನ್ನ ದೀವರಾದ ಕರ್ತನು
ನಿನಗೆ ಕೊಡುವ ನಿನ್ನ ದೇಶದಲ್ಲೆಲ್ಲಾ ನಿನ್ನ ಎಲ್ಲಾ ಬಾಗಲುಗಳಲ್ಲಿ
೫೩ ನಿನಗೆ ಮುತ್ತಿಗೆ ಹಾಕುವದು. ಆಗ ಮುತ್ತಿಗೆಯಲ್ಲಿಯೂ ನಿನ್ನ
ಶತ್ರುಗಳು ನಿನಗೆ ಮಾಡುವ ಇಕ್ಕಟ್ಟಿನಲ್ಲಿಯೂ ನಿನ್ನ ಗರ್ಭದ
ಫಲವನ್ನೂ, ನಿನ್ನ ದೇವರಾದ ಕರ್ತನು ನಿನಗೆ ಕೊಟ್ಟ ಕುಮಾರ
೫೪ ಕುಮಾರ್ತೆಗಳ ಮಾಂಸವನ್ನೂ ತಿನ್ನುವಿ. ನಿನ್ನಲ್ಲಿ ಮೃದುವಾದ
ವನು ಬಹಳ ಮೇರೆಕ ಗುಣವುಳ್ಳವನೂ ಯಾವನೋ, ಅವನ ಕ
ಣ್ಣು ತನ್ನ ಸಹೋದರನ ಕಡೆಗೂ, ತನ್ನ ಮಗ್ಗಲಲ್ಲಿರುವ ತನ್ನ
ಹೆಂಡತಿಯ ಕಡೆಗೂ, ಅವನು ಉಳಿಸಿಕೊಳ್ಳುವ ಮಕ್ಕಳ ಕಡೆಗೂ,
೫೫ ಕಠಿಣವಾಗುವದು. ಮುತ್ತಿಗೆಯಲ್ಲಿಯೂ, ನಿನ್ನ ಶತ್ರುಗಳು ನಿ
ನ್ನ ಎಲ್ಲಾ ಬಾಗಲುಗಳಲ್ಲಿ ನಿನಗೆ ಮಾಡುವ ಇಕ್ಕಟ್ಟಿನಲ್ಲಿಯೂ,
ತನಗೆ ನಾಕಾಗುವದಿಲ್ಲ ಅಂದು ಕೊಂಡು, ಅವನು ಉಣ್ಣುವ ತನ್ನ
ಮಕ್ಕಳ ಮಾಂಸದಲ್ಲಿ ಅವಕೊಳಗೆ ಒಬ್ಬನಿಗಾದರೂ ಏನೂ ಕೊ
೫೬ ಡುವದಿಲ್ಲ. ನಿನ್ನಲ್ಲಿ ಮೃದುವಾದವಳೂ ಬಹಳ ಮೇರೆಕ ಗುಣವು
ಳ್ಳವಳೂ ಯಾವಳೋ, ಮೃದುತನದಿಂದಲೂ ಮೇರೆಕ ಗುಣ
ದಿಂದಲೂ ನೆಲಕ್ಕೆ ಅಂಗಾಲನ್ನು ನಿಲ್ಲಿಸಲಾರದವಳು ಯಾವಳೋ,
ತನ್ನ ಮಗ್ಗಲಲ್ಲಿರುವ ಗಂಡನ ಕಡೆಗೂ ತನ್ನ ಮಗನ, ಮಗಳ ಕ
೫೭ ಡೆಗೂ, ತನ್ನ ಕಾಲುಗಳ ನಡುವೆಯಿಂದ ಬರುವ ಶಿಶುವಿನ ಕಡೆಗೂ,
ತಾನು ಹೆತ್ತ ಮಕ್ಕಳ ಕಡೆಗೂ, ಅವಳ ಕಣ್ಣು ಕಠಿಣವಾಗುವದು;
ಯಾಕಂದರೆ ಎಲ್ಲಾದರ ಕೊರತೆಯಲ್ಲಿಯೂ, ಮುತ್ತಿಗೆಯಲ್ಲಿ
ಯೂ ನಿನ್ನ ಶತ್ರು ನಿನಗೆ ನಿನ್ನ ಬಾಗಲುಗಳಲ್ಲಿ ಮಾಡುವ ಇಕ್ಕ
ಟ್ಟಿನಲ್ಲಿಯೂ, ಅವರನ್ನು ಅಂತರಂಗವಾಗಿ ತಿಂದು ಬಿಡುವಳು.

೫೮ ನಿನ್ನ ದೇವರಾದ ಯೆಹೋವನೆಂಬ ಈ ಘನವುಳ್ಳ ಭಯಂಕ
ರವಾದ ಹೆಸರಿಗೆ ಭಯ ಪಡ ಬೇಕೆಂದು, ಈ ಪುಸ್ತಕದಲ್ಲಿ ಬರೆದಿರು
ವ ಈ ನ್ಯಾಯಪ್ರಮಾಣದ ಮಾತುಗಳನ್ನು ಕಾಪಾಡದೆ, ಮಾ
೫೯ ಡದೆ, ಹೋದರೆ, ಕರ್ತನು ನಿನ್ನ ಬಾಧೆಗಳನ್ನೂ ನಿನ್ನ ಬೀಜದ
ಬಾಧೆಗಳನ್ನೂ ಆಶ್ಚರ್ಯವಾಗ ಮಾಡುವನು; ಅವು ಹೊತ್ತವಾದ
ಸ್ಥಿರವಾದ ಬಾಧೆಗಳೂ, ಕೆಟ್ಟವಾದ ಸ್ಥಿರವಾದ ರೋಗಗಳೂ ಆ
೬೦ ಗುವವು. ನೀನು ಹೆದರಿ ಕೊಂಡ ಐಗುಪ್ತದ ಬೇನೆಗಳನ್ನೆಲ್ಲಾ ಅವ
ನು ತಿರಿಗಿ ನಿನ್ನ ಮೇಲೆ ಬರ ಮಾಡುವನು; ಅವು ನಿನ್ನ ಮೇಲೆ ಹ
೬೧ ತ್ತುವವು. ಮತ್ತು ಈ ನ್ಯಾಯಪ್ರಮಾಣದ ಪುಸ್ತಕದಲ್ಲಿ ಬರೆ
ಯದ ರೋಗಗಳನ್ನೂ ಬೇನೆಗಳನ್ನೂ ಎಲ್ಲಾ ನೀನು ನಾಶನವಾ
೬೨ ಗುವ ಪರ್ಯಂತರ ಕರ್ತನು ನಿನ್ನ ಮೇಲೆ ತರುವನು. ಆಗ ನೀ
ನು ನಿನ್ನ ದೇವರಾದ ಕರ್ತನ ಮಾತನ್ನು ಕೇಳದ್ದರಿಂದ ನೀವು ಬಾ
ಹುಳ್ಳಕ್ಕೆ ಆಕಾಶದ ನಕ್ಷತ್ರಗಳ ಹಾಗಿದ್ದದ್ದಕ್ಕೆ ಬದಲಾಗಿ ಸ್ವಲ್ಪ
೬೩ ಮಂದಿಯಾಗಿ ಉಳಿಯುವಿರಿ. ಮತ್ತು ಆಗುವದೇನಂದರೆ—ಕರ್ತ
ನು ಹ್ಯಾಗೆ ನಿಮಗೆ ಒಳ್ಳೇದನ್ನು ಮಾಡುವದಕ್ಕೂ ನಿಮ್ಮನ್ನು ಹೆ
ಚ್ಚಿಸುವದಕ್ಕೂ ನಿಮಗೋಸ್ಕರ ಸಂತೋಷಿಸಿದನೋ, ಹಾಗೆ ಕ
ರ್ತನು ನಿಮ್ಮನ್ನು ಕೆಡಿಸುವದಕ್ಕೂ ನಿಮ್ಮನ್ನು ನಾಶನ ಮಾಡುವ
ದಕ್ಕೂ ನಿಮಗೆ ವಿರೋಧವಾಗಿ ಸಂತೋಷಿಸುವನು; ನೀನು ಸ್ವ
ತಂತ್ರಿಸಿ ಕೊಳ್ಳುವದಕ್ಕೆ ಹೋಗುವ ದೇಶದಿಂದ ನೀವು ಕೀಳ್ಪಡು
೬೪ ವಿ. ಇದಲ್ಲದೆ ಕರ್ತನು ನಿನ್ನನ್ನು ಭೂಮಿಯ ಈ ಮೇರೆಯಿಂ
ದ ಆ ಮೇರೆಯ ವರಿಗೂ ಎಲ್ಲಾ ಜನಗಳಲ್ಲಿ ಚದರಿಸುವನು; ಅಲ್ಲಿ
ನೀನೂ ನಿನ್ನ ಪಿತೃಗಳೂ ತಿಳಿಯದಂಥ, ಮರವೂ ಕಲ್ಲೂ ಆಗಿ
೬೫ ರುವಂಥ, ಬೇರೆ ದೇವರುಗಳನ್ನು ಸೇವಿಸುವಿ. ಆ ಜನಾಂಗಗಳಲ್ಲಿ

ನಿನಗೆ ಸಮಾಧಾನ ಆಗುವದಿಲ್ಲ; ನಿನ್ನ ಅಂಗಾಲಿಗೆ ವಿಶ್ರಾಂತಿ ಆ
ಗುವದಿಲ್ಲ; ಅಲ್ಲಿ ಕರ್ತನು ನಿನಗೆ ನಡುಗುವ ಹೃದಯವನೂ,
ಕ್ಷೀಣಿಸುವ ಕಣ್ಣುಗಳನೂ, ಕುಂದುವ ಪ್ರಾಣವನೂ ಕೊಡುವ
೬೬ ನು. ನಿನ್ನ ಜೀವವು ನಿನ್ನ ಮುಂದೆ ತೂಗ್ಯಾಡುವದು; ರಾತ್ರಿ ಹಗ
೬೭ ಲು ಜೀವಕ್ಕೆ ನಂಬಿಕೆ ಇಲ್ಲದೆ, ಹೆದರಿ ಕೊಳ್ಳುವಿ. ನಿನ್ನ ಹೃದಯ
ದಲ್ಲಿ ಆಗುವ ಹೆದರಿಕೆಯ ನಿಮಿತ್ತವೂ, ನಿನ್ನ ಕಣ್ಣುಗಳು ನೋ
ಡುವ ನೋಟದ ನಿಮಿತ್ತವೂ, ಮುಂಜಾನೆಯಲ್ಲಿ ಅಯ್ಯೋ, ಸಂ
ಜೆ ಆಗ ಬೇಕು, ಅನ್ನುವಿ; ಸಂಜೆಯಲ್ಲಿ ಅಯ್ಯೋ, ಮುಂಜಾನೆ
೬೮ ಆಗ ಬೇಕು, ಅನ್ನುವಿ. ಇದಲ್ಲದೆ ಕರ್ತನು ನೀನು ಇನ್ನು ಮೇಲೆ
ನೋಡುವದಿಲ್ಲವೆಂದು ನಾನು ಹೇಳಿದ ಮಾರ್ಗದಿಂದ, ಹಡಗಗಳ
ಲ್ಲಿ ನಿನ್ನನ್ನು ಐಗುಪ್ತಕ್ಕೆ ತಿರಿಗಿ ಬರ ಮಾಡುವನು; ಅಲ್ಲಿ ದಾಸ
ರಾಗಿಯೂ ದಾಸಿಯರಾಗಿಯೂ ನಿಮ್ಮ ಶತ್ರುಗಳಿಗೆ ಮಾರಲ್ಪಡು
ವಿರಿ; ಆದರೆ ಕೊಂಡು ಕೊಳ್ಳುವವನೊಬ್ಬನೂ ಇರುವದಿಲ್ಲ.

## ೨೯. ಸಂಧಿ.

೧ ಹೋರೆಬಿನಲ್ಲಿ ಅವರ ಸಂಗಡ ಮಾಡಿದ ಒಡಂಬಡಿಕೆಯ ಕೊ
ರ್ತನು, ಇಸ್ರಯೇಲ್ ಮಕ್ಕಳ ಸಂಗಡ ಮಾಡ ಬೇಕೆಂದು, ಕ
ರ್ತನು ಮೋಶೆಗೆ ಮೋವಾಬಿನ ದೇಶದಲ್ಲಿ ಆಜ್ಞಾಪಿಸಿದ ಒಡಂಬಡಿ
ಕೆಯ ಮಾತುಗಳು ಇವೇ.
೨ ಮೋಶೆ ಇಸ್ರಯೇಲನ್ನೆಲ್ಲಾ ಕರೆದು, ಅವರಿಗೆ ಹೇಳಿದ್ದೇನಂ
ದರೆ—ಕರ್ತನು ಐಗುಪ್ತ ದೇಶದಲ್ಲಿ ನಿಮ್ಮ ಕಣ್ಣುಗಳ ಮುಂದೆ ಫ
ರೋನನಿಗೂ, ಅವನ ಎಲ್ಲಾ ಸೇವಕರಿಗೂ, ಅವನ ಎಲ್ಲಾ ದೇಶ
3 ಕ್ಕೂ ಮಾಡಿದವುಗಳನ್ನೆಲ್ಲಾ ನೋಡಿದಿರಿ. ಆ ದೊಡ್ಡ ಕೋಧ
ನಿಗಳನೂ, ಆ ದೊಡ್ಡ ಗುರುತುಗಳನೂ, ಲಕ್ಷಣಗಳನೂ ನಿ
೪ ನ್ನ ಕಣ್ಣುಗಳು ನೋಡಿದವಲ್ಲ! ಆದಾಗ್ಯೂ ಕರ್ತನು ನಿಮಗೆ
ಇಂದಿನ ಪರ್ಯಂತರ ತಿಳಿಯ ಕೊಳ್ಳುವ ಹೃದಯವನೂ, ನೋ
೫ ಡುವ ಕಣ್ಣುಗಳನೂ ಕೇಳುವ ಕಿವಿಗಳನೂ ಕೊಡಲಿಲ್ಲ. ನಾನು
ನಾಲ್ವತ್ತು ವರುಷ ನಿಮ್ಮನ್ನು ಅರಣ್ಯದಲ್ಲಿ ನಡಿಸಿದೆನು; ನಿಮ್ಮ
ಮೇಲಿರುವ ವಸ್ತ್ರಗಳು ಹಳ್ಳೇವಾಗಲಿಲ್ಲ; ನಿಮ್ಮ ಪಾದಗಳಲ್ಲಿರುವ
೬ ಕೆರಗಳು ಹಳ್ಳೇವಾಗಲಿಲ್ಲ. ನಾನೇ ನಿಮ್ಮ ದೇವರಾದ ಕರ್ತನೆಂದು,
ನೀವು ತಿಳಿದು ಕೊಳ್ಳುವ ಹಾಗೆ, ನೀವು ಕೊಟ್ಟಿ ತಿನ್ನಲಿಲ್ಲ; ದ್ರಾ
ಕ್ಷೇ ರಸ ಮದ್ಯಗಳನ್ನು ಕುಡಿಯಲಿಲ್ಲ.
೭ ನೀವು ಈ ಸ್ಥಳಕ್ಕೆ ಬಂದಾಗ, ಹೆಷ್ಬೋನಿನ ಅರಸನಾದ ಸೀ
ಹೋನನೂ, ಬಾಷಾನಿನ ಅರಸನಾದ ಓಗನೂ ನಮ್ಮೆದುರಿಗೆ ಯು
೮ ದ್ಧಕ್ಕೆ ಹೊರಟರು; ನಾವು ಅವರನ್ನು ಹೊಡೆದು, ಅವರ ದೇಶ
ವನ್ನು ತಕ್ಕೊಂಡು, ರೂಬೆನ್ಯರಿಗೂ ಗಾದನವರಿಗೂ ಮನಸ್ಸೆ
೯ ಯ ಅರ್ಧ ಕುಲಕ್ಕೂ ಸ್ವಾಸ್ತ್ಯವಾಗಿ ಕೊಟ್ಟೆವು. ಹೀಗಿರುವದ
ರಿಂದ, ನೀವು ಮಾಡುವದೆಲ್ಲಾದರಲ್ಲಿ ಸಫಲವಾಗುವ ಹಾಗೆ, ಈ
ಒಡಂಬಡಿಕೆಯ ಮಾತುಗಳನ್ನು ಕೇಳಿ, ಮಾಡ ಬೇಕು.
೧೦ ನೀವೆಲ್ಲರು ಈ ಹೊತ್ತು ನಿಮ್ಮ ದೇವರಾದ ಕರ್ತನ ಮುಂದೆ
ನಿಂತಿದ್ದೀರಿ; ನಿಮ್ಮ ಕುಲಗಳ ಮುಖ್ಯಸ್ಥರೂ, ಹಿರಿಯರೂ, ಅಧಿ
೧೧ ಕಾರಿಗಳೂ, ಇಸ್ರಯೇಲಿನ ಮನುಷ್ಯರೆಲ್ಲರೂ, ನಿಮ್ಮ ಚಿಕ್ಕವ
ರೂ, ಹೆಂಡರೂ, ನಿಮ್ಮ ದಂಡಿನಲ್ಲಿರುವ ಪರವಾಸಿಯೂ, ನಿಮಗೆ
೧೨ ಕಟ್ಟಿಗೆ ಕಡಿಯುವವರೂ, ನೀರು ಸೇದುವವರೂ ಸಹ, ನಿನ್ನ ದೇ
ವರಾದ ಕರ್ತನು ಈ ಹೊತ್ತು ನಿನ್ನ ಸಂಗಡ ಮಾಡುವ ಒಡಂಬ
೧೩ ಡಿಕೆಯಲ್ಲಿಯೂ ಆಣೆಯಲ್ಲಿಯೂ ಸೇರುವದಕ್ಕೆ ಇದ್ದೀರಿ. ಆ
ಒಡಂಬಡಿಕೆ ಯಾವದಂದರೆ—ಅವನು ನಿನಗೆ ಹೇಳಿದಂತೆಯೂ,
ನಿನ್ನ ಪಿತೃಗಳಾದ ಅಬ್ರಹಾಮನಿಗೂ, ಇಸಾಕನಿಗೂ, ಯಾ
ಕೋಬನಿಗೂ, ಪ್ರಮಾಣ ಮಾಡಿದಂತೆಯೂ, ಈ ಹೊತ್ತು ನಿ
ನ್ನನ್ನು ತನಗೆ ಜನವಾಗಿ ಸ್ಥಾಪಿಸಿ, ನಿನಗೆ ದೇವರಾಗ ಬೇಕೆಂಬು
೧೪ ವದೇ. ಇದಲ್ಲದೆ ನಿಮ್ಮ ಸಂಗಡ ಮಾತ್ರ ಈ ಒಡಂಬಡಿಕೆಯ
ನ್ನೂ, ಈ ಆಣೆಯನ್ನೂ, ನಾನು ಮಾಡುವದಿಲ್ಲ; ಈ ಹೊತ್ತು
೧೫ ಇಲ್ಲಿ ನಮ್ಮ ಸಂಗಡ ನಮ್ಮ ದೇವರಾದ ಕರ್ತನ ಮುಂದೆ ನಿಂತವನ
ಸಂಗಡಲೂ, ಈ ಹೊತ್ತು ಇಲ್ಲಿ ನಮ್ಮ ಸಂಗಡ ಇರದವನ ಸಂಗ
ಡಲೂ ಮಾಡುತ್ತೇನೆ.
೧೬ ನಾವು ಐಗುಪ್ತ ದೇಶದಲ್ಲಿ ವಾಸವಾಗಿದ್ದೆವೆಂದೂ, ನೀವು ದಾ
ಟಿ ಬಂದ ಜನಾಂಗಗಳನ್ನು ನಾವು ದಾಟಿ ಬಂದೆವೆಂದೂ, ನಿಮಗೆ
೧೭ ತಿಳಿಯಿತಲ್ಲ! ಅವರ ಬಳಿಯಲ್ಲಿರುವ ಮರ, ಕಲ್ಲು, ಬೆಳ್ಳಿ, ಛಂ
ಗಾರಗಳ ಅಸಹ್ಯಗಳನ್ನೂ ಬೊಂಬೆಗಳನ್ನೂ ನೋಡಿದಿರಲ್ಲ!
೧೮ ಈ ಹೊತ್ತು ನಮ್ಮ ದೇವರಾದ ಕರ್ತನನ್ನು ಹೃದಯದಲ್ಲಿ ಬಿ
ಟ್ಟು, ಆ ಜನಾಂಗಗಳ ದೇವರುಗಳಿಗೆ ಸೇವೆ ಮಾಡುವದಕ್ಕೆ ತಿರು
ಗಿ ಕೊಳ್ಳುವ ಪುರುಷನಾದರೂ, ಸ್ತ್ರೀಯಾದರೂ, ಗೋತ್ರವಾ
ದರೂ, ಕುಲವಾದರೂ ಇರ ಬಾರದು. ವಿಷವನ್ನೂ ಮಾಚಿ ಸ
೧೯ ತ್ರೈಮನ್ನೂ ಬೆಳ್ಳುವ ಬೇರು ನಿಮ್ಮಲ್ಲಿ ಇರ ಬಾರದು. ಈ ಆ
ಣೆಯ ಮಾತುಗಳನ್ನು ಕೇಳಿ—ನಾನು ನನ್ನ ಹೃದಯದ ಕಾಠಿ
ಣ್ಯದಲ್ಲಿ ನಡೆದು ಕೊಂಡು, ದಾಹಕ್ಕೆ ಅಮಲನ್ನು ಕೂಡಿಸಿದರೂ,
ನನಗೆ ಸಮಾಧಾನವಿರುವದೆಂದು ಹೇಳಿ ಕೊಂಡು, ತನ್ನ ಹೃದ
ಯದಲ್ಲಿ ತನ್ನನ್ನು ಆಶೀರ್ವದಿಸಿ ಕೊಳ್ಳುವವನು ಇರ ಬಾರದು.
೨೦ ಅಂಥವನಿಗೆ ಕರ್ತನು ಮನ್ನಿಸಲೊಲ್ಲನು; ಆಗಲೇ ಕರ್ತನ ಕೋ
ಪವೂ ಕೋಪವೂ ಆ ಮನುಷ್ಯನ ಮೇಲೆ ಹೊಗೆ ಹಾಯುವ
ವು; ಈ ಪುಸ್ತಕದಲ್ಲಿ ಬರೆದಿರುವ ಶಾಪವೆಲ್ಲಾ ಅವನ ಮೇಲೆ ನೆಲೆ
ಯಾಗುವದು; ಕರ್ತನು ಅವನ ಹೆಸರನ್ನು ಆಕಾಶದ ಕೆಳಗಿನಿಂ
೨೧ ದ ಅಳಿಸಿ ಬಿಡುವನು. ಈ ನ್ಯಾಯಪ್ರಮಾಣದ ಪುಸ್ತಕದಲ್ಲಿ ಬ
ರೆದಿರುವ ಒಡಂಬಡಿಕೆಯ ಎಲ್ಲಾ ಶಾಪಗಳ ಪ್ರಕಾರ ಕರ್ತನು ಅ
ವನನ್ನು ಇಸ್ರಯೇಲಿನ ಎಲ್ಲಾ ಕುಲಗಳೊಳಗಿಂದ ಕೇಡಿಗೆ ಪ್ರತ್ಯೇ
ಕಿಸುವನು.
೨೨ ನಿಮ್ಮ ತರುವಾಯ ಹುಟ್ಟುವ ನಿಮ್ಮ ಮಕ್ಕಳ ಮುಂದಿನ ಸಂ
ತತಿಯೂ, ದೂರ ದೇಶದಿಂದ ಬರುವ ಅನ್ಯನೂ, ಆ ದೇಶದ
ಬಾಧೆಗಳನ್ನೂ, ಕರ್ತನು ಅದರಲ್ಲಿ ಬರ ಮಾಡಿದ ಕೋಗಗಳ
೨೩ ನ್ನೂ ನೋಡಿ, ಕರ್ತನು ತನ್ನ ಕೋಪದಲ್ಲಿಯೂ ಉರಿಯಲ್ಲಿ
ಯೂ ಕೆಡವಿ ಹಾಕಿದ ಸೊದೋಮೂ, ಗಮೋರವೂ, ಅದ್ಮಾವೂ,
ಜೆಬೋಯಿಮೂ, ಇವುಗಳ ಹಾಗೆ ಆ ದೇಶವೆಲ್ಲಾ ಗಂಧಕವೂ ಉ
ಪ್ಪೂ ಉರಿಯುತ್ತಾ, ಬಿತ್ತಲ್ಪಡದೆ, ಕೊಳೆಯದೆ, ಯಾವ ಹುಲ್ಲು
ನಾದರೂ ಬೆಳ್ಳದೆ ಇರುವದನ್ನು ನೋಡಿ, ಹೇಳುವದೇನಂದರೆ—
೨೪ ಜನಾಂಗಗಳೆಲ್ಲಾ ಹೇಳುವದೇನಂದರೆ—ಯಾಕೆ ಕರ್ತನು ಈ
ದೇಶಕ್ಕೆ ಹೀಗೆ ಮಾಡಿದ್ದಾನೆ? ಈ ದೊಡ್ಡ ಕೋಪದ ಉರಿ ಏನು!
೨೫ ಆಗ ಹೇಳುವದೇನಂದರೆ—ಅವರು ತಮ್ಮನ್ನು ಐಗುಪ್ತ ದೇಶದ
ಲ್ಲಿಂದ ಹೊರಗೆ ತರುವಾಗ, ತಮ್ಮ ಪಿತೃಗಳ ದೇವರಾದ ಕರ್ತ
೨೬ ನು ತಮ್ಮ ಸಂಗಡ ಮಾಡಿದ ಒಡಂಬಡಿಕೆಯನ್ನು ಬಿಟ್ಟು, ಹೋ
ಗಿ, ಬೇರೆ ದೇವರುಗಳನ್ನೂ, ತಮಗೆ ತಿಳಿಯದಂಥ, ಅವನು ತ
ಮಗೆ ಪಾಲಿಡದಂಥ ದೇವರುಗಳನ್ನೂ ಸೇವಿಸಿ, ಅಡ್ಡ ಬಿದ್ದರಿಂ
೨೭ ದ, ಕರ್ತನ ಕೋಪವು ಈ ದೇಶದ ಮೇಲೆ ಈ ಪುಸ್ತಕದಲ್ಲಿ ಬರೆ
ದಿರುವ ಶಾಪವನ್ನೆಲ್ಲಾ ಅದರ ಮೇಲೆ ತರುವ ಹಾಗೆ ಉರಿಯಿತು.
೨೮ ಕರ್ತನು ಅವರನ್ನು ಕೋಪದಲ್ಲಿಯೂ, ಹಿಟ್ಟನಲ್ಲಿಯೂ, ಮಹಾ
ರೌದ್ರದಲ್ಲಿಯೂ ದೇಶದಲ್ಲಿಂದ ಕಿತ್ತು ಹಾಕಿ, ಇಂದು ಇರುವ ಪ್ರ
ಕಾರ ಬೇರೆ ದೇಶಕ್ಕೆ ಕಳುಹಿಸಿದ್ದಾನೆ.
ೲ ರಹಸ್ಯಗಳು ನಮ್ಮ ದೇವರಾದ ಕರ್ತನಿಗೆ ಸರಿ; ಆದರೆ ಪ್ರಕ
ಟವಾದವುಗಳು ನಾವು ಈ ನ್ಯಾಯಪ್ರಮಾಣದ ಮಾತುಗಳ
ನ್ನೆಲ್ಲಾ ಮಾತುವ ಹಾಗೆ, ನಮಗೂ ನಮ್ಮ ಮಕ್ಕಳಿಗೂ ನಿತ್ಯ
ವಾಗಿ ಅವೆ.

## ೩೦. ಸಂಧಿ.

೧ ಇದಲ್ಲದೆ ನಾನು ನಿನ್ನ ಮುಂದೆ ಇಟ್ಟ ಈ ಮಾತುಗಳೆಲ್ಲಾ,
ಆಶೀರ್ವಾದವೂ ಶಾಪವೂ, ನಿನಗೆ ಸಂಭವಿಸಿದ ಮೇಲೆ, ನಿನ್ನ ದೇ
ವರಾದ ಕರ್ತನು ನಿನ್ನನ್ನು ನೂಕಿ ಬಿಟ್ಟ ಎಲ್ಲಾ ಜನಾಂಗಗಳ
೨ ಮಧ್ಯದಲ್ಲಿ ನೀನು ನೆನಪು ಮಾಡಿ ಕೊಂಡು, ನಿನ್ನ ದೇವರಾದ
ಕರ್ತನ ಕಡೆಗೆ ತಿರುಗಿ ಕೊಂಡು, ನೀನೂ ನಿನ್ನ ಮಕ್ಕಳೂ ನಾ
ನು ಈ ಹೊತ್ತು ನಿನಗೆ ಆಜ್ಞಾಪಿಸುವದೆಲ್ಲಾದರಲ್ಲಿ ನಿನ್ನ ಪೂರ್ಣ
ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ಅವನ
3 ಮಾತನ್ನು ಕೇಳಿದರೆ, ನಿನ್ನ ದೇವರಾದ ಕರ್ತನು ನಿನ್ನ ಕೆಲೆ
ಯನ್ನು ತಿರುಗಿಸಿ, ನಿನ್ನ ಮೇಲೆ ಅಂತ್ಯಕರಣ ಪಟ್ಟು, ತಿರುಗಿ ಕೊಂ
ಡು, ನಿನ್ನ ದೇವರಾದ ಕರ್ತನು ನಿನ್ನನ್ನು ಚದರಿಸಿದ ಎಲ್ಲಾ ಜನ
೪ ಗಳೊಳಗಿಂದ ನಿನ್ನನ್ನು ಕೂಡಿಸುವನು. ಆಕಾಶದ ಅಂತ್ಯದಲ್ಲಿ
ನಿನ್ನವರು ನೂಕಲ್ಪಟ್ಟಿದ್ದರೆ, ಅಲ್ಲಿಂದ ನಿನ್ನ ದೇವರಾದ ಕರ್ತನು
೫ ನಿನ್ನನ್ನು ಕೂಡಿಸಿ, ಅಲ್ಲಿಂದ ನಿನ್ನನ್ನು ತಕ್ಕೊಳ್ಳುವನು. ಇದ
ಲ್ಲದೆ ನಿನ್ನ ದೇವರಾದ ಕರ್ತನು ನಿನ್ನ ಪಿತೃಗಳ ಸ್ವತಂತ್ರಿಸಿ
ಕೊಂಡ ದೇಶಕ್ಕೆ ನಿನ್ನನ್ನು ತರುವನು; ನೀನು ಅದನ್ನು ಸ್ವತಂತ್ರಿ
ಸಿ ಕೊಳ್ಳುವಿ; ಅವನು ನಿನಗೆ ಒಳ್ಳೇದನ್ನು ಮಾಡಿ, ನಿನ್ನ ಪಿ
೬ ತೃಗಳಿಗಿಂತಲೂ ನಿನ್ನನ್ನು ಹೆಚ್ಚಿಸುವನು. ಆಗ ನೀನು ನಿನ್ನ
ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿ
ನ್ನ ಪೂರ್ಣ ಪ್ರಾಣದಿಂದಲೂ ಪ್ರೀತಿ ಮಾಡಿ, ಬದುಕುವ ಹಾಗೆ,
ನಿನ್ನ ದೇವರಾದ ಕರ್ತನು ನಿನ್ನ ಹೃದಯವನ್ನೂ, ನಿನ್ನ ಬೀಜದ
3 ಹೃದಯವನ್ನೂ ಪರಿಶೋಧಿಸುವನು. ಇದಲ್ಲದೆ ನಿನ್ನ ದೇವರಾ
ದ ಕರ್ತನು ಆ ಶಾಪಗಳನ್ನೆಲ್ಲಾ ನಿನ್ನ ಶತ್ರುಗಳ ಮೇಲೆಯೂ,
ನಿನ್ನನ್ನು ಹಿಂದಟ್ಟಿದ ನಿನ್ನ ಹಗೆಯವರ ಮೇಲೆಯೂ ಇಡುವನು.
೮ ಆದರೆ ನೀನು ತಿರುಗಿ ಕೊಂಡು, ಕರ್ತನ ಮಾತನ್ನು ಕೇಳಿ ನಾ
ನು ಈ ಹೊತ್ತು ನಿನಗೆ ಆಜ್ಞಾಪಿಸುವ ಅವನ ಎಲ್ಲಾ ಆಜ್ಞೆಗಳ
೯ ನ್ನು ಮಾಡುವಿ. ಇದಲ್ಲದೆ ಕರ್ತನು ನಿನ್ನನ್ನು ನಿನ್ನ ಎಲ್ಲಾ ಕೈ
ಕೆಲಸದಲ್ಲಿ, ನಿನ್ನ ಗರ್ಭದ ಫಲದಲ್ಲಿ, ನಿನ್ನ ಪಶುಗಳ ಫಲದಲ್ಲಿ, ನಿ
ನ್ನ ಭೂಮಿಯ ಫಲದಲ್ಲಿ ಒಳ್ಳೇದಕ್ಕೋಸ್ಕರ ಅಭಿವೃದ್ಧಿ ಮಾ
೧೦ ಡುವನು. ಯಾಕಂದರೆ ನೀನು ನಿನ್ನ ದೇವರಾದ ಕರ್ತನ ಮಾ
ತನ್ನು ಕೇಳಿ, ಈ ನ್ಯಾಯಪ್ರಮಾಣದ ಪುಸ್ತಕದಲ್ಲಿ ಬರೆದಿರುವ
ಅವನ ಆಜ್ಞೆ, ಸೀಮಗಳನ್ನು ಕಾಪಾಡಿ, ನಿನ್ನ ಪೂರ್ಣ ಹೃದ
ಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ದೇವರಾ
ದ ಕರ್ತನ ಕಡೆಗೆ ತಿರುಗಿ ಕೊಂಡರೆ, ಕರ್ತನು ನಿನ್ನ ಪಿತೃಗಳ
ಮೇಲೆ ಸಂತೋಷಿಸಿದ ಹಾಗೆ, ನಿನ್ನ ಮೇಲೆ ಒಳ್ಳೇದಕ್ಕೋಸ್ಕರ
ಸಂತೋಷಿಸುವನು.
೧೧ ನಿಶ್ಚಯವಾಗಿ ನಾನು ಈ ಹೊತ್ತು ನಿನಗೆ ಆಜ್ಞಾಪಿಸುವ ಈ
೧೨ ಆಜ್ಞೆಯು ನಿನಗೆ ಅದ್ಭುತವಾದದ್ದಲ್ಲ, ದೂರವಾದದ್ದಲ್ಲ. ನಾವು
ಅದನ್ನು ಮಾತುವಂತೆ, ನಮಗೋಸ್ಕರ ಯಾರು ಆಕಾಶಕ್ಕೆ ಏ
ರಿ ಹೋಗಿ, ನಮಗೋಸ್ಕರ ಅದನ್ನು ತಕ್ಕೊಂಡು, ಅದನ್ನು ತಿಳಿ
ಸುವರು? ಎಂಬುವ ಹಾಗೆ, ಅದು ಆಕಾಶದಲ್ಲಿ ಇರುವಂಥಾದ್ದಲ್ಲ.
೧೩ ನಾವು ಅದನ್ನು ಮಾತುವಂತೆ, ನಮಗೋಸ್ಕರ ಯಾರು ಸಮು
ದ್ರವನ್ನು ದಾಟಿ, ನಮಗೋಸ್ಕರ ಅದನ್ನು ತಕ್ಕೊಂಡು, ಅದ
ನ್ನು ತಿಳಿಸುವರು? ಎಂಬುವ ಹಾಗೆ, ಅದು ಸಮುದ್ರದ ಆಚೆಯ
೧೪ ಲ್ಲಿ ಇರುವಂಥಾದ್ದಲ್ಲ. ಆ ವಾಕ್ಯವು ನಿನಗೆ ಬಹಳ ಸಮೀಪವಾಗಿ
ದೆ; ಅದನ್ನು ಮಾತುವ ಹಾಗೆ, ನಿನ್ನ ಬಾಯಿಯಲ್ಲಿಯೂ ನಿ
ನ್ನ ಹೃದಯದಲ್ಲಿಯೂ ಅದೆ.
೧೫ ಇಗೋ, ಈ ಹೊತ್ತು ಜೀವವನೂ, ಒಳ್ಳೇದನೂ, ಮರ
೧೬ ಣವನೂ, ಕೆಟ್ಟದ್ದನೂ, ನಿನ್ನ ಮುಂದೆ ಇಟ್ಟಿದ್ದೇನೆ. ನಿನ್ನ ದೇ
ವರಾದ ಕರ್ತನನ್ನು ಪ್ರೀತಿ ಮಾಡಿ, ಅವನ ಮಾರ್ಗಗಳಲ್ಲಿ ನಡೆ
ದು ಕೊಂಡು, ಅವನ ಆಜ್ಞೆ, ನೇಮ, ನ್ಯಾಯಗಳನ್ನು ಕಾಪಾಡ
ಬೇಕೆಂದು, ಈ ಹೊತ್ತು ನಿಮಗೆ ಆಜ್ಞಾಪಿಸಿದ್ದೇನೆ; ಹಾಗೆ ಮಾ
ಡಿದರೆ, ನೀನು ಬದುಕಿ, ಹೆಚ್ಚುವಿ; ನಿನ್ನ ದೇವರಾದ ಕರ್ತನು ನೀ
ನು ಸ್ವತಂತ್ರಿಸಿ ಕೊಳ್ಳುವದಕ್ಕೆ ಹೋಗುವ ದೇಶದಲ್ಲಿ ನಿನ್ನನ್ನು
೧೭ ಆಶೀರ್ವದಿಸುವನು. ಆದರೆ ನಿನ್ನ ಹೃದಯವು ತಿರುಗಿ ಕೊಂಡ
ರೆ, ನೀನು ಕೇಳದೆ ಹೋದರೆ, ಎಳೆಯಲ್ಪಟ್ಟು, ಬೇರೆ ದೇವರು
೧೮ ಗಳಿಗೆ ಅಡ್ಡ ಬಿದ್ದು, ಸೇವೆ ಮಾಡಿದರೆ, ನಶಿಸಲೇ ನಶಿಸುವಿರೆಂದು,
ನೀನು ಸೇರಿ ಸ್ವತಂತ್ರಿಸಿ ಕೊಳ್ಳುವದಕ್ಕೆ ಯೊರ್ದನನ್ನು ದಾಟಿ
ಹೋಗುವ ದೇಶದಲ್ಲಿ ನಿಮ್ಮ ದಿವಸಗಳು ಬಹಳವಾಗುವದಿಲ್ಲವೆಂ
೧೯ ದು, ಈ ಹೊತ್ತು ನಿಮಗೆ ತಿಳಿಸುತ್ತೇನೆ. ನಾನು ಜೀವವನೂ,
ಮರಣವನೂ, ಆಶೀರ್ವಾದವನೂ, ಶಾಪವನೂ, ನಿನ್ನ ಮುಂ
ದೆ ಇಟ್ಟಿದ್ದೇನೆಂಬುವದಕ್ಕೆ ಆಕಾಶವನೂ ಭೂಮಿಯನೂ ಈ
೨೦ ಹೊತ್ತು ನಿಮ್ಮ ಮೇಲೆ ಸಾಕ್ಷಿಗಳಾಗಿ ಕರೆಯುತ್ತೇನೆ. ಹೀಗಿರುವ
ದರಿಂದ ನೀನೂ ನಿನ್ನ ಬೀಜವೂ ಬದುಕುವ ಹಾಗೆಯೂ, ನಿನ್ನ
ದೇವರಾದ ಕರ್ತನನ್ನು ಪ್ರೀತಿ ಮಾಡಿ, ನಿನ್ನ ಜೀವವೂ ನಿನ್ನ ದಿ
ವಸಗಳ ಬಾಹುಳ್ಯವೂ ಆಗುವ ಅವನ ಮಾತನ್ನು ಕೇಳಿ, ಅವ
ನಿಗೆ ಅಂಜಿ ಕೊಳ್ಳುವ ಹಾಗೆಯೂ, ಕರ್ತನು ನಿನ್ನ ಪಿತೃಗಳಾ
ದ ಅಬ್ರಹಾಮನಿಗೂ, ಇಸಾಕನಿಗೂ, ಯಾಕೋಬನಿಗೂ ಕೊ
ಡುತ್ತೇನೆಂದು, ಪ್ರಮಾಣ ಮಾಡಿದ ಭೂಮಿಯಲ್ಲಿ ನೀನು ವಾಸ
ಮಾಡುವ ಹಾಗೆಯೂ, ಜೀವವನ್ನು ಆದುಕೋ.

## ೩೧. ಸಂಧಿ.

೧ ಆಗ ಮೋಶೆ ಹೋಗಿ, ಇಸ್ರಯೇಲಿಗೆಲ್ಲಾ ಈ ಮಾತುಗಳ
೨ ನ್ನು ಹೇಳಿದನು. ಅವನು ಅವರಿಗೆ ಹೇಳಿದ್ದೇನಂದರೆ—ನಾನು ಈ
ಹೊತ್ತು ನೂರಾ ಇಪ್ಪತ್ತು ವರುಷದವನಾಗಿದ್ದೇನೆ; ನಾನು ಇ
ನ್ನು ಹೋಗುವದಕ್ಕೆ ಬರುವದಕ್ಕೆ ಶಕ್ತನಲ್ಲ; ಇದಲ್ಲದೆ ಕರ್ತನು
ನನಗೆ, ನೀನು ಯೊರ್ದನನ್ನು ದಾಟುವದಿಲ್ಲವೆಂದು, ಹೇಳಿದ್ದಾನೆ.
3 ನಿನ್ನ ದೇವರಾದ ಕರ್ತನು ತಾನೇ ನಿನ್ನ ಮುಂದೆ ದಾಟುವನು,
ಅವನು ಆ ಜನಾಂಗಗಳನ್ನು ನಿನ್ನ ಮುಂದೆ ನಾಶನ ಮಾಡುವ

ನು; ನೀನು ಅವುಗಳನ್ನು ಸ್ವತಂತ್ರಿಸಿ ಕೊಳ್ಳಿವಿ; ಕರ್ತನು ಹೇ
ಳಿದ ಪ್ರಕಾರ ಯೆಹೋಶುವನು ನಿನ್ನ ಮುಂದೆ ದಾಟಿ ಹೋಗು
೪ ವನು. ಕರ್ತನು ಅಮೋರ್ಯರ ಅರಸನಾದ ಸೀಹೋನನಿಗೂ,
ಓಗನಿಗೂ, ಅವನು ನಾಶನ ಮಾಡಿದ ಅವರ ದೇಶಕ್ಕೂ ಮಾಡಿ
೫ ದಂತೆ, ಆ ಜನಾಂಗಳಿಗೆ ಮಾಡುವನು. ನಾನು ನಿಮಗೆ ಆಜ್ಞಾ
ಪಿಸಿದ ಸಮಸ್ತ ಆಜ್ಞೆಯ ಪ್ರಕಾರ, ನೀವು ಅವರಿಗೆ ಮಾಡುವ ಹಾ
ಗೆ, ಕರ್ತನು ಅವರನ್ನು ನಿಮ್ಮ ಮುಂದೆ ಕೊಟ್ಟು ಬಿಡುವನು.
೬ ಬಲವಾಗಿರಿ; ದೃಢವಾಗಿರಿ; ಅವರಿಗೆ ಭಯ ಪಡಬೇಡಿರಿ; ಯಾ
ಕಂದರೆ ನಿನ್ನ ದೇವರಾದ ಕರ್ತನು ಅವನೇ ನಿನ್ನ ಸಂಗಡ ಹೋ
ಗುತ್ತಾನೆ; ಅವನು ನಿನ್ನನ್ನು ಬಿಡುವದಿಲ್ಲ, ವಿಸರ್ಜಿಸುವದಿಲ್ಲ.

೭ ಆಗ ಮೋಶೆ ಯೆಹೋಶುವನನ್ನು ಕರೆದು, ಸಮಸ್ತ ಇಸ್ರ
ಯೇಲಿನ ಮುಂದೆ ಅವನಿಗೆ ಹೇಳಿದ್ದೇನಂದರೆ—ಬಲವಾಗಿರು; ದೃಢ
ವಾಗಿರು; ಯಾಕಂದರೆ ನೀನು ಈ ಜನರ ಸಂಗಡ ಕರ್ತನು ಅ
ವರ ಪಿತೃಗಳಿಗೆ, ಕೊಡುತ್ತೇನೆಂದು, ಪ್ರಮಾಣ ಮಾಡಿದ ದೇಶದ
ಲ್ಲಿ ಕೇರಬೇಕು; ನೀನು ಅದನ್ನು ಅವರಿಗೆ ಸ್ವಾಸ್ಥ್ಯವಾಗಿ ಕೊ
೮ ಡಬೇಕು. ಇದಲ್ಲದೆ ಕರ್ತನು ತಾನೇ ನಿನ್ನ ಮುಂದೆ ಹೋಗು
ತ್ತಾನೆ; ಅವನೇ ನಿನ್ನ ಸಂಗಡ ಇರುವನು; ನಿನ್ನನ್ನು ಬಿಡುವದಿ
ಲ್ಲಿ, ವಿಸರ್ಜಿಸುವದಿಲ್ಲ; ನೀನು ಭಯ ಪಡಬೇಡ; ಅಂಜಿ ಕೊ
ಳ್ಳಬೇಡ.

೯ ಇದಲ್ಲದೆ ಮೋಶೆ ಈ ನ್ಯಾಯಪ್ರಮಾಣವನ್ನು ಬರೆದು,
ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನು ಹೊರುವಂಥ, ಲೇವಿಯ
ಮಕ್ಕಳಾದ ಯಾಜಕರಿಗೂ ಇಸ್ರಯೇಲಿನ ಎಲ್ಲಾ ಹಿರಿಯರಿಗೂ
೧೦ ಕೊಟ್ಟನು. ಮೋಶೆ ಅವರಿಗೆ ಆಜ್ಞಾಪಿಸಿದ್ದೇನಂದರೆ—ಏಳ್ಕೇಳು ವ
ರುಷಗಳಾದ ಮೇಲೆ ಬಿಡುಗಡೆಯ ವರುಷದ ಕಾಲದಲ್ಲಿ, ಗುಡಾ
೧೧ ರಗಳ ಹಬ್ಬದಲ್ಲಿ, ಇಸ್ರಯೇಲಿನವರೆಲ್ಲರು ನಿನ್ನ ದೇವರಾದ ಕರ್ತ
ನ ಸನ್ನಿಧಿಯಲ್ಲಿ, ಅವನು ಆದು ಕೊಳ್ಳುವ ಸ್ಥಳದಲ್ಲಿ, ಕಾಣಿಸಿ
ಕೊಳ್ಳುವದಕ್ಕೆ ಬಂದಾಗ, ನೀನು ಈ ನ್ಯಾಯಪ್ರಮಾಣವನ್ನು
ಇಸ್ರಯೇಲಿನವರೆಲ್ಲರ ಮುಂದೆ, ಅವರು ಕೇಳುವ ಹಾಗೆ, ಓದಬೇ
೧೨ ಕು. ಜನರನ್ನೂ—ಗಂಡಸರನ್ನೂ, ಹೆಂಗಸರನ್ನೂ, ಚಿಕ್ಕವರ
ನ್ನೂ, ನಿನ್ನ ಬಾಗಲುಗಳಲ್ಲಿರುವ ಪರವಾಸಿಯನ್ನೂ, ಅವರು ಕೇ
ಳಿ, ಕಲಿತು, ನಿಮ್ಮ ದೇವರಾದ ಕರ್ತನಿಗೆ ಭಯ ಪಟ್ಟು, ಈ ನ್ಯಾ
ಯಪ್ರಮಾಣದ ವಾಕ್ಯಗಳನ್ನೆಲ್ಲಾ ಕಾಪಾಡಿ, ಮಾಡುವ ಹಾಗೆ,
೧೩ ಕೂಡಿಸು. ಕಿಳಿಯದಿರುವ ಅವರ ಮಕ್ಕಳು ಸಹ ಕೇಳಿ, ನೀವು
ಸ್ವತಂತ್ರಿಸಿ ಕೊಳ್ಳುವದಕ್ಕೆ ಯೊರ್ದನನ್ನು ದಾಟುವ ಭೂಮಿ
ಯಲ್ಲಿ ನೀವು ಬದುಕುವ ದಿವಸಗಳೆಲ್ಲಾ ಕರ್ತನಿಗೆ ಭಯ ಪಡು
ವದಕ್ಕೆ ಕಲಿತು ಕೊಳ್ಳಲಿ.

೧೪ ಇದಲ್ಲದೆ ಕರ್ತನು ಮೋಶೆಗೆ ಹೇಳಿದ್ದೇನಂದರೆ—ಇಗೋ, ನೀ
ನು ಸಾಯುವ ದಿನ ಸಮೀಪವಾಯಿತು; ಯೆಹೋಶುವನನ್ನು ಕ
ರೆ; ಸಭೆಯ ಗುಡಾರದಲ್ಲಿ ನಿಂತು ಕೊಳ್ಳಿರಿ; ಆಗಲವನಿಗೆ ಆಜ್ಞೆ
ಕೊಡುವೆನು; ಈ ಪ್ರಕಾರ ಮೋಶೆಯೂ ಯೆಹೋಶುವನೂ
೧೫ ಹೋಗಿ, ಸಭೆಯ ಗುಡಾರದಲ್ಲಿ ನಿಂತು ಕೊಂಡರು. ಆಗ ಕರ್ತ
ನು ಗುಡಾರದಲ್ಲಿ ಮೇಘ ಸ್ತಂಭದಲ್ಲಿ ಕಾಣಿಸಿ ಕೊಂಡನು; ಆ ಮೇ
೧೬ ಘ ಸ್ತಂಭವು ಗುಡಾರದ ಬಾಗಲಿನ ಮೇಲೆ ನಿಂತಿತು. ಆಗ ಕರ್ತ
ನು ಮೋಶೆಗೆ ಹೇಳಿದ್ದೇನಂದರೆ—ಇಗೋ, ನೀನು ನಿನ್ನ ಪಿತೃಗಳ
ಸಂಗಡ ಮಲಗುವಿ; ಮತ್ತು ಈ ಜನರು ಎದ್ದು, ಅವರು ಪ್ರವೇಶಿಸು
ವ ದೇಶದ ಅನ್ಯ ದೇವರುಗಳನ್ನು ಅನುಸರಿಸಿ, ಜಾರತ್ವ ಮಾಡಿ,
ನನ್ನನ್ನು ಬಿಟ್ಟು, ನಾನು ಅವರ ಸಂಗಡ ಮಾಡಿದ ಒಡಂಬಡಿಕೆ
೧೭ ಯನ್ನು ವಿಮಾರುವರು. ಆ ದಿವಸದಲ್ಲಿ ನನ್ನ ಕೋಪವು ಅವರ
ಮೇಲೆ ಉರಿಯುವದು; ನಾನು ಅವರನ್ನು ಬಿಟ್ಟು ಬಿಟ್ಟು, ನನ್ನ
ಮುಖವನ್ನು ಅವರಿಗೆ ಮರೆ ಮಾಡುವೆನು; ಅವರು ತಿನ್ನಲ್ಪನಾಲಿ
ಕ್ಕೆ ಆಗುವರು; ಬಹಳ ಕೇಡುಗಳೂ ಇಕ್ಕಟ್ಟುಗಳೂ ಅವರನ್ನು
ಹಿಡಿಯುವವು; ಆ ಕಾಲದಲ್ಲಿ ಅವರು ಹೇಳುವದೇನಂದರೆ—ನಮ್ಮ
ದೇವರು ನಮ್ಮ ಮಧ್ಯದಲ್ಲಿ ಇಲ್ಲದ ಕಾರಣ, ಈ ಕೇಡುಗಳು ನ
೧೮ ಮ್ಮನ್ನು ಹಿಡಿದವಲ್ಲ! ಅವರು ಮಾಡಿದ ಎಲ್ಲಾ ಕೆಟ್ಟತನದ ನಿಮಿ
ತ್ತವೂ, ಅನ್ಯ ದೇವರುಗಳ ಕಡೆಗೆ ತಿರುಗಿದ್ದರಿಂದಲೂ, ನಾನು ಆ
ದಿವಸದಲ್ಲಿ ನನ್ನ ಮುಖವನ್ನು ಮರೆ ಮಾಡಲೇ ಮಾಡುವೆನು. ಹೀ
ಗಿರುವದರಿಂದ ಈಗ ಈ ಹಾಡನ್ನು ಬರೆದು ಕೊಳ್ಳಿರಿ; ಇಸ್ರಯೇ
ಲ್ ಮಕ್ಕಳಿಗೆ ಅದನ್ನು ಕಲಿಸು; ಇಸ್ರಯೇಲ್ ಮಕ್ಕಳಲ್ಲಿ ಈ ಹಾ
ಡು ನನಗೆ ಸಾಕ್ಷಿಯಾಗಿರುವ ಹಾಗೆ, ಅದನ್ನು ಅವರ ಬಾಯಿಗ
೧೯ ಳಲ್ಲಿ ಇಡು. ನಾನು ಅವರ ಪಿತೃಗಳಿಗೆ ಪ್ರಮಾಣ ಮಾಡಿದಂಥ,
ಹಾಲೂ ಜೇನೂ ಹರಿಯುವಂಥ ದೇಶಕ್ಕೆ ಅವರನ್ನು ತರಲಾಗಿ,
ಅವರು ಉಂಡು, ತೃಪ್ತಿಯಾಗಿ, ಕೊಬ್ಬಿದವರಾದಾಗ, ಅವರು
ಅನ್ಯ ದೇವರುಗಳ ಕಡೆಗೆ ತಿರುಗಿ ಕೊಂಡು, ಸೇವಿಸಿ, ನನಗೆ
೨೦ ಕೋಪವೆಬ್ಬಿಸಿ, ನನ್ನ ಒಡಂಬಡಿಕೆಯನ್ನು ವಿಮಾರುವರು. ಮತ್ತು
ಆಗುವದೇನಂದರೆ, ಬಹಳ ಕೇಡುಗಳೂ ಇಕ್ಕಟ್ಟುಗಳೂ ಅವರ
ನ್ನು ಹಿಡಿದಾಗ, ಈ ಹಾಡು ಅವರ ಮುಂದೆ ಸಾಕ್ಷಿಯಾಗಿ ಉತ್ತ
ರ ಕೊಡುವದು; ಯಾಕಂದರೆ ಅದು ಅವರ ಬೀಜದ ಬಾಯಿಯ
ಲ್ಲಿಂದ ಮರೆತು ಹೋಗುವದಿಲ್ಲ; ನಿಶ್ಚಯವಾಗಿ ನಾನು ಪ್ರಮಾಣ
ಮಾಡಿದ ದೇಶದಲ್ಲಿ ಅವರನ್ನು ತರುವದಕ್ಕಿಂತ ಮುಂಚೆ, ಅವರು
ಈ ಹೊತ್ತು ಮಾಡುವ ಕಲ್ಪನೆಗಳನ್ನು ನಾನು ಬಲ್ಲೆನು.

೨೧ ಆದದರಿಂದ ಮೋಶೆ ಅದೇ ದಿವಸದಲ್ಲಿ ಈ ಹಾಡನ್ನು ಬರೆದು,
೨೩ ಇಸ್ರಯೇಲ್ ಮಕ್ಕಳಿಗೆ ಕಲಿಸಿದನು. ಮತ್ತು ನೂನನ ಮಗನಾ
ದ ಯೆಹೋಶುವನಿಗೆ ಆಜ್ಞೆ ಕೊಟ್ಟು, ಹೇಳಿದ್ದೇನಂದರೆ—ಬಲವಾ
ಗಿರು; ದೃಢವಾಗಿರು; ಯಾಕಂದರೆ ನೀನು ಇಸ್ರಯೇಲ್ ಮಕ್ಕಳ
ನ್ನು ನಾನವರಿಗೆ ಪ್ರಮಾಣ ಮಾಡಿದ ದೇಶಕ್ಕೆ ತರುವಿ; ಮತ್ತು
ನಾನು ನಿನ್ನ ಸಂಗಡ ಇರುವೆನು.

೨೪ ಇದಲ್ಲದೆ ಮೋಶೆ ಈ ನ್ಯಾಯಪ್ರಮಾಣದ ವಾಕ್ಯಗಳನ್ನು
೨೫ ಪುಸ್ತಕದಲ್ಲಿ ಬರೆದು, ಶೀರಿಸಿದಾಗ, ಮೋಶೆ ಕರ್ತನ ಒಡಂಬಡಿಕೆ
ಯ ಪೆಟ್ಟಿಗೆಯನ್ನು ಹೊರುವ ಲೇವ್ಯರಿಗೆ ಆಜ್ಞಾಪಿಸಿದ್ದೇನಂ
೨೬ ದರೆ—ಈ ನ್ಯಾಯಪ್ರಮಾಣದ ಪುಸ್ತಕವನ್ನು ತಕ್ಕೊಂಡು, ನಿ
ಮ್ಮ ದೇವರಾದ ಕರ್ತನ ಒಡಂಬಡಿಕೆಯ ಪೆಟ್ಟಿಗೆಯ ಒಂದು ಪಾ
ರ್ಶ್ವದಲ್ಲಿ ಇಡಿರಿ; ಅದು ನಿನಗೆ ವಿಕೋಢವಾದ ಸಾಕ್ಷಿಗೆ ಅಲ್ಲಿ ಇರ
೨೭ ಲಿ. ಯಾಕಂದರೆ ನಿನ್ನ ದ್ರೋಹವನ್ನೂ ನಿನ್ನ ಕಠಿಣವಾದ ಕು
ತ್ತಿಗೆಯನ್ನೂ ನಾನು ಬಲ್ಲೆನು; ಇಗೋ, ಈ ಹೊತ್ತು ನಾನು ಇ
ನ್ನು ನಿಮ್ಮ ಸಂಗಡ ಬದುಕಿ ಇರುವ ವೇಳೆಯಲ್ಲಿ ಕರ್ತನಿಗೆ ದ್ರೋ
ಹ ಮಾಡಿದವರಾದಿರಿ; ನಾನು ಸತ್ತ ಮೇಲೆ ಇನ್ನೇನಾಗುವದು! ನಿ
೨೮ ಮ್ಮ ಕುಲಗಳ ಎಲ್ಲಾ ಹಿರಿಯರನ್ನೂ, ನಿಮ್ಮ ಅಧಿಕಾರಿಗಳನ್ನೂ,
ನನ್ನ ಬಳಿಗೆ ಕೂಡಿಸಿರಿ; ಅಗ ಈ ಮಾತನ್ನು, ಅವರು ಕೇಳುವ
ಹಾಗೆ, ಆಡುವೆನು; ಆಕಾಶವನ್ನೂ ಭೂಮಿಯನ್ನೂ ಸಾಕ್ಷಿಗೆ ಕರೆ
೨೯ ಯುವೆನು. ಯಾಕಂದರೆ ನಾನು ಸತ್ತ ಮೇಲೆ, ನೀವು ಕೆಟ್ಟೇ ಕೆ



ಟ್ಟು ಹೋಗುವಿರೆಂದು, ಬಲ್ಲೆನು; ನೀವು ಕರ್ತನ ಮುಂದೆ ಕೆಟ್ಟದ್ದ
ನ್ನು ಮಾಡಿ, ನಿಮ್ಮ ಕೈ ಕ್ರಿಯೆಗಳಿಂದ ಅವನಿಗೆ ಕೋಪ ಎಬ್ಬಿ
ಸುವ ಕಾರಣ, ಕಡೇ ದಿವಸದಲ್ಲಿ ನಿಮಗೆ ಕೇಡು ಸಂಭವಿಸುವದು.
೩೦ ಆಗ ಮೋಶೆ ಇಸ್ರಯೇಲ್ ಸಭೆ ಕೇಳುವ ಹಾಗೆ, ಈ ಹಾಡಿನ
ಮಾತುಗಳನ್ನು ಹೇಳಿ, ಶೀರಿಸಿದನು;—

## ೩೨. ಸಂಧಿ.

೧ ಆಕಾಶಗಳೇ, ಕಿವಿ ಕೊಡಿರಿ—ನಾನು ಮಾತಾಡುತ್ತೇನೆ;
ಭೂಮಿಯು ನನ್ನ ಬಾಯಿಯ ಮಾತುಗಳನ್ನು ಕೇಳಲಿ.
೨ ನನ್ನ ಕಲಿಕೆಯು ಮಳೆಯಂತೆ ಸುರಿಯುವದು;
ನನ್ನ ಮಾತು ಮಂಜಿನಂತೆಯೂ,
ಹುಲ್ಲಿನ ಮೇಲೆ ಬೀಳುವ ತುಂಪರೆಯ ಹಾಗೆಯೂ,
ಪೈರ್ಯದ ಮೇಲೆ ಬೀಳುವ ವೃಷ್ಟಿಗಳ ಹಾಗೆಯೂ ಗಕೆಯುವದು.
೩ ಯಾಕಂದರೆ ಕರ್ತನ ಹೆಸರನ್ನು ಸಾರುತ್ತೇನೆ;
ನಮ್ಮ ದೇವರಿಗೆ ದೊಡ್ಡಸ್ತಿಕೆಯನ್ನು ಕೊಡಿರಿ.
೪ ಅವನೇ ಬಂಡೆ, ಅವನ ಕೃತ್ಯವು ಸಂಪೂರ್ಣವಾದದ್ದು;
ಅವನ ಮಾರ್ಗಗಳೆಲ್ಲಾ ನ್ಯಾಯ;
ಅವನು ಅನ್ಯಾಯವಿಲ್ಲದ ನಂಬಿಕೆಯುಳ್ಳ ದೇವರು;
ನೀತಿಯೂ ಯಥಾರ್ಥವೂ ಉಳ್ಳವನು.
೫ ತಮ್ಮ ಮಾರ್ಗ ಕೆಡಿಸಿ ಬಿಟ್ಟರು;
ಅವರು ಅವನ ಮಕ್ಕಳಲ್ಲವೆಂಬುವದು ಅವರ ಊಣತೆ;
ಅವರು ಮುಖ ಡೊಂಕಾದ ಸಂತತಿಯೇ.
೬ ಕರ್ತನಿಗೆ ಇದನ್ನು ಪ್ರತಿಯಾಗಿ ಕೊಡುತ್ತೀರೋ!
ಜ್ಞಾನವಿಲ್ಲದ ಬುದ್ಧಿಹೀನ ಜನರೇ! ಅವನು ನಿನ್ನನ್ನು ಕೊಂಡ ತಂ
ದೆಯಲ್ಲವೋ!
ಅವನೇ ನಿನ್ನನ್ನು ಮಾಡಿ, ಸ್ಥಿರ ಪಡಿಸಿದ್ದಾನೆ.
೭ ಪೂರ್ವದ ದಿವಸಗಳನ್ನು ಜ್ಞಾಪಕ ಮಾಡು;
ತಲ ತಲಾಂತರಗಳ ವರುಷಗಳನ್ನು ಗ್ರಹಿಸಿ ಕೊಳ್ಳಿರಿ;
ನಿನ್ನ ತಂದೆಯನ್ನು ಕೇಳು, ಅವನು ನಿನಗೆ ತಿಳಿಸುವನು,
ನಿನ್ನ ಹಿರಿಯರನ್ನು ಕೇಳು, ಅವರು ನಿನಗೆ ಹೇಳುವರು.
೮ ಮಹೋನ್ನತನು ಜನಾಂಗಳಿಗೆ ಸ್ವಾಸ್ಥ್ಯ ಕೊಡುವಾಗ,
ಅವನು ಆದಮನ ಮಕ್ಕಳನ್ನು ಬಿಂಗಡಿಸುವಾಗ,
ಇಸ್ರಯೇಲ್ ಮಕ್ಕಳ ಲೆಖ್ಖದ ಪ್ರಕಾರ
ಜನಗಳ ಮೇರೆಗಳನ್ನು ಇಟ್ಟನು.
೯ ಯಾಕಂದರೆ ಕರ್ತನ ಭಾಗ ಅವನ ಜನವೇ;
ಯಾಕೋಬನೇ ಅವನ ಸ್ವಾಸ್ಥ್ಯದ ಪಾಲು.
೧೦ ಅವನು ಅರಣ್ಯದ ದೇಶದಲ್ಲಿಯೂ,
ಘರ್ಜನೆಯುಳ್ಳ ಅಡವಿಯ ಕಾಡಿನಲ್ಲಿಯೂ, ಅವನನ್ನು ದೊರ
ಕಿಸಿ ಕೊಂಡು,
ಸುತ್ತಿ ಕೊಂಡು, ಪರಾಮರಿಸಿ,
ಕಣ್ಣು ಬೊಂಬೆಯ ಹಾಗೆ ಕಾಪಾಡಿದನು.
೧೧ ಹದ್ದು ತನ್ನ ಗೂಡನ್ನು ಎಬ್ಬಿಸಿ,
ಪಿಳ್ಳೆಗಳ ಮೇಲೆ ಅಡ್ಡಾಡಿ,
ರೆಕ್ಕೆಗಳನ್ನು ಚಾಚಿ,
ಅವುಗಳನ್ನು ತಕ್ಕೊಂಡು, ಪಕ್ಕದ ಮೇಲೆ ಎತ್ತಿ ಕೊಳ್ಳುವಂತೆ,
೧೨ ಕರ್ತನು ಒಬ್ಬನೇ ಅವನನ್ನು ನಡಿಸಿದನು;
ಅನ್ಯ ದೇವರು ಒಬ್ಬನೂ ಅವನ ಸಂಗಡ ಇದ್ದಿಲ್ಲ.
೧೩ ಅವನು ಹೊಲದ ಆದಾಯವನ್ನು ಉಣ್ಣುವ ಹಾಗೆ,
ಭೂಮಿಯ ಎತ್ತರವಾದ ಸ್ಥಳಗಳಲ್ಲಿ ಅವನನ್ನು ರಥ ಏರ ಮಾಡಿ,
ಬಂಡೆಯೊಳಗಿಂದ ಜೇನನ್ನೂ,
ಬಿಳೀ ಕಲ್ಲಿನ ಬಂಡೆಯೊಳಗಿಂದ ಎಣ್ಣೆಯನ್ನೂ, ಅವನಿಗೆ ಕುಡಿ
ಯ ಕೊಟ್ಟನು.
೧೪ ಹಸಗಳ ಕೆನೆಯನ್ನೂ, ಕುರಿಗಳ ಹಾಲನ್ನೂ,
ಕುರಿ ಮರಿಗಳ ಕೊಬ್ಬಿನ ಸಂಗಡ,
ಬಾಶಾನಿನ ಟಗರುಗಳನ್ನೂ, ಹೋತುಗಳನ್ನೂ,
ಉತ್ತಮವಾದ ಗೋಧಿಯ ಸಂಗಡ, ಕೊಟ್ಟನು.
ದ್ರಾಕ್ಷೇ ರಸವನ್ನು ಬೆರಸದೆ ಕುಡಿದಿ.
೧೫ ಆಗ ಯೆಷುರೂನನ್ನು ಕೊಬ್ಬಿ, ಒದ್ದನು;
ಕೊಬ್ಬಿ ಕೊಂಡು, ತೋರವಾಗಿ
ಕೊಬ್ಬು ಮುಚ್ಚಿ ಹೋದಿ.
ಅವನು ತನ್ನನ್ನು ಮಾಡಿದ ದೇವರನ್ನು ಬಿಟ್ಟು,
ತನ್ನ ರಕ್ಷಣೆಯ ಬಂಡೆಯನ್ನು ಅಲಕ್ಷ್ಯ ಮಾಡಿದನು.
೧೬ ಅನ್ಯರಿಂದ ಅವನಿಗೆ ಕೋಪ ಹುಟ್ಟಿಸಿದರು;
ಅಸಹ್ಯಗಳಿಂದ ಅವನಿಗೆ ಕರ ಕಕೆ ಎಬ್ಬಿಸಿದರು.
೧೭ ದೇವರಲ್ಲದ ದೆವ್ವಗಳಿಗೆ,
ಅವರು ಅರಿಯದ ದೇವರುಗಳಿಗೆ,
ಇತ್ತಲಾಗಿ ಹುಟ್ಟಿದ ಹೊಸಬರಿಗೆ,
ಅವರ ಪಿತೃಗಳು ಅರಿಯದವರಿಗೆ, ಬಲಿ ಅರ್ಪಿಸಿದರು.
೧೮ ನಿನ್ನನ್ನು ಹುಟ್ಟಿಸಿದ ಬಂಡೆಯನ್ನು ನೆನಸದೆ,
ನಿನ್ನನ್ನು ರೂಪಿಸಿದ ದೇವರನ್ನು ಮರೆತಿ.
೧೯ ಕರ್ತನು ಅದನ್ನು ನೋಡಿ,
ಕರ ಕಕೆಯಿಂದ ತನ್ನ ಕುಮಾರ ಕುಮಾರ್ತೆಗಳನ್ನು ಉದಾ
ಸೀನ ಮಾಡಿದನು.
೨೦ ಅವನು ಹೇಳಿದ್ದೇನಂದರೆ—ನನ್ನ ಮುಖವನ್ನು ಅವರಿಗೆ ಮರೆ
ಮಾಡುವೆನು;
ಅವರ ಅಂತ್ಯವು ಏನೆಂದು ನೋಡುವೆನು;
ಯಾಕಂದರೆ ಅವರು ತಕ್ಕುಳ್ಳ ಸಂತತಿಯೇ,
ನಂಬಿಕೆಯಿಲ್ಲದ ಮಕ್ಕಳೇ.
೨೧ ದೇವರಲ್ಲದ್ದರಿಂದ ಅವರು ನನಗೆ ಕೋಪ ಹುಟ್ಟಿಸಿದರು;
ತಮ್ಮ ಮಾಯೆಗಳಿಂದ ನನಗೆ ಕರ ಕಕೆ ಎಬ್ಬಿಸಿದರು;
ಜನವಲ್ಲದ್ದರಿಂದ ನಾನು ಅವರಿಗೆ ಕೋಪ ಹುಟ್ಟಿಸುವೆನು;
ಮೂಢ ಜನಾಂಗದಿಂದ ಅವರಿಗೆ ಕರ ಕಕೆ ಎಬ್ಬಿಸುವೆನು.
೨೨ ಯಾಕಂದರೆ ನನ್ನ ಕೋಪದಲ್ಲಿ ಬೆಂಕಿ ಹತ್ತಿತು;
ಅದು ಕೆಳಗಿನ ಪಾತಾಳದ ಮಟ್ಟಿಗೂ ಉರಿದು,
ಭೂಮಿಯನ್ನೂ ಅದರ ಆದಾಯವನ್ನೂ, ತಿಂದು ಬಿಟ್ಟು,
ಬೆಟ್ಟಗಳ ಅಸ್ತಿವಾರವನ್ನು ದಹಿಸುವದು.
೨೩ ನಾನು ಕೇಡುಗಳನ್ನು ಅವರ ಮೇಲೆ ಕೂಡಿಸಿರುವೆನು;
ನನ್ನ ಬಾಣಗಳನ್ನು ಅವರ ಮೇಲೆ ಎಸೆದು, ಶೀರಿಸುವೆನು.

೨೪ ಹಸಿವೆಯಿಂದ ಕುಂದಿ ಹೋಗುವರು;
ಜ್ವಾಲೆಯಿಂದಲೂ ಕಠಿಣ ವ್ಯಾಧಿಯಿಂದಲೂ ಸಂಹರಿಸಲ್ಪಡುವರು.
ಕಾಡ ಮೃಗಗಳ ಹಲ್ಲನ್ನೂ,
ಧೂಳಿಯಲ್ಲಿರುವ ಹಾವುಗಳ ವಿಷದ ಸಂಗಡ,
ಅವರಿಗೆ ವಿಕೋಧವಾಗಿ ಕಳುಹಿಸುವೆನು.
೨೫ ಹೊರಗೆ ಕತ್ತಿಯೂ, ಒಳಗೆ ಭಯವೂ
ಪ್ರಾಯಸ್ಥನನ್ನೂ, ಕನ್ಯಿಕೆಯನ್ನೂ,
ನಕೆ ಕೂಡಲಿನವನ ಸಂಗಡ ಮೊಲೆ ಕೂಸನ್ನೂ ಸಂಹರಿಸುವವು.
೨೬ ಅವರನ್ನು ಊದಿ ಬಿಡುವೆನೆಂದು, ಹೇಳಿ ಕೊಂಡೆನು;
ಅವರ ಜ್ಞಾಪಕವನ್ನು ಮನುಷ್ಯರಲ್ಲಿ ಇರದ ಹಾಗೆ ಮಾಡುವೆನು.
೨೭ ಶತ್ರುವಿನ ಕೋಪಕ್ಕೆ ಮಾತ್ರ ಭಯ ಪಡುತ್ತೇನೆ;
ಅವರ ವಿಕೋಧಿಗಳು ತಿಳಿಯದೆ ನಡೆದಾರು;
ನಮ್ಮ ಕೈ ಉನ್ನತವಾಗಿದೆ ಎಂದೂ,
ಕರ್ತನು ಇವುಗಳನ್ನೆಲ್ಲಾ ಮಾಡಲಿಲ್ಲವೆಂದೂ, ಹೇಳ್ಯಾರು.
೨೮ ಯಾಕಂದರೆ ಅವರು ಆಲೋಚನೆ ಭ್ರಷ್ಟ ಜನಾಂಗವೇ;
ಅವರಲ್ಲಿ ಗ್ರಹಿಕೆ ಇಲ್ಲ.

೨೯ ಅವರು ಜ್ಞಾನವಂತರಾಗಿ, ಇದರ ವಿಷಯ,
ಬುದ್ಧಿ ತಂದು, ತಮ್ಮ ಕಡೇ ಕಾಲಕ್ಕಾಗಿ ಗ್ರಹಿಕೆಯುಳ್ಳವರಾದರೆ,
ಎಷ್ಟೋ ಒಳ್ಳೇದು!
೩೦ ಅವರ ಬಂಡೆ ಅವರನ್ನು ಮಾರಿ ಬಿಟ್ಟರೆ ಹೊರ್ತಾಗಿ,
ಕರ್ತನು ಅವರನ್ನು ಒಪ್ಪಿಸಿ ಬಿಟ್ಟರೆ ಹೊರ್ತಾಗಿ,
ಒಬ್ಬನು ಹ್ಯಾಗೆ ಸಾವಿರ ಮಂದಿಯನ್ನು ಹಿಂದಟ್ಟುವನು!
ಇಬ್ಬರು ಹ್ಯಾಗೆ ಹತ್ತು ಸಾವಿರ ಮಂದಿಯನ್ನು ಓಡಿಸುವರು!
೩೧ ಯಾಕಂದರೆ ನಮ್ಮ ಬಂಡೆಯ ಹಾಗೆ ಅವರ ಬಂಡೆ ಅಲ್ಲ.
ಇದಕ್ಕೆ ನಮ್ಮ ಶತ್ರುಗಳೇ ಸಾಕ್ಷಿ.
೩೨ ಯಾಕಂದರೆ ಸೊದೋಮಿನ ದ್ರಾಕ್ಷೇ ಗಿಡದಿಂದಲೂ,
ಗಮೋರದ ತೋಟದೊಳಗಿಂದಲೂ,
ಅವರ ದ್ರಾಕ್ಷೇ ಗಿಡ;
ಅವರ ಹುಳ್ಳುಗಳು ವಿಷದ ಹುಳ್ಳುಗಳು;
ಅವರಿಗೆ ಕಹಿಯಾದ ಗೊಂಚಲುಗಳು ಅವೆ.
೩೩ ಅವರ ದ್ರಾಕ್ಷೇ ರಸವು ಸರ್ಪಗಳ ವಿಷವೂ, ಹಾವುಗಳ ಕ್ರೂರ ವಿಷವೂ, ಆಗಿದೆ.
೩೪ ಅದು ನನ್ನ ಸಂಗಡ ಬಚ್ಚಿಟ್ಟಲ್ಪಟ್ಟಿದ್ದಲ್ಲವೋ?
ನನ್ನ ಉಗ್ರಾಣಗಳಲ್ಲಿ ಮುದ್ರೆ ಹಾಕಲ್ಪಟ್ಟಿದ್ದಲ್ಲವೋ?
೩೫ ಮುಯ್ಯಿಗೆ ಮುಯ್ಯಿ ಕೊಡುವದೂ ಪ್ರತಿ ಫಲ ಕೊಡುವದೂ ನನ್ನದೇ;
ತಕ್ಕ ಕಾಲದಲ್ಲಿ ಅವರ ಕಾಲು ಜಾರುವದು;
ಯಾಕಂದರೆ ಅವರ ನಾಶನದ ದಿವಸ ಸಮೀಪವೇ;
ಅವರಿಗೆ ಸಿದ್ಧವಾದದ್ದು ಬೇಗ ಬರುತ್ತದೆ.

೩೬ ಯಾಕಂದರೆ ಕರ್ತನು ತನ್ನ ಜನರಿಗೆ ನ್ಯಾಯ ತೀರಿಸುವನು;
ಬಲ ಕೋಯಿತೆಂದೂ,
ಬಚ್ಚಿಟ್ಟಲ್ಪಟ್ಟವರೂ ಉಳಿದವರೂ ಇಲ್ಲವೆಂದೂ ನೋಡಿದಾಗ,
ತನ್ನ ದಾಸರಿಗೋಸ್ಕರ ಪಶ್ಚಾತ್ತಾಪ ಪಡುವನು.
೩೭ ಆಗ ಅವನು ಹೇಳುವದೇನಂದರೆ—ಅವರ ದೇವರುಗಳು ಎಲ್ಲಿ?
ಅವರು ನಂಬಿ ಕೊಂಡಂಥ,
೩೮ ಅವರ ಬಲಿಗಳ ಕೊಬ್ಬನ್ನು ತಿಂದಂಥ,
ಅವರ ಪಾನದ ಅರ್ಪಣೆಗಳ ದ್ರಾಕ್ಷೇ ರಸ ಕುಡಿದಂಥ
ಅವರ ಬಂಡೆಯು ಎಲ್ಲಿ?
ಅವರು ಎದ್ದು, ನಿಮಗೆ ಸಹಾಯ ಮಾಡಲಿ;
ನಿಮಗೋಸ್ಕರ ಮರೆಯಾಗಲಿ.
೩೯ ನಾನು ಅವನೇ ಎಂದೂ,
ನನ್ನ ಸಂಗಡ ಬೇರೆ ದೇವರಿಲ್ಲವೆಂದೂ, ಈಗ ನೋಡಿರಿ;
ನಾನೇ ಸಾಯಿಸುತ್ತೇನೆ, ಬದುಕಿಸುತ್ತೇನೆ,
ಘಾಯ ಮಾಡುತ್ತೇನೆ, ನಾನೇ ಸ್ವಸ್ಥ ಮಾಡುತ್ತೇನೆ;
ನನ್ನ ಕೈಯಿಂದ ತಪ್ಪಿಸುವವನಿಲ್ಲ.
೪೦ ನಾನು ಆಕಾಶಕ್ಕೆ ನನ್ನ ಕೈಯನ್ನು ಎತ್ತಿ—
ನಾನು ನಿತ್ಯವಾಗಿ ಬದುಕುತ್ತೇನೆಂದು, ಹೇಳುತ್ತೇನೆ.
೪೧ ನಾನು ಮಿಂಚುವ ಕತ್ತಿಯನ್ನು ಹದ ಮಾಡುವಾಗ,
ನನ್ನ ಕೈ ನ್ಯಾಯವನ್ನು ಹಿಡು ಕೊಳ್ಳುವಾಗ,
ನನ್ನ ಶತ್ರುಗಳಿಗೆ ಮುಯ್ಯಿಗೆ ಮುಯ್ಯಿ ತೀರಿಸಿ,
ನನ್ನ ಹಗೆಯವರಿಗೆ ಸಲ್ಲಿಸುವೆನು.
೪೨ ಯುದ್ಧದಲ್ಲಿ ಸತ್ತವರ, ಕೆಕೆಯವರ ರಕ್ತದಿಂದಲೂ,
ಶತ್ರುವಿನ ಮುಖ್ಯಸ್ಥರ ತಲೆಯ ರಕ್ತದಿಂದಲೂ,
ನನ್ನ ಬಾಣಗಳನ್ನು ಮತ್ತಾಗ ಮಾಡುವೆನು,
ನನ್ನ ಕತ್ತಿ ಮಾಂಸವನ್ನು ತಿನ್ನುವದು.

೪೩ ಎಲ್ಲಾ ಜನಾಂಗಗಳೇ, ಅವನ ಜನರ ಸಂಗಡ ಹರ್ಷಿಸಿರಿ,
ಯಾಕಂದರೆ ತನ್ನ ದಾಸರ ರಕ್ತಕ್ಕೋಸ್ಕರ ಮುಯ್ಯಿ ತೀರಿಸುತ್ತಾನೆ,
ತನ್ನ ಶತ್ರುಗಳಿಗೆ ಮುಯ್ಯಿಗೆ ಮುಯ್ಯಿ ತೀರಿಸುತ್ತಾನೆ,
ತನ್ನ ಭೂಮಿಗೋಸ್ಕರವೂ ತನ್ನ ಜನರಿಗೋಸ್ಕರವೂ ಪಾಪ ಮುಚ್ಚುತ್ತಾನೆ

೪೪ ಆಗ ಮೋಶೆ ನೂನನ ಮಗನಾದ ಯೆಹೋಶುವನ ಸಂಗಡ ಬಂದು, ಈ ಹಾಡಿನ ಮಾತುಗಳನ್ನೆಲ್ಲಾ, ಜನರು ಕೇಳುವ ಹಾ
೪೫ ಗೆ, ಹೇಳಿದನು. ಮೋಶೆ ಈ ಮಾತುಗಳನ್ನೆಲ್ಲಾ ಸಮಸ್ತ ಇಸ್ರ
೪೬ ಯೇಲಿಗೆ ಹೇಳಿ ತೀರಿಸಿದಾಗ, ಅವರಿಗೆ ಹೇಳಿದ್ದೇನಂದರೆ—ನಾನು ಈ ಹೊತ್ತು ನಿಮಗೆ ಸಾಕ್ಷಿಯಾಗಿ ಹೇಳುವ ಮಾತುಗಳಿಗೆಲ್ಲಾ ನಿಮ್ಮ ಹೃದಯಗಳನ್ನು ಇಡಿರಿ; ಈ ನ್ಯಾಯ ಪ್ರಮಾಣದ ಮಾತುಗಳನ್ನೆಲ್ಲಾ ಕಾಪಾಡಿ, ಮಾಡುವದಕ್ಕೆ, ನಿಮ್ಮ ಮಕ್ಕಳಿಗೆ ಆ
೪೭ ಜ್ಞಾಪಿಸ ಬೇಕು. ಯಾಕಂದರೆ ಇದು ನಿಮಗೆ ವ್ಯರ್ಥ ಕಾರ್ಯವಲ್ಲ, ಇದು ನಿಮ್ಮ ಜೀವವೇ. ನೀವು ಸ್ವತಂತ್ರಿಸಿ ಕೊಳ್ಳುವದಕ್ಕೆ ಯೊರ್ದನನ್ನು ದಾಟುವ ಭೂಮಿಯಲ್ಲಿ ಇದರಿಂದಲೇ ನಿಮ್ಮ ದಿವಸಗಳನ್ನು ಹೆಚ್ಚಿಸಿ ಕೊಳ್ಳುವಿರಿ.

೪೮ ಅದೇ ದಿವಸದಲ್ಲಿ ಕರ್ತನು ಮೋಶೆಗೆ ಹೇಳಿದ್ದೇನಂದರೆ—
೪೯ ಈ ಅಬರಿಂ ಪರ್ವತದ ಮೇಲೆ ಮೋವಾಬ್ ದೇಶದಲ್ಲಿಯೂ, ಯೆರಿಕೋವಿಗೆ ಎದುರಾಗಿಯೂ ಇರುವ ನೇಬೊ ಬೆಟ್ಟದ ಮೇಲೆ ಏರಿ ಹೋಗು; ನಾನು ಇಸ್ರಯೇಲ್ ಮಕ್ಕಳಿಗೆ ಸ್ವಾಸ್ತ್ಯವಾಗಿ ಕೊ



೫೦ ರುವ ಕಾನಾನ್ ದೇಶವನ್ನು ನೋಡು. ನಿನ್ನ ಸಹೋದರನಾದ ಆರೋನನು ಹೋರ್ ಬೆಟ್ಟದಲ್ಲಿ ಸತ್ತು, ತನ್ನ ಜನರ ಬಳಿಗೆ ಕೂಡಿಸಲ್ಪಟ್ಟ ಹಾಗೆ, ನೀನು ಏರಿ ಹೋಗುವ ಬೆಟ್ಟದಲ್ಲಿ ಸತ್ತು,
೫೧ ನಿನ್ನ ಜನರ ಬಳಿಗೆ ಕೂಡಿಸಲ್ಪಡು. ಕಾರಣವೇನಂದರೆ, ನೀವು ಜೀನ್ ಅರಣ್ಯದಲ್ಲಿ ಕಾದೆಸಿನ ಮೆರೀಬದ ನೀರಿನ ಬಳಿಯಲ್ಲಿ, ನನ್ನನ್ನು ಇಸ್ರಯೇಲ್ ಮಕ್ಕಳಲ್ಲಿ ಪರಿಶುದ್ಧ ಮಾಡದೆ, ನನಗೆ
೫೨ ವಿರೋಧವಾಗಿ ಅಕೃತ್ಯ ಮಾಡಿದಿರಿ. ನೀನು ಆ ದೇಶವನ್ನು ಕಣ್ಣಾರ ನೋಡುವಿ, ಆದರೆ ನಾನು ಇಸ್ರಯೇಲ್ ಮಕ್ಕಳಿಗೆ ಕೊಡುವ ದೇಶದಲ್ಲಿ ನೀನು ಪ್ರವೇಶಿಸುವದಿಲ್ಲ.

## ೩೩. ಸಂಧಿ.

೧ ದೇವರ ಮನುಷ್ಯನಾದ ಮೋಶೆ ಸಾಯುವದಕ್ಕಿಂತ ಮುಂಚೆ ಇಸ್ರಯೇಲ್ ಮಕ್ಕಳಿಗೆ ಕೊಟ್ಟ ಆಶೀರ್ವಾದವು ಯಾವದಂದರೆ—

೨ ಕರ್ತನು ಸೀನಾಯಿಂದ ಬಂದನು;
ಸೇಯಿರಿನಿಂದ ಅವರಿಗೆ ಉದಯಿಸಿದನು;
ಪಾರಾ ಬೆಟ್ಟದಿಂದ ಪ್ರಕಾಶಿಸಿದನು;
ಪರಿಶುದ್ಧರ ಅಯುತಗಳ ಸಂಗಡ ಬಂದನು;
ಅವನ ಬಲ ಪಾರ್ಶ್ವದಿಂದ ಅವರಿಗೆ ಬೆಂಕಿಯ ಕಟ್ಟಳೆ ಹೊರಟಿತು.
೩ ಹೌದು, ಜನಗಳನ್ನು ಪ್ರೀತಿ ಮಾಡುತ್ತಾನೆ;
ಅವನ ಪರಿಶುದ್ಧರೆಲ್ಲರು ನಿನ್ನ ಕೈಯಲ್ಲಿ ಇದ್ದಾರೆ;
ಅವರು ನಿನ್ನ ಪಾದದ ಬಳಿಯ ಕೂತು ಕೊಂಡು,
ನಿನ್ನ ವಾಕ್ಯಗಳನ್ನು ಹೊಂದುತ್ತಾರೆ.
೪ ಮೋಶೆ ನಮಗೆ ನ್ಯಾಯಪ್ರಮಾಣವನ್ನು ಆಜ್ಞಾಪಿಸಿದ್ದಾನೆ;
ಅದೇ ಯಾಕೋಬನ ಸಭೆಯ ಬಾಧ್ಯವು.
೫ ಜನರ ಮುಖ್ಯಸ್ಥರೂ,
ಇಸ್ರಯೇಲಿನ ಕುಲಗಳೂ ಕೂಡಿ ಕೊಂಡಿರಲಾಗಿ,
ಅವನು ಯೆಷುರೂನನಲ್ಲಿ ಅರಸನಾಗಿದ್ದನು.

೬ ರೂಬೆನನು ಸಾಯದೆ, ಬದುಕಲಿ;
ಅವನ ಜನ ಸ್ವಲ್ಪವಾಗದಿರಲಿ.
೭ ಯೆಹೂದನಿಗೆ ಏನಂದರೆ—
ಕರ್ತನೇ, ಯೆಹೂದನ ಶಬ್ದವನ್ನು ಕೇಳು;
ಅವನನ್ನು ಸ್ವಂತ ಜನರ ಬಳಿಗೆ ತೇರಿಸು;
ತನ್ನ ಕೈಗಳಿಂದ ಹೋರಾಡುವನು;
ಅವನ ವೈರಿಗಳ ವಿರುದ್ಧ ಅವನಿಗೆ ಸಹಾಯವಾಗಿರು.

೮ ಲೇವಿಗೆ ಹೇಳಿದ್ದೇನಂದರೆ—
ನಿನ್ನ ತುಮ್ಮಿಮ್ ನಿನ್ನ ಊರಿಮ್
ಮಸ್ಸದಲ್ಲಿ ನೀನು ಶೋಧಿಸಿದಂಥ,
ಮೆರೀಬದ ನೀರಿನ ಬಳಿಯಲ್ಲಿ ನೀನು ವಿವಾದ ಮಾಡಿದಂಥ,
೯ ನಿನ್ನ ಭಕ್ತ ಪ್ರಿಯನ ಬಳಿಯಲ್ಲಿ ಇರುವವು;
ಅವನು ತಂದೆ ತಾಯಿಗಳಿಗೆ, ಅವರನ್ನು ನೋಡಲಿಲ್ಲ, ಅಂದನು.
ತನ್ನ ಸಹೋದರರ ಗುರುತನ್ನು ತಿಳಿಯ ಕೊಳ್ಳಲಿಲ್ಲ;
ತನ್ನ ಮಕ್ಕಳನ್ನು ಅರಿಯಲಿಲ್ಲ;
ಯಾಕಂದರೆ ಅವರು ನಿನ್ನ ವಾಕ್ಯವನ್ನು ಕೈ ಕೊಂಡು,
ನಿನ್ನ ಒಡಂಬಡಿಕೆಯನ್ನು ಕಾಪಾಡುತ್ತಾರೆ.
೧೦ ಅವರು ಯಾಕೋಬನಿಗೆ ನಿನ್ನ ನ್ಯಾಯಗಳನ್ನೂ,
ಇಸ್ರಯೇಲಿಗೆ ನಿನ್ನ ನ್ಯಾಯಪ್ರಮಾಣವನ್ನೂ ಬೋಧಿಸುವರು;
ನಿನ್ನ ಮುಖದ ಮುಂದೆ ಧೂಪವನ್ನೂ,
ನಿನ್ನ ಬಲಿಪೀಠದ ಮೇಲೆ ಸರ್ವಾಂಗ ದಹನವನ್ನೂ ಇಡುವರು.
೧೧ ಕರ್ತನೇ, ಅವನ ಆಸ್ತಿಯನ್ನು ಆಶೀರ್ವದಿಸು;
ಅವನ ಕೈ ಕೆಲಸವನ್ನು ಮೆಚ್ಚು;
ಅವನಿಗೆ ವಿರೋಧವಾಗಿ ಏಳುವವರ,
ಅವನನ್ನು ಹಗೆ ಮಾಡುವವರ ಸೊಂಟಗಳನ್ನು,
ಅವರು ತಿರಿಗಿ ಏಳದ ಹಾಗೆ, ಘಾಯ ಮಾಡು.

೧೨ ಬೆನ್ಯಮೀನನಿಗೆ ಹೇಳಿದ್ದೇನಂದರೆ—
ಕರ್ತನಿಗೆ ಪ್ರಿಯನು ಭರವಸವಾಗಿ ಅವನ ಬಳಿಯಲ್ಲಿ ವಾಸ ಮಾಡುವನು;
ಆತನವನಿಗೆ ದಿನವೆಲ್ಲಾ ಮರೆಯಾಗಿರುವನು;
ಅವನ ಹೆಗಲುಗಳ ನಡುವೆ ವಾಸ ಮಾಡುವನು.
೧೩ ಯೋಸೆಫನಿಗೆ ಹೇಳಿದ್ದೇನಂದರೆ—
ಅವನ ದೇಶವು,
ಆಕಾಶದ ಉತ್ತಮವಾದದರಿಂದಲೂ, ಮಂಜಿನಿಂದಲೂ,
ಕೆಳಗೆ ಮಲಗಿರುವ ಅಗಾಧದಿಂದಲೂ,
೧೪ ಬಿಸಿಲಿನ ಆದಾಯದ ಉತ್ತಮವಾದದರಿಂದಲೂ,
ತಿಂಗಳುಗಳ ಮೊಳಕೆಯ ಉತ್ತಮವಾದದರಿಂದಲೂ,
೧೫ ಪೂರ್ವ ಪರ್ವತಗಳ ಶ್ರೇಷ್ಠವಾದದರಿಂದಲೂ,
ನಿತ್ಯವಾದ ಬೆಟ್ಟಗಳ ಉತ್ತಮವಾದದರಿಂದಲೂ,
೧೬ ಭೂಮಿಯ ಉತ್ತಮವಾದದರಿಂದಲೂ, ಅದರ ಪೂರ್ಣತೆಯಿಂದಲೂ,
ಕರ್ತನ ಕಡೆಯಿಂದ ಆಶೀರ್ವಾದ ಹೊಂದಲಿ;
ಪೊದೆಯಲ್ಲಿ ವಾಸವಾಗಿದ್ದವನ ಮೆಚ್ಚಿಗೆ
ಯೋಸೆಫನ ತಲೆಯ ಮೇಲೆಯೂ,
ತನ್ನ ಸಹೋದರರಿಗೆ ಪ್ರತ್ಯೇಕವಾದವನ ನೆತ್ತಿಯ ಮೇಲೆಯೂ ಬರಲಿ.
೧೭ ಅವನ ಹೊಚ್ಚುಲ ಹೋರಿಯಂತೆ ಅವನಿಗೆ ಪ್ರಭೆ ಉಂಟು;
ಅವನ ಕೊಂಬುಗಳು ಕಾಡ ಕೋಣ ಕೊಂಬುಗಳೇ;
ಅವುಗಳಿಂದ ಜನಗಳನ್ನು ಒಟ್ಟಿಗೆ
ಭೂಮಿಯ ಅಂತ್ಯಗಳ ಪರ್ಯಂತರ ನೂಕುತ್ತಾನೆ;
ಇವು ಎಫ್ರಯಿಮನ ಅಯುತಗಳೂ,
ಇವು ಮನಸ್ಸೆಯ ಸಹಸ್ರಗಳೂ.

೧೮ ಜೆಬುಲೋನನಿಗೆ ಹೇಳಿದ್ದೇನಂದರೆ—
ಜೆಬುಲೋನನೇ, ನೀನು ಹೊರಕುವದರಲ್ಲಿ ಸಂತೋಷ ಪಡು;
ಇಸ್ಸಕಾರನೇ, ನಿನ್ನ ಗುಡಾರಗಳಲ್ಲಿ ಸಂತೋಷ ಪಡು.
೧೯ ಅವರು ಜನಗಳನ್ನು ಬೆಟ್ಟಕ್ಕೆ ಕರೆಯುವರು;
ಅಲ್ಲಿ ನೀತಿಯ ಬಲಿಗಳನ್ನು ಅರ್ಪಿಸುವರು;
ಯಾಕಂದರೆ ಸಮುದ್ರಗಳ ಉಗ್ರಾಣವನ್ನೂ,
ಮರಳಿನ ಗುಪ್ತವಾದ ದ್ರವ್ಯವನ್ನೂ ಹೀರಿ ಕೊಳ್ಳುವರು.
೨೦ ಗಾದನಿಗೆ ಹೇಳಿದ್ದೇನಂದರೆ—

ಗಾಡನನ್ನು ವಿಸ್ತರಿಸ ಮಾಡಿದವನು ಆಶೀರ್ವದಿಸಲ್ಪಡಲಿ;
ಅವನು ಸಿಂಹದಂತೆ ಮಲಗಿ ಕೊಂಡು,
ತೋಳ್ಳನ್ನೂ ನೆತ್ತಿಯನ್ನೂ ಕೀಳುತ್ತಾನೆ.
೨೧ ಅವನು ಮೊದಲನೇ ಪಾಲನ್ನು ತನಗೆ ನೋಡಿ ಕೊಂಡನು;
ಯಾಕಂದರೆ ಅಲ್ಲಿ ನ್ಯಾಯಾಧಿಪತಿಯ ಭಾಗ ನೇಮಿಸಲ್ಪ
ಟ್ಟಿದೆ;
ಜನರ ಮುಖ್ಯಸ್ಥರ ಸಂಗಡ ಬಂದು,
ಕರ್ತನ ನೀತಿಯನ್ನೂ,
ಇಸ್ರಯೇಲಿನ ಸಂಗಡ ಅವನ ನ್ಯಾಯಗಳನ್ನೂ ಮಾಡಿದನು.

೨೨ ದಾನನಿಗೆ ಹೇಳಿದ್ದೇನಂದರೆ—
ದಾನನು ಸಿಂಹದ ಮರಿಯೇ,
ಬಾಷಾನಿನಿಂದ ಹಾರಿ ಬರುವನು.

೨೩ ನೆಫ್ತಲಿಗೆ ಹೇಳಿದ್ದೇನಂದರೆ—
ನೆಫ್ತಲಿಯೇ, ಅನುಗ್ರಹದಿಂದ ತೃಪ್ತನೇ,
ಕರ್ತನ ಆಶೀರ್ವಾದದಿಂದ ತುಂಬಿದವನೇ,
ಪಶ್ಚಿಮವನ್ನೂ ದಕ್ಷಿಣವನ್ನೂ ಸ್ವತಂತ್ರಿಸಿಕೋ.

೨೪ ಆಶೇರನಿಗೆ ಹೇಳಿದ್ದೇನಂದರೆ—
ಆಶೇರನು ಮಕ್ಕಳ ಆಶೀರ್ವಾದವನ್ನು ಹೊಂದಲಿ;
ತನ್ನ ಸಹೋದರರ ಅನುಗ್ರಹವನ್ನು ಹೊಂದಲಿ;
ಅವನ ಕಾಲು ಎಣ್ಣೆಯಲ್ಲಿ ಅದ್ದಿ ಇರಲಿ.
೨೫ ಕಬ್ಬಿಣವೂ ತಾಮ್ರವೂ ನಿನ್ನ ಪಾದ ರಕ್ಷೆಯಾಗಿರಲಿ;
ನಿನ್ನ ದಿವಸಗಳ ಪ್ರಕಾರ ನಿನ್ನ ವಿಶ್ರಾಂತಿ ಇರಲಿ.

೨೬ ಯೆಷುರೂನನೇ, ದೇವರ ಹಾಗೆ ಯಾರೂ ಇಲ್ಲ;
ಅವನು ನಿನ್ನ ಸಹಾಯಕ್ಕೆ ಆಕಾಶದಲ್ಲಿಯೂ,
ತನ್ನ ಘನತೆಯಲ್ಲಿ ಮೇಘಗಳ ಮೇಲೆಯೂ, ರಥವೇರಿದವನಾ
ಗಿದ್ದಾನೆ.
೨೭ ಅನಾದಿಯಾದ ದೇವರು ಆಶ್ರಯವೇ;
ನಿತ್ಯವಾದ ತೋಳ್ಳುಗಳು ಕೆಳಗವೆ;
ಶತ್ರುವನ್ನು ನಿನ್ನ ಮುಂದೆ ಹೊರಡಿಸಿ,
ಅವರನ್ನು ನಾಶನ ಮಾಡೆಂದು ಹೇಳುವನು.
೨೮ ಇಸ್ರಯೇಲು ಏಕಾಂತವಾಗಿ ಭರವಸವಾಗಿ ವಾಸಿಸುವದು;
ಗೋಧಿ ದ್ರಾಕ್ಷೇ ರಸಗಳ ದೇಶದಲ್ಲಿ ಯಾಕೋಬನ ಬುಗ್ಗೆ ಇರು
ವದು.
ಅವನ ಆಕಾಶಗಳು ಸಹ ಮಂಜನ್ನು ಸುರಿಸುವವು.
೨೯ ಇಸ್ರಯೇಲೇ, ನಿನಗೆ ಭಾಗ್ಯವಾಯಿತು;
ನಿನ್ನ ಸಹಾಯದ ಗುರಾಣಿಯೂ
ನಿನ್ನ ಘನತೆಯ ಕತ್ತಿಯೂ,
ಆಗಿರುವ ಕರ್ತನಿಂದ ರಕ್ಷಿಸಲ್ಪಟ್ಟ ಜನನೇ,
ನಿನ್ನ ಹಾಗೆ ಯಾರು!
ನಿನ್ನ ಶತ್ರುಗಳು ನಿನಗೆ ಮುಖ ಸ್ತುತಿ ಮಾಡುವರು;
ನೀನು ಅವರ ಉನ್ನತವಾದ ಸ್ಥಳಗಳ ಮೇಲೆ ನಡೆದು ಹೋ
ಗುವಿ.

## ೩೪. ಸಂಧಿ.

೧ ಆಗ ಮೋಶೆ ಮೋವಾಬಿನ ಬೈಲಿನಿಂದ ನೇಬೋ ಪರ್ವತಕ್ಕೆ
ಯೆರಿಕೋವಿಗೆ ಎದುರಾಗಿರುವ ಪಿಸ್ಗದ ಶಿಖರಕ್ಕೆ ಏರಿ ಹೋದನು;
ಅಲ್ಲಿ ಕರ್ತನು ಅವನಿಗೆ ದೇಶವನ್ನೆಲ್ಲಾ, ದಾನಿನ ಪರ್ಯಂತರಕ್ಕೆ
೨ ರುವ ಗಿಲ್ಯಾದನ್ನೂ, ಎಲ್ಲಾ ನೆಫ್ತಲಿಯನ್ನೂ, ಸಮಸ್ತ ಎಫ್ರ
ಯಿಮನ, ಮನಸ್ಸೆಯ ದೇಶವನ್ನೂ, ಪಶ್ಚಿಮ ಸಮುದ್ರದ ಪ
೩ ರ್ಯಂತರಕ್ಕಿರುವ ಸಮಸ್ತ ಯೆಹೂದ ದೇಶವನ್ನೂ, ದಕ್ಷಿಣವ
ನ್ನೂ ಖರ್ಜೂರಗಳ ಪಟ್ಟಣವಾದ ಯೆರಿಕೋವಿನ ತಗ್ಗೆಂಬ ಬೈಲ
೪ ನ್ನೂ, ಜೋವಾರಿನ ಪರ್ಯಂತರಕ್ಕೂ ತೋರಿಸಿದನು. ಮತ್ತು
ಕರ್ತನು ಅವನಿಗೆ ಹೇಳಿದ್ದೇನಂದರೆ—ನಾನು ನಿನ್ನ ಬೀಜಕ್ಕೆ
ಕೊಡುತ್ತೇನೆಂದು ಅಬ್ರಹಾಮನಿಗೂ, ಇಸಾಕನಿಗೂ, ಯಾಕೋ
ಬನಿಗೂ ಪ್ರಮಾಣ ಮಾಡಿದ ದೇಶವು ಇದೇ; ಅದನ್ನು ನಿನಗೆ
ತೋರಿಸಿದೆನು; ಆದರೆ ನೀನು ಅಲ್ಲಿಗೆ ದಾಟಿ ಕೀರುವದಿಲ್ಲ.
೫ ಕರ್ತನು ಹೇಳಿದ ಹಾಗೆ, ಕರ್ತನ ದಾಸನಾದ ಮೋಶೆ ಅಲ್ಲಿ
೬ ಮೋವಾಬಿನ ದೇಶದಲ್ಲಿ ಸತ್ತನು. ಅವನು ಅವನನ್ನು ತಗ್ಗಿನಲ್ಲಿ
ಮೋವಾಬಿನ ದೇಶದಲ್ಲಿ, ಬೇತ್ಪೆಯೋರಿಗೆ ಎದುರಾಗಿ ಹೂಣಿಟ್ಟ
ನು; ಅವನ ಸಮಾಧಿ ಇಂದಿನ ವರಿಗೂ ಯಾರಿಗೂ ತಿಳಿಯಲಿಲ್ಲ.
೭ ಮೋಶೆ ಸಾಯುವಾಗ, ನೂರ ಇಪ್ಪತ್ತು ವರುಷದವನಾಗಿದ್ದನು;
೮ ಅವನ ಕಣ್ಣು ಮೊಬ್ಬಾಗಲಿಲ್ಲ; ಅವನ ತ್ರಾಣ ಹೋಗಲಿಲ್ಲ. ಇ
ಸ್ರಯೇಲ್ ಮಕ್ಕಳು ಮೋವಾಬಿನ ಬೈಲಿನಲ್ಲಿ ಮೋಶೆಯ ನಿಮಿ
ತ್ತ ಮೂವತ್ತು ದಿವಸ ಅತ್ತರು. ಈ ಪ್ರಕಾರ ಮೋಶೆಯ ನಿಮಿತ್ತ
ವಾದ ಗೋಳಾಟದಲ್ಲಿ ಅಳುವ ದಿವಸಗಳು ಮುಗಿದವು.
೯ ಇದಲ್ಲದೆ ನೂನನ ಮಗನಾದ ಯೆಹೋಶುವನು ಜ್ಞಾನದ ಆ
ತ್ಮದಿಂದ ತುಂಬಿದ್ದನು; ಯಾಕಂದರೆ ಮೋಶೆ ಅವನ ಮೇಲೆ ತನ್ನ
ಕೈಗಳನ್ನು ಇಟ್ಟಿದ್ದನು. ಇಸ್ರಯೇಲ್ ಮಕ್ಕಳು, ಕರ್ತನು ಮೋಶೆ
ಗೆ ಆಜ್ಞಾಪಿಸಿದ ಪ್ರಕಾರ ಮಾಡಿ, ಅವನ ಮಾತು ಕೇಳಿದರು.
೧೦ ಆದರೆ ಐಗುಪ್ತ ದೇಶದಲ್ಲಿ, ಫರೋನನಿಗೂ, ಅವನ ಎಲ್ಲಾ ಸೇ
ವಕರಿಗೂ, ಅವನ ಎಲ್ಲಾ ದೇಶಕ್ಕೂ, ಮಾಡುವದಕ್ಕೆ ಕರ್ತನು
ಅವನನ್ನು ಕಳುಹಿಸಿದ ಸಮಸ್ತ ಗುರುತುಗಳ, ಲಕ್ಷಣಗಳ ವಿಷ
೧೧ ಯದಲ್ಲಿಯೂ, ಮೋಶೆ ಸಮಸ್ತ ಇಸ್ರಯೇಲಿನ ಮುಂದೆ ತೋ
ರಿಸಿದ ಸಮಸ್ತ ಬಲವಾದ ಕೈಯ, ಸಮಸ್ತ ಮಹಾ ಭಯದ ವಿಷ
೧೨ ಯದಲ್ಲಿಯೂ, ಕರ್ತನು ಮುಖಾಮುಖಿಯಾಗಿ ತಿಳಿದ ಮೋಶೆ
ಯ ಹಾಗೆ ಮತ್ತೊಬ್ಬ ಪ್ರವಾದಿ ಇಸ್ರಯೇಲಿನಲ್ಲಿ ಏಳಲಿಲ್ಲ.

---

# THE BOOK OF JOSHUA.

## ಯೆಹೋಶುವನ ಪುಸ್ತಕವು.

## ೧. ಸಂಧಿ.

೧ ಕರ್ತನ ಸೇವಕನಾದ ಮೋಶೆ ಸತ್ತ ತರುವಾಯ, ಕರ್ತನು
೨ ಮೋಶೆಯ ಸೇವಕನಾದ ನೂನನ ಮಗನಾಗಿರುವ ಯೆಹೋಶು
ವನ ಸಂಗಡ ಹೇಳಿದ್ದೇನಂದರೆ, ನನ್ನ ಸೇವಕನಾದ ಮೋಶೆ ಸತ್ತ
ನು. ಈಗ ನೀನು, ಇಸ್ರಯೇಲ್ ಮಕ್ಕಳಾದ ಈ ಜನಕ್ಕೆಲ್ಲರು
ಸಹಿತವಾಗಿ, ಎದ್ದು, ಯೊರ್ದನನ್ನು ದಾಟಿ ಇಸ್ರಯೇಲ್ ಮಕ್ಕಳಿ
3 ಗೆ ನಾನು ಕೊಡುವ ದೇಶಕ್ಕೆ ಹೋಗು. ನಿಮ್ಮ ಪಾದವು ತುಳಿ
ಯುವ ಎಲ್ಲಾ ಸ್ಥಳವನ್ನು ನಾನು ಮೋಶೆಗೆ ಹೇಳಿದ ಹಾಗೆಯೇ
೪ ನಿಮಗೆ ಕೊಟ್ಟೆನು. ಅರಣ್ಯವೂ ಈ ಲೆಬನೋನೂ ಮೊದಲು
ಗೊಂಡು, ಫ್ರಾತ್ ನದಿಯಾದ ದೊಡ್ಡ ನದಿಯ ಪರ್ಯಂತರಕ್ಕಿ
ರುವ ಹಿತ್ತಿಯರ ದೇಶವೆಲ್ಲಾ, ಸೂರ್ಯನು ಅಸ್ತಮಿಸುವ ದಿಕ್ಕಿ
ಯಾದ ದೊಡ್ಡ ಸಮುದ್ರದ ಪರ್ಯಂತರ ನಿಮ್ಮ ಮೇರೆಯಾಗಿ
೫ ರುವದು. ಆದರೆ ನೀನು ಜೀವಿಸುವ ದಿವಸಗಳೆಲ್ಲೆಲ್ಲಾ ಒಬ್ಬನು ನಿ
ನ್ನ ಮುಂದೆ ನಿಲ್ಲುವದಿಲ್ಲ. ನಾನು ಮೋಶೆಯ ಸಂಗಡ ಇದ್ದ ಹಾಗೆ
ಯೇ ನಿನ್ನ ಸಂಗಡ ಇರುವೆನು. ನಾನು ನಿನ್ನನ್ನು ಬಿಡುವದಿಲ್ಲ,
೬ ವಿಸರ್ಜಿಸುವದಿಲ್ಲ. ಬಲವಾಗಿರು, ದೃಢವಾಗಿರು. ಯಾಕಂದರೆ
ಈ ಜನರಿಗೆ, ನಾನು ಅವರ ತಂದೆಗಳಿಗೆ ಕೊಡುವೆನೆಂದು ಆಣೆ
೭ ಇಟ್ಟು ದೇಶವನ್ನು ನೀನು ಬಾಧ್ಯತೆಯಾಗಿ ಕೊಡುವಿ. ನನ್ನ ಸೇ
ವಕನಾದ ಮೋಶೆ ನಿನಗೆ ಆಜ್ಞಾಪಿಸಿದ ನ್ಯಾಯಪ್ರಮಾಣವೆಲ್ಲಾದ
ರ ಪ್ರಕಾರ, ನೀನು ಮಾತಿ, ಕೈ ಕೊಳ್ಳುವ ಹಾಗೆ ಬಲವಾಗಿರು,
ದೃಢವಾಗಿರು. ನೀನು ಹೋಗುವ ಸ್ಥಳದಲ್ಲೆಲ್ಲಾ ಸಫಲವಾಗುವ
ಹಾಗೆ, ಅದನ್ನು ಬಿಟ್ಟು, ಬಲಕ್ಕಾದರೂ ಎಡಕ್ಕಾದರೂ ತೊಲಗ
೮ ಬೇಡ. ಈ ಪುಸ್ತಕದಲ್ಲಿ ಬರೆದಿರುವ ನ್ಯಾಯಪ್ರಮಾಣವು ನಿನ್ನ
ಬಾಯಿ ಬಿಟ್ಟು ಹೋಗ ಬಾರದು; ಅದರಲ್ಲಿ ಬರೆದಿರುವ ಪ್ರಕಾರ
ವೇ ಮಾತಿ, ಕೈ ಕೊಳ್ಳುವ ಹಾಗೆ, ರಾತ್ರಿ ಹಗಲು ಅದನ್ನು ಧ್ಯಾ
ನಿಸ ಬೇಕು. ಆಗ ನಿನ್ನ ಮಾರ್ಗವನ್ನು ಸಫಲ ಮಾಡಿ, ಬುದ್ಧಿ
ವಂತನಾಗಿ ನಡೆದು ಕೊಳ್ಳುವಿ. ನಿನಗೆ ಆಜ್ಞಾಪಿಸಿದ್ದೇನಲ್ಲ! ಬಲ
೯ ವಾಗಿರು, ದೃಢವಾಗಿರು. ಭಯ ಪಡ ಬೇಡ, ಹೆದರ ಬೇಡ.
ಯಾಕಂದರೆ ನೀನು ಹೋಗುವ ಸ್ಥಳದಲ್ಲೆಲ್ಲಾ ನಿನ್ನ ದೇವರಾದ
ಕರ್ತನು ನಿನ್ನ ಸಂಗಡ ಇದ್ದಾನೆ.
೧೦ ಆಗ ಯೆಹೋಶುವ ಜನರ ಅಧಿಕಾರಿಗಳಿಗೆ ಆಜ್ಞಾಪಿಸಿ ಹೇಳಿ
೧೧ ದ್ದೇನಂದರೆ, ನೀವು ದಂಡಿನ ಮಧ್ಯದಲ್ಲಿ ನಡೆದು ಹೋಗಿ, ಜನರಿ
ಗೆ, ಆಜ್ಞಾಪಿಸಿ ಹೇಳ ಬೇಕಾದದ್ದೇನಂದರೆ, ನಿಮಗೋಸ್ಕರ ಆಹಾ
ರವನ್ನು ಸಿದ್ಧ ಮಾಡಿ ಕೊಳ್ಳಿರಿ; ಯಾಕಂದರೆ ನಿಮ್ಮ ದೇವರಾ
ದ ಕರ್ತನು ನಿಮಗೆ ಸ್ವತಂತ್ರಿಸಿ ಕೊಳ್ಳ ಕೊಡುವ ದೇಶವನ್ನು
ನೀವು ಸ್ವತಂತ್ರಿಸಿ ಕೊಳ್ಳ ಇನ್ನು ಮೂರು ದಿವಸಗಳಲ್ಲಿ ಯೊ
ರ್ದನನ್ನು ದಾಟಿ ಹೋಗ ಬೇಕು.
೧೨ ಇದಲ್ಲದೆ ಯೆಹೋಶುವ ರೂಬೆನಿಯರಿಗೂ ಗಾದಿಯರಿಗೂ
೧೩ ಮನಸ್ಸೆಯ ಅರ್ಧ ಕುಲದವರಿಗೂ ಹೇಳಿದ್ದೇನಂದರೆ, ಕರ್ತನ
ಸೇವಕನಾದ ಮೋಶೆ ನಿಮಗೆ ಆಜ್ಞಾಪಿಸಿದ ವಾಕ್ಯವನ್ನು ಜ್ಞಾಪಕ
ಮಾಡಿ ಕೊಳ್ಳಿರಿ. ನಿಮ್ಮ ದೇವರಾದ ಕರ್ತನು ನಿಮ್ಮನ್ನು ವಿ
೧೪ ಶ್ರಾಂತಿ ಪಡಿಸಿ, ನಿಮಗೆ ಈ ದೇಶವನ್ನು ಕೊಟ್ಟನು. ಏನಂದರೆ,
ನಿಮ್ಮ ಹೆಂಡರೂ ಚಿಕ್ಕವರೂ ದನಗಳೂ ಮೋಶೆ ನಿಮಗೆ ಕೊ
ಟ್ಟ ಯೊರ್ದನಿಗೆ ಈಚೇ ಇರುವ ದೇಶದಲ್ಲಿ ಇರಲಿ; ಆದರೆ ನಿ
ಮ್ಮಲ್ಲಿ ಇರುವ ಪರಾಕ್ರಮ ಶಾಲಿಗಳೆಲ್ಲಾ ನಿಮ್ಮ ಸಹೋದರರ
೧೫ ಮುಂದೆ ಸನ್ನದ್ಧರಾಗಿ ನಡೆದು ಹೋಗಿ, ಕರ್ತನು ನಿಮ್ಮ ಹಾಗೆ
ಯೇ ನಿಮ್ಮ ಸಹೋದರರನ್ನು ವಿಶ್ರಾಂತಿ ಪಡಿಸಿ, ಅವರು ನಿಮ್ಮ
ದೇವರಾದ ಕರ್ತನು ತಮಗೆ ಕೊಡುವ ದೇಶವನ್ನು ಸ್ವತಂತ್ರಿಸಿ
ಕೊಳ್ಳುವ ಪರ್ಯಂತರ, ಅವರಿಗೆ ಸಹಾಯ ಮಾಡಿರಿ; ತರುವಾ
ಯ ಕರ್ತನ ಸೇವಕನಾದ ಮೋಶೆ ಯೊರ್ದನಿಗೆ ಈಚೆಯಲ್ಲಿ,
ಸೂರ್ಯನು ಉದಯಿಸುವ ದಿಕ್ಕಿನಲ್ಲಿ ನಿಮಗೆ ಕೊಟ್ಟ ನಿಮ್ಮ
ಸ್ವಾಸ್ತ್ಯವಾದ ದೇಶಕ್ಕೆ ತಿರಿಗಿ ಬಂದು, ಅದನ್ನು ಸ್ವತಂತ್ರಿಸಿ
ಕೊಂಡಿರಿ, ಅಂದನು.
೧೬ ಆಗಲವರು ಯೆಹೋಶುವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂ
ದರೆ, ನೀನು ನಮಗೆ ಆಜ್ಞಾಪಿಸುವದನ್ನೆಲ್ಲಾ ಮಾಡುವೆವು; ಎಲ್ಲಿ
೧೭ ಕಳುಹಿಸುತ್ತೀಯೋ, ಅಲ್ಲಿ ಹೋಗುವೆವು. ನಾವು ಎಲ್ಲಾದರಲ್ಲಿ
ಮೋಶೆಯ ಮಾತು ಕೇಳಿದ ಹಾಗೆಯೇ ನಿನ್ನ ಮಾತು ಕೇಳುವೆ
ವು. ಆದರೆ ನಿನ್ನ ದೇವರಾದ ಕರ್ತನು ಮೋಶೆಯ ಸಂಗಡ ಇ
೧೮ ದ್ದ ಹಾಗೆ, ನಿನ್ನ ಸಂಗಡಲೂ ಇರಲಿ. ನೀನು ಆಜ್ಞಾಪಿಸುವ ಎಲ್ಲಾ
ದರಲ್ಲಿ ನಿನ್ನ ಮಾತುಗಳನ್ನು ಕೇಳದೆ, ನಿನ್ನ ಬಾಯಿ ಮಾತಿಗೆ
ತಿರುಗ ಬೀಳುವವನು ಯಾವನೋ, ಅವನು ಸಾಯ ಬೇಕು.
ಆದರೆ ಬಲವಾಗಿರು, ದೃಢವಾಗಿರು.

## ೨. ಸಂಧಿ.

೧ ಮತ್ತು ನೂನನ ಮಗನಾದ ಯೆಹೋಶುವ ಹೊಂಚುಗಾರರಾ
ದ ಇಬ್ಬರು ಮನುಷ್ಯರನ್ನು ಷಿಟ್ಟೀಮಿನಿಂದ ಕಳುಹಿಸಿ, ಅವರ
ಸಂಗಡ, ನೀವು ಹೋಗಿ, ಏಕಾಂತವಾಗಿ ದೇಶವನ್ನೂ ಯೆರಿಕೋ
ವನ್ನೂ ನೋಡಿರಿ, ಅಂದನು. ಅವರು ಹೋಗಿ, ರಹಾಬಳೆಂಬ ಹೆ
ಸರುಳ್ಳ ಒಬ್ಬ ಸೂಳೆಯ ಮನೆಯಲ್ಲಿ ಹೋಗಿ, ಇಳಿದರು.
೨ ಆದರೆ ಯೆರಿಕೋವಿನ ಅರಸನಿಗೆ, ಇಗೋ, ಇಸ್ರಯೇಲ್
ಮಕ್ಕಳಲ್ಲಿ ಇಬ್ಬರು ದೇಶವನ್ನು ಚಾಳತಿ ನೋಡ ಈ ರಾತ್ರಿಯ
3 ಲ್ಲಿ ಇಲ್ಲಿಗೆ ಬಂದಿದ್ದಾರೆಂದು, ಹೇಳಲ್ಪಟ್ಟಿತು. ಆಗ ಯೆರಿಕೋವಿ
ನ ಅರಸನು ರಹಾಬಳ ಬಳಿಗೆ ಕಳುಹಿಸಿ, ನಿನ್ನ ಬಳಿಗೆ ಬಂದು, ನಿ
ನ್ನ ಮನೆಯಲ್ಲಿ ಪ್ರವೇಶಿಸಿದ ಮನುಷ್ಯರನ್ನು ಹೊರಗೆ ತಾ;
ಯಾಕಂದರೆ ಅವರು ದೇಶವೆಲ್ಲಾ ಕೊಂಡಿಸ ಬಂದಿದ್ದಾರೆ, ಅಂ
ದನು.
೪ ಆದರೆ ಆ ಸ್ತ್ರೀಯು ಆ ಇಬ್ಬರನ್ನು ಅಡಗಿಸಿಟ್ಟು, ಹೇಳಿದ್ದೇ
ನಂದರೆ, ನನ್ನ ಬಳಿಗೆ ಮನುಷ್ಯರು ಬಂದಿದ್ದರು; ಆದರೆ ನಾನು
೫ ಅವರನ್ನು ಯಾವ ಕಡೆಯವರೆಂದು ತಿಳಿಯದೆ ಇದ್ದೆನು. ಬಾಗ
ಲು ಮುಚ್ಚುವ ಕತ್ತಲು ವೇಳೆಯಲ್ಲಿ ಆ ಮನುಷ್ಯರು ಹೊರಟು
ಹೋದರು. ಅವರು ಎಲ್ಲಿ ಹೋದರೋ, ನಾನು ಅರಿಯೆ; ಅವರ
೬ ನ್ನು ಬೇಗ ಹಿಂದಟ್ಟಿರಿ; ಯಾಕಂದರೆ ನಿಮಗೆ ಸಿಕ್ಕುವರು. ಆದ
ರೆ ಅವಳು ಅವರನ್ನು ಮಾಳಿಗೆಯ ಮೇಲೆ ಏರಿಸಿ, ಮಾಳಿಗೆಯ

೭ ಮೇಲೆ ಸಾಲಾಗಿ ಇಟ್ಟಿದ್ದ ಸೂಣಬಿನೊಳಗೆ ಬಚ್ಚಿಟ್ಟಿಳು. ಆ ಮ
ನುಷ್ಯರು ಯೊರ್ದನಿಗೆ ಹೋಗುವ ಹಾದಿಯಲ್ಲಿ ನದಿಯ ಕೇವು
ಗಳ ಪರ್ಯಂತರ ಅವರನ್ನು ಹಿಂದಟ್ಟಿದರು. ಅವರನ್ನು ಹಿಂದ
ಟ್ಟುವವರು ಹೊರಟು ಹೋದಾಗಲೇ, ಬಾಗಲು ಮುಚ್ಚಿದರು.

೮ ಅದರೆ ಈ ಮನುಷ್ಯರು ಮಲಗುವದಕ್ಕಿಂತ ಮುಂಚೆ, ಅವಳು
ಮಾಳಿಗೆಯ ಮೇಲಕ್ಕೇರಿ, ಅವರ ಬಳಿಗೆ ಬಂದು, ಅವರ ಸಂಗದ
೯ ಹೇಳಿದ್ದೇನಂದರೆ, ಕರ್ತನು ನಿಮಗೆ ದೇಶವನ್ನು ಕೊಟ್ಟಿದ್ದಾನೆಂ
ದೂ, ನಿಮ್ಮ ಬೆದರಿಕೆ ನಮ್ಮ ಮೇಲೆ ಬಿದ್ದದೆ ಎಂದೂ, ನಿಮಗೋಸ್ಕ
ರ ದೇಶದ ನಿವಾಸಿಗಳೆಲ್ಲರು ಕರಗುತ್ತಾರೆಂದೂ, ನಾ ಬಲ್ಲೆನು. ಯಾ
೧೦ ಕಂದರೆ ನೀವು ಐಗುಪ್ತದಿಂದ ಹೊರಡುವಾಗ, ಕರ್ತನು ನಿಮಗೋ
ಸ್ಕರ ಕೆಂಪು ಸಮುದ್ರದ ನೀರನ್ನು ಬತ್ತಿ ಹೋಗ ಮಾಡಿದ್ದನೂ,
ನೀವು ನಿರ್ಮೂಲ ಮಾಡಿದ ಯೊರ್ದನಿಗೆ ಆಚೆಯಲ್ಲಿದ್ದ ಅಮೋ
ರ್ಯರ ಇಬ್ಬರು ಅರಸುಗಳಾದ ಸೀಹೋನನಿಗೂ ಓಗನಿಗೂ
೧೧ ಮಾಡಿದ್ದನೂ, ಕೇಳಿದೆವು. ಕೇಳಿದಾಗ, ನಮ್ಮ ಹೃದಯವು ಕರ
ಗಿ ಹೋಯಿತು. ಇನ್ನು ನಿಮಗೋಸ್ಕರ ಒಬ್ಬರಲ್ಲಿ ಅತ್ತ ನಿಲ್ಲದೆ
ಹೋಯಿತು. ಯಾಕಂದರೆ ನಿಮ್ಮ ದೇವರಾದ ಯೆಹೋವ ಮೇ
ಲಿರುವ ಆಕಾಶದಲ್ಲಿಯೂ ಕೆಳಗಿರುವ ಭೂಮಿಯ ಮೇಲೆಯೂ
೧೨ ದೇವರಾಗಿದ್ದಾನೆ. ಈಗ ನಾನು ನಿಮಗೆ ಕೃಪೆ ಮಾಡಿದ್ದರಿಂದ,
೧೩ ನೀವು ನನಗೆ ಕರ್ತನ ಮೇಲೆ ಆಣೆ ಇಡಿರಿ; ಏನಂದರೆ—ನನ್ನ ತಂದೆ
ಯ ಮನೆಗೆ ಕೃಪೆ ಮಾಡ ಬೇಕು, ನನಗೆ ಸತ್ಯವಾದ ಗುರುತನ್ನು
ಕೊಡ ಬೇಕು. ನನ್ನ ತಂದೆಯನ್ನೂ, ನನ್ನ ತಾಯಿಯನ್ನೂ
ನನ್ನ ಸಹೋದರರನ್ನೂ, ನನ್ನ ಸಹೋದರಿಗಳನ್ನೂ, ಅವರಿಗೆ
ಇರುವ ಎಲ್ಲವನ್ನೂ, ಜೀವದಿಂದ ಇಟ್ಟು, ನಮ್ಮ ಪ್ರಾಣಗಳನ್ನು
೧೪ ಸಾವಿಗೆ ತಪ್ಪಿಸ ಬೇಕು, ಅಂದಳು. ಆಗ ಆ ಮನುಷ್ಯರು ಅವಳಿ
ಗೆ, ನೀನು ಈ ನಮ್ಮ ಕಾರ್ಯವನ್ನು ಬಹಿರಂಗ ಮಾಡದೆ ಇದ್ದರೆ,
ನಮ್ಮ ಪ್ರಾಣ ನಿಮಗೋಸ್ಕರ ಸಾಯ ಬೇಕು. ಮತ್ತು ಕರ್ತ
ನು ನಮಗೆ ದೇಶವನ್ನು ಕೊಟ್ಟಾಗ, ಸತ್ಯವನ್ನೂ ಕೃಪೆಯನ್ನೂ
ಮಾಡುವೆವು, ಅಂದರು.

೧೫ ಆಗ ಅವರನ್ನು ಹಗ್ಗದಿಂದ ಕಿಟಕಿಯ ದೆಕೆಯಿಂದ ಇಳಿಯ
ಬಿಟ್ಟಳು. ಯಾಕಂದರೆ ಅವಳ ಮನೆ ಅಲಂಗದ ಮೇಲೆ ಇತ್ತು,
೧೬ ಅಲಂಗದಲ್ಲಿ ಅವಳು ವಾಸವಾಗಿದ್ದಳು. ಮತ್ತು ಅವರಿಗೆ ನಿಮ್ಮ
ನ್ನು ಹಿಂದಟ್ಟುವವರು ನಿಮಗೆ ಅಡ್ಡ ಬಾರದ ಹಾಗೆ, ನೀವು ಬೆಟ್ಟ
ಕ್ಕೆ ಹೋಗಿ, ಅವರು ತಿರಿಗಿ ಬರುವ ಪರ್ಯಂತರ ಅಲ್ಲಿ ಮೂರು
ದಿವಸ ಬಚ್ಚಿಟ್ಟು ಕೊಂಡಿದ್ದು. ತರುವಾಯ ನಿಮ್ಮ ಮಾರ್ಗವಾಗಿ
೧೭ ಹೋಗಿರಿ, ಅಂದಳು. ಆಗ ಆ ಮನುಷ್ಯರು ಅವಳ ಸಂಗದ ಹೇ
ಳಿದ್ದೇನಂದರೆ—ನೀನು ನಮಗೆ ಇಟ್ಟ ಈ ನಿನ್ನ ಆಣೆಯ ವಿಷಯ
೧೮ ನಾವು ನಿರಪರಾಧಿಗಳಾಗಿರ ಬೇಕು ಇಗೋ, ನಾವು ದೇಶದಲ್ಲಿ ಪ್ರ
ವೇಶಿಸುವಾಗ, ನೀನು ನಮ್ಮನ್ನು ಕಿಟಕಿಯಿಂದ ಇಳಿಯ ಬಿಟ್ಟ ಈ
ಕೆಂಪು ನೂಲಿನ ಹಗ್ಗವನ್ನು ಕಿಟಕಿಯಲ್ಲಿ ಕಟ್ಟಿ, ನಿನ್ನ ತಂದೆಯ
ನ್ನೂ, ನಿನ್ನ ತಾಯಿಯನ್ನೂ, ನಿನ್ನ ಸಹೋದರರನ್ನೂ, ನಿನ್ನ
ತಂದೆಯ ಮನೆಯವರೆಲ್ಲರನ್ನೂ ನಿನ್ನ ಮನೆಯಲ್ಲಿ ಕೂಡಿಸಿ
೧೯ ಕೊಳ್ಳ ಬೇಕು. ಯಾವನಾದರೂ ನಿನ್ನ ಬಾಗಲಿಂದ ಹೊರಗೆ
ಹೊರಟರೆ, ಅವನ ರಕ್ತವು ಅವನ ತಲೆಯ ಮೇಲೆ ಇರುವದು.
ನಾವು ನಿರಪರಾಧಿಗಳಾಗಿರುವೆವು. ಅದರೆ ನಿನ್ನ ಸಂಗದ ಮನೆ
ಯಲ್ಲಿ ಇರುವ ಯಾವನ ಮೇಲಾದರೂ ಕೈ ಹಾಕಲ್ಪಟ್ಟರೆ, ಅವ
೨೦ ನ ರಕ್ತದ ಅಪರಾಧವು ನಮ್ಮ ತಲೆಯ ಮೇಲೆ ಇರುವದು. ಇದ
ಲ್ಲದೆ ನೀನು ಈ ನಮ್ಮ ಕಾರ್ಯವನ್ನು ತಿಳಿಸಿದರೆ, ನೀನು ನಮಗೆ
೨೧ ಇಟ್ಟ ಆಣೆಗೆ ನಾವು ನಿರಪರಾಧಿಗಳಾಗಿರುವೆವು. ಅದಕ್ಕವಳು,
ನಿಮ್ಮ ಮಾತುಗಳ ಪ್ರಕಾರವೇ ಆಗಲಿ, ಎಂದು ಹೇಳಿ, ಅವರನ್ನು
ಕಳುಹಿಸಿ ಬಿಟ್ಟಳು; ಅವರು ಹೋದಾಗ, ಆ ಕೆಂಪು ಹಗ್ಗವನ್ನು
ಕಿಟಕಿಯಲ್ಲಿ ಕಟ್ಟಿ ಬಿಟ್ಟಳು.

೨೨ ಅವರು ಹೋಗಿ, ಬೆಟ್ಟಕ್ಕೆ ಸೇರಿ, ಹಿಂದಟ್ಟುವವರು ತಿರಿಗಿ ಬ
ರುವ ಪರ್ಯಂತರ ಮೂರು ದಿವಸ ಅಲ್ಲಿ ಇದ್ದರು. ಹಿಂದಟ್ಟುವ
ವರು ಮಾರ್ಗದಲ್ಲೆಲ್ಲಾ ಅವರನ್ನು ಹುಡುಕಿ, ಕಾಣದೆ ಹೋದರು.
೨೩ ಆ ಇಬ್ಬರು ಮನುಷ್ಯರು ತಿರುಗಿ ಕೊಂಡು, ಬೆಟ್ಟದಿಂದ ಇಳಿ
ದು, ನದಿಯನ್ನು ದಾಟಿ, ನೂನನ ಮಗನಾದ ಯೆಹೋಶುವನ
ಬಳಿಗೆ ಬಂದು, ತಮಗೆ ಸಂಭವಿಸಿದ್ದನ್ನೆಲ್ಲಾ ಅವನಿಗೆ ವಿವರಿಸಿ, ಅ
೨೪ ವನ ಸಂಗದ, ನಿಶ್ಚಯವಾಗಿ ಕರ್ತನು ದೇಶವನ್ನೆಲ್ಲಾ ನಮ್ಮ ಕೈ
ಯಲ್ಲಿ ಒಪ್ಪಿಸಿ ಕೊಟ್ಟನು. ದೇಶದ ನಿವಾಸಿಗಳೆಲ್ಲರು ನಮಗೋ
ಸ್ಕರ ಕರಗುತ್ತಾರೆ, ಎಂದು ಹೇಳಿದರು.

## 3. ಸಂಧಿ.

೧ ಯೆಹೋಶುವ ಬೆಳಿಗ್ಗೆ ಎದ್ದಾಗ, ಅವನೂ, ಇಸ್ರಯೇಲ್ ಮ
ಕ್ಕಳೆಲ್ಲರೂ ಷಿಟ್ಟೀಮಿನಿಂದ ಪ್ರಯಾಣ ಮಾಡಿ, ಯೊರ್ದನಿ
ನ ಬಳಿಗೆ ಬಂದು, ದಾಟುವದಕ್ಕಿಂತ ಮುಂಚೆ ಅಲ್ಲಿ ವಸ್ತಿಯಾ
ಗಿದ್ದರು.
೨ ಮೂರು ದಿವಸಗಳಾದ ಮೇಲೆ, ಅಧಿಕಾರಿಗಳು ದಂಡಿನೊಳಗೆ
೩ ಹಾದು ಹೋಗಿ, ಜನರಿಗೆ ಆಜ್ಞಾಪಿಸಿದ್ದೇನಂದರೆ, ಯಾಜಕರಾದ
ಲೇವ್ಯರು ನಿಮ್ಮ ದೇವರಾದ ಕರ್ತನ ಒಡಂಬಡಿಕೆಯ ಪೆಟ್ಟಿಗೆ
ಹೊರುವದನ್ನು ನೋಡುವಾಗ, ನೀವು ನಿಮ್ಮ ಸ್ಥಳದಿಂದ ಹೊರ
೪ ಟು, ಅದರ ಹಿಂದೆ ಹೋಗ ಬೇಕು. ಆದರೆ ನಿಮಗೂ ಅದಕ್ಕೂ
ಸುಮಾರು ಎರಡು ಸಾವಿರ ಮೊಳ ದೂರ ಇರ ಬೇಕು. ನೀವು
ಹೋಗುವ ಮಾರ್ಗವನ್ನು ತಿಳಿಯುವ ಹಾಗೆ, ಅದರ ಹತ್ತರ
ಸೇರ ಬೇಡಿರಿ. ಯಾಕಂದರೆ ನೀವು ಎಂದಾದರೂ ಆ ಮಾರ್ಗ
ದಲ್ಲಿ ದಾಪೆ ಹೋದದ್ದಿಲ್ಲ.
೫ ಮತ್ತು ಯೆಹೋಶುವ ಜನರಿಗೆ, ನಿಮ್ಮನ್ನು ಪರಿಶುದ್ಧ ಮಾಡಿ
ಕೊಳ್ಳಿರಿ; ಯಾಕಂದರೆ ನಾಳೆ ಕರ್ತನು ನಿಮ್ಮ ಮಧ್ಯದಲ್ಲಿ ಅ
ದ್ಭುತಗಳನ್ನು ಮಾಡುವನು, ಅಂದನು.
೬ ಆಗ ಯೆಹೋಶುವ ಯಾಜಕರಿಗೆ, ನೀವು ಒಡಂಬಡಿಕೆಯ
ಪೆಟ್ಟಿಗೆಯನ್ನು ಹೊತ್ತು ಕೊಂಡು, ಜನರಿಗೆ ಮುಂದಾಗಿ ಹಾದು
ಹೋಗಿರಿ, ಅಂದನು. ಹಾಗೆಯೇ ಅವರು ಒಡಂಬಡಿಕೆಯ ಪೆಟ್ಟಿ
ಗೆಯನ್ನು ಹೊತ್ತು ಕೊಂಡು, ಜನರಿಗೆ ಮುಂದಾಗಿ ಹೋದರು.
೭ ಮತ್ತು ಕರ್ತನು ಯೆಹೋಶುವನ ಸಂಗದ ಹೇಳಿದ್ದೇನಂದ
ರೆ—ನಾನು ಮೋಶೆಯ ಸಂಗದ ಇದ್ದ ಪ್ರಕಾರ, ನಿನ್ನ ಸಂಗದ ಇ
ರುವದನ್ನು ಇಸ್ರಯೇಲ್ಯರೆಲ್ಲರು ತಿಳಿಯುವ ಹಾಗೆ, ಇಂದು ನಿ
ನ್ನನ್ನು ಅವರ ಕಣ್ಣುಗಳ ಮುಂದೆ ಹೊತ್ತವನಾಗ ಮಾಡ ಪ್ರಾ
೮ ರಂಭಿಸುವೆನು. ನೀನು ಒಡಂಬಡಿಕೆಯ ಪೆಟ್ಟಿಗೆಯನ್ನು ಹೊರು
ವ ಯಾಜಕರಿಗೆ, ಯೊರ್ದನಿನ ನೀರಿನ ಅಂಚಿಗೆ ಬಂದಾಗ, ಅ
ಲ್ಲಿ ನಿಲ್ಲಿರೆಂದು, ಆಜ್ಞಾಪಿಸು, ಅಂದನು.
೯ ಆಗ ಯೆಹೋಶುವ ಇಸ್ರಯೇಲ್ ಮಕ್ಕಳಿಗೆ, ನೀವು ಇಲ್ಲಿಗೆ



ಬಂದು, ನಿಮ್ಮ ದೇವರಾದ ಕರ್ತನ ವಾಕ್ಯಗಳನ್ನು ಕೇಳಿರಿ, ಅಂದ
೧೦ ನು. ಮತ್ತು ಯೆಹೋಶುವ ಹೇಳಿದ್ದೇನಂದರೆ, ಜೀವವುಳ್ಳ ದೇ
ವರು ನಿಮ್ಮ ಮಧ್ಯದಲ್ಲಿರುವದನ್ನೂ ಅತನು ಕನಾನ್ಯರನ್ನೂ ಹಿ
ತ್ತಿಯರನ್ನೂ, ಹಿವ್ವಿಯರನ್ನೂ, ಪೆರಿಜ್ಜಿಯರನ್ನೂ, ಗಿರ್ಗಾಸ್ಯ
ರನ್ನೂ, ಅಮೋರ್ಯರನ್ನೂ, ಯೆಬೂಸ್ಯರನ್ನೂ ನಿಮ್ಮ ಮುಂ
ದೆ ನಿಶ್ಚಯವಾಗಿ ಓಡಿಸಿ ಬಿಡುವದನ್ನೂ, ನೀವು ತಿಳಿಯ ಗುರುತೇ
೧೧ ನಂದರೆ, ಇಗೋ, ಸಮಸ್ತ ಭೂಮಿಗೆ ಕರ್ತನಾದವನ ಒಡಂಬಡಿ
ಕೆಯ ಪೆಟ್ಟಿಗೆ ನಿಮ್ಮ ಮುಂದೆ ಯೊರ್ದನನ್ನು ದಾಟಿ ಹೋಗು
೧೨ ವದು. ಈಗ ಇಸ್ರಯೇಲ್ ಕುಲಗಳಲ್ಲಿ ಹನ್ನೆರಡು ಮಂದಿಯ
ನ್ನು ಒಂದೊಂದು ಕುಲಕ್ಕೆ ಒಬ್ಬೊಬ್ಬರಾಗಿ, ನಿಮಗೆ ತಕ್ಕೊಳ್ಳಿ
೧೩ ರಿ. ಆಗಲಾಗುವದೇನಂದರೆ, ಸಮಸ್ತ ಭೂಮಿಗೂ ಕರ್ತನಾದ ಯೆ
ಹೋವನ ಪೆಟ್ಟಿಗೆಯನ್ನು ಹೊರುವ ಯಾಜಕರ ಅಂಗಾಲುಗ
ಳು ಯೊರ್ದನಿನ ನೀರಲ್ಲಿ ಇಟ್ಟಾಗಲೇ, ನದಿಯ ನೀರು ಭೇದಿ
ಸಲ್ಪಟ್ಟು, ಮೇಲಿನಿಂದ ಹರಿದು ಬರುವ ನೀರು ಹರಿಯದೆ, ಕುಪ್ಪೆ
ಯಾಗಿ ನಿಲ್ಲುವದು.
೧೪ ಜನರು ಯೊರ್ದನನ್ನು ದಾಟಿ ತಮ್ಮ ಗುಡಾರಗಳಿಂದ ಹೊ
ರ ಹೊರಟರು. ಯಾಜಕರು ಒಡಂಬಡಿಕೆಯ ಪೆಟ್ಟಿಗೆಯನ್ನು
ಜನರಿಗೆ ಮುಂದಾಗಿ ಹೊತ್ತು ಕೊಂಡು, ಯೊರ್ದನಿನ ಬಳಿಗೆ
೧೫ ಬಂದರು. ಅದರೆ ಯೊರ್ದನಿನ ನೀರು ಸುಗ್ಗಿ ಕಾಲವೆಲ್ಲಾ ತನ್ನ
ಥಡಗಳ ಮೇಲೆ ಎಲ್ಲಿಯೂ ಹೊರಳ್ಳಿ ಹರಿಯುತ್ತಾ ಇತ್ತು. ಆಗ
ಏನಾಯಿತಂದರೆ, ಪೆಟ್ಟಿಗೆಯನ್ನು ಹೊರುವ ಯಾಜಕರ ಕಾಲು
೧೬ ಗಳು ನೀರಿನ ಅಂಚಿನಲ್ಲಿ ಇಡುತ್ತಲೇ, ಮೇಲಿನಿಂದ ಇಳಿದು ಬರುವ
ನೀರು ನಿಂತು, ಬಹು ದೂರದಲ್ಲಿ ಚಾರೆತಾನಿಗೆ ಹೊಂದಿದ ಆದಮ್
ಊರಿನ ಹತ್ತರ ಬಂದು, ಕುಪ್ಪೆಯಾಗಿ ನಿಂತಿತು. ಉಪ್ಪು ಸಮು
ದ್ರವೆಂಬ ಸಮುದ್ರಕ್ಕೆ ಇಳಿದು ಹೋಗುವ ನೀರುಗಳು ಭೇದಿಸಲ್ಪ
೧೭ ಟ್ಟವು. ಆಗ ಜನರು ಯೆರಿಕೋವಿಗೆ ಎದುರಾಗಿ ದಾಟಿದರು. ಮ
ತ್ತು ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನು ಹೊರುವ ಯಾ
ಜಕರು ಯೊರ್ದನಿನ ಮಧ್ಯದಲ್ಲಿ ಒಣಗಿದ ಭೂಮಿಯಲ್ಲಿ ದೃಢ
ವಾಗಿ ನಿಂತರು. ಜನಾಂಗವೆಲ್ಲಾ ದಾಟಿ ಮುಗಿಸುವ ಪರ್ಯಂತರ,
ಇಸ್ರಯೇಲ್ಯರೆಲ್ಲರೂ ಒಣಗಿದ ಭೂಮಿಯಲ್ಲಿ ದಾಟಿದರು.

## ೪. ಸಂಧಿ.

೧ ಜನರೆಲ್ಲರು ಯೊರ್ದನನ್ನು ದಾಟಿ ಮುಗಿಸಿದಾಗ, ಕರ್ತನು
೨ ಯೆಹೋಶುವನ ಸಂಗದ ಹೇಳಿದ್ದೇನಂದರೆ, ನೀನು ಜನರಲ್ಲಿ ಪ್ರತಿ
ಕುಲಕ್ಕೆ ಒಬ್ಬೊಬ್ಬನಾಗಿ ಹನ್ನೆರಡು ಮಂದಿಯನ್ನು ತೆಗೆದು ಕೊಂ
೩ ಡು, ಯೊರ್ದನಿನ ಮಧ್ಯದಲ್ಲಿ ಯಾಜಕರ ಕಾಲುಗಳು ಸ್ಥಿರವಾಗಿ
ನಿಂತ ಸ್ಥಳದಲ್ಲಿಂದ ಹನ್ನೆರಡು ಕಲ್ಲುಗಳನ್ನು ತೆಗೆದು ಕೊಂಡು,
ಅವುಗಳನ್ನು ನಿಮ್ಮ ಸಂಗದ ಆಜೇ ಥಡಕ್ಕೆ ವೈದು, ನೀವು ಈ
೪ ರಾತ್ರಿಯಲ್ಲಿ ಇಳಿಯುವ ಸ್ಥಳದಲ್ಲಿ ಅವುಗಳನ್ನು ಹಾಕಿರಿ ಎಂದು,
ಅವರಿಗೆ ಆಜ್ಞಾಪಿಸು, ಅಂದನು. ಆಗ ಯೆಹೋಶುವ ಇಸ್ರಯೇ
೫ ಲ್ ಮಕ್ಕಳಲ್ಲಿ ಒಂದೊಂದು ಕುಲಕ್ಕೆ ಒಬ್ಬೊಬ್ಬನ ಪ್ರಕಾರ ತಾನು
ಏರ್ಪಡಿಸಿದ ಹನ್ನೆರಡು ಮಂದಿಯನ್ನು ಕಕರೆದನು; ಯೆಹೋಶುವ
ಅವರಿಗೆ ಹೇಳಿದ್ದೇನಂದರೆ—ನೀವು ಯೊರ್ದನಿನ ಮಧ್ಯದಲ್ಲಿ ನಿಮ್ಮ
ದೇವರಾದ ಕರ್ತನ ಪೆಟ್ಟಿಗೆಯ ಮುಂದೆ ಇಸ್ರಯೇಲ್ ಮಕ್ಕಳ
ಕುಲಗಳ ಲೆಖ್ಖಕ್ಕೆ ಸರಿಯಾಗಿ ಒಬ್ಬೊಬ್ಬನು ಒಂದೊಂದು ಕಲ್ಲ
೬ ನ್ನು ಹೆಗಲ ಮೇಲೆ ಹೊತ್ತು ಕೊಂಡು ಹೋಗಿರಿ. ಯಾಕಂದರೆ
ಇದು ನಿಮ್ಮ ಮಧ್ಯದಲ್ಲಿ ಗುರುತಾಗಿರ ಬೇಕು; ಈ ಕಲ್ಲುಗಳೇ
೭ ನೆಂದು, ನಾಳೆ ನಿಮ್ಮ ಮಕ್ಕಳು ನಿಮ್ಮನ್ನು ಕೇಳುವಾಗ, ನೀವು
ಅವರಿಗೆ ಹೇಳ ಬೇಕಾದ್ದು—ಯೊರ್ದನಿನ ನೀರುಗಳು ಕರ್ತನ
ಒಡಂಬಡಿಕೆಯ ಪೆಟ್ಟಿಗೆಯ ಮುಂದೆ ಭೇದಿಸಲ್ಪಟ್ಟವು; ಅದು
ಯೊರ್ದನನ್ನು ದಾಟುವಾಗ, ಯೊರ್ದನಿನ ನೀರುಗಳು ಭೇದಿಸ
ಲ್ಪಟ್ಟವು. ಈ ಕಲ್ಲುಗಳು ಇಸ್ರಯೇಲ್ ಮಕ್ಕಳಿಗೆ ಎಂದೆಂದಿಗೂ
ಜ್ಞಾಪಕಾರ್ಥವಾದ ಗುರುತಾಗಿರ ಬೇಕು.
೮ ಆಗ ಇಸ್ರಯೇಲ್ ಮಕ್ಕಳು ಯೆಹೋಶುವನು ಆಜ್ಞಾಪಿಸಿದ
ಹಾಗೆ ಮಾಡಿದರು; ಕರ್ತನು ಯೆಹೋಶುವನಿಗೆ ಹೇಳಿದ ಪ್ರಕಾ
ರ, ಇಸ್ರಯೇಲ್ ಮಕ್ಕಳ ಕುಲಗಳ ಲೆಖ್ಖಕ್ಕೆ ಸರಿಯಾಗಿ ಹನ್ನೆರ
ಡು ಕಲ್ಲುಗಳನ್ನು ಯೊರ್ದನಿನ ಮಧ್ಯದಿಂದ ತೆಗೆದು ಕೊಂಡು,
ಅವುಗಳನ್ನು ತಮ್ಮ ಸಂಗದ ಆಜೇ ಥಡಕ್ಕೆ ವೈದು, ತಾವು ವಸ್ತಿ
ಯಾದ ಸ್ಥಳದಲ್ಲಿ ಇಟ್ಟರು.
೯ ಮತ್ತು ಯೆಹೋಶುವ ಯೊರ್ದನಿನ ಮಧ್ಯದಲ್ಲಿ ಒಡಂಬಡಿಕೆ
ಯ ಪೆಟ್ಟಿಗೆಯನ್ನು ಹೊತ್ತ ಯಾಜಕರ ಕಾಲುಗಳು ಇಟ್ಟ ಸ್ಥಳ
ದಲ್ಲಿ ಹನ್ನೆರಡು ಕಲ್ಲುಗಳನ್ನು ನಿಲ್ಲಿಸಿದನು. ಅವು ಈ ಪರ್ಯಂ
ತರ ಅಲ್ಲಿಯೇ ಇರುತ್ತವೆ.
೧೦ ಮೋಶೆ ಯೆಹೋಶುವನಿಗೆ ಆಜ್ಞಾಪಿಸಿದ ಪ್ರಕಾರ, ಜನರಿಗೆ
ಹೇಳ ಕರ್ತನು ಯೆಹೋಶುವನಿಗೆ ಆಜ್ಞಾಪಿಸಿದ್ದೆಲ್ಲಾ ತೀರುವ
ಪರ್ಯಂತರ ಪೆಟ್ಟಿಗೆಯನ್ನು ಹೊರುವ ಯಾಜಕರು ಯೊರ್ದ
ನಿನ ನಡುವೆ ನಿಂತರು; ಜನರು ತ್ವರೆಯಾಗಿ ದಾಟಿ ಹೋದರು.
೧೧ ಜನರೆಲ್ಲರೂ ದಾಟಿ ತೀರಿದಾಗ, ಕರ್ತನ ಪೆಟ್ಟಿಗೆಯೂ ಯಾಜ
ಕರೂ ಜನರ ಎದುರಿನಲ್ಲಿ ದಾಟಿದರು.
೧೨ ರೂಬೆನನ ಮಕ್ಕಳೂ, ಗಾದನ ಮಕ್ಕಳೂ, ಮನಸ್ಸೆಯ ಅ
ರ್ಧ ಕುಲವೂ ಮೋಶೆಯು ತಮಗೆ ಆಜ್ಞಾಪಿಸಿದ ಹಾಗೆಯೇ ಸ
ನ್ನದ್ಧರಾಗಿ ಇಸ್ರಯೇಲ್ ಮಕ್ಕಳ ಮುಂದೆ ಹಾದು ಹೋದರು.
೧೩ ಹೆಚ್ಚು ಕಡಿಮೆ ನಾಲ್ವತ್ತು ಸಾವಿರ ಜನರು ಯುದ್ಧಕ್ಕೆ ಸಿದ್ಧರಾಗಿ,
ಕರ್ತನ ಮುಖದ ಮುಂದೆ ಯುದ್ಧವು ಮಾಡಲಿಕ್ಕೆ ಯೆರಿಕೋವಿನ
ಬೈಲುಗಳಿಗೆ ಹಾದು ಹೋದರು.
೧೪ ಆ ದಿನದಲ್ಲಿ ಕರ್ತನು ಯೆಹೋಶುವನನ್ನು ಇಸ್ರಯೇಲರೆಲ್ಲರ
ಕಣ್ಣುಗಳ ಮುಂದೆ ಹೊತ್ತವನಾಗ ಮಾಡಿದನು. ಅವರು ಮೋಶೆಗೆ
ಭಯ ಪಟ್ಟ ಹಾಗೆಯೇ, ಅವನಿಗೂ ಅವನು ಬದುಕಿದ ದಿವಸಗಳೆ
ಲ್ಲಾ ಭಯ ಪಟ್ಟರು.
೧೫ ಮತ್ತು ಕರ್ತನು ಯೆಹೋಶುವನಿಗೆ ಒಡಂಬಡಿಕೆಯ ಪೆಟ್ಟಿಗೆ
೧೬ ಯನ್ನು ಹೊರುವ ಯಾಜಕರಿಗೆ ಯೊರ್ದನಿಂದ ಮೇಲಕ್ಕೆ ಬ
ರಲಿಕ್ಕೆ ಆಜ್ಞಾಪಿಸೆಂದು ಹೇಳಿದಾಗ, ಯೆಹೋಶುವನು ಅವರಿಗೆ,
೧೭ ಯೊರ್ದನಿಂದ ಮೇಲಕ್ಕೆ ಬನ್ನಿರಿ ಎಂದು ಆಜ್ಞಾಪಿಸಿದನು. ಆಗ
ಅದನ್ನೇನಂದರೆ, ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನು ಹೊರು
ವ ಯಾಜಕರು ಯೊರ್ದನಿನ ಮಧ್ಯದಲ್ಲಿಂದ ಏರಿ, ತಮ್ಮ ಅಂಗಾ
ಲುಗಳನ್ನು ಒಣಗಿದ ಭೂಮಿಗೆ ಎತ್ತಿ ಕೊಂಡಾಗ, ಯೊರ್ದನಿನ
ನೀರುಗಳು ತಮ್ಮ ಸ್ಥಳಕ್ಕೆ ತಿರಿಗಿ ಮೊದಲಿನ ಹಾಗೆಯೇ ಥಡಗಳ
ಮೇಲೆಲ್ಲಾ ಹರಿದವು.
೧೮ ಜನರು ಮೊದಲನೇ ತಿಂಗಳ ಹತ್ತನೇ ದಿವಸದಲ್ಲಿ ಯೊರ್ದನಿ
ನೊಳಗಿಂದ ಏರಿ ಬಂದು, ಯೆರಿಕೋವಿನ ಮೂಲ್ಲ ಮೇಲೆಯಾದ

೨೦ ಗಿಲ್ಗಾಲಿನಲ್ಲಿ ಇಳಿದರು. ಮತ್ತು ಅಲ್ಲಿ ಯೆಹೋಶುವನು ಅವರು
ಯೊರ್ದನಿನಿಂದ ತೆಗೆದು ಕೊಂಡ ಹನ್ನೆರಡು ಕಲ್ಲುಗಳನ್ನು ಗಿಲ್ಗಾ
೨೧ ಲಿನಲ್ಲಿ ನಿಲ್ಲಿಸಿ, ಇಸ್ರಯೇಲ್ ಮಕ್ಕಳಿಗೆ ಹೇಳಿದ್ದೇನಂದರೆ—ಈ ಕ
೨೨ ಲ್ಲುಗಳು ಏನೆಂದು, ನಾಳೆ ನಿಮ್ಮ ಮಕ್ಕಳು ತಮ್ಮ ತಂದೆಗಳನ್ನು ಕೇ
ಳಿದರೆ, ನೀವು ಅವರಿಗೆ ತಿಳಿಸ ಬೇಕಾದದ್ದೇನಂದರೆ, ಇಸ್ರಯೇಲರು
ಒಣಗಿದ ಭೂಮಿಯಲ್ಲಿ ಈ ಯೊರ್ದನನ್ನು ದಾಟಿ ಬಂದರು.
೨೩ ಯಾಕಂದರೆ ಭೂಮಿಯೆ ಜನಗಳೆಲ್ಲಾ ಕರ್ತನ ಹಸ್ತವು ಬಲವು
ಳ್ಳದ್ದೆಂದು, ತಿಳಿಯುವ ಹಾಗೆಯೂ, ನೀವು ನಿರಂತರವೂ ನಿಮ್ಮ
೨೪ ಕರ್ತನಾದ ದೇವರಿಗೆ ಭಯ ಪಡುವ ಹಾಗೆಯೂ, ನಿಮ್ಮ ದೇವ
ರಾದ ಕರ್ತನು ಕೆಂಪು ಸಮುದ್ರವನ್ನು ನಮ್ಮ ಮುಂದೆ, ನಾವು
ದಾಟುವ ಪರ್ಯಂತರ, ಒಣಗಿ ಹೋಗ ಮಾಡಿದ ಹಾಗೆ, ದೇ
ವರಾದ ಕರ್ತನು ನೀವು ದಾಟಿ ಬರುವ ಪರ್ಯಂತರ ಯೊರ್ದ
ನಿನ ನೀರುಗಳನ್ನು ಹಾಗ ಮಾಡಿದನು.

## ೫. ಸಂಧಿ.

೧ ಮತ್ತು ಏನಾಯಿತಂದರೆ—ಕರ್ತನು ಇಸ್ರಯೇಲ್ ಮಕ್ಕಳು
ದಾಟಿ ಹೋಗುವ ಪರ್ಯಂತರ, ಅವರ ಮುಂದೆ ಒಣಗಿ ಹೋಗ
ಮಾಡಿದ್ದನ್ನು ಯೊರ್ದನಿನ ಆಚೇ ಥದಲ್ಲಿ, ಪಶ್ಚಿಮದಲ್ಲಿ, ವಾಸಿ
ಸಿದ್ದ ಅಮೋರ್ಯರ ಸಕಲ ಅರಸುಗಳೂ ಸಮುದ್ರದ ಆಚೆಯ
ಲ್ಲಿ ವಾಸಿಸಿದ ಕನಾನ್ಯರ ಸಕಲ ಅರಸುಗಳೂ ಕೇಳಿದಾಗ, ಅವರ
ಹೃದಯವು ಕರಗಿತು; ಇಸ್ರಯೇಲ್ ಮಕ್ಕಳ ನಿಮಿತ್ತ ಅವರಿಗೆ
೨ ಆತ್ಮವಿಲ್ಲದೆ ಹೋಯಿತು. ಆ ಕಾಲದಲ್ಲಿ ಕರ್ತನು ಯೆಹೋ
ಶುವನಿಗೆ, ನೀನು ಬೆಣಚಿ ಕಲ್ಲು ಚೂರಿಗಳನ್ನು ಮಾಡಿ ಕೊಂಡು,
ತಿರಿಗಿ ಎರಡನೇ ಸಾರಿ ಇಸ್ರಯೇಲ್ ಮಕ್ಕಳನ್ನು ಪರಿಛೇದನೆ ಮಾ
೩ ಡು, ಅಂದನು. ಆಗ ಯೆಹೋಶುವನು ತಾನು ಬೆಣಚಿ ಕಲ್ಲು ಚೂ
ರಿಗಳನ್ನು ಮಾಡಿ ಕೊಂಡು, ಇಸ್ರಯೇಲ್ ಮಕ್ಕಳನ್ನು ಹಾರಾ
೪ ಲೋಥ್ ಪರ್ವತದಲ್ಲಿ ಪರಿಛೇದನೆ ಮಾಡಿಸಿದನು. ಯೆಹೋಶು
ವನು ಪರಿಛೇದನೆ ಮಾಡಿಸಿದ ಕಾರಣವೇನಂದರೆ—ಐಗುಪ್ತದಿಂದ
ಹೊರಟ ಸಕಲ ಜನರು, ಗಂಡಸಾದ ಯುದ್ಧದ ಮನುಷ್ಯರೆಲ್ಲ
ರು, ಐಗುಪ್ತದಿಂದ ಹೊರಟಾಗ, ಅರಣ್ಯದೊಳಗೆ ಮಾರ್ಗದಲ್ಲಿ
೫ ಸತ್ತು ಹೋದರು. ಐಗುಪ್ತದಿಂದ ಹೊರಟ ಜನಕೆಲ್ಲರೂ ಪರಿಛೇ
ದನೆ ಮಾಡಲ್ಪಟ್ಟರು; ಆದರೆ ಐಗುಪ್ತದಿಂದ ಹೊರಟಾಗ, ಅರಣ್ಯ
ದೊಳಗೆ ಮಾರ್ಗದಲ್ಲಿ ಹುಟ್ಟಿದ ಸಕಲ ಜನರೂ ಪರಿಛೇದನೆ
೬ ಮಾಡಲ್ಪಡಲಿಲ್ಲ. ಮತ್ತು ಕರ್ತನ ಶಬ್ದವನ್ನು ಕೇಳದೆ ಹೋದ
ಐಗುಪ್ತದಿಂದ ಹೊರಟ ಯುದ್ಧದ ಮನುಷ್ಯರಾದ ಜನಾಂಗವೆಲ್ಲಾ
ಮುಗಿದು ಹೋಗುವ ಪರ್ಯಂತರ, ಇಸ್ರಯೇಲ್ ಮಕ್ಕಳು ನಾ
ಲ್ವತ್ತು ವರುಷಗಳು ಅರಣ್ಯದಲ್ಲಿ ತಿರುಗುತ್ತಿದ್ದರು; ಯಾಕಂದರೆ
ನಮಗೆ ಕೊಡುವದಕ್ಕೆ ಕರ್ತನು ಅವರ ತಂದೆಗಳಿಗೆ ಆಣೆ ಇಟ್ಟ
ದೇಶವನ್ನು, ಹಾಲೂ ಜೇನೂ ಹರಿಯುವ ದೇಶವನ್ನು ಅವರಿಗೆ
ತೋರಿಸುವದಿಲ್ಲ ಎಂದು, ಕರ್ತನು ಅವರಿಗೆ ಆಣೆ ಇಟ್ಟಿದ್ದನು.
೭ ಅವರಿಗೆ ಪ್ರತಿಯಾಗಿ ಅವರ ಮಕ್ಕಳನ್ನು ಏಳ್ಗೆ ಮಾಡಿದನು; ಇ
ವರನ್ನು ಯೆಹೋಶುವನು ಪರಿಛೇದನೆ ಮಾಡಿದನು. ಯಾಕಂ
ದರೆ ಇವರನ್ನು ಮಾರ್ಗದಲ್ಲಿ ಪರಿಛೇದನೆ ಮಾಡದೆ ಇದ್ದದರಿಂದ,
೮ ಇವರು ಪರಿಛೇದನೆ ಇಲ್ಲದವರಾಗಿದ್ದರು. ಆದರೆ ಜನರೆಲ್ಲರನ್ನು
ಪರಿಛೇದನೆ ಮಾಡಿ ತೀರಿಸಿದಾಗ, ಅವರು ವಾಸಿ ಆಗುವ ಪರ್ಯಂ
ತರ ದಂಡಿನೊಳಗೆ ತಮ್ಮ ತಮ್ಮ ಸ್ಥಳಗಳಲ್ಲಿ ಇದ್ದರು. ಮತ್ತು
೯ ಕರ್ತನು ಯೆಹೋಶುವನಿಗೆ, ಇಂದು ಐಗುಪ್ತದ ನಿಂದೆಯನ್ನು ನಿ
ಮ್ಮಲ್ಲಿಂದ ಹೊರಳಿಸಿ ಬಿಟ್ಟಿದ್ದೇನೆ, ಅಂದನು. ಆದದರಿಂದ ಆ ಸ್ಥ
ಳವು ಇಂದಿನ ವರಿಗೂ, ಗಿಲ್ಗಾಲ್ ಎಂದು ಹೇಳಲ್ಪಡುವದು.

೧೦ ಇಸ್ರಯೇಲ್ ಮಕ್ಕಳು ಗಿಲ್ಗಾಲಿನಲ್ಲಿ ಇಳಿದಿದ್ದು, ಹದಿನಾಲ್ಕನೇ
ದಿವಸ ಸಾಯಂಕಾಲದಲ್ಲಿ ಯೆರಿಕೋವಿನ ಬೈಲುಗಳಲ್ಲಿ ಪಸ್ಕವ
ನ್ನು ಆಚರಿಸಿದರು.
೧೧ ಪಸ್ಕದ ಎರಡನೇ ದಿವಸವಾದ ಅಂದಿನ ದಿವಸವು ಅವರು ಆ
ದೇಶದ ಹಳೆಯ ಧಾನ್ಯದಿಂದ ಮಾಡಿದ ಹುಳಿ ಇಲ್ಲದ ಕೊಟ್ಟಿಗ
೧೨ ಳನ್ನೂ ಹುರಿದ ಧಾನ್ಯಗಳನ್ನೂ ತಿಂದರು. ಅವರು ಆ ದೇಶದ
ಹಳೆಯ ಧಾನ್ಯವನ್ನು ತಿಂದ ಮರು ದಿವಸದಲ್ಲೇ ಮನ್ನವು ನಿಂ
ತು ಹೋಯಿತು; ಇಸ್ರಯೇಲ್ ಮಕ್ಕಳಿಗೆ ಮನ್ನ ಇನ್ನೂ ಆಗ
ಲಿಲ್ಲ; ಆ ವರುಷದಲ್ಲಿ ಕನಾನ್ಯ ದೇಶದ ಫಲವನ್ನು ತಿಂದರು.
೧೩ ಯೆಹೋಶುವ ಯೆರಿಕೋವಿನ ಬಳಿಯಲ್ಲಿ ಇದ್ದಾಗ, ಆದ
ದ್ದೇನಂದರೆ, ತನ್ನ ಕಣ್ಣುಗಳನ್ನು ಎತ್ತಿ ನೋಡುವಾಗ, ಇಗೋ,
ಒಬ್ಬ ಮನುಷ್ಯನು ಅವನಿಗೆದುರಾಗಿ ನಿಂತಿದ್ದನು; ಅವನ ಕೈಯ
ಲ್ಲಿ ಬಿಚ್ಚು ಕತ್ತಿ ಇತ್ತು. ಯೆಹೋಶುವ ಅವನ ಬಳಿಗೆ ಹೋ
ಗಿ, ಅವನಿಗೆ—ನೀನು ನಮಗೋಸ್ಕರವೋ! ನಮ್ಮ ವೈರಿಗಳಿಗೋ
೧೪ ಸ್ಕರವೋ! ಅಂದನು. ಅದಕ್ಕಾತನು, ಅಲ್ಲ; ಕರ್ತನ ಸೈನ್ಯದ
ಅಧಿಪತಿಯಾಗಿ ಈಗ ನಾನು ಬಂದಿದ್ದೇನೆ, ಅಂದನು; ಆಗ ಯೆ
ಹೋಶುವನು ಮೋಕೆ ಕೆಳಗಾಗಿ ನೆಲಕ್ಕೆ ಬಿದ್ದು, ಅವನನ್ನು ಆ
೧೫ ರಾಧಿಸಿ, ಅವನಿಗೆ—ನನ್ನ ಕರ್ತನು ತನ್ನ ಸೇವಕನಿಗೆ ಏನು ಹೇ
ಳುತ್ತಾನೆ! ಅಂದನು. ಅದಕ್ಕೆ ಕರ್ತನ ಸೈನ್ಯದ ಅಧಿಪತಿ ಯೆ
ಹೋಶುವನಿಗೆ, ನಿನ್ನ ಕೆರಗಳನ್ನು ನಿನ್ನ ಕಾಲುಗಳಿಂದ ತೆಗೆದು
ಹಾಕು; ಯಾಕಂದರೆ ನೀನು ನಿಂತಿರುವ ಸ್ಥಳವು ಪರಿಶುದ್ಧವಾದ
ದ್ದು, ಅಂದನು. ಹಾಗೆಯೇ ಯೆಹೋಶುವ ಮಾಡಿದನು.

## ೬. ಸಂಧಿ.

೧ ಆಗ ಇಸ್ರಯೇಲ್ ಮಕ್ಕಳ ನಿಮಿತ್ತವಾಗಿ, ಒಬ್ಬರೂ ಹೊರಗೆ
ಬಾರದ ಹಾಗೆಯೂ, ಒಳಗೆ ಹೋಗದ ಹಾಗೆಯೂ, ಯೆರಿ
ಕೋ ಮುಚ್ಚೇ ಮುಚ್ಚಲ್ಪಟ್ಟಿತು. ಆಗ ಕರ್ತನು ಯೆಹೋಶು
೨ ವನಿಗೆ ಹೇಳಿದ್ದೇನಂದರೆ—ಇಗೋ, ಯೆರಿಕೋವನ್ನೂ ಅದರ ಅ
ರಸನನ್ನೂ ಬಲವುಳ್ಳ ಪರಾಕ್ರಮಿಗಳನ್ನೂ ನಿನ್ನ ಕೈಯಲ್ಲಿ ಒ
೩ ಪ್ಪಿಸಿ ಕೊಟ್ಟೆನು. ಯುದ್ಧ ಸನ್ನದ್ಧರಾದ ನೀವೆಲ್ಲರು ಒಂದು ಸಾ
ರಿ ಪಟ್ಟಣವನ್ನು ಸುತ್ತ ಬೇಕು. ಈ ಪ್ರಕಾರ ಆರು ದಿವಸಗ
೪ ಳು ಮಾಡ ಬೇಕು. ಏಳು ಮಂದಿ ಯಾಜಕರು ಒಡಂಬಡಿಕೆಯ
ಪೆಟ್ಟಿಗೆಯ ಮುಂದೆ ಸಂಭ್ರಮದ ಏಳು ತುತೂರಿಗಳನ್ನು ಹಿಡು
ಕೊಂಡು, ಹೋಗ ಬೇಕು. ಆದರೆ ಅವರು ಏಳನೇ ದಿವಸ ಪಟ್ಟಣ
ವನ್ನು ಏಳು ಸಾರಿ ಸುತ್ತಿ ಬರ ಬೇಕು. ಯಾಜಕರು ತುತೂರಿಗ
೫ ಳನ್ನು ಊದ ಬೇಕು. ಅವರು ಸಂಭ್ರಮದ ತುತೂರಿಗಳಿಂದ
ದೀರ್ಘ ಧ್ವನಿ ಸೈಯುವಾಗ, ನೀವು ಆ ತುತೂರಿಯ ಧ್ವನಿಯ
ನ್ನು ಕೇಳುವಾಗ, ಜನಕೆಲ್ಲರು ಮಹಾ ಆರ್ಭಟವಾಗಿ ಆರ್ಭಟಿಸ
ಬೇಕು; ಆಗ ಆ ಪಟ್ಟಣದ ಗೋಡೆ ಕೂಲ ಬಿದ್ದು ಹೋಗುವದು.
ಜನರು ಅವನವನು ತನ್ನ ಮುಂದೆ ಸರಿಯಾಗಿ ಏರಿ ಹೋಗ
ಬೇಕು.



೬ ಆಗ ನೂನನ ಮಗನಾದ ಯೆಹೋಶುವನು ಯಾಜಕರನ್ನು
ಕರೆದು, ಅವರಿಗೆ—ನೀವು ಒಡಂಬಡಿಕೆಯ ಪೆಟ್ಟಿಗೆಯನ್ನು ಎತ್ತಿ
ಕೊಳ್ಳಿರಿ; ಮತ್ತು ಏಳು ಮಂದಿ ಯಾಜಕರು ಏಳು ಸಂಭ್ರಮದ
ತುತೂರಿಗಳನ್ನು ಕರ್ತನ ಪೆಟ್ಟಿಗೆಯ ಮುಂದೆ ಹಿಡು ಕೊಂಡು
೭ ಹೋಗಲಿ, ಅಂದನು. ಮತ್ತು ಜನರಿಗೆ, ನೀವು ಹಾದು ಹೋಗಿ,
ಪಟ್ಟಣದ ಸುತ್ತ ಸುತ್ತಿರಿ; ಯುದ್ಧಕ್ಕೆ ಸಿದ್ಧನು ಕರ್ತನ ಪೆಟ್ಟಿಗೆಯ
ಮುಂದೆ ನಡೆಯಲಿ, ಅಂದನು.
೮ ಯೆಹೋಶುವನು ಜನರ ಸಂಗಡ ಮಾತಾಡಿದ ತರುವಾಯ
ಆದದ್ದೇನಂದರೆ, ಏಳು ಸಂಭ್ರಮದ ತುತೂರಿಗಳನ್ನು ಹಿಡು
ಕೊಂಡ ಏಳು ಮಂದಿ ಯಾಜಕರು ತುತೂರಿಗಳನ್ನು ಊದುತ್ತಾ,
ಕರ್ತನ ಮುಂದೆ ನಡೆದರು. ಕರ್ತನ ಒಡಂಬಡಿಕೆಯ ಪೆಟ್ಟಿಗೆ
೯ ಅವರ ಹಿಂದೆ ನಡೆಯಿತು. ಹೀಗೆ ಯುದ್ಧ ಸನ್ನದ್ಧರಾದ ಜನರು
ತುತೂರಿಗಳನ್ನು ಊದುವ ಯಾಜಕರ ಮುಂದೆ ನಡೆದರು.
ಯಾಜಕರು ತುತೂರಿಯನ್ನು ಊದುತ್ತಿರುವಾಗ, ಹಿಂದಿನ ಸೈ
೧೦ ನ್ಯವು ಪೆಟ್ಟಿಗೆಯ ಹಿಂದೆ ನಡೆದು ಬಂತು. ಯೆಹೋಶುವನು
ಜನರಿಗೆ ಆಜ್ಞಾಪಿಸಿದ್ದೇನಂದರೆ, ನಾನು ಹೇಳುವ ದಿವಸದ ಪ
ರ್ಯಂತರ ಆರ್ಭಟಿಸ ಬೇಡಿರಿ; ನಿಮ್ಮ ಶಬ್ದ ಕೇಳಲಿಸ ಬೇಡಿರಿ;
ನಿಮ್ಮ ಬಾಯಿಯಿಂದ ಮಾತು ಹೊರಡ ಬಾರದು; ನಾನು—ಆ
೧೧ ರ್ಭಟಿಸಿಕೆಂದು ಹೇಳುವ ದಿವಸದಲ್ಲಿ ಆರ್ಭಟಿಸ ಬೇಕು. ಹೀಗೆ
ಯೇ ಕರ್ತನ ಪೆಟ್ಟಿಗೆಯು ಪಟ್ಟಣವನ್ನು ಒಂದು ಸಾರಿ ಸುತ್ತಿತು;
ಆಗಲವರು ದಂಡಿನಲ್ಲಿ ಬಂದು, ವಾಸಿಸಿದರು.
೧೨ ಮತ್ತು ಯೆಹೋಶುವ ಉದಯದಲ್ಲಿ ಎದ್ದನು; ಯಾಜಕರು
೧೩ ಕರ್ತನ ಪೆಟ್ಟಿಗೆಯನ್ನು ಹೊತ್ತು ಕೊಂಡು ಹೋದರು. ಸಂಭ್ರ
ಮದ ತುತೂರಿಗಳನ್ನು ಹಿಡಿಯುವ ಏಳು ಮಂದಿ ಯಾಜಕರು
ಆ ತುತೂರಿಗಳನ್ನು ಊದುತ್ತಾ ಕರ್ತನ ಒಡಂಬಡಿಕೆಯ ಪೆಟ್ಟಿ
ಗೆಯ ಮುಂದೆ ನಡೆಯುತ್ತಾ, ಹೋದರು. ಮತ್ತು ಯುದ್ಧಕ್ಕೆ
ಸಿದ್ಧವಾದ ಜನರು ಅವರ ಮುಂದೆ ನಡೆದರು; ಆದರೆ ಹಿಂದಿನ ಸೈ
ನ್ಯದವರು, ಯಾಜಕರು ತುತೂರಿಗಳನ್ನು ಊದುತ್ತಾ ಹೋಗು
೧೪ ವ ಕರ್ತನ ಪೆಟ್ಟಿಗೆಯ ಹಿಂದೆ ನಡೆದರು. ಹಾಗೆ ಎರಡನೇ ದಿ
ವಸದಲ್ಲಿ ಅವರು ಪಟ್ಟಣವನ್ನು ಒಂದು ಸಾರಿ ಸುತ್ತಿ ಬಂದು, ದಂಡಿಗೆ
ತಿರುಗಿದರು. ಹೀಗೆಯೇ ಆರು ದಿವಸ ಮಾಡಿದರು.
೧೫ ಆದರೆ ಏಳನೇ ದಿವಸ, ಹೊತಾರೆ, ಸೂರ್ಯ ಉದಯವಾಗು
ವಾಗ, ಅವರು ಎದ್ದು, ಪಟ್ಟಣವನ್ನು ಅದೇ ರೀತಿಯಾಗಿ ಏಳು ಸಾ
ರಿ ಸುತ್ತಿ ಬಂದರು; ಆ ದಿನದಲ್ಲಿ ಮಾತ್ರವೇ ಪಟ್ಟಣವನ್ನು ಏಳು
೧೬ ಸಾರಿ ಸುತ್ತಿ ಬಂದರು. ಏಳನೇ ಸಾರಿ ಯಾಜಕರು ತುತೂರಿಗ
ಳನ್ನು ಊದುವಾಗ ಆದದ್ದೇನಂದರೆ, ಯೆಹೋಶುವನು ಜನರಿಗೆ
ಹೇಳಿದ್ದೇನಂದರೆ—ಆರ್ಭಟಿಸಿರಿ; ಯಾಕಂದರೆ ಕರ್ತನು ನಿಮಗೆ
೧೭ ಪಟ್ಟಣವನ್ನು ಕೊಟ್ಟನು. ಇದಲ್ಲದೆ ಈ ಪಟ್ಟಣವೂ ಅದರಲ್ಲಿರುವ
ಸಮಸ್ತವೂ ಕರ್ತನ ಶಾಪಕ್ಕೆ ಈಡಾಗಿರುವದು; ರಹಾಬ ಎಂಬ
ಸೂಳೆಯೂ ಅವಳ ಮನೆಯಲ್ಲಿ ಇರುವ ಸಮಸ್ತರೂ ಬದುಕಲಿ.
ಯಾಕಂದರೆ ನಾವು ಕಳುಹಿಸಿದ ದೂತರನ್ನು ಬಚ್ಚಿಟ್ಟಳು.
೧೮ ನೀವು ಶಾಪಕ್ಕೆ ಈಡಾದವುಗಳನ್ನು ತೆಗೆದು ಕೊಂಡಾಗ, ನಿಮ್ಮ
ನ್ನು ಶಾಪಕ್ಕೆ ಈಡಾಗಿ ಮಾಡಿ ಕೊಂಡು, ಇಸ್ರಯೇಲಿನ ದಂಡ
ನ್ನು ಶಾಪಕ್ಕೆ ಈಡು ಮಾಡಿ, ತೊಂದರೆ ಪಡಿಸದ ಹಾಗೆ, ಶಾಪ
ಕ್ಕೆ ಈಡಾದವುಗಳನ್ನು ತೆಗೆದು ಕೊಳ್ಳದೆ, ಬಹು ಎಚ್ಚರಿಕೆಯಾ
೧೯ ಗಿರ್ರಿ. ಎಲ್ಲಾ ಬೆಳ್ಳಿ, ಭಂಗಾರವೂ, ಹಿತ್ತಾಳಿ, ಕಬ್ಬಿಣ ಪಾತ್ರೆಗ
ಳೂ ಕರ್ತನಿಗೆ ಪರಿಶುದ್ಧವಾಗಿವೆ; ಅವು ಕರ್ತನ ಉಗ್ರಾಣಕ್ಕೆ
ಕೇರ ಬೇಕು.
೨೦ ಜನರು ಆರ್ಭಟಿಸಿದರು. ಹಾಗೆ ಯಾಜಕರು ತುತೂರಿಗಳನ್ನು
ಊದಿದರು. ತುತೂರಿಯ ಶಬ್ದವನ್ನು ಜನರು ಕೇಳಿ, ಮಹಾ ಆ
ರ್ಭಟವಾಗಿ ಆರ್ಭಟಿಸುತ್ತಲೇ, ಗೋಡೆ ಕೂಲ ಬಿತ್ತು; ಆಗ ಜನ
೨೧ ರು ಅವನವನು ತನ್ನ ಮುಂದೆ ಸರಿಯಾಗಿ ಏರಿ ಹೋಗಿ, ಪಟ್ಟ
ವನ್ನು ಹಿಡಿದು, ಪಟ್ಟಣದಲ್ಲಿರುವ ಸ್ತ್ರೀ ಪುರುಷರನ್ನೂ, ಹಿರಿ ಕಿರಿ
ಯರನ್ನೂ, ಕುರಿ ದನಗಳನ್ನೂ, ಕತ್ತೆಗಳನ್ನೂ, ಎಲ್ಲಾ ಕತ್ತಿಯ
ಬಾಯಿಯಿಂದ ನಿರ್ಮೂಲ ಮಾಡಿದರು.
೨೨ ಆದರೆ ಯೆಹೋಶುವ ದೇಶವನ್ನು ಪಾಳತಿ ನೋಡ ಹೋಗಿ
ದ್ದ ಇಬ್ಬರು ಮನುಷ್ಯರಿಗೆ, ನೀವು ಸೂಳೆಯಾದ ಹೆಂಗಸಿನ ಮ
ನೆಯಲ್ಲಿ ಹೋಗಿ, ಅವಳನ್ನೂ, ಅವಳಿಗೆ ಉಂಟಾದ ಸಮಸ್ತವ
ನ್ನೂ, ನೀವು ಅವಳಿಗೆ ಆಣೆ ಇಟ್ಟ ಹಾಗೆ, ಅಲ್ಲಿಂದ ಹೊರಗೆ
೨೩ ತಕ್ಕೊಂಡು ಬನ್ನಿರಿ, ಎಂದು ಆಜ್ಞಾಪಿಸಿದನು. ಪಾಳತಿಗಾರರಾದ
ಯೌವನಸ್ಥರು ಒಳಗೆ ಹೋಗಿ, ರಹಾಬಳನ್ನೂ, ಅವಳ ತಂದೆ
ಯನ್ನೂ, ಅವಳ ತಾಯಿಯನ್ನೂ, ಅವಳ ಸಹೋದರರನ್ನೂ,
ಅವಳಿಗಿದ್ದ ಸಮಸ್ತವನ್ನೂ, ಅವಳ ಗೋತ್ರಸವರಾದ ಸಮಸ್ತರ
ನ್ನೂ ಹೊರಗೆ ಕರ ತಂದು, ಇಸ್ರಯೇಲ ದಂಡಿನ ಹೊರಗೆ ಅವ
ರನ್ನು ಇರಿಸಿದರು.
೨೪ ಆದರೆ ಪಟ್ಟಣವನ್ನೂ, ಅದರಲ್ಲಿರುವ ಸಮಸ್ತವನ್ನೂ ಬೆಂಕಿ
ಯಿಂದ ಸುಟ್ಟು ಬಿಟ್ಟರು. ಬೆಳ್ಳಿ ಭಂಗಾರವನ್ನೂ, ಹಿತ್ತಾಳಿ, ಕ
ಬ್ಬಿಣದ ಪಾತ್ರೆಗಳನ್ನೂ ಮಾತ್ರ ಕರ್ತನ ಮನೆಯ ಉಗ್ರಾಣ
ಕ್ಕೆ ಕೊಟ್ಟರು.
೨೫ ಆದರೆ ಸೂಳೆಯಾದ ರಹಾಬಳನ್ನೂ, ಅವಳನ್ನೂ ಅವಳ
ತಂದೆಯ ಮನೆಯವರನ್ನೂ ಅವಳಿಗಿದ್ದ ಸಮಸ್ತವನ್ನೂ ಯೆ
ಹೋಶುವನು ಪ್ರಾಣದಿಂದ ಇಟ್ಟನು; ಮತ್ತು ಅವಳು ಇಷ್ಟು
ದಿವಸದ ವರಿಗೂ ಇಸ್ರಯೇಲರಲ್ಲಿ ವಾಸವಾಗಿದ್ದಾಳೆ. ಯಾಕಂ
ದರೆ ಯೆರಿಕೋವನ್ನು ಪಾಳತಿ ನೋಡ ಯೆಹೋಶುವನು ಕಳು
ಹಿಸಿದ ದೂತರನ್ನು ಬಚ್ಚಿಟ್ಟಳು.
೨೬ ಆ ಕಾಲದಲ್ಲಿ ಯೆಹೋಶುವನು ಈ ಯೆರಿಕೋ ಪಟ್ಟವನ್ನು
ಎದ್ದು ಕಟ್ಟಿಸುವ ಮನುಷ್ಯನು ಕರ್ತನ ಮುಂದೆ ಶಪಿಸಲ್ಪಡಲಿ;
ತನ್ನ ಜೊಚ್ಚಲ ಮಗನಲ್ಲಿ ಅದರ ಅಸ್ತಿವಾರವನ್ನು ಹಾಕುವನು,
ತನ್ನ ಚಿಕ್ಕ ಮಗನಲ್ಲಿ ಅದರ ಬಾಗಲುಗಳನ್ನು ಇಡುವನು ಎಂದು
ಆಣೆ ಇಟ್ಟು, ಹೇಳಿದನು.
೨೭ ಹೀಗೆಯೇ ಕರ್ತನು ಯೆಹೋಶುವನ ಸಂಗಡ ಇದ್ದನು; ಅವ
ನ ಕೀರ್ತಿ ದೇಶವೆಲ್ಲಾದರಲ್ಲಿ ಇತ್ತು.

## ೭. ಸಂಧಿ.

೧ ಆದರೆ ಇಸ್ರಯೇಲ್ ಮಕ್ಕಳು ಶಾಪಕ್ಕೆ ಈಡಾದದರಲ್ಲಿ ಅ
ಕೃತ್ಯ ಮಾಡಿದರು; ಏನಂದರೆ ಯೆಹೂದ ಕುಲದ ಜೇರಹನ
ಮಗನಾದ ಜಬ್ದಿಯ ಮಗನಾದ ಕರ್ಮಿಯ ಮಗನಾದ ಆಕಾನ
ನು ಶಾಪಕ್ಕೀಡಾದದರಲ್ಲಿ ಕೆಲವನ್ನು ತೆಗೆದು ಕೊಂಡನು. ಆದದ
ರಿಂದ ಕರ್ತನ ಕೋಪವು ಇಸ್ರಯೇಲ್ ಮಕ್ಕಳ ಮೇಲೆ ಉರಿ
ಯಿತು.

೨ ಆಗ ಯೆಹೋಶುವನು, ನೀವು ದೇಶವನ್ನು ಪಾಳತಿ ನೋಡಿ, ಬನ್ನಿರಿ ಎಂದು ಹೇಳಿ, ಯೆರಿಕೋವಿನಿಂದ ಮನುಷ್ಯರನ್ನು ಬೆಸೆಲಿಗೆ, ಪೂರ್ವ ಕಡೆಯಾದ ಬೆತಾವಿನ ಬಳಿಯಲ್ಲಿರುವ ಆಯಿಗೆ, ಕಳುಹಿಸಿದನು. ಆಗಲವರು ಹೋಗಿ, ಆಯಿಯನ್ನು ಪಾಳತಿ ನೋಡಿ, ಯೆಹೋಶುವನ ಬಳಿಗೆ ತಿರಿಗಿ ಬಂದು, ಅವನಿಗೆ, ಜನರೆಲ್ಲರೂ ಏರಿ ಹೋಗದೆ ಇರಲಿ; ಆಯಿಯನ್ನು ಹೊಡೆಯಲಿಕ್ಕೆ ಎರಡು ಮೂರು ಸಾವಿರ ಜನ ಮಾತ್ರವೇ ಹೋಗಲಿ; ಅಲ್ಲಿಗೆ ಹೋಗ ಜನರೆಲ್ಲರನ್ನೂ ದಣಿಸ ಬೇಡ; ಯಾಕಂದರೆ ಆ ಜನವು ಸ್ವಲ್ಪವು, ಅಂದರು.

೪ ಹಾಗೆಯೇ ಜನರಲ್ಲಿ ಹೆಚ್ಚು ಕಡಿಮೆ ಮೂರು ಸಾವಿರ ಮಂದಿ ಅಲ್ಲಿಗೆ ಹೋದರು; ಆದರೆ ಅವರು ಆಯಿಯ ಮನುಷ್ಯರ ಮುಂದೆ ಓಡಿ ಹೋದರು. ಆಯಿ ಮನುಷ್ಯರು ಇವರಲ್ಲಿ ಹೆಚ್ಚು ಕಡಿಮೆ ಮೂವತ್ತಾರು ಮಂದಿಯನ್ನು ಹೊಡೆದು ಹಾಕಿದರು. ಮತ್ತು ಬಾಗಲು ಪ್ರಾರಂಭಿಸಿ, ಬೆಬಾರಿಯ ವರಿಗೂ ಅವರನ್ನು ಹಿಂದಟ್ಟಿ, ಇಳಿಯುವಾಗ, ಅವರನ್ನು ಹೊಡೆದರು. ಆದದರಿಂದ ಜನರ ಹೃದಯವು ಕರಗಿ ನೀರಾಯಿತು.

೬ ಆಗ ಯೆಹೋಶುವ ತನ್ನ ವಸ್ತ್ರಗಳನ್ನು ಹರಕೊಂಡು, ತಾನೂ ಇಸ್ರಯೇಲಿನ ಹಿರಿಯರೂ ತಮ್ಮ ತಲೆಗಳ ಮೇಲೆ ಮಣ್ಣು ಹಾಕಿ ಕೊಂಡು, ಸಾಯಂಕಾಲದ ಪರ್ಯಂತರ ಕರ್ತನ ಪೆಟ್ಟಿಗೆಯ ಮುಂದೆ ನೆಲದ ಮೇಲೆ ಬೋರ್ಲ ಬಿದ್ದರು. ಇದಲ್ಲದೆ ಯೆಹೋಶುವ ಹೇಳ್ದೆನೆಂದರೆ, ಅಯ್ಯೋ! ಕರ್ತನಾದ ದೇವಕೇ, ನಮ್ಮನ್ನು ನಾಶ ಮಾಡುವ ಹಾಗೆ, ನಮ್ಮನ್ನು ಅಮೋರ್ಯರ ಕೈಯಲ್ಲಿ ಒಪ್ಪಿಸಿ ಕೊಡುವದಕ್ಕಾಗಿ ನೀನು ಈ ಜನರನ್ನು ಯೊರ್ದನನ್ನು ದಾಟ ಮಾಡಿದ್ದೇನು! ನಾವು ಯೊರ್ದನಿನ ಅಚೆಯಲ್ಲಿ ಇದ್ದರೆ, ಬಳ್ಳೇದಾಗಿತ್ತು. ಓ ಕರ್ತನೇ, ಈಗ ಇಸ್ರಯೇಲರು ತಮ್ಮ ಶತ್ರುಗಳಿಗೆ ಬೆನ್ನು ಕೊಟ್ಟ ತರುವಾಯ, ನಾನು ಏನು ಹೇಳಲಿ! ಏನಂದರೆ ಕನಾನ್ಯರೂ ದೇಶವಾಸಿಗಳೆಲ್ಲರೂ ಇದನ್ನು ಕೇಳಿ, ನಮ್ಮನ್ನು ಸುತ್ತಿ ಕೊಂಡು, ನಮ್ಮ ಹೆಸರನ್ನು ಭೂಮಿಯಿಂದ ಕಡಿದು ಬಿಡುವರು; ಆಗ ನೀನು ನಿನ್ನ ದೊಡ್ಡ ಹೆಸರಿಗೆ ಏನು ಮಾಡುವಿ? ಅಂದನು.

೧೦ ಆಗ ಕರ್ತನು ಯೆಹೋಶುವನಿಗೆ ಹೇಳ್ದೆನೆಂದರೆ, ಏಳು;
೧೧ ನೀನು ಈಗ ಈ ಪ್ರಕಾರ ಬೋರ್ಲ ಬಿದ್ದಿರುವದೇನು! ಇಸ್ರಯೇಲ್ಯರು ಪಾಪ ಮಾಡಿ, ನಾನು ತಮಗೆ ಆಜ್ಞಾಪಿಸಿದ ನನ್ನ ಒಡಂಬಡಿಕೆಯನ್ನು ಮೀರಿದರು; ಅವರು ಶಾಪಕ್ಕೀಡಾದದರಲ್ಲಿ ಕಳ್ಳವು ಮಾಡಿ, ತೆಗೆದು ಕೊಂಡು, ವಂಚನೆ ಮಾಡಿ, ಅದನ್ನು ತಮ್ಮ
೧೨ ಸಾಮಾನುಗಳಲ್ಲಿ ಬಚ್ಚಿಟ್ಟು ಕೊಂಡಿದ್ದಾರೆ. ಆದದರಿಂದ ಇಸ್ರಯೇಲ್ ಮಕ್ಕಳು ತಮ್ಮ ಶತ್ರುಗಳ ಮುಂದೆ ನಿಲ್ಲ ಕೂಡದೆ, ತಮ್ಮ ಶತ್ರುಗಳಿಗೆ ಬೆನ್ನು ಕೊಟ್ಟರು; ಯಾಕಂದರೆ ಅವರು ಶಾಪಕ್ಕೀಡಾದರು. ನೀವು ಶಾಪಕ್ಕೀಡಾದದ್ದನ್ನು ನಿಮ್ಮ ಮಧ್ಯದಲ್ಲಿಂದ ನಾಶ ಮಾಡದೆ ಇದ್ದರೆ, ಇನ್ನು ನಾನು ನಿಮ್ಮ ಸಂಗಡ ಇರೆ
೧೩ ನು. ನೀನು ಎದ್ದು, ಜನರನ್ನು ಪರಿಶುದ್ಧ ಮಾಡಿ, ಹೇಳ ಬೇಕಾದದ್ದೇನಂದರೆ, ನಾಳೆಗೆ ನಿಮ್ಮನ್ನು ಪರಿಶುದ್ಧ ಮಾಡಿ ಕೊಳ್ಳಿರಿ; ಯಾಕಂದರೆ, ಇಸ್ರಯೇಲೇ, ನಿನ್ನ ಮಧ್ಯದಲ್ಲಿ ಶಾಪಕ್ಕೆ ಈಡಾದದ್ದು ಉಂಟು; ಅದನ್ನು ನಿಮ್ಮಲ್ಲಿಂದ ತೆಗೆದು ಹಾಕುವ ಪರ್ಯಂತರ ನೀನು ನಿನ್ನ ಶತ್ರುಗಳ ಮುಂದೆ ನಿಲ್ಲ ಕೂಡದೆಂದು, ಇಸ್ರ
೧೪ ಯೇಲ್ ಕರ್ತನಾದ ದೇವರು ಹೇಳುತ್ತಾನೆ. ಆದದರಿಂದ ಹೊತಾಕೆಯಲ್ಲಿ ನಿಮ್ಮ ಕುಲಗಳ ಪ್ರಕಾರವೇ ಕೀರಿ ಬನ್ನಿರಿ. ಆಗ ಕರ್ತನು ಹಿಡಿಯುವ ಕುಲ ಗೋತ್ರ ಗೋತ್ರವಾಗಿಯೂ, ಕರ್ತನು ಹಿಡಿಯುವ ಗೋತ್ರ ಮನೆ ಮನೆಯಾಗಿಯೂ, ಕರ್ತನು ಹಿಡಿಯುವ ಮನೆ ಹೆಸರು ಹೆಸರಾಗಿಯೂ ಕೀರಲಿ. ಆಗ ಶಾಪಕ್ಕೀಡಾದದ್ದು ಉಂಟಾದವನಾಗಿ ಹಿಡಿಯಲ್ಪಡುವವನು ಕರ್ತನ ಒಡಂಬಡಿಕೆಯನ್ನು ಮೀರಿ, ಇಸ್ರಯೇಲಿನಲ್ಲಿ ಬುದ್ಧಿ ಹೀನವಾದ ಕಾರ್ಯವನ್ನು ಮಾಡಿದ್ದರಿಂದ, ಅವನೂ ಅವನಲ್ಲಿರುವ ಸಮಸ್ತವೂ ಬೆಂಕಿಯಿಂದ ಸುಟ್ಟು ಬಿಡಲ್ಪಡಲಿ, ಅಂದನು.

೧೬ ಹೀಗೆಯೇ ಯೆಹೋಶುವ ಉದಯದಲ್ಲಿ ಎದ್ದು, ಇಸ್ರಯೇಲನ್ನು ಕುಲ ಕುಲವಾಗಿ ಕರೆದಾಗ, ಯೆಹೂದ ಕುಲವು ಹಿಡಿಯಲ್ಪಟ್ಟಿತು. ಅವನು ಯೆಹೂದನ ಗೋತ್ರಗಳನ್ನು ಕರೆದಾಗ, ಜರ್ಹಿಯರ ಗೋತ್ರವು ಹಿಡಿಯಲ್ಪಟ್ಟಿತು. ಜರ್ಹಿಯರ ಗೋತ್ರವನ್ನು ಹೆಸರು ಹೆಸರಾಗಿ ಕರೆದಾಗ, ಜಬ್ದಿ ಹಿಡಿಯಲ್ಪಟ್ಟನು.
೧೮ ಅವನ ಮನೆಯವರನ್ನು ಅವನು ಹೆಸರು ಹೆಸರಾಗಿ ಕರೆದಾಗ, ಯೆಹೂದನ ಕುಲದ ಜೇರಹನ ಮಗನಾದ ಜಬ್ದಿಯ ಮಗನಾದ ಕರ್ಮಿಯ ಮಗನಾದ ಆಕಾನನು ಹಿಡಿಯಲ್ಪಟ್ಟನು.

೧೯ ಆಗ ಯೆಹೋಶುವ ಆಕಾನನಿಗೆ—ನನ್ನ ಮಗನೇ, ನೀನು ಈಗ ಇಸ್ರಯೇಲಿನ ದೇವರಾದ ಕರ್ತನಿಗೆ ಘನವನ್ನು ಕೊಟ್ಟು, ಅವನಿಗೆ ಅರಿಕೆ ಮಾಡು; ಏನು ಮಾಡಿದಿಯೋ, ಅದನ್ನು ನನಗೆ ತಿಳಿಸು; ನನಗೆ ಮಾಜ ಬೇಡ, ಅಂದನು. ಆಗ ಆಕಾನನು ಯೆಹೋಶುವನಿಗೆ ಪ್ರತ್ಯುತ್ತರವಾಗಿ ಹೇಳ್ದೆನೆಂದರೆ, ನಿಜವಾಗಿ ನಾನು ಇಸ್ರಯೇಲ್ ದೇವರಾದ ಕರ್ತನಿಗೆ ವಿರೋಧವಾಗಿ ಪಾಪ
೨೦ ಮಾಡಿ, ಇಂತಿಂತಾವುಗಳನ್ನು ಮಾಡಿದ್ದೇನೆ. ಏನಂದರೆ ನಾನು ಕೊಳ್ಳೆಯಲ್ಲಿ ಒಂದು ಷಿನಾರ್ ದೇಶದ ಬಳ್ಳೇ ವಸ್ತ್ರವನ್ನೂ, ಇನ್ನೂರು ಬೆಳ್ಳಿ ಶೆಕೆಲುಗಳನ್ನೂ, ಐವತ್ತು ಶೆಕೆಲ್ ತೂಕವಾದ ಒಂದು ಭಂಗಾರದ ಗಟ್ಟಿಯನ್ನೂ ಕಂಡು, ಅವುಗಳನ್ನು ಇಚ್ಛೈಸಿ, ತೆಗೆದು ಕೊಂಡೆನು; ಇಗೋ, ಅವು ನನ್ನ ಗುಡಾರದ ಮಧ್ಯದಲ್ಲಿ ನೆಲದೊಳಗೆ ಬಚ್ಚಿಟ್ಟು ಇದ್ದೇನೆ; ಬೆಳ್ಳಿಯೂ ಕೆಳಗದೆ, ಅಂದನು.

೨೨ ಆಗ ಯೆಹೋಶುವ ಆಳುಗಳನ್ನು ಕಳುಹಿಸಿದನು; ಅವರು ಗುಡಾರಕ್ಕೆ ಓಡಿದರು; ಇಗೋ, ಅವನ ಗುಡಾರದ ಮಧ್ಯದಲ್ಲಿ ಅವು ಬಚ್ಚಿಟ್ಟಲ್ಪಟ್ಟಿದ್ದವು; ಬೆಳ್ಳಿಯು ಅದರ ಕೆಳಗೆ ಇತ್ತು. ಅವರು ಅವುಗಳನ್ನು ಗುಡಾರದ ಮಧ್ಯದ ಭೂಮಿಯಿಂದ ತೆಗೆದು
೨೩ ಕೊಂಡು, ಯೆಹೋಶುವನ ಬಳಿಗೂ, ಸಮಸ್ತ ಇಸ್ರಯೇಲ್ ಮಕ್ಕಳ ಬಳಿಗೂ ತಂದು, ಕರ್ತನ ಮುಂದೆ ಇಟ್ಟರು.

೨೪ ಆಗ ಯೆಹೋಶುವನೂ ಇಸ್ರಯೇಲ್ಯಕೆಲ್ಲರೂ ಕೂಡ ಜೇರಹನ ಮಗನಾದ ಆಕಾನನನ್ನೂ, ಆ ಬೆಳ್ಳಿಯನ್ನೂ, ವಸ್ತ್ರವನ್ನೂ, ಭಂಗಾರದ ಗಟ್ಟಿಯನ್ನೂ, ಅವನ ಕುಮಾರರನ್ನೂ, ಕುಮಾರ್ತೆಗಳನ್ನೂ, ಅವನ ಎತ್ತುಗಳನ್ನೂ, ಕತ್ತೆಗಳನ್ನೂ, ಕುರಿಗಳನ್ನೂ, ಅವನ ಗುಡಾರವನ್ನೂ, ಅವನಿಗಿದ್ದ ಸಮಸ್ತವನ್ನೂ ತೆಗೆದು ಕೊಂಡು, ಆಕೋರಿನ ತಗ್ಗಿಗೆ ಹೋದರು. ಆಗ
ೲ ಯೆಹೋಶುವನು ಅವನಿಗೆ, ನೀನು ನಮ್ಮನ್ನು ತೊಂದರೆ ಪಡಿಸಿದ್ದೇನು! ಇಂದು ಕರ್ತನು ನಿನ್ನನ್ನು ತೊಂದರೆ ಪಡಿಸುವನು, ಅಂದನು. ಆಗ ಇಸ್ರಯೇಲ್ಯರೆಲ್ಲರೂ ಅವರನ್ನು ಕಲ್ಲೆಸೆದರು. ಅವ



ರನ್ನು ಕಲ್ಲೆಸೆದ ತರುವಾಯ, ಬೆಂಕಿಯಿಂದ ಅವರನ್ನು ಸುಟ್ಟು ಬಿಟ್ಟು, ಅವರ ಮೇಲೆ ಕಲ್ಲು ಕುಪ್ಪೆ ಕೂಡಿಸಿದರು. ಅದು ಈ ದಿನದ
ೲ ಮಟ್ಟಿಗೂ ಉಂಟು. ಆಗ ಕರ್ತನು ತನ್ನ ಕೋಪದ ಉರಿಯನ್ನು ಬಿಟ್ಟು, ತಿರುಗಿದನು; ಆದದರಿಂದ ಆ ಸ್ಥಳವು ಈ ವರಿಗೂ ಅಕೋರಿನ ತಗ್ಗೆಂದು ಕರೆಯಲ್ಪಡುವದು.

## ೮. ಸಂಧಿ.

೧ ಆಗ ಕರ್ತನು ಯೆಹೋಶುವನಿಗೆ ಹೇಳ್ದೆನೆಂದರೆ, ಭಯಪಡ ಬೇಡ, ಬೆದರ ಬೇಡ. ನೀನು ಸಮಸ್ತ ಯುದ್ಧಸ್ಥರಾದ ಜನರನ್ನು ಕೂಡಿಸಿ ಕೊಂಡು, ಎದ್ದು, ಆಯಿಗೆ ಏರಿ ಹೋಗು. ಇಗೋ, ನಾನು ಆಯಿಯ ಅರಸನನ್ನೂ, ಅವನ ಜನವನ್ನೂ, ಅವನ ಪಟ್ಟಣವನ್ನೂ, ಅವನ ಭೂಮಿಯನ್ನೂ ನಿನ್ನ ಕೈಯಲ್ಲಿ ಒ
೨ ಪ್ಪಿಸಿ ಕೊಟ್ಟಿನು. ನೀನು ಯೆರಿಕೋವಿಗೂ ಅದರ ಅರಸನಿಗೂ ಯಾವ ಪ್ರಕಾರ ಮಾಡಿದಿಯೋ, ಹಾಗೆಯೇ, ಆಯಿಗೂ ಅದರ ಅರಸನಿಗೂ ಮಾಡ ಬೇಕು. ಅದರ ಕೊಳ್ಳೆಯನ್ನೂ ದನಗಳನ್ನೂ ಮಾತ್ರವೇ ನಿಮಗೋಸ್ಕರ ಸುಲು ಕೊಳ್ಳಿರಿ. ನೀವು ಆ ಪಟ್ಟಣಕ್ಕೆ ಹಿಂಭಾಗದಲ್ಲಿ ಒಂದು ಆಸಕೆಯನ್ನು ಮಾಡಿ ಕೊಳ್ಳಿರಿ, ಅಂದನು.

೩ ಆಗ ಆಯಿಗೆ ಏರಿ ಹೋಗ ಯೆಹೋಶುವನೂ ಸಮಸ್ತ ಯುದ್ಧಸ್ಥರೂ ಎದ್ದರು. ಆದರೆ ಯೆಹೋಶುವನು ಪರಾಕ್ರಮಶಾಲಿಗಳಾದ ಮೂವತ್ತು ಸಾವಿರ ಜನರನ್ನು ಆದು ಕೊಂಡು, ರಾ
೪ ತ್ರಿಯಲ್ಲಿ ಅವರನ್ನು ಕಳುಹಿಸಿದನು. ಅವರಿಗೆ ಆಜ್ಞಾಪಿಸಿ, ಹೇಳ್ದೆನಂದರೆ, ನೋಡಿ ಕೊಳ್ಳಿರಿ—ಪಟ್ಟಣಕ್ಕೆ ಪಟ್ಟಣದ ಹಿಂದೆ ನೀವು ಹೊಂಚಿ ಕೊಂಡಿರಿ; ಪಟ್ಟಣಕ್ಕೆ ಬಹು ದೂರವಾಗದ ಬೇಡಿರಿ; ನೀಳ್ಲರೂ
೫ ಸಿದ್ಧವಾಗಿರ್ರಿ. ಆದರೆ ನಾನೂ ನನ್ನ ಸಂಗಡ ಇರುವ ಜನರೆಲ್ಲರೂ ಪಟ್ಟಣದ ಸಮೀಪಕ್ಕೆ ಕೀರುವೆವು. ಆಗ ಆಗುವದೇನಂದರೆ, ಅವರು ಮುಂಚಿನ ಹಾಗೆಯೇ ನಮಗೆ ವಿರೋಧವಾಗಿ ಪಟ್ಟಣಿಂದ ಹೊರ
೬ ಟು ಬರುವಾಗ, ಅವರ ಮುಂದೆ ಓಡಿ ಹೋಗುವೆವು. ಆಗಲವರು, ಮುಂಚಿನ ಹಾಗೆಯೇ ನಮ್ಮ ಮುಂದೆ ಓಡಿ ಹೋಗುತ್ತಾರೆಂದು ಹೇಳಿ, ನಮ್ಮ ಹಿಂದೆ ಹೊರಡುವರು; ಆದರೆ ನಾವು ಅವರನ್ನು ಪಟ್ಟಣದ ಬಳಿಯಿಂದ ಎಳೆ ಕೊಳ್ಳುವ ವರಿಗೂ ಅವರ ಮುಂ
೭ ದೆ ಓಡಿ ಹೋಗುವೆವು. ಆಗ ನೀವು ಹೊಂಚಿ ಕೊಳ್ಳುವ ಸ್ಥಳದಿಂದ ಎದ್ದು, ಬಂದು, ಪಟ್ಟಣವನ್ನು ಹಿಡಿಯ ಬೇಕು; ನಿಮ್ಮ ದೇವರಾದ
೮ ಕರ್ತನು ಅದನ್ನು ನಿಮ್ಮ ಕೈಗೆ ಒಪ್ಪಿಸಿ ಕೊಡುವನು. ನೀವು ಪಟ್ಟಣವನ್ನು ಹಿಡಿದ ತರುವಾಯ, ಅದನ್ನು ಬೆಂಕಿ ಹಚ್ಚಿ, ಸುಟ್ಟು ಬಿಟ್ಟು, ಕರ್ತನ ಮಾತಿನ ಪ್ರಕಾರವೇ ಮಾಡ ಬೇಕು. ಇಗೋ,
೯ ನಾನು ಇದನ್ನು ನಿಮಗೆ ಆಜ್ಞಾಪಿಸಿದೆನು, ಅಂದನು. ಯೆಹೋಶುವ ಅವರನ್ನು ಕಳುಹಿಸಿದಾಗ, ಅವರು ಹೋಗಿ, ಬೇತೆಲಿಗೂ ಆಯಿಗೂ ನಡುವೆ ಆಯಿಗೆ ಪಶ್ಚಿಮ ಕಡೆ ಹೊಂಚಿ ಕೊಂಡರು. ಆದರೆ ಯೆಹೋಶುವನು ಆ ರಾತ್ರಿ ಜನರಲ್ಲಿ ಇಳ್ಳಂ ಕೊಂಡನು.

೧೦ ಉದಯ ಕಾಲದಲ್ಲಿ ಎದ್ದು, ಜನವನ್ನು ಲೆಖ್ಖ ಮಾಡಿ, ತಾನೂ ಇಸ್ರಯೇಲಿನ ಹಿರಿಯರೂ ಜನರ ಮುಂದೆ ನಡೆದು, ಆಯಿಗೆ ಏರಿ
೧೧ ಹೋದರು. ಅವನ ಸಂಗಡ ಇದ್ದ ಯುದ್ಧಸ್ಥರೆಲ್ಲಾ ನಡೆದು, ಪಟ್ಟಣದ ಸಮೀಪವಾಗಿ ಬಂದು. ಕೀರಿ, ಆಯಿಗೆ ಉತ್ತರ ದಿಕ್ಕಿನಲ್ಲಿ ಇಳ್ಳಿದರು. ಆದರೆ ಆಯಿಗೂ ಅವರಿಗೂ ಮಧ್ಯದಲ್ಲಿ ಒಂದು ತಗ್ಗು
೧೨ ಇತ್ತು. ಯೆಹೋಶುವ ಹೆಚ್ಚು ಕಡಿಮೆ ಐದು ಸಾವಿರ ಜನವನ್ನು ಆದು ಕೊಂಡು, ಆ ಪಟ್ಟಣದ ಪಶ್ಚಿಮ ಕಡೆಯಲ್ಲಿ ಬೇತೆಲಿಗೂ ಆಯಿಗೂ ನಡುವೆ ಹೊಂಚಿ ಕೊಳ್ಳುವದಕ್ಕೆ ಅವರನ್ನು ಇಟ್ಟನು.
೧೩ ಪಟ್ಟಣಕ್ಕೆ ಉತ್ತರದಲ್ಲಿ ಇರುವ ಸಕಲ ಸೈನ್ಯದ ಜನವನ್ನೂ, ಪಟ್ಟಣಕ್ಕೆ ಪಶ್ಚಿಮ ದಿಕ್ಕಿನಲ್ಲಿ ಅಡಗಿ ಕೊಳ್ಳುವ ಜನವನ್ನೂ ಇಟ್ಟ ತರುವಾಯ, ಯೆಹೋಶುವ ಆ ರಾತ್ರಿಯಲ್ಲಿ ತಗ್ಗಿನಲ್ಲಿ ಇಳಿದು ಹೋದನು.

೧೪ ಆಯಿಯ ಅರಸನು ಇದನ್ನು ಕಂಡಾಗ, ಆ ಪಟ್ಟಣದ ಜನರು ತ್ವರೆ ಪಟ್ಟು, ಉದಯ ಕಾಲಕ್ಕೆ ಎದ್ದು, ನಿಶ್ಚಯಿಸಿದ ವೇಳೆಯಲ್ಲಿ ಅವನೂ ಅವನ ಜನರೆಲ್ಲರೂ ಇಸ್ರಯೇಲ್ಯರಿಗೆ ಎದುರಾಗಿ ಯುದ್ಧ ಮಾಡ, ಬೈಲಿಗೆ ಹೊರಟರು. ಆದರೆ ಅವನು ಪಟ್ಟಣದ ಹಿಂದೆ ತನಗೋಸ್ಕರ ಹೊಂಚಿ ಕೊಂಡಿರುವದನ್ನು ಅರಿಯದೆ
೧೫ ಇದ್ದನು. ಅವರ ಮುಂದೆ ಯೆಹೋಶುವನೂ ಇಸ್ರಯೇಲ್ಯರೆಲ್ಲರೂ ಒಡಿಯಲ್ಪಟ್ಟ ಹಾಗೆ ತೋರಿ, ಅರಣ್ಯದ ಮಾರ್ಗವಾಗಿ ಓಡಿ
೧೬ ಹೋದರು. ಆಗ ಪಟ್ಟಣದಲ್ಲಿರುವ ಜನರೆಲ್ಲರೂ ಅವರನ್ನು ಹಿಂದಟ್ಟಲಿಕ್ಕೆ ಕೂಗಲ್ಪಟ್ಟರು; ಮತ್ತು ಯೆಹೋಶುವನನ್ನು ಹಿಂದಟ್ಟಲಾಗಿ, ಆ ಪಟ್ಟಣದ ಬಳಿಯಿಂದ ಎಳೆಯಲ್ಪಟ್ಟು ಹೋದರು. ಅಯಿಯಲ್ಲಿಯೂ ಬೇತೆಲಿನಲ್ಲಿಯೂ ಇಸ್ರಯೇಲಿನ ಹಿಂದೆ ಹೊರಟು
೧೭ ಹೋಗದ ಮನುಷ್ಯನು ಒಬ್ಬನೂ ಇಲ್ಲ. ಪಟ್ಟಣವನ್ನು ತೆರೆದಿಟ್ಟು, ಹೋಗಿ, ಇಸ್ರಯೇಲನ್ನು ಹಿಂದಟ್ಟಿದರು.

೧೮ ಆಗ ಕರ್ತನು ಯೆಹೋಶುವನಿಗೆ, ನಿನ್ನ ಕೈಯಲ್ಲಿರುವ ಈಟಿಯನ್ನು ಆಯಿಗೆ ಸರಿಯಾಗಿ ಚಾಚು; ಯಾಕಂದರೆ ಅದನ್ನು ನಿನ್ನ ಕೈಗೆ ಒಪ್ಪಿಸಿ ಕೊಡುತ್ತೇನೆ, ಅಂದನು. ಹಾಗೆಯೇ ಅವನು ತನ್ನ ಕೈಯಲ್ಲಿರುವ ಈಟಿಯನ್ನು ಪಟ್ಟಣಕ್ಕೆ ಎ
೧೯ ದುರಾಗಿ ಚಾಚಿದನು. ಆಗ ಹೊಂಚಿ ಕೊಂಡಿದ್ದವರು ತ್ವರೆಯಾಗಿ ತಮ್ಮ ಸ್ಥಳದಿಂದ ಎದ್ದು, ಅವನು ತನ್ನ ಕೈಯನ್ನು ಚಾಚುತ್ತಲೇ ಪಟ್ಟಣಕ್ಕೆ ಬಂದು, ಅದನ್ನು ಹಿಡಿದು, ತ್ವರೆಯಾಗಿ ಬೆಂಕಿ
೨೦ ಯನ್ನು ಹಚ್ಚಿದರು. ಆಯಿಯ ಮನುಷ್ಯರು ಹಿಂದಕ್ಕೆ ತಿರುಗಿ ನೋಡಿದಾಗ, ಇಗೋ, ಪಟ್ಟಣದ ಹೊಗೆ ಹೊತ್ತಿ, ಅಕಾಶಕ್ಕೆ ಏಳುವದನ್ನು ಕಂಡರು; ಹೀಗಾದರೂ ಹಾಗಾದರೂ ಓಡಿ ಹೋಗ ಅವರಿಗೆ ತ್ರಾಣೆ ಇಲ್ಲದೆ ಹೋಯಿತು. ಆಗ ಅರಣ್ಯಕ್ಕೆ ಓಡಿ
೨೧ ಹೋದ ಜನರು ಹಿಂದಟ್ಟಿದವರ ಕಡೆಗೆ ತಿರುಗಿದರು. ಹೊಂಚಿ ಕೊಂಡ ಜನರು ಪಟ್ಟಣವು ಹಿಡಿದದ್ದನ್ನೂ ಪಟ್ಟಣದ ಹೊಗೆ ಏಳುವದನ್ನೂ ಯೆಹೋಶುವನೂ ಇಸ್ರಯೇಲ್ಯರೆಲ್ಲರೂ ನೋಡುವಾಗ, ತಿರುಗಿ ಕೊಂಡು, ಆಯಿಯ ಮನುಷ್ಯರನ್ನು ಹೊಡೆದು ಬಿಟ್ಟರು.
೨೨ ಅವರು ಪಟ್ಟಣದೊಳಗಿಂದ ಇವರಿಗೆ ಎದುರಾಗಿ ಬಂದ ಕಾರಣ, ಅವರು ಈಚೇಲಿ ಆಚೇಲಿ ಇರುವ ಇಸ್ರಯೇಲ್ಯರ ಮಧ್ಯದಲ್ಲಿ ಸಿಕ್ಕಿದರು. ಆದದರಿಂದ ಅವರಲ್ಲಿ ಒಬ್ಬರೂ ತಪ್ಪಿಸಿ ಕೊಂಡು
೨೩ ಹೋಗದ ಹಾಗೆಯೂ, ಉಳಿಯದ ಹಾಗೆಯೂ, ಅವರನ್ನು ಹೊಡೆದು, ಆಯಿಯ ಅರಸನನ್ನು ಜೀವಿತನಾಗಿ ಹಿಡಿದು, ಯೆಹೋಶುವನ ಬಳಿಗೆ ತಂದರು.

ೲ ಇಸ್ರಯೇಲ್ಯರು ಅರಣ್ಯದಲ್ಲಿ ಹಿಡಿಸಿದ ಆಯಿಯ ನಿವಾಸಿಗಳೆಲ್ಲರನ್ನು ಕತ್ತಿಯ ಬಾಯಿಯಿಂದ—ಅವರೆಲ್ಲರು ಬಿದ್ದು, ಮುಗಿಯುವ ಪರ್ಯಂತರ—ಬೈಲಿನಲ್ಲಿ ಸಂಹರಿಸಿ ತೀರಿದ ತರುವಾಯ, ಇಸ್ರಯೇಲ್ಯರೆಲ್ಲರೂ ಆಯಿಗೆ ತಿರುಗಿ, ಅದನ್ನು ಕತ್ತಿಯ ಬಾಯಿಯಿಂ

೨೫ ದ ಹೊಡೆದರು. ಆ ದಿವಸದಲ್ಲಿ ಬಿದ್ದ ಸ್ತ್ರೀ ಪುರುಷರಾದ ಆ
೨೬ ಯಿಯ ಮನುಷ್ಯರೆಲ್ಲರು ಹನ್ನೆರಡು ಸಾವಿರ ಜನರು. ಯೆ
ಹೋಶುವ ಆಯಿಯ ನಿವಾಸಿಗಳೆಲ್ಲರನ್ನು ನಿರ್ಮೂಲ ಮಾಡಿದ
ವರಿಗೂ ಚಾಕಿ ಕೊಂಡಿರುವ ತನ್ನ ಕೈಯಲ್ಲಿದ್ದ ಈಟಿಯನ್ನು
೨೭ ಹಿಂದೆಗೆಯಲಿಲ್ಲ. ಆದರೆ ಕರ್ತನು ಯೆಹೋಶುವನಿಗೆ ಆಜ್ಞಾಪಿ
ಸಿದ ಪ್ರಕಾರವೇ ಇಸ್ರಯೇಲ್ಯರು ಆ ಪಟ್ಟಣದ ದನಗಳನ್ನೂ ಕೊ
ಳ್ಳೆಯನ್ನೂ ತಮಗೋಸ್ಕರ ಸುಲು ಕೊಂಡರು. ಯೆಹೋಶು
ವನು ಆಯಿಯನ್ನು ಸುಟ್ಟು ಬಿಟ್ಟು, ಅದನ್ನು ಈ ವರಿಗೂ ಇರು
ವ ಹಾಗೆ ಎಂದಿಗೂ ಹಾಳಾಗಿ ಬಿದ್ದಿರುವ ಮಣ್ಣು ದಿಬ್ಬೆಯನ್ನು
೨೮ ಮಾಡಿ, ಆಯಿಯ ಅರಸನನ್ನು ಸಾಯಂಕಾಲದ ವರಿಗೂ ಬಂ
ದು ಮರದಲ್ಲಿ ತೂಗ ಹಾಕಿಸಿದನು. ಸೂರ್ಯ ಅಸ್ತಮಿಸುವಾಗ,
ಯೆಹೋಶುವನು ಅವನ ಹೆಣವನ್ನು ಮರದಿಂದ ಇಳಿಸಿ, ಅ
ದನ್ನು ಆ ಪಟ್ಟಣದ ಬಾಗಲಿನ ದ್ವಾರದಲ್ಲಿ ಹಾಕ ಆಜ್ಞಾಪಿಸಿದ
ನು. ಆಗಲವರು ಹಾಗೆಯೇ ಮಾಡಿ, ಈ ಪರ್ಯಂತರೆ ಇರುವ
ದೊಡ್ಡ ಕಲ್ಲು ಕುಪ್ಪೆಯನ್ನು ಅದರ ಮೇಲೆ ಕುಪ್ಪೆಯಾಗಿ ಇ
ಟ್ಟರು.

೩೦ ಆಗ ಯೆಹೋಶುವ ಕರ್ತನ ಸೇವಕನಾದ ಮೋಶೆ ಇಸ್ರ
ಯೇಲ್ ಮಕ್ಕಳಿಗೆ ಆಜ್ಞಾಪಿಸಿದ ಹಾಗೆ, ಮೋಶೆಯ ನ್ಯಾಯಪ್ರ
ಮಾಣದಲ್ಲಿ ಬರೆಯಲ್ಪಟ್ಟಿರುವ ಹಾಗೆ, ಏಬೆಲ್ ಪರ್ವತದಲ್ಲಿ ಇ
ಸ್ರಯೇಲಿನ ದೇವರಾದ ಕರ್ತನಿಗೆ ಉಳಿ ಮುಟ್ಟಿದ ಪೂರ್ಣವಾದ
೩೧ ಕಲ್ಲುಗಳಿಂದ ಒಂದು ಬಲಿಪೀಠವನ್ನು ಕಟ್ಟಿದನು. ಆಗಲವರು ಅ
ದರ ಮೇಲೆ ಕರ್ತನಿಗೆ ಹೋಮಗಳನ್ನೂ ಸಮಾಧಾನದ ಬಲಿಗ
೩೨ ಳನ್ನೂ ಅರ್ಪಿಸಿದರು. ಅಲ್ಲಿ ಅವನು ಮೋಶೆ ಇಸ್ರಯೇಲ್ ಮಕ್ಕ
ಳ ಮುಂದೆ ಬರೆದಿದ್ದ ನ್ಯಾಯಪ್ರಮಾಣದ ಪ್ರತಿಯನ್ನು ಕಲ್ಲುಗಳ
೩೩ ಲ್ಲಿ ಬರೆದನು. ಎಲ್ಲಾ ಇಸ್ರಯೇಲ್ಯರೂ, ಅವರ ಹಿರಿಯರೂ, ಅವ
ರ ಯಜಮಾನರೂ, ಅವರ ನ್ಯಾಯಾಧಿಪತಿಗಳೂ, ಪರದೇಶಸ
ರೂ, ದೇಶಸ್ಥರೂ, ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನು ಹೊ
ರುವ ಲೇವ್ಯರಾದ ಯಾಜಕರ ಮುಂದೆ ಒಡಂಬಡಿಕೆಯ ಪೆಟ್ಟಿಗೆಗೆ
ಈಚೇಲಿ ಅಚೇಲಿ, ಅರ್ಧ ಗೆರಿಜ್ಜೀಮ್ ಪರ್ವತದ ಪಾರ್ಶ್ವವಾಗಿ
ಯೂ, ಅರ್ಧ ಏಬೆಲ್ ಪರ್ವತದ ಪಾರ್ಶ್ವವಾಗಿಯೂ, ಜನರ
ನ್ನು ಆಶೀರ್ವದಿಸುವದಕ್ಕೆ ಕರ್ತನ ಸೇವಕನಾದ ಮೋಶೆ ಮೊದ
೩೪ ಲು ಆಜ್ಞಾಪಿಸಿದ ಹಾಗೆ, ನಿಂತರು. ತರುವಾಯ ಅವನು ನ್ಯಾಯ
ಪ್ರಮಾಣದ ಎಲ್ಲಾ ಮಾತುಗಳನ್ನು, ಆಶೀರ್ವಾದಗಳನ್ನೂ ಶಾ
ಪಗಳನ್ನೂ, ನ್ಯಾಯಪ್ರಮಾಣದ ಪುಸ್ತಕದಲ್ಲಿ ಬರೆದಿರುವ ಪ್ರಕಾ
೩೫ ರ ಎಲ್ಲಾ ಸಾರಿದನು. ಮೋಶೆ ಆಜ್ಞಾಪಿಸಿದ್ದೆಲ್ಲಾ ಇಸ್ರಯೇಲಿನ
ಸಭೆಗೆಲ್ಲಾ ಸ್ತ್ರೀಯರಿಗೂ ಚಿಕ್ಕವರಿಗೂ, ಅವರಲ್ಲಿ ಸಂಚರಿಸು
ವ ಪರದೇಶಸ್ಥರಿಗೂ ಸಹ, ಅವನು ಸಾರಿದನು; ಒಂದು ಮಾತೂ
ಬಿಡಲಿಲ್ಲ.

## ೯. ಸಂಧಿ.

೧ ಮತ್ತು ಯೊರ್ದನಿಗೆ ಈಚೆಯಲ್ಲಿ ಬೆಟ್ಟಗಳಲ್ಲಿಯೂ, ತಗ್ಗು
ಗಳಲ್ಲಿಯೂ, ಲೆಬನೋನಿಗೆ ಎದುರಾದ ದೊಡ್ಡ ಸಮುದ್ರದ ಸ
ಮಸ್ತ ಪ್ರಾಂತ್ಯಗಳಲ್ಲಿ ಇರುವ ಹಿತ್ತಿಯರ, ಅಮೋರ್ಯರ,
ಕನಾನ್ಯರ, ಪೆರಿಜ್ಜಿಯರ, ಹಿವ್ವಿಯರ, ಯೆಬೂಸಿಯರ ಅರಸರ
೨ ಳು ಇದನ್ನು ಕೇಳಿದಾಗ ಅದನ್ನೇನಂದರೆ, ಅವರು ಯೆಹೋಶು
ವನ ಸಂಗಡಲೂ, ಇಸ್ರಯೇಲ್ಯರ ಸಂಗಡಲೂ ಯುದ್ಧ ಮಾಡ
ಬೇಕೆಂದು ಒಮ್ಮನಸ್ಸಾಗಿ ಕೂಡಿದರು.

೩ ಆದರೆ ಗಿಬ್ಯೋನಿನ ನಿವಾಸಿಗಳಾದವರು, ಯೆಹೋಶುವನು
೪ ಯೆರಿಕೋವಿಗೂ ಆಯಿಗೂ ಮಾಡಿದ್ದನ್ನು ಕೇಳಿದಾಗ, ಒಂದು
ತಂತ್ರವಾದ ಉಪಾಯವನ್ನು ಮಾಡಿ, ರಾಯಭಾರಿಗಳ ಹಾಗೆ
ತೋರಿ, ಗೋಣಿಗಳನ್ನೂ ತೇಪೆ ಹಾಕಿದ ಹಳೇವಾದ ದ್ರಾಕ್ಷೇ
ರಸದ ಶಿದ್ದಿಗೆಗಳನ್ನೂ ತಮ್ಮ ಕತ್ತೆಗಳ ಮೇಲೆ ಹಾಕಿ ಕೊಂಡು,
೫ ತೇಪೆ ಹಾಕಿದ ಹಳೇವಾದ ಕೆರಗಳನ್ನು ತಮ್ಮ ಕಾಲುಗಳಲ್ಲಿ ಮೆಟ್ಟಿ
ಕೊಂಡು, ಹಳೇ ಬಟ್ಟೆಗಳನ್ನು ತೊಟ್ಟು ಕೊಂಡು, ಒಣಗಿ ಬೂ
ಜು ಹಿಡಿದ ಭಕ್ಷ್ಯವನ್ನು ಮಾರ್ಗಕ್ಕೆ ತೆಗೆದು ಕೊಂಡು, ಅವರು
೬ ಗಿಲ್ಗಾಲಿನಲ್ಲಿ ಇರುವ ದಂಡಿಗೆ ಯೆಹೋಶುವನ ಬಳಿಗೆ ಹೋಗಿ,
ಅವನಿಗೂ ಇಸ್ರಯೇಲ್ಯರಿಗೂ—ದೂರ ದೇಶದಿಂದ ಬಂದೆವು;
ಈಗ ನಮ್ಮ ಸಂಗಡ ಒಡಂಬಡಿಕೆ ಮಾಡಿರಿ, ಅಂದರು.

೭ ಆಗ ಇಸ್ರಯೇಲ್ ಮನುಷ್ಯರು ಹಿವ್ವಿಯರಿಗೆ, ನೀವು ಒಂದು
ವೇಳೆ ನಮ್ಮ ಮಧ್ಯದಲ್ಲಿ ಇರುವವರು; ನಿಮ್ಮ ಸಂಗಡ ಒಡಂಬಡಿ
೮ ಕೆಯನ್ನು ಮಾಡುವದು ಹ್ಯಾಗೆ! ಅಂದರು. ಅದಕ್ಕವರು ಯೆ
ಹೋಶುವನಿಗೆ, ನಾವು ನಿನ್ನ ಸೇವಕರು, ಅಂದರು. ಆಗ ಯೆ
ಹೋಶುವ ಅವರಿಗೆ, ನೀವು ಯಾರು! ಎಲ್ಲಿಂದ ಬಂದಿರಿ! ಅಂದನು.
೯ ಅವರು ಅವನಿಗೆ ಹೇಳಿದ್ದೇನಂದರೆ, ನಿಮ್ಮ ದೇವರಾದ ಕರ್ತನ ಹೆ
ಸರಿಗೋಸ್ಕರ ನಿನ್ನ ಸೇವಕರಾದ ನಾವು ದೂರ ದೇಶದಿಂದ
೧೦ ಬಂದೆವು. ಯಾಕಂದರೆ ಅವನ ಕೀರ್ತಿಯನ್ನೂ, ಅವನು ಐಗು
ಪ್ತದಲ್ಲಿ ಮಾಡಿದ ಎಲ್ಲವನ್ನೂ, ಯೊರ್ದನಿಗೆ ಆಚೇರಿಯವ ಅ
ಮೋರ್ಯರ ಇಬ್ಬರು ಅರಸುಗಳಾದ, ಹೆಷ್ಬೋನಿನ ಅರಸನಾದ
೧೧ ಸೀಹೋನನಿಗೂ, ಅಷ್ಟರೋತಿನಲ್ಲಿದ್ದ ಬಾಶಾನಿನ ಅರಸನಾದ ಓ
ಗನಿಗೂ ಮಾಡಿದ ಎಲ್ಲವನ್ನೂ ಕೇಳಿದೆವು. ಮತ್ತು ನಮ್ಮ ಹಿರಿ
ಯರೂ ನಮ್ಮ ದೇಶವಾಸಿಗಳಾದ ಜನರೆಲ್ಲರೂ ನಮಗೆ ಹೇಳಿದ್ದೇ
ನಂದರೆ—ನೀವು ಮಾರ್ಗಕ್ಕಾಗಿ ಆಹಾರವನ್ನು ತೆಗೆದು ಕೊಂಡು,
ಅವರೆದುರಿಗೆ ಹೋಗಿ, ಅವರಿಗೆ, ನಾವು ನಿಮ್ಮ ಸೇವಕರು; ಆದ
ಕಾರಣ ಈಗ ನಮ್ಮ ಸಂಗಡ ಒಡಂಬಡಿಕೆ ಮಾಡಿರಿ, ಎಂದು ಹೇ
೧೨ ಳಿರಿ, ಅಂದರು. ಆದರೆ ನಿಮ್ಮ ಬಳಿಗೆ ಬರುವದಕ್ಕೆ, ನಾವು ಹೊ
ರಟೆ ದಿವಸದಲ್ಲಿ ನಮ್ಮ ಮಾರ್ಗ ಪ್ರಯಾಣಕ್ಕೆ ನಮ್ಮ ಮನೆ
ಯೊಳಗೆ ಬಿಸಿಯ ಮೇಲಿನ ಬಿಸಿ ಕೊಟ್ಟಿಗಳನ್ನು ತೆಗೆದು ಕೊಂ
೧೩ ಡೆವು; ಈಗ ಅವು ಒಣಗಿ ಬೂಜು ಹಿಡಿದವುಗಳಾದವು; ನಾವು
ದ್ರಾಕ್ಷೇ ರಸ ತುಂಬುವಾಗ, ಈ ಶಿದ್ದಿಗೆಗಳು ಹೊಸವಾಗಿದ್ದವು.
ಇಗೋ, ಅವು ಹರಿದು ಹೋದವು. ಇದಲ್ಲದೆ ಈ ನಮ್ಮ ವಸ್ತ್ರಗ
ಳೂ ನಮ್ಮ ಕೆರಗಳೂ, ಪ್ರಯಾಣ ಬಹಳ ದೂರವಾದದರಿಂದ,
ಹಳೇವಾದವು, ಅಂದರು.

೧೪ ಆಗ ಇವರು ಕರ್ತನಿಂದ ಆಲೋಚನೆಯನ್ನು ಕೇಳದೆ, ಅವ
೧೫ ರ ಆಹಾರದಲ್ಲಿ ತೆಗೆದು ಕೊಂಡರು. ಯೆಹೋಶುವ ಅವರ ಸಂ
ಗಡ ಸಮಾಧಾನ ಮಾಡಿ ಕೊಂಡು, ಅವರನ್ನು ಜೀವದಿಂದ ಇರಿ
ಸುವದಕ್ಕೆ ಅವರ ಸಂಗಡ ಒಡಂಬಡಿಕೆ ಮಾಡಿದನು. ಇದಲ್ಲದೆ
ಸಭೆಯ ಪ್ರಭುಗಳು ಅವರಿಗೆ ಆಣೆ ಇಟ್ಟರು.

೧೬ ಆದರೆ ಅವರ ಸಂಗಡ ಒಡಂಬಡಿಕೆ ಮಾಡಿ ಮೂರು ದಿವಸ
ಗಳಾದ ತರುವಾಯ, ಅವರು ತಮ್ಮ ಸಮೀಪವಾಗಿ ತಮ್ಮಲ್ಲಿ ಇ
೧೭ ರುವವರೆಂದು, ಕೇಳಿದರು. ಇಸ್ರಯೇಲ್ ಮಕ್ಕಳು ಪ್ರಯಾಣವಾ



ಗಿ ಹೋಗುವಾಗ, ಮೂರನೇ ದಿವಸದಲ್ಲಿ ಗಿಬ್ಯೋನು, ಕೆಫೀರ,
ಬೆಕೋತು, ಕಿರ್ಯಾತ್ ಯಾರೀಮ್ ಎಂಬ ಅವರ ಪಟ್ಟಣಗಳಿಗೆ
೧೮ ಬಂದರು ಸಭೆಯ ಪ್ರಭುಗಳು ಅವರಿಗೆ ಇಸ್ರಯೇಲಿನ ದೇವರಾ
ದ ಕರ್ತನ ಮೇಲೆ ಆಣೆ ಇಟ್ಟದರಿಂದ, ಇಸ್ರಯೇಲ್ ಮಕ್ಕಳು ಅ
ವರನ್ನು ಸಂಹರಿಸಲಿಲ್ಲ. ಆದರೆ ಸಭೆಯಾದ ಇಸ್ರಯೇಲ್ಯರೆಲ್ಲ
ರೂ ಪ್ರಭುಗಳ ಮೇಲೆ ಗುಣು ಗುಟ್ಟಿದರು.

೧೯ ಆಗ ಸಕಲ ಪ್ರಭುಗಳು ಎಲ್ಲಾ ಸಭೆಗೆ ಹೇಳಿದ್ದೇನಂದರೆ, ನಾ
ವು ಇಸ್ರಯೇಲಿನ ದೇವರಾದ ಕರ್ತನ ಮೇಲೆ ಅವರಿಗೆ ಆಣೆ ಇ
೨೦ ಟ್ಟಿವು; ಆದದರಿಂದ ಅವರನ್ನು ನಾವು ಮುಟ್ಟಿ ಕೂಡದು. ನಾವು
ಅವರಿಗೆ ಇಟ್ಟ ಆಣೆಯ ನಿಮಿತ್ತ ಉಗ್ರವು ನಮ್ಮ ಮೇಲೆ ಬಾರದ
ಹಾಗೆ, ನಾವು ಅವರನ್ನು ಜೀವದಿಂದ ಇರಿಸಿ, ಅವರಿಗೆ ಒಂದನ್ನು
೨೧ ಮಾಡುವೆವು. ಏನಂದರೆ ಪ್ರಭುಗಳಾದ ನಾವು ಅವರಿಗೆ ಹೇಳಿದ
ಹಾಗೆಯೇ ಅವರು ಜೀವದಿಂದ ಇದ್ದು, ಎಲ್ಲಾ ಸಭೆಗೆ ಕಟ್ಟಿಗೆ ಕಡಿ
ಯುವವರಾಗಿಯೂ, ನೀರು ತರುವವರಾಗಿಯೂ ಇರಲಿ, ಎಂದು
೨೨ ಪ್ರಭುಗಳು ಸಭೆಯವರ ಸಂಗಡ ಹೇಳಿದರು. ತರುವಾಯ ಯೆ
ಹೋಶುವನು ಅವರನ್ನು ಕರಸಿ, ಅವರಿಗೆ ಹೇಳಿದ್ದೇನಂದರೆ, ನ
ಮ್ಮ ಮಧ್ಯದಲ್ಲಿ ವಾಸವಾಗಿರುವ ನೀವು ನನ್ನನ್ನು ಮೋಸಗೊ
ಳಿಸಿ, ನಾವು ನಿಮಗೆ ಬಹಳ ದೂರವಾಗಿರುವವರೆಂದು, ನಮ್ಮ ಸಂ
೨೩ ಗಡ ಹೇಳಿದ್ದೇನು! ಈಗ ನೀವು ಶಪಿಸಲ್ಪಟ್ಟವರು; ನಿಮ್ಮಲ್ಲಿ ಒಬ್ಬ
ನಾದರೂ ದಾಸತ್ವದಿಂದ ಬಿಡಿಸಲ್ಪಡುವದಿಲ್ಲ; ನನ್ನ ದೇವರ ಮ
ನೆಗೆ ಕಟ್ಟಿಗೆ ಕಡಿಯುವವರೂ ನೀರು ತರುವವರೂ ಆಗಿರುವಿರಿ.
೨೪ ಅದಕ್ಕವರು ಯೆಹೋಶುವನಿಗೆ ಹೇಳಿದ್ದೇನಂದರೆ, ನಿಮಗೆ ದೇಶವೆ
ಲ್ಲಾ ಒಪ್ಪಿಸಿ ಕೊಡಲಿಕ್ಕೂ, ದೇಶದ ನಿವಾಸಿಗಳನ್ನೆಲ್ಲಾ ನಿಮ್ಮ
ಮುಂದೆ ನಾಶನ ಮಾಡಲಿಕ್ಕೂ, ನಿಮ್ಮ ದೇವರಾದ ಕರ್ತನು ತ
ನ್ನ ಸೇವಕನಾದ ಮೋಶೆಗೆ ಆಜ್ಞಾಪಿಸಿದ್ದು ನಿಮ್ಮ ಸೇವಕರಿಗೆ ನಿ
ಶ್ಚಯವಾಗಿ ತಿಳಿಸಲ್ಪಟ್ಟದರಿಂದ, ನಾವು ನಮ್ಮ ಪ್ರಾಣಗಳಿಗೋ
ಸ್ಕರ ನಿಮಗೆ ಬಹಳ ಭಯ ಪಟ್ಟು, ಈ ಕಾರ್ಯವನ್ನು ಮಾಡಿ
೨೫ದೆವು. ಇಗೋ, ನಾವು ನಿನ್ನ ಕೈಯಲ್ಲಿ ಇದ್ದೇವೆ. ನಿನ್ನ ದೃ
ಷ್ಟಿಗೆ ಒಳ್ಳೇದಾಗಿಯೂ ನೆಟ್ಟಗಾಗಿಯೂ ತೋಚುವ ಹಾಗೆ
೨೬ ನಮಗೆ ಮಾಡು. ಆ ಪ್ರಕಾರವೇ ಯೆಹೋಶುವ ಅವರಿಗೆ ಮಾ
ಡಿ, ಇಸ್ರಯೇಲ್ ಮಕ್ಕಳು ಅವರನ್ನು ಕೊಂದು ಹಾಕದ ಹಾಗೆ
೨೭ ಅವರನ್ನು ಇವರ ಕೈಗೆ ತಪ್ಪಿಸಿ ಬಿಟ್ಟು, ಈ ವರಿಗೂ ಇರುವ
ಹಾಗೆಯೇ, ಅವರನ್ನು ಆ ದಿವಸದಲ್ಲಿ ಸಭೆಗೂ ಕರ್ತನು ಆದು
ಕೊಳ್ಳುವ ಸ್ಥಳದಲ್ಲಿರುವ ಅವನ ಬಲಿಪೀಠಕ್ಕೂ ಕಟ್ಟಿಗೆ ಕಡಿ
ಯುವವರಾಗಿಯೂ ನೀರು ತರುವವರಾಗಿಯೂ ಮಾಡಿದನು.

## ೧೦. ಸಂಧಿ.

೧ ಯೆಹೋಶುವ ಆಯಿಯನ್ನು ಹಿಡಿದು, ಯೆರಿಕೋವಿಗೂ ಅ
ರ ಅರಸನಿಗೂ ಮಾಡಿದ ಹಾಗೆಯೇ ಆಯಿಗೂ ಅದರ ಅರಸ
೨ ನಿಗೂ ಮಾಡಿ, ಅದನ್ನು ಹಿಡಿದು, ನಿರ್ಮೂಲ ಮಾಡಿದನೆಂದೂ,
ಗಿಬ್ಯೋನಿನ ನಿವಾಸಿಗಳು ಇಸ್ರಯೇಲಿನ ಸಂಗಡ ಸಮಾಧಾನ
ಮಾಡಿ ಕೊಂಡು, ಅವರಲ್ಲಿ ಇದ್ದಾರೆಂದೂ, ಯೆರೂಸಲೇಮಿನ ಅರ
ಸನಾದ ಆದೋನಿಜೇದೆಕನು ಕೇಳಿದಾಗ, ಬಹು ಭಯ ಪಟ್ಟರು.
ಯಾಕಂದರೆ ಗಿಬ್ಯೋನ್ ರಾಜ ಪಟ್ಟಣಗಳ ಹಾಗೆ ದೊಡ್ಡ ಪಟ್ಟಣ
ವಾಗಿತ್ತು; ಮತ್ತು ಆಯಿಗಿಂತ ದೊಡ್ಡದಾಗಿತ್ತು; ಇದಲ್ಲದೆ
೩ ಅದರ ಮನುಷ್ಯರು ಪರಾಕ್ರಮ ಶಾಲಿಗಳಾಗಿದ್ದರು. ಆದದರಿಂದ
ಯೆರೂಸಲೇಮಿನ ಅರಸನಾದ ಅದೋನಿಜೇದೆಕನು ಹೆಬ್ರೋನಿನ
ಅರಸನಾದ ಹೊಹಾಮನಿಗೂ, ಯರ್ಮೂತಿನ ಅರಸನಾದ ಪಿ
ರಾಮನಿಗೂ, ಲಕೀಷಿನ ಅರಸನಾದ ಯಫೀಯನಿಗೂ, ಎಗ್ಲೋ
೪ ನಿನ ಅರಸನಾದ ದೆಬೀರನಿಗೂ ಹೇಳಿ ಕಳುಹಿಸಿದ್ದೇನಂದರೆ, ಗಿ
ಬ್ಯೋನು ಯೆಹೋಶುವನ ಸಂಗಡಲೂ ಇಸ್ರಯೇಲ್ ಮಕ್ಕಳ
ಸಂಗಡಲೂ ಸಮಾಧಾನ ಮಾಡಿ ಕೊಂಡದರಿಂದ, ನಾವು ಅದ
ನ್ನು ಹೊಡೆಯ ನೀವು ನನ್ನ ಬಳಿಗೆ ಬಂದು, ನನಗೆ ಸಹಾಯ
೫ ಮಾಡಿರಿ. ಹಾಗೆಯೇ ಅಮೋರ್ಯರ ಅರಸುಗಳಾದ ಯೆರೂ
ಸಲೇಮಿನ ಅರಸನೂ, ಹೆಬ್ರೋನಿನ ಅರಸನೂ ಯರ್ಮೂತಿನ
ಅರಸನೂ, ಲಕೀಷಿನ ಅರಸನೂ, ಎಗ್ಲೋನಿನ ಅರಸನೂ, ಈ ಐ
ದು ಮಂದಿ ಅರಸುಗಳು ಕೂಡಿ ಕೊಂಡು, ಅವರೂ ಅವರ ಸೈನ್ಯ
ವೂ ಹೊರಟು ಹೋಗಿ, ಗಿಬ್ಯೋನಿನ ಮುಂದೆ ದಂಡಿಳಿದು, ಅ
ದರ ಮೇಲೆ ಯುದ್ಧ ಮಾಡಿದರು.

೬ ಆಗ ಗಿಬ್ಯೋನಿನ ನಿವಾಸಿಗಳು, ಪರ್ವತಗಳಲ್ಲಿ ವಾಸವಾಗಿರು
ವ ಅಮೋರ್ಯರ ಅರಸುಗಳೆಲ್ಲರೂ ನಮಗೆ ವಿರೋಧವಾಗಿ
ಕೂಡಿದ್ದರಿಂದ ನಿನ್ನ ಸೇವಕರನ್ನು ಕೈ ಬಿಡದೆ, ಶೀಘ್ರವಾಗಿ ನಮ್ಮ
ಬಳಿಗೆ ಬಂದು, ನಮ್ಮನ್ನು ರಕ್ಷಿಸಿ, ನಮಗೆ ಸಹಾಯ ಮಾಡೆಂದು,
ಗಿಲ್ಗಾಲಿನಲ್ಲಿ ದಂಡಿಳಿದ ಯೆಹೋಶುವನ ಬಳಿಗೆ ಹೇಳಿ ಕಳುಹಿಸಿದ
೭ ರು. ಆಗ ಯೆಹೋಶುವ ಗಿಲ್ಗಾಲನ್ನು ಬಿಟ್ಟು, ತಾನೂ ತನ್ನ ಸಂ
ಗಡ ಸಮಸ್ತ ಯುದ್ಧದ ಜನರೂ ಸಮಸ್ತ ಪರಾಕ್ರಮ ಶಾಲಿಗ
ಳೂ ಏರಿ ಹೋದರು.

೮ ಆದರೆ ಕರ್ತನು ಯೆಹೋಶುವನಿಗೆ, ನೀನು ಅವರಿಗೆ ಭಯ
ಪಡ ಬೇಡ; ಏನಂದರೆ ನಿನ್ನ ಕೈಯಲ್ಲಿ ಅವರನ್ನು ಒಪ್ಪಿಸಿ ಕೊ
ಟ್ಟಿನು; ಅವರಲ್ಲಿ ಒಬ್ಬನಾದರೂ ನಿನ್ನ ಎದುರಿನಲ್ಲಿ ನಿಲ್ಲುವದಿಲ್ಲ,
೯ ಅಂದನು. ಆದದರಿಂದ ಯೆಹೋಶುವನು ಗಿಲ್ಗಾಲಿನಿಂದ ರಾತ್ರಿ
ಯೆಲ್ಲಾ ಪ್ರಯಾಣ ಮಾಡಿ, ಅವರ ಮೇಲೆ ಅಕಸ್ಮಿಕವಾಗಿ ಬಂ
ದನು. ಆಗ ಕರ್ತನು ಅವರನ್ನು ಇಸ್ರಯೇಲಿನ ಮುಂದೆ ಗಲಿಬಿ
ಲಿ ಮಾಡಿ, ಅವರನ್ನು ಗಿಬ್ಯೋನಿನಲ್ಲಿ ದೊಡ್ಡ ಸಂಹಾರದಿಂದ
ಸಂಹರಿಸಿ, ಬೆಥೊರೋನಿಗೆ ಹೋಗುವ ಮಾರ್ಗದಲ್ಲಿ ಹಿಂದ
ಟ್ಟಿ, ಅಜೇಕದ ಮಟ್ಟಿಗೂ ಮಕ್ಕೇದದ ಮಟ್ಟಿಗೂ ಹೊಡೆದನು.
೧೦ ಮತ್ತು ಅದದ್ದೇನಂದರೆ, ಅವರು ಬೆಥೊರೋನಿನಿಂದ ಇಳಿದು, ಅ
ಜೇಕದ ಮಟ್ಟಿಗೂ ಇಸ್ರಯೇಲಿನ ಮುಂದೆ ಓಡಿ ಹೋಗುವಾಗ,
ಅವರ ಮೇಲೆ ಕರ್ತನು ಅಕಾಶದಿಂದ ಅವರನ್ನು ಕೊಲ್ಲುವ ದೊ
ಡ್ಡ ಕಲ್ಲುಗಳನ್ನು ಗರಿಸಿದನು. ಇಸ್ರಯೇಲ್ ಮಕ್ಕಳು ಕತ್ತಿಯಿಂ
ದ ಕೊಂದವರಿಗಿಂತ ಕಲ್ಲು ಮಳೆಯಿಂದ ಸತ್ತವರು ಹೆಚ್ಚಾಗಿ
ದ್ದರು.

೧೧ ಕರ್ತನು ಅಮೋರ್ಯರನ್ನು ಇಸ್ರಯೇಲ್ ಮಕ್ಕಳ ಕೈಯ
ಲ್ಲಿ ಒಪ್ಪಿಸಿ ಕೊಡುವ ಆ ದಿವಸದಲ್ಲಿ ಯೆಹೋಶುವ ಕರ್ತನ ಸಂ
ಗಡ ಮಾತಾಡಿ, ಇಸ್ರಯೇಲಿನ ಕಣ್ಣುಗಳ ಮುಂದೆ, ಸೂರ್ಯ
ನೇ, ನೀನು ಗಿಬ್ಯೋನಿನಲ್ಲಿಯೂ, ಚಂದ್ರನೇ, ನೀನು ಅಯ್ಯಾ
ಲೋನ್ ತಗ್ಗಿನಲ್ಲಿಯೂ ನಿಲೆಯಾಗಿ ನಿಂತಿರು, ಅಂದನು.

೧೨ ಆದದರಿಂದ ಜನಾಂಗವು ತಮ್ಮ ಶತ್ರುಗಳಿಗೆ ಮುಯ್ಯಿಗೆ ಮು
ಯ್ಯಿ ಮಾಡುವ ಪರ್ಯಂತರ, ಸೂರ್ಯ ಚಂದ್ರರು ನಿಲೆಯಾಗಿ
ನಿಂತಿದ್ದರು. ಇದು ಯಾಶರಿನ ಪುಸ್ತಕದಲ್ಲಿ ಬರೆದಿರಲಿಲ್ಲವೋ!

ಹಾಗೆಯೇ ಸೂರ್ಯನು ಅಸ್ತಮಿಸ ತ್ಪಕೆ ಮಾಡದೆ, ಹೆಚ್ಚು ಕ
ತಿಮೆ ಒಂದು ಪೂರ್ಣ ದಿವಸ ಆಕಾಶ ಮಧ್ಯದಲ್ಲಿ ನಿಂತಿದ್ದನು.
೧೪ ಕರ್ತನು ಒಬ್ಬ ಮನುಷ್ಯನ ಮಾತನ್ನು ಕೇಳಿದಂಥಾ ಆ ದಿವಸ
ಕ್ಕೆ ಸಮಾನವಾದ ದಿವಸವು ಪೂರ್ವದಲ್ಲಿಯೂ ಇಲ್ಲ, ಅಪರದಲ್ಲಿ
೧೫ ಯೂ ಇಲ್ಲ. ಯಾಕಂದರೆ ಕರ್ತನು ಇಸ್ರಯೇಲಿಗೋಸ್ಕರ
ಯುದ್ಧ ಮಾಡಿದನು. ತರುವಾಯ ಯೆಹೋಶುವ ಸಮಸ್ತ ಇ
ಸ್ರಯೇಲಿನ ಕೂಡ ಗಿಲ್ಗಾಲಿನಲ್ಲಿರುವ ದಂಡಿಗೆ ತಿರುಗಿದನು.

೧೬ ಆದರೆ ಆ ಐದು ಮಂದಿ ಅರಸುಗಳು ಓಡಿ ಹೋಗಿ, ಮಕ್ಕೇ
೧೭ ದದಲ್ಲಿರುವ ಒಂದು ಗವಿಯಲ್ಲಿ ಬಚ್ಚಿಟ್ಟು ಕೊಂಡಿದ್ದರು. ಮತ್ತು
ಆ ಐದು ಮಂದಿ ಅರಸುಗಳು ಮಕ್ಕೇದದಲ್ಲಿರುವ ಒಂದು ಗವಿಯ
ಲ್ಲಿ ಬಚ್ಚಿಟ್ಟು ಕೊಂಡವರಾಗಿ ಸಿಕ್ಕಿದರೆಂದು, ಯೆಹೋಶುವನಿಗೆ ತಿ
೧೮ ಳಿಸಲ್ಪಟ್ಟಿತು. ಆಗ ಯೆಹೋಶುವ ಹೇಳಿದ್ದೇನಂದರೆ, ದೊಡ್ಡ ಕ
ಲ್ಲುಗಳನ್ನು ಗವಿಯ ಬಾಯಿಯಲ್ಲಿ ದೊಬ್ಬಿ ಹಾಕಿ, ಆ ಸ್ಥಳದಲ್ಲಿ
೧೯ ಅವರನ್ನು ಕಾಯಿ, ಮನುಷ್ಯರನ್ನು ಇಡಿರಿ. ಮತ್ತು ನೀವು ನಿಲ್ಲ
ಬೇಡಿರಿ; ನಿಮ್ಮ ಶತ್ರುಗಳನ್ನು ಹಿಂದಟ್ಟಿರಿ; ಅವರ ಹಿಂಭಾಗವ
ನ್ನು ಕಡಿದು ಬಿಡಿರಿ; ತಮ್ಮ ಪಟ್ಟಣಗಳಲ್ಲಿ ಪ್ರವೇಶಿಸ ಗೊಡ ಬೇಡಿ
ರಿ; ಯಾಕಂದರೆ ನಿಮ್ಮ ದೇವರಾದ ಕರ್ತನು ಅವರನ್ನು ನಿಮ್ಮ
೨೦ ಕೈಗೆ ಒಪ್ಪಿಸಿ ಕೊಟ್ಟಿದ್ದಾನೆ. ಯೆಹೋಶುವನೂ ಇಸ್ರಯೇಲ್
ಮಕ್ಕಳೂ ಅವರನ್ನು, ಮುಗಿಯುವ ವರಗೂ, ದೊಡ್ಡ ಸಂಹಾರ
ದಿಂದ ಸಂಹರಿಸಿ ಬಿಟ್ಟು ತರುವಾಯ, ಅವರಲ್ಲಿ ಉಳಿದವರು ಕೋ
೨೧ ಟೆಗಳುಳ್ಳ ಪಟ್ಟಣಗಳಲ್ಲಿ ಕೀರಿದರು. ಮತ್ತು ಜನರೆಲ್ಲಾ ಮಕ್ಕೇದ
ದಲ್ಲಿರುವ ದಂಡಿಗೆ, ಯೆಹೋಶುವನ ಬಳಿಗೆ ಸಮಾಧಾನದಿಂದ ತಿ
ರಿಗಿ ಬಂದರು; ಇಸ್ರಯೇಲ್ ಮಕ್ಕಳಿಗೆ ವಿರೋಧವಾಗಿ ಒಬ್ಬನೂ
ತನ್ನ ನಾಲಿಗೆಯನ್ನು ಅಲ್ಲಾಡಿಸಲಿಲ್ಲ.

೨೨ ಆಗ ಯೆಹೋಶುವ ನೀವು ಗವಿಯ ಬಾಯಿಯನ್ನು ತೆಗೆದು,
ಆ ಐದು ಮಂದಿ ಅರಸುಗಳನ್ನು ಗವಿಯೊಳಗಿಂದ ನನ್ನ ಬಳಿಗೆ
೨೩ ಹೊರಗೆ ತನ್ನಿರಿ, ಅಂದನು. ಹಾಗೆಯೇ ಮಾಡಿದರು. ಆ ಐದು
ಮಂದಿ ಅರಸುಗಳಾದ ಯೆರೂಸಲೇಮಿನ ಅರಸನನ್ನೂ, ಹೆಬ್ರೋ
ನಿನ ಅರಸನನ್ನೂ, ಯರ್ಮೂತಿನ ಅರಸನನ್ನೂ, ಲಕೀಷಿನ ಅ
ರಸನನ್ನೂ, ಎಗ್ಲೋನಿನ ಅರಸನನ್ನೂ ಆ ಗವಿಯೊಳಗಿಂದ ಅವ
೨೪ ನ ಬಳಿಗೆ ಹೊರಗೆ ತಂದರು. ಅವರನ್ನು ಯೆಹೋಶುವನ ಬಳಿ
ಗೆ ತೆಗೆದು ಕೊಂಡು ಬಂದಾಗ, ಯೆಹೋಶುವ ಇಸ್ರಯೇಲ್ಯರೆ
ಲ್ಲರನ್ನು ಕರಿಸಿ, ತನ್ನ ಸಂಗಡ ಬಂದ ಯುದ್ಧಸ್ಥರಾದ ಅಧಿಕಾರಿಗ
ಳಿಗೆ, ನೀವು ಸಮೀಪಕ್ಕೆ ಬಂದು, ನಿಮ್ಮ ಪಾದಗಳನ್ನು ಈ ಅರ
ಸುಗಳ ಕುತ್ತಿಗೆಗಳ ಮೇಲೆ ಇಡಿರಿ, ಅಂದನು. ಆಗಲವರು ಸಮೀಪ
೨೫ ಕ್ಕೆ ಬಂದು, ತಮ್ಮ ಪಾದಗಳನ್ನು ಅವರ ಕುತ್ತಿಗೆಗಳ ಮೇಲೆ
ಇಟ್ಟರು. ಆಗ ಯೆಹೋಶುವ ಅವರಿಗೆ, ಭಯ ಪಡ ಬೇಡಿರಿ, ಹೆ
ದರ ಬೇಡಿರಿ; ಬಲಗೊಂಡು, ಧೈರ್ಯವಾಗಿರ್ರಿ. ಯಾಕಂದರೆ ನೀವು
ಯುದ್ಧ ಮಾಡುವ ನಿಮ್ಮ ಶತ್ರುಗಳೆಲ್ಲರಿಗೂ ಕರ್ತನು ಹೀಗೆಯೇ
ಮಾಡುವನು, ಅಂದನು.

೨೬ ಆ ತರುವಾಯ ಯೆಹೋಶುವ ಅವರನ್ನು ಹೊಡೆದು, ಐದು
ಮರಗಳಲ್ಲಿ ತೂಗ ಹಾಕಿ, ಸಾಯಿಸಿದನು. ಅವರು ಸಾಯಂಕಾ
೨೭ ಲದ ವರಿಗೂ ಮರಗಳಲ್ಲಿ ತೂಗಾಡುತ್ತಿದ್ದರು. ಆದರೆ ಸೂರ್ಯ
ನು ಅಸ್ತಮಿಸುವಾಗ, ಯೆಹೋಶುವ ಆಜ್ಞಾಪಿಸಲು, ಅವರನ್ನು
ಮರಗಳಿಂದ ಇಳಿಸಿ, ಅವರು ಬಚ್ಚಿಟ್ಟು ಕೊಂಡಿದ್ದ ಗವಿಯಲ್ಲಿ
ಅವರನ್ನು ಹಾಕಿ, ಈ ವರಿಗೂ ಇರುವ ಹಾಗೆ ದೊಡ್ಡ ಕಲ್ಲುಗಳ
೨೮ ನ್ನು ಅದರ ಬಾಯಿಗೆ ಮುಚ್ಚಿದರು. ಆ ದಿವಸದಲ್ಲಿ ಯೆಹೋಶು
ವ ಮಕ್ಕೇದನನ್ನು ಹಿಡಿದು, ಅದನು, ಕತ್ತಿಯ ಬಾಯಿಯಿಂದ
ಹೊಡೆದು, ಅದರ ಅರಸನನ್ನೂ, ಮನುಷ್ಯರನ್ನೂ ಅದರಲ್ಲಿರು
ವ ಎಲ್ಲಾ ಪ್ರಾಣಿಗಳನ್ನೂ, ಒಬ್ಬರನ್ನಾದರೂ ಉಳಿಯ ಗೊಡ
ದೆ, ನಿರ್ಮೂಲ ಮಾಡಿ, ತಾನು ಯೆರಿಕೋಪಿನ ಅರಸನಿಗೆ ಮಾ
ಡಿದ ಹಾಗೆಯೇ ಮಕ್ಕೇದದ ಅರಸನಿಗೆ ಮಾಡಿದನು.

೨೯ ಆಗ ಯೆಹೋಶುವನೂ, ಅವನ ಸಂಗಡ ಸಮಸ್ತ ಇಸ್ರಯೇ
೩೦ ಲೂ ಮಕ್ಕೇದದಿಂದ ಲಿಬ್ನಕ್ಕೆ ಹೊರಟು ಹೋಗಿ, ಲಿಬ್ನದ ಮೇಲೆ
ಯುದ್ಧ ಮಾಡಿದರು. ಕರ್ತನು ಅದನ್ನೂ, ಅದರ ಅರಸನನ್ನೂ
ಇಸ್ರಯೇಲಿನ ಕೈಯಲ್ಲಿ ಒಪ್ಪಿಸಿ ಕೊಟ್ಟನು; ಅವನು ಅದನ್ನೂ,
ಅದರಲ್ಲಿರುವ ಎಲ್ಲಾ ಪ್ರಾಣಿಗಳನ್ನೂ, ಒಬ್ಬರನ್ನಾದರೂ ಉಳಿ
ಯ ಗೊಡದೆ, ಕತ್ತಿಯ ಬಾಯಿಯಿಂದ ಹೊಡೆದು, ಯೆರಿಕೋ
ವಿನ ಅರಸನಿಗೆ ಮಾಡಿದ ಹಾಗೆ ಅದರ ಅರಸನಿಗೆ ಮಾಡಿದನು.

೩೧ ಮತ್ತು ಯೆಹೋಶುವ, ಇಸ್ರಯೇಲೆಲ್ಲಾ ಸಹಿತವಾಗಿ, ಲಿಬ್ನ
ದಿಂದ ಲಕೀಷಿಗೆ ಹೊರಟು, ಅದರ ಎದುರಿಗೆ ದಂಡಿಳಿದು, ಅದರ
೩೨ ಮೇಲೆ ಯುದ್ಧ ಮಾಡಿದನು. ಕರ್ತನು ಲಕೀಷನ್ನು ಇಸ್ರಯೇ
ಲಿನ ಕೈಯಲ್ಲಿ ಒಪ್ಪಿಸಿ ಕೊಟ್ಟನು. ಅವನು ಅದನ್ನು ಎರಡನೇ
ದಿವಸದಲ್ಲಿ ಹಿಡಿದು, ಲಿಬ್ನಕ್ಕೆ ಮಾಡಿದ್ದಕ್ಕೆ ಸರಿಯಾಗಿ ಅದನ್ನೂ
ಅದರಲ್ಲಿರುವ ಎಲ್ಲಾ ಪ್ರಾಣಿಗಳನ್ನೂ ಕತ್ತಿಯ ಬಾಯಿಯಿಂದ
ಹೊಡೆದನು.

೩೩ ಆಗ ಗೇಜರಿನ ಅರಸನಾದ ಹೊರಾಮನೂ ಲಕೀಷಿಗೆ ಸಹಾ
ಯ ಮಾಡ ಬಂದನು. ಆದರೆ ಯೆಹೋಶುವ ಒಬ್ಬನಾದರೂ
ಉಳಿಯದೆ ಇರುವ ಮಟ್ಟಿಗೂ ಅವನನ್ನೂ ಅವನ ಜನರನ್ನೂ
ಹೊಡೆದು ಬಿಟ್ಟನು.

೩೪ ಮತ್ತು ಯೆಹೋಶುವನೂ ಅವನ ಸಂಗಡ ಸಮಸ್ತ ಇಸ್ರಯೇ
ಲೂ ಲಕೀಷಿನಿಂದ ಎಗ್ಲೋನಿಗೆ ಹೊರಟು,
೩೫ ಅದಕ್ಕೆದುರಾಗಿ ದಂ
ಡಿಳಿದು, ಅದರ ಮೇಲೆ ಯುದ್ಧ ಮಾಡಿ, ಅದೇ ದಿನದಲ್ಲಿ ಅದನ್ನು
ಹಿಡಿದು, ಅದನ್ನು ಕತ್ತಿಯ ಬಾಯಿಯಿಂದ ಹೊಡೆದರು. ಅವನು
ಲಕೀಷಿಗೆ ಮಾಡಿದ್ದೆಲ್ಲಾದರ ಹಾಗೆ ಅದಕ್ಕೆ ಮಾಡಿ, ಅದೇ ದಿನದ
ಲ್ಲಿ ಅದರಲ್ಲಿರುವ ಸಕಲ ಪ್ರಾಣಿಗಳನ್ನು ನಿರ್ಮೂಲ ಮಾಡಿ
ದನು.

೩೬ ಮತ್ತು ಯೆಹೋಶುವನು ಸಮಸ್ತ ಇಸ್ರಯೇಲಿನ ಸಂಗಡ ಎ
ಗ್ಲೋನಿನಿಂದ ಹೆಬ್ರೋನಿಗೆ ಹೊರಟು ಹೋಗಿ, ಅದರ ಮೇಲೆ
೩೭ ಯುದ್ಧ ಮಾಡಿ, ಅದನ್ನು ಹಿಡಿದು, ಅದನ್ನೂ, ಅದರ ಅರಸನ
ನ್ನೂ, ಅದರ ಸಮಸ್ತ ಪಟ್ಟಣಗಳನ್ನೂ, ಅವುಗಳಲ್ಲಿರುವ ಸಮಸ್ತ
ಪ್ರಾಣಿಗಳನ್ನೂ ಕತ್ತಿಯ ಬಾಯಿಯಿಂದ ಹೊಡೆದು, ಎಗ್ಲೋ
ನಿಗೆ ಮಾಡಿದ್ದೆಲ್ಲಾದರ ಹಾಗೆ ಒಬ್ಬನನ್ನಾದರೂ ಉಳಿಯ ಗೊಡ
ದೆ, ಅದನ್ನೂ, ಅದರಲ್ಲಿರುವ ಎಲ್ಲಾ ಪ್ರಾಣಿಗಳನ್ನೂ ನಿರ್ಮೂಲ
ಮಾಡಿದನು.

೩೮ ಮತ್ತು ಯೆಹೋಶುವ ಸಮಸ್ತ ಇಸ್ರಯೇಲಿನ ಕೂಡ ದೆಬೀ
ರಕ್ಕೆ ತಿರುಗಿ ಕೊಂಡು, ಅದರ ಮೇಲೆ ಯುದ್ಧ ಮಾಡಿ, ಅದನ್ನೂ,
೩೯ ಅದರ ಅರಸನನ್ನೂ, ಅದರ ಸಮಸ್ತ ಪಟ್ಟಣಗಳನ್ನೂ ಹಿಡಿದು,
ಅವುಗಳನ್ನು ಕತ್ತಿಯ ಬಾಯಿಯಿಂದ ಹೊಡೆದು, ಅದರಲ್ಲಿರುವ
ಸಮಸ್ತ ಪ್ರಾಣಿಗಳನ್ನು, ಒಬ್ಬನನ್ನಾದರೂ ಉಳಿಯ ಗೊಡದೆ,



ನಿರ್ಮೂಲ ಮಾಡಿದನು. ಹೆಬ್ರೋನಿಗೂ, ಲಿಬ್ನಕ್ಕೂ, ಅದರ ಅ
ರಸನಿಗೂ ಮಾಡಿದ ಹಾಗೆಯೇ, ದೆಬೀರಕ್ಕೂ ಅದರ ಅರಸನಿ
ಗೂ ಮಾಡಿದನು.

೪೦ ಮತ್ತು ಯೆಹೋಶುವ ಸಮಸ್ತ ಬೆಟ್ಟಗಳ ದೇಶವನ್ನೂ, ತೆಂ
ಕಣ ದೇಶವನ್ನೂ ತಗ್ಗಿನ ದೇಶವನ್ನೂ, ನೀರು ಬುಗ್ಗೆಗಳ ದೇಶ
ವನ್ನೂ, ಅವುಗಳ ಅರಸುಗಳೆಲ್ಲರನ್ನೂ, ಒಬ್ಬರನ್ನಾದರೂ ಉಳಿ
ಯ ಗೊಡದೆ, ಹೊಡೆದು, ಇಸ್ರಯೇಲಿನ ದೇವರಾದ ಕರ್ತನು
೪೧ ಆಜ್ಞಾಪಿಸಿದ ಹಾಗೆಯೇ ಶ್ವಾಸವುಳ್ಳದ್ದನ್ನೆಲ್ಲಾ ನಿರ್ಮೂಲ ಮಾ
ಡಿದನು. ಯೆಹೋಶುವ ಕಾದೇಷ್ ಬರ್ನೇಯದಿಂದ ಗಾಜದ ಮಟ್ಟಿ
ಗೂ ಇರುವವರನ್ನೂ ಗೋಷೆನಿನ ಸಮಸ್ತ ದೇಶವನ್ನೂ
೪೨ ಗಿಬ್ಯೋನಿನ ಪರ್ಯಂತರ ಹೊಡೆದು ಬಿಟ್ಟನು. ಯೆಹೋಶುವ
ಈ ಸಮಸ್ತ ಅರಸುಗಳನ್ನೂ, ಅವರ ದೇಶವನ್ನೂ ಒಂದೇ ಸಾರಿ
ತೆಗೆದು ಕೊಂಡನು. ಯಾಕಂದರೆ ಇಸ್ರಯೇಲಿನ ದೇವರಾದ ಕ
೪೩ ರ್ತನು ಇಸ್ರಯೇಲಿಗೋಸ್ಕರ ಯುದ್ಧ ಮಾಡಿದನು. ಆಗ ಯೆ
ಹೋಶುವನು ಇಸ್ರಯೇಲೆಲ್ಲಾದರ ಸಂಗಡ ಗಿಲ್ಗಾಲಿನಲ್ಲಿರುವ ದಂ
ಡಿಗೆ ಬಂದನು.

## ೧೧. ಸಂಧಿ.

೧ ಹಚೋರಿನ ಅರಸನಾದ ಯಬೀನನು ಇವುಗಳನ್ನು ಕೇಳಿದಾ
ಗ ಆದದ್ದೇನಂದರೆ, ಅವನು ಮದೋನಿನ ಅರಸನಾದ ಯೊಬಾಬ
೨ ನ ಬಳಿಗೂ, ಷಿಮ್ರೋನಿನ ಅರಸನ ಬಳಿಗೂ, ಅಕ್ಷಾಫಿನ ಅರಸನ
ಬಳಿಗೂ, ಪರ್ವತಗಳ ಉತ್ತರ ದಿಕ್ಕಿನಲ್ಲಿಯೂ, ಕಿನೆರೋತಿಗೆ
ದಕ್ಷಿಣಕ್ಕಿರುವ ಬೈಲಲ್ಲಿಯೂ, ತಗ್ಗುಗಳಲ್ಲಿಯೂ, ಪಶ್ಚಿಮದಲ್ಲಿ
೩ ದೋರಿನ ಪ್ರಾಂತ್ಯಗಳಲ್ಲಿಯೂ ಇರುವ ಅರಸುಗಳ ಬಳಿಗೂ,
ಪೂರ್ವ ಪಶ್ಚಿಮಕ್ಕಿರುವ ಕನಾನ್ಯರ ಬಳಿಗೂ, ಪರ್ವತಗಳಲ್ಲಿರು
ವ ಅಮೋರ್ಯರ, ಹಿತ್ತಿಯರ, ಪೆರಿಜ್ಜಿಯರ, ಯೆಬೂಸಿಯರ
ಬಳಿಗೂ ಮಿಚ್ಪೆಯ ದೇಶದಲ್ಲಿ ಹೆರ್ಮೋನ್ ಪರ್ವತದ ಕೆಳ ಭಾ
೪ ಗದಲ್ಲಿರುವ ಹಿವ್ವಿಯರ ಬಳಿಗೂ ಹೇಳಿ ಕಳುಹಿಸಿದನು. ಆಗಲ
ವರು, ಸಮುದ್ರ ಧಡದ ಮರಳಿನ ಹಾಗೆಯೇ ಬಹು ಜನವೂ ಬ
ಹು ರಥಗಳೂ ಕುದುರೆಗಳೂ ಉಂಟಾಗಿರುವ ತಮ್ಮ ಎಲ್ಲಾ ಸೈ
೫ ನ್ಯಗಳ ಸಂಗಡ ಹೊರಟರು. ಈ ಅರಸುಗಳೆಲ್ಲಾ ಕೂಡಿ ಕೊಂ
ಡು, ಇಸ್ರಯೇಲಿನ ಸಂಗಡ ಯುದ್ಧ ಮಾಡ ಬಂದು, ಏಕವಾಗಿ
ಮೆರೋಮು ಎಂಬ ಜಲಗಳ ಬಳಿಯಲ್ಲಿ ದಂಡಿಳಿದರು.

೬ ಆಗ ಕರ್ತನು ಯೆಹೋಶುವನಿಗೆ, ಅವರಿಗೆ ಭಯ ಪಡ ಬೇಡ;
ಯಾಕಂದರೆ ನಾಳೆ ಇಷ್ಟು ಹೊತ್ತಿಗೆ ಅವಕೆಲ್ಲರನ್ನು ಇಸ್ರಯೇ
ಲಿನ ಮುಂದೆ ಕೊಲ್ಲಲ್ಪಟ್ಟವರಾಗಿ ಒಪ್ಪಿಸಿ ಕೊಡುವೆನು. ನೀನು ಅ
ವರ ಕುದುರೆಗಳ ಹಿಂಗಾಲಿನ ನರವನ್ನು ಕೊಯಿದು, ಅವರ ರಥ
೭ ಗಳನ್ನು ಬೆಂಕಿಯಿಂದ ಸುಟ್ಟು ಬಿಡ ಬೇಕು, ಅಂದನು. ಆಗ
ಯೆಹೋಶುವನೂ ಅವನ ಸಂಗಡ ಇದ್ದ ಯುದ್ಧಸ್ಥರೆಲ್ಲರೂ ಬಂ
ದು, ಫಕ್ಕನೆ ಮೆರೋಮು ಜಲಗಳ ಬಳಿಯಲ್ಲಿ ಅವರ ಮೇಲೆ ಬಿ
೮ ದ್ದರು. ಕರ್ತನು ಅವರನ್ನು ಇಸ್ರಯೇಲಿನ ಕೈಯಲ್ಲಿ ಒಪ್ಪಿಸಿ
ಕೊಟ್ಟನು; ಅವರು ಅವರನ್ನು ಹೊಡೆದು, ದೊಡ್ಡ ಚಿದೋನಿನ
ವರಿಗೂ, ಮಿಸ್ರೆಫೋತ್ಮಾಯಿಮಿನ ವರಿಗೂ, ಮೂಲ್ಲಲ್ಲಿರುವ ಮಿ
ಚ್ಪೆಯ ತಗ್ಗಿನ ವರಿಗೂ ಹಿಂದಟ್ಟಿ, ಅವರಲ್ಲಿ ಒಬ್ಬನನ್ನಾದರೂ
೯ ಉಳಿಯ ಗೊಡದೆ, ಅವರನ್ನು ಹೊಡೆದು ಬಿಟ್ಟರು. ಯೆಹೋಶು
ವ, ಕರ್ತನು ತನಗೆ ಹೇಳಿದ ಪ್ರಕಾರವೇ, ಅವರ ಕುದುರೆಗಳ ಹಿಂ
ಗಾಲಿನ ನರವನ್ನು ಕೊಯಿದು ಬಿಟ್ಟು, ಅವರ ರಥಗಳನ್ನು ಬೆಂ
ಕಿಯಿಂದ ಸುಟ್ಟು ಬಿಟ್ಟನು.

೧೦ ಆ ಕಾಲದಲ್ಲಿ ಯೆಹೋಶುವನು ತಿರಿಗಿ ಕೊಂಡು, ಹಚೋರ
ನ್ನು ಹಿಡಿದು, ಅದರ ಅರಸನನ್ನು ಕತ್ತಿಯಿಂದ ಹೊಡೆದು ಬಿಟ್ಟ
ನು; ಯಾಕಂದರೆ ಹಚೋರು ಮೊದಲು ಆ ರಾಜ್ಯಗಳಿಗೆಲ್ಲಾ ತ
ಲೆಯಾಗಿತ್ತು. ಅವರು ಉಸುರುಳ್ಳದ್ದಾದ ಒಂದನ್ನಾದರೂ ಉಳಿ
೧೧ ಯ ಗೊಡದೆ, ಅದರಲ್ಲಿರುವ ಪ್ರಾಣಿಗಳನ್ನೆಲ್ಲಾ ಕತ್ತಿಯ ಬಾ
ಯಿಯಿಂದ ಹೊಡೆದು, ನಿರ್ಮೂಲ ಮಾಡಿ, ಹಚೋರನ್ನು
೧೨ ಬೆಂಕಿಯಿಂದ ಸುಟ್ಟು ಬಿಟ್ಟರು. ಇದಲ್ಲದೆ ಯೆಹೋಶುವ ಆ ಅರ
ಸುಗಳ ಸಮಸ್ತ ಪಟ್ಟಣಗಳನ್ನೂ, ಅವುಗಳ ಸಮಸ್ತ ಅರಸುಗಳ
ನ್ನೂ ಹಿಡಿದು, ಕತ್ತಿಯ ಬಾಯಿಯಿಂದ ಹೊಡೆದು, ಕರ್ತನ ಸೇ
ವಕನಾದ ಮೋಶೆ ಆಜ್ಞಾಪಿಸಿದ ಹಾಗೆಯೇ, ಅವರನ್ನು ನಿರ್ಮೂ
೧೩ ಲ ಮಾಡಿ ಬಿಟ್ಟನು. ಆದರೆ ತಮ್ಮ ದಿಬ್ಬೆಯ ಮೇಲೆ ನಿಂತಿರುವ
ಪಟ್ಟಣಗಳನ್ನೆಲ್ಲಾ ಇಸ್ರಯೇಲ್ ಸುಟ್ಟು ಬಿಡಲಿಲ್ಲ; ಹಚೋರನ್ನು
೧೪ ಮಾತ್ರ ಯೆಹೋಶುವ ಸುಟ್ಟು ಬಿಟ್ಟನು. ಆ ಪಟ್ಟಣಗಳ ಕೊಳ್ಳೆ
ಯೆನ್ನೆಲ್ಲಾ ಪಶುಗಳನ್ನೆಲ್ಲಾ ಇಸ್ರಯೇಲ್ ಮಕ್ಕಳು ತಮಗೋ
ಸ್ಕರ ಸುಲುಕೊಂಡರು; ಆದರೆ ಮನುಷ್ಯರೆಲ್ಲರನ್ನು ಕತ್ತಿಯ
ಬಾಯಿಯಿಂದ ನಾಶ ಮಾಡುವ ಪರ್ಯಂತರ ಹೊಡೆದು ಬಿಟ್ಟ
೧೫ ರು. ಉಸುರುಳ್ಳದ್ದಾದ ಒಂದನ್ನೂ ಅವರು ಉಳಿಯ ಗೊಡಿಸಿ
ದ್ದಿಲ್ಲ. ಕರ್ತನು ತನ್ನ ಸೇವಕನಾದ ಮೋಶೆಗೆ ಹ್ಯಾಗೆ ಆಜ್ಞಾಪಿ
ಸಿ ಇದ್ದನೋ, ಹಾಗೆಯೇ ಮೋಶೆ ಯೆಹೋಶುವನಿಗೆ ಆಜ್ಞಾಪಿ
ಸಿದನು; ಮತ್ತು ಯೆಹೋಶುವ ಹಾಗೆಯೇ ಮಾಡಿದನು. ಕರ್ತ
ನು ಮೋಶೆಗೆ ಆಜ್ಞಾಪಿಸಿದ್ದರಲ್ಲಿ ಒಂದನ್ನೂ ಅವನು ಕಡಿಮೆ ಮಾ
ಡಿದ್ದಿಲ್ಲ.

೧೬ ಈ ಪ್ರಕಾರ ಯೆಹೋಶುವನು ಸೇಯಿರಿಗೆ ಏರಿ ಹೋಗುವ
ಹಾಲಕು ಬೆಟ್ಟದ ಮೊದಲುಗೊಂಡು ಬಾಳ್‌ಗಾದಿನ ಮಟ್ಟಿಗೂ ಇ
ರುವ ಲೆಬನೋನಿನ ತಗ್ಗಿನಲ್ಲಿ ಹೆರ್ಮೋನಿನ ಬೆಟ್ಟದ ಕೆಳಗೆ ಇರು
ವ ಎಲ್ಲಾ ದೇಶವಾದ ಬೆಟ್ಟಗಳನ್ನೂ, ದಕ್ಷಿಣ ದೇಶವೆಲ್ಲಾನ್ನೂ,
ಗೋಷೆನ್ ಸೀಮೆ ಎಲ್ಲಾನ್ನೂ, ಅದರ ತಗ್ಗನ್ನೂ, ಬೈಲನ್ನೂ,
ಇಸ್ರಯೇಲ್ ಬೆಟ್ಟವನ್ನೂ, ಅದರ ತಗ್ಗನ್ನೂ ತೆಗೆದು ಕೊಂಡು,
೧೭ ಅವುಗಳ ಅರಸುಗಳೆಲ್ಲರನ್ನೂ ಹಿಡಿದು, ಅವರನ್ನು ಹೊಡೆದು,
೧೮ ಕೊಂದು ಹಾಕಿದನು. ಯೆಹೋಶುವನು ಬಹಳ ದಿವಸ ಈ ಅರ
ಸುಗಳೆಲ್ಲರ ಸಂಗಡ ಯುದ್ಧ ಮಾಡುತ್ತಿದ್ದನು.

೧೯ ಗಿಬ್ಯೋನಿನ ನಿವಾಸಿಗಳಾದ ಹಿವ್ವಿಯರ ಹೊರತಾಗಿ, ಇಸ್ರ
ಯೇಲ್ ಮಕ್ಕಳ ಸಂಗಡ ಸಮಾಧಾನ ಮಾಡಿ ಕೊಂಡ ಬೇರೆ ಒಂ
ದು ಪಟ್ಟಣವಾದರೂ ಇಲ್ಲ; ಅವರು ಎಲ್ಲವುಗಳನ್ನು ಯುದ್ಧದಿಂದ ತೆ
೨೦ ಗೆದು ಕೊಂಡರು. ಯಾಕಂದರೆ ಅವರು ಯುದ್ಧ ಮಾಡ ಇಸ್ರ
ಯೇಲಿಗೆ ಎದುರಾಗಿ ಬರುವ ಹಾಗೆ, ಅವರ ಹೃದಯವನ್ನು ಕಠಿ
ಣ ಮಾಡಿದ್ದು, ಅವರನ್ನು ನಿರ್ಮೂಲ ಮಾಡುವ ಹಾಗೆ, ಕರ್ತ
ನು ಮೋಶೆಗೆ ಆಜ್ಞಾಪಿಸಿದ ಪ್ರಕಾರ ಅವರಿಗೆ ದಯೆ ಮಾಡದೆ, ಅ
ವರನ್ನು ನಾಶನ ಮಾಡುವ ಹಾಗೆ, ಕರ್ತನಿಂದ ಉಂಟಾಗಿತ್ತು.

೨೧ ಆ ಕಾಲದಲ್ಲಿ ಯೆಹೋಶುವ ಬಂದು, ಬೆಟ್ಟದ ದೇಶವಾದ ಹೆ
ಬ್ರೋನಿನಲ್ಲಿಯೂ ದೆಬೀರಿನಲ್ಲಿಯೂ ಅನಾಬಿನಲ್ಲಿಯೂ ಯೆ
ಹೂದನ ಸಕಲ ಬೆಟ್ಟಗಳಲ್ಲಿಯೂ ಇಸ್ರಯೇಲಿನ ಸಕಲ ಬೆಟ್ಟಗ

ಳಲ್ಲಿಯೂ ಇದ್ದ ಅನಾಕ್ಯರನ್ನು ಕಡಿದು ಬಿಟ್ಟು, ಅವರನ್ನೂ ಅ
೨೨ ವರ ಪಟ್ಟಣಗಳನ್ನೂ ಕೂಡ ನಿರ್ಮೂಲ ಮಾಡಿದನು. ಅನಾಕ್ಯ
ರು ಇಸ್ರಯೇಲ್ ಮಕ್ಕಳ ದೇಶದಲ್ಲಿ ಉಳಿಯಲಿಲ್ಲ; ಗಾಜದಲ್ಲಿ
ಯೂ ಗಾತಿನಲ್ಲಿಯೂ ಅಶ್ದೋದಿನಲ್ಲಿಯೂ ಮಾತ್ರ ಉಳಿದರು.

೨೩ ಹೀಗೆಯೇ ಯೆಹೋಶುವ ದೇಶವೆಲ್ಲಾ ಕರ್ತನು ಮೋಶೆಗೆ
ಹೇಳಿದ ಪ್ರಕಾರವೇ ಹಿಡಿದು, ಅದನ್ನು ಇಸ್ರಯೇಲಿಗೆ ಅವರ ಕು
ಲಗಳ ಪಾಲುಗಳ ಹಾಗೆಯೇ ಬಾಧ್ಯತೆಯಾಗಿ ಕೊಟ್ಟನು. ಆ
ಗ ದೇಶವು ಯುದ್ಧವಿಲ್ಲದೆ ವಿಶ್ರಮವಾಯಿತು.

## ೧೨. ಸಂಧಿ.

೧ ಯೊರ್ದನಿಗೆ ಆಚೆ ಸೂರ್ಯನು ಉದಯಿಸುವ ದಿಕ್ಕಿನಲ್ಲಿ
ಅರ್ನೋನು ನದಿಯಿಂದ ಹೆರ್ಮೋನ್ ಬೆಟ್ಟದ ವರೆಗೂ, ಮೂಲ್ಲ
ಬೈಲಿನ ಎಲ್ಲಾ ದರಲ್ಲಿಯೂ ಇಸ್ರಯೇಲ್ ಮಕ್ಕಳು ಅವರನ್ನು ಹೊ
ಡೆದು, ಸ್ವತಂತ್ರಿಸಿ ಕೊಂಡ ದೇಶಗಳ ಅರಸುಗಳ್ಯಾರಂದರೆ, ಅ
೨ ರ್ನೋನ್ ನದಿಯ ಮಧ್ಯ ಭಾಗದ ಥದದ ಬಳಿಯಲ್ಲಿ ಇರುವ
ಅರೊವೇರಿನಿಂದಲೂ, ಅರ್ಥ ಗಿಲ್ಯಾದಿನಿಂದಲೂ, ಅಮ್ಮೋನನ
ಮಕ್ಕಳ ಮೇರೆಯಾದ ಯಬ್ಬೋಕು ನದಿಯ ಪರ್ಯಂತರ
೩ ಕ್ಕೂ, ಮತ್ತು ಬೈಲಿನಿಂದ ಮೂಲ್ಲಬೈಲಿರುವ ಕಿನೆರೋತು ಸಮು
ದ್ರದ ಪರ್ಯಂತರಕ್ಕೂ, ಬೇತ್ ಯೆಷಿಮೋತು ಮಾರ್ಗವಾಗಿ
ಮೂಲ್ಲಬೈಲಿರುವ ಬೈಲಿನ ಉಪ್ಪು ಸಮುದ್ರದ ಪರ್ಯಂತರಕ್ಕೂ,
ಮತ್ತು ಅಶ್ದೋತ್ ಪಿಸ್ಗಕ್ಕೆ ಕೆಳಗಾದ ದಕ್ಷಿಣದಿಂದ ಇರುವ ದೇಶ
೪ ವನ್ನು ಆಳಿ ಕೊಂಡಿದ್ದ, ಹೆಷ್ಬೋನಿನಲ್ಲಿ ವಾಸಿಸಿದ್ದ, ಅಮೋರ್ಯ
ರ ಅರಸನಾದ ಸೀಹೋನನೂ; ಅಷ್ಟರೋತಿನಲ್ಲಿಯೂ ಎದ್ರೈ
೫ಯಲ್ಲಿಯೂ ವಾಸ ಮಾಡಿ, ಹೆರ್ಮೋನ್ ಬೆಟ್ಟವನ್ನೂ, ಸಲ್ಕವ
ನ್ನೂ, ಗೆಷೂರ್ಯರ, ಮಾಕಾತ್ಯರ ಮೇರೆಯ ವರಿಗೂ ಹೆ
ಷ್ಬೋನಿನ ಅರಸನಾದ ಸೀಹೋನನ ಮೇರೆಯಾಗಿದ್ದ ಗಿಲ್ಯಾದಿ
ನ ಅರ್ಧದ ಪರ್ಯಂತರಕ್ಕೂ ಇರುವ ಬಾಶಾನಿಲ್ಲಾ ಆಳಿ ಕೊಂ
೬ ಡಿದ್ದ, ರಾಕ್ಷಸರಲ್ಲಿ ಮಿಕ್ಕ ಬಾಶಾನಿನ ಅರಸನಾದ ಓಗನೂ; ಇವ
ರನ್ನು ಕರ್ತನು ಸೇವಕನಾದ ಮೋಶೆಯೂ ಇಸ್ರಯೇಲ್ ಮಕ್ಕ
ಳೂ ಹೊಡೆದು ಬಿಟ್ಟು, ಅವರ ದೇಶವನ್ನು ರೂಬೆನ್ಯರಿಗೂ,
ಗಾದಿಯರಿಗೂ ಮನಸ್ಸೆಯ ಅರ್ಧ ಕುಲದವರಿಗೂ ಸ್ವತಂತ್ರವಾ
೭ ಗಿ ಕೊಟ್ಟನು.

೮ ಆದರೆ ಯೊರ್ದನಿಗೆ ಈಚೆಯಲ್ಲಿ ಪೃಥ್ವಿಮದಲ್ಲಿ ಲೆಬನೋನಿನ ತ
ಗ್ಗಿನಲ್ಲಿರುವ ಬಳ್ಳಾದು ಮೊದಲುಗೊಂಡು ಸೇಯಿರಿಗೆ ಏರಿ ಹೋ
ಗುವ ಹಾಲಕು ಬೆಟ್ಟದ ಮಟ್ಟಿಗೂ, ಬೆಟ್ಟಗಳಲ್ಲಿಯೂ, ತಗ್ಗುಗಳ
ಲ್ಲಿಯೂ, ಬೈಲಿನಲ್ಲಿಯೂ, ನೀರು ಬುಗ್ಗೆಗಳ ಸ್ಥಳದಲ್ಲಿಯೂ, ಅ
೯ ರಣ್ಯದಲ್ಲಿಯೂ ದಕ್ಷಿಣದಲ್ಲಿಯೂ ಯೆಹೋಶುವನು ಇಸ್ರಯೇ
ಲಿನ ಕುಲಗಳಿಗೆ ಸ್ವಾಸ್ಥ್ಯವಾಗಿ ಪಾಲು ಇಟ್ಟ ದೇಶವಾದಂಥ,
ಹಿತ್ತಿಯರ, ಅಮೋರ್ಯರ, ಕನಾನ್ಯರ, ಪೆರಿಜ್ಜಿಯರ, ಹಿವ್ವಿ
ಯರ, ಯೆಬೂಸಿಯರ ದೇಶದಲ್ಲಿ ಇದ್ದ, ಯೆಹೋಶುವನೂ ಇ
೯ ಸ್ರಯೇಲ್ ಮಕ್ಕಳೂ ಹೊಡೆದು ಬಿಟ್ಟ ಅರಸುಗಳೂ ಯಾರಂ
೧೦ ದರೆ—ಯೆರಿಕೋವಿನ ಅರಸನು ಒಬ್ಬ; ಬೇತೆಲ್ ಬಳಿಯಲ್ಲಿರುವ
ಆಯಿಯ ಅರಸನು ಒಬ್ಬ; ಯೆರೂಸಲೇಮಿನ ಅರಸನು ಒಬ್ಬ;
೧೧ ಹೆಬ್ರೋನಿನ ಅರಸನು ಒಬ್ಬ; ಯರ್ಮೂತಿನ ಅರಸನು ಒಬ್ಬ;
೧೨ ಲಕೀಷಿನ ಅರಸನು ಒಬ್ಬ; ಎಗ್ಲೋನಿನ ಅರಸನು ಒಬ್ಬ; ಗೇಜರನ
೧೩ ಅರಸನು ಒಬ್ಬ, ದೆಬೀರನ ಅರಸನು ಒಬ್ಬ; ಗೆದೇರಿನ ಅರಸನು
೧೪ ಒಬ್ಬ; ಹೊರ್ಮದ ಅರಸನು ಒಬ್ಬ; ಆರದನ ಅರಸನು ಒಬ್ಬ; ಲಿಬ್ನ
ದ ಅರಸನು ಒಬ್ಬ; ಅದುಲ್ಲಮಿನ ಅರಸನು ಒಬ್ಬ; ಮಕ್ಕೇದದ
೧೫ ಅರಸನು ಒಬ್ಬ; ಬೇತೆಲಿನ ಅರಸನು ಒಬ್ಬ; ತಪ್ಪೂಹದ ಅರಸನು
೧೬ ಒಬ್ಬ; ಹೆಫೆರಿನ ಅರಸನು ಒಬ್ಬ; ಅಫೇಕಿನ ಅರಸನು ಒಬ್ಬ;
೧೭ ಲಸ್ರೋನಿನ ಅರಸನು ಒಬ್ಬ; ಮದೋನಿನ ಅರಸನು ಒಬ್ಬ;
೧೮ ಹಚೋರಿನ ಅರಸನು ಒಬ್ಬ; ಷಿಮ್ರೊನ್ಮೆರೋನಿನ ಅರಸನು
೧೯ ಒಬ್ಬ; ಅಕ್ಷಾಫಿನ ಅರಸನು ಒಬ್ಬ; ತಾಣಕದ ಅರಸನು ಒಬ್ಬ;
೨೦ ಮೆಗಿದ್ದೋನಿನ ಅರಸನು ಒಬ್ಬ; ಕೇದೆಷಿನ ಅರಸನು ಒಬ್ಬ;
೨೧ ಕರ್ಮೇಲ್ ಬೆಟ್ಟದ ಯೊಕ್ನೆಯಾಮದ ಅರಸನು ಒಬ್ಬ; ದೋರಿ
೨೨ ನ ಪ್ರಾಂತ್ಯದಲ್ಲಿರುವ ದೋರಿನ ಅರಸನು ಒಬ್ಬ; ಗಿಲ್ಗಾಲಿನ
೨೩ ಜನಾಂಗಗಳ ಅರಸನು ಒಬ್ಬ; ತಿರ್ಚದ ಅರಸನು ಒಬ್ಬ; ಎಲ್ಲಾ
ಮೂವತ್ತೊಂದು ಮಂದಿ ಅರಸುಗಳು.

## ೧೩. ಸಂಧಿ.

೧ ಯೆಹೋಶುವ ಮುದುಕನಾಗಿ, ದಿವಸಗಳು ಹೋದವನಾಗಿ
ದ್ದನು. ಮತ್ತು ಕರ್ತನು ಅವನಿಗೆ ಹೇಳಿದ್ದೇನಂದರೆ, ನೀನು ಮು
ದುಕನಾಗಿ, ದಿವಸಗಳು ಹೋದವನಾದಿ; ಆದರೆ ಸ್ವತಂತ್ರಿಸಿ ಕೊ
ಳ್ಳ ತಕ್ಕ ಭೂಮಿ ಬಹಳವಾಗಿ ಉಳಿದದೆ. ಏನಂದರೆ—ಐಗುಪ್ತಕ್ಕೆ
೨ ಎದುರಾದ ಷಿಹೋರಿನಿಂದ ಕನಾನ್ಯರಿಗೆ ಎಣಿಸಲ್ಪಟ್ಟಿದ್ದಾದ, ಉ
ತ್ತರಕ್ಕೆ ಎಕ್ರೋನಿನ ಮೇರೆಯ ಮಟ್ಟಿಗೂ ಇರುವ ಫಿಲಿಷ್ಟ್ಯರ
೩ ಮೇರೆಗಳೆಲ್ಲಾ, ಗೆಷೂರ್ಯರ ದೇಶವೆಲ್ಲಾ, ಗಾಜದವರೂ, ಅ
ಶ್ದೋದ್ಯರೂ ಅಷ್ಕೆಲೋನ್ಯರೂ, ಗಿತ್ತಿಯರೂ ಎಕ್ರೋನ್ಯ
ರೂ ಎಂಬುವ ಫಿಲಿಷ್ಟ್ಯರ ಐದು ಮಂದಿ ಅಧಿಪತಿಗಳ ಸೀಮೆ;
೪ ಅವ್ವಿಯರ ಸೀಮೆ; ದಕ್ಷಿಣದಿಂದ ಅಮೋರ್ಯರ ಮೇರೆಯಾದ
ಅಭೇಕದ ಮಟ್ಟಿಗೂ ಇರುವ ಕನಾನ್ಯರ ಸರ್ವ ದೇಶವು; ಚಿ
೫ದೋನ್ಯರಿಗೆ ಹೊಂದಿದ ಮೆಯಾರವು; ಗಿಬ್ಲಿಯರ ಸೀಮೆ; ಸೂ
ರ್ಯನು ಉದಯಿಸುವ ದಿಕ್ಕಿನಲ್ಲಿ ಹೆರ್ಮೋನ್ ಬೆಟ್ಟದ ಕೆಳಗೆ
ಇರುವ ಬಾಳ್‌ಗಾದಿನಿಂದ ಹಮಾತಿನಲ್ಲಿ ಪ್ರವೇಶಿಸುವ ಸ್ಥಳದ ಮ
೬ ಟ್ಟಿಗೂ ಇರುವ ಲೆಬನೋನೆಲ್ಲಾ, ಇವುಗಳೇ. ಲೆಬನೋನಿನಿಂದ
ಮಿಸ್ರೆಫೋತ್ಮಾಯಿದ ವರಿಗೂ ಬೆಟ್ಟದ ದೇಶದ ಎಲ್ಲಾ ನಿವಾಸಿಗಳ
೭ ನ್ನೂ, ಎಲ್ಲಾ ಚಿದೋನ್ಯರನ್ನೂ ನಾನು ಇಸ್ರಯೇಲ್ ಮಕ್ಕಳ
ಎದುರಿನಿಂದ ಹೊರಡಿಸಿ ಬಿಡುವೆನು. ಆದರೆ ನಾನು ನಿನಗೆ ಹೇಳಿದ
ಹಾಗೆಯೇ ನೀನು ಜೇಟುಗಳನ್ನು ಹಾಕಿ, ಇಸ್ರಯೇಲಿಗೆ ಭಾಗ್ಯತೆ
೮ ಯಾಗಿ ಪಾಲಿಸ ಬೇಕು. ಈಗ ಈ ದೇಶವನ್ನು ಒಂಭತ್ತು ಕುಲ
ಗಳಿಗೂ, ಮನಸ್ಸೆಯ ಅರ್ಧ ಕುಲಕ್ಕೂ ಬಾಧ್ಯತೆಯಾಗಿ ಪಾ
ಲಿಸು. ಅವರ ಸಂಗಡ ರೂಬೆನ್ಯರೂ ಗಾದಿಯರೂ ತಮ್ಮ ಬಾಧ್ಯ
ತೆಯನ್ನು ಹೊಂದಿದರು. ಏನಂದರೆ ಕರ್ತನ ಸೇವಕನಾದ ಮೋ
ಶೆ ಯೊರ್ದನಿಗೆ ಆಚೆ ಸೂರ್ಯೋದಯದ ದಿಕ್ಕಿನಲ್ಲಿ ಅವರಿಗೆ
೯ ಕೊಟ್ಟದ್ದೇ—ಅರ್ನೋನ್ ನದಿ ತೀರದಲ್ಲಿರುವ ಅರೊವೇರೂ
ನದಿಯ ಮಧ್ಯ ಭಾಗದಲ್ಲಿರುವ ಪಟ್ಟಣವೂ ಪೊದರ್ಗೊಂಡು, ದಿ
೧೦ ಬೋನ ಮಟ್ಟಿಗಿರುವ ಮೇದೆಬದ ಸಮನಾದ ಭೂಮಿಯೂ; ಹೆ
ಷ್ಬೋನಿನಲ್ಲಿ ಆಳಿದ ಅಮೋರ್ಯರ ಅರಸನಾದ ಸೀಹೋನನಿಗೆ



೧೧ ಅಮ್ಮೋನಿನ ಮಕ್ಕಳ ಮೇರೆಯ ಮಟ್ಟಿಗೂ ಇದ್ದ ಸಕಲ ಪಟ್ಟಣ
೧೨ ಳೂ; ಗಿಲ್ಯಾದೂ; ಗೆದೂರ್ಯರ ಮಾಕಾತ್ಯರ ಮೇರೆಯೂ; ಹೆ
ರ್ಮೋನ್ ಪರ್ವತವೆಲ್ಲವೂ; ಅಷ್ಟರೋತಿನಲ್ಲಿಯೂ ಎದ್ರೈಯ
ಲ್ಲಿಯೂ ಆಳಿದ, ರಾಕ್ಷಸರಲ್ಲಿ ಮಿಕ್ಕಿದ್ದ, ಬಾಶಾನಿನ ಅರಸನಾದ
ಓಗನ ರಾಜ್ಯವೆಲ್ಲಾ ಸಮಸ್ತ ರಾಜ್ಯವಾದ ಬಾಶಾನೂ. ಅವರನ್ನು
ಮೋಶೆ ಹೊಡೆದು, ಹೊರಡಿಸಿದನು.

೧೩ ಆದರೆ ಇಸ್ರಯೇಲ್ ಮಕ್ಕಳು ಗೆಷೂರ್ಯರನ್ನೂ ಮಾಕಾ
ತ್ಯರನ್ನೂ ಹೊರಡಿಸಿ ಬಿಡಲಿಲ್ಲ; ಯಾಕಂದರೆ ಗೆಷೂರ್ಯರೂ
ಮಾಕಾತ್ಯರೂ ಈ ದಿನದ ವರಿಗೂ ಇಸ್ರಯೇಲಿನ ಮಧ್ಯದಲ್ಲಿ
೧೪ ವಾಸಿಸಿ ಇದ್ದಾರೆ. ಆದರೆ ಮೋಶೆ ಲೇವ್ಯರ ಕುಲಕ್ಕೆ ಮಾತ್ರ
ಬಾಧ್ಯತೆಯನ್ನು ಕೊಡಲಿಲ್ಲ; ಯಾಕಂದರೆ ಅವನು ಅವರಿಗೆ ಹೇ
ಳಿದ ಪ್ರಕಾರ ಇಸ್ರಯೇಲಿನ ದೇವರಾದ ಕರ್ತನ ದಹನ ಬಲಿಗಳೇ
ಅವರ ಬಾಧ್ಯತೆ.

೧೫ ಇದಲ್ಲದೆ ಮೋಶೆ ರೂಬೆನನ ಮಕ್ಕಳ ಕುಲಕ್ಕೆ ಅವರ ಗೋ
೧೬ ತ್ರಗಳ ಪ್ರಕಾರ ಬಾಧ್ಯತೆಯನ್ನು ಕೊಟ್ಟನು. ಅರ್ನೋನ್ ನದಿ
ಯ ತೀರದಲ್ಲಿರುವ ಅರೊವೇರೂ ನದಿಯ ನಡು ಮಧ್ಯದಲ್ಲಿ
ರುವ ಪಟ್ಟಣವೂ ಪೊದರ್ಗೊಂಡು, ಮೇದೆಬದ ಬಳಿಯಲ್ಲಿರುವ ಸಕ
೧೭ ಲ ಸಮನಾದ ಭೂಮಿಯೂ; ಸಮನಾದ ಭೂಮಿಯಲ್ಲಿರುವ
ಹೆಷ್ಬೋನೂ, ಅದರ ಎಲ್ಲಾ ಪಟ್ಟಣಗಳಾದ ದಿಬೋನು, ಬಾಮೋ
೧೮ತ್‌ಬಾಳ್, ಬೇತ್ ಬಾಳ್‌ಮೆಯೋನು, ಯಾಹಚ, ಕೆದೆಮೋತ್,
೧೯ ಮೆಫಾತ್, ಕಿರ್ಯಾತಾಯಿಮ್, ಸಿಬ್ಮ, ತಗ್ಗಿನ ಪೆಟ್ಟದಲ್ಲಿರುವ
೨೦ ಚೆರೆತ್‌ಷಾರ್, ಬೇತ್ಪೆಯೋರ್, ಅಶ್ದೊತ್‌ಪಿಸ್ಗ, ಬೇತ್‌ಯೆಷಿಮೋ
೨೧ ತ್, ಹರ್, ಸಮನಾದ ಭೂಮಿಯ ಎಲ್ಲಾ ಪಟ್ಟಣಗಳೂ; ಹೆಷ್ಬೋನಿ
ನಲ್ಲಿ ಆಳಿದ ಸೀಹೋನೆಂಬ ಅಮೋರ್ಯರ ಅರಸನ ರಾಜ್ಯವೆಲ್ಲ
ವೂ ಅವರ ಮೇರೆಗೊಳಗಾದವು. ಮೋಶೆ ಅವನನ್ನೂ ದೇಶದಲ್ಲಿ
ಅವನ ಅಧಿಪತಿಗಳಾದಂಥ, ಮಿದ್ಯಾನಿನ ಪ್ರಭುಗಳಾದಂಥ, ಏವ್ಯೆ,
ರೆಕೆಮ್, ಚುರ್, ಹೂರ್, ರೆಬ ಎಂಬವರನ್ನೂ ಕೊಂದು ಹಾಕಿದನು.
೨೨ ಇದಲ್ಲದೆ ಇಸ್ರಯೇಲ್ ಮಕ್ಕಳು ಸಂಹರಿಸಿದ ಇತರರ ಸಂಗಡ
ಬೆಯೋರಿನ ಮಗನಾದ ಬಿಳಾಮನೆಂಬ ಕಣಿ ಹೇಳುವವನನ್ನು
೨೩ ಕತ್ತಿಯಿಂದ ಕೊಂದು ಹಾಕಿದರು. ಯೊರ್ದನೂ ಅದರ ಮೇರೆ
ಯೂ ರೂಬೆನನ ಮಕ್ಕಳ ಮೇರೆಯಾಗಿತ್ತು. ಈ ಪಟ್ಟಣಗಳೂ
ಇವುಗಳ ಗ್ರಾಮಗಳೂ ರೂಬೆನನ ಮಕ್ಕಳಿಗೆ ಅವರ ಗೋತ್ರ
೨೪ ಗಳ ಪ್ರಕಾರ ಬಾಧ್ಯತೆಯೇ.

೨೫ ಇದಲ್ಲದೆ ಮೋಶೆಯು ಗಾದನ ಮಕ್ಕಳ ಕುಲಕ್ಕೆ ಅವರ
೨೬ ಗೋತ್ರಗಳ ಪ್ರಕಾರ ಬಾಧ್ಯತೆಯಾಗಿ ಕೊಟ್ಟನು. ಯಾಜೆ
ರೂ; ಗಿಲ್ಯಾದಿನ ಸಮಸ್ತ ಪಟ್ಟಣಗಳೂ; ರಬ್ಬಕ್ಕೆದುರಾಗಿರುವ
ಅರೊವೇರಿನ ವರಿಗೂ ಉಂಟಾಗಿರುವ ಅಮ್ಮೋನಿನ ಮಕ್ಕಳ
೨೭ ಅರ್ಧ ದೇಶವು; ಹೆಷ್ಬೋನಿನಿಂದ ರಾಮತ್‌ಮಿಸ್ಪೆ, ಬೆಟೊನೀಮ್
ಇವುಗಳ ವರಿಗೂ ಮಹನಾಯಿಮಿನಿಂದ ದೆಬೀರ್ ಮೇರೆಯ
೨೮ ವರಿಗೂ ಇರುವ ದೇಶವು; ಮತ್ತು ತಗ್ಗಿನಲ್ಲಿರುವ ಬೇತ್ ಆರಾಮ್;
ಬೇತ್ ನಿಮ್ರಾ, ಸುಕ್ಕೋತ್, ಚಾಫೋನ್; ಹೆಷ್ಬೋನಿನ ಅರಸ
ನಾದ ಸೀಹೋನಿನ ಉಳಿದ ರಾಜ್ಯವೂ; ಯೊರ್ದನಿಗೆ ಆಚೆಯ
ಲ್ಲಿರುವ ಮೂಲ್ಲ ಯೊರ್ದನಿನ ತೀರವಾಗಿ ಕಿನೆರೋತು ಸಮು
ದ್ರದ ಕಡೆಯ ಪರ್ಯಂತರಕ್ಕೂ ಇರುವ ದೇಶವೂ; ಅವರ ಮೇ
೨೯ ರೆಗೆ ಒಳಗಾದವು. ಈ ಪಟ್ಟಣಗಳೂ ಇವುಗಳ ಗ್ರಾಮಗಳೂ ಗಾ
ದಿನ ಮಕ್ಕಳಿಗೆ ಅವರ ಗೋತ್ರಗಳ ಪ್ರಕಾರ ಬಾಧ್ಯತೆಯೇ.

೩೦ ಇದಲ್ಲದೆ ಮನಸ್ಸೆಯ ಮಕ್ಕಳ ಅರ್ಧ ಕುಲಕ್ಕೆ ಮೋಶೆ ಅವ
ರ ಗೋತ್ರಗಳ ಪ್ರಕಾರ ಸ್ವಾಸ್ಥ್ಯವನ್ನು ಕೊಟ್ಟನು. ಏನಂದರೆ
ಮಹನಾಯಿಮಿನಿಂದ ಬಾಶಾನಿನ ಅರಸನಾದ ಓಗನ ಸಮಸ್ತ ರಾ
ಜ್ಯವಾಗಿರುವ ಬಾಶಾನೆಲ್ಲವೂ ಬಾಶಾನಿನಲ್ಲಿರುವ ಯಾಯಿರನ
ಸಮಸ್ತ ಊರುಗಳಾದ ಅರವತ್ತು ಪಟ್ಟಣಗಳೂ ಅವರ ಮೇರೆಗೆ
೩೧ ಒಳಗಾದವು. ಮತ್ತು ಗಿಲ್ಯಾದಿನಲ್ಲಿ ಅರ್ಧವನ್ನೂ, ಬಾಶಾನಿನಲ್ಲಿ
ಅಷ್ಟರೋತು, ಎದ್ರೈ, ಎಂಬ ಓಗನ ರಾಜ್ಯದ ಪಟ್ಟಣಗಳನ್ನೂ
ಮನಸ್ಸೆಯ ಮಗನಾದ ಮಕೀರನ ಮಕ್ಕಳಿಗೆ, ಅವರ ಗೋತ್ರ
ಗಳ ಪ್ರಕಾರ ಮಕೀರನ ಮಕ್ಕಳಲ್ಲಿ ಅರ್ಧ ಜನಕ್ಕೆ ಕೊಟ್ಟನು.

೩೨ ಸೂರ್ಯೋದಯದ ದಿಕ್ಕಿನಲ್ಲಿ ಯೆರಿಕೋವಿನ ಬಳಿಯಲ್ಲಿ
ಹೀಗೆಯೇ ಮೋಶೆಯು ಯೊರ್ದನಿಗೆ ಆಚೆಯಲ್ಲಿರುವ ಮೋವಾ
33 ಬಿನ ಬೈಲುಗಳಲ್ಲಿ ಪಾಲು ಹಂಚಿದ ಬಾಧ್ಯತೆಗಳು ಇವೇ. ಆದ
ರೆ ಲೇವ್ಯನ ಕುಲಕ್ಕೆ ಮೋಶೆ ಬಾಧ್ಯತೆಯನ್ನು ಕೊಟ್ಟಿದ್ದಿಲ್ಲವು.
ಯಾಕಂದರೆ ಅವನು ಅವರಿಗೆ ಹೇಳಿದ ಪ್ರಕಾರ ಇಸ್ರಯೇಲ್ ದೇ
ವರಾದ ಕರ್ತನು ತಾವೇ ಅವರ ಬಾಧ್ಯತೆ.

## ೧೪. ಸಂಧಿ.

೧ ಆದರೆ ಯಾಜಕನಾದ ಎಲೆಯಾಜರನೂ, ನೂನನ ಮಗನಾ
ದ ಯೆಹೋಶುವನೂ, ಇಸ್ರಯೇಲ್ ಮಕ್ಕಳ ಕುಲಗಳ ತಂದೆಗಳ
ಯಜಮಾನರೂ ಅವರಿಗೆ ಬಾಧ್ಯತೆಯಾಗಿ ಕೊಡಲು, ಕಾನಾನ್
ದೇಶದಲ್ಲಿ ಇಸ್ರಯೇಲ್ ಮಕ್ಕಳು ಬಾಧ್ಯವಾಗಿ ಹೊಂದಿದ ದೇಶಗ
೨ ಳು ಇವೇ. ಅವರು ಕರ್ತನು ಮೋಶೆಯ ಮುಖಾಂತ್ರವಾಗಿ ಆ
ಜ್ಞಾಪಿಸಿದ ಹಾಗೆಯೇ, ಒಂಭತ್ತುವರೆ ಕುಲಗಳಿಗೆ ಚೀಟುಗಳನ್ನು
೩ ಹಾಕಿ, ಬಾಧ್ಯವಾಗಿ ಪಾಲು ಹಂಚಿದರು. ಯಾಕಂದರೆ ಮೋಶೆ
ಯೊರ್ದನಿಗೆ ಆಚೆ ಎರಡು ವರೆ ಕುಲಗಳಿಗೆ ಬಾಧ್ಯತೆಯನ್ನು ಕೊ
ಟ್ಟಿದ್ದನು. ಆದರೆ ಲೇವ್ಯರಿಗೆ ಅವರಲ್ಲಿ ಬಾಧ್ಯತೆಯನ್ನು ಕೊಡ
೪ ಲಿಲ್ಲ; ಯಾಕಂದರೆ ಯೋಸೆಫನ ಮಕ್ಕಳಾದ ಮನಸ್ಸೆಯೂ ಎ
ಫ್ರಯಿಮನೂ ಎರಡು ಕುಲಗಳಾಗಿದ್ದರು. ಅವರು ಲೇವ್ಯರಿಗೆ
ದೇಶದಲ್ಲಿ ಪಾಲು ಕೊಡಲಿಲ್ಲ; ವಾಸ ಮಾಡುವ ಪಟ್ಟಣಗಳನ್ನೂ,
ದನಗಳಿಗೋಸ್ಕರವಾಗಿಯೂ ಸ್ಥಿತಿಗಳಿಗೋಸ್ಕರವಾಗಿಯೂ
೫ ಪ್ರಾಂತ್ಯಗಳನ್ನೂ ಮಾತ್ರ ಕೊಟ್ಟರು. ಆದರೆ ಅವರು ಲೇವ್ಯರಿ
ಗೆ ಇಸ್ರಯೇಲ್ ಮಕ್ಕಳು ಕರ್ತನು ಮೋಶೆಗೆ ಆಜ್ಞಾಪಿಸಿದ ಪ್ರಕಾ
ರ ಮಾಡಿ, ದೇಶವನ್ನು ಪಾಲು ಹಂಚಿದರು.

೬ ಮತ್ತು ಯೆಹೂದನ ಮಕ್ಕಳು ಗಿಲ್ಗಾಲಿನಲ್ಲಿ ಯೆಹೋಶುವನ
ಬಳಿಗೆ ಕೇರಿದರು. ಆಗ ಕೆನಿಜ್ಯನಾದ ಯೆಫುನ್ನೆಯ ಮಗನಾದ
ಕಾಲೆಬನು ಅವನಿಗೆ ಹೇಳಿದ್ದೇನಂದರೆ, ಕಾದೆಷ್ ಬರ್ನೇಯದಲ್ಲಿ ಕ
ರ್ತನು ನನ್ನನ್ನೂ ನಿನ್ನನ್ನೂ ಕುರಿತು ದೇವರ ಮನುಷ್ಯನಾದ
೭ ಮೋಶೆಗೆ ಹೇಳಿದ ಮಾತನ್ನು ನೀನು ಬಲ್ಲಿ. ದೇಶವನ್ನು ಪಾಳ
ಲಿ ನೋಡ, ಕರ್ತನ ಸೇವಕನಾದ ಮೋಶೆ ನನ್ನನ್ನು ಕಾದೆಷ್ ಬ
ರ್ನೇಯದಿಂದ ಕಳುಹಿಸುವಾಗ, ನಾನು ನಾಲ್ವತ್ತು ವರುಷ ಪ್ರಾ
ಯದವನಾಗಿದ್ದೆನು. ಮತ್ತು ನನ್ನ ಹೃದಯದಲ್ಲಿ ಇದ್ದದರ ಹಾ
೮ ಗೆಯೇ, ಅವನಿಗೆ ತಿರಿಗಿ ತಕ್ಕೊಂಡು ಬಂದೆನು. ನನ್ನ ಸಂಗಡ
ಹೋಗಿ ಬಂದ ನನ್ನ ಸಹೋದರರು ಜನರ ಹೃದಯವನ್ನು ಕರ
ಗಿಸಿದರು. ಆದರೆ ನಾನು ನನ್ನ ದೇವರಾದ ಕರ್ತನನ್ನು ಪೂರ್ಣ
೯ ವಾಗಿ ಹಿಂಬಾಲಿಸಿದೆನು. ಆ ದಿವಸದಲ್ಲಿ ಮೋಶೆ ನನಗೆ, ನೀನು ನ

ನ್ನು ದೇವರಾದ ಕರ್ತನನ್ನು ಪೂರ್ಣ ಮನಸ್ಸಾಗಿ ಹಿಂಬಾಲಿಸಿ
ದ್ದರಿಂದ ನಿನ್ನ ಕಾಲು ತುಳಿದ ದೇಶ ನಿನಗೂ ನಿನ್ನ ಮಕ್ಕಳಿಗೂ
ಎಂದೆಂದಿಗೂ ಬಾಧ್ಯತೆಯಾಗಿರುವದು ಎಂದು, ಆಣೆ ಇಟ್ಟನು.
೧೦ ಈಗ, ಇಗೋ, ಕರ್ತನು ಮೋಶೆಗೆ ಈ ವಾಕ್ಯವನ್ನು ಹೇಳಿದಂ
ದಿನಿಂದ, ಇಸ್ರಯೇಲ್ ಮಕ್ಕಳು ಅರಣ್ಯದಲ್ಲಿ ಸಂಚರಿಸಿದ ನಾ
ಲ್ವತ್ತೈದು ವರುಷ, ಕರ್ತನು ಹೇಳಿದ ಹಾಗೆಯೇ ನನ್ನನ್ನು ಜೀ
ವದಿಂದ ಇಟ್ಟಿದ್ದಾನೆ. ಈಗ, ಇಗೋ, ನಾನು ಇಂದು ಎಂಭತ್ತೈ
೧೧ ದು ವರುಷ ಪ್ರಾಯದವನಾಗಿದ್ದೇನೆ. ಮೋಶೆ ನನ್ನನ್ನು ಕಳುಹಿ
ಸಿದ ದಿವಸದಲ್ಲಿ ನಾನು ಹ್ಯಾಗೆ ಬಲವಾಗಿ ಇದ್ದೆನೋ, ಹಾಗೆಯೇ
ಇದು ವರಿಗೂ ಬಲವಾಗಿದ್ದೇನೆ. ನಾನು ಯುದ್ಧಕ್ಕೂ, ಹೋಗಿ
ಬರುವದಕ್ಕೂ, ನನಗೆ ಆಗ ಇದ್ದ ಶಕ್ತಿಯ ಹಾಗೆಯೇ ಈಗಲೂ
೧೨ ಶಕ್ತಿಯುಳ್ಳವನಾಗಿದ್ದೇನೆ. ಆದದರಿಂದ ಕರ್ತನು ಆ ದಿವಸದಲ್ಲಿ
ಹೇಳಿದ ಈ ಬೆಟ್ಟವನ್ನು ಈಗ ನನಗೆ ಕೊಡು; ಯಾಕಂದರೆ ಅ
ಲ್ಲಿ ಅನಾಕ್ಯರು ಉಂಟೆಂದೂ, ಗೋಡೆಗಳುಳ್ಳ ದೊಡ್ಡ ಪಟ್ಟಣಗ
ಳುಂಟೆಂದೂ, ನೀನು ಆ ದಿವಸದಲ್ಲಿ ಕೇಳಿದಿ. ಕರ್ತನು ನನ್ನ ಸಂ
ಗಡ ಇದ್ದರೆ, ಕರ್ತನು ಹೇಳಿದ ಪ್ರಕಾರವೇ ನಾನು ಅವರನ್ನು
ಹೊರಡಿಸಿ ಬಿಡುವೆನು, ಅಂದನು.

೧೩ ಆಗ ಯೆಹೋಶುವ ಯೆಫುನ್ನೆಯ ಮಗನಾದ ಕಾಲೆಬನನ್ನು
ಆಶೀರ್ವದಿಸಿ, ಅವನಿಗೆ ಹೆಬ್ರೋನನ್ನು ಬಾಧ್ಯವಾಗಿ ಕೊಟ್ಟನು.
೧೪ ಹೀಗೆಯೇ ಕೆನೆಜ್ಯವಾದ ಯೆಫುನ್ನೆಯ ಮಗನಾದ ಕಾಲೆಬನು ಇ
ಸ್ರಯೇಲಿನ ದೇವರಾದ ಕರ್ತನನ್ನು ಪೂರ್ಣವಾಗಿ ಹಿಂಬಾಲಿಸಿ
ದ್ದರಿಂದ, ಹೆಬ್ರೋನು ಇಂದಿನ ವರಿಗೂ ಅವನ ಬಾಧ್ಯತೆಯಾಯಿ
೧೫ ತು. ಹೆಬ್ರೋನಿನ ಹೆಸರು ಮೊದಲು ಕಿರ್ಯತರ್ಬ; ಈ ಹೆಸರು
ಅನಾಕ್ಯರಲ್ಲಿ ಒಬ್ಬ ದೊಡ್ಡ ಮನುಷ್ಯನದು. ದೇಶವು ಯುದ್ಧ
ವಿಲ್ಲದೆ ಶಾಂತವಾಯಿತು.

## ೧೫. ಸಂಧಿ.

೧ ಇದ್ದಲ್ಲದೆ ಯೆಹೂದನ ಮಕ್ಕಳ ಕುಲಕ್ಕೆ ಅವರ ಗೋತ್ರಗಳ
ಪ್ರಕಾರ ಬಿಭಾಗಿಸಿದ ಮೇರೆ ಯಾವದಂದರೆ, ಕಟ್ಟ ಕಡೆಯಾದ
ದಕ್ಷಿಣ ಪಾರ್ಶ್ವದಲ್ಲಿ ಎದೋಮನ ಮೇರೆಯ ಅಂಚಾದ ಜೇನ್
ಅರಣ್ಯ ದಕ್ಷಿಣ ಭಾಗವಾದ ಅವರ ಮೇರೆ.
೨ ಉಪ್ಪು ಸಮುದ್ರದ ಕಡೆಯಲ್ಲಿ ದಕ್ಷಿಣ ಮುಖವಾಗಿರುವ ಕೊ
ನೆಯಿಂದ ದಕ್ಷಿಣ ಪಾರ್ಶ್ವದಲ್ಲಿರುವ ಮಾಲೆಯಕ್ರಾಬಿಯ ದಿಬ್ಬ
3 ಗಳಿಗೂ, ಅಲ್ಲಿಂದ ಜೀನಿಗೂ, ಅಲ್ಲಿಂದ ದಕ್ಷಿಣದಲ್ಲಿರುವ ಕಾದೆ
ಷ್ ಬರ್ನೇಯಕ್ಕೂ, ಅಲ್ಲಿಂದ ಹೆಜ್ರೋನನ್ನು ದಾಟಿ, ಅದ್ದಾರ
೪ ಕೂ, ಅಲ್ಲಿಂದ ಕರ್ಕಾವನ್ನು ಸುತ್ತಿ ಅಜ್ಮೊನಿಗೂ, ಅಲ್ಲಿಂದ ಐ
ಗುಪ್ತ್ಯದ ನದಿ ಹಿಡಿದು, ಸಮುದ್ರದ ಪರ್ಯಂತರ ಹೋಗಿ ಕೀ
ರುವದು. ಇದೇ ನಿಮ್ಮ ದಕ್ಷಿಣ ಮೇರೆ.
೫ ಮತ್ತು ಅದರ ಮೂಡಣ ಮೇರೆ ಯಾವದಂದರೆ, ಯೊರ್ದನಿ
ನ ಕೊನೆಯ ಮಟ್ಟಿಗಿರುವ ಉಪ್ಪು ಸಮುದ್ರವು.
ಉತ್ತರ ಪಾರ್ಶ್ವದ ಯೊರ್ದನಿನ ಮೇರೆ ಕೊನೆ ಹತ್ತಿರ
೬ ಸಮುದ್ರದ ಮುಖದ್ವಾರದಿಂದ ಇತ್ತು; ಅಲ್ಲಿಂದ ಬೇಥೊಗ್ಲಕ್ಕೂ,
ಅಲ್ಲಿಂದ ಉತ್ತರಕ್ಕಿರುವ ಬೇತಾರಬನ್ನು ದಾಟಿ, ರೂಬೆನನ ಮ
೭ ಗನಾದ ಬೊಹಾನನ ಕಲ್ಲಿಗೂ, ಅಲ್ಲಿಂದ ಆಕೋರ್ ತಗ್ಗನ್ನು ಬಿ
ಟ್ಟು ಕೆಬೀರಿಗೂ, ಉತ್ತರಕ್ಕೆ, ನದಿಗೆ ದಕ್ಷಿಣ ಪಾರ್ಶ್ವವಾದ ಅ
ದುಮ್ಮಿನ ದಿಬ್ಬೆಗೆ ಎದುರಾಗಿರುವ ಗಿಲ್ಗಾಲಿಗೂ, ಅಲ್ಲಿಂದ ಎನ್ಷೆ
೮ ಮೆಷಿನ ನೀರಿಗೂ, ಅಲ್ಲಿಂದ ಎನ್ರೋಗಲಿಗೂ, ಅಲ್ಲಿಂದ ಯೆಬೂ
ಸಿಯರು ವಾಸವಾಗಿರುವ ಯೆರೂಸಲೇಮಿಗೆ ದಕ್ಷಿಣ ಪಾರ್ಶ್ವವಾ
ಗಿ ಹಿನ್ನೋಮನ ತಗ್ಗನ್ನು ದಾಟಿ, ಉತ್ತರಕ್ಕಿರುವ ಯೆಬೂಸಿ
ಯರ ತಗ್ಗಿನ ಕಡೆಯಲ್ಲಿ ಪಶ್ಚಿಮಕ್ಕಾಗಿ ಹಿನ್ನೋಮನ ತಗ್ಗಿನ
ಮುಂದಿರುವ ಬೆಟ್ಟದ ಶಿಖರದ ವರಿಗೂ, ಆ ಬೆಟ್ಟದ ಶಿಖರದಿಂದ ನೆ
೯ ಫ್ತೋಹದ ನೀರಿನ ಬುಗ್ಗೆಗೂ, ಅಲ್ಲಿಂದ ಎಫ್ರೋನನ ಬೆಟ್ಟದ ಪಟ್ಟ
ಣಗಳಿಗೂ, ಅಲ್ಲಿಂದ ಕಿರ್ಯಾತ್ ಯಾರೀಮ್ ಅದ ಬಾಳಕ್ಕೂ,
೧೦ ಬಾಳದಿಂದ ಪಶ್ಚಿಮಕ್ಕಿರುವ ಸೇಯಿರ್ ಬೆಟ್ಟವನ್ನು ಸುತ್ತಿ, ಅಲ್ಲಿಂ
ದ ಉತ್ತರಕ್ಕಿರುವ ಕೆಸಲೋನಿನ ಯಾಯಿರನ ಬೆಟ್ಟದ ಪಾ
ರ್ಶ್ವಕ್ಕೂ, ಅಲ್ಲಿಂದ ಬೇತ್‌ಷೆಮೆಷಿಗೆ ಇಳಿದು, ತಿಮ್ನಾತಿಗೂ, ಅ
೧೧ ಲ್ಲಿಂದ ಉತ್ತರಕ್ಕಿರುವ ಎಕ್ರೋನಿನ ಪಾರ್ಶ್ವವನ್ನು ಹಿಡಿದು, ಷಿ
ಕ್ಕೆರೋನಿಗೂ, ಅಲ್ಲಿಂದ ಬಾಳ ಬೆಟ್ಟವನ್ನು ದಾಟಿ, ಯಬ್ನೇಲಿಗೆ
ಹೊರಟು, ಸಮುದ್ರಕ್ಕೆ ಕಡೆಯಾಗುವದು.
೧೨ ಪಡುವ ಮೇರೆ ದೊಡ್ಡ ಸಮುದ್ರವು.
ಇದೇ ಯೆಹೂದನ ಮಕ್ಕಳಿಗೆ ಅವರ ಗೋತ್ರಗಳ ಪ್ರಕಾರ
೧೩ ಉಂಟಾದ ಸುತ್ತಲಿರುವ ಮೇರೆ. ಇದಲ್ಲದೆ ಯೆಹೋಶುವ ಕರ್ತ
ನು ತನಗೆ ಆಜ್ಞಾಪಿಸಿದ ಪ್ರಕಾರ ಯೆಫುನ್ನೆಯ ಮಗನಾದ ಕಾಲೆ
ಬನಿಗೆ ಅನಾಕನ ತಂದೆಯ ಕಿರ್ಯಾತ್ ಅರ್ಬ ಎಂಬ ಹೆಬ್ರೋನ
ನ್ನು ಯೆಹೂದನ ಮಕ್ಕಳ ನಡುವೆ ಪಾಲಾಗಿ ಕೊಟ್ಟನು. ಆಗ
೧೪ ಕಾಲೆಬನು ಅಲ್ಲಿಂದ ಅನಾಕನ ಮೂವರು ಮಕ್ಕಳಾದ ಶೆಷಾಯಿ,
ಅಹಿಮಾನ್, ತಲ್ಮಾಯರನ್ನು ಹೊರಡಿಸಿ ಬಿಟ್ಟನು. ಮತ್ತು ಕಾ
ಲೆಬನು ಅಲ್ಲಿಂದ ಹೊರಟು, ಯಾವನು ಪೂರ್ವದಲ್ಲಿ ಕಿರ್ಯತ
ಸೇಫೆರ್ ಎಂಬ ಹೆಸರು ಉಂಟಾಗಿದ್ದ ದೆಬೀರಿನ ವಾಸಿಗಳ ಬಳಿಗೆ
೧೫ ಹೋಗಿ, ಅವನು ಕಿರ್ಯತ್ ಸೇಫೆರನ್ನು ಹೊಡೆದು, ಹೆಡಿಯೆಬ
ನೋ, ಅವನಿಗೆ ನನ್ನ ಮಗಳಾದ ಅಕ್ಷಳನ್ನು ಮದುವೆ ಮಾಡಿ
೧೬ ಕೊಡುವೆನು, ಎಂದು ಹೇಳಿದನು. ಆಗ ಕಾಲೆಬನ ಸಹೋದರನಾ
ದ ಕೆನಾಜನ ಮಗನು ಒತ್ನಿಯೇಲನು ಅದನ್ನು ಹಿಡಿದನು. ಅವ
೧೭ ನು ತನ್ನ ಮಗಳಾದ ಅಕ್ಷಳನ್ನು ಅವನಿಗೆ ಮದುವೆ ಮಾಡಿ ಕೊ
ಟ್ಟನು. ಅವಳು ಬಂದಾಗ, ತನ್ನ ತಂದೆಯನ್ನು ಒಂದು ಹೊಲವ
ನ್ನು ಕೇಳುವದಕ್ಕೆ ಅವನನ್ನು ಪ್ರೇರೇಪಿಸಿ, ತಾನು ಕತ್ತೆಯ ಮೇ
ಲಿನಿಂದ ಇಳಿದಳು. ಆಗ ಕಾಲೆಬನು ಅವಳನ್ನು ಸೋಡಿ, ನಿನಗೆ
೧೮ ಏನು ಬೇಕು! ಅಂದನು. ಅದಕ್ಕೆ ಅವಳು, ನನಗೆ ಬಂದು ಆಶೀ
ರ್ವಾದ ಕೊಡು; ಯಾಕಂದರೆ ನನಗೆ ಮೊದಲು ದಕ್ಷಿಣ ಭೂಮಿ
ಯನ್ನು ಕೊಟ್ಟೀ, ನೀರು ಬುಗ್ಗೆಗಳನ್ನು ನನಗೆ ಕೊಡು, ಅಂದಳು.
ಆಗಲವನು ಅವಳಿಗೆ ಮೇಲ್ಭಾಗದಲ್ಲಿಯೂ ಕೆಳ ಭಾಗದಲ್ಲಿಯೂ
೧೯ ನೀರು ಬುಗ್ಗೆಗಳನ್ನು ಕೊಟ್ಟನು.
೨೦ ಯೆಹೂದನ ಮಕ್ಕಳ ಕುಲಕ್ಕೆ ಅವರ ಗೋತ್ರಗಳ ಪ್ರಕಾರ
೨೧ ಉಂಟಾದ ಸ್ವಾಸ್ತ್ಯವೇನಂದರೆ—ಕಟ್ಟ ಕಡೆಯ ದಕ್ಷಿಣ ಪಾರ್ಶ್ವ
ವಾದ ಎದೋಮಿನ ಮೇರೆಗೆ ಸರಿಯಾಗಿ ಯೆಹೂದನ ಮಕ್ಕಳ
೨೨ ಕುಲಕ್ಕೆ ಇರುವ ಪಟ್ಟಣಗಳು ಯಾವವಂದರೆ—ಕಬ್ಜೇಲ್, ಏದೆರ್,
ಯಾಗೂರ್, ಕೀನ, ದಿಮೋನ, ಅದಾದ, ಕೇದೆಷ್, ಹಜೋರ್,
ಇತ್ನಾನ್, ಜೀಫ್, ಟೆಲೆಮ್, ಬೆಯಲೋತ್, ಹಜೋರ್, ಹದಾದ,
ಕಿರ್ಯೋತ್, ಹೆಜ್ರೋರ್, ಎಂಬುವ ಹಜೋರ್, ಅಮಾಮ್, ಶೆ
ಮ, ಮೋಲದ, ಹಜರ್‌ಗದ್ದ, ಹೆಷ್ಮೋನ್, ಬೇತ್ಪೆಲೆಟ, ಹಜರ್
ಶುವಲ್, ಬೇರ್ಷಬ, ಬಿಜ್ಯೋತ್ಯ, ಬಾಳ, ಯೀಯೀಮ್, ಅಚೆಮ್



೩೦ ಎಲ್ತೋಲದ್, ಕೆಸಿಲ್, ಹೊರ್ಮ, ಚಿಕ್ಲಗ್, ಮದ್ಮನ, ಸನ್ಸನ,
೩೧ ಲೆಬಾಯೋತ್, ಷಿಲೀಮ್, ಅಯಿನ್, ರಿಮ್ಮೋನ್, ಎಂಬುವುಗಳೇ; ಪಟ್ಟ
೩೨ ಗಳೆಲ್ಲಾ ಇಪ್ಪತ್ತೊಂಭತ್ತು; ಮತ್ತು ಅವುಗಳ ಗ್ರಾಮಗಳು.
೩೩ ತಗ್ಗಿನ ದೇಶದಲ್ಲಿರುವ ಎಷ್ಟೌಲ್, ಜೊರೆಯ, ಅಷ್ನ,
೩೪ ಜನೋಹ, ಎಂಗನ್ನೀಮ್, ತಪ್ಪೂಹ, ಏನಾಮ್, ಯೆರ್ಮೂತು,
೩೫ ಅದುಲ್ಲಮ್, ಸೋಕೊ, ಅಜೇಕ, ಷಾರಯಿಮ್, ಅದಿತಾಯಿಮ್,
೩೬ ಗೆದೇರ, ಗೆದೆರೋತಾಯಿಮ್, ಎಂಬ ಹದಿನಾಲ್ಕು ಪಟ್ಟಣಗಳು; ಮ
೩೭ ತ್ತು ಅವುಗಳ ಗ್ರಾಮಗಳು. ಮತ್ತು ಚೇನಾನ್, ಹದಾಷ, ಮಿಗ್ದ
೩೮ ಲ್‌ಗಾದ್, ದಿಳ್ಳಾನ್, ಮಿಚ್ಪೆ, ಯೊಕ್ತೇಲ್, ಲಕೀಷ್, ಬೊಚ್ಕತ್, ಎ
೩೯ ಗ್ಲೋನ್, ಕಬ್ಬೋನ್, ಲಹ್ಮಾಮ್, ಕಿತ್ಲೀಷ್, ಗೆದೆರೋತ್, ಬೇತ್
೪೦, ೪೧ ದಾಗೊನ್, ನಾಮಮ, ಮಕ್ಕೇದ, ಎಂಬ ಹದಿನಾರು ಪಟ್ಟಣಗಳೂ,
೪೦ ಅವುಗಳ ಗ್ರಾಮಗಳೂ. ಇದಲ್ಲದೆ ಲಿಬ್ನ, ಎತೆರ್, ಆಶಾನ್,
೪೩ ಇಫ್ತ, ಅಷ್ನ, ನೆಚೀಬ್, ಕೆಯೀಲಾ, ಅಕ್ಜೀಬ್, ಮಾರೇಷ,
೪೪ ಎಂಬ ಒಂಭತ್ತು ಪಟ್ಟಣಗಳು; ಮತ್ತು ಅವುಗಳ ಗ್ರಾಮಗಳು.
೪೫, ೪೬ ಮತ್ತು ಎಕ್ರೋನ್, ಅದರ ಪಟ್ಟಣಗಳೂ ಗ್ರಾಮಗಳೂ ಸಹ. ಮ
ತ್ತು ಎಕ್ರೋನಿನಿಂದ ಸಮುದ್ರದ ಪರ್ಯಂತರ ಅಶ್ದೊದಿನ ಬಳಿ
ಯಲ್ಲಿರುವ ಸಮಸ್ತ ಗ್ರಾಮಗಳೂ; ಮತ್ತು ಅಶ್ದೊಡ್, ಅದರ
೪೭ ಪಟ್ಟಣಗಳೂ ಗ್ರಾಮಗಳೂ; ಗಾಜವು, ಅದರ ಪಟ್ಟಣಗಳೂ, ಅದರ
ಗ್ರಾಮಗಳೂ; ಐಗುಪ್ತದ ನದಿ, ದೊಡ್ಡ ಸಮುದ್ರ, ಅದರ ಮೇರೆ,
ಇವುಗಳ ಮಟ್ಟಿಗೂ.
೪೮ ಮತ್ತು ಬೆಟ್ಟಗಳಲ್ಲಿರುವ ಷಮಿರ್, ಯತ್ತೀರ್, ಸೋಕೊ,
೪೯ ದನ್ನ, ಕೆಬೀರ್ ಎಂಬ ಕೀರ್ಯತ್‌ಸನ್ನ, ಅನಾಬ್, ಎಷ್ಟೆಮೋ,
೫೦ ಅನೀಮ್, ಗೋಷೆರ್, ಹೋಲೋನ್, ಗಿಲೋ ಎಂಬ ಹನ್ನೊಂದು
೫೧ ಪಟ್ಟಣಗಳು; ಮತ್ತು ಅವುಗಳ ಗ್ರಾಮಗಳು. ಆರಾಬ್, ದೂಮ, ಎ
೫೨, ೫೩ ಷಾನ್, ಯಾನೂಮ್, ಬೇತ್ತಪೂಹ, ಅಫೇಕ, ಹುಮ್ಟ, ಹೆಬ್ರೋ
೫೪ ನು ಎಂಬ ಕಿರ್ಯತ್ ಅರ್ಬ, ಚೀಯೋರ್ ಎಂಬ ಒಂಭತ್ತು ಪಟ್ಟ
ಗಳು; ಮತ್ತು ಅವುಗಳ ಗ್ರಾಮಗಳು. ಮತ್ತು ಮಾವೋನ್,
೫೫, ೫೬ ಕರ್ಮೇಲ್, ಜೀಫ್, ಯುಟ್ಟ, ಇಜ್ರೆಲ್, ಯೊಗ್ದಿಯಮ್, ಜನೋ
೫೭ ಹ, ಕಾಯಿನ್, ಗಿಬೆಯ, ತಿಮ್ನ, ಎಂಬ ಹತ್ತು ಪಟ್ಟಣಗಳು; ಮ
೫೮ ತ್ತು ಅವುಗಳ ಗ್ರಾಮಗಳು. ಹಲ್ಹೂಲ್, ಬೇಟ್ಚೂರ್, ಗಿದೋರ್;
೫೯ ಮಾರತ್, ಬೇತಾನೋತ್, ಎಲ್ತೆಕೋನ್ ಎಂಬ ಆರು ಪಟ್ಟಣಗಳು,
೬೦ ಮತ್ತು ಅವುಗಳ ಗ್ರಾಮಗಳು. ಕಿರ್ಯಾತ್ ಯಾರಿಮ್ ಎಂಬ
ಕಿರ್ಯಾತ್ ಬಾಳ್, ರಬ್ಬ ಎಂಬ ಎರಡು ಪಟ್ಟಣಗಳು. ಮತ್ತು ಅ
ವುಗಳ ಗ್ರಾಮಗಳು.
೬೧ ಮತ್ತು ಅರಣ್ಯದಲ್ಲಿರುವ ಬೇತಾರಬ, ಮಿದ್ದಿನ್, ಸೆಕಾಕ, ನಿ
ಬ್ಷಾನ್, ಉಪ್ಪು ಪಟ್ಟಣಪು, ಎಂಗೇದಿ ಎಂಬ ಆರು ಪಟ್ಟಣಗಳು; ಮ
ತ್ತು ಅವುಗಳ ಗ್ರಾಮಗಳು.
೬೨ ಆದರೆ ಯೆರೂಸಲೇಮಿನಲ್ಲಿ ವಾಸವಾಗಿದ್ದ ಯೆಬೂಸ್ಯರನ್ನು
ಯೆಹೂದ ಮಕ್ಕಳು ಹೊರಡಿಸಿ ಬಿಡ ಕೂಡದೆ ಹೋಯಿತು.
ಆದದರಿಂದ ಈ ದಿವಸದ ವರಿಗೂ ಯೆಬೂಸ್ಯರು ಯೆಹೂದನ
ಮಕ್ಕಳ ಸಂಗಡ ಯೆರೂಸಲೇಮಿನಲ್ಲಿ ವಾಸವಾಗಿದ್ದಾರೆ.

## ೧೬. ಸಂಧಿ.

೧ ಯೋಸೆಫನ ಮಕ್ಕಳಿಗೆ ಚೀಟು ಬಿದ್ದ ಪ್ರಕಾರ ಉಂಟಾದ
ಸ್ವಾಸ್ತ್ಯದ ಭೂಮಿ ಯಾವದಂದರೆ, ಯೆರಿಕೋವಿನ ಬಳಿಯಲ್ಲಿ
ರುವ ಯೊರ್ದನಿನಿಂದ ಮೂಲ್ಲಲ್ಲಿರುವ ಯೆರಿಕೋವಿನ ಜಲದ ಪ
ರ್ಯಂತರಕ್ಕೂ ಮತ್ತು ಬೇತೆಲಿನ ಬೆಟ್ಟಗಳ ಮಟ್ಟಿಗೂ ಇರು
೨ ವ ಅರಣ್ಯದ ಮಾರ್ಗವಾಗಿ ಹೋಗಿ, ಬೇತೆಲಿಂದ ಊಜಿಗೂ,
3 ಅಲ್ಲಿಂದ ಅರ್ಕಿಯ ಮೇರೆಯಾದ ಅಟಕೋತನ್ನು ದಾಟಿ, ಪಶ್ಚಿ
ಮಕ್ಕೆ ಯಫ್ಲೇಟಿಯರ ಮೇರೆಗೂ, ಕೆಳಗಡೆಯಾದ ಬೇಥೊ
ರೋನ್ ಮೇರೆಯ ಪರ್ಯಂತರಕ್ಕೂ, ಅಲ್ಲಿಂದ ಗೆಜೆರಿನ ಮಟ್ಟಿ
೪ ಗೂ ಹೋಗಿ, ಸಮುದ್ರಕ್ಕೆ ತೀರುವದು. ಇದನ್ನು ಯೋಸೆಫನ
ಮಕ್ಕಳಾದ ಮನಸ್ಸೆ ಎಫ್ರಯಿಮರು ಬಾಧ್ಯವಾಗಿ ತೆಗೆದು ಕೊಂ
ಡರು.
೫ ಮತ್ತು, ಅವರ ಗೋತ್ರಗಳ ಪ್ರಕಾರ ಎಫ್ರಯಿಮ್ ಮಕ್ಕಳ
ಮೇರೆ ಏನಂದರೆ, ಕೆಳಗಡೆಯಾದ ಮೂಲ್ಲು ಮೇರೆಯು ಅಟಕೋ
೬ ತ ಆಸರ ಪ್ರಾರಂಭಿಸಿ, ಮೇಲ್ಗಡೆಯಾದ ಪಶ್ಚಿಮದ ಮೇರೆ ಬೇ
೭ ಥೊರೋನಿನ ವರಿಗೂ ಹೋಗುವದು. ಪಶ್ಚಿಮದ ಮೇರೆ ಮಿಕ್ತೆ
ತಾತಿನಿಂದ ಉತ್ತರಕ್ಕೆ ಹೊರಟು, ಮೂಡಣಕ್ಕೆ ತಾನಾತ್ಷಿಲೋವಿ
ಗೆ ತಿರುಗಿ ಯೆನೋಹಕ್ಕೆ ಮೂಡಣ ಕಡೆಯಾಗಿ ಹಾದು ಹೋ
೮ ಗಿ, ಯನೋಹದಿಂದ ಅಟಕೋತಿಗೂ ನವಾರಕ್ಕೂ ಇಳಿದು, ಯೆ
ರಿಕೋವಿನ ಬಳಿಯಲ್ಲಿ ಬಂದು, ಯೊರ್ದನಿಗೆ ತೀರುವದು. ತ
ಪ್ಪೂಹದಿಂದ ಪಶ್ಚಿಮದ ಮೇರೆ ಕಾನ ನದಿಗೆ ಹೋಗಿ, ಸಮುದ್ರದ
ಲ್ಲಿ ತೀರುವದು. ಇದು ಎಫ್ರಯಿಮನ ಮಕ್ಕಳ ಕುಲಕ್ಕೆ ಅವರ
೯ ಗೋತ್ರಗಳ ಪ್ರಕಾರವೇ ಉಂಟಾದ ಬಾಧ್ಯತೆ. ಮತ್ತು ಎಫ್ರಯಿಮಾ
ಮನ ಮಕ್ಕಳಿಗೆ ಕೊಡಲ್ಪಟ್ಟ ಎಲ್ಲಾ ಪಟ್ಟಣಗಳೂ ಅವುಗಳ ಗ್ರಾ
ಮಗಳೂ ಮನಸ್ಸೆಯ ಮಕ್ಕಳ ಬಾಧ್ಯತೆಯಲ್ಲಿದ್ದವು. ಮತ್ತು
ಗೇಜರಿನಲ್ಲಿ ವಾಸವಾಗಿದ್ದ ಕನಾನ್ಯರನ್ನು ಹೊರಡಿಸಿ ಬಿಡದೆ ಹೋ
ದದರಿಂದ, ಕನಾನ್ಯರು ಈ ವರಿಗೂ ಅವರಲ್ಲಿ ವಾಸವಾಗಿದ್ದು, ಕ
ಪ್ಪ ಕೊಡುವ ಸೇವಕರಾಗಿದ್ದಾರೆ.

## ೧೭. ಸಂಧಿ.

೧ ಇದಲ್ಲದೆ ಮನಸ್ಸೆಯ ಕುಲಕ್ಕೂ ಭಾಗ ಉಂಟಾಯಿತು.
ಯಾಕಂದರೆ ಅವನು ಯೋಸೆಫನಿಗೆ ಚೊಚ್ಚಲ ಮಗನಾಗಿದ್ದ
ನು. ಮನಸ್ಸೆಯ ಹಿರಿಯ ಮಗನಾದ ಗಿಲ್ಯಾದನ ತಂದೆಯಾದ
ಮಕೀರನು ಶೂರನಾದದರಿಂದ ಗಿಲ್ಯಾದೂ ಬಾಶಾನೂ ಅವನ ಪಾ
ಲಿಗೆ ಬಂದವು. ಮತ್ತು ಮನಸ್ಸೆಯ ಇತರ ಮಕ್ಕಳಾದ ಅಬಿಯೇ
ಜರನ ಮಕ್ಕಳಿಗೂ, ಹೇಲೆಕನ ಮಕ್ಕಳಿಗೂ, ಅಸ್ರಿಯೇಲಿನ ಮಕ್ಕ
ಳಿಗೂ, ಶೆಕೆಮನ ಮಕ್ಕಳಿಗೂ, ಹೇಫೆರನ ಮಕ್ಕಳಿಗೂ, ಶೆಮಿದಾ
ನನ ಮಕ್ಕಳಿಗೂ, ಅವರ ಗೋತ್ರಗಳಿಗೆ ತಕ್ಕ ಬಾಧ್ಯತೆ ಉಂಟಾ
ಯಿತು. ಇವರು ತಮ್ಮ ಗೋತ್ರಗಳ ಪ್ರಕಾರ ಯೋಸೆಫನ ಮ
ಗನಾದ ಮನಸ್ಸೆಯ ಗಂಡು ಮಕ್ಕಳಾದವರು.
3 ಆದರೆ ಮನಸ್ಸೆಯ ಮಗನಾದ ಮಕೀರನ ಮಗನಾದ ಗಿಲ್ಯಾದ
ನ ಮಗನಾದ ಹೇಫೆರನ ಮಗನಾದ ಚೆಲೊಫಾದನಿಗೆ ಕುಮಾರ
ರಿಲ್ಲ; ಅದರೆ ಮಹಲ, ನೊವ, ಹೊಗ್ಲ, ಮಿಲ್ಕ, ತಿರ್ಚ ಎಂಬುವ
೪ ಕುಮಾರ್ತೆಗಳು ಇದ್ದರು. ಇವರು ಯಾಜಕನಾದ ಎಲೆಯಾ
ಜರನ ಬಳಿಗೂ, ನೂನನ ಮಗನಾದ ಯೆಹೋಶುವನ ಬಳಿಗೂ,
ಪ್ರಭುಗಳ ಬಳಿಗೂ ಬಂದು, ಅವರಿಗೆ ನಮ್ಮ ಸಹೋದರರಲ್ಲಿ ನಮ
ಗೆ ಬಾಧ್ಯತೆಯನ್ನು ಕೊಡ ಕರ್ತನು ಮೋಶೆಗೆ ಆಜ್ಞಾಪಿಸಿದನು,
ಅಂದರು. ಆದದರಿಂದ ಅವರ ತಂದೆಗಳ ಸಹೋದರರ ಮಧ್ಯದಲ್ಲಿ

ಅವರಿಗೆ ಕರ್ತನ ವಾಕ್ಯದ ಹಾಗೆಯೇ ಬಾಧ್ಯತೆಯನ್ನು ಕೊಟ್ಟನು.

೫ ಇದಲ್ಲದೆ ಮನಸ್ಸೆಯ ಕುಮಾರ್ತೆಗಳು ಅವನ ಕುಮಾರರಲ್ಲಿ ಬಾಧ್ಯತೆಯನ್ನು ಹೊಂದಿದ್ದರಿಂದ, ಯೊರ್ದನಿಗೆ ಆಚೆಯಲ್ಲಿರುವ ಗಿಲ್ಯಾದೂ ಬಾಶಾನೂ ಎಂಬ ದೇಶಗಳ ಹೊರ್ತು, ಮನಸ್ಸೆ
೬ ಗೆ ಚೀಟಿನಲ್ಲಿ ಬಿದ್ದ ದೇಶ ಹತ್ತು ಪಾಲಾಯಿತು. ಅದರೆ ಮನಸ್ಸೆಯ ಇತರ ಮಕ್ಕಳಿಗೆ ಗಿಲ್ಯಾದ್ ದೇಶ ಉಂಟಾಯಿತು.

೭ ಮನಸ್ಸೆಯ ಮೇರೆ ಯಾವದಂದರೆ, ಆಶೇರಿನಿಂದ ಕೆಕೆಮಿನ ಮುಂದಿರುವ ಮಿಕ್ತೆತಾಶಿಗೂ, ಅಲ್ಲಿಂದ ಬಲ ಪಾರ್ಶ್ವವಾಗಿ ಎತ್ತಪ್ಪೂಹದ ನಿವಾಸಗಳಿಗೆ ಹೋಗುವದು. ತಪ್ಪೂಹ ಭೂಮಿ ಮನ
೮ ಸ್ಸೆಯದಾಗಿತ್ತು. ಅದರೆ ಮನಸ್ಸೆಯ ಮೇರೆಯಲ್ಲಿರುವ ತಪ್ಪೂಹ ಎಫ್ರಯಿಮನ ಮಕ್ಕಳದಾಗಿತ್ತು. ಮತ್ತು ಆ ಮೇರೆ ಕಾನನದಿಯ ದಕ್ಷಿಣಕ್ಕೆ ನದಿಯ ಮಟ್ಟಿಗೂ ಇಳಿದು ಹೋಗುವದು. ಅಲ್ಲಿರುವ ಮನಸ್ಸೆಯ ಪಟ್ಟಣಗಳಲ್ಲಿ ಕೆಲವು ಪಟ್ಟಣಗಳು ಎಫ್ರಯಿಮನವಾಗಿದ್ದವು. ಮನಸ್ಸೆಯ ಮೇರೆಯು ನದಿಯ ಉತ್ತರಕ್ಕಿರುವ ಸಮು
೯ ದ್ರದ ಪರ್ಯಂತರಕ್ಕೂ ಹೋಗಿರುವದು. ನದಿಯ ದಕ್ಷಿಣ ಪೀಮೆ ಎಫ್ರಯಿಮನದು; ಉತ್ತರ ಪೀಮೆಯು ಮನಸ್ಸೆಯದು; ಸಮುದ್ರವು ಅದರ ಮೇರೆಯಾಗಿರುವದು. ಉತ್ತರಕ್ಕೆ ಇರುವ ಅ
೧೦ ಶೇರಿನಿಂದ ಪೂರ್ವಕ್ಕೆ ಇರುವ ಇಸ್ಸಾಕಾರನ ಪರ್ಯಂತರ ಹೋಗಿ, ಇಸ್ಸಾಕಾರನ ಮಧ್ಯದಲ್ಲಿಯೂ ಆಶೇರನ ಮಧ್ಯದಲ್ಲಿಯೂ ಇರುವ ಮೂರು ಪೀಮೆಗಳಾದ ಬೇತ್ಶೆಯನೂ ಅದರ ಗ್ರಾಮಗಳೂ, ಇಬ್ಲೆಯಮೂ ಅದರ ಗ್ರಾಮಗಳೂ, ದೋರೂ ಅದರ ಗ್ರಾ
೧೧ ಮಗಳೂ, ಎಂದೋರೂ ಅದರ ಗ್ರಾಮಗಳೂ, ತಾಣಕವೂ ಅದರ ಗ್ರಾಮಗಳೂ, ಮಿಗಿದ್ದೋನೂ ಅದರ ಗ್ರಾಮಗಳೂ, ಇವು
೧೨ ಮನಸ್ಸೆಯವು. ಅದರೆ ಮನಸ್ಸೆಯ ಮಕ್ಕಳು ಆ ಪಟ್ಟಣಗಳ ವಾಸಿಗಳಾದ ಕನಾನ್ಯರನ್ನು ಹೊರಡಿಸ ಕೂಡದೆ ಹೋಯಿತು. ಯಾಕಂದರೆ ಕನಾನ್ಯರು ಆ ಪೀಮೆಯಲ್ಲೇ ವಾಸವಾಗಿರ ಮನ
೧೩ ಸ್ಸಾಗಿದ್ದರು. ಅದರೆ ಇಸ್ರಯೇಲ್ ಮಕ್ಕಳು ಬಲಿಷ ಕೊಂಡಾಗ, ಕನಾನ್ಯರನ್ನು ಹೊರಡಿಸೇ ಹೊರಡಿಸದೆ, ಅವರನ್ನು ಕಪ್ಪ ಕೊಡುವವರಾಗ ಮಾಡಿ ಕೊಂಡರು.

೧೪ ಮತ್ತು ಯೋಸೆಫನ ಮಕ್ಕಳು ಯೆಹೋಶುವನ ಸಂಗಡ ಮಾತಾಡಿ, ಹೇಳಿದ್ದೇನಂದರೆ, ಕರ್ತನು ನನ್ನನ್ನು ಈ ವರಿಗೂ ಆಶೀರ್ವದಿಸುತ್ತಾ ಬಂದದ್ದರಿಂದ, ನಾನು ಬಹು ಜನ. ಹೀಗಿರುವಾಗ, ನೀನು ನಮಗೆ ಬಾಧ್ಯತೆಯಾಗಿ ಒಂದೇ ಭಾಗವನ್ನೂ ಒಂದೇ ಪಾಲ
೧೫ ನ್ನೂ ಕೊಟ್ಟದ್ದು ಯಾಕೆ? ಅಂದರು. ಅದಕ್ಕೆ ಯೆಹೋಶುವ ಅವರಿಗೆ, ನೀನು ಬಹು ಜನವಾದರೆ, ನೀವು ಪೆರಿಜ್ಜಿಯರ, ರಾಕ್ಷಸರ ದೇಶದಲ್ಲಿರುವ ಅಡವಿಗೆ ಹೋಗಿ, ಅದನ್ನು ಕಡಿದು, ನಿನಗೋಸ್ಕರ ಸ್ಥಳ ಮಾಡಿ ಕೊಳ್ಳ.
೧೬ ನಿನಗೆ ಎಫ್ರಯಿಮಿನ ಪರ್ವತವು ಇಕ್ಕಟ್ಟಾಗಿದೆಯಲ್ಲ, ಅಂದನು. ಅದಕ್ಕೆ ಯೋಸೆಫನ ಮಕ್ಕಳು, ಆ ಪರ್ವತವು ನಮಗೆ ಸಾಲದು. ಇದಲ್ಲದೆ ತಗ್ಗಿನ ಪೀಮೆಯಲ್ಲಿ ಇರುವ ಬೇತ್ಶೆಯನಲ್ಲಿಯೂ ಅದರ ಊರುಗಳಲ್ಲಿಯೂ ಇಜ್ರೇ
೧೭ ಲಿನ ತಗ್ಗಿನಲ್ಲಿಯೂ ವಾಸಿಸಿರುವ ಸಮಸ್ತ ಕನಾನ್ಯರ ಬಳಿಯಲ್ಲಿ ಕಬ್ಬಿಣದ ರಥಗಳು ಉಂಟು, ಅಂದರು. ಆಗ ಯೆಹೋಶುವ ಯೋಸೆಫನ ಮಕ್ಕಳಾದ ಎಫ್ರಯಿಮನಿಗೂ ಮನಸ್ಸೆಗೂ ಹೇಳಿದ್ದೇನಂದರೆ, ನೀನು ಬಹು ಜನ, ನಿನಗೆ ಮಹಾ ಶಕ್ತಿ ಉಂಟು.
೧೮ ಒಂದೇ ಭಾಗ ನಿನಗೆ ಇರ ಬಾರದು. ಪರ್ವತವು ನಿನ್ನದಾಗಿರುವದು; ಯಾಕಂದರೆ ಅದು ಅಡವಿಯಾಗಿದೆ; ಅದನ್ನು ನೀನು ಕಡಿಯ ಬೇಕು. ಅದರ ಅಂತ್ಯಗಳ ಮಟ್ಟಿಗೂ ನಿನ್ನದಾಗಿರುವದು. ಯಾಕಂದರೆ ಕಬ್ಬಿಣದ ರಥಗಳಿದ್ದರೂ, ಅವರು ಬಲಿಷ್ಠರಾಗಿದ್ದರೂ, ನೀನು ಅವರನ್ನು ಹೊರಡಿಸಿ ಬಿಡುವಿ, ಅಂದನು.

## ೧೮. ಸಂಧಿ.

೧ ಮತ್ತು ಇಸ್ರಯೇಲ್ ಮಕ್ಕಳ ಸಭೆಯೆಲ್ಲಾ ಶಿಲೋವಿನಲ್ಲಿ ಕೂಡಿ, ಅಲ್ಲಿ ಸಭೆಯ ಗುಡಾರವನ್ನು ನಿಲ್ಲಿಸಿದರು. ದೇಶವು ಅವ
೨ ರ ವಶವಾಯಿತು. ಅದರೆ ಇಸ್ರಯೇಲ್ ಮಕ್ಕಳಲ್ಲಿ ತಮ್ಮ ಬಾಧ್ಯತೆಯನ್ನು ಪಾಲಿಟ್ಟು ಕೊಳ್ಳದ ಏಳು ಕುಲಗಳು ಉಳಿದಿದ್ದವು.
೩ ಯೆಹೋಶುವ ಇಸ್ರಯೇಲ್ ಮಕ್ಕಳಿಗೆ ಹೇಳಿದ್ದೇನಂದರೆ, ನಿಮ್ಮ ತಂದೆಗಳ ದೇವರಾದ ಕರ್ತನು ನಿಮಗೆ ಕೊಟ್ಟ ದೇಶವನ್ನು ಸ್ವತಂತ್ರಿಸಿ ಕೊಳ್ಳುವದಕ್ಕೆ ನೀವು ಎಷ್ಟು ವರಿಗೂ ಲಲ್ಯ ಮಾಡುವಿರಿ? ಕುಲಕ್ಕೆ ಮೂರು ಮಂದಿಯ ಪ್ರಕಾರ ನಿಮ್ಮಲ್ಲಿ ಮನುಷ್ಯರನ್ನು ತೆಗೆದು ಕೊಳ್ಳಿರಿ; ಅವರನ್ನು ಕಳುಹಿಸುವೆನು; ಅವರು ಎದ್ದು,
೪ ಹೋಗಿ, ದೇಶದಲ್ಲಿ ಸಂಚರಿಸಿ, ತಮ್ಮ ಬಾಧ್ಯತೆಗಳ ವೈನವನ್ನು ಬರೆದು, ನನ್ನ ಬಳಿಗೆ ತಕ್ಕೊಂಡು ಬರ ಬೇಕು. ಅದನ್ನು ಅವರು ಏಳು ಪಾಲಾಗಿ ಹಂಚ ಬೇಕು. ಯೆಹೂದ ದಕ್ಷಿಣದಲ್ಲಿರುವ ತಮ್ಮ ಮೇರೆಯಲ್ಲಿ ನಿಲ್ಲ ಬೇಕು. ಯೋಸೆಫನ ಮನೆಯವರು ಉತ್ತ
೫ ರದಲ್ಲಿರುವ ತಮ್ಮ ಮೇರೆಯಲ್ಲಿ ನಿಲ್ಲ ಬೇಕು. ನೀವು ದೇಶವನ್ನು ಏಳು ಪಾಲಾಗಿ ಅದರ ವೈನವನ್ನು ಬರೆದು, ಇಲ್ಲಿಗೆ ನನ್ನ ಬಳಿಯಲ್ಲಿ ತನ್ನಿರಿ. ನಾನು ಈ ಸ್ಥಳದಲ್ಲಿ ನಿಮ್ಮ ದೇವರಾದ ಕರ್ತನ
೬ ಮುಂದೆ ನಿಮಗೆ ಚೀಟುಗಳನ್ನು ಹಾಕಿ, ಪಾಲಿಡುವೆನು. ಅದರೆ ಲೇವ್ಯರಿಗೆ ನಿಮ್ಮಲ್ಲಿ ಪಾಲಿಲ್ಲವು. ಯಾಕಂದರೆ ಅವರಿಗೆ ಕರ್ತನ ಯಾಜಕತ್ವವೇ ಅವರ ಬಾಧ್ಯತೆ. ಇದಲ್ಲದೆ ಗಾದನೂ, ರೂಬೆನೂ ಮನಸ್ಸೆಯ ಅರ್ಧ ಕುಲವೂ ಯೊರ್ದನಿನ ಆಚೆಯಲ್ಲಿ ಮೂಲ್ಲ ದಿಕ್ಕಿನಲ್ಲಿ ಕರ್ತನ ಸೇವಕನಾದ ಮೋಶೆ ತಮಗೆ ಕೊಟ್ಟ ತಮ್ಮ ಬಾಧ್ಯತೆ ತಕ್ಕೊಂಡಿದ್ದಾರೆ, ಅಂದನು.
೭ ಆ ಮನುಷ್ಯರು ಎದ್ದು ಹೋದರು. ಯೆಹೋಶುವ ದೇಶದ ವೈನ ಬರೆಯ ಹೋದವರಿಗೆ, ನೀವು ಹೋಗಿ, ದೇಶದಲ್ಲಿ ಸಂಚರಿಸಿ, ಅದರ ವೈನವನ್ನು ಬರೆದು, ನನ್ನ ಬಳಿಗೆ ತಕ್ಕೊಂಡು ಬನ್ನಿ; ನಾನು ಇಲ್ಲಿ ಶಿಲೋವಿನಲ್ಲಿ ಕರ್ತನ ಮುಂದೆ ನಿಮಗೆ ಚೀಟುಗ
೮ ಳನ್ನು ಹಾಕಿ, ಪಾಲು ಇಡುವೆನು ಎಂದು, ಆಜ್ಞಾಪಿಸಿದನು. ಆ ಮನುಷ್ಯರು ಹೋಗಿ, ದೇಶವನ್ನು ಸಂಚರಿಸಿ, ಅದನ್ನು ಅದರ ಪಟ್ಟಣಗಳ ಪ್ರಕಾರ ಏಳು ಪಾಲಾಗಿ ಒಂದು ಪುಸ್ತಕದಲ್ಲಿ ಬರಕೊಂಡು, ಶಿಲೋವಿನಲ್ಲಿರುವ ದಂಡಿಗೆ ಯೆಹೋಶುವನ ಬಳಿಗೆ ತಿರಿಗಿ ಬಂದರು.
೯ ಆಗ ಯೆಹೋಶುವ ಅವರಿಗೆ ಶಿಲೋವಿನಲ್ಲಿ ಕರ್ತನ ಮುಂದೆ ಚೀಟುಗಳನ್ನು ಹಾಕಿದನು. ಅಲ್ಲಿ ಯೆಹೋಶುವ ಇಸ್ರಯೇಲ್ ಮಕ್ಕಳಿಗೆ ದೇಶವನ್ನು ಅವರ ಪಾಲುಗಳ ಪ್ರಕಾರ ಹಂಚಿ
೧೦ ಕೊಟ್ಟನು.
ಆಗ ಬೆನ್ಯಾಮಿನನ ಮಕ್ಕಳಿಗೆ ಅವರ ಗೋತ್ರಗಳ ಪ್ರಕಾರ ಅವರ ಕುಲದ ಭಾಗ ಉಂಟಾಯಿತು. ಅವರ ಭಾಗವಾದ ದೇಶದ
೧೧ ಮೇರೆ ಯಾವದಂದರೆ, ಯೆಹೂದನ ಮಕ್ಕಳಿಗೂ ಯೋಸೆಫನ ಮಕ್ಕಳಿಗೂ ನಡುವೆ ಹಾದು ಹೋಗುವದು.



೧೨ ಅದರೆ ಆ ಮೇರೆ ಉತ್ತರ ಭಾಗದಲ್ಲಿ ಯೊರ್ದನಿನಿಂದ ಯೆರಿಕೋವಿನ ಪಾರ್ಶ್ವವಾಗಿ ಏರಿ, ಪಶ್ಚಿಮವಾಗಿ ಬೆಟ್ಟಗಳಲ್ಲಿ ಏರಿ,
೧೩ ಬೇತಾವಿನ ಅರಣ್ಯಕ್ಕೆ ತಿರುವದು. ಮತ್ತು ಆ ಮೇರೆಯು ಅಲ್ಲಿಂದ ಬೇತೆಲೆಬ ಲೂಜಿಗೆ ಹಾದು, ಲೂಜಿಗೆ ದಕ್ಷಿಣ ಪಾರ್ಶ್ವವಾಗಿ ಕೋಗಿ, ಅಟಕೋತ್ ಅದ್ದಾರಿನ ಕೆಳಗಿನ ಬೇಥೊರೋನಿಗೆ ದಕ್ಷಿಣದಲ್ಲಿರುವ ಬೆಟ್ಟಕ್ಕೆ ಹಾಯುವದು.
೧೪ ಇದಲ್ಲದೆ ಆ ಮೇರೆಯು ದಕ್ಷಿಣ ಮೂಲೆಗೆ ಎದುರಾಗಿರುವ ಬೇಥೊರೋನಿಗೆ ಎದುರಾದ ಬೆಟ್ಟವನ್ನು ಹಿಡಿದು, ದಕ್ಷಿಣವಾಗಿ ಸಮುದ್ರದ ಮೂಲೆಯನ್ನು ಸುತ್ತಿ ಕೊಂಡು, ಕಿರ್ಯಾತ್ ಯಾರೀಮ್ ಎಂಬ ಯೆಹೂದನ ಮಕ್ಕಳ ಪಟ್ಟಣವಾದ ಕಿರ್ಯಾತ್ ಬಾಳದ ಬಳಿಗೆ ಹೋಗಿ, ಮುಗಿಯುವದು. ಇದು ಪಶ್ಚಿಮ ಮೂಲೆ ಯಾಗಿತ್ತು.
೧೫ ಮತ್ತು ಆ ಮೇರೆಯಾದ ದಕ್ಷಿಣ ಮೂಲೆಯು ಕಿರ್ಯಾತ್ ಯಾರೀಮಿನ ತುದಿಯಿಂದ ಹೊರಟು, ಪಶ್ಚಿಮಕ್ಕೆ ಹೋಗಿ, ನೆಫ್ತೋಹದ ಜಲ ಬುಗ್ಗೆಯ ಪರ್ಯಂತರ ಹೊರಟು, ಅಲ್ಲಿಂದ ರಾ
೧೬ ಕ್ಷಸರ ಹಳ್ಳದ ತಗ್ಗಿನ ಉತ್ತರದಲ್ಲಿರುವ ಹಿನೊಮ್ಮನ ಕುಮಾರನ ಹಳ್ಳದ ತಗ್ಗಿಗೆ ಎದುರಾದ ಬೆಟ್ಟದ ಕಡೇ ಭಾಗಕ್ಕೆ ಇಳಿದು, ದಕ್ಷಿಣದಲ್ಲಿ ಯೆಬೂಸ್ಯರ ಮೇರೆಯಾದ ಹಿನೊಮ್ಮನ ಹಳ್ಳದ ತಗ್ಗಿಗೂ, ಅಲ್ಲಿಂದ ಎನ್ರೋಗೆಲಿಗೂ ಏರಿ, ಅಲ್ಲಿಂದ ಉ
೧೭ ತ್ತರಕ್ಕೆ ಹೋಗಿ, ಎನ್ಷೆಮೆಷಿಗೂ, ಅಲ್ಲಿಂದ ಅದುಮ್ಮಿಮ್ ಎಂಬ ದಿಬ್ಬೆಗೆ ಎದುರಾದ ಗಿಲೀಲೋತಿಗೂ, ಅಲ್ಲಿಂದ ರೂಬೆನನ ಕುಮಾರನಾದ ಬೊಹಾನನ ಕಲ್ಲಿಗೆ ಏರಿ ಹೋಗಿ, ಅಲ್ಲಿಂದ ಅರಾಬಕ್ಕೆ
೧೮ ಎದುರಾಗಿ ಉತ್ತರ ಪಾರ್ಶ್ವಕ್ಕೆ ಹೊರಟು, ಅರಾಬಕ್ಕೆ ಇಳಿದು
೧೯ ಬಂದು, ಅಲ್ಲಿಂದ ಆ ಮೇರೆ ಬೇಥೊಗ್ಲಕ್ಕೆ ಉತ್ತರ ಪಾರ್ಶ್ವವಾಗಿ ಹೊರಟು, ಯೊರ್ದನಿನ ಮುಖದ್ವಾರಕ್ಕೆ ಉತ್ತರವಾದ ಉಪ್ಪು ಸಮುದ್ರದ ಉತ್ತರ ಮೂಲೆಯಲ್ಲಿ ಮುಗಿಯಿತು. ಅದು ದಕ್ಷಿಣ ಪಾರ್ಶ್ವದ ಮೇರೆ.
೨೦ ಮತ್ತು ಮೂಲ್ಲ ಭಾಗದಲ್ಲಿ ಯೊರ್ದನ್ ಅದರ ಮೇರೆಯಾಗಿತ್ತು. ಇದು ಬೆನ್ಯಾಮಿನನ ಮಕ್ಕಳಿಗೆ ಅವರ ಗೋತ್ರಗಳ ಪ್ರಕಾರ ಸುತ್ತಲಿರುವ ಮೇರೆಗಳ ಬಳಿಗಿರುವ ಬಾಧ್ಯತೆಯಾಗಿತ್ತು.
೨೧ ಬೆನ್ಯಾಮಿನನ ಮಕ್ಕಳ ಕುಲಕ್ಕೆ ಅವರ ಗೋತ್ರಗಳ ಪ್ರಕಾರ, ಇರುವ ಪಟ್ಟಣಗಳು ಯಾವವಂದರೆ, ಯೆರಿಕೋ, ಬೇಥೊಗ್ಲ
೨೨ ಕೆಟ್ಟೆಜೆಂಬ ತಗ್ಗು, ಬೇತಾರಬ, ಜೆಮರಾಯಿಮ್, ಬೇತೆಲ್, ಅವ್ವಿ
೨೩, ೨೪ ಮ್, ಪಾರ, ಒಫ್ರ, ಕೆಫರಮ್ಮೋನಿ, ಒಫ್ನಿ, ಗೇಬ, ಎಂಬುವ ಹನ್ನೆ
೨೫ ರು ಪಟ್ಟಣಗಳೂ ಅವುಗಳ ಗ್ರಾಮಗಳೂ. ಮತ್ತು ಗಿಬಿಯೋನ್,
೨೬, ೨೭ ರಾಮ, ಬೆರೋತ್, ಮಿಚ್ಪೆ, ಕೆಫೀರ, ಮೋಚ, ರೆಕೆಮ್, ಇರ್ಪೇ
೨೮ ಲ್, ತರಾಲ, ಜೇಲ, ಎಲೆಫ, ಯೆರೂಸಲೇಮು ಎಂಬ ಯೆಬೂಸು, ಗಿಬಿಯತ್, ಕಿರ್ಯಾತ್ ಎಂಬುವ ಹದಿನಾಲ್ಕು ಪಟ್ಟಣಗಳೂ ಅವುಗಳ ಗ್ರಾಮಗಳೂ. ಇವೇ ಬೆನ್ಯಾಮಿನನ ಮಕ್ಕಳಿಗೆ, ಅವರ ಗೋತ್ರಗಳ ಪ್ರಕಾರ, ಇರುವ ಬಾಧ್ಯತೆಗಳಾಗಿದ್ದವು.

## ೧೯. ಸಂಧಿ.

೧ ಮತ್ತು ಎರಡನೇ ಚೀಟು ಬಿದ್ದ ಭಾಗವು ಸಿಮೆಯೋನನದಾಗಿ, ಸಿಮೆಯೋನನ ಕುಲದ ಮಕ್ಕಳಿಗೆ, ಅವರ ವಂಶಗಳ ಪ್ರಕಾರ, ಉಂಟಾಯಿತು. ಅವರ ಬಾಧ್ಯತೆ ಯೆಹೂದನ ಮಕ್ಕಳ ಬಾಧ್ಯತೆಯ
೨ ಮಧ್ಯದಲ್ಲಿತ್ತು. ಅವರ ಬಾಧ್ಯತೆಯಲ್ಲಿ ಶೇರಿದ ಪಟ್ಟಣಗಳು ಯಾವವಂದರೆ, ಬೇರ್ಷೆಬ, ಶೇಬ, ಮೊಲಾದ, ಹಜರ್‌ಷುವಲ್, ಬಾ
೩, ೪ ಳ, ಆಜೆಮ್, ಎತ್ತೊಲಾದ್, ಬೆತೂಲ್, ಹೊರ್ಮ, ಚಿಕ್ಲಗ್, ಬೇತ
೫ ಮರ್ಕಬೋತ್, ಹಜರ್, ಸೂಸ, ಬೇತ್‌ಲೆಬಾವೋತ್, ಸರೂಹೆ, ಎಂಬುವ ಹದಿಮೂರು ಪಟ್ಟಣಗಳೂ ಅವುಗಳ ಗ್ರಾಮಗಳೂ. ಮತ್ತು
೬ ಅಯಿನ್, ರಿಮ್ಮೋನ್, ಎತೆರ್, ಅಷಾನ್, ಎಂಬುವ ನಾಲ್ಕು ಪಟ್ಟಣ
೭ ಗಳೂ ಅವುಗಳ ಗ್ರಾಮಗಳೂ. ಮತ್ತು ಈ ಪಟ್ಟಣಗಳ ಸುತ್ತಲೂ ಬಾಳಾತ್ ಬೇರಿನ ಮಟ್ಟಿಗೂ, ದಕ್ಷಿಣದಲ್ಲಿರುವ ರಾಮತಿನ ಮಟ್ಟಿಗೂ, ಇರುವ ಎಲ್ಲಾ ಗ್ರಾಮಗಳು ಸಹಿತವಾಗಿ, ಸಿಮೆಯೋನನ
೮ ಕುಲದ ಮಕ್ಕಳಿಗೆ, ಅವರ ವಂಶಗಳ ಪ್ರಕಾರ ಉಂಟಾದ ಬಾಧ್ಯತೆಯಾಗಿತ್ತು. ಸಿಮೆಯೋನನ ಮಕ್ಕಳ ಬಾಧ್ಯತೆ ಯೆಹೂದನ ಮಕ್ಕಳ ಭಾಗದಲ್ಲಿ ಉಂಟಾಗಿತ್ತು. ಯಾಕಂದರೆ ಯೆಹೂದನ ಮಕ್ಕಳ ಭಾಗವು ಅವರಿಗೆ ಹೆಚ್ಚಾಗಿದ್ದ ಕಾರಣ, ಸಿಮೆಯೋನನ ಮಕ್ಕಳಿಗೆ ಅವರ ಭಾಗದಲ್ಲಿ ಬಾಧ್ಯತೆ ಉಂಟಾಯಿತು.
೯ ಮತ್ತು ಮೂರನೇ ಚೀಟು ಬಿದ್ದ ಭಾಗ ಜೆಬುಲೋನನ ಮಕ್ಕಳಿಗೆ, ಅವರ ಗೋತ್ರಗಳ ಪ್ರಕಾರ, ಉಂಟಾಯಿತು. ಅವರ ಬಾ
೧೦ ಧ್ಯತೆಯ ಮೇರೆ ಸರೀದಿನ ಮಟ್ಟಿಗೂ ಉಂಟಾಗಿತ್ತು. ಅಲ್ಲಿಂದ ಪಶ್ಚಿಮದಲ್ಲಿ ಮಾರಾಳಕ್ಕೆ ಏರಿ, ದಬೇಷೆತಿಗೆ ಹೋಗಿ, ಯೊಕ್ನೆ
೧೧ ಯಾಮಿಗೆ ಎದುರಾದ ಹಳ್ಳಕ್ಕೆ ತಿರುವದು. ಮತ್ತು ಅದು ಸರೀದಿನಿಂದ ಮೂಲ್ಲು, ಸೂರ್ಯನು ಉದಯಿಸುವ ಕಡೆಯಾಗಿ ಕಿಸ್ಲೊತ್ತತಬೋರಿನ ಮೇರೆಗೆ ತಿರುಗಿ, ಅಲ್ಲಿಂದ ದಬ್ರತಿಗೆ ಹೊರ
೧೨ ಟು, ಯಫೀಯಕ್ಕೆ ಹೋಗಿ, ಅಲ್ಲಿಂದ ಮೂಲ್ಲು ದಿಕ್ಕಿನಲ್ಲಿರುವ ಗಿತ್ತಹೇಫೆರನ್ನು ಇತ್ತಕಾಚೇನನ್ನು ದಾಟಿ, ರಿಮ್ಮೋನಿಮತೋವರಿಗೂ ನೇಯಕ್ಕೂ ಹಾದು, ಅಲ್ಲಿಂದ ಆ ಮೇರೆ ಉತ್ತರ ದಿಕ್ಕಿನಲ್ಲಿರುವ ಹನ್ನತೋನಿಗೆ ತಿರುಗಿ, ಇಫ್ತಹೇಲಿನ ಹಳ್ಳದ ತಗ್ಗಿಗೆ
೧೩ ತೀರುವದು.
ಈ ಮೇರೆಯಲ್ಲಿರುವ ಕಟ್ಟತ್, ನಹಲಾಲ್, ಶಿಮ್ರೋನ್, ಇದಾಲ, ಬೆಥ್ಲೆಹೇಮ್, ಮೊದಲಾದ ಹಕ್ಕಿರದು ಪಟ್ಟಣಗಳು, ಅವುಗ
೧೪ ಳ ಗ್ರಾಮಗಳು ಸಹಿತವಾಗಿ, ಜೆಬುಲೋನನ ಮಕ್ಕಳಿಗೆ, ಅವರ ವಂಶಗಳ ಪ್ರಕಾರ, ಬಾಧ್ಯತೆಯಾಗಿದ್ದವು.
೧೫ ಮತ್ತು ನಾಲ್ಕನೇ ಚೀಟು ಬಿದ್ದ ಭಾಗವು ಇಸ್ಸಾಕಾರನಿಗೆ, ಇಸ್ಸಾಕಾರನ ಮಕ್ಕಳಿಗೆ ಅವರ ಗೋತ್ರಗಳ ಪ್ರಕಾರ, ಉಂಟಾಯಿ
೧೬ ತು. ಅವರ ಮೇರೆ ಇಜ್ರೇಲಿಗೆ ಎದುರಾದ ಕೆಸುಲ್ಲೋತ್, ದೂಬೆಷ್, ಹಫರಾಯಿಮ್, ಷಿಯೋನ್, ಅನಾಹರತ್, ರಬ್ಬಿತ್, ಕಿಶ್ಯೋನ್,
೧೭ ಅಬೇಜ್, ರೆಮೆತ್, ಎನ್‌ಗನ್ನಿಮ್, ಎನ್ಹದ್ದ, ಬೇತ್ಪಚೇಜ್ ಎಂಬ
೧೮ ಪಟ್ಟಣಗಳನ್ನು ಸುತ್ತಿ, ಅಲ್ಲಿಂದ ತಬೋರಿಗೆ ಹೊರಟು, ಷಹಚಿಮಕ್ಕೂ, ಬೇತಷೆಮೆಷಿಗೂ ಶೇರಿ, ಯೊರ್ದನಿಗೆ ತೀರುವದು; ಹದಿ
೧೯ ನಾರು ಪಟ್ಟಣಗಳೂ ಅವುಗಳ ಗ್ರಾಮಗಳೂ; ಇವೇ ಇಸ್ಸಾಕಾರನ ಕುಲದ ಮಕ್ಕಳಿಗೆ, ಅವರ ಗೋತ್ರಗಳ ಪ್ರಕಾರ, ಉಂಟಾದ ಬಾ
೨೦ ಧ್ಯತೆ.
೨೧ ಮತ್ತು ಚೀಟು ಬಿದ್ದ ಐದನೇ ಭಾಗವು ಆಶೇರನ ಮಕ್ಕಳಿಗೆ
೨೨ ಅವರ ಗೋತ್ರಗಳ ಪ್ರಕಾರ ಉಂಟಾಯಿತು. ಅವರ ಮೇರೆ
೨೩ ಯಾವದಂದರೆ, ಹೆಲ್ಕತ್; ಹಲಿ, ಬೆಟೆನ್, ಅಕ್ಷಾಫ್, ಅಲಮ್ಮೆಲೆಕ್, ಅಮಾಡ್, ಮಿಷೆಯಲ್ ಎಂಬ ಪಟ್ಟಣಗಳನ್ನು ಸುತ್ತಿ ಕೊಂಡು, ಅದು ಪಶ್ಚಿಮಕ್ಕೆ ಕರ್ಮೇಲಿಗೂ ಶಿಹೋರ್‌ಲಿಬ್ನತಿಗೂ ಹೋಗಿ,

೨೭ ಅಲ್ಲಿಂದ ಸೂರ್ಯೋದಯದ ಕಡೆಯಾಗಿ ಬೇತ್‌ದಾಗೋನಿಗೆ ತಿರುಗಿ, ಜೆಬುಲೋನಿಗೂ ಬೇತೆಮೆಕಿಗೆ ಉತ್ತರ ದಿಕ್ಕಿನಲ್ಲಿ ಇರುವ ಇಫ್ತಹೇಲಿನ ತಗ್ಗಿಗೂ ನೀಯೇಲಿಗೂ ಹಾದು, ಎಡ ಪಾರ್ಶ್ವ
೨೮ ದಲ್ಲಿರುವ ಕಬೂಲಿಗೂ, ಅಲ್ಲಿಂದ ಹೆಬ್ರೋನಿಗೂ, ಕೆಹೋಬಿಗೂ, ಹಪ್ಪೋನಿಗೂ, ಕಾನಕ್ಕೂ, ಮಹಾ ಚಿಕೋನಿನ ಮಟ್ಟಿ
೨೯ ಗೆ, ಹಾದು, ರಾಮಕ್ಕೆ ಹೋಗಿ, ಜೋರು ಎಂಬ ಬಲವಾದ ಪಟ್ಟಣದ ಮಟ್ಟಿಗೂ ತಿರುಗಿ, ಅಲ್ಲಿಂದ ಹೋಸಕ್ಕೆ ಹೊರಟು, ಸಮು
೩೦ ದ್ರದ ಬಳಿಯ ಅಕ್ಷೀಬಿನ ಮೇರೆಯ ಅಂಚೆಗೆ ತೀರುವದು. ಅದಕ್ಕೆ ಉಮ್ಮ, ಅಫೇಕ್ ಕೆಹೋಬ್ ಎಂಬ ಪಟ್ಟಣಗಳು ಸೇರಿ ಇದ್ದವು.
೩೧ ಇಪ್ಪತ್ತೆರಡು ಪಟ್ಟಣಗಳೂ ಅವುಗಳ ಗ್ರಾಮಗಳೂ. ಇದೇ ಆಶೇರನ ಕುಲದ ಮಕ್ಕಳಿಗೆ, ಅವರ ವಂಶಗಳ ಪ್ರಕಾರ ಈ ಪಟ್ಟಣಗಳೂ ಅವುಗಳ ಗ್ರಾಮಗಳೂ, ಬಾಧ್ಯತೆಯಾಗಿದ್ದವು.

೩೨ ಮತ್ತು ಆರನೇ ಚೀಟು ಬಿದ್ದ ಭಾಗವು ನೆಫ್ತಲಿಯ ಮಕ್ಕಳ ದಾಗಿ, ನೆಫ್ತಲಿಯ ಮಕ್ಕಳಿಗೆ, ಅವರ ಗೋತ್ರಗಳ ಪ್ರಕಾರ, ಉಂ
೩೩ ಟಾಯಿತು. ಅವರ ಮೇರೆ ಹೆಲೆಫಿನಿಂದ ಇತ್ತು; ಅಲ್ಲೋನಿನಿಂದ ಚಾನನ್ನಿವಿಂ, ಅದಾಮಿ, ನೆಕೆಬ್, ಯಬ್ನೆಯೇಲ್, ಇವುಗಳ ಮೇಲೆ ಹಾದು, ಲಕ್ಕೂಮಿನ ಮಟ್ಟಿಗೂ ಹೋಗಿ, ಯೊರ್ದನಿಗೆ ತೀರುವದು.
೩೪ ಮತ್ತು ಆ ಮೇರೆ ಪ್ಚಿಮಕ್ಕೆ ಅಜೊತ್ತಬೋರಿಗೆ ತಿರುಗಿ, ಅಲ್ಲಿಂದ ಹುಕ್ಕೋಕಿಗೆ ಹೊರಟು, ದಕ್ಷಿಣಕ್ಕೆ ಜೆಬುಲೋನನನ್ನೂ, ಪ್ಚಿಮಕ್ಕೆ ಅಶೇರನನ್ನೂ, ಸೂರ್ಯೋದಯದ ದಿಕ್ಕಿನಲ್ಲಿ ಯೊರ್ದನಿನ ಬಳಿಯಲ್ಲಿರುವ ಯೆಹೂದವನ್ನೂ ಮುಟ್ಟಿ ಬರುವದು.
೩೫ ಇದರಲ್ಲಿರುವ ಕೋಟೆಗಳುಳ್ಳ ಪಟ್ಟಣಗಳು ಯಾವವಂದರೆ, ಚಿದ್ದಿಮ್, ಚೇರ್, ಹಮಾತ್, ರಕ್ಕತ್, ಕಿನೆರೆತ್,
೩೬ ಅದಾಮ, ರಾಮ, ಹಚೊರ್, ಕೆದೆಷ್, ಎದ್ರಯಿ, ಎನ್ಹಚೋರ್, ಇರ್ಯೋನ್, ಮಿಗ್ದಲೇಲ್, ಹೊರೇಮ್, ಬೇಟಾನತ್, ಬೇತ್ಶೆಮೇಷ್, ಮೊದಲಾದ ಹ
೩೭ ತ್ತೊಂಭತ್ತು ಪಟ್ಟಣಗಳೂ ಅವುಗಳ ಗ್ರಾಮಗಳೂ. ಇದೇ ನೆಫ್ತಲಿ
೩೮ ಯ ಕುಲದ ಮಕ್ಕಳಿಗೆ, ಅವರ ಗೋತ್ರಗಳ ಪ್ರಕಾರ, ಉಂಟಾದ ಬಾಧ್ಯತೆ.

೪೦ ಇದಲ್ಲದೆ ಏಳನೇ ಚೀಟು ಬಿದ್ದ ಭಾಗವು ದಾನನ ಕುಲದ ಮ
೪೧ ಕ್ಕಳಿಗೆ, ಅವರ ಗೋತ್ರಗಳ ಪ್ರಕಾರ ಉಂಟಾಯಿತು. ಅವರ
೪೨ ಬಾಧ್ಯತೆಯ ಮೇರೆ ಜೋರ ಎಷ್ಟೋಲ್, ಇರ್ಶೆಮೆಷ್, ಷ
೪೩ ವಲಬ್ಬಿನ್, ಅಯ್ಯಲೋನ್, ಇತ್ಲ, ಏಲೋನ್, ತಿಮ್ನತ್, ಎ
೪೪ ಕ್ರೋನ್, ಎಲ್ತೆಕೆ, ಗಿಬ್ಬೆತೋನ್, ಬಾಳತ್, ಯೆಹೂದ್, ಬೆನೇ
೪೫ ಬ್ರಕ್, ಗತ್‌ರಿಮ್ಮೋನ್, ಮೆಯಕೋರ್ಣ್, ರಕ್ಕೋನ್, ಎಂಬ ಪ
೪೬ ಟ್ಟಣಗಳು, ಯೊಪ್ಪೋವಿಗೆ ಎದುರಾದ ಮೇರೆಯು ಸಹ. ಇದಲ್ಲದೆ
೪೭ ದಾನನ ಮಕ್ಕಳ ಮೇರೆ ಅವರಿಗೆ ಸಾಲದ್ದರಿಂದ, ಅವರು ಹೊರಟು ಹೋಗಿ, ಲೆಷೆಮಿನ ಮೇಲೆ ಯುದ್ಧ ಮಾಡಿ, ಅದನ್ನು ಹಿಡಿದು, ಕತ್ತಿಯ ಬಾಯಿಯಿಂದ ಅದನ್ನು ಹೊಡೆದು, ಅದನ್ನು ಸ್ವತಂತ್ರಿಸಿ ಕೊಂಡು, ಅದರಲ್ಲಿ ವಾಸವಾಗಿದ್ದು, ಲೆಷೆಮಿಗೆ ತಮ್ಮ ತಂ
೪೮ ದೆಯಾದ ದಾನನ ಹೆಸರಿನ ಪ್ರಕಾರ ದಾನ್ ಎಂದು ಹೆಸರಿಟ್ಟರು. ಈ ಪಟ್ಟಣಗಳೂ ಅವುಗಳ ಗ್ರಾಮಗಳೂ ದಾನನ ಮಕ್ಕಳ ಕುಲಕ್ಕೆ, ಅವರ ಗೋತ್ರಗಳ ಪ್ರಕಾರ ಉಂಟಾದ ಬಾಧ್ಯತೆಯಾಗಿದ್ದವು.

೪೯ ಅವರು ದೇಶವನ್ನು ಅದರ ಮೇರೆಗಳ ಪ್ರಕಾರ ಬಾಧ್ಯತೆಯಾಗಿ ಹಂಚಿ ಕೊಂಡು, ತೀರಿಸಿದಾಗ, ಇಸ್ರಯೇಲ್ ಮಕ್ಕಳು ನೂನನ ಮಗನಾದ ಯೆಹೋಶುವನಿಗೆ ತಮ್ಮ ಮಧ್ಯದಲ್ಲಿ ಬಾಧ್ಯತೆಯ
೫೦ ನ್ನು ಕೊಟ್ಟರು. ಅವನು ಕೇಳಿದ ಎಫ್ರಯಿಮ್ ಬೆಟ್ಟದಲ್ಲಿರುವ ತಿಮ್ನತಸೆರಹ ಎಂಬ ಪಟ್ಟಣವನ್ನು, ಕರ್ತನ ಮಾತಿನ ಪ್ರಕಾರ, ಕೊಟ್ಟರು. ಆ ಪಟ್ಟಣವನ್ನು ಅವನು ಕಟ್ಟಿಸಿ, ಅದರಲ್ಲಿ ವಾಸವಾಗಿದ್ದನು.
೫೧ ಯಾಜಕನಾದ ಎಲೆಯಾಜರನೂ ನೂನನ ಮಗನಾದ ಯೆಹೋಶುವನೂ ಇಸ್ರಯೇಲಿನ ಮಕ್ಕಳ ಕುಲಗಳ ಪಿತೃಗಳ ಹಿರಿಯರೂ ಶಿಲೋಹಿನಲ್ಲಿ, ಸಭೆಯ ಗುಡಾರದ ಬಾಗಲ ಬಳಿಯಲ್ಲಿ, ಕರ್ತನ ಸಮುಖದಲ್ಲಿ, ಚೀಟು ಹಾಕಿ, ಹಂಚಿ ಕೊಟ್ಟ ಬಾಧ್ಯತೆಗಳು ಇವೇ. ಹೀಗೆ ಅವರು ದೇಶವನ್ನು ಹಂಚಿ ಕೊಂಡು, ತೀರಿಸಿದರು.

## ೨೦. ಸಂಧಿ.

೧ ಮತ್ತು ಕರ್ತನು ಯೆಹೋಶುವನ ಸಂಗಡ ಮಾತಾಡಿ, ಹೇಳಿದ್ದೇನಂದರೆ—ನೀನು ಇಸ್ರಯೇಲ್ ಮಕ್ಕಳಿಗೆ ಹೇಳ ಬೇಕಾದದ್ದೇನಂದರೆ, ಅರಿಯದೆ, ಕೈ ತಪ್ಪಾಗಿ ಪ್ರಾಣ ಹೊದೆದು, ಕೊಂದು
೨ ಹಾಕಿದವನು ಅಲ್ಲಿ ಓಡಿ ಹೋಗುವದಕ್ಕೆ, ನಾನು ಮೋಶೆಯ ಮುಖಾಂತ್ರ ನಿಮಗೆ ಹೇಳಿದ ಆಶ್ರಯದ ಪಟ್ಟಣಗಳನ್ನು ಗೊತ್ತು
೩ ಮಾಡಿ ಕೊಳ್ಳಿರಿ. ಅವು ನಿಮಗೆ ರಕ್ತ ವಿಚಾರಕನ ಕೈಗೆ ತಪ್ಪಿಸಿ
೪ ಕೊಳ್ಳುವ ಆಶ್ರಯವಾಗಿರುವವು. ಆ ಪಟ್ಟಣಗಳಲ್ಲಿ ಒಂದಕ್ಕೆ ಓಡಿ ಬಂದವನು ಪಟ್ಟದ ಬಾಗಲ ದ್ವಾರದಲ್ಲಿ ನಿಂತು ಕೊಂಡು, ಆ ಪಟ್ಟದ ಹಿರಿಯರು ಕೇಳುವ ಹಾಗೆ, ತನ್ನ ಮಾತುಗಳನ್ನು ಹೇಳುವಾಗ, ಅವರು ಅವನನ್ನು ಪಟ್ಟದೊಳಗೆ ತೇರಿಸಿ ಕೊಂಡು, ತಮ್ಮ ಬಳಿಯಲ್ಲಿ ನಿವಾಸವಾಗಿರ ಅವನಿಗೆ ಸ್ಥಳವನ್ನು ಕೊಡ ಬೇಕು.
೫ ಮತ್ತು ರಕ್ತ ವಿಚಾರಕನು ಅವನನ್ನು ಹಿಂದಟ್ಟಿ ಬಂದರೆ, ಕೊಲೆ ಮಾಡಿದವನನ್ನು ಅವನ ಕೈಗೆ ಒಪ್ಪಿಸಿ ಕೊಡ ಬಾರದು; ಯಾಕಂದರೆ ಅರಿಯದೆ, ತನ್ನ ನೆಕೆಯವನನ್ನು ಹೊದೆದನು; ಮತ್ತು
೬ ಪೂರ್ವದಲ್ಲಿ ಅವನನ್ನು ಹಗೆ ಮಾಡಲಿಲ್ಲ. ಇದಲ್ಲದೆ ಅವನು ನ್ಯಾಯ ವಿಚಾರಣೆಗೋಸ್ಕರ ಸಭೆಯ ಮುಂದೆ ಬಂದು ನಿಲ್ಲುವ ಪರ್ಯಂತರಕ್ಕೂ, ಆ ದಿನಗಳಲ್ಲಿ ಇರುವ ಪ್ರಧಾನ ಯಾಜಕನು ಮರಣ ಹೊಂದುವ ಮಟ್ಟಿಗೂ, ಆ ಪಟ್ಟದಲ್ಲೇ ವಾಸವಾಗಿರ ಬೇಕು. ತರುವಾಯ ಕೊಂದವನು ತಾನು ಬಿಟ್ಟು, ಓಡಿ ಹೋದ ತನ್ನ ಪಟ್ಟಣಕ್ಕೂ ತನ್ನ ಮನೆಗೂ ತಿರುಗಿ ಬರ ಬಹುದು.
೭ ಹಾಗೆಯೇ ಅವರು ನೆಫ್ತಲಿಯ ಬೆಟ್ಟದ ಗಲಿಲಾಯದಲ್ಲಿ ಇರುವ ಕೆಡೆಬನ್ನೂ, ಎಫ್ರಯಿಮನ ಬೆಟ್ಟಗಳಲ್ಲಿರುವ ಬೆಕೆಮನ್ನೂ, ಯೆಹೂದದ ಬೆಟ್ಟಗಳಲ್ಲಿರುವ ಹೆಬ್ರೋನ್ ಎಂಬ ಕಿರ್ಯಾತ್ ಅರ್ಬವನ್ನೂ ಪರಿಶುದ್ಧ ಮಾಡಿದರು.
೮ ಯೆರಿಕೋ ಇರುವ ಯೊರ್ದನಿನ ಆಚೇ ಥಡವಾದ ಸೂರ್ಯೋದಯದ ದಿಕ್ಕಿನಲ್ಲಿ ರೂಬೆನನ ಕುಲಕ್ಕಿರುವ ಸಮವಾದ ಭೂಮಿಯ ಅರಣ್ಯದಲ್ಲಿರುವ ಬೆಜೆರನ್ನೂ, ಗಾದನ ಕುಲಕ್ಕೆ ಗಿಲ್ಯಾದಿನಲ್ಲಿರುವ ರಾಮೋತನ್ನೂ, ಮನಸ್ಸೆಯ ಕುಲಕ್ಕೆ ಬಾಶಾನಿನಲ್ಲಿರುವ ಗೋಲಾನನ್ನೂ, ಕೊಟ್ಟರು.
೯ ಕೈ ತಪ್ಪಿ, ಅರಿಯದೆ, ಪ್ರಾಣ ಹೊದೆದ ಯಾವನಾದರೂ ಸಭೆಯ ಮುಂದೆ ಬಂದು ನಿಲ್ಲುವ ಪರ್ಯಂತರ, ರಕ್ತ ವಿಚಾರಕನ ಕೈಯಿಂದ ಸಾಯದ ಹಾಗೆ, ಅಲ್ಲಿ ಓಡಿ ಹೋಗುವದಕ್ಕೆ, ಇಸ್ರಯೇಲ್ ಮಕ್ಕಳೆಲ್ಲರಿಗೂ, ಅವರ ಮಧ್ಯದಲ್ಲಿ ವಾಸವಾಗಿರುವ ಪರದೇಶಿಗೂ ನಿರ್ಣಯಿಸಲ್ಪಟ್ಟ ಪಟ್ಟಣಗಳು ಇವೇ.



## ೨೧. ಸಂಧಿ.

೧ ಮತ್ತು ಲೇವ್ಯರ ಪಿತೃಗಳ ಹಿರಿಯರು ಕಾನಾನ್ ದೇಶದೊಳು ಶಿಲೋಹಿನಲ್ಲಿರುವ ಯಾಜಕನಾದ ಎಲೆಯಾಜರನ ಬಳಿಗೂ, ನೂನನ ಮಗನಾದ ಯೆಹೋಶುವನ ಬಳಿಗೂ, ಇಸ್ರಯೇಲ್ ಮಕ್ಕಳ ಕುಲಗಳ ಪಿತೃಗಳಲ್ಲಿರುವ ಹಿರಿಯರ ಬಳಿಗೂ ಬಂದು, ಅವರ ಸಂಗಡ ಮಾತಾಡಿ, ನಾವು ವಾಸವಾಗಿರುವ ಪಟ್ಟಣಗಳನ್ನೂ,
೨ ನಮ್ಮ ಪಶುಗಳಿಗೋಸ್ಕರ ಅವುಗಳ ಪ್ರಾಂತಪುರಗಳನ್ನೂ ನಮಗೆ ಕೊಡ, ಕರ್ತನು ಮೋಶೆಯ ಮುಖಾಂತ್ರವಾಗಿ ಆಜ್ಞಾಪಿಸಿದ್ದಾನೆ, ಅಂದರು. ಹಾಗೆಯೇ ಇಸ್ರಯೇಲ್ ಮಕ್ಕಳು ತಮ್ಮ
೩ ಬಾಧ್ಯತೆಯಲ್ಲಿ ಲೇವ್ಯರಿಗೆ, ಕರ್ತನ ವಾಕ್ಯದ ಪ್ರಕಾರ, ಪಟ್ಟಗಳನ್ನೂ, ಅವುಗಳ ಪ್ರಾಂತಪುರಗಳನ್ನೂ ಕೊಟ್ಟರು. ಯಾವವಂದರೆ—
೪ ಕೋಹತ್ಯರ ಗೋತ್ರಗಳಿಗೆ ಭಾಗ ಉಂಟಾದಾಗ, ಲೇವ್ಯರಲ್ಲಿ ಯಾಜಕನಾದ ಆರೋನನ ಮಕ್ಕಳಿಗೆ ಯೆಹೂದನ ಕುಲದಲ್ಲಿಯೂ ಸಿಮೆಯೋನನ ಕುಲದಲ್ಲಿಯೂ ಬೆನ್ಯಮಿನನ ಕುಲದಲ್ಲಿಯೂ ಹದಿಮೂರು ಪಟ್ಟಗಳು ಚೀಟಿನಿಂದ ಉಂಟಾದವು.
೫ ಕೋಹತನ ಇತರ ಮಕ್ಕಳಿಗೆ ಎಫ್ರಯಿಮನ ಕುಲದಲ್ಲಿಯೂ, ದಾನನ ಕುಲದಲ್ಲಿಯೂ, ಮನಸ್ಸೆಯ ಅರ್ಧ ಕುಲದಲ್ಲಿಯೂ ಹತ್ತು ಪಟ್ಟಗಳು ಚೀಟಿನಿಂದ ಉಂಟಾದವು.
೬ ಗರ್ಷೋನಿನ ಮಕ್ಕಳಿಗೆ ಇಸ್ಸಕಾರನ ಕುಲದಲ್ಲಿಯೂ, ಆಶೇರನ ಕುಲದಲ್ಲಿಯೂ, ನೆಫ್ತಲಿಯ ಕುಲದಲ್ಲಿಯೂ, ಬಾಶಾನಿನಲ್ಲಿರುವ ಮನಸ್ಸೆಯ ಅರ್ಧ ಕುಲದಲ್ಲಿಯೂ ಹದಿಮೂರು ಪಟ್ಟಗಳು ಚೀಟಿನಿಂದ ಉಂಟಾದವು.
೭ ಇದಲ್ಲದೆ ಮೆರಾರಿಯ ಮಕ್ಕಳಿಗೆ, ಅವರ ಗೋತ್ರಗಳ ಪ್ರಕಾರ, ರೂಬೆನನ ಕುಲದಲ್ಲಿಯೂ, ಗಾದನ ಕುಲದಲ್ಲಿಯೂ, ಜೆಬುಲೋನನ ಕುಲದಲ್ಲಿಯೂ, ಹನ್ನಿರಡು ಪಟ್ಟಗಳು ಉಂಟಾದವು.
೮ ಈ ಪಟ್ಟಗಳನ್ನೂ ಅವುಗಳ ಪ್ರಾಂತಪುರಗಳನ್ನೂ ಇಸ್ರಯೇಲ್ ಮಕ್ಕಳು, ಕರ್ತನು ಮೋಶೆಯ ಮುಖಾಂತ್ರ ಆಜ್ಞಾಪಿಸಿದ ಪ್ರಕಾರ, ಲೇವ್ಯರಿಗೆ ಚೀಟು ಹಾಕಿ ಕೊಟ್ಟರು.
೯ ಅದಕೆ ಲೇವಿಯ ಮಕ್ಕಳಲ್ಲಿ ಮೊದಲನೇ ಚೀಟು ಬಿದ್ದ ಕೋ
೧೦ ಹತ್ಯರ ಗೋತ್ರಗಳಲ್ಲಿ ಇರುವ ಆರೋನನ ಮಕ್ಕಳಿಗೆ ಯೆಹೂ
೧೧ ದನ ಮಕ್ಕಳ ಕುಲದಲ್ಲಿಯೂ ಸಿಮೆಯೋನನ ಮಕ್ಕಳ ಕುಲದಲ್ಲಿಯೂ ಕೊಡಲ್ಪಟ್ಟ ಪಟ್ಟಗಳ ಹೆಸರುಗಳು ಯಾವವಂದರೆ—ಯೆಹೂದನ ಬೆಟ್ಟಗಳಲ್ಲಿರುವ ಅನಾಕನ ತಂದೆಯಾದ ಅರ್ಬನ ಹೆಸರಿನ ಪಟ್ಟಣವಾದ ಹೆಬ್ರೋನನ್ನೂ, ಅದರ ಸುತ್ತಲಿರುವ ಪ್ರಾಂ
೧೨ ತಪುರಗಳನ್ನೂ ಅವರಿಗೆ ಕೊಟ್ಟರು. ಆದರೆ ಆ ಪಟ್ಟದ ಹೊಲ ಬುಗಳನ್ನೂ, ಅದರ ಗ್ರಾಮಗಳನ್ನೂ ಯೆಫುನ್ನೆಯ ಮಗನಾದ
೧೩ ಕಾಲೆಬನಿಗೆ ಬಾಧ್ಯತೆಯಾಗಿ ಕೊಟ್ಟರು. ಹೀಗೆಯೇ ಯಾಜಕನಾದ ಆರೋನನ ಮಕ್ಕಳಿಗೆ, ಕೊಲೆ ಮಾಡಿದವನಿಗೆ ಆಶ್ರಯ ಪಟ್ಟಣವಾದ ಹೆಬ್ರೋನನ್ನೂ, ಅದರ ಪ್ರಾಂತಪುರಗಳನ್ನೂ, ಲಿಬ್ನವನ್ನೂ ಅದರ ಪ್ರಾಂತಪುರಗಳನ್ನೂ, ಯತ್ತೀರನ್ನೂ, ಅದ
೧೪ ರ ಪ್ರಾಂತಪುರಗಳನ್ನೂ, ಎಷ್ಟೆಮೋವನ್ನೂ, ಅದರ ಪ್ರಾಂ
೧೫ ತಪುರಗಳನ್ನೂ, ಹೊಲೋನನ್ನೂ, ಅದರ ಪ್ರಾಂತಪುರಗಳನ್ನೂ ದೆಬೀರನ್ನೂ, ಅದರ ಪ್ರಾಂತಪುರಗಳನ್ನೂ, ಅಯಿನನ್ನೂ, ಅದರ ಪ್ರಾಂತಪುರಗಳನ್ನೂ, ಯುಟ್ಟನನ್ನೂ, ಅದರ ಪ್ರಾಂತಪುರಗಳನ್ನೂ, ಬೇತ್ಶೆಮೆಷನ್ನೂ, ಅದರ ಪ್ರಾಂತಪುರಗಳನ್ನೂ,
೧೬ ಹೀಗೆಯೇ ಆ ಎರಡು ಕುಲಗಳಿಂದ ಈ ಒಂಭತ್ತು ಪಟ್ಟಣಗಳನ್ನು
೧೭ ಕೊಟ್ಟರು. ಇದಲ್ಲದೆ ಬೆನ್ಯಮಿನನ ಕುಲದಲ್ಲಿ ಗಿಬ್ಯೋನನ್ನೂ, ಅದರ ಪ್ರಾಂತಪುರಗಳನ್ನೂ, ಗೇಬನ್ನೂ, ಅದರ ಪ್ರಾಂತಪುರಗಳನ್ನೂ, ಅಣಾತೋತನ್ನೂ, ಅದರ ಪ್ರಾಂತಪುರಗಳನ್ನೂ,
೧೮ ಅಲ್ಮೋನನ್ನೂ, ಅದರ ಪ್ರಾಂತಪುರಗಳನ್ನೂ, ನಾಲ್ಕು ಪಟ್ಟಗಳನ್ನು, ಕೊಟ್ಟರು. ಯಾಜಕನಾದ ಆರೋನನ ಮಕ್ಕಳ ಪಟ್ಟಗಳೆಲ್ಲಾ ಹದಿಮೂರು ಪಟ್ಟಗಳೂ ಅವುಗಳ ಪ್ರಾಂತಪು
೧೯ ರಗಳೂ. ಇದಲ್ಲದೆ ಲೇವ್ಯರಾದ ಕೋಹತನ ಮಕ್ಕಳಲ್ಲಿ ಉಳಿದ
೨೦ ಇತರ ಮಕ್ಕಳಿಗೆ ಭಾಗವಾದ ಪಟ್ಟಗಳು, ಎಫ್ರಯಿಮನ ಕುಲದಲ್ಲಿ ಉಂಟಾದವು.

ಕೊಲೆ ಮಾಡಿದವನಿಗೆ ಆಶ್ರಯ ಪಟ್ಟಣವಾದ ಎಫ್ರಯಿಮನ ಬೆಟ್ಟಗಳಲ್ಲಿರುವ ಬೆಕೆಮನ್ನೂ ಅದರ ಪ್ರಾಂತಪುರಗಳನ್ನೂ, ಗೇಜರನ್ನೂ ಅದರ ಪ್ರಾಂತಪುರಗಳನ್ನೂ, ಕಿಬ್ಜಾಯಿಮನ್ನೂ ಅ
೨೧ ದರ ಪ್ರಾಂತಪುರಗಳನ್ನೂ, ಬೇಥೊರೋನನ್ನೂ, ಅದರ ಪ್ರಾಂತಪುರಗಳನ್ನೂ, ನಾಲ್ಕು ಪಟ್ಟಗಳನ್ನು ಕೊಟ್ಟರು. ಇದಲ್ಲದೆ
೨೨ ದಾನನ ಕುಲದಲ್ಲಿ ಎಲ್ತೆಕೆಯನ್ನೂ, ಅದರ ಪ್ರಾಂತಪುರಗಳನ್ನೂ, ಗಿಬ್ಬೆತೋನನ್ನೂ, ಅದರ ಪ್ರಾಂತಪುರಗಳನ್ನೂ, ಅಯ್ಯಲೋ
೨೩ ನನ್ನೂ, ಅದರ ಪ್ರಾಂತಪುರಗಳನ್ನೂ, ಗತ್ರಿಮ್ಮೋನನ್ನೂ, ಅದರ ಪ್ರಾಂತಪುರಗಳನ್ನೂ, ನಾಲ್ಕು ಪಟ್ಟಗಳನ್ನು, ಕೊಟ್ಟರು.
೨೪ ಮನಸ್ಸೆಯ ಅರ್ಧ ಕುಲದಲ್ಲಿ ತಾಣಕವನ್ನೂ ಅದರ ಪ್ರಾಂತಪುರಗಳನ್ನೂ, ಗತ್ರಿಮ್ಮೋನನ್ನೂ ಅದರ ಪ್ರಾಂತಪುರಗಳನ್ನೂ,
೨೫ ಎರಡು ಪಟ್ಟಗಳನ್ನು ಕೊಟ್ಟರು. ಹೀಗೆಯೇ ಉಳಿದಂಥ ಕೋಹತನ ಮಕ್ಕಳ ಗೋತ್ರಗಳಿಗೆ ಉಂಟಾದ ಪಟ್ಟಗಳೆಲ್ಲಾ ಹತ್ತು ಪಟ್ಟಗಳೂ, ಅವುಗಳ ಪ್ರಾಂತಪುರಗಳೂ.
೨೬ ಲೇವ್ಯರ ಗೋತ್ರಗಳಲ್ಲಿರುವ ಗೆರ್ಷೋನಿನ ಮಕ್ಕಳಿಗೆ ಮನಸ್ಸೆಯ ಅರ್ಧ ಕುಲದಲ್ಲಿ ಕೊಲೆ ಮಾಡಿದವನಿಗೆ ಆಶ್ರಯ ಪಟ್ಟಣವಾದ ಬಾಶಾನಿನಲ್ಲಿರುವ ಗೋಲಾನನ್ನೂ, ಅದರ ಪ್ರಾಂತಪುರಗ
೨೭ ಳನ್ನೂ, ಬೇಟ್ಟೆರವನ್ನೂ, ಅದರ ಪ್ರಾಂತಪುರಗಳನ್ನೂ—ಎರಡು ಪಟ್ಟಗಳನ್ನು ಕೊಟ್ಟರು. ಇದಲ್ಲದೆ ಇಸ್ಸಕಾರನ ಕುಲದಲ್ಲಿ
೨೮ ಕಿಶೋನನ್ನೂ, ಅದರ ಪ್ರಾಂತಪುರಗಳನ್ನೂ, ದಬ್ರತನ್ನೂ, ಅದರ ಪ್ರಾಂತಪುರಗಳನ್ನೂ, ಯರ್ಮೂತನ್ನೂ, ಅದರ ಪ್ರಾಂತಪುರಗಳನ್ನೂ, ಎನ್‌ಗನ್ನಿಮನ್ನೂ, ಅದರ ಪ್ರಾಂತಪುರಗಳ
೨೯ ನ್ನೂ—ನಾಲ್ಕು ಪಟ್ಟಗಳನ್ನು ಕೊಟ್ಟರು. ಮತ್ತು ಆಶೇರನ ಕುಲದಲ್ಲಿ ಮಿಷಾಲನ್ನೂ, ಅದರ ಪ್ರಾಂತಪುರಗಳನ್ನೂ, ಅಬ್ದೋ
೩೦ ನನ್ನೂ, ಅದರ ಪ್ರಾಂತಪುರಗಳನ್ನೂ, ಹೆಲ್ಕತನ್ನೂ, ಅದರ ಪ್ರಾಂತಪುರಗಳನ್ನೂ, ಕೆಹೋಬನ್ನೂ, ಅದರ ಪ್ರಾಂತಪುರಗಳ
೩೧ ನ್ನೂ—ನಾಲ್ಕು ಪಟ್ಟಗಳನ್ನು ಕೊಟ್ಟರು. ನೆಫ್ತಲಿಯ ಕುಲದಲ್ಲಿ ಕೊಲೆ ಮಾಡಿದವನಿಗೆ ಆಶ್ರಯದ ಪಟ್ಟಣವಾದ ಗಲಿಲಾಯದಲ್ಲಿರುವ ಕೇದೆಷನ್ನೂ, ಅದರ ಪ್ರಾಂತಪುರಗಳನ್ನೂ, ಹಮ್ಮೋತ್‌ದೋರನ್ನೂ, ಅದರ ಪ್ರಾಂತಪುರಗಳನ್ನೂ, ಕರ್ತಾನನ್ನೂ, ಅದರ
33 ಪ್ರಾಂತಪುರಗಳನ್ನೂ—ಮೂರು ಪಟ್ಟಗಳನ್ನು ಕೊಟ್ಟರು. ಗರ್ಷೋನ್ಯರಿಗೆ, ಅವರ ಗೋತ್ರಗಳ ಪ್ರಕಾರ, ಉಂಟಾದ ಪಟ್ಟಗಳೆಲ್ಲಾ ಹದಿಮೂರು ಪಟ್ಟಗಳೂ, ಅವುಗಳ ಪ್ರಾಂತಪುರಗ

೨೪ ಳೂ. ಉಳಿದ ಶೇವ್ಯರಾದ ಮೆರಾರಿಯ ಮಕ್ಕಳ ಗೋತ್ರಗಳಿಗೆ
ಜೆಬುಲೋನನ ಕುಲದಲ್ಲಿ ಯೊಕ್ನೆಯಮನೂಪ, ಅದರ ಪ್ರಾಂತ
ಪುರಗಳನೂಪ, ಕರ್ತಾವನೂಪ, ಅದರ ಪ್ರಾಂತಪುರಗಳನೂಪ, ದಿ
೩೫ ಮ್ನಾವನೂಪ, ಅದರ ಪ್ರಾಂತಪುರಗಳನೂಪ, ನಹಲಾಲನೂಪ, ಅದ
ರ ಪ್ರಾಂತಪುರಗಳನೂಪ—ನಾಲ್ಕು ಪಟ್ಟಣಗಳನ್ನು ಕೊಟ್ಟರು.
೩೬ ಇದಲ್ಲದೆ ರೂಬೆನನ ಕುಲದಲ್ಲಿ ಬೇಚೆರನೂಪ, ಅದರ ಪ್ರಾಂತಪು
ರಗಳನೂಪ, ಯಾಹಚನೂಪ, ಅದರ ಪ್ರಾಂತಪುರಗಳನೂಪ,
ಕೆದೆಮೋತನೂಪ, ಅದರ ಪ್ರಾಂತಪುರಗಳನೂಪ, ಮೆಫಾತನೂಪ,
೩೭ ಅದರ ಪ್ರಾಂತಪುರಗಳನೂಪ—ನಾಲ್ಕು ಪಟ್ಟಣಗಳನ್ನು ಕೊಟ್ಟರು.
೩೮ ಮತ್ತು ಗಾದನ ಕುಲದಲ್ಲಿ ಕೊಲೆ ಮಾಡಿದವನಿಗೆ ಆಶ್ರಯದ ಪ
ಟ್ಟಣವಾದ ಗಿಲ್ಯಾದಿನಲ್ಲಿರುವ ರಾಮೋತನೂಪ, ಅದರ ಪ್ರಾಂತಪು
ರಗಳನೂಪ, ಮಹನಾಯಿಮನೂಪ, ಅದರ ಪ್ರಾಂತಪುರಗಳ
ನೂಪ, ಹೆಷ್ಬೋನನೂಪ, ಅದರ ಪ್ರಾಂತಪುರಗಳನೂಪ, ಯಾ
ಜೆರನೂಪ, ಅದರ ಪ್ರಾಂತಪುರಗಳನೂಪ—ನಾಲ್ಕು ಪಟ್ಟಣಗಳನ್ನು
೪೦ ಕೊಟ್ಟರು. ಹೀಗೆಯೇ ಶೇವ್ಯರ ಗೋತ್ರಗಳಲ್ಲಿ ಉಳಿದಂಥ
ಮೆರಾರಿಯ ಮಕ್ಕಳಿಗೆ, ಅವರ ಗೋತ್ರಗಳ ಪ್ರಕಾರ, ಚೀಟಿನಿಂ
ದ ಉಂಟಾದ ಪಟ್ಟಣಗಳೆಲ್ಲಾ ಹನ್ನೆರಡು ಪಟ್ಟಣಗಳೂ, ಅವುಗಳ
ಪ್ರಾಂತಪುರಗಳೂ.
೪೧ ಇಸ್ರಯೇಲ್ ಮಕ್ಕಳ ಸ್ವಾಸ್ತ್ಯದ ಮಧ್ಯದಲ್ಲಿ ಇರುವ ಶೇವ್ಯ
೪೨ ರ ಎಲ್ಲಾ ಪಟ್ಟಣಗಳೂ, ಅವುಗಳ ಪ್ರಾಂತಪುರಗಳೂ, ನಾಲ್ವತ್ತೆಂ
ಟು ಪಟ್ಟಣಗಳು; ಈ ಪಟ್ಟಣಗಳಲ್ಲಿ ಪ್ರತಿ ಪಟ್ಟಣಕ್ಕೆ ಅದರದರ ಸುತ್ತ
ಲೂ ಪ್ರಾಂತಪುರಗಳು ಇದ್ದವು; ಈ ಪಟ್ಟಣಗಳಿಗೆಲ್ಲಾ ಹೀಗೆಯೇ.
೪೩ ಕರ್ತನು ಅವರ ತಂದೆಗಳಿಗೆ ಕೊಡುವೆನೆಂದು ಆಣೆ ಇಟ್ಟ ದೇ
ಶವೆಲ್ಲಾ ಇಸ್ರಯೇಲಿಗೆ ಕೊಟ್ಟನು; ಅವರು ಅದನ್ನು ಸ್ವತಂತ್ರಿಸಿ
೪೪ ಕೊಂಡು, ಅದರಲ್ಲಿ ವಾಸವಾಗಿದ್ದರು. ಕರ್ತನು ಅವರ ತಂದೆಗಳಿ
ಗೆ ಆಣೆ ಇಟ್ಟ ಪ್ರಕಾರವೆಲ್ಲಾ, ಅವರ ಸುತ್ತಲೂ ಅವರಿಗೆ ವಿಶ್ರಾಂ
ತಿ ಕೊಟ್ಟನು; ಅವರ ಎಲ್ಲಾ ಶತ್ರುಗಳಲ್ಲಿಯೂ ಒಬ್ಬನಾದರೂ
ಅವರ ಮುಂದೆ ನಿಲ್ಲಲಿಲ್ಲ; ಅವರ ಶತ್ರುಗಳನ್ನೆಲ್ಲಾ ಕರ್ತನು ಅವ
೪೫ ರ ಕೈಯಲ್ಲಿ ಒಪ್ಪಿಸಿದನು. ಕರ್ತನು ಇಸ್ರಯೇಲ್ ಮನೆಗೆ ಹೇಳಿ
ದ ಒಳ್ಳೇ ಮಾತುಗಳಲ್ಲಿ ಒಂದು ಮಾತಾದರೂ ಬಿದ್ದು ಹೋಗಲಿ
ಲ್ಲ; ಎಲ್ಲಾ ಸಂಭವಿಸಿತು.

## ೨೨. ಸಂಧಿ.

೧ ಆಗ ಯೆಹೋಶುವ ರೂಬೆನ್ಯರನೂಪ, ಗಾದಿಯರನೂಪ,
೨ ಮನಸ್ಸೆಯ ಅರ್ಧ ಗೋತ್ರದವರನೂಪ ಕರಿಸಿ, ಅವರಿಗೆ ಹೇಳಿ
ದ್ದೇನಂದರೆ—ಕರ್ತನ ಸೇವಕನಾದ ಮೋಶೆ ನಿಮಗೆ ಆಜ್ಞಾಪಿಸಿದ
ಎಲ್ಲವನ್ನು ನೀವು ಕೈಕೊಂಡು, ನಾನು ನಿಮಗೆ ಆಜ್ಞಾಪಿಸಿದ್ದೆ
೩ ಲ್ಲಾದರಲ್ಲಿ ನನ್ನ ಮಾತನ್ನು ಕೇಳ್ದಿರಿ. ನೀವು ಬಹಳ ದಿವಸಗ
ಳಿಂದ ಇಂದಿನ ಪರ್ಯಂತರ ನಿಮ್ಮ ಸಹೋದರರನ್ನು ಕೈ ಬಿಡದೆ,
ನಿಮ್ಮ ದೇವರಾದ ಕರ್ತನ ಆಜ್ಞೆಯಾದ ಕಾಯಿದೆಯನ್ನು ಕೈ
೪ ಕೊಂಡಿರಿ. ಈಗ ನಿಮ್ಮ ದೇವರಾದ ಕರ್ತನು ಅವರಿಗೆ ಮಾತು
ಕೊಟ್ಟ ಪ್ರಕಾರ ನಿಮ್ಮ ಸಹೋದರರಿಗೆ ವಿಶ್ರಾಂತಿ ಕೊಟ್ಟಿದ್ದನು.
ಮತ್ತು ಕರ್ತನ ಸೇವಕನಾದ ಮೋಶೆ ಯೊರ್ದನಿಗೆ ಆಚೆ ನಿಮ
ಗೆ ಕೊಟ್ಟ ಸ್ವಾಸ್ತ್ಯವಾದ ನಿಮ್ಮ ದೇಶದಲ್ಲಿರುವ ನಿಮ್ಮ ಗುಡಾರ
೫ ಗಳಿಗೆ ಶಿರಿಗಿ ಹೋಗಿರಿ. ಆದರೆ ಕರ್ತನ ಸೇವಕನಾದ ಮೋಶೆ
ನಿಮಗೆ ಆಜ್ಞಾಪಿಸಿದ ಆಜ್ಞೆಯನ್ನೂ ನ್ಯಾಯಪ್ರಮಾಣವನ್ನೂ
ಜಾಗ್ರತೆಯಾಗಿ ಕೈಕೊಂಡು ಮಾಡಿ, ನಿಮ್ಮ ದೇವರಾದ ಕರ್ತ
ನನ್ನು ಪ್ರೀತಿ ಮಾಡಿ, ಅವನ ಎಲ್ಲಾ ಮಾರ್ಗಗಳಲ್ಲಿ ನಡೆದು, ಅವ
ನ ಆಜ್ಞೆಗಳನ್ನು ಕೈಕೊಂಡು, ಅವನನ್ನು ಅಂಟಿಕೊಂಡು, ಅವನ
ನ್ನು ನಿಮ್ಮ ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂ
ದಲೂ ಸೇವಿಸಿರಿ.
೬ ಮತ್ತು ಯೆಹೋಶುವ ಅವರನ್ನು ಆಶೀರ್ವದಿಸಿ, ಕಳುಹಿಸಿ
೭ ಬಿಟ್ಟಾಗ, ಅವರು ತಮ್ಮ ಗುಡಾರಗಳಿಗೆ ಹೋದರು. ಮನಸ್ಸೆ
ಯ ಅರ್ಧ ಕುಲಕ್ಕೆ ಮೋಶೆ ಬಾಷಾನಿನಲ್ಲಿ ಸ್ವಾಸ್ತ್ಯ ಕೊಟ್ಟಿ
ದ್ದನು; ಅದರೆ ಅರ್ಧ ಕುಲಕ್ಕೆ ಯೆಹೋಶುವ ಯೊರ್ದನಿನ ಈ
ಕಡೆಯಲ್ಲಿ ಪಶ್ಚಿಮಕ್ಕೆ ಅವರ ಸಹೋದರರ ನಡುವೆ ಸ್ವಾಸ್ತ್ಯ
೮ ಕೊಟ್ಟನು. ಇದಲ್ಲದೆ ಯೆಹೋಶುವನು ಅವರನ್ನು ಅವರ ಗುಡಾ
ರಗಳಿಗೆ ಕಳುಹಿಸಿ ಬಿಡುವಾಗ, ಅವರನ್ನು ಆಶೀರ್ವದಿಸಿ, ಅವರಿಗೆ,
ನೀವು ಬಹು ಆಸ್ತಿಯೂ ಬಹು ಹೆಚ್ಚಾದ ಧನ ಕುರಿಗಳೂ ಬೆಳ್ಳಿ,
ಭಂಗಾರ, ತಾಮ್ರ, ಕಬ್ಬಿಣವೂ, ಬಹು ಹೆಚ್ಚಾದ ವಸ್ತ್ರಗಳೂ
ಉಂಟಾದವರಾಗಿ, ಶಿರಿಗಿ ನಿಮ್ಮ ಗುಡಾರಗಳಿಗೆ ಹೋಗಿ, ನಿಮ್ಮ
ಶತ್ರುಗಳ ಕೊಳ್ಳೆಯನ್ನು ನಿಮ್ಮ ಸಹೋದರರ ಸಂಗಡ ಹಂಚಿ
ಕೊಳ್ಳಿರಿ, ಅಂದನು.
೯ ಮತ್ತು ರೂಬೆನನ ಮಕ್ಕಳೂ, ಗಾದನ ಮಕ್ಕಳೂ, ಮನಸ್ಸೆ
ಯ ಅರ್ಧ ಕುಲದವರೂ, ಕರ್ತನು ಮೋಶೆಗೆ ಆಜ್ಞಾಪಿಸಿದ ಪ್ರ
ಕಾರ, ತಾವು ವಸ ಮಾಡಿ ಕೊಂಡ, ತಮ್ಮ ಸ್ವಾಸ್ತ್ಯವಾದ ದೇಶ
ವಾಗಿರುವ ಗಿಲ್ಯಾದ್ ದೇಶಕ್ಕೆ ಹೋಗುವದಕ್ಕೆ, ಕಾನಾನ್ ದೇಶ
ದಲ್ಲಿರುವ ಶಿಲೋವನೂಪ, ಇಸ್ರಯೇಲ್ ಮಕ್ಕಳನ್ನೂಪ ಬಿಟ್ಟು
ಶಿರಿಗಿ ಹೋದರು.
೧೦ ಕಾನಾನ್ ದೇಶದಲ್ಲಿರುವ ಯೊರ್ದನಿನ ಪ್ರಾಂತ್ಯಕ್ಕೆ ಬಂದಾ
ಗ, ಅದರ ಬಳಿಯಲ್ಲಿ ರೂಬೆನನ ಮಕ್ಕಳೂ, ಗಾದನ ಮಕ್ಕಳೂ,
ಮನಸ್ಸೆಯ ಅರ್ಧ ಕುಲದವರೂ, ನೋಟಕ್ಕೆ ದೊಡ್ಡದಾದ ಪೀಠ
ವನ್ನು ಕಟ್ಟಿದರು.
೧೧ ಇಗೋ, ರೂಬೆನನ ಮಕ್ಕಳೂ, ಗಾದನ ಮಕ್ಕಳೂ, ಮನಸ್ಸೆ
ಯ ಅರ್ಧ ಕುಲದವರೂ, ಕಾನಾನ್ ದೇಶಕ್ಕೆ ಎದುರಾಗಿ, ಇಸ್ರ
ಯೇಲ್ ಮಕ್ಕಳು ದಾಟಿ ಬಂದ ಯೊರ್ದನಿನ ಪ್ರಾಂತ್ಯದಲ್ಲಿ ಬಲಿ
ಪೀಠವನ್ನು ಕಟ್ಟಿದರೆಂದು, ಇಸ್ರಯೇಲ್ ಮಕ್ಕಳು ಕೇಳಿದರು.
೧೨ ಇಸ್ರಯೇಲ್ ಮಕ್ಕಳು ಅದನ್ನು ಕೇಳಿದಾಗ, ಇಸ್ರಯೇಲ್ ಮ
ಕ್ಕಳ ಸಭೆಯೆಲ್ಲಾ ದಂಡಾಗಿ ಅವರ ಮೇಲೆ ಹೋಗುವದಕ್ಕೆ, ಶಿ
೧೩ ಲೋವಿನಲ್ಲಿ ಕೂಡಿದರು. ಗಿಲ್ಯಾದ್ ದೇಶದಲ್ಲಿರುವ ರೂಬೆನನ
ಮಕ್ಕಳ ಬಳಿಗೂ, ಗಾದನ ಮಕ್ಕಳ ಬಳಿಗೂ, ಮನಸ್ಸೆಯ ಅ
ರ್ಧ ಕುಲದವರ ಬಳಿಗೂ ಯಾಜಕನಾದ ಎಲೆಯಾಜರನ ಮಗ
೧೪ ನಾದ ಫಿನೆಹಾಸನನೂಪ, ಅವನ ಸಂಗಡ ಇಸ್ರಯೇಲಿನ ಎಲ್ಲಾ
ಕುಲಗಳಲ್ಲಿ ಪ್ರತಿ ಪಿತೃವಿನ ಮನೆಗೆ ಒಬ್ಬ ಪ್ರಭುವಿನ ಪ್ರಕಾರ,
ಹತ್ತು ಮಂದಿ ಪ್ರಭುಗಳನ್ನೂಪ ಕಳುಹಿಸಿದರು. ಇವರಲ್ಲಿ ಪ್ರತಿ
ಮನುಷ್ಯನು ಇಸ್ರಯೇಲ್ ಸಹಸ್ರಗಳಲ್ಲಿ ತನ್ನ ತನ್ನ ತಂದೆಗಳ
ಮನೆಗೆ ಹಿರಿಯನಾಗಿದ್ದನು.
೧೫ ಇವರು ಗಿಲ್ಯಾದ್ ದೇಶದಲ್ಲಿ ರೂಬೆನನ ಮಕ್ಕಳ ಬಳಿಗೂ, ಗಾ
ದನ ಮಕ್ಕಳ ಬಳಿಗೂ ಮನಸ್ಸೆಯ ಅರ್ಧ ಕುಲದವರ ಬಳಿಗೂ
ಬಂದು, ಅವರ ಸಂಗಡ ಮಾತಾಡಿ, ಕರ್ತನ ಸಭೆಯೆಲ್ಲಾ ಹೇಳುವ
೧೬ ದೇನಂದರೆ, ನೀವು ಈ ಹೊತ್ತು ಕರ್ತನ ಕಡೆಯನ್ನು ಬಿಟ್ಟು, ಅವನಿ
ಗೆ ವಿರೋಧವಾಗಿ ಶಿರುಗ ಬೀಳುವ ಹಾಗೆ, ನಿಮಗೆ ಬಂದು ಬಲಿಪೀ
ಠವನ್ನು ಕಟ್ಟಿ ಕೊಂಡು, ಇಸ್ರಯೇಲ್ ದೇವರಿಗೆ ಮಾಡಿದ ಈ



೧೭ ಅಕೃತ್ಯವೇನು! ಪೆಯೋರನ ಅಕ್ರಮ ನಮಗೆ ಸ್ವಲ್ಪವೋ!
ಕರ್ತನ ಸಭೆಯ ಮೇಲೆ ಬಾಧೆ ಬಂದಾಗ್ಯೂ, ಈ ದಿನದ ವರ
೧೮ ಗೂ ಅದನ್ನು ಕಳೆದು ನಾವು ಶುದ್ಧವಾಗಿಲ್ಲ. ಮತ್ತು ಈ
ಹೊತ್ತು ಕರ್ತನ ಕಡೆಯಿಂದ ಶಿರುಗಿ ಹೋಗುತ್ತೀರಲ್ಲ! ಮತ್ತು
ಈ ಹೊತ್ತು ಕರ್ತನಿಗೆ ವಿರೋಧವಾಗಿ ಶಿರುಗ ಬಿದ್ದಾಗ, ನಾಳೆ
ಅವನು ಇಸ್ರಯೇಲ್ ಸಭೆಯೆಲ್ಲಾದರ ಮೇಲೆ ಕೌದ್ರವುಳ್ಳವನಾ
೧೯ ಗುವನು. ನಿಮ್ಮ ಸ್ವಾಸ್ತ್ಯವಾದ ದೇಶ ಅಶುದ್ಧವಾಗಿದ್ದರೆ, ಕರ್ತ
ನ ವಾಸ ಸ್ಥಳವು ಇರುವ ಕರ್ತನ ಸ್ವಾಸ್ತ್ಯವಾದ ದೇಶಕ್ಕೆ ನೀವು
ದಾಟಿ ಬಂದು, ನಮ್ಮ ಮಧ್ಯದಲ್ಲಿ ಸ್ವಾಸ್ತ್ಯವನ್ನು ಶೆಗೆದು ಕೊ
೨೦ ಳ್ಳಿರಿ. ಕರ್ತನ ಬಲಿಪೀಠವನ್ನು ಹೊರ್ತಾಗಿ, ನಿಮಗೋಸ್ಕರ
ಬೊಂದು ಬಲಿಪೀಠವನ್ನು ಕಟ್ಟಿ ಕೊಳ್ಳುವದರಿಂದ ನೀವು ಕರ್ತನಿಗೆ ವಿ
ರೋಧವಾಗಿ ಶಿರುಗ ಬೀಳ್ದಿ ಬೇಡಿರಿ; ನಮಗೆ ವಿರೋಧವಾಗಿಯೂ
ಶಿರುಗ ಬೀಳ್ದಿ ಬೇಡಿರಿ. ಸಫಿತವಾದದರಲ್ಲಿ ಜೇರಹನ ಮಗನಾದ
ಆಕಾನನು ಅಕೃತ್ಯ ಮಾಡಿದಾಗ, ಈ ಕೌದ್ರ ಆಗಲಿಲ್ಲವೋ!
ಮತ್ತು ಆ ಮನುಷ್ಯನು ಇಸ್ರಯೇಲ್ ಸಮಸ್ತ ಸಭೆಯ ಮೇಲೆ
ತನ್ನ ಅಕ್ರಮದಲ್ಲಿ ಒಬ್ಬನೇ ಶೀರ ಹೋಗಲಿಲ್ಲ.

೨೧ ರೂಬೆನನ ಮಕ್ಕಳೂ, ಗಾದನ ಮಕ್ಕಳೂ, ಮನಸ್ಸೆಯ
೨೨ ಅರ್ಧ ಕುಲದವರೂ ಇಸ್ರಯೇಲ್ ಸಹಸ್ರ ಮುಖ್ಯಸ್ಥರಿಗೆ ಪ್ರತ್ಯು
ತ್ತರ ಹೇಳಿದ್ದೇನಂದರೆ—ದೇವರುಗಳಿಗೆ ದೇವರಾದ ಕರ್ತನೇ, ದೇ
ವರುಗಳಿಗೆ ದೇವರಾದ ಕರ್ತನೇ, ಅವನೇ ತಿಳಿಯುತ್ತಾನೆ; ಮತ್ತು
ಇಸ್ರಯೇಲ್ ತಿಳಿಯುವದು. ಇದು ಶಿರುಗ ಬೀಳುವದರಿಂದಲಾದ
ರೂ, ಕರ್ತನಿಗೆ ವಿರೋಧವಾಗಿ ಅಕೃತ್ಯ ಮಾಡುವದರಿಂದಲಾದ
ರೂ ಉಂಟಾಗಿತ್ತಾದರೆ, ನಮ್ಮನ್ನು ಈ ಹೊತ್ತು ರಕ್ಷಿಸ ಬಾರ
೨೩ ದು. ನಾವು ದೇವರ ಕಡೆಯಿಂದ ಶಿರುಗಿ ಕೊಂಡು, ಹೋಮಗಳ
ನ್ನಾದರೂ, ಅರ್ಪಣೆಯನ್ನಾದರೂ, ಸಮಾಧಾನದ ಬಲಿಗಳ
ನ್ನಾದರೂ ಅದರ ಮೇಲೆ ಅರ್ಪಿಸುವದಕ್ಕೋಸ್ಕರ ಪೀಠವನ್ನು
೨೪ ಕಟ್ಟಿದ್ದು ಉಂಟಾದರೆ, ಕರ್ತನು ಅದನ್ನು ವಿಚಾರಿಸಲಿ. ಅದರೆ
ನಾಳೆ ನಿಮ್ಮ ಮಕ್ಕಳು ನಮ್ಮ ಮಕ್ಕಳಿಗೆ—ಇಸ್ರಯೇಲಿನ ದೇವ
೨೫ ರಾದ ಕರ್ತನಿಗೂ ನಿಮಗೂ ಏನು! ರೂಬೆನನ ಮಕ್ಕಳೇ, ಗಾ
ದನ ಮಕ್ಕಳೇ, ಕರ್ತನು ನಿಮಗೂ ನಮಗೂ ಯೊರ್ದನನ್ನು
ಮೇರೆ ಮಾಡಿದ್ದರಿಂದ ಕರ್ತನ ಕಾರ್ಯಗಳಲ್ಲಿ ನಿಮಗೆ ಭಾಗವು
ಇಲ್ಲವೆಂದು ಹೇಳಿ, ನಮ್ಮ ಮಕ್ಕಳನ್ನು ಕರ್ತನಿಗೆ ಭಯ ಪಡದ
ಹಾಗೆ ಮಾಡ್ಯಾರೆಂದು ಅಂಜಿ ಕೊಂಡು, ಇದನ್ನು ಮಾಡಿದೆವು;
೨೬ ಹೋಮಕ್ಕೋಸ್ಕರವಾದರೂ, ಬಲಿಗೋಸ್ಕರವಾದರೂ ಅಲ್ಲ.
ನಾಳೆ ನಿಮ್ಮ ಮಕ್ಕಳು ನಮ್ಮ ಮಕ್ಕಳಿಗೆ ಕರ್ತನಲ್ಲಿ ನಿಮಗೆ
೨೭ ಭಾಗವಿಲ್ಲವೆಂದು ಹೇಳಿದೆ ಇರುವ ಹಾಗೆಯೂ, ಮತ್ತು ನಾವು
ಕರ್ತನ ಸನ್ನಿಧಿಯಲ್ಲಿ ಹೋಮಗಳಿಂದಲೂ, ಬಲಿಗಳಿಂದಲೂ,
ಸಮಾಧಾನದ ಬಲಿಗಳಿಂದಲೂ ಅವನನ್ನು ಸೇವಿಸುವ ಹಾಗೆಯೂ,
ನಮಗೂ ನಿಮಗೂ, ನಮ್ಮ ತರುವಾಯ ನಮ್ಮ ಸಂತತಿಯವರಿ
ಗೂ ಮಧ್ಯದಲ್ಲಿ ಸಾಕ್ಷಿ ಉಂಟಾಗಿರುವ ಬಗ್ಯೆ, ಪೀಠವನ್ನು
೨೮ ಕಟ್ಟಿ ಕೊಳ್ಳುವ ಎಂದು ಹೇಳಿ, ಮಾಡಿದೆವು. ನಾವು ಅಂದು
ಕೊಂಡದ್ದೇನಂದರೆ—ನಾಳೆ ನಮಗಾದರೂ, ನಮ್ಮ ಸಂತತಿಯವರಿ
ಗಾದರೂ, ಹಾಗೆ ಹೇಳಿದರೆ, ಆಗ ಹೊಮಕ್ಕಾದರೂ ಬಲಿಗಳಿಗಾ
ದರೂ ಅಲ್ಲ; ನಮಗೂ ನಿಮಗೂ ನಡುವೆ ಸಾಕ್ಷಿಗೋಸ್ಕರ ನಮ್ಮ
ತಂದೆಗಳು ಉಂಟು ಮಾಡಿದ ಕರ್ತನ ಬಲಿಪೀಠದ ಹೋಲ್ವಿಕೆಯಾ
೨೯ ದ ಪೀಠವನ್ನು ನೋಡಿರಿ ಎಂದು ಹೇಳುವರು. ಅದರೆ ನಮ್ಮ ದೇವ
ರಾದ ಕರ್ತನ ವಾಸ ಸ್ಥಳದ ಮುಂದೆ ಇರುವ ಅವನ ಬಲಿಪೀಠವನ್ನು
ಹೊರ್ತಾಗಿ, ನಾವು ಹೋಮಗಳಿಗೋಸ್ಕರವಾಗಿಯೂ, ಅರ್ಪ
ಣೆಗಳಿಗೋಸ್ಕರವಾಗಿಯೂ, ಬಲಿಗಳಿಗೋಸ್ಕರವಾಗಿಯೂ ಮ
ತ್ತೊಂದು ಬಲಿಪೀಠವನ್ನು ಕಟ್ಟಿ, ಕರ್ತನಿಗೆ ವಿರೋಧವಾಗಿ ಶಿರುಗ
ಬೀಳುವದೂ, ಕರ್ತನ ಕಡೆಯಿಂದ ಶಿರುಗಿ ಹೋಗುವದೂ, ನಮ
ಗೆ ದೂರವಾಗಿರಲಿ, ಅಂದರು.
೩೦ ಮತ್ತು ಯಾಜಕನಾದ ಫಿನೆಹಾಸನೂ, ಅವನ ಸಂಗಡ ಇದ್ದ
ಸಭೆಯ ಪ್ರಭುಗಳೂ, ಇಸ್ರಯೇಲ್ ಸಹಸ್ರಗಳ ಮುಖ್ಯಸ್ಥರೂ,
ರೂಬೆನನ ಮಕ್ಕಳೂ, ಗಾದನ ಮಕ್ಕಳೂ, ಮನಸ್ಸೆಯ ಮಕ್ಕ
ಳೂ ಹೇಳಿದ ಮಾತುಗಳನ್ನು ಕೇಳಿದಾಗ, ಅವರಿಗೆ ವಿಹಿತವಾಗಿ
೩೧ ತೋರಿದವು. ಮತ್ತು ಯಾಜಕನಾಗಿರುವ ಎಲೆಯಾಜರನ ಕು
ಮಾರನಾದ ಫಿನೆಹಾಸನು ರೂಬೆನನ ಮಕ್ಕಳಿಗೂ, ಗಾದನ ಮ
ಕ್ಕಳಿಗೂ, ಮನಸ್ಸೆಯ ಮಕ್ಕಳಿಗೂ ಹೇಳಿದ್ದೇನಂದರೆ, ನೀವು
ಕರ್ತನಿಗೆ ವಿರೋಧವಾಗಿ ಈ ಅಕೃತ್ಯವನ್ನು ಮಾಡದೆ ಇರುವ
ದರಿಂದ, ಕರ್ತನು ನಮ್ಮ ಮಧ್ಯದಲ್ಲಿ ಇದ್ದಾನೆಂದು, ಇಂದು ಅರಿತಿ
ದ್ದೇವೆ. ಈಗ ನೀವು ಇಸ್ರಯೇಲ್ ಮಕ್ಕಳನ್ನು ಕರ್ತನ ಕೈಗೆ
ತಪ್ಪಿಸಿದಿರಿ, ಅಂದರು.
೩೨ ಮತ್ತು ಯಾಜಕನಾದ ಎಲೆಯಾಜರನ ಮಗ ಫಿನೆಹಾಸನೂ
ಪ್ರಭುಗಳೂ ಗಿಲ್ಯಾದ್ ದೇಶದಲ್ಲಿರುವ ರೂಬೆನನ ಮಕ್ಕಳನ್ನೂ
ಗಾದನ ಮಕ್ಕಳನ್ನೂ ಬಿಟ್ಟು, ಕಾನಾನ್ ದೇಶದಲ್ಲಿರುವ ಇಸ್ರ
ಯೇಲ್ ಮಕ್ಕಳ ಬಳಿಗೆ ಶಿರಿಗಿ ಬಂದು, ಅವರಿಗೆ ಪ್ರತ್ಯುತ್ತರವ
೩೩ ನ್ನು ತಂದರು. ಆ ಮಾತು ಇಸ್ರಯೇಲ್ ಮಕ್ಕಳಿಗೆ ವಿಹಿತವಾಗಿ
ತೋರಿತು. ಆದದರಿಂದ ಇಸ್ರಯೇಲ್ ಮಕ್ಕಳು ರೂಬೆನನ ಮಕ್ಕ
ಳೂ, ಗಾದನ ಮಕ್ಕಳೂ ನಿವಾಸವಾಗಿದ್ದ ದೇಶವನ್ನು ಕೆಡಿಸಿ ಬಿಡ
ಅವರ ಮೇಲೆ ಯುದ್ಧಕ್ಕೆ ಹೋಗ ಬೇಕೆಂಬುವ ಮಾತನ್ನು ಬಿ
ಟ್ಟು ಬಿಟ್ಟು, ದೇವರನ್ನು ಆಶೀರ್ವದಿಸಿದರು.
೩೪ ರೂಬೆನನ ಮಕ್ಕಳೂ ಗಾದನ ಮಕ್ಕಳೂ ಆ ಬಲಿಪೀಠಕ್ಕೆ
ಸಾಕ್ಷಿ ಎಂಬ ಅರ್ಥವಾಗುವ ಏದೆಂಬ ಹೆಸರಿಟ್ಟರು. ಯಾಕಂದ
ರೆ ಅದೇ ನಮಗೂ ನಿಮಗೂ, ಯೆಹೋವ ದೇವರಾಗಿದ್ದಾನೆ
ಎಂದು, ಸಾಕ್ಷಿಯಾಗಿರುವದು.

## ೨೩. ಸಂಧಿ.

೧ ಕರ್ತನು ಇಸ್ರಯೇಲಿಗೆ ಸುತ್ತಲಿರುವ ಎಲ್ಲಾ ಶತ್ರುಗಳಿಂದ
ತಪ್ಪಿಸಿ ವಿಶ್ರಾಂತಿಕೆ ಕೊಟ್ಟ ಬಹಳ ದಿವಸಗಳ ತರುವಾಯ, ಯೆ
ಹೋಶುವ ದಿವಸಗಳು ಗತಿಸಿ, ವೃದ್ಧನಾಗಿರುವಾಗ, ಅವನು ಸ
ಮಸ್ತ ಇಸ್ರಯೇಲನ್ನೂ, ಅವರ ಹಿರಿಯರನ್ನೂ, ಅವರ ಮು
ಖ್ಯಸ್ಥರನ್ನೂ, ಅವರ ನ್ಯಾಯಾಧಿಪತಿಗಳನ್ನೂ, ಅವರ ಪಾರು
೨ ಪತ್ಯಗಾರರನ್ನೂ ಕರಿಸಿ, ಅವರಿಗೆ ಹೇಳಿದ್ದೇನಂದರೆ—ನಾನು ವೃ
ದ್ಧನಾಗಿಯೂ ದಿವಸಗಳು ಗತಿಸಿದವನಾಗಿಯೂ ಇದ್ದೇನೆ.
೩ ಅದರೆ ನಿಮ್ಮ ದೇವರಾದ ಕರ್ತನು ನಿಮಗೋಸ್ಕರ ಈ ಸಕಲ
ಜನಾಂಗಗಳಿಗೆ ಮಾಡಿದ ಎಲ್ಲವನ್ನು ನೋಡಿದಿರಿ; ಯಾಕಂದರೆ
ನಿಮಗೋಸ್ಕರವಾಗಿ ಯುದ್ಧ ಮಾಡಿದವನು ಕರ್ತನಾದ ದೇವ
೪ ರೇ. ಇಗೋ, ನಾನು ಯೊರ್ದನ್ ಮೊದಲ್ಗೊಂಡು, ಪಶ್ಚಿಮಕ್ಕಿ
ರುವ ದೊಡ್ಡ ಸಮುದ್ರದ ಪರ್ಯಂತರಕ್ಕೂ, ಜನಾಂಗಗಳನ್ನು
ಕಡಿದು, ಉಳಿದ ಸಕಲ ಜನಾಂಗಗಳ ದೇಶಗಳನ್ನು ನಿಮ್ಮ ಕುಲಗ
ಳಿಗೆ ಬಾಧ್ಯತೆಯಾಗಿ ನಿಮಗೆ ಹಂಚಿ ಕೊಟ್ಟೆನು.

೫ ಇದಲ್ಲದೆ ನಿಮ್ಮ ದೇವರಾದ ಕರ್ತನು ಅವರನ್ನು ನಿಮ್ಮ ಮುಂದೆ
ತಳ್ಳಿ ಬಿಟ್ಟು, ನಿಮ್ಮ ಕಣ್ಣೆದುರಿನಿಂದ ಅವರನ್ನು ಹೊರಡಿಸಿ ಬಿಡು
ವನು. ನೀವು ಅವರ ದೇಶವನ್ನೂ, ಕರ್ತನು ನಿಮಗೆ ವಾಗ್ದತ್ತ
೬ ಮಾಡಿದ ಹಾಗೆಯೇ, ಸ್ವತಂತ್ರಿಸಿ ಕೊಳ್ಳುವಿರಿ. ಈಗ ನೀವು
ಮೋಶೆಯ ನ್ಯಾಯಪ್ರಮಾಣದ ಪುಸ್ತಕದಲ್ಲಿ ಬರೆದಿರುವ ಎಲ್ಲ
ವನ್ನು ಕೈ ಕೊಂಡು ಮಾಡುವ ಹಾಗೆ, ಅದನ್ನು ಬಿಟ್ಟು, ಬಲಗೆ
ಗಾದರೂ ಎಡಗೆಗಾದರೂ ತೊಲಗದೆ, ನಿಮ್ಮ ಮಧ್ಯದಲ್ಲಿ ಉಳಿ
೭ ದಿರುವ ಈ ಜನಾಂಗಗಳಲ್ಲಿ ಶೇರದೆ, ಅವರ ದೇವರುಗಳ ಹೆಸರು
ಗಳನ್ನು ಸ್ಮರಿಸದೆ, ಅವುಗಳ ಮೇಲೆ ಆಣೆ ಇಡಿಸದೆ, ನೀವು ಅವು
ಗಳಿಗೆ ಸೇವೆ ಮಾಡದೆ, ಅದ್ದ ಬೀಳದೆ ಇರುವ ಹಾಗೆ, ಬಲಗೊಂ
೮ ಡು, ಈ ದಿನದ ವರಿಗೂ ಮಾಡಿದ ಹಾಗೆಯೇ ನಿಮ್ಮ ದೇವರಾದ
ಕರ್ತನನ್ನು ಅಂಟಿ ಕೊಂಡಿರ್ರಿ. ಏನಂದರೆ ಕರ್ತನು ನಿಮ್ಮ
ಮುಂದೆ ದೊಡ್ಡವಾದ ಬಲವಾದ ಜನಾಂಗಗಳನ್ನು ಹೊರಡಿಸಿ ಬಿ
೯ ಟ್ಟನು. ನೀವಾದರೆ, ಈ ವರಿಗೂ ಒಬ್ಬರಾದರೂ ನಿಮ್ಮ ಮುಂದೆ
ನಿಲ್ಲಲಾರದೆ ಹೋದರು. ನಿಮ್ಮಲ್ಲಿ ಇರುವ ಒಬ್ಬನು ಸಾವಿರ
ಮಂದಿಯನ್ನು ಹಿಂದಟ್ಟುವನು. ಯಾಕಂದರೆ ನಿಮ್ಮ ದೇವರಾದ
ಕರ್ತನು ನಿಮಗೆ ಹೇಳಿದ ಹಾಗೆ, ಅವನೇ ನಿಮಗೋಸ್ಕರ
ಯುದ್ಧ ಮಾಡುತ್ತಾನೆ.
೧೦ ಅದರಿಂದ ನೀವು ನಿಮ್ಮ ದೇವರಾದ ಕರ್ತನನ್ನು ಪ್ರೀತಿ ಮಾ
ಡುವ ಹಾಗೆ, ನಿಮ್ಮ ಪ್ರಾಣಗಳಿಗೆ ಬಹಳ ಹೆಚ್ಚರಿಕೆಯಾಗಿರ್ರಿ.
೧೧ ಯಾಕಂದರೆ ನೀವು ಹ್ಯಾಗೂ ತಿರುಗಿ ಕೊಂಡು, ನಿಮ್ಮಲ್ಲಿ ಉಳಿ
ದಿರುವ ಈ ಜನಾಂಗಗಳ ಉಳುಹನ್ನು ಅಂಟಿ ಕೊಂಡು, ಅವರಿಗೆ
೧೩ ಬೀಗರಾಗಿ, ನೀವು ಅವರ ಬಳಿಗೂ, ಅವರು ನಿಮ್ಮ ಬಳಿಗೂ,
ಪ್ರವೇಶಿಸಿದರೆ, ನಿಮ್ಮ ದೇವರಾದ ಕರ್ತನು ಇನ್ನು ಈ ಜನಾಂಗ
ಗಳನ್ನು ನಿಮ್ಮ ಮುಂದೆ ಹೊರಡಿಸಿ ಬಿಡನು; ನಿಮ್ಮ ದೇವರಾದ
ಕರ್ತನು ನಿಮಗೆ ಕೊಟ್ಟ ಈ ಒಳ್ಳೇ ದೇಶದೊಳಗಿಂದ ನೀವು
ನಾಶನವಾಗಿ ಹೋಗುವ ಮಟ್ಟಿಗೂ, ಅವರು ನಿಮಗೆ ಉರ್ಲಾಗಿ
ಯೂ, ಸೇಣಾಗಿಯೂ, ನಿಮ್ಮ ಪಕ್ಕೆಯಲ್ಲಿ ಕೂಲವಾಗಿಯೂ,
ನಿಮ್ಮ ಕಣ್ಣುಗಳಿಗೆ ಮುಳ್ಳುಗಳಾಗಿಯೂ ಇರುವರೆಂದು, ತಿಳಿದೇ,
ತಿಳಿಯಿರಿ.
೧೪ ಇಗೋ, ಇಂದು ನಾನು ಭೂಮಿಯವೆಲ್ಲರ ಮಾರ್ಗವಾಗಿ
ಹೋಗುತ್ತೇನೆ. ನಿಮ್ಮ ದೇವರಾದ ಕರ್ತನು ನಿಮಗೋಸ್ಕರ ಹೇ
ಳಿದ ಎಲ್ಲಾ ಒಳ್ಳೇ ಮಾತುಗಳಲ್ಲಿ ಒಂದು ಮಾತಾದರೂ ತಪ್ಪ
ಲಿಲ್ಲವೆಂದು, ನಿಮ್ಮ ಪೂರ್ಣ ಹೃದಯದಿಂದಲೂ ನಿಮ್ಮ ಪೂರ್ಣ
೧೫ ಪ್ರಾಣದಿಂದಲೂ ಅರಿತಿದ್ದೀರಿ; ಅವುಗಳಲ್ಲಿ ಒಂದು ಮಾತಾದರೂ
ತಪ್ಪದೆ, ಅವೆಲ್ಲಾ ನಿಮಗೆ ಸಂಭವಿಸಿದವು. ಈಗ ನಿಮ್ಮ ದೇವರಾ
ದ ಕರ್ತನು ನಿಮ್ಮ ಸಂಗಡ ಹೇಳಿದ ಒಳ್ಳೇ ಕಾರ್ಯಗಳೆಲ್ಲಾ
ನಿಮಗೆ ಹ್ಯಾಗೆ ಸಂಭವಿಸಿದವೋ, ಹಾಗೆಯೇ ನಿಮ್ಮ ದೇವರಾದ
ಕರ್ತನು ನಿಮಗೆ ಆಜ್ಞಾಪಿಸಿದ ತನ್ನ ಆಜ್ಞೆಗಳನ್ನು ನೀವು ಮೀರಿ,
೧೬ ನೀವು ಹೋಗಿ, ಅನ್ಯ ದೇವರುಗಳನ್ನು ಸೇವಿಸಿ, ಅವುಗಳಿಗೆ ಅದ್ದ
ಬಿದ್ದರೆ, ನಿಮ್ಮ ದೇವರಾದ ಕರ್ತನು ನಿಮಗೆ ಕೊಟ್ಟ ಈ ಒಳ್ಳೇ
ದೇಶದಲ್ಲಿಂದ ನಿಮ್ಮನ್ನು ನಾಶನ ಮಾಡುವ ಮಟ್ಟಿಗೂ, ಕರ್ತನು
ನಿಮ್ಮ ಮೇಲೆ ಸಕಲ ಕೇಡುಗಳನ್ನು ಬರ ಮಾಡುವನು. ಮತ್ತು
ಕರ್ತನ ಕೋಪವು ನಿಮ್ಮ ಮೇಲೆ ಹೊತ್ತಿ, ಉರಿಯುವದು; ನೀವು
ಶೀಘ್ರವಾಗಿ ಅವನು ನಿಮಗೆ ಕೊಟ್ಟ ಒಳ್ಳೇ ದೇಶದಲ್ಲಿಂದ ನಾಶ
ವಾಗಿ ಹೋಗುವಿರಿ.

## ೨೪. ಸಂಧಿ.

೧ ಮತ್ತು ಯೆಹೋಶುವ ಬೆಕೆಮಿನಲ್ಲಿ ಇಸ್ರಯೇಲಿನ ಸಮಸ್ತ
ಕುಲಗಳನ್ನು ಕೂಡಿಸಿ, ಇಸ್ರಯೇಲಿನ ಹಿರಿಯರನ್ನೂ, ಅವರ
ಮುಖ್ಯಸ್ಥರನ್ನೂ, ಅವರ ನ್ಯಾಯಾಧಿಪತಿಗಳನ್ನೂ ಅವರ ಪಾ
ರುಪತ್ಯಗಾರರನ್ನೂ ಕರಿಸಿದನು. ಅವರು ದೇವರ ಮುಂದೆ ಬಂದು,
ನಿಂತರು.

೨ ಮತ್ತು ಯೆಹೋಶುವ ಎಲ್ಲಾ ಜನರಿಗೆ ಹೇಳಿದ್ದೇನಂದರೆ—
ಇಸ್ರಯೇಲಿನ ದೇವರಾದ ಕರ್ತನು ಹೇಳುವದೇನಂದರೆ, ಪೂರ್ವ
ದಲ್ಲಿ ನಿಮ್ಮ ತಂದೆಗಳು, ಅಬ್ರಹಾಮನಿಗೂ ನಾಹೋರನಿಗೂ ತಂ
ದೆಯಾದ ತೇರಹನು, ನದಿಯ ಆಚೆ ವಾಸವಾಗಿದ್ದು, ಅನ್ಯ ದೈ
ವಗಳನ್ನು ಆರಾಧಿಸುತ್ತಿದ್ದರು. ಆದರೆ ನಾನು ನದಿಯ ಆಚೆಯ
೩ ಲ್ಲಿ ಇದ್ದ ನಿಮ್ಮ ತಂದೆಯಾದ ಅಬ್ರಹಾಮನನ್ನು ಕರಕೊಂಡು
ಬಂದು, ಅವನನ್ನು ಕಾನಾನ್ ದೇಶವೆಲ್ಲಾ ಸಂಚರಿಸ ಮಾಡಿ, ಅವ
ನ ಬೀಜವನ್ನು ಅಭಿವೃದ್ಧಿ ಮಾಡಿದೆನು. ಅವನಿಗೆ ಇಸಾಕನ
೪ ನ್ನು ಕೊಟ್ಟೆನು. ಇಸಾಕನಿಗೆ ಯಾಕೋಬನನ್ನೂ ಏಸಾವನ
ನ್ನೂ ಕೊಟ್ಟು, ಏಸಾವನಿಗೆ ಸೇಯಿರ್ ಪರ್ವತದ ದೇಶವನ್ನು
ಸ್ವಾಸ್ತ್ಯವಾಗಿ ಕೊಟ್ಟೆನು. ಮತ್ತು ಯಾಕೋಬನೂ ಅವನ
೫ ಮಕ್ಕಳೂ ಐಗುಪ್ತಕ್ಕೆ ಹೋದರು. ನಾನು ಮೋಶೆಯನ್ನೂ ಆ
ರೋನನನ್ನೂ ಕಳುಹಿಸಿ, ಅದರ ಮಧ್ಯದಲ್ಲಿ ನಾನು ಮಾಡಿದವು
ಗಳ ಪ್ರಕಾರ ಐಗುಪ್ತವನ್ನು ಬಾಧಿಸಿದೆನು. ತರುವಾಯ ನಿಮ್ಮನ್ನು
೬ ಹೊರಡ ಮಾಡಿದೆನು. ನಾನು ನಿಮ್ಮ ತಂದೆಗಳನ್ನು ಐಗುಪ್ತದಿಂದ
ಹೊರಡ ಮಾಡಿದಾಗ, ನೀವು ಸಮುದ್ರದ ತೀರಕ್ಕೆ ಬಂದಿರಿ. ಆದ
ರೆ ಐಗುಪ್ತ್ಯರು ರಥಗಳ ಸಂಗಡಲೂ, ರಥಿಕರ ಸಂಗಡಲೂ, ನಿಮ್ಮ
೭ ತಂದೆಗಳನ್ನು ಕೆಂಪು ಸಮುದ್ರದ ಮಟ್ಟಿಗೂ ಹಿಂದಟ್ಟಿದರು. ಅವ
ರು ಕರ್ತನಿಗೆ ಕೂಗಿದಾಗ, ನಿಮಗೂ ಐಗುಪ್ತ್ಯರಿಗೂ ಮಧ್ಯದ
ಲ್ಲಿ ಅಂಧಕಾರವನ್ನು ಇಟ್ಟು, ಸಮುದ್ರವನ್ನು ಅವರ ಮೇಲೆ ಬರ
೮ ಮಾಡಿ, ಅವರನ್ನು ಮುಚ್ಚಿ ಬಿಟ್ಟನು. ನಾನು ಐಗುಪ್ತದಲ್ಲಿ
ಮಾಡಿದ್ದನ್ನು ನಿಮ್ಮ ಕಣ್ಣುಗಳು ನೋಡಿದವು. ಮತ್ತು ಅರಣ್ಯ
ದಲ್ಲಿ ಅನೇಕ ದಿವಸ ವಾಸವಾಗಿದ್ದಿರಿ. ಯೊರ್ದನಿಗೆ ಆಚೆ ವಾಸ
ವಾಗಿದ್ದ ಅಮೋರ್ಯರ ದೇಶಕ್ಕೆ ನಿಮ್ಮನ್ನು ಕರಕೊಂಡು ಬಂದೆ
ನು. ಅವರು ನಿಮ್ಮ ಸಂಗಡ ಯುದ್ಧ ಮಾಡುವಾಗ, ಅವರ ದೇ
ಶವನ್ನು ನೀವು ಸ್ವತಂತ್ರಿಸಿ ಕೊಳ್ಳುವ ಹಾಗೆ, ಅವರನ್ನು ನಿಮ್ಮ
೯ ಕೈಯಲ್ಲಿ ಒಪ್ಪಿಸಿ, ಅವರನ್ನು ನಿಮ್ಮ ಎದುರಿನಿಂದ ನಾಶನ ಮಾ
ಡಿದೆನು. ಆಗ ಮೋವಾಬ್ಯರ ಅರಸನಾದ, ಚಿಪ್ಪೋರನ ಮಗನಾದ
ಬಾಲಾಕನು ಇಸ್ರಯೇಲಿನ ಸಂಗಡ ಯುದ್ಧ ಮಾಡಿ, ನಿಮ್ಮನ್ನು
೧೦ ಶಪಿಸುವ ಹಾಗೆ, ಬೆಯೊರಿನ ಮಗನಾದ ಬಿಳಾಮನನ್ನು ಕರೆ
ಕಳುಹಿಸಿದನು. ಆದರೆ ನಾನು ಬಿಳಾಮನ ಮಾತು ಕೇಳ ಮನಸ್ಸಿ
ಲ್ಲದ್ದರಿಂದ, ಅವನು ನಿಮ್ಮನ್ನು ಆಶೀರ್ವದಿಸೇ ಆಶೀರ್ವದಿಸಿದನು
೧೧ ನಾನು ಅವನ ಕೈಯಿಂದ ನಿಮ್ಮನ್ನು ತಪ್ಪಿಸಿದೆನು. ಮತ್ತು ನೀ
ವು ಯೊರ್ದನನ್ನು ದಾಟಿ, ಯೆರಿಕೋವಿಗೆ ಬಂದಿರಿ. ಯೆರಿ
ಕೋವಿನ ನಿವಾಸಿಗಳೂ, ಅಮೋರ್ಯರೂ, ಪೆರಿಜ್ಜಿಯರೂ, ಕ
ನಾನ್ಯರೂ, ಹಿತ್ತಿಯರೂ, ಗಿರ್ಗಾಸ್ಯರೂ, ಹಿವ್ವಿಯರೂ, ಯೆ
೧೨ ಬೂಸ್ಯರೂ ನಿಮ್ಮ ಸಂಗಡ ಯುದ್ಧ ಮಾಡಿದರು. ಆದರೆ ನಾನು



ಅವರನ್ನು ನಿಮ್ಮ ಕೈಗೆ ಒಪ್ಪಿಸಿದೆನು. ಇದಲ್ಲದೆ ನಾನು ನಿ
ಮ್ಮ ಮುಂದೆ ಕುರುಟಿಗನ ಹುಳಗಳನ್ನು ಕಳುಹಿಸಿದೆನು. ಅವು
ಅವರನ್ನು ಅಮೋರ್ಯರ ಇಬ್ಬರು ಅರಸುಗಳನ್ನು ನಿಮ್ಮ
ಮುಂದೆ ಓಡಿಸಿದವು; ನಿನ್ನ ಕತ್ತಿಯಿಂದಲ್ಲ, ನಿನ್ನ ಬಿಲ್ಲಿನಿಂದಲ್ಲ.
೧೩ ನಾನು ನೀವು ದಣಿಯದ ದೇಶವನ್ನೂ, ನೀವು ಕಟ್ಟದ ಪಟ್ಟಣಗಳ
ನ್ನೂ ನಿಮಗೆ ಕೊಟ್ಟೆನು; ನೀವು ಅವುಗಳಲ್ಲಿ ವಾಸವಾಗಿದ್ದೀರಿ;
ನೀವು ನಾಟದ ದ್ರಾಕ್ಷೇ ತೋಟಗಳ ಫಲವನ್ನೂ, ಇಪ್ಪೇ ತೋಪು
ಗಳ ಫಲವನ್ನೂ ತಿನ್ನುತ್ತೀರಿ.
೧೪ ಆದದರಿಂದ ಈಗ ಕರ್ತನಿಗೆ ಭಯ ಪಟ್ಟು, ಪೂರ್ಣವಾಗಿ
ಯೂ ಸತ್ಯವಾಗಿಯೂ ಅವನನ್ನು ಸೇವಿಸಿರಿ. ಮತ್ತು ನಿಮ್ಮ
ತಂದೆಗಳು ನದಿಯ ಆಚೆಯಲ್ಲಿಯೂ ಐಗುಪ್ತದಲ್ಲಿಯೂ ಸೇವಿ
ಸಿದ ದೇವರುಗಳನ್ನು ತೊರೆದು ಬಿಟ್ಟು, ಕರ್ತನನ್ನು ಸೇವಿಸಿರಿ.
೧೫ ಕರ್ತನನ್ನು ಸೇವಿಸುವದು ನಿಮಗೆ ಚನಾಗಿ ಕಾಣಿಸದಿದ್ದರೆ, ಈ
ಹೊತ್ತು ನೀವು ಯಾರನ್ನು ಸೇವಿಸುವಿರೋ—ನಿಮ್ಮ ತಂದೆಗಳು
ನದಿಯ ಆಚೆ ಸೇವಿಸಿದ ದೇವರುಗಳನ್ನೋ! ನೀವು ವಾಸವಾಗಿ
ರುವ ಅಮೋರ್ಯರ ದೇವರುಗಳನ್ನೋ!—ಅದು ಕೊಳ್ಳಿರಿ; ಆದ
ರೆ ನಾನೂ ನನ್ನ ಮನೆಯವರೂ ಕರ್ತನನ್ನು ಸೇವಿಸುವೆವು.
೧೬ ಜನರು ಅವನಿಗೆ ಪ್ರತ್ಯುತ್ತರ ಕೊಟ್ಟು, ಹೇಳಿದ್ದೇನಂದರೆ, ನಾ
ವು ಕರ್ತನನ್ನು ಬಿಟ್ಟು, ಅನ್ಯ ದೇವರುಗಳನ್ನು ಸೇವಿಸುವ ಕಾ
೧೭ ರ್ಯವು ನಮಗೆ ದೂರವಾಗಿರಲಿ. ಯಾಕಂದರೆ ನಮ್ಮ ದೇವರಾ
ದ ಕರ್ತನು ತಾನೇ ನಮ್ಮನ್ನೂ ನಮ್ಮ ತಂದೆಗಳನ್ನೂ ದಾಸತ್ವದ
ಮನೆಯಾದ ಐಗುಪ್ತ ದೇಶದಿಂದ ಬರ ಮಾಡಿ, ನಮ್ಮ ಕಣ್ಣುಗಳ
ಮುಂದೆ ಆ ದೊಡ್ಡ ಅದ್ಭುತಗಳನ್ನು ಮಾಡಿ, ನಾವು ನಡೆದ ಎಲ್ಲಾ
ಮಾರ್ಗಗಳಲ್ಲಿಯೂ, ನಾವು ಅವರ ಮಧ್ಯದಲ್ಲಿ ಹಾದು ಜಂ
೧೮ ದ ಎಲ್ಲಾ ಜನಗಳಲ್ಲಿಯೂ, ನಮ್ಮನ್ನು ಕಾಪಾಡಿದವನು. ಇದ
ಲ್ಲದೆ ದೇಶದಲ್ಲಿ ವಾಸವಾಗಿದ್ದ ಅಮೋರ್ಯರ ಸಕಲ ಜನಗಳ
ನ್ನು ಕರ್ತನು ನಮ್ಮ ಮುಂದೆ ಹೊರಡಿಸಿ ಬಿಟ್ಟನು. ಆದದರಿಂದ
ನಾವು ಕರ್ತನನ್ನು ಸೇವಿಸುವೆವು; ಯಾಕಂದರೆ ಅವನು ನಮ್ಮ
ದೇವರು, ಅಂದರು.
೧೯ ಅದಕ್ಕೆ ಯೆಹೋಶುವನು ಜನರಿಗೆ ಹೇಳಿದ್ದೇನಂದರೆ, ನೀವು
ಕರ್ತನನ್ನು ಸೇವಿಸಲಾರಿರಿ; ಯಾಕಂದರೆ ಅವನು ಪರಿಶುದ್ಧನಾದ
ದೇವರು, ಕೋಪವುಳ್ಳ ದೇವರು; ಅವನು ನಿಮ್ಮ ದ್ರೋಹಗಳ
೨೦ ನ್ನೂ ನಿಮ್ಮ ಪಾಪಗಳನ್ನೂ ಮನ್ನಿಸನು. ಯಾಕಂದರೆ ಕರ್ತ
ನನ್ನು ಬಿಟ್ಟು, ಅನ್ಯ ದೇವರುಗಳನ್ನು ಸೇವಿಸಿದರೆ, ಒಳ್ಳೇದನ್ನು
ಮಾಡಿದ ತರುವಾಯ, ಅವನು ನಿಮಗೆ ಕೇಡು ಮಾಡಿ, ನಿಮ್ಮನ್ನು
ಶೀರಿಸಿ ಬಿಡುವನು.
೨೧ ಅದಕ್ಕೆ ಜನರು ಯೆಹೋಶುವನಿಗೆ—ಇಲ್ಲ; ನಿಶ್ಚಯವಾಗಿ ಕ
ರ್ತನನ್ನು ಸೇವಿಸುವೆವು, ಅಂದರು.
೨೨ ಯೆಹೋಶುವ ಜನರಿಗೆ, ನೀವು ಕರ್ತನನ್ನು ಸೇವಿಸುವದಕ್ಕೆ
ಅವನನ್ನು ಆದು ಕೊಂಡು ಇದ್ದೀರೆಂದು, ನಿಮಗೆ ನೀವೇ ಸಾಕ್ಷಿಗ
ಳಾಗಿದ್ದೀರಿ, ಅಂದನು.
೨೩ ಅದಕ್ಕವರು, ನಾವೇ ಸಾಕ್ಷಿಗಳಾಗಿದ್ದೇವೆ, ಅಂದರು.
ಅದಕ್ಕವನು, ಈಗ ನಿಮ್ಮ ಮಧ್ಯದಲ್ಲಿರುವ ಅನ್ಯ ದೇವರುಗಳ
ನ್ನು ತೊಲೆದು, ನಿಮ್ಮ ಹೃದಯವನ್ನು ಇಸ್ರಯೇಲಿನ ದೇವರಾ
ದ ಕರ್ತನಿಗೆ ಶಿರುಗಿಸಿರಿ, ಅಂದನು.
೨೪ ಜನರು ಯೆಹೋಶುವನಿಗೆ, ನಾವು ನಮ್ಮ ದೇವರಾದ ಕರ್ತ
ನನ್ನು ಸೇವಿಸಿ, ಅವನ ವಾಕ್ಯ ಕೇಳುವೆವು, ಅಂದರು.
೨೫ ಮತ್ತು ಯೆಹೋಶುವ ಆ ಹೊತ್ತು ಬೆಕೇಮಿನಲ್ಲಿ ಜನರ ಸಂ
ಗಡ ಒಡಂಬಡಿಕೆಯನ್ನು ಮಾಡಿ, ಅದನ್ನು ಅವರಿಗೆ ನೇಮವಾಗಿ
೨೬ ಯೂ ನ್ಯಾಯವಾಗಿಯೂ ಇಟ್ಟನು. ಈ ಮಾತುಗಳನ್ನು ಯೆ
ಹೋಶುವ ದೇವರ ನ್ಯಾಯಪ್ರಮಾಣದ ಪುಸ್ತಕದಲ್ಲಿ ಬರೆದು,
ಒಂದು ದೊಡ್ಡ ಕಲ್ಲನ್ನು ಎತ್ತಿ, ಅದನ್ನು ಅಲ್ಲಿ ಕರ್ತನ ಪರಿಶುದ್ಧ
೨೭ ಸ್ಥಳದ ಬಳಿಯಲ್ಲಿ ಕಲೇ ಆಲದ ಮರದ ಕೆಳಗೆ ನೆಡಿಸಿದನು. ಯೆ
ಹೋಶುವ ಜನರಿಗೆಲ್ಲಾ—ಇಗೋ, ಈ ಕಲ್ಲು ನಿಮ್ಮ ಮಧ್ಯದಲ್ಲಿ
ಸಾಕ್ಷಿಯಾಗಿರಲಿ. ಯಾಕಂದರೆ ಅದು ಕರ್ತನು ನಮ್ಮ ಸಂಗಡ
ಹೇಳಿದ ಎಲ್ಲಾ ವಚನಗಳನ್ನು ಕೇಳಿತು. ಆದದರಿಂದ ನೀವು ನಿಮ್ಮ
ದೇವರಿಗೆ ವಿಕೋಧವಾಗಿ ಅಪದ್ಧವನ್ನು ಹೇಳಿದ ಹಾಗೆ, ಇದೇ ನಿ
೨೮ ಮಗೆ ಸಾಕ್ಷಿಯಾಗಿರಲಿ, ಎಂದು ಹೇಳಿದನು. ಮತ್ತು ಯೆಹೋ
ಶುವ ಜನರನ್ನು ಅವರವರ ಬಾಧ್ಯತೆಗಳಿಗೆ ಕಳುಹಿಸಿದನು.
೨೯ ಇವುಗಳಾದ ತರುವಾಯ ನೂನನ ಮಗನಾದ ಯೆಹೋಶು
ವ ಎಂಬ ಕರ್ತನ ಸೇವಕನು ನೂರ ಹತ್ತು ವರುಷ ವಯಸ್ಸಿನವ
೩೦ ನಾಗಿ ಸತ್ತು ಹೋದನು. ಅವನನ್ನು ಬೆಟ್ಟದ ದೇಶವಾದ ಎಫ್ರಯಿಾ
ಮಿನಲ್ಲಿರುವ ಗಾಯಷಿನ ಉತ್ತರಕ್ಕಿರುವ ತಿಮ್ನತ್ ಸೇರ ಎಂಬ
೩೧ ಅವನ ಬಾಧ್ಯತೆಯ ಮೇರೆಯಲ್ಲಿ ಹೂಣಿಟ್ಟರು. ಯೆಹೋಶು
ವನ ಸಕಲ ದಿನಗಳಲ್ಲಿಯೂ, ಯೆಹೋಶುವನ ತರುವಾಯ ಬಹು
ದಿನಗಳು ಜೀವಿಸಿ ಇದ್ದು, ಕರ್ತನು ಇಸ್ರಯೇಲಿಗೆ ಮಾಡಿದ ಸಕಲ
ಕಾರ್ಯಗಳನ್ನು ಅರಿತಿದ್ದ ಹಿರಿಯರ ಸಕಲ ದಿನಗಳಲ್ಲಿಯೂ,
ಇಸ್ರಯೇಲರು ಕರ್ತನನ್ನು ಸೇವಿಸಿದರು.
೩೨ ಇದಲ್ಲದೆ ಇಸ್ರಯೇಲ್ ಮಕ್ಕಳು ಐಗುಪ್ತದಿಂದ ತಂದ ಯೋ
ಸೆಫನ ಎಲುವುಗಳನ್ನು ಅವರು ಬೆಕೇಮಿನಲ್ಲಿ ಯಾಕೋಬನು ಷೆ
ಕೇಮನ ತಂದೆಯಾದ ಹಮೋರನ ಮಕ್ಕಳಿಂದ ನೂರು ರೂಪಾ
ಯಿಗಳಿಗೆ ಕೊಂಡಂಥ, ಯೋಸೆಫನ ಮಕ್ಕಳಿಗೆ ಬಾಧ್ಯತೆಯಾ
ದಂಥ ನೆಲದ ಭಾಗದಲ್ಲಿ ಹೂಣಿಟ್ಟರು.
33 ಮತ್ತು ಅಲ್ಕೋನನ ಮಗನಾದ ಎಲೆಯಾಜರನು ಸತ್ತು
ಹೋದನು; ಅವನನ್ನು ಅವನ ಮಗನಾದ ಫಿನೆಹಾಸನಿಗೆ ಎಫ್ರ
ಯಿಾಮ್ ಬೆಟ್ಟದ ದೇಶದಲ್ಲಿ ಕೊಡಲ್ಪಟ್ಟ ಗುಡ್ಡದಲ್ಲಿ ಹೂಣಿ
ಟ್ಟರು.

# THE BOOK OF JUDGES.

## ನ್ಯಾಯಾಧಿಪತಿಗಳ ಪುಸ್ತಕವು.

### ೧. ಸಂಧಿ.

೧ ಯೆಹೋಶುವ ಸತ್ತ ತರುವಾಯ ಆದದ್ದೇನಂದರೆ, ಇಸ್ರಯೇ
ಲ್ ಮಕ್ಕಳು, ಕನಾನ್ಯರ ಮೇಲೆ ಮೊದಲು ನಮ್ಮಲ್ಲಿ ಯುದ್ಧಕ್ಕೆ
೨ ಹೋಗುವವರು ಯಾರೆಂದು, ಕರ್ತನನ್ನು ಕೇಳಿದರು. ಅದಕ್ಕೆ
ಕರ್ತನು, ಯೆಹೂದನು ಹೋಗಲಿ; ಇಗೋ, ನಾನು ಆ ದೇಶವ
ನ್ನು ಅವನ ಕೈಯಲ್ಲಿ ಒಪ್ಪಿಸಿ ಕೊಟ್ಟೆನು, ಅಂದನು.
೩ ಮತ್ತು ಯೆಹೂದನು ತನ್ನ ಸಹೋದರನಾದ ಸಿಮೆಯೋನ
ನಿಗೆ, ನೀನು ನನ್ನ ಸಂಗಡ ನನ್ನ ಭಾಗಕ್ಕೆ ಏರಿ ಬಾ; ಕನಾನ್ಯರ
ಮೇಲೆ ಯುದ್ಧ ಮಾಡುವ; ನಾನು ಹಾಗೆಯೇ ನಿನ್ನ ಸಂಗಡ ನಿನ್ನ
೪ ಭಾಗಕ್ಕೆ ಬರುವೆನು, ಅಂದನು. ಸಿಮೆಯೋನನು ಅವನ ಸಂಗಡ
ಹೋದನು. ಯೆಹೂದನು ಏರಿ ಹೋದಾಗ, ಕರ್ತನು ಕನಾನ್ಯರ
ನ್ನೂ ಪೆರಿಜ್ಜಿಯರನ್ನೂ ಅವರ ಕೈಯಲ್ಲಿ ಒಪ್ಪಿಸಿ ಕೊಟ್ಟನು.
೫ ಇವರು ಬೆಜೆಕನಲ್ಲಿ ಅವರಲ್ಲಿ ಹತ್ತು ಸಾವಿರ ಜನರನ್ನು ಹೊಡೆ
ದರು. ಅವರು ಬೆಜೆಕಿನಲ್ಲಿ ಅದೋನಿ ಬೆಜೆಕನನ್ನು ಕಂಡು,
ಅವನ ಸಂಗಡ ಯುದ್ಧ ಮಾಡಿ, ಅಲ್ಲಿ ಕನಾನ್ಯರನ್ನೂ ಪೆರಿಜ್ಜಿ
೬ ಯರನ್ನೂ ಹೊಡೆದರು. ಆದರೆ ಅದೋನಿ ಬೆಜೆಕನು ಓಡಿ ಹೋ
ದದರಿಂದ, ಅವನನ್ನು ಹಿಂದಟ್ಟಿ, ಹಿಡಿದು, ಅವನ ಕೈ ಕಾಲುಗಳ
೭ ಹೆಬ್ಬೆರಳುಗಳನ್ನು ಕೊಯಿದು ಹಾಕಿದರು. ಆಗ ಅದೋನಿ ಬೆ
ಜೆಕನು ನನ್ನಿಂದ ಕೈ ಕಾಲುಗಳ ಹೆಬ್ಬೆರಳುಗಳು ಕೊಯಿಸಿ ಕೊ
ಳ್ಳಲ್ಪಟ್ಟ ಎಪ್ಪತ್ತು ಮಂದಿ ಅರಸುಗಳು ನನ್ನ ಮೇಜಿನ ಕೆಳಗೆ ಕೂ
ಡಿಸಿ, ಶಿಂದರು; ನಾನು ಹ್ಯಾಗೆ ಮಾಡಿದೆನೋ, ಹಾಗೆಯೇ ದೇವ
ರು ನನಗೆ ಮುಯ್ಯಿಗೆ ಮುಯ್ಯಿ ಮಾಡಿದ್ದಾನೆ, ಅಂದನು. ಅವ
ನನ್ನು ಯೆರೂಸಲೇಮಿಗೆ ತಕ್ಕೊಂಡು ಬಂದರು; ಅಲ್ಲಿ ಸತ್ತನು.
೮ ಮತ್ತು ಯೆಹೂದನ ಮಕ್ಕಳು ಯೆರೂಸಲೇಮಿನ ಮೇಲೆ ಯು
ದ್ಧ ಮಾಡಿ, ಅದನ್ನು ಹಿಡಿದು, ಅದನ್ನು ಕತ್ತಿಯ ಬಾಯಿಯಿಂದ
೯ ಹೊಡೆದು, ಪಟ್ಣವನ್ನು ಬೆಂಕಿಯಿಂದ ಸುಟ್ಟು ಬಿಟ್ಟರು. ತರು
ವಾಯ ಯೆಹೂದನ ಮಕ್ಕಳು ಬೆಟ್ಟಗಳಲ್ಲಿಯೂ, ದಕ್ಷಿಣದಲ್ಲಿ
ಯೂ, ತಗ್ಗಿನಲ್ಲಿಯೂ, ವಾಸಿಸಿರುವ ಕನಾನ್ಯರ ಸಂಗಡ ಯುದ್ಧ
೧೦ ಮಾಡ ಹೋದರು. ಯೆಹೂದನು ಪೂರ್ವದಲ್ಲಿ ಕಿರ್ಯಾತ್
ಅರ್ಬ ಎಂಬ ಹೆಸರು ಗೊಂಡಿದ್ದ ಹೆಬ್ರೋನಿನಲ್ಲಿ ವಾಸವಾಗಿದ್ದ ಕ
ನಾನ್ಯರ ಮೇಲೆ ಹೋಗಿ, ಶೇಷೈ, ಅಹಿಮನ್, ತಲ್ಮಾಯರನ್ನು
೧೧ ಹೊಡೆದು ಬಿಟ್ಟನು. ಅಲ್ಲಿಂದ ದೆಬೀರನಲ್ಲಿ ವಾಸವಾಗಿರುವವರ
ಮೇಲೆ ಹೋದರು; ದೆಬೀರಿಗೆ ಪೂರ್ವದಲ್ಲಿ ಕಿರ್ಯಾತ್‌ಸೇಫರ್
ಎಂಬ ಹೆಸರಿತ್ತು.
೧೨ ಮತ್ತು ಕಾಲೆಬನು, ಕಿರ್ಯಾತ್‌ಸೇಫೆರನ್ನು ಹೊಡೆದು ತ
ಕ್ಕೊಳ್ಳುವವನಿಗೆ ನನ್ನ ಕುಮಾರ್ತೆಯಾದ ಅಕ್ಷಳನ್ನು ಹೆಂಡತಿ
೧೩ ಯಾಗಿ ಕೊಡುವೆನೆಂದು, ಹೇಳಿದನು. ಆಗ ಕಾಲೆಬನ ತಮ್ಮನಾ
ದ ಕೆನಾಜನ ಮಗನಾದ ಒಥಿಯೇಲನು ಅದನ್ನು ಹಿಡಿದನು. ಅ
ವನು ತನ್ನ ಮಗಳಾದ ಅಕ್ಷಳನ್ನು ಅವನಿಗೆ ಹೆಂಡತಿಯಾಗಿ ಕೊ
೧೪ ಟ್ಟನು. ಅವಳು ಅವನ ಬಳಿಗೆ ಹೋಗುವಾಗ, ತನ್ನ ತಂದೆಯಿಂ
ದ ಒಂದು ಹೊಲವನ್ನು ಕೇಳಿ ಅವನನ್ನು ಪ್ರೇರೇಪಿಸಿದಳು. ಕತ್ತೆ
ಯಿಂದ ಇಳಿದಳು; ಕಾಲೆಬನು ಅವಳಿಗೆ, ನಿನಗೆ ಏನು ಬೇಕು? ಅಂ
೧೫ ದನು. ಅವಳು ಅವನಿಗೆ, ನನಗೆ ಆಶೀರ್ವಾದ ಕೊಡು. ಏನಂದರೆ,
ದಕ್ಷಿಣ ಭೂಮಿಯನ್ನು ನನಗೆ ಕೊಟ್ಟಿ; ನೀರು ಬುಗ್ಗೆಗಳನ್ನು
ನನಗೆ ಕೊಡು, ಅಂದಳು. ಕಾಲೆಬನು ಮೇಲಿನ ಬುಗ್ಗೆಗಳನ್ನೂ
ಕೆಳಗಿನ ಬುಗ್ಗೆಗಳನ್ನೂ ಅವಳಿಗೆ ಕೊಟ್ಟನು.
೧೬ ಮತ್ತು ಮೋಶೆಯ ಮಾವನಾದ ಕೇನ್ಯನ ಮಕ್ಕಳು ಖರ್ಜೂ
ರ ಗಿಡಗಳ ಪಟ್ಣದಿಂದ ಹೊರಟು, ಯೆಹೂದನ ಮಕ್ಕಳ ಸಂಗಡ
ಅರಾದಿಗೆ ದಕ್ಷಿಣಕ್ಕಿರುವ ಯೆಹೂದದ ಅರಣ್ಯಕ್ಕೆ ಬಂದು, ಜನ
ರ ಸಂಗಡ ವಾಸವಾಗಿದ್ದರು.
೧೭ ಮತ್ತು ಯೆಹೂದನು ತನ್ನ ಸಹೋದರನಾದ ಸಿಮೆಯೋನನ
ಸಂಗಡ ಹೊರಟು, ಜೆಫತಿನಲ್ಲಿ ವಾಸವಾಗಿರುವ ಕನಾನ್ಯರನ್ನು
ಹೊಡೆದು, ಆ ಪಟ್ಣವನ್ನು ನಿರ್ಮೂಲ ಮಾಡಿದರು. ಆ ಪಟ್ಣ
ವು ಹೊರ್ಮ ಎಂದು ಕರೆಯಲ್ಪಟ್ಟಿತು. ಇದಲ್ಲದೆ ಯೆಹೂದನು
೧೮ ಗಾಜವನ್ನೂ, ಅದರ ಮೇರೆಯನ್ನೂ, ಅಸ್ಕೆಲೋನನ್ನೂ, ಅ
ದರ ಮೇರೆಯನ್ನೂ, ಎಕ್ರೋನನ್ನೂ, ಅದರ ಮೇರೆಯನ್ನೂ
೧೯ ತೆಗೆದು ಕೊಂಡನು. ಕರ್ತನು ಯೆಹೂದನ ಸಂಗಡ ಇದ್ದದರಿಂದ,
ಅವನು ಬೆಟ್ಟಗಳವರನ್ನು ಹೊರಡಿಸಿ ಬಿಟ್ಟನು; ಆದರೆ ತಗ್ಗಿನ ನಿ
ವಾಸಿಗಳಿಗೆ ಕಬ್ಬಿಣದ ರಥಗಳಿದ್ದದರಿಂದ, ಅವನು ಅವರನ್ನು
೨೦ ಹೊರಡಿಸಲಾರದೆ ಹೋದನು. ಮೋಶೆ ಹೇಳಿದ ಪ್ರಕಾರ ಅವರು
ಹೆಬ್ರೋನನ್ನು ಕಾಲೆಬನಿಗೆ ಕೊಟ್ಟರು. ಅವನು ಅನಾಕನ ಮೂ
ವರು ಮಕ್ಕಳನ್ನು ಅಲ್ಲಿಂದ ಹೊರಡಿಸಿ ಬಿಟ್ಟನು.
೨೧ ಬೆನ್ಯಮೀನನ ಮಕ್ಕಳು ಯೆರೂಸಲೇಮಿನಲ್ಲಿ ವಾಸವಾಗಿದ್ದ
ಯೆಬೂಸ್ಯರನ್ನು ಹೊರಡಿಸಲಿಲ್ಲ. ಯೆಬೂಸ್ಯರು ಈ ದಿವಸದ
ಪರ್ಯಂತರ ಬೆನ್ಯಮೀನನ ಮಕ್ಕಳ ಸಂಗಡ ಯೆರೂಸಲೇಮಿನ
ಲ್ಲಿ ವಾಸವಾಗಿದ್ದಾರೆ.
೨೨ ಇದಲ್ಲದೆ ಯೋಸೆಫನ ಮಕ್ಕಳು ಬೇತೆಲಿಗೆ ಏರಿ ಹೋದರು.
೨೩ ಕರ್ತನು ಅವರ ಸಂಗಡ ಇದ್ದನು. ಆದರೆ ಮೊದಲು ಲೂಜೆಂದು
ಹೆಸರುಳ್ಳ ಬೇತೆಲೆಂಬ ಪಟ್ಣವನ್ನು ಚಾಳತಿ ನೋಡ, ಯೋಸೆಫನ
೨೪ ಮನೆಯವರು ಕಳುಹಿಸಿದರು. ಚಾಳತಿಯವರು ಪಟ್ಣದೊಳಗಿಂದ
ಬರುವ ಒಬ್ಬ ಮನುಷ್ಯನನ್ನು ಕಂಡು, ಅವನಿಗೆ, ದಯೆ ಮಾಡಿ,
ಪಟ್ಣದಲ್ಲಿ ಪ್ರವೇಶಿಸುವ ಮಾರ್ಗವನ್ನು ನಮಗೆ ತೋರಿಸು; ನಾ
೨೫ ವು ನಿನಗೆ ಕೃಪೆ ನಡಿಸುವೆವು, ಅಂದರು. ಅವನು ಪಟ್ಣದಲ್ಲಿ ಪ್ರ
ವೇಶಿಸುವ ಮಾರ್ಗವನ್ನು ಅವರಿಗೆ ತೋರಿಸಿದಾಗ, ಅವರು ಬಂ
ದು, ಪಟ್ಣವನ್ನು ಕತ್ತಿಯ ಬಾಯಿಯಿಂದ ಹೊಡೆದು, ಆ ಮನುಷ್ಯ
೨೬ ನನ್ನೂ ಅವನ ಸಮಸ್ತ ಗೋತ್ರವನ್ನೂ ಕಳುಹಿಸಿ ಬಿಟ್ಟರು. ಆ
ಮನುಷ್ಯನು ಹಿತ್ತಿಯರ ದೇಶಕ್ಕೆ ಹೋಗಿ, ಅಲ್ಲಿ ಬಂದು ಪಟ್ಣವ
ನ್ನು ಕಟ್ಟಿ, ಅದಕ್ಕೆ ಲೂಜೆಂದು ಹೆಸರಿಟ್ಟನು. ಈ ವರಿಗೂ ಅದ
ಕ್ಕೆ ಅದೇ ಹೆಸರು.
೨೭ ಮತ್ತು ಮನಸ್ಸೆಯ ಗೋತ್ರದವರು ಬೇತ್ ಷೆಯನಿನವರ
ನ್ನೂ, ಅದರ ಊರುಗಳವರನ್ನೂ, ತಾಣಕದವರನ್ನೂ, ಅದರ
ಊರುಗಳವರನ್ನೂ, ದೋರಿನವರನ್ನೂ, ಅದರ ಊರುಗಳವರ
ನ್ನೂ, ಇಬ್ಲಾಮಿನವರನ್ನೂ, ಅದರ ಊರುಗಳವರನ್ನೂ, ಮೆಗಿ



ದ್ದೊನಿನವರನ್ನೂ, ಅದರ ಊರುಗಳವರನ್ನೂ, ಹೊರಡಿಸಿ ಬಿಡಲಿ
೨೮ ಲ್ಲಿ. ಕನಾನ್ಯರಾದ ಇವರು ಆ ದೇಶದಲ್ಲಿ ವಾಸಿಸಿರ ಬೇಕೆಂದಿದ್ದರು.
ಇಸ್ರಯೇಲು ಬಲಿತು ಕೊಂಡಾಗ, ಅವರನ್ನು ಪೂರ್ಣವಾಗಿ ಹೊ
ರಡಿಸಿ ಬಿಡದೆ, ಕಪ್ಪ ಕೊಡ ಕನಾನ್ಯರಿಗೆ ನೇಮಕ ಮಾಡಿದರು.
೨೯ ಇದಲ್ಲದೆ ಎಫ್ರಯಿಮ್ ಗೇಜರಿನಲ್ಲಿ ವಾಸವಾಗಿದ್ದ ಕನಾನ್ಯರ
ನ್ನು ಹೊರಡಿಸಿ ಬಿಡಲಿಲ್ಲ. ಕನಾನ್ಯರು ಗೇಜರಿನಲ್ಲಿ ಅವರ ಸಂಗ
ಡ ವಾಸಿಸಿದ್ದರು.
೩೦ ಜೆಬುಲೋನ್ ಕಿಟ್ರೋನಿನ ವಾಸಿಗಳನ್ನೂ ನಹಲೋಲಿನ ವಾಸಿ
ಗಳನ್ನೂ ಹೊರಡಿಸಿ ಬಿಡಲಿಲ್ಲ. ಕನಾನ್ಯರಾದ ಇವರು ಅವರಲಿ
೩೧ ವಾಸಿಸಿದ್ದು, ಕಪ್ಪವನ್ನು ಕೊಡುವವರಾದರು. ಆಶೇರ್ ಅಕ್ಕೋ
ಬಿನ ವಾಸಿಗಳನ್ನೂ, ಚಿದೋನಿನ ವಾಸಿಗಳನ್ನೂ, ಅಹ್ಲಾಬ್, ಅ
ಕ್ಷೀಬ್, ಹೆಲ್ಬ, ಅಫೀಕ್, ರೆಹೋಬ್ ಪಟ್ಣಗಳ ವಾಸಿಗಳನ್ನೂ,
೩೨ ಹೊರಡಿಸಿ ಬಿಡಲಿಲ್ಲ. ಆದರೆ ಆಶೇರ್ಯರು ಅವರನ್ನು ಹೊರಡಿಸಿ
ಬಿಡದೆ, ಆ ದೇಶ ವಾಸಿಗಳಾದ ಕನಾನ್ಯರ ಮಧ್ಯದಲ್ಲಿ ವಾಸವಾಗಿ
ದ್ದರು.
೩೩ ನೆಫ್ತಲಿ ಬೇತ್‌ಷೆಮೆಷಿನ ವಾಸಿಗಳನ್ನೂ, ಬೇಟಾನತಿನ ವಾಸಿಗ
ಳನ್ನೂ ಹೊರಡಿಸಿ ಬಿಡದೆ, ಆ ದೇಶ ವಾಸಿಗಳಾದ ಕನಾನ್ಯರ
ಮಧ್ಯದಲ್ಲಿ ವಾಸಿಸಿದ್ದರು. ಆದರೆ ಬೇತ್‌ಷೆಮೆಷ್ ಬೇಟಾನತ್ ಪಟ್ಣ
ವಾಸಿಗಳು ಅವರಿಗೆ ಕಪ್ಪ ಕೊಡುವವರಾದರು.
೩೪ ಇದಲ್ಲದೆ ಅಮೋರ್ಯರು ದಾನನ ಮಕ್ಕಳನ್ನು ತಗ್ಗಿನಲ್ಲಿ ಇ
೩೫ ಳಿಯಗೊಡದೆ, ಬೆಟ್ಟಗಳಿಗೆ ಓಡಿಸಿ ಬಿಟ್ಟು, ತಾವು ಹೆರೆಸ್ ಬೆಟ್ಟ
ದಲ್ಲಿಯೂ ಅಯ್ಯಲೋನಿನಲ್ಲಿಯೂ ಷಾಲ್ಬಿಮಿನಲ್ಲಿಯೂ ವಾಸಿ
ಸ ಬೇಕೆಂದಿದ್ದರು. ಆದರೆ ಯೋಸೆಫನ ಮನೆಯವರ ಕೈ ಭಾರ
೩೬ ವಾದದರಿಂದ, ಅವರಿಗೆ ಕಪ್ಪ ಕೊಡುವವರಾದರು. ಹೀಗೆಯೇ ಅ
ಮೋರ್ಯರ ಮೇರೆಯು ಮಾಲೆಯಕ್ರಬ್ಬಿಮನ್ನು ಹಿಡಿದು, ಗು
ಡ್ಡದಿಂದ ಮೇಲ್ಗಡೆ ಹಾದು ಹೋಗುವದಾಗಿತ್ತು.

### ೨. ಸಂಧಿ.

೧ ಮತ್ತು ಕರ್ತನ ದೂತನು ಗಿಲ್ಗಾಲಿನಿಂದ ಬೋಕಿಮಿಗೆ ಬಂದು,
ಹೇಳಿದ್ದೇನಂದರೆ, ನಾನು ನಿಮ್ಮನ್ನು ಐಗುಪ್ತದಿಂದ ಬರ ಮಾಡಿ,
ನಿಮ್ಮ ತಂದೆಗಳಿಗೆ ಆಣೆ ಇಟ್ಟ ದೇಶದಲ್ಲಿ ನಿಮ್ಮನ್ನು ಸೇರಿಸಿದೆನು.
೨ ಮತ್ತು ನಾನು ನಿಮ್ಮ ಸಂಗಡ ಮಾಡಿದ ನನ್ನ ಒಡಂಬಡಿಕೆಯ
ನ್ನು ಎಂದಿಗೂ ನಿರರ್ಥಕ ಮಾಡೆನು. ನೀವು ಈ ದೇಶದ ನಿವಾ
ಸಿಗಳ ಸಂಗಡ ಒಡಂಬಡಿಕೆ ಮಾಡದೆ, ಅವರ ಬಲಿಪೀಠಗಳನ್ನು ಕೆ
ಡವಿ ಬಿಡಿರಿ, ಎಂದು ಹೇಳಿದೆನು. ಆದರೆ ನೀವು ನನ್ನ ಮಾತನ್ನು
೩ ಕೇಳಲಿಲ್ಲ. ಹೀಗೆ ಯಾಕೆ ಮಾಡಿದಿರಿ! ಆದದರಿಂದ ನಾನು ಅವ
ರನ್ನು ನಿಮ್ಮ ಮುಖದ ಮುಂದೆ ಓಡಿಸಿ ಬಿಡೆನು; ಅವರು ನಿಮ್ಮ
ನ್ನು ಉಪದ್ರ ಪಡಿಸುವರು; ಅವರ ದೇವರುಗಳು ನಿಮಗೆ ಉರ್ಲಾ
ಗುವವೆಂದು, ಹೇಳಿದೆನು.
೪ ಕರ್ತನ ದೂತನು ಈ ಮಾತುಗಳನ್ನು ಇಸ್ರಯೇಲ್ ಮಕ್ಕ
ಳೆಲ್ಲರ ಸಂಗಡ ಹೇಳುವಾಗ, ಜನರು ತಮ್ಮ ಶಬ್ದವನ್ನು ಎತ್ತಿ, ಅತ್ತ
ರು. ಆ ಸ್ಥಳಕ್ಕೆ ಬೋಕಿಮ್ ಎಂಬ ಹೆಸರಿಟ್ಟು, ಅಲ್ಲಿ ಕರ್ತನಿಗೆ
೫ ಬಲಿಯನ್ನು ಅರ್ಪಿಸಿದರು.
೬ ಯೆಹೋಶುವ ಜನರನ್ನು ಕಳುಹಿಸಿ ಬಿಟ್ಟಾಗ, ಇಸ್ರಯೇಲ್
ಮಕ್ಕಳು, ದೇಶವನ್ನು ಸ್ವತಂತ್ರಿಸಿ ಕೊಳ್ಳಲು ತಮ್ಮ ತಮ್ಮ ಬಾ
ಧ್ಯತೆಗಳಿಗೆ ಹೋದರು.
೭ ಆದರೆ ಯೆಹೋಶುವನ ಸಕಲ ದಿನಗಳಲ್ಲಿಯೂ, ಕರ್ತನು
ಇಸ್ರಯೇಲರಿಗೋಸ್ಕರ ಮಾಡಿದ ದೊಡ್ಡ ಕಾರ್ಯಗಳನ್ನು ಕಂ
ಡಂಥ, ಯೆಹೋಶುವನ ತರುವಾಯ ಬದುಕಿದ ಹಿರಿಯರ ಸಕಲ
ದಿವಸಗಳಲ್ಲಿಯೂ, ಜನರು ಕರ್ತನನ್ನು ಸೇವಿಸಿದರು.
೮ ಆದರೆ ನೂನನ ಮಗನೆಂಬುವ ಕರ್ತನ ಸೇವಕನಾದ ಯೆ
ಹೋಶುವನು ನೂರ ಹತ್ತು ವರುಷ ಪ್ರಾಯದವನಾಗಿ ಸತ್ತನು.
೯ ಅವನನ್ನು ಎಫ್ರಯಿಮಿನ ಬೆಟ್ಟದಲ್ಲಿ ಗಾಯಷ್ ಪರ್ವತದ ಉತ್ತ
ರ ದಿಕ್ಕಿನಲ್ಲಿರುವ ಅವನ ಬಾಧ್ಯತೆಯ ಮೇರೆಯಾದ ತಿಮ್ನತ್ ಹೆ
೧೦ ರೆಸಿನಲ್ಲಿ ಹೂಣಿಟ್ಟರು. ಮತ್ತು ಆ ಸಂತತಿಯವರೆಲ್ಲರೂ ತ
ಮ್ಮ ತಂದೆಗಳ ಬಳಿಯಲ್ಲಿ ಕೂಡಿಸಿ ಕೊಳ್ಳಲ್ಪಟ್ಟರು.
ಅವರ ತರುವಾಯ ಕರ್ತನನ್ನು ಅವನು ಇಸ್ರಯೇಲರಿಗೋ
ಸ್ಕರ ಮಾಡಿದ ಅವನ ಕೃತ್ಯಗಳನ್ನೂ ಸಹ ಅರಿಯದೆ ಇರುವ
೧೧ ಮತ್ತೊಂದು ಸಂತತಿ ಎದ್ದಿತು. ಮತ್ತು ಇಸ್ರಯೇಲ್ ಮಕ್ಕಳು
ಕರ್ತನ ಮುಂದೆ ಕೆಟ್ಟತನ ಮಾಡಿ, ಬಾಳನನ್ನು ಸೇವಿಸಿ, ತಮ್ಮ ತಂ
೧೨ ದೆಗಳನ್ನು ಐಗುಪ್ತದಿಂದ ಹೊರಡ ಮಾಡಿದ ತಮ್ಮ ದೇವರಾದ ಕ
ರ್ತನನ್ನು ಬಿಟ್ಟು, ತಮ್ಮ ಸುತ್ತಲಿರುವ ಜನಗಳ ಅನ್ಯ ದೇವರುಗ
ಳಲ್ಲಿ ಕೇರಿದ ದೇವರುಗಳ ಹಿಂದೆ ಹೋಗಿ, ಅವುಗಳಿಗೆ ಅಡ್ಡ ಬಿದ್ದು,
೧೩ ಕರ್ತನಿಗೆ ಕರಕಲೆ ಉಂಟು ಮಾಡಿದರು. ಅವರು ಕರ್ತನನ್ನು
ಬಿಟ್ಟು, ಬಾಳನನ್ನೂ ಅಷ್ಟರೋತನನ್ನೂ ಸೇವಿಸಿದರು.
೧೪ ಆದದರಿಂದ ಕರ್ತನು ಇಸ್ರಯೇಲಿನ ಮೇಲೆ ಕೋಪ ಗೊಂ
ಡು, ಅವರನ್ನು ಕೊಳ್ಳೆ ಇಡುವ ಕೊಳ್ಳೆಗಾರರ ಕೈಯಲ್ಲಿ ಒಪ್ಪಿ
ಸಿ ಕೊಟ್ಟನು. ಅವರು ಇನ್ನು ಮೇಲೆ ತಮ್ಮ ಶತ್ರುಗಳಿಗೆ ಎದು
ರಾಗಿ ನಿಲ್ಲದ ಹಾಗೆ, ಅವರ ಸುತ್ತಲಿರುವ ಅವರ ಶತ್ರುಗಳ ಕೈಗೆ
೧೫ ಅವರನ್ನು ಮಾರಿ ಬಿಟ್ಟನು. ಕರ್ತನು ಹೇಳಿದ ಹಾಗೆಯೂ, ಕ
ರ್ತನು ಅವರಿಗೆ ಆಣೆ ಇಟ್ಟ ಹಾಗೆಯೂ, ಅವರು ಎಲ್ಲಿ ಹೋ
ದರೂ, ಅಲ್ಲಿ ಕೇಡು ಆಗುವದಕ್ಕೆ ಕರ್ತನ ಕೈ ಅವರ ಮೇಲೆ
ಇತ್ತು.
೧೬ ಆದರೆ ಕರ್ತನು ಅವರನ್ನು ಕೊಳ್ಳೆ ಇಡುವವರ ಕೈಯೊಳ
೧೭ ಗಿಂದ ರಕ್ಷಿಸಿದ ನ್ಯಾಯಾಧಿಪತಿಗಳನ್ನು ಎಬ್ಬಿಸಿದನು. ಅವರು
ತಮ್ಮ ನ್ಯಾಯಾಧಿಪತಿಗಳ ಮಾತನ್ನು ಕೇಳದೆ, ಅನ್ಯ ದೇವರು
ಗಳ ಹಿಂದೆ ಜಾರತ್ವ ಮಾಡಿ, ಅವುಗಳಿಗೆ ಅಡ್ಡ ಬಿದ್ದು, ತಮ್ಮ ತಂ
ದೆಗಳು ಕರ್ತನ ಆಜ್ಞೆಗಳನ್ನು ಕೇಳಿ, ನಡೆದ ಮಾರ್ಗವನ್ನು ಶೀ
ಘ್ರವಾಗಿ ತೊಲೆದು ಬಿಟ್ಟರು; ಅವರು ಮಾಡಿದ ಪ್ರಕಾರ ಮಾ
ಡಲಿಲ್ಲ. ಕರ್ತನು ಅವರಿಗೆ ನ್ಯಾಯಾಧಿಪತಿಗಳನ್ನು ಎಬ್ಬಿಸಿದಾ
ಗ, ಕರ್ತನು ನ್ಯಾಯಾಧಿಪತಿಯ ಸಂಗಡ ಇದ್ದು, ಆ ನ್ಯಾಯಾ
ಧಿಪತಿಯ ದಿವಸಗಳಲ್ಲೆಲ್ಲಾ ಅವರನ್ನು ಅವರ ಶತ್ರುಗಳ ಕೈಗೆ
ತಪ್ಪಿಸಿ, ರಕ್ಷಿಸುತ್ತಿದ್ದನು. ಯಾಕಂದರೆ ಅವರು ತಮ್ಮನ್ನು ಬಾಧಿ
ಸಿ, ಕ್ರಮೆ ಪಡಿಸುವವರ ನಿಮಿತ್ತ ಗೋಳಾಡುವದರಿಂದ, ಕರ್ತನು
ಪಶ್ಚಾತ್ತಾಪ ಪಟ್ಟನು.
೧೯ ಆ ನ್ಯಾಯಾಧಿಪತಿ ಸತ್ತಾಗ, ಅವರು ತಿರಿಗಿ ಮಾರ್ಗ ತಪ್ಪಿ,
ಅನ್ಯ ದೇವರುಗಳನ್ನು ಹಿಂಬಾಲಿಸಿ, ಹೋಗಿ, ಅವುಗಳನ್ನೂ ಸೇ
ವಿಸಿ, ಅವುಗಳಿಗೆ ಅಡ್ಡ ಬಿದ್ದು, ತಮ್ಮ ತಂದೆಗಳಿಗಿಂತ ಅಧಿಕವಾಗಿ
ತಮ್ಮನ್ನು ಕೆಡಿಸಿ ಕೊಂಡು, ತಮ್ಮ ಕ್ರಿಯೆಗಳನ್ನೂ ತಮ್ಮ ಕಾ
ಠಿಣ್ಯದ ಮಾರ್ಗವನ್ನೂ ಬಿಟ್ಟು ಬಿಡದೆ ಹೋದರು.

೨೦ ಆದದರಿಂದ ಕರ್ತನು ಇಸ್ರಯೇಲಿನ ಮೇಲೆ ಕೋಪ ಮಾಡಿ, ಹೇಳಿದ್ದೇನಂದರೆ, ಈ ಜನಾಂಗ, ನಾನು ಅವರ ತಂದೆಗಳಿಗೆ ಆಜ್ಞಾಪಿಸಿದ ನನ್ನ ಒಡಂಬಡಿಕೆಯನ್ನು ಮೀರಿ, ನನ್ನ ಮಾತನ್ನು ೨೧ ಕೇಳದೆ ಹೋದದರಿಂದ, ಇವರು ತಮ್ಮ ತಂದೆಗಳು ಕೈ ಕೊಂಡು ನಡೆದ ಕರ್ತನ ಮಾರ್ಗದಲ್ಲಿ ತಾವು ಕೈ ಕೊಂಡು ನಡೆಯುವ ೨೨ ಕೋ! ಇಲ್ಲವೋ! ಎಂದು ಪರೀಕ್ಷಿಸುವ ಹಾಗೆ, ನಾನು ಇನ್ನು ಮೇಲೆ ಯೆಹೋಶುವ ಸಾಯುವಾಗ ಉಳಿಸಿದ ಜನಾಂಗಗಳಲ್ಲಿ ಒಬ್ಬರನಾದರೂ ಇವರ ಮುಂದೆ ಹೊರದಿಸಿ ಬಿಡುವದಿಲ್ಲ, ಅಂ ೨೩ ದನು. ಆದದರಿಂದ ಕರ್ತನು ಆ ಜನಾಂಗಗಳನ್ನು ಯೆಹೋಶುವನ ಕೈಯಲ್ಲಿ ಒಪ್ಪಿಸಿ ಕೊಡದೆ, ಅವುಗಳನ್ನು ಶೀಘ್ರವಾಗಿ ಓಡಿಸಿ ಬಿಡದೆ, ಉಳಿಸಿದನು.

## ೩. ಸಂಧಿ.

೧ ಕಾನಾನ್ ದೇಶದ ಸಕಲ ಯುದ್ಧಗಳನ್ನು ಅರಿಯದೆ ಇದ್ದ ಇಸ್ರಯೇಲ್ಯರನ್ನು ಪರೀಕ್ಷಿಸುವದಕ್ಕೂ, ಮೊದಲು ಯುದ್ಧವನ್ನು ೨ ಅರಿಯದೆ ಇದ್ದ ಇಸ್ರಯೇಲ್ ಮಕ್ಕಳ ಸಂತತಿಗಳವರು ಅದನ್ನು ಕೂಡಾ ಕಲಿತು ಕೊಳ್ಳುವದಕ್ಕೂ, ಕರ್ತನು ಉಳಿಸಿದ ಜನಾಂಗಗಳು ಯಾವವಂದರೆ, ಐದು ಮಂದಿ ಫಿಲಿಷ್ಟ್ಯರ ಅಧಿಪತಿಗಳೂ, ೩ ಸಮಸ್ತ ಕನಾನ್ಯರೂ ಚಿದೋನಿಯರೂ ಬಾಳ್ ಹೆರ್ಮೋನ್ ಪ್ರಾರಂಭಿಸಿ, ಹಮಾತಿನ ಪ್ರವೇಶದ ವರಿಗೂ ಲೆಬನೋನಿನ ಬೆಟ್ಟ ೪ ಗಳಲ್ಲಿ ವಾಸವಾಗಿರುವ ಹಿವ್ವಿಯರೂ, ಇವರನ್ನು, ಕರ್ತನು ಮೋಶೆಯ ಮುಖಾಂತ್ರವಾಗಿ ಇಸ್ರಯೇಲ್ಯರ ತಂದೆಗಳಿಗೆ ಆಜ್ಞಾಪಿಸಿದ ಆಜ್ಞೆಗಳನ್ನು ಅವರು ಕೇಳುವರೋ? ಇಲ್ಲವೋ! ಎಂದು, ಇವರಿಂದ ಇಸ್ರಯೇಲನ್ನು ಪರೀಕ್ಷಿಸುವದಕ್ಕೆ ಉಳಿಸಿಟ್ಟನು.

೫ ಇಸ್ರಯೇಲ್ ಮಕ್ಕಳು ಕನಾನ್ಯರು, ಹಿತ್ತಿಯರು, ಅಮೋರ್ಯರು, ಪೆರಿಜ್ಜಿಯರು, ಹಿವ್ವಿಯರು ಯೆಬೂಸ್ಯರು ಮಧ್ಯದಲ್ಲಿ ವಾಸ ೬ ವಾಗಿದ್ದು, ಅವರ ಕುಮಾರ್ತೆಗಳನ್ನು ತಾವು ಮದುವೆ ಮಾಡಿ ಕೊಂಡು, ತಮ್ಮ ಕುಮಾರ್ತೆಗಳನ್ನು ಅವರ ಕುಮಾರರಿಗೆ ಮದುವೆ ಮಾಡಿ ಕೊಟ್ಟು, ಅವರ ದೇವರುಗಳನ್ನು ಸೇವಿಸಿದರು. ೭ ಇಸ್ರಯೇಲ್ ಮಕ್ಕಳು ಕರ್ತನ ಮುಂದೆ ಕೆಟ್ಟತನ ಮಾಡಿ, ತಮ್ಮ ದೇವವಾದ ಕರ್ತನನ್ನು ಮರೆತು, ಬಾಳನನ್ನೂ ವಿಗ್ರಹಗ ೮ ಳನ್ನೂ ಸೇವಿಸಿದರು. ಆದದರಿಂದ ಕರ್ತನು ಇಸ್ರಯೇಲಿನ ಮೇಲೆ ಕೋಪ ಮಾಡಿ, ಅವರನ್ನು ಮೆಸೊಪೊತಮ್ಯದ ಅರಸನಾದ ಕುರ್ಷಾರಿಷತಾಯಿಮನ ಕೈಗೆ ಮಾರಿ ಬಿಟ್ಟನು. ಇಸ್ರಯೇಲ್ ಮಕ್ಕಳು ಕುರ್ಷಾರಿಷತಾಯಿಮನನ್ನು ಎಂಟು ವರುಷ ಸೇವಿಸಿದ ೯ ರು. ಆ ತರುವಾಯ ಇಸ್ರಯೇಲ್ ಮಕ್ಕಳು ಕರ್ತನನ್ನು ಕೂಗುವಾಗ, ಕರ್ತನು ಇಸ್ರಯೇಲ್ ಮಕ್ಕಳಿಗೆ, ಅವರನ್ನು ರಕ್ಷಿಸುವ ರಕ್ಷಕನನ್ನು ಎಬ್ಬಿಸಿದನು—ಕಾಲೆಬನ ತಮ್ಮನಾದ ಕೆನಾಜನ ಮಗ ೧೦ ನಾದ ಒಥನಿಯೇಲನನ್ನೇ. ಅವನ ಮೇಲೆ ಕರ್ತನ ಆತ್ಮವು ಬಂದು ಇದ್ದದ್ದರಿಂದ, ಅವನು ಇಸ್ರಯೇಲಿನಲ್ಲಿ ನ್ಯಾಯ ತೀರಿಸಿದನು. ಮತ್ತು ಯುದ್ಧ ಮಾಡ ಹೊರಟನು. ಕರ್ತನು ಅವನ ಕೈಗೆ ಮೆಸೊಪೊತಮ್ಯದ ಅರಸನಾದ ಕುರ್ಷಾರಿಷತಾಯಿಮನನ್ನು ಒಪ್ಪಿಸಿ ಕೊಟ್ಟನು. ಅವನ ಕೈ ಕುರ್ಷಾರಿಷತಾಯಿಮನ ಮೇಲೆ ಬಲ ೧೧ ವಾಯಿತು. ಮತ್ತು ದೇಶವು ನಾಲ್ವತ್ತು ವರುಷದ ಪರ್ಯಂತರ ಶಾಂತವಾಗಿತ್ತು. ಮತ್ತು ಕೆನಾಜನ ಮಗನಾದ ಒಥನಿಯೇಲನು ಸತ್ತನು.

೧೨ ಇಸ್ರಯೇಲ್ ಮಕ್ಕಳು ಕರ್ತನ ಮುಂದೆ ತಿರಿಗಿ ಕೆಟ್ಟತನ ಮಾಡಿದರು. ಅವರು ಕರ್ತನ ಮುಂದೆ ಕೆಟ್ಟತನ ಮಾಡಿದ್ದರಿಂದ, ಕರ್ತನು ಮೋವಾಬ್ಯರ ಅರಸನಾದ ಎಗ್ಲೋನನನ್ನು ಇಸ್ರಯೇ ೧೩ ಲಿಗೆ ವಿರೋಧವಾಗಿ ಬಲ ಪಡಿಸಿದನು. ಅವನು ಅಮ್ಮೋನನ ಮಕ್ಕಳನ್ನೂ, ಅಮಲೇಕನ ಮಕ್ಕಳನ್ನೂ ಕೂಡಿಸಿ ಕೊಂಡು ಬಂದು, ಇಸ್ರಯೇಲನ್ನು ಹೊಡೆದು, ಖರ್ಜೂರ ಗಿಡದ ಪಟ್ಟಣವನ್ನು ೧೪ ಸ್ವತಂತ್ರಿಸಿ ಕೊಂಡನು. ಮತ್ತು ಇಸ್ರಯೇಲ್ ಮಕ್ಕಳು ಮೋವಾಬ್ಯರ ಅರಸನಾದ ಎಗ್ಲೋನನನ್ನು ಹದಿನೆಂಟು ವರುಷ ಸೇವಿಸಿದರು.

೧೫ ಆದಕೆ ಇಸ್ರಯೇಲ್ ಮಕ್ಕಳು ಕರ್ತನನ್ನು ಕೂಗಿದಾಗ, ಕರ್ತನು ಅವರಿಗೆ ಬೆನ್ಯಾಮಿನ್ಯನಾದ ಗೇರನ ಮಗನಾದ ಎಹೂದನೆಂಬ ರಕ್ಷಕನನ್ನು ಎಬ್ಬಿಸಿದನು. ಅವನು ಬಲಗೈ ಅಭ್ಯಾಸವಿಲ್ಲದವನಾಗಿದ್ದನು. ಅವನ ಕೈಯಿಂದ ಇಸ್ರಯೇಲ್ ಮಕ್ಕಳು ಮೋವಾಬಿನ ಅರಸನಾದ ಎಗ್ಲೋನನಿಗೆ ಕಾಣಿಕೆಯನ್ನು ಕಳುಹಿಸಿದರು. ೧೬ ಎಹೂದನು ಇಬ್ಬಾಯಿಯುಳ್ಳ, ಮೊಳ ಉದ್ದವಾದ ಒಂದು ಕಠಾರಿಯನ್ನು ತನಗೆ ಉಂಟು ಮಾಡಿ ಕೊಂಡು, ಅದನ್ನು ತನ್ನ ವಸ್ತ್ರಗಳ ಕೆಳಗೆ ತನ್ನ ಬಲಗಡೆ ನಡುವಿನಲ್ಲಿ ಕಟ್ಟಿ ಕೊಂಡು, ೧೭ ಕಾಣಿಕೆಯನ್ನು ಮೋವಾಬಿನ ಅರಸನಾದ ಎಗ್ಲೋನನ ಬಳಿಗೆ ತಂದನು. ಎಗ್ಲೋನನು ಬಹು ಕೊಬ್ಬಿದವನಾಗಿದ್ದನು.

೧೮ ಅವನು ಕಾಣಿಕೆಯನ್ನು ಕೊಟ್ಟು ತೀರಿಸಿದಾಗ, ಕಾಣಿಕೆಯನ್ನು ಹೊತ್ತು ಕೊಂಡು ಬಂದ ಜನರನ್ನು ಕಳುಹಿಸಿ ಬಿಟ್ಟು, ತಾನು ೧೯ ಗಿಲ್ಗಾಲಿನಲ್ಲಿರುವ ವಿಗ್ರಹಗಳ ಸ್ಥಳದಿಂದ ಹಿಂದಕ್ಕೆ ತಿರುಗಿ, ಅವನ ಬಳಿಗೆ ಬಂದು, ಅರಸೇ, ನಿನ್ನ ಸಂಗಡ ಹೇಳ ಬೇಕಾದ ರಹಸ್ಯವಾದ ಒಂದು ಮಾತು ಅದೆ, ಅಂದನು. ಅವನು, ಸುಮ್ಮನೆ ಇರ್ರಂ ೨೦ ದು ಹೇಳಿದಾಗ, ಅವನ ಬಳಿಯಲ್ಲಿ ನಿಂತವರೆಲ್ಲರು ಅವನನ್ನು ಬಿಟ್ಟು, ಹೊರಗೆ ಹೋದರು. ಅವನು ತನಗೋಸ್ಕರ ಮಾತ್ರ ಇದ್ದ ತಂಪಾದ ಕೊಠಡಿಯಲ್ಲಿ ಕುಳಿತಾಗ, ಎಹೂದನು ಅವನ ಬಳಿಗೆ ಪ್ರವೇಶಿಸಿ, ನಿನ್ನ ಸಂಗಡ ಹೇಳ ಬೇಕಾದ ದೇವರ ಮಾತು ೨೧ ನನಗದೆ, ಅಂದನು. ಅವನು ತನ್ನ ಗದ್ದುಗೆಯಿಂದ ಎದ್ದನು. ಎಹೂದನು ತನ್ನ ಎಡಗೈಯನ್ನು ಚಾಚಿ, ತನ್ನ ಬಲಗಡೆ ನಡುವಿನಲ್ಲಿ ಇದ್ದ ಕಠಾರಿಯನ್ನು ತಕ್ಕೊಂಡು, ಅವನ ಹೊಟ್ಟೆಯಲ್ಲಿ ತಿವಿ ೨೨ ದನು. ಅದು ಅಲಗಿನ ಸಂಗಡ ಹಿಡಿ ಸಹ ಅವನ ಹೊಟ್ಟೆಯಲ್ಲಿ ಹೊಕ್ಕು, ಕಿತ್ತು ತೆಗೆಯ ಕೂಡದ ಹಾಗೆ, ಕೊಬ್ಬು ಅಲಗನ್ನು ೨೩ ಸುತ್ತಿ ಕೊಂಡಿತು. ಆದದರಿಂದ ಮಲವು ಹೊರಟಿತು. ಎಹೂದನು ಕೊಠಡಿಯ ಕದವನ್ನು ತನ್ನ ಹಿಂಭಾಗವಾಗಿ ಮುಚ್ಚಿ, ಬೀಗವನ್ನು ಹಾಕಿ, ಸಭಾಸ್ಥಾನದಲ್ಲಿಂದ ಹೊರಟು ಹೋದನು.

೨೪ ಅವನು ಹೋದ ತರುವಾಯ ಉಳಿಗದವರು ಕೊಠಡಿಯ ಬಾಗಲು ಮುಚ್ಚಲ್ಪಟ್ಟಿರುವದನ್ನು ಕಂಡಾಗ, ಅರಸನು ನಿಶ್ಚಯವಾಗಿ ತನ್ನ ತಂಪಿನ ಕೊಠಡಿಯಲ್ಲಿ ಕಾಲು ಮುಚ್ಚಿ ಕೊಂಡಿದ್ದಾ ೨೫ ನೆ, ಅಂದು ಕೊಂಡು, ಅವರು ತಮಗೆ ನಾಚಿಕೆಯಾಗುವ ಮಟ್ಟಿಗೂ ಕಾದಿದ್ದರು. ಆದಕೆ, ಇಗೋ, ಅವನು ಅಡ್ಡು ಹೊತ್ತಿಗೂ ಕೊಠಡಿಯ ಕದವನ್ನು ತೆಗೆಯದೆ ಇದ್ದದರಿಂದ, ಅವರು ಬೀಗದ ಕೈಯನ್ನು ತೆಗೆದು ಕೊಂಡು, ಬಾಗಲನ್ನು ತೆಗೆದರು. ಇಗೋ, ಅವರ ಕರ್ತನು ನೆಲದ ಮೇಲೆ ಸತ್ತು ಬಿದ್ದಿದ್ದನು.



೨೬ ಆದಕೆ ಅವರು ಆಲಸ್ಯ ಮಾಡುತ್ತಿರುವಾಗ, ಎಹೂದನು ತಪ್ಪಿಸಿ ಕೊಂಡನು. ಅವನು ವಿಗ್ರಹಗಳನ್ನು ದಾಟಿ, ಸೇಯಿರಾತನ್ನು, ೨೭ ಕೇರಿ, ತಪ್ಪಿಸಿ ಕೊಂಡನು. ಅವನು ಅಲ್ಲಿ ಬಂದಾಗ, ಎಫ್ರಯಿಮಿನ ಬೆಟ್ಟಗಳಲ್ಲಿ ತುತೂರಿಯನ್ನು ಊದಿದನು. ಆಗ ಇಸ್ರಯೇಲ್ ಮಕ್ಕಳು ಅವನ ಸಂಗಡ ಬೆಟ್ಟದ ದೇಶದಿಂದ ಇಳಿದರು; ಅವನು ಇವರ ಮುಂದೆ ನಡೆದು, ಅವರ ಸಂಗಡ, ನೀವು ನನ್ನ ಹಿಂದೆ ಹ ೨೮ ತ್ತಿ ಬನ್ನಿರಿ; ಯಾಕಂದರೆ ಕರ್ತನು ನಿಮ್ಮ ಶತ್ರುಗಳಾದ ಮೋವಾಬ್ಯರನ್ನು ನಿಮ್ಮ ಕೈಯಲ್ಲಿ ಒಪ್ಪಿಸಿ ಕೊಟ್ಟನು, ಅಂದನು. ಅವರು ಅವನ ಹಿಂದೆ ಬಂದು, ಮೋವಾಬ್ಯರಿಗೆ ಎದುರಾದ ಯೊರ್ದನಿನ ಕೇವುಗಳನ್ನು ಹಿಡಿದು, ಒಬ್ಬರನ್ನಾದರೂ ದಾಟಗೊಡದೆ, ೨೯ ಮೋವಾಬ್ಯರಲ್ಲಿ ಹೆಚ್ಚು ಕಡಿಮೆ ಹತ್ತು ಸಾವಿರ ಜನರನ್ನು ಹೊಡೆದು ಬಿಟ್ಟರು. ಅವರೆಲ್ಲರು ಕೊಬ್ಬಾದವರೂ ಪರಾಕ್ರಮವಂತರೂ ಆಗಿದ್ದರು. ೩೦ ಅವರಲ್ಲಿ ಒಬ್ಬನಾದರೂ ತಪ್ಪಿ ಹೋದದ್ದಿಲ್ಲವು. ಹೀಗೆಯೇ ಆ ದಿವಸದಲ್ಲಿ ಮೋವಾಬ್ ಇಸ್ರಯೇಲಿನ ಕೈ ಕೆಳಗೆ ತಗ್ಗಲ್ಪಟ್ಟಿತು; ದೇಶವು ಎಂಭತ್ತು ವರುಷ ಶಾಂತವಾಗಿತ್ತು.

೩೧ ಅವನ ತರುವಾಯ ಅನಾತನ ಮಗನಾದ ಶಮ್ಗರ್ ಎದ್ದನು. ಅವನು ಫಿಲಿಷ್ಟ್ಯರಲ್ಲಿ ಆರು ನೂರು ಮನುಷ್ಯರನ್ನು ಒಂದು ಮುಳ್ಳು ಕೋಲಿನಿಂದ ಹೊಡೆದು ಬಿಟ್ಟನು. ಅವನು ಇಸ್ರಯೇಲನ್ನು ರಕ್ಷಿಸಿದನು.

## ೪. ಸಂಧಿ.

೧ ಆದಕೆ ಎಹೂದನು ಸತ್ತ ತರುವಾಯ ಇಸ್ರಯೇಲ್ ಮಕ್ಕಳು ತಿರಿಗಿ ಕರ್ತನ ಕಣ್ಣುಗಳ ಮುಂದೆ ಕೆಟ್ಟತನ ಮಾಡಿದರು. ೨ ಆದದರಿಂದ ಕರ್ತನು ಅವರನ್ನು ಹಚೋರಿನಲ್ಲಿ ಆಳುವ ಕನಾನ್ಯರ ಅರಸನಾದ ಯಬೀನನ ಕೈಗೆ ಮಾರಿ ಬಿಟ್ಟನು. ಅವನ ದಂಡಿಗೆ ಜನಾಂಗಗಳ ಪಟ್ಟಣವಾದ ಹರೋಷೆತಿನಲ್ಲಿ ವಾಸವಾಗಿರು ೩ ವ ಸೀಸ್ರ ಅಧಿಪತಿಯಾಗಿದ್ದನು. ಇದಲ್ಲದೆ ಇಸ್ರಯೇಲ್ ಮಕ್ಕಳು ಕರ್ತನಿಗೆ ಕೂಗಿದರು. ಯಾಕಂದರೆ ಅವನಿಗೆ ಒಂಭೈನೂರು ಕಬ್ಬಿಣದ ರಥಗಳಿದ್ದವು; ಮತ್ತು ಅವನು ಇಸ್ರಯೇಲ್ ಮಕ್ಕಳನ್ನು ಇಪ್ಪತ್ತು ವರುಷ ಬಲವಂತವಾಗಿ ಬಾಧೆ ಪಡಿಸಿದನು.

೪ ಆ ಕಾಲದಲ್ಲಿ ಲಪಿದೋತನ ಹೆಂಡತಿಯಾದ ದೆಬೋರಳೆಂಬ ೫ ಪ್ರವಾದಿನಿ ಇಸ್ರಯೇಲಲ್ಲಿ ನ್ಯಾಯ ತೀರಿಸುತ್ತಿದ್ದಳು. ಅವಳು ರಾಮಕ್ಕೂ ಬೆತೇಲಿಗೂ ಮಧ್ಯವಾದ ಎಫ್ರಯಿಮ್ಯರ ಬೆಟ್ಟದ ದೇಶದಲ್ಲಿರುವ ದೆಬೋರಳ ಖರ್ಜೂರದ ಮರದ ಕೆಳಗೆ ವಾಸಿಸಿದ್ದಳು. ಇಸ್ರಯೇಲ್ ಮಕ್ಕಳು ಅವಳ ಬಳಿಗೆ ನ್ಯಾಯ ತೀ ೬ ರ್ಪಿಕೆಗೋಸ್ಕರ ಹೋಗುತ್ತಿದ್ದರು. ಅವಳು ಕೇದೆಷ್ ನೆಫ್ತಾಲಿಯಲ್ಲಿರುವ ಅಬಿನೊವಾಮನ ಮಗನಾದ ಬಾರಕನನ್ನು ಕರೆ ಕಳುಹಿಸಿ, ಅವನ ಸಂಗಡ, ನಿನಗೆ ಇಸ್ರಯೇಲ್ ದೇವವಾದ ಕರ್ತನು ಆಜ್ಞಾಪಿಸಿದ್ದೇನಂದರೆ, ನೀನು ನೆಫ್ತಾಲಿಯ ಮಕ್ಕಳಲ್ಲಿಯೂ ಜೆಬುಲೋನನ ಮಕ್ಕಳಲ್ಲಿಯೂ ಹತ್ತು ಸಾವಿರ ಜನರನ್ನು ಕೂಡಿಸಿ ೭ ಕೊಂಡು, ತಬೋರ್ ಬೆಟ್ಟಕ್ಕೆ ಹೋಗು. ನಾನು ಯಬೀನನ ಸೇನಾಪತಿಯಾದ ಸೀಸ್ರನನ್ನೂ ಅವನ ರಥಗಳನ್ನೂ ಅವನ ಸೈನ್ಯವನ್ನೂ ಕಿಶೋನ್ ತಗ್ಗಿನಲ್ಲಿ ನಿನ್ನ ಬಳಿಗೆ ಬರ ಮಾಡಿ, ಅವನನ್ನು ನಿನ್ನ ಕೈಯಲ್ಲಿ ಒಪ್ಪಿಸಿ ಕೊಡುವೆನೆಂದು, ಆಜ್ಞಾಪಿಸಿ ೮ ದನು, ಅಂದಳು. ಬಾರಕನು ಅವಳಿಗೆ, ನೀನು ನನ್ನ ಸಂಗಡ ಬಂದರೆ, ಹೋಗುವೆನು; ನೀನು ನನ್ನ ಸಂಗಡ ಬಾರದೆ ಇದ್ದರೆ, ನಾ ೯ ನು ಹೋಗೆನು, ಅಂದನು. ಅದಕ್ಕವಳು, ನಾನು ನಿನ್ನ ಸಂಗಡ ಬರಲೇ ಬರುವೆನು; ಆದರೆ ನೀನು ಹೋಗುವ ಪ್ರಯಾಣದಿಂದ ಉಂಟಾಗುವ ಘನವು ನಿನ್ನದಾಗಿರದು; ಯಾಕಂದರೆ ಕರ್ತನು ಒಬ್ಬ ಸ್ತ್ರೀಯ ಕೈಯಲ್ಲಿ ಸೀಸ್ರನನ್ನು ಒಪ್ಪಿಸಿ ಕೊಡುವನು ಎಂದು ಹೇಳಿ, ದೆಬೋರ ಎದ್ದು, ಬಾರಕನ ಕೂಡ ಕೇದೆಷಿಗೆ ಹೋ ೧೦ ದಳು. ಮತ್ತು ಬಾರಕನು ಜೆಬುಲೋನನ್ನೂ, ನೆಫ್ತಾಲಿಯನ್ನೂ ಕೂಡ ಕಕರೆದನು; ಹತ್ತು ಸಾವಿರ ಜನರ ಸಹಿತವಾಗಿ ಕೇದೆಷಿಗೆ ಏರಿ ಹೋದನು. ದೆಬೋರ ಅವನ ಸಂಗಡ ಏರಿ ಹೋದಳು.

೧೧ ಮತ್ತು ಮೋಶೆಯ ಮಾವನಾದ ಹೋಬಾಬನ ಮಕ್ಕಳಲ್ಲಿ ಕೇರಿದ ಕೇನ್ಯವಾದ ಹೇಬೆರೆಂಬವನು ಕೇನಿಯರನ್ನು ಬಿಟ್ಟು, ಪ್ರತ್ಯೇಕಿಸಿ, ತನ್ನ ಗುಡಾರವನ್ನು ಕೇದೆಷನ ಬಳಿಯಲ್ಲಿರುವ ಚಾವನಾಯಿಮ್ ಎಂಬ ತೋಪಿನಲ್ಲಿ ಹಾಕಿ ಕೊಂಡಿದ್ದನು.

೧೨ ಆಗ ಅಬಿನೊವಾಮನ ಮಗನಾದ ಬಾರಕನು ತಬೋರ್ ಬೆಟ್ಟ ೧೩ ದಲ್ಲಿ ಏರಿದನೆಂದು, ಸೀಸ್ರನಿಗೆ ತಿಳಿಸಲ್ಪಟ್ಟಿತು. ಆದದರಿಂದ ಸೀಸ್ರನು ಒಂಭೈನೂರು ಕಬ್ಬಿಣದ ರಥಗಳಾದ ತನ್ನ ಎಲ್ಲಾ ರಥಗಳನ್ನೂ, ತನ್ನ ಸಂಗಡ ಇರುವ ಎಲ್ಲಾ ಜನವನ್ನೂ ಜನಾಂಗಗಳ ಪಟ್ಟಣವಾದ ಹರೋಷೆತಿನಲ್ಲಿಂದ ಕಿಶೋನ್ ತಗ್ಗಿಗೆ ಬರ ಮಾಡಿದನು.

೧೪ ಮತ್ತು ದೆಬೋರ ಬಾರಕನಿಗೆ, ನೀನು ಏಳು; ಯಾಕಂದರೆ ಕರ್ತನು ಸೀಸ್ರನನ್ನು ನಿನ್ನ ಕೈಯಲ್ಲಿ ಒಪ್ಪಿಸಿ ಕೊಡುವ ದಿನವು ಇದೇ; ಕರ್ತನು ನಿನ್ನ ಮುಂದೆ ಹೊರಡಲಿಲ್ಲವೋ! ಅಂದಳು. ಬಾರಕನು ತನ್ನ ಹಿಂದೆ ಹತ್ತು ಸಾವಿರ ಜನರನ್ನು ತೆಗೆದು ಕೊಂ ೧೫ ಡು, ತಬೋರ್ ಬೆಟ್ಟದಿಂದ ಇಳಿದನು. ಕರ್ತನು ಸೀಸ್ರನನ್ನೂ, ಅವನ ಎಲ್ಲಾ ರಥಗಳನ್ನೂ, ಅವನ ಎಲ್ಲಾ ಸೈನ್ಯವನ್ನೂ ಬಾರಕನ ಮುಂದೆ ಕತ್ತಿಯ ಬಾಯಿಯಿಂದ ಚದರ ಬಡಿದನು. ಮತ್ತು ಸೀಸ್ರನು ರಥವನ್ನು ಬಿಟ್ಟು, ಇಳಿದು, ಕಾಲು ನಡೆಯಾಗಿ ಓಡಿ ಹೋ ೧೬ ದನು. ಆದಕೆ ಬಾರಕನು ರಥಗಳನ್ನೂ ಸೈನ್ಯವನ್ನೂ ಜನಾಂಗಳ ಪಟ್ಟಣವಾದ ಹರೋಷೆತಿನ ಮಟ್ಟಿಗೂ ಹಿಂದಟ್ಟಿದನು. ಸೀಸ್ರನ ಸೈನ್ಯವೆಲ್ಲಾ ಕತ್ತಿಯ ಬಾಯಿಯಿಂದ ಹತವಾಗಿ ಬಿತ್ತು; ಒಬ್ಬನಾದರೂ ಉಳಿಯಲಿಲ್ಲ.

೧೭ ಆದಕೆ ಸೀಸ್ರನು ಕಾಲು ನಡೆಯಾಗಿ ಕೇನ್ಯನಾದ ಹೇಬೆರನ ಹೆಂಡತಿಯಾದ ಯಾಯೇಲಳ ಗುಡಾರಕ್ಕೆ ಓಡಿ ಬಂದನು. ಯಾಕಂದರೆ ಯಬೀನನೆಂಬ ಹಚೋರಿನ ಅರಸನಿಗೂ ಕೇನ್ಯನಾದ ಹೇಬೆರನ ಮನೆಗೂ ಸಮಾಧಾನ ಇತ್ತು. ಆಗ ಯಾಯೇಲ್ ಸೀಸ್ರನನ್ನು ಎದುರುಗೊಳ್ಳ ಹೋಗಿ, ಅವನಿಗೆ, ಒಳಗೆ ಬಾ, ನನ್ನ ಸ್ವಾಮಿ; ನನ್ನ ಒಳಗೆ ಬಾ; ಭಯ ಪಡ ಬೇಡ, ಎಂದು, ಹೇಳಿದಳು. ಅವನು ಗುಡಾರದಲ್ಲಿರುವ ಅವಳ ಬಳಿಗೆ ಬಂದಾಗ, ಅವಳು ಅವನನ್ನು ಒಂದು ಜಂಬುಖಾನದಿಂದ ಮುಚ್ಚಿದಳು. ೧೮ ಸೀಸ್ರನು ಅವಳಿಗೆ, ನನಗೆ ಕುಡಿಯುವದಕ್ಕೆ ಸ್ವಲ್ಪ ನೀರು ದಯೆ ಮಾಡು; ಯಾಕಂದರೆ ನನಗೆ ದಾಹ ಉಂಟು, ಅಂದನು. ಅವಳು ಹಾಲಿನ ಕಿದ್ದಿಗೆಯನ್ನು ತೆರೆದು, ಅವನಿಗೆ ಕುಡಿಯ ಕೊಟ್ಟು, ೧೯ ತಿರಿಗಿ ಅವನನ್ನು ಮುಚ್ಚಿದಳು. ತಿರಿಗಿ ಅವನು ಅವಳಿಗೆ, ನೀನು ಬಾಗಲಲ್ಲಿ ನಿಂತಿರು; ಯಾವವನಾದರೂ ಬಂದು, ಇಲ್ಲಿ ಯಾರಾದರೂ ಇದ್ದಾರೋ! ಎಂದು ನಿನ್ನನ್ನು ಕೇಳಿದರೆ, ಇಲ್ಲವೆಂದು ಹೇಳು, ೨೦ ಅಂದನು.

೨೧ ಅಂದನು. ಮತ್ತು ಹೇಬೆರನ ಹೆಂಡತಿಯಾದ ಯಾಯೇಲ್ ಒಂ
ದು ಗುಡಾರದ ಮೊಳೆಯನ್ನು ತೆಗೆದು, ತನ್ನ ಕೈಯ್ಯಲ್ಲಿ ಸುತ್ತಿ
ಗೆಯನ್ನು ಹಿಡಿದು ಕೊಂಡು, ಅವನು ಆಯಾಸದಿಂದ ಬಹಳ ನಿ
ದ್ರೆ ಮಾಡುತ್ತಿರುವಾಗ, ಮೆಲ್ಲಗೆ ಅವನ ಬಳಿಗೆ ಬಂದು, ಅವನ ಕ
ಣತಲೆಯಲ್ಲಿ ಆ ಮೊಳೆಯನ್ನು ಜಡಿದು, ನೆಲದಲ್ಲಿ ನಾಟಿದಳು.
೨೨ ಅವನು ಸತ್ತನು. ಮತ್ತು, ಇಗೋ, ಸೀಸ್ರನನ್ನು ಹಿಂದಟ್ಟುವ ಬಾ
ರಕನು ಬಂದನು. ಆಗ ಯಾಯೇಲ್ ಅವನಿಗೆ ಎದುರ್ಗೊಳ್ಳ
ಹೊರಟು ಹೋಗಿ—ಬಾ; ನೀನು ಹುಡುಕುವ ಮನುಷ್ಯನನ್ನು
ನಿನಗೆ ತೋರಿಸುವೆನೆಂದು, ಅವನಿಗೆ ಹೇಳಿದಳು. ಅವನು ಅವಳ
ಬಳಿಗೆ ಬಂದಾಗ, ಇಗೋ, ಸೀಸ್ರ ಸತ್ತು ಬಿದ್ದಿದ್ದನು; ಮೊಳೆಯು
ಅವನ ತಲೆಯಲ್ಲಿ ಜಡಿದಿತ್ತು.

೨೩ ಹೀಗೆಯೇ ದೇವರು ಆ ದಿವಸದಲ್ಲಿ ಕನಾನ್ಯರ ಅರಸನಾದ
೨೪ ಯಬೀನನನ್ನು ಇಸ್ರಯೇಲ್ ಮಕ್ಕಳ ಮುಂದೆ ತಗ್ಗಿಸಿದನು. ಇಸ್ರ
ಯೇಲ್ ಮಕ್ಕಳ ಕೈ ಕನಾನ್ಯರ ಅರಸನಾದ ಯಬೀನನನ್ನು ಕ
ಡಿದು ಬಿಡುವ ಮಟ್ಟಿಗೂ, ಅವನ ಮೇಲೆ ಜಯವಾಗಿ ಕಠಿಣವಾ
ಗಿತ್ತು.

## ೫. ಸಂಧಿ.

೧ ಮತ್ತು ಆ ದಿವಸದಲ್ಲಿ ದೆಬೋರಳೂ ಅಬಿನೊವಾಮನ ಮಗ
ನಾದ ಬಾರಕನೂ ಹಾಡಿದ್ದೇನಂದರೆ,
೨ ಜನರು ಉಚಿತವಾಗಿ ಕೂಡಿ ಬಂದಾಗ,
ಕರ್ತನು ಇಸ್ರಯೇಲಿಗೋಸ್ಕರ ನೀತಿಯನ್ನು ಮುಯ್ಯಿ ಕೊಟ್ಟಿ
ದ್ದರಿಂದ
ನೀವು ಅವನನ್ನು ಆಶೀರ್ವದಿಸಿರಿ.
೩ ಅರಸರೇ, ಕೇಳಿರಿ;
ಪ್ರಭುಗಳೇ, ಕಿವಿಗೊಡಿರಿ;
ನಾನು ಕರ್ತನಿಗೆ, ನಾನೇ ಕರ್ತನಿಗೆ ಹಾಡುವೆನು;
ಇಸ್ರಯೇಲಿನ ದೇವರಾದ ಕರ್ತನನ್ನು ಕೀರ್ತಿಸುವೆನು.

೪ ಕರ್ತನೇ, ನೀನು ಸೇಯಿರಿನಿಂದ ಹೊರಟು,
ಎದೋಮಿನ ಬೈಲಿನಿಂದ ನಡೆದು ಬರುವಾಗ,
ಭೂಮಿ ಕದಲಿತು, ಆಕಾಶವು ಸಹ ಸುರಿಯಿತು;
ಮೇಘಗಳು ನೀರು ಸುರಿದವು.
೫ ಕರ್ತನ ಮುಂದೆ ಬೆಟ್ಟಗಳು ಕರಗಿದವು;
ಇಸ್ರಯೇಲಿನ ದೇವರಾದ ಕರ್ತನ ಮುಂದೆ ಸೀನಾಯಿ ಪರ್ವತ
ವು ಸಹ ಕರಗಿತು.

೬ ಅಣಾತನ ಮಗನಾದ ಶಮ್ಗರನ ದಿವಸಗಳಲ್ಲಿಯೂ
ಯಾಯೇಲಳ ದಿವಸಗಳಲ್ಲಿಯೂ
ದಾರಿಗಳು ನಿಂತು ಹೋದವು;
ಮಾರ್ಗಸ್ಥರು ಡೊಂಕು ದಾರಿಗಳಲ್ಲಿ ನಡೆಯುತ್ತಿದ್ದರು.
೭ ದೆಬೋರಳಾದ ನಾನು ಏಳುವ ಮಟ್ಟಿಗೂ,
ಇಸ್ರಯೇಲಿನಲ್ಲಿ ತಾಯಾಗಿ ನಾನು ಏಳುವ ಮಟ್ಟಿಗೂ,
ಅಧಿಪತಿಗಳು ನಿಂತು ಹೋದರು;
ಇಸ್ರಯೇಲಿನಲ್ಲಿ ನಿಂತು ಹೋದರು.
೮ ಅವರು ಹೊಸ ದೇವರುಗಳನ್ನು ಆದು ಕೊಂಡರು;
ಆಗ ಯುದ್ಧವು ಬಾಗಲುಗಳಲ್ಲಿ ಆಯಿತು.
ಇಸ್ರಯೇಲಿನಲ್ಲಿ ನಾಲ್ವತ್ತು ಸಾವಿರ ಜನಕೊಳಗೆ ಗುರಾಣಿಯೂ
ಕಠಾರಿಯೂ ಕಾಣಲ್ಪಟ್ಟವೋ!

೯ ಜನರಲ್ಲಿ ಉಚಿತವಾಗಿ ಬಂದ
ನ್ಯಾಯಾಧಿಪತಿಗಳ ಮೇಲೆ ನನ್ನ ಹೃದಯ ಅದೆ.
ಕರ್ತನನ್ನು ಆಶೀರ್ವದಿಸಿರಿ.
೧೦ ಬಿಳ್ಳೇ ಕತ್ತೆಗಳ ಮೇಲೆ ಏರುವವರೇ,
ನ್ಯಾಯದ ಸಿಂಹಾಸನದಲ್ಲಿ ಕುಳಿತಿರುವವರೇ,
ಮಾರ್ಗದಲ್ಲಿ ನಡೆಯುವವರೇ,
ಧ್ಯಾನ ಮಾಡಿರಿ.
೧೧ ನೀರು ಕೇದುವ ಸ್ಥಳಗಳ ಹತ್ತರ ಬಿಲ್ಲುಗಾರರ ಶಬ್ದದಿಂದ ತಪ್ಪಿಸ
ಲ್ಪಟ್ಟವರು;
ಅಲ್ಲಿ ಕರ್ತನ ಸತ್ಯವಾದ ಕ್ರಿಯೆಗಳನ್ನು, ಇಸ್ರಯೇಲಿನಲ್ಲಿ ಅಧಿ
ಪತಿಗಳಿಗೆ ಮಾಡಿದ ಸತ್ಯವಾದ ಕ್ರಿಯೆಗಳನ್ನೇ ಹಾಡಿ
ಕೊಳ್ಳುವರು.
ಕರ್ತನ ಜನರು ಬಾಗಲುಗಳಿಗೆ ಇಳಿದು ಬರುವರು.
೧೨ ಎಚ್ಚರವಾಗು, ಎಚ್ಚರವಾಗು, ದೆಬೋರಳೇ;
ಎಚ್ಚರವಾಗು, ಎಚ್ಚರವಾಗು, ಹಾಡನ್ನು ಹಾಡು;
ಬಾರಕನೇ, ಏಳು;
ಅಬಿನೊವಾಮನ ಮಗನೇ, ಕೆಳೆ ಹಿಡಿದವರನ್ನು ಕೆಳೆಯಾಗಿ
ವೈಯಿ.
೧೩ ಆಗ ಉಳಿದವನನ್ನು ಅವನು ಜನರಲ್ಲಿ ಶ್ರೇಷ್ಠರಾದವರ ಮೇಲೆ
ಆಳ್ವ ಮಾಡಿದನು;
ಕರ್ತನು ನನ್ನನ್ನು ಪರಾಕ್ರಮ ಶಾಲಿಗಳ ಮೇಲೆ ಆಳ್ವ ಮಾಡಿ
ದನು.

೧೪ ಅಮಲೇಕ್ಯರಿಗೆ ವಿರೋಧ ಮಾಡಿದವರ ಬೇರು ಎಫ್ರಯಿಮಿ
ನಿಂದ ಉಂಟಾಯಿತು,
ನಿನ್ನ ಹಿಂದೆ ನಿನ್ನ ಜನರಲ್ಲಿ ಬೆನ್ಯಮಿನ್ ಹೋದನು.
ಮಕೀರನಲ್ಲಿಂದ ಅಧಿಪತಿಗಳು,
ಜೆಬುಲೋನನಲ್ಲಿಂದ ಕೋಲಿನಿಂದ ಕೂಡಿಸಿದವರು ಬಂದರು.
೧೫ ಇಸ್ಸಕಾರನ ಪ್ರಧಾನರು ದಿಬೋರಳ ಸಂಗಡ ಇದ್ದರು;
ಮತ್ತು ಇಸ್ಸಕಾರನು, ಬಾರಕನು ಹಾಗೆಯೇ;
ಕಾಲು ನಡೆಯಾಗಿ ತಗ್ಗಿನಲ್ಲಿ ಕಳುಹಿಸಲ್ಪಟ್ಟನು.
ರೂಬೆನನ ಭಾಗಗಳಲ್ಲಿ
ದೊಡ್ಡ ಹೃದಯ ಶೋಧನೆಗಳು ಇದ್ದವು.
೧೬ ಮಂದೆಗಳ ಕೂಗನ್ನು ಕೇಳ,
ನೀನು ದೊಡ್ಡಿಗಳ ಬಳಿಯಲ್ಲಿ ಇದ್ದದ್ದೇನು!
ರೂಬೆನನ ಭಾಗಗಳಲ್ಲಿ
ದೊಡ್ಡ ಹೃದಯ ಶೋಧನೆಗಳು ಇದ್ದವು.
೧೭ ಗಿಲ್ಯಾದು ಯೊರ್ದನಿಗೆ ಆಚೆ ನಿಂತು ಹೋಯಿತು;
ದಾನನು ಹಡಗಗಳಲ್ಲಿ ನಿಂತದ್ದೇನು!
ಆಶೇರನು ಸಮುದ್ರದ ಧಕದಲ್ಲಿದ್ದು,
ತನ್ನ ಕೇವುಗಳ ಬಳಿಯಲ್ಲಿ ವಾಸಿಸಿದನು.
೧೮ ಜೆಬುಲೋನನೂ ನೆಫ್ತಲಿಯೂ ಬೈಲಿನ ಎತ್ತರವಾದ ಸ್ಥಳಗಳಲ್ಲಿ
ಮರಣಕ್ಕೆ ತಮ್ಮ ಪ್ರಾಣವನ್ನು ಧೈರ್ಯವಾಗಿ ಇಟ್ಟ ಜನರಾಗಿ
ದ್ದರು.



೧೯ ಅರಸುಗಳು ಬಂದು, ಯುದ್ಧ ಮಾಡಿದರು;
ಆಗ ಕನಾನ್ಯರ ಅರಸುಗಳು
ಮೆಗಿದ್ದೋನಿನ ಜಲ ಸಮೀಪವಾದ ತಾಣಕದಲ್ಲಿ ಯುದ್ಧ ಮಾಡಿ
ದರು;
ಅವರು ಬೆಳ್ಳೀ ಲಾಭ ತಕ್ಕೊಳ್ಳಲಿಲ್ಲ.
೨೦ ಆಕಾಶದಲ್ಲಿ ಇರುವವುಗಳು ಯುದ್ಧ ಮಾಡಿದವು;
ನಕ್ಷತ್ರಗಳು ತಮ್ಮ ಚಾರಗಳಲ್ಲಿ ಸೀಸ್ರನಿಗೆ ವಿರೋಧವಾಗಿ ಯು
ದ್ಧ ಮಾಡಿದವು.
೨೧ ಕಿಶೋನ್ ನದಿಯು,
ಆ ಹಳೇದಾದ ಕಿಶೋನ್ ನದಿಯು ಅವರನ್ನು ಬಡು ಕೊಂಡು
ಹೋಯಿತು;
ನನ್ನ ಪ್ರಾಣವೇ, ನೀನು ಬಲವನ್ನು ತುಳಿದು ಹಾಕಿದಿ.
೨೨ ಆಗ ನೆಲವನ್ನು ಘುಟ್ಟಿಸಿ ಓಡುವ ಅವರ ಬಲವಾದ ಕುದುರೆಗಳು
ತಮ್ಮ ಘುಟ್ಟನೆಯಿಂದ ಗೊರಿಕೆಗಳನ್ನು ಒಡೆದು ಬಿಟ್ಟವು.

೨೩ ನೀವು ಮೆರೋಜನ್ನು ಶಪಿಸಿರಿ;
ಅದರ ನಿವಾಸಿಗಳನ್ನು ಶಪಿಸಲೇ ಶಪಿಸಿರಿ, ಎಂದು
ಕರ್ತನ ದೂತನು ಹೇಳುತ್ತಾನೆ;
ಯಾಕಂದರೆ ಅವರು ಕರ್ತನ ಸಹಾಯಕ್ಕೂ,
ಪರಾಕ್ರಮ ಶಾಲಿಗಳಿಗೆ ವಿರೋಧವಾಗಿ ಕರ್ತನ ಸಹಾಯಕ್ಕೂ
ಬಾರದೆ ಹೋದರು.
೨೪ ಕೇನ್ಯನಾದ ಹೇಬೆರನ ಹೆಂಡತಿ ಯಾಯೇಲ್
ಸ್ತ್ರೀಯರಲ್ಲಿ ಅಧಿಕವಾಗಿ ಆಶೀರ್ವದಿಸಲ್ಪಡುವಳು;
ಸ್ತ್ರೀಯರೊಳಗೆ ಅಧಿಕವಾಗಿ ಗುಡಾರದಲ್ಲಿ ಆಶೀರ್ವದಿಸಲ್ಪಡು
ವಳು.
೨೫ ನೀರನ್ನು ಕೇಳಿದನು; ಹಾಲು ಕೊಟ್ಟಳು;
ಅಮೂಲ್ಯವಾದ ಬಟ್ಟಲಲ್ಲಿ ಮಜ್ಜಿಗೆಯನ್ನು ತಂದಿಟ್ಟಳು.
೨೬ ತನ್ನ ಎಡಗೈಯ್ಯಲ್ಲಿ ಮೊಳೆಯನ್ನೂ,
ತನ್ನ ಬಲಗೈಯ್ಯಲ್ಲಿ ಸುತ್ತಿಗೆಯನ್ನೂ ತೆಗೆದು ಕೊಂಡಳು;
ಸುತ್ತಿಗೆಯಿಂದ ಸೀಸ್ರನನ್ನು ಹೊಡೆದಳು;
ಅವಳು ಅವನ ಕಣ ತಲೆಯನ್ನು ಘುಯ ಮಾಡಿ, ತಿವಿದು
ಬಿಟ್ಟು,
ಅವನ ತಲೆಯನ್ನು ಕೊಯಿದು ಬಿಟ್ಟಳು.
೨೭ ಅವಳ ಕಾಲುಗಳ ಹತ್ತರ ಬೊಗ್ಗಿ, ಬಿದ್ದು, ಮಲಗಿದನು;
ಅವಳ ಕಾಲುಗಳ ಹತ್ತರ ಬಾಗಿ, ಬಿದ್ದನು;
ಎಲ್ಲಿ ಬಾಗಿ, ಬಿದ್ದನೋ, ಅಲ್ಲೇ ಬಿದು, ಸತ್ತನು.
೨೮ ಸೀಸ್ರನ ತಾಯಿ ಕಿಟಕಿಯಿಂದ ನೋಡಿದಳು,
ತಟ್ಟಿಯಿಂದ ಕೂಗಿದಳು.
ಅವನ ರಥವು ಬರ ಇಷ್ಟು ಅಲಸ್ಯವಾದದ್ದೇನು!
ಅವನ ರಥಗಳ ಗಾಲಿಗಳು ಹಿಂದುಳಿದು ಇರುವದೇನು!
೨೯ ಅದಕ್ಕವಳ ಜ್ಞಾನವುಳ್ಳ ಪ್ರಧಾನ ಸ್ತ್ರೀಯರು ಪ್ರತ್ಯುತ್ತರ ಕೊ
ಟ್ಟರು;
ಹೌದು, ಅವಳೇ ತನಗೆ ಬದಲು ಮಾತು ಹೇಳಿ ಕೊಂಡಳು.
೩೦ ಅವರಿಗೆ ಸಿಕ್ಕಲಿಲ್ಲವೋ! ಕೊಳ್ಳೆ ಹಂಚಿ ಕೊಳ್ಳಲಿಲ್ಲವೋ!
ಒಬ್ಬೊಬ್ಬ ಶೂರನಿಗೆ ಬಂದೆರಡು ಹೆಣ್ಣು;
ಸೀಸ್ರನಿಗೆ ನಾನಾ ವರ್ಣವುಳ್ಳ ಕೊಳ್ಳೆ—
ನಾನಾ ವರ್ಣವುಳ್ಳಂಥ, ವಿಚಿತ್ರವಾಗಿ ಹೊಲಿದಂಥ,
ಎರಡು ಪಕ್ಕಗಳಲ್ಲಿ ವಿಚಿತ್ರವಾಗಿ ಹೊಲಿದಂಥ,
ಕೊಳ್ಳೆ ಹಿಡಿಯುವವರ ಕಂಠಗಳಿಗೆ ತಕ್ಕಂಥ,
ನಾನಾ ವರ್ಣವುಳ್ಳ ಕೊಳ್ಳೆ ಸಿಕ್ಕಲಿಲ್ಲವೋ!

೩೧ ಕರ್ತನೇ, ಹೀಗೆಯೇ ನಿನ್ನ ಶತ್ರುಗಳೆಲ್ಲರು ನಾಶನವಾಗಲಿ;
ಆದರೆ ಅವನನ್ನು ಪ್ರೀತಿ ಮಾಡುವವರು ಪರಾಕ್ರಮದಿಂದ ಹೊರ
ಡುವ ಸೂರ್ಯನ ಹಾಗೆಯೇ ಇರಲಿ.

ಮತ್ತು ದೇಶವು ನಾಲ್ವತ್ತು ವರುಷ ಶಾಂತವಾಗಿತ್ತು.

## ೬. ಸಂಧಿ.

೧ ಆದರೆ ಇಸ್ರಯೇಲ್ ಮಕ್ಕಳು ಕರ್ತನ ಕಣ್ಣುಗಳ ಮುಂದೆ
ಕೆಟ್ಟತನ ಮಾಡಿದರು; ಆದದರಿಂದ ಕರ್ತನು ಅವರನ್ನು ಏಳ್ಳ ವ
೨ ರುಷ ಮಿದ್ಯಾನ್ಯರ ಕೈಗೆ ಒಪ್ಪಿಸಿ ಕೊಟ್ಟನು. ಮಿದ್ಯಾನ್ಯರ ಕೈ
ಇಸ್ರಯೇಲಿನ ಮೇಲೆ ಬಲವಾದದರಿಂದ ಇಸ್ರಯೇಲ್ ಮಕ್ಕಳು
ಮಿದ್ಯಾನ್ಯರ ನಿಮಿತ್ತ ತಮಗೆ ಪರ್ವತಗಳಲ್ಲಿ ಇರುವ ಗುಹೆಗಳ
ನ್ನೂ ಗವಿಗಳನ್ನೂ ಬಲವಾದ ಸ್ಥಾನಗಳನ್ನೂ ಮಾಡಿ ಕೊಂಡ
೩ ರು. ಮತ್ತು ಆದದ್ದೇನಂದರೆ, ಇಸ್ರಯೇಲ್ಯರು ಬೀಜ ಬಿತ್ತಿದ ತರು
ವಾಯ, ಮಿದ್ಯಾನ್ಯರೂ ಅಮಲೇಕ್ಯರೂ ಮೂಲ್ಲ ದೇಶಸ್ಥರೂ
೪ ಅವರಿಗೆ ವಿರೋಧವಾಗಿ ಬಂದು, ದಂಡಿಳಿದು, ಗಾಜದ ಪ್ರವೇಶದ
ಮಟ್ಟಿಗೂ ಭೂಮಿಯ ಫಲವನ್ನು ಕೆಡಿಸಿ ಬಿಟ್ಟು, ಇಸ್ರಯೇಲಲ್ಲಿ
ಆಹಾರವಾದರೂ, ಕುರಿ ದನ ಕತ್ತೆಗಳಾದರೂ ಉಳಿಯ ಕೊಡ
೫ ಲಿಲ್ಲ. ಯಾಕಂದರೆ ಅವರು ತಮ್ಮ ಕುರಿ ದನಗಳೂ ಗುಡಾರಗ
ಳೂ ಸಹಿತವಾಗಿ ಏರಿ ಬಂದು, ಮಿಡಿತೆಗಳ ಹಾಗೆ ಗುಂಪಾಗಿ ಬಂದ
ರು. ಮತ್ತು ಅವರಿಗೂ ಅವರ ಒಂಟೆಗಳಿಗೂ ಎಣಿಕೆ ಇಲ್ಲ.
೬ ಹೀಗೆ ಅದನ್ನು ಕೆಡಿಸಿ ಬಿಡುವದಕ್ಕೆ ದೇಶದಲ್ಲಿ ಬಂದರು. ಆದಕಾ
ರಣ ಇಸ್ರಯೇಲರು ಮಿದ್ಯಾನ್ಯರಿಂದ ಬಹಳ ಕ್ಷೀಣಿಸಿ ಹೋ
ದರು. ಮತ್ತು ಇಸ್ರಯೇಲ್ ಮಕ್ಕಳು ಕೂಗಿದರು.
೭ ಇಸ್ರಯೇಲರು ಮಿದ್ಯಾನ್ಯರ ನಿಮಿತ್ತ ಕರ್ತನಿಗೆ ಕೂಗಿದಾಗ,
೮ ಕರ್ತನು ಒಬ್ಬ ಪ್ರವಾದಿಯನ್ನು ಇಸ್ರಯೇಲ್ ಮಕ್ಕಳ ಬಳಿಗೆ
೯ ಕಳುಹಿಸಿದನು. ಅವನು ಅವರಿಗೆ—ಹೇಳ್ದೇನಂದರೆ—ಇಸ್ರಯೇ
ಲಿನ ದೇವರಾದ ಕರ್ತನು ಹೇಳುವದೇನಂದರೆ, ನಾನು ನಿಮ್ಮನ್ನು
ಐಗುಪ್ತದಿಂದ ಏರಿ ಬರ ಮಾಡಿದೆನು; ದಾಸತ್ವದ ಮನೆಯಿಂದ
ಹೊರಕ ಮಾಡಿದೆನು; ನಿಮ್ಮನ್ನು ಐಗುಪ್ತ್ಯರ ಕೈಯಿಂದಲೂ
ನಿಮ್ಮನ್ನು ಬಾಧೆ ಪಡಿಸುವವಕೆಲ್ಲರ ಕೈಯಿಂದಲೂ ತಪ್ಪಿಸಿ, ಅವ
ರನ್ನು ನಿಮ್ಮ ಮುಂದೆ ಹೊರಗೆ ಹಾಕಿ, ಅವರ ದೇಶವನ್ನು ನಿಮ
೧೦ ಗೆ ಕೊಟ್ಟೆನು; ಮತ್ತು ನಿಮಗೆ, ನಾನೇ ನಿಮ್ಮ ದೇವರಾದ ಕರ್ತ
ನು; ನೀವು ವಾಸಿಸಿರುವ ಅಮೋರ್ಯರ ದೇಶದ ದೇವರುಗಳಿಗೆ
ಭಯ ಪಡ ಬೇಡಿರೆಂದು, ಹೇಳಿದೆನು. ಆದರೆ ನೀವು ನನ್ನ ಶಬ್ದವ
ನ್ನು ಕೇಳದೆ ಹೋದಿರಿ.
೧೧ ಮತ್ತು ಕರ್ತನ ದೂತನು ಬಂದು, ಅಬಿಯೆಜ್ರಿಯನಾದ
ಯೊವಾಷನಿಗೆ ಹೊಂದಿದ ಒಫ್ರದಲ್ಲಿರುವ ಏಕೊನ್ ಮರದ ಕೆಳ
ಗೆ ಕುಳಿತನು. ಆಗ ಯೊವಾಷನ ಮಗನಾದ ಗಿದ್ಯೋನನು ಮಿ
ದ್ಯಾನ್ಯರಿಗೆ ತಪ್ಪಿಸುವ ಹಾಗೆ, ದ್ರಾಕ್ಷೆ ಆಲೆಯ ಬಳಿಯಲ್ಲಿ ಗೋ

೧೨ ಧಿಯನ್ನು ಬಡಿಯುತ್ತಿದ್ದನು. ಆಗ ಕರ್ತನ ದೂತನು ಅವನಿಗೆ ಪ್ರತ್ಯಕ್ಷವಾಗಿ, ಅವನ ಸಂಗಡ, ಬಲವುಳ್ಳ ಪರಾಕ್ರಮವು ಶಾಲಿಯೇ,
೧೩ ಕರ್ತನು ನಿನ್ನ ಸಂಗಡ ಇದ್ದಾನೆ, ಅಂದನು. ಆಗ ಗಿದ್ಯೋನನು ಅವನಿಗೆ, ನನ್ನ ಸ್ವಾಮಿಯೇ, ಕರ್ತನು ನಮ್ಮ ಸಂಗಡ ಇದ್ದರೆ, ಇದೆಲ್ಲಾ ನಮಗೆ ಸಂಭವಿಸಿದ್ದೇನು! ಕರ್ತನು ನಮ್ಮನ್ನು ಐಗುತ್ತದಿಂದ ಬರ ಮಾಡಲಿಲ್ಲವೋ! ಎಂದು, ನಮ್ಮ ತಂದೆಗಳು ನಮಗೆ ವಿವರಿಸಿ ಹೇಳಿದ ಅವನ ಅದ್ಭುತಗಳೆಲ್ಲಾ ಎಲ್ಲಿ! ಈಗ ಕರ್ತನು ನಮ್ಮನ್ನು ಕೈ ಬಿಟ್ಟು, ಮಿದ್ಯಾನ್ಯರ ಕೈಗೆ ನಮ್ಮನ್ನು ಒಪ್ಪಿಸಿದ್ದಾನೆ, ಅಂದನು.
೧೪ ಕರ್ತನು ಅವನನ್ನು ದೃಷ್ಟಿಸಿ ನೋಡಿ, ಈ ನಿನ್ನ ಶಕ್ತಿಯಿಂದ ಹೋಗು; ನೀನು ಇಸ್ರಯೇಲನ್ನು ಮಿದ್ಯಾನ್ಯರ ಕೈಯಿಂದ ತಪ್ಪಿಸಿ ರಕ್ಷಿಸುವಿ; ನಾನು ನಿನ್ನನ್ನು ಕಳುಹಿಸಲಿಲ್ಲವೋ!
೧೫ ಅಂದನು. ಅದಕ್ಕೆವನು ಅವನ ಸಂಗಡ, ನನ್ನ ಸ್ವಾಮಿಯೇ, ನಾನು ಇಸ್ರಯೇಲನ್ನು ಹ್ಯಾಗೆ ರಕ್ಷಿಸುವೆ! ಮನಸ್ಸೆಯಲ್ಲಿ ನನ್ನ ಸಾವಿರ ಬಡವಾದದ್ದು; ನನ್ನ ತಂದೆಯ ಮನೆಯಲ್ಲಿ ನಾನು ಚಿಕ್ಕವನು, ಅಂದನು. ಆದರೆ ಕರ್ತನು ಅವನಿಗೆ, ನಾನು ನಿನ್ನ ಸಂಗಡ
೧೬ ಇರುವದರಿಂದ, ನೀನು ಮಿದ್ಯಾನ್ಯರನ್ನು ಒಬ್ಬಿ ಮನುಷ್ಯನ ಹಾಗೆ ಹೊಡೆಯುವಿ, ಅಂದನು. ಅದಕ್ಕವನು ಅಪ್ಪಣೆದ್ದೇನಂದರೆ—ಈಗ ನಿನ್ನ ಸಮುಖದಲ್ಲಿ ನನಗೆ ದಯೆ ದೊರಕಿದ್ದರೆ, ನನ್ನ ಸಂಗಡ ಮಾತಾಡುವವನು ನೀನೇ ಎಂಬುವದಕ್ಕೆ ನನಗೆ ಒಂದು ಗುರುತನ್ನು ಮಾಡಿ ಕೊಡ ಬೇಕು. ದಯೆ ಮಾಡಿ, ನಾನು ನಿನ್ನ ಬಳಿಗೆ ನನ್ನ ಕಾಣಿಕೆಯನ್ನು ತಂದು, ನಿನ್ನ ಮುಂದೆ ಇರುವ ಪರ್ಯಂತರ ನೀನು ಈ ಸ್ಥಳವನ್ನು ಬಿಟ್ಟು ಹೋಗದೆ ಇರು, ಅಂದನು. ಆದಕ್ಕೆ ಅವನು, ನೀನು ತಿರಿಗಿ ಬರುವ ತನಕ ನಾನು ಇರುವೆನು, ಅಂದನು.

೧೮ ಆಗ ಗಿದ್ಯೋನನು ಒಳಗೆ ಹೋಗಿ, ಒಂದು ಮೇಕೆಯ ಮರಿಯನ್ನೂ ಒಂದು ಎಫ ಹಿಟ್ಟಿನಲ್ಲಿ ಹುಳಿ ಇಲ್ಲದ ಕೊಟ್ಟಿಗಳನ್ನೂ ಸಿದ್ಧ ಮಾಡಿ, ಮಾಂಸವನ್ನು ಪುಟ್ಟಿಯಲ್ಲಿ ಇಟ್ಟು, ರಸವನ್ನು ಬಟ್ಟಲ್ಲಿ ಹೊಯಿದು, ಅದನ್ನು ಹೊರಗೆ ಮರದ ಕೆಳಗೆ ಇರುವ
೧೯ ಅವನ ಬಳಿಯಲ್ಲಿ ತಂದಿಟ್ಟನು. ಮತ್ತು ದೇವರ ದೂತನು ಅವನಿಗೆ, ನೀನು ಮಾಂಸವನ್ನೂ ಹುಳಿ ಇಲ್ಲದ ಕೊಟ್ಟಿಗಳನ್ನೂ ತೆಗೆದು ಕೊಂಡು, ಈ ಬಂಡೆಯ ಮೇಲಿಟ್ಟು, ರಸವನ್ನು ಹೊಯ್ಯಿ,
೨೦ ಅಂದನು. ಅವನು ಹಾಗೆಯೇ ಮಾಡಿದನು. ಆಗ ಕರ್ತನ ದೂತನು ತನ್ನ ಕೈಯಲ್ಲಿದ್ದ ಕೋಲಿನ ಮೊನೆಯನ್ನು ಚಾಚಿ, ಮಾಂಸವನ್ನೂ ಹುಳಿ ಇಲ್ಲದ ಕೊಟ್ಟಿಗಳನ್ನೂ ಮುಟ್ಟಿದನು. ಬೆಂಕಿ ಬಂಡೆಯಿಂದ ಎದ್ದು, ಮಾಂಸವನ್ನೂ ಹುಳಿ ಇಲ್ಲದ ಕೊಟ್ಟಿಗಳನ್ನೂ ದಹಿಸಿ ಬಿಟ್ಟಿತು. ಆಗ ಕರ್ತನ ದೂತನು ಅವನ ಕಣ್ಣುಗಳಿಗೆ ಕಾಣಿಸದೆ ಹೋದನು.

೨೧ ಗಿದ್ಯೋನನು ಅವನು ಕರ್ತನ ದೂತನೆಂದು ಕಂಡಾಗ, ಗಿದ್ಯೋನನು, ಕರ್ತನಾದ ದೇವಕೇ, ಅಯ್ಯೋ! ಯಾಕಂದರೆ ನಾನು ಕರ್ತನ ದೂತನನ್ನು ಮುಖಾ ಮುಖಿಯಾಗಿ ನೋಡಿದೆನು,
೨೩ ಅಂದನು. ಆದರೆ ಕರ್ತನು ಅವನಿಗೆ, ನಿನಗೆ ಸಮಾಧಾನವಾಗಲಿ; ಭಯ ಪಡ ಬೇಡ; ನೀನು ಸಾಯುವದಿಲ್ಲ, ಅಂದನು.
೨೪ ಮತ್ತು ಗಿದ್ಯೋನನು ಕರ್ತನಿಗೆ ಅಲ್ಲಿ ಬಲಿಪೀಠವನ್ನು ಕಟ್ಟಿ, ಯೆಹೋವ ಶಾಲೋಮ್ ಎಂದು, ಅದಕ್ಕೆ ಹೆಸರಿಟ್ಟನು. ಅದು ಈವರಿಗೂ ಅಬಿಯೆಜ್ರಿಯರ ಬಪ್ರದಲ್ಲಿ ಇನ್ನೂ ಅದೆ.

೨೫ ಅದೇ ರಾತ್ರಿಯಲ್ಲಿ ಕರ್ತನು ಅವನಿಗೆ ಹೇಳಿದ್ದೇನಂದರೆ—ನೀನು ನಿನ್ನ ತಂದೆಗಿರುವ ಎತ್ತುಗಳಲ್ಲಿ ಎಳೇದಾದ ಏಳು ಮರುಪುಳ್ಳ ಎರಡನೇ ಹೋರಿಯನ್ನು ತಕ್ಕೊಂಡು ಹೋಗಿ, ನಿನ್ನ ತಂದೆಗೆ ಇರುವ ಬಾಳೆನ ಬಲಿಪೀಠವನ್ನು ಕೆಡವಿ, ಅದರ ಸಮೀಪದಲ್ಲಿ
೨೬ ರುವ ಶೋಪನ್ನು ಕಡಿದು ಹಾಕಿ, ಈ ಪರ್ವತದ ತುದಿಯಲ್ಲಿ ನೇಮಕವಾದ ಸ್ಥಳದಲ್ಲಿ, ನಿನ್ನ ದೇವರಾದ ಕರ್ತನಿಗೆ ಬಲಿಪೀಠವನ್ನು ಕಟ್ಟಿ, ಆ ಎರಡನೇ ಹೋರಿಯನ್ನು ತಂದು, ಅದನ್ನು ನೀನು ಕಡಿದು ಹಾಕಿದ ಶೋಪನ ಕಟ್ಟಿಗೆಗಳ ಮೇಲೆ ಹೋಮವಾಗಿ ಅರ್ಪಿಸು.
೨೭ ಆಗ ಗಿದ್ಯೋನನು ತನ್ನ ಸೇವಕರಲ್ಲಿ ಹತ್ತು ಮಂದಿಯನ್ನು ತಕ್ಕೊಂಡು, ಕರ್ತನು ತನಗೆ ಹೇಳಿದ ಹಾಗೆಯೇ ಮಾಡಿದನು. ಆದರೆ ಹಗಲಲ್ಲಿ ಮಾಡದ ಹಾಗೆ, ಅವನು ತನ್ನ ತಂದೆಯ ಮನೆಯವರಿಗೂ ಆ ಊರಿನ ಮನುಷ್ಯರಿಗೂ ಭಯ ಪಟ್ಟದರಿಂದ, ರಾತ್ರಿಯಲ್ಲಿ ಮಾಡಿದನು.

೨೮ ಆ ಊರಿನ ಮನುಷ್ಯರು ಉದಯದಲ್ಲಿ ಎದ್ದಾಗ, ಇಗೋ, ಬಾಳೆನ ಬಲಿಪೀಠವು ಕೆಡವಲ್ಪಟ್ಟಿತ್ತು, ಅದರ ಸಮೀಪದಲ್ಲಿದ್ದ ಶೋಪು ಕಡಿಯಲ್ಪಟ್ಟಿತ್ತು; ಕಟ್ಟಲ್ಪಟ್ಟ ಬಲಿಪೀಠದ ಮೇಲೆ ಆ ಎರಡನೇ
೨೯ ಹೋರಿ ಬಲಿ ಇಡಲ್ಪಟ್ಟಿತ್ತು. ಆಗಲವರು ಒಬ್ಬರಿಗೊಬ್ಬರು, ಈ ಕಾರ್ಯವನ್ನು ಮಾಡಿದವನ್ಯಾರು! ಅಂದರು. ವಿಚಾರಿಸಿ ಹುಡುಕುವಾಗ ಯೊವಾಷನ ಮಗನಾದ ಗಿದ್ಯೋನನು ಈ ಕಾರ್ಯ
೩೦ ಮಾಡಿದನು, ಅಂದರು. ಆ ಊರಿನವರು ಯೊವಾಷನಿಗೆ, ನಿನ್ನ ಮಗನನ್ನು ಹೊರಗೆ ತಕ್ಕೊಂಡು ಬಾ; ಅವನು ಸಾಯ ಬೇಕು; ಯಾಕಂದರೆ ಬಾಳೆನ ಬಲಿಪೀಠವನ್ನು ಕೆಡವಿ, ಅದರ ಬಳಿಯಲ್ಲಿದ್ದ
೩೧ ಶೋಪನ್ನು ಕಡಿದು ಹಾಕಿದನು, ಅಂದರು. ಆದರೆ ಯೊವಾಷನು ತನಗೆ ವಿರೋಧವಾಗಿ ನಿಲ್ಲುವ ಸಮಸ್ತರಿಗೂ, ನೀವು ಬಾಳೆನಿಗಾಗಿ ವ್ಯಾಜ್ಯವಾಡುವಿರೋ! ನೀವು ಅವನನ್ನು ರಕ್ಷಿಸುವಿರೋ! ಅವನಿಗಾಗಿ ವ್ಯಾಜ್ಯ ಮಾಡುವವನು ಈ ಉದಯ ಕಾಲದಲ್ಲೇ ಕೊಲ್ಲಲ್ಪಡಲಿ; ಅವನು ದೇವರಾದರೆ, ನನ್ನ ಬಲಿಪೀಠವನ್ನು ಕೆಡವಿ ಬಿಟ್ಟದ್ದಾನೆಂದು, ತನಗೋಸ್ಕರ ವ್ಯಾಜ್ಯವಾಡಲಿ, ಅಂದನು. ಗಿದ್ಯೋ
೩೨ ನನು ಬಾಳೆನ ಬಲಿಪೀಠವನ್ನು ಕೆಡವಿದ್ದರಿಂದ, ಅವನು ಅವನ ಸಂಗಡ ವ್ಯಾಜ್ಯವಾಡಲೆಂದು ಹೇಳಿ, ಆ ದಿವಸದಲ್ಲಿ ಅವನಿಗೆ ಯೆರುಬ್ಬಾಳೆಂಬ ಹೆಸರಿಟ್ಟನು.

೩೩ ಮತ್ತು ಮಿದ್ಯಾನ್ಯರೂ ಅಮಲೇಕ್ಯರೂ ಮೂಲ್ಲ ದೇಶಸ್ಥರೆಲ್ಲರೂ ಏಕವಾಗಿ ಕೂಡಿ, ದಾಟಿ ಬಂದು, ಇಜ್ರೇಲಿನ ತಗ್ಗಿನಲ್ಲಿ ದಂಡಿಳಿದರು. ಕರ್ತನ ಆತ್ಮವು ಗಿದ್ಯೋನನ ಮೇಲೆ ಬಂತು; ಅವ
೩೪ ನು ತುತೂರಿಯನ್ನು ಊದಿದನು; ಅಬಿಯೇಜರ್ ಜನ ಅವನ ಹಿಂದೆ ಕೂಡಿಸಲ್ಪಟ್ಟಿತು. ಮನಸ್ಸೆಯಲ್ಲೆಲ್ಲಿಯೂ ದೂತರನ್ನು ಕಳುಹಿಸಿದಾಗ, ಅವರು ಕೂಡಿಸಲ್ಪಟ್ಟರು. ಆಶೇರಲ್ಲಿಯೂ ಜೆಬುಲೋನಲ್ಲಿಯೂ ನೆಪ್ತಲಿಯಲ್ಲಿಯೂ, ದೂತರನ್ನು ಕಳುಹಿಸಿದಾಗ, ಅವರು ಇವರಿಗೆ ಎದುರಾಗಿ ಬಂದರು.

೩೬ ಮತ್ತು ಗಿದ್ಯೋನನು ದೇವರಿಗೆ ಹೇಳಿದ್ದೇನಂದರೆ—ನೀನು ಹೇಳಿದ ಹಾಗೆಯೇ ನನ್ನ ಕೈಯಿಂದ ಇಸ್ರಯೇಲನ್ನು ರಕ್ಷಿಸುವಿಯಾದರೆ, ಇಗೋ, ಉಣ್ಣೆಯ ಗುಜ್ಜನ್ನು ಕಣದಲ್ಲಿ ಹಾಕುವೆನು. ಮಂಜು ಉಣ್ಣೆಯ ಮೇಲೆ ಮಾತ್ರವೇ ಇದ್ದು, ಭೂಮಿಯೆಲ್ಲಾ ಜಣಗಿದ್ದರೆ, ಆಗ ನೀನು ಹೇಳಿದ ಹಾಗೆ ಇಸ್ರಯೇಲನ್ನು ನನ್ನ ಕೈಯಿಂದ ರಕ್ಷಿಸುವಿ ಎಂಬುವದನ್ನು ತಿಳಿಯುವೆನು. ಹಾಗೆಯೇ ಆಯಿತು;



ಅವನು ಮರು ದಿವಸ ಉದಯದಲ್ಲಿ ಎದ್ದು, ಉಣ್ಣೆಯನ್ನು ತೆಗೆದು
೩೮ ಕೊಂಡು, ಅದರೊಳಗಿದ್ದ ಮಂಜಿನ ನೀರನ್ನು ಒಂದು ಬಟ್ಟಲು ತುಂಬ ಹಿಂಡಿದನು. ಮತ್ತು ಗಿದ್ಯೋನನು ದೇವರಿಗೆ, ನಾನು ಇನ್ನೊಂದು ಸಾರಿ ಮಾತಾಡುವದರಿಂದ, ನಿನ್ನ ಕೋಪವು ನನ್ನ ಮೇಲೆ ಉರಿಯ ಬಾರದು; ಉಣ್ಣೆಯಿಂದ ಇನ್ನೊಂದು ಸಾರಿ ನಾನು ನಿನ್ನನ್ನು ಕೋಧಿಸ ದಯವಾಗಲಿ. ಉಣ್ಣೆ ಮಾತ್ರವೇ ಜಣಗುವ
೩೯ ಹಾಗೆಯೂ ಭೂಮಿಯೆಲ್ಲೆಲ್ಲಾ ಮಂಜು ಇರುವ ಹಾಗೆಯೂ ಅಪ್ಪಣೆ ಆಗಲಿ, ಅಂದನು. ಹಾಗೆಯೇ ದೇವರು ಆ ರಾತ್ರಿಯಲ್ಲಿ
೪೦ ಮಾಡಿದನು. ಉಣ್ಣೆ ಮಾತ್ರವೇ ಜಣಗಿ, ಭೂಮಿಯೆಲ್ಲೆಲ್ಲಿಯೂ ಮಂಜು ಇತ್ತು.

## ೭. ಸಂಧಿ.

೧ ಮತ್ತು ಗಿದ್ಯೋನನೆಂಬ ಯೆರುಬ್ಬಾಳನೂ ಅವನ ಸಂಗಡ ಇದ್ದ ಜನರೆಲ್ಲರೂ ಉದಯದಲ್ಲಿ ಎದ್ದು, ಹಾರೋದೆಂಬ ಭಾವಿಯ ಬಳಿಯಲ್ಲಿ ದಂಡಿಳಿದರು. ಮಿದ್ಯಾನ್ಯರ ದಂಡು ಅವರಿಗೆ ಉ
೨ ತ್ತರಕ್ಕೆ ಮೋರೆ ಬೆಟ್ಟದ ಹಿಂದಾದ ತಗ್ಗಿನಲ್ಲಿ ಇಳಿದಿತ್ತು. ಆಗ ಕರ್ತನು ಗಿದ್ಯೋನನಿಗೆ, ನಾನು ಮಿದ್ಯಾನ್ಯರನ್ನು ಜನರ ಕೈಯಲ್ಲಿ ಒಪ್ಪಿಸಿ ಕೊಡುವದಕ್ಕೆ ನಿನ್ನ ಸಂಗಡ ಇರುವ ಜನವು ಬಹಳವಾಗಿದೆ; ಇಸ್ರಯೇಲ್ಯರು—ನಮ್ಮ ಕೈ ನಮ್ಮನ್ನು ರಕ್ಷಿಸಿತೆಂದು, ನನಗೆ
೩ ವಿರೋಧವಾಗಿ ಹೆಜ್ಜೆ ಪಟ್ಟಾರು. ಆದದರಿಂದ ನೀನು ಹೋಗಿ, ಜನರು ಕೇಳುವ ಹಾಗೆ, ಯಾವನಿಗೆ ಭಯವೂ ನಡುಗುವಿಕೆಯೂ ಉಂಟೋ, ಅವನು ತಿರಿಗಿ ತ್ವರೆಯಾಗಿ ಗಿಲ್ಯಾದ್ ಬೆಟ್ಟದಿಂದ ಹೋಗಲಿ, ಎಂದು ಪ್ರಕಟಿ ಮಾಡು, ಅಂದನು. ಆಗ ಜನರಲ್ಲಿ ಇಪ್ಪತ್ತೆರಡು ಸಾವಿರ ಜನರು ತಿರಿಗಿ ಹೋದರು; ಹತ್ತು ಸಾವಿರ ಜನರು ನಿಂತಿದ್ದರು.

೪ ಮತ್ತು ಕರ್ತನು ಗಿದ್ಯೋನನಿಗೆ, ಜನರು ಇನ್ನೂ ಬಹಳವಾಗಿದ್ದಾರೆ, ಅವರನ್ನು ಜಲದ ಸಮೀಪಕ್ಕೆ ಇಳಿದು ಮೊಗ ಮಾಡು; ಅಲ್ಲಿ ನಾನು ಅವರನ್ನು ನಿನಗೋಸ್ಕರ ಪರಿಕ್ಷೆ ಮಾಡುವೆನು. ನಿನ್ನ ಸಂಗಡ ಬರ ಅಲ್ಲಿ ಯಾವನನ್ನು ಕುರಿತು ಹೇಳುವೆನೋ, ಅವನು ನಿನ್ನ ಸಂಗಡ ಬರಲಿ; ಆದರೆ ನಾನು—ನಿನ್ನ ಸಂಗಡ ಬರ ಬಾರದೆಂದು, ಯಾವನನ್ನು ಕುರಿತು ಹೇಳುವೆನೋ, ಅವನು ಬಾರದೆ ಇರಲಿ, ಅಂದನು. ಗಿದ್ಯೋನನು ಜನರನ್ನು ಜಲದ ಬಳಿಗೆ
೫ ಹೋಗ ಮಾಡಿದನು. ಆಗ ಕರ್ತನು ಗಿದ್ಯೋನನಿಗೆ, ನಾಯಿ ನೆಕ್ಕುವ ಹಾಗೆ, ಜಲವನ್ನು ತನ್ನ ನಾಲಿಗೆಯಿಂದ ನೆಕ್ಕುವ ಒಬ್ಬೊಬ್ಬನನ್ನೂ ಕುಡಿಯುವದಕ್ಕೆ ಮೊಣಕಾಲೂರಿ, ಬೊಗ್ಗುವ
೬ ಒಬ್ಬೊಬ್ಬನನ್ನೂ ಬೇರೆ ಬೇರೆಯಾಗಿ ನಿಲ್ಲಿಸು, ಅಂದನು. ಆಗ ತಮ್ಮ ಕೈಯಿಂದ ತೆಗೆದು ಕೊಂಡು, ತಮ್ಮ ಬಾಯಿಗೆ ಎತ್ತಿ, ನೆಕ್ಕಿದವರ ಲೆಖ್ಖವು ಮುನ್ನೂರು ಜನವಾಗಿತ್ತು. ಇತರ ಜನರೆಲ್ಲಾ
೭ ನೀರು ಕುಡಿಯುವದಕ್ಕೆ ಮೊಣಕಾಲೂರಿ, ಬೊಗ್ಗಿದರು. ಆಗ ಕರ್ತನು ಗಿದ್ಯೋನನಿಗೆ—ನೆಕ್ಕಿ, ಕುಡಿದ ಆ ಮುನ್ನೂರು ಜನರಿಂದ ನಾನು ನಿಮ್ಮನ್ನು ರಕ್ಷಿಸಿ, ಮಿದ್ಯಾನ್ಯರನ್ನು ನಿನ್ನ ಕೈಯಲ್ಲಿ ಒಪ್ಪಿಸಿ ಕೊಡುವೆನು; ಇತರ ಜನರೆಲ್ಲಾ ತಮ್ಮ ತಮ್ಮ ಸ್ಥಳಗಳಿಗೆ
೮ ಹೋಗಲಿ, ಅಂದನು. ಆಗ ಜನರು ಆಹಾರವನ್ನೂ ತಮ್ಮ ತುತೂರಿಗಳನ್ನೂ ತಮ್ಮ ಕೈಗಳಲ್ಲಿ ತೆಗೆದು ಕೊಂಡರು; ಆದರೆ ಅವನು ಇಸ್ರಯೇಲನ್ನೆಲ್ಲಾ ಅವರವರ ಗುಡಾರಗಳಿಗೆ ಕಳುಹಿಸಿ, ಆ ಮುನ್ನೂರು ಜನರನ್ನು ಇಟ್ಟು ಕೊಂಡನು. ಮಿದ್ಯಾನ್ಯರ ದಂಡು ಅವನಿಗೆ ಕೆಳ ಭಾಗವಾದ ತಗ್ಗಿನಲ್ಲಿ ಇತ್ತು.

೯ ಆ ರಾತ್ರಿಯಲ್ಲಿ ಆದದ್ದೇನಂದರೆ, ಕರ್ತನು ಅವನಿಗೆ, ನೀನು ಎದ್ದು, ದಂಡಿಗೆ ಇಳಿದು ಹೋಗು; ಯಾಕಂದರೆ ಅದನ್ನು ನಿನ್ನ
೧೦ ಕೈಯಲ್ಲಿ ಒಪ್ಪಿಸಿ ಕೊಟ್ಟಿದ್ದೇನು. ಇಳಿದು ಹೋಗ ನೀನು ಭಯ ಪಟ್ಟರೆ, ಮೊದಲು ನೀನು ನಿನ್ನ ಸೇವಕನಾದ ಫೂರನ ಸಂಗಡ ದಂಡಿಗೆ ಇಳಿದು ಹೋಗಿ, ಅವರು ಮಾತಾಡುವದನ್ನು ಕೇಳು;
೧೧ ತರುವಾಯ ದಂಡಿಗೆ ಇಳಿದು ಹೋಗ ನಿನ್ನ ಕೈಗಳು ಬಲಗೊಳ್ಳುವವು, ಅಂದನು. ಹಾಗೆಯೇ ಅವನು ತನ್ನ ಸೇವಕನಾದ ಫೂರನ ಸಂಗಡ ದಂಡಿನ ಹೊರಗಿರುವ ಯುದ್ಧಸ್ಥರ ಬಳಿಗೆ ಹೋದನು. ಮಿದ್ಯಾನ್ಯರೂ ಅಮಲೇಕ್ಯರೂ ಸಕಲ ಮೂಲ್ಲ ದೇಶಸ್ಥರೂ ಮಿಡಿತೆಗಳಷ್ಟು ಗುಂಪಾಗಿ ತಗ್ಗಿನಲ್ಲಿ ಮಲಗಿದ್ದರು. ಅವರ
೧೨ ಒಂಟೆಗಳಿಗೆ ಲೆಖ್ಖವಿಲ್ಲ, ಸಮುದ್ರದ ಮರಳಿನ ಹಾಗೆ ಗುಂಪಾಗಿದ್ದವು. ಗಿದ್ಯೋನನು ಬಂದಾಗ, ಇಗೋ, ತನ್ನ ಜತೆಗಾರನಿಗೆ ಒಬ್ಬನು ತನಗಾದ ಸ್ವಪ್ನವನ್ನು ವಿವರಿಸಿ, ಹೇಳಿದ್ದೇನಂದರೆ, ಇಗೋ, ನಾನು ಒಂದು ಕನಸನ್ನು ಕಂಡೆನು. ಇಗೋ, ಒಂದು ಜವೆಗೋಧಿಯ ಕೊಟ್ಟಿ ಮಿದ್ಯಾನ್ಯರ ದಂಡಿನ ಮೇಲೆ ಕೊರಳಿ, ಒಂದು ಗುಡಾರದ ಮೇಲೆ ಬಂದು, ಬೀಳುವ ಹಾಗೆ ಅದನ್ನು ಹೊಡೆಯಿತು; ಅದನ್ನು ಕೆಡವಿ ಹಾಕಿತು; ಆ ಗುಡಾರವು ಬೋರ್ಲಬಿತ್ತು. ಮತ್ತು ಅವನ ಜತೆಗಾರನು ಪ್ರತ್ಯುತ್ತರ ಕೊಟ್ಟು, ಇದು
೧೪ ಯೊವಾಷನ ಮಗನಾದ ಗಿದ್ಯೋನನೆಂಬ ಇಸ್ರಯೇಲಿನ ಮನುಷ್ಯನ ಕತ್ತಿಯೇ ಹೊರ್ತು, ಇತರವಲ್ಲ; ದೇವರು ಮಿದ್ಯಾನ್ಯರನ್ನೂ ಈ ಸಮಸ್ತ ದಂಡನ್ನೂ ಅವನ ಕೈಯಲ್ಲಿ ಒಪ್ಪಿಸಿ ಕೊಟ್ಟನು, ಅಂದನು.

೧೫ ಗಿದ್ಯೋನನು ಆ ಕನಸಿನ ವಿವರವನ್ನೂ ಅದರ ಅರ್ಥವನ್ನೂ ಕೇಳಿದಾಗ, ಅವನು ಅಡ್ಡ ಬಿದ್ದು, ಇಸ್ರಯೇಲ್ ದಂಡಿಗೆ ತಿರಿಗಿ ಬಂದು, ಏಳು; ಯಾಕಂದರೆ ಕರ್ತನು ಮಿದ್ಯಾನ್ಯರ ದಂಡ
೧೬ ನ್ನು ನಿಮ್ಮ ಕೈಯಲ್ಲಿ ಒಪ್ಪಿಸಿ ಕೊಟ್ಟಿನೆಂದು, ಹೇಳಿದನು. ಮತ್ತು ಆ ಮುನ್ನೂರು ಜನರನ್ನು ಮೂರು ಪಾಲಾಗಿ ಹಂಚಿ, ಎಲ್ಲರ ಕೈಯಲ್ಲಿ ತುತೂರಿಗಳನ್ನೂ ಬರೀ ಕೊತಗಳನ್ನೂ, ಅವುಗಳಲ್ಲಿ ಇರುವ ಬಂಜುಗಳನ್ನೂ ಕೊಟ್ಟು, ಅವರಿಗೆ ಹೇಳಿದ್ದೇನಂದರೆ, ನಾ
೧೭ ನು ಮಾಡುವದನ್ನು ನೋಡಿ, ಹಾಗೆಯೇ ನೀವು ಮಾಡಿರಿ. ಇಗೋ, ನಾನು ದಂಡಿನ ಅಂಚಿಗೆ ಬಂದಾಗ, ಹ್ಯಾಗೆ ಮಾಡುವೆನೋ, ಹಾಗೆಯೇ ನೀವು ಮಾಡಿರಿ. ನಾನೂ ನನ್ನ ಸಂಗಡ ಇರುವ ಸಮಸ್ತರೂ ತುತೂರಿಯನ್ನು ಊದುವಾಗ, ನೀವೆಲ್ಲರೂ ದಂಡಿನ ಸುತ್ತ ಎಲ್ಲಾ ಕಡೆಯಲ್ಲೂ ತುತೂರಿಗಳನ್ನು ಊದಿ, ಕರ್ತನ ಕತ್ತಿ, ಗಿದ್ಯೋನನ ಕತ್ತಿ ಎಂದು ಹೇಳಿರಿ, ಅಂದನು.

೧೯ ಮಧ್ಯ ರಾತ್ರಿ ಝಾವಿನ ಮೊದಲಲ್ಲಿ, ಕಾವಲಿಗಾರರನ್ನು ಬದಲು ಮಾಡಿದಾಗ, ಗಿದ್ಯೋನನೂ ಅವನ ಸಂಗಡ ಇದ್ದ ನೂರು ಮಂದಿಯೂ ದಂಡಿನ ಅಂಚಿನಲ್ಲಿ ಬಂದು, ತುತೂರಿಗಳನ್ನು ಊದಿ
೨೦ ತಮ್ಮ ಕೈಯಲ್ಲಿದ್ದ ಕೊತಗಳನ್ನು ಒಡೆದರು. ಈ ಮೂರು ಗುಂಪಿನ ಜನರು ತುತೂರಿಗಳನ್ನು ಊದಿ, ಆ ಕೊತಗಳನ್ನು ಒಡೆದು ಬಿಟ್ಟು, ಬಂಜುಗಳನ್ನು ತಮ್ಮ ಎಡಗೈಯಲ್ಲಿಯೂ ಊದುವ ತುತೂರಿಗಳನ್ನು ತಮ್ಮ ಬಲಗೈಯಲ್ಲಿಯೂ ಹಿಡಿದು, ಕರ್ತನ ಕತ್ತಿ, ಗಿದ್ಯೋನನ ಕತ್ತಿ ಎಂದು ಕೂಗಿ, ದಂಡಿನ ಸುತ್ತಲೂ ಅವರ

೨೧ ವರು ತಮ್ಮ ಸ್ಥಳದಲ್ಲಿ ನಿಂತರು. ಆಗ ದಂಡೆಲ್ಲಾ ಓಡಿ, ಅರ್ಭಟಿ
೨೨ ಸಿ, ಓಡಿ ಹೋದರು. ಮುನ್ನೂರು ಜನರು ತುತೂರಿಗಳನ್ನು ಊ
ದುವಾಗ, ಕರ್ತನು ದಂಡಿನಲ್ಲಿ ಎಲ್ಲೆಲ್ಲಿಯೂ ಒಬ್ಬನ ಕತ್ತಿಯನ್ನು
ಒಬ್ಬನ ಮೇಲೆ ಬರ ಮಾಡಿದನು. ದಂಡು ಜೆರೇರಪಿನಲ್ಲಿರುವ ಬೇತ್
ಷಿಟ್ಟದ ಮಟ್ಟಿಗೂ, ಟಬ್ಬಾತಿನ ಬಳಿಯಲ್ಲಿರುವ ಅಬೆಲ್ಮೆಹೋಲ
ದ ಮೇರೆಯ ಪರ್ಯಂತರಕ್ಕೂ, ಓಡಿ ಹೋಯಿತು.

೨೩ ಮತ್ತು ಇಸ್ರಯೇಲ್ ಮನುಷ್ಯರು ನೆಫ್ತಲಿಯಿಂದಲೂ, ಅಶೇರ
ನಿಂದಲೂ, ಸಮಸ್ತ ಮನಸ್ಸೆಯಿಂದಲೂ ಕೂಡಿ ಬಂದು, ಮಿದ್ಯಾ
೨೪ ನ್ಯರನ್ನು ಹಿಂದಟ್ಟಿದರು. ಇದಲ್ಲದೆ ಗಿದ್ಯೋನನು ಎಫ್ರಯಿಮ್
ಬೆಟ್ಟಗಳಲ್ಲೆಲ್ಲಿಯೂ ದೂತರನ್ನು ಕಳುಹಿಸಿ, ನೀವು ಮಿದ್ಯಾನ್ಯ
ರಿಗೆ ಎದುರಾಗಿ ಇಳಿದು ಹೋಗಿ, ಬೇತ್‌ಬಾರದ ಪರ್ಯಂತರಕ್ಕಿರು
ವ ನೀರುಗಳನ್ನೂ ಯೊರ್ದನನ್ನೂ ಅವರಿಗೆ ಮುಂದಾಗಿ ಹಿಡಿ
ಯಿಕೆಂದು, ಹೇಳಿದನು. ಹಾಗೆಯೇ ಎಫ್ರಯಿಮಾನ ಮನು
ಷ್ಯರೆಲ್ಲರು ಕೂಡಿ ಕೊಂಡು, ಬೇತ್‌ಬಾರದ ಪರ್ಯಂತರ ನೀರು
೮೫ ಗಳನ್ನೂ ಯೊರ್ದನನ್ನೂ ಹಿಡಿದರು. ಮಿದ್ಯಾನ್ಯರ ಇಬ್ಬರು
ಅಧಿಪತಿಗಳಾದ ಒರೇಬನನ್ನೂ ಜೇಬನನ್ನೂ ಹಿಡಿದು, ಒರೇಬನ
ನ್ನು ಒರೇಬೆಂಬ ಬಂಡೆಯಲ್ಲಿಯೂ, ಜೇಬನನ್ನು ಜೇಬನ ದ್ರಾಕ್ಷೆ
ಯ ಆಲೆಯ ಬಳಿಯಲ್ಲಿಯೂ ಕೊಂದು ಹಾಕಿ, ಮಿದ್ಯಾನ್ಯರ
ನ್ನು ಹಿಂದಟ್ಟಿ, ಒರೇಬ್, ಜೇಬರ ತಲೆಗಳನ್ನು ಯೊರ್ದನಿಗೆ ಈ
ಕೆಯಲ್ಲಿದ್ದ ಗಿದ್ಯೋನನ ಬಳಿಗೆ ತಂದರು.

## ೮. ಸಂಧಿ.

೧ ಆಗ ಎಫ್ರಯಿಮಾನ ಮನುಷ್ಯರು ಅವನಿಗೆ ನೀನು ಮಿದ್ಯಾ
ನ್ಯರ ಮೇಲೆ ಯುದ್ಧ ಮಾಡ ಹೋಗುವಾಗ, ನಮ್ಮನ್ನು ಕರೆ
ಯದೆ ಹೋದದ್ದೇನೆಂದು ಹೇಳಿ, ಅವನ ಸಂಗಡ ಬಲವಾಗಿ ವಿವಾ
೨ ದ ಮಾಡಿದರು. ಅವನು ಅವರಿಗೆ ಹೇಳಿದ್ದೇನಂದರೆ—ನೀವು ಮಾ
ಡಿದ್ದಕ್ಕೆ ಸಮಾನವಾಗಿ ನಾನೇನು ಮಾಡಿದೆನು? ಅಬಿಯೇಜರನ
ದ್ರಾಕ್ಷೆ ಫಲ ಕೂಡಿಸುವದಕ್ಕಿಂತ ಎಫ್ರಯಿಮಾನ ದ್ರಾಕ್ಷೆ ಹಕ್ಕಲು
೩ ಉತ್ತಮವಲ್ಲವೇ! ದೇವರು ನಿಮ್ಮ ಕೈಯಲ್ಲಿ ಮಿದ್ಯಾನ್ಯರ ಪ್ರಧಾ
ನರಾದ ಒರೇಬನನ್ನೂ ಜೇಬನನ್ನೂ ಒಪ್ಪಿಸಿ ಕೊಡಲಿಲ್ಲವೇ! ನೀವು
ಮಾಡಿದ್ದಕ್ಕೆ ನಾನು ಮಾಡಿದ್ದು ಎಷ್ಟು ಮಾತ್ರ! ಅವನು ಈ
ಮಾತು ಹೇಳಿದಾಗ, ಅವನ ವಿಷಯವಾಗಿ ಅವರ ಆತ್ಮ ಶಾಂತ
ವಾಯಿತು.

೪ ಮತ್ತು ಗಿದ್ಯೋನನು ಯೊರ್ದನಿಗೆ ಬಂದು, ಅದನ್ನು ದಾಟಿ,
ಅವನೂ ಅವನ ಸಂಗಡ ಇದ್ದ ಮುನ್ನೂರು ಜನರೂ ದಣಿದವ
೫ ರಾಗಿಯೂ ಹಿಂದಟ್ಟುವವರಾಗಿಯೂ ಇದ್ದರು. ಅವನು ಸು
ಕ್ಕೋತಿನ ಮನುಷ್ಯರಿಗೆ—ದಯೆ ಮಾಡಿ, ನನ್ನ ಕೂಡ ಇರುವ
ಜನರಿಗೆ ಕೆಲವು ರೊಟ್ಟಿಗಳನ್ನು ಕೊಡಿರಿ. ಯಾಕಂದರೆ ಅವರು
ದಣಿದು ಇದ್ದಾರೆ; ಮತ್ತು ನಾನು ಮಿದ್ಯಾನ್ಯರ ಅರಸುಗಳಾದ
ಜೇಬಹನನ್ನೂ ಚಲ್ಮುನ್ನಹನನ್ನೂ ಹಿಂದಟ್ಟುತ್ತೇನೆ, ಅಂದನು.
೬ ಆದರೆ ಸುಕ್ಕೋತಿನ ಪ್ರಧಾನರು ಅವನಿಗೆ, ನಿನ್ನ ರಾಣುವೆಗೆ
ನಾವು ಕೊಟ್ಟೆ ಕೊಡ ಬೇಕಾದ ಹಾಗೆ, ಜೇಬಹ ಚಲ್ಮುನ್ನರ ಕೈ
೭ ನಿನ್ನ ಕೈ ವಶವಾಗಿದೆಯೋ! ಅಂದರು. ಆಗ ಗಿದ್ಯೋನನು ಅವರ
ಗೆ, ಹಾಗಾದರೆ, ಕರ್ತನು ಜೇಬಹನನ್ನೂ ಚಲ್ಮುನ್ನಹನನ್ನೂ ನ
ನ್ನ ಕೈಯಲ್ಲಿ ಒಪ್ಪಿಸಿ ಕೊಟ್ಟ ತರುವಾಯ, ನಿಮ್ಮ ಮಾಂಸವ
ನ್ನು ಅರಣ್ಯದ ಮುಳ್ಳುಗಳಿಂದಲೂ ನೆಗ್ಗಿಲು ಮುಳ್ಳುಗಳಿಂದಲೂ
೮ ಬಡಿಯುವೆನು, ಅಂದನು. ಅಲ್ಲಿಂದ ಪೆನೂಯೇಲಿಗೆ ಏರಿ ಹೋಗಿ,
ಆ ಊರಿನವರ ಸಂಗಡ ಆ ಪ್ರಕಾರವೇ ಮಾತಾಡಿದನು. ಅವರು
ಸುಕ್ಕೋತಿನ ಮನುಷ್ಯರು ಪ್ರತ್ಯುತ್ತರ ಕೊಟ್ಟ ಹಾಗೆಯೇ ಪ್ರ
ತ್ಯುತ್ತರ ಕೊಟ್ಟರು. ಆಗಲವನು ಪೆನೂಯೇಲಿನ ಮನುಷ್ಯರಿಗೆ
೯ ಸಹ, ನಾನು ಸಮಾಧಾನವಾಗಿ ತಿರಿಗಿ ಬರುವಾಗ, ಈ ಬುರುಜ
ನ್ನು ಕೆಡವಿ ಬಿಡುವೆನು, ಅಂದನು.

೧೦ ಆದರೆ ಜೇಬಹನೂ ಚಲ್ಮುನ್ನಹನೂ ತಮ್ಮ ಸೈನ್ಯವಾದ ಹೆಚು
ಕತಿಮೆ ಹದಿನೈದು ಸಾವಿರ ಜನರ ಸಂಗಡ ಕರ್ಕೋರಿನಲ್ಲಿ ಇದ್ದ
ರು. ಇವರಲ್ಲುಳ್ಳ, ಕತ್ತಿ ಹಿಡಿಯ ತಕ್ಕ ಲಕ್ಷ ಇಪ್ಪತ್ತು ಸಾವಿರ
ಜನ ಬಿದ್ದು ಹೋಗಲಾಗಿ, ಮೂಲ್ಲ ದೇಶದ ಸಮಸ್ತ ಮನುಷ್ಯ
೧೧ ರಲ್ಲಿ ಉಳಿದರು. ಗಿದ್ಯೋನನು ನೋಬಾಹಿಗೂ ಯೊಗ್ಬೆಹಾಗೂ
ಮೂಲ್ಲಲ್ಲಿ ಇದ್ದ ಗುಡಾರಗಳಲ್ಲಿ ವಾಸಿಸಿರುವವರ ಮಾರ್ಗವಾಗಿ
ಏರಿ ಹೋಗಿ, ಆ ದಂಡನ್ನು ಹೊಡೆದು ಬಿಟ್ಟನು. ಯಾಕಂದರೆ
೧೨ ದಂಡು ಭರವಸವಾಗಿತ್ತು. ಮತ್ತು ಜೇಬಹನೂ ಚಲ್ಮುನ್ನಹನೂ
ಓಡಿ ಹೋದದರಿಂದ, ಅವನು ಮಿದ್ಯಾನ್ಯರ ಇಬ್ಬರು ಅರಸುಗಳಾ
ದ ಜೇಬಹನನ್ನೂ ಚಲ್ಮುನ್ನಹನನ್ನೂ ಹಿಂದಟ್ಟಿ, ಹಿಡಿದು, ದಂಡ
ನ್ನೆಲ್ಲಾ ಚದರ ಬಡಿದನು.

೧೩ ಮತ್ತು ಯೊವಾಷನ ಮಗನಾದ ಗಿದ್ಯೋನನು ಹೇಶೆಸಿನ
ಬೆಕೆಯಿಂದ ಯುದ್ಧ ತೀರಿಸಿ ಕೊಂಡು, ತಿರಿಗಿ ಬಂದು, ಸುಕ್ಕೋ
ತಿನ ಮನುಷ್ಯರಲ್ಲಿ ಒಬ್ಬ ಚಿಗ್ರಯದವನನ್ನು ಹಿಡಿದು, ಅವನನ್ನು
೧೪ ಕೇಳಿದಾಗ, ಅವನು ಸುಕ್ಕೋತಿನ ಪ್ರಧಾನರೂ ಹಿರಿಯರೂ
೧೫ ಆದ ಎಪ್ಪತ್ತೇಳು ಜನರನ್ನು ಅವನಿಗೆ ಬರೆದು ಕೊಟ್ಟನು. ಗಿದ್ಯೋ
ನನು ಸುಕ್ಕೋತಿನ ಮನುಷ್ಯರ ಬಳಿಗೆ ಬಂದು, ಇಗೋ, ದಣಿ
ದಿರುವ ನಿನ್ನ ಮನುಷ್ಯರಿಗೆ ನಾವು ಕೊಟ್ಟಿಯನ್ನು ಕೊಡ ಬೇ
ಕಾದ ಹಾಗೆ, ಜೇಬಹ ಚಲ್ಮುನ್ನರ ಕೈ ಈಗಲೇ ನಿನ್ನ ಕೈವಶ
ವಾಗಿದೆಯೋ! ಎಂದು, ನೀವು ನನ್ನನ್ನು ನಿಂದಿಸಿದ ಜೇಬಹನ
೧೬ ನ್ನೂ ಚಲ್ಮುನ್ನಹನನ್ನೂ ನೋಡಿರಿ, ಎಂದು ಹೇಳಿ, ಪಟ್ಟಣದ ಹಿರಿಯ
ರನ್ನು ಹಿಡಿದು, ಅರಣ್ಯದ ಮುಳ್ಳುಗಳನ್ನೂ ನೆಗ್ಗಿಲು ಮುಳ್ಳುಗ
ಳನ್ನೂ ತಕ್ಕೊಂಡು, ಅವುಗಳಿಂದ ಸುಕ್ಕೋತಿನ ಮನುಷ್ಯರನ್ನು
೧೭ ಶಿಕ್ಷೆಯ ಮಾಡಿದನು. ಮತ್ತು ಪೆನೂಯೇಲಿನ ಬುರುಜನ್ನು ಕೆಡವಿ,
ಆ ಪಟ್ಟಣದ ಮನುಷ್ಯರನ್ನು ಕೊಂದು ಹಾಕಿದನು.

೧೮ ಮತ್ತು ಅವನು ಜೇಬಹನಿಗೂ ಚಲ್ಮುನ್ನಹನಿಗೂ ನೀವು ತಬೋ
ರಲ್ಲಿ ಕೊಂದು ಹಾಕಿದ ಆ ಮನುಷ್ಯರು ಯಾವ ರೂಪವಾಗಿದ್ದ
ರು? ಅಂದನು. ಅದಕ್ಕವರು, ನಿನ್ನ ಹಾಗೆಯೇ ಅವರು; ಒಬ್ಬೊ
೧೯ ಬ್ಬರು ರೂಪದಲ್ಲಿ ಅರಸನ ಮಕ್ಕಳಾಗಿದ್ದರು, ಅಂದರು. ಅದಕ್ಕ
ವನು, ಅವರು ನನ್ನ ತಾಯಿಯ ಮಕ್ಕಳು; ನನ್ನ ಸಹೋದರರು.
ಕರ್ತನ ಜೀವದ ಆಣೆ—ನೀವು ಅವರನ್ನು ಬದುಕಿಸಿದ್ದರೆ, ನಿಮ್ಮ
೨೦ ನ್ನು ಕೊಲ್ಲೆನು, ಅಂದನು. ಮತ್ತು ತನ್ನ ಹೊಚ್ಚಲ ಮಗನಾದ
ಯೆತೆರನಿಗೆ, ನೀನೆದ್ದು, ಅವರನ್ನು ಕೊಂದು ಹಾಕು, ಅಂದನು,
ಆದರೆ ಆ ಹುಡುಗನು ತನ್ನ ಕತ್ತಿಯನ್ನು ಬಿಚ್ಚಬೆ ಹೋದನು;
ಯಾಕಂದರೆ ಅವನು ಇನ್ನೂ ಹುಡುಗನಾದದರಿಂದ, ಭಯ ಪ
೨೧ ಟ್ಟನು. ಆಗ ಜೇಬಹನೂ ಚಲ್ಮುನ್ನಹನೂ ಅವನಿಗೆ, ನೀನೇ ಎದ್ದು,
ನಮ್ಮ ಮೇಲೆ ಬೀಳು; ಯಾಕಂದರೆ ಮನುಷ್ಯನು ಹ್ಯಾಗೋ,
ಹಾಗೆಯೇ ಅವನ ಪರಾಕ್ರಮ ಇರುವದು, ಅಂದರು. ಗಿದ್ಯೋ



ನನು ಎದ್ದು, ಜೇಬಹನನ್ನೂ ಚಲ್ಮುನ್ನಹನನ್ನೂ ಕೊಂದು ಹಾಕಿ,
ಅವರ ಒಂಟೆಗಳ ಕತ್ತಿಗೆಗಳಲ್ಲಿ ಇದ್ದ ಆಭರಣಗಳನ್ನು ತೆಗೆದು
ಕೊಂಡನು.

೨೨ ಮತ್ತು ಇಸ್ರಯೇಲ್ ಜನರು ಗಿದ್ಯೋನನಿಗೆ, ನೀನು ನಮ್ಮ
ನ್ನು ಮಿದ್ಯಾನ್ಯರ ಕೈಯಿಂದ ತಪ್ಪಿಸಿ ರಕ್ಷಿಸಿದ್ದರಿಂದ, ನೀನೂ, ನಿ
ನ್ನ ಕುಮಾರನೂ, ನಿನ್ನ ಕುಮಾರನ ಕುಮಾರನೂ, ನಮ್ಮನ್ನು
೨೩ ಆಳ ಬೇಕು, ಅಂದರು. ಗಿದ್ಯೋನನು ಅವರಿಗೆ, ನಾನು ನಿಮ್ಮ
ನ್ನು ಆಳುವದಿಲ್ಲ; ನನ್ನ ಮಗನು ನಿಮ್ಮನ್ನು ಆಳುವದಿಲ್ಲ, ಕರ್ತ
೨೪ನೇ ನಿಮ್ಮನ್ನು ಆಳುವನು, ಅಂದನು. ಮತ್ತು ಗಿದ್ಯೋನನು, ಬಂ
ದು ಬಿನ್ನಹ ನಿಮಗೆ ಮಾಡುತ್ತೇನೆ—ಒಬ್ಬೊಬ್ಬನು ಕೊಳ್ಳೆ ಇ
ಟ್ಟ ಮುರುವುಗಳನ್ನು ನನಗೆ ಕೊಡಿರಿ, ಅಂದನು. ಯಾಕಂದರೆ
ಅವರು ಇಷ್ಮಯೇಲ್ಯರಾಗಿದ್ದದರಿಂದ, ಅವರಿಗೆ ಭಂಗಾರದ ಮು
೨೫ ರುವುಗಳಿದ್ದವು. ಅವರು, ನಾವು ಕೊಡಲೇ ಕೊಡುವೆವು ಎಂದು
ಹೇಳಿ, ಒಂದು ವಸ್ತ್ರವನ್ನು ಹಾಸಿ, ಅಲ್ಲಿ ಅವರವರು ಕೊಳ್ಳೆ ಇ
೨೬ ಟ್ಟ ಮುರುವುಗಳನ್ನು ಹಾಕಿದರು. ಆದರೆ ಆಭರಣಗಳೂ, ಕಂ
ಠ ಮಾಲೆಗಳೂ, ಮಿದ್ಯಾನ್ಯರ ಅರಸುಗಳು ಹೊದ್ದು ಕೊಂಡಿದ್ದ
ಕಕ್ಕಾಂಬರ ವಸ್ತ್ರಗಳೂ, ಅವರ ಒಂಟೆಗಳ ಕೊರಳ್ಳೊಳಗೆ ಇದ್ದ
ಸರಪಣಿಗಳೂ ಹೊರ್ತು, ಅವನು ಕೇಳಿ ತೆಗೆದು ಕೊಂಡ ಭಂ
ಗಾರದ ಮುರುವುಗಳ ತೂಕವು ಸಾವಿರದ ಏಳು ನೂರು ಶೆಕೆ
೨೭ ಲ್ ತೂಕವಾಗಿತ್ತು. ಆ ಭಂಗಾರದಿಂದ ಗಿದ್ಯೋನನು ಬಂದು
ಎಫೋದನ್ನು ಮಾಡಿಸಿ, ಅದನ್ನು ತನ್ನ ಊರಾದ ಒಫ್ರದಲ್ಲಿ
ಇಟ್ಟನು. ಆದರೆ ಇಸ್ರಯೇಲೆಲ್ಲಾ ಅದರ ಹಿಂದೆ ಜಾರರಾಗಿ
ಹೋದರು. ಅದು ಗಿದ್ಯೋನನಿಗೂ ಅವನ ಮನೆಗೂ ಉರ್ಲಾ
ಯಿತು.

೨೮ ಮತ್ತು ಮಿದ್ಯಾನ್ಯರು ತಮ್ಮ ತಲೆಯನ್ನು ತಿರಿಗಿ ಎತ್ತ ಕೂಡ
ದ ಹಾಗೆ, ಇಸ್ರಯೇಲ್ ಮಕ್ಕಳ ಮುಂದೆ ತಗ್ಗಿಸಲ್ಪಟ್ಟರು. ದೇ
ಶವು ಗಿದ್ಯೋನನ ದಿವಸಗಳಲ್ಲಿ ನಾಲ್ವತ್ತು ವರುಷ ಶಾಂತವಾಗಿ
೨೯ ತ್ತು. ಮತ್ತು ಯೊವಾಷನ ಮಗನಾದ ಯೆರುಬ್ಬಾಳನು ಹೋಗಿ,
೩೦ ತನ್ನ ಮನೆಯಲ್ಲಿ ವಾಸವಾಗಿದ್ದನು. ಗಿದ್ಯೋನನಿಗೆ ಅನೇಕ
ಮಂದಿ ಹೆಂಡತಿಯರು ಇದ್ದದರಿಂದ, ತನ್ನ ತೊಡೆಯಿಂದ ಹೊರ
೩೧ ಟೆ ಎಪ್ಪತ್ತು ಮಂದಿ ಮಕ್ಕಳು ಇದ್ದರು. ಶೆಕೆಮಿನಲ್ಲಿದ್ದ ಅವನ
ಉಪಪತ್ನಿಯು ಅವನಿಗೆ ಒಬ್ಬ ಮಗನನ್ನು ಹೆತ್ತಳು. ಅವನು ಆ
೩೨ ಮಗನಿಗೆ ಅಬಿಮೇಲೆಕೆಂಬ ಹೆಸರಿಟ್ಟನು. ಮತ್ತು ಯೊವಾಷನ
ಮಗನಾದ ಗಿದ್ಯೋನನು ಒಳ್ಳೇ ವೃದ್ಧಾಪ್ಯದಲ್ಲಿ ಸತ್ತು, ಅಬಿ
ಯೇಜ್ರಿಯರಿಗೆ ಸೇರಿದ ಒಫ್ರದಲ್ಲಿ ತನ್ನ ತಂದೆಯಾದ ಯೊವಾ
ಷನ ಸಮಾಧಿಯಲ್ಲಿ ಹೂಣಿಡಲ್ಪಟ್ಟನು.

೩೩ ಗಿದ್ಯೋನನು ಸತ್ತ ತರುವಾಯ ಆದದ್ದೇನಂದರೆ, ಇಸ್ರ
ಯೇಲ್ ಮಕ್ಕಳು ತಿರಿಗಿ ಕೊಂಡು, ಬಾಳೀಮನ ಹಿಂದೆ ಜಾರರಾಗಿ
ಹೋಗಿ, ಬಾಳ್ ಬೆರೀತನ್ನು ತಮಗೆ ದೇವರಾಗಿ ಇಟ್ಟು ಕೊಂಡರು.
೩೪ ಸುತ್ತಲು ಇದ್ದ ತಮ್ಮ ಎಲ್ಲಾ ಶತ್ರುಗಳ ಕೈಯಿಂದ ತಮ್ಮನ್ನು
ತಪ್ಪಿಸಿ ಬಿಟ್ಟ ತಮ್ಮ ದೇವರಾದ ಕರ್ತನನ್ನು ಜ್ಞಾಪಕ ಮಾಡಿ
ಕೊಳ್ಳಲಿಲ್ಲ. ಗಿದ್ಯೋನನೆಂಬ ಯೆರುಬ್ಬಾಳ್ ಇಸ್ರಯೇಲಿಗೆ ಮಾ
ಡಿದ ಸಕಲ ಉಪಕಾರಗಳಿಗೆ ತಕ್ಕ ಹಾಗೆ, ಕೃಪೆಯನ್ನು ಅವನ
ಮನೆಗೆ ಮಾಡದೆ ಹೋದರು.

## ೯. ಸಂಧಿ.

೧ ಮತ್ತು ಯೆರುಬ್ಬಾಳನ ಮಗನಾದ ಅಬಿಮೇಲೆಕನು ಶೆಕೆಮಿನ
ಲ್ಲಿರುವ ತನ್ನ ತಾಯಿಯ ಸಹೋದರರ ಬಳಿಗೆ ಹೋಗಿ, ಅವರ
ಸಂಗಡಲೂ ತನ್ನ ತಾಯಿಯ ತಂದೇ ಮನೆಯ ಗೋತ್ರವಾದ ಸ
೨ ಮಸ್ತರ ಸಂಗಡಲೂ ಮಾತಾಡಿ, ನೀವು ದಯೆ ಮಾಡಿ, ಶೆಕೆಮಿ
ನ ಜನರೆಲ್ಲರು ಕೇಳುವ ಹಾಗೆ ಮಾತಾಡ ಬೇಕಾದದ್ದೇನಂದರೆ,
ಯೆರುಬ್ಬಾಳನ ಮಕ್ಕಳಾದ ಎಪ್ಪತ್ತು ಮಂದಿಯು ನಿಮ್ಮನ್ನು ಆ
ಳುವದು ಒಳ್ಳೇದೋ! ಒಬ್ಬನು ಆಳುವದು ಒಳ್ಳೇದೋ! ಮತ್ತು
ನಾನು ನಿಮ್ಮ ಎಲುವೂ ನಿಮ್ಮ ಮಾಂಸವೂ ಆಗಿದ್ದೇನೆಂದು, ಜ್ಞಾ
೩ ಪಕ ಮಾಡಿ ಕೊಳ್ಳಿರಿ, ಅಂದನು. ಹಾಗೆಯೇ ಅವನ ತಾಯಿ
ಯ ಸಹೋದರರು ಅವನನ್ನು ಕುರಿತು ಶೆಕೆಮಿನ ಜನರೆಲ್ಲರ ಕಿವಿ
ಗಳಲ್ಲಿ ಈ ಮಾತುಗಳನ್ನೆಲ್ಲಾ ಆಡಿದರು. ಅವರು ಇವನನ್ನು ತ
ಮ್ಮ ಸಹೋದರನೆಂದು ಹೇಳಿದ್ದರಿಂದ, ಆ ಜನರ ಹೃದಯವು ಅ
೪ ಬಿಮೇಲೆಕನ ಕಡೆಗೆ ತಿರುಗಿತು. ಮತ್ತು ಅವರು ಬಾಳ್‌ಬೆರೀತಿನ
ಮನೆಯೊಳಗಿಂದ ಎಪ್ಪತ್ತು ಬೆಳ್ಳಿಯ ಶೆಕೆಲುಗಳನ್ನು ತೆಗೆದು
ಕೊಂಡು, ಅವನಿಗೆ ಕೊಟ್ಟರು. ಅವುಗಳಿಂದ ಅಬಿಮೇಲೆಕನು ನಿ
ಷ್ಪ್ರಯೋಜಕರನ್ನೂ ನೀಚರನ್ನೂ ಸಂಬಳಕ್ಕೆ ಇಟ್ಟು ಕೊಂಡ
೫ ನು; ಅವರು ಅವನ ಹಿಂದೆ ಹೋದರು. ಅವನು ಒಫ್ರದಲ್ಲಿರುವ
ತನ್ನ ತಂದೆಯ ಮನೆಗೆ ಬಂದು, ತನ್ನ ಸಹೋದರರಾದ ಯೆರು
ಬ್ಬಾಳನ ಎಪ್ಪತ್ತು ಮಂದಿ ಕುಮಾರರನ್ನು ಒಂದು ಕಲ್ಲಿನ ಮೇಲೆ
ಕೊಂದು ಹಾಕಿದನು. ಆದರೆ ಯೆರುಬ್ಬಾಳನ ಚಿಕ್ಕ ಮಗನಾ
ದ ಯೊತಾಮನು ಒಬ್ಬನೇ ಉಳಿದನು; ಯಾಕಂದರೆ ಅಡಗಿ
ಕೊಂಡನು.

೬ ಮತ್ತು ಶೆಕೆಮಿನ ಜನರೆಲ್ಲರೂ ಮಿಲ್ಲೋನಿನ ಮನೆಯವರೆಲ್ಲ
ರೂ ಕೂಡಿ ಕೊಂಡು, ಹೋಗಿ, ಶೆಕೆಮಿನ ಬೈಲಲ್ಲಿ ಇರುವ ಸ್ತಂಭ
೭ ದ ಬಳಿಯಲ್ಲಿ ಅಬಿಮೇಲೆಕನನ್ನು ಅರಸನಾಗ ನೇಮಿಸಿದರು. ಇದು
ಯೊತಾಮನಿಗೆ ತಿಳಿಸಲ್ಪಟ್ಟಾಗ, ಅವನು ಹೋಗಿ, ಗೆರಿಜ್ಜಿಮ್ ಬೆ
ಟ್ಟದ ತುದಿಯಲ್ಲಿ ಏರಿ, ನಿಂತು, ತನ್ನ ಶಬ್ದವನ್ನೆತ್ತಿ, ಕೂಗಿ, ಅವರು
ಗೆ ಹೇಳಿದ್ದೇನಂದರೆ, ಶೆಕೆಮಿನ ಜನರೇ, ದೇವರು ನಿಮ್ಮನ್ನು ಕೇಳು
೮ ವ ಹಾಗೆ, ನನ್ನ ಮಾತನ್ನು ಕೇಳಿರಿ. ಮರಗಳು ತಮ್ಮ ಮೇಲೆ
ಒಬ್ಬ ಅರಸನನ್ನು ಅಭಿಷೇಕಿಸಿ ಕೊಳ್ಳ ಹೊರಟು ಹೋಗಿ, ಇ
ಪ್ಪೆಯ ಮರಕ್ಕೆ—ನೀನು ನಮ್ಮ ಮೇಲೆ ಅರಸನಾಗಿರು, ಅಂದವು.
೯ ಇಪ್ಪೆಯ ಮರ ಅವುಗಳಿಗೆ, ಯಾವದರಿಂದ ದೇವರನ್ನೂ ಮನು
ಷ್ಯರನ್ನೂ ಘನ ಪಡಿಸುತ್ತಾಕೋ, ಈ ನನ್ನ ಪುಷ್ಟಿಯನ್ನು ಬಿ
ಟ್ಟು, ಮರಗಳಿಗೋಸ್ಕರ ತಿರುಗಾಡ ಹೋಗುವೆನೋ! ಅಂದಿತು.
೧೦ ಮರಗಳು ಅಂಜೂರದ ಗಿಡಕ್ಕೆ, ನೀನು ಬಂದು, ನಮ್ಮ ಮೇಲೆ ಅರ
೧೧ ಸನಾಗಿರು, ಅಂದವು. ಆದರೆ ಅಂಜೂರದ ಗಿಡವು ಅವುಗಳಿಗೆ, ನಾ
ನು ನನ್ನ ಮಧುರವನ್ನೂ ನನ್ನ ಒಳ್ಳೇ ಫಲವನ್ನೂ ಬಿಟ್ಟು, ಮರ
೧೨ ಗಳಿಗೋಸ್ಕರ ತಿರುಗಾಡ ಹೋಗುವೆನೋ! ಅಂದಿತು. ಮತ್ತು
ಮರಗಳು ದ್ರಾಕ್ಷೇ ಗಿಡಕ್ಕೆ, ನೀನು ಬಂದು, ನಮ್ಮ ಮೇಲೆ ಅರಸ
೧೩ ನಾಗಿರು, ಅಂದವು. ಆದರೆ ದ್ರಾಕ್ಷೇ ಗಿಡವು ಅವುಗಳಿಗೆ, ದೇವರ
ನ್ನೂ ಮನುಷ್ಯರನ್ನೂ ಸಂತೋಷ ಪಡಿಸುವ ನನ್ನ ರಸವನ್ನು
ನಾನು ಬಿಟ್ಟು, ಮರಗಳಿಗೋಸ್ಕರ ತಿರುಗಾಡ ಹೋಗುವೆನೋ!
೧೪ ಅಂದಿತು. ಮತ್ತು ಎಲ್ಲಾ ಮರಗಳು ಮುಳ್ಳಿನ ಗಿಡಕ್ಕೆ, ನೀನು
೧೫ ಬಂದು, ನಮ್ಮ ಮೇಲೆ ಅರಸನಾಗಿರು, ಅಂದವು. ಮುಳ್ಳಿನ ಗಿಡ

ವು ಮರಗಳಿಗೆ, ನೀವು ನನ್ನನ್ನು ಅರಸನಾಗ ಅಭಿಷೇಕ ಮಾಡು
ವದು ಸತ್ಯದಲ್ಲಾದರೆ, ನನ್ನ ನೆರಳಲ್ಲಿ ಬಂದು, ಆಶ್ರಯಿಸಿ ಕೊಳ್ಳಿ
ರಿ; ಇಲ್ಲದಿದ್ದರೆ, ಮುಳ್ಳಿನ ಗಿಡದಿಂದ ಬೆಂಕಿ ಹೊರಟು, ಲೆಬನೋನಿ
ನ ದೇವದಾರುಗಳನ್ನು ದಹಿಸಿ ಬಿಡಲಿ, ಅಂದಿತು.

೧೬ ನೀವು ಈಗ ಅಬಿಮೇಲೆಕನನ್ನು ಅರಸನಾಗ ಮಾಡಿದ್ದು ಸತ್ಯ
ದಲ್ಲಿಯೂ ಪೂರ್ಣ ಗುಣದಲ್ಲಿಯೂ ಮಾಡಿದ್ದಾದರೆ—ಮತ್ತು
೧೭ ಯೆರುಬ್ಬಾಳನಿಗೂ ಅವನ ಮನೆಗೂ ಒಳ್ಳೇದನ್ನು ಮಾಡಿ ಇದ್ದ
ರೆ—ನನ್ನ ತಂದೆಯಾದ ಅವನು ನಿಮಗೋಸ್ಕರ ಯುದ್ಧ ಮಾಡಿ
ದವನಾಗಿಯೂ, ತನ್ನ ಪ್ರಾಣವನ್ನು ಎಣಿಸದೆ ಮಿದ್ಯಾನಿನ
ಕೈಯಿಂದ ನಿಮ್ಮನ್ನು ತಪ್ಪಿಸಿದವನಾಗಿಯೂ ಇರಲಾಗಿ, ನೀವು
೧೮ ಈ ಹೊತ್ತು ನನ್ನ ತಂದೆಯ ಮನೆಗೆ ವಿರೋಧವಾಗಿ ಎದ್ದು,
ಅವನ ಎಪ್ಪತ್ತು ಮಕ್ಕಳನ್ನು ಒಂದೇ ಕಲ್ಲಿನ ಮೇಲೆ ಕೊಂದು,
೧೯ ಅವನ ದಾಸಿಯ ಮಗನಾದ ಅಬಿಮೇಲೆಕನನ್ನು, ಅವನು ನಿಮ್ಮ
ಸಹೋದರನಾಗಿರುವದರಿಂದ, ಶೆಕೆಮಿನ ಜನರ ಮೇಲೆ ಅರಸನಾಗಿ
ಇಟ್ಟದ್ದು ಯೆರುಬ್ಬಾಳನ ಕೆಲಸಕ್ಕೆ ನೀವು ಮಾಡ ತಕ್ಕ ಬದುಲಾ
ಗಿದ್ದರೆ—ಮತ್ತು ಈ ಹೊತ್ತು ಅವನಿಗೂ ಅವನ ಮನೆಗೂ
ನೀವು ಸತ್ಯದಲ್ಲಿಯೂ ಪೂರ್ಣ ಗುಣದಲ್ಲಿಯೂ ಕಾರ್ಯ
ಮಾಡಿ ಇದ್ದರೆ, ಅಬಿಮೇಲೆಕನಲ್ಲಿ ನೀವು ಸಂತೋಷ ಪಡಿರಿ,
೨೦ ಅವನು ಸಹ ನಿಮ್ಮಲ್ಲಿ ಸಂತೋಷ ಪಡಲಿ. ಇಲ್ಲದಿದ್ದರೆ, ಅಬಿ
ಮೇಲೆಕನಿಂದ ಬೆಂಕಿ ಹೊರಟು, ಶೆಕೆಮಿನ ಜನರನ್ನೂ ಮಿಲ್ಲೋನಿ
ನ ಮನೆಯವರನ್ನೂ ದಹಿಸಿ ಬಿಡಲಿ. ಮತ್ತು ಶೆಕೆಮಿನ ಜನರಿಂದ
ಲೂ ಮಿಲ್ಲೋನಿನ ಮನೆಯವರಿಂದಲೂ ಬೆಂಕಿ ಹೊರಟು, ಅಬಿ
ಮೇಲೆಕನನ್ನು ದಹಿಸಿ ಬಿಡಲಿ.

೨೧ ಆಗ ಯೊತಾಮನು ತಪ್ಪಿಸಿ ಕೊಂಡು, ಓಡಿ, ಬೇರಕ್ಕೆ ಹೋಗಿ,
ಅಲ್ಲಿ ತನ್ನ ಸಹೋದರನಾದ ಅಬಿಮೇಲೆಕನ ನಿಮಿತ್ತವಾಗಿ ವಾಸ
ವಾಗಿದ್ದನು.

೨೨ ಆದರೆ ಅಬಿಮೇಲೆಕನು ಇಸ್ರಯೇಲನ್ನು ಮೂರು ವರುಷ
ಆಳಿದ ತರುವಾಯ ದೇವರು ಅಬಿಮೇಲೆಕನಿಗೂ ಶೆಕೆಮಿನ ಜನರಿ
೨೩ ಗೂ ನಡುವೆ ಕೆಟ್ಟ ಆತ್ಮವನ್ನು ಕಳುಹಿಸಿದನು. ಆಗ ಎಪ್ಪತ್ತು
೨೪ ಮಂದಿ ಮಕ್ಕಳಿಗೆ ಮಾಡಲ್ಪಟ್ಟ ಬಲಾತ್ಕಾರ ಬಂದು, ಪಾಪ್ತಿ
ಸುವ ಹಾಗೆಯೂ, ಅವರ ರಕ್ತವು ಅವನನ್ನು ಕೊಂದ ಅವರ
ಸಹೋದರನಾದ ಅಬಿಮೇಲೆಕನ ಮೇಲೆಯೂ ಅವನ ಸಹೋದ
ರರನ್ನು ಕೊಲ್ಲುವದಕ್ಕೆ ಅವನ ಕೈಗಳನ್ನು ಬಲ ಪಡಿಸಿದ ಶೆಕೆಮಿನ
ಮನುಷ್ಯರ ಮೇಲೆಯೂ ಬರುವ ಹಾಗೆಯೂ, ಶೆಕೆಮಿನ ಜನರು
೨೫ ಅಬಿಮೇಲೆಕನಿಗೆ ದ್ರೋಹ ಮಾಡಿದರು. ಶೆಕೆಮಿನ ಮನುಷ್ಯರು
ಪರ್ವತಗಳ ಶಿಖರಗಳ ಮೇಲೆ ಅವನಿಗೋಸ್ಕರ ಹೊಂಚಿ ಕೊ
ಳ್ಳುವವರನ್ನು ಇಟ್ಟು, ತಮ್ಮ ಸುಲಿಪಾವಾಗಿ ಮಾರ್ಗದಲ್ಲಿ ಹಾದು
ಹೋಗುವ ಸಮಸ್ತರನ್ನು ಸುಲು ಕೊಂಡರು. ಅದು ಅಬಿಮೇಲೆ
೨೬ ಕನಿಗೆ ತಿಳಿಸಲ್ಪಟ್ಟಿತು. ಆಗ ಏಬೆದನ ಮಗನಾದ ಗಾಳನೂ ಅ
ವನ ಸಹೋದರರೂ ಶೆಕೆಮಿಗೆ ದಾಟಿ ಬಂದರು; ಆದರೆ ಶೆಕೆಮಿನ
ಜನರು ಅವನಲ್ಲಿ ಭರವಸವಿಟ್ಟು, ಹೊರಗೆ ಹೋಗಿ, ತಮ್ಮ ದ್ರಾಕ್ಷೇ
೨೭ ಫಲಗಳನ್ನು ಕೊಯಿದು, ಅವುಗಳನ್ನು ತುಳಿದು, ಹಬ್ಬ ಮಾಡಿ,
ತಮ್ಮ ದೇವರ ಮನೆಯೊಳಗೆ ಹೋಗಿ, ಉಂಡು, ಕುಡಿದು, ಅಬಿ
೨೮ ಮೇಲೆಕನನ್ನು ಶಪಿಸಿದರು. ಆಗ ಏಬೆದನ ಮಗನಾದ ಗಾಳನು
ಹೇಳಿದ್ದೇನಂದರೆ, ನಾವು ಅವನನ್ನು ಸೇವಿಸುವ ಹಾಗೆ, ಅಬಿಮೇ
ಲೆಕನು ಯಾರು! ಶೆಕೆಮನು ಯಾರು! ಯೆರುಬ್ಬಾಳನ ಮಗನ
ಲ್ಲವೋ! ಅವನ ಪ್ರಧಾನನು ಜೆಬೂಲನಲ್ಲವೋ! ಶೆಕೆಮಿನ ತಂದೆ
ಯಾದ ಹಮೋರನ ಮನುಷ್ಯರನ್ನೇ ಸೇವಿಸಿರಿ; ಇವನನ್ನು
೨೯ ನಾವು ಯಾಕೆ ಸೇವಿಸ ಬೇಕು! ಈ ಜನರನ್ನು ನನ್ನ ಕೈಗೆ
ಯಾರು ಒಪ್ಪಿಸಿ ಕೊಡುವರು! ಆಗ ನಾನು ಅಬಿಮೇಲೆಕನನ್ನು
ತೆಗೆದು ಹಾಕುವೆನು. ಮತ್ತು ಅಬಿಮೇಲೆಕನಿಗೆ, ನೀನು ನಿನ್ನ ಸೈ
ನ್ಯವನ್ನು ಹೆಚ್ಚಿಸಿ ಕೊಂಡು, ಹೊರಟು ಬಾ, ಅಂದನು.

೩೦ ಆ ಪಟ್ಟಣದ ಅಧಿಪತಿಯಾದ ಜೆಬೂಲನು ಏಬೆದನ ಮಗನಾದ
೩೧ ಗಾಳನು ಹೇಳಿದ ಮಾತುಗಳನ್ನು ಕೇಳಿದಾಗ, ಕೋಪಗೊಂಡು,
ಅಬಿಮೇಲೆಕನ ಬಳಿಗೆ ರಹಸ್ಯವಾಗಿ ದೂತರನ್ನು ಕಳುಹಿಸಿ, ಇ
ಗೋ, ಏಬೆದನ ಮಗನಾದ ಗಾಳನೂ ಅವನ ಸಹೋದರರೂ
ಶೆಕೆಮಿಗೆ ಬಂದಿದ್ದಾರೆ; ಮತ್ತು ಇಗೋ, ಅವರು ಪಟ್ಟಣವನ್ನು ನಿನ
೩೨ ಗೆ ವಿರೋಧವಾಗಿ ಬಲ ಪಡಿಸುತ್ತಾರೆ. ಆದದರಿಂದ ಈಗ ನೀನೂ
ನಿನ್ನ ಸಂಗಡ ಇರುವ ಜನರೂ ಕೂಡ ರಾತ್ರಿಯಲ್ಲಿ ಎದ್ದು, ಅರ
೩೩ ಬಯಲಲ್ಲಿ ಹೊಂಚಿ ಕೊಳ್ಳ ಬೇಕು. ಮತ್ತು ಹೊತ್ತಾರೆ ಸೂ
ರ್ಯನು ಉದಯಿಸುವಾಗ, ನೀನು ಎದ್ದು, ಪಟ್ಟಣದ ಮೇಲೆ ಬೀಳ
ಬೇಕು; ಇಗೋ, ಅವನೂ ಅವನ ಸಂಗಡ ಇರುವ ಜನರೂ ನಿ
ಮಗೆದುರಾಗಿ ಹೊರಟು ಬರುವಾಗ, ನೀನು ನಿನ್ನ ಕೈಗೆ ಸಿ
ಬಂದ ಹಾಗೆ ಅವನಿಗೆ ಮಾಡ ಬಹುದೆಂದು, ಹೇಳಿದನು.

೩೪ ಹಾಗೆಯೇ ಅಬಿಮೇಲೆಕನೂ ಅವನ ಸಂಗಡ ಇದ್ದ ಸಮಸ್ತ
ಜನರೂ ರಾತ್ರಿಯಲ್ಲಿ ಎದ್ದು, ಶೆಕೆಮಿಗೆ ವಿರೋಧವಾಗಿ ನಾಲ್ಕು
ಗುಂಪಾಗಿ ಹೊಂಚಿ ಕೊಂಡಿದ್ದರು. ಮತ್ತು ಏಬೆದನ ಮಗನಾದ
೩೫ ಗಾಳನು ಹೊರಟು ಬಂದು, ಪಟ್ಟಣದ ಬಾಗಲ ದ್ವಾರದಲ್ಲಿ ನಿಂತನು.
ಆಗ ಹೊಂಚಿ ಕೊಂಡಿದ್ದ ಅಬಿಮೇಲೆಕನೂ ತನ್ನ ಸಂಗಡ ಇದ್ದ
೩೬ ಜನರೂ ಎದ್ದು, ಬಂದರು. ಗಾಳನು ಆ ಜನರನ್ನು ಕಂಡಾಗ, ಇ
ಗೋ, ಬೆಟ್ಟದ ಶಿಖರಗಳಿಂದ ಜನರು ಇಳಿದು ಬರುತ್ತಾರೆಂದು,
ಜೆಬೂಲನಿಗೆ ಹೇಳಿದನು. ಜೆಬೂಲನು ಅವನಿಗೆ, ನೀನು ಬೆಟ್ಟಗಳ
೩೭ ನೆರಳನ್ನು ನೋಡಿ, ಮನುಷ್ಯರನ್ನುತ್ತೀ, ಅಂದನು. ಗಾಳನು ತಿ
ರಿಗಿ ಅವನ ಸಂಗಡ ಮಾತಾಡಿ, ಇಗೋ, ಜನರು ಎತ್ತರ ಸ್ಥಳಗ
ಳಿಂದ ಇಳಿದು ಬರುತ್ತಾರೆ; ಮಿಯೋನೀಮಿನ ಬೈಲು ಮಾರ್ಗವಾಗಿ
೩೮ ಬಂದು ಗುಂಪು ಬರುತ್ತಾರೆ, ಅಂದನು. ಆಗ ಜೆಬೂಲನು ಅವನಿಗೆ,
ನಾವು ಅವನನ್ನು ಸೇವಿಸುವ ಹಾಗೆ ಅಬಿಮೇಲೆಕನು ಯಾರು!
ಎಂದು, ನೀನು ಹೇಳಿದ ನಿನ್ನ ಬಾಯಿ ಈಗ ಎಲ್ಲಿ! ಅದು ನೀನು
ಅಲಕ್ಷ್ಯ ಮಾಡಿದ ಜನವಲ್ಲವೋ! ಈಗ ನೀನು ದಯೆ ಮಾಡಿ,
ಹೊರಟು, ಅವರ ಸಂಗಡ ಯುದ್ಧ ಮಾಡು, ಅಂದನು. ಗಾಳ
೩೯ ನು ಶೆಕೆಮಿನ ಮನುಷ್ಯರ ಮುಂದೆ ಹೊರಟು, ಅಬಿಮೇಲೆಕನ
೪೦ ಸಂಗಡ ಯುದ್ಧ ಮಾಡಿದನು. ಆದರೆ ಅಬಿಮೇಲೆಕನು ಅವನನ್ನು
ಹಿಂದಟ್ಟಿದನು; ಅವನು ಅವನ ಮುಂದೆ ಓಡಿ ಹೋದನು. ಬಾಗಲ
೪೧ ದ್ವಾರದ ಪರ್ಯಂತರ ಅನೇಕರು ಸಂಹಾರವಾಗಿ ಬಿದ್ದರು. ಆಗ
ಅಬಿಮೇಲೆಕನು ಅರೂಮದಲ್ಲಿ ವಾಸ ಮಾಡಿದನು; ಆದರೆ ಜೆಬೂ
ಲನು ಗಾಳನನ್ನೂ ಅವನ ಸಹೋದರರನ್ನೂ, ಶೆಕೆಮಿನಲ್ಲಿ ಇರದ
ಹಾಗೆ, ಹೊರಡಿಸಿ ಬಿಟ್ಟನು.

೪೨ ಮಾರನೆಯ ದಿವಸದಲ್ಲಿ ಆದದ್ದೇನಂದರೆ, ಜನರು ಬೈಲಿಗೆ ಹೊರ
ಟರು; ಮತ್ತು ಅಬಿಮೇಲೆಕನಿಗೆ ತಿಳಿಸಿದರು. ಅವನು ಜನವನ್ನು
೪೩ ತಕ್ಕೊಂಡು, ಅವರನ್ನು ಮೂರು ಗುಂಪುಗಳಾಗಿ ಮಾಡಿ, ಬೈಲಿ



ಯಲ್ಲಿ ಹೊಂಚಿ ಕೊಂಡನು. ಮತ್ತು ನೋಡುವಾಗ, ಇಗೋ, ಜ
ನರು ಪಟ್ಟಣದಿಂದ ಹೊರಟು ಬರುತ್ತಾರೆ. ಅವರ ಮೇಲೆ ಎದ್ದು,
೪೪ ಬಂದು, ಅವರನ್ನು ಹೊಡೆದನು. ಮತ್ತು ಅಬಿಮೇಲೆಕನೂ ಅವನ
ಸಂಗಡ ಇದ್ದ ಗುಂಪು ಜನರೂ ಕವಿದು, ಪಟ್ಟಣದ ಬಾಗಲ ದ್ವಾರದ
ಲ್ಲಿ ನಿಂತರು. ಕಡಿಮೆ ಎರಡು ಗುಂಪು ಜನರು ಬೈಲಿನಲ್ಲಿರುವ ಸ
೪೫ ಮಸ್ತರ ಮೇಲೆ ಕವಿದು, ಅವರನ್ನು ಹೊಡೆದು ಬಿಟ್ಟರು. ಅಬಿಮೇ
ಲೆಕನು ಆ ದಿನವೆಲ್ಲಾ ಪಟ್ಟಣದ ಮೇಲೆ ಯುದ್ಧ ಮಾಡಿ, ಪಟ್ಟಣ
ನ್ನು ಹಿಡಿದು, ಅದರಲ್ಲಿದ್ದ ಜನವನ್ನು ಕೊಂದು, ಪಟ್ಟಣವನ್ನು ಕೆಡ
ವಿ ಬಿಟ್ಟು, ಅದರಲ್ಲಿ ಉಪ್ಪು ಬಿತ್ತಿದನು.

೪೬ ಅದನ್ನು ಶೆಕೆಮಿನ ಹೂಡೆಯಲ್ಲಿದ್ದ ಜನರೆಲ್ಲರೂ ಕೇಳಿದಾಗ,
ಅವರು ಬೆರೀತೆಂಬ ದೇವರ ಮನೆಯ ಭದ್ರವಾದ ಸ್ಥಳದಲ್ಲಿ ಪ್ರವೇ
೪೭ ಶಿಸಿದರು. ಆದರೆ ಶೆಕೆಮಿನ ಗಡಿಯಲ್ಲಿದ್ದ ಜನರೆಲ್ಲರೂ ಅಲ್ಲಿ ಕೂ
೪೮ ಡಿ ಇದ್ದಾರೆಂದು, ಅಬಿಮೇಲೆಕನಿಗೆ ತಿಳಿಸಲ್ಪಟ್ಟಾಗ, ಅಬಿಮೇಲೆಕ
ನು, ತನ್ನ ಸಂಗಡ ಇದ್ದ ಜನರೆಲ್ಲರು ಸಹಿತವಾಗಿ, ಚಲ್ಮೊನ್ ಬೆಟ್ಟ
ದಲ್ಲಿ ಏರಿ, ತನ್ನ ಕೈಯಲ್ಲಿ ಕೊಡ್ಲಿಯನ್ನು ಹಿಡಿದು, ಒಂದು ಮ
ರದ ಕೊಂಬೆಯನ್ನು ಕಡಿದು, ಅದನ್ನು ತನ್ನ ಹೆಗಲ ಮೇಲೆ
ಹೊತ್ತು ಕೊಂಡು, ತನ್ನ ಕೂಡ ಇದ್ದ ಜನರಿಗೆ, ನಾನು ಮಾಡಿ
ದ್ದನ್ನು ನೋಡಿ, ಹಾಗೆಯೇ ಶೀಘ್ರವಾಗಿ ಮಾಡಿರಿ, ಅಂದನು.
೪೯ ಜನರೆಲ್ಲರು ಅವನವನು ಒಂದೊಂದು ಕೊಂಬೆಯನ್ನು ಕಡಿದು,
ಅಬಿಮೇಲೆಕನ ಹಿಂದೆ ಹೋಗಿ, ಅವುಗಳನ್ನು ಆ ಭದ್ರವಾದ ಸ್ಥಳ
ಕ್ಕೆ ಹಾಕಿ, ಅದಕ್ಕೆ ಬೆಂಕಿಯನ್ನು ಹಚ್ಚಿದರು. ಆಗ ಶೆಕೆಮಿನ ಹೂ
ಡೆಯವರೆಲ್ಲರೂ, ಹೆಚ್ಚು ಕಡಿಮೆ ಸಾವಿರ ಜನ ಸತ್ತು ಹೋದರು.

೫೦ ಮತ್ತು ಅಬಿಮೇಲೆಕನು ತೆಬೇಚಿಗೆ ಹೋಗಿ, ತೆಬೇಚಿಗೆ
೫೧ ವಿರೋಧವಾಗಿ ದಂಡಿಳಿದು, ಅದನ್ನು ಹಿಡಿದನು. ಆದರೆ ಪಟ್ಟದ
ನಡುವೆ ಬಲವಾದ ಹೂಡೆ ಇತ್ತು; ಅಲ್ಲಿಗೆ ಆ ಪಟ್ಟದಲ್ಲಿರುವ ಸಮ
ಸ್ತ ಸ್ತ್ರೀ ಪುರುಷರು ಓಡಿ ಹೋಗಿ, ಅದರಲ್ಲಿ ಹೊಕ್ಕು, ತಮ್ಮ
ಹಿಂಬಳಿಯಾಗಿ ಬಾಗಲನ್ನು ಮುಚ್ಚಿ ಹೂಡೆಯ ಮೇಲೆ ಏರಿದರು.
೫೨ ಆಗ ಅಬಿಮೇಲೆಕನು ಆ ಹೂಡೆಗೆ ಬಂದು, ಅದರ ಮೇಲೆ ಯುದ್ಧ
ಮಾಡಿ, ಹೂಡೆಯ ಬಾಗಲನ್ನು ಸುಟ್ಟು ಬಿಡುವದಕ್ಕೆ ಅದರ ಬಳಿಗೆ
೫೩ ಬಂದನು. ಆದರೆ ಒಬ್ಬ ಸ್ತ್ರೀಯು ಒಂದು ಬೀಸುವ ಕಲ್ಲಿನ ಒಡಕ
ನ್ನು ಅಬಿಮೇಲೆಕನ ತಲೆಯ ಮೇಲೆ ಹಾಕಿದಳು; ಅದರಿಂದ ಅವನ ತ
೫೪ ಲೆಯನ್ನು ಒಡದು ಹಾಕಿದಳು. ಆಗಲವನು ಶೀಘ್ರವಾಗಿ ತನ್ನ ಆ
ಯುಧಗಳನ್ನು ಹೊರುವ ಸೇವಕನನ್ನು ಕರೆದು, ಅವನನ್ನು
ಒಬ್ಬ ಸ್ತ್ರೀಯು ಕೊಂದಳೆಂದು, ನನ್ನನ್ನು ಕುರಿತು ಹೇಳಿದ ಹಾ
ಗೆ, ನೀನು ನಿನ್ನ ಕತ್ತಿಯನ್ನು ಕಿತ್ತು, ನನ್ನನ್ನು ಕೊಲ್ಲೆಂದು, ಅ
ವನಿಗೆ ಹೇಳಿದನು. ಹಾಗೆಯೇ ಅವನ ಸೇವಕನು ಅವನನ್ನು
೫೫ ತಿವಿದು ಹಾಕಿದನು; ಅವನು ಸತ್ತನು. ಅಬಿಮೇಲೆಕನು ಸತ್ತು
ಹೋದದ್ದನ್ನು ಇಸ್ರಯೇಲ್ ಮನುಷ್ಯರು ನೋಡಿದಾಗ, ಅವರ
ವರು ತಮ್ಮ ಸ್ಥಳಗಳಿಗೆ ಹೋದರು.

೫೬ ಈ ಪ್ರಕಾರ ಅಬಿಮೇಲೆಕನು ತನ್ನ ಎಪ್ಪತ್ತು ಮಂದಿ ಸಹೋ
ದರರನ್ನು ಕೊಂದು ಹಾಕಿದ್ದರಿಂದ, ತನ್ನ ತಂದೆಗೆ ಮಾಡಿದ ಕೇಡ
೫೭ ನ್ನು ದೇವರು ಅವನ ಮೇಲೆ ತಿರಿಗಿ ಬರ ಮಾಡಿದನು. ಇದಲ್ಲದೆ
ಶೆಕೆಮಿನ ಮನುಷ್ಯರು ಮಾಡಿದ ಸಮಸ್ತ ಕೆಟ್ಟತನವನ್ನು ಅವರ
ತಲೆಗಳ ಮೇಲೆ ದೇವರು ಬರ ಮಾಡಿದನು. ಮತ್ತು ಯೆರುಬ್ಬಾ
ಳನ ಮಗನಾದ ಯೊತಾಮನ ಶಾಪವು ಅವರ ಮೇಲೆ ಬಂತು.

## ೧೦. ಸಂಧಿ.

೧ ಅಬಿಮೇಲೆಕನ ತರುವಾಯ ಇಸ್ಸಾಕಾರನ ಕುಲದ ದೋಡೊವಿ
ನ ಮಗನಾದ ಪೂವನ ಮಗನಾದ ತೋಲನು ಇಸ್ರಯೇಲನ್ನು
ರಕ್ಷಿಸ ಎದ್ದನು. ಅವನು ಎಫ್ರಯಿಮ್ ಬೆಟ್ಟದ ಶಿಮಿಯ ದಬಾ
೨ ರಲ್ಲಿ ವಾಸ ಮಾಡಿದನು. ಇಸ್ರಯೇಲಿಗೆ ಇಪ್ಪತ್ತು ಮೂರು ವ
ರುಷ ನ್ಯಾಯ ತೀರಿಸುತ್ತಿದ್ದನು. ಅವನು ಸತ್ತು, ದಬಿರಾಳಲ್ಲಿ
ಹೂಣಲ್ಪಟ್ಟನು.

೩ ಅವನ ತರುವಾಯ ಗಿಲ್ಯಾದ್ಯನಾದ ಯಯಿರಾನು ಎದ್ದು,
ಇಸ್ರಯೇಲರನ್ನು ಇಪ್ಪತ್ತೆರಡು ವರುಷ ನ್ಯಾಯ ತೀರಿಸಿದನು.
೪ ಅವನಿಗೆ ಮೂವತ್ತು ಕತ್ತೇ ಮರಿಗಳ ಮೇಲೆ ಏರುವ ಮೂವತ್ತು
ಮಂದಿ ಕುಮಾರರು ಇದ್ದರು. ಇವರಿಗೆ ಗಿಲ್ಯಾದ್ ದೇಶದಲ್ಲಿ ಮೂ
ವತ್ತು ಗ್ರಾಮಗಳಿದ್ದವು; ಅವುಗಳಿಗೆ ಈ ದಿನದ ವರೆಗೂ ಹೋ
೫ ವ ಯಯಿರಾಕೆಂಬ ಹೆಸರಿದೆ. ಮತ್ತು ಯಯಿರಾನು ಸತ್ತು,
ಕಮೋನಿನಲ್ಲಿ ಹೂಣಲ್ಪಟ್ಟನು.

೬ ಆದರೆ ಇಸ್ರಯೇಲ್ ಮಕ್ಕಳು ತಿರಿಗಿ ಕರ್ತನ ಮುಂದೆ ಕೆಟ್ಟ
ತನ ಮಾಡಿ, ಬಾಳೀಮನನ್ನೂ, ಅಷ್ಟರೋತನನ್ನೂ, ಸುರ್ಯ
ದೇಶದ ದೇವರುಗಳನ್ನೂ, ಚಿದೋನಿನ ದೇವರುಗಳನ್ನೂ, ಮೋ
ವಾಬಿನ ದೇವರುಗಳನ್ನೂ, ಅಮ್ಮೋನಿನ ಮಕ್ಕಳ ದೇವರುಗಳ
ನ್ನೂ, ಫಿಲಿಷ್ಟ್ಯರ ದೇವರುಗಳನ್ನೂ, ಸೇವಿಸಿದರು; ಕರ್ತನನ್ನು
೭ ಬಿಟ್ಟು, ಅವನನ್ನು ಸೇವಿಸದೆ ಹೋದರು. ಆಗ ಕರ್ತನು ಇಸ್ರ
ಯೇಲಿನ ಮೇಲೆ ಕೋಪಗೊಂಡು, ಅವರನ್ನು ಫಿಲಿಷ್ಟ್ಯರ ಕೈಗೂ
೮ ಅಮ್ಮೋನಿನ ಮಕ್ಕಳ ಕೈಗೂ ಮಾರಿ ಬಿಟ್ಟನು. ಆ ವರುಷವು
ಮೊದಲ್ಗೊಂಡು, ಹದಿನೆಂಟು ವರುಷ ಯೊರ್ದನಿಗೆ ಆಚೆ ಗಿಲ್ಯಾ
ದಿನಲ್ಲಿ ಅಮೋರ್ಯರ ದೇಶದಲ್ಲಿರುವ ಇಸ್ರಯೇಲ್ ಮಕ್ಕಳನ್ನೆ
ಲ್ಲಾ ಒಡೆದು ಹೊದೆದರು. ಇದಲ್ಲದೆ ಅಮ್ಮೋನಿನ ಮಕ್ಕಳು
೯ ಯೆಹೂದ್ಯರ ಮೇಲೆಯೂ, ಬೆನ್ಯಮಿನರ ಮೇಲೆಯೂ, ಎಪ್ರ
ಯಿಮ್ ಮನೆಯ ಮೇಲೆಯೂ ಯುದ್ಧ ಮಾಡ ಯೊರ್ದನ
ನ್ನು ದಾಟಿ ಬಂದರು. ಇಸ್ರಯೇಲಿಗೆ ಬಹು ಇಕಟ್ಟಾಯಿತು.

೧೦ ಆಗ ಇಸ್ರಯೇಲ್ ಮಕ್ಕಳು ಕರ್ತನಿಗೆ ಕೂಗಿ, ನಮ್ಮ ದೇವ
ರನ್ನು ಬಿಟ್ಟು, ಬಾಳೀಮನನ್ನು ಸೇವಿಸಿದ್ದರಿಂದ, ನಾವು ನಿನಗೆ
೧೧ ವಿರೋಧವಾಗಿ ಪಾಪ ಮಾಡಿದೆವು, ಅಂದರು. ಕರ್ತನು ಇಸ್ರ
ಯೇಲ್ ಮಕ್ಕಳಿಗೆ ಹೇಳಿದ್ದೇನಂದರೆ, ನಾನು ನಿಮ್ಮನ್ನು ಐಗುಪ್ತ್ಯ
ರ ಕೈಯೊಳಗಿಂದಲೂ, ಅಮೋರ್ಯರ ಕೈಯೊಳಗಿಂದಲೂ,
ಅಮ್ಮೋನಿನ ಮಕ್ಕಳ ಕೈಯೊಳಗಿಂದಲೂ, ಫಿಲಿಷ್ಟ್ಯರ ಕೈಯೊ
೧೨ ಳಗಿಂದಲೂ ತಪ್ಪಿಸಿ ಬಿಡಲಿಲ್ಲವೋ! ಇದಲ್ಲದೆ ಚಿದೋನ್ಯರೂ ಅಮ
ಲೇಕ್ಯರೂ ಮಯೋನ್ಯರೂ ನಿಮ್ಮನ್ನು ಬಾಧೆ ಪಡಿಸುವಾಗ, ನೀ
ವು ನನಗೆ ಕೂಗಿದ್ದರಿಂದ, ನಾನು ನಿಮ್ಮನ್ನು ಅವರ ಕೈಗೆ ತಪ್ಪಿಸಿ,
೧೩ ರಕ್ಷಿಸಿದೆನು. ಆದರೆ ನೀವು ನನ್ನನ್ನು ಬಿಟ್ಟು, ಅನ್ಯ ದೈವಗಳನ್ನು
ಸೇವಿಸುತ್ತಾ ಬಂದಿರಿ; ಆದದರಿಂದ ಇನ್ನು ನಾನು ನಿಮ್ಮನ್ನು ರಕ್ಷಿ
೧೪ ಸೆನು. ನೀವು ಹೋಗಿ, ನಿಮಗೆ ನೀವೇ ಆದು ಕೊಂಡ ದೇವರುಗ
ಳಿಗೆ ಕೂಗಿರಿ; ಅವರು ನಿಮ್ಮ ಇಕ್ಕಟ್ಟಿನ ಕಾಲದಲ್ಲಿ ನಿಮ್ಮನ್ನು ರ
೧೫ ಕ್ಷಿಸಲಿ, ಅಂದನು. ಇಸ್ರಯೇಲ್ ಮಕ್ಕಳು ಕರ್ತನಿಗೆ, ನಾವು ಪಾ
ಪ ಮಾಡಿದೆವು; ನೀನು ನಿನ್ನ ಕಣ್ಣುಗಳಿಗೆ ಒಳ್ಳೇದಾಗಿ ತೋರು
ವದೆಲ್ಲಾ ನಮಗೆ ಮಾಡು. ಆದರೆ ಈ ಹೊತ್ತು ದಯೆ ಮಾಡಿ,

೧೬ ನಮ್ಮನ್ನು ರಕ್ಷಿಸು, ಅಂದರು. ಅವರು ಅನ್ಯ ದೇವರುಗಳನ್ನು
ತಮ್ಮ ಮಧ್ಯದಲ್ಲಿಂದ ತೊರೆದು ಬಿಟ್ಟು, ಕರ್ತನನ್ನು ಸೇವಿಸಿದ
ರು. ಆಗ ಅವನ ಪ್ರಾಣ ಇಸ್ರಯೇಲಿನ ಕಷ್ಟಕ್ಕೋಸ್ಕರ ಮ
ನಸ್ಸಿನಲ್ಲಿ ವ್ಯಸನ ಪಟ್ಟಿತು.

೧೭ ಮತ್ತು ಅಮ್ಮೋನನ ಮಕ್ಕಳು ಏಕವಾಗಿ ಕೂಡಿ ಕೊಂಡು,
ಗಿಲ್ಯಾದಿನಲ್ಲಿ ದಂಡಿಳಿದರು. ಅದರೆ ಇಸ್ರಯೇಲ್ ಮಕ್ಕಳು ಏಕ
೧೮ ವಾಗಿ ಕೂಡಿ, ಮಿಚ್ಪದಲ್ಲಿ ದಂಡಿಳಿದರು. ಆಗ ಗಿಲ್ಯಾದಿನ ಜನರೂ
ಪ್ರಧಾನರೂ ಒಬ್ಬರಿಗೊಬ್ಬರು, ಯಾವನು ಅಮ್ಮೋನನ ಮಕ್ಕಳ
ಮೇಲೆ ಯುದ್ಧ ಮಾಡಲಾರಂಭಿಸುವನು! ಅವನು ಗಿಲ್ಯಾದಿನ ನಿ
ವಾಸಿಗಳಿಗೆಲ್ಲಾ ಶ್ರೇಷ್ಠನಾಗಿರುವನು, ಅಂದರು.

## ೧೧. ಸಂಧಿ.

೧ ಅದರೆ ಗಿಲ್ಯಾದ್ಯನಾದ ಯೆಫ್ತಾಹನು ಬಲವುಳ್ಳ ಪರಾಕ್ರಮ
ಶಾಲಿಯಾಗಿದ್ದನು; ಅವನು ಸೂಳೆಯ ಮಗನು; ಗಿಲ್ಯಾದನು
೨ ಅವನನ್ನು ಪಡೆದನು. ಇದಲ್ಲದೆ ಗಿಲ್ಯಾದನ ಹೆಂಡತಿ ಅವನಿಗೆ ಮ
ಕ್ಕಳನ್ನು ಪಡೆದಳು. ಅವನ ಹೆಂಡತಿಯ ಮಕ್ಕಳು ದೊಡ್ಡವರಾ
ದಾಗ, ಅವರು ಯೆಫ್ತಾಹನಿಗೆ, ನೀನು ನಮ್ಮ ತಂದೆಯ ಮನೆ
ಯ ಬಾಧ್ಯಸ್ತನಲ್ಲ; ಯಾಕಂದರೆ ನೀನು ಪರಸ್ತ್ರೀಯ ಮಗನು,
3 ಎಂಥೇಳಿ, ಅವನನ್ನು ಹೊರಡಿಸಿದರು. ಆಗ ಯೆಫ್ತಾಹನು ತನ್ನ
ಸಹೋದರರ ಬಳಿಯಿಂದ ಓಡಿ ಹೋಗಿ, ಟೋಬ್ ದೇಶದಲ್ಲಿ ವಾಸ
ವಾಗಿದ್ದನು; ಆ ಸ್ಥಳದ ನಿಷ್ಪ್ರಯೋಜಕ ಮನುಷ್ಯರು ಯೆಫ್ತಾ
ಹನ ಬಳಿಗೆ ಕೂಡಿ ಕೊಂಡು, ಅವನ ಸಂಗಡ ಹೊರಡುತ್ತಿದ್ದರು.

೪ ದಿವಸಗಳಾದ ಮೇಲೆ ಆದದ್ದೇನಂದರೆ, ಅಮ್ಮೋನನ ಮಕ್ಕಳು
೫ ಇಸ್ರಯೇಲಿನ ಮೇಲೆ ಯುದ್ಧ ಮಾಡಿದರು. ಅದರೆ ಅವರು ಇ
ಸ್ರಯೇಲಿನ ಮೇಲೆ ಯುದ್ಧ ಮಾಡುವಾಗ, ಗಿಲ್ಯಾದಿನ ಹಿರಿಯ
ರು ಯೆಫ್ತಾಹನನ್ನು ಟೋಬ್ ದೇಶದಿಂದ ಕರ ಕೊಂಡು ಬರ
೬ ಹೋಗಿ, ಯೆಫ್ತಾಹನಿಗೆ, ನೀನು ಬಂದು, ನಾವು ಅಮ್ಮೋನನ
ಮಕ್ಕಳ ಸಂಗಡ ಯುದ್ಧ ಮಾಡ, ನಮ್ಮ ಸೈನ್ಯಾಧಿಪತಿಯಾ
೭ ಗಿರು, ಅಂದರು. ಆಗ ಯೆಫ್ತಾಹನು ಗಿಲ್ಯಾದಿನ ಹಿರಿಯರಿಗೆ,
ನೀವಲ್ಲವೇ, ನನ್ನನ್ನು ಹಗೆ ಮಾಡಿ, ನನ್ನ ತಂದೆಯ ಮನೆಯಿಂ
ದ ಹೊರಡಿಸಿದವರು! ಈಗ ನಿಮಗೆ ಇಕ್ಕಟ್ಟು ಬಂದಿರುವಾಗ್ಯೆ,
೮ ನನ್ನ ಬಳಿಗೆ ಬಂದಿರಿ, ಅಂದನು. ಗಿಲ್ಯಾದಿನ ಹಿರಿಯರು ಯೆಫ್ತಾ
ಹನಿಗೆ, ನೀನು ನಮ್ಮೊಂದಿಗೆ ಬಂದು, ಅಮ್ಮೋನನ ಮಕ್ಕಳ ಸಂ
ಗಡ ಯುದ್ಧ ಮಾಡಿ, ಗಿಲ್ಯಾದಿನ ವಾಸಿಗಳಾದ ನಮ್ಮೆಲ್ಲರಿಗೆ ನೀ
ನು ಶ್ರೇಷ್ಠನಾಗಿರುವ ಹಾಗೆ, ಈಗ ನಿನ್ನ ಬಳಿಗೆ ತಿರಿಗಿ ಬಂದೆವು,
೯ ಅಂದರು. ಆಗ ಯೆಫ್ತಾಹನು ಗಿಲ್ಯಾದಿನ ಹಿರಿಯರಿಗೆ ಅಮ್ಮೋ
ನನ ಮಕ್ಕಳ ಸಂಗಡ ಯುದ್ಧ ಮಾಡ ನೀವು ತಿರಿಗಿ ನನ್ನನ್ನು ಕರ
ತಂದರೆ, ಮತ್ತು ಕರ್ತನು ಅವರನ್ನು ನನ್ನ ಮುಂದೆ ಒಪ್ಪಿಸಿ ಕೊ
ಟ್ಟರೆ, ನಾನು ನಿಮಗೆ ಶ್ರೇಷ್ಠನಾಗಿರುವೆನೋ? ಅಂದನು. ಗಿಲ್ಯಾದಿ
೧೦ ನ ಹಿರಿಯರು ಯೆಫ್ತಾಹನಿಗೆ, ನಾವು ಈ ನಿನ್ನ ಮಾತಿನ ಹಾಗೆ
ಯೇ ಮಾಡದೆ ಹೋದರೆ, ಕರ್ತನು ನಮ್ಮ ನಿನ್ನ ಮಧ್ಯದಲ್ಲಿ
೧೧ ಕೇಳುವ ಸಾಕ್ಷಿಯಾಗಿರಲಿ, ಅಂದರು. ಹಾಗೆಯೇ ಯೆಫ್ತಾಹ
ನು ಗಿಲ್ಯಾದಿನ ಹಿರಿಯರ ಸಂಗಡ ಹೋದನು. ಆಗ ಜನರು ಅವ
ನನ್ನು ತಮ್ಮ ಮೇಲೆ ಶ್ರೇಷ್ಠನಾಗಿಯೂ ಸೈನ್ಯಾಧಿಪತಿಯಾ
ಗಿಯೂ ಇಟ್ಟು ಕೊಂಡರು. ಯೆಫ್ತಾಹನು ತನ್ನ ಮಾತುಗಳ
ನ್ನೆಲ್ಲಾ ಮಿಚ್ಪದಲ್ಲಿ ಕರ್ತನ ಮುಂದೆ ಹೇಳಿದನು.

೧೨ ಮತ್ತು ಅವನು ಅಮ್ಮೋನನ ಮಕ್ಕಳ ಅರಸನ ಬಳಿಗೆ ದೂತ
ರನ್ನು ಕಳುಹಿಸಿ, ನೀನು ನನಗೆ ವಿರೋಧವಾಗಿ ನನ್ನ ಸಂಗಡ
ಯುದ್ಧ ಮಾಡ ನನ್ನ ದೇಶದಲ್ಲಿ ಬರುವ ಕಾರಣವೇನಿಂದು, ಹೇ
ಳಿದನು. ೧೩ ಅಮ್ಮೋನನ ಮಕ್ಕಳ ಅರಸನು ಯೆಫ್ತಾಹನ ದೂತರಿ
ಗೆ, ಇಸ್ರಯೇಲ್ ಐಗುಪ್ತದಿಂದ ಬರುವಾಗ, ಅರ್ನೋನಿನಿಂದ
ಯಬ್ಬೋಕಿನ ಮಟ್ಟಿಗೂ, ಯೊರ್ದನಿನ ವರಿಗೂ, ಇರುವ ನನ್ನ
ದೇಶವನ್ನು ತಕ್ಕೊಂಡರು. ಅದದರಿಂದ ಈಗ ಅದನ್ನು ನನಗೆ
ಸಮಾಧಾನವಾಗಿ ತಿರಿಗಿ ಕೊಡು, ಅಂದನು.

೧೪ ಅದರೆ ಯೆಫ್ತಾಹನು ತಿರಿಗಿ ಅಮ್ಮೋನನ ಮಕ್ಕಳ ಅರಸನ ಬ
ಳಿಗೆ ದೂತರನ್ನು ಕಳುಹಿಸಿ, ಅವರಿಗೆ ಹೇಳಿದ್ದೇನಂದರೆ, ಯೆಫ್ತಾ
೧೫ ಹನು ಹೇಳುವ ಮಾತು ಇದೇ—ಇಸ್ರಯೇಲ್ ಮೋವಾಬಿನ ದೇಶ
ವನ್ನಾದರೂ, ಅಮ್ಮೋನನ ಮಕ್ಕಳ ದೇಶವನ್ನಾದರೂ ತಕ್ಕೊಂ
೧೬ ಡದ್ದಿಲ್ಲ. ಹ್ಯಾಗಂದರೆ ಇಸ್ರಯೇಲ್ ಐಗುಪ್ತದಿಂದ ಏರಿ ಬರುವಾ
ಗ, ಅರಣ್ಯದಲ್ಲಿ ಅಪಿನ ಸಮುದ್ರದ ಪರ್ಯಂತರ ನಡೆದು, ಕಾದೆ
೧೭ ಶಿಗೆ ಬಂದು, ಎದೋಮಿನ ಅರಸನ ಬಳಿಗೆ ದೂತರನ್ನು ಕಳುಹಿಸಿ,
ನಾನು ನಿನ್ನ ದೇಶವನ್ನು ಹಾದು ಹೋಗ ಅಪ್ಪಣೆ ಆಗ ಬೇಕು,
ಎಂದು ಹೇಳಿದರು. ಅದರೆ ಎದೋಮಿನ ಅರಸನು ಕೇಳದೆ ಹೋ
ದನು. ಮತ್ತು ಅವರು ಮೋವಾಬಿನ ಅರಸನ ಬಳಿಗೂ ಕಳುಹಿಸಿ
ದರು; ಅವನು ಒಪ್ಪದೆ ಹೋದನು. ಅದದರಿಂದ ಇಸ್ರಯೇಲ್ಯರು
೧೮ ಕಾದೆಸಿನಲ್ಲಿ ವಾಸ ಮಾಡಿದರು. ಮತ್ತು ಅರಣ್ಯದಲ್ಲಿ ನಡೆದು,
ಎದೋಮ್ ದೇಶವನ್ನೂ ಮೋವಾಬ್ ದೇಶವನ್ನೂ ಸುತ್ತಿ ಕೊಂ
ಡು ಹೋಗಿ, ಮೋವಾಬ್ ದೇಶದ ಮೂಡಣ ಕಡೆಗೆ ಬಂದು,
ಮೋವಾಬಿನ ಮೇರೆಯೊಳಗೆ ಪ್ರವೇಶಿಸದೆ, ಮೋವಾಬಿನ ಮೇರೆ
೧೯ ಯಾದ ಅರ್ನೋನಿನ ಆಚೆಯಲ್ಲಿ ಇಳಿದರು. ಮತ್ತು ಇಸ್ರ
ಯೇಲ್ ಹೆಷ್ಬೋನಿನ ಅರಸನಾದಂಥ, ಅಮೋರ್ಯರ ಅರಸನಾ
ದಂಥ, ಸೀಹೋನನ ಬಳಿಗೆ ದೂತರನ್ನು ಕಳುಹಿಸಿದರು. ಇಸ್ರ
ಯೇಲ್, ನನ್ನ ಸ್ಥಾನಕ್ಕೆ ನಿನ್ನ ದೇಶವನ್ನು ನಾವು ದಾಟಿ ಹೋ
೨೦ ಗುವದಕ್ಕೆ ಅಪ್ಪಣೆ ಆಗ ಬೇಕು, ಅಂದರು. ಸೀಹೋನನು ತನ್ನ
ಮೇರೆಯನ್ನು ದಾಟುವದಕ್ಕೆ ಇಸ್ರಯೇಲನ್ನು ನಂಬದೆ, ತನ್ನ ಜ
ನವನ್ನೆಲ್ಲಾ ಕೂಡಿಸಿ, ಯಾಹಚಿನಲ್ಲಿ ದಂಡಿಳಿದು, ಇಸ್ರಯೇಲಿನ
೨೧ ಸಂಗಡ ಯುದ್ಧ ಮಾಡಿದನು. ಆಗ ಇಸ್ರಯೇಲಿನ ದೇವರಾದ
ಕರ್ತನು ಸೀಹೋನನನ್ನೂ ಅವನ ಸಕಲ ಜನರನ್ನೂ ಇಸ್ರಯೇ
ಲಿನ ಕೈಯಲ್ಲಿ ಒಪ್ಪಿಸಿ ಕೊಟ್ಟನು. ಇವರು ಅವರನ್ನು ಹೊಡೆದು
ಬಿಟ್ಟರು. ಹಾಗೆಯೇ ಇಸ್ರಯೇಲ್ಯರು ಆ ದೇಶದಲ್ಲಿ ವಾಸಿಸಿದ
೨೨ ಅಮೋರ್ಯರ ದೇಶವನ್ನೆಲ್ಲಾ ಸ್ವತಂತ್ರಿಸಿ ಕೊಂಡರು. ಮತ್ತು
ಅರ್ನೋನಿನಿಂದ ಯಬ್ಬೋಕಿನ ಮಟ್ಟಿಗೂ ಅರಣ್ಯದಿಂದ ಯೊ
ರ್ದನಿನ ವರಿಗೂ ಇರುವ ಅಮೋರ್ಯರ ಮೇರೆಯಾದ ದೇಶವ
೨೩ ನ್ನೆಲ್ಲಾ ಸ್ವತಂತ್ರಿಸಿ ಕೊಂಡರು. ಈಗ ಇಸ್ರಯೇಲಿನ ದೇವರಾದ
ಕರ್ತನು ಅಮೋರ್ಯರನ್ನು ತನ್ನ ಜನವಾದ ಇಸ್ರಯೇಲಿನ
ಮುಂದೆ ಹೊರಡಿಸಿರುವಾಗ, ನೀನು ಆ ದೇಶವನ್ನು ಸ್ವತಂತ್ರಿಸಿ
೨೪ ಕೊಳ್ಳಬಹುದೋ! ಅದರೆ ನಿನ್ನ ದೇವನಾದ ಕೆಮೊಷ್ ನಿನ್ನ ಮುಂ
ದೆ ಹೊರಡಿಸುವವರ ದೇಶವನ್ನು ನೀನು ಸ್ವತಂತ್ರಿಸಿ ಕೊಳ್ಳುವದಿ
ಲ್ಲವೋ! ಹಾಗೆಯೇ ನಮ್ಮ ದೇವರಾದ ಕರ್ತನು ನಮ್ಮ ಮುಂದೆ
೨೫ ಹೊರಡಿಸುವವರ ದೇಶವನ್ನೆಲ್ಲಾ ನಾವು ಸ್ವತಂತ್ರಿಸಿ ಕೊಳ್ಳುವೆ



ವು. ಈಗ ಚಿಪ್ಪೋರನ ಮಗನಾದ ಮೋವಾಬಿನ ಅರಸನಾದ
ಬಾಲಾಕನಿಗಿಂತ ನೀನು ಉತ್ತಮನೋ! ಅವನು ಇಸ್ರಯೇಲಿನ
ಸಂಗಡ ಯಾವಾಗಲಾದರೂ ವಿವಾದ ಮಾಡಿದನೋ! ಯಾವಾ
೨೬ ಗಲಾದರೂ ಅವರಿಗೆ ವಿರೋಧವಾಗಿ ಯುದ್ಧ ಮಾಡಿದನೋ!
ಇಸ್ರಯೇಲ್ ಹೆಷ್ಬೋನಿನಲ್ಲಿಯೂ, ಅದರ ಗ್ರಾಮಗಳಲ್ಲಿಯೂ,
ಅರೋವೆರನಲ್ಲಿಯೂ, ಅದರ ಗ್ರಾಮಗಳಲ್ಲಿಯೂ, ಅರ್ನೋ
ನಿನ ತೀರವಾದ ಎಲ್ಲಾ ಊರುಗಳಲ್ಲಿಯೂ, ಮುನ್ನೂರು ವರುಷ
ಗಳಿಂದ ವಾಸಿಸಿರುವಾಗ, ಇದ್ದ ಪರ್ಯಂತರ ನೀವು ಅದನ್ನು
೨೭ ಬಿಡಿಸದೆ ಹೋದದ್ದೇನು! ನಾನು ನಿನಗೆ ಪಾಪ ಮಾಡಲಿಲ್ಲ. ನೀ
ನೇ ನನ್ನ ಮೇಲೆ ಯುದ್ಧ ಮಾಡುವದರಿಂದ, ನನಗೆ ಕೆಟ್ಟದ್ದನ್ನು
ಮಾಡುತ್ತೀ. ನ್ಯಾಯಾಧಿಪತಿಯಾದ ಕರ್ತನು ಈ ಹೊತ್ತು
ಇಸ್ರಯೇಲ್ ಮಕ್ಕಳಿಗೂ ಅಮ್ಮೋನನ ಮಕ್ಕಳಿಗೂ ಮಧ್ಯದ
ಲ್ಲಿ ನ್ಯಾಯ ತೀರಿಸಲಿ.

೨೮ ಅದರೆ ಅಮ್ಮೋನನ ಮಕ್ಕಳ ಅರಸನು ಯೆಫ್ತಾಹನು ತನಗೆ
ಹೇಳಿ ಕಳುಹಿಸಿದ ಮಾತನ್ನು ಕೇಳದೆ ಹೋದನು.

೨೯ ಆಗ ಕರ್ತನ ಆತ್ಮ ಯೆಫ್ತಾಹನ ಮೇಲೆ ಬಂತು. ಅವನು ಗಿ
ಲ್ಯಾದ್ ಮನಸ್ಸೆಯ ಶೀಮೆಗಳನ್ನು ದಾಟಿ ಹೋಗಿ, ಗಿಲ್ಯಾದಿನಲ್ಲಿ
ರುವ ಮಿಚ್ಪೆಗೆ ಬಂದು, ಅಲ್ಲಿಂದ ಅಮ್ಮೋನನ ಮಕ್ಕಳೆದುರಿಗೆ ಹಾ
ದು ಹೋದನು.

೩೦ ಮತ್ತು ಯೆಫ್ತಾಹನು ಕರ್ತನಿಗೆ ಒಂದು ಹರಿಕೆಯನ್ನು ಮಾ
ಡಿ ಹೇಳಿದ್ದೇನಂದರೆ, ನೀನು ಅಮ್ಮೋನನ ಮಕ್ಕಳನ್ನು ನನ್ನ ಕೈ
೩೧ ಯಲ್ಲಿ ಒಪ್ಪಿಸಿ ಕೊಡಲೇ ಕೊಟ್ಟರೆ, ನಾನು ಅಮ್ಮೋನನ ಮಕ್ಕ
ಳ ಬಳಿಯಿಂದ ಸಮಾಧಾನದಲ್ಲಿ ತಿರಿಗಿ ಬರುವಾಗ, ನನ್ನ ಮನೆ
ಯ ಬಾಗಲಿಂದ ನನಗೆ ಎದುರ್ಗೊಳ್ಳ ಬರುವದು ಕರ್ತನದಾಗಿ
ರುವದು, ಅದನ್ನು ಹೋಮವಾಗಿ ಅರ್ಪಿಸುವೆನು, ಅಂದನು.

೩೨ ಮತ್ತು ಯೆಫ್ತಾಹನು ಅಮ್ಮೋನನ ಮಕ್ಕಳ ಮೇಲೆ ಯುದ್ಧ
ಮಾಡ ಅವರೆದುರಿಗೆ ಹೊರಟು ಹೋದನು. ಕರ್ತನು ಅವರ
೩೩ ನ್ನು ಅವನ ಕೈಯಲ್ಲಿ ಒಪ್ಪಿಸಿ ಕೊಟ್ಟನು. ಅವನು ಅವರನ್ನು
ಅರೋವೆರಿನಿಂದ ನೀನು ಮಿನ್ನೀತಿಗೆ ಹೋಗುವ ಪರ್ಯಂತರ ಇ
ರುವ ಇಪ್ಪತ್ತು ಪಟ್ಟಣಗಳನ್ನು ದ್ರಾಕ್ಷೇ ತೋಟದ ಬೈಲಿನ ಮಟ್ಟಿ
ಗೂ ಮಹಾ ದೊಡ್ಡ ಸಂಹಾರದಿಂದ ಹೊಡೆದನು. ಮತ್ತು ಅ
ಮ್ಮೋನನ ಮಕ್ಕಳು ಇಸ್ರಯೇಲ್ ಮಕ್ಕಳ ಮುಂದೆ ತಗ್ಗಿಸಲ್ಪ
ಟ್ಟರು.

೩೪ ಯೆಫ್ತಾಹನು ಮಿಚ್ಪದಲ್ಲಿರುವ ತನ್ನ ಮನೆಗೆ ಬರುವಾಗ, ಇ
ಗೋ, ಅವನ ಮಗಳು ದಮ್ಮತಿಗಳ ಸಂಗಡಲೂ ನಾಟ್ಯದ ಸಂಗ
ಡಲೂ ಅವನಿಗೆ ಎದುರ್ಗೊಳ್ಳ ಹೊರಟಳು. ಅವನಿಗೆ ಅವಳು
ಒಬ್ಬಳೇ ಮಗಳು; ಅವಳ ಹೊರತಾಗಿ ಅವನಿಗೆ ಮಕ್ಕಳಿಲ್ಲ.
೩೫ ಅವನು ಅವಳನ್ನು ನೋಡಿದಾಗ, ತನ್ನ ವಸ್ತ್ರಗಳನ್ನು ಹರ
ಕೊಂಡು, ಅಯ್ಯೋ, ನನ್ನ ಕುಮಾರ್ತೆಯೇ, ನೀನು ನನ್ನನ್ನು
ಕುಂಗಲೇ ಕುಂಗ ಮಾಡಿ, ನನ್ನನ್ನು ತೊಂದರೆಗೆ ಪಡಿಸುವವರಲ್ಲಿ
ನೀನು ಒಬ್ಬಳು. ಯಾಕಂದರೆ ನಾನು ಕರ್ತನಿಗೆ ನನ್ನ ಬಾಯಿ
೩೬ ತೆರೆದೆನು; ಮತ್ತು ಹಿಂದೆಗಿಯಲಾರೆನು, ಅಂದನು. ಅವಳು ಅವ
ನಿಗೆ, ನನ್ನ ತಂದೆಯೇ, ನೀನು ಕರ್ತನಿಗೆ ನಿನ್ನ ಬಾಯಿ ತೆರೆದಿ
ಯಲ್ಲ; ಕರ್ತನು ಅಮ್ಮೋನನ ಮಕ್ಕಳಾದ ನಿನ್ನ ಶತ್ರುಗಳಿಗೆ
ನಿನ್ನಿಂದ ಮುಯ್ಯಿ ಮಾಡಿಸಿದ್ದರಿಂದ, ಅವನಿಗೆ ನಿನ್ನ ಬಾಯಿ
ಯಿಂದ ಹೊರಟ ಮಾತಿನ ಪ್ರಕಾರವೇ ನನಗೆ ಮಾಡು, ಅಂದಳು.
೩೭ ಇದಲ್ಲದೆ ಅವಳು ತನ್ನ ತಂದೆಗೆ, ಈ ಕಾರ್ಯ ನನಗೆ ಆಗಲಿ—
ಏನಂದರೆ ನಾನೂ ನನ್ನ ಗೆಳತಿಯರೂ ಕೂಡಾ ನನ್ನ ಕನ್ಯಾ
ಭಾವಕ್ಕೋಸ್ಕರ ಬೆಟ್ಟಗಳ ಮೇಲೆ ಹೋಗಿ, ನನ್ನ ಗೆಳತಿಯರ
ಸಂಗಡ ಅಳುವದಕ್ಕೆ, ನನಗೆ ಎರಡು ತಿಂಗಳು ಗಡುವನ್ನು ಕೊ
ಡು, ಅಂದಳು. ಆಗಲವನು ಎರಡು ತಿಂಗಳು ಹೋಗಿ ಬಾ ಎಂದು
ಹೇಳಿ, ಅವಳನ್ನು ಕಳುಹಿಸಿ ಬಿಟ್ಟನು. ಅವಳು ತನ್ನ ಗೆಳತಿಯ
ರ ಸಂಗಡ ಹೋಗಿ, ತನ್ನ ಕನ್ಯಾಭಾವಕ್ಕೋಸ್ಕರ ಬೆಟ್ಟಗಳ
ಮೇಲೆ ಅತ್ತು, ಎರಡು ತಿಂಗಳು ತೀರಿದಾಗ, ತನ್ನ ತಂದೆಯ ಬಳಿ
೩೯ ಗೆ ಬಂದಳು. ಆಗ ಅವನು ಮಾಡಿದ್ದ ತನ್ನ ಹರಿಕೆಯ ಪ್ರಕಾರ
ಅವಳಿಗೆ ಮಾಡಿದನು. ಅವಳು ಪುರುಷನನ್ನು ಅರಿಯದೆ ಇದ್ದ
೪೦ ಳು. ಮತ್ತು ವರುಷಕ್ಕೆ ನಾಲ್ಕು ದಿವಸ ಇಸ್ರಯೇಲಿನ ಕುಮಾ
ರ್ತೆಗಳು ಹೋಗಿ, ಗಿಲ್ಯಾದ್ಯನಾದ ಯೆಫ್ತಾಹನ ಮಗಳನ್ನು
ಕೀರ್ತಿಸುವದು ಇಸ್ರಯೇಲಿನಲ್ಲಿ ನೇಮಕವಾಯಿತು.

## ೧೨. ಸಂಧಿ.

೧ ಎಫ್ರಯಿಮನ ಜನರು ಕೂಡಿ ಕೊಂಡು, ಉತ್ತರಕ್ಕೆ ಹೋ
ಗಿ, ಯೆಫ್ತಾಹನಿಗೆ, ನೀನು ಅಮ್ಮೋನನ ಮಕ್ಕಳ ಮೇಲೆ ಯು
ದ್ಧ ಮಾಡ ಹೋದಾಗ, ನಮ್ಮನ್ನು ಯಾಕೆ ನಿನ್ನ ಸಂಗಡ
ಹೋಗ ಕರೇ ಕಳುಹಿಸಲಿಲ್ಲ! ನಿನ್ನ ಮನೆಯನ್ನು, ನಿನ್ನನ್ನು
೨ ಸಹಿತವಾಗಿ, ಬೆಂಕಿಯಿಂದ ಸುಟ್ಟು ಬಿಡುವೆವು, ಅಂದರು. ಯೆ
ಫ್ತಾಹನು ಅವರಿಗೆ ಹೇಳಿದ್ದೇನಂದರೆ, ನನಗೂ ನನ್ನ ಜನಕ್ಕೂ
ಅಮ್ಮೋನನ ಮಕ್ಕಳ ಸಂಗಡ ದೊಡ್ಡ ವ್ಯಾಜ್ಯವಿರುವಾಗ, ನಾನು
ನಿಮ್ಮನ್ನು ಕರೆದೆನು; ಅದರೆ ನೀವು ನನ್ನನ್ನು ಅವರ ಕೈಯಿಂದ
3 ಬಿಡಿಸಿ ರಕ್ಷಿಸಲಿಲ್ಲವು. ನೀವು ನನ್ನನ್ನು ರಕ್ಷಿಸುವದಿಲ್ಲವೆಂದು, ನಾ
ನು ಕಂಡು, ನನ್ನ ಪ್ರಾಣವನ್ನು ಕೈಯಲ್ಲಿ ಹಿಡು ಕೊಂಡು, ಅ
ಮ್ಮೋನನ ಮಕ್ಕಳ ಮೇಲೆ ಹೋರೆನು; ಕರ್ತನು ಅವರನ್ನು ನ
ನ್ನ ಕೈಯಲ್ಲಿ ಒಪ್ಪಿಸಿ ಕೊಟ್ಟನು. ನೀವು ನನ್ನ ಸಂಗಡ ಯು
ದ್ಧ ಮಾಡ ಈ ಹೊತ್ತು ನನಗೆ ವಿರೋಧವಾಗಿ ಯಾಕೆ ಬಂದಿರಿ!

೪ ಮತ್ತು ಯೆಫ್ತಾಹನು ಗಿಲ್ಯಾದ್ ಜನಕೆಲ್ಲರನ್ನು ಕೂಡಿಸಿ, ಎಫ್ರ
ಯಿಮನ ಸಂಗಡ ಯುದ್ಧ ಮಾಡಿದನು. ಎಫ್ರಯಿಮನ ಮ
ನಸ್ಸೆಯ ಮಧ್ಯದಲ್ಲಿರುವ ಗಿಲ್ಯಾದ್ಯರಾದ ನೀವು ಎಫ್ರಯಿಮ
ನ ಕಡೆಯಿಂದ ತಪ್ಪಿಸಿ ಕೊಂಡವರಾಗಿದ್ದೀರೆಂದು, ಎಫ್ರಯಿಮ
ಮ್ಯರು ಹೇಳಿದ್ದರಿಂದ ಗಿಲ್ಯಾದ್ಯರು ಎಫ್ರಯಿಮ್ಯರನ್ನು ಕೊಡೆ
ದರು. ಗಿಲ್ಯಾದ್ಯರು ಎಫ್ರಯಿಮ್ಯರಿಗೆ ಮುಂಕೊಂಡು, ಯೊ
೫ ರ್ದನಿನ ಕೇವುಗಳನ್ನು ಹಿಡಿದರು. ಆಗ ಏನಾಯಿತಂದರೆ, ಎಫ್ರ
ಯಿಮ್ಯರಲ್ಲಿ ತಪ್ಪಿಸಿ ಕೊಂಡ ಯಾವನಾದರೂ ಬಂದು, ದಾ
ಟುತ್ತೇನೆಂದು ಹೇಳಿದರೆ, ಗಿಲ್ಯಾದ್ಯರು, ನೀನು ಎಫ್ರಯಿಮ್ಯ
ನೋ! ಎಂದು ಅವನನ್ನು ಕೇಳಿದಾಗ; ಅವನು, ಅಲ್ಲವಂದರೆ,
೬ ಷಿಬ್ಬೋಲೆತ್ ಅನ್ನ ಬೇಕಂದರು. ಆಗಲವನು ಹಾಗೆ ಹೇಳಲಾರ
ದೆ, ಸಿಬ್ಬೋಲೆತ್, ಅನ್ನುವನು. ಆಗ ಅವನನ್ನು ಹಿಡಿದು,
ಯೊರ್ದನಿನ ಕೇವುಗಳ ಬಳಿಯಲ್ಲಿ ಕೊಂದು ಹಾಕಿದರು. ಹೀಗೆ
ಆ ಕಾಲದಲ್ಲಿ ಎಫ್ರಯಿಮ್ಯರೊಳಗೆ ನಾಲ್ವತ್ತೆರಡು ಸಾವಿರ ಜನ
ರು ಬಿದ್ದು ಹೋದರು.

೭ ಯೆಫ್ತಾಹನು ಇಸ್ರಯೇಲನ್ನು ಆರು ವರುಷ ನ್ಯಾಯ ತೀರಿ
ಸಿದನು. ಮತ್ತು ಗಿಲ್ಯಾದ್ಯನಾದ ಯೆಫ್ತಾಹನು ಸತ್ತು, ಗಿಲ್ಯಾದ್
ಪಟ್ಟಣಗಳ ಒಂದರಲ್ಲಿ ಹೂಣಲ್ಪಟ್ಟನು.
೮ ಅವನ ತರುವಾಯ ಬೇತ್ಲೆಹೇಮಿನವನಾದ ಇಬ್ಜಾನ್ ಇಸ್ರಯೇ
ಲಿಗೆ ನ್ಯಾಯ ತೀರಿಸಿದನು. ಅವನಿಗೆ ಮೂವತ್ತು ಮಂದಿ ಕು
ಮಾರರೂ, ಮೂವತ್ತು ಮಂದಿ ಕುಮಾರ್ತೆಗಳೂ ಇದ್ದರು.
ಕುಮಾರ್ತೆಗಳನ್ನು ಹೊರಗೆ ಮದುವೆ ಮಾಡಿ ಕೊಟ್ಟನು; ಹೊ
ರಗಿನಿಂದ ಮೂವತ್ತು ಮಂದಿ ಕುಮಾರ್ತೆಗಳನ್ನು ತನ್ನ ಕುಮಾ
ರರಿಗೆ ತೀರಿಸಿ ಕೊಂಡನು. ಅವನು ಇಸ್ರಯೇಲಿಗೆ ಏಳು ವರುಷ
೧೦ ನ್ಯಾಯ ತೀರಿಸಿದನು. ಮತ್ತು ಇಬ್ಜಾನನು ಸತ್ತು, ಬೇತ್ಲೆಹೇಮಿ
ನಲ್ಲಿ ಹೂಣಲ್ಪಟ್ಟನು.
೧೧ ಅವನ ತರುವಾಯ ಜೆಬುಲೋನಿನವನಾದ ಏಲೋನನು ಇಸ್ರ
ಯೇಲನ್ನು ನ್ಯಾಯ ವಿಚಾರಿಸಿದನು. ಅವನು ಹತ್ತು ವರುಷಗಳು
೧೨ ಇಸ್ರಯೇಲಿಗೆ ನ್ಯಾಯ ತೀರಿಸಿದನು. ಮತ್ತು ಜೆಬುಲೋನ್ಯನಾ
ದ ಏಲೋನನು ಸತ್ತು, ಜೆಬುಲೋನ್ ದೇಶವಾದ ಅಯ್ಯಲೋನಿನ
ಲ್ಲಿ ಹೂಣಲ್ಪಟ್ಟನು.
೧೩ ಅವನ ತರುವಾಯ ಪಿರಥೋನಿಯಾದ ಹಿಲ್ಲೇಲನ ಮಗನಾದ
೧೪ ಅಬ್ದೋನನು ಇಸ್ರಯೇಲಿಗೆ ನ್ಯಾಯ ತೀರಿಸಿದನು. ಅವನಿಗೆ
ಎಪ್ಪತ್ತು ಕತ್ತೇ ಮರಿಗಳ ಮೇಲೆ ಏರುವ ನಾಲ್ವತ್ತು ಮಂದಿ ಮಕ್ಕ
ಳೂ, ಮೂವತ್ತು ಮಂದಿ ಮೊಮ್ಮಕ್ಕಳೂ ಇದ್ದರು. ಅವನು ಇ
೧೫ ಸ್ರಯೇಲನಿಗೆ ಎಂಟು ವರುಷ ನ್ಯಾಯ ತೀರಿಸಿದನು. ಮತ್ತು ಪಿ
ರಥೋನಿಯಾದ ಹಿಲ್ಲೇಲನ ಮಗನಾದ ಅಬ್ದೋನನು ಸತ್ತು, ಎಫ್ರ
ಯಿಮ್ ದೇಶದಲ್ಲಿ ಅಮಲೇಕ್ಯರ ಬೆಟ್ಟದಲ್ಲಿರುವ ಪಿರಥೋನಲ್ಲಿ
ಹೂಣಲ್ಪಟ್ಟನು.

## ೧೩. ಸಂಧಿ.

೧ ಮತ್ತು ಇಸ್ರಯೇಲ್ ಮಕ್ಕಳು ತಿರಿಗಿ ಕರ್ತನ ಕಣ್ಣುಗಳ
ಮುಂದೆ ಕೆಟ್ಟದ್ದನ್ನು ಮಾಡಿದ್ದರಿಂದ, ಕರ್ತನು ಅವರನ್ನು ನಾಲ್ವ
ತ್ತು ವರುಷದ ಪರ್ಯಂತರ ಫಿಲಿಷ್ಟ್ಯರ ಕೈಯಲ್ಲಿ ಒಪ್ಪಿಸಿ ಕೊ
ಟ್ಟನು.
೨ ಆದರೆ ಜೋರದವನಾದ ದಾನ್ಯರ ಗೋತ್ರದ ಮನೋಹ ಎಂ
೩ ಬ ಒಬ್ಬ ಮನುಷ್ಯನಿದ್ದನು. ಅವನ ಹೆಂಡತಿಯು ಹೆರದೆ, ಗೊಡ್ಡಾ
ಗಿದ್ದಳು. ಮತ್ತು ಕರ್ತನ ದೂತನು ಆ ಸ್ತ್ರೀಗೆ ಪ್ರತ್ಯಕ್ಷವಾಗಿ,
೪ ಅವಳಿಗೆ, ಇಗೋ, ನೀನು ಹೆರದೆ, ಗೊಡ್ಡಾಗಿದ್ದೀ. ಆದರೆ ನೀನು
ಗರ್ಭ ಧರಿಸಿ, ಒಬ್ಬ ಮಗನನ್ನು ಹೆರುವಿ. ಆದದರಿಂದ ನೀನು ದ್ರಾ
ಕ್ಷೇರಸವನ್ನೂ ಮದ್ಯಪಾನವನ್ನೂ ಕುಡಿಯದೆ, ಅಶುಚಿಯಾದ
೫ ಒಂದನ್ನಾದರೂ ತಿನ್ನದೆ, ಎಚ್ಚರಿಕೆಯಾಗಿರ ಬೇಕು. ಯಾಕಂ
ದರೆ, ಇಗೋ, ನೀನು ಗರ್ಭವನ್ನು ಧರಿಸಿ, ಒಬ್ಬ ಮಗನನ್ನು ಹೆ
ರುವಿ; ಅವನ ತಲೆಯ ಮೇಲೆ ಕ್ಷೌರದ ಕತ್ತಿ ಬರುವದಿಲ್ಲ. ಯಾ
ಕಂದರೆ ಗರ್ಭ ಬಿಟ್ಟಾಗಲಿಂದ ಆ ಹುಡಗ ದೇವರ ನಜೀರನಾಗಿರು
ವನು. ಅವನು ಇಸ್ರಯೇಲನ್ನು ಫಿಲಿಷ್ಟ್ಯರ ಕೈಯಿಂದ ಬಿಡಿಸಿ,
ರಕ್ಷಿಸ ಪ್ರಾರಂಭಿಸುವನು, ಅಂದನು.
೬ ಆಗ ಆ ಸ್ತ್ರೀ ಬಂದು, ತನ್ನ ಗಂಡನಿಗೆ ಹೇಳಿದ್ದೇನಂದರೆ, ದೇ
ವರ ಮನುಷ್ಯನು ನನ್ನ ಬಳಿಗೆ ಬಂದನು. ಅವನ ರೂಪ ದೇವ
ರ ದೂತನ ರೂಪದ ಹಾಗೆ ಮಹಾ ಭಯಂಕರವಾಗಿತ್ತು. ನಾನು
ಅವನನ್ನು, ಎಲ್ಲಿಂದ ಬಂದಿ! ಎಂದು ಕೇಳಲಿಲ್ಲ; ಅವನು ತನ್ನ ಹೆ
೭ ಸರನ್ನು ನನಗೆ ತಿಳಿಸಲಿಲ್ಲ. ಅವನು ನನಗೆ ಹೇಳಿದ್ದೇನಂದರೆ, ಇ
ಗೋ, ನೀನು ಗರ್ಭವತಿಯಾಗಿ ಒಬ್ಬ ಮಗನನ್ನು ಹೆರುವಿ; ಈ
ಗ ನೀನು ದ್ರಾಕ್ಷೇರಸವನ್ನೂ ಮದ್ಯಪಾನವನ್ನೂ ಕುಡಿಯದೆ,
ಅಶುಚಿಯಾದ ಒಂದನ್ನಾದರೂ ತಿನ್ನದೆ ಇರು. ಯಾಕಂದರೆ
ಆ ಹುಡುಗ ಗರ್ಭ ಬಿಟ್ಟಾಗಲಿಂದ ತನ್ನ ಮರಣದ ಪರ್ಯಂತರ
ದೇವರ ನಜೀರನಾಗಿರುವನು.
೮ ಮನೋಹನು ಕರ್ತನನ್ನು ಬೇಡಿ ಕೊಂಡದ್ದೇನಂದರೆ, ಓ ನನ್ನ
ಕರ್ತನೇ, ನೀನು ಕಳುಹಿಸಿದ ದೇವರ ಮನುಷ್ಯನು ಇನ್ನೊಂದು
ಸಾರಿ ನಮ್ಮ ಬಳಿಗೆ ಬಂದು, ಹುಟ್ಟುವ ಕೂಸಿಗೋಸ್ಕರ ನಾವು
ಮಾಡ ಬೇಕಾದದ್ದನ್ನು ನಮಗೆ ತಿಳಿಯ ಹೇಳಲಿ. ದೇವರು ಮ
ನೋಹನ ಶಬ್ದವನ್ನು ಕೇಳಿದನು. ಆ ಸ್ತ್ರೀಯು ಹೊಲದಲ್ಲಿ ಕು
ಳಿತಿರುವಾಗ, ದೇವರ ದೂತನು ತಿರಿಗಿ ಅವಳ ಬಳಿಗೆ ಬಂದನು.
೧೦ ಆಗ ಅವಳ ಗಂಡನಾದ ಮನೋಹನು ಅವಳ ಸಂಗಡ ಇರಲಿಲ್ಲ.
ಆದದರಿಂದ ಅವಳು ಬೇಗ ಓಡಿ ಹೋಗಿ, ತನ್ನ ಗಂಡನಿಗೆ, ಇ
ಗೋ, ಆ ಹೊತ್ತು ನನ್ನ ಬಳಿಗೆ ಬಂದವನು ನನಗೆ ಪ್ರತ್ಯಕ್ಷವಾದ
ನು ಎಂದು, ತಿಳಿಸಿದಳು. ಆಗ ಮನೋಹನು ಎದ್ದು, ತನ್ನ ಹೆಂಡ
೧೧ ತಿಯ ಹಿಂದೆ ಹೋಗಿ, ಅವನ ಬಳಿಗೆ ಬಂದು, ಅವನಿಗೆ, ನೀನು
ಈ ಸ್ತ್ರೀಯ ಸಂಗಡ ಮಾತಾಡಿದವನೋ! ಅಂದನು. ಅವನು
ನಾನೇ, ಅಂದನು. ಮತ್ತು ಮನೋಹನು, ನೀನು ಹೇಳಿದ ಮಾ
೧೨ ತುಗಳು ಆಗುವಾಗ, ಆ ಕೂಸಿಗೋಸ್ಕರ ಮಾಡುವ ರೀತಿ ಏನು!
೧೩ ನಡಿಸ ತಕ್ಕದ್ದೇನು! ಅಂದನು. ಕರ್ತನ ದೂತನು ಮನೋಹನಿಗೆ
ಹೇಳಿದ್ದೇನಂದರೆ, ನಾನು ಈ ಸ್ತ್ರೀಗೆ ಹೇಳಿದ್ದೆಲ್ಲಾ ದರಲ್ಲಿ ಅವಳು
೧೪ ಎಚ್ಚರಿಕೆಯಾಗಿದ್ದು, ದ್ರಾಕ್ಷೇ ಗಿಡದಲ್ಲಿ ಹುಟ್ಟುವ ಒಂದನ್ನೂ ತಿ
ನ್ನಧೆ, ದ್ರಾಕ್ಷೇರಸವನ್ನೂ ಮದ್ಯಪಾನವನ್ನೂ ಕುಡಿಯದೆ, ಅಶು
ಚಿಯಾದ ಒಂದನ್ನೂ ತಿನ್ನಧೆ ಇದ್ದು, ನಾನು ಅವಳಿಗೆ ಆಜ್ಞಾಪಿಸಿ
ದ್ದೆಲ್ಲಾ ಕೈ ಕೊಳ್ಳಲಿ, ಅಂದನು.
೧೫ ಮತ್ತು ಮನೋಹನು ಕರ್ತನ ದೂತನಿಗೆ, ನಾವು ನಿನಗೋಸ್ಕ
ರ ಮೇಕೆಯ ಮರಿಯನ್ನು ಸಿದ್ಧ ಮಾಡುವ ಪರ್ಯಂತರ ನಿಲ್ಲಿಸಿ
೧೬ ಕೊಳ್ಳುತ್ತೇವೆ; ದಯವಾಗಿ ಇರು, ಅಂದನು. ಕರ್ತನ ದೂತನು
ಮನೋಹನಿಗೆ, ನೀನು ನನ್ನನ್ನು ನಿಲ್ಲಿಸಿ ಕೊಂಡರೂ, ನಾನು ನಿ
ನ್ನ ಆಹಾರವನ್ನು ತಿನ್ನುವದಿಲ್ಲ; ನೀನು ಹೋಮವನ್ನು ಅರ್ಪಿಸಿ
೧೭ ದರೆ, ಅದನ್ನು ಕರ್ತನಿಗೆ ಅರ್ಪಿಸ ಬೇಕು, ಅಂದನು. ಯಾಕಂ
ದರೆ ಮನೋಹನು, ಅವನು ಕರ್ತನ ದೂತನೆಂದು, ಅರಿಯದೆ ಇ
ದ್ದನು. ಮತ್ತು ಮನೋಹನು ಕರ್ತನ ದೂತನಿಗೆ, ನೀನು ಹೇಳಿ
ದ ಮಾತುಗಳು ಆಗುವಾಗ, ನಾವು ನಿನ್ನನ್ನು ಘನ ಪಡಿಸುವ
೧೮ ಹಾಗೆ ನಿನ್ನ ಹೆಸರೇನು? ಅಂದನು. ಆದರೆ ಕರ್ತನ ದೂತನು
ಅವನಿಗೆ ನನ್ನ ಹೆಸರು ಏನೆಂದು ನೀನು ಕೇಳುವದೇನು! ಆ ಹೆಸ
೧೯ ರು ಆಶ್ಚರ್ಯವಾದದ್ದು, ಅಂದನು. ಮನೋಹನು ಮೇಕೆಯ
ಮರಿಯನ್ನೂ ಅರ್ಪಣೆಯನ್ನೂ ತಂದು, ಅವುಗಳನ್ನು ಬಂಡೆ
ಯ ಮೇಲೆ ಕರ್ತನಿಗೆ ಅರ್ಪಿಸಿದನು. ಮನೋಹನೂ ಅವನ
ಹೆಂಡತಿಯೂ ನೋಡುವಾಗ, ಕರ್ತನ ದೂತನು ಆಶ್ಚರ್ಯವಾಗಿ
೨೦ ಮಾಡಿದನು. ಅಗ್ನಿ ಜ್ವಾಲೆಯು ಬಲಿಪೀಠದಿಂದ ಆಕಾಶಕ್ಕೆ
ಸರಿಯಾಗಿ ಏಳುವಾಗ, ಏನಾಯಿತಂದರೆ, ಕರ್ತನ ದೂತನು ಬ
ಲಿಪೀಠದ ಜ್ವಾಲೆಯಲ್ಲಿ ಮೇಲಕ್ಕೆ ಹೋದನು. ಅದನ್ನು ಮನೋ



ಹನೂ ಅವನ ಹೆಂಡತಿಯೂ ನೋಡಿ, ನೆಲದ ಮೇಲೆ ಬೋರ್ಲ
ಬಿದ್ದರು. ಆದರೆ ಕರ್ತನ ದೂತನು ಮನೋಹನಿಗೂ ಅವನ ಹೆಂ
ಡತಿಗೂ ತಿರಿಗಿ ಕಾಣಿಸಿಲ್ಲಿ.
೨೧ ಆಗ ಮನೋಹನು, ಇವನು ಕರ್ತನ ದೂತನೆಂದು ತಿಳ್ಳು ಕೊಂ
ಡನು. ಮತ್ತು ಮನೋಹನು ತನ್ನ ಹೆಂಡತಿಗೆ, ನಾವು ದೇವರನ್ನು
೨೨ ಕಂಡದರಿಂದ ನಾಯೆಲೇ ನಾಯುವೆವು, ಅಂದನು. ಅವನ ಹೆಂಡ
ತಿ ಅವನಿಗೆ, ಕರ್ತನು ನಮ್ಮನ್ನು ಕೊಂದು ಹಾಕ ಮನಸ್ಸಾಗಿ
ದ್ದರೆ, ಅವನು ನಮ್ಮ ಕೈಯಿಂದ ಹೋಮವನ್ನೂ ಅರ್ಪಣೆ
ಯನ್ನೂ ತಕ್ಕೊಳ್ಳಲಿಲ್ಲ; ಇವುಗಳೆನ್ನೆಲ್ಲಾ ನಮಗೆ ತೋರಿಸ
ನು; ಈಗ ಹೇಳಿದವುಗಳನ್ನು ನಮಗೆ ತಿಳಿಯ ಮಾಡನು, ಅಂ
ದಳು.
೨೩ ಮತ್ತು ಆ ಸ್ತ್ರೀ ಮಗನನ್ನು ಹೆತ್ತು, ಅವನಿಗೆ ಸಂಸೋನನು
೨೪ ಎಂದು ಹೆಸರಿಟ್ಟಳು. ಆ ಹುಡುಗ ಬೆಳೆದನು; ಕರ್ತನು ಅವನ
ನ್ನು ಅಭಿವರ್ದಿಸಿದನು. ಇದಲ್ಲದೆ ಜೋರಕ್ಕೂ ಎಷ್ಟೋಲೀ
ಗೂ ಮಧ್ಯದಲ್ಲಿ ದಾನನ ದಂಡಿನಲ್ಲಿ ಅವನನ್ನು ಕರ್ತನ ಆತ್ಮವು
ಆಗಾಗ್ಯೆ ಪ್ರೇರೇಪಿಸುವದಕ್ಕೆ ಪ್ರಾರಂಭಿಸಿತು.

## ೧೪. ಸಂಧಿ.

೧ ಮತ್ತು ಸಂಸೋನನು ತಿಮ್ನಾತಿಗೆ ಇಳಿದು ಹೋಗಿ, ತಿಮ್ನಾತಿ
೨ ನೊಳಗೆ ಫಿಲಿಷ್ಟ್ಯರ ಕುಮಾರ್ತೆಗಳಲ್ಲಿ ಒಬ್ಬ ಸ್ತ್ರೀಯನ್ನು
ನೋಡಿ, ತನ್ನ ತಂದೆ ತಾಯಿಗಳ ಬಳಿಗೆ ಏರಿ ಬಂದು, ಅವರಿಗೆ ತಿ
ಳಿಸಿ, ನಾನು ತಿಮ್ನಾತಿನಲ್ಲಿ ಫಿಲಿಷ್ಟ್ಯರ ಕುಮಾರ್ತೆಗಳೊಳಗೆ
ಒಬ್ಬ ಸ್ತ್ರೀಯನ್ನು ನೋಡಿದೆನು; ಈಗ ಅವಳನ್ನು ಹೆಂಡತಿಯಾ
೩ ಗ ನನಗೆ ತಕ್ಕೊಳ್ಳಿರಿ, ಅಂದನು. ಆಗಲವನ ತಂದೆಯೂ ತಾಯಿ
ಯೂ ಅವನಿಗೆ, ನಿನಗೆ ಪರಿಛೇದನೆ ಇಲ್ಲದ ಫಿಲಿಷ್ಟ್ಯರಲ್ಲಿ ಹೆಂಡತಿ
ಯನ್ನು ತಕ್ಕೊಳ್ಳುವದಕ್ಕೆ ನಿನ್ನ ಸಹೋದರರ ಕುಮಾರ್ತೆಗಳಲ್ಲಿಯೂ ನಮ್ಮ ಎಲ್ಲಾ ಜನರಲ್ಲಿಯೂ ಹೆಂಗಸಿಲ್ಲವೋ! ಅಂದರು.
ಆದರೆ ಸಂಸೋನನು ತನ್ನ ತಂದೆಗೆ, ಅವಳನ್ನು ನನಗೆ ತೆಗೆದು
ಕೋ; ಯಾಕಂದರೆ ಅವಳು ನನ್ನ ಮನಸ್ಸಿಗೆ ಸರಿ, ಅಂದನು
೪ ಇದು ಕರ್ತನಿಂದ ಉಂಟಾಯಿತೆಂದು, ಅವನ ತಂದೆ ತಾಯಿಗ
ಳು ಅರಿಯದೆ ಇದ್ದರು. ಏನಂದರೆ ಫಿಲಿಷ್ಟ್ಯರಿಗೆ ವಿಕೋಧವಾಗಿ
೫ ಅವನು ಕಾರಣವನ್ನು ಹಿಡಿಯ ಹುಡುಕಿದನು. ಯಾಕಂದರೆ ಆ
ಕಾಲದಲ್ಲಿ ಫಿಲಿಷ್ಟ್ಯರು ಇಸ್ರಯೇಲನ್ನು ಆಳುತ್ತಿದ್ದರು. ಹಾಗೆ
ಯೇ ಸಂಸೋನನೂ ಅವನ ತಂದೆ ತಾಯಿಗಳೂ ತಿಮ್ನಾತಿಗೆ
ಹೋಗುತ್ತಿದ್ದರು. ಅವರು ತಿಮ್ನಾತಿನ ದ್ರಾಕ್ಷೇ ತೋಟಗಳ ಬಳಿ
ಗೆ ಬಂದಾಗ, ಇಗೋ, ಘರವಾದ ಸಿಂಹವು ಅವನ ಎದುರಿಗೆ ಬಂ
೬ ದು, ಗರ್ಜಿಸಿತು. ಆಗಲವನು ತನ್ನ ಕೈಯಲ್ಲಿ ಏನೂ ಇಲ್ಲದಿದ್ದ
ರೂ, ಕರ್ತನ ಆತ್ಮವು ಅವನ ಮೇಲೆ ಬಂದದರಿಂದ,ಅದನ್ನು ಬಂ
೭ ದು ಮೇಕೆಯ ಮರಿಯ ಹಾಗೆ ಕೀಳಿ ಬಿಟ್ಟನು. ಆದರೆ ಅವನು
ತಾನು ಮಾಡಿದ್ದನ್ನು ತನ್ನ ತಂದೆ ತಾಯಿಗಳಿಗೆ ತಿಳಿಸಲಿಲ್ಲ.
ಮತ್ತು ಅವನು ಹೋಗಿ, ಆ ಸ್ತ್ರೀಯ ಸಂಗಡ ಮಾತಾಡಿದನು;
ಅವಳು ಸಂಸೋನನ ಕಣ್ಣಿಗೆ ತಕ್ಕವಳಾಗಿದ್ದಳು.
೮ ಕೆಲವು ದಿವಸಗಳ ತರುವಾಯ ಅವನು ಅವಳನ್ನು ತಕ್ಕೊಳ್ಳ
ತಿರಿಗಿ ಬರುವಾಗ, ಸಿಂಹದ ಹೆಣವನ್ನು ನೋಡುವದಕ್ಕೆ ತೊಲಗಿ
ಹೋದನು. ಇಗೋ, ಸಿಂಹದ ಒಡಲೊಳಗೆ ಜೇನು ಹುಳಗಳೂ
೯ ಜೇನೂ ಇದ್ದವು. ಅದನ್ನು ಅವನು ತನ್ನ ಕೈಗಳಲ್ಲಿ ತೆಗೆದು
ಕೊಂಡು, ತಿನ್ನುತ್ತಾ ತನ್ನ ತಂದೆ ತಾಯಿಗಳ ಬಳಿಗೆ ಹೋಗಿ,
ಅವರಿಗೂ ಕೊಟ್ಟನು; ಅವರೂ ತಿಂದರು. ಆದರೆ ಸಿಂಹದ ಒಡಲ
ಲ್ಲಿ ತಾನು ಜೇನು ತೆಗೆದು ಕೊಂಡೆನೆಂದು, ಅವರಿಗೆ ತಿಳಿಸಲಿಲ್ಲ.
೧೦ ಅವನ ತಂದೆಯು ಆ ಸ್ತ್ರೀ ಇರುವ ಸ್ಥಳಕ್ಕೆ ಬಂದಾಗ, ಸಂಸೋ
ನನು ಪ್ರಾಯಸ್ಥರು ಮಾಡುವ ಮರ್ಯಾದೆಯ ಹಾಗೆಯೇ
೧೧ ಅಲ್ಲಿ ಔತನ ಮಾಡಿದನು. ಮತ್ತು ಆದದ್ದೇನಂದರೆ, ಅವರು
ಅವನನ್ನು ನೋಡಲಾಗಿ, ಅವನ ಸಂಗಡ ಇರ ಮೂವತ್ತು ಮಂದಿ
೧೨ ಸಂಗಡಿಗರನ್ನು ಕೊಟ್ಟರು. ಅವರಿಗೆ ಸಂಸೋನನು ಹೇಳಿದ್ದೇ
ನಂದರೆ, ನಾನು ನಿಮಗೆ ಒಂದು ಬಗಟನ್ನು ಹೇಳುವೆನು; ನೀವು
ಅದನ್ನು ಔತನದ ಈ ಏಳು ದಿವಸಗಳಲ್ಲಿ ಗ್ರಹಿಸಿ ಕೊಂಡು,
ನನಗೆ ಅದರ ಅರ್ಥವನ್ನು ಹೇಳಿದರೆ, ನಾನು ನಿಮಗೆ ಮೂ
೧೩ ವತ್ತು ದುಪ್ಪಟಿಗಳನ್ನೂ ಮೂವತ್ತು ದುಸ್ತು ವಸ್ತ್ರಗಳನ್ನೂ ಕೊ
ಡುವೆನು. ಅದರ ಅರ್ಥವನ್ನು ನೀವು ನನಗೆ ಹೇಳಲಿಕೆ ಹೋದರೆ,
ನೀವು ನನಗೆ ಮೂವತ್ತು ದುಪ್ಪಟಿಗಳನ್ನೂ ಮೂವತ್ತು ದುಸ್ತು
ವಸ್ತ್ರಗಳನ್ನೂ ಕೊಡ ಬೇಕು, ಅಂದನು. ಅವರು ಅವನಿಗೆ, ನೀ
ನು ನಿನ್ನ ಬಗಟನ್ನು ಹೇಳು, ಅದನ್ನು ಕೇಳ್ಳೋಣ, ಅಂದರು.
೧೪ ಆಗ ಅವನು ಅವರಿಗೆ ಹೇಳ್ಳಿದ್ದೇನಂದರೆ—

ತಿನ್ನುವಂಥಾದ್ದರಿಂದ ತಿನ್ನ ತಕ್ಕದ್ದು ಹೊರಟಿತು,
ಬಲವಾದದ್ದರಿಂದ ಕೀಯೆ ಹೊರಟಿತು.

೧೫ ಬಗಟನ್ನು ಅವರು ಮೂರು ದಿವಸ ಬಿಡಿಸಲಾರದೆ ಹೋದರು.
ಏಳನೇ ದಿವಸದಲ್ಲಿ ಆದದ್ದೇನಂದರೆ, ಅವರು ಸಂಸೋನನ ಹೆಂಡ
ತಿಗೆ, ನಾವು ನಿನ್ನನ್ನೂ ನಿನ್ನ ತಂದೆಯ ಮನೆಯನ್ನೂ ಬೆಂಕಿ
ಯಿಂದ ಸುಟ್ಟು ಬಿಡದ ಹಾಗೆ, ನೀನು ನಿನ್ನ ಗಂಡನ ಆ ಬಗಟ
ನ್ನು ನಮಗೆ ತಿಳ್ಳಿಸುವ ಹಾಗೆ, ಅವನನ್ನು ಮರುಳ್ಳು ಗೊಳ್ಳಿಸು.
ನೀನು ನಮಗೆ ಉಂಟಾದ್ದನ್ನು ಕಸು ಕೊಳ್ಳುವದಕ್ಕಲ್ಲವೇ, ನ
೧೬ ಮ್ಮನ್ನು ಕರೆಸಿದಿ! ಅಂದರು. ಆಗ ಸಂಸೋನನ ಹೆಂಡತಿ ಅವನ
ಮುಂದೆ ಅತ್ತು, ನೀನು ನನ್ನನ್ನು ಪ್ರೀತಿ ಮಾಡದೆ, ನನ್ನನ್ನು ಹಗೆ
ಮಾಡುತ್ತೀ; ಯಾಕಂದರೆ ನೀನು ನನ್ನ ಜನರ ಮಕ್ಕಳಿಗೆ ಬಂದು
ಒಗಟನ್ನು ಕೇಳಿ, ಅದನ್ನು ನನಗೆ ತಿಳ್ಳಿಸದೆ ಹೋದಿ, ಅಂದಳು.
ಅವನು ಅವಳಿಗೆ, ಇಗೋ, ನಾನು ನನ್ನ ತಾಯಿ ತಂದೆಗೆ ಅದ
೧೭ ನ್ನು ತಿಳ್ಳಿಸಲಿಲ್ಲ; ನಿನಗೆ ತಿಳ್ಳಿಸುವೆನೋ! ಅಂದನು. ಅವಳು ಅವರಿ
ಗೆ ಔತನ ಇದ್ದ ಏಳು ದಿವಸಗಳಲ್ಲಿ ಅವನ ಮುಂದೆ ಅತ್ತಳು. ಆ
ದರೆ ಏಳನೇ ದಿವಸದಲ್ಲಿ ಅವಳು ಅವನನ್ನು ಬಹಳವಾಗಿ ಪೀಡಿಸಿ
ದ್ದರಿಂದ, ಅವಳಿಗೆ ತಿಳ್ಳಿಸಿದನು. ಆಗ ತನ್ನ ಜನರ ಮಕ್ಕಳಿಗೆ ಆ
೧೮ ಬಗಟನ್ನು ತಿಳ್ಳಿಸಿದಳು. ಆದದರಿಂದ ಏಳನೇ ದಿವಸದಲ್ಲಿ ಸೂ
ರ್ಯ ಮುಣುಗುವದಕ್ಕಿಂತ ಮುಂಚೆ ಆ ಊರಿನವರು ಅವನಿಗೆ
ಹೇಳ್ಳಿದ್ದೇನಂದರೆ—

ಜೇನಿಗಿಂತ ಕೀಯಾದದ್ದೇನು!
ಸಿಂಹಕ್ಕಿಂತ ಬಲವಾದದ್ದೇನು!

ಅವನು ಅವರಿಗೆ, ನೀವು ನನ್ನ ಕರುಸಿನಿಂದ ಉಳ್ಳದೆ ಇದ್ದರೆ,
೧೯ ನನ್ನ ಬಗಟನ್ನು ಗ್ರಹಿಸಲಾರಿರಿ, ಅಂದನು. ಮತ್ತು ಕರ್ತನ
ಆತ್ಮವು ಅವನ ಮೇಲೆ ಬಂದದರಿಂದ, ಅವನು ಅಶ್ಕೆಲೋನಿಗೆ
ಹೋಗಿ, ಆ ಊರಿನಲ್ಲಿ ಮೂವತ್ತು ಜನರನ್ನು ಹೊಡೆದು, ಸುಲು
ಕೊಂಡು, ಬಗಟನ್ನು ತಿಳ್ಳಿಸಿದವರಿಗೆ ದುಸ್ತು ವಸ್ತ್ರಗಳನ್ನು ಕೊ
ಟ್ಟನು.

೨೦ ಮತ್ತು ಅವನು ಕೋಪಗೊಂಡು, ತನ್ನ ತಂದೆಯ ಮನೆಗೆ ಹೊರಟು ಹೋದನು. ಆದರೆ ಸಂಸೋನನ ಹೆಂಡತಿಯು ಅವನ ಸಂಗಡ ಸ್ನೇಹಿತನಾಗಿದ್ದ ಅವನ ಸ್ನೇಹಿತನಿಗೆ ಕೊಡಲ್ಪಟ್ಟಿಳು.

## ೧೫. ಸಂಧಿ.

೧ ಕೆಲವು ದಿವಸ ಹೋದ ತರುವಾಯ ಆದದ್ದೇನಂದರೆ, ಸಂಸೋ ನನು ಗೋಧಿಯ ಸುಗ್ಗಿಯ ಕಾಲದಲ್ಲಿ ತನ್ನ ಹೆಂಡತಿಯನ್ನು ನೋಡ, ಒಂದು ಮೇಕೆಯ ಮರಿಯನ್ನು ತೆಗೆದು ಕೊಂಡು ಹೋಗಿ, ತನ್ನ ಹೆಂಡತಿಯಲ್ಲಿ ಬಳಿಗೆ ಕೊಠಡಿಯಲ್ಲಿ ಪ್ರವೇಶಿಸುತ್ತೇ ನೆ, ಅಂದನು. ಆದರೆ ಅವಳ ತಂದೆಯು ಅವನನ್ನು ಪ್ರವೇಶಿಸ ೨ ಗೊಡದೆ, ಅವನಿಗೆ, ನೀನು ಅವಳನ್ನು ಹಗೆ ಮಾಡತೇ ಹಗೆ ಮಾ ಡಿದಿ ಎಂದು ನಾನು ತಿಳಿದು, ಅವಳನ್ನು ನಿನ್ನ ಗೆಳೆಯನಿಗೆ ಕೊ ಟ್ಟೆನು; ಅವಳ ತಂಗಿ ಅವಳಿಗಿಂತ ಚಂದವುಳ್ಳವಳಲ್ಲವೋ! ಇವ ಳು ಅವಳಿಗೆ ಬದಲಾಗಿ ನಿನಗೆ ಇರಲಿ, ಅಂದನು.

೩ ಆಗ ಸಂಸೋನನು ಅವರನ್ನು ಕುರಿತು, ನಾನು ಈ ಸಾ ರಿ ಫಿಲಿಷ್ಟ್ಯರಿಗೆ ಕೇಡನ್ನು ಮಾಡಿದರೆ, ಅವರಿಗಂತ ನಿರಪರಾಧಿ ಯಾಗಿರುವೆನೆಂದು ಅಂದು ಕೊಂಡು, ಹೊರಟು ಹೋಗಿ, ಮು ೪ ನ್ನೂರು ನರಿಗಳನ್ನು ಹಿಡಿದು, ಪಂಜುಗಳನ್ನು ತಕ್ಕೊಂಡು ಬಂ ದು, ಬಾಲಕ್ಕೆ ಬಾಲ ಕೀರಿಸಿ, ಎರಡು ಬಾಲಗಳ ನಡುವೆ ಒಂದು ಪಂಜನ್ನು ಕಟ್ಟಿ, ಬಾಲಗಳಿಗೆ ಬೆಂಕಿ ಹಚ್ಚಿ, ಅವುಗಳನ್ನು ಫಿಲಿ ಷ್ಟ್ಯರ ಬೈರಿನಲ್ಲಿ ಕಳುಹಿಸಿ ಬಿಟ್ಟು, ಶೆನೆ ಗೂಡುಗಳನ್ನೂ, ಬೈ ರುಗಳನ್ನೂ, ದ್ರಾಕ್ಷೇ ತೋಟಗಳನ್ನೂ ಇಟ್ಟೆಯ ತೋಪುಗಳ ೫ ನ್ನೂ ಕೂಡ ಸುಟ್ಟು ಬಿಟ್ಟನು. ಫಿಲಿಷ್ಟ್ಯರು, ಇದನ್ನು ಮಾಡಿದ ವರು ಯಾರೆಂದರು. ಅದಕ್ಕೆ, ತಿಮ್ನಾತಿನವನ ಅಳಿಯನಾದ ಸಂ ಸೋನನು ಮಾಡಿದನು; ಯಾಕಂದರೆ ಇವನು ಅವನ ಹೆಂಡತಿ ಯನ್ನು ತಕ್ಕೊಂಡು, ಅವನ ಜತೆಗಾರನಿಗೆ ಕೊಟ್ಟನು, ಅಂದರು. ಆಗ ಫಿಲಿಷ್ಟ್ಯರು ಏರಿ ಬಂದು, ಅವಳನ್ನೂ ಅವಳ ತಂದೆಯ ನ್ನೂ ಬೆಂಕಿಯಿಂದ ಸುಟ್ಟು ಬಿಟ್ಟರು.

೬ ಸಂಸೋನನು ಅವರಿಗೆ, ನೀವು ಈ ಪ್ರಕಾರ ಮಾಡಿದರೂ, ನಾನು ನಿಮಗೆ ಮುಯ್ಯಿಗೆ ಮುಯ್ಯಿ ಮಾಡುತ್ತೇನೆ, ಆಗ ಬಿಡು ೭ ವೆನು, ಅಂದನು. ಅವನು ಅವರನ್ನು ಹೆಗಲಿನಿಂದ ತೊಡೆಯ ಮ ಟ್ಟಿಗೂ ದೊಡ್ಡ ಸಂಹಾರವಾಗಿ ಹೊಡೆದನು. ಮತ್ತು ಅವನು ಹೋಗಿ, ಏಟಾಮ್ ಗುಡ್ಡದ ಮೇಲೆ ನಿವಾಸವಾಗಿದ್ದನು.

೮ ಮತ್ತು ಫಿಲಿಷ್ಟ್ಯರು ಹೊರಟು ಹೋಗಿ, ಯೆಹೂದದಲ್ಲಿ ಇ ಳಿದು, ಲೇಹಿಯಲ್ಲಿ ವ್ಯಾಪಿಸಿದರು. ಯೆಹೂದ ಮನುಷ್ಯರು ಅವರಿಗೆ, ನೀವು ನಮ್ಮ ಮೇಲೆ ಬಂದದ್ದೇನು! ಅಂದರು. ಫಿಲಿಷ್ಟ್ಯ ರು, ಸಂಸೋನನು ನಮಗೆ ಮಾಡಿದ ಹಾಗೆ, ನಾವು ಅವನಿಗೆ ಪ್ರತಿ ಯಾಗಿ ಮಾಡ ಅವನನ್ನು ಹಿಡಿದು, ಕಟ್ಟುವದಕ್ಕೆ ಬಂದೆವು, ಅಂ ೧೦ ದರು. ಆಗ ಯೆಹೂದದಲ್ಲಿ ಮೂರು ಸಾವಿರ ಜನವು ಏಟಾಮ್ ಗುಡ್ಡದ ಮೇಲಕ್ಕೆ ಏರಿ ಹೋಗಿ, ಸಂಸೋನನಿಗೆ, ಫಿಲಿಷ್ಟ್ಯರು ನ ಮ್ಮನ್ನು ಆಳುತ್ತಾ ಇದ್ದಾರೆಂದು, ನೀನು ಅರಿಯೋ! ನೀನು ನಮ ೧೧ ಗೆ ಹೀಗೆ ಯಾಕೆ ಮಾಡಿದಿ! ಅಂದರು. ಅದಕ್ಕವನು, ಅವರು ನನಗೆ ಮಾಡಿದ ಪ್ರಕಾರವೇ, ನಾನು ಅವರಿಗೆ ಮಾಡಿದೆನು, ಅಂದ ನು. ಆಗಲವರು ಅವನಿಗೆ, ನಾವು ನಿನ್ನನ್ನು ಕಟ್ಟಿ, ಫಿಲಿಷ್ಟ್ಯರ ಕೈಯಲ್ಲಿ ಒಪ್ಪಿಸಿ ಕೊಡ ಬಂದೆವು, ಅಂದರು. ಸಂಸೋನನು ಅವ ೧೨ ರಿಗೆ, ನೀವು ನನ್ನ ಮೇಲೆ ಬೀಳುವದಿಲ್ಲವೆಂದು, ನನಗೆ ಆಣೆ ಇಡಿರಿ, ಅಂದನು. ಅದಕ್ಕವರು, ಇಲ್ಲ; ಆದರೆ ನಿನ್ನನ್ನು ಭದ್ರವಾಗಿ ಕಟ್ಟಿ, ಅವರ ಕೈಯಲ್ಲಿ ಒಪ್ಪಿಸಿ ಕೊಡುವೆವು; ನಾವು ನಿನ್ನನ್ನು ಕೊ ಲ್ಲುವದೇ ಇಲ್ಲ, ಅಂದರು. ಮತ್ತು ಎರಡು ಹೊಸ ಹಗ್ಗಗಳಿಂದ ಅವನನ್ನು ಕಟ್ಟಿ, ಗುಡ್ಡದ ಮೇಲಿನಿಂದ ತಂದರು.

೧೩ ಅವನು ಲೇಹಿಗೆ ಬಂದು, ಕೀರಿದಾಗ, ಫಿಲಿಷ್ಟ್ಯರು ಅವನಿಗೆ ಎ ದುರಾಗಿ ಬಂದು, ಅರ್ಭಟಿಸಿದರು. ಮತ್ತು ಕರ್ತನ ಆತ್ಮವು ಅವ ನ ಮೇಲೆ ಬಂದದರಿಂದ, ಅವನ ತೋಳುಗಳಲ್ಲಿ ಕಟ್ಟಿ ಇದ್ದ ಹಗ್ ಗಳು ಬೆಂಕಿಯಿಂದ ಸುಟ್ಟು ಹೋದ ಧಾರದ ಹಾಗೆ ಆದವು. ೧೪ ಅವನ ಕೈಗಳಲ್ಲಿ ಇದ್ದ ಕಟ್ಟುಗಳು ಊಚಿ ಬಿದ್ದವು. ಅವನು ಒಂದು ಕತ್ತೇ ದವಡೆಯ ಹೊಸ ಎಲುವನ್ನು ಕಂಡು ಕೊಂಡು, ತನ್ನ ಕೈಯನ್ನು ಚಾಚಿ, ಅದನ್ನು ತಕ್ಕೊಂಡು, ಅದರಿಂದ ಸಾವಿರ ಜನರನ್ನು ಹೊಡೆದು ಬಿಟ್ಟನು. ಮತ್ತು ಸಂಸೋನನು ಹೇಳಿದ್ದೇನಂದರೆ—

ನಾನು ಕತ್ತೇ ದವಡೆಯ ಎಲುವಿನಿಂದ ಕುಪ್ಪೆ ಕುಪ್ಪೆಯಾಗಿ, ಕತ್ತೇ ದವಡೆಯ ಎಲುವಿನಿಂದ ಸಾವಿರ ಜನರನ್ನು ಹೊಡೆದು ಬಿ ಟ್ಟೆಕ್ಕೇನೆ.

೧೫ ಅವನು ಮಾತಾಡಿ ತೀರಿಸಿದಾಗ, ತನ್ನ ಕೈಯಲ್ಲಿದ್ದ ದವಡೆ ಯ ಎಲುವನ್ನು ಬಿಸಾಟು ಬಿಟ್ಟು, ಆ ಸ್ಥಳಕ್ಕೆ, ರಾಮತ್ ಲೇಹಿ ಎಂಬ ಹೆಸರಿಟ್ಟನು.

೧೬ ಆದರೆ ಅವನು ಬಹಳ ದಾಹ ಪಟ್ಟು, ಕರ್ತನನ್ನು ಕೂಗಿ, ನೀನು ನಿನ್ನ ಸೇವಕನ ಕೈಯಿಂದ ಈ ದೊಡ್ಡ ರಕ್ಷಣೆಯನ್ನು ಕೊಟ್ಟೆ; ಈಗ ನಾನು ದಾಹದಿಂದ ಸತ್ತು, ಪರಿಛೇದನೆ ಇಲ್ಲದವ ರ ಕೈಯಲ್ಲಿ ಬೀಳ ಬೇಕೋ! ಅಂದನು. ಆಗ ದೇವರು ಲೇಹಿ ಯಲ್ಲಿ ಟೊಳ್ಳಾದ ಸ್ಥಳವನ್ನು ಕೀಳಿ ಬಿಟ್ಟನು ಅದಕೊಳಗಿಂದ ೧೭ ನೀರು ಹೊರಟು ಬಂತು. ಸಂಸೋನನು ಆ ನೀರನ್ನು ಕುಡಿದ ರಿಂದ, ಅವನ ಆತ್ಮ ತಿರಿಗಿ ಬಂತು, ಅವನು ಜೀವಿಸಿದನು. ಆದದ ರಿಂದ ಎನ್ಹಕ್ಕೋರೆ ಎಂದು ಅದಕ್ಕೆ ಹೆಸರಿಟ್ಟನು. ಈ ದಿವಸದ ವರಿಗೂ ಅದು ಲೇಹಿಯಲ್ಲಿ ಉಂಟು

೧೮ ಅವನು ಫಿಲಿಷ್ಟ್ಯರ ದಿವಸಗಳಲ್ಲಿ ಇಪ್ಪತ್ತು ವರುಷ ಇಸ್ರಯೇ ಲಿಗೆ ನ್ಯಾಯ ತೀರಿಸಿದನು.

## ೧೬. ಸಂಧಿ.

೧ ಮತ್ತು ಸಂಸೋನನು ಗಾಜಕ್ಕೆ ಹೋಗಿ, ಅಲ್ಲಿ ಒಬ್ಬ ಸೂಳೆ ೨ ಯನ್ನು ಕಂಡು, ಅವಳ ಬಳಿಗೆ ಪ್ರವೇಶಿಸಿದನು. ಆಗ, ಸಂಸೋನ ನು ಇಲ್ಲಿಗೆ ಬಂದಿದ್ದಾನೆಂದು, ಗಾಜದವರಿಗೆ ಹೇಳಲ್ಪಟ್ಟಿದರಿಂದ, ಅವರು ಅವನನ್ನು ಸುತ್ತಿ ಕೊಂಡು, ರಾತ್ರಿಯೆಲ್ಲಾ ಪಟ್ಟಣದ ಬಾಗ ಲಲ್ಲಿ ಅವನಿಗೆ ಹೊಂಚಿ ಕೊಂಡಿದ್ದು, ರಾತ್ರಿಯೆಲ್ಲಾ ಸುಮ್ಮನಿದ್ದು, ಹೊತ್ತಾರೆ ಬೆಳಕಾದಾಗ, ಅವನನ್ನು ಕೊಂದು ಹಾಕುವೆವು, ಅಂ ೩ ದರು. ಆದರೆ ಸಂಸೋನನು ಅರ್ಧ ರಾತ್ರಿಯ ಪರ್ಯಂತರ ಮಲಗಿದ್ದು, ಅರ್ಧ ರಾತ್ರಿಯಲ್ಲಿ ಎದ್ದು, ಪಟ್ಟಣದ ಬಾಗಲ ಕದಗಳ ನ್ನೂ, ಅದರ ಎರಡು ತೋಳುಗಳನ್ನೂ ಹಿಡಿದು, ಅಗುಳಿ ಸಹ ಕಿತ್ತು, ತನ್ನ ಹೆಗಲ ಮೇಲೆ ಹೊತ್ತು ಕೊಂಡು ಹೋಗಿ, ಹೆಬ್ರೋ ನಿಗೆ ಎದುರಾಗಿರುವ ಪರ್ವತದ ಶಿಖರದ ಮೇಲಕ್ಕೆ ಬೈದಿಟ್ಟನು.

೪ ಇದರ ತರುವಾಯ ಆದದ್ದೇನಂದರೆ, ಸೋರೆಕ್ ತಗ್ಗಿನಲ್ಲಿ ವಾ



ಸಿಸಿರುವ ದೆಲೀಲ ಎಂಬ ಹೆಸರುಳ್ಳ ಒಬ್ಬ ಸ್ತ್ರೀಯನ್ನು ಪ್ರೀತಿ ೫ ಮಾಡಿದನು. ಅವಳ ಬಳಿಗೆ ಫಿಲಿಷ್ಟ್ಯರ ಅಧಿಪತಿಗಳು ಬಂದು, ಅವಳಿಗೆ, ನೀನು ಅವನನ್ನು ಮರುಳುಗೊಳಿಸಿ, ನಾವು ಅವನನ್ನು ಯಾವ ಪ್ರಕಾರ ಗೆದ್ದು, ಕಟ್ಟಿ, ಕುಂದಿಸ ಬಹುದೆಂದೂ, ಅವನ ದೊಡ್ಡ ಶಕ್ತಿ ಯಾವದರಲ್ಲಿ ಅದೆ ಎಂದೂ, ನೋಡು; ನಾವು ಒ ಬ್ಬೊಬ್ಬರು ನಿನಗೆ ಸಾವಿರದ ನೂರು ರೂಪಾಯಿಗಳನ್ನು ಕೊ ಡುವೆವು, ಅಂದರು.

೬ ಆಗ ದೆಲೀಲ ಸಂಸೋನನಿಗೆ, ನಿನ್ನ ದೊಡ್ಡ ಶಕ್ತಿ ಯಾವದರಲ್ಲಿ ಉಂಟೆಂದೂ, ನಿನ್ನನ್ನು ಕುಂದಿಸ ನೀನು ಹ್ಯಾಗೆ ಕಟ್ಟಲ್ಪಟ ಬಹು ೭ ದೆಂದೂ, ನನಗೆ ದಯೆ ಮಾಡಿ ತಿಳಿಸು, ಅಂದಳು. ಸಂಸೋನನು ಅವಳಿಗೆ, ಅವರು ನನ್ನನ್ನು ಒಣಗದೆ ಇರುವ ಹಸೀವಾದ ಏಳು ನಾರಿನ ಬರಲುಗಳಿಂದ ಕಟ್ಟಿದರೆ, ನಾನು ಬಲಹೀನನಾಗಿ ಮತ್ತೊ ೮ ಬ್ಬ ಮನುಷ್ಯನ ಹಾಗೆ ಇರುವೆನು, ಅಂದನು. ಆಗ ಫಿಲಿಷ್ಟ್ಯರ ಅಧಿಪತಿಗಳು ಒಣಗದೆ ಇರುವ ಹಸೀವಾದ ಏಳು ನಾರಿನ ಬರಲು ೯ ಗಳನ್ನು ಅವಳಿಗೆ ಕೊಟ್ಟರು. ಮತ್ತು ಹೊಂಚುಗಾರರು ಅವಳ ಗೋಸ್ಕರ ಕೊಠಡಿಯಲ್ಲಿ ಕೂಶಿದ್ದರು. ಅವನಿಗೆ, ಸಂಸೋನ ನೇ, ಫಿಲಿಷ್ಟ್ಯರು ನಿನ್ನ ಮೇಲೆ ಬರುತ್ತಾರೆ, ಅಂದಳು. ಆಗಲವನು ಬೆಂಕಿಗೆ ತೋರಿಸಲ್ಪಟ್ಟ ಸಣಬಿನ ಹುರಿ ಹರಿದು ಹೋಗುವ ಹಾ ಗೆಯೇ, ನಾರಿನ ಬರಲುಗಳನ್ನು ಹರಿದು ಬಿಟ್ಟನು. ಅವನ ಶಕ್ತಿ ತಿಳಿಯಲ್ಪಡದೆ ಹೋಯಿತು.

೧೦ ಮತ್ತು ದೆಲೀಲ ಸಂಸೋನನಿಗೆ, ಇಗೋ, ನೀನು ನನ್ನನ್ನು ವಂಚನೆ ಮಾಡಿ, ನನಗೆ ಸುಳ್ಳುಗಳನ್ನು ಹೇಳಿದಿ. ಈಗ ನೀನು ಯಾವದರಿಂದ ಕಟ್ಟಲ್ಪಡ ಬಹುದೋ, ನನಗೆ ದಯೆ ಮಾಡಿ ತಿ ೧೧ ಳಿಸು, ಅಂದಳು. ಅವನು ಅವಳಿಗೆ, ಯಾವ ಕೆಲಸ ಮಾಡದೆ ಇರುವ ಹೊಸ ಹಗ್ಗಗಳಿಂದ ನನ್ನನ್ನು ಕಟ್ಟಲೇ ಕಟ್ಟಿದರೆ, ನಾ ನು ಬಲಹೀನನಾಗಿ ಮತ್ತೊಬ್ಬ ಮನುಷ್ಯನ ಹಾಗೆಯೇ ಇರುವೆ ೧೨ ನು, ಅಂದನು. ಆಗ ದೆಲೀಲ ಹೊಸ ಹಗ್ಗಗಳನ್ನು ತಕ್ಕೊಂ ಡು, ಅವುಗಳಿಂದ ಅವನನ್ನು ಕಟ್ಟಿ, ಅವನಿಗೆ ಸಂಸೋನನೇ, ಫಿಲಿಷ್ಟ್ಯರು ನಿನ್ನ ಮೇಲೆ ಬರುತ್ತಾರೆ, ಅಂದಳು. ಹೊಂಚು ಗಾರರು ಕೊಠಡಿಯಲ್ಲಿ ಕೂಶಿದ್ದರು. ಆದರೆ ಅವನು ತನ್ನ ತೋಳುಗಳಲ್ಲಿ ಇರುವವುಗಳನ್ನು ಧಾರದ ಹಾಗೆಯೇ ಹರಿದು ಬಿಟ್ಟನು

೧೩ ಮತ್ತು ದೆಲೀಲ ಸಂಸೋನನಿಗೆ ಈ ವರಿಗೂ ನನ್ನನ್ನು ವಂ ಚನೆ ಮಾಡಿ, ನನಗೆ ಸುಳ್ಳುಗಳನ್ನು ಹೇಳಿದಿ. ನೀನು ಯಾವದ ರಿಂದ ಕಟ್ಟಲ್ಪಡ ಬಹುದೋ, ತಿಳಿಸು, ಅಂದಳು. ಅವನು ಅವಳಿ ಗೆ, ನೀನು ನನ್ನ ತಲೆಯ ಏಳು ಜಡೆಗಳನ್ನು ಮಗ್ಗದಲ್ಲಿ ನೆಯಿ ೧೪ ದರೆ, ಆಗುವದು, ಅಂದನು. ಆಗ ಅವುಗಳನ್ನು ಗೂಟದಿಂದ ಥ ರ್ರ ಮಾಡಿ, ಅವನಿಗೆ, ಸಂಸೋನನೇ ಫಿಲಿಷ್ಟ್ಯರು ನಿನ್ನ ಮೇಲೆ ಬರುತ್ತಾರೆ, ಅಂದಳು. ಅವನು ತನ್ನ ನಿದ್ರೆಯಿಂದ ಎಚ್ಚತ್ತು, ಎ ದು, ಮಗ್ಗದ ಗೂಟವನ್ನೂ ಮಗ್ಗವನ್ನೂ ತಕ್ಕೊಂಡು ಹೋ ದನು.

೧೫ ಮತ್ತು ಅವಳು ಅವನಿಗೆ, ನಿನ್ನ ಹೃದಯವು ನನ್ನ ಸಂಗಡ ಇಲ್ಲದೆ ಇರುವಾಗ್ಯೆ, ನಿನ್ನನ್ನು ಪ್ರೀತಿ ಮಾಡುತ್ತೇನೆಂದು, ನೀನು ಹ್ಯಾಗೆ ಹೇಳುತ್ತಿ! ನೀನು ಈ ಮೂರು ಸಾರಿ ನನ್ನನ್ನು ವಂಚ ನೆ ಮಾಡಿದಿ; ನಿನ್ನ ದೊಡ್ಡ ಶಕ್ತಿ ಯಾವದರಲ್ಲಿ ಉಂಟೋ, ನನ ೧೬ ಗೆ ತಿಳಿಸಲಿಲ್ಲ, ಅಂದಳು. ಮತ್ತು ಅವನನ್ನು ದಿನ ದಿನ ತನ್ನ ಮಾತುಗಳಿಂದ ಪೀಡಿಸಿ, ಶೊಂದರೆ ಪಡಿಸಿದ್ದರಿಂದ ಅವನ ಪ್ರಾ ಣ ಸಾಯುವ ಹಾಗೆ ವ್ಯಸನ ಪಟ್ಟಿತು. ಅವನು ತನ್ನ ಹೃದ ೧೭ ಯವೆಲ್ಲಾ ಅವಳಿಗೆ ತಿಳಿಸಿ, ಅವಳಿಗೆ ಹೇಳಿದ್ದೇನಂದರೆ, ಕ್ಷೌರದ ಕತ್ತಿ ನನ್ನ ತಲೆಯ ಮೇಲೆ ಬಂದದ್ದಿಲ್ಲ; ಯಾಕಂದರೆ ನಾನು ನನ್ನ ತಾಯಿಯ ಗರ್ಭ ಬಿಟ್ಟಾಗಲಿಂದ ದೇವರ ನಜೀರನಾಗಿದ್ದೇ ನೆ. ನನ್ನ ತಲೆಯನ್ನು ಬೋಳಿಸಿದರೆ, ನನ್ನ ಶಕ್ತಿ ನನ್ನನ್ನು ಬಿ ಟ್ಟು ಹೋಗುವದು; ನಾನು ಬಲಹೀನನಾಗಿ, ಎಲ್ಲಾ ಮನುಷ್ಯರ ಹಾಗೆ ಇರುವೆನು.

೧೯ ಆಗ ದೆಲೀಲ ಅವನು ತನಗೆ ತನ್ನ ಹೃದಯವನ್ನೆಲ್ಲಾ ತಿಳಿಸಿ ದ್ದಾನೆಂದು, ಕಂಡು, ಅವಳು ಫಿಲಿಷ್ಟ್ಯರ ಅಧಿಪತಿಗಳಿಗೆ, ನೀವು ಈ ಸಾರಿ ಬನ್ನಿರಿ; ಯಾಕಂದರೆ ಅವನು ತನ್ನ ಹೃದಯವನ್ನೆಲ್ಲಾ ನನಗೆ ತಿಳಿಸಿದನು ಎಂದು, ಕರೇ ಕಳುಹಿಸಿದಳು. ಆಗ ಫಿಲಿಷ್ಟ್ಯ ರ ಅಧಿಪತಿಗಳು ಅವಳ ಬಳಿಗೆ ಏರಿ ಬಂದು, ಕೊಬ್ಬವನ್ನು ತಮ್ಮ ೧೮ ಕೈಯಲ್ಲಿ ತಕ್ಕೊಂಡು ಬಂದರು. ಅವಳು ಅವನನ್ನು ತನ್ನ ತೊ ಡೆಗಳ ಮೇಲೆ ನಿದ್ರೆ ಹೋಗ ಮಾಡಿ, ಒಬ್ಬನನ್ನು ಕರೆದು, ಅವ ನ ತಲೆಯ ಏಳು ಜಡೆಗಳನ್ನು ಬೋಳಿಸ ಮಾಡಿ, ಅವನನ್ನು ಕುಂದಿಸ ಪ್ರಾರಂಭಿಸಿದಳು. ಆಗಲವನ ಶಕ್ತಿ ಅವನನ್ನು ಬಿಟ್ಟು ೨೦ ಹೋಯಿತು. ಮತ್ತು ಅವಳು, ಸಂಸೋನನೇ, ಫಿಲಿಷ್ಟ್ಯರು ನಿನ್ನ ಮೇಲೆ ಬರುತ್ತಾರೆ, ಅಂದಳು. ಅವನು ತನ್ನ ನಿದ್ರೆಯಿಂದ ಎಚ್ಚ ತ್ತು, ಕರ್ತನು ತನ್ನನ್ನು ಬಿಟ್ಟು ತೊಲಗಿದ್ದನ್ನು ಅರಿಯದೆ, ಯಾ ವಾಗಿನ ಹಾಗೆಯೇ ನಾನು ಹೊರಟು ಕೊಡಹಿ ಕೊಳ್ಳುವೆನು, ೨೧ ಅಂದು ಕೊಂಡನು. ಆದರೆ ಫಿಲಿಷ್ಟ್ಯರು ಅವನನ್ನು ಹಿಡಿದು, ಅವ ನ ಕಣ್ಣುಗಳನ್ನು ಕಿತ್ತು, ಅವನನ್ನು ಗಾಜಕ್ಕೆ ಬೈದು, ಎರಡು ಹಿ ತ್ತಾಳಿ ಸಂಕೋಲೆಗಳನ್ನು ಹಾಕಿದರು. ಅವನು ಕೆಸೆ ಮನೆಯಲ್ಲಿ ಬೀಸುತ್ತಿದ್ದನು.

೨೨ ಆದರೆ ಅವನ ತಲೆಯ ಕೂದಲು ಕ್ಷೌರ ಮಾಡಿದ ತರುವಾ ೨೩ ಯ, ತಿರಿಗಿ ಮೊಳಿಯಲಾರಂಭಿಸಿತು. ಮತ್ತು ಫಿಲಿಷ್ಟ್ಯರ ಅಧಿಪ ತಿಗಳು ತಮ್ಮ ದೇವನಾದ ದಗೋನನಿಗೆ ದೊಡ್ಡ ಬಲಿಯನ್ನು ಅ ರ್ಪಿಸಲೂ, ಸಂತೋಷ ಪಡಲೂ, ಕೂಡಿ ಬಂದರು. ಯಾಕಂದರೆ, ನಮ್ಮ ದೇವರು ನಮ್ಮ ಶತ್ರುವಾದ ಸಂಸೋನನನ್ನು ನಮ್ಮ ಕೈಯ ೨೪ ಲ್ಲಿ ಒಪ್ಪಿಸಿ ಕೊಟ್ಟನೆಂದು, ಹೇಳಿ ಕೊಂಡರು. ಜನರು ಅವನನ್ನು ನೋಡಿದಾಗ, ತಮ್ಮ ದೇವರನ್ನು ಹೊಗಳಿದರು; ಯಾಕಂದರೆ ನಮ್ಮ ದೇಶವನ್ನು ಹಾಳು ಮಾಡಿ, ನಮ್ಮಲ್ಲಿ ಅನೇಕರನ್ನು ಕೊಂ ಡ ನಮ್ಮ ಶತ್ರುವನ್ನು ನಮ್ಮ ದೇವರು ನಮ್ಮ ಕೈಯಲ್ಲಿ ಒಪ್ಪಿಸಿ ೨೫ ಕೊಟ್ಟನೆಂದು, ಹೇಳಿ ಕೊಂಡರು. ಮತ್ತು ಆದದ್ದೇನಂದರೆ ಅವ ರ ಹೃದಯಗಳು ಸಂಭ್ರಮವಾಗಿರುವಾಗ, ನಮ್ಮ ಮುಂದೆ ವಿ ನೋದ ಮಾಡುವ ಹಾಗೆ ಸಂಸೋನನನ್ನು ಕರಕೊಂಡು ಬನ್ನಿರಿ, ಅಂದರು. ಅವರು ಸಂಸೋನನನ್ನು ಕಸೆಮನೆಯಿಂದ ಕರ ತಂದ ರು. ಅವರ ಮುಂದೆ ಅವನು ವಿನೋದ ಮಾಡಿದನು; ಸ್ತಂಭಗಳ ೨೬ ನಡುವೆ ನಿಲ್ಲಿಸಲ್ಪಟ್ಟನು. ಆದರೆ ಸಂಸೋನನು ತನ್ನ ಕೈ ಹಿಡಿದ ಹುಡುಗನಿಗೆ ಮನೆಯನ್ನು ಹೊತ್ತಿರುವ ಸ್ತಂಭಗಳನ್ನು ನಾನು ಆ ತು ಕೊಳ್ಳುವ ಬಗ್ಯೆ, ಅವುಗಳನ್ನು ಮುಟ್ಟುವ ಹಾಗೆ, ನನ್ನನ್ನು ೨೭ ಬಿಡು, ಅಂದನು. ಆದರೆ ಆ ಮನೆ ಸ್ತ್ರೀ ಪುರುಷರಿಂದ ತುಂಬಿ ಇ ತ್ತು; ಅಲ್ಲಿ ಫಿಲಿಷ್ಟ್ಯರ ಅಧಿಪತಿಗಳೆಲ್ಲರೂ ಇದ್ದರು. ಇದಲ್ಲದೆ

ಸಂಸೋನನನ್ನು ವಿನೋದ ಮಾಡುವಾಗ, ನೋಡ ಮಾಳಿಗೆಯ
ಮೇಲೆ ಇದ್ದ ಸ್ತ್ರೀ ಪುರುಷರು ಹೆಚ್ಚು ಕಡಿಮೆ ಮೂರು ಸಾವಿರ
೨೯ ಜನರಾಗಿದ್ದರು. ಆಗ ಸಂಸೋನನು ಕರ್ತನನ್ನು ಕೂಗಿ, ಕರ್ತ
ನಾದ ಯೆಹೋವನೇ, ನಾನು ನನ್ನ ಎರಡು ಕಣ್ಣುಗಳಿಗಾಗಿ ಒಂ
ದೇ ಸಾರಿ ಫಿಲಿಷ್ಟ್ಯರಿಗೆ ಮುಯ್ಯಿಗೆ ಮುಯ್ಯಿ ಮಾಡುವ ಹಾಗೆ,
೩೦ ಈ ಸಾರಿ ಮಾತ್ರ ನನ್ನನ್ನು ನೆನಸಿ, ಬಲ ಪಡಿಸು, ದೇವನೇ, ಎಂ
ದೇಳ್ಳಿ, ಸಂಸೋನನು ಆ ಮನೆಯು ನಿಲ್ಲುವದಕ್ಕೆ ಆಧಾರವಾದ
ಎರಡು ನಡುವಿನ ಸ್ತಂಭಗಳನ್ನು—ಒಂದು ತನ್ನ ಬಲಗೈಯಿಂದಲೂ,
ಮತ್ತೊಂದು ತನ್ನ ಎಡಗೈಯಿಂದಲೂ—ಹಿಡಿ ಕೊಂಡು, ತನ್ನ
ಪ್ರಾಣವು ಫಿಲಿಷ್ಟ್ಯರ ಸಂಗಡ ಸಾಯಲಿ ಎಂದೆಳ್ಳಿ, ತನ್ನ ಕತ್ತಿ
ಇದ್ದ ಮಟ್ಟಿಗೂ ಬಾಗಿದನು. ಆಗ ಮನೆಯು ಅಧಿಪತಿಗಳ ಮೇಲೆ
ಯೂ ಅದರಲ್ಲಿರುವ ಎಲ್ಲಾ ಜನರ ಮೇಲೆಯೂ ಬಿತ್ತು. ಹೀಗೆ
ಯೇ ಅವನು ಸಾಯುವಾಗ ಕೊಂದ ಜನರು, ಅವನು ಬದು
ಕುವಾಗ ಕೊಂದ ಜನರಿಗಿಂತ ಹೆಚ್ಚಾಗಿದ್ದರು.
೩೧ ಮತ್ತು ಅವನ ಸಹೋದರರೂ ಅವನ ತಂದೆಯ ಮನೆಯವ
ರೆಲ್ಲರೂ ಹೋಗಿ, ಅವನನ್ನು ತಕ್ಕೊಂಡು ಬಂದು, ಜೋರಕ್ಕೂ
ಎಷ್ಟಾಲೋಲಿಗೂ ನಡುವೆ ಅವನ ತಂದೆಯಾದ ಮನೋಹನ ಸ
ಮಾಧಿಯಲ್ಲಿ ಅವನನ್ನು ಹೂಣಿಟ್ಟರು. ಅವನು ಇಸ್ರಯೇಲಿಗೆ
ಇಪ್ಪತ್ತು ವರುಷ ನ್ಯಾಯ ತೀರಿಸಿದನು.

## ೧೭. ಸಂಧಿ.

೧ ಆದರೆ ಎಫ್ರಯಿಮ್ ಬೆಟ್ಟದಲ್ಲಿ ಮೀಕ ಎಂಬ ಹೆಸರುಳ್ಳ ಒ
೨ ಬ್ಬ ಮನುಷ್ಯನು ಇದ್ದನು. ಅವನು ತನ್ನ ತಾಯಿಗೆ, ನಿನ್ನ ಬಳಿ
ಯಿಂದ ತೆಗೆಯಲ್ಪಟ್ಟಾಗ, ನೀನು ಆ ಹೂಣವನ್ನು ಕುರಿತು ಶಪಿಸಿ,
ನೀನು ನನ್ನ ಕಿವಿಗಳಲ್ಲಿ ಮಾತಾಡಿದಿಯಲ್ಲ! ಇಗೋ, ಆ ಸಾವಿ
ರದ ನೂರು ರೂಪಾಯಿಗಳು ನನ್ನ ಬಳಿಯಲ್ಲಿ ಅವೆ; ನಾನು ಅ
ವುಗಳನ್ನು ತಕ್ಕೊಂಡೆನು, ಅಂದನು. ಅದಕ್ಕೆ ಅವನ ತಾಯಿ,
ನನ್ನ ಮಗನೇ, ನೀನು ಕರ್ತನಿಂದ ಆಶೀರ್ವದಿಸಲ್ಪಟ್ಟವನು, ಅಂದಳು.
3 ಅವನು ಆ ಸಾವಿರದ ನೂರು ರೂಪಾಯಿಗಳನ್ನು ತನ್ನ ತಾಯಿ
ಗೆ ತಿರಿಗಿ ಕೊಟ್ಟಾಗ, ಅವನ ತಾಯಿ, ನನ್ನ ಮಗನ ನಿಮಿತ್ತ ಕಟ
ದ ವಿಗ್ರಹವನ್ನೂ ಎರಕದ ವಿಗ್ರಹವನ್ನೂ ಮಾಡ ನಾನು ನನ್ನ
ಕೈಯಲ್ಲಿದ್ದ ಈ ರೂಪಾಯಿಗಳನ್ನು ಕರ್ತನಿಗೆ ಪರಿಶುದ್ಧ ಮಾ
ಡೇ ಮಾಡಿದ್ದೆನು; ಈಗ ನಿನಗೆ ತಿರಿಗಿ ಕೊಡುವೆನು, ಅಂದಳು.
೪ ಆದರೆ ಅವನು ಆ ಹೂಣವನ್ನು ತನ್ನ ತಾಯಿಗೆ ತಿರಿಗಿ ಕೊಟ್ಟನು.
ಆಗ ಅವನ ತಾಯಿ ಇನ್ನೂರು ರೂಪಾಯಿಗಳನ್ನು ತಕ್ಕೊಂಡು,
ಅಕ್ಕಸಾಲೆಯವನ ಕೈಯಲ್ಲಿ ಕೊಟ್ಟಳು. ಅವನು ಅವುಗಳಿಂದ
ಕಟದ ವಿಗ್ರಹವನ್ನೂ ಎರಕದ ವಿಗ್ರಹವನ್ನೂ ಮಾಡಿದನು. ಅವು
೫ ಮೀಕನ ಮನೆಯಲ್ಲಿದ್ದವು. ಈ ಮೀಕಾ ಎಂಬ ಮನುಷ್ಯನಿಗೆ
ದೇವರ ಮನೆ ಉಂಟಾಗಿದ್ದದರಿಂದ, ಅವನು ಒಂದು ಏಫೋದನ್ನೂ
ಪ್ರತಿಮೆಗಳನ್ನೂ ಮಾಡಿ, ತನ್ನ ಕುಮಾರರಲ್ಲಿ ಒಬ್ಬನನ್ನು ಪ್ರತಿ
೬ ಷ್ಠೆ ಮಾಡಿದನು. ಅವನು ಇವನಿಗೆ ಯಾಜಕನಾದನು. ಆ ದಿವ
ಸಗಳ್ಳಿಗೆ ಇಸ್ರಯೇಲಲ್ಲಿ ಅರಸನಿಲ್ಲ; ಅವನವನು ತನ್ನ ಕಣ್ಣು
ಗಳಿಗೆ ನಿಷ್ಟೆಗಿಯಾಗಿ ತೋರಿದ್ದನ್ನು ಮಾಡಿದನು.
೭ ಯೆಹೂದದ ಬೇತ್ಲೆಹೇಮಿನವನಾದಂಥ ಯೆಹೂದನ ಗೋ
ತ್ರದ ಲೇವ್ಯನಾದಂಥ ಒಬ್ಬ ಪ್ರಾಯದವನಿದ್ದನು; ಅವನು ಅಲ್ಲಿ
೮ ತಂಗಿದ್ದನು. ಆ ಮನುಷ್ಯನು ಶಿಕ್ಕುವ ಸ್ಥಳದಲ್ಲಿ ತಂಗುವದಕ್ಕೆ
ಯೆಹೂದದ ಬೇತ್ಲೆಹೇಮ್ ಪಟ್ಟಣವನ್ನು ಬಿಟ್ಟು ಹೋದನು; ಮತ್ತು
ಪ್ರಯಾಣ ಮಾಡುವಾಗ ಎಫ್ರಯಿಮ್ ಬೆಟ್ಟದಲ್ಲಿರುವ ಮೀಕ
೯ ನ ಮನೆಯ ಬಳಿಗೆ ಬಂದನು. ಆಗ ಮೀಕ ಅವನಿಗೆ, ನೀನು
ಎಲ್ಲಿಂದ ಬಂದಿ? ಅಂದನು. ಇವನು ಅವನಿಗೆ ನಾನು ಯೆಹೂದದ
ಬೇತ್ಲೆಹೇಮಿನವನಾದ ಲೇವ್ಯನು; ನಾನು ಶಿಕ್ಕುವ ಸ್ಥಳದಲ್ಲಿ ತಂಗ
೧೦ ಬೇಕೆಂದು ಹೋಗುತ್ತೇನೆ, ಅಂದನು. ಮೀಕ ಅವನಿಗೆ, ನೀನು
ನನ್ನ ಬಳಿಯಲ್ಲಿ ವಾಸ ಮಾಡಿ, ನನಗೆ ತಂದೆಯಾಗಿಯೂ ಯಾ
ಜಕನಾಗಿಯೂ ಇರು; ನಾನು ನಿನಗೆ ವರುಷಕ್ಕೆ ಹತ್ತು ರೂಪಾ
ಯಿಗಳನ್ನೂ, ಒಂದು ಜತ್ತು ವಸ್ತ್ರಗಳನ್ನೂ, ಆಹಾರವನ್ನೂ
ಕೊಡುವೆನು, ಅಂದನು. ಹಾಗೆಯೇ ಲೇವ್ಯನು ಹೋದನು. ಮ
ತ್ತು ಲೇವ್ಯನು ಆ ಮನುಷ್ಯನ ಬಳಿಯಲ್ಲಿ ವಾಸವಾಗಿರ ಸಮ್ಮತಿ
೧೧ ಪಟ್ಟನು. ಆ ಯೌವನಸ್ಥನು ಅವನಿಗೆ ಅವನ ಮಕ್ಕಳ್ಳಲ್ಲಿ ಒಬ್ಬ
೧೨ ನ ಹಾಗೆ ಇದ್ದನು. ಮೀಕ ಲೇವ್ಯನನ್ನೂ ಪ್ರತಿಷ್ಠೆ ಮಾಡಿದನು;
ಮತ್ತು ಆ ಯೌವನಸ್ಥನು ಅವನಿಗೆ ಯಾಜಕನಾದನು; ಅವನು
೧೩ ಮೀಕನ ಮನೆಯಲ್ಲಿ ಇದ್ದನು. ಮತ್ತು ಮೀಕನು, ನನಗೆ ಒಬ್ಬ
ಲೇವ್ಯನು ಯಾಜಕನಾಗಿರುವದರಿಂದ, ಕರ್ತನು ನನಗೆ ಒಳ್ಳೇದ
ನ್ನು ಮಾಡುವನೆಂದು, ಈಗ ತಿಳಿಯುತ್ತೇನೆ, ಅಂದು ಕೊಂಡನು.

## ೧೮. ಸಂಧಿ.

೧ ಆ ದಿವಸಗಳ್ಳಲ್ಲಿ ಇಸ್ರಯೇಲಿನೊಳ್ಳಗೆ ಅರಸನಿರಲಿಲ್ಲ.
ಮತ್ತು ಆ ದಿವಸಗಳ್ಳಲ್ಲಿ ದಾನನ ಗೋತ್ರದವರು ವಾಸವಾಗಿರ
ತಮಗೆ ಬಾಧ್ಯತೆಯನ್ನು ಹುಡುಕುತ್ತಿದ್ದರು. ಯಾಕಂದರೆ ಅಂ
ದಿನ ಪರ್ಯಂತರ ಅವರಿಗೆ ಇಸ್ರಯೇಲ್ ಕುಲಗಳ್ಳಲ್ಲಿ ಪೂರ್ಣ
೨ ವಾಗಿ ಬಾಧ್ಯತೆ ದೊರಕಲಿಲ್ಲ. ಅವರು ದೇಶವನ್ನು ಪೇಳಿ
ಸೋಡಿ ಕೋಧಿಸುವದಕ್ಕಾಗಿ, ತಮ್ಮ ಮೇರೆಗಳ್ಳಲ್ಲಿರುವ ಜೋರ
ದಿಂದಲೂ ಎಷ್ಟಾಲೋಲಿನಿಂದಲೂ ತಮ್ಮ ಗೋತ್ರದಲ್ಲಿ ಪರಾಕ್ರಮ
ಶಾಲಿಗಳಾದ ಐದು ಮಂದಿಯನ್ನು ಕಳಿಸಿದರು, ಅವರ ಸಂಗತಿ, ನೀ
ವು ಹೋಗಿ, ದೇಶವನ್ನು ಶೋಧಿಸಿರಿ ಎಂದು ಹೇಳ್ಳಿ, ಕಳುಹಿಸಿದರು.
ಹಾಗೆಯೇ ಇವರು ಎಫ್ರಯಿಮ್ ಬೆಟ್ಟದಲ್ಲಿರುವ ಮೀಕನ ಮ
೩ ನೆಯ ಬಳಿಗೆ ಬಂದು, ಅಲ್ಲಿ ಇಳ್ಳು ಕೊಂಡರು. ಅವರು ಮೀಕನ
ಮನೆಯ ಬಳಿಯಲ್ಲಿರುವಾಗ, ಲೇವ್ಯನಾದ ಪ್ರಾಯಸ್ಥನ ಶಬ್ದವ
ನ್ನು ತಿಳ್ಳಿ ಕೊಂಡು, ಅವನ ಬಳ್ಳಗೆ ಹೋಗಿ, ನಿನ್ನನ್ನು ಇಲ್ಲಿಗೆ
ಕರ ಕೊಂಡು ಬಂದವನ್ಯಾರು? ಇಲ್ಲಿ ಏನು ಮಾಡುತ್ತಿ? ಇಲ್ಲಿ ನಿ
೪ ನಗೆ ಏನು? ಅಂದರು. ಅವನು, ಮೀಕನು ನನಗೆ ಹೀಗೆ ಹೀಗೆ ನ
ಡಿಸುತ್ತಾನೆ, ನನ್ನನ್ನು ಸಂಬಳಕ್ಕೆ ಇಟ್ಟು ಕೊಂಡಿದ್ದಾನೆ; ನಾನು
೫ ಅವನಿಗೆ ಯಾಜಕನಾಗಿದ್ದೇನೆ, ಅಂದನು. ಆಗಲವರು ಅವನಿಗೆ,
ನಾವು ಹೋಗುವ ನಮ್ಮ ಮಾರ್ಗವು ಸಫಲವಾಗುವದೋ! ಎಂ
ದು ತಿಳ್ಳಿಯುವ ಹಾಗೆ, ದಯ ಮಾಡಿ ದೇವರನ್ನು ಕೇಳು, ಅಂ
೬ ರು. ಆ ಯಾಜಕನು, ಸಮಾಧಾನವಾಗಿ ಹೋಗಿರಿ; ನೀವು
ಹೋಗುವ ನಿಮ್ಮ ಮಾರ್ಗವು ಕರ್ತನ ಮುಂದೆ ಅದೆ, ಅಂದನು.
೭ ಆಗ ಆ ಐದು ಮಂದಿಯು ಹೊರಟು, ಲಯಿಷಿಗೆ ಹೋಗಿ,
ಅದರಲ್ಲಿ ವಾಸಿಸಿರುವ ಆ ಜನರನ್ನು ನೋಡುವಾಗ, ಅವರು ಅಜಾ
ಗ್ರತೆಯಾಗಿಯೂ, ಚಿದೋನ್ಯರ ಹಾಗೆ ವಿಶ್ರಾಂತಿಯಾಗಿಯೂ,
ಭರವಸವಾಗಿಯೂ ಇದ್ದರು; ಯಾವ ಕಾರ್ಯದಲ್ಲಾದರೂ ಸಾ



ಚಿಕೆ ಪಡಿಸುವದಕ್ಕೆ ಬಿಗಿ ಹಿಡಿಯುವ ಅಧಿಪತಿ ದೇಶದಲ್ಲಿ ಇಲ್ಲ;
ಮತ್ತು ಚಿದೋನ್ಯರಿಗೆ ದೂರವಾಗಿದ್ದರು; ಯಾವ ಮನುಷ್ಯನ
೮ ಸಂಗಡಲಾದರೂ ಅವರಿಗೆ ಏನೂ ಕೆಲಸವಿಲ. ಮತ್ತು ಅವರು
ಜೋರದಲ್ಲಿಯೂ ಎಷ್ಟಾಲೋಲಿನಲ್ಲಿಯೂ ಇರುವ ಸಹೋದರರ
ಬಳ್ಳಗೆ ತಿರಿಗಿ ಬಂದರು. ಅವರ ಸಹೋದರರು, ನೀವು ಏನು ಹೇ
೯ ಳುತ್ತೀರಿ! ಅಂದರು. ಅದಕ್ಕವರು, ನಾವು ಅವರ ಮೇಲೆ ಯುದ್ಧ
ಮಾಡ ಹೋಗುವದಕ್ಕೆ ಏಳ್ಳಿರಿ; ಯಾಕಂದರೆ ನಾವು ಆ ದೇಶವ
ನ್ನು ನೋಡಿದೆವು; ಇಗೋ, ಅದು ಬಹಳ ಚನ್ನಾಗಿದೆ; ನೀವು
ಸುಮ್ಮನೆ ಇರುವದು ಯಾಕೆ! ಆ ದೇಶದಲ್ಲಿ ಪ್ರವೇಶಿಸಿ, ಅದನ್ನು
೧೦ ಸ್ವತಂತ್ರಿಸಿ ಕೊಳ್ಳ ಹೋಗುವದಕ್ಕೆ ತಾಮಸ ಮಾಡ ಬೇಡಿರಿ.
ನೀವು ಅಲ್ಲಿಗೆ ಹೋಗುವಾಗ, ಭರವಸವಾಗಿರುವ ಜನರ ಬಳ್ಳಗೆ
ಹೋಗುವಿರಿ; ಅದು ವಿಸ್ತಾರವಾದ ದೇಶವಾಗಿದೆ; ದೇವರು ಅದ
ನ್ನು ನಿಮ್ಮ ಕೈಯಲ್ಲಿ ಒಪ್ಪಿಸಿ ಕೊಟ್ಟಿದ್ದಾನೆ. ಭೂಮಿಯಲ್ಲಿರು
ವ ವಸ್ತುಗಳ್ಳಲ್ಲಿ ಒಂದಾದರೂ ಆ ಸ್ಥಳದಲ್ಲಿ ಕೊರತೆ ಇಲ್ಲ, ಅಂ
ದರು.

೧೧ ಆಗ ಜೋರದಲ್ಲಿಯೂ ಎಷ್ಟಾಲೋಲಿನಲ್ಲಿಯೂ ಇರುವ ದಾ
ನನ ಗೋತ್ರದವರಲ್ಲಿ ಆರು ನೂರು ಮನುಷ್ಯರು ಯುದ್ಧಕ್ಕೆ
ತಕ್ಕ ಆಯುಧಗಳನ್ನು ಕಟ್ಟಿ ಕೊಂಡು, ಅಲ್ಲಿಂದ ಹೊರಟು
೧೨ ಹೋಗಿ, ಯೆಹೂದದಲ್ಲಿರುವ ಕಿರ್ಯಾತ್ ಯಾರಿಮಿನಲ್ಲಿ ಇಳ್ಳಿ
ದರು. ಆದದರಿಂದ ಆ ಸ್ಥಳಕ್ಕೆ ಈ ದಿನದ ವರಿಗೂ ಮಹನೇ
೧೩ ದಾನ್ ಎಂದು ಕರೆಯಲ್ಪಡುವದು. ಇಗೋ, ಕಿರ್ಯಾತ್ ಯಾ
ರಿಮಿನ ಹಿಂದೆ ಇರುವದು. ಅಲ್ಲಿಂದ ಅವರು ಎಫ್ರಯಿಮ್ ಬೆ
ಟ್ಟಕ್ಕೆ ಹೋಗಿ, ಮೀಕನ ಮನೆಯ ಪರ್ಯಂತರ ಬಂದರು.
೧೪ ಆಗ ಲಯಿಷಿನ ದೇಶವನ್ನು ಪೇಳಿ ಸೋಡಿ ಬಂದ ಆ ಐದು
ಮಂದಿ ಮನುಷ್ಯರು ತಮ್ಮ ಸಹೋದರರಿಗೆ ಉತ್ತರ ಕೊಟ್ಟು,
ಈ ಮನೆಗಳ್ಳಲ್ಲಿ ಏಫೋದೂ, ಪ್ರತಿಮೆಗಳೂ, ಕಟದ ವಿಗ್ರಹವೂ,
ಎರಕದ ವಿಗ್ರಹವೂ ಉಂಟೆಂದು, ನೀವು ಅರಿಯಿರಾ! ನೀವು ಈ
೧೫ ಗ ಮಾಡ ಬೇಕಾದದ್ದೇನೆಂದು ತಿಳ್ಳು ಕೊಳ್ಳಿರಿ, ಅಂದರು. ಅವರು
ಅಲ್ಲಿಗೆ ತೊಲಗಿ, ಮೀಕನ ಮನೆಯಲ್ಲಿರುವ ಪ್ರಾಯಸ್ತನಾದ
ಲೇವ್ಯನ ಮನೆಗೆ ಬಂದು, ಅವನನ್ನು ಕ್ಷೇಮ ಸಮಾಚಾರವನ್ನು
೧೬ ಕೇಳ್ಳಿದರು. ಯುದ್ಧದ ಆಯುಧಗಳನ್ನು ಕಟ್ಟಿ ಕೊಂಡ ದಾನನ
ಗೋತ್ರದವರಾದ ಆರು ನೂರು ಮಂದಿಯೂ ಬಾಗಲ ದ್ವಾರ
೧೭ ದಲ್ಲಿ ನಿಂತರು. ಆದರೆ ದೇಶವನ್ನು ಪೇಳಿ ಸೋಡಿ ಬಂದ ಆ
ಐದು ಮಂದಿ ಏರಿ ಹೋಗಿ, ಒಳ್ಳಗೆ ಹೊಕ್ಕು, ಏಫೋದನ್ನೂ, ಪ್ರ
ತಿಮೆಗಳನ್ನೂ, ಕಟದ ವಿಗ್ರಹವನ್ನೂ, ಎರಕದ ವಿಗ್ರಹವನ್ನೂ ತ
ಕ್ಕೊಂಡರು. ಆಗ ಯಾಜಕನೂ ಯುದ್ಧದ ಆಯುಧಗಳನ್ನು
ಕಟ್ಟಿ ಕೊಂಡ ಆರು ನೂರು ಜನರೂ ಬಾಗಲ ದ್ವಾರದಲ್ಲಿ ನಿಂತಿ
ದ್ದರು. ಮತ್ತು ಅವರು ಮೀಕನ ಮನೆಗೆ ಬಂದು, ಏಫೋದನ್ನೂ
ಪ್ರತಿಮೆಗಳನ್ನೂ, ಕಟದ ವಿಗ್ರಹವನ್ನೂ, ಎರಕ ವಿಗ್ರಹವನ್ನೂ
ತಕ್ಕೊಂಡಾಗ, ಯಾಜಕನು ಅವರಿಗೆ, ನೀವು ಏನು ಮಾಡುತ್ತೀರಿ!
೧೯ ಅಂದನು. ಅವರು ಅವನಿಗೆ, ನೀನು ಸುಮ್ಮನೆ ಇರು; ನಿನ್ನ ಬಾ
ಯಿಯ ಮೇಲೆ ನಿನ್ನ ಕೈ ಹಾಕಿ ಕೊಂಡು, ನಮ್ಮ ಸಂಗಡ ಬಂದು,
ನಮಗೆ ತಂದೆಯಾಗಿಯೂ ಯಾಜಕನಾಗಿಯೂ ಇರು. ನೀ
ನು ಒಬ್ಬನ ಮನೆಗೆ ಯಾಜಕನಾಗಿರುವದು ಒಳ್ಳೇದೋ! ಇಸ್ರ
ಯೇಲಲ್ಲಿ ಬಂದು ಕುಲಕ್ಕೂ ಒಂದು ಗೋತ್ರಕ್ಕೂ ಯಾಜಕನಾ
೨೦ ಗಿರುವದು ಒಳ್ಳೇದೋ! ಅಂದರು. ಆಗ ಯಾಜಕನ ಹೃದಯ
ವು ಸಂತೋಷಪಟ್ಟು, ಅವನು ಏಫೋದನ್ನೂ, ಪ್ರತಿಮೆಗಳನ್ನೂ,
ಕಟದ ವಿಗ್ರಹವನ್ನೂ ತಕ್ಕೊಂಡು, ಜನರ ಮಧ್ಯದಲ್ಲಿ ಬಂದನು.
೨೧ ಅವರು ತಿರುಗಿ ಕೊಂಡು, ಹೊರಟು, ಚಿಕ್ಕವರನ್ನೂ, ಸಾಮಾ
ನುಗಳನ್ನೂ, ಕುರಿ ದನಗಳನ್ನೂ ತಮಗೆ ಮುಂದಾಗಿ ಕಳುಹಿಸಿ
ದರು.

೨೨ ಅವರು ಮೀಕನ ಮನೆಯಿಂದ ದೂರವಾಗಿ ಹೋದಾಗ,
ಮೀಕನ ಮನೆಯ ಸುತ್ತಲು ನೆಕೆಮನೆಗಳ್ಳಲ್ಲಿರುವ ಮನುಷ್ಯರು
ಕೂಡಿ ಕೊಂಡು, ದಾನನ ಮಕ್ಕಳ್ಳನ್ನು ಕಲತು ಕೊಂಡು, ದಾನನ
೨೩ ಮಕ್ಕಳ್ಳಗೆ ಕೂಗಿದರು. ಅವರು ತಮ್ಮ ಮುಖ ತಿರುಗಿಸಿ, ಮೀ
ಕನಿಗೆ, ನೀವು ಗುಂಪು ಕೂಡಿ ಕೊಳ್ಳ ನಿನಗೆ ಏನಾಯಿತು! ಅಂ
೨೪ ದರು. ಅವನು, ನಾನು ಮಾಡಿ ಕೊಂಡ ನನ್ನ ದೇವರುಗಳನ್ನೂ
ಯಾಜಕನನ್ನೂ ತಕ್ಕೊಂಡು ಹೋದಿರಿ; ಇನ್ನು ನನಗೆ ಏನದೆ!
ಮತ್ತು ನೀವು ನನ್ನನ್ನು, ನಿನಗೆ ಏನಾಯಿತೆಂದು, ಕೇಳುವದೇನು!
೨೫ ಅಂದನು. ಆದರೆ ದಾನನ ಮಕ್ಕಳು ಅವನಿಗೆ, ಕಹಿ ಪ್ರಾಣದವ
ರು ನಿನ್ನ ಮೇಲೆ ಬೀಳ್ಳದ ಹಾಗೆ, ನೀನು ನಿನ್ನ ಪ್ರಾಣವನ್ನೂ
ನಿನ್ನ ಮನೆಯವರ ಪ್ರಾಣವನ್ನೂ ಕಳ್ಳ ಕೊಳ್ಳದ ಹಾಗೆ, ನಿನ್ನ
೨೬ ಶಬ್ದ ನಮ್ಮುಲ್ಲಿ ಕೇಳ್ಳ ಗೊಡಿಸದಿರು, ಅಂದರು. ಮತ್ತು ದಾನನ
ಮಕ್ಕಳು ತಮ್ಮ ಮಾರ್ಗವಾಗಿ ಹೋದರು. ಆಗ ಮೀಕನು ಅ
ವರು ತನಗಿಂತ ಬಲಿಷ್ಠರೆಂದು ನೋಡಿ, ತಿರುಗಿ ಕೊಂಡು, ತನ್ನ
ಮನೆಗೆ ಹೋದನು.
೨೭ ಆದರೆ ಅವರು ಮಾಡಿ ಕೊಂಡವುಗಳನ್ನೂ, ಅವನಿಗಿದ್ದ
ಯಾಜಕನನ್ನೂ ತೆಗೆದು ಕೊಂಡು, ವಿಶ್ರಾಂತಿಯಾಗಿಯೂ, ಭ
ರವಸವಾಗಿಯೂ ಇದ್ದ ಲಯಿಷಿನ ಜನರ ಮೇಲೆ ಬಂದು, ಅವ
ನ್ನು ಕತ್ತಿಯ ಬಾಯಿಯಿಂದ ಹೊಡೆದು, ಆ ಪಟ್ಟಣವನ್ನು ಬೆಂಕಿ
೨೮ ಯಿಂದ ಸುಟ್ಟು ಬಿಟ್ಟರು. ಅದು ಚಿದೋನಿಗೆ ದೂರವಾಗಿದ್ದದ
ರಿಂದಲೂ, ಯಾವ ಮನುಷ್ಯನ ಸಂಗಡಲಾದರೂ ಅವರಿಗೆ ಕೆಲ
ಸವಿಲ್ಲದ್ದರಿಂದಲೂ, ತಪ್ಪಿಸುವವರು ಯಾರೂ ಇಲ್ಲ. ಆ ಪಟ್ಟಣವು
ಬೇತ್ರೆಹೋಬಿಗೆ ಸಮೀಪವಾದ ತ್ಗ್ನಲ್ಲಿ ಇತ್ತು.
೨೯ ಅವರು ಅಲ್ಲಿ ಪಟ್ಟಣವನ್ನು ಕಟ್ಟಿ, ಅದರಲ್ಲಿ ವಾಸವಾಗಿದ್ದರು. ಆ
ದರೆ ಆ ಪಟ್ಟಣಕ್ಕೆ ಇಸ್ರಯೇಲಿಗೆ ಹುಟ್ಟಿದ ತಮ್ಮ ತಂದೆಯಾದ
೩೦ ದಾನನ ಹೆಸರಿನ ಹಾಗೆಯೇ ದಾನೆಂದು ಹೆಸರಿಟ್ಟರು. ಆದರೆ
ಮೊದಲಲ್ಲಿ ಆ ಪಟ್ಟಣಕ್ಕೆ ಲಯಿಷೆಂಬ ಹೆಸರು ಇತ್ತು. ಆಗ ದಾ
ನನ ಮಕ್ಕಳು ಆ ಕಟದ ವಿಗ್ರಹವನ್ನು ತಮಗೆ ಸ್ಥಾಪಿಸಿ ಕೊಂಡ
ರು. ಮನಸ್ಸೆಯ ಮಗನಾದ ಗೆರ್ಷೋಮನ ಮಗನಾದ ಯೊ
ತಾನನೂ, ಅವನ ಮಕ್ಕಳ್ಳೂ, ಆ ದೇಶದವರು ಸೆರೆಯಾಗಿ ಪೈ
೩೧ ಯಲ್ಪಡುವ ದಿವಸನ ವರಿಗೂ, ದಾನನ ಕುಲದವರಿಗೆ ಯಾಜ
ಕರಾಗಿದ್ದರು. ದೇವರ ಮನೆ ಶಿಲೋವಿನಲ್ಲಿ ಇರುವ ಮಟ್ಟಿಗೂ,
ಅವರು ಮೀಕನು ಮಾಡಿದ ವಿಗ್ರಹವನ್ನು ಇಟ್ಟು ಕೊಂಡಿದ್ದರು.

## ೧೯. ಸಂಧಿ.

೧ ಇಸ್ರಯೇಲಿನಲ್ಲಿ ಅರಸನಿಲ್ಲದ ಆ ದಿವಸಗಳ್ಳೊಳ್ಳಗೆ ಆದದ್ದೇ
ನಂದರೆ, ಎಫ್ರಯಿಮ್ ಬೆಟ್ಟದ ಪಾರ್ಶ್ವದಲ್ಲಿ ಒಬ್ಬ ಲೇವ್ಯನು
ವಾಸ್ತಿಯಾಗಿದ್ದನು. ಅವನು ಯೆಹೂದದ ಬೇತ್ಲೆಹೇಮಿನವಳಾದಂ
೨ ಥ ಸ್ತ್ರೀಯನ್ನು ಉಪಪತ್ನಿಯಾಗಿ ಇಟ್ಟು ಕೊಂಡಿದ್ದನು. ಅವ

ನ ಉಪಪತ್ನಿ ಅವನಿಗೆ ದ್ರೋಹವಾಗಿ ಜಾರತ್ವ ಮಾಡಿ, ಅವನನ್ನು ಬಿಟ್ಟು, ಯೆಹೂದದ ಬೇತ್ಲೆಹೇಮಿನಲ್ಲಿರುವ ತನ್ನ ತಂದೆಯ ಮನೆಗೆ ಹೋಗಿ, ಅಲ್ಲಿ ನಾಲ್ಕು ತಿಂಗಳ್ಳಿದ್ದಳು.

೩ ಆಗ ಅವಳ ಗಂಡನು ಎದ್ದು, ಅವಳ ಮನಸ್ಸಿಗೆ ಸರಿಯಾಗಿ ಮಾತಾಡಿ, ಅವಳನ್ನು ತಿರಿಗಿ ಕರತರುವದಕ್ಕೆ ತನ್ನ ಊಳಿಗದವನನ್ನೂ, ಎರಡು ಕತ್ತೆಗಳನ್ನೂ ತಕ್ಕೊಂಡು, ಅವಳ ಬಳಿಗೆ ಹೋದನು. ಅವಳು ಅವನನ್ನು ತನ್ನ ತಂದೆಯ ಮನೆಗೆ ಕರಕೊಂಡು ಹೋದಳು. ಹೆಂಗಸಿನ ತಂದೆ ಅವನನ್ನು ಕಂಡಾಗ, ಅವನನ್ನು ಕಲತು ಕೊಂಡದರಿಂದ ಸಂತೋಷ ಪಟ್ಟನು. ೪ ಹೆಂಗಸಿನ ತಂದೆಯಾದ ಅವನ ಮಾವನು ಅವನನ್ನು ನಿಲ್ಲಿಸಿ ಕೊಂಡದರಿಂದ, ಅವನು ಮೂರು ದಿವಸ ಅವನ ಸಂಗಡ ಇದ್ದನು. ಅವರು ಅಲ್ಲಿ ಉಂಡು, ಕುಡಿದು, ಅಲ್ಲಿ ಇಳ್ಳಂ ಕೊಂಡಿದ್ದರು. ೫ ಆದರೆ ನಾಲ್ಕನೇ ದಿವಸ ಉದಯದಲ್ಲಿ ಅವರು ಎದ್ದ ತರುವಾಯ, ಅವನು ಹೋಗುವದಕ್ಕೆ ಎದ್ದಾಗ, ಹೆಂಗಸಿನ ತಂದೆ ತನ್ನ ಅಳಿಯನಿಗೆ, ನೀನು ಸ್ವಲ್ಪ ಕೊಟ್ಟಿಯಿಂದ ನಿನ್ನ ಹೃದಯವನ್ನು ಉದ್ಧಾರ ಮಾಡಿಕೋ; ತರುವಾಯ ನೀವು ಹೋಗ ಬಹುದು, ಅಂದನು. ಅವರು ಕುಳಿತು ಇಬ್ಬರು ಕೂಡಾ ಉಂಡು, ಕುಡಿದರು. ೬ ಹೆಂಗಸಿನ ತಂದೆ ಆ ಮನುಷ್ಯನಿಗೆ, ನೀನು ದಯೆ ಮಾಡಿ, ನಿನ್ನ ಹೃದಯವನ್ನು ಸಂತೋಷ ಪಡಿಸ ಈ ರಾತ್ರಿ ಇರು, ಅಂದನು. ೭ ಹೋಗುವದಕ್ಕೆ ಆ ಮನುಷ್ಯನು ಎದ್ದಾಗ, ಅವನ ಮಾವನು ಅವನನ್ನು ಬಲವಂತ ಮಾಡಿದ್ದರಿಂದ, ಅವನು ಆ ರಾತ್ರಿ ಅಲ್ಲಿದ್ದನು. ೮ ಐದನೇ ದಿವಸ ಉದಯದಲ್ಲಿ ಅವನು ಹೋಗುವದಕ್ಕೆ ಎದ್ದಾಗ, ಹೆಂಗಸಿನ ತಂದೆ, ನೀನು ದಯೆ ಮಾಡಿ, ನಿನ್ನ ಹೃದಯವನ್ನು ಉದ್ಧಾರ ಮಾಡಿಕೋ, ಅಂದನು. ಹಾಗೆಯೇ ಅವನು ಹೊತ್ತು ಇಳಿಯುತ್ತಿರುವ ಪರ್ಯಂತರ ಆಲಸ್ಯವಾಗಿದ್ದು, ಇಬ್ಬರೂ ಉಂಡರು. ೯ ಮತ್ತು ಅವನೂ, ಅವನ ಉಪಪತ್ನಿಯೂ ಅವನ ಊಳಿಗದವನೂ ಹೋಗ ಎದ್ದಾಗ, ಹೆಂಗಸಿನ ತಂದೆಯಾದ ಅವನ ಮಾವನು ಅವನಿಗೆ, ಇಗೋ, ಹೊತ್ತು ಹೋಗಿ, ಸಂಜೆಯಾಯಿತು; ಈ ರಾತ್ರಿ ನೀನು ದಯೆ ಮಾಡಿ, ಇಲ್ಲಿ ಇರು; ಹೊತ್ತು ಮುಣುಗ ಬಂತು; ನಿನ್ನ ಹೃದಯವನ್ನು ಸಂತೋಷ ಪಡಿಸುವ ಹಾಗೆ ಈ ರಾತ್ರಿ ಇಲ್ಲಿದ್ದು, ನಿನ್ನ ಗುಡಾರಕ್ಕೆ ಹೋಗುವ ಹಾಗೆ, ನಾಳೆ ಬೆಳ್ಗ್ಯೆ ಎದ್ದು, ನಿಮ್ಮ ಮಾರ್ಗ ಹಿಡಿದು ಹೋಗ ಬಹುದು, ೧೦ ಅಂದನು. ಆದರೆ ಆ ಮನುಷ್ಯನು ಆ ರಾತ್ರಿ ಅಲ್ಲಿರ ಮನಸ್ಸಿಲ್ಲದೆ, ಎದ್ದು, ತಡಿ ಕಟ್ಟಿದ ಎರಡು ಕತ್ತೆಗಳ ಸಂಗಡಲೂ ತನ್ನ ಉಪಪತ್ನಿಯ ಸಂಗಡಲೂ ಹೊರಟು ಹೋಗಿ, ಯೆರೂಸಲೇಮು ಎಂಬ ಯೆಬೂಸಿಗೆ ಸರಿಯಾಗಿ ಬಂದನು.

೧೧ ಅವರು ಯೆಬೂಸಿಗೆ ಸಮೀಪಿಸಿ ಬಂದಾಗ, ಹೊತ್ತು ಬಹಳ ಹೋಗಿತ್ತು; ಆಗ ಊಳಿಗದವನು ತನ್ನ ಯಜಮಾನನಿಗೆ, ನೀನು ದಯೆ ಮಾಡಿ, ಈ ಯೆಬೂಸ್ಯರ ಪಟ್ಣಕ್ಕೆ ತಿರುಗಿ ಕೊಂಡು, ಅದರಲ್ಲಿ ಇಳಿಯುವ ಬಾ, ಅಂದನು. ೧೨ ಆದರೆ ಅವನ ಯಜಮಾನನು ಅವನಿಗೆ, ನಾವು ಇಲ್ಲಿ ಇಸ್ರಯೇಲ್ ಮಕ್ಕಳಲ್ಲದ ಅನ್ಯರ ಪಟ್ಣದಲ್ಲಿ ಇಳಿಯದೆ, ಗಿಬೆಯದ ಮಟ್ಟಿಗೂ ಹಾದು ಹೋಗುವ, ಅಂದನು. ೧೩ ಮತ್ತು ಅವನು ಊಳಿಗದವನಿಗೆ, ಗಿಬೆಯದಲ್ಲಾದರೂ ರಾಮದಲ್ಲಾದರೂ ಇಳಿಯೆ ಆ ಸ್ಥಳಗಳಲ್ಲಿ ಒಂದಕ್ಕೆ ಸೇರುವ ಬಾ, ಅಂದನು. ೧೪ ಹಾಗೆಯೇ ಅವರು ದಾಟಿ ಹೋದರು. ಅವರು ಬೆನ್ಯಮಾನನಿಗೆ ಸೇರಿದ ಗಿಬೆಯ ಬಳಿಯಲ್ಲಿ ಬರುವಾಗ, ಸೂರ್ಯ ಮುಣಿಗಿತು. ೧೫ ಆದದರಿಂದ ಅವರು ಗಿಬೆಯದಲ್ಲಿ ಇಳಿಯ ಪ್ರವೇಶಿಸುವ ಹಾಗೆ, ಅಲ್ಲಿಗೆ ತೊಲಗಿದರು. ಅವನು ಪ್ರವೇಶಿಸಿವಾಗ, ಮನೆಯಲ್ಲಿ ಇಳಿಯ ಅವರನ್ನು ಯಾರೂ ಸೇರಿಸಿ ಕೊಳ್ಳದ್ದರಿಂದ ಅವನು ಆ ಪಟ್ಣದ ಬೀದಿಯಲ್ಲಿ ಕುಳಿತಿದ್ದನು.

೧೬ ಆಗ, ಇಗೋ, ಒಬ್ಬ ಮುದುಕನು ಹೊಲದಲ್ಲಿ ತನ್ನ ಕೆಲಸವನ್ನು ಬಿಟ್ಟು, ಸಂಜೆಯಲ್ಲಿ ಬಂದನು. ಆ ಮನುಷ್ಯನು ಎಫ್ರಯಿಮ್ ಬೆಟ್ಟದವನಾಗಿಯೂ ಗಿಬೆಯದಲ್ಲಿ ಪರವಾಸವಾಗಿಯೂ ಇದ್ದನು. ಆದರೆ ಅಲ್ಲಿರುವ ಜನರು ಬೆನ್ಯಮಾನ್ಯರಾಗಿದ್ದರು. ೧೭ ಆ ಮುದುಕನು ತನ್ನ ಕಣ್ಣುಗಳನ್ನೆತ್ತಿ, ಆ ಪಟ್ಣದ ಬೀದಿಯಲ್ಲಿ ಕುಳಿತಿದ್ದ ಮಾರ್ಗದವನನ್ನು ನೋಡಿ, ನೀನು ಎಲ್ಲಿಗೆ ಹೋಗುತ್ತೀ? ಎಲ್ಲಿಂದ ಬಂದೆ? ಅಂದನು. ೧೮ ಅವನು ಇವನಿಗೆ, ನಾವು ಯೆಹೂದದ ಬೇತ್ಲೆಹೇಮಿನಿಂದ ಎಫ್ರಯಿಮ್ ಬೆಟ್ಟದ ಪಾರ್ಶ್ವಕ್ಕೆ ಹಾದು ಹೋಗುತ್ತೇವೆ. ನಾನು ಅಲ್ಲಿಯವನು; ಯೆಹೂದದ ಬೇತ್ಲೆಹೇಮಿಗೆ ಹೋಗಿದ್ದೆನು; ಈಗ ಕರ್ತನ ಮನೆಗೆ ಹೋಗುತ್ತೇನೆ; ಆದರೆ ನನ್ನನ್ನು ಯಾರೂ ಮನೆಗೆ ಸೇರಿಸಿ ಕೊಳ್ಳಲಿಲ್ಲ. ೧೯ ಆದರೂ ನಮ್ಮ ಕತ್ತೆಗಳಿಗೆ ಮೇವೂ ನನಗೂ ನಿನ್ನ ದಾಸಿಗೂ ನಿನ್ನ ಸೇವಕರ ಸಂಗಡ ಇರುವ ಪ್ರಾಯಸ್ತನಿಗೂ ಕೊಟ್ಟಿಯೂ ದ್ರಾಕ್ಷೇ ರಸವೂ ಉಂಟು, ಏನೂ ಕೊರತೆ ಇಲ್ಲ, ಅಂದನು. ೨೦ ಆಗ ಆ ಮುದುಕನು, ನಿನಗೆ ಸಮಾಧಾನವಾಗಲಿ, ನಿನ್ನ ಕೊರತೆಯೆಲ್ಲಾ ನನ್ನ ಮೇಲೆ ಇರಲಿ; ಹ್ಯಾಗಾದರೂ ಬೀದಿಯೊಳ್ಳಗೆ ಇಳಿದಿರ ಬೇಸವೆಂದು ಹೇಳಿ, ಅವನನ್ನು ತನ್ನ ಮನೆಗೆ ಕರಕೊಂಡು ಹೋಗಿ, ಕತ್ತೆಗಳಿಗೆ ಮೇವು ಹಾಕಿದನು. ಅವರು ತಮ್ಮ ಕಾಲುಗಳನ್ನು ತೊಳೆದು, ಉಂಡು, ಕುಡಿದರು.

೨೧ ಅವರು ತಮ್ಮ ಹೃದಯವನ್ನು ಸಂತೋಷ ಪಡಿಸಿ ಕೊಂಡಿರುವ ವೇಳೆಯಲ್ಲಿ, ಇಗೋ, ಆ ಪಟ್ಣದ ಮನುಷ್ಯರಲ್ಲಿ ಬೆಲಿಯಾಳನ ಮಕ್ಕಳು ಆ ಮನೆಯನ್ನು ಸುತ್ತಿ ಕೊಂಡು, ಕದವನ್ನು ಬಡಿದು, ಆ ಮನೆಯ ಯಜಮಾನನಾದ ಮುದುಕನಿಗೆ, ನಿನ್ನ ಮನೆಯಲ್ಲಿ ಬಂದ ಆ ಮನುಷ್ಯನನ್ನು, ನಾವು ಅವನನ್ನು ತಿಳುಕೊಳ್ಳುವ ಹಾಗೆ, ಹೊರಗೆ ತಾ ಎಂದು, ಹೇಳಿದರು. ೨೩ ಆಗ ಮನೆಯ ಯಜಮಾನನಾದ ಆ ಮನುಷ್ಯನು ಅವರ ಬಳಿಗೆ ಹೊರಟು ಹೋಗಿ, ಅವರಿಗೆ ಹೇಳಿದ್ದೇನಂದರೆ, ಹಾಗೆ ಬೇಡಿರಿ, ನನ್ನ ಸಹೋದರರೇ, ದಯೆ ಮಾಡಿ, ಕೆಟ್ಟತನ ಮಾಡ ಬೇಡಿರಿ; ಆ ಮನುಷ್ಯನು ನನ್ನ ಮನೆಯಲ್ಲಿ ಪ್ರವೇಶಿಸಿದ್ದರಿಂದ, ನೀವು ಅಂಥ ಬುದ್ಧಿಹೀನತೆಯನ್ನು ಮಾಡ ಬೇಡಿರಿ. ೨೪ ಇಗೋ, ಕನ್ನಿಕೆಯಾದ ನನ್ನ ಮಗಳನ್ನೂ, ಅವನ ಉಪಪತ್ನಿಯನ್ನೂ ಹೊರಗೆ ತರುವೆನು; ನೀವು ಅವರನ್ನು ಕುಂದಿಸಿ, ನಿಮ್ಮ ಕಣ್ಣುಗಳಿಗೆ ಸರಿಯಾಗಿ ಶೋರುವ ಹಾಗೆ ಅವರಿಗೆ ಮಾಡಿರಿ. ಆದರೆ ಈ ಮನುಷ್ಯನಿಗೆ ಅಂಥಾ ಬುದ್ಧಿಹೀನವಾದ ಕಾರ್ಯವನ್ನು ಮಾಡ ಬೇಡಿರಿ, ೨೫ ಅಂದನು. ಆದರೆ ಆ ಮನುಷ್ಯರು ಅವನ ಮಾತನ್ನು ಕೇಳ್ಳಲೊಲ್ಲದೆ ಹೋದರು. ಆದದರಿಂದ ಆ ಮನುಷ್ಯನು ತನ್ನ ಉಪಪತ್ನಿಯನ್ನು ಹಿಡಿದು, ಅವರ ಬಳಿಯಲ್ಲಿ ಹೊರಗೆ ತಂದು ಬಿಟ್ಟನು; ಅವರು ಅವಳನ್ನು ತಿಳುಕೊಂಡು, ಉದಯಕಾಲದ ಪರ್ಯಂತರ ರಾತ್ರಿಯೆಲ್ಲಾ ಅವಳನ್ನು ಕೆಡಿಸಿ, ಉದಯವಾಗುವಾಗ ಅವಳನ್ನು ಬಿಟ್ಟು ಬಿಟ್ಟರು.



೨೬ ಆ ಸ್ತ್ರೀ ಉದಯಕಾಲಕ್ಕೆ ಮುಂಚೆ ಬಂದು, ಬೆಳಕಾಗುವ ಮಟ್ಟಿಗೂ ಅಲ್ಲಿ ತನ್ನ ಯಜಮಾನನು ಇರುವ ಮನೆಯ ಬಾಗಲ ಬಳಿಯಲ್ಲಿ ಬಿದ್ದಿದ್ದಳು. ೨೭ ಅವಳ ಯಜಮಾನನು ಉದಯದಲ್ಲಿ ಎದ್ದು, ಮನೆಯ ಬಾಗಲನ್ನು ತೆಕೆದು, ತನ್ನ ಮಾರ್ಗವಾಗಿ ಹೋಗ ಹೊರಡುವಾಗ, ಇಗೋ, ತನ್ನ ಉಪಪತ್ನಿ ಮನೆಯ ಬಾಗಲ ಮುಂದೆ ತನ್ನ ಕೈಗಳನ್ನು ಹೊಸ್ತಲ ಮೇಲೆ ಇಟ್ಟವಳಾಗಿ, ಬಿದ್ದಿದ್ದಳು. ಆಗಲವನು ಅವಳಿಗೆ—ಎದ್ದು, ಹೊಗುವ, ಅಂದನು. ಆದರೆ ಪ್ರತ್ಯುತ್ತರವೇನೂ ಇಲ್ಲದೆ ಹೋಯಿತು. ೨೮ ಆಗ ಆ ಮನುಷ್ಯನು ಅವಳನ್ನು ಕತ್ತೆಯ ಮೇಲೆ ಹಾಕಿ ಕೊಂಡು, ತನ್ನ ಸ್ಥಳಕ್ಕೆ ಹೋದನು.

೨೯ ಅವನು ತನ್ನ ಮನೆಗೆ ಹೋದಾಗ, ಒಂದು ಕತ್ತಿಯನ್ನು ತೆಗೆದು ಕೊಂಡು, ತನ್ನ ಉಪಪತ್ನಿಯನ್ನು ಹಿಡಿದು, ಎಲುವುಗಳ ಸಂಗಡ ಹನ್ನೆರಡು ತುಂಡುಗಳಾಗಿ ಕಡಿದು, ಅವುಗಳನ್ನು ಇಸ್ರಯೇಲಿನ ಮೇರೆಗಳಿಗೆಲ್ಲಾ ಕಳುಹಿಸಿದನು. ೩೦ ಆಗಲು ಅದನ್ನು ನೋಡುವವರೆಲ್ಲಾ ಇಸ್ರಯೇಲ ಮಕ್ಕಳು ಐಗುಪ್ತದಿಂದ ಬಂದ ದಿವಸ ಮೊದಲ್ಗೊಂಡು ಈ ಪರ್ಯಂತರ ಇಂಥಾ ಕಾರ್ಯವು ಆದದ್ದೂ ಇಲ್ಲ, ಕಾಣಲ್ಪಟ್ಟದ್ದೂ ಇಲ್ಲ. ನೀವು ಇದಕ್ಕೆ ಹೃದಯ ಬಿಟ್ಟು, ಆಲೋಚನೆ ಮಾಡಿ, ಮಾತಾಡಿರಿ, ಅಂದರು.

## ೨೦. ಸಂಧಿ.

೧ ಆಗ ಇಸ್ರಯೇಲ್ ಮಕ್ಕಳೆಲ್ಲರು ಹೊರಟು, ಗಿಲ್ಯಾದು ಸಹಿತವಾಗಿ ದಾನ್ ಪಟ್ಣವು ಮೊದಲುಗೊಂಡು ಬೆರ್ಷೆಬದ ಮಟ್ಟಿಗೂ ಸಭೆಯು ಒಬ್ಬ ಮನುಷ್ಯನ ಹಾಗೆ ಮಿಚ್ಪೆಯಲ್ಲಿ ಕರ್ತನ ಮುಂದೆ ಕೂಡಲ್ಪಟ್ಟಿತು. ೨ ಇದಲ್ಲದೆ ಇಸ್ರಯೇಲಿನ ಸಮಸ್ತ ಕುಲಗಳಾದ ಸಮಸ್ತ ಜನರ ಮುಖ್ಯಸ್ಥರು, ಬಿಚ್ಚು ಕತ್ತಿ ಹಿಡಿದುಕೊಂಡ ನಾಲ್ಕು ಲಕ್ಷ ಕಾಲ್ಬಲವು, ದೇವರ ಸಭೆಯಾದ ಜನರಲ್ಲಿ ಅಲ್ಲಿ ನಿಂತರು. ೩ ಆದರೆ ಬೆನ್ಯಮಾನನ ಮಕ್ಕಳು, ಇಸ್ರಯೇಲ್ ಮಕ್ಕಳು ಮಿಚ್ಪೆಗೆ ಬಂದ ವರ್ತಮಾನವನ್ನು ಕೇಳ್ಳಿದರು.

೪ ಆಗ ಇಸ್ರಯೇಲ್ ಮಕ್ಕಳು, ನೀವು ಮಾತಾಡಿರಿ; ಆ ಕೆಟ್ಟತನವು ಹ್ಯಾಗೆ ಆಯಿತು! ಅಂದರು. ೫ ಯಾವನ ಹೆಂಡತಿ ಕೊಲ್ಲಲ್ಪಟ್ಟಳೋ, ಆ ಪುರುಷನಾದ ಲೇವ್ಯನು ಅವರಿಗೆ ಪ್ರತ್ಯುತ್ತರ ಕೊಟ್ಟು, ಹೇಳಿದ್ದೇನಂದರೆ, ನಾನು ಬೆನ್ಯಮಾನನ ಊರಾದ ಗಿಬೆಯಕ್ಕೆ ನನ್ನ ಉಪಪತ್ನಿ ಸಹಿತವಾಗಿ ಇಳ್ಳು ಕೊಳ್ಳ ಬಂದೆನು. ೬ ಆದರೆ ಗಿಬೆಯ ಪಟ್ಣದವರು ನನಗೆ ವಿರೋಧವಾಗಿ ಎದ್ದು, ನಾನು ಇಳಿದಿದ್ದ ಮನೆಯನ್ನು ರಾತ್ರಿಯಲ್ಲಿ ಮುತ್ತಿ ಕೊಂಡು, ನನ್ನನ್ನು ಕೊಂದು ಹಾಕ ನೆನಸಿ, ನನ್ನ ಉಪಪತ್ನಿಯನ್ನು ಕುಂದಿಸಿದರು. ೭ ಅವಳು ಸತ್ತು ಹೋದಳು. ಅವರು ಇಸ್ರಯೇಲಿನಲ್ಲಿ ದುಷ್ಕರ್ಮವನ್ನೂ ಬುದ್ಧಿಹೀನವಾದ ಕೆಲಸವನ್ನೂ ಮಾಡಿದ್ದರಿಂದ, ನಾನು ನನ್ನ ಉಪಪತ್ನಿಯನ್ನು ಹಿಡಿದು, ಅವಳನ್ನು ಕಡಿದು, ಇಸ್ರಯೇಲಿನ ಬಾಧ್ಯತೆಯಾದ ಭೂಮಿಯೆಲ್ಲಾದರಲ್ಲಿ ಕಳುಹಿಸಿದೆನು. ೮ ಇಗೋ, ನೀವೆಲ್ಲರು ಇಸ್ರಯೇಲ್ ಮಕ್ಕಳಾಗಿದ್ದೀರಿ; ನಿಮ್ಮ ಮಾತನ್ನೂ ಆಲೋಚನೆಯನ್ನೂ ಇಲ್ಲಿ ಹೇಳಿ ಕೊಡಿರಿ.

೯ ಆಗ ಸಮಸ್ತ ಜನವೂ ಒಬ್ಬ ಮನುಷ್ಯನ ಹಾಗೆ ಎದ್ದು, ಹೇಳ್ಳಿದ್ದೇನಂದರೆ, ನಮ್ಮಲ್ಲಿ ಯಾವನಾದರೂ ತನ್ನ ಗುಡಾರಕ್ಕೆ ಹೋಗುವದಿಲ್ಲ, ತನ್ನ ಮನೆಗೆ ತೊಲಗುವದಿಲ್ಲ. ೧೦ ಈಗ ನಾವು ಗಿಬೆಯಕ್ಕೆ ಮಾಡುವದು ಇದೇ—ಅದಕ್ಕೆ ವಿರೋಧವಾಗಿ ಚೀಟುಗಳು ಬಿದ್ದ ಪ್ರಕಾರ ಹೋಗುತ್ತೇವೆ. ಆದರೆ ಬೆನ್ಯಮಾನನ ಗೋತ್ರದವರಾದ ಗಿಬೆಯದವರು ಇಸ್ರಯೇಲಿನಲ್ಲಿ ಮಾಡಿದ ಸಮಸ್ತ ಬುದ್ಧಿಹೀನವಾದ ಕೆಲಸಕ್ಕೆ ತಕ್ಕ ಪ್ರಕಾರ ಮಾಡುವ ಹಾಗೆ, ನಾವು ಆಹಾರವನ್ನು ತಕ್ಕೊಂಡು ಬರುವದಕ್ಕೆ, ಇಸ್ರಯೇಲಿನ ಸಕಲ ಕುಲಗಳಲ್ಲಿ ನೂರಕ್ಕೆ ಹತ್ತು, ಸಾವಿರಕ್ಕೆ ನೂರು, ಹತ್ತು ಸಾವಿರಕ್ಕೆ ಸಾವಿರ ಜನರನ್ನು ತೆಗೆದು ಕೊಂಡು, ಕಳುಹಿಸುತ್ತೇವೆ. ೧೧ ಹೀಗೆಯೇ ಇಸ್ರಯೇಲ್ ಮನುಷ್ಯರೆಲ್ಲರೂ ಒಬ್ಬ ಮನುಷ್ಯನ ಹಾಗೆ ಬಂಧಿಸಲ್ಪಟ್ಟು, ಆ ಪಟ್ಣದ ಮುಂದೆ ಕೂಡಿದರು. ೧೨ ಮತ್ತು ಅಲ್ಲಿಂದ ಇಸ್ರಯೇಲ್ ಕುಲಗಳು ಬೆನ್ಯಮಾನನ ಸಮಸ್ತ ಕುಲದಲ್ಲಿ ಅಳುಗಳನ್ನು ಕಳುಹಿಸಿ, ನಿಮ್ಮಲ್ಲಿ ಮಾಡಿದ ಈ ಕೆಟ್ಟತನವೇನು! ೧೩ ಗಿಬೆಯದಲ್ಲಿರುವ ಬೆಲಿಯಾಳನ ಮಕ್ಕಳಾದ ಆ ಮನುಷ್ಯರನ್ನು ನಾವು ಕೊಲೆ ಮಾಡಿ, ಕೆಟ್ಟತನ ಇಸ್ರಯೇಲಿನಿಂದ ತೆಗೆದು ಹಾಕುವ ಹಾಗೆ, ಅವರನ್ನು ಒಪ್ಪಿಸಿ ಕೊಡಿರಿ, ಎಂದು ಹೇಳ್ಳ ಬೇಕೆಂದರು. ೧೪ ಆದರೆ ಬೆನ್ಯಮಾನನ ಮಕ್ಕಳು ಇಸ್ರಯೇಲ್ ಮಕ್ಕಳಾದ ತಮ್ಮ ಸಹೋದರರ ಮಾತನ್ನು ಕೇಳ್ಳ ಮನಸ್ಸಾಗಿರದೆ, ಇಸ್ರಯೇಲ್ ಮಕ್ಕಳ ಸಂಗಡ ಯುದ್ಧ ಮಾಡ ಹೊರಡುವ ಹಾಗೆ, ಪಟ್ಣಗಳಲ್ಲಿಂದ ಗಿಬೆಯದಲ್ಲಿ ಬಂದು ಕೂಡಿದರು. ೧೫ ಗಿಬೆಯದ ನಿವಾಸಿಗಳಲ್ಲಿ ಆದು ಕೊಲ್ಲಲ್ಪಟ್ಟ ಏಳು ನೂರು ಜನವಾಗಿ ಎಣಿಸಲ್ಪಟ್ಟವರ ಹೊರ್ತಾಗಿ, ಪಟ್ಣಗಳಲ್ಲಿಂದ ಬಂದು ಕೂಡಿದ ಕತ್ತಿ ಕೇಳ್ಳುವ ಮನುಷ್ಯರಾದ ಬೆನ್ಯಮಾನನ ಮಕ್ಕಳು ಆ ಕಾಲದಲ್ಲಿ ಇಪ್ಪತ್ತಾರು ಸಾವಿರ ಜನವಾಗಿ ಎಣಿಸಲ್ಪಟ್ಟರು. ೧೬ ಈ ಸಮಸ್ತ ಜನರಲ್ಲಿ ಆದು ಕೊಲ್ಲಲ್ಪಟ್ಟ ಏಳು ನೂರು ಜನರು ಬಲಗೈ ಅಭ್ಯಾಸವಿಲ್ಲದವರಾಗಿದ್ದರು. ಅವರೆಲ್ಲರೂ ಒಂದು ಕೂದಲೆಳೆ ತಪ್ಪದ ಹಾಗೆ ಕವಣೆಯಿಂದ ಕಲ್ಲೆಸೆಯುವವರಾಗಿದ್ದರು. ೧೭ ಬೆನ್ಯಮಾನನವರ ಹೊರ್ತು, ಇಸ್ರಯೇಲಲ್ಲಿ ಕತ್ತಿ ಕೀಳ್ಳುವ ಮನುಷ್ಯರು ನಾಲ್ಕು ಲಕ್ಷ ಜನರೆಂದು, ಎಣಿಸಲ್ಪಟ್ಟರು. ಇವರೆಲ್ಲರೂ ಯುದ್ಧದ ಮನುಷ್ಯರಾಗಿದ್ದರು.

೧೮ ಆಗ ಇಸ್ರಯೇಲಿನ ಮಕ್ಕಳು ಎದ್ದು, ದೇವರ ಮನೆಗೆ ಹೋಗಿ, ನಮ್ಮಲ್ಲಿ ಮೊದಲು ಬೆನ್ಯಮಾನನ ಮಕ್ಕಳ ಸಂಗಡ ಯುದ್ಧ ಮಾಡ ಹೋಗ ಬೇಕಾದವರು ಯಾರೆಂದು, ದೇವರನ್ನು ಕೇಳಿದರು. ಅದಕ್ಕೆ ಕರ್ತನು, ಯೆಹೂದನು ಮೊದಲು ಹೋಗ ಬೇಕು, ಅಂದನು.

೧೯ ಆಗ ಇಸ್ರಯೇಲಿನ ಮಕ್ಕಳು ಉದಯದಲ್ಲಿ ಎದ್ದು, ಗಿಬೆಯಕ್ಕೆ ಎದುರಾಗಿ ದಂಡಿಳಿದರು. ೨೦ ಮತ್ತು ಇಸ್ರಯೇಲಿನ ಮನುಷ್ಯರು ಬೆನ್ಯಮಾನನ ಸಂಗಡ ಯುದ್ಧ ಮಾಡ ಹೊರಟರು; ಮತ್ತು ಇಸ್ರಯೇಲಿನ ಮನುಷ್ಯರು ಗಿಬೆಯದ ಬಳಿಯಲ್ಲಿ ಯುದ್ಧಕ್ಕೆ ವ್ಯೂಹ ಕಟ್ಟಿದರು. ೨೧ ಆಗ ಬೆನ್ಯಮಾನನ ಮಕ್ಕಳು ಗಿಬೆಯದಿಂದ ಹೊರಟು, ಇಸ್ರಯೇಲಲ್ಲಿ ಇಪ್ಪತ್ತೆರಡು ಸಾವಿರ ಜನರನ್ನು ಆ ದಿವಸದಲ್ಲಿ ನೆಲಕ್ಕೆ ಬೀಳ್ಳ ಕಡಿದರು. ೨೨ ಮತ್ತು ಇಸ್ರಯೇಲ್ ಮನುಷ್ಯರಾದ ಜನರು ಬಲಗೊಂಡು, ಮೊದಲನೇ ದಿವಸ ಯುದ್ಧಕ್ಕೆ ವ್ಯೂಹ ಕಟ್ಟಿದ ಸ್ಥಳದಲ್ಲಿ ತಿರಿಗಿ ವ್ಯೂಹ ಕಟ್ಟಿದರು. ಇಸ್ರಯೇಲ್ ಮಕ್ಕಳು ಕರ್ತನ ಬಳಿಗೆ ಹೋಗಿ, ಅವನ ಮುಂದೆ ಸಾಯಂಕಾಲದ ಪರ್ಯಂತರ ಅತ್ತು, ನಮ್ಮ ಸಹೋದರನಾದ ಬೆನ್ಯಮಾನನ ಮಕ್ಕಳ ಸಂಗಡ ಯುದ್ಧ ಮಾಡ ಹೋಗ ಬೇಕೋ! ಎಂದು ಕರ್ತ

೨೩ ನನ್ನು ಕೇಳಿದರು. ಅದಕ್ಕೆ ಕರ್ತನು, ಅವನ ಮೇಲೆ ಹೋಗಿರಿ,
ಅಂದನು. ಎರಡನೇ ದಿವಸದಲ್ಲಿ ಇಸ್ರಯೇಲ್ ಮನುಷ್ಯರು ಬೆ
೨೪ ನ್ಯಾಮಿನನ ಮಕ್ಕಳ ಬಳಿಗೆ ಬಂದರು. ಆಗ ಬೆನ್ಯಾಮಿನನವರು
ಆ ಎರಡನೇ ದಿವಸದಲ್ಲಿ ಗಿಬೆಯದಲ್ಲಿಂದ ಅವರಿಗೆ ಎದುರಾಗಿ ಹೊ
೨೫ ರಟು ಬಂದು, ಇನ್ನೂ ಇಸ್ರಯೇಲ್ ಮಕ್ಕಳಲ್ಲಿ ಕತ್ತಿ ಕೀಳುವ
ಹದಿನೆಂಟು ಸಾವಿರ ಜನರನ್ನು ನೆಲಕ್ಕೆ ಬೀಳ್ಳ ಕಡಿದರು.

೨೬ ಆಗ ಇಸ್ರಯೇಲ್ ಮಕ್ಕಳೆಲ್ಲರೂ ಸಮಸ್ತ ಜನರೂ ಹೊರ
ಟು, ದೇವರ ಮನೆಗೆ ಬಂದು, ಅತ್ತು, ಅಲ್ಲಿ ಕರ್ತನ ಮುಂದೆ ಕು
ಳಿತು ಕೊಂಡು, ಆ ಸಾಯಂಕಾಲದ ಪರ್ಯಂತರ ಉಪವಾಸವಾ
ಗಿದ್ದು, ಕರ್ತನಿಗೆ ಹೋಮಗಳನ್ನೂ ಸಮಾಧಾನದ ಬಲಿಗಳ
ನ್ನೂ ಅರ್ಪಿಸಿದರು. ಮತ್ತು ಆ ದಿವಸಗಳಲ್ಲಿ ದೇವರ ಒಡಂಬ
೨೭ ಡಿಕೆಯ ಪೆಟ್ಟಿಗೆಯು ಅಲ್ಲಿದ್ದದರಿಂದಲೂ, ಆರೋನನ ಮಗನಾ
ದ ಎಲೆಯೋಜರನ ಮಗನಾದ ಫಿನೆಹಾನನು ಅವರ ಮುಂದೆ ನಿಂತಿ
ದ್ದದರಿಂದಲೂ, ಇಸ್ರಯೇಲ್ ಮಕ್ಕಳು, ನಮ್ಮ ಸಹೋದರನಾದ
೨೮ ಬೆನ್ಯಾಮಿನನ ಮಕ್ಕಳ ಸಂಗಡ ಇನ್ನೂ ಯುದ್ಧ ಮಾಡ ಹೋ
ಗ ಬೇಕೋ! ಬೇಡವೋ! ಎಂದು, ದೇವರನ್ನು ಕೇಳ್ಳ ಕೊಂಡರು.
ಕರ್ತನು, ಹೋಗಿರಿ; ಯಾಕಂದರೆ ನಾಳೆ ಅವರನ್ನು ನಿಮ್ಮ ಕೈ
ಯಲ್ಲಿ ಒಪ್ಪಿಸಿ ಕೊಡುವೆನು, ಅಂದನು.

೨೯ ಮತ್ತು ಇಸ್ರಯೇಲ್ಯರು ಗಿಬೆಯದ ಸುತ್ತಲೂ ಹೊಂಚಿ
೩೦ ಕೊಳ್ಳುವವರನ್ನಿಟ್ಟರು. ಮತ್ತು ಮೂರನೇ ದಿವಸದಲ್ಲಿ ಇಸ್ರ
ಯೇಲ್ ಮಕ್ಕಳು ಬೆನ್ಯಾಮಿನನ ಮಕ್ಕಳಿಗೆ ಎದುರಾಗಿ ಹೋಗಿ,
ಮೊದಲು ಎರಡು ಸಾರಿ ಮಾಡಿದ ಹಾಗೆಯೇ, ಗಿಬೆಯದ ಸಮೀಪ
೩೧ ದಲ್ಲಿ ವ್ಯೂಹವನ್ನು ಕಟ್ಟಿದರು. ಆಗ ಬೆನ್ಯಾಮಿನನ ಮಕ್ಕಳು
ಇಸ್ರಯೇಲ ಜನಕ್ಕೆ ಎದುರಾಗಿ ಹೊರಟು, ಪಟ್ಟಣದ ಬಳಿಯಿಂದ
ಎಳೆಯಲ್ಪಟ್ಟು, ಅಡವಿಯಲ್ಲಿ ಭಾರೀ ಮಾರ್ಗವಾದ ಬೇತೆಲಿಗೂ
ಗಿಬೆಯಕ್ಕೂ ಹೋಗುವ ಎರಡು ಮಾರ್ಗಗಳಲ್ಲಿ ಇಸ್ರಯೇಲ್
ಜನಕ್ಕೊಳ್ಳಗೆ ಪೂರ್ವದ ಹಾಗೆಯೇ ಹೆಚ್ಚು ಕಡಿಮೆ ಮೂವತ್ತು
೩೨ ಜನರನ್ನು ಹೊಡೆದು ಕೊಲ್ಲಲಾರಂಭಿಸಿದಾಗ, ಅವರು ಪೂರ್ವದ
ಹಾಗೆಯೇ ನಮ್ಮ ಮುಂದೆ ಮುರಿಯಲ್ಪಡುತ್ತಾರೆ, ಅಂದು ಕೊಂಡ
ರು. ಆದರೆ ಇಸ್ರಯೇಲ್ ಮಕ್ಕಳು ಅವರನ್ನು ಪಟ್ಟಣದ ಬಳಿಯಿಂ
ದ ಭಾರಿ ಮಾರ್ಗಗಳಿಗೆ ಎಳೆ ಕೊಳ್ಳುವ ಹಾಗೆ, ನಾವು ಓಡಿ
ಹೋಗುವ ಎಂದು, ಅಂದು ಕೊಂಡರು. ಮತ್ತು ಇಸ್ರಯೇಲ್ ಮ
ಕ್ಕಳೆಲ್ಲರೂ ತಮ್ಮ ಸ್ಥಳದಲ್ಲಿಂದ ಎದ್ದು, ಬಾಳೆತಾಮರಿನಲ್ಲಿ ವ್ಯೂ
೩೩ ಹವನ್ನು ಕಟ್ಟಿದರು. ಆಗ ಗಿಬೆಯದ ಗವಿಯಲ್ಲಿ ಹೊಂಚಿ
೩೪ ಕೊಂಡಿದ್ದ ಇಸ್ರಯೇಲ್ಯರು ಹೊರಟು ಬಂದರು. ಅವರಲ್ಲಿ ಆದು
ಕೊಳ್ಳಲ್ಪಟ್ಟ ಹತ್ತು ಸಾವಿರ ಮನುಷ್ಯರು ಗಿಬೆಯಕ್ಕೆ ವಿರೋ
೩೫ ಧವಾಗಿ ಬಂದರು. ಯುದ್ಧವು ಅಭಿಶೋರವಾಗಿತ್ತು. ಆದರೆ ಅ
ವರು, ಕೇಡು ತಮಗೆ ಸಮೀಪವಾಗಿತ್ತೆಂದು ಅರಿಯದೆ ಇದ್ದರು.
ಆಗ ಕರ್ತನು ಇಸ್ರಯೇಲಿನ ಮುಂದೆ ಬೆನ್ಯಾಮಿನನನ್ನು ಮುರಿಯ
ಬಡಿದನು. ಆ ದಿವಸದಲ್ಲಿ ಇಸ್ರಯೇಲ್ ಮಕ್ಕಳು ಬೆನ್ಯಾಮಿನ್ಯ
ರಲ್ಲಿ ಕತ್ತಿ ಕೀಳುವವರಾದ ಇಪ್ಪತ್ತೈದು ಸಾವಿರದ ನೂರು ಮ
ನುಷ್ಯರನ್ನು ನಾಶ ಮಾಡಿದರು.

೩೬ ಮತ್ತು ಬೆನ್ಯಾಮಿನನ ಮಕ್ಕಳು, ತಾವು ಮುರಿಯಲ್ಪಟ್ಟೆವೆಂ
ದು ಕಂಡರು; ಯಾಕಂದರೆ ಇಸ್ರಯೇಲ್ ಮನುಷ್ಯರು ಗಿಬೆಯದ
ಬಳಿಯಲ್ಲಿ ಹೊಂಚಿ ಕೊಳ್ಳ ಇಟ್ಟು ಇದ್ದವರನ್ನು ನಂಬಿ ಇದ್ದದ
೩೭ ರಿಂದ, ಬೆನ್ಯಾಮಿನ್ಯರಿಗೆ ಸ್ಥಳವನ್ನು ಕೊಟ್ಟರು. ಆಗ ಹೊಂಚಿ
ಕೊಂಡಿದ್ದವರು ತೀವ್ರವಾಗಿ ಗಿಬೆಯದ ಮೇಲೆ ಹೊಗ ಬಿದ್ದರು.
ಮತ್ತು ಹೊಂಚಿ ಕೊಂಡಿದ್ದವರು ಸಾಲಾಗಿ ಹೊರಟು, ಪಟ್ಟಣದ
೩೮ ಲ್ಲಿರುವವಕೆಲ್ಲರನ್ನು ಕತ್ತಿಯ ಬಾಯಿಯಿಂದ ಹೊಡೆದರು. ಇಸ್ರ
ಯೇಲ್ ಮನುಷ್ಯರು ಹೊಂಚಿ ಕೊಂಡಿದ್ದವರ ಸಂಗಡ ನೇಮಿಸಿ
ಕೊಂಡ ಗುರುತೇನಂದರೆ, ಪಟ್ಟಣದಲ್ಲಿಂದ ಮಹಾ ದೊಡ್ಡ ಹೊಗೆ
೩೯ ಯನ್ನು ಏಳ್ಳ ಮಾಡುವದೇ. ಇಸ್ರಯೇಲ್ ಮನುಷ್ಯರು ಯು
ದ್ಧದಲ್ಲಿ ಹಿಂದೆಗೆದಾಗ, ಬೆನ್ಯಾಮಿನ್ಯರು ಇಸ್ರಯೇಲ್ಯರನ್ನು
ಹೊಡೆಯ ಪ್ರಾರಂಭಿಸಿ, ಅವರಲ್ಲಿ ಹೆಚ್ಚು ಕಡಿಮೆ ಮೂವತ್ತು
ಜನರನ್ನು ಕೊಂದಾಗ, ಮೊದಲು ಯುದ್ಧದಲ್ಲಿ ಆದ ಹಾಗೆ ನಿಶ್ಚ
ಯವಾಗಿ ಅವರು ನಮ್ಮ ಮುಂದೆ ಮುರಿಯಲ್ಪಡುತ್ತಾರೆ, ಅಂದು
೪೦ ಕೊಂಡರು. ಆದರೆ ಪಟ್ಟಣದೊಳಗಿಂದ ಅಗ್ನಿ ಜ್ವಾಲೆ, ಹೊಗೆಯ
ಸ್ತಂಭ ಸಹಿತವಾಗಿ, ಏಳ್ಳ ಪ್ರಾರಂಭಿಸಿತು. ಬೆನ್ಯಾಮಿನ್ಯರು ಅವ
ನ್ನು ಹಿಂದಕ್ಕೆ ತಿರುಗಿ ನೋಡಿದಾಗ, ಇಗೋ, ಪಟ್ಟಣದ ಜ್ವಾಲೆ
೪೧ ಆಕಾಶಕ್ಕೆ ಏರಿತು. ಮತ್ತು ಇಸ್ರಯೇಲ್ ಮನುಷ್ಯರು ತಿರುಗಿ
ಕೊಂಡು ಬಂದಾಗ, ಬೆನ್ಯಾಮಿನನ ಜನರು ಭಲ್ಲಣ ಪಟ್ಟರು.
ಯಾಕಂದರೆ, ಕೇಡು ತಮ್ಮ ಮೇಲೆ ಸಂಪ್ರಾಪ್ತಿಸಿತೆಂದು, ಕಂಡರು.
೪೨ ಅದದರಿಂದ ಅವರು ಇಸ್ರಯೇಲ್ ಮನುಷ್ಯರ ಮುಂದೆ ಅರಣ್ಯ
ದ ಮಾರ್ಗಕ್ಕೆ ತಿರುಗಿ ಹೋದರು. ಆದರೆ ಯುದ್ಧವು ಅವರ
ನ್ನು ಹತ್ತಿತು. ಮತ್ತು ಪಟ್ಟಣದಿಂದ ಹೊರಟು ಬರುವ ಜನರನ್ನು
೪೩ ಮಧ್ಯದಲ್ಲೇ ಕೊಂದು ಹಾಕಿದರು. ಬೆನ್ಯಾಮಿನ್ಯರನ್ನು ಮುತ್ತಿ
ಕೊಂಡು, ಅವರನ್ನು ಹಿಂದಟ್ಟಿ, ಗಿಬೆಯಕ್ಕೆ ಮೂಡ್ಲ ದಿಕ್ಕಿನಲ್ಲಿ
೪೪ ಅವಕಾಶವಿಲ್ಲದೆ ತುಳಿದು ಹಾಕಿದರು. ಬೆನ್ಯಾಮಿನ್ಯರಲ್ಲಿ ಹದಿ
ನೆಂಟು ಸಾವಿರ ಜನರು ಬಿದ್ದರು. ಇವಕೆಲ್ಲರೂ ಪರಾಕ್ರಮಶಾಲಿ
೪೫ ಗಳಾಗಿದ್ದರು. ಆದರೆ ಅವರು ತಿರುಗಿ ಕೊಂಡು, ಅರಣ್ಯದಲ್ಲಿರು
ವ ರಿಮ್ಮೋನ್ ಗುಡ್ಡಕ್ಕೆ ಓಡಿ ಹೋದರು. ಅದರಲ್ಲಿ ಐದು
ಸಾವಿರ ಜನರನ್ನು ಭಾರೀ ಮಾರ್ಗಗಳಲ್ಲಿ ಅಕ್ಕಲಾರಿಸಿ, ಕೊಂ
ದು ಹಾಕಿದರು. ಕಡಿಮೆಯವರನ್ನು ಗಿದೋಮಿನ ಪರ್ಯಂತರ
ಹಿಂದಟ್ಟಿ, ಅವರಲ್ಲಿ ಎರಡು ಸಾವಿರ ಮನುಷ್ಯರನ್ನು ಹೊಡೆದು
೪೬ ಬಿಟ್ಟರು. ಹೀಗೆಯೇ ಬೆನ್ಯಾಮಿನ್ಯರೊಳ್ಳಗೆ ಆ ದಿವಸದಲ್ಲಿ ಬಿದ್ದ
ವಕೆಲ್ಲರೂ ಕತ್ತಿ ಕೀಳುವ ಇಪ್ಪತ್ತೈದು ಸಾವಿರ ಜನರು, ಇವಕೆಲ್ಲ
೪೭ ರೂ ಪರಾಕ್ರಮಶಾಲಿಗಳಾಗಿದ್ದರು. ಆದರೆ ಆರು ನೂರು ಮಂದಿ
ತಿರುಗಿ ಕೊಂಡು, ಅರಣ್ಯದಲ್ಲಿರುವ ರಿಮ್ಮೋನ್ ಬೆಟ್ಟಕ್ಕೆ ಓಡಿ
ಹೋಗಿ, ರಿಮ್ಮೋನ್ ಗುಡ್ಡದಲ್ಲಿ ನಾಲ್ಕು ತಿಂಗಳು ವಾಸವಾಗಿ
ದ್ದರು.

೪೮ ಇಸ್ರಯೇಲ್ ಜನರು ಬೆನ್ಯಾಮಿನನ ಮಕ್ಕಳ ಮೇಲೆ ತಿರುಗಿ
ಹೋಗಿ, ಪಟ್ಟಣದಲ್ಲಿ ಜನರನ್ನೂ ಪಶುಗಳನ್ನೂ, ಕೈಗೆ ಸಿಕ್ಕಿದ್ದೆಲ್ಲ
ವನ್ನೂ ಕತ್ತಿಯ ಬಾಯಿಯಿಂದ ಹೊಡೆದು, ತಾವು ಹೋದ ಸ
ಮಸ್ತ ಪಟ್ಟಣಗಳನ್ನು ಬೆಂಕಿಯಿಂದ ಸುಟ್ಟು ಬಿಟ್ಟರು.

## ೨೧. ಸಂಧಿ.

೧ ಆದರೆ ಇಸ್ರಯೇಲ್ಯರು, ತಮ್ಮಲ್ಲಿ ಯಾವನಾದರೂ ತನ್ನ
ಮಗಳನ್ನು ಬೆನ್ಯಾಮಿನನ ಮನುಷ್ಯನಿಗೆ ಮದುವೆ ಮಾಡಿ ಕೊ
೨ ಡುವದಿಲ್ಲ ಎಂದು, ಮಿಚ್ಪೆಯಲ್ಲಿ ಆಣೆ ಇಟ್ಟರು. ಆದದರಿಂದ ಜ
ನರು ದೇವರ ಮನೆಗೆ ಬಂದು, ಅಲ್ಲಿ ದೇವರ ಮುಂದೆ ಸಾಯಂಕಾ



೩ ಲದ ಪರ್ಯಂತರವಿದ್ದು, ದೊಡ್ಡ ಅಳ್ಳವಿಕೆಯಿಂದ ಅತ್ತು, ಇಸ್ರ
ಯೇಲಿನ ದೇವರಾದ ಕರ್ತನೇ, ಈ ಹೊತ್ತು ಇಸ್ರಯೇಲಿನಲ್ಲಿ
ಒಂದು ಕುಲ ಕೊರತೆಯಾದ ಕಾರ್ಯವೇನು! ಅಂದರು.

೪ ಜನರು ಮಾರನೆ ದಿವಸ ಉದಯದಲ್ಲಿ ಎದ್ದು, ಅಲ್ಲಿ ಬಲಿಪೀ
ಠವನ್ನು ಕಟ್ಟಿ, ಹೋಮಗಳನ್ನೂ ಸಮಾಧಾನದ ಬಲಿಗಳನ್ನೂ
ಅರ್ಪಿಸಿದರು.

೫ ಅದರೆ ಇಸ್ರಯೇಲ್ ಮಕ್ಕಳು—ಕರ್ತನ ಬಳಿಗೆ ಸಭೆಯೊಂದಿ
ಗೆ ಇಸ್ರಯೇಲಿನ ಸಮಸ್ತ ಕುಲಗಳಲ್ಲಿ ಬಾರದವರು ಯಾರು!
ಅಂದರು. ಯಾಕಂದರೆ ಕರ್ತನ ಬಳಿಗೆ ಮಿಚ್ಪೆಗೆ ಬಾರದವನು
ಸಾಯಲೇ ಸಾಯ ಬೇಕೆಂದು, ದೊಡ್ಡ ಆಣೆ ಇಟ್ಟು ಕೊಂಡಿದ್ದ
೬ ರು. ಆಗ ಇಸ್ರಯೇಲ್ ಮಕ್ಕಳು ತಮ್ಮ ಸಹೋದರನಾದ ಬೆ
ನ್ಯಾಮಿನನ ವಿಷಯವಾಗಿ ಪಶ್ಚಾತ್ತಾಪ ಪಟ್ಟು, ಹೇಳ್ಳಿದ್ದೇನಂದರೆ,
ಈ ಹೊತ್ತು ಇಸ್ರಯೇಲಿನಲ್ಲಿ ಒಂದು ಕುಲ ಛೇದಿಸಲ್ಪಟ್ಟು ಹೋ
೭ ಯಿತು. ನಾವು ನಮ್ಮ ಕುಮಾರ್ತೆಗಳಲ್ಲಿ ಒಬ್ಬಳನ್ನಾದರೂ
ಅವರಿಗೆ ಕೊಡುವದಿಲ್ಲವೆಂದು, ನಾವು ಕರ್ತನ ಮೇಲೆ ಆಣೆ ಇ
ಟ್ಟು ಕೊಂಡದರಿಂದ, ಉಳಿದವರಿಗೆ ಹೆಂಡರು ದೊರಕ ನಾವು ಅವ
೮ ರಿಗೋಸ್ಕರ ಏನು ಮಾಡುವ! ಮತ್ತು ಇಸ್ರಯೇಲಿನ ಕುಲಗಳಲ್ಲಿ
ಮಿಚ್ಪೆಗೆ ಕರ್ತನ ಬಳಿಗೆ ಬಾರದವರು ಯಾರಾದರೂ ಒಬ್ಬರುಂ
ಟೋ? ಅಂದರು.

೯ ಆಗ, ಇಗೋ, ಯಾಬೆಷ್ ಗಿಲ್ಯಾದಿನವರಲ್ಲಿ ಒಬ್ಬನಾದರೂ
ಸಭೆಯ ಬಳಿಗೆ ದಂಡಿಗೆ ಬಂದದ್ದಿಲ್ಲವು. ಮತ್ತು ಜನರು ಲೆಖ್ಖ
೧೦ ಮಾಡಲ್ಪಟ್ಟಾಗ, ಇಗೋ, ಯಾಬೆಷ್ ಗಿಲ್ಯಾದಿನಲ್ಲಿ ಇರುವವರ
ಲ್ಲಿ ಒಬ್ಬನಾದರೂ ಇದ್ದದ್ದಿಲ್ಲ. ಆಗ ಸಭೆಯು ಪರಾಕ್ರಮ ಶಾಲಿ
ಗಳಲ್ಲಿ ಹನ್ನೆರಡು ಸಾವಿರ ಮನುಷ್ಯರನ್ನು ಅಲ್ಲಿಗೆ ಕಳ್ಳಹಿಸು
ವಾಗ, ಅವರಿಗೆ, ನೀವು ಹೋಗಿ, ಯಾಬೆಷ್ ಗಿಲ್ಯಾದಿನ ನಿವಾಸಿ
ಗಳನ್ನೂ, ಸ್ತ್ರೀಯರನ್ನೂ ಚಿಕ್ಕವರನ್ನೂ ಕೂಡಾ ಕತ್ತೀ ಬಾ
೧೧ ಯಿಯಿಂದ ಹೊಡೆದು ಬಿಡಿರಿ. ಮತ್ತು ಮಾಡ ಬೇಕಾದ್ದೇನಂದ
ರೆ, ಎಲ್ಲಾ ಗಂಡಸರನ್ನೂ, ಅವನ ಸಂಗಡ ಮಲಗಿ ಪುರುಷನ
ನ್ನು ಅರಿತ ಸ್ತ್ರೀಯರನ್ನೂ ನಿರ್ಮೂಲ ಮಾಡಿರೆಂದು, ಆಜ್ಞಾಪಿ
೧೨ ಸಿದರು. ಹಾಗೆಯೇ ಯಾಬೆಷ್ ಗಿಲ್ಯಾದಿನ ನಿವಾಸಿಗಳಲ್ಲಿ ಅವ
ರ ಸಂಗಡ ಮಲಗುವದರಿಂದ ಪುರುಷರನ್ನು ಅರಿಯದೆ ಇರುವ
ನಾನೂರು ಮಂದಿ ಪ್ರಾಯದ ಕನ್ನಿಕೆಗಳನ್ನು ಕಂಡು ಕೊಂಡು,
ಅವರನ್ನು ಕಾನಾನ್ ದೇಶದಲ್ಲಿರುವ ಶಿಲೋಹಿನಲ್ಲಿದ್ದ ದಂಡಿಗೆ
ತಂದರು.

೧೩ ಆಗ ಸಭೆಯವಕೆಲ್ಲರೂ ರಿಮ್ಮೋನ್ ಗುಡ್ಡದಲ್ಲಿರುವ ಬೆನ್ಯಾ
೧೪ ಮಿನನ ಮಕ್ಕಳ ಸಂಗಡ ಮಾತಾಡಲೂ, ಅವರಿಗೆ ಸಮಾಧಾ
ನವನ್ನು ಹಾರಲೂ ಕೆಲಬರನ್ನು ಕಳ್ಳುಹಿಸಿದರು. ಆ ಕಾಲದಲ್ಲಿ
ಬೆನ್ಯಾಮಿನ್ಯರು ತಿರಿಗಿ ಅವರ ಬಳ್ಳಗೆ ಬಂದರು. ಅವರು ಯಾಬೆಷ್
ಗಿಲ್ಯಾದಿನ ಸ್ತ್ರೀಯರಲ್ಲಿ ಜೀವದಿಂದ ಉಳ್ಳಿಸಿದ ಸ್ತ್ರೀಯರನ್ನು ಅ
ವರಿಗೆ ಹೆಂಡರಾಗಿ ಕೊಟ್ಟರು. ಆದರೆ ಅವರಿಗೆ ತಕ್ಕಷ್ಟು ಹೆಂಡರು
೧೫ ಸಿಕ್ಕಲಿಲ್ಲ. ಮತ್ತು ಕರ್ತನು ಇಸ್ರಯೇಲ ಕುಲಗಳಲ್ಲಿ ಹರಕು
ಮಾಡಿದ್ದದಿಂದ, ಜನರು ಬೆನ್ಯಾಮಿನನಿಗಾಗಿ ಪಶ್ಚಾತ್ತಾಪ ಪಟ್ಟರು.

೧೬ ಮತ್ತು ಸಭೆಯ ಹಿರಿಯರು, ಬೆನ್ಯಾಮಿನನ ಕುಲದ ಸ್ತ್ರೀಯ
ರು ನಾಶನವಾದದರಿಂದ, ಕಡಿಮೆ ಜನರಿಗೆ ಹೆಂಡರು ದೊರಕುವದ
ಕ್ಕಾಗಿ, ಏನು ಮಾಡುವ! ಅಂದರು. ಮತ್ತು ಇಸ್ರಯೇಲಿನಲ್ಲಿ
೧೭ ಒಂದು ಕುಲವು ಅಳ್ಳದು ಹೋಗದ ಹಾಗೆ, ತಪ್ಪಿಸಿ ಕೊಂಡ ಬೆನ್ಯ
ಮಿನ್ಯರಿಗೆ ಬಾಧ್ಯತೆ ಇರ ಬೇಕು. ನಾವಾದರೆ, ನಮ್ಮ ಕುಮಾ
ರ್ತೆಗಳಲ್ಲಿ ಅವರಿಗೆ ಹೆಣ್ಣು ಕೊಡ ಕೂಡದು. ಯಾಕಂದರೆ,
ಬೆನ್ಯಾಮಿನ್ಯರಿಗೆ ಹೆಣ್ಣು ಕೊಡುವವನು ಶಪಿಸಲ್ಪಡತೆಂದು, ಇಸ್ರ
ಯೇಲಿನ ಮಕ್ಕಳು ಆಣೆ ಇಟ್ಟು ಕೊಂಡಿದ್ದಾರೆ, ಅಂದರು.

೧೮ ಮತ್ತು ಅವರು ಇಗೋ, ಬೇತೆಲಿಗೆ ಉತ್ತರದಲ್ಲಿಯೂ ಬೇತೆ
ಲಿನಿಂದ ಶೆಕೆಮಿಗೆ ಹೋಗುವ ಭಾರೀ ಮಾರ್ಗದ ಮೂಡ್ಲಲ್ಲಿ
ಯೂ ಲೆಬೊನಕ್ಕೆ ದಕ್ಷಿಣದಲ್ಲಿರುವ ಶಿಲೋಹಿನಲ್ಲಿ ಪ್ರತಿ ವರು
ಷ ಕರ್ತನ ಹಬ್ಬ ಉಂಟೆಂದು, ಹೇಳ್ಳಿದರು. ಅವರು ಬೆನ್ಯಾಮಿನನ
ಮಕ್ಕಳಿಗೆ, ನೀವು ಹೋಗಿ, ದ್ರಾಕ್ಷೇ ತೋಟಗಳಲ್ಲಿ ಹೊಂಚಿ
೧೯ ಕೊಂಡಿರ್ರಿ. ಇಗೋ, ಶಿಲೋಹಿನ ಕುಮಾರ್ತೆಗಳು ನಾಟ್ಯವಾ
ಡುತ್ತಾ ಹೊರಟು ಬರುವರು; ನೀವು ಅವರನ್ನು ನೋಡಿದಾಗ,
ದ್ರಾಕ್ಷೇ ತೋಟಗಳಿಂದ ಹೊರಟು, ನಿಮ್ಮಲ್ಲಿ ಅವನವನು ಶಿ
ಲೋಹಿನ ಕುಮಾರ್ತೆಗಳಲ್ಲಿ ತನಗೆ ಹೆಂಡತಿಯಾಗಿ ಒಬ್ಬೊಬ್ಬಳ
ನ್ನು ಹಿಡು ಕೊಂಡು, ಬೆನ್ಯಾಮಿನನ ದೇಶಕ್ಕೆ ಹೋಗಿರಿ, ಎಂದು
೨೦ ಆಜ್ಞಾಪಿಸಿದರು. ಮತ್ತು ಅವರ ತಂದೆಗಳಾದರೂ ಅವರ ಸ
ಹೋದರರಾದರೂ ನಮ್ಮ ಸಂಗಡ ವ್ಯಾಜ್ಯವಾಡ ಬಂದರೆ, ನಾವು
ಅವರಿಗೆ, ಯುದ್ಧದಲ್ಲಿ ನಾವು ಅವನವನಿಗೆ ಹೆಂಡತಿಯನ್ನು ತ
ಕ್ಕೊಳ್ಳದ ಕಾರಣ, ನಮಗೋಸ್ಕರ ಅವರ ಮೇಲೆ ದಯ
ಮಾಡಿರಿ. ಯಾಕಂದರೆ ನೀವು ಈ ವೇಳೆಯಲ್ಲಿ ಅವರಿಗೆ ಕೊಡ
ಲಿಲ್ಲ; ಅಪರಾಧಸಾಗಲಿಲ್ಲ ಎಂಬದಾಗಿ ಹೇಳುತ್ತೇವೆ, ಅಂದರು.
೨೩ ಆಗ ಬೆನ್ಯಾಮಿನನ ಮಕ್ಕಳು ಅದೇ ಪ್ರಕಾರ ಮಾಡಿ, ನಾಟ್ಯವಾ
ಡುವ ಹೆಣ್ಣುಗಳಲ್ಲಿ ತಮ್ಮ ಲೆಖ್ಖಕ್ಕೆ ಸರಿಯಾಗಿ ಹಿಡುಕೊಂಡವ
ರನ್ನು ಅವನವನು ತನಗೆ ಹೆಂಡತಿಯಾಗಿ ತಕ್ಕೊಂಡು, ತಮ್ಮ
ಬಾಧ್ಯತೆಗೆ ತಿರುಗಿ ಕೊಂಡು ಹೋಗಿ, ಪಟ್ಟಣಗಳನ್ನು ಕಟ್ಟಿ, ಅವು
೨೪ ಗಳಲ್ಲಿ ವಾಸಿಸಿದರು. ಇಸ್ರಯೇಲ್ ಮಕ್ಕಳು ಆ ಕಾಲದಲ್ಲಿ ಆ
ಸ್ಥಳವನ್ನು ಬಿಟ್ಟು, ತಮ್ಮ ತಮ್ಮ ಕುಲಗಳಿಗೂ ತಮ್ಮ ತಮ್ಮ
ಗೋತ್ರಗಳಿಗೂ ಹೋದರು. ಅಲ್ಲಿಂದ ಒಬ್ಬೊಬ್ಬನು ತನ್ನ ಬಾ
ಧ್ಯತೆಗೆ ಹೊರಟು ಹೋದನು.

೨೫ ಆ ದಿವಸಗಳಲ್ಲಿ ಇಸ್ರಯೇಲಿನಲ್ಲಿ ಅರಸನು ಇಲ್ಲ; ಒಬ್ಬೊಬ್ಬ
ನು ತನ್ನ ಕಣ್ಣುಗಳಿಗೆ ಸರಿಯಾಗಿ ತೋಚಿದ್ದನ್ನು ಮಾಡಿ
ದನು.

# THE BOOK OF RUTH.

## ರೂತಳು.

### ೧. ಸಂಧಿ.

೧ ನ್ಯಾಯಾಧಿಪತಿಗಳು ನ್ಯಾಯ ತೀರಿಸುವ ದಿನಗಳಲ್ಲಿ ದೇಶ
ದೊಳಗೆ ಬರ ಉಂಟಾಗಿದ್ದಾಗ, ಆದದ್ದೇನಂದರೆ, ಯೆಹೂದದ
ಬೇತ್ಲೆಹೇಮಿನವನಾದ ಒಬ್ಬ ಮನುಷ್ಯನು ತನ್ನ ಹೆಂಡತಿಯ
ನ್ನೂ ತನ್ನ ಇಬ್ಬರು ಮಕ್ಕಳನ್ನೂ ತಕ್ಕೊಂಡು, ಮೋವಾಬ್
೨ ದೇಶದಲ್ಲಿ ಪರವಾಸ ಮಾಡ ಹೋದನು. ಆ ಮನುಷ್ಯನ ಹೆಸ
ರು ಎಲಿಮೆಲೆಕನು; ಅವನ ಹೆಂಡತಿಯ ಹೆಸರು ನವೋಮಿ, ಅವ
ನ ಮಕ್ಕಳಲ್ಲಿ ಒಬ್ಬನ ಹೆಸರು ಮಹ್ಲೋನನು, ಮತ್ತೊಬ್ಬನ ಹೆ
ಸರು ಕಿಲ್ಯೋನನು. ಇವರು ಎಫ್ರಾತ್ಯರಾದ ಯೆಹೂದದ ಬೇತ್ಲೆ
ಹೇಮಿನವರಾಗಿದ್ದರು. ಇವರು ಮೋವಾಬ್ ದೇಶಕ್ಕೆ ಬಂದು, ಅ
ಲ್ಲಿ ಇದ್ದರು.
೩ ಆದರೆ ನವೋಮಿಯ ಗಂಡನಾದ ಎಲಿಮೆಲೆಕನು ಸತ್ತು ಹೋ
೪ ದನು; ಅವಳೂ ಅವಳ ಇಬ್ಬರು ಮಕ್ಕಳೂ ಉಳಿದಿದ್ದರು. ಇವ
ರು ಒರ್ಪಳೂ ರೂತಳೂ ಎಂಬ ಹೆಸರುಗಳುಳ್ಳ ಮೋವಾಬ್ ದೇ
ಶದ ಸ್ತ್ರೀಯರನ್ನು ತಮಗೆ ಹೆಂಡತಿಯಾಗಿ ತಕ್ಕೊಂಡು, ಹೆಚ್ಚು ಕಡಿ
೫ ಮೆ ಹತ್ತು ವರುಷ ಅಲ್ಲಿ ವಾಸವಾಗಿದ್ದರು. ಮತ್ತು ಮಹ್ಲೋನನೂ
ಕಿಲ್ಯೋನನೂ, ಅವರಿಬ್ಬರೂ ಸತ್ತು ಹೋದರು; ಆ ಸ್ತ್ರೀಯು
ತನ್ನ ಇಬ್ಬರು ಕುಮಾರರನ್ನೂ ತನ್ನ ಗಂಡನನ್ನೂ ಕಳೆಕೊಂ
೬ ಡು, ಉಳಿದವಳಾದಳು. ಆದರೆ ಕರ್ತನು ತನ್ನ ಜನರಿಗೆ ಆಹಾರ
ವನ್ನು ಕೊಡುವ ಹಾಗೆ, ಅವರನ್ನು ದರ್ಶಿಸಿದನೆಂದು, ಅವಳು
ಮೋವಾಬ್ ದೇಶದಲ್ಲಿ ಕೇಳಿದ್ದರಿಂದ, ಅವಳು ತನ್ನ ಸೊಸೆಗಳ
ಸಂಗಡ ಮೋವಾಬ್ ದೇಶದಿಂದ ಯೆಹೂದ ದೇಶಕ್ಕೆ ತಿರಿಗಿ ಹೋ
ಗುವದಕ್ಕೋಸ್ಕರ, ಪ್ರಯಾಣವಾಗಿ ತಾನು ಇದ್ದ ಸ್ಥಳವನ್ನು
೭ ಬಿಟ್ಟು, ಹೊರಟಳು. ಅವಳ ಇಬ್ಬರು ಸೊಸೆಯರು ಅವಳ ಸಂ
ಗಡ ಹೊರಟು, ಯೆಹೂದ ದೇಶಕ್ಕೆ ತಿರಿಗಿ ಹೋಗ ಅವರು
೮ ಮಾರ್ಗದಲ್ಲಿ ನಡೆಯುವಾಗ, ನವೋಮಿ ತನ್ನ ಇಬ್ಬರು ಸೊ
ಸೆಯರಿಗೆ, ನೀವು, ಬಬ್ಬೊಬ್ಬಿಳು ತನ್ನ ತಾಯಿಯ ಮನೆಗೆ,
ತಿರಿಗಿ ಹೋಗಿರಿ. ನೀವು ಸತ್ತವರಿಗೂ ನನಗೂ ಮಾಡಿದ ಹಾಗೆ
ಯೇ, ಕರ್ತನು ನಿಮಗೆ ಕೃಪೆಯಿಂದ ಮಾಡಲಿ. ಕರ್ತನು ನಿ
೯ ಮ್ಮಲ್ಲಿ ಒಬ್ಬೊಬ್ಬಳಿಗೆ ತನ್ನ ಗಂಡನ ಮನೆಯಲ್ಲಿ ವಿಶ್ರಾಂತಿ
ಹೊಂದ ಮಾಡಲಿ, ಅಂದಳು. ಮತ್ತು ಅವರನ್ನು ಮುದ್ದಿಟ್ಟು
೧೦ ಕೊಂಡಳು. ಆಗಲವರು ಶಬ್ದವನ್ನೆತ್ತಿ, ಅತ್ತು, ಅವಳಿಗೆ, ನಿಶ್ಚ
ಯವಾಗಿ ನಿನ್ನ ಜನರ ಬಳಿಗೆ ನಿನ್ನ ಸಂಗಡ ತಿರಿಗಿ ಬರುತ್ತೇವೆ,
ಅಂದರು.
೧೧ ಅದಕ್ಕೆ ನವೋಮಿ, ನನ್ನ ಕುಮಾರ್ತೆಗಳ್ಳೇ, ನೀವು ಹಿಂದಕ್ಕೆ
ಹೋಗಿರಿ; ನನ್ನ ಸಂಗಡ ಯಾಕೆ ಬರುತ್ತೀರಿ! ನಿಮಗೆ ಗಂಡಂ
ದಿರಾಗುವ ಹಾಗೆ, ಇನ್ನು ನನ್ನ ಗರ್ಭದಲ್ಲಿ ನನಗೆ ಮಕ್ಕಳು ಉಂ
೧೨ ಟೋ! ನನ್ನ ಕುಮಾರ್ತೆಗಳ್ಳೇ, ನೀವು ಹಿಂದಕ್ಕೆ ಹೋಗಿರಿ;
ಯಾಕಂದರೆ ನಾನು ಒಬ್ಬ ಗಂಡನಿಗೆ ಹೆಂಡತಿಯಾಗಲಿಕ್ಕೆ ಪ್ರಾ
ಯವು ಹೋದವಳು. ಒಂದು ವೇಳೆ ನಿರೀಕ್ಷಣೆ ನನಗೆ ಉಂಟೆಂ
ದು ಹೇಳಿ, ನಾನು ಈ ಹೊತ್ತಿನ ರಾತ್ರಿಯಲ್ಲಿ ಒಬ್ಬ ಗಂಡನಿಗೆ
ಶೇರಿ, ನಾನು ಮಕ್ಕಳನ್ನು ಹೆತ್ತರೂ, ಅವರು ದೊಡ್ಡವರಾಗುವ
೧೩ ಪರ್ಯಂತರ ಕಾದು ಕೊಳ್ಳುವಿರೋ! ಗಂಡನಿಲ್ಲದೆ ನೀವು ತಾಳಿ
ಕೊಂಡಿರುವಿರೋ! ಇಲ್ಲ, ನನ್ನ ಕುಮಾರ್ತೆಗಳ್ಳೇ; ಯಾಕಂದರೆ
ಕರ್ತನ ಕೈಯು ನನ್ನ ಮೇಲೆ ಹೊರಟಿದ್ದರಿಂದ, ನಿಮಗಿಂತ ನನ
೧೪ ಗೆ ಬಹು ಕಹಿಯಾಗಿದೆ, ಅಂದಳು. ಆಗಲವರು ತಿರಿಗಿ ಶಬ್ದವನ್ನೆ
ತ್ತಿ, ಅತ್ತರು. ಒರ್ಪಳು ತನ್ನ ಅತ್ತೆಯನ್ನು ಮುದ್ದಿಟ್ಟು ಕೊಂಡ
ಳು; ಆದರೆ ರೂತಳು ಅವಳನ್ನು ಅಂಟಿ ಕೊಂಡಳು.
೧೫ ಆಗಲವಳು, ಇಗೋ, ನಿನ್ನ ನೆಗೆ ಹೆಣ್ಣು ತನ್ನ ಜನರ ಬಳಿ
ಗೂ ತನ್ನ ದೇವರುಗಳ ಬಳಿಗೂ ತಿರಿಗಿ ಹೋದಳು; ನೀನೂ ನಿ
೧೬ ನ್ನ ನೆಗೆ ಹೆಣ್ಣಿನ ಹಿಂದೆ ಹೋಗು, ಅಂದಳು. ಅದಕ್ಕೆ ರೂತಳು,
ನಿನ್ನನ್ನು ಬಿಟ್ಟು, ಹಿಂದಕ್ಕೆ ಹೋಗ, ನನ್ನನ್ನು ಬೇಡಿ
ಕೊಳ್ಳ ಬೇಡ; ಯಾಕಂದರೆ ನೀನು ಎಲ್ಲಿ ಹೋಗುವಿಯೋ,
ನಾನು ಅಲ್ಲಿಗೆ ಬರುವೆನು; ನೀನು ಎಲ್ಲಿ ಇಳು ಕೊಳ್ಳುವಿಯೋ,
ನಾನು ಅಲ್ಲಿ ಇಳು ಕೊಳ್ಳುವೆನು; ನಿನ್ನ ಜನರೇ ನನ್ನ ಜನರು;
೧೭ ನಿನ್ನ ದೇವರೇ ನನ್ನ ದೇವರು. ನೀನು ಎಲ್ಲಿ ಸಾಯುತ್ತೀಯೋ,
ಅಲ್ಲಿ ನಾನು ಸತ್ತು, ಹೂಣಲ್ಪಡುವೆನು. ಮರಣವು ಮಾತ್ರ ನಿನ
ಗೂ ನನಗೂ ಪ್ರತ್ಯೇಕಿಸದಿದ್ದರೆ, ಕರ್ತನು ನನಗೆ ಹೀಗೆ ಹಾಗೆ
೧೮ ಮಾಡುತ್ತಾ ಬರಲಿ, ಅಂದಳು. ಅವಳು ತನ್ನ ಸಂಗಡ ಬರ
ದೃಢವಾಗಿರುವದನ್ನು ಕಂಡಾಗ, ಅವಳ ಸಂಗಡ ಮಾತಾಡಕೆ
ಹೋದಳು.
೧೯ ಹಾಗೆಯೇ ಇಬ್ಬರೂ ಬೇತ್ಲೆಹೇಮಿನ ಮಟ್ಟಿಗೂ ನಡೆದು ಹೋ
ದರು. ಅವರು ಬೇತ್ಲೆಹೇಮಿನಲ್ಲಿ ಪ್ರವೇಶಿಸುವಾಗ, ಆ ಪಟ್ಟಣವೆಲ್ಲಾ
ಇವರಿಗೋಸ್ಕರ ಗದ್ದಲಾಗಿ, ಇವಳು ನವೋಮಿಯೋ! ಅಂದರು.
೨೦ ಆಗಲಿವಳು ಅವರಿಗೆ, ನೀವು ನನ್ನನ್ನು ನವೋಮಿ ಎಂದು ಕರೆಯ
ಬೇಡಿರಿ; ಮಾರಾಳೆಂದು ಕರೆಯಿರಿ; ಯಾಕಂದರೆ ಸರ್ವಶಕ್ತನು
೨೧ ನನಗೆ ಬಹು ಕಹಿಯಾಗಿ ನಡಿಸಿದನು. ನಾನು ಪರಿಪೂರ್ಣಾಗಿ
ಹೊರಟು ಹೋದೆನು; ಕರ್ತನು ನನ್ನನ್ನು ಏನೂ ಇಲ್ಲದೆ ತಿರಿಗಿ
ಬರ ಮಾಡಿದ್ದಾನೆ. ಕರ್ತನು ನನಗೆ ವಿರೋಧವಾಗಿ ಸಾಕ್ಷಿ ಕೊ
ಟ್ಟು, ಸರ್ವಶಕ್ತನು ನನಗೆ ಕೇಡು ಮಾಡಿರುವಾಗ್ಯೆ, ನೀವು ನನ್ನ
ನ್ನು ನವೋಮಿ ಎಂದು ಕರೆಯುವದೇನು! ಅಂದಳು.
೨೨ ಈ ಪ್ರಕಾರ ನವೋಮಿ ಮೋವಾಬ್ ದೇಶಸ್ಥಳಾದ ರೂತೆಂಬ
ತನ್ನ ಸೊಸೆಯ ಸಂಗಡ ಮೋವಾಬ್ ದೇಶದಿಂದ ತಿರಿಗಿ ಬಂದಳು.
ಇದ್ದಲ್ಲದೆ ಅವರು ಜವೆಗೋಧಿಯ ಸುಗ್ಗಿಯ ಕಾಲ ಪ್ರಾರಂಭಿಸಿ
ದಾಗ, ಬೇತ್ಲೆಹೇಮಿಗೆ ಬಂದರು.

### ೨. ಸಂಧಿ.

೧ ಮತ್ತು ನವೋಮಿಯ ಗಂಡನಾದ ಎಲಿಮೆಲೆಕನ ಗೋತ್ರದಲ್ಲಿ
ಬೋವಜನು ಎಂಬ ಹೆಸರುಳ್ಳ ಒಬ್ಬ ಪರಾಕ್ರಮವುಳ್ಳ ಸ್ಥಿತಿವಂತ
೨ ನಾಗಿರುವ ನೆಂಟನಿದ್ದನು. ಮೋವಾಬ್ಯಳಾದ ರೂತಳು ನವೋಮಿ
ಗೆ, ನಾನು ಹೊಲಕ್ಕೆ ಹೋಗಿ, ಯಾವನ ಕಟಾಕ್ಷ ನನಗೆ ಲಗು
ವದೋ, ಅವನ ಹೊಲದಲ್ಲಿ ಹಕ್ಕಲ ಶೆನೆಗಳನ್ನು ಆದು ಕೊಳ್ಳ



ವೆನು, ಅಂದಳು. ಅದಕ್ಕೆವಳು, ನನ್ನ ಮಗಳ್ಳೇ, ಹೋಗು, ಅಂ
೩ ದಳು. ಅವಳು ಹೋಗಿ, ಹೊಲದಲ್ಲಿ ಕೊಯ್ಯುವವರ ಹಿಂದೆ
ಹಕ್ಕಲಾದು ಕೊಂಡಳು. ಅವಳಿಗೆ ಪ್ರಾಪ್ತಿಯಾಗಿ ಪ್ರಾಪ್ತಿಸಿದ
ಆ ಹೊಲದ ಭಾಗ ಎಲಿಮೆಲೆಕನ ಗೋತ್ರದವನಾದ ಬೋವಜನ
ದಾಗಿತ್ತು.
೪ ಮತ್ತು, ಇಗೋ, ಬೋವಜನು ಬೇತ್ಲೆಹೇಮಿನಿಂದ ಬಂದು,
ಕೊಯ್ಯುವವರಿಗೆ, ಕರ್ತನು ನಿಮ್ಮ ಸಂಗಡ ಇರಲಿ, ಅಂದನು.
೫ ಅದಕ್ಕೆ ಅವರು, ಕರ್ತನು ನಿನ್ನನ್ನು ಆಶೀರ್ವದಿಸಲಿ, ಅಂದರು.
ಮತ್ತು ಬೋವಜನು ಕೊಯ್ಯುವವರ ಮೇಲೆ ಮೇಲ್ಗಾವಲಿಯಾ
ಗಿ ಇಟ್ಟ ತನ್ನ ಸೇವಕನಿಗೆ, ಈ ಹುಡುಗಿ ಯಾರವಳು? ಅಂದನು.
೬ ಅದಕ್ಕೆ ಕೊಯ್ಯುವವರ ಮೇಲೆ ಮೇಲ್ಗಾವಲಿಯಾಗಿ ಇಡಲ್ಪಟ್ಟ
ಆ ಸೇವಕನು ಪ್ರತ್ಯುತ್ತರವಾಗಿ, ಇವಳು ಮೋವಾಬ್ ದೇಶದಿಂ
೭ ದ ನವೋಮಿಯ ಸಂಗಡ ಬಂದ ಮೋವಾಬ್ಯಳಾದ ಹುಡುಗಿ. ಆ
ದರೆ ಇವಳು, ಕೊಯ್ಯುವವರ ಹಿಂದೆ ಕೊಯಿದ ಸೂಡುಗಳ್ಳಲ್ಲಿ
ನಾನು ಹಕ್ಕಲಾರಿಸಿ ಕೊಳ್ಳಲೂ, ಕೂಡಿಸಿ ಕೊಳ್ಳಲೂ, ಅಪ್ಪಣೆ
ಆಗ ಬೇಕು, ಅಂದಳು. ಮತ್ತು ಮನೆಯಲ್ಲಿ ಕ್ಷಣ ಮಾತ್ರವಿದ್ದು,
ಬೆಳಗಿನಿಂದ ಈ ವರಿಗೂ ಇಲ್ಲಿಯೇ ಇದ್ದಾಳೆ, ಅಂದನು.
೮ ಆಗ ಬೋವಜನು ರೂತಳ್ಳಿಗೆ, ನನ್ನ ಮಗಳ್ಳೇ, ನನ್ನ ಮಾತು
ಕೇಳುತ್ತೀಯಾ? ನೀನು ಹಕ್ಕಲಾದು ಕೊಳ್ಳ ಅನ್ಯರ ಹೊಲಕ್ಕೆ
ಹೋಗದೆ, ಈ ಸ್ಥಳವನ್ನು ಬಿಟ್ಟು ಹೊರಡದೆ, ಇಲ್ಲಿಯೇ ನನ್ನ
೯ ದಾಸಿಗಳ ಸಂಗಡ ಕೂಡಿ ಕೊಂಡಿರು. ನಿನ್ನ ಕಣ್ಣುಗಳು ಅವರು
ಕೊಯ್ಯುವ ಹೊಲದ ಮೇಲೆ ಇರಲಿ; ಅವರ ಹಿಂದೆಯೇ ಹೋ
ಗು. ಯಾವನಾದರೂ ನಿನ್ನನ್ನು ಮುಟ್ಟಿದ ಹಾಗೆ ಅವರಿಗೆ ಆ
ಜ್ಞಾಪಿಸಿದ್ದೇನಲ್ಲ? ನಿನಗೆ ದಾಹವಾದರೆ, ನೀನು ಗಡಿಗೆಗಳ ಬಳಿಗೆ
ಹೋಗಿ, ಪ್ರಾಯಸ್ಥರು ಕೇದಿಟ್ಟ ನೀರನ್ನು ಕುಡಿ, ಅಂದನು.
೧೦ ಆಗ ಅವಳು ಮೋಕೆ ಕೆಳಗಾಗಿ ಬಿದ್ದು, ವಂದಿಸಿ, ಅವನಿಗೆ, ನಾ
ನು ಅನ್ಯಳಾಗಿರುವಾಗ, ನೀನು ನನ್ನನ್ನು ತಿಳು ಕೊಳ್ಳ ನನ್ನ
೧೧ ಮೇಲೆ ನಿನ್ನ ಕಟಾಕ್ಷವಾದದ್ದು ಹ್ಯಾಗೆ! ಅಂದಳು. ಆಗ ಬೋವ
ಜನು ಅವಳಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ನಿನ್ನ ಗಂಡನು
ಸತ್ತ ತರುವಾಯ, ನೀನು ನಿನ್ನ ಅತ್ತೆಗೋಸ್ಕರ ಮಾಡಿದ್ದೆಲ್ಲವೂ,
ನೀನು ನಿನ್ನ ತಂದೆ ತಾಯಿಗಳನ್ನೂ, ನೀನು ಹುಟ್ಟಿದ ದೇಶವ
ನ್ನೂ ಬಿಟ್ಟು, ನೀನು ಎಂದಿಗೂ ಅರಿಯದ ಜನರ ಬಳಿಗೆ ಬಂದ
೧೨ ದ್ದೂ ನನಗೆ ಚನಾಗಿ ತಿಳಿಸಲ್ಪಟ್ಟವು. ನೀನು ಮಾಡಿದ್ದಕ್ಕೆ
ಕರ್ತನು ನಿನಗೆ ಬದಲು ಕೊಡಲಿ; ಇಸ್ರಯೇಲ್ ದೇವರಾದ ಕರ್ತ
ನ ರೆಕ್ಕೆಗಳ ಕೆಳಗೆ ಆಶ್ರಯಿಸಿ ಕೊಳ್ಳ ಬಂದ ನಿನಗೆ, ಅವನಿಂದ
೧೩ ಬರುವ ನಿನ್ನ ಸಂಬಳ ಪರಿಪೂರ್ಣವಾಗಿರಲಿ, ಅಂದನು. ಅದಕ್ಕೆ
ಅವಳು, ನನ್ನ ಸ್ವಾಮಿಯೇ, ನನಗೆ ನಿನ್ನ ಕಟಾಕ್ಷವಾಗಲಿ; ಯಾ
ಕಂದರೆ ನನ್ನನ್ನು ಉಪಶಾಂತಿ ಪಡಿಸಿದಿ; ನಿನ್ನ ದಾಸಿಯ ಹೃದ
ಯ ಸಂತೋಷಕ್ಕಾಗಿ ಮಾತಾಡಿದಿ; ಆದರೆ ನಾನು ನಿನ್ನ ದಾ
೧೪ ಸಿಗಳ್ಳಲ್ಲಿ ಬಬ್ಬಳ್ಳ ಹಾಗಲ್ಲ, ಅಂದಳು. ಇದ್ದಲ್ಲದೆ ಬೋವಜನು
ಅವಳಿಗೆ, ಉಣ್ಣುವ ವೇಳೆಯಲ್ಲಿ ಇಲ್ಲಿ ಹತ್ತರ ಬಂದು, ಕೊಟ್ಟಿ
ಂದು, ತುಣಿಕೆಯನ್ನು ಹುಳಿ ನೀರಿನಲ್ಲಿ ಅದ್ದು, ಅಂದನು.

ಅವಳು ಕೊಯ್ಯುವವರ ಬಳಿಯಲ್ಲಿ ಕುಳಿತಳ್ಳು. ಆಗಲವನು
ಅವಳಿಗೆ ಹುರಿದ ತೆನೆಯನ್ನು ಕೊಟ್ಟನು. ಅವಳು ತಿಂದು, ತೃ
೧೫ ಪ್ತಿ ಪಟ್ಟು, ಇನ್ನೂ ಮಿಗಿಸಿಟ್ಟಳ್ಳು. ಅವಳು ಹಕ್ಕಲಾದು ಕೊಳ್ಳ
ಏಳುವಾಗ, ಬೋವಜನು ತನ್ನ ಸೇವಕರಿಗೆ ಆಜ್ಞಾಪಿಸಿ ಹೇಳಿದ್ದೇ
ನಂದರೆ, ಇವಳು ಕೊಯಿದ ಸೂಡುಗಳ್ಳ ಮಧ್ಯದಲ್ಲಿ ಹಕ್ಕಲಾದು
ಕೊಳ್ಳಲಿ. ನೀವು ಅವಳನ್ನು ನಾಚಿಕೆ ಪಡಿಸ ಬೇಡಿರಿ; ಅವಳು
೧೬ ಹಕ್ಕಲಾದು ಕೊಳ್ಳುವ ಹಾಗೆ, ನೀವು ಅವಳಿಗೋಸ್ಕರ ಸೂಡು
ಗಳ್ಳಲ್ಲಿ ಕೆಲವು ಜಾರ ಬಿಡಿರಿ; ಅವಳನ್ನು ಗದರಿಸ ಬೇಡಿರಿ. ಹಾಗೆ
ಯೇ ಅವಳು ಸಾಯಂಕಾಲದ ವರಿಗೂ ಹೊಲದಲ್ಲಿ ಹಕ್ಕಲಾದು
೧೭ ಕೊಂಡಳು. ಅವಳು ಹಕ್ಕಲಾದು ಕೊಂಡದ್ದನ್ನು ಬಡಿದಾಗ, ಅ
ದು ಹೆಚ್ಚು ಕಡಿಮೆ ಒಂದು ಏಫದ ಜವೆ ಗೋಧಿಯಾಗಿತ್ತು.
೧೮ ಅವಳು ಅದನ್ನು ಶೆಗೆದು ಕೊಂಡು, ಪಟ್ಟಣಕ್ಕೆ ಬಂದಳು. ಅವಳು
ಹಕ್ಕಲಾದು ಕೊಂಡದ್ದನ್ನು ಅವಳ ಅತ್ತೆಯು ನೋಡಿದಳು. ಆ
ಗಲವಳು ತೃಪ್ತಿಯಾದ ಮೇಲೆ, ಮಿಗಿಸಿಟ್ಟದ್ದನ್ನು ತಂದು, ಅವಳ್ಳ
ಗೆ ಕೊಟ್ಟಳ್ಳು.
೧೯ ಆಗಲವಳ್ಳ ಅತ್ತೆ, ನೀನು ಈ ಹೊತ್ತು ಎಲ್ಲಿ ಹಕ್ಕಲಾದು
ಕೊಂಡಿ! ಎಲ್ಲಿ ಕೆಲಸ ಮಾಡಿದಿ! ನಿನ್ನನ್ನು ಪರಾಮರಿಸಿದವನು
ಆಶೀರ್ವದಿಸಲ್ಪಡಲಿ, ಅಂದಳ್ಳು. ಅದಕ್ಕವಳ್ಳು ತಾನು ಯಾವನ ಹ
ತ್ತರ ಕೆಲಸ ಮಾಡಿದ್ದೆಳ್ಳೋ, ತನ್ನ ಅತ್ತೆಗೆ ತಿಳ್ಳಿಸಿದಳ್ಳು. ಮತ್ತು
ನಾನು ಈ ಹೊತ್ತು ಕೆಲಸ ಮಾಡಿದವನ ಹೆಸರು ಬೋವಜನಿಂ
೨೦ ದು, ಹೇಳಿದಳ್ಳು. ನವೋಮಿ ತನ್ನ ಸೊಸೆಗೆ, ಜೀವಿಸಿರುವವರಿ
ಗೋಸ್ಕರವೂ ಸತ್ತವರಿಗೋಸ್ಕರವೂ ಮಾಡಿದ ಕೃಪೆಯನ್ನು
ಬಿಡದೆ ಇರುವವನು ಕರ್ತನಿಂದ ಆಶೀರ್ವದಿಸಲ್ಪಡಲಿ, ಅಂದಳ್ಳು.
ಮತ್ತು ನವೋಮಿ ಅವಳ್ಳಿಗೆ, ಆ ಮನುಷ್ಯನು ನಮ್ಮ ನೆಂಟನಾಗಿ
ಯೂ ವಿಮೋಚಿಸ ತಕ್ಕ ನಮ್ಮ ಬಾಧ್ಯರಲ್ಲಿ ಒಬ್ಬನಾಗಿಯೂ
೨೧ ಇದ್ದಾನೆ, ಅಂದಳ್ಳು. ಅದಕ್ಕೆ ಮೋವಾಬ್ಯಳ್ಳಾದ ರೂತ ಅವಳ್ಳಿ
ಗೆ, ಮತ್ತು ಅವನು ನನ್ನ ಕೈಕೆಲ್ಲಾ ಕೊಯಿದು ತೀರುವ ವರಿ
ಗೂ ನೀನು ನನ್ನ ಕೆಲಸದವರ ಸಂಗಡ ಕೂಡಿ ಕೊಂಡಿರು ಎಂದು,
೨೨ ನನಗೆ ಹೇಳಿದನು, ಅಂದಳ್ಳು. ಆಗ ನವೋಮಿ ತನ್ನ ಸೊಸೆಯಾ
ದ ರೂತಳ್ಳಿಗೆ, ನನ್ನ ಮಗಳ್ಳೇ, ಮತ್ತೊಂದು ಹೊಲದಲ್ಲಿ ಮನು
ಷ್ಯರು ನಿನ್ನನ್ನು ಕಂಡು ಕೊಳ್ಳದ ಹಾಗೆ, ನೀನು ಅವನ ದಾಸಿ
೨೩ ಗಳ ಸಂಗಡ ಹೊರಟು ಹೋಗುವದು ಒಳ್ಳೇದು, ಅಂದಳ್ಳು.
ಅವಳು ತನ್ನ ಅತ್ತೆಯ ಮನೆಯಲ್ಲಿ ವಾಸವಾಗಿದ್ದು, ಹಾಗೆಯೇ
ಜವೆ ಗೋಧಿಯ ಸುಗ್ಗಿಯು ತೀರುವ ಪರ್ಯಂತರ, ಹಕ್ಕಲಾದು
ಕೊಳ್ಳುವದಕ್ಕೋಸ್ಕರ, ಬೋವಜನ ದಾಸಿಗಳ ಸಂಗಡ ಕೂಡಿ
ಕೊಂಡು, ಹೋಗುತ್ತಿದ್ದಳ್ಳು.

### 3. ಸಂಧಿ.

೧ ಮತ್ತು ಅವಳ್ಳ ಅತ್ತೆಯಾದ ನವೋಮಿ ಅವಳ್ಳಿಗೆ ಹೇಳಿದ್ದೇನಂ
ದರೆ—ನನ್ನ ಮಗಳ್ಳೇ, ನೀನು ಚನ್ನಾಗಿರುವದಕ್ಕೋಸ್ಕರ, ನಾನು
೨ ನಿನಗೆ ವಿಶ್ರಾಂತಿಯನ್ನು ಹುಡುಕ ಬೇಕಲ್ಲವೋ! ಈಗ ನೀನು
ಯಾರ ದಾಸಿಗಳ್ಳ ಸಂಗಡ ಇದ್ದಿಯೋ, ಆ ಬೋವಜನು ನಮ್ಮ
ನೆಂಟನಾಗಿದ್ದಾನಲ್ಲ! ಇಗೋ, ಅವನು ರಾತ್ರಿಯಲ್ಲಿ ಕಣಕೊಳ್ಳ
೩ ಗೆ ಜವೆ ಗೋಧಿಯನ್ನು ತೂರುವನು. ನೀನು ಕೊಳ್ಳ ಕೊಂಡು,
ಎಣ್ಣೆ ಹಚ್ಚಿ ಕೊಂಡು, ನಿನ್ನ ವಸ್ತ್ರಗಳ್ಳನ್ನು ಧರಿಸಿ ಕೊಂಡು, ಆ
ಕಣಕ್ಕೆ ಹೋಗು. ಆದರೆ ಆ ಮನುಷ್ಯನು ಉಂಡು, ಕುಡಿದು,
ತೀರುವ ವರಿಗೂ, ಅವನಿಗೆ ನಿನ್ನನ್ನು ತಿಳಿಯ ಪಡಿಸ ಬೇಡ.
೪ ಅವನು ಮಲಗಿ ಕೊಂಡಾಗ, ಅವನು ಮಲಗಿರುವ ಸ್ಥಳವನ್ನು ನೀ

ನು ತಿಳಿಕೊಂಡಿದ್ದು, ಹೋಗಿ, ಅವನ ಕಾಲುಗಳ ಮೇಲೆ ಹೊ
ದ್ದಿದ್ದದ್ದನ್ನು ತೆಗೆದು ಮಲಗಿಕೋ. ಆಗ ನೀನು ಮಾಡ ಬೇಕಾದ
೪ ದ್ದೇನೆಂದು, ಅವನು ನಿನಗೆ ತಿಳಿಸುವನು, ಅಂದಳು. ಅದಕ್ಕೆ ಇವ
ಳು, ನೀನು ಹೇಳಿದ್ದೆಲ್ಲಾ ಮಾಡುವೆನು. ಅಂದಳು.

೬ ಮತ್ತು ಅವಳು ಆ ಕಣಕ್ಕೆ ಹೋಗಿ, ತನ್ನ ಅತ್ತೆ ತನಗೆ
೭ ಆಜ್ಞಾಪಿಸಿದ ಪ್ರಕಾರವೆಲ್ಲಾ ಮಾಡಿದಳು. ಏನಂದರೆ, ಬೋವಜನು
ಉಂಡು, ಕುಡಿದು, ಹೃದಯ ಸಂತೋಷವಾಗಿದ್ದು, ಒಂದು ಗೂ
೮ ಡಿನ ಆಸರೆಯಾಗಿ ಬಂದು, ಮಲಗಿದನು. ಆಗ ಅವಳು ಮೆಲ್ಲಗೆ
ಬಂದು, ಅವನ ಕಾಲುಗಳ ಮೇಲೆ ಹೊದ್ದದ್ದನ್ನು ತೆಗೆದು, ಮಲಗಿದ
೯ ಳು. ಆದರೆ ಅರ್ಧ ರಾತ್ರಿಯಲ್ಲಿ ಆ ಮನುಷ್ಯನು ಹೆದರಿ, ತಿರು
ಗಿ ಕೊಡಾಗ, ಇಗೋ, ಒಬ್ಬ ಸ್ತ್ರೀ ತನ್ನ ಕಾಲುಗಳ ಬಳಿಯ
೧೦ ಲ್ಲಿ ಮಲಗಿದ್ದಳು. ನೀನು ಯಾರಂದನು. ಅದಕ್ಕವಳು, ನಾನು
ನಿನ್ನ ದಾಸಿಯಾದ ರೂತಳು; ನೀನು ನಿನ್ನ ದಾಸಿಯ ಮೇಲೆ
ನಿನ್ನ ರೆಕ್ಕೆ ಚಾಚು; ಯಾಕಂದರೆ ನೀನು ಬಾಧ್ಯನು, ಅಂದಳು.
೧೧ ಅದಕ್ಕೆ ಅವನು ಹೇಳಿದ್ದೇನಂದರೆ, ನನ್ನ ಮಗಳೇ, ಕರ್ತನಿಂದ
ನಿನಗೆ ಆಶೀರ್ವಾದವಾಗಲಿ; ನೀನು ಬಡವರೂ, ಐಶ್ವರ್ಯವಂ
ತರೂ ಅದ ಯೌವನಸ್ಥರ ಹಿಂದೆ ಹೋಗದ್ದರಿಂದ, ಮೊದಲಲ್ಲಿ
ತೋರಿಸಿದ್ದಕ್ಕಿಂತ, ಕಡೆಯಲ್ಲಿ ನೀನು ತೋರಿಸಿದ ಕೃಪೆ ಉತ್ತ
೧೨ ಮವಾಗಿದೆ. ಈಗ, ನನ್ನ ಮಗಳೇ, ನೀನು ಭಯಪಡ ಬೇಡ;
ನೀನು ಹೇಳಿದ್ದೆಲ್ಲಾ ನಿನಗೆ ಮಾಡುವೆನು; ಯಾಕಂದರೆ ನೀನು
ಯೋಗ್ಯಳಾದ ಸ್ತ್ರೀ ಎಂದು, ಬಾಗಲಲ್ಲಿರುವ ನನ್ನ ಜನರೆಲ್ಲರು
೧೩ ಬಲ್ಲರು. ಈಗ ನಾನು ಬಾಧ್ಯನಾಗಿರುವದು ನಿಜವೇ; ಆದರೆ ನನ
ಗಿಂತ ಸಮೀಪಸ್ತನಾದ ಬಾಧ್ಯನು ಒಬ್ಬನಿದ್ದಾನೆ. ಈ ರಾತ್ರಿಯ
ಲ್ಲಿ ಇಲ್ಲಿರು; ನಾಳೆ ಅವನು ನಿನಗೆ ಬಾಧ್ಯನ ಕಾರ್ಯ ಮಾಡಿ
ದರೆ, ಒಳ್ಳೇದಾಯಿತು; ಮಾಡಲಿ. ಅವನು ನಿನಗೆ ಬಾಧ್ಯನ ಕಾ
ರ್ಯ ಮಾಡ ಮನಸ್ಸಿಲ್ಲದೆ ಇದ್ದರೆ, ಕರ್ತನ ಜೀವದಾಣೆ—
ನಾನೇ ನಿನಗೆ ಬಾಧ್ಯನ ಕಾರ್ಯ ಮಾಡುತ್ತೇನೆ; ಉದಯ ಕಾಲ
೧೪ ದ ವರಗೂ ಮಲಗಿರು, ಅಂದನು.

ಅವಳು ಹಾಗೆಯೇ ಉದಯ ಕಾಲದ ವರಗೂ ಅವನ ಪಾದ
ಗಳ ಬಳಿಯಲ್ಲಿ ಮಲಗಿದ್ದು, ಒಬ್ಬರನ್ನೊಬ್ಬರು ಕಾಣ ಕೂಡು
ವದಕ್ಕೆ ಮುಂಚೆ ಎದ್ದಳು. ಮತ್ತು ಅವನು ಒಬ್ಬ ಹೆಂಗಸು ಕಣ
೧೫ ದಲ್ಲಿ ಬಂದಳೆಂದು ತಿಳಿಯಲ್ಪಡಕೆ ಇರಲಿ, ಅಂದನು. ಮತ್ತು ನೀನು
ಹೊದ್ದು ಕೊಂಡಿರುವ ವಸ್ತ್ರವನ್ನು ತಂದು, ಹಿಡಿ, ಅಂದನು. ಅವ
ಳು ಅದನ್ನು ಹಿಡಿಯುವಾಗ, ಅವನು ಅದರಲ್ಲಿ ಆರು ಸೊಲಿಗೆ
ಜವೆಗೋಧಿಯನ್ನು ಅಳೆದು, ಹಾಕಿದನು. ಅವನು ಪಟ್ಟಣಕ್ಕೆ ಬಂ
ದನು.

೧೬ ಅವಳು ತನ್ನ ಅತ್ತೆಯ ಬಳಿಗೆ ಬಂದಾಗ, ಅವಳ ಅತ್ತೆಯು,
ನನ್ನ ಮಗಳೇ, ನಿನಗೆ ಏನಾಯಿತು! ಅಂದಳು. ಆಗಲವಳು ಆ
೧೭ ಮನುಷ್ಯನು ತನಗೆ ಮಾಡಿದ್ದೆಲ್ಲಾ ಅವಳಿಗೆ ತಿಳಿಸಿದಳು; ಮತ್ತು
ನೀನು ನಿನ್ನ ಅತ್ತೆಯ ಬಳಿಗೆ ಬರೀಕೈಯಾಗಿ ಹೋಗ ಬಾರದೆಂ
ದು, ಅವನು ಈ ಆರು ಸೊಲಿಗೆ ಜವೆಗೋಧಿಯನ್ನು ನನಗೆ ಕೊ
೧೮ ಟ್ಟನು, ಅಂದಳು. ಅದಕ್ಕೆ ಇವಳು, ನನ್ನ ಮಗಳೇ, ಈ ಕಾ
ರ್ಯ ಏನಾಗುವದೋ ಎಂದು, ನೀನು ತಿಳಿಯುವ ವರಗೂ, ಸು
ಮ್ಮನೆ ಇರು; ಯಾಕಂದರೆ ಆ ಮನುಷ್ಯನು ಈ ಹೊತ್ತು ಈ
ಕಾರ್ಯವನ್ನು ತೀರಿಸುವ ವರಗೂ ವಿಶ್ರಾಂತಿ ಪಡನು, ಅಂದಳು.

## ೪. ಸಂಧಿ.

೧ ಮತ್ತು ಬೋವಜನು ಪಟ್ಟಣದ ಬಾಗಲಲ್ಲಿ ಹೋಗಿ, ಕುಳಿತಿ
ರುವಾಗ, ಇಗೋ, ಬೋವಜನು ಹೇಳಿ ಇದ್ದ ಆ ಬಾಧ್ಯನು ಹಾ
ದು ಹೋಗುತ್ತಿದ್ದನು. ಮತ್ತು, ಓ ಹೋ ಫಲಾನಿಯವನೇ, ಇತ್ತ
೨ ಲಾಗಿ ಬಂದು, ಇಲ್ಲಿ ಕೂತ್ರು, ಅಂದನು. ಅವನು ಬಂದು, ಕುಳಿತ
ನು. ಆಗ ಬೋವಜನು ಪಟ್ಟಣದ ಹಿರಿಯರಲ್ಲಿ ಹತ್ತು ಮಂದಿಯನ್ನು
೩ ಕರೆದು, ಅವರನ್ನು, ಇಲ್ಲಿ ಕೂತು ಕೊಳ್ಳಿರಿ, ಅಂದನು; ಅವರು
ಕುಳಿತರು. ಆಗ ಅವನು ಆ ಬಾಧ್ಯನಿಗೆ ಹೇಳಿದ್ದೇನಂದರೆ,
ಮೋವಾಬ್ ಪ್ರಾಂತಿಯಿಂದ ತಿರಿಗಿ ಬಂದ ನವೋಮಿ ನಮ್ಮ ಸಹೋ
೪ ದರನಾದ ಎಲಿಮೆಲೆಕನಿಗೆ ಇದ್ದ ಹೊಲದ ಪಾಲನ್ನು ಮಾರಿ, ಹಾ
ಕುತ್ತಾಳೆ. ಮತ್ತು ನಾನು ನಿನಗೆ ಅರಿಕೆ ಮಾಡ ಬೇಕೆಂದಿದ್ದೆನಂ
ದರೆ—ನಿವಾಸಿಗಳ ಮುಂದೆಯೂ ನನ್ನ ಜನರಾದ ಹಿರಿಯರ
ಮುಂದೆಯೂ ಅದನ್ನು ಕೊಂಡು ಕೋ. ಬಿಡಿಸಿ ಕೊಂಡರೆ, ಬಿಡಿ
ಸಿಕೋ; ಬಿಡಿಸಿ ಕೊಳ್ಳದಿದ್ದರೆ, ನಾನು ತಿಳಿಯ ಕೊಳ್ಳುವ ಹಾಗೆ,
ನನಗೆ ಅರಿಕೆ ಮಾಡು; ಯಾಕಂದರೆ ನೀನೂ, ನಿನ್ನ ತರುವಾಯ
ನಾನೂ ಅಲ್ಲದೆ ಬಿಡಿಸಿ ಕೊಳ್ಳುವವನು ಯಾರೂ ಇಲ್ಲ, ಅಂದ
೫ ನು. ಅದಕ್ಕೆ ಅವನು, ನಾನು ಬಿಡಿಸಿ ಕೊಳ್ಳುವೆನು, ಅಂದನು.
ಆಗ ಬೋವಜನು, ನೀನು ನವೋಮಿಯಿಂದ ಆ ಹೊಲವನ್ನು
ಕೊಂಡು ಕೊಳ್ಳುವ ದಿವಸದಲ್ಲಿ ಸತ್ತವನ ಬಾಧ್ಯತೆಯಲ್ಲಿ ಅವನ
ಹೆಸರನ್ನು ಸ್ಥಿರ ಮಾಡುವ ಹಾಗೆ, ಅವನ ಹೆಂಡತಿಯಾಗಿರುವ
ಮೋವಾಬ್ಯಳಾದ ರೂತಳಿಂದಲೂ ಅದನ್ನು ಕೊಂಡು ಕೊಳ್ಳ
೬ ಬೇಕು, ಅಂದನು. ಅದಕ್ಕೆ ಬಾಧ್ಯನು, ನಾನು ನನ್ನ ಬಾಧ್ಯ
ತೆಯನ್ನು ಕೆಡಿಸಿ ಕೊಳ್ಳದ ಹಾಗೆ, ಅದನ್ನು ಬಿಡಿಸಿ ಕೊಳ್ಳಲಾ
ರೆನು; ನಾನು ಬಿಡಿಸಿ ಕೊಳ್ಳ ತಕ್ಕದ್ದನ್ನು ನೀನು ಬಿಡಿಸಿಕೋ;
೭ ಯಾಕಂದರೆ ನಾನು ಬಿಡಿಸಿ ಕೊಳ್ಳಲಾರೆನು, ಅಂದನು. ಬಿಡಿಸಿ
ಕೊಳ್ಳುವದರಲ್ಲಿಯೂ, ಬದಲು ಮಾಡುವದರಲ್ಲಿಯೂ, ಸಕಲ
ಕಾರ್ಯಗಳೂ ದೃಢವಾಗುವ ಹಾಗೆ, ಇಸ್ರಯೇಲಿನಲ್ಲಿ ಪೂರ್ವ
ದ ವಾಡಿಕೆ ಏನಂದರೆ, ಒಬ್ಬನು ತನ್ನ ಕೆರವನ್ನು ತೆಗೆದು, ತನ್ನ ನೆ
ರೆಯವನಿಗೆ ಕೊಡುವನು; ಇದು ಇಸ್ರಯೇಲಿನಲ್ಲಿ ಸಾಕ್ಷಿಗಾದ್ದು.
೮ ಹಾಗೆಯೇ ಆ ಬಾಧ್ಯನು ಬೋವಜನಿಗೆ, ನೀನು ನಿನಗೋಸ್ಕರ
ಕೊಂಡುಕೋ ಎಂದು, ತನ್ನ ಕೆರವನ್ನು ತೆಗೆದು ಹಾಕಿದನು

೯ ಆಗ ಬೋವಜನು ಹಿರಿಯರಿಗೂ ಸಮಸ್ತ ಜನರಿಗೂ, ನಾ
ನು ಎಲಿಮೆಲೆಕನಿಗೆ ಇದ್ದ ಎಲ್ಲವನೂ, ಕಿಲ್ಯೋನನಿಗೂ ಮ
ಹ್ಲೋನನಿಗೂ ಇದ್ದ ಎಲ್ಲವನೂ ನವೋಮಿಯ ಕೈಯಿಂದ ಕೊಂ
ಡು ಕೊಂಡೆನು ಎಂಬುವದಕ್ಕೆ ಈ ಹೊತ್ತು ನೀವು ಸಾಕ್ಷಿಗಳಾಗಿ
೧೦ ದ್ದೀರಿ, ಅಂದನು. ಇದಲ್ಲದೆ ಸತ್ತವನ ಸಹೋದರರಲ್ಲಿಂದಲೂ,
ಅವನ ಸ್ಥಳದ ಬಾಗಲಲ್ಲಿಂದಲೂ ಅವನ ಹೆಸರು ಕಡಿದು ಹಾಕಲ್ಪ
ಡದ ಹಾಗೆ, ಸತ್ತವನ ಬಾಧ್ಯತೆಯಲ್ಲಿ ಅವನ ಹೆಸರನ್ನು ಸ್ಥಿರ
ಮಾಡ ನಾನು ಮಹ್ಲೋನನ ಹೆಂಡತಿಯಾಗಿದ್ದ ಮೋವಾಬ್ಯಳಾ
ದ ರೂತಳನ್ನು ನನಗೆ ಹೆಂಡತಿಯಾಗಿ ಕೊಂಡು ಕೊಂಡೆನು. ಇ
ದಕ್ಕೆ ಈ ಹೊತ್ತು ನೀವು ಸಾಕ್ಷಿಗಳಾಗಿದ್ದೀರಿ, ಅಂದನು. ಆಗ
೧೧ ಬಾಗಲಲ್ಲಿರುವ ಸಮಸ್ತ ಜನರೂ ಹಿರಿಯರೂ ಹೇಳಿದ್ದೇನಂದರೆ—
ನಾವು ಸಾಕ್ಷಿಗಳೇ; ನಿನ್ನ ಮನೆಯಲ್ಲಿ ಬಂದ ಸ್ತ್ರೀಯನ್ನು ಕ
ರ್ತನು ಇಸ್ರಯೇಲ್ ಮನೆಯನ್ನು ಕಟ್ಟಿದ ಇಬ್ಬರಾದ ರಾಹೇಲಳ



ಹಾಗೆಯೂ ಲೇಯಳ ಹಾಗೆಯೂ ಮಾಡುವನಾಗಲಿ. ಎಫ್ರಾ
ತದಲ್ಲಿ ಯೋಗ್ಯ ಕಾರ್ಯ ಮಾಡು; ಬೇತ್ಲೆಹೇಮಿನಲ್ಲಿ ಹೆಸರು
೧೨ ಗೊಂಡವನಾಗಿರು; ಈ ಹುಡುಗಿಯಿಂದ ಕರ್ತನು ನಿನಗೆ ಕೊಡು
ವ ಬೀಜದಿಂದ ನಿನ್ನ ಮನೆಯು, ತಾಮರಳು ಯೆಹೂದನಿಗೆ ಹೆ
ತ್ತ ಪೇರೆಳನ ಮನೆಯ ಹಾಗೆಯೇ ಆಗಲಿ, ಅಂದರು.

೧೩ ಮತ್ತು ಬೋವಜನು ರೂತಳನ್ನು ತಕ್ಕೊಂಡನು; ಅವಳು
ಅವನಿಗೆ ಹೆಂಡತಿಯಾದಳು. ಅವನು ಅವಳ ಬಳಿಗೆ ಪ್ರವೇಶಿಸಿದಾ
ಗ, ಕರ್ತನು ಅವಳಿಗೆ ಗರ್ಭವನ್ನು ಧರಿಸ ಕೊಟ್ಟದ್ದರಿಂದ, ಅವ
೧೪ ಳು ಮಗನನ್ನು ಹೆತ್ತಳು. ಆಗ ಸ್ತ್ರೀಯರು ನವೋಮಿಗೆ ಹೇಳಿ
ದ್ದೇನಂದರೆ—ಇಸ್ರಯೇಲಲ್ಲಿ ಹೆಸರುಗೊಳ್ಳುವ ಬಾಧ್ಯನು ನಿನಗೆ
ಒಬ್ಬನಿಲ್ಲದ ಹಾಗೆ ಮಾಡದೆ ಇರುವ ಕರ್ತನು ಆಶೀರ್ವದಿಸಲ್ಪಡ
೧೫ ಲಿ. ಅವನು ಪ್ರಾಣವನ್ನು ಉಪಪುನರ್ಜೀವಿಸುವವನಾಗಿಯೂ,
ನಿನ್ನ ವೃದ್ಧ ವಯಸ್ಸಿನಲ್ಲಿ ಸಂರಕ್ಷಿಸುವವನಾಗಿಯೂ ಇರುವ
ನು. ಯಾಕಂದರೆ ನಿನ್ನನ್ನು ಪ್ರೀತಿ ಮಾಡುವ, ಏಳು ಮಂದಿ ಮ
ಕ್ಕಳಿಗಿಂತ ನಿನಗೆ ಉತ್ತಮಳಾಗಿರುವ ನಿನ್ನ ಕೊಸೆಯು ಅವನ
೧೬ ನ್ನು ಹೆತ್ತಳು, ಅಂದರು. ನವೋಮಿ ಆ ಮಗುವನ್ನು ಎತ್ತಿ, ತನ್ನ
೧೭ ಉಡಲಲ್ಲಿ ಇಟ್ಟು ಕೊಂಡು, ಅದಕ್ಕೆ ದಾದಿಯಾದಳು. ಆಗ ನೆರೆ
ಮನೆಯ ಸ್ತ್ರೀಯರು, ನವೋಮಿಗೆ ಒಬ್ಬ ಮಗನು ಹುಟ್ಟಿದ್ದಾನೆಂ
ದು ಹೇಳಿ, ಅವನಿಗೆ ಓಬೆದನೆಂದು ಹೆಸರಿಟ್ಟರು. ಇವನೇ ದಾವೀ
ದನ ತಂದೆಯಾದ ಇಷಾಯನಿಗೆ ತಂದೆಯಾದವನು.

೧೮ ಪೇರೆಳನ ಸಂತತಿ ಯಾವದಂದರೆ—ಪೇರೆಳನು ಹೆಜ್ರೋನನ್ನು
೧೯ ಪಡೆದನು; ಹೆಜ್ರೋನನು ರಾಮನನ್ನು ಪಡೆದನು; ರಾಮನು ಅ
೨೦ ಮಿನದಾಬನನ್ನು ಪಡೆದನು; ಅಮಿನದಾಬನು ನಾಹೆಶೋನನನ್ನು
೨೧ ಪಡೆದನು; ನಾಹೆಶೋನನು ಸಲ್ಮೋನನನ್ನು ಪಡೆದನು; ಸಲ್ಮೋನ
೨೨ ನು ಬೋವಜನನ್ನು ಪಡೆದನು; ಬೋವಜನು ಓಬೆದನನ್ನು ಪಡೆ
ದನು; ಓಬೆದನು ಇಷಾಯನನ್ನು ಪಡೆದನು; ಇಷಾಯನು ದಾವೀ
ದನನ್ನು ಪಡೆದನು.

# THE FIRST BOOK OF SAMUEL.

## ಸಮುವೇಲನ ಮೊದಲನೇ ಪುಸ್ತಕವು.

## ೧. ಸಂಧಿ.

೧ ಎಫ್ರಯಿಮ್ ಬೆಟ್ಟದಲ್ಲಿರುವ ರಾಮತಾಯಿಂ ಹೋಫಿಮಿನಲ್ಲಿ
ಎಲ್ಕಾನ ಎಂಬ ಹೆಸರುಳ್ಳ ಒಬ್ಬ ಮನುಷ್ಯನಿದ್ದನು. ಅವನು
ಎಫ್ರಾತಿಯನಾದ ಚೂಫನ ಮಗನಾದ ತೋಹುವಿನ ಮಗನಾದ
೨ ಎಲೀಹುವಿನ ಮಗನಾದ ಯೆಹೋರಮನ ಮಗನಾಗಿದ್ದನು. ಅವ
ನಿಗೆ ಇಬ್ಬರು ಹೆಂಡರಿದ್ದರು. ಒಬ್ಬಳ ಹೆಸರು ಹನ್ನಳು, ಮತ್ತೊಬ್ಬ
ಳ ಹೆಸರು ಪೆನಿನ್ನಳು, ಪೆನಿನ್ನಳಿಗೆ ಮಕ್ಕಳಿದ್ದರು, ಆದರೆ ಹನ್ನಳಿಗೆ
ಮಕ್ಕಳು ಇಲ್ಲ.

೩ ಅವನು ಪ್ರತಿ ವರುಷ ತನ್ನ ಪಟ್ಟಣದಿಂದ ಹೋಗುತ್ತಿದ್ದನು. ಕರ್ತನ ಯಾಜಕರಾದ ಹೊಫ್ನಿ
ಯೂ ಫಿನೆಹಾಸನೂ ಎಂಬ ಏಲಿಯ ಮಕ್ಕಳಿಬ್ಬರು ಅಲ್ಲಿ ಇದ್ದರು.
೪ ಎಲ್ಕಾನನು ಬಲಿಯನ್ನು ಅರ್ಪಿಸುವ ದಿನಗಳಲ್ಲಿ ಅವನು ತನ್ನ
ಹೆಂಡತಿಯಾದ ಪೆನಿನ್ನಳಿಗೂ, ಅವಳ ಸಮಸ್ತ ಕುಮಾರರಿಗೂ,
೫ ಕುಮಾರ್ತೆಗಳಿಗೂ ಪಾಲನ್ನು ಕೊಟ್ಟನು. ಆದರೆ ಹನ್ನಳಿಗೆ
ಎರಡಷ್ಟಾದ ಪಾಲನ್ನು ಕೊಟ್ಟನು. ಯಾಕಂದರೆ ಹನ್ನಳನ್ನು
ಪ್ರೀತಿ ಮಾಡಿದನು. ಆದರೆ ಕರ್ತನು ಅವಳ ಗರ್ಭವನ್ನು ಮು
೬ ಚ್ಚಿ ಬಿಟ್ಟಿದ್ದನು. ಕರ್ತನು ಅವಳ ಗರ್ಭವನ್ನು ಮುಚ್ಚಿ ಬಿಟ್ಟದ್ದ
ರಿಂದ, ಅವಳ ವಿರೋಧಿಯಾದವಳು ಅವಳಿಗೆ ಮನಗುಂದುವ
೭ ಹಾಗೆ ಬಹಳವಾಗಿ ಕರಕರೆ ಎಬ್ಬಿಸಿದಳು. ಹೀಗೆಯೇ ಅವನು
ಪ್ರತಿ ಸಂವತ್ಸರದಲ್ಲಿಯೂ ಮಾಡಿದ್ದರಿಂದ, ಇವಳು ಕರ್ತನ ಮ
ನೆಗೆ ಹೋಗುತ್ತಿರುವಾಗ, ಈ ಪ್ರಕಾರ ಅವಳಿಗೆ ಕರಕರೆ ಎಬ್ಬಿಸಿ
ದಳು; ಅವಳು ಅತ್ತು, ಉಣ್ಣದೆ ಇದ್ದಳು. ಆಗಲವಳ ಪುರುಷ
ನಾದ ಎಲ್ಕಾನನು ಅವಳಿಗೆ, ಹನ್ನಳೇ, ಯಾಕೆ ಅಳುತ್ತೀ! ಯಾ
ಕೆ ಉಣ್ಣದೆ ಇದ್ದೀ! ಯಾಕೆ ನಿನ್ನ ಹೃದಯದಲ್ಲಿ ದುಃಖ ಪಡು
ತ್ತಿದ್ದೀ! ಹತ್ತು ಮಂದಿ ಕುಮಾರರಿಗಿಂತ ನಾನು ನಿನಗೆ ಉತ್ತಮನ
ಲ್ಲವೋ! ಅಂದನು.

೮ ಆಗಲವರು ಪಿಲೋವಿನಲ್ಲಿ ಉಂಡು, ಕುಡಿದ ತರುವಾಯ ಹನ್ನ
ಳು ಎದ್ದು, ಹೋದಳು. ಯಾಜಕನಾದ ಏಲಿಯು ಕರ್ತನ ಮಂದಿ
ರದ ಸ್ತಂಭದ ಬಳಿಯಲ್ಲಿ ಆಸನದ ಮೇಲೆ ಕುಳಿತಿರುವಾಗ, ಅವ
೯ ಳು ಕಹಿಯಾದ ಪ್ರಾಣವುಳ್ಳವಳಾಗಿ ಕರ್ತನನ್ನು ಪ್ರಾರ್ಥಿಸಿ,
ಅತ್ತೇ ಅತ್ತು, ಹರಿಕೆಯನ್ನು ಮಾಡಿ, ಹೇಳಿದ್ದೇನಂದರೆ—ಸೈನ್ಯ
೧೦ ಗಳ ಕರ್ತನೇ, ನೀನು ನಿಶ್ಚಯವಾಗಿ ನಿನ್ನ ದಾಸಿಯ ದೀನತೆಯ
ನ್ನು ನೋಡಿ, ನಿನ್ನ ದಾಸಿಯನ್ನು ಮರೆಯದೆ, ನನ್ನನ್ನು ನೆನಸಿ
ನಿನ್ನ ದಾಸಿಗೆ ಗಂಡು ಬೀಜವಾದವನನ್ನು ಕೊಟ್ಟರೆ, ಅವನನ್ನು
ಅವನು ಬದುಕುವ ಸಕಲ ದಿವಸಗಳಲ್ಲಿ ಕರ್ತನಿಗೆ ಒಪ್ಪಿಸಿ ಕೊಡುವೆ
೧೧ ನು. ಮತ್ತು ಅವನ ತಲೆಯ ಮೇಲೆ ಕ್ಷೌರಕನ ಕತ್ತಿ ಬೀಳುವದಿಲ್ಲ,
ಅಂದಳು.

೧೨ ಅವಳು ಕರ್ತನ ಮುಂದೆ ಹೆಚ್ಚಾಗಿ ಪ್ರಾರ್ಥನೆ ಮಾಡುತ್ತಿ
ರುವಾಗ, ಏಲಿಯು ಅವಳ ಬಾಯಿಯನ್ನು ನೋಡಿ ಕೊಂಡಿದ್ದನು.
೧೩ ಮತ್ತು ಹನ್ನಳು ತನ್ನ ಹೃದಯದಲ್ಲೇ ಮಾತಾಡುತ್ತಾ, ತನ್ನ
ತುಟಿಗಳನ್ನು ಮಾತ್ರ ಆಡಿಸುತ್ತಾ ಇದ್ದದರಿಂದ, ಅವಳ ಶಬ್ದವು ಕೇ
ಳಲ್ಪಡದೆ ಇತ್ತು. ಆದದರಿಂದ ಏಲಿಯು, ಅವಳು ಅಮಲೇರಿದವ
ಳಾಗಿದ್ದಾಳೆಂದು, ನೆನಸಿದನು. ಮತ್ತು ಏಲಿ ಅವಳಿಗೆ, ಎಷ್ಟು ಪ
ರ್ಯಂತರ ಅಮಲೇರಿದವಳಾಗಿರುವಿ! ನಿನ್ನ ಬಳಿಯಿಂದ ನಿನ್ನ
೧೪ ದ್ರಾಕ್ಷೇ ರಸ ತೊಳೆದು ಬಿಡು, ಅಂದನು. ಅದಕ್ಕೆ ಹನ್ನಳು ಅವ
ನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ನನ್ನ ಸ್ವಾಮಿಯೇ, ಹಾ
ಗಲ್ಲ; ನಾನು ದುಃಖದ ಆತ್ಮವುಳ್ಳ ಸ್ತ್ರೀಯಾಗಿದ್ದೇನೆ; ನಾನು ದ್ರಾ
ಕ್ಷೇ ರಸವನ್ನಾದರೂ ಮದ್ಯಪಾನವನ್ನಾದರೂ ಕುಡಿದವಳಲ್ಲ;
೧೬ ನಾನು ಕರ್ತನ ಮುಂದೆ ನನ್ನ ಪ್ರಾಣವನ್ನು ಹೊಯಿದು ಬಿಟ್ಟೆನು.
ನಿನ್ನ ದಾಸಿಯನ್ನು ಬೆಲಿಯಾಳನ ಮಗಳೆಂದು ನೆನಸ ಬೇಡ;
ಯಾಕಂದರೆ ನನ್ನ ಹೆಚ್ಚಾದ ಚಿಂತೆಯಿಂದಲೂ ಕರಕರೆಯಿಂದಲೂ

೧೫ ಈ ಪರ್ಯಂತರ ಮಾತಾಡಿ ಕೊಳ್ಳುತ್ತಾ ಇದ್ದೆನು, ಅಂದಳು. ಆಗ ಏಲಿಯು ಅವಳಿಗೆ ಪ್ರತ್ಯುತ್ತರವಾಗಿ, ಸಮಾಧಾನದಿಂದ ಹೋಗು; ಇಸ್ರಯೇಲಿನ ದೇವರು, ಅವನಿಂದ ನೀನು ಬೇಡಿ ಕೊಂಡ ನಿನ್ನ ವಿ
೧೮ ಜ್ಞಾಪನೆಯನ್ನು ನಿನಗೆ ಕೊಡಲಿ, ಅಂದನು. ಅದಕ್ಕವಳು, ನಿನ್ನ ಸೇವಕಳಿಗೆ ನಿನ್ನ ಕಟಾಕ್ಷವಾಗಲಿ, ಅಂದಳು. ಮತ್ತು ಆ ಸ್ತ್ರೀಯು ಹೊರಟು ಹೋಗಿ, ಊಟ ಮಾಡಿದಳು; ಮತ್ತು ಆ ಮೇಲೆ ಅವಳ ಮುಖ ದುಃಖವಾಗಿರಲಿಲ್ಲ.

೧೯ ಅವರು ಉದಯದಲ್ಲಿ ಎದ್ದು, ಕರ್ತನ ಮುಂದೆ ಅಡ್ಡ ಬಿದ್ದು, ತಿರುಗಿ ಕೊಂಡು, ರಾಮದಲ್ಲಿರುವ ತಮ್ಮ ಮನೆಗೆ ಬಂದರು. ಮತ್ತು ಎಲ್ಕಾನನು ತನ್ನ ಹೆಂಡತಿಯಾದ ಹನ್ನಳನ್ನು ಶಿಳು ಕೊಂಡನು; ಆಗ ಕರ್ತನು ಅವಳನ್ನು ಜ್ಞಾಪಕ ಮಾಡಿ ಕೊಂಡನು.

೨೦ ಹನ್ನಳು ಗರ್ಭವತಿಯಾಗಿ, ಕಾಲ ಪೂರ್ತಿಯಾದ ತರುವಾಯ ಆದದ್ದೇನಂದರೆ, ಅವಳು ಮಗನನ್ನು ಹೆತ್ತು, ನಾನು ಅವನನ್ನು ಕರ್ತನ ಬಳಿಯಲ್ಲಿ ಕೇಳಿ ಕೊಂಡೆನು ಎಂದು ಹೇಳಿ, ಅವನಿಗೆ ಸಮುವೇಲನೆಂದು ಹೆಸರಿಟ್ಟಳು.

೨೧ ಆದರೆ ಎಲ್ಕಾನನು ಕರ್ತನಿಗೆ ಪ್ರತಿ ವರುಷದ ಬಲಿಯನ್ನೂ
೨೨ ತನ್ನ ಹರಿಕೆಯನ್ನೂ ಸಲ್ಲಿಸುವದಕ್ಕೆ, ತನ್ನ ಮನೆಯ ಸಮಸ್ತರ ಸಂಗಡ ಹೋಗುವಾಗ, ಹನ್ನಳು ಹೋಗದೆ, ತನ್ನ ಗಂಡನಿಗೆ ಮಗುವು ಮೊಲೆ ಮರಿಯುವ ಪರ್ಯಂತರ ನಾನು ಬರುವದಿಲ್ಲ; ಆಗ ಅವನು ಕರ್ತನ ಸನ್ನಿಧಿಯಲ್ಲಿ ಕಾಣಲ್ಪಡುವದಕ್ಕೂ, ಅಲ್ಲಿ ಎಂದೆಂದಿಗೂ ಇರುವದಕ್ಕೂ, ನಾನು ಅವನನ್ನು ತಕ್ಕೊಂಡು ಬ
೨೩ ರುವೆನು, ಅಂದಳು. ಆಗಲವಳ ಗಂಡನಾದ ಎಲ್ಕಾನನು ಅವಳಿಗೆ, ನೀನು ನಿನ್ನ ಕಣ್ಣುಗಳಿಗೆ ಬಳ್ಳೇದಾಗಿ ತೋರುವ ಹಾಗೆ ಮಾಡು; ಅವನು ಮೊಲೆ ಮರಿಯುವ ಪರ್ಯಂತರ ಇರು; ಕರ್ತನು ತನ್ನ ವಾಕ್ಯವನ್ನು ಸ್ಥಿರ ಮಾಡಲಿ, ಅಂದನು. ಹಾಗೆಯೇ ಅವಳು ನಿಂತು, ತನ್ನ ಮಗುವು ಮೊಲೆ ಮರಿಯುವ ಪರ್ಯಂತರ ಅವನಿಗೆ ಮೊಲೆ ಕೊಡುತ್ತಿದ್ದಳು.

೨೪ ಅವಳು ಅವನನ್ನು ಮೊಲೆ ಬಿಡಿಸಿದ ತರುವಾಯ, ಅವನನ್ನು ತನ್ನ ಸಂಗಡ ತಕ್ಕೊಂಡು, ಮೂರು ಹೋರಿಗಳನ್ನೂ, ಒಂದು ಏಫದ ಹಿಟ್ಟನ್ನೂ, ಒಂದು ಶಿದ್ದಿಗೆ ದ್ರಾಕ್ಷೇ ರಸವನ್ನೂ ತಕ್ಕೊಂ
೨೫ ಡು ಶಿಲೋವಿನಲ್ಲಿರುವ ಕರ್ತನ ಮನೆಗೆ ಹೋದಳು. ಆಗ ಆ ಮಗುವು ಚಿಕ್ಕದಾಗಿತ್ತು. ಅವರು ಒಂದು ಹೋರಿಯನ್ನು ಕೊ
೨೬ ಯಿದ ತರುವಾಯ, ಮಗುವನ್ನು ಏಲಿಯ ಬಳಿಗೆ ತಂದರು. ಮತ್ತು ಅವಳು ಹೇಳಿದ್ದೇನಂದರೆ, ನನ್ನ ಸ್ವಾಮಿಯೇ, ನಿನ್ನ ಪಾ. ಣದ ಸಾಕ್ಷಿ, ನನ್ನ ಸ್ವಾಮಿಯೇ, ಕರ್ತನಿಗೆ ಪ್ರಾರ್ಥನೆ ಮಾಡಿ ಇಲ್ಲಿ ನಿನ್ನ ಬಳಿಯಲ್ಲಿ ನಿಂತಿದ್ದ ಸ್ತ್ರೀಯು ನಾನೇ; ಈ ಮಗುವಿ
೨೭ ಗೋಸ್ಕರ ಪ್ರಾರ್ಥನೆ ಮಾಡಿದೆನು; ನಾನು ಕರ್ತನಿಗೆ ವಿಜ್ಞಾಪನೆ ಮಾಡಿದ ವಿಜ್ಞಾಪನೆಯನ್ನು ಆತನು ನನಗೆ ಕೊಟ್ಟನು. ಆದದರಿಂದ ನಾನು ಅವನನ್ನು ಕರ್ತನಿಗೆ ಒಪ್ಪಿಸಿದೆನು; ಅವನು ಜೀವಿಸಿರುವ ಪರ್ಯಂತರ ಕರ್ತನಿಗೆ ಒಪ್ಪಿಸಲ್ಪಟ್ಟಿರುವನು, ಅಂದಳು ಮತ್ತು ಅವನು ಅಲ್ಲಿ ಕರ್ತನಿಗೆ ಅಡ್ಡ ಬಿದ್ದನು.

## ೨. ಸಂಧಿ.

೧ ಮತ್ತು ಹನ್ನಳು ಪ್ರಾರ್ಥಿಸಿ, ಹೇಳಿದ್ದೇನಂದರೆ,
ನನ್ನ ಹೃದಯವು ಕರ್ತನಲ್ಲಿ ಸಂಭ್ರಮಿಸಿತು;
ನನ್ನ ಕೊಂಬು ಕರ್ತನಲ್ಲಿ ಉನ್ನತವಾಯಿತು.
ನನ್ನ ಶತ್ರುಗಳ ಮೇಲೆ ನನ್ನ ಬಾಯಿ ವಿಸ್ತಾರವಾಯಿತು;
ಯಾಕಂದರೆ ನಾನು ನಿನ್ನ ರಕ್ಷಣೆಯಲ್ಲಿ ಸಂತೋಷ ಪಟ್ಟೆನು.

೨ ಕರ್ತನ ಹಾಗೆ ಪರಿಶುದ್ಧನಾದವನಿಲ್ಲ;
ನಿಶ್ಚಯವಾಗಿ ನಿನ್ನ ಹೊರ್ತು ಮತ್ತೊಬ್ಬರಿಲ್ಲ.
ನಮ್ಮ ದೇವರ ಹಾಗೆಯೇ ಬಂಡೆಯು ಇಲ್ಲ.
೩ ಇನ್ನು ಮೇಲೆ ಎತ್ತರ ಎತ್ತರವಾಗಿ ಮಾತಾಡ ಬೇಡಿರಿ;
ನಿಮ್ಮ ಬಾಯಿಯಿಂದ ಕಠಿಣ ಮಾತು ಹೊರಡ ಬಾರದು.
ಯಾಕಂದರೆ ಕರ್ತನು ಶಿಳುವಳ್ಳಿಕೆಯುಳ್ಳ ದೇವರು;
ಅವನಿಂದ ಕ್ರಿಯೆಗಳು ತೂಗಲ್ಪಡುತ್ತವೆ.
೪ ಪರಾಕ್ರಮಶಾಲಿಗಳ ಬಿಲ್ಲುಗಳು ಮುರಿಯಲ್ಪಟ್ಟವು;
ಎಡವಿದವರು ಬಲದಿಂದ ನಡು ಕಟ್ಟಲ್ಪಟ್ಟಿದ್ದಾರೆ.
೫ ತೃಪ್ತಿ ಪಟ್ಟವರು ಕೊಟ್ಟಿಗೋಸ್ಕರ ಕೂಲಿ ಕೆಲಸಕ್ಕೆ ಹೋಗುತ್ತಾರೆ;
ಹಸಿದವರು ಇಲ್ಲದೆ ಹೋದರು.
ಬಂಜೆಯಾದವಳು ಏಳು ಮಂದಿ ಮಕ್ಕಳನ್ನು ಹೆತ್ತಳು;
ಅನೇಕ ಮಂದಿ ಮಕ್ಕಳನ್ನು ಹೆತ್ತವಳು ಬಲಹೀನಳಾದಳು.

೬ ಕರ್ತನು ಕೊಲ್ಲುವವನೂ, ಬದುಕಿಸುವವನೂ ಆಗಿದ್ದಾನೆ;
ಪಾತಾಳಕ್ಕೆ ಇಳಿಯ ಮಾಡುತ್ತಾನೆ; ಏಳ ಮಾಡುತ್ತಾನೆ.
೭ ಕರ್ತನು ದಾರಿದ್ರ್ಯ ಕೊಡುವವನೂ, ಐಶ್ವರ್ಯ ಕೊಡುವವನೂ,
ತಗ್ಗಿಸುವವನೂ, ಉನ್ನತ ಮಾಡುವವನೂ ಆಗಿದ್ದಾನೆ.
ದರಿದ್ರನನ್ನು ಭೂಮಿಯ ಧೂಳಿಯಿಂದ ಎತ್ತುವವನೂ,
೮ ಬಡವನನ್ನು ಶಿಪ್ಪೇ ಗುಮ್ಮೆಯಿಂದ ತೆಗೆದು, ಉನ್ನತ ಮಾಡುವವನೂ ಆಗಿದ್ದಾನೆ.
ಅವರನ್ನು ಅಧಿಪತಿಗಳ ಮಧ್ಯದಲ್ಲಿ ಕೂತ್ರ ಮಾಡುತ್ತಾನೆ;
ಘನತೆಯ ಸಿಂಹಾಸನವನ್ನು ಬಾಧ್ಯವಾಗಿ ಹೊಂದಿಸುತ್ತಾನೆ.
ಯಾಕಂದರೆ ಭೂಮಿಯ ಅಸ್ತಿವಾರಗಳು ಕರ್ತನವಾಗಿವೆ.
ಭೂಲೋಕವನ್ನು, ಅವುಗಳ ಮೇಲೆ ಇಟ್ಟಿದ್ದಾನೆ.
೯ ತಾನು ತನ್ನ ಭಕ್ತರ ಕಾಲುಗಳನ್ನು ಕಾಯುವನು;
ಆದರೆ ದುಷ್ಟರು ಕತ್ತಲ್ಲಲ್ಲಿ ಮೌನವಾಗಿರುವರು;
ಯಾಕಂದರೆ ಶಕ್ತಿಯಿಂದ ಒಬ್ಬನೂ ಜಯಿಸನು.

೧೦ ಕರ್ತನ ಸಂಗಡ ವಿವಾದಿಸುವವರು ಭಿನ್ನವಾಗುವರು;
ಆಕಾಶದಲ್ಲಿ ಅವರ ಮೇಲೆ ಗುಡುಗುವನು.
ಕರ್ತನು ಭೂಮ್ಯಂತಗಳಿಗೆ ನ್ಯಾಯ ತೀರಿಸುವನು;
ತನ್ನ ಅರಸನಿಗೆ ಬಲವನ್ನು ಕೊಡುವನು;
ತನ್ನ ಅಭಿಷಿಕ್ತನ ಕೊಂಬನ್ನು ಉನ್ನತ ಮಾಡುವನು.

೧೧ ಮತ್ತು ಎಲ್ಕಾನನು ರಾಮದಲ್ಲಿರುವ ತನ್ನ ಮನೆಗೆ ಹೋದನು; ಆದರೆ ಆ ಹುಡುಗನು ಯಾಜಕನಾದ ಏಲಿಯ ಸಮುಖದಲ್ಲಿ ಕರ್ತನನ್ನು ಸೇವಿಸಿದನು.

೧೨ ಆದರೆ ಏಲಿಯ ಕುಮಾರರು ಕರ್ತನನ್ನು ಅರಿಯದೆ, ಬೆಲಿ
೧೩ ಯಾಳನ ಮಕ್ಕಳಾಗಿದ್ದರು. ಆ ಯಾಜಕರು ಜನರನ್ನು ನಡಿಸಿ



ದ ವಿಧವೇನಂದರೆ, ಯಾವನಾದರೂ ಬಲಿ ಅರ್ಪಿಸಿದರೆ, ಆ ಅರ್ಪಿಸಿದ ಬಲಿಯ ಮಾಂಸವನ್ನು ಬೇಯಿಸುವಾಗ, ಯಾಜಕನ
೧೪ ಸೇವಕನು ಮೂರು ಕೂಲಗಳ ಆಯುಧವನ್ನು ತಕ್ಕೊಂಡು ಬಂದು, ಅದನ್ನು ಕೊಪ್ಪರಿಗೆಯಲ್ಲಾದರೂ, ಗಡಿಗೆಯಲ್ಲಾದರೂ, ತಪ್ಪಲೆಯಲ್ಲಾದರೂ, ಭಾಂಡದಲ್ಲಾದರೂ ಚುಚ್ಚುವನು. ಆ ಆಯುಧದಲ್ಲಿ ಬರುವದನ್ನೆಲ್ಲಾ ಯಾಜಕನು ತನಗೆ ತಕ್ಕೊಳ್ಳುವನು. ಹೀಗೆಯೇ ಅವರು ಶಿಲೋವಿನಲ್ಲಿ ಅಲ್ಲಿಗೆ ಬರುವ ಸಮಸ್ತ ಇಸ್ರ
೧೫ ಯೇಲ್ಯರಿಗೆ ಮಾಡಿದರು. ಇದಲ್ಲದೆ ಕೊಬ್ಬನ್ನು ಸುಡುವದಕ್ಕಿಂತ ಮುಂಚೆ, ಯಾಜಕನ ಸೇವಕನು ಬಂದು, ಬಲಿಯನ್ನು ಅರ್ಪಿಸುವವನ ಸಂಗಡ, ಯಾಜಕನಿಗೆ ಪಾಕ ಮಾಡ ತಕ್ಕ ಮಾಂಸವನ್ನು ಕೊಡು; ಯಾಕಂದರೆ ಅವನು ನಿನ್ನ ಕೈಯಿಂದ ಬೆಂದ ಮಾಂಸವನ್ನು ತಕ್ಕೊಳ್ಳುವದಿಲ್ಲ; ಹಸಿದು ಆಗ ಬೇಕು, ಅನ್ನುವನು. ಯಾವ ಮನುಷ್ಯನಾದರೂ ಅವನಿಗೆ, ಅವರು ದಿನ
೧೬ ಕಟ್ಟಿಯ ಹಾಗೆ ಕೊಬ್ಬನ್ನು ಸುಡಲೇ ಸುಡಲಿ, ಆಗ ನೀನು ನಿನ್ನ ಪ್ರಾಣದ ಇಚ್ಛೆಯ ಹಾಗೆಯೇ ತಕ್ಕೋ, ಎಂದು ಹೇಳಿದರೆ, ಅವನು, ಹಾಗಲ್ಲ, ಈಗಲೇ ಕೊಡು; ಇಲ್ಲದಿದ್ದರೆ, ಬಲವಂತವಾಗಿ
೧೭ ತಕ್ಕೊಳ್ಳುವೆನು ಎಂದು, ಅನ್ನುವನು. ಆದದರಿಂದ ಆ ಪ್ರಾಯಸ್ತರ ಪಾಪವು ಕರ್ತನ ಸನ್ನಿಧಿಯಲ್ಲಿ ಅಧಿಕವಾಗಿತ್ತು. ಯಾಕಂದರೆ ಜನರು ಕರ್ತನ ಅರ್ಪಣೆಯನ್ನು ಅಸಂಹಿಸಿ ಕೊಂಡರು.

೧೮ ಆದರೆ ಸಮುವೇಲನು ಮಡಿ ಏಫೋದನ್ನು ಧರಿಸಿ, ಹುಡುಗನಾ
೧೯ ಗಿದ್ದು, ಕರ್ತನ ಸನ್ನಿಧಿಯಲ್ಲಿ ಸೇವಿಸುತ್ತಿದ್ದನು. ಇದಲ್ಲದೆ ಅವನ ತಾಯಿ ಪ್ರತಿ ವರುಷದಲ್ಲೂ, ವರುಷದ ಬಲಿಯನ್ನು ಅರ್ಪಿಸ ಬರುವ ತನ್ನ ಗಂಡನ ಸಂಗಡ ಬರುವಾಗ, ಅವನಿಗೆ ಒಂದು ಚಿಕ್ಕ
೨೦ ನಿಲುವಂಗಿಯನ್ನು ಮಾಡಿ ಕೊಂಡು ಬರುವಳು. ಆಗ ಏಲಿಯು ಎಲ್ಕಾನನನ್ನೂ ಅವನ ಹೆಂಡತಿಯನ್ನೂ ಆಶೀರ್ವದಿಸಿ, ಕರ್ತನಿಗೆ ಸಲ್ಲಿಸಿದ್ದಕ್ಕೋಸ್ಕರ ಕರ್ತನು ಈ ಸ್ತ್ರೀಯಿಂದ ನಿನಗೆ ಬೀಜವನ್ನು ದಯಪಾಲಿಸಲಿ, ಅಂದನು. ಅವರು ತಿರಿಗಿ ತಮ್ಮ ಸ್ಥಳಕ್ಕೆ
೨೧ ಹೋದರು. ಹಾಗೆಯೇ ಕರ್ತನು ಹನ್ನಳನ್ನು ದರ್ಶಿಸಿದ್ದರಿಂದ, ಅವಳು ಗರ್ಭ ಧರಿಸಿ, ಮೂವರು ಕುಮಾರರನ್ನೂ ಇಬ್ಬರು ಕುಮಾರ್ತೆಗಳನ್ನೂ ಹೆತ್ತಳು. ಇದಲ್ಲದೆ ಸಮುವೇಲೆಂಬ ಹುಡುಗನು ಕರ್ತನ ಸನ್ನಿಧಿಯಲ್ಲಿ ದೊಡ್ಡವನಾಗುತ್ತಿದ್ದನು.

೨೨ ಆದರೆ ಏಲಿಯು ಬಹಳ ವೃದ್ಧನಾಗಿದ್ದನು. ಅವನು ತನ್ನ ಕುಮಾರರು ಇಸ್ರಯೇಲಿಗೆ ಮಾಡುವದೆಲ್ಲವನ್ನೂ, ಅವರು ಸಭೆಯ ಗುಡಾರದ ಬಾಗಲ ಬಳಿಯಲ್ಲಿ ಕೂಡಿ ಬರುವ ಸ್ತ್ರೀಯರ ಸಂಗ
೨೩ ಮಲಗಿದ್ದರೆಂಬುವದನ್ನೂ ಕೇಳಿ, ಅವರಿಗೆ ಹೇಳಿದ್ದೇನಂದರೆ, ನೀವು ಇಂಥಾ ಕಾರ್ಯಗಳನ್ನು ಮಾಡುವದೇನು! ಯಾಕಂದರೆ ನಾನು ಈ ಸಮಸ್ತ ಜನರಿಂದ ನಿಮ್ಮ ಕೆಟ್ಟ ಕಾರ್ಯಗಳನ್ನು ಕೇಳುತ್ತೇ
೨೪ ನೆ. ನನ್ನ ಕುಮಾರರೇ, ಬೇಡಿರಿ; ಯಾಕಂದರೆ ನಾನು ಕೇಳುವ ವರ್ತಮಾನ ಒಳ್ಳೇದಲ್ಲ; ಕರ್ತನ ಜನ ಮೀರಿ ನಡಿಯುವ ಹಾ
೨೫ ಗೆ ಮಾಡುತ್ತೀರಿ. ಮನುಷ್ಯನಿಗೆ ವಿರೋಧವಾಗಿ ಮನುಷ್ಯನು ಪಾಪ ಮಾಡಿದರೆ, ನ್ಯಾಯಾಧಿಪತಿಗಳು ಅವನಿಗೆ ನ್ಯಾಯ ತೀರಿಸುವರು. ಒಬ್ಬನು ಕರ್ತನಿಗೆ ವಿರೋಧವಾಗಿ ಪಾಪ ಮಾಡಿದರೆ, ಅವನಿಗೋಸ್ಕರ ಪ್ರಾರ್ಥನೆ ಮಾಡ ತಕ್ಕವನು ಯಾರು! ಅಂದನು. ಆದರೆ ಕರ್ತನು ಅವರನ್ನು ಕೊಂದು ಹಾಕುವದಕ್ಕೆ ಮನಸ್ಸಾಗಿದ್ದ ಕಾರಣ, ಅವರು ತಮ್ಮ ತಂದೆಯ ಮಾತನ್ನು ಕೇಳದೆ ಹೋದರು.

೨೬ ಆದರೆ ಸಮುವೇಲೆಂಬ ಹುಡುಗನು ದೊಡ್ಡವನಾಗುತ್ತಾ ಇದ್ದನು; ಮತ್ತು ಕರ್ತನ ಮುಂದೆಯೂ, ಮನುಷ್ಯರ ಮುಂದೆಯೂ ಒಳ್ಳೆಯವನಾಗಿದ್ದನು.

೨೭ ಮತ್ತು ದೇವರ ಮನುಷ್ಯನು ಏಲಿಯ ಬಳಿಗೆ ಬಂದು, ಅವನಿಗೆ ಹೇಳಿದ್ದು—ಕರ್ತನು ಹೇಳುವದೇನಂದರೆ, ನಿನ್ನ ತಂದೆಯ ಮನೆಯವರು, ಐಗುಪ್ತದಲ್ಲಿ ಫರೋನನ ಮನೆಯೊಳಗೆ ಇರುವಾಗ,
೨೮ ನಾನು ಅವರಿಗೆ ಪ್ರತ್ಯಕ್ಷವಾಗಿ ಕಾಣ ಬರಲಿಲ್ಲವೋ! ನನ್ನ ಬಲಿಪೀಠದ ಮೇಲೆ ಬಲಿಯನ್ನು ಅರ್ಪಿಸುವದಕ್ಕೂ, ಧೂಪವನ್ನು ಸುಡುವದಕ್ಕೂ, ನನ್ನ ಮುಂದೆ ಏಫೋದನ್ನು ಧರಿಸಿ ಕೊಂಡಿರುವದಕ್ಕೂ, ನಾನು ಇಸ್ರಯೇಲಿನ ಎಲ್ಲಾ ಕುಲಗಳಿಂದ ನನಗೆ ಯಾಜಕನಾಗಿರ, ನಾನು ಅವನನ್ನು ಅದು ಕೊಳ್ಳಲಿಲ್ಲವೋ! ನಿನ್ನ ತಂದೆಯ ಮನೆಗೆ ಇಸ್ರಯೇಲ್ ಮಕ್ಕಳು ಮಾಡುವ ದಹನ ಬಲಿಗಳನ್ನೆಲ್ಲಾ ಕೊಡಲಿಲ್ಲವೋ!
೨೯ ನನ್ನ ಜನರಾದ ಇಸ್ರಯೇಲ್ಯರು ನನಗೆ ಅರ್ಪಿಸುವ ತಮ್ಮ ಅರ್ಪಣೆಗಳಲ್ಲಿ ಪ್ರಾಮುಖ್ಯವಾದವುಗಳಿಂದ ನಿಮ್ಮನ್ನು ಕೊಬ್ಬಿ ಮಾಡುವದಕ್ಕೆ, ನನ್ನ ವಾಸಸ್ಥಳದಲ್ಲಿ ನಾನು ಆಜ್ಞಾಪಿಸಿದ ನನ್ನ ಬಲಿಯನ್ನೂ ಅರ್ಪಣೆಯನ್ನೂ ನೀವು ಒದ್ದು, ನನಗಿಂತ ನಿನ್ನ ಮಕ್ಕಳನ್ನು ಘನಪಡಿ
೩೦ ಸುವದೇನು! ಆದದರಿಂದ ಇಸ್ರಯೇಲಿನ ದೇವರಾದ ಕರ್ತನು ಹೇಳುವದೇನಂದರೆ, ನಿನ್ನ ಮನೆಯವರೂ ನಿನ್ನ ತಂದೆಯ ಮನೆಯವರೂ ಎಂದೆಂದಿಗೂ ನನ್ನ ಸನ್ನಿಧಿಯಲ್ಲಿ ನಡೆದು ಕೊಳ್ಳುವರೆಂದು, ನಾನು ಹೇಳ್ದೇ ಹೇಳಿ ಇದ್ದನು. ಆದರೆ ಈಗ ಕರ್ತನು ಹೇಳುವದೇನಂದರೆ, ನನಗೆ ಅದು ದೂರವಾಗಿರಲಿ; ಯಾಕಂದರೆ ನನ್ನನ್ನು ಘನಪಡಿಸುವವರನ್ನು ಘನ ಪಡಿಸುವೆನು; ನನ್ನನ್ನು
೩೧ ತಿರಸ್ಕರಿಸುವವರು ಉದಾಸೀನವಾಗುವರು. ಇಗೋ, ನಿನ್ನ ಮನೆಯಲ್ಲಿ ಒಬ್ಬ ಮುದುಕನು ಇಲ್ಲದ ಹಾಗೆ, ನಿನ್ನ ತೋಳ್ಳನ್ನೂ, ನಿನ್ನ ತಂದೆಯ ಮನೆಯವರ ತೋಳ್ಳನ್ನೂ, ನಾನು ಛೇದಿಸುವ
೩೨ ದಿವಸಗಳು ಬರುವವು. ಇದಲ್ಲದೆ ಇಸ್ರಯೇಲಿಗೆ ಮಾಡುವ ಸಕಲ ಉತ್ತಮವಾದವುಗಳಿಗೆ ಬದಲಾಗಿ, ನೀನು ನನ್ನ ವಾಸಸ್ಥಳದಲ್ಲಿ ಒಬ್ಬ ವೈರಿಯನ್ನು ಕಾಣುವಿ. ಎಂದಿಗೂ ನಿನ್ನ ಮನೆಯಲ್ಲಿ
೩೩ ಒಬ್ಬ ಮುದುಕನು ಇರುವದಿಲ್ಲ. ನನ್ನ ಬಲಿಪೀಠದ ಬಳಿಯಿಂದ, ನಾನು ಕಡಿದು ಬಿಡದ ಮನುಷ್ಯನು, ನಿನ್ನ ಕಣ್ಣುಗಳನ್ನು ಕಳೆದು, ನಿನ್ನ ಪ್ರಾಣವನ್ನು ವೇದನೆ ಪಡಿಸುವದಕ್ಕೆ ಇರುವನು; ನಿನ್ನ ಮನೆಯ ಗುಂಪೆಲ್ಲಾ ಪ್ರಾಯಸ್ತರಾದಾಗಲೇ ಸಾಯುವರು
೩೪ ಇದಲ್ಲದೆ ನಿನಗೆ ಗುರುತಾಗಿ ಹೊಫ್ನಿಯು ಫಿನೆಹಾಸನು ಎಂಬ ನಿನ್ನ ಇಬ್ಬರು ಮಕ್ಕಳಿಗೆ ಬರುವದೇನಂದರೆ, ಅವರಿಬ್ಬರೂ ಒಂದೇ
೩೫ ದಿವಸದಲ್ಲಿ ಸಾಯುವರು. ಆದರೆ ನನ್ನ ಹೃದಯಕ್ಕೂ, ನನ್ನ ಪ್ರಾಣಕ್ಕೂ ಸಮರ್ಪಕವಾದ ಹಾಗೆ ಮಾಡುವ ನಂಬಿಕೆಯಾದ ಒಬ್ಬ ಯಾಜಕನನ್ನು ನನಗೋಸ್ಕರ ಎಬ್ಬಿಸಿ, ಅವನಿಗೆ ಸ್ಥಿರವಾದ ಮನೆಯನ್ನು ಕಟ್ಟುವೆನು. ಅವನು ನನ್ನ ಅಭಿಷಿಕ್ತನ ಮುಂದೆ
೩೬ ನಿರಂತರವಾಗಿ ನಡೆದು ಕೊಳ್ಳುವನು. ಮತ್ತು ಆಗುವದೇನಂದರೆ, ನಿನ್ನ ಮನೆಯಲ್ಲಿ ಉಳಿದವರೆಲ್ಲಾ ಬಂದು, ಅವನಿಗೆ ಅಡ್ಡ ಬಿದ್ದು, ಬಂದು ಬೆಳ್ಳಿ ಹಣವನ್ನೂ ಒಂದು ಕೊಟ್ಟಿಯ ಮುರುಕನ್ನೂ ಕೇಳುವದಕ್ಕೆ ಕುಂಗಿ, ನಾನು ಸ್ವಲ್ಪ ಕೊಟ್ಟಿಯನ್ನು ತಿನ್ನುವ ಹಾಗೆ, ದಯ ಮಾಡಿ, ನನ್ನನ್ನು ಯಾಜಕ ಸೇವೆಯಲ್ಲಿ ಕೇರಿಸಿಕೋ ಎಂದು ಹೇಳುವನು, ಅಂದನು.

## ೩. ಸಂಧಿ.

೧ ಸಮುವೇಲೆಂಬ ಹುಡುಗನು ಏಲಿಯ ಮುಂದೆ ಕರ್ತನಿಗೆ ಸೇವೆ
ಮಾಡಿ ಕೊಂಡಿದ್ದನು. ಆ ದಿನಗಳಲ್ಲಿ ಕರ್ತನ ವಾಕ್ಯವು ಅಮೂ
೨ ಲ್ಯವಾಗಿತ್ತು; ವಿಸ್ತಾರವಾದ ದರ್ಶನವಿಲ್ಲ. ಆ ಕಾಲದಲ್ಲಿ ಆದದ್ದೇ
ನಂದರೆ, ಏಲಿ ತನ್ನ ಸ್ಥಳದಲ್ಲಿ ಮಲಗಿದ್ದನು; ಮತ್ತು ನೋಡ ಕೂ
3 ಡದ ಹಾಗೆ ಅವನ ಕಣ್ಣುಗಳು ಮೊಬ್ಬಾಗುತ್ತಿದ್ದವು. ದೇವರ ಪೆ
ಟ್ಟಿಗೆ ಇರುವ ಕರ್ತನ ಮಂದಿರದಲ್ಲಿ ದೇವರ ದೀಪಗೆಯು ಆರಿ
ಹೋಗುವದಕ್ಕಿಂತ ಮುಂಚೆ, ಸಮುವೇಲನು ಮಲಗಿದ್ದನು; ಆಗ
೪ ಕರ್ತನು ಸಮುವೇಲನನ್ನು ಕರೆದನು. ಅದಕ್ಕವನು, ಇಗೋ, ಇ
ದ್ದೇನೆ ಎಂದು ಹೇಳಿ, ಏಲಿಯ ಬಳಿಗೆ ಓಡಿ ಹೋಗಿ, ಇಗೋ, ಇ
೫ ದ್ದೇನೆ; ನೀನು ನನ್ನನ್ನು ಕರೆದಿಯಲ್ಲ! ಅಂದನು. ಅದಕ್ಕವನು,
ನಾನು ನಿನ್ನನ್ನು ಕರೆಯಲಿಲ್ಲ; ಶಿರಿಗಿ ಹೋಗಿ, ಮಲಗಿಕೋ,
೬ ಅಂದನು. ಅವನು ಹೋಗಿ, ಹಾಗೆಯೇ ಮಲಗಿದನು. ಮತ್ತು
ಕರ್ತನು, ಸಮುವೇಲನೇ, ಎಂದು ಅವನನ್ನು ಶಿರಿಗಿ ಕರೆದನು. ಆಗ
ಸಮುವೇಲನು ಎದ್ದು, ಏಲಿಯ ಬಳಿಗೆ ಹೋಗಿ, ಇಗೋ, ಇದ್ದೇ
ನೆ; ನನ್ನನ್ನು ಕರೆದಿಯಲ್ಲ! ಅಂದನು. ಅದಕ್ಕವನು, ನನ್ನ ಮ
ಗನೇ, ನಾನು ಕರೆಯಲಿಲ್ಲ; ನೀನು ಹೋಗಿ, ಮಲಗಿಕೋ, ಅಂದ
೭ ನು. ಆದರೆ ಸಮುವೇಲನು ಆ ವರಿಗೂ ಕರ್ತನನ್ನು ಅರಿತವನೂ
ಅಲ್ಲ; ಕರ್ತನ ವಾಕ್ಯವು ಅವನಿಗೆ ತಿಳಿಯಲ್ಪಟ್ಟದ್ದೂ ಇಲ್ಲ.
೮ ಕರ್ತನು ಮತ್ತೂ ಮೂರನೇ ಸಾರಿ, ಸಮುವೇಲನೇ, ಎಂದು ಕರೆ
ದನು. ಅವನು ಎದ್ದು, ಏಲಿಯ ಬಳಿಗೆ ಹೋಗಿ, ಇಗೋ, ಇದ್ದೇ
ನೆ; ಯಾಕಂದರೆ ನನ್ನನ್ನು ಕರೆದಿ, ಅಂದನು. ಆಗ ಏಲಿಯು,
ಕರ್ತನು ಹುಡುಗನನ್ನು ಕರೆಯುತ್ತಾನೆಂದು ಗ್ರಹಿಸಿ ಕೊಂಡನು.
೯ ಮತ್ತು ಏಲಿಯು ಸಮುವೇಲನಿಗೆ, ನೀನು ಹೋಗಿ, ಮಲಗು; ಅವ
ನು ನಿನ್ನನ್ನು ಕರೆದರೆ, ಆಗ ನೀನು, ಕರ್ತನೇ, ಮಾತಾಡು; ಯಾ
ಕಂದರೆ ನಿನ್ನ ದಾಸನು ಕೇಳುತ್ತಾನೆ, ಎಂದು ಹೇಳು. ಅಂದನು.
೧೦ ಹಾಗೆಯೇ ಸಮುವೇಲನು ಹೋಗಿ, ತನ್ನ ಸ್ಥಳದಲ್ಲಿ ಮಲಗಿದನು
ಆಗ ಕರ್ತನು ಬಂದು, ನಿಂತು, ಮೊದಲಿನ ಹಾಗೆಯೇ, ಸಮುವೇಲ
ನೇ, ಸಮುವೇಲನೇ, ಎಂದು ಕರೆದನು. ಅದಕ್ಕೆ ಸಮುವೇಲನು,
ಮಾತಾಡು, ನಿನ್ನ ದಾಸನು ಕೇಳುತ್ತಾನೆ, ಅಂದನು.
೧೧ ಕರ್ತನು ಸಮುವೇಲನಿಗೆ ಹೇಳಿದ್ದೇನಂದರೆ—ಇಗೋ, ನಾನು
ಇಸ್ರಯೇಲಿನಲ್ಲಿ ಒಂದು ಕಾರ್ಯವನ್ನು ಮಾಡುವೆನು; ಅದನ್ನು
೧೨ ಕೇಳುವವನ ಎರಡು ಕಿವಿಗಳು ಝಣ ಝಣಿಸುವವು. ಯಾಕಂ
ದರೆ ನಾನು ಏಲಿಯ ಮನೆಯನ್ನು ಕುರಿತು ಹೇಳಿದ್ದನ್ನೆಲ್ಲಾ ಅವ
೪ ರಿಗೆ ಆ ದಿವಸದಲ್ಲಿ ಮಾಡುತ್ತೇನೆ; ಆರಂಭಿಸುವಾಗ, ತೀರಿಸುತ್ತೇ
೧೩ ನೆ. ಅವನು ತಿಳಿದ ಅಕ್ರಮದ ನಿಮಿತ್ತ ನಾನು ಎಂದೆಂದಿಗೂ ಅವ
ನ ಮನೆಗೆ ನ್ಯಾಯ ತೀರಿಸುವೆನೆಂದು, ಅವನಿಗೆ ಹೇಳಿದ್ದೇನೆ. ಯಾ
ಕಂದರೆ ತನ್ನ ಕುಮಾರರು ತಮ್ಮನ್ನು ಶಾಪಕ್ಕೆ ಈಡಾಗಿ ಮಾ
೧೪ ಡಿ ಕೊಂಡಾಗ, ಅವರಿಗೆ ಗಂಟು ಮೋಕೆ ತೋರಿಸಲಿಲ್ಲ. ಆದದ
ರಿಂದ ಏಲಿಯ ಮನೆಯ ಅಕ್ರಮವು ಯುಗ ಯುಗಾಂತರಕ್ಕೂ
ಬಲಿಯಿಂದಲಾದರೂ ಅರ್ಪಣೆಯಿಂದಲಾದರೂ ಮುಚ್ಚಲ್ಪಟ್ಟುವದಿ
ಲ್ಲ ಎಂದು, ನಾನು ಏಲಿಯ ಮನೆಯನ್ನು ಕುರಿತು ಆಣೆ ಇಟ್ಟಿ
ನು, ಅಂದನು.
೧೫ ಸಮುವೇಲನು ಉದಯದ ಪರ್ಯಂತರ ಮಲಗಿದ್ದು, ಕ
ರ್ತನ ಮನೆಯ ಬಾಗಲುಗಳನ್ನು ತೆರೆದನು. ಆದರೆ ಸಮು
೧೬ ವೇಲನು ದರ್ಶನವನ್ನು ಏಲಿಗೆ ತಿಳಿಸ ಭಯ ಪಟ್ಟನು. ಆಗ ಏಲಿ
ಯು ಸಮುವೇಲನನ್ನು ಕರೆದು, ಅವನಿಗೆ, ನನ್ನ ಮಗನಾದ ಸ
೧೭ ಮುವೇಲನೇ, ಅಂದನು. ಅದಕ್ಕವನು, ಇಗೋ, ಇದ್ದೇನೆ, ಅಂದ
ನು. ಏಲಿಯು ಅವನಿಗೆ, ಕರ್ತನು ನಿನಗೆ ಹೇಳಿದ ಮಾತೇನು!
ನನಗೆ ಅದನ್ನು ಮಾಜ ಬೇಡ. ಅವನು ನಿನಗೆ ಹೇಳಿದ ಸಕಲ ವಾ
ರ್ತೆಗಳಲ್ಲಿ ನೀನು ಯಾವದನ್ನಾದರೂ ನನಗೆ ಮಾಜಿದರೆ, ದೇವ
೧೮ ರು ನಿನಗೆ ಅದಕ್ಕಿಂತ ಅಧಿಕವಾಗಿ ಮಾಡಲಿ, ಅಂದನು. ಹಾಗೆಯೇ
ಸಮುವೇಲನು ಅವನಿಗೆ ಬಂದನ್ನೂ ಮಾಜದೆ, ಆ ಮಾತುಗಳನ್ನೆ
ಲ್ಲಾ ಅವನಿಗೆ ತಿಳಿಸಿದನು. ಅದಕ್ಕವನು, ಆತನು ಕರ್ತನು, ತನ್ನ
ಕಣ್ಣುಗಳಿಗೆ ಒಳ್ಳೇದಾಗಿ ತೋರುವದನ್ನು ಮಾಡಲಿ, ಅಂದನು.
೧೯ ಆದರೆ ಸಮುವೇಲನು ಬೆಳೆಯುತ್ತಾ ಬಂದನು; ಮತ್ತು ಕರ್ತ
ನು ಅವನ ಸಂಗಡ ಇದ್ದು, ಅವನ ವಾಕ್ಯಗಳಲ್ಲಿ ಒಂದಾದರೂ ಭೂ
೨೦ ಮಿಗೆ ಬಿದ್ದು ಹೋಗ ಗೊಡಿಸಲಿಲ್ಲ. ಆಗ ಸಮುವೇಲನು ಕರ್ತ
ನ ಪ್ರವಾದಿಯಾಗಿ ಸ್ಥಿರ ಮಾಡಲ್ಪಟ್ಟನೆಂದು, ದಾನ್ ಊರು ಮೊ
ದಲ್ಗೊಂಡು ಬೇರ್ಷೆಬದ ಮಟ್ಟಿಗೂ ಇದ್ದ ಇಸ್ರಯೇಲ್ಯರೆಲ್ಲರು ತಿ
೨೧ ಳಿದಿದ್ದರು. ಕರ್ತನು ಶಿರಿಗಿ ಶಿಲೋವಿನಲ್ಲಿ ಕಾಣಿಸಿ ಕೊಂಡನು.
ಯಾಕಂದರೆ ಕರ್ತನು ಶಿಲೋವಿನಲ್ಲಿ ಕರ್ತನ ವಾಕ್ಯದಿಂದ ಸಮು
ವೇಲಿಗೆ ಪ್ರತ್ಯಕ್ಷವಾದನು.

## ೪. ಸಂಧಿ.

೧ ಮತ್ತು ಸಮುವೇಲನ ವಾಕ್ಯವು ಸಮಸ್ತ ಇಸ್ರಯೇಲಲ್ಲಿ ಉಂ
ಟಾಯಿತು.

ಆದರೆ ಇಸ್ರಯೇಲ್ಯರು ಫಿಲಿಷ್ಟ್ಯರಿಗೆ ವಿರೋಧವಾಗಿ ಯುದ್ಧ
ಕ್ಕೆ ಹೊರಟು, ಎಬೆನೇಜರನ ಸಮೀಪದಲ್ಲಿ ದಂಡಿಳಿದರು. ಫಿಲಿ
೨ ಷ್ಟ್ಯರು ಅಫೇಕಿನಲ್ಲಿ ದಂಡಿಳಿದರು. ಫಿಲಿಷ್ಟ್ಯರು ಇಸ್ರಯೇಲಿಗೆ
ಎದುರಾಗಿ ವ್ಯೂಹವನ್ನು ಕಟ್ಟಿ, ಯುದ್ಧ ಕಲಹಾಗ, ಇಸ್ರಯೇ
ಲ್ಯರು ಫಿಲಿಷ್ಟ್ಯರ ಮುಂದೆ ಹೊಡೆಯಲ್ಪಟ್ಟರು. ಏನಂದರೆ ಫಿಲಿ
ಷ್ಟ್ಯರು ಯುದ್ಧರಂಗದಲ್ಲಿ ಹೆಚ್ಚು ಕಡಿಮೆ ನಾಲ್ಕು ಸಾವಿರ ಜನ
ರನ್ನು ಹೊಡೆದು ಹಾಕಿದರು.
3 ಜನರು ದಂಡಿನಲ್ಲಿ ಬಂದಾಗ, ಇಸ್ರಯೇಲಿನ ಹಿರಿಯರು, ಈ
ಹೊತ್ತು ಕರ್ತನು ಫಿಲಿಷ್ಟ್ಯರ ಮುಂದೆ ನಮ್ಮನ್ನು ಮುರಿಯ ಬ
ಡಿದದ್ದೇನು! ಕರ್ತನ ಒಡಂಬಡಿಕೆಯ ಪೆಟ್ಟಿಗೆಯು ನಮ್ಮಲ್ಲಿದ್ದು,
ನಮ್ಮನ್ನು ನಮ್ಮ ಶತ್ರುಗಳಿಂದ ತಪ್ಪಿಸಿ ರಕ್ಷಿಸುವ ಹಾಗೆ, ನಾವು
೪ ಅದನ್ನು ಶಿಲೋವಿನಿಂದ ತರುವ, ಅಂದರು. ಹಾಗೆಯೇ ಜನರು
ಕೆರೂಬಿಗಳ ಮಧ್ಯದಲ್ಲಿರುವ ಸೈನ್ಯಗಳ ಕರ್ತನ ಒಡಂಬಡಿಕೆಯ
ಪೆಟ್ಟಿಗೆಯನ್ನು ತಕ್ಕೊಂಡು ಬರ ಶಿಲೋವಿಗೆ ಕಳುಹಿಸಿದರು. ಅ
ಲ್ಲಿ ಏಲಿಯ ಇಬ್ಬರು ಮಕ್ಕಳಾದ ಹೊಫ್ನಿಯೂ ಫಿನೆಹಾಸನೂ
ದೇವರ ಒಡಂಬಡಿಕೆಯ ಪೆಟ್ಟಿಗೆಯ ಬಳಿಯಲ್ಲಿದ್ದರು.
೫ ಕರ್ತನ ಒಡಂಬಡಿಕೆಯ ಪೆಟ್ಟಿಗೆ ದಂಡಿನಲ್ಲಿ ಬಂದಾಗ, ಇಸ್ರ
ಯೇಲೆಲ್ಲಾ ಮಹಾ ಆರ್ಭಟವಾಗಿ ಭೂಮಿ ಕಂಪಿಸುವ ಹಾಗೆ ಆ
೬ ರ್ಭಟಿಸಿದರು. ಅವರು ಆರ್ಭಟಿಸುವ ಶಬ್ದವನ್ನು ಫಿಲಿಷ್ಟ್ಯರು
ಕೇಳಿದಾಗ, ಇಬ್ರೀಯರ ದಂಡಿನಲ್ಲಿ ಈ ಮಹಾ ಆರ್ಭಟೆನು!
ಎಂಥೇಳಿ, ಕರ್ತನ ಒಡಂಬಡಿಕೆಯ ಪೆಟ್ಟಿಗೆಯು ದಂಡಿನಲ್ಲಿ ಬಂ
೭ ತೆಂದು, ತಿಳಿಯ ಕೊಂಡರು. ದೇವರು ದಂಡಿನಲ್ಲಿ ಬಂದನೆಂದು ಹೇಳ
ಲ್ಪಟ್ಟದ್ದರಿಂದ, ಫಿಲಿಷ್ಟ್ಯರು ಭಯ ಪಟ್ಟು, ನಮಗೆ ಅಯ್ಯೋ!



೮ ಯಾಕಂದರೆ ಪೂರ್ವದಲ್ಲಿ ಹೀಗೆ ಇದ್ದದ್ದಿಲ್ಲ. ನಮಗೆ ಅಯ್ಯೋ!
ಆ ಶ್ರೇಷ್ಠ ದೇವರುಗಳ ಕೈಯಿಂದ ನಮ್ಮನ್ನು ತಪ್ಪಿಸುವವನ್ಯಾ
ರು! ಐಗುಪ್ತ್ಯರನ್ನು ಅರಣ್ಯದಲ್ಲಿ ಸಕಲ ಬಾಧೆಗಳಿಂದ ಬಡಿದ
೯ ದೇವರುಗಳು ಅವರೇ. ಫಿಲಿಷ್ಟ್ಯರೇ, ನೀವು ಬಲಗೊಂಡು, ಗಂಡಸ
ರಾಗಿರಿ; ಇಬ್ರಿಯರು ನಿಮಗೆ ಊಳಿಗ ಮಾಡಿದ ಪ್ರಕಾರ, ನೀವು
ಅವರಿಗೆ ಊಳಿಗ ಮಾಡದ ಹಾಗೆ, ಗಂಡಸರಾಗಿದ್ದು, ಯುದ್ಧ ಮಾ
ಡಿರೆಂದು, ಹೇಳಿ ಕೊಂಡರು.
೧೦ ಮತ್ತು ಫಿಲಿಷ್ಟ್ಯರು ಯುದ್ಧ ಮಾಡಿದರು. ಇಸ್ರಯೇಲ್ಯರು
ಹೊಡೆಯಲ್ಪಟ್ಟು, ಅವರವರು ತಮ್ಮ ಗುಡಾರಗಳಿಗೆ ಓಡಿ ಹೋ
ದರು. ಮತ್ತು ಅಲ್ಲಿ ಬೊಡ್ಡ ಹತವಾಗಿ, ಇಸ್ರಯೇಲಲ್ಲಿ ಮೂವ
೧೧ ತ್ತು ಸಾವಿರ ಕಾಲ್ಬಲವು ಬಿತ್ತು. ದೇವರ ಪೆಟ್ಟಿಗೆಯು ತಕ್ಕೊಳ್ಳ
ಲ್ಪಟ್ಟಿತು. ಏಲಿಯ ಇಬ್ಬರು ಮಕ್ಕಳಾದ ಹೊಫ್ನಿಯೂ ಫಿನೆ
ಹಾಸನೂ ಸತ್ತರು.
೧೨ ಅದೇ ದಿವಸದಲ್ಲಿ ಬೆನ್ಯಮಿನ್ಯನಾದ ಒಬ್ಬ ಮನುಷ್ಯನು
ತನ್ನ ವಸ್ತ್ರಗಳನ್ನು ಹರಿದು ಕೊಂಡು, ತನ್ನ ತಲೆಯ ಮೇಲೆ
ಮಣ್ಣು ಹಾಕಿ ಕೊಂಡು, ಯುದ್ಧರಂಗದಿಂದ ಶಿಲೋವಿಗೆ ಓಡಿ
೧೩ ಬಂದನು. ಅವನು ಬರುವಾಗ, ಇಗೋ, ಏಲಿಯು, ದೇವರ ಪೆಟ್ಟಿ
ಗೆಗೋಸ್ಕರ ತನ್ನ ಹೃದಯವು ಹೆದರುತ್ತಾ ಇರುವದರಿಂದ,
ಆಸನದ ಮೇಲೆ ಮಾರ್ಗದ ಬಳಿಯಲ್ಲಿ ನಿರೀಕ್ಷಿಸಿ ಕೊಳ್ಳುತ್ತಾ, ಕು
ಳಿತಿದ್ದನು. ಊರಲ್ಲಿ ವರ್ತಮಾನ ತಿಳಿಸ ಆ ಮನುಷ್ಯನು ಪ
೧೪ ಟ್ಟಣದಲ್ಲಿ ಪ್ರವೇಶಿಸಿದಾಗ, ಪಟ್ಟಣವೆಲ್ಲಾ ಕೂಗಿತು. ಕೂಗುವ ಶಬ್ದವ
ನ್ನು ಏಲಿಯು ಕೇಳಿದಾಗ, ಆ ಗುಂಪಿನ ಶಬ್ದ ಏನು! ಅಂದನು.
೧೫ ಆಗ ಆ ಮನುಷ್ಯನು ತ್ವರೆಯಾಗಿ ಬಂದು, ಏಲಿಗೆ ತಿಳಿಸಿದನು.
೧೬ ಆದರೆ ಏಲಿಯು ತೊಂಭತ್ತೆಂಟು ವರುಷ ಪ್ರಾಯದವನಾಗಿದ್ದ
ನು. ಅವನು ನೋಡ ಕೂಡದ ಹಾಗೆ, ಅವನ ಕಣ್ಣುಗಳು ಇಂಗಿ
ಹೋದವು. ಆ ಮನುಷ್ಯನು ಏಲಿಗೆ, ಯುದ್ಧರಂಗದಿಂದ ಬಂದವ
ನು ನಾನೇ; ನಾನು ಈ ಹೊತ್ತು ಯುದ್ಧರಂಗದಿಂದ ಓಡಿ ಬಂದೆನು,
ಅಂದನು. ಆಗಲವನು, ನನ್ನ ಮಗನೇ, ಅಲ್ಲಿ ನಡೆದ ವರ್ತಮಾ
೧೭ ನವೇನು! ಅಂದನು. ಅದಕ್ಕೆ ವರ್ತಮಾನ ತಂದವನು ಪ್ರತ್ಯುತ್ತರವಾ
ಗಿ, ಇಸ್ರಯೇಲ್ಯರು ಫಿಲಿಷ್ಟ್ಯರ ಮುಂದೆ ಓಡಿ ಹೋದರು, ಜನರಲ್ಲಿ
ದೊಡ್ಡ ಸಂಹಾರವಾಯಿತು; ನಿನ್ನ ಇಬ್ಬರು ಮಕ್ಕಳಾದ ಹೊ
ಫ್ನಿಯೂ ಫಿನೆಹಾಸನೂ ಸತ್ತರು; ಇದಲ್ಲದೆ ದೇವರ ಪೆಟ್ಟಿಗೆಯು
೧೮ ತಕ್ಕೊಳ್ಳಲ್ಪಟ್ಟಿತು, ಅಂದನು. ಅವನು ದೇವರ ಒಡಂಬಡಿಕೆಯ
ಪೆಟ್ಟಿಗೆಯ ಮಾತನ್ನು ಹೇಳಿದಾಗ, ಏಲಿಯು ಆಸನದ ಮೇಲಿಂ
ದ ಬಾಗಲಿನ ಪಾರ್ಶ್ವವಾಗಿ ಹಿಂದಕ್ಕೆ ಬಿದ್ದು, ಕೋಣಲು ಮುರಿ
ದು, ಸತ್ತನು. ಯಾಕಂದರೆ ಅವನು ಮುದುಕನಾಗಿಯೂ ಭಾರ
ವುಳ್ಳವನಾಗಿಯೂ ಇದ್ದನು. ಅವನು ನಾಲ್ವತ್ತು ವರುಷ ಇಸ್ರ
ಯೇಲಿಗೆ ನ್ಯಾಯ ತೀರಿಸಿದನು.
೧೯ ಇದಲ್ಲದೆ ಅವನ ಸೊಸೆಯಾದ ಫಿನೆಹಾಸನ ಹೆಂಡತಿ ಗರ್ಭಿ
ಣಿಯಾಗಿ ಹೆರುವದಕ್ಕಿದ್ದಳು. ಅವಳು ದೇವರ ಪೆಟ್ಟಿಗೆಯು ತ
ಕ್ಕೊಳ್ಳಲ್ಪಟ್ಟ ವರ್ತಮಾನವನ್ನೂ, ತನ್ನ ಮಾವನೂ ತನ್ನ
ಗಂಡನೂ ಸತ್ತು ಹೋದರೆಂಬುವದನ್ನೂ ಕೇಳಿದಾಗ, ಅವಳಿಗೆ
೨೦ ಪ್ರಸವ ವೇದನೆ ಹತ್ತಿ, ಅವಳು ಬೊಗ್ಗಿ, ಹೆತ್ತಳು. ಅವಳು ಸಾ
ಯುವ ವೇಳೆಯಲ್ಲಿ ಅವಳ ಬಳಿಯಲ್ಲಿ ನಿಂತಿರುವ ಸ್ತ್ರೀಯರು,
ಭಯ ಪಡ ಬೇಡ; ಯಾಕಂದರೆ ಮಗನನ್ನು ಹೆತ್ತಿ ಎಂದು, ಅವ
೨೧ ಳ ಸಂಗಡ ಹೇಳಿದರು. ಆದರೆ ಅವಳು ಅದಕ್ಕೆ ಪ್ರತ್ಯುತ್ತರ ಹೇ
ಳದೆ, ಅದರ ಮೇಲೆ ಹೃದಯವಿಡದೆ, ದೇವರ ಪೆಟ್ಟಿಗೆ ಹಿಡಿಯ
ಲ್ಪಟ್ಟದ್ದರಿಂದಲೂ, ತನ್ನ ಮಾವನೂ ತನ್ನ ಗಂಡನೂ ಸತ್ತು ಹೋ
ದದರಿಂದಲೂ, ಇಸ್ರಯೇಲನ್ನು ಬಿಟ್ಟು ಹೋಯಿತು, ಎಂ
೨೨ ಥೇಳಿ, ಆ ಕೂಸಿಗೆ ಈಕಬೊದನೆಂಬ ಹೆಸರಿಟ್ಟಳು. ದೇವರ
ಪೆಟ್ಟಿಗೆ ಹಿಡಿಯಲ್ಪಟ್ಟು ಹೋದದರಿಂದ, ಮಹತ್ತು ಇಸ್ರಯೇಲ
ನ್ನು ಬಿಟ್ಟು ಹೋಯಿತೆಂದು, ಹೇಳಿದಳು.

## ೫. ಸಂಧಿ.

೧ ಆದರೆ ಫಿಲಿಷ್ಟ್ಯರು ದೇವರ ಪೆಟ್ಟಿಗೆಯನ್ನು ತಕ್ಕೊಂಡು,
೨ ಎಬೆನೇಜರಿನಿಂದ ಅಶ್ದೋದಿಗೆ ಬೈದರು. ಫಿಲಿಷ್ಟ್ಯರು ದೇವರ
ಪೆಟ್ಟಿಗೆಯನ್ನು ತಕ್ಕೊಂಡು ಬಂದಾಗ, ದಗೋನನ ಮನೆಯಲ್ಲಿ
3 ದಗೋನನ ಬಳಿಯಲ್ಲಿಟ್ಟರು. ಆದರೆ ಅಶ್ದೋದ್ಯರು ಮಾರಣೆ
ದಿವಸ ಬಳಿಗ್ಯೇ ಎದ್ದಾಗ, ಇಗೋ, ದಗೋನ್ ಕರ್ತನ ಪೆಟ್ಟಿಗೆ
೪ ಯ ಮುಂದೆ ಬೋರ್ಲ ಬಿದ್ದಿತ್ತು. ಆಗಲವರು ದಗೋನನನ್ನು
ತೆಗೆದು, ಅದನ್ನು ಅದರ ಸ್ಥಳದಲ್ಲಿ ಶಿರಿಗಿ ಇಟ್ಟರು. ಅವರು ಮಾ
ರಣೆ ದಿವಸ ಬೆಳಿಗ್ಯೇ ಎದ್ದಾಗ, ಇಗೋ, ದಗೋನ್ ಕರ್ತನ ಪೆ
ಟ್ಟಿಗೆಯ ಮುಂದೆ ಬೋರ್ಲ ಬಿದ್ದಿತ್ತು; ಮತ್ತು ದಗೋನನ ತಲೆ
ಯೂ ಅದರ ಎರಡು ಕೈಗಳೂ ಹೊಸ್ತಲ ಮೇಲೆ ಕಡಿಯಲ್ಪಟ್ಟು,
೫ ಬಿದ್ದಿದ್ದವು; ಮತ್ಸ್ಯ ರೂಪ ಮಾತ್ರ ಅದಕ್ಕೆ ಉಳಿದಿತ್ತು. ಆದದ
ರಿಂದ ಈ ದಿನದ ವರಿಗೂ ದಗೋನನ ಯಾಜಕರೂ ದಗೋನ
ನ ಮನೆಯಲ್ಲಿ ಪ್ರವೇಶಿಸುವವರೆಲ್ಲರೂ ಅಶ್ದೋದಿನಲ್ಲಿರುವ ದ
ಗೋನನ ಹೊಸ್ತಲನ್ನು ತುಳಿಯರು.
೬ ಆದರೆ ದೇವರ ಕೈ ಅಶ್ದೋದಿನವರ ಮೇಲೆ ಮಹಾ ಭಾರವಾ
ಗಿತ್ತು; ಅವರನ್ನು ಹಾಳು ಮಾಡಿದನು; ಅಶ್ದೋದನ್ನೂ, ಅದರ
೭ ಮೇರೆಗಳನ್ನೂ ಮೂಲ ವ್ಯಾಧಿಯಿಂದ ಹೊಡೆದನು. ಈ ಪ್ರಕಾ
ರ ಸಂಭವಿಸಿದ್ದನ್ನು ಅಶ್ದೋದಿನ ಜನರು ನೋಡಿದಾಗ, ಇಸ್ರಯೇ
ಲ್ ದೇವರ ಪೆಟ್ಟಿಗೆಯು ನಮ್ಮ ಬಳಿಯಲ್ಲಿ ಇರ ಬಾರದು; ಯಾ
ಕಂದರೆ ಅವನ ಕೈ ನಮ್ಮ ಮೇಲೆಯೂ, ನಮ್ಮ ದೇವರಾದ ದ
೮ ಗೋನನ ಮೇಲೆಯೂ ಕಠಿಣವಾಗಿದೆ, ಅಂದರು. ಮತ್ತು ಅವರು
ಫಿಲಿಷ್ಟ್ಯರ ಅಧಿಪತಿಗಳೆಲ್ಲರನ್ನು ತಮ್ಮ ಬಳಿಗೆ ಕಳುಹಿಸಿ,
ಅವರಿಗೆ, ಇಸ್ರಯೇಲ್ ದೇವರ ಪೆಟ್ಟಿಗೆಯನ್ನು ಏನು ಮಾಡುವ!
ಅಂದರು. ಅದಕ್ಕವರು, ಇಸ್ರಯೇಲ್ ದೇವರ ಪೆಟ್ಟಿಗೆ ಗಾತಿಗೆ
ಸುತ್ತಾಗಿ ವೈಯಲ್ಪತಲಿ, ಅಂದರು. ಅವರು ಇಸ್ರಯೇಲ್ ದೇವರ
೯ ಪೆಟ್ಟಿಗೆಯನ್ನು ಸುತ್ತಾ ವೈದರು. ಅದರೆ ಅವರು ಅದನ್ನು ಸುತ್ತಾ
ಗಿ ವೈದ ತರುವಾಯ, ಕರ್ತನ ಕೈ ಆ ಪಟ್ಟಣದ ಮೇಲೆ ಬಂದು, ಮ
ಹಾ ದೊಡ್ಡ ನಾಶ ಮಾಡಿತು. ಇದಲ್ಲದೆ ಕರ್ತನು ಚಿಕ್ಕವರಿಂದ
ಹಿರಿಯರ ಮಟ್ಟಿಗೂ ಆ ಪಟ್ಟಣದ ಮನುಷ್ಯರನ್ನು ಹೊಡೆದನು;
ಮತ್ತು ಅವರಿಗೆ ಮೂಲ ವ್ಯಾಧಿ ಹುಟ್ಟಿತು.
೧೦ ಅವರು ದೇವರ ಪೆಟ್ಟಿಗೆಯನ್ನು ಎಕ್ರೋನಿಗೆ ಕಳುಹಿಸಿದರು.
ದೇವರ ಪೆಟ್ಟಿಗೆಯು ಎಕ್ರೋನಿಗೆ ಬಂದಾಗ ಆದದ್ದೇನಂದರೆ, ಎ
ಕ್ರೋನ್ಯರು, ನಮ್ಮನ್ನೂ ನಮ್ಮ ಜನರನ್ನೂ ಕೊಂದು ಹಾಕ
ಇಸ್ರಯೇಲ್ ದೇವರ ಪೆಟ್ಟಿಗೆಯನ್ನು ನಮ್ಮ ಬಳಿಗೆ ಸುತ್ತಾಗಿ ತಂ
೧೧ ದರೆಂದು, ಕೂಗಿ ಹೇಳಿದರು. ಆಗ ಆ ಪಟ್ಟಣದಲ್ಲೆಲ್ಲಿಯೂ ಮರಣ
ಕರವಾದ ನಾಶ ಉಂಟಾಗಿ, ದೇವರ ಕೈ ಅಲ್ಲಿ ಮಹಾ ಭಾರವಾಗಿ

ದ್ದದರಿಂದ, ಅವರು ಫಿಲಿಷ್ಟ್ಯರ ಅಧಿಪತಿಗಳೈಲ್ಲರನ್ನು ಕರೆಯ ಕಳುಹಿಸಿ, ಇಸ್ರಯೇಲ್ ದೇವರ ಬೆಟ್ಟಿಗೆಯು ನಮ್ಮನ್ನೂ ನಮ್ಮ ಜನರನ್ನೂ ಕೊಂದು ಹಾಕದ ಹಾಗೆ, ನೀವು ಅದನ್ನೂ ಅದರ ಸ್ವಸ್ಥಳಕ್ಕೆ ತಿರಿಗಿ ಕಳುಹಿಸಿ ಬಿಡಿರಿ, ಅಂದರು. ಸತ್ತು ಹೋಗದೆ ಉಳಿದ ಮನುಷ್ಯರು ಮೂಲವ್ಯಾಧಿಯಿಂದ ಬೇಧಿಸಲ್ಪಟ್ಟಿರು; ಆ ಪಟ್ಟಣದ ಬೊಕೆಯು ಆಕಾಶಕ್ಕೆ ಏರಿತು.

## ೬. ಸಂಧಿ.

೧ ಅದರೆ ಕರ್ತನ ಬೆಟ್ಟಿಗೆಯು ಫಿಲಿಷ್ಟ್ಯರ ಬೀಮೆಯಲ್ಲಿ ಏಳು ತಿಂಗಳು ಇದ್ದ ತರುವಾಯ, ಫಿಲಿಷ್ಟ್ಯರು ಪೂಜಾರಿಗಳನ್ನೂ ಕಣಿ ಕೇಳುವವರನ್ನೂ ಕರಸಿ, ಕರ್ತನ ಬೆಟ್ಟಿಗೆಯನ್ನು ನಾವೇನು
೨ ಮಾಡುವ! ನಾವು ಅದನ್ನು ಹ್ಯಾಗೆ ಅದರ ಸ್ವಸ್ಥಳಕ್ಕೆ ಕಳುಹಿಸುವ! ನಮಗೆ ತಿಳ್ಳಿಸಿರಿ, ಅಂದರು. ಅದಕ್ಕವರು ಹೇಳಿದ್ದೇನಂದರೆ, ಇಸ್ರಯೇಲ್ ದೇವರ ಬೆಟ್ಟಿಗೆಯನ್ನು ನೀವು ಕಳುಹಿಸ ಬೇಕಾದರೆ, ಅದನ್ನು ಬರಿದಾಗಿ ಕಳುಹಿಸಬೆಡಿ, ಅದರ ಸಂಗಡ ನಿಶ್ಚಯವಾಗಿ ಅಪರಾಧ ಕಾಣಿಕೆಯನ್ನು ಕಳುಹಿಸಿರಿ; ಆಗ ನೀವು ಸ್ವಸ್ಥ ಮಾಡಲ್ಪಡುವಿರಿ. ಮತ್ತು ಅವನ ಕೈ ನಿಮ್ಮನ್ನು ಬಿಟ್ಟು ಹೋಗದೆ ಇರುವ
೪ ಕಾರಣ, ನಿಮಗೆ ತಿಳ್ಳಿಯಲ್ಪಡುವದು, ಅಂದರು. ಆಗಲವರು, ಅಪರಾಧ ಕಾಣಿಕೆಯೋಗಿ ನಾವು ಅದರ ಸಂಗಡ ಕಳುಹಿಸ ತಕ್ಕದ್ದೇನು! ಅಂದರು. ಅದಕ್ಕವರು ಹೇಳಿದ್ದೇನಂದರೆ, ಫಿಲಿಷ್ಟ್ಯರ ಅಧಿಪತಿಗಳ ಲೆಖ್ಖಕ್ಕೆ ಸರಿಯಾಗಿ ಒಬ್ಬೊಬ್ಬರಿಗೆ ಮೂಲವ್ಯಾಧಿಯ ವಿಧವಾದ ಐದು ಭಂಗಾರದ ಸ್ವರೂಪಗಳನ್ನೂ, ಭಂಗಾರದ ಐದು ಇಲಿಗಳನ್ನೂ ಕಳುಹಿಸಿರಿ; ಯಾಕಂದರೆ ನಿಮ್ಮೆಲ್ಲರಿಗೂ
೫ ನಿಮ್ಮ ಅಧಿಪತಿಗಳಿಗೂ ಒಂದೇ ವೇದನೆ ಅದೆ. ಆದದರಿಂದ ನಿಮ್ಮ ಮೂಲವ್ಯಾಧಿಯ ಸ್ವರೂಪಗಳನ್ನೂ, ಭೂಮಿಯನ್ನು ಕೆಡಿಸಿ ಬಿಟ್ಟ ನಿಮ್ಮ ಇಲಿಗಳ ಸ್ವರೂಪಗಳನ್ನೂ ನೀವು ಮಾಡಿ, ಇಸ್ರಯೇಲ್ ದೇವರಿಗೆ ಘನವನ್ನು ಕೊಡ ಬೇಕು. ಆಗ ಒಂದು ವೇಳೆ ಅವನು ನಿಮ್ಮ ಮೇಲೆಯೂ, ನಿಮ್ಮ ದೇವರುಗಳ ಮೇಲೆಯೂ ನಿಮ್ಮ ಭೂಮಿಯ ಮೇಲೆಯೂ ಇರುವ ತನ್ನ ಕೈಯನ್ನು ತೆಗೆ
೬ ದು ಲಘು ಮಾಡುವನು. ಐಗುಪ್ತ್ಯರೂ ಫರೋನನೂ ತಮ್ಮ ಹೃದಯವನ್ನು ಕಠಿಣ ಮಾಡಿದ ಹಾಗೆ, ನೀವು ನಿಮ್ಮ ಹೃದಯವನ್ನು ಕಠಿಣ ಪಡಿಸುವೇನು? ಯಾಕಂದರೆ ಅವನು ಅವರ ಮಧ್ಯದಲ್ಲಿ ಆಶ್ಚರ್ಯವಾದ ಕ್ರಿಯೆಗಳನ್ನು ನಡಿಸಿದಾಗ, ಅವರು ಇಸ್ರಯೇಲನ್ನು, ಅವರು ಹೋಗುವ ಹಾಗೆ, ಕಳುಹಿಸಲಿಲ್ಲ
೭ ವೋ! ಅದರೆ ಈಗ ನೀವು ಒಂದು ಹೊಸ ಭಂಡಿಯನ್ನು ಮಾಡಿ, ಸೊಗವನ್ನು ಹಾಕದೆ ಇರುವ ಹಾಲು ಕರೆಯುವ ಎರಡು ಹಸಗಳನ್ನು ತಕ್ಕೊಂಡು, ಅವುಗಳನ್ನು ಭಂಡಿಗೆ ಕಟ್ಟಿ, ಅವುಗಳ ಕರುಗಳನ್ನು, ಅವುಗಳ ಹಿಂದೆ ಹೋಗದ ಹಾಗೆ, ಮನೆಗೆ ತೆಗೆದು
೮ ಕೊಂಡು ಬಂದು, ಕರ್ತನ ಬೆಟ್ಟಿಗೆಯನ್ನು ತೆಗೆದು, ಅದನ್ನು ಭಂಡಿಯ ಮೇಲೆ ಹೇರಿ, ನಿಮ್ಮ ಅಪರಾಧ ಕಾಣಿಕೆಯಾದ, ನೀವು ಕಳುಹಿಸಿ ಕೊಡುವ ಭಂಗಾರದ ಮುರುಪುಗಳನ್ನು ಅದರ ಪಕ್ಕದಲ್ಲಿ ಒಂದು ಚಿಕ್ಕ ಬೆಟ್ಟಿಗೆಯಲ್ಲಿ ಹಾಕಿ, ಅದನ್ನು ಹೋಗ ಕಳುಹಿಸಿರಿ; ಆಗ ನೋಡಿರಿ. ಅದು ತನ್ನ ಮೇಕೆಯಾದ ಬೇತ್ಶೆಮೆಷಿನ ಮಾರ್ಗವನ್ನು ಹಿಡಿದು ಹೋದರೆ, ಅವನು ಈ ದೊಡ್ಡ ಕೇಡನ್ನು ನಮಗೆ ಮಾಡಿದ್ದಾನೆ; ಇಲ್ಲದೆ ಹೋದರೆ, ಅವನ ಹಸ್ತವು ನಮ್ಮನ್ನು ಮುಟ್ಟಿಲಿಲ್ಲ; ಅದು ನಮಗೆ ಪ್ರಾಪ್ತಿ ಆಯಿತೆಂದು ತಿಳ್ಳಿ ಕೊಳ್ಳಿರಿ, ಅಂದರು.

೧೦ ಆ ಮನುಷ್ಯರು ಆ ಪ್ರಕಾರವೇ ಎರಡು ಕರೆಯುವ ಹಸಗಳನ್ನು ತಕ್ಕೊಂಡು, ಅವುಗಳನ್ನು ಭಂಡಿಗೆ ಕಟ್ಟಿ, ಅವುಗಳ ಕರುಗಳನ್ನು ಮನೆಯಲ್ಲಿ, ಇಟ್ಟು, ಕರ್ತನ ಬೆಟ್ಟಿಗೆಯನ್ನೂ ಭಂಗಾ
೧೧ ರದ ಇಲಿಗಳನ್ನೂ ತಮ್ಮ ಮೂಲವ್ಯಾಧಿಯ ರೂಪಗಳನ್ನೂ ಹಿಡಿಯುವ ಚಿಕ್ಕ ಬೆಟ್ಟಿಗೆಯನ್ನೂ ಆ ಭಂಡಿಯ ಮೇಲೆ ಇಟ್ಟರು. ಆಗ ಹಸಗಳು ಕೂಗುತ್ತಾ ಬೇತ್ಶೆಮೆಷಿಗೆ ಹೋಗುವ
೧೨ ಮಾರ್ಗವನ್ನು ಹಿಡಿದು, ಬಲ ಎತ ಪಾರ್ಶ್ವವಾಗಿ ತೊಲಗದೆ, ರಾಜ ಮಾರ್ಗದಲ್ಲಿ ನೆಟ್ಟಗೆ ನಡೆದವು; ಫಿಲಿಷ್ಟ್ಯರ ಅಧಿಪತಿಗಳು
೧೩ ಬೇತ್ಶೆಮೆಷಿನ ಮೇರೆಯ ಮಟ್ಟಿಗೂ ಅವುಗಳ ಹಿಂದೆ ಹೋದರು. ಬೇತ್ಶೆಮೆಷಿನ ಮನುಷ್ಯರು ತಗ್ಗಿನಲ್ಲಿ ಗೋಧಿಯ ಪೈರನ್ನು ಕೊಯ್ಯುತ್ತಿದ್ದರು. ಅವರು ತಮ್ಮ ಕಣ್ಣುಗಳನ್ನು ಎತ್ತಿ,
೧೪ ಬೆಟ್ಟಿಗೆಯನ್ನು ಕಂಡು, ಅದನ್ನು ನೋಡಿದದರಿಂದ ಸಂತೋಷಪಟ್ಟರು. ಆ ಭಂಡಿಯು ಬೇತ್ಶೆಮೆಷಿನ ಊರಿನವನಾದ ಯೆಹೋಶುವನ ಹೊಲದಲ್ಲಿ ಬಂದು, ನಿಂತಿತು. ಅಲ್ಲಿ ಒಂದು ದೊಡ್ಡ
೧೫ ಕಲ್ಲು ಇತ್ತು. ಆಗಲವರು ಆ ಭಂಡಿಯ ಕಟ್ಟಿಗೆಗಳನ್ನು ಬೀಳಿ, ಹಸಗಳನ್ನು ಕರ್ತನಿಗೆ ಹೋಮವಾಗಿ ಅರ್ಪಿಸಿದರು. ಮತ್ತು ಲೇವ್ಯರು ಕರ್ತನ ಬೆಟ್ಟಿಗೆಯನ್ನೂ, ಅದರ ಸಂಗಡ ಇದ್ದ ಭಂಗಾರದ ಕಾಣಿಕೆಗಳುಳ್ಳ ಚಿಕ್ಕ ಬೆಟ್ಟಿಗೆಯನ್ನೂ ಇಳಿಸಿ, ಆ ದೊಡ್ಡ ಕಲ್ಲಿನ ಮೇಲಿಟ್ಟು ಕೊಂಡಿದ್ದರು; ಅದರೆ ಬೇತ್ಶೆಮೆಷಿನ ಮನುಷ್ಯರು ಆ ದಿವಸದಲ್ಲಿ ಕರ್ತನಿಗೆ ಹೋಮಗಳನ್ನೂ ಬಲಿಗಳನ್ನೂ
೧೬ ಅರ್ಪಿಸಿದರು. ಅದರೆ ಫಿಲಿಷ್ಟ್ಯರ ಐದು ಮಂದಿ ಅಧಿಪತಿಗಳು ಇವುಗಳನ್ನು ನೋಡಿ, ಅದೇ ದಿನದಲ್ಲಿ ತಿರಿಗಿ ಎಕ್ರೋನಿಗೆ ಹೋದರು.

೧೭ ಫಿಲಿಷ್ಟ್ಯರು ಅಪರಾಧ ಕಳ್ಳುವುದಕ್ಕಾಗಿ, ಅಶ್ದೋದಿಗೋಸ್ಕರ ಒಂದೂ, ಗಾಜಕ್ಕೋಸ್ಕರ ಒಂದೂ, ಅಶ್ಕೆಲೋನಿಗೋಸ್ಕರ ಒಂದೂ, ಗಾತಿಗೋಸ್ಕರ ಒಂದೂ, ಎಕ್ರೋನಿಗೋಸ್ಕರ ಒಂದೂ ಮೂಲವ್ಯಾಧಿಯ ಭಂಗಾರದ ಸ್ವರೂಪಗಳನ್ನು ಕರ್ತ
೧೮ ನಿಗೆ ಅರ್ಪಿಸಿದರು. ಅದರೆ ಅವರು ಕಳುಹಿಸಿದ ಭಂಗಾರದ ಇಲಿಗಳು ಬೇತ್ಶೆಮೆಷಿನವನಾದ ಯೆಹೋಶುವನ ಹೊಲದಲ್ಲಿ ಈ ದಿನದ ವರಿಗೂ ಇರುವ ಕರ್ತನ ಬೆಟ್ಟಿಗೆಯನ್ನು ಇಳ್ಳಿಸಿದ ಅಬೇಲು ಎಂಬ ಕಲ್ಲಿನ ಮಟ್ಟಿಗೂ ಫಿಲಿಷ್ಟ್ಯರ ಐದು ಮಂದಿ ಅಧಿಪತಿಗಳ ಬಲವುಳ್ಳ ಪಟ್ಟಣಗಳ, ಗ್ರಾಮಗಳ ಲೆಖ್ಖಕ್ಕೆ ಸರಿಯಾಗಿದ್ದವು.

೧೯ ಅದರೆ ಬೇತ್ಶೆಮೆಷಿನ ಜನರು ಕರ್ತನ ಬೆಟ್ಟಿಗೆಯಲ್ಲಿ ನೋಡಿದ್ದರಿಂದ, ಕರ್ತನು ಅವರೊಳಗೆ ಎಪ್ಪತ್ತು ಮಂದಿಯನ್ನು ಹೊ
೨೦ ಡೆದನು. ಕರ್ತನು ತಮ್ಮಲ್ಲಿ ದೊಡ್ಡ ಸಂಹಾರವಾಗಿ ಜನರನ್ನು ಹೊಡೆದ್ದರಿಂದ, ಅವರು ದುಖ್ಖ ಪಟ್ಟು, ಈ ಪರಿಶುದ್ಧ ದೇವರಾದ ಕರ್ತನ ಮುಂದೆ ನಿಲ್ಲ ತಕ್ಕವನ್ಯಾರು! ನಮ್ಮ ಬಳ್ಳಿಯಿಂದ ಯಾ
೨೧ ರ ಬಳ್ಳಿಗೆ ಏರಿ ಹೋಗುವನು? ಎಂದು ಹೇಳ್ಳಿದರು. ಮತ್ತು ಅವರು ಕಿರ್ಯಾತ್ಯಾರಿಮಿನ ನಿವಾಸಿಗಳ್ಳಿಗೆ ದೂತರನ್ನು ಕಳುಹಿಸಿ, ಫಿಲಿಷ್ಟ್ಯರು ಕರ್ತನ ಬೆಟ್ಟಿಗೆಯನ್ನು ತಿರಿಗಿ ಕಳ್ಳುಹಿಸಿದ್ದಾರೆ; ನೀವು ಇಳ್ಳಿದು ಬಂದು, ಅದನ್ನು ನಿಮ್ಮ ಬಳ್ಳಿಗೆ ತಕ್ಕೊಂಡು ಹೋಗಿರಿ, ಎಂದು ಹೇಳ್ಳಿದರು.



## ೭. ಸಂಧಿ.

೧ ಕಿರ್ಯಾತ್ಯಾರಿಮಿನ ಮನುಷ್ಯರು ಬಂದು, ಕರ್ತನ ಬೆಟ್ಟಿಗೆಯನ್ನು ತಕ್ಕೊಂಡು, ಗುಡ್ಡದ ಮೇಲೆ ಇರುವ ಅಬಿನದಾಬನ ಮನೆಯಲ್ಲಿ ತಂದಿಟ್ಟು, ಕರ್ತನ ಬೆಟ್ಟಿಗೆಯನ್ನು ಕಾಯುವದ ಕ್ಕೋಸ್ಕರ ಅವನ ಕುಮಾರನಾದ ಎಲೆಯೋಜಬರನನ್ನು ಪರಿಶುದ್ಧ ಮಾಡಿದರು.

೨ ಅದರೆ ಬೆಟ್ಟಿಗೆ ಕಿರ್ಯಾತ್ಯಾರಿಮಿನಲ್ಲಿ ವಾಸವಾಗಿದ್ದ ದಿವಸಗಳು ಹೆಚ್ಚಾದವು; ಇಪ್ಪತ್ತು ವರುಷ ಅಲ್ಲಿ ಇದ್ದಾಗ, ಇಸ್ರಯೇಲ್ ಮನೆಯವರೆಲ್ಲರು ಕರ್ತನಿಗೋಸ್ಕರ ಗೋಳ್ಳಾಡುತ್ತಿದ್ದ
3 ರು. ಆಗ ಸಮುವೇಲನು ಇಸ್ರಯೇಲ್ ಮನೆಯವರಿಗೆಲ್ಲಾ ಹೇಳ್ಳಿದ್ದೇನಂದರೆ, ನೀವು ನಿಮ್ಮ ಪೂರ್ಣ ಹೃದಯದಿಂದ ಕರ್ತನ ಕಡೆಗೆ ತಿರುಗಿ, ನಿಮ್ಮಲ್ಲಿರುವ ಅನ್ಯ ದೇವರುಗಳನ್ನೂ ಅಶ್ತಾರೋತನೂ ನಿಮ್ಮ ಮಧ್ಯದಲ್ಲಿಂದ ತೊಲೆದು ಬಿಟ್ಟು, ನಿಮ್ಮ ಹೃದಯವನ್ನು ಕರ್ತನಿಗೆ ಸಿದ್ಧ ಮಾಡಿ, ಅವನೊಬ್ಬನನ್ನು ಸೇವಿಸಿದರೆ,
೪ ಅವನು ನಿಮ್ಮನ್ನು ಫಿಲಿಷ್ಟ್ಯರ ಕೈಗಳ್ಳೊಳಗಿಂದ ತಪ್ಪಿಸುವನು, ಅಂದನು. ಆಗ ಇಸ್ರಯೇಲ್ ಮಕ್ಕಳು ಬಾಳೀಮನ್ನೂ ಅಶ್ತಾರೋತನೂ ತೊಲೆದು ಬಿಟ್ಟು, ಕರ್ತನೊಬ್ಬನನ್ನು ಸೇವಿಸಿದರು.

೫ ಮತ್ತು ಸಮುವೇಲನು, ನಾನು ನಿಮಗೋಸ್ಕರವಾಗಿ ಕರ್ತನನ್ನು ಪ್ರಾರ್ಥಿಸುವ ಹಾಗೆ, ಇಸ್ರಯೇಲನ್ನೆಲ್ಲಾ ಮಿಚ್ಪೆಯಲ್ಲಿ ಕೂಡಿಸಿ ಕೊಳ್ಳಿರಿ, ಅಂದನು. ಅವಕ್ಕೆಲ್ಲರು ಮಿಚ್ಪೆಯಲ್ಲಿ ಕೂಡಿ ಬಂದು, ಕರ್ತನ ಮುಂದೆ ನೀರು ತಂದು, ಹೊಯಿದು, ಆ ದಿವಸದ
೬ ಲ್ಲಿ ಉಪವಾಸ ಮಾಡಿ, ಕರ್ತನಿಗೆ ವಿರೋಧವಾಗಿ ಪಾಪ ಮಾಡಿದೆವೆಂದು, ಅಲ್ಲಿ ಹೇಳ್ಳಿದರು. ಮತ್ತು ಸಮುವೇಲನು ಇಸ್ರಯೇಲ್ ಮಕ್ಕಳ್ಳಿಗೆ ಮಿಚ್ಪೆಯಲ್ಲಿ ನ್ಯಾಯ ತೀರಿಸುತ್ತಿದ್ದನು.

೭ ಅದರೆ ಇಸ್ರಯೇಲ್ ಮಕ್ಕಳು ಮಿಚ್ಪೆಯಲ್ಲಿ ಕೂಡಿ ಬಂದರೆಂದು, ಫಿಲಿಷ್ಟ್ಯರು ಕೇಳ್ಳಿದಾಗ, ಫಿಲಿಷ್ಟ್ಯರ ಅಧಿಪತಿಗಳು ಇಸ್ರ
೮ ಯೇಲರಿಗೆ ವಿರೋಧವಾಗಿ ಏರಿ ಬಂದರು. ಆಗ ಇಸ್ರಯೇಲ್ ಮಕ್ಕಳು ಕೇಳ್ಳಿ, ಫಿಲಿಷ್ಟ್ಯರಿಗೋಸ್ಕರ ಭಯ ಪಟ್ಟು, ಸಮುವೇಲನಿಗೆ, ನಮ್ಮ ದೇವರಾದ ಕರ್ತನು ನಮ್ಮನ್ನು ಫಿಲಿಷ್ಟ್ಯರ ಕೈಯಿಂದ ತಪ್ಪಿಸಿ ರಕ್ಷಿಸುವ ಹಾಗೆ, ನೀನು ನಮಗೋಸ್ಕರವಾಗಿ ಮೌನವಾಗಿರವೆ, ಅವನಿಗೆ ಕೂಗು, ಅಂದರು. ಆಗ ಸಮುವೇಲನು ಹಾಲು
೯ ಕುಡಿಯುವ ಕುರಿ ಮರಿಯನ್ನು ತೆಗೆದು ಕೊಂಡು, ಕರ್ತನಿಗೆ ಪೂರ್ಣ ಹೋಮವನ್ನು ಅರ್ಪಿಸಿದನು; ಮತ್ತು ಸಮುವೇಲನು ಇಸ್ರಯೇಲಿಗೋಸ್ಕರ ಕರ್ತನಿಗೆ ಕೂಗಿದನು. ಕರ್ತನು ಅವನಿಗೆ
೧೦ ಪ್ರತ್ಯುತ್ತರ ಕೊಟ್ಟನು. ಮತ್ತು ಸಮುವೇಲನು ಹೋಮವನ್ನು ಅರ್ಪಿಸುವಾಗ, ಫಿಲಿಷ್ಟ್ಯರು ಇಸ್ರಯೇಲಿನ ಮೇಲೆ ಯುದ್ಧ ಮಾಡ ಸಮೀಪಿಸಿದರು. ಆಗ ಕರ್ತನು ಫಿಲಿಷ್ಟ್ಯರ ಮೇಲೆ ದೊಡ್ಡ ಶಬ್ದದಿಂದ ಗುಡುಗಿ, ಅವರನ್ನು ಮುರಿಯ ಬಡಿದನು; ಅವರು ಇ
೧೧ ಸ್ರಯೇಲಿನ ಮುಂದೆ ಹೊಡೆಯಲ್ಪಟ್ಟರು. ಆಗ ಇಸ್ರಯೇಲ್ಯರು ಮಿಚ್ಪೆಯಿಂದ ಹೊರಟು, ಫಿಲಿಷ್ಟ್ಯರನ್ನು ಹಿಂದಟ್ಟಿ, ಬೆತ್ಕಾರಿನ
೧೨ ವರಿಗೂ ಅವರನ್ನು ಹೊಡೆದರು. ಮತ್ತು ಸಮುವೇಲನು ಒಂದು ಕಲ್ಲನ್ನು ತೆಗೆದು ಕೊಂಡು, ಮಿಚ್ಪೆಗೂ ಬೇನಿಗೂ ಮಧ್ಯದಲ್ಲಿ ನಿಲ್ಲಿಸಿ, ಈ ಪರ್ಯಂತರ ಕರ್ತನು ನಮಗೆ ಸಹಾಯ ಮಾಡಿದನೆಂದು ಹೇಳ್ಳಿ, ಅದಕ್ಕೆ ಎಬೆನೇಜರು ಎಂದು, ಹೆಸರಿಟ್ಟನು.

೧೩ ಮತ್ತು ಫಿಲಿಷ್ಟ್ಯರು ತಗ್ಗಿಸಲ್ಪಟ್ಟು, ಇಸ್ರಯೇಲಿನ ಮೇರೆಯಲ್ಲಿ ಇನ್ನು ಬಾರದೆ ಇದ್ದರು. ಇದಲ್ಲದೆ ಸಮುವೇಲನು ಇದ್ದ ದಿವ
೧೪ ಸಗಳೆಲ್ಲಾ ಕರ್ತನ ಕೈ ಫಿಲಿಷ್ಟ್ಯರಿಗೆ ವಿರೋಧವಾಗಿತ್ತು. ಫಿಲಿಷ್ಟ್ಯರು ಇಸ್ರಯೇಲಿನಿಂದ ತೆಗೆದು ಕೊಂಡಿದ್ದ ಎಕ್ರೋನ್ ಮೊದಲ್ಗೊಂಡು ಗಾತಿನ ಮಟ್ಟಿಗೂ ಇರುವ ಪಟ್ಟಣಗಳು ಇಸ್ರಯೇಲಿಗೆ ತಿರಿಗಿ ಕೊಡಲ್ಪಟ್ಟವು. ಮತ್ತು ಅವುಗಳ ಮೇರೆಗಳನ್ನು ಇಸ್ರಯೇಲ್ಯರು ಫಿಲಿಷ್ಟ್ಯರ ಕೈಯಿಂದ ಬಿಡಿಸಿ ಕೊಂಡರು. ಮತ್ತು ಇಸ್ರಯೇಲಿಗೂ ಅಮೋರ್ಯರಿಗೂ ಸಮಾಧಾನ ಉಂಟಾಗಿತ್ತು.

೧೫ ಇದಲ್ಲದೆ ಸಮುವೇಲನು ತಾನು ಬದುಕಿದ ಎಲ್ಲಾ ದಿವಸಗಳ್ಳಲ್ಲಿ
೧೬ ಇಸ್ರಯೇಲಿಗೆ ನ್ಯಾಯ ತೀರಿಸಿದನು. ಅವನು ಪ್ರತಿ ವರುಷ ಹೊರಟು, ಬೇತೇಲನ್ನೂ, ಗಿಲ್ಗಾಲನ್ನೂ, ಮಿಚ್ಪೆಯನ್ನೂ, ಸುತ್ತಿ ಕೊಂಡು ಹೋಗಿ, ಆ ಸ್ಥಳಗಳ್ಳಲ್ಲೆಲ್ಲಾ ಇಸ್ರಯೇಲಿಗೆ ನ್ಯಾಯ
೧೭ ತೀರಿಸಿದನು. ಅವನು ರಾಮಕ್ಕೆ ತಿರಿಗಿ ಬರುತ್ತಾ ಇದ್ದನು. ಯಾಕಂದರೆ ಅಲ್ಲಿ ಅವನ ಮನೆ ಇತ್ತು; ಅಲ್ಲಿ ಇಸ್ರಯೇಲಿಗೆ ನ್ಯಾಯ ತೀರಿಸಿದನು; ಮತ್ತು ಕರ್ತನಿಗೆ ಅಲ್ಲಿ ಒಂದು ಬಲಿಪೀಠವನ್ನು ಕಟ್ಟಿಸಿದನು.

## ೮. ಸಂಧಿ.

೧ ಅದರೆ ಸಮುವೇಲನು ವೃದ್ಧನಾದಾಗ ಏನಾಯಿತಂದರೆ, ತನ್ನ
೨ ಕುಮಾರರನ್ನು ಇಸ್ರಯೇಲಿಗೆ ನ್ಯಾಯಾಧಿಪತಿಗಳ್ಳಾಗಿರ ಇಟ್ಟನು. ಅವನ ಹಿರೀ ಮಗನ ಹೆಸರು ಯೊವೇಲನು; ಅವನ ಎರಡನೇ ಮಗನ ಹೆಸರು ಅಬೀಯನು; ಬೇರ್ಷೆಬದಲ್ಲಿ ನ್ಯಾಯಾ
3 ಧಿಪತಿಗಳ್ಳಾಗಿದ್ದರು. ಅದರೆ ಅವನ ಮಕ್ಕಳು ಅವನ ಮಾರ್ಗದಲ್ಲಿ ನಡೆಯದೆ, ಲೋಭಕ್ಕಾಗಿ ಮಾರ್ಗ ತಪ್ಪಿ, ಲಂಚವನ್ನು ತ
೪ ಕ್ಕೊಂಡು, ನ್ಯಾಯವನ್ನು ತಪ್ಪಿಸಿದರು. ಆಗ ಇಸ್ರಯೇಲ್ ಹಿರಿಯರೆಲ್ಲರೂ ಕೂಡಿ ಕೊಂಡು, ರಾಮದಲ್ಲಿರುವ ಸಮುವೇಲನ
೫ ಬಳ್ಳಿಗೆ ಬಂದು, ಅವನಿಗೆ, ಇಗೋ, ವೃದ್ಧನಾದಿ; ನಿನ್ನ ಮಕ್ಕಳು ನಿನ್ನ ಮಾರ್ಗದಲ್ಲಿ ನಡೆಯುವದಿಲ್ಲ. ಈಗ ಸಮಸ್ತ ಜನಾಂಗಳ ಹಾಗೆ, ನಮಗೆ ನ್ಯಾಯ ತೀರಿಸುವದಕ್ಕೆ ನಮಗೆ ಒಬ್ಬ ಅರಸನನ್ನು ನೇಮಿಸು, ಅಂದರು.

೬ ಅದರೆ ನಮಗೆ ನ್ಯಾಯ ತೀರಿಸುವದಕ್ಕೆ ನಮಗೆ ಒಬ್ಬ ಅರಸನನ್ನು ನೇಮಿಸು ಎಂದು, ಅವರು ಹೇಳ್ಳಿದ ವಾರ್ತೆಯು ಸಮುವೇಲನ ಕಣ್ಣುಗಳ್ಳಿಗೆ ಕೆಟ್ಟದ್ದಾಗಿ ಕಾಣಿಸಿತು; ಮತ್ತು ಅವನು ಕ
೭ ರ್ತನಿಗೆ ಪ್ರಾರ್ಥನೆ ಮಾಡಿದನು. ಆಗ ಕರ್ತನು ಸಮುವೇಲನಿಗೆ ಹೇಳ್ಳಿದ್ದೇನಂದರೆ, ಜನರು ನಿನಗೆ ಹೇಳ್ಳಿದ್ದೆಲ್ಲಾದರಲ್ಲಿ ಅವರ ಶಬ್ದ ಕೇಳ್ಳಿ. ಯಾಕಂದರೆ ಅವರು ನಿನ್ನನ್ನು ಅಲಕ್ಷ್ಯ ಮಾಡದೆ, ನಾನು ಅವರನ್ನು ಆಳ್ಳದ ಹಾಗೆ, ನನ್ನನ್ನು ಅಲಕ್ಷ್ಯ ಮಾಡಿದ್ದಾರೆ.
೮ ನಾನು ಅವರನ್ನು ಐಗುಪ್ತದಿಂದ ಬರ ಮಾಡಿದ ದಿನವು ಮೊದಲುಗೊಂಡು ಈ ದಿನದ ವರಿಗೂ ಅವರು ನನ್ನನ್ನು ಬಿಟ್ಟು, ಅನ್ಯ ದೇವರುಗಳ್ಳನ್ನು ಸೇವಿಸಿ, ಮಾಡಿದ ಸಮಸ್ತ ಕೃತ್ಯಗಳ ಪ್ರಕಾರ,
೯ ನಿನಗೂ ಮಾಡುತ್ತಾರೆ. ಈಗ ಅವರ ಮಾತನ್ನು ಕೇಳ್ಳು; ಅದರೆ ನೀನು ಅವರಿಗೆ ಸಾಕ್ಷಿಯನ್ನು ಕೊಟ್ಟೇ ಕೊಡು; ಮತ್ತು ಅವರನ್ನು ಆಳ್ಳುವ ಅರಸನ ಪದ್ಧತಿಯನ್ನು ಅವರಿಗೆ ತಿಳ್ಳಿಸು, ಅಂದನು.

೧೦ ಆಗ ಸಮುವೇಲನು ತನ್ನನ್ನು ಒಬ್ಬ ಅರಸನನ್ನು ಕೇಳ್ಳಿದ ಜನರಿಗೆ ಕರ್ತನ ವಾಕ್ಯಗಳ್ಳನ್ನೆಲ್ಲಾ ಹೇಳ್ಳಿದನು. ನಿಮ್ಮನ್ನು ಆಳ್ಳುವ

ಅರಸನ ಪದ್ಧತಿ ಏನಂದರೆ, ಅವನು ನಿಮ್ಮ ಕುಮಾರರನ್ನು ತನ
ಗೋಸ್ಕರ ತನ್ನ ರಥಕಾರರಾಗಿಯೂ ರಾಹುತರಾಗಿಯೂ ತ
೧೨ ಕ್ಕೊಳ್ಳುವನು. ತನ್ನ ರಥಗಳ ಮುಂದೆ ಓಡುವರು. ಸಾವಿರ ಜ
ನಕ್ಕೆ ಅಧಿಪತಿಗಳಾಗಿಯೂ, ಐವತ್ತು ಜನಕ್ಕೆ ಅಧಿಪತಿಗಳಾಗಿ
ಯೂ, ತನ್ನ ಭೂಮಿಯನ್ನು ಉಳುವವರಾಗಿಯೂ, ತನ್ನ ಬೈರ
ನ್ನು ಕೊಯ್ಯುವವರಾಗಿಯೂ, ತನ್ನ ಯುದ್ಧದ ಆಯುಧಗಳ
ನ್ನೂ, ತನ್ನ ರಥದ ಬಾತಿ ಮುಟ್ಟುಗಳನ್ನೂ ಮಾಡುವವರಾಗಿ
೧೩ ಯೂ, ನೇಮಿಸುವನು. ಇದಲ್ಲದೆ ಅವನು ನಿಮ್ಮ ಕುಮಾರ್ತೆಗಳ
ನ್ನು ಶೈಲಗಾರ್ತಿಗಳಾಗಿಯೂ, ಅಡಿಗೆ ಮಾಡುವವರಾಗಿಯೂ,
೧೪ ಕೊಟ್ಟಿ ಸುಡುವವರಾಗಿಯೂ ಇಟ್ಟುಕೊಳ್ಳುವನು. ಮತ್ತು ಅವ
ನು ಉತ್ತಮವಾದ ನಿಮ್ಮ ಹೊಲಗಳನ್ನೂ, ನಿಮ್ಮ ದ್ರಾಕ್ಷೇ ತೋ
ಟಗಳನ್ನೂ, ನಿಮ್ಮ ಇಪ್ಪೇ ತೋಪುಗಳನ್ನೂ ತೆಗೆದು ಕೊಂಡು,
೧೫ ತನ್ನ ಸೇವಕರಿಗೆ ಕೊಡುವನು. ನಿಮ್ಮ ಬೈರುಗಳಲ್ಲಿಯೂ ನಿಮ್ಮ
ದ್ರಾಕ್ಷೇ ಫಲಗಳಲ್ಲಿಯೂ ಹತ್ತರಲ್ಲಿ ಒಂದನ್ನು ತೆಗೆದು ಕೊಂಡು,
೧೬ ತನ್ನ ಪ್ರಧಾನರಿಗೂ ತನ್ನ ಸೇವಕರಿಗೂ ಕೊಡುವನು. ನಿಮ್ಮ
ದಾಸರನ್ನೂ, ನಿಮ್ಮ ದಾಸಿಯರನ್ನೂ, ನಿಮ್ಮ ಉತ್ತಮ ಪ್ರಾ
ಯಸ್ತರನ್ನೂ, ನಿಮ್ಮ ಕತ್ತೆಗಳನ್ನೂ ತಕ್ಕೊಂಡು, ತನ್ನ ಕೆಲಸ
೧೭ ಕ್ಕೆ ಇಡುವನು. ಇದಲ್ಲದೆ ಅವನು ನಿಮ್ಮ ಕುರಿಗಳಲ್ಲಿ ಹತ್ತರಲ್ಲಿ
ಒಂದನ್ನು ಆದು ಕೊಳ್ಳುವನು; ನೀವು ಅವನಿಗೆ ದಾಸರಾಗುವಿರಿ.
೧೮ ನೀವು ನಿಮಗೆ ಆದು ಕೊಂಡ ನಿಮ್ಮ ಅರಸನ ನಿಮಿತ್ತ ಆ ದಿವಸದ
ಲ್ಲಿ ಕೂಗುವಿರಿ; ಆದರೆ ಆ ದಿವಸದಲ್ಲಿ ಕರ್ತನು ನಿಮಗೆ ಪ್ರತ್ಯು
ತ್ತರ ಕೊಡುವದಿಲ್ಲ, ಅಂದನು.

೧೯ ಆದರೂ ಜನರು ಸಮುವೇಲನ ಮಾತನ್ನು ಕೇಳಿಕೊಳ್ಳದೆ,
ಹಾಗಲ್ಲ; ಆದರೆ ನಮ್ಮ ಮೇಲೆ ಅರಸು ಇರ ಬೇಕು; ಮತ್ತು
೨೦ ನಾವು ಸಕಲ ಜನಾಂಗಗಳ ಹಾಗೆ ಇರ ಬೇಕು; ನಮ್ಮ ಅರಸನು
ನಮಗೆ ನ್ಯಾಯ ತೀರಿಸುವನು; ನಮ್ಮ ಮುಂದೆ ಹೊರಟು, ನ
೨೧ ಮ್ಮ ಯುದ್ಧಗಳನ್ನು ನಡಿಸುವನು, ಅಂದರು. ಸಮುವೇಲನು
ಜನರ ಮಾತುಗಳನ್ನೆಲ್ಲಾ ಕೇಳಿ, ಅವುಗಳನ್ನು ಕರ್ತನ ಕಿವಿಗಳ
೨೨ ಲ್ಲಿ ಹೇಳಿದನು. ಆದರೆ ಕರ್ತನು ಸಮುವೇಲನಿಗೆ, ಅವರ ಮಾತ
ನ್ನು ಕೇಳಿ, ಅವರಿಗೆ ಅರಸನನ್ನು ನೇಮಿಸು, ಅಂದನು. ಆಗ ಸ
ಮುವೇಲನು ಇಸ್ರಯೇಲ್ ಜನರಿಗೆ, ನಿಮ್ಮ ನಿಮ್ಮ ಪಟ್ಟಣಗಳಿಗೆ
ಹೋಗಿರಿ, ಅಂದನು.

## ೯. ಸಂಧಿ.

೧ ಆದರೆ ಬೆನ್ಯಾಮಿನನ ವಂಶದವನಾದ ಕೀಷನೆಂಬ ಒಬ್ಬ ಮನು
ಷ್ಯನಿದ್ದನು. ಅವನು ಅಬೀಹನ ಮಗನಾದ ಬೆಕೊರಾತನ ಮಗ
ನಾದ ಚೆಕೋರನ ಮಗನಾದ ಅಬಿಯೇಲನ ಮಗನಾದ ಪರಾಕ್ರ
೨ ಮ ಶಾಲಿಯಾಗಿದ್ದನು. ಅವನಿಗೆ ಒಳ್ಳೇ ಪ್ರಾಯಸ್ತನಾದ ಸಾ
ಲನೆಂಬ ಹೆಸರುಳ್ಳ ಒಬ್ಬ ಮಗನಿದ್ದನು. ಇಸ್ರಯೇಲ್ ಮಕ್ಕಳಲ್ಲಿ
ಅವನಿಗಿಂತ ಸಾಂದರ್ಯವುಳ್ಳವನು ಒಬ್ಬನಾದರೂ ಇಲ್ಲ. ಅವ
ನು ತನ್ನ ಭುಜಗಳಿಂದ ಜನರಿಗಿಂತ ಎತ್ತರವಾದವನಾಗಿದ್ದನು.
3 ಸಾಲನ ತಂದೆಯಾದ ಕೀಷನ ಕತ್ತೆಗಳು ಕಾಣದೆ ಹೋದದ
ರಿಂದ, ಅವನು ತನ್ನ ಮಗನಾದ ಸಾಲನಿಗೆ, ನೀನಿದ್ದು, ಕೆಲಸದವ
ರಲ್ಲಿ ಒಬ್ಬನನ್ನು ನಿನ್ನ ಸಂಗಡ ಕರ ಕೊಂಡು, ಕತ್ತೆಗಳನ್ನು ಹು
೪ ಡುಕ ಹೋಗ ಬೇಕು, ಅಂದನು. ಹಾಗೆಯೇ ಅವನು ಎಫ್ರಯಿಾ
ಮ್ ಬೆಟ್ಟವನ್ನೂ ಪಲೀಷ ದೇಶವನ್ನೂ ದಾಟಿ ಹೋದನು; ಅದ
ರೆ ಅವು ಸಿಕ್ಕಲಿಲ್ಲ. ಮತ್ತು ಷಾಲೀಷಾ ದೇಶವನ್ನು ಹಾದು ಹೋ
ದನು; ಅಲ್ಲಿಯೂ ಅವುಗಳು ಇಲ್ಲದೆ ಹೋದವು. ಮತ್ತು ಅವ
ನು ಬೆನ್ಯಾಮಿನನ ದೇಶವನ್ನು ದಾಟಿ, ಅವುಗಳನ್ನು ಕಾಣದೆ
೫ ಹೋದನು. ಅವರು ಚೂಫು ಎಂಬ ದೇಶಕ್ಕೆ ಬಂದಾಗ, ಸಾಲನು
ತನ್ನ ಸಂಗಡ ಇದ್ದ ಕೆಲಸದವನಿಗೆ, ನನ್ನ ತಂದೆಯು ಕತ್ತೆಗಳ
ಮೇಲೆ ಇರುವ ಚಿಂತೆಯನ್ನು ಬಿಟ್ಟು, ನಮಗೋಸ್ಕರ ಚಿಂತೆ ಪ
ಡದ ಹಾಗೆ, ನಾವು ಹಿಂದಕ್ಕೆ ಹೋಗುವ ಬಾ, ಅಂದನು. ಅದ
೬ ಕ್ಕವನು, ಇಗೋ, ಈ ಪಟ್ಟಣದಲ್ಲಿ ದೇವರ ಮನುಷ್ಯನು ಒಬ್ಬನಿ
ದ್ದಾನೆ; ಅವನು ಘನವುಳ್ಳ ಮನುಷ್ಯನು; ಅವನು ಹೇಳುವದೆ
ಲ್ಲಾ ತಪ್ಪದೆ ಬರುವದು. ಈಗ ನಾವು ಅಲ್ಲಿಗೆ ಹೋಗುವ, ಒಂದು
ವೇಳೆ ಅವನು ನಾವು ಹೋಗ ಬೇಕಾದ ನಮ್ಮ ಮಾರ್ಗವನ್ನು
೭ ತಿಳಿಸುವನು, ಅಂದನು. ಆಗ ಸಾಲನು ತನ್ನ ಸೇವಕನಿಗೆ, ಇಗೋ,
ನಾವು ಆ ಮನುಷ್ಯನ ಬಳಿಗೆ ಹೋದರೆ, ಏನು ತಕ್ಕೊಂಡು
ಹೋಗುವ! ಯಾಕಂದರೆ ನಮ್ಮ ಹಪಿಬಿಗಳಲ್ಲಿ ಇರುವ ಕೊಟ್ಟಿ
ಮುಗಿದು ಹೋಯಿತು; ದೇವರ ಮನುಷ್ಯನ ಬಳಿಗೆ ತಕ್ಕೊಂ
ಡು ಹೋಗ ತಕ್ಕ ಕಾಣಿಕೆ ಇಲ್ಲ; ನಮ್ಮ ಬಳಿಯಲ್ಲಿ ಏನಿದೆ!
೮ ಅಂದನು. ಅದಕ್ಕೆ ಆ ಸೇವಕನು ಸಾಲನಿಗೆ ಪ್ರತ್ಯುತ್ತರವಾಗಿ,
ಇಗೋ, ನನ್ನ ಕೈಯಲ್ಲಿ ಇನ್ನೂ ಕಾಲು ಬೆಳ್ಳಿ ಬೆಕೆಲು ಅದೆ;
ದೇವರ ಮನುಷ್ಯನು ನಮಗೆ ಮಾರ್ಗವನ್ನು ತಿಳಿಸುವ ಹಾಗೆ,
೯ ನಾನು ಅದನ್ನು ಅವನಿಗೆ ಕೊಡುವೆನು, ಅಂದನು. ಪೂರ್ವದಲ್ಲಿ
ಇಸ್ರಯೇಲಲ್ಲಿ ಯಾವನಾದರೂ ದೇವರ ಹತ್ತರ ವಿಚಾರಿಸ ಬೇ
ಕಾದರೆ, ದೀರ್ಘದರ್ಶಿಯ ಬಳಿಗೆ ಹೋಗುವ ಬನ್ನಿರಿ, ಅನ್ನುವ
ನು. ಯಾಕಂದರೆ ಈ ಕಾಲದಲ್ಲಿ ಪ್ರವಾದಿ ಎಂದು ಕರೆಯಲ್ಪಟ್ಟ
ವನು ಪೂರ್ವ ಕಾಲದಲ್ಲಿ ದೀರ್ಘದರ್ಶಿ ಎಂದು ಕರೆಯಲ್ಪಟ್ಟಿ
೧೦ ದ್ದನು. ಆಗ ಸಾಲನು ಸೇವಕನಿಗೆ, ನಿನ್ನ ಮಾತು ಬಲ್ಲೇದು;
ನಾವು ಹೋಗುವ ಬಾ, ಅಂದನು. ಮತ್ತು ದೇವರ ಮನುಷ್ಯನಿ
ದ್ದ ಆ ಪಟ್ಟಣಕ್ಕೆ ಹೋದರು.

೧೧ ಅವರು ದಿನ್ನೆ ಮಟ್ಟಿಯನ್ನು ಏರಿ, ಪಟ್ಟಣದೊಳಗೆ ಹೋಗು
ವಾಗ, ನೀರು ಕೇದ ಬರುವ ಹುಡುಗಿಯರನ್ನು ನೋಡಿ, ದೀರ್ಘ
೧೨ ದರ್ಶಿಯು ಇಲ್ಲಿ ಇದ್ದಾನೋ! ಎಂದು ಅವರನ್ನು ಕೇಳಿದರು. ಅ
ವರು ಇವರಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ಅವನು ಇದ್ದಾ
ನೆ; ಇಗೋ, ನಿಮ್ಮ ಮುಂದೆ ಇದ್ದಾನೆ; ಈಗ ಬೇಗ ಹೋಗಿರಿ;
ಯಾಕಂದರೆ ಈ ಹೊತ್ತು ಮೇಡಿನ ಮೇಲೆ ಜನರು ಬಲಿಯನ್ನು
ಅರ್ಪಿಸುವದರಿಂದ, ಅವನು ಈ ಹೊತ್ತು ಪಟ್ಟಣಕ್ಕೆ ಬಂದಿದ್ದಾನೆ.
೧೩ ನೀವು ಪಟ್ಟಣದೊಳಗೆ ಪ್ರವೇಶಿಸುತ್ತಲೇ, ಉಣ್ಣುವದಕ್ಕೆ ಮೇಡಿನ
ಮೇಲೆ ಏರುವದಕ್ಕಿಂತ ಮುಂಚೆ, ಅವನನ್ನು ಕಂಡು ಕೊಳ್ಳುವಿರಿ
ಯಾಕಂದರೆ ಅವನು ಬರುವ ಮಟ್ಟಿಗೂ ಜನರು ಉಣ್ಣುವದಿಲ್ಲ.
ಯಾಕಂದರೆ ಅವನು ಅರ್ಪಣೆಯನ್ನು ಆಶೀರ್ವದಿಸುತ್ತಾನೆ;
ತರುವಾಯ ಕರೆಯಲ್ಪಟ್ಟವರು ಉಣ್ಣುತ್ತಾರೆ. ಈಗಲೇ ಹೋಗಿ
೧೪ ರಿ, ಯಾಕಂದರೆ ಈ ವೇಳೆಯಲ್ಲಿ ಅವನನ್ನು ಕಂಡು ಕೊಳ್ಳುವಿ
ರಿ, ಅಂದರು. ಅವರು ಪಟ್ಟಣಕ್ಕೆ ಏರಿ ಹೋದರು. ಅವರು ಪಟ್ಟ
ಣದಲ್ಲಿ ಪ್ರವೇಶಿಸಿದಾಗ, ಇಗೋ, ಸಮುವೇಲನು ಮೇಡಿನ ಮೇಲ
ಕ್ಕೆ ಏರಿ ಹೋಗುವದಕ್ಕೆ ಅವರಿಗೆದುರಾಗಿ ಹೊರಟು ಬಂ
ದನು.



೧೫ ಆದರೆ ಸಾಲನು ಬರುವದಕ್ಕೆ ಒಂದು ದಿವಸ ಮುಂಚೆ, ಕರ್ತನು
೧೬ ಸಮುವೇಲನ ಕಿವಿಯಲ್ಲಿ ತಿಳಿಯ ಪಡಿಸಿದ್ದೇನಂದರೆ, ನಾಳೆ ಇಷ್ಟು
ಹೊತ್ತಿಗೆ ಬೆನ್ಯಾಮಿನನ ದೇಶದವನಾದ ಒಬ್ಬ ಮನುಷ್ಯನನ್ನು
ನಿನ್ನ ಬಳಿಗೆ ಕಳಿಹಿಸುವೆನು; ನೀನು ಅವನನ್ನು ನನ್ನ ಜನರಾದ
ಇಸ್ರಯೇಲಿನ ಮೇಲೆ ನಾಯಕನಾಗಿರ ಅಭಿಷೇಕಿಸ ಬೇಕು; ಅವ
ನು ನನ್ನ ಜನರನ್ನು ಫಿಲಿಷ್ಟ್ಯರ ಕೈಯಿಂದ ತಪ್ಪಿಸಿ ರಕ್ಷಿಸುವನು;
ಯಾಕಂದರೆ ನನ್ನ ಜನರ ಕೂಗು ನನ್ನ ಬಳಿಗೆ ಬಂದದರಿಂದ, ಅ
೧೭ ವರನ್ನು ನೋಡಿದ್ದೇನೆ, ಅಂದನು. ಸಮುವೇಲನು ಸಾಲನನ್ನು
ನೋಡಿದಾಗ, ಕರ್ತನು ಅವನಿಗೆ, ಇಗೋ, ನಾನು ನಿನಗೆ ಹೇಳಿ
ದ ಮನುಷ್ಯನು ಇವನೇ; ಇವನೇ ನನ್ನ ಜನರನ್ನು ಆಳುವನು,
ಅಂದನು.

೧೯ ಸಾಲನು ಬಾಗಲಲ್ಲಿ ಇರುವ ಸಮುವೇಲನ ಸಮೀಪಕ್ಕೆ ಬಂ
ದು, ಅವನಿಗೆ, ನೀನು ದಯ ಮಾಡಿ, ದರ್ಶಿಯ ಮನೆಯು ಎಲ್ಲಿ
೧೯ ಇದೆ! ನನಗೆ ತಿಳಿಸು, ಅಂದನು. ಸಮುವೇಲನು ಸಾಲನಿಗೆ ಪ್ರತ್ಯು
ತ್ತರವಾಗಿ, ದರ್ಶಿಯು ನಾನೇ; ನೀವು ನನ್ನ ಮುಂದೆ ಮೇಡಿನ
ಮೇಲಕ್ಕೆ ಏರಿ ಹೋಗಿರಿ; ಈ ಹೊತ್ತು ನೀವು ನನ್ನ ಸಂಗಡ ಉ
ಣ್ಣ ಬೇಕು; ನಾಳೆ ಹೊತ್ತಾರೆ ನಿಮ್ಮನ್ನು ಕಳುಹಿಸುವೆನು; ಮ
ತ್ತು ನಿಮ್ಮ ಹೃದಯದಲ್ಲಿರುವದನ್ನೆಲ್ಲಾ ತಿಳಿಯ ಪಡಿಸುವೆನು,
೨೦ ಅಂದನು. ಇಂದಿಗೆ ಮೂರನೇ ದಿವಸದಲ್ಲಿ ಕಾಣದೆ ಹೋದ ನಿನ್ನ
ಕತ್ತೆಗಳ ಮೇಲೆ ನಿನ್ನ ಹೃದಯ ಇಡ ಬೇಡ; ಯಾಕಂದರೆ ಅವು
ದೊರಕಿದವು. ಇದಲ್ಲದೆ ಇಸ್ರಯೇಲಿನ ಅಭಿಲಾಷೆಯೆಲ್ಲಾ ಯಾ
ರ ಮೇಲೆ ಇರುವದು! ನಿನ್ನ ಮೇಲೆಯೂ, ನಿನ್ನ ತಂದೆಯ ಮನೆ
೨೧ ಯವರೆಲ್ಲರ ಮೇಲೆಯೂ, ಅಲ್ಲವೋ! ಅಂದನು. ಅದಕ್ಕೆ ಸಾ
ಲನು ಅವನಿಗೆ ಪ್ರತ್ಯುತ್ತರವಾಗಿ, ನಾನು ಇಸ್ರಯೇಲರ ಕುಲಗಳ
ಲ್ಲೆಲ್ಲಾ ಚಿಕ್ಕದಾದ ಬೆನ್ಯಾಮಿನನ ಗೋತ್ರದವನಲ್ಲವೇ! ಇದಲ್ಲದೆ
ಬೆನ್ಯಾಮಿನನ ಕುಲದ ಸಮಸ್ತ ಗೋತ್ರಗಳಲ್ಲಿ ನನ್ನ ಗೋತ್ರವು
ಚಿಕ್ಕದಾದದ್ದಲ್ಲವೇ! ನೀನು ಯಾಕೆ ಹೀಗೆ ನನ್ನ ಸಂಗಡ ಮಾ
ತಾಡುತ್ತೀರೆ! ಅಂದನು.

೨೨ ಆಗ ಸಮುವೇಲನು ಸಾಲನನ್ನೂ ಅವನ ಸೇವಕನನ್ನೂ ಕರ
೨೩ ತಂದು, ಕರೆಯಲ್ಪಟ್ಟವರಲ್ಲಿ ಮುಖ್ಯವಾದ ಸ್ಥಳ ಕೊಟ್ಟನು. ಅವ
ರು ಹೆಚ್ಚು ಕಡಿಮೆ ಮೂವತ್ತು ಜನರಿದ್ದರು. ಮತ್ತು ಸಮುವೇಲ
ನು ಅಡಿಗೆಯವನಿಗೆ, ನಾನು ನಿನ್ನ ಕೈಯಲ್ಲಿ ಕೊಟ್ಟು ಇಡ ಬೇ
೨೪ ಳಿದ ಪಾಲನ್ನು ತಂದಿಡು, ಅಂದನು. ಆಗ ಅಡಿಗೆಯವನು ಒಂದು
ಮುಂದೊಡೆಯನ್ನೂ ಅದರ ಸಂಗಡ ಇದ್ದದ್ದನ್ನೂ ತಂದು, ಅದ
ನ್ನು ಸಾಲನ ಮುಂದೆ ಇಟ್ಟನು. ಆಗ ಸಮುವೇಲನು ಸಾಲನಿಗೆ,
ಇಗೋ, ಉಳಿಸಿದ್ದು! ಇದನ್ನು ನಿನ್ನ ಮುಂದೆ ಇಟ್ಟು ಕೊಂಡು,
ಉಣ್ಣು; ಯಾಕಂದರೆ ನಾನು ಜನರನ್ನು ಕರೆದಿದ್ದೇನೆಂದು ಹೇಳಿ
ದ ಕಾಲದಿಂದ ಈ ವರಿಗೂ ನಿನಗೋಸ್ಕರ ಇಡಲ್ಪಟ್ಟಿತ್ತು, ಅಂದ
ನು. ಹಾಗೆಯೇ ಸಾಲನು ಆ ದಿವಸದಲ್ಲಿ ಸಮುವೇಲನ ಸಂಗಡ
ಊಟ ಮಾಡಿದನು.

೨೫ ಅವರು ಮೇಡಿನಿಂದ ಪಟ್ಟಣಕ್ಕೆ ಇಳಿದು ಬಂದಾಗ, ಸಮುವೇಲನು
೨೬ ಮಾಳಿಗೆಯ ಮೇಲೆ ಸಾಲನ ಸಂಗಡ ಮಾತಾಡಿದನು. ಅವರು
ಉದಯ ಕಾಲದಲ್ಲಿ ಸೂರ್ಯೋದಯಕ್ಕೆ ಎದ್ದಾಗ, ಸಮುವೇಲ
ನು ಸಾಲನನ್ನು ಮಾಳಿಗೆಗೆ ಕರೆದು, ಏಳು, ನಾನು ನಿನ್ನನ್ನು ಕಳು
ಹಿಸುತ್ತೇನೆ, ಅಂದನು. ಹಾಗೆಯೇ ಸಾಲನು ಎದ್ದನು; ಆಗ ಸಾ
ಲನೂ ಸಮುವೇಲನೂ ಇಬ್ಬರೂ ಹೊರಗೆ ಹೊರಟರು.

೨೭ ಪಟ್ಟಣದ ಅಂತ್ಯದ ಪರ್ಯಂತರಕ್ಕೂ ಇಳಿದು ಬಂದಾಗ, ಸ
ಮುವೇಲನು ಸಾಲನಿಗೆ, ನಾನು ದೇವರ ವಾರ್ತೆಯನ್ನು ನಿನಗೆ
ತಿಳಿಸುವ ಹಾಗೆ, ಸ್ವಲ್ಪ ಹೊತ್ತು ನಿಲ್ಲು; ನಿನ್ನ ಸೇವಕನನ್ನು ನ
ಮ್ಮ ಮುಂದೆ ಹೋಗ ಹೇಳು, ಅಂದನು. ಅವನು ಮುಂದೆ ಹೋ
ದನು.

## ೧೦. ಸಂಧಿ.

೧ ಆಗ ಸಮುವೇಲನು ಎಣ್ಣೆಯ ಪಾತ್ರೆಯನ್ನು ತಕ್ಕೊಂಡು,
ಅವನ ತಲೆಯ ಮೇಲೆ ಹೊಯಿದು, ಅವನನ್ನು ಮುದ್ದಿಟ್ಟು ಕೊಂ
ಡು, ಹೇಳಿದ್ದೇನಂದರೆ, ಕರ್ತನು ನಿನ್ನನ್ನು ತನ್ನ ಬಾಧ್ಯತೆಯ
೨ ಮೇಲೆ ನಾಯಕನಾಗಿರ ಅಭಿಷೇಕ ಮಾಡಿದ್ದಾನಂತಲ್ಲವೋ? ನೀ
ನು ಈ ಹೊತ್ತು ನನ್ನನ್ನು ಬಿಟ್ಟು ಹೋದಾಗ, ಬೆನ್ಯಾಮಿನನ
ಮೇರೆಯಾದ ಜೆಲ್ಜಾಹುವಿನಲ್ಲಿರುವ ರಹೇಲಳ ಸಮಾಧಿಯ ಬಳಿ
ಯಲ್ಲಿ ಇಬ್ಬರು ಮನುಷ್ಯರನ್ನು ಕಂಡು ಕೊಳ್ಳುವಿ. ಅವರು ನಿ
ನಗೆ, ನೀನು ಹುಡುಕ ಹೋದ ಕತ್ತೆಗಳು ಸಿಕ್ಕಿದವು; ಇದಲ್ಲದೆ, ಇ
ಗೋ, ನಿನ್ನ ತಂದೆಯು ಕತ್ತೆಗಳ ಮಾತನ್ನು ಬಿಟ್ಟು, ನಿನಗೋ
ಸ್ಕರ ಚಿಂತೆ ಪಟ್ಟು, ನನ್ನ ಮಗನಿಗೋಸ್ಕರ ಏನು ಮಾಡಲಿ!
3 ಅನ್ನುತ್ತಾನೆಂದು, ಹೇಳುವರು. ನೀನು ಆ ಸ್ಥಳವನ್ನು ಬಿಟ್ಟು, ಆ
ಜೇಲಿ ದಾಟಿ, ತಬೋರಿನ ತೋಪಿನಲ್ಲಿ ಬರುವಾಗ, ಒಬ್ಬನು
ಮೂರು ಮೇಕೆಯ ಮರಿಗಳನ್ನೂ, ಮತ್ತೊಬ್ಬನು ಮೂರು
ರೊಟ್ಟಿಗಳನ್ನೂ, ಇನ್ನೊಬ್ಬನು ದ್ರಾಕ್ಷೇ ರಸವಿರುವ ಒಂದು ಸಿ
ದ್ದಿಗೆಯನ್ನೂ ಹೊತ್ತು ಕೊಂಡು, ದೇವರ ಬಳಿಗೆ ಬೇತೆಲಿಗೆ
೪ ಹೋಗುವ ಮೂವರನ್ನು ಕಾಣುವಿ. ಅವರು ನಿನ್ನ ಕ್ಷೇಮ ಸ
ಮಾಚಾರವನ್ನು ವಿಚಾರಿಸಿ, ನಿನಗೆ ಎರಡು ಕೊಟ್ಟಿಗಳನ್ನು ಕೊ
ಡುವರು; ಅವುಗಳನ್ನು ನೀನು ಅವರ ಕೈಯಿಂದ ತೆಗೆದು ಕೊ
೫ ಳ್ಳುವಿ. ತರುವಾಯ ಫಿಲಿಷ್ಟ್ಯರ ಕಾಣುವಿರುವ ದೇವರ ಗುಡ್ಡಕ್ಕೆ
ಹೋಗುವಿ. ಅಲ್ಲಿಂದ ನೀನು ಪಟ್ಟಣದಲ್ಲಿ ಪ್ರವೇಶಿಸುವಾಗ, ನಿನಗೆ
ದುರಾಗಿ ವೀಣೆ, ದಮ್ಮುಡಿ, ಪಿಳ್ಳಂಗೋವಿ, ಕಿನ್ನರಿಗಳನ್ನು ತಮ್ಮ
ಮುಂದೆ ಇಟ್ಟು ಕೊಂಡವರಾಗಿ ಮೇಡಿನಿಂದ ಇಳಿದು ಬರುವ ಪ್ರ
೬ ವಾದಿಗಳ ಗುಂಪು ಬರುವದು. ಅವರು ಪ್ರವಾದಿಸುವರು. ಆಗ
ಕರ್ತನ ಆತ್ಮವು ನಿನ್ನ ಮೇಲೆ ಬರುವದು; ನೀನು ಅವರ ಸಂಗಡ
3 ಪ್ರವಾದಿಸುವಿ; ಬೇರೆ ಮನುಷ್ಯನಾಗಿ ಮಾರ್ಪಡುವಿ. ಈ ಗು
ರುತುಗಳೆಲ್ಲಾ ನಿನಗೆ ಸಂಭವಿಸಿದಾಗ, ದೇವರು ನಿನ್ನ ಸಂಗಡ ಇ
ರುವದರಿಂದ, ನೀನು ಆ ವೇಳೆಯಲ್ಲಿ ನಿನಗೆ ಕೈ ಕೂಡಿದ ಹಾಗೆ
೮ ಮಾಡು. ಆದರೆ ನೀನು ನನಗೆ ಮುಂದಾಗಿ ಗಿಲ್ಗಾಲಿಗೆ ಇಳಿದು
ಹೋಗ ಬೇಕು; ಇಗೋ, ನಾನು ಹೋಮಗಳನ್ನೂ, ಸಮಾ
ಧಾನದ ಬಲಿಗಳನ್ನೂ ಅರ್ಪಿಸುವದಕ್ಕಾಗಿ, ನಿನ್ನ ಬಳಿಗೆ ಬರುವೆ
ನು. ನೀನು ಮಾಡ ಬೇಕಾದದ್ದನ್ನು ನಾನು ನಿನಗೆ ತಿಳಿಸುವ ಪ
ರ್ಯಂತರ, ನೀನು ಅಲ್ಲಿ ಏಳು ದಿವಸ ಕಾದು ಕೊಳ್ಳ ಬೇಕು,
ಅಂದನು.

೯ ಅವನು ಸಮುವೇಲನನ್ನು ಬಿಟ್ಟು ಹೋಗ ಬೆಂದಿರಿಸಿದಾಗ,
ಏನಾಯಿತಂದರೆ, ದೇವರು ಅವನಿಗೆ ಬೇರೆ ಹೃದಯವನ್ನು ಕೊ
ಟ್ಟನು; ಆ ಸಮಸ್ತ ಗುರುತುಗಳು ಆ ದಿವಸದಲ್ಲಿ ಅವನಿಗೆ ಸಂಭ
೧೦ ವಿಸಿದವು. ಅವನು ಆ ಗುಡ್ಡಕ್ಕೆ ಬಂದಾಗ, ಇಗೋ, ಪ್ರವಾದಿಗಳ

ಗುಂಪು ಅವನೆದುರಿಗೆ ಬಂತು; ಆಗ ದೇವರ ಆತ್ಮವು ಅವನ ಮೇಲೆ
೧೧ ಬಂದದರಿಂದ, ಅವರಲ್ಲಿದ್ದು ಪ್ರವಾದಿಸಿದನು. ಅದಕ್ಕೆ ಮುಂಚೆ
ಅವನನ್ನು ಶಿಳ್ಳಿದವರೆಲ್ಲರು, ಅವನು ಪ್ರವಾದಿಗಳ ಸಂಗಡಲಿದ್ದು,
ಪ್ರವಾದಿಸುವದನ್ನು ಕಂಡಾಗ, ಅವರು ಒಬ್ಬರ ಸಂಗಡ ಒಬ್ಬರು,
ಕೀಷನ ಮಗನಿಗೆ ಬಂದದ್ದು ಇದೇನು! ಸೌಲನು ಪ್ರವಾದಿಗಳಲ್ಲಿ
೧೨ ಇದ್ದಾನೋ! ಅಂದರು. ಅದಕ್ಕೆ ಅಲ್ಲಿಯವನೊಬ್ಬನು ಪ್ರತ್ಯುತ್ತರವಾಗಿ, ಇವರ ತಂದೆ ಯಾರು! ಅಂದನು. ಆದದರಿಂದ ಸೌ
ಲನು ಪ್ರವಾದಿಗಳಲ್ಲಿ ಇದ್ದಾನೋ! ಎಂಬ ಸಾಮತಿ ಉಂಟಾಯಿ
೧೩ ತು. ಅವನು ಪ್ರವಾದಿಸಿ ತೀರಿಸಿದ ತರುವಾಯ, ಮೇಡಿನ ಮೇಲ
ಕ್ಕೆ ಬಂದನು.
೧೪ ಆಗ ಸೌಲನ ಚಿಕ್ಕಪ್ಪನು, ನೀವು ಎಲ್ಲಿ ಹೋದಿರಿ! ಎಂದು ಅ
ವನನ್ನೂ ಅವನ ಕೆಲಸದವನನ್ನೂ ಕೇಳಿದನು. ಅದಕ್ಕವನು, ಕ
ತ್ತೆಗಳನ್ನು ಹುಡುಕುವದಕ್ಕೆ; ಮತ್ತು ಅವುಗಳನ್ನು ಕಾಣದೆ ಹೋ
೧೫ ದದರಿಂದ, ಸಮುವೇಲನ ಬಳಿಗೆ ಹೋದೆವು, ಅಂದನು. ಅದಕ್ಕೆ
ಸೌಲನ ಚಿಕ್ಕಪ್ಪನು, ಸಮುವೇಲನು ನಿನಗೆ ಏನು ಹೇಳಿದನು! ದ
೧೬ ಯೆ ಮಾಡಿ, ನನಗೆ ಶಿಳ್ಳಿನು, ಅಂದನು. ಸೌಲನು ತನ್ನ ಚಿಕ್ಕಪ್ಪ
ನಿಗೆ, ಕತ್ತೆಗಳು ದೊರಕಿದವೆಂದು, ಅವನು ನಮಗೆ ಶಿಳ್ಳಿಸೇ ಶಿಳ್ಳಿಸಿ
ದನು, ಅಂದನು. ಆದರೆ ಅವನು ಸಮುವೇಲನು ಹೇಳಿದ ರಾಜ್ಯ
ದ ಮಾತನ್ನು ಅವನಿಗೆ ಶಿಳ್ಳಿಸಲಿಲ್ಲ.
೧೭ ಮತ್ತು ಸಮುವೇಲನು ಜನರನ್ನು ಮಿಚ್ಪೆಯಲ್ಲಿ ಕರ್ತನ ಬಳಿ
ಗೆ ಕೂಡಾ ಕರಸಿ, ಇಸ್ರಯೇಲಿನ ಮಕ್ಕಳಿಗೆ, ಇಸ್ರಯೇಲಿನ ದೇ
೧೮ ವರಾದ ಕರ್ತನು ಹೇಳುವದೇನಂದರೆ—ನಾನು ನಿಮ್ಮನ್ನು ಐಗು
ಪ್ತದಿಂದ ಬರ ಮಾಡಿ, ನಿಮ್ಮನ್ನು ಐಗುಪ್ತ್ಯರ ಕೈಯಿಂದಲೂ, ನಿ
ಮ್ಮನ್ನು ಬಾಧೆ ಪಡಿಸಿದ ಸಮಸ್ತ ರಾಜ್ಯಗಳ ಕೈಯಿಂದಲೂ ಬಿಡಿ
೧೯ ಸಿದೆನು. ಆದರೆ ನಿಮ್ಮ ಎಲ್ಲಾ ಕೇಡುಗಳಿಂದಲೂ ಇಕ್ಕಟ್ಟುಗಳಿಂದ
ಲೂ ನಿಮ್ಮನ್ನು ತಪ್ಪಿಸಿ ರಕ್ಷಿಸಿದ ನಿಮ್ಮ ದೇವರನ್ನು ನೀವು ಈ ದಿ
ವಸದಲ್ಲಿ ಅಲಕ್ಷ್ಯ ಮಾಡಿ, ಅವನಿಗೆ, ನಮ್ಮ ಮೇಲೆ ಒಬ್ಬ ಅರಸ
ನನ್ನು ನೇಮಿಸಿನು, ಎಂದು ಹೇಳಿದಿರಿ. ಆದದರಿಂದ ಈಗ ಕರ್ತನ
ಮುಂದೆ ನಿಮ್ಮ ಕುಲಗಳ ಪ್ರಕಾರವಾಗಿಯೂ ನಿಮ್ಮ ಸಹಸ್ರಗಳ
ಪ್ರಕಾರವಾಗಿಯೂ ನಿಲ್ಲಿರಿ, ಅಂದನು.
೨೦ ಸಮುವೇಲನು ಇಸ್ರಯೇಲಿನ ಕುಲಗಳನ್ನೆಲ್ಲಾ ಸವಿಾಪ ಬರ
೨೧ ಮಾಡಿದಾಗ, ಬೆನ್ಯಮಿನನ ಕುಲ ತಕ್ಕೊಳ್ಳಲ್ಪಟ್ಟಿತು. ಅವನು
ಬೆನ್ಯಮಿನನ ಕುಲವನ್ನು ಅದರ ಗೋತ್ರಗಳ ಹಾಗೆಯೇ ಹತ್ತರ
ಬರ ಮಾಡಿದಾಗ, ಮಟ್ರಿಯ ಗೋತ್ರ ತಕ್ಕೊಳ್ಳಲ್ಪಟ್ಟಿತು, ಮ
ತ್ತು ಕೀಷನ ಮಗನಾದ ಸೌಲನು ತಕ್ಕೊಳ್ಳಲ್ಪಟ್ಟನು. ಆದರೆ
ಅವನನ್ನು ಹುಡುಕುವಾಗ, ಅವನು ಶಿಕ್ಕಲಿಲ್ಲ.
೨೨ ಆದದರಿಂದ, ಅವನು ಇನ್ನು ಇಲ್ಲಿ ಬರುವನೋ? ಎಂದು ಕರ್ತ
ನನ್ನು ಕೇಳಿದರು. ಇಗೋ, ಅವನು ಸಾಮಾನಿನಲ್ಲಿ ಅಡಗಿ
೨೩ ಕೊಂಡಿದ್ದಾನೆಂದು, ಕರ್ತನು ಹೇಳಿದನು. ಆಗಲವರು ಓಡಿ ಹೋ
ಗಿ, ಅಲ್ಲಿಂದ ಅವನನ್ನು ಕರ ತಂದರು. ಅವನು ಜನರ ಮಧ್ಯದಲ್ಲಿ
ನಿಲ್ಲುವಾಗ, ಅವನು ತನ್ನ ಭುಜದಿಂದ ಎಲ್ಲಾ ಜನರಿಗಿಂತ ಎತ್ತರ
ವಾಗಿದ್ದನು.
೨೪ ಆಗ ಸಮುವೇಲನು, ಕರ್ತನು ಆದು ಕೊಂಡವನನ್ನು ನೋ
ಡಿರಿ; ಸಮಸ್ತ ಜನರಿಗೆ, ಎಲ್ಲಾ ಜನರಲ್ಲಿ ಇವನಿಗೆ ಸಮಾನವಾದವ
ನು ಯಾವನೂ ಇಲ್ಲವಲ್ಲ, ಅಂದನು. ಜನರೆಲ್ಲರೂ ಆರ್ಭಟಿಸಿ,
೨೫ ಅರಸಾದವನು ಬಾಳಲಿ, ಅಂದರು. ಮತ್ತು ಸಮುವೇಲನು ರಾಜ್ಯ
ದ ಪದ್ಧತಿಯನ್ನು ಜನರಿಗೆ ಹೇಳಿ ಕೊಟ್ಟು, ಒಂದು ಪುಸ್ತಕದಲ್ಲಿ
ಬರೆದು, ಕರ್ತನ ಮುಂದೆ ಇಟ್ಟನು. ಆಗ ಜನರನ್ನೆಲ್ಲಾ ಅವರ
ವರ ಮನೆಗೆ ಕಳುಹಿಸಿ ಬಿಟ್ಟನು.
೨೬ ಮತ್ತು ಸೌಲನು ಗಿಬ್ಯದಲ್ಲಿರುವ ತನ್ನ ಮನೆಗೆ ಹೋದನು.
ಕರ್ತನು ಯಾರ ಹೃದಯವನ್ನು ಮುಟ್ಟಿದನೋ, ಅವರು
೨೭ ಒಂದು ಗುಂಪು ಅವನ ಸಂಗಡ ಹೋಯಿತು. ಆದರೆ ಬೆಲಿಯಾ
ಳನ ಮಕ್ಕಳು, ಇವನು ನಮ್ಮನ್ನು ರಕ್ಷಿಸುವದೇನೆಂದು! ಅವನನ್ನು
ತಿರಸ್ಕರಿಸಿದರು; ಅವನಿಗೆ ಕಾಣಿಕೆಯನ್ನು ತಕ್ಕೊಂಡು ಬರಲಿಲ್ಲ.
ಆದರೆ ಅವನು ಕೇಳಿದವನ ಹಾಗೆ ಇದ್ದನು.

## ೧೧. ಸಂಧಿ.

೧ ಆದರೆ ಅಮ್ಮೋನ್ಯನಾದ ನಹಾಷನು ಬಂದು, ಗಿಲ್ಯಾದಿನಲ್ಲಿರು
ವ ಯಾಬೆಷಿಗೆ ವಿರೋಧವಾಗಿ ದಂಡು ಇರಿಸಿದನು. ಆಗ ಯಾ
ಬೆಷಿನ ಜನರೆಲ್ಲರು ನಹಾಷನಿಗೆ, ನೀನು ನಮ್ಮ ಸಂಗಡ ಒಡಂಬಡಿ
೨ ಕೆ ಮಾಡಿದರೆ, ನಾವು ನಿನ್ನನ್ನು ಸೇವಿಸುವೆವು, ಅಂದರು. ಅಮ್ಮೋ
ನ್ಯನಾದ ನಹಾಷನು ಅವರಿಗೆ, ಇಸ್ರಯೇಲ್ಯರೆಲ್ಲರಿಗೆ ಅವಮಾ
ನ ಬರುವ ಹಾಗೆ, ನಿಮ್ಮೆಲ್ಲರ ಬಲ ಕಣ್ಣುಗಳನ್ನು ಕಿತ್ತು ಹಾಕಿ,
ನಿಮ್ಮ ಸಂಗಡ ಒಡಂಬಡಿಕೆ ಮಾಡುತ್ತೇನೆ, ಅಂದನು.
೩ ಅದಕ್ಕೆ ಯಾಬೆಷಿನ ಹಿರಿಯರು ಅವನಿಗೆ, ನಾವು ಇಸ್ರಯೇ
ಲಿನ ಸಮಸ್ತ ಮೇರೆಗಳಿಗೆ ದೂತರನ್ನು ಕಳುಹಿಸ ನಮಗೆ ಏಳು
ದಿವಸಗಳ ಗಡುವನ್ನು ಕೊಡು; ನಮ್ಮನ್ನು ರಕ್ಷಿಸುವವರು ಯಾ
ರೂ ಇಲ್ಲದೆ ಹೋದರೆ, ಆಗ ನಾವು ನಿನ್ನ ಬಳಿಗೆ ಹೊರಟು ಬ
೪ ರುವೆವು, ಅಂದರು. ಮತ್ತು ದೂತರು ಸೌಲನು ಇರುವ ಗಿಬ್ಯಕ್ಕೆ
ಬಂದು, ಜನರ ಕಿವಿಗಳಲ್ಲಿ ಆ ಮಾತುಗಳನ್ನು ಹೇಳಿದರು. ಆಗ
೫ ಜನರೆಲ್ಲರೂ ಶಬ್ದವನೆತ್ತಿ, ಅತ್ತರು. ಇಗೋ, ಸೌಲನು ದನಗಳ
ಹಿಂದೆ ಹೊಲದಿಂದ ಬಂದು, ಜನರು ಅಳುವದೇನು! ಎಂದು ಕೇಳಿ
ದನು. ಆಗಲವನಿಗೆ ಯಾಬೆಷಿನ ಜನರ ಮಾತುಗಳನ್ನು ವಿವರಿ
೬ ಸಿದರು. ಸೌಲನು ಈ ಮಾತುಗಳನ್ನು ಕೇಳಿದಾಗ, ದೇವರ ಆ
ತ್ಮವು ಅವನ ಮೇಲೆ ಬಂತು; ಅವನು ಬಹು ಕೋಪ ಗೊಂಡು,
೭ ಒಂದು ಗತ್ತೇದ ಎತ್ತುಗಳನ್ನು ತೆಗೆದು ಕೊಂಡು, ಅವುಗಳನ್ನು
ತುಂಡು ತುಂಡಾಗಿ ಖಂಡ್ರಿಸಿ, ದೂತರ ಕೈಯಿಂದ ಇಸ್ರಯೇಲಿನ
ಮೇರೆಗಳಿಗೆಲ್ಲಾ ಕಳುಹಿಸಿ, ಸೌಲನ ಹಿಂದೆಯೂ ಸಮುವೇಲನ
ಹಿಂದೆಯೂ ಹೊರಡದವನ ದನಗಳಿಗೆ ಈ ಪ್ರಕಾರ ಮಾಡಲ್ಪಡು
೮ ವದೆಂದು, ಹೇಳಿದನು. ಆಗ ಕರ್ತನಿಂದ ಉಂಟಾದ ಭಯ ಜನರ
ಮೇಲೆ ಬಿದ್ದದ್ದರಿಂದ, ಅವರು ಒಬ್ಬನೇ ಮನುಷ್ಯನ ಹಾಗೆ ಹೊರ
ಟು ಬಂದರು. ಅವನು ಅವರನ್ನು ಬೇಜೆಕಿನಲ್ಲಿ ಎಣಿಸಿದಾಗ, ಇ
ಸ್ರಯೇಲ್ ಮಕ್ಕಳು ಮೂರು ಲಕ್ಷ ಜನರೂ, ಯೆಹೂದ ಮನು
ಷ್ಯರು ಮೂವತ್ತು ಸಾವಿರ ಜನರೂ ಆಗಿದ್ದರು.
೯ ಆಗಲವರು ಬಂದ ದೂತರಿಗೆ, ನೀವು ಗಿಲ್ಯಾದಿನಲ್ಲಿರುವ ಯಾ
ಬೆಷಿನ ಜನರಿಗೆ ಹೇಳ ಬೇಕಾದದ್ದೇನಂದರೆ, ನಾಳೆ ಬಿಸಿಲೇರಿದಾಗ,
ನಿಮಗೆ ರಕ್ಷಣೆ ಉಂಟಾಗುವದು, ಅಂದರು. ಹಾಗೆಯೇ ದೂತ
ರು ಬಂದು, ಯಾಬೆಷಿನ ಜನರಿಗೆ ಅದನ್ನು ಶಿಳ್ಳಿಸಿದಾಗ, ಅವರು
೧೦ ಸಂತೋಷ ಪಟ್ಟರು. ತರುವಾಯ ಯಾಬೆಷಿನ ಜನರು ನಹಾ
ಷನಿಗೆ, ನಾಳೆ ನಿನ್ನ ಬಳಿಗೆ ಹೊರಟು ಬರುವೆವು; ಆಗ ನೀನು ನಿ



ನ್ನ ಕಣ್ಣುಗಳಿಗೆ ಒಳ್ಳೇದಾಗಿ ತೋರುವದೆಲ್ಲಾ ನಮಗೆ ಮಾಡು,
ಅಂದರು.
೧೧ ಆದರೆ ಮಾರನೆ ದಿವಸದಲ್ಲಿ ಸೌಲನು ಜನರನ್ನು ಮೂರು ಗುಂ
ಪಾಗಿ ಇರಿಸಿ, ಬೆಳಗಿನ ಝಾವಿನಲ್ಲಿ ದಂಡಿನಲ್ಲಿ ಬಂದು, ಹಗಲು
ಬಿಸಿಲೇರುವ ಪರ್ಯಂತರ ಅಮ್ಮೋನ್ಯರನ್ನು ಸಂಹರಿಸಿದನು. ಉ
ಳಿದವರು ಚದರಿ ಹೋದರು; ಅವರಲ್ಲಿ ಇಬ್ಬರು ಕೂಡ ಇರಲಿಲ್ಲ.
೧೨ ಆಗ ಜನರು ಸಮುವೇಲನಿಗೆ, ಸೌಲನು ನಮ್ಮ ಮೇಲೆ ಆಳುವ
ನೋ! ಎಂದು ಹೇಳಿದವರ್ಯಾರು! ಆ ಮನುಷ್ಯರನ್ನು ನಮಗೆ ಒ
೧೩ ಪ್ಪಿಸಿರಿ; ಅವರನ್ನು ಕೊಂದು ಹಾಕುತ್ತೇವೆ, ಅಂದರು. ಆಗ ಸೌ
ಲನು ಕರ್ತನು ಈ ದಿವಸ ಇಸ್ರಯೇಲಲ್ಲಿ ರಕ್ಷಣೆಯನ್ನು ಉಂ
ಟು ಮಾಡಿದ್ದರಿಂದ, ಈ ಹೊತ್ತು ಯಾವನೂ ಕೊಲೆ ಪಡ ಬಾರ
ದು, ಅಂದನು.
೧೪ ಆಗ ಸಮುವೇಲನು ಜನರಿಗೆ, ನಾವು ಗಿಲ್ಗಾಲಿಗೆ ಹೋಗಿ, ಅಲ್ಲಿ
೧೫ ರಾಜ್ಯವನ್ನು ನೂತನ ಪಡಿಸುವ ಬನ್ನಿರಿ, ಅಂದನು. ಹಾಗೆಯೇ
ಜನರೆಲ್ಲರು ಗಿಲ್ಗಾಲಿಗೆ ಹೋಗಿ, ಆ ಸ್ಥಳದಲ್ಲಿ ಕರ್ತನ ಮುಂದೆ
ಸೌಲನನ್ನು ಅರಸನಾಗ ಮಾಡಿ, ಕರ್ತನಿಗೆ ಸಮಾಧಾನದ ಬಲಿ
ಗಳನ್ನು ಅರ್ಪಿಸಿದರು. ಅಲ್ಲಿ ಸೌಲನೂ ಸಮಸ್ತ ಇಸ್ರಯೇಲ್ಯ
ರೂ ಬಹಳವಾಗಿ ಸಂತೋಷ ಪಟ್ಟರು.

## ೧೨. ಸಂಧಿ.

೧ ಮತ್ತು ಸಮುವೇಲನು ಇಸ್ರಯೇಲ್ಯರೆಲ್ಲರಿಗೆ, ಹೇಳಿದ್ದೇನಂದ
ರೆ, ಇಗೋ, ನೀವು ನನಗೆ ಹೇಳಿದ್ದೆಲ್ಲಾದರಲ್ಲಿ ನಿಮ್ಮ ಮಾತು ಕೇ
೨ ಳಿ, ನಿಮ್ಮ ಮೇಲೆ ಒಬ್ಬ ಅರಸನನ್ನು ಇಟ್ಟೆನು. ಈಗ, ಇಗೋ,
ಆ ಅರಸು ನಿಮ್ಮ ಮುಂದಾಗಿ ನಡೆಯುತ್ತಾನೆ. ಆದರೆ ನಾನು
ವೃದ್ಧನಾನೆನು; ನರೆ ಬಂದವನಾನೆನು. ಇಗೋ, ನನ್ನ ಮಕ್ಕ
ಳು ನಿಮ್ಮ ಸಂಗಡ ಇದ್ದಾರೆ. ನಾನು ನನ್ನ ಚಿಕ್ಕತನ ದೊದ
ಲ್ಗೊಂಡು ಈ ದಿನದ ವರಿಗೂ ನಿಮ್ಮ ಮುಂದೆ ನಡೆ ಕೊಂಡಿದ್ದೇನೆ.
೩ ಇಗೋ, ನಾನು ಇಲ್ಲಿ ಇದ್ದೇನೆ. ಕರ್ತನ ಮುಂದೆಯೂ ಅವನ
ಅಭಿಷಿಕ್ತನ ಮುಂದೆಯೂ ನನ್ನ ವಿಷಯ ಉತ್ತರ ಕೊಡಿರಿ.
ನಾನು ಯಾರ ಎತ್ತನ್ನೂ ಯಾರ ಕತ್ತೆಯನ್ನೂ ತೆಗೆದು ಕೊಂ
ಡೆನು! ಯಾರಿಗೆ ಬಲಾತ್ಕಾರ ಮಾಡಿದೆನು! ಯಾರನ್ನು ಬ
ಡೆದು ಬಿಟ್ಟೆನು! ಯಾರಿಂದ ಕಣ್ಣಿಗೆ ಮರೆ ಮಾಡುವ ಲಂಚವ
೪ ನ್ನು ತೆಗೆದು ಕೊಂಡೆನು? ಶಿಲಿಗಿ ಕೊಡುತ್ತೇನೆ, ಅಂದನು. ಅವ
ರು ನೀನು ನಮಗೆ ಬಲಾತ್ಕಾರ ಮಾಡಲಿಲ್ಲ, ನಮ್ಮನ್ನು ಬಡೆದು
ಬಿಡಲಿಲ್ಲ; ನೀನು ಯಾವನ ಕೈಯಿಂದ ಏನಾದರೂ ತಕ್ಕೊಳ್ಳ
೫ ಲಿಲ್ಲ, ಅಂದರು. ಆಗಲವನು ಅವರಿಗೆ, ನೀವು ನನ್ನಲ್ಲಿ ಏನಾದ
ರೂ ಕಂಡು ಹಿಡಿಯಲಿಲ್ಲ ಎಂಬುವದಕ್ಕೆ ಕರ್ತನೇ ನಿಮಗೆ ಸಾಕ್ಷಿ
ಯಾಗಿದ್ದಾನೆ; ಮತ್ತು ಅವನ ಅಭಿಷಿಕ್ತನು ಈ ಹೊತ್ತು ಸಾ
ಕ್ಷಿಯಾಗಿದ್ದಾನೆ, ಅಂದನು. ಅದಕ್ಕವರು ಸಾಕ್ಷಿಯಾಗಿದ್ದಾನೆ,
ಅಂದರು.
೬ ಆಗ ಸಮುವೇಲನು ಜನರಿಗೆ ಹೇಳಿದ್ದೇನಂದರೆ, ಮೋಶೆಯ
ನ್ನೂ ಆರೋನನನ್ನೂ ಮುಂದಕ್ಕೆ ತಂದವನೂ, ನಿಮ್ಮ ತಂದೆಗ
ಳನ್ನು ಐಗುಪ್ತ ದೇಶಕೊಳಗಿಂದ ಬರ ಮಾಡಿದವನೂ ಕರ್ತನೇ.
೭ ಈಗ ನಿಲ್ಲಿರಿ; ಕರ್ತನು ನಿಮಗೂ ನಿಮ್ಮ ತಂದೆಗಳಿಗೂ ಮಾಡಿ
ದ ಸಮಸ್ತ ನೀತಿಯಾದ ಕ್ರಿಯೆಗಳ ವಿಷಯ ಕರ್ತನ ಮುಂದೆ
೮ ನಿಮಗೆ ನ್ಯಾಯ ಹೇಳುತ್ತೇನೆ. ಯಾಕೋಬನು ಐಗುಪ್ತಕ್ಕೆ
ಬಂದ ತರುವಾಯ, ನಿಮ್ಮ ತಂದೆಗಳು ಕರ್ತನಿಗೆ ಕೂಗಿದರು;
ಆಗ ಕರ್ತನು ಮೋಶೆಯನ್ನೂ ಆರೋನನನ್ನೂ ಕಳುಹಿಸಿದ
ನು. ಇವರು ನಿಮ್ಮ ತಂದೆಗಳನ್ನು ಐಗುಪ್ತದಿಂದ ಕರ ತಂದು, ಅ
೯ ವರನ್ನು ಈ ಸ್ಥಳದಲ್ಲಿ ವಾಸವಾಗಿರ ಮಾಡಿದನು. ಆದರೆ ಅವ
ರು ತಮ್ಮ ದೇವರಾದ ಕರ್ತನನ್ನು ಮರೆತು ಹೋದಾಗ, ಅವನು
ಅವರನ್ನು ಹಜೋರಿನ ಸೈನ್ಯಾಧಿಪತಿಯಾದ ಸಿಸ್ರನ ಕೈಗೂ
ಫಿಲಿಷ್ಟ್ಯರ ಕೈಗೂ ಮೋವಾಬ್ಯದ ಅರಸನ ಕೈಗೂ ಮಾರಾ ಬಿ
೧೦ ಟ್ಟನು. ಇವರು ಅವರ ಸಂಗಡ ಯುದ್ಧ ಮಾಡಿದರು. ಆದದರಿಂ
ದ ಅವರು ಕರ್ತನಿಗೆ ಕೂಗಿ, ನಾವು ಕರ್ತನಾದ ನಿನ್ನನ್ನು ಬಿ
ಟ್ಟು, ಬಾಳ್ಳಿಮನ್ನೂ ಅಷ್ಟರೋತಳನ್ನೂ ಸೇವಿಸಿದ್ದರಿಂದ, ಪಾಪ
ಮಾಡಿದೆವು. ಈಗ ನೀನು ನಮ್ಮ ಶತ್ರುಗಳ ಕೈಯಿಂದ ನಮ್ಮ
೧೧ ನ್ನು ಬಿಡಿಸು, ನಿನ್ನನ್ನು ಸೇವಿಸುವೆವು, ಅಂದರು. ಆಗ ಕರ್ತ
ನು ಯೆರುಬ್ಬಾಳನನ್ನೂ, ಬೆದಾನನನ್ನೂ, ಯೆಫ್ತಾಹನನ್ನೂ, ಸ
ಮುವೇಲನನ್ನೂ ಕಳುಹಿಸಿ, ನಿಮ್ಮನ್ನು ಸಮಸ್ತ ದಿಕ್ಕಿನಲ್ಲಿರುವ
ನಿಮ್ಮ ಶತ್ರುಗಳ ಕೈಯಿಂದ ಬಿಡಿಸಿದನು; ನೀವು ಭರವಸವಾಗಿ
೧೨ ವಾಸ ಮಾಡಿದಿರಿ. ಆದರೆ ಅಮ್ಮೋನನ ಮಕ್ಕಳ ಅರಸನಾದ
ನಹಾಷನು ನಿಮಗೆ ವಿರೋಧವಾಗಿ ಯುದ್ಧ ಮಾಡ ಬರುವದನ್ನು
ನೋಡಿ, ನಿಮ್ಮ ದೇವರಾದ ಕರ್ತನೇ ನಿಮಗೆ ಅರಸನಾಗಿರುವಾ
ಗ, ನೀವು ನವಗೆ, ಹಾಗೆ ಬೇಡ; ಒಬ್ಬ ಅರಸನು ನಮ್ಮನ್ನು ಆಳ
೧೩ ಬೇಕು, ಅಂದಿರಿ. ಈಗ, ಇಗೋ, ನೀವು ಆದು ಕೊಂಡಂಥ ನೀ
ವು ಕೇಳಿದಂಥ ಅರಸನು ಇಲ್ಲಿ ಇದ್ದಾನೆ. ಇಗೋ, ಕರ್ತನು ನಿ
ಮ್ಮ ಮೇಲೆ ಅರಸನನ್ನು ಇಟ್ಟನು. ನೀವು ಕರ್ತನ ಮಾತಿಗೆ
೧೪ ವಿರೋಧವಾಗಿ ಶಿರುಗ ಬೀಳದೆ, ಕರ್ತನಿಗೆ ಭಯ ಪಟ್ಟು, ಅವನ
ನ್ನು ಸೇವಿಸಿ, ಅವನ ಶಬ್ದ ಕೇಳದೆ, ನೀವೂ ನಿಮ್ಮ ಮೇಲೆ ಆ
ಳುವ ಅರಸನೂ ನಿಮ್ಮ ದೇವರಾದ ಕರ್ತನ ಹಿಂದೆ ಹತ್ತುತ್ತಾ
೧೫ ಇರುವಿರಿ. ನೀವು ಕರ್ತನ ಶಬ್ದ ಕೇಳದೆ, ಕರ್ತನ ಮಾತಿಗೆ
ವಿರೋಧವಾಗಿ ಶಿರುಗ ಬಿದ್ದರೆ, ಕರ್ತನ ಕೈ ನಿಮಗೂ ನಿಮ್ಮ ತಂ
೧೬ ದೆಗಳಿಗೂ ವಿರೋಧವಾಗಿರುವದು. ಮತ್ತು ಈಗ ನಿಂತು ಕೊ
ಳ್ಳಿರಿ; ಕರ್ತನು ನಿಮ್ಮ ಕಣ್ಣುಗಳ ಮುಂದೆ ಮಾಡುವ ಈ ದೊ
೧೭ ಡ್ಡ ಕಾರ್ಯವನ್ನು ನೋಡಿರಿ. ಈಗ ಗೋಧಿಯ ಸುಗ್ಗಿ ಅಲ್ಲ
ವೋ! ನೀವು ನಿಮಗೆ ಒಬ್ಬ ಅರಸನನ್ನು ಕೇಳಿದ್ದರಿಂದ, ಕರ್ತನ
ದೃಷ್ಟಿಗೆ ನೀವು ಮಾಡಿದ ನಿಮ್ಮ ಕೆಟ್ಟತನವು ಬೆಜ್ಜಾಗಿದೆ ಎಂದು
ತಿಳಿ ಕೊಂಡು ನೋಡುವ ಹಾಗೆ, ನಾನು ಕರ್ತನಿಗೆ ಕೂಗುವೆನು;
ಆಗಲವನು ಗುಡುಗನ್ನೂ ಮಳೆಯನ್ನೂ ಕಳುಹಿಸುವನು.
೧೮ ಸಮುವೇಲನು ಕರ್ತನಿಗೆ ಕೂಗಿದ್ದರಿಂದ, ಆ ದಿವಸದಲ್ಲೇ ಕ
ರ್ತನು ಗುಡುಗನ್ನೂ ಮಳೆಯನ್ನೂ ಕಳುಹಿಸಿದನು. ಆಗ ಜ
ನರೆಲ್ಲರು ಕರ್ತನಿಗೂ ಸಮುವೇಲನಿಗೂ ಬಹಳವಾಗಿ ಭಯ ಪ
ಟ್ಟರು. ಮತ್ತು ಜನರೆಲ್ಲರೂ ಸಮುವೇಲನಿಗೆ ನಾವು ಸಾಯದ
ಹಾಗೆ, ನಿನ್ನ ದೇವರಾದ ಕರ್ತನಿಗೆ ನಿನ್ನ ಸೇವಕರಿಗೋಸ್ಕರ
ಪ್ರಾರ್ಥನೆ ಮಾಡು. ಯಾಕಂದರೆ ನಮಗೆ ಒಬ್ಬ ಅರಸನು ಬೇ
ಕೆಂದು, ಕೇಳಿ, ನಮ್ಮ ಸಮಸ್ತ ಪಾಪಗಳಿಗೆ ಕೆಟ್ಟತನ ಕೂಡಿಸಿದೆ
೧೯ ವೆಂದು ಹೇಳಿದರು. ಆಗ ಸಮುವೇಲನು ಜನರಿಗೆ ಹೇಳಿದ್ದೇನಂದ
ರೆ, ನೀವು ಭಯ ಪಡ ಬೇಡಿರಿ. ಈ ಕೆಟ್ಟತನವೆಲ್ಲಾ ಮಾಡಿದ್ದೀ
ರಿ; ಆದರೂ ಕರ್ತನನ್ನು ಬಿಟ್ಟು ತೊಲಗದೆ, ನಿಮ್ಮ ಪೂರ್ಣ

ಹೃದಯದಿಂದ ಕರ್ತನನ್ನು ಸೇವಿಸಿರಿ. ಪ್ರಯೋಜನ ಕೊಡದಂ
೨೧ ಥ, ರಕ್ಷಿಸದಂಥ, ವ್ಯರ್ಥವಾದವುಗಳನ್ನು ಅನುಸರಿಸುವದಕ್ಕೆ
ತೊಲಗಿ ಹೋಗ ಬೇಡಿರಿ. ಅವು ವ್ಯರ್ಥವಾದವುಗಳೇ ಸರಿ.
ಯಾಕಂದರೆ ಕರ್ತನು ತನ್ನ ದೊಡ್ಡ ಹೆಸರಿಗೋಸ್ಕರ ತನ್ನ ಜ
೨೨ ನರನ್ನು ಕೈ ಬಿಡುವದಿಲ್ಲ. ನಿಮ್ಮನ್ನು ತನಗೆ ಜನವಾಗ ಮಾಡಿ
ಕೊಳ್ಳ ಇಚ್ಛೈಸಿದ್ದಾನಲ್ಲ! ಇದಲ್ಲದೆ ನಾನು ನಿಮಗೋಸ್ಕರ
ಪ್ರಾರ್ಥನೆ ಮಾಡದೆ, ಕರ್ತನಿಗೆ ವಿರೋಧವಾಗಿ ಮಾಡುವ ಪಾ
೨೩ ಪ ನನಗೆ ದೂರವಾಗಿರಲಿ. ಒಳ್ಳೇದಾದ ನೆಟ್ಟನೆಯಾದ ಮಾ
೨೪ ರ್ಗದಲ್ಲಿ ನಿಮ್ಮನ್ನು ಬೋಧಿಸುವೆನು. ಆದರೆ ನೀವು ಕರ್ತನಿಗೆ
ಭಯ ಪಟ್ಟು, ನಿಮ್ಮ ಪೂರ್ಣ ಹೃದಯದಿಂದ ಸತ್ಯವಾಗಿ ಅವ
ನನ್ನು ಸೇವಿಸಿರಿ. ಯಾಕಂದರೆ ಆತನು ನಿಮಗೋಸ್ಕರ ಎದ್ದು
ಮಹತ್ತಾದ ಕಾರ್ಯಗಳನ್ನು ಮಾಡಿದನೆಂದು ನೋಡಿ ಕೊಳ್ಳಿರಿ.
೨೫ ನೀವು ಕೆಟ್ಟತನವನ್ನು ಮಾಡೇ ಮಾಡಿದರೆ, ನೀವೂ ನಿಮ್ಮ ಅರ
ಸನೂ ಕೂಡಾ ನಾಶನವಾಗಿ ಹೋಗುವಿರಿ, ಅಂದನು.

## ೧೩. ಸಂಧಿ.

೧ ಸಾಲನು ಒಂದು ವರುಷ ಆಳಿದನು; ಮತ್ತು ಇಸ್ರಯೇಲನ್ನು
ಎರಡು ವರುಷ ಆಳಿದಾಗ, ಸಾಲನು ಇಸ್ರಯೇಲಲ್ಲಿ ಮೂರು
೨ ಸಾವಿರ ಜನರನ್ನು ಆದು ಕೊಂಡನು. ಸಾವಿರ ಜನರಲ್ಲಿ ಎರಡು
ಸಾವಿರ ಜನರು ಸಾಲನು ಇರುವ ಮಿಕ್ಮಾಷಿನಲ್ಲಿಯೂ ಬೇತೇಲಿನ
ಪರ್ವತದಲ್ಲಿಯೂ ಇದ್ದರು; ಸಾವಿರ ಜನರು ಯೊನತಾನನ ಸಂ
ಗಡ ಬೆನ್ಯಮಿನ್ ದೇಶದ ಗಿಬ್ಯದಲ್ಲಿದ್ದರು. ಕಡಿಮೆ ಜನರನ್ನು
ಅವರವರ ಗುಡಾರಗಳಿಗೆ ಕಳುಹಿಸಿ ಬಿಟ್ಟನು.
೩ ಆದರೆ ಯೊನತಾನನು ಗೇಬದಲ್ಲಿ ಫಿಲಿಷ್ಟ್ಯರ ಠಾಣ ಹೊಡೆ
ದನು; ಅದು ಫಿಲಿಷ್ಟ್ಯರು ಕೇಳಿದರು. ಅದರಿಂದ ಸಾಲನು ದೇಶ
ದಲ್ಲೆಲ್ಲಿಯೂ ಇಬ್ರೀಯರು ಕೇಳಲೆಂದು, ತುತೂರಿಯನ್ನು ಹಿ
೪ ಡಿಸಿದನು. ಫಿಲಿಷ್ಟ್ಯರ ಠಾಣ ಸಾಲನು ಹೊಡೆದನೆಂದೂ ಫಿಲಿ
ಷ್ಟ್ಯರಿಗೆ ಇಸ್ರಯೇಲ್ಯರು ದುರ್ವಾಸನೆಯುಳ್ಳವರಾದರೆಂದೂ
ಸಮಸ್ತ ಇಸ್ರಯೇಲ್ಯರು ಕೇಳಿದಾಗ, ಸಾಲನ ಹಿಂದೆ ಹೋಗ
೫ ಗಿಲ್ಗಾಲಿಗೆ ಕರಿಸಿ ಕೊಳ್ಳಲ್ಪಟ್ಟರು. ಆಗ ಇಸ್ರಯೇಲ್ಯರ ಸಂಗಡ
ಯುದ್ಧ ಮಾಡ ಫಿಲಿಷ್ಟ್ಯರು ಮೂವತ್ತು ಸಾವಿರ ರಥಗಳೂ,
ಆರು ಸಾವಿರ ಕುದುರೇ ರಾಹುತರೂ ಸಮುದ್ರ ತೀರದ ಮರಳ
ದ್ದು ಜನವೂ ಕೂಡಿ ಕೊಂಡು, ಮಿಕ್ಮಾಷಿನಲ್ಲಿ ಇಳಿದರು.
೬ ಆಗ ಇಸ್ರಯೇಲ್ ಜನರು ತಮಗೆ ಶ್ರಮೆ ಉಂಟಾದದರಿಂದ,
ತಾವು ಇಕ್ಕಟ್ಟಿನಲ್ಲಿ ಇರುವದನ್ನು ನೋಡಿ, ಗವಿಗಳಲ್ಲಿಯೂ,
ಮುಳ್ಳಿನ ಪೊದೆಗಳಲ್ಲಿಯೂ, ಗುಡ್ಡಗಳಲ್ಲಿಯೂ, ದುರ್ಗಗಳ
೭ ಲ್ಲಿಯೂ, ಕೂಣೆಗಳಲ್ಲಿಯೂ ಅಡಗಿ ಕೊಂಡರು. ಇದಲ್ಲದೆ
ಇಬ್ರೀಯರಲ್ಲಿ ಕೆಲವರು ಯೊರ್ದನನ್ನು ದಾಟಿ, ಗಾದನ
ದೇಶಕ್ಕೂ ಗಿಲ್ಯಾದಿಗೂ ಹೋದರು. ಆದರೆ ಸಾಲನು ಇನ್ನು
ಗಿಲ್ಗಾಲಿನಲ್ಲಿದ್ದನು; ಜನಕೆಲ್ಲರು ಹೆದರಿ ಕೊಂಡು, ಅವನನ್ನು ಹಿಂ
೮ ಬಾಲಿಸಿದರು. ಆದರೆ ಸಾಲನು ತನಗೆ ಸಮುವೇಲನು ನೇಮಿಸಿದ
ಕಾಲದ ಪ್ರಕಾರ, ಏಳು ದಿವಸ ಕಾದಿದ್ದನು. ಸಮುವೇಲನು ಗಿಲ್ಗಾ
ಲಿಗೆ ಬಾರದೆ ಇದ್ದದರಿಂದ, ಜನವು ಅವನನ್ನು ಬಿಟ್ಟು, ಚದರು
೯ ಹೋಯಿತು. ಆಗ, ಸಾಲನು ಹೋಮವನ್ನೂ ಸಮಾಧಾನದ
ಬಲಿಗಳನ್ನೂ ನನ್ನ ಬಳಿಗೆ ತಕ್ಕೊಂಡು ಬನ್ನಿರಿ ಎಂಥೇಳಿ, ಹೋ
ಮವನ್ನು ಅರ್ಪಿಸಿದನು.

೧೦ ಆದರೆ ಅವನು ಹೋಮವನ್ನು ಅರ್ಪಿಸಿ ತೀರಿಸುತ್ತಲೇ, ಇ
ಗೋ, ಸಮುವೇಲನು ಬಂದನು. ಆಗ ಅವನನ್ನು ಆಶೀರ್ವದಿಸುವ
೧೧ ದಕ್ಕೆ, ಸಾಲನು ಅವನನ್ನು ಎದುರ್ಗೊಳ್ಳ ಹೋದನು. ಆದರೆ ಸ
ಮುವೇಲನು, ನೀನೇನು ಮಾಡಿದಿ! ಎಂದು ಸಾಲನನ್ನು ಕೇಳಿದಾಗ,
ಅವನು ಹೇಳಿದ್ದೇನಂದರೆ, ಜನರು ನನ್ನನ್ನು ಬಿಟ್ಟು, ಚದರಿ ಹೋ
ದದ್ದನ್ನೂ, ನೇಮಿಸಿದ ದಿವಸಗಳ ಪ್ರಕಾರಕ್ಕೆ ನೀನು ಬಾರದ್ದನ್ನೂ,
೧೨ ಫಿಲಿಷ್ಟ್ಯರು ಮಿಕ್ಮಾಷಿನಲ್ಲಿ ಕೂಡಿ ಕೊಂಡಿರುವದನ್ನೂ, ನಾನು
ಕಂಡದರಿಂದ, ಫಿಲಿಷ್ಟ್ಯರು ಗಿಲ್ಗಾಲಿನಲ್ಲಿರುವ ನನ್ನ ಬಳಿಗೆ ಬರುವ
ರು ಎಂದೂ, ನಾನು ಕರ್ತನ ದಯೆ ಬೇಡಿ ಕೊಳ್ಳಲಿಲ್ಲವೆಂದೂ
ಹೇಳಿ, ಮುಂಕೊಂಡು, ಹೋಮವನ್ನು ಅರ್ಪಿಸಿದೆನು, ಅಂದನು.
೧೩ ಸಮುವೇಲನು ಸಾಲನಿಗೆ ಹೇಳಿದ್ದೇನಂದರೆ, ನೀನು ಬುದ್ಧಿ ಹೀನ
ವಾದ ಕೆಲಸವನ್ನು ಮಾಡಿದಿ; ನಿನ್ನ ದೇವರಾದ ಕರ್ತನು ನಿನಗೆ
ಆಜ್ಞಾಪಿಸಿದ ಆಜ್ಞೆಯನ್ನು ಕೈ ಕೊಳ್ಳದೆ ಹೋದಿ. ಯಾಕಂದ
ರೆ ಈಗ ಕರ್ತನು ಇಸ್ರಯೇಲ್ಲಿ ನಿನ್ನ ರಾಜ್ಯವನ್ನು ಯುಗ
೧೪ ಯುಗಕ್ಕೆ ದೃಢ ಮಾಡಲಿಕ್ಕೆ ಇದ್ದನು. ಆದರೆ ಈಗ ನಿನ್ನ ರಾ
ಜ್ಯವು ನಿಲ್ಲದಿಲ್ಲ. ಕರ್ತನು ನಿನಗೆ ಆಜ್ಞಾಪಿಸಿದ್ದನ್ನು ನೀನು
ಕೈ ಕೊಳ್ಳದೆ ಹೋದದರಿಂದ, ಅವನು ತನ್ನ ಹೃದಯಕ್ಕೆ ಅ
ನುಸರಣೆಯಾದ ಒಬ್ಬ ಮನುಷ್ಯನನ್ನು ಹುಡುಕಿ, ಅವನನ್ನು
ತನ್ನ ಜನರ ಮೇಲೆ ನಾಯಕನಾಗಿರ ಕಟ್ಟಳೆ ಇಟ್ಟನು.
೧೫ ಮತ್ತು ಸಮುವೇಲನು ಎದ್ದು, ಗಿಲ್ಗಾಲನ್ನು ಬಿಟ್ಟು, ಬೆನ್ಯಮಿ
ನ್ ದೇಶದ ಗಿಬ್ಯಕ್ಕೆ ಹೋದನು. ಮತ್ತು ಸಾಲನು ತನ್ನ ಸಂಗ
೧೬ ಡ ಇದ್ದ ಜನರನ್ನು ಲೆಖ್ಖ ನೋಡಿದನು. ಅವರು ಆರು ನೂರು
ಜನರಿದ್ದರು. ಸಾಲನೂ ಅವನ ಮಗನಾದ ಯೊನತಾನನೂ ಅವ
ನ ಸಂಗಡ ಇರುವ ಜನವೂ ಸಹಿತವಾಗಿ, ಬೆನ್ಯಮಿನ್ ದೇಶದ
ಗಿಬ್ಯದಲ್ಲಿ ಇದ್ದರು. ಆದರೆ ಫಿಲಿಷ್ಟ್ಯರು ಮಿಕ್ಮಾಷಿನಲ್ಲಿ ಇಳಿದಿದ್ದ
ರು.
೧೭ ಆಗ ಫಿಲಿಷ್ಟ್ಯರ ದಂಡಿನಿಂದ ಕೆಡಿಸುವವರು ಮೂರು ಗುಂಪಾ
ಗಿ ಹೊರಟರು; ಒಂದು ಗುಂಪು ಒಫ್ರದ ಮಾರ್ಗವಾಗಿ ಶುವಾಲ
ದೇಶದ ಕಡೆಗೆ ಹೋಯಿತು; ಮತ್ತೊಂದು ಗುಂಪು ಬೇಥೊ
೧೮ ರೋನಿನ ಮಾರ್ಗವಾಗಿ ಹೋಯಿತು; ಬೇರೊಂದು ಗುಂಪು ಅ
ರಣ್ಯಕ್ಕೆ ಎದುರಾಗಿರುವ ಜೆಬೋಯಿಮ್ ತಗ್ಗಿನೆದುರಾದ ಮೇರೆ
ಯ ಮಾರ್ಗವಾಗಿ ಹೋಯಿತು.
೧೯ ಆದರೆ ಇಸ್ರಯೇಲರು ತಮಗೆ ಕತ್ತಿಯನ್ನಾದರೂ ಭಲ್ಲೆಯ
ನ್ನಾದರೂ ಮಾಡಿ ಕೊಳ್ಳದ ಹಾಗೆ ಇರ ಬೇಕೆಂದು, ಫಿಲಿಷ್ಟ್ಯ
ರು ಹೇಳಿ ಕೊಂಡದರಿಂದ, ಆಗ ಇಸ್ರಯೇಲ್ ದೇಶದಲ್ಲಿ ಒಬ್ಬ ಕ
೨೦ ಮ್ಮಾರನಾದರೂ ಸಿಕ್ಕಲಿಲ್ಲ. ಆದದರಿಂದ ಇಸ್ರಯೇಲೆಲ್ಲಾ ತಮ್ಮ
ತಮ್ಮ ನೇಗಲಿನ ಗುಳ್ಳಗಳನ್ನೂ, ಸಲಿಕೆಗಳನ್ನೂ, ಕೊಡ್ಲಿಗಳ
ನ್ನೂ, ಗುದ್ದಲಿಗಳನ್ನೂ ಪೊಸೆ ಮಾಡುವದಕ್ಕೆ ಫಿಲಿಷ್ಟ್ಯರ ಬಳಿ
೨೧ ಗೆ ಹೋಗ ಬೇಕಾಗಿತ್ತು. ಅದರೆ ಗುದ್ದಲಿಗಳನ್ನೂ, ಗುಂಟಿಗೆಗ
ಳನ್ನೂ, ಗಸಿ ಪೊಳೆಗಳನ್ನೂ, ಕೊಡ್ಲಿಗಳನ್ನೂ, ಅಂಕುಶಗಳ
ನ್ನೂ ಹದ ಮಾಡುವದಕ್ಕೆ ಅವರಲ್ಲಿ ಅದವು ಮಾತ್ರ ಇತ್ತು.
೨೨ ಯುದ್ಧದ ದಿವಸದಲ್ಲಿ ಸಾಲನ ಸಂಗಡಲೂ ಯೊನತಾನನ ಸಂಗ
ಡಲೂ ಇರುವ ಸಮಸ್ತ ಜನರ ಕೈಯಲ್ಲಿ ಕತ್ತಿಯಾದರೂ ಈಟಿ
೨೩ ಯಾದರೂ ಇಲ್ಲದೆ ಇತ್ತು. ಆದರೆ ಸಾಲನಿಗೂ ಅವನ ಕುಮಾ
ರನಾದ ಯೊನತಾನನಿಗೂ ಮಾತ್ರವೇ ಉಂಟಾಗಿತ್ತು.



೨೪ ಆಗ ಫಿಲಿಷ್ಟ್ಯರ ದಂಡು ಮಿಕ್ಮಾಷಿನ ಕಣಿವೆಯ ಮಾರ್ಗಕ್ಕೆ
ಹೊರಟಿತು.

## ೧೪. ಸಂಧಿ.

೧ ಮತ್ತು ಆ ಕಾಲದಲ್ಲಿ ಏನಾಯಿತಂದರೆ, ಸಾಲನ ಮಗನಾದ
ಯೊನತಾನನು ತನ್ನ ಆಯುಧಗಳನ್ನು ಹಿಡಿಯುವವನಾದ ಪ್ರಾ
ಯಸ್ತನಿಗೆ, ನಾವು ನಮಗೆದುರಾಗಿ ಆಚೆಯಲ್ಲಿರುವ ಫಿಲಿಷ್ಟ್ಯರ
ಠಾಣಕ್ಕೆ ಹೋಗುವ ಬಾ, ಅಂದನು. ಆದರೆ ತಂದೆಗೆ ತಿಳಿಸಲಿಲ್ಲ.
೨ ಆದರೆ ಸಾಲನು ಗಿಬ್ಯದ ಕಟ್ಟೆ ಕಡೆ ಮೇರೆಯಾದ ಮಿಗ್ರೋನಿನ
ಲ್ಲಿರುವ ದಾಳಿಂಬರ ಗಿಡದ ಕೆಳಗಿದ್ದನು. ಅವನ ಸಂಗಡ ಹೆಚ್ಚು
೩ ಕಡಿಮೆ ಆರು ನೂರು ಜನರಿದ್ದರು. ಆಗ ಏಲಿಯ ಮಗನಾಗಿರು
ವ ಫಿನೆಹಾನನ ಮಗನಾದ ಈಕಬೋದನ ಸಹೋದರನಾದ
ಅಹೀಟುಬನ ಮಗನಾದ ಅಹೀಯನು ಷಿಲೋವಿನಲ್ಲಿ ಎಫ್ರೋದ
ನ್ನು ಧರಿಸಿ ಕೊಂಡು, ಕರ್ತನ ಯಾಜಕನಾಗಿದ್ದನು. ಆದರೆ ಯೊ
೪ ನತಾನನು ಹೋದದ್ದು ಜನರು ಅರಿಯದೆ ಇದ್ದರು. ಯೊನತಾ
ನನು ಫಿಲಿಷ್ಟ್ಯರ ಠಾಣಕ್ಕೆ ದಾಟಿ ಹೋಗ ಹುಡುಕಿದ ಮಾರ್ಗ
ದ ಮಧ್ಯದಲ್ಲಿ ಈಚೆ ಅಚೆಯಲ್ಲಿ ಬೊಚೇಚೂ ಸೇನೆಯೂ
೫ ಎಂಬ ಕೂಹಾದ ಎರಡು ಬಂಡೆಗಳಿದ್ದವು. ಆ ಬಂಡೆಗಳಲ್ಲಿ ಒಂ
ದು ಉತ್ತರಕ್ಕೆ, ಮಿಕ್ಮಾಷಿಗೆ ಎದುರಾಗಿಯೂ, ಮತ್ತೊಂದು ದ
೬ ಕ್ಷಿಣಕ್ಕೆ ಗಿಬ್ಯಕ್ಕೆ ಎದುರಾಗಿಯೂ ಇತ್ತು. ಆಗ ಯೊನತಾನ
ನು ತನ್ನ ಆಯುಧಗಳನ್ನು ಹಿಡಿಯುವ ಪ್ರಾಯಸ್ತನಿಗೆ, ನಾವು
ಸರಿಸೇದನೆ ಇಲ್ಲದವರ ಠಾಣಕ್ಕೆ ದಾಟಿ ಹೋಗುವ ಬಾ; ಒಂದು
ಪೇಳೆ ಸೇವರು ನಮಗೋಸ್ಕರ ಕಾರ್ಯವನ್ನು ನಡಿಸುವನು.
ಯಾಕಂದರೆ ಅನೇಕ ಜನರಿಂದಲಾದರೂ ಸ್ವಲ್ಪ ಜನರಿಂದಲಾದ
ರೂ ರಕ್ಷಿಸುವದಕ್ಕೆ ಕರ್ತನಿಗೆ ಏನಾದರೂ ಅಟಂಕವಿಲ್ಲ, ಅಂದನು
೭ ಅದಕ್ಕೆ ಅವನ ಆಯುಧಗಳನ್ನು ಹಿಡಿಯುವವನು ಅವನಿಗೆ, ನಿ
ನ್ನ ಹೃದಯದಲ್ಲಿ ಇರುವದನ್ನೆಲ್ಲಾ ಮಾಡು; ನಡಿ; ಇಗೋ,
ನಿನ್ನ ಹೃದಯಕ್ಕೆ ಸರಿಯಾಗಿ ನಾನೂ ನಿನ್ನ ಸಂಗಡ ಇದ್ದೇನೆ,
೮ ಅಂದನು. ಆಗ ಯೊನತಾನನು ಹೇಳಿದ್ದೇನಂದರೆ, ಇಗೋ, ನಾ
ವು ಆ ಮನುಷ್ಯರ ಬಳಿಗೆ ದಾಟಿ ಹೋಗಿ, ಅವರಿಗೆ ಕಾಣಿಸಿ
೯ ಕೊಳ್ಳುವೆವು. ಅವರು, ನಾವು ನಿಮ್ಮ ಬಳಿಗೆ ಬರುವ ಪರ್ಯಂತರ
ನಿಮ್ಮುವೆ ನಿಲ್ಲಿರಿಂದು, ನಮ್ಮ ಸಂಗಡ ಹೇಳಿದರೆ, ನಾವು ಅವರ
೧೦ ಬಳಿಗೆ ಹೋಗದೆ, ನಮ್ಮ ಸ್ಥಳದಲ್ಲಿ ನಿಲ್ಲುವ. ಒಂದು ಪೇಳೆ ಅವ
ರು, ನಮ್ಮ ಬಳಿಗೆ ಬನ್ನಿರಿ ಎಂದು ಹೇಳಿದರೆ, ಹೋಗುವ; ಯಾ
ಕಂದರೆ ಕರ್ತನು ಅವರನ್ನು ನಮ್ಮ ಕೈಗೆ ಒಪ್ಪಿಸಿ ಕೊಟ್ಟನೆಂಬು
ವದಕ್ಕೆ ಇದೇ ನಮಗೆ ಗುರುತಾಗಿರುವದು, ಅಂದನು.
೧೧ ಹಾಗೆಯೇ ಅವರಿಬ್ಬರೂ ತಾವು ಫಿಲಿಷ್ಟ್ಯರ ಠಾಣದವರಿಗೆ
ಕಾಣಿಸಿ ಕೊಂಡರು. ಆಗ ಫಿಲಿಷ್ಟ್ಯರು, ಇಗೋ, ಗುಹೆಗಳಲ್ಲಿ
೧೨ ಬಚ್ಚಿಟ್ಟು ಕೊಂಡಿದ್ದ ಇಬ್ರೀಯರು ಹೊರಟು ಬರುತ್ತಾರೆಂದರು.
ಮತ್ತು ಠಾಣದ ಮನುಷ್ಯರು ಯೊನತಾನನಿಗೂ ಅವನ ಆಯು
ಧ ಹಿಡಿಯುವವನಿಗೂ, ನಮ್ಮ ಬಳಿಗೆ ಬನ್ನಿರಿ; ನಿಮಗೆ ಕಾರ್ಯ
ತಿಳಿಸುತ್ತೇವೆ ಎಂದು, ಪ್ರತ್ಯುತ್ತರ ಕೊಟ್ಟರು. ಆಗ ಯೊನತಾನ
ನು ತನ್ನ ಆಯುಧಗಳನ್ನು ಹಿಡಿಯುವವನಿಗೆ, ನನ್ನ ಹಿಂದೆ ಏರಿ
ಬಾ; ಯಾಕಂದರೆ ಕರ್ತನು ಅವರನ್ನು ಇಸ್ರಯೇಲ್ಯರ ಕೈಗೆ
೧೩ ಒಪ್ಪಿಸಿ ಕೊಟ್ಟನು, ಅಂದನು. ಯೊನತಾನನು ತನ್ನ ಕೈಗಳಿಂದ
ಲೂ ಕಾಲುಗಳಿಂದಲೂ ಏರಿದನು. ಅವನ ಆಯುಧಗಳನ್ನು ಹಿಡಿ
ಯುವವನು ಅವನ ಹಿಂದೆ ಏರಿದನು. ಆಗಲವರು ಯೊನತಾನನ
ಮುಂದೆ ಬಿದ್ದರು. ಮತ್ತು ಅವನ ಆಯುಧಗಳನ್ನು ಹಿಡಿಯುವ
೧೪ ವನು ಅವನ ಹಿಂದೆ ಕೊಲ್ಲುತ್ತಾ ಹೋದನು. ಯೊನತಾನನೂ
ಅವನ ಆಯುಧಗಳನ್ನು ಹಿಡಿಯುವವನೂ ಹೊಡೆದ ಆ ಹೊಡ
ಲ ಸಂಸಾರದಲ್ಲಿ ಅರಕೂರಿಗೆಯ ಭೂಮಿಯಲ್ಲಿ ಬಿದ್ದವರು ಹೆ
ಚ್ಚು ಕಡಿಮೆ ಇಪ್ಪತ್ತು ಜನರಾಗಿದ್ದರು.
೧೫ ಆಗ ದಂಡಿನಲ್ಲಿಯೂ ಹೊಲದಲ್ಲಿಯೂ ಸಕಲ ಜನರಲ್ಲಿಯೂ
ಹೆದರಿಕೆ ಆಯಿತು. ಠಾಣದವರೂ ಕೊಳ್ಳೆಗಾರರೂ ಹೆದರಿ
ಕೊಂಡರು; ಇದಲ್ಲದೆ ಭೂಮಿ ಕಂಪಿಸಿತು. ಅದು ದೇವರಿಂದ
೧೬ ಉಂಟಾದ ಹೆದರಿಕೆಯಾಗಿತ್ತು. ಬೆನ್ಯಮಿನನ ದೇಶದ ಗಿಬ್ಯದ
ಲ್ಲಿದ್ದ ಸಾಲನ ಕೋವರದವರು ನೋಡಿದಾಗ, ಇಗೋ, ಆ ಗುಂ
ಪಿನವರು ಕರಗಿ ಹೋಗುತ್ತಾ, ಒಬ್ಬರನ್ನೊಬ್ಬರು ಸಂಹರಿಸುತ್ತಾ
೧೭ ಇದ್ದರು. ಆಗ ಸಾಲನು ತನ್ನ ಬಳಿಯಲ್ಲಿದ್ದ ಜನರಿಗೆ, ನಮ್ಮ ಬಳಿ
ಯಿಂದ ಹೋದವರು ಯಾರೆಂದು, ಲೆಖ್ಖವನ್ನು ನೋಡಿರಿ, ಅಂದ
ನು. ಅವರು ಲೆಖ್ಖ ನೋಡುವಾಗ, ಇಗೋ, ಯೊನತಾನನೂ ಅ
ವನ ಆಯುಧಗಳನ್ನು ಹಿಡಿಯುವವನೂ ಇಲ್ಲದೆ ಇದ್ದರು.
೧೮ ಆಗ ಸಾಲನು ಅಹೀಯನಿಗೆ, ನೀನು ದೇವರ ಚೆಟ್ಟಿಗೆಯನ್ನು ತ
ಕ್ಕೊಂಡು ಬಾ, ಅಂದನು. ಯಾಕಂದರೆ ದೇವರ ಚೆಟ್ಟಿಗೆಯು
ಆ ಕಾಲದಲ್ಲಿ ಇಸ್ರಯೇಲ್ ಮಕ್ಕಳ ಬಳಿಯಲ್ಲಿತ್ತು. ಇನ್ನು ಸಾ
ಲನು ಯಾಜಕನ ಸಂಗಡ ಮಾತಾಡುತ್ತಿರುವಾಗ ಏನಾಯಿತಂದ
ರೆ, ಫಿಲಿಷ್ಟ್ಯರ ದಂಡಿನಲ್ಲಿ ಉಂಟಾದ ಕಲಹವು ಅಧಿಕವಾಗುತ್ತಾ
೧೯ ಇತ್ತು; ಆಗ ಸಾಲನು ಯಾಜಕನಿಗೆ, ಕೈ ಬಿಡು, ಅಂದನು ಆಗ
ಸಾಲನೂ ಅವನ ಸಂಗಡ ಇದ್ದ ಜನಕೆಲ್ಲರೂ ಕೂಡಿ ಕೊಂಡು,
ಯುದ್ಧಕ್ಕೆ ಬಂದಾಗ, ಇಗೋ, ಫಿಲಿಷ್ಟ್ಯರಲ್ಲಿ ಒಬ್ಬರ ಕತ್ತಿಯು
ಒಬ್ಬರಿಗೆ ವಿರೋಧವಾಗಿತ್ತು; ಮಹಾ ದೊಡ್ಡ ನಾಶವಾಯಿತು.
೨೦ ಇದಲ್ಲದೆ ಪೂರ್ವದಲ್ಲಿ ಫಿಲಿಷ್ಟ್ಯರ ಬಳಿಯಲ್ಲಿದ್ದು, ಅವರ ಕೂಡ
ದಂಡಿನ ಸಂಗಡ ಸುತ್ತಲಿರುವ ದೇಶದಿಂದ ಬಂದ ಇಬ್ರೀಯರು
ಸಾಲನ ಸಂಗಡಲೂ ಯೊನತಾನನ ಸಂಗಡಲೂ ಇರುವ ಇಸ್ರ
೨೧ ಯೇಲರ ಸಂಗಡ ಕೂಡಿ ಕೊಂಡರು. ಹಾಗೆಯೇ ಎಫ್ರಯಿಮ್
ಬೆಟ್ಟದಲ್ಲಿ ಬಚ್ಚಿಟ್ಟು ಕೊಂಡಿದ್ದ ಸಮಸ್ತ ಇಸ್ರಯೇಲ್ ಮನು
ಷ್ಯರು, ಫಿಲಿಷ್ಟ್ಯರು ಓಡಿ ಹೋದರೆಂದು ಕೇಳಿದಾಗ, ಅವರು
೨೨ ಸಹ ಯುದ್ಧದಲ್ಲಿ ಅವರನ್ನು ಬೆನ್ನಿ ಹತ್ತಿದರು. ಕರ್ತ
ನು ಆ ದಿನದಲ್ಲಿ ಇಸ್ರಯೇಲನ್ನು ರಕ್ಷಿಸಿದನು. ಇದಲ್ಲದೆ ಆ ಯು
ದ್ಧವು ಬೆತಾವನ ವರಗೂ ನಡಿಯಿತು.
೨೩ ಆದರೆ ಇಸ್ರಯೇಲ್ಯರು ಆ ದಿವಸದಲ್ಲಿ ಬಹಳ ಕಷ್ಟ ಪಟ್ಟರು.
ಯಾಕಂದರೆ ಸಾಲನು, ನಾನು ನನ್ನ ಶತ್ರುಗಳಿಗೆ ಮುಯ್ಯಿ
ಮಾಡುವ ಹಾಗೆ, ಸಾಯಂಕಾಲದ ಪರ್ಯಂತರ ಯಾವನು ಆ
ಹಾರ ತಿನ್ನುತ್ತಾನೋ, ಅವನು ಶಪಿಸಲ್ಪಡಲಿ ಎಂದು, ಆಣೆ ಇಟ್ಟದ
೨೪ ರಿಂದ, ಜನಕೆಲ್ಲರು ಆಹಾರ ರುಚಿ ನೋಡದೆ ಇದ್ದರು. ದೇಶದ ಜ
ನಕೆಲ್ಲರು ಅಡವಿಯಲ್ಲಿ ಹೋಗುತ್ತಿರುವಾಗ, ಅಲ್ಲಿ ನೆಲದ ಮೇಲೆ
೨೫ ಜೇನುತೊಟ್ಟಿ ಇತ್ತು. ಜನರು ಆ ಅಡವಿಯಲ್ಲಿ ಹೋಗುವಾಗ,
ಇಗೋ, ಜೇನು ತುಪ್ಪ ಸುರಿಯುತ್ತಿತ್ತು; ಆದರೆ ಜನರು ಆ ಆಣೆ
ಯ ನಿಮಿತ್ತ ಭಯ ಪಟ್ಟು ಇದ್ದದರಿಂದ, ಒಬ್ಬನಾದರೂ ತನ್ನ
೨೬ ಬಾಯಿಗೆ ತನ್ನ ಕೈ ಹಾಕಿ ಕೊಳ್ಳಲಿಲ್ಲ. ಆದರೆ ಯೊನತಾನ

ನು ತನ್ನ ತಂದೆಯು ಜನರಿಗೆ ಆಣೆ ಇಟ್ಟಿದ್ದನ್ನು ಕೇಳದೆ ಇದ್ದ
ಕಾರಣ, ತನ್ನ ಕೈಯಲ್ಲಿದ್ದ ಕೋಲನ್ನು ಚಾಚಿ, ಅದನ್ನು ಜೇ
ನು ತೊಟ್ಟಿಯಲ್ಲಿ ಅದ್ದಿ, ತನ್ನ ಬಾಯಿಗೆ ತನ್ನ ಕೈ ಹಾಕಿ
ಕೊಂಡನು. ಆದದರಿಂದ ಅವನ ಕಣ್ಣುಗಳು ಕಳೆಯನ್ನು ಹೊಂ
೨೮ ದಿದವು. ಆಗ ಜನರಲ್ಲಿ ಒಬ್ಬನು ಅವನಿಗೆ, ಈ ಹೊತ್ತು ಆಹಾರ
ತಿನ್ನುವವನು ಶಪಿಸಲ್ಪಡಲಿ ಎಂದು, ನಿನ್ನ ತಂದೆಯು ಜನರಿಗೆ ಆ
ಣೆ ಇಟ್ಟೇ ಇಟ್ಟನು; ಅದಕ್ಕೋಸ್ಕರ ಜನರು ದಣಿದು ಹೋಗಿ
೨೯ ದ್ದಾರೆ, ಅಂದನು. ಅದಕ್ಕೆ ಯೊನತಾನನು ಹೇಳಿದ್ದೇನಂದರೆ, ನ
ನ್ನ ತಂದೆಯು ದೇಶವನ್ನು ಶ್ರಮೆ ಪಡಿಸಿದನು. ಇಗೋ, ನಾನು
ಈ ಜೇನು ತುಪ್ಪದಲ್ಲಿ ಸ್ವಲ್ಪ ರುಚಿ ನೋಡಿದ್ದರಿಂದ, ನನ್ನ ಕಣ್ಣು
೩೦ ಗಳು ಕಳೆಯನ್ನು ಹೊಂದಿದವೆಂದು, ನೋಡು. ಈ ದಿನದಲ್ಲಿ
ಜನರು ತಮಗೆ ದೊರಕಿದ ತಮ್ಮ ಶತ್ರುಗಳ ಕೊಳ್ಳೆಯಲ್ಲಿ
ಯಾವದನ್ನಾದರೂ ತಿಂದೇ ತಿಂದು ಇದ್ದರೆ, ಎದ್ದು ಚನ್ನಾಗಿ
ತ್ತು; ಮತ್ತು ಫಿಲಿಷ್ಟ್ಯರನ್ನು ಸಂಹರಿಸುವದು ಈಗ ಎದ್ದು ದೊ
ಡ್ಡದಾಗಿರುವದು, ಅಂದನು.

೩೧ ಜನರು ಆ ದಿನದಲ್ಲಿ ಮಿಕ್ಮಾಷಿನಿಂದ ಅಯ್ಯಲೋನಿನ ವರ
ಗೂ ಫಿಲಿಷ್ಟ್ಯರನ್ನು ಮುರಿಯ ಬಡಿದದರಿಂದ ಅವರು ಬಹಳವಾ
೩೨ ಗಿ ದಣಿದು ಹೋದರು. ಆದದರಿಂದ ಅವರು ಕೊಳ್ಳೆಗೆ ಹೊಗ
ಬಿದ್ದು, ಕುರಿಗಳನ್ನೂ ದನಗಳನ್ನೂ ಕರುಗಳನ್ನೂ ಹಿಡಿದು,
ನೆಲದ ಮೇಲೆ ಕೊಯಿದು, ಮಾಂಸವನ್ನು ರಕ್ತದ ಸಂಗಡ ತಿಂದ
೩೩ ರು. ಆಗಲವರು ಸೌಲನಿಗೆ, ಇಗೋ, ಜನರು ಮಾಂಸದ ಕೂಡ
ರಕ್ತವನ್ನು ತಿನ್ನುವದರಿಂದ, ಕರ್ತನಿಗೆ ವಿರೋಧವಾಗಿ ಪಾಪ
ಮಾಡುತ್ತಾರೆಂದು, ತಿಳಿಸಿದರು. ಅದಕ್ಕವನು, ನೀವು ಕ್ರೋಹ
ಮಾಡಿದಿರಿ; ಈಗ ಒಂದು ದೊಡ್ಡ ಕಲ್ಲನ್ನು ನನ್ನ ಬಳಿಗೆ ಹೊರ
೩೪ ಳಿಸಿ ಬಿಡಿರಿ, ಅಂದನು. ಮತ್ತು ಸೌಲನು ಅವರಿಗೆ, ನೀವು ಜನರ
ಲ್ಲಿ ಚದರಿ ಹೋಗಿ, ರಕ್ತ ಸಹಿತವಾಗಿ ತಿಂದು, ಕರ್ತನಿಗೆ ವಿರೋ
ಧವಾಗಿ ಪಾಪ ಮಾಡದೆ, ಅವನವನು ತನ್ನ ಎತ್ತನ್ನೂ ತನ್ನ
ಕುರಿಯನ್ನೂ ನನ್ನ ಬಳಿಗೆ ತಂದು, ಇಲ್ಲಿ ಕೊಯಿದು, ತಿನ್ನಿರಿ
ಎಂಬದಾಗಿ ಹೇಳಿರಿ, ಅಂದನು. ಆದದರಿಂದ ಜನರೆಲ್ಲರು ಅವನವ
ನು ತನ್ನ ಎತ್ತನ್ನು ಆ ರಾತ್ರಿಯಲ್ಲಿ ತನ್ನ ಸಂಗಡ ತಕ್ಕೊಂಡು
೩೫ ಬಂದು, ಅಲ್ಲಿ ಕೊಯಿದರು. ಮತ್ತು ಸೌಲನು ಕರ್ತನಿಗೆ ಒಂದು
ಬಲಿಪೀಠವನ್ನು ಕಟ್ಟಿಸಿದನು. ಅದೇ ಕರ್ತನಿಗೆ ಅವನು ಕಟ್ಟಿಸಿದ
ಮೊದಲನೇ ಬಲಿಪೀಠವು.

೩೬ ಮತ್ತು ಸೌಲನು ಜನರಿಗೆ, ನಾವು ಈ ರಾತ್ರಿಯಲ್ಲಿ ಫಿಲಿಷ್ಟ್ಯರ
ಹಿಂದೆ ಹತ್ತಿ ಹೋಗಿ, ಉದಯ ಕಾಲದ ಪರ್ಯಂತರ ಅವರ
ನ್ನು ಕೊಳ್ಳೆಗೆ ಇಟ್ಟು, ಅವರಲ್ಲಿ ಒಬ್ಬನನ್ನಾದರೂ ಉಳಿಯ ಗೊ
ಡದೆ ಇರುವ, ಅಂದನು. ಅದಕ್ಕೆ ಜನರು ನಿನ್ನ ಕಣ್ಣುಗಳಿಗೆ ಬ
ಳ್ಳೇದಾಗಿ ತೋರುವದನ್ನೆಲ್ಲಾ ಮಾಡು, ಅಂದರು. ಆಗ ಯಾ
೩೭ ಜಕನು ದೇವರ ಸನ್ನಿಧಿಗೆ ಹೋಗುವ ಅಂದನು. ಮತ್ತು ಸೌಲ
ನು, ನಾನು ಫಿಲಿಷ್ಟ್ಯರನ್ನು ಹಿಂಬಾಲಿಸಿ, ಹೋಗಲೋ! ನೀನು
ಅವರನ್ನು ಇಸ್ರಯೇಲ್ಯರ ಕೈಗೆ ಒಪ್ಪಿಸಿ ಕೊಡುವಿಯೋ? ಎಂದು
ದೇವರನ್ನು ಕೇಳಿದನು. ಆದರೆ ಆತನು ಅವನಿಗೆ ಆ ದಿವಸದಲ್ಲಿ
ಪ್ರತ್ಯುತ್ತರ ಕೊಡದೆ ಹೋದನು.

೩೮ ಆಗ ಸೌಲನು ಹೇಳಿದ್ದೇನಂದರೆ, ಜನರ ಮುಖ್ಯಸ್ಥರೇ, ಇಲ್ಲಿ
ಬನ್ನಿರಿ; ಈ ಹೊತ್ತು ಈ ಪಾಪ ಯಾವದರಿಂದ ಉಂಟಾಯಿ
ತೆಂದು, ತಿಳಿದು ಕೊಂಡು, ನೋಡಿರಿ. ಯಾಕಂದರೆ ನನ್ನ ಕುಮಾ
ರನಾದ ಯೊನತಾನನಿಂದಾದರೂ ಉಂಟಾಗಿದ್ದರೆ, ಅವನು ಸಾ
ಯಲೇ ಸಾಯುವನೆಂದು, ಇಸ್ರಯೇಲನ್ನು ರಕ್ಷಿಸುವ ಕರ್ತನ
ಮೇಲೆ ಆಣೆ ಇಟ್ಟು ಹೇಳುತ್ತೇನೆ, ಅಂದನು. ಆದರೆ ಸಕಲ ಜನ
೪೦ ರಲ್ಲಿ ಒಬ್ಬನಾದರೂ ಅವನಿಗೆ ಪ್ರತ್ಯುತ್ತರ ಕೊಡಲಿಲ್ಲ. ಆಗ
ಸೌಲನು ಸಮಸ್ತ ಇಸ್ರಯೇಲಿಗೆ, ನೀವು ಒಂದು ಕಡೆಯಲ್ಲಿ ಇ
ರಿ; ನಾನೂ ನನ್ನ ಮಗನಾದ ಯೊನತಾನನೂ ಒಂದು ಕಡೆಯ
ಲ್ಲಿ ಇರುತ್ತೇವೆ, ಅಂದನು. ಜನರು ಸೌಲನಿಗೆ, ನಿನ್ನ ಕಣ್ಣುಗಳಿ
೪೧ ಗೆ ಒಳ್ಳೇದಾಗಿ ತೋರುವದನ್ನು ಮಾಡು, ಅಂದರು. ಸೌಲನು
ಇಸ್ರಯೇಲನ ದೇವರಾದ ಕರ್ತನಿಗೆ, ನೀನು ಪೂರ್ಣ ನ್ಯಾಯ
ವನ್ನು ದಯೆ ಚಾಲಿಸು, ಅಂದನು. ಆಗ ಸೌಲನೂ ಯೊನತಾ
ನನೂ ತಕ್ಕೊಳ್ಳಲ್ಪಟ್ಟರು; ಜನರು ಹೊರಟು ಬಂದರು. ಮತ್ತು
೪೨ ಸೌಲನು ಅವರಿಗೆ, ನನ್ನ ಮೇಲೆಯೂ ನನ್ನ ಮಗನಾದ ಯೊನ
ತಾನನ ಮೇಲೆಯೂ ಚೀಟು ಹಾಕಿರಿ, ಅಂದಾಗ; ಯೊನತಾನನು
೪೩ ತಕ್ಕೊಳ್ಳಲ್ಪಟ್ಟನು. ಆಗ ಸೌಲನು ಯೊನತಾನನಿಗೆ, ನೀನು
ಮಾಡಿದ್ದನ್ನು ನನಗೆ ತಿಳಿಸು, ಅಂದನು. ಅದಕ್ಕೆ ಯೊನತಾನ
ನು, ನನ್ನ ಕೈಯಲ್ಲಿರುವ ಕೋಲಿನ ಕೊನೆಯಿಂದ ನಾನು ಸ್ವಲ್ಪ
ಜೇನು ತುಪ್ಪವನ್ನು ತಕ್ಕೊಂಡು, ರುಚಿ ನೋಡಿದೆನು; ಇಗೋ,
೪೪ ನಾನು ಸಾಯ ಬೇಕು, ಅಂದನು. ಅದಕ್ಕೆ ಸೌಲನು, ಯೊನ
ತಾನನೇ, ನೀನು ಸಾಯಲೇ ಸಾಯ ಬೇಕು; ಇಲ್ಲದಿದ್ದರೆ, ದೇವ
ರು ನನಗೆ ಹೆಚ್ಚಾಗಿ ಮಾಡಲಿ, ಅಂದನು. ಆದರೆ ಜನರು ಸೌಲ
೪೫ ನಿಗೆ, ಇಸ್ರಯೇಲಲ್ಲಿ ಈ ದೊಡ್ಡ ರಕ್ಷಣೆಯನ್ನು ಉಂಟು ಮಾಡಿ
ದ ಯೊನತಾನನು ಸಾಯ ಬಹುದೋ? ಆಗದು; ಅವನು ಇಂದು
ಕರ್ತನಿಗೆ ಸಹಾಯಕನಾಗಿದ್ದು, ಕಾರ್ಯವನ್ನು ನಡಿಸಿದ್ದರಿಂದ,
ಕರ್ತನ ಆಣೆ ಅವನ ತಲೆಯಲ್ಲಿರುವ ಒಂದು ಕೂದಲಾದರೂ ನೆ
ಲದ ಮೇಲೆ ಬೀಳುವದಿಲ್ಲ, ಅಂದರು. ಮತ್ತು ಜನರು ಯೊನತಾನ
೪೬ ನನ್ನು ಸಾಯದ ಹಾಗೆ ಬಿಡಿಸಿ ಕೊಂಡರು. ಆಗ ಸೌಲನು ಫಿಲಿ
ಷ್ಟ್ಯರನ್ನು ಹಿಂಬಾಲಿಸುವದನ್ನು ಬಿಟ್ಟು ಬಿಟ್ಟನು. ಫಿಲಿಷ್ಟ್ಯರು
ತಮ್ಮ ಸ್ಥಳಕ್ಕೆ ಹೋದರು.

೪೭ ಸೌಲನು ಇಸ್ರಯೇಲಿನ ಮೇಲೆ ಕೊರೆತನ ತಕ್ಕೊಂಡು, ಸುತ್ತ
ಲಿರುವ ತನ್ನ ಸಮಸ್ತ ಶತ್ರುಗಳಾದ ಮೋವಾಬ್ಯರ ಮೇಲೆಯೂ,
ಅಮ್ಮೋನನ ಮಕ್ಕಳ ಮೇಲೆಯೂ, ಎದೋಮ್ಯರ ಮೇಲೆಯೂ,
ಜೋಬದ ಅರಸುಗಳ ಮೇಲೆಯೂ, ಫಿಲಿಷ್ಟ್ಯರ ಮೇಲೆಯೂ
ಯುದ್ಧ ಮಾಡಿದನು. ಯಾರ ಮೇಲೆ ತಿರುಗಿದನೋ, ಅವರನ್ನು
೪೮ ಗಾರಿಸಿ ಬಿಟ್ಟನು. ಮತ್ತು ಅವನು ಸೈನ್ಯವನ್ನು ಕೂಡಿಸಿ ಕೊಂ
ಡು, ಅಮಲೇಕ್ಯರನ್ನು ಸಂಹರಿಸಿದನು; ಇಸ್ರಯೇಲನ್ನು ಕೊಳ್ಳೆ
ಇಡುವ ಸಮಸ್ತರ ಕೈಗೂ ತಪ್ಪಿಸಿ ಬಿಟ್ಟನು.

೪೯ ಆದರೆ ಸೌಲನಿಗೆ ಯೊನತಾನನೂ ಇಷ್ವಿಯೂ ಮಲ್ಕಿಶೂ
ವನೂ ಎಂಬ ಮೂವರು ಕುಮಾರರೂ, ಹಿರಿಯಳಾದ ಮೆರಾ
ಬಳು ಚಿಕ್ಕವಳಾದ ಮೀಕಳು ಎಂಬ ಇಬ್ಬರು ಕುಮಾರ್ತೆಗಳೂ
ಇದ್ದರು. ಮತ್ತು ಅಹಿಮಾಚನ ಕುಮಾರ್ತೆಯಾದ ಅಹಿನೊ
೫೦ ವಾಮಳು ಸೌಲನ ಹೆಂಡತಿಯಾಗಿದ್ದಳು. ಸೌಲನ ಚಿಕ್ಕಪ್ಪನಾದ
ನೇರನ ಮಗನಾದ ಅಬ್ನೇರನೆಂಬವನು ಅವನ ಸೈನ್ಯಾಧಿಪತಿ
೫೧ ಯಾಗಿದ್ದನು. ಕೀಷನೆಂಬವನು ಸೌಲನ ತಂದೆಯು. ಅಬ್ನೇರ
ನ ತಂದೆಯಾದ ನೇರನು ಅಬಿಯೇಲನ ಮಗನು. ಇದಲ್ಲದೆ ಸಾ



೫೨ ಲನು ಇದ್ದ ದಿವಸಗಳೆಲ್ಲಾ ಫಿಲಿಷ್ಟ್ಯರ ಮೇಲೆ ಬಲವಾದ ಯುದ್ಧ
ವು ನಡಿಯಿತು. ಸೌಲನು ಯಾವ ಪರಾಕ್ರಮಶಾಲಿಯನ್ನಾದ
ರೂ ಧೈರ್ಯಶಾಲಿಯನ್ನಾದರೂ ನೋಡಿದರೆ, ಅವನನ್ನು ತನ್ನ
ಬಳಿಯಲ್ಲಿ ಕೇರಿಸಿ ಕೊಳ್ಳುತ್ತಾ ಇದ್ದನು.

## ೧೫. ಸಂಧಿ.

೧ ಮತ್ತು ಸಮುವೇಲನು ಸೌಲನಿಗೆ ಹೇಳಿದ್ದೇನಂದರೆ, ಕರ್ತನು
ತನ್ನ ಜನರಾದ ಇಸ್ರಯೇಲ್ಯರ ಮೇಲೆ ನಿನ್ನನ್ನು ಅರಸನಾಗಿರ
ಅಭಿಷೇಕಿಸ ನನ್ನನ್ನು ಕಳುಹಿಸಿದನು. ಈಗ ನೀನು ಕರ್ತನ
೨ ಮಾತುಗಳ ಶಬ್ದವನ್ನು ಕೇಳು. ಸೈನ್ಯಗಳ ಕರ್ತನು ಹೇಳುವ
ದೇನಂದರೆ—ಇಸ್ರಯೇಲ್ಯರು ಐಗುಪ್ತದಿಂದ ಏರಿ ಬರುವಾಗ, ಅ
ಮಲೇಕ್ಯರು ಅವರ ಮಾರ್ಗಕ್ಕೆ ಅಡ್ಡಗಟ್ಟಿದ್ದು, ನಾನು ನೆನಸಿ
೩ ಕೊಂಡಿದ್ದೇನೆ. ಈಗ ನೀನು ಹೋಗಿ, ಅಮಲೇಕ್ಯರನ್ನು ಹೊಡೆ
ದು, ಅವರಿಗೆ ಉಂಟಾದದ್ದನ್ನೆಲ್ಲಾ ನಿರ್ಮೂಲ ಮಾಡಿ ಬಿಟ್ಟು, ಅ
ವರನ್ನು ಕನಿಕರಿಸದೆ ಪುರುಷರನ್ನೂ, ಸ್ತ್ರೀಯರನ್ನೂ, ಚಿಕ್ಕವ
ರನ್ನೂ, ಹೊಲೆ ಕೂಸುಗಳನ್ನೂ, ದನಗಳನ್ನೂ, ಕುರಿಗಳನ್ನೂ,
ಒಂಟೆಗಳನ್ನೂ, ಕತ್ತೆಗಳನ್ನೂ ಕೊಂದು ಹಾಕು.
೪ ಆಗ ಸೌಲನು ಟೆಲಾಯಿಮಿನಲ್ಲಿ ಜನರನ್ನು ಕೂಡಿಸಿ, ಲೆಖ್ಖ
ನೋಡಿದನು. ಇಸ್ರಯೇಲ್ಯರ ಕಾಲ್ಬಲವು ಎರಡು ಲಕ್ಷ ಜನವೂ,
೫ ಯೆಹೂದನ ಮನುಷ್ಯರು ಹತ್ತು ಸಾವಿರ ಜನವೂ, ಇತ್ತು. ಮ
ತ್ತು ಸೌಲನು ಅಮಲೇಕ್ಯರ ಪಟ್ಟಣ ಪರ್ಯಂತರ ಬಂದು, ತಗ್ಗಿನ
೬ ಲ್ಲಿ ಜಗಳ ಮಾಡಿದನು. ಕೇನ್ಯರಿಗೆ ಅವನು ಹೇಳಿದ್ದೇನಂದರೆ—
ಇಸ್ರಯೇಲ್ಯರು ಐಗುಪ್ತದಿಂದ ಬಂದಾಗ, ನೀವು ಅವರೆಲ್ಲರಿಗೆ
ಕೃಪೆ ತೋರಿಸಿದ್ದರಿಂದ, ನಾನು ನಿಮ್ಮನ್ನು ಅಮಲೇಕ್ಯರ ಸಂಗ
ಡ ನಾಶನ ಮಾಡದ ಹಾಗೆ, ನೀವು ಅವರ ಮಧ್ಯದಲ್ಲಿಂದ ಹೊರ
ಟು, ತೊಲಗಿ ಹೋಗಿರಿ. ಹಾಗೆಯೇ ಕೇನ್ಯರು ಅಮಲೇಕ್ಯರ
೭ ಮಧ್ಯದಿಂದ ತೊಲಗಿ ಹೋದರು. ಆಗ ಸೌಲನು ಹವೀಲದಿಂದ ಐ
ಗುಪ್ತಕ್ಕೆ ಎದುರಾಗಿರುವ ಶೂರಿಗೆ ಹೋಗುವ ಮೇರೆಯ ವರಿಗೂ
೮ ಇದ್ದ ಅಮಲೇಕ್ಯರನ್ನು ಹೊಡೆದು, ಅಮಲೇಕ್ಯರ ಅರಸನಾದ ಅ
ಗಾಗನನ್ನು ಜೀವಿತನಾಗಿ ಹಿಡಿದನು. ಆದರೆ ಸಮಸ್ತ ಜನರನ್ನು
೯ ಕತ್ತಿಯ ಬಾಯಿಯಿಂದ ನಿರ್ಮೂಲ ಮಾಡಿದನು. ಸೌಲನೂ
ಜನರೂ ಅಗಾಗನನ್ನೂ ದನ ಕುರಿಗಳಲ್ಲಿ ಮೇಲ್ತರವಾದವುಗಳ
ನ್ನೂ ಉತ್ತಮವಾದ ಸಮಸ್ತವನ್ನೂ ಕನಿಕರಿಸಿದರು. ಅವುಗಳ
ನ್ನು ನಿರ್ಮೂಲ ಮಾಡಲೊಲ್ಲದೆ ಇದ್ದನು. ಆದರೆ ತಿರಸ್ಕರಿಸಲ್ಪ
ಡ ತಕ್ಕ ನೀಚವಾದವುಗಳನ್ನೆಲ್ಲಾ ನಿರ್ಮೂಲ ಮಾಡಿದರು.
೧೦ ಆಗ ಕರ್ತನ ವಾಕ್ಯವು ಸಮುವೇಲನಿಗೆ ಉಂಟಾಯಿತು—ಏನಂ
ದರೆ, ನಾನು ಸೌಲನನ್ನು ಅರಸನಾಗ ಮಾಡಿದ್ದರಿಂದ ಪಶ್ಚಾತ್ತಾಪ
೧೧ ಪಡುತ್ತೇನೆ. ಯಾಕಂದರೆ ಅವನು ನನ್ನನ್ನು ಹಿಂಬಾಲಿಸುವದ
ನ್ನು ಬಿಟ್ಟು ಹೋದನು; ನನ್ನ ಮಾತುಗಳನ್ನು ಈಡೇರಿಸಲಿಲ್ಲ,
ಅಂದನು. ಅದಕ್ಕೆ ಸಮುವೇಲನು ದುಃಖ ಪಟ್ಟವನಾಗಿ, ರಾತ್ರಿಯೆ
೧೨ ಲ್ಲಾ ಕರ್ತನಿಗೆ ಕೂಗಿದನು. ಆದರೆ ಸಮುವೇಲನು ಉದಯ ಕಾ
ಲದಲ್ಲೆದ್ದು, ಸೌಲನನ್ನು ಎದುರ್ಗೊಳ್ಳ ಹೋದನು. ಆಗ ಸೌಲನು
ಕರ್ಮೆಲಿಗೆ ಬಂದು, ಇಗೋ, ತನಗೆ ಒಂದು ಹಸ್ತವನ್ನು ನಿಲ್ಲಿಸಿ
ದನೆಂದೂ, ಅಲ್ಲಿಂದ ಸುತ್ತಿ ಕೊಂಡು, ಗಾಟಿ ಗಿಲ್ಗಾಲಿಗೆ ಹೋದ
೧೩ ನೆಂದೂ ಸಮುವೇಲನಿಗೆ ತಿಳಿಸಲ್ಪಟ್ಟಿತು. ಸಮುವೇಲನು ಸೌಲನ
ಬಳಿಗೆ ಬಂದಾಗ, ಸೌಲನು ಅವನಿಗೆ, ನಿನಗೆ ಕರ್ತನ ಆಶೀರ್ವಾದ
ವಾಗಲಿ; ನಾನು ಕರ್ತನ ಮಾತನ್ನು ಈಡೇರಿಸಿದೆನು, ಅಂದನು.
೧೪ ಆಗ ಸಮುವೇಲನು ಅವನಿಗೆ, ನನ್ನ ಕಿವಿಗಳಲ್ಲಿ ಬೀಳುವ ಆ ಕುರಿ
ಗಳ ಶಬ್ದವೇನು? ನಾನು ಕೇಳುವ ದನಗಳ ಶಬ್ದವೇನು? ಅಂದನು.
೧೫ ಅದಕ್ಕೆ ಸೌಲನು, ಜನರು ಅಮಲೇಕ್ಯರ ಬಳಿಯಿಂದ ತಕ್ಕೊಂ
ಡು ಬಂದವುಗಳು; ಯಾಕಂದರೆ ನಿನ್ನ ದೇವರಾದ ಕರ್ತನಿಗೆ ಬ
ಲಿಯನ್ನು ಅರ್ಪಿಸುವದಕ್ಕೋಸ್ಕರ ಮೇಲ್ತರವಾದ ದನ ಕುರಿಗಳ
ನ್ನು ಉಳಿಸಿಟ್ಟು, ಮಿಕ್ಕಾದವುಗಳನ್ನೆಲ್ಲಾ ನಿರ್ಮೂಲ ಮಾಡಿ ಬಿ
೧೬ ಟ್ಟರು, ಅಂದನು. ಆಗ ಸಮುವೇಲನು ಸೌಲನಿಗೆ, ಬಿಡು; ಕರ್ತ
ನು ಈ ರಾತ್ರಿಯಲ್ಲಿ ನನಗೆ ಹೇಳಿದನ್ನು ನಿನಗೆ ತಿಳಿಸುವೆನು, ಅಂ
ದನು. ಅವನು, ಹೇಳು, ಅಂದನು.
೧೭ ಆಗ ಸಮುವೇಲನು ಹೇಳಿದ್ದೇನಂದರೆ, ನೀನು ನಿನ್ನ ಕಣ್ಣುಗ
ಳಿಗೆ ಚಿಕ್ಕವನಾಗಿರುವಾಗಲೇ, ಇಸ್ರಯೇಲ್ ಕುಲಗಳ ಮೇಲೆ ಯ
ಜಮಾನನಾಗ ಮಾಡಲ್ಪಟ್ಟಿಯಲ್ಲವೋ? ಮತ್ತು ಕರ್ತನು ನಿನ್ನ
ನ್ನು ಇಸ್ರಯೇಲ್ಯರ ಮೇಲೆ ಅರಸನಾಗ ಅಭಿಷೇಕಿಸಿದನಲ್ಲವೋ?
೧೮ ಮತ್ತು ಕರ್ತನು ನಿನ್ನನ್ನು, ಪಾಪಿಷ್ಠರಾದ ಅಮಲೇಕ್ಯರನ್ನು ನಿ
ರ್ಮೂಲ ಮಾಡಿ, ಅವರು ತೀರಿ ಹೋಗುವ ಮಟ್ಟಿಗೂ, ಅವರ
೧೯ ಸಂಗಡ ಯುದ್ಧ ಮಾಡ ಬೇಕೆಂದು, ಕಳುಹಿಸಿದನು. ಹೀಗಿರುವಾ
ಗ, ನೀನು ಯಾಕೆ ಕರ್ತನ 'ಮಾತನ್ನು ಕೇಳದೆ, ಕೊಳ್ಳೆಯ
ಮೇಲೆ ಹೊಗ ಬಿದ್ದು, ಕರ್ತನ ದೃಷ್ಟಿಗೆ ಕೆಟ್ಟದ್ದನ್ನು ಮಾಡಿದಿ?
೨೦ ಅಂದನು. ಆಗ ಸೌಲನು ಸಮುವೇಲನಿಗೆ ಹೇಳಿದ್ದೇನಂದರೆ, ನಾ
ನು ನಿಶ್ಚಯವಾಗಿ ಕರ್ತನ ಮಾತನ್ನು ಕೇಳಿ, ಕರ್ತನು ನನ್ನನ್ನು
ಕಳುಹಿಸಿದ ಮಾರ್ಗವಾಗಿ ಹೋಗಿ, ಅಮಲೇಕ್ಯರ ಅರಸನಾದ
ಅಗಾಗನನ್ನು ತಕ್ಕೊಂಡು ಬಂದು, ಅಮಲೇಕ್ಯರನ್ನು ನಿರ್ಮೂ
೨೧ ಲ ಮಾಡಿದೆನು. ಆದರೆ ಜನರು ನಿನ್ನ ದೇವರಾದ ಕರ್ತನಿಗೆ ಗಿ
ಲ್ಗಾಲಿನಲ್ಲಿ ಬಲಿ ಕೊಡುವದಕ್ಕಾಗಿ ಕೊಳ್ಳೆಯಲ್ಲಿ ನಿರ್ಮೂಲ
ಮಾಡ ತಕ್ಕ ಕುರಿ ದನಗಳಲ್ಲಿ ಮೇಲ್ತರವಾದವುಗಳನ್ನು ಹಿಡು
ಕೊಂಡು ಬಂದರು, ಅಂದನು.
೨೨ ಅದಕ್ಕೆ ಸಮುವೇಲನು ಹೇಳಿದ್ದೇನಂದರೆ, ಕರ್ತನ ಮಾತು
ಕೇಳದೆಕೆ, ಕರ್ತನಿಗೆ ಆಗುವ ಸಂತೋಷ ಹೋಮಗಳಲ್ಲಿಯೂ ಬ
ಲಿಗಳಲ್ಲಿಯೂ ಆಗುವದೋ? ಇಗೋ, ಬಲಿಗಿಂತ ಕೇಳುವ
ದೂ, ಟಗರುಗಳ ಕೊಬ್ಬಿಗಿಂತ ಆಲೈಸುವದೂ ಉತ್ತಮವಾಗಿರು
೨೩ ವದು. ಯಾಕಂದರೆ ತಿರುಗ ಬೀಳ್ವಿಕೆಯು ಕಣಿ ಹೇಳುವ ಪಾ
ಪವಾಗಿದೆ; ಒರಟುತನವು ಪಾತಕಕ್ಕೂ, ವಿಗ್ರಹಾರಾಧನೆಗೂ ಸರಿ
ಯಾಗಿದೆ. ನೀನು ಕರ್ತನ ವಾಕ್ಯವನ್ನು ಅಲಕ್ಷ್ಯ ಮಾಡಿದ್ದರಿಂದ,
ಅವನು ನಿನ್ನನ್ನು, ಅರಸನಾಗಿರದ ಹಾಗೆ, ಅಲಕ್ಷ್ಯ ಮಾಡಿ ಬಿಟ್ಟ
೨೪ ನು. ಆಗ ಸೌಲನು ಸಮುವೇಲನಿಗೆ, ನಾನು ಕರ್ತನ ವಾಕ್ಯವ
ನ್ನೂ ನಿನ್ನ ಮಾತುಗಳನ್ನೂ ಮೀರಿದ್ದರಿಂದ, ಪಾಪವ ಮಾಡಿ
ದೆನು. ಯಾಕಂದರೆ ನಾನು ಜನಕ್ಕೆ ಭಯ ಪಟ್ಟು, ಅವರ ಮಾ
೨೫ ತನ್ನು ಕೇಳಿದೆನು. ಈಗ ನೀನು ದಯೆ ಮಾಡಿ, ನನ್ನ ಪಾಪವ
ನ್ನು ಕ್ಷಮಿಸಿ, ನಾನು ಕರ್ತನಿಗೆ ಅಡ್ಡ ಬೀಳುವ ಹಾಗೆ ನನ್ನ ಸಂ
ಗಡ ತಿರುಗಿ ಬಾ, ಅಂದನು.
೨೬ ಆದರೆ ಸಮುವೇಲನು ಸೌಲನಿಗೆ, ನಾನು ನಿನ್ನ ಸಂಗಡ ತಿರು
ಗಿ ಬರುವದಿಲ್ಲ; ಯಾಕಂದರೆ ನೀನು ಕರ್ತನ ವಾಕ್ಯವನ್ನು ಅಲ
ಕ್ಷ್ಯ ಮಾಡಿದಿ; ಕರ್ತನು ನಿನ್ನನ್ನು ಇಸ್ರಯೇಲ್ಯರ ಮೇಲೆ ಅರ

೨೭ ಸನಾಗಿರದ ಹಾಗೆ, ಅಲಕ್ಷ್ಯ ಮಾಡಿ ಬಿಟ್ಟನು, ಎಂದು ಹೇಳಿ, ಸ
ಮುವೇಲನು ಹೋಗುವದಕ್ಕೋಸ್ಕರ ತಿರುಗಿ ಕೊಳ್ಳುವಾಗ, ಸಾ
ಲನು ಅವನ ವಸ್ತ್ರದ ಕೊನೆಯನ್ನು ಹಿಡಿ ಕೊಂಡನು. ಅದು
೨೮ ಹರಿದು ಹೋಯಿತು. ಆಗ ಸಮುವೇಲನು ಅವನಿಗೆ, ನಿನ್ನ ಬಳಿ
ಯಿಂದ ಇಸ್ರಯೇಲಿನ ರಾಜ್ಯವನ್ನು ಕರ್ತನು ಈ ಹೊತ್ತು ಹ
ರಿದು ಬಿಟ್ಟು, ನಿನಗಿಂತ ಒಳ್ಳೆಯವನಾಗಿರುವ ನಿನ್ನ ಜತೆಗಾರನಿ
೨೯ ಗೆ ಅದನ್ನು ಕೊಟ್ಟನು. ಇಸ್ರಯೇಲಿನ ನಿತ್ಯ ಬಲವಾದವನು ಅ
ಪದ್ಧವಾಡುವವನಲ್ಲ; ಪಶ್ಚಾತ್ತಾಪ ಪಡುವವನಲ್ಲ. ಯಾಕಂದರೆ
೩೦ ಅವನು ಪಶ್ಚಾತ್ತಾಪ ಪಡ ಮನುಷ್ಯನಾದವನಲ್ಲ, ಅಂದನು. ಅ
ದಕ್ಕವನು, ನಾನು ಪಾಪವನ್ನು ಮಾಡಿದೆನು; ಆದರೆ ಈಗ ನೀನು
ದಯೆ ಮಾಡಿ, ನನ್ನ ಜನರ ಹಿರಿಯರ ಮುಂದೆಯೂ ಇಸ್ರಯೇ
ಲ್ಯರ ಮುಂದೆಯೂ ನನ್ನನ್ನು ಘನ ಪಡಿಸು; ನಾನು ನಿನ್ನ ದೇವ
ರಾದ ಕರ್ತನಿಗೆ ಅಡ್ಡ ಬೀಳುವ ಹಾಗೆ, ನೀನು ನನ್ನ ಸಂಗಡ ತಿ
೩೧ ರುಗಿ ಬಾ, ಅಂದನು. ಹಾಗೆಯೇ ಸಮುವೇಲನು ತಿರುಗಿ, ಸಾಲನ
ಹಿಂದೆ ಹೋದನು; ಸಾಲನು ಕರ್ತನಿಗೆ ಅಡ್ಡ ಬಿದ್ದನು.

೩೨ ಮತ್ತು ಸಮುವೇಲನು, ಅಮಲೇಕ್ಯರ ಅರಸನಾದ ಅಗಾಗನ
ನ್ನು ನನ್ನ ಬಳಿಗೆ ತನ್ನಿರಿ, ಅಂದನು. ಅಗಾಗನು ಆನಂದವಾಗಿ
ಅವನ ಬಳಿಗೆ ಹೋಗಿ, ನಿಶ್ಚಯವಾಗಿ ಮರಣದ ಕಹಿ ತಪ್ಪಿ ಹೋ
೩೩ ಯಿತೆಂದು, ಅಂದು ಕೊಂಡನು. ಆದರೆ ಸಮುವೇಲನು ಅವನಿಗೆ,
ನಿನ್ನ ಕತ್ತಿಯು ಹ್ಯಾಗೆ ಸ್ತ್ರೀಯರನ್ನು ಮಕ್ಕಳಿಲ್ಲದವರಾಗ
ಮಾಡಿತೋ, ಹಾಗೆಯೇ ಸ್ತ್ರೀಯರಲ್ಲಿ ನಿನ್ನ ತಾಯಿಯು ಮ
ಕ್ಕಳಿಲ್ಲದವಳಾಗುವಳು ಎಂದು ಹೇಳಿ, ಸಮುವೇಲನು ಗಿಲ್ಗಾಲಿನ
ಲ್ಲಿ ಕರ್ತನ ಮುಂದೆ ಅಗಾಗನನ್ನು ತುಂಡು ತುಂಡಾಗಿ ಖಂಡ್ರಿಸಿ
ಬಿಟ್ಟನು.

೩೪ ಮತ್ತು ಸಮುವೇಲನು ರಾಮಕ್ಕೆ ಹೋದನು; ಆದರೆ ಸಾಲ
ನು ಸಾಲನ ಊರಾದ ಗಿಬ್ಯದಲ್ಲಿರುವ ತನ್ನ ಮನೆಗೆ ಹೋದನು.
೩೫ ಸಮುವೇಲನು ತಾನು ಸಾಯುವ ದಿವಸದ ವರಗೂ ಸಾಲನನ್ನು
ತಿರಿಗಿ ನೋಡ ಬರಲಿಲ್ಲ. ಆದರೆ ಸಮುವೇಲನು ಅವನಿಗೋಸ್ಕರ
ದುಃಖ ಪಟ್ಟನು. ಇದಲ್ಲದೆ ಅವನನ್ನು ಇಸ್ರಯೇಲಿನ ಮೇಲೆ ಅ
ರಸನಾಗ ಮಾಡಿದ್ದಕ್ಕೋಸ್ಕರ ಕರ್ತನು ಪಶ್ಚಾತ್ತಾಪ ಪಟ್ಟನು.

## ೧೬. ಸಂಧಿ.

೧ ಮತ್ತು ಕರ್ತನು ಸಮುವೇಲನಿಗೆ, ಇಸ್ರಯೇಲಿನ ಅರಸನಾಗಿ
ರದ ಹಾಗೆ, ನಾನು ಅಲಕ್ಷ್ಯ ಮಾಡಿದ ಸಾಲನಿಗೋಸ್ಕರ ನೀನು
ಎದ್ದು ಪರ್ಯಂತರ ದುಃಖವುಳ್ಳವನಾಗಿರುವಿ! ನೀನು ನಿನ್ನ
ಕೊಂಬನ್ನು ತೈಲದಿಂದ ತುಂಬಿಸಿ ಕೊಂಡು ಬಾ, ಬೇತ್ಲೆಹೇಮಿನವ
ನಾದ ಇಷಾಯನ ಬಳಿಗೆ ನಿನ್ನನ್ನು ಕಳುಹಿಸುವೆನು; ಯಾಕಂ
ದರೆ ಅವನ ಮಕ್ಕಳಲ್ಲಿ ನಾನು ಒಬ್ಬನನ್ನು ಅರಸನಾಗ ಆದು
೨ ಕೊಂಡೆನು, ಅಂದನು. ಆಗ ಸಮುವೇಲನು, ನಾನು ಹೋಗುವ
ದು ಹ್ಯಾಗೆ! ಸಾಲನು ಅದನ್ನು ಕೇಳಿದರೆ, ನನ್ನನ್ನು ಕೊಂದು
ಹಾಕುವನು, ಅಂದನು. ಅದಕ್ಕೆ ಕರ್ತನು, ನೀನು ಒಂದು ಕಡಸ
ನ್ನು ನಿನ್ನ ಸಂಗಡ ತಕ್ಕೊಂಡು ಹೋಗಿ, ನಾನು ಕರ್ತನಿಗೆ ಬಲಿ
೩ ಇಡ ಬಂದೆನು ಎಂದು ಹೇಳಿ, ಇಷಾಯನನ್ನು ಬಲಿಗೆ ಕರೆಯ
ಬೇಕು; ಆಗ ನೀನು ಮಾಡ ಬೇಕಾದದ್ದನ್ನು ನಾನು ನಿನಗೆ ತಿಳಿ
ಸುವೆನು; ನಾನು ನಿನಗೆ ಹೇಳುವವನನ್ನೇ ನೀನು ನನಗೋಸ್ಕರ
ಅಭಿಷೇಕಿಸ ಬೇಕು, ಅಂದನು.

೪ ಕರ್ತನು ಹೇಳಿದ ಪ್ರಕಾರ ಸಮುವೇಲನು ಮಾಡಿ, ಬೇತ್ಲೆಹೇ
ಮಿಗೆ ಬಂದನು. ಆಗ ಊರಿನ ಹಿರಿಯರು ಅವನ ಬರುವಿಕೆಯ
ನ್ನು ಕಂಡು, ಹೆದರಿ, ಅವನಿಗೆ, ಸಮಾಧಾನವಾಗಿ ಬಂದಿಯೋ!
ಅಂದರು. ಅದಕ್ಕವನು, ಸಮಾಧಾನವೇ; ಕರ್ತನಿಗೆ ಬಲಿಯನ್ನು
೫ ಅರ್ಪಿಸ ಬಂದೆನು. ನೀವು ನಿಮ್ಮನ್ನು ಪರಿಶುದ್ಧ ಮಾಡಿ ಕೊಂಡು,
ನನ್ನ ಸಂಗಡ ಬಲಿಗೆ ಬನ್ನಿರಿ, ಅಂದನು. ಮತ್ತು ಇಷಾಯನನ್ನೂ
ಅವನ ಮಕ್ಕಳನ್ನೂ ಪರಿಶುದ್ಧ ಮಾಡಿ, ಅವರನ್ನು ಬಲಿಗೆ ಕರೆ
ದನು.

೬ ಅವರು ಬಂದಾಗ ಏನಾಯಿತಂದರೆ, ಅವನು ಎಲ್ಯಾಬನನ್ನು
ನೋಡಿ, ನಿಶ್ಚಯವಾಗಿ ಕರ್ತನ ಅಭಿಷಿಕ್ತನು ಅವನ ಮುಂದೆ
೭ ಇದ್ದಾನೆ, ಅಂದು ಕೊಂಡನು. ಆದರೆ ಕರ್ತನು ಸಮುವೇಲನಿಗೆ,
ನೀನು ಅವನ ರೂಪವನ್ನೂ ಅವನ ದೇಹದ ಉದ್ದವನ್ನೂ ದೃ
ಷ್ಟಿಸ ಬೇಡ; ಯಾಕಂದರೆ ಅವನನ್ನು ನಾನು ಅಲಕ್ಷ್ಯ ಮಾಡಿ
ದೆನು; ಯಾಕಂದರೆ ಮನುಷ್ಯನು ನೋಡುವದು ಪ್ರಮಾಣವ
ಲ್ಲ; ಮನುಷ್ಯನು ಕಣ್ಣು ನೋಟದಿಂದ ನೋಡುವನು, ಆದರೆ
೮ ಕರ್ತನು ಹೃದಯವನ್ನು ನೋಡುವನು, ಅಂದನು. ಆಗ ಇ
ಷಾಯನು ಅಬಿನದಾಬನನ್ನು ಕರೆದು, ಅವನನ್ನು ಸಮುವೇಲನ
ಮುಂದೆ ಹಾಯ ಮಾಡಿದನು; ಆದರೆ ಅವನು, ಇವನನ್ನು ಕರ್ತ
೯ ನು ಆದು ಕೊಳ್ಳಲಿಲ್ಲ, ಅಂದನು. ಮತ್ತು ಇಷಾಯನು ಷಮ್ಮ
ನನ್ನು ಹಾಯ ಮಾಡಿದನು; ಆದರೆ ಅವನು, ಇವನನ್ನು ಕರ್ತನು
೧೦ ಆದು ಕೊಳ್ಳಲಿಲ್ಲ, ಅಂದನು. ಹೀಗೆಯೇ ಇಷಾಯನು ತನ್ನ
ಏಳು ಮಂದಿ ಕುಮಾರರನ್ನು ಸಮುವೇಲನ ಮುಂದೆ ಹಾಯ
ಮಾಡಿದನು; ಆದರೆ ಸಮುವೇಲನು ಇಷಾಯನಿಗೆ, ಕರ್ತನು ಇ
೧೧ ವರಲ್ಲಿ ಒಬ್ಬನನ್ನಾದರೂ ಆದು ಕೊಳ್ಳಲಿಲ್ಲ, ಅಂದನು. ಮತ್ತು
ನಿನಗಿರುವ ಮಕ್ಕಳು ಇಷ್ಟೇಸೋ! ಎಂದು ಇಷಾಯನನ್ನು ಕೇ
ಳಿದನು. ಅದಕ್ಕವನು, ಚಿಕ್ಕವನೊಬ್ಬನು ಉಳಿದಿದ್ದಾನೆ; ಇಗೋ,
ಅವನು ಕುರಿಗಳನ್ನು ಕಾಯುತ್ತಾ ಇದ್ದಾನೆ, ಅಂದನು. ಆಗ ಸ
ಮುವೇಲನು ಇಷಾಯನಿಗೆ, ಅವನನ್ನು ಕರೆಯ ಕಳುಹಿಸು;
ಯಾಕಂದರೆ ಅವನು ಇಲ್ಲಿಗೆ ಬರುವ ಪರ್ಯಂತರ ನಾವು ಪಂ
೧೨ ಜ್ಞಿಯಲ್ಲಿ ಕೂತ್ರಿಕ್ಕಾಗದು, ಅಂದನು. ಆಗ ಇಷಾಯನು ಅ
ವನನ್ನು ಕರೆಯ ಕಳುಹಿಸಿದನು. ಅವನು ಕೆಂಪಾದ ಮೈ ಬಣ್ಣದ
ವನಾಗಿಯೂ, ಸುಂದರ ಮುಖವುಳ್ಳವನಾಗಿಯೂ, ನೋಟಕ್ಕೆ
ಜೆಲುವಿಕೆಯುಳ್ಳವನಾಗಿಯೂ ಇದ್ದನು. ಆಗ ಕರ್ತನು ಸಮು
ವೇಲನಿಗೆ, ನೀನೆದ್ದು, ಇವನನ್ನು ಅಭಿಷೇಕಿಸು; ಇವನು ಅವನೇ,
೧೩ ಅಂದನು. ಸಮುವೇಲನು ಎಣ್ಣೆ ಇರುವ ಕೊಂಬನ್ನು ತಕ್ಕೊಂ
ಡು, ಅವನನ್ನು ಅವನ ಸಹೋದರರ ಮಧ್ಯದಲ್ಲಿ ಅಭಿಷೇಕ
ಮಾಡಿದನು. ಆ ದಿವಸದಾರಭ್ಯವಾಗಿ ಕರ್ತನ ಆತ್ಮವು ದಾವೀ
ದನ ಮೇಲೆ ಬಂತು. ಮತ್ತು ಸಮುವೇಲನು ಎದ್ದು, ರಾಮಕ್ಕೆ
ಹೋದನು.

೧೪ ಆದರೆ ಕರ್ತನ ಆತ್ಮ ಸಾಲನನ್ನು ಬಿಟ್ಟು ಹೋಯಿತು;
೧೫ ಕರ್ತನಿಂದ ಬಂದ ದುರಾತ್ಮವು ಅವನನ್ನು ಹೆದರಿಸಿತು. ಆಗ ಸಾ
ಲನ ಸೇವಕರು ಅವನಿಗೆ, ಇಗೋ, ದೇವರಿಂದ ಬಂದ ದುರಾತ್ಮವು
೧೬ ನಿನ್ನನ್ನು ಹೆದರಿಸುತ್ತದೆ; ಕಿನ್ನರಿಯನ್ನು ಬಾರಸ ತಿಳಿದ ಒಬ್ಬನ
ನ್ನು ಹುಡುಕುವ ಹಾಗೆ, ನಮ್ಮ ಕರ್ತನಾದ ನೀನು ನಿನ್ನ ಸನ್ನಿ



ಧಿಯಲ್ಲಿರುವ ನಿನ್ನ ಸೇವಕರಿಗೆ ಹೇಳ ಬೇಕು; ದೇವರಿಂದ
ದುರಾತ್ಮವು ನಿನ್ನ ಮೇಲೆ ಬಂದಿರುವಾಗ, ಅವನು ತನ್ನ
ಕೈಯಿಂದ ಅದನ್ನು ಬಾರಿಸಿದರೆ, ನಿನಗೆ ಒಳ್ಳೇದಾಗಿರುವದು,
೧೭ ಅಂದರು. ಸಾಲನು ತನ್ನ ಸೇವಕರಿಗೆ, ಚನ್ನಾಗಿ ಬಾರಸ ಬಲ್ಲ
ವನಾದ ಒಬ್ಬನನ್ನು ನನಗೋಸ್ಕರ ನೋಡಿ, ನನ್ನ ಬಳಿಗೆ ಕರ
೧೮ ಕೊಂಡು ಬನ್ನಿರಿ, ಅಂದನು. ಆಗ ಸೇವಕರಲ್ಲಿ ಒಬ್ಬನು ಅವನಿ
ಗೆ ಪ್ರತ್ಯುತ್ತರವಾಗಿ, ಇಗೋ, ಬಾರಸ ತಿಳಿದವನಾದಂಥ, ಬೇತ್ಲೆ
ಹೇಮಿನವನಾದ ಇಷಾಯನ ಮಗನನ್ನು ನೋಡಿದೆನು. ಅವನು
ಧೈರ್ಯವಂತನಾದ ಪರಾಕ್ರಮಶಾಲಿಯಾಗಿಯೂ, ರಣ ಶೂ
ರನಾಗಿಯೂ, ಕಾರ್ಯಗಳಲ್ಲಿ ಬುದ್ಧಿವಂತನಾಗಿಯೂ, ಜೆಲುವಿಕೆ
ಯುಳ್ಳವನಾಗಿಯೂ ಇದ್ದಾನೆ; ಇದಲ್ಲದೆ ಕರ್ತನು ಅವನ ಸಂಗ
೧೯ ಡ ಇದ್ದಾನೆ, ಅಂದನು. ಆದಕಾರಣ ಸಾಲನು ಇಷಾಯನ ಬಳಿಗೆ
ದೂತರನ್ನು ಕಳುಹಿಸಿ, ಕುರಿಗಳ ಬಳಿಯಲ್ಲಿ ಇರುವ ನಿನ್ನ ಕು
ಮಾರನಾದ ದಾವೀದನನ್ನು ನನ್ನ ಬಳಿಗೆ ಕಳುಹಿಸು, ಅಂದನು.
೨೦ ಆಗ ಇಷಾಯನು ಆಹಾರವನ್ನೂ, ಒಂದು ಕಿದ್ದಿಗೇ ದ್ರಾಕ್ಷೇ ರಸ
ವನ್ನೂ, ಒಂದು ಮೇಕೆಯ ಮರಿಯನ್ನೂ ಕತ್ತೆಯ ಮೇಲೆ
ಹೇರಿ, ತನ್ನ ಮಗನಾದ ದಾವೀದನ ಕೈಯಿಂದ ಸಾಲನಿಗೆ ಕಳು
೨೧ ಹಿಸಿದನು. ಹಾಗೆಯೇ ಅವನು ಸಾಲನ ಬಳಿಗೆ ಬಂದು, ಅವನ
ಮುಂದೆ ನಿಂತನು; ಅವನು ಇವನನ್ನು ಬಹಳವಾಗಿ ಪ್ರೀತಿ ಮಾ
ಡಿದನು. ಅವನಿಗೆ ಇವನು ಆಯುಧ ಹಿಡಿಯುವವನಾದನು.
೨೨ ಸಾಲನು ಇಷಾಯನ ಬಳಿಗೆ ಮನುಷ್ಯನನ್ನು ಕಳುಹಿಸಿ, ದಾ
ವೀದನು ನನ್ನ ಸಮುಖದಲ್ಲಿ ನಿಲ್ಲುವ ಹಾಗೆ, ದಯೆ ಮಾಡು;
ಯಾಕಂದರೆ ನನ್ನ ಸಮುಖದಲ್ಲಿ ಅವನಿಗೆ ದಯೆ ದೊರಕಿತು,
೨೩ ಅಂದನು. ಹಾಗೆಯೇ ದೇವರಿಂದ ಬಂದ ದುರಾತ್ಮವು ಸಾಲನ
ಮೇಲೆ ಬಂದಾಗ, ದಾವೀದನು ಕಿನ್ನರಿಯನ್ನು ತೆಗೆದು ಕೊಂಡು,
ತನ್ನ ಕೈಯಿಂದ ಬಾರಿಸುವನು. ಅದರಿಂದ ಸಾಲನು ವಿಶ್ರಾಂತಿ
ಯನ್ನು ಹೊಂದಿ, ಚನ್ನಾಗಿರುವನು; ಮತ್ತು ದುರಾತ್ಮವು ಅವನ
ನ್ನು ಬಿಟ್ಟು ಹೋಗುವದು.

## ೧೭. ಸಂಧಿ.

೧ ಆದರೆ ಫಿಲಿಷ್ಟ್ಯರು ಯುದ್ಧ ಮಾಡುವದಕ್ಕೆ ಶಮ್ಮ ರಾಣುವೆ
ಯನ್ನು ಯೆಹೂದ ದೇಶದ ಸೋಕದಲ್ಲಿ ಕೂಡಿಸಿ, ಅಜೇಕಕ್ಕೂ
೨ ಸೋಕಕ್ಕೂ ಮಧ್ಯದಲ್ಲಿ ಎಫೆಸ್ದಮ್ಮಿನಲ್ಲಿ ದಂಡಿಳಿದರು. ಹಾಗೆ
ಯೇ ಸಾಲನೂ ಇಸ್ರಯೇಲ್ ಮನುಷ್ಯರೂ ಕೂಡಿ ಕೊಂಡು,
ಏಲ ತಗ್ಗಿನ ಬಳಿಯಲ್ಲಿ ದಂಡಿಳಿದು, ಫಿಲಿಷ್ಟ್ಯರಿಗೆ ಎದುರಾಗಿ
೩ ಯುದ್ಧ ಮಾಡ ವ್ಯೂಹ ಕಟ್ಟಿದರು. ಫಿಲಿಷ್ಟ್ಯರು ಒಂದು ಕಡೆ
ಯಾಗಿ ಪರ್ವತದ ಬಳಿಯಲ್ಲಿಯೂ, ಇಸ್ರಯೇಲ್ ಒಂದು ಕಡೆ
ಯಾಗಿ ಪರ್ವತದ ಬಳಿಯಲ್ಲಿಯೂ, ನಿಂತರು; ಅವರ ಇವರ
ಮಧ್ಯದಲ್ಲಿ ತಗ್ಗು ಉಂಟಾಗಿತ್ತು.

೪ ಅದರೆ ಗಾತು ಊರಿನ ರಣವೀರನಾದ ಗೊಲೆಯಾತನೆಂ
ಬ ಹೆಸರುಳ್ಳ ಒಬ್ಬನು ಫಿಲಿಷ್ಟ್ಯರ ದಂಡಿನಿಂದ ಹೊರಟನು.
೫ ಅವನು ಆರುವಕೆ ಮೊಳ ಉದ್ದ. ಅವನ ತಲೆಯ ಮೇಲೆ ಹಿತ್ತಾ
ಳಿಯ ಶಿರಸ್ತ್ರಾಣ ಇತ್ತು; ಜಿರಾಭತ್ತರ ಕವಚವನ್ನು ತೊಟ್ಟು
ಕೊಂಡಿದ್ದನು. ಆ ಜಿರಾಭತ್ತರ ಕವಚದ ಹಿತ್ತಾಳಿಯು ಐದು
೬ ಸಾವಿರ ಷೆಕೆಲು ತೂಕವಾಗಿತ್ತು. ಅವನ ಕಾಲುಗಳಲ್ಲಿ ಹಿತ್ತಾಳಿ
ಯ ಚಮ್ಮಳಿಗೆ, ಅವನ ತೋಳುಗಳ ಮಧ್ಯದಲ್ಲಿ ಬರ್ಚಿ ಇದ್ದ
೭ ವು. ಅವನ ಈಟಿಯ ಗಾಣೆಯು ಜಾಪನ ಗಂಟಿಗೆಯ ದಿಂಡಿನ
ಹಾಗಿತ್ತು; ಅವನ ಈಟಿಯ ಅಲಗು ಆರು ನೂರು ಷೆಕೆಲು ತೂಕ
೮ ವಾಗಿತ್ತು. ಇದಲ್ಲದೆ ಬೇಡ್ಯ ಹಿಡಿಯುವವನು ಅವನ ಮುಂದೆ ನಡೆ
ದನು. ಅವನು ನಿಂತು, ಇಸ್ರಯೇಲ್ ಸೈನ್ಯಗಳಿಗೆ ಕೂಗಿ ಹೇಳಿದ್ದೇ
ನಂದರೆ, ಯಾಕೆ ನೀವು ವ್ಯೂಹ ಕಟ್ಟಿ ಕೊಳ್ಳ ಹೊರಟಿರಿ? ನಾ
ನು ಫಿಲಿಷ್ಟ್ಯನಲ್ಲವೋ! ನೀವು ಸಾಲನ ಸೇವಕರಲ್ಲವೋ! ನೀವು
ನಿಮಗೋಸ್ಕರ ಒಬ್ಬನನ್ನು ಆದು ಕೊಳ್ಳಿರಿ; ಅವನು ನನ್ನ
೯ ಮುಂದೆ ಬರಲಿ. ಅವನು ನನ್ನ ಸಂಗಡ ಯುದ್ಧ ಮಾಡ ಬಲ್ಲವ
ನಾಗಿದ್ದು, ನನ್ನನ್ನು ಕೊಂದರೆ, ನಾವು ನಿಮಗೆ ಸೇವಕರಾಗಿರುವೆ
ವು; ನಾನು ಅವನ ಸಂಗಡ ಯುದ್ಧ ಮಾಡ ಬಲ್ಲವನಾಗಿದ್ದು, ಅ
ವನನ್ನು ಕೊಂದರೆ, ನೀವು ನಮಗೆ ಸೇವಕರಾಗಿದ್ದು, ನಮ್ಮನ್ನು
೧೦ ಸೇವಿಸ ಬೇಕು, ಅಂದನು. ಮತ್ತು ಆ ಫಿಲಿಷ್ಟ್ಯನು, ನಾನು ಈ ದಿ
ನ ಇಸ್ರಯೇಲಿನ ಸೈನ್ಯಗಳನ್ನು ನಿಂದಿಸುತ್ತೇನೆ; ನಾವು ಒಬ್ಬರಿ
ಗೊಬ್ಬರು ಯುದ್ಧ ಮಾಡುವ ಹಾಗೆ ನನಗೆ ಒಬ್ಬನನ್ನು ಬಿಟ್ಟು
೧೧ ಬಿಡಿರಿ, ಅಂದನು. ಸಾಲನೂ ಸಮಸ್ತ ಇಸ್ರಯೇಲ್ಯರೂ ಆ ಫಿಲಿ
ಷ್ಟ್ಯನ ಮಾತುಗಳನ್ನು ಕೇಳಿದಾಗ, ಹೆದರಿ ಕೊಂಡು, ಬಹು ಭ
ಯ ಪಟ್ಟರು.

೧೨ ಆದರೆ ದಾವೀದನು ಯೆಹೂದದ ಬೇತ್ಲೆಹೇಮ್ ಊರಿನ ಎಫ್ರಾ
ತ್ಯನಾದ ಇಷಾಯನೆಂಬವನ ಮಗನಾಗಿದ್ದನು. ಈ ಇಷಾಯ
ನಿಗೆ ಎಂಟು ಮಂದಿ ಮಕ್ಕಳಿದ್ದರು; ಇವನು ಸಾಲನ ದಿವಸಗಳ
೧೩ ಲ್ಲಿ ಜನರೊಳಗೆ ವೃದ್ಧನಾಗಿದ್ದನು. ಇಷಾಯನ ಮೂವರು ಹಿ
ರಿಯ ಮಕ್ಕಳು ಸಾಲನ ಹಿಂದೆ ಯುದ್ಧಕ್ಕೆ ಹೋಗಿದ್ದರು. ಯು
ದ್ಧಕ್ಕೆ ಹೋದ ಆ ಮೂವರು ಮಕ್ಕಳಲ್ಲಿ ಹೊಚ್ಚಲ ಮಗನ ಹೆ
ಸರು ಎಲ್ಯಾಬನು; ಎರಡನೆಯವನ ಹೆಸರು ಅಬಿನದಾಬನು, ಮೂ
೧೪ ರನೆಯವನ ಹೆಸರು ಷಮ್ಮನು. ಆದರೆ ದಾವೀದನು ಚಿಕ್ಕವನಾ
೧೫ ಗಿದ್ದನು. ಹಿರಿಯರಾದ ಆ ಮೂವರು ಸಾಲನ ಹಿಂದೆ ಯುದ್ಧಕ್ಕೆ
ಹೋಗಿದ್ದರು. ದಾವೀದನು ಸಾಲನನ್ನು ಬಿಟ್ಟು, ಬೇತ್ಲೆಹೇಮಿಗೆ
೧೬ ತನ್ನ ತಂದೆಯ ಕುರಿಗಳನ್ನು ಮೇಯಿಸ ಹೋಗಿದ್ದನು. ಆದರೆ
ಫಿಲಿಷ್ಟ್ಯನು ಉದಯದಲ್ಲಿಯೂ ಸಾಯಂಕಾಲದಲ್ಲಿಯೂ ಬಂದು,
ನಾಲ್ವತ್ತು ದಿವಸ ನಿಂತು ಕೊಳ್ಳುತ್ತಿದ್ದನು.

೧೭ ಮತ್ತು ಇಷಾಯನು ತನ್ನ ಮಗನಾದ ದಾವೀದನಿಗೆ ಹೇಳಿ
ದ್ದೇನಂದರೆ, ನಿನ್ನ ಸಹೋದರರಿಗೋಸ್ಕರ ಬಂದು ಏಫದ ಹುರಿ
ದ ಧಾನ್ಯವನ್ನೂ, ಈ ಹತ್ತು ಕೊಟ್ಟಿಗಳನ್ನೂ ತಕ್ಕೊಂಡು,
೧೮ ದಂಡಿನಲ್ಲಿರುವ ನಿನ್ನ ಸಹೋದರರ ಬಳಿಗೆ ಓಡಿ ಹೋಗು. ಇದ
ಲ್ಲದೆ ಈ ಹತ್ತು ಗಿಣ್ಣಿನ ಗಡ್ಡೆಗಳನ್ನು ಅವರ ಸಾವಿರಕ್ಕೆ ಪ್ರಧಾ
ನನಾದವನಿಗೆ ಕೊಟ್ಟು, ನಿನ್ನ ಸಹೋದರರ ಕ್ಷೇಮ ಸಮಾಚಾ
ರವನ್ನು ವಿಚಾರಿಸಿ, ಅವರ ಗುರುತನ್ನು ತಕ್ಕೊಂಡು ಬಾ, ಅಂ
ದನು.

೧೯ ಆಗ ಸಾಲನೂ, ಇವರೂ, ಇಸ್ರಯೇಲ್ಯರೆಲ್ಲರೂ ಫಿಲಿಷ್ಟ್ಯಿ
೨೦ ರ ಸಂಗಡ ಏಲ ತಗ್ಗಿನಲ್ಲಿ ಯುದ್ಧ ಮಾಡುತ್ತಿದ್ದರು. ಆದರೆ ದಾ
ವೀದನು ಉದಯ ಕಾಲದಲ್ಲಿ ಎದ್ದು, ಕುರಿ ಕಾಯುವವನ ವಶವಾ
ಗಿ ಕುರಿಗಳನ್ನು ಬಿಟ್ಟು, ತನ್ನ ತಂದೆಯಾದ ಇಷಾಯನು ತನ

ಗೆ ಆಜ್ಞಾಪಿಸಿದ ಹಾಗೆಯೇ ತಕ್ಕೊಂಡು ಹೋಗಿ, ಸೈನ್ಯವು
ಯುದ್ಧಕ್ಕೆ ಅರ್ಭಟಿಸಿ, ಹೊರಡುವಾಗ; ಸಾಮಾನು ಇರುವ ಸ್ಥಳ
೨೧ ಕ್ಕೆ ಬಂದನು. ಇಸ್ರಯೇಲ್ಯರೂ ಫಿಲಿಷ್ಟ್ಯರೂ, ಸೈನ್ಯಕ್ಕೆದುರಾ
೨೨ ಗಿ ಸೈನ್ಯವ್ಯೂಹ ಕಟ್ಟಿ ಕೊಂಡಿದ್ದರು. ಆಗ ದಾವೀದನು ತಾನು
ತಕ್ಕೊಂಡು ಬಂದದ್ದನ್ನು ಸಾಮಾನು ಕಾಯುವವನ ಕೈಯಲ್ಲಿ
ಇಟ್ಟು ಬಿಟ್ಟು, ರಣ ರಂಗಕ್ಕೆ ಓಡಿ ಹೋಗಿ, ತನ್ನ ಸಹೋದರರ
ಬಳಿಗೆ ಬಂದು, ಅವರ ಕ್ಷೇಮ ಸಮಾಚಾರವನ್ನು ಕೇಳಿದನು.
೨೩ ಅವನು ಇವರ ಸಂಗಡ ಮಾತಾಡಿ ಕೊಳ್ಳುತ್ತಾ ಇರುವಾಗ, ಇ
ಗೋ, ಗಾತು ಊರಿನ ರಣವೀರನಾದ ಗೊಲೆಯಾತನೆಂಬ
ಆ ಫಿಲಿಷ್ಟ್ಯನು ಫಿಲಿಷ್ಟ್ಯರ ಸೈನ್ಯದಿಂದ ಹೊರಟು, ಮೊದಲಿನ
ಹಾಗೆಯೇ ಮಾತಾಡಿದನು; ಆ ಮಾತುಗಳನ್ನು ದಾವೀದನು
೨೪ ಕೇಳಿದನು. ಇಸ್ರಯೇಲ್ ಮನುಷ್ಯರೆಲ್ಲರೂ ಅವನನ್ನು ನೋ
ಡಿದಾಗ, ಅವನ ಬಳಿಯಿಂದ ಓಡಿ ಹೋದರು; ಮತ್ತು ಬಹು ಭ
ಯ ಪಟ್ಟರು.
೨೫ ಇಸ್ರಯೇಲ್ ಮನುಷ್ಯರು ಹೇಳಿದ್ದೇನಂದರೆ, ಏರಿ ಬಂದ ಈ
ಮನುಷ್ಯನನ್ನು ನೋಡಿದಿರೋ! ಇಸ್ರಯೇಲನ್ನು ನಿಂದಿಸ ಏರಿ
ಬಂದಿದ್ದಾನಲ್ಲ! ಯಾವನು ಇವನನ್ನು ಹೊಡೆದು ಬಿಡುವನೋ,
ಅವನನ್ನು ಅರಸನು ಬಹಳ ಐಶ್ವರ್ಯವಂತನಾಗ ಮಾಡಿ, ಅ
ವನಿಗೆ ತನ್ನ ಮಗಳನ್ನು ಕೊಟ್ಟು, ಅವನ ತಂದೆಯ ಮನೆಯ
ನ್ನು ಇಸ್ರಯೇಲಲ್ಲಿ ಮಾನ್ಯವಾಗಿ ಮಾಡುವನು, ಅಂದರು.
೨೬ ಆಗ ದಾವೀದನು ತನ್ನ ಬಳಿಯಲ್ಲಿ ನಿಂತಿದ್ದ ಮನುಷ್ಯರಿಗೆ,
ಈ ಫಿಲಿಷ್ಟ್ಯನನ್ನು ಹೊಡೆದು, ಇಸ್ರಯೇಲಿನ ಮೇಲಿನಿಂದ ನಿಂದೆ
ಯನ್ನು ತೊಳೆದು ಬಿಡುವ ಆ ಮನುಷ್ಯನಿಗೆ ಏನು ಮಾಡಲ್ಪಡು
ವದು? ಪರಿಛೇದನೆ ಇಲ್ಲದ ಈ ಫಿಲಿಷ್ಟ್ಯನು ಜೀವವುಳ್ಳ ದೇವರ
೨೭ ಸೈನ್ಯಗಳನ್ನು ನಿಂದಿಸುವದಕ್ಕೆ ಎದ್ದವನು! ಅಂದನು. ಜನರು
ಆ ಮಾತಿಗೆ ಸರಿಯಾಗಿ, ಅವನನ್ನು ಕೊಂದವನಿಗೆ ಈ ಪ್ರಕಾರ
ಮಾಡಲ್ಪಡುವನೆಂದು, ಹೇಳಿದರು.
೨೮ ಆದಕೆ ಅವನು ಆ ಮನುಷ್ಯರ ಸಂಗಡ ಮಾತಾಡುತ್ತಿರುವದ
ನ್ನು ಅವನ ಹಿರಿಯ ಸಹೋದರನಾದ ಎಲ್ಯಾಬನು ಕೇಳಿ, ಅವನ
ಮೇಲೆ ಕೋಪ ಗೊಂಡು, ನೀನು ಇಲ್ಲಿಗೆ ಬಂದದೇನು! ಅರಣಿಯ
ಲ್ಲಿರುವ ಆ ಸ್ವಲ್ಪ ಕುರಿಗಳನ್ನು ಯಾರ ವಶವಾಗಿ ಬಿಟ್ಟಿ ಬಂ
ದಿ! ನಿನ್ನ ಗರ್ವವನ್ನೂ ನಿನ್ನ ಹೃದಯದ ಅಹಂಕಾರವನ್ನೂ
ನಾನು ಬಲ್ಲೆನು; ಯಾಕಂದರೆ ಯುದ್ಧವನ್ನು ನೋಡ ಇಲ್ಲಿದು
೨೯ ಬಂದಿದ್ದೀ, ಅಂದನು. ಅದಕ್ಕೆ ದಾವೀದನು, ನಾನು ಈಗ ಮಾ
೩೦ ಡಿದ್ದೇನು! ಆ ಮಾತು ಉಂಟಲ್ಲ? ಅಂದನು. ಮತ್ತು ಅವನನ್ನು
ಬಿಟ್ಟು, ಬೇರೊಬ್ಬನ ಕಡೆಗೆ ತಿರುಗಿ ಕೊಂಡು, ಹಾಗೆಯೇ ಹೇಳಿದ
ನು. ಆಗ ಜನರು ಮೊದಲು ಹೇಳಿದ ಹಾಗೆಯೇ ಅವನಿಗೆ ಪ್ರತ್ಯಾ
೩೧ ತ್ತರವನ್ನು ಹೇಳಿದರು. ಮತ್ತು ದಾವೀದನು ಹೇಳಿದ ಮಾತುಗ
ಳನ್ನು ಕೇಳಿದಾಗ, ಸೌಲನ ಮುಂದೆ ತಿಳಿಸಿದರು. ಆತನು ಅವನ
ನ್ನು ಕರೇ ಕಳುಹಿಸಿದನು.
೩೨ ಆಗ ದಾವೀದನು ಸೌಲನಿಗೆ, ಅವನ ನಿಮಿತ್ತವಾಗಿ ಯಾವನ
ಹೃದಯವೂ ಕುಂಗ ಬಾರದು; ನಿನ್ನ ಸೇವಕನು ಹೋಗಿ, ಈ
೩೩ ಫಿಲಿಷ್ಟ್ಯನ ಸಂಗಡ ಯುದ್ಧ ಮಾಡುವನು, ಅಂದನು. ಆಗ ಸೌ
ಲನು ದಾವೀದನಿಗೆ, ಈ ಫಿಲಿಷ್ಟ್ಯನ ಮೇಲೆ ಯುದ್ಧ ಮಾಡ
ನಿನ್ನಿಂದಲಾಗದು; ಯಾಕಂದರೆ ನೀನು ಹುಡುಗನಾಗಿದ್ದೀ; ಅದರೆ
ಅವನು ಚಿಕ್ಕಂದಿನಿಂದ ಯುದ್ಧದ ಮನುಷ್ಯನಾಗಿದ್ದಾನೆ, ಅಂ
೩೪ ದನು. ದಾವೀದನು ಸೌಲನಿಗೆ ಹೇಳಿದ್ದೇನಂದರೆ, ನಿನ್ನ ಸೇವಕ
ನು ತನ್ನ ತಂದೆಯ ಕುರಿಗಳನ್ನು ಮೇಯಿಸಿ ಕೊಂಡಿರುವಾಗ,
ಸಿಂಹವೂ, ಕರಡಿಯೂ ಬಂದು, ಮಂದೆಯಲ್ಲಿ ಇರುವ ಕುರಿ ಮರಿ
೩೫ ಯನ್ನು ಹಿಡಿದವು. ಆಗ ನಾನು ಅದರ ಹಿಂದೆ ಹತ್ತಿ ಹೋಗಿ, ಅ
ದನ್ನು ಹೊಡೆದು ಬಿಟ್ಟು, ಆ ಕುರಿ ಮರಿಯನ್ನು ಅದರ ಬಾಯಿ
ಯಿಂದ ತಪ್ಪಿಸಿದೆನು. ಅದು ನನ್ನ ಮೇಲೆ ಕವಿಯುವಾಗ, ನಾನು
ಅದರ ಗಡ್ಡವನ್ನು ಹಿಡಿದು, ಹೊಡೆದು, ಕೊಂದು ಹಾಕಿದೆನು.
೩೬ ಹೀಗೆಯೇ ನಿನ್ನ ಸೇವಕನು ಆ ಸಿಂಹವನ್ನೂ, ಆ ಕರಡಿಯನ್ನೂ
ಹೊಡೆದು ಬಿಟ್ಟೆನು. ಪರಿಛೇದನೆ ಇಲ್ಲದ ಈ ಫಿಲಿಷ್ಟ್ಯನು ಜೀ
ವವುಳ್ಳ ದೇವರ ಸೈನ್ಯಗಳನ್ನು ನಿಂದಿಸಿದ್ದರಿಂದ ಅವುಗಳಲ್ಲಿ ಒಂ
೩೭ ದರ ಹಾಗೆ ಇರುವನು, ಅಂದನು. ಇದಲ್ಲದೆ ದಾವೀದನು, ನನ್ನ
ನ್ನು ಸಿಂಹದ ಕೈಗೂ ಕರಡಿಯ ಕೈಗೂ ತಪ್ಪಿಸಿ ಬಿಟ್ಟ ಕರ್ತನು
ಈ ಫಿಲಿಷ್ಟ್ಯನ ಕೈಗೂ ನನ್ನನ್ನು ತಪ್ಪಿಸಿ ಬಿಡುವನು, ಅಂದನು.
ಆಗ ಸೌಲನು ದಾವೀದನಿಗೆ, ನೀನು ಹೋಗು; ಕರ್ತನು ನಿನ್ನ
ಸಂಗಡ ಇರಲಿ, ಅಂದನು.
೩೮ ಆಗ ಸೌಲನು ದಾವೀದನಿಗೆ ತನ್ನ ವಸ್ತ್ರಗಳನ್ನು ಧರಿಸ ಮಾ
ಡಿ, ಅವನ ತಲೆಯ ಮೇಲೆ ಒಂದು ಹಿತ್ತಾಳೆಯ ಶಿರಸ್ತ್ರಾಣವನ್ನು
ಇಟ್ಟು, ಅವನಿಗೆ ಕವಚವನ್ನು ತೊಡಿಸಿದನು. ಮತ್ತು ದಾವೀದನು
೩೯ ಅವನ ಕತ್ತಿಯನ್ನು ತನ್ನ ವಸ್ತ್ರಗಳ ಮೇಲೆ ಕಟ್ಟಿ ಕೊಂಡು,
ಹೋಗ ಬೇಕೆಂದಿದ್ದನು. ಯಾಕಂದರೆ ಅವನು ಪರಿಕ್ಷಿಸಿದ್ದಿಲ್ಲ.
ಆಗ ದಾವೀದನು ಸೌಲನಿಗೆ ನಾನು ಪರಿಕ್ಷಿಸದ್ದರಿಂದ, ಇವುಗಳ
ಸಂಗಡ ಹೋಗಲಾರೆನೆಂದು ಹೇಳಿ, ಅವುಗಳನ್ನು ಬಿಚ್ಚಿ ಹಾಕಿ,
೪೦ ತನ್ನ ಕೋಲನ್ನು ತನ್ನ ಕೈಯಲ್ಲಿ ಹಿಡಿದು, ಹಳ್ಳದಲ್ಲಿರುವ
ಐದು ನುಣ್ಣಗ ಕಲ್ಲುಗಳನ್ನು ಆರಿ ಕೊಂಡು, ಅವುಗಳನ್ನು
ತನಗೆ ಇರುವ ಮೇಯಿಸುವವರ ಪಟ್ಟೀ ಚೀಲದಲ್ಲಿ ಹಾಕಿ, ತನ್ನ
ಕವಣೆಯನ್ನು ತನ್ನ ಕೈಯಲ್ಲಿ ಹಿಡು ಕೊಂಡು, ಆ ಫಿಲಿಷ್ಟ್ಯನ
೪೧ ಬಳಿಗೆ ಕೇರ ಹೋದನು. ಆಗ ಫಿಲಿಷ್ಟ್ಯನು ನಡೆದೇ ನಡೆದು,
೪೨ ದಾವೀದನ ಬಳಿಗೆ ಸಮೀಪಿಸಿ ಬಂದನು. ಅವನ ಶೇಷ್ಯವನ್ನು ಹಿ
ಡಿಯುವವನು ಅವನ ಮುಂದೆ ನಡೆದನು. ಫಿಲಿಷ್ಟ್ಯನು ದಾವೀ
ದನನ್ನು ದೃಷ್ಟಿಸಿ ನೋಡಿದಾಗ, ಅವನು ಕೆಂಪಾದವನಾಗಿಯೂ
ಸಾಂದರ್ಯ ರೂಪವುಳ್ಳವನಾಗಿಯೂ ಇರುವ ಪ್ರಾಯದವ
೪೩ ನಾಗಿದ್ದದರಿಂದ, ಅವನನ್ನು ತಿರಸ್ಕರಿಸಿ, ದಾವೀದನಿಗೆ, ನೀನು ಕೋ
ಲಿನ ಸಂಗಡ ನನ್ನ ಬಳಿಗೆ ಬರುವ ಹಾಗೆ, ನಾನು ನಾಯಿಯೋ!
ಎಂದು ಹೇಳಿ, ಆ ಫಿಲಿಷ್ಟ್ಯನು ತನ್ನ ದೇವರುಗಳಿಂದ ದಾವೀದನ
೪೪ ನ್ನು ಶಪಿಸಿದನು. ಮತ್ತು ದಾವೀದನಿಗೆ, ನೀನು ನನ್ನ ಬಳಿಗೆ ಬಾ;
ನಿನ್ನ ಮಾಂಸವನ್ನು ಆಕಾಶದ ಪಕ್ಷಿಗಳಿಗೂ ಅರಣಿಯ ಮೃಗ
ಗಳಿಗೂ ಆಹಾರವಾಗಿ ಕೊಡುವೆನು, ಅಂದನು.
೪೫ ಆಗ ದಾವೀದನು ಫಿಲಿಷ್ಟ್ಯನಿಗೆ ಹೇಳಿದ್ದೇನಂದರೆ, ನೀನು ಕತ್ತಿ
ಯ ಸಂಗಡಲೂ ಈಟಿಯ ಸಂಗಡಲೂ ಡಾಲಿನ ಸಂಗಡಲೂ ನ
ನ್ನು ಬಳಿಗೆ ಬರುತ್ತೀ; ಅದರೆ ನಾನು ನೀನು ನಿಂದಿಸಿದ ಇಸ್ರಯೇ
ಲಿನ ಸೈನ್ಯಗಳ ದೇವರಾದಂಥ ಸೈನ್ಯಗಳ ಕರ್ತನ ಹೆಸರಿನಲ್ಲಿ
೪೬ ನಿನ್ನ ಬಳಿಗೆ ಬರುತ್ತೇನೆ. ಕರ್ತನು ನಿನ್ನನ್ನು ನನ್ನ ಕೈಯಲ್ಲಿ
ಒಪ್ಪಿಸಿ ಕೊಡುವನು; ಮತ್ತು ನಾನು ನಿನ್ನನ್ನು ಹೊಡೆದು ಬಿಟ್ಟು,
ನಿನ್ನ ತಲೆಯನ್ನು ನಿನ್ನಿಂದ ತಪ್ಪಿಸಿ, ಫಿಲಿಷ್ಟ್ಯರ ದಂಡಿನ ಹೆಣಗ
ಳನ್ನು ಈ ದಿನ ಆಕಾಶದ ಪಕ್ಷಿಗಳಿಗೂ ಅರಣಿಯ ಮೃಗಗಳಿ



೪೭ ಗೂ ಆಹಾರವಾಗಿ ಕೊಡುವೆನು. ಮತ್ತು ಈ ದಿನ ಇಸ್ರಯೇಲಿ
ಗೆ ದೇವರು ಉಂಟೆಂದು, ಭೂಲೋಕದವರೆಲ್ಲರೂ ತಿಳಿಯುವರು.
ಕರ್ತನು ಕತ್ತಿಯಿಂದಲೂ ಈಟಿಯಿಂದಲೂ ರಕ್ಷಿಸುವದಿಲ್ಲ ಎಂದು,
ಈ ಕೂಟವೆಲ್ಲಾ ತಿಳಿದು ಕೊಳ್ಳುವದು; ಯಾಕಂದರೆ ಯುದ್ಧವು
ಕರ್ತನದು; ಅವನು ನಿಮ್ಮನ್ನು ನಮ್ಮ ಕೈಯಲ್ಲಿ ಒಪ್ಪಿಸಿ ಕೊಡು
ವನು, ಅಂದನು.
೪೮ ಮತ್ತು ಏನಾಯಿತಂದರೆ, ಆ ಫಿಲಿಷ್ಟ್ಯನು ಎದ್ದು, ದಾವೀದ
ನಿಗೆ ಎದುರಾಗಿ ಸಮೀಪಿಸಿ ಬರುವಾಗ, ದಾವೀದನು ತ್ವರೆಯಾಗಿ
೪೯ ಆ ಸೈನ್ಯಕ್ಕೆ, ಆ ಫಿಲಿಷ್ಟ್ಯನಿಗೆದುರಾಗಿ ಓಡಿ ಹೋಗಿ, ತನ್ನ ಕೈ
ಯನ್ನು ಚೀಲದಲ್ಲಿ ಹಾಕಿ, ಅದರಲ್ಲಿರುವ ಒಂದು ಕಲ್ಲನ್ನು ತೆಗೆ
ದು ಕೊಂಡು, ಕವಣೆಯಲ್ಲಿಟ್ಟು, ಬೀಸಿ, ಫಿಲಿಷ್ಟ್ಯನ ಹಣೆಯ
ನ್ನು ತಾಕ ಎಸೆದನು. ಆ ಕಲ್ಲು ಅವನ ಹಣೆಯೊಳಗೆ ಹೊಕ್ಕ
೫೦ ದ್ದರಿಂದ, ಅವನು ನೆಲದ ಮೇಲೆ ಬೋರ್ಲ ಬಿದ್ದನು. ಹೀಗೆಯೇ
ದಾವೀದನು ಒಂದು ಕವಣೆಯ ಕಲ್ಲಿನಿಂದ ಫಿಲಿಷ್ಟ್ಯನ ಮೇಲೆ ಬ
ಲಗೊಂಡು, ಫಿಲಿಷ್ಟ್ಯನನ್ನು ಹೊಡೆದು, ಅವನನ್ನು ಕೊಂದು ಹಾ
೫೧ ಕಿದನು. ಆದರೆ ದಾವೀದನ ಕೈಯಲ್ಲಿ ಕತ್ತಿಯು ಇರಲಿಲ್ಲ. ದಾ
ವೀದನು ಓಡಿ ಹೋಗಿ, ಫಿಲಿಷ್ಟ್ಯನ ಮೇಲೆ ನಿಂತು, ಅವನ ಕತ್ತಿಯ
ನ್ನು ತೆಗೆದು ಕೊಂಡು, ಅದನ್ನು ಬಕೆಯಿಂದ ಕಿತ್ತು, ಅವನನ್ನು
ಕೊಂದು, ಅವನ ತಲೆಯನ್ನು ಕಡಿದು ಹಾಕಿದನು. ಫಿಲಿಷ್ಟ್ಯರು
ತಮ್ಮ ಪರಾಕ್ರಮಶಾಲಿ ಸತ್ತು ಹೋದದ್ದನ್ನು ಕಂಡಾಗ, ಓಡಿ
ಹೋದರು.
೫೨ ಮತ್ತು ಇಸ್ರಯೇಲ ಮನುಷ್ಯರೂ ಯೆಹೂದದ ಮನುಷ್ಯ
ರೂ ಎದ್ದು, ಅರ್ಭಟಿಸಿ, ತಗ್ಗಿನ ಮೇರೆಯ ಮಟ್ಟಿಗೂ, ಎಕ್ರೋ
ನಿನ ಬಾಗಲುಗಳ ಪರ್ಯಂತರಕ್ಕೂ ಫಿಲಿಷ್ಟ್ಯರನ್ನು ಹಿಂದಟ್ಟಿದ
ರು. ಆದರಿಂದ ಕೊಲ್ಲಲ್ಪಟ್ಟ ಫಿಲಿಷ್ಟ್ಯರು ಷಾಯಿಮಿನ ಮಾ
ರ್ಗದಲ್ಲಿ ಗಾತಿನ ಮಟ್ಟಿಗೂ ಎಕ್ರೋನಿನ ಮಟ್ಟಿಗೂ ಬಿದ್ದಿದ್ದರು.
೫೩ ಇಸ್ರಯೇಲ್ ಮಕ್ಕಳು ಫಿಲಿಷ್ಟ್ಯರನ್ನು ಓಡಿಸಿ ಬಿಟ್ಟ ತರುವಾಯ,
೫೪ ತಿರಿಗಿ ಬಂದು, ಅವರ ಗುಡಾರಗಳನ್ನು ಕೊಳ್ಳೆ ಇಟ್ಟರು. ದಾವೀ
ದನು ಫಿಲಿಷ್ಟ್ಯನ ತಲೆಯನ್ನು ತಕ್ಕೊಂಡು, ಅದನ್ನು ಯೆರೂ
ಸಲೇಮಿಗೆ ತಂದನು. ಅದರೆ ಅವನ ಆಯುಧಗಳನ್ನು ತನ್ನ
ಗುಡಾರದಲ್ಲಿ ಇಟ್ಟನು.
೫೫ ದಾವೀದನು ಫಿಲಿಷ್ಟ್ಯನಿಗೆ ಎದುರಾಗಿ ಹೊರಟು ಹೋಗುವದ
ನ್ನು ಸೌಲನು ನೋಡುವಾಗ, ತನ್ನ ಸೈನ್ಯಾಧಿಪತಿಯಾದ ಅಬ್ನೇ
ರನಿಗೆ, ಅಬ್ನೇರನೇ, ಈ ಪ್ರಾಯಸ್ತನು ಯಾರ ಮಗನು! ಅಂ
ದನು. ಅದಕ್ಕೆ ಅಬ್ನೇರನು, ಅರಸನೇ, ನಿನ್ನ ಪ್ರಾಣದಾಣೆ
೫೬ ನಾನರಿಯೆ, ಅಂದನು. ಅದಕ್ಕರಸನು, ಆ ಯಾವನಸ್ತನು
೫೭ ಯಾರ ಮಗನೆಂದು ವಿಚಾರಿಸು, ಅಂದನು. ಆದದರಿಂದ ದಾವೀ
ದನು ಫಿಲಿಷ್ಟ್ಯನನ್ನು ಕೊಂದು, ಅವನ ತಲೆಯನ್ನು ತೆಗೆದು
ಕೊಂಡು, ತಿರಿಗಿ ಬರುವಾಗ, ಅಬ್ನೇರನು ಅವನನ್ನು ಕರೆದು,
೫೮ ಸೌಲನ ಮುಂದೆ ತಂದು ಬಿಟ್ಟನು. ಆಗ ಸೌಲನು, ಪ್ರಾಯಸ್ತ
ನೇ, ನೀನು ಯಾರ ಮಗನು! ಎಂದು ಅವನನ್ನು ಕೇಳಿದನು. ಅ
ದಕ್ಕೆ ದಾವೀದನು, ನಾನು ನಿನ್ನ ಸೇವಕನಾಗಿರುವ ಬೇತ್ಲೆಹೇಮಿ
ನವನಾದ ಇಷಾಯನ ಮಗನು, ಅಂದನು.

## ೧೮. ಸಂಧಿ.

೧ ಆದಕೆ ಅವನು ಸೌಲನ ಸಂಗಡ ಮಾತನಾಡಿ ತೀರಿಸಿದಾಗ,
ಯೊನತಾನನ ಪ್ರಾಣವು ದಾವೀದನ ಪ್ರಾಣದ ಸಂಗಡ ಕಟ್ಟಲ್ಪ
ಟ್ಟಿತು; ಯೊನತಾನನು ಅವನನ್ನು ತನ್ನ ಪ್ರಾಣದ ಹಾಗೆಯೇ
೨ ಪ್ರೀತಿ ಮಾಡಿದನು. ಇದಲ್ಲದೆ ಸೌಲನು ಆ ದಿವಸ ಅವನನ್ನು ತ
ನ್ನ ಬಳಿಯಲ್ಲಿ ಇಟ್ಟು ಕೊಂಡನು; ತಿರಿಗಿ ತನ್ನ ತಂದೆಯ ಮನೆ
೩ ಗೆ ಹೋಗ ಗೊಡಿಸಲಿಲ್ಲ. ಯೊನತಾನನು ದಾವೀದನನ್ನು ತನ್ನ
ಪ್ರಾಣದ ಹಾಗೆ ಪ್ರೀತಿ ಮಾಡಿದ್ದರಿಂದ, ಒಬ್ಬರಿಗೊಬ್ಬರು ಒಡಂಬ
೪ ಡಿಕೆಯನ್ನು ಮಾಡಿ ಕೊಂಡರು. ಆಗ ಯೊನತಾನನು ತೊಟ್ಟು
ಕೊಂಡಿದ್ದ ನಿಲುವಂಗಿಯನ್ನು ತೆಗೆದು, ಅದನ್ನೂ, ತನ್ನ ವಸ್ತ್ರ
ಗಳನ್ನೂ, ತನ್ನ ಕತ್ತಿಯನ್ನೂ, ತನ್ನ ಬಿಲ್ಲನ್ನೂ ತನ್ನ ನಡುಕ
ಟ್ಟನ್ನೂ ದಾವೀದನಿಗೆ ಕೊಟ್ಟನು.
೫ ಸೌಲನು ದಾವೀದನನ್ನು ಎಲ್ಲಿಗೆ ಕಳುಹಿಸಿದರೆ, ಅಲ್ಲಿಗೆ ಹೊರ
ಟು ಹೋಗಿ, ಅವನು ಬುದ್ಧಿಯಿಂದ ಕಾರ್ಯವನ್ನು ನಡಿಸುತ್ತಿದ್ದ
ನು. ಆದದರಿಂದ ಸೌಲನು ಅವನನ್ನು ಯುದ್ಧಸ್ಥರ ಮೇಲೆ ಅಧಿಕಾರಿ
ಯಾಗ ಮಾಡಿದನು. ಅವನು ಸಮಸ್ತ ಜನರ ಕಣ್ಣು ಮುಂದೆ
ಯೂ, ಸೌಲನ ಸಮಸ್ತ ಸೇವಕರ ಕಣ್ಣು ಮುಂದೆಯೂ, ಬಳ್ಳಿ
ಯವನಾಗಿದ್ದನು. ಆದರೆ ದಾವೀದನು ಫಿಲಿಷ್ಟ್ಯನನ್ನು ಹೊಡೆದು,
ಜನರ ಸಹಿತವಾಗಿ ಬರುವಾಗ, ಇಸ್ರಯೇಲ್ಯರ ಸಮಸ್ತ ಪಟ್ಟಣಗಳಿಂ
ದ ಸ್ತ್ರೀಯರು ಹೊರಟು, ದಪ್ಪುಡಿಗಳ್ಳಿಂದಲೂ ಸಂತೋಷದಿಂದ
ಲೂ ಮೂರು ತಂತ್ರೀ ವಾದ್ಯಗಳ್ಳಿಂದಲೂ ಹಾಡುತ್ತಾ, ನಾಟ್ಯವಾ
ಡುತ್ತಾ, ಅರಸನಾದ ಸೌಲನನ್ನು ಎದುರ್ಗೊಳ್ಳ ಬಂದರು. ಆ
೭ ಸ್ತ್ರೀಯರು ಆಡುತ್ತಾ, ಒಬ್ಬರಿಗೊಬ್ಬರು, ಸೌಲನು ಸಾವಿರಗಳ
ನ್ನೂ, ದಾವೀದನು ಹತ್ತು ಸಾವಿರಗಳನ್ನೂ ಕೊಂದನೆಂದು, ಪ್ರ
ತ್ಯುತ್ತರ ಕೊಟ್ಟರು.
೮ ಸೌಲನಿಗೆ ಬಹು ಕೋಪವಾಯಿತು; ಆ ಮಾತು ಅವನ ಕಣ್ಣು
ಗಳಿಗೆ ಕೆಟ್ಟದ್ದಾಗಿತ್ತು. ಇವರು ದಾವೀದನಿಗೆ ಹತ್ತು ಸಾವಿರಗಳ
ನ್ನು ಹೇಳಿ ಕೊಟ್ಟದ್ದಾರೆ; ನನಗೆ ಸಾವಿರಗಳನ್ನು ಹೇಳಿ ಕೊ
ಟ್ಟಿದ್ದಾರೆ; ಅವನಿಗೆ ರಾಜ್ಯವಲ್ಲದೆ ಇನ್ನು ಆಗ ಬೇಕಾದದ್ದೇನು!
೯ ಅಂದನು. ಆ ದಿವಸ ಮೊದಲುಗೊಂಡು ಸೌಲನು ದಾವೀದನ
ಮೇಲೆ ಕಣ್ಣಿಟ್ಟನು.
೧೦ ಮಾರನೆ ದಿವಸದಲ್ಲಿ ಏನಾಯಿತಂದರೆ, ದೇವರಿಂದ ಬಂದ ದು
ರಾತ್ಮವು ಸೌಲನ ಮೇಲೆ ಇಳಿಯಿತು. ಅವನು ಮನೆಯ ಮಧ್ಯ
ದಲ್ಲಿ ಪ್ರವಾದಿಸುತ್ತಿದ್ದನು. ಆಗ ದಾವೀದನು ದಿನ ದಿನ ಮಾಡುತ್ತಿ
ದ್ದ ಹಾಗೆಯೇ ತನ್ನ ಕೈಯಿಂದ ಬಾರಿಸುತ್ತಿದ್ದನು. ಅದರೆ ಸೌಲ
ನ ಕೈಯಲ್ಲಿ ಈಟಿಯು ಇತ್ತು. ಆಗ ಸೌಲನು, ದಾವೀದನನ್ನು
೧೧ ಗೋಡೆಗೆ ಹತ್ತಂತವಾಗ ಹೊಡೆಯುವೆನೆಂದು, ಈಟಿಯನ್ನು ಹಾ
ಕಿದನು. ಆದರೆ ದಾವೀದನು ಎರಡು ಸಾರಿ ಅವನ ಸಮುಖದಿಂದ
ತಪ್ಪಿಸಿ ಕೊಂಡನು.
೧೨ ಮತ್ತು ಸೌಲನು ದಾವೀದನಿಗೆ ಭಯ ಪಟ್ಟನು; ಯಾಕಂದರೆ
ಕರ್ತನು ಅವನ ಸಂಗಡ ಇದ್ದನು; ಸೌಲನ ಕಡೆಯಿಂದ ತೊಳಿಗಿ
೧೩ ಹೋಗಿದ್ದನು. ಆದದರಿಂದ ಸೌಲನು ಅವನನ್ನು ತನ್ನ ಬಳಿಯಿಂ
ದ ತೊಳಗಿಸಿ ಬಿಟ್ಟು, ಸಾವಿರ ಜನಕ್ಕೆ ಪ್ರಧಾನನಾಗಿಟ್ಟನು. ಹಾ
ಗೆಯೇ ಅವನು ಜನರ ಮುಂದೆ ಹೊರಟು ಹೋಗುತ್ತಾ, ಬರುತ್ತಾ,
೧೪ ಇದ್ದನು. ಆದರೆ ದಾವೀದನು ತನ್ನ ಸಕಲ ಮಾರ್ಗಗಳ್ಳಲ್ಲಿ ಬುದ್ಧಿ
೧೫ಯುಳ್ಳವನಾಗಿದ್ದನು; ಕರ್ತನು ಅವನ ಸಂಗಡ ಇದ್ದನು. ಸೌಲ
ನು ಅವನು ಮಹಾ ಬುದ್ಧಿವಂತನಾಗಿ ನಡಿಯುವದನ್ನು ನೋಡಿ,

೧೬ ಅವನಿಗೆ ಭಯ ಪಟ್ಟಿದ್ದನು. ಆದರೆ ಇಸ್ರಯೇಲ್ ಜನರೆಲ್ಲರೂ ಯೆಹೂದ ಜನರೆಲ್ಲರೂ ದಾವೀದನು ತಮ್ಮ ಮುಂದೆ ಹೊರಟು ಹೋಗುತ್ತಾ ಬರುತ್ತಾ ಇರುವದರಿಂದ, ಅವನನ್ನು ಪ್ರೀತಿ ಮಾಡಿದರು.

೧೭ ಆಗ ಸೌಲನು, ನನ್ನ ಕೈ ಅವನ ಮೇಲೆ ಇರ ಬಾರದು; ಫಿಲಿಷ್ಟ್ಯರ ಕೈ ಅವನ ಮೇಲೆ ಇರಲಿ, ಅಂದು ಕೊಂಡು, ದಾವೀದನಿಗೆ, ಇಗೋ, ನನ್ನ ಹಿರಿಯ ಮಗಳಾದ ಮೆರಾಬಳನ್ನು ನಿನಗೆ ಹೆಂಡತಿಯಾಗಿ ಕೊಡುವೆನು; ನೀನು ನನಗೋಸ್ಕರ ಪರಾಕ್ರಮಶಾಲಿಯಾಗಿದ್ದು, ಕರ್ತನ ಯುದ್ಧಗಳನ್ನು ನಡಿಸು, ಅಂದನು. ದಾವೀದನು ಸೌಲನಿಗೆ, ಅರಸನಿಗೆ ಅಳಿಯನಾಗಿರುವದಕ್ಕೆ ನಾನೆಷ್ಟರವನು! ನನ್ನ ಜೀವವು ಏನು! ಇಸ್ರಯೇಲಿನಲ್ಲಿ ನನ್ನ ತಂದೆಯ ೧೮ ಗೋತ್ರವು ಎಷ್ಟು ಮಾತ್ರ! ಅಂದನು. ಆದರೆ ಸೌಲನ ಮಗಳಾದ ಮೆರಾಬಳು ದಾವೀದನಿಗೆ ಕೊಡಲ್ಪಡುವದಕ್ಕಿರುವಾಗ, ಅವಳು ಮೆಹೋಲದವನಾದ ಅದ್ರಿಯೇಲನಿಗೆ ಹೆಂಡತಿಯಾಗಿ ಕೊಡಲ್ಪಟ್ಟಳು.

೧೦ ಇದಲ್ಲದೆ ಸೌಲನ ಮಗಳಾದ ಮೀಕಳು ದಾವೀದನನ್ನು ಪ್ರೀತಿ ಮಾಡಿದಳು. ಅದು ಸೌಲನಿಗೆ ತಿಳಿಸಲ್ಪಟ್ಟಾಗ, ಆ ಕಾರ್ಯ ೨೦ ಅವನಿಗೆ ಯುಕ್ತವಾಗಿ ತೋರಿತು. ಅವನಿಗೆ ಉರ್ಲಾಗಿರುವ ಹಾಗೆಯೂ, ಫಿಲಿಷ್ಟ್ಯರ ಕೈಯಿ ಅವನ ಮೇಲೆ ಬರುವ ಹಾಗೆಯೂ, ಇವಳನ್ನು ಅವನಿಗೆ ಕೊಡುವೆನು, ಅಂದು ಕೊಂಡನು. ಆದದರಿಂದ ಸೌಲನು ದಾವೀದನಿಗೆ ನೀನು ಎರಡನೆಯವಳಿಂದ ಈ ಹೊತ್ತು ಅಳಿಯನಾಗು, ಅಂದನು. ಮತ್ತು ಸೌಲನು ತನ್ನ ಸೇವಕರಿಗೆ, ನೀವು ದಾವೀದನ ಸಂಗಡ ಅಂತರಂಗವಾಗಿ ಮಾತನಾಡಿ, ಇಗೋ, ಅರಸನು ನಿನ್ನ ಮೇಲೆ ಪ್ರೀತಿಯುಳ್ಳವನಾಗಿ ಇದ್ದಾನೆ; ಈಗ ನೀನು ಅರಸನಿಗೆ ಅಳಿಯನಾಗೆಂದು ಹೇಳಿರಿ, ಎಂದು ಆಜ್ಞಾ ೨೩ ಪಿಸಿದನು. ಹಾಗೆಯೇ ಸೌಲನ ಸೇವಕರು ಈ ಮಾತುಗಳನ್ನು ದಾವೀದನ ಕಿವಿಗಳಲ್ಲಿ ಹೇಳಿದರು. ಆದರೆ ದಾವೀದನು, ನಾನು ದರಿದ್ರನೂ ಅಲ್ಪನಾಗಿ ಎಣಿಸಲ್ಪಟ್ಟವನೂ ಆಗಿರುವಾಗ, ನಾನು ಅರಸನಿಗೆ ಅಳಿಯನಾಗುವದು ನಿಮ್ಮ ಕಣ್ಣುಗಳಿಗೆ ಅಲ್ಪವಾಗಿ ಕಾಣುತ್ತದೆಯೋ! ಅಂದನು. ಆಗ ಸೌಲನ ಸೇವಕರು ಅವನಿಗೆ, ದಾವೀದನು ಈ ಪ್ರಕಾರವಾಗಿ ಮಾತಾಡಿದನೆಂದು, ಹೇಳಿದರು. ೨೫ ಆದರೆ ಸೌಲನು, ದಾವೀದನನ್ನು ಫಿಲಿಷ್ಟ್ಯರ ಕೈಯಿಂದ ಬೀಳಮಾಡ ಬೇಕೆಂದು ನೆನೆಸಿ, ತನ್ನ ಸೇವಕರಿಗೆ ಹೇಳಿದ್ದೇನಂದರೆ, ನೀವು ದಾವೀದನಿಗೆ, ಅರಸನು ತೆರವನ್ನು ಅಪೇಕ್ಷಿಸದೆ, ತನ್ನ ಶತ್ರುಗಳಿಗೆ ಮುಯ್ಯಿಗೆ ಮುಯ್ಯಿ ಕೊಡುವ ಹಾಗೆ, ನೂರು ಮಂದಿ ಫಿಲಿಷ್ಟ್ಯರ ಮುಂದೊಗಲನ್ನು ಅಪೇಕ್ಷಿಸುತ್ತಾನೆಂದು ಹೇಳಿರಿ, ೨೬ ಅಂದನು. ಹಾಗೆಯೇ ಅವನ ಸೇವಕರು ದಾವೀದನಿಗೆ ಈ ಮಾತುಗಳನ್ನು ತಿಳಿಸಿದಾಗ, ಅರಸನಿಗೆ ಅಳಿಯನಾಗುವದು ಅವನಿ ೨೭ ಗೆ ಚನ್ನಾಗಿ ಕಾಣಿಸಿತು. ಆದದರಿಂದ ನೇಮಿಸಿದ ದಿವಸಗಳು ಈಡೇರುವದಕ್ಕಿಂತ ಮುಂಚೆ, ಅವನು ಎದ್ದು, ತನ್ನ ಮನುಷ್ಯರನ್ನು ಕರ ಕೊಂಡು ಹೋಗಿ, ಫಿಲಿಷ್ಟ್ಯರಲ್ಲಿ ಇನ್ನೂರು ಜನರನ್ನು ಹೊಡೆದು, ಆ ಮುಂದೊಗಲುಗಳನ್ನು ತಂದು, ತಾನು ಅರಸನಿಗೆ ಅಳಿಯನಾಗುವ ಹಾಗೆ, ಅವುಗಳನ್ನು ಅರಸನಿಗೆ ಪೂರ್ಣವಾಗಿ ಒಪ್ಪಿಸಿದನು. ಆಗ ಸೌಲನು ತನ್ನ ಕುಮಾರ್ತೆಯಾದ ಮೀಕಳನ್ನು ಅವನಿಗೆ ಹೆಂಡತಿಯಾಗ ಕೊಟ್ಟನು. ಆದರೆ ಸೌಲನು ಕರ್ತನು ದಾವೀದನ ಸಂಗಡ ಇದ್ದಾನೆಂದೂ, ತನ್ನ ಮಗಳಾದ ಮೀಕಳು ಅವನನ್ನು ಪ್ರೀತಿ ಮಾಡಿ ಇದ್ದಾಳೆಂದೂ ತಿಳಿದು ಕೊಂಡನು; ಮತ್ತು ಸೌಲನು ದಾವೀದನಿಗೋಸ್ಕರ ಅಧಿಕ ಭಯ ಪಟ್ಟನು; ಮತ್ತು ಸೌಲನು ನಿರಂತರದಲ್ಲಿ ದಾವೀದನಿಗೆ ಶತ್ರುವಾ ೨೯ ಗಿದ್ದನು. ಆಗ ಫಿಲಿಷ್ಟ್ಯರ ಪ್ರಧಾನರು ಹೊರಟರು. ಅವರು ಹೊರಟೆ ತರುವಾಯ, ದಾವೀದನು ಸೌಲನ ಸಮಸ್ತ ಸೇವಕರಿಗಿಂತ ಬುದ್ಧಿಯಾಗಿ ಕಾರ್ಯವನ್ನು ನಡಿಸಿದನು. ಆದದರಿಂದ ಅವನ ಹೆಸರು ಬಹಳ ಅಮೂಲ್ಯವಾಗಿತ್ತು.

## ೧೯. ಸಂಧಿ.

೧ ಮತ್ತು ಸೌಲನು ದಾವೀದನನ್ನು ಕೊಂದು ಹಾಕುವ ಹಾಗೆ ತನ್ನ ಮಗನಾದ ಯೊನತಾನನ ಸಂಗಡಲೂ ತನ್ನ ಸಮಸ್ತ ಸೇವಕರ ಸಂಗಡಲೂ ಮಾತಾಡಿದನು. ಆದರೆ ಸೌಲನ ಮಗನಾದ ೨ ಯೊನತಾನನು ದಾವೀದನ ಮೇಲೆ ಮಹಾ ಸ್ನೇಹವುಳ್ಳವನಾಗಿದ್ದನು; ಮತ್ತು ಯೊನತಾನನು ದಾವೀದನಿಗೆ ತಿಳಿಸಿದ್ದೇನಂದರೆ, ನನ್ನ ತಂದೆಯಾದ ಸೌಲನು ನಿನ್ನನ್ನು ಕೊಂದು ಹಾಕ ಹುಡುಕುತ್ತಾನೆ; ಈಗ ನೀನು ನಾಳೆ ಉದಯದ ಪರ್ಯಂತರ ಹೆಚ್ಚರಿಕೆಯಾಗಿದ್ದು, ಮರೆಯಾದ ಸ್ಥಳದಲ್ಲಿ ಇದ್ದು, ಅಡಗಿಕೋ. ೩ ಆಗ ನಾನು ಹೊರಟು ಬಂದು, ನೀನು ಇರುವ ಹೊಲದಲ್ಲಿ, ನನ್ನ ತಂದೆಯ ಬಳಿಯಲ್ಲಿ ನಿಂತು ಕೊಂಡು, ನಿನಗೋಸ್ಕರ ನನ್ನ ತಂದೆಯ ಸಂಗಡ ಮಾತಾಡಿ, ನಾನು ನೋಡುವದನ್ನು ನಿನಗೆ ತಿಳಿಸುವೆನು, ಅಂದನು.

೪ ಹಾಗೆಯೇ ಯೊನತಾನನು ತನ್ನ ತಂದೆಯಾದ ಸೌಲನ ಸಂಗಡ ದಾವೀದನನ್ನು ಕುರಿತು ಬಳ್ಳೇದನ್ನು ಮಾತಾಡಿ, ಅವನಿಗೆ ಹೇಳಿದ್ದು, ಅರಸನು ತನ್ನ ಸೇವಕನಾದ ದಾವೀದನಿಗೆ ವಿರೋಧವಾಗಿ ಪಾಪ ಮಾಡದೆ ಇರಲಿ. ಯಾಕಂದರೆ ಅವನು ನಿನಗೆ ವಿರೋಧವಾಗಿ ಪಾಪ ಮಾಡಲಿಲ್ಲವು. ಅವನ ಕ್ರಿಯೆಗಳು ನಿನಗೆ ೫ ಮಹಾ ಉತ್ತಮವಾಗಿವೆ ಏನಂದರೆ ಅವನು ತನ್ನ ಪ್ರಾಣವನ್ನು ತನ್ನ ಕೈಯಲ್ಲಿ ಹಿಡು ಕೊಂಡು, ಫಿಲಿಷ್ಟ್ಯನನ್ನು ಹೊಡೆದನು. ಮತ್ತು ಕರ್ತನು ಸಮಸ್ತ ಇಸ್ರಯೇಲಿಗೋಸ್ಕರ ದೊಡ್ಡ ರಕ್ಷಣೆಯನ್ನು ಉಂಟು ಮಾಡಿದನು. ನೀನು ನೋಡಿ, ಸಂತೋಷಪಟ್ಟೆ; ಈಗ ಕಾರಣವಿಲ್ಲದೆ ದಾವೀದನನ್ನು ಕೊಂದು, ನಿರಪರಾಧವಾದ ರಕ್ತಕ್ಕೆ ವಿರೋಧವಾಗಿ ಪಾಪವನ್ನು ಮಾಡುವದು ಯಾ ೬ ಕೆ! ಅಂದನು. ಆಗ ಸೌಲನು ಯೊನತಾನನ ಮಾತನ್ನು ಕೇಳಿ, ೭ ಕರ್ತನಾಣೆ ಅವನು ಕೊಲೆ ಪಡುವದಿಲ್ಲ, ಅಂದನು. ಆಗ ಯೊನತಾನನು ದಾವೀದನನ್ನು ಕರೆದು, ಆ ಮಾತುಗಳನ್ನೆಲ್ಲಾ ಅವನಿಗೆ ತಿಳಿಸಿ, ದಾವೀದನನ್ನು ಸೌಲನ ಬಳಿಗೆ ಕರ ತಂದನು; ಅವನು ಮುಂಚಿನ ಹಾಗೆಯೇ ಅವನ ಬಳಿಯಲ್ಲಿ ಇದ್ದನು.

೮ ಆದರೆ ಶಿರಿಗೆ ಯುದ್ಧ ಉಂಟಾಯಿತು; ಆಗ ದಾವೀದನು ಹೊರಟು, ಫಿಲಿಷ್ಟ್ಯರ ಸಂಗಡ ಯುದ್ಧ ಮಾಡಿ, ಅವರನ್ನು ದೊಡ್ಡ ಸಂಹಾರದಿಂದ ಹೊಡೆದನು, ಅವರು ಅವನ ಎದುರಿನಿಂದ ಓಡಿ ಹೋದರು.

೯ ಮತ್ತು ಸೌಲನು ತನ್ನ ಕೈಯಲ್ಲಿ ಈಟಿಯನ್ನು ಹಿಡಿದು, ತನ್ನ ಮನೆಯೊಳಗೆ ಕುಳಿತಿರುವಾಗ, ಕರ್ತನಿಂದ ಕಳುಹಿಸಲ್ಪಟ್ಟ ದುರಾತ್ಮವು ಅವನ ಮೇಲೆ ಬಂತು; ದಾವೀದನು ತನ್ನ ಕೈಯಿಂದ



೧೦ ಬಾರಿಸಿದನು. ಆಗ ಸೌಲನು ದಾವೀದನನ್ನು ಈಟಿಯಿಂದ ಗೋಡೆಗೆ ಹತ್ತಂಡವಾಗುವ ಹಾಗೆ ಹೊಡೆಯ ಹುಡಿಕಿದನು; ಆದರೆ ಇವನು ಸೌಲನ ಎದುರಿನಿಂದ ತಪ್ಪಿಸಿ ಕೊಂಡನು. ಅವನು ಈಟಿಯನ್ನು ಗೋಡೆಯಲ್ಲಿ ಹೊಗ ಹೊಡೆದನು. ದಾವೀದನು ಓಡಿ ೧೧ ಹೋಗಿ, ಆ ರಾತ್ರಿಯಲ್ಲಿ ತಪ್ಪಿಸಿ ಕೊಂಡನು. ಆದರೆ ದಾವೀದನನ್ನು ಕಾದು ಕೊಂಡಿದ್ದು, ಉದಯದಲ್ಲಿ ಅವನನ್ನು ಕೊಂದು ಹಾಕುವ ಹಾಗೆ, ಸೌಲನು ಅವನ ಮನೆಗೆ ದೂತರನ್ನು ಕಳುಹಿಸಿದನು. ಆಗ ಅವನ ಹೆಂಡತಿಯಾದ ಮೀಕಳು ಅವನಿಗೆ, ನೀನು ಈ ರಾತ್ರಿಯಲ್ಲಿ ನಿನ್ನ ಪ್ರಾಣವನ್ನು ತಪ್ಪಿಸಿ ಕೊಳ್ಳದೆ ಹೋದರೆ, ೧೨ ನಾಳೆ ಕೊಲ್ಲಲ್ಪಡುವಿ ಎಂದು ಹೇಳಿ, ಮೀಕಳು ದಾವೀದನನ್ನು ಕಿಟಕಿಯ ಮಾರ್ಗವಾಗಿ ಇಳಿಸಿ ಬಿಟ್ಟಳು. ಅವನು ತಪ್ಪಿಸಿ ಕೊಂ ೧೩ ಡು, ಓಡಿ ಹೋದನು. ತರುವಾಯ ಮೀಕಳು ಒಂದು ಗೊಂಬೆಯನ್ನು ತೆಗೆದು ಕೊಂಡು, ಮಂಚದ ಮೇಲೆ ಮಲಗಿಸಿ, ಅದರ ತಲೇ ಭಾಗದಲ್ಲಿ ಒಂದು ಕುರಿ ಉಣ್ಣೆಯ ತಲೆಗಿಂಬನ್ನು ಹಾಕಿ, ೧೪ ಅದನ್ನು ವಸ್ತ್ರದಿಂದ ಮುಚ್ಚಿದಳು. ಸೌಲನು ದಾವೀದನನ್ನು ಹಿಡು ಕೊಂಡು ಬರ ದೂತರನ್ನು ಕಳುಹಿಸಿದಾಗ, ಅವನು ಕೋ ೧೫ ಗದಲ್ಲಿದ್ದಾನೆ, ಅಂದಳು. ಶಿರಿಗೆ ಸೌಲನು ದಾವೀದನನ್ನು ನೋಡುವದಕ್ಕೋಸ್ಕರ ದೂತರನ್ನು ಕಳುಹಿಸಿ, ಅವನನ್ನು ನಾನು ಕೊಂದು ಹಾಕುವ ಹಾಗೆ, ನೀವು ಮಂಚದ ಸಂಗಡ ನನ್ನ ಬಳಿಗೆ ತ ೧೬ ಕ್ಕೊಂಡು ಬನ್ನಿರಿ, ಅಂದನು. ಹಾಗೆಯೇ ಸೇವಕರು ಬಂದು, ನೋಡಿದಾಗ, ಇಗೋ, ಗೊಂಬೆಯು ಮಂಚದ ಮೇಲೆ ಇತ್ತು; ೧೭ ಅದರ ತಲೆಗೆ ಬಂದು ಕುರಿ ಉಣ್ಣೆಯ ತಲೆಗಿಂಬು ಇತ್ತು. ಆಗ ಸೌಲನು ಮೀಕಳಿಗೆ, ನೀನು ಈ ಪ್ರಕಾರ ನನ್ನನ್ನು ಮೋಸ ಮಾಡಿ, ನನ್ನ ಶತ್ರುವನ್ನು ಕಳುಹಿಸಿದ್ದೇನು! ಅವನು ತಪ್ಪಿಸಿ ಕೊಂಡನಲ್ಲ! ಅಂದನು. ಆಗ ಮೀಕಳು ಸೌಲನಿಗೆ ಪ್ರತ್ಯುತ್ತರವಾಗಿ, ಅವನು ನನಗೆ, ನಾನು ನಿನ್ನನ್ನು ಕೊಂದು ಹಾಕುವದು ಯಾಕೆ! ನನ್ನನ್ನು ಹೋಗ ಗೊಡಿಸೆಂದು ಹೇಳಿದನು, ಅಂದಳು.

೧೮ ಹೀಗೆಯೇ ದಾವೀದನು ಓಡಿ ಹೋಗಿ, ತಪ್ಪಿಸಿ ಕೊಂಡು, ರಾಮದಲ್ಲಿರುವ ಸಮುವೇಲನ ಬಳಿಗೆ ಬಂದು, ಸೌಲನು ತನಗೆ ಮಾಡಿದ್ದನ್ನೆಲ್ಲಾ ಅವನಿಗೆ ತಿಳಿಸಿದನು. ಮತ್ತು ಅವನೂ ಸಮುವೇಲನೂ ೧೯ ಹೋಗಿ, ನಯೋತಿನಲ್ಲಿ ವಾಸವಾಗಿದ್ದರು. ಆಗ, ಇಗೋ, ದಾವೀದನು ರಾಮದ ನಯೋತಿನಲ್ಲಿ ಇದ್ದಾನೆಂದು, ಸೌಲನಿಗೆ ತಿಳಿಸ ೨೦ ಲ್ಪಟ್ಟಿತು. ಆದದರಿಂದ ಸೌಲನು ದಾವೀದನನ್ನು ಹಿಡು ಕೊಂಡು ಬರ, ದೂತರನ್ನು ಕಳುಹಿಸಿದನು. ಅವರು ಪ್ರವಾದಿಗಳ ಗುಂಪು ಪ್ರವಾದಿಸುವದನ್ನೂ, ಅವರ ಮೇಲೆ ಯಜಮಾನನಾಗಿರುವ ಸಮುವೇಲನು ನಿಂತಿರುವದನ್ನೂ ನೋಡಿದಾಗ, ದೇವರ ಆತ್ಮವು ಸೌಲನ ದೂತರ ಮೇಲೆ ಬಂತು; ಅವರು ಕೂಡ ಪ್ರವಾದಿಸಿದರು. ೨೧ ಇದು ಸೌಲನಿಗೆ ತಿಳಿಸಲ್ಪಟ್ಟಾಗ, ಅವನು ಬೇರೆ ದೂತರನ್ನು ಕಳುಹಿಸಿದನು; ಅವರೂ ಹಾಗೆಯೇ ಪ್ರವಾದಿಸಿದರು. ಮತ್ತು ಮೂರನೇ ಸಾರಿ ಸೌಲನು ದೂತರನ್ನು ಕಳುಹಿಸಿದನು; ಅವರೂ ಹಾಗೆ ೨೨ ಯೇ ಪ್ರವಾದಿಸಿದರು. ಆಗ ಸೌಲನು ತಾನೇ ರಾಮಕ್ಕೆ ಹೋದನು; ಸೇಕದಲ್ಲಿರುವ ದೊಡ್ಡ ಭಾವಿಯ ಬಳಿಗೆ ಬಂದು, ಸಮುವೇಲನೂ ದಾವೀದನೂ ಎಲ್ಲಿ ಇದ್ದಾಗೆಂದು, ಕೇಳಿದನು. ಆಗ ಒಬ್ಬನು, ಇಗೋ, ಅವರು ರಾಮದ ನಯೋತಿನಲ್ಲಿದ್ದಾಗೆ, ಅಂದನು. ೨೩ ಹಾಗೆಯೇ ಅವನು ರಾಮದ ನಯೋತಿಗೆ ಹೋದನು. ಆಗ ದೇವರ ಆತ್ಮವು ಅವನ ಮೇಲೆ ಬಂತು; ಅವನು ರಾಮದ ನಯೋತಿಗೆ ಸೇರುವ ಪರ್ಯಂತರ ಪ್ರವಾದಿಸುತ್ತಾ ಬರುವನು. ೨೪ ಅಲ್ಲಿ ತನ್ನ ವಸ್ತ್ರಗಳನ್ನು ಬಿಚ್ಚಿ ಹಾಕಿ, ತಾನೂ ಹಾಗೆಯೇ ಸಮುವೇಲನ ಮುಂದೆ ಪ್ರವಾದಿಸಿದನು; ಆ ದಿನ ಹಗಲೆಲ್ಲವೂ ರಾತ್ರಿಯೆಲ್ಲವೂ ಬೆತ್ತಲೆಯಾಗಿ ಬಿದ್ದಿದ್ದನು. ಆದದರಿಂದ, ಸೌಲನು ಕೂಡಾ ಪ್ರವಾದಿಗಳಲ್ಲಿ ಇದ್ದಾನೋ! ಅಂಬುವರು.

## ೨೦. ಸಂಧಿ.

೧ ಆದರೆ ದಾವೀದನು ರಾಮದ ನಯೋತಿನಿಂದ ಓಡಿ ಹೋಗಿ, ಯೊನತಾನನ ಬಳಿಗೆ ಬಂದು, ಅವನ ಮುಂದೆ, ನಾನು ಏನು ಮಾಡಿದೆನು! ನನ್ನ ಅಕ್ರಮವೇನು! ನಿನ್ನ ತಂದೆಯು ನನ್ನ ಪ್ರಾಣ ಹುಡುಕುವ ಹಾಗೆ, ನಾನು ಅವನಿಗೆ ಮಾಡಿದ ಪಾಪವೇನು! ಅಂ ೨ ದನು. ಅವನು ಇವನಿಗೆ, ಅದು ಆಗ ಬಾರದು; ನೀನು ಸಾಯುವದಿಲ್ಲ; ಇಗೋ, ನನ್ನ ತಂದೆಯು ನನಗೆ ತಿಳಿಸದೆ, ಯಾವ ಚಿಕ್ಕ ಕಾರ್ಯವನ್ನಾದರೂ ದೊಡ್ಡ ಕಾರ್ಯವನ್ನಾದರೂ ಮಾಡನು. ಈ ಕಾರ್ಯವನ್ನು ಯಾತಕ್ಕೆ ನನ್ನ ತಂದೆಯು ೩ ನನಗೆ ಬಚ್ಚಿಟ್ಟಾನು! ಹಾಗೆ ಆಗದು, ಅಂದನು. ಆಗ ದಾವೀದನು ಮತ್ತು ಆಣೆ ಇಟ್ಟು ಹೇಳಿದ್ದು, ನಿನ್ನ ಕಣ್ಣು ಮುಂದೆ ನನಗೆ ದಯೆ ದೊರಕಿತೆಂದು, ನಿನ್ನ ತಂದೆಯು ನಿಶ್ಚಯವಾಗಿ ಬಲ್ಲನು; ಆದಕಾರಣ ಅವನು ಯೊನತಾನನು ವ್ಯಥೆ ಪಡದ ಹಾಗೆ, ಅವನು ಇದನ್ನು ತಿಳಿಯ ಬಾರದು ಎಂದು, ಅನ್ನುತ್ತಾನೆ. ನಿಶ್ಚಯವಾಗಿ, ಕರ್ತನಾಣೆ, ನನ್ನ ಪ್ರಾಣದಾಣೆ, ನನಗೂ ಮರಣ ೪ ಕ್ಕೂ ಬಂದು ಅಡಿ ದೂರ ಮಾತ್ರವೆದೆ, ಅಂದನು. ಆಗ ಯೊನತಾನನು ದಾವೀದನಿಗೆ, ನಿನ್ನ ಪ್ರಾಣವು ಏನೇನು ಹೇಳುತ್ತದೋ, ನಿನಗೋಸ್ಕರ ಮಾಡುವೆನು, ಅಂದನು.

೫ ದಾವೀದನು ಯೊನತಾನನಿಗೆ ಹೇಳಿದ್ದೇನಂದರೆ, ಇಗೋ, ನಾಳೆ ಶುದ್ಧ ಚಾತ್ಯವು; ಆದದರಿಂದ ನಾನು ಅರಸನ ಸಂಗಡ ಬಂಟಿಯಲ್ಲಿ ಉಣ್ಣಾ ಬೇಕಾಗಿರುವದು. ನಾನು ಮೂರನೇ ದಿವಸದ ಸಾಯಂಕಾಲದ ಪರ್ಯಂತರ ಹೊಲದಲ್ಲಿ ಬಚ್ಚಿಟ್ಟು ಕೊಂಡಿರ, ೬ ನನ್ನನ್ನು ಹೋಗ ಗೊಡಿಸು. ನಿನ್ನ ತಂದೆಯು ನನ್ನನ್ನು ವಿಚಾರಿಸೇ ವಿಚಾರಿಸಿ, ಅವನು ಎಲ್ಲಿ ಎಂದು ಕೇಳಿದರೆ, ದಾವೀದನು ತನ್ನ ಊರಾದ ಬೇತ್ಲೆಹೇಮಿಗೆ ಓಡಿ ಹೋಗ ನನ್ನನ್ನು ಬಹಳವಾ ೭ ಗಿ ಬೇಡಿ ಕೊಂಡನು, ಯಾಕಂದರೆ ತನ್ನ ಸಮಸ್ತ ಗೋತ್ರಕ್ಕೋಸ್ಕರ ವರುಷದ ಬಲಿ ಉಂಟು. ಅದಕ್ಕೆ ಅವನು ಒಳ್ಳೇದೆಂದು ಹೇಳಿದರೆ, ನಿನ್ನ ಸೇವಕನಿಗೆ ಸಮಾಧಾನವಾಗಿರುವದು; ಅವನು ಬಹಳ ಕೋಪ ಮಾಡಿದರೆ, ಅವನಿಂದ ಕೇಡು ಸ್ಥಿರ ಮಾಡಲ್ಪಟ್ಟಿತೆಂದು ತಿಳುಕೋ. ಆದದರಿಂದ ನೀನು ನಿನ್ನ ಸೇವಕನ ೮ ಮೇಲೆ ಕೃಪೆ ತೋರಿಸ ಬೇಕು; ಯಾಕಂದರೆ ಕರ್ತನ ಮುಂದೆ ನಿನ್ನ ಸೇವಕನನ್ನು ನಿನ್ನ ಸಂಗಡ ಬಡಂಬಡಿಕೆಗೆ ಒಳಗಾಗ ಮಾಡಿ ಕೊಂಡಿ. ನನ್ನಲ್ಲಿ ಅಕ್ರಮವಿದ್ದರೆ, ನೀನೇ ನನ್ನನ್ನು ಕೊಂದು ಹಾಕು; ನನ್ನನ್ನು ನಿನ್ನ ತಂದೆಯ ಬಳಿಗೆ ಮೈಯ್ಯುವದು ಯಾಕೆ! ಅಂದನು.

೯ ಆಗ ಯೊನತಾನನು, ಅದು ನಿನಗೆ ದೂರವಾಗಿರಲಿ; ಯಾಕಂದರೆ ಕೇಡು ನಿನ್ನ ಮೇಲೆ ಬರ ಮಾಡ ನನ್ನ ತಂದೆಯಿಂದ ನಿರ್ಧಾರ್ಯ ಮಾಡಲ್ಪಟ್ಟಿತೆಂದು ತಿಳಿದೇ ತಿಳಿದರೆ, ನಾನು ಅದನ್ನು ನಿನಗೆ ತಿಳಿಸದೆ ಇರುವೆನೋ! ಅಂದನು.

೧೦ ಆಗ ದಾವೀದನು ಯೊನತಾನನಿಗೆ, ನಿನ್ನ ತಂದೆಯು ನಿನಗೆ
ಕಠಿಣವಾದ ಪ್ರತ್ಯುತ್ತರ ಹೇಳಿದರೆ, ಅದನ್ನು ನನಗೆ ತಿಳಿಸುವವನು
೧೧ ಯಾರು? ಅಂದನು. ಆಗ ಯೊನತಾನನು ದಾವೀದನಿಗೆ, ನಾ
ವು ಹೊಲಬಿಗೆ ಹೋಗುವ ಬಾ, ಅಂದನು. ಹಾಗೆಯೇ ಅವರಿಬ್ಬ
೧೨ ರು ಹೊಲಬಿಗೆ ಹೊರಟು ಹೋದರು. ಮತ್ತು ಯೊನತಾನನು
ದಾವೀದನಿಗೆ ಹೇಳಿದ್ದೇನಂದರೆ, ಇಸ್ರಯೇಲ್ಯರ ದೇವರಾದ ಕರ್ತ
ನೇ ಸಾಕ್ಷಿ—ನಾನು ನಾಳೆ ನಾಡಿದ್ದರೊಳಗೆ ನನ್ನ ತಂದೆಯನ್ನು
ವಿಚಾರಿಸಲು, ಇಗೋ, ದಾವೀದನ ಮೇಲೆ ದಯವಾದರೆ, ನಿನ್ನ
ಕಿವಿಗಳಿಗೆ ಕೇಳಿಸುವ ಹಾಗೆ, ನಿನಗೆ ಹೇಳಿ ಕಳುಹಿಸದೆ ಇದ್ದರೆ,
ಕರ್ತನು ಯೊನತಾನನಿಗೆ ಅದಕ್ಕಿಂತ ಅಧಿಕವಾಗಿ ಮಾಡಲಿ.
೧೩ ಅದಕೆ ನಿನಗೆ ಕೇಡು ಮಾಡ ನನ್ನ ತಂದೆಗೆ ಮನಸ್ಸಾಗಿದ್ದರೆ, ಅದ
ನ್ನು ನಿನ್ನ ಕಿವಿಗಳಿಗೆ ಕೇಳಿಸಿ, ನೀನು ಸಮಾಧಾನದಿಂದ ಹೋ
೧೪ ಗುವ ಹಾಗೆ, ನಿನ್ನನ್ನು ಕಳುಹಿಸುವೆನು. ಕರ್ತನು ನನ್ನ ತಂದೆ
ಯ ಸಂಗಡ ಇದ್ದ ಹಾಗೆ ನಿನ್ನ ಸಂಗಡ ಇರಲಿ. ಅದಕೆ ನಾನು ಇ
ನ್ನೂ ಬದುಕುತ್ತಿರುವಾಗ, ನಾನು ಸಾಯದ ಹಾಗೆ, ನೀನು ಕ
ರ್ತನ ದಯವನ್ನು ನನ್ನ ಮೇಲೆ ತೋರಿಸ ಬೇಕಾದದ್ದಲ್ಲದೆ,
೧೫ ಕರ್ತನು ದಾವೀದನ ಶತ್ರುಗಳನ್ನು, ಒಬ್ಬನೂ ಇಲ್ಲದ ಹಾಗೆ,
ಭೂಮಿಯಲ್ಲಿಂದ ಕಡಿದು ಬಿಟ್ಟಾಗ, ಎಂದಿಗೂ ನಿನ್ನ ಕೃಪೆಯೆ
೧೬ ನ್ನು ನನ್ನ ಮನೆಯಿಂದ ಕಡಿದು ಹಾಕ ಬಾರದು, ಅಂದನು. ಹೀ
ಗೆಯೇ ಯೊನತಾನನು ದಾವೀದನ ಮನೆಯ ಸಂಗಡ ಬಹುಬಿಡಿ
ಕೆಯನ್ನು ಮಾಡಿ, ದಾವೀದನ ಶತ್ರುಗಳಿಂದ ಕರ್ತನು ಲೆಬ್ಬವನ್ನು
೧೭ ಕೇಳಿಲಿ, ಅಂದನು. ಮತ್ತು ಯೊನತಾನನು ದಾವೀದನನ್ನು ಪ್ರೀತಿ
ಮಾಡಿದ್ದರಿಂದ, ಅವನಿಂದ ತಿರಿಗಿ ಪ್ರಮಾಣ ತೆಗೆದು ಕೊಂಡನು;
ಯಾಕಂದರೆ ಅವನು ತನ್ನ ಪ್ರಾಣವನ್ನು ಪ್ರೀತಿ ಮಾಡಿದ ಹಾ
ಗೆಯೇ ಅವನನ್ನು ಪ್ರೀತಿ ಮಾಡಿದನು.

೧೮ ಮತ್ತು ಯೊನತಾನನು ದಾವೀದನಿಗೆ ಹೇಳಿದ್ದೇನಂದರೆ, ನಾಳೆ
ಶುದ್ಧ ಪಾಸ್ಯವು; ನೀನು ವಿಚಾರಿಸಲ್ಪಡುವಿ; ಯಾಕಂದರೆ ನಿನ್ನ
೧೯ ಸ್ಥಳವು ಬರಿದಾಗಿರುವದು. ನೀನು ಮೂರು ದಿವಸ ತಡೆದ ತರು
ವಾಯ, ಕೆಲಸವು ನಡಿಯುತ್ತಿರುವಾಗ, ನೀನು ಬಚ್ಚಿಟ್ಟು ಕೊಂಡು
ಇದ್ದ ಸ್ಥಳಕ್ಕೆ ತ್ವರೆಯಾಗಿ ತಿರಿಗಿ ಬಂದು, ಏಜಲ್ ಎಂಬ ಕಲ್ಲಿನ
೨೦ ಬಳಿಯಲ್ಲಿ ಕುಳ್ತಿರು. ಆಗ ನಾನು ಗುರಿ ಇಟ್ಟು ಹಾಕುವ ಹಾಗೆ
ಅದರ ಪಾರ್ಶ್ವವಾಗಿ ಮೂರು ಬಾಣಗಳನ್ನು ಎಸೆಯುವೆನು.
೨೧ ಮತ್ತು, ಇಗೋ, ಹುಡುಗನನ್ನು ಕಳುಹಿಸಿ, ಆ ಬಾಣಗಳನ್ನು ಹು
ಡುಕಿ ಕೊಂಡು ಬಾ, ಎಂದು ಹೇಳುವೆನು. ಇಗೋ, ಆ ಬಾಣಗ
ಳು ನಿನಗೆ ಈಚೆ ಬಿದ್ದವೆ; ಅವುಗಳನ್ನು ತೆಗೆದು ಕೊಂಡು ಬಾ
ಎಂದು, ನಾನು ಹುಡುಗನಿಗೆ ಹೇಳೇ ಹೇಳಿದರೆ, ನೀನು ಬರ ಬಹು
ದು. ಯಾಕಂದರೆ, ಕರ್ತನಾಣೆ, ನಿನಗೆ ಕೇಡಿಲ್ಲದೆ ಸಮಾಧಾ
೨೨ ನವಿರುವದು. ಆದರೆ, ಇಗೋ, ಬಾಣಗಳು ನಿನಗೆ ಆಚೆ ಬಿದ್ದವೆ
ಎಂದು, ಹುಡುಗನಿಗೆ ಹೇಳಿದರೆ, ಹೊರಟು ಹೋಗು; ಯಾಕಂ
೨೩ ದರೆ ಕರ್ತನು ನಿನ್ನನ್ನು ಕಳುಹಿಸಿದನು. ನಾನೂ ನೀನೂ ಮಾ
ತಾಡಿ ಕೊಂಡ ಈ ಕಾರ್ಯಕ್ಕೆ, ಇಗೋ, ಕರ್ತನು ನನಗೂ
ನಿನಗೂ, ಎಂದೆಂದಿಗೂ ಸಾಕ್ಷಿಯಾಗಿರುವನು.

೨೪ ಹಾಗೆಯೇ ದಾವೀದನು ಹೊಲದಲ್ಲಿ ಬಚ್ಚಿಟ್ಟು ಕೊಂಡಿದ್ದನು.
ಶುದ್ಧ ಪಾಸ್ಯವಾದಾಗ, ಅರಸನು ಭೋಜನವನ್ನು ಮಾಡ ಕುಳಿತ
೨೫ ನು. ಅರಸನು ಎಂದಿನಂತೆ ಗೋಡೆಯ ಬಳಿಯಲ್ಲಿ ಇರುವ ತನ್ನ
ಗದ್ದಿಗೆಯ ಮೇಲೆ ಕುಳ್ತಿತಾಗ, ಯೊನತಾನನು ಎದ್ದನು; ಅದಕೆ
೨೬ ಅಬ್ನೇರನು ಸೌಲನ ಬಳಿಯಲ್ಲಿ ಕುಳ್ತಿತನು. ದಾವೀದನು ಇರುವ
ಸ್ಥಳವು ಬರಿದಾಗಿತ್ತು. ಆದರೆ ಸೌಲನು ಆ ದಿವಸದಲ್ಲಿ ಅವನನ್ನು
ಕುರಿತು ಏನೂ ಹೇಳಿದೆ, ಅವನಿಗೆ ಏನಾದರೂ ಸಂಭವಿಸಿರ ಬೇಕು;
ಅವನು ಅಶುಚಿಯಾಗಿದ್ದಾನೆ, ನಿಶ್ಚಯವಾಗಿ ಅಶುಚಿಯಾಗಿದ್ದಾ
ನೆ, ಎಂದು ಹೇಳಿ ಕೊಂಡನು.

೨೭ ಶುದ್ಧ ಪಾಸ್ಯದ ಮಾರನೆ ದಿವಸದಲ್ಲಿ ದಾವೀದನು ಕೂತ್ತು
ವ ಸ್ಥಳವು ಹಾಗೆಯೇ ಬರಿದಾಗಿತ್ತು; ಆದರಿಂದ ಸೌಲನು, ಇಷಾ
ಯನ ಮಗನು ನಿನ್ನಿಯಿಂದ ಭೋಜನಕ್ಕೆ ಬಾರದ್ದೇನು? ಎಂದು
೨೮ ತನ್ನ ಕುಮಾರನಾದ ಯೊನತಾನನ್ನು ಕೇಳಿದನು. ಯೊನತಾ
ನನು ಸೌಲನಿಗೆ ಪ್ರತ್ಯುತ್ತರವಾಗಿ, ಬೇಲ್ಲೆಹೇಮಿನ ಮಟ್ಟಿಗೂ
ಹೋಗಿ ಬರ, ದಾವೀದನು ನನ್ನನ್ನು ಬಹಳವಾಗಿ ಬೇಡಿ ಕೊಂಡ
೨೯ ನು. ನನಗೆ ಅವನು, ದಯೆ ಮಾಡಿ, ನನಗೆ ಅಪ್ಪಣೆ ಕೊಡು;
ಯಾಕಂದರೆ ಊರೊಳಗೆ ನಮ್ಮ ಗೋತ್ರಕ್ಕೆ ಬಲಿ ಉಂಟು; ನ
ನ್ನ ಸಹೋದರನು ನನ್ನನ್ನು ಬರ ಬೇಳಿ ಕಳುಹಿಸಿದನು. ಈಗ
ನಿನ್ನ ಕಣ್ಣುಗಳಲ್ಲಿ ನನಗೆ ದಯೆ ದೊರಕಿದರೆ, ನಾನು ಅಪ್ಪಣೆ
ತಕ್ಕೊಂಡು, ನನ್ನ ಸಹೋದರರನ್ನು ನೋಡುವದಕ್ಕೆ ಹೋಗು
ತ್ತೇನೆ, ಅಂದನು. ಆದದರಿಂದ ಅವನು ಅರಸನ ಪಂತ್ತಿಗೆ ಬರಲಿಲ್ಲ,
ಅಂದನು.

೩೦ ಆಗ ಸೌಲನು ಯೊನತಾನನ ಮೇಲೆ ಕೋಪ ಗೊಂಡು, ಅವ
ನಿಗೆ, ಪ್ರತಿಕೂಲವಾದ ವಕ್ರ ಮಗನೇ, ನಿನಗೆ ನಾಚಿಕೆಯಾಗುವ
ಹಾಗೆಯೂ, ನಿನ್ನ ತಾಯಿಯ ಬೆತ್ತಲೆತನಕ್ಕೆ ನಾಚಿಕೆಯಾಗು
ವ ಹಾಗೆಯೂ, ಇಷಾಯನ ಮಗನನ್ನು ನೀನು ಆರಿ ಕೊಂಡಿ
ದ್ದೀ ಎಂದು, ನಾನರಿಯೆನೋ! ಯಾಕಂದರೆ ಇಷಾಯನ ಮಗ
೩೧ ನು ಭೂಮಿಯ ಮೇಲೆ ಬದುಕುವ ದಿವಸಗಳ ಮಟ್ಟಿಗೂ ನೀನಾ
ದರೂ ನಿನ್ನ ರಾಜ್ಯವಾದರೂ ಸ್ಥಿರವಾಗುವದಿಲ್ಲ. ಆದದರಿಂದ
ಈಗ ನೀನು ಅವನನ್ನು ಕಳೆಯ ಕಳುಹಿಸಿ, ನನ್ನ ಬಳಿಗೆ ತಕ್ಕೊಂ
ಡು ಬಾ; ಯಾಕಂದರೆ ಅವನು ಸಾಯ ತಕ್ಕವನೇ, ಅಂದನು.
೩೨ ಅದಕ್ಕೆ ಯೊನತಾನನು ತನ್ನ ತಂದೆಯಾದ ಸೌಲನಿಗೆ ಪ್ರತ್ಯುತ್ತ
ರವಾಗಿ, ಅವನನ್ನು ಯಾಕೆ ಕೊಲೆ ಮಾಡ ಬೇಕು? ಅವನು ಏ
33 ನು ಮಾಡಿದನು? ಅಂದನು. ಆಗ ಸೌಲನು ಅವನನ್ನು ಹೊಡೆ
ಯ ಈಟಿಯನ್ನು ಅವನ ಮೇಲೆ ಎಸೆದನು. ಆದದರಿಂದ ಯೊ
ನತಾನನು ತನ್ನ ತಂದೆಯು ದಾವೀದನನ್ನು ಕೊಂದು ಹಾಕ ದೃ
೩೪ ಢ ಮಾಡಿದನೆಂದು, ತಿಳ್ಕಿ ಕೊಂಡನು. ಆಗ ಯೊನತಾನನು
ಕೋಪದ ಉರಿಯಿಂದ ಪಂತ್ತಿಯನ್ನು ಬಿಟ್ಟು, ಎದ್ದು, ಹೋಗಿ,
ಶುದ್ಧ ಬಿದಿಗೆಯ ದಿವಸದಲ್ಲಿ ಊಟ ಮಾಡಲಿಲ್ಲ. ಯಾಕಂದರೆ
ತನ್ನ ತಂದೆಯು ದಾವೀದನಿಗೆ ಅವಮಾನ ಮಾಡಿದ್ದರಿಂದ, ಅವ
ನಿಗೋಸ್ಕರ ವ್ಯಥೆ ಪಟ್ಟನು.

೩೫ ಉದಯದಲ್ಲಿ ಯೊನತಾನನು, ದಾವೀದನಿಗೆ ನೇಮಿಸಿದ ವೇಳೆ
ಯ ಪ್ರಕಾರವೇ, ಬಬ್ಬ ಚಿಕ್ಕ ಹುಡುಗನನ್ನು ಕರ ಕೊಂಡು,
ಹೊಲಕ್ಕೆ ಹೊರಟು ಹೋಗಿ, ಹುಡುಗನಿಗೆ, ನೀನು ಓಡಿ ಹೋಗಿ,
೩೬ ನಾನು ಹಾಕುವ ಬಾಣಗಳನ್ನು ಹುಡುಕಿ ಕೊಂಡು ಬಾ, ಎಂದು
ಹೇಳಿ, ಆ ಹುಡುಗನು ಓಡುವಾಗ, ಅವನಿಗೆ ಆಚೆ ಹೋಗುವ ಹಾ
ಗೆ, ಬಾಣವನ್ನು ಎಸೆದನು. ಯೊನತಾನನು ಹಾಕಿದ ಬಾಣವಿರು
೩೭ ವ ಸ್ಥಳದ ಪರ್ಯಂತರ ಹುಡುಗನು ಹೋದಾಗ, ಬಾಣವು ನಿನ



ಗೆ ಆಚೆ ಇಲ್ಲವೋ? ಎಂದು ಯೊನತಾನನು ಹುಡುಗನ ಹಿಂದೆ
೩೮ ಕೂಗಿದನು. ನೀನು ಆಲಸ್ಯವಿಲ್ಲದೆ ತ್ವರೆಯಾಗಿ ಹೋಗು ಎಂ
ದು, ಯೊನತಾನನು ಹುಡುಗನಿಗೆ ಹಿಂದಾಗಿ ಕೂಗಿ ಹೇಳಿದನು.
ಹಾಗೆಯೇ ಯೊನತಾನನ ಹುಡುಗನು ಬಾಣಗಳನ್ನು ಹುಡುಕಿ
೩೯ ಕೊಂಡು, ತನ್ನ ಯಜಮಾನನ ಬಳಿಗೆ ತಂದನು. ಆ ಹುಡುಗ
ನು ಏನೂ ತಿಳ್ಕಿಯದೆ ಇದ್ದನು. ಯೊನತಾನನೂ ದಾವೀದನೂ
೪೦ ಮಾತ್ರ ಆ ಸಂಗತಿಯನ್ನು ತಿಳ್ಕಿ ಕೊಂಡಿದ್ದರು. ಆಗ ಯೊನ
ತಾನನು ತನ್ನ ಆಯುಧಗಳನ್ನು ತನ್ನ ಹುಡುಗನಿಗೆ ಕೊಟ್ಟು,
ಅವನ ಸಂಗಡ, ಅವುಗಳನ್ನು ಪಟ್ಟಣದೊಳ್ಕಿಕೆ ಹೈಯಿ, ಅಂದನು.
೪೧ ಹುಡುಗನು ಹೋಗುತ್ತಲೇ, ದಾವೀದನು ದಕ್ಷಿಣ ಪಾರ್ಶ್ವದಿಂ
ದ ಎದ್ದು, ಬಂದು, ಪೋರೆ ಕೆಳಗಾಗಿ ನೆಲಕ್ಕೆ ಬಿದ್ದು, ಮೂರು ಸಾ
ರಿ ವಂದಿಸಿದನು. ಅವರು ಒಬ್ಬರಿಗೊಬ್ಬರು ಮುದ್ದಿಟ್ಟು ಕೊಂಡು,
ಒಬ್ಬರನೊಬ್ಬರು ನೋಡಿ, ಅತ್ತರು; ದಾವೀದನು ಬಹಳವಾಗಿ ಅ
೪೨ ತ್ತನು. ಆಗ ಯೊನತಾನನು ದಾವೀದನಿಗೆ, ನೀನು ಸಮಾಧಾ
ನವಾಗಿ ಹೋಗು; ಕರ್ತನು ಯುಗ ಯುಗಕ್ಕೂ ನನಗೂ ನಿನ
ಗೂ, ನನ್ನ ಬೀಜಕ್ಕೂ ನಿನ್ನ ಬೀಜಕ್ಕೂ ಮಧ್ಯದಲ್ಲಿ ಸಾಕ್ಷಿ
ಯಾಗಿರುವನೆಂದು, ಕರ್ತನ ಹೆಸರಿನಿಂದ ನಾವಿಬ್ಬರೂ ಹೇಳಿ, ಆಣೆ
ಇಟ್ಟು ಕೊಂಡೆವಲ್ಲ! ಅಂದನು. ಆಗ ದಾವೀದನು ಎದ್ದು, ಹೋ
ದನು; ಯೊನತಾನನು ಪಟ್ಟಣದಲ್ಲಿ ಪ್ರವೇಶಿಸಿದನು.

## ೨೧. ಸಂಧಿ.

೧ ಆದರೆ ದಾವೀದನು ನೋಬಿನಲ್ಲಿರುವ ಯಾಜಕನಾದ ಅಹಿ
ಮೇಲೆಕನ ಬಳಿಗೆ ಬಂದನು. ಅಹಿಮೇಲೆಕನು ದಾವೀದನನ್ನು
ಎದುರ್ಗೊಳ್ಳ ಬಂದಾಗ, ಹೆದರಿ, ಒಬ್ಬರೂ ನಿನ್ನ ಸಂಗಡ ಬಾ
ರದೆ, ನೀನು ಒಂಟಿಯಾಗಿ ಬಂದದ್ದು ಏನೆಂದು, ಅವನನ್ನು ಕೇಳ್ಕಿ
೨ ದನು. ದಾವೀದನು ಯಾಜಕನಾದ ಅಹಿಮೇಲೆಕನಿಗೆ ಹೇಳ್ಕಿದ್ದೇ
ನಂದರೆ, ಅರಸನು ನನಗೆ ಒಂದು ಕಾರ್ಯವನ್ನು ಆಜ್ಞಾಪಿಸಿ,
ನಾನು ಕಳುಹಿಸಿದ ಕಾರ್ಯವೂ, ನಿನಗೆ ಆಜ್ಞಾಪಿಸಿದ್ದೂ ಇಂಥಾ
ದ್ದೆಂದು ಒಬ್ಬರಿಗೂ ತಿಳ್ಕಿಯ ಬಾರದೆಂದು, ನನಗೆ ಹೇಳ್ಕಿದನು. ಮ
ತ್ತು ಇಂಥಿಂಥ ಸ್ಥಳಗಳಿಗೆ ಹೋಗ ನಾನು ನನ್ನ ಕೆಲಸದವರಿಗೆ
3 ನೇಮಿಸಿ ಇದ್ದೇನೆ. ಈಗ ನಿನ್ನ ಕೈಯಲ್ಲಿ ಏನಾದರೂ ಉಂ
ಟೋ? ಐದು ಕೊಟ್ಟಿಗಳನ್ನಾದರೂ ನಿನಗೆ ದೊರಕಿದ ಯಾವ
೪ ದನ್ನಾದರೂ ನನಗೆ ಕೊಡು, ಅಂದನು. ಯಾಜಕನು ದಾವೀದ
ನಿಗೆ ಪ್ರತ್ಯುತ್ತರವಾಗಿ, ಪರಿಶುದ್ಧ ಕೊಟ್ಟಿಯ ಹೊರ್ತಾಗಿ, ನನ್ನ
ಕೈಯಲ್ಲಿ ಬಳಿಕೆಯಾದ ಕೊಟ್ಟಿ ಒಂದಾದರೂ ಇಲ್ಲ; ಪ್ರಾಯ
ಸ್ತರು ಸ್ತ್ರೀಯರ ಬಳಿಗೆ ಕೇರದಿದ್ದರೆ, ಅದು ಆಗಲಿ, ಅಂದನು.
೫ ದಾವೀದನು ಯಾಜಕನಿಗೆ ಪ್ರತ್ಯುತ್ತರವಾಗಿ, ನಾನು ಹೊರಟುವ
ದಕ್ಕಿಂತ ಮುಂಚೆ ನಿನ್ನೆಯೂ ಮೊನ್ನೆಯೂ ಸ್ತ್ರೀಯರು ನಮ
ಗೆ ತಡೆಯಲ್ಪಟ್ಟರು. ಪ್ರಾಯಸ್ತರ ಪಾತ್ರೆಗಳು ಪರಿಶುದ್ಧವಾಗಿ
ವೆ; ಕೊಟ್ಟಿಯು ಈ ಹೊತ್ತು ಪಾತ್ರೆಯಲ್ಲಿ ಪರಿಶುದ್ಧ ಮಾಡ
ಲ್ಪಟ್ಟದ್ದಾಗಿದ್ದರೂ, ಅದು ಒಂದು ಪ್ರಕಾರ ಬಳಿಕೆಯಾಗಿದೆ, ಅಂ
೬ ದನು. ಆಗ ಕರ್ತನ ಸನ್ನಿಧಿಯಿಂದ ತೆಗೆದು ಕೊಳ್ಳಲ್ಪಟ್ಟ ಸ
ಮುಖದ ಕೊಟ್ಟಿಗಳ ಹೊರ್ತು, ಬೇರೆ ಕೊಟ್ಟಿಯು ಅಲ್ಲಿ ಇಲ್ಲ
ದ್ದರಿಂದ, ಯಾಜಕನು ಅವನಿಗೆ ಪರಿಶುದ್ಧ ಕೊಟ್ಟಿಯನ್ನು ಕೊ
ಟ್ಟನು. ಯಾಕಂದರೆ ಅವುಗಳನ್ನು ತೆಗೆದು ಕೊಳ್ಳುವ ದಿವಸ
ದಲ್ಲಿ ಅವುಗಳಿಗೆ ಬದಲಾಗಿ ಬಿಸಿ ಕೊಟ್ಟಿಗಳು ಇಡಲ್ಪಡುವವು.
೭ ಆದರೆ ಸೌಲನ ಸೇವಕರಲ್ಲಿ ಎದೋಮ್ಯನಾದ ದೋಯೇಗನೆಂಬ
ಹೆಸರುಳ್ಳ ಒಬ್ಬನು ಆ ದಿವಸ ಅಲ್ಲಿ ಕರ್ತನ ಮುಂದೆ ತಡೆಯ
ಲ್ಪಟ್ಟಿದ್ದನು. ಅವನು ಸೌಲನ ಹಿಂಡು ಕಾಯುವವರಲ್ಲಿ ಪ್ರೌಢ
ನಾಗಿದ್ದನು. ಆಗ ದಾವೀದನು ಅಹಿಮೇಲೆಕನಿಗೆ, ಇಲ್ಲಿ ನಿನ್ನ
೮ ಕೈ ವಶದಲ್ಲಿ ಈಟಿಯಾದರೂ ಕತ್ತಿಯಾದರೂ ಇಲ್ಲವೋ!
ಯಾಕಂದರೆ ಅರಸನ ಕಾರ್ಯವು ಅವಸರವಾದದರಿಂದ, ನಾನು
ನನ್ನ ಕತ್ತಿಯನ್ನಾದರೂ ಆಯುಧಗಳನ್ನಾದರೂ ತಕ್ಕೊಂಡು
೯ ಬರಲಿಲ್ಲ, ಅಂದನು. ಅದಕ್ಕೆ ಯಾಜಕನು, ಇಗೋ, ನೀನು ಏಲ
ಶ್ಗನಲ್ಲಿ ಸಂಹರಿಸಿದ ಫಿಲಿಷ್ಟ್ಯನಾದ ಗೊಲೆಯಾತನ ಕತ್ತಿಯ
ನ್ನು ಎಫೋದಿನ ಹಿಂದೆ ಬಂದು ಬಟ್ಟೆಯಲ್ಲಿ ಸುತ್ತಿ ಇಟ್ಟಿದೆ. ಅ
ದನ್ನು ನೀನು ತೆಗೆದು ಕೊಂಡರೆ, ತೆಗೆದುಕೋ; ಯಾಕಂದರೆ
ಅದು ಒಂದೇ ಅಲ್ಲದೆ, ಇಲ್ಲಿ ಬೇರೊಂದು ಇಲ್ಲ, ಅಂದನು.
ಅದಕ್ಕೆ ದಾವೀದನು ಅದರಂಥಾದ್ದು ಇನ್ನಿಲ್ಲ; ಅದನ್ನು ನನಗೆ
ಕೊಡು, ಅಂದನು.

೧೦ ಮತ್ತು ದಾವೀದನು ಎದ್ದು, ಆ ದಿನ ಸೌಲನ ಎದುರಿನಿಂದ
೧೧ ಗಾತಿನ ಅರಸನಾದ ಅಕೀಷನ ಬಳಿಗೆ ಓಡಿ ಬಂದನು. ಆದರೆ ಅ
ಕೀಷನ ಸೇವಕರು ಅವನಿಗೆ, ಇವನು ದೇಶದ ಅರಸನಾದ ದಾವೀ
ದನಲ್ಲವೋ! ಸೌಲನು ಸಾವಿರಗಳನ್ನೂ, ದಾವೀದನು ಹತ್ತು ಸಾ
ವಿರಗಳನ್ನೂ ಸಂಹರಿಸಿದನೆಂದು, ಇವನನ್ನು ಕುರಿತು ನಾಟ್ಯದಲ್ಲಿ
೧೨ ಒಬ್ಬರಿಗೊಬ್ಬರು ಹಾಡಿದರಲ್ಲವೇ! ಅಂದರು. ಆಗ ದಾವೀದನು
ಈ ಮಾತುಗಳನ್ನು ತನ್ನ ಹೃದಯದಲ್ಲಿ ಇಟ್ಟು ಕೊಂಡು, ಗಾ
ತಿನ ಅರಸನಾದ ಅಕೀಷನಿಗೋಸ್ಕರ ಮಹಾ ಭಯಸ್ತನಾಗಿ,
೧೩ ಅವರ ಕಣ್ಣು ಮುಂದೆ ತನ್ನ ಬುದ್ಧಿಯನ್ನು ಮಾರ್ಪಡಿಸಿ, ಅವ
ರ ಕೈಗಳಲ್ಲಿ ತನ್ನನ್ನು ಹುಚ್ಚನ ಹಾಗೆಯೇ ತೋರ ಮಾಡಿ,
ಬಾಗಲ ಕದಗಳನ್ನು ಬರಕುತ್ತಾ, ತನ್ನ ಬಾಯಿಯ ಜೊಲ್ಲನ್ನು
೧೪ ತನ್ನ ಗಡ್ಡದ ಮೇಲೆ ಸುರಿಸಿ ಕೊಂಡನು. ಆಗ ಅಕೀಷನು ತನ್ನ
ಸೇವಕರಿಗೆ, ಇಗೋ, ಈ ಮನುಷ್ಯನು ಹುಚ್ಚು ಹಿಡಿದವನೆಂದು
ನೋಡುತ್ತೀರಲ್ಲ! ಇವನನ್ನು ನನ್ನ ಬಳಿಗೆ ಯಾಕೆ ತಕ್ಕೊಂಡು
೧೫ ಬಂದಿರಿ! ಹುಚ್ಚರು ನನಗೆ ಅವಶ್ಯವೆಂದು, ನನ್ನ ಮುಂದೆ ಹುಚ್ಚು
ಹುರುಳು ಮಾಡ ಇವನನ್ನು ನನ್ನ ಮುಂದೆ ತಕ್ಕೊಂಡು ಬಂದಿ
ಕೋ! ಇವನು ನನ್ನ ಮನೆಯಲ್ಲಿ ಬರ ಬೇಕೋ! ಅಂದನು.

## ೨೨. ಸಂಧಿ.

೧ ಮತ್ತು ದಾವೀದನು ಆ ಸ್ಥಳದಿಂದ ತಪ್ಪಿಸಿ ಕೊಂಡು, ಅಡುಲ್ಲ
ಮು ಎಂಬ ಗವಿಗೆ ಬಂದನು. ಆ ವರ್ತಮಾನವನ್ನು ಅವನ ಸ
ಹೋದರರೂ, ಅವನ ತಂದೆಯ ಮನೆಯವರೆಲ್ಲರೂ ಕೇಳ್ಕಿ, ಅಲ್ಲಿ
೨ ಗೆ ಅವನ ಬಳಿಗೆ ಬಂದರು. ಇದ್ದಲ್ಲದೆ ಋಣ ಪಟ್ಟವರೆಲ್ಲರೂ,
ಸಾಲಗಾರರೆಲ್ಲರೂ, ಕಹಿಯಾದ ಪ್ರಾಣವುಳ್ಳವರೆಲ್ಲರೂ ಅವ
ನ ಸಂಗಡ ಕೂಡಿ ಕೊಂಡರು ಆ ಗಳವರಿಗೆ ಅವನು ಅಧಿಪತಿ
ಯಾದನು. ಹೆಚ್ಚು ಕಡಿಮೆ ನಾನೂರು ಜನರು ಅವನ ಬಳಿಯ
ಲ್ಲಿ ಇದ್ದರು.

3 ದಾವೀದನು ಅಲ್ಲಿಂದ ಹೊರಟು, ಮೋವಾಬ್ ದೇಶದ ಮಿಜ್ಪೆಗೆ
ಬಂದು, ಮೋವಾಬಿನ ಅರಸನಿಗೆ, ದೇವರು ನನಗೆ ಏನು ಮಾಡು
ವನೋ, ಎಂದು ನಾನು ತಿಳ್ಕಿಯುವ ಮಟ್ಟಿಗೂ, ನನ್ನ ತಂದೆ ತಾ

ಯಿಗ್ಯಂ ಹೊರಟು ಬಂದು, ನಿನ್ನ ಬಳಿಯಲ್ಲಿ ವಾಸಿಸಿ ಇರಲಿ
ಎಂದು ಹೇಳ್ದ, ಅವರನ್ನು ಮೋವಾಬಿನ ಅರಸನ ಬಳಿಗೆ ಕರ ತಂ
೪ ದು, ಬಿಟ್ಟನು. ದಾವೀದನು ಗವಿಯಲ್ಲಿ ಇದ್ದ ದಿವಸಗಳೆಲ್ಲಾ ಅವರು
೫ ಅರಸನ ಬಳಿಯಲ್ಲಿ ವಾಸವಾಗಿದ್ದರು. ಆದರೆ ಗಾದನೆಂಬ ಪ್ರವಾ
ದಿ ದಾವೀದನಿಗೆ, ನೀನು ಗವಿಯಲ್ಲಿರದೆ, ಯೆಹೂದ ದೇಶಕ್ಕೆ
ಹೊರಟು ಬಾ, ಅಂದನು. ಆಗ ದಾವೀದನು ಹೊರಟು ಹೇರೆತು
ಎಂಬ ಅರಣ್ಯಕ್ಕೆ ಬಂದನು.

೬ ಸೌಲನು ದಾವೀದನೂ ಅವನ ಸಂಗತಲಿರುವ ಮನುಷ್ಯರೂ
ಕಾಣಲ್ಪಟ್ಟನೆಂದು, ವರ್ತಮಾನವನ್ನು ಕೇಳ್ದನು. ಮತ್ತು ಸೌ
ಲನು ಗಿಬ್ಯದಲ್ಲಿರುವ ರಾಮದಲ್ಲಿ ಬಂದು ತೋಪಿನಲ್ಲಿ ತನ್ನ ಈಟಿ
ಯನ್ನು ಕೈಯಲ್ಲಿ ಹಿಡಿದು, ಕುಳಿತು ಕೊಂಡನು; ಅವನ ಸೇವ
೭ ಕರೆಲ್ಲರು ಸುತ್ತಲು ನಿಂತಿದ್ದರು. ಆಗ ಸೌಲನು ತನ್ನ ಸುತ್ತಲು
ನಿಂತಿದ್ದ ಸೇವಕರಿಗೆ ಹೇಳ್ದಿದ್ದೇನಂದರೆ, ಬೆನ್ಯಮಾನನ ಮಕ್ಕಳೇ,
ಕೇಳ್ಳಿ; ನೀವೆಲ್ಲರೂ ನನಗೆ ವಿರೋಧವಾಗಿ ಒಳ್ಳ ಸಂಚು ನಡಿ
ಸ ಇಷಾಯನ ಮಗನು ನಿಮ್ಮೆಲ್ಲರಿಗೂ ಹೊಲಗಳನ್ನೂ, ದ್ರಾ
ಕ್ಷೇ ತೋಟಗಳನ್ನೂ ಕೊಡುವನೋ! ನಿಮ್ಮೆಲ್ಲರನ್ನೂ ಸಾವಿರ
ಕ್ಕೆ ಯಜಮಾನರಾಗಿಯೂ, ನೂರಕ್ಕೆ ಯಜಮಾನರಾಗಿಯೂ,
೮ ಇಡುವನೋ! ಇದಲ್ಲದೆ ನಿಮ್ಮಲ್ಲಿ ನನ್ನ ಮಗನು ಇಷಾಯನ
ಮಗನ ಸಂಗತ ಒಡಂಬಡಿಕೆ ಮಾಡಿ ಕೊಂಡದ್ದನ್ನು ನನಗೆ ಯಾ
ವನೂ ತಿಳಿಸಲಿಲ್ಲ ನಿಮ್ಮಲ್ಲಿ ಯಾವನಾದರೂ ನನಗೋಸ್ಕರ
ಚಿಂತಿಸಿ, ನನ್ನ ಮಗನು ಈ ಹೊತ್ತು ನನಗೋಸ್ಕರ ಅಡಗಿ
ಕೊಂಡಿರುವ ಹಾಗೆ, ನನ್ನ ಸೇವಕನನ್ನು ನನಗೆ ವಿರೋಧವಾಗಿ
ಎಬ್ಬಿಸಿದ್ದನ್ನು ಯಾವನೂ ನನಗೆ ತಿಳಿಸಲಿಲ್ಲ, ಅಂದನು.

೯ ಆಗ ಸೌಲನ ಸೇವಕರಿಗೆ ಯೆಜಮಾನನಾಗಿದ್ದ ಎದೋಮ್ಯ
ನಾದ ದೋಯೆಗನು ಪ್ರತ್ಯುತ್ತರವಾಗಿ ಇಷಾಯನ ಮಗನು
ನೋಬದಲ್ಲಿರುವ ಅಹೀಟುಬನ ಮಗನಾದ ಅಹಿಮೆಲೆಕನ ಬಳಿಗೆ
೧೦ ಬಂದದ್ದನ್ನು ನಾನು ನೋಡಿದೆನು. ಇವನು ಅವನಿಗೋಸ್ಕರ ಕ
ರ್ತನನ್ನು ಕೇಳ್ಳಿ, ಅವನಿಗೆ ಆಹಾರವನ್ನು ಕೊಟ್ಟು, ಫಿಲಿಷ್ಟ್ಯನಾ
ದ ಗೊಲೆಯಾತನ ಕತ್ತಿಯನ್ನು ಅವನಿಗೆ ಕೊಟ್ಟನು, ಅಂ
ದನು.

೧೧ ಅದರಿಂದ ಅರಸನು ಅಹೀಟುಬನ ಮಗನಾದ ಯಾಜಕನಾಗಿ
ರುವ ಅಹಿಮೆಲೆಕನನ್ನೂ, ನೋಬದಲ್ಲಿರುವ ಯಾಜಕರಾಗಿರುವ
ಅವನ ತಂದೆಯ ಮನೆಯವರಾದ ಸಮಸ್ತರನ್ನೂ ಕರೇ ಕಳುಹಿಸಿ
ದನು. ಅವರೆಲ್ಲರೂ ಅರಸನ ಬಳ್ಳಿಗೆ ಬಂದರು. ಆಗ ಸೌಲನು,
೧೨ ಅಹೀಟುಬನ ಮಗನೇ, ಕೇಳ್ಳು, ಅಂದನು. ಅದಕ್ಕವನು, ಇಗೋ,
ನನ್ನ ಸ್ವಾಮಿಯೇ, ನಾನು ಇಲ್ಲಿದ್ದೇನೆ, ಅಂದನು. ಸೌಲನು ಅವ
ನಿಗೆ, ನೀವೂ ಇಷಾಯನ ಮಗನೂ ನನಗೆ ವಿರೋಧವಾಗಿ ಒಳ್ಳ
ಸಂಚು ಮಾಡಿದ್ದೇನು! ಅವನು ಅಡಗಿ ಕೊಂಡು, ಇಂದಿಗಿರು
ವಂತೆ, ನನಗೆ ವಿರೋಧವಾಗಿ ಏಳುವ ಹಾಗೆ, ನೀನು ಅವನಿಗೆ
ಕೊಟ್ಟಿಯನ್ನೂ ಕತ್ತಿಯನ್ನೂ ಕೊಟ್ಟು, ದೇವರನ್ನು ಅವನಿ
೧೪ ಗೋಸ್ಕರ ವಿಚಾರಿಸಿದ್ದೇನು! ಅಂದನು. ಅಹಿಮೆಲೆಕನು ಅರಸ
ನಿಗೆ ಪ್ರತ್ಯುತ್ತರವಾಗಿ ಹೇಳ್ದಿದ್ದೇನಂದರೆ, ನಿನ್ನ ಸಮಸ್ತ ಸೇವಕ
ರಲ್ಲಿ ದಾವೀದನ ಹಾಗೆ ಸತ್ಯವಂತನು ಯಾರು! ಅವನು ಅರಸ
ನಿಗೆ ಅಳ್ಳಿಯನೂ, ನಿನ್ನ ಆಜ್ಞೆಗಳ ಹಾಗೆ ಮಾಡಿ ಕೊಂಡು ಬ
ರುವವನೂ, ನಿನ್ನ ಮನೆಯಲ್ಲಿ ಘನವುಳ್ಳವನೂ ಆಗಿದ್ದಾನೆ.
೧೫ ನಾನು ಅವನಿಗೋಸ್ಕರ ದೇವರನ್ನು ಕೇಳ್ಳ ಪ್ರಾರಂಭಿಸಿದ್ದು ಈ
ಹೊತ್ತೋ! ಅದು ನನಗೆ ದೂರವಾಗಿರಲಿ. ಅರಸನು ತನ್ನ ಸೇವ
ಕನ ಮೇಲಾದರೂ, ನನ್ನ ತಂದೆಯ ಮನೆಯವರಲ್ಲಿ ಯಾರ
ಮೇಲಾದರೂ ಅಪರಾಧ ಹೊರಿಸ ಬಾರದು; ಯಾಕಂದರೆ ನಿನ್ನ
ಸೇವಕನು ಇದರಲ್ಲಿ ಹೆಚ್ಚಾದದ್ದನ್ನಾದರೂ ಕಡಿಮೆಯಾದದ್ದನ್ನಾ
ದರೂ ತಿಳ್ಳಿದವನಲ್ಲ, ಅಂದನು.

೧೬ ಅದಕ್ಕೆ ಅರಸನು, ಅಹಿಮೆಲೆಕನೇ, ನೀನೂ ನಿನ್ನ ತಂದೇ ಮ
ನೆಯ ಸಮಸ್ತರೂ ಸಾಯಲೇ ಸಾಯ ಬೇಕು, ಅಂದನು.

೧೭ ಅರಸನು ತನ್ನ ಬಳ್ಳಿಯಲ್ಲಿ ನಿಂತಿರುವ ಓಟಗಾರರಿಗೆ, ನೀವು
ತಿರುಗಿ ಕೊಂಡು, ಕರ್ತನ ಯಾಜಕರನ್ನು ಕೊಂದು ಹಾಕಿರಿ,
ಯಾಕಂದರೆ ಅವರ ಕೈಯಿ ದಾವೀದನ ಸಂಗತ ಸಹಾಯವಾಗಿ
ದೆ. ಅವನು ಓಡಿ ಹೋಗುವದನ್ನು ಅವರು ತಿಳ್ಳದಿದ್ದು, ಅದನ್ನು
ನನಗೆ ತಿಳ್ಳಸದೆ ಹೋದರು, ಅಂದನು. ಆದರೆ ಅರಸನ ಸೇವಕ
ರು ಕರ್ತನ ಯಾಜಕರ ಮೇಲೆ ಬೀಳ್ಳ ತಮ್ಮ ಕೈಯನ್ನು ಚಾಚ
೧೮ ಲೊಲ್ಲದೆ ಹೋದರು. ಆಗ ಅರಸನು ದೋಯೆಗನಿಗೆ, ನೀನು ತಿರು
ಗಿ ಕೊಂಡು, ಯಾಜಕರ ಮೇಲೆ ಬೀಳ್ಳು, ಅಂದನು. ಆಗ ಎ
ದೋಮ್ಯನಾದ ದೋಯೆಗನು ತಿರುಗಿ ಕೊಂಡು, ಯಾಜಕರ
ಮೇಲೆ ಬಿದ್ದು, ಸಣಬು ನಾರಿನ ಏಫೋದನ್ನು ಧರಿಸಿ ಕೊಳ್ಳುವವ
೧೯ ರಾದ ಎಂಭತ್ತೈದು ಜನರನ್ನು ಆ ದಿನದಲ್ಲಿ ಕೊಂದನು. ಇದಲ್ಲದೆ
ಯಾಜಕರ ಪಟ್ಟಣವಾದ ನೋಬಿನಲ್ಲಿ ಇರುವ ಪುರುಷರನ್ನೂ,
ಸ್ತ್ರೀಯರನ್ನೂ, ಮಕ್ಕಳನ್ನೂ, ಕೂಸುಗಳನ್ನೂ, ಎತ್ತುಗಳ
ನ್ನೂ, ಕತ್ತೆಗಳನ್ನೂ, ಕುರಿಗಳನ್ನೂ ಕತ್ತೀ ಬಾಯಿಯಿಂದ ಹೊ
ಡೆದು ಬಿಟ್ಟನು.

೨೦ ಅದರೆ ಅಹೀಟುಬನ ಮಗನಾಗಿರುವ ಅಹಿಮೆಲೆಕನ ಮಕ್ಕಳ
ಲ್ಲಿ ಒಬ್ಬನಾದ ಅಬ್ಯಾತಾರನು ತಪ್ಪಿಸಿ ಕೊಂಡು, ದಾವೀದನ ಬಳ್ಳಿಗೆ
೨೧ ಓಡಿ ಹೋದನು. ಸೌಲನು ಕರ್ತನ ಯಾಜಕರನ್ನು ಕೊಂದು
ಹಾಕಿದ ವರ್ತಮಾನವನ್ನು ಅಬ್ಯಾತಾರನು ದಾವೀದನಿಗೆ ತಿಳ್ಳಿಸಿ
೨೨ ನು. ಆಗ ದಾವೀದನು ಅಬ್ಯಾತಾರನಿಗೆ ಹೇಳ್ದಿದ್ದೇನಂದರೆ, ಎದೋ
ಮ್ಯನಾದ ದೋಯೆಗನು ಅಲ್ಲಿ ಇದ್ದದರಿಂದ, ಅವನು ಸೌಲನಿಗೆ
ತಿಳ್ಳಿಸೇ ತಿಳ್ಳಿಸುವನೆಂದು, ನಾನು ಆ ಹೊತ್ತು ತಿಳ್ಳಿದ್ದೆನು. ನಿನ್ನ
ತಂದೆಯ ಮನೆಯ ಸಮಸ್ತರ ಪ್ರಾಣ ಹತ್ಯಕ್ಕೆ ಹೇತುವೆಯಾ
೨೩ ದವನು ನಾನೇ. ನನ್ನ ಬಳ್ಳಿಯಲ್ಲಿ ಇರು; ಭಯ ಪಡ ಬೇಡ;
ಯಾಕಂದರೆ ನನ್ನ ಪ್ರಾಣ ಹುಡುಕುವವನು ನಿನ್ನ ಪ್ರಾಣವ
ನ್ನು ಹುಡುಕುವನು. ಆದರೆ ನೀನು ನನ್ನ ಸಂಗತ ಇದ್ದರೆ, ಸುರಕ್ಷಿ
ತವಾಗಿರುವಿ, ಅಂದನು.

## ೨೩. ಸಂಧಿ.

೧ ಮತ್ತು, ಇಗೋ, ಫಿಲಿಷ್ಟ್ಯರು ಕೆಯಿಲಾಲಕ್ಕೆ ವಿರೋಧವಾಗಿ
ಯುದ್ಧ ಮಾಡಿ, ಕಣಗಳನ್ನು ಕೊಳ್ಳೆ ಇಡುತ್ತಿದ್ದಾರೆಂದು,
೨ ದಾವೀದನಿಗೆ ತಿಳ್ಳಿಸಿದರು. ಅದರಿಂದ ದಾವೀದನು, ನಾನು ಫಿಲಿ
ಷ್ಟ್ಯರನ್ನು ಹೊಡೆಯ ಹೋಗಲೋ! ಎಂದು ಕರ್ತನನ್ನು ಕೇ
ಳ್ಳಿದನು; ಅದಕ್ಕೆ ಕರ್ತನು, ನೀನು ಹೋಗಿ, ಫಿಲಿಷ್ಟ್ಯರನ್ನು
3 ಹೊಡೆದು, ಕೆಯಿಲಾಲವನ್ನು ರಕ್ಷಿಸು, ಅಂದನು. ಆಗ ದಾವೀದನ
ಮನುಷ್ಯರು ಅವನಿಗೆ, ಇಗೋ, ನಾವು ಇಲ್ಲಿ ಯೆಹೂದದಲ್ಲಿ
ರುವಾಗಲೇ ಭಯ ಪಡುತ್ತೇವೆ; ಆದರೆ ನಾವು ಫಿಲಿಷ್ಟ್ಯರ ಸೈನ್ಯ



ಗಳಿಗೆ ವಿರೋಧವಾಗಿ ಕೆಯಿಲಾಲಕ್ಕೆ ಹೋದರೆ, ಎಷ್ಟರಿಕವಾದ
೪ ಭಯ! ಅಂದರು. ದಾವೀದನು ತಿರಿಗಿ ಕರ್ತನನ್ನು ಕೇಳ್ಳಿದನು.
ಅದಕ್ಕೆ ಕರ್ತನು ಪ್ರತ್ಯುತ್ತರವಾಗಿ, ನೀನೆದ್ದು, ಕೆಯಿಲಾಲಕ್ಕೆ ಹೋ
ಗು; ಯಾಕಂದರೆ ನಾನು ಫಿಲಿಷ್ಟ್ಯರನ್ನು ನಿನ್ನ ಕೈಯಲ್ಲಿ ಒಪ್ಪಿಸಿ
೫ ಕೊಡುವೆನು, ಅಂದನು. ಹಾಗೆಯೇ ದಾವೀದನೂ ಅವನ ಮನು
ಷ್ಯರೂ ಎದ್ದು, ಕೆಯಿಲಾಲಕ್ಕೆ ಹೋಗಿ, ಫಿಲಿಷ್ಟ್ಯರ ಸಂಗತ
ಯುದ್ಧ ಮಾಡಿ, ಅವರ ದನಗಳನ್ನು ಹಿಡು ಕೊಂಡು ಬಂದು, ಅ
ವರನ್ನು ಬೊದ್ದ ಸಂಹಾರದಿಂದ ಹೊಡೆದನು. ಈ ಪ್ರಕಾರ ದಾವೀ
ದನು ಕೆಯಿಲಾಲದ ನಿವಾಸಿಗಳನ್ನು ರಕ್ಷಿಸಿದನು.

೬ ಆದರೆ ಅಹಿಮೆಲೆಕನ ಮಗನಾದ ಅಬ್ಯಾತಾರನು ಕೆಯಿಲಾಲದ
ಲ್ಲಿ ಇರುವ ದಾವೀದನ ಬಳ್ಳಿಗೆ ಓಡಿ ಬಂದಾಗ, ಅವನ ಕೈಯಲ್ಲಿ
ಏಫೋದು ಇತ್ತು.

೭ ದಾವೀದನು ಕೆಯಿಲಾಲಕ್ಕೆ ಬಂದಿದ್ದಾನೆಂದು ಸೌಲನಿಗೆ ತಿಳ್ಳಿಸ
ಲ್ಪಟ್ಟಾಗ, ಸೌಲನು, ದೇವರು ಅವನನ್ನು ನನ್ನ ಕೈಯಲ್ಲಿ ಒಪ್ಪಿಸಿ
ಕೊಟ್ಟನು, ಯಾಕಂದರೆ ಅವನು ಬಾಗಲುಗಳೂ ಅಗುಳಿಗಳೂ
ಇರುವ ಪಟ್ಟಣದ ಬಳ್ಳಿಗೆ ಪ್ರವೇಶಿಸಿದ್ದರಿಂದ ಬಳ್ಳಿಗೆ ಮುಚ್ಚಲ್ಪಟ್ಟಿದ್ದಾ
೮ ನೆ, ಅಂದು ಕೊಂಡನು. ಆಗ ಸೌಲನು ದಾವೀದನನ್ನೂ ಅವನ
ಮನುಷ್ಯರನ್ನೂ ಮುತ್ತಿ ಕೊಳ್ಳುವ ಹಾಗೆ, ತನ್ನ ಮನುಷ್ಯರೆಲ್ಲ
ರನ್ನು ಕೆಯಿಲಾಲಕ್ಕೆ ಯುದ್ಧಕ್ಕೆ ಹೋಗ ಕರೆದನು.

೯ ಸೌಲನು ತನಗೆ ಕೇಡನ್ನು ಮಾಡ ಯೋಚಿಸುತ್ತಿದ್ದಾನೆಂದು,
ದಾವೀದನು ತಿಳ್ಳಿದ್ದರಿಂದ ಆಚಾರ್ಯನಾದ ಅಬ್ಯಾತಾರನಿಗೆ, ಏಫೋ
೧೦ ದನ್ನು ಇಲ್ಲಿಗೆ ತಕ್ಕೊಂಡು ಬಾ, ಅಂದನು. ಮತ್ತು ದಾವೀದನು
ಹೇಳ್ಳಿದ್ದೇನಂದರೆ, ಇಸ್ರಯೇಲ ದೇವರಾದ ಕರ್ತನೇ, ಸೌಲನು ಕೆ
ಯಿಲಾಲಕ್ಕೆ ಬಂದು, ನನ್ನ ನಿಮಿತ್ತ ಪಟ್ಟಣವನ್ನು ಕೆಡಿಸ ಹುಡುಕು
೧೧ ತ್ತಿದ್ದಾನೆಂದು, ನಿನ್ನ ಸೇವಕನು ಕೇಳ್ಳೇ ಕೇಳ್ಳಿದನು. ಕೆಯಿಲಾ
ಲ ಪಟ್ಟದವರು ನನ್ನನ್ನು ಅವನ ಕೈಯಲ್ಲಿ ಒಪ್ಪಿಸಿ ಕೊಡುವರೋ!
ನಿನ್ನ ಸೇವಕನು ಕೇಳ್ಳಿದ ಹಾಗೆ ಸೌಲನು ಇಲ್ಲಿಗೆ ಬರುವನೋ!
ಇಸ್ರಯೇಲಿನ ದೇವರಾದ ಕರ್ತನೇ, ದಯ ಮಾಡಿ, ಇದನ್ನು ನಿ
ನ್ನ ಸೇವಕನಿಗೆ ತಿಳ್ಳಿಸು, ಅಂದನು. ಅದಕ್ಕೆ ಕರ್ತನು, ಬರುವ
೧೨ ನು, ಅಂದನು. ಕೆಯಿಲಾಲ ಪಟ್ಟದವರು ನನ್ನನ್ನೂ ನನ್ನ ಮನು
ಷ್ಯರನ್ನೂ ಸೌಲನ ಕೈಯಲ್ಲಿ ಒಪ್ಪಿಸಿ ಕೊಡುವರೋ! ಎಂದು
ದಾವೀದನು ಕೇಳ್ಳಿದಾಗ, ಕರ್ತನು, ಅವರು ಒಪ್ಪಿಸಿ ಕೊಡುವರು,
ಅಂದನು.

೧೩ ಅದರಿಂದ ದಾವೀದನೂ, ಹೆಚ್ಚು ಕಡಿಮೆ ಆರು ನೂರು ಮಂ
ದಿಯಾದ ತನ್ನ ಜನರೂ ಎದ್ದು, ಕೆಯಿಲಾಲನ್ನು ಬಿಟ್ಟು, ಹೊರ
ಟು, ತಾವು ಹೋಗ ಕೂಡುವಲ್ಲಿಗೆ ಹೋದರು. ದಾವೀದನು ಕೆ
ಯಿಲಾಲದಿಂದ ತಪ್ಪಿಸಿ ಕೊಂಡು ಹೋದನೆಂದು, ಸೌಲನಿಗೆ ತಿಳ್ಳಿಸ
೧೪ ಲ್ಪಟ್ಟಾಗ, ಅವನು ಹೊರಡುವದನ್ನು ನಿಲ್ಲಿಸಿ ಬಿಟ್ಟನು. ಆದರೆ
ದಾವೀದನು ಅರಣ್ಯದಲ್ಲಿರುವ ದುರ್ಗಸ್ಥಾನಗಳಲ್ಲಿಯೂ ಜೀಫು
ಎಂಬ ಅರಣ್ಯದ ಪಟ್ಟದಲ್ಲಿಯೂ ವಾಸವಾಗಿದ್ದನು. ಸೌಲನು ದಿ
ನಾಲು ಅವನನ್ನು ಹುಡುಕುತ್ತಿದ್ದನು; ಆದರೆ ದೇವರು ಅವನನ್ನು
ಅವನ ಕೈಯಲ್ಲಿ ಒಪ್ಪಿಸಿ ಕೊಡಲಿಲ್ಲ.

೧೫ ತನ್ನ ಪ್ರಾಣವನ್ನು ಹುಡುಕುವದಕ್ಕೆ ಸೌಲನು ಹೊರಟನೆಂ
ದು, ದಾವೀದನು ತಿಳ್ಳಿದಾಗ, ತಾನು ಜೀಫು ಎಂಬ ಅಡವಿಯೊಳಗೆ
೧೬ ಬಂದು ಕೇಕಾಗ್ರಾದ ಸ್ಥಳದಲ್ಲಿದ್ದನು. ಆಗ ಸೌಲನ ಮಗನಾದ
ಯೊನತಾನನು ಎದ್ದು, ಕೇಕಾರಣ್ಯದಲ್ಲಿರುವ ದಾವೀದನ ಬಳ್ಳಿಗೆ
ಹೋಗಿ, ದೇವರಲ್ಲಿ ಅವನ ಕೈಯನ್ನು ಬಲಪಡಿಸಿ, ಅವನಿಗೆ, ಭ
೧೭ ಯ ಪಡ ಬೇಡ; ಯಾಕಂದರೆ ನನ್ನ ತಂದೆಯಾದ ಸೌಲನ ಕೈ
ಯಿ ನಿನ್ನನ್ನು ಹಿಡಿಯುವದಿಲ್ಲ. ನೀನು ಇಸ್ರಯೇಲಿನ ಮೇಲೆ ಅ
ರಸನಾಗಿರುವಿ; ನಾನು ನಿನಗೆ ಎರಡನೆಯವನಾಗಿರುವೆನು. ಮತ್ತು
ಹೀಗೆ ಆಗುವದೆಂದು, ನನ್ನ ತಂದೆಯಾದ ಸೌಲನು ತಿಳ್ಳಿದು ಇದ್ದಾ
೧೮ ನೆ, ಅಂದನು. ಮತ್ತು ಅವರಿಬ್ಬರೂ ಕರ್ತನ ಮುಂದೆ ಒಡಂಬಡಿಕೆ
ಯನ್ನು ಮಾಡಿ ಕೊಂಡರು. ದಾವೀದನು ಅರಣ್ಯದಲ್ಲೇ ನಿಂತ
ನು; ಆದರೆ ಯೊನತಾನನು ತನ್ನ ಮನೆಗೆ ಹೋದನು.

೧೯ ಆಗ ಜೀಫ್ಯರು ಗಿಬ್ಯದಲ್ಲಿರುವ ಸೌಲನ ಬಳ್ಳಿಗೆ ಬಂದು ಹೇಳ್ಳಿ
ದ್ದೇನಂದರೆ, ದಾವೀದನು ನಮ್ಮ ಪಾರ್ಶ್ವವಾಗಿ ಯೆಷಿಮೋನಿನ
ದಕ್ಷಿಣದಲ್ಲಿ ಕೇಕಾರಣ್ಯದೊಳಗಿರುವ ಹಕೀಲ ಗುಡ್ಡದ ಬಲವಾದ
೨೦ ಅಡಗಿಕೆಯ ಸ್ಥಳಗಳಲ್ಲಿ ಬಚ್ಚಿಟ್ಟು ಕೊಂಡಿದ್ದಾನೆ. ಈಗ, ಅರಸ
ನೇ, ನೀನು ನಿನ್ನ ಪ್ರಾಣದ ಇಚ್ಛೆ ಇದ್ದ ಹಾಗೆ, ಇಳಿದು ಬಾ;
ಅವನನ್ನು ಅರಸನ ಕೈಯಲ್ಲಿ ಒಪ್ಪಿಸಿ ಕೊಡುವ ಭಾರವು ನಮ್ಮ
೨೧ ದು, ಅಂದರು. ಆಗ ಸೌಲನು ಹೇಳ್ಳಿದ್ದೇನಂದರೆ, ನೀವು ನನ್ನ
ಮೇಲೆ ಕನಿಕರ ಪಟ್ಟಕಾರಣ, ಕರ್ತನಿಂದ ನಿಮಗೆ ಆಶೀರ್ವಾದವಾ
೨೨ ಗಲಿ. ನೀವು ದಯೆ ಮಾಡಿ ಹೋಗಿ, ಅವನ ಹೆಜ್ಜೆ ಇರುವ ಸ್ಥಳ
ವನ್ನೂ, ಅಲ್ಲಿ ಅವನನ್ನು ನೋಡಿದವರು ಯಾರು ಎಂಬುವದ
೨೩ ನ್ನೂ ಇನ್ನೂ ಭದ್ರವಾಗಿ ತಿಳ್ಳು ಕೊಂಡು ನೋಡಿರಿ; ಯಾಕಂದ
ಕೆ ಅವನು ಬಹು ಉಪಾಯದಿಂದ ಪ್ರವರ್ತಿಸುತ್ತಾನೆಂದು, ನನಗೆ
ಹೇಳ್ಳುತ್ತಾರೆ. ಅವನು ಬಚ್ಚಿಟ್ಟು ಕೊಂಡಿರುವ ಸಮಸ್ತ ರಹಸ್ಯ
ಸ್ಥಳಗಳನ್ನು ನೋಡಿ, ತಿಳ್ಳು ಕೊಂಡು, ನಿಶ್ಚಯವಾದ ವರ್ತಮಾನ
ವನ್ನು ನನ್ನ ಬಳ್ಳಿಗೆ ತಕ್ಕೊಂಡು ಬನ್ನಿರಿ; ಆಗ ನಾನು ನಿಮ್ಮ ಸಂ
ಗತ ಬಂದು, ಅವನು ದೇಶದಲ್ಲಿದ್ದರೆ, ಯೆಹೂದದ ಸಹಸ್ರಗಳಲ್ಲಿ
೨೪ ಅವನನ್ನು ಹುಡುಕ ಹೋಗುವೆನು, ಅಂದನು. ಅದರಿಂದ ಅವ
ರು ಎದ್ದು, ಸೌಲನ ಮುಂದೆ ಜೀಫಕ್ಕೆ ಹೊರಟು ಹೋದರು

ಆದರೆ ದಾವೀದನೂ ಅವನ ಮನುಷ್ಯರೂ ಯೆಷಿಮೋನಿನ
೨೪ ದಕ್ಷಿಣ ದಿಕ್ಕಿಯಾದ ಪೈಲಲ್ಲಿರುವ ಮಾವೋನಿನ ಅರಣ್ಯದಲ್ಲಿದ್ದರು.
ಸೌಲನೂ ಅವನ ಮನುಷ್ಯರೂ ಹುಡುಕ ಬಂದರು.
ಇದು ದಾವೀದನಿಗೆ ತಿಳ್ಳಿಸಲ್ಪಟ್ಟಾಗ, ಅವನು ಬಂಡೆಗೆ ಇಳಿದು, ಮಾ
ವೋನಿನ ಅರಣ್ಯದಲ್ಲಿ ವಾಸಿಸಿದನು. ಅದನ್ನು ಸೌಲನು ಕೇಳ್ಳಿ,
೨೬ ಮಾವೋನಿನ ಅರಣ್ಯದಲ್ಲಿ ದಾವೀದನನ್ನು ಹಿಂದಟ್ಟಿದನು. ಸೌಲ
ನು ಪೆಟ್ಟದ ಈ ಪಾರ್ಶ್ವದಲ್ಲಿ ಹೋದನು; ದಾವೀದನೂ ಅವನ
ಮನುಷ್ಯರೂ ಪೆಟ್ಟದ ಆ ಪಾರ್ಶ್ವದಲ್ಲಿ ಹೋದರು; ಸೌಲನಿಗೆ
ತಪ್ಪಿಸಿ ಕೊಂಡು ಹೋಗ ದಾವೀದನು ತ್ವರೆ ಮಾಡುವಾಗ, ಸೌಲ
ನೂ ಅವನ ಮನುಷ್ಯರೂ ಹಿಡಿಯುವ ಹಾಗೆ, ಅವರನ್ನು ಸುತ್ತಿ
೨೭ ಕೊಂಡರು. ಆದರೆ ಒಬ್ಬ ದೂತನು ಸೌಲನ ಬಳ್ಳಿಗೆ ಬಂದು, ನೀ
ನು ತ್ವರೆಯಾಗಿ ಬಾ; ಯಾಕಂದರೆ ಫಿಲಿಷ್ಟ್ಯರು ದೇಶದ ಮೇಲೆ
೨೮ ಬಂದು ಬಿದ್ದಿದ್ದಾರೆ, ಅಂದನು ಆದದರಿಂದ ಸೌಲನು ದಾವೀದನ
ನ್ನು ಹಿಂದಟ್ಟುವದನ್ನು, ಬಿಟ್ಟು, ಫಿಲಿಷ್ಟ್ಯರಿಗೆ ಎದುರಾಗಿ ಹೋ
ದನು. ಆದಕಾರಣ ಆ ಸ್ಥಳಕ್ಕೆ ಸೆಲಹಮಲ್ಲೆಕೋತ್ ಎಂಬ ಹೆಸ
೨೯ ರಿಟ್ಟರು. ಮತ್ತು ದಾವೀದನು ಆ ಸ್ಥಳವನ್ನು ಬಿಟ್ಟು ಹೋಗಿ,
ಎಂಗೇದಿಯಲ್ಲಿರುವ ಬಲವಾದ ಸ್ಥಳಗಳಲ್ಲಿ ವಾಸಿಸಿದನು.

## ೨೪. ಸಂಧಿ.

೧ ಮತ್ತು ಏನಾಯಿತಂದರೆ, ಸೌಲನು ಫಿಲಿಷ್ಟ್ಯರನ್ನು ಹಿಂದಟ್ಟಿ, ತಿರಿಗಿ ಬಂದಾಗ, ಇಗೋ, ದಾವೀದನು ಎಂಗೇದಿ ಅರಣ್ಯದಲ್ಲಿ ಇದ್ದಾನೆಂದು ಅವನಿಗೆ ತಿಳಿಸಲ್ಪಟ್ಟಿತು. ಆಗ ಸೌಲನು ಸಮಸ್ತ ಇಸ್ರಯೇಲಲ್ಲಿ ಆದು ಕೊಳ್ಳಲ್ಪಟ್ಟ ಮೂರು ಸಾವಿರ ಜನರನ್ನು ತಕ್ಕೊಂಡು, ದಾವೀದನನ್ನೂ ಅವನ ಮನುಷ್ಯರನ್ನೂ ಹುಡುಕ ೨ ಕಾಡು ಮೇಕೆಗಳಿರುವ ಬಂಡೆಗಳಿಗೆ ಹೋದನು. ಅವನು ಮಾರ್ಗದಲ್ಲಿ ಕುರಿ ಹಟ್ಟಿಗಳು ಇರುವ ಗವಿಯ ಬಳಿಗೆ ಬಂದು, ಅದರಲ್ಲಿ ಅವನು ತನ್ನ ಕಾಲುಗಳನ್ನು ಮುಚ್ಚಿಕೊಳ್ಳ ಪ್ರವೇಶಿಸಿದನು. ಆದರೆ ದಾವೀದನೂ ಅವನ ಮನುಷ್ಯರೂ ಆ ಗವಿಯ ಪಕ್ಕಗ ೪ ಳಲ್ಲಿ ಇದ್ದರು. ಆಗ ದಾವೀದನ ಮನುಷ್ಯರು ಅವನಿಗೆ, ಇಗೋ, ನಾನು ನಿನ್ನ ಶತ್ರುವನ್ನು ನಿನ್ನ ಕಣ್ಣುಗಳಿಗೆ ಸರಿ ತೋರುವ ಹಾಗೆ ಮಾಡುವದಕ್ಕೆ ಅವನನ್ನು ನಿನ್ನ ಕೈಯಲ್ಲಿ ಒಪ್ಪಿಸಿ ಕೊಡುವೆನೆಂದು, ಕರ್ತನು ನಿನಗೆ ಹೇಳಿದ ದಿವಸವು ಇದೇ, ಅಂದರು. ಆಗ ದಾವೀದನು ಎದ್ದು, ಹೋಗಿ, ಏಕಾಂತವಾಗಿ ಸೌಲನ ನಿಲುವಂಗಿಯ ೫ ಶರಗನ್ನು ಕೊಯಿದು ಬಿಟ್ಟನು. ಅದರೆ ಹಾಗೆ ಮಾಡಿದ ಮೇಲೆ, ಅವನು ಸೌಲನ ನಿಲುವಂಗಿಯ ಶರಗನ್ನು ಕೊಯಿದು ೬ ಕೊಂಡದರಿಂದ, ದಾವೀದನ ಹೃದಯ ಬಡು ಕೊಂಡಿತು. ಮತ್ತು ಅವನು ತನ್ನ ಮನುಷ್ಯರಿಗೆ, ಅವನು ಕರ್ತನ ಅಭಿಷಿಕ್ತನಾದದರಿಂದ, ನನ್ನ ಕೈಯಿ ಅವನಿಗೆ ವಿರೋಧವಾಗಿ ಚಾಚಿ, ಕರ್ತನಿಂದ ಅಭಿಷಿಕ್ತನಾದ ನನ್ನ ಸ್ವಾಮಿಗೆ ಈ ಕಾರ್ಯ ಮಾಡುವದನ್ನು ೭ ಕರ್ತನು ಅಭ್ಯಂತರಿಸಲಿ, ಅಂದನು. ಹೀಗೆಯೇ ದಾವೀದನು ತನ್ನ ಮನುಷ್ಯರನ್ನು ಸೌಲನ ಮೇಲೆ ಏಳಿಗೊಡದೆ, ಈ ಮಾತುಗಳಿಂದ ಅವರನ್ನು ನಿಲ್ಲಿಸಿದನು. ಆದರೆ ಸೌಲನು ಎದ್ದು, ಗವಿಯನ್ನು ಬಿಟ್ಟು, ಮಾರ್ಗವಾಗಿ ನಡೆದು ಹೋದನು.

೮ ತರುವಾಯ ದಾವೀದನು ಎದ್ದು, ಗವಿಯಿಂದ ಹೊರಟು, ಸೌಲನ ಹಿಂದೆ ಕೂಗಿದ್ದೇನಂದರೆ, ಅರಸನಾದ ನನ್ನ ಸ್ವಾಮಿಯೇ, ಎಂದು ಕೂಗಿದನು. ಸೌಲನು ಹಿಂದಿರುಗಿ ನೋಡಿದಾಗ, ದಾವೀ ೯ ದನು ನೆಲದ ಪರ್ಯಂತರ ಬೊಗ್ಗಿ, ವಂದಿಸಿದನು. ಸೌಲನಿಗೆ ದಾವೀದನು ಹೇಳ್ದಿದ್ದೇನಂದರೆ, ಇಗೋ, ದಾವೀದನು ನಿನಗೆ ಕೇಡು ಮಾಡ ಹುಡುಕತ್ತಾನೆಂದು ಹೇಳುವ ಮನುಷ್ಯರ ಮಾತುಗಳ ೧೦ ನ್ನು ಯಾಕೆ ಕೇಳುತ್ತಿದ್ದೀ! ಇಗೋ, ಕರ್ತನು ಈ ಹೊತ್ತು ಗವಿಯಲ್ಲಿ ನಿನ್ನನ್ನು ನನ್ನ ಕೈಯಲ್ಲಿ ಒಪ್ಪಿಸಿ ಕೊಟ್ಟನೆಂಬುವದನ್ನು ಈ ದಿನ ನಿನ್ನ ಕಣ್ಣುಗಳು ನೋಡಿದವು. ಕೆಲವರು ನಿನ್ನನ್ನು ಕೊಂದು ಹಾಕ ಹೇಳಿದರು; ಆದರೆ ನನ್ನ ಕಣ್ಣು ನಿನ್ನನ್ನು ಕರುಣಿಸಿತು; ಮತ್ತು ಅವನು ಕರ್ತನ ಅಭಿಷಿಕ್ತನಾದದರಿಂದ, ನನ್ನ ೧೧ ಕೈಯಿ ನನ್ನ ಸ್ವಾಮಿಗೆ ವಿರೋಧವಾಗಿ ಚಾಚೆನು, ಅಂದೆನು. ಇದಲ್ಲದೆ ನನ್ನ ತಂದೆಯೇ, ನೋಡು; ನಿಶ್ಚಯವಾಗಿ ನನ್ನ ಕೈಯಲ್ಲಿರುವ ನಿನ್ನ ನಿಲುವಂಗಿಯ ಶರಗನ್ನು ನೋಡು. ಯಾಕಂದರೆ ನಾನು ನಿನ್ನನ್ನು ಕೊಂದು ಹಾಕದೆ, ನಿನ್ನ ನಿಲುವಂಗಿಯ ಶರಗನ್ನು ಕೊಯಿದು ಕೊಂಡದರಿಂದ, ನನ್ನಲ್ಲಿ ಕೆಟ್ಟತನವೂ ದ್ರೋಹವೂ ಇಲ್ಲವೆಂದೂ, ನಾನು ನಿನಗೆ ವಿರೋಧವಾಗಿ ಪಾಪ ಮಾಡಿದ್ದಿಲ್ಲವೆಂದೂ ತಿಳ್ಕಿದು ಕೊಂಡು, ನೋಡು. ಹೀಗಿದ್ದರೂ ನೀನು ೧೨ ನನ್ನ ಪ್ರಾಣವನ್ನು ತೆಗೆದು ಕೊಳ್ಳ ಬೇಟೆಯಾಡುತ್ತೀ. ಕರ್ತನು ನನ್ನ ನಿನ್ನ ಮಧ್ಯದಲ್ಲಿ ನ್ಯಾಯ ತೀರಿಸಲಿ; ಕರ್ತನು ತಾನೇ ನನಗೋಸ್ಕರ ನಿನ್ನ ಬಸಯ ಮುಯ್ಯಿಗೆ ಮುಯ್ಯಿ ಮಾಕಲಿ; ೧೩ ಆದರೆ ನನ್ನ ಕೈ ನಿನ್ನ ಮೇಲೆ ಇರುವದಿಲ್ಲ. ಪೂರ್ವದವರು ಹೇಳ್ದದ ಸಾಮಶಿಯ ಪ್ರಕಾರ, ದುಷ್ಟರಿಂದ ದುಷ್ಟತ್ವವು ಹುಟ್ಟುವದು. ೧೪ ಆದರೂ ನನ್ನ ಕೈ ನಿನ್ನ ಮೇಲೆ ಇರುವದಿಲ್ಲ. ಇಸ್ರಯೇಲಿನ ಅರಸನು ಯಾರ ಹಿಂದೆ ಹತ್ತ ಹೊರಟನು! ಯಾರನ್ನು ಹಿಂದಟ್ಟುತ್ತೀ! ಸತ್ತ ನಾಯಿಯನ್ನೇ; ಒಂದು ಕೂಕೆಯನ್ನೇ. ೧೫ ಕರ್ತನು ನ್ಯಾಯಾಧಿಪತಿಯಾಗಿದ್ದು, ನನಗೂ ನಿನಗೂ ನ್ಯಾಯ ತೀರಿಸಿ, ನನ್ನ ವ್ಯಾಜ್ಯವನ್ನು ನೋಡಿ, ವ್ಯಾಜ್ಯವಾಡಿ, ನನ್ನನ್ನು ನಿನ್ನ ಕೈಗೆ ತಪ್ಪಿಸಿ ಬಿಡಲಿ, ಅಂದನು.

೧೬ ದಾವೀದನು ಈ ಮಾತುಗಳನ್ನು ಸೌಲನಿಗೆ ಹೇಳಿ ತೀರಿಸಿದಾಗ, ಸೌಲನು, ನನ್ನ ಕುಮಾರನಾದ ದಾವೀದನೇ, ಇದು ನಿನ್ನ ಶಬ್ದವಲ್ಲವೋ! ಅಂದನು: ಮತ್ತು ಸೌಲನು ತನ್ನ ಶಬ್ದವನ್ನೆತ್ತಿ, ಅತ್ತನು. ೧೭ ಮತ್ತು ದಾವೀದನಿಗೆ ಹೇಳ್ದಿದ್ದೇನಂದರೆ, ನೀನು ನನಗಿಂತ ನೀತಿವಂತನು; ಯಾಕಂದರೆ ನೀನು ನನಗೆ ಬಳ್ಳೇದನ್ನು ಸಲ್ಲಿಸಿದಿ; ಆದರೆ ನಾನು ನಿನಗೆ ಕೇಡನ್ನು ಸಲ್ಲಿಸಿದೆನು. ೧೮ ಕರ್ತನು ನನ್ನನ್ನು ನಿನ್ನ ಕೈಯಲ್ಲಿ ಒಪ್ಪಿಸಿ ಕೊಟ್ಟಾಗ, ನೀನು ನನ್ನನ್ನು ಕೊಂದು ಹಾಕದೆ ಇದ್ದದರಿಂದ, ನೀನು ನನಗೆ ಉಪಕಾರ ಮಾಡಿದ್ದನ್ನು ಈ ಹೊತ್ತು ತೋರಿಸಿದಿ. ೧೯ ಯಾಕಂದರೆ ಯಾವನಾದರೂ ತನ್ನ ಶತ್ರುವನ್ನು ಹಿಡಿದು ಕೊಂಡರೆ, ಅವನನ್ನು ಸುರಕ್ಷಿತವಾಗಿ ಬಿಟ್ಟು ಬಿಡುವನೋ! ಆದದರಿಂದ ಈ ಹೊತ್ತು ನೀನು ನನಗೆ ಮಾಡಿದ್ದಕ್ಕೆ ಬದಲಾಗಿ ದೇವರು ನಿನಗೆ ಬಳ್ಳೇದನ್ನು ಮಾಕಲಿ. ೨೦ ಈಗ, ಇಗೋ, ನೀನು ನಿಶ್ಚಯವಾಗಿ ಅರಸನಾಗುವಿ ಎಂದೂ, ಇಸ್ರಯೇಲಿನ ರಾಜ್ಯವು ನಿನ್ನ ಕೈಯಲ್ಲಿ ಸ್ಥಿರ ಮಾಡಲ್ಪಡುವದೆಂದೂ, ನಾ ಬಲ್ಲೆನು. ೨೧ ಆದದರಿಂದ ನೀನು ನನ್ನ ತರುವಾಯ ನನ್ನ ಬೀಜವನ್ನು ಕಡಿದು ಬಿಡುವದಿಲ್ಲವೆಂದೂ, ನನ್ನ ತಂದೆಯ ಮನೆಯಲ್ಲಿ ನನ್ನ ಹೆಸರನ್ನು ನಾಶನ ಮಾಡುವದಿಲ್ಲವೆಂದೂ, ನನಗೆ ಕರ್ತನಿಂದ ೨೨ ಆಣೆ ಇಡು, ಅಂದನು. ಹಾಗೆಯೇ ದಾವೀದನು ಸೌಲನಿಗೆ ಆಣೆ ಇಟ್ಟನು. ಆಗ ಸೌಲನು ತನ್ನ ಮನೆಗೆ ಹೋದನು. ಆದರೆ ದಾವೀದನೂ ಅವನ ಮನುಷ್ಯರೂ ಬಲವಾದ ಸ್ಥಳಕ್ಕೆ ಏರಿ ಹೋದರು.

## ೨೫. ಸಂಧಿ.

೧ ಮತ್ತು ಸಮುವೇಲನು ಸತ್ತು ಹೋದನು; ಇಸ್ರಯೇಲ್ಯರೆಲ್ಲರು ಕೂಡಿ ಬಂದು, ಅವನಿಗೋಸ್ಕರ ಗೋಳಾಡಿ, ರಾಮದಲ್ಲಿರುವ ಅವನ ಮನೆಯಲ್ಲಿ ಅವನನ್ನು ಹೂಣಿಟ್ಟರು.

೨ ಆಗ ದಾವೀದನು ಎದ್ದು, ಪಾರಾನ್ ಅರಣ್ಯಕ್ಕೆ ಹೋದನು. ಆದರೆ ಕರ್ಮೇಲಿನಲ್ಲಿ ಕೆಲಸ ಉಂಟಾಗಿರುವ ಮಹೋನಿವನಾದ ಒಬ್ಬ ಮನುಷ್ಯನಿದ್ದನು. ಆ ಮನುಷ್ಯನು ಬಹು ದೊಡ್ಡವನಾಗಿದ್ದನು; ಅವನಿಗೆ ಮೂರು ಸಾವಿರ ಕುರಿಗಳೂ ಸಾವಿರ ಮೇಕೆಗಳೂ ಇದ್ದವು. ಅವನು ಕರ್ಮೇಲಿನಲ್ಲಿ ತನ್ನ ಕುರಿಗಳನ್ನು ಉಣ್ಣೆ ಕತ್ತರಿಸುತ್ತಿದ್ದನು. ೩ ಈ ಮನುಷ್ಯನ ಹೆಸರು ನಬಾಲನು; ಅವನ ಹೆಂಡತಿಯ ಹೆಸರು ಅಬಿಗಾಯಿಲು. ಆ ಸ್ತ್ರೀಯು ಮಹಾ ಬುದ್ಧಿವಂತೆಯಾಗಿಯೂ ಸೌಂದರ್ಯವತಿಯಾಗಿಯೂ ಇದ್ದಳು. ಆದರೆ ಆ ಮನುಷ್ಯನು ಕಠಿಣ ಗುಣವುಳ್ಳವನಾಗಿಯೂ ತನ್ನ ಕ್ರಿಯೆ



ಗಳಲ್ಲಿ ಕೆಟ್ಟವನಾಗಿಯೂ ಇದ್ದನು; ಅವನು ಕಾಲೆಬನ ವಂಶಸ್ಥನು. ೪ ಆದರೆ ನಬಾಲನು ತನ್ನ ಕುರಿಗಳ ಉಣ್ಣೆ ಕತ್ತರಿಸುವ ಪರ್ವತಮಾ ೫ ನವನ್ನು ದಾವೀದನು ಅರಣ್ಯದಲ್ಲಿ ಕೇಳ್ದಿದನು. ಆಗ ದಾವೀದನು ಹತ್ತು ಮಂದಿ ಪ್ರಾಯದವರನ್ನು ಕಳುಹಿಸಿದನು; ಆಗ ದಾವೀದನು ಅವರಿಗೆ ಹೇಳ್ದಿದ್ದೇನಂದರೆ—ನೀವು ಕರ್ಮೇಲಿಗೆ ಹೋಗಿ, ನಬಾಲನ ಬಳಿಗೆ ಕೇರಿದಾಗ, ನನ್ನ ಹೆಸರಿನಿಂದ ಅವನ ಕ್ಷೇಮ ಸಮಾಚಾ ೬ ರವನ್ನು ಕೇಳಿ, ಬಾಳುವವನಾದ ಅವನಿಗೆ ಹೇಳ್ದ ಬೇಕಾದದ್ದೇನಂದರೆ, ನಿನಗೆ ಸಮಾಧಾನವೂ, ನಿನ್ನ ಮನೆಗೆ ಸಮಾಧಾನವೂ, ನಿನಗೆ ೭ ಉಂಟಾದ ಎಲ್ಲಕ್ಕೂ ಸಮಾಧಾನವೂ, ಆಗಲಿ. ಈಗ ನಾನು ನಿನಗೆ ಕುರಿಗಳ ಉಣ್ಣೆ ಕತ್ತರಿಸುವವರು ಉಂಟೆಂದು ಕೇಳ್ದಿದ್ದೇನೆ. ಆದರೆ ನಮ್ಮ ಸಂಗಡಲಿದ್ದ ನಿನ್ನ ಕುರಿ ಕಾಯುವವರು ಕರ್ಮೇಲಿನಲ್ಲಿ ಇದ್ದ ದಿವಸಗಳೆಲ್ಲಾ ನಾವು ಅವರಿಗೆ ನಾಚಿಕೆ ಪಡಿಸಲಿಲ್ಲ; ಮ ೮ ತ್ತು ಅವರು ಬಂದಾದರೂ ಕಳ್ಳಕೊಳ್ಳಲಿಲ್ಲ. ನಿನ್ನ ಸೇವಕರನ್ನು ಕೇಳು; ಅವರು ನಿನಗೆ ಹೇಳುವರು. ಆದದರಿಂದ ಈಗ ಈ ಪ್ರಾಯದವರಿಗೆ ನಿನ್ನ ಕಣ್ಣುಗಳಲ್ಲಿ ದಯೆ ದೊರಕಲಿ; ಯಾಕಂದರೆ ಒಳ್ಳೇ ದಿವಸದಲ್ಲಿ ಬಂದೆವು. ನಿನ್ನ ಕೈಯಲ್ಲಿ ದೊರಕುವದನ್ನು ನಿನ್ನ ಸೇವಕರಿಗೂ, ನಿನ್ನ ಕುಮಾರನಾದ ದಾವೀದನಿಗೂ ದಯಪಾಲಿಸು.

೯ ದಾವೀದನ ಪ್ರಾಯಸ್ತರು ಬಂದು, ಈ ವಾಕ್ಯಗಳಲ್ಲೆಲ್ಲಾ ದಾ ೧೦ ವೀದನ ಹೆಸರಿನಲ್ಲಿ ನಬಾಲನಿಗೆ ಹೇಳಿ, ಸುಮ್ಮನೆ ಆದರು. ನಬಾಲನು ದಾವೀದನ ಸೇವಕರಿಗೆ ಪ್ರತ್ಯುತ್ತರವಾಗಿ ಹೇಳ್ದಿದ್ದು, ದಾವೀದನು ಯಾರು! ಇಷಾಯನ ಮಗನು ಯಾರು! ತಮ್ಮ ಯಜಮಾನನನ್ನು ಬಿಟ್ಟು, ಅಗಲಿ ಹೋಗುವ ಸೇವಕರು ಈ ದಿವಸದಲ್ಲಿ ೧೧ ಅನೇಕರುಂಟು. ನಾನು ನನ್ನ ರೊಟ್ಟಿಯನ್ನೂ, ನೀರನ್ನೂ, ಉಣ್ಣೆ ಕತ್ತರಿಸುವವರಿಗೋಸ್ಕರ ನಾನು ಸಿದ್ದ ಮಾಡಿಸಿದ ಮಾಂಸವನ್ನೂ ತೆಗೆದು, ಎಲ್ಲಿಯವಕೆಂದು ನಾನರಿಯದ ಮನುಷ್ಯರಿಗೆ ೧೨ ಕೊಡುವೆನೋ! ಅಂದನು. ದಾವೀದನ ಪ್ರಾಯದವರು ತಮ್ಮ ಮಾರ್ಗವಾಗಿ ಹಿಂದಕ್ಕೆ ತಿರುಗಿ, ದಾವೀದನ ಬಳಿಗೆ ಬಂದು, ಈ ೧೩ ಮಾತುಗಳನ್ನೆಲ್ಲಾ ಅವನಿಗೆ ತಿಳ್ಕಿಸಿದರು. ಆಗ ದಾವೀದನು ತನ್ನ ಮನುಷ್ಯರಿಗೆ, ನೀವು ಒಬ್ಬೊಬ್ಬನು ತನ್ನ ಕತ್ತಿಯನ್ನು ಕಟ್ಟಿ ಕೊಳ್ಳಿರಿ, ಅಂದನು. ಅವನವನು ತನ್ನ ಕತ್ತಿಯನ್ನು ಕಟ್ಟಿ ಕೊಂಡನು; ಹಾಗೆಯೇ ದಾವೀದನು ತನ್ನ ಕತ್ತಿಯನ್ನು ಕಟ್ಟಿ ಕೊಂಡನು. ದಾವೀದನ ಹಿಂದೆ ಹೆಚ್ಚು ಕಡಿಮೆ ನಾನೂರು ಮಂದಿ ಹೋದರು. ಆದರೆ ಇನ್ನೂರು ಮಂದಿ ಸಾಮಾನಿನ ಬಳಿಯಲ್ಲಿ ನಿಂತರು.

೧೪ ಆಗ ಕೆಲಸದವರಲ್ಲಿ ಒಬ್ಬನು ನಬಾಲನ ಹೆಂಡತಿಯಾದ ಅಬಿಗಾಯಿಲಿಗೆ ಹೇಳ್ದಿದ್ದೇನಂದರೆ—ಇಗೋ, ನಮ್ಮ ಯಜಮಾನನನ್ನು ಆಶೀರ್ವದಿಸ ದಾವೀದನು ಅರಣ್ಯದಿಂದ ದೂತರನ್ನು ಕಳುಹಿಸಿದನು. ೧೫ ಆದರೆ ಅವನು ಅವರನ್ನು ಗದರಿಸಿದನು. ಆ ಮನುಷ್ಯರು ನಮಗೆ ಮಹಾ ಉಪಕಾರಿಗಳಾಗಿದ್ದರು. ನಾವು ಹೊರಗೆ ಇರುವಾಗ, ಅವರು ನಮ್ಮಲ್ಲಿ ಸಂಚರಿಸುತ್ತಿದ್ದ ದಿನಗಳೆಲ್ಲಾ ನಾವು ನಾಚಿಕೆ ಪಡಲಿಲ್ಲ; ಒಂದನ್ನಾದರೂ ಕಳಕೊಳ್ಳಲಿಲ್ಲ. ೧೬ ಇದಲ್ಲದೆ ಅವರ ಸಂಗಡ ನಾವು ಕುರಿಗಳನ್ನು ಮೇಯಿಸಿ ಕೊಂಡು ಇದ್ದ ದಿವಸಗಳೆಲ್ಲಾ ನಮಗೆ ಅವರು ರಾತ್ರೀ ಹಗಲು ಬಂದು ಕೋಟೆ ಗೋಡೆಯಾಗಿದ್ದರು. ೧೭ ಈಗ ನೀನು ಅದಕ್ಕೆ ಮಾತ ಬೇಕಾದದ್ದೇನೆಂದು, ತಿಳ್ಕಿ ಕೊಂಡು, ನೋಡು. ಯಾಕಂದರೆ ಕೇಡು ನಮ್ಮ ಯಾಜಮಾನನ ಮೇಲೆಯೂ ಅವನ ಮನೆಯೆಲ್ಲಾದರ ಮೇಲೆಯೂ ನಿಶ್ಚಯಿಸಲ್ಪಟ್ಟಿದೆ, ಏನಂದರೆ ಅವನು ಬೆಲಿಯಾಳ್ನ ಮಗನಾಗಿರುವದರಿಂದ, ಅವನ ಸಂಗಡ ಯಾವನೂ ಮಾತಾಡ ಕೂಡದು, ಅಂದನು.

೧೮ ಆಗ ಅಬಿಗಾಯಿಲು ಶೀಘ್ರವಾಗಿ ಇನ್ನೂರು ಕೊಟ್ಟಿಗಳನ್ನೂ, ಎರಡು ಸಿದ್ದಿಗೆ ದ್ರಾಕ್ಷೇ ರಸವನ್ನೂ, ಪಾಕ ಮಾಡಿದ ಐದು ಕುರಿಗಳನ್ನೂ, ಐದು ಸೇರು ಹುರಿದ ಧಾನ್ಯವನ್ನೂ, ಒಣಗಿದ ನೂರು ದ್ರಾಕ್ಷೇಗೊಪ್ಪೆಗಳನ್ನೂ, ಒಣಗಿದ ಇನ್ನೂರು ಅಂಜೂರದ ಅಡೆಗಳನ್ನೂ ತೆಗೆದು, ಕತ್ತೆಗಳ ಮೇಲೆ ಹೇರಿಸಿ ಕೊಂಡು, ತನ್ನ ಸೇ ೧೯ ವಕರಿಗೆ, ನನಗೆ ಮುಂದಾಗಿ ಹೋಗಿರಿ; ಇಗೋ, ನಾನು ನಿಮ್ಮ ಹಿಂಬಳಿಯಾಗಿ ಬರುವೆನೆಂದು ಹೇಳ್ದಿದ್ದಳು. ಆದರೆ ತನ್ನ ಗಂ ೨೦ ಡನಾದ ನಬಾಲನಿಗೆ ತಿಳ್ಕಿಸಲಿಲ್ಲ. ಆಗ ಏನಾಯಿತಂದರೆ, ಅವಳು ಒಂದು ಕತ್ತೆಯ ಮೇಲೆ ಹತ್ತಿ ಕೊಂಡು, ಮಾರ್ಗದಲ್ಲಿ ಗುಡ್ಡದ ಮರೆಗೆ ಬಂದಾಗ, ಇಗೋ, ದಾವೀದನೂ ಅವನ ಮನುಷ್ಯರೂ ಅವಳಿಗೆ ಎದುರಾಗಿ ಇಳ್ಕಿದು ಬಂದರು. ಅವಳು ಅವರನ್ನು ಕಲತು ಕೊಂಡಳು.

೨೧ ಆದರೆ ದಾವೀದನು ಹೇಳ್ಕಿ ಕೊಂಡದ್ದೇನಂದರೆ—ಅಡವಿಯಲ್ಲಿದ್ದ ಇವನ ಸ್ಥಿತಿಯನ್ನೆಲ್ಲಾ, ಅಬೆಲ್ಲಾದರಲ್ಲಿ ಒಂದಾದರೂ ಕಳಕೊಳ್ಳದ ಹಾಗೆ, ನಾನು ವ್ಯರ್ಥವಾಗಿ ಕಾಪಾಡಿದೆನು. ಯಾಕಂದರೆ ಅವನು ನಾನು ಮಾಡಿದ ಉಪಕಾರಕ್ಕೆ ನನಗೆ ಅಪಕಾರ ಮಾ ೨೨ ಡಿದ್ದಾನೆ. ಅವನಿಗೆ ಉಂಟಾದವೆಲ್ಲರಲ್ಲಿ ಉದಯವಾಗುವ ಪರ್ಯಂತರ ನಾನು ಒಬ್ಬ ಗಂಡಸನ್ನು ಉಳ್ಳಿಸಿದರೆ, ದೇವರು ದಾವೀದನ ಶತ್ರುಗಳಿಗೆ ಹೀಗೆಯೂ, ಇದಕ್ಕಿಂತ ಅಧಿಕವಾಗಿಯೂ ಮಾಕಲಿ, ಅಂದನು.

೨೩ ಅಬಿಗಾಯಿಲು ದಾವೀದನನ್ನು ನೋಡಿದಾಗ, ಶೀಘ್ರವಾಗಿ ಕತ್ತೆಯಿಂದಿಳ್ಕಿದು, ದಾವೀದನಿಗೆ ಎದುರಾಗಿ ಹೋಗಿ, ಅವನ ಮುಂದೆ ಮೋರೆ ಕೆಳಗಾಗಿ ಬಿದ್ದು, ನೆಲಕ್ಕೆ ಎರಗಿ, ಅವನ ಪಾದಗಳ ಮೇಲೆ ೨೪ ಬಿದ್ದು, ನನ್ನ ಸ್ವಾಮಿಯೇ, ಈ ಅಕ್ರಮವು ನನ್ನ ಮೇಲೆಯೇ ಇರಲಿ. ದಯೆ ಮಾಡಿ, ನಿನ್ನ ದಾಸಿಯನ್ನು ನಿನ್ನ ಕಿವಿಗಳಲ್ಲಿ ಮಾತಾಡ ಸೊಡಿಸಿ, ನಿನ್ನ ದಾಸಿಯ ಮಾತುಗಳನ್ನು ಕೇಳು. ೨೫ ನನ್ನ ಸ್ವಾಮಿ ದಯೆ ಮಾಡಿ, ಬೆಲಿಯಾಳ್ನ ಈ ಮನುಷ್ಯನಾದ ನಬಾಲನ ಮೇಲೆ ತನ್ನ ಹೃದಯ ಇಡದೆ ಇರಲಿ. ಯಾಕಂದರೆ ಅವನ ಹೆಸರು ಹ್ಯಾಗೋ, ಹಾಗೆಯೇ ಅವನು. ಅವನು ನಬಾಲನೆಂಬ ಹೆಸರುಳ್ಳವನು ಬುದ್ಧಿಹೀನತ್ವ ಅವನ ಸಂಗಡ ಇರುವದು. ಅದರೆ ನನ್ನ ಸ್ವಾಮಿಯಾದ ನೀನು ಕಳುಹಿಸಿದ ನಿನ್ನ ಪ್ರಾಯಸ್ತರನ್ನು ೨೬ ನಿನ್ನ ದಾಸಿಯಾದ ನಾನು ನೋಡಲಿಲ್ಲ. ಆದಕಾರಣ ನನ್ನ ಸ್ವಾಮಿಯೇ, ನೀನು ರಕ್ತ ಜೆಲ್ಲುವದಕ್ಕೂ ನಿನ್ನ ಕೈಯಿಂದ ನಿನಗೆ ರಕ್ಷಣೆ ಮಾಡಿ ಕೊಳ್ಳುವದಕ್ಕೂ ಹೋಗುವದನ್ನು ದೇವರು ಆಟಂಕ ಮಾಡಿದ್ದರಿಂದ, ಕರ್ತನ ಜೀವದಾಣೆ—ನಿನ್ನ ಪ್ರಾಣದ ಜೀವದಾಣೆ, ನನ್ನ ಕರ್ತನೇ, ನಿನ್ನ ಶತ್ರುಗಳೂ ನನ್ನ ಸ್ವಾಮಿಯ ಕೇಡಾಕೈಸುವವರೂ ನಬಾಲನ ಹಾಗೆಯೇ ಆಗಲಿ. ೨೭ ಈಗ ನಿನ್ನ ದಾಸಿ ನನ್ನ ಸ್ವಾಮಿಗೆ ತಕ್ಕೊಂಡು ಬಂದ ಈ ಆಶೀರ್ವಾದ ನನ್ನ ಸ್ವಾಮಿಯ ಹೆಜ್ಜೆಯಲ್ಲಿ ನಡಿಯುವ ಪ್ರಾಯಸ್ತರಿಗೆ ೨೮ ಕೊಡಲ್ಪಡಲಿ. ನೀನು ದಯೆ ಮಾಡಿ, ನಿನ್ನ ದಾಸಿಯ ದ್ರೋಹ

ವನ್ನು ಮನ್ನಿಸ ಬೇಕು; ಯಾಕಂದರೆ ನನ್ನ ಸ್ವಾಮಿ ಕರ್ತನ
ಯುದ್ಧಗಳನ್ನು ನಡಿಸುತ್ತಾನೆ; ನಿನ್ನ ದಿನಗಳಲ್ಲಿ ನಿನ್ನ ಬಳಿ
ಯ ಕೆಟ್ಟತನ ಕಂಡು ಹಿಡಿಯಲ್ಪಟ್ಟಿದ್ದಿಲ್ಲ; ಆದರೆಂದ ಕರ್ತನು
ನನ್ನ ಸ್ವಾಮಿಗೆ ಸ್ಥಿರವಾದ ಮನೆಯನ್ನು ಮಾಡೇ ಮಾಡುವನು.
೨೯ ಈಗ ನಿನ್ನನ್ನು ಹಿಂದಟ್ಟಿ, ನಿನ್ನ ಪ್ರಾಣವನ್ನು ಹುಡುಕುವದಕ್ಕೆ
ಒಬ್ಬನು ಎದ್ದಿದ್ದಾನೆ. ಆದರೆ ನನ್ನ ಸ್ವಾಮಿಯ ಪ್ರಾಣವು ದೇವ
ರಾದ ಕರ್ತನ ಬಳಿಯ ಜೀವದ ಕಟ್ಟಿನಲ್ಲಿ ಕಟ್ಟಲ್ಪಟ್ಟಿರುವದು.
ನಿನ್ನ ಶತ್ರುಗಳ ಪ್ರಾಣವನ್ನು ಕವಣೆಯ ಮಧ್ಯದಲ್ಲಿಟ್ಟು, ಎಸೆದ
೩೦ ಹಾಗೆಯೇ ಅವನು ಎಸೆದು ಬಿಡುವನು. ಇದಲ್ಲದೆ ನನ್ನ ಸ್ವಾಮಿ
ಯಾದ ನಿನ್ನನ್ನು ಕುರಿತು ಕರ್ತನು ಹೇಳಿದ ಒಳ್ಳೇದನೆಲ್ಲಾ
ನಿನಗೆ ಮಾಡಿ, ನಿನ್ನನ್ನು ಇಸ್ರಯೇಲರ ಮೇಲೆ ನಾಯಕನಾಗಿ
ನೇಮಿಸಿದಾಗ, ಏನಾಗುವದಂದರೆ, ನೀನು ಸುಮ್ಮನೆ ರಕ್ತ ಚೆಲ್ಲಿ
ದ್ದೂ ನನ್ನ ಸ್ವಾಮಿ ತನಗೆ ತಾನೇ ರಕ್ಷಣೆ ಮಾಡಿ ಕೊಂಡದ್ದೂ
ನಿನಗೆ ಚಂಚಲಕರವಾಗಿರುವದಿಲ್ಲ, ನನ್ನ ಸ್ವಾಮಿಯ ಹೃದಯ
೩೧ ಕ್ಕೆ ಆಟಂಕವಾಗಿರುವದಿಲ್ಲ. ಆದರೆ ನನ್ನ ಸ್ವಾಮಿಗೆ ಕರ್ತನು
ಚನ್ನಾಗಿ ನಡಿಸಿದಾಗ, ನಿನ್ನ ದಾಸಿಯನ್ನು ಜ್ಞಾಪಕ ಮಾಡಿ
ಕೊಳ್ಳ ಬೇಕು, ಅಂದಳು.
೩೨ ಆಗ ದಾವೀದನು ಅಬಿಗಾಯಿಲಿಗೆ ಹೇಳಿದ್ದೇನಂದರೆ, ನನ್ನನ್ನು
ಎದುರ್ಗೊಳ್ಳುವದಕ್ಕೆ ಈ ಹೊತ್ತು ನಿನ್ನನ್ನು ಕಳುಹಿಸಿದ ಇಸ್ರ
೩೩ ಯೇಲನ ದೇವರಾದ ಕರ್ತನು ಆಶೀರ್ವದಿಸಲ್ಪಡಲಿ; ನಿನ್ನ ಬುದ್ಧಿ
ಮಾತು ಆಶೀರ್ವದಿಸಲ್ಪಡಲಿ. ನಾನು ರಕ್ತ ಚೆಲ್ಲುವದಕ್ಕೂ ನನ್ನ
ಕೈಯಿಂದ ನನಗೆ ರಕ್ಷಣೆ ಮಾಡಿ ಕೊಳ್ಳುವದಕ್ಕೂ ಬಾರದ ಹಾ
ಗೆ, ಈ ಹೊತ್ತು ನನ್ನನ್ನು ಆಟಂಕಿಸಿದ ನಿನಗೆ ಆಶೀರ್ವಾದ ಆಗ
೩೪ ಲಿ. ಯಾಕಂದರೆ ನಿನಗೆ ಕೇಡು ಮಾಡದ ಹಾಗೆ, ನನಗೆ ಆಟಂಕ
ಮಾಡಿದ ಇಸ್ರಯೇಲಿನ ದೇವರಾದ ಕರ್ತನ ಜೀವದಾಣೆ—ನೀ
ನು ತ್ವರೆಯಾಗಿ ನನ್ನನ್ನು ಎದುರ್ಗೊಳ್ಳ ಬಾರದೆ ಇದ್ದರೆ, ಉದ
ಯವಾಗುವಷ್ಟರಲ್ಲಿ ನಬಾಲನಿಗೆ ಒಂದು ಗಂಡಸಾದರೂ ಉಳಿದಿ
೩೫ ರನು. ಮತ್ತು ಅವಳು ತನಗೆ ತಂದದ್ದನ್ನು ದಾವೀದನು ಅವಳ
ಕೈಯಿಂದ ತಕ್ಕೊಂಡು, ಅವಳಿಗೆ ನೀನು ಸಮಾಧಾನವಾಗಿ ನಿನ್ನ
ಮನೆಗೆ ಹೋಗು; ಇಗೋ, ನಾನು ನಿನ್ನ ಮಾತನ್ನು ಕೇಳಿ,
ನಿನ್ನ ಮುಖ ದಾಕ್ಷಿಣ್ಯವನ್ನು ನೋಡಿದೆನು, ಅಂದನು.
೩೬ ಅದರೆ ಅಬಿಗಾಯಿಲು ನಬಾಲನ ಬಳಿಗೆ ಬಂದಾಗ, ಇಗೋ,
ಅರಸನ ಔತಣಕ್ಕೆ ಸಮಾನವಾದ ಔತಣ ಅವನ ಮನೆಯಲ್ಲಿತ್ತು.
ಅವನು ಬಹಳವಾಗಿ ಕುಡಿದ್ದರಿಂದ, ಅವನ ಹೃದಯವು ಅವನಲ್ಲಿ
ಸಂಭ್ರಮವಾಗಿತ್ತು. ಆದಕಾರಣ ಅವಳು ಉದಯವಾಗುವ ಪ
ರ್ಯಂತರ ಅವನಿಗೆ ಚಿಕ್ಕದನಾಗಲಿ ದೊಡ್ಡದನಾಗಲಿ ತಿಳಿಸ
೩೭ ಲಿಲ್ಲ. ಉದಯದಲ್ಲಿ ನಬಾಲನಿಂದ ದ್ರಾಕ್ಷೇ ರಸ ಬಿಟ್ಟು ಹೋದಾ
ಗ, ಅವನ ಹೆಂಡತಿಯು ಈ ಮಾತುಗಳನ್ನು ಅವನಿಗೆ ತಿಳಿಸಲು,
ಏನಾಯಿತಂದರೆ, ಅವನ ಹೃದಯವು ಅವನಲ್ಲಿ ಸತ್ತು, ಅವನು
ಕಲ್ಲಿನ ಹಾಗಾದನು.
೩೮ ಹೆಚ್ಚು ಕಡಿಮೆ ಹತ್ತು ದಿವಸಗಳಾದ ತರುವಾಯ ಏನಾಯಿ
ತಂದರೆ, ಕರ್ತನು ನಬಾಲನನ್ನು ಹೊಡೆದ್ದರಿಂದ ಅವನು ಸತ್ತನು.
೩೯ ನಬಾಲನು ಸತ್ತನೆಂದು, ದಾವೀದನು ಕೇಳಿದಾಗ, ನನ್ನ ನಿಂದೆಯ
ವ್ಯಾಜ್ಯವನ್ನು ನಬಾಲನಿಂದ ವಿಚಾರಿಸಿ, ತನ್ನ ಸೇವಕನನ್ನು, ಕೇ
ಡು ಮಾಡ ಹೊಡದ ಹಾಗೆ, ಆಟಂಕಿಸಿದ ಕರ್ತನು ಆಶೀರ್ವದಿಸ
ಲ್ಪಡಲಿ. ಯಾಕಂದರೆ ಕರ್ತನು ನಬಾಲನ ಕೆಟ್ಟತನವನ್ನು ಅವ
ನ ತಲೆಯ ಮೇಲೆ ಬರ ಮಾಡಿದನು, ಅಂದನು. ಮತ್ತು ದಾವೀ
ದನು ಅಬಿಗಾಯಿಲನ್ನು ತನಗೆ ಹೆಂಡತಿಯಾಗಿ ತಕ್ಕೊಳ್ಳುವದ
ಕ್ಕಾಗಿ, ಅವಳ ಸಂಗಡ ಮಾತಾಡ ಕಳುಹಿಸಿದನು.
೪೦ ದಾವೀದನ ಸೇವಕರು ಕರ್ಮೇಲಿನಲ್ಲಿರುವ ಅಬಿಗಾಯಿಲಿನ
ಬಳಿಗೆ ಬಂದಾಗ, ಅವಳಿಗೆ, ದಾವೀದನು ನಿನ್ನನ್ನು ತನಗೆ ಹೆಂಡ
ತಿಯಾಗಿ ತಕ್ಕೊಳ್ಳುವದಕ್ಕಾಗಿ, ನಮ್ಮನ್ನು ನಿನ್ನ ಬಳಿಗೆ ಕಳು
ಹಿಸಿದನೆಂದು, ಹೇಳಿದರು. ಆಗ ಅವಳು ಎದ್ದು, ಮೋರೆ ಕೆಳಗಾಗಿ
ನೆಲಕ್ಕೆ ಅಡ್ಡ ಬಿದ್ದು, ಇಗೋ, ನಿನ್ನ ದಾಸಿ ನನ್ನ ಸ್ವಾಮಿಯ
೪೧ ಉಳಿಗದವರ ಪಾದಗಳನ್ನು ತೊಳಿಯುವ ಒಬ್ಬ ಸೇವಕಳಾಗ
ಬೇಕು, ಅಂದಳು. ಮತ್ತು ಅಬಿಗಾಯಿಲು ತ್ವರೆಯಾಗಿ ಎದ್ದು,
ಕತ್ತೆಯ ಮೇಲೆ ಹತ್ತಿ ಕೊಂಡು, ತನ್ನ ಸಂಗಡ ಇರುವ ಐದು
ಮಂದಿ ದಾಸಿಯರನ್ನು ಕರ ಕೊಂಡು, ದಾವೀದನ ಸೇವಕರ ಹಿಂ
೪೨ ದೆ ಹೋಗಿ, ಅವನಿಗೆ ಹೆಂಡತಿಯಾದಳು. ಇದಲ್ಲದೆ ದಾವೀದನು
ಇಸ್ರೇಲು ಊರಿನವಳಾದ ಅಹಿನೊವಾಮಳನ್ನು ತಕ್ಕೊಂಡನು.
ಅವರಿಬ್ಬರೂ ಅವನಿಗೆ ಹೆಂಡರಾದರು. ಆದರೆ ಸೌಲನು ದಾವೀದ
ನ ಹೆಂಡತಿಯಾದ ಮೀಕಳೆಂಬ ತನ್ನ ಕುಮಾರ್ತೆಯನ್ನು ಗ
ಲ್ಲಿಯ ಪಟ್ಟಣದ ಲಯಿಷನಮಗನಾದ ಫಲ್ಟಿಗೆ ಕೊಟ್ಟನು.

## ೨೯. ಸಂಧಿ.

೧ ಆದರೆ ಜೀಫ್ಯರು ಗಿಬ್ಯದಲ್ಲಿರುವ ಸೌಲನ ಬಳಿಗೆ ಬಂದು, ದಾ
ವೀದನು ಯೆಷಿಮೋನಿಗೆ ಎದುರಾದ ಹಕೀಲ ಬೆಟ್ಟದಲ್ಲಿ ಬಚ್ಚಿಟ್ಟು
ಕೊಂಡಿದ್ದಾನೆ, ಅಂದರು. ಆಗ ಸೌಲನು ಎದ್ದು, ಜೀಫು ಅರಣ್ಯ
೨ ದಲ್ಲಿರುವ ದಾವೀದನನ್ನು ಹುಡುಕ ಇಸ್ರಯೇಲಿನಲ್ಲಿ ಆಯಲ್ಪಟ್ಟ
ಮೂರು ಸಾವಿರ ಜನರ ಸಂಗಡ ಜೀಫು ಅರಣ್ಯಕ್ಕೆ ಹೊರಟು
ಹೋಗಿ, ಯೆಷಿಮೋನಿಗೆ ಎದುರಾಗಿ ಮಾರ್ಗದಲ್ಲಿರುವ ಹಕೀಲ
೩ ಬೆಟ್ಟದಲ್ಲಿ ದಂಡಿಳಿದನು. ಆದರೆ ದಾವೀದನು ಸೌಲನು ತನ್ನನ್ನು
ಹಿಂದೆ ಹತ್ತಿ ಅರಣ್ಯಕ್ಕೆ ಬಂದದ್ದನ್ನು ಸೋಡಿ, ಅರಣ್ಯದಲ್ಲಿ ನಿಂ
೪ ತನು. ದಾವೀದನು ಪೇಳ್ಳಿಶಿಗಾರರನ್ನು ಕಳುಹಿಸಿ, ಸೌಲನು ಬಂ
ದದ್ದು ನಿಶ್ಚಯವೆಂದು, ತಿಳಿದು ಕೊಂಡನು.
೫ ಮತ್ತು ದಾವೀದನು ಎದ್ದು, ಸೌಲನ ದಂಡಿನ ಸ್ಥಳಕ್ಕೆ ಬಂದ
ನು; ಮತ್ತು ಸೌಲನೂ ಅವನ ದಂಡಿನ ಯಜಮಾನನಾಗಿರುವ
ನೇರನ ಮಗನಾದ ಅಬ್ನೇರನೂ ಮಲಗಿರುವ ಸ್ಥಳವನ್ನು ದಾವೀ
ದನು ನೋಡಿದನು. ಆದರೆ ಸೌಲನು ಮಧ್ಯದಲ್ಲಿ ಮಲಗಿದ್ದನು;
೬ ಜನರು ಅವನ ಸುತ್ತಲು ದಂಡಾಗಿ ಇಳಿದಿದ್ದರು. ಆಗ ದಾವೀದನು
ಹಿತ್ತಿಯನಾದ ಅಹಿಮೇಲೆಕನನ್ನೂ, ಚೆರೂಯಳ ಮಗನಾಗಿರು
ವ ಯೊವಾಬನ ಸಹೋದರನಾದ ಅಬಿಷಯ್ಯನನ್ನೂ ನೋಡಿ,
ನನ್ನ ಸಂಗಡ ದಂಡಿನಲ್ಲಿ ಪ್ರವೇಶಿಸ ಬರುವವನು ಯಾರೆಂದು,
ಕೇಳಿದನು; ಅದಕ್ಕೆ ಅಬಿಷಯ್ಯನು, ನಾನು ನಿನ್ನ ಸಂಗಡ ಬರು
೭ ವೆನು, ಅಂದನು.
ಹಾಗೆಯೇ ದಾವೀದನೂ ಅಬಿಷಯ್ಯನೂ ರಾತ್ರಿಯಲ್ಲಿ ಆ
ಜನರ ಬಳಿಗೆ ಬಂದರು. ಇಗೋ, ಸೌಲನು ಮಧ್ಯದಲ್ಲಿ ಮಲಗಿ,
ನಿದ್ರೆ ಮಾಡುತ್ತಿದ್ದನು; ಅವನ ಈಟಿಯು ಅವನ ತಲೆಗಿಂಬಿನ ಕೆಳ
ಯಲ್ಲಿ ನೆಟ್ಟಿತ್ತು. ಆದರೆ ಅವನ ಸುತ್ತಲು ಅಬ್ನೇರನೂ ಜನ
೮ ರೂ ಮಲಗಿದ್ದರು. ಆಗ ಅಬಿಷಯ್ಯನು ದಾವೀದನಿಗೆ, ಈ
ಹೊತ್ತು ದೇವರು ನಿನ್ನ ಶತ್ರುವನ್ನು ನಿನ್ನ ಕೈಯಲ್ಲಿ ಒಪ್ಪಿಸಿ



ಕೊಟ್ಟಿದ್ದಾನೆ; ಈಗ ನಾನು ಅವನನ್ನು ಈಟಿಯಿಂದ ಒಂದೇ
೮ ಬೆಟ್ಟು ನೆಲಕ್ಕೆ ಹತ್ತುವ ಹಾಗೆ ಹೊಡೆಯ, ಅಪ್ಪಣೆ ಕೊಡ ಬೇ
ಕು; ಎರಡು ಸಾರಿ ಹೊಡೆಯುವದಿಲ್ಲ, ಅಂದನು. ಆದರೆ ದಾವೀ
ದನು ಅಬಿಷಯ್ಯನಿಗೆ, ಅವನನ್ನು ಸಂಹರಿಸ ಬೇಡ; ಯಾಕಂದ
ಕೆ ಅಪರಾಧವಿಲ್ಲದೆ ಕರ್ತನ ಅಭಿಷಿಕ್ತನಿಗೆ ವಿರೋಧವಾಗಿ ಕೈ
೯ ಹಾಕುವವನು ಯಾರು! ಅಂದನು. ಇದಲ್ಲದೆ ದಾವೀದನು ಹೇಳಿ
ದ್ದೇನಂದರೆ, ಕರ್ತನ ಜೀವದಾಣೆ—ಕರ್ತನು ಅವನನ್ನು ಬಡಿ
ಯುವನು; ಇಲ್ಲದೆ ಅವನ ಕಾಲ ಬಂದು, ಅವನು ಸಾಯುವನು;
೧೦ ಇಲ್ಲದೆ ಯುದ್ಧಕ್ಕೆ ಹೋಗಿ, ಮಡಿಯುವನು. ನಾನು ನನ್ನ ಕೈಯ
ನ್ನು ಕರ್ತನ ಅಭಿಷಿಕ್ತನ ಮೇಲೆ ಹಾಕದ ಹಾಗೆ, ಕರ್ತನು ನನ
ಗೆ ಆಟಂಕ ಮಾಡಲಿ. ಆದರೆ ನೀನು ಅವನ ತಲೆಗಿಂಬಿನ ಬಳಿ
ಯಲ್ಲಿರುವ ಈಟಿಯನ್ನೂ ನೀರಿನ ತಂಬಿಗೆಯನ್ನು ತೆಗೆದುಕೋ;
೧೧ ನಾವು ಹೋಗುವ. ಮತ್ತು ದಾವೀದನು ಸೌಲನ ತಲೆಗಿಂಬಿನ
ಬಳಿಯಲ್ಲಿದ್ದ ಈಟಿಯನ್ನೂ ನೀರಿನ ತಂಬಿಗೆಯನ್ನೂ ತೆಗೆದು
ಕೊಂಡನು; ಅವರು ಹೊರಟು ಹೋದರು. ಒಬ್ಬರಾದರೂ
ನೋಡಿದ್ದಿಲ್ಲ; ಅರಿತಿದ್ದಿಲ್ಲ; ಯಾರೂ ಎಚ್ಚತ್ತಿಕಲಿಲ್ಲ. ಯಾಕಂ
ದರೆ ಕರ್ತನಿಂದ ಅಗಾಧ ನಿದ್ರೆಯು ಅವರ ಮೇಲೆ ಇಳಿದ ಕಾರ
ಣ, ಅವರೆಲ್ಲರೂ ನಿದ್ರೆ ಗೈಯುತ್ತಿದ್ದರು.
೧೩ ದಾವೀದನು ದಾಟಿ, ಆ ಕಡೆಗೆ ಹೋಗಿ, ತಮಗೂ ಅವರಿಗೂ
ಮಧ್ಯದಲ್ಲಿ ಬಹಳ ಸ್ಥಳ ಉಂಟಾಗುವ ಹಾಗೆ, ದೂರವಾಗಿರುವ
೧೪ ಬಂದು ಬೆಟ್ಟದ ಕೊನೆಯಲ್ಲಿ ನಿಂತು, ಜನರಿಗೂ ನೇರನ ಮಗನಾ
ದ ಅಬ್ನೇರನಿಗೂ ಎದುರಾಗಿ ಕೂಗಿ ಹೇಳಿದ್ದೇನಂದರೆ—ಅಬ್ನೇರ
ನೇ, ನೀನು ಪ್ರತ್ಯುತ್ತರ ಕೊಡುವದಿಲ್ಲವೋ! ಅಂದನು. ಅದಕ್ಕೆ
ಅಬ್ನೇರನು ಪ್ರತ್ಯುತ್ತರವಾಗಿ, ಅರಸನಿಗೆ ಎದುರಾಗಿ ಕೂಗುವವ
೧೫ ನು ನೀನು ಯಾರು! ಅಂದನು. ಆಗ ದಾವೀದನು ಅಬ್ನೇರನಿಗೆ
ಹೇಳಿದ್ದೇನಂದರೆ—ನೀನು ಪರಾಕ್ರಮ ಶಾಲಿ ಅಲ್ಲವೇ! ಇಸ್ರಯೇ
ಲಿನಲ್ಲಿ ನಿನಗೆ ಸಮಾನನಾದವನು ಯಾರು! ಆದರೆ ನೀನು ನಿನ್ನ
ಸ್ವಾಮಿಯಾದ ಅರಸನನ್ನು ಕಾಯದೆ ಹೋದದ್ದೇನು! ಯಾ
೧೬ ಕಂದರೆ ಜನರಲ್ಲಿ ಒಬ್ಬನು ನಿನ್ನ ಸ್ವಾಮಿಯಾದ ಅರಸನನ್ನು
ಸಂಹರಿಸುವದಕ್ಕೆ ಬಂದಿದ್ದನು. ನೀನು ಮಾಡಿದ ಈ ಕಾರ್ಯ
ಒಳ್ಳೇದಲ್ಲ. ಕರ್ತನ ಜೀವದಾಣೆ—ಕರ್ತನ ಅಭಿಷಿಕ್ತನಾದ ನಿ
ಮ್ಮ ಸ್ವಾಮಿಯನ್ನು ನೀವು ಕಾಯದೆ ಹೋದದರಿಂದ, ಮರಣ
ಕ್ಕೆ ಯೋಗ್ಯರು. ಈಗ ಅರಸನ ತಲೆಗಿಂಬಿನ ಬಳಿಯಲ್ಲಿದ್ದ ಅ
ವನ ಈಟಿಯೂ ನೀರಿನ ತಂಬಿಗೆಯೂ ಎಲ್ಲಿ ಅವೆಯೋ, ನೋ
ಡು, ಅಂದನು.
೧೭ ಆಗ ಸೌಲನು ದಾವೀದನ ಶಬ್ದವನ್ನು ತಿಳಿಕೊಂಡು, ನನ್ನ
ಕುಮಾರನಾದ ದಾವೀದನೇ, ಇದು ನಿನ್ನ ಶಬ್ದವಲ್ಲವೋ! ಅಂದ
೧೮ ನು. ದಾವೀದನು, ಅರಸನಾದ ನನ್ನ ಸ್ವಾಮಿಯೇ, ನನ್ನ ಶಬ್ದ
ಹೌದು, ಅಂದನು. ಮತ್ತು ಹೇಳಿದ್ದೇನಂದರೆ—ನನ್ನ ಸ್ವಾಮಿ
ತನ್ನ ಸೇವಕನನ್ನು ಹೀಗೆ ಹಿಂದಟ್ಟುವದೇನು! ನಾನೇನು ಮಾಡಿ
೧೯ದೆನು! ನನ್ನ ಕೈಯಲ್ಲಿ ಏನು ಕೆಟ್ಟತನ ಅದೆ! ಈಗ ಅರಸನಾದ
ನನ್ನ ಸ್ವಾಮಿ ದಯ ಮಾಡಿ, ತನ್ನ ಸೇವಕನ ಮಾತುಗಳನ್ನು
ಕೇಳಲಿ. ಕರ್ತನು ನಿನ್ನನ್ನು ನನಗೆ ವಿರೋಧವಾಗಿ ಪ್ರೇರೇಪಿಸಿ
ದರೆ, ಕಾಣಿಕೆಯನ್ನು ಅಂಗೀಕರಿಸಲಿ; ಆದರೆ ಮನುಷ್ಯರ ಮಕ್ಕ
ಳು ಇದನ್ನು ಮಾಡಿದರೆ, ಅವರು ಕರ್ತನ ಮುಂದೆ ಶಪಿಸಲ್ಪಡಲಿ.
ಯಾಕಂದರೆ, ನೀನು ಹೋಗಿ, ಅನ್ಯ ದೇವರುಗಳನ್ನು ಸೇವಿಸು
ಎಂದು ಹೇಳಿ, ಅವರು ಈ ಹೊತ್ತು ನನ್ನನ್ನು ಕರ್ತನ ಬಾಧ್ಯತೆ
೨೦ ಯಲ್ಲಿ ಇರದ ಹಾಗೆ ಓಡಿಸಿ ಬಿಟ್ಟರು. ಆದದರಿಂದ ಕರ್ತನ ಮು
ಖದ ಮುಂದೆ ನನ್ನ ರಕ್ತವು ನೆಲದ ಮೇಲೆ ಬೀಳ್ಳದಿರಲಿ. ಯಾ
ಕಂದರೆ ಒಬ್ಬನು ಬೆಟ್ಟಗಳಲ್ಲಿ ಗೌಜನ್ನು ಹೇಟೆಯಾಡುವ ಹಾಗೆ
ಇಸ್ರಯೇಲಿನ ಅರಸನು ಒಂದು ಕೂಳೆಯನ್ನು ಹುಡುಕ ಹೊರ
ಟನು, ಅಂದನು.
೨೧ ಆಗ ಸೌಲನು, ನಾನು ಪಾಪ ಮಾಡಿದೆನು; ನನ್ನ ಮಗನಾದ
ದಾವೀದನೇ, ತಿರಿಗಿ ಬಾ; ಯಾಕಂದರೆ ನನ್ನ ಪ್ರಾಣ ಈ ಹೊ
ತ್ತು ನಿನ್ನ ದೃಷ್ಟಿಗೆ ಅಮೂಲ್ಯವಾಗಿದ್ದದರಿಂದ, ನಾನು ಇನ್ನು
ಮೇಲೆ ನಿನಗೆ ಕೇಡು ಮಾಡೆನು; ಇಗೋ, ನಾನು ಹುಚ್ಚು ಕೆಲಸ
ಮಾಡಿದ್ದೇನೆ, ಮಹಾ ಹೆಚ್ಚಾದ ತಪ್ಪು ಮಾಡಿದೆನು, ಅಂದನು.
೨೨ ದಾವೀದನು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ—ಇಗೋ, ಅರಸನ
ಈಟಿಯು ಇಲ್ಲಿ ಅದೆ. ಪ್ರಾಯದವರಲ್ಲಿ ಒಬ್ಬನು ಈ ಕಡೆಗೆ ಬಂ
ದು, ಅದನ್ನು ತಕ್ಕೊಂಡು ಹೋಗಲಿ. ಆದರೆ ಕರ್ತನು ಅವನವ
೨೩ ನಿಗೆ ಅವನ ನೀತಿಗೂ ಅವನ ಸತ್ಯಕ್ಕೂ ತಕ್ಕ ಫಲವನ್ನು ಕೊಡ
ಲಿ. ಯಾಕಂದರೆ ಕರ್ತನು ಈ ಹೊತ್ತು ನಿನ್ನನ್ನು ನನ್ನ ಕೈಯ
ಲ್ಲಿ ಒಪ್ಪಿಸಿ ಕೊಟ್ಟನು. ಆದರೆ ನಾನು ಕರ್ತನ ಅಭಿಷಿಕ್ತನ ಮೇ
೨೪ ಲೆ ನನ್ನ ಕೈ ಚಾಚ ಮನಸ್ಸಿಲ್ಲದೆ ಇದ್ದೆನು. ಇಗೋ, ಈ ದಿನ
ನಿನ್ನ ಪ್ರಾಣ ನನ್ನ ದೃಷ್ಟಿಗೆ ಹ್ಯಾಗೆ ಕೊಡ್ಡದಾಗಿತ್ತೋ, ಹಾ
ಗೆಯೇ ನನ್ನ ಪ್ರಾಣವು ಕರ್ತನ ದೃಷ್ಟಿಗೆ ಕೊಡ್ಡದಾಗಿರಲಿ.
೨೫ ಅವನು ನನ್ನನ್ನು ಎಲ್ಲಾ ಇಕ್ಕಟ್ಟಿನಿಂದ ತಪ್ಪಿಸಿ ಬಿಡಲಿ, ಅಂದನು.
ಆಗ ಸೌಲನು ದಾವೀದನಿಗೆ, ನನ್ನ ಮಗನಾದ ದಾವೀದನೇ, ನೀ
ನು ಆಶೀರ್ವದಿಸಲ್ಪಡುವಿ; ನೀನು ಹೆಚ್ಚಾದ ಕಾರ್ಯಗಳನ್ನು
ಮಾಡುವಿ; ಗೆದ್ದೇ ಗೆಲ್ಲುವಿ, ಅಂದನು. ಹಾಗೆಯೇ ದಾವೀದನು
ತನ್ನ ಮಾರ್ಗವಾಗಿ ಹೋದನು; ಸೌಲನು ತನ್ನ ಸ್ಥಳಕ್ಕೆ ತಿರುಗಿ
ದನು.

## ೨೭. ಸಂಧಿ.

೧ ಆದರೆ ದಾವೀದನು ತನ್ನ ಹೃದಯದಲ್ಲಿ, ನಾನು ಎಂದಿಗಾದ
ರೂ ಒಂದು ದಿನ ಸೌಲನ ಕೈಯಿಂದ ಮಡಿದು ಹೋಗುತ್ತೇನೆ.
ನಾನು ತ್ವರೆಯಾಗಿ ಫಿಲಿಷ್ಟ್ಯರ ದೇಶಕ್ಕೆ ತಪ್ಪಿಸಿ ಕೊಂಡು ಓಡಿ
ಹೋಗುವದಕ್ಕಿಂತ, ನನಗೆ ಉತ್ತಮವಾದ ಕಾರ್ಯವಿಲ್ಲ. ಸೌಲ
ನು ನನ್ನನ್ನು ಇಸ್ರಯೇಲಿನಲ್ಲಿ ಇನ್ನು ಹುಡುಕ ದಿಕ್ಕು ಕಾಣದೆ
ಹೋಗುವನು. ಈ ಪ್ರಕಾರ ನಾನು ಅವನ ಕೈಗೆ ತಪ್ಪಿಸಿ ಕೊಂ
೨ ಡು ಹೋಗುವೆನು, ಅಂದು ಕೊಂಡನು. ಆದದರಿಂದ ದಾವೀದನು
ಎದ್ದು, ತನ್ನ ಸಂಗಡಿದ್ದ ಆರು ನೂರು ಜನರೊಡನೆ ಗಾತಿನ ಅರ
ಸನಾಗಿರುವ ಮಾವೋಕನ ಮಗನಾದ ಅಕೀಷನ ಬಳಿಗೆ ದಾಟಿ
೩ ಹೋದನು. ದಾವೀದನು ಗಾತಿನಲ್ಲಿ, ಅಕೀಷನ ಬಳಿಯಲ್ಲಿ ತಾ
ನೂ ತನ್ನ ಜನರೂ ವಾಸವಾಗಿದ್ದರು. ಪ್ರತಿ ಮನುಷ್ಯನು ತನ್ನ
ಮನೆಯವರು ಸಹಿತವಾಗಿ, ದಾವೀದನು ತನ್ನ ಇಬ್ಬರು ಹೆಂಡರಾ
ದ ಇಜ್ರೇಲಿಯಳಾಗಿರುವ ಅಹಿನೊವಾಮಳೂ, ಕರ್ಮೇಲಿಯ
ಳಾದ ನಬಾಲನ ಹೆಂಡತಿಯಾಗಿದ್ದ ಅಬಿಗಾಯಿಲಳೂ ಸಹಿತವಾ
೪ ಗಿ ಇದ್ದರು. ದಾವೀದನು ಗಾತಿಗೆ ಓಡಿ ಹೋದನೆಂದು, ಸೌಲನಿಗೆ
ತಿಳಿಸಲ್ಪಟ್ಟದರಿಂದ, ಅವನು ಆ ತರುವಾಯ ಅವನನ್ನು ಹುಡುಕ
ಲಿಲ್ಲ.

೫ ದಾವೀದನು ಅಕೀಷನಿಗೆ ಹೇಳಿದ್ದೇನಂದರೆ—ನಿನ್ನ ಕಣ್ಣುಗಳ ಮುಂದೆ ನನಗೆ ದಯೆ ದೊರಕಿದ್ದರೆ, ಗ್ರಾಮಾಂತರಗಳಲ್ಲಿ ನಾನು ಇರುವದಕ್ಕೆ ಅವರು ಬಂದು ಸ್ಥಳ ನನಗೆ ಕೊಡಲಿ; ನಿನ್ನ ದಾಸನು ಯಾಕೆ ನಿನ್ನ ಸಂಗಡ ರಾಜ್ಯ ಪಟ್ಟಣದಲ್ಲಿ ಇರ ಬೇಕು! ಅಂದನು.
೬ ಆಗ ಅಕೀಷನು ಆ ದಿವಸದಲ್ಲಿ ಚಿಕ್ಲಾಗನ್ನು ಅವನಿಗೆ ಕೊಟ್ಟನು. ಆದದರಿಂದ ಚಿಕ್ಲಾಗು ಈ ವರಿಗೂ ಯೆಹೂದದ ಅರಸರಿ
೭ ಗೆ ಕೇರಿ ಅದೆ. ದಾವೀದನು ಫಿಲಿಷ್ಟ್ಯರ ದೇಶದಲ್ಲಿ ಒಂದು ವರುಷ ನಾಲ್ಕು ತಿಂಗಳು ವಾಸಿಸಿದ್ದನು.
೮ ಮತ್ತು ದಾವೀದನೂ ಅವನ ಮನುಷ್ಯರೂ ದೂರಿಗೆ ಹೋಗುವ ಮೇಕೆಯಿಂದ ಐಗುಪ್ತದ ಮಟ್ಟಿಗೂ ಇರುವ ಶೀಮೆಯಲ್ಲಿ ಪೂರ್ವದಿಂದ ವಾಸಿಸಿರುವವರಾದ ಗೆಷೂರ್ಯರ ಮೇಲೆಯೂ, ಗೆಜ್ರಿಯರ ಮೇಲೆಯೂ, ಅಮಲೇಕ್ಯರ ಮೇಲೆಯೂ ಕವಿಯ
೯ ಹೋದರು. ಆಗ ದಾವೀದನು ಪುರುಷರನ್ನಾದರೂ ಸ್ತ್ರೀಯರನ್ನಾದರೂ ಬದುಕಲೀಸದೆ, ಆ ಶೀಮೆಯನ್ನು ಹೊಡೆದು, ಕುರಿ ದನಗಳನ್ನೂ, ಕತ್ತೆಗಳನ್ನೂ, ಒಂಟೆಗಳನ್ನೂ, ವಸ್ತ್ರಗಳನ್ನೂ ತೆ
೧೦ ಗೆದು ಕೊಂಡು, ಅಕೀಷನ ಬಳಿಗೆ ತಿರುಗಿ ಬಂದನು. ಆಗ ಅಕೀಷನು, ಈ ಹೊತ್ತು ಕವಿದು ಕೊಂಡಿರಲ್ಲೆ! ದಾವೀದನು, ನಾವು ಯೆಹೂದದ ದಕ್ಷಿಣ ಶೀಮೆಯ ಮೇಲೆಯೂ, ಯೆರಹ್ಮೇಲಿಯರ ದಕ್ಷಿಣ ಶೀಮೆಯ ಮೇಲೆಯೂ ಕೇನಿಯರ ದಕ್ಷಿಣ ಶೀಮೆಯ
೧೧ ಮೇಲೆಯೂ ಬಿದ್ದೆವು, ಅಂದನು. ದಾವೀದನು ಹೀಗೀಗೆ ಮಾಡಿದನೆಂದೂ, ಅವನು ಫಿಲಿಷ್ಟ್ಯರ ಶೀಮೆಯಲ್ಲಿ ವಾಸವಾಗಿರುವ ದಿನಗಳೆಲ್ಲಾ ಇದು ಅವನ ಮರ್ಯಾದೆ ಎಂದೂ, ಅವರು ತನಗೆ ವಿಕೋಧವಾಗಿ ಗಾತು ಪಟ್ಟಣಕ್ಕೆ ವರ್ತಮಾನವನ್ನು ತಕ್ಕೊಂಡು
೧೨ ಬಾರದ ಹಾಗೆ, ಒಬ್ಬ ಪುರುಷನನ್ನಾದರೂ ಸ್ತ್ರೀಯಳನ್ನಾದರೂ ಬದುಕಲೀಸಲಿಲ್ಲ. ಅಕೀಷನು ದಾವೀದನನ್ನು ನಂಬಿ, ಇವನು ತನ್ನ ಜನರಾದ ಇಸ್ರಯೇಲ್ಯರಿಗೆ ದುರ್ವಾಸನೆಯಾಗೇ ಅದನು. ಆದದರಿಂದ ಇವನು ಎಂದೆಂದಿಗೂ ನನ್ನ ದಾಸನಾಗಿರುವನು, ಅಂದನು.

## ೨೯. ಸಂಧಿ.

೧ ಆ ದಿವಸಗಳಲ್ಲಿ ಏನಾಯಿತಂದರೆ, ಫಿಲಿಷ್ಟ್ಯರು ಇಸ್ರಯೇಲ್ಯರ ಮೇಲೆ ಯುದ್ಧ ಮಾಡ ತಮ್ಮ ರಾಣುವೆಗಳನ್ನು ಸೈನ್ಯವಾಗಿ ಕೂಡಿಸಿ ಕೊಂಡರು. ಆಗ ಅಕೀಷನು ದಾವೀದನಿಗೆ, ನೀನೂ ನಿನ್ನ ಮನುಷ್ಯರೂ ಯುದ್ಧವನ್ನು ಮಾಡ ನಮ್ಮ ಸಂಗಡ ಬರಲೇ ಬರ ಬೇಕೆಂದು ತಿಳುಕೋ, ಅಂದನು. ದಾವೀದನು ಅಕೀಷ
೨ ನಿಗೆ, ನಿಶ್ಚಯವಾಗಿ ನಿನ್ನ ದಾಸನು ಮಾಡುವದನ್ನು ತಿಳುಕೊಳ್ಳುವಿ, ಅಂದನು. ಅಕೀಷನು ದಾವೀದನಿಗೆ, ನಿಶ್ಚಯವಾಗಿ ಸರ್ವಕಾಲದಲ್ಲಿ ನಾನು ನಿನ್ನನ್ನು ತಲೆಗಾವಲಿಯವನಾಗಿರ ಮಾಡುವೆನು, ಅಂದನು.
೩ ಆದರೆ ಸಮುವೇಲನು ಸತ್ತು ಹೋಗಿದ್ದನು; ಇಸ್ರಯೇಲ್ಯರೆಲ್ಲರು ಅವನಿಗೋಸ್ಕರ ಗೋಳಾಡಿ, ಅವನ ಊರಾದ ರಾಮದಲ್ಲಿ ಅವನನ್ನು ಹೂಣಿಟ್ಟಿದ್ದರು.

ಇದಲ್ಲದೆ ಸೌಲನು ಯೆಕ್ಷಿಣಿಗಾರರನ್ನೂ ಮಂತ್ರಜ್ಞರನ್ನೂ ದೇಶದಲ್ಲಿಂದ ಹೊರಡಿಸಿದ್ದನು.

೪ ಆಗ ಫಿಲಿಷ್ಟ್ಯರು ಕೂಡಿ ಕೊಂಡು ಬಂದು, ಷುನೇಮನಲ್ಲಿ ದಂಡಿಳಿದರು. ಸೌಲನು ಸಮಸ್ತ ಇಸ್ರಯೇಲನ್ನು ಕೂಡಿಸಿ ಕೊಂ
೫ ಡು, ಗಿಲ್ಬೋಯದಲ್ಲಿ ದಂಡಿಳಿದನು. ಆದರೆ ಸೌಲನು ಫಿಲಿಷ್ಟ್ಯರ ದಂಡನ್ನು ನೋಡಿ, ಭಯ ಪಟ್ಟನು; ತನ್ನ ಹೃದಯ ತನ್ನಲ್ಲಿ
೬ ಬಹಳ ಹೆದರಿತು. ಸೌಲನು ಕರ್ತನನ್ನು ಕೇಳಿ ಕೊಂಡಾಗ, ಕರ್ತನು ಅವನಿಗೆ ಸ್ವಪ್ನಗಳಿಂದಲೂದರೂ, ಊರಿಮಿನಿಂದಲೂದರೂ, ಪ್ರವಾದಿಗಳಿಂದಲೂದರೂ, ಪ್ರತ್ಯುತ್ತರ ಕೊಡಲಿಲ್ಲ.
೭ ಆಗ ಸೌಲನು ತನ್ನ ದಾಸರಿಗೆ, ನಾನು ಅವಳ ಬಳಿಗೆ ಹೋಗಿ, ವಿಚಾರಿಸುವ ಹಾಗೆ, ಯೆಕ್ಷಿಣಿಗಾರ್ತಿಯಾದ ಒಬ್ಬ ಸ್ತ್ರೀಯನ್ನು ಹುಡುಕಿರಿ, ಅಂದನು. ಅವನ ದಾಸರು ಅವನಿಗೆ, ಇಗೋ, ಎಂದೋರಿನಲ್ಲಿ ಯೆಕ್ಷಿಣಿಗಾರ್ತಿಯಾದ ಒಬ್ಬ ಸ್ತ್ರೀ ಇದ್ದಾಳೆ, ಅಂದರು.

೮ ಆಗ ಸೌಲನು ತನ್ನನ್ನು ಮಾಜಿ, ಬದಲು ವಸ್ತ್ರಗಳನ್ನು ಧರಿಸಿ, ತನ್ನ ಸಂಗಡ ಇಬ್ಬರು ಮನುಷ್ಯರನ್ನು ಕರ ಕೊಂಡು, ರಾತ್ರಿಯಲ್ಲಿ ಆ ಸ್ತ್ರೀಯ ಬಳಿಗೆ ಬಂದು, ಅವಳಿಗೆ, ನೀನು ದಯೆ ಮಾಡಿ, ನಿನ್ನ ಯೆಕ್ಷಿಣಿ ವಿದ್ಯದಿಂದ ನನಗೆ ಕಣಿ ಹೇಳು; ನಾನು ನಿನಗೆ ಹೇಳುವವನನ್ನು ನನಗೆ ಏರಿ ಬರ ಮಾಡು, ಅಂದನು.
೯ ಆ ಸ್ತ್ರೀಯು ಅವನಿಗೆ, ಇಗೋ, ಸೌಲನು ಯೆಕ್ಷಿಣಿಗಾರರನ್ನೂ ಮಂತ್ರಜ್ಞರನ್ನೂ ದೇಶದಲ್ಲಿಂದ ಕಡಿದು ಬಿಟ್ಟನೆಂದು, ನೀನು ಬಲ್ಲಿ. ಈಗ ನನ್ನನ್ನು ಕೊಂದು ಹಾಕುವ ಹಾಗೆ, ಯಾಕೆ ನನ್ನ ಪ್ರಾಣಕ್ಕೆ
೧೦ ಉರ್ಲಿಡುತ್ತೀ! ಅಂದಳು. ಆಗ ಸೌಲನು, ಕರ್ತನ ಜೀವದಾಣೆ—ಈ ಕಾರ್ಯಕ್ಕೋಸ್ಕರ ನಿನಗೆ ದಂಡನೆ ಬಾರದು, ಎಂದು ಅವಳಿಗೆ ಕರ್ತನ ಮೇಲೆ ಆಣೆ ಇಟ್ಟನು.
೧೧ ಆಗಲವಳು, ನಿನಗೆ ನಾನು ಯಾರನ್ನು ಏರಿ ಬರ ಮಾಡ ಬೇಕು! ಅಂದಳು. ಅದಕ್ಕವನು, ಸಮುವೇಲನನ್ನು ನನಗೆ ಏರಿ ಬರ ಮಾಡು, ಅಂದನು.

೧೨ ಆ ಸ್ತ್ರೀಯು ಸಮುವೇಲನನ್ನು ಕಂಡಾಗ, ಮಹಾ ಶಬ್ದವಾಗಿ ಕೂಗಿದಳು. ಮತ್ತು, ಆ ಸ್ತ್ರೀ, ಯಾಕೆ ನನ್ನನ್ನು ಮೋಸ ಮಾ
೧೩ ಡಿದಿ! ನೀನೇ ಸೌಲನು, ಅಂದಳು. ಅರಸನು ಅವಳಿಗೆ, ಭಯ ಪಡ ಬೇಡ. ನೀನು ನೋಡಿದ್ದೇನು! ಅಂದನು. ಆಗ ಆ ಸ್ತ್ರೀ ಸೌಲನಿಗೆ, ದೇವರುಗಳು ಭೂಮಿಯಿಂದ ಎದ್ದು ಬರುವದನ್ನು
೧೪ ನೋಡಿದೆನು, ಅಂದಳು. ಆಗಲವನು, ಅವನ ರೂಪವೇನೆಂದು, ಅವಳನ್ನು ಕೇಳಿದನು. ಅವಳು, ನಿಲುವಂಗಿಯನ್ನು ಹೊದ್ದಿರುವ ಮುದಿ ಪ್ರಾಯದವನಾದ ಒಬ್ಬ ಮನುಷ್ಯನು ಏರಿ ಬರುತ್ತಾನೆ, ಅಂದಳು. ಆದದರಿಂದ ಸೌಲನು ಅವನನ್ನು ಸಮುವೇಲನೆಂದು ತಿಳಿದು ಕೊಂಡು, ಮೋಕೆ ಕೆಳಗಾಗಿ ನೆಲದ ಮಟ್ಟಿಗೂ ಬಾಗಿ,
೧೫ ಅಡ್ಡ ಬಿದ್ದನು.

ಆಗ ಸಮುವೇಲನು ಸೌಲನಿಗೆ, ನೀನು ನನ್ನನ್ನು ಏರಿ ಬರ ಮಾಡಿ, ಯಾಕೆ ಕದಲಿಸಿದಿ! ಅಂದನು. ಅದಕ್ಕೆ ಸೌಲನು, ನಾನು ಬಹಳ ಇಕ್ಕಟ್ಟು ಪಟ್ಟಿದ್ದೇನೆ; ಯಾಕಂದರೆ ಫಿಲಿಷ್ಟ್ಯರು ನನಗೆ ವಿರೋಧವಾಗಿ ಯುದ್ಧ ಮಾಡುತ್ತಾರೆ; ಆದರೆ ದೇವರು ನನ್ನನ್ನು ಬಿಟ್ಟು ಹೋದನು. ಅವನು ಪ್ರವಾದಿಗಳ ಮುಖಾಂತ್ರವಾದರೂ ಸ್ವಪ್ನದ ಮುಖಾಂತ್ರವಾದರೂ ನನಗೆ ಪ್ರತ್ಯುತ್ತರ ಕೊಡಲಿಲ್ಲ. ಆದದರಿಂದ ನಾನು ಮಾಡ ಬೇಕಾದದ್ದನ್ನು ನೀನು ತಿಳಿಸುವ ಹಾ
೧೬ ಗೆ, ನಿನ್ನನ್ನು ಕರೆಸಿದೆನು, ಅಂದನು. ಸಮುವೇಲನು ಅವನಿಗೆ, ಕರ್ತನು ನಿನ್ನನ್ನು ಬಿಟ್ಟು ಹೋಗಿ, ನಿನಗೆ ಶತ್ರುವಾಗಿರುವಾಗ,



ನೀನು ನನ್ನನ್ನು ಕೇಳುವದು ಯಾಕೆ! ಕರ್ತನು ನನ್ನ ಮುಖಾಂ
೧೭ ತ್ರ ಹೇಳಿದ ಹಾಗೆಯೇ ನಿನಗೆ ಮಾಡಿದ್ದಾನೆ. ಕರ್ತನು ರಾಜ್ಯವನ್ನು ನಿನ್ನ ಕೈಯಿಂದ ಕನು ಕೊಂಡು, ಅದನ್ನು ನಿನ್ನ ನೆರೆ
೧೮ ಮನೆಯವನಾದ ದಾವೀದನಿಗೆ ಕೊಟ್ಟನು. ನೀನು ಕರ್ತನ ಮಾತನ್ನು ಕೇಳದೆ, ಅಮಲೇಕ್ಯರ ಮೇಲೆ ಇದ್ದ ಆತನ ಉರಿ ಕೋಪವನ್ನು ತೀರಿಸದೆ ಹೋದದರಿಂದ, ಕರ್ತನು ಈ ದಿವಸದಲ್ಲಿ ನಿನಗೆ
೧೯ ಹೀಗೆ ಮಾಡಿದನು. ಮತ್ತು ಕರ್ತನು ನಿನ್ನನ್ನು ಸಹಿತವಾಗಿ ಇಸ್ರಯೇಲನ್ನು ಫಿಲಿಷ್ಟ್ಯರ ಕೈಯಲ್ಲಿ ಒಪ್ಪಿಸಿ ಕೊಡುವನು. ನಾಳೆ ನೀನೂ ನಿನ್ನ ಕುಮಾರರೂ ನನ್ನ ಸಂಗಡ ಇರುವಿರಿ. ಕರ್ತ
೨೦ ನು ಇಸ್ರಯೇಲ್ ಸೈನ್ಯವನ್ನು ಫಿಲಿಷ್ಟ್ಯರ ಕೈಯಲ್ಲಿ ಒಪ್ಪಿಸಿ ಕೊಡುವನು, ಅಂದನು. ಆಗ ಸೌಲನು ನೆಲದ ಮೇಲೆ ಬೋರ್ಲಬಿದ್ದು, ಸಮುವೇಲನ ಮಾತುಗಳಿಗೋಸ್ಕರ ಬಹು ಭಯ ಪಟ್ಟನು. ಆ ದಿನವೆಲ್ಲಾ ಏನೂ ಉಣ್ಣದೆ ಇದ್ದದರಿಂದ, ಅವನೊಳಗೆ
೨೧ ಶಕ್ತಿ ಇಲ್ಲದೆ ಹೋಯಿತು. ಆಗ ಆ ಸ್ತ್ರೀಯು ಅವನ ಬಳಿಗೆ ಬಂದು, ಅವನು ಬಹಳ ಕಲ್ಲಣ ಪಟ್ಟನೆಂದು ನೋಡಿ, ಅವನಿಗೆ ಹೇಳಿದ್ದೇನಂದರೆ—ಇಗೋ, ನಿನ್ನ ದಾಸಿಯಾದ ನಾನು ನಿನ್ನ ಮಾತನ್ನು ಕೇಳಿ, ನನ್ನ ಪ್ರಾಣವನ್ನು ನನ್ನ ಕೈಯಲ್ಲಿ ಇಟ್ಟು ಕೊಂಡೆ
೨೨ ನು; ನೀನು ನನಗೆ ಹೇಳಿದ ಮಾತುಗಳನ್ನು ಕೇಳಿದೆನು. ಆದದರಿಂದ ಈಗ ನೀನು ನಿನ್ನ ದಾಸಿಯ ಮಾತನ್ನು ಕೇಳಿ, ನೀನು ಮಾರ್ಗ ಹಿಡಿದು, ನಡೆಯುವಾಗ, ನಿನಗೆ ಶಕ್ತಿ ಇರುವ ಹಾಗೆ, ನಾನು ನಿನ್ನ ಮುಂದೆ ಒಂದು ಕೊಟ್ಟಿಯ ತುಂಡನ್ನು ಇರಿಸ ನನಗೆ ಅಪ್ಪಣೆ
೨೩ ಕೊಡು; ನೀನು ತಿನ್ನು, ಅಂದಳು. ಅದಕ್ಕವನು, ನಾನು ಒಲ್ಲೆನು; ನಾನು ತಿನ್ನುವದಿಲ್ಲ, ಅಂದನು. ಆದರೆ ಅವನ ದಾಸರೂ ಆ ಸ್ತ್ರೀಯೂ ಅವನನ್ನು ಬಲವಂತ ಮಾಡಿದ್ದರಿಂದ, ಅವನು ಅವರ ಮಾತನ್ನು ಕೇಳಿ, ನೆಲವನ್ನು ಬಿಟ್ಟು, ಎದ್ದು, ಮಂಚದ ಮೇಲೆ
೨೪ ಕುಳಿತು ಕೊಂಡನು. ಆ ಸ್ತ್ರೀಗೆ ಮನೆಯಲ್ಲಿ ಒಂದು ಕೊಟ್ಟಿದ
೨೫ ಕರುವು ಇತ್ತು; ಅವಳು ಅದನ್ನು ತ್ವರೆಯಾಗಿ ಕೊಂದು, ಹಿಟ್ಟನ್ನು ಹಿಸಿಕೆ, ಅದನ್ನು ಹುಳಿ ಇಲ್ಲದ ಕೊಟ್ಟಿಗಳಾಗಿ ಸುಟ್ಟು, ಸೌಲನ ಮುಂದೆಯೂ ಅವನ ದಾಸರ ಮುಂದೆಯೂ ತಂದಿಟ್ಟಳು. ಅವರು ಉಂಡು, ಎದ್ದು, ಆ ರಾತ್ರಿಯೆಲ್ಲೇ ಹೊರಟು ಹೋದರು.

## ೨೯. ಸಂಧಿ.

೧ ಆದರೆ ಫಿಲಿಷ್ಟ್ಯರು ತಮ್ಮ ಸಮಸ್ತ ಸೈನ್ಯಗಳನ್ನು ಅಫೇಕದಲ್ಲಿ ಕೂಡಿಸಿ ಕೊಂಡರು. ಹಾಗೆಯೇ ಇಸ್ರಯೇಲ್ಯರು ಇಜ್ರೇಲಿ
೨ ನಲ್ಲಿರುವ ಬುಗ್ಗೆಯ ಬಳಿಯಲ್ಲಿ ದಂಡಿಳಿದರು. ಫಿಲಿಷ್ಟ್ಯರ ಅಧಿಪತಿಗಳು ನೂರು ನೂರಾಗಿಯೂ, ಸಾವಿರ ಸಾವಿರವಾಗಿಯೂ, ನಡೆದು ಬಂದರು; ಆದರೆ ದಾವೀದನೂ ಅವನ ಮನುಷ್ಯರೂ ಅಕೀ
೩ ಷನ ಸಂಗಡ ಹಿಂದಿನ ದಂಡಿನಲ್ಲಿ ಬಂದರು. ಆಗ ಫಿಲಿಷ್ಟ್ಯರ ಅಧಿಪತಿಗಳು, ಈ ಇಬ್ರೀಯರು ಯಾಕೆ! ಅಂದರು. ಅಕೀಷನು ಫಿಲಿಷ್ಟ್ಯರ ಅಧಿಪತಿಗಳಿಗೆ, ಇಸ್ರಯೇಲಿನ ಅರಸನಾದ ಸೌಲನ ದಾಸನಾದ ಈ ದಾವೀದನು ಇಷ್ಟು ದಿವಸಗಳಾಗಿ ಇಷ್ಟು ವರುಷಗಳಾಗಿ ನನ್ನ ಸಂಗಡ ಇದ್ದದ್ದಿಲ್ಲವೋ! ಇವನು ನಮ್ಮ ಬಳಿಯ
೪ ಬಂದು ಬಿದ್ದ ದಿವಸ ಮೊದಲ್ಗೊಂಡು ಇಂದಿನ ವರಿಗೂ ನಾನು ಅವನಲ್ಲಿ ಒಂದು ಅಪರಾಧವನ್ನಾದರೂ ಕಂಡು ಕೊಳ್ಳಲಿಲ್ಲ, ಅಂದನು. ಆದರೆ ಫಿಲಿಷ್ಟ್ಯರ ಅಧಿಪತಿಗಳು ಅವನ ಮೇಲೆ ಕೌರ್ರವಾ
೫ ಗಿ ಅವನಿಗೆ ಹೇಳಿದ್ದೇನಂದರೆ—ಇವನು ಯುದ್ಧದಲ್ಲಿ ನಮಗೆ ಶತ್ರುವಾಗಿರದ ಹಾಗೆ, ಯುದ್ಧಕ್ಕೆ ನಮ್ಮ ಸಂಗಡ ಇವನನ್ನು ಬರಗೊಡದೆ, ನೀನು ಅವನಿಗೆ ನೇಮಿಸಿದ ತನ್ನ ಸ್ಥಳಕ್ಕೆ ತಿರಿಗಿ ಹೋಗುವ ಹಾಗೆ, ಅವನನ್ನು ಕಳುಹಿಸಿ ಬಿಡು. ಯಾಕಂದರೆ ಇವನು ಯಾತರಿಂದ ತನ್ನ ಥೊಕೆಗೆ ತನ್ನನ್ನು ಇಷ್ಟಸಾಗ ಮಾಡಿ ಕೊಳ್ಳುವನು? ಈ ಮನುಷ್ಯರ ತಲೆಗಳಿಂದಲ್ಲವೇ! ಸೌಲನು ಸಾವಿರ
೬ ಜನರನ್ನೂ ದಾವೀದನು ಹತ್ತು ಸಾವಿರ ಜನರನ್ನೂ ಹೊಡೆದನೆಂದು, ನಾಟ್ಯದಲ್ಲಿ ಒಬ್ಬರಿಗೊಬ್ಬರು ಹಾಡಿದ್ದು ಈ ದಾವೀದನನ್ನು ಕುರಿತಲ್ಲವೋ! ಅಂದರು
೭ ಆಗ ಅಕೀಷನು ದಾವೀದನನ್ನು ಕಕೆದು, ಅವನಿಗೆ ಹೇಳಿದ್ದೇನಂದರೆ, ಕರ್ತನಾಣೆ—ನೀನು ನೆಟ್ಟನೆಯವನು, ನೀನು ನನ್ನ ಸಂಗಡ ದಂಡಿನಲ್ಲಿ ಹೋಗುತ್ತಾ ಬರುತ್ತಾ ಇರುವದು ನನ್ನ ದೃಷ್ಟಿಗೆ ಬಳ್ಳೇದು. ನೀನು ನನ್ನ ಬಳಿಗೆ ಬಂದ ದಿನದಿಂದ ಈ
೮ ವರಿಗೂ ನಿನ್ನಲ್ಲಿ ಕೆಟ್ಟದ್ದನ್ನು ಕಂಡದ್ದಿಲ್ಲ. ಆದರೆ ಈಗ ನೀನು ಅಧಿಪತಿಗಳ ದೃಷ್ಟಿಗೆ ಬಳ್ಳೆಯವನಲ್ಲ. ಆದದರಿಂದ ನೀನು ಫಿಲಿಷ್ಟ್ಯರ ಅಧಿಪತಿಗಳ ದೃಷ್ಟಿಗೆ ಕೇಡು ಮಾಡದ ಹಾಗೆ, ಈಗ ಸಮಾಧಾನವಾಗಿ ಹಿಂದಕ್ಕೆ ನಿನ್ನ ಸ್ಥಳಕ್ಕೆ ಹೋಗು, ಅಂದನು.
೯ ದಾವೀದನು ಅಕೀಷನಿಗೆ, ನನ್ನ ಯಜಮಾನನಾದ ಅರಸನ ಶತ್ರುಗಳ ಸಂಗಡ ಯುದ್ಧ ಮಾಡ ಹೋಗದ ಹಾಗೆ, ನಾನೇನು ಮಾಡಿದೆನು! ನಿನ್ನ ದಾಸನು ನಿನ್ನ ಬಳಿಗೆ ಬಂದಂದಿನಿಂದ ಈ ದಿ
೧೦ ನದ ವರಿಗೂ ನನ್ನಲ್ಲಿ ಏನು ಕಂಡು ಕೊಂಡಿ! ಅಂದನು. ಅಕೀಷನು ದಾವೀದನಿಗೆ ಪ್ರತ್ಯುತ್ತರವಾಗಿ, ನೀನು ನನ್ನ ದೃಷ್ಟಿಯಲ್ಲಿ ಒಬ್ಬ ದೇವದೂತನ ಹಾಗೆಯೇ ಉತ್ತಮನಾಗಿದ್ದಿ ಎಂದು, ನಾ
೧೧ ಬಲ್ಲೆನು. ಆದರೆ, ಯುದ್ಧಕ್ಕೆ ಇವನು ನಮ್ಮ ಸಂಗಡ ಬರ ಬಾರದೆಂದು, ಫಿಲಿಷ್ಟ್ಯರ ಅಧಿಪತಿಗಳು ಹೇಳಿದ್ದಾರೆ. ಆದದರಿಂದ ನಾಳೆ ಉದಯಕ್ಕೆ ಎದ್ದು, ನಿನ್ನ ಸಂಗಡ ಬಂದ ನಿನ್ನ ಥೊಕೆಯ ಸೇವಕರನ್ನು ಕರ ಕೊಂಡು, ಅವರ ಸಂಗಡ ಏಳುತ್ತತ್ತೇ, ಉದಯದಲ್ಲಿ, ಬೆಳಕು ನಿಮಗೆ ಆಗುವಾಗ, ಹೊರಟು ಹೋಗು, ಅಂದನು.
೧೨ ಹಾಗೆಯೇ ದಾವೀದನೂ ಅವನ ಮನುಷ್ಯರೂ ಉದಯದಲ್ಲಿ ಫಿಲಿಷ್ಟ್ಯರ ದೇಶಕ್ಕೆ ತಿರಿಗಿ ಹೋಗ ಮುಂಝೂನೆ ಎದ್ದರು. ಆದರೆ ಫಿಲಿಷ್ಟ್ಯರು ಇಜ್ರೇಲಿಗೆ ಹೊರಟು ಹೋದರು.

## ೩೦. ಸಂಧಿ.

೧ ಮತ್ತು ದಾವೀದನೂ ಅವನ ಮನುಷ್ಯರೂ ಮೂರನೇ ದಿವಸದಲ್ಲಿ ಚಿಕ್ಲಾಗಿಗೆ ಬಂದು ಕೇರುವಷ್ಟರಲ್ಲಿ ಏನಾಯಿತಂದರೆ, ಅಮಲೇಕ್ಯರು ದಕ್ಷಿಣ ಶೀಮೆಯ ಮೇಲೆಯೂ ಚಿಕ್ಲಾಗನ ಮೇಲೆಯೂ ಬಂದು ಬಿದ್ದು, ಚಿಕ್ಲಾಗನ್ನು ಹೊಡೆದು, ಅದನ್ನು ಬೆಂಕಿ
೨ ಯಿಂದ ಸುಟ್ಟು ಬಿಟ್ಟು, ಅದರಲ್ಲಿದ್ದ ಸ್ತ್ರೀಯರನ್ನು ಕೆಕೆ ಹಿಡಿದು, ಹಿರಿಯರನ್ನಾದರೂ ಕಿರಿಯರನ್ನಾದರೂ ಕೊಂದು ಹಾಕದೆ, ಅವರನ್ನು ಕೆಕೆಯಾಗಿ ತೆಗೆದು ಕೊಂಡು, ತಮ್ಮ ಮಾರ್ಗವಾಗಿ
೩ ಹೊರಟು ಹೋದರು. ದಾವೀದನೂ ಅವನ ಮನುಷ್ಯರೂ ಆ ಪಟ್ಟಣಕ್ಕೆ ಬಂದಾಗ, ಇಗೋ, ಅದು ಬೆಂಕಿಯಿಂದ ಸುಟ್ಟು ಹಾಕಲ್ಪಟ್ಟಿತ್ತು. ಇದಲ್ಲದೆ ತಮ್ಮ ಹೆಂಡರೂ, ತಮ್ಮ ಕುಮಾರರೂ, ಕುಮಾರ್ತೆಗಳೂ ಕೆಕೆಯಾಗಿ ಕೈಯಲ್ಪಟ್ಟಿದ್ದರು. ಆಗ ದಾವೀ

ದನೂ ಅವನ ಸಂಗಡವಿದ್ದ ಜನವೂ ಅಳುವದಕ್ಕೆ ತಮ್ಮಲ್ಲಿ ಶಕ್ತಿ
ಇಲ್ಲದೆ ಹೋಗುವ ಮಟ್ಟಿಗೂ, ತಮ್ಮ ಕಬ್ಜವನ್ನಿತ್ತಿ, ಅತ್ತರು.
೫ ದಾವೀದನ ಇಬ್ಬರು ಹೆಂಡರಾಗಿದ್ದ ಇಜ್ರೇಲಿಯಳಾದ ಅಹಿನೊವಾ
ಮಳೂ, ಕರ್ಮೇಲಿಯಳಾದ ನಬಾಲನ ಹೆಂಡತಿಯಾಗಿದ್ದ ಅಬಿ
೬ ಗಾಯಿಲೂ ಶೆರೆಯಾಗಿ ವೈಯಲ್ಪಟ್ಟರು. ಆದಕೆ ಜನಕ್ಕೆಲ್ಲರು
ಅವನವನು ತನ್ನ ತನ್ನ ಕುಮಾರರಿಗೋಸ್ಕರವಾಗಿಯೂ, ಕು
ಮಾರ್ತೆಗಳಿಗೋಸ್ಕರವಾಗಿಯೂ ಮನಸ್ಸೋವ್ಯಸನ ಪಟ್ಟು, ದಾ
ವೀದನನ್ನು ಕಲ್ಲೆಸೆಯ ಬೇಕೆಂದು ಹೇಳಿ ಕೊಂಡದ್ದರಿಂದ, ಅವನು
ಬಹಳ್ಳ ಇಕ್ಕಟ್ಟು ಪಟ್ಟನು. ಆದರೂ ದಾವೀದನು ಕರ್ತನಾದ
ದೇವರಲ್ಲಿ ತನ್ನನ್ನು ಬಲ ಪಡಿಸಿ ಕೊಂಡನು.

೭ ಆಗ ದಾವೀದನು ಅಹಿಮೆಲೆಕನ ಮಗನಾದ ಅಬ್ಯಾತಾರನೆಂಬ
ಯಾಜಕನಿಗೆ, ನೀನು ದಯೆ ಮಾಡಿ ಏಫೋದನ್ನು ನನಗೆ ತ
ಕ್ಕೊಂಡು ಬಾ, ಅಂದನು. ಹಾಗೆಯೇ ಅಬ್ಯಾತಾರನು ಏಫೋದನ್ನು
೮ ದಾವೀದನ ಬಳಿಗೆ ತಂದನು. ದಾವೀದನು ಕರ್ತನನ್ನು, ನಾನು ಆ
ದಂಡಿನ ಹಿಂದೆ ಹತ್ತಲೋ! ನಾನು ಅವರನ್ನು ಕಲತು ಕೊಳ್ಳು
ವೆನೋ! ಎಂದು ಕೇಳ್ದನು. ಅದಕ್ಕವನು, ನೀನು ಹಿಂದೆ ಹತ್ತು;
ನಿಶ್ಚಯವಾಗಿ ನೀನು ಅವರನ್ನು ಕಲತು ಕೊಳ್ಳುವಿ; ಬಿಡಿಸೇ ಬಿ
೯ ಡಿಸಿ ಕೊಳ್ಳುವಿ, ಅಂದನು. ಆಗ ದಾವೀದನೂ ಅವನ ಸಂಗಡ
ಇದ್ದ ಆರು ನೂರು ಜನರೂ ಹೋದರು; ಅವರು ಬೆಸೋರು
ಎಂಬ ಹಳ್ಳದ ಬಳಿಗೆ ಬಂದಾಗ, ಹಿಂದುಳಿದವರು ಅಲ್ಲಿ ನಿಂತರು.
೧೦ ದಾವೀದನು, ತಾನೂ ನಾನೂರು ಜನರೂ ಹಿಂದಟ್ಟಿ ಹೋದರು.
ಬೆಸೋರಿನ ಹಳ್ಳವನ್ನು ದಾಟಲಾರದೆ ದಣಿದು ಇದ್ದದರಿಂದ, ಇ
ನ್ನೂರು ಜನರು ಅಲ್ಲಿ ನಿಂತರು.

೧೧ ಅವರು ಒಬ್ಬ ಐಗುಪ್ತ್ಯನನ್ನು ಅಡವಿಯಲ್ಲಿ ಕಂಡು ಕೊಂಡು,
ಅವನನ್ನು ದಾವೀದನ ಬಳಿಗೆ ತಂದು, ಅವನಿಗೆ ಕೊಟ್ಟಿ ಕೊಟ್ಟಿ
೧೨ ರು; ಅವನು ತಿಂದನು. ಮತ್ತು ಅವನಿಗೆ ನೀರನ್ನು ಕುಡಿಸಿ, ಅಂ
ಜೂರದ ಫಲದ ಅಡೆಯಲ್ಲಿ ಒಂದು ತುಂಡನ್ನೂ ಒಣಗಿದ ಎರಡು
ದ್ರಾಕ್ಷೇ ಗೊನೆಗಳನ್ನೂ ಅವನಿಗೆ ಕೊಟ್ಟರು. ಅವನು ಅವುಗ
ಳನ್ನು ತಿಂದಾಗ, ಅವನ ಅತ್ಮ ಅವನಿಗೆ ತಿರಿಗಿ ಬಂತು. ಯಾಕಂ
ದಕೆ ಅವನು ರಾತ್ರಿ ಹಗಲು ಮೂರು ದಿವಸದಿಂದ ಕೊಟ್ಟಿ ತಿನ್ನ
೧೩ ಲಿಲ್ಲ, ನೀರನ್ನೂ ಕುಡಿಯಲಿಲ್ಲ. ದಾವೀದನು ಅವನನ್ನು, ನೀನು
ಯಾರವನು? ನೀನು ಎಲ್ಲಿಯವನು! ಎಂದು ಕೇಳ್ದಾಗ, ಅವನು,
ನಾನು ಒಬ್ಬ ಅಮಲೇಕ್ಯನ ಊಳಿಗದವನಾದ ಐಗುಪ್ತ ದೇಶದ
ಪ್ರಾಯಸ್ತನು. ಈ ಹೊತ್ತಿಗೆ ಮೂರು ದಿವಸ ನಾನು ರೋಗ
ದಲ್ಲಿ ಬಿದ್ದದರಿಂದ, ನನ್ನ ಯಜಮಾನನು ನನ್ನನ್ನು ಬಿಟ್ಟು ಹೋ
೧೪ ದನು. ಅದಕೆ ನಾವು ಕೆರೇತ್ಯರ ದಕ್ಷಿಣ ಪಾರ್ಶ್ವದ ಮೇಲೆಯೂ
ಯೆಹೂದದ ಮೇಲೆಯ ಮೇಲೆಯೂ ಕಾಲೆಬನ ದಕ್ಷಿಣ ಪಾರ್ಶ್ವ
ದ ಮೇಲೆಯೂ ಬಿದ್ದು, ಚಿಕ್ಲಾಗನ್ನು ಬೆಂಕಿಯಿಂದ ಸುಟ್ಟು ಬಿ
೧೫ ಟ್ಟೆವು, ಅಂದನು. ದಾವೀದನು ಅವನನ್ನು, ನೀನು ನನ್ನನ್ನು ಆ
ದಂಡಿಗೆ ಕರ ಕೊಂಡು ಹೋಗುತ್ತೀಯಾ? ಎಂದು ಕೇಳ್ದನು.
ಅದಕ್ಕವನು, ನೀನು ನನ್ನನ್ನು ಕೊಂದು ಹಾಕುವದಿಲ್ಲ, ನನ್ನನ್ನು
ನನ್ನ ಯಜಮಾನನ ಕೈಯಲ್ಲಿ ಒಪ್ಪಿಸಿ ಕೊಡುವದಿಲ್ಲ ಎಂದು,
ನನಗೆ ದೇವರ ಹೆಸರಿನಿಂದ ಪ್ರಮಾಣ ಕೊಟ್ಟರೆ, ನಿನ್ನನ್ನು ಆ
ದಂಡಿಗೆ ಕರ ಕೊಂಡು ಹೋಗುತ್ತೇನೆ, ಅಂದನು.

೧೬ ಇವನು ದಾವೀದನನ್ನು ಕರ ಕೊಂಡು, ಅಲ್ಲಿಗೆ ಹೋದಾಗ,
ಅವರು ಭೂಮಿಯ ಮೇಲೆ ಎಲ್ಲೆಲ್ಲಿಯೂ, ಫಿಲಿಷ್ಟ್ಯರ ದೇಶದಲ್ಲಿ
ಯೂ ಯೆಹೂದ ದೇಶದಲ್ಲಿಯೂ ವ್ಯಾಪಿಸಿ ಕೊಂಡು, ಸಮಸ್ತ
ಕೊಳ್ಳೆ ತಕ್ಕೊಂಡು ಬಂದದರಿಂದ, ಉಂಡು, ಕುಡಿದು, ಆಡಿ ಪಾ
೧೭ ಡಿ ಕೊಂಡಿದ್ದರು. ಆಗ ದಾವೀದನು ಅವರನ್ನು ಮುನುಸಂಜೆ
ಯಿಂದ ಮಾರಣೆ ದಿವಸ ಸಾಯಂಕಾಲದ ವರಿಗೂ ಹೊಡೆಯು
ತ್ತಾ ಇದ್ದನು. ಆದಕೆ ಅವರಲ್ಲಿ ಒಂಟಿಗಳ ಮೇಲೆ ಏರಿ ಓಡಿ ಹೋ
ದ ನಾನೂರು ಮಂದಿ ಪ್ರಾಯಸ್ತರ ಹೊರತು ಒಬ್ಬನಾದರೂ
೧೮ ತಪ್ಪಿಸಿ ಕೊಂಡದ್ದಿಲ್ಲ. ದಾವೀದನು ಅಮಲೇಕ್ಯರು ತಕ್ಕೊಂಡು
ಹೋದದ್ದನ್ನೆಲ್ಲಾ ಬಿಡಿಸಿ ಕೊಂಡನು. ಮತ್ತು ತನ್ನ ಇಬ್ಬರು
೧೯ ಹೆಂಡರನ್ನು ದಾವೀದನು ಬಿಡಿಸಿ ಕೊಂಡನು. ಅವರು ತಕ್ಕೊಂ
ಡು ಹೋದ ಕಿರಿಯರಲ್ಲಾದರೂ, ಹಿರಿಯರಲ್ಲಾದರೂ, ಕುಮಾರ
ರಲ್ಲಾದರೂ, ಕುಮಾರ್ತೆಗಳಲ್ಲಾದರೂ, ಕೊಳ್ಳೆಯಾದ ಯಾ
ವ ವಸ್ತುಗಳಲ್ಲಾದರೂ, ಒಂದೂ ಕೊರತೆ ಇಲ್ಲದ ಹಾಗೆ, ದಾವೀ
೨೦ ದನು ಎಲ್ಲವನ್ನು ತಿರಿಗಿ ತಕ್ಕೊಂಡನು. ಇದಲ್ಲದೆ ದಾವೀದನು
ಅವರ ಸಮಸ್ತ ಕುರಿ ದನಗಳ ಮಂದೆಗಳನ್ನು ಹಿಡಿದನು; ಅವುಗಳ
ನ್ನು ಇವರು ತಮ್ಮ ದನಗಳಿಗೆ ಮುಂದಾಗಿ ಹೊಡೆ ಕೊಂಡು
ಹೋಗುತ್ತಾ, ಇವು ದಾವೀದನ ಕೊಳ್ಳೆ ಎಂದು, ಅಂದು ಕೊಂ
ಡರು.

೨೧ ಆದಕೆ ದಣಿದು ಇದ್ದದರಿಂದ ದಾವೀದನ ಹಿಂದೆ ಬರಲಾರದೆ,
ಬೆಸೋರಿನ ಹಳ್ಳದ ಬಳಿಯಲ್ಲಿ ಬಿಟ್ಟು ಹೋಗಿದ್ದ ಇನ್ನೂರು
ಜನರ ಬಳಿಗೆ ದಾವೀದನು ಬಂದಾಗ, ಅವರು ದಾವೀದನನ್ನೂ ಅ
ವನ ಸಂಗಡ ಇದ್ದ ಜನರನ್ನೂ ಎದುರ್ಗೊಳ್ಳ ಹೋದರು. ದಾ
ವೀದನು ಆ ಜನರ ಬಳಿಗೆ ಸೇರಿ, ಅವರ ಕ್ಷೇಮ ಸಮಾಚಾರವನ್ನು
೨೨ ಕೇಳ್ದನು. ಆಗ ದಾವೀದನ ಸಂಗಡ ಬಂದ ಮನುಷ್ಯರಲ್ಲಿ ಕೆಟ್ಟ
ವರಾದ ಬೆಲಿಯಾಳಿನ ಮನುಷ್ಯರು ಹೇಳಿದ್ದೇನಂದರೆ, ಅವರು
ನಮ್ಮ ಸಂಗಡ ಬಾರದೆ ಇದ್ದದರಿಂದ, ನಾವು ತಿರಿಗಿ ತಕ್ಕೊಂಡು
ಬಂದ ಕೊಳ್ಳೆಯ ವಸ್ತುಗಳಲ್ಲಿ ಅವರಿಗೆ ಒಂದನ್ನೂ ಕೊಡುವ
ದಿಲ್ಲ; ಅವನವನು ತನ್ನ ತನ್ನ ಹೆಂಡರು ಮಕ್ಕಳನ್ನು ಮಾತ್ರವೇ
೨೩ ಕರ ಕೊಂಡು ಹೋಗಲಿ, ಅಂದರು. ಅದಕ್ಕೆ ದಾವೀದನು, ನನ್ನ
ಸಹೋದರರೇ, ನಮ್ಮನ್ನು ಕಾಪಾಡಿ, ನಮಗೆ ವಿರೋಧವಾಗಿ
ಬಂದ ಈ ಗುಂಪನ್ನು ನಮ್ಮ ಕೈಯಲ್ಲಿ ಒಪ್ಪಿಸಿ ಕೊಟ್ಟ ಕರ್ತನು
ನಮಗೆ ಕೊಟ್ಟದ್ದಕ್ಕೆ ನೀವು ಹಾಗೆ ಮಾಡ ಬೇಡಿರಿ. ಈ ಕಾ
೨೪ ರ್ಯಕ್ಕೋಸ್ಕರ ನಿಮ್ಮ ಮಾತು ಯಾರು ಕೇಳುವರು! ಆದಕೆ
ಯುದ್ಧಕ್ಕೆ ಹೋದವನ ಪಾಲಿನ ಹಾಗೆಯೇ, ಸಾಮಾನಿನ ಬಳಿ
ಯಲ್ಲಿ ಕಾದಿರುವವನ ಪಾಲು ಇರಲಿ; ಅವರಿವರ ಪಾಲು ಸರಿ
೨೫ ಯಾಗಿರಲಿ, ಅಂದನು. ಹಾಗೆಯೇ ಅವನು ಆ ದಿವಸ ಮೊದ
ಲ್ಗೊಂಡು ಇಂದಿನ ವರಿಗೂ ಇರುವ ಹಾಗೆ, ಇಸ್ರಯೇಲಿಗೆ ಆದ
ನ್ನು ನೇಮಕವಾಗಿಯೂ ಪದ್ಧತಿಯಾಗಿಯೂ ನೇಮಿಸಿದನು.

೨೬ ಆದಕೆ ದಾವೀದನು ಚಿಕ್ಲಾಗಿಗೆ ಬಂದಾಗ, ಅವನು ಕೊಳ್ಳೆ
ಮಾಡಿದವುಗಳಲ್ಲಿ ತನ್ನ ಸ್ನೇಹಿತರಾದ ಯೆಹೂದದ ಹಿರಿಯರಿ
ಗೆ ಕೆಲವನ್ನು ಕಳುಹಿಸಿ, ಇಗೋ, ಕರ್ತನ ಶತ್ರುಗಳ ಕೊಳ್ಳೆ
೨೭ ಯಲ್ಲಿ ಇವು ನಿಮಗೆ ಆಶೀರ್ವಾದವೆಂದು, ಹೇಳ್ದನು. ಯಾರಿ
ಗಂದರೆ—ಬೇತೆಲಿನಲ್ಲಿರುವವರಿಗೂ, ದಕ್ಷಿಣಾದ ರಾಮೋತಿನ
ಲ್ಲಿರುವವರಿಗೂ, ಯತ್ತೀರಿನಲ್ಲಿರುವವರಿಗೂ, ಅರೋಯೇರಿನಲ್ಲಿರು
೨೮ ವವರಿಗೂ, ಸಿಪ್ಮೋತಿನಲ್ಲಿರುವವರಿಗೂ, ಎಷ್ಟೆಮೋವದಲ್ಲಿರುವ



ರಿಗೂ, ರಕಾಲಿನಲ್ಲಿರುವವರಿಗೂ, ಯೆರಹ್ಮೇಲಿಯರ ಪಟ್ಟಣಗಳ
೨೯ ಲ್ಲಿರುವವರಿಗೂ, ಕೇನಿಯರ ಪಟ್ಟಣಗಳಲ್ಲಿರುವವರಿಗೂ, ಹೊರ್ಮ
೩೦ ದಲ್ಲಿರುವವರಿಗೂ, ಕೊರಶಾನಿನಲ್ಲಿರುವವರಿಗೂ, ಅಟಾಕಿನಲ್ಲಿ
೩೧ ರುವವರಿಗೂ, ಹೆಬ್ರೋನಿನಲ್ಲಿರುವವರಿಗೂ, ದಾವೀದನೂ ಅವನ
ಮನುಷ್ಯರೂ ಸಂಚರಿಸುತ್ತಿದ್ದ ಸಮಸ್ತ ಸ್ಥಳಗಳಲ್ಲಿರುವವರಿಗೂ
ಕಳುಹಿಸಿದನು.

## ೩೧. ಸಂಧಿ.

೧ ಆದಕೆ ಫಿಲಿಷ್ಟ್ಯರು ಇಸ್ರಯೇಲಿನ ಸಂಗಡ ಯುದ್ಧ ಮಾಡಿದ
ರು. ಆಗ ಇಸ್ರಯೇಲ ಜನರು ಫಿಲಿಷ್ಟ್ಯರ ಎದುರಿನಿಂದ ಓಡಿ
ಹೋಗಿ, ಗಿಲ್ಬೋಯೆ ಬೆಟ್ಟದಲ್ಲಿ ಕೊಲ್ಲಲ್ಪಟ್ಟವರಾಗಿ ಬಿದ್ದರು.
೨ ಫಿಲಿಷ್ಟ್ಯರು ಸೌಲನನ್ನೂ ಅವನ ಕುಮಾರರನ್ನೂ ಬೆನ್ನಟ್ಟಿ,
ಸೌಲನ ಕುಮಾರರಾದ ಯೊನತಾನನನ್ನೂ, ಅಬಿನದಾಬನನ್ನೂ,
೩ ಮಲ್ಕಿಶುವನನ್ನೂ ಹೊಡೆದರು. ಇದಲ್ಲದೆ ಯುದ್ಧವು ಸೌಲನಿಗೆ
ಭಾರವಾಗಿತ್ತು. ಯಾಕಂದರೆ ಬಿಲ್ಲುಗಾರರು ಅವನನ್ನು ಬಾಣಗ
ಳಿಂದ ಹೊಡೆದರು. ಅವನು ಅವರಿಂದ ಬಹು ಭಾಯ ಪಟ್ಟನು.
ಆದಕಾರಣ ಅವನು ತನ್ನ ಆಯುಧ ಹಿಡಿಯುವವನಿಗೆ, ಈ ಪರ
ಛೇದನೆ ಇಲ್ಲದವರು ಬಂದು, ನನ್ನನ್ನು ತಿವಿದು ಬಿಟ್ಟು, ಅವಮಾ
ನ ಮಾಡದ ಹಾಗೆ, ನೀನು ನಿನ್ನ ಕತ್ತಿಯನ್ನು ಕಿತ್ತು, ನನ್ನನ್ನು
೪ ಅದರಿಂದ ತಿವಿ, ಅಂದನು. ಆದರೆ ಅವನ ಆಯುಧ ಹಿಡಿಯುವ
ವನು ಬಹು ಭಯ ಪಟ್ಟದರಿಂದ, ಹಾಗೆ ಮಾಡಲೊಲ್ಲದೆ ಹೋ
ದನು. ಆಗ ಸೌಲನು ತಾನೇ ಕತ್ತಿಯನ್ನು ತಕ್ಕೊಂಡು, ಅದರ
೫ ಮೇಲೆ ಬಿದ್ದನು. ಸೌಲನು ಸತ್ತು ಹೋದದ್ದನ್ನು ಅವನ ಆಯು
ಧ ಹಿಡಿಯುವವನು ನೋಡಿದಾಗ, ಅವನೂ ಹಾಗೆಯೇ ತನ್ನ
೬ ಕತ್ತಿಯ ಮೇಲೆ ಬಿದ್ದು, ಅವನ ಸಂಗಡ ಸತ್ತನು. ಹೀಗೆಯೇ
ಆ ದಿನ ಸೌಲನೂ, ಅವನ ಮೂವರು ಮಕ್ಕಳೂ, ಅವನ ಆಯು
ಧ ಹಿಡಿಯುವವನೂ, ಅವನ ಸಮಸ್ತ ಮನುಷ್ಯರೂ ಕೂಡಾ
೭ ಸತ್ತರು.
ಮತ್ತು ಇಸ್ರಯೇಲ ಮನುಷ್ಯರು ಓಡಿ ಹೋದರೆಂದೂ,
ಸೌಲನೂ ಅವನ ಮಕ್ಕಳೂ ಸತ್ತರೆಂದೂ ತಗ್ಗಿಗೂ ಯೊರ್ದನಿ
ಗೂ ಆಚೆಯಲ್ಲಿದ್ದ ಇಸ್ರಯೇಲ ಜನರು ಕಂಡಾಗ, ಅವರು ತ
ಮ್ಮ ಪಟ್ಟಣಗಳನ್ನು ಬಿಟ್ಟು, ಓಡಿ ಹೋದರು. ಆಗ ಫಿಲಿಷ್ಟ್ಯರು
ಬಂದು, ಅವುಗಳಲ್ಲಿ ವಾಸವಾಗಿದ್ದರು.
೮ ಮಾರಣೆ ದಿವಸದಲ್ಲಿ ಫಿಲಿಷ್ಟ್ಯರು ಕೊಲೆ ಪಟ್ಟವರನ್ನು ಸು
ಲುಕೊಳ್ಳ ಬಂದಾಗ, ಗಿಲ್ಬೋಯೆ ಬೆಟ್ಟದಲ್ಲಿ ಬಿದ್ದಿರುವ ಸೌಲನ
ನ್ನೂ ಅವನ ಮೂವರು ಮಕ್ಕಳನ್ನೂ ಕಂಡು ಕೊಂಡು, ಅವನ
೯ ತಲೆಯನ್ನು ಕಡಿದು, ಅವನ ಆಯುಧಗಳನ್ನು ಬಿಚ್ಚಿ, ತಕ್ಕೊಂ
ಡು, ತಮ್ಮ ವಿಗ್ರಹಗಳ ಗುಡಿಗಳಲ್ಲಿಯೂ, ಜನರಲ್ಲಿಯೂ ಸಾರು
೧೦ ವದಕ್ಕೆ ಫಿಲಿಷ್ಟ್ಯರ ದೇಶದ ಸುತ್ತಲು ಕಳುಹಿಸಿದರು. ಅವನ ಆ
ಯುಧಗಳನ್ನು ಅಷ್ಟರೋತಿನ ಮಂದಿರದಲ್ಲಿ ಇಟ್ಟು, ಅವನ ಶರೀ
ರವನ್ನು ಬೆತ್ಷಾನಿನ ಅಲಂಗಕ್ಕೆ ಹತ್ತ ಜಡಿದರು.
೧೧ ಹೀಗೆಯೇ ಫಿಲಿಷ್ಟ್ಯರು ಸೌಲನಿಗೆ ಮಾಡಿದ್ದನ್ನು ಯಾಬೆಷು
ಗಿಲ್ಯಾದಿನವರು ಕೇಳಿದಾಗ, ಅವರಲ್ಲಿ ಪರಾಕ್ರಮಶಾಲಿಗಳು ಎದ್ದು,
೧೨ ರಾತ್ರಿಯೆಲ್ಲಾ ನಡೆದು ಹೋಗಿ, ಬೆತ್ಷಾನಿನ ಅಲಂಗದಲ್ಲಿ ಜಡಿದಿದ್ದ
ಸೌಲನ ಶರೀರವನ್ನೂ ಅವನ ಕುಮಾರರ ಶರೀರಗಳನ್ನೂ ತ
೧೩ ಕ್ಕೊಂಡು, ಯಾಬೆಷಿಗೆ ಬಂದು, ಅವುಗಳನ್ನು ಅಲ್ಲಿ ಸುಟ್ಟು ಬಿ
ಟ್ಟು, ಅವರ ಎಲುವುಗಳನ್ನು ತಕ್ಕೊಂಡು, ಅವುಗಳನ್ನು ಯಾಬೆ
ಷಿನಲ್ಲಿರುವ ಒಂದು ಮರದ ಕೆಳಗೆ ಹೂಣಿಟ್ಟು, ಏಳು ದಿವಸ ಉ
ಪವಾಸ ಮಾಡಿದರು.

---

# THE SECOND BOOK OF SAMUEL.

## ಸಮುವೇಲನ ಎರಡನೇ ಪುಸ್ತಕವು.

## ೧. ಸಂಧಿ.

೧ ಸೌಲನು ಸತ್ತ ತರುವಾಯ ದಾವೀದನು ಅಮಲೇಕ್ಯರನ್ನು
ಹೊಡೆದು, ಚಿಕ್ಲಾಗಿಗೆ ತಿರಿಗಿ ಬಂದು, ಎರಡು ದಿವಸ ಅಲ್ಲಿ ಇದ್ದ
೨ ತರುವಾಯ ಏನಾಯಿತಂದರೆ, ಇಗೋ, ಮೂರನೇ ದಿವಸದಲ್ಲಿ
ತನ್ನ ವಸ್ತ್ರಗಳನ್ನು ಹರು ಕೊಂಡು, ತನ್ನ ತಲೆಯ ಮೇಲೆ ಮ
ಣ್ಣು ಹೊಯಿದು ಕೊಂಡಿದ್ದ ಒಬ್ಬ ಮನುಷ್ಯನು ಸೌಲನ ಬಳಿ
ಯಿಂದ ದಂಡಿನಲ್ಲಿಂದ ಹೊರಟು, ದಾವೀದನ ಬಳಿಗೆ ಬಂದಾಗ, ನೆ
೩ ಲದ ಮೇಲೆ ಬಿದ್ದು, ಅವನಿಗೆ ವಂದಿಸಿದನು. ದಾವೀದನು ಅವನಿಗೆ,
ನೀನು ಎಲ್ಲಿಂದ ಬಂದಿ! ಅಂದನು. ಅದಕ್ಕವನು, ಇಸ್ರಯೇಲಿನ
೪ ದಂಡಿನಲ್ಲಿಂದ ತಪ್ಪಿಸಿ ಕೊಂಡು ಬಂದೆನು, ಅಂದನು. ದಾವೀದನು
ಅವನಿಗೆ, ನಡೆದ ವರ್ತಮಾನವೇನು! ನೀನು ನನಗೆ ತಿಳಿಸು, ಅಂ
ದನು. ಅವನು, ಜನವು ಯುದ್ಧದಿಂದ ಓಡಿ ಹೋದರು; ಜನರಲ್ಲಿ
ಅನೇಕರು ಬಿದ್ದು, ಸತ್ತರು; ಸೌಲನೂ ಅವನ ಮಗನಾದ ಯೊನ
ತಾನನೂ ಸತ್ತರು, ಅಂದನು.

೫ ದಾವೀದನು ತನಗೆ ವರ್ತಮಾನ ಹೇಳಿದ ಪ್ರಾಯದವನಿಗೆ,
ಸೌಲನೂ ಅವನ ಮಗನಾದ ಯೊನತಾನನೂ ಸತ್ತರೆಂದು, ನಿನಗೆ
೬ ಹ್ಯಾಗೆ ತಿಳಿಯಿತು! ಅಂದನು. ಅವನಿಗೆ ವರ್ತಮಾನ ಹೇಳಿದ
ಪ್ರಾಯದವನು ಹೇಳ್ದದ್ದೇನಂದರೆ—ನಾನು ಸುಮ್ಮನೇ ಗಿಲ್ಬೋ
ಯೆ ಬೆಟ್ಟದಲ್ಲಿ ಬಂದಿದ್ದೆನು. ಅಲ್ಲಿ, ಇಗೋ, ಸೌಲನು ತನ್ನ ಈ
ಟಿಯ ಮೇಲೆ ಆತು ಕೊಂಡಿದ್ದನು. ಆಗ, ಇಗೋ, ರಥಗಳೂ
೭ ರಾಹುತರೂ ಅವನನ್ನು ಹಿಂದಟ್ಟಿ ಕೊಂಡೇ ಇದ್ದರು. ಅವನು
ಹಿಂದಕ್ಕೆ ತಿರುಗಿ ನೋಡಿದಾಗ, ನನ್ನನ್ನು ಕಂಡು, ಕರೆದನು. ಇ

೮ ಗೋ, ಇದ್ದೇನೆ, ಅಂದೆನು. ಆಗಲವನು, ನೀನ್ಯಾರು! ಅಂದನು.
೯ ನಾನು ಅವನಿಗೆ, ಅಮಲೇಕ್ಯನೆಂದು ಹೇಳಿದೆನು. ಅವನು ನನಗೆ,
ನೀನು ದಯೆ ಮಾಡಿ, ನನ್ನ ಮೇಲೆ ನಿಂತು, ನನ್ನನ್ನು ಕೊಂದು
ಹಾಕು; ಯಾಕಂದರೆ ನನ್ನ ಪ್ರಾಣ ಇನ್ನೂ ನನ್ನಲ್ಲಿ ಪೂರ್ಣ
ವಾಗಿರುವದರಿಂದ, ಸಂಕಟವು ನನ್ನನ್ನು ಹಿಡಿಯಿತು, ಅಂದನು.
೧೦ ಆದದರಿಂದ ನಾನು, ಇವನು ಬಿದ್ದ ತರುವಾಯ ಬದುಕಲಾರನೆಂ
ದು ತಿಳಿದು, ಅವನ ಮೇಲೆ ನಿಂತು, ಅವನನ್ನು ಕೊಂದು ಹಾಕಿ
ದೆನು. ಮತ್ತು ಅವನ ತಲೆಯ ಮೇಲಿದ್ದ ಕಿರೀಟವನ್ನೂ ಅವನ
ಕೈಯಲ್ಲಿದ್ದ ಕಡಗವನ್ನೂ ತೆಗೆದು ಕೊಂಡು, ಅವುಗಳನ್ನು ನನ್ನ
ಸ್ವಾಮಿಗೆ ಇಲ್ಲಿ ತಂದೆನು, ಅಂದನು.
೧೧ ಆಗ ದಾವೀದನೂ, ಅವನ ಸಂಗಡ ಇದ್ದ ಸಮಸ್ತ ಜನರೂ
೧೨ ತಮ್ಮ ವಸ್ತ್ರಗಳನ್ನು ಹರು ಕೊಂಡು, ಸೌಲನೂ ಅವನ ಮಗ
ನಾದ ಯೊನತಾನನೂ ಇಸ್ರಯೇಲಿನ ಮನೆಯವರೂ ಕರ್ತನ
ಜನರೂ ಕತ್ತಿಯಿಂದ ಬಿದ್ದ ಕಾರಣ, ಅವರಿಗೋಸ್ಕರ ಗೋಳಾ
ಡಿ, ಅತ್ತು, ಅಸ್ತಮಾನದ ವರಿಗೂ ಉಪವಾಸವಾಗಿದ್ದರು.
೧೩ ಆದರೆ ದಾವೀದನು ಅದನ್ನು ತನಗೆ ತಿಳಿಸಿದ ಪ್ರಾಯದವನ
ನ್ನು, ನೀನು ಎಲ್ಲಿಯವನೆಂದು ಕೇಳಿದಾಗ, ಅವನು ನಾನು ಅನ್ಯನ
೧೪ ಮಗನಾದ ಅಮಲೇಕ್ಯನು, ಅಂದನು. ಆಗ ದಾವೀದನು ಅವನಿಗೆ,
ಕರ್ತನ ಅಭಿಷಿಕ್ತನನ್ನು ಸಂಹರಿಸ ನಿನ್ನ ಕೈ ಚಾಚುವದಕ್ಕೆ ಭ
೧೫ ಯ ಪಡದೆ ಇದ್ದದ್ದು ಹ್ಯಾಗೆ! ಎಂದು ಹೇಳಿದನು. ಮತ್ತು ದಾವೀ
ದನು ಪ್ರಾಯಸ್ತರಲ್ಲಿ ಒಬ್ಬನನ್ನು ಕರೆದು, ನೀನು ಹತ್ತರ ಹೋ
ಗಿ, ಅವನ ಮೇಲೆ ಬೀಳು, ಅಂದನು. ಹಾಗೆಯೇ ಅವನು ಅವನ
೧೬ ನ್ನು ಹೊಡೆದನು; ಅವನು ಸತ್ತನು. ಮತ್ತು ದಾವೀದನು ಅವನಿ
ಗೆ, ಕರ್ತನ ಅಭಿಷಿಕ್ತನನ್ನು ಕೊಂದು ಹಾಕಿದೆನೆಂದು, ನಿನ್ನ
ಬಾಯಿ ನಿನಗೆ ವಿರೋಧವಾಗಿ ಸಾಕ್ಷಿ ಹೇಳ್ದದ್ದರಿಂದ, ನಿನ್ನ ರಕ್ತ
ವು ನಿನ್ನ ತಲೆಯ ಮೇಲೆ ಇರಲಿ, ಅಂದನು.
೧೭ ಆಗ ದಾವೀದನು ಸೌಲನ ಮೇಲೆಯೂ ಅವನ ಮಗನಾದ
ಯೊನತಾನನ ಮೇಲೆಯೂ ಈ ಗೋಳಾಟದಿಂದ ಗೀತ ಹಾಡಿ,
೧೮ ಗೋಳಾಡಿದನು. ಇದಲ್ಲದೆ ದಾವೀದನು ಬಿಲ್ಲೆಂಬ ಗೀತವನ್ನು
ಯೆಹೂದನ ಮಕ್ಕಳಿಗೆ ಕಲಿಸ ಹೇಳ್ದದನು; ಇಗೋ, ಯಾಶೆ
ರನ ಪುಸ್ತಕದಲ್ಲಿ ಬರೆಯಲ್ಪಟ್ಟಿದೆ.
೧೯ ಏನಂದರೆ—ಇಸ್ರಯೇಲಿನ ಜಿಂಕೆಯೇ, ನಿನ್ನ ಮೇಡುಗಳ ಮೇ
ಲೆ ಕೊಲ್ಲಲ್ಪಟ್ಟಿ.
ಪರಾಕ್ರಮ ಶಾಲಿಗಳು ಹ್ಯಾಗೆ ಬಿದ್ದರು!

೨೦ ಗಾತಿನಲ್ಲಿ ತಿಳಿಸ ಬೇಡಿರಿ,
ಅಶ್ಕೆಲೋನಿನ ಬೀದಿಗಳಲ್ಲಿ ಸಾರ ಬೇಡಿರಿ.
ಫಿಲಿಷ್ಟ್ಯರ ಕುಮಾರ್ತೆಗಳು ಸಂತೋಷ ಪಟ್ಟಾರಲ್ಲ!
ಪರಿಛೇದನೆ ಇಲ್ಲದವರ ಕುಮಾರ್ತೆಗಳು ಉತ್ಸಾಹ ಪಟ್ಟಾರಲ್ಲ!
೨೧ ಗಿಲ್ಬೋಯ ಬೆಟ್ಟಗಳೇ, ನಿಮ್ಮ ಮೇಲೆ ಮಂಜೂ,
ಮಳೆಯೂ ಅರ್ಪಣೆಗಳ ಹೊಲಗಳೂ ಇಲ್ಲದೆ ಹೋಗಲಿ.
ಯಾಕಂದರೆ ಅಲ್ಲಿ ಪರಾಕ್ರಮಶಾಲಿಗಳ ಹೇಸಿಕೆಯಾಯಿತು.
ಸೌಲನ ಗುರಾಣಿ ಸಹ ಎಣ್ಣೆಯಿಂದ ಅಭಿಷೇಕಿಸಲ್ಪಡದವನ ಹಾ
ಗಾದನು.
೨೨ ಕೊಲ್ಲಲ್ಪಟ್ಟವರ ರಕ್ತದಿಂದಲೂ
ಬಲಶಾಲಿಗಳ ಕೊಬ್ಬಿನಿಂದಲೂ
ಯೊನತಾನನ ಬಿಲ್ಲು ಹಿಂದಕ್ಕೆ ತಿರುಗಲಿಲ್ಲ;
ಸೌಲನ ಕತ್ತಿ ಬರಿದಾಗಿ ತಿರಿಗಿ ಬರಲಿಲ್ಲ.

೨೩ ಸೌಲನೂ ಯೊನತಾನನೂ ಜೀವದಿಂದಿದ್ದಾಗ, ಪ್ರಿಯಕರವಾ
ಗಿಯೂ ಸಂತೋಷಕರವಾಗಿಯೂ ಇದ್ದರು;
ತಮ್ಮ ಮರಣದಲ್ಲಿಯೂ ಅಗಲಿ ಹೋಗದೆ ಇದ್ದರು.
ಅವರು ಹದ್ದುಗಳಿಗಿಂತ ವೇಗವುಳ್ಳವರೂ,
ಸಿಂಹಗಳಿಗಿಂತ ಬಲವುಳ್ಳವರೂ ಆಗಿದ್ದರು.
೨೪ ಇಸ್ರಯೇಲಿನ ಕುಮಾರ್ತೆಗಳೇ, ಸೌಲನಿಗೋಸ್ಕರ ಅಳ್ಳಿರಿ,
ನಿಮಗೆ ರಕ್ತಾಂಬರವನ್ನು ಸಂಭ್ರಮವಾಗಿ ತೊಡಿಸಿದನಲ್ಲ!
ನಿಮ್ಮ ಉಡಿಕೆಗಳ ಮೇಲೆ ಚಿನ್ನದ ಆಭರಣಗಳನ್ನು ಧರಿಸ ಮಾ
ಡಿದನಲ್ಲ!
೨೫ ಅಯ್ಯೋ! ಪರಾಕ್ರಮಶಾಲಿಗಳು ಯುದ್ಧದಲ್ಲಿ ಬಿದ್ದಿದ್ದಾರೆ.
ಯೊನತಾನನೇ, ನೀನು ನಿನ್ನ ಮೇಡುಗಳ ಮೇಲೆ ಕೊಲ್ಲಲ್ಪಟ್ಟಿ.

೨೬ ನನ್ನ ಸಹೋದರನಾದ ಯೊನತಾನನೇ, ನಾನು ನಿನಗೋಸ್ಕ
ರ ಇಕ್ಕಟ್ಟು ಪಡುತ್ತೇನೆ;
ನೀನು ನನಗೆ ಮಹಾ ಸಂತೋಷಕರವಾಗಿದ್ದಿ.
ನಿನ್ನ ಪ್ರೀತಿ ನನ್ನ ಮೇಲೆ ಆಶ್ಚರ್ಯವಾಗಿತ್ತು.
ಸ್ತ್ರೀಯರ ಪ್ರೀತಿಗಿಂತ ಅಧಿಕವಾದದ್ದು.
೨೭ ಅಯ್ಯೋ! ಪರಾಕ್ರಮಶಾಲಿಗಳು ಯುದ್ಧದಲ್ಲಿ ಬಿದ್ದಿದ್ದಾರೆ;
ಯುದ್ಧದ ಆಯುಧಗಳು ನಾಶನವಾಗಿ ಹೋದವಲ್ಲ?

## ೨. ಸಂಧಿ.

೧ ಆ ತರುವಾಯ ಏನಾಯಿತಂದರೆ, ದಾವೀದನು ಕರ್ತನನ್ನು,
ಯೆಹೂದದ ಪಟ್ಟಣಗಳಲ್ಲಿ ಯಾವದಕ್ಕಾದರೂ ಹೋಗಲೋ? ಎಂ
ದು ಕೇಳ್ದದನು. ಕರ್ತನು ಅವನಿಗೆ, ಹೋಗು, ಅಂದನು. ಮತ್ತು
ದಾವೀದನು, ಎಲ್ಲಿ ಹೋಗಲಿ! ಅಂದನು. ಅದಕ್ಕಾತನು, ಹೆಬ್ರೋ
೨ ನಿಗೆ, ಅಂದನು. ಹಾಗೆಯೇ ದಾವೀದನೂ ತನ್ನ ಇಬ್ಬರು ಹೆಂ
ಡರಾದ ಇಜ್ರೇಲಿಯಳಾಗಿರುವ ಅಹಿನೊವಾಮಳೂ, ಕರ್ಮೇಲಿಯ
ನಾದ ನಬಾಲನ ಹೆಂಡತಿಯಾಗಿದ್ದ ಅಬಿಗಾಯಿಲೂ ಅಲ್ಲಿಗೆ ಹೋ
೩ ದರು. ಇದಲ್ಲದೆ ತನ್ನ ಸಂಗಡಲಿರುವ ಮನುಷ್ಯರನ್ನೂ ಅವರ
ವರ ಮನೆಯವರನ್ನೂ ತಕ್ಕೊಂಡು ಹೋದನು; ಅವರು ಹೆ
೪ ಬ್ರೋನಿನ ಪಟ್ಟಣಗಳಲ್ಲಿ ವಾಸವಾಗಿದ್ದರು. ಆಗ ಯೆಹೂದನ ಮ
ನುಷ್ಯರು ಬಂದು, ಅಲ್ಲಿ ದಾವೀದನನ್ನು ಯೆಹೂದನ ಮನೆಯವ
ರ ಮೇಲೆ ಅರಸನಾಗ ಅಭಿಷೇಕಿಸಿದರು.
೫ ಯಾಬೆಷ್ ಗಿಲ್ಯಾದಿನವರು ಸೌಲನನ್ನು ಹೂಣಿಟ್ಟರೆಂದು, ದಾ
ವೀದನಿಗೆ ತಿಳಿಸಲ್ಪಟ್ಟಾಗ, ದಾವೀದನು ಯಾಬೆಷ್ ಗಿಲ್ಯಾದಿನವ
ರಿಗೆ ದೂತರನ್ನು ಕಳುಹಿಸಿ, ನೀವು ನಿಮ್ಮ ಯಜಮಾನನಾದ
ಸೌಲನಿಗೆ ಈ ಕೃಪೆಯನ್ನು ತೋರಿಸಿ, ಅವನನ್ನು ಹೂಣಿಟ್ಟ
೬ ಕಾರಣ, ಕರ್ತನಿಂದ ನಿಮಗೆ ಆಶೀರ್ವಾದವಾಗಲಿ. ಈಗ ಕರ್ತ
ನು ನಿಮಗೆ ಕೃಪೆಯನ್ನೂ ಸತ್ಯವನ್ನೂ ದಯಪಾಲಿಸಲಿ. ನೀ
ವು ಈ ಕಾರ್ಯ ಮಾಡಿದ್ದರಿಂದ, ನಾನು ನಿಮಗೆ ಪ್ರತ್ಯುಪಕಾರ
೭ ಮಾಡುವೆನು. ನೀವು ಪರಾಕ್ರಮಶಾಲಿಗಳಾಗಿದ್ದು, ನಿಮ್ಮ ಕೈಯಿ
ಗಳು ಬಲವಾಗಿರಲಿ; ಯಾಕಂದರೆ ನಿಮ್ಮ ಯಜಮಾನನಾದ
ಸೌಲನು ಸತ್ತು ಹೋದನು; ಯೆಹೂದನ ವಂಶಸ್ಥರು ನನ್ನನ್ನು
ತಮ್ಮ ಮೇಲೆ ಅರಸನಾಗ ಅಭಿಷೇಕ ಮಾಡಿದರು, ಅಂದನು.



೮ ಆದರೆ ಸೌಲನ ಸೈನ್ಯಾಧಿಪತಿಯಾದ ನೇರನ ಮಗನಾಗಿರುವ
ಅಬ್ನೇರನು ಸೌಲನ ಮಗನಾದ ಇಷ್ಬೋಶೆತನನ್ನು ಮಹನಾಯಿ
೯ ಮಿಗೆ ಕರ ಕೊಂಡು ಹೋಗಿ, ಅಲ್ಲಿ ಅವನನ್ನು ಗಿಲ್ಯಾದ್ಯರ ಮೇ
ಲೆಯೂ, ಅಷೂರ್ಯರ ಮೇಲೆಯೂ, ಇಜ್ರೇಲಿಯರ ಮೇಲೆ
ಯೂ, ಎಫ್ರಯಿಮ್ಯರ ಮೇಲೆಯೂ, ಬೆನ್ಯಮೀನ್ಯರ ಮೇಲೆ
ಯೂ, ಇಸ್ರಯೇಲ್ಯರೆಲ್ಲರ ಮೇಲೆಯೂ ಅರಸನಾಗ ಮಾಡಿದ
೧೦ ನು. ಸೌಲನ ಮಗನಾದ ಇಷ್ಬೋಶೆತನು ಇಸ್ರಯೇಲಿನ ಮೇ
ಲೆ ಆಳ್ವ ಆರಂಭಿಸಿದಾಗ, ನಾಲ್ವತ್ತು ವರುಷ ಪ್ರಾಯದವನಾಗಿ
ದ್ದು, ಎರಡು ವರುಷ ಆಳ್ವದನು. ಆದರೆ ಯೆಹೂದನ ಮನೆಯ
೧೧ ವರು ದಾವೀದನನ್ನು ಹಿಂಬಾಲಿಸಿದರು. ದಾವೀದನು ಹೆಬ್ರೋನಿ
ನಲ್ಲಿ ಯೆಹೂದನ ಮನೆಯವರ ಮೇಲೆ ಅರಸನಾಗಿದ್ದ ದಿವಸಗಳು
ಏಳು ವರುಷ ಆರು ತಿಂಗಳು.
೧೨ ಮತ್ತು ನೇರನ ಮಗನಾಗಿರುವ ಅಬ್ನೇರನೂ ಸೌಲನ ಮಗ
ನಾದ ಇಷ್ಬೋಶೆತನ ಸೇವಕರೂ ಮಹನಾಯಿಮಿನಿಂದ ಹೊರ
೧೩ ಟು, ಗಿಬ್ಯೋನಿಗೆ ಬಂದರು. ಹಾಗೆಯೇ ಚೆರೂಯಳ ಮಗ
ನಾದ ಯೊವಾಬನೂ ದಾವೀದನ ಸೇವಕರೂ ಹೊರಟು, ಗಿಬ್ಯೋ
ನಿನ ಕೆಕೆಯ ಬಳಿಯಲ್ಲಿ ಕೂಡಿ ಬಂದರು; ಅವರು ಕೆಕೆಯ ಅಕ್ಕೆ
ಯಲ್ಲಿಯೂ ಇವರು ಕೆಕೆಯ ಈಚೆಯಲ್ಲಿಯೂ ಇಳ್ದಿದರು.
೧೪ ಆಗ ಅಬ್ನೇರನು ಯೊವಾಬನಿಗೆ, ಪ್ರಾಯಸ್ತರು ಎದ್ದು, ನಮ್ಮ
ಮುಂದೆ ಆಡಲಿ, ಅಂದನು. ಅದಕ್ಕೆ ಯೊವಾಬನು, ಏಳಲಿ, ಅಂ
೧೫ ದನು. ಹಾಗೆಯೇ ಸೌಲನ ಮಗನಾದ ಇಷ್ಬೋಶೆತನ ಕಡೆ
ಯವರಾದ ಬೆನ್ಯಮೀನ್ಯರಲ್ಲಿ ಹನ್ನೆರಡು ಮಂದಿಯೂ ದಾವೀದ
ನ ಸೇವಕರಲ್ಲಿ ಹನ್ನೆರಡು ಮಂದಿಯೂ ಎದ್ದು, ಹೊರಟು, ಒಬ್ಬ
ರ ತಲೆಯನ್ನು ಒಬ್ಬರು ಹಿಡಿದು, ಒಬ್ಬರ ಪಕ್ಕೆಯಲ್ಲಿ ಒಬ್ಬರು
೧೬ ಕತ್ತಿಯನ್ನು ಹಾಕಿ, ಏಕವಾಗಿ ಬಿದ್ದು ಹೋದರು. ಆದದರಿಂದ
ಗಿಬ್ಯೋನಿನಲ್ಲಿರುವ ಆ ಸ್ಥಳಕ್ಕೆ ಹೆಲ್ಕಹ್ಚೂರಿಮ್ ಎಂಬ ಹೆಸರಾ
೧೭ ಯಿತು. ಇದಲ್ಲದೆ ಆ ದಿನವು ಅಘೋರವಾದ ಯುದ್ಧವಾಯಿತು
ಅಬ್ನೇರನೂ ಇಸ್ರಯೇಲ್ ಮನುಷ್ಯರೂ ದಾವೀದನ ಸೇವಕರಿಂ
ದ ಬಡಿಯಲ್ಪಟ್ಟರು.
೧೮ ಮತ್ತು ಚೆರೂಯಳ ಮೂವರು ಮಕ್ಕಳಾದ ಯೊವಾಬನೂ
ಅಬಿಷಯ್ಯನೂ, ಅಸಹೇಲನೂ ಅಲ್ಲಿ ಇದ್ದರು. ಅಸಹೇಲನ
೧೯ ಅಡಿಯ ಜಿಂಕೆಯ ಹಾಗೆ ಪಾದತ್ವರಿತನಾಗಿದ್ದನು. ಅಸಹೇಲ
ನು ಅಬ್ನೇರನನ್ನು ಹಿಂದಟ್ಟಿ, ಅಬ್ನೇರನ ಹಿಂದೆ ಹತ್ತುವದರಲ್ಲಿ
೨೦ ಬಲಗಡೆಗಾದರೂ ಎಡಗಡೆಗಾದರೂ ತೊಲಗದೆ ಇದ್ದನು. ಆದದ
ರಿಂದ ಅಬ್ನೇರನು ಹಿಂದಕ್ಕೆ ತಿರುಗಿ ನೋಡಿ, ನೀನು ಅಸಹೇಲನ
೨೧ ಲ್ಲವೇ! ಅಂದನು. ಅದಕ್ಕವನು, ನಾನೇ, ಅಂದನು. ಆಗ ಅಬ್ನೇ
ರನು ಅವನಿಗೆ, ನೀನು ಬಲಗಡೆಗಾದರೂ ಎಡಗಡೆಗಾದರೂ ತೊ
ಲಗಿ, ಪ್ರಾಯಸ್ತರಲ್ಲಿ ಒಬ್ಬನನ್ನು ಹಿಡಿದು, ಅವನ ಆಯುಧಗ
ಳನ್ನು ತಕ್ಕೋ, ಅಂದನು. ಆದರೆ ಅಸಹೇಲನು ಅವನ ಹಿಂದಿ
೨೨ ನಿಂದ ತೊಲಗಲೊಲ್ಲದೆ ಇದ್ದನು. ಮತ್ತು ಅಬ್ನೇರನು ಅಸಹೇಲ
ನಿಗೆ, ನೀನು ನನ್ನನ್ನು ಹಿಂಬಾಲಿಸುವದನ್ನು ಬಿಟ್ಟು, ತೊಲಗಿ
ಹೋಗು; ನಾನು ನಿನ್ನನ್ನು ನೆಲಕ್ಕೆ ಹೊಡೆದು ಬಿಡುವದು ಯಾ
ಕೆ! ನಾನು ನಿನ್ನ ಸಹೋದರನಾದ ಯೊವಾಬನಿಗೆ ಮುಖ ತೋ
೨೩ ರಿಸುವದು ಹ್ಯಾಗೆ! ಅಂದನು. ಆದರೆ ಅವನು ತೊಲಗುವದಕ್ಕೆ
ಒಪ್ಪದೆ ಹೋದದರಿಂದ, ಅಬ್ನೇರನು ತನ್ನ ಭಲ್ಯದ ಹಿಂಭಾಗದ
ಪೊನೆಯಿಂದ ಅವನ ಪಕ್ಕೆಯ ಐದನೇ ಎಲುಬನ ಸಂದಿನಲ್ಲಿ ಹಾ
ಯ ತಿವಿದನು; ಅವನು ಅಲ್ಲಿ ಬಿದ್ದು, ಅದೇ ಸ್ಥಳದಲ್ಲಿ ಸತ್ತನು.
ಆಗ ಏನಾಯಿತಂದರೆ ಅಸಹೇಲನು ಬಿದ್ದು ಸತ್ತ ಸ್ಥಳಕ್ಕೆ ಬಂದವ
೨೪ ರೆಲ್ಲರು ಅಲ್ಲಿಯೇ ಸುಮ್ಮನೇ ನಿಂತರು. ಆದರೆ ಯೊವಾಬನೂ
ಅಬಿಷಯ್ಯನೂ ಅಬ್ನೇರನನ್ನು ಹಿಂದಟ್ಟಿ, ಸೂರ್ಯ ಅಸ್ತಮಿ
ಸುವ ವರಿಗೆ ಗಿಬ್ಯೋನಿನ ಅರಣ್ಯ ಮಾರ್ಗದ ಅಂಚಾದ ಗೀ
ಹಕ್ಕೆ ಎದುರಾಗಿರುವ ಅಮ್ಮದ ಗುಡ್ಡದ ಮಟ್ಟಿಗೂ ಬಂದರು.
೨೫ ಆಗ ಅಬ್ನೇರನ ಹಿಂದೆ ಬೆನ್ಯಮೀನನ ಮಕ್ಕಳು ಒಂದೇ ಮೊ
ತ್ತವಾಗಿ ಕೂಡಿ ಕೊಂಡು, ಒಂದು ಗುಡ್ಡದ ಶಿಖರದಲ್ಲಿ ನಿಂತಿದ್ದರು.
೨೬ ಆಗ ಅಬ್ನೇರನು ಯೊವಾಬನಿಗೆ, ಕತ್ತಿಯು ಯಾವಾಗ್ಯೂ ತಿಂ
ದು ಬಿಡ ಬೇಕೋ! ಅಂತ್ಯದಲ್ಲಿ ಅದು ಕಹಿಯಾಗಿರುವದೆಂದು,
ನೀವು ಅರಿಯಿರೋ! ತಮ್ಮ ಸಹೋದರರನ್ನು ಹಿಂಬಾಲಿಸುವದ
ನ್ನು ಬಿಟ್ಟು, ಹಿಂದಕ್ಕೆ ತಿರುಗುವ ಹಾಗೆ, ಜನರಿಗೆ ಎಚ್ಚರಿಸುವಂ
೨೭ ತರ ಹೇಳ್ದೆ ಇರುಬೆ! ಎಂದು ಕೂಗಿ ಹೇಳ್ದದನು. ಅದಕ್ಕೆ ಯೊ
ವಾಬನು, ದೇವರ ಜೀವದಾಣೆ—ಉದಯದಲ್ಲಿ ನೀನು ಮಾತಾಡ
ದೆ ಹೋದರೆ, ನಿಶ್ಚಯವಾಗಿ ಜನರಲ್ಲಿ ಪ್ರತಿ ಮನುಷ್ಯನು ತನ್ನ
ಸಹೋದರರ ಹಿಂದಿನಿಂದ ತಿರುಗಿ ಹೋಗುತ್ತಿದ್ದನು, ಅಂದನು.
೨೮ ಮತ್ತು ತುತೂರಿಯನ್ನು ಊದಿದನು. ಆಗ ಜನರೆಲ್ಲರೂ ನಿಂತ
ರು; ಇಸ್ರಯೇಲನ್ನು ಇನ್ನೂ ಹಿಂದಟ್ಟಿಲಿಲ್ಲ, ಇನ್ನೂ ಯುದ್ಧ
ಮಾಡಲಿಲ್ಲ.
೨೯ ಅಬ್ನೇರನೂ ಅವನ ಮನುಷ್ಯರೂ ಆ ರಾತ್ರಿಯೆಲ್ಲಾ ಬೈಲಿ
ನಲ್ಲಿ ನಡೆದು, ಯೊರ್ದನನ್ನು ದಾಟಿ, ಬಿತ್ರೋನೆಲ್ಲಾ ಹಾದು,
೩೦ ಮಹನಾಯಿಮಿಗೆ ಬಂದರು. ಯೊವಾಬನು ಅಬ್ನೇರನ ಹಿಂದಿ
ನಿಂದ ತಿರುಗಿ, ಜನರೆಲ್ಲರನ್ನು ಕೂಡಿಸಿ ಕೊಂಡಾಗ, ದಾವೀದನ
ಸೇವಕರಲ್ಲಿ ಹತ್ತೊಂಭತ್ತು ಮನುಷ್ಯರೂ ಅಸಹೇಲನೂ ಕಡಿಮೆ
೩೧ ಯಾಗಿದ್ದರು. ಆದರೆ ದಾವೀದನ ಸೇವಕರು ಬೆನ್ಯಮೀನ್ಯರಲ್ಲಿ
ಯೂ ಅಬ್ನೇರನ ಮನುಷ್ಯರಲ್ಲಿಯೂ ಮುನ್ನೂರು ಅರವತ್ತು
ಜನರನ್ನು ಹೊಡೆದರು. ಅವರು ಅಸಹೇಲನನ್ನು ಎತ್ತಿ ಕೊಂಡು,
ಬೇತ್ಲೆಹೇಮಿನಲ್ಲಿರುವ ಅವನ ತಂದೆಯ ಸಮಾಧಿಯಲ್ಲಿ ಹೂಣಿ
ಟ್ಟರು. ಮತ್ತು ಯೊವಾಬನೂ ಅವನ ಮನುಷ್ಯರೂ ರಾತ್ರಿಯೆ
ಲ್ಲಾ ನಡೆದು, ಉದಯವಾದಾಗ ಹೆಬ್ರೋನಿಗೆ ಬಂದರು.

## ೩. ಸಂಧಿ.

೧ ಮತ್ತು ಸೌಲನ ಮನೆಗೂ ದಾವೀದನ ಮನೆಗೂ ಬಹು ದಿವಸ
ಯುದ್ಧವು ನಡಿಯಿತು. ದಾವೀದನು ಬಲವಾಗುತ್ತಾ ಬಂದನು. ಆ
೨ ದರೆ ಸೌಲನ ಮನೆಯವರು ದರಿದ್ರರಾಗುತ್ತಾ ಹೋದರು. ಹೆಬ್ರೋ
ನಿನಲ್ಲಿ ದಾವೀದನಿಗೆ ಹುಟ್ಟಿದ ಮಕ್ಕಳು ಯಾರಂದರೆ, ಇಜ್ರೇಲಿ
ಯಳಾದ ಅಹಿನೊವಾಮಳಿಂದ ಹುಟ್ಟಿದ ತನ್ನ ಚೊಚ್ಚಲ ಮಗ
೩ ನಾದ ಅಮ್ನೊನನೂ; ಕರ್ಮೇಲಿಯನಾಗಿರುವ ನಬಾಲನ ಹೆಂಡತಿ
ಯಾದ ಅಬಿಗಾಯಿಲಿಂದ ಹುಟ್ಟಿದ ಅವನ ಎರಡನೇ ಮಗನಾದ
ಕಿಲಾಬನೂ; ಗೆಷೂರಿನ ಅರಸನಾಗಿರುವ ತಲ್ಮಾಯನ ಮಗಳಾ
ದ ಮಾಕಳಿಂದ ಹುಟ್ಟಿದ ಅವನ ಮೂರನೇ ಮಗನಾದ ಅಬ್ಷಲೋ
೪ ಮನೂ; ಹಗ್ಗೀತಳಿಂದ ಹುಟ್ಟಿದ ನಾಲ್ಕನೇ ಮಗನಾದ ಅದೋನಿ
ಯನೂ, ಅಬಿಟಾಲಳಿಂದ ಹುಟ್ಟಿದ ಐದನೇ ಮಗನಾದ ಬೆಷಟ್ಯ
೫ ನೂ; ದಾವೀದನ ಹೆಂಡತಿಯಾದ ಎಗ್ಲಳಿಂದ ಹುಟ್ಟಿದ ಅರನೇ ಮ

ಗನಾದ ಇಟ್ರಾಮನೂ; ಇವರು ಹೆಬ್ರೋನಿನಲ್ಲಿ ದಾವೀದನಿಗೆ ಹುಟ್ಟಿದವರು.

೬ ಸೌಲನ ಮನೆಗೂ ದಾವೀದನ ಮನೆಗೂ ಯುದ್ಧವು ನಡಿಯುತ್ತಿರುವಾಗ, ಏನಾಯಿತಂದರೆ—ಅಬ್ನೇರನು ಸೌಲನ ಮನೆಯ
೭ ಪಕ್ಷದಲ್ಲಿ ತನ್ನನ್ನು ಬಲಿಷ್ಟನಾಗ ಮಾಡಿ ಕೊಂಡನು. ಸೌಲನಿಗೆ ಅಯ್ಯಾಹನ ಮಗಳಾದ ರಿಚ್ಪಳೆಂಬ ಹೆಸರುಳ್ಳ ಒಬ್ಬ ಉಪಪತ್ನಿ ಇದ್ದಳು. ಇಬ್ಬೊಶೆತನು ಅಬ್ನೇರನಿಗೆ, ನೀನು ನನ್ನ
೮ ತಂದೆಯ ಉಪಪತ್ನಿಯ ಬಳಿಗೆ ಪ್ರವೇಶಿಸಿದ್ದೇನು! ಅಂದನು. ಆಗ ಅಬ್ನೇರನು ಇಬ್ಬೊಶೆತನ ಮಾತುಗಳಿಗೆ ಬಹು ಕೋಪಿತನಾಗಿ ಹೇಳಿದ್ದೇನಂದರೆ, ನಾನು ನಿನ್ನನ್ನು ದಾವೀದನ ಕೈಯಲ್ಲಿ ಒಪ್ಪಿಸಿ ಕೊಡದೆ, ಈ ದಿವಸದ ವರಿಗೂ ಯೆಹೂದವನ್ನು ವಿಶ್ವಾಸಿಸಿ, ನಿನ್ನ ತಂದೆಯಾದ ಸೌಲನ ಮನೆಗೂ, ಅವನ ಸಹೋದರರಿಗೂ, ಸ್ನೇಹಿತರಿಗೂ ಕೃಪೆ ತೋರಿಸಿದ ನನ್ನನ್ನು ನೀನು ಈ ಹೊತ್ತು ಈ ಸ್ತ್ರೀಗೋಸ್ಕರ ನನ್ನಲ್ಲಿ ಅಕ್ರಮ ಎಣಿಸುವದಕ್ಕೆ, ನಾನು
೯ ನಾಯಿಯ ತಲೆಯೋ! ನಾನು ಸೌಲನ ಮನೆಯಿಂದ ರಾಜ್ಯವನ್ನು ತಪ್ಪಿಸಿ, ಕರ್ತನು ದಾವೀದನಿಗೆ ಆಣೆ ಇಟ್ಟ ಪ್ರಕಾರವೇ ದಾವೀದನ ಸಿಂಹಾಸನವನ್ನು ದಾನಿನಿಂದ ಬೇರ್ಷೆಬದ ಮಟ್ಟಿಗೂ ಇರುವ ಇಸ್ರಯೇಲಿನ ಮೇಲೆಯೂ ಯೆಹೂದದ ಮೇಲೆಯೂ ಸ್ಥಿರ ಪಡಿಸುವ ಹಾಗೆ, ನಾನು ಮಾಡದೆ ಇದ್ದಕೆ, ದೇವರು ಅಬ್ನೇರನಿಗೆ ಅಪ್ಪಾಗಿಯೂ ಅಧಿಕವಾಗಿಯೂ ಮಾಡಲಿ, ಅಂದನು.
೧೦ ಅವನು ಅಬ್ನೇರನಿಗೆ ಭಯ ಪಟ್ಟಿದ್ದರಿಂದ, ಒಂದು ಮಾತಾದರೂ ಪ್ರತ್ಯುತ್ತರ ಹೇಳಲಾರದೆ ಇದ್ದನು.

೧೧ ಆಗ ಅಬ್ನೇರನು ತನ್ನ ಹೆಸರಿನಲ್ಲಿ ದಾವೀದನ ಬಳಿಗೆ ದೂತರನ್ನು ಕಳುಹಿಸಿ, ದೇಶವು ಯಾರದೆಂದೂ, ನೀನು ನನ್ನ ಸಂಗಡ ಒಡಂಬಡಿಕೆಯನ್ನು ಮಾಡು; ಆಗ, ಇಗೋ, ಇಸ್ರಯೇಲನೆಲ್ಲಾ ನಿನ್ನ ಬಳಿಗೆ ಬರ ಮಾಡುವ ಹಾಗೆ, ನನ್ನ ಕೈ ನಿನ್ನ ಸಂಗಡ ಇರುವದೆಂದೂ ಹೇಳು, ಅಂದನು. ಅದಕ್ಕವನು, ಒಳ್ಳೇದು ನಾನು ನಿನ್ನ
೧೩ ಸಂಗಡ ಒಡಂಬಡಿಕೆಯನ್ನು ಮಾಡುವೆನು; ಆದರೆ ಒಂದು ಕಾರ್ಯ ನಿನ್ನನ್ನು ಕೇಳುತ್ತೇನೆ; ಏನಂದರೆ, ನೀನು ನನ್ನ ಮುಖವನ್ನು ನೋಡ ಬರುವಾಗ, ಮುಂದೆ ಸೌಲನ ಮಗಳಾದ ಮೀಕಳನ್ನು ಕರಕೊಂಡು ಬಾರದೆ ಹೋದರೆ, ನೀನು ನನ್ನ ಮುಖವನ್ನು ನೋ
೧೪ ರುವದಿಲ್ಲ, ಅಂದನು. ಮತ್ತು ದಾವೀದನು ಸೌಲನ ಮಗನಾದ ಇಬ್ಬೊಶೆತನ ಬಳಿಗೆ ದೂತರನ್ನು ಕಳುಹಿಸಿ, ಫಿಲಿಷ್ಟ್ಯರ ನೂರು ಮುಂದೊಗಲುಗಳಿಂದ ನನಗೆ ನೇಮಕ ಮಾಡಿ ಕೊಂಡ ನನ್ನ
೧೫ ಹೆಂಡತಿಯಾದ ಮೀಕಳನ್ನು ನನಗೆ ಒಪ್ಪಿಸು, ಅಂದನು. ಆಗ ಇಬ್ಬೊಶೆತನು ಸೇವಕರನ್ನು ಕಳುಹಿಸಿ, ಲಯಿಷನ ಮಗನಾಗಿರುವ ಅವಳ ಗಂಡನಾದ ಪತ್ತಿಯೇಲನಿಂದ ಅವಳನ್ನು ತೆ
೧೬ ಗೆದು ಕೊಂಡನು. ಅವಳ ಗಂಡನು ಅವಳ ಸಂಗಡ ಬಹೂರಿಮಿನವರಿಗೂ ಅಳುತ್ತಾ ಅವಳ ಹಿಂದೆ ಬಂದನು. ಆಗ ಅಬ್ನೇರನು ಅವನಿಗೆ, ತಿರುಗಿ ಹೋಗು, ಅಂದನು; ಅವನು ತಿರುಗಿ ಹೋದನು.

೧೭ ಮತ್ತು ಅಬ್ನೇರನು ಇಸ್ರಯೇಲಿನ ಹಿರಿಯರ ಸಂಗಡ ಮಾತಾಡಿ ಹೇಳ್ದಿದ್ದೇನಂದರೆ, ದಾವೀದನು ನಿಮ್ಮ ಮೇಲೆ ಅರಸನಾಗಿರುವದಕ್ಕೆ ನೀವು ನಿನ್ನೆಯೂ ಮೊನ್ನೆಯೂ ಹುಡುಕುತ್ತಿದ್ದಿರಿ.
೧೮ ಆದರೆ ಈಗ ಅದನ್ನು ಮಾಡಿರಿ; ಯಾಕಂದರೆ, ನಾನು ನನ್ನ ಜನರಾದ ಇಸ್ರಯೇಲನ್ನು ಫಿಲಿಷ್ಟ್ಯರ ಕೈಗೂ ಅವರ ಸಮಸ್ತ ಶತ್ರುಗಳ ಕೈಗೂ ನನ್ನ ದಾಸನಾದ ದಾವೀದನ ಕೈಯಿಂದ ತಪ್ಪಿಸಿ ರಕ್ಷಿಸುವೆನೆಂದು, ಕರ್ತನು ದಾವೀದನಿಗೋಸ್ಕರ ಹೇಳಿದ್ದಾನೆ,
೧೯ ಅಂದನು. ಇದಲ್ಲದೆ ಅಬ್ನೇರನು ಬೆನ್ಯಮಿನನವರ ಸಂಗಡ ಮಾತಾಡಿದನು. ಮತ್ತು ಅಬ್ನೇರನು ಇಸ್ರಯೇಲ್ಯರ ದೃಷ್ಟಿಗೂ ಬೆನ್ಯಮಿನನ ಮನೆಯವರೆಲ್ಲರ ದೃಷ್ಟಿಗೂ ಬಲ್ಲೇದಾಗಿ ಹೋರಿದ್ದನೆಲ್ಲಾ ದಾವೀದನಿಗೆ ತಿಳಿಸುವದಕ್ಕೆ ಹೆಬ್ರೋನಿಗೆ ಹೋದನು.
೨೦ ಹೀಗೆಯೇ ಅಬ್ನೇರನು, ತನ್ನ ಸಂಗಡ ಇಪ್ಪತ್ತು ಜನರನ್ನು ಕರಕೊಂಡು, ಹೆಬ್ರೋನಿನಲ್ಲಿರುವ ದಾವೀದನ ಬಳಿಗೆ ಬಂದನು. ದಾವೀದನು ಅಬ್ನೇರನಿಗೂ ಅವನ ಸಂಗಡ ಬಂದ ಮನುಷ್ಯರಿಗೂ ಔತಣ ಮಾಡಿಸಿದನು. ಆಗ ಅಬ್ನೇರನು ದಾವೀದನಿಗೆ ಸಮಸ್ತ
೨೧ ಇಸ್ರಯೇಲ್ಯರು ನಿನ್ನ ಸಂಗಡ ಒಡಂಬಡಿಕೆಯನ್ನು ಮಾಡುವ ಹಾಗೆಯೂ, ನಿನ್ನ ಪ್ರಾಣವು ಇಚ್ಛೈಸಿದ ಹಾಗೆ ಸಮಸ್ತರ ಮೇಲೆ ಆಳುವ ಹಾಗೆಯೂ, ನಾನು ಎದ್ದು, ಹೋಗಿ, ಸಮಸ್ತ ಇಸ್ರಯೇಲನ್ನು ಅರಸನಾದ ನನ್ನ ಕರ್ತನ ಬಳಿಗೆ ಕೂಡಿಸಿ ಕೊಡುವ ಬರುವೆನು, ಅಂದನು. ದಾವೀದನು ಅಬ್ನೇರನಿಗೆ ಅಪ್ಪಣೆ ಕೊಟ್ಟಿದ್ದರಿಂದ, ಅವನು ಸಮಾಧಾನವಾಗಿ ಹೋದನು.

೨೨ ಆಗ, ಇಗೋ, ದಾವೀದನ ಸೇವಕರೂ ಯೊವಾಬನೂ ಒಂದು ಗುಂಪಿನಿಂದ ಬಹಳ ಕೊಳ್ಳೆಯನ್ನು ತಕ್ಕೊಂಡು ಬಂದರು. ಆದರೆ, ಅಬ್ನೇರನು ಹೆಬ್ರೋನಿನಲ್ಲಿ ದಾವೀದನ ಸಂಗಡ ಇರಲಿಲ್ಲ; ಯಾಕಂದರೆ ಅವನು ಇವನನ್ನುಕಳುಹಿಸಿ ಬಿಟ್ಟಿದ್ದರಿಂದ, ಇವನು
೨೩ ಸಮಾಧಾನವಾಗಿ ಹೋದನು. ಯೊವಾಬನೂ ಅವನ ಸಂಗಡ ಇದ್ದ ಕಾಣುವೆಯೂ ಬಂದಾಗ, ಅವರು ಯೊವಾಬನ ಸಂಗಡ ನೇರನ ಮಗನಾದ ಅಬ್ನೇರನು ಅರಸನ ಬಳಿಗೆ ಬಂದನು; ಅವನು ಇವನನ್ನು ಕಳುಹಿಸಿ ಬಿಟ್ಟಿದ್ದರಿಂದ, ಸಮಾಧಾನವಾಗಿ ಹೋಗಿ
೨೪ ದ್ದಾನೆ, ಅಂದರು. ಆಗ ಯೊವಾಬನು ಅರಸನ ಬಳಿಗೆ ಬಂದು, ಹೇಳ್ದಿದ್ದೇನಂದರೆ, ಏನು ಮಾಡಿದಿ! ಇಗೋ, ಅಬ್ನೇರನು ನಿನ್ನ ಬಳಿಗೆ ಬಂದನು. ಅವನು ಹೋಗಲೇ ಹೋಗುವ ಹಾಗೆ, ನೀನು
೨೫ ಅವನನ್ನು ಕಳುಹಿಸಿ ಬಿಟ್ಟದ್ದು ಯಾಕೆ! ನೇರನ ಮಗನಾದ ಅಬ್ನೇರನನ್ನು ನೀನರಿಯಾ! ನಿಶ್ಚಯವಾಗಿ ಅವನು ನಿನ್ನನ್ನು ಮೋಸಗೊಳಿಸಲೂ, ನಿನ್ನ ಹೊರಡುವಿಕೆಯನ್ನೂ ಬರುವಿಕೆಯನ್ನೂ ತಿಳಿಯಲೂ, ನೀನು ಮಾಡುವದನ್ನೆಲ್ಲಾ ತಿಳಿಯಲೂ ಬಂದಿದ್ದನು, ಅಂದನು.

೨೬ ಯೊವಾಬನು ದಾವೀದನನ್ನು ಬಿಟ್ಟು ಹೊರಟು, ಅಬ್ನೇರನ ಹಿಂದೆ ದೂತರನ್ನು ಕಳುಹಿಸಿದನು; ಅವರು ಅವನನ್ನು ಸೀರದ ಭಾವಿಯಿಂದ ತಿರಿಗಿ ಕರಕೊಂಡು ಬಂದರು. ಆದರೆ ದಾವೀದನಿಗೆ ತಿಳಿಯದೆ ಇತ್ತು. ಅಬ್ನೇರನು ಹೆಬ್ರೋನಿಗೆ ತಿರಿಗಿ ಬಂದ
೨೭ ತರುವಾಯ, ಯೊವಾಬನು ಬಾಗಲಲ್ಲಿ ಅವನ ಸಂಗಡ ಸಮಾಧಾನವಾಗಿ ಮಾತಾಡ ಅವನನ್ನು ಒಂದು ಕಡೆ ಕರಕೊಂಡು ಹೋಗಿ, ತನ್ನ ತಮ್ಮನಾದ ಅಸಹೇಲನ ರಕ್ತಾಪರಾಧದ ನಿಮಿತ್ತ ಅಲ್ಲಿ ಅವನ ಪಕ್ಕೆಯ ಐದನೇ ಎಲುಬಿನಲ್ಲಿ ಇರಿದು, ಕೊಂದು ಹಾಕಿದನು.

೨೮ ದಾವೀದನು ಅದನ್ನು ಕೇಳ್ದಿದಾಗ ಹೇಳ್ದಿದ್ದೇನಂದರೆ, ನೇರನ ಮಗನಾದ ಅಬ್ನೇರನ ರಕ್ತಾಪರಾಧಕ್ಕೆ ನಾನೂ ನನ್ನ ರಾಜ್ಯವೂ ಯುಗ ಯುಗಾಂತರಕ್ಕೂ ಕರ್ತನ ಮುಂದೆ ನಿರಪರಾಧವಾಗಿ
೨೯ ದ್ದೇವೆ. ಅದು ಯೊವಾಬನ ತಲೆಯ ಮೇಲೆಯೂ, ಅವನ ತಂದೆಮನೆಯೆಲ್ಲಾದರ ಮೇಲೆಯೂ ನಿಂತಿರಲಿ. ಯೊವಾಬನ ಮನೆಯಲ್ಲಿ ಕುಸುಮ ಕೋಗದವನೂ, ಕುಷ್ಠಕೋಗಿಯೂ, ಕೋಲು ಹಿಡಿದು ನಡಿಯುವವನೂ, ಕತ್ತಿಯಿಂದ ಬೀಳುವವನೂ, ಕೊಟ್ಟಿ
೩೦ ಕೊರತೆಯವನೂ ಎಂದಿಗೂ ನಿಂತು ಹೋಗದೆ ಇರಲಿ, ಅಂದನು. ಹೀಗೆಯೇ ಯೊವಾಬನೂ ಅವನ ಸಹೋದರನಾದ ಅಬಿಷಯ್ಯನೂ, ಗಿಬ್ಯೋನಿನ ಯುದ್ಧದಲ್ಲಿ ಅಬ್ನೇರನು ತಮ್ಮ ತಮ್ಮನಾದ ಅಸಹೇಲನನ್ನು ಕೊಂದು ಹಾಕಿದ್ದರಿಂದ, ಅವನನ್ನು ಕೊಂದು
೩೧ ಹಾಕಿದರು. ಆಗ ದಾವೀದನು ಯೊವಾಬನಿಗೂ ಅವನ ಸಂಗಡಲಿದ್ದ ಸಮಸ್ತ ಜನರಿಗೂ, ನೀವು ನಿಮ್ಮ ವಸ್ತ್ರಗಳನ್ನು ಹರು ಕೊಂಡು, ಗೋಣಿ ಶಟ್ಟುಗಳನ್ನು ಉಟ್ಟು ಕೊಂಡು, ಅಬ್ನೇರನಿಗೆ ಮುಂದಾಗಿ ಗೋಳಾಡಿರಿ, ಅಂದನು. ಅರಸನಾದ ದಾವೀದನು ಅವನ ಶೇದಿಗೆಯ
೩೨ ಹಿಂದೆ ಹೋದನು. ಅವರು ಅಬ್ನೇರನನ್ನು ಹೆಬ್ರೋನಿನಲ್ಲಿ ಹೂಣಿಡುವಾಗ, ಅರಸನು ತನ್ನ ಕಬ್ಬವನ್ನೆತ್ತಿ, ಅಬ್ನೇರನ ಸಮಾಧಿ
೩೩ ಯ ಬಳಿಯಲ್ಲಿ ಅತ್ತನು; ಜನರೆಲ್ಲರು ಅತ್ತರು. ಅರಸನು ಅಬ್ನೇರನಿಗೋಸ್ಕರ ಗೋಳಾಡಿ, ಹೇಳ್ದಿದ್ದೇನಂದರೆ,

೩೪ ಬುದ್ಧಿಹೀನನು ಸತ್ತ ಹಾಗೆಯೇ ಅಬ್ನೇರನು ಸತ್ತನೋ!
ನಿನ್ನ ಕೈಯಿಗಳು ಕಟ್ಟಲ್ಪಡಲಿಲ್ಲ,
ನಿನ್ನ ಕಾಲುಗಳು ಸಂಕೋಲೆ ಹಾಕಲ್ಪಡಲಿಲ್ಲ,
ಒಬ್ಬನು ದುರ್ಮಾರ್ಗರ ಮುಂದೆ ಸಾಯುವ ಹಾಗೆಯೇ
ನೀನು ಸತ್ತಿ.

ಆಗ ಜನರೆಲ್ಲರು ಮತ್ತೂ ಅವನಿಗೋಸ್ಕರ ಅತ್ತರು. ಇನ್ನೂ ಹೊತ್ತಿರುವಾಗ್ಯೆ, ಜನರೆಲ್ಲರು ಬಂದು, ಭೋಜನ ಎಂದು
೩೫ ದಾವೀದನಿಗೆ ಹೇಳ್ದಿದಾಗ; ದಾವೀದನು, ಸೂರ್ಯನು ಅಸ್ತಮಿಸುವದಕ್ಕಿಂತ ಮುಂಚೆ, ನಾನು ಕೊಟ್ಟಿಯನ್ನಾದರೂ ಮತ್ತೇನಾದರೂ ರುಚಿ ನೋಡಿದರೆ, ದೇವರು ನನಗೆ ಇಚ್ಛಾಗಿಯೂ
೩೬ ಅಧಿಕವಾಗಿಯೂ ಮಾಡಲೆಂದು, ಆಣೆ ಇಟ್ಟು, ಹೇಳ್ದಿದನು ಜನರೆಲ್ಲರು ತಿಳ್ದಿದು ಕೊಂಡಾಗ, ಅವರ ಕಣ್ಣುಗಳಿಗೆ ಬಲ್ಲೇದಾಗಿ ಕಾಣಿಸಿತು. ಹಾಗೆಯೇ ಅರಸನು ಏನೇನು ಮಾಡಿದನೋ, ಅದು
೩೭ ಜನರ ಕಣ್ಣುಗಳಿಗೆ ಬಲ್ಲೇದಾಗಿ ಕಾಣಿಸಿತು. ಯಾಕಂದರೆ ನೇರನ ಮಗನಾದ ಅಬ್ನೇರನನ್ನು ಕೊಂದು ಹಾಕಿದ್ದು ಅರಸನಿಂದ ಅದದ್ದಲ್ಲವೆಂದು, ಸಮಸ್ತ ಜನರೂ ಸಮ
೩೮ ಸ್ತ ಇಸ್ರಯೇಲ್ಯರೂ ಆ ದಿವಸದಲ್ಲಿ ತಿಳ್ದು ಕೊಂಡರು. ಇದಲ್ಲದೆ ಅರಸನು ತನ್ನ ಸೇವಕರಿಗೆ, ಇಸ್ರಯೇಲಿನಲ್ಲಿ ಈ ಹೊತ್ತು ಪ್ರ
೩೯ ಧಾನನೂ ದೊಡ್ಡವನೂ ಬಿದ್ದಿದ್ದಾನೆಂದು ಅರಿಯಿರಾ! ನಾನು ಅರಸನಾಗಿ ಅಭಿಷೇಕಿಸಲ್ಪಟ್ಟಿದ್ದರೂ ಇಂದಿಗೆ ದುರ್ಬಲನಾಗಿದ್ದೇನೆ. ಚೆರೂಯಳ್ಳ ಕುಮಾರರಾದ ಈ ಮನುಷ್ಯರು ನನಗೆ ಕಠಿಣರಾಗಿದ್ದಾರೆ. ಕೆಟ್ಟತನ ಮಾಡುವವನಿಗೆ ಕರ್ತನು ಅವನ ಕೆಟ್ಟತನಕ್ಕೆ ಸರಿಯಾಗಿ ಬದಲು ಕೊಡುವನು, ಅಂದನು.

## ೪. ಸಂಧಿ.

೧ ಅಬ್ನೇರನು ಹೆಬ್ರೋನಿನಲ್ಲಿ ಸತ್ತು ಹೋದನೆಂದು ಸೌಲನ ಮಗನು ಕೇಳ್ದಿದಾಗ, ಅವನ ಕೈಗಳು ದುರ್ಬಲವಾದವು; ಮತ್ತು
೨ ಇಸ್ರಯೇಲ್ಯರೆಲ್ಲರು ಶಲ್ಲಣ ಪಟ್ಟರು. ಆದರೆ ಸೌಲನ ಮಗನಿಗೆ ಸೈನ್ಯಾಧಿಪತಿಗಳಾದ ಇಬ್ಬರು ಮನುಷ್ಯರಿದ್ದರು; ಒಬ್ಬನ ಹೆಸರು ಬಾಣನು, ಮತ್ತೊಬ್ಬನ ಹೆಸರು ರೆಕಾಬನು; ಅವರು ಬೆನ್ಯಮಿನನ ಮಕ್ಕಳಲ್ಲಿ ಬೆರೋತ್ಯಕೊಳ್ಳಗೆ ಒಬ್ಬನ ಮಗನಾದ ರಿಮ್ಮೋನನ
೩ ನ ಮಕ್ಕಳು. ಯಾಕಂದರೆ ಬೆರೋತು ಬೆನ್ಯಮಿನನ ಚಾಲಿನಲ್ಲಿ ಲೆಖ್ಖಿಸಲ್ಪಟ್ಟಿತ್ತು. ಆದರೆ ಬೆರೋತ್ಯರು ಗಿತ್ತಾಯಕ್ಕೆ ಓಡಿ ಹೋಗಿ, ಇಂದಿನ ವರಿಗೂ ಅಲ್ಲಿ ವಾಸವಾಗಿದ್ದರು.

೪ ಆದರೆ ಸೌಲನ ಮಗನಾದ ಯೊನತಾನನಿಗೆ ಕಾಲು ಕುಂಟಾದ ಒಬ್ಬ ಮಗನಿದ್ದನು. ಇಜ್ರೇಲಿನಿಂದ ಸೌಲನೂ ಯೊನತಾನನೂ ಸತ್ತರೆಂಬುವ ವರ್ತಮಾನ ಬಂದಾಗ, ಅವನು ಐದು ವರುಷದವನಾಗಿದ್ದನು. ಆಗ ಅವನ ದಾದಿಯು ಅವನನ್ನು ಎತ್ತಿ ಕೊಂಡು, ಓಡಿ ಹೋದಳು. ಅವಳು ತ್ವರೆಯಾಗಿ ಓಡಿದಾಗ, ಏನಾಯಿತಂದರೆ, ಅವನು ಬಿದ್ದು, ಕುಂಟನಾದನು. ಅವನ ಹೆಸರು ಮೆಫಿಬೋಷೆತನು.

೫ ಬೆರೋತ್ಯನ ಮಗನಾಗಿರುವ ರಿಮ್ಮೋನನ ಮಕ್ಕಳಾದ ರೆಕಾಬನೂ ಬಾಣನೂ ಹೊರಟು, ಬಿಸಲು ಬೇಳೆಯಲ್ಲಿ, ಮಧ್ಯಾನ್ಹದಲ್ಲಿ ಮಂಚದ ಮೇಲೆ ಮಲಗಿ ಕೊಂಡಿರುವ ಇಬ್ಬೊಶೆತನ ಮನೆ
೬ ಗೆ ಬಂದು, ಗೋಧಿಯನ್ನು ತಕ್ಕೊಂಡು ಹೋಗುವವರಾಗಿ ನಡುಮನೆಯೊಳಗೆ ಬಂದು, ಅವನ ಐದನೇ ಎಲುಬಿನ ಸಂದಿನಲ್ಲಿ ತಿವಿದರು. ರೆಕಾಬನೂ ಅವನ ಸಹೋದರನಾದ ಬಾಣನೂ ತಪ್ಪಿಸಿ
೭ ಕೊಂಡು, ಹೋದರು. ಯಾಕಂದರೆ ಅವರು ಮನೆಯೊಳಗೆ ಪ್ರವೇಶಿಸಿದಾಗ, ಅವನು ಮಲಗುವ ಮನೆಯಲ್ಲಿ ತನ್ನ ಹಾಸಿಕೆಯ ಮೇಲೆ ಮಲಗಿದ್ದನು; ಇವರು ಅವನನ್ನು ಹೊಡೆದು, ಕೊಂದು ಹಾಕಿ, ತಲೆಯನ್ನು ಕಡಿದು, ಅದನ್ನು ತೆಗೆದು ಕೊಂಡು, ರಾತ್ರಿಯೆಲ್ಲಾ ಬೈಲಿನಲ್ಲಿ ನಡೆದು, ಹೆಬ್ರೋನಿನಲ್ಲಿರುವ ದಾವೀದನ ಬಳಿಗೆ ಇಬ್ಬೊಶೆತನ ತಲೆಯನ್ನು ತಂದು, ಅರಸನಿಗೆ, ಇಗೋ, ನಿನ್ನ ಪ್ರಾಣವನ್ನು ಹುಡುಕಿದ ನಿನ್ನ ಶತ್ರುವಾಗಿದ್ದ ಸೌಲನ ಮಗನಾದ ಇಬ್ಬೊಶೆತನ ತಲೆಯು. ಈ ದಿನದಲ್ಲಿ ಕರ್ತನು ಅರಸನಾದ ನಮ್ಮ ಸ್ವಾಮಿಗೋಸ್ಕರ ಸೌಲನಿಗೂ ಅವನ ಬೀಜಕ್ಕೂ ಮುಯ್ಯಿಗೆ ಮುಯ್ಯಿ ಕೊಟ್ಟಿದ್ದಾನೆ, ಅಂದರು.

೮ ಆಗ ದಾವೀದನು ಬೆರೋತ್ಯನ ಮಗನಾಗಿರುವ ರಿಮ್ಮೋನನ ಮಕ್ಕಳಾದ ರೆಕಾಬನಿಗೂ ಅವನ ಸಹೋದರನಾದ ಬಾಣನಿಗೂ ಪ್ರತ್ಯುತ್ತರವಾಗಿ ಹೇಳ್ದಿದ್ದೇನಂದರೆ, ಎಲ್ಲಾ ಇಕ್ಕಟ್ಟಿನಿಂದ ನನ್ನ ಪ್ರಾಣವನ್ನು ಬಿಡೋಚಿಸಿದ ಕರ್ತನ ಜೀವದಾಣೆ—ತನ್ನ ಕಣ್ಣಿ
೯ ಗೆ ಸುವರ್ತಮಾನ ಎಂದು ಕಾಣಿಸಿ ಕೊಂಡವನಾಗಿ, ನಾನು ತನ್ನ ವರ್ತಮಾನಕ್ಕೋಸ್ಕರ ಬಹು ಮಾನವನ್ನು ಕೊಡುವೆನೆಂದು ನೆನಸಿ, ಒಬ್ಬನು ನನಗೆ, ಇಗೋ, ಸೌಲನು ಸತ್ತನೆಂದು ಹೇಳ್ದಿದ್ದರಿಂದ, ನಾನು ಚಿಕ್ಲಾಗಿನಲ್ಲಿ ಅವನನ್ನು ಹಿಡಿದು, ಕೊಂದು ಹಾಕಿ
೧೦ ದರೆ, ತನ್ನ ಮನೆಯಲ್ಲಿ ತನ್ನ ಹಾಸಿಕೆಯ ಮೇಲೆ ಮಲಗಿದ್ದ ನೀತಿವಂತನನ್ನು ಕೊಲೆ ಮಾಡಿದ ದುಷ್ಟ ಮನುಷ್ಯರನ್ನು ಎಷ್ಟು ಅಧಿಕವಾಗಿ ಕೊಲೆ ಮಾಡುವೆನು! ಹಾಗಾದರೆ—ಈಗ ನಾನು ನಿಮ್ಮ ಕೈಯಿಂದ ಅವನ ರಕ್ತ ವಿಚಾರಣೆ ಮಾಡಿ, ನಿಮ್ಮನ್ನು ಭೂಮಿ
೧೧ ಯಿಂದ ನಿರ್ಮೂಲ ಮಾಡದೆ ಇರುವೆನೋ! ಮತ್ತು ದಾವೀದನು ತನ್ನ ಪ್ರಾಯಸ್ತರಿಗೆ ಆಜ್ಞಾಪಿಸಿದ್ದರಿಂದ, ಅವರು ಅವರನ್ನು ಕೊಂದು ಹಾಕಿ, ಅವರ ಕೈ ಕಾಲುಗಳನ್ನು ಕೊಯಿದು, ಹೆಬ್ರೋ

ನಿನಲ್ಲಿರುವ ಭಾವಿಯ ಬಳಿಯಲ್ಲಿ ತೂಗ ಹಾಕಿದರು. ಮತ್ತು ಅ
ವರು ಇಬ್ಬೋಬದತನ ತಲೆಯೆನ್ನು ತಕ್ಕೊಂಡು, ಅದನ್ನು ಹೆ
ಬ್ರೋನಿನಲ್ಲಿರುವ ಅಬ್ಬೋಶನ ಸಮಾಧಿಯಲ್ಲಿ ಹೂಣಿಟ್ಟರು.

## ೫. ಸಂಧಿ.

೧ ಆ ಕಾಲದಲ್ಲಿ ಇಸ್ರಯೇಲ ಕುಲಗಳೆಲ್ಲಾ ಹೆಬ್ರೋನಿನಲ್ಲಿರುವ
ದಾವೀದನ ಬಳಿಗೆ ಬಂದು, ಹೇಳಿದ್ದೇನಂದರೆ—ಇಗೋ, ನಾವು ನಿ
೨ ನ್ನು ಎಲುವೂ ನಿನ್ನ ಮಾಂಸವೂ ಆಗಿದ್ದೇವೆ. ಇದಲ್ಲದೆ ಪೂರ್ವದ
ಲ್ಲಿ ಸೌಲನು ನಮ್ಮ ಮೇಲೆ ಅರಸನಾಗಿದ್ದಾಗ, ನೀನು ಇಸ್ರಯೇ
ಲನ್ನು ಹೊರಗೆ ನಡಿಸುವವನಾಗಿಯೂ ಒಳಗೆ ತರುವವನಾಗಿ
ಯೂ ಇದ್ದಿ. ಅದರಿಂದ ಕರ್ತನು ನಿನಗೆ, ನೀನು ನನ್ನ ಜನ
ವಾದ ಇಸ್ರಯೇಲನ್ನು ಮೇಯಿಸುವಿ; ಇಸ್ರಯೇಲಿನ ಮೇಲೆ ನಾ
೩ ಯಕನಾಗಿರುವಿ ಎಂದು ಹೇಳಿದನು, ಅಂದರು. ಹಾಗೆಯೇ ಇಸ್ರ
ಯೇಲಿನ ಹಿರಿಯರೆಲ್ಲರೂ ಹೆಬ್ರೋನಿನಲ್ಲಿರುವ ಅರಸನ ಬಳಿಗೆ
ಬಂದದರಿಂದ, ಅರಸನಾದ ದಾವೀದನು ಹೆಬ್ರೋನಿನಲ್ಲಿ ಕರ್ತನ
ಮುಂದೆ ಅವರ ಸಂಗಡ ಒಡಂಬಡಿಕೆಯನ್ನು ಮಾಡಿದನು. ಅವ
ರು ದಾವೀದನನ್ನು ಇಸ್ರಯೇಲಿನ ಮೇಲೆ ಅರಸನಾಗಿರ ಅಭಿಷೇ
೪ ಕ ಮಾಡಿದರು. ದಾವೀದನು ಆಳ್ವಿಕೆ ಪ್ರಾರಂಭಿಸಿದಾಗ, ಮೂವ
೫ ತ್ತು ವರುಷದವನಾಗಿದ್ದನು; ನಾಲ್ವತ್ತು ವರುಷ ಆಳಿದನು. ಅವ
ನು ಹೆಬ್ರೋನಿನಲ್ಲಿ ಯೆಹೂದ ಜನರ ಮೇಲೆ ಏಳುವರೆ ವರುಷ
ಆಳಿದನು; ಯೆರೂಸಲೇಮಿನಲ್ಲಿ ಸಮಸ್ತ ಇಸ್ರಯೇಲ್ಯರ ಮೇಲೆ
ಯೂ, ಸಮಸ್ತ ಯೆಹೂದ ಜನರ ಮೇಲೆಯೂ ಮೂವತ್ತು ವ
ರುಷ ಆಳಿದನು.

೬ ಆಗ ಅರಸನೂ ಅವನ ಮನುಷ್ಯರೂ ದೇಶದ ನಿವಾಸಿಗಳಾದ
ಯೆಬೂಸ್ಯರ ಬಳಿಗೆ, ಯೆರೂಸಲೇಮಿಗೆ ಬಂದರು. ದಾವೀದನು
ಇದರಲ್ಲಿ ಬರಲಾರನೆಂದು ಅವರು ನೆನೆಸಿ, ದಾವೀದನಿಗೆ, ನೀನು
ಕುರುಡರನ್ನೂ ಕುಂಟರನ್ನೂ ತೆಗೆದು ಹಾಕಿದರೆ ಹೊರ್ತಾಗಿ,
೭ ನೀನು ಇಲ್ಲಿಗೆ ಬರುವದಕ್ಕಿಲ್ಲ, ಅಂದರು. ಆದಾಗ್ಯೂ ದಾವೀದ
ನು ಚಿಯೋನಿನ ಕೋಟೆಯನ್ನು ಹಿಡಿದನು. ಅದೇ ದಾವೀದನ
೮ ಪಟ್ಟಣವು. ಯಾಕಂದರೆ ಆ ದಿವಸದಲ್ಲಿ ದಾವೀದನು, ಕಂದಕವನ್ನು
ದಾಟಿ, ಯೆಬೂಸ್ಯರನ್ನೂ ದಾವೀದನ ಪ್ರಾಣ ದ್ವೇಷಿಗಳಾದ
ಕುಂಟರನ್ನೂ ಕುರುಡರನ್ನೂ ಹೊಡೆಯುವವನ್ಯಾರು! ಅಂದನು.
ಅದದರಿಂದ ಕುರುಡರೂ ಕುಂಟರೂ ಮನೆಗೆ ಬರ ಕೂಡದು, ಅಂ
ದರು.

೯ ಮತ್ತು ದಾವೀದನು ಕೋಟೆಯಲ್ಲಿ ವಾಸ ಮಾಡಿ, ಅದಕ್ಕೆ ದಾ
ವೀದನ ಪಟ್ಟಣವೆಂದು ಹೆಸರಿಟ್ಟನು. ಇದಲ್ಲದೆ ದಾವೀದನು ಮಿಲ್ಲೋ
ವಿನ ಸುತ್ತಲಾಗಿ ಪ್ರಾರಂಭಿಸಿ, ಒಳ ಪಾರ್ಶ್ವದಲ್ಲಿ ಇರುವದನ್ನು
೧೦ ಕಟ್ಟಿಸಿದನು. ಹೀಗೆಯೇ ದಾವೀದನು ದಿನ ದಿನಕ್ಕೆ ದೊಡ್ಡವನಾ
ಗುತ್ತಾ ಇದ್ದನು; ಸೈನ್ಯಗಳ ದೇವರಾದ ಕರ್ತನು ಅವನ ಸಂಗಡ
ಇದ್ದನು.

೧೧ ಆಗ ಜೋರಿನ ಅರಸನಾದ ಹಿರಾಮನು ದಾವೀದನ ಬಳಿಗೆ
ದೂತರನ್ನೂ, ದೇವದಾರು ಮರಗಳನ್ನೂ, ಬಡಿಗೆಯವರನ್ನೂ,
ಕಲ್ಲು ಕುಟಿಗರನ್ನೂ ಕಳುಹಿಸಿದನು. ಅವರು ದಾವೀದನಿಗೆ ಮನೆ
೧೨ ಯನ್ನು ಕಟ್ಟಿದರು. ದಾವೀದನು ತನ್ನನ್ನು ಕರ್ತನು ಇಸ್ರಯೇ
ಲಿನ ಮೇಲೆ ಅರಸನಾಗ ಸ್ಥಿರ ಪಡಿಸಿದನೆಂದೂ, ತನ್ನ ಜನವಾದ
ಇಸ್ರಯೇಲಿನ ನಿಮಿತ್ತ ತನ್ನ ರಾಜ್ಯವನ್ನು ಎಬ್ಬಿಸಿದನೆಂದೂ ತಿಳಿದು
ಕೊಂಡನು.

೧೩ ಹೆಬ್ರೋನನ್ನು ಬಿಟ್ಟು ಹೋದ ತರುವಾಯ, ದಾವೀದನು
ಯೆರೂಸಲೇಮಿನಿಂದ ಇನ್ನೂ ಕೆಲವು ಮಂದಿ ಉಪಪತ್ನಿಗಳನ್ನೂ
ಹೆಂಡತಿಯರನ್ನೂ ತಕ್ಕೊಂಡನು; ದಾವೀದನಿಗೆ ಇನ್ನೂ ಕುಮಾರ
೧೪ ರೂ ಕುಮಾರ್ತೆಗಳೂ ಹುಟ್ಟಿದರು. ಯೆರೂಸಲೇಮಿನಲ್ಲಿ ಅವ
ನಿಗೆ ಹುಟ್ಟಿದವರ ಹೆಸರುಗಳು ಯಾವವಂದರೆ—ಷಮೂವನೂ,
೧೫ ಷೊಬಾಬನೂ, ನತಾನನೂ, ಸೊಲೊಮೋನನೂ, ಇಭಾರನೂ,
೧೬ ಎಲಿಷೂವನೂ, ನೆಫೆಗನೂ, ಯಫೀಯನೂ, ಎಲಿಷಾಮನೂ,
ಎಲ್ಯಾದನೂ, ಎಲಿಫೆಲೆಟನೂ.

೧೭ ಅವರು ದಾವೀದನನ್ನು ಇಸ್ರಯೇಲಿನ ಮೇಲೆ ಅರಸನಾಗ ಅಭಿ
ಷೇಕ ಮಾಡಿದ್ದಾಕೆಂದು ಫಿಲಿಷ್ಟ್ಯರು ಕೇಳಿದಾಗ, ಅವಕ್ಕೆಲ್ಲರು
ದಾವೀದನನ್ನು ಹುಡುಕ ಬಂದರು. ಅದನ್ನು ದಾವೀದನು ಕೇಳಿ
೧೮ ದಾಗ ಗಢೀ ಸ್ಥಳಕ್ಕೆ ಇಳಿದು ಹೋದನು. ಆದರೆ ಫಿಲಿಷ್ಟ್ಯರು
ಬಂದು, ರೆಫಯೀಮಿನ ತಗ್ಗಿನಲ್ಲಿ ಇಳುಕೊಂಡರು. ಆಗ ದಾವೀ
೧೯ ದನು, ನಾನು ಫಿಲಿಷ್ಟ್ಯರ ಮೇಲೆ ಹೋಗ ಬೇಕೋ! ಅವರನ್ನು
ನನ್ನ ಕೈಯಲ್ಲಿ ಒಪ್ಪಿಸಿ ಕೊಡುವಿಯೋ! ಎಂದು ಕರ್ತನನ್ನು
ಕೇಳಿದನು. ಅದಕ್ಕೆ ಕರ್ತನು ದಾವೀದನಿಗೆ, ಹೋಗು; ಯಾಕಂ
ದರೆ ಫಿಲಿಷ್ಟ್ಯರನ್ನು ನಿನ್ನ ಕೈಯಲ್ಲಿ ಒಪ್ಪಿಸಿ ಕೊಡಲೇ ಕೊಡು
೨೦ ವೆನೆಂದು, ಹೇಳಿದನು. ಅದುಕಾರಣ ದಾವೀದನು ಬಾಳ್ ಪೆರಾಜೀ
ಮಿಗೆ ಬಂದು, ಅಲ್ಲಿ ಅವರನ್ನು ಹೊಡೆದು, ನೀರು ಕಟ್ಟಿ ಒಡೆದು
ಹರಿಯುವ ಹಾಗೆ, ಕರ್ತನು ನನ್ನ ಮುಂದೆ ನನ್ನ ಶತ್ರುಗಳ ಮೇ
ಲೆ ಹರಿದು ಬಿದ್ದಿದ್ದಾನೆಂದು ಹೇಳಿ, ಆ ಸ್ಥಳಕ್ಕೆ ಬಾಳ್ ಪೆರಾಜೀಮು
೨೧ ಎಂದು ಹೆಸರಿಟ್ಟನು. ಅಲ್ಲಿ ಫಿಲಿಷ್ಟ್ಯರು ತಮ್ಮ ವಿಗ್ರಹಗಳನ್ನು
ಬಿಟ್ಟು ಹೋದದರಿಂದ, ದಾವೀದನೂ ಅವನ ಮನುಷ್ಯರೂ ಅ
ವುಗಳನ್ನು ತಕ್ಕೊಂಡು ಹೋದರು.

೨೨ ಫಿಲಿಷ್ಟ್ಯರು ತಿರಿಗಿ ಬಂದು, ರೆಫಯೀಮಿನ ತಗ್ಗಿನಲ್ಲಿ ವಿಸ್ತಾರ
೨೩ ವಾಗಿ ಇಳುಕೊಂಡರು. ದಾವೀದನು ಕರ್ತನನ್ನು ಕೇಳಿ ಕೊಂ
ಡಾಗ, ಆತನು ಅವನಿಗೆ, ನೀನು ಏರ ಹೋಗದೆ, ಅವರ ಹಿಂದಗ
ಡೆ ಸುತ್ತಿ ಕೊಂಡು ಹೋಗಿ, ಹಿಪ್ಪಲಿ ಗಿಡಗಳ ಗೆದುರಾಗಿ ಅವರ
೨೪ ಮೇಲೆ ಬರ ಬೇಕು. ಹಿಪ್ಪಲಿ ಗಿಡಗಳ ಶಿಖರಗಳಲ್ಲಿ ನಡೆದು
ಬರುವ ಶಬ್ದವನ್ನು ನೀನು ಕೇಳಿದಾಗ, ಎಚ್ಚರ ಪಡ ಬೇಕು;
ಯಾಕಂದರೆ ಆಗಲೇ ಕರ್ತನು ಫಿಲಿಷ್ಟ್ಯರ ದಂಡನ್ನು ಹೊಡೆಯ
೨೫ ನಿನ್ನ ಮುಂದಾಗಿ ಹೊರಡುವನು, ಅಂದನು. ಆಗ ದಾವೀದನು
ಕರ್ತನು ತನಗೆ ಆಜ್ಞಾಪಿಸಿದ ಪ್ರಕಾರ ಮಾಡಿ, ಗೇಬದಿಂದ ಗೇಜ
ರಿನ ಪರ್ಯಂತರ ಫಿಲಿಷ್ಟ್ಯರನ್ನು ಹೊಡೆದನು.

## ೬. ಸಂಧಿ.

೧ ಮತ್ತು ದಾವೀದನು ಇಸ್ರಯೇಲಿನಲ್ಲಿ ಆಯ್ದಪ್ಪಟ್ಟ ಮೂವತ್ತು
ಸಾವಿರ ಜನರನ್ನು ಕೂಡಿಸಿ ಕೊಂಡು, ಎದ್ದು, ತನ್ನ ಸಂಗಡ ಇ
೨ ದ್ದ ಸಮಸ್ತ ಜನರನ್ನು ಕರ ಕೊಂಡು, ಕೆರೂಬಿಗಳ ಮಧ್ಯದಲ್ಲಿ
ವಾಸವಾಗಿರುವ ಸೈನ್ಯಗಳ ಕರ್ತನೆಂಬ ಹೆಸರುಳ್ಳ ದೇವರ ಪೆಟ್ಟಿ
ಗೆಯನ್ನು ಯೆಹೂದದ ಬಾಳೆಯಿಂದ ತರುವದಕ್ಕೆ ಹೊರಟನು.
೩ ಆಗಲವರು ಗಿಬ್ಯದಲ್ಲಿರುವ ಅಬಿನದಾಬನ ಮನೆಯೊಳಗಿಂದ
ದೇವರ ಪೆಟ್ಟಿಗೆಯನ್ನು ತೆಗೆದು ಕೊಂಡು, ಹೊಸ ರಥದ ಮೇಲೆ



ಏರಿಸಿದರು. ಮತ್ತು ಅಬಿನದಾಬನ ಮಕ್ಕಳಾದ ಉಜ್ಜನೂ ಅಹಿ
೪ ಯೋನೂ ಆ ಹೊಸ ರಥವನ್ನು ನಡಿಸಿದರು. ಗಿಬ್ಯದಲ್ಲಿದ್ದ ಅ
ಬಿನದಾಬನ ಮನೆಯೊಳಗಿಂದ ಹೊರಗೆ ತಂದು, ಅವರು ಅದರ
ಸಂಗಡ ಹೋಗುತ್ತಿರುವಾಗ, ಅಹಿಯೋನು ಪೆಟ್ಟಿಗೆಯ ಮುಂದೆ
೫ ನಡೆದನು. ದಾವೀದನೂ ಇಸ್ರಯೇಲ ಮನೆಯವರೆಲ್ಲರೂ ತುರಾ
ಯಿ ಮರದಿಂದ ಮಾಡಲ್ಪಟ್ಟ ಸಕಲ ವಿಧ ವಾದ್ಯಗಳಾದ ಕಿನ್ನರಿಗ
ಳನ್ನೂ, ವೀಣೆಗಳನ್ನೂ, ದಮ್ಮುಡಿಗಳನ್ನೂ, ಸ್ವರಮಂಡಲಗಳ
ನ್ನೂ, ತಾಳಗಳನ್ನೂ ಕರ್ತನ ಮುಂದೆ ಬಾರಿಸಿ ಕೊಳ್ಳುತ್ತಾ
ಹೋದರು.

೬ ಅವರು ನಕೋನನ ಕಣದ ಬಳಿಗೆ ಬಂದಾಗ, ಉಜ್ಜನು ದೇವ
ರ ಪೆಟ್ಟಿಗೆಯನ್ನು ಹಿಡಿಯುವದಕ್ಕೆ ತನ್ನ ಕೈ ಚಾಚಿದನು;
೭ ಯಾಕಂದರೆ ಎತ್ತುಗಳು ಎಡವಿದವು. ಆಗ ಕರ್ತನ ಕೋಪವು
ಉಜ್ಜನ ಮೇಲೆ ಉರಿಯಿತು; ದೇವರು ಅವನ ಅಪರಾಧಕ್ಕೋಸ್ಕ
ರ ಅವನನ್ನು ಹೊಡೆದನು; ಅಲ್ಲಿ ಅವನು ದೇವರ ಪೆಟ್ಟಿಗೆಯ
೮ ಬಳಿಯಲ್ಲಿ ಸತ್ತನು. ಕರ್ತನು ಉಜ್ಜನನ್ನು ಹರಿದು ಬಿಟ್ಟದ್ದರಿಂ
ದ, ದಾವೀದನು ಕೋಪ ಗೊಂಡು, ಆ ಸ್ಥಳಕ್ಕೆ ಇಂದಿನ ವರಿಗೂ
ಪೆರಜೂಜ್ಜಿನೆಂದು ಹೆಸರಿಟ್ಟನು.

೯ ದಾವೀದನು ಆ ದಿನ ಕರ್ತನಿಗೆ ಭಯ ಪಟ್ಟು, ಕರ್ತನ ಪೆಟ್ಟಿ
೧೦ ಗೆಯು ನನ್ನ ಬಳಿಗೆ ಬರುವದು ಹ್ಯಾಗೆ! ಅಂದನು. ದಾವೀದನು
ಕರ್ತನ ಪೆಟ್ಟಿಗೆ ತನಗೆ ದಾವೀದನ ಪಟ್ಟಣಕ್ಕೆ ತರ ಮನಸ್ಸಿಲ್ಲದೆ,
ಗಿತ್ತಿಯನಾದ ಒಬೆದೆದೋಮನ ಮನೆಗೆ ತೊಲಗಿಸಿ ಕೇರಿಸಿದನು.
ಕರ್ತನ ಪೆಟ್ಟಿಗೆಯು ಗಿತ್ತಿಯನಾದ ಒಬೆದೆದೋಮನ ಮನೆಯ
೧೧ ಲ್ಲಿ ಮೂರು ತಿಂಗಳು ಇದ್ದದರಿಂದ, ಕರ್ತನು ಒಬೆದೆದೋಮನ
ನೂ ಅವನ ಮನೆಯೆಲ್ಲನ್ನೂ ಆಶೀರ್ವದಿಸಿದನು.

೧೨ ದೇವರ ಪೆಟ್ಟಿಗೆಯ ನಿಮಿತ್ತ ಕರ್ತನು ಒಬೆದೆದೋಮನ ಮ
ನೆಯನ್ನೂ ಅವನಿಗೆ ಉಂಟಾದದ್ದೆಲ್ಲವನ್ನೂ ಆಶೀರ್ವದಿಸಿದ್ದಾ
ನೆಂದು, ಅರಸನಾದ ದಾವೀದನಿಗೆ ತಿಳಿಸಲ್ಪಟ್ಟಿತು. ಆಗ ದಾವೀದ
ನು ಹೊರಟು ಹೋಗಿ, ದೇವರ ಪೆಟ್ಟಿಗೆಯನ್ನು ಒಬೆದೆದೋಮನ
ಮನೆಯಿಂದ ದಾವೀದನ ಪಟ್ಟಣಕ್ಕೆ ಸಂತೋಷವಾಗಿ ತರ ಮಾಡಿ
೧೩ ದನು. ಕರ್ತನ ಪೆಟ್ಟಿಗೆಯನ್ನು ಹೊತ್ತು ಕೊಂಡು ಹೋಗುವವ
ರು ಆರು ಹೆಜ್ಜೆ ನಡೆದಾಗ, ಅವನು ಎತ್ತುಗಳನ್ನೂ ಕೊಬ್ಬಿದ
೧೪ ಪಶುಗಳನ್ನೂ ಬಲಿಯಾಗಿ ಕೊಟ್ಟನು. ಇದಲ್ಲದೆ ದಾವೀದನು
ಮಡಿ ಏಫೋದನ್ನು ಧರಿಸಿ ಕೊಂಡು, ತನ್ನ ಪೂರ್ಣ ಬಲದಿಂದ
೧೫ ಕರ್ತನ ಮುಂದೆ ನಾಟ್ಯವಾಡಿದನು. ಈ ಪ್ರಕಾರ ದಾವೀದನೂ
ಇಸ್ರಯೇಲ ಮನೆಯವರೆಲ್ಲರೂ ಕರ್ತನ ಪೆಟ್ಟಿಗೆಯನ್ನು ಜಯ
ಧ್ವನಿಯಿಂದಲೂ ತುತೂರಿಯ ಶಬ್ದದಿಂದಲೂ ಬರ ಮಾಡಿದರು.

೧೬ ಆದರೆ ಕರ್ತನ ಪೆಟ್ಟಿಗೆಯು ದಾವೀದನ ಪಟ್ಟಣದಲ್ಲಿ ಪ್ರವೇಶಿಸು
ವಾಗ, ಸೌಲನ ಮಗಳಾದ ಮೀಕಳು ಕಿಟಕಿಯಿಂದ ನೋಡಿ, ಅ
ರಸನಾದ ದಾವೀದನು ಕರ್ತನ ಮುಂದೆ ಹಾರಿ ನಾಟ್ಯವಾಡುವದ
ನ್ನು ಕಂಡು, ತನ್ನ ಹೃದಯದಲ್ಲಿ ಅವನನ್ನು ತಿರಸ್ಕರಿಸಿದಳು.
೧೭ ಅವರು ಕರ್ತನ ಪೆಟ್ಟಿಗೆಯನ್ನು ಒಳಗೆ ತಂದು, ಅದಕ್ಕೆ ದಾವೀ
ದನು ಹಾಕಿದ ಗುಡಾರದೊಳಗೆ ಅದರ ಸ್ಥಳದಲ್ಲಿ ಅದನ್ನು ಇಟ್ಟ
ತರುವಾಯ, ದಾವೀದನು ಕರ್ತನ ಸನ್ನಿಧಿಯಲ್ಲಿ ಹೋಮಗಳ
೧೮ ನ್ನೂ ಸಮಾಧಾನದ ಬಲಿಗಳನ್ನೂ ಅರ್ಪಿಸಿದನು. ದಾವೀದನು
ಹೋಮಗಳನ್ನೂ ಸಮಾಧಾನದ ಬಲಿಗಳನ್ನೂ ಅರ್ಪಿಸಿ ತೀರಿಸಿ
೧೯ ದ ತರುವಾಯ, ಸೈನ್ಯಗಳ ಕರ್ತನ ಹೆಸರಿನಲ್ಲಿ ಜನರನ್ನು ಆ
ಶೀರ್ವದಿಸಿ, ಜನರಿಗೆಲ್ಲಾ, ಇಸ್ರಯೇಲಿನ ಸಮೂಹಕ್ಕೆಲ್ಲಾ, ಸ್ತ್ರೀ
ಪುರುಷರಾದ ಒಬ್ಬೊಬ್ಬರಿಗೆ ಒಂದು ಕೊಟ್ಟಿ ತಂಡನ್ನೂ, ಒಂ
ದು ದೊಡ್ಡ ತುಂಡು ಮಾಂಸವನ್ನೂ, ಒಂದು ಪೀಸೆ ದ್ರಾಕ್ಷೇ ರಸ
ವನ್ನೂ ಪಾಲಿಟ್ಟನು. ತರುವಾಯ ಜನರೆಲ್ಲರೂ ತಮ್ಮ ತಮ್ಮ
೨೦ ಮನೆಗಳಿಗೆ ಹೋದರು. ಆಗ ದಾವೀದನು ತನ್ನ ಮನೆಯನ್ನು
ಆಶೀರ್ವದಿಸುವದಕ್ಕೆ ತಿರುಗಿದಾಗ, ಸೌಲನ ಮಗಳಾದ ಮೀಕ
ಳು ದಾವೀದನಿಗೆ ಎದುರಾಗಿ ಬಂದು, ನಿಷ್ಪ್ರಯೋಜಕ ಮನುಷ್ಯ
ರಲ್ಲಿ ಒಬ್ಬನು ನಾಚಿಕೆ ಇಲ್ಲದೆ ತನ್ನ ವಸ್ತ್ರಗಳನ್ನು ಬಿಚ್ಚಿ ಹಾಕಿ
ದ ಹಾಗೆಯೇ ಈ ಹೊತ್ತು ತನ್ನ ಸೇವಕರ ದಾಸಿಗಳ ಕಣ್ಣು
ಮುಂದೆ ತನ್ನ ವಸ್ತ್ರಗಳನ್ನು ಬಿಚ್ಚಿ ಹಾಕಿದ್ದ ಇಸ್ರಯೇಲಿನ ಅರ
೨೧ ಸನು ಈ ಹೊತ್ತು ಎಷ್ಟು ಘನ ಪಟ್ಟಿದ್ದನು! ಅಂದಳು. ಆದರೆ
ದಾವೀದನು ಮೀಕಳಿಗೆ, ನಿನ್ನ ತಂದೆಗಿಂತಲೂ ಅವನ ಮನೆಯ
ವರೆಲ್ಲರಿಗಿಂತಲೂ ನನ್ನನ್ನು, ಕರ್ತನ ಜನರಾದ ಇಸ್ರಯೇಲಿನ
ಮೇಲೆ ನಾಯಕನಾಗ ನೇಮಿಸುವ ಹಾಗೆ, ಆರಿಸ ಕೊಂಡ ಕರ್ತ
೨೨ ನ ಸಮುಖದ ಮುಂದೆಯೇ ಆಯಿತು. ನಾನು ಕರ್ತನ ಮುಂದೆ
ಆಡುವೆನು. ಇನ್ನೂ ಇದಕ್ಕಿಂತ ಅಲ್ಪನಾಗಿ ಇರುವೆನು; ನನ್ನ
ದೃಷ್ಟಿಯಲ್ಲಿ ನೀಚನಾಗಿರುವೆನು. ಆದರೆ ನೀನು ಹೇಳಿದ ದಾಸಿ
ಗಳಿಂದ, ನಿಶ್ಚಯವಾಗಿ ಅವರಿಂದ ಘನವನ್ನು ಹೊಂದುವೆನು,
೨೩ ಅಂದನು. ಆದದರಿಂದ ಸೌಲನ ಮಗಳಾದ ಮೀಕಳು ತನ್ನ ಮ
ರಣ ದಿವಸದ ಮಟ್ಟಿಗೂ ಮಕ್ಕಳಿಲ್ಲದವಳಾಗಿದ್ದಳು.

## ೭. ಸಂಧಿ.

೧ ಕರ್ತನು ಅರಸನಿಗೆ ಅವನ ಸುತ್ತಲಿದ್ದ ಎಲ್ಲಾ ಶತ್ರುಗಳಿಂದ ತ
ಪ್ಪಿಸಿ, ವಿಶ್ರಾಂತಿಯನ್ನು ಕೊಟ್ಟ ತರುವಾಯ, ಅರಸನು ತನ್ನ
೨ ಮನೆಯಲ್ಲಿ ವಾಸವಾಗಿದ್ದಾಗ, ಏನಾಯಿತಂದರೆ, ಅರಸನು ಪ್ರವಾ
ದಿಯಾದ ನತಾನನಿಗೆ—ನೋಡು, ನಾನು ದೇವದಾರುಗಳ ಮನೆ
ಯಲ್ಲಿ ವಾಸವಾಗಿದ್ದೇನೆ; ಆದರೆ ದೇವರ ಪೆಟ್ಟಿಗೆಯು ತೆರೆಗಳ
೩ ಮಧ್ಯದಲ್ಲಿ ವಾಸವಾಗಿದೆ, ಅಂದನು. ಆಗ ನತಾನನು ಅರಸನಿ
ಗೆ, ನೀನು ಹೋಗಿ, ನಿನ್ನ ಹೃದಯದಲ್ಲಿರುವದನ್ನೆಲ್ಲಾ ಮಾಡು;
ಯಾಕಂದರೆ ಕರ್ತನು ನಿನ್ನ ಸಂಗಡ ಇದ್ದಾನೆ, ಅಂದನು.

೪ ಆ ರಾತ್ರಿಯಲ್ಲಿ ಏನಾಯಿತಂದರೆ, ಕರ್ತನ ವಾಕ್ಯವು ನತಾನ
೫ ನಿಗೆ ಉಂಟಾಗಿ, ಹೇಳಿದ್ದೇನಂದರೆ—ನೀನು ಹೋಗಿ, ನನ್ನ ಸೇವಕ
ನಾದ ದಾವೀದನ ಸಂಗಡ ಕರ್ತನು ಹೇಳ ಬೇಕಾದದ್ದೇನಂದರೆ,
ನಾನು ವಾಸವಾಗಿರ ನೀನು ನನಗೆ ಮನೆಯನ್ನು ಕಟ್ಟುವಿಯೋ!
೬ ನಿಶ್ಚಯವಾಗಿ ನಾನು ಐಗುಪ್ತದಿಂದ ಇಸ್ರಯೇಲ ಮಕ್ಕಳನ್ನು ಬ
ರ ಮಾಡಿದ ಕಾಲ ಮೊದಲುಗೊಂಡು ಇಂದಿನ ವರಿಗೂ ಮನೆಯ
ಲ್ಲಿ ವಾಸ ಮಾಡದೆ, ಗುಡಾರದಲ್ಲಿಯೂ ತಂಗುವ ಸ್ಥಳದಲ್ಲಿಯೂ
೭ ವಾಸ ಮಾಡಿ ಕೊಂಡಿದ್ದೆನು. ನಾನು ಇಸ್ರಯೇಲ್ಯರಾದ ನನ್ನ
ಜನವನ್ನು ಮೇಯಿಸ ಆಜ್ಞಾಪಿಸಿದ ಇಸ್ರಯೇಲಿನ ಒಂದು ಕುಲದ
ವರ ಸಂಗಡಲಾದರೂ ನೀವು ನನಗೆ ದೇವದಾರುಗಳ ಮನೆಯ
ನ್ನು ಕಟ್ಟದೆ ಇರುವದೇನೆಂದು, ನಾನು ಇಸ್ರಯೇಲ ಮಕ್ಕಳೆಲ್ಲರ
ಸಂಗಡ ನಡೆಯುತ್ತಿದ್ದ ಯಾವ ಸ್ಥಳದಲ್ಲಾದರೂ ಏನಾದರೂ ಹೇ
೮ ಳಿದೆನೋ! ಈಗ ನೀನು ನನ್ನ ಸೇವಕನಾದ ದಾವೀದನಿಗೆ ಹೇಳ
ಬೇಕಾದದ್ದೇನಂದರೆ, ನೀನು ನನ್ನ ಜನರಾದ ಇಸ್ರಯೇಲ್ಯರ ಮೇಲೆ

ನಾಯಕನಾಗಿರ ನಾನು ಕುರಿಗಳ ಹಿಂದೆ ನಡೆದ ನಿನ್ನನ್ನು ಕುರಿ
೯ ಯ ಹಟ್ಟಿಯಿಂದ ತೆಗೆದು ಕೊಂಡೆನು; ನೀನು ಎಲ್ಲಿ ಹೋದರೂ,
ಅಲ್ಲಿ ನಿನ್ನ ಸಂಗಡಲಿದ್ದು, ನಿನ್ನ ಶತ್ರುಗಳೆಲ್ಲರನ್ನು ನಿನ್ನ ಮುಂ
ದೆ ಕಡಿದು ಬಿಟ್ಟು, ಭೂಮಿಯಲ್ಲಿರುವ ದೊಡ್ಡವರ ಹೆಸರಿನ ಹಾಗೆ
೧೦ ದೊಡ್ಡ ಹೆಸರನ್ನು ನಿನಗೆ ಉಂಟು ಮಾಡಿದೆನು. ಇದಲ್ಲದೆ ನಾ
ನು ನನ್ನ ಜನರಾದ ಇಸ್ರಯೇಲ್ಯರಿಗೆ ಒಂದು ಸ್ಥಳವನ್ನು ಏರ್ಪಡಿ
ಸಿ, ಅವರು ಇನ್ನು ಮೇಲೆ ಚಲಿಸದೆ, ಸ್ವಸ್ಥಳದಲ್ಲಿ ವಾಸವಾಗಿರು
ವ ಹಾಗೆ, ಅವರನ್ನು ನೆಡುವೆನು. ಪೂರ್ವದ ಹಾಗೆಯೂ, ನಾ
ನು ನನ್ನ ಜನವಾದ ಇಸ್ರಯೇಲಿನ ಮೇಲೆ ನ್ಯಾಯಾಧಿಪತಿಗಳ
ನ್ನು ನೇಮಿಸಿದ ದಿವಸದಿಂದಾದ ಹಾಗೆಯೂ ಅನ್ಯಾಯದ ಮಕ್ಕ
೧೧ ಳು ಇನ್ನು ಮೇಲೆ ಅವರನ್ನು ಕುಂದಿಸದೆ ಇರುವರು. ನಿನ್ನನ್ನು
ನಿನ್ನ ಸಮಸ್ತ ಶತ್ರುಗಳಿಗೆ ತಪ್ಪಿಸಿ, ನಿನಗೆ ವಿಶ್ರಾಂತಿಯನ್ನು ಉಂ
೧೨ ಟು ಮಾಡಿದೆನು. ಇದಲ್ಲದೆ ಕರ್ತನು ನಿನಗೆ ತಿಳಿಸುವದೇನಂದ
ರೆ—ನಾನು ನಿನಗೆ ಮನೆಯನ್ನು ಉಂಟು ಮಾಡುವೆನು. ಮತ್ತು
ನಿನ್ನ ದಿವಸಗಳು ಪೂರ್ತಿಯಾಗಿ, ನೀನು ನಿನ್ನ ಪಿತೃಗಳ ಸಂ
ಗಡ ಮಲಗಿ ಕೊಂಡಿರುವಾಗ, ನಿನ್ನ ಕರುಳುಗಳಿಂದ ಹೊರಡುವ
ನಿನ್ನ ಬೀಜವನ್ನು ನಿನ್ನ ತರುವಾಯ ಎಬ್ಬಿಸಿ, ನಾನು ಅವನ
೧೩ ರಾಜ್ಯವನ್ನು ಸ್ಥಿರ ಮಾಡುವೆನು. ಅವನು ನನ್ನ ಹೆಸರಿಗೆ ಮನೆ
ಯನ್ನು ಕಟ್ಟುವನು; ನಾನು ಅವನ ರಾಜ್ಯದ ಸಿಂಹಾಸನವನ್ನು
೧೪ ಯುಗ ಯುಗಾಂತರಕ್ಕೆ ಸ್ಥಿರ ಮಾಡುವೆನು. ನಾನು ಅವನಿಗೆ
ತಂದೆಯಾಗಿರುವೆನು; ಅವನು ನನಗೆ ಮಗನಾಗಿರುವನು. ಅವ
ನು ಅಕ್ರಮ ಮಾಡಿದರೆ, ನಾನು ಅವನನ್ನು ಮನುಷ್ಯರ ಕೋ
ಲಿನಿಂದಲೂ ಮನುಷ್ಯರ ಮಕ್ಕಳ ಬೆಬ್ಬೆಗಳಿಂದಲೂ ದಂಡಿಸುವೆ
೧೫ ನು. ಆದರೆ ನಾನು ನಿನ್ನ ಮುಂದೆ ತೊರೆದು ಬಿಟ್ಟ ಸೌಲನಿಂದ
ನನ್ನ ಕೃಪೆಯನ್ನು ನಾನು ತೊಲಗಿಸಿದ ಹಾಗೆ, ಅವನಿಂದ ತೊಲ
೧೬ ಗಿಸುವದಿಲ್ಲ. ನಿನ್ನ ಮನೆಯೂ ನಿನ್ನ ರಾಜ್ಯವೂ ನಿನ್ನ ಮುಂದೆ
ಯುಗ ಯುಗಾಂತರಕ್ಕೆ ಸ್ಥಿರ ಮಾತಲ್ಪಟುವವು; ನಿನ್ನ ಸಿಂಹಾ
೧೭ ಸನವು ಯುಗ ಯುಗಾಂತರಕ್ಕೆ ಶಾಶ್ವತವಾಗಿರುವದು. ನತಾನ
ನು ಈ ಸಕಲ ವಾಕ್ಯಗಳ ಪ್ರಕಾರವಾಗಿಯೂ ಸಕಲ ದರ್ಶನದ
ಪ್ರಕಾರವಾಗಿಯೂ ದಾವೀದನ ಸಂಗಡ ಮಾತಾಡಿದನು.

೧೮ ಆಗ ಅರಸನಾದ ದಾವೀದನು ಒಳಗೆ ಪ್ರವೇಶಿಸಿ, ಕರ್ತನ
ಮುಂದೆ ನಿಂತು, ಹೇಳಿದ್ದೇನಂದರೆ, ಕರ್ತನಾದ ಯೆಹೋವನೇ,
ನನ್ನನ್ನು ನೀನು ಇದ್ದ ಪರ್ಯಂತರಕ್ಕೂ ತಂದದ್ದಕ್ಕೆ ನಾನು
೧೯ ಎಷ್ಟರವನು? ನನ್ನ ಮನೆ ಎಷ್ಟರದು? ಕರ್ತನಾದ ಯೆಹೋವ
ನೇ, ಇದು ನಿನ್ನ ಕಣ್ಣುಗಳಿಗೆ ಅಲ್ಪ ಕಾರ್ಯವಾಗಿ ಕಾಣಿಸಿದ್ದರಿಂ
ದ, ಮುಂದೆ ಬರುವ ಬಹು ಕಾಲದ ಮಾತು ನಿನ್ನ ದಾಸನ ಮನೆ
ಯನ್ನು ಕುರಿತು ಹೇಳಿದಿ. ಕರ್ತನಾದ ಯೆಹೋವನೇ, ಇದು
೨೦ ಮನುಷ್ಯನ ನ್ಯಾಯವೋ! ದಾವೀದನು ಇನ್ನೂ ನಿನಗೆ ಹೆಚ್ಚಾ
೨೧ ಗಿ ಹೇಳಿ ಕೊಳ್ಳುವದೇನು! ಯಾಕಂದರೆ ನೀನು ನಿನ್ನ ದಾಸನ
ನ್ನು ಬಲ್ಲೆ; ಕರ್ತನಾದ ಯೆಹೋವನೇ, ನಿನ್ನ ವಾಕ್ಯದ ನಿಮಿತ್ತ
ವಾಗಿಯೂ, ನಿನ್ನ ಹೃದಯದ ಪ್ರಕಾರವಾಗಿಯೂ, ನಿನ್ನ ದಾ
ಸನಿಗೆ ತಿಳಿಯ ಮಾಡುವ ಹಾಗೆ, ಈ ದೊಡ್ಡ ಕಾರ್ಯಗಳನ್ನೆಲ್
೨೨ ಲಾ ಮಾಡಿದಿ. ಆದದರಿಂದ, ಕರ್ತನಾದ ಯೆಹೋವನೇ, ನೀನು
ದೊಡ್ಡವನಾಗಿದ್ದೀ; ಯಾಕಂದರೆ, ನಾವು ನಮ್ಮ ಕಿವಿಗಳಿಂದ ಕೇ
ಳಿದ ಎಲ್ಲಾದರ ಪ್ರಕಾರ, ನಿನ್ನ ಹಾಗೆ ಯಾವನೂ ಇಲ್ಲ; ನಿನ್ನ
೨೩ ಹೊರತು ದೇವರು ಯಾವನೂ ಇಲ್ಲ. ಭೂಲೋಕದಲ್ಲಿ ನಿನ್ನ
ಜನಕ್ಕೆ, ಇಸ್ರಯೇಲಿಗೆ ಸಮಾನವಾದ ಜನಾಂಗ ಯಾವದು!
ಅವರನ್ನು ಸ್ವಜನರಾಗಿ ವಿಮೋಚಿಸಲೂ, ತನಗೆ ಹೆಸರನ್ನು
ಮಾಡಿ ಕೊಳ್ಳಲೂ ದೇವರು ಹೋದನು; ಅವರಿಗೋಸ್ಕರ—ನಿ
ನ್ನ ದೇಶಕ್ಕೆ, ಏಗುಪ್ತದಿಂದ—ಜನಾಂಗಗಳಿಂದಲೂ ಅವರ ದೇವ
ರುಗಳಿಂದಲೂ ವಿಮೋಚಿಸಿದ ನಿನ್ನ ಜನರ ಮುಂದೆ, ಈ ದೊಡ್ಡ
ವುಗಳಾದ ಭಯಂಕರವಾದ ಕಾರ್ಯಗಳನ್ನು ಮಾಡುವದಕ್ಕಾಗಿ
೨೪ ಯೇ. ಇಸ್ರಯೇಲ್ ಜನವನ್ನು ಯುಗ ಯುಗಾಂತರಕ್ಕೆ ನಿನ್ನ
ಜನವಾಗಿರುವ ಹಾಗೆ, ನಿನಗೆ ಸ್ಥಿರ ಪಡಿಸಿದಿ; ಯೆಹೋವನಾದ
೨೫ ನೀನು ಅವರಿಗೆ ದೇವರಾಗಿದ್ದೀ. ಈಗ, ಯೆಹೋವನಾದ ದೇವ
ರೇ, ನೀನು ನಿನ್ನ ದಾಸನನ್ನು ಕುರಿತೂ ಅವನ ಮನೆಯನ್ನು
ಕುರಿತೂ ಹೇಳಿದ ವಾಕ್ಯವನ್ನು ಯುಗ ಯುಗಾಂತರಕ್ಕೆ ಸ್ಥಿರ
೨೬ ಪಡಿಸಿ, ನೀನು ಹೇಳಿದ ಹಾಗೆಯೇ ಮಾಡು. ಸೈನ್ಯಗಳ ಕರ್ತನು
ಇಸ್ರಯೇಲಿನ ಮೇಲೆ ದೇವರಾಗಿದ್ದಾನೆಂದು, ಯುಗ ಯುಗಾಂತ
ರಕ್ಕೆ ನಿನ್ನ ನಾಮ ಮಹಿಮೆ ಪಡಲಿ. ಇದಲ್ಲದೆ ನಿನ್ನ ದಾಸನಾ
೨೭ ದ ದಾವೀದನ ಮನೆ ನಿನ್ನ ಮುಂದೆ ಸ್ಥಿರ ಪಟ್ಟಿರಲಿ. ಯಾಕಂದ
ರೆ ಸೈನ್ಯಗಳ ಕರ್ತನೇ, ಇಸ್ರಯೇಲಿನ ದೇವನೇ, ನಾನು ನಿನಗೆ
ಮನೆಯನ್ನು ಕಟ್ಟುವೆನೆಂದು, ನಿನ್ನ ದಾಸನ ಕಿವಿಗೆ ಕೇಳಿಸ ಮಾ
ಡಿದ್ದರಿಂದ, ನಿನ್ನನ್ನು ಕುರಿತು ಈ ಪ್ರಾರ್ಥನೆಯನ್ನು ಪ್ರಾರ್ಥಿ
೨೮ ಸ ನಿನ್ನ ದಾಸನ ಹೃದಯದಲ್ಲಿ ಧೈರ್ಯ ದೊರಕಿತು. ಈಗ
ಕರ್ತನಾದ ಯೆಹೋವನೇ, ನೀನೇ ದೇವರಾದವನು; ನಿನ್ನ ವಾ
ಕ್ಯಗಳು ಸತ್ಯವು; ನಿನ್ನ ದಾಸನಿಗೆ ಈ ಒಳ್ಳೇ ಮಾತನ್ನು ಹೇ
೨೯ ಳಿದಿ. ಆದಕಾರಣ ಈಗ ನಿನ್ನ ದಾಸನ ಮನೆ ನಿನ್ನ ಮುಂದೆ
ಯುಗ ಯುಗಾಂತರಕ್ಕೆ ಇರುವ ಹಾಗೆ, ಅದನ್ನು ಆಶೀರ್ವದಿಸ
ನಿನಗೆ ಚಿತ್ತವಾಗಿರಲಿ. ಯಾಕಂದರೆ, ಕರ್ತನಾದ ಯೆಹೋವ
ನೇ, ನೀನು ಅದನ್ನು ಹೇಳಿದಿ; ನಿನ್ನ ದಾಸನ ಮನೆ ಯುಗಾಂತ
ರಕ್ಕೆ ನಿನ್ನ ಆಶೀರ್ವಾದದಿಂದ ಆಶೀರ್ವದಿಸಲ್ಪಟ್ಟಿರಲಿ.

## ೮. ಸಂಧಿ.

೧ ಇದರ ತರುವಾಯ ಏನಾಯಿತಂದರೆ, ದಾವೀದನು ಫಿಲಿಷ್ಟ್ಯ
ರನ್ನು ಹೊಡೆದು, ಅವರನ್ನು ಅಣಗಿಸಿ, ಅವರ ಕೈಯಿಂದ ಮೇ
೨ ತಗಮ್ಮವನ್ನು ತಕ್ಕೊಂಡನು. ಇದಲ್ಲದೆ ಅವನು ಮೋವಾಬನ್ನು
ಹೊಡೆದು, ಅವರನ್ನು ದಾರದಿಂದ ಅಳೆದು, ಅವರನ್ನು ನೆಲಕ್ಕೆ
ಬೀಳ್ಳ ಮಾಡಿದನು; ಅವರನ್ನು ಕೊಲ್ಲುವದಕ್ಕೆ ಎರಡು ದಾರ
ಗಳಿಂದ ಬದುಕಿಸುವದಕ್ಕೆ ಒಂದು ಪೂರ್ಣವಾದ ದಾರದಿಂದ ಅಳೆದ
ನು. ಹಾಗೆಯೇ ಮೋವಾಬ್ಯರು ದಾವೀದನಿಗೆ ದಾಸರಾಗಿ ಅವನಿ
ಗೆ ಕಪ್ಪ ಕೊಡುವವರಾದರು.

3 ಇದಲ್ಲದೆ ದಾವೀದನು ಫ್ರಾತು ನದಿಯ ಬಳಿಯಲ್ಲಿ ತನ್ನ
ಮೇಲೆಯನ್ನು ಕಟ್ಟಿ ಕೊಳ್ಳ ಹೋದಾಗ, ಅವನು ಜೋಬದ
ಅರಸನಾಗಿರುವ ಕೆಹೋಬನ ಮಗನಾದ ಹದದೇಜರನನ್ನು
೪ ಹೊಡೆದನು. ಮತ್ತು ದಾವೀದನು ಅವನಿಗಿದ್ದ ಸಾವಿರ ರಥಗಳ
ನ್ನೂ, ಏಳು ನೂರು ಕುದುರೆ ರಾಹುತರನ್ನೂ, ಇಪ್ಪತ್ತು ಸಾವಿ
ರ ಕಾಲ್ಬಲವನ್ನೂ ಹಿಡಿದು, ನೂರು ರಥಗಳಿಗೆ ತಕ್ಕ ಕುದುರೆಗ
ಳನ್ನು ಉಳಿಸಿ, ಇತರ ಕುದುರೆಗಳ ಕಾಲಿನ ನರಗಳನ್ನು ಕೊಯಿ
೫ ಸಿ ಬಿಟ್ಟನು. ಆದರೆ ದಮಸ್ಕದಲ್ಲಿರುವ ಅರಾಮ್ಯರು ಜೋಬದ



ಅರಸನಾದ ಹದದೇಜರನಿಗೆ ಸಹಾಯ ಮಾಡ ಬಂದಾಗ, ದಾವೀ
ದನು ಅರಾಮ್ಯರಲ್ಲಿ ಇಪ್ಪತ್ತೆರಡು ಸಾವಿರ ಜನರನ್ನು ಕೊಂದು
೬ ಹಾಕಿದನು. ಮತ್ತು ದಾವೀದನು ದಮಸ್ಕದಕ್ಕೆ ಹೊಂದಿದ ಅರಾ
ಮ್ಯದಲ್ಲಿ ಠಾಣಗಳನ್ನು ಇಟ್ಟನು. ಹಾಗೆಯೇ ಅರಾಮ್ಯರು ದಾ
ವೀದನಿಗೆ ದಾಸರಾಗಿ ಕಪ್ಪ ಕೊಡುವವರಾದರು. ಮತ್ತು ಹೋದ
೭ ಸ್ಥಳಗಳಲ್ಲೆಲ್ಲಾ ಕರ್ತನು ಅವನನ್ನು ರಕ್ಷಿಸಿದನು. ಆದರೆ ದಾವೀ
ದನು ಹದದೇಜರನ ಸೇವಕರಿಗಿದ್ದ ಭಂಗಾರದ ಡಾಲುಗಳನ್ನು ತೆಗೆ
೮ ದು ಕೊಂಡು, ಅವುಗಳನ್ನು ಯೆರೂಸಲೇಮಿಗೆ ತಂದನು. ಇದಲ್ಲ
ದೆ ಹದದೇಜರನ ಪಟ್ಟಣಗಳಾದ ಬೇಟಹದಿಂದಲೂ ಬೆರೊತಾಯಿಂ
ದಲೂ ಅರಸನಾದ ದಾವೀದನು ಅತ್ಯಧಿಕವಾಗಿ ಹಿತ್ತಾಳೆಯನ್ನು
ತೆಗೆದು ಕೊಂಡು ಬಂದನು.

೯ ಆದರೆ ಹಮಾತಿನ ಅರಸನಾದ ತೋಯಿಗೆ ಹದದೇಜರನ
ಸಂಗಡ ಯುದ್ಧ ಉಂಟಾಗಿದ್ದದರಿಂದ, ದಾವೀದನು ಹದದೇಜರನ ಸ
ಮಸ್ತ ಸೈನ್ಯವನ್ನು ಹೊಡೆದ ವರ್ತಮಾನವನ್ನು ತೋಯಿ ಕೇ
ಳಿದಾಗ, ಅರಸನಾದ ದಾವೀದನ ಕ್ಷೇಮ ವರ್ತಮಾನ ವಿಚಾರಿಸ
೧೦ ಲೂ, ಹದದೇಜರನ ಸಂಗಡ ಯುದ್ಧ ಮಾಡಿ, ಅವನನ್ನು ಮುರಿ
ಯ ಬಡಿದದ್ದಕ್ಕೋಸ್ಕರ ಅವನನ್ನು ಆಶೀರ್ವದಿಸಲೂ ತೋಯಿ
ತನ್ನ ಕುಮಾರನಾದ ಯೋರಮನನ್ನು ಅವನ ಬಳಿಗೆ ಕಳುಹಿಸಿ
ದನು. ಇದಲ್ಲದೆ ಅವನು ತನ್ನ ಸಂಗಡ ಬೆಳ್ಳಿ ಭಂಗಾರ ಹಿತ್ತಾಳಿ
೧೧ ಯ ಪಾತ್ರೆಗಳನ್ನು ತೆಗೆದು ಕೊಂಡು ಬಂದನು. ಇವುಗಳನ್ನು
ಅರಸನಾದ ದಾವೀದನು ವಶ ಮಾಡಿ ಕೊಂಡ ಅರಾಮ್ಯರೂ
ಮೋವಾಬ್ಯರೂ ಅಮ್ಮೋನನ ಮಕ್ಕಳೂ ಫಿಲಿಷ್ಟ್ಯರೂ ಅಮಲೇ
೧೨ ಕ್ಯರೂ ಎಂಬ ಸಕಲ ಜನಾಂಗಗಳಿಂದ ತೆಗೆದು, ಹರಿಕೆ ಇಟ್ಟ ಬೆ
ಳ್ಳಿ ಭಂಗಾರದ ಸಂಗಡಲೂ, ಜೋಬದ ಅರಸನಾಗಿರುವ ರೆಹೋ
ಬನ ಮಗನಾದ ಹದದೇಜರನ ಬಳಿಯ ಕೊಳ್ಳೆ ಇಟ್ಟದರ ಸಂಗಡ
ಲೂ ಕರ್ತನಿಗೆ ಹರಿಕೆ ಮಾಡಿ, ಇಟ್ಟನು.

೧೩ ದಾವೀದನು ಉಪ್ಪಿನ ತಗ್ಗಿನಲ್ಲಿ ಹದಿನೆಂಟು ಸಾವಿರ ಅರಾಮ್ಯ
೧೪ ರನ್ನು ಹೊಡೆದು ತಿರುಗಿದಾಗ, ಹೆಸರು ಗೊಂಡನು. ಎದೋಮಿನ
ಲ್ಲಿ ಠಾಣಗಳನ್ನಿಟ್ಟನು; ಸಮಸ್ತ ಎದೋಮಿನಲ್ಲಿ ಅವನು ಠಾಣ
ಗಳನ್ನು ಇಟ್ಟಿದ್ದರಿಂದ, ಎದೋಮ್ಯಕೆಲ್ಲರು ದಾವೀದನಿಗೆ ದಾಸ
ರಾದರು. ಮತ್ತು ದಾವೀದನು ಹೋದ ಸಮಸ್ತ ಸ್ಥಳಗಳಲ್ಲಿ ಕ
೧೫ ರ್ತನು ಅವನನ್ನು ರಕ್ಷಿಸಿದನು. ಹೀಗೆಯೇ ದಾವೀದನು ಸಮಸ್ತ
ಇಸ್ರಯೇಲಿನ ಮೇಲೆ ಅಳ್ಳಿ, ತನ್ನ ಸಮಸ್ತ ಜನರಿಗೂ ನೀತಿ ನ್ಯಾ
೧೬ ಯಗಳನ್ನು ನಡಿಸುತ್ತಾ ಬಂದನು. ಜೆರೂಯಳ ಮಗನಾದ
ಯೊವಾಬನು ಸೈನ್ಯಾಧಿಪತಿಯಾಗಿದ್ದನು; ಅಹೀಲೂದನ ಮಗನಾ
ದ ಯೆಹೋಷಾಫಾಟನು ನವತಿಕೆಗಳನ್ನು ಬರೆಯುವವನಾಗಿದ್ದ
೧೭ ನು. ಅಹೀಟುಬನ ಮಗನಾದ ಚದೋಕನೂ ಅಬ್ಯತಾರನ ಮ
ಗನಾದ ಅಹಿಮೇಲಕನೂ ಯಾಜಕರಾಗಿದ್ದರು; ಸೆರಾಯನು ರಾ
೧೮ ಯಸದವನಾಗಿದ್ದನು. ಯೆಹೋಯದಾವನ ಮಗನಾದ ಬೆನಾ
ಯನು ಕೆಳೇತ್ಯರ ಮೇಲೆಯೂ ಪೆಲೆತ್ಯರ ಮೇಲೆಯೂ ಯಜ
ಮಾನನಾಗಿದ್ದನು. ಆದರೆ ದಾವೀದನ ಮಕ್ಕಳು ಪ್ರಭುಗಳಾಗಿ
ದ್ದರು.

## ೯. ಸಂಧಿ.

೧ ಮತ್ತು ದಾವೀದನು, ಸೌಲನ ಮನೆಯವರಲ್ಲಿ, ಯೊನತಾನನಿ
೨ ಗೋಸ್ಕರ ನಾನು ಅವನಿಗೆ ಕೃಪೆ ಮಾಡುವ ಹಾಗೆ, ಯಾವ
ನಾದರೂ ಉಳಿದಿದ್ದಾನೋ! ಎಂದು ಕೇಳಿದನು. ಆಗ ಸೌಲನ
ಮನೆಯ ದಾಸನಾದ ಚೀಬನೆಂಬವನು ಇದ್ದನು. ಅವನನ್ನು ದಾ
ವೀದನ ಬಳಿಗೆ ಕರ ತಂದರು. ಅರಸನು ಅವನಿಗೆ, ನೀನು ಚೀಬ
3 ನೋ! ಅಂದನು. ಅದಕ್ಕವನು, ನಿನ್ನ ದಾಸ, ಅಂದನು. ಅರಸನು
ಅವನಿಗೆ, ನಾನು ಅವನಿಗೆ ದೇವರ ಕೃಪೆ ತೋರಿಸುವ ಹಾಗೆ,
ಸೌಲನ ಮನೆಯವರಲ್ಲಿ ಇನ್ನೂ ಯಾವನಾದರೂ ಇಲ್ಲವೋ!
ಅಂದನು. ಆಗ ಚೀಬನು ಅರಸನಿಗೆ, ಯೊನತಾನನಿಗೆ ಎರಡು
೪ ಕಾಲು ಕುಂಟಾದ ಒಬ್ಬ ಮಗನಿದ್ದಾನೆ, ಅಂದನು. ಅವನು ಎಲ್ಲಿ
ಇದ್ದಾನೆಂದು, ಅರಸನು ಅವನನ್ನು ಕೇಳಿದನು. ಅವನು ಅರಸನಿ
ಗೆ, ಇಗೋ, ಅವನು ಲೊದೆಬಾರಲ್ಲಿ ಅಮ್ಮಿಯೇಲನ ಮಗನಾದ
೫ ಮಕೀರನ ಮನೆಯಲ್ಲಿ ಇದ್ದಾನೆ, ಅಂದನು. ಆಗ ಅರಸನಾದ
ದಾವೀದನು ಅವನನ್ನು ಲೊದೆಬಾರಲ್ಲಿರುವ ಅಮ್ಮಿಯೇಲನ ಮಗ
ನಾದ ಮಕೀರನ ಮನೆಯಿಂದ ಕರೇ ಕಳುಹಿಸಿದನು.

೬ ಸೌಲನ ಮಗನಾಗಿರುವ ಯೊನತಾನನ ಮಗನಾದ ಮೆಫಿ
ಬೋಷತನು ದಾವೀದನ ಬಳಿಗೆ ಬಂದಾಗ, ಪೋಕೆ ಕೆಳಗಾಗಿ
೭ ಬಿದ್ದು, ವಂದಿಸಿದನು. ದಾವೀದನು, ಮೆಫಿಬೋಷತನೇ, ಅಂದನು.
ಅವನು, ಇಗೋ, ನಿನ್ನ ದಾಸನು, ಅಂದನು. ಆಗ ದಾವೀದನು
ಅವನಿಗೆ, ಭಯ ಪಡ ಬೇಡ; ಯಾಕಂದರೆ ನಿನ್ನ ತಂದೆಯಾದ
ಯೊನತಾನನ ನಿಮಿತ್ತ ನಾನು ನಿನಗೆ ಕೃಪೆ ಮಾಡೇ ಮಾಡುವೆ
ನು; ನಿನ್ನ ತಂದೆಯಾದ ಸೌಲನ ಭೂಮಿಯನ್ನೆಲ್ಲಾ ನಿನಗೆ ಶಿರಿಗಿ
ಕೊಡುವೆನು; ಆದರೆ ನೀನು ನನ್ನ ಪಂಗ್ತಿಯಲ್ಲಿ ನಿತ್ಯವೂ ಭೋ
೮ ಜನ ಮಾಡುವಿ, ಅಂದನು. ಆಗಲವನು ಅಡ್ಡ ಬಿದ್ದು, ನೀನು ನ
ನ್ನಂಥ ಸತ್ತ ನಾಯಿಯನ್ನು ದೃಷ್ಟಿಸುವ ಹಾಗೆ, ನಿನ್ನ ದಾಸನು
ಎಷ್ಟರವನು! ಅಂದನು.

೯ ಅರಸನು ಸೌಲನ ದಾಸನಾದ ಚೀಬನನ್ನು ಕರೆದು, ಅವನಿಗೆ
ಹೇಳಿದ್ದೇನಂದರೆ—ನಾನು ಸೌಲನಿಗೂ ಅವನ ಸಮಸ್ತ ಮನೆಗೂ
ಹೊಂದಿದ ಸಮಸ್ತವನ್ನು ನಿನ್ನ ಯಜಮಾನನ ಮಗನಿಗೆ ಕೊ
೧೦ ಟ್ಟಿನು. ಆದದರಿಂದ ನೀನೂ ನಿನ್ನ ಕುಮಾರರೂ ನಿನ್ನ ದಾಸ
ರೂ, ನಿನ್ನ ಯಜಮಾನನ ಮಗನಿಗೆ ಆಹಾರ ಉಂಟಾಗುವ ಹಾ
ಗೆ, ಅವನಿಗೋಸ್ಕರ ಭೂಮಿಯನ್ನು ವ್ಯವಸಾಯ ಮಾಡಿ, ಅ
ದರ ಫಲವನ್ನು ತರ ಬೇಕು. ಆದರೆ ನಿನ್ನ ಯಜಮಾನನ ಮಗ
ನಾದ ಮೆಫಿಬೋಷತನು ನಿತ್ಯವೂ ನನ್ನ ಪಂಗ್ತಿಯಲ್ಲಿ ಭೋಜಿ
ಸುವನು, ಅಂದನು. ಈ ಚೀಬನಿಗೆ ಹದಿನೈದು ಮಂದಿ ಕುಮಾ
೧೧ ರರೂ ಇಪ್ಪತ್ತು ಮಂದಿ ದಾಸರೂ ಇದ್ದರು. ಆಗ ಚೀಬನು ಅ
ರಸನಿಗೆ, ಅರಸನಾದ ನನ್ನ ಸ್ವಾಮಿ ತನ್ನ ದಾಸನಿಗೆ ಆಜ್ಞಾಪಿಸಿ
ದ್ದನೆಲ್ಲಾ ನಿನ್ನ ದಾಸನು ಹಾಗೆಯೇ ಮಾಡುವನು, ಅಂದನು. ಅ
ರಸನ ಮಕ್ಕಳಲ್ಲಿ ಒಬ್ಬನ ಹಾಗೆ ಮೆಫಿಬೋಷತನು ನನ್ನ ಪಂ
೧೨ ಗ್ತಿಯಲ್ಲಿ ಭೋಜನ ಮಾಡುವನೆಂದು, ಅರಸನು ಹೇಳಿದನು. ಆ
ದರೆ ಮೆಫಿಬೋಷತನಿಗೆ ಮೀಕನೆಂಬ ಹೆಸರುಳ್ಳ ಒಬ್ಬ ಚಿಕ್ಕ
ಮಗನಿದ್ದನು. ಚೀಬನ ಮನೆಯಲ್ಲಿ ವಾಸವಾಗಿದ್ದ ಸಮಸ್ತರೂ
೧೩ ಮೆಫಿಬೋಷತನಿಗೆ ದಾಸರಾಗಿದ್ದರು. ಹೀಗೆಯೇ ಮೆಫಿಬೋಷ
ತನು ಅರಸನ ಪಂಗ್ತಿಯಲ್ಲಿ ನಿತ್ಯ ಭೋಜಿಸುವದರಿಂದ, ಯೆರೂ
ಸಲೇಮಿನಲ್ಲೇ ವಾಸವಾಗಿದ್ದನು. ಅವನಿಗೆ ಎರಡು ಕಾಲು ಕುಂಟಾ
ಗಿದ್ದವು.

## ೧೦. ಸಂಧಿ.

೧ ಇದರ ತರುವಾಯ ಏನಾಯಿತಂದರೆ ಅಮ್ಮೋನನ ಮಕ್ಕಳ
ಅರಸನು ಸತ್ತನು; ಅವನ ಮಗನಾದ ಹನೂನನು ಅವನಿಗೆ ಬದ
೨ ಲಾಗಿ ಆಳಿದನು. ಆಗ ದಾವೀದನು, ಹನೂನನ ತಂದೆಯಾದ
ನಹಾಷನು ನನಗೆ ಕೃಪೆ ತೋರಿಸಿದ ಹಾಗೆಯೇ, ನಾನು ಅವನ
ಮಗನಾದ ಹನೂನನಿಗೆ ಕೃಪೆ ತೋರಿಸುವೆನು, ಅಂದನು. ಮ
ತ್ತು ದಾವೀದನು ಅವನ ತಂದೆಗೋಸ್ಕರ ಅವನಿಗೆ ಆದರಣೆ ಹೇ
೩ ಳ ತನ್ನ ಸೇವಕರನ್ನು ಕಳುಹಿಸಿದನು. ದಾವೀದನ ಸೇವಕರು
ಅಮ್ಮೋನನ ಮಕ್ಕಳ ದೇಶಕ್ಕೆ ಬಂದಾಗ, ಅಮ್ಮೋನನ ಮಕ್ಕಳ
ಪ್ರಧಾನರು ತಮ್ಮ ಯಜಮಾನನಾದ ಹನೂನನಿಗೆ, ದಾವೀದನು
ಆದರಣೆ ಹೇಳುವವರನ್ನು ನಿನ್ನ ಬಳಿಗೆ ಕಳುಹಿಸಿದ್ದರಿಂದ, ನಿನ್ನ
ತಂದೆಯನ್ನು ಘನ ಪಡಿಸುತ್ತಾನೆಂದು, ನಿನ್ನ ದೃಷ್ಟಿಗೆ ತೋ
ಚುತ್ತದೋ? ಈ ಪಟ್ಟಣವನ್ನು ಕೋಧಿಸಲೂ, ಚಾಳ್ಕತಿ ನೋಡ
ಲೂ, ಅದನ್ನು ಕೆಡವಿ ಹಾಕಲೂ, ದಾವೀದನು ತನ್ನ ಸೇವಕರನ್ನು
೪ ನಿನ್ನ ಬಳಿಗೆ ಕಳುಹಿಸಲಿಲ್ಲವೋ! ಅಂದರು. ಆದದರಿಂದ ಹನೂ
ನನು ದಾವೀದನ ಸೇವಕರನ್ನು ಹಿಡಿದು, ಅವರ ಅರ್ಧ ಗಡ್ಡವನ್ನು
ಬೋಳಿಸ ಮಾಡಿ, ಅವರ ವಸ್ತ್ರಗಳನ್ನು ಮಧ್ಯದಲ್ಲಿ ಪಿರ್ತ್ರಗಳ
೫ ಪರ್ಯಂತರ ಕತ್ತರಿಸಿ ಹಾಕಿ, ಅವರನ್ನು ಕಳುಹಿಸಿದನು. ಅವ
ರು ಅದನ್ನು ದಾವೀದನಿಗೆ ತಿಳಿಸಿದಾಗ, ಆ ಮನುಷ್ಯರು ಬಹಳ
ನಾಚಿಕೆ ಪಟ್ಟದ್ದರಿಂದ, ದಾವೀದನು ಕೆಲವರನ್ನು ಅವರಿಗೆದುರಾಗಿ
ಕಳುಹಿಸಿದನು. ನಿಮ್ಮ ಗಡ್ಡಗಳು ಬೆಳೆಯುವ ಪರ್ಯಂತರ ನೀ
ವು ಯೆರಿಕೋವಿನಲ್ಲಿದ್ದು, ತರುವಾಯ ಬನ್ನಿರಿ, ಎಂದು ಅರಸನು
ಹೇಳಿದನು.

೬ ಅಮ್ಮೋನನ ಮಕ್ಕಳು ತಾವು ದಾವೀದನಿಗೆ ದುರ್ವಾಸನೆ
ಯಾದೆವೆಂದು ತಿಳುಕೊಂಡಾಗ, ಅವರು ದೂತರನ್ನು ಕಳುಹಿಸಿ,
ಬೇತ್‌ರೆಹೋಬಿನಲ್ಲಿಯೂ ಜೋಬದಲ್ಲಿಯೂ ಇರುವ ಇಪ್ಪತ್ತು
ಸಾವಿರ ಕಾಲ್ಬಲವಾದ ಅರಾಮ್ಯರನ್ನೂ, ಅರಸನಾದ ಮಾಕನ
ಬಳ್ಳಿಂದ ಸಾವಿರ ಜನರನ್ನೂ, ಇಷ್ಟೋಬಿನಿಂದ ಹನ್ನೆರಡು
ಸಾವಿರ ಜನರನ್ನೂ ಕೂಲಿಗೆ ತೆಗೆದು ಕೊಂಡರು.
೭ ದಾವೀದನು ಅದನ್ನು ಕೇಳಿದಾಗ, ಅವನು ಯೊವಾಬನನ್ನೂ
ಪರಾಕ್ರಮಶಾಲಿಗಳಾದ ಸಕಲ ರಾಣುವೆಯವರನ್ನೂ ಕಳುಹಿಸಿ
೮ ದನು. ಆಗ ಅಮ್ಮೋನನ ಮಕ್ಕಳು ಹೊರಟು, ಪಟ್ಟಣದ ಬಾಗಲ
ಮುಂದೆ ವ್ಯೂಹ ಕಟ್ಟಿದರು. ಆದರೆ ಜೋಬದಿಂದಲೂ ರೆಹೋ
ಬಿನಿಂದಲೂ, ಇಷ್ಟೋಬಿನಿಂದಲೂ, ಮಾಕನಿಂದಲೂ, ಬಂದ ಅ
೯ ರಾಮ್ಯರು ಹೊರಗೆ ಬೈಲಿನಲ್ಲಿ ಬೇಕೆ ಇಳಿದಿದ್ದರು. ಯೊವಾಬ
ನು ಯುದ್ಧದ ಮುಖವು ಹಿಂದೆ ಮುಂದೆ ತನಗೆ ಎದುರಾಗಿರುವದ
ನ್ನು ನೋಡಿದಾಗ, ಅವನು ಇಸ್ರಯೇಲಲ್ಲಿ ಆಯಲ್ಪಟ್ಟ ಎಲ್ಲಾ
ಜನರನ್ನು ಆದು ಕೊಂಡು, ಅರಾಮ್ಯರಿಗೆ ಎದುರಾಗಿ ವ್ಯೂಹ
೧೦ ಕಟ್ಟಿದನು. ಆದರೆ ಮಿಕ್ಕಾದವರು ಅಮ್ಮೋನನ ಮಕ್ಕಳಿಗೆದುರಾ
ಗಿ ವ್ಯೂಹ ಕಟ್ಟುವ ಹಾಗೆ, ಅವರನ್ನು ತನ್ನ ಸಹೋದರನಾದ
೧೧ ಅಬಿಷಯ್ಯನ ಕೈಯಲ್ಲಿ ಒಪ್ಪಿಸಿ ಕೊಟ್ಟು, ಅರಾಮ್ಯರು ನನ
ಗಿಂತ ಬಲವುಳ್ಳವರಾದರೆ, ನೀನು ನನಗೆ ಸಹಾಯ ಕೊಡ ಬೇ
ಕು; ಅಮ್ಮೋನನ ಮಕ್ಕಳು ನಿನಗಿಂತ ಬಲವುಳ್ಳವರಾದರೆ, ನಾ
೧೨ ನು ಬಂದು, ನಿನಗೆ ಸಹಾಯ ಮಾಡುವೆನು. ಬಲವಾಗಿರು; ನಾವು
ನಮ್ಮ ಜನರಿಗೋಸ್ಕರವೂ ನಮ್ಮ ದೇವರ ಪಟ್ಟಣಗಳಿಗೋಸ್ಕರ
ವೂ ಬಲಗೊಳ್ಳೂವ; ಕರ್ತನು ತನ್ನ ದೃಷ್ಟಿಗೆ ಉತ್ತಮವಾದದ್ದ
ನ್ನು ಮಾಡಲಿ, ಅಂದನು.
೧೩ ಆಗ ಯೊವಾಬನೂ ಅವನ ಸಂಗಡ ಇದ್ದ ಜನರೂ ಅರಾಮ್ಯ
ರ ಮೇಲೆ ಯುದ್ಧ ಮಾಡ ಮುಂಗೊಂಡರು. ಅವರು ಅವನ ಎ
೧೪ ದುರಿನಿಂದ ಓಡಿ ಹೋದರು. ಅರಾಮ್ಯರು ಓಡಿ ಹೋದದ್ದನ್ನು
ಅಮ್ಮೋನನ ಮಕ್ಕಳು ನೋಡಿದಾಗ, ಅವರು ಅಬಿಷಯ್ಯನ
ಎದುರಿನಿಂದ ಓಡಿ, ಪಟ್ಟಣದೊಳಗೆ ಹೊಕ್ಕರು. ಆಗ ಯೊವಾಬನು
ಅಮ್ಮೋನನ ಮಕ್ಕಳನ್ನು ಬಿಟ್ಟು, ತಿರುಗಿ, ಯೆರೂಸಲೇಮಿಗೆ
ಬಂದನು.
೧೫ ಅರಾಮ್ಯರು ತಾವು ಇಸ್ರಯೇಲ್ಯರ ಮುಂದೆ ಮುರಿಯಲ್ಪ
ಟ್ಟದ್ದನ್ನು ಕಂಡಾಗ, ಒಂದೇ ಮೊತ್ತವಾಗಿ ಕೂಡಿದರು. ಇದಲ್ಲದೆ
ಹದರೇಜರನು ನದಿಗೆ ಆಚೆ ಇದ್ದ ಅರಾಮ್ಯರನ್ನು ಕರೇ ಕಳು
೧೬ ಹಿಸಿದ್ದರಿಂದ, ಅವರು ಹೆಲಾಮಿಗೆ ಬಂದರು; ಹದರೇಜರನ ಸೈನ್ಯ
ಕ್ಕೆ ಅಧಿಪತಿಯಾದ ಶೋಬಕನು ಅವರ ಮುಂದೆ ನಡೆದನು
೧೭ ಆದು ದಾವೀದನಿಗೆ ತಿಳಿಸಲ್ಪಟ್ಟಾಗ, ಅವನು ಇಸ್ರಯೇಲ್ಯರೆಲ್ಲರ
ನ್ನು ಕೂಡಿಸಿ ಕೊಂಡು, ಯೊರ್ದನನ್ನು ದಾಟಿ, ಹೆಲಾಮಿಗೆ
ಬಂದನು. ಅರಾಮ್ಯರು ದಾವೀದನಿಗೆದುರಾಗಿ ವ್ಯೂಹ ಕಟ್ಟಿ,
೧೮ ಯುದ್ಧ ಮಾಡಿದರು. ಆಗ ಅರಾಮ್ಯರು ಇಸ್ರಯೇಲ್ಯರ ಎದು
ರಿನಿಂದ ಓಡಿದರು. ದಾವೀದನು ಅರಾಮ್ಯರಲ್ಲಿ ಏಳು ನೂರು
ಮಂದಿ ರಥಿಕರನ್ನೂ ನಾಲ್ವತ್ತು ಸಾವಿರ ಕುದುರೆ ರಾಹುತರನ್ನೂ
ಕೊಂದು, ಅವರ ಸೈನ್ಯದ ಯಜಮಾನನಾದ ಶೋಬಕನನ್ನು
೧೯ ಹೊಡೆದನು; ಅವನು ಅಲ್ಲಿಯೇ ಸತ್ತನು. ಹದರೇಜರನ ಸೇವಕ
ರಾದ ಸಮಸ್ತ ಅರಸುಗಳು ತಾವು ಇಸ್ರಯೇಲ್ಯರ ಮುಂದೆ ಮು
ರಿಯಲ್ಪಟ್ಟದ್ದನ್ನು ಕಂಡಾಗ, ಅವರು ಇಸ್ರಯೇಲ್ಯರ ಸಂಗಡ ಸ
ಮಾಧಾನ ಮಾಡಿ ಕೊಂಡು, ಅವರನ್ನು ಸೇವಿಸಿದರು. ಆ ತರು
ವಾಯ ಅರಾಮ್ಯರು ಅಮ್ಮೋನನ ಮಕ್ಕಳಿಗೆ ಇನ್ನು ಸಹಾಯ
ಮಾಡ ಭಯ ಪಟ್ಟಿದ್ದರು.

## ೧೧. ಸಂಧಿ.

೧ ವರುಷದ ಶಕ್ಕ ಕಾಲದಲ್ಲಿ, ಅರಸುಗಳು ಯುದ್ಧಕ್ಕೆ ಹೊರ
ಡುವಾಗ, ದಾವೀದನು ಯೊವಾಬನನ್ನೂ ಅವನ ಸಂಗಡಿದ್ದ ಅ
ವನ ಸೇವಕರನ್ನೂ ಸಮಸ್ತ ಇಸ್ರಯೇಲ್ಯರನ್ನೂ ಕಳುಹಿಸಿದ
ನು; ಅವರು ಅಮ್ಮೋನನ ಮಕ್ಕಳನ್ನು ಸಂಹರಿಸಿ, ರಬ್ಬಾಹನ್ನು
ಮುತ್ತಿಗೆ ಹಾಕಿದರು. ದಾವೀದನು ಯೆರೂಸಲೇಮಿನಲ್ಲೇ ನಿಂ
ತನು.
೨ ಮತ್ತು ಏನಾಯಿತಂದರೆ, ದಾವೀದನು ಒಂದು ದಿನ ಸಾಯಂ
ಕಾಲದಲ್ಲಿ ತನ್ನ ಹಾಸಿಕೆಯಿಂದ ಎದ್ದು, ಅರಮನೆಯ ಉಪ್ಪರಿಗೆ
ಯ ಮೇಲೆ ತಿರುಗಾಡುತ್ತಾ ಇದ್ದು, ಸ್ನಾನ ಮಾಡುತ್ತಿರುವ ಒ
ಬ್ಬ ಸ್ತ್ರೀಯನ್ನು ಉಪ್ಪರಿಗೆಯ ಮೇಲಿನಿಂದ ನೋಡಿದನು. ಆ
೩ ಸ್ತ್ರೀಯು ಮಹಾ ಸೌಂದರ್ಯ ರೂಪವುಳ್ಳವಳಾಗಿದ್ದಳು. ಆಗ
ದಾವೀದನು, ಆ ಸ್ತ್ರೀ ಯಾರೆಂದು, ಕೇಳಿ ಕಳುಹಿಸಿದನು. ಅವಳು
ಹಿತ್ತಿಯನಾದ ಊರೀಯನ ಹೆಂಡತಿಯಾಗಿರುವ ಎಲಿಯಾಮನ
೪ ಮಗಳಾದ ಬತ್ಷೆಬಳಲ್ಲವೇ! ಅಂದನು. ಆಗ ದಾವೀದನು ದೂತ



ರನ್ನು ಕಳುಹಿಸಿ, ಅವಳನ್ನು ತಕ್ಕೊಂಡನು. ಅವಳು ಅವನ ಬ
ಳಿಗೆ ಬಂದಾಗ, ಅವಳು ತನ್ನ ಮೈಲಿಗೆಯನ್ನು ಕಳೆ ಕೊಂಡು,
ಶುಚಿಯಾಗಿದ್ದದರಿಂದ ದಾವೀದನು ಅವಳ ಸಂಗಡ ಮಲಗಿದನು.
೫ ತರುವಾಯ ತನ್ನ ಮನೆಗೆ ಹೋದಳು. ಆ ಸ್ತ್ರೀಯು ಗರ್ಭ
ಧರಿಸಿ, ತಾನು ಗರ್ಭವತಿಯಾದೆನೆಂದು ದಾವೀದನಿಗೆ ಹೇಳಿ ಕಳು
೬ ಹಿಸಿದಳು. ಆಗ ದಾವೀದನು, ಹಿತ್ತಿಯನಾದ ಊರೀಯನನ್ನು ತ
ನ್ನ ಬಳಿಗೆ ಕಳುಹಿಸೆಂದು, ಯೊವಾಬನಿಗೆ ಹೇಳಿ ಕಳುಹಿಸಿದನು.
ಹಾಗೆಯೇ ಯೊವಾಬನು ಊರೀಯನನ್ನು ದಾವೀದನ ಬಳಿಗೆ
ಕಳುಹಿಸಿದನು.
೭ ಊರೀಯನು ದಾವೀದನ ಬಳಿಗೆ ಬಂದಾಗ, ದಾವೀದನು ಅವ
ನನ್ನು ಯೊವಾಬನ ಸುವರ್ತಮಾನವನ್ನೂ ಜನರ ಸುವರ್ತ
ಮಾನವನ್ನೂ ಯುದ್ಧದ ಸುವರ್ತಮಾನವನ್ನೂ ವಿಚಾರಿಸಿದನು.
೮ ಮತ್ತು ದಾವೀದನು ಊರೀಯನಿಗೆ, ನೀನು ನಿನ್ನ ಮನೆಗೆ ಹೋ
ಗಿ, ನಿನ್ನ ಕಾಲುಗಳನ್ನು ತೊಳಿ, ಅಂದನು. ಊರೀಯನು ಅರಸ
ನ ಮನೆಯಿಂದ ಹೊರಡುವಾಗ, ಅರಸನ ಬಹುಮಾನವು ಅವನ
೯ ಸಂಗಡಲೇ ಹೋಯಿತು. ಆದರೆ ಊರೀಯನು ತನ್ನ ಮನೆಗೆ
ಹೋಗದೆ, ಅರಮನೆಯ ಬಾಗಲ ಬಳಿಯಲ್ಲಿ ತನ್ನ ಯಜಮಾನನ
೧೦ ಸಮಸ್ತ ಸೇವಕರ ಸಂಗಡ ಮಲಗಿದ್ದನು. ಊರೀಯನು ತನ್ನ
ಮನೆಗೆ ಹೋಗಲಿಲ್ಲವೆಂದು, ದಾವೀದನಿಗೆ ತಿಳಿಸಲ್ಪಟ್ಟಾಗ, ದಾವೀ
ದನು ಊರೀಯನಿಗೆ, ನೀನು ಪ್ರಯಾಣದಿಂದ ಬರಲಿಲ್ಲವೋ!
೧೧ ಯಾಕೆ ನಿನ್ನ ಮನೆಗೆ ಹೋಗಲಿಲ್ಲ! ಅಂದನು. ಊರೀಯನು
ದಾವೀದನಿಗೆ, ಒಡಂಬಡಿಕೆಯ ಪೆಟ್ಟಿಗೆಯೂ, ಇಸ್ರಯೇಲಿನವರೂ
ಯೆಹೂದದವರೂ ಗುಡಾರಗಳಲ್ಲಿ ವಾಸಿಸಿರುವಾಗಲೂ, ನನ್ನ ಕ
ರ್ತನಾದ ಯೊವಾಬನೂ ನನ್ನ ಕರ್ತನ ಸೇವಕರೂ ಹೊರಗೆ
ದಂಡಿಳಿದಿರುವಾಗಲೂ, ನಾನು ಉಣ್ಣುವದಕ್ಕೂ, ಕುಡಿಯುವದ
ಕ್ಕೂ, ನನ್ನ ಹೆಂಡತಿಯ ಸಂಗಡ ಮಲಗುವದಕ್ಕೂ, ನನ್ನ ಮನೆ
ಗೆ ಹೋದೇನೋ! ನಿನ್ನ ಜೀವದಾಣೆ, ನಿನ್ನ ಪ್ರಾಣದ ಜೀವದಾ
೧೨ ಣೆ ನಾನು ಈ ಕಾರ್ಯ ಮಾಡೆನು, ಅಂದನು. ಆಗ ದಾವೀದ
ನು ಊರೀಯನಿಗೆ, ಈ ಹೊತ್ತು ಇಲ್ಲಿರು, ನಾಳೆ ನಿನ್ನನ್ನು ಕಳು
ಹಿಸುತ್ತೇನೆ, ಅಂದನು. ಹಾಗೆಯೇ ಊರೀಯನು ಆ ದಿನವೂ
೧೩ ಮಾರಣೆ ದಿನವೂ ಯೆರೂಸಲೇಮಿನಲ್ಲಿ ಇದ್ದನು. ದಾವೀದನು
ಅವನನ್ನು ಕರೆದಾಗ, ಅವನು ಆತನ ಮುಂದೆ ಉಂಡು, ಕುಡಿದ
ನು. ಇದಲ್ಲದೆ ದಾವೀದನು ಅವನನ್ನು ಮತ್ತಾಗ ಮಾಡಿಸಿದನು.
ಅವನು ಸಾಯಂಕಾಲದಲ್ಲಿ ತನ್ನ ಮನೆಗೆ ಹೋಗದೆ, ತನ್ನ ಯ
ಜಮಾನನ ಸೇವಕರ ಸಂಗಡ ಮಲಗುವದಕ್ಕೆ ಹೊರಟು ಹೋ
ದನು.
೧೪ ಉದಯದಲ್ಲಿ ದಾವೀದನು ಯೊವಾಬನಿಗೆ ಬಂದು ಪತ್ರಿಕೆಯ
೧೫ ನ್ನು ಬರೆದು, ಊರೀಯನ ಕೈಯಲ್ಲಿ ಕಳುಹಿಸಿದನು. ಆ ಪತ್ರಿ
ಕೆಯಲ್ಲಿ, ಊರೀಯನನ್ನು ಬಲವಾದ ಯುದ್ಧದ ಮುಖಕ್ಕೆ ಸರಿ
ಯಾಗಿ ನಿಲ್ಲಿಸಿ, ಅವನು ಹೊಡೆಯಲ್ಪಟ್ಟು, ಸಾಯುವ ಹಾಗೆ,
ಅವನನ್ನು ಬಿಟ್ಟು, ನೀವು ಹಿಂದಕ್ಕೆ ಸರಿಯಿರಿ, ಎಂದು ಬರೆದಿ
ದ್ದನು.
೧೬ ಹಾಗೆಯೇ ಯೊವಾಬನು ಆ ಪಟ್ಟಣವನ್ನು ನೋಡಿ ಕೊಂಡಾ
ಗ, ಯಾವ ಸ್ಥಳದಲ್ಲಿ ಪರಾಕ್ರಮಶಾಲಿಗಳು ಇರುವಕೆಂದು ತಿಳು
೧೭ ಕೊಂಡನೋ, ಅಲ್ಲಿ ಊರೀಯನನ್ನು ನಿಲ್ಲಿಸಿದನು. ಪಟ್ಟಣದ ಮನು
ಷ್ಯರು ಹೊರಟು, ಯೊವಾಬನ ಸಂಗಡ ಯುದ್ಧ ಮಾಡುವಾಗ,
ದಾವೀದನ ಸೇವಕರಾದ ಜನರಲ್ಲಿ ಕೆಲವರು ಬಿದ್ದರು; ಇದಲ್ಲದೆ
ಹಿತ್ತಿಯನಾದ ಊರೀಯನು ಸತ್ತನು.
೧೮ ಆಗ ಯೊವಾಬನು ಯುದ್ಧದ ವರ್ತಮಾನಗಳನ್ನೆಲ್ಲಾ ದಾವೀ
ದನಿಗೆ ತಿಳಿಸ ದೂತನನ್ನು ಕಳುಹಿಸುವಾಗ, ಅವನಿಗೆ ಹೇಳಿದ್ದೇ
೧೯ ನಂದರೆ, ನೀನು ಈ ಯುದ್ಧದ ವರ್ತಮಾನಗಳನ್ನೆಲ್ಲಾ ಅರಸನಿಗೆ
೨೦ ಹೇಳಿ ತೀರಿಸಿದ ತರುವಾಯ, ಅರಸನಿಗೆ ಕೋಪ ಉರಿದು, ನೀ
ವು ಯುದ್ಧ ಮಾಡ ಪಟ್ಟಣಕ್ಕೆ ಇಷ್ಟು ಸಮೀಪವಾಗಿ ಹೋದ್ದೇನು!
೨೧ ಅವರು ಅಲಂಗದಲ್ಲಿ ನಿಂತು, ಎಸೆಯುವಕೆಂದು ಅರಿಯಿರಾ? ಯೆ
ರುಬ್ಬೇಷತನ ಮಗನಾದ ಅಬಿಮೇಲೆಕನನ್ನು ಕೊಂದವರ್ಯಾರು!
ತೆಬೇಚೆನಲ್ಲಿ ಒಬ್ಬ ಹೆಂಗಸು ಅಲಂಗದಲ್ಲಿಂದ ಒಂದು ಬೀಸುವ
ಕಲ್ಲಿನ ತುಂಡನ್ನು ಅವನ ಮೇಲೆ ಹಾಕಿದಾಗ, ಅವನು ಸತ್ತನಲ್ಲ
ವೇ! ನೀವು ಅಲಂಗಕ್ಕೆ ಇಷ್ಟು ಸಮೀಪವಾಗಿ ಹೋದದ್ದೇನು!
ಎಂದು ನಿನ್ನನ್ನು ಕೇಳಿದರೆ, ಆಗ ನೀನು, ನಿನ್ನ ಸೇವಕನಾದ ಊ
ರೀಯನೆಂಬ ಹಿತ್ತಿಯನು ಸತ್ತನೆಂದು ಹೇಳು, ಅಂದನು.
೨೨ ಹಾಗೆಯೇ ಆ ದೂತನು ಹೋಗಿ, ದಾವೀದನಿಗೆ ಯೊವಾಬ
ನು ತನ್ನನ್ನು ಕಳುಹಿಸಿದ ವರ್ತಮಾನಗಳನ್ನೆಲ್ಲಾ ತಿಳಿಸಿದನು.
೨೩ ಆ ದೂತನು ಅವನಿಗೆ ಹೇಳಿದ್ದೇನಂದರೆ, ಆ ಮನುಷ್ಯರು ನಿಶ್ಚ
ಯವಾಗಿ ನಮ್ಮ ಮೇಲೆ ಬಲಗೊಂಡು, ಬೈಲಿನಲ್ಲಿ ನಮ್ಮ ಮೇಲೆ
ಹೊರಟು ಬಂದಾಗ, ನಾವು ಪಟ್ಟಣದ ಬಾಗಲ ಪರ್ಯಂತರ ಅವ
೨೪ ರ ಮೇಲೆ ಬಂದೆವು. ಆಗ ಬಿಲ್ಲುಗಾರರು ಅಲಂಗದ ಮೇಲಿನಿಂದ
ನಿನ್ನ ಸೇವಕರ ಮೇಲೆ ಬಾಣಗಳನ್ನು ಎಸೆದ ಕಾರಣ, ಅರಸನ
ಸೇವಕರಲ್ಲಿ ಕೆಲವರು ಸತ್ತರು; ಇದಲ್ಲದೆ ನಿನ್ನ ಸೇವಕನಾದ
೨೫ ಊರೀಯನೆಂಬ ಹಿತ್ತಿಯನು ಸತ್ತನು, ಅಂದನು. ಆಗ ದಾವೀದ
ನು ಆ ದೂತನಿಗೆ, ನೀನು ಯೊವಾಬನಿಗೆ ಹೇಳ ಬೇಕಾದದ್ದೇನಂ
ದರೆ, ಈ ಕಾರ್ಯ ನಿನ್ನ ಕಣ್ಣುಗಳಿಗೆ ಕೆಟ್ಟದ್ದಾಗಿ ತೋರ ಬಾ
ರದು; ಯಾಕಂದರೆ ಕತ್ತಿಯು ಇವನನ್ನಾದರೂ ಸರಿ, ಅವ
ನನ್ನಾದರೂ ಸರಿ, ತಿಂದು ಬಿಡುವದು. ನೀನು ಪಟ್ಟಣವನ್ನು ನಿ
ರ್ಮೂಲ ಮಾಡುವ ಹಾಗೆ, ಅದರ ಮೇಲೆ ನಿನ್ನ ಯುದ್ಧವನ್ನು
ಬಲ ಮಾಡು, ಎಂದು ಹೇಳಿ, ಅವನನ್ನು ಬಲ ಪಡಿಸು, ಅಂದನು.
೨೬ ಆದರೆ ತನ್ನ ಗಂಡನಾದ ಊರೀಯನು ಸತ್ತನೆಂದು ಊರೀಯ
ನ ಹೆಂಡತಿಯು ಕೇಳಿದಾಗ, ಅವಳು ತನ್ನ ಗಂಡನಿಗೋಸ್ಕರ
೨೭ ಗೋಳಾಡಿದಳು. ದುಖ್ಖದ ದಿವಸಗಳು ತೀರಿದ ತರುವಾಯ,
ದಾವೀದನು ಅವಳನ್ನು ತನ್ನ ಮನೆಗೆ ಕರೇ ಕಳುಹಿಸಿದನು; ಅವ
ಳು ಅವನಿಗೆ ಹೆಂಡತಿಯಾಗಿ ಒಬ್ಬ ಮಗನನ್ನು ಹೆತ್ತಳು. ಆದ
ರೆ ದಾವೀದನು ಮಾಡಿದ ಈ ಕಾರ್ಯವು ಕರ್ತನ ದೃಷ್ಟಿಗೆ ಕೆ
ಟ್ಟದ್ದಾಗಿತ್ತು.

## ೧೨. ಸಂಧಿ.

೧ ಮತ್ತು ಕರ್ತನು ದಾವೀದನ ಬಳಿಗೆ ನತಾನನನ್ನು ಕಳುಹಿಸಿದ
ನು. ಇವನು ಅವನ ಬಳಿಗೆ ಬಂದು, ಅವನಿಗೆ ಹೇಳಿದ್ದೇನಂದರೆ—
ಬಂದು ಪಟ್ಟಣದಲ್ಲಿ ಇಬ್ಬರು ಮನುಷ್ಯರಿದ್ದರು; ಒಬ್ಬನು ಐಶ್ವ
೨ ರ್ಯವಂತನು, ಮತ್ತೊಬ್ಬನು ದರಿದ್ರನು. ಐಶ್ವರ್ಯವಂತನಿಗೆ
೩ ಕುರಿ ದನಗಳು ಬಹಳವಾಗಿದ್ದವು. ಆದರೆ ದರಿದ್ರನಿಗೆ ತಾನು ಕೊಂ
ಡು, ಬದುಕಿಸಿದ ಒಂದು ಚಿಕ್ಕ ಹೆಣ್ಣು ಕುರಿ ಮರಿಯ ಹೊರ್ತು,

ಬೇಕೊಂದು ಇರಲಿಲ್ಲ. ಅದು ಅವನ ಸಂಗಡಲೂ ಅವನ ಮಕ್ಕಳ
ಸಂಗಡಲೂ ಬೆಳೆದು, ಅವನ ತುಂಡು ತಿಂದು, ಅವನ ಪಾತ್ರೆಯಲ್ಲಿ
ಕುಡಿದು, ಅವನ ಮಗ್ಗುಲಲ್ಲಿ ಮಲಗಿ ಕೊಂಡು, ಅವನಿಗೆ ಕುಮಾ
೪ ರ್ತೆಯ ಹಾಗಿತ್ತು. ಐಶ್ವರ್ಯವುಳ್ಳ ಆ ಮನುಷ್ಯನ ಬಳಿಗೆ
ಒಬ್ಬ ಮಾರ್ಗಸ್ಥನು ಬಂದಾಗ, ಪ್ರಯಾಣ ಮಾಡುವವನಿಗೆ ಅ
ತಿಗೆಯನ್ನು ಮಾಡಿಸ ತನ್ನ ಕುರಿ ದನಗಳಲ್ಲಿ ಒಂದನ್ನು ತಕ್ಕೊ
ಳ್ಳ ಮನಸ್ಸಿಲ್ಲದೆ, ಆ ದರಿದ್ರನ ಕುರಿಯನ್ನು ತಕ್ಕೊಂಡು, ಅ
ದನ್ನು ತನ್ನ ಬಳಿಗೆ ಬಂದ ಮನುಷ್ಯನಿಗೆ ಅತಿಗೆಯನ್ನು ಮಾಡಿ
ಸಿದನು, ಅಂದನು.

೫ ಆಗ ದಾವೀದನು ಆ ಮನುಷ್ಯನ ಮೇಲೆ ಬಹಳ ಕೋಪಿಸಿ
ಕೊಂಡು, ನಥಾನನ ಸಂಗಡ ಹೇಳಿದ್ದೇನಂದರೆ, ಕರ್ತನ ಜೀವದಾ
ಣೆ—ಇದನ್ನು ಮಾಡಿದ ಆ ಮನುಷ್ಯನು ಮರಣಕ್ಕೆ ಪಾತ್ರನಾ
೬ ಗಿದ್ದಾನೆ. ಅವನು ಕನಿಕರ ಪಡದೆ, ಈ ಕಾರ್ಯವನ್ನು ಮಾಡಿ
ದ್ದರಿಂದ, ಆ ಕುರಿಸೋಸ್ಕರವಾಗಿ ನಾಲ್ಕರಷ್ಟು ತಿರಿಗಿ ಕೊಡ ಬೇ
ಕು, ಅಂದನು.

೭ ಆಗ ನಥಾನನು ದಾವೀದನಿಗೆ, ನೀನೇ ಆ ಮನುಷ್ಯನು. ಇಸ್ರ
ಯೇಲಿನ ದೇವರಾದ ಕರ್ತನು ಹೇಳುವದೇನಂದರೆ, ನಾನು ನಿನ್ನ
ನ್ನು ಇಸ್ರಯೇಲಿನ ಮೇಲೆ ಅರಸನಾಗಿ ಅಭಿಷೇಕ ಮಾಡಿ, ನಿನ್ನ
೮ ನ್ನು ಸೌಲನ ಕೈಗೆ ತಪ್ಪಿಸಿ ಬಿಟ್ಟು, ನಿನ್ನ ಯಜಮಾನನ ಮನೆ
ಯನ್ನೂ ನಿನ್ನ ಯಜಮಾನನ ಹೆಂಡತಿಯರನ್ನೂ ನಿನ್ನ ಉಡಿ
ಲಲ್ಲಿ ಕೊಟ್ಟು, ಇಸ್ರಯೇಲಿನ ಮನೆಯನ್ನೂ ಯೆಹೂದದ ಮನೆ
೯ ಯನ್ನೂ ನಿನಗೆ ಕೊಟ್ಟೆನು. ಇದು ಸಾಲದೆ ಇದ್ದರೆ, ಇಂಥಿಂಥ
ವುಗಳನ್ನು ನಿನಗೆ ಇನ್ನು ಕೊಡುತ್ತಿದ್ದೆನು. ನೀನು ಕರ್ತನ ದೃ
ಷ್ಟಿಗೆ ಈ ಕೆಟ್ಟ ಕಾರ್ಯವನ್ನು ಮಾಡುವ ಹಾಗೆ, ಅವನ ಮಾ
ತನ್ನು ತಿರಸ್ಕರಿಸಿದ್ದೇನು? ನೀನು ಹಿತ್ತಿಯನಾದ ಊರೀಯನನ್ನು
ಕತ್ತಿಯಿಂದ ಹೊಡೆಯ ಮಾಡಿ, ಅವನ ಹೆಂಡತಿಯನ್ನು ನಿನಗೆ
ಹೆಂಡತಿಯಾಗ ತೆಗೆದು ಕೊಂಡಿ; ಇದಲ್ಲದೆ ಅವನನ್ನು ಅಮ್ಮೋ
೧೦ ನನ ಮಕ್ಕಳ ಕತ್ತಿಯಿಂದ ಕೊಂದು ಹಾಕಿಸಿದಿ. ಈಗ ನೀನು ನ
ನ್ನನ್ನು ತಿರಸ್ಕರಿಸಿ, ಹಿತ್ತಿಯನಾದ ಊರೀಯನ ಹೆಂಡತಿಯನ್ನು
ನಿನಗೆ ಹೆಂಡತಿಯಾಗಿ ತೆಗೆದು ಕೊಂಡದ್ದರಿಂದ, ಕತ್ತಿಯು ಎಂದಿ
೧೧ ಗೂ ನಿನ್ನ ಮನೆಯನ್ನು ಬಿಟ್ಟು ತೊಲಗದು. ಮತ್ತು ಕರ್ತನು
ಹೇಳುವದೇನಂದರೆ, ಇಗೋ, ನಾನು ನಿನ್ನ ಮನೆಯಲ್ಲಿ ಕೆಟ್ಟದ್ದ
ನ್ನು ನಿನಗೆ ವಿರೋಧವಾಗಿ ಏಳ ಮಾಡಿ, ನಿನ್ನ ಕಣ್ಣುಗಳ ಮುಂ
ದೆ ನಿನ್ನ ಹೆಂಡರನ್ನು ತೆಗೆದು, ನಿನ್ನ ನೆರೆಯವನಿಗೆ ಕೊಡುವೆನು.
ಅವನು ಈ ಸೂರ್ಯನ ದೃಷ್ಟಿಯಲ್ಲಿ ಅವರ ಸಂಗಡ ಮಲಗು
೧೨ ವನು. ಯಾಕಂದರೆ ನೀನು ಮರೆಯಲ್ಲಿ ಅದನ್ನು ಮಾಡಿದಿ;
ಆದರೆ ನಾನು ಈ ಕಾರ್ಯವನ್ನು ಇಸ್ರಯೇಲ್ಯರೆಲ್ಲರ ಮುಂದೆ
ಯೂ ಸೂರ್ಯನ ಮುಂದೆಯೂ ಮಾಡುವೆನು, ಅಂದನು.

೧೩ ಆಗ ದಾವೀದನು ನಥಾನನಿಗೆ ನಾನು ಕರ್ತನಿಗೆ ವಿರೋಧವಾ
ಗಿ ಪಾಪ ಮಾಡಿದೆನು, ಅಂದನು. ನಥಾನನು ದಾವೀದನಿಗೆ, ನೀ
ನು ಸಾಯದ ಹಾಗೆ ಕರ್ತನು ನಿನ್ನ ಪಾಪವನ್ನು ಪರಿಹರಿಸಿದನು.
೧೪ ಆದರೆ ಈ ಕಾರ್ಯದಿಂದ ನೀನು ಕರ್ತನ ಶತ್ರುಗಳಿಗೆ ಬಹಳವಾ
ಗಿ ಅಸಂಹಿಸ ಆಸ್ಪದ ಕೊಟ್ಟ ಕಾರಣ, ನಿನಗೆ ಹುಟ್ಟಿದ ಮಗುವು
೧೫ ಸಾಯಲೇ ಸಾಯುವದು, ಅಂದನು. ಆಗ ನಥಾನನು ತನ್ನ ಮ
ನೆಗೆ ಹೋದನು.

ಮತ್ತು ಕರ್ತನು ಊರೀಯನ ಹೆಂಡತಿಯು ದಾವೀದನಿಗೆ ಹೆ
೧೬ ತ್ತ ಕೂಸನ್ನು ತ್ರಸೆ ಪಡಿಸಿದನು. ಆ ಕೂಸು ಬಹು ವೆಥೆ ಪಟ್ಟ
ದ್ದರಿಂದ, ದಾವೀದನು ಅದಕ್ಕೋಸ್ಕರ ದೇವರನ್ನು ಬೇಡಿ ಕೊಂ
ಡನು. ಇದಲ್ಲದೆ ದಾವೀದನು ಉಪವಾಸ ಮಾಡಿ, ಒಳಗೆ ಹೋಗಿ,
೧೭ ರಾತ್ರಿಯೆಲ್ಲಾ ನೆಲದ ಮೇಲೆ ಮಲಗಿದ್ದನು. ಅವನನ್ನು ಎಬ್ಬಿಸ
ಅವನ ಮನೆಯ ಹಿರಿಯರು ಅವನ ಬಳಿಗೆ ಬಂದರು; ಆದರೆ ಅವ
ನು ಒಲ್ಲದೆ ಇದ್ದನು. ಮತ್ತು ಅವರ ಸಂಗಡ ಭೋಜನ ಮಾಡದೆ
೧೮ ಹೋದನು. ಮಗುವು ಏಳನೇ ದಿವಸ ಸತ್ತು ಹೋಯಿತು. ಆಗ,
ಮಗುವು ಸತ್ತು ಹೋಯಿತೆಂದು, ದಾವೀದನ ಸೇವಕರು ಅವನಿಗೆ
ತಿಳಿಸ ಭಯ ಪಟ್ಟರು. ಯಾಕಂದರೆ, ಇಗೋ, ಮಗುವು ಬದುಕಿ
ರಲಾಗಿ ನಾವು ಅವನ ಸಂಗಡ ಮಾತಾಡುವಾಗ, ಅವನು ನಮ್ಮ
ಮಾತನ್ನು ಕೇಳದೆ ಹೋದನು. ಈಗ ಮಗುವು ಸತ್ತು ಹೋ
ಯಿತೆಂದು ನಾವು ಅವನಿಗೆ ಹೇಳಿದರೆ, ಇನ್ನೂ ಎಷ್ಟು ಸಂಕಟ
೧೯ ಪಡುವನೋ! ಅಂದು ಕೊಂಡರು. ಆದರೆ ದಾವೀದನು ತನ್ನ ಸೇ
ವಕರು ಪಿಸುಗುಟ್ಟುವದನ್ನು ನೋಡಿ, ಮಗುವು ಸತ್ತು ಹೋಯಿ
ತೆಂದು ಗ್ರಹಿಸಿ ಕೊಂಡನು. ಆಗ ದಾವೀದನು ತನ್ನ ಸೇವಕರಿಗೆ,
ಮಗುವು ಸತ್ತು ಹೋಯಿತೋ! ಅಂದನು. ಅವರು, ಸತ್ತು ಹೊ
೨೦ ಯಿತು, ಅಂದರು. ಆಗ ದಾವೀದನು ನೆಲದಿಂದ ಎದ್ದು, ಕೊಳೆ
ದು ಕೊಂಡು, ತೈಲವನ್ನು ಹಚ್ಚಿ ಕೊಂಡು, ಬದಲು ವಸ್ತ್ರಗಳನ್ನು
ಧರಿಸಿ ಕೊಂಡು, ಕರ್ತನ ಮನೆಗೆ ಹೋಗಿ, ಅವನಿಗೆ ಅಡ್ಡ ಬಿದ್ದು,
ತನ್ನ ಮನೆಗೆ ಬಂದನು. ಮತ್ತು ಅವನು ಕೇಳಿದಾಗ, ಅವನು
೨೧ ಮುಂದೆ ಇಟ್ಟು ಕೊಟ್ಟಿ ತಿಂದನು. ಅವನ ಸೇವಕರು ಅವನಿಗೆ, ಇ
ದು ಏನು ಕಾರ್ಯ ನೀನು ಮಾಡುವದು! ಮಗುವು ಜೀವದಿಂದ
ಇರುವಾಗ, ನೀನು ಉಪವಾಸವಾಗಿದ್ದು, ಅದಕ್ಕೋಸ್ಕರ ಅಳುತ್ತಿ
ದ್ದಿ; ಆದರೆ ಮಗುವು ಸತ್ತ ಮೇಲೆ, ನೀನು ಎದ್ದು, ಕೊಟ್ಟಿ ತಿಂದಿ,
೨೨ ಅಂದರು. ಅದಕ್ಕವನು, ಮಗುವು ಜೀವದಿಂದ ಇರುವಾಗ, ಅದು
ಬದುಕುವ ಹಾಗೆ, ಕರ್ತನು ನನಗೆ ದಯೆ ಮಾಡುವನೇನೋ! ಎಂ
೨೩ ದು, ಉಪವಾಸ ಮಾಡಿ, ಅತ್ತೆನು. ಆದರೆ ಈಗ ಸತ್ತದೆಯಲ್ಲ!
ನಾನು ಉಪವಾಸ ಮಾಡುವದು ಯಾಕೆ? ನಾನು ಅದನ್ನು ತಿರಿ
ಬರ ಮಾಡ ಬಲ್ಲೆನೋ! ನಾನು ಅದರ ಬಳಿಗೆ ಹೋಗುವೆನು; ಆ
ದರೆ ಅದು ನನ್ನ ಬಳಿಗೆ ತಿರಿಗಿ ಬರುವದಿಲ್ಲ, ಅಂದನು.

೨೪ ಮತ್ತು ದಾವೀದನು ತನ್ನ ಹೆಂಡತಿಯಾದ ಬತ್ಷೆಬಳನ್ನು ಆರ
ರಿಸಿ, ಅವಳ ಬಳಿಗೆ ಹೋಗಿ, ಅವಳ ಸಂಗಡ ಮಲಗಿದನು. ಅವ
ಳು ಒಬ್ಬ ಮಗನನ್ನು ಹೆತ್ತಳು. ಅವನಿಗೆ ಸೊಲೊಮೋನನೆಂಬ
ಹೆಸರಿಟ್ಟನು. ಕರ್ತನು ಅವನನ್ನು ಪ್ರೀತಿ ಮಾಡಿದನು. ಮತ್ತು
೨೫ ಪ್ರವಾದಿಯಾದ ನಥಾನನ ಮುಖಾಂತರ, ಕರ್ತನ ನಿಮಿತ್ತ ಅವನಿ
ಗೆ ಯೆದೀದ್ಯನೆಂದು ಹೆಸರಿಟ್ಟನು.

೨೬ ಆದರೆ ಯೊವಾಬನು ಅಮ್ಮೋನನ ಮಕ್ಕಳ ರಬ್ಬಾತಿನ ಮೇಲೆ
೨೭ ಯುದ್ಧ ಮಾಡಿ, ರಾಜ್ಯದ ಆ ಪಟ್ಟಣವನ್ನು ಹಿಡಿದನು. ಮತ್ತು
ಯೊವಾಬನು ದಾವೀದನಿಗೆ, ನಾನು ರಬ್ಬಾತಿನ ಮೇಲೆ ಯುದ್ಧ
೨೮ ಮಾಡಿ, ನೀರುಗಳ ಪಟ್ಟಣವನ್ನು ಹಿಡಿದಿದ್ದೇನೆ. ಈಗ ನಾನು ಪಟ್ಟ
ಣವನ್ನು ಹಿಡಿದು, ಅದು ನನ್ನ ಹೆಸರಿನಿಂದ ಕರೆಯಲ್ಪಡದ ಹಾಗೆ,
ನೀನು ಜನವನ್ನು ಕೂಡಿಸಿ ಕೊಂಡು, ಬಂದು, ಪಟ್ಟಣವನ್ನು ಮುತ್ತಿ
೨೯ ಗೆ ಹಾಕಿ, ಹಿಡಿ, ಎಂದು ಹೇಳಿ ದೂತರನ್ನು ಕಳುಹಿಸಿದನು. ಹಾ
ಗೆಯೇ ದಾವೀದನು ಜನಕೆಲ್ಲರನ್ನು ಕೂಡಿಸಿ ಕೊಂಡು, ರಬ್ಬಾತಿಗೆ



ಹೋಗಿ, ಅದರ ಮೇಲೆ ಯುದ್ಧ ಮಾಡಿ, ಅದನ್ನು ತೆಗೆದು ಕೊಂ
೩೦ ಡನು. ಆದರ ಅರಸನ ತಲೆಯ ಮೇಲೆ ಇದ್ದ ಕಿರೀಟವನ್ನು ತೆಗೆ
ದು ಕೊಂಡನು. ಅದು ಭಂಗಾರದ್ದಾಗಿ ಒಂದು ತಲಾಂತಿನ ತೂಕ
ವಾಗಿತ್ತು; ರತ್ನಗಳಿಂದ ಕೆತ್ತಲ್ಪಟ್ಟಿತ್ತು. ಅದು ದಾವೀದನ ತಲೆಯ
ಮೇಲೆ ಇರಿಸಲ್ಪಟ್ಟಿತು. ಇದಲ್ಲದೆ ಅವನು ಆ ಪಟ್ಟಣದಿಂದ ಬಹು ಅ
೩೧ ಧಿಕವಾಗಿ ಕೊಳ್ಳೆಯನ್ನು ತಂದನು. ಆದರೆ ಅದರಲ್ಲಿದ್ದ ಜನರ
ನ್ನು ಅವನು ಹೊರಗೆ ತಂದು, ಅವರನ್ನು ಗರಗಸದ ಕೆಲಸಕ್ಕೂ,
ಸಲಿಕೆಯ ಕೆಲಸಕ್ಕೂ, ಕೊಡ್ಲಿಯ ಕೆಲಸಕ್ಕೂ, ಇಟ್ಟಿಗೇ ಭಟ್ಟಿ
ಯ ಕೆಲಸಕ್ಕೂ ಇಟ್ಟನು. ಈ ಪ್ರಕಾರವೇ ಅಮ್ಮೋನನ ಮಕ್ಕ
ಳ ಸಮಸ್ತ ಪಟ್ಟಣಗಳಿಗೂ ಮಾಡಿ, ದಾವೀದನೂ ಜನಕೆಲ್ಲರೂ ಯೆ
ರೂಸಲೇಮಿಗೆ ತಿರಿಗಿ ಬಂದರು.

## ೧೩. ಸಂಧಿ.

೧ ತರುವಾಯ ಏನಾಯಿತಂದರೆ, ದಾವೀದನ ಮಗನಾದ ಅಬ್ಬ
ಲೋಮನಿಗೆ ತಾಮರಳೆಂಬ ಹೆಸರುಳ್ಳ ಸೌಂದರ್ಯವತಿಯಾದ
ಒಬ್ಬ ಸಹೋದರಿ ಇದ್ದಳು. ಅವಳನ್ನು ದಾವೀದನ ಮಗನಾದ
೨ ಅಮ್ಮೋನನು ಪ್ರೀತಿ ಮಾಡಿದನು. ಮತ್ತು ತನ್ನ ಸಹೋದರಿ
ಯಾದ ತಾಮರಳ ನಿಮಿತ್ತ ಸಂಕಟ ಪಟ್ಟು, ಅಸ್ವಸ್ಥವಾದನು.
ಯಾಕಂದರೆ ಅವಳು ಕನ್ನಿಕೆಯಾಗಿದ್ದಳು; ಆದದರಿಂದ ಅವಳ
೩ ನ್ನು ಏನಾದರೂ ಮಾಡ ಅಮ್ಮೋನನಿಗೆ ಕಷ್ಟವಾಗಿತ್ತು. ಆದರೆ
ಅಮ್ಮೋನನಿಗೆ ದಾವೀದನ ಸಹೋದರನಾಗಿರುವ ಷಿಮ್ಯೂನ ಮಗ
ನಾದ ಯೊನದಾಬನೆಂಬ ಹೆಸರುಳ್ಳ ಒಬ್ಬ ಸ್ನೇಹಿತನಿದ್ದನು. ಈ
೪ ಯೊನದಾಬನು ಮಹಾ ಜ್ಞಾನಿಯಾಗಿದ್ದನು. ಇವನು ಅವನಿಗೆ,
ಅರಸನ ಮಗನಾದ ನೀನು ದಿನ ದಿನಕ್ಕೆ ಯಾಕೆ ನಸಿಪಿ ಹೋ
ಗುತ್ತೀ? ನನಗೆ ತಿಳಿಸುವದಿಲ್ಲವೋ! ಅಂದನು. ಅದಕ್ಕೆ ಅಮ್ಮೋನ
ನು ಅವನಿಗೆ, ನಾನು ನನ್ನ ಸಹೋದರನಾಗಿರುವ ಅಬ್ಬಲೋಮ
ನ ಸಹೋದರಿಯಾದ ತಾಮರಳನ್ನು ಪ್ರೀತಿ ಮಾಡುತ್ತೇನೆ, ಅಂ
೫ ದನು. ಆಗ ಯೊನದಾಬನು ಅವನಿಗೆ, ನೀನು ಕೋಗಿಷ್ಟನ ಹಾ
ಗೆ ಮಂಚದ ಮೇಲೆ ಮಲಗು; ನಿನ್ನನ್ನು ನೋಡುವದಕ್ಕೆ ನಿನ್ನ
ತಂದೆ ಬರುವಾಗ, ನೀನು ಅವನಿಗೆ, ನನ್ನ ಸಹೋದರಿಯಾದ
ತಾಮರಳು ಬರುವ ಹಾಗೆ ದಯೆ ಮಾಡ ಬೇಕು; ನಾನು ಅವಳ
ಕೈಯಿಂದ ಉಣ್ಣುವ ಹಾಗೆ, ಅವಳು ನನ್ನ ಕಣ್ಣೆದುರಿನಲ್ಲಿ ಅಡಿ
ಗೆಯನ್ನು ಮಾಡಿ, ನನಗೆ ಆಹಾರ ಕೊಡಲಿ, ಎಂದು ಹೇಳು,
೬ ಅಂದನು. ಅವನು ಅದೇ ಪ್ರಕಾರ ಕೋಗಿಷ್ಟನ ಹಾಗೆ ಮಲಗಿದ
ನು. ಅರಸನು ತನ್ನನ್ನು ನೋಡ ಬಂದಾಗ, ಅಮ್ಮೋನನು ಅರ
ಸನಿಗೆ, ನೀನು ನನ್ನ ಸಹೋದರಿಯಾದ ತಾಮರಳು ಬರುವ ಹಾ
ಗೆ ದಯೆ ಮಾಡ ಬೇಕು, ನಾನು ಅವಳ ಕೈಯಿಂದ ಉಣ್ಣುವ
ಹಾಗೆ, ಅವಳು ನನ್ನ ಕಣ್ಣು ಮುಂದೆ ಎರಡು ಭಕ್ಷ್ಯಗಳನ್ನು
ಮಾಡ ಬರಲಿ, ಅಂದನು.

೭ ಆಗ ದಾವೀದನು ತನ್ನ ಮನೆಯಲ್ಲಿರುವ ತಾಮರಳ ಬಳಿಗೆ
ಮನುಷ್ಯನನ್ನು ಕಳುಹಿಸಿ, ನೀನು ನಿನ್ನ ಸಹೋದರನಾದ ಅ
ಮ್ಮೋನನ ಮನೆಗೆ ಹೋಗಿ, ಅವನಿಗೆ ಅತಿಗೆಯನ್ನು ಮಾಡಿ ಇ
೮ ರು, ಅಂದನು. ಹಾಗೆಯೇ ತಾಮರಳು ತನ್ನ ಸಹೋದರನಾದ
ಅಮ್ಮೋನನ ಮನೆಗೆ ಹೋದಳು. ಅವನು ಮಲಗಿದ್ದನು. ಅವಳು
ಹಿಟ್ಟನ್ನು ತೆಗೆದು ಕೊಂಡು, ಹಿಸಿಕೆ, ಅವನ ಕಣ್ಣು ಮುಂದೆ ನಾ
೯ ದಿ, ಭಕ್ಷ್ಯಗಳನ್ನು ಮಾಡಿದಳು. ಪಾತ್ರೆ ತಕ್ಕೊಂಡು, ಅವನ
ಮುಂದೆ ಇಟ್ಟಿಳು. ಆದರೆ ಅಮ್ಮೋನನು, ನಾನು ಉಣ್ಣುವದಿಲ್ಲ
ಎಂದು ಹೇಳಿ, ನನ್ನ ಬಳಿಯಿಂದ ಎಲ್ಲಾ ಮನುಷ್ಯರನ್ನು ಕಳುಹಿಸಿ
ಬಿಡಿರಿ, ಅಂದನು. ಹಾಗೆಯೇ ಎಲ್ಲರು ಅವನನ್ನು ಬಿಟ್ಟು, ಹೊರಗೆ
೧೦ ಹೋದರು. ಆಗ ಅಮ್ಮೋನನು, ನಾನು ನಿನ್ನ ಕೈಯಿಂದ ಭೋ
ಜಿಸುವ ಹಾಗೆ ಆ ಭಕ್ಷ್ಯಗಳನ್ನು ಕೊಠಡಿಯೊಳಗೆ ತೆಗೆದು
ಕೊಂಡು ಬಾ, ಅಂದನು. ಹಾಗೆಯೇ ತಾಮರಳು ತಾನು ಮಾಡಿ
ದ ಭಕ್ಷ್ಯಗಳನ್ನು ಕೊಠಡಿಯೊಳಗೆ ತನ್ನ ಸಹೋದರನಾದ ಅ
೧೧ ಮ್ಮೋನನ ಬಳಿಗೆ ತಕ್ಕೊಂಡು ಬಂದಳು. ಆದರೆ, ಅವನು ಅವು
ಗಳನ್ನು ಉಣ್ಣುವ ಹಾಗೆ, ಅವಳು ಅವನ ಬಳಿಗೆ ತಂದಾಗ, ಅವ
ನು ಅವಳನ್ನು ಹಿಡಿದು, ಅವಳಿಗೆ, ನನ್ನ ಸಹೋದರಿಯೇ, ನನ್ನ
೧೨ ಸಂಗಡ ಮಲಗು, ಬಾ, ಅಂದನು. ಅದಕ್ಕವಳು, ನನ್ನ ಸಹೋ
ದರನೇ, ಬೇಡ; ನನ್ನನ್ನು ಕುಂದಿಸ ಬೇಡ; ಯಾಕಂದರೆ ಇಸ್ರ
ಯೇಲಲ್ಲಿ ಇಂಥಾ ಕಾರ್ಯ ಮಾಡ ಕೂಡದು; ಇಂಥಾ ಬುದ್ಧಿ
೧೩ ಹೀನವಾದ ಕೆಲಸ ಮಾಡ ಬೇಡ. ನಾನಾದರೆ, ನನ್ನ ನಿಂದೆಯನ್ನು
ಎಲ್ಲಿಗೆ ಹೋಗ ಮಾಡಲಿ; ಇದಲ್ಲದೆ ನೀನು ಇಸ್ರಯೇಲಿನಲ್ಲಿ ಬು
ದ್ಧಿಹೀನನೊಳಗೆ ಒಬ್ಬನ ಹಾಗೆ ಇರುವಿ. ಹಾಗಾದರೆ ಈಗ ದ
ಯೆ ಮಾಡಿ, ಅರಸನ ಸಂಗಡ ಮಾತಾಡು; ಯಾಕಂದರೆ ನಿನ್ನ
೧೪ ಬಳಿಯಿಂದ ನನ್ನನ್ನು ಅಭ್ಯಂತರಿಸುವದಿಲ್ಲ, ಅಂದಳು. ಆದರೆ
ಅವನು ಅವಳ ಮಾತನ್ನು ಕೇಳಲೊಲ್ಲದೆ, ತಾನು ಅವಳಿಗಿಂತ
ಬಲವುಳ್ಳವನಾಗಿದ್ದದರಿಂದ, ಅವಳನ್ನು ಕುಂದಿಸಿ ಅವಳ ಸಂಗಡ
೧೫ ಮಲಗಿದನು.

ಆಗ ಅಮ್ಮೋನನು ಅವಳನ್ನು ಅತ್ಯಂತ ಹಗೆ ಮಾಡಿದನು;
ಅವನು ಅವಳನ್ನು ಹಗೆ ಮಾಡಿದ ಹಗೆಯು ಮೊದಲು ಮಾಡಿ
ದ ಪ್ರೀತಿಗಿಂತ ಅಧಿಕವಾಗಿತ್ತು ಆದದರಿಂದ ಅಮ್ಮೋನನು ಅವ
೧೬ ಳಿಗೆ, ಎದ್ದು, ಹೋಗು, ಅಂದನು. ಆಗಲವಳು ಅವನಿಗೆ, ಇದಕ್ಕೆ
ಕಾರಣವಿಲ್ಲ; ನನಗೆ ಮಾಡಿದ ಆ ಕೆಟ್ಟತನಕ್ಕಿಂತ ನೀನು ನನ್ನ
ನ್ನು ಕಳುಹಿಸಿ ಬಿಡುವ ಈ ಕೆಟ್ಟತನವು ಮತ್ತೂ ಅಧಿಕವಾಗಿದೆ,
೧೭ ಅಂದಳು. ಆದರೆ ಅವನು ಅವಳ ಮಾತನ್ನು ಕೇಳಲೊಲ್ಲದೆ ತ
ನ್ನನ್ನು ಸೇವಿಸುವ ತನ್ನ ದಾಸನನ್ನು ಕರೆದು, ಇವಳನ್ನು ನನ್ನ
ಬಳಿಯಿಂದ ಹೊರಗೆ ತಳ್ಳಿ, ಅವಳ ಹಿಂದೆ ಬಾಗಲು ಮುಚ್ಚಿ, ಬೀ
೧೮ ಗ ಹಾಕಿರಿ, ಅಂದನು. ಅವಳು ವಿಚಿತ್ರವಾದ ವಸ್ತ್ರವನ್ನು ಉ
ಟ್ಟಿದ್ದಳು; ಯಾಕಂದರೆ ಅರಸನ ಕುಮಾರ್ತೆಗಳಾದ ಕನ್ಯಸ್ತ್ರೀ
ಯರು ಇಂಥಾ ನಿಲುವಂಗಿಗಳನ್ನು ಧರಿಸಿ ಕೊಳ್ಳುತ್ತಿದ್ದರು. ಆ
ದರೆ ಅವನ ಸೇವಕನು ಅವಳನ್ನು ಹೊರಗೆ ತಂದು, ಅವಳ ಹಿಂ
ದೆ ಬಾಗಲು ಮುಚ್ಚಿ, ಬೀಗ ಹಾಕಿದನು.

೧೯ ಆಗ ತಾಮರಳು ತನ್ನ ತಲೆಯ ಮೇಲೆ ಮಣ್ಣನ್ನು ಹಾಕಿ
ಕೊಂಡು, ತಾನು ಧರಿಸಿ ಕೊಂಡಿದ್ದ ವಿಚಿತ್ರವಾದ ವಸ್ತ್ರವನ್ನು
ಹರಿದು, ತನ್ನ ಕೈಗಳನ್ನು ತಲೆಯ ಮೇಲೆ ಇಟ್ಟು ಕೊಂಡು, ಅ
೨೦ ಳುತ್ತಾ ಹೋದಳು. ಆಗ ಅವಳ ಸಹೋದರನಾದ ಅಬ್ಬಲೋಮ
ನು ಅವಳಿಗೆ ಹೇಳಿದ್ದೇನಂದರೆ, ನಿನ್ನ ಸಹೋದರನಾದ ಅಮ್ಮೋ
ನನು ನಿನ್ನ ಸಂಗಡ ಇದ್ದನೋ! ನನ್ನ ಸಹೋದರಿಯೇ, ಈಗ
ಮೌನವಾಗಿರು; ಅವನು ನಿನ್ನ ಸಹೋದರನು; ಈ ಕಾರ್ಯ ನಿ
ನ್ನ ಮನಸ್ಸಿನಲ್ಲಿಡ ಬೇಡ, ಅಂದನು. ಹಾಗೆಯೇ ತಾಮರಳು ತ
ನ್ನ ಸಹೋದರನಾದ ಅಬ್ಬಲೋಮನ ಮನೆಯಲ್ಲಿ ಚಿಂತಾಕ್ರಾಂ
ತಳಾಗಿದ್ದಳು.

೨೦ ಅರಸನಾದ ದಾವೀದನು ಈ ವರ್ತಮಾನವನ್ನೆಲ್ಲಾ ಕೇಳಿದಾ
೨೦ ಗ, ಬಹು ಕುಪಿತನಾದನು. ಅನಕೆ ಅಬ್ಷಲೋಮನು ತನ್ನ ಸ
ಹೋದರನಾದ ಅಮ್ನೋನನ ಸಂಗಡ ಒಳ್ಳೇದಾದರೂ ಕೆಟ್ಟದ್ದಾ
ದರೂ ಮಾತಾಡದೆ ಇದ್ದನು. ಯಾಕಂದರೆ ಅವನು ತನ್ನ ಸ
ಹೋದರಿಯಾದ ತಾಮರಳನ್ನು ಕುಂದಿಸಿದ್ದರಿಂದ, ಅಬ್ಷಲೋಮ
೨೩ ನು ಅವನನ್ನು ಹಗೆ ಮಾಡಿದ್ದನು. ಎರಡು ವರುಷ ಹೋದ ತ
ರುವಾಯ ಏನಾಯಿತಂದರೆ, ಅಬ್ಷಲೋಮನಿಗೆ ಎಫ್ರಯಿಮಿನ
ಬಳಿಯಲ್ಲಿರುವ ಬಾಳ್‌ಹಜೋರಿನಲ್ಲಿ ಕುರಿಗಳನ್ನು ಉಣ್ಣೆ ಕತ್ತರಿ
ಸುವವರಿದ್ದರು. ಆದದರಿಂದ ಅಬ್ಷಲೋಮನು ಅರಸನ ಮಕ್ಕಳ
೨೪ ನ್ನೆಲ್ಲಾ ಔತಣಕ್ಕೆ ಕರೆದನು. ಇದಲ್ಲದೆ ಅಬ್ಷಲೋಮನು ಅರಸನ
ಬಳಿಗೆ ಹೋಗಿ, ಇಗೋ, ಈಗ ನಿನ್ನ ಸೇವಕನಿಗೆ ಉಣ್ಣೆ ಕತ್ತರಿ
ಸುವವರು ಇದ್ದಾರೆ; ಅರಸನೂ ತನ್ನ ಸೇವಕರೂ ನಿನ್ನ ಸೇವ
೨೫ ಕನ ಸಂಗಡ ಬರಲಿ. ಅರಸನು ಅಬ್ಷಲೋಮನ ಸಂಗಡ, ಹಾಗಲ್ಲ;
ನನ್ನ ಮಗನೇ, ನಾವು ನಿನಗೆ ಭಾರವಾಗಿರದ ಹಾಗೆ ನಾವೆಲ್ಲರು
ಈಗ ಬರುವದಿಲ್ಲ, ಅಂದನು. ಮತ್ತು ಅವನು ಅತನನ್ನು ಬಲವಂ
ತ ಮಾಡಿದನು; ಆದರೆ ಅವನು ಹೋಗಲೊಲ್ಲದೆ, ಅವನನ್ನು ಆ
೨೬ ಶೀರ್ವದಿಸಿದನು. ಆಗ ಅಬ್ಷಲೋಮನು, ಹಾಗಾದರೆ, ನನ್ನ ಸ
ಹೋದರನಾದ ಅಮ್ನೋನನು ನಮ್ಮ ಸಂಗಡ ಬರಲಿ, ಅಂದನು.
೨೭ ಅರಸನು ಅವನಿಗೆ, ಯಾಕೆ ಅವನು ನಿಮ್ಮ ಸಂಗಡ ಬರ ಬೇಕು!
ಅಂದನು. ಮತ್ತು ಅಬ್ಷಲೋಮನು ಅವನನ್ನು ಬಲವಂತ ಮಾಡಿ
ದ್ದರಿಂದ, ಅವನು ಅಮ್ನೋನನನ್ನೂ ಅರಸನ ಸಮಸ್ತ ಮಕ್ಕಳ
ನ್ನೂ ಅವನ ಸಂಗಡ ಕಳುಹಿಸಿದನು.

೨೮ ಆದರೆ ಅಬ್ಷಲೋಮನು ತನ್ನ ಸೇವಕರಿಗೆ ಆಜ್ಞಾಪಿಸಿ ಹೇಳಿ
ದ್ದೇನಂದರೆ, ನೀವು ನೋಡಿ ಕೊಳ್ಳಿರಿ; ಅಮ್ನೋನನ ಹೃದಯ
ದ್ರಾಕ್ಷೇರಸದಿಂದ ಸಂಭ್ರಮವಾಗಿರುವಾಗ, ನಾನು ನಿಮಗೆ ಅಮ್ನೋ
ನನನ್ನು ಕೊಲ್ಲಿರಿ, ಎಂದು ಹೇಳುತ್ತಲೇ, ಅವನನ್ನು ಕೊಂದು ಹಾ
ಕಿರಿ, ಭಯ ಪಡ ಬೇಡಿರಿ. ನಾನು ನಿಮಗೆ ಆಜ್ಞಾಪಿಸಿದ್ದೇನಲ್ಲ! ಬಲ
೨೯ ವಾಗಿರಿ; ಪರಾಕ್ರಮಿಗಳಾಗಿರ್ರಿ, ಅಂದನು. ಅಬ್ಷಲೋಮನು ಆಜ್ಞಾ
ಪಿಸಿದ ಹಾಗೆಯೇ ಅವನ ಸೇವಕರು ಅಮ್ನೋನನಿಗೆ ಮಾಡಿದರು.
ಆಗ ಅರಸನ ಮಕ್ಕಳೆಲ್ಲರೂ ಎದ್ದು, ತಮ್ಮ ತಮ್ಮ ಹಾಸರ ಕತ್ತೆ
೩೦ ಗಳನ್ನೇರಿ, ಓಡಿ ಹೋದರು. ಆದರೆ ಅವರು ಹಾದಿಯಲ್ಲಿರುವಾ
ಗ, ಅಬ್ಷಲೋಮನು ಅರಸನ ಮಕ್ಕಳನ್ನೆಲ್ಲಾ ಕೊಂದು ಹಾಕಿ
ದ್ದಾನೆ, ಒಬ್ಬನಾದರೂ ಉಳಿಯೆಯಿಲ್ಲ, ಎಂದು ದಾವೀದನಿಗೆ ವರ್ತ
ಮಾನ ಬಂತು.

೩೧ ಆಗ ಅರಸನು ಎದ್ದು, ತನ್ನ ವಸ್ತ್ರಗಳನ್ನು ಹರುಕೊಂಡು,
ನೆಲದ ಮೇಲೆ ಬಿದ್ದನು; ಅವನ ಸೇವಕರೆಲ್ಲರೂ ತಮ್ಮ ವಸ್ತ್ರಗಳ
೩೨ ನ್ನು ಹರುಕೊಂಡು, ಅವನ ಸುತ್ತಲು ನಿಂತರು. ಆದರೆ ದಾವೀ
ದನ ಸಹೋದರನಾದ ಶಿಮ್ಯನ ಮಗನಾಗಿರುವ ಯೊನದಾಬನು
ದಾವೀದನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ನನ್ನ ಸ್ವಾಮಿಗಾ,
ಅರಸನ ಮಕ್ಕಳಾದ ಪ್ರಾಯಸ್ತರೆಲ್ಲರನ್ನು ಕೊಂದು ಹಾಕಿದ
ರೆಂದು, ನೆನಸ ಬೇಡ; ಅಮ್ನೋನನು ಮಾತ್ರವೇ ಸತ್ತನು; ಯಾ
ಕಂದರೆ ಅಬ್ಷಲೋಮನು ತನ್ನ ಸಹೋದರಿಯಾದ ತಾಮರಳನ್ನು
ಅಮ್ನೋನನು ಕುಂದಿಸಿದ ದಿನ ಮೊದಲುಗೊಂಡು ಈ ಕಾರ್ಯವ
೩೩ ನ್ನು ಮಾಡ ತನ್ನ ಮನಸ್ಸಿನಲ್ಲಿ ಸ್ಥಿರ ಮಾಡಿದ್ದಾನೆ. ಆದದರಿಂದ,
ಅರಸಾದ ನನ್ನ ಸ್ವಾಮಿಯೇ, ಅರಸನ ಮಕ್ಕಳೆಲ್ಲರು ಸತ್ತರೆಂ
ಬುವ ಮಾತನ್ನು ನಿನ್ನ ಮನಸ್ಸಿನಲ್ಲಿಡ ಬೇಡ; ಯಾಕಂದರೆ ಅ
ಮ್ನೋನನು ಒಬ್ಬನೇ ಸತ್ತನು, ಅಂದನು.

೩೪ ಆದರೆ ಅಬ್ಷಲೋಮನು ಓಡಿ ಹೋದನು; ಆಗ ಕೋಟವರಿದ್ದ
ಸೇವಕನು ತನ್ನ ಕಣ್ಣುಗಳನ್ನೆತ್ತಿ ನೋಡುವಾಗ, ಇಗೋ, ಅವ
ನ ಹಿಂಭಾಗದಲ್ಲಿ ಬೆಟ್ಟದ ಪಾರ್ಶ್ವದ ಮಾರ್ಗವಾಗಿ ಅನೇಕ
೩೫ ಜನರು ಬರುತ್ತಿದ್ದರು. ಆಗ ಯೊನದಾಬನು ಅರಸನಿಗೆ, ಇ
ಗೋ, ಅರಸನ ಮಕ್ಕಳು ಬರುತ್ತಾರೆ; ನಿನ್ನ ಸೇವಕನು ಹೇಳಿದ
೩೬ ಹಾಗೆಯೇ ಆಯಿತು, ಅಂದನು. ಅವನು ಮಾತಾಡಿ ತೀರಿಸಿ
ದಾಗ, ಇಗೋ, ಅರಸನ ಮಕ್ಕಳು ಬಂದು, ಕಣ್ಣೆತ್ತಿ, ಅತ್ತರು.
ಅರಸನೂ ಅವನ ಸಮಸ್ತ ಸೇವಕರೂ ಮಹಾ ಧ್ವನಿ ಮಾಡಿ,
ಅತ್ತರು.

೩೭ ಆದರೆ ಅಬ್ಷಲೋಮನು ಓಡಿ ಹೋಗಿ, ಗೆಷೂರಿನ ಅರಸನಾ
ಗಿರುವ ಅಮ್ಮಿಹೂದನ ಮಗನಾದ ತಲ್ಮಾಯನ ಬಳಿಗೆ ಹೋದ
ನು. ಮತ್ತು ದಾವೀದನು ದಿನಂಪ್ರತಿಯೆಲ್ಲಿ ತನ್ನ ಮಗನಿಗಾಗಿ
ದುಃಖ ಪಡುತ್ತಿದ್ದನು.

೩೮ ಹೀಗೆಯೇ ಅಬ್ಷಲೋಮನು ಗೆಷೂರಿಗೆ ಓಡಿ ಹೋಗಿ, ಅಲ್ಲಿ
ಮೂರು ವರುಷ ಇದ್ದನು. ಆದರೆ ಅಬ್ಷಲೋಮನಿಗೋಸ್ಕರ ಬ
ಹು ಇಷ್ಟೆ ಗೊಂದಿದ್ದನು; ಯಾಕಂದರೆ ಅಮ್ನೋನನು ಸತ್ತ ಹೋ
ದದರಿಂದ, ಅರಸನಾದ ದಾವೀದನು ಅವನಿಗೋಸ್ಕರ ಆದರಣೆ
ಹೊಂದಿದನು.

## ೧೪. ಸಂಧಿ.

೧ ಆದರೆ ಅರಸನ ಹೃದಯವು ಅಬ್ಷಲೋಮನ ಮೇಲೆ ಇರುವ
ದನ್ನು ಚೆರೂಯಳ ಮಗನಾದ ಯೊವಾಬನು ನೋಡಿದನು.
೨ ಮತ್ತು ಯೊವಾಬನು ತೆಕೋಯಿಗೆ ಮನುಷ್ಯರನ್ನು ಕಳುಹಿಸಿ,
ಅಲ್ಲಿಂದ ಒಬ್ಬ ಜ್ಞಾನವುಳ್ಳ ಸ್ತ್ರೀಯನ್ನು ಕರಸಿ, ಅವಳಿಗೆ, ನೀ
ನು ಸೋಳಾಡುವವಳ ಹಾಗೆ ನಡ ಕೊಂಡು, ದುಃಖದ ವಸ್ತ್ರಗಳ
೩ ನ್ನು ಧರಿಸಿ ಕೊಂಡು, ತಲೆಗೆ ಎಣ್ಣೆಯನ್ನು ಹಚ್ಚಿ ಕೊಳ್ಳದೆ,
ಸತ್ತವನಿಗೋಸ್ಕರ ಅನೇಕ ದಿವಸಗಳಿಂದ ದುಃಖಿಸುವವಳ ಹಾಗಿ
ದ್ದು, ಅರಸನ ಬಳಿಗೆ ಹೋಗಿ, ಅವನ ಸಂಗಡ ಈ ಪ್ರಕಾರ
ಮಾತಾಡು ಎಂದು, ಅವಳು ಹೇಳ ಬೇಕಾದ ಮಾತುಗಳನ್ನು
ಯೊವಾಬನು ಅವಳಿಗೆ ಕಲಿಸಿ ಕೊಟ್ಟನು.

೪ ಹಾಗೆಯೇ ತೆಕೋಯಿನವಳಾದ ಆ ಸ್ತ್ರೀಯು ಅರಸನ ಸಂಗ
ಡ ಮಾತಾಡಿದಳು. ಮತ್ತು ಮೋರೆ ಕೆಳಗಾಗಿ ನೆಲಕ್ಕೆ ಬಿದ್ದು,
ವಂದಿಸಿ, ಅರಸನೇ, ರಕ್ಷಿಸು, ಅಂದಳು. ಅರಸನು ಅವಳಿಗೆ, ನಿನ
೫ ಗೆ ಏನಾಯಿತು! ಅಂದನು. ಅದಕ್ಕವಳು, ನಾನು ನಿಶ್ಚಯವಾಗಿ
ವಿಧವೆಯಾದ ಸ್ತ್ರೀಯು; ನನ್ನ ಗಂಡನು ಸತ್ತು ಹೋಗಿದ್ದಾನೆ.
೬ ಆದರೆ ನಿನ್ನ ಸೇವಕಳಿಗೆ ಇಬ್ಬರು ಮಕ್ಕಳಿದ್ದರು; ಅವರಿಬ್ಬರೂ
ಅಡವಿಯಲ್ಲಿ ಹೋರಾಡಿದರು; ಅವರನ್ನು ಬಿಡಿಸುವವರು ಯಾ
ರೂ ಇಲ್ಲದ್ದರಿಂದ, ಒಬ್ಬನು ಮತ್ತೊಬ್ಬನನ್ನು ಹೊಡೆದು, ಕೊಂ
೭ ದು ಹಾಕಿದನು. ಆದದರಿಂದ, ಇಗೋ, ಗೋತ್ರದವರೆಲ್ಲರು ನಿನ್ನ
ಸೇವಕಳ ಮೇಲೆ ಎದ್ದು, ತನ್ನ ಸಹೋದರನನ್ನು ಹೊಡೆದವನ
ನ್ನು ಅವನ ಸಹೋದರನ ಪ್ರಾಣಕ್ಕೋಸ್ಕರ ನಾವು ಅವನನ್ನು
ಕೊಲ್ಲುವ ಹಾಗೆಯೂ, ಬಾಧ್ಯನನ್ನು ಸಹ ನಾಶನ ಮಾಡಿ ಬಿ
ಡುವ ಹಾಗೆಯೂ, ಅವನನ್ನು ಒಪ್ಪಿಸಿ ಕೊಡೆಂದು, ಹೇಳುತ್ತಾರೆ.



ಹೀಗೆಯೇ ಅವರು ನನಗೆ ಉಳಿದಿರುವ ನನ್ನ ಕೆಂಡವನ್ನು ಆರಿಸಿ,
ಭೂಮಿಯ ಮೇಲೆ ನನ್ನ ಗಂಡನಿಗೆ ಹೆಸರಾದರೂ ಉಳಿಯಿಕೆ
೮ ಯಾದರೂ ಬಿಡುವದಿಲ್ಲ, ಅಂದಳು. ಆಗ ಅರಸನು ಆ ಸ್ತ್ರೀಯ
ಸಂಗಡ, ನೀನು ನಿನ್ನ ಮನೆಗೆ ಹೋಗು; ನಾನು ನಿನಗೋಸ್ಕರ
ಆಜ್ಞಾಪಿಸುತ್ತೇನೆ, ಅಂದನು.

೯ ಆದರೆ ತೆಕೋಯಿನ ಸ್ತ್ರೀಯು ಅರಸನಿಗೆ, ಅರಸನಾದ ನನ್ನ
ಸ್ವಾಮಿಯೇ, ಆ ಅಕ್ರಮವು ನನ್ನ ಮೇಲೆಯೂ ನನ್ನ ತಂದೆಯ
ಮನೆಯ ಮೇಲೆಯೂ ಇರಲಿ; ಅರಸನೂ ಅರಸನ ಸಿಂಹಾಸನ
೧೦ ವೂ ನಿರಾಪರಾಧವಾಗಿರಲಿ, ಅಂದಳು. ಅದಕ್ಕೆ ಅರಸನು, ಯಾ
ವನಾದರೂ ನಿನಗೆ ಏನಾದರೂ ಹೇಳಿದರೆ, ಅವನನ್ನು ನನ್ನ ಬಳಿ
ಗೆ ಕರಕೊಂಡು ಬಾ; ಅವನು ಇನ್ನು ನಿನ್ನ ಗೊತವೆಗೆ ಬಾರದೆ
೧೧ ಇರುವನು, ಅಂದನು. ಮತ್ತು ಅವಳು ರಕ್ತ ವಿಚಾರಕನು ಇನ್ನು
ಸಂಹರಿಸ ಗೊಡದ ಹಾಗೆ, ಅರಸನಾದ ನೀನು ನಿನ್ನ ದೇವರಾದ
ಕರ್ತನನ್ನು ಜ್ಞಾಪಕ ಮಾಡು; ಅವರು ನನ್ನ ಮಗನನ್ನು ನಾಶ
ನ ಮಾಡ ಬಾರದು, ಅಂದಳು. ಅದಕ್ಕವನು, ಕರ್ತನ ಜೀವದಾ
ಣೆ—ನಿನ್ನ ಮಗನ ತಲೆಯ ಕೂದಲಲ್ಲಿ ಒಂದಾದರೂ ನೆಲದ ಮೇ
ಲೆ ಬೀಳುವದಿಲ್ಲ, ಅಂದನು.

೧೨ ಆಗ ಆ ಸ್ತ್ರೀ, ಅರಸನಾದ ನನ್ನ ಕರ್ತನ ಸಂಗಡ ನಿನ್ನ ದಾ
ಸಿಯು ಒಂದು ಮಾತನ್ನು ಹೇಳ ಅಪ್ಪಣೆ ಆಗ ಬೇಕು, ಅಂದ
೧೩ ಳು. ಅವನು, ಹೇಳು, ಅಂದನು. ಆಗ ಆ ಸ್ತ್ರೀಯು ಹೇಳಿದ್ದೇ
ನಂದರೆ, ದೇವರ ಜನರಿಗೆ ವಿರೋಧವಾಗಿ ಅಂಥಾ ಕಾರ್ಯವನ್ನು
ನೀನು ನೆನಸುವದೇನು! ಅರಸನು ತಾನು ಹೊರಡಿಸಿದವನನ್ನು ತಿ
ರಿಗಿ ಕೇರಿಸಿ ಕೊಳ್ಳದೆ ಹೋದದರಿಂದ ಇದನ್ನು ಅಪರಾಧಸ್ತನ
೧೪ ಹಾಗೆಯೇ ಮಾತಾಡುತ್ತಿದ್ದಾನೆ. ಯಾಕಂದರೆ ನಾವು ಸಾಯಲೇ
ಸಾಯ ಬೇಕು; ನೆಲದ ಮೇಲೆ ಚೆಲ್ಲಲ್ಪಟ್ಟು, ತಿರಿಗಿ ಕೂಡಿಸಲ್ಪಡದ
ನೀರಿನ ಹಾಗೆ ಇದ್ದೇವೆ ಆದರೆ ದೇವರು ಪ್ರಾಣವನ್ನು ತಕ್ಕೊ
ಳ್ಳದೆ, ಹೊರಡಿಸಲ್ಪಟ್ಟವನು ಹೊರಡಿಸಲ್ಪಟ್ಟಿರದ ಹಾಗೆ, ಆಲೋ
೧೫ ಚನೆಗಳನ್ನು ಮಾಡುವವನಾಗಿದ್ದಾನೆ. ಈಗ ಜನರು ನನ್ನನ್ನು
ಭಯ ಪಡಿಸಿದ್ದರಿಂದ ಈ ಕಾರ್ಯವನ್ನು ಕುರಿತು ನನ್ನ ಸ್ವಾಮಿ
ಯಾದ ಅರಸನ ಸಂಗಡ ನಿನ್ನ ದಾಸಿಯಾದ ನಾನು ಮಾತಾ
೧೬ ಡುವದಕ್ಕೆ ಬಂದೆನು. ನಿನ್ನ ದಾಸಿ ಅಂದು ಕೊಂಡದ್ದೇನಂದರೆ, ನಾ
ನು ಅರಸನ ಬಳಿಗೆ ಹೋಗುತ್ತೇನೆ; ಒಂದು ಮೇಳೆ ಅರಸನು ತನ್ನ
ದಾಸಿಯ ಕಾರ್ಯವನ್ನು ನಡಿಸುವನು. ಯಾಕಂದರೆ ಅರಸನು
ಕೇಳಿ, ನನ್ನನ್ನೂ ನನ್ನ ಮಗನನ್ನೂ ದೇವರ ಬಾಧ್ಯತೆಯಲ್ಲಿಂ
ದ ನಾಶನ ಮಾಡ ಬೇಕಾದ ಮನುಷ್ಯನ ಕೈಯಿಂದ ತನ್ನ ದಾ
೧೭ ಸಿಯನ್ನು ತಪ್ಪಿಸುವನು. ಮತ್ತು ನಿನ್ನ ದಾಸಿ ಅಂದು ಕೊಂಡ
ದ್ದೇನಂದರೆ, ಅರಸನಾದ ನನ್ನ ಸ್ವಾಮಿಯ ಮಾತು ಆದರಣೆ
ಯಾಗಿರಲಿ; ಯಾಕಂದರೆ ಒಳ್ಳೇದನ್ನೂ ಕೆಟ್ಟದ್ದನ್ನೂ ಕೇಳುವ
ದಕ್ಕೆ ಅರಸನಾದ ನನ್ನ ಸ್ವಾಮಿ ದೇವರ ದೂತನ ಹಾಗೆ ಇದ್ದಾ
ನೆ. ಮತ್ತು ನಿನ್ನ ದೇವರಾದ ಕರ್ತನು ನಿನ್ನ ಸಂಗಡ ಇದ್ದಾನೆ,
ಅಂದಳು.

೧೮ ಆಗ ಅರಸನು ಪ್ರತ್ಯುತ್ತರವಾಗಿ ಆ ಸ್ತ್ರೀಗೆ, ನಾನು ನಿನ್ನ
ನ್ನು ಕೇಳುವ ಕಾರ್ಯ ನನಗೆ ಮಾಜ ಬೇಡ, ಅಂದನು. ಅದಕ್ಕ
೧೯ ವಳು, ಅರಸನಾದ ನನ್ನ ಸ್ವಾಮಿ ಮಾತಾಡಲಿ, ಅಂದಳು. ಅ
ದಕ್ಕೆ ಅರಸನು, ಇದೆಲ್ಲಾದರಲ್ಲಿ ಯೊವಾಬನ ಕೈ ನಿನ್ನ ಸಂಗಡ
ಉಂಟಲ್ಲವೋ! ಅಂದನು. ಆ ಸ್ತ್ರೀ ಪ್ರತ್ಯುತ್ತರವಾಗಿ, ನಿನ್ನ
ಪ್ರಾಣದ ಜೀವದಾಣೆ—ಅರಸನಾದ ನನ್ನ ಸ್ವಾಮಿಯೇ, ನೀನು
ಹೇಳುವವುಗಳಲ್ಲಿ ಒಂದನ್ನಾದರೂ ಯಾವನೂ ಎಡಗೆಗಾದ
ರೂ ಬಲಗೆಗಾದರೂ ತಿರಿಗಿಸ ಕೂಡದು. ಯಾಕಂದರೆ ನಿನ್ನ
೨೦ ಸೇವಕನಾದ ಯೊವಾಬನು ನನಗೆ ಆಜ್ಞಾಪಿಸಿ, ಈ ಸಮಸ್ತ
ಮಾತುಗಳನ್ನು ನಿನ್ನ ಸೇವಕಳಿಗೆ ಹೇಳಿ ಕೊಟ್ಟನು ಈ ಮಾ
ತಿನ ರೂಪವನ್ನು ತಿರಿಗಿಸುವದಕ್ಕೆ ನಿನ್ನ ಸೇವಕನಾದ ಯೊವಾ
ಬನು ಇದನ್ನು ಮಾಡಿದ್ದಾನೆ. ಆದರೆ ಭೂಮಿಯಲ್ಲಿ ನಡಿಯುವ
ದನ್ನೆಲ್ಲಾ ತಿಳಿಯುವದಕ್ಕೆ ದೇವದೂತನ ಜ್ಞಾನದ ಹಾಗೆಯೇ
ನನ್ನ ಕರ್ತನು ಜ್ಞಾನವುಳ್ಳವನಾಗಿದ್ದಾನೆ, ಅಂದಳು.

೨೧ ಆದದರಿಂದ ಅರಸನು ಯೊವಾಬನಿಗೆ, ಇಗೋ, ನಾನು ಈ
ಕಾರ್ಯವನ್ನು ಮಾಡಿದೆನು; ನೀನು ಹೋಗಿ, ಪ್ರಾಯಸ್ತನಾದ
೨೨ ಅಬ್ಷಲೋಮನನ್ನು ತಿರಿಗಿ ಕರಕೊಂಡು ಬಾ, ಅಂದನು. ಆಗ
ಯೊವಾಬನು ಪೊರೆ ಕೆಳಗಾಗಿ ನೆಲದ ಮೇಲೆ ಬಿದ್ದು, ವಂದಿಸಿ,
ಅರಸನನ್ನು ಆಶೀರ್ವದಿಸಿದನು. ಮತ್ತು ಯೊವಾಬನು, ಅರಸನು
ತನ್ನ ಸೇವಕನ ಮಾತಿನ ಪ್ರಕಾರ ಮಾಡಿದ್ದರಿಂದ, ನನ್ನ ಸ್ವಾ
ಮಿಯಾದ ಅರಸನ ಕಣ್ಣುಗಳಲ್ಲಿ ನನಗೆ ದಯೆ ದೊರಕಿತೆಂಬುವ
೨೩ ದು ಈ ಹೊತ್ತು ನಿನ್ನ ಸೇವಕನಿಗೆ ತಿಳಿಯಿತು, ಅಂದನು. ಹಾಗೆ
ಯೇ ಯೊವಾಬನು ಎದ್ದು, ಗೆಷೂರಿಗೆ ಹೋಗಿ, ಅಬ್ಷಲೋಮನ
೨೪ ನ್ನು ಯೆರೂಸಲೇಮಿಗೆ ಕರಕೊಂಡು ಬಂದನು. ಆದರೆ ಅರಸನು,
ಅವನು ತನ್ನ ಮನೆಗೆ ತಿರುಗಿ ಹೋಗಲಿ; ಅವನು ನನ್ನ ಮುಖವ
ನ್ನು ನೋಡ ಬಾರದು, ಅಂದನು. ಆದದರಿಂದ ಅಬ್ಷಲೋಮನು
ಅರಸನ ಮುಖವನ್ನು ನೋಡದೆ, ತನ್ನ ಮನೆಗೆ ತಿರುಗಿ ಹೋ
ದನು.

೨೫ ಸಮಸ್ತ ಇಸ್ರಯೇಲಲ್ಲಿ ಬಹಳ ಹೊಗಳಲ್ಪಡ ತಕ್ಕ ಅಬ್ಷಲೋ
ಮನಿಗೆ ಸಮಾನವಾದ ಸೌಂದರ್ಯವುಳ್ಳವನು ಒಬ್ಬನೂ ಇಲ್ಲ.
ಅವನ ಅಂಗಾಲು ಮೊದಲ್ಗೊಂಡು ನಡುನೆತ್ತಿಯ ವರೆಗೂ ಅವನ
೨೬ ಲ್ಲಿ ಒಂದು ಕಳಂಕವಾದರೂ ಇಲ್ಲದೆ ಇತ್ತು. ಅವನು, ತನ್ನ ತಲೆ
ಯ ಕೂದಲು ಭಾರವಾಗಿದೆ ಎಂದು, ವರುಷ ವರುಷದ ಕಡೆಯ
ಲ್ಲಿ ಬೋಳಿಸಿ ಕೊಳ್ಳುವನು; ಬೋಳಿಸಿ ಕೊಳ್ಳುವಾಗ, ಅವನ ತ
ಲೆಕೂದಲು ಅರಸನ ತೂಕದ ಪ್ರಕಾರ ಇನ್ನೂರು ಬೆಕೆಲು ತೂ
೨೭ ಕವಾಗಿರುವದು. ಅಬ್ಷಲೋಮನಿಗೆ ಮೂರು ಮಂದಿ ಕುಮಾರ
ರೂ, ತಾಮರು ಎಂಬ ಒಬ್ಬ ಕುಮಾರ್ತೆಯೂ ಹುಟ್ಟಿದರು. ಇ
ವಳು ಸೌಂದರ್ಯವುಳ್ಳ ಸ್ತ್ರೀಯಾಗಿದ್ದಳು.

೨೮ ಹೀಗೆಯೇ ಅಬ್ಷಲೋಮನು ಅರಸನ ಮುಖವನ್ನು ನೋಡದೆ,
ಪೂರ್ಣವಾಗಿ ಎರಡು ವರುಷ ಯೆರೂಸಲೇಮಿನಲ್ಲಿ ವಾಸವಾಗಿದ್ದ
೨೯ ನು. ಆದದರಿಂದ ಅಬ್ಷಲೋಮನು ಅರಸನ ಬಳಿಗೆ ತನ್ನನ್ನು ಕಳು
ಹಿಸುವದಕ್ಕೆ, ಯೊವಾಬನನ್ನು, ಕರೇ ಕಳುಹಿಸಿದನು. ಆದರೆ
ಅವನು ಅವನ ಬಳಿಗೆ ಬರಲೊಲ್ಲದೆ ಹೋದನು. ಎರಡನೇ ಸಾರಿ
ಅವನನ್ನು ಕರೇ ಕಳುಹಿಸಿದನು; ಮತ್ತೂ ಅವನು ಬರಲೊಲ್ಲದೆ
೩೦ ಹೋದನು. ಆದದರಿಂದ ಅವನು ತನ್ನ ಸೇವಕರಿಗೆ, ಇಗೋ, ನ
ನ್ನ ಹೊಲಕ್ಕೆ ಸಮೀಪವಾಗಿ ಯೊವಾಬನ ಹೊಲವಿದೆ; ಅದರಲ್ಲಿ ಜ
ವೆ ಗೋಧಿ ಅದೆ; ನೀವು ಹೋಗಿ, ಅದನ್ನು ಬೆಂಕಿಯಿಂದ ಸುಟ್ಟು
ಬಿಡಿರಿ, ಅಂದನು. ಹಾಗೆಯೇ ಅಬ್ಷಲೋಮನ ಸೇವಕರು ಆ ಹೊ
೩೧ ಲಕ್ಕೆ ಬೆಂಕಿಯನ್ನು ಹಚ್ಚಿದರು. ಆಗ ಯೊವಾಬನು ಎದ್ದು, ಅ

ಬ್ಬಲೋಮನ ಮನೆಗೆ ಬಂದು, ಅವನಿಗೆ, ನನ್ನ ಹೊಲವನ್ನು ನಿನ್ನ
ಸೇವಕರು ಬೆಂಕಿಯಿಂದ ಸುಟ್ಟು ಬಿಟ್ಟಿದ್ದೇನು! ಎಂದು ಕೇಳಿದನು.
೩೦ ಅಬ್ಷಲೋಮನು ಯೊವಾಬನಿಗೆ, ಇಗೋ, ನಾನು ಗೆಷೂರಿನಿಂ
ದ ಯಾಕೆ ಬಂದೆನೆಂದು, ಅರಸನಿಗೆ ಹೇಳ್ಳ ನಿನ್ನನ್ನು ಕಳ್ಳುಹಿಸು
ವ ಹಾಗೆ, ಇಲ್ಲಿಗೆ ಬಾ ಎಂದು, ನಿನ್ನನ್ನು ಕಳೇಕಳ್ಳುಹಿಸಿದೆನು.
ನಾನು ಇನೂಂ ಅಲ್ಲಿಯೇ ಇದ್ದಕೆ, ನನಗೆ ಉತ್ತಮವಾಗಿತ್ತು. ಈ
ಗ ನಾನು ಅರಸನ ಮುಖವನ್ನು ನೋಡ ಬೇಕು; ಮತ್ತು ನನ್ನಲ್ಲಿ
ಅಕ್ರಮ ಇದ್ದಕೆ, ಅವನು ನನ್ನನ್ನು ಕೊಂದು ಹಾಕಲಿ, ಅಂದನು
೩೩ ಹಾಗೆಯೇ ಯೊವಾಬನು ಅರಸನ ಬಳ್ಳಿಗೆ ಹೋಗಿ ತಿಳ್ಳಿಸಿದ್ದರಿಂದ,
ಅರಸನು ಅಬ್ಷಲೋಮನನ್ನು ಕರಸಿದನು. ಆಗಲವನು ಅರಸನ
ಬಳ್ಳಿಗೆ ಬಂದು, ತನ್ನ ಮುಖವನ್ನು ನೆಲದ ಮಟ್ಟಿಗೂ ಬೊಗ್ಗಿಸಿ,
ವಂದಿಸಿದನು. ಆಗ ಅರಸನು ಅಬ್ಷಲೋಮನನ್ನು ಮುದ್ದಿಟ್ಟು
ಕೊಂಡನು.

## ೧೫. ಸಂಧಿ.

೧ ಇದರ ತರುವಾಯ ಏನಾಯಿತಂದರೆ, ಅಬ್ಷಲೋಮನು ತನ
ಗೋಸ್ಕರ ರಥಗಳನ್ನೂ, ಕುದುರೆಗಳನ್ನೂ, ತನ್ನ ಮುಂದೆ ಓಡ
೨ ಐವತ್ತು ಮಂದಿ ಸೇವಕರನ್ನೂ ಸಿದ್ಧ ಮಾಡಿ ಕೊಂಡನು. ಇದ
ಲ್ಲದೆ ಅಬ್ಷಲೋಮನು ಹೊತ್ತುಂಟೆ ಎದ್ದು, ಬಾಗಲ ಬಳ್ಳಿಯ ನಿಂತು
ಕೊಂಡು, ವ್ಯಾಜ್ಯ ಉಂಟಾದವನು ಯಾವನಾದರೂ ನ್ಯಾಯ
ಕೋಸ್ಕರ ಅರಸನ ಬಳ್ಳಿಗೆ ಬರುವವನಾಗಿದ್ದರೆ, ಅವನನ್ನು ಕರೆ
೩ ದು, ನೀನು ಯಾವ ಪಟ್ಟಣದವನೆಂದು, ಕೇಳುವನು. ಅದಕ್ಕವನು,
ನಿನ್ನ ಸೇವಕನು ಇಸ್ರಯೇಲ ಕುಲಗಳ್ಳಲ್ಲಿ ಒಬ್ಬನೆಂದು ಹೇಳ್ಳಿದರೆ,
ಅಬ್ಷಲೋಮನು ಅವನಿಗೆ, ನೋಡು, ನಿನ್ನ ಕಾರ್ಯಗಳು ಬಳ್ಳೇ
ವೂ ಯುಕ್ತವೂ ಆದವುಗಳು; ಆದರೆ ಅರಸನ ಬಳ್ಳಯಲ್ಲಿ ನಿನ್ನ
೪ ನ್ನು ವಿಚಾರಿಸುವದಕ್ಕೆ ಯಾವನೂ ಇಲ್ಲ, ಅನ್ನುವನು. ಇದ್ದಲ್ಲ
ದೆ ಅಬ್ಷಲೋಮನು, ನಾನು ದೇಶದ ಮೇಲೆ ನ್ಯಾಯಾಧಿಪತಿಯಾ
ಗಿ ನೇಮಿಸಲ್ಪಟ್ಟಿದ್ದರೆ, ಉತ್ತಮ; ಆಗ ವ್ಯಾಜ್ಯವಾದರೂ ನ್ಯಾಯ
ವಿಚಾರಣೆಯಾದರೂ ಇದ್ದ ಪ್ರತಿ ಮನುಷ್ಯನು ನನ್ನ ಬಳ್ಳಿಗೆ ಬಂ
ದರೆ, ನಾನು ಅವನಿಗೆ ನೀತಿಯಾಗಿ ತೀರಿಸುವೆನು, ಅನ್ನುವನು.
೫ ಮತ್ತು ಏನಾಯಿತಂದರೆ, ಯಾವನಾದರೂ ತನಗೆ ಅಡ್ಡ ಬೀಳ್ಳ
ತನ್ನ ಬಳ್ಳಿಗೆ ಬಂದರೆ, ತನ್ನ ಕೈಯನ್ನು ಚಾಚಿ, ಅವನನ್ನು ಹಿಡಿ
೬ ದು, ಮುದ್ದಿಟ್ಟು ಕೊಳ್ಳುತ್ತಿದ್ದನು. ಈ ಪ್ರಕಾರ ಅಬ್ಷಲೋಮನು
ನ್ಯಾಯಕ್ಕೋಸ್ಕರ ಅರಸನ ಬಳ್ಳಿಗೆ ಬರುವ ಇಸ್ರಯೇಲ್ಯರೆಲ್ಲ
ರಿಗೆ ಮಾಡಿದನು. ಹೀಗೆ ಅಬ್ಷಲೋಮನು ಇಸ್ರಯೇಲ್ಯರ ಹೃದ
ಯಗಳನ್ನು ಕದ್ದು ಕೊಂಡನು.
೭ ಆದರೆ ನಾಲ್ಕು ವರುಷಗಳಾದ ತರುವಾಯ ಅಬ್ಷಲೋಮನು
ಅರಸನಿಗೆ, ನಾನು ಕರ್ತನಿಗೆ ಮಾಡಿ ಕೊಂಡಿದ್ದ ನನ್ನ ಹರಕೆಯ
ನ್ನು ಹೆಬ್ರೋನಿನಲ್ಲಿ ಸಲ್ಲಿಸುವದಕ್ಕೆ ಹೋಗ ಅಪ್ಪಣೆ ಕೊಡ
೮ ಬೇಕು. ಯಾಕಂದರೆ ಕರ್ತನು ನನ್ನನ್ನು ಯೆರೂಸಲೇಮಿಗೆ ತಿ
ರಿಗಿ ಬರಲೇ ಬರ ಮಾಡಿದರೆ, ನಾನು ಕರ್ತನನ್ನು ಸೇವಿಸುವೆನೆಂ
ದು, ನಿನ್ನ ಸೇವಕನು ಅರಾಮ್ಯ ದೇಶದ ಗೆಷೂರಿನಲ್ಲಿ ವಾಸಿಸಿರು
೯ ವಾಗ, ಹರಿಕೆ ಮಾಡಿ ಕೊಂಡಿದ್ದನು, ಅಂದನು. ಅರಸನು ಅವನಿ
ಗೆ, ಸಮಾಧಾನವಾಗಿ ಹೋಗು, ಅಂದನು. ಆಗ ಅವನು ಎದ್ದು,
೧೦ ಹೆಬ್ರೋನಿಗೆ ಹೋದನು. ಆದರೆ ಅಬ್ಷಲೋಮನು ಇಸ್ರಯೇಲಿನ
ಸಮಸ್ತ ಕುಲಗಳ್ಳಿಗೆ ಪಾಳ್ಳತಿಗಾರರನ್ನು ಕಳ್ಳುಹಿಸಿ, ಅವರಿಗೆ, ನೀ
ವು ತುತೂರಿಯ ಶಬ್ದ ಕೇಳ್ಳಿದಾಗ, ಅಬ್ಷಲೋಮನು ಹೆಬ್ರೋನಿನ
ಲ್ಲಿ ಆಳ್ಳುತ್ತಾನೆಂದು ಹೇಳ್ಳಿರಿ, ಅಂದನು.
೧೧ ಅಬ್ಷಲೋಮನ ಸಂಗಡ ಯೆರೂಸಲೇಮಿನಿಂದ ಕರೆಯಲ್ಪಟ್ಟ
ಇನ್ನೂರು ಮಂದಿ ಜನರು ಹೋದರು. ಆದರೆ ಅವರು ನಿರ್ವಂ
೧೨ ಚನೆಯುಳ್ಳವರಾಗಿ ಏನೂ ತಿಳ್ಳಿಯದೆ ಇದ್ದರು. ಅಬ್ಷಲೋಮ
ನು ಬಲಿಗಳ್ಳನ್ನು ಅರ್ಪಿಸುತ್ತಿರುವಾಗ, ದಾವೀದನ ಯೋಚನೆ ಕ
ರ್ತನಾಗಿರುವ ಗಿಲೋನಿಯನಾದ ಅಹಿತೋಫೆಲನನ್ನು ಗಿಲೋ
ವೆಂಬ ಅವನ ಪಟ್ಟಣದಿಂದ ಕರೇಕಳ್ಳುಹಿಸಿದನು. ಮತ್ತು ಅಬ್ಷಲೋ
ಮನ ಸಂಗಡ ಕೂಡುವ ಜನರು ಆಗಾಗ್ಯೆ ಹೆಚ್ಚಿದ್ದರಿಂದ ಬಳ್ಳಸಂ
ಚಿನ ಗುಂಪು ಬಲವಾಯಿತು.
೧೩ ಆದರೆ ದಾವೀದನ ಬಳ್ಳಿಗೆ ಒಬ್ಬ ದೂತನು ಬಂದು, ಇಸ್ರಯೇಲ
ಮನುಷ್ಯರ ಹೃದಯಗಳು ಅಬ್ಷಲೋಮನ ಕಡೆಗಾದವು, ಅಂದ
೧೪ ನು. ಆಗ ದಾವೀದನು ಯೆರೂಸಲೇಮಿನಲ್ಲಿ ತನ್ನ ಹತ್ರ ಇರುವ
ತನ್ನ ಸಮಸ್ತ ಸೇವಕರಿಗೆ, ಏಳ್ಳಿರಿ, ನಾವು ಓಡಿ ಹೋಗುವ; ಇ
ಲ್ಲದಿದ್ದರೆ, ಅಬ್ಷಲೋಮನ ಕೈಗೆ ತಪ್ಪಿಸಿ ಕೊಂಡು ಹೋಗಲಾರೆವು;
ಅವನು ಥಗ್ಗನೆ ನಮ್ಮನ್ನು ಹಿಡಿದು, ನಮ್ಮ ಮೇಲೆ ಕೇಡನ್ನು ಬರ
ಮಾಡಿ, ಪಟ್ಟಣವನ್ನು ಕತ್ತೀ ಬಾಯಿಂದ ಹೊಡೆಯದ ಹಾಗೆ, ಹೊ
೧೫ ರಟು ಹೋಗ ತ್ವರೆ ಮಾಡಿರಿ, ಅಂದನು. ಆಗ ಅರಸನ ಸೇವಕ
ರು ಅರಸನಿಗೆ, ಇಗೋ, ಅರಸನಾದ ನಮ್ಮ ಸ್ವಾಮಿ ನಮಗೆ ಏ
ನೇನು ಆಜ್ಞಾಪಿಸುವನೋ, ಅದನ್ನು ಮಾಡ ನಿನ್ನ ಸೇವಕರು ಸಿ
ದ್ಧವಾಗಿದ್ದೇವೆ, ಅಂದರು.
೧೬ ಮತ್ತು ಅರಸನು ಮನೆಗೆ ಕಾವಲಿ ಇರ ಉಪಪತ್ನಿಗಳಾದ ಪ
ತ್ತು ಮಂದಿ ಸ್ತ್ರೀಯರನ್ನು ಬಿಟ್ಟು, ತಾನೂ ತನ್ನ ಮನೆಯವರೆ
ಲ್ಲರೂ ತನ್ನ ಪಾದಗಳ ಹತ್ತರ ಹೊರಟು ಹೋದರು. ಅರಸ
೧೭ ನೂ ಅವನ ಹಿಂದೆ ಸಮಸ್ತ ಜನರೂ ಹೊರಟು ಹೋಗಿ, ದೂರ
ವಾದ ಸ್ಥಳದಲ್ಲಿ ನಿಂತರು. ಅವನ ಸಮಸ್ತ ಸೇವಕರೂ ಸಮಸ್ತ
ಕೆರೇತ್ಯರೂ ಸಮಸ್ತ ಪಿಲೆತಿಯರೂ, ಅವನ ಹಿಂದೆ ಗಾತಿನಿಂದ
ತನ್ನ ಸಂಗಡ ಬಂದ ಗಿತ್ತಿಯರಾದ ಆರು ನೂರು ಮಂದಿಯೂ
ಅರಸನ ಮುಂದೆ ನಡೆದರು. ಆಗಲರಸನು ಗಿತ್ತಿಯನಾದ ಇತ್ತಾ
೧೮ ಯನ್ನು ನೋಡಿ, ನೀನು ನಮ್ಮ ಸಂಗಡ ಬರುವದು ಯಾಕೆ! ನಿ
ನ್ನ ಸ್ಥಳಕ್ಕೆ ಹಿಂದಿರುಗಿ ಹೋಗಿ, ಅರಸನ ಸಂಗಡ ಇರು. ಯಾ
ಕಂದರೆ ನೀನು ಕೆರಹಿಡಿಯಲ್ಪಟ್ಟವನಾದ ಅನ್ಯ ದೇಶಸ್ಥನು, ಅಂದ
೧೯ ನು. ನೀನು ನಿನ್ನೆ ಬಂದವನಾದದರಿಂದ, ನಮ್ಮ ಸಂಗಡ ಹೋಗ
ನಾನು ನಿನ್ನನ್ನು ತಿರುಗಾಡಿಸುವದು ಯಾಕೆ! ನಾನು ಎಲ್ಲಿಗೆ ಹೋ
ಗ ಬೇಕಾದರೆ, ಅಲ್ಲಿಗೆ ಹೋಗುವೆನು. ನೀನು ನಿನ್ನ ಸಹೋದರನ
ನ್ನು ಕರಕೊಂಡು, ಹಿಂದಕ್ಕೆ ಹೋಗು; ಕೃಪೆಯೂ ಸತ್ಯವೂ ನಿ
೨೦ ನ್ನ ಸಂಗಡ ಇರಲಿ, ಅಂದನು. ಆದರೆ ಇತ್ತಾಯಿ ಅರಸನಿಗೆ ಪ್ರತ್ಯು
ತ್ತರವಾಗಿ, ಕರ್ತನ ಜೀವದಾಣೆಯೂ ಅರಸನಾದ ನನ್ನ ಸ್ವಾ
ಮಿಯ ಜೀವದಾಣೆಯೂ--ಅರಸನಾದ ನನ್ನ ಸ್ವಾಮಿ ಎಲ್ಲಿ
ಇರುವನೋ, ಸಾವಾದರೂ, ಬದುಕಾದರೂ, ನಿಶ್ಚಯವಾಗಿ ಅಲ್ಲಿ
೨೧ ನಿನ್ನ ಸೇವಕನು ಇರುವನು, ಅಂದನು. ಆಗ ದಾವೀದನು ಇತ್ತಾ
ಯಿಗೆ, ನೀನು ಹೋಗಿ, ದಾಟು, ಅಂದನು. ಆದದರಿಂದ ಗಿತ್ತಿಯ
ನಾದ ಇತ್ತಾಯೂ, ಅವನ ಸಮಸ್ತ ಮನುಷ್ಯರೂ, ಅವನ ಸಂ
ಗಡ ಇರುವ ಸಮಸ್ತ ಚಿಕ್ಕವರೂ ಕೂಡಾ ದಾಟಿ ಹೋದರು.



೨೩ ಜನರೆಲ್ಲಾ ದಾಟಿ ಹೋಗುವಾಗ, ದೇಶದವರೆಲ್ಲಾ ಮಹಾ ಧ್ವನಿ
ಯಾಗಿ ಅತ್ತರು. ಅರಸನು ಕಿದ್ರೋನು ಹಳ್ಳವನ್ನು ದಾಟಿದ
ನು; ಹಾಗೆಯೇ ಅವನ ಜನರೆಲ್ಲರೂ ದಾಟಿ ಅರಣ್ಯದ ಮಾರ್ಗ
ವಾಗಿ ನಡೆದು ಹೋದರು.
೨೪ ಮತ್ತು, ಇಗೋ, ಚದೋಕನೂ, ಅವನ ಸಂಗಡ ಇರುವ ಸ
ಮಸ್ತ ಲೇವ್ಯರೂ ದೇವರ ಒಡಂಬಡಿಕೆಯ ಪೆಟ್ಟಿಗೆಯನ್ನು ಹೊ
ತ್ತು ಕೊಂಡು ಬಂದು, ಇಳ್ಳಿಸಿದರು. ಆದರೆ ಅಬ್ಯಾತಾರನು ಜನ
ಲ್ಲರು ಪಟ್ಟಣದಿಂದ ದಾಟಿ ತೀರುವ ಪರ್ಯಂತರ ಮುಂದೆ ನಡೆ
೨೫ ಯುತ್ತಿದ್ದನು. ಆಗ ಅರಸನು ಚದೋಕನಿಗೆ, ದೇವರ ಪೆಟ್ಟಿಗೆ
ಯನ್ನು ಪಟ್ಟಣಕ್ಕೆ ತಿರಿಗಿ ತಕ್ಕೊಂಡು ಹೋಗು. ಕರ್ತನ ಕ
ಣ್ಣುಗಳ್ಳ ಮುಂದೆ ನನಗೆ ಕೃಪೆ ದೊರಕಿದರೆ, ಅವನು ನನ್ನನ್ನು
ತಿರಿಗಿ ಬರ ಮಾಡಿ, ಅದನ್ನೂ ತನ್ನ ವಾಸ ಸ್ಥಳವನ್ನೂ ನನಗೆ
೨೬ ತೋರಿಸುವನು. ಒಂದು ವೇಳೆ ಅವನು, ನಿನ್ನಲ್ಲಿ ನನಗೆ ಇಷ್ಟವಿ
ಲ್ಲವೆಂದು ಹೇಳ್ಳಿದರೆ, ಇಗೋ, ನಾನಿದ್ದೇನೆ; ಅವನು ತನ್ನ ದೃಷ್ಟಿ
೨೭ ಗೆ ಯುಕ್ತವಾದ ಹಾಗೆ ನನಗೆ ಮಾಡಲಿ, ಅಂದನು. ಮತ್ತು ಅರ
ಸನು ಯಾಜಕನಾದ ಚದೋಕನಿಗೆ, ನೀನು ದರ್ಶಿಯಲ್ಲವೇ!
ನೀನು ಸಮಾಧಾನದಿಂದ ಪಟ್ಟಣಕ್ಕೆ ತಿರಿಗಿ ಹೋಗು; ಇದಲ್ಲದೆ ನಿ
ನ್ನ ಇಬ್ಬರು ಮಕ್ಕಳ್ಳಾದ ಅಹಿಮಾಚನೂ, ಅಬ್ಯಾತಾರನ ಮಗ
೨೮ ನಾದ ಯೊನತಾನನೂ ನಿನ್ನ ಸಂಗಡ ಹೋಗಲಿ. ಇಗೋ, ನ
ನಗೆ ತಿಳ್ಳಿಸುವದಕ್ಕೆ ನಿಮ್ಮ ಬಳ್ಳಿಯಿಂದ ವರ್ತಮಾನ ಬರುವ ಮ
೨೯ ಟ್ಟಿಗೂ, ನಾನು ಅರಣ್ಯದ ಪೈಲಲ್ಲಿ ಇರುವೆನು, ಅಂದನು. ಹಾ
ಗೆಯೇ ಚದೋಕನೂ ಅಬ್ಯಾತಾರನೂ ದೇವರ ಪೆಟ್ಟಿಗೆಯನ್ನು
ತಿರಿಗಿ ಯೆರೂಸಲೇಮಿಗೆ ತಕ್ಕೊಂಡು ಹೋಗಿ, ಅಲ್ಲಿದ್ದರು.
೩೦ ಆದರೆ ದಾವೀದನು ಅಳ್ಳುತ್ತಾ, ತನ್ನ ಮುಖವನ್ನು ಮುಚ್ಚಿ
ಕೊಂಡು, ಬರಿಗಾಲಾಗಿ ಇಳ್ಳೇಗುಡ್ಡವನ್ನು ಏರಿದನು. ಅವನ ಸಂ
ಗಡ ಇರುವ ಸಮಸ್ತ ಜನರೂ ತಮ್ಮ ತಮ್ಮ ಮುಖಗಳ್ಳನ್ನು ಮು
೩೧ ಚ್ಚಿ ಕೊಂಡು, ಅಳ್ಳುತ್ತಾ, ಮೇಲಕ್ಕೆ ಏರಿದರು. ಮತ್ತು ಅಹಿತೋ
ಫೆಲನು ಅಬ್ಷಲೋಮನ ಒಳ್ಳಯಲ್ಲಿ ಬಳ್ಳಸಂಚಿನವರ ಸಂಗಡ ಇ
ದ್ದಾನೆಂದು, ದಾವೀದನಿಗೆ ತಿಳ್ಳಿಸಲ್ಪಟ್ಟಾಗ, ದಾವೀದನು, ಕರ್ತನೇ,
ಅಹಿತೋಫೆಲನ ಆಲೋಚನೆ ಹುಚ್ಚು ತನವಾಗಲಿ, ಅಂದನು.
೩೨ ದಾವೀದನು ಪರ್ವತಾಗ್ರಕ್ಕೆ ಬಂದು, ಅಲ್ಲಿ ದೇವರಿಗೆ ಅಡ್ಡ ಬಿ
ದ್ದಾಗ, ಏನಾಯಿತಂದರೆ, ಇಗೋ, ಅರ್ಕಿಯನಾದ ಹುಷಾಯಿ
ತನ್ನ ಅಂಗಿಯನ್ನು ಹರುಕೊಂಡು, ತನ್ನ ತಲೆಯ ಮೇಲೆ ಮಣ್ಣು
೩೩ ಹೊಯಿಕೊಂಡು, ಅವನನ್ನು ಎದುರ್ಗೊಳ್ಳ ಬಂದನು. ಆಗ ದಾ
ವೀದನು ಅವನಿಗೆ ಹೇಳ್ಳಿದ್ದೇನಂದರೆ, ನೀನು ನನ್ನ ಸಂಗಡ ಬಂದರೆ,
ನನಗೆ ಭಾರವಾಗಿರುವಿ; ನೀನು ಪಟ್ಟಣಕ್ಕೆ ತಿರಿಗಿ ಹೋಗಿ, ಅಬ್ಷ
೩೪ ಲೋಮನಿಗೆ, ಅರಸನೇ, ನಾನು ನಿನ್ನ ಸೇವಕನಾಗಿರುವೆನು. ನಾ
ನು ಇಂದಿನ ಮಟ್ಟಿಗೂ ಹ್ಯಾಗೆ ನಿನ್ನ ತಂದೆಗೆ ಸೇವಕನಾಗಿದ್ದೆ
ನೋ, ಹಾಗೆಯೇ ಈಗ ನಿನ್ನ ಸೇವಕನಾಗಿರುವೆನು, ಎಂದು ಹೇ
ಳ್ಳಿದರೆ, ನೀನು ನನಗೋಸ್ಕರ ಅಹಿತೋಫೆಲನ ಆಲೋಚನೆಯ
೩೫ ನ್ನು ವ್ಯರ್ಥ ಮಾಡ ಬಹುದು. ಅಲ್ಲಿ ಯಾಜಕರಾದ ಚದೋಕ
ನೂ ಅಬ್ಯಾತಾರನೂ ನಿನ್ನ ಬಳ್ಳಿಯಲ್ಲಿ ಇಲ್ಲವೋ! ಆದದರಿಂದ ನೀ
ನು ಅರಸನ ಮನೆಯಲ್ಲಿ ಯಾವ ವರ್ತಮಾನವನ್ನು ಕೇಳ್ಳುತ್ತೀ
ಯೋ, ಅದನ್ನು ಯಾಜಕರಾದ ಚದೋಕನಿಗೂ ಅಬ್ಯಾತಾರನಿ
೩೬ ಗೂ ತಿಳ್ಳಿಸು. ಇಗೋ, ಅಲ್ಲಿ ಅವರ ಸಂಗಡ ಅವರ ಇಬ್ಬರು ಮ
ಕ್ಕಳು ಇದ್ದಾರೆ—ಚದೋಕನ ಮಗನಾದ ಅಹಿಮಾಚನೂ, ಅಬ್ಯಾ
ತಾರನ ಮಗನಾದ ಯೊನತಾನನೂ. ನೀವು ಕೇಳ್ಳಿದ ವರ್ತಮಾ
ನವನ್ನೆಲ್ಲಾ ಅವರ ಕೈಯಿಂದ ನನಗೆ ಹೇಳ್ಳಿ ಕಳ್ಳುಹಿಸ ಬೇಕು, ಅಂ
೩೭ ದನು. ಹಾಗೆಯೇ ದಾವೀದನ ಸ್ನೇಹಿತನಾದ ಹುಷಾಯಿ ಪಟ್ಟ
ಣಕ್ಕೆ ಬಂದನು; ಮತ್ತು ಅಬ್ಷಲೋಮನು ಯೆರೂಸಲೇಮಿಗೆ
ಬಂದನು.

## ೧೬. ಸಂಧಿ.

೧ ದಾವೀದನು ಬೆಟ್ಟದ ತುದಿಯಿಂದ ಸ್ವಲ್ಪ ದೂರ ಹೋದಾಗ,
ಮೆಫಿಬೋಷತನ ಸೇವಕನಾದ ಜೀಬನು ಸಬರ ಕಟ್ಟಿದ ಎರಡು
ಕತ್ತೆಗಳ್ಳನ್ನು ಹೊಡೆ ಕೊಂಡು ಬಂದು, ಅವನನ್ನು ಎದುರ್ಗೊಂಡ
ನು; ಅವುಗಳ ಮೇಲೆ ಇನ್ನೂರು ಕೊಟ್ಟಿಗಳ್ಳೂ, ಒಣಗಿದ ನೂ
ರು ದ್ರಾಕ್ಷೇ ಗೊನೆಗಳ್ಳೂ, ವಸಂತ ಕಾಲದ ನೂರು ಹಣ್ಣುಗ
೨ ಳ್ಳೂ, ಒಂದು ಶಿದ್ದಿಗೆ ದ್ರಾಕ್ಷೇರಸವೂ ಇದ್ದವು. ಅರಸನು ಜೀಬ
ನಿಗೆ, ಇವು ಯಾಕೆ! ಅಂದನು. ಅದಕ್ಕೆ ಜೀಬನು, ಕತ್ತೆಗಳು
ಅರಸನ ಮನೆಯವರು ಹತ್ತುವದಕ್ಕೂ, ಆ ಕೊಟ್ಟಿಗಳ್ಳೂ ವ
ಸಂತ ಕಾಲದ ಫಲಗಳ್ಳೂ ಪಾಯಸ್ತರು ತಿನ್ನುವದಕ್ಕೂ, ದ್ರಾ
ಕ್ಷೇರಸವು ಅರಣ್ಯದಲ್ಲಿ ದಣಿದವರು ಕುಡಿಯುವದಕ್ಕೂ, ಅಂದ
೩ ನು. ಆಗ ಅರಸನು ಅವನನ್ನು ನಿನ್ನ ಯಜಮಾನನ ಕುಮಾರ
ನು ಎಲ್ಲಿದ್ದಾನೆಂದು, ಕೇಳ್ಳಿದನು. ಜೀಬನು ಅರಸನಿಗೆ, ಇಗೋ,
ಅವನು ಯೆರೂಸಲೇಮಿನಲ್ಲಿದ್ದಾನೆ. ಯಾಕಂದರೆ ಈ ಹೊತ್ತು
ಇಸ್ರಯೇಲಿನ ಮನೆಯವರು ನನ್ನ ತಂದೆಯ ರಾಜ್ಯವನ್ನು ನನ
೪ ಗೆ ತಿರಿಗಿ ಕೊಡುವರೆಂದು ಹೇಳ್ಳಿ ಕೊಂಡನು, ಅಂದನು. ಆಗ ಅ
ರಸನು ಜೀಬನಿಗೆ, ಇಗೋ, ಮೆಫಿಬೋಷತನಿಗೆ ಉಂಟಾದದ್ದೆಲ್ಲಾ
ನಿನ್ನದಾಯಿತು, ಅಂದನು. ಅದಕ್ಕೆ ಜೀಬನು, ಅರಸನಾದ ನನ್ನ
ಸ್ವಾಮಿಯೇ, ನಾನು ಅಡ್ಡ ಬೀಳ್ಳುತ್ತೇನೆ; ನಿನ್ನ ಕಣ್ಣುಗಳ್ಳಲ್ಲಿ
ನನಗೆ ದಯೆ ದೊರಕಲಿ, ಅಂದನು.
೫ ಅರಸನಾದ ದಾವೀದನು ಬಹುರೀಮಿನ ಮಟ್ಟಿಗೂ ಬಂದಾ
ಗ, ಇಗೋ, ಸೌಲನ ಗೋತ್ರದವನಾದಂಥ ಗೇರನ ಮಗನಾದ
ಶಿಮ್ಮೈಯೆಂಬ ಹೆಸರುಳ್ಳ ಒಬ್ಬ ಮನುಷ್ಯನು ಅಲ್ಲಿಂದ ಹೊರಟು,
೬ ದೂಷಿಸುತ್ತಾ ನಡೆದು ಬಂದನು. ಸಮಸ್ತ ಜನರೂ ಸಮಸ್ತ ಪ
ರಾಕ್ರಮವಂತರೂ ದಾವೀದನ ಬಲ ಎಡ ಪಾರ್ಶ್ವಗಳ್ಳಲ್ಲಿರುವಾಗ,
ಅವನು ಅರಸನಾದ ದಾವೀದನ ಮೇಲೆಯೂ ಅವನ ಸಮಸ್ತ ಉ
೭ ಳ್ಳಿಗದವರ ಮೇಲೆಯೂ ಕಲ್ಲುಗಳ್ಳನ್ನು ಎಸೆದನು. ಶಿಮ್ಮೈ ಅವನ
ನ್ನು ದೂಷಿಸುತ್ತಾ ಹೇಳ್ಳಿದ್ದೇನಂದರೆ, ರಕ್ತದ ಮನುಷ್ಯನೇ, ಬೆಲಿ
ಯಾಳನ ಮನುಷ್ಯನೇ, ಹೊರಟು ಹೋಗು, ಹೊರಟು ಹೋ
೮ ಗು. ಕರ್ತನು ಸೌಲನ ಮನೆಯವರ ರಕ್ತವನ್ನು ಸೌಲನಿಗೆ
ಪ್ರತಿಯಾಗಿ ಅರಸನಾದ ನಿನ್ನ ಮೇಲೆ ತಿರಿಗಿ ಬರ ಮಾಡಿ, ರಾಜ್ಯ
ವನ್ನು ನಿನ್ನ ಮಗನಾದ ಅಬ್ಷಲೋಮನ ಕೈಯಲ್ಲಿ ಒಪ್ಪಿಸಿ ಕೊ
ಟ್ಟನು; ಯಾಕಂದರೆ ನೀನು ರಕ್ತದ ಮನುಷ್ಯನಾದದರಿಂದ, ಇ
ಗೋ, ನಿನ್ನ ಕೇಡಿನಲ್ಲಿ ಶಿಕ್ಕಿ ಕೊಂಡಿ, ಅಂದನು.
೯ ಆಗ ಜೆರೂಯಳ್ಳ ಮಗನಾದ ಅಬಿಷಯ್ಯನು ಅರಸನಿಗೆ,
ಆ ಸತ್ತ ನಾಯಿ ಅರಸನಾದ ನನ್ನ ಸ್ವಾಮಿಯನ್ನು ದೂಷಿಸುವ
ದೇನು! ನಾನು ದಾಟಿ ಹೋಗಿ, ಅವನ ತಲೆಯನ್ನು ತೆಗೆದು ಕೊ
೧೦ ಳ್ಳ ಅಪ್ಪಣೆ ಆಗಲಿ, ಅಂದನು. ಅದಕ್ಕೆ ಅರಸನು, ಜೆರೂಯಳ್ಳ

ಮಕ್ಕಳೇ, ನನಗೂ ನಿಮಗೂ ಏನು! ಅವನು ನನ್ನನ್ನು ದೂಷಿ
ಸಲಿ; ಯಾಕಂದರೆ ದಾವೀದನನ್ನು ದೂಷಿಸು ಎಂದು, ಕರ್ತನು
ಅವನಿಗೆ ಹೇಳಿದ್ದಾನೆ; ಹಾಗಾದರೆ, ಯಾಕೆ ಹೀಗೆ ಮಾಡುತ್ತಿದೆ!
೧೧ ಎಂದು ಹೇಳುವವನ್ಯಾರು! ಅಂದನು. ಮತ್ತು ದಾವೀದನು ಅಬಿ
ಷಯ್ಯನಿಗೂ ತನ್ನ ಸಮಸ್ತ ಸೇವಕರಿಗೂ ಹೇಳಿದ್ದೇನಂದರೆ, ಇ
ಗೋ, ನನ್ನ ಹೊಟ್ಟೆಯಲ್ಲಿ ಹುಟ್ಟಿದ ನನ್ನ ಮಗನು ನನ್ನ ಪ್ರಾ
ಣವನ್ನು ಹುಡುಕುತ್ತಾನೆ; ಎಷ್ಟು ಅಧಿಕವಾಗಿ ಈ ಬೆನ್ಯಮಿನ್ಯ
ನಾದವನು! ಅವನನ್ನು ಬಿಟ್ಟು ಬಿಡಿರಿ; ಅವನು ದೂಷಿಸಲಿ; ಯಾ
೧೦ ಕಂದರೆ ಕರ್ತನು ಅವನಿಗೆ ಹಾಗೆಯೇ ಹೇಳಿದ್ದಾನೆ. ಬಂದು ವೇ
ಳೆ ಕರ್ತನು ನನ್ನ ಶ್ರಮೆಯನ್ನು ನೋಡಿ, ಈ ದಿನದಲ್ಲಿ ಅವನು
ಮಾಡಿದ ದೂಷಣೆಗೆ ಪ್ರತಿಯಾಗಿ ನನಗೆ ಒಳ್ಳೇದನ್ನು ಮಾಡ
೧೩ ಬಹುದು, ಅಂದನು. ಆದರೆ ದಾವೀದನೂ ಅವನ ಸೇವಕರೂ ಹಾ
ದಿ ಹಿಡಿದು ಹೋಗುವಾಗ, ಶಿಮ್ಮಿ ಪೆಟ್ಟದ ಪಾರ್ಶ್ವವಾಗಿ ಬಂದು,
ಅವನಿಗೆದುರಾಗಿ ನಡೆದು, ದೂಷಿಸಿ, ಅವನ ಕಡೆಗೆ ಮಣ್ಣನ್ನು
೧೪ ತೂರಿ, ಕಲ್ಲುಗಳನ್ನು ಎಸೆದನು. ಅರಸನೂ ಅವನ ಸಂಗಡಿರು
ವ ಸಮಸ್ತ ಜನರೂ ನಡೆದು ದಣಿದ್ದರಿಂದ, ಅಲ್ಲಿ ಸಂಪ್ರಾಣಿಸಿ
ಕೊಂಡರು.

೧೫ ಅಬ್ಷಲೋಮನೂ ಇಸ್ರಯೇಲ ಮನುಷ್ಯರಾದ ಸಮಸ್ತ ಜ
ನರೂ ಅವನ ಸಂಗಡ ಅಹಿತೋಫಲನೂ ಯೆರೂಸಲೇಮಿಗೆ ಬಂ
೧೬ ದರು. ಅರ್ಕಿಯನಾದ ಹುಷಾಯಿಯೆಂಬ ದಾವೀದನ ಸ್ನೇಹಿತ
ನು ಅಬ್ಷಲೋಮನ ಬಳಿಗೆ ಬಂದಾಗ, ಹುಷಾಯಿ ಅಬ್ಷಲೋಮ
೧೭ ನಿಗೆ, ಅರಸನು ಬಾಳಲಿ, ಅರಸನು ಬಾಳಲಿ, ಅಂದನು. ಆಗ ಅಬ್ಷ
ಲೋಮನು ಹುಷಾಯಿಗೆ, ನಿನ್ನ ಸ್ನೇಹಿತನಿಗೆ ಮಾಡಿದ ಕೃಪೆ
ಇದೇನೋ! ನೀನು ನಿನ್ನ ಸ್ನೇಹಿತನ ಸಂಗಡ ಹೋಗದೆ ಇದ್ದದ್ದೇ
೧೮ ನು! ಅಂದನು. ಹುಷಾಯಿ ಅಬ್ಷಲೋಮನಿಗೆ, ಹಾಗಲ್ಲ, ಆದರೆ
ಕರ್ತನೂ, ಈ ಜನವೂ, ಇಸ್ರಯೇಲ ಸಮಸ್ತ ಮನುಷ್ಯರೂ
ಯಾರನ್ನು ಆರಿಸಿಕೊಳ್ಳುವರೋ, ನಾನು ಅವನವನಾಗಿರುವೆ
೧೯ ನು; ನಾನು ಅವನ ಬಳಿಯಲ್ಲಿ ಇರುವೆನು. ಇದಲ್ಲದೆ ನಾನು
ಯಾರನ್ನು ಸೇವಿಸ ತಕ್ಕದ್ದು? ಅವನ ಮಗನ ಸಮುಖದಲ್ಲಿ ಅಲ್ಲ
ವೇ! ನಾನು ನಿನ್ನ ತಂದೆಯ ಸಮುಖದಲ್ಲಿ ಹ್ಯಾಗೆ ಸೇವಿಸಿದೆ
ನೋ, ಹಾಗೆಯೇ ನಿನ್ನ ಸಮುಖದಲ್ಲಿ ಇರುವೆನು, ಅಂದನು.

೨೦ ಆಗ ಅಬ್ಷಲೋಮನು ಅಹಿತೋಫಲನಿಗೆ, ನಾವು ಮಾಡ ಬೇ
೨೧ ಕಾದದ್ದನ್ನು ನೀವು ಯೋಚನೆ ಮಾಡಿ ಹೇಳಿರಿ, ಅಂದನು. ಅಹಿ
ತೋಫಲನು ಅಬ್ಷಲೋಮನಿಗೆ, ಮನೆಗೆ ಕಾವಲಿ ಇಟ್ಟ ನಿನ್ನ ತಂ
ದೆಯ ಉಪಪತ್ನಿಗಳ ಬಳಿಗೆ ಪ್ರವೇಶಿಸು; ಆಗ ನಿನ್ನ ತಂದೆಗೆ
ನೀನು ದುರ್ವಾಸನೆಯುಳ್ಳವನೆಂದು, ಸಮಸ್ತ ಇಸ್ರಯೇಲ್ಯರು
೨೨ ಕೇಳಿ, ನಿನ್ನ ಸಂಗಡಲಿರುವ ಎಲ್ಲಾ ಜನರ ಕೈಗಳೂ ಬಲವಾಗಿರು
ವವು, ಅಂದನು. ಹಾಗೆಯೇ ಅವರು ಅಬ್ಷಲೋಮನಿಗೆ ಮನೆ
ಯ ಮೇಲೆ ಗುಡಾರ ಹಾಕಿದರು; ಅಲ್ಲಿ ಅಬ್ಷಲೋಮನು ಸಮ
ಸ್ತ ಇಸ್ರಯೇಲ್ಯರ ಕಣ್ಣುಗಳ ಮುಂದೆ ತನ್ನ ತಂದೆಯ ಉಪಪ
೨೩ ತ್ನಿಗಳ ಬಳಿಗೆ ಪ್ರವೇಶಿಸಿದನು. ಆ ಕಾಲದಲ್ಲಿ ಅಹಿತೋಫಲನು
ಆಲೋಚಿಸಿದ ಆಲೋಚನೆಯು ಒಬ್ಬನು ದೇವರ ವಾಕ್ಯವನ್ನು
ವಿಚಾರಿಸುವ ಹಾಗೆ ಇತ್ತು. ಅಹಿತೋಫಲನ ಆಲೋಚನೆಯೆ
ಲ್ಲಾ ದಾವೀದನಿಗೂ ಅಬ್ಷಲೋಮನಿಗೂ ಹಾಗೆಯೇ ಇತ್ತು.

## ೧೭. ಸಂಧಿ.

೧ ಇದಲ್ಲದೆ ಅಹಿತೋಫಲನು ಅಬ್ಷಲೋಮನಿಗೆ ಹೇಳಿದ್ದು—ಅಬ್ಬ
ಣೆ ಆದರೆ, ನಾನು ಹನ್ನೆರಡು ಸಾವಿರ ಜನರನ್ನು ಆರಿಸಿಕೊಳ್ಳು
ವೆನು. ಆಗ ನಾನೆದ್ದು, ಆ ರಾತ್ರಿ ದಾವೀದನ ಹಿಂದೆ ಹತ್ತಿ, ಅವ
೨ ನು ದಣಿದು, ಅವನ ಕೈ ದುರ್ಬಲವಾಗಿರುವಾಗ, ಅವನ ಮೇಲೆ
ಹೋಗಿ ಬಿದ್ದು, ಅವನನ್ನು ಹೆದರಿಸುವೆನು. ಆಗ ಅವನ ಸಂಗಡ
ಇರುವ ಜನರೆಲ್ಲರು ಓಡಿ ಹೋಗುವರು. ನಾನು ಅರಸನನ್ನು ಮಾ
೩ ತ್ರ ಹೊಡೆದು, ಜನರೆಲ್ಲರನ್ನು ತಿರಿಗಿ ನಿನ್ನ ಬಳಿಗೆ ತಕ್ಕೊಂಡು
ಬರುವೆನು. ನೀನು ಹುಡುಕುವವನು ಸಿಕ್ಕಿದರೆ, ಜನರೆಲ್ಲರು ತಿರು
ಗಿದ ಹಾಗೆ ಆಗುವದು; ಜನರೆಲ್ಲರು ಸಮಾಧಾನವಾಗಿರುವರು, ಅಂ
೪ ದನು. ಈ ಮಾತು ಅಬ್ಷಲೋಮನ ದೃಷ್ಟಿಗೂ ಇಸ್ರಯೇಲ
೫ ಸಮಸ್ತ ಹಿರಿಯರ ದೃಷ್ಟಿಗೂ ಸರಿಯಾಗಿತ್ತು. ಆದರೆ ಅಬ್ಷ
ಲೋಮನು ಅರ್ಕಿಯನಾದ ಹುಷಾಯಿಯನ್ನು ನಾವು ಕೇಳುವ
ಹಾಗೆ, ಅವನನ್ನು ಕರೆಯಿರಿ, ಅಂದನು.
೬ ಹುಷಾಯಿ ಅಬ್ಷಲೋಮನ ಬಳಿಗೆ ಬಂದಾಗ, ಅಬ್ಷಲೋಮ
ನು ಅವನಿಗೆ, ಅಹಿತೋಫಲನು ಈ ಪ್ರಕಾರ ಹೇಳಿದ್ದಾನೆ. ಅವನ
ಮಾತಿನ ಪ್ರಕಾರ ಮಾಡೋಣೋ! ಬೇಡವಾದರೆ, ನೀ ಮಾತಾ
೭ ಡು, ಅಂದನು. ಆಗ ಹುಷಾಯಿ ಅಬ್ಷಲೋಮನಿಗೆ, ಅಹಿತೋ
ಫಲನು ಹೇಳಿದ ಆಲೋಚನೆಯು ಈ ವೇಳೆಗೆ ಒಳ್ಳೇದಲ್ಲ, ಅಂ
೮ ದನು. ಮತ್ತು ಹುಷಾಯಿ ಹೇಳಿದ್ದೇನಂದರೆ, ನಿನ್ನ ತಂದೆಯೂ
ಅವನ ಮನುಷ್ಯರೂ ಪರಾಕ್ರಮಶಾಲಿಗಳು; ಅವರು ಅಡವಿಯ
ಲ್ಲಿ ಮರಿಗಳನ್ನು ಕಳ್ಳ ಕೊಂಡ ಕರಡಿಯ ಹಾಗೆಯೇ ಕಹಿಯಾ
ದ ಪ್ರಾಣವುಳ್ಳವರಾಗಿದ್ದಾರೆಂದು, ನೀನು ಬಲ್ಲಿ. ಇದಲ್ಲದೆ ನಿನ್ನ
ತಂದೆಯು ಕೂರನು; ಅವನು ರಾತ್ರಿಯಲ್ಲಿ ಜನರ ಸಂಗಡ ತಂ
೯ ಗುವದಿಲ್ಲ. ಇಗೋ, ಅವನು ಈಗ ಒಂದು ಗವಿಯಲ್ಲಾದರೂ
ಒಂದು ಸ್ಥಳದಲ್ಲಾದರೂ ಅಡಗಿ ಕೊಂಡಿದ್ದಾನೆ. ಮೊದಲೇ ಇವ
ರಲ್ಲಿ ಕೆಲವರು ಬಿದ್ದರೆ, ಅದನ್ನು ಕೇಳುವವರು, ಅಬ್ಷಲೋಮನ
ನ್ನು ಹಿಂಬಾಲಿಸುವ ಜನರಲ್ಲಿ ಸಂಹಾರವಾಯಿತೆಂದು ಹೇಳುವರು.
೧೦ ಆಗ ಸಿಂಹದ ಹೃದಯವುಳ್ಳ ಪರಾಕ್ರಮವಂತನ ಹೃದಯ ಸ
ಹ ಕರಗೇ ಕರಗುವದು. ಇದಲ್ಲದೆ ನಿನ್ನ ತಂದೆಯು ಶೂರನೆಂ
ದೂ, ಅವನ ಸಂಗಡ ಇರುವವರು ಪರಾಕ್ರಮಶಾಲಿಗಳೆಂದೂ, ಇ
೧೧ ಸ್ರಯೇಲ್ಯರೆಲ್ಲರು ಬಲ್ಲರು. ನಾನು ಹೇಳುವ ಆಲೋಚನೆ ಏನಂ
ದರೆ, ದಾನಿನಿಂದ ಬೇರ್ಷೆಬದ ಮಟ್ಟಿಗೂ ಇರುವ ಸಮುದ್ರದ
ಮರಳಿನಷ್ಟು ಸಮಸ್ತವಾದ ಇಸ್ರಯೇಲ್ಯರು ನಿನ್ನ ಬಳಿಯಲ್ಲಿ
ಕೂಡಿಸಲ್ಪಟ್ಟಿ ತರುವಾಯ, ನೀನೇ ಯುದ್ಧಕ್ಕೆ ಹೋಗ ಬೇಕು.
೧೨ ಆಗ ನಾವು ಅವನನ್ನು ಕಂಡು ಕೊಳ್ಳುವ ಸ್ಥಳದಲ್ಲಿ ಅವನ ಮೇ
ಲೆ ಬಂದು, ಭೂಮಿಯ ಮೇಲೆ ಮಂಜು ಬೀಳುವ ಹಾಗೆ, ಅವನ
ಮೇಲೆ ಬೀಳುವೆವು. ಅವನೂ ಅವನ ಸಂಗಡಲಿರುವ ಸಮಸ್ತ ಜನ
೧೩ ರಲ್ಲಿ ಒಬ್ಬನಾದರೂ ಉಳಿಯುವದಿಲ್ಲ. ಅವನು ಒಂದು ವೇಳೆ
ಒಂದು ಪಟ್ಟಣದಲ್ಲಿ ಹೊಕ್ಕರೆ, ಇಸ್ರಯೇಲ್ಯರೆಲ್ಲರೂ ಆ ಪಟ್ಟಣಕ್ಕೆ
ಹಗ್ಗಗಳನ್ನು ತಂದು ಹಾಕಿದ ತರುವಾಯ, ನಾವು ಬಂದು ಹರ
ಳಾದರೂ ಅಲ್ಲಿ ಕಾಣದ ಹಾಗೆ, ಅದನ್ನು ನದಿಗೆ ಎಳೆದು ಹಾಕು
ವೆವು, ಅಂದನು.
೧೪ ಆಗ ಅಬ್ಷಲೋಮನೂ ಇಸ್ರಯೇಲ ಸಮಸ್ತ ಮನುಷ್ಯರೂ,
ಅಹಿತೋಫಲನ ಆಲೋಚನೆಗಿಂತ ಅರ್ಕಿಯನಾದ ಹುಷಾಯಿ



ಯ ಆಲೋಚನೆ ಒಳ್ಳೇದು, ಅಂದರು. ಯಾಕಂದರೆ ತಾನು ಅಬ್ಷ
ಲೋಮನ ಮೇಲೆ ಕೇಡನ್ನು ಬರ ಮಾಡುವ ಹಾಗೆ, ಅಹಿತೋಫ
ಲನ ಒಳ್ಳೇ ಆಲೋಚನೆಯನ್ನು ವ್ಯರ್ಥ ಮಾಡುವದಕ್ಕೆ ಕರ್ತ
ನು ನೇಮಿಸಿದ್ದನು.
೧೫ ಮತ್ತು ಹುಷಾಯಿ ಯಾಜಕರಾದ ಚದೋಕನಿಗೂ ಅಬ್ಯಾ
ತಾರನಿಗೂ ಹೇಳಿದ್ದೇನಂದರೆ, ಅಹಿತೋಫಲನು ಅಬ್ಷಲೋಮನಿ
ಗೂ ಇಸ್ರಯೇಲಿನ ಹಿರಿಯರಿಗೂ ಇಂಥಿಂಥ ಆಲೋಚನೆ ಹೇಳಿ
೧೬ ದನು. ಆದರೆ ನಾನು ಇಂಥಿಂಥ ಆಲೋಚನೆ ಹೇಳಿದೆನು. ಆದದ
ರಿಂದ ನೀವು ತ್ವರೆಯಾಗಿ ಕಳುಹಿಸಿ, ದಾವೀದನಿಗೆ ತಿಳಿಸ ಬೇಕಾ
ದದ್ದೇನಂದರೆ, ನೀನು ರಾತ್ರಿಯಲ್ಲಿ ಅರಣ್ಯದ ಬೈಲುಗಳಲ್ಲಿ ತಂಗ
ಬೇಡ; ಅರಸನೂ ಅವನ ಸಂಗಡಲಿರುವ ಎಲ್ಲಾ ಜನರೂ ನುಂಗ
ಲ್ಪಡದ ಹಾಗೆ; ದಾಟೀ ದಾಟಿ ಹೋಗು.
೧೭ ಆದರೆ ಯೊನತಾನನೂ ಅಹಿಮಾಚನೂ ಪಟ್ಟಣದಲ್ಲಿ ಪ್ರವೇಶಿ
ಸ ಕೂಡದೆ ಇದ್ದದರಿಂದ, ಎನ್ರೋಗೆಲಿನ ಬಳಿಯಲ್ಲಿ ನಿಂತಿದ್ದರು.
ಆದದರಿಂದ ಅವರು ಅರಸನಾದ ದಾವೀದನಿಗೆ ಅದನ್ನು ತಿಳಿಸುವ
ಹಾಗೆ, ಒಬ್ಬ ದಾಸಿಯು ಹೋಗಿ, ಅವರಿಗೆ ಹೇಳಿದಳು. ಆದರೆ ಒ
ಬ್ಬ ಹುಡುಗನು ಅವರನ್ನು ನೋಡಿ, ಅಬ್ಷಲೋಮನಿಗೆ ತಿಳಿಸಿದನು.
ಆದದರಿಂದ ಅವರಿಬ್ಬರು ಶೀಘ್ರವಾಗಿ ಹೋಗಿ, ಬಹೂರಿಮಿನಲ್ಲಿರು
ವ ಒಬ್ಬ ಮನುಷ್ಯನ ಮನೆಯಲ್ಲಿ ಪ್ರವೇಶಿಸಿ, ಅವನ ಅಂಗಳದ
೧೯ ಲ್ಲಿರುವ ಭಾವಿಯಲ್ಲಿ ಇಳಿದರು. ಆಗ ಆ ಮನೆಯವಳು ಭಾವಿ
ಯ ಬಾಯಿ ಮೇಲೆ ಒಂದು ವಸ್ತ್ರವನ್ನು ಹಾಸಿ, ನುಚ್ಚನ್ನು ಹರ
ವಿ ಬಿಟ್ಟಳು. ಆದದರಿಂದ ಕಾರ್ಯ ತಿಳಿಯದೆ ಹೋಯಿತು.
೨೦ ಅಬ್ಷಲೋಮನ ಸೇವಕರು ಮನೆಯೊಳಗೆ ಬಂದು, ಆ ಸ್ತ್ರೀಯ
ನ್ನು ಅಹಿಮಾಚನೂ ಯೊನತಾನನೂ ಎಲ್ಲಿ? ಎಂದು ಕೇಳಿದಾಗ,
ಅವಳು ಅವರಿಗೆ, ಹಳ್ಳವನ್ನು ದಾಟಿ ಹೋದರು, ಅಂದಳು. ಇ
ವರು ಹುಡಿಕಿ ಕಾಣದೆ ಹೋಗಿ, ಯೆರೂಸಲೇಮಿಗೆ ತಿರುಗಿದರು.
೨೧ ಆದರೆ ಇವರು ಹೋದ ತರುವಾಯ, ಅವರು ಭಾವಿಯೊಳಗಿಂದ
ಏರಿ, ಹೋಗಿ, ಅರಸನಾದ ದಾವೀದನಿಗೆ ತಿಳಿಸಿ, ದಾವೀದನಿಗೆ ನೀ
ನು ಶೀಘ್ರವಾಗಿ ಎದ್ದು, ನೀರುಗಳನ್ನು ದಾಟಿ ಹೋಗು; ಯಾ
ಕಂದರೆ ಈ ಪ್ರಕಾರ ಅಹಿತೋಫಲನು ನಿನಗೆ ವಿರೋಧವಾಗಿ ಆ
೨೨ ಲೋಚನೆ ಹೇಳಿದನು, ಅಂದರು. ಆಗ ದಾವೀದನೂ ಅವನ ಸಂ
ಗಡ ಇದ್ದ ಸಮಸ್ತ ಜನರೂ ಎದ್ದು, ಯೊರ್ದನನ್ನು ದಾಟಿದರು.
ಉದಯವಾಗುವದಕ್ಕಿಂತ ಮುಂಚೆ ಒಬ್ಬರಾದರೂ ಹಿಂದುಳಿಯದ
ಹಾಗೆ, ಯೊರ್ದನನ್ನು ದಾಟಿದರು.
೨೩ ಆದರೆ ಅಹಿತೋಫಲನು ತನ್ನ ಯೋಚನೆಯ ಪ್ರಕಾರ ನಡೆ
ಯಲಿಲ್ಲವೆಂದು ನೋಡಿದಾಗ, ತನ್ನ ಕತ್ತೆಯ ಮೇಲೆ ತಡಿಯ
ನ್ನು ಹಾಕಿ, ಏರಿ, ತನ್ನ ಊರಿನಲ್ಲಿರುವ ತನ್ನ ಮನೆಗೆ ಹೋಗಿ,
ತನ್ನ ಮನೆಯವರಿಗೆ ಆಜ್ಞಾಪಿಸಿ, ಉಲುಹಾಕಿ ಕೊಂಡು, ಸ
ತ್ತು, ತನ್ನ ತಂದೆಯ ಸಮಾಧಿಯಲ್ಲಿ ಹೂಣಲ್ಪಟ್ಟನು.
೨೪ ಮತ್ತು ದಾವೀದನು ಮಹನಾಯಿಮಿಗೆ ಬಂದನು. ಇದಲ್ಲದೆ ಅ
ಬ್ಷಲೋಮನೂ, ಅವನ ಸಂಗಡ ಇಸ್ರಯೇಲ ಸಮಸ್ತ ಮನುಷ್ಯ
೨೫ ರೂ ಯೊರ್ದನನ್ನು ದಾಟಿದರು. ಅಬ್ಷಲೋಮನು ಯೊವಾಬ
ನಿಗೆ ಬದಲಾಗಿ ಅಮಾಸನನ್ನು ರಾಣುವೆಯ ಯಜಮಾನನಾಗಿ
ಇಟ್ಟಿದ್ದನು. ಈ ಅಮಾಸನು ನಹಾಷನ ಮಗಳಾದ ಅಬಿಗಾಯಿ
ಲಿನ ಬಳಿಗೆ ಪ್ರವೇಶಿಸಿದ ಇಸ್ರಯೇಲ್ಯನಾದ ಇತ್ರನೆಂಬ ಹೆಸರುಳ್ಳ
ಒಬ್ಬನ ಮಗನಾಗಿದ್ದನು. ಅಬಿಗಾಯಿಲು ಯೊವಾಬನ ತಾಯಾ
೨೬ ದ ಚೆರೂಯಳಿಗೆ ಸಹೋದರಿಯಾಗಿದ್ದಳು. ಹೀಗೆಯೇ ಇಸ್ರ
ಯೇಲೂ ಅಬ್ಷಲೋಮನೂ ಗಿಲ್ಯಾದ್ ದೇಶದಲ್ಲಿ ದಂಡಿಳಿದರು.
೨೭ ಆದರೆ ದಾವೀದನು ಮಹನಾಯಿಮಿಗೆ ಬಂದಾಗ, ಏನಾಯಿ
ತಂದರೆ, ಅಮ್ಮೋನನ ಮಕ್ಕಳ ರಬ್ಬಾತು ಪಟ್ಟಣದ ನಹಾಷನ ಮಗ
ನಾದ ಶೋಬಿಯೂ, ಲೊದೆಬಾರು ಊರವನಾಗಿರುವ ಅಮ್ಮಿ
೨೮ ಯೇಲನ ಮಗನಾದ ಮಕೀರನೂ, ಕೊಗ್ಲಿ ಊರಿನ ಗಿಲ್ಯಾದ್ಯನಾ
ದ ಬರ್ಜಿಲ್ಲಾಯಿಯೂ ಹಾಸಿಗೆಗಳನ್ನೂ, ಬಟ್ಟಲುಗಳನ್ನೂ, ಮಡಿಕೆ
ಗಳನ್ನೂ, ಗೋಧಿಯನ್ನೂ, ಜವೆಗೋಧಿಯನ್ನೂ, ಹಿಟ್ಟನ್ನೂ,
ಹುರಿದ ಕಾಳುಗಳನ್ನೂ, ಅವರೆಯನ್ನೂ, ಹೆಸರನ್ನೂ, ಹುರಿದ ಕಡ
ಲೆಯನ್ನೂ, ಜೇನು ತುಪ್ಪವನ್ನೂ, ಬೆಣ್ಣೆಯನ್ನೂ, ಕುರಿಗಳ
ನ್ನೂ, ಹಸುವಿನ ಗಿಣ್ಣದ ಗಡ್ಡೆಗಳನ್ನೂ ದಾವೀದನಿಗೂ ಅವನ
ಸಂಗಡಲಿದ್ದ ಜನರಿಗೂ ಉಣ್ಣುವದಕ್ಕೆ ತಂದರು. ಯಾಕಂದರೆ
ಅರಣ್ಯದಲ್ಲಿ ಜನರು ಹಸಿದು, ದಣಿದು, ದಾಹವಾಗಿ ಇರುವರೆಂ
ದು ಅಂದು ಕೊಂಡರು.

## ೧೮. ಸಂಧಿ.

೧ ಮತ್ತು ದಾವೀದನು ತನ್ನ ಸಂಗಡಲಿರುವ ಜನರನ್ನು ಲೆಖ್ಖ
೨ ಮಾಡಿ, ಅವರ ಮೇಲೆ ಸಾವಿರಗಳಿಗೂ ನೂರುಗಳಿಗೂ ಅಧಿಪತಿ
ಗಳನ್ನು ನೇಮಿಸಿದನು. ಮತ್ತು ದಾವೀದನು ಜನರಲ್ಲಿ ಮೂರನೇ
ಪಾಲನ್ನು ಯೊವಾಬನ ಕೈಗೂ, ಮೂರನೇ ಪಾಲನ್ನು ಯೊ
ವಾಬನ ಸಹೋದರನಾದ ಚೆರೂಯಳ ಮಗನಾಗಿರುವ ಅಬಿಷ
ಯ್ಯನ ಕೈಗೂ, ಮೂರನೇ ಪಾಲನ್ನು ಗಿತ್ತಿಯನಾದ ಇತ್ತಾಯಿ
ಯ ಕೈಗೂ ಒಪ್ಪಿಸಿದನು. ಮತ್ತು ಅರಸನು ಜನರಿಗೆ ನಾನು ನಿಮ್ಮ
೩ ಸಂಗಡ ಹೊರಟೇ ಹೊರಟು ಬರುತ್ತೇನೆ, ಅಂದನು. ಆದರೆ ಜನ
ರು ಅವನಿಗೆ ಪ್ರತ್ಯುತ್ತರವಾಗಿ, ನೀನು ನಮ್ಮ ಸಂಗಡ ಬರ ಬೇಡ;
ಯಾಕಂದರೆ ನಾವು ಓಡೇ ಓಡಿ ಹೋದರೂ, ಅವರು ನಮ್ಮ
ಮೇಲೆ ಮನಸ್ಸಿಡುವದಿಲ್ಲ; ನಮ್ಮಲ್ಲಿ ಅರ್ಧ ಜನರು ಸತ್ತು ಹೋ
ದರೂ, ಅವರು ನಮ್ಮ ಮೇಲೆ ಮನಸ್ಸಿಡುವದಿಲ್ಲ. ನೀನಾದರೆ ನ
ಮ್ಮ ಸಮಾನವಾದ ಹತ್ತು ಸಾವಿರ ಜನಕ್ಕೆ ಸರಿಯಾಗಿದ್ದೀ. ಈ
ಗ ನೀನು ಪಟ್ಟಣದಲ್ಲಿದ್ದು ನಮಗೆ ಸಹಾಯವಾಗಿರುವದು ಉತ್ತಮ,
೪ ಅಂದರು. ಆಗ ಅರಸನು ಅವರಿಗೆ, ನಿಮ್ಮ ಕಣ್ಣುಗಳಿಗೆ ಉತ್ತ
ಮವಾಗಿ ಕಾಣಿಸುವದನ್ನು ಮಾಡುವೆನು, ಅಂದನು. ಅರಸನು
ಬಾಗಲ ಬಳಿಯಲ್ಲಿ ನಿಂತನು; ಜನರೆಲ್ಲಾ ನೂರು ನೂರಾಗಿಯೂ
ಸಾವಿರ ಸಾವಿರಗಳಾಗಿಯೂ ಹೊರಟರು.
೫ ಆದರೆ ಅರಸನು ಯೊವಾಬನಿಗೂ ಅಬಿಷಯ್ಯನಿಗೂ ಇತ್ತಾ
ಯಿಗೂ ಆಜ್ಞಾಪಿಸಿ, ನನಗೋಸ್ಕರ ಪ್ರಾಯಸ್ಥನಾದ ಅಬ್ಷಲೋ
ಮನಿಗೆ ಮೆಲ್ಲಗಿರ್ರಿ, ಅಂದನು. ಹೀಗೆ ಅರಸನು ಅಬ್ಷಲೋಮನ
ನ್ನು ಕುರಿತು ಅಧಿಪತಿಗಳೆಲ್ಲರಿಗೂ ಕೊಟ್ಟ ಆಜ್ಞೆಯನ್ನು ಜನರೆ
ಲ್ಲರು ಕೇಳಿದರು.
೬ ಹೀಗೆಯೇ ಜನರು ಇಸ್ರಯೇಲಿಗೆ ವಿರೋಧವಾಗಿ ಹೊರಟ
೭ ರು. ಯುದ್ಧವು ಎಫ್ರಯಿಮ್ ಅಡವಿಯಲ್ಲಿತ್ತು. ಅಲ್ಲಿ ಇಸ್ರ
ಯೇಲ ಜನರು ದಾವೀದನ ಸೇವಕರ ಮುಂದೆ ಸಂಹಾರವಾದರು.
೮ ಆ ಹೊತ್ತು ಅಲ್ಲಿ ದೊಡ್ಡ ಸಂಹಾರವಾಯಿತು; ಇಪ್ಪತ್ತು ಸಾವಿರ
ಜನರು ಬಿದ್ದರು. ಅಲ್ಲಿನ ಯುದ್ಧವು ದೇಶವೆಲ್ಲಾದರ ಮೇಲೆ ವಿಸ್ತರಿ

ಸಲ್ಪಟ್ಟಿತು. ಆ ಹೊತ್ತು ಜನರಲ್ಲಿ ಕತ್ತಿ ತಿಂದವರಿಗಂತ, ಅಹವಿ
ಅನೇಕರನ್ನು ತಿಂದಿತು.

೯ ಆಗ ಅಬ್ಷಲೋಮನು ದಾವೀದನ ಸೇವಕರಿಗೆ ಎದುರಾಗಿ ಬಂ
ದನು. ಆದರೆ ಅಬ್ಷಲೋಮನು ಹಾಸರ ಕತ್ತೆಯ ಮೇಲೆ ಏರಿ ಇ
ದ್ದನು. ಆ ಹಾಸರ ಕತ್ತೆಯು ಬಂದು ದೊಡ್ಡ ಏಲಾ ಮರದ ಬಲ
ವಾದ ಕೊಂಬೆಗಳ ಕೆಳಗೆ ಬಂದಾಗ, ಅವನ ತಲೆಯು ಆ ಮರದ
ಕೊಂಬೆಯಲ್ಲಿ ಸಿಕ್ಕಿ ಕೊಂಡಿತು. ಆದದರಿಂದ ಅವನು ಆಕಾಶ
ಕ್ಕೂ ಭೂಮಿಗೂ ಮಧ್ಯದಲ್ಲಿ ಹಿಡಿಯಲ್ಪಟ್ಟಿದ್ದನು. ಅವನು ಹ
೧೦ ತ್ತಿದ್ದ ಹಾಸರ ಕತ್ತೆಯು ಹಾದು ಹೋಯಿತು. ಒಬ್ಬನು ನೋ
ಡಿ ಯೊವಾಬನಿಗೆ ತಿಳಿಸಿ, ಇಗೋ, ಅಬ್ಷಲೋಮನು ಬಂದು ಏ
೧೧ ಲಾ ಮರದಲ್ಲಿ ತೂಗಾಡುವದನ್ನು ನೋಡಿದೆನು, ಅಂದನು. ಅದ
ಕ್ಕೆ ಯೊವಾಬನು ತನಗೆ ಅದನ್ನು ತಿಳಿಸಿದವನಿಗೆ, ಇಗೋ, ನೀ
ನು ನೋಡಿದಿ! ಅವನನ್ನು ಯಾಕೆ ಅಲ್ಲಿ ನೆಲಕ್ಕೆ ಹೊಡೆದು ಬಿಡ
ಲಿಲ್ಲ! ನಾನು ನಿನಗೆ ಹತ್ತು ಬೆಳ್ಳಿ ಯನ್ನೂ ಒಂದು ನಡು
೧೨ ಕಟ್ಟನ್ನೂ ಕೊಡುತ್ತಿದ್ದೆನು, ಅಂದನು. ಆದರೆ ಆ ಮನುಷ್ಯನು
ಯೊವಾಬನಿಗೆ ಹೇಳ್ದೇನಂದರೆ, ನೀನು ನನ್ನ ಕೈಯಲ್ಲಿ ಸಾವಿರ
ಬೆಳ್ಳಿ ಯನ್ನು ಕೊಟ್ಟರೂ, ನಾನು ಅರಸನ ಮಗನ
ಮೇಲೆ ನನ್ನ ಕೈ ಚಾಚುವದಿಲ್ಲ. ಯಾಕಂದರೆ ಅಬ್ಷಲೋಮ
ನೆಂಬ ಪ್ರಾಯಸ್ತನಿಗೆ ಯಾರೂ ನಷ್ಟ ಮಾಡದ ಹಾಗೆ ಜಾ
ಗ್ರತೆಯಾಗಿರ್ರೆಂದು, ಅರಸನು ನಿನಗೂ ಅಬಿಷಯ್ಯನಿಗೂ ಇತ್ತಾ
೧೩ ಯಿಗೂ ನಮ್ಮ ಕಿವಿಗಳಲ್ಲಿ ಆಜ್ಞಾಪಿಸಿದ್ದನು. ಹಾಗಿತ್ತಾದರೆ, ನಾ
ನೇ ನನ್ನ ಪ್ರಾಣಕ್ಕೆ ಮೋಸ ಮಾಡಿ ಕೊಂಡಿರುವೆನು. ಯಾ
ಕಂದರೆ ಅರಸನಿಗೆ ಯಾವ ಕಾರ್ಯವಾದರೂ ಬಚ್ಚಿಡಲ್ಪಟ್ಟಿದ್ದ
ಲ್ಲ; ಮತ್ತು ನೀನೇ ನನಗೆ ವಿರೋಧವಾಗಿ ನಿಂತಿರುವಿ, ಅಂದನು
೧೪ ಆಗ ಯೊವಾಬನು ನಾನು ಹೀಗೆ ನಿನ್ನ ಮುಂದೆ ಆಲಸ್ಯ ಮಾಡೆ
ನು, ಎಂಥೇಳಿ, ಮೂರು ಭಲ್ಯಗಳನ್ನು ತನ್ನ ಕೈಯಲ್ಲಿ ತಕ್ಕೊಂ
ಡು, ಅಬ್ಷಲೋಮನು ಇನ್ನೂ ಏಲಾ ಮರದ ಮಧ್ಯದಲ್ಲಿ ಜೀವದಿಂ
೧೫ದಿರುವಾಗ, ಅವುಗಳನ್ನು ಅವನ ಹೃದಯದಲ್ಲಿ ಶಿವಿದನು. ಆಗ
ಯೊವಾಬನ ಆಯುಧ ಹಿಡಿಯುವ ಹತ್ತು ಮಂದಿ ಪ್ರಾಯಸ್ತ
ರು ಸುತ್ತಿ ಕೊಂಡು, ಅಬ್ಷಲೋಮನನ್ನು ಕೊಂದು ಹಾಕಿದರು.

೧೬ ಆಗ ಯೊವಾಬನು ತುತೂರಿಯನ್ನು ಊದಿದ್ದರಿಂದ, ಜನರು
ಇಸ್ರಯೇಲ್ಯರ ಹಿಂದೆ ಹತ್ತುವದನ್ನು ಬಿಟ್ಟು ತಿರುಗಿದರು. ಯಾ
೧೭ ಕಂದರೆ ಯೊವಾಬನು ಜನರನ್ನು ತಡೆದನು. ಮತ್ತು ಅವರು ಅ
ಬ್ಷಲೋಮನನ್ನು ತಕ್ಕೊಂಡು, ಅಡವಿಯಲ್ಲಿರುವ ಒಂದು ದೊಡ್ಡ
ಕುಣಿಯಲ್ಲಿ ಹಾಕಿ, ಅವನ ಮೇಲೆ ದೊಡ್ಡ ಕಲ್ಲಿನ ಕುಪ್ಪೆಯನ್ನು
ಇಟ್ಟರು. ಆದರೆ ಇಸ್ರಯೇಲ್ಯರೆಲ್ಲರು ತಮ್ಮ ಗುಡಾರಗಳಿಗೆ ಓಡಿ
ಹೋದರು.

೧೮ ಆದರೆ ಅಬ್ಷಲೋಮನು ಜೀವದಿಂದಿರುವಾಗ, ನನ್ನ ಹೆಸರನ್ನು
ನೆನಪು ಮಾಡ ನನಗೆ ಮಗನಿಲ್ಲವೆಂದು ಹೇಳಿ, ಅರಸನ ತಗ್ಗಿನಲ್ಲಿ
ರುವ ಒಂದು ಸ್ತಂಭವನ್ನು ತಕ್ಕೊಂಡು, ತನಗೋಸ್ಕರ ನಿಲ್ಲಿಸಿ,
ಆ ಸ್ತಂಭಕ್ಕೆ ತನ್ನ ಹೆಸರನ್ನು ಕೊಟ್ಟಿದ್ದನು. ಅದು ಈ ದಿನದ
ವರಿಗೂ ಅಬ್ಷಲೋಮನ ಕೈ ಎಂದು ಹೇಳಲ್ಪಡುವದು.

೧೯ ಆಗ ಚದೋಕನ ಮಗನಾದ ಅಹಿಮಾಚನು, ಕರ್ತನು ಅವ
ನ ಶತ್ರುಗಳ ಮೇಲೆ ಅವನ ನ್ಯಾಯ ತೀರಿಸಿದ್ದಾನೆಂಬ ವರ್ತ
ಮಾನ ಅರಸನಿಗೆ ತಿಳಿಸುವದಕ್ಕೆ, ನಾನು ಓಡಿ ಹೋಗ ಅಪ್ಪಣೆ
೨೦ ಆಗ ಬೇಕು, ಅಂದನು. ಆದರೆ ಯೊವಾಬನು ಅವನಿಗೆ, ನೀನು
ಈ ಹೊತ್ತು ವರ್ತಮಾನ ತಕ್ಕೊಂಡು ಹೋಗ ಬೇಡ; ಮ
ತ್ತೊಂದು ದಿವಸ ವರ್ತಮಾನ ತಕ್ಕೊಂಡು ಹೋಗ ಬಹುದು.
ಯಾಕಂದರೆ ಅರಸನ ಮಗನು ಸತ್ತದ್ದರಿಂದ, ಈ ಹೊತ್ತು ನೀನು
೨೧ ವರ್ತಮಾನ ತಕ್ಕೊಂಡು ಹೋಗ ಬೇಡ, ಅಂದನು. ಮತ್ತು
ಯೊವಾಬನು ಕೂಷಿಗೆ, ನೀನು ಹೋಗಿ, ನೋಡಿದ್ದನ್ನು ಅರಸ
೨೨ ನಿಗೆ ತಿಳಿಸು, ಅಂದನು. ಕೂಷಿಯು ಯೊವಾಬನಿಗೆ ಅಡ್ಡ ಬಿದ್ದು
ಓಡಿ ಬಿಟ್ಟನು. ಆಗ ಚದೋಕನ ಮಗನಾದ ಅಹಿಮಾಚನು
ಮತ್ತೂ ಯೊವಾಬನಿಗೆ, ನಾನು ಕೂಷಿಯ ಹಿಂದೆ ಓಡಿ ಹೋ
ಗ ಹ್ಯಾಗಾದರೂ ಅಪ್ಪಣೆ ಕೊಡ ಬೇಕು, ಅಂದನು. ಅದಕ್ಕೆ
ಯೊವಾಬನು, ನನ್ನ ಮಗನೇ, ನಿನಗೆ ವರ್ತಮಾನ ಇಲ್ಲದಿರುವಾ
೨೩ ಗ, ನೀನು ಓಡುವದು ಯಾಕೆ! ಅಂದನು. ಅವನು ಹ್ಯಾಗಾದರೂ
ಓಡಿ ಹೋಗುತ್ತೇನೆ, ಅಂದಾಗ, ಓಡು, ಅಂದನು. ಆಗ ಅಹಿ
ಮಾಚನು ಬೈಲು ಮಾರ್ಗವಾಗಿ ಓಡಿ, ಕೂಷಿಯನ್ನು ದಾಟಿ
ಹೋದನು.

೨೪ ಆದರೆ ದಾವೀದನು ಎರಡು ಬಾಗಲುಗಳ ಮಧ್ಯದಲ್ಲಿ ಕುಳಿತಿ
ದ್ದನು. ಕೋವರದವನು ಅಲಂಗದಲ್ಲಿರುವ ಬಾಗಲ ಮಾಳಿಗೆಯ
ಮೇಲೆ ಏರಿ, ತನ್ನ ಕಣ್ಣುಗಳನ್ನೆತ್ತಿ, ನೋಡಲಾಗಿ ಇಗೋ, ಒ
೨೫ ಬ್ಬ ಮನುಷ್ಯನು ಒಂಟಿಯಾಗಿ ಓಡಿ ಬರುತ್ತಿದ್ದನು. ಆಗ ಕೋ
ವರದವನು ಕೂಗಿ ಅರಸನಿಗೆ ತಿಳಿಸಿದನು. ಅರಸನು ಅವನು ಒ
ಬ್ಬನಾಗಿ ಬಂದರೆ, ಅವನ ಬಾಯಿಯಲ್ಲಿ ವರ್ತಮಾನ ಇರುವದು,
೨೬ ಅಂದನು. ಅವನು ಬರ ಬರ ಸಮೀಪಿಸಿದನು. ಮತ್ತು ಕೋವರ
ದವನು ಬೇರೊಬ್ಬನು ಓಡಿ ಬರುವದನ್ನು ಕಂಡು, ಬಾಗಲು ಕಾ
ಯುವವನನ್ನು ಕರೆದು, ಇಗೋ, ಮತ್ತೊಬ್ಬನು ಒಂಟಿಯಾಗಿ
೨೭ ಓಡಿ ಬರುತ್ತಿದ್ದಾನೆ, ಅಂದನು. ಅದಕ್ಕೆ ಅರಸನು ಅವನು ಕೂಡ
ವರ್ತಮಾನ ತಕ್ಕೊಂಡು ಬರುತ್ತಾನೆ, ಅಂದನು. ಕೋವರದ
ವನು, ಮೊದಲನೆಯವನ ಓಟವು ಚದೋಕನ ಮಗನಾದ ಅಹಿ
ಮಾಚನ ಓಟದ ಹಾಗೆ ಇರುವದೆಂದು ನನಗೆ ಕಾಣುತ್ತದೆ, ಅಂದ
ನು. ಅದಕ್ಕೆ ಅರಸನು ಅವನು ಒಳ್ಳೆಯವನು ಒಳ್ಳೇ ವರ್ತ
ಮಾನವನ್ನು ತರುತ್ತಾನೆ, ಅಂದನು.

೨೮ ಆಗ ಅಹಿಮಾಚನು ಕೂಗಿ, ಅರಸನಿಗೆ, ಕ್ಷೇಮ ಎಂದು ಹೇ
ಳಿ, ಅರಸನ ಮುಂದೆ ಬೋರೆ ಕೆಳಗಾಗಿ ನೆಲಕ್ಕೆ ಅಡ್ಡ ಬಿದ್ದು, ಅ
ರಸನಾದ ನನ್ನ ಸ್ವಾಮಿಗೆ ವಿರೋಧವಾಗಿ ತಮ್ಮ ಕೈಗಳನ್ನೆತ್ತಿ
ದ ಮನುಷ್ಯರನ್ನು ಒಪ್ಪಿಸಿ ಕೊಟ್ಟ ನಿನ್ನ ದೇವರಾದ ಕರ್ತನು
೨೯ ಆಶೀರ್ವದಿಸಲ್ಪಡಲಿ, ಅಂದನು. ಅರಸನು ಪ್ರಾಯಸ್ತನಾದ ಅ
ಬ್ಷಲೋಮನಿಗೆ ಕ್ಷೇಮವೋ! ಎಂದು ಕೇಳ್ದನು. ಅದಕ್ಕೆ ಅಹಿ
ಮಾಚನು ಪ್ರತ್ಯುತ್ತರವಾಗಿ, ಯೊವಾಬನು ಅರಸನ ಸೇವಕನನ್ನೂ
ನಿನ್ನ ಸೇವಕನಾದ ನನ್ನನ್ನೂ ಕಳುಹಿಸಿದಾಗ, ದೊಡ್ಡ ಸಮೂಹ
ವನ್ನು ಕಂಡೆನು. ಆದರೆ ಅದು ಏನೋ, ನಾನರಿಯೇ, ಅಂದನು.
೩೦ ಅರಸನು, ನೀನು ಇತ್ತಲಾಗಿ ಬಂದು ನಿಲ್ಲು, ಅಂದನು. ಅವನು
ಅತ್ತಲಾಗಿ ಹೋಗಿ ನಿಂತನು. ಆಗ, ಇಗೋ, ಕೂಷಿಯು ಬಂದ
೩೧ ನು. ಮತ್ತು ಕೂಷಿಯು, ಅರಸನಾದ ನನ್ನ ಯಜಮಾನನಿಗೆ
ವರ್ತಮಾನ ಉಂಟು. ಏನಂದರೆ ಕರ್ತನು ಈ ಹೊತ್ತು ನಿನಗೆ
ವಿರೋಧವಾಗಿ ಎದ್ದ ಸಮಸ್ತರಿಗೂ ಮುಯ್ಯಿಗೆ ಮುಯ್ಯಿ ಕೊ
೩೨ ಟ್ಟಿದ್ದಾನೆ, ಅಂದನು. ಅರಸನು ಕೂಷಿಗೆ, ಪ್ರಾಯಸ್ತನಾದ ಅ



ಬ್ಷಲೋಮನಿಗೆ ಕ್ಷೇಮವೋ! ಅಂದನು. ಕೂಷಿಯು ಪ್ರತ್ಯುತ್ತರ
ವಾಗಿ, ಅರಸನಾದ ನನ್ನ ಸ್ವಾಮಿಯ ಶತ್ರುಗಳು ಆ ಪ್ರಾಯಸ್ತನ
೩೩ ಹಾಗೆಯೇ ಇರಲಿ, ಅಂದನು. ಆಗ ಅರಸನು ನಡುಗುತ್ತಾ, ಊ
ರು ಬಾಗಲ ಮೇಲಿರುವ ಕೊಠಡಿಗೆ ಏರಿ ಹೋದನು; ಹೋಗುವಾ
ಗ, ಅತ್ತು. ನನ್ನ ಮಗನಾದ ಅಬ್ಷಲೋಮನೇ, ನನ್ನ ಮಗನೇ,
ನನ್ನ ಮಗನಾದ ಅಬ್ಷಲೋಮನೇ; ನಿನಗೆ ಪ್ರತಿಯಾಗಿ ನಾನು
ಸತ್ತಕೆ, ಉತ್ತಮ, ಅಬ್ಷಲೋಮನೇ, ನನ್ನ ಮಗನೇ, ನನ್ನ ಮಗ
ನೇ, ಅಂದನು.

## ೧೯. ಸಂಧಿ.

೧ ಆಗ, ಇಗೋ, ಅರಸನು ಅಬ್ಷಲೋಮನಿಗೋಸ್ಕರ ಅತ್ತು
೨ ದುಖ್ಖ ಪಡುತ್ತಾನೆಂದು, ಯೊವಾಬನಿಗೆ ತಿಳಿಸಲ್ಪಟ್ಟಿತು. ಆ ದಿನ
ಆ ರಕ್ಷಣೆಯು ಸಮಸ್ತ ಜನರಿಗೂ ದುಖ್ಖವಾಯಿತು. ಯಾಕಂ
೩ ದರೆ ಅರಸನು ತನ್ನ ಮಗನಿಗೋಸ್ಕರ ವ್ಯಥೆ ಪಡುತ್ತಾನೆಂದು
ಜನರು ಕೇಳ್ದರು. ಆದದರಿಂದ ಜನರು ಯುದ್ಧದಲ್ಲಿ ಓಡಿ ಹೋ
ಗಿ, ಅವಮಾನ ಪಟ್ಟು ಕಳ್ಳತನವಾಗಿ ಬರುವ ಹಾಗೆ, ಆ ದಿನದ
೪ ಲ್ಲಿ ಕಳ್ಳತನವಾಗಿ ಪಟ್ಟಣದೊಳಗೆ ಬಂದರು. ಆದರೆ ಅರಸನು
ಮೋಕೆಯನ್ನು ಮುಚ್ಚಿ ಕೊಂಡು, ಮಹಾ ಶಬ್ದವಾಗಿ, ನನ್ನ ಮ
ಗನಾದ ಅಬ್ಷಲೋಮನೇ, ಅಬ್ಷಲೋಮನೇ, ನನ್ನ ಮಗನೇ, ನ
ನ್ನ ಮಗನೇ, ಎಂದು ಕೂಗುತ್ತಿದ್ದನು.

೫ ಆಗ ಯೊವಾಬನು ಮನೆಯೊಳಗೆ ಅರಸನ ಬಳಿಗೆ ಬಂದು
ಅವನಿಗೆ, ನೀನು ನಿನ್ನ ಹಗೆಯವರನ್ನು ಪ್ರೀತಿ ಮಾಡಿ, ನಿ
ನ್ನನ್ನು ಪ್ರೀತಿ ಮಾಡುವವರನ್ನು ಹಗೆ ಮಾಡಿದ್ದರಿಂದ, ಈ
ಹೊತ್ತು ನಿನ್ನ ಪ್ರಾಣವನ್ನೂ, ನಿನ್ನ ಕುಮಾರರ ಪ್ರಾಣಗಳ
ನ್ನೂ ನಿನ್ನ ಕುಮಾರ್ತೆಗಳ ಪ್ರಾಣಗಳನ್ನೂ, ನಿನ್ನ ಹೆಂಡರ
ಪ್ರಾಣಗಳನ್ನೂ, ಉಪಪತ್ನಿಗಳ ಪ್ರಾಣಗಳನ್ನೂ ರಕ್ಷಿಸಿದ ನಿ
೬ ನ್ನ ಸೇವಕರ ಮುಖಗಳನ್ನು ನಾಚಿಕೆ ಪಡಿಸಿದ್ದೀ. ಯಾಕಂದರೆ
ಪ್ರಧಾನರಾದರೂ ಸೇವಕರಾದರೂ ನಿನಗೆ ಏನು ಇಲ್ಲವೆಂದು, ಈ
ಹೊತ್ತು ತಿಳಿಯ ಮಾಡಿದಿ. ಯಾಕಂದರೆ ಈ ಹೊತ್ತು ನಾವೆ
ಲ್ಲರೂ ಸತ್ತು, ಅಬ್ಷಲೋಮನು ಬದುಕಿದ್ದರೆ, ನಿನ್ನ ಕಣ್ಣುಗಳಿಗೆ
೭ ಸರಿಯಾಗಿರುವದೆಂದು, ನನಗೆ ತಿಳಿಯುತ್ತದೆ. ಈಗ ನೀನು ಎ
ದ್ದು, ಹೊರಟು ಬಂದು, ನಿನ್ನ ಸೇವಕರ ಸಂಗಡ ಸಮಾಧಾನವಾ
ಗಿ ಮಾತಾಡು. ನೀನು ಹೊರಗೆ ಬಾರದೆ ಇದ್ದರೆ, ಈ ರಾತ್ರಿಯ
ಲ್ಲಿ ಒಬ್ಬರಾದರೂ ನಿನ್ನ ಸಂಗಡ ಇರುವದಿಲ್ಲವೆಂದು, ಕರ್ತನ
ಮೇಲೆ ಆಣೆ ಇಟ್ಟು ಹೇಳುತ್ತೇನೆ. ಆಗ ನಿನ್ನ ಚಿಕ್ಕತನದಿಂದ
ಈ ದಿನದ ವರಿಗೂ ನಿನಗೆ ಬಂದ ಸಮಸ್ತ ಕೇಡಿಗಿಂತ ಅದು ನಿನ
೮ ಗೆ ಅಧಿಕ ಕೇಡಾಗಿರುವದು, ಅಂದನು. ಆಗ ಅರಸನು ಎದ್ದು
ಹೋಗಿ ಬಾಗಲಲ್ಲಿ ಕುಳಿತನು. ಇಗೋ, ಅರಸನು ಬಾಗಲಲ್ಲಿ
ಕುಳಿತಿದ್ದಾನೆಂದು, ಸಮಸ್ತ ಜನರಿಗೆ ತಿಳಿಸಲ್ಪಟ್ಟದ್ದರಿಂದ, ಜನರೆಲ್ಲ
ರು ಅರಸನ ಮುಂದಕ್ಕೆ ಬಂದರು. ಯಾಕಂದರೆ ಇಸ್ರಯೇಲ್ಯರೆ
ಲ್ಲರು ತಮ್ಮ ತಮ್ಮ ಗುಡಾರಗಳಿಗೆ ಓಡಿ ಹೋಗಿದ್ದರು.

೯ ಆದರೆ ಇಸ್ರಯೇಲಿನ ಎಲ್ಲಾ ಕುಲಗಳಲ್ಲಿರುವ ಸಮಸ್ತ ಜನರು
ತಮ್ಮೊಳಗೆ ವ್ಯಾಜ್ಯವಾಡಿ, ನಮ್ಮ ಶತ್ರುಗಳ ಕೈಗೆ ನಮ್ಮನ್ನು ವಿ
ಮೋಚನೆ ಮಾಡಿದವನು ಅರಸನೇ; ಫಿಲಿಷ್ಟ್ಯರ ಕೈಗೆ ನಮ್ಮನ್ನು
೧೦ ತಪ್ಪಿಸಿದವನು ಅವನೇ. ಆದರೆ ಈಗ ಅಬ್ಷಲೋಮನಿಗೋಸ್ಕರ
ದೇಶವನ್ನು ಬಿಟ್ಟು ಓಡಿ ಹೋಗಿದ್ದಾನೆ. ನಮ್ಮನ್ನು ಆಳ್ಳ ಅಭಿ
ಷೇಕಿಸಲ್ಪಟ್ಟ ಅಬ್ಷಲೋಮನು ಯುದ್ಧದಲ್ಲಿ ಸತ್ತನು. ನಾವು ಈ
ಗ ಅರಸನನ್ನು ಮತ್ತೂ ಕರಕೊಂಡು ಬರ ಸುಮ್ಮನೇ ಇರುವದು
ಯಾಕೆ! ಅಂದರು.

೧೧ ಆಗ ಅರಸನಾದ ದಾವೀದನು ಯಾಜಕರಾದ ಚದೋಕನ ಬ
ಳಿಗೂ ಅಬ್ಯಾತಾರನ ಬಳಿಗೂ ಸೇವಕರನ್ನು ಕಳುಹಿಸಿ, ನೀವು
ಯೆಹೂದದ ಹಿರಿಯರಿಗೆ ಹೇಳ್ಳ ಬೇಕಾದದ್ದೇನಂದರೆ—ಸಮಸ್ತ
ಇಸ್ರಯೇಲಿನ ಮಾತು ಅರಸನಿಗೆ, ತನ್ನ ಮನೆಗೆ ಬಂದಿರುವಾಗ,
ಅರಸನನ್ನು ತನ್ನ ಮನೆಗೆ ತಿರಿಗಿ ಕರಕೊಂಡು ಬರ ನೀವು ಹಿಂ
೧೨ ದಾದದ್ದೇನು! ನನ್ನ ಸಹೋದರರೂ ನೀವು; ನನ್ನ ಎಲುವೂ ನ
ನ್ನ ಮಾಂಸವೂ ನೀವು. ಹಾಗಾದರೆ ಅರಸನನ್ನು ತಿರಿಗಿ ಬರ
೧೩ ಮಾಡ ನೀವು ಹಿಂದಾದದ್ದೇನು! ಇದಲ್ಲದೆ ನೀವು ಅಮಾಸನಿಗೆ,
ನೀನು ನನ್ನ ಎಲುವೂ ಮಾಂಸವೂ ಅಲ್ಲವೋ! ನೀನು ಯೊವಾಬ
ನಿಗೆ ಬದಲಾಗಿ ಯಾವಾಗ್ಯೂ ನನ್ನ ಮುಂದೆ ಸೈನ್ಯದ ಪ್ರಧಾನ
ನಾಗಿರದೆ ಹೋದರೆ, ದೇವರು ನನಗೆ ಹೀಗೆಯೂ ಹಾಗೆಯೂ
೧೪ ಮಾಡಲಿ, ಎಂದು ಹೇಳ್ಳಿರಿ, ಅಂದನು. ಹಾಗೆಯೇ ಅವನು ಸಕಲ
ಯೆಹೂದ ಮನುಷ್ಯರ ಹೃದಯವನ್ನು ಒಬ್ಬನ ಹೃದಯದ
ಹಾಗೆ ಬೊಗ್ಗಿಸಿದ್ದರಿಂದ, ಅವರು ಅರಸನಿಗೆ, ನೀನೂ ನಿನ್ನ ಸಮಸ್ತ
೧೫ ಸೇವಕರೂ ತಿರಿಗಿ ಬನ್ನಿರಿ ಎಂದು, ಹೇಳ್ಳಿ ಕಳುಹಿಸಿದರು. ಅರಸ
ನು ತಿರಿಗಿ ಬರ ಯೊರ್ದನಿನ ಮಟ್ಟಿಗೂ ಬಂದಾಗ, ಯೆಹೂದ
ದವರು ಅರಸನನ್ನು ಎದುರುಗೊಳ್ಳ ಹೋಗಿ, ಅರಸನು ಯೊ
ರ್ದನನ್ನು ದಾಟುವ ಹಾಗೆ ಮಾಡ, ಗಿಲ್ಗಾಲಿಗೆ ಬಂದರು.

೧೬ ಇದಲ್ಲದೆ ಬಹೂರಿಮಿನವನಾದಂಥ, ಬೆನ್ಯಾಮಿನ್ಯನಾದಂಥ ಗೇ
ರನ ಮಗನಾದ ಶಿಮ್ಮೆಯು ತ್ವರೆಯಾಗಿ ಯೆಹೂದ ಮನುಷ್ಯರ
೧೭ ಸಂಗಡ ಅರಸನಾದ ದಾವೀದನನ್ನು ಎದುರುಗೊಳ್ಳ ಬಂದನು.
ಅವನ ಸಂಗಡ ಬೆನ್ಯಾಮಿನನ ಮನುಷ್ಯರಾದ ಸಾವಿರ ಜನರೂ,
ಸೌಲನ ಮನೆಯ ಸೇವಕನಾದ ಚೀಬನೂ, ತನ್ನ ಸಂಗಡ ತನ್ನ
ಹದಿನೈದು ಮಂದಿ ಕುಮಾರರೂ ತನ್ನ ಇಪ್ಪತ್ತು ಮಂದಿ ಸೇವಕ
೧೮ ರೂ ಯೊರ್ದನನ್ನು ದಾಟಿ, ಅರಸನಿಗೆ ಎದುರಾಗಿ ಬಂದರು. ಆ
ದರೆ ಅರಸನ ಮನೆಯವರನ್ನು ಈಚೆ ಥಡಕ್ಕೆ ತರಲೂ, ಅವನ
ದೃಷ್ಟಿಗೆ ಒಳ್ಳೇದಾಗಿ ಕೋರಿದ್ದನ್ನು ಮಾಡಲೂ, ಹರುಗೋಲು
ಆಚೇ ಥದಲ್ಲಿ ಬಂತು. ಆಗ ಗೇರನ ಮಗನಾದ ಶಿಮ್ಮೆ, ಯೊರ್ದ
ನನ್ನು ದಾಟುತ್ತಲೇ, ಅರಸನ ಮುಂದೆ ಬಿದ್ದು, ಅರಸನಿಗೆ ಹೇಳ್ಳಿ
೧೯ ದ್ದೇನಂದರೆ, ನನ್ನ ಸ್ವಾಮಿ ನನ್ನ ಅಕ್ರಮವನ್ನು ನನಗೆ ಎಣಿಸ
ದೆ, ಅರಸನಾದ ನನ್ನ ಸ್ವಾಮಿ ಯೆರೂಸಲೇಮಿನಿಂದ ಹೊರಟು
ಬರುವ ದಿವಸದಲ್ಲಿ ತನ್ನ ದಾಸನು ಕೋಪವಾಗಿ ಮಾಡಿದ ಕಾ
ರ್ಯವನ್ನು ನೆನಸದೆ, ತನ್ನ ಮನಸ್ಸಿನಲ್ಲಿ ಇಡದೆ ಇರಲಿ. ಯಾಕಂ
೨೦ ದರೆ ಪಾಪ ಮಾಡಿದೆನೆಂದು, ನಿನ್ನ ಸೇವಕನಾಗಿರುವ ನಾನು ತಿ
ಳಿದು ಇದ್ದೇನೆ. ಆದದರಿಂದ, ಇಗೋ, ಅರಸನಾದ ನನ್ನ ಸ್ವಾಮಿ
ಯನ್ನು ಎದುರುಗೊಳ್ಳ ಯೋಸೆಫನ ಮನೆಯ ಸಮಸ್ತರಿಗಂತ
೨೧ ಮುಂದಾಗಿ ಬಂದೆನು, ಅಂದನು. ಆಗ ಚೆರೂಯಳ ಮಗನಾದ
ಅಬಿಷಯ್ಯನು ಪ್ರತ್ಯುತ್ತರವಾಗಿ, ಕರ್ತನ ಅಭಿಷಿಕ್ತನನ್ನು ಶಿಮ್ಮೆ
ದೂಷಿಸಿದ್ದರಿಂದ, ಅವನು ಅದಕ್ಕಾಗಿ ಕೊಲ್ಲಲ್ಪಡ ಬೇಕಲ್ಲವೋ!
೨೨ ಅಂದನು. ಆದರೆ ದಾವೀದನು, ಚೆರೂಯಳ ಮಕ್ಕಳೇ, ಈ ಹೊ

ತ್ತು ನೀವು ನನಗೆ ಶತ್ರುಗಳಾಗಿರುವ ಹಾಗೆ, ನನಗೆ ನಿಮಗೆ ಏನು! ಈ ಹೊತ್ತು ಇಸ್ರಯೇಲಿನಲ್ಲಿ ಯಾವನಾದರೂ ಕೊಲೆ ಪಡನು; ಯಾಕಂದರೆ ಈ ಹೊತ್ತು ನಾನು ಇಸ್ರಯೇಲಿನ ಮೇಲೆ ಅರಸ
೨೩ ನಾಗಿದ್ದೇನೆಂದು ನಾನು ಶಿಳ್ಳಿಯುತ್ತೇನಲ್ಲ! ಅಂದನು. ಆಗ ಅರಸನು ಶಿಮ್ಶೊಗೆ, ನೀನು ಸಾಯುವದಿಲ್ಲ, ಅಂದನು. ಮತ್ತು ಅರಸನು ಅವನಿಗೆ ಆಣೆ ಇಟ್ಟನು.

೨೪ ಮತ್ತು ಶೌಲನ ಮಗನಾದ ಮೆಫಿಬೋಷತನು ಅರಸನನ್ನು ಎದುರುಗೊಳ್ಳ ಬಂದನು. ಅವನು ಅರಸನು ಹೋದಂದಿನಿಂದ, ಅವನು ಮರಳಿ ಸಮಾಧಾನವಾಗಿ ಬರುವ ಮಟ್ಟಿಗೂ, ತನ್ನ ಕಾ
ಲುಗಳನ್ನು ಸರಿ ಮಾಡಿ ಕೊಳ್ಳಲಿಲ್ಲ, ತನ್ನ ಗಡ್ಡವನ್ನು ನೆಟ್ಟಗೆ ಮಾಡಿ ಕೊಳ್ಳಲಿಲ್ಲ, ತನ್ನ ಬಟ್ಟೆಗಳನ್ನು ಒಗೆದು ಕೊಳ್ಳಲಿಲ್ಲ.
೨೫ ಅವನು ಯೆರೂಸಲೇಮಿನಿಂದ ಅರಸನನ್ನು ಎದುರುಗೊಳ್ಳ ಬಂ
ದಾಗ, ಅರಸನು ಅವನಿಗೆ, ಮೆಫಿಬೋಷತನೇ, ನೀನು ಯಾಕೆ
೨೬ ನನ್ನ ಸಂಗಡ ಬಾರದೆ ಹೋದಿ! ಅಂದನು. ಅದಕ್ಕವನು, ಅರಸನಾ
ದ ನನ್ನ ಸ್ವಾಮಿಯೇ, ನನ್ನ ಸೇವಕನು ನನ್ನನ್ನು ಮೋಸ ಮಾ
ಡಿದನು. ಯಾಕಂದರೆ ನಿನ್ನ ಸೇವಕನು ಕುಂಟನಾಗಿರುವದರಿಂದ,
ಬಂದು ಕತ್ತೆಯ ಮೇಲೆ ತಡಿಯನ್ನು ಹಾಕಿ, ಅದರ ಮೇಲೇರಿ, ಅ
ರಸನ ಸಂಗಡ ಹೋಗುವೆನೆಂದು, ನಿನ್ನ ಸೇವಕನಾದ ನಾನು ಅ
೨೭ ವನಿಗೆ ಹೇಳಿದೆನು. ಅವನು ಅರಸನಾದ ನನ್ನ ಸ್ವಾಮಿಗೆ ನಿನ್ನ
ಸೇವಕನ ಮೇಲೆ ಘಾತಿಯನ್ನು ಹೇಳಿದನು. ಆದರೆ ಅರಸನಾದ
೨೮ ನನ್ನ ಸ್ವಾಮಿ ದೇವ ದೂತನ ಹಾಗೆಯೇ ಇದ್ದಾನೆ. ನಿನ್ನ ದೃ
ಷ್ಟಿಗೆ ಒಳ್ಳೇದಾಗಿರುವದನ್ನು ಮಾಡು. ಯಾಕಂದರೆ ಅರಸನಾ
ದ ನನ್ನ ಸ್ವಾಮಿಗೆ ನನ್ನ ತಂದೆಯ ಮನೆಯವರೆಲ್ಲರು ಸತ್ತವರ
ಹಾಗೆ ಇದ್ದಾಗ್ಯೂ, ನಿನ್ನ ಪಂಕ್ತಿಯಲ್ಲಿ ಭೋಜನಮಾಡುವವರೊಳಗೆ
ನಿನ್ನ ಸೇವಕನನ್ನು ಇಟ್ಟಿ. ಇನ್ನು ಅರಸನಿಗೆ ನನಗೆ ಇನ್ನು ನ್ಯಾ
೨೯ ಯವೇನು! ಅಂದನು. ಆಗ ಅರಸನು ಅವನಿಗೆ ಇನ್ನು ನಿನ್ನ
ಕಾರ್ಯಗಳನ್ನು ಕುರಿತು ಮಾತಾಡುವದೇನು! ನೀನೂ ಜೀಬನೂ
ಭೂಮಿಯನ್ನು ಪಾಲು ಹಂಚಿ ಕೊಳ್ಳಿರಿ ಎಂದು ಹೇಳ್ದೇ
೩೦ ನೆ, ಅಂದನು. ಮೆಫಿಬೋಷತನು ಅರಸನಿಗೆ ಅರಸನಾದ ನನ್ನ
ಸ್ವಾಮಿ ಸಮಾಧಾನದಿಂದ ತಿರಿಗಿ ತನ್ನ ಮನೆಗೆ ಬಂದದ್ದೇ ಸಾಕು.
ಅವನೇ ಸಮಸ್ತವನ್ನು ತಕ್ಕೊಳ್ಳಲಿ, ಅಂದನು.

೩೧ ಇದಲ್ಲದೆ ಗಿಲ್ಯಾದ್ಯನಾದ ಬರ್ಜಿಲ್ಲಾಯಿ ರೊಗ್ಲಿಮಿನಿಂದ ಅರ
ಸನನ್ನು ಯೊರ್ದನನ್ನು ದಾಟಿಸ ಬಂದನು. ಈ ಬರ್ಜಿಲ್ಲಾಯಿ
೩೨ ಎಂಭತ್ತು ವರುಷದವನಾಗಿ ಮಹಾ ವೃದ್ಧನಾಗಿದ್ದನು. ಅರಸನು
ಮಹಾನಾಯಿಮಿನಲ್ಲಿ ವಾಸಿಸಿರುವ ಮಟ್ಟಿಗೂ, ಇವನು ಅವನನ್ನು
ಸಂರಕ್ಷಿಸಿದನು; ಯಾಕಂದರೆ ಅವನು ಮಹಾ ದೊಡ್ಡ ಮನು
೩೩ ಷ್ಯನಾಗಿದ್ದನು. ಆದದರಿಂದ ಅರಸನು ಬರ್ಜಿಲ್ಲಾಯಿಗೆ, ನೀನು
ನನ್ನ ಸಂಗಡ ಬಾ, ಯೆರೂಸಲೇಮಿನಲ್ಲಿ ನಿನ್ನನ್ನು ನನ್ನ ಬಳಿಯ
೩೪ ಲ್ಲಿ ಸಂರಕ್ಷಿಸುವೆನು, ಅಂದನು. ಆದರೆ ಬರ್ಜಿಲ್ಲಾಯಿ ಅರಸನಿಗೆ
ಹೇಳ್ದದ್ದು—ನಾನು ಅರಸನ ಸಂಗಡ ಯೆರೂಸಲೇಮಿಗೆ ಏರಿ ಹೋ
೩೫ ಗುವ ಹಾಗೆ, ನಾನು ಬದುಕುವ ವರುಷ ಎಷ್ಟು ಉಂಟು! ನಾನು
ಈ ಹೊತ್ತು ಎಂಭತ್ತು ವರುಷದವನು; ಇನ್ನು ಒಳ್ಳೇದು ಕೆಟ್ಟ
ದ್ದು ಎಂಬ ಭೇದ ತಿಳಿಯುವೆನೋ! ಭೋಜನಮಾಡುವದೂ ಕುಡಿಯು
ವದೂ ನಿನ್ನ ಸೇವಕನಿಗೆ ರುಚಿಕರವಾಗಿರುವದೋ! ಸಂಗೀತಗಾ
ರರ, ಸಂಗೀತಗಾರ್ತಿಯರ ಶಬ್ದವನ್ನು ಇನ್ನು ಕೇಳುವೆನೋ!
ಹಾಗಾದರೆ ನಿನ್ನ ಸೇವಕನು ಅರಸನಾದ ನನ್ನ ಸ್ವಾಮಿಗೆ ಇ
೩೬ ನ್ನು ಭಾರವಾಗಿರ ಬೇಕು. ನಿನ್ನ ಸೇವಕನು ಸ್ವಲ್ಪ ದೂರ ಯೊ
ರ್ದನನ್ನು ದಾಟುವ ಮಟ್ಟಿಗೂ ಅರಸನ ಸಂಗಡ ಬರುವನು; ಅಂ
೩೭ ಥಾ ಬದಲು ಅರಸನು ನನಗೆ ಮಾತುವದು ಯಾಕೆ! ಅಪ್ಪಣೆ ಆ
ದರೆ, ನಿನ್ನ ಸೇವಕನಾದ ನಾನು ತಿರಿಗಿ ಹೋಗಿ, ನನ್ನ ಪಟ್ಟದಲ್ಲಿ
ನನ್ನ ತಂದೆ ತಾಯಿಗಳ ಸಮಾಧಿಯ ಬಳಿಯಲ್ಲಿ ಸಾಯುತ್ತೇ
ನೆ. ಆದರೆ ಅರಸನಾದ ನನ್ನ ಸ್ವಾಮಿಯ ಸಂಗಡ, ಇಗೋ, ನಿ
ನ್ನ ಸೇವಕನಾದ ಕಿಂಹಾಮನು ಬರುವನು; ನಿನ್ನ ಕಣ್ಣುಗಳಿಗೆ
ಒಳ್ಳೇದಾಗಿರುವದನ್ನು ಅವನಿಗೆ ಮಾತು, ಅಂದನು. ಆಗ ಅರ
೩೮ ಸನು, ಕಿಂಹಾಮನು ನನ್ನ ಸಂಗಡ ಬರಲಿ; ನಿನ್ನ ಕಣ್ಣುಗಳಿಗೆ ಒ
ಳ್ಳೇದಾಗಿರುವದನ್ನು ನಾನು ಅವನಿಗೆ ಮಾತುವೆನು; ನಿನಗೆ ನನ್ನಿಂ
ದ ಬೇಕಾದದ್ದೆಲ್ಲಾ ಮಾತುವೆನು, ಅಂದನು. ಜನಕ್ಕೆಲ್ಲರು ಯೊ
ರ್ದನನ್ನು ದಾಟಿದರು. ಅರಸನು ದಾಟಿ ಬಂದಾಗ, ಬರ್ಜಿಲ್ಲಾ
೩೯ ಯನ್ನು ಮುದ್ದಿಟ್ಟು, ಅವನನ್ನು ಆಶೀರ್ವದಿಸಿದನು. ಆಗಲವನು
ತನ್ನ ಸ್ಥಳಕ್ಕೆ ತಿರುಗಿದನು. ಅರಸನು ಗಿಲ್ಗಾಲಿಗೆ ಬಂದನು; ಹಾ
ಗೆಯೇ ಅವನ ಸಂಗಡ ಕಿಂಹಾಮನು ಬಂದನು; ಯೆಹೂದದ ಜನ
ಕ್ಕೆಲ್ಲರೂ ಇಸ್ರಯೇಲಿನ ಅರ್ಧ ಪಾಲು ಜನರೂ ಅರಸನನ್ನು ಕರ
೪೦ ಕೊಂಡು ಬಂದರು.

ಮತ್ತು, ಇಗೋ, ಇಸ್ರಯೇಲ ಮನುಷ್ಯರೆಲ್ಲರೂ ಅರಸನ
ಬಳಿಗೆ ಬಂದು, ಅರಸನಿಗೆ, ನಮ್ಮ ಸಹೋದರರಾದ ಯೆಹೂದ್ಯ
ಮನುಷ್ಯರು ಕಳ್ಳತನವಾಗಿ ನಿನ್ನನ್ನು ಕರ ತಂದದ್ದೇನು! ಅರಸ
ನನ್ನೂ, ಅವನ ಮನೆಯವರನ್ನೂ, ಅವನ ಸಂಗಡ ಇರುವ ದಾ
ವೀದನ ಸಕಲ ಮನುಷ್ಯರನ್ನೂ, ಯೊರ್ದನನ್ನು ದಾಟಿಸಿದ್ದೇನು!
೪೧ ಅಂದರು. ಆಗ ಯೆಹೂದ ಮನುಷ್ಯರೆಲ್ಲರೂ ಇಸ್ರಯೇಲಿನ
ಮನುಷ್ಯರಿಗೆ ಪ್ರತ್ಯುತ್ತರವಾಗಿ, ಅರಸನು ನಮಗೆ ಬಂಧುವಾನ
ದರಿಂದಲೇ; ಈ ಕಾರ್ಯಕ್ಕೋಸ್ಕರ ನೀವು ಕೋಪವಾಗಿರುವ
ದೇನು! ನಾವು ಅರಸನ ಖರ್ಚಿನಿಂದ ಏನಾದರು ಉಂಟೆ ಮಾಡಿ
ಕೆವೋ? ಅವನು ನಮಗೆ ಏನಾದರೂ ಕೊಟ್ಟನೋ! ಅಂದರು.
೪೨ ಆದರೆ ಇಸ್ರಯೇಲ ಜನರು ಯೆಹೂದ ಜನರಿಗೆ ಪ್ರತ್ಯುತ್ತರವಾಗಿ,
ಅರಸನಲ್ಲಿ ನಮಗೆ ಹತ್ತು ಪಾಲುಂಟು; ನಿಮಗಿಂತ ನಮಗೆ ದಾವೀ
ದನ ಬಾಧ್ಯವು ಅಧಿಕವಾಗಿದೆ. ನಮ್ಮ ಅರಸನನ್ನು ತಿರಿಗಿ ಕರ
ಕೊಂಡು ಬರುವದರಲ್ಲಿ ನಮ್ಮ ಮಾತು ಮೊದಲು ಇರದ ಹಾಗೆ
ನಮ್ಮನ್ನು ಯಾಕೆ ಅಲ್ಪವಾಗಿ ಎಣಿಸಿದಿರಿ! ಅಂದರು. ಆದರೆ ಇ
ಸ್ರಯೇಲ ಮನುಷ್ಯರ ಮಾತುಗಳಿಗಿಂತ ಯೆಹೂದ ಮನುಷ್ಯ
ರ ಮಾತುಗಳು ಕಠೋಪಾದವು.

## ೨೦. ಸಂಧಿ.

೧ ಆಗ ಬೆನ್ಯಮೀನನ ಮನುಷ್ಯನಾದಂಥ, ಬಿಕ್ರಿಯ ಮಗನಾ
ಗಿರುವ, ಶೇಬನೆಂಬ ಹೆಸರುಳ್ಳ ಬೆಲಿಯಾಳನವನಾದಂಥ ಒಬ್ಬನು
ಅಲ್ಲಿದ್ದನು. ಅವನು ತುತೂರಿಯನ್ನು ಊದಿ, ನಮಗೆ ದಾವೀದನ
ಲ್ಲಿ ಪಾಲಿಲ್ಲವು, ಇಷಾಯನ ಮಗನ ಬಳಿಯಲ್ಲಿ ನಮಗೆ ಬಾಧ್ಯ
ವಿಲ್ಲವು. ಇಸ್ರಯೇಲ್ಯರೇ, ನಿಮ್ಮ ನಿಮ್ಮ ಗುಡಾರಗಳಿಗೆ ಹೋಗಿ
೨ ರಿ, ಅಂದನು. ಆಗ ಇಸ್ರಯೇಲ ಜನರೆಲ್ಲರು ದಾವೀದನನ್ನು ಬಿ
ಟ್ಟು ಸರಿದು, ಬಿಕ್ರಿಯ ಮಗನಾದ ಶೇಬನ ಹಿಂಕೆ ಹೋದರು. ಆ
ದರೆ ಯೊರ್ದನಿನಿಂದ ಯೆರೂಸಲೇಮಿನ ಮಟ್ಟಿಗೂ ಇರುವ ಯೆ
ಹೂದ ಮನುಷ್ಯರು ತಮ್ಮ ಅರಸನನ್ನು ಅಂಟಿ ಕೊಂಡಿದ್ದರು.



೩ ದಾವೀದನು ಯೆರೂಸಲೇಮಿನಲ್ಲಿರುವ ತನ್ನ ಮನೆಗೆ ಬಂದನು;
ಮತ್ತು ಅರಸನು ಮನೆಯನ್ನು ಕಾಯಿಲಿಟ್ಟು ಉಪಪತ್ನಿಗಳಾದ
ಹತ್ತು ಮಂದಿ ಸ್ತ್ರೀಯರನ್ನು ಕೆಗೆದು, ಅವರನ್ನು ಒಂದು ಕಾವ
ಲಿ ಮನೆಯಲ್ಲಿ ಇರಿಸಿ, ಸಂರಕ್ಷಿಸಿ, ಅವರ ಬಳಿಗೆ ಪ್ರವೇಶಿಸದೆ ಇ
ದ್ದನು. ಹಾಗೆಯೇ ಅವರು ತಮ್ಮ ಸಾಯುವ ದಿವಸದ ಮಟ್ಟಿ
ಗೂ ಬಿಗಿಯಾಗಿ ಇರಿಸಲ್ಪಟ್ಟು ವಿಧವೆಗಳ ಹಾಗೆಯೇ ಬದುಕಿ
ದರು.

೪ ಮತ್ತು ಅರಸನು ಅಮಾಸನಿಗೆ, ನೀನು ಮೂರು ದಿವಸಗಳೊ
ಳಗೆ ಯೆಹೂದ ಜನರನ್ನು ಕೂಡಿಸಿ ಕೊಂಡು, ನೀನು ಇಲ್ಲಿ ಸಿದ್ಧ
೫ ವಾಗಿರು, ಅಂದನು. ಹಾಗೆಯೇ ಅಮಾಸನು ಯೆಹೂದ ಜನರ
ನ್ನು ಕೂಡಿಸ ಹೋದನು; ಆದರೆ ತನಗೆ ನೇಮಿಸಿದ ಕಾಲದಲ್ಲಿ ಬಾ
೬ ರದೆ, ಆಲಸ್ಯ ಮಾಡಿದನು. ಆದದರಿಂದ ದಾವೀದನು ಅಬಿಷಯ್ಯ
ನಿಗೆ ಈಗ ಅಬ್ಷಲೋಮನಿಗಿಂತ ಬಿಕ್ರಿಯ ಮಗನಾದ ಶೇಬನು ನ
ಮಗೆ ಕೇಡನ್ನು ಮಾಡುವನು. ಅವನು ತನಗೆ ಗಡೀ ಸ್ಥಳಗಳಾದ
ಪಟ್ಟಣಗಳನ್ನು ಸಂಪಾದಿಸಿ ಕೊಂಡು, ನಮಗೆ ತಪ್ಪಿಸಿ ಕೊಳ್ಳದ
ಹಾಗೆ, ನೀನು ನಿನ್ನ ಯಜಮಾನನ ಸೇವಕರನ್ನು ತಕ್ಕೊಂಡು,
೭ ಹೊರಟು, ಅವನನ್ನು ಹಿಂದಟ್ಟು, ಅಂದನು. ಹಾಗೆಯೇ ಅವನ
ಹಿಂದೆ ಯೊವಾಬನ ಮನುಷ್ಯರೂ, ಕೆರೇತ್ಯರೂ, ಪೆಲೇತ್ಯರೂ,
ಪೊದಲಾದ ಸಮಸ್ತ ಪರಾಕ್ರಮಶಾಲಿಗಳೂ ಬಿಕ್ರಿಯ ಮಗನಾ
ದ ಶೇಬನನ್ನು ಹಿಂದಟ್ಟಿ ಯೆರೂಸಲೇಮಿನಿಂದ ಹೊರಟರು.

೮ ಅವರು ಗಿಬ್ಯೋನ ಸಮಿಪದಲ್ಲಿರುವ ದೊಡ್ಡ ಕಲ್ಲಿನ ಬಳಿಗೆ ಬಂ
ದಾಗ, ಅಮಾಸನು ಅವರ ಮುಂದೆ ಬಂದನು. ಆದರೆ ಯೊವಾಬ
ನು ತಾನು ತೊಟ್ಟು ಕೊಂಡಿರುವ ಅಂಗಿಯ ಮೇಲೆ ಒಂದು ನಡು
ಕಟ್ಟನ್ನು ಕಟ್ಟಿ ಕೊಂಡಿದ್ದನು. ಅದರಲ್ಲಿ ಒಕೆಯ ಸಂಗಡ ಒಂದು
ಕತ್ತಿಯು ಅವನ ನಡುವಿನಲ್ಲಿ ತೂಗುತ್ತಿತ್ತು. ಅವನು ನಡೆಯು
೯ ವಾಗ, ಅದು ಬಿತ್ತು. ಆಗ ಯೊವಾಬನು ಅಮಾಸನಿಗೆ, ನನ್ನ ಸ
ಹೋದರನೇ, ಕ್ಷೇಮವೋ! ಮತ್ತು ಯೊವಾಬನು ಅವನನ್ನು ಮು
ದ್ದಿಟ್ಟು ಕೊಳ್ಳ, ತನ್ನ ಬಲಗೈಯಿಂದ ಅವನ ಗಡ್ಡವನ್ನು ಹಿಡಿದು,
ಅಮಾಸನು ಯೊವಾಬನ ಕೈಯಲ್ಲಿದ್ದ ಕತ್ತಿಗೆ ಎಚ್ಚರಿಕೆ ಇಲ್ಲದಿ
ರುವಾಗ, ಯೊವಾಬನು ಅವನನ್ನು, ಕರುಳುಗಳು ಹೊರಡುವ
೧೦ ಹಾಗೆ, ಅವನ ಪಕ್ಕೆಯ ಐದನೇ ಎಲುಬಿನಲ್ಲಿ ತಿವಿದನು. ಎರಡನೇ
ಸಾರಿ ಹೊಡೆಯಲಿಲ್ಲ. ಅವನು ಸತ್ತನು. ಮತ್ತು ಯೊವಾಬನೂ
ಅವನ ಸಹೋದರನಾದ ಅಬಿಷಯ್ಯನೂ ಬಿಕ್ರಿಯ ಮಗನಾದ
೧೧ ಶೇಬನನ್ನು ಹಿಂದಟ್ಟಿದರು. ಯೊವಾಬನ ಸೇವಕರಲ್ಲಿ ಒಬ್ಬನು ಸ
ತ್ತವನ ಬಳಿಯಲ್ಲಿ ನಿಂತು, ಯಾವನು ಯೊವಾಬನ ಮೇಲೆ ಇಷ್ಟ
ಪಟ್ಟವನೋ, ಯಾವನು ದಾವೀದನಿಗೆ ಹೊಂದಿದವನೋ, ಅವ
೧೨ ನು ಯೊವಾಬನ ಹಿಂದೆ ಹೋಗಲಿ, ಅಂದನು. ಆದರೆ ಅಮಾಸ
ನು ರಾಜ ಮಾರ್ಗದೊಳಗೆ ರಕ್ತದಲ್ಲಿ ಹೊರಳುತ್ತಾ ಇದ್ದನು.
ಜನರೆಲ್ಲರು ನಿಂತಿರುವದನ್ನು ಆ ಮನುಷ್ಯನು ಕಂಡಾಗ, ಅವನು
ಅಮಾಸನನ್ನು ಹಾದಿಯಿಂದ ಹೊಲಕ್ಕೆ ಎಳೆದು ಹಾಕಿ, ಅವನ
೧೩ ಮೇಲೆ ಒಂದು ವಸ್ತ್ರವನ್ನು ಹಾಕಿದನು. ಅವನು ರಾಜ ಮಾರ್ಗ
ದಿಂದ ಎಳೆದು ಹಾಕಲ್ಪಟ್ಟ ತರುವಾಯ, ಜನರೆಲ್ಲರೂ ಮುಂದಕ್ಕೆ
ಹೋಗಿ, ಬಿಕ್ರಿಯ ಮಗನಾದ ಶೇಬನನ್ನು ಹಿಂದಟ್ಟಿ ಯೊವಾಬ
ನ ಹಿಂದೆ ಹೋದರು.

೧೪ ಅವನು ಇಸ್ರಯೇಲಿನ ಎಲ್ಲಾ ಕುಲಗಳಲ್ಲಿ ಹಾದು, ಬೆತ್ ಮಾ
ಕದ ಅಬೇಲಿನ ಮಟ್ಟಿಗೂ, ಎಲ್ಲಾ ಬೇರೀಯರ ಬಳಿಗೂ ಹೋದನು.
೧೫ ಅವರು ಕೂಡಿ ಕೊಂಡು, ಅವನ ಸಂಗಡ ಹೋದರು. ಅವರು
ಬಂದು, ಅವನು ಇದ್ದ ಬೆತ್ ಮಾಕದ ಅಬೇಲನ್ನು ಮುತ್ತಿಗೆ ಹಾ
ಕಿ, ಪಟ್ಟಣಕ್ಕೆದುರಾಗಿ ಕಂದಕದ ಗಡ್ಡೆಯ ಪರ್ಯಂತರ ಮೊಹರ್ಬೆ
ಯನ್ನು ಹಾಕಿದರು. ಯೊವಾಬನ ಸಂಗಡಿರುವ ಜನರೆಲ್ಲರೂ
ಅಲಂಗವನ್ನು ಕೆಡುವುವದಕ್ಕೆ ಹೊಡೆದರು. ಆಗ ಜ್ಞಾನವುಳ್ಳ ಒ
೧೬ ಬ್ಬ ಸ್ತ್ರೀಯು ಪಟ್ಟಣದಲ್ಲಿಂದ, ಕೇಳಿರಿ, ಕೇಳಿರಿ; ನಾನು ಯೊವಾಬ
ನ ಸಂಗಡ ಮಾತಾಡುವ ಹಾಗೆ, ಅವನು ಇಲ್ಲಿಗೆ ಸಮಿಪಿಸಿ ಬರ
ಬೇಳಿರಿ, ಎಂದು ಕೂಗಿದಳು. ಅವನು ಅವಳ ಬಳಿಗೆ ಸಮಿಪಿಸಿ
೧೭ ಬಂದಾಗ, ಆ ಸ್ತ್ರೀಯು, ನೀನು ಯೊವಾಬನೋ! ಅಂದಳು.
ಅದಕ್ಕವನು, ನಾನೇ, ಅಂದನು. ಆಗಲವಳು ಅವನಿಗೆ, ನಿನ್ನ
ಸೇವಕಳ ಮಾತುಗಳನ್ನು ಕೇಳು, ಅಂದಳು. ನಾನು ಕೇಳುತ್ತೇ
೧೮ ನೆ, ಅಂದನು. ಆಗಲವಳು ಅವನಿಗೆ ಹೇಳ್ದದ್ದು—ಪೂರ್ವದಲ್ಲಿ
ಮಾತಾಡುವ ಮಾತು ಏನಂದರೆ—ಅವರು ಅಬೇಲಿನಲ್ಲಿ ಕೇಳೇ ಕೇ
ಳಿ, ಹಾಗೆಯೇ ಕಾರ್ಯ ತೀರಿಸಿ ಕೊಳ್ಳುವರು. ನಾನು ಇಸ್ರಯೇ
೧೯ ಲಿನ ಸಮಾಧಾನವುಳ್ಳವರಲ್ಲಿಯೂ ನಂಬಿಗಸ್ತರಲ್ಲಿಯೂ ಒಬ್ಬ
ಳಾಗಿದ್ದೇನೆ. ನೀನು ಇಸ್ರಯೇಲಿನಲ್ಲಿ ಪಟ್ಟಣವನ್ನೂ ತಾಯಿಯ
ನ್ನೂ ನಾಶನ ಮಾಡ ಹುಡುಕುತ್ತೀ. ನೀನು ಕರ್ತನ ಬಾಧ್ಯತೆ
೨೦ ಯನ್ನು ನುಂಗುವೇನು! ಅಂದಳು. ಅದಕ್ಕೆ ಯೊವಾಬನು ಪ್ರ
ತ್ಯುತ್ತರವಾಗಿ, ನನಗೆ ದೂರವಾಗಿರಲಿ, ನುಂಗುವದೂ ಕೆಡಿಸುವ
೨೧ ದೂ ನನಗೆ ದೂರವಾಗಿರಲಿ. ಕಾರ್ಯವು ಹಾಗಲ್ಲ; ಯಾಕಂದರೆ
ಬಿಕ್ರಿಯ ಮಗನಾದ ಶೇಬನೆಂಬ ಹೆಸರುಳ್ಳ ಎಫ್ರಯಿಮ್ ಬೆಟ್ಟ
ದವನಾದ ಒಬ್ಬ ಮನುಷ್ಯನು ಅರಸನಾದ ದಾವೀದನಿಗೆ ವಿರೋ
ಧವಾಗಿ ತನ್ನ ಕೈಯನ್ನು ಎತ್ತಿದ್ದಾನೆ. ನೀವು ಅವನೊಬ್ಬನನ್ನೇ
ಒಪ್ಪಿಸಿ ಕೊಡಿರಿ; ಆಗ ನಾನು ಪಟ್ಟಣವನ್ನು ಬಿಟ್ಟು ಹೋಗುವೆನು,
ಅಂದನು. ಆ ಸ್ತ್ರೀಯು ಯೊವಾಬನಿಗೆ, ಇಗೋ, ಅವನ ತಲೆಯು
ಅಲಂಗದ ಮೇಲಿನಿಂದ ನಿನ್ನ ಬಳಿಗೆ ಹಾಕಲ್ಪಡುವದು, ಅಂದಳು.
೨೨ ಮತ್ತು ಆ ಸ್ತ್ರೀಯು ತನ್ನ ಜ್ಞಾನದಿಂದ ಸಮಸ್ತ ಜನರ ಬಳಿಗೆ
ಹೋದಳು. ಆಗಲವರು ಬಿಕ್ರಿಯ ಮಗನಾದ ಶೇಬನ ತಲೆಯ
ನ್ನು ಕಡಿದು, ಯೊವಾಬನ ಬಳಿಗೆ ಹಾಕಿದರು. ಮತ್ತು ಅವನು
ತುತೂರಿಯನ್ನು ಊದಿದ್ದರಿಂದ, ಅವರು ಪಟ್ಟಣದ ಬಳಿಯಿಂದ
ಚದರಿ, ಪ್ರತಿ ಮನುಷ್ಯನು ತನ್ನ ತನ್ನ ಗುಡಾರಕ್ಕೆ ಹೋದನು.
ಯೊವಾಬನು ಯೆರೂಸಲೇಮಿನಲ್ಲಿರುವ ಅರಸನ ಬಳಿಗೆ ತಿರಿಗಿ
ಬಂದನು.

೨೩ ಯೊವಾಬನು ಇಸ್ರಯೇಲಿನ ಸಮಸ್ತ ಸೈನ್ಯದ ಮೇಲೆ
ಇದ್ದನು; ಯೆಹೋಯದಾವನ ಮಗನಾದ ಬೆನಾಯನು ಕೆರೇತ್ಯರ
೨೪ ಮೇಲೆಯೂ ಪೆಲೇತ್ಯರ ಮೇಲೆಯೂ ಇದ್ದನು; ಅದೋರಮನು
ಗುತ್ತಿಗೆಯ ಹೂಣದ ಮೇಲೆ ಇದ್ದನು; ಅಹೀಲೂದನ ಮಗನಾದ ಯೆ
ಹೊಷಫಾಟನು ಸಂಪ್ರತಿಯವನಾಗಿದ್ದನು; ಶೇವನು ಕಾರ್ಯಸ
೨೬ ದವನಾಗಿದ್ದನು; ಚಡೋಕನೂ ಅಬ್ಯಾತಾರನೂ ಯಾಜಕರಾಗಿ
ದ್ದರು; ಯಾಯಿರ್ಯನಾದ ಈರನು ದಾವೀದನ ಬಳಿಯ ಶ್ರೇಷ್ಠ
ನಾಗಿದ್ದನು.

## ೨೧. ಸಂಧಿ.

೧ ದಾವೀದನ ದಿವಸಗಳಲ್ಲಿ ವರ್ಷ ವರ್ಷವಾಗಿ ಮೂರು ವರುಷ ಬರ ಉಂಟಾಗಿತ್ತು. ಆಗ ದಾವೀದನು ಕರ್ತನ ಮುಖವನ್ನು
ಹುಡಿಕಿದಾಗ, ಸೌಲನು ಗಿಬ್ಯೋನಿಯರನ್ನು ಕೊಂದು ಹಾಕಿದ್ದ
ರಿಂದ ಅವನಿಗೋಸ್ಕರವೂ ರಕ್ತಾಪರಾಧವುಳ್ಳ ಮನೆಗೋಸ್ಕರವೂ
ಉಂಟಾಗಿದೆ ಎಂದು, ಕರ್ತನು ಹೇಳಿದನು. ಆಗ ಅರಸನು ಗಿಬ್ಯೋ
೨ ನಿಯರನ್ನು ಕರೇಕಳುಹಿಸಿದನು. ಆದರೆ ಗಿಬ್ಯೋನಿಯರು ಇಸ್ರ
ಯೇಲ ಮಕ್ಕಳಾಗಿರದೆ, ಅಮೋರ್ಯರಲ್ಲಿ ಉಳಿದವರಾಗಿದ್ದರು.
ಅವರಿಗೆ ಇಸ್ರಯೇಲ ಮಕ್ಕಳು ಆಣೆ ಇಟ್ಟಿದ್ದರು. ಸೌಲನು ಇ
ಸ್ರಯೇಲ ಮಕ್ಕಳಿಗೋಸ್ಕರವಾಗಿಯೂ ಯೆಹೂದಕ್ಕೋಸ್ಕರ
ವಾಗಿಯೂ ತೋರಿಸಿದ ಆಸಕ್ತಿಯಿಂದ ಅವರನ್ನು ಹೊಡೆಯ ಹು
೩ ಡುಕಿದ್ದನು. ಆದದರಿಂದ ದಾವೀದನು ಗಿಬ್ಯೋನಿಯರನ್ನು ನಾನು
ನಿಮಗೆ ಮಾಡ ಬೇಕಾದದ್ದೇನು? ನೀವು ಕರ್ತನ ಬಾಧ್ಯತೆಯನ್ನು
ಆಶೀರ್ವದಿಸುವ ಹಾಗೆ, ನಾನು ಯಾವದರಿಂದ ಪಾಪ ಮುಚ್ಚಲಿ!
೪ ಎಂದು ಕೇಳಿದನು. ಆಗ ಗಿಬ್ಯೋನಿಯರು ಅವನಿಗೆ ಸೌಲನ ಕೈ
ಯಿಂದಲಾದರೂ ಅವನ ಮನೆಯವರ ಕೈಯಿಂದಲಾದರೂ ನಮ
ಗೆ ಬೆಳ್ಳಿಯಾದರೂ ಭಂಗಾರವಾದರೂ ಬೇಡ; ಮತ್ತು ನೀನು ಈ
ಕಾರ್ಯಕ್ಕೋಸ್ಕರ ಇಸ್ರಯೇಲಿನಲ್ಲಿ ಒಬ್ಬನಾದರೂ ಕೊಂ
ದು ಹಾಕ ಬೇಕೆಂಬುವದು ನಮಗೆ ಅಗತ್ಯವಿಲ್ಲ, ಅಂದರು. ಆಗಲ
೫ ವನು ನೀವು ನನಗೆ ಏನು ಹೇಳುತ್ತೀರೋ, ನಾನು ನಿಮಗೆ ಮಾಡು
ವೆನು, ಅಂದನು. ಅವರು ಅರಸನಿಗೆ, ಯಾವನು ನಮ್ಮನ್ನು ಶೀ
ರಿಸಿ ಬಿಟ್ಟು, ನಾವು ಇಸ್ರಯೇಲಿನ ಸಮಸ್ತ ಮೇರೆಗಳೊಳಗೆ ನಿ
ಲ್ಲದೆ, ನಾಶನವಾಗುವ ಹಾಗೆ ನಮಗೆ ಕೇಡು ಮಾಡ ನೆನೆಸಿದನೋ,
೬ ಅವನ ಕುಮಾರರಲ್ಲಿ ಏಳು ಮಂದಿ ನಮಗೆ ಒಪ್ಪಿಸಲ್ಪಡಲಿ. ಆಗ
ನಾವು ಕರ್ತನು ಆದು ಕೊಂಡ ಸೌಲನ ಊರಾದ ಗಿಬ್ಯದಲ್ಲಿ ಅವ
ರನ್ನು ಕರ್ತನಿಗೋಸ್ಕರ ಗಲ್ಲಿಗೆ ಹಾಕುವೆವು, ಅಂದರು. ಅದಕ್ಕೆ
ಅರಸನು, ನಾನು ಒಪ್ಪಿಸಿ ಕೊಡುವೆನು, ಅಂದನು.

೭ ಆದರೆ ದಾವೀದನು ತನಗೂ ಸೌಲನ ಮಗನಾದ ಯೊನತಾನ
ನಿಗೂ ಕರ್ತನನ್ನು ಕುರಿತು ಉಂಟಾದ ಪ್ರಮಾಣಕ್ಕೋಸ್ಕರ
ಅರಸನು ಸೌಲನ ಮಗನಾದ ಯೊನತಾನನ ಮಗನಾದ ಮೆಫಿಬೋ
೮ ಷತನನ್ನು ಕನಿಕರಿಸಿ, ಅಯ್ಯಾಹನ ಮಗಳಾಗಿರುವ ರಿಚ್ಪಳು
ಸೌಲನಿಗೆ ಹೆತ್ತ ಅವಳ ಇಬ್ಬರು ಮಕ್ಕಳಾದ ಅರ್ಮೋನಿಯ
ನೂಲಿ, ಮೆಫಿಬೋಷತನನ್ನೂ, ಸೌಲನ ಮಗಳಾಗಿರುವ ಮೀಕಾಳು
ಮೆಹೋಲದವನಾದ ಬರ್ಜಿಲ್ಲಾಯಿಯ ಮಗನಾಗಿರುವ ಅದ್ರಿಯೇ
ಲನಿಗೆ ಸಾಕಿದ ಐದು ಮಂದಿ ಮಕ್ಕಳನ್ನೂ ಹಿಡು ಕೊಂಡು, ಅವ
೯ ರನ್ನು ಗಿಬ್ಯೋನಿಯರ ಕೈಯಲ್ಲಿ ಒಪ್ಪಿಸಿ ಕೊಟ್ಟನು. ಇವರು
ಅವರನ್ನು ಕರ್ತನ ಮುಂದೆ ಬೆಟ್ಟದ ಮೇಲೆ ಗಲ್ಲಿಗೆ ಹಾಕಿದರು.
ಹಾಗೆಯೇ ಅವರು ಏಳು ಮಂದಿಯೂ ಒಂದೇ ಸಾರಿ ಬಿದ್ದರು.
ಜವೆಗೋಧೀ ಸುಗ್ಗಿಯ ದಿನದ ಪ್ರಾರಂಭದಲ್ಲಿ ಅವರು ಕೊಂದು
೧೦ ಹಾಕಲ್ಪಟ್ಟರು. ಆಗ ಅಯ್ಯಾಹನ ಮಗಳಾದ ರಿಚ್ಪಳು ಗೋಣಿ
ಯನ್ನು ತಕ್ಕೊಂಡು ಹೋಗಿ, ಗುಡ್ಡದ ಮೇಲೆ ಅದನ್ನು ತನ
ಗೋಸ್ಕರ ಹಾಸಿ, ಸುಗ್ಗಿಯ ದಿವಸ ಮೊದಲುಗೊಂಡು ಆಕಾಶ
ದಿಂದ ಅವರ ಮೇಲೆ ಮಳೆ ಸುರಿಯುವ ಮಟ್ಟಿಗೂ, ಹಗಲಲ್ಲಿ ಅ
ಕಾಶದ ಪಕ್ಷಿಗಳನ್ನಾದರೂ ರಾತ್ರಿಯಲ್ಲಿ ಅಡವಿಯ ಮೃಗಗಳ
ನ್ನಾದರೂ ಅದರ ಮೇಲೆ ಕೂಡ್ರ ಗೊಡದೆ ಇದ್ದಳು.

೧೧ ಅಯ್ಯಾಹನ ಮಗಳಾದ ರಿಚ್ಪಳೆಂಬ ಸೌಲನ ಉಪಪತ್ನಿ ಮಾ
೧೨ ಡಿದ್ದು ದಾವೀದನಿಗೆ ತಿಳಿಸಲ್ಪಟ್ಟಾಗ, ದಾವೀದನು ಹೋಗಿ ಫಿಲಿ
ಷ್ಟ್ಯರು ಗಿಲ್ಬೋಯದಲ್ಲಿ ಸೌಲನನ್ನು ಹೊಡೆದಾಗ, ಬೇತ್ಷಾನಿ
ನ ಬೀದಿಯಲ್ಲಿ ತೂಗ ಹಾಕಿದ, ಗಿಲ್ಯಾದಿನ ಯಾಬೆದು ಪಟ್ಟಣ
ದವರು ಅಲ್ಲಿ ಹೋಗಿ, ಕದ್ದು ಮೈದ ಸೌಲನ ಎಲುವುಗಳನ್ನೂ, ಅ
ವನ ಮಗನಾದ ಯೊನತಾನನ ಎಲುವುಗಳನ್ನೂ ಅವರಿಂದ ತ
೧೩ ಕ್ಕೊಂಡು, ಅಲ್ಲಿಂದ ಬಂದು, ಗಲ್ಲಿಗೆ ಹಾಕಲ್ಪಟ್ಟವರ ಎಲುವುಗಳ
ನ್ನೂ ಕೂಡಿಸಿ ಕೊಂಡು, ಸೌಲನ ಎಲುವುಗಳನ್ನೂ, ಅವನ ಮ
ಗನಾದ ಯೊನತಾನನ ಎಲುವುಗಳನ್ನೂ ಬೆನ್ಯಮೀನನ ದೇಶದ
ಜೇಲದಲ್ಲಿರುವ ಅವನ ತಂದೆಯಾದ ಕೀಷನ ಸಮಾಧಿಯಲ್ಲಿ
೧೪ ಹೂಣಿಟ್ಟರು. ಅವರು ಅರಸನು ಆಜ್ಞಾಪಿಸಿದನೆಲ್ಲಾ ತೀರಿಸಿದ
ತರುವಾಯ, ದೇವರು ದೇಶಕ್ಕೋಸ್ಕರ ಬಿನ್ನಹವನ್ನು ಕೇಳಿ
ದನು.

೧೫ ಮತ್ತು ಫಿಲಿಷ್ಟ್ಯರು ತಿರಿಗಿ ಇಸ್ರಯೇಲ್ಯರ ಮೇಲೆ ಯುದ್ಧ
ಮಾಡಿದರು. ಆಗ ದಾವೀದನೂ ಅವನ ಸಂಗಡಿದ್ದ ಅವನ ಸೇ
ವಕರೂ ಹೋಗಿ, ಫಿಲಿಷ್ಟ್ಯರ ಸಂಗಡ ಯುದ್ಧ ಮಾಡಿದರು. ಆ
೧೬ ದರೆ ದಾವೀದನು ದಣಿದು ಹೋದನು. ಆಗ ಮನ್ನೂರು ಬೆಕೆಲು
ತೂಕವಾದ ಹಿತ್ತಾಳೆಯ ಈಟಿಯುಳ್ಳವನಾಗಿ, ಹೊಸ ಕತ್ತಿಯ
ನ್ನು ನಡುವಿನಲ್ಲಿ ಕಟ್ಟಿ ಕೊಂಡಿರುವ, ರಾಫನ ಮಕ್ಕಳಲ್ಲಿ ಒಬ್ಬ
ನಾದ ಇಷ್ಬಿಬೆನೋಬನು ದಾವೀದನನ್ನು ಹೊಡೆದು ಬಿಡ ಬೇ
ಕೆಂದಿದ್ದನು. ಆದರೆ ಚೆರೂಯಳ ಮಗನಾದ ಅಬಿಷಯ್ಯನು ಅ
ವನಿಗೆ ಸಹಾಯವಾಗಿ ಬಂದು, ಫಿಲಿಷ್ಟ್ಯನನ್ನು ಹೊಡೆದು, ಕೊಂ
೧೭ ದು ಹಾಕಿದನು. ಆಗ ದಾವೀದನ ಮನುಷ್ಯರು ಅವನಿಗೆ, ನೀನು
ಇಸ್ರಯೇಲಿನ ದೀಪಗೆಯನ್ನು ಆರಿಸಿ ಬಿಡದ ಹಾಗೆ, ಇನ್ನು ಮೇ
ಲೆ ನಮ್ಮ ಸಂಗಡ ಯುದ್ಧಕ್ಕೆ ಹೊರಡ ಬೇಡ ಎಂದು, ಅವನಿಗೆ
ಆಣೆ ಇಟ್ಟರು.

೧೮ ಇದರ ತರುವಾಯ ಏನಾಯಿತಂದರೆ, ತಿರಿಗಿ ಫಿಲಿಷ್ಟ್ಯರ ಸಂ
ಗಡ ಗೋಬದಲ್ಲಿ ಯುದ್ಧ ಉಂಟಾಯಿತು. ಆಗ ಹುಷಾತ್ಯನಾ
ದ ಸಿಬ್ಬೆಕಾಯನು ರಾಫನ ಮಕ್ಕಳಲ್ಲಿ ಸಾಫನನ್ನು ಹೊಡೆದು ಬಿ
ಟ್ಟನು. ತಿರಿಗಿ ಫಿಲಿಷ್ಟ್ಯರ ಸಂಗಡ ಗೋಬದಲ್ಲಿ ಯುದ್ಧ ಉಂಟಾ
೧೯ ದಾಗ, ಬೇತ್ಲೆಹೇಮ್ಯನಾದ ಯಾರಿಯೊರ್ಗಿಮನ ಮಗನಾಗಿರು
ವ ಎಲ್ಹನಾನನು ಗಿತ್ತಿಯನಾದ ಗೊಲೆಯಾತನ ಸಹೋದರನ
ನ್ನು ಹೊಡೆದು ಬಿಟ್ಟನು. ಈ ಗೊಲೆಯಾತನ ಈಟಿಯ ಕಟ್ಟಿ
ಗೆಯು ನೆಯ್ಯುವವರ ದೋಣಿ ಮರಕ್ಕೆ ಸಮಾನವಾಗಿತ್ತು.
೨೦ ಮತ್ತು ಗಾತಿನಲ್ಲಿ ಯುದ್ಧ ಉಂಟಾದಾಗ, ಅಲ್ಲಿ ಎತ್ತರವಾದ
ಒಬ್ಬ ಮನುಷ್ಯನಿದ್ದನು; ಅವನ ಕೈ ಕಾಲುಗಳ ಬೆರಳುಗಳು ಆ
ರು ಆರಾಗಿ ಕೆಬ್ಬುದಲ್ಲಿ ಇಪ್ಪತ್ತು ನಾಲ್ಕು ಆಗಿದ್ದವು. ಇವನು
೨೧ ಹಾಗೆಯೇ ರಾಫನಿಗೆ ಹುಟ್ಟಿದ್ದನು. ಅವನು ಇಸ್ರಯೇಲನ್ನು ನಿಂ
ದಿಸಿದ್ದರಿಂದ ದಾವೀದನ ಸಹೋದರನಾಗಿರುವ ಷಿಮ್ಮನ ಮಗ
೨೨ ನಾದ ಯೊನತಾನನು ಅವನನ್ನು ಹೊಡೆದು ಬಿಟ್ಟನು. ಈ
ನಾಲ್ಕು ಮಂದಿಯು ಗಾತಿನಲ್ಲಿದ್ದ ರಾಫನಿಗೆ ಹುಟ್ಟಿದ್ದರು; ಇವ
ರು ದಾವೀದನಿಂದಲೂ ಅವನ ಸೇವಕರಿಂದಲೂ ಸಂಹಾರವಾಗಿ
ಬಿದ್ದರು.



## ೨೨. ಸಂಧಿ.

೧ ಕರ್ತನು ದಾವೀದನನ್ನು ಅವನ ಸಮಸ್ತ ಶತ್ರುಗಳ ಕೈಯೊ
ಳಗಿಂದಲೂ, ಸೌಲನ ಕೈಯೊಳಗಿಂದಲೂ ಬಿಡಿಸಿದ ದಿವಸದ
ಲ್ಲಿ ಅವನು ಕರ್ತನನ್ನು ಕುರಿತು ಈ ಹಾಡಿನ ಮಾತುಗಳನ್ನು
ಹೇಳಿದನು. ಏನಂದರೆ—

೨ ಕರ್ತನು ನನ್ನ ಬಂಡೆಯೂ, ನನ್ನ ಕೋಟೆಯೂ, ನನ್ನನ್ನು
ತಪ್ಪಿಸುವವನೂ;
೩ ನನ್ನ ಬಂಡೆಯಾದ ದೇವರು;
ನಾನು ಅವನಲ್ಲಿ ಆಶ್ರಯಿಸಿ ಕೊಳ್ಳುವೆನು;
ನನ್ನ ಗುರಾಣಿಯೂ, ನನ್ನ ರಕ್ಷಣೆಯ ಕೊಂಬೂ,
ನನ್ನ ದುರ್ಗವೂ, ನನ್ನ ಆಶ್ರಯವೂ,
ನನ್ನ ರಕ್ಷಕನೂ, ನನ್ನನ್ನು ಬಲಾತ್ಕಾರದಿಂದ ತಪ್ಪಿಸಿ ರಕ್ಷಿಸುತ್ತೀ.
೪ ಸ್ತುತಿಸ ತಕ್ಕ ಕರ್ತನನ್ನು ಕೂಗುತ್ತೇನೆ;
ನನ್ನ ಶತ್ರುಗಳೊಳಗಿಂದ ರಕ್ಷಿಸಲ್ಪಡುತ್ತೇನೆ.

೫ ಯಾಕಂದರೆ ಮರಣ ಪಾಶಗಳು ನನ್ನನ್ನು ಆವರಿಸಿ ಕೊಂ
ಡವು;
ಬೆಲಿಯಾಳನ ಹಳ್ಳಗಳು ನನ್ನನ್ನು ಹೆದರಿಸಿದವು;
೬ ಪಾತಾಳ ಪಾಶಗಳು ನನ್ನನ್ನು ಸುತ್ತಿ ಕೊಂಡವು;
ಮರಣದ ನೇಣುಗಳು ನನ್ನನ್ನು ಮುಂಕೊಂಡವು.
೭ ನನ್ನ ಇಕ್ಕಟ್ಟಿನಲ್ಲಿ ಕರ್ತನನ್ನು ಕರೆಸೆನು;
ನನ್ನ ದೇವರನ್ನು ಕರೆಸೆನು.
ಅವನು ತನ್ನ ಮಂದಿರದೊಳಗಿಂದ ನನ್ನ ಶಬ್ದವನ್ನು ಕೇಳಿದನು;
ನನ್ನ ಮೊರೆಯು ಅವನ ಕಿವಿಗೆ ಬಂತು.
೮ ಆಗ ಭೂಮಿಯು ಕದಲಿ, ಕಂಪಿಸಿತು;
೯ ಆಕಾಶಗಳ ಅಸ್ತಿವಾರಗಳು ನಡುಗಿ, ಕದಲಿದವು;
ಯಾಕಂದರೆ ಅವನಿಗೆ ಕೋಪ ಬಂತು.
ಅವನ ಮೂಗಿನಿಂದ ಹೊಗೆ ಏರಿತು,
ಅವನ ಬಾಯಿಯೊಳಗಿಂದ ಬೆಂಕಿ ದಹಿಸಿತು;
ಕೆಂಡಗಳು ಅದರಿಂದ ಉರಿದವು.
೧೦ ಆಕಾಶಗಳನ್ನು ಬೊಗ್ಗಿಸಿ, ಇಳಿದನು;
ಅವನ ಪಾದಗಳ ಕೆಳಗೆ ಕಾರ್ಗತ್ತಲು.
೧೧ ಅವನು ಕೆರೂಬಿಯ ಮೇಲೆ ಕೂತು, ಹಾರಿದನು;
ಘೂಳಿಯ ರೆಕ್ಕೆಗಳ ಮೇಲೆ ಕಾಣಲ್ಪಟ್ಟನು.
೧೨ ಕತ್ತಲನ್ನೂ, ಕತ್ತಲಾದ ನೀರುಗಳನ್ನೂ,
ಆಕಾಶದ ಕಾರು ಮೋಡಗಳನ್ನೂ ತನ್ನ ಸುತ್ತಲು ಡೇರಗಳಾಗಿ
ಮಾಡಿ ಕೊಂಡನು.
೧೩ ಅವನ ಮುಂದಿನ ಪ್ರಕಾಶದಿಂದ ಬೆಂಕಿಯ ಕೆಂಡಗಳು ಉರಿಯಲ್ಪ
ಟ್ಟವು.
೧೪ ಕರ್ತನು ಆಕಾಶದಿಂದ ಗುಡುಗಿದನು;
ಮಹೋನ್ನತನು ತನ್ನ ಶಬ್ದವನ್ನು ಕೊಟ್ಟನು.
೧೫ ತನ್ನ ಬಾಣಗಳನ್ನು ಕಳುಹಿಸಿ, ಅವರನ್ನು ಚದರಿಸಿದನು;
೧೬ ಮಿಂಚನ್ನು ಕಳುಹಿಸಿ, ಅವರನ್ನು ಗಲಿಬಿಲಿ ಮಾಡಿದನು.
ಆಗ ಕರ್ತನ ಗದರಿಕೆಯಿಂದಲೂ,
ಅವನ ಮೂಗಿನ ಶ್ವಾಸದ ಘೂಳಿಯಿಂದಲೂ,
ಸಮುದ್ರದ ತಳೆಗಳು ಕಾಣಲ್ಪಟ್ಟವು;
ಭೂಲೋಕದ ಅಸ್ತಿವಾರಗಳು ಬೈಲಾದವು.
೧೭ ಮೇಲಿನಿಂದ ಕೈ ಚಾಚಿ, ನನ್ನನ್ನು ಹಿಡಿದು,
ವಿಸ್ತಾರವಾದ ನೀರುಗಳೊಳಗಿಂದ ನನ್ನನ್ನು ಎಳೆದನು.
೧೮ ನನ್ನ ಬಲವುಳ್ಳ ಶತ್ರುವಿಗೂ,
ನನ್ನ ಹಗೆಯವರಿಗೂ ನನ್ನನ್ನು ತಪ್ಪಿಸಿದನು;
೧೯ ಯಾಕಂದರೆ ಅವರು ನನಗಿಂತ ಬಲಿಷ್ಟರಾಗಿದ್ದರು.
ನನ್ನ ಆಪತ್ತಿನ ದಿವಸದಲ್ಲಿ ನನ್ನನ್ನು ಮುಂಗೊಂಡರು;
ಆದರೆ ಕರ್ತನು ನನಗೆ ಆಧಾರವಾಗಿದ್ದನು.
೨೦ ನನ್ನನ್ನು ವಿಶಾಲ ಸ್ಥಳಕ್ಕೆ ಹೊರಗೆ ತಂದನು;
ನನ್ನಲ್ಲಿ ಸಂತೋಷ ಪಟ್ಟದರಿಂದ ನನ್ನನ್ನು ತಪ್ಪಿಸಿ ಬಿಟ್ಟನು.

೨೧ ಕರ್ತನು ನನ್ನ ನೀತಿಯ ಪ್ರಕಾರ ನನಗೆ ಸಲ್ಲಿಸಿದನು;
ನನ್ನ ಕೈಗಳ ಶುದ್ಧತ್ವದ ಪ್ರಕಾರ ನನಗೆ ಬದಲು ಕೊಟ್ಟನು.
೨೨ ಯಾಕಂದರೆ ಕರ್ತನ ಮಾರ್ಗಗಳನ್ನು ಕೈ ಕೊಂಡೆನು;
ನನ್ನ ದೇವರನ್ನು ಬಿಡುವ ದುಷ್ಟತ್ವ ಮಾಡಲಿಲ್ಲ.
೨೩ ಯಾಕಂದರೆ ಅವನ ನ್ಯಾಯಗಳೆಲ್ಲಾ ನನ್ನ ಮುಂದೆ ಇದ್ದವು;
ಅವನ ನೇಮಕಗಳನ್ನು ನನ್ನಿಂದ ತೊಲಗಿಸಲಿಲ್ಲ.
೨೪ ಅವನ ಮುಂದೆ ಸಂಪೂರ್ಣನಾಗಿದ್ದು,
ನನ್ನ ಅಕ್ರಮದಿಂದ ನನ್ನನ್ನು ತಪ್ಪಿಸಿ, ಕಾಪಾಡಿ ಕೊಂಡೆನು.
೨೫ ಆದದರಿಂದ ಕರ್ತನು ನನ್ನ ನೀತಿಯ ಪ್ರಕಾರವಾಗಿಯೂ,
ಅವನ ಕಣ್ಣುಗಳ ಮುಂದಿನ ನನ್ನ ಶುದ್ಧತ್ವದ ಪ್ರಕಾರವಾಗಿಯೂ
ನನಗೆ ಬದಲು ಕೊಟ್ಟನು.
೨೬ ಕೃಪೆಯುಳ್ಳವನಿಗೆ ಕೃಪೆಯುಳ್ಳವನಾಗಿರುವಿ;
ಸಂಪೂರ್ಣನಾದ ಮನುಷ್ಯನಿಗೆ ಸಂಪೂರ್ಣನಾಗಿರುವಿ.
೨೭ ಶುದ್ಧನಿಗೆ ಶುದ್ಧನಾಗಿರುವಿ;
ಮೂರ್ಖನ ಸಂಗಡ ಹೋರಾಡುವಿ.
೨೮ ಮತ್ತು ನೀನು ದೀನ ಜನರನ್ನು ರಕ್ಷಿಸುವಿ;
ಉನ್ನತರನ್ನು ತಗ್ಗಿಸುವ ಹಾಗೆ, ನಿನ್ನ ಕಣ್ಣುಗಳು ಅವರ ಮೇಲೆ
ಅವೆ.

೨೯ ಯಾಕಂದರೆ, ಕರ್ತನೇ, ನೀನು ನನ್ನ ದೀಪವು;
ಕರ್ತನು ನನ್ನ ಕತ್ತಲನ್ನು ಪ್ರಕಾಶಿಸ ಮಾಡುವನು.
೩೦ ಯಾಕಂದರೆ ನಿನ್ನಿಂದ ಗುಂಪಿನ ಮೇಲೆ ಬಿದ್ದೆನು;
ನನ್ನ ದೇವರಿಂದ ಗೋಡೆ ನೆಗೆದೆನು.
೩೧ ದೇವರಾದರೆ, ಅವನ ಮಾರ್ಗವು ಸಂಪೂರ್ಣವಾದದ್ದು;
ಕರ್ತನ ವಾಕ್ಯವು ಪುಟಕ್ಕೆ ಹಾಕಿದ್ದಾಗಿದೆ;
ಅವನು ತನ್ನನ್ನು ಆಶ್ರಯಿಸಿ ಕೊಳ್ಳುವವರೆಲ್ಲರಿಗೆ ಗುರಾಣಿಯಾ
ಗಿದ್ದಾನೆ.
೩೨ ಯಾಕಂದರೆ ಯೆಹೋವನಲ್ಲದೆ ದೇವರು ಯಾರು!
ನಮ್ಮ ದೇವರಲ್ಲದೆ ಬಂಡೆಯು ಯಾರು!
೩೩ ದೇವರು ನನ್ನ ಬಲಸ್ಥಾನವೂ ನನ್ನ ಪರಾಕ್ರಮವೂ ಆಗಿದ್ದಾನೆ;
ನನ್ನ ಮಾರ್ಗವನ್ನು ಸಂಪೂರ್ಣ ಮಾಡುತ್ತಾನೆ.
೩೪ ನನ್ನ ಕಾಲುಗಳನ್ನು ದುಪ್ಪಿಗಳ ಹಾಗೆ ಮಾಡಿ,
ನನ್ನನ್ನು ನನ್ನ ಮೇರುಗಳ ಮೇಲೆ ನಿಲ್ಲ ಮಾಡುತ್ತಾನೆ.

೩೫ ನನ್ನ ಕೈಗಳಿಗೆ ಯುದ್ಧ ಕಲಿಸುತ್ತಾನೆ;
ನನ್ನ ತೋಳುಗಳು ಹಿತ್ತಾಳೆಯ ಬಿಲ್ಲು ಬೊಗ್ಗಿಸುತ್ತವೆ.
೩೬ ನೀನು ನಿನ್ನ ರಕ್ಷಣೆಯ ಗುರಾಣಿಯನ್ನು ನನಗೆ ಕೊಟ್ಟಿ;
ನಿನ್ನ ದೀನತ್ವ ನನ್ನನ್ನು ಹೆಚ್ಚಿಸಿತು.
೩೭ ನನ್ನ ಹೆಜ್ಜೆಗಳನ್ನು ನನ್ನ ಕೆಳಗೆ ಅಗಲ ಮಾಡಿದ್ದೀ;
ನನ್ನ ಗಿರಿಗೆಗಳು ಹೊರಳಲಿಲ್ಲ.
೩೮ ನನ್ನ ಶತ್ರುಗಳನ್ನು ಹಿಂದಟ್ಟಿ, ಅವರನ್ನು ನಾಶನ ಮಾಡಿದೆನು;
ಅವರನ್ನು ಶೀರಿಸಿ ಬಿಡುವ ಮಟ್ಟಿಗೂ ನಾನು ತಿರುಗಲಿಲ್ಲ.
೩೯ ಅವರನ್ನು ಶೀರಿಸಿ ಬಿಟ್ಟನು; ಘಾಯ ಮಾಡಿದೆನು; ಏಳಬೆ ಹೋದರು;
ನನ್ನ ಪಾದಗಳ ಕೆಳಗೆ ಬಿದ್ದರು.
೪೦ ನೀನು ಯುದ್ಧಕ್ಕೆ ಪರಾಕ್ರಮದಿಂದ ನನ್ನ ನಡು ಕಟ್ಟಿದಿ;
ನನ್ನ ಎದುರಾಳಿಗಳನ್ನು ನನ್ನ ಕೆಳಗೆ ಎರಗ ಮಾಡಿದಿ.
೪೧ ನನ್ನ ಶತ್ರುಗಳನ್ನು ನನಗೆ ಬೆನ್ನು ಕೊಡ ಮಾಡಿದಿ;
ನಾನು ನನ್ನ ಹಗೆಯವರನ್ನು ಸಂಹರಿಸುವ ಹಾಗೆ ಮಾಡಿದಿ.
೪೨ ಅವರು ಸುತ್ತಲೂ ನೋಡುತ್ತಿದ್ದರು, ಆದರೆ ರಕ್ಷಿಸುವವನು ಇಲ್ಲ;
ಕರ್ತನ ಕಡೆಗೆ ನೋಡಿದರು, ಆದರೆ ಅವರಿಗೆ ಪ್ರತ್ಯುತ್ತರ ಕೊಡಲಿಲ್ಲ.
೪೩ ಆಗ ನಾನು ಅವರನ್ನು ನೆಲದ ಧೂಳಿನ ಹಾಗೆ ಪುಡಿ ಪುಡಿ ಮಾಡಿದೆನು;
ಬೀದಿಯ ಕೆಸರನ ಹಾಗೆ ಅವರನ್ನು ತುಳಿದು,
ಅವರನ್ನು ಚದರ ಮಾಡಿದೆನು.
೪೪ ನೀನು ನನ್ನ ಜನರ ವಾಗ್ವಾದಗಳಿಂದ ನನ್ನನ್ನು ತಪ್ಪಿಸಿದ್ದೀ;
ಜನಾಂಗಗಳಿಗೆ ತಲೆಯಾಗಿ ನನ್ನನ್ನು ಇರಿಸಿದ್ದೀ;
ನಾನು ಅರಿಯದ ಜನರು ನನ್ನನ್ನು ಸೇವಿಸುವರು.
೪೫ ಅನ್ಯರ ಮಕ್ಕಳು ನನಗೆ ಸುಳ್ಳು ಹೇಳುವರು;
ಕಿವಿಯಿಂದ ಕೇಳುವ ಕೂಡ್ಲೇ ನನ್ನ ಮಾತು ಕೇಳುವರು.
೪೬ ಅನ್ಯರ ಮಕ್ಕಳು ಜೀರ್ಣವಾಗುವರು;
ತಮ್ಮ ದುರ್ಗಗಳೊಳಗಿಂದ ನಡುಗುತ್ತಾ ಬರುವರು.
೪೭ ಕರ್ತನು ಜೀವಿತನಾಗಿದ್ದಾನೆ;
ನನ್ನ ಬಂಡೆಗೆ ಆಶೀರ್ವಾದವಾಗಲಿ;
ನನ್ನ ರಕ್ಷಣೆಯ ಬಂಡೆಯಾದ ದೇವರು ಉನ್ನತನಾಗಲಿ.
೪೮ ದೇವರೇ ನನಗೋಸ್ಕರ ಮುಯ್ಯಿಗೆ ಮುಯ್ಯಿ ತೀರಿಸುತ್ತಾನೆ;
ಜನರನ್ನು ನನ್ನ ಕೆಳಗೆ ಅಣಗಿಸುತ್ತಾನೆ.
೪೯ ಅವನು ನನ್ನ ಶತ್ರುಗಳಿಂದ ನನ್ನನ್ನು ಬಿಡಿಸುತ್ತಾನೆ.
ನೀನು ನನ್ನ ಎದುರಾಳಿಗಳಿಂದ ನನ್ನನ್ನು ತಪ್ಪಿಸಿ, ಉನ್ನತ ಮಾಡುತ್ತೀ;
ಬಲಾತ್ಕಾರದ ಮನುಷ್ಯನಿಂದ ತಪ್ಪಿಸುತ್ತೀ.
೫೦ ಆದದರಿಂದ, ಕರ್ತನೇ, ನಾನು ಜನಾಂಗಗಳಲ್ಲಿ ನಿನ್ನನ್ನು ಕೊಂಡಾಡುವೆನು;
ನಿನ್ನ ಹೆಸರನ್ನು ಕೀರ್ತಿಸುವೆನು.
೫೧ ಅವನು ತನ್ನ ಅರಸನಿಗೆ ರಕ್ಷಣೆಯ ಬುರುಜಾಗಿದ್ದಾನೆ;
ತನ್ನ ಅಭಿಷಿಕ್ತನಾದ ದಾವೀದನಿಗೂ,
ಅವನ ಬೀಜಕ್ಕೂ ಕೃಪೆಯನ್ನು ಯುಗ ಯುಗಕ್ಕೂ ಮಾಡುತ್ತಾನೆ.

## ೨೩. ಸಂಧಿ.

೧ ದಾವೀದನ ಕಡೇ ಮಾತುಗಳು ಇವೇ—
ಇಷಾಯನ ಮಗನಾದ ದಾವೀದನು ನುಡಿದನು;
ಎತ್ತರವಾಗಿ ಎಬ್ಬಿಸಲ್ಪಟ್ಟ ಪುರುಷನು,
ಯಾಕೋಬನ ದೇವರ ಅಭಿಷಿಕ್ತನು,
ಇಸ್ರಯೇಲಿನ ರಮ್ಯ ಕೀರ್ತನೆಗಾರನು ನುಡಿದದ್ದೇನಂದರೆ,—

೨ ಕರ್ತನ ಆತ್ಮ ನನ್ನಿಂದ ಮಾತಾಡಿದನು;
ಅವನ ನುಡಿ ನನ್ನ ಬಾಯಿಯಲ್ಲಿ ಇತ್ತು.
೩ ಇಸ್ರಯೇಲಿನ ದೇವರು ಹೇಳಿದ್ದು;
ಇಸ್ರಯೇಲಿನ ಬಂಡೆ ನನ್ನ ಸಂಗಡ ಮಾತಾಡಿದ್ದು—
ಮನುಷ್ಯರ ಮೇಲೆ ನೀತಿವಂತನು ಆಳುವನು;
ದೇವರ ಭಯದಲ್ಲಿ ಆಳುವನು.
೪ ಸೂರ್ಯನು ಮೂಡಿರುವಂಥ,
ಪ್ರಕಾಶದಿಂದ ಮೋಡಗಳಿಲ್ಲದೆ ಇರುವಂಥ,
ಉದಯ ಕಾಲದ ಬೆಳಕಿನ ಹಾಗೆಯೂ,
ಮಳೆ ಬಂದ ಮೇಲೆ ಭೂಮಿಯಿಂದಾಗುವ ಹುಲ್ಲಿನ ಹಾಗೆಯೂ ಇರುವನು.
೫ ನನ್ನ ಮನೆ ದೇವರ ಸಮುಖದಲ್ಲಿ ಹಾಗೆಯೇ ಅಲ್ಲ, ನಿಜವೇ.
ಆದರೂ ನನ್ನ ಸಂಗಡ ನಿತ್ಯವಾದ ಒಡಂಬಡಿಕೆಯನ್ನು ಮಾಡಿದ್ದಾನೆ;
ಎಲ್ಲಾದರ ವಿಷಯ ಸಿದ್ಧವಾದದ್ದಾಗಿಯೂ ಸ್ಥಿರವಾದದ್ದಾಗಿಯೂ ಅದೆ.
ಅವನು ಅದನ್ನು ಚೊಳಿಸದೆ ಇದ್ದರೂ,
ನನ್ನ ಸಮಸ್ತ ರಕ್ಷಣೆಯೂ ನನ್ನ ಸಮಸ್ತ ಅಭಿಲಾಷೆಯೂ ಅದೇ.
೬ ಆದರೆ ಬೆಲಿಯಾಳನ ಮನುಷ್ಯರೆಲ್ಲರೂ ತಳ್ಳಲ್ಪಡುವ ಮುಳ್ಳಿಗಳ ಹಾಗೆ ಇರುವರು.
೭ ಯಾಕಂದರೆ ಕೈಯಿಂದ ತೆಗೆಯಲ್ಪಡುವವರಲ್ಲ;
ಅವರನ್ನು ಮುಟ್ಟುವ ಮನುಷ್ಯನು
ಕಬ್ಬಿಣವನ್ನೂ ಈಟಿಯ ಕಟ್ಟಿಗೆಯನ್ನೂ ಧರಿಸಿ ಕೊಂಡಿರಬೇಕು.
ಮತ್ತು ಇರುವ ಸ್ಥಳದಲ್ಲಿ ಬೆಂಕಿಯಿಂದ ಸುಟ್ಟು ಬಿಡಲ್ಪಡುವರು.

೮ ದಾವೀದನಿಗೆ ಇದ್ದ ಪರಾಕ್ರಮಶಾಲಿಗಳ ಹೆಸರುಗಳು ಇವೇ—
ಶ್ರೇಷ್ಠ ಯುದ್ಧಸ್ಥರಿಗೆ ತಲೆಯಾಗಿ, ಆಸನದ ಮೇಲೆ ಕೂತವನಾದ ತಕ್ಕೋನಿಯನು; ಇವನೇ ಎಚ್ಚಿಯನಾದ ಅದೀನೊ. ಇವನು ಎಂಟು ನೂರು ಜನರ ಮೇಲೆ ಬಿದ್ದು, ಅವರನ್ನು ಒಂದೇ ಸಾರಿ ಕೊಂದು ಹಾಕಿದನು ಇವನ ಹಿಂದೆ ಅಹೋಹ್ಯನಾಗಿರುವ ದೋದನ ಮಗನಾಗಿರುವ ಎಲೆಯಾಜರನು. ಇವನು ಇಸ್ರಯೇಲ ಜನರು ಓಡಿ ಹೋದ ತರುವಾಯ, ಯುದ್ಧಕ್ಕೆ ಕೂಡಿ ಬಂದ ಫಿಲಿಷ್ಟಿರನ್ನು ನಿಂದಿಸಿದ ದಾವೀದನ ಸಂಗಡ ಇದ್ದ ಮೂವರು ಪರಾಕ್ರಮಶಾಲಿಗಳಲ್ಲಿ ಒಬ್ಬನಾಗಿದ್ದನು. ಇವನು ಎದ್ದು, ತನ್ನ ಕೈ ದಣಿದು, ತನ್ನ ಕೈ ಕತ್ತಿಗೆ ಹತ್ತಿ ಕೊಳ್ಳುವ ಮಟ್ಟಿಗೂ, ಫಿಲಿಷ್ಟ್ಯರನ್ನು ಹೊಡೆದು ಬಿಟ್ಟನು. ಆ ದಿನ ಕರ್ತನು ದೊಡ್ಡ ರಕ್ಷಣೆಯನ್ನು ಉಂಟು ಮಾಡಿದನು. ಜನರು ಸುಲು ಕೊಳ್ಳುವದಕ್ಕೆ ಮಾತ್ರ ಅವನ ಹಿಂದೆ ತಿರುಗಿದರು.
೧೦ ಇವನ ಹಿಂದೆ ಹರಾರಿಯನಾಗಿರುವ ಅಗೆಯನ ಮಗನಾದ ಷಮ್ಮನು. ಅವನು ಅಲಸಂದಿಯಿಂದ ತುಂಬಿದ ಹೊಲದಲ್ಲಿ ಫಿಲಿಷ್ಟ್ಯರು ದಂಡಾಗಿ ಕೂಡಿ ಬಂದಾಗ, ಜನರು ಫಿಲಿಷ್ಟ್ಯರ ಮುಂದೆ ಓಡಿ ಹೋದರು. ಆದರೆ ಅವನು ಆ ಹೊಲದಲ್ಲಿ ನಿಂತು ಕೊಂಡು, ಅದನ್ನು ತಪ್ಪಿಸಿ, ಕಾಪಾಡಿ, ಫಿಲಿಷ್ಟ್ಯರನ್ನು ಹೊಡೆದು ಬಿಟ್ಟನು. ಆಗ ಕರ್ತನು ದೊಡ್ಡ ರಕ್ಷಣೆಯನ್ನು ಉಂಟು ಮಾಡಿದನು.
೧೩ ಮೂವತ್ತು ಮಂದಿ ಶ್ರೇಷ್ಠರಲ್ಲಿ ಈ ಮೂರು ಮಂದಿ ಹೊರಟು, ಸುಗ್ಗಿಯ ಕಾಲದಲ್ಲಿ ಅಡುಲ್ಲಾಮಿನ ಗವಿಯಲ್ಲಿರುವ ದಾವೀದನ ಬಳಿಗೆ ಬಂದರು; ಆಗ ಫಿಲಿಷ್ಟ್ಯರ ದಂಡು ರೆಫಯಿಮಿನ ತಗ್ಗಿನಲ್ಲಿ ಇಳಿದಿತ್ತು. ದಾವೀದನು ಗಡೀಸ್ಥಳದಲ್ಲಿರುವಾಗ, ಫಿಲಿಷ್ಟ್ಯರ ದಂಡು ಬೇತ್ಲೆಹೇಮಿನಲ್ಲಿ ಇತ್ತು. ಆಗ ದಾವೀದನು, ಬೇತ್ಲೆಹೇಮಿನ ಬಾಗಲ ಬಳಿಯಲ್ಲಿರುವ ಭಾವಿಯ ನೀರನ್ನು ನನಗೆ ಕುಡಿಯ ಕೊಡುವವನ್ಯಾರೆಂದು, ಬಹು ಆಶೆಯಿಂದ ಹೇಳಿದನು. ಆಗ ಈ ಮೂರು ಮಂದಿ ಪರಾಕ್ರಮಶಾಲಿಗಳು ಫಿಲಿಷ್ಟ್ಯರ ದಂಡನ್ನು ಭೇದಿಸಿ ಬಿದ್ದು, ಬೇತ್ಲೆಹೇಮಿನ ಬಾಗಲ ಬಳಿಯಲ್ಲಿರುವ ಭಾವಿಯ ನೀರನ್ನು ಶೇದಿ, ದಾವೀದನಿಗೆ ತಕ್ಕೊಂಡು ಬಂದರು. ಆದರೆ ಅವನು ಅದನ್ನು ಕುಡಿಯಲೊಲ್ಲದೆ, ಕರ್ತನಿಗೆ ಹೊಯಿದನು. ಮತ್ತು, ಕರ್ತನೇ, ಇದನ್ನು ಮಾಡುವದು ನನಗೆ ದೂರವಾಗಿರಲಿ. ಇದು ತಮ್ಮ ಪ್ರಾಣಗಳಿಂದ ಹೋದ ಮನುಷ್ಯರ ರಕ್ತವಲ್ಲವೇ? ಎಂಥೇಳಿ, ಕುಡಿಯಲೊಲ್ಲದೆ ಇದ್ದನು. ಇವುಗಳನ್ನು ಈ ಮೂರು ಮಂದಿ ಪರಾಕ್ರಮಶಾಲಿಗಳು ಮಾಡಿದರು.
೧೮ ಯೊವಾಬನ ಸಹೋದರನಾದ ಜೆರೂಯಳ ಮಗನಾಗಿರುವ ಅಬಿಷಯ್ಯನು ಮೂರು ಮಂದಿಯಲ್ಲಿ ಮುಖ್ಯಸ್ಥನು. ಅವನು ತನ್ನ ಈಟಿಯನ್ನು ಎತ್ತಿ, ಮುನ್ನೂರು ಜನರನ್ನು ಸಂಹರಿಸ್ದರಿಂದ, ಮೂವರೊಳಗೆ ಹೆಸರ್ಗೊಂಡನು. ಈ ಮೂರು ಮಂದಿಯಲ್ಲಿ ಅವನು ಘನವುಳ್ಳವನಾಗಿದ್ದದರಿಂದ ಅಲ್ಲವೇ? ಅವರಲ್ಲಿ ಪ್ರಧಾನನಾದನು. ಆದರೆ ಆ ಮೊದಲಿನ ಮೂರು ಜನಕ್ಕೆ ಅವನು ಸರಿಯಾದವನಲ್ಲ. ಕಬಜೇಲಿನಲ್ಲಿದ್ದ ಪರಾಕ್ರಮಶಾಲಿಯ ಮಗನಾದ ಯೆಹೊಯದಾವನ ಮಗನಾಗಿರುವ ಬೆನಾಯನು ಕೃತ್ಯಗಳಲ್ಲಿ ದೊಡ್ಡವನಾಗಿದ್ದನು. ಅವನು ಸಿಂಹದ ಹಾಗಿರುವ ಮೊವಾಬಿನ ಇಬ್ಬರು ಮನುಷ್ಯರನ್ನು ಹೊಡೆದು ಬಿಟ್ಟನು. ಇದಲ್ಲದೆ ಹಿಮ ಕಾಲದಲ್ಲಿ ಕೂಣಿಯೊಳಗೆ ಇಳಿದು, ಒಂದು ಸಿಂಹವನ್ನು ಹೊಡೆದು ಬಿಟ್ಟನು. ಮತ್ತು ಅವನು ರೂಪವುಳ್ಳ ಒಬ್ಬ ಐಗುಪ್ತದ ಮನುಷ್ಯನನ್ನು ಹೊಡೆದು ಬಿಟ್ಟನು. ಆ ಐಗುಪ್ತ್ಯನ ಕೈಯಲ್ಲಿ ಒಂದು ಈಟಿಯು ಇತ್ತು. ಇವನು ಬಂದು ಕೋಲನ್ನು ತಕ್ಕೊಂಡು, ಅವನ ಬಳಿಗೆ ಹೋಗಿ, ಆ ಈಟಿಯನ್ನು ಐಗುಪ್ತ್ಯನ ಕೈಯಿಂದ ಕಸು ಕೊಂಡು, ಅವನನ್ನು ಅವನ ಈಟಿಯಿಂದಲೇ ಕೊಂದು ಹಾಕಿದನು. ಇವುಗಳನ್ನು ಯೆಹೊಯದಾವನ ಮಗನಾದ ಬೆನಾಯನು ಮಾಡಿದ್ದರಿಂದ, ಮೂರು ಮಂದಿ ಪರಾಕ್ರಮಶಾಲಿಗಳಲ್ಲಿ ಹೆಸರ್ಗೊಂಡವನಾಗಿದ್ದನು. ಕಡಿಮೆ ಮೂವತ್ತು ಜನರಿಗಿಂತ ಅವನು ಘನವುಳ್ಳವನಾಗಿದ್ದನು; ಆದರೆ ಆ ಮೊದಲಿನ ಮೂರು ಮಂದಿಗೆ ಅವನು ಸರಿಯಾದವನಲ್ಲ. ದಾವೀದನು ಅವನನ್ನು ತನ್ನ ಮೈಗಾವಲಿಯವರ ಮೇಲೆ ಯಜಮಾನನಾಗಿಟ್ಟನು.
೨೪ ಯೊವಾಬನ ಸಹೋದರನಾದ ಅಸಯೇಲನು ಮೂವತ್ತು ಮಂದಿಯಲ್ಲಿ ಒಬ್ಬನಾಗಿದ್ದನು. ಈ ಮೂವತ್ತು ಮಂದಿ ಯಾರಂದರೆ, ಬೇತ್ಲೆಹೇಮು ಊರಿನ ದೋದನ ಮಗನಾದ ಎಲ್ಹನಾನನು, ಹರೋದ್ಯನಾದ ಷಮ್ಮನು, ಹರೋದ್ಯನಾದ ಎಲೀಕನು, ಪಲ್ತ್ಯನಾದ ಹೆಲೇಚನು, ತೆಕೋವಿಯನಾದ ಇಕ್ಕೇಷನ ಮಗನಾದ ಈರನು. ಅಣತೋತ್ಯನಾದ ಅಬ್ಯೇಜರನು, ಹುಷಾತ್ಯನಾದ ಮೆಬುನ್ನಾಯಿಯು, ಅಹೋಹ್ಯನಾದ ಚಲ್ಮೋನನು, ನೆಟೋಫದವನಾದ ಮಹರಾಯಿಯು, ನೆಟೋಫದವನಾದ ಬಾಣನ ಮಗ ಹೆಲೇಬನು, ಬೆನ್ಯಮಿನನ ಮಕ್ಕಳ ಗಿಬ್ಯ ಊರಿನವನಾದ, ರಿಬಾಯಿಯ ಮಗನಾದ ಇತ್ತಾಯಿಯು, ಪಿರಟೋನಿಯನಾದ ಬೆನಾಯನು, ಹೊಳೆಗಳಳ್ಳ ಗಾಷು ಊರಿನವನಾದ ಹಿದ್ದಾಯಿಯು, ಅರ್ಬಾತ್ಯನಾದ ಅಬ್ಯಲ್ಬೋನನು, ಬಹೂಮಿಯನಾದ ಅಜ್ಮಾವೇತನು, ಷಅಲ್ಬೋನಿಯನಾದ ಎಲ್ಯಾಭನು, ಯಷೇನನ ಕುಮಾರರಲ್ಲಿ ಒಬ್ಬನಾದ ಯೊನತಾನನು, ಹರಾರಿಯನಾದ ಷಮ್ಮನು, ಹರಾರಿಯನಾದ ಷರಾರನ ಮಗನಾದ ಅಹಿಯಾಮನು, ಮಾಕಾತ್ಯರಲ್ಲಿ ಒಬ್ಬನ ಮಗನಾಗಿರುವ ಅಹಸ್ಬಾಯಿಯ ಮಗನಾದ ಎಲಿಫೇಲಟನು, ಗಿಲೋನಿಯನಾಗಿರುವ ಅಹಿತೋಫೆಲನ ಮಗನಾದ ಎಲಿಯಾಮನು, ಕರ್ಮೇಲಿಯನಾದ ಹೆಚ್ರಾಯಿಯು, ಅರ್ಬಿಯನಾದ ಪಬಾಯಿಯು, ಜೋಬದವನಾದ ನಾತಾನನ ಮಗನಾಗಿರುವ ಇಗಾಲನು, ಗಾದಿಯನಾದ ಬಾನಿಯು, ಅಮ್ಮೋನ್ಯನಾದ ಜೇಲಕನು, ಜೆರೂಯಳ ಮಗನಾದ ಯೊವಾಬನ ಆಯುಧಗಳನ್ನು ಹಿಡಿಯುವ ಬೆಕೋತ್ಯನಾದ ನಹರಾಯಿಯು, ಇತ್ರಿಯನಾದ ಈರನು, ಇತ್ರಿಯನಾದ ಗಾರೆಬನು, ಹಿತ್ತಿಯನಾದ ಊರೀಯನು—ಇವರೆಲ್ಲಾ ಮೂವತ್ತೇಳು ಮಂದಿಯೇ.

## ೨೪. ಸಂಧಿ.

೧ ಮತ್ತು ಕರ್ತನ ಕೋಪವು ತಿರಿಗಿ ಇಸ್ರಯೇಲಿಗೆ ವಿರೋಧವಾಗಿ ಉರಿಯಿತು; ಆಗ, ಇಸ್ರಯೇಲನ್ನೂ ಯೆಹೂದವನ್ನೂ ತೆಬ್ಬಿಸ ಹೋಗೆಂದು ಸೈತಾನನು ದಾವೀದನನ್ನು ಪ್ರೇರೇಪಿಸಿದನು.
೨ ಅರಸನು ಸೈನ್ಯಾಧಿಪತಿಯಾದ ಯೊವಾಬನಿಗೆ, ನಾನು ಜನರ ತೆಬ್ಬವನ್ನು ತಿಳಿಯುವ ಹಾಗೆ, ನೀನು ದಾನಿನಿಂದ ಬೆರ್ಷೆಬದ ಮಟ್ಟಿಗೂ ಇರುವ ಇಸ್ರಯೇಲ ಸಮಸ್ತ ಕುಲಗಳಲ್ಲಿ ಹೋಗಿ, ಜನರನ್ನು ತೆಬ್ಬಿಸು, ಅಂದನು. ಆಗ ಯೊವಾಬನು ಅರಸನಿಗೆ, ಅರಸನಾದ ನನ್ನ ಸ್ವಾಮಿಯ ಕಣ್ಣುಗಳು ಅದನ್ನು ನೋಡುವ ಹಾಗೆ, ನಿನ್ನ ದೇವರಾದ ಕರ್ತನು ಈಗ ಇರುವದಕ್ಕಿಂತ ಜನರನ್ನು ನೂರಾರ್ದ್ದಾಗಿ ಹೆಚ್ಚು ಮಾಡಲಿ; ಆದರೆ ಅರಸನಾದ ನನ್ನ ಸ್ವಾಮಿ ಈ ಕಾರ್ಯವನ್ನು ಇಚ್ಛೈಸುವದೇನು? ಅಂದನು. ಆದರೆ ಅರಸನ ಮಾತು ಯೊವಾಬನ ಮೇಲೆಯೂ ಸೈನ್ಯಾಧಿಪತಿಗಳ ಮೇಲೆಯೂ ಬಲವಾಗಿತ್ತು.
ಆಗ ಯೊವಾಬನೂ ಸೈನ್ಯಾಧಿಪತಿಗಳೂ ಇಸ್ರಯೇಲ ಜನರನ್ನು ತೆಬ್ಬಿಸ ಅರಸನ ಸಮುಖದಿಂದ ಹೊರಟು ಹೋದರು. ಅವರು ಯೊರ್ದನನ್ನು ದಾಟಿ, ಗಾದನ ನದಿಯ ನಡು ಮಧ್ಯದಲ್ಲಿರು

ವ ಪಟ್ಟಣಕ್ಕೆ ಬಲಪಾರ್ಶ್ವವಾದ ಅರೋಯೆರಿನಲ್ಲಿಯೂ ಯಾಜೆರಿ
೬ ನಲ್ಲಿಯೂ ಇಳಿದು, ಅಲ್ಲಿಂದ ಗಿಲ್ಯಾದಿಗೂ, ತಾಹ್ತೀಮ್ ಹೋಜಿ
ಯ ದೇಶಕ್ಕೂ, ಅಲ್ಲಿಂದ ದನ್ಯಾಣಿಗೂ, ಅಲ್ಲಿಂದ ಸುತ್ತಿ ಕೊಂ
೭ ರು, ಚಿದೋನಿಗೂ ಬಂದರು. ಮತ್ತು ಅವರು ಜೋರು ಎಂಬ ಗ
ಢೀ ಸ್ಥಳಕ್ಕೂ, ಹಿವ್ವಿಯರ, ಕನಾನ್ಯರ ಸಕಲ ಪಟ್ಟಣಗಳಿಗೂ
ಅಲ್ಲಿಂದ ಯೆಹೂದದ ದಕ್ಷಿಣ ದಿಕೆಯಾದ ಬೇರ್ಷೆಬಕ್ಕೂ ಬಂ
೮ ದರು. ಹೀಗೆಯೇ ಅವರು ಸಮಸ್ತ ದೇಶದ ಮೇಲೆ ಹೋಗಿ, ಒಂ
ಭತ್ತು ತಿಂಗಳು ಇಪ್ಪತ್ತು ದಿವಸವಾದ ತರುವಾಯ ಯೆರೂಸಲೇ
೯ ಮಿಗೆ ಬಂದರು. ಯೋವಾಬನು ಅರಸನಿಗೆ ಕೊಟ್ಟ ಜನರ ಒಟ್ಟು
ಲೆಖ್ಖವೇನಂದರೆ, ಇಸ್ರಯೇಲಲ್ಲಿ ಕತ್ತಿ ಹಿಡಿಯ ತಕ್ಕ ಪರಾಕ್ರಮವು
ಳ್ಳ ಎಂಟು ಲಕ್ಷ ಮಂದಿ ಇದ್ದರು. ಯೆಹೂದ ಜನರು ಐದು ಲಕ್ಷ
ಮಂದಿಯಾಗಿ ಇದ್ದರು.

೧೦ ಅದರೆ ದಾವೀದನು ಜನರನ್ನು ಲೆಖ್ಖಿಸಿದ ತರುವಾಯ, ಅವನು
ತನ್ನ ಹೃದಯದಲ್ಲಿ ಶಿವಿಯೆಲ್ಪಟ್ಟನು. ಆದದರಿಂದ ದಾವೀದನು
ಕರ್ತನಿಗೆ, ನಾನು ಮಾಡಿದ್ದಕಲ್ಲಿ ಮಹಾ ಪಾಪ ಮಾಡಿದೆನು.
ಕರ್ತನೇ, ದಯೆ ಮಾಡಿ, ನಿನ್ನ ಸೇವಕನ ಅಕ್ರಮವನ್ನು ಪರಿಹ
ರಿಸು; ಯೌಕಂದರೆ ನಾನು ಬಹಳ ಹುಚ್ಚುತನವಾಗಿ ಮಾಡಿದೆ
೧೧ ನು, ಅಂದನು. ದಾವೀದನು ಉದಯದಲ್ಲಿ ಎದ್ದಾಗ, ಅವನ ದೃ
ಶನಾದ ಗಾದನೆಂಬ ಪ್ರವಾದಿಗೆ ಕರ್ತನ ವಾಕ್ಯ ಉಂಟಾಗಿ, ಅವನಿ
೧೨ ಗೆ ಹೇಳಿದ್ದೇನಂದರೆ—ನೀನು ಹೋಗಿ, ದಾವೀದನಿಗೆ ಹೇಳ ಬೇ
ಕಾದದ್ದೇನಂದರೆ, ಮೂರು ಕಾರ್ಯಗಳನ್ನು ನಾನು ನಿನ್ನ ಮುಂ
ದೆ ಇಡುವೆನು. ನಾನು ನಿನಗೆ ಮಾಡುವ ಹಾಗೆ ಅವುಗಳಲ್ಲಿ ಒಂ
೧೩ ದನ್ನು ಆದುಕೋ, ಎಂದು ಕರ್ತನು ಹೇಳುತ್ತಾನೆ. ಹಾಗೆಯೇ
ಗಾದನು ದಾವೀದನ ಬಳಿಗೆ ಬಂದು, ಅವನಿಗೆ ತಿಳಿಸಿ, ಹೇಳಿದ್ದೇನಂ
ದರೆ, ನಿನ್ನ ದೇಶದಲ್ಲಿ ನಿನಗೆ ಏಳು ವರುಷ ಬರವು ಆಗ ಬೇ
ಕೋ? ಇಲ್ಲವೇ ಮೂರು ತಿಂಗಳು ನಿನ್ನ ಶತ್ರುಗಳು ನಿನ್ನನ್ನು
ಹಿಂದಟ್ಟುವಾಗ, ನೀನು ಅವರ ಮುಂದೆ ಓಡಿ ಹೋಗ ಬೇಕೋ?
ಇಲ್ಲವೆ ನಿನ್ನ ದೇಶದಲ್ಲಿ ಮೂರು ದಿವಸ ಬಾಧೆ ಉಂಟಾಗ ಬೇ
ಕೋ? ಈಗ ನನ್ನನ್ನು ಕಳುಹಿಸಿದವನಿಗೆ ನಾನು ಏನು ಪ್ರತ್ಯು
ತ್ತರ ತಕ್ಕೊಂಡು ಹೋಗ ಬೇಕು? ಯೋಚಿಸಿ ನೋಡು, ಅಂದ
೧೪ ನು. ಆಗ ದಾವೀದನು ಗಾದನಿಗೆ, ನಾನು ಬಹು ಇಕ್ಕಟ್ಟಿನಲ್ಲಿ ಇ
ದ್ದೇನೆ. ಈಗ ಕರ್ತನ ಕೈಯಲ್ಲಿ ಬೀಳುವೆವು; ಯೌಕಂದರೆ ಅ
ವನ ಅಂತ್ಯಕರುಣೆವು ಬಹಳವಾಗಿದೆ; ಮನುಷ್ಯರ ಕೈಯಲ್ಲಿ
ಬೀಳ್ಳೆನು, ಅಂದನು.

೧೫ ಹಾಗೆಯೇ ಕರ್ತನು ಉದಯ ಕಾಲದಿಂದ ನೇಮಿಸಿದ ಕಾಲ
ದ ಮಟ್ಟಿಗೂ ಇಸ್ರಯೇಲಿನ ಮೇಲೆ ಬಾಧೆಯನ್ನು ಕಳುಹಿಸಿದ
ನು. ಅದರಿಂದ ದಾನಿನಿಂದ ಬೇರ್ಷೆಬದ ಪರಿಗೂ ಇರುವ ಜನರ
೧೬ ಲ್ಲಿ ಎಪ್ಪತ್ತು ಸಾವಿರ ಜನರು ಸತ್ತು ಹೋದರು. ಅದರೆ ದೂತ
ನು ಯೆರೂಸಲೇಮನ್ನು ಕೆಡಿಸ ಅದರ ಮೇಲೆ ತನ್ನ ಕೈ ಚಾಚಿ
ದಾಗ, ಕರ್ತನು ಆ ಕೇಡಿಗೆ ಪಶ್ಚಾತ್ತಾಪ ಪಟ್ಟು, ಜನರನ್ನು ಕೆಡಿ
ಸುವ ದೂತನಿಗೆ, ಸಾಕು; ಈಗ ನಿನ್ನ ಕೈಯನ್ನು ಎಳೆಕೋ,
೧೭ ಅಂದನು. ಆಗ ಕರ್ತನ ದೂತನು ಯೆಬೂಸ್ಯನಾದ ಅರವ್ನನ
ತುಳಿಸುವ ಕಣದ ಬಳಿಯಲ್ಲಿ ಇದ್ದನು. ದಾವೀದನು ಜನರನ್ನು
ಹೊಡೆದು ಬರುವ ದೂತನನ್ನು ನೋಡಿದಾಗ, ಅವನು ಕರ್ತನಿ
ಗೆ ಹೇಳಿದ್ದೇನಂದರೆ, ಇಗೋ, ನಾನೇ ಪಾಪ ಮಾಡಿದೆನು, ನಾನೇ
ಅಕ್ರಮ ಮಾಡಿದೆನು; ಆದರೆ ಈ ಕುರಿಗಳು ಮಾಡಿದ್ದೇನು! ನಿ
ನ್ನ ಕೈ ನನ್ನ ಮೇಲೆಯೂ, ನನ್ನ ತಂದೆಯ ಮನೆಯ ಮೇಲೆ
ಯೂ ಇರಲಿ.

೧೮ ಅದೇ ದಿವಸದಲ್ಲಿ ಪ್ರವಾದಿಯಾದ ಗಾದನು ದಾವೀದನ ಬಳಿ
ಗೆ ಬಂದು, ಅವನಿಗೆ, ನೀನು ಹೋಗಿ, ಯೆಬೂಸ್ಯನಾದ ಅರವ್ನ
ನ ಕಣದಲ್ಲಿ ಕರ್ತನಿಗೆ ಒಂದು ಬಲಿಪೀಠವನ್ನು ಕಟ್ಟಿಸು, ಅಂದ
೧೯ ನು. ಆಗ ದಾವೀದನು, ಗಾದನು ಹೇಳಿದ ಹಾಗೆಯೇ, ಕರ್ತನು
೨೦ ಆಜ್ಞಾಪಿಸಿದ ಪ್ರಕಾರವೇ ಹೋದನು. ಆದರೆ ಅರವ್ನನು ಕಣ್ಣೆ
ತ್ತಿ, ಅರಸನೂ ಅವನ ಸೇವಕರೂ ತನ್ನ ಬಳಿಗೆ ಬರುವದನ್ನು
ನೋಡಿದನು; ಆಗ ಅರವ್ನನು ಹೊಗಟು, ನೆಲದ ಮಟ್ಟಿಗೂ
ಮೋರೆ ಕೆಳಗಾಗಿ ಅರಸನಿಗೆ ಅಡ್ಡ ಬಿದ್ದನು. ಮತ್ತು ಅರವ್ನ
ನು, ಅರಸನಾದ ನನ್ನ ಸ್ವಾಮಿ ತನ್ನ ಸೇವಕನ ಬಳಿಗೆ ಬಂದದ್ದೇ
೨೧ ನು! ಅಂದನು. ಅದಕ್ಕೆ ದಾವೀದನು, ಈ ಬಾಧೆಯು ಜನರ ಕಡೆ
ಯಿಂದ ತಡೆಯಲ್ಪಡುವ ಹಾಗೆ, ಕರ್ತನಿಗೆ ಒಂದು ಬಲಿಪೀಠವ
ನ್ನು ಕಟ್ಟಿಸುವದಕ್ಕೆ, ಈ ಕಣವನ್ನು ನಿನ್ನಿಂದ ಕೊಂಡು ಕೊ
೨೨ ಳ್ಳ ಬಂದಿದ್ದೇನೆ, ಅಂದನು. ಅರವ್ನನು ದಾವೀದನಿಗೆ, ಅರಸನಾ
ದ ನನ್ನ ಸ್ವಾಮಿ ಅದನ್ನು ತಕ್ಕೊಂಡು, ತನ್ನ ದೃಷ್ಟಿಗೆ ಒಳ್ಳೇ
ದಾಗಿರುವದನ್ನು ಅರ್ಪಿಸಲಿ; ಇಗೋ, ಹೋಮಕ್ಕೋಸ್ಕರ ಎ
ತ್ತುಗಳೂ, ಕಟ್ಟಿಗೆಗಳಿಗೋಸ್ಕರ ಹಂತಿ ಹೊಡೆಯುವ ನಾಮಾ
೨೩ ನೂ ಬಾತಿಮುಟ್ಟುಗಳೂ ಇಲ್ಲಿ ಅವೆ, ಅಂದನು. ಅರವ್ನನು ಇವು
ಗಳನ್ನೆಲ್ಲಾ ಅರಸನ ಹಾಗೆ ಅರಸನಿಗೆ ಕೊಟ್ಟನು. ಇದಲ್ಲದೆ ಅ
ರವ್ನನು ಅರಸನಿಗೆ, ನಿನ್ನ ದೇವರಾದ ಕರ್ತನು ನಿನ್ನನ್ನು ಮೆಚ್ಚ
೨೪ ಲಿ, ಅಂದನು. ಆದರೆ ಅರಸನು ಅರವ್ನನಿಗೆ, ಹಾಗಲ್ಲ; ನಿಶ್ಚಯ
ವಾಗಿ ನಿನ್ನಿಂದ ಕ್ರಯಕ್ಕೆ ಕೊಂಡು ಕೊಳ್ಳುತ್ತೇನೆ; ಸುವತ್ತುಸೆ ಬಂ
ದ ಹೋಮಗಳನ್ನು ನನ್ನ ದೇವರಾದ ಕರ್ತನಿಗೆ ಅರ್ಪಿಸೆನು,
ಅಂದನು. ಮತ್ತು ದಾವೀದನು ಆ ಕಣವನ್ನೂ ದನಗಳನ್ನೂ
೨೫ ಇವತ್ತು ಚೆಕೆಲ್ ಬೆಳ್ಳಿಗೆ ಕೊಂಡು ಕೊಂಡನು. ಆಗ ದಾವೀ
ದನು ಕರ್ತನಿಗೆ ಅಲ್ಲಿ ಬಲಿಪೀಠವನ್ನು ಕಟ್ಟಿಸಿ, ಹೋಮಗಳನ್ನೂ
ಸಮಾಧಾನದ ಬಲಿಗಳನ್ನೂ ಅರ್ಪಿಸಿದನು. ಹೀಗೆಯೇ ಕರ್ತ
ನು ದೇಶಕ್ಕೋಸ್ಕರ ಬಿನ್ನಹ ಕೇಳಿದ್ದರಿಂದ, ಇಸ್ರಯೇಲಿನ ಕಡೆ
ಯಿಂದ ಆ ಬಾಧೆಯು ತಡೆಯಲ್ಪಟ್ಟಿತು.

---



# THE FIRST BOOK OF THE KINGS.

## ಅರಸುಗಳ ಮೊದಲನೇ ಪುಸ್ತಕವು.

### ೧. ಸಂಧಿ.

೧ ಅರಸನಾದ ದಾವೀದನು ವೃದ್ಧನಾಗಿಯೂ ವರುಷಗಳು ಹೋ
ದವನಾಗಿಯೂ ಇರುವಾಗ, ಅವನನ್ನು ವಸ್ತ್ರಗಳಿಂದ ಮುಚ್ಚಿದ
೨ ರು; ಆದರೆ ಅವನಿಗೆ ಬೆಚ್ಚಗೆ ಆಗಲಿಲ್ಲ. ಆದದರಿಂದ ಅವನ ಸೇ
ವಕರು ಅವನಿಗೆ, ಅರಸನಾದ ನಮ್ಮ ಸ್ವಾಮಿಗೋಸ್ಕರ ಕನ್ನಿಕೆ
ಯಾದ ಒಬ್ಬ ಹುಡುಗಿ ಹುಡುಕಲ್ಪಡಲಿ; ಅವಳು ಅರಸನ ಬಳಿಯ
ಲ್ಲಿ ನಿಂತು, ಅವನನ್ನು ಆದರಿಸಿ, ಅರಸನಾದ ನಮ್ಮ ಸ್ವಾಮಿಗೆ
ಬೆಚ್ಚಗೆ ಆಗುವ ಹಾಗೆ, ಅವನ ಮಗ್ಗುಲಲ್ಲಿ ಮಲಗಲಿ, ಅಂದರು.
೩ ಹಾಗೆಯೇ ಅವರು ಸೌಂದರ್ಯವತಿಯಾದ ಹುಡುಗಿಗೋಸ್ಕರ
ಇಸ್ರಯೇಲಿನ ಮೇರೆಗಳಲ್ಲೆಲ್ಲಾ ಹುಡಿಕಿ, ಶುನಾಮ್ಯಳಾದ ಅಬಿಷಾ
ಗಳನ್ನು ಕಂಡು ಕೊಂಡು, ಅವಳನ್ನು ಅರಸನ ಬಳಿಗೆ ತಂದರು.
೪ ಈ ಸೌಂದರ್ಯವತಿಯಾದ ಹುಡುಗಿ ಅರಸನನ್ನು ಆದರಿಸಿ, ಅ
ವನನ್ನು ಸೇವಿಸುತ್ತಾ ಇದ್ದಳು; ಆದರೆ ಅರಸನು ಅವಳನ್ನು ಅ
ರಿಯದೆ ಇದ್ದನು.

೫ ಆದರೆ ಹಗ್ಗೀತಳ ಮಗನಾದ ಅದೋನಿಯೆನು ತನ್ನನ್ನು ಎತ್ತಿ
ಕೊಂಡು, ನಾನು ಅರಸನಾಗಿರ ಬೇಕೆಂದು ಅಂದು ಕೊಂಡು, ತನ
ಗೋಸ್ಕರ ರಥಗಳನ್ನೂ, ರಾಹುತರನ್ನೂ, ತನ್ನ ಮುಂದೆ ಓಡು
ವದಕ್ಕೆ ಐವತ್ತು ಮಂದಿ ಮನುಷ್ಯರನ್ನೂ ಸಿದ್ಧ ಮಾಡಿದನು.
೬ ಅವನ ತಂದೆಯು ಎಂದಾದರೂ, ನೀನು ಹೀಗೆ ಯಾಕೆ ಮಾಡಿದಿ!
ಎಂದು ಹೇಳಿ ಅವನನ್ನು ವ್ಯಥೆ ಪಡಿಸಲಿಲ್ಲ. ಇದಲ್ಲದೆ ಅವನು
೭ ಬಹು ಒಳ್ಳೇ ರೂಪವಂತನಾಗಿದ್ದನು. ಅಬ್ಷಲೋಮನ ತರುವಾ
ಯ ಅವನ ತಾಯಿ ಅವನನ್ನು ಹೆತ್ತಳು. ಅವನು ಚೆರೂಯಳ
ಮಗನಾದ ಯೊವಾಬನ ಸಂಗಡಲೂ ಯಾಜಕನಾದ ಅಬ್ಯಾತಾರ
ನ ಸಂಗಡಲೂ ಮಾತಾಡಿದನು; ಅವರು ಅದೋನಿಯನನ್ನು ಹಿಂ
೮ ಬಾಲಿಸಿ, ಅವನಿಗೆ ಸಹಾಯಕರಾಗಿದ್ದರು. ಆದರೆ ಯಾಜಕನಾ
ದ ಚದೋಕನೂ, ಯೆಹೋಯದಾವನ ಮಗನಾದ ಬೆನಾಯ
ನೂ, ಪ್ರವಾದಿಯಾದ ನತಾನನೂ, ಶಿಮ್ಯೆಯೂ, ರೇಯಿಯೂ,
ದಾವೀದನ ಪರಾಕ್ರಮಶಾಲಿಗಳೂ, ಅದೋನಿಯೆನ ಸಂಗಡ ಹೋ
೯ ಗಲಿಲ್ಲ. ಆಗ ಅದೋನಿಯನು ಎನ್ರೋಗೆಲಿನ ಬಳಿಯಲ್ಲಿರುವ
ಜೊಹೇಲತು ಎಂಬ ಕಲ್ಲಿನ ಹತ್ತರ ಕುರಿಗಳನ್ನೂ, ಎತ್ತುಗಳನ್ನೂ
ಕೊಬ್ಬಿದವುಗಳನ್ನೂ ಕೊಲ್ಲಿಸಿ, ಅರಸನ ಮಕ್ಕಳಾದ ತನ್ನ ಸ
ಮಸ್ತ ಸಹೋದರರನ್ನೂ ಅರಸನ ಸೇವಕರಾದ ಸಮಸ್ತ ಯೆ
೧೦ ಹೂದ ಮನುಷ್ಯರನ್ನೂ ಕರೆದನು. ಆದರೆ ಪ್ರವಾದಿಯಾದ
ನತಾನನನ್ನೂ, ಬೆನಾಯನನ್ನೂ, ಪರಾಕ್ರಮಶಾಲಿಗಳನ್ನೂ,
ತನ್ನ ಸಹೋದರನಾದ ಸೊಲೊಮೋನನನ್ನೂ ಕರೆಯಲಿಲ್ಲ.

೧೧ ಆಗ ನತಾನನು ಸೊಲೊಮೋನನ ತಾಯಿಯಾದ ಬತ್ಷೆಬ
ಳಿಗೆ ಹೇಳ್ಳಿದ್ದೇನಂದರೆ, ನಮ್ಮ ಸ್ವಾಮಿಯಾದ ದಾವೀದನು ಅರಿ
ಯದಿರುವಾಗ, ಹಗ್ಗೀತಳ ಮಗನಾದ ಅದೋನಿಯೆನು ಆಳುತ್ತಾ
೧೨ ನೆಂದು, ನೀನು ಕೇಳಲಿಲ್ಲವೋ! ಆದದರಿಂದ ನೀನು ನಿನ್ನ ಪ್ರಾಣ
ವನ್ನೂ ನಿನ್ನ ಮಗನಾದ ಸೊಲೊಮೋನನ ಪ್ರಾಣವನ್ನೂ ರ
ಕ್ಷಿಸಿ ಕೊಳ್ಳುವ ಹಾಗೆ, ಅಪ್ಪಣೆ ಆದರೆ, ನಿನಗೆ ಆಲೋಚನೆ ಬೇ
೧೩ ಳುತ್ತೇನೆ. ನೀನು ಅರಸನಾದ ದಾವೀದನ ಬಳಿಗೆ ಹೋಗಿ, ಅವ
ನಿಗೆ, ಅರಸನಾದ ನನ್ನ ಸ್ವಾಮಿಯೇ, ನಿಶ್ಚಯವಾಗಿ ನನ್ನ ತರು
ವಾಯ ನಿನ್ನ ಮಗನಾದ ಸೊಲೊಮೋನನು ಆಳುವನೆಂದೂ, ನಿ.
ವನು ನನ್ನ ಸಿಂಹಾಸನದ ಮೇಲೆ ಕುಳಿತು ಕೊಳ್ಳುವನೆಂದೂ ಹೇ
ಳ್ಳ ನಿನ್ನ ದಾಸಿಗೆ ಆಣೆ ಇಟ್ಟು ಹೇಳಿಲ್ಲವೋ! ಹೀಗಿರಲಾಗಿ
೧೪ ನಿಯನು ಆಳುವದು ಯಾಕೆ! ಎಂದು ಹೇಳು. ಇಗೋ, ದಾವೀದನ ಸಿಂ
ಇನ್ನೂ ಅರಸನ ಸಂಗಡ ಮಾತಾಡುತ್ತಿರುವಾಗ, ನಿ ಸ್ಥಿರವಾಗಿ
ಹಿಂದೆಯೇ ಬಳಿಗೆ ಬಂದು, ನಿನ್ನ ಮಾತುಗಳನ್ನು ನನು ಸೊಲೊ
ರುವೆನು, ಅಂದನು. ದನು. ಅವಳು
೧೫ ಆಗ ಬತ್ಷೆಬಳು ಕೊಠಡಿಯೊಳಗೆ ಅರಸನ ಜ್ಞಂದಳ್ಳು. ಅದಕ್ಕೆ
ಅರಸನು ಅತಿವೃದ್ಧನಾಗಿರುವದರಿಂದ, ಶುನಾಮ್ಯ ವನು ನಿನಗೆ ಹೇ
೧೬ ಗಳು ಅರಸನಿಗೆ ಸೇವೆ ಮಾಡುತ್ತಾ ಇದ್ದಳು. ಬತ್ಷೆಬಕ್ಕಳಳು, ಹೇ
ಅರಸನಿಗೆ ವಂದನೆ ಮಾಡಿದಳು. ಅರಸನು, ನಿನಗೇನು ಂದೂ, ನಾ
೧೭ ಅವಳು ಅವನಿಗೆ ಪ್ರತ್ಯುತ್ತರವಾಗಿ, ನನ್ನ ಸ್ವಾಮಿಯೇ, ತೆ ಕಣ್ಣಿ
ವಾಗಿ ನನ್ನ ತರುವಾಯ ನಿನ್ನ ಮಗನಾದ ಸೊಲೊಮೋ
ಳುವನೆಂದೂ, ಅವನು ನನ್ನ ಸಿಂಹಾಸನದ ಮೇಲೆ ಕುಳಿತು ಕೊ
ಳ್ಳುವನೆಂದೂ, ನೀನು ನಿನ್ನ ದಾಸಿಗೆ ನಿನ್ನ ದೇವರಾದ ಕರ್ತನ ಹೆ
೧೮ ಸರಿನಲ್ಲಿ ಪ್ರಮಾಣ ಮಾಡಿದಿ. ಆದರೆ, ಇಗೋ, ಅರಸನಾಗಿರು
ವ ನನ್ನ ಸ್ವಾಮಿಯಾದ ನೀನು ಅರಿಯದೆ ಇರುವಾಗ, ಅದೋನಿ
೧೯ ಯನು ಆಳುತ್ತಾನೆ. ಇದಲ್ಲದೆ ಅವನು ಎತ್ತುಗಳನ್ನೂ, ಕೊಬ್ಬಿ
ದವುಗಳನ್ನೂ, ಕುರಿಗಳನ್ನೂ ಬಹಳವಾಗಿ ಕೊಲ್ಲಿಸಿ, ಅರಸನ
ಮಕ್ಕಳೆಲ್ಲರನ್ನೂ, ಯಾಜಕನಾದ ಅಬ್ಯಾತಾರನನ್ನೂ, ಸೈನ್ಯಾ
೨೦ ಧಿಪತಿಯಾದ ಯೊವಾಬನನ್ನೂ ಕರೆದಿದ್ದಾನೆ. ಆದರೆ ನಿನ್ನ ಸೇ
ವಕನಾದ ಸೊಲೊಮೋನನನ್ನು ಅವನು ಕರೆಯಲಿಲ್ಲ. ಆದದ
ರಿಂದ, ಅರಸನಾದ ನನ್ನ ಸ್ವಾಮಿಯೇ, ನಿನ್ನ ತರುವಾಯ ನನ್ನ
ಸ್ವಾಮಿಯಾದ ಅರಸನ ಸಿಂಹಾಸನದ ಮೇಲೆ ಕುಳಿತು ಕೊಳ್ಳುವ
ವನ್ಯಾವನೋ, ನೀನು ಹೇಳುವ ಹಾಗೆ, ಸಮಸ್ತ ಇಸ್ರಯೇಲ್ಯರ
೨೧ ಕಣ್ಣುಗಳು ನಿನ್ನ ಮೇಲೆ ಇರುತ್ತವೆ. ಇಲ್ಲದಿದ್ದರೆ ಅರಸನಾದ ನ
ನ್ನ ಸ್ವಾಮಿ ತನ್ನ ಪಿತೃಗಳ ಸಂಗಡ ಮಲಗಿ ಕೊಂಡಿರುವಾಗ,
ನಾನೂ ನನ್ನ ಮಗನಾದ ಸೊಲೊಮೋನನೂ ಪಾಪಿಗಳಾಗಿರು
ವೆವು, ಅಂದಳು.

೨೨ ಅವಳು ಅರಸನ ಸಂಗಡ ಇನ್ನೂ ಮಾತಾಡುತ್ತಿರುವಾಗ, ಇ
೨೩ ಗೋ, ಪ್ರವಾದಿಯಾದ ನತಾನನು ಬಂದನು. ಆಗ ಅರಸನಿಗೆ,
ಇಗೋ, ಪ್ರವಾದಿಯಾದ ನತಾನನು, ತಿಳಿಸಿ ಅಂದರು. ಅವನು
ಒಳಗೆ ಅರಸನ ಮುಂದೆ ಬಂದಾಗ, ಅರಸನ ಮುಂದೆ ಮೋರೆ ಕೆಳ
೨೪ ಗಾಗಿ ನೆಲಕ್ಕೆ ಅಡ್ಡ ಬಿದ್ದನು. ಆಗ ನತಾನನು ಹೇಳ್ಳಿದ್ದೇನಂದರೆ,
ಅರಸನಾದ ನನ್ನ ಸ್ವಾಮಿಯೇ, ಅದೋನಿಯೆನು ನನ್ನ ತರುವಾ
ಯ ಆಳುವನೆಂದೂ, ನನ್ನ ಸಿಂಹಾಸನದ ಮೇಲೆ ಕುಳಿತು ಕೊಳ್ಳು
೨೫ ವನೆಂದೂ ನೀನು ಹೇಳಿದಿಯೋ! ಯಾಕುದರೆ ಈ ಹೊತ್ತು ಅವ
ನು ಇಳಿದು ಹೋಗಿ, ಎತ್ತುಗಳನ್ನೂ, ಕೊಬ್ಬಿದವುಗಳನ್ನೂ, ಕು

ರಗಳನ್ನೂ ಅನೇಕವಾಗಿ ಕೊಲ್ಲಿಸಿ, ಅರಸನ ಮಕ್ಕಳೆಲ್ಲರನ್ನೂ,
ಸೈನ್ಯಾಧಿಪತಿಗಳನ್ನೂ, ಯಾಜಕನಾದ ಅಬ್ಯತಾರನನ್ನೂ ಕಡೆ
ದಿದ್ದಾನೆ. ಇಗೋ, ಅವರು ಅವನ ಮುಂದೆ ಉಂಟು, ಕುದಿದು,
೨೬ ಅರಸನಾದ ಅದೋನಿಯನು ಬಾಳಲಿ, ಅನ್ನುತ್ತಾತೆ. ಆದರೆ ನನ್ನ
ನ್ನೂ, ನಿನ್ನ ಸೇವಕನಾದ ನನ್ನನ್ನೂ, ಯಾಜಕನಾದ ಚದೋ
ಕನನ್ನೂ, ಯೆಹೋಯದಾವನ ಮಗನಾದ ಬೆನಾಯನನ್ನೂ.
ನಿನ್ನ ಸೇವಕನಾದ ಸೊಲೊಮೋನನನ್ನೂ ಅವನು ಕರೆಯಲಿಲ್ಲ.
೨೭ ಅರಸನಾದ ನನ್ನ ಸ್ವಾಮಿಯಿಂದ ಈ ಕಾರ್ಯವಾಯಿತೋ!
ಅರಸನಾದ ನನ್ನ ಸ್ವಾಮಿ ತನ್ನ ತರುವಾಯ ತನ್ನ ಸಿಂಹಾಸನದ
ಮೇಲೆ ಕುಳಿತು ಕೊಳ್ಳುವವನು ಇವನೆಂದು, ನಿನ್ನ ಸೇವಕನಾದ ನ
ಗೆ ನೀನು ತಿಳಿಸದೆ ಹೋದಿಯೋ! ಅಂದನು.

೨೮ ಆಗ ಅರಸನಾದ ದಾವೀದನು ಪ್ರತ್ಯುತ್ತರವಾಗಿ, ಬತ್ಷೇಬಳನ್ನು
ಳಿಗೆ ಕರೆ, ಅಂದನು. ಅವಳು ಅರಸನ ಸಮುಖಕ್ಕೆ ಬಂ
ನನ್ನ ಅರಸನ ಮುಂದೆ ನಿಂತಿರುವಾಗ, ಅರಸನು, ನಿಶ್ಚಯವಾಗಿ
ದು, ಅರಸನಾದ ಸೊಲೊಮೋನನು ನನ್ನ ತರುವಾಯ ಆಳುವ
೨೯ ನಿನ್ನ ಶ್ರೇಷ್ಠನು ನನಗೆ ಬದಲಾಗಿ ನನ್ನ ಸಿಂಹಾಸನದ ಮೇಲೆ ಕು
೩೦ ಳಿತುಕೊಳ್ಳುವನೆಂದೂ, ನಾನು ಇಸ್ರಯೇಲಿನ ದೇವರಾದ ಕರ್ತ
ನಿಗೆ ಸತ್ಯದಲ್ಲಿ ನಿನಗೆ ಹ್ಯಾಗೆ ಆಣೆ ಇಟ್ಟು ಹೇಳಿದೆನೋ, ಹಾಗೆ
ನೆ ಈ ದಿನ ನಿಶ್ಚಯವಾಗಿ ಮಾಡುವೆನೆಂದೂ, ಸಮಸ್ತ ಇಕ್ಕಟ್ಟಿ
ಗಿಂದ ನನ್ನ ಪ್ರಾಣವನ್ನು ವಿಮೋಚಿಸಿದ ಕರ್ತನ ಜೀವದ
ಮೇಲೆ ಆಣೆ ಇಡುತ್ತೇನೆಂದೂ ಪ್ರಮಾಣವಾಗಿ ಹೇಳಿದನು. ಆಗ
೩೧ ಬತ್ಷೇಬಳು ಮುಖವನ್ನು ನೆಲಕ್ಕೆ ಬೊಗ್ಗಿಸಿ, ಅರಸನನ್ನು ವಂದಿಸಿ,
ನನ್ನ ಸ್ವಾಮಿಯಾದ ಅರಸನಾದ ದಾವೀದನು ಎಂದೆಂದಿಗೂ ಬ
ದುಕಲಿ, ಅಂದಳು.

೩೨ ಆಗ ಅರಸನಾದ ದಾವೀದನು, ಯಾಜಕನಾದ ಚದೋಕನ
ನ್ನೂ, ಪ್ರವಾದಿಯಾದ ನತಾನನನ್ನೂ, ಯೆಹೋಯದಾವನ
ಮಗನಾದ ಬೆನಾಯನನ್ನೂ ನನ್ನ ಬಳಿಗೆ ಕರೆಯಿರಿ, ಅಂದನು.
೩೩ ಅವರು ಅರಸನ ಸಮುಖಕ್ಕೆ ಬಂದಾಗ, ಅರಸನು ಅವರಿಗೆ, ನೀ
ವು ನಿಮ್ಮ ಯಜಮಾನನ ಸೇವಕರನ್ನು ಕರ ಕೊಂಡು ಹೋಗಿ,
ನನ್ನ ಮಗನಾದ ಸೊಲೊಮೋನನನ್ನೂ ನನ್ನ ಸ್ವಂತ ಹಾಸರ
ಕತ್ತೆಯ ಮೇಲೆ ಏರಿಸಿ, ಗಿಹೋನಿಗೆ ಅವನನ್ನು ಕರ ಕೊಂಡು
೩೪ ಹೋಗಿರಿ. ಅಲ್ಲಿ ಯಾಜಕನಾದ ಚದೋಕನೂ ಪ್ರವಾದಿಯಾದ
ನತಾನನೂ ಅವನನ್ನು ಇಸ್ರಯೇಲಿನ ಮೇಲೆ ಅರಸನಾಗಿರ ಅಭಿ
ಷೇಕಿಸಲಿ. ಮತ್ತು ತುತೂರಿಯನ್ನು ಊದಿ, ಅರಸನಾದ ಸೊ
೩೫ ಲೊಮೋನನು ಬಾಳಲಿ, ಎಂಥೇಳಿರಿ. ಆಗಲವನು ಬಂದು, ನನ್ನ
ಸಿಂಹಾಸನದ ಮೇಲೆ ಕೂತ್ರುವ ಹಾಗೆ, ನೀವು ಅವನ ಹಿಂದೆ ಏರಿ
ಬನ್ನಿರಿ. ಯಾಕಂದರೆ ಅವನು ನನಗೆ ಬದಲಾಗಿ ಅರಸನಾಗಿರುವ
೩೬ ನು; ಇಸ್ರಯೇಲಿನ ಮೇಲೆಯೂ ಯೆಹೂದದ ಮೇಲೆಯೂ ನಾ
ಯಕನಾಗಿರ ನಾನು ಅವನನ್ನು ನೇಮಿಸಿದ್ದೇನೆ, ಅಂದನು. ಯೆ
ಹೋಯದಾವನ ಮಗನಾದ ಬೆನಾಯನು ಅರಸನಿಗೆ ಪ್ರತ್ಯುತ್ತರ
ವಾಗಿ, ಆಮೆನ್, ಅರಸನಾದ ನನ್ನ ಸ್ವಾಮಿಯ ದೇವರಾದ ಕರ್ತ
೩೭ ನು ಹಾಗೆಯೇ ಹೇಳಲಿ. ಕರ್ತನು ಅರಸನಾದ ನನ್ನ ಸ್ವಾಮಿಯ
ಸಂಗಡ ಹ್ಯಾಗೆ ಇದ್ದನೋ, ಹಾಗೆಯೇ ಸೊಲೊಮೋನನ ಸಂಗ
ಡ ಇದ್ದು, ನನ್ನ ಸ್ವಾಮಿಯಾದ, ಅರಸನಾದ ದಾವೀದನ ಸಿಂಹಾ
ಸನಕ್ಕಿಂತ ಇವನ ಸಿಂಹಾಸನವನ್ನು ಅಧಿಕವಾಗ ಮಾಡಲಿ, ಅಂದನು.

೩೮ ಹಾಗೆಯೇ ಯಾಜಕನಾದ ಚದೋಕನೂ, ಪ್ರವಾದಿಯಾದ
ನತಾನನೂ, ಯೆಹೋಯದಾವನ ಮಗನಾದ ಬೆನಾಯನೂ, ಕ್ರೇ
ತ್ಯರೂ, ಪೆಲೇತ್ಯರೂ ಇಳಿದು ಹೋಗಿ, ಸೊಲೊಮೋನನನ್ನು ಅ
ರಸನಾದ ದಾವೀದನ ಹಾಸರಕತ್ತೆಯ ಮೇಲೆ ಏರಿಸಿ, ಗಿಹೋನಿಗೆ
೩೯ ಕರ ತಂದರು. ಆಗ ಯಾಜಕನಾದ ಚದೋಕನು ಗುಡಾರದೊ
ಳಗಿಂದ ತೈಲದ ಕೊಂಬನ್ನು ತಂದು, ಸೊಲೊಮೋನನನ್ನು ಅಭಿ
ಷೇಕಿಸಿದನು. ಮತ್ತು ತುತೂರಿಯನ್ನು ಊದಿದರು. ಆಗ ಜನರೆ
೪೦ ಲ್ಲರು ಅರಸನಾದ ಸೊಲೊಮೋನನು ಬಾಳಲಿ, ಅಂದರು. ಇದಲ್ಲ
ದೆ ಜನರೆಲ್ಲರು ಅವನ ಹಿಂದೆ ಏರಿ ಬಂದರು. ಜನರು ಬಿಳ್ಳೆಗೋಲ
ವಿಗಳನ್ನು ಊದಿ, ಮಹಾ ಸಂತೋಷದಿಂದ ಸಂತೋಷಿಸಿದರು.
ಅವರ ಶಬ್ದದಿಂದ ಭೂಮಿ ಬಿಳಿತು.

೪೧ ಆಗ ಅದೋನಿಯನೂ ಅವನ ಸಂಗಡಲಿದ್ದ ಕರೆಯಲ್ಪಟ್ಟವ
ರೂ ಉಂಡು ತೀರಿಸಿದಾಗ, ಅದನ್ನು ಕೇಳಿದರು. ಯೊವಾಬನು
ತುತೂರಿಯ ಶಬ್ದವನ್ನು ಕೇಳಿದಾಗ, ಪಟ್ಟಣ ಗುಬುರಾಗಿರುವ ಶಬ್ದ
ಯಾಕೆ! ಅಂದನು. ಅವನು ಮಾತಾಡುತ್ತಿರುವಾಗ, ಇಗೋ,
೪೨ ಯಾಜಕನಾಗಿರುವ ಅಬ್ಯತಾರನ ಮಗನಾದ ಯೊನತಾನನು ಬಂ
ದನು. ಅದೋನಿಯನು, ಬಾ; ಯಾಕಂದರೆ ನೀನು ಪರಾಕ್ರಮಶಾ
ಲಿ, ಬಹ್ಳೇ ಸಮಾಚಾರ ತರುತ್ತೀ, ಅಂದನು. ಆಗ ಯೊನತಾನನು
೪೩ ಪ್ರತ್ಯುತ್ತರವಾಗಿ, ಅದೋನಿಯನಿಗೆ ಹೇಳಿದ್ದೇನಂದರೆ—ನಿಶ್ಚಯ
ವಾಗಿ ನಮ್ಮ ಸ್ವಾಮಿಯಾದ ಅರಸನಾದ ದಾವೀದನು ಸೊಲೊ
೪೪ ಮೋನನನ್ನು ಅರಸನಾಗ ಮಾಡಿದ್ದಾನೆ. ಇದಲ್ಲದೆ ಅರಸನು ಅವ
ನ ಸಂಗಡ ಯಾಜಕನಾದ ಚದೋಕನನ್ನೂ, ಪ್ರವಾದಿಯಾದ
ನತಾನನನ್ನೂ, ಯೆಹೋಯದಾವನ ಮಗನಾದ ಬೆನಾಯನ
ನ್ನೂ, ಕೆರೇತ್ಯರನನ್ನೂ, ಪೆಲೇತ್ಯರನನ್ನೂ ಕಳುಹಿಸಿದ್ದಾನೆ. ಅವ
೪೫ ರು ಅವನನ್ನು ಅರಸನ ಹಾಸರಕತ್ತೆಯ ಮೇಲೆ ಏರಿಸಿ, ಯಾಜ
ಕನಾದ ಚದೋಕನೂ ಪ್ರವಾದಿಯಾದ ನತಾನನೂ ಅವನನ್ನು
ಗಿಹೋನಿನಲ್ಲಿ ಅರಸನಾಗಿರ ಅಭಿಷೇಕಿಸಿದ್ದಾರೆ; ಅವರು ಸಂತೋ
ಷ ಪಡುತ್ತಾ, ಅಲ್ಲಿಂದ ಬಂದ ಕಾರಣ, ಪಟ್ಟಣವು ಗದ್ದಲಾಯಿತು.
೪೬ ನೀವು ಕೇಳಿದ್ದ ಶಬ್ದವು ಇದೇ. ಇದಲ್ಲದೆ ಸೊಲೊಮೋನನು ರಾ
೪೭ ಜ್ಯ ಸಿಂಹಾಸನದ ಮೇಲೆ ಕುಳಿತು ಕೊಂಡಿದ್ದಾನೆ. ಇದರ ಜೊ
ತೆ ಅರಸನ ಸೇವಕರು ನಮ್ಮ ಯಜಮಾನನಾದ ಅರಸನಾದ
ದಾವೀದನನ್ನು ಆಶೀರ್ವದಿಸ ಬಂದು, ದೇವರು ಸೊಲೊಮೋನನ
ನಾಮವನ್ನು ನಿನ್ನ ನಾಮಕ್ಕಿಂತ ಉತ್ತಮವಾಗಿ ಮಾಡಲೆಂದೂ,
ಅವನ ಸಿಂಹಾಸನವನ್ನು ನಿನ್ನ ಸಿಂಹಾಸನಕ್ಕಿಂತ ಮಹಿಮೆ ಪಡಿ
ಸಲೆಂದೂ ಹೇಳುತ್ತಿರುವಾಗ, ಅರಸನು ಮಂಚದ ಮೇಲೆ ಬಾಗಿ,
೪೮ ವಂದಿಸಿದನು. ಮತ್ತು ಅರಸನು ಹೇಳ್ದೆನಂದರೆ, ನನ್ನ ಕಣ್ಣು
ಗಳು ನೋಡುತ್ತಿರುವಾಗ, ಇಂದು ನನ್ನ ಸಿಂಹಾಸನದ ಮೇಲೆ
ಕೂತ್ರುವವನನ್ನು ನನಗೆ ಕೊಟ್ಟಿರುವ ಇಸ್ರಯೇಲಿನ ದೇವರಾ
ದ ಕರ್ತನು ಆಶೀರ್ವದಿಸಲ್ಪಡಲಿ, ಅಂದನು.

೪೯ ಆಗ ಅದೋನಿಯನ ಸಂಗಡಲಿರುವ ಕರೆಯಲ್ಪಟ್ಟವರೆಲ್ಲರೂ
ಹೆದರಿಗೊಂಡು, ಎದ್ದು, ತಮ್ಮು ತಮ್ಮು ಸ್ಥಳಗಳಿಗೆ ಹೋದರು.
೫೦ ಆದರೆ ಅದೋನಿಯನು ಸೊಲೊಮೋನನಿಗೆ ಭಯ ಪಟ್ಟದ್ದರಿಂದ,
ಎದ್ದು ಹೋಗಿ, ಬಲಿ ಪೀಠದ ಕೊಂಬುಗಳನ್ನು ಹಿಡಿ ಕೊಂಡನು.
೫೧ ಆಗ, ಅದೋನಿಯನು ಅರಸನಾದ ಸೊಲೊಮೋನನಿಗೆ ಭಯ ಪ
ಡುತ್ತಾನೆ; ಯಾಕಂದರೆ, ಇಗೋ, ಅವನು ಬಲಿಪೀಠದ ಕೊಂಬು



ಗಳನ್ನು ಹಿಡಿದು, ಅರಸನಾದ ಸೊಲೊಮೋನನು ಕತ್ತಿಯಿಂದ ತ
ನ್ನ ಸೇವಕನನ್ನು ಕೊಲ್ಲುವದಿಲ್ಲವೆಂದು ಈ ಹೊತ್ತು ನನಗೆ ಆಣೆ
೫೨ ಇಡಲಿ, ಎಂಥೇಳಿದ್ದು ಸೊಲೊಮೋನನಿಗೆ ತಿಳಿಸಲ್ಪಟ್ಟಿತು. ಅದ
ಕ್ಕೆ ಸೊಲೊಮೋನನು, ಅವನು ಉತ್ತಮನಾಗಿದ್ದರೆ, ಅವನ ಕೂ
ದಲ್ಲಿ ಬಂದಾದರೂ ಸೆಲಕ್ಕೆ ಬೀಳ್ಳದು; ಆದರೆ ಅವನಲ್ಲಿ ಕೆಟ್ಟತನ
೫೩ ವು ಕಿಕ್ಕಿದರೆ, ಅವನು ಸಾಯುವನು, ಅಂದನು ಅರಸನಾದ
ಸೊಲೊಮೋನನು ಅವನನ್ನು ಕರೆಸಿದಾಗ, ಬಲಿಪೀಠದ ಬಳಿಯಿಂ
೫೪ ದ ಅವನನ್ನು ಕರ ಕೊಂಡು ಬಂದರು. ಆಗ ಅವನು ಬಂದು, ಅರ
ಸನಾದ ಸೊಲೊಮೋನನಿಗೆ ಅಡ್ಡ ಬಿದ್ದನು. ಸೊಲೊಮೋನನು
ಅವನಿಗೆ, ನಿನ್ನ ಮನೆಗೆ ಹೋಗು, ಅಂದನು.

## ೨. ಸಂಧಿ.

೧ ಆದರೆ ದಾವೀದನು ಸಾಯುವ ಕಾಲ ಸಮೀಪಿಸಿದ್ದರಿಂದ, ಅವ
೨ ನು ತನ್ನ ಮಗನಾದ ಸೊಲೊಮೋನನಿಗೆ ಆಜ್ಞಾಪಿಸಿದ್ದೇನಂದರೆ,
ನಾನು ಭೂಮಿಯವರೆಲ್ಲರೂ ಹೋಗುವ ಮಾರ್ಗವಾಗಿ ಹೋ
೩ ಗುತ್ತೇನೆ; ನೀನು ಬಲ ಗೊಂಡು ಪುರುಷನಾಗಿರು. ನೀನು ಏನು
ಮಾಡಿದರೂ, ಎಲ್ಲಿ ಸಂಚರಿಸಿದರೂ, ಎಲ್ಲಾದರಲ್ಲಿ ಬುದ್ಧಿಯುಳ್ಳ
ವನಾಗಿರುವದಕ್ಕೂ, ಕರ್ತನು ನನ್ನನ್ನು ಕುರಿತು, ನಿನ್ನ ಮಕ್ಕ
ಳು ತಾವು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದ
ಲೂ ನನ್ನ ಮುಂದೆ ಸತ್ಯವಾಗಿ ನಡೆದು ಕೊಳ್ಳುವ ಹಾಗೆ, ತಮ್ಮ
ಮಾರ್ಗವನ್ನು ಕಾದು ಕೊಂಡರೆ, ಇಸ್ರಯೇಲಿನ ಸಿಂಹಾಸನದ
ಮೇಲೆ ಕೂತ್ರ ತಕ್ಕ ಪುರುಷನು ನಿನಗೆ ಕೊರತೆ ಪಡುವದಿಲ್ಲವೆಂ
ದು, ಹೇಳಿದ ತನ್ನ ವಾಕ್ಯವನ್ನು ಸ್ಥಿರ ಪಡಿಸುವದಕ್ಕೂ, ನೀನು
೪ ಮೋಶೆಯ ನ್ಯಾಯಪ್ರಮಾಣದಲ್ಲಿ ಬರೆದಿರುವ ಪ್ರಕಾರ ನಿನ್ನ
ದೇವರಾದ ಕರ್ತನ ನೇಮಗಳನ್ನೂ, ಲಕ್ಷ್ಣೆಗಳನ್ನೂ, ನ್ಯಾಯಗ
ಳನ್ನೂ ಸಾಕ್ಷಿಗಳನ್ನೂ ಕೈ ಕೊಂಡು, ಅವನ ಮಾರ್ಗದಲ್ಲಿ ನ
ಡೆಯುವ ಹಾಗೆ, ಅವನ ಕಾಯಿದೆಯನ್ನು ಕೈಕೋ. ಇದಲ್ಲದೆ
೫ ಚೆರೂಯಳ ಮಗನಾದ ಯೊವಾಬನು ನನಗೂ ಇಸ್ರಯೇಲಿನ
ಸೈನ್ಯಗಳಿಗೆ ಇಬ್ಬರು ಅಧಿಪತಿಗಳಾದ, ನೇರನ ಮಗನಾದ ಅ
ಬ್ನೇರನಿಗೂ, ಯೆತ್ರನ ಮಗನಾದ ಅಮಾಸನಿಗೂ ಏನು ಮಾ
ಡಿದನೋ, ನೀನು ಬಲ್ಲಿ. ಯಾಕಂದರೆ ಅವನು ಅವರನ್ನು ಕೊಂ
ದು ಸಮಾಧಾನದಲ್ಲಿ ಯುದ್ಧದ ರಕ್ತವನ್ನು ಚೆಲ್ಲಿ, ತನ್ನ ನಡುವಿ
ನಲ್ಲಿರುವ ನಡುಕಟ್ಟಿನ ಮೇಲೆಯೂ, ತನ್ನ ಪಾದಗಳಲ್ಲಿರುವ
೬ ಪಾದರಕ್ಷೆಗಳ ಮೇಲೆಯೂ ಯುದ್ಧದ ರಕ್ತವನ್ನು ಹಾಕಿ ಕೊಂಡ
ನು. ಆದಕಾರಣ ನೀನು ನಿನ್ನ ಜ್ಞಾನದ ಪ್ರಕಾರ ಮಾಡಿ, ಅವನ
ನರೆತಲೆಯನ್ನು ಸಮಾಧಾನದಿಂದ ಪಾತಾಳಕ್ಕೆ ಇಳಿಯ ಗೊಡಿ
೭ ಸದಿರು. ಆದರೆ ನೀನು ಗಿಲ್ಯಾದ್ಯನಾದ ಬರ್ಜಿಲ್ಲಾಯನ ಮಕ್ಕಳಿ
ಗೆ ಕೃಪೆ ಮಾಡು; ಅವರು ನಿನ್ನ ಕಣ್ಣಿಯಲ್ಲಿ ಭೋಜಿಸುವವರ
ಸಂಗಡ ಇರಲಿ. ಯಾಕಂದರೆ ನಾನು ನಿನ್ನ ಸಹೋದರನಾದ ಅ
ಬ್ಷಲೋಮನ ಮುಂದೆ ಓಡಿ ಹೋದಾಗ, ಅವರು ಹಾಗೆಯೇ
೮ ನನ್ನ ಹತ್ತರಕ್ಕೆ ಬಂದರು. ಇದಲ್ಲದೆ ನಾನು ಮಹನಾಯಿಮಿಗೆ
ಹೋಗುವ ದಿನದಲ್ಲಿ ಅಘೋರವಾದ ಕಟನೆಯಿಂದ ನನ್ನನ್ನು ಶ
ಪಿಸಿದ ಬಹೂರಿಮಿನ ಬೆನ್ಯಮೀನನಾದ ಗೇರನ ಮಗನಾಗಿರುವ
ಶಿಮ್ಮೆಯು ನಿನ್ನ ಬಳಿಯಲ್ಲಿದ್ದಾನೆ. ಅವನು ಯೊರ್ದನಿನ ಬಳಿ
ಯ ನನ್ನನ್ನು ಎದುರ್ಗೊಳ್ಳ ಬಂದದರಿಂದ, ನಾನು ನಿನ್ನನ್ನು
ಕತ್ತಿಯಿಂದ ಕೊಲ್ಲಿಸುವದಿಲ್ಲವೆಂದು, ಕರ್ತನ ಹೆಸರಿನಲ್ಲಿ ಆಣೆ ಇ
೯ ಟ್ಟಿನು. ಆದರೆ ನೀನು ಈಗ ಅವನನ್ನು ನಿರಪರಾಧಿ ಎಂದು ಎಣಿ
ಸ ಬೇಡ. ಯಾಕಂದರೆ ನೀನು ಬುದ್ಧಿವಂತನಾಗಿರುವದರಿಂದ, ಅ
ವನಿಗೆ ಏನು ಮಾಡ ತಕ್ಕದ್ದೋ, ನೀನು ಬಲ್ಲಿ; ಆದರೆ ಅವನ ನರೆ
ತಲೆಯನ್ನು ರಕ್ತದಿಂದ ಪಾತಾಳಕ್ಕೆ ಇಳಿಯ ಮಾಡು, ಅಂದನು.
೧೦ ಹೀಗೆಯೇ ದಾವೀದನು ತನ್ನ ಪಿತೃಗಳ ಸಂಗಡ ಮಲಗಿ
೧೧ ಕೊಂಡನು; ದಾವೀದನ ಪಟ್ಟಣದಲ್ಲಿ ಹೂಣಲ್ಪಟ್ಟನು. ದಾವೀದನು
ಇಸ್ರಯೇಲಿನ ಮೇಲೆ ಆಳಿದ ದಿವಸಗಳು ನಾಲ್ವತ್ತು ವರುಷಗಳು.
ಏಳು ವರುಷ ಹೆಬ್ರೋನಿನಲ್ಲಿ ಆಳಿದನು; ಮೂವತ್ತು ಮೂರು
ವರುಷ ಯೆರೂಸಲೇಮಿನಲ್ಲಿ ಆಳಿದನು.

೧೨ ಆಗ ಸೊಲೊಮೋನನು ತನ್ನ ತಂದೆಯಾದ ದಾವೀದನ ಸಿಂ
ಹಾಸನದ ಮೇಲೆ ಕುಳಿತನು; ಅವನ ರಾಜ್ಯವು ಬಹು ಸ್ಥಿರವಾಗಿ
೧೩ ತ್ತು. ಆದರೆ ಹಗ್ಗೀತಳ ಮಗನಾದ ಅದೋನಿಯನು ಸೊಲೊ
ಮೋನನ ತಾಯಿಯಾದ ಬತ್ಷೇಬಳ ಬಳಿಗೆ ಬಂದನು. ಅವಳು
೧೪ ಅವನಿಗೆ, ಸಮಾಧಾನವಾಗಿ ಬರುತ್ತೀಯೋ! ಅಂದಳು. ಅದಕ್ಕೆ
ಅವನು, ಸಮಾಧಾನವೇ, ಅಂದನು. ಮತ್ತು ಅವನು ನಿನಗೆ ಹೇ
೧೫ ಳ ತಕ್ಕ ಮಾತು ನನಗೆ ಉಂಟು, ಅಂದನು. ಅದಕ್ಕವಳು, ಹೇ
ಳು, ಅಂದಳು. ಆಗಲವನು, ರಾಜ್ಯವು ನನ್ನದಾಗಿತ್ತೆಂದೂ, ನಾ
ನು ಆಳುವ ಹಾಗೆ, ಸಮಸ್ತ ಇಸ್ರಯೇಲ್ಯರು ನನ್ನ ಮೇಲೆ ಕಣ್ಣಿ
೧೬ ಟ್ಟಿರೆಂದೂ, ನೀನು ಬಲ್ಲಿ. ಆದರೆ ರಾಜ್ಯವು ತಿರುಗಿ ಕೊಂಡು, ನ
ನ್ನ ಸಹೋದರನದಾಯಿತು; ಯಾಕಂದರೆ ಅದು ಅವನಿಗೆ ಕ
ರ್ತನಿಂದ ಉಂಟಾಯಿತು. ಈಗ ನಾನು ನಿನ್ನನ್ನು ಒಂದು ಮನ
ವಿ ಕೇಳ್ಳ ಕೊಳ್ಳುತ್ತೇನೆ; ಮುಖವನ್ನು ಹಿಂದಿರುಗಿಸ ಬೇಡ, ಅಂ
೧೭ ದನು. ಅವನಿಗೆ, ಹೇಳು, ಅಂದಳು. ಆಗಲವನು, ನೀನು ದಯ
ಮಾಡಿ, ಅರಸನಾದ ಸೊಲೊಮೋನನು ಶುನಾಮ್ಯಳಾದ ಅಬಿ
ಷಾಗಳನ್ನು ನನಗೆ ಹೆಂಡತಿಯಾಗಿ ಕೊಡ ಅವನನ್ನು ಕೇಳು.
೧೮ ಯಾಕಂದರೆ ಅವನು ನಿನ್ನ ಮುಖವನ್ನು ಹಿಂದಿರುಗಿಸುವದಿಲ್ಲ,
ಅಂದನು. ಅದಕ್ಕೆ ಬತ್ಷೇಬಳು, ಬಳ್ಳೇದು, ನಿನಗೋಸ್ಕರ ಅರಸ
ನ ಸಂಗಡ ಮಾತಾಡುವೆನು, ಅಂದಳು.

೧೯ ಆದದರಿಂದ ಬತ್ಷೇಬಳು ಅದೋನಿಯನಿಗೋಸ್ಕರ ಮಾತಾ
ಡುವದಕ್ಕೆ ಅರಸನಾದ ಸೊಲೊಮೋನನ ಬಳಿಗೆ ಹೋದಳು.
ಅರಸನು ಅವಳನ್ನು ಎದುರ್ಗೊಳ್ಳ ಎದ್ದು, ಅವಳಿಗೆ ಅಡ್ಡ ಬಿ
ದ್ದು, ತಾನು ತನ್ನ ಸಿಂಹಾಸನದ ಮೇಲೆ ಕುಳಿತು ಕೊಂಡು, ಅರ
೨೦ ಸನ ತಾಯಿಗೋಸ್ಕರ ಅರಸನವನ್ನು ಹಾಕಿಸಿದನು. ಅವಳು ಅವ
ನ ಬಲಗಡೆಯಲ್ಲಿ ಕುಳಿತು ಕೊಂಡಳು. ಅವಳು ಅವನಿಗೆ, ನಿನ್ನಿಂ
ದ ಒಂದು ಚಿಕ್ಕ ಮನವಿ ಕೇಳ್ಳುತ್ತೇನೆ; ನನ್ನ ಮುಖ ಹಿಂದಿರುಗಿಸ
ಬೇಡ, ಅಂದಳು. ಅರಸನು ಅವಳಿಗೆ, ನನ್ನ ತಾಯಿಯೇ, ಕೇ
ಳು; ಯಾಕಂದರೆ ನಾನು ನಿನ್ನ ಮುಖ ಹಿಂದಿರುಗಿಸುವದಿಲ್ಲ,
೨೧ ಅಂದನು. ಅದಕ್ಕವಳು, ಶುನಾಮ್ಯಳಾದ ಅಬಿಷಾಗಳು ನಿನ್ನ
ಸಹೋದರನಾದ ಅದೋನಿಯನಿಗೆ ಹೆಂಡತಿಯಾಗಿ ಕೊಡಲ್ಪಡ
೨೨ ಲಿ, ಅಂದಳು. ಅರಸನಾದ ಸೊಲೊಮೋನನು ತನ್ನ ತಾಯಿಗೆ
ಪ್ರತ್ಯುತ್ತರವಾಗಿ, ಶುನಾಮ್ಯಳಾದ ಅಬಿಷಾಗಳನ್ನು ನೀನು ಕೇ
ಳುವದೇನು? ರಾಜ್ಯವನ್ನು ಕೇಳು; ಯಾಕಂದರೆ, ಅವನು ನನ್ನ
ಹಿರಿಯ ಸಹೋದರನಾಗಿದ್ದಾನೆ. ಅವನಿಗೋಸ್ಕರವೂ ಯಾಜ

ಕನಾದ ಅಬ್ಯಾಶಾರನಿಗೋಸ್ಕರವೂ ಚೆರೂಯೆಳ್ಳ ಮಗನಾದ
ಯೊವಾಬನಿಗೋಸ್ಕರವೂ ಕೇಳು, ಅಂದನು. ಆಗ ಅರಸನಾದ
೨೨ ಸೊಲೊಮೋನನು, ಅದೋನಿಯನು ಈ ಮಾತನ್ನು ತನ್ನ ಪ್ರಾ
ಣಕ್ಕೆ ವಿಕೋಧವಾಗಿ ಹೇಳಬೆಕೆ ಇದ್ದರೆ, ದೇವರು ನನಗೆ ಹಾಗೆ
ಯೂ ಅದಕ್ಕಿಂತ ಅಧಿಕವಾಗಿಯೂ ಮಾಡಲೆಂದು, ಕರ್ತನ ಹೆ
೨೪ ಸರಿನಲ್ಲಿ ಆಣೆ ಇಟ್ಟನು. ಹಾಗಾದರೆ, ನನ್ನನ್ನು ಸ್ಥಿರ ಪಡಿಸಿ, ನ
ನ್ನು ತಂದೆಯಾದ ದಾವೀದನ ಸಿಂಹಾಸನದ ಮೇಲೆ ನನ್ನನ್ನು ಕೂ
ರ್ರಿಸಿ, ತಾನು ಮಾತು ಕೊಟ್ಟ ಪ್ರಕಾರ, ನನಗೆ ಮನೆಯನ್ನು ಉಂ
ಟು ಮಾಡಿದ ಕರ್ತನ ಜೀವದಾಣೆ—ಈ ಹೊತ್ತು ಅದೋನಿ
೨೫ ಯನು ಸಾಯುವನು, ಅಂದನು. ಆಗ ಅರಸನಾದ ಸೊಲೊಮೋ
ನನು ಯೆಹೋಯದಾವನ ಮಗನಾದ ಬೆನಾಯನನ್ನು ಕಳುಹಿ
ಸಿದನು. ಇವನು ಅವನ ಮೇಲೆ ಬಿದ್ದದರಿಂದ, ಸತ್ತು ಹೋದನು.

೨೬ ಯಾಜಕನಾದ ಅಬ್ಯಾತಾರನಿಗೆ ಅರಸನು ಹೇಳಿದ್ದೇನಂದರೆ,
ನೀನು ಅಣತೋತಿಗೆ, ನಿನ್ನ ಹೊಲಗಳಿಗೆ ಹೋಗು. ಯಾಕಂ
ದರೆ ನೀನು ಸಾವಿಗೆ ಪಾತ್ರನಾಗಿದ್ದೀ; ಆದರೆ ನೀನು ಕರ್ತನಾದ
ಯೆಹೋವನ ಪೆಟ್ಟಿಗೆಯನ್ನು ನನ್ನ ತಂದೆಯಾದ ದಾವೀದನ
ಮುಂದೆ ಹೊತ್ತದ್ದರಿಂದಲೂ, ನನ್ನ ತಂದೆಯ ಸಮಸ್ತ ಶ್ರಮೆಗಳ
ಲ್ಲಿ ನೀನು ಶ್ರಮೆ ಪಟ್ಟದ್ದರಿಂದಲೂ, ನಾನು ಈಗ ನಿನ್ನನ್ನು ಸಾ
೨೭ ಯಿಸುವದಿಲ್ಲ, ಅಂದನು. ಹೀಗೆಯೇ ಕರ್ತನು ಶಿಲೋಹಿನಲ್ಲಿ
ಏಲಿಯ ಮನೆಯನ್ನು ಕುರಿತು ಹೇಳಿದ ವಾಕ್ಯವು ಈಡೇರುವದ
ಕ್ಕೆ, ಸೊಲೊಮೋನನು ಅಬ್ಯಾತಾರನನ್ನು ಕರ್ತನಿಗೆ ಯಾಜಕ
ನಾಗಿರದ ಹಾಗೆ, ಹೊರದಿಸಿ ಬಿಟ್ಟನು.

೨೮ ಆಗ ಈ ಸುದ್ದಿ ಯೊವಾಬನಿಗೆ ಬಂತು. ಯಾಕಂದರೆ
ಯೊವಾಬನು ಅಬ್ಶಲೋಮನ ಹಿಂದೆ ಹೋಗದೆ ಇದ್ದರೂ, ಅ
ದೋನಿಯನ ಹಿಂದೆ ಹೋದನು. ಆದದರಿಂದ ಯೊವಾಬನು ಕ
ರ್ತನ ಮಂದಿರಕ್ಕೆ ಓಡಿ ಹೋಗಿ, ಬಲಿಪೀಠದ ಕೊಂಬುಗಳನ್ನು
೨೯ ಹಿಡಿದನು. ಮತ್ತು ಯೊವಾಬನು ಕರ್ತನ ಮಂದಿರಕ್ಕೆ ಓಡಿ ಹೋ
ಗಿ, ಇಗೋ, ಬಲಿಪೀಠದ ಬಳಿಯಲ್ಲಿ ಇದ್ದಾನೆಂಬುವ ಮಾತು ಅರ
ಸನಾದ ಸೊಲೊಮೋನನಿಗೆ ತಿಳಿಸಲ್ಪಟ್ಟಿತು. ಆಗ ಸೊಲೊಮೋ
ನನು ಯೆಹೋಯದಾವನ ಮಗನಾದ ಬೆನಾಯನಿಗೆ, ನೀನು
೩೦ ಹೋಗಿ, ಅವನ ಮೇಲೆ ಬೀಳು, ಅಂದನು. ಬೆನಾಯನು ಕರ್ತ
ನ ಮಂದಿರಕ್ಕೆ ಬಂದು, ಅವನಿಗೆ, ಅರಸನು—ನೀನು ಹೊರಗೆ ಬರ
ಬೇಕೆಂದು ಹೇಳುತ್ತಾನೆ, ಅಂದನು. ಅದಕ್ಕವನು, ಇಲ್ಲ; ಇಲ್ಲಿಯೇ
ಸಾಯುತ್ತೇನೆ, ಅಂದನು. ಬೆನಾಯನು ಅರಸನ ಬಳಿಗೆ ಶಿರಿಗಿ
ಹೋಗಿ, ಯೊವಾಬನು ಹೀಗೆ ಹೇಳಿ, ನನಗೆ ಪ್ರತ್ಯುತ್ತರ ಕೊಟ್ಟ
೩೧ ನು, ಅಂದನು. ಅರಸನು ಅವನಿಗೆ, ಅವನು ಹೇಳಿದ ಪ್ರಕಾರ ಮಾ
ಡು; ನನ್ನಿಂದಲೂ ನನ್ನ ತಂದೆಯ ಮನೆಯಿಂದಲೂ ಯೊವಾಬನು
ಚೆಲ್ಲಿದ ತಪ್ಪಿಲ್ಲದ ರಕ್ತವನ್ನು ತೊಲಗಿಸುವ ಹಾಗೆ, ಅವನ ಮೇ
೩೨ ಲೆ ಬಿದ್ದು, ಅವನನ್ನು ಹೂಣಿಡು. ಆಗ ಕರ್ತನು ಅವನ ತಲೆಯ
ಮೇಲೆ ಅವನ ರಕ್ತಾಪರಾಧವನ್ನು ಬರ ಮಾಡುವನು. ಯಾಕಂದರೆ
ನನ್ನ ತಂದೆಯಾದ ದಾವೀದನು ತಿಳಿಯದಿರುವಾಗ, ಅವನು ತನಗಿಂ
ತ ನೀತಿಯುಳ್ಳ ಉತ್ತಮರಾದ ಇಬ್ಬರ ಮೇಲೆ ಬಿದ್ದು, ಅವರನ್ನು
ಕತ್ತಿಯಿಂದ ಕೊಂದನು. ಅವರು ಯಾರಂದರೆ ಇಸ್ರಯೇಲಿನ ಸೈ
ನ್ಯಕ್ಕೆ ಅಧಿಪತಿಯಾಗಿದ್ದ ನೇರನ ಮಗನಾದ ಅಬ್ನೇರನೂ, ಯೆ
ಹೂದನ ಸೈನ್ಯಕ್ಕೆ ಅಧಿಪತಿಯಾಗಿದ್ದ ಯೇತ್ರನ ಮಗನಾದ ಅ
೩೩ ಮಾಸನೂ. ಆದದರಿಂದ ಅವರ ರಕ್ತಾಪರಾಧವು ಯೊವಾಬನು
ತಲೆಯ ಮೇಲೆಯೂ ಅವನ ಬೀಜವಾದವರ ತಲೆಯ ಮೇಲೆಯೂ
ಯುಗ ಯುಗಕ್ಕೂ ಇರುವದು. ಆದರೆ ದಾವೀದನ ಮೇಲೆಯೂ,
ಅವನ ಬೀಜವಾದವರ ಮೇಲೆಯೂ, ಅವನ ಮನೆಯ ಮೇಲೆಯೂ,
ಅವನ ಸಿಂಹಾಸನದ ಮೇಲೆಯೂ ಕರ್ತನಿಂದ ಸಮಾಧಾನವು
೩೪ ಯುಗ ಯುಗಾಂತರಕ್ಕೂ ಇರುವದು, ಅಂದನು. ಹಾಗೆಯೇ
ಯೆಹೋಯದಾವನ ಮಗನಾದ ಬೆನಾಯನು ಹೋಗಿ, ಅವನ
ಮೇಲೆ ಬಿದ್ದು, ಅವನನ್ನು ಕೊಂದು ಹಾಕಿದನು. ಮತ್ತು ಅವನು
ಅರಣ್ಯದಲ್ಲಿರುವ ತನ್ನ ಮನೆಯಲ್ಲಿ ಹೂಣಲ್ಪಟ್ಟನು. ಆಗ ಅ
ರಸನು ಯೆಹೋಯದಾವನ ಮಗನಾದ ಬೆನಾಯನನ್ನು ಯೊ
೩೫ ವಾಬನಿಗೆ ಬದಲಾಗಿ ಸೈನ್ಯದ ಮೇಲೆ ನೇಮಿಸಿದನು. ಇದಲ್ಲದೆ ಅ
ರಸನು ಅಬ್ಯಾತಾರನಿಗೆ ಬದಲಾಗಿ ಯಾಜಕನಾದ ಚದೋಕನನ್ನು
ನೇಮಿಸಿದನು.

೩೬ ಮತ್ತು ಅರಸನು ಶಿಮ್ಮೈಯನ್ನು ಕರೇ ಕಳುಹಿಸಿ, ಅವನಿಗೆ,
ನೀನು ಯೆರೂಸಲೇಮಿನಲ್ಲಿ ನಿನಗೆ ಮನೆಯನ್ನು ಕಟ್ಟಿಸಿ ಕೊಂಡು,
ಅಲ್ಲಿಂದ ಎಲ್ಲಿಗೂ ಹೋಗದೆ, ವಾಸವಾಗಿರು. ಯಾಕಂದರೆ ಯಾ
೩೭ ವ ದಿವಸದಲ್ಲಿ ನೀನು ಹೊರಟು, ಕಿದ್ರೋನೆಂಬ ಹಳ್ಳವನ್ನು ದಾ
ಟುವಿಯೋ, ಆ ದಿವಸದಲ್ಲಿ ಸಾಯಲೇ ಸಾಯುವಿ ಎಂದು ತಿಳಿಯೇ
ತಿಳುಕೋ. ನಿನ್ನ ರಕ್ತವು ನಿನ್ನ ತಲೆಯ ಮೇಲೆ ಇರುವದು, ಅಂ
೩೮ ದನು. ಶಿಮ್ಮೈ ಅರಸನಿಗೆ, ಮಾತು ಒಳ್ಳೇದು; ಅರಸನಾದ ನನ್ನ
ಸ್ವಾಮಿ ಹೇಳಿದ ಪ್ರಕಾರವೇ ನಿನ್ನ ಸೇವಕನು ಮಾಡುವನು, ಅಂ
ದನು. ಮತ್ತು ಶಿಮ್ಮೈ ಯೆರೂಸಲೇಮನಲ್ಲಿ ಬಹಳ ದಿವಸ ವಾಸ
ವಾಗಿದ್ದನು.

೩೯ ಮೂರು ವರುಷಗಳ ಅಂತ್ಯದಲ್ಲಿ ಏನಾಯಿತಂದರೆ, ಶಿಮ್ಮೈಯ
ಸೇವಕರಲ್ಲಿ ಇಬ್ಬರು ಗಾತಿನ ಅರಸನಾದ, ಮಾಕನ ಮಗನಾದ
೪೦ ಅಕೀಷನ ಬಳಿಗೆ ಓಡಿ ಹೋದರು. ಆಗ ಶಿಮ್ಮೈಗೆ, ಇಗೋ, ನಿ
ನ್ನ ಸೇವಕರು ಗಾತಿನಲ್ಲಿದ್ದಾರೆಂದು, ತಿಳಿಸಿದರು. ಆದದರಿಂದ ಶಿಮ್ಮೈ
ಎದ್ದು, ತನ್ನ ಕತ್ತೆಗೆ ತಡಿಯನ್ನು ಹಾಕಿಸಿ, ತನ್ನ ಸೇವಕರನ್ನು
ಹುಡುಕಿ, ಗಾತಿನಲ್ಲಿರುವ ಅಕೀಷನ ಬಳಿಗೆ ಹೋದನು. ಮತ್ತು
ಶಿಮ್ಮೈ ಹೋಗಿ, ಗಾತಿನಿಂದ ತನ್ನ ಸೇವಕರನ್ನು ಕರಕೊಂಡು ಬಂ
೪೧ ದನು. ಮತ್ತು ಶಿಮ್ಮೈ ಯೆರೂಸಲೇಮನ್ನು ಬಿಟ್ಟು, ಗಾತಿಗೆ ಹೋ
೪೨ ಗಿ, ಶಿರಿಗಿ ಬಂದಿದ್ದಾನೆಂದು, ಸೊಲೊಮೋನನಿಗೆ ತಿಳಿಸಲ್ಪಟ್ಟಿತು
ಆಗ ಅರಸನು ಶಿಮ್ಮೈಯನ್ನು ಕರೇ ಕಳುಹಿಸಿ, ಅವನಿಗೆ, ನಿಶ್ಚಯ
ವಾಗಿ ನೀನು ಯಾವ ದಿವಸದಲ್ಲಿ ಹೊರಟು, ಎಲ್ಲಿಗಾದರೂ ಹೋ
ಗುವಿಯೋ, ಅದೇ ದಿವಸ ಸಾಯಲೇ ಸಾಯುವಿ ಎಂದು ತಿಳಿದೇ
ತಿಳುಕೋ, ಎಂಬದಾಗಿ, ನಾನು ನಿನಗೆ ದೃಢವಾಗಿ ಹೇಳಿ, ಕರ್ತ
ನ ಹೆಸರಿನಲ್ಲಿ ನಿನ್ನಿಂದ ಪ್ರಮಾಣ ಮಾಡಿಸಲಿಲ್ಲವೋ! ಮತ್ತು
ನಾನು ಕೇಳಿದ ಮಾತು ಒಳ್ಳೇದೆಂದು, ನೀನು ಹೇಳಿತಿಲ್ಲವೋ!
೪೩ ನೀನು ಕರ್ತನ ಆಣೆಯನ್ನೂ, ನಾನು ನಿನಗೆ ಲಜ್ಜಾಪಿಸಿದ ಲಜ್ಜೆ
ಯನ್ನೂ ನೀನು ಕೈ ಕೊಳ್ಳದೆ ಇದ್ದದ್ದೇನು! ಅಂದನು. ಇದಲ್ಲ
೪೪ ದೆ ಅರಸನು ಶಿಮ್ಮೈಗೆ, ನೀನು ನನ್ನ ತಂದೆಯಾದ ದಾವೀದನಿಗೆ
ಮಾಡಿದ ಕೆಟ್ಟತನವನ್ನೆಲ್ಲಾ ನಿನ್ನ ಹೃದಯ ತಿಳಿಯುತ್ತದೆ. ಕ
ರ್ತನು ನಿನ್ನ ಕೆಟ್ಟತನವನ್ನು ನಿನ್ನ ತಲೆಯ ಮೇಲೆ ಬರ ಮಾ
ಡುವನು. ಆದರೆ ಅರಸನಾದ ಸೊಲೊಮೋನನು ಆಶೀರ್ವದಿಸ
ಲ್ಪಡುವನು; ದಾವೀದನ ಸಿಂಹಾಸನವು ಕರ್ತನ ಮುಂದೆ ಯುಗ



೪೬ ಯುಗಾಂತರಕ್ಕೂ ಸ್ಥಿರವಾಗಿರುವದು, ಅಂದನು. ಆಗ ಅರಸ
ನು ಯೆಹೋಯದಾವನ ಮಗನಾದ ಬೆನಾಯನಿಗೆ ಆಜ್ಞಾಪಿಸಿ
ದ್ದರಿಂದ, ಅವನು ಹೊರಟು ಅವನ ಮೇಲೆ ಬಿದ್ದನು; ಅವನು ಸ
ತ್ತನು. ಹೀಗೆಯೇ ರಾಜ್ಯವು ಸೊಲೊಮೋನನ ಕೈಯಲ್ಲಿ ಸ್ಥಿರ
ಮಾಡಲ್ಪಟ್ಟಿತು.

## 3. ಸಂಧಿ.

೧ ಮತ್ತು ಸೊಲೊಮೋನನು ಐಗುಪ್ತದ ಅರಸನಾದ ಫರೋನ
ನ ಸಂಗಡ ಬಂಧುತ್ವ ಮಾಡಿ, ಫರೋನನ ಮಗಳನ್ನು ತಕ್ಕೊಂ
ಡನು. ಅವನು ತನ್ನ ಮನೆಯನ್ನೂ ಕರ್ತನ ಮನೆಯನ್ನೂ ಯೆ
ರೂಸಲೇಮಿನ ಗೋಡೆಯನ್ನೂ ಸುತ್ತಲು ಕಟ್ಟಿ ಶೀರಿಸುವ ಮಟ್ಟಿ
೨ ಗೂ, ಅವಳನ್ನು ದಾವೀದನ ಪಟ್ಟಣದಲ್ಲಿ ತಂದು ಇಟ್ಟನು. ಆದರೆ
ಆಕಾಲದ ವರಿಗೂ ಕರ್ತನ ಹೆಸರಿಗೆ ಮನೆ ಕಟ್ಟಲ್ಪಟದೆ ಇದ್ದದರಿಂ
3 ದ, ಜನರು ಮೇಡುಗಳ ಮೇಲೆ ಬಲಿ ಅರ್ಪಿಸುತ್ತಿದ್ದರು. ಸೊಲೊ
ಮೋನನು ಕರ್ತನನ್ನು ಪ್ರೀತಿ ಮಾಡಿ, ತನ್ನ ತಂದೆಯಾದ ದಾ
ವೀದನ ಕಟ್ಟಳೆಗಳಲ್ಲಿ ನಡೆಯುತ್ತಾ ಇದ್ದನು. ಆದರೆ ತಾನು
ಮೇಡುಗಳ ಮೇಲೆ ಬಲಿಯನ್ನೂ ಧೂಪವನ್ನೂ ಅರ್ಪಿಸುತ್ತಾ
ಇದ್ದನು.

೪ ಗಿಬ್ಯೋನು ದೊಡ್ಡ ಮೇಡು; ಆದದರಿಂದ ಅರಸನು ಬಲಿಗಳ
ನ್ನರ್ಪಿಸ ಅಲ್ಲಿಗೆ ಹೋಗಿ, ಆ ಬಲಿಪೀಠದ ಮೇಲೆ ಸಾವಿರ ಹೋ
೫ ಮಗಳನ್ನು ಅರ್ಪಿಸಿದನು. ಗಿಬ್ಯೋನಿನಲ್ಲಿರುವಾಗ, ರಾತ್ರಿಯಲ್ಲಿ
ಸ್ವಪ್ನದೊಳಗೆ ಕರ್ತನು ಸೊಲೊಮೋನನಿಗೆ ಕಾಣಿಸಲ್ಪಟ್ಟನು.
ಮತ್ತು ದೇವರು ಅವನಿಗೆ, ನಾನು ನಿನಗೆ ಏನು ಕೊಡ ಬೇಕು!
೬ ಕೇಳಿಕೋ, ಅಂದನು. ಅದಕ್ಕೆ ಸೊಲೊಮೋನನು ಹೇಳಿದ್ದೇನಂ
ದರೆ—ನನ್ನ ತಂದೆಯಾಗಿರುವ ನಿನ್ನ ಸೇವಕನಾದ ದಾವೀದನು ನಿ
ನ್ನ ಮುಂದೆ ಸತ್ಯವಾಗಿಯೂ, ನೀತಿಯಾಗಿಯೂ, ನಿಷ್ಟೆಯಿಂದ
ದ ಹೃದಯವುಳ್ಳವನಾಗಿಯೂ ನಡೆದ್ದರಿಂದ, ನೀನು ಅವನಿಗೆ ಬ
ಹು ಕೃಪೆ ಮಾಡಿ, ಈ ಮಹಾ ಕೃಪೆಯನ್ನು ಅವನಿಗೋಸ್ಕರ
ಕಾದಿಟ್ಟಿದ್ದೀ. ಯಾಕಂದರೆ ಈ ಹೊತ್ತಿರುವ ಹಾಗೆಯೇ ತನ್ನ
ಸಿಂಹಾಸನದ ಮೇಲೆ ಕುಳಿತು ಕೊಳ್ಳ ಮಗನನ್ನು ಕೊಟ್ಟಿದ್ದೀ.
೭ ಈಗ, ನನ್ನ ದೇವರಾದ ಕರ್ತನೇ, ನೀನು ನನ್ನ ತಂದೆಯಾದ
ದಾವೀದನಿಗೆ ಬದಲಾಗಿ ನಿನ್ನ ಸೇವಕನನ್ನು ಅರಸನಾಗ ಮಾಡಿ
ದ್ದೀ. ಆದರೆ ನಾನು ಚಿಕ್ಕ ಬಾಲಕನಾಗಿದ್ದು, ಹೊರಟು ಹೋ
೮ ಗಲೂ ಒಳಗೆ ಬರಲೂ ಅರಿಯದೆ ಇದ್ದೇನೆ. ಇದಲ್ಲದೆ ನಿನ್ನ ಸೇ
ವಕನು ನೀನು ಆದು ಕೊಂಡ ನಿನ್ನ ಮಹಾ ಜನದ ಮಧ್ಯದಲ್ಲಿ
ಇದ್ದಾನೆ. ಆ ಜನ ಬಹಳವಾಗಿರುವದರಿಂದ, ಅವರನ್ನು ಎಣಿಸಲೂ,
೯ ಲೆಖ್ಖ ಬರೆಯಲೂ ಆಗದು. ಆದದರಿಂದ ನಿನ್ನ ಜನರನ್ನು ನ್ಯಾ
ಯ ವಿಚಾರಿಸ, ಒಳ್ಳೇದನ್ನೂ ಕೆಟ್ಟದ್ದನ್ನೂ ತಿಳಿಯುವ ಹಾಗೆ,
ನಿನ್ನ ಸೇವಕನಿಗೆ ತಿಳಿವಳಿಕೆಯುಳ್ಳ ಹೃದಯವನ್ನು ಕೊಡ
ಬೇಕು. ಯಾಕಂದರೆ ಈ ನಿನ್ನ ಬಹು ಗುಂಪಾದ ಜನರನ್ನು
ನ್ಯಾಯ ವಿಚಾರಿಸ ಸಾಮರ್ಥ್ಯವುಳ್ಳವನು ಯಾವನು! ಅಂ
ದನು.

೧೦ ಸೊಲೊಮೋನನು ಕೇಳಿದ ಈ ಕಾರ್ಯವು ಕರ್ತನ ದೃಷ್ಟಿ
೧೧ ಗೆ ಒಳ್ಳೇದಾಗಿತ್ತು. ಆದದರಿಂದ ದೇವರು ಅವನಿಗೆ, ನೀನು ನಿನ
ಗೋಸ್ಕರ ಹೆಚ್ಚಾದ ದಿವಸಗಳನ್ನು ಕೇಳದೆ, ನಿನಗೋಸ್ಕರ ಐಶ್ವ
ರ್ಯ ಕೇಳದೆ, ನಿನ್ನ ಶತ್ರುಗಳ ಪ್ರಾಣವನ್ನು ಕೇಳದೆ, ನ್ಯಾ
ಯವನ್ನು ತಿಳಿಯ ನಿನಗೋಸ್ಕರ ಗ್ರಹಿಕೆಯನ್ನು ಕೇಳಿದ್ದರಿಂದ,
೧೨ ಇಗೋ, ನಾನು ನಿನ್ನ ಮಾತುಗಳ ಪ್ರಕಾರವೇ ಮಾಡಿದೆನು.
ಇಗೋ, ನಿನಗಿಂತ ಮುಂಚೆ ನಿನಗೆ ಸಮಾನವಾದವನು ಇಲ್ಲದ ಹಾ
ಗೆಯೂ, ನಿನ್ನ ತರುವಾಯ ನಿನ್ನಂಥಾವನು ಯಾವನೂ ಏಳ
ದ ಹಾಗೆಯೂ, ಜ್ಞಾನವೂ ಗ್ರಹಿಕೆಯೂ ಉಳ್ಳ ಹೃದಯವ
೧೩ ನ್ನು ಕೊಟ್ಟಿದ್ದೇನೆ. ಮತ್ತು ನೀನು ಕೇಳದ ಐಶ್ವರ್ಯವನ್ನೂ
ಘನವನ್ನೂ ಸಹ ಕೊಟ್ಟಿದ್ದೇನೆ. ಆದದರಿಂದ ನಿನ್ನ ಸಮಸ್ತ ದಿ
ವಸಗಳಲ್ಲಿ ನಿನ್ನ ಹಾಗೆ ಅರಸುಗಳಲ್ಲಿ ಒಬ್ಬನೂ ಇರುವದಿಲ್ಲ.
೧೪ ನೀನು, ನಿನ್ನ ತಂದೆಯಾದ ದಾವೀದನು ನಡೆದ ಪ್ರಕಾರ, ನನ್ನ
ಮಾರ್ಗಗಳಲ್ಲಿ ನಡೆದು, ನನ್ನ ಕಟ್ಟಳೆಗಳನ್ನೂ ನನ್ನ ಆಜ್ಞೆಗಳ
ನ್ನೂ ಕೈ ಕೊಂಡರೆ, ನಿನ್ನ ದಿವಸಗಳನ್ನು ಹೆಚ್ಚಿಸುವೆನು, ಅಂದ
೧೫ ನು. ಆಗ ಸೊಲೊಮೋನನು ಎಚ್ಚತ್ತಾಗ, ಇಗೋ, ಅದು ಸ್ವ
ಪ್ನವು. ಮತ್ತು ಅವನು ಯೆರೂಸಲೇಮಿಗೆ ಬಂದು, ಕರ್ತನ ಒ
ಡಂಬಡಿಕೆಯ ಪೆಟ್ಟಿಗೆಯ ಮುಂದೆ ನಿಂತು, ಹೋಮಗಳನ್ನೂ
ಸಮಾಧಾನದ ಬಲಿಗಳನ್ನೂ ಅರ್ಪಿಸಿ, ತನ್ನ ಸೇವಕರಿಗೆ ಔತ
ಣ ಮಾಡಿಸಿದನು.

೧೬ ಆಗ ಇಬ್ಬರು ಸೂಳೆಯರಾದ ಹೆಂಗಸರು ಅರಸನ ಬಳಿಗೆ
೧೭ ಬಂದು, ಅವನ ಮುಂದೆ ನಿಂತರು. ಅವರಲ್ಲಿ ಒಬ್ಬಳು, ಹೇ ಸ್ವಾ
ಮಿಯೇ, ನಾನೂ ಈ ಹೆಂಗಸೂ ಒಂದೇ ಮನೆಯಲ್ಲಿ ವಾಸವಾಗಿ
೧೮ ದ್ದೇವೆ. ಅವಳ ಸಂಗಡ ಮನೆಯಲ್ಲಿರುವಾಗ, ಮಗುವನ್ನು ಹೆತ್ತೆ
ನು. ಮತ್ತು ಏನಾಯಿತಂದರೆ, ನಾನು ಹೆತ್ತ ಮೂರು ದಿವಸಗಳ
ತರುವಾಯ ಈ ಹೆಂಗಸು ಕೂಡ ಹೆತ್ತಳು. ನಾವು ಇಬ್ಬರೂ
೧೯ ಕೂಡಾ ಇದ್ದೆವು. ಮನೆಯಲ್ಲಿ ನಮ್ಮ ಇಬ್ಬರ ಹೊರ್ತು, ನಮ್ಮ
ಸಂಗಡ ಮತ್ತಾರೂ ಇಲ್ಲ. ಆದರೆ ಅವಳು ಅದರ ಮೇಲೆ ಮಲ
ಗಿದ್ದರಿಂದ, ರಾತ್ರಿಯಲ್ಲಿ ಈ ಹೆಂಗಸಿನ ಮಗುವು ಸತ್ತು ಹೋಯಿ
೨೦ ತು. ಮತ್ತು ಇವಳು ಮಧ್ಯರಾತ್ರಿಯಲ್ಲಿ ಎದ್ದು, ನಿನ್ನ ದಾಸಿ ನಿ
ದ್ರೆಗೈಯುತ್ತಿರುವಾಗ, ನನ್ನ ಹತ್ತರ ಮಲಗಿದ್ದ ನನ್ನ ಮಗನನ್ನು
ತೆಗೆದು ಕೊಂಡು, ಅದನ್ನು ತನ್ನ ಎದೆಯ ಮೇಲೆ ಮಲಗಿಸಿ ಕೊಂ
೨೧ ಡು, ತನ್ನ ಸತ್ತ ಮಗುವನ್ನು ನನ್ನ ಎದೆಯ ಮೇಲೆ ಮಲಗಿಸಿದ
ಳು. ಉದಯದಲ್ಲಿ ನನ್ನ ಕೂಸಿಗೆ ಹೊಲೆ ಕೊಡ ಎದ್ದಾಗ, ಇ
ಗೋ, ಅದು ಸತ್ತಿತ್ತು. ಆದರೆ ಉದಯದಲ್ಲಿ ಅದನ್ನು ಯೋಚಿಸಿ
೨೨ ದಾಗ, ಇಗೋ, ಅದು ನಾನು ಹೆತ್ತ ಮಗುವಲ್ಲ. ಆಗ ಆ ಬೇರೆ
ಹೆಂಗಸು, ಇಲ್ಲ; ಬದುಕಿರುವವನು ನನ್ನ ಮಗನು, ಸತ್ತವನು ನಿನ್ನ
ಮಗನು, ಅಂದಳು. ಆದರೆ ಇವಳು, ಹಾಗಲ್ಲ; ಸತ್ತವನು ನಿನ್ನ
ಮಗನು, ಬದುಕಿರುವವನು ನನ್ನ ಮಗನು, ಅಂದಳು. ಹೀಗೆಯೇ
ಅರಸನ ಮುಂದೆ ಮಾತಾಡಿದರು.

೨೩ ಆಗ ಅರಸನು ಹೇಳಿದ್ದು—ಇವಳು, ಬದುಕಿರುವವನು ನನ್ನ
ಮಗನು, ಸತ್ತವನು ನಿನ್ನ ಮಗನು, ಅನ್ನುತ್ತಾಳೆ. ಅವಳು, ಹಾ
ಗಲ್ಲ; ಸತ್ತವನು ನಿನ್ನ ಮಗನು, ಬದುಕಿರುವವನು ನನ್ನ ಮಗನು,
೨೪ ಅನ್ನುತ್ತಾಳೆ. ಆಗ ಅರಸನು, ಕತ್ತಿಯನ್ನು ನನ್ನ ಬಳಿಗೆ ತಕ್ಕೊಂ
ಡು ಬಾ, ಅಂದನು. ಅವರು ಕತ್ತಿಯನ್ನು ಅರಸನ ಬಳಿಗೆ ತಂದ
೨೫ ರು. ಆಗ ಅರಸನು, ಬದುಕಿರುವ ಕೂಸನ್ನು ಎರಡು ತುಂಡಾಗಿ
ಕತ್ತಿದು, ಇವಳಿಗೆ ಒಂದು ಪಾಲು, ಅವಳಿಗೆ ಒಂದು ಪಾಲು ಕೊ
ಡಿರಿ, ಅಂದನು. ಆಗ ಬದುಕಿರುವ ಕೂಸಿನ ತಾಯಾದವಳ ಕರು

ಳುಗಳು ತನ್ನ ಮಗನಿಗೋಸ್ಕರ ಉಕ್ಕಿದ್ದರಿಂದ, ಅವಳು ಅರಸನಿ
ಗೆ, ಹೇ ಸ್ವಾಮಿಯೇ, ಬದುಕಿರುವ ಕೂಸನ್ನು ಇವಳಿಗೆ ಕೊಡಿ
ರಿ; ಕೊಲ್ಲಲೇ ಬೇಡಿ, ಅಂದಳು. ಅದಕೆ ಮತ್ತೊಬ್ಬಳು, ಅದು ನ
ನ್ನದಾಗಲಿ ನಿನ್ನದಾಗಲಿ ಆಗಿರ ಬಾರದು; ಕಡಿಯಿರಿ, ಅಂದಳು.
೨೭ ಆಗ ಅರಸನು ಪ್ರತ್ಯುತ್ತರವಾಗಿ, ಬದುಕಿರುವ ಕೂಸನ್ನು ಇವಳಿ
ಗೆ ಕೊಡಿರಿ; ಕೊಲ್ಲಲೇ ಬೇಡಿರಿ; ಇವಳೇ ಅದರ ತಾಯಿ, ಅಂ
ದನು.

೨೮ ಅರಸನು ತೀರಿಸಿದ ನ್ಯಾಯವನ್ನು ಕುರಿತು ಸಮಸ್ತ ಇಸ್ರಯೇ
ಲ್ಯರು ಕೇಳಿ, ಅರಸನಿಗೆ ಭಯ ಪಟ್ಟರು; ಯಾಕಂದರೆ ನ್ಯಾಯ
ತೀರಿಸ ಅವನಲ್ಲಿ ದೇವರ ಜ್ಞಾನವಿದೆ ಎಂದು, ನೋಡಿದರು.

## ೪. ಸಂಧಿ.

೧ ೧ ಹೀಗೆಯೇ ಅರಸನಾದ ಸೊಲೊಮೋನನು ಸಮಸ್ತ ಇಸ್ರ
ಯೇಲಿನ ಮೇಲೆ ಅರಸನಾಗಿದ್ದನು. ಅವನಿಗೆ ಇದ್ದ ಪ್ರಧಾನರು
ಯಾರಂದರೆ, ಚದೋಕನ ಮಗನಾದ ಅಜರ್ಯನು ಯಾಜಕ
3 ನು. ಶೀಷನ ಮಕ್ಕಳಾದ ಎಲಿಹೊರೇಫನೂ ಅಹೀಯನೂ ರಾ
೪ ಯಸದವರು; ಅಹೀಲುದನ ಮಗನಾದ ಯೆಹೊಷಫಾಟನು ಸಂ
ಪ್ರತಿಯವನು. ಯೆಹೋಯದಾವನ ಮಗನಾದ ಬೆನಾಯನು
ಸೈನ್ಯದ ಅಧಿಪತಿಯು; ಚದೋಕನೂ ಅಬ್ಯಾತಾರನೂ ಯಾಜಕ
೫ ರು. ನತಾನನ ಮಗನಾದ ಅಜರ್ಯನು ಅಧಿಪತಿಗಳ ಶ್ರೇಷ್ಠನು;
ನತಾನನ ಮಗನಾದ ಜಬೂದನು ಪ್ರಭುವಾಗಿದ್ದು, ಅರಸನ ಸ್ನೇಹಿ
೬ ತವಾಗಿದ್ದನು. ಅಹಿಷಾರನು ಮನೆಯ ವಿಚಾರಣೆ ಕರ್ತನು; ಅ
ಬ್ದನ ಮಗನಾದ ಅದೊನೀರಮನು ಪಾರುಪತ್ಯಗಾರನು.

೭ ಇದಲ್ಲದೆ ಅರಸನಿಗೂ ಅವನ ಮನೆಗೂ ಆಹಾರವನ್ನು ಸಿದ್ಧ
ಮಾಡಿಸುವದಕ್ಕೋಸ್ಕರ, ಸೊಲೊಮೋನನಿಗೆ ಸಮಸ್ತ ಇಸ್ರ
ಯೇಲಿನ ಮೇಲೆ ಹನ್ನೆರಡು ಮಂದಿ ಅಧಿಪತಿಗಳಿದ್ದರು. ಅವನವ
ನು ವರುಷದಲ್ಲಿ ತನ್ನ ವಂತಿನ ತಿಂಗಳು ಬಂದಾಗ, ಆಹಾರವನ್ನು
೮ ಸಿದ್ಧ ಮಾಡಿದನು. ಅವರ ಹೆಸರುಗಳೇನಂದರೆ—ಎಫ್ರಯಿಮಿ
೯ ನ ಬೆಟ್ಟದಲ್ಲಿ, ಹೂರನ ಮಗನು. ಮಕಾಚು, ಷಅಲ್ಬಿಮ್, ಬೇ
೧೦ ತ್ಷೆಮಷ್, ಎಲೊನ್ಬೇಥನಾನು, ಇವುಗಳಲ್ಲಿ ದೆಕ್ರನ ಮಗನು. ಅರೂ
೧೧ ಬೊತಲ್ಲಿ ಹೇಸದನ ಮಗನು; ಅವನಿಗೆ ಸೋಕೋವೂ ಹೆಫೇರಿ
ನ ಸಮಸ್ತ ದೇಶವೂ ಇದ್ದವು. ದೋರಿನ ಸಮಸ್ತ ದೇಶದಲ್ಲಿ ಅ
ಬಿನದಾಬನ ಮಗನು; ಇವನಿಗೆ ಸೊಲೊಮೋನನ ಮಗಳಾದ
೧೨ ಟಾಫತಳು ಹೆಂಡತಿಯಾಗಿದ್ದಳು. ತಾಣಕವು ಮಿಗಿದ್ದೋನು
ಎಂಬವುಗಳಲ್ಲಿ ಅಹೀಲುದನ ಮಗನಾದ ಬಾಣನು; ಅವನಿಗೆ ಚ
ರ್ತಾನ ಬಳಿಯಲ್ಲಿ ಇಜ್ರೇಲಿನ ಕೆಳಗಿರುವ ಸಮಸ್ತ ಬೇತ್ಶಾನು;
ಬೇತ್ಶಾನು ಮೊದಲ್ಗೊಂಡು ಅಬೆಲ್ಮೆಹೋಲವನ್ನು ಹಾದು, ಯೊ
೧೩ ಕ್ಮೆಯಾಮದ ಆಚೇ ವರೆಗೂ ಇತ್ತು. ರಮೋತು ಗಿಲ್ಯಾದಿನಲ್ಲಿ
ಗೇಬ್ರನ ಮಗನು; ಅವನಿಗೆ ಗಿಲ್ಯಾದಿನಲ್ಲಿರುವ ಮನಸ್ಸೆಯ
ಮಗನಾದ ಯಾಯಿರನ ಊರುಗಳೂ, ಮತ್ತು ಬಾಶಾನಿನಲ್ಲಿರು
ವ ಅರ್ಗೋಬು ದೇಶವೂ; ಅದರಲ್ಲಿ ಹಿತ್ತಾಳೆಯ ಅಗುಳಿಗಳೂ
೧೪ ಗೋಡೆಗಳೂ ಉಳ್ಳ ಅರುವತ್ತು ದೊಡ್ಡ ಪಟ್ಟಣಗಳಿದ್ದವು. ಮಹ
೧೫ ನಾಯಿಮಿನಲ್ಲಿ, ಇದೋನ ಮಗನಾದ ಅಹಿನದಾಬನು. ನೆಫ್ತ
ಲಿಯಲ್ಲಿ, ಅಹಿಮಾಚನು; ಅವನಿಗೆ ಸೊಲೊಮೋನನ ಮಗಳಾ
೧೬ ದ ಬಸ್ಮಾತಳು ಹೆಂಡತಿಯಾಗಿದ್ದಳು. ಅಶೇರನಲ್ಲಿಯೂ ಅಳೋ
೧೭ ತಿನಲ್ಲಿಯೂ, ಹುಷಾಯನ ಮಗನಾದ ಬಾಣನು. ಇಸ್ಸಾಕಾರನ
ಲ್ಲಿ, ಪರೂಹನ ಮಗನಾದ ಯೆಹೋಷಫಾಟನು. ಬೆನ್ಯಮಿನಾ
೧೮ ನಲ್ಲಿ, ಏಲನ ಮಗನಾದ ಶಿಮಿಯಾಯಿ. ಗಿಲ್ಯಾದಿನ ದೇಶದಲ್ಲಿಯೂ,
ಅಮೋರ್ಯರ ಅರಸನಾದ ಸೀಹೋನನ ದೇಶದಲ್ಲಿಯೂ, ಬಾ
ಶಾನಿನ ಅರಸನಾದ ಓಗನ ದೇಶದಲ್ಲಿಯೂ, ಊರಿಯ ಮಗನಾ
ದ ಗೇಬ್ರನು. ಅವನೊಬ್ಬನೇ ಆ ದೇಶಕ್ಕೆ ಅಧಿಪತಿಯಾಗಿದ್ದನು.

೧೯ ಯೆಹೂದ ಇಸ್ರಯೇಲ್ಯರು ಉಣ್ಣುತ್ತಾ, ಕುಡಿಯುತ್ತಾ, ಸಂ
ತೋಷ ಪಡುತ್ತಾ, ಸಮುದ್ರದ ಬಳಿಯಲ್ಲಿರುವ ಮರಳಿನ ಹಾಗೆ
೨೦ ಅನೇಕರಾಗಿದ್ದರು. ಇದಲ್ಲದೆ ಸೊಲೊಮೋನನು ನದಿ ಮೊದ
ಲ್ಗೊಂಡು ಫಿಲಿಷ್ಟ್ಯರ ದೇಶವನ್ನು ಹಾದು, ಐಗುಪ್ತದ ಮೇರೆಯ
ವರೆಗೂ ಇರುವ ಸಮಸ್ತ ರಾಜ್ಯಗಳ ಮೇಲೆ ಆಳುತ್ತಿದ್ದನು. ಆ
ರಾಜ್ಯಗಳವರು, ಸೊಲೊಮೋನನು ಜೀವಿಸಿರುವ ದಿವಸಗಳಲ್ಲೆ
ಲ್ಲಾ ಕಾಣಿಕೆಗಳನ್ನು ತಂದು, ಅವನನ್ನು ಸೇವಿಸುತ್ತಾ ಇದ್ದರು.

೨೧ ೨೨ ಸೊಲೊಮೋನನ ಒಂದು ದಿನದ ಭೋಜನ ಏನಂದರೆ, ನಲು
ವಾದ ಹಿಟ್ಟು ಮೂವತ್ತು ಕೋರ್, ಹಿಟ್ಟು ಅರುವತ್ತು ಕೋರ್,
೨೩ ಕೊಬ್ಬಿದ ಎತ್ತುಗಳು ಹತ್ತು, ಮೇಯುವ ಎತ್ತುಗಳು ಇಪ್ಪತ್ತು
ಕುರಿಗಳು ನೂರು, ಇವು ಹೊರ್ತಾಗಿ ದುಪ್ಪಿಗಳೂ, ಜಿಂಕೆಗಳೂ,
ಕೆಂದಜಿಂಕೆಗಳೂ, ಕೊಬ್ಬಿದ ಕೋಳಿಗಳೂ. ಯಾಕಂದರೆ ನದಿ
೨೪ ಯ ಈಚೆಯಲ್ಲಿ ತಿಪ್ಸಹ ಮೊದಲುಗೊಂಡು, ಅಜ್ಜದ ವರೂ
ನದಿಯ ಈಚೆಯಲ್ಲಿರುವ ಸಮಸ್ತ ಅರಸುಗಳ ಮೇಲೆ ಅವನು ಅ
ಧಿಕಾರಿಯಾಗಿದ್ದನು. ಇದಲ್ಲದೆ ತನ್ನ ಸುತ್ತಲಿರುವ ಸಮಸ್ತ ದಿ
೨೫ ಕ್ಕಿನಲ್ಲಿ ತನಗೆ ಸಮಾಧಾನವಾಗಿತ್ತು. ಹೀಗೆಯೇ ದಾನ ಮೊದಲು
ಗೊಂಡು ಬೇರ್ಷೆಬದ ಮಟ್ಟಿಗೂ ಸೊಲೊಮೋನನ ಸಮಸ್ತ ದಿ
ವಸಗಳಲ್ಲಿ ಯೆಹೂದ ಇಸ್ರಯೇಲಿನಲ್ಲಿರುವ ಪ್ರತಿಮನುಷ್ಯನು
ತನ್ನ ದ್ರಾಕ್ಷೇಗಿಡದ ಕೆಳಗೂ, ತನ್ನ ಅಂಜೂರ ಗಿಡದ ಕೆಳಗೂ
೨೬ ಭರವಸವಾಗಿ ವಾಸವಾಗಿದ್ದನು. ಮತ್ತು ಸೊಲೊಮೋನನಿಗೆ ತ
ನ್ನ ರಥಗಳಿಗೋಸ್ಕರ ನಾಲ್ಕು ಸಾವಿರ ಜೋಡು ಕುದುರೆಗ
ಳೂ, ಹನ್ನೆರಡು ಸಾವಿರ ರಾಹುತರೂ ಇದ್ದರು.

೨೭ ಆ ಅಧಿಪತಿಗಳು, ತಮ್ಮ ತಮ್ಮ ತಿಂಗಳ ವಂತಿನ ಪ್ರಕಾರ,
ಅರಸನಾದ ಸೊಲೊಮೋನನಿಗೋಸ್ಕರವೂ, ಅರಸನಾದ ಸೊ
ಲೊಮೋನನ ಮೇಜಿಗೆ ಬರುವವರೆಲ್ಲರಿಗೋಸ್ಕರವೂ ಸಿದ್ಧ ಮಾ
ಡಿದರು; ಅವರಿಗೆ ಕೊರತೆಯಾದದ್ದು ಒಂದೂ ಇಲ್ಲ. ಹೀಗೆಯೇ
೨೮ ಪ್ರತಿ ಮನುಷ್ಯನು ತನ್ನ ವಂತಿನ ಪ್ರಕಾರ ಕುದುರೆಗಳಿಗೋಸ್ಕರ
ವೂ ಕಾಲಾಡಿ ಒಟೆಗಳಿಗೋಸ್ಕರವೂ, ಅವುಗಳ ಸ್ಥಳಕ್ಕೆ ಜವೆ
೨೯ ಗೋಧಿಯನ್ನೂ ಹುಲ್ಲನ್ನೂ ತಂದನು. ಇದಲ್ಲದೆ ದೇವರು ಸೊ
ಲೊಮೋನನಿಗೆ ಅತ್ಯಧಿಕವಾಗಿ ಜ್ಞಾನವನ್ನೂ, ಗ್ರಾಹಿಕೆಯ
ನ್ನೂ, ಸಮುದ್ರ ತೀರದಲ್ಲಿರುವ ಮರಳಿನ ಹಾಗೆಯೇ ಹೃದಯದ
೩೦ ವಿಸ್ತಾರವನ್ನೂ ಕೊಟ್ಟನು. ಸೊಲೊಮೋನನ ಜ್ಞಾನವು ಮೂ
ರ್ಲ ದೇಶದ ಸಮಸ್ತರ ಜ್ಞಾನಕ್ಕಿಂತಲೂ, ಐಗುಪ್ತದ ಸಮಸ್ತರ ಜ್ಞಾ
೩೧ ನಕ್ಕಿಂತಲೂ ಅಧಿಕವಾಗಿತ್ತು. ಎಜ್ರಾಹಿಯಾದ ಏತಾನನು, ಮ
ಹೋಲನ ಮಕ್ಕಳಾದ ಹೆಮಾನನು, ಕಲ್ಕೋಲನು, ದರ್ದಾವನು
ಮೊದಲಾದ ಸಮಸ್ತ ಮನುಷ್ಯರಿಗಿಂತ ಅವನು ಜ್ಞಾನವಂತನಾಗಿ
ದ್ದನು. ಸುತ್ತಲಿರುವ ಸಕಲ ಜನಾಂಗಗಳಲ್ಲಿ ಅವನ ಹೆಸರು ಇತ್ತು.
೩೨ ಅವನು ಮೂರು ಸಾವಿರ ನಾಮಕಿಗಳನ್ನು ಹೇಳಿದನು; ಅವನ
೩೩ ಹಾಡುಗಳು ಸಾವಿರದ ಐದು. ಅವನು ಮರಗಳನ್ನು ಕುರಿತು, ಲೆ



ಬನೋನಿನಲ್ಲಿರುವ ದೇವದಾರು ಮೊದಲು ಗೊಂಡು, ಗೋಡೆಯ
33 ಮೇಲೆ ಬೆಳೆಯುವ ಇಸೊಪಿನ ವರೆಗೂ ಹೇಳಿದನು. ಇದಲ್ಲದೆ
ಮೃಗಗಳನ್ನು ಕುರಿತೂ, ಪಕ್ಷಿಗಳನ್ನು ಕುರಿತೂ, ಕ್ರಿಮಿಗಳನ್ನು
34 ಕುರಿತೂ ಮೀನುಗಳನ್ನು ಕುರಿತೂ ಹೇಳಿದನು. ಮತ್ತು ಸೊಲೊ
ಮೋನನ ಜ್ಞಾನವನ್ನು ಕುರಿತು ಕೇಳಿದ ಭೂಮಿಯ ಮೇಲಿರುವ
ಸಮಸ್ತ ಅರಸುಗಳ ಬಳಿಯಿಂದ, ಎಲ್ಲಾ ಜನಗಳವರು ಅವನ
ಜ್ಞಾನವನ್ನು ಕೇಳ ಬಂದರು.

## ೫. ಸಂಧಿ.

೧ ಆದಕೆ ಸೊಲೊಮೋನನನ್ನು ತನ್ನ ತಂದೆಗೆ ಬದಲಾಗಿ ಅರಸ
ನಾಗ ಅಭಿಷೇಕಿಸಿದ್ದಾರೆಂದು, ಹೋರಿನ ಅರಸನಾದ ಹಿರಾಮ
ನು ಕೇಳಿದಾಗ, ಅವನು ತನ್ನ ಸೇವಕರನ್ನು ಸೊಲೊಮೋನನ
ಬಳಿಗೆ ಕಳುಹಿಸಿದನು. ಯಾಕಂದರೆ ಹಿರಾಮನು ಯಾವಾಗ
೨ ಲೂ ದಾವೀದನಿಗೆ ಸ್ನೇಹಿತನಾಗಿದ್ದನು. ಮತ್ತು ಸೊಲೊಮೋ
ನನು ಹಿರಾಮನ ಬಳಿಗೆ ಸೇವಕರನ್ನು ಕಳುಹಿಸಿ ಹೇಳಿದ್ದೇನಂದ
3 ಕೆ—ನನ್ನ ತಂದೆಯಾದ ದಾವೀದನು ತನ್ನ ದೇವರಾದ ಕರ್ತನ
ನಾಮಕ್ಕೆ ಮನೆಯನ್ನು ಕಟ್ಟಿಸಲಾರದೆ ಇದ್ದನೆಂದು, ನೀನು ಬಲ್ಲಿ.
ಯಾಕಂದರೆ ಕರ್ತನು ಅವನ ಶತ್ರುಗಳನ್ನು ಅವನ ಪಾದದ ಕೆ
ಳಗಿರುವ ಮಟ್ಟಿಗೂ, ಅವನ ಸುತ್ತಲಿರುವ ಸಮಸ್ತ ದಿಕ್ಕುಗಳಲ್ಲಿ
4 ಯುದ್ಧ ಉಂಟಾಗಿತ್ತು. ಆದರೆ ಈಗ ನನ್ನ ದೇವರಾದ ಕರ್ತನು
ಶತ್ರುವಾದರೂ ತಗುಲುವ ಕೇಡು ಒಂದಾದರೂ ಇಲ್ಲದ ಹಾಗೆ,
ಸಮಸ್ತ ದಿಕ್ಕುಗಳಲ್ಲಿ ನನಗೆ ಸಮಾಧಾನವನ್ನು ಕೊಟ್ಟಿದ್ದಾನೆ.
5 ಆದದರಿಂದ, ಇಗೋ, ನನ್ನ ದೇವರಾದ ಕರ್ತನ ಹೆಸರಿಗೆ ಮನೆ
ಯನ್ನು ಕಟ್ಟಿಸ ಬೇಕೆಂದಿದ್ದೇನೆ. ಕರ್ತನು ನನ್ನ ತಂದೆಯಾದ
ದಾವೀದನಿಗೆ, ನಿನಗೆ ಬದಲಾಗಿ ನಿನ್ನ ಸಿಂಹಾಸನದ ಮೇಲೆ ನಾನು
ಇರಿಸುವ ನಿನ್ನ ಮಗನೇ ನನ್ನ ಹೆಸರಿಗೆ ಮನೆಯನ್ನು ಕಟ್ಟಿಸು
6 ವನು ಎಂದು, ಹೇಳಿದ ಪ್ರಕಾರವೇ. ಆದದರಿಂದ ನೀನು ನನಗೋ
ಸ್ಕರ ಲೆಬನೋನಿನಲ್ಲಿ ದೇವದಾರುಗಳನ್ನು ಕಡಿಯ ಆಜ್ಞಾಪಿಸು.
ನನ್ನ ಸೇವಕರೂ ನಿನ್ನ ಸೇವಕರೂ ಕೂಡ ಇರಲಿ. ನೀನು ಹೇ
ಳಿದ ಎಲ್ಲಾದರ ಪ್ರಕಾರ ನಿನ್ನ ಸೇವಕರಿಗೋಸ್ಕರ ಕೂಲಿಯನ್ನು
ಕೊಡುತ್ತೇನೆ. ಯಾಕಂದರೆ ನಮ್ಮಲ್ಲಿ ಚೆದೋನ್ಯರ ಹಾಗೆ ಮ
ರವನ್ನು ಕಡಿಯ ಶಿಲ್ಪದವರಿಲ್ಲವೆಂದು, ನೀನು ಬಲ್ಲಿ.

7 ಹಿರಾಮನು ಸೊಲೊಮೋನನ ಮಾತುಗಳನ್ನು ಕೇಳಿದಾಗ,
ಬಹು ಸಂತೋಷ ಪಟ್ಟು, ಈ ಮಹಾ ಜನರ ಮೇಲಿರ ಜ್ಞಾನವು
8 ಳ್ಳ ಮಗನನ್ನು ದಾವೀದನಿಗೆ ಕೊಟ್ಟ ಕರ್ತನು ಈ ಹೊತ್ತು ಆ
ಜೀವದಿಸಲ್ಪತಲಿ, ಅಂದನು. ಮತ್ತು ಹಿರಾಮನು ಸೊಲೊಮೋ
ನನ ಬಳಿಗೆ ಸೇವಕರನ್ನು ಕಳುಹಿಸಿ, ನೀನು ಹೇಳಿ ಕಳುಹಿಸಿದ್ದ
ನ್ನು ನಾನು ಕೇಳಿದ್ದೇನೆ. ದೇವದಾರು ಮರಗಳ ವಿಷಯವೂ
9 ತುರಾಯಿ ಮರಗಳ ವಿಷಯವೂ ನೀನು ಇಚ್ಛೈಸಿದ್ದನ್ನೆಲ್ಲಾ ನಾನು
ಮಾಡುವೆನು. ನನ್ನ ಸೇವಕರು ಅವುಗಳನ್ನು ಲೆಬನೋನಿನಿಂದ
ಸಮುದ್ರಕ್ಕೆ ತಂದ ಮೇಲೆ, ನೀನು ನನಗೆ ನೇಮಿಸಿದ ಸ್ಥಳಕ್ಕೆ
ತೆಪ್ಪವನ್ನು ಕಟ್ಟಿಸಿ, ಸಮುದ್ರದಿಂದ ಕಳುಹಿಸಿ, ಅಲ್ಲಿ ಬಿಪ್ಪಿಸುವ
ಹಾಗೆ ಮಾಡುವೆನು. ನೀನು ಅವುಗಳನ್ನು ತಕ್ಕೊಂಡು, ನನ್ನ
ಮನೆಯವರಿಗೋಸ್ಕರ ಆಹಾರವನ್ನು ಕೊಟ್ಟು, ನನ್ನ ಇಚ್ಛೆಯ
ನ್ನು ತೀರಿಸುವಿ, ಅಂದನು.

10 ಹೀಗೆಯೇ ಹಿರಾಮನು ದೇವದಾರು ಮರಗಳನ್ನೂ ತುರಾಯಿ
ಮರಗಳನ್ನೂ ಸೊಲೊಮೋನನ ಇಚ್ಛೆಯ ಪ್ರಕಾರವೆಲ್ಲಾ ಕೊ
ಟ್ಟನು. ಸೊಲೊಮೋನನು ಹಿರಾಮನಿಗೆ ಅವನ ಮನೆಯವರ
11 ಆಹಾರಕ್ಕೋಸ್ಕರ ಇಪ್ಪತ್ತು ಸಾವಿರ ಕೋರ್ ಗೋಧಿಯನ್ನೂ
ಇಪ್ಪತ್ತು ಕೋರ್ ಗಾಣವಾಡಿದ ಎಣ್ಣೆಯನ್ನೂ ಕೊಟ್ಟನು.
ಹೀಗೆಯೇ ಸೊಲೊಮೋನನು ಹಿರಾಮನಿಗೆ ಪ್ರತಿ ವರುಷ ಕೊ
12 ಡುತ್ತಾ ಇದ್ದನು. ಇದಲ್ಲದೆ ಕರ್ತನು ಸೊಲೊಮೋನನಿಗೆ ಮಾ
ತು ಕೊಟ್ಟ ಪ್ರಕಾರ ಜ್ಞಾನವನ್ನು ಕೊಟ್ಟನು. ಮತ್ತು ಹಿರಾಮ
ನಿಗೂ ಸೊಲೊಮೋನನಿಗೂ ಸಮಾಧಾನ ಉಂಟಾಗಿತ್ತು.
ಅವರಿಬ್ಬರೂ ಬಡಬಡಿಕೆಯನ್ನು ಮಾಡಿ ಕೊಂಡರು.

13 ಆಗ ಅರಸನಾದ ಸೊಲೊಮೋನನು ಸಮಸ್ತ ಇಸ್ರಯೇಲ್ಯ
ರಿಂದ ಬಿಟ್ಟಿ ಆಳುಗಳನ್ನು ತಕ್ಕೊಂಡನು. ಆ ಬಿಟ್ಟಿ ಆಳುಗಳ
ಲೆಕ್ಕವು ಮೂವತ್ತು ಸಾವಿರ ಜನವಾಗಿತ್ತು. 14 ಅವನು ಅವರನ್ನು
ಲೆಬನೋನಿಗೆ ಕಳುಹಿಸಿದನು. ತಿಂಗಳು ತಿಂಗಳಿಗೂ ವಂತಿನ ಪ್ರ
ಕಾರ, ಹತ್ತು ಸಾವಿರ ಜನರನ್ನು ಕಳುಹಿಸಿದನು. ಅವರು ಒಂದು
ತಿಂಗಳು ಲೆಬನೋನಿನಲ್ಲಿದ್ದು, ಎರಡು ತಿಂಗಳು ತಮ್ಮ ಮನೆಗಳಲ್ಲಿ
ಇದ್ದರು. ಅದೊನೀರಮನು ಬಿಟ್ಟಿ ಆಳುಗಳ ಮೇಲೆ ಯಜಮಾನ
15 ನಾಗಿದ್ದನು. ಇದಲ್ಲದೆ ಸೊಲೊಮೋನನಿಗೆ ಹೊರೆಗಾರರು ಎಪ್ಪ
ತ್ತು ಸಾವಿರವೂ, ಬೆಟ್ಟದಲ್ಲಿ ಕಲ್ಲುಕುಟಿಗರು ಎಂಭತ್ತು ಸಾವಿರ
16 ವೂ ಇದ್ದರು. ಇವರ ಹೊರ್ತಾಗಿ ಸೊಲೊಮೋನನ ಮುಖ್ಯ
ವಾದ ಅಧಿಪತಿಗಳು ಕೆಲಸದ ಮೇಲೆ ಇದ್ದರು. ಕೆಲಸ ಮಾಡುವ
ಜನರ ಮೇಲೆ ಮೂರು ಸಾವಿರದ ಮುನ್ನೂರು ಮಂದಿ ಇದ್ದರು.
17 ಅರಸನು ಆಜ್ಞಾಪಿಸಿದ್ದರಿಂದ, ದೊಡ್ಡ ಕಲ್ಲುಗಳನ್ನೂ, ಪ್ರಿಯವಾದ
ಕಲ್ಲುಗಳನ್ನೂ, ಮನೆಯ ಅಸ್ತಿವಾರವನ್ನು ಹಾಕ ಕಟಿದ ಕಲ್ಲುಗ
18 ಳನ್ನೂ ತಂದರು. ಹೀಗೆಯೇ ಸೊಲೊಮೋನನ ಶಿಲ್ಪಕಾರರೂ,
ಹಿರಾಮನ ಶಿಲ್ಪಕಾರರೂ, ಗಿಬ್ಲಿಯರೂ ಅವುಗಳನ್ನು ಕಡಿದು,
ಮನೆಯನ್ನು ಕಟ್ಟುವದಕ್ಕೆ ಕಲ್ಲುಗಳನ್ನೂ ಮರಗಳನ್ನೂ ಸಿದ್ಧ
ಮಾಡಿದರು.

## ೬. ಸಂಧಿ.

೧ ಮತ್ತು ಏನಾಯಿತಂದರೆ, ಇಸ್ರಯೇಲ ಮಕ್ಕಳು ಐಗುಪ್ತ ದೇ
ಶದಿಂದ ಬಂದ ನಾನೂರ ಎಂಭತ್ತನೇ ವರುಷದಲ್ಲಿ ಇಸ್ರಯೇಲಿನ
ಮೇಲೆ ಸೊಲೊಮೋನನ ಆಳಿಕೆಯ ನಾಲ್ಕನೇ ವರುಷದ ಎರಡ
ನೇ ತಿಂಗಳಾದ ಜಿವ್ ಎಂಬ ತಿಂಗಳಲ್ಲಿ ಅವನು ಕರ್ತನ ಮನೆಯ
ನ್ನು ಕಟ್ಟಿಸ ಪ್ರಾರಂಭಿಸಿದನು.

2 ಅರಸನಾದ ಸೊಲೊಮೋನನು ಕರ್ತನಿಗೋಸ್ಕರ ಕಟ್ಟಿಸಿದ
ಮನೆಯು ಹ್ಯಾಗಂದರೆ, ಅದರ ಉದ್ದ ಅರವತ್ತು ಮೊಳವೂ,
ಅದರ ಅಗಲ ಇಪ್ಪತ್ತು ಮೊಳವೂ ಅದರ ಉನ್ನತ ಮೂವತ್ತು
3 ಮೊಳವೂ. ಮನೆಯ ಮಂದಿರದ ಮುಂದೆ ಮಂಟಪವಿತ್ತು; ಅದು,
ಮನೆಯ ಅಗಲದ ಪ್ರಕಾರ, ಇಪ್ಪತ್ತು ಮೊಳ ಉದ್ದವಾಗಿತ್ತು;
4 ಮನೆಯ ಮುಂದೆ ಇರುವ ಅದರ ಅಗಲವು ಹತ್ತು ಮೊಳವು. ಅ
ವನು ಸಣ್ಣ ಕನ್ನಡಿಗಳುಳ್ಳ ಕಿಟಿಕೆಗಳನ್ನು ಮನೆಗೆ ಮಾಡಿಸಿದ
5 ನು; ಇದಲ್ಲದೆ ಮನೆಯ ಗೋಡೆಗೆ ಶೇರಿದ್ದಾಗಿ ಸುತ್ತಲೂ ಕೊಠ
ಡಿಗಳನ್ನು ಕಟ್ಟಿಸಿದನು. ಮಂದಿರದ ಸುತ್ತಲೂ ವಾಕ್ಯ ಸ್ಥಾನ
ದ ಸುತ್ತಲೂ ಗೋಡೆಗಳಿಗೆ ಸಮೀಪವಾಗಿ ಕೊಠಡಿಗಳನ್ನು ಕ

೬ ಟ್ಟಿಸಿದನು. ಕೆಳಗಿರುವ ಕೊಠಡಿಯು ಐದು ಮೊಳ ಅಗಲ, ಎರ
ಡನೇದು ಆರು ಮೊಳ ಅಗಲ, ಮೂರನೇದು ಏಳು ಮೊಳ ಅಗಲ.
ಯಾಕಂದರೆ ತೊಲೆಗಳು ಮನೆಯ ಗೋಡೆಗಳಲ್ಲಿ ತಗಲದ ಹಾ
ಗೆ, ಮನೆಯ ಸುತ್ತಲೂ ಹೊರಗಡೆಯಲ್ಲಿ ನಿಲ್ಲುವ ಅಂತಸ್ತುಗ
೭ ಳನ್ನು ಕಟ್ಟಿಸಿದನು. ಮನೆಯನ್ನು ಕಟ್ಟುತ್ತಿರುವಾಗ, ಸಿದ್ಧವಾಗಿ
ತರಲ್ಪಟ್ಟ ಕಲ್ಲುಗಳಿಂದ ಕಟ್ಟಲ್ಪಟ್ಟಿತು. ಆದದರಿಂದ ಮನೆಯ
ನ್ನು ಕಟ್ಟುತ್ತಿರುವಾಗ, ಅದರಲ್ಲಿ ಸುತ್ತಿಗೆ, ಕೊಡ್ಲಿ, ಕಬ್ಬಿಣದ
೮ ಯಾವ ಜಾತಿಮುಟ್ಟಿನ ಸಬ್ದ ಕೇಳಲ್ಪಟ್ಟದ್ದಿಲ್ಲ. ಮಧ್ಯ ಕೊಠ
ಡಿಯ ಬಾಗಲು ಮನೆಯ ಬಲ ಭಾಗದಲ್ಲಿ ಇತ್ತು; ಸುತ್ತಲಾಗು
ವ ಮೆಟ್ಟುಗಳಿಂದ ಮಧ್ಯ ಕೊಠಡಿಗೂ ಮಧ್ಯ ಕೊಠಡಿಯಿಂದ
೯ ಮೂರನೇ ಕೊಠಡಿಗೂ ಹತ್ತಿದರು. ಹೀಗೆಯೇ ಅವನು ಮನೆ
ಯನ್ನು ಕಟ್ಟಿ ತೀರಿಸಿದ ತರುವಾಯ, ಮನೆಯನ್ನು ದೇವದಾರು
೧೦ ಗಳ ತೊಲೆಗಳಿಂದಲೂ ಹಲಿಗೆಗಳಿಂದಲೂ ಮುಚ್ಚಿಸಿದನು. ಮ
ತ್ತು ಅವನು ಐದು ಮೊಳ ಎತ್ತರವಾದ ಕೊಠಡಿಗಳನ್ನು ಮನೆ
ಯ ಬಳಿಯಲ್ಲಿ ಸುತ್ತಲು ಕಟ್ಟಿಸಿದನು; ಅವು ಮನೆಯ ಮೇಲೆ
ಇರಿಸಿದ ದೇವದಾರು ತೊಲೆಗಳ ಮೇಲೆ ನಿಂತಿದ್ದವು.

೧೧ ಆಗ ಕರ್ತನ ವಾಕ್ಯವು ಸೊಲೊಮೋನನಿಗೆ ಉಂಟಾಗಿ ಹೇ
೧೨ ಳಿದ್ದೇನಂದರೆ—ನೀನು ಕಟ್ಟಿಸುವ ಈ ಮನೆಯನ್ನು ಕುರಿತು ಏ
ನಂದರೆ, ನೀನು ನನ್ನ ಕಟ್ಟಳೆಗಳಲ್ಲಿ ನಡೆದು, ನನ್ನ ನ್ಯಾಯಗಳ
ಪ್ರಕಾರ ಮಾಡಿ, ನನ್ನ ಸಕಲ ಆಜ್ಞೆಗಳಲ್ಲಿ ನಡೆದು ಕೊಳ್ಳುವ
ಹಾಗೆ, ಅವುಗಳನ್ನು ಕೈ ಕೊಂಡರೆ, ನಾನು ನಿನ್ನ ತಂದೆಯಾದ
೧೩ ದಾವೀದನಿಗೆ ಹೇಳಿದ ನನ್ನ ವಾಕ್ಯವನ್ನು ನಿನಗೆ ಸ್ಥಿರ ಮಾಡಿ, ನ
ನ್ನ ಜನವಾದ ಇಸ್ರಯೇಲನ್ನು ಕೈ ಬಿಡದೆ, ಇಸ್ರಯೇಲ ಮಕ್ಕಳ
೧೪ ಮಧ್ಯದಲ್ಲಿ ವಾಸವಾಗಿರುವೆನು, ಅಂದನು. ಮತ್ತು ಸೊಲೊ
ಮೋನನು ಮನೆಯನ್ನು ಕಟ್ಟಿಸಿ, ತೀರಿಸಿದನು.

೧೫ ಮತ್ತು ಮನೆಯ ಗೋಡೆಗಳ ಒಳ ಭಾಗಕ್ಕೆ ಮಂದಿರದ ನೆಲ
ಮೊದಲು ಗೊಂಡು ಗೋಡೆಗಳ ಮೇಲೆ ಮಾಳಿಗೆಯ ವರಿಗೂ ದೇ
ವದಾರು ಹಲಿಗೆಗಳಿಂದ ಕಟ್ಟಿಸಿದನು; ಒಳ ಭಾಗದಲ್ಲಿ ಮರದಿಂದ
ಮುಚ್ಚಿ, ಮನೆಯ ನೆಲಕ್ಕೆ ತುರಾಯಿ ಮರಗಳ ಹಲಿಗೆಗಳಿಂದ
೧೬ ಮುಚ್ಚಿದನು. ಅವನು ಮನೆಯ ಪಾರ್ಶ್ವಗಳಲ್ಲಿ ಇಪ್ಪತ್ತು ಮೊಳ
ನೆಲವನ್ನೂ ಗೋಡೆಗಳನ್ನೂ ದೇವದಾರುಗಳ ಹಲಿಗೆಗಳಿಂದ ಕ
೧೭ ಟ್ಟಿಸಿದನು. ಅವುಗಳನ್ನು ಒಳ ಭಾಗದಲ್ಲಿ ಮಹಾ ಪರಿಶುದ್ಧವಾದ
ವಾಕ್ಯಸ್ಥಾನವಾಗಿ ಕಟ್ಟಿಸಿದನು. ಅದರ ಮುಂದಿರುವ ಮಂದಿರವಾ
೧೮ ಗಿರುವ ಮನೆಯು ನಾಲ್ವತ್ತು ಮೊಳ ಉದ್ದವಾಗಿತ್ತು. ಮಂದಿರದ
ಒಳಗಿರುವ ದೇವದಾರು ಮೊಗ್ಗುಗಳೂ ವಿಕಸಿಸಿದ ಪುಷ್ಪಗಳೂ
ಅದ ಕೆತ್ತಿದ ಕೆಲಸವಾಗಿತ್ತು. ಒಂದು ಕಲ್ಲಾದರೂ ಕಾಣಿಸದ ಹಾ
೧೯ ಗೆ ಎಲ್ಲಾ ದೇವದಾರು ಮರವಾಗಿತ್ತು. ಕರ್ತನ ಬಹುಬಡಿಕೆಯ
ಪೆಟ್ಟಿಗೆಯನ್ನು ಅಲ್ಲಿ ಇರಿಸುವದಕ್ಕೆ ಮನೆಯೊಳಗೆ ವಾಕ್ಯಸ್ಥಾ
೨೦ ನವನ್ನು ಸಿದ್ಧ ಮಾಡಿಸಿದನು. ವಾಕ್ಯಸ್ಥಾನದ ಮುಂಭಾಗದ ಪ್ರ
ಮಾಣವು ಇಪ್ಪತ್ತು ಮೊಳ ಉದ್ದವೂ, ಇಪ್ಪತ್ತು ಮೊಳ ಅಗಲ
ವೂ, ಇಪ್ಪತ್ತು ಮೊಳ ಎತ್ತರವೂ ಆಗಿತ್ತು. ಅದನ್ನು ಚಿನ್ನದ ತ
ಗಡುಗಳಿಂದ ಹೊದಗಿಸಿದನು. ದೇವದಾರು ಮರದ ಬೀಶವನ್ನು
೨೧ ಹಾಗೆಯೇ ಹೊದಗಿಸಿದನು. ಸೊಲೊಮೋನನು ಮನೆಯ ಒಳ
ಭಾಗವನ್ನು ಚಿನ್ನದ ತಗಡುಗಳಿಂದ ಹೊದಗಿಸಿ, ವಾಕ್ಯಸ್ಥಾನದ
ಮುಂದೆ ಚಿನ್ನದ ಸರಪಣಿಗಳಿಂದ ಅಡ್ಡವನ್ನು ಮಾಡಿ, ಅದನ್ನು
೨೨ ಚಿನ್ನದಿಂದ ಹೊದಗಿಸಿದನು. ಮತ್ತು ಮನೆಯೆಲ್ಲಾ ಮುಗಿಯು
ವ ಮಟ್ಟಿಗೂ, ಅವನು ಮನೆಯನ್ನೆಲ್ಲಾ ಚಿನ್ನದಿಂದ ಹೊದಗಿಸಿ,
ವಾಕ್ಯಸ್ಥಾನದ ಮುಂಭಾಗದಲ್ಲಿರುವ ಬೀಶವನ್ನೆಲ್ಲಾ ಚಿನ್ನದಿಂದ
ಹೊದಗಿಸಿದನು.

೨೩ ಅವನು ವಾಕ್ಯಸ್ಥಾನದಲ್ಲಿ ಇಪ್ಪೇ ಮರಗಳಿಂದ ಎರಡು ಕೆರೂ
ಬಿಗಳನ್ನು ಮಾಡಿದನು. ಒಂದೊಂದು ಹತ್ತು ಮೊಳ ಉನ್ನತ
ವಾಗಿತ್ತು. ಕೆರೂಬಿಗೆ ಇರುವ ಒಂದೊಂದು ಕೆಕ್ಕೆ ಐದು ಮೊಳ
೨೪ ವೂ ಕೆರೂಬಿಯ ಮತ್ತೊಂದು ಕೆಕ್ಕೆ ಐದು ಮೊಳವಾಗಿತ್ತು; ಒಂ
ದು ಕೆಕ್ಕೆಯ ಕೊನೆ ಮೊದಲುಗೊಂಡು, ಮತ್ತೊಂದು ಕೆಕ್ಕೆಯ
೨೫ ಕೊನೆಯ ವರಿಗೂ ಹತ್ತು ಮೊಳವಾಗಿತ್ತು. ಎರಡನೇ ಕೆರೂಬಿ
೨೬ ಯು ಹತ್ತು ಮೊಳವಾಗಿತ್ತು. ಎರಡು ಕೆರೂಬಿಗಳಿಗೆ ಒಂದೇ
೨೭ ಅಳತೆಯೂ ಒಂದೇ ಪ್ರಮಾಣವೂ ಇತ್ತು. ಒಂದು ಕೆರೂಬಿಯು
ಹತ್ತು ಮೊಳ ಉನ್ನತವಾಗಿತ್ತು; ಎರಡನೇ ಕೆರೂಬಿಯು ಅದರ
ಹಾಗೆಯೇ ಇತ್ತು. ಆ ಕೆರೂಬಿಗಳನ್ನು ಒಳಮನೆಯೊಳಗೆ
ಇಟ್ಟನು. ಕೆರೂಬಿಗಳು ಕೆಕ್ಕೆಗಳನ್ನು ಚಾಚಿ ಇರುವದರಿಂದ,
ಒಂದರ ಕೆಕ್ಕೆ ಈ ಭಾಗದ ಗೋಡೆಯನ್ನೂ, ಮತ್ತೊಂದು ಕೆರೂ
೨೮ ಬಿಯ ಕೆಕ್ಕೆ ಆ ಭಾಗದ ಗೋಡೆಯನ್ನೂ ಮುಟ್ಟಿತು; ಮನೆಯ
ಮಧ್ಯದಲ್ಲಿ ಒಂದರ ಕೆಕ್ಕೆ ಮತ್ತೊಂದರ ಕೆಕ್ಕೆಯನ್ನು ಮುಟ್ಟಿ
ತು. ಆ ಕೆರೂಬಿಗಳನ್ನು ಚಿನ್ನದ ತಗಡುಗಳಿಂದ ಹೊದಗಿಸಿ
ದನು.

೨೯ ಮನೆಯ ಗೋಡೆಗಳನ್ನೆಲ್ಲಾ ಅವನು ಸುತ್ತಲೂ ಒಳ ಹೊರ
ಭಾಗಗಳಲ್ಲಿ ಕೆರೂಬಿಗಳೂ, ಖರ್ಜೂರ ಗಿಡಗಳೂ, ವಿಕಸಿಸಿದ
ಪುಷ್ಪಗಳೂ ಅದ ಕೆತ್ತಿದ ಕೆಲಸದಿಂದ ವಿಚಿತ್ರ ಕೆಲಸವನ್ನು ಮಾ
೩೦ ಡಿಸಿದನು. ಮನೆಯ ಒಳ ಹೊರ ಭಾಗವಾಗಿರುವ ನೆಲವನ್ನು ಚಿ
ನ್ನದಿಂದ ಹೊದಗಿಸಿದನು.

೩೧ ಅವನು ವಾಕ್ಯಸ್ಥಾನದ ಬಾಗಲಿಗೆ ಇಪ್ಪೇ ಮರಗಳಿಂದ ಜೋ
ರು ಕದಗಳನ್ನು ಮಾಡಿಸಿದನು. ದ್ವಾರಬಂಧವೂ ನಿಲುವುಗಳೂ
೩೨ ಐದರಲ್ಲಿ ಒಂದು ಭಾಗವಾಗಿದ್ದವು. ಇಪ್ಪೇ ಮರವಾದ ಆ ಜೋ
ರು ಕದಗಳ ಮೇಲೆ ಅವನು ಕೆರೂಬಿಗಳೂ ಖರ್ಜೂರ ಗಿಡಗಳೂ
ವಿಕಸಿಸಿದ ಪುಷ್ಪಗಳೂ ಅದ ಚಿತ್ರಗಳನ್ನು ಮಾಡಿಸಿ, ಚಿನ್ನದಿಂ
ದ ಹೊದಗಿಸಿದನು. ಆ ಕೆರೂಬಿಗಳನ್ನೂ ಖರ್ಜೂರ ಗಿಡಗಳ
೩೩ ನ್ನೂ ಚಿನ್ನದಿಂದ ಹೊದಗಿಸಿದನು. ಇದಲ್ಲದೆ ಮಂದಿರದ ಬಾಗಲಿ
ಗೂ ಇಪ್ಪೇ ಮರದ ನಿಲುವುಗಳನ್ನು ಮಾಡಿಸಿದನು. ಅದು ನಾ
೩೪ ಲ್ಕರಲ್ಲಿ ಒಂದು ಭಾಗವಾಗಿತ್ತು. ಅದರ ಎರಡು ಕದಗಳು ತುರಾ
ಯಿ ಮರದ ಹಲಿಗೆಗಳಾಗಿದ್ದವು. ಒಂದು ಕದಕ್ಕೆ ಎರಡು ಮಡಿ
ಪು ಹಲಿಗೆಗಳಾಗಿಯೂ ಮತ್ತೊಂದು ಕದಕ್ಕೆ ಎರಡು ಮಡಿಪು
೩೫ ಹಲಿಗೆಗಳಾಗಿಯೂ ಇತ್ತು. ಅದರ ಮೇಲೆ ಕೆರೂಬಿಗಳೂ, ಖ
ರ್ಜೂರ ಗಿಡಗಳೂ, ವಿಕಸಿಸಿದ ಪುಷ್ಪಗಳೂ ಅದ ಕೆತ್ತಿದ ಕೆಲಸ
ವನ್ನು ಮಾಡಿಸಿ, ಕೆತ್ತಿದ ಕೆಲಸಕ್ಕೆ ಸರಿಯಾಗಿ ಚಿನ್ನದ ತಗಡಿ
೩೬ ನಿಂದ ಅವುಗಳನ್ನು ಹೊದಗಿಸಿದನು. ಅವನು ಒಳಗಿನ ಅಂಗಳವ
ನ್ನು ಕಟಿದ ಕಲ್ಲುಗಳಿಂದ ಮೂರು ವರಿಕೆಯಾಗಿಯೂ, ದೇವದಾ
ರು ಮರದ ಸ್ತಂಭಗಳಿಂದ ಒಂದು ವರಿಕೆಯಾಗಿಯೂ ಕಟ್ಟಿಸಿ
೩೭ ದನು.

ನಾಲ್ಕನೇ ವರುಷದ ಜಿವ್ ತಿಂಗಳಲ್ಲಿ ಕರ್ತನ ಮನೆಯ ಅಸ್ತಿ
೩೮ ವಾರವು ಹಾಕಲ್ಪಟ್ಟಿತು. ಹನ್ನೊಂದನೇ ವರುಷದ ಎಂಟನೇ ತಿಂ



ಗಳಾದ ಬುಲ್ ತಿಂಗಳಲ್ಲಿ ಆ ಮನೆಯು ಅದರ ಎಲ್ಲಾ ಭಾಗಗಳಲ್ಲಿ
ಯೂ ಅದರ ಎಲ್ಲಾ ನ್ಯಾಯದ ಪ್ರಕಾರ ಕಟ್ಟಿ ತೀರಿಸಲ್ಪಟ್ಟಿತು.
ಹೀಗೆ ಅವನು ಏಳು ವರುಷಗಳಲ್ಲಿ ಅದನ್ನು ಕಟ್ಟಿಸಿದನು.

## ೭. ಸಂಧಿ.

೧ ಆದರೆ ಸೊಲೊಮೋನನು ತನ್ನ ಮನೆಯನ್ನು ಹದಿಮೂರು
ವರುಷಗಳಲ್ಲಿ ಕಟ್ಟಿಸಿದನು; ಆಗ ತನ್ನ ಮನೆಯನ್ನೆಲ್ಲಾ ಮುಗಿ
ಸಿದನು.

೨ ಇದಲ್ಲದೆ ಅವನು ಲೆಬನೋನಿನ ಆಡವಿಯ ಮನೆಯನ್ನು ಕ
ಟ್ಟಿಸಿದನು. ನೂರು ಮೊಳ ಉದ್ದವೂ, ಐವತ್ತು ಮೊಳ ಅಗಲ
ವೂ, ಮೂವತ್ತು ಮೊಳ ಎತ್ತರವೂ ಆಗಿತ್ತು. ನಾಲ್ಕು ಸಾಲು
ದೇವದಾರು ಕಂಭಗಳ ಮೇಲೆ ಇತ್ತು; ದೇವದಾರು ತೊಲೆಗಳು
೩ ಕಂಭಗಳ ಮೇಲೆ ಇದ್ದವು. ಒಂದೊಂದು ಸಾಲು ಹದಿನೈದು ಕಂ
ಭಗಳಾಗಿ, ನಾಲ್ವತ್ತೈದು ಕಂಭಗಳ ಮೇಲೆ ಇರುವ ತೊಲೆಗಳು
೪ ದೇವದಾರುಗಳಿಂದ ಮುಚ್ಚಲ್ಪಟ್ಟಿತು. ಮೂರು ಸಾಲು ಕಿಟಿಕಿಗ
ಳು ಇದ್ದವು; ಮೂರು ಸಾಲುಗಳಲ್ಲಿ ಬೆಳಕಿಗೆ ಬೆಳಕು ಎದುರಾಗಿ
೫ ತ್ತು. ಕಿಟಿಕಿಗಳಲ್ಲಿ ಬಾಗಲುಗಳೂ ನಿಲುವುಗಳೂ ಎಲ್ಲಾ ಜೊಕ
೬ ಳು; ಮೂರು ಸಾಲುಗಳಲ್ಲಿ ಬೆಳಕಿಗೆ ಬೆಳಕು ಎದುರಾಗಿತ್ತು. ಐವ
ತ್ತು ಮೊಳ ಉದ್ದವೂ ಮೂವತ್ತು ಮೊಳ ಅಗಲವೂ ಆದ ಮಂ
ಟಪವನ್ನು ಸ್ತಂಭಗಳಿಂದ ಮಾಡಿದನು. ಈ ಮಂಟಪವೂ, ಅದರ
ಸ್ತಂಭಗಳೂ, ತೊಲೆಗಳೂ ಮನೆಯ ಸ್ತಂಭಗಳಿಗೂ ತೊಲೆಗಳಿ
೭ ಗೂ ಎದುರಾಗಿದ್ದವು. ಮತ್ತು ಅಲ್ಲಿ ನ್ಯಾಯ ತೀರಿಸ, ನ್ಯಾ
ಯಾಸನದ ಮಂಟಪವೆಂಬ ಮಂಟಪವನ್ನು ಮಾಡಿ, ಈ ಪಾರ್ಶ್ವ
ದಿಂದ ಆ ಪಾರ್ಶ್ವದ ಮಟ್ಟಿಗೂ ದೇವದಾರುಗಳನ್ನು ಹಾಸಿದನು.
೮ ಮತ್ತು ತಾನು ವಾಸವಾಗಿರುವ ತನ್ನ ಮನೆಯಲ್ಲಿ ಮಂಟಪಕ್ಕೆ
ಒಳ ಭಾಗದಲ್ಲಿ ಈ ಕೆಲಸದ ಹಾಗೆ ಮಾಡಲ್ಪಟ್ಟ ಬೇರೆ ಒಂದು
ಅಂಗಳ ಇತ್ತು. ಇದಲ್ಲದೆ ಸೊಲೊಮೋನನು ತಾನು ತಕ್ಕೊಂಡ
ಫರೋನನ ಮಗಳಿಗೂ ಈ ಮಂಟಪದ ಹಾಗೆ ಒಂದು ಮನೆ
ಯನ್ನು ಮಾಡಿದನು.

೯ ಇವೆಲ್ಲಾ ಒಳಗೂ, ಹೊರಗೂ, ಅಸ್ತಿವಾರಗಳು ಮೊದಲು
ಗೊಂಡು, ಕಟ್ಟೋದದ ವರಿಗೂ, ಹೊರಗಿರುವ ದೊಡ್ಡ ಅಂಗಳದ
ಮಟ್ಟಿಗೂ, ಅಳತೆಯ ಪ್ರಕಾರ ಗರಗಸದಿಂದ ಕೊಯ್ಯಲ್ಪಟ್ಟ ಕಟ
೧೦ ದ ಬೆಲೆಯಾದ ಕಲ್ಲುಗಳಾಗಿದ್ದವು. ಅಸ್ತಿವಾರವು ಹತ್ತು ಮೊಳದ
ಕಲ್ಲುಗಳೂ ಎಂಟು ಮೊಳದ ಕಲ್ಲುಗಳೂ ಆದ ಬೆಲೆಯುಳ್ಳ ಕ
೧೧ ಲ್ಲುಗಳಾಗಿಯೂ ದೊಡ್ಡ ಕಲ್ಲುಗಳಾಗಿಯೂ ಇತ್ತು. ಅದರ
ಮೇಲೆ ಕಟಿದ ಕಲ್ಲುಗಳ ಅಳತೆಯ ಪ್ರಕಾರ ಬೆಲೆಯುಳ್ಳ ಕಲ್ಲುಗ
೧೨ ಳೂ ದೇವದಾರುಗಳೂ ಇದ್ದವು. ದೊಡ್ಡ ಅಂಗಳವು ಸುತ್ತಲಾಗಿ
ಮೂರು ತರ ಕಟಿದ ಕಲ್ಲುಗಳೂ, ಒಂದು ತರ ದೇವದಾರು ಮರ
ದ ತೊಲೆಗಳೂ ಉಂಟಾಗಿತ್ತು; ಕರ್ತನ ಮನೆಯ ಒಳ ಅಂಗಳ
ಕ್ಕೂ ಮನೆಯ ಮಂಟಪಕ್ಕೂ ಹಾಗೆಯೇ.

೧೩ ಆದರೆ ಅರಸನಾದ ಸೊಲೊಮೋನನು ಹಿರಾಮನನ್ನು ಜೋ
೧೪ ರಿನಿಂದ ಕರೇ ಕಳುಹಿಸಿದನು. ಇವನು ನೆಫ್ತಲಿಯ ಕುಲದವನಾದ
ಒಬ್ಬ ವಿಧವೆಯ ಮಗನು; ಅವನ ತಂದೆ ಜೋರಿನ ಮನುಷ್ಯ
ನಾದ ತಾಂಬ್ರ ಕೆಲಸದವನಾಗಿದ್ದನು; ಅವನು ಎಲ್ಲಾ ತಾಂಬ್ರ ಕೆಲ
ಸವನ್ನು ಮಾಡ ತಕ್ಕ ಜ್ಞಾನದಿಂದಲೂ, ಗ್ರಹಿಕೆಯಿಂದಲೂ, ತಿಳು
ವಳಿಕೆಯಿಂದಲೂ ಪೂರ್ಣನಾಗಿದ್ದನು. ಅವನು ಅರಸನಾದ
ಸೊಲೊಮೋನನ ಬಳಿಗೆ ಬಂದು, ಅವನ ಕೆಲಸವನ್ನೆಲ್ಲಾ ಮಾಡಿ
ದನು.

೧೫ ಅವನು ಎರಡು ತಾಂಬ್ರದ ಸ್ತಂಭಗಳನ್ನು ಮಾಡಿದನು. ಒಂ
ದೊಂದು ಸ್ತಂಭ ಹದಿನೆಂಟು ಮೊಳ ಉದ್ದ; ಒಂದೊಂದು ಸ್ತಂಭದ
೧೬ ಸುತ್ತಳತೆ ಹನ್ನೆರಡು ಮೊಳ ನೂಲಳತೆ. ಆ ಸ್ತಂಭಗಳ ತಲೆಯ
ಮೇಲೆ ಇರಿಸ, ತಾಂಬ್ರದಿಂದ ಎರಡ ಹೊಯ್ಯಲ್ಪಟ್ಟ ಎರಡು ಕುಂಭಗಳ
೧೭ ನ್ನು ಮಾಡಿದನು. ಒಂದೊಂದು ಕುಂಭವು ಐದು ಮೊಳ ಎತ್ತರ
ವಾಗಿತ್ತು. ಸ್ತಂಭಗಳ ಕೊನೆಯ ಮೇಲೆ ಇರುವ ಕುಂಭಗಳಿಗೆ
ಜಾಲರಿನ ಹಾಗೆ ಇರುವ ಹೆಣಿಕೆಗಳೂ, ಸರಪಣಿಗಳ ಹಾಗಿರುವ
ಸೊಂಪೆಗಳೂ ಇದ್ದವು. ಒಂದೊಂದು ಕುಂಭಕ್ಕೆ ಏಳು ಇದ್ದವು.
೧೮ ಸ್ತಂಭಗಳಿಗೆ ಇನ್ನೂ ಮಾಡಿದ್ದು ಹ್ಯಾಗಂದರೆ, ಕೊನೆಯಲ್ಲಿರು
ವ ಕುಂಭಗಳನ್ನು ಮುಚ್ಚುವ ಹಾಗೆ, ಕುಂಭಗಳೊಳಗೆ ಒಂದೊಂ
ದರಲ್ಲಿ ಜಾಲರು ಕೆಲಸದ ಮೇಲೆ ಸುತ್ತಲೂ ಎರಡು ಸಾಲು ದಾಳಿಂ
೧೯ ಬರ ಹಣ್ಣುಗಳನ್ನು ಮಾಡಿದನು. ಮಂಟಪದ ಮುಂದಿರುವ ಆ
ಸ್ತಂಭಗಳ ಕೊನೆಯ ಮೇಲಿರುವ ಕುಂಭಗಳು ತಾವರೆ ಪುಷ್ಪಗಳ
೨೦ ಕೆಲಸವಾಗಿ, ನಾಲ್ಕು ಮೊಳ ಎತ್ತರವಾಗಿದ್ದವು. ಎರಡು ಸ್ತಂಭಗಳ
ಮೇಲಿರುವ ಕುಂಭಗಳಲ್ಲಿ ಉನ್ನತ ಜಾಲರು ಕೆಲಸದ ಸಮೀಪದ
ಲ್ಲಿರುವ ಅದರ ಹೊಟ್ಟೆಯ ಬಳಿಯಲ್ಲಿ ಇನ್ನೂರು ದಾಳಿಂಬಗಳ
ಸಾಲುಗಳಾಗಿ ಸುತ್ತಲೂ ಇದ್ದವು; ಮತ್ತೊಂದು ಕುಂಭಕ್ಕೂ ಹೀ
೨೧ ಗೆಯೇ ಇತ್ತು. ಆ ಸ್ತಂಭಗಳನ್ನು ಮಂದಿರದ ಮಂಟಪದ ಮುಂ
ದೆ ನಿಲ್ಲಿಸಿದನು. ಅವನು ಬಲಗಡೆಯಲ್ಲಿ ನಿಲ್ಲಿಸಿದ ಸ್ತಂಭಕ್ಕೆ ಯಕೀನ್
ಎಂದೂ, ಎಡಗಡೆಯಲ್ಲಿ ನಿಲ್ಲಿಸಿದ ಸ್ತಂಭಕ್ಕೆ ಬೋವಜ್
೨೨ ಎಂದೂ ಹೆಸರಿಟ್ಟನು. ಸ್ತಂಭಗಳ ತಲೆಯಲ್ಲಿ ತಾವರೆ ಪುಷ್ಪಗಳ
ಕೆಲಸವಾಗಿತ್ತು. ಹೀಗೆ ಸ್ತಂಭಗಳ ಕೆಲಸವು ಮುಗಿಯಿತು.

೨೩ ಇದಲ್ಲದೆ ಎರಡ ಸಮುದ್ರವನ್ನು ಮಾಡಿದನು. ಅದು ಬಟವಾ
ಗಿ ಈ ಅಂಚಿನಿಂದ ಆ ಅಂಚಿಗೆ ಹತ್ತು ಮೊಳವೂ, ಅದರ ಎತ್ತ
ರ ಐದು ಮೊಳವೂ, ಸುತ್ತಳತೆ ಮೂವತ್ತು ಮೊಳ ನೂಲಳತೆ
ಯೂ ಆಗಿತ್ತು. ಅದರ ಅಂಚಿನ ಕೆಳ ಭಾಗದಲ್ಲಿ ಅದರ ಸುತ್ತ
೨೪ ಲೂ ಮೊಗ್ಗುಗಳಿದ್ದವು. ಅವು ಒಂದೊಂದು ಮೊಳಕ್ಕೆ ಹತ್ತಾಗಿ
ಆ ಸಮುದ್ರದ ಸುತ್ತಲೂ ಇದ್ದವು. ಈ ಸಮುದ್ರ ಎರಡ ಹೊ
ಯ್ಯಲ್ಪಡುವಾಗ, ಮೊಗ್ಗುಗಳು ಎರಡು ಸಾಲಾಗಿ ಎರಡ ಹೊಯ್ಯ
೨೫ ಲ್ಪಟ್ಟಿದ್ದವು. ಅದು ಹನ್ನೆರಡು ಎತ್ತುಗಳ ಮೇಲೆ ನಿಂತಿತು. ಮೂ
ರು ಉತ್ತರಕ್ಕೂ, ಮೂರು ಪಶ್ಚಿಮಕ್ಕೂ, ಮೂರು ದಕ್ಷಿಣಕ್ಕೂ,
ಮೂರು ಪೂರ್ವಕ್ಕೂ ನೋಡುತ್ತಾ ಇದ್ದವು; ಆ ಸಮುದ್ರ ಅವು
ಗಳ ಮೇಲೆ ಇತ್ತು; ಅವುಗಳ ಹಿಂಭಾಗಗಳೆಲ್ಲಾ ಒಳ ಪಾರ್ಶ್ವದ
೨೬ ಲ್ಲಿ ಇದ್ದವು. ಅದರ ದಪ್ಪವು ನಾಲ್ಕು ಬೆರಳಬ್ಬಾಗಿಯೂ, ಅದರ
ಅಂಚು ಪಾತ್ರೆಯ ಅಂಚಿನ ಹಾಗೆಯೂ, ತಾವರೆ ಪುಷ್ಪದ
ಹಾಗೆಯೂ ಇತ್ತು. ಅದು ಎರಡು ಸಾವಿರ ಕೊಳಗ ಹಿಡಿಯು
ವದಾಗಿತ್ತು.

೨೭ ಹತ್ತು ತಾಂಬ್ರದ ಆಧಾರಗಳನ್ನು ಮಾಡಿದನು. ಒಂದೊಂದು
ಆಧಾರವು ನಾಲ್ಕು ಮೊಳ ಉದ್ದವೂ, ನಾಲ್ಕು ಮೊಳ ಅಗಲವೂ,
೨೮ ಮೂರು ಮೊಳ ಎತ್ತರವೂ ಆಗಿತ್ತು. ಆ ಆಧಾರಗಳ ಮೇಲಿರು
ವ ಕೆಲಸ ಹ್ಯಾಗಂದರೆ, ಅವುಗಳಿಗೆ ಕಂಗೂರಿಗಳುಂಟಾಗಿದ್ದವು;
೨೯ ಕಂಗೂರಿಗಳು ಹಲಿಗೆಗಳ ನಡುವೆ ಇದ್ದವು. ಹಲಿಗೆಗಳ ನಡುವೆ

ಇರುವ ಆ ಕಂಗೂರಿಗಳಲ್ಲಿ ಸಿಂಹಗಳೂ ಎತ್ತುಗಳೂ ಕೆರೂಬಿ
ಗಳೂ ಇದ್ದವು. ಹಲಿಗೆಗಳ ಮೇಲ್ಭಾಗದಲ್ಲಿ ಒಂದು ಅಂಚು ಇ
ತ್ತು; ಸಿಂಹಗಳಿಗೂ ಎತ್ತುಗಳಿಗೂ ಕೆಳಭಾಗದಲ್ಲಿ ಕೆರೂಬಿಗಳ ಕೆ
೩೦ ಲಸಗಳು ಅದರ ಸಂಗಡ ಇದ್ದವು. ಒಂದೊಂದು ಆಧಾರಕ್ಕೆ ನಾಲ್ಕು
ತಾಂಬ್ರದ ಗಾಲಿಗಳೂ, ತಾಂಬ್ರದ ಅಣಸುಗಳೂ ಇದ್ದವು. ಅದರ
ನಾಲ್ಕು ಮೂಲೆಗಳಿಗೂ ಭುಜಗಳಿದ್ದವು. ಸಮುದ್ರದ ಕೆಳಗೆ ಇರು
ವ ಪ್ರತಿಕೆರೂಬಿಯ ಬಳಿಯಲ್ಲೂ ಎರಕ ಹೊಯ್ಯಲ್ಪಟ್ಟ ಭುಜಗ
೩೧ ಳಿದ್ದವು. ಅಂಚಿಗೆ ಬಳಿಗಾದ ಅದರ ಬಾಯಿ ಮೇಲೆ ಒಂದು ಮೊಳ
ವುದ್ದವಾಗಿತ್ತು. ಅದರ ಬಾಯಿ ದುಂಡಾಗಿ ಒಂದುವರೆ ಮೊಳವಾಗಿ
ತ್ತು; ಅದರ ಬಾಯಿ ಮೇಲೆ ಚಿತ್ರಗಳಿದ್ದವು; ಅದರ ಚಿತ್ರಗಳು
೩೨ ದುಂಡಾಗಿರದೆ ಚೌಕವಾಗಿದ್ದವು. ಕಂಗೂರಿಗಳ ಕೆಳಗೆ ನಾಲ್ಕು
ಗಾಲಿಗಳಿದ್ದವು; ಗಾಲಿಗಳ ಅಚ್ಚುಗಳು ಆಧಾರದಲ್ಲಿದ್ದವು. ಒಂ
ದೊಂದು ಗಾಲಿಯು ಒಂದುವರೆ ಮೊಳವಾಗಿತ್ತು. ಗಾಲಿಗಳ ಮೇ
೩೩ ಲೆ ಇದ್ದ ಕೆಲಸವು ಕಠದ ಗಾಲಿಯ ಕೆಲಸದ ಹಾಗೆ ಇತ್ತು. ಅವು
ಗಳ ಇರುಸುಗಳೂ, ಅವುಗಳ ಅಣಸುಗಳೂ, ಅವುಗಳ ಚಕ್ರಗ
ಳೂ, ಅವುಗಳ ಕಂಬಿಗಳೂ ಎಲ್ಲಾ ಎರಕ ಹೊಯ್ಯಲ್ಪಟ್ಟಿದ್ದವು.
೩೪ ಒಂದೊಂದು ಆಧಾರದ ನಾಲ್ಕು ಮೂಲೆಗಳಲ್ಲಿ ಭುಜಗಳಿದ್ದವು;
೩೫ ಆಧಾರದಲ್ಲಿಂದಲೇ ಭುಜಗಳು ಆದವು. ಆಧಾರದ ತಲೆಯಲ್ಲಿ ಒಂ
ದುವರೆ ಮೊಳ ದುಂಡಾದದ್ದು ಒಂದು ಇತ್ತು; ಆಧಾರದ ತಲೆಯ
ಮೇಲೆ ಅದರ ಕೈ ಪಿಡಿಗಳೂ ಅದರ ಅಂಚುಗಳೂ ಅದರಿಂದಲೇ
೩೬ ಆಗಿದ್ದವು. ಅದರದರ ಪ್ರಮಾಣದ ಪ್ರಕಾರ ಹಲಿಗೆಗಳ ಕೈ ಪಿಡಿ
ಗಳ ಮೇಲೆಯೂ, ಅಂಚುಗಳ ಮೇಲೆಯೂ, ಕೆರೂಬಿಗಳನ್ನೂ
ಸಿಂಹಗಳನ್ನೂ, ಖರ್ಜೂರದ ಗಿಡಗಳನ್ನೂ ಚಿತ್ರಿಸಿದನು; ಸುತ್ತ
೩೭ ಲೂ ಅದರದರ ಪ್ರಮಾಣದ ಪ್ರಕಾರ ಚಿತ್ರಿಸಿದನು. ಈ ಪ್ರಕಾರ
ಆ ಹತ್ತು ಆಧಾರಗಳನ್ನು ಮಾಡಿದನು. ಅವುಗಳಿಗೆಲ್ಲಾ ಒಂ
ದೇ ಎರಕವೂ, ಒಂದೇ ಅಳತೆಯೂ, ಒಂದೇ ಪ್ರಮಾಣವೂ ಆ
೩೮ ಗಿದ್ದವು. ಮತ್ತು ಹತ್ತು ತಾಂಬ್ರದ ತೊಟ್ಟಿಗಳನ್ನು ಮಾಡಿದನು.
ಒಂದೊಂದು ತೊಟ್ಟಿಯು ನಾಲ್ವತ್ತು ಕೊಳಗ ಹಿಡಿಯಿತು; ಒಂ
ದೊಂದು ತೊಟ್ಟಿಯು ನಾಲ್ಕು ಮೊಳವು; ಆ ಹತ್ತು ಆಧಾರಗಳ
ಲ್ಲಿಯೂ ಒಂದೊಂದರ ಮೇಲೆ ಒಂದೊಂದು ತೊಟ್ಟಿಯನ್ನು ಇ
೩೯ ಟ್ಟನು. ಮನೆಯ ಬಲ ಪಾರ್ಶ್ವದಲ್ಲಿ ಐದು ಆಧಾರಗಳನ್ನೂ,
ಮನೆಯ ಎಡ ಪಾರ್ಶ್ವದಲ್ಲಿ ಐದು ಆಧಾರಗಳನ್ನೂ ಇಟ್ಟನು.
ಅದಕೆ ಸಮುದ್ರವನ್ನು ಮನೆಯ ಪೂರ್ವ ಭಾಗದ ಬಲ ಪಾರ್ಶ್ವ
೪೦ ದಲ್ಲಿ ದಕ್ಷಿಣಕ್ಕೆದುರಾಗಿ ಇಟ್ಟನು. ಹೀಗೆಯೇ ಹಿರಾಮನು ತೊ
ಟ್ಟಿಗಳನ್ನೂ, ಸಲಿಕೆಗಳನ್ನೂ, ಚಾತ್ರೆಗಳನ್ನೂ ಮಾಡಿದನು.
ಹಿರಾಮನು ಕರ್ತನ ಮನೆಗೋಸ್ಕರ ಅರಸನಾದ ಸೊಲೊಮೋ
ನನು ಮಾಡಿಸಿದ ಎಲ್ಲಾ ಕೆಲಸಗಳನ್ನು ಮಾಡಿ ತೀರಿಸಿದನು.

೪೧ ಏನಂದರೆ, ಎರಡು ಸ್ತಂಭಗಳೂ; ಎರಡು ಸ್ತಂಭಗಳ ತಲೆಯ
೪೨ ಲ್ಲಿರುವ ಕುಂಭಗಳ ಚಂಬುಗಳೂ; ಎರಡು ಸ್ತಂಭಗಳ ತಲೆಯಲ್ಲಿ
ರುವ ಕುಂಭಗಳ ಎರಡು ಚಂಬುಗಳನ್ನು ಮುಚ್ಚುವ ಎರಡು ಜಾ
ಲರು ಸಾಮಾನುಗಳೂ; ಎರಡು ಜಾಲರು ಸಾಮಾನುಗಳಿಗೆ
ನಾನೂರು ದಾಳಿಂಬುಗಳೂ; ಸ್ತಂಭಗಳ ಮೇಲೆ ಇರುವ ಎರಡು
ಚಂಬುಗಳನ್ನು ಮುಚ್ಚುವಂತೆ, ಒಂದು ಜಾಲರು ಸಾಮಾನಿಗೆ ಎ
೪೩ ರಡು ಸಾಲಿನ ದಾಳಿಂಬುಗಳೂ; ಹತ್ತು ಆಧಾರಗಳೂ, ಆಧಾರಗ
೪೪ ಳ ಮೇಲಿರುವ ಹತ್ತು ತೊಟ್ಟಿಗಳೂ; ಒಂದು ಸಮುದ್ರವೂ, ಸ
೪೫ ಮುದ್ರದ ಕೆಳಗಿರುವ ಹನ್ನೆರಡು ಎತ್ತುಗಳೂ; ಕಿಟ್ಟಿಗಳೂ, ಸಲಿ
ಕೆಗಳೂ, ಚಾತ್ರೆಗಳೂ. ಹಿರಾಮನು ಕರ್ತನ ಮನೆಗೋಸ್ಕರ
ಅರಸನಾದ ಸೊಲೊಮೋನನಿಗೆ ಮಾಡಿದ ಈ ಸಾಮಾನುಗಳೆ
ಲ್ಲಾ ನಿರ್ಮಲವಾದ ತಾಂಬ್ರದವುಗಳಾಗಿದ್ದವು. ಯೊರ್ದನಿಗೆ ಕೀ
೪೬ ರದ ಬೈಲಾದ, ಸುಕ್ಕೋತಿಗೂ ಚರ್ತಾನಿಗೂ ನಡುವೆ ಇರುವ
ಜೇಡು ಮಣ್ಣಿನ ಸ್ಥಳದಲ್ಲಿ ಅರಸನು ಅವುಗಳನ್ನು ಎರಕ ಹೊ
೪೭ ಯಿಸಿದನು. ಈ ಸಾಮಾನುಗಳೆಲ್ಲಾ ಬಹು ಹೆಚ್ಚಾಗಿದ್ದರಿಂದ,
ಸೊಲೊಮೋನನು ಅವುಗಳನ್ನು ಎಣಿಸದೆ ಬಿಟ್ಟನು; ತಾಂಬ್ರದ
ತೂಕವು ವಿಚಾರಿಸಲ್ಪಡಲಿಲ್ಲ.
೪೮ ಇದಲ್ಲದೆ ಕರ್ತನ ಮನೆಗೆ ಉಂಟಾದ ಸಾಮಾನುಗಳನ್ನೆಲ್ಲಾ
ಸೊಲೊಮೋನನು ಮಾಡಿಸಿದನು; ಏನಂದರೆ, ಜಿನ್ನಿನ ಧೂಪ
ಪೀಠವೂ, ಸಮುಖದ ಕೊಟ್ಟಿಗಳನ್ನು ಇಡುವದಕ್ಕೆ ಜಿನ್ನಿದ ಮೇ
೪೯ ಜೂ, ವಾಕ್ಯಸ್ಥಾನದ ಮುಂಭಾಗದ ಬಲಪಾರ್ಶ್ವದಲ್ಲಿ ಐದು,
ಎಡ ಪಾರ್ಶ್ವದಲ್ಲಿ ಐದು, ಅವರಂಜಿಯ ದೀಪಸ್ತಂಭಗಳೂ, ಜಿನ್ನಿ
ವಾದ ಅದರ ಹೂವುಗಳೂ, ದೀಪಗಳೂ, ಚಿಮಟಿಗಳೂ, ಅರಂ
೫೦ ಜಿಯ ತಂಬಿಗೆಗಳೂ ಕತ್ತರಿಗಳೂ, ಸಲಿಕೆಗಳೂ, ಚಾಟುಗ
ಳೂ, ಅಗ್ನಿ ಚಾತ್ರೆಗಳೂ, ಮಹಾ ಪರಿಶುದ್ಧ ಸ್ಥಳವಾದ ಒಳಗಿನ
ಮನೆಯ ಕದಗಳಿಗೋಸ್ಕರವೂ ಮಂದಿರವೆಂಬುವ ಮನೆಯ ಕದ
ಗಳಿಗೋಸ್ಕರವೂ ಭಂಗಾರದ ಕೀಲುಪಟ್ಟಿಗಳೂ, ಇವೆಲ್ಲಾ ಮಾ
೫೧ ಡಿಸಿದನು. ಹೀಗೆಯೇ ಅರಸನಾಗಿರುವ ಸೊಲೊಮೋನನು ಕ
ರ್ತನ ಮನೆಗೋಸ್ಕರ ಮಾಡಿಸಿದ ಕೆಲಸವೆಲ್ಲಾ ಮುಗಿಯಿತು.
ಆಗ ಸೊಲೊಮೋನನು ತನ್ನ ತಂದೆಯಾದ ದಾವೀದನು ಪರಿಶು
ದ್ಧ ಮಾಡಿದ ಬೆಳ್ಳಿಯನ್ನೂ, ಚಿನ್ನವನ್ನೂ, ಸಾಮಾನುಗಳ
ನ್ನೂ ತಕ್ಕೊಂಡು ಬಂದು, ಕರ್ತನ ಮನೆಯ ಉಗ್ರಾಣಗಳಲ್ಲಿ
ಇಟ್ಟನು.

## ೮. ಸಂಧಿ.

೧ ಆಗ ಚಿಯೋನೆಂಬ ದಾವೀದನ ಪಟ್ಟಣದೊಳಗಿಂದ ಕರ್ತನ
ಒಡಂಬಡಿಕೆಯ ಪೆಟ್ಟಿಗೆಯನ್ನು ತರುವ ನಿಮಿತ್ತ, ಅರಸನಾದ
ಸೊಲೊಮೋನನು ಇಸ್ರಾಯೇಲಿನ ಮಕ್ಕಳಲ್ಲಿ ಶ್ರೇಷ್ಠರಾಗಿರುವ
ತಂದೆಗಳಾದ ಇಸ್ರಾಯೇಲಿನ ಹಿರಿಯರನ್ನೂ, ಕುಲಗಳ ಪ್ರಭುಗಳ
ನ್ನೂ ಯೆರೂಸಲೇಮಿನಲ್ಲಿ ತನ್ನ ಬಳಿಗೆ ಕೂಡಿ ಬರ ಮಾ
ಡಿದನು.
೨ ಏಳನೇ ತಿಂಗಳಾದ ಏತನಿಮ್ ಎಂಬ ತಿಂಗಳಲ್ಲಿ, ಹಬ್ಬದ ಕಾ
ಲದಲ್ಲಿ ಇಸ್ರಾಯೇಲಿನ ಸಮಸ್ತ ಮನುಷ್ಯರು ಅರಸನಾದ ಸೊ
೩ ಲೊಮೋನನ ಬಳಿಗೆ ಕೂಡಿ ಬಂದರು. ಇಸ್ರಾಯೇಲಿನ ಹಿರಿಯ
ಕೆಲ್ಲರು ಬಂದ ತರುವಾಯ ಯಾಜಕರು ಪೆಟ್ಟಿಗೆಯನ್ನು ಎತ್ತಿ
ಕೊಂಡು, ಕರ್ತನ ಪೆಟ್ಟಿಗೆಯನ್ನೂ, ಸಭೆಯ ಗುಡಾರವನ್ನೂ,
ಗುಡಾರದಲ್ಲಿದ್ದ ಸಮಸ್ತ ಪರಿಶುದ್ಧವಾದ ಸಾಮಾನುಗಳನ್ನೂ ತಂ
೪ ದರು. ಇವುಗಳನ್ನು ಯಾಜಕರೂ ಲೇವ್ಯರೂ ತಂದರು.
೫ ಆಗ ಅರಸನಾದ ಸೊಲೊಮೋನನೂ, ಅವನ ಬಳಿಗೆ ಕೂಡಿದ
ಇಸ್ರಾಯೇಲ ಸಭೆಯವರೆಲ್ಲರೂ ಪೆಟ್ಟಿಗೆಯ ಮುಂದೆ ನಿಂತು, ಹೆ
ಚ್ಚಾದದರಿಂದ ಕೆಲ್ಬಿಸಲೂ ಎಣಿಸಲೂ ಕೂಡದ ಕುರಿಗಳನ್ನೂ
೬ ದನಗಳನ್ನೂ ಬಲಿಯಾಗಿ ಅರ್ಪಿಸಿದರು. ಇದಲ್ಲದೆ ಯಾಜಕ
ರು ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನು ಮಹಾ ಪರಿಶುದ್ಧ



ಸ್ಥಳವೆಂಬುವ ಮನೆಯ ವಾಕ್ಯ ಸ್ಥಾನಕ್ಕೆ ತಂದು, ಕೆರೂಬಿಗಳ
೭ ಕೆಕ್ಕೆಗಳ ಕೆಳಗೆ ಅದರ ಸ್ಥಳದಲ್ಲಿ ಇಟ್ಟರು. ಯಾಕಂದರೆ
ಕೆರೂಬಿಗಳು ಎರಡು ಕೆಕ್ಕೆಗಳನ್ನು ಚಾಚಿದ್ದವು. ಹೀಗೆಯೇ
ಕೆರೂಬಿಗಳು ಪೆಟ್ಟಿಗೆಯನ್ನೂ ಅದರ ಕೋಲುಗಳನ್ನೂ ಮೇಲಿ
೮ ನಿಂದ ಮುಚ್ಚಿದ್ದವು. ಆಗ ಕೋಲುಗಳ ಕೊನೆಗಳು ವಾಕ್ಯ
ಸ್ಥಾನದ ಮುಂದೆ ಪರಿಶುದ್ಧ ಸ್ಥಳದಲ್ಲಿ ಕಾಣಲ್ಪಡುವ ಹಾಗೆ, ಎಳ
ಕೊಂಡರು. ಆದರೆ ಅವು ಹೊರಗೆ ಕಾಣಲ್ಪಡಲಿಲ್ಲ. ಅಲ್ಲಿ ಇಂದಿ
೯ ನ ವರೆಗೂ ಇರುತ್ತವೆ. ಇಸ್ರಾಯೇಲ ಮಕ್ಕಳು ಐಗುತ್ತ ದೇಶ
ದೊಳಗಿಂದ ಬಂದ ಕಾಲದಲ್ಲಿ ಕರ್ತನು ಅವರಿಗೆ ಒಡಂಬಡಿಕೆ
ಮಾಡಿದಾಗ, ಹೋರೆಬಿನ ಬಳಿಯಲ್ಲಿ ಪೆಟ್ಟಿಗೆಯೊ
ಳಗೆ ಇಟ್ಟ ಕಲ್ಲಿನ ಎರಡು ಹಲಿಗೆಗಳ ಹೊರತಾಗಿ, ಅದರಲ್ಲಿ ಮ
ತ್ತೇನು ಇಲ್ಲ.
೧೦ ಮತ್ತು ಏನಾಯಿತಂದರೆ, ಯಾಜಕರು ಪರಿಶುದ್ಧ ಸ್ಥಳದಿಂದ
೧೧ ಬಂದಾಗ, ಮೇಘವು ಕರ್ತನ ಮನೆಯನ್ನು ತುಂಬಿತ್ತು. ಮೇಘ
ಕ್ಕೋಸ್ಕರ ಯಾಜಕರು ಸೇವೆಸಲ್ಲಿಲಾರದೆ ಹೋದರು.
ಯಾಕಂದರೆ ಕರ್ತನ ಘನವು ಕರ್ತನ ಮನೆಯನ್ನು ತುಂ
ಬಿತ್ತು.
೧೨ ಆಗ ಸೊಲೊಮೋನನು ಹೇಳಿದ್ದೇನಂದರೆ—ಕಾರ್ಗತ್ತಲಲ್ಲಿ
೧೩ ವಾಸವಾಗಿರುವೆನೆಂದು, ಕರ್ತನು ಹೇಳಿದ್ದಾನೆ. ನಿನಗೆ ನಿವಾಸದ
ಮನೆಯನ್ನು, ನೀನು ಎಂದೆಂದಿಗೂ ಅದರಲ್ಲಿ ವಾಸವಾಗಿರುವ
ಹಾಗೆ, ಶಾಶ್ವತ ಸ್ಥಳವನ್ನು ಕಟ್ಟಿಸೇ ಕಟ್ಟಿಸಿದ್ದೇನೆ.
೧೪ ಮತ್ತು ಅರಸನು ತನ್ನ ಮುಖವನ್ನು ತಿರುಗಿಸಿ, ಇಸ್ರಾಯೇಲಿ
೧೫ ನ ಕೂಟವನ್ನೆಲ್ಲಾ ಆಶೀರ್ವದಿಸಿದನು. ಇಸ್ರಾಯೇಲಿನ ಕೂಟವೆ
ಲ್ಲಾ ನಿಂತಿರುವಾಗ, ಅವನು ಹೇಳಿದ್ದೇನಂದರೆ—ನನ್ನ ತಂದೆಯಾ
ದ ದಾವೀದನ ಸಂಗಡ ಮಾತಾಡಿ, ತನ್ನ ಕೈಯಿಂದ ತೀರಿಸಿದ ಇ
೧೬ ಸ್ರಾಯೇಲಿನ ದೇವರಾದ ಕರ್ತನು ಆಶೀರ್ವದಿಸಲ್ಪಡಲಿ. ಅವನು
ಹೇಳಿದ್ದೇನಂದರೆ, ನನ್ನ ಜನರಾದ ಇಸ್ರಾಯೇಲನ್ನು ಐಗುತ್ತ ದೇ
ಶದಿಂದ ಬರ ಮಾಡಿದ ದಿನ ಮೊದಲುಗೊಂಡು, ನನ್ನ ನಾಮವು
ಅದರಲ್ಲಿ ಇರುವ ನಿಮಿತ್ತ, ಮನೆಯನ್ನು ಕಟ್ಟುವದಕ್ಕೆ, ಇಸ್ರಾ
ಯೇಲಿನ ಸಮಸ್ತ ಕುಲಗಳೊಳಗಿಂದ ಪಟ್ಟಣವನ್ನು ನಾನು ಆದು
ಕೊಳ್ಳದೆ, ನನ್ನ ಜನರಾದ ಇಸ್ರಾಯೇಲಿನ ಮೇಲೆ ಇರ ದಾವೀದನ
೧೭ ನ್ನು ಆದು ಕೊಂಡೆನು, ಅಂದನು. ಮತ್ತು ಇಸ್ರಾಯೇಲಿನ ದೇವರಾ
ದ ಕರ್ತನ ನಾಮಕ್ಕೆ ಮನೆಯನ್ನು ಕಟ್ಟಿ ಬೇಕೆಂದು, ನನ್ನ ತಂ
೧೮ ದೆಯಾದ ದಾವೀದನಿಗೆ ಮನಸ್ಸಿತ್ತು. ಆಗ ಕರ್ತನು ನನ್ನ ತಂ
ದೆಯಾದ ದಾವೀದನಿಗೆ, ನನ್ನ ನಾಮಕ್ಕೆ ಮನೆಯನ್ನು ಕಟ್ಟ
ಬೇಕೆಂದು ನಿನಗೆ ಮನಸ್ಸುಂಟಾಗಿತ್ತಲ್ಲ! ನಿನಗೆ ಮನಸ್ಸುಂಟಾಗಿ
೧೯ ದ್ದದರಿಂದ, ಚನ್ನಾಗಿ ಮಾತಾಡಿದಿ. ಆದರೆ ನೀನು ಮನೆಯನ್ನು
ಕಟ್ಟಿಸ ಬೇಡ; ನಿನ್ನ ತೊಡೆಗಳಿಂದ ಹೊರಡುವ ಮಗನು ಅವನೇ
೨೦ ನನ್ನ ನಾಮಕ್ಕೆ ಮನೆಯನ್ನು ಕಟ್ಟಿಸುವನು, ಅಂದನು. ಈಗ
ಕರ್ತನು ತಾನು ಹೇಳಿದ ವಾಕ್ಯವನ್ನು ತೀರಿಸಿದ್ದಾನೆ. ನಾನು ನ
ನ್ನ ತಂದೆಯಾದ ದಾವೀದನಿಗೆ ಬದಲಾಗಿ ಎದ್ದು, ಕರ್ತನು ಮಾ
ತು ಕೊಟ್ಟ ಪ್ರಕಾರ, ಇಸ್ರಾಯೇಲಿನ ಸಿಂಹಾಸನದ ಮೇಲೆ ಕುಳಿತು
ಕೊಂಡು, ಇಸ್ರಾಯೇಲಿನ ದೇವರಾದ ಕರ್ತನ ನಾಮಕ್ಕೆ ಮನೆಯ
೨೧ ನ್ನು ಕಟ್ಟಿಸಿದ್ದೇನೆ. ಇದಲ್ಲದೆ ಕರ್ತನು ನಮ್ಮ ತಂದೆಗಳನ್ನು
ಐಗುತ್ತ ದೇಶದಿಂದ ಬರ ಮಾಡಿದಾಗ, ಅವರ ಸಂಗಡ ಮಾಡಿದ
ಒಡಂಬಡಿಕೆಯು ಇರುವ ಪೆಟ್ಟಿಗೆಗೋಸ್ಕರ ಸ್ಥಳವನ್ನು ಮಾಡಿ
ಸಿದೆನು.
೨೨ ಆಗ ಸೊಲೊಮೋನನು ಇಸ್ರಾಯೇಲಿನ ಕೂಟವೆಲ್ಲದರ ಸ
ಮುಖದಲ್ಲಿ ದೇವರ ಬಲಿ ಪೀಠದ ಮುಂದೆ ನಿಂತು, ಆಕಾಶಕ್ಕೆ ತನ್ನ
ಕೈಗಳನ್ನು ಚಾಚಿ ಹೇಳಿದ್ದೇನಂದರೆ—
೨೩ ಇಸ್ರಾಯೇಲಿನ ದೇವರಾದ ಕರ್ತನೇ, ಮೇಲಿರುವ ಆಕಾಶದಲ್ಲಾ
ದರೂ, ಕೆಳಗಿರುವ ಭೂಮಿಯಲ್ಲಾದರೂ ನಿನ್ನ ಹಾಗೆ ದೇವರು
ಯಾರೂ ಇಲ್ಲ. ತಮ್ಮ ಸಂಪೂರ್ಣವಾದ ಹೃದಯದಿಂದ ನಡೆ
ಯುವ ನಿನ್ನ ಸೇವಕರ ಸಂಗಡ ಒಡಂಬಡಿಕೆಯನ್ನೂ ಕೃಪೆಯ
೨೪ ನ್ನು ಕೈಕೊಳ್ಳುವವನೇ; ನಿನ್ನ ಸೇವಕನಾದಂಥ, ನನ್ನ ತಂದೆಯಾ
ದ ದಾವೀದನಿಗೆ ಮಾತು ಕೊಟ್ಟದ್ದನ್ನು ಕೈಕೊಂಡವನೇ. ನೀ
ನು ನಿನ್ನ ಬಾಯಿಂದ ಹೇಳಿದ್ದನ್ನು ಇಂದಿನ ಪ್ರಕಾರವೇ ನಿನ್ನ ಕೈ
೨೫ ಯಿಂದ ತೀರಿಸಿದಿ. ಆದಕಾರಣ ಈಗ, ಇಸ್ರಾಯೇಲಿನ ದೇವರಾದ
ಕರ್ತನೇ, ನಿನ್ನ ಮಕ್ಕಳು ತಮ್ಮ ಮಾರ್ಗಕ್ಕೆ ಜಾಗ್ರತೆಯಾಗಿ
ದ್ದು, ನೀನು ನನ್ನ ಮುಂದೆ ನಡೆದ ಪ್ರಕಾರ, ಅವರು ನನ್ನ ಮುಂ
ದೆ ನಡೆದರೆ, ಇಸ್ರಾಯೇಲಿನ ಸಿಂಹಾಸನದ ಮೇಲೆ ನನ್ನ ಸಮುಖ
ದಲ್ಲಿ ಕುಳಿತು ಕೊಳ್ಳ ಮನುಷ್ಯನು ಕೊರತೆಯಾಗುವದಿಲ್ಲವೆಂ
ದು ನೀನು ನನ್ನ ತಂದೆಯಾದ, ನಿನ್ನ ಸೇವಕನಾದ ದಾವೀದನಿಗೆ
೨೬ ಹೇಳಿದ ಮಾತು ಕೈಗೂಡಲಿ. ಈಗ, ಇಸ್ರಾಯೇಲಿನ ದೇವರೇ, ನನ್ನ
ತಂದೆಯಾದ ನಿನ್ನ ಸೇವಕನಾದ ದಾವೀದನಿಗೆ ಹೇಳಿದ ವಾಕ್ಯವು
ನಿಶ್ಚಯವಾಗಲಿ.
೨೭ ಆದರೆ ದೇವರು ನಿಶ್ಚಯವಾಗಿ ಭೂಮಿಯ ಮೇಲೆ ವಾಸವಾಗಿ
ರುವನೋ? ಇಗೋ, ಆಕಾಶಗಳೂ, ಆಕಾಶಾಕಾಶಗಳೂ ನಿನ್ನ
ನ್ನು ಹಿಡಿಯಲಾರವು; ಹಾಗಾದರೆ ನಾನು ಕಟ್ಟಿಸಿದ ಈ ಮನೆ
ಯು ಹಿಡಿಯುವದು ಹ್ಯಾಗೆ! ಆದರೆ, ನನ್ನ ದೇವರಾದ ಕರ್ತನೇ,
೨೮ ನಿನ್ನ ಸೇವಕನ ಪ್ರಾರ್ಥನೆಗೂ ಅವನ ವಿಜ್ಞಾಪನೆಗೂ ತಿರುಗಿ
ಕೊಂಡು, ಇಂದು ನಿನ್ನ ಸೇವಕನು ನಿನ್ನ ಮುಂದೆ ಪ್ರಾರ್ಥಿಸುವ
೨೯ ಪ್ರಾರ್ಥನೆಯನ್ನೂ ಕೂಗನ್ನೂ ಕೇಳು. ನಿನ್ನ ಸೇವಕನು ಈ
ಸ್ಥಳದಲ್ಲಿ ಮಾಡುವ ಪ್ರಾರ್ಥನೆಯನ್ನು ನೀನು ಕೇಳುವ ಹಾಗೆ,
ಅಲ್ಲಿ ನನ್ನ ನಾಮವಿರುವದೆಂದು, ನೀನು ಹೇಳಿದ ಸ್ಥಳವಾದ ಈ
ಮನೆಯ ಮೇಲೆ ರಾತ್ರಿ ಹಗಲು ನಿನ್ನ ಕಣ್ಣುಗಳು ತೆರೆದಿರಲಿ.
೩೦ ಮತ್ತು ನಿನ್ನ ಸೇವಕನ ವಿಜ್ಞಾಪನೆಯನ್ನೂ, ನಿನ್ನ ಜನರಾದ ಇ
ಸ್ರಾಯೇಲ್ಯರ ವಿಜ್ಞಾಪನೆಯನ್ನೂ ಕೇಳು. ಅವರು ಈ ಸ್ಥಳದ ಕ
ಡೆಗೆ ಪ್ರಾರ್ಥಿಸುವಾಗ, ನೀನು ಆಕಾಶದಲ್ಲಿ, ನೀನು ವಾಸ ಮಾ
ಡುವ ಸ್ಥಳದಲ್ಲಿ ಕೇಳು; ಕೇಳಿದಾಗ, ಮನ್ನಿಸು.
೩೧ ಯಾವನಾದರೂ ತನ್ನ ನೆರೆಯವನಿಗೆ ವಿರೋಧವಾಗಿ ಪಾಪ
ಮಾಡಲು, ಅವನು ಆಣೆ ಇಡ ಬೇಕೆಂದು, ಅವನಿಗೆ ಆಣೆ ನೀ
ಮಿಸಲು, ಈ ಮನೆಯಲ್ಲಿ ನಿನ್ನ ಬಲಿಪೀಠದ ಮುಂದೆ ಈ ಆಣೆ
೩೨ ಬಂದರೆ, ಆಗ ನೀನು ದುಷ್ಟನನ್ನು ದುಷ್ಟನಾಗ ಮಾಡಿ, ಅವನ
ಮಾರ್ಗವನ್ನು ಅವನ ತಲೆಯ ಮೇಲೆ ಬರ ಮಾಡುವ ಹಾಗೆ
ಯೂ, ನೀತಿವಂತನನ್ನು ನೀತಿವಂತನಾಗ ಮಾಡಿ, ಅವನ ನೀತಿ
ಯ ಪ್ರಕಾರ ಅವನಿಗೆ ಕೊಡುವ ಹಾಗೆಯೂ, ಆಕಾಶದಲ್ಲಿ ಕೇ
ಳಿ, ನಡಿಸಿ, ನಿನ್ನ ಸೇವಕರ ನ್ಯಾಯವನ್ನು ತೀರಿಸು.
೩೩ ನಿನ್ನ ಜನರಾದ ಇಸ್ರಾಯೇಲ್ಯರು ನಿನಗೆ ವಿರೋಧವಾಗಿ ಪಾ
ಪ ಮಾಡಿದ್ದರಿಂದ, ಶತ್ರುವಿನ ಮುಂದೆ ಮುರಿಯಲ್ಪಟ್ಟು, ನಿನ್ನ ಕ

ಪೆಗೆ ತಿರುಗಿ ಕೊಂಡು, ನಿನ್ನ ನಾಮವನ್ನು ಕೊಂಡಾಡಿ, ಪ್ರಾರ್ಥಿ
೩೪ ಸಿ, ಈ ಮನೆಯಲ್ಲಿ ನಿನಗೆ ವಿಜ್ಞಾಪನೆ ಮಾಡಿದರೆ, ಆಗ ನೀನು
ಆಕಾಶದಲ್ಲಿ ಕೇಳಿ, ನಿನ್ನ ಜನರಾದ ಇಸ್ರಯೇಲ್ಯರ ಪಾಪವನ್ನು
ಮನ್ನಿಸಿ, ನೀನು ಅವರ ತಂದೆಗಳಿಗೆ ಕೊಟ್ಟ ದೇಶಕ್ಕೆ ಅವರನ್ನು
೩೫ ತಿರಿಗಿ ಬರ ಮಾಡು. ಅವರು ನಿನಗೆ ವಿರೋಧವಾಗಿ ಪಾಪವನ್ನು
ಮಾಡಿದ ಕಾರಣ ಆಕಾಶವು ಮುಚ್ಚಲ್ಪಟ್ಟು, ಮಳೆ ಇಲ್ಲದಿರುವಾ
ಗ, ನೀನು ಅವರನ್ನು ಕುಂದಿಸಿದ್ದರಿಂದ, ಅವರು ಈ ಸ್ಥಳದ ಕಡೆ
ಗೆ ಪ್ರಾರ್ಥನೆ ಮಾಡಿ, ನಿನ್ನ ನಾಮವನ್ನು ಕೊಂಡಾಡಿ, ತಮ್ಮ
೩೬ ಪಾಪವನ್ನು ಬಿಟ್ಟು ಬಿಟ್ಟರೆ, ಆಗ ನೀನು ಆಕಾಶದಲ್ಲಿ ಕೇಳಿ, ನಿ
ನ್ನ ಸೇವಕರ, ಇಸ್ರಯೇಲ್ ಜನರ ಪಾಪವನ್ನು ಮನ್ನಿಸಿ, ಅವ
ರು ನಡಿಯ ಬೇಕಾದ ಸನ್ಮಾರ್ಗವನ್ನು ಅವರಿಗೆ ಕಲಿಸುವ ಹಾಗೆ,
ನಿನ್ನ ಜನರಿಗೆ ಬಾಧ್ಯತೆಯಾಗಿ ಕೊಟ್ಟ ಭೂಮಿಯ ಮೇಲೆ ಮ
ಳೆಯನ್ನು ಕೊಡು.

೩೭ ದೇಶದಲ್ಲಿ ಬರವಾದರೂ, ಉರಿಭುಳ್ಳಿಯೂ ಕಾಡಿಗೆಯೂ
ಬಾಣತೆ ಕೋಗವು ಆದರೂ, ಬಿಡಿತೆಯಾದರೂ, ಕಂಬಳಿ
ಹುಳ್ಳವಾದರೂ, ಅವರ ಶತ್ರುಗಳು ಅವರ ಸ್ವದೇಶದ ಪಟ್ಣಗಳಲ್ಲಿ
ಅವರನ್ನು ಇರಿಕಿಸಿದರೂ, ಯಾವ ಬಾಧೆ ಯಾವ ಪೀನೆ ಇದ್ದ
೩೮ ರೂ, ನಿನ್ನ ಜನರಾದ ಸಮಸ್ತ ಇಸ್ರಯೇಲ್ಲಿ ಯಾವ ಮನು
ಷ್ಯನಾದರೂ ಯಾವ ಪ್ರಾರ್ಥನೆಯನ್ನಾದರೂ ವಿಜ್ಞಾಪನೆಯ
ನ್ನಾದರೂ ಮಾಡಿದರೆ, ತನ್ನ ಸ್ವಂತ ಹೃದಯದ ಬಾಧೆಯನ್ನು
೩೯ ಶಿಳಿದು, ಈ ಮನೆಯ ಕಡೆಗೆ ತನ್ನ ಕೈಗಳನ್ನು ಚಾಚಿದರೆ, ಆಗ,
ನೀನು ನಮ್ಮ ಪಿತೃಗಳಿಗೆ ಕೊಟ್ಟ ದೇಶದಲ್ಲಿ ಅವರು ಬದುಕಿರು
೪೦ ವ ಮಟ್ಟಿಗೂ ಅವರು ನಿನಗೆ ಭಯ ಪಡುವ ಹಾಗೆ, ನೀನು ಆಕಾ
ಶದಲ್ಲಿ, ನೀನು ವಾಸ ಮಾಡುವ ಸ್ಥಳದಲ್ಲಿ ಕೇಳಿ, ಮನ್ನಿಸಿ, ನಡಿ
ಸಿ, ಮನುಷ್ಯನ ಹೃದಯವನ್ನು ಶಿಳಿಯುವ ನೀನು ಪ್ರತಿ ಮ
ನುಷ್ಯನಿಗೂ ಅವನವನ ಮಾರ್ಗಗಳ ಪ್ರಕಾರ ಕೊಡು. ಯಾ
ಕಂದರೆ ನೀನೇ, ನೀನೊಬ್ಬನೇ, ಸಮಸ್ತ ಮನುಷ್ಯರ ಮಕ್ಕಳ
ಹೃದಯಗಳನ್ನು ಶಿಳಿದವನಾಗಿದ್ದೀ.

೪೧ ಇದಲ್ಲದೆ ನಿನ್ನ ಜನರಾದ ಇಸ್ರಯೇಲಿನವನಲ್ಲದೆ, ನಿನ್ನ ನಾ
ಮದ ನಿಮಿತ್ತ ದೂರ ದೇಶದಿಂದ ಬಂದ ಪರಕೀಶಸ್ಥನನ್ನು ಕುರಿತು
೪೨ ಏನಂದರೆ—ಯಾಕಂದರೆ ನಿನ್ನ ಮಹಾ ನಾಮವನ್ನೂ, ನಿನ್ನ ಬ
ಲವಾದ ಕೈಯನ್ನೂ, ನಿನ್ನ ಚಾಚಿದ ಶೋಳ್ಳನ್ನೂ ಕುರಿತು ಕೇ
೪೩ ಳುವರು—ಅವನು ಬಂದು ಈ ಮನೆಯ ಕಡೆಗೆ ಪ್ರಾರ್ಥನೆ ಮಾ
ಡಿದರೆ, ನಿನ್ನ ಜನರಾದ ಇಸ್ರಯೇಲಿನ ಹಾಗೆ ಭೂಲೋಕದಲ್ಲಿರು
ವ ಸಮಸ್ತರು ನಿನಗೆ ಭಯ ಪಡುವದಕ್ಕಾಗಿ, ನಿನ್ನ ನಾಮವ
ನ್ನು ಶಿಳಿಯುವ ಹಾಗೆಯೂ, ನಾನು ಕಟ್ಟಿಸಿದ ಈ ಮನೆಯ
ಮೇಲೆ ನಿನ್ನ ನಾಮ ಕರೆಯಲ್ಪಟ್ಟಿದೆ ಎಂದು, ಅವರು ಶಿಳಿಯು
ವ ಹಾಗೆಯೂ, ನೀನು ಆಕಾಶದಲ್ಲಿ, ನೀನು ವಾಸ ಮಾಡುವ
ಸ್ಥಳದಲ್ಲಿ ಕೇಳಿ, ಪರಕೀಶಸ್ಥನು ನಿನಗೆ ಕೂಗಿದ ಎಲ್ಲಾದರ ಹಾಗೆ
ಮಾಡು.

೪೪ ನಿನ್ನ ಜನರು ನೀನು ಕಳುಹಿಸುವ ಯಾವ ಸ್ಥಳದಲ್ಲಾದರೂ
ತಮ್ಮ ಶತ್ರುಗಳ ಸಂಗಡ ಯುದ್ಧವನ್ನು ಮಾಡ ಹೊರಟು ಹೋ
ಗಿ, ನೀನು ಆದು ಕೊಂಡ ಪಟ್ಣದ ಮಾರ್ಗವಾಗಿಯೂ, ನಾನು
ನಿನ್ನ ನಾಮಕ್ಕೋಸ್ಕರ ಕಟ್ಟಿಸಿದ ಈ ಮನೆಯ ಮಾರ್ಗವಾಗಿ
೪೫ ಯೂ ಅವರು ಕರ್ತನಾದ ನಿನಗೆ ಪ್ರಾರ್ಥನೆ ಮಾಡಿದರೆ, ಆಗ
ನೀನು ಆಕಾಶದಲ್ಲಿ ಅವರ ಪ್ರಾರ್ಥನೆಯನ್ನೂ ಅವರ ವಿಜ್ಞಾಪನೆ
೪೬ ಯನ್ನೂ ಕೇಳಿ, ಅವರ ನ್ಯಾಯವನ್ನು ತೀರಿಸು. ಪಾಪವನ್ನು
ಮಾಡದವನು ಯಾವನೂ ಇಲ್ಲದ್ದರಿಂದ, ಅವರು ನಿನಗೆ ವಿರೋ
ಧವಾಗಿ ಪಾಪ ಮಾಡಲು, ನೀನು ಅವರ ಮೇಲೆ ಕೋಪಿಸಿ ಕೊಂ
ಡು, ದೂರವಾದರೂ ಸಮೀಪವಾದರೂ ಶತ್ರುವಿನ ದೇಶಕ್ಕೆ ಅವ
ರು ಕೆಡೆಯಾಗಿ ವೈಯ್ಯಲ್ಪಡುವ ಹಾಗೆ, ನೀನು ಅವರನ್ನು ಶತ್ರು
೪೭ ವಿನ ಕೈಯಲ್ಲಿ ಒಪ್ಪಿಸಿದರೆ, ಮತ್ತು ಅವರು ಕೆಡೆ ವೈಯಲ್ಪಟ್ಟ ದೇ
ಶದಲ್ಲಿ ಆಲೋಚನೆ ಮಾಡಿ ಕೊಂಡು, ತಿರುಗಿ ಕೊಂಡು, ನಾವು
ಪಾಪ ಮಾಡಿ, ವಕ್ರ ಬುದ್ಧಿಯಿಂದ ನಡೆದು, ದ್ರೋಹ ಮಾಡಿದೆ
೪೮ ವೆಂದು ತಮ್ಮನ್ನು ಕೆಡೆಯಾಗಿ ವೈಯ್ಯುವವರ ದೇಶದಲ್ಲಿ ನಿನಗೆ
ವಿಜ್ಞಾಪನೆ ಮಾಡಿ, ಅವರನ್ನು ಕೆಡೆಯಾಗಿ ವೈದ ಶತ್ರುಗಳ ದೇಶ
ದಲ್ಲಿ ತಮ್ಮ ಪೂರ್ಣ ಹೃದಯದಿಂದಲೂ ತಮ್ಮ ಪೂರ್ಣ ಪ್ರಾ
ಣದಿಂದಲೂ ನಿನ್ನ ಕಡೆಗೆ ತಿರುಗಿ ಕೊಂಡು, ನೀನು ಅವರ ಪಿತೃ
ಗಳಿಗೆ ಕೊಟ್ಟ ತಮ್ಮ ದೇಶದ ಮಾರ್ಗವಾಗಿಯೂ, ನೀನು ಆದು
ಕೊಂಡ ಪಟ್ಣದ ಮಾರ್ಗವಾಗಿಯೂ, ನಿನ್ನ ನಾಮಕ್ಕೋಸ್ಕರ
ನಾನು ಕಟ್ಟಿಸಿದ ಈ ಮನೆಯ ಮಾರ್ಗವಾಗಿಯೂ ಅವರು ನಿನ
೪೯ ಗೆ ಪ್ರಾರ್ಥನೆ ಮಾಡಿದರೆ, ಆಗ ನೀನು ಆಕಾಶದಲ್ಲಿ, ನೀನು ವಾ
ಸ ಮಾಡುವ ಸ್ಥಳದಲ್ಲಿ ಕೇಳಿ, ಅವರ ನ್ಯಾಯವನ್ನು ತೀರಿಸಿ,
೫೦ ನಿನಗೆ ವಿರೋಧವಾಗಿ ಮಾಡಿದ ನಿನ್ನ ಜನರ ಪಾಪಗಳನ್ನೂ,
ಅವರು ನಿನಗೆ ವಿರೋಧವಾಗಿ ಮಾಡಿದ ಅವರ ಸಮಸ್ತ ದ್ರೋಹ
ಗಳನ್ನೂ ಮನ್ನಿಸಿ, ಅವರನ್ನು ಕೆಡೆಯಾಗಿ ವೈಯ್ಯುವವರು ಅ
ವರನ್ನು ಕರುಣಿಸುವ ಹಾಗೆ, ಅವರ ಮುಂದೆ ನೀನು ಅವರನ್ನು
೫೧ ಕರುಣಿಸು. ಯಾಕಂದರೆ ಅವರು ಐಗುಪ್ತದಿಂದಲೂ, ಕಬ್ಬಿಣದ
ಒಲೆಯ ಮಧ್ಯದಿಂದಲೂ ನೀನು ಬರ ಮಾಡಿದ ನಿನ್ನ ಜನವಾಗಿ
ಯೂ ನಿನ್ನ ಬಾಧ್ಯತೆಯಾಗಿಯೂ ಇದ್ದಾರೆ. ಅವರು ನಿನಗೆ
೫೨ ಕೂಗುವ ಎಲ್ಲಾದರಲ್ಲಿ ನೀನು ಅವರನ್ನು ಕೇಳುವ ಹಾಗೆ, ನಿನ್ನ
ಸೇವಕನ ವಿಜ್ಞಾಪನೆಗೂ, ನಿನ್ನ ಜನವಾದ ಇಸ್ರಯೇಲಿನ ವಿಜ್ಞಾ
ಪನೆಗೂ ನಿನ್ನ ಕಣ್ಣುಗಳು ತೆಕೆದಿರಲಿ, ಕರ್ತನಾದ ಯೆಹೋವ
೫೩ ನೇ. ಯಾಕಂದರೆ, ನೀನು ಐಗುಪ್ತದಿಂದ ನಮ್ಮ ಪಿತೃಗಳನ್ನು
ಹೊರಡ ಮಾಡುವಾಗ, ನಿನ್ನ ಸೇವಕನಾದ ಮೋಶೆಯ ಮುಖಾಂ
ತರವಾಗಿ ಹೇಳಿದ ಹಾಗೆ ಅವರನ್ನು ನಿನ್ನ ಬಾಧ್ಯತೆಯಾಗಿ ಭೂ
ಮಿಯ ಸಮಸ್ತ ಜನಕ್ಕೋಸ್ಕರದಿಂದ ಪ್ರತ್ಯೇಕಿಸಿದಿ.

೫೪ ಮತ್ತು ಸೊಲೊಮೋನನು ಕರ್ತನಿಗೆ ಈ ಸಮಸ್ತ ಪ್ರಾರ್ಥ
ನೆಯನ್ನೂ ವಿಜ್ಞಾಪನೆಯನ್ನೂ ಮಾಡಿ ತೀರಿಸಿದ ತರುವಾಯ ಏ
ನಾಯಿತಂದರೆ, ಅವನು ಕರ್ತನ ಬಲಿಪೀಠದ ಮುಂದೆ ಮೊಣಕಾ
ಲೂರಿದ್ದನ್ನೂ, ತನ್ನ ಕೈಗಳನ್ನು ಆಕಾಶಕ್ಕೆ ಚಾಚಿದ್ದನ್ನೂ ಬಿ
ಟ್ಟು ಎದ್ದನು.

೫೫ ಮತ್ತು ಅವನು ನಿಂತು, ಮಹಾ ಶಬ್ದದಿಂದ ಇಸ್ರಯೇಲಿನ ಸ
ಮಸ್ತ ಕೂಟವನ್ನು ಆಶೀರ್ವದಿಸಿ ಹೇಳಿದ್ದೇನಂದರೆ—ತನ್ನ ಜನ
ರಾದ ಇಸ್ರಯೇಲ್ಯರಿಗೆ ತಾನು ಮಾತು ಕೊಟ್ಟ ಎಲ್ಲಾದರ ಪ್ರಕಾ
೫೬ ರ, ವಿಶ್ರಾಂತಿಯನ್ನು ಕೊಟ್ಟ ಕರ್ತನು ಆಶೀರ್ವದಿಸಲ್ಪಡಲಿ. ಅ
ವನು ತನ್ನ ಸೇವಕನಾದ ಮೋಶೆಯ ಮುಖಾಂತರ ಹೇಳಿದ
ಎಲ್ಲಾ ಉತ್ತಮವಾದ ಮಾತುಗಳಲ್ಲಿ ಒಂದು ಮಾತಾದರೂ ಬಿದ್ದು
೫೭ ಹೋದದ್ದಿಲ್ಲ. ಅವನು ನಮ್ಮ ತಂದೆಗಳಿಗೆ ಆಜ್ಞಾಪಿಸಿದ ತನ್ನ ಆ
ಜ್ಞೆಗಳನ್ನೂ, ತನ್ನ ಕಟ್ಟಳೆಗಳನ್ನೂ, ತನ್ನ ನ್ಯಾಯಗಳನ್ನೂ



ಕೈಕೊಳ್ಳಲೂ, ತನ್ನ ಸಮಸ್ತ ಮಾರ್ಗಗಳಲ್ಲಿ ನಡೆಯಲೂ,
೫೮ ನಮ್ಮ ಹೃದಯಗಳನ್ನು ತನ್ನ ಕಡೆಗೆ ತಿರುಗಿಸುವ ಹಾಗೆ, ನಮ್ಮ
ದೇವರಾದ ಕರ್ತನು ನಮ್ಮನ್ನು ಕೈ ಬಿಡದೆ, ನಮ್ಮನ್ನು ವಿಸರ್ಜಿ
ಸದೆ, ನಮ್ಮ ಪಿತೃಗಳ ಸಂಗಡ ಹ್ಯಾಗೆ ಇದ್ದನೋ, ಹಾಗೆಯೇ
೫೯ ನಮ್ಮ ಸಂಗಡ ಇರಲಿ. ಇದಲ್ಲದೆ ಯೆಹೋವ ತಾನೇ ದೇವರಾಗಿ
೬೦ ದ್ದಾನೆ; ಅವನ ಹೊರತು ಬೇರೊಬ್ಬನಿಲ್ಲವೆಂದು, ಭೂಲೋಕದ
ಜನರೆಲ್ಲರು ಶಿಳಿಯುವ ಹಾಗೆ, ಕಾರ್ಯಕ್ಕೆ ತಕ್ಕದ್ದಾಗಿ ಸಕಲ
ಕಾಲಗಳಲ್ಲಿ ತನ್ನ ಸೇವಕನ ನ್ಯಾಯವನ್ನೂ ತನ್ನ ಜನವಾದ ಇ
ಸ್ರಯೇಲಿನ ನ್ಯಾಯವನ್ನೂ ತೀರಿಸುವ ಹಾಗೆ, ನಾನು ಕರ್ತನ
ಮುಂದೆ ವಿಜ್ಞಾಪನೆ ಮಾಡಿದ ಈ ನನ್ನ ಮಾತುಗಳು ರಾತ್ರಿ ಹಗ
೬೧ ಲು ನಮ್ಮ ದೇವರಾದ ಕರ್ತನ ಬಳಿಯಲ್ಲಿ ಇರಲಿ. ಇಂದಿನ ಹಾ
ಗೆಯೇ ಅವನ ಕಟ್ಟಳೆಗಳಲ್ಲಿ ನಡೆಯಲೂ, ಅವನ ಆಜ್ಞೆಗಳನ್ನು
ಕೈಕೊಳ್ಳಲೂ, ನಮ್ಮ ದೇವರಾದ ಕರ್ತನ ಸಂಗಡ ನಿಮ್ಮ ಹೃ
ದಯವು ಸಂಪೂರ್ಣವಾಗಿರಲಿ, ಅಂದನು.

೬೨ ಆಗ ಅರಸನೂ, ಅವನ ಸಂಗಡ ಇಸ್ರಯೇಲ್ಯರೆಲ್ಲರೂ ಕರ್ತ
೬೩ ನ ಮುಂದೆ ಬಲಿಗಳನ್ನು ಅರ್ಪಿಸಿದರು. ಸೊಲೊಮೋನನು ಕ
ರ್ತನಿಗೆ ಅರ್ಪಿಸಿದ ಸಮಾಧಾನದ ಬಲಿಗಳಾಗಿ ಇಪ್ಪತ್ತೆರಡು ಸಾ
ವಿರ ಎತ್ತುಗಳನ್ನೂ ಲಕ್ಷಾ ಇಪ್ಪತ್ತು ಸಾವಿರ ಕುರಿಗಳನ್ನೂ ಅ
ರ್ಪಿಸಿದನು. ಹೀಗೆಯೇ ಅರಸನೂ ಇಸ್ರಯೇಲ ಸಮಸ್ತ ಮಕ್ಕ
೬೪ ಳೂ ಕರ್ತನ ಮನೆಯನ್ನು ಪ್ರತಿಷ್ಠೆ ಮಾಡಿದರು. ಅದೇ ದಿನದ
ಲ್ಲಿ ಅರಸನು ಕರ್ತನ ಮನೆಯ ಮಧ್ಯ ಅಂಗಳವನ್ನು ಪರಿಶುದ್ಧ
ಮಾಡಿದನು. ಯಾಕಂದರೆ ಕರ್ತನ ಮುಂದಿರುವ ತಾಂಬ್ರದ ಪೀಠ
ದ ಮೇಲೆ ಹೋಮಗಳನ್ನೂ, ಕಾಣಿಕೆಗಳನ್ನೂ, ಸಮಾಧಾನ
ದ ಬಲಿಗಳ ಕೊಬ್ಬನ್ನೂ ಇಡುವದಕ್ಕೆ ಸ್ಥಳ ಸಾಲದೆ ಇದ್ದದರಿಂ
ದ, ಅಲ್ಲಿ ಅವನು ಹೋಮಗಳನ್ನೂ, ಕಾಣಿಕೆಗಳನ್ನೂ, ಸಮಾ
ಧಾನದ ಬಲಿಗಳ ಕೊಬ್ಬನ್ನೂ ಅರ್ಪಿಸಿದನು.

೬೫ ಅದೇ ಕಾಲದಲ್ಲಿ ಸೊಲೊಮೋನನೂ, ಅವನ ಸಂಗಡ ಹಮಾತಿ
ನ ಪ್ರವೇಶ ಮೊದಲುಗೊಂಡು ಐಗುಪ್ತದ ನದಿಯ ಮಟ್ಟಿಗೂ ಇ
ರುವ ಮಹಾ ಕೂಟವಾದ ಸಮಸ್ತ ಇಸ್ರಯೇಲ್ಯರೂ ನಮ್ಮ ದೇ
ವರಾದ ಕರ್ತನ ಮುಂದೆ ಏಳೇಳು ಹದಿನಾಲ್ಕು ದಿವಸ ಹಬ್ಬವ
೬೬ ನ್ನು ಮಾಡಿದರು. ಎಂಟನೇ ದಿನದಲ್ಲಿ ಅವನು ಜನರಿಗೆ ಅಪ್ಪಣೆ
ಯನ್ನು ಕೊಟ್ಟನು. ಆಗ ಅವರು ಅರಸನನ್ನು ಆಶೀರ್ವದಿಸಿ,
ಕರ್ತನು ತನ್ನ ಸೇವಕನಾದ ದಾವೀದನಿಗೋಸ್ಕರವೂ ತನ್ನ ಜ
ನರಾದ ಇಸ್ರಯೇಲ್ಯರಿಗೋಸ್ಕರವೂ ಮಾಡಿದ ಸಮಸ್ತ ಉಪಕಾರ
ದ ನಿಮಿತ್ತ ಸಂತೋಷ ಪಟ್ಟು, ಹೃದಯದಲ್ಲಿ ಆನಂದವುಳ್ಳವ
ರಾಗಿ ತಮ್ಮ ತಮ್ಮ ಗುಡಾರಗಳಿಗೆ ಹೋದರು.

## ೯. ಸಂಧಿ.

೧ ಸೊಲೊಮೋನನು ಕರ್ತನ ಮನೆಯನ್ನೂ ಅರಮನೆಯ
ನ್ನೂ ಸೊಲೊಮೋನನು ಮಾಡ ಆಶೆಯಿಂದ ಇಚ್ಛೈಸಿದ್ದನ್ನೆ
೨ ಲ್ಲಾ ಕಟ್ಟಿಸಿ, ತೀರಿಸಿದ ತರುವಾಯ ಏನಾಯಿತಂದರೆ, ಕರ್ತನು
ಸೊಲೊಮೋನನಿಗೆ ಗಿಬ್ಯೋನಿನಲ್ಲಿ ಪ್ರತ್ಯಕ್ಷವಾದ ಹಾಗೆ ಎರಡನೇ
ಸಾರಿ ಅವನಿಗೆ ಪ್ರತ್ಯಕ್ಷವಾದನು.

೩ ಆಗ ಕರ್ತನು ಅವನಿಗೆ, ನೀನು ನನ್ನ ಮುಂದೆ ಮಾಡಿದ ನಿ
ನ್ನ ಪ್ರಾರ್ಥನೆಯನ್ನೂ ನಿನ್ನ ವಿಜ್ಞಾಪನೆಯನ್ನೂ ನಾನು ಕೇಳಿ,
ಯುಗ ಯುಗಕ್ಕೂ ನನ್ನ ನಾಮವು ಅಲ್ಲಿರುವ ಹಾಗೆ, ನೀನು ಕ
೪ ಟ್ಟಿಸಿದ ಈ ಮನೆಯನ್ನು ಪರಿಶುದ್ಧ ಮಾಡಿದೆನು; ನನ್ನ ಕಣ್ಣುಗ
ಳೂ ನನ್ನ ಹೃದಯವೂ ನಿತ್ಯವಾಗಿ ಅಲ್ಲಿರುವವು. ನಾನು ನಿನ
ಗೆ ಆಜ್ಞಾಪಿಸಿದ ಪ್ರಕಾರ ಮಾಡುವ ಹಾಗೆ, ನನ್ನ ಕಟ್ಟಳೆಗಳನ್ನೂ
ನನ್ನ ನ್ಯಾಯಗಳನ್ನೂ ಕೈ ಕೊಂಡು, ಹೃದಯದ ಸಂಪೂ
ರ್ಣತೆಯಲ್ಲಿಯೂ ನೆಟ್ಟನೆತನದಲ್ಲಿಯೂ ನಿನ್ನ ತಂದೆಯಾದ
೫ ದಾವೀದನು ನಡೆದ ಪ್ರಕಾರ, ನೀನು ನನ್ನ ಮುಂದೆ ನಡೆದರೆ, ಇಸ್ರ
ಯೇಲಿನ ಸಿಂಹಾಸನದ ಮೇಲೆ ಕುಳ್ಳಿತು ಕೊಳ್ಳ, ನಿನಗೆ ಮನುಷ್ಯ
ನು ಕೊರತೆಯಾಗುವದಿಲ್ಲವೆಂದು, ನಾನು ನಿನ್ನ ತಂದೆಯಾದ
ದಾವೀದನಿಗೆ ಮಾತು ಕೊಟ್ಟ ಪ್ರಕಾರ, ಇಸ್ರಯೇಲಿನಲ್ಲಿ ನಿನ್ನ
೬ ರಾಜ್ಯನ ಸಿಂಹಾಸನವನ್ನು ನಿರಂತರವಾಗಿ ಸ್ಥಿರ ಪಡಿಸುವೆನು. ಆ
ದರೆ ನೀವಾದರೂ ನಿಮ್ಮ ಮಕ್ಕಳಾದರೂ ನಾನು ನಿಮ್ಮ ಮುಂದೆ
ಇಟ್ಟ ಆಜ್ಞೆಗಳನ್ನೂ ಕಟ್ಟಳೆಗಳನ್ನೂ ಕೈ ಕೊಳ್ಳದೆ, ನನ್ನ ಕ
೭ ಡೆಯಿಂದ ತಿರುಗೇ ತಿರುಗಿ ಹೋಗಿ, ಅನ್ಯ ದೇವರುಗಳನ್ನು ಸೇ
ವಿಸಿ, ಅವುಗಳಿಗೆ ಅಡ್ಡ ಬಿದ್ದರೆ, ಆಗ ನಾನು ಇಸ್ರಯೇಲಿಗೆ ಕೊ
ಟ್ಟ ಭೂಮಿಯಲ್ಲಿಂದ ಅವರನ್ನು ಕಡಿದು ಬಿಟ್ಟು, ನನ್ನ ನಾಮ
ಕ್ಕೋಸ್ಕರ ಪರಿಶುದ್ಧ ಮಾಡಿದ ಈ ಮನೆಯನ್ನು ನನ್ನ ದೃಷ್ಟಿ
೮ ಗೆದುರಿನಿಂದ ಬಿಸಾಟು ಬಿಡುವೆನು. ಇಸ್ರಯೇಲು ಸಮಸ್ತ ಜನಗ
ಳಲ್ಲಿ ಗಾಳಿಯಾಗಿಯೂ ಅಪಹಾಸ್ಯವಾಗಿಯೂ ಇರುವದು. ಇ
ದಲ್ಲದೆ ಈ ಎತ್ತರವಾಗಿರುವ ಮನೆಯನ್ನು ಹಾದು ಹೋಗುವವ
ರೆಲ್ಲರು, ಅದಕ್ಕೆ ಆಶ್ಚರ್ಯ ಪಟ್ಟು, ಛೀ ಅಂದು, ಕರ್ತನು ಈ
ದೇಶಕ್ಕೂ ಈ ಮನೆಗೂ ಹೀಗೆಯ ಮಾಕೆ ಮಾಡಿದನೆಂದು, ಅ
೯ ನ್ನುವರು. ಅವರು ಪ್ರತ್ಯುತ್ತರವಾಗಿ ತಮ್ಮ ತಂದೆಗಳನ್ನು ಐಗು
ಪ್ತ ದೇಶದೊಳಗಿಂದ ಬರ ಮಾಡಿದ ತಮ್ಮ ದೇವರಾದ ಕರ್ತನ
ನ್ನು ಬಿಟ್ಟು ಬಿಟ್ಟು, ಅನ್ಯ ದೇವರುಗಳನ್ನು ಹೊಂದಿ ಕೊಂಡು,
ಅವುಗಳಿಗೆ ಅಡ್ಡ ಬಿದ್ದು, ಸೇವಿಸಿದ್ದರಿಂದ, ಕರ್ತನು ಈ ಕೇಡನ್ನೆ
ಲ್ಲಾ ಅವರ ಮೇಲೆ ಬರ ಮಾಡಿದನೆಂದು, ಹೇಳುವರು.

೧೦ ಜೋರಿನ ಅರಸನಾದ ಹಿರಾಮನು ಸೊಲೊಮೋನನಿಗೆ ದೇ
ವದಾರು ಮರಗಳನ್ನೂ ತುರಾಯಿ ಮರಗಳನ್ನೂ ಚಿನ್ನವನ್ನೂ
೧೧ ತನ್ನ ಸಮಸ್ತ ಇಚ್ಛೆಯ ಪ್ರಕಾರ ಕೊಟ್ಟಿದ್ದರಿಂದ, ಇಪ್ಪತ್ತು ವರು
ಷಗಳಾದ ತರುವಾಯ, ಸೊಲೊಮೋನನು ಆ ಎರಡು ಮನೆಗಳ
ನ್ನು—ಕರ್ತನ ಮನೆಯನ್ನೂ ಅರಮನೆಯನ್ನೂ—ಕಟ್ಟಿಸಿ ತೀರಿ
ಸಿದಾಗ, ಸೊಲೊಮೋನನು ಗಲಿಲಾಯ ದೇಶದಲ್ಲಿ ಹಿರಾಮನಿಗೆ
೧೨ ಇಪ್ಪತ್ತು ಪಟ್ಣಗಳನ್ನು ಕೊಟ್ಟನು. ಆಗ ಹಿರಾಮನು ಜೋರಿನಿಂದ
ಸೊಲೊಮೋನನು ತನಗೆ ಕೊಟ್ಟ ಪಟ್ಣಗಳನ್ನು ನೋಡ ಬಂದನು.
೧೩ ಅದರೆ ಅವು ಅವನ ಕಣ್ಣುಗಳಿಗೆ ಸರಿಯಾಗಿರಲಿಲ್ಲ. ಅದರಿಂದ
ಅವನು, ನನ್ನ ಸಹೋದರನೇ, ನೀನು ನನಗೆ ಕೊಟ್ಟ ಈ ಪಟ್ಣಗ
ಳೇನಿಂದು ಹೇಳಿ, ಅವುಗಳಿಗೆ ಕಬೂಲು ದೇಶವೆಂದು ಹೆಸರಿಟ್ಟನು.
೧೪ ಇಂದಿನ ವರಿಗೂ ಅದೇ ಹೆಸರು. ಹಿರಾಮನು ಅರಸನಿಗೆ ನೂರ
ಇಪ್ಪತ್ತು ತಲಾಂತುಗಳ ಚಿನ್ನವನ್ನು ಕಳುಹಿಸಿದನು.

೧೫ ಅರಸನಾದ ಸೊಲೊಮೋನನು ಬಿಟ್ಟ ಆಳುಗಳನ್ನು ಕೂಡಿಸಿ
ದ ಕಾರಣವೇನಂದರೆ, ಕರ್ತನ ಮಂದಿರವನ್ನೂ, ತನ್ನ ಮನೆಯ
ನ್ನೂ, ಮಿಲ್ಲೋವನ್ನೂ, ಯೆರೂಸಲೇಮಿನ ಗೋಡೆಯನ್ನೂ,
ಹಜೋರನ್ನೂ, ಮೆಗಿದ್ದೋನನ್ನೂ, ಗೇಜರನ್ನೂ ಕಟ್ಟುವದ
೧೬ ಕ್ಕೋಸ್ಕರವೇ. ಐಗುಪ್ತದ ಅರಸನಾದ ಫರೋನನು ಏರಿ ಹೋ

೧೨ ಗಿ, ಗೇಜರನ್ನು ತೆಗೆದು ಕೊಂಡು, ಅದನ್ನು ಪೆಂಕಿಯಿಂದ ಸುಟ್ಟು
ಬಿಟ್ಟು, ಪಟ್ಟಣದಲ್ಲಿ ವಾಸವಾಗಿದ್ದ ಕನಾನ್ಯರನ್ನು ಕೊಂದು, ಸೊ
ಲೊಮೋನನ ಹೆಂಡತಿಯಾದ ತನ್ನ ಮಗಳಿಗೆ ಅದನ್ನು ಉಂಬಳಿ
೧೩ ಗೆಯಾಗಿ ಕೊಟ್ಟನು. ಹೀಗೆಯೇ ಸೊಲೊಮೋನನು ಗೇಜರ
ನ್ನು ಕೆಳಗಿರುವ ಬೆಥೋರನನ್ನೂ ಬಾಳತನ್ನೂ ಅಡವಿಯಲ್ಲಿರು
೧೪ ವ ತದ್ಮೋರನ್ನೂ ದೇಶದಲ್ಲಿ ಕಟ್ಟಿಸಿದನು. ಇದಲ್ಲದೆ ಸೊಲೊ
ಮೋನನು ತನಗೆ ಉಂಟಾದ ಉಗ್ರಾಣದ ಪಟ್ಟಣಗಳನ್ನೂ, ತನ್ನ
೧೫ ರಥಗಳಿಗೋಸ್ಕರ ಪಟ್ಟಣಗಳನ್ನೂ, ತನ್ನ ರಾಹುತರಿಗೋಸ್ಕರ
ಪಟ್ಟಣಗಳನ್ನೂ, ಯೆರೂಸಲೇಮಿನಲ್ಲಿಯೂ ಲೆಬನೋನಿನಲ್ಲಿಯೂ
ತಾನು ಆಳುವ ದೇಶವೆಲ್ಲಾದರಲ್ಲಿಯೂ ಕಟ್ಟ ಇಚ್ಛೈಸಿದ್ದನೆಲ್ಲಾ
ಕಟ್ಟಿಸಿದನು.
೧೦ ಇಸ್ರಯೇಲಿನ ಮಕ್ಕಳಲ್ಲದೆ, ಅಮೋರ್ಯರು, ಹಿತ್ತಿಯರು,
ಪೆರಿಜ್ಜಿಯರು, ಹಿವ್ವಿಯರು, ಯೆಬೂಸ್ಯರು, ಇವರಲ್ಲಿ ಉಳಿದ
೨೦ ಸಮಸ್ತ ಜನರೂ, ಇವರ ತರುವಾಯ ದೇಶದಲ್ಲಿ ಉಳಿದ, ಇಸ್ರ
ಯೇಲ ಮಕ್ಕಳು ನಿರ್ಮೂಲ ಮಾಡ ಕೂಡದ ಅವರ ಮಕ್ಕ
ಳೂ, ಇವರ ಮೇಲೆ ಸೊಲೊಮೋನನು ಇಂದಿನ ವರಿಗೂ ದಾ
೨೧ ಸತ್ವದ ಬಿಟ್ಟಿ ನೇಮಕವನ್ನಿಟ್ಟನು. ಆದರೆ ಇಸ್ರಯೇಲಿನ ಮ
ಕ್ಕಳನ್ನು ಸೊಲೊಮೋನನು ದಾಸರಾಗ ಮಾಡಲಿಲ್ಲ; ಅವರು
ಯುದ್ಧಸ್ಥರಾಗಿಯೂ, ತನ್ನ ಸೇವಕರಾಗಿಯೂ, ತನ್ನ ಕೈ
ಕೆಳಗಿರುವ ತನ್ನ ಪ್ರಧಾನರಾಗಿಯೂ, ಅಧಿಕಾರಿಗಳಾಗಿಯೂ,
ತನ್ನ ರಥಗಳನ್ನು ನಡಿಸುವವರಾಗಿಯೂ, ತನ್ನ ರಾಹುತರಾಗಿ
೨೩ ಯೂ ಇದ್ದರು. ಇವರೊಳಗೆ ಐನೂರ ಐವತ್ತು ಮಂದಿ ಸೊಲೊ
ಮೋನನ ಕೆಲಸದ ಪ್ರಧಾನರಾದ ಅಧಿಕಾರಿಗಳಾಗಿದ್ದರು. ಇವರು
ಕೆಲಸದಲ್ಲಿ ಕಟ್ಟು ಪಡುವ ಜನರ ಮೇಲೆ ಅಧಿಕಾರಿಗಳಾಗಿದ್ದರು.
೨೪ ಆದರೆ ಫರೋನನ ಮಗಳು ದಾವೀದನ ಪಟ್ಟಣದಿಂದ ತನಗೋ
ಸ್ಕರ ಸೊಲೊಮೋನನು ಕಟ್ಟಿಸಿದ ಪಟ್ಟಣಕ್ಕೆ ಬಂದಳು. ಆಗಲ
ವನು ಮಿಲ್ಲೋವನ್ನು ಕಟ್ಟಿಸಿದನು.
೨೫ ವರುಷಕ್ಕೆ ಮೂರು ಸಾರಿ ಸೊಲೊಮೋನನು ಕರ್ತನಿಗೆ
ತಾನು ಕಟ್ಟಿಸಿದ ಬಲಿಪೀಠದ ಮೇಲೆ ಹೋಮಗಳನ್ನೂ ಸಮಾ
ಧಾನದ ಬಲಿಗಳನ್ನೂ ಅರ್ಪಿಸಿ, ಕರ್ತನ ಮುಂದಿರುವ ಪೀಠದ
ಮೇಲೆ ಧೂಪವನ್ನು ಸುಟ್ಟನು. ಹೀಗೆಯೇ ಅವನು ಮನೆಯ
ನ್ನು ಶೀರಿಸಿದನು.
೨೬ ಇದಲ್ಲದೆ ಅರಸನಾದ ಸೊಲೊಮೋನನು ಎದೋಮ್ ದೇಶದ
ಆಪಿನ ಸಮುದ್ರ ತೀರದ ಎಲೋತಿನ ಬಳಿಯಲ್ಲಿರುವ ಎಜ್ಯೊನ್ಗೇ
೨೭ ಬರಿನಲ್ಲಿ ಹಡಗಗಳನ್ನು ಮಾಡಿಸಿದನು. ಹಿರಾಮನು ಹಡಗಳ
ಲ್ಲಿ ಸಮುದ್ರ ಪ್ರವರ್ತಕರಾದ ನಾವಿಕರಾಗಿರುವ ತನ್ನ ಸೇವಕರ
ನ್ನು ಸೊಲೊಮೋನನ ಸೇವಕರ ಸಂಗಡ ಕಳುಹಿಸಿದನು.
೨೮ ಅವರು ಓಫಿರಿಗೆ ಹೋಗಿ, ಅಲ್ಲಿಂದ ನಾನೂರ ಇಪ್ಪತ್ತು ಭಂಗಾ
ರದ ತಲಾಂತುಗಳನ್ನು ಅರಸನಾದ ಸೊಲೊಮೋನನಿಗೆ ತ
ಕ್ಕೊಂಡು ಬಂದರು.

## ೧೦. ಸಂಧಿ.

೧ ಆದರೆ ಶೇಬದ ರಾಣಿಯು ಕರ್ತನ ನಾಮವನ್ನು ಕುರಿತು
ಸೊಲೊಮೋನನ ಕೀರ್ತಿಯನ್ನು ಕೇಳಿದಾಗ, ಬಗಟೆಗಳಿಂದ ಅ
೨ ವನನ್ನು ಪರೀಕ್ಷಿಸ ಬಂದಳು. ಅವಳು ಮಹಾ ಗುಂಪಿನ ಸಂಗಡ
ಲೂ, ಸುಗಂಧಗಳನ್ನೂ ಬಹು ಹೆಚ್ಚಾದ ಚಿನ್ನವನ್ನೂ ಅಮೂ
ಲ್ಯವಾದ ಕಲ್ಲುಗಳನ್ನೂ ಹೊರುವ ಒಂಟೆಗಳ ಸಂಗಡಲೂ ಬಂದ
ಳು. ಅವಳು ಸೊಲೊಮೋನನ ಬಳಿಗೆ ಬಂದ ಮೇಲೆ, ತನ್ನ ಹೃ
ದಯದಲ್ಲಿ ಇದ್ದ ಎಲ್ಲವನ್ನು ಕುರಿತು ಅವನ ಸಂಗಡ ಮಾತಾಡಿ
೩ ದಳು. ಆಗ ಸೊಲೊಮೋನನು ಅವಳ ಮಾತುಗಳನ್ನೆಲ್ಲಾ ಅ
ವಳಿಗೆ ತಿಳಿಸಿದನು. ಅವಳಿಗೆ ತಿಳಿಸದಂಥ, ಅರಸನಿಗೆ ಮರೆಯಾ
೪ ಗಿದ್ದಂಥಾದ್ದು ಒಂದೂ ಇರಲಿಲ್ಲ. ಶೇಬದ ರಾಣಿಯು ಸೊಲೊಮೋ
೫ ನನ ಸಮಸ್ತ ಜ್ಞಾನವನ್ನೂ, ಅವನು ಕಟ್ಟಿಸಿದ ಮನೆಯನ್ನೂ, ಅ
ವನ ಮೇಜಿನ ಭೋಜನವನ್ನೂ, ಅವನ ದಾಸರ ಕೂತಿರುಬಕೆಯ
ನ್ನೂ, ಅವನ ಸೇವಕರು ನಿಂತಿರುವದನ್ನೂ, ಅವರ ವಸ್ತ್ರಗಳ
ನ್ನೂ, ಅವನ ಪಾನದಾಯಕರನ್ನೂ, ಅವನು ಕರ್ತನ ಮನೆಗೆ
ಏರಿ ಹೋಗುವ ಮಾರ್ಗವನ್ನೂ ನೋಡಿದಾಗ, ಅವಳಲ್ಲಿ ಆತ್ಮ
ಇಲ್ಲದೆ ಹೋಯಿತು. ಮತ್ತು ಅವಳು ಅರಸನಿಗೆ ಹೇಳಿದ್ದೇನಂ
೬ ದರೆ—ನಾನು ನನ್ನ ದೇಶದಲ್ಲಿ ನಿನ್ನ ಕ್ರಿಯೆಗಳನ್ನು ಕುರಿತೂ,
ನಿನ್ನ ಜ್ಞಾನವನ್ನು ಕುರಿತೂ ನಾನು ಕೇಳಿದ ಮಾತು ಸತ್ಯವು.
೭ ಆದರೆ ನಾನು ಬಂದು, ನನ್ನ ಕಣ್ಣುಗಳಿಂದ ನೋಡುವ ಮಟ್ಟಿಗೂ,
ಆ ಮಾತುಗಳನ್ನು ನಂಬದೆ ಹೋದೆನು. ಇಗೋ, ಅರ್ಧವು ನನ
ಗೆ ಹೇಳಲ್ಪಟ್ಟಿದ್ದಿಲ್ಲ; ನಿನ್ನ ಜ್ಞಾನವೂ ನಿನ್ನ ಐಶ್ವರ್ಯತನವೂ ನಾ
೮ ನು ಕೇಳಿದ ಕೀರ್ತಿಗಿಂತ ಅಧಿಕವಾಗಿರುವದು. ನಿನ್ನ ಮನುಷ್ಯ
ರು ಭಾಗ್ಯವಂತರು; ನಿನ್ನ ಮುಂದೆ ಯಾವಾಗಲೂ ನಿಂತು, ನಿ
ನ್ನ ಜ್ಞಾನವನ್ನು ಕೇಳುವ ಈ ನಿನ್ನ ಸೇವಕರು ಭಾಗ್ಯವಂತರು.
೯ ನಿನ್ನನ್ನು ಇಸ್ರಯೇಲಿನ ಸಿಂಹಾಸನದ ಮೇಲೆ ಕೂಡ್ರಿಸುವ ಹಾ
ಗೆ ನಿನ್ನಲ್ಲಿ ಇಷ್ಟ ಪಟ್ಟ ನಿನ್ನ ದೇವರಾದ ಕರ್ತನು ಅಪೇಕ್ಷಿದಿ
ಸಲ್ಪಡಲಿ. ಕರ್ತನು ಯುಗ ಯುಗಕ್ಕೂ ಇಸ್ರಯೇಲನ್ನು ಪ್ರೀ
ತಿ ಮಾಡಿದ್ದರಿಂದ, ನ್ಯಾಯವನ್ನೂ ನೀತಿಯನ್ನೂ ನಡಿಸ ಅವ
ನು ನಿನ್ನನ್ನು ಅರಸನಾಗ ಮಾಡಿದನು. ಮತ್ತು ಅವಳು ಅರಸ
೧೦ ನಿಗೆ ನೂರ ಇಪ್ಪತ್ತು ತಲಾಂತು ತೂಕ ಚಿನ್ನವನ್ನೂ ಬಹು ಹೆ
ಚ್ಚಾದ ಸುಗಂಧಗಳನ್ನೂ ಅಮೂಲ್ಯವಾದ ಕಲ್ಲುಗಳನ್ನೂ ಕೊ
ಟ್ಟಳು. ಶೇಬದ ರಾಣಿಯು ಅರಸನಾದ ಸೊಲೊಮೋನನಿಗೆ
ಕೊಟ್ಟ ವಿಸ್ತಾರವಾದ ಸುಗಂಧಗಳ ಹಾಗೆ ಇನ್ನೂ ಬಂದಿದ್ದಿಲ್ಲ.
೧೧ ಇದಲ್ಲದೆ ಓಫಿರಿನಿಂದ ಭಂಗಾರವನ್ನು ತಂದ ಹಿರಾಮನ ಹಡ
ಗಳು ಓಫಿರಿನಿಂದ ಅನೇಕ ಅಲ್ಮುಗ್ ಮರಗಳನ್ನೂ ಅಮೂಲ್ಯ
೧೨ ವಾದ ಕಲ್ಲುಗಳನ್ನೂ ತಂದವು. ಅರಸನು ಅಲ್ಮುಗ್ ಮರಗಳಿಂ
ದ ಕರ್ತನ ಮನೆಗೋಸ್ಕರವೂ, ಅರಸನ ಮನೆಗೋಸ್ಕರವೂ
ಸ್ತಂಭಗಳನ್ನು ಮಾಡಿಸಿದನು. ಇದಲ್ಲದೆ ಅವುಗಳಿಂದ ಹಾಡುವ
ವರಿಗೋಸ್ಕರ ಕಿನ್ನರಿಗಳನ್ನೂ ವೀಣೆಗಳನ್ನೂ ಮಾಡಿಸಿದನು.
ಈ ದಿನದ ವರಿಗೂ ಅಂಥಾ ಅಲ್ಮುಗ್ ಮರಗಳು ಬಂದದ್ದೂ ಕಂ
೧೩ ಡದ್ದೂ ಇಲ್ಲ. ಅರಸನಾದ ಸೊಲೊಮೋನನು ಶೇಬದ ರಾಣಿಗೆ
ರಾಜ್ಯದಾನವಾಗಿ ಕೊಟ್ಟದ್ದು ಹೊರ್ತಾಗಿ, ಅವಳು ಇಚ್ಛೈಸಿ
ಕೇಳಿದ್ದನ್ನೆಲ್ಲಾ ಸೊಲೊಮೋನನು ಅವಳಿಗೆ ಕೊಟ್ಟನು. ಆಗ
ತಿರುಗಿ ಕೊಂಡು, ಅವಳೂ ಅವಳ ಸೇವಕರೂ ತಮ್ಮ ದೇಶಕ್ಕೆ
ಹೋದರು.
೧೪ ಆದರೆ ವರ್ತಕರಿಂದಲೂ ವರ್ತಕರ ವ್ಯಾಪಾರದಿಂದಲೂ, ಅ
ರಬ್ಬಿಯ ಅರಸುಗಳಿಂದಲೂ ದೇಶದ ಅಧಿಪತಿಗಳಿಂದಲೂ ಬಂದ
೧೫ ಭಂಗಾರದ ಹೊರ್ತಾಗಿ, ಒಂದೇ ವರುಷದಲಿ ಸೊಲೊಮೋನನಿ



ಗೆ ಬಂದ ಭಂಗಾರವು ಆರು ನೂರ ಅರುವತ್ತಾರು ತಲಾಂತು
ತೂಕವಾಗಿತ್ತು.
೧೬ ಮತ್ತು ಅರಸನಾದ ಸೊಲೊಮೋನನು ಅರಬಂಜಿಯಿಂದ ಇ
ನ್ನೂರು ಖೇಡ್ಯಗಳನ್ನು ಮಾಡಿಸಿದನು. ಒಂದೊಂದು ಖೇಡ್ಯಕ್ಕೆ
೧೭ ಆರು ನೂರು ಶೆಕೆಲು ತೂಕ ಭಂಗಾರವಿತ್ತು. ಹಾಗೆಯೇ ಅರ
ಬಂಜಿಯಿಂದ ಮುನ್ನೂರು ಗುರಾಣಿಗಳನ್ನು ಮಾಡಿಸಿದನು. ಒಂ
ದೊಂದು ಗುರಾಣಿಗೆ ಮೂರು ಮನಾ ತೂಕ ಭಂಗಾರವಿತ್ತು.
ಅರಸನು ಇವುಗಳನ್ನು ಲೆಬನೋನಿನ ಅಡವಿಯ ಮನೆಯಲ್ಲಿ ಇ
ಟ್ಟನು.
೧೮ ಇದಲ್ಲದೆ ಅರಸನು ದಂತದಿಂದ ದೊಡ್ಡ ಸಿಂಹಾಸನವನ್ನು
೧೯ ಮಾಡಿಸಿ, ಅದನ್ನು ಅಪರಂಜಿಯಿಂದ ಹೊದಿಗಿಸಿದನು. ಈ ಸಿಂ
ಹಾಸನಕ್ಕೆ ಆರು ಪಾವಟಿಗೆಗಳಿದ್ದವು. ಈ ಸಿಂಹಾಸನದ ಮೆಲೇ
ಹಿಂಭಾಗವು ದುಂಡಾಗಿತ್ತು. ಮತ್ತು ಕಾಲಿನ ಕೊಳ್ಳುವ ಸ್ಥಳದ
ಎರಡು ಪಾರ್ಶ್ವಗಳಲ್ಲಿ ಕೈಗಳಿದ್ದವು. ಆ ಕೈಗಳ ಬಳಿಯಲ್ಲಿ ಎ
೨೦ ರಡು ಸಿಂಹಗಳು ನಿಂತಿದ್ದವು. ಹನ್ನೆರಡು ಸಿಂಹಗಳು ಆರು ಪಾವ
ಟಿಗೆಗಳ ಮೇಲೆ ಎರಡು ಪಾರ್ಶ್ವಗಳಲ್ಲಿ ನಿಂತಿದ್ದವು. ಯಾವ
೨೧ ರಾಜ್ಯದಲ್ಲಿಯೂ ಅಂಥಾದ್ದು ಇದ್ದದ್ದಿಲ್ಲ. ಇದಲ್ಲದೆ ಅರಸನಾದ
ಸೊಲೊಮೋನನು ಕುಡಿಯುವ ಪಾತ್ರೆಗಳೆಲ್ಲಾ ಭಂಗಾರದವು
ಗಳಾಗಿದ್ದವು. ಲೆಬನೋನಿನ ಅಡವಿಯ ಮನೆಯ ಪಾತ್ರೆಗಳೆ
ಲ್ಲಾ ಹಾಗೆಯೇ ಅಪರಂಜಿಯವುಗಳಾಗಿದ್ದವು. ಬೆಳ್ಳಿಯಾದದು
ಯಾವದೂ ಇಲ್ಲ. ಸೊಲೊಮೋನನ ದಿವಸಗಳಲ್ಲಿ ಅದು ಏನು
೨೨ ಇಲ್ಲದ್ದಾಗಿ ಎಣಿಸಲ್ಪಟ್ಟಿತ್ತು. ಯಾಕಂದರೆ ಹಿರಾಮನ ಹಡಗಗ
ಳ ಸಂಗಡ ಅರಸನಿಗೆ ತಾರ್ಷಿಷಿನ ಹಡಗಗಳು ಸಮುದ್ರದ ಮೇ
ಲೆ ಉಂಟಾಗಿದ್ದವು. ಮೂರು ವರುಷಕ್ಕೆ ಒಂದು ಸಾರಿ ತರ್ಷೀ
ಷಿನ ಹಡಗಗಳು ಭಂಗಾರವನ್ನೂ, ಬೆಳ್ಳಿಯನ್ನೂ, ದಂತವ
ನ್ನೂ, ಕೋತಿಗಳನ್ನೂ, ನವಿಲುಗಳನ್ನೂ ತಕ್ಕೊಂಡು ಬರು
ತ್ತಾ ಇದ್ದವು.
೨೩ ಹೀಗೆಯೇ ಅರಸನಾದ ಸೊಲೊಮೋನನು ಐಶ್ವರ್ಯದಿಂದ
ಲೂ ಜ್ಞಾನದಿಂದಲೂ ಭೂಲೋಕದ ಸಮಸ್ತ ಅರಸುಗಳಿಗಿಂತ
೨೪ ದೊಡ್ಡವನಾಗಿದ್ದನು. ಮತ್ತು ದೇವರು ಸೊಲೊಮೋನನ ಹೃ
ದಯದಲ್ಲಿ ಉಂಟು ಮಾಡಿದ ಅವನ ಜ್ಞಾನವನ್ನು ಕೇಳುವದಕ್ಕಾ
ಗಿ, ಭೂಮಿಯಲ್ಲಿರುವ ಸಮಸ್ತರೂ ಅವನ ಮುಖ ದರ್ಶನವನ್ನು
೨೫ ಹುಡುಕಿದರು. ಅವರವರು ಕಾಣಿಕೆಯಾಗಿ ಬೆಳ್ಳಿಯ ಪಾತ್ರೆಗ
ಳನ್ನೂ, ಭಂಗಾರದ ಪಾತ್ರೆಗಳನ್ನೂ, ವಸ್ತ್ರಗಳನ್ನೂ, ಆಯು
ಧಗಳನ್ನೂ ಸುಗಂಧಗಳನ್ನೂ ಕುದುರೆಗಳನ್ನೂ, ಹಾಸರ ಕತ್ತೆ
ಗಳನ್ನೂ, ವರುಷ ವರುಷಕ್ಕೂ ನೇಮಕದ ಪ್ರಕಾರ ತರುತ್ತಾ
ಇದ್ದರು.
೨೬ ಇದಲ್ಲದೆ ಸೊಲೊಮೋನನು ರಥಗಳನ್ನೂ ರಾಹುತರನ್ನೂ
ಕೂಡಿಸಿದನು. ಅವನಿಗೆ ಸಾವಿರದ ನಾನೂರು ರಥಗಳು, ಪಟ್ಟ
ಗಳಲ್ಲಿಯೂ ಅರಸನ ಬಳಿಯ ಯೆರೂಸಲೇಮಿನಲ್ಲಿಯೂ ತಾ
ನು ಇರಿಸಿದ ಹನ್ನೆರಡು ಸಾವಿರ ಕುದುರೆ ರಾಹುತರೂ ಇದ್ದರು.
೨೭ ಮತ್ತು ಅರಸನು ಯೆರೂಸಲೇಮಿನಲ್ಲಿ ಬೆಳ್ಳಿಯನ್ನು ಕಲ್ಲುಗಳ
ಹಾಗೆಯೂ, ದೇವದಾರುಗಳನ್ನು ತಗ್ಗಿನಲ್ಲಿರುವ ಹಿಪ್ಪಲಿ ಗಿಡಗ
೨೮ ಳ ಹಾಗೆಯೂ ಬಹಳವಾಗ ಮಾಡಿದನು. ಇದಲ್ಲದೆ ಸೊಲೊ
ಮೋನನಿಗೆ ಐಗುಪ್ತದಿಂದ ಕುದುರೆಗಳೂ ಸಣಬಿನ ನೂಲೂ ತರ
ಲ್ಪಟ್ಟವು. ಅರಸನ ವರ್ತಕರು ಕ್ರಯಕ್ಕೆ ಸಣಬಿನ ನೂಲನ್ನು
೨೯ ತೆಗೆದು ಕೊಂಡರು. ಐಗುಪ್ತದಿಂದ ಹೊರಟು ಏರಿ ಬರುವ ರಥ
ದ ಕ್ರಯ ಆರು ನೂರು ಬೆಳ್ಳಿ ಶೆಕೆಲುಗಳು; ಕುದುರೆಯ ಕ್ರಯ
ನೂರ ಐವತ್ತು ಬೆಳ್ಳಿ ಶೆಕೆಲುಗಳು. ಈ ಪ್ರಕಾರ ಹಿತ್ತಿಯರ ಅ
ರಸುಗಳೆಲ್ಲರಿಗೂ ಅರಾಮ್ಯದ ಅರಸುಗಳಿಗೂ ಅವರ ಕೈಯಿಂ
ದ ತಕ್ಕೊಂಡು ಬರುತ್ತಿದ್ದರು.

## ೧೧. ಸಂಧಿ.

೧ ಆದರೆ ಅರಸನಾದ ಸೊಲೊಮೋನನು ಫರೋನ ಮಗಳ ಹೊ
ರ್ತಾಗಿ ಅನೇಕ ಅನ್ಯ ದೇಶಗಳ ಸ್ತ್ರೀಯರನ್ನು ಪ್ರೀತಿ ಮಾಡಿ
ದನು—ಮೋವಾಬ್ಯರನ್ನೂ, ಅಮ್ಮೋನ್ಯರನ್ನೂ, ಎದೋಮ್ಯರ
೨ ನ್ನೂ, ಚಿದೋನ್ಯರನ್ನೂ, ಹಿತ್ತಿಯರನ್ನೂ. ಈ ಜನಾಂಗಗಳ
ನ್ನು ಕುರಿತು ಕರ್ತನು ಇಸ್ರಯೇಲ ಮಕ್ಕಳಿಗೆ ಹೇಳಿದ್ದೇನಂದರೆ—
ನೀವು ಅವರ ಬಳಿಗೆ ಪ್ರವೇಶಿಸ ಬಾರದು; ಅವರು ನಿಮ್ಮ ಬಳಿಗೆ ಪ್ರ
ವೇಶಿಸ ಬಾರದು. ಅವರು ನಿಶ್ಚಯವಾಗಿ ನಿಮ್ಮ ಹೃದಯವನ್ನು
ತಮ್ಮ ದೇವರುಗಳ ಕಡೆಗೆ ತಿರುಗಿಸುವರು. ಅವರಿಗೆ ಸೊಲೊಮೋ
೩ ನನು ಪ್ರೀತಿಯಾಗಿ ಕೂಡಿ ಕೊಂಡನು. ಅವನಿಗೆ ಅರಸುಗಳ ಕು
ಮಾರ್ತೆಗಳಾದ ಏಳು ನೂರು ಮಂದಿ ಹೆಂಡರೂ, ಮುನ್ನೂರು
೪ ಮಂದಿ ಉಪಪತ್ನಿಗಳೂ ಇದ್ದರು. ಅವನ ಹೆಂಡರು ಅವನ ಹೃದ
ಯವನ್ನು ತೊಲಗಿಸಿದರು. ಸೊಲೊಮೋನನು ಮುದುಕನಾದ
ಕಾಲದಲ್ಲಿ ಏನಾಯಿತಂದರೆ, ಅವನ ಹೆಂಡರು ಅನ್ಯ ದೇವರುಗಳ
ಕಡೆಗೆ ಅವನ ಹೃದಯವನ್ನು ತೊಲಗ ಮಾಡಿದರು. ಅವನ
ಹೃದಯವು ತನ್ನ ತಂದೆಯಾದ ದಾವೀದನ ಹೃದಯದ ಹಾಗೆ,
ತನ್ನ ದೇವರಾದ ಕರ್ತನ ಸಂಗಡ ಪರಿಪೂರ್ಣವಾಗಿರಲಿಲ್ಲ.
೫ ಸೊಲೊಮೋನನು ಚಿದೋನ್ಯರ ದೇವತೆಯಾದ ಅಷ್ಟೋರತ
ನ್ನೂ, ಅಮ್ಮೋನ್ಯರ ಅಸಹ್ಯಕರವಾದ ಮಿಲ್ಕೋಮನ್ನೂ ಹಿಂ
ಬಾಲಿಸಿದನು. ಹೀಗೆಯೇ ಸೊಲೊಮೋನನು ತನ್ನ ತಂದೆಯಾ
೬ ದ ದಾವೀದನ ಹಾಗೆ ಕರ್ತನನ್ನು ಪೂರ್ಣವಾಗಿ ಹಿಂಬಾಲಿಸದೆ,
ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾಡಿದನು. ಆಗ ಸೊಲೊ
ಮೋನನು ಮೋವಾಬಿನ ಅಸಹ್ಯಕರವಾದ ಕೆಮೋಷಿಗೋಸ್ಕರ
ವೂ ಅಮ್ಮೋನಿನ ಮಕ್ಕಳ ಅಸಹ್ಯಕರವಾದ ಮೊಲೊಕನಿಗೋ
ಸ್ಕರವೂ ಯೆರೂಸಲೇಮಿಗೆದುರಾಗಿರುವ ಬೆಟ್ಟದಲ್ಲಿ ಎತ್ತರವಾದ
೭ ಸ್ಥಳವನ್ನು ಕಟ್ಟಿಸಿದನು. ಇದೇ ಪ್ರಕಾರ ತಮ್ಮ ದೇವರುಗಳಿಗೆ
ಧೂಪವನ್ನು ಸುಟ್ಟು, ಬಲಿಗಳನ್ನು ಅರ್ಪಿಸುವ ತನ್ನ ಅನ್ಯ ಜಾತಿ
ಯಾದ ಸಮಸ್ತ ಹೆಂಡರಿಗೋಸ್ಕರವೂ ಕಟ್ಟಿಸಿದನು.
೮ ಆದಕಾರಣ ಸೊಲೊಮೋನನಿಗೆ ಎರಡು ಸಾರಿ ಪ್ರತ್ಯಕ್ಷವಾದ
ಇಸ್ರಯೇಲಿನ ದೇವರಾದ ಕರ್ತನ ಕಡೆಯಿಂದ ಅವನ ಹೃದಯ
ವು ತೊಲಗಿ ಹೋದದರಿಂದ, ಕರ್ತನು ಅವನ ಮೇಲೆ ಕೋಪಿಸಿ
೧೦ ಕೊಂಡಿದ್ದನು. ಮತ್ತು ಅನ್ಯ ದೇವರುಗಳ ಹಿಂದೆ ಹೋಗ ಬಾ
ರದೆಂದು, ಆತನು ಇದನ್ನು ಕುರಿತು ಅವನಿಗೆ ಆಜ್ಞಾಪಿಸಿದ್ದನು.
ಆದರೆ ಅವನು ಕರ್ತನು ಆಜ್ಞಾಪಿಸಿದ್ದನ್ನು ಕೈಕೊಳ್ಳದೆ ಹೋದ
೧೧ ನು. ಆದಕಾರಣ ಕರ್ತನು ಸೊಲೊಮೋನನಿಗೆ ಹೇಳಿದ್ದೇನಂದ
ರೆ—ನೀನು ಹೀಗೆ ನಡೆದು, ನಾನು ನಿನಗೆ ಆಜ್ಞಾಪಿಸಿದ ನನ್ನ ಒಡಂ
ಬಡಿಕೆಯನ್ನೂ ನನ್ನ ಕಟ್ಟಳೆಗಳನ್ನೂ ಕೈಕೊಳ್ಳದೆ ಹೋದದ
ರಿಂದ, ನಿಶ್ಚಯವಾಗಿ ನಾನು ರಾಜ್ಯವನ್ನು ನಿನ್ನಿಂದ ಕಸುಕೊಂ

೧೨ ಡು, ಅದನ್ನು ನಿನ್ನ ಸೇವಕನಿಗೆ ಕೊಡುವೆನು. ಆದರೆ ನಿನ್ನ ತಂ
ದೆಯಾದ ದಾವೀದನಿಗೋಸ್ಕರ ನಿನ್ನ ಕಾಲದಲ್ಲಿ ನಾನು ಇದನ್ನು
ಮಾಡದೆ, ನಿನ್ನ ಮಗನ ಕೈಯೊಳಗಿಂದ ಅದನ್ನು ಕಸುಕೊಳ್ಳು
೧೩ ವೆನು. ಇದಲ್ಲದೆ ರಾಜ್ಯವನ್ನೆಲ್ಲಾ ನಾನು ಕಸುಕೊಳ್ಳದೆ, ನನ್ನ
ಸೇವಕನಾದ ದಾವೀದನಿಗೋಸ್ಕರವಾಗಿಯೂ, ನಾನು ಆರಿ
ಕೊಂಡ ಯೆರೂಸಲೇಮಿಗೋಸ್ಕರವಾಗಿಯೂ ನಿನ್ನ ಮಗನಿಗೆ
ಒಂದು ಕುಲವನ್ನು ಕೊಡುವೆನು.

೧೪ ಆಗ ಕರ್ತನು ಎದೋಮ್ಯನಾದ ಹದಾದನನ್ನು ಸೊಲೊ
೧೫ ಮೋನನಿಗೆ ಶತ್ರುವಾಗಿರ ಎಬ್ಬಿಸಿದನು. ಅವನು ಎದೋಮಿನಲ್ಲಿ
ಅರಸನ ಬೀಜದವನಾಗಿದ್ದನು. ಹ್ಯಾಗಂದರೆ ದಾವೀದನು ಎದೋ
ಮಿನಲ್ಲಿರುವಾಗ, ಸೈನ್ಯಾಧಿಪತಿಯಾದ ಯೊವಾಬನು ಎದೋಮಿ
೧೬ ನಲ್ಲಿ ಗಂಡಸರೆಲ್ಲರನ್ನು ಕೊಂದು ಹಾಕಿದ ತರುವಾಯ, ಕೊಂದು
ಹಾಕಲ್ಪಟ್ಟವರನ್ನು ಹೂಣಿಡ ಹೋದಾಗ, ಹದಾದನು ಇನ್ನೂ
ಚಿಕ್ಕ ಹುಡುಗನಾಗಿದ್ದು, ಅವನೂ ಅವನ ಸಂಗಡ ಅವನ ತಂದೆ
ಯ ಸೇವಕರಾದ ಎದೋಮ್ಯರಾದ ಕೆಲವರೂ ಐಗುಪ್ತದಲ್ಲಿ ಪ್ರ
೧೭ ವೇಶಿಸ ಓಡಿ ಹೋದರು. ಯಾಕಂದರೆ ಯೊವಾಬನು ಎದೋ
ಮಿನಲ್ಲಿರುವ ಗಂಡಸರೆಲ್ಲರನ್ನು ಸಂಹರಿಸುವ ಮಟ್ಟಿಗೂ, ಇಸ
ಯೇಲಿನ ಸಮಸ್ತ ಸೈನ್ಯದ ಸಂಗಡ ಅಲ್ಲಿ ಆರು ತಿಂಗಳು ಇ
ದ್ದನು.

೧೮ ಆದರೆ ಹದಾದನೂ ಅವನ ಸಂಗಡ ಇರುವವರೂ ಮಿದ್ಯಾನ
ನ್ನು ಬಿಟ್ಟು, ಪಾರಾನಿಗೆ ಬಂದು, ಪಾರಾನಿನಲ್ಲಿ ಮನುಷ್ಯರನ್ನು
ತೆಗೆದು ಕೊಂಡು, ಐಗುಪ್ತದಲ್ಲಿ ಪ್ರವೇಶಿಸಿ, ಐಗುಪ್ತದ ಅರಸನಾದ
ಫರೋನನ ಬಳಿಗೆ ಬಂದರು. ಅವನು ಇವನಿಗೆ ಮನೆಯನ್ನು ಕೊ
ಟ್ಟು, ಆಹಾರವನ್ನು ನೇಮಿಸಿ, ಭೂಮಿಯನ್ನು ಕೊಟ್ಟನು. ಇದ
೧೯ ಲ್ಲದೆ ಹದಾದನು ಫರೋನನ ದೃಷ್ಟಿಯಲ್ಲಿ ಅತಿ ಕೃಪೆಯನ್ನು
ಹೊಂದಿದನು. ಏನಂದರೆ ಅವನು ರಾಣಿಯಾಗಿರುವ ತನ್ನ ಹೆಂ
ಡತಿಯಾದ ತಹ್ಪೆಯೆಂಬವಳ ಸಹೋದರಿಯನ್ನು ಅವನಿಗೆ ಹೆಂ
೨೦ ಡತಿಯಾಗಿ ಕೊಟ್ಟನು. ತಹ್ಪೆಯ ಸಹೋದರಿಯು ಅವನಿಗೆ
ಗೆನುಬತನೆಂಬ ಮಗನನ್ನು ಹೆತ್ತಳು. ತಹ್ಪೆಯು ಇವನನ್ನು
ಫರೋನನ ಮನೆಯಲ್ಲಿ ಮೊಲೆ ಬಿಡಿಸಿದಳು. ಗೆನುಬತನು ಫರೋ
ನನ ಮನೆಯಲ್ಲಿ ಫರೋನನ ಮಕ್ಕಳ ಸಂಗಡ ಇದ್ದನು.

೨೧ ಆದರೆ ದಾವೀದನು ತನ್ನ ಪಿತೃಗಳ ಸಂಗಡ ಮಲಗಿದ್ದಾನೆಂ
ದೂ, ಸೈನ್ಯಾಧಿಪತಿಯಾದ ಯೊವಾಬನು ಸತ್ತು ಹೋದನೆಂ
ದೂ, ಹದಾದನು ಐಗುಪ್ತದಲ್ಲಿ ಕೇಳಿದಾಗ, ಹದಾದನು ಫರೋನ
ನಿಗೆ, ನಾನು ನನ್ನ ದೇಶಕ್ಕೆ ಹೋಗುವ ಹಾಗೆ, ನನ್ನನ್ನು ಕಳು
೨೨ ಹಿಸು, ಅಂದನು. ಫರೋನನು ಅವನಿಗೆ, ಯಾತಕೆ? ಇಗೋ,
ನೀನು ನಿನ್ನ ದೇಶಕ್ಕೆ ಹೋಗ ಬೇಕೆಂಬುವ ಹಾಗೆ, ನೀನು ನನ್ನ
ಸಂಗಡ ಇರುವಾಗ, ನಿನಗೆ ಏನು ಕೊರತೆಯಾಯಿತು? ಅಂದಾ
ಗ ಅವನು, ಏನೂ ಇಲ್ಲ; ಆದರೆ ಹ್ಯಾಗಾದರೂ ನನ್ನನ್ನು ಕಳು
ಹಿಸು, ಅಂದನು.

೨೩ ಇದಲ್ಲದೆ ದೇವರು ಮತ್ತೊಬ್ಬ ಶತ್ರುವನ್ನು ಅವನ ಮೇಲೆ
ಎಬ್ಬಿಸಿದನು. ಅವನು ಯಾರಂದರೆ, ಜೋಬದ ಅರಸನಾದ ತ
ನ್ನ ಯಜಮಾನನಾಗಿರುವ ಹದದೇಜರನನ್ನು ಬಿಟ್ಟು ಓಡಿ ಹೋ
೨೪ ದ ಎಲ್ಯಾದಾವನ ಮಗನಾದ ರೆಜೋನನು. ದಾವೀದನು ಜೋಬ
ದ ಜನರನ್ನು ಸಂಹರಿಸುವಾಗ, ಇವನು ಮನುಷ್ಯರನ್ನು ತನ್ನ
ಬಳಿಯಲ್ಲಿ ಕೂಡಿಸಿ ಕೊಂಡು, ಒಂದು ಗುಂಪಿಗೆ ಪ್ರಧಾನನಾದನು.

೨೫ ಇವನು ಅವರ ಸಂಗಡ ದಮಸ್ಕಕ್ಕೆ ಹೋಗಿ, ಅಲ್ಲಿ ವಾಸಿಸಿ, ದ
ಮಸ್ಕದಲ್ಲಿ ಆಳುತ್ತಾ ಇದ್ದನು. ಹದಾದನು ಮಾಡಿದ ಕೇಡು
ಹೊರ್ತಾಗಿ, ಇವನು ಸೊಲೊಮೋನನ ದಿವಸಗಳೆಲ್ಲೆಲ್ಲಾ ಇಸ್ರಾ
ಯೇಲಿಗೆ ಶತ್ರುವಾಗಿದ್ದನು. ಅವನು ಇಸ್ರಾಯೇಲನ್ನು ಅಸಂಪಿಸಿ,
ಅರಾಮನನ್ನು ಆಳುತ್ತಾ ಇದ್ದನು.

೨೬ ಇದಲ್ಲದೆ ಚರೇದ ಪಟ್ಟಣದ ಎಫ್ರಾತ್ಯನಾದ ನೆಬಾಟನ ಮಗ
ನಾದ ಯೆರೊಬಾಮನು ಇದ್ದನು; ಜೆರೊಯೆಳೆಂಬ ವೆಧವೆಯಾದ
ಸ್ತ್ರೀ ಅವನಿಗೆ ತಾಯಿಯು; ಅವನು ಸೊಲೊಮೋನನ ಸೇವಕ
ನು; ಇವನು ಅರಸನಿಗೆ ವಿರೋಧವಾಗಿ ತನ್ನ ಕೈಯನ್ನೆತ್ತಿದನು.
೨೭ ಅವನು ಅರಸನಿಗೆ ವಿರೋಧವಾಗಿ ತನ್ನ ಕೈಯನ್ನು ಎತ್ತಿದ ಕಾ
ರಣವೇನಂದರೆ, ಸೊಲೊಮೋನನು ಮಿಲ್ಲೋವನ್ನು ಕಟ್ಟಿಸಿ, ತ
ನ್ನ ತಂದೆಯಾದ ದಾವೀದನ ಪಟ್ಟಣದಲ್ಲಿ ಬಿದ್ದ ಹೋದವುಗಳನ್ನು
೨೮ ಕಟ್ಟಿಸುತ್ತಿರುವಾಗ, ಯೆರೊಬಾಮನು ಪರಾಕ್ರಮಶಾಲಿಯಾಗಿ
ರುವದರಿಂದ, ಸೊಲೊಮೋನನು ಈ ಪ್ರಾಯಸ್ತನು ಕೆಲಸ
ಮಾಡ ತಕ್ಕವನೆಂದು ನೋಡಿ, ಯೋಸೆಫನ ಮನೆಯ ಸಮಸ್ತ
ಕಾರ್ಯಗಳ ಮೇಲೆ ಅವನನ್ನು ಅಧಿಪತಿಯಾಗಿಟ್ಟನು.

೨೯ ಆ ಕಾಲದಲ್ಲಿ ಏನಾಯಿತಂದರೆ, ಯೆರೊಬಾಮನು ಯೆರೂ
ಸಲೇಮಿನೊಳಗಿಂದ ಹೊರಟು ಹೋಗುವಾಗ, ಷಿಲೋನ್ಯನಾದ
ಅಹೀಯನೆಂಬ ಪ್ರವಾದಿಯು ಅವನನ್ನು ಹಾದಿಯಲ್ಲಿ ಕಂಡನು.
ಅವನು ಹೊಸ ವಸ್ತ್ರವನ್ನು ಹೊದ್ದು ಕೊಂಡಿದ್ದನು. ಮತ್ತು ಅ
೩೰ ವರಿಬ್ಬರೂ ಹೊಲದಲ್ಲಿ ಒಂಟಿಯಾಗಿದ್ದರು. ಆಗ ಅಹೀಯನು
ತನ್ನ ಮೇಲೆ ಇರುವ ಹೊಸ ವಸ್ತ್ರವನ್ನು ಹಿಡಿದು, ಹನ್ನೆರಡು
ತುಂಡುಗಳಾಗಿ ಹರಿದು, ಯೆರೊಬಾಮನಿಗೆ, ಈ ಹತ್ತು ತುಂಡುಗ
ಳನ್ನು ನೀನು ತೆಗೆದುಕೋ. ಇದಕ್ಕೆ ಇಸ್ರಾಯೇಲಿನ ದೇವರಾದ
೩೧ ಕರ್ತನು ಹೇಳುವದೇನಂದರೆ—ಇಗೋ, ನಾನು ಸೊಲೊಮೋನ
ನ ಕೈಯಿಂದ ರಾಜ್ಯವನ್ನು ಹರಿದು, ತಕ್ಕೊಂಡು, ಹತ್ತು ಕುಲಗಳ
೩೨ ನ್ನು ನಿನಗೆ ಕೊಡುವೆನು. ನನ್ನ ಸೇವಕನಾದ ದಾವೀದನಿಗೋಸ್ಕ
ರವೂ, ಇಸ್ರಾಯೇಲಿನ ಸಮಸ್ತ ಕುಲಗಳಿಂದ ನಾನು ಆರಿ ಕೊಂಡ
ಪಟ್ಟಣವಾದ ಯೆರೂಸಲೇಮಿಗೋಸ್ಕರವೂ ಅವನಿಗೆ ಒಂದು ಕುಲ
೩೩ ಇರುವದು. ಯಾಕಂದರೆ ಅವನ ತಂದೆಯಾದ ದಾವೀದನ ಹಾಗೆ
ನನ್ನ ಕಟ್ಟಳೆಗಳನ್ನೂ ನನ್ನ ನ್ಯಾಯಗಳನ್ನೂ ಕೈಕೊಳ್ಳಲೂ,
ನನ್ನ ದೃಷ್ಟಿಗೆ ನೆಟ್ಟನೆಯಾದದ್ದನ್ನು ಮಾಡಲೂ, ಅವರು ನನ್ನ
ಮಾರ್ಗಗಳಲ್ಲಿ ನಡೆಯದೆ, ನನ್ನನ್ನು ಬಿಟ್ಟು, ಚಿದೋನ್ಯರ ದೇ
ವತೆಯಾದ ಅಷ್ಟೋರತನ್ನೂ, ಮೋವಾಬ್ಯರ ದೇವರಾದ ಕೆ
ಮೋಷನ್ನೂ, ಅಮ್ಮೋನನ ಮಕ್ಕಳ ದೇವರಾದ ಮಿಲ್ಕೋಮ
ನ್ನೂ ಆರಾಧಿಸಿದ್ದಾಕೆ. ಆದರೂ ನನ್ನ ಆಜ್ಞೆಗಳನ್ನೂ ನನ್ನ ಕ
ಟ್ಟಳೆಗಳನ್ನೂ ಕೈಕೊಂಡದ್ದರಿಂದ, ನಾನು ಆರಿ ತೆಗೆದು ಕೊಂಡ
ನನ್ನ ಸೇವಕನಾದ ದಾವೀದನಿಗೋಸ್ಕರ ನಾನು ಅವನ ಕೈಯಿಂದ
ರಾಜ್ಯವನ್ನೆಲ್ಲಾ ತೆಗೆದು ಕೊಳ್ಳದೆ, ಅವನ ಜೀವದ ಸಕಲ ದಿವ
೩೪ ಸಗಳಲ್ಲಿ ಅವನನ್ನು ಪ್ರಭುವಾಗಿ ಇರಿಸುವೆನು. ಆದರೆ ನಾನು ಅ
ವನ ಮಗನ ಕೈಯಿಂದ ರಾಜ್ಯವನ್ನು ತಕ್ಕೊಂಡು, ಅದರಲ್ಲಿ ಪ
೩೫ ತ್ತು ಕುಲಗಳನ್ನು ನಿನಗೆ ಕೊಡುವೆನು. ಮತ್ತು ಅಲ್ಲಿ ನನ್ನ ಹೆಸ
ರನ್ನಿಡಲು, ನಾನು ಆರಿ ಕೊಂಡ ಪಟ್ಟಣವಾದ ಯೆರೂಸಲೇಮಿನಲ್ಲಿ
ನನ್ನ ಮುಂದೆ ನನ್ನ ಸೇವಕನಾದ ದಾವೀದನಿಗೆ ಯಾವಾಗಲೂ
೩೬ ಬೆಳಕಂಟಾಗುವ ಹಾಗೆ, ಅವನ ಮಗನಿಗೆ ಒಂದು ಕುಲವನ್ನು
ಕೊಡುವೆನು. ಇದಲ್ಲದೆ ನಾನು ನಿನ್ನನ್ನು ತಕ್ಕೊಂಡು, ನೀನು



ನಿನ್ನ ಪ್ರಾಣ ಇಚ್ಛೈಸುವದೆಲ್ಲಾದರಲ್ಲಿ ಅರಸುತನವನ್ನು ಮಾಡಿ,
೩೭ ಇಸ್ರಾಯೇಲಿನ ಮೇಲೆ ಅರಸನಾಗಿರುವಿ. ಮತ್ತು ಆಗುವದೇನಂದ
ಕೆ, ನಾನು ನಿನಗೆ ಆಜ್ಞಾಪಿಸಿದ್ದೆಲ್ಲಾ ನೀನು ಕೇಳಿ, ನನ್ನ ಮಾರ್ಗ
ಗಳಲ್ಲಿ ನಡೆದು, ನನ್ನ ಸೇವಕನಾದ ದಾವೀದನು ಮಾಡಿದ ಹಾಗೆ,
ನನ್ನ ಕಟ್ಟಳೆಗಳನ್ನೂ ನನ್ನ ಆಜ್ಞೆಗಳನ್ನೂ ಕೈಕೊಂಡು, ನನ್ನ
ದೃಷ್ಟಿಗೆ ನೆಟ್ಟನೆಯಾದದ್ದನ್ನು ಮಾಡಿದರೆ, ನಾನು ನಿನ್ನ ಸಂಗಡ
ಇದ್ದು, ದಾವೀದನಿಗೋಸ್ಕರ ಕಟ್ಟಿದ ಹಾಗೆ, ನಿನಗೆ ಸ್ಥಿರವಾದ
೩೮ ಮನೆಯನ್ನು ಕಟ್ಟಿ, ಇಸ್ರಾಯೇಲನ್ನು ನಿನಗೆ ಕೊಡುವೆನು. ಇದ
ಕ್ಕೋಸ್ಕರ ದಾವೀದನ ಬೀಜವನ್ನು ಕುಂದಿಸುವೆನು; ಆದರೆ ನಿರಂ
ತರವಾಗಿ ಅಲ್ಲ.

೩೯ ಇದರ ನಿಮಿತ್ತ ಸೊಲೊಮೋನನು ಯೆರೊಬಾಮನನ್ನು ಕೊ
ಲ್ಲ ಹುಡುಕಿದನು; ಆದದರಿಂದ ಯೆರೊಬಾಮನು ಎದ್ದು, ಐಗುಪ್ತ
ಕ್ಕೆ, ಐಗುಪ್ತದ ಅರಸನಾದ ಶೀಷಕನ ಬಳಿಗೆ ಓಡಿ ಹೋಗಿ,
ಸೊಲೊಮೋನನು ಸಾಯುವತನಕ ಮಟ್ಟಿಗೂ ಐಗುಪ್ತದಲ್ಲಿ ಇದ್ದನು.
೪೦ ಸೊಲೊಮೋನನ ಮಿಕ್ಕಾದ ಕ್ರಿಯೆಗಳೂ, ಅವನು ಮಾಡಿದ್ದೆ
ಲ್ಲವೂ ಅವನ ಜ್ಞಾನವೂ ಸೊಲೊಮೋನನ ಕ್ರಿಯೆಗಳ ಪುಸ್ತಕ
೪೧ ದಲ್ಲಿ ಬರೆಯಲ್ಪಡಲಿಲ್ಲವೋ? ಸೊಲೊಮೋನನು ಯೆರೂಸಲೇಮಿ
ನಲ್ಲಿ ಸಮಸ್ತ ಇಸ್ರಾಯೇಲಿನ ಮೇಲೆ ಆಳಿದ ದಿವಸಗಳು ನಾಲ್ವ
೪೨ ತ್ತು ವರುಷಗಳಾಗಿದ್ದವು. ಸೊಲೊಮೋನನು ತನ್ನ ಪಿತೃಗಳ
ಸಂಗಡ ಮಲಗಿದನು; ತನ್ನ ತಂದೆಯಾದ ದಾವೀದನ ಪಟ್ಟದಲ್ಲಿ
ಹೂಣಲ್ಪಟ್ಟನು; ಅವನ ಮಗನಾದ ರೆಹಬಾಮನು ಅವನಿಗೆ ಬದ
ಲಾಗಿ ಆಳಿದನು.

## ೧೨. ಸಂಧಿ.

೧ ಆಗ ರೆಹಬಾಮನು ಬೆಕೆಮಿಗೆ ಹೋದನು; ಯಾಕಂದರೆ ಅವ
ನನ್ನು ಅರಸನಾಗ ಮಾಡುವದಕ್ಕೆ ಸಮಸ್ತ ಇಸ್ರಾಯೇಲ್ಯರು
ಬೆಕೆಮಿಗೆ ಬಂದರು.

೨ ಮತ್ತು ಏನಾಯಿತಂದರೆ, ಅರಸನಾದ ಸೊಲೊಮೋನನ ಸ
ಮುಖದಿಂದ ಓಡಿ ಹೋಗಿ, ಐಗುಪ್ತದಲ್ಲಿ ವಾಸವಾಗಿದ್ದು, ಇನ್ನೂ
ಐಗುಪ್ತದಲ್ಲಿದ್ದ ನೆಬಾಟನ ಮಗನಾದ ಯೆರೊಬಾಮನು ಇದ
೩ ನ್ನು ಕೇಳಿದಾಗ, ಅವರು ಅವನನ್ನು ಕರೆ ಕಳುಹಿಸಿದರು. ಆಗ
ಯೆರೊಬಾಮನೂ ಇಸ್ರಾಯೇಲಿನ ಸಮಸ್ತ ಕೂಟವೂ ರೆಹಬಾ
ಮನ ಬಳಿಗೆ ಬಂದು, ಅವನ ಸಂಗಡ ಮಾತಾಡಿ, ನಿನ್ನ ತಂದೆ
೪ ಯು ನಮ್ಮ ನೊಗವನ್ನು ಕಠಿಣವಾಗ ಮಾಡಿದನು; ಈಗ ನೀನು
ನಿನ್ನ ತಂದೆಯ ಕಠಿಣವಾದ ಸೇವೆಯನ್ನೂ, ಅವನು ನಮ್ಮ
ಮೇಲೆ ಹಾಕಿದ ಅವನ ಭಾರವಾದ ನೊಗವನ್ನೂ ಹೌರ ಮಾಡಿ
೫ ದರೆ, ನಾವು ನಿನ್ನನ್ನು ಸೇವಿಸುವೆವು, ಅಂದರು. ಅವನು ಅವರಿ
ಗೆ, ನೀವು ಹೋಗಿ ಮೂರು ದಿವಸಗಳ ತರುವಾಯ ತಿರಿಗಿ ನನ್ನ
ಬಳಿಗೆ ಬನ್ನಿರಿ, ಎಂದು ಹೇಳಿದ್ದರಿಂದ, ಅವರು ಹೋದರು.

೬ ಆಗ ಅರಸನಾದ ರೆಹಬಾಮನು ತನ್ನ ತಂದೆಯಾದ ಸೊಲೊ
ಮೋನನು ಬದುಕಿರುವಾಗ ಅವನ ಮುಂದೆ ನಿಲ್ಲುವ ಹಿರಿಯರ
ಆಲೋಚನೆ ಕೇಳಿ, ಈ ಜನರಿಗೆ ಪ್ರತ್ಯುತ್ತರವನ್ನು ಕೊಡ ಏನು
೭ ಆಲೋಚನೆ ಹೇಳುತ್ತೀರಿ? ಅಂದನು. ಅವರು ಅವನಿಗೆ, ನೀನು
ಇಂದು ಈ ಜನರಿಗೆ ಸೇವಕನಾಗಿ, ಅವರನ್ನು ಸೇವಿಸಿ, ಬಳ್ಳೇ
ಮಾತುಗಳಿಂದ ಅವರಿಗೆ ಪ್ರತ್ಯುತ್ತರವನ್ನು ಕೊಟ್ಟಿದೆ, ಆಗ ಅ
ವರು ನಿರಂತರವಾಗಿ ನಿನ್ನ ಸೇವಕರಾಗಿರುವರೆಂದು ಹೇಳಿದರು.

೮ ಆದರೆ ಅವನು ತನಗೆ ಹಿರಿಯರು ಹೇಳಿದ ಆಲೋಚನೆಯ
ನ್ನು ಬಿಟ್ಟು, ತನ್ನ ಸಂಗಡ ಬೆಳೆದ ತನ್ನ ಮುಂದೆ ನಿಂತಿರುವ
೯ ಪ್ರಾಯಸ್ತರ ಬಳಿಯ ಆಲೋಚನೆ ಕೇಳಿದನು. ಮತ್ತು ಅವರಿ
ಗೆ, ನಿನ್ನ ತಂದೆ ನಮ್ಮ ಮೇಲೆ ಹಾಕಿದ ನೊಗವನ್ನು ಹೌರ
ಮಾಡೆಂದು, ನನಗೆ ಹೇಳಿದ ಈ ಜನರಿಗೆ ಪ್ರತ್ಯುತ್ತರ ಕೊಡ,
೧೦ ಏನು ಯೋಚನೆ ಹೇಳುತ್ತೀರಿ? ಅಂದನು. ಆಗ ಅವನ ಸಂಗಡ
ಬೆಳೆದ ಪ್ರಾಯಸ್ತರು ಅವನಿಗೆ, ನಿನ್ನ ತಂದೆ ನಮ್ಮ ನೊಗವನ್ನು
ಭಾರ ಮಾಡಿದನು; ಆದರೆ ನೀನು ಅದನ್ನು ನಮಗೆ ಹೌರ ಮಾ
ಡೆಂದು, ನಿನ್ನ ಸಂಗಡ ಮಾತಾಡಿದ ಈ ಜನರಿಗೆ ನೀನು ಹೇಳ
೧೧ ಬೇಕಾದದ್ದೇನಂದರೆ, ನನ್ನ ಕಿರು ಬೆರಳು ನನ್ನ ತಂದೆಯ ನಡುವಿ
ಗಿಂತ ದಪ್ಪವಾಗಿರುವದು. ನನ್ನ ತಂದೆಯು ನಿಮ್ಮ ಮೇಲೆ ಭಾರ
ವಾದ ನೊಗವನ್ನು ಹೊರಿಸಿದನು; ನಾನು ನಿಮ್ಮ ನೊಗಕ್ಕೆ ಮ
ತ್ತೂ ಭಾರವಾಗ ಮಾಡುವೆನು; ನನ್ನ ತಂದೆಯು ನಿಮ್ಮನ್ನು
ಚಬುಕುಗಳಿಂದ ಶಿಕ್ಷಿಸಿದನು; ಆದರೆ ನಾನು ನಿಮ್ಮನ್ನು ಹೇಳುಗ
ಳಿಂದ ಶಿಕ್ಷಿಸುವೆನು ಎಂಬದಾಗಿ, ನೀನು ಅವರಿಗೆ ಹೇಳು, ಅಂ
ದರು.

೧೨ ಆಗ, ಮೂರನೇ ದಿವಸದಲ್ಲಿ ನನ್ನ ಬಳಿಗೆ ಬನ್ನಿರೆಂದು, ಅರಸ
ನು ಹೇಳಿದ ಪ್ರಕಾರ, ಮೂರನೇ ದಿವಸದಲ್ಲಿ ಯೆರೊಬಾಮನೂ
೧೩ ಸಮಸ್ತ ಜನರೂ ರೆಹಬಾಮನ ಬಳಿಗೆ ಬಂದರು. ಆದರೆ ಅರಸ
ನು ಜನರಿಗೆ ಕಠಿಣವಾದ ಪ್ರತ್ಯುತ್ತರವನ್ನು ಹೇಳಿ, ಹಿರಿಯರು
ಅವನಿಗೆ ಹೇಳಿದ ಯೋಚನೆಯನ್ನು ಬಿಟ್ಟು, ಪ್ರಾಯಸ್ತರ ಆ
ಲೋಚನೆಯ ಪ್ರಕಾರ ಅವರ ಸಂಗಡ ಮಾತಾಡಿ ಹೇಳಿದ್ದೇನಂ
೧೪ ದರೆ, ನನ್ನ ತಂದೆಯು ನಿಮ್ಮ ನೊಗವನ್ನು ಭಾರವಾಗ ಮಾಡಿ
ದನು; ನಾನು ಅದನ್ನು ಮತ್ತೂ ಭಾರವಾಗ ಮಾಡುತ್ತೇನೆ; ನನ್ನ
ತಂದೆಯು ನಿಮ್ಮನ್ನು ಚಬುಕುಗಳಿಂದ ಶಿಕ್ಷಿಸಿದನು; ನಾನು ನಿಮ್ಮ
ನ್ನು ಹೇಳುಗಳಿಂದ ಶಿಕ್ಷಿಸುವೆನು, ಅಂದನು.

೧೫ ಹೀಗೆಯೇ ಅರಸನು ಜನರ ಮಾತು ಕೇಳಲೆದೆ ಹೋದನು.
ಯಾಕಂದರೆ ಕರ್ತನು ನೆಬಾಟನ ಮಗನಾದ ಯೆರೊಬಾಮನಿಗೆ
ಷಿಲೋನ್ಯನಾದ ಅಹೀಯನ ಕೈಯಿಂದ ಹೇಳಿದ ವಾಕ್ಯವು ಈ
ಡೇರುವದಕ್ಕೆ ಈ ಹೇತುವೆ ಕರ್ತನಿಂದ ಉಂಟಾಯಿತು.

೧೬ ಅರಸನು ಅವರ ಮಾತನ್ನು ಕೇಳಲೆದೆ ಹೋದನೆಂದು ಸಮಸ್ತ
ಇಸ್ರಾಯೇಲ್ಯರು ನೋಡಿದಾಗ, ಜನರು ಅರಸನಿಗೆ ಪ್ರತ್ಯುತ್ತರ
ವಾಗಿ, ದಾವೀದನಲ್ಲಿ ನಮಗೆ ಭಾಗವೇನು? ಇಶಾಯನ ಮಗನಲ್ಲಿ
ನಮಗೆ ಬಾಧ್ಯತೆ ಇಲ್ಲ; ಇಸ್ರಾಯೇಲ್ಯರೇ, ನಿಮ್ಮ ಗುಡಾರಗಳಿಗೆ
ಹೋಗಿರಿ; ದಾವೀದನೇ, ಈಗ ನಿನ್ನ ಮನೆಯನ್ನು ನೋಡಿಕೋ.
ಎಂಥೇಳಿ, ಇಸ್ರಾಯೇಲ್ಯರು ತಮ್ಮ ತಮ್ಮ ಗುಡಾರಗಳಿಗೆ ಹೋ
೧೭ ದರು. ಆದರೆ ಯೆಹೂದದ ಪಟ್ಟಣಗಳಲ್ಲಿ ವಾಸವಾಗಿರುವ ಇಸ್ರಾ
ಯೇಲ್ ಮಕ್ಕಳ ಮೇಲೆ ರೆಹಬಾಮನು ಆಳಿದನು.

೧೮ ಆಗ ರೆಹಬಾಮನು ಕಪ್ಪಕ್ಕೆ ಗೊತ್ತುಗಾರನಾದ ಅದೋರಾಮ
ನನ್ನು ಕಳುಹಿಸಿದನು. ಆದರೆ ಇಸ್ರಾಯೇಲ್ಯರೆಲ್ಲರು ಅವನ ಮೇಲೆ
ಕಲ್ಲೆಸೆದು, ಕೊಂದು ಹಾಕಿದರು. ಆದದರಿಂದ ಅರಸನಾದ ರೆಹ
ಬಾಮನು ಯೆರೂಸಲೇಮಿಗೆ ಓಡಿ ಹೋಗ ಬಲಗೊಂಡು, ತನ್ನ
೧೯ ರಥದ ಮೇಲೆ ಏರಿದನು. ಹೀಗೆಯೇ ಇಂದಿನ ವರೆಗೂ ಇಸ್ರಾ
ಯೇಲ್ಯರು ದಾವೀದನ ಮನೆಯ ಮೇಲೆ ತಿರುಗ ಬಿದ್ದರು.

೨೦ ಇಸ್ರಯೇಲ್ಯರೆಲ್ಲರು ಯೆರೊಬಾಮನು ತಿರಿಗಿ ಬಂದಿದ್ದಾನೆಂದು ಕೇಳಿದಾಗ, ಅವರು ಸಭೆಗೆ ಅವನನ್ನು ಕರೆಗೆ ಕಳುಹಿಸಿ, ಸಮಸ್ತ ಇಸ್ರಯೇಲಿನ ಮೇಲೆ ಅವನನ್ನು ಅರಸನಾಗ ಮಾಡಿದರು. ಯೆಹೂದನ ಕುಲ ಹೊರ್ತಾಗಿ ದಾವೀದನ ಮನೆಯನ್ನು ಹಿಂಬಾಲಿಸುವವರು ಯಾರೂ ಇಲ್ಲ.

೨೧ ರೆಹಬಾಮನು ಯೆರೂಸಲೇಮಿಗೆ ಬಂದ ತರುವಾಯ, ಸೊಲೊಮೋನನ ಮಗನಾದ ರೆಹಬಾಮನಿಗೆ ರಾಜ್ಯವನ್ನು ತಿರಿಗಿ ಬರಮಾಡುವ ಹಾಗೆ, ಇಸ್ರಯೇಲಿನ ಮನೆಯ ಮೇಲೆ ಯುದ್ಧ ಮಾಡಬೆನ್ಯಮೀನಾನ ಕುಲದ ಸಂಗಡ ಯೆಹೂದನ ಸಮಸ್ತ ಮನೆಯವರಾದ ಯುದ್ಧ ಮಾಡತಕ್ಕವರಾಗಿರುವ, ಆರು ಕೊಳ್ಳಲ್ಪಟ್ಟ ಲಕ್ಷಾ
೨೨ ಎಂಭತ್ತು ಸಾವಿರ ಜನರನ್ನು ಕೂಡಿಸಿದನು. ಆದರೆ ದೇವರ ವಾಕ್ಯವು ದೇವರ ಮನುಷ್ಯನಾಗಿರುವ ಶೆಮಾಯನಿಗೆ ಉಂಟಾಯಿತು; ಏನಂದರೆ, ನೀನು ಯೆಹೂದದ ಅರಸನಾದ ಸೊಲೊಮೋನನ ಮಗನಾಗಿರುವ ರೆಹಬಾಮನಿಗೂ, ಯೆಹೂದನ, ಬೆನ್ಯಮೀನಾನ ಸಮಸ್ತ ಮನೆಯವರಿಗೂ, ಮಿಕ್ಕಾದ ಜನರಿಗೂ ಹೇಳಿ
೨೩ ಬೇಕಾದದ್ದೇನಂದರೆ, ನೀವು ಇಸ್ರಯೇಲಿನ ಮಕ್ಕಳಾಗಿರುವ ನಿಮ್ಮ ಸಹೋದರರಿಗೆ ವಿರೋಧವಾಗಿ ಯುದ್ಧ ಮಾಡ ಹೋಗದೆ, ಪ್ರತಿ ಮನುಷ್ಯನು ತನ್ನ ಮನೆಗೆ ತಿರುಗಲಿ. ಯಾಕಂದರೆ ಈ ಕಾರ್ಯವು ನನ್ನಿಂದ ಉಂಟಾಯಿತೆಂದು, ಕರ್ತನು ಹೇಳುತ್ತಾನೆ.
೨೪ ಆದದರಿಂದ ಅವರು ಕರ್ತನ ವಾಕ್ಯವನ್ನು ಕೇಳಿ, ಕರ್ತನ ವಾಕ್ಯದ ಪ್ರಕಾರವೇ ತಿರಿಗಿ ಹೋದರು.

೨೫ ಮತ್ತು ಯೆರೊಬಾಮನು ಎಫ್ರಯಿಮಾನ ಬೆಟ್ಟದಲ್ಲಿ ಶೆಕೆಮನ್ನು ಕಟ್ಟಿಸಿ, ಅದರಲ್ಲಿ ವಾಸಿಸಿದನು. ಮತ್ತು ಅಲ್ಲಿಂದ ಹೊರಟು
೨೬ ಹೋಗಿ, ಪೆನುವೇಲನ್ನು ಕಟ್ಟಿಸಿದನು. ಆದರೆ ಯೆರೊಬಾಮನು ತನ್ನ ಹೃದಯದಲ್ಲಿ ಅಂದು ಕೊಂಡದ್ದೇನಂದರೆ—ಈಗ ರಾಜ್ಯವು
೨೭ ದಾವೀದನ ಮನೆಗೆ ತಿರುಗುವದು. ಈ ಜನರು ಯೆರೂಸಲೇಮಿನಲ್ಲಿರುವ ಕರ್ತನ ಮನೆಗೆ ಬಲಿ ಅರ್ಪಿಸ ಏರಿ ಹೋದರೆ, ಆಗ ಈ ಜನರ ಹೃದಯವು ಯೆಹೂದದ ಅರಸನಾದ ರೆಹಬಾಮನ ಕಡೆಗೆ, ತಮ್ಮ ಯಜಮಾನನ ಕಡೆಗೆ, ತಿರುಗುವದು. ಮತ್ತು ಅವರು ನನ್ನನ್ನು ಕೊಂದು ಹಾಕಿ, ಯೆಹೂದದ ಅರಸನಾದ ರೆಹ
೨೮ ಬಾಮನ ಕಡೆಗೆ ತಿರುಗಿ ಹೋಗುವರು. ಆದದರಿಂದ ಅರಸನು ಯೋಚನೆ ಕೇಳಿ ಕೊಂಡು, ಎರಡು ಭಂಗಾರದ ಹೋರಿಗಳನ್ನು ಮಾಡಿಸಿ, ಜನರಿಗೆ, ಯೆರೂಸಲೇಮಿನ ವರಿಗೂ ಏರಿ ಹೋಗುವದು ನಿಮಗೆ ಹೆಚ್ಚಾಗಿದೆ. ಇಸ್ರಯೇಲೇ, ಐಗುಪ್ತದಿಂದ ನಿನ್ನನ್ನು
೨೯ ಬರ ಮಾಡಿದ ನಿನ್ನ ದೇವರುಗಳು, ಇಗೋ, ಅಂದನು. ಮತ್ತು ಅವನು ಒಂದನ್ನು ಬೇತೆಲಿನಲ್ಲಿಯೂ ಮತ್ತೊಂದನ್ನು ದಾನಿನಲ್ಲಿ
೩೦ ಯೂ ಇಟ್ಟನು. ಮತ್ತು ಈ ಕಾರ್ಯ ಪಾಪಕಾರ್ಯಾಯಿತು. ಜನರು ಒಂದರ ದರ್ಶನಕ್ಕೋಸ್ಕರ ದಾನಿನ ಮಟ್ಟಿಗೂ ಹೋದರು.
೩೧ ಇದಲ್ಲದೆ ಅವನು ಮೇಡುಗಳ ಒಂದು ಮನೆಯನ್ನು ಕಟ್ಟಿಸಿ, ಲೇವಿಯ ಮಕ್ಕಳಲ್ಲದ ಜನರಲ್ಲಿ ಕಡೆಯವರೆಗಿಂದ ಯಾಜಕರ
೩೨ ನ್ನು ಮಾಡಿಸಿದನು. ಮತ್ತು ಯೆರೊಬಾಮನು ಎಂಟನೇ ತಿಂಗಳ ಹದಿನೈದನೇ ದಿವಸದಲ್ಲಿ ಯೆಹೂದದಲ್ಲಿರುವ ಹಬ್ಬದ ಪ್ರಕಾರ ಹಬ್ಬವನ್ನು ನೇಮಿಸಿ, ಪೀಠದ ಮೇಲೆ ಬಲಿಗಳನ್ನು ಅರ್ಪಿಸಿದನು. ಈ ಪ್ರಕಾರ ಅವನು ಬೇತೆಲಿನಲ್ಲಿ ಮಾಡಿ, ಅವನು ಉಂಟು ಮಾಡಿದ ಹೋರಿಗಳಿಗೆ ಬಲಿಗಳನ್ನು ಅರ್ಪಿಸ ಬೇತೆಲಿನಲ್ಲಿ ತಾನು
33 ಮಾಡಿದ ಮೇಡುಗಳ ಯಾಜಕರನ್ನು ಇರಿಸಿದನು. ಹೀಗೆಯೇ ಅವನು ತನ್ನ ಸ್ವಂತ ಹೃದಯದಲ್ಲಿ ಯೋಚಿಸಿದ ತಿಂಗಳಲ್ಲಿ, ಎಂಟನೇ ತಿಂಗಳ ಹದಿನೈದನೇ ದಿವಸದಲ್ಲಿ ಅವನು ಬೇತೆಲಿನಲ್ಲಿ ಉಂಟು ಮಾಡಿದ ಪೀಠದ ಮೇಲೆ ಬಲಿಗಳನ್ನರ್ಪಿಸಿ, ಇಸ್ರಯೇಲಿನ ಮಕ್ಕಳಿಗೆ ಹಬ್ಬವನ್ನು ನೇಮಿಸಿದನು. ಇದಲ್ಲದೆ ತಾನೇ ಪೀಠದ ಮೇಲೆ ಬಲಿಗಳನ್ನರ್ಪಿಸಿ, ಧೂಪವನ್ನು ಸುಟ್ಟನು.

## ೧೩. ಸಂಧಿ.

೧ ಆದರೆ ಯೆರೊಬಾಮನು ಧೂಪವನ್ನರ್ಪಿಸ ಬಲಿಪೀಠದ ಒಳ್ಳಯಲ್ಲಿ ನಿಂತಿರುವಾಗ, ಇಗೋ, ಯೆಹೂದದಿಂದ ಬೇತೆಲಿಗೆ ಕರ್ತ
೨ ನ ಮಾತಿನಿಂದ ದೇವರ ಮನುಷ್ಯನು ಬಂದನು. ಅವನು ಆ ಪೀಠಕ್ಕೆ ವಿರೋಧವಾಗಿ ಕರ್ತನ ಮಾತಿನಿಂದ ಕೂಗಿ ಹೇಳ್ದೇನಂದರೆ—ಪೀಠವೇ, ಪೀಠವೇ, ಇಗೋ, ದಾವೀದನ ಮನೆಗೆ ಯೊಷೀಯನೆಂದು ಹೆಸರುಳ್ಳ ಒಬ್ಬ ಕುಮಾರನು ಹುಟ್ಟುವನು; ಅವನು ನಿನ್ನ ಮೇಲೆ ಧೂಪವರ್ಪಿಸುವ ಮೇಡುಗಳ ಯಾಜಕರನ್ನು ಬಲಿಯಾಗಿ ಅರ್ಪಿಸುವನು; ಮತ್ತು ಮನುಷ್ಯರ ಎಲುವುಗಳು ನಿನ್ನ ಮೇಲೆ ಸುಡಲ್ಪಡುವವೆಂದು, ಕರ್ತನು ಹೇಳುತ್ತಾನೆ, ಅಂದನು.
3 ಅದೇ ದಿವಸದಲ್ಲಿ ಅವನು ಗುರುತನ್ನು ಕೊಟ್ಟು, ಅವರಿಗೆ, ಕರ್ತನು ಇದಕ್ಕೆ ಹೇಳಿದ ಗುರುತೇನಂದರೆ—ಇಗೋ, ಪೀಠವು ಒಡೆಯಲ್ಪಟ್ಟು ಹೋಗಿ, ಅದರ ಮೇಲೆ ಇರುವ ಬೂದಿಯು ಚೆಲ್ಲಲ್ಪಟ್ಟಿರುವದು, ಅಂದನು.

೪ ಅರಸನಾದ ಯೆರೊಬಾಮನು ಬೇತೆಲಿನಲ್ಲಿರುವ ಬಲಿಪೀಠಕ್ಕೆ ವಿರೋಧವಾಗಿ ದೇವರ ಮನುಷ್ಯನು ಕೂಗಿದ ಮಾತನ್ನು ಕೇಳಿದಾಗ, ಅವನು ಪೀಠದ ಒಳ್ಳಯಿಂದ ತನ್ನ ಕೈ ಚಾಚಿ, ಅವನನ್ನು ಹಿಡಿ, ಅಂದನು. ಆಗ ಅವನಿಗೆ ವಿರೋಧವಾಗಿ ಚಾಚಿದ ಅವನ ಕೈ ಹಿಂದಕ್ಕೆ ಎಳೆ ಕೊಳ್ಳಲೂ ಕೂಡದ ಹಾಗೆ ಒಣಗಿ ಹೋಯಿತು. ಇದಲ್ಲದೆ ಕರ್ತನ ಮಾತಿನಿಂದ ದೇವರ ಮನುಷ್ಯನು
೫ ಕೊಟ್ಟ ಗುರುತಿನ ಪ್ರಕಾರವೇ, ಪೀಠವು ಶೀಳ್ಳ ಹೋಗಿ, ಬೂದಿಯು ಪೀಠದಿಂದ ಚೆಲ್ಲಲ್ಪಟ್ಟಿತು. ಆಗ ಅರಸನು ಪ್ರತ್ಯುತ್ತರವಾಗಿ ದೇವರ ಮನುಷ್ಯನಿಗೆ, ನನ್ನ ಕೈ ಮತ್ತು ಗುಣವಾಗುವ ಹಾಗೆ ನೀನು ನಿನ್ನ ದೇವರಾದ ಕರ್ತನ ಕಟಾಕ್ಷವನ್ನು ಬೇಡಿ ಕೊಂಡು, ನನಗೋಸ್ಕರ ಪ್ರಾರ್ಥನೆ ಮಾಡು, ಅಂದನು. ಆಗ ದೇವರ ಮ
೬ ನುಷ್ಯನು ಕರ್ತನ ಕಟಾಕ್ಷವನ್ನು ಬೇಡಿ ಕೊಂಡದ್ದರಿಂದ, ಅರಸನ ಕೈ ಗುಣವಾಗಿ, ಮುಂಚಿನ ಹಾಗೆ ಆಯಿತು. ಮತ್ತು ಅರಸನು ದೇವರ ಮನುಷ್ಯನಿಗೆ ನೀನು ನನ್ನ ಮನೆಗೆ ಬಂದು, ನಿನ್ನನ್ನು ವಿಶ್ರಮಿಸ ಮಾಡಿಕೊ, ನಾನು ನಿನಗೆ ದಾನ ಕೊಡುವೆನು, ಅಂದನು. ಆದರೆ ದೇವರ ಮನುಷ್ಯನು ಅರಸನಿಗೆ ಪ್ರತ್ಯುತ್ತರ
೭ ವಾಗಿ, ನೀನು ನನಗೆ ನಿನ್ನ ಅರ್ಧ ಮನೆಯನ್ನು ಕೊಟ್ಟರೂ, ನಾನು ನಿನ್ನ ಸಂಗಡ ಹೋಗುವದಿಲ್ಲ; ಈ ಸ್ಥಳದಲ್ಲಿ ಕೊಟ್ಟ ಶಿನ್ನುವದಿಲ್ಲ, ಕುಡಿಯುವದಿಲ್ಲ. ಯಾಕಂದರೆ ನೀನು ಕೊಟ್ಟ
೮ ಶಿನ್ನ ಬೇಡ, ನೀರನ್ನು ಕುಡಿಯ ಬೇಡ, ನೀನು ಬಂದ ಮಾರ್ಗದಿಂದ ತಿರಿಗಿ ಹೋಗ ಬೇಡ ಎಂದು ಕರ್ತನ ವಾಕ್ಯದಿಂದ ನನಗೆ
೯ ಆಜ್ಞೆ ಆಯಿತು, ಅಂದನು. ಆದದರಿಂದ ಅವನು ಬೇತೆಲಿಗೆ ಬಂದ ಮಾರ್ಗದಿಂದ ತಿರಿಗಿ ಹೋಗದೆ, ಮತ್ತೊಂದು ಮಾರ್ಗವಾಗಿ ಹೋದನು.



೧೦ ಆದರೆ ಬೇತೆಲಿನಲ್ಲಿ ಒಬ್ಬ ವೃದ್ಧನಾದ ಪ್ರವಾದಿಯು ವಾಸವಾಗಿದ್ದನು, ಅವನ ಮಕ್ಕಳು ಬಂದು, ಆ ದಿನದಲ್ಲಿ ಬೇತೆಲಿನಲ್ಲಿ ದೇವರ ಮನುಷ್ಯನು ಮಾಡಿದ ಸಮಸ್ತ ಕ್ರಿಯೆಗಳನ್ನು ಅವನಿಗೆ ತಿಳಿ
೧೧ ಸಿದರು; ಅವನು ಅರಸನಿಗೆ ಹೇಳಿದ ಮಾತುಗಳನ್ನು ತಮ್ಮ ತಂಕೆಗೆ ತಿಳಿಸಿದರು. ಆಗ ಅವರ ತಂಕೆ ಅವರಿಗೆ, ಅವನು ಯಾವ ಮಾರ್ಗವಾಗಿ ಹೋದನು? ಅಂದನು. ಯಾಕಂದರೆ ಯೆಹೂದದಿಂದ ಬಂದ ದೇವರ ಮನುಷ್ಯನು ಹೋದ ಮಾರ್ಗವನ್ನು ಅವನ
೧೨ ಮಕ್ಕಳು ನೋಡಿದ್ದರು. ಅವನು ತನ್ನ ಮಕ್ಕಳಿಗೆ, ಕತ್ತೆಗೆ ಸಬರ ಹಾಕಿರಿ, ಅಂದನು. ಅವರು ಕತ್ತೆಗೆ ಸಬರ ಹಾಕಿದರು; ಅವನು ಅದರ ಮೇಲೆ ಏರಿ ದೇವರ ಮನುಷ್ಯನ ಹಿಂದೆ ಹೋಗಿ, ಅವನು ಏಲಾ ಮರದ ಕೆಳಗೆ ಕುಳಿತು ಕೊಳ್ಳುವಾಗ ಅವನನ್ನು ಕಂಡು
೧೩ ಕೊಂಡನು. ಆಗ, ನೀನು ಯೆಹೂದದಿಂದ ಬಂದ ದೇವರ ಮನುಷ್ಯನೋ! ಅಂದನು. ಅದಕ್ಕವನು, ನಾನೇ, ಅಂದನು. ಆಗಲವನಿ
೧೪ ಗೆ, ನೀನು ನನ್ನ ಮನೆಗೆ ಬಂದು, ಕೊಟ್ಟಿ ಶಿನ್ನು, ಅಂದನು. ಅದಕ್ಕವನು, ನಾನು ನಿನ್ನ ಸಂಗಡ ತಿರುಗಲೂ ಹೋಗಲೂ ಕೂಡದು, ಈ ಸ್ಥಳದಲ್ಲಿ ನಿನ್ನ ಸಂಗಡ ಕೊಟ್ಟಿ ಶಿನ್ನುವದಿಲ್ಲ, ನೀರು ಕುಡಿ
೧೫ ಯುವದಿಲ್ಲ. ಯಾಕಂದರೆ, ನೀನು ಅಲ್ಲಿ ಕೊಟ್ಟಿ ಶಿನ್ನ ಬೇಡ, ನೀರು ಕುಡಿಯ ಬೇಡ, ಬಂದ ಮಾರ್ಗದಿಂದ ತಿರಿಗಿ ಹೋಗ ಬೇಡ ಎಂದು, ಕರ್ತನ ಮಾತಿನಿಂದ ನನಗೆ ಹೇಳಲ್ಪಟ್ಟಿತು, ಅಂದನು. ಇವನು ಅವನಿಗೆ, ನಾನು ನಿನ್ನ ಹಾಗೆಯೇ ಪ್ರವಾದಿಯಾಗಿದ್ದೇನೆ; ಮತ್ತು ಒಬ್ಬ ದೂತನು ಕರ್ತನ ಮಾತಿನಿಂದ ನನಗೆ ಹೇಳಿದ್ದೇನಂದರೆ, ಅವನು ಕೊಟ್ಟಿ ಶಿನ್ನಲೂ ನೀರು ಕುಡಿಯಲೂ, ಅವನನ್ನು ಹಿಂದಕ್ಕೆ ನಿನ್ನ ಮನೆಗೆ ಕರಕೊಂಡು ಬಾ, ಅಂದನು. ಆದರೆ ಇವ
೧೮ ನು ಅವನಿಗೆ ಸುಳ್ಳು ಹೇಳ್ದನು. ಹಾಗೆಯೇ ಅವನು ಇವನ ಸಂಗಡ ಹಿಂದಕ್ಕೆ ಹೋಗಿ, ಅವನ ಮನೆಯಲ್ಲಿ ಕೊಟ್ಟಿ ಶಿಂದು, ನೀರು ಕುಡಿದನು.

೧೯ ಅವರು ಮೇಜಿಗೆ ಕುಳಿತಿರುವಾಗ, ಆದದ್ದೇನಂದರೆ, ಅವನನ್ನು
೨೦ ಹಿಂದಕ್ಕೆ ಕರತಂದ ಪ್ರವಾದಿಗೆ ಕರ್ತನ ವಾಕ್ಯ ಉಂಟಾಗಿ, ಅವನು ಯೆಹೂದದಿಂದ ಬಂದ ದೇವರ ಮನುಷ್ಯನಿಗೆ ಕೂಗಿ ಹೇಳ್ದೇನಂದರೆ, ನೀನು ಕರ್ತನ ಮಾತಿಗೆ ತಿರುಗ ಬಿದ್ದು ನಿನ್ನ ದೇವ
೨೧ ರಾದ ಕರ್ತನು ನಿನಗೆ ಆಜ್ಞಾಪಿಸಿದ ಆಜ್ಞೆಯನ್ನು ಕೈಕೊಳ್ಳದೆ ಹಿಂದಕ್ಕೆ ಬಂದು, ಕೊಟ್ಟಿ ಶಿನ್ನ ಬೇಡ, ನೀರು ಕುಡಿಯ ಬೇಡ ಎಂದು, ಕರ್ತನು ನಿನಗೆ ಹೇಳಿದ ಸ್ಥಳದಲ್ಲಿ ನೀನು ಕೊಟ್ಟಿ ಶಿಂದು ನೀರು ಕುಡಿದ್ದರಿಂದ, ನಿನ್ನ ಹೆಣ ನಿನ್ನ ಪಿತೃಗಳ ಸಮಾಧಿಗೆ ಬರುವದಿಲ್ಲವೆಂದು, ಕರ್ತನು ಹೇಳುತ್ತಾನೆ, ಅಂದನು.

೨೩ ಮತ್ತು ಏನಾಯಿತಂದರೆ, ಅವನು ಕೊಟ್ಟಿ ಶಿಂದು, ಕುಡಿದ ತರುವಾಯ, ಇವನು ಕರತಂದ ಪ್ರವಾದಿಗೋಸ್ಕರ ಕತ್ತೆಗೆ ಸಬ
೨೪ ರ ಹಾಕಿದನು. ಅವನು ಹೋದ ತರುವಾಯ, ಸಿಂಹವು ಅವನನ್ನು ಹಾದಿಯಲ್ಲಿ ಹಿಡಿದು, ಕೊಂದು ಹಾಕಿತು. ಅವನ ಹೆಣ ಹಾದಿಯಲ್ಲಿ ಹಾಕಲ್ಪಟ್ಟಿತು; ಕತ್ತೆಯು ಅದರ ಬಳಿಯಲ್ಲಿ ನಿಂತಿ
೨೫ ತ್ತು. ಸಿಂಹವು ಹೆಣದ ಬಳಿಯಲ್ಲಿ ನಿಂತಿತ್ತು. ಆಗ, ಇಗೋ, ಮನುಷ್ಯರು ಹಾದು ಹೋಗಿ, ಮಾರ್ಗದಲ್ಲಿ ಹಾಕಲ್ಪಟ್ಟಿರುವ ಹೆಣವನ್ನೂ ಹೆಣದ ಬಳಿಯಲ್ಲಿ ನಿಂತಿರುವ ಸಿಂಹವನ್ನೂ ನೋಡಿ, ವೃದ್ಧ ಪ್ರವಾದಿಯು ವಾಸವಾಗಿರುವ ಪಟ್ಟಣಕ್ಕೆ ಬಂದು, ತಿಳಿ
೨೬ ಸಿದರು. ಅವನನ್ನು ಮಾರ್ಗದಿಂದ ಹಿಂದಕ್ಕೆ ಕರತಂದ ಪ್ರವಾದಿಯು ಆ ವರ್ತಮಾನವನ್ನು ಕೇಳಿ, ಇವನೇ ಕರ್ತನ ಮಾತಿಗೆ ತಿರುಗ ಬಿದ್ದ ದೇವರ ಮನುಷ್ಯನು; ಕರ್ತನು ಅವನಿಗೆ ಹೇಳಿದ ಮಾತಿನ ಪ್ರಕಾರ, ಕರ್ತನು ಅವನನ್ನು ಸಿಂಹಕ್ಕೆ ಒಪ್ಪಿಸಿದ್ದಾನೆ; ಅದು ಅವನನ್ನು ಚೀಳ್ಳ ಕೊಂದು ಹಾಕಿತು, ಅಂದನು. ಮತ್ತು
೨೭ ತನ್ನ ಮಕ್ಕಳಿಗೆ, ಕತ್ತೆಗೆ ಸಬರ ಹಾಕಿರಿ, ಅಂದನು. ಅವರು ಸಬರ ಹಾಕಿದರು. ಅವನು ಹೋಗಿ, ಇವನ ಹೆಣವು ಹಾದಿಯಲ್ಲಿ ಹಾಕಲ್ಪಟ್ಟಿರುವದನ್ನೂ, ಕತ್ತೆಯೂ ಸಿಂಹವೂ ಹೆಣದ ಬಳಿ
೨೮ ಯಲ್ಲಿ ನಿಂತಿರುವದನ್ನೂ ನೋಡಿದನು. ಸಿಂಹವು ಹೆಣವನ್ನು ತಿನ್ನದೆ, ಕತ್ತೆಯನ್ನು ಚೀಳ್ಳ ಹಾಕದೆ ಇತ್ತು. ಆಗ ಪ್ರವಾದಿಯು ದೇವರ ಮನುಷ್ಯನ ಹೆಣವನ್ನು ಎತ್ತಿ, ಕತ್ತೆಯ ಮೇಲೆ ಹಾಕಿ ಕೊಂಡು, ಅದನ್ನು ಹಿಂದಕ್ಕೆ ತಂದನು. ಹೀಗೆಯೇ ವೃದ್ಧನಾದ ಪ್ರವಾದಿಯು ಗೋಳ್ಳಾಡುವದಕ್ಕೂ ಅವನನ್ನು ಹೂಣಿಡುವದ
೩೦ ಕ್ಕೂ ಪಟ್ಟಣಕ್ಕೆ ತಂದನು. ಅವನ ಹೆಣವನ್ನು ತನ್ನ ಸಮಾಧಿಯಲ್ಲಿ ಹೂಣಿಟ್ಟನು. ಆಗಲವರು, ಅಯ್ಯೋ, ನಮ್ಮ ಸಹೋ
೩೧ ದರನೇ, ಎಂದು ಅವನಿಗೋಸ್ಕರ ಗೋಳ್ಳಾಡಿದರು. ಅವನು ಇವನನ್ನು ಹೂಣಿಟ್ಟ ತರುವಾಯ ಏನಾಯಿತಂದರೆ, ಅವನು ತನ್ನ ಮಕ್ಕಳಿಗೆ, ನಾನು ಸತ್ತಾಗ, ದೇವರ ಮನುಷ್ಯನನ್ನು ಹೂಣಿಟ್ಟ ಸಮಾಧಿಯಲ್ಲಿ ನನ್ನನ್ನು ಹೂಣಿಡಿರಿ; ನನ್ನ ಎಲುವುಗಳನ್ನು
೩೨ ಅವನ ಎಲುವುಗಳ ಬಳಿಯಲ್ಲಿ ಇಡಿರಿ. ಯಾಕಂದರೆ ಅವನು ಬೇತೆಲಿನಲ್ಲಿರುವ ಬಲಿಪೀಠಕ್ಕೆ ವಿರೋಧವಾಗಿಯೂ, ಸಮಾರ್ಯ ಪಟ್ಟಣಗಳಲ್ಲಿರುವ ಮೇಡುಗಳ ಸಮಸ್ತ ಮನೆಗಳಿಗೆ ವಿರೋಧವಾಗಿಯೂ ಕರ್ತನ ಮಾತಿನಿಂದ ಕೂಗಿದ ಮಾತು ಆಗೇ ಆಗುವದು, ಅಂದನು.

33 ಈ ಕಾರ್ಯದ ತರುವಾಯ ಯೆರೊಬಾಮನು ತನ್ನ ಕೆಟ್ಟ ಮಾರ್ಗವನ್ನು ಬಿಟ್ಟು ತಿರುಗದೆ, ಮೇಡುಗಳಿಗೆ ಜನರಲ್ಲಿ ಕಡೆಯವರಿಂದ ಯಾಜಕರನ್ನು ನೇಮಿಸಿದನು. ಯಾವನಿಗೆ ಮನಸ್ಸಿತ್ತೋ, ಅವನನ್ನು ಇವನು ಪ್ರತಿಷ್ಠೆ ಮಾಡಿಸಿದ್ದರಿಂದ, ಮೇಡುಗಳ ಯಾಜಕರಲ್ಲಿ ಒಬ್ಬನಾದನು. ಯೆರೊಬಾಮನ ಮನೆಯವರನ್ನು ಭೂಮಿಯ ಮುಖದಿಂದ ಸಂಹರಿಸಲೂ, ನಾಶ ಮಾಡಲೂ, ಈ ಕಾರ್ಯ ಅವರಿಗೆ ಪಾಪವಾಯಿತು.

## ೧೪. ಸಂಧಿ.

೧ ಅದೇ ಕಾಲದಲ್ಲಿ ಯೆರೊಬಾಮನ ಮಗನಾದ ಅಬೀಯನು ರೋಗದಲ್ಲಿ ಇದ್ದನು. ಆದದರಿಂದ ಯೆರೊಬಾಮನು ತನ್ನ ಹೆಂ
೨ ಡತಿಗೆ, ನೀನೆದ್ದು, ನೀನು ಯೆರೊಬಾಮನ ಹೆಂಡತಿ ಎಂದು ಯಾರೂ ತಿಳಿಯದ ಹಾಗೆ, ವೇಷ ಹಾಕಿ ಕೊಂಡು, ಶಿಲೋವಿಗೆ ಹೋಗು; ಇಗೋ, ಈ ಜನರ ಮೇಲೆ ಅರಸನಾಗಿರುವಿ ಎಂದು,
3 ನನಗೆ ಹೇಳಿದ ಪ್ರವಾದಿಯಾದ ಅಹೀಯನು ಅಲ್ಲಿದ್ದಾನೆ. ಇದಲ್ಲದೆ ನೀನು ನಿನ್ನ ಕೈಯ್ಯಲ್ಲಿ ಹತ್ತು ರೊಟ್ಟಿಗಳನ್ನೂ, ಭಕ್ಷ್ಯಗಳನ್ನೂ ಒಂದು ಶಿದ್ದಿಗೆ ಜೇನು ತುಪ್ಪವನ್ನೂ ತೆಗೆದು ಕೊಂಡು, ಅವನ ಬಳಿಗೆ ಹೋಗು. ಅವನು ಚಿಕ್ಕವನಿಗೆ ಆಗುವದನ್ನು
೪ ನಿನಗೆ ತಿಳಿಸುವನು, ಅಂದನು. ಯೆರೊಬಾಮನ ಹೆಂಡತಿಯು ಹಾಗೆಯೇ ಮಾಡಿ, ಎದ್ದು, ಶಿಲೋವಿಗೆ ಹೋಗಿ, ಅಹೀಯನ ಮನೆಗೆ ಬಂದಳು. ಆದರೆ ಅಹೀಯನು ಕಾಣಲಾರದೆ ಇದ್ದನು; ಯಾಕಂದರೆ ವೃದ್ಧಾಪ್ಯದಿಂದ ಅವನ ಕಣ್ಣುಗಳು ಇಂಗಿ ಹೋ

೫ ದವು. ಆದರೆ ಕರ್ತನು ಅಹೀಯನಿಗೆ, ಇಗೋ, ಯೆರೊಬಾಮನ ಹೆಂಡತಿ ತನ್ನ ಮಗನಿಗೋಸ್ಕರ ನಿನ್ನಿಂದ ಕಾರ್ಯವನ್ನು ಕೇಳಿ ಬರುತ್ತಾಳೆ. ಯಾಕಂದರೆ ಅವನು ರೋಗದಲ್ಲಿದ್ದಾನೆ. ನೀನು ಅವಳಿಗೆ ಹೀಗೀಗೆ ಹೇಳು. ಯಾಕಂದರೆ ಅವಳು ಒಳಗೆ ಬರುವಾಗ, ಮತ್ತೊಬ್ಬಳೆಂದು ತನ್ನನ್ನು ತೋರ ಮಾಡುವಳು, ಅಂದನು.

೬ ಮತ್ತು ಏನಾಯಿತಂದರೆ, ಅವಳು ಬಾಗಲಲ್ಲಿ ಪ್ರವೇಶಿಸುವಾಗ, ಅಹೀಯನು ಅವಳ ಪಾದಗಳ ಶಬ್ದವನ್ನು ಕೇಳುತ್ತಲೇ, ಅವನು ಹೇಳಿದ್ದೇನಂದರೆ, ಯೆರೊಬಾಮನ ಹೆಂಡತಿಯೇ, ಒಳಗೆ ಬಾ; ನೀನು ಮತ್ತೊಬ್ಬಳೆಂದು ತೋರ ಮಾಡುವದು ಯಾಕೆ? ನಾನು ಕಠಿಣವಾದುವುಗಳನ್ನು ತಿಳಿಸ ನಿನ್ನ ಒಳಗೆ ಕಳುಹಿಸಲ್ಪಟ್ಟಿದ್ದೇನೆ.

೭ ನೀನು ಹೋಗಿ, ಯೆರೊಬಾಮನಿಗೆ ಹೇಳ ಬೇಕಾದದ್ದು—ಇಸ್ರಯೇಲಿನ ದೇವರಾದ ಕರ್ತನು ಹೇಳುವದೇನಂದರೆ, ನಾನು ಜನರೊಳಗಿಂದ ತೆಗೆದು, ನಿನ್ನನ್ನು ಉನ್ನತ ಮಾಡಿ, ನನ್ನ ಜನರಾದ ಇಸ್ರಯೇಲ್ಯರ ಮೇಲೆ ನಾಯಕನಾಗ ಮಾಡಿ, ದಾವೀದನ ಮನೆಯಿಂದ ರಾಜ್ಯವನ್ನು ಕಸು ಕೊಂಡು, ನಿನಗೆ ಕೊಟ್ಟಿನು. ಆದರೆ

೮ ನನ್ನ ಆಜ್ಞೆಗಳನ್ನು ಕೈ ಕೊಂಡು, ನನ್ನ ದೃಷ್ಟಿಯಲ್ಲಿ ನೆಟ್ಟಿನೆಯಾದದ್ದನ್ನು ಮಾಡ, ತನ್ನ ಸಂಪೂರ್ಣವಾದ ಹೃದಯದಿಂದ ನನ್ನನ್ನು ಹಿಂಬಾಲಿಸಿದ ನನ್ನ ಸೇವಕನಾದ ದಾವೀದನ ಹಾಗೆ ನೀನು ಇರದೆ, ನಿನಗೆ ಮುಂಚೆ ಇದ್ದವಕ್ಕೆಲ್ಲರಿಗಿಂತ ಕೆಟ್ಟದ್ದನ್ನು

೯ ಮಾಡಿದಿ. ಯಾಕಂದರೆ ನೀನು ಹೋಗಿ, ನನಗೆ ಕೋಪವನ್ನೆಬ್ಬಿಸ ಅನ್ಯ ದೇವರುಗಳನ್ನೂ ಎರಕ ಹೊಯ್ಯಲ್ಪಟ್ಟ ವಿಗ್ರಹಗಳನ್ನೂ ನಿನಗೆ ಮಾಡಿ ಕೊಂಡು, ನನ್ನನ್ನು ನಿನ್ನ ಬೆನ್ನಿನ ಹಿಂದಕ್ಕೆ

೧೦ ಹಾಕಿದಿ. ಆದದರಿಂದ, ಇಗೋ, ನಾನು ಯೆರೊಬಾಮನ ಮನೆಯ ಮೇಲೆ ಕೇಡನ್ನು ಬರ ಮಾಡಿ, ಯೆರೊಬಾಮನ ಕಡೆಯಿಂದ ಸಮಸ್ತ ಗಂಡಸರನ್ನೂ, ಇಸ್ರಯೇಲಿನಲ್ಲಿ ಉಳಿದು ಬಚ್ಚಿಟ್ಟು ಕೊಂಡವರನ್ನೂ ಕಡಿದು ಬಿಟ್ಟು, ಅದು ತೀರುವ ಪರ್ಯಂತರ, ಮನುಷ್ಯನು ಸಗಣಿಯನ್ನು ಹ್ಯಾಗೆ ತೆಗೆದು ಹಾಕುತ್ತಾನೋ, ಹಾಗೆಯೇ ನಾನು ಯೆರೊಬಾಮನ ಮನೆಯ ಉಳುವಿಕೆಯನ್ನು

೧೧ ತೆಗೆದು ಹಾಕುತ್ತೇನೆ. ಯೆರೊಬಾಮನವರಲ್ಲಿ ಯಾವನು ಪಟ್ಟಣದಲ್ಲಿ ಸಾಯುವನೋ, ಅವನನ್ನು ನಾಯಿಗಳು ತಿನ್ನುವವು; ಹೊಲದಲ್ಲಿ ಸಾಯುವವನನ್ನು ಆಕಾಶದ ಪಕ್ಷಿಗಳು ತಿನ್ನುವವು.

೧೨ ನಿಶ್ಚಯವಾಗಿ ಕರ್ತನು ಅದನ್ನು ಹೇಳಿದ್ದಾನೆ. ಆದದರಿಂದ ನೀನೆದ್ದು, ನಿನ್ನ ಮನೆಗೆ ಹೋಗು; ನಿನ್ನ ಕಾಲು ಪಟ್ಟಣದಲ್ಲಿ ಪ್ರವೇಶಿ

೧೩ ಸುವಾಗ, ನಿನ್ನ ಮಗನು ಸಾಯುವನು. ಇದಲ್ಲದೆ ಸಮಸ್ತ ಇಸ್ರಯೇಲ್ಯರು ಅವನಿಗೋಸ್ಕರ ಗೋಳಾಡಿ, ಅವನನ್ನು ಹೂಣಿಡುವರು; ಯಾಕಂದರೆ ಯೆರೊಬಾಮನವರಲ್ಲಿ ಅವನೊಬ್ಬನೇ ಸಮಾಧಿಗೆ ಬರುವನು. ಯಾಕಂದರೆ ಯೆರೊಬಾಮನ ಮನೆಯೊಳಗೆ ಅವನಲ್ಲಿ ಇಸ್ರಯೇಲಿನ ದೇವರಾದ ಕರ್ತನ ಕಡೆಗಾದ

೧೪ ಬಳ್ಳೇ ಕ್ರಿಯೆ ಕಿಕ್ಕಿತು. ಇದಲ್ಲದೆ ಕರ್ತನು ಇಸ್ರಯೇಲನ್ನು ಆಳ್ವ ಅದೇ ದಿನದಲ್ಲಿ ಯೆರೊಬಾಮನ ಮನೆಯನ್ನು ಕಡಿದು

೧೫ ಬಿಡುವ ಒಬ್ಬ ಅರಸನನ್ನು ತನಗೋಸ್ಕರ ಎಬ್ಬಿಸುವನು. ಮತ್ತು ಈಗಲೇ ಏನು ಆಗುವದು? ನೀರಿನಲ್ಲಿರುವ ಅವು ಅಲ್ಲಾಡುವ ಹಾಗೆ, ಕರ್ತನು ಇಸ್ರಯೇಲನ್ನು ಹೊಡೆಯುವನು. ಇಸ್ರಯೇಲರು ಕರ್ತನಿಗೆ ಕಕಕಕೆ ಎಬ್ಬಿಸ ತಮ್ಮ ವಿಗ್ರಹಾರಾಧನೆಗೋಸ್ಕರ ತೋಪುಗಳನ್ನು ಹಾಕಿದ್ದರಿಂದ, ಅವನು ಅವರ ತಂದೆಗಳಿಗೆ ಕೊಟ್ಟ ಈ ಉತ್ತಮ ದೇಶದಲ್ಲಿಂದ ಅವರನ್ನು ನಿರ್ಮೂಲ ಮಾಡಿ,

೧೬ ನದಿಯ ಆಚೆಯಲ್ಲಿ ಅವರನ್ನು ಚದರ ಮಾಡುವನು. ಅವನು ಯೆರೊಬಾಮನ ಪಾಪಗಳ ನಿಮಿತ್ತ ಇಸ್ರಯೇಲರನ್ನು ಒಪ್ಪಿಸಿ ಬಿಡುವನು; ಯಾಕಂದರೆ ಅವನೇ ಪಾಪ ಮಾಡಿ, ಪಾಪವನ್ನು ಮಾಡ ಇಸ್ರಯೇಲನ್ನು ಪ್ರೇರೇಪಿಸಿದನು, ಅಂದನು.

೧೭ ಆಗ ಯೆರೊಬಾಮನ ಹೆಂಡತಿ ಎದ್ದು, ಹೊರಟು, ತಿರ್ಚಕ್ಕೆ ಬಂದಳು. ಕರ್ತನು ಪ್ರವಾದಿಯಾದ ತನ್ನ ಸೇವಕನಾಗಿರುವ ಅಹೀಯನ ಮುಖಾಂತರ ಹೇಳಿದ ವಾಕ್ಯದ ಪ್ರಕಾರವೇ, ಅವಳು

೧೮ ಬಾಗಲ ಹೊಸ್ತಲ ಒಳಗೆ ಬಂದಾಗ, ಮಗನು ಸತ್ತನು. ಅವರು ಅವನನ್ನು ಹೂಣಿಟ್ಟರು; ಇಸ್ರಯೇಲ್ಯರೆಲ್ಲರು ಅವನಿಗೋಸ್ಕರ ಗೋಳಾಡಿದರು.

೧೯ ಯೆರೊಬಾಮನ ಮಿಕ್ಕಾದ ಕ್ರಿಯೆಗಳೂ—ಅವನು ಯುದ್ಧ ಮಾಡಿದ್ದೂ, ಆಳಿದ್ದೂ—ಇಗೋ, ಅವು ಇಸ್ರಯೇಲಿನ ಅರಸುಗಳ

೨೦ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ. ಯೆರೊಬಾಮನು ಆಳಿದ ದಿವಸಗಳು ಇಪ್ಪತ್ತೆರಡು ವರುಷಗಳಾಗಿದ್ದವು. ಅವನು ತನ್ನ ಪಿತೃಗಳ ಸಂಗಡ ಮಲಗಿದನು. ಅವನ ಮಗನಾದ ನಾದಬನು ಅವನಿಗೆ ಬದಲಾಗಿ ಆಳಿದನು.

೨೧ ಆದರೆ ಸೊಲೊಮೋನನ ಮಗನಾದ ರೆಹಬಾಮನು ಯೆಹೂದದಲ್ಲಿ ಆಳುತ್ತಾ ಇದ್ದನು. ರೆಹಬಾಮನು ಆಳ ಆರಂಭಿಸಿದಾಗ ನಾಲ್ವತ್ತೊಂದು ವರುಷದವನಾಗಿದ್ದು, ಕರ್ತನು ತನ್ನ ನಾಮವನ್ನು ಇಡ ಇಸ್ರಯೇಲಿನ ಸಕಲ ಕುಲಗಳೊಳಗಿಂದ ಆರಿಸಿಕೊಂಡ ಪಟ್ಟಣವಾದ ಯೆರೂಸಲೇಮಿನಲ್ಲಿ ಹದಿನೇಳು ವರುಷ ಆಳಿದನು. ಅವನ ತಾಯಿ ಅಮ್ಮೋನ್ಯಳಾದ ನಾಮಮಳೆಂಬ ಹೆಸರುಳ್ಳವಳಾಗಿದ್ದಳು.

೨೨ ಆದರೆ ಯೆಹೂದದವರು ಕರ್ತನ ಸಮುಖದಲ್ಲಿ ಕೆಟ್ಟತನ ಮಾಡಿ, ತಮ್ಮ ಪಿತೃಗಳು ಮಾಡಿದ ಸಮಸ್ತ ಪಾಪಗಳಿಗಿಂತ ತಾವು ಹೆಚ್ಚಾಗಿ ಪಾಪ ಮಾಡಿ, ಅವನಿಗೆ ಕೋಪವೆಬ್ಬಿಸಿ

೨೩ ದರು. ಅವರು ಮೇಡುಗಳನ್ನೂ, ಸ್ತಂಭಗಳನ್ನೂ, ವಿಗ್ರಹಗಳನ್ನೂ ಎತ್ತರವಾದ ಪ್ರತಿ ಗುಡ್ಡದ ಮೇಲೆಯೂ ಹಸುರಾದ ಪ್ರತಿ ಗಿಡದ ಕೆಳಗೂ ತಮಗೆ ಮಾಡಿದರು. ಇದಲ್ಲದೆ ದೇಶದಲ್ಲಿ ಪುರುಷ ಸಂಗಮರಿದ್ದರು. ಅವರು ಇಸ್ರಯೇಲಿನ ಮಕ್ಕಳ ಮುಂದೆ

೨೪ ಕರ್ತನು ಹೊರಡಿಸಿದ ಜನಾಂಗಗಳ ಸಕಲ ಅಸಹ್ಯಗಳ ಪ್ರಕಾರವಾಗಿ ಮಾಡುತ್ತಾ ಇದ್ದರು.

೨೫ ಮತ್ತು ಅರಸನಾದ ರೆಹಬಾಮನ ಐದನೇ ವರುಷದಲ್ಲಿ ಏನಾಯಿತಂದರೆ, ಐಗುಪ್ತದ ಅರಸನಾದ ಶೀಷಕನು ಯೆರೂಸಲೇಮಿಗೆ

೨೬ ವಿರೋಧವಾಗಿ ಏರಿ ಬಂದನು. ಅವನು ಕರ್ತನ ಮನೆಯ ಬೊಕ್ಕಸಗಳನ್ನೂ, ಅರಸನ ಮನೆಯ ಬೊಕ್ಕಸಗಳನ್ನೂ ತೆಗೆದು ಕೊಂಡನು; ಸಮಸ್ತವನ್ನು ತೆಗೆದು ಕೊಂಡನು. ಇದಲ್ಲದೆ ಸೊಲೊಮೋನನು ಮಾಡಿಸಿದ ಭಂಗಾರದ ಗುರಾಣಿಗಳನ್ನು ತ

೨೭ ಕ್ಕೊಂಡು ಹೋದನು. ಆದರೆ ಅರಸನಾದ ರೆಹಬಾಮನು ಅವಕ್ಕೆ ಬದಲಾಗಿ ತಾಂಬ್ರದ ಗುರಾಣಿಗಳನ್ನು ಮಾಡಿಸಿ, ಅರಮನೆಯ ಬಾಗಲನ್ನು ಕಾಯುವ ಕಾವಲಿಯವರ ಅಧಿಪತಿಯ ಕೈಯಲ್ಲಿ

೨೮ ಒಪ್ಪಿಸಿದನು. ಅರಸನು ಕರ್ತನ ಮನೆಗೆ ಹೋಗುತ್ತಿರುವಾಗ, ಕಾವಲಿಯವರು ಅವುಗಳನ್ನು ಎತ್ತಿ ಕೊಂಡು ಬಂದರು; ಮತ್ತು ಅವುಗಳನ್ನು ಹಿಂದಕ್ಕೆ ಕಾವಲಿಯ ಚಾವಡಿಗೆ ತಂದರು.



೨೯ ಆದರೆ ರೆಹಬಾಮನ ಮಿಕ್ಕಾದ ಕ್ರಿಯೆಗಳೂ ಅವನು ಮಾಡಿದ ಸಮಸ್ತವೂ ಯೆಹೂದ ಅರಸುಗಳ ದಿನಚರ್ಯೆಗಳ ಪುಸ್ತಕ

೩೦ ದಲ್ಲಿ ಬರೆಯಲ್ಪಟಲಿಲ್ಲವೋ? ರೆಹಬಾಮನಿಗೂ ಯೆರೊಬಾಮನಿಗೂ ಅವರ ಜೀವಾಂತ್ಯದ ಪರ್ಯಂತರ ಯುದ್ಧ ಉಂಟಾಗಿತ್ತು.

೩೧ ರೆಹಬಾಮನು ತನ್ನ ಪಿತೃಗಳ ಸಂಗಡ ಮಲಗಿದನು; ತನ್ನ ಪಿತೃಗಳ ಸಂಗಡ ದಾವೀದನ ಪಟ್ಟದಲ್ಲಿ ಹೂಣಿಡಲ್ಪಟ್ಟನು. ಅವನ ತಾಯಿ ಅಮ್ಮೋನ್ಯಳಾದ ನಾಮಮಳೆಂಬ ಹೆಸರುಳ್ಳವಳಾಗಿದ್ದಳು. ಅವನ ಮಗನಾದ ಅಬಿಯಾಮನು ಅವನಿಗೆ ಬದಲಾಗಿ ಆಳಿದನು.

## ೧೫. ಸಂಧಿ.

೧ ಆದರೆ ನಿಬಾಟನ ಮಗನಾಗಿರುವ ಅರಸನಾದ ಯೆರೊಬಾಮನ ಹದಿನೆಂಟನೇ ವರುಷದಲ್ಲಿ ಅಬಿಯಾಮನು ಯೆಹೂದದ ಮೇ

೨ ಲೆ ಆಳುತ್ತಿದ್ದನು. ಅವನು ಯೆರೂಸಲೇಮಿನಲ್ಲಿ ಮೂರು ವರುಷ ಆಳಿದನು. ಅವನ ತಾಯಿ ಅಬ್ಶಲೋಮನ ಮಗಳಾಗಿದ್ದು,

೩ ಮಾಕಳೆಂಬ ಹೆಸರುಳ್ಳವಳಾಗಿದ್ದಳು. ಆದರೆ ತನ್ನ ಪಿತೃವಾದ ದಾವೀದನ ಹೃದಯದ ಪ್ರಕಾರ ತನ್ನ ಹೃದಯವು ತನ್ನ ದೇವರಾದ ಕರ್ತನ ಮುಂದೆ ಪೂರ್ಣವಾಗಿರದೆ, ತನಗೆ ಮುಂಚಿದ್ದ ತ

೪ ನ್ನ ತಂದೆ ಮಾಡಿದ ಸಮಸ್ತ ಪಾಪಗಳಲ್ಲಿ ನಡೆದನು. ಆದರೆ ಅವನ ತರುವಾಯ ಅವನ ಮಗನನ್ನು ನೇಮಿಸುವದಕ್ಕೂ, ಯೆರೂಸಲೇಮನ್ನು ಸ್ಥಿರ ಪಡಿಸುವದಕ್ಕೂ, ತನ್ನ ದೇವರಾದ ಕರ್ತನು ದಾವೀದನ ನಿಮಿತ್ತ ಯೆರೂಸಲೇಮಿನಲ್ಲಿ ಅವನಿಗೆ ದೀಪವನ್ನು

೫ ಕೊಟ್ಟನು. ಯಾಕಂದರೆ ದಾವೀದನು ಹಿತ್ತಿಯನಾದ ಊರೀಯನ ಕಾರ್ಯ ಹೊರತಾಗಿ, ತನ್ನ ಜೀವದ ಸಮಸ್ತ ದಿವಸಗಳಲ್ಲಿ ಕರ್ತನು ತನಗೆ ಆಜ್ಞಾಪಿಸಿದ ಎಲ್ಲಾದಕ್ಕೆ ತೊಲಗದೆ ಅವನ ದೃ

೬ ಷ್ಟಿಗೆ ನೆಟ್ಟನೆಯಾದದ್ದನ್ನು ಮಾಡಿದನು. ಆದರೆ ರೆಹಬಾಮನಿಗೂ ಯೆರೊಬಾಮನಿಗೂ ಅವರ ಜೀವಾಂತ್ಯದ ಪರ್ಯಂತರ ಯುದ್ಧ ಉಂಟಾಗಿತ್ತು.

೭ ಅಬಿಯಾಮನ ಮಿಕ್ಕಾದ ಕ್ರಿಯೆಗಳೂ ಅವನು ಮಾಡಿದ್ದೆಲ್ಲವೂ ಯೆಹೂದದ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟ್ಟವಲ್ಲವೋ? ಅಬಿಯಾಮನಿಗೂ ಯೆರೊಬಾಮನಿಗೂ

೮ ಯುದ್ಧ ಉಂಟಾಗಿತ್ತು. ಅಬಿಯಾಮನು ತನ್ನ ಪಿತೃಗಳ ಸಂಗಡ ಮಲಗಿದನು; ದಾವೀದನ ಪಟ್ಟದಲ್ಲಿ ಅವನನ್ನು ಹೂಣಿಟ್ಟರು; ಅವನ ಮಗನಾದ ಆಸನು ಅವನಿಗೆ ಬದಲಾಗಿ ಆಳಿದನು.

೯ ಇಸ್ರಯೇಲಿನ ಅರಸನಾದ ಯೆರೊಬಾಮನ ಇಪ್ಪತ್ತನೇ ವ

೧೦ ರುಷದಲ್ಲಿ ಆಸನು ಯೆಹೂದದ ಮೇಲೆ ಆಳಿದನು. ನಾಲ್ವತ್ತೊಂದು ವರುಷ ಅವನು ಯೆರೂಸಲೇಮಿನಲ್ಲಿ ಆಳಿದನು. ಅವನ ತಾಯಿ ಅಬ್ಶಲೋಮನ ಮಗಳಾಗಿದ್ದು, ಮಾಕಳೆಂಬ ಹೆಸರುಳ್ಳವ

೧೧ ಳಾಗಿದ್ದಳು. ಆಸನು ತನ್ನ ತಂದೆಯಾದ ದಾವೀದನ ಹಾಗೆ ಕ

೧೨ ರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು ಮಾಡಿದನು. ಅವನು ಪುರುಷ ಸಂಗಮರನ್ನು ದೇಶದಲ್ಲಿಂದ ಹೊರಡಿಸಿ, ತನ್ನ ಪಿತೃಗಳು ಮಾಡಿದ ಸಮಸ್ತ ಮಣ್ಣು ದೇವರುಗಳನ್ನು ತೆಗೆದು ಹಾಕಿದ

೧೩ ನು. ಇದಲ್ಲದೆ ಆಸನು ತನ್ನ ತಾಯಿಯಾದ ಮಾಕಳು ತೋಪಿನಲ್ಲಿ ಒಂದು ವಿಗ್ರಹವನ್ನು ಮಾಡಿಸಿ ಇಟ್ಟದ್ದರಿಂದ, ಅವಳನ್ನು ರಾಣಿಯಾಗಿರದ ಹಾಗೆ ತೆಗೆದು ಹಾಕಿ, ಅವಳ ವಿಗ್ರಹವನ್ನು ಕಡಿದು ಬಿಟ್ಟು, ಕಿದ್ರೋನೆಂಬ ಹಳ್ಳದ ಬಳಿಯಲ್ಲಿ ಅದನ್ನು ಸುಟ್ಟು

೧೪ ಬಿಟ್ಟನು. ಪೇಡುಗಳು ತೆಗೆದು ಹಾಕಲ್ಪಟ್ಟದ್ದಿಲ್ಲ. ಆದರೆ ಆಸನ ಹೃದಯವು ತನ್ನ ಸಮಸ್ತ ದಿವಸಗಳಲ್ಲಿ ಕರ್ತನ ಸಂಗಡ ಪೂರ್ಣವಾಗಿತ್ತು. ತಾನೂ ತನ್ನ ತಂದೆಯೂ ಅರ್ಪಿಸಿದ ಬೆಳ್ಳಿಯೂ ಭಂಗಾರವೂ ಸಾಮಾನುಗಳೂ ಆದ ಪರಿಶುದ್ಧವಾದುವುಗಳನ್ನು ಅವನು ಕರ್ತನ ಮನೆಗೆ ತಂದನು.

೧೫ ಆಸನಿಗೂ ಇಸ್ರಯೇಲಿನ ಅರಸನಾದ ಬಾಷನಿಗೂ ಅವರ

೧೬ ಜೀವಾಂತ್ಯದ ಪರ್ಯಂತರ ಯುದ್ಧ ಉಂಟಾಗಿತ್ತು. ಆಗ ಇಸ್ರಯೇಲಿನ ಅರಸನಾದ ಬಾಷನು ಯೆಹೂದಕ್ಕೆ ವಿರೋಧವಾಗಿ ಹೋಗಿ, ಯೆಹೂದದ ಅರಸನಾದ ಆಸನ ಒಳಗೆ ಒಳಗೆ ಬರಲೂ ಹೊರಗೆ ಹೋಗಲೂ ಗೊಡಿಸದ ಹಾಗೆ ರಾಮವನ್ನು ಕಟ್ಟಿಸಿದನು.

೧೭ ಆಗ ಆಸನು ಕರ್ತನ ಮನೆಯ ಬೊಕ್ಕಸಗಳಲ್ಲಿ ಮಿಕ್ಕ ಸಮಸ್ತ ಬೆಳ್ಳಿ ಭಂಗಾರವನ್ನೂ, ಅರಮನೆಯ ಬೊಕ್ಕಸಗಳನ್ನೂ ತೆಗೆದು, ತನ್ನ ಸೇವಕರ ಕೈಯಲ್ಲಿ ಒಪ್ಪಿಸಿ, ದಮಸ್ಕ ಪಟ್ಟದಲ್ಲಿ ವಾಸವಾಗಿರುವ ಹೆಜ್ಯೋನನ ಮಗನಾದ ಟಬ್ರಿಮೋನನ ಮಗನಾಗಿರುವ ಅರಾಮಿನ ಅರಸನಾದ ಬೆನ್ಹದಾದನಿಗೆ ಅವುಗಳನ್ನು ಕಳುಹಿಸಿ, ಹೇಳಿದ್ದೇನಂದರೆ, ನನಗೂ ನಿನಗೂ, ನನ್ನ ತಂದೆಗೂ ನಿನ್ನ

೧೮ ತಂದೆಗೂ ಒಡಂಬಡಿಕೆ ಉಂಟು. ಇಗೋ, ನಾನು ಬೆಳ್ಳಿ ಭಂಗಾರವನ್ನು ದಾನವಾಗಿ ನಿನ್ನ ಒಳಗೆ ಕಳುಹಿಸಿದ್ದೇನೆ. ಇಸ್ರಯೇಲಿನ ಅರಸನಾದ ಬಾಷನು ನನ್ನನ್ನು ಬಿಟ್ಟು ಹೋಗುವ ಹಾಗೆ, ನೀನು ಬಂದು, ಅವನ ಸಂಗಡ ಮಾಡಿದ ನಿನ್ನ ಒಡಂಬಡಿಕೆಯನ್ನು ಮೀರು.

೧೯ ಹಾಗೆಯೇ ಬೆನ್ಹದಾದನು ಅರಸನಾದ ಆಸನ ಮಾತನ್ನು ಕೇಳಿ, ಇಸ್ರಯೇಲಿನ ಪಟ್ಟಗಳಿಗೆ ವಿರೋಧವಾಗಿ ತನಗುಂಟಾದ ಸೈನ್ಯಗಳ ಅಧಿಪತಿಗಳನ್ನು ಕಳುಹಿಸಿ, ಇಯ್ಯೋನನು, ದಾನ್ಸು, ಅಬೇಲು, ಬೆತ್ಮಾಕವು, ಸಮಸ್ತ ಕಿನೆರೋತು, ಸಮಸ್ತ ನೆಫ್ತಲಿ ದೇಶವು,

೨೦ ಇವುಗಳನ್ನು ಹೊಡೆದು ಬಿಟ್ಟನು. ಬಾಷನು ಅದನ್ನು ಕೇಳುತ್ತಲೇ, ರಾಮವ ಕಟ್ಟಿಸುವದನ್ನು ಬಿಟ್ಟು, ತಿರ್ಚದಲ್ಲಿ ವಾಸಿಸಿದನು.

೨೧ ಆಗ ಅರಸನಾದ ಆಸನು ಯೆಹೂದದಲ್ಲೆಲ್ಲಿಯೂ ಸಾರಿದನು; ಒಬ್ಬರೂ ಬಿಡಲ್ಪಡಲಿಲ್ಲ; ಆಗಲವರು ಬಾಷನು ಕಟ್ಟಿಸಿದ ರಾಮದ ಕಲ್ಲುಗಳನ್ನೂ ಅದರ ಮರಗಳನ್ನೂ ತಕ್ಕೊಂಡು ಹೋದರು. ಮತ್ತು ಅರಸನಾದ ಆಸನು ಅವುಗಳಿಂದ ಬೆನ್ಯಮೀನನ ಗೇಬವನ್ನೂ ಮಿಸ್ಪೆಯನ್ನೂ ಕಟ್ಟಿಸಿದನು.

೨೨ ಆಸನ ಮಿಕ್ಕಾದ ಎಲ್ಲಾ ಕ್ರಿಯೆಗಳೂ, ಅವನ ಸಮಸ್ತ ಪರಾಕ್ರಮವೂ, ಅವನು ಮಾಡಿದ್ದೆಲ್ಲವೂ, ಅವನು ಕಟ್ಟಿಸಿದ ಪಟ್ಟಗಳೂ, ಇವು ಯೆಹೂದದ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟಲಿಲ್ಲವೋ? ಆದರೆ ತನ್ನ ವೃದ್ಧಾಪ್ಯ ಕಾಲದಲ್ಲಿ

೨೩ ಅವನು ತನ್ನ ಕಾಲುಗಳಲ್ಲಿ ಅಸ್ವಸ್ಥವಾಗಿದ್ದನು. ಮತ್ತು ಆಸನು ತನ್ನ ಪಿತೃಗಳ ಸಂಗಡ ಮಲಗಿದನು; ತನ್ನ ತಂದೆಯಾದ ದಾವೀದನ ಪಟ್ಟದಲ್ಲಿ ತನ್ನ ಪಿತೃಗಳ ಸಂಗಡ ಹೂಣಿಡಲ್ಪಟ್ಟನು. ಅವನಿಗೆ ಬದಲಾಗಿ ಅವನ ಮಗನಾದ ಯೆಹೊಷಾಫಾಟನು ಆಳಿದನು.

೨೪ ಯೆಹೂದದ ಅರಸನಾದ ಆಸನ ಎರಡನೇ ವರುಷದಲ್ಲಿ ಯೆರೊಬಾಮನ ಮಗನಾದ ನಾದಬನು ಇಸ್ರಯೇಲಿನ ಮೇಲೆ ಆಳ

೨೯ ಲೆರಂಭಿಸಿ, ಎರಡು ವರುಷ ಇಸ್ರಯೇಲಿನ ಮೇಲೆ ಆಳಿದನು. ಆದ
ಕೆ ಅವನು ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾಡಿ, ಪಾಪ
ಮಾಡ ಇಸ್ರಯೇಲನ್ನು ಪ್ರೇರೇಪಿಸಿದ ಅವನ ತಂದೆಯ ಪಾಪದ
ಲ್ಲಿಯೂ ಅವನ ಮಾರ್ಗದಲ್ಲಿಯೂ ನಡೆದನು.

೨೭ ಮತ್ತು ಇಸ್ಸಕಾರನ ಮನೆಯವನಾಗಿರುವ ಅಹೀಯೆನ ಮ
ಗನಾದ ಬಾಷನು ಅವನಿಗೆ ವಿರೋಧವಾಗಿದ್ದು, ಫಿಲಿಷ್ಟ್ಯರಿಗೆ ಉಂ
ಟೂದ ಗಿಬ್ಬೆತೋನಿನಲ್ಲಿ ಅವನನ್ನು ಹೊಡೆದು ಬಿಟ್ಟನು. ಯಾ
ಕಂದರೆ ನಾದಬನೂ ಸಮಸ್ತ ಇಸ್ರಯೇಲ್ಯರೂ ಗಿಬ್ಬೆತೋನಿಗೆ
೨೮ ಮುತ್ತಿಗೆ ಹಾಕುತ್ತಾ ಇದ್ದರು. ಯೆಹೂದದ ಅರಸನಾದ ಆಸನ
ಮೂರನೇ ವರುಷದಲ್ಲಿ ಬಾಷನು ನಾದಬನನ್ನು ಕೊಂದು ಹಾಕಿ,
೨೯ ಅವನಿಗೆ ಬದಲಾಗಿ ಆಳಿದನು. ಅವನು ಆಳುತ್ತಿರುವಾಗ ಏನಾ
ಯಿತಂದರೆ, ಯೆರೊಬಾಮನ ಮನೆಯನ್ನೆಲ್ಲಾ ಹೊಡೆದು ಬಿಟ್ಟಿ
೩೦ ನು. ಯೆರೊಬಾಮನು ಪಾಪ ಮಾಡಿ ಇಸ್ರಯೇಲನ್ನು ಪ್ರೇರೇ
ಪಿಸಿದ ನಿಮಿತ್ತವಾಗಿಯೂ, ಇಸ್ರಯೇಲಿನ ದೇವರಾದ ಕರ್ತನಿಗೆ
ಕಕೆಕಕೆ ಎಬ್ಬಿಸಿದ ನಿಮಿತ್ತವಾಗಿಯೂ, ಕರ್ತನು ಪಿಲೋನಿಯ
ನಾಗಿರುವ ತನ್ನ ಸೇವಕನಾದ ಅಹೀಯನ ಮುಖಾಂತರ ಹೇಳಿದ
ಮಾತಿನ ಪ್ರಕಾರವೇ ಅವನು ಯೆರೊಬಾಮನನ್ನು ನಾಶನ ಮಾ
ಡುವ ಪರ್ಯಂತರ ಶ್ವಾಸವುಳ್ಳ ಒಬ್ಬನನ್ನೂ ಉಳಿಯ ಗೊಡಿಸ
೩೧ ಲಿಲ್ಲ. ಆದರೆ ನಾದಬನ ಮಿಕ್ಕಾದ ಕ್ರಿಯೆಗಳೂ, ಅವನು ಮಾಡಿ
ದ ಸಮಸ್ತವೂ ಇಸ್ರಯೇಲ್ಯರ ಅರಸುಗಳ ದಿನಚರ್ಯೆಗಳ
೩೦ ಪುಸ್ತಕದಲ್ಲಿ ಬರೆಯಲ್ಪಟಿಲ್ಲವೋ! ಇದಲ್ಲದೆ ಆಸನಿಗೂ ಇಸ್ರ
ಯೇಲಿನ ಅರಸನಾದ ಬಾಷನಿಗೂ ಅವರ ಜೀವಾಂತ್ಯದ ಪ
ರ್ಯಂತರ ಯುದ್ಧ ಉಂಟಾಗಿತ್ತು.

೩೩ ಯೆಹೂದದ ಅರಸನಾದ ಆಸನ ಮೂರನೇ ವರುಷದಲ್ಲಿ ಅ
ಹೀಯನ ಮಗನಾದ ಬಾಷನು ಸಮಸ್ತ ಇಸ್ರಯೇಲಿನ ಮೇಲೆ
ತಿರ್ಚದಲ್ಲಿ ಆಳ ಆರಂಭಿಸಿ, ಇಪ್ಪತ್ತು ನಾಲ್ಕು ವರುಷ ಆಳಿದನು.
೩೪ ಆದರೆ ಅವನು ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾಡಿ, ಯ
ರೊಬಾಮನ ಮಾರ್ಗದಲ್ಲಿಯೂ ಅವನು ಇಸ್ರಯೇಲನ್ನು ಪಾ
ಪ ಮಾಡ ಪ್ರೇರೇಪಿಸಿದ ಅವನ ಪಾಪದಲ್ಲಿಯೂ ನಡೆದನು.

## ೧೯. ಸಂಧಿ.

೧ ಮತ್ತು ಬಾಷನಿಗೆ ವಿರೋಧವಾಗಿ ಹನಾನಿಯ ಮಗನಾದ
ಯೆಹುಬನಿಗೆ ಕರ್ತನ ವಾಕ್ಯ ಉಂಟಾಗಿ ಹೇಳಿದ್ದೇನಂದರೆ, ನಾ
೨ ನು ನಿನ್ನನ್ನು ಧೂಳಿಯ ಮೇಲಿನಿಂದ ಎಬ್ಬಿಸಿ, ನಿನ್ನನ್ನು ನನ್ನ
ಜನರಾದ ಇಸ್ರಯೇಲಿನ ಮೇಲೆ ನಾಯಕನಾಗಿ ಇರಿಸಿದೆನು. ಆದ
ರೆ ನೀನು ಯೆರೊಬಾಮನ ಮಾರ್ಗದಲ್ಲಿ ನಡೆದು, ನನ್ನ ಜನರಾ
ದ ಇಸ್ರಯೇಲ್ಯರು ತಮ್ಮ ಪಾಪಗಳಿಂದ ನನಗೆ ಕಕೆಕಕೆ ಎಬ್ಬಿ
೩ ಸುವ ಹಾಗೆ, ಅವರನ್ನು ಪಾಪ ಮಾಡ ಪ್ರೇರೇಪಿಸಿದಿ. ಇಗೋ,
ನಾನು ಬಾಷನ ಸಂತತಿಯನ್ನೂ ಅವನ ಮನೆಯ ಸಂತತಿಯ
ನ್ನೂ ಶೆಗೆದು ಹಾಕಿ, ನಿನ್ನ ಮನೆಯನ್ನು ನೆಬಾಟನ ಮಗನಾದ
೪ ಯೆರೊಬಾಮನ ಮನೆಯ ಹಾಗೆ ಮಾಡುವೆನು. ಬಾಷನ ವಂಶ
ಸ್ತರಲ್ಲಿ ಪಟ್ಟಣದೊಳಗೆ ಸಾಯುವವನನ್ನು ನಾಯಿಗಳು ತಿನ್ನುವ
ವು, ಅವನ ವಂಶಸ್ತರಲ್ಲಿ ಹೊಲದೊಳಗೆ ಸಾಯುವವನನ್ನು ಆ
ಕಾಶದ ಪಕ್ಷಿಗಳು ತಿನ್ನುವವು.

೫ ಆದರೆ ಬಾಷನ ಇತರ ಕಾರ್ಯಗಳೂ ಅವನು ಮಾಡಿದ್ದೂ,
ಅವನ ಪರಾಕ್ರಮವೂ ಇಸ್ರಯೇಲಿನ ಅರಸುಗಳ ದಿನಚರ್ಯೆ
ಗಳ ಪುಸ್ತಕದಲ್ಲಿ ಬರೆಯಲ್ಪಟಿಲ್ಲವೋ! ಬಾಷನು ತನ್ನ ಪಿತೃ
ಗಳ ಸಂಗಡ ಮಲಗಿದನು; ತಿರ್ಚದಲ್ಲಿ ಹೂಣಿಡಲ್ಪಟ್ಟನು; ಮತ್ತು
ಅವನ ಮಗನಾದ ಏಲನು ಅವನಿಗೆ ಬದಲಾಗಿ ಆಳಿದನು.

೬ ಇದಲ್ಲದೆ ಬಾಷನು ಯೆರೊಬಾಮನ ಮನೆಯವರ ಹಾಗಿದ್ದು,
ಅವನನ್ನು ಹೊಡೆದು ಬಿಟ್ಟು, ತನ್ನ ಕೈ ಕೆಲಸದಿಂದ ಕರ್ತನಿಗೆ
ಕಕೆಕಕೆ ಎಬ್ಬಿಸಿ, ಕರ್ತನ ಸಮುಖದಲ್ಲಿ ತಾನು ಮಾಡಿದ ಎಲ್ಲಾ
ಕೆಟ್ಟತನದ ನಿಮಿತ್ತ ಅವನಿಗೆ ವಿರೋಧವಾಗಿಯೂ, ಅವನ ಮನೆ
ಗೆ ವಿರೋಧವಾಗಿಯೂ ಹನಾನಿಯ ಮಗನಾಗಿರುವ ಪ್ರವಾದಿ
ಯಾದ ಯೆಹುವಿನ ಮುಖಾಂತರ ಕರ್ತನ ವಾಕ್ಯ ಉಂಟಾಯಿತು.

೭ ಯೆಹೂದದ ಅರಸನಾದ ಆಸನ ಇಪ್ಪತ್ತಾರನೇ ವರುಷದಲ್ಲಿ
ಬಾಷನ ಮಗನಾದ ಏಲನು ಇಸ್ರಯೇಲಿನ ಮೇಲೆ ತಿರ್ಚದಲ್ಲಿ
ಎರಡು ವರುಷ ಆಳಿದನು. ಆದರೆ ತಿರ್ಚದಲ್ಲಿ ತನ್ನ ಮನೆಯ
೮ ಉಗ್ರಾಣಿಕನಾದ ಅರ್ಚನ ಮನೆಯಲ್ಲಿ ಅವನು ಕುಡಿದು ಮತ್ತ
ನಾಗಿ ತಿರ್ಚದಲ್ಲಿರುವಾಗ, ಅರ್ಧ ರಥಗಳಿಗೆ ಅಧಿಪತಿಯಾಗಿ
ರುವ ಅವನ ಸೇವಕನಾದ ಜಿಮ್ರನು ಅವನಿಗೆ ವಿರೋಧವಾಗಿ
೯ ಒಳ ಸಂಚು ಮಾಡಿದನು. ಮತ್ತು ಜಿಮ್ರನು ಒಳಗೆ ಹೋಗಿ,
ಯೆಹೂದದ ಅರಸನಾದ ಆಸನ ಇಪ್ಪತ್ತೇಳನೇ ವರುಷದಲ್ಲಿ ಅ
ವನನ್ನು ಹೊಡೆದು, ಕೊಂದು ಹಾಕಿ, ಅವನಿಗೆ ಬದಲಾಗಿ ಆಳಿ
ದನು.

೧೦ ಅವನು ಆಳ ಆರಂಭಿಸಿದಾಗ ಏನಾಯಿತಂದರೆ, ಅವನು ಸಿಂ
ಹಾಸನದ ಮೇಲೆ ಕುಳಿತು ಕೊಳ್ಳುತ್ತಲೇ ಬಾಷನ ಮನೆಯವರ
ನ್ನೆಲ್ಲಾ ಹೊಡೆದು ಬಿಟ್ಟನು. ಅವನ ಬಂಧುಗಳಲ್ಲಿಯೂ ಅವನ
ಸ್ನೇಹಿತರಲ್ಲಿಯೂ ಅವನಿಗೆ ಗಂಡಸರಾದ ಒಬ್ಬನನ್ನು ಉಳಿಯ
೧೧ ಗೊಡಿಸಲಿಲ್ಲ. ಹೀಗೆಯೇ ಬಾಷನೂ ಅವನ ಮಗನಾದ ಏಲನೂ
ತಮ್ಮ ಮಾಯೆವಾದವುಗಳಿಂದ ಇಸ್ರಯೇಲಿನ ದೇವರಾದ ಕರ್ತ
ನಿಗೆ ಕಕೆಕಕೆ ಎಬ್ಬಿಸಿ, ಪಾಪ ಮಾಡಿದ ಪಾಪಗಳಿಂದಲೂ, ತಾವು
೧೩ ಇಸ್ರಯೇಲನ್ನು ಪಾಪ ಮಾಡ ಪ್ರೇರೇಪಿಸಿದ್ದರಿಂದಲೂ, ಕರ್ತ
ನು ಪ್ರವಾದಿಯಾದ ಯೆಹುವಿನ ಮುಖಾಂತರ ಬಾಷನಿಗೆ ವಿರೋ
ಧವಾಗಿ ಹೇಳಿದ ಆಸನ ವಾಕ್ಯದ ಪ್ರಕಾರವೇ, ಜಿಮ್ರನು ಬಾಷನ
ಮನೆಯನ್ನೆಲ್ಲಾ ನಾಶನ ಮಾಡಿದನು.

೧೪ ಏಲನ ಇತರ ಕ್ರಿಯೆಗಳೂ, ಅವನು ಮಾಡಿದ್ದೆಲ್ಲವೂ ಇಸ್ರ
ಯೇಲ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟಿ
ಲ್ಲವೋ!

೧೫ ಯೆಹೂದದ ಅರಸನಾದ ಆಸನ ಇಪ್ಪತ್ತೇಳನೇ ವರುಷದಲ್ಲಿ
ಜಿಮ್ರನು ತಿರ್ಚದಲ್ಲಿ ಏಳು ದಿವಸ ಆಳಿದನು. ಆಗ ಜನರು ಫಿಲಿ
ಷ್ಟ್ಯರಿಗೆ ಉಂಟಾಗಿರುವ ಗಿಬ್ಬೆತೋನಿನ ಒಳಯಲ್ಲಿ ದಂಡಾಗಿ
೧೬ ಇಳಿದಿದ್ದರು. ಜಿಮ್ರನು ಒಳಸಂಚು ಮಾಡಿ, ಅರಸನನ್ನು ಕೊಂ
ದು ಹಾಕಿದ್ದಾನೆಂದು, ಅಲ್ಲಿ ಇಳಿದಿರುವ ದಂಡಿನವರು ಕೇಳಿದ್ದರಿಂದ,
ಇಸ್ರಯೇಲ್ಯರೆಲ್ಲರು ಅದೇ ದಿವಸದಲ್ಲಿ ದಂಡಿನೊಳಗೆ ದಂಡಿನ ಅ
ಧಿಪತಿಯಾದ ಒಮ್ರಿಯನ್ನು ಇಸ್ರಯೇಲಿನ ಮೇಲೆ ಅರಸನಾ
೧೭ ಗ ಮಾಡಿದರು. ಆಗ ಒಮ್ರಿಯೂ ಅವನ ಸಂಗಡ ಇಸ್ರಯೇಲ್ಯ
ರೆಲ್ಲರೂ ಗಿಬ್ಬೆತೋನನ್ನು ಬಿಟ್ಟು ಹೋಗಿ, ತಿರ್ಚವನ್ನು ಮುತ್ತಿ
೧೮ ಗೆ ಹಾಕಿದರು. ಪಟ್ಟಣವು ಹಿಡಿಯಲ್ಪಟ್ಟಿದ್ದನ್ನು ಜಿಮ್ರನು ನೋಡಿ



ದಾಗ, ಅವನು ಅರಮನೆಯ ಅಂತಃಪುರದೊಳಗೆ ಪ್ರವೇಶಿಸಿ, ತನ್ನ
ಮೇಲೆ ಇರುವ ಅರಮನೆಯನ್ನು ಬೆಂಕಿಯಿಂದ ಸುಟ್ಟು, ತಾನೂ
೧೯ ಸತ್ತನು. ಅವನು ಕರ್ತನ ಸಮುಖದಲ್ಲಿ ಕೆಟ್ಟತನ ಮಾಡಿ, ತಾ
ನು ಮಾಡಿದ ಪಾಪಗಳ ನಿಮಿತ್ತವಾಗಿಯೂ, ಯೆರೊಬಾಮನ
ಮಾರ್ಗದಲ್ಲಿ ನಡೆದು, ಇಸ್ರಯೇಲನ್ನು ಪಾಪ ಮಾಡ ಪ್ರೇರೇಪಿ
ಸಿದ ಅವನ ಪಾಪದ ನಿಮಿತ್ತವಾಗಿಯೂ ಇದು ಆಯಿತು.

೨೦ ಜಿಮ್ರನ ಇತರ ಕಾರ್ಯಗಳೂ, ಅವನು ಮಾಡಿದ ಒಳಗಂ
ಚೂ ಇಸ್ರಯೇಲಿನ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ
ಬರೆಯಲ್ಪಟಿಲ್ಲವೋ!

೨೧ ಆಗ ಇಸ್ರಯೇಲಿನ ಜನರು ಎರಡು ಪಾಲಾಗಿ ವಿಭೇದಿಸಲ್ಪಟ್ಟು,
ಅರ್ಧ ಜನರು ಗಿನಾತನ ಮಗನಾದ ತಿಬ್ನಿಯನ್ನು ಅರಸನಾಗ
ಮಾಡ ಅವನ ಹಿಂದೆ ಹೋದರು; ಅರ್ಧ ಜನರು ಒಮ್ರಿಯ ಹಿಂ
೨೨ ದೆ ಹೋದರು. ಆದರೆ ಒಮ್ರಿಯ ಹಿಂದೆ ಹೋದ ಜನರು ಗಿನಾ
ತನ ಮಗನಾದ ತಿಬ್ನಿಯ ಹಿಂದೆ ಹೋದ ಜನರನ್ನು ಜಯಿಸಿದ್ದ
ರಿಂದ ತಿಬ್ನಿಯು ಸತ್ತು ಹೋದನು, ಒಮ್ರಿಯು ಆಳಿದನು.

೨೩ ಯೆಹೂದದ ಅರಸನಾದ ಆಸನ ಮೂವತ್ತೊಂದನೇ ವರುಷ
ದಲ್ಲಿ ಒಮ್ರಿಯು ಇಸ್ರಯೇಲಿನ ಮೇಲೆ ಆಳ ಆರಂಭಿಸಿ, ಹನ್ನೆರ
೨೪ ಡು ವರುಷ ಆಳಿದನು; ತಿರ್ಚದಲ್ಲಿ ಆರು ವರುಷ ಆಳಿದನು.
ಅವನು ಶೇಮರನಿಗೆ ಎರಡು ತಲಾಂತು ಬೆಳ್ಳಿಯನ್ನು ಕೊಟ್ಟು,
ಸಮಾರ್ಯೆಂಬ ಬೆಟ್ಟವನ್ನು ಕೊಂಡು ಕೊಂಡು, ಆ ಬೆಟ್ಟದ
ಮೇಲೆ ಪಟ್ಟಣವನ್ನು ಕಟ್ಟಿಸಿ, ಶೇಮರನೆಂಬ ಬೆಟ್ಟದ ಯಜಮಾನನ
ಹೆಸರಿನ ಹಾಗೆ ತಾನು ಕಟ್ಟಿಸಿದ ಪಟ್ಟಣಕ್ಕೆ ಸಮಾರ್ಯೆಂದು ಹೆಸ
೨೫ ರಿಟ್ಟನು. ಆದರೆ ಒಮ್ರಿಯು ಕರ್ತನ ಸಮುಖದಲ್ಲಿ ಕೆಟ್ಟತನ
ಮಾಡಿ, ತನಗೆ ಮುಂಚೆ ಇದ್ದ ಎಲ್ಲರಿಗಿಂತ ಕೆಟ್ಟವನಾಗಿ ನಡೆದ
೨೬ ನು. ಏನಂದರೆ ಅವನು ನೆಬಾಟನ ಮಗನಾದ ಯೆರೊಬಾಮನ
ಸಕಲ ಮಾರ್ಗಗಳಲ್ಲಿಯೂ, ಇಸ್ರಯೇಲಿನ ದೇವರಾದ ಕರ್ತನಿ
ಗೆ ತಮ್ಮ ಮಾಯೆವಾದವುಗಳಿಂದ ಕಕೆಕಕೆ ಎಬ್ಬಿಸುವ ಹಾಗೆ,
ಇಸ್ರಯೇಲನ್ನು ಪಾಪ ಮಾಡ ಪ್ರೇರೇಪಿಸಿದ ಯೆರೊಬಾಮನ
ಪಾಪದಲ್ಲಿಯೂ ನಡೆದನು.

೨೭ ಆದರೆ ಒಮ್ರಿಯು ಮಾಡಿದ ಇತರ ಕಾರ್ಯಗಳೂ, ಅವನು
ತೋರಿಸಿದ ಅವನ ಪರಾಕ್ರಮವೂ ಇಸ್ರಯೇಲಿನ ಅರಸುಗಳ
೨೮ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟಿಲ್ಲವೋ! ಮತ್ತು
ಒಮ್ರಿಯು ತನ್ನ ಪಿತೃಗಳ ಸಂಗಡ ಮಲಗಿದನು; ಸಮಾರ್ಯೆ
ಪಟ್ಟಣದಲ್ಲಿ ಹೂಣಿಡಲ್ಪಟ್ಟನು; ಮತ್ತು ಅವನಿಗೆ ಬದಲಾಗಿ ಅವನ
ಮಗನಾದ ಅಹಾಬನು ಆಳಿದನು.

೨೯ ಯೆಹೂದದ ಅರಸನಾದ ಆಸನ ಮೂವತ್ತೆಂಟನೇ ವರುಷದ
ಲ್ಲಿ ಒಮ್ರಿಯ ಮಗನಾದ ಅಹಾಬನು ಇಸ್ರಯೇಲಿನ ಮೇಲೆ ಆಳ
ಆರಂಭಿಸಿ, ಸಮಾರ್ಯದಲ್ಲಿ ಇಸ್ರಯೇಲಿನ ಮೇಲೆ ಇಪ್ಪತ್ತೆರಡು
೩೦ ವರುಷ ಆಳಿದನು. ಆದರೆ ಒಮ್ರಿಯ ಮಗನಾದ ಅಹಾಬನು ತ
ನಗೆ ಮುಂಚೆ ಇದ್ದ ಎಲ್ಲರಿಗಿಂತ ಕರ್ತನ ಸಮುಖದಲ್ಲಿ ಕೆಟ್ಟತನ
೩೧ ಮಾಡಿದನು. ಮತ್ತು ನೆಬಾಟನ ಮಗನಾದ ಯೆರೊಬಾಮನ
ಪಾಪಗಳಲ್ಲಿ ನಡೆಯುವದು ಅವನಿಗೆ ಅಲ್ಪವಾಗಿತ್ತು; ಅವನು ಚಿ
ದೋನ್ಯರ ಅರಸನಾಗಿರುವ ಎತ್ಬಾಳನ ಮಗಳಾದ ಇಜೆಬೇಲಳ
ನ್ನು ತಕ್ಕೊಂಡು, ಹೋಗಿ, ಬಾಳನನ್ನು ಸೇವಿಸಿ, ಅವನಿಗೆ ಅಡ್ಡ
೩೨ ಬಿದ್ದನು. ಇದಲ್ಲದೆ ತಾನು ಸಮಾರ್ಯದಲ್ಲಿ ಕಟ್ಟಿಸಿದ ಬಾಳನ
೩೩ ಮನೆಯಲ್ಲಿ ಬಾಳನಿಗೆ ಬಲಿಪೀಠವನ್ನು ಕಟ್ಟಿಸಿದನು. ಮತ್ತು ಅ
ಹಾಬನು ತೋಪನ್ನು ಹಾಕಿಸಿದನು. ಹೀಗೆಯೇ ಅಹಾಬನು ಇ
ಸ್ರಯೇಲಿನ ದೇವರಾದ ಕರ್ತನಿಗೆ ಕಕೆಕಕೆ ಎಬ್ಬಿಸುವ ಹಾಗೆ
ತನಗೆ ಮುಂಚಿದ್ದ ಇಸ್ರಯೇಲಿನ ಅರಸುಗಳೆಲ್ಲರಿಗಿಂತ ಅಧಿಕವಾ
ಗಿ ಮಾಡಿದನು.

೩೪ ಅವನ ದಿವಸಗಳಲ್ಲಿ ಬೇತೆಲಿನವನಾದ ಹಿಯೇಲನು ಯೆರಿ
ಕೋನನ್ನು ಕಟ್ಟಿಸಿದನು; ಕರ್ತನು ನೂನನ ಮಗನಾದ ಯೆ
ಹೋಶುವನ ಮುಖಾಂತರ ಹೇಳಿದ್ದ ವಾಕ್ಯದ ಪ್ರಕಾರವೇ, ಅವನು
ತನ್ನ ಜೊಚ್ಚುಲ ಮಗನಾದ ಅಬೀರಮನಲ್ಲಿ ಅದರ ಅಸ್ತಿವಾರವ
ನ್ನು ಹಾಕಿ, ತನ್ನ ಚಿಕ್ಕ ಮಗನಾದ ಸೆಗೂಬನಲ್ಲಿ ಅದರ ಬಾಗ
ಲುಗಳನ್ನು ಇಟ್ಟನು.

## ೧೭. ಸಂಧಿ.

೧ ಆದರೆ ಗಿಲ್ಯಾದಿನ ನಿವಾಸಿಗಳಲ್ಲಿ ತಿಷ್ಬಿಯನಾದ ಎಲೀಯನು
ಅಹಾಬನಿಗೆ, ಯಾವನ ಸಮುಖದಲ್ಲಿ ನಿಲ್ಲುತ್ತೇನೋ, ಆ ಇಸ್ರ
ಯೇಲಿನ ದೇವರಾದ ಕರ್ತನ ಜೀವವಾಣೆ—ನನ್ನ ಮಾತಿನ ಪ್ರ
ಕಾರವಲ್ಲದೆ ಈ ವರುಷಗಳಲ್ಲಿ ಮಂಜೂ ಮಳೆಯೂ ಆಗದೆಂದು,
ಅಂದನು.

೨ ಮತ್ತು ಕರ್ತನ ಮಾತು ಅವನಿಗೆ ಉಂಟಾಗಿ ಹೇಳಿದ್ದೇನಂ
ದರೆ, ನೀನು ಈ ಸ್ಥಳವನ್ನು ಬಿಟ್ಟು, ಪೂರ್ವ ದಿಕ್ಕಿಗೆ ಹೋಗಿ,
೩ ಯೊರ್ದನಿಗೆ ಕಲಶಿರುವ ಕೆರೀತು ಹಳ್ಳದ ಬಳಿಯಲ್ಲಿ ಅಡಗಿ
೪ ಕೊಂಡಿರು. ಆಗ ಆಗುವದೇನಂದರೆ, ನೀನು ಆ ಹಳ್ಳದ ನೀರನ್ನು
ಕುಡಿಯುವಿ; ನಿನಗೆ ಆಹಾರವನ್ನು ಕೊಡ ನಾನು ಕಾಗಿಗಳಿಗೆ ಆ
ಜ್ಞಾಪಿಸಿದ್ದೇನೆ. ಅವನು ಹೋಗಿ, ಕರ್ತನ ಮಾತಿನ ಹಾಗೆಯೇ
ಮಾಡಿದನು; ಏನಂದರೆ ಅವನು ಹೋಗಿ, ಯೊರ್ದನಿಗೆ ಕಲಶಿ
೫ ರುವ ಕೆರೀತು ಹಳ್ಳದ ಬಳಿಯಲ್ಲಿ ವಾಸವಾಗಿದ್ದನು. ಕಾಗಿಗಳು
ಅವನಿಗೆ ಉದಯ ಕಾಲದಲ್ಲಿ ರೊಟ್ಟಿಯನ್ನೂ ಮಾಂಸವನ್ನೂ,
ಸಾಯಂಕಾಲದಲ್ಲಿ ರೊಟ್ಟಿಯನ್ನೂ ಮಾಂಸವನ್ನೂ ತಕ್ಕೊಂ
೬ ಡು ಬಂದವು; ಆ ಹಳ್ಳದ ನೀರನ್ನು ಕುಡಿಯುತ್ತಿದ್ದನು. ಕೆಲವು
ದಿವಸಗಳ ತರುವಾಯ ಏನಾಯಿತಂದರೆ, ದೇಶದಲ್ಲಿ ಮಳೆ ಇಲ್ಲ
ದ್ದರಿಂದ ಆ ಹಳ್ಳವು ಬತ್ತಿ ಹೋಯಿತು.

೭ ಮತ್ತು ಕರ್ತನ ವಾಕ್ಯವು ಅವನಿಗೆ ಉಂಟಾಗಿ, ಹೇಳಿದ್ದೇನಂ
೮ ದರೆ, ನೀನೆದ್ದು, ಚಿದೋನಿಗೆ ಹೊಂದಿದ ಚಿಕೆಪ್ತಕ್ಕೆ ಹೋಗಿ, ಅ
ಲ್ಲಿ ವಾಸವಾಗಿರು; ಇಗೋ, ನಿನ್ನನ್ನು ಸಂರಕ್ಷಣೆ ಮಾಡ ಅಲ್ಲಿ
೧೦ ರುವ ಒಬ್ಬ ವೆಧವೆ ಸ್ತ್ರೀಗೆ ಆಜ್ಞಾಪಿಸಿದೆನು. ಹಾಗೆಯೇ ಅವನೆ
ದ್ದು, ಚಿಕೆಪ್ತಕ್ಕೆ ಹೋಗಿ, ಪಟ್ಟಣದ ಬಾಗಲ ಬಳಿಗೆ ಬಂದಾಗ, ಇ
ಗೋ, ಅಲ್ಲಿ ಒಬ್ಬ ವೆಧವೆ ಸ್ತ್ರೀಯು ಕಟ್ಟಿಗೆಗಳನ್ನು ಆರಿಸಿ ಕೊ
ಳ್ಳುತ್ತಾ ಇದ್ದಳು. ಅವನು ಅವಳನ್ನು ಕರೆದು, ನೀನು ದಯ
ಮಾಡಿ, ನಾನು ಕುಡಿಯುವದಕ್ಕೆ, ಪಾತ್ರೆಯಲ್ಲಿ ಸ್ವಲ್ಪ ನೀರ
೧೧ ನ್ನು ತಕ್ಕೊಂಡು ಬಾ, ಅಂದನು. ಅವಳು ತಕ್ಕೊಂಡು ಬರ ಹೋ
ಗುತ್ತಿರುವಾಗ, ಅವನು ಅವಳನ್ನು ಕರೆದು, ನೀನು ದಯ ಮಾಡಿ,
ನಿನ್ನ ಕೈಯಲ್ಲಿ ಕೊಟ್ಟಿಯ ತುಂಡನ್ನು ನನಗೆ ತಕ್ಕೊಂಡು ಬಾ,
೧೨ ಅಂದನು. ಅದಕ್ಕೆ ಅವಳು, ನಿನ್ನ ದೇವರಾದ ಕರ್ತನ ಜೀವವಾ
ಣೆ—ಕೊತದಲ್ಲಿ ಒಂದು ಹಿಡಿ ಹಿಟ್ಟೂ ತಂಬಿಗೆಯಲ್ಲಿ ಸ್ವಲ್ಪ ಎ
ಣ್ಣೆಯೂ ಹೊರ್ತಾಗಿ, ನನಗೆ ಒಂದು ದೋಸೆಯೂ ಇಲ್ಲ. ಇ

ಗೋ, ನಾನೂ ನನ್ನ ಕುಮಾರನೂ ಅದನ್ನು ತಿಂದು, ಸತ್ತು
ಹೋಗುವ ಹಾಗೆ, ಅದನ್ನು ನನಗೂ ಅವನಿಗೂ ಸಿದ್ಧ ಮಾಡ,
೧೩ ಏರಡು ಕಟ್ಟಿಗೆಗಳನ್ನು ಆರಿಸಿ ಕೊಂಡಿದ್ದೇನೆ, ಅಂದಳು. ಆಗ ಎ
ಲೀಯನು ಅವಳಿಗೆ, ಭಯ ಪಡ ಬೇಡ; ನೀನು ಹೋಗಿ, ನಿನ್ನ
ಮಾತಿನ ಪ್ರಕಾರವೇ ಮಾಡು. ಆದರೆ ಮೊದಲು ಅದರಲ್ಲಿ ನನಗೆ
ಒಂದು ಚಿಕ್ಕ ರೊಟ್ಟಿ ಮಾಡಿ, ನನ್ನ ಬಳಿಗೆ ತಕ್ಕೊಂಡು ಬಾ;
ತರುವಾಯ ನಿನಗೂ ನಿನ್ನ ಮಗನಿಗೂ ಸಿದ್ಧ ಮಾಡಿಕೋ.
೧೪ ಯಾಕಂದರೆ ಕರ್ತನು ಭೂಮಿಯ ಮೇಲೆ ಮಳೆಯನ್ನು ಕೊಡು
ವ ಪರ್ಯಂತರಕ್ಕೂ, ಕೊಡದಲ್ಲಿರುವ ಹಿಟ್ಟು ತೀರುವದಿಲ್ಲ, ತಂ
ಬಿಗೆಯಲ್ಲಿರುವ ಎಣ್ಣೆಯು ಮುಗಿಯುವದಿಲ್ಲ, ಎಂದು ಇಸ್ರಯೇ
೧೫ ಲಿನ ದೇವರಾದ ಕರ್ತನು ಹೇಳುತ್ತಾನೆ, ಅಂದನು. ಆಗ ಅವಳು
ಹೋಗಿ, ಎಲೀಯನ ಮಾತಿನ ಹಾಗೆಯೇ ಮಾಡಿ, ಅವಳೂ,
೧೬ ಇವನೂ, ಅವಳ ಮನೆಯವರೂ ಅನೇಕ ದಿವಸ ಉಂಡರು. ಕರ್ತ
ನು ಎಲೀಯನ ಮುಖಾಂತರ ಹೇಳಿದ ವಾಕ್ಯದ ಪ್ರಕಾರವೇ ಕೊ
ಡದಲ್ಲಿರುವ ಹಿಟ್ಟು ತೀರದೆ, ತಂಬಿಗೆಯಲ್ಲಿರುವ ಎಣ್ಣೆಯು ಮು
ಗಿಯದೆ ಇತ್ತು.

೧೭ ಇವುಗಳ ತರುವಾಯ ಏನಾಯಿತಂದರೆ, ಮನೆಯ ಯಜಮಾ
ನಳಾದ ಆ ಸ್ತ್ರೀಯ ಮಗನು ಕೋಗದಲ್ಲಿ ಬಿದ್ದು, ಅವನಿಗೆ ಶ್ವಾ
೧೮ ಸ ಉಳಿಯದ ಹಾಗೆ, ಅವನ ಕೋಗವು ಅಧಿಕವಾಗಿತ್ತು. ಆಗ
ಅವಳು ಎಲೀಯನಿಗೆ, ದೇವರ ಮನುಷ್ಯನೇ, ನನಗೂ ನಿನಗೂ
ಏನು? ನನ್ನ ಅಕ್ರಮವನ್ನು ಜ್ಞಾಪಕ ಪಡಿಸಲೂ, ನನ್ನ ಮಗನ
ನ್ನು ಸಾಯ ಮಾಡಲೂ, ನನ್ನ ಬಳಿಗೆ ಬಂದಿಯೋ! ಅಂದಳು.
೧೯ ಅವನು ಅವಳಿಗೆ, ನಿನ್ನ ಮಗನನ್ನು ನನಗೆ ಕೊಡು ಎಂದು ಹೇ
ಳಿ, ಅವನನ್ನು ಅವಳ ಉಡಿಲಿನಿಂದ ಎತ್ತಿ ಕೊಂಡು, ತಾನು ವಾಸ
೨೦ ವಾಗಿರುವ ಉಪ್ಪರಿಗೆಗೆ ಹೋಗಿ, ತನ್ನ ಮಂಚದ ಮೇಲೆ ಮಲಗಿ
ಸಿ, ನನ್ನ ದೇವರಾದ ಕರ್ತನೇ, ನಾನು ವಾಸವಾಗಿರುವ ವೆಧವೆ
ಯ ಮಗನನ್ನು ಕೊಂದು ಹಾಕುವ ಈ ಕೇಡನ್ನು ಅವಳ ಮೇಲೆ
೨೧ ಬರ ಮಾಡಿದಿಯಲ್ಲ? ಎಂದು ಕರ್ತನನ್ನು ಕೂಗಿ ಹೇಳಿದನು. ಆ
ಗ ಅವನು ಚಿಕ್ಕವನ ಮೇಲೆ ಮೂರು ಸಾರಿ ಬೋರ್ಲ ಬಿದ್ದು,
ನನ್ನ ದೇವರಾದ ಕರ್ತನೇ, ಈ ಚಿಕ್ಕವನ ಪ್ರಾಣ ಅವನಲ್ಲಿ ಶಿರಿ
೨೨ ಗಿ ಬರಲಿ ಎಂದು, ಕರ್ತನನ್ನು ಕೂಗಿದನು. ಕರ್ತನು ಎಲೀಯ
ನ ಶಬ್ದವನ್ನು ಕೇಳಿದ್ದರಿಂದ, ಚಿಕ್ಕವನು ಬದುಕುವ ಹಾಗೆ, ಅವ
೨೩ ನ ಪ್ರಾಣವು ಅವನೊಳಗೆ ಶಿರಿಗಿ ಬಂತು. ಆಗ ಎಲೀಯನು ಚಿ
ಕ್ಕವನನ್ನು ಎತ್ತಿ ಕೊಂಡು, ಉಪ್ಪರಿಗೆಯಿಂದ ಕೆಳಗಿರುವ ಮನೆಗೆ
ತೆಗೆದು ಕೊಂಡು ಬಂದು, ಅವನನ್ನು ಅವನ ತಾಯಿಗೆ ಕೊಟ್ಟನು.
ಮತ್ತು ನೋಡು; ನಿನ್ನ ಮಗನು ಜೀವದಿಂದಿದ್ದಾನೆಂದು, ಎಲೀಯ
೨೪ ನು ಹೇಳಿದನು. ಆಗ ಆ ಸ್ತ್ರೀಯು ಎಲೀಯನಿಗೆ, ನೀನು ದೇವ
ರ ಮನುಷ್ಯನೆಂದೂ, ನಿನ್ನ ಬಾಯಿಯಲ್ಲಿರುವ ಕರ್ತನ ವಾಕ್ಯ
ವು ನಿಜವೆಂದೂ, ಇದರಿಂದ ಈಗ ತಿಳಿದಿದ್ದೇನೆ, ಅಂದಳು.

## ೧೮. ಸಂಧಿ.

೧ ಅನೇಕ ದಿವಸಗಳು ಹೋದ ತರುವಾಯ ಮೂರನೇ ವರುಷ
ದಲ್ಲಿ ಏನಾಯಿತಂದರೆ, ಕರ್ತನ ವಾಕ್ಯವು ಎಲೀಯನಿಗೆ ಉಂಟಾ
ಗಿ, ಹೇಳಿದ್ದೇನಂದರೆ—ನೀನು ಹೋಗಿ, ಅಹಾಬನಿಗೆ ನಿನ್ನನ್ನು
ತೋರಿಸು, ಆಗ ನಾನು ಭೂಮಿಯ ಮೇಲೆ ಮಳೆಯನ್ನು ಕೊ
೨ ಡುವೆನು. ಆಗ ಎಲೀಯನು ಅಹಾಬನಿಗೆ ತನ್ನನ್ನು ತೋರಿಸ ಹೋ
ದನು. ಆದರೆ ಸಮಾರ್ಯದಲ್ಲಿ ಬರ ಬಲವಾಗಿತ್ತು.

ಆದರೆ ಅಹಾಬನು ತನ್ನ ಮನೆಯ ಉಗ್ರಾಣಿಕನಾದ ಒಬದೀ
3 ಯನನ್ನು ಕರೆದನು. ಆದರೆ ಒಬದೀಯನು ಕರ್ತನಿಗೆ ಬಹಳ ಭ
೪ ಯ ಪಡುವವನಾಗಿದ್ದನು. ಮತ್ತು ಇಜೆಬೇಲಳು ಕರ್ತನ ಪ್ರವಾ
ದಿಗಳನ್ನು ಕಡಿದು ಬಿಡುವಾಗ, ಒಬದೀಯನು ನೂರು ಮಂದಿ
ಪ್ರವಾದಿಗಳನ್ನು ತೆಗೆದು ಕೊಂಡು, ಐವತ್ತು ಐವತ್ತು ಮಂದಿ
ಯಾಗಿ ಅವರನ್ನು ಗವಿಯಲ್ಲಿ ಬಚ್ಚಿಟ್ಟು, ಅವರಿಗೆ ಆಹಾರವ
ನ್ನೂ ನೀರನ್ನೂ ಕೊಟ್ಟು, ಅವರನ್ನು ಸಂರಕ್ಷಣೆ ಮಾಡುತ್ತಾ
ಇದ್ದನು. ಅಹಾಬನು ಒಬದೀಯನಿಗೆ ಹೇಳಿದ್ದೇನಂದರೆ, ನೀನು
೫ ದೇಶದಲ್ಲಿರುವ ಎಲ್ಲಾ ನೀರು ಬುಗ್ಗೆಗಳ ಬಳಿಗೂ, ಎಲ್ಲಾ ಹಳ್ಳ
ಗಳ ಬಳಿಗೂ ಹೋಗು. ನಾವು ಸಮಸ್ತ ಪಶುಗಳನ್ನು ಕಳ್ಳಕೊ
ಳ್ಳದ ಹಾಗೆ, ಕುದುರೆಗಳನ್ನೂ ಹಾಸರ ಕತ್ತೆಗಳನ್ನೂ ಜೀವದಿಂ
ದ ಇರಿಸುವದಕ್ಕೆ, ನಮಗೆ ಒಂದು ವೇಳೆ ಹುಲ್ಲು ದೊರಕ ಬಹು
೬ ದು ಹಾಗೆಯೇ ಅವರು ದೇಶವನ್ನು ಹಾದು ಹೋಗ ಅದನ್ನು
ವಿಭಾಗ ಮಾಡಿ ಕೊಂಡು, ಅಹಾಬನು ಒಂದು ಮಾರ್ಗದಲ್ಲಿಯೂ,
ಒಬದೀಯನು ಮತ್ತೊಂದು ಮಾರ್ಗದಲ್ಲಿಯೂ ಪ್ರತ್ಯೇಕವಾ
ಗಿ ಹೋದರು.

೭ ಒಬದೀಯನು ಮಾರ್ಗದಲ್ಲಿ ಹೋಗುತ್ತಿರುವಾಗ, ಇಗೋ,
ಎಲೀಯನು ಅವನಿಗೆ ಎದುರಾಗಿ ಬಂದನು; ಒಬದೀಯನು ಅವ
ನನ್ನು ಅರಿತು, ಪೋಕೆ ಕೆಳಗಾಗಿ ಬಿದ್ದು, ನೀನು ನನ್ನ ಸ್ವಾಮಿ
೮ ಯಾದ ಎಲೀಯನಲ್ಲವೋ! ಅಂದನು. ಇವನು ಅವನಿಗೆ, ನಾನೇ;
ನೀನು ಹೋಗಿ, ಇಗೋ, ಎಲೀಯನು ಇಲ್ಲಿದ್ದಾನೆಂದು, ನಿನ್ನ ಯ
೯ ಜಮಾನನಿಗೆ ಹೇಳು, ಅಂದನು. ಅದಕ್ಕವನು, ಅಹಾಬನು ನನ್ನ
ನ್ನು ಕೊಂದು ಹಾಕುವ ಹಾಗೆ, ನೀನು ನಿನ್ನ ಸೇವಕನನ್ನು ಅವ
೧೦ ನ ಕೈಯಲ್ಲಿ ಒಪ್ಪಿಸಿ ಕೊಡ ನಾನೇನು ಪಾಪ ಮಾಡಿದೆನು! ನಿ
ನ್ನ ದೇವರಾದ ಕರ್ತನ ಜೀವದಾಣೆ—ನನ್ನ ಯಜಮಾನನು ನಿ
ನ್ನನ್ನು ಹುಡುಕ ಕಳುಹಿಸದ ಜನಾಂಗವೂ, ರಾಜ್ಯವೂ ಒಂದೂ
ಇಲ್ಲ. ಅವರು, ಇಲ್ಲ ಎಂದು ಹೇಳಿದಾಗ, ಅವರು ನಿನ್ನನ್ನು ಕಂ
೧೧ ಡದಿಲ್ಲವೆಂದು, ರಾಜ್ಯಕ್ಕೂ ಜನಾಂಗಕ್ಕೂ ಆಣೆ ಇಟ್ಟನು. ಈ
ಗ ನೀನು, ಇಗೋ, ಎಲೀಯನು ಇಲ್ಲಿದ್ದಾನೆಂದು, ನಿನ್ನ ಯಜ
೧೨ ಮಾನನಿಗೆ ಶಿಳ್ಳೆಂಬದಾಗಿ ಹೇಳುತ್ತೀ. ನಾನು ನಿನ್ನನ್ನು ಬಿಟ್ಟು
ಹೋಗುವಾಗ, ಆಗುವದೇನಂದರೆ, ಕರ್ತನ ಆತ್ಮವು ನಾನಾಯಿ
ದ ಸ್ಥಳಕ್ಕೆ ನಿನ್ನನ್ನು ಪೈಯುವದು. ನಾನು ಬಂದು, ಅಹಾಬನಿ
ಗೆ ತಿಳಿಸಿದಾಗ, ಅವನು ನಿನ್ನನ್ನು ಕಾಣದೆ ಹೋದರೆ, ನನ್ನನ್ನು
ಕೊಂದು ಹಾಕುವನು. ಆದರೆ ನಿನ್ನ ಸೇವಕನಾದ ನಾನು ನನ್ನ
೧೩ ಚಿಕ್ಕತನದಿಂದ ಕರ್ತನಿಗೆ ಭಯ ಪಡುತ್ತೇನೆ. ಇಜೆಬೇಲಳು
ಕರ್ತನ ಪ್ರವಾದಿಗಳನ್ನು ಕೊಂದು ಹಾಕುವಾಗ, ನಾನು ಕ
ರ್ತನ ಪ್ರವಾದಿಗಳಲ್ಲಿ ನೂರು ಮಂದಿಯನ್ನು ಐವತ್ತು ಐವತ್ತು
ಮಂದಿಯಾಗಿ ಗವಿಯಲ್ಲಿ ಬಚ್ಚಿಟ್ಟು, ಅವರಿಗೆ ಆಹಾರವನ್ನೂ
ನೀರನ್ನೂ ಕೊಟ್ಟು, ಸಂರಕ್ಷಿಸಿ, ನಾನು ಮಾಡಿದ್ದು, ನನ್ನ ಯಜ
೧೪ ಮಾನನಾದ ನಿನಗೆ ಹೇಳಲ್ಪಟ್ಟದ್ದಿಲ್ಲವೋ! ಆದರೆ ಈಗ, ನನ್ನ
ಯಜಮಾನನು ನನ್ನನ್ನು ಕೊಂದು ಹಾಕುವ ಹಾಗೆ, ಇಗೋ, ಎ
ಲೀಯನು ಇದ್ದಾನೆಂದು, ನೀನು ಹೋಗಿ ಅವನಿಗೆ ಹೇಳೆಂಬದಾಗಿ,
೧೫ ನೀನು ಹೇಳುತ್ತೀ, ಅಂದನು. ಅದಕ್ಕೆ ಎಲೀಯನು, ಯಾವನ



ಮುಂದೆ ನಿಲ್ಲುತ್ತೇನೋ, ಆ ಸೈನ್ಯಗಳ ಕರ್ತನ ಜೀವದಾಣೆ—
ಇಂದು ನನ್ನನ್ನು ಅವನಿಗೆ ತೋರಿಸುವೆನು, ಅಂದನು.

೧೬ ಹಾಗೆಯೇ ಒಬದೀಯನು ಅಹಾಬನೆದುರಿಗೆ ಹೋಗಿ, ತಿಳಿಸಿದ್ದ
ರಿಂದ, ಅಹಾಬನು ಎಲೀಯನನ್ನು ಎದುರುಗೊಳ್ಳ ಹೋದನು.
೧೭ ಅಹಾಬನು ಎಲೀಯನನ್ನು ನೋಡಿದಾಗ, ಅಹಾಬನು ಅವನಿಗೆ,
ಇಸ್ರಯೇಲನ್ನು ತೊಂದರೆ ಗೊಳಿಸುವವನು ನೀನಲ್ಲವೋ! ಅಂದ
೧೮ ನು. ಅದಕ್ಕೆ ಅವನು, ನಾನು ಇಸ್ರಯೇಲನ್ನು ತೊಂದರೆ ಗೊ
ಳಿಸುವದಿಲ್ಲ; ಆದರೆ ನೀನೂ ನಿನ್ನ ತಂದೆಯ ಮನೆಯವರೂ
ಕರ್ತನ ಆಜ್ಞೆಗಳನ್ನು ಬಿಟ್ಟು ಬಿಡುವದರಿಂದಲೇ; ಮತ್ತು ಬಾಳೀ
೧೯ ಮುಗಳನ್ನೂ ಹಿಂಬಾಲಿಸಿದಿ. ಆದದರಿಂದ ನೀನು ಕಳುಹಿಸಿ, ಕ
ರ್ಮೆಲು ಬೆಟ್ಟದ ಬಳಿಯಲ್ಲಿ ಸಮಸ್ತ ಇಸ್ರಯೇಲನ್ನೂ, ಬಾಳ
ನ ನಾನೂರ ಐವತ್ತು ಮಂದಿ ಪ್ರವಾದಿಗಳನ್ನೂ, ಇಜೆಬೇಲಳ
ಮೇಜಿನ ಹತ್ತರ ಭೋಜಿಸುವ ತೋಪುಗಳ ನಾನೂರು ಮಂದಿ
೨೦ ಪ್ರವಾದಿಗಳನ್ನೂ ನನ್ನ ಬಳಿಗೆ ಕೂಡಿಸು, ಅಂದನು. ಹಾಗೆ
ಯೇ ಅಹಾಬನು ಇಸ್ರಯೇಲಿನ ಮಕ್ಕಳೆಲ್ಲರಿಗೂ ಕಳುಹಿಸಿ,
ಕರ್ಮೆಲು ಬೆಟ್ಟದ ಬಳಿಯಲ್ಲಿ ಪ್ರವಾದಿಗಳನ್ನು ಕೂಡಿಸಿದನು.

೨೧ ಆಗ ಎಲೀಯನು ಸಕಲ ಜನರ ಬಳಿಗೆ ಬಂದು, ನೀವು ಎರಡು
ಯೋಚನೆಗಳಿಂದ ಎಷ್ಟು ವರಿಗೂ ಕಂಟುತ್ತಾ ಇರುವಿರಿ! ಯೆ
ಹೋವ ದೇವರಾಗಿದ್ದರೆ, ಅವನನ್ನು ಹಿಂಬಾಲಿಸಿರಿ; ಬಾಳನು ದೇ
ವರಾಗಿದ್ದರೆ, ಅದನ್ನು ಹಿಂಬಾಲಿಸಿರಿ, ಅಂದನು. ಜನರು ಅವನಿ
ಗೆ ಪ್ರತ್ಯುತ್ತರವಾಗಿ ಮಾತಾಡಲಿಲ್ಲ.

೨೨ ಆಗ ಎಲೀಯನು ಜನರಿಗೆ ಹೇಳಿದ್ದೇನಂದರೆ—ಯೆಹೋವನ
ಪ್ರವಾದಿಗಳಲ್ಲಿ ನಾನೊಬ್ಬನೇ ಉಳಿದಿದ್ದೇನೆ; ಆದರೆ ಬಾಳನ ಪ್ರವಾ
೨೩ ದಿಗಳು ನಾನೂರ ಐವತ್ತು ಮಂದಿಯಾಗಿದ್ದಾರೆ. ಈಗ ಎರಡು
ಹೋರಿಗಳನ್ನು ನಮಗೆ ಕೊಡಲಿ; ಒಂದು ಹೋರಿಯನ್ನು ಅವ
ರು ಆರಿಸಿ ಕೊಂಡು, ಅದನ್ನು ತುಂಡು ತುಂಡಾಗಿ ಕಡಿದು, ಬೆಂಕಿ
ಹಾಕದೆ, ಕಟ್ಟಿಗೆಗಳ ಮೇಲೆ ಇಡಲಿ. ನಾನು ಇನ್ನೊಂದು ಹೋ
ರಿಯನ್ನು ಹಾಗೆಯೇ ಮಾಡಿ, ಬೆಂಕಿ ಹಾಕದೆ, ಕಟ್ಟಿಗೆಗಳ ಮೇ
೨೪ ಲೆ ಇಡುವೆನು. ಆಗ ನೀವು ನಿಮ್ಮ ದೇವರ ಹೆಸರನ್ನು ಕರೆಯಿರಿ,
ನಾನು ಯೆಹೋವನ ಹೆಸರನ್ನು ಕರೆಯುವೆನು. ಆಗ ಬೆಂಕಿ
ಯಿಂದ ಪ್ರತ್ಯುತ್ತರ ಕೊಡುವ ದೇವರು ತಾನೇ ದೇವರಾಗಲಿ
ಅಂದನು.

೨೫ ಅದಕ್ಕೆ ಜನರೆಲ್ಲರು ಪ್ರತ್ಯುತ್ತರವಾಗಿ, ಈ ಮಾತು ಬಲ್ಲೇ
ದು, ಅಂದರು. ಆಗ ಎಲೀಯನು ಬಾಳನ ಪ್ರವಾದಿಗಳಿಗೆ, ನೀವು
ಅನೇಕರಾಗಿರುವದರಿಂದ, ಒಂದು ಹೋರಿಯನ್ನು ಆರಿಸಿ ಕೊಂಡು,
ಅದನ್ನು ಮೊದಲು ಸಿದ್ಧ ಮಾಡಿ, ನಿಮ್ಮ ದೇವರ ಹೆಸರನ್ನು ಕರೆ
೨೬ ಯಿರಿ; ಆದರೆ ಬೆಂಕಿಯನ್ನು ಹಾಕದೆ ಇರ್ರಿ, ಅಂದನು. ಅವರು
ತಮಗೆ ಕೊಡಲ್ಪಟ್ಟ ಹೋರಿಯನ್ನು ತೆಗೆದು ಕೊಂಡು, ಸಿದ್ಧ
ಮಾಡಿ, ಬಾಳನೇ, ನಮ್ಮನ್ನು ಕೇಳೆಂದು, ಉದಯದಿಂದ ಮಧ್ಯಾ
ನ್ಹದ ವರಿಗೂ ಬಾಳನ ಹೆಸರನ್ನು ಕರೆಯುತ್ತಿದ್ದರು. ಆದರೆ ಒಂ
ದು ಶಬ್ದವೂ ಇಲ್ಲ, ಪ್ರತ್ಯುತ್ತರ ಕೊಡುವವನೂ ಇಲ್ಲ. ಅವರು
೨೭ ಮಾಡಿದ ಬಲಿಪೀಠದ ಹತ್ತರ ಹಾರ್ಯಾದಿದರು. ಮಧ್ಯಾನ್ಹದಲ್ಲಿ
ಎಲೀಯನು ಅವರನ್ನು ಗೇಲಿ ಮಾಡಿ, ಅವರಿಗೆ, ದೊಡ್ಡ ಶಬ್ದಿಂ
ದ ಕರೆಯಿರಿ; ಯಾಕಂದರೆ ಅವನು ದೇವರೇ. ಒಂದು ವೇಳೆ
ಧ್ಯಾನದಲ್ಲಿದ್ದಾನೆ; ಇಲ್ಲವೆ ಕೆಲಸದಲ್ಲಿದ್ದಾನೆ; ಇಲ್ಲವೆ ಪಯಾ
ಣದಲ್ಲಿದ್ದಾನೆ; ಇಲ್ಲವೆ ಅವನು ನಿದ್ದೆ ಮಾಡುತ್ತಾನೆ, ಮತ್ತು
೨೮ ಎಚ್ಚರಿಸಲ್ಪಡ ಬೇಕು, ಅಂದನು. ಅವರು ದೊಡ್ಡ ಶಬ್ದಿಂದ ಕೂಗಿ,
ತಮ್ಮ ಮರ್ಯಾದೆಯ ಪ್ರಕಾರವೇ, ರಕ್ತವು ತಮ್ಮ ಮೇಲೆ
ಸೋರುವ ಮಟ್ಟಿಗೂ, ಕತ್ತಿಗಳಿಂದಲೂ ಚೂರಿಗಳಿಂದಲೂ ತ
ಮ್ಮನ್ನು ಕೊಯಿದು ಕೊಂಡರು. ಮಧ್ಯಾನ್ಹವಾಹ ತರುವಾಯ
೨೯ ಸಾಯಂಕಾಲದ ಬಲಿ ಅರ್ಪಿಸಲ್ಪಡುವ ವೇಳೆಯ ಮಟ್ಟಿಗೂ ಪ್ರ
ವಾದಿಸುತ್ತಾ ಇದ್ದರು. ಆದರೆ ಶಬ್ದವಾದರೂ ಪ್ರತ್ಯುತ್ತರ ಕೊಡು
ವವನಾದರೂ ಆಲೈಸುವವನಾದರೂ ಇಲ್ಲ.

೩೦ ಆಗ ಎಲೀಯನು ಸಮಸ್ತ ಜನರಿಗೂ, ನನ್ನ ಬಳಿಗೆ ಬನ್ನಿರಿ,
ಅಂದನು; ಜನರೆಲ್ಲರು ಅವನ ಬಳಿಗೆ ಬಂದರು. ಕಿತ್ತು ಹಾಕಲ್ಪ
ಟ್ಟ ಕರ್ತನ ಬಲಿಪೀಠವನ್ನು ಅವನು ಕಟ್ಟಿಗೆ ಮಾಡಿದನು. ಮ
ತ್ತು, ನಿನಗೆ ಇಸ್ರಯೇಲೆಂಬ ಹೆಸರುಂಟಾಗಿರುವದೆಂದು ಕರ್ತನ
೩೧ ವಾಕ್ಯವು ಬಂದ ಯಾಕೋಬನ ಮಕ್ಕಳ ಕುಲಗಳ ಲೆಖ್ಖದ ಹಾ
ಗೆ, ಎಲೀಯನು ಹನ್ನೆರಡು ಕಲ್ಲುಗಳನ್ನು ತೆಗೆದು ಕೊಂಡು, ಆ
ಕಲ್ಲುಗಳಿಂದ ಕರ್ತನ ಹೆಸರಿಗೆ ಬಲಿಪೀಠವನ್ನು ಕಟ್ಟಿ, ಬಲಿಪೀಠದ
ಸುತ್ತಲೂ ಎರಡು ಕೊಳಗ ಬೀಜ ಹಿಡಿಯುವ ಒಂದು ಕಾಲಿವೆಯ
೩೨ ನ್ನು ಉಂಟು ಮಾಡಿದನು. ತರುವಾಯ ಅವನು ಕಟ್ಟಿಗೆಗಳ
ನ್ನು ಇಟ್ಟು, ಹೋರಿಯನ್ನು ತುಂಡು ತುಂಡಾಗಿ ಕಡಿದು, ಕಟ್ಟಿಗೆ
ಗಳ ಮೇಲೆ ಇಟ್ಟು, ನೀವು ನಾಲ್ಕು ಕೊಡ ನೀರನ್ನು ತುಂಬಿ
ಕೊಂಡು, ಹೋಮದ ಮೇಕೆಯೂ ಕಟ್ಟಿಗೆಗಳ ಮೇಲೆಯೂ
೩೩ ಹೊಯ್ಯಿರಿ, ಅಂದನು. ಎರಡನೇ ಸಾರಿ ಹೊಯ್ಯಿರಿ, ಅಂದನು.
ಅವರು ಎರಡನೇ ಸಾರಿಯೂ ಹೊಯಿದರು. ಮೂರನೇ ಸಾರಿ
ಹೊಯ್ಯಿರಿ, ಅಂದನು; ಮೂರನೇ ಸಾರಿಯೂ ಹೊಯಿದರು.
೩೪ ಅದದರಿಂದ ನೀರು ಬಲಿಪೀಠದ ಸುತ್ತಲೂ ಹರಿಯಿತು. ಇದಲ್ಲದೆ
ಅವನು ಕಾಲಿವೆಯನ್ನು ನೀರಿನಿಂದ ತುಂಬಿಸಿದನು.

೩೬ ಸಾಯಂಕಾಲದ ಬಲಿಯನ್ನು ಅರ್ಪಿಸುವ ವೇಳೆಯಲ್ಲಿ ಪ್ರವಾ
ದಿಯಾದ ಎಲೀಯನು ಸಮೀಪಕ್ಕೆ ಬಂದು ಹೇಳಿದ್ದೇನಂದರೆ—
ಅಬ್ರಹಾಮನಿಗೂ ಇಸಾಕನಿಗೂ ಇಸ್ರಯೇಲಿಗೂ ದೇವರಾದ
ಯೆಹೋವನೇ, ಇಸ್ರಯೇಲಿನಲ್ಲಿ ನೀನು ದೇವಕೆಂದೂ, ನಾನು
ನಿನ್ನ ಸೇವಕನೆಂದೂ, ನಾನು ಈ ಕಾರ್ಯಗಳನ್ನೆಲ್ಲಾ ನಿನ್ನ
ಮಾತಿನ ಹಾಗೆಯೇ ಮಾಡಿದೆನೆಂದೂ, ಇಂದು ತಿಳಿಯಲ್ಪಡಲಿ.
೩೭ ನೀನು ದೇವರಾದ ಯೆಹೋವನೆಂದೂ, ನೀನು ಅವರ ಹೃದಯ
ವನ್ನು ಮರಳಿಯೂ ತಿರಿಗಿಸಿದಿ ಎಂದೂ, ಈ ಜನವು ತಿಳಿಯುವ
ಹಾಗೆ, ನನಗೆ ಪ್ರತ್ಯುತ್ತರ ಕೊಡು, ಯೆಹೋವನೇ, ನನಗೆ ಪ್ರ
೩೮ ತ್ಯುತ್ತರ ಕೊಡು. ಆಗ ಯೆಹೋವನ ಬೆಂಕಿ ಇಳಿದು ಬಂದು,
ಹೋಮವನ್ನೂ, ಕಟ್ಟಿಗೆಗಳನ್ನೂ, ಕಲ್ಲುಗಳನ್ನೂ, ಮಣ್ಣನ್ನೂ
ತಿಂದು ಬಿಟ್ಟು, ಕಾಲಿವೆಯಲ್ಲಿದ್ದ ನೀರನ್ನು ನೆಕ್ಕಿ ಬಿಟ್ಟಿತು.

೩೯ ಜನರೆಲ್ಲರು ಇದನ್ನು ನೋಡಿದಾಗ, ಬೋರ್ಲ ಬಿದ್ದು, ಯೆ
ಹೋವ ತಾನೇ ದೇವರು, ಯೆಹೋವ ತಾನೇ ದೇವರು, ಅಂದ
೪೦ ರು. ಆಗ ಎಲೀಯನು ಅವರಿಗೆ, ನೀವು ಬಾಳನ ಪ್ರವಾದಿಗಳನ್ನು
ಹಿಡಿಯಿರಿ; ಅವರಲ್ಲಿ ಒಬ್ಬನೂ ತಪ್ಪಿಸಿ ಕೊಳ್ಳದೆ ಇರಲಿ, ಅಂದ
ನು. ಇವರು ಅವರನ್ನು ಹಿಡಿದರು; ಎಲೀಯನು ಅವರನ್ನು ಕಿ
ಶೋನು ಹಳ್ಳದ ಬಳಿಗೆ ತಕ್ಕೊಂಡು ಹೋಗಿ, ಅಲ್ಲಿ ಅವರನ್ನು
ಕೊಂದು ಹಾಕಿದನು.

೪೧ ಮತ್ತು ಎಲೀಯನು ಅಹಾಬನಿಗೆ, ನೀನು ಏರಿ ಹೋಗಿ, ಉಂ

ರು, ಕುಡಿ; ಯಾಕಂದರೆ ಬಹು ಮಳೆಯ ಶಬ್ದ ಅಯಿತು, ಅಂದ
೪೮ ನು. ಅಹಾಬನು ಉಂಡು ಕುಡಿಯುವದಕ್ಕೆ ಏರಿ ಹೋದನು;
ಮತ್ತು ಎಲೀಯನು ಕರ್ಮೇಲಿನ ಶಿಖರದಲ್ಲಿ ಏರಿ, ನೆಲದ ಮೇಲೆ
ಬಿದ್ದು, ತನ್ನ ಮುಖವನ್ನು ತನ್ನ ಮೊಣಕಾಲುಗಳ ನಡುವೆ ಬೊ
ಗ್ಗ ಮಾಡಿ, ತನ್ನ ಸೇವಕನಿಗೆ, ನೀನು ಏರಿ ಹೋಗಿ, ಸಮುದ್ರದ
೪೩ ಕಡೆ ನೋಡು, ಅಂದನು. ಅವನು ಹೋಗಿ, ನೋಡಿ, ಏನೂ ಇ
ಲ್ಲ, ಅಂದನು. ಏಳು ಸಾರಿ ತಿರಿಗಿ ಹೋಗಿ, ನೋಡು, ಅಂದನು.
೪೪ ಏಳನೇ ಸಾರಿ ಏನಾಯಿತಂದರೆ, ಇವನು, ಇಗೋ, ಸಮುದ್ರದ
ಲ್ಲಿಂದ ಒಬ್ಬ ಮನುಷ್ಯನ ಅಂಗೈಯಷ್ಟು ಚಿಕ್ಕ ಮೇಘವು ಏಳು
ತ್ತದೆ, ಅಂದನು. ಆಗಲವನು, ನೀನು ಹೋಗಿ, ಅಹಾಬನಿಗೆ ಮಳೆ
ಯು ನಿನ್ನನ್ನು ಅಟಂಕ ಮಾಡದ ಹಾಗೆ, ಸಿದ್ಧ ಮಾಡಿ, ಇಳಿದು
೪೫ ಹೋಗೆಂದು ಹೇಳು, ಅಂದನು. ಆಗ ಇದ್ದಕ್ಕಿದ್ದ ಹಾಗೆ, ಆಕಾಶ
ವು ಮೇಘಗಳಿಂದಲೂ ಘಾಳಿಯಿಂದಲೂ ಕಪ್ಪಾಗಿ, ದೊಡ್ಡ ಮ
ಳೆಯು ಉಂಟಾಯಿತು. ಆದರೆ ಅಹಾಬನು ರಥದಲ್ಲಿ ಏರಿ, ಇಜ್ರೇ
೪೬ ಲಿಗೆ ಹೋದನು. ಆದರೆ ಕರ್ತನ ಕೈ ಎಲೀಯನ ಮೇಲೆ ಇರು
ವದರಿಂದ, ಅವನು ತನ್ನ ನಡುವನ್ನು ಕಟ್ಟಿ ಕೊಂಡು, ಇಜ್ರೇಲಿನ
ಮಟ್ಟಿಗೂ ಅಹಾಬನಿಗೆ ಮುಂದಾಗಿ ಓಡಿದನು.

## ೧೯. ಸಂಧಿ.

೧ ಎಲೀಯನು ಮಾಡಿದ್ದೆಲ್ಲವನೂ, ಅವನು ಕತ್ತಿಯಿಂದ ಎಲ್ಲಾ
ಪ್ರವಾದಿಗಳನ್ನು ಕೊಂದು ಹಾಕಿದ ವರ್ತಮಾನವೆಲ್ಲವನೂ, ಅ
೨ ಹಾಬನು ಇಜೆಬೇಲಳಿಗೆ ತಿಳಿಸಿದಾಗ, ಇಜೆಬೇಲಳು ಎಲೀಯನ ಬ
ಳಿಗೆ ದೂತನನ್ನು ಕಳುಹಿಸಿ, ನಾನು ನಾಳೆ ಇಷ್ಟು ಹೊತ್ತಿಗೆ ಅ
ವರಲ್ಲಿರುವ ಒಬ್ಬೊಬ್ಬನ ಪ್ರಾಣದ ಹಾಗೆ ನಿನ್ನ ಪ್ರಾಣ ಮಾಡ
ದೆ ಹೋದರೆ, ದೇವರುಗಳು ನನಗೆ ಹೀಗೆಯೂ ಹಾಗೆಯೂ
೩ ಮಾಡಲಿ, ಎಂದು ಹೇಳಿದಳು. ಅವನು ನೋಡಿದಾಗ, ಎದ್ದು, ತ
ನ್ನ ಪ್ರಾಣಕ್ಕೋಸ್ಕರ ಯೆಹೂದಕ್ಕೆ ಕೇರಿದ ಬೇರ್ಷೆಬಕ್ಕೆ ಹೊ
ರಟು ಹೋಗಿ, ಅಲ್ಲಿ ತನ್ನ ಸೇವಕನನ್ನು ಬಿಟ್ಟನು.
೪ ಆದರೆ ಅವನು ಅರಣ್ಯದಲ್ಲಿ ಒಂದು ದಿವಸದ ಪ್ರಯಾಣ
ಹೋಗಿ, ಜಾಲಿ ಮರದ ಕೆಳಗೆ ಕುಳಿತು, ತನ್ನ ಪ್ರಾಣ ಸಾಯ
ಬೇಕೆಂದು ಬೇಡಿ ಕೊಂಡು, ಕರ್ತನೇ, ಈಗ ಸಾಕು; ನನ್ನ ಪ್ರಾ
ಣವನ್ನು ತೆಗೆದುಕೋ. ಯಾಕಂದರೆ ನನ್ನ ಪಿತೃಗಳಿಗಿಂತ
೫ ನಾನು ಉತ್ತಮನಲ್ಲ, ಅಂದನು. ಅವನು ಜಾಲಿ ಮರದ ಕೆಳಗೆ ಮ
ಲಗಿ ಕೊಂಡು, ನಿದ್ರೆ ಮಾಡುತ್ತಿರುವಾಗ, ಇಗೋ, ಒಬ್ಬ ದೂತ
೬ ನು ಅವನನ್ನು ತಟ್ಟಿ, ಅವನಿಗೆ, ಎದ್ದು, ಉಣ್ಣು, ಅಂದನು. ಅವ
ನು ಎದ್ದು, ನೋಡಿದಾಗ, ಇಗೋ, ಕೆಂಡದಲ್ಲಿ ಸುಡಲ್ಪಟ್ಟ ಕೊಟ್ಟೆ
ಯೂ ಒಂದು ಶಂಬಿಗೆ ನೀರೂ ಅವನ ತಲೆಗಿಂಬಿನ ಬಳಿಯಲ್ಲಿ
ಇತ್ತು. ಆಗ ಅವನು ಉಂಡು, ಕುಡಿದು, ತಿರಿಗಿ ಮಲಗಿಕೊಂಡ
೭ ನು. ತಿರಿಗಿ ಎರಡನೇ ಸಾರಿ ಕರ್ತನ ದೂತನು ಬಂದು, ಅವನ
ನ್ನು ತಟ್ಟಿ, ಅವನಿಗೆ, ನೀನೆದ್ದು, ಉಣ್ಣು; ಯಾಕಂದರೆ ಪ್ರಯಾ
೮ ಣವು ನಿನಗೆ ಹೆಚ್ಚಾಗಿದೆ, ಅಂದನು. ಆಗ ಅವನೆದ್ದು, ಉಂಡು,
ಕುಡಿದು, ಆ ಭೋಜನದ ಶಕ್ತಿಯಿಂದ ರಾತ್ರಿ ಹಗಲೂ ನಾಲ್ವತ್ತು
ದಿವಸ ಹೋರೆಬು ಎಂಬ ದೇವರ ಬೆಟ್ಟದ ಮಟ್ಟಿಗೂ ನಡೆದನು.
೯ ಅವನು ಅಲ್ಲಿರುವ ಒಂದು ಗವಿಗೆ ಬಂದು, ಅಲ್ಲಿ ರಾತ್ರಿ ವಾಸಿ
ಸಿದನು. ಆಗ, ಇಗೋ, ಅವನಿಗೆ ಕರ್ತನ ವಾಕ್ಯ ಉಂಟಾಗಿ,
೧೦ ಅವನಿಗೆ, ಎಲೀಯನೇ, ಇಲ್ಲಿ ನಿನಗೆ ಏನು? ಅಂದನು. ಆದಕ್ಕನ
ನು, ಸೈನ್ಯಗಳ ದೇವರಾದ ಕರ್ತನಿಗೋಸ್ಕರ ನಾನು ಬಹು ಕೋ
ಪವುಳ್ಳವನಾಗಿದ್ದೆನು; ಯಾಕಂದರೆ ಇಸ್ರಯೇಲಿನ ಮಕ್ಕಳು
ನಿನ್ನ ಒಡಂಬಡಿಕೆಯನ್ನು ಬಿಟ್ಟು, ನಿನ್ನ ಬೀಜಗಳನ್ನು ಕೆಡವಿ,
ನಿನ್ನ ಪ್ರವಾದಿಗಳನ್ನು ಕತ್ತಿಯಿಂದ ಕೊಂದು ಹಾಕಿದ್ದಾರೆ; ನಾ
ನೊಬ್ಬನೇ ಉಳಿದಿದ್ದೇನೆ; ಆದರೆ ಅವರು ನನ್ನ ಪ್ರಾಣವನ್ನು ತೆ
೧೧ ಗೆದು ಕೊಳ್ಳ ಹುಡುಕುತ್ತಾರೆ, ಅಂದನು. ಆಗ ಅತನು, ನೀನು
ಹೊರಗೆ ಬಂದು, ಕರ್ತನ ಮುಂದೆ ಬೆಟ್ಟದ ಮೇಲೆ ನಿಲ್ಲು, ಅಂ
ದನು. ಮತ್ತು, ಇಗೋ, ಕರ್ತನು ಹಾದು ಹೋದನು; ಕರ್ತನ
ಮುಂದೆ ಬೆಟ್ಟಗಳನ್ನು ಭೇದಿಸುವಂಥ, ಗುಡ್ಡಗಳನ್ನು ಒಡೆಯುವಂ
ಥ, ಮಹಾ ಬಲವಾದ ಘಾಳಿ; ಆ ಘಾಳಿಯಲ್ಲಿ ಕರ್ತನು ಇಲ್ಲ,
ಘಾಳಿಯ ತರುವಾಯ ಭೂಕಂಪವು; ಆ ಭೂಕಂಪದಲ್ಲಿ ಕರ್ತ
೧೨ ನು ಇಲ್ಲ. ಭೂಕಂಪದ ತರುವಾಯ ಬೆಂಕಿಯು; ಬೆಂಕಿಯಲ್ಲಿ
ಕರ್ತನು ಇಲ್ಲ. ಬೆಂಕಿಯ ತರುವಾಯ ಮೆಲ್ಲಗೆಯಾದಂಥ ಸೂ
ಕ್ಷ್ಮವಾದಂಥ ಶಬ್ದವು. ಎಲೀಯನು ಅದನ್ನು ಕೇಳಿದಾಗ, ತನ್ನ
೧೩ ವಸ್ತ್ರದಿಂದ ತನ್ನ ಮುಖವನ್ನು ಮುಚ್ಚಿ ಕೊಂಡು, ಹೊರಗೆ ಬಂ
ದು, ಗವಿಯ ಬಾಯಿಯಲ್ಲಿ ನಿಂತನು. ಆಗ, ಇಗೋ, ಎಲೀಯನೇ
ಇಲ್ಲಿ ನಿನಗೆ ಏನು? ಎಂಬ ಶಬ್ದವು ಅವನಿಗೆ ಉಂಟಾಯಿತು.
೧೪ ಅದಕ್ಕೆ ಅವನು, ಸೈನ್ಯಗಳ ದೇವರಾದ ಕರ್ತನಿಗೋಸ್ಕರ ನಾ
ನು ಮಹಾ ಕೋಪವುಳ್ಳವನಾಗಿದ್ದೆನು; ಯಾಕಂದರೆ ಇಸ್ರಯೇ
ಲಿನ ಮಕ್ಕಳು ನಿನ್ನ ಒಡಂಬಡಿಕೆಯನ್ನು ಬಿಟ್ಟು, ನಿನ್ನ ಬಲಿಪೀ
ಠಗಳನ್ನು ಕೆಡವಿ, ನಿನ್ನ ಪ್ರವಾದಿಗಳನ್ನು ಕತ್ತಿಯಿಂದ ಕೊಂದು
ಹಾಕಿದ್ದಾರೆ; ನಾನೊಬ್ಬನೇ ಉಳಿದಿದ್ದೇನೆ; ನನ್ನ ಪ್ರಾಣವನ್ನು
೧೫ ತೆಗೆದು ಕೊಳ್ಳ ಹುಡುಕುತ್ತಾರೆ, ಅಂದನು. ಆಗ ಕರ್ತನು ಅವ
ನಿಗೆ ಹೇಳಿದ್ದೇನಂದರೆ—ನೀನು ಹೋಗಿ, ನಿನ್ನ ಮಾರ್ಗದಲ್ಲಿ ರ
ಮಸ್ಕದ ಅರಣ್ಯಕ್ಕೆ ತಿರಿಗಿ ಕೊಂಡು, ಬಳಿಗೆ ಹೋಗಿ, ಹಜಯೇ
ಲನನ್ನು ಅರಾಮಿನ ಮೇಲೆ ಅರಸನಾಗಿರ ಅಭಿಷೇಕಿಸು. ಇದಲ್ಲ
ದೆ ನಿಂಷಿಯ ಮಗನಾದ ಯೇಹುವನ್ನು ಇಸ್ರಯೇಲಿನ ಮೇಲೆ
೧೬ ಅರಸನಾಗಿರ ಅಭಿಷೇಕಿಸಿ, ಅಬೆಲ್ಮೆಹೋಲ ಊರಿನವನಾದ ಶಪಾ
ಟನ ಮಗನಾಗಿರುವ ಎಲೀಷನನ್ನು ನಿನಗೆ ಪ್ರತಿಯಾಗಿ ಪ್ರವಾ
ದಿಯಾಗಿರ ಅಭಿಷೇಕಿಸು. ಮತ್ತು ಆಗುವದೇನಂದರೆ, ಹಜಯೇ
೧೭ ಲನ ಕತ್ತಿಗೆ ತಪ್ಪಿದವನನ್ನು ಯೇಹುವು ಕೊಂದು ಹಾಕುವನು;
ಯೇಹುವಿನ ಕತ್ತಿಗೆ ತಪ್ಪಿದವನನ್ನು ಎಲೀಷನು ಕೊಂದು ಹಾಕು
ವನು. ಆದರೆ ಬಾಳನಿಗೆ ಬೊಗ್ಗದೆ ಇರುವ ಸಕಲ ಮೊಣಕಾಲು
ಗಳೂ ಅದನ್ನು ಮುದ್ದಿಸದ ಸಕಲ ಬಾಯಿಗಳೂ ಆಗಿರುವ ಏಳು
ಸಾವಿರ ಮಂದಿಯನ್ನು ಇಸ್ರಯೇಲಿನಲ್ಲಿ ನನಗೋಸ್ಕರ ಉಳಿಸಿ
ಕೊಂಡಿದ್ದೇನೆ, ಅಂದನು.

೧೯ ಹಾಗೆಯೇ ಅವನು ಅಲ್ಲಿಂದ ಹೊರಟು, ಶಪಾಟನ ಮಗನಾದ
ಎಲೀಷನನ್ನು ಕಂಡು ಕೊಂಡನು; ಅವನು ತನ್ನ ಮುಂದೆ ಇರುವ
ಹನ್ನೆರಡು ಜೋಡು ಎತ್ತುಗಳಿಂದ ಉಳುತ್ತಿದ್ದನು; ಮತ್ತು ಅವ
ನು ಹನ್ನೆರಡನೇ ಜೋಡಿನ ಸಂಗಡ ಇದ್ದನು. ಎಲೀಯನು ಅವ
ನ ಮುಂದೆ ಹಾದು ಹೋಗಿ, ತನ್ನ ವಸ್ತ್ರವನ್ನು ಅವನ ಮೇಲೆ
೨೦ ಹಾಕಿದನು. ಆಗ ಅವನು ಎತ್ತುಗಳನ್ನು ಬಿಟ್ಟು, ಎಲೀಯನ ಹಿಂ
ದೆ ಓಡಿ ಹೋಗಿ, ಅವನಿಗೆ, ಅಪ್ಪಣೆ ಆದರೆ, ನಾನು ನನ್ನ ತಂದೆ
ತಾಯಿಗಳನ್ನು ಮುದ್ದಿಟ್ಟು, ನಿನ್ನನ್ನು ಹಿಂಬಾಲಿಸುವೆನು, ಅಂದ



ನು. ಅವನು ಇವನಿಗೆ, ಹಿಂದಕ್ಕೆ ಹೋಗು; ನಾನು ನಿನಗೆ ಏನು
೨೧ ಮಾಡಿದೆನು! ಅಂದನು. ಆಗ ಇವನು ಅವನನ್ನು ಬಿಟ್ಟು, ತಿರುಗಿ
ಕೊಂಡು, ಒಂದು ಜೋಡು ಎತ್ತುಗಳನ್ನು ತಕ್ಕೊಂಡು, ಅವುಗಳ
ನ್ನು ಕೊಂದು, ಆ ಜೋಡು ಎತ್ತುಗಳ ಬಾತಿಮಟ್ಟುಗಳಿಂದ ಅವು
ಗಳ ಮಾಂಸವನ್ನು ಬೇಯಿಸಿ, ಜನರಿಗೆ ಕೊಟ್ಟನು. ಅವರು
ಭೋಜಿಸಿದ ತರುವಾಯ, ಅವನು ಎದ್ದು, ಎಲೀಯನ ಹಿಂದೆ ಹತ್ತಿ,
ಅವನಿಗೆ ಸೇವೆ ಮಾಡಿದನು.

## ೨೦. ಸಂಧಿ

೧ ಅರಾಮಿನ ಅರಸನಾದ ಬೆನ್ಹದಾದನು ತನ್ನ ರಾಣುವೆಯನ್ನೆ
ಲ್ಲಾ ಕೂಡಿಸಿದನು. ಅವನ ಬಳಿಯಲ್ಲಿ ಕುದುರೆಗಳೂ ರಥಗಳೂ
ಸಹಿತವಾಗಿ ಮೂವತ್ತೆರಡು ಮಂದಿ ಅರಸುಗಳಿದ್ದರು. ಮತ್ತು ಅ
ವನು ಏರಿ ಹೋಗಿ, ಸಮಾರ್ಯವನ್ನು ಮುತ್ತಿಗೆ ಹಾಕಿ, ಅದರ
೨ ಮೇಲೆ ಯುದ್ಧ ಮಾಡಿದನು. ಅವನು ಇಸ್ರಯೇಲಿನ ಅರಸನಾದ
ಅಹಾಬನ ಬಳಿಗೆ ದೂತರನ್ನು ಪಟ್ಟಣದೊಳಗೆ ಕಳುಹಿಸಿ, ನಿನ್ನ ಬೆ
೩ ಳ್ಳಿಯೂ ನಿನ್ನ ಭಂಗಾರವೂ ನನ್ನವು; ನಿನ್ನ ಹೆಂಡರೂ ನಿನ್ನ
ಮಕ್ಕಳೂ, ಉತ್ತಮರಾದವರೇ ನನ್ನವರೆಂದು ಬೆನ್ಹದಾದನು ಹೇ
೪ ಳುತ್ತಾನೆಂಬದಾಗಿ ಅವನಿಗೆ ಹೇಳಿದನು. ಇಸ್ರಯೇಲಿನ ಅರಸನು
ಪ್ರತ್ಯುತ್ತರವಾಗಿ, ಅರಸನಾದ ನನ್ನ ಸ್ವಾಮಿಯೇ, ನಿನ್ನ ಮಾತಿನ
ಹಾಗೆಯೇ ನಾನು ನಿನ್ನವನು; ನನಗುಂಟಾದ ಸಮಸ್ತವು ನಿನ್ನದು,
೫ ಅಂದನು.
ಆ ದೂತರು ತಿರಿಗಿ ಬಂದು, ಅವನಿಗೆ, ಬೆನ್ಹದಾದನು ಹೇಳುವ
ದೇನಂದರೆ, ನಿನ್ನ ಬೆಳ್ಳಿಯನ್ನೂ, ನಿನ್ನ ಭಂಗಾರವನ್ನೂ, ನಿನ್ನ
ಸ್ತ್ರೀಯರನ್ನೂ, ನಿನ್ನ ಮಕ್ಕಳನ್ನೂ ನನಗೆ ಒಪ್ಪಿಸ ಬೇಕೆಂದು,
೬ ನಿನಗೆ ಹೇಳಿ ಕಳುಹಿಸಿದೆನು. ನಿಶ್ಚಯವಾಗಿ ನಾಳೆ ಇಷ್ಟು ಹೊ
ತ್ತಿಗೆ ನಾನು ನನ್ನ ಸೇವಕರನ್ನು ನಿನ್ನ ಬಳಿಗೆ ಕಳುಹಿಸುವೆನು;
ಅವರು ನಿನ್ನ ಮನೆಯನ್ನೂ, ನಿನ್ನ ಸೇವಕರ ಮನೆಗಳನ್ನೂ
ಶೋಧಿಸಿ, ನಿನ್ನ ಕಣ್ಣಿಗೆ ರಮ್ಯವಾದದ್ದನ್ನು ಅವರು ತಮ್ಮ ಕೈ
೭ ಯಲ್ಲಿ ಹಿಡಿದು, ತಕ್ಕೊಂಡು ಹೋಗುವರು. ಆಗ ಇಸ್ರಯೇಲಿ
ನ ಅರಸನು ದೇಶದ ಹಿರಿಯರನ್ನೆಲ್ಲಾ ಕರಸಿ, ಅವರಿಗೆ, ಇವನು
ಕೇಡನ್ನು ಹುಡುಕುತ್ತಾನೆಂದು, ದಯೆ ಮಾಡಿ ತಿಳುಕೊಂಡು
ನೋಡಿರಿ. ಯಾಕಂದರೆ ಅವನು ನನ್ನ ಹೆಂಡರುಗೋಸ್ಕರವೂ,
ನನ್ನ ಮಕ್ಕಳಿಗೋಸ್ಕರವೂ, ನನ್ನ ಬೆಳ್ಳಿಗೋಸ್ಕರವೂ, ನನ್ನ
ಭಂಗಾರಕ್ಕೋಸ್ಕರವೂ ನನ್ನ ಬಳಿಗೆ ಕಳುಹಿಸಿದಾಗ, ನಾನು
೮ ಕೊಡೆನೆಂದು ಅವನಿಗೆ ಹೇಳಿದ್ದಿಲ್ಲ, ಅಂದನು. ಆಗ ಹಿರಿಯರೆ
ಲ್ಲರೂ ಜನಕೆಲ್ಲರೂ ಅವನಿಗೆ, ಅವನ ಮಾತು ಕೇಳಿದೆ ಒಪ್ಪದೆ
೯ ಇರು, ಅಂದರು. ಆದದರಿಂದ ಅವನು ಬೆನ್ಹದಾದನ ದೂತರಿಗೆ,
ನೀವು ಅರಸನಾದ ನನ್ನ ಸ್ವಾಮಿಗೆ ಹೇಳ ಬೇಕಾದದ್ದೇನಂದರೆ,
ನೀನು ಮೊದಲು ಹೇಳಿದ ಸಮಸ್ತವನ್ನೂ ಮಾಡುವೆನು; ಆದರೆ
ಈ ಕಾರ್ಯವನ್ನು ನಾನು ಮಾಡ ಕೂಡದು ಎಂದು ಹೇಳಿರಿ,
ಅಂದನು. ದೂತರು ಹೋಗಿ, ಈ ಬದಲು ಮಾತು ಅವನಿಗೆ ಹೇ
೧೦ ಳಿದರು.
ಆಗ ಬೆನ್ಹದಾದನು ಕಳುಹಿಸಿ, ನನ್ನನ್ನು ಹಿಂಬಾಲಿಸುವ ಸ
ಮಸ್ತ ಜನರೂ ಕೈತುಂಬ ತಕ್ಕೊಳ್ಳಿ ಸಮಾರ್ಯದ ಧೂಳಿಯು
ಸಾಕಾದರೆ, ದೇವರು ನನಗೆ ಹೀಗೆಯೂ ಹಾಗೆಯೂ ಮಾಡಲಿ,
೧೧ ಎಂದು ಅವನಿಗೆ ಹೇಳಿ ಕಳುಹಿಸಿದನು. ಅದಕ್ಕೆ ಇಸ್ರಯೇಲಿನ ಅ
ರಸನು ಪ್ರತ್ಯುತ್ತರವಾಗಿ, ಕಟ್ಟಿ ಕೊಳ್ಳುವವನು ಬಿಚ್ಚಿ ಹಾಕುವ
೧೨ ವನ ಹಾಗೆ ಹೊಗಳಿ ಕೊಳ್ಳಬೆ ಇರಲಿ, ಅಂದನು. ಅವನೂ ಅವ
ನ ಸಂಗಡ ಗುಡಾರಗಳಲ್ಲಿ ಕುಡಿಯುವ ಅರಸುಗಳೂ ಈ ಮಾ
ತು ಕೇಳುತ್ತಲೇ, ಅವನು ತನ್ನ ಸೇವಕರಿಗೆ, ಸಿದ್ಧ ಮಾಡಿರಿ, ಅಂ
ದನು. ಹಾಗೆಯೇ ಪಟ್ಟಣದ ಮೇಲೆ ಯುದ್ಧಕ್ಕೆ ಸಿದ್ಧ ಮಾಡಿದರು.
೧೩ ಆಗ, ಇಗೋ, ಒಬ್ಬ ಪ್ರವಾದಿಯು ಇಸ್ರಯೇಲಿನ ಅರಸನಾ
ದ ಅಹಾಬನ ಬಳಿಗೆ ಬಂದು, ಈ ದೊಡ್ಡ ಗುಂಪನ್ನು ನೋಡಿ
ದಿಯೋ! ಇಗೋ, ನಾನೇ ಕರ್ತನೆಂದು ನೀನು ತಿಳಿಯುವ ಹಾ
ಗೆ, ಈ ಹೊತ್ತು ಅದನ್ನು ನಿನ್ನ ಕೈಯಲ್ಲಿ ಒಪ್ಪಿಸಿ ಕೊಡುವೆನೆಂ
೧೪ ದು, ಕರ್ತನು ಹೇಳುತ್ತಾನೆ, ಅಂದನು. ಅಹಾಬನು, ಯಾರ ಕೈ
ಯಿಂದ! ಅಂದನು. ಅದಕ್ಕವನು, ಶೀಮೆಗಳ ಪ್ರಧಾನರ ಸೇವಕರಿಂ
ದಲೇ, ಎಂದು ಕರ್ತನು ಹೇಳುತ್ತಾನೆ, ಅಂದನು. ಆಗಲವನು,
ಯುದ್ಧ ನಡಿಸುವವನು ಯಾರು! ಅಂದನು. ಅದಕ್ಕವನು, ನೀ
ನೇ, ಅಂದನು.
೧೫ ಅವನು ಶೀಮೆಗಳ ಪ್ರಧಾನರ ಸೇವಕರನ್ನು ಲೆಖ್ಖ ಮಾಡಿದಾ
ಗ, ಅವರು ಇನ್ನೂರ ಮೂವತ್ತೆರಡು ಜನರಾಗಿದ್ದರು. ಅವರ
ತರುವಾಯ ಇಸ್ರಯೇಲ ಮಕ್ಕಳಾದ ಸಕಲ ಜನರನ್ನು ಲೆಖ್ಖ
೧೬ ಮಾಡಿದಾಗ, ಏಳು ಸಾವಿರ ಜನರಾಗಿದ್ದರು. ಅವರು ಮಧ್ಯಾ
ನ್ಹದಲ್ಲಿ ಹೊರಟರು; ಆದರೆ ಬೆನ್ಹದಾದನೂ, ಅವನ ಸಹಾಯಕ
ರಾದ ಮೂವತ್ತೆರಡು ಮಂದಿ ಅರಸುಗಳೂ ಕೂಡ, ಗುಡಾರಗಳ
೧೭ ಲ್ಲಿ ಅಮಲೇರುವ ಹಾಗೆ ಕುಡಿಯುತ್ತಾ ಇದ್ದರು. ಶೀಮೆಗಳ ಪ್ರ
ಧಾನರ ಸೇವಕರು ಮೊದಲು ದಂಡಾಗಿ ಹೊರಡುವಾಗ, ಬೆನ್ಹದಾ
ದನು ಮನುಷ್ಯರನ್ನು ಕಳುಹಿಸಿದನು. ಅವರು ತಿರಿಗಿ ಬಂದು,
ಸಮಾರ್ಯದಿಂದ ಮನುಷ್ಯರು ಬಂದಿದ್ದಾರೆಂದು, ಅವನಿಗೆ ತಿಳಿ
೧೮ ಸಿದರು. ಆಗಲವನು ಅವರು ಸಮಾಧಾನಕ್ಕೋಸ್ಕರ ಹೊರಟು
ಬಂದಿದ್ದರೆ, ಅವರನ್ನು ಜೀವಿತರಾಗಿ ಹಿಡಿಯಿರಿ; ಯುದ್ಧಕ್ಕೋಸ್ಕರ
ಹೊರಟು ಬಂದಿದ್ದರೆ, ಅವರನ್ನು ಜೀವಿತರಾಗಿ ಹಿಡಿಯಿರಿ, ಅಂದ
೧೯ ನು. ಶೀಮೆಗಳ ಪ್ರಧಾನರ ಸೇವಕರೂ ಅವರ ಹಿಂದೆ ಬಂದ ರಾ
ಣುವೆಯವರೂ ಪಟ್ಟಣದಿಂದ ಹೊರಗೆ ಬಂದಾಗ, ಪ್ರತಿ ಮನು
ಷ್ಯನು ತನಗೆ ಎದುರು ಬಿದ್ದವರನ್ನು ಕೊಂದು ಹಾಕಿದನು.
೨೦ ಆಗ ಅರಾಮ್ಯರು ಓಡಿ ಹೋದರು; ಇಸ್ರಯೇಲ್ಯರು ಅವರನ್ನು
ಹಿಂದಟ್ಟಿದರು; ಅರಾಮಿನ ಅರಸನಾದ ಬೆನ್ಹದಾದನು ಕುದುರೆ ಹ
ತ್ತಿ ಕೊಂಡು, ಕುದುರೆ ರಾಹುತರ ಸಂಗಡ ತಪ್ಪಿಸಿ ಕೊಂಡನು.
೨೧ ಇದಲ್ಲದೆ ಇಸ್ರಯೇಲಿನ ಅರಸನು ಹೊರಟು, ಕುದುರೆಗಳನ್ನೂ
ರಥಗಳನ್ನೂ ಹೊವೆದು, ಅರಾಮ್ಯರನ್ನು ಮಹಾ ಸಂಹಾರದಿಂದ
ಹೊವೆದು ಬಿಟ್ಟನು.
೨೨ ಮತ್ತು ಪ್ರವಾದಿಯು ಇಸ್ರಯೇಲಿನ ಅರಸನ ಬಳಿಗೆ ಬಂದು,
ಅವನಿಗೆ, ನೀನು ಹೋಗಿ, ಬಲಗೊಂಡು, ನೀನು ಮಾಡ ತಕ್ಕದ್ದ
ನ್ನು ತಿಳಿಯ ಕೊಂಡು ನೋಡು; ಯಾಕಂದರೆ ವರುಷಾಂತರದಲಿ
ಅರಾಮಿನ ಅರಸನು ನಿನಗೆ ವಿರೋಧವಾಗಿ ಬರುವನು, ಅಂದನು.
೨೩ ಆದರೆ ಅರಾಮಿನ ಅರಸನ ಸೇವಕರು ಅವನಿಗೆ, ಅವರ ದೇವ
ರುಗಳು ಪರ್ವತಗಳ ದೇವರುಗಳು, ಆದದರಿಂದ ಅವರು ನಮ್ಮ
ನ್ನು ಜಯಿಸಿದರು. ನಾವು ಅವರ ಸಂಗಡ ಸಮ ಭೂಮಿಯಲ್ಲಿ
ಯುದ್ಧ ಮಾಡುವ; ನಿಶ್ಚಯವಾಗಿ ನಾವು ಅವರನ್ನು ಜಯಿಸುವೆ

೨೪ ವು. ಇದಲ್ಲದೆ ನೀನು ಮಾಡ ಬೇಕಾದದ್ದೇನಂದರೆ, ಅರಸುಗಳನ್ನು ತೆಗೆದು ಹಾಕಿ, ಅವರಿಗೆ ಪ್ರತಿಯಾಗಿ ಅಧಿಪತಿಗಳನ್ನು ನೇಮಿಸಿ,
೨೫ ನೀನು ಕಳಕೊಂಡ ದಂಡಿನ ಹಾಗೆ, ಕುದುರೆಗೆ ಕುದುರೆಯೂ ರಥಕ್ಕೆ ರಥವೂ ಬೇಕೆ ದಂಡನ್ನು ಲೆಖ್ಖಿಸು; ಆಗ ನಾವು ಸಮ ಭೂಮಿಯಲ್ಲಿ ಅವರ ಸಂಗಡ ಯುದ್ಧ ಮಾಡುವ; ನಿಶ್ಚಯವಾಗಿ ನಾವು ಅವರನ್ನು ಜಯಿಸುವೆವು, ಅಂದರು. ಅವನು ಅವರ ಮಾತನ್ನು ಕೇಳಿ, ಹಾಗೆಯೇ ಮಾಡಿದನು.

೨೬ ಮತ್ತು ವರುಷಾಂತರದಲ್ಲಿ ಏನಾಯಿತಂದರೆ, ಬೆನ್ಹದಾದನು ಅರಾಮ್ಯರನ್ನು ಲೆಖ್ಖಿಸಿ, ಇಸ್ರಯೆಲಿನ ಸಂಗಡ ಯುದ್ಧ ಮಾಡ
೨೭ ಅಫೇಕಿಗೆ ಹೋದನು. ಆದದರಿಂದ ಇಸ್ರಯೇಲಿನ ಮಕ್ಕಳು ಲೆಖ್ಖ ಮಾಡಲ್ಪಟ್ಟು, ಬೇಕಾದದ್ದನ್ನು ಸಿದ್ಧ ಮಾಡಿ ಕೊಂಡು, ಅವರಿಗೆ ಎದುರಾಗಿ ಹೊರಟರು. ಇಸ್ರಯೇಲಿನ ಮಕ್ಕಳು ಅವರಿಗೆದುರಾಗಿ ದಂಡಿಳಿದಿರುವಾಗ, ಮೇಕೆ ಮರಿಗಳ ಎರಡು ಮಂದೆಗಳ ಹಾಗಿದ್ದರು; ಆದರೆ ಅರಾಮ್ಯರು ದೇಶವನ್ನು ತುಂಬಿದ್ದರು.

೨೮ ಆಗ ದೇವರ ಮನುಷ್ಯನೊಬ್ಬನು ಬಂದು, ಇಸ್ರಯೇಲಿನ ಅರಸನಿಗೆ, ಕರ್ತನು ತಗ್ಗುಗಳ ದೇವರಾಗಿರದೆ, ಪರ್ವತಗಳ ದೇವರಾಗಿದ್ದಾನೆಂಬದಾಗಿ ಅರಾಮ್ಯರು ಹೇಳಿದ್ದರಿಂದ, ನಾನು ಯೆಹೋವನಾಗಿದ್ದೇನೆಂದು ನೀವು ತಿಳಿಯುವ ಹಾಗೆ, ಆ ದೊಡ್ಡ ಸಮೂಹವನ್ನೆಲ್ಲಾ ನಿನ್ನ ಕೈಯಲ್ಲಿ ಒಪ್ಪಿಸುವೆನೆಂದು, ಕರ್ತನು ಹೇಳುತ್ತಾನೆ, ಅಂದನು.

೨೯ ಏಳು ದಿವಸ ಇವರು ಅವರಿಗೆ ಎದುರಾಗಿ ದಂಡಿಳಿದಿದ್ದರು. ಆದರೆ ಏಳನೇ ದಿವಸದಲ್ಲಿ ಯುದ್ಧಕ್ಕೆ ಕಲತಾಗ, ಇಸ್ರಯೇಲಿನ ಮಕ್ಕಳು ಅರಾಮ್ಯರಲ್ಲಿ ಎಕ್ಕ ಕಾಲ್ಬಲವನ್ನು ಒಂದೇ ದಿವಸದಲ್ಲಿ
೩೦ ಸಂಹರಿಸಿದರು. ಮಿಕ್ಕಾದವರು ಅಫೇಕೆಬ ಪಟ್ಟಣದೊಳಗೆ ಓಡಿ ಹೋದರು. ಅಲ್ಲಿ ಒಂದು ಗೋಡೆಯು ಉಳಿಯ ಕೊಂಡವರಲ್ಲಿ ಇಪ್ಪತ್ತೆಳು ಸಾವಿರ ಮಂದಿಯ ಮೇಲೆ ಬಿತ್ತು. ಆದರೆ ಬೆನ್ಹದಾದನು ಪಟ್ಟಣಕ್ಕೆ ಓಡಿ ಬಂದು, ಕೊಠಡಿಯ ಒಳ ಕೊಠಡಿಯಲ್ಲಿ ಬಚ್ಚಿಟ್ಟು ಕೊಂಡನು.

೩೧ ಆಗ ಅವನ ಸೇವಕರು ಅವನಿಗೆ, ಇಗೋ, ಇಸ್ರಯೇಲಿನ ಮನೆಯ ಅರಸುಗಳು ಕೃಪೆಯುಳ್ಳವರೆಂದು ನಾವು ಕೇಳಿದ್ದೇವೆ, ನಾವು ಗೋಣಿಯನ್ನು ನಡುವಿನಲ್ಲಿ ಕಟ್ಟಿ ಕೊಂಡು, ಹಗ್ಗಗಳನ್ನು ನಮ್ಮ ತಲೆಗಳಲ್ಲಿ ಸುತ್ತಿ ಕೊಂಡು, ಇಸ್ರಯೇಲಿನ ಅರಸನ ಬಳಿಗೆ ಹೋಗುವ, ಒಂದು ವೇಳೆ ಅವನು ನಿನ್ನ ಪ್ರಾಣವನ್ನು
೩೨ ರಕ್ಷಿಸುವನು, ಅಂದರು. ಹಾಗೆಯೇ ಅವರು ಗೋಣಿಯನ್ನು ತಮ್ಮ ನಡುವುಗಳಲ್ಲಿ ಕಟ್ಟಿ ಕೊಂಡು, ಹಗ್ಗಗಳನ್ನು ತಮ್ಮ ತಲೆಗಳಿಗೆ ಸುತ್ತಿ ಕೊಂಡು, ಇಸ್ರಯೇಲಿನ ಅರಸನ ಬಳಿಗೆ ಬಂದು, ನನ್ನ ಪ್ರಾಣ ಬದುಕಲೆಂದು, ನಿನ್ನ ಸೇವಕನಾದ ಬೆನ್ಹದಾದನು ಹೇಳುತ್ತಾನೆ, ಅಂದರು. ಅದಕ್ಕೆ ಅವನು, ಇನೂಖ ಬದುಕುತ್ತಾನೋ!
೩೩ ಅವನು ನನ್ನ ಸಹೋದರನು, ಅಂದನು. ಆದರೆ ಆ ಮನುಷ್ಯರು ಜಾಗ್ರತೆಯಾಗಿ ನೋಡಿ ಕೊಂಡಿದ್ದು, ಅವನ ಬಾಯಿ ಮಾತನ್ನು ಸಂಗತಿಯೇ ಹಿಡಿದು, ನಿನ್ನ ಸಹೋದರನಾದ ಬೆನ್ಹದಾದನು ಇದ್ದಾನೆಂದು ಹೇಳಿದರು. ಆಗಲವನು, ನೀವು ಹೋಗಿ, ಅವನನ್ನು ಕರಕೊಂಡು ಬನ್ನಿರಿ, ಅಂದನು. ಬೆನ್ಹದಾದನು ಅವನ ಬಳಿಗೆ ಹೊರಟು ಬಂದಾಗ, ಅವನು ಇವನನ್ನು ರಥದಲ್ಲೇರಿ ಬರ ಮಾಡಿದನು.
೩೪ ಆಗ ಬೆನ್ಹದಾದನು ಅವನಿಗೆ, ನನ್ನ ತಂದೆಯು ನಿನ್ನ ತಂದೆಯಿಂದ ತೆಗೆದು ಕೊಂಡ ಪಟ್ಟಣಗಳನ್ನು ತಿರಿಗಿ ಕೊಡುತ್ತೇನೆ; ನನ್ನ ತಂದೆಯು ಸಮಾರ್ಯದಲ್ಲಿ ಮಾಡಿದ ಹಾಗೆಯೇ ದಮಸ್ಕದಲ್ಲಿ ನೀನು ನಿನಗೆ ಬೀದಿಗಳನ್ನು ಮಾಡಿಸ ಬೇಕು, ಅಂದನು. ಅದಕ್ಕವನು, ಈ ಬಡಂಬಡಿಕೆಯ ಪ್ರಕಾರವೇ ನಿನ್ನನ್ನು ಕಳುಹಿಸಿ ಬಿಡುತ್ತೇನೆ, ಅಂದನು. ಹೀಗೆಯೇ ಇವನು ಅವನ ಸಂಗಡ ಬಡಂಬಡಿಕೆಯನ್ನು ಮಾಡಿ, ಅವನನ್ನು ಕಳುಹಿಸಿ ಬಿಟ್ಟನು.

೩೫ ಆದರೆ ಪ್ರವಾದಿಗಳ ಮಕ್ಕಳಲ್ಲಿ ಒಬ್ಬನು ಕರ್ತನ ಮಾತಿನಿಂದ ತನ್ನ ಜತೆಗಾರನಿಗೆ, ನೀನು ದಯೆ ಮಾಡಿ, ನನ್ನನ್ನು ಕೂಡೆ, ಅಂ
೩೬ ದನು. ಆದರೆ ಆ ಮನುಷ್ಯನು ಅವನನ್ನು ಹೊಡೆಯಲೊಲ್ಲದೆ ಇದ್ದನು. ಆಗಲವನು ಇವನಿಗೆ, ನೀನು ಕರ್ತನ ಶಬ್ದ ಕೇಳದೆ ಹೋದದರಿಂದ, ಇಗೋ, ನೀನು ನನ್ನನ್ನು ಬಿಟ್ಟು ಹೋಗುವಾಗ, ಸಿಂಹವು ನಿನ್ನನ್ನು ಕೊಲ್ಲುವದು, ಅಂದನು. ಅವನು ಇವನನ್ನು ಬಿಟ್ಟು ಹೋದಾಗಲೇ, ಸಿಂಹವು ಅವನನ್ನು ಕಂಡು, ಕೊಂದು
೩೭ ಹಾಕಿತು. ಮತ್ತು ಅವನು ಮತ್ತೊಬ್ಬನನ್ನು ಕಂಡು ಕೊಂಡು, ದಯೆ ಮಾಡಿ ನನ್ನನ್ನು ಹೊಡೆ, ಅಂದನು. ಆ ಮನುಷ್ಯನು ಅವನನ್ನು ಹೊಡೆದನು; ಮತ್ತು ಘಾಯವಾಗುವ ಹಾಗೆ ಹೊಡೆದನು. ಆಗ ಆ ಪ್ರವಾದಿಯು ಹೋಗಿ, ತನ್ನ ಕಣ್ಣುಗಳ ಮೇಲೆ ಬೂದಿಯನ್ನು ಹಚ್ಚಿ ಕೊಂಡು, ತನ್ನನ್ನು ಮಾಚಿ, ಅರಸನಿಗೋಸ್ಕರ ಮಾರ್ಗದಲ್ಲಿ ಕಾದು ಕೊಂಡಿದ್ದನು. ಅರಸನು ಹಾದು ಹೋಗುತ್ತಿರುವಾಗ, ಇವನು ಅರಸನಿಗೆ ಕೂಗಿ ಹೇಳ್ದೇನಂದರೆ, ನಿನ್ನ
೩೮ ಸೇವಕನು ಯುದ್ಧದೊಳ್ಗೀಕೆ ಹೊರಟು ಹೋಗಿರುವಾಗ, ಇಗೋ, ಒಬ್ಬ ಮನುಷ್ಯನು ತೊಲಗಿ, ಒಬ್ಬನನ್ನು ನನ್ನ ಬಳಿಗೆ ತಕ್ಕೊಂಡು ಬಂದು, ಈ ಮನುಷ್ಯನನ್ನು ಕಾಯಿ; ಇವನು ಹ್ಯಾಗಾದರೂ ಇಲ್ಲದೆ ಹೋದರೆ, ನಿನ್ನ ಪ್ರಾಣವು ಅವನ ಪ್ರಾಣಕ್ಕೆ ಬದಲಾಗಿರುವದು; ಇಲ್ಲವೆ ನೀನು ಒಂದು ತಲಾಂತು ಬೆಳ್ಳಿಯನ್ನು ಕೊಡಬೇಕು, ಅಂದನು. ಆದರೆ ನಿನ್ನ ಸೇವಕನು ಅಲ್ಲಿ ಇಲ್ಲಿ ಕೆಲಸ
೩೯ ಮಾಡುತ್ತಿರುವಾಗ, ಅವನು ಇಲ್ಲದೆ ಹೋದನು, ಅಂದನು. ಇಸ್ರಯೇಲಿನ ಅರಸನು ಅವನಿಗೆ, ನಿನ್ನ ತೀರ್ಪಿಕೆ ಹಾಗೆಯೇ ಆಗುವದು; ನೀನೇ ನಿರ್ಣಯಿಸಿದಿ, ಅಂದನು. ಆಗ ಅವನು ಶೀಘ್ರವಾಗಿ ತನ್ನ ಕಣ್ಣುಗಳ ಮೇಲೆ ಇರುವ ಬೂದಿಯನ್ನು ಒರಸಿ ಹಾಕಿದ್ದರಿಂದ, ಇಸ್ರಯೇಲಿನ ಅರಸನು ಅವನು ಪ್ರವಾದಿಗಳಲ್ಲಿ ಒಬ್ಬನೆಂದು ತಿಳಿ ಕೊಂಡನು. ಮತ್ತು ಇವನು ಅವನಿಗೆ, ಕರ್ತನು
೪೦ ಹೇಳುವದೇನಂದರೆ—ನಾನು ತಪಸಿ, ನಾಶಕ್ಕೆ ಒಪ್ಪಿಸಿದ ಮನುಷ್ಯನನ್ನು ನೀನು ಕೈ ಬಿಟ್ಟು ಹೋಗಲಾಡಿಸಿದ ಕಾರಣ, ಅವನ ಪ್ರಾಣಕ್ಕೆ ಬದಲಾಗಿ ನಿನ್ನ ಪ್ರಾಣವೂ, ಅವನ ಜನಕ್ಕೆ ಬದಲಾಗಿ
೪೧ ನಿನ್ನ ಜನವೂ ಹೋಗುವದು, ಅಂದನು. ಆಗ ಇಸ್ರಯೇಲಿನ ಅರಸನು ವ್ಯಸನವನ್ನೂ ಕೋಪವನ್ನೂ ಹೊಂದಿ, ತನ್ನ ಮನೆಗೆ ಹೋಗ ಹೊರಟು, ಸಮಾರ್ಯಕ್ಕೆ ಬಂದನು.

## ೨೧. ಸಂಧಿ.

೧ ಇವುಗಳ ತರುವಾಯ ಏನಾಯಿತಂದರೆ, ಇಜ್ರೇಲಲ್ಲಿ ಸಮಾರ್ಯದ ಅರಸನಾದ ಅಹಾಬನ ಅರಮನೆಯ ಬಳಿಯಲ್ಲಿ ಇಜ್ರೇ
೨ ಲ್ಯನಾದ ನಬೋತನಿಗೆ ಒಂದು ದ್ರಾಕ್ಷೇ ತೋಟವಿತ್ತು. ಮತ್ತು ಅಹಾಬನು ನಬೋತನಿಗೆ, ನಿನ್ನ ದ್ರಾಕ್ಷೇ ತೋಟವು ನನ್ನ ಮನೆಯ ಬಳಿಯಲ್ಲಿ ಇರುವದರಿಂದ, ಅದು ನನಗೆ ಬಲ್ಲವ ತೋಟವಾ



ಗುವ ಹಾಗೆ, ಅದನ್ನು ನನಗೆ ಕೊಡು; ನಾನು ಅದಕ್ಕೆ ಬದಲಾಗಿ ಅದಕ್ಕಿಂತ ಒಳ್ಳೇ ದ್ರಾಕ್ಷೇ ತೋಟವನ್ನು ನಿನಗೆ ಕೊಡುವೆನು; ಇಲ್ಲದೆ ನಿನ್ನ ಕಣ್ಣುಗಳಿಗೆ ಒಳ್ಳೇದಾಗಿದ್ದರೆ, ಕೊಬ್ಬುದಲ್ಲಿ ಅದರ
೩ ಬೆಲೆಯನ್ನು ಕೊಡುವೆನು, ಅಂದನು. ಆದರೆ ನಬೋತನು ಅಹಾಬನಿಗೆ, ನಾನು ನನ್ನ ಪಿತೃಗಳ ಬಾಧ್ಯತೆಯನ್ನು ನಿನಗೆ ಕೊಡುವದನ್ನು ಕರ್ತನು ನನಗೆ ದೂರವಾಗ ಮಾಡಲಿ, ಅಂದನು.

೪ ನಾನು ನನ್ನ ಪಿತೃಗಳ ಬಾಧ್ಯತೆಯನ್ನು ನಿನಗೆ ಕೊಡುವದಿಲ್ಲವೆಂದು, ಇಜ್ರೇಲ್ಯನಾದ ನಬೋತನು ಹೇಳ್ದಾದ ಮಾತಿಗೋಸ್ಕರ ಅಹಾಬನು ವ್ಯಸನವನ್ನೂ ಕೋಪವನ್ನೂ ಹೊಂದಿ, ತನ್ನ ಮನೆಗೆ ಬಂದು, ತನ್ನ ಮಂಚದ ಮೇಲೆ ಮಲಗಿ, ತನ್ನ ಮುಖವನ್ನು
೫ ತಿರುಗಿಸಿ ಕೊಂಡು, ಕೊಟ್ಟಿ ತಿನ್ನದೆ ಇದ್ದನು. ಆಗ ಅವನ ಹೆಂಡತಿಯಾದ ಇಜೆಬೇಲಳು ಅವನ ಬಳಿಗೆ ಬಂದು, ಅವನಿಗೆ, ನೀನು ಕೊಟ್ಟಿ ತಿನ್ನದ ಹಾಗೆ, ನಿನ್ನ ಆತ್ಮ ವ್ಯಸನವುಳ್ಳದ್ದಾಗಿರುವದೇನು? ಅಂದಳು. ಅವನು ಅವಳಿಗೆ, ಹೇಳ್ದೆನಂದರೆ—ಯಾಕಂದರೆ ನಾನು ಇಜ್ರೇಲ್ಯನಾದ ನಬೋತನ ಸಂಗಡ ಮಾತಾಡಿ, ನಿನ್ನ
೬ ದ್ರಾಕ್ಷೇ ತೋಟವನ್ನು ನನಗೆ ಕ್ರಯಕ್ಕೆ ಕೊಡು; ಇಲ್ಲವೆ ನಿನಗೆ ಮನಸ್ಸಿದ್ದರೆ, ಅದಕ್ಕೆ ಬದಲಾಗಿ ಬೇರೆ ದ್ರಾಕ್ಷೇ ತೋಟವನ್ನು ಕೊಡುವೆನೆಂದು, ಅವನಿಗೆ ಹೇಳಿದೆನು. ಅದಕ್ಕವನು, ನನ್ನ ದ್ರಾಕ್ಷೇ ತೋಟವನ್ನು ಕೊಡೆನು, ಅಂದನು.

೭ ಆಗ ಅವನ ಹೆಂಡತಿಯಾದ ಇಜೆಬೇಲಳು ಅವನಿಗೆ, ನೀನು ಈಗ ಇಸ್ರಯೇಲಿನ ರಾಜ್ಯವನ್ನು ಆಳುತ್ತಾ ಇದ್ದಿಯಾ! ಎದ್ದು, ಕೊಟ್ಟಿ ತಿನ್ನು; ನಿನ್ನ ಹೃದಯ ಸಂತೋಷವಾಗಿರಲಿ. ನಾನೇ ಇಜ್ರೇಲ್ಯನಾದ ನಬೋತನ ದ್ರಾಕ್ಷೇ ತೋಟವನ್ನು ನಿನಗೆ ಕೊಡು
೮ ವೆನು, ಅಂದಳು. ಅವಳು ಅಹಾಬನ ಹೆಸರಿನಲ್ಲಿ ಪತ್ರಿಕೆಗಳನ್ನು ಬರೆದು, ಅವುಗಳಿಗೆ ಅವನ ಮುದ್ರೆ ಹಾಕಿ, ಆ ಪತ್ರಿಕೆಗಳನ್ನು ನಬೋತನ ಸಂಗಡ ಅವನ ಪಟ್ಟಣದಲ್ಲಿ ವಾಸವಾಗಿರುವ ಹಿರಿಯರು
೯ ಗೂ ಶ್ರೇಷ್ಠರಿಗೂ ಕಳುಹಿಸಿದಳು. ಅವಳು ಪತ್ರಿಕೆಗಳಲ್ಲಿ ಬರೆದದ್ದೇನಂದರೆ, ನೀವು ಉಪವಾಸವನ್ನು ಪ್ರಕಟ ಮಾಡಿ, ನಬೋ
೧೦ ತನನ್ನು ಜನರೊಳಗೆ ಉನ್ನತ ಸ್ಥಾನದಲ್ಲಿ ಇರಿಸಿ, ನೀನು ದೇವರನ್ನೂ ಅರಸನನ್ನೂ ದೂಷಿಸಿದಿ ಎಂದು, ಅವನಿಗೆ ವಿರೋಧವಾಗಿ ಸಾಕ್ಷಿ ಹೇಳ ಅವನ ಮುಂದೆ ಬೆಲಿಯಾಳನ ಘಕ್ಕಳಾದ ಇಬ್ಬರು ಮನುಷ್ಯರನ್ನು ನಿಲ್ಲಿಸಿರಿ; ತರುವಾಯ ಅವನನ್ನು ಹೊರಗೆ ವೈದು, ಅವನು ಸಾಯುವ ಹಾಗೆ, ಕಲ್ಲೆಸೆಯಿರಿ, ಅಂದಳು.

೧೧ ಆಗ ಅವನ ಪಟ್ಟಣದ ಮನುಷ್ಯರೂ ಅವನ ಪಟ್ಟಣದ ನಿವಾಸಿಗಳೂ ಆದ ಹಿರಿಯರೂ ಶ್ರೇಷ್ಠರೂ ಇಜೆಬೇಲಳು ಅವರಿಗೆ ಕಳುಹಿಸಿದ ಪ್ರಕಾರವೂ, ಅವಳು ಅವರ ಬಳಿಗೆ ಕಳುಹಿಸಿದ ಪತ್ರಿಕೆಗಳ
೧೨ ಪ್ರಕಾರವೂ ಮಾಡಿದರು. ಅವರು ಉಪವಾಸವನ್ನು ಪ್ರಕಟ ಮಾಡಿ, ನಬೋತನನ್ನು ಜನರೊಳಗೆ ಉನ್ನತ ಸ್ಥಾನದಲ್ಲಿ ಇರಿಸಿದರು.
೧೩ ಆಗ ಬೆಲಿಯಾಳನ ಮಕ್ಕಳಾದ ಇಬ್ಬರು ಮನುಷ್ಯರು ಬಂದು, ಅವನಿಗೆದುರಾಗಿ ಕುಳಿತು ಕೊಂಡರು; ಈ ಬೆಲಿಯಾಳನ ಮನುಷ್ಯರು ಜನರ ಸಮುಖದಲ್ಲಿ ನಬೋತನಿಗೆ ವಿರೋಧವಾಗಿ, ಈ ನಬೋತನು ದೇವರನ್ನೂ ಅರಸನನ್ನೂ ದೂಷಿಸಿದನೆಂದು ಸಾಕ್ಷಿ ಹೇಳ್ದರು. ಆಗ ಅವನನ್ನು ಪಟ್ಟಣದ ಹೊರಗೆ ತಕ್ಕೊಂಡು ಹೋಗಿ, ಅವನು ಸಾಯುವ ಹಾಗೆ, ಅವರು ಅವನನ್ನು ಕಲ್ಲೇ
೧೪ ಕೆಸೆದರು. ಮತ್ತು ಅವರು ಇಜೆಬೇಲಳಿಗೆ, ನಬೋತನು ಕಲ್ಲೆಸೆಯಲ್ಪಟ್ಟು, ಸತ್ತನೆಂದು, ಹೇಳಿ ಕಳುಹಿಸಿದರು.

೧೫ ನಬೋತನು ಕಲ್ಲೆಸೆಯಲ್ಪಟ್ಟು ಸತ್ತಿದ್ದಾನೆಂದು, ಇಜೆಬೇಲಳು ಕೇಳಿದಾಗ, ಅವಳು ಅಹಾಬನಿಗೆ, ನೀನೆದ್ದು, ಇಜ್ರೇಲ್ಯನಾದ ನಬೋತನು ಬೆಲೆಗೆ ಕೊಡ ಸಮ್ಮತಿಸದ ದ್ರಾಕ್ಷೇ ತೋಟವನ್ನು ಸ್ವತಂತ್ರಿಸಿಕೋ; ಯೆಹಕಂದರೆ ನಬೋತನು ಜೀವದಿಂದಿಲ್ಲ, ಸ
೧೬ ತ್ತಿದ್ದಾನೆ, ಅಂದಳು. ನಬೋತನು ಸತ್ತನೆಂದು ಅಹಾಬನು ಕೇಳಿದಾಗ, ಅವನೆದ್ದು, ಇಜ್ರೇಲ್ಯನಾದ ನಬೋತನ ದ್ರಾಕ್ಷೇ ತೋಟವನ್ನು ಸ್ವತಂತ್ರಿಸಿ ಕೊಳ್ಳ ಹೋದನು.

೧೭ ಆಗ ಕರ್ತನ ವಾಕ್ಯವು ತಿಷ್ಬಿಯನಾದ ಎಲೀಯನಿಗೆ ಉಂಟಾಗಿ ಹೇಳ್ದದ್ದೇನಂದರೆ—ನೀನೆದ್ದು, ಸಮಾರ್ಯದಲ್ಲಿರುವ ಇಸ್ರಯೇಲಿನ ಅರಸನಾದ ಅಹಾಬನಿಗೆದುರಾಗಿ ಹೋಗು, ಇಗೋ, ಅವನು ನಬೋತನ ದ್ರಾಕ್ಷೇ ತೋಟದಲ್ಲಿದ್ದಾನೆ; ಅದನ್ನು ಸ್ವತಂತ್ರಿಸಿ
೧೮ ಕೊಳ್ಳ ಅಲ್ಲಿಗೆ ಹೋಗಿದ್ದಾನೆ. ನೀನು ಅವನಿಗೆ ಹೇಳ ಬೇಕಾದದ್ದೇನಂದರೆ—ನೀನು ಕೊಂದು ಹಾಕಿ, ಸ್ವತಂತ್ರಿಸಿ ಕೊಂಡಿಯೋ! ಇದಲ್ಲದೆ ನೀನು ಅವನಿಗೆ, ನಾಯಿಗಳು ನಬೋತನ ರಕ್ತವನ್ನು ನೆಕ್ಕಿದ ಸ್ಥಳದಲ್ಲೇ ನಾಯಿಗಳು ನಿನ್ನ ರಕ್ತವನ್ನು, ನಿಶ್ಚಯವಾಗಿ ನಿನ್ನದನ್ನು, ನೆಕ್ಕುವವೆಂದು, ಕರ್ತನು ಹೇಳುತ್ತಾನೆಂದು ಹೇಳು.

೧೯ ಆಗ ಅಹಾಬನು ಎಲೀಯನಿಗೆ, ನನ್ನ ಶತ್ರುವೇ, ನೀನು ನನ್ನನ್ನು ಕಂಡು ಕೊಂಡಿಯಾ! ಅದಕ್ಕವನು, ಕಂಡು ಕೊಂಡೆನು;
೨೦ ನೀನು ಕರ್ತನ ಸಮುಖದಲ್ಲಿ ಕೇಡನ್ನು ಮಾಡ ನಿನ್ನನ್ನು ಒಪ್ಪಿಸಿದ್ದರಿಂದ, ಇಗೋ, ನಾನು ನಿನ್ನ ಮೇಲೆ ಕೇಡನ್ನು ಬರ ಮಾಡಿ, ನಿನ್ನ ಸಂತತಿಯನ್ನು ತೆಗೆದು ಹಾಕಿ, ಅಹಾಬನಿಗೆ ಒಬ್ಬ ಗಂಡುಸಾದರೂ, ಇಸ್ರಯೇಲಿನಲ್ಲಿ ಬಚ್ಚಿಕಲ್ಪಟ್ಟವನಾದರೂ ಉಳಿದವ
೨೧ ನಾದರೂ ಇರದ ಹಾಗೆ, ಕಡಿದು ಬಿಡುವೆನು. ನೀನು ನನಗೆ ಎಬ್ಬಿಸಿದ ಕಡೆಕಡೆಯ ನಿಮಿತ್ತವೂ, ಇಸ್ರಯೇಲನ್ನು ಪಾಪ ಮಾಡಿಸಿದ ನಿಮಿತ್ತವೂ, ನಾನು ನಿನ್ನ ಮನೆಯನ್ನು ನೆಬಾಟನ ಮಗನಾದ ಯೆರೊಬಾಮನ ಮನೆಯ ಹಾಗೆಯೂ ಅಹೀಯನ ಮಗನಾದ
೨೨ ಬಾಷನ ಮನೆಯ ಹಾಗೆಯೂ ಮಾಡುವೆನು, ಅಂದನು. ಮತ್ತು ಇಜೆಬೇಲಳನ್ನು ಕುರಿತು ಕರ್ತನು ಹೇಳ್ದದ್ದೇನಂದರೆ—ನಾಯಿಗಳು ಇಜೆಬೇಲಳನ್ನು ಇಜ್ರೇಲಿನ ಅಲಂಗದ ಬಳಿಯಲ್ಲಿ ತಿನ್ನುವವು,
೨೩ ಅಹಾಬನವರಲ್ಲಿ ಪಟ್ಟಣದೊಳಗೆ ಯಾವನು ಸಾಯುವನೋ, ಅವನನ್ನು ನಾಯಿಗಳು ತಿನ್ನುವವು; ಹೊರಗೆ ಸಾಯುವವನನ್ನು ಆಕಾಶದ ಪಕ್ಷಿಗಳು ತಿನ್ನುವವು.

೨೪ ಆದರೆ ತನ್ನ ಹೆಂಡತಿಯಾದ ಇಜೆಬೇಲಳಿಂದ ಪ್ರೇರೇಪಿಸಲ್ಪಟ್ಟು, ಕರ್ತನ ಸಮುಖದಲ್ಲಿ ಕೆಟ್ಟತನವನ್ನು ಮಾಡ ತನ್ನನ್ನು
೨೫ ಮಾರಿ ಬಿಟ್ಟ ಅಹಾಬನ ಹಾಗೆ ಯಾವನೂ ಇಲ್ಲ. ಇದಲ್ಲದೆ ಕರ್ತನು ಇಸ್ರಯೇಲಿನ ಮಕ್ಕಳ ಮುಂದೆ ಹೊರದಿಸಿ ಬಿಟ್ಟ ಅಮೋರ್ಯರು ಮಾಡಿದ ಎಲ್ಲಾದರ ಪ್ರಕಾರ ಅವನು ಮಣ್ಣು ದೇವರುಗಳನ್ನು ಹಿಂಬಾಲಿಸಿದ್ದರಿಂದ, ಅಸಹ್ಯವಾಗಿ ನಡೆದನು.

೨೬ ಆದರೆ ಅಹಾಬನು ಈ ಮಾತುಗಳನ್ನು ಕೇಳಿದಾಗ, ಏನಾಯಿತಂದರೆ, ಅವನು ತನ್ನ ವಸ್ತ್ರಗಳನ್ನು ಹರಿದು, ತನ್ನ ಮಾಂಸದ ಮೇಲೆ ಗೋಣಿಯನ್ನು ಹಾಕಿ ಕೊಂಡು, ಉಪವಾಸ ಮಾಡಿ
೨೭ ಗೋಣಿಯಲ್ಲಿ ಮಲಗಿ ಕೊಂಡು, ಮೆಲ್ಲಗೆ ನಡೆದನು. ಆಗ ಕರ್ತನ ವಾಕ್ಯವು ತಿಷ್ಬಿಯನಾದ ಎಲೀಯನಿಗೆ ಉಂಟಾಗಿ ಹೇಳ್ದದ್ದೇ
೨೮ ನಂದರೆ, ಅಹಾಬನು ನನ್ನ ಮುಂದೆ ತನ್ನನ್ನು ತಗ್ಗಿಸಿದ್ದನ್ನು ಕಂಡಿ

೨೪ ವು. ಇಲ್ಲದೆ ನೀನು ಮಾಡ ಬೇಕಾದದ್ದೇನಂದರೆ, ಅರಸುಗಳನ್ನು ತೆಗೆದು ಹಾಕಿ, ಅವರಿಗೆ ಪ್ರತಿಯಾಗಿ ಅಧಿಪತಿಗಳನ್ನು ನೇಮಿಸಿ,
೨೫ ನೀನು ಕಳಕೊಂಡ ರಥದ ಹಾಗೆ, ಕುದುರೆಗೆ ಕುದುರೆಯೂ ರಥಕ್ಕೆ ರಥವೂ ಬೇರೆ ದಂಡನ್ನು ಕೆಟ್ಟಿಸು; ಆಗ ನಾವು ಸಮ ಭೂಮಿಯಲ್ಲಿ ಅವರ ಸಂಗಡ ಯುದ್ಧ ಮಾಡುವ; ನಿಶ್ಚಯವಾಗಿ ನಾವು ಅವರನ್ನು ಜಯಿಸುವೆವು, ಅಂದರು. ಅವನು ಅವರ ಮಾತನ್ನು ಕೇಳ್ಳಿ, ಹಾಗೆಯೇ ಮಾಡಿದನು.

೨೬ ಮತ್ತು ವರುಷಾಂತರದಲ್ಲಿ ಏನಾಯಿತಂದರೆ, ಬೆನ್ಹದಾದನು ಅರಾಮ್ಯರನ್ನು ಕೆಟ್ಟಿಸಿ, ಇಸ್ರಯೆಲಿನ ಸಂಗಡ ಯುದ್ಧ ಮಾಡ
೨೭ ಅಫೇಕಿಗೆ ಹೋದನು. ಆದದರಿಂದ ಇಸ್ರಯೇಲಿನ ಮಕ್ಕಳು ಕೆಟ್ಟಿ ಮಾತಲ್ಪಟ್ಟು, ಬೇಕಾದದ್ದನ್ನು ಸಿದ್ಧ ಮಾಡಿ ಕೊಂಡು, ಅವರಿಗೆ ಎದುರಾಗಿ ಹೊರಟರು. ಇಸ್ರಯೇಲಿನ ಮಕ್ಕಳು ಅವರಿಗೆದುರಾಗಿ ದಂಡಿಳಿದಿರುವಾಗ, ಮೇಕೆ ಮರಿಗಳ ಎರಡು ಮಂದೆಗಳ ಹಾಗಿದ್ದರು; ಆದರೆ ಅರಾಮ್ಯರು ದೇಶವನ್ನು ತುಂಬಿದ್ದರು.

೨೮ ಆಗ ದೇವರ ಮನುಷ್ಯನೊಬ್ಬನು ಬಂದು, ಇಸ್ರಯೇಲಿನ ಅರಸನಿಗೆ, ಕರ್ತನು ತಗ್ಗುಗಳ ದೇವರಾಗಿರದೆ, ಪರ್ವತಗಳ ದೇವರಾಗಿದ್ದಾನೆಂಬದಾಗಿ ಅರಾಮ್ಯರು ಹೇಳಿದ್ದರಿಂದ, ನಾನು ಯೆಹೋವನಾಗಿದ್ದೇನೆಂದು ನೀವು ತಿಳಿಯುವ ಹಾಗೆ, ಆ ದೊಡ್ಡ ಸಮೂಹವನ್ನೆಲ್ಲಾ ನಿನ್ನ ಕೈಯಲ್ಲಿ ಒಪ್ಪಿಸುವೆನೆಂದು, ಕರ್ತನು ಹೇಳುತ್ತಾನೆ, ಅಂದನು.

೨೯ ಏಳು ದಿವಸ ಇವರು ಅವರಿಗೆ ಎದುರಾಗಿ ದಂಡಿಳಿದಿದ್ದರು. ಆದರೆ ಏಳನೇ ದಿವಸದಲ್ಲಿ ಯುದ್ಧಕ್ಕೆ ಕಲಹಾಗ, ಇಸ್ರಯೇಲಿನ ಮಕ್ಕಳು ಅರಾಮ್ಯರಲ್ಲಿ ಲಕ್ಷ ಕಾಲ್ಬಲವನ್ನು ಒಂದೇ ದಿವಸದಲ್ಲಿ
೩೦ ಸಂಹರಿಸಿದರು. ಮಿಕ್ಕಾದವರು ಅಫೇಕೆಂಬ ಪಟ್ಟಣದೊಳಗೆ ಓಡಿ ಹೋದರು. ಅಲ್ಲಿ ಒಂದು ಗೋಡೆಯು ಉಳಿಯ ಕೊಂಡವರಲ್ಲಿ ಇಪ್ಪತ್ತೇಳು ಸಾವಿರ ಮಂದಿಯ ಮೇಲೆ ಬಿತ್ತು. ಆದರೆ ಬೆನ್ಹದಾದನು ಪಟ್ಟಣಕ್ಕೆ ಓಡಿ ಬಂದು, ಕೊಠಡಿಯ ಒಳ ಕೊಠಡಿಯಲ್ಲಿ ಬಚ್ಚಿಟ್ಟು ಕೊಂಡನು.

೩೧ ಆಗ ಅವನ ಸೇವಕರು ಅವನಿಗೆ, ಇಗೋ, ಇಸ್ರಯೇಲಿನ ಮನೆಯ ಅರಸುಗಳು ಕೃಪೆಯುಳ್ಳವರೆಂದು ನಾವು ಕೇಳ್ಳಿದ್ದೇವೆ, ನಾವು ಗೋಣಿಯನ್ನು ನಡುವಿನಲ್ಲಿ ಕಟ್ಟಿ ಕೊಂಡು, ಹಗ್ಗಗಳನ್ನು ನಮ್ಮ ತಲೆಗಳಲ್ಲಿ ಸುತ್ತಿ ಕೊಂಡು, ಇಸ್ರಯೇಲಿನ ಅರಸನ ಬಳಿಗೆ ಹೋಗುವ, ಒಂದು ವೇಳೆ ಅವನು ನಿನ್ನ ಪ್ರಾಣವನ್ನು
೩೨ ರಕ್ಷಿಸುವನು, ಅಂದರು. ಹಾಗೆಯೇ ಅವರು ಗೋಣಿಯನ್ನು ತಮ್ಮ ನಡುವುಗಳಲ್ಲಿ ಕಟ್ಟಿ ಕೊಂಡು, ಹಗ್ಗಗಳನ್ನು ತಮ್ಮ ತಲೆಗಳಲ್ಲಿ ಸುತ್ತಿ ಕೊಂಡು, ಇಸ್ರಯೇಲಿನ ಅರಸನ ಬಳಿಗೆ ಬಂದು, ನನ್ನ ಪ್ರಾಣ ಬದುಕಲೆಂದು, ನಿನ್ನ ಸೇವಕನಾದ ಬೆನ್ಹದಾದನು ಹೇಳುತ್ತಾನೆ, ಅಂದರು. ಅದಕ್ಕೆ ಅವನು, ಇನ್ನೂ ಬದುಕುತ್ತಾನೋ!
೩೩ ಅವನು ನನ್ನ ಸಹೋದರನು, ಅಂದನು. ಆದರೆ ಆ ಮನುಷ್ಯರು ಜಾಗ್ರತೆಯಾಗಿ ನೋಡಿ ಕೊಂಡಿದ್ದು, ಅವನ ಬಾಯಿ ಮಾತನ್ನು ಸಂಗಡಲೇ ಹಿಡಿದು, ನಿನ್ನ ಸಹೋದರನಾದ ಬೆನ್ಹದಾದನು ಇದ್ದಾನೆಂದು ಹೇಳ್ಳಿದರು. ಆಗಲವನು, ನೀವು ಹೋಗಿ, ಅವನನ್ನು ಕರಕೊಂಡು ಬನ್ನಿರಿ, ಅಂದನು. ಬೆನ್ಹದಾದನು ಅವನ ಬಳಿಗೆ ಹೊರಟು ಬಂದಾಗ, ಅವನು ಇವನನ್ನು ರಥದಲ್ಲೇರಿ ಬರ ಮಾಡಿದನು.
೩೪ ಆಗ ಬೆನ್ಹದಾದನು ಅವನಿಗೆ, ನನ್ನ ತಂದೆಯು ನಿನ್ನ ತಂದೆಯಿಂದ ತೆಗೆದು ಕೊಂಡ ಪಟ್ಟಣಗಳನ್ನು ತಿರಿಗಿ ಕೊಡುತ್ತೇನೆ; ನನ್ನ ತಂದೆಯು ಸಮಾರ್ಯದಲ್ಲಿ ಮಾಡಿದ ಹಾಗೆಯೇ ದಮಸ್ಕದಲ್ಲಿ ನೀನು ನಿನಗೆ ಬೀದಿಗಳನ್ನು ಮಾಡಿಸ ಬೇಕು, ಅಂದನು. ಅದಕ್ಕವನು, ಈ ಬಡಂಬಡಿಕೆಯ ಪ್ರಕಾರವೇ ನಿನ್ನನ್ನು ಕಳುಹಿಸಿ ಬಿಡುತ್ತೇನೆ, ಅಂದನು. ಹೀಗೆಯೇ ಇವನು ಅವನ ಸಂಗಡ ಒಡಂಬಡಿಕೆಯನ್ನು ಮಾಡಿ, ಅವನನ್ನು ಕಳುಹಿಸಿ ಬಿಟ್ಟನು.

೩೫ ಆದರೆ ಪ್ರವಾದಿಗಳ ಮಕ್ಕಳಲ್ಲಿ ಒಬ್ಬನು ಕರ್ತನ ಮಾತಿನಿಂದ ತನ್ನ ಜತೆಗಾರನಿಗೆ, ನೀನು ದಯೆ ಮಾಡಿ, ನನ್ನನ್ನು ಹೊಡೆ, ಅಂ
೩೬ ದನು. ಆದರೆ ಆ ಮನುಷ್ಯನು ಅವನನ್ನು ಹೊಡೆಯಕೊಳ್ಳದೆ ಇದ್ದನು. ಆಗಲವನು ಇವನಿಗೆ, ನೀನು ಕರ್ತನ ಶಬ್ದ ಕೇಳ್ಳದೆ ಹೋದದರಿಂದ, ಇಗೋ, ನೀನು ನನ್ನನ್ನು ಬಿಟ್ಟು ಹೋಗುವಾಗ, ಸಿಂಹವು ನಿನ್ನನ್ನು ಕೊಲ್ಲುವದು, ಅಂದನು. ಅವನು ಇವನನ್ನು ಬಿಟ್ಟು ಹೋದಾಗಲೇ, ಸಿಂಹವು ಅವನನ್ನು ಕಂಡು, ಕೊಂದು
೩೭ ಹಾಕಿತು. ಮತ್ತು ಅವನು ಮತ್ತೊಬ್ಬನನ್ನು ಕಂಡು ಕೊಂಡು, ದಯೆ ಮಾಡಿ ನನ್ನನ್ನು ಹೊಡೆ, ಅಂದನು. ಆ ಮನುಷ್ಯನು ಅವನನ್ನು ಹೊಡೆದನು; ಮತ್ತು ಘಾಯವಾಗುವ ಹಾಗೆ ಹೊಡೆ
೩೮ ದನು. ಆಗ ಆ ಪ್ರವಾದಿಯು ಹೋಗಿ, ತನ್ನ ಕಣ್ಣುಗಳ ಮೇಲೆ ಬೂದಿಯನ್ನು ಹಚ್ಚಿ ಕೊಂಡು, ತನ್ನನ್ನು ಮಾಜಿ, ಅರಸನಿಗೋಸ್ಕರ ಮಾರ್ಗದಲ್ಲಿ ಕಾದು ಕೊಂಡಿದ್ದನು. ಅರಸನು ಹಾದು ಹೋಗುತ್ತಿರುವಾಗ, ಇವನು ಅರಸನಿಗೆ ಕೂಗಿ ಹೇಳ್ಳಿದ್ದೇನಂದರೆ, ನಿನ್ನ
೩೯ ಸೇವಕನು ಯುದ್ಧದೊಳ್ಳೀಕೆ ಹೊರಟು ಹೋಗಿರುವಾಗ, ಇಗೋ, ಒಬ್ಬ ಮನುಷ್ಯನು ತೊಲಗಿ, ಒಬ್ಬನನ್ನು ನನ್ನ ಬಳಿಗೆ ತಕ್ಕೊಂಡು ಬಂದು, ಈ ಮನುಷ್ಯನನ್ನು ಕಾಯಿ; ಇವನು ಹ್ಯಾಗಾದರೂ ಇಲ್ಲದೆ ಹೋದರೆ, ನಿನ್ನ ಪ್ರಾಣವು ಅವನ ಪ್ರಾಣಕ್ಕೆ ಬದಲಾಗಿರುವದು; ಇಲ್ಲದೆ ನೀನು ಒಂದು ತಲಾಂತು ಬೆಳ್ಳಿಯನ್ನು ಕೊಡ
೪೦ ಬೇಕು, ಅಂದನು. ಆದರೆ ನಿನ್ನ ಸೇವಕನು ಅಲ್ಲಿ ಇಲ್ಲಿ ಕೆಲಸ ಮಾಡುತ್ತಿರುವಾಗ, ಅವನು ಇಲ್ಲದೆ ಹೋದನು, ಅಂದನು. ಇಸ್ರಯೇಲಿನ ಅರಸನು ಅವನಿಗೆ, ನಿನ್ನ ಶಿಕ್ಷೆಕೆ ಹಾಗೆಯೇ ಆಗುವದು; ನೀನೇ ನಿರ್ಣಯಿಸಿದಿ, ಅಂದನು. ಆಗ ಅವನು ಶೀಘ್ರವಾಗಿ ತನ್ನ ಕಣ್ಣುಗಳ ಮೇಲೆ ಇರುವ ಬೂದಿಯನ್ನು ಒರಸಿ ಹಾಕಿ
೪೧ ದ್ದರಿಂದ, ಇಸ್ರಯೇಲಿನ ಅರಸನು ಅವನು ಪ್ರವಾದಿಗಳಲ್ಲಿ ಒಬ್ಬನೆಂದು ತಿಳ್ಳಿ ಕೊಂಡನು. ಮತ್ತು ಇವನು ಅವನಿಗೆ, ಕರ್ತನು
೪೨ ಹೇಳುವದೇನಂದರೆ—ನಾನು ಶಪಿಸಿ, ನಾಶಕ್ಕೆ ಒಪ್ಪಿಸಿದ ಮನುಷ್ಯನನ್ನು ನೀನು ಕೈ ಬಿಟ್ಟು ಹೋಗಲಾಡಿಸಿದ ಕಾರಣ, ಅವನ ಪ್ರಾಣಕ್ಕೆ ಬದಲಾಗಿ ನಿನ್ನ ಪ್ರಾಣವೂ, ಅವನ ಜನಕ್ಕೆ ಬದಲಾ
೪೩ ಗಿ ನಿನ್ನ ಜನವೂ ಹೋಗುವದು, ಅಂದನು. ಆಗ ಇಸ್ರಯೇಲಿನ ಅರಸನು ವ್ಯಸನವನ್ನೂ ಕೋಪವನ್ನೂ ಹೊಂದಿ, ತನ್ನ ಮನೆಗೆ ಹೋಗ ಹೊರಟು, ಸಮಾರ್ಯಕ್ಕೆ ಬಂದನು.

## ೨೧. ಸಂಧಿ.

೧ ಇವುಗಳ ತರುವಾಯ ಏನಾಯಿತಂದರೆ, ಇಜ್ರೇಲಲ್ಲಿ ಸಮಾರ್ಯದ ಅರಸನಾದ ಆಹಾಬನ ಅರಮನೆಯ ಬಳಿಯಲ್ಲಿ ಇಜ್ರೇ
೨ ಲ್ಯನಾದ ನಬೋತನಿಗೆ ಒಂದು ದ್ರಾಕ್ಷೇ ತೋಟವಿತ್ತು. ಮತ್ತು ಅಹಾಬನು ನಬೋತನಿಗೆ, ನಿನ್ನ ದ್ರಾಕ್ಷೇ ತೋಟವು ನನ್ನ ಮನೆಯ ಬಳಿಯಲ್ಲಿ ಇರುವದರಿಂದ, ಅದು ನನಗೆ ಲಲ್ಯದ ತೋಟವಾ



ಗುವ ಹಾಗೆ, ಅದನ್ನು ನನಗೆ ಕೊಡು; ನಾನು ಅದಕ್ಕೆ ಬದಲಾಗಿ
೩ ಅದಕ್ಕಿಂತ ಒಳ್ಳೇ ದ್ರಾಕ್ಷೇ ತೋಟವನ್ನು ನಿನಗೆ ಕೊಡುವೆನು; ಇಲ್ಲವೆ ನಿನ್ನ ಕಣ್ಣುಗಳಿಗೆ ಒಳ್ಳೇದಾಗಿದ್ದರೆ, ಕೊಬ್ಬುದಲ್ಲಿ ಅದರ ಬೆಲೆಯನ್ನು ಕೊಡುವೆನು, ಅಂದನು. ಆದರೆ ನಬೋತನು ಅಹಾಬನಿಗೆ, ನಾನು ನನ್ನ ಪಿತೃಗಳ ಬಾಧ್ಯತೆಯನ್ನು ನಿನಗೆ ಕೊಡುವದನ್ನು ಕರ್ತನು ನನಗೆ ದೂರವಾಗ ಮಾಡಲಿ, ಅಂದನು.

೪ ನಾನು ನನ್ನ ಪಿತೃಗಳ ಬಾಧ್ಯತೆಯನ್ನು ನಿನಗೆ ಕೊಡುವದಿಲ್ಲವೆಂದು, ಇಜ್ರೇಲ್ಯನಾದ ನಬೋತನು ಹೇಳ್ಳಿದ ಮಾತಿಗೋಸ್ಕರ ಅಹಾಬನು ವ್ಯಸನವನ್ನೂ ಕೋಪವನ್ನೂ ಹೊಂದಿ, ತನ್ನ ಮನೆಗೆ ಬಂದು, ತನ್ನ ಮಂಚದ ಮೇಲೆ ಮಲಗಿ, ತನ್ನ ಮುಖವನ್ನು
೫ ತಿರುಗಿಸಿ ಕೊಂಡು, ಕೊಟ್ಟಿ ತಿನ್ನದೆ ಇದ್ದನು. ಆಗ ಅವನ ಹೆಂಡತಿಯಾದ ಇಜೆಬೇಲಳು ಅವನ ಬಳಿಗೆ ಬಂದು, ಅವನಿಗೆ, ನೀನು ಕೊಟ್ಟಿ ತಿನ್ನದ ಹಾಗೆ, ನಿನ್ನ ಆತ್ಮ ವ್ಯಸನವುಳ್ಳದ್ದಾಗಿರುವದೇನು! ಅಂದಳು. ಅವನು ಅವಳಿಗೆ, ಹೇಳ್ಳಿದ್ದೇನಂದರೆ—ಯಾಕಂದರೆ ನಾನು ಇಜ್ರೇಲ್ಯನಾದ ನಬೋತನ ಸಂಗಡ ಮಾತಾಡಿ, ನಿನ್ನ
೬ ದ್ರಾಕ್ಷೇ ತೋಟವನ್ನು ನನಗೆ ಕ್ರಯಕ್ಕೆ ಕೊಡು; ಇಲ್ಲವೆ ನಿನಗೆ ಮನಸ್ಸಿದ್ದರೆ, ಅದಕ್ಕೆ ಬದಲಾಗಿ ಬೇರೆ ದ್ರಾಕ್ಷೇ ತೋಟವನ್ನು ಕೊಡುವೆನೆಂದು, ಅವನಿಗೆ ಹೇಳ್ಳಿದೆನು. ಅದಕ್ಕವನು, ನನ್ನ ದ್ರಾಕ್ಷೇ ತೋಟವನ್ನು ಕೊಡೆನು, ಅಂದನು.

೭ ಆಗ ಅವನ ಹೆಂಡತಿಯಾದ ಇಜೆಬೇಲಳು ಅವನಿಗೆ, ನೀನು ಈಗ ಇಸ್ರಯೇಲಿನ ರಾಜ್ಯವನ್ನು ಆಳುತ್ತಾ ಇದ್ದೀಯಾ! ಎದ್ದು, ಕೊಟ್ಟಿ ತಿನ್ನು; ನಿನ್ನ ಹೃದಯ ಸಂತೋಷವಾಗಿರಲಿ. ನಾನೇ ಇಜ್ರೇಲ್ಯನಾದ ನಬೋತನ ದ್ರಾಕ್ಷೇ ತೋಟವನ್ನು ನಿನಗೆ ಕೊಡು
೮ ವೆನು, ಅಂದಳು. ಅವಳು ಅಹಾಬನ ಹೆಸರಿನಲ್ಲಿ ಪತ್ರಿಕೆಗಳನ್ನು ಬರೆದು, ಅವುಗಳಿಗೆ ಅವನ ಮುದ್ರೆ ಹಾಕಿ, ಆ ಪತ್ರಿಕೆಗಳನ್ನು ನಬೋತನ ಸಂಗಡ ಅವನ ಪಟ್ಟಣದಲ್ಲಿ ವಾಸವಾಗಿರುವ ಹಿರಿಯರು
೯ ಗೂ ಶ್ರೇಷ್ಠರಿಗೂ ಕಳುಹಿಸಿದಳು. ಅವಳು ಪತ್ರಿಕೆಗಳಲ್ಲಿ ಬರೆದದ್ದೇನಂದರೆ, ನೀವು ಉಪವಾಸವನ್ನು ಪ್ರಕಟ ಮಾಡಿ, ನಬೋ
೧೦ ತನನ್ನು ಜನರೊಳಗೆ ಉನ್ನತ ಸ್ಥಾನದಲ್ಲಿ ಇರಿಸಿ, ನೀನು ದೇವರನ್ನೂ ಅರಸನನ್ನೂ ದೂಷಿಸಿದಿ ಎಂದು, ಅವನಿಗೆ ವಿರೋಧವಾಗಿ ಸಾಕ್ಷಿ ಹೇಳ್ಳ ಅವನ ಮುಂದೆ ಬೆಲಿಯಾಳ್ಳನ ಮಕ್ಕಳಾದ ಇಬ್ಬರು ಮನುಷ್ಯರನ್ನು ನಿಲ್ಲಿಸಿರಿ; ತರುವಾಯ ಅವನನ್ನು ಹೊರಗೆ ಬೈದು, ಅವನು ಸಾಯುವ ಹಾಗೆ, ಕಲ್ಲೆಸೆಯಿರಿ, ಅಂದಳು.

೧೧ ಆಗ ಅವನ ಪಟ್ಟಣದ ಮನುಷ್ಯರೂ ಅವನ ಪಟ್ಟಣದ ನಿವಾಸಿಗಳೂ ಆದ ಹಿರಿಯರೂ ಶ್ರೇಷ್ಠರೂ ಇಜೆಬೇಲಳು ಅವರಿಗೆ ಕಳುಹಿಸಿದ ಪ್ರಕಾರವೂ, ಅವಳು ಅವರ ಬಳಿಗೆ ಕಳುಹಿಸಿದ ಪತ್ರಿಕೆಗಳ
೧೨ ಪ್ರಕಾರವೂ ಮಾಡಿದರು. ಅವರು ಉಪವಾಸವನ್ನು ಪ್ರಕಟಿ ಮಾಡಿ, ನಬೋತನನ್ನು ಜನರೊಳಗೆ ಉನ್ನತ ಸ್ಥಾನದಲ್ಲಿ ಇರಿಸಿದರು.
೧೩ ಆಗ ಬೆಲಿಯಾಳ್ಳನ ಮಕ್ಕಳಾದ ಇಬ್ಬರು ಮನುಷ್ಯರು ಬಂದು, ಅವನಿಗೆದುರಾಗಿ ಕುಳಿತು ಕೊಂಡರು; ಈ ಬೆಲಿಯಾಳ್ಳನ ಮನುಷ್ಯರು ಜನರ ಸಮುಖದಲ್ಲಿ ನಬೋತನಿಗೆ ವಿರೋಧವಾಗಿ, ಈ ನಬೋತನು ದೇವರನ್ನೂ ಅರಸನನ್ನೂ ದೂಷಿಸಿದನೆಂದು ಸಾಕ್ಷಿ ಹೇಳ್ಳಿದರು. ಆಗ ಅವನನ್ನು ಪಟ್ಟಣದ ಹೊರಗೆ ತಕ್ಕೊಂಡು ಹೋಗಿ, ಅವನು ಸಾಯುವ ಹಾಗೆ, ಅವರು ಅವನನ್ನು ಕಲ್ಲೀ
೧೪ ಲೆಸೆದರು. ಮತ್ತು ಅವರು ಇಜೆಬೇಲಳಿಗೆ, ನಬೋತನು ಕಲ್ಲೆಸೆಯಲ್ಪಟ್ಟು, ಸತ್ತನೆಂದು, ಹೇಳ್ಳಿ ಕಳುಹಿಸಿದರು.
೧೫ ನಬೋತನು ಕಲ್ಲೆಸೆಯಲ್ಪಟ್ಟು ಸತ್ತಿದ್ದಾನೆಂದು, ಇಜೆಬೇಲಳು ಕೇಳ್ಳಿದಾಗ, ಅವಳು ಅಹಾಬನಿಗೆ, ನೀನೆದ್ದು, ಇಜ್ರೇಲ್ಯನಾದ ನಬೋತನು ಬೆಲೆಗೆ ಕೊಡ ಸಮ್ಮತಿಸದ ದ್ರಾಕ್ಷೇ ತೋಟವನ್ನು ಸ್ವತಂತ್ರಿಸಿಕೋ; ಯಾಕಂದರೆ ನಬೋತನು ಜೀವದಿಂದಿಲ್ಲ, ಸತ್ತಿದ್ದಾನೆ, ಅಂದಳು. ನಬೋತನು ಸತ್ತನೆಂದು ಅಹಾಬನು ಕೇಳ್ಳಿದಾಗ, ಅವನೆದ್ದು, ಇಜ್ರೇಲ್ಯನಾದ ನಬೋತನ ದ್ರಾಕ್ಷೇ ತೋಟವನ್ನು ಸ್ವತಂತ್ರಿಸಿ ಕೊಳ್ಳ ಹೋದನು.

೧೭ ಆಗ ಕರ್ತನ ವಾಕ್ಯವು ತಿಷ್ಬಿಯನಾದ ಎಲೀಯನಿಗೆ ಉಂಟಾಗಿ ಹೇಳ್ಳಿದ್ದೇನಂದರೆ—ನೀನೆದ್ದು, ಸಮಾರ್ಯದಲ್ಲಿರುವ ಇಸ್ರಯೇಲಿನ ಅರಸನಾದ ಅಹಾಬನಿಗೆದುರಾಗಿ ಹೋಗು; ಇಗೋ, ಅವನು
೧೮ ನಬೋತನ ದ್ರಾಕ್ಷೇ ತೋಟದಲ್ಲಿದ್ದಾನೆ; ಅದನ್ನು ಸ್ವತಂತ್ರಿಸಿ ಕೊಳ್ಳ ಅಲ್ಲಿಗೆ ಹೋಗಿದ್ದಾನೆ. ನೀನು ಅವನಿಗೆ ಹೇಳ ಬೇಕಾದದ್ದೇನಂದರೆ—ನೀನು ಕೊಂದು ಹಾಕಿ, ಸ್ವತಂತ್ರಿಸಿ ಕೊಂಡಿಯೋ! ಇದಲ್ಲದೆ ನೀನು ಅವನಿಗೆ, ನಾಯಿಗಳು ನಬೋತನ ರಕ್ತವನ್ನು ನೆಕ್ಕಿದ ಸ್ಥಳದಲ್ಲೇ ನಾಯಿಗಳು ನಿನ್ನ ರಕ್ತವನ್ನು, ನಿಶ್ಚಯವಾಗಿ ನಿನ್ನದನ್ನು, ನೆಕ್ಕುವವೆಂದು, ಕರ್ತನು ಹೇಳುತ್ತಾನೆಂದು ಹೇಳ್ಳಿ.

೧೯ ಆಗ ಅಹಾಬನು ಎಲೀಯನಿಗೆ, ನನ್ನ ಶತ್ರುವೇ, ನೀನು ನನ್ನನ್ನು ಕಂಡು ಕೊಂಡಿಯಾ! ಅದಕ್ಕವನು, ಕಂಡು ಕೊಂಡೆನು;
೨೦ ನೀನು ಕರ್ತನ ಸಮುಖದಲ್ಲಿ ಕೇಡನ್ನು ಮಾಡ ನಿನ್ನನ್ನು ಒಪ್ಪಿಸಿದ್ದರಿಂದ, ಇಗೋ, ನಾನು ನಿನ್ನ ಮೇಲೆ ಕೇಡನ್ನು ಬರ ಮಾಡಿ, ನಿನ್ನ ಸಂತತಿಯನ್ನು ತೆಗೆದು ಹಾಕಿ, ಅಹಾಬನಿಗೆ ಒಬ್ಬ ಗಂಡು
೨೧ ಸಾದರೂ, ಇಸ್ರಯೇಲಿನಲ್ಲಿ ಬಚ್ಚಿಕಲ್ಪಟ್ಟವನಾದರೂ ಉಳಿದವನಾದರೂ ಇರದ ಹಾಗೆ, ಕಡಿದು ಬಿಡುವೆನು. ನೀನು ನನಗೆ ಎಬ್ಬಿಸಿದ ಕಕೆಕಕೆಯ ನಿಮಿತ್ತವೂ, ಇಸ್ರಯೇಲನ್ನು ಪಾಪ ಮಾಡಿಸಿದ ನಿಮಿತ್ತವೂ, ನಾನು ನಿನ್ನ ಮನೆಯನ್ನು ನೆಬಾಟನ ಮಗನಾದ
೨೨ ಯೆರೊಬಾಮನ ಮನೆಯ ಹಾಗೆಯೂ ಅಹೀಯನ ಮಗನಾದ ಬಾಷನ ಮನೆಯ ಹಾಗೆಯೂ ಮಾಡುವೆನು, ಅಂದನು. ಮತ್ತು ಇಜೆಬೇಲಳನ್ನು ಕುರಿತು ಕರ್ತನು ಹೇಳ್ಳಿದ್ದೇನಂದರೆ—ನಾಯಿಗಳು ಇಜೆಬೇಲಳನ್ನು ಇಜ್ರೇಲಿನ ಆಲಂಗದ ಬಳಿಯಲ್ಲಿ ತಿನ್ನುವವು,
೨೩ ಅಹಾಬನವರಲ್ಲಿ ಪಟ್ಟಣದೊಳಗೆ ಯಾವನು ಸಾಯುವನೋ, ಅವನನ್ನು ನಾಯಿಗಳು ತಿನ್ನುವವು; ಹೊರಗೆ ಸಾಯುವವನನ್ನು ಆಕಾಶದ ಪಕ್ಷಿಗಳು ತಿನ್ನುವವು.

೨೫ ಆದರೆ ತನ್ನ ಹೆಂಡತಿಯಾದ ಇಜೆಬೇಲಳಿಂದ ಪ್ರೇರೇಪಿಸಲ್ಪಟ್ಟು, ಕರ್ತನ ಸಮುಖದಲ್ಲಿ ಕೆಟ್ಟತನವನ್ನು ಮಾಡ ತನ್ನನ್ನು
೨೬ ಮಾರಿ ಬಿಟ್ಟ ಅಹಾಬನ ಹಾಗೆ ಯಾವನೂ ಇಲ್ಲ. ಇದಲ್ಲದೆ ಕರ್ತನು ಇಸ್ರಯೇಲಿನ ಮಕ್ಕಳ ಮುಂದೆ ಹೊರಡಿಸಿ ಬಿಟ್ಟ ಅಮೋರ್ಯರು ಮಾಡಿದ ಎಲ್ಲಾದರ ಪ್ರಕಾರ ಅವನು ಮೂರ್ತಿ ದೇವರುಗಳನ್ನು ಹಿಂಬಾಲಿಸಿದ್ದರಿಂದ, ಅಸಹ್ಯವಾಗಿ ನಡೆದನು.

೨೭ ಆದರೆ ಅಹಾಬನು ಈ ಮಾತುಗಳನ್ನು ಕೇಳ್ಳಿದಾಗ, ಏನಾಯಿತಂದರೆ, ಅವನು ತನ್ನ ವಸ್ತ್ರಗಳನ್ನು ಹರಿದು, ತನ್ನ ಮಾಂಸದ ಮೇಲೆ ಗೋಣಿಯನ್ನು ಹಾಕಿ ಕೊಂಡು, ಉಪವಾಸ ಮಾಡಿ
೨೮ ಗೋಣಿಯಲ್ಲಿ ಮಲಗಿ ಕೊಂಡು, ಮೆಲ್ಲಗೆ ನಡೆದನು. ಆಗ ಕರ್ತನ ವಾಕ್ಯವು ತಿಷ್ಬಿಯನಾದ ಎಲೀಯನಿಗೆ ಉಂಟಾಗಿ ಹೇಳ್ಳಿದ್ದೇ
೨೯ ನಂದರೆ, ಅಹಾಬನು ನನ್ನ ಮುಂದೆ ತನ್ನನ್ನು ತಗ್ಗಿಸಿದ್ದನ್ನು ಕಂಡಿ

ಯಾ! ಅವನು ನನ್ನ ಮುಂದೆ ತನ್ನನ್ನು ತಗ್ಗಿಸಿದ್ದರಿಂದ, ನಾನು ಅವನ ದಿವಸಗಳಲ್ಲಿ ಆ ಕೇಡನ್ನು ಬರ ಮಾಡದೆ, ಅವನ ಮಗನ ದಿವಸಗಳಲ್ಲಿ ಕೇಡನ್ನು ಅವನ ಮನೆಯ ಮೇಲೆ ಬರ ಮಾಡುವೆನು.

## ೨೨. ಸಂಧಿ.

೧ ೧ ಅದಕೆ ಅರಾಮ್ಯರಿಗೂ ಇಸ್ರಯೇಲ್ಯರಿಗೂ ಮೂರು ವರುಷ ೨ ಯುದ್ಧವಿಲ್ಲದೆ ಇತ್ತು. ಮೂರನೇ ವರುಷದಲ್ಲಿ ಏನಾಯಿತಂದರೆ, ಯೆಹೂದದ ಅರಸನಾದ ಯೆಹೋಷಫಾಟನು ಇಸ್ರಯೇಲಿನ ಅ ೩ ರಸನ ಬಳಿಗೆ ಬಂದನು. ಇಸ್ರಯೇಲಿನ ಅರಸನು ತನ್ನ ಸೇವಕ ರಿಗೆ, ಗಿಲ್ಯಾದಿನಲ್ಲಿರುವ ರಮೋತು ನಮ್ಮದೆಂದು ಅರಿಯಿರಾ! ನಾವು ಅದನ್ನು ಅರಾಮಿನ ಅರಸನ ಕೈಯಿಂದ ತೆಗೆದು ಕೊಳ್ಳ ೪ ದೆ ಸುಮ್ಮನೆ ಇದ್ದೇವೆ, ಅಂದನು. ಆಗ ಅವನು ಯೆಹೋಷಫಾ ಟನಿಗೆ, ನೀನು ಗಿಲ್ಯಾದಿನಲ್ಲಿರುವ ರಮೋತಿನ ಮೇಲೆ ಯುದ್ಧ ಮಾಡ ನನ್ನ ಸಂಗಡ ಬರುತ್ತೀಯಾ! ಅಂದನು. ಯೆಹೋಷ ಫಾಟನು ಇಸ್ರಯೇಲಿನ ಅರಸನಿಗೆ, ನಿನ್ನ ಹಾಗೆ ನಾನು, ನಿನ್ನ ಜನರ ಹಾಗೆ ನನ್ನ ಜನರು, ನಿನ್ನ ಕುದುರೆಗಳ ಹಾಗೆ ನನ್ನ ಕು ದುರೆಗಳು, ಅಂದನು.

೫ ೫ ಅದಕೆ ಯೆಹೋಷಫಾಟನು ಇಸ್ರಯೇಲನ ಅರಸನಿಗೆ, ನೀನು ದಯ ಮಾಡಿ, ಇಂದು ಕರ್ತನ ವಾಕ್ಯವನ್ನು ವಿಚಾರಿಸು, ಅಂದ ೬ ನು. ಆಗ ಇಸ್ರಯೇಲಿನ ಅರಸನು ಹೆಚ್ಚು ಕಡಿಮೆ ನಾನೂರು ಮಂದಿ ಪ್ರವಾದಿಗಳನ್ನು ಕೂಡಿಸಿ, ನಾನು ಗಿಲ್ಯಾದಿನಲ್ಲಿರುವ ರಮೋತಿನ ಮೇಲೆ ಯುದ್ಧಕ್ಕೆ ಹೋಗ ಬಹುದೋ! ಬೇಡವೋ! ಎಂದು ಅವರನ್ನು ಕೇಳಿದನು. ಅದಕ್ಕವರು, ಹೋಗು; ಕರ್ತನು ಅದನ್ನು ಅರಸನ ಕೈಯಲ್ಲಿ ಒಪ್ಪಿಸಿ ಕೊಡುವನು.

೭ ೭ ಅದಕೆ ಯೆಹೋಷಫಾಟನು, ಇವರು ಹೊರ್ತಾಗಿ, ನಾವು ಅ ವನಿಂದ ವಿಚಾರಿಸುವ ಹಾಗೆ, ಇಲ್ಲಿ ಕರ್ತನ ಪ್ರವಾದಿಯು ಯಾ ೮ ವನೂ ಇಲ್ಲವೋ! ಅಂದನು. ಆಗ ಇಸ್ರಯೇಲಿನ ಅರಸನು ಯೆಹೋಷಫಾಟನಿಗೆ, ನಾವು ಅವನಿಂದ ಕರ್ತನ ಬಳಿಯ ವಿಚಾ ರಿಸುವ ಹಾಗೆ, ಇಮ್ಲನ ಮಗನಾದ ಮಿಕಾಯನೆಂಬ ಇನ್ನೊಬ್ಬ ನಿದ್ದಾನೆ; ಆದರೆ ನಾನು ಅವನನ್ನು ಹಗೆ ಮಾಡುತ್ತೇನೆ; ಯಾ ಕಂದರೆ ಅವನು ನನ್ನನ್ನು ಕುರಿತು ಒಳ್ಳೇದನಲ್ಲ, ಕೆಟ್ಟದ್ದನ್ನು ಪ್ರವಾದಿಸುತ್ತಾನೆ, ಅಂದನು. ಅದಕ್ಕೆ ಯೆಹೋಷಫಾಟನು ಅರ ಸನು ಹಾಗೆ ಅನ್ನದಿರಲಿ, ಅಂದನು.

೯ ೯ ಆಗ ಇಸ್ರಯೇಲಿನ ಅರಸನು ಒಬ್ಬ ನಪುಂಸಕನನ್ನು ಕರೆದು, ಇಮ್ಲನ ಮಗನಾದ ಮಿಕಾಯನನ್ನು ಶೀಘ್ರವಾಗಿ ಕರ ಕೊಂಡು ೧೦ ಬಾ, ಅಂದನು. ಅದರೆ ಇಸ್ರಯೇಲಿನ ಅರಸನೂ ಯೆಹೂದದ ಅರಸನಾದ ಯೆಹೋಷಫಾಟನೂ ವಸ್ತ್ರಗಳನ್ನು ಧರಿಸಿ ಕೊಂ ಡು, ಸಮಾರ್ಯದ ಬಾಗಲ ಮುಂದಣ ಕಣದಲ್ಲಿ ತನ್ನ ತನ್ನ ಸಿಂಹಾಸನದ ಮೇಲೆ ಕುಳಿತಿದ್ದರು; ಸಕಲ ಪ್ರವಾದಿಗಳೂ ಅವರ ೧೧ ಮುಂದೆ ಪ್ರವಾದಿಸಿದರು. ಆಗ ಕೆನಾನನ ಮಗನಾದ ಚಿದ್ಕೀಯ ನು ತನಗೆ ಕಬ್ಬಿಣದ ಕೊಂಬುಗಳನ್ನು ಮಾಡಿ ಕೊಂಡು, ಇವು ಗಳಿಂದ ನೀನು ಅರಾಮ್ಯರನ್ನು ನಿರ್ಮೂಲ ಮಾಡುವ ಮಟ್ಟಿಗೂ ೧೨ ಇರದು ಹಾಕುವಿ ಎಂದು, ಕರ್ತನು ಹೇಳುತ್ತಾನೆ, ಅಂದನು. ಸ ಮಸ್ತ ಪ್ರವಾದಿಗಳೂ ಹಾಗೆಯೇ ಪ್ರವಾದಿಸಿ, ಗಿಲ್ಯಾದಿನ ರಮೋ ತಿಗೆ ಹೋಗಿ, ಸಾಫಲ್ಯ ಹೊಂದು; ಕರ್ತನು ಅದನ್ನು ಅರಸನ ಕೈಯಲ್ಲಿ ಒಪ್ಪಿಸಿ ಕೊಡುವನು, ಅಂದರು.

೧೩ ೧೩ ಅದರೆ ಮಿಕಾಯನನ್ನು ಕರೆಯ ಹೋದ ದೂತನು ಅವನಿಗೆ ಇಗೋ, ಪ್ರವಾದಿಗಳ ವಾಕ್ಯಗಳು ಒಂದೇ ಬಾಯಿಯಿಂದ ಅರಸ ನಿಗೆ ಒಳ್ಳೇವಾಗಿವೆ; ನಿನ್ನ ವಾಕ್ಯವು ಅವರಲ್ಲಿರುವ ಒಬ್ಬನ ವಾ ೧೪ ಕ್ಯದ ಹಾಗೆಯೇ ಇರಲಿ; ಒಳ್ಳೇ ಮಾತು ಆಡು, ಅಂದನು. ಅದ ಕ್ಕೆ ಮಿಕಾಯನು, ಕರ್ತನ ಜೀವದಾಣೆ—ಕರ್ತನು ನನಗೆ ಏನು ಹೇಳುವನೋ ಅದನ್ನು ಮಾತಾಡುವೆನು, ಅಂದನು. ಅವನು ಅ ರಸನ ಬಳಿಗೆ ಬಂದನು.

೧೫ ೧೫ ಅರಸನು ಅವನಿಗೆ, ಮಿಕಾಯನೇ, ನಾವು ಗಿಲ್ಯಾದಿನಲ್ಲಿರುವ ರಮೋತಿನ ಮೇಲೆ ಯುದ್ಧಕ್ಕೆ ಹೋಗ ಬಹುದೋ! ಹೋಗ ಬೇ ಡವೋ! ಅಂದನು. ಇವನು ಪ್ರತ್ಯುತ್ತರವಾಗಿ, ಹೋಗಿ, ಸಾಫಲ್ಯ ಹೊಂದು; ಕರ್ತನು ಅದನ್ನು ಅರಸನ ಕೈಯಲ್ಲಿ ಒಪ್ಪಿಸಿ ಕೊಡು ೧೬ ವನು, ಅಂದನು. ಆಗ ಅರಸನು ಅವನಿಗೆ, ನೀನು ಕರ್ತನ ಹೆಸರಿ ನಲ್ಲಿ ಸತ್ಯವನ್ನಲ್ಲದೆ, ಬೇರೊಂದು ನನಗೆ ಹೇಳಿ ಬಾರದೆಂದು, ನಾ ೧೭ ನು ಎಷ್ಟು ಸಾರಿ ನಿನಗೆ ಆಣೆ ಇಡ ಬೇಕು! ಅಂದನು. ಅದಕ್ಕವ ನು, ಕಾಯುವವನಿಲ್ಲದ ಕುರಿಗಳ ಹಾಗೆಯೇ ಬೆಟ್ಟಗಳ ಮೇಲೆ ಚದರಲ್ಪಟ್ಟ ಸಮಸ್ತವಾದ ಇಸ್ರಯೇಲನ್ನು ನೋಡಿದೆನು. ಆಗ ಕರ್ತನು, ಇವರಿಗೆ ಯಜಮಾನನು ಇಲ್ಲ; ಪ್ರತಿ ಮನುಷ್ಯನು ತ ನ್ನ ತನ್ನ ಮನೆಗೆ ಸಮಾಧಾನವಾಗಿ ತಿರುಗಿ ಹೋಗಲಿ, ಅಂದನು.

೧೮ ೧೮ ಆಗ ಇಸ್ರಯೇಲಿನ ಅರಸನು ಯೆಹೋಷಫಾಟನಿಗೆ, ಇವನು ನನ್ನನ್ನು ಕುರಿತು ಒಳ್ಳೇದನ್ನಲ್ಲ, ಕೆಟ್ಟದ್ದನ್ನೇ ಪ್ರವಾದಿಸುವನೆಂ ದು, ನಾನು ನಿನಗೆ ಹೇಳಿಲ್ಲವೇ! ಅಂದನು.

೧೯ ೧೯ ಮತ್ತು ಮಿಕಾಯನು ಹೇಳಿದ್ದೇನಂದರೆ—ಅದರಿಂದ ಕರ್ತನ ವಾಕ್ಯವನ್ನು ಕೇಳು. ಕರ್ತನು ತನ್ನ ಸಿಂಹಾಸನದ ಮೇಲೆ ಕುಳಿ ತು ಕೊಂಡಿರುವದನ್ನೂ ಆಕಾಶದ ಸಮಸ್ತ ಸೈನ್ಯವು ಅವನ ಬ ಲಪಾರ್ಶ್ವದಲ್ಲಿಯೂ, ಎಡಪಾರ್ಶ್ವದಲ್ಲಿಯೂ ನಿಂತಿರುವದನ್ನೂ ೨೦ ನೋಡಿದೆನು. ಆಗ ಕರ್ತನು, ಆಹಾಬನು ಹೋಗಿ, ಗಿಲ್ಯಾದಿನ ರಮೋತಿನ ಬಳಿಯಲ್ಲಿ ಬೀಳುವ ಹಾಗೆ, ಅವನನ್ನು ಮರುಳು ೨೧ ಗೊಳಿಸುವವನ್ಯಾರು! ಅಂದನು. ಒಬ್ಬನು ಹೀಗೆಯೂ, ಮತ್ತೊ ಬ್ಬನು ಹಾಗೆಯೂ ಹೇಳುತ್ತಿರುವಾಗ, ಒಂದು ಆತ್ಮವು ಹೊರಟು ಬಂದು, ಕರ್ತನ ಮುಂದೆ ನಿಂತು, ನಾನು ಅವನನ್ನು ಮರುಳು ೨೨ ಗೊಳಿಸುತ್ತೇನೆ, ಅಂದಿತು. ಆಗ ಕರ್ತನು ಅದಕ್ಕೆ, ಯಾವದರಿಂ ದ! ಅಂದನು. ಅದು, ನಾನು ಹೊರಟು, ಅವನ ಎಲ್ಲಾ ಪ್ರವಾದಿಗ ಳ ಬಾಯಿಯಲ್ಲಿ ಅಪಧ್ಯವಾದ ಆತ್ಮನಾಗಿರುವೆನು, ಅಂದಿತು. ೲ3 ಅದಕ್ಕೆ ಆತನು, ನೀನು ಅವನನ್ನು ಮರುಳು ಗೊಳಿಸುವಿ, ಮ ತ್ತು ಜಯಿಸುವಿ. ಹೋಗಿ, ಹಾಗೆ ಮಾತು, ಅಂದನು. ಆದರರಿಂ ದ, ಇಗೋ, ಈಗ ಕರ್ತನು ಈ ಸಮಸ್ತವಾದ ನಿನ್ನ ಪ್ರವಾದಿಗ ಳ ಬಾಯಿಯಲ್ಲಿ ಅಪಧ್ಯವಾದ ಆತ್ಮವನ್ನು ಇಟ್ಟಿದ್ದಾನೆ; ಇದಲ್ಲದೆ ಕರ್ತನು ನಿನ್ನನ್ನು ಕುರಿತು ಕೇಡನ್ನು ಹೇಳಿದ್ದಾನೆ, ಅಂದನು.

ೲ೪ ೲ೪ ಆಗ ಕೆನಾನನ ಮಗನಾದ ಚಿದ್ಕೀಯನು ಸವಿಾಪಕ್ಕೆ ಬಂ ದು, ಮಿಕಾಯನ ಕೆನ್ನೆಯ ಮೇಲೆ ಹೊಡೆದು, ಕರ್ತನ ಆತ್ಮವು ನನ್ನನ್ನು ಬಿಟ್ಟು, ನಿನ್ನ ಸಂಗಡ ಮಾತಾಡ ಯಾವ ಮಾರ್ಗ ವಾಗಿ ಬಂತು! ಅಂದನು. ಅದಕ್ಕೆ ಮಿಕಾಯನು, ಇಗೋ, ನಿನ್ನ ನ್ನು ಬಚ್ಚಿಟ್ಟು ಕೊಳ್ಳ ಬಳ್ಳ ಕೊಠಡಿಯೊಳಗೆ ನೀನು ಹೋಗು ವ ದಿವಸದಲ್ಲಿ ನೋಡುವಿ, ಅಂದನು.



ೲ೬ ೲ೬ ಆಗ ಇಸ್ರಯೇಲಿನ ಅರಸನು ಹೇಳಿದ್ದೇನಂದರೆ—ಮಿಕಾಯ ನನ್ನು ಹಿಡಿದು, ಪಟ್ಟಣದ ಅಧಿಪತಿಯಾದ ಆಮೋನನ ಬಳಿಗೂ ಅ ೲ೭ ರಸನ ಮಗನಾದ ಯೊವಾಷನ ಬಳಿಗೂ ಅವನನ್ನು ಹಿಂದಕ್ಕೆ ಮೈದು, ನೀವು ಇವನನ್ನು ಕೆಲಮನೆಯಲ್ಲಿಟ್ಟು, ನಾನು ಸಮಾಧಾ ನವಾಗಿ ತಿರಿಗಿ ಬರುವ ಮಟ್ಟಿಗೂ, ಅವನಿಗೆ ಬಾಧೆಯ ಕೊಟ್ಟಿ ಯನ್ನೂ ಬಾಧೆಯ ನೀರನ್ನೂ ಕೊಡಿರಿ ಎಂದು ಅರಸನು ಹೇ ೲ೮ ಳುತ್ತಾನೆಂದು, ಹೇಳಿರಿ. ಅದಕ್ಕೆ ಮಿಕಾಯನು, ನೀನು ಸಮಾ ಧಾನದಿಂದ ತಿರಿಗಿ ಬರಲೇ ಬಂದರೆ, ಕರ್ತನು ನನ್ನ ಮುಖಾಂತರ ಮಾತಾಡಿದ್ದಿಲ್ಲ, ಎಂಥೇಳಿ, ಜನರೇ, ನೀವೆಲ್ಲರೂ ಕೇಳಿರಿ, ಅಂ ದನು.

ೲ೯ ೲ೯ ಹೀಗೆಯೇ ಇಸ್ರಯೇಲಿನ ಅರಸನೂ ಯೆಹೂದದ ಅರಸನಾ ದ ಯೆಹೋಷಫಾಟನೂ ಗಿಲ್ಯಾದಿನ ರಮೋತಿಗೆ ಹೋದರು. ೳ೦ ಆಗ ಇಸ್ರಯೇಲಿನ ಅರಸನು ಯೆಹೋಷಫಾಟನಿಗೆ, ನಾನು ನ ನ್ನನ್ನು ಮಾಜಿ, ಯುದ್ಧದೊಳಗೆ ಪ್ರವೇಶಿಸುವೆನು; ಆದರೆ ನೀನು ನಿನ್ನ ವಸ್ತ್ರಗಳನ್ನು ಧರಿಸಿ ಕೊಂಡಿರು, ಅಂದನು. ಹಾಗೆಯೇ ಇಸ್ರಯೇಲಿನ ಅರಸನು ತನ್ನನ್ನು ಮಾಜಿ, ಯುದ್ಧಕ್ಕೆ ಹೋದ ೳ೧ ನು. ಆದರೆ ಅರಾಮಿನ ಅರಸನು ತನ್ನ ರಥಗಳ ಮೇಲೆ ಅಧಿಕಾ ರವುಳ್ಳ ಮೂವತ್ತೆರಡು ಮಂದಿ ಪ್ರಧಾನರಿಗೆ, ನೀವು ಹಿರಿ ಕಿರಿ ಯರ ಸಂಗಡ ಯುದ್ಧ ಮಾಡದೆ, ಇಸ್ರಯೇಲಿನ ಅರಸನ ಸಂಗಡ ೳ೨ ಶೇ ಯುದ್ಧ ಮಾಡಿರಿ, ಎಂದು ಆಜ್ಞಾಪಿಸಿದ್ದನು. ಆದದರಿಂದ ರಥಾ ಧಿಪತಿಗಳು ಯೆಹೋಷಫಾಟನನ್ನು ನೋಡಿದಾಗ, ನಿಶ್ಚಯವಾಗಿ ಇವನು ಇಸ್ರಯೇಲಿನ ಅರಸನೆಂದು ಹೇಳಿ, ಅವನ ಸಂಗಡ ಯು ದ್ಧ ಮಾಡುವದಕ್ಕೆ ತಿರುಗಿ ಕೊಂಡರು; ಆಗ ಯೆಹೋಷಫಾಟನು ೲ3 ಕೂಗಿದನು. ಅವನು ಇಸ್ರಯೇಲಿನ ಅರಸನಲ್ಲವೆಂದು, ರಥಾಧಿ ೳ೪ ಪತಿಗಳು ನೋಡಿದಾಗ, ಅವನನ್ನು ಬಿಟ್ಟು, ತಿರುಗಿದರು. ಆದರೆ ಒಬ್ಬ ಮನುಷ್ಯನು ಸುಮ್ಮನೆ ಬಿಲ್ಲಿಗೆ ಬಾಣವನ್ನೇರಿಸಿ, ಇಸ್ರಯೇ ಲಿನ ಅರಸನನ್ನು ಜಿರಾಭತ್ತರ ಸಂದುಗಳಲ್ಲಿ ಹೊಡೆದನು; ಆದ ದರಿಂದ ಅವನು ತನ್ನ ಸಾರಥಿಗೆ, ನೀನು ರಥವನ್ನು ತಿರುಗಿಸಿ, ನನ್ನನ್ನು ಸೈನ್ಯದೊಳಗಿಂದ ಆಚೇ ಕಡೆಗೆ ವೈಯಿ; ಯಾಕಂದರೆ ೳ೫ ನಾನು ಘಾಯ ಪಟ್ಟಿದ್ದೇನೆ, ಅಂದನು. ಆ ದಿವಸ ಯುದ್ಧವು ಬಲವಾದದರಿಂದ, ಅರಸನು ಅರಾಮ್ಯರಿಗೆದುರಾಗಿ ರಥದ ಮೇಲೆ ನಿಲ್ಲಿಸಲ್ಪಟ್ಟು, ಸಾಯಂಕಾಲದಲ್ಲಿ ಸತ್ತು ಹೋದನು; ಆದರೆ ಆ ೳ೬ ಘಾಯದ ರಕ್ತವು ರಥದ ಮಧ್ಯದಲ್ಲಿ ಹರಿಯಿತು. ಸೂರ್ಯ ಮುಣುಗುವಾಗ, ಪ್ರತಿ ಮನುಷ್ಯನು ತನ್ನ ತನ್ನ ಪಟ್ಟಣಕ್ಕೂ ಪ್ರ ತಿ ಮನುಷ್ಯನು ತನ್ನ ತನ್ನ ದೇಶಕ್ಕೂ ಹೋಗಲಿ ಎಂದು, ದಂ ೳ೭ ದಿನಲ್ಲಿ ಪ್ರಕಟ ಮಾಡಲ್ಪಟ್ಟಿತು. ಹಾಗೆಯೇ ಅರಸನು ಸತ್ತು ಹೋಗಿ, ಸಮಾರ್ಯಕ್ಕೆ ತರಲ್ಪಟ್ಟನು; ಅವರು ಅರಸನನ್ನು ೳ೮ ಸಮಾರ್ಯದಲ್ಲಿ ಹೂಣಿಟ್ಟರು. ಆ ರಥವು ಸಮಾರ್ಯದ ಕೆಕೆ ಯಲ್ಲಿ ತೊಳೆಯಲ್ಪಡುವಾಗ, ಕರ್ತನು ಹೇಳಿದ ವಾಕ್ಯದ ಪ್ರಕಾರ ವೇ ನಾಯಿಗಳು ಅವನ ರಕ್ತವನ್ನು ನೆಕ್ಕಿದವು; ಹಾಗೆಯೇ ಅವ ರು ಕವಚವನ್ನು ತೊಳೆದರು.

ೳ೯ ೳ೯ ಆದರೆ ಅಹಾಬನ ಇತರ ಕ್ರಿಯೆಗಳೂ, ಅವನು ಮಾಡಿದ್ದೆಲ್ಲ ವೂ, ಅವನು ಕಟ್ಟಿಸಿದ ದಂತದ ಮನೆಯೂ, ಅವನು ಕಟ್ಟಿಸಿದ ಎಲ್ಲಾ ಪಟ್ಟಣಗಳೂ ಇಸ್ರಯೇಲಿನ ಅರಸುಗಳ ದಿನಚರ್ಯೆ ಪುಸ್ತ ೳ೦ ಕದಲ್ಲಿ ಬರೆಯಲ್ಪಡಲಿಲ್ಲವೋ! ಹೀಗೆಯೇ ಅಹಾಬನು ತನ್ನ ಪಿತೃಗಳ ಸಂಗಡ ಮಲಗಿದನು; ಮತ್ತು ಅವನ ಮಗನಾದ ಅಹ ಜ್ಯನು ಅವನಿಗೆ ಬದಲಾಗಿ ಆಳಿದನು.

ೳ೧ ೳ೧ ಆಸನ ಮಗನಾದ ಯೆಹೋಷಫಾಟನು ಇಸ್ರಯೇಲಿನ ಅರ ಸನಾದ ಅಹಾಬನ ನಾಲ್ಕನೇ ವರುಷದಲ್ಲಿ ಯೆಹೂದದ ಮೇಲೆ ೳ೨ ಅರಸನಾದನು. ಯೆಹೋಷಫಾಟನು ಅರಸನಾಗುವಾಗ ಮೂವ ತ್ತೈದು ವರುಷದವನಾಗಿದ್ದು, ಯೆರೂಸಲೇಮಿನಲ್ಲಿ ಇಪ್ಪತ್ತೈದು ವರುಷ ಆಳಿದನು. ಅವನ ತಾಯಿಯ ಹೆಸರು ಅಜೂಬಳು; ಅವ ೳ3 ಳು ಶಿಲ್ಹಿಯ ಮಗಳು. ಅವನು ತನ್ನ ತಂದೆಯಾದ ಆಸನ ಸಮ ಸ್ತ ಮಾರ್ಗಗಳಲ್ಲಿ ನಡೆದು, ಅದನ್ನು ಬಿಟ್ಟು ತೊಲಗದೆ, ಕರ್ತ ನ ಸಮುಖದಲ್ಲಿ ನೆಟ್ಟಗೆಯಾದದ್ದನ್ನು ಮಾಡಿದನು. ಆದರೂ ಮೇಡುಗಳನ್ನು ತೆಗೆದು ಹಾಕಲಿಲ್ಲ; ಜನರು ಇನ್ನೂ ಮೇಡುಗಳ ೳ೪ ಮೇಲೆ ಬಲಿಗಳನ್ನೂ ಧೂಪಗಳನ್ನೂ ಅರ್ಪಿಸುತ್ತಿದ್ದರು. ಮತ್ತು ಯೆಹೋಷಫಾಟನು ಇಸ್ರಯೇಲಿನ ಅರಸನ ಸಂಗಡ ಸಮಾಧಾ ನ ಮಾಡಿ ಕೊಂಡನು.

ೳ೫ ೳ೫ ಯೆಹೋಷಫಾಟನ ಇತರ ಕ್ರಿಯೆಗಳೂ, ಅವನು ತೋರಿ ಸಿದ ಪರಾಕ್ರಮವೂ, ಅವನು ಯುದ್ಧ ಮಾಡಿದ ವಿಧವೂ ಯೆಹೂ ದದ ಅರಸುಗಳ ದಿನಚರ್ಯೆ ಪುಸ್ತಕದಲ್ಲಿ ಬರೆಯಲ್ಪಡಲಿಲ್ಲವೋ! ೳ೬ ಅವನ ತಂದೆಯಾದ ಆಸನ ದಿವಸಗಳಲ್ಲಿ ಉಳಿದ ಪುರುಷಸಂಗ ೳ೭ ಮರನ್ನು ಅವನು ದೇಶದಿಂದ ತೆಗೆದು ಹಾಕಿದನು. ಆ ಕಾಲದಲ್ಲಿ ಎದೋಮಿನೊಳಗೆ ಅರಸನಿಲ್ಲ; ಅಧಿಪತಿ ಆಳುತ್ತಿದ್ದನು.

ೳ೮ ೳ೮ ಯೆಹೋಷಫಾಟನು ಭಂಗಾರಕ್ಕೋಸ್ಕರ ಓಫಿರಿಗೆ ಹೋಗು ವದಕ್ಕೆ ತರ್ಷೀಷಿನ ಹಡಗಗಳನ್ನು ಮಾಡಿಸಿದನು. ಆದರೆ ಅವು ಹೋಗಲಿಲ್ಲ; ಯಾಕಂದರೆ ಆ ಹಡಗಗಳು ಎಜ್ಯೊನ್ಗೇಬರಿನ ಬಳಿ ೳ೯ ಯಲ್ಲಿ ಒಡೆದು ಹೋದವು. ಆಗ ಅಹಾಬನ ಮಗನಾದ ಅಹಜ್ಯ ನು ಯೆಹೋಷಫಾಟನಿಗೆ, ನನ್ನ ಸೇವಕರು ನಿನ್ನ ಸೇವಕರ ಸಂಗಡ ಹಡಗಗಳಲ್ಲಿ ಹೋಗಲಿ, ಅಂದನು; ಆದರೆ ಯೆಹೋಷ ಫಾಟನು ಸಮ್ಮತಿಸಲಿಲ್ಲ.

ೳ೧ ೳ೧ ಯೆಹೋಷಫಾಟನು ತನ್ನ ಪಿತೃಗಳ ಸಂಗಡ ಮಲಗಿದನು; ಮತ್ತು ತನ್ನ ತಂದೆಯಾದ ದಾವೀದನ ಪಟ್ಟಣದಲ್ಲಿ ತನ್ನ ಪಿತೃಗ ಳ ಸಂಗಡ ಹೂಣಿಡಲ್ಪಟ್ಟನು. ಅವನ ಮಗನಾದ ಯೆಹೋರ ಮನು ಅವನಿಗೆ ಬದಲಾಗಿ ಆಳಿದನು.

ೳ೧ ೳ೧ ಅಹಾಬನ ಮಗನಾದ ಅಹಜ್ಯನು ಯೆಹೂದದ ಅರಸನಾದ ಯೆಹೋಷಫಾಟನ ಹದಿನೇಳನೇ ವರುಷ ಸಮಾರ್ಯದಲ್ಲಿ ಇ ಸ್ರಯೇಲಿನ ಮೇಲೆ ಆಳ ಆರಂಭಿಸಿ, ಎರಡು ವರುಷ ಇಸ್ರಯೇಲಿ ನ ಮೇಲೆ ಆಳಿದನು. ಆದರೆ ಅವನು ಕರ್ತನ ಸಮುಖದಲ್ಲಿ ಕೆಟ್ಟ ೳ೨ ದ್ದನ್ನು ಮಾಡಿ, ತನ್ನ ತಂದೆಯ ಮಾರ್ಗದಲ್ಲಿಯೂ, ತನ್ನ ತಾಯಿಯ ಮಾರ್ಗದಲ್ಲಿಯೂ, ಇಸ್ರಯೇಲನ್ನು ಪಾಪ ಮಾಡ ಪ್ರೇರೇಪಿಸಿದ ನೆಬಾಟನ ಮಗನಾದ ಯೆರೊಬಾಮನ ಮಾರ್ಗದ ೳ3 ಲ್ಲಿಯೂ ನಡೆದನು. ಅವನು ಬಾಳನನ್ನು ಸೇವಿಸಿ, ಅದಕ್ಕೆ ಅಡ್ಡ ಬಿದ್ದು, ತನ್ನ ತಂದೆಯು ಮಾಡಿದ ಎಲ್ಲಾದರ ಪ್ರಕಾರವೇ ಇಸ್ರ ಯೇಲಿನ ದೇವರಾದ ಕರ್ತನಿಗೆ ಕಕೆಕಕೆ ಎಬ್ಬಿಸಿದನು.

ಯ ಹಾಗೂ ಅಲ್ಲ. ತನ್ನ ತಂದೆಯು ಮಾಡಿಟ್ಟ ಬಾಳ್ವನ ಸ್ತಂಭ
೩ ವನ್ನು ತೆಗೆದು ಹಾಕಿದನು. ಆದರೂ ಇಸ್ರಯೇಲನು ಪಾಪ
ಮಾಡ ಪ್ರೇರೇಪಿಸಿದ ನೆಬಾಟನ ಮಗನಾದ ಯೆರೊಬಾಮನ
ಪಾಪಗಳಿಗೆ ಅವನು ಹತ್ತಿ ಕೊಂಡು, ಅವುಗಳನ್ನು ಬಿಟ್ಟು ತೊಲ
ಗದೆ ಇದ್ದನು.

೪ ಆದರೆ ಮೋವಾಬಿನ ಅರಸನಾದ ಮೇಷನು ಕುರಿ ಮಂದೆಯು
ಳ್ಳವನಾಗಿದ್ದು, ಇಸ್ರಯೇಲಿನ ಅರಸನಿಗೆ ಒಂದು ಲಕ್ಷ ಕುರಿ ಮರಿ
ಗಳನ್ನೂ, ಉಣ್ಣೆ ಸಹಿತವಾಗಿ ಒಂದು ಲಕ್ಷ ಟಗರುಗಳನ್ನೂ
೫ ಕೊಡುತ್ತಿದ್ದನು. ಅಹಾಬನು ಸತ್ತ ತರುವಾಯ ಏನಾಯಿತಂದರೆ,
ಮೋವಾಬಿನ ಅರಸನು ಇಸ್ರಯೇಲಿನ ಅರಸನಿಗೆ ವಿಕೋಧವಾಗಿ
ತಿರುಗ ಬಿದ್ದನು.

೬ ಆ ದಿವಸದಲ್ಲಿ ಯೆಹೋರಮನು ಸಮಾರ್ಯದಿಂದ ಹೊರ
೭ ಟು ಹೋಗಿ, ಇಸ್ರಯೇಲನ್ನು ಲೆಖ್ಖಿಸಿದನು. ಇದಲ್ಲದೆ ಅವನು
ಹೋಗಿ, ಮೋವಾಬಿನ ಅರಸನು ನನಗೆ ವಿರೋಧವಾಗಿ ತಿರುಗ ಬಿ
ದ್ದಿದ್ದಾನೆ; ನೀನು ನನ್ನ ಸಂಗಡ ಮೋವಾಬಿನ ಮೇಲೆ ಯುದ್ಧ
ಮಾಡ ಏರಿ ಬರುವಿಯಾ! ಎಂದು ಯೆಹೂದದ ಅರಸನಾದ ಯೆ
ಹೋಷಾಫಾಟನಿಗೆ ಹೇಳಿ ಕಳುಹಿಸಿದನು. ಅದಕ್ಕವನು, ನಾನು
ಏರಿ ಬರುವೆನು; ನಾನು ನಿನ್ನ ಹಾಗೆ, ನನ್ನ ಜನ ನಿನ್ನ ಜನದ
ಹಾಗೆ, ನನ್ನ ಕುದುರೆಗಳು ನಿನ್ನ ಕುದುರೆಗಳ ಹಾಗೆ, ಅಂದನು.
೮ ಯಾವ ಮಾರ್ಗವಾಗಿ ಏರಿ ಹೋಗುವ! ಎಂದು ಇವನು ಕೇಳಿ
ದಾಗ, ಅವನು ಎದೋಮಿನ ಅರಣ್ಯ ಮಾರ್ಗವಾಗಿ, ಅಂದನು.
೯ ಹೀಗೆಯೇ ಇಸ್ರಯೇಲಿನ ಅರಸನೂ, ಯೆಹೂದದ ಅರಸನೂ,
ಎದೋಮಿನ ಅರಸನೂ ಹೊರಟು, ಸುತ್ತಾದ ಮಾರ್ಗದಲ್ಲಿ ಏಳು
ದಿವಸ ನಡೆದರು. ಆದರೆ ಸೈನ್ಯಕ್ಕೂ, ಅವರ ಹಿಂದೆ ಬಂದ ಪಶು
ಗಳಿಗೂ ನೀರು ಇಲ್ಲದೆ ಹೋಯಿತು.

೧೦ ಆಗ ಇಸ್ರಯೇಲಿನ ಅರಸನು, ಅಯ್ಯೋ! ಕರ್ತನು ಈ ಮೂ
ರು ಮಂದಿ ಅರಸುಗಳನ್ನು ಮೋವಾಬ್ಯರ ಕೈಯಲ್ಲಿ ಒಪ್ಪಿಸಿ ಕೊ
೧೧ ಡ ಕರೆದಿದ್ದಾನಲ್ಲ! ಅಂದನು. ಆದರೆ ಯೆಹೋಷಾಫಾಟನು, ಅವ
ನ ಮೂಲಕವಾಗಿ ಕರ್ತನನ್ನು ಕೇಳುವ ಹಾಗೆ, ಇಲ್ಲಿ ಕರ್ತನ ಪ್ರ
ವಾದಿಯು ಯಾವನೂ ಇಲ್ಲವೋ! ಅಂದನು. ಆಗ ಇಸ್ರಯೇ
ಲಿನ ಅರಸನ ಸೇವಕರಲ್ಲಿ ಒಬ್ಬನು ಪ್ರತ್ಯುತ್ತರವಾಗಿ, ಎಲೀಯನ
ಕೈಗಳ ಮೇಲೆ ನೀರು ಹೊಯಿದ ಶಫಾಟನ ಮಗನಾದ ಎಲೀಷ
ನು ಇಲ್ಲಿದ್ದಾನೆಂದು, ಹೇಳಿದನು. ಆಗ ಯೆಹೋಷಾಫಾಟನು ಅವ
೧೨ ನ ಬಳಿಯಲ್ಲಿ ಕರ್ತನ ವಾಕ್ಯ ಉಂಟು, ಅಂದನು. ಮತ್ತು ಇಸ್ರ
ಯೇಲಿನ ಅರಸನೂ, ಯೆಹೋಷಾಫಾಟನೂ ಎದೋಮಿನ ಅರಸ
೧೩ ನೂ ಅವನ ಬಳಿಗೆ ಇಳಿದು ಹೋದರು. ಆದರೆ ಎಲೀಷನು ಇಸ್ರ
ಯೇಲಿನ ಅರಸನಿಗೆ, ನನಗೂ ನಿನಗೂ ಏನು! ನೀನು ನಿನ್ನ ತಂ
ದೆಯ ಪ್ರವಾದಿಗಳ ಬಳಿಗೂ, ನಿನ್ನ ತಾಯಿಯ ಪ್ರವಾದಿಗಳ ಬ
ಳಿಗೂ ಹೋಗು, ಅಂದನು. ಇಸ್ರಯೇಲಿನ ಅರಸನು ಅವನಿಗೆ,
ಇಲ್ಲ; ಕರ್ತನು ಈ ಮೂರು ಮಂದಿ ಅರಸುಗಳನ್ನು ಮೋವಾಬ್ಯ
ರ ಕೈಯಲ್ಲಿ ಒಪ್ಪಿಸಿ ಕೊಡುವದಕ್ಕೆ ಕೂಡ ಕರೆದಿದ್ದಾನಲ್ಲ! ಅಂ
೧೪ ದನು. ಆಗ ಎಲೀಷನು ಹೇಳಿದ್ದೇನಂದರೆ, ನಾನು ಯಾವನ ಸ
ಮುಖದಲ್ಲಿ ನಿಂತಿರುತ್ತೇನೋ, ಆ ಸೈನ್ಯಗಳ ಕರ್ತನ ಜೀವದಾ
ಣೆ—ಯೆಹೂದದ ಅರಸನಾದ ಯೆಹೋಷಾಫಾಟನ ಮುಖದಾ
ಕ್ಷಿಣ್ಯವನ್ನು ನಾನು ನೋಡದಿದ್ದರೆ, ನಾನು ನಿನ್ನ ಕಡೆ ಕಣ್ಣೆತ್ತು
೧೫ ವದಿಲ್ಲ, ನೋಡುವದಿಲ್ಲ. ಆದರೆ ಈಗ ಬಾರಿಸುವವನನ್ನು ನನ್ನ
ಬಳಿಗೆ ಕರ ಕೊಂಡು ಬಾ, ಅಂದನು. ಆ ಬಾರಿಸುವವನು ಬಾರಿಸಿ
ದಾಗ, ಕರ್ತನ ಕೈ ಅವನ ಮೇಲೆ ಬಂತು. ಆಗ ಅವನು ಹೇಳಿ
೧೬ ದ್ದೇನಂದರೆ, ಈ ತಗ್ಗನ್ನು ಹಳ್ಳ ಹಳ್ಳಗಳಾಗಿ ಮಾಡಿರಿಂದು, ಕ
ರ್ತನು ಹೇಳುತ್ತಾನೆ. ಯಾಕಂದರೆ, ಕರ್ತನು ಹೀಗೆ ಹೇಳುತ್ತಾ
ನೆ—ನೀವು ಘುಳ್ಳಿಯನ್ನೂ ಮಳೆಯನ್ನೂ ನೋಡುವದಿಲ್ಲ; ಆದ
ರೆ ನೀವೂ, ನಿಮ್ಮ ದನಗಳೂ, ನಿಮ್ಮ ಪಶುಗಳೂ ಕುಡಿಯುವ
೧೭ ಹಾಗೆ, ಈ ತಗ್ಗು ನೀರಿನಿಂದ ತುಂಬಲ್ಪಡುವದು. ಇದಲ್ಲದೆ ಇದು
ಕರ್ತನ ದೃಷ್ಟಿಗೆ ಅಲ್ಪವಾಗಿರುವದು; ಅವನು ಮೋವಾಬ್ಯರನ್ನು
೧೮ ನಿಮ್ಮ ಕೈಯಲ್ಲಿ ಒಪ್ಪಿಸಿ ಕೊಡುವನು. ಇದಲ್ಲದೆ ನೀವು ಕೋಟೆ
ಯುಳ್ಳ ಎಲ್ಲಾ ಪಟ್ಟಣಗಳನ್ನೂ ಆದು ಕೊಳ್ಳಿ, ತಕ್ಕ ಎಲ್ಲಾ ಪಟ್ಟ
ಣಗಳನ್ನೂ ಹೊಡೆದು ಬಿಟ್ಟು, ಉತ್ತಮವಾದ ಎಲ್ಲಾ ಮರಗಳನ್ನು
ಬೀಳ್ಳ ಮಾಡಿ, ನೀರು ಭಾವಿಗಳನ್ನೆಲ್ಲಾ ಮುಚ್ಚಿ, ಉತ್ತಮವಾದ
ಭೂಮಿಯಲ್ಲಿರುವ ಹೊಲಗಳನ್ನೆಲ್ಲಾ ಕಲ್ಲುಗಳಿಂದ ಕೆಡಿಸ ಬೇಕು,
ಅಂದನು.

೧೯ ಉದಯದಲ್ಲಿ ಕಾಣಿಕೆಯನ್ನು ಅರ್ಪಿಸುತ್ತಿರುವಾಗ, ಏನಾ
ಯಿತಂದರೆ, ಇಗೋ, ನೀರು ಎದೋಮಿನ ಮಾರ್ಗವಾಗಿ ಬಂದ
೨೦ ದರಿಂದ, ದೇಶವು ನೀರಿನಿಂದ ತುಂಬಲ್ಪಟ್ಟಿತು. ಅರಸುಗಳು ತಮ್ಮ
ಸಂಗಡ ಯುದ್ಧ ಮಾಡುವದಕ್ಕೆ ಏರಿ ಬಂದಿದ್ದಾರೆಂದು, ಮೋವಾ
ಬ್ಯರು ಕೇಳಿದಾಗ, ಅವರು ಆಯುಧ ಧರಿಸ ತಕ್ಕ ಪ್ರಾಯಸ್ಥ
ರು ಮೊದಲುಗೊಂಡು ಸಮಸ್ತರನ್ನು ಕೂಡಿಸಿ ಕೊಂಡು, ಮೇರೆ
೨೧ ಯಲ್ಲಿ ನಿಂತರು. ಮೋವಾಬ್ಯರು ಉದಯ ಕಾಲದಲ್ಲಿ ಎದ್ದು ಆ
ನೀರಿನ ಮೇಲೆ ಸೂರ್ಯ ಹುಟ್ಟಿದ್ದರಿಂದ ಆಚೆಯಲ್ಲಿರುವ ಆ ನೀ
೨೩ ರು ರಕ್ತದ ಹಾಗೆ ಕೆಂಪಾಗಿರುವದನ್ನು ಕಂಡರು. ಆಗ ಅವರು,
ಇದು ರಕ್ತವೇ; ಆ ಅರಸುಗಳು ತಮ್ಮನ್ನು ತಾವೇ ನಾಶನ ಮಾ
ಡೇ ಮಾಡಿ, ಒಬ್ಬರನ್ನೊಬ್ಬರು ಕೊಂದಿದ್ದಾರೆ; ಈಗ ಮೋವಾ
ಬ್ಯರೇ, ಕೊಳ್ಳೆಗೆ ಬನ್ನಿರಿ ಎಂದು, ಹೇಳಿ ಕೊಂಡರು. ಅವರು ಇ
೨೪ ಸ್ರಯೇಲಿನ ದಂಡಿಗೆ ಬಂದಾಗ, ಇಸ್ರಯೇಲ್ಯರು ಎದ್ದು, ಮೋವಾ
ಬ್ಯರು ತಮ್ಮ ಮುಂದೆ ಓಡಿ ಹೋಗುವ ಹಾಗೆ, ಅವರನ್ನು ಹೊ
ಡೆದು, ಮೋವಾಬ್ಯರನ್ನು ಅವರ ದೇಶದ ಮಟ್ಟಿಗೂ ಹೊಡೆಯು
೨೫ ತ್ತಾ ಬಂದರು. ಇದಲ್ಲದೆ ಅವರು ಪಟ್ಟಣಗಳನ್ನು ಕೆಡವಿ ಹಾಕಿ, ಉ
ತ್ತಮವಾದ ಹೊಲಗಳ ಮೇಲೆ ಅವನವನು ಕಲ್ಲನ್ನು ಹಾಕಿ ತುಂಬಿ
ಸಿ, ನೀರು ಭಾವಿಗಳನ್ನೆಲ್ಲಾ ಮುಚ್ಚಿ, ಸಮಸ್ತ ಉತ್ತಮವಾದ ಮ
ರಗಳನ್ನು ಬೀಳ್ಳ ಮಾಡಿದರು. ಕಿರ್ಹರೇಷೆತಿನಲ್ಲಿ ಮಾತ್ರ ಆದರ
ಕಲ್ಲುಗಳನ್ನು ಉಳಿಸಿ ಬಿಟ್ಟರು. ಆದರೆ ಕಲ್ಲೆಸೆಯುವವರು ಅದ
ನ್ನು ಸುತ್ತಿ ಕೊಂಡು, ಹೊಡೆದು ಬಿಟ್ಟರು.

೨೬ ಮೋವಾಬಿನ ಅರಸನು ಯುದ್ಧವು ತನಗೆ ಅತಿ ಕಷ್ಟವಾಯಿತೆಂ
ದು ಕಂಡಾಗ, ಎದೋಮಿನ ಅರಸನ ಮೇಲೆ ಹೋಗ ಬೀಳುವ ನಿ
ಮಿತ್ತ ಕತ್ತಿ ಹಿಡಿಯುವ ಏಳ್ನೂರು ಮಂದಿಯನ್ನು ತನ್ನ ಸಂಗ
ಡ ತೆಗೆದು ಕೊಂಡನು; ಆದರೆ ಅದು ಅವರಿಂದ ಆಗದೆ ಹೋಯಿ
೨೭ ತು. ಆಗ ಅವನು ತನಗೆ ಬದಲಾಗಿ ಆಳ್ವ ಹೋಗುವ ತನ್ನ ಹಿ
ರಿಯ ಮಗನನ್ನು ತಕ್ಕೊಂಡು, ಅವನನ್ನು ಅಲಂಗದ ಮೇಲೆ
ಹೋಮವಾಗಿ ಅರ್ಪಿಸಿದನು. ಇಸ್ರಯೇಲಿಗೆ ಬಹು ಕೋಪ್ರವಾದ
ದರಿಂದ,ಅವರು ಅವನನ್ನು ಬಿಟ್ಟು, ತಮ್ಮ ದೇಶಕ್ಕೆ ತಿರುಗಿ ಹೋ
ದರು.



## ೪. ಸಂಧಿ.

೧ ಆದರೆ ಪ್ರವಾದಿಗಳ ಮಕ್ಕಳ ಹೆಂಡತಿಯಲ್ಲಿ ಒಬ್ಬಳು ಎಲೀಷನಿಗೆ
ಕೂಗಿ, ನಿನ್ನ ದಾಸನಾದ ನನ್ನ ಗಂಡನು ಸತ್ತನು; ಮತ್ತು ನಿನ್ನ
ದಾಸನು ಕರ್ತನಿಗೆ ಭಯ ಪಡುವವನಾಗಿದ್ದನೆಂದು, ನೀನು ಬಲ್ಲಿ;
ಈಗ ಸಾಲಗಾರನು ನನ್ನ ಇಬ್ಬರು ಮಕ್ಕಳನ್ನು ತನಗೆ ದಾಸರಾ
೨ ಗ ತೆಗೆದು ಕೊಳ್ಳ ಬಂದಿದ್ದಾನೆ, ಅಂದಳು. ಎಲೀಷನು ಅವಳಿಗೆ,
ನಾನು ನಿನಗೆ ಏನು ಮಾಡಲಿ! ಮನೆಯಲ್ಲಿ ನಿನಗೆ ಏನು ಉಂಟು!
ನನಗೆ ತಿಳಿಸು, ಅಂದನು. ಅವಳು, ನಿನ್ನ ಸೇವಕಳಿಗೆ ಒಂದು
ಕೊಡದ ಎಣ್ಣೆ ಅಲ್ಲದೆ, ಮನೆಯಲ್ಲಿ ಮತ್ತೊಂದಿಲ್ಲ, ಅಂದಳು.
೩ ಆಗಲವನು, ನೀನು ಹೋಗಿ, ಹೊರಗಿರುವ ನಿನ್ನ ಎಲ್ಲಾ ನೆಕೆವ
ನೆಯವರಿಂದ ಬರೀ ಪಾತ್ರೆಗಳನ್ನು ಕೇಳಿಕೋ; ಸ್ವಲ್ಪ ಮಾತ್ರ
೪ ತಕ್ಕೊಳ್ಳ ಬೇಡ. ನೀನು ಒಳಗೆ ಪ್ರವೇಶಿಸಿ, ನಿನ್ನ ಹಿಂದೆಯೂ
ನಿನ್ನ ಮಕ್ಕಳ ಹಿಂದೆಯೂ ಬಾಗಲು ಮುಚ್ಚಿ ಕೊಂಡು, ಆ ಪಾತ್ರೆ
ಗಳಲ್ಲೆಲ್ಲಾ ಹೊಯಿದು, ತುಂಬಿದ್ದನ್ನು ಒಂದು ಕಡೆ ಇರಿಸು, ಅಂದ
೫ ನು. ಅವಳು ಅವನನ್ನು ಬಿಟ್ಟು ಹೋಗಿ, ತನ್ನ ಹಿಂದೆಯೂ ತನ್ನ
ಮಕ್ಕಳ ಹಿಂದೆಯೂ ಬಾಗಲು ಮುಚ್ಚಿದಳು; ಇವರು ಅವಳ ಬಳಿ
ಗೆ ಪಾತ್ರೆಗಳನ್ನು ತಕ್ಕೊಂಡು ಬಂದರು; ಅವಳು ಹೊಯಿದಳು.
೬ ಆ ಪಾತ್ರೆಗಳು ತುಂಬಿದ ತರುವಾಯ ಏನಾಯಿತಂದರೆ, ಅವಳು
ತನ್ನ ಮಗನಿಗೆ, ಇನ್ನೊಂದು ಪಾತ್ರೆಯನ್ನು ನನ್ನ ಬಳಿಗೆ ತ
ಕ್ಕೊಂಡು ಬಾ, ಅಂದಳು. ಅವನು ಅವಳಿಗೆ, ಇನ್ನು ಪಾತ್ರೆ ಇ
೭ ಲ್ಲ, ಅಂದನು. ಆಗ ಎಣ್ಣೆಯು ನಿಂತು ಹೋಯಿತು. ಆಗ ಅವ
ಳು ಬಂದು, ದೇವರ ಮನುಷ್ಯನಿಗೆ ತಿಳಿಸಿದಳು. ಅವನು, ನೀನು
ಹೋಗಿ, ಆ ಎಣ್ಣೆಯನ್ನು ಮಾರಿ, ನಿನ್ನ ಸಾಲವನ್ನು ತೀರಿಸಿ,
ಮಿಕ್ಕದ್ದರಿಂದ ನೀನೂ ನಿನ್ನ ಮಕ್ಕಳೂ ಜೀವನ ಮಾಡಿರಿ, ಅಂ
ದನು.

೮ ಮತ್ತು ಆ ಕಾಲದಲ್ಲಿ ಏನಾಯಿತಂದರೆ, ಎಲೀಷನು ಶುನೇಮಿಗೆ
ಹೋದನು. ಅಲ್ಲಿ ಘನವುಳ್ಳ ಒಬ್ಬ ಸ್ತ್ರೀಯು ಇದ್ದಳು. ಅ
ವಳು ಅವನನ್ನು ಕೊಟ್ಟಿ ತಿನ್ನ ಬಲವಂತ ಮಾಡಿದಳು. ಹಾಗೆ
ಯೇ ಅವನು ಆ ಮಾರ್ಗವಾಗಿ ಹೋಗುವಾಗಲೆಲ್ಲಾ ಅಲ್ಲಿ ಕೊ
೯ ಟ್ಟಿ ತಿನ್ನ ಹೋಗುತ್ತಿದ್ದನು. ಅದದರಿಂದ ಅವಳು ತನ್ನ ಗಂಡನಿ
ಗೆ ಹೇಳ್ಳಿದ್ದೇನಂದರೆ, ಇಗೋ, ನಮ್ಮ ಬಳಿಯ ಯಾವಾಗಲೂ
ಹಾದು ಹೋಗುವ ಇವನು ದೇವರ ಪರಿಶುದ್ಧನಾದ ಮನುಷ್ಯ
೧೦ ನಾಗಿದ್ದಾನೆಂದು, ನನಗೆ ತಿಳಿಯುತ್ತದೆ. ನಾವು ಮಾಳಿಗೆಯ ಮೇ
ಲೆ ಒಂದು ಚಿಕ್ಕ ಕೊಠಡಿಯನ್ನು ಕಟ್ಟಿಸಿ, ಅದರಲ್ಲಿ ಅವನಿಗೋ
ಸ್ಕರ ಮಂಚವನ್ನೂ, ಮೇಜನ್ನೂ, ಕುರ್ಚಿಯನ್ನೂ, ದೀಪಸ್ತಂ
ಭವನ್ನೂ ಇಡುವ; ಆಗ ಅವನು ನಮ್ಮ ಬಳಿಗೆ ಬರುವಾಗ, ಅಲ್ಲಿ
೧೧ ಪ್ರವೇಶಿಸುವನು, ಅಂದಳು. ಒಂದು ದಿವಸ ಅವನು ಅಲ್ಲಿಗೆ ಬಂ
೧೨ ದು, ಆ ಕೊಠಡಿಯಲ್ಲಿ ಪ್ರವೇಶಿಸಿ ಮಲಗಿದನು. ಆಗ ಅವನು
ತನ್ನ ಸೇವಕನಾದ ಗೆಹಾಜಿಗೆ, ನೀನು ಶುನೇಮ್ಯಳನ್ನು ಕರೆ, ಅಂ
ದನು. ಅವನು ಅವಳನ್ನು ಕರೆದ್ದರಿಂದ, ಅವಳು ಇವನ ಮುಂದೆ
೧೩ ನಿಂತಳು. ಮತ್ತು ಅವನು ಇವನಿಗೆ, ನೀನು, ಇಗೋ, ಈ ಸಕಲ
ಚಿಂತೆಯಿಂದ ನಮಗೋಸ್ಕರ ಚಿಂತಿಸಿದಿ; ನಿನಗೆ ಮಾಡ ಬೇಕಾ
ದದ್ದೇನು! ನಿನಗೋಸ್ಕರ ಅರಸನ ಸಂಗಡಲಾದರೂ ಸೈನ್ಯಾಧಿ
ಪತಿಯ ಸಂಗಡಲಾದರೂ ಮಾತಾಡ ಬೇಕೋ! ಎಂದು, ಇವಳಿ
ಗೆ ಹೇಳು, ಅಂದನು. ಅದಕ್ಕವಳು, ನನ್ನ ಸ್ವಜನರ ಮಧ್ಯದಲ್ಲಿ
೧೪ ನಾನು ವಾಸವಾಗಿದ್ದೇನೆ, ಅಂದಳು. ಮತ್ತು ಅವನು, ಹಾಗಾದ
ರೆ, ಅವಳಿಗೋಸ್ಕರ ಮಾಡ ಬೇಕಾದದ್ದೇನು! ಅಂದನು. ಅದಕ್ಕೆ
ಗೆಹಾಜಿಯು, ಅವಳು ಮಗುವಿಲ್ಲದೆ ಇದ್ದಾಳೆ, ಅವಳ ಗಂಡನು
೧೫ ಮುದುಕನಾಗಿದ್ದಾನೆ, ಅಂದನು. ಮತ್ತು ಅವಳನ್ನು ಕರೆ, ಅಂದನು.
೧೬ ಅವನು ಅವಳನ್ನು ಕರೆದಾಗ, ಅವಳು ಬಾಗಲಲ್ಲಿ ನಿಂತಳು. ಆಗ
ಅವನು ಜೀವ ಉತ್ಪತ್ತಿಯಾಗುವ ಕಾಲದ ಪ್ರಕಾರ, ನೇಮಿಸಿದ
ಕಾಲದಲ್ಲಿ ಒಬ್ಬ ಮಗನನ್ನು ಅಪ್ಪಿ ಕೊಳ್ಳುವಿ, ಅಂದನು. ಅದಕ್ಕ
ವಳು, ಹಾಗಲ್ಲ, ದೇವರ ಮನುಷ್ಯನೇ, ನನ್ನ ಸ್ವಾಮಿಯೇ,
೧೭ ನಿನ್ನ ಸೇವಕಳಿಗೆ ನೀನು ಅಬದ್ಧ ಹೇಳ ಬೇಡ, ಅಂದಳು. ಆ ಸ್ತ್ರೀ
ಯು ಗರ್ಭ ಧರಿಸಿ, ಎಲೀಷನು ತನಗೆ ಹೇಳ್ಳಿದ ಕಾಲದಲ್ಲಿ, ಜೀವ
ಉತ್ಪತ್ತಿಯಾಗುವ ಕಾಲದ ಪ್ರಕಾರ, ಮಗನನ್ನು ಹೆತ್ತಳು.

೧೮ ಆದರೆ ಆ ಮಗುವು ಬೆಳೆದಾಗ, ಒಂದು ದಿವಸ ಅವನು ಬೆಳೆ
ಕೊಯ್ಯುವವರ ಬಳಿಯಲ್ಲಿರುವ ತನ್ನ ತಂದೆಯ ಬಳಿಗೆ ಹೋ
೧೯ ದನು. ಆಗ ಅವನು ತನ್ನ ತಂದೆಗೆ, ನನ್ನ ತಲೆಯು, ನನ್ನ ತಲೆ
ಯು, ಅಂದನು. ಇವನು ಹುಡುಗನಿಗೆ, ಅವನನ್ನು ಅವನ ತಾ
೨೦ ಯಿಯ ಬಳಿಗೆ ಎತ್ತಿ ಕೊಂಡು ಹೋಗು, ಅಂದನು. ಇವನು ಅ
ವನನ್ನು ಅವನ ತಾಯಿಯ ಬಳಿಗೆ ಎತ್ತಿ ಕೊಂಡು ಹೋದನು.
ಅವನು ಮಧ್ಯಾನ್ಹದ ಪರ್ಯಂತರ ಅವಳ ತೊಡೆಯ ಮೇಲೆ
೨೧ ಕುಳಿತಿದ್ದು, ಸತ್ತು ಹೋದನು. ಆಗ ಅವಳು ಏರಿ ಹೋಗಿ, ಅವ
ನನ್ನು ದೇವರ ಮನುಷ್ಯನ ಮಂಚದ ಮೇಲೆ ಮಲಗಿಸಿ, ಅವನಿ
ಗೋಸ್ಕರ ಬಾಗಲು ಹಾಕಿ, ಹೊರಟು, ತನ್ನ ಗಂಡನನ್ನು ಕರೆ
೨೨ ದು, ನಾನು ದೇವರ ಮನುಷ್ಯನ ಬಳಿಗೆ ಓಡಿ ಹೋಗಿ, ತಿರಿಗಿ
ಬರುವ ಹಾಗೆ, ನೀನು ದಯೆ ಮಾಡಿ ಹುಡುಗರಲ್ಲಿ ಒಬ್ಬನನ್ನೂ,
೨೩ ಒಂದು ಕತ್ತೆಯನ್ನೂ ನನಗೆ ಕಳುಹಿಸು, ಅಂದಳು. ಅದಕ್ಕೆ
ಅವನು, ಇದು ಅಮಾವಾಸ್ಯೆ ಅಲ್ಲ, ಸಬ್ಬತು ಅಲ್ಲ; ಯಾಕೆ
ನೀನು ಈ ಹೊತ್ತು ಅವನ ಬಳಿಗೆ ಹೋಗುತ್ತೀ! ಅಂದನು. ಅದ
೨೪ ಕ್ಕವಳು, ಒಳ್ಳೇದಾಗಿರುವದು, ಅಂದಳು. ಆಗಲವಳು ಕತ್ತೆಯ
ಮೇಲೆ ತಡಿಯನ್ನು ಹಾಕಿಸಿ, ತನ್ನ ಸೇವಕನಿಗೆ, ನಡಿಸಿ ಕೊಂಡು
ಹೋಗು; ನಾನು ನಿನಗೆ ಹೇಳುವ ಮಟ್ಟಿಗೂ ನನಗೋಸ್ಕರ ಸ
ವಾರಿ ತತ ಮಾಡ ಬೇಡೆಂದು ಹೇಳ್ಳಿ, ಕರ್ಮೇಲು ಪೆಟ್ಟದಲ್ಲಿರುವ
ದೇವರ ಮನುಷ್ಯನ ಬಳಿಗೆ ಬಂದಳು.

೨೫ ಆಗ ಏನಾಯಿತಂದರೆ, ದೇವರ ಮನುಷ್ಯನು ದೂರದಿಂದ
ಅವಳನ್ನು ನೋಡಿ, ಅವನು ತನ್ನ ಸೇವಕನಾದ ಗೆಹಾಜಿಗೆ, ಇ
೨೬ ಗೋ, ಆ ಶುನೇಮ್ಯಳು. ನೀನು ಅವಳನ್ನು ಎದುರುಗೊಳ್ಳ ಓಡಿ
ಹೋಗಿ, ಅವಳಿಗೆ, ನಿನಗೆ ಸುಖವೋ! ನಿನ್ನ ಗಂಡನಿಗೆ ಸುಖವೋ!
೨೭ ಮಗುವಿಗೆ ಸುಖವೋ! ಎಂದು ಹೇಳು, ಅಂದನು. ಅವಳು, ಸುಖ
ವು, ಅಂದಳು. ಮತ್ತು ಅವಳು ಬೆಟ್ಟಕ್ಕೆ ದೇವರ ಮನುಷ್ಯನ
ಬಳಿಗೆ ಬಂದು, ಅವನ ಕಾಲುಗಳನ್ನು ಹಿಡಿದಳು. ಆದರೆ ಅವಳ
ನ್ನು ತಳ್ಳಿ ಹಾಕ ಗೆಹಾಜಿಯು ಹತ್ತರ ಬಂದದರಿಂದ, ದೇವರ
ಮನುಷ್ಯನು, ಅವಳನ್ನು ಬಿಡು; ಯಾಕಂದರೆ ಅವಳ ಪ್ರಾಣವು
ಅವಳಲ್ಲಿ ಕಹಿಯಾಗಿರುತ್ತದೆ; ಕರ್ತನು ಅದನ್ನು ನನಗೆ ತಿಳ್ಳಿಸದೆ,
೨೮ ಮರೆ ಮಾಡಿದ್ದಾನೆ, ಅಂದನು. ಆಗಲವಳು, ನಾನು ನನ್ನ ಸ್ವಾ
ಮಿಯಿಂದ ಕುಮಾರನನ್ನು ಕೇಳ್ಳಿ ಕೊಂಡೆನೋ! ನನ್ನನ್ನು ಸೋ
೨೯ ಸಗೊಳ್ಳಸ ಬೇಡೆಂದು ನಾನು ಹೇಳಿಲ್ಲವೋ! ಅಂದಳು. ಆಗ

ಅವನು ಗೆಹಾಜಿಗೆ, ನೀನು ನಿನ್ನ ನಡುವನ್ನು ಕಟ್ಟಿಕೊಂಡು, ನನ್ನ
ಕೋಲನ್ನು ನಿನ್ನ ಕೈಯಲ್ಲಿ ಹಿಡುಕೊಂಡು, ಹೋಗು. ನಿನಗೆ
ಯಾವನಾದರೂ ಎದುರುಗೊಂಡರೆ, ಅವನನ್ನು ವಂದಿಸ ಬೇಡ;
ಯಾವನಾದರೂ ನಿನ್ನನ್ನು ವಂದಿಸಿದರೆ, ಅವನಿಗೆ ಪ್ರತ್ಯುತ್ತರ
ಹೇಳ ಬೇಡ; ನನ್ನ ಕೋಲನ್ನು ಆ ಹುಡುಗನ ಮುಖದ ಮೇಲೆ
೩೦ ಹಾಕು, ಅಂದನು. ಆದರೆ ಹುಡುಗನ ತಾಯಿ, ಕರ್ತನ ಜೀವದಾ
ಣೆಯೂ ನಿನ್ನ ಜೀವದಾಣೆಯೂ—ನಾನು ನಿನ್ನನ್ನು ಬಿಡುವದಿಲ್ಲ,
೩೧ ಅಂದಳು. ಆಗ ಅವನೆದ್ದು, ಅವಳ ಹಿಂದೆ ಹೋದನು. ಗೆಹಾಜಿ
ಯು ಅವರಿಗೆ ಮುಂದಾಗಿ ಹೋಗಿ, ಆ ಕೋಲನ್ನು ಹುಡುಗನ
ಮುಖದ ಮೇಲೆ ಇಟ್ಟನು. ಆದರೆ ಕಬ್ದವಾದರೂ ಆಲೈಸುವದಾ
ದರೂ ಇಲ್ಲದೆ ಇತ್ತು. ಆದದರಿಂದ ಅವನು ಎದುರುಗೊಳ್ಳ ತಿರಿ
ಗಿ ಹೋಗಿ, ಅವನಿಗೆ, ಹುಡುಗನು ಎಚ್ಚರವಾಗಲಿಲ್ಲ, ಅಂದನು.
೩೨ ಎಲೀಷನು ಮನೆಯಲ್ಲಿ ಬಂದಾಗ, ಇಗೋ, ಆ ಹುಡುಗ ಸತ್ತವ
೩೩ ನಾಗಿದ್ದು, ಮಂಚದ ಮೇಲೆ ಮಲಗಿಸಲ್ಪಟ್ಟಿದ್ದನು. ಅವನು ಒಳಗೆ
ಪ್ರವೇಶಿಸಿ, ತಾವಿಬ್ಬರೊಳಗಿಗಾಗಿ ಬಾಗಲು ಮುಚ್ಚಿಕೊಂಡು, ಕರ್ತ
೩೪ ನನ್ನು ಪ್ರಾರ್ಥಿಸಿದನು. ಮತ್ತು ಅವನು ಏರಿ ಹೋಗಿ, ಮಗುವಿ
ನ ಮೇಲೆ ಮಲಗಿ ಕೊಂಡು, ತನ್ನ ಬಾಯಿಯನ್ನು ಅವನ ಬಾ
ಯಿಯ ಮೇಲೆಯೂ, ತನ್ನ ಕಣ್ಣುಗಳನ್ನು ಅವನ ಕಣ್ಣುಗಳ
ಮೇಲೆಯೂ ತನ್ನ ಕೈಗಳನ್ನು ಅವನ ಕೈಗಳ ಮೇಲೆಯೂ
ಇಟ್ಟಿದನು; ಮತ್ತು, ಅವನ ಮೇಲೆ ಬೋರ್ಲಬಿದ್ದದರಿಂದ, ಮಗುವಿ
೩೫ ನ ಮಾಂಸವು ಬೆಚ್ಚಗೆ ಆಯಿತು. ಆಗ ಅವನು ತಿರಿಗಿ ಬಂದು,
ಮನೆಯಲ್ಲಿ ಬಂದು ಸಾರಿ ಇತ್ತಕಡೆ ಒಂದು ಸಾರಿ ಅತ್ತಕಡೆ ತಿರು
ಗಾಡಿ, ಏರಿ ಹೋಗಿ, ಅವನ ಮೇಲೆ ಬೋರ್ಲಬಿದ್ದನು. ಆಗ ಆ
ಹುಡುಗನು ಏಳು ಸಾರಿ ಶೀತನು; ಆ ಹುಡುಗನು ತನ್ನ ಕಣ್ಣುಗ
೩೬ ಳನ್ನು ತೆರೆದನು. ಆಗಲವನು ಗೆಹಾಜಿಯನ್ನು ಕರೆದು, ಅವನಿಗೆ
ಶುನೇಮ್ಯಳನ್ನು ಕರೆ, ಅಂದನು. ಅವನು ಅವಳನ್ನು ಕರೆದನು.
ಅವಳು ಅವನ ಬಳಿಗೆ ಬಂದಾಗ, ಅವನು ನಿನ್ನ ಕುಮಾರನನ್ನು
೩೭ ತಕ್ಕೊಂಡು ಹೋಗು, ಅಂದನು. ಆಗ ಅವಳು ಬಂದು, ಅವನ
ಪಾದಗಳ ಮೇಲೆ ಬಿದ್ದು, ನೆಲಕ್ಕೆ ಬೊಗ್ಗಿ, ತನ್ನ ಮಗನನ್ನು ಎತ್ತಿ
ಕೊಂಡು, ಹೊರಟು ಹೋದಳು.

೩೮ ಎಲೀಷನು ತಿರಿಗಿ ಗಿಲ್ಗಾಲಿಗೆ ಬಂದಾಗ, ದೇಶದಲ್ಲಿ ಬರ ಉಂ
ಟಾಗಿತ್ತು. ಪ್ರವಾದಿಗಳ ಮಕ್ಕಳು ಅವನ ಮುಂದೆ ಕುಳಿತಿರು
ವಾಗ, ಅವನು ತನ್ನ ಸೇವಕನಿಗೆ, ನೀನು ದೊಡ್ಡ ಗಡಿಗೆಯನ್ನು
ಮೇಲಿಟ್ಟು, ಪ್ರವಾದಿಗಳ ಮಕ್ಕಳಿಗೋಸ್ಕರ ಆಹಾರವನ್ನು ಬೇ
೩೯ ಯಿಸು, ಅಂದನು. ಆದರೆ ಒಬ್ಬನು ಪಲ್ಯವನ್ನು ತರ ಅಡವಿಗೆ
ಹೋಗಿ, ಅಡವಿಯ ಬಳ್ಳಿಯನ್ನು ನೋಡಿ, ಅಡವಿಯ ಕಾಯಿಗಳ
ನ್ನು ತನ್ನ ಉಡಿಯ ತುಂಬ ಕೂಡಿಸಿ ಕೊಂಡು ಬಂದು, ಅವುಗಳ
ನ್ನು ಕೊಯಿದು, ಆಹಾರವಿರುವ ಗಡಿಗೆಯಲ್ಲಿ ಹಾಕಿದನು; ಯಾ
೪೦ ಕಂದರೆ ಅವುಗಳನ್ನು ಅರಿಯದೆ ಇದ್ದರು. ಮತ್ತು ಮನುಷ್ಯರು
ಉಣ್ಣುವದಕ್ಕೆ ಹೊಯಿದರು. ಅವರು ಆಹಾರವನ್ನು ಉಣ್ಣುತ್ತಿ
ರುವಾಗ, ಏನಾಯಿತಂದರೆ, ಅವರು, ದೇವರ ಮನುಷ್ಯನೇ, ಗಡಿ
ಗೆಯಲ್ಲಿ ಸಾವು, ಎಂದು ಕೂಗಿದರು. ಯಾಕಂದರೆ ಉಣ್ಣಲಾರದೆ
೪೧ ಇದ್ದರು. ಆಗಲವನು, ಹಿಟ್ಟನ್ನು ತಕ್ಕೊಂಡು ಬರ ಹೇಳಿ, ಅದ
ನ್ನು ಗಡಿಗೆಯಲ್ಲಿ ಹಾಕಿ, ಜನರು ಉಣ್ಣುವ ಹಾಗೆ, ಹೊಯ್ಯಿರಿ,
ಅಂದನು. ಆಗ ಆ ಗಡಿಗೆಯಲ್ಲಿ ಕೆಟ್ಟದ್ದೇನಾದರೂ ಇದ್ದದಿಲ್ಲ.

೪೨ ಇದಲ್ಲದೆ ಬಾಳ್ಪ ಶೀಷದಿಂದ ಒಬ್ಬ ಮನುಷ್ಯನು ದೇವರ ಮ
ನುಷ್ಯನಿಗೆ ಮೊದಲು ಫಲವಾದ ಜವೆಗೋಧಿಯ ಇಪ್ಪತ್ತು ಕೊಟ್ಟಿ
ಗಳನ್ನು, ಕಾಳಿನಿಂದ ತುಂಬಿದ ತೆನೆಗಳನ್ನು ತಕ್ಕೊಂಡು ಬಂದನು.
೪೩ ಆಗಲವನು, ಜನರಿಗೆ ಕೊಡು; ಅವರು ತಿನ್ನಲಿ, ಅಂದನು. ಆದರೆ
ಅವನ ಸೇವಕನು, ಇದನ್ನು ನೂರು ಮಂದಿಗೆ ಬಡಿಸುವದು ಹ್ಯಾ
ಗೆ! ಅಂದನು. ಅದಕ್ಕವನು, ಜನರಿಗೆ ಕೊಡು; ಅವರು ತಿನ್ನಲಿ.
ಯಾಕಂದರೆ ಅವರು ತಿಂದು, ಇನ್ನೂಳಿಸಿ ಬಿಡುವರೆಂದು,
೪೪ ಕರ್ತನು ಹೇಳುತ್ತಾನೆ, ಅಂದನು. ಹಾಗೆಯೇ ಅವನು ಅವರ
ಮುಂದೆ ಇಟ್ಟನು. ಕರ್ತನ ವಾಕ್ಯದ ಪ್ರಕಾರ ಅವರು ತಿಂದು,
ಉಳಿಸಿಟ್ಟರು.

## ೫. ಸಂಧಿ.

೧ ಆದರೆ ಅರಾಮಿನ ಅರಸನ ಸೈನ್ಯಾಧಿಪತಿಯಾದ ನಾಮಾನ
ನು ತನ್ನ ಸ್ವಾಮಿಯ ಮುಂದೆ ದೊಡ್ಡವನಾಗಿಯೂ ಘನವುಳ್ಳ
ವನಾಗಿಯೂ ಇದ್ದನು. ಯಾಕಂದರೆ ಅವನಿಂದ ಕರ್ತನು ಅರಾ
ಮಿಗೆ ರಕ್ಷಣೆಯನ್ನು ಉಂಟು ಮಾಡಿದನು; ಇದಲ್ಲದೆ ಅವನು
ಪರಾಕ್ರಮಶಾಲಿಯಾದವನಾಗಿ, ಕುಷ್ಠರೋಗಿಯಾಗಿದ್ದನು. ಆ
ದರೆ ಅರಾಮಿನವರು ಗುಂಪು ಗುಂಪಾಗಿ ಹೊರಟು, ಇಸ್ರಯೇಲ್
೨ ದೇಶದಿಂದ ಒಬ್ಬ ಹುಡುಗಿಯನ್ನು ಕೆರೆಯಾಗಿ ಹಿಡುಕೊಂಡು
ಬಂದರು. ಅವಳು ನಾಮಾನನ ಹೆಂಡತಿಯ ಸನ್ನಿಧಿಯಲ್ಲಿ ಇದ್ದ
೩ ಳು. ಅವಳು ತನ್ನ ಯಜಮಾನಿಗೆ, ಅಹ, ನನ್ನ ಸ್ವಾಮಿ
ಸಮಾರ್ಯದಲ್ಲಿರುವ ಪ್ರವಾದಿಯ ಬಳಿಯಲ್ಲಿರ ಬೇಕು; ಆಗಲ
ವನು ಇವನ ಕುಷ್ಠರೋಗ ತಪ್ಪಿಸಿ, ವಾಸಿ ಮಾಡುವನು, ಅಂ
೪ ಳು. ಆಗ ಒಬ್ಬನು ಹೋಗಿ, ಇಸ್ರಯೇಲ್ ದೇಶದ ಹುಡುಗಿ ಹೀ
ಗೆ ಹೀಗೆ ಹೇಳಿದಳೆಂದು, ತನ್ನ ಯಜಮಾನನಿಗೆ ತಿಳಿಸಿದನು.

೫ ಆದದರಿಂದ ಅರಾಮಿನ ಅರಸನು, ನೀನು ಹೋಗಿ ಬಾ, ನಾ
ನು ಇಸ್ರಯೇಲಿನ ಅರಸನಿಗೆ ಪತ್ರಿಕೆಯನ್ನು ಕಳುಹಿಸುವೆನು,
ಅಂದನು. ಹಾಗೆಯೇ ಅವನು ಹತ್ತು ತಲಾಂತು ಬೆಳ್ಳಿಯನ್ನೂ,
ಆರು ಸಾವಿರ ಭಂಗಾರದ ಹಣಗಳನ್ನೂ, ಹತ್ತು ದುಸ್ತು ಬಟ್ಟೆಗ
ಳನ್ನೂ ತೆಗೆದು ಕೊಂಡು ಹೋದನು. ಅವನು ಇಸ್ರಯೇಲಿನ
೬ ಅರಸನ ಬಳಿಗೆ ಆ ಪತ್ರಿಕೆಯನ್ನು ತೆಗೆದು ಕೊಂಡು ಬಂದನು.
ಏನಂದರೆ, ಈ ಪತ್ರಿಕೆ ನಿನಗೆ ಶೇರುವಾಗ, ಇಗೋ, ನನ್ನ ಸೇವ
ಕನಾದ ನಾಮಾನನನ್ನು, ನೀನು ಅವನ ಕುಷ್ಠರೋಗ ತಪ್ಪಿಸಿ,
೭ ವಾಸಿ ಮಾಡುವ ಹಾಗೆ, ನಿನ್ನ ಬಳಿಗೆ ಕಳುಹಿಸಿದ್ದೇನೆ. ಇಸ್ರ
ಯೇಲಿನ ಅರಸನು ಆ ಪತ್ರಿಕೆಯನ್ನು ಓದಿದ ಮೇಲೆ, ತನ್ನ ವ
ಸ್ತ್ರಗಳನ್ನು ಹರು ಕೊಂಡು, ಕೊಲ್ಲುವದಕ್ಕೂ ಬದುಕಿಸುವದ
ಕ್ಕೂ ನಾನೇ ದೇವರೋ! ಇವನ ಕುಷ್ಠರೋಗ ತಪ್ಪಿಸಿ, ವಾಸಿ
ಮಾಡುವದಕ್ಕೆ ನನ್ನ ಬಳಿಗೆ ಕಳುಹಿಸಿದ್ದೇನು! ನೀವು ದಯೆ
ಮಾಡಿ, ಇವನು ನನಗೆ ವಿರೋಧವಾಗಿ ಝಗಳಕ್ಕೆ ಕಾರಣ ಹು
ಡುಕುವದನ್ನು ನೋಡಿ, ತಿಳುಕೊಳ್ಳಿರಿ, ಅಂದನು.

೮ ಇಸ್ರಯೇಲಿನ ಅರಸನು ತನ್ನ ವಸ್ತ್ರಗಳನ್ನು ಹರುಕೊಂಡ
ನೆಂದು, ದೇವರ ಮನುಷ್ಯನಾದ ಎಲೀಷನು ಕೇಳಿದಾಗ, ನೀನು
ನಿನ್ನ ವಸ್ತ್ರಗಳನ್ನು ಹರುಕೊಂಡದ್ದೇನು! ಇಸ್ರಯೇಲಿನಲ್ಲಿ ಪ್ರವಾ
ದಿ ಉಂಟೆಂದು, ಅವನು ತಿಳುಕೊಳ್ಳುವ ಹಾಗೆ, ಅವನು ನನ್ನ ಬ
೯ ಳಿಗೆ ಬರಲಿ ಎಂದು, ಅರಸನಿಗೆ ಹೇಳಿಕಳುಹಿಸಿದನು. ಹಾಗೆಯೇ



ನಾಮಾನನು ತನ್ನ ಕುದುರೆಗಳ ಸಂಗಡಲೂ ತನ್ನ ರಥದ ಸಂಗಡ
ಲೂ ಬಂದು, ಎಲೀಷನ ಮನೆಯ ಬಾಗಲ ಬಳಿಯಲ್ಲಿ ನಿಂತನು.
೧೦ ಆಗ ಎಲೀಷನು, ನೀನು ಹೋಗಿ, ಯೊರ್ದನಿನಲ್ಲಿ ಏಳು ಸಾರಿ
ತೊಳೆಕೋ; ಆಗ ನಿನ್ನ ಮಾಂಸವು ನಿನಗೆ ಮಾರ್ಪಡುವದು,
ನೀನು ಶುಚಿಯಾಗುವಿ ಎಂದು ಹೇಳಿ, ಅವನ ಬಳಿಗೆ ದೂತನನ್ನು
೧೧ ಕಳುಹಿಸಿದನು. ಆಗ ನಾಮಾನನು ಕೌದ್ರುಗೊಂಡು, ಹೊರಟು
ಹೋಗಿ, ಹೇಳಿದ್ದೇನಂದರೆ—ಇಗೋ, ಅವನು ನಿಶ್ಚಯವಾಗಿ ನನ್ನ
ಬಳಿಗೆ ಹೊರಟು ಬಂದು, ತನ್ನ ದೇವರಾದ ಕರ್ತನ ಹೆಸರನ್ನು
ಕರೆದು, ಆ ಸ್ಥಳದ ಮೇಲೆ ತನ್ನ ಕೈಯನ್ನು ಅಲ್ಲಾಡಿಸಿ, ಕುಷ್ಠ
ರೋಗ ತಪ್ಪಿಸಿ, ವಾಸಿ ಮಾಡುವನೆಂದು, ನಾನು ಹೇಳಿ ಕೊಂಡೆ
೧೨ ನು. ನಾನು ಅವುಗಳಲ್ಲಿ ತೊಳೆ ಕೊಂಡು, ಶುಚಿಯಾಗುವ
ಹಾಗೆ, ದಮಸ್ಕದ ನದಿಗಳಾದ ಅಬಾನವೂ ಫರ್ಪರೂ ಇಸ್ರ
ಯೇಲಿನ ಸಮಸ್ತ ನೀರುಗಳಿಗಿಂತ ಉತ್ತಮವಲ್ಲವೋ! ಎಂಥೇಳಿ,
೧೩ ತಿರುಗಿ ಕೊಂಡು, ಉರಿಯಿಂದ ಹೊರಡನು. ಆದರೆ ಅವನ ಸೇವ
ಕರು ಅವನ ಬಳಿಗೆ ಬಂದು, ಅವನ ಸಂಗಡ ಮಾತಾಡಿ, ನನ್ನ
ತಂದೆಯೇ, ಪ್ರವಾದಿಯು ದೊಡ್ಡ ಕಾರ್ಯವನ್ನು ನಿನಗೆ ಹೇಳಿ
ದ್ದರೆ, ನೀನು ಮಾಡುವದಿಲ್ಲವೋ! ಅವನು ನಿನಗೆ, ತೊಳೆಕೊಂಡು,
೧೪ ಶುಚಿಯಾಗೆಂದು ಹೇಳಿದರೆ, ಅದ್ದು ಏನು! ಅಂದರು. ಆಗಲವನು
ಇಳಿದು ಹೋಗಿ, ದೇವರ ಮನುಷ್ಯನ ವಾಕ್ಯದ ಪ್ರಕಾರ ಯೊ
ರ್ದನಿನಲ್ಲಿ ಏಳು ಸಾರಿ ಮುಣುಗಿದನು; ಆಗ ಅವನ ಮಾಂಸ
ವು ಚಿಕ್ಕ ಮಗುವಿನ ಮಾಂಸದ ಹಾಗೆ ಮಾರ್ಪಟ್ಟಿತು; ಅವನು
ಶುಚಿಯಾದನು.

೧೫ ಆಗ ಅವನೂ ಅವನ ಸಮಸ್ತ ಸೈನ್ಯವೂ ದೇವರ ಮನು
ಷ್ಯನ ಬಳಿಗೆ ತಿರಿಗಿ ಬಂದರು. ಅವನ ಮುಂದೆ ಇವನು ಬಂದು,
ನಿಂತು, ಇಗೋ, ಇಸ್ರಯೇಲಿನಲ್ಲಿರುವ ದೇವರ ಹೊರ್ತು ಭೂ
ಮಿಯಲ್ಲೆಲ್ಲಿಯೂ ಬೇರೆ ದೇವರು ಇಲ್ಲವೆಂದು, ನಾನು ಬಲ್ಲೆನು;
ಆದಕಾರಣ ನೀನು ದಯೆ ಮಾಡಿ, ನಿನ್ನ ಸೇವಕನಿಂದ ಅಳೀವರ್ಷ
೧೬ ದವನ್ನು ತಕ್ಕೋ, ಅಂದನು. ಆದರೆ ಅವನು, ನಾನು ಯಾವನ
ಮುಂದೆ ನಿಲ್ಲುತ್ತೇನೋ, ಆ ಕರ್ತನ ಜೀವದಾಣೆ—ನಾನು ತಕ್ಕೊ
ಳ್ಳುವದಿಲ್ಲ, ಅಂದನು. ಅವನು ತಕ್ಕೊಳ್ಳ ಬೇಕೆಂದು, ಬಲವಂತ
೧೭ ಮಾಡಿದರೂ, ನಾನು ಬಲ್ಲೆನು, ಅಂದನು. ಆಗ ನಾಮಾನನು ಹೇ
ಳಿದ್ದೇನಂದರೆ, ಹಾಗಾದರೆ, ಎರಡು ಹಾಸರ ಕತ್ತೆಗಳು ಹೊರ ತ
ಕ್ಕ ಮಣ್ಣು ನಿನ್ನ ಸೇವಕನಿಗೆ ದಯೆ ಮಾಡ ಬೇಕಲ್ಲ! ಯಾಕಂದ
ರೆ ನಿನ್ನ ಸೇವಕನು ಇನ್ನು ಮೇಲೆ ಕರ್ತನಿಗೆ ಹೊರ್ತಾಗಿ ಅನ್ಯ
ದೇವರುಗಳಿಗೆ ಹೋಮವನ್ನಾದರೂ ಬಲಿಯನ್ನಾದರೂ ಅರ್ಪಿ
೧೮ ಸನು. ಈ ಕಾರ್ಯವನ್ನು ಕರ್ತನು ನಿನ್ನ ಸೇವಕನಿಗೆ ಮನ್ನಿ
ಸಲಿ; ಏನಂದರೆ ನನ್ನ ಯಜಮಾನನು ಅಡ್ಡ ಬೀಳುವದಕ್ಕೆ ರಿ
ಮ್ಮೋನನ ಮನೆಯಲ್ಲಿ ಪ್ರವೇಶಿಸಿ, ಅವನು ನನ್ನ ಕೈಯ ಮೇಲೆ
ಆತು ಕೊಳ್ಳುವಾಗ, ರಿಮ್ಮೋನನ ಮನೆಯಲ್ಲಿ ನಾನು ಅಡ್ಡ ಬಿದ್ದ
ರೆ, ನಾನು ರಿಮ್ಮೋನನ ಮನೆಯಲ್ಲಿ ಅಡ್ಡ ಬೀಳುವಾಗ, ಕರ್ತನು
ನಿನ್ನ ಸೇವಕನಿಗೆ ಈ ಕಾರ್ಯ ಮನ್ನಿಸಲಿ, ಅಂದನು. ಅದಕ್ಕವ
೧೯ ನು, ಸಮಾಧಾನದಿಂದ ಹೋಗು, ಅಂದನು. ಆಗ ಸ್ವಲ್ಪ ದೂರ
ವಾಗಿ ಅವನನ್ನು ಬಿಟ್ಟು ಹೋದನು.

೨೦ ಆದರೆ ದೇವರ ಮನುಷ್ಯನಾದ ಎಲೀಷನ ಸೇವಕನಾಗಿರುವ
ಗೆಹಾಜಿಯು, ಇಗೋ, ನನ್ನ ಯಜಮಾನನು ಈ ಅರಾಮ್ಯನಾ
ದ ನಾಮಾನನು ತಕ್ಕೊಂಡು ಬಂದದ್ದನ್ನು ಅವನ ಕೈಯಿಂದ
ತಕ್ಕೊಳ್ಳದೆ, ಸುಮ್ಮನೆ ಕಳುಹಿಸಿದ್ದಾನೆ. ಆದರೆ ಕರ್ತನ ಜೀವ
ದಾಣೆ—ನಾನು ಅವನ ಹಿಂದೆ ಓಡಿ ಹೋಗಿ, ಅವನ ಕೈಯಿಂದ
೨೧ ಏನಾದರೂ ತಕ್ಕೊಳ್ಳುವೆನು, ಅಂದು ಕೊಂಡನು. ಹಾಗೆಯೇ
ಗೆಹಾಜಿಯು ನಾಮಾನನ ಹಿಂದೆ ಹೋದನು. ನಾಮಾನನು ತನ್ನ
ಹಿಂದೆ ಓಡಿ ಬರುವವನನ್ನು ನೋಡಿದಾಗ, ಅವನನ್ನು ಎದುರು
೨೨ ಗೊಳ್ಳ ರಥದಿಂದ ಇಳಿದು, ಅವನಿಗೆ, ಸುಖವೋ! ಅಂದನು. ಅ
ದಕ್ಕವನು, ಸುಖವೇ; ಇಗೋ, ಪ್ರವಾದಿಗಳ ಮಕ್ಕಳಲ್ಲಿ ಇಬ್ಬರು
ಪ್ರಾಯಸ್ತರು ಎಫ್ರಯಿಮಿನ ಬೆಟ್ಟದಿಂದ ಈಗಲೇ ನನ್ನ ಬಳಿಗೆ
ಬಂದಿದ್ದಾರೆ; ನೀನು ದಯೆ ಮಾಡಿ, ಅವರಿಗೆ ಒಂದು ತಲಾಂತು
ಬೆಳ್ಳಿಯನ್ನೂ, ಎರಡು ದುಸ್ತು ಬಟ್ಟೆಗಳನ್ನೂ ಕೊಡ ಹೇಳ ನ
೨೩ ನ್ನ ಯಜಮಾನನು ಕಳುಹಿಸಿದ್ದಾನೆ, ಅಂದನು. ಆಗ ನಾಮಾನ
ನು, ನೀನು ದಯೆ ಮಾಡಿ, ಎರಡು ತಲಾಂತುಗಳನ್ನು ತಕ್ಕೋ
ಎಂದು ಹೇಳಿ, ಅವನನ್ನು ಬಲವಂತ ಮಾಡಿದನು. ಹಾಗೆಯೇ
ಎರಡು ತಲಾಂತು ಬೆಳ್ಳಿಯನ್ನು ಎರಡು ಚೀಲಗಳಲ್ಲಿ ಕಟ್ಟಿಸಿ,
ಅದರ ಸಂಗಡ ಎರಡು ದುಸ್ತು ಬಟ್ಟೆಗಳನ್ನು ಕೊಟ್ಟು, ತನ್ನ
ಸೇವಕರಲ್ಲಿ ಇಬ್ಬರ ಮೇಲೆ ಹೊರಿಸಿದನು; ಅವರು ಇವನ ಮುಂದೆ
೨೪ ಹೊತ್ತು ಕೊಂಡು ಹೋದರು. ಆದರೆ ಅವನು ದುರ್ಗಕ್ಕೆ ಬಂದಾ
ಗ, ಅವರ ಕೈಯಿಂದ ತಕ್ಕೊಂಡು, ಮನೆಯಲ್ಲಿಟ್ಟು, ಆ ಮನು
೨೫ ಷ್ಯರನ್ನು ಕಳುಹಿಸಿ ಬಿಟ್ಟದ್ದರಿಂದ, ಅವರು ಹೋದರು. ಆಗ
ಇವನು ಒಳಗೆ ಪ್ರವೇಶಿಸಿ, ತನ್ನ ಯಜಮಾನನ ಮುಂದೆ ನಿಂತನು.
ಎಲೀಷನು ಅವನಿಗೆ, ಗೆಹಾಜಿಯೇ, ಎಲ್ಲಿಂದ ಬಂದಿ! ಅಂದನು.
ಅದಕ್ಕವನು ನಿನ್ನ ಸೇವಕನು ಎಲ್ಲಿಗೂ ಹೋಗಲಿಲ್ಲ, ಅಂದನು.
೨೬ ಆಗ ಅವನು ಇವನಿಗೆ, ಆ ಮನುಷ್ಯನು ನಿನಗೆ ಎದುರುಗೊಳ್ಳ
ತನ್ನ ರಥದಿಂದ ಇಳಿದು, ನಿನ್ನ ಬಳಿಗೆ ಬಂದಾಗ, ನನ್ನ ಹೃದ
ಯವು ನಿನ್ನ ಸಂಗಡ ಹೋಗಲಿಲ್ಲವೋ! ಕೊಬ್ಬುವನ್ನೂ, ವಸ್ತ್ರಗ
ಳನ್ನೂ, ಇಚ್ಚೆಯ ಕೋಪುಗಳನ್ನೂ, ದ್ರಾಕ್ಷೇ ತೋಟಗಳ
ನ್ನೂ, ಕುರಿ ದನಗಳನ್ನೂ, ದಾಸ ದಾಸಿಯರನ್ನೂ ಸಂಪಾದಿಸಿ
೨೭ ಕೊಳ್ಳುವದಕ್ಕೆ ಇದು ಸಮಯವೋ! ಅದದರಿಂದ ನಾಮಾನನ
ಕುಷ್ಠರೋಗವು ನಿನಗೂ ನಿನ್ನ ಬೀಜಕ್ಕೂ ನಿತ್ಯವಾಗಿ ಹತ್ತುವ
ದು, ಅಂದನು. ಆಗ ಅವನು ಮಂಜಿನ ಹಾಗೆಯೇ ಕುಷ್ಠರೋಗಿ
ಯಾಗಿ ಅವನ ಸಮುಖದಿಂದ ಹೊರಟು ಹೋದನು.

## ೬. ಸಂಧಿ.

೧ ಮತ್ತು ಪ್ರವಾದಿಗಳ ಮಕ್ಕಳು ಎಲೀಷನಿಗೆ, ಇಗೋ, ಈಗ
ನಾವು ನಿನ್ನ ಸಂಗಡ ವಾಸವಾಗಿರುವ ಸ್ಥಳವು ನಮಗೆ ಇಕ್ಕಟ್ಟಾ
ಗಿದೆ. ದಯೆ ಮಾಡು; ನಾವು ಯೊರ್ದನಿನ ಮಟ್ಟಿಗೂ ಹೋಗಿ,
ಪ್ರತಿ ಮನುಷ್ಯನು ಅಲ್ಲಿಂದ ಬಂದೊಂದು ತೊಲೆಯನ್ನು ತ
ಕ್ಕೊಂಡು ಬಂದು, ವಾಸವಾಗಿರುವದಕ್ಕೆ ನಮಗೋಸ್ಕರ ಒಂದು
ಸ್ಥಳವನ್ನು ಅಲ್ಲಿ ಮಾಡುವ, ಅಂದರು. ಅವನು, ಹೋಗಿರಿ, ಅಂ
೩ ದನು. ಆಗ ಅವರಲ್ಲಿ ಒಬ್ಬನು, ನೀನು ದಯೆವಾಗಿ ಚಿತ್ತೈಸಿ,
ನಿನ್ನ ಸೇವಕರ ಸಂಗಡ ಬಾ, ಅಂದನು. ನಾನು ಬರುತ್ತೇನೆ,
೪ ಅಂದನು. ಹಾಗೆಯೇ ಅವನು ಅವರ ಸಂಗಡ ಹೋದನು. ಅವ
೫ ರು ಯೊರ್ದನಿಗೆ ಬಂದು, ಅಲ್ಲಿ ಮರಗಳನ್ನು ಕಡಿದರು. ಆದರೆ
ಒಬ್ಬನು ಮರವನ್ನು ಬೀಳಿಸುವಾಗ, ಕೊಡ್ಲಿಯು ನೀರಿನೊಳಗೆ

ಬಿತ್ತು. ಆಗಲವನು, ಅಯ್ಯೋ! ಯಜಮಾನನೇ, ಅದು ಎರವಾ
೬ ಗಿ ತಕ್ಕೊಂಡದ್ದು ಎಂದು, ಕೂಗಿ ಹೇಳಿದನು. ದೇವರ ಮನುಷ್ಯ
ನು, ಅದು ಎಲ್ಲಿ ಬಿತ್ತು! ಅಂದನು. ಇವನು ಅವನಿಗೆ ಸ್ಥಳವನ್ನು
ತೋರಿಸಿದ ತರುವಾಯ, ಅವನು ಒಂದು ಕಟ್ಟಿಗೆಯನ್ನು ಕಡಿದು,
೭ ಅಲ್ಲಿ ಹಾಕಿದ್ದರಿಂದ, ಆ ಕಬ್ಬಿಣವು ತೇಲಿತು. ನೀನು ತೆಗೆದುಕೋ,
ಅಂದನು. ಹಾಗೆಯೇ ಅವನು ತನ್ನ ಕೈಯನ್ನು ಚಾಚಿ, ಅದ
ನ್ನು ತೆಗೆದು ಕೊಂಡನು.

೮ ಮತ್ತು ಅರಾಮಿನ ಅರಸನು ಇಸ್ರಯೇಲಿನ ಮೇಲೆ ಯುದ್ಧ
ಮಾಡುತ್ತಾ ಇದ್ದನು; ಮತ್ತು ಇಂಥಿಂಥ ಸ್ಥಳದಲ್ಲಿ ನನ್ನ ದಂಡು
ಇಳ್ಳುವ ಬೇಕೆಂದು, ತನ್ನ ಸೇವಕರ ಸಂಗಡ ಯೋಚನೆ ಮಾಡಿ
೯ ಕೊಂಡನು. ಆಗ ದೇವರ ಮನುಷ್ಯನು ಇಸ್ರಯೇಲಿನ ಅರಸನಿ
ಗೆ ಅಂಥಾ ಸ್ಥಳವನ್ನು ಹಾದು ಹೋಗದೆ, ಜಾಗ್ರತೆಯಾಗಿ ಇರು,
ಯಾಕಂದರೆ ಅರಾಮ್ಯರು ಅಲ್ಲಿಗೆ ಇಳಿದು ಬಂದಿದ್ದಾರೆಂದು,
೧೦ ಹೇಳಿ ಕಳುಹಿಸಿದನು. ಹೀಗೆಯೇ ದೇವರ ಮನುಷ್ಯನು ತನ್ನ
ನ್ನು ಎಚ್ಚರಿಸಿ, ತನಗೆ ಹೇಳಿದ ಸ್ಥಳಕ್ಕೆ ಇಸ್ರಯೇಲಿನ ಅರಸನು
ಕಳುಹಿಸಿ, ರಕ್ಷಿಸಿ ಕೊಂಡನು; ಒಂದೆರಡು ಸಾರಿ ಮಾತ್ರವೇ ಅಲ್ಲ.

೧೧ ಮತ್ತು ಅರಾಮಿನ ಅರಸನ ಹೃದಯವು ಇದರ ನಿಮಿತ್ತ ಕಳ
ವಳ್ಳ ಗೊಂಡು, ತನ್ನ ಸೇವಕರನ್ನು ಕರೆದು, ಅವರಿಗೆ, ನಮ್ಮಲ್ಲಿ
ಇಸ್ರಯೇಲಿನ ಅರಸನ ಕಡೆಯವನು ಯಾರು! ನೀವು ನನಗೆ
೧೨ ತಿಳಿಸುವದಿಲ್ಲವೋ! ಅಂದನು. ಅವನ ಸೇವಕರಲ್ಲಿ ಒಬ್ಬನು, ನ
ನ್ನ ಸ್ವಾಮಿಯೇ, ಅರಸನೇ, ಯಾವನೂ ಇಲ್ಲ. ಆದರೆ ಇಸ್ರ
ಯೇಲಿನಲ್ಲಿರುವ ಪ್ರವಾದಿಯಾದ ಎಲೀಷನು ನೀನು ನಿನ್ನ ಮಲ
ಗುವ ಮನೆಯಲ್ಲಿ ಹೇಳುವ ಮಾತುಗಳನ್ನು ಇಸ್ರಯೇಲಿನ ಅ
೧೩ ರಸನಿಗೆ ಹೇಳುತ್ತಾನೆ, ಅಂದನು. ಆಗಲವನು, ನಾನು ಕಳುಹಿಸಿ,
ಅವನನ್ನು ಹಿಡಿಯುವ ಹಾಗೆ, ನೀವು ಹೋಗಿ, ಅವನು ಎಲ್ಲಿ
ದ್ದಾನೋ! ನೋಡಿರಿ, ಅಂದನು. ಇಗೋ, ದೊತಾನಿನಲ್ಲಿದ್ದಾ
ನೆಂದು, ಅವನಿಗೆ ತಿಳಿಸಿದರು.

೧೪ ಆದದರಿಂದ ಅವನು ಅಲ್ಲಿಗೆ ಕುದುರೆಗಳನ್ನೂ, ರಥಗಳನ್ನೂ
ಮಹಾ ಸೈನ್ಯವನ್ನೂ ಕಳುಹಿಸಿದನು. ಅವರು ರಾತ್ರಿಯಲ್ಲಿ
೧೫ ಬಂದು, ಪಟ್ಟಣವನ್ನು ಸುತ್ತಿ ಕೊಂಡರು. ದೇವರ ಮನುಷ್ಯನ
ಸೇವಕನು ಉದಯದಲ್ಲಿ ಎದ್ದು, ಹೊರಗೆ ಹೊರಟಾಗ, ಇಗೋ,
ಕುದುರೆಗಳೂ ರಥಗಳೂ ಉಳ್ಳ ಸೈನ್ಯವು ಪಟ್ಟಣವನ್ನು ಸುತ್ತಿ
ಕೊಂಡಿತ್ತು. ಆಗ ಸೇವಕನು ಅವನಿಗೆ, ಅಯ್ಯೋ! ನನ್ನ ಸ್ವಾಮಿ
೧೬ ಯೇ, ಏನು ಮಾಡುವ! ಅಂದನು. ಆದರೆ ಅವನು, ಭಯ ಪಡ
ಬೇಡ; ಯಾಕಂದರೆ ಅವರ ಸಂಗಡ ಇರುವವರಿಗಿಂತ, ನಮ್ಮ
೧೭ ಸಂಗಡ ಇರುವವರು ಹೆಚ್ಚಾಗಿದ್ದಾರೆ, ಅಂದನು. ಆಗ ಎಲೀಷನು,
ಕರ್ತನೇ, ನೀನು ದಯೆ ಮಾಡಿ, ಅವನು ನೋಡುವ ಹಾಗೆ, ಅ
ವನ ಕಣ್ಣುಗಳನ್ನು ತೆರೆ ಎಂದು ಪ್ರಾರ್ಥಿಸಿದನು. ಕರ್ತನು ಆ
ಪ್ರಾಯಸ್ತನ ಕಣ್ಣುಗಳನ್ನು ತೆರೆದಾಗ, ಇಗೋ, ಎಲೀಷನ ಸು
ತ್ತಲೂ ಬೆಟ್ಟದಲ್ಲಿ ಬೆಂಕಿಯ ಕುದುರೆಗಳೂ ರಥಗಳೂ ತುಂಬಿ
೧೮ ದ್ದವು. ಅವರು ಇವನ ಬಳಿಗೆ ಇಳಿದು ಬಂದಾಗ, ಎಲೀಷನು,
ಕರ್ತನೇ, ನೀನು ದಯೆ ಮಾಡಿ, ಈ ಜನರನ್ನು ಕುರುಡುತನ
ದಿಂದ ಹೊಡೆ, ಎಂದು ಪ್ರಾರ್ಥಿಸಿದನು. ಆಗ ಎಲೀಷನ ಮಾತಿ
೧೯ ನ ಹಾಗೆಯೇ ಅವರನ್ನು ಕುರುಡುತನದಿಂದ ಹೊಡೆದನು. ಆಗ
ಎಲೀಷನು ಅವರಿಗೆ, ಇದು ಆ ಮಾರ್ಗವಲ್ಲ, ಇದು ಆ ಪಟ್ಟಣ
ಲ್ಲ; ನನ್ನ ಹಿಂದೆ ಬನ್ನಿರಿ; ನೀವು ಹುಡುಕುವ ಮನುಷ್ಯನ ಬಳಿಗೆ
ನಿಮ್ಮನ್ನು ಬರ ಮಾಡುವೆನು ಎಂಥೇಳಿ, ಅವರನ್ನು ಸಮಾರ್ಯ
೨೦ ಕ್ಕೆ ನಡಿಸಿದನು. ಅವರು ಸಮಾರ್ಯಕ್ಕೆ ಬಂದಾಗ, ಏನಾಯಿ
ತಂದರೆ, ಎಲೀಷನು, ಕರ್ತನೇ, ಇವರು ನೋಡುವ ಹಾಗೆ, ಇವ
ರ ಕಣ್ಣುಗಳನ್ನು ತೆರೆ, ಅಂದನು. ಆಗ ಕರ್ತನು ಅವರ ಕಣ್ಣು
ಗಳನ್ನು ತೆರೆದನು; ಅವರು ನೋಡಿದಾಗ, ಇಗೋ, ಸಮಾರ್ಯ
ದ ಮಧ್ಯದಲ್ಲಿದ್ದರು.

೨೧ ಇಸ್ರಯೇಲಿನ ಅರಸನು ಅವರನ್ನು ಕಂಡಾಗ, ಎಲೀಷನಿಗೆ,
ನನ್ನ ತಂದೆಯೇ, ನಾನು ಹೊಡೆಯಲೋ! ಹೊಡೆಯಲೋ! ಅಂ
೨೨ ದನು. ಅದಕ್ಕವನು, ಹೊಡೆಯ ಬೇಡ; ನೀನು ನಿನ್ನ ಕತ್ತಿಯಿಂ
ದಲೂ ನಿನ್ನ ಬಿಲ್ಲಿನಿಂದಲೂ ಕೆಕೆಯಾಗಿ ತೆಗೆದು ಕೊಳ್ಳುವವರ
ನ್ನು ಹೊಡೆಯುತ್ತೀಯೋ! ಕೊಟ್ಟಿಯನ್ನೂ ನೀರನ್ನೂ ಇವ
ರ ಮುಂದೆ ಇಡು; ಅವರು ಉಂಡು, ಕುಡಿದು, ತಮ್ಮ ಯಜಮಾ
೨೩ ನನ ಬಳಿಗೆ ಹೋಗಲಿ, ಅಂದನು. ಆಗ ಅವರಿಗೋಸ್ಕರ ದೊಡ್ಡ
ಔತಣ ಮಾಡಿಸಿದನು; ಅವರು ಉಂಡು ಕುಡಿದ ತರುವಾಯ, ಅವ
ರನ್ನು ಕಳುಹಿಸಿ ಬಿಟ್ಟನು. ಅವರು ತಮ್ಮ ಯಜಮಾನನ ಬಳಿಗೆ
ಹೋದರು. ಮತ್ತು ಅರಾಮ್ಯರ ದಂಡುಗಳು ಇಸ್ರಯೇಲ್ ದೇಶ
ದಲ್ಲಿ ತಿರಿಗಿ ಬಾರದೆ ಹೋದವು.

೨೪ ಇದರ ತರುವಾಯ ಏನಾಯಿತಂದರೆ; ಅರಾಮಿನ ಅರಸನಾದ
ಬೆನ್ಹದಾದನು ತನ್ನ ಸಮಸ್ತ ಸೈನ್ಯವನ್ನು ಕೂಡಿಸಿ ಕೊಂಡು,
ಹೊರಟು ಹೋಗಿ, ಸಮಾರ್ಯವನ್ನು ಮುತ್ತಿಗೆ ಹಾಕಿದನು.
೨೫ ಆದದರಿಂದ ಸಮಾರ್ಯದಲ್ಲಿ ದೊಡ್ಡ ಬರ ಉಂಟಾಯಿತು. ಇ
ಗೋ, ಒಂದು ಕತ್ತೆಯ ತಲೆಯು ಎಂಭತ್ತು ರೂಪಾಯಿಗಳ್ಳಗೂ,
ಒಂದು ಕಾಬ್ ಪಾರಿವಾಳ್ಳದ ಕೆಟ್ಟಿ ಐದು ರೂಪಾಯಿಗಳ್ಳಗೂ
ಮಾರಲ್ಪಡುವ ಮಟ್ಟಿಗೂ, ಅದನ್ನು ಮುತ್ತಿಗೆ ಹಾಕಿದನು.

೨೬ ಇಸ್ರಯೇಲಿನ ಅರಸನು ಅಲಂಗದ ಮೇಲೆ ಹಾದು ಹೋಗು
ತ್ತಿರುವಾಗ, ಒಬ್ಬ ಸ್ತ್ರೀಯು ಅವನಿಗೆ ಕೂಗಿ, ನನ್ನ ಸ್ವಾಮಿ
೨೭ ಯೇ, ಅರಸನೇ, ರಕ್ಷಿಸು, ಅಂದಳು. ಅದಕ್ಕವನು, ಕರ್ತನು ನಿ
ನ್ನನ್ನು ಸಂರಕ್ಷಿಸದೆ ಹೋದರೆ, ನಾನು ಎಲ್ಲಿಂದ ನಿನ್ನನ್ನು ರಕ್ಷಿಸ
ಲಿ! ಕಣದಿಂದಲೋ! ಇಲ್ಲವೆ ಆಲೆಯಿಂದಲೋ! ಅಂದನು.
೨೮ ಮತ್ತು ಅರಸನು ಅವಳ್ಳಿಗೆ, ನಿನಗೆ ಏನು ಅಂದೆ! ಅಂದನು. ಅದ
ಕ್ಕವಳು, ಈ ಸ್ತ್ರೀಯು ನನಗೆ ಹೇಳಿದ್ದೇನಂದರೆ, ಈ ಹೊತ್ತು
ನಾವು ನಿನ್ನ ಮಗನನ್ನು ತಿನ್ನುವ ಹಾಗೆ, ಅವನನ್ನು ಕೊಡು;
೨೯ ನಾಳೆ ನನ್ನ ಮಗನನ್ನು ತಿನ್ನುವ, ಅಂದಳು. ಹಾಗೆಯೇ ನಾವು
ನನ್ನ ಮಗನನ್ನು ಬೇಯಿಸಿ, ಅವನನ್ನು ತಿಂದೆವು. ಮಾರಣೆ ದಿವ
ಸದಲ್ಲಿ ನಾನು ಅವಳ್ಳಿಗೆ, ನಾವು ನಿನ್ನ ಮಗನನ್ನು ತಿನ್ನುವ ಹಾ
ಗೆ, ಅವನನ್ನು ಕೊಡು ಅಂದೆನು. ಆದರೆ ಅವಳು ತನ್ನ ಮಗನ
೩೦ ನ್ನು ಬಚ್ಚಿಟ್ಟಿದ್ದಾಳೆ, ಅಂದಳು. ಅರಸನು ಆ ಸ್ತ್ರೀಯು ಹೇಳಿದ
ಮಾತುಗಳನ್ನು ಕೇಳಿದಾಗ, ತನ್ನ ವಸ್ತ್ರಗಳನ್ನು ಹರು ಕೊಂ
ಡು, ಅಲಂಗದ ಮೇಲೆ ಹಾದು ಹೋದನು. ಜನರು ನೋಡಿದಾಗ,
ಇಗೋ, ಅವನ ಮಾಂಸದ ಮೇಲೆ ಒಳ್ಳಗೆ ಗೋಣಿಯು ಇತ್ತು.
೩೧ ಆಗಲವನು ಶಫಾಟನ ಮಗನಾದ ಎಲೀಷನ ತಲೆಯು ಈ ದಿನ
ವೆಲ್ಲಾ ಅವನ ಮೇಲೆ ಇದ್ದರೆ, ದೇವರು ನನಗೆ ಹೀಗೆಯೂ ಹಾಗೆ
ಯೂ ಮಾಡಲಿ, ಅಂದನು.

೩೨ ಆದರೆ ಎಲೀಷನು ತನ್ನ ಮನೆಯಲ್ಲಿ ಕುಳ್ಳತು ಕೊಂಡಿದ್ದನು;



ಹಿರಿಯರು ಅವನ ಸಂಗಡ ಕುಳ್ಳತು ಕೊಂಡಿದ್ದರು. ಆಗ ಅರಸ
ನು ತನ್ನ ಬಳಿಯಿಂದ ಒಬ್ಬ ಮನುಷ್ಯನನ್ನು ಕಳುಹಿಸಿದನು. ಆ
ದೂತನು ಎಲೀಷನ ಬಳಿಗೆ ಬರುವದಕ್ಕಿಂತ ಮುಂಚೆ, ಅವನು
ಹಿರಿಯರಿಗೆ, ಈ ಕೊಲೆಪಾತಕನ ಮಗನು ನನ್ನ ತಲೆಯನ್ನು
೩೩ ತೆಗೆದು ಕೊಳ್ಳ ಕಳುಹಿಸಿದ್ದನ್ನು ನೋಡಿದಿರೋ! ದೂತನು ಬ
ರುವಾಗ ನೋಡಿರಿ; ಬಾಗಲು ಮುಚ್ಚಿ, ಬಾಗಲ ಬಳ್ಳಯಲ್ಲಿ ಅವನ
ನ್ನು ಭುಟ್ಟಿಯಾಗಿ ಹಿಡು ಕೊಳ್ಳಿರಿ. ಅವನ ಯಜಮಾನನ
ಪಾದಗಳ ಶಬ್ದವು ಅವನ ಹಿಂದೆ ಇಲ್ಲವೋ! ಅಂದನು. ಅವನು
ಅವರ ಸಂಗಡ ಇನ್ನೂ ಮಾತಾಡುತ್ತಿರುವಾಗ, ಇಗೋ, ಆ ದೂ
ತನು ತನ್ನ ಬಳ್ಳಗೆ ಬಂದನು. ಮತ್ತು, ಇಗೋ, ಈ ಕೇಡು ಕರ್ತ
ನಿಂದ ಉಂಟಾಯಿತು; ನಾನು ಇನ್ನೂ ಕರ್ತನನ್ನು ನಿರೀಕ್ಷಿಸು
ವದೇನು! ಅಂದನು.

## ೭. ಸಂಧಿ.

೧ ಆಗ ಎಲೀಷನು, ನೀವು ಕರ್ತನ ವಾಕ್ಯವನ್ನು ಕೇಳ್ಳರಿ; ಕರ್ತ
ನು ಹೀಗೆ ಹೇಳುತ್ತಾನೆ—ನಾಳೆ ಹೆಚ್ಚು ಕಡಿಮೆ ಇದ್ದು ಹೊತ್ತಿಗೆ
ಸಮಾರ್ಯದ ಬಾಗಲಲ್ಲಿ ಒಂದು ಸೇಯ ನಯವಾದ ಹಿಟ್ಟು
ಒಂದು ಷೆಕೆಲಿಗೂ, ಎರಡು ಸೇಯ ಜವೆಗೋಧಿಯು ಒಂದು ಷೆ
೨ ಕೆಲಿಗೂ ಮಾರಲ್ಪಡುವವು, ಅಂದನು. ಆಗ ಅರಸನಿಗೆ ಕೈಯಾ
ಸರ ಕೊಡುವ ಅಧಿಕಾರಿಯು ದೇವರ ಮನುಷ್ಯನಿಗೆ ಪ್ರತ್ಯುತ್ತ
ರವಾಗಿ, ಇಗೋ, ಕರ್ತನು ಆಕಾಶದಲ್ಲಿ ಕಿಟಕಿಗಳನ್ನು ಮಾಡಿ
ದರೆ, ಈ ಕಾರ್ಯ ಆಗ ಬಹುದೋ! ಅಂದನು. ಅದಕ್ಕವನು ಇ
ಗೋ, ನೀನು ನಿನ್ನ ಕಣ್ಣುಗಳಿಂದ ನೋಡುವಿ; ಆದರೆ ಅದರಿಂದ
ತಿನ್ನುವದಿಲ್ಲ, ಅಂದನು.

3 ಆದರೆ ಊರು ಬಾಗಲ ದ್ವಾರದಲ್ಲಿ ನಾಲ್ಕು ಮಂದಿ ಕುಷ್ಠ
ರೋಗಿಗಳು ಇದ್ದರು. ಅವರು ಒಬ್ಬರಿಗೊಬ್ಬರು, ನಾವು ಸಾ
೪ ಯುವ ಮಟ್ಟಿಗೂ ಇಲ್ಲಿ ಕುಳ್ಳತು ಕೊಂಡಿರುವದೇನು! ನಾವು ಪ
ಟ್ಟಣದಲ್ಲಿ ಪ್ರವೇಶಿಸುವ ಅಂದರೆ, ಪಟ್ಟಣದಲ್ಲಿ ಬರವಾದದರಿಂದ, ಅಲ್ಲಿ
ಸಾಯುತ್ತೇವೆ. ಇಲ್ಲಿ ನಾವು ಕುಳಿತಿದ್ದರೂ, ಹಾಗೆಯೇ ಸಾ
ಯುತ್ತೇವೆ ಆದದರಿಂದ ನಾವು ಅರಾಮ್ಯರ ದಂಡಿಗೆ ಹೋಗಿ
ಬೀಳ್ಳವ, ಬನ್ನಿರಿ. ಅವರು ನಮ್ಮನ್ನು ಬದುಕಲೀಸಿದರೆ, ಬದುಕು
ವೆವು; ಅವರು ನಮ್ಮನ್ನು ಸಾಯಿಸಿದರೆ, ಸಾಯುವೆವು, ಅಂದು
೫ ಕೊಂಡರು. ಹಾಗೆಯೇ ಸಂಜೆಯಲ್ಲಿ ಎದ್ದು, ಅರಾಮ್ಯರ ದಂಡಿಗೆ
ಹೋಗ, ಅವರು ಅರಾಮ್ಯರ ದಂಡಿನ ಅಂಚಿಗೆ ಬಂದಾಗ, ಇ
೬ ಗೋ, ಅಲ್ಲಿ ಯಾರೂ ಇರಲಿಲ್ಲ. ಯಾಕಂದರೆ ಕರ್ತನು ದಂ
ಡಿನಲ್ಲಿರುವ ಅರಾಮ್ಯರಿಗೆ ರಥಗಳ ಶಬ್ದವೂ ಕುದುರೆಗಳ ಶಬ್ದ
ವೂ ಮಹಾ ಸೈನ್ಯದ ಶಬ್ದವೂ ಕೇಳ್ಳಲ್ಪಡ ಮಾಡಿದ್ದರಿಂದ, ಅವ
ರು ಒಬ್ಬರಿಗೊಬ್ಬರು, ಇಗೋ, ಇಸ್ರಯೇಲಿನ ಅರಸನು ಹಿತ್ತಿ
ಯರ ಅರಸುಗಳನ್ನೂ, ಐಗುಪ್ತದ ಅರಸುಗಳನ್ನೂ ನಮ್ಮ ಮೇ
೭ ಲೆ ಬರ, ಅವರನ್ನು ಕೂಲಿಗೆ ಕರೆದಿದ್ದಾನೆ, ಅಂದು ಕೊಂಡರು.
ಮತ್ತು ಅವರು ಸಂಜೆಯಲ್ಲಿ ಎದ್ದು, ದಂಡಿದ್ದ ಹಾಗೆ, ತಮ್ಮ ಗುಡಾ
ರಗಳನ್ನೂ ತಮ್ಮ ಕುದುರೆಗಳನ್ನೂ ತಮ್ಮ ಕತ್ತೆಗಳನ್ನೂ ಬಿ
ಟ್ಟು ಬಿಟ್ಟು, ತಮ್ಮ ಪ್ರಾಣಕ್ಕೋಸ್ಕರ ಓಡಿ ಹೋದರು.

೮ ಆ ಕುಷ್ಠರೋಗಿಗಳು ದಂಡಿನ ಅಂಚಿನ ಮಟ್ಟಿಗೂ ಬಂದು,
ಒಂದು ಗುಡಾರದಲ್ಲಿ ಪ್ರವೇಶಿಸಿ, ಅಲ್ಲಿ ಉಂಡು, ಕುಡಿದು, ಅಲ್ಲಿದ್ದ
ಬೆಳ್ಳಿ ಭಂಗಾರವನ್ನೂ, ವಸ್ತ್ರಗಳನ್ನೂ ತೆಗೆದು ಕೊಂಡು ಹೋ
ಗಿ, ಬಚ್ಚಿಟ್ಟರು; ತಿರಿಗಿ ಬಂದು, ಮತ್ತೊಂದು ಗುಡಾರದಲ್ಲಿ ಪ್ರವೇ
ಶಿಸಿ, ಅಲ್ಲಿಂದಲೂ ಹಾಗೆಯೇ ತೆಗೆದು ಕೊಂಡು ಹೋಗಿ, ಬಚ್ಚಿ
೯ ಟ್ಟರು. ಆಗಲವರು ಒಬ್ಬರಿಗೊಬ್ಬರು, ನಾವು ಮಾಡಿದ್ದು ಒಳ್ಳೇ
ದಲ್ಲ; ಈ ದಿವಸ ಒಳ್ಳೇ ಸಮಾಚಾರದ ದಿವಸ; ಮತ್ತು ನಾವು
ಸುಮ್ಮನೆ ಇದ್ದೇವೆ. ಉದಯವಾಗುವ ಪರ್ಯಂತರ ನಾವು ತಡೆ
ದರೆ, ಪ್ರಾಯಶ್ಚಿತ್ತ ಹೊಂದುವೆವು; ಆದಕಾರಣ ನಾವು ಅರಸನ
ಮನೆಯವರಿಗೆ ತಿಳಿಸುವ ಹಾಗೆ, ಹೋಗುವ, ಬನ್ನಿರಿ, ಅಂದು
ಕೊಂಡರು.

೧೦ ಹಾಗೆಯೇ ಅವರು ಬಂದು, ಪಟ್ಟಣದ ಬಾಗಲು ಕಾಯುವವನ
ನ್ನು ಕರೆದು, ಅವನಿಗೆ, ನಾವು ಅರಾಮ್ಯರ ದಂಡಿಗೆ ಹೋಗಿ ಬಂ
ದೆವು; ಇಗೋ, ಅಲ್ಲಿ ಕಟ್ಟಲ್ಪಟ್ಟ ಕುದುರೆಗಳೂ, ಕಟ್ಟಲ್ಪಟ್ಟ ಕತ್ತೆ
ಗಳೂ, ಸುಮ್ಮನಿರುವ ಗುಡಾರಗಳೂ ಹೊರ್ತಾಗಿ, ಮನುಷ್ಯ
೧೧ ನಾದರೂ ಮನುಷ್ಯನ ಶಬ್ದವಾದರೂ ಇಲ್ಲ, ಅಂದರು. ಅವನು
ಬಾಗಲು ಕಾಯುವವರನ್ನು ಕರೆದನು; ಅವರು ಒಳ್ಳಗಿರುವ ಅರಸ
ನ ಮನೆಯವರಿಗೆ ತಿಳಿಸಿದರು.

೧೨ ಆಗ ಅರಸನು ರಾತ್ರಿಯಲ್ಲಿ ಎದ್ದು, ತನ್ನ ಸೇವಕರಿಗೆ, ಅರಾ
ಮ್ಯರು ನಮಗೆ ಮಾಡಿದ್ದನ್ನು ನಿಮಗೆ ತಿಳ್ಳಿಸುತ್ತೇನೆ. ನಾವು ಹಸಿ
ದವರಾಗಿದ್ದೇವೆಂದು, ಅವರು ತಿಳ್ಳಿದು, ಹೊಲದಲ್ಲಿ ಅಡಗಿ ಕೊಳ್ಳ
ದಂಡಿನಿಂದ ಹೊರಟು—ಅವರು ಪಟ್ಟಣದಿಂದ ಹೊರಟು ಬಂದಾಗ,
ನಾವು ಅವರನ್ನು ಪ್ರಾಣದಿಂದ ಹಿಡಿದು, ಪಟ್ಟಣದಲ್ಲಿ ಪ್ರವೇಶಿಸುವ
೧೩ ಎಂದು, ಅಂದು ಕೊಂಡಿದ್ದಾರೆ, ಅಂದನು. ಆಗ ಅವನ ಸೇವಕರಲ್ಲಿ
ಒಬ್ಬನು ಪ್ರತ್ಯುತ್ತರವಾಗಿ, ಪಟ್ಟಣದಲ್ಲಿ ಉಳ್ಳದಿರುವ ಕುದುರೆಗಳ
ಲ್ಲಿ ಐದು ಕುದುರೆಗಳನ್ನು ತಕ್ಕೊಂಡು ಹೋಗಲಿ; ಇಗೋ, ಅ
ವು ಇಸ್ರಯೇಲಿನ ಸಮಸ್ತ ಸಮೂಹದಲ್ಲಿ ಉಳ್ಳದವುಗಳ ಹಾಗೆ
ಅವೆ; ಇಗೋ, ಇಸ್ರಯೇಲಿನ ಸಮಸ್ತ ಗುಂಪಿನಲ್ಲಿ ಮುಗಿದು ಹೋ
ದವುಗಳ ಹಾಗೆ ಅವೆ; ನಾವು ಕಳುಹಿಸಿ, ನೋಡುವ, ಅಂದನು.
೧೪ ಹಾಗೆಯೇ ಅವರು ಎರಡು ರಥಗಳ ಕುದುರೆಗಳನ್ನು ತೆಗೆದು
ಕೊಂಡರು; ಆಗ ಅರಸನು, ನೀವು ಅರಾಮ್ಯರ ದಂಡಿನ ಹಿಂದೆ
೧೫ ಹೋಗಿ, ನೋಡಿರಿ, ಎಂದು ಕಳುಹಿಸಿದನು. ಅವರು ಅವರ ಹಿಂದೆ
ಯೊರ್ದನಿನ ಪರ್ಯಂತರ ಹೋದರು. ಇಗೋ, ಮಾರ್ಗದಲ್ಲೆ
ಲ್ಲಾ ಅರಾಮ್ಯರು ತಮ್ಮ ಅವಸರದಿಂದ ಬಿಸಾಟಿ ವಸ್ತ್ರಗಳ್ಳಿಂದ
ಲೂ ಪಾತ್ರೆಗಳ್ಳಿಂದಲೂ ತುಂಬಿತ್ತು. ದೂತರು ತಿರಿಗಿ ಬಂದು, ಅ
ರಸನಿಗೆ ತಿಳ್ಳಿಸಿದರು.

೧೬ ಆಗ ಜನರು ಹೊರಟು ಹೋಗಿ, ಅರಾಮ್ಯರ ಗುಡಾರಗಳನ್ನು
ಸುಲುಕೊಂಡರು. ಆದದರಿಂದ ಕರ್ತನ ವಾಕ್ಯದ ಪ್ರಕಾರವೇ ಒಂ
ದು ಸೇಯ ನಯವಾದ ಹಿಟ್ಟು ಒಂದು ಷೆಕೆಲಿಗೂ, ಎರಡು ಸೇ
೧೭ ಯ ಜವೆಗೋಧಿಯು ಒಂದು ಷೆಕೆಲಿಗೂ ಮಾರಲ್ಪಟ್ಟಿತು. ಆದ
ರೆ ಅರಸನಿಗೆ ಕೈಯಾಸರ ಕೊಡುವ ಆ ಅಧಿಕಾರಿಯನ್ನು ಅರ
ಸನು ಪಟ್ಟಿದ ಬಾಗಲಿನ ಕಾವಲಿಗೆ ನೇಮಿಸಿದ್ದನು. ಅರಸನು
ದೇವರ ಮನುಷ್ಯನ ಬಳ್ಳಗೆ ಬಂದಾಗ, ದೇವರ ಮನುಷ್ಯನು ಹೇಳಿ
ದ್ದ ಪ್ರಕಾರವೇ, ಜನರು ಅವನನ್ನು ಪಟ್ಟಿದ ಬಾಗಲಲ್ಲಿ ತುಳ್ಳಿದು
೧೮ ಹಾಕಿದ್ದರಿಂದ, ಅವನು ಸತ್ತು ಹೋದನು. ಹಾಗೆಯೇ ಎರಡು
ಸೇಯ ಜವೆಗೋಧಿಯು ಒಂದು ಷೆಕೆಲಿಗೂ, ಒಂದು ಸೇಯ
ನಯವಾದ ಹಿಟ್ಟು ಒಂದು ಷೆಕೆಲಿಗೂ, ನಾಳೆ ಇಷ್ಟು ಹೊತ್ತಿಗೆ
ಸಮಾರ್ಯದ ಬಾಗಲಲ್ಲಿ ಮಾರಲ್ಪಡುವದೆಂದು, ದೇವರ ಮನು

೧೯ ಷ್ಯನು ಅಂಸನಿಗೆ ಹೇಳಿದ ಪ್ರಕಾರವೇ ಸಂಭವಿಸಿತು. ಆ ಅಧಿ
ಕಾರಿ ದೇವರ ಮನುಷ್ಯನಿಗೆ ಪ್ರತ್ಯುತ್ತರವಾಗಿ, ಇಗೋ, ಕರ್ತ
ನು ಆಕಾಶದಲ್ಲಿ ಕಿಟಕಿಗಳನ್ನು ಉಂಟು ಮಾಡಿದರೆ, ಹಾಗಾಗು
ವದೋ! ಅಂದನು; ಅದಕ್ಕವನು, ಇಗೋ, ನೀನು ನಿನ್ನ ಕಣ್ಣುಗ
ಳಿಂದ ನೋಡುವಿ; ಆದರೆ ಅದರಿಂದ ತಿನ್ನುವದಿಲ್ಲ, ಎಂದು ಹೇಳಿದ್ದ
೨೦ ನು. ಆ ಪ್ರಕಾರವೇ ಅವನಿಗೆ ಸಂಭವಿಸಿತು; ಏನಂದರೆ ಬಾಗಲಲ್ಲಿ
ಜನರು ಅವನನ್ನು ತುಳಿದ್ದರಿಂದ, ಅವನು ಸತ್ತನು.

## ೮. ಸಂಧಿ.

೧ ಮತ್ತು ಎಲೀಷನು ತಾನು ಬದುಕಿಸಿದ ಮಗನ ತಾಯಿಯಾದ
ಸ್ತ್ರೀಗೆ, ನೀನು ಎದ್ದು, ನೀನೂ ನಿನ್ನ ಮನೆಯವರೂ ಎಲ್ಲಿ ವಸ್ತಿ
ಯಾಗಿರ ಸ್ಥಳ ಉಂಟೋ, ಅಲ್ಲಿಗೆ ಹೋಗಿ, ವಸ್ತಿಯಾಗಿರು.
ಯಾಕಂದರೆ ಕರ್ತನು ಬರವನ್ನು ಕರೆದಿದ್ದಾನೆ; ಅದು ದೇಶದ
ಮೇಲೆ ಏಳು ವರುಷದ ಮಟ್ಟಿಗೂ, ಬರುವದು ಎಂದು, ಹೇಳಿದನು;
೬ ಆಗ ಆ ಸ್ತ್ರೀಯು ಎದ್ದು, ದೇವರ ಮನುಷ್ಯನ ಮಾತಿನ ಪ್ರಕಾ
ರವೇ ಮಾಡಿ, ತನ್ನ ಮನೆಯವರ ಸಂಗಡ ಹೋಗಿ, ಫಿಲಿಷ್ಟ್ಯರ
ದೇಶದಲ್ಲಿ ಏಳು ವರುಷ ವಸ್ತಿಯಾಗಿದ್ದಳು.
೩ ಏಳು ವರುಷ ಆದ ತರುವಾಯ ಏನಾಯಿತಂದರೆ, ಆ ಸ್ತ್ರೀ
ಯು ಫಿಲಿಷ್ಟ್ಯರ ದೇಶವನ್ನು ಬಿಟ್ಟು, ಶಿರಿಗಿ ಬಂದು, ತನ್ನ ಮನೆ
ಗೋಸ್ಕರವೂ ತನ್ನ ಹೊಲಕ್ಕೋಸ್ಕರವೂ ಅರಸನಿಗೆ ಕೂಗ
೪ ಹೊರಟಳು. ಅರಸನು ದೇವರ ಮನುಷ್ಯನ ಸೇವಕನಾದ ಗೆಹಾ
ಜಿಯ ಸಂಗಡ ಮಾತಾಡಿ, ಎಲೀಷನು ಮಾಡಿದ ಎಲ್ಲಾ ದೊಡ್ಡ
ಕ್ರಿಯೆಗಳನ್ನು ನನಗೆ ವಿವರವಾಗಿ ಹೇಳಿರೆಂದು, ಅವನಿಗೆ ಹೇಳಿದ
೫ ನು. ಅವನು ಸತ್ತವನನ್ನು ಬದುಕಿಸಿದನೆಂದು, ಅವನು ಅರಸನಿಗೆ
ವಿವರವಾಗಿ ಹೇಳುತ್ತಿರುವಾಗ, ಏನಾಯಿತಂದರೆ, ಇಗೋ, ಬದು
ಕಿಸಿದ ಮಗನ ತಾಯಿಯಾದ ಆ ಸ್ತ್ರೀಯು ತನ್ನ ಮನೆಗೋಸ್ಕರ
ವೂ ತನ್ನ ಹೊಲಕ್ಕೋಸ್ಕರವೂ ಅರಸನಿಗೆ ಕೂಗುತ್ತಿದ್ದಳು. ಆ
ಗ ಗೆಹಾಜಿಯು, ನನ್ನ ಸ್ವಾಮಿಯೇ, ಅರಸನೇ, ಇವಳೇ ಆ
ಸ್ತ್ರೀಯು, ಎಲೀಷನು ಬದುಕಿಸಿದ ಅವಳ ಮಗನು ಇವನೇ, ಅಂದ
೬ ನು. ಅರಸನು ಆ ಸ್ತ್ರೀಯನ್ನು ಕೇಳಿದಾಗ, ಅವಳು ವಿವರವಾಗಿ
ಹೇಳಿದಳು. ಆಗ ಅರಸನು ಅವಳಿಗೆ ಒಬ್ಬ ನಪುಂಸಕನನ್ನು ಕಳು
ಹಿಸಿ ಕೊಟ್ಟು, ಅವಳಿಗೆ ಉಂಟಾದದ್ದನ್ನೆಲ್ಲಾ, ಅವಳು ದೇಶವನ್ನು
ಬಿಟ್ಟ ದಿನ ಮೊದಲುಗೊಂಡು ಆ ಕಾಲದ ಮಟ್ಟಿಗೂ ಆ ಹೊಲ
ದ ಹುಟ್ಟುವಳಿಯದ್ದೂ ಅವಳಿಗೆ ಬರುವ ಹಾಗೆ ಮಾಡು, ಅಂ
ದನು.
೭ ಅರಾಮಿನ ಅರಸನಾದ ಬೆನ್ಹದಾದನು ಅಸ್ವಸ್ಥವಾಗಿರುವಾಗ'
ಎಲೀಷನು ದಮಸ್ಕಕ್ಕೆ ಬಂದನು. ದೇವರ ಮನುಷ್ಯನು ಇಲ್ಲಿಗೆ
೮ ಬಂದು ಇದ್ದಾನೆಂದು, ಅವನಿಗೆ ತಿಳಿಸಲ್ಪಟ್ಟಿತು. ಆಗ ಅರಸನು
ಹಜಯೇಲನಿಗೆ, ನೀನು ನಿನ್ನ ಕೈಯಲ್ಲಿ ಕಾಣಿಕೆಯನ್ನು ತ
ಕ್ಕೊಂಡು ಹೋಗಿ, ದೇವರ ಮನುಷ್ಯನನ್ನು ಎದುರುಗೊಂಡು,
ಈ ವ್ಯಾಧಿ ಬಿಟ್ಟು, ನಾನು ಬದುಕುವೆನೋ! ಎಂದು, ಅವನಿಂದ
೯ ಕರ್ತನನ್ನು ವಿಚಾರಿಸು, ಅಂದನು. ಹಾಗೆಯೇ ಹಜಯೇಲನು
ದಮಸ್ಕದಲ್ಲಿರುವ ಸಕಲ ಉತ್ತಮವಾದವುಗಳಲ್ಲಿ ನಾಲ್ವತ್ತು ಒಂಟೆ
ಗಳ ಭಾರವನ್ನು ಕಾಣಿಕೆಯಾಗಿ ತಕ್ಕೊಂಡು, ಅವನನ್ನು ಎದು
ರುಗೊಳ್ಳಲು ಹೋಗಿ, ಅವನ ಮುಂದೆ ಬಂದು, ನಿಂತು, ಅರಾಮಿನ
ಅರಸನಾಗಿರುವ ನಿನ್ನ ಮಗನಾದ ಬೆನ್ಹದಾದನು, ಈ ವ್ಯಾಧಿ ಬಿ
ಟ್ಟು ಬದುಕುವೆನೋ! ಎಂದು ಕೇಳಲು ನನ್ನನ್ನು ನಿನ್ನ ಬಳಿಗೆ ಕಳು
೧೦ ಹಿಸಿದ್ದಾನೆ, ಅಂದನು. ಅದಕ್ಕೆ ಎಲೀಷನು, ನೀನು ಹೋಗಿ, ಅವ
ನಿಗೆ, ಬದುಕಲೇ ಬದುಕುವಿ ಎಂದು ಹೇಳು; ಆದರೆ ಅವನು ಸಾಯ
ಲೇ ಸಾಯುವನೆಂದು, ಕರ್ತನು ನನಗೆ ತೋರಿಸಿದ್ದಾನೆ, ಅಂ
೧೧ ನು. ಆಗ ಇವನು ನಾಚಿಕೆ ಪಡುವ ಪರ್ಯಂತರ ತನ್ನ ಮುಖ
ವನ್ನು ಸ್ಥಿರ ಪಡಿಸಿ, ಕಣ್ಣೀಟ್ಟನು; ಮತ್ತು ದೇವರ ಮನುಷ್ಯನು
೧೨ ಅತ್ತನು. ಆಗ ಹಜಯೇಲನು, ನನ್ನ ಸ್ವಾಮಿ ಅಳುವದೇನು!
ಅಂದನು. ಅದಕ್ಕವನು, ಯಾಕಂದರೆ ಇಸ್ರಯೇಲ್ ಮಕ್ಕಳಿಗೆ
ನೀನು ಮಾಡ ಹೋಗುವ ಕೇಡು ನನಗೆ ತಿಳಿದದೆ; ನೀನು ಅವರ
ಕೋಟೆಗಳಿಗೆ ಬೆಂಕಿ ಹೊತ್ತಿಸಿ, ಅವರ ಪ್ರಾಯಸ್ಥರನ್ನು ಕತ್ತಿ
ಯಿಂದ ಕೊಂದು, ಅವರ ಕೂಸುಗಳನ್ನು ನುಜ್ಜು ಗುಜ್ಜು ಮಾ
ಡಿ, ಅವರ ಗರ್ಭಿಣಿ ಸ್ತ್ರೀಯರನ್ನು ಚೀಳಿ ಬಿಡುವಿ, ಅಂದನು.
೧೩ ಹಜಯೇಲನು, ಆದರೆ ಇಂಥಾ ಮಹಾ ಕೆಲಸವನ್ನು ಮಾಡುವ
ದಕ್ಕೆ ನಿನ್ನ ಸೇವಕನು ಏನು! ನಾಯಿಯೋ! ಅಂದನು. ಎಲೀ
ಷನು, ನೀನು ಅರಾಮಿನ ಮೇಲೆ ಅರಸನಾಗುವಿ ಎಂದು, ಕರ್ತನು
೧೪ ನನಗೆ ತಿಳಿಸಿದ್ದಾನೆ, ಅಂದನು. ಅವನು ಎಲೀಷನನ್ನು ಬಿಟ್ಟು,
ಹೊರಟು, ತನ್ನ ಯಜಮಾನನ ಬಳಿಗೆ ಬಂದನು. ಇವನು ಅವ
ನಿಗೆ, ಎಲೀಷನು ನಿನಗೆ ಏನು ಹೇಳಿದನೆಂದು ಕೇಳಿದ್ದಕ್ಕೆ, ನೀನು ಬ
ದುಕಲೇ ಬದುಕುವಿ ಎಂದು, ನನಗೆ ಹೇಳಿದನು, ಅಂದನು. ಮಾರ
ನೆ ದಿವಸದಲ್ಲಿ ಏನಾಯಿತಂದರೆ, ಅವನು ದಪ್ಪ ಬಟ್ಟೆಯನ್ನು
೧೫ ತಕ್ಕೊಂಡು, ನೀರಿನಲ್ಲಿ ಅದ್ದಿ, ಅವನ ಮುಖದ ಮೇಲೆ ಹಾಸಿದ್ದ
ರಿಂದ, ಅವನು ಸತ್ತನು. ಮತ್ತು ಹಜಯೇಲನು ಅವನಿಗೆ ಬದಲಾ
ಗಿ ಆಳಿದನು.
೧೬ ಇಸ್ರಯೇಲಿನ ಅರಸನಾಗಿರುವ ಅಹಾಬನ ಮಗನಾದ ಯೋ
ರಾಮನ ಐದನೇ ವರುಷದಲ್ಲಿ, ಯೆಹೂದಕ್ಕೆ ಯೆಹೋಷಾಫಾಟನು
ಅರಸನಾಗಿರುವಾಗ, ಯೆಹೂದದ ಅರಸನಾಗಿರುವ ಯೆಹೋಷ
೧೭ ಫಾಟನ ಮಗನಾದ ಯೆಹೋರಾಮನು ಆಳ್ವಿಕೆ ಆರಂಭಿಸಿದನು. ಅವ
ನು ಆಳ್ವಿಕೆ ಆರಂಭಿಸಿದಾಗ, ಮೂವತ್ತೆರಡು ವರುಷದವನಾಗಿದ್ದ,
ಯೆರೂಸಲೇಮಿನಲ್ಲಿ ಎಂಟು ವರುಷ ಆಳ್ವಿಕೆ ಮಾಡಿದನು. ಅಹಾಬನ ಮ
ನೆಯವರು ಮಾಡಿದ ಹಾಗೆ, ಅವನು ಇಸ್ರಯೇಲಿನ ಅರಸುಗಳ
ಮಾರ್ಗದಲ್ಲಿ ನಡೆದನು; ಯಾಕಂದರೆ ಅಹಾಬನ ಮಗಳು ಅವ
೧೮ ನಿಗೆ ಹೆಂಡತಿಯಾಗಿದ್ದಳು; ಮತ್ತು ಅವನು ಕರ್ತನ ದೃಷ್ಟಿಯ
ಲ್ಲಿ ಕೆಟ್ಟದ್ದನ್ನು ಮಾಡಿದನು. ಆದರೆ ಕರ್ತನು ದಾವೀದನಿಗೂ ಅವ
ನ ಮಕ್ಕಳಿಗೂ ನಿರಂತರವಾಗಿ ದೀಪವನ್ನು ಕೊಡುವೆನೆಂದು, ಅವ
ನಿಗೆ ಹೇಳಿದ ಹಾಗೆ, ತನ್ನ ಸೇವಕನಾದ ದಾವೀದನ ನಿಮಿತ್ತ
೧೯ ಯೆಹೂದವನ್ನು ಕೆಡಿಸ ಮನಸ್ಸಿಲ್ಲದೆ ಇದ್ದನು. ಅವನ ಕಾಲದಲ್ಲಿ
ಯೆಹೂದದ ಕೈ ಕೆಳಗಿದ್ದ ಎದೋಮ್ಯರು ತಿರುಗ ಬಿದ್ದು, ತಮಗೆ
ಒಬ್ಬ ಅರಸನನ್ನು ಮಾಡಿ ಕೊಂಡರು.
೨೦ ಆದದರಿಂದ ಯೆಹೋರಾಮನು ತನ್ನ ಬಳಿಯಲ್ಲಿದ್ದ ಎಲ್ಲಾ ರಥ
ಗಳನ್ನು ತಕ್ಕೊಂಡು, ಚಯೀರಾಗೆ ಹೋಗಿ, ರಾತ್ರಿಯಲ್ಲಿ ಎದ್ದು,
ತನ್ನನ್ನು ಸುತ್ತಿಕೊಂಡಿದ್ದ ಎದೋಮ್ಯರನ್ನೂ, ರಥಗಳ ಯೆಜ
ಮಾನರನ್ನೂ ಹೊಡೆದನು. ಜನರು ತಮ್ಮ ಗುಡಾರಗಳಿಗೆ ಓಡಿ
೨೧ ಹೋದರು. ಆದರೆ ಎದೋಮು ಯೆಹೂದದ ಕೈ ಕೆಳಗೆ ಇರದ
ಹಾಗೆ, ಅಂದಿನಿಂದ ಈ ವರಿಗೂ ತಿರುಗ ಬಿತ್ತು. ಆ ಕಾಲದಲ್ಲಿ
ಯೇ ಲಿಬ್ನ ತಿರುಗ ಬಿತ್ತು.



೨೨ ಯೆಹೋರಾಮನ ಇತರ ಕ್ರಿಯೆಗಳೂ ಅವನು ಮಾಡಿದ್ದೆಲ್ಲ
ವೂ ಯೆಹೂದದ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆ
ಯಲ್ಪಡಲಿಲ್ಲವೋ! ಯೆಹೋರಾಮನು ತನ್ನ ಪಿತೃಗಳ ಸಂಗಡ
ಮಲಗಿದನು; ತನ್ನ ಪಿತೃಗಳ ಬಳಿಯಲ್ಲಿ ದಾವೀದನ ಪಟ್ಟಣದಲ್ಲಿ
ಹೂಣಿಲ್ಪಟ್ಟನು; ಅವನ ಮಗನಾದ ಅಹಜ್ಯನು ಅವನಿಗೆ ಬದ
ಲಾಗಿ ಅರಸನಾದನು.
೨೩ ಇಸ್ರಯೇಲಿನ ಅರಸನಾಗಿರುವ ಅಹಾಬನ ಮಗನಾದ ಯೋ
ರಾಮನ ಹನ್ನೆರಡನೇ ವರುಷದಲ್ಲಿ, ಯೆಹೂದದ ಅರಸನಾಗಿರುವ
ಯೆಹೋರಾಮನ ಮಗನಾದ ಅಹಜ್ಯನು ಆಳ್ವಿಕೆ ಆರಂಭಿಸಿದನು.
೨೬ ಅಹಜ್ಯನು ಆಳ್ವಿಕೆ ಆರಂಭಿಸಿದಾಗ, ಇಪ್ಪತ್ತೆರಡು ವರುಷದವನಾಗಿ
ದ್ದು, ಯೆರೂಸಲೇಮಿನಲ್ಲಿ ಒಂದು ವರುಷ ಆಳ್ವಿದನು. ಅವನ
ತಾಯಿ ಅಟಲ್ಯಳು; ಅವಳು ಇಸ್ರಯೇಲಿನ ಅರಸನಾದ ಒಮ್ರಿ
೨೭ ಯ ಮಗಳು. ಅವನು ಅಹಾಬನ ಮನೆಯ ಮಾರ್ಗದಲ್ಲಿ ನಡೆ
ದು, ಅಹಾಬನ ಮನೆಯವರ ಹಾಗೆ ಕರ್ತನ ದೃಷ್ಟಿಯಲ್ಲಿ ಕೆಟ್ಟ
ದ್ದನ್ನು ಮಾಡಿದನು. ಯಾಕಂದರೆ ಅವನು ಅಹಾಬನ ಅಳಿಯ
೨೮ ನಾಗಿದ್ದನು. ಅವನು ಅಹಾಬನ ಮಗನಾದ ಯೋರಾಮನ ಸಂಗ
ಡ ಗಿಲ್ಯಾದಿನಲ್ಲಿರುವ ರಾಮೋತಿಗೆ, ಅರಾಮಿನ ಅರಸನಾದ ಹಜ
ಯೇಲನ ಮೇಲೆ ಯುದ್ಧ ಮಾಡ ಹೋದನು. ಆದರೆ ಅರಾಮ್ಯ
೨೯ ರು ಯೋರಾಮನನ್ನು ಹೊಡೆದರು. ಆದರೆ ಅರಸನಾದ ಯೋರ
ಮನು ಅರಾಮ ದೇಶದ ಅರಸನಾದ ಹಜಯೇಲನ ಮೇಲೆ ಯುದ್ಧ
ಮಾಡಿದಾಗ, ರಾಮೋತಿನಲ್ಲಿ ಅರಾಮ್ಯರು ತನ್ನನ್ನು ಹೊಡೆದ
ಘಾಯಗಳನ್ನು ಗುಣ ಮಾಡಿ ಕೊಳ್ಳುವದಕ್ಕೆ, ಇಜ್ರೇಲಿಗೆ ತಿರಿ
ಗಿ ಹೋದನು. ಆಗ ಅಹಾಬನ ಮಗನಾದ ಯೋರಾಮನು ಇಜ್ರೇ
ಲಿನಲ್ಲಿ ಅಸ್ವಸ್ಥವಾಗಿರುವದರಿಂದ, ಯೆಹೂದದ ಅರಸನಾಗಿರುವ
ಯೆಹೋರಾಮನ ಮಗನಾದ ಅಹಜ್ಯನು ಅವನನ್ನು ನೋಡ ಹೋ
ದನು.

## ೯. ಸಂಧಿ.

೧ ಮತ್ತು ಪ್ರವಾದಿಯಾದ ಎಲೀಷನು ಪ್ರವಾದಿಗಳ ಮಕ್ಕಳಲ್ಲಿ
ಒಬ್ಬನನ್ನು ಕರೆದು, ಅವನಿಗೆ, ನೀನು ನಡುವನ್ನು ಕಟ್ಟಿ ಕೊಂ
ಡು, ಈ ಎಣ್ಣೆಯ ಪಾತ್ರೆಯನ್ನು ನಿನ್ನ ಕೈಯಲ್ಲಿ ತೆಗೆದು
೨ ಕೊಂಡು, ಗಿಲ್ಯಾದಿನಲ್ಲಿರುವ ರಾಮೋತಿಗೆ ಹೋಗು. ನೀನು ಅ
ಲ್ಲಿಗೆ ಕೇರಿದಾಗ, ನಿಂಷಿಯ ಮಗನಾಗಿರುವ ಯೆಹೋಷಾಫಾಟನ
ಮಗನಾದ ಯೇಹುವನ್ನು ಅಲ್ಲಿ ನೋಡಿ, ಒಳಗೆ ಪ್ರವೇಶಿಸಿ, ಅ
ವನನ್ನು ತನ್ನ ಸಹೋದರರ ಮಧ್ಯದಿಂದ ಏಳ್ಪಮಾಡಿ, ಅಂತ
ರಂಗದ ಕೊಠಡಿಯಲ್ಲಿ ಕರಕೊಂಡು ಹೋಗಿ, ಎಣ್ಣೆಯ ಪಾತ್ರೆ
3 ಯನ್ನು ತಕ್ಕೊಂಡು, ಅವನ ತಲೆಯ ಮೇಲೆ ಹೊಯಿದು, ಅ
ವನಿಗೆ ಇಸ್ರಯೇಲಿನ ಮೇಲೆ ಅರಸನಾಗಿರ ನಿನ್ನನ್ನು ಅಭಿಷೇಕಿಸಿ
ದ್ದೇನೆ ಎಂದು, ಕರ್ತನು ಹೇಳುತ್ತಾನೆಂಬದಾಗಿ, ಹೇಳು. ಆಗ ಕದ
೪ ವನ್ನು ತೆರೆದು, ತಡ ಮಾಡದೆ, ಓಡಿ ಬಾ, ಅಂದನು. ಹಾಗೆಯೇ
ಪ್ರಾಯಸ್ಥನು, ಪ್ರವಾದಿಯಾದ ಆ ಪ್ರಾಯಸ್ಥನು ಗಿಲ್ಯಾದಿನ
ಲ್ಲಿರುವ ರಾಮೋತಿಗೆ ಹೋದನು.
೫ ಅವನು ಕೇರಿದಾಗ, ಇಗೋ, ಸೈನ್ಯಾಧಿಪತಿಗಳು ಕುಳಿತು
ಕೊಂಡಿದ್ದರು. ಆಗಲವನು, ಅಧಿಪತಿಯೇ, ನಿನಗೆ ಹೇಳ ಬೇಕಾದ
ಮಾತು ನನಗೆ ಉಂಟು, ಅಂದನು. ಯೇಹುವು ಅವನಿಗೆ, ನಮ್ಮೆ
ಲ್ಲರಲ್ಲಿ ಯಾರಿಗೆ! ಅಂದನು. ಅವನು, ಅಧಿಪತಿಯೇ, ನಿನಗೆ, ಅಂ
೬ ದನು. ಅವನು ಎದ್ದು, ಮನೆಯೊಳಗೆಕ್ಕೆ ಹೋದನು. ಆಗ ಇವ
ನು ಎಣ್ಣೆಯನ್ನು ಅವನ ತಲೆಯ ಮೇಲೆ ಹೊಯಿದು, ಅವನಿಗೆ
ಹೇಳಿದ್ದು, ಇಸ್ರಯೇಲಿನ ದೇವರಾದ ಕರ್ತನು ಹೇಳುವದೇನಂದ
ರೆ—ಕರ್ತನ ಜನವಾದ ಇಸ್ರಯೇಲಿನ ಮೇಲೆ ಅರಸನಾಗಿರ ನಿನ್ನ
೭ ನ್ನು ಅಭಿಷೇಕಿಸಿದ್ದೇನೆ. ನಾನು ಪ್ರವಾದಿಗಳಾದ ನನ್ನ ಸೇವಕರ
ರಕ್ತಕ್ಕೋಸ್ಕರವೂ, ಕರ್ತನ ಸಮಸ್ತ ಸೇವಕರ ರಕ್ತಕ್ಕೋಸ್ಕ
ರವೂ ಇಜೆಬೇಲಳಿಗೆ ಮುಯ್ಯಿಗೆ ಮುಯ್ಯಿ ಕೊಡುವ ಹಾಗೆ,
ನೀನು ನಿನ್ನ ಯಜಮಾನನಾದ ಅಹಾಬನ ಮನೆಯನ್ನು ಸಂಹರಿ
೮ ಸ ಬೇಕು. ಮತ್ತು ಅಹಾಬನ ಮನೆಯೆಲ್ಲಾ ನಾಶವಾಗಿ ಹೋ
ಗುವದು; ಅಹಾಬನಿಂದ ಪ್ರತಿ ಗಂಡುಸನನ್ನೂ ಇಸ್ರಯೇಲಿನಲ್ಲಿ
ಉಳಿದು ಬಚ್ಚಿಕಿಡಲ್ಪಟ್ಟವನನ್ನೂ ನಾನು ಕಡಿದು ಬಿಡುವೆನು. ಅಹಾ
೯ ಬನ ಮನೆಯನ್ನು ನೆಬಾಟನ ಮಗನಾದ ಯೆರೊಬಾಮನ ಮನೆ
ಯ ಹಾಗೆಯೂ, ಅಹೀಯನ ಮಗನಾದ ಬಾಷನ ಮನೆಯ
೧೦ ಹಾಗೆಯೂ ಮಾಡುವೆನು. ಇದಲ್ಲದೆ ಇಜ್ರೇಲಿನ ಚಾಪಿನಲ್ಲಿ ನಾ
ಯಿಗಳು ಇಜೆಬೇಲಳನ್ನು ತಿನ್ನುವವು ಅವಳನ್ನು ಹೂಣಿಡ
ಯಾವನೂ ಇಲ್ಲ, ಎಂಥೇಳಿ, ಬಾಗಲನ್ನು ತೆರೆದು, ಓಡಿ ಹೋ
ದನು.
೧೧ ಆಗ ಯೇಹುವು ತನ್ನ ಯಜಮಾನನ ಸೇವಕರ ಬಳಿಗೆ
ಹೊರಟು ಬಂದನು. ಅವರು ಅವನಿಗೆ, ಸಮಾಧಾನವೋ! ಆ
ಹುಚ್ಚನು ನಿನ್ನ ಬಳಿಗೆ ಬಂದದ್ದೇನು! ಅಂದರು. ಅವನು ಅವರಿಗೆ,
ಆ ಮನುಷ್ಯನನ್ನೂ ಅವನ ಮಾತನ್ನೂ ನೀವು ಬಲ್ಲಿರಿ, ಅಂದ
೧೨ ನು. ಅದಕ್ಕವರು, ಸುಳ್ಳು; ದಯ ಮಾಡಿ, ನಮಗೆ ತಿಳಿಸು,
ಅಂದರು. ಆದದರಿಂದ ಅವನು, ಇಸ್ರಯೇಲಿನ ಮೇಲೆ ಅರಸನಾಗಿ
ರ ನಿನ್ನನ್ನು ಅಭಿಷೇಕಿಸಿದ್ದೇನೆಂಬದಾಗಿ, ಕರ್ತನು ಹೇಳುತ್ತಾನೆಂ
೧೩ ದು, ಹೀಗೆ ಹೀಗೆ ನನಗೆ ಹೇಳಿದನು, ಅಂದನು. ಆಗಲವರು ತ್ವ
ರೆ ಪಟ್ಟು, ಅವನವನು ತನ್ನ ವಸ್ತ್ರವನ್ನು ತೆಗೆದು, ಪಾವಟಿಗೆಗಳ
ಮೇಲೆ ಹಾಸಿ, ಇವನನ್ನು ಕುಳ್ಳಿರಿಸಿ, ತುತೂರಿಗಳನ್ನು ಊದಿ,
೧೪ ಯೇಹುವು ಅರಸನಾಗಿದ್ದಾನೆಂದು, ಹೇಳಿದರು. ಹೀಗೆಯೇ ನಿಂ
ಷಿಯ ಮಗನಾಗಿರುವ ಯೆಹೋಷಾಫಾಟನ ಮಗನಾದ ಯೇ
ಹುವು ಯೋರಾಮನಿಗೆ ವಿರೋಧವಾಗಿ ಒಳಗಂಚು ಮಾಡಿದನು.
೧೫ ಅರಾಮಿನ ಅರಸನಾದ ಹಜಯೇಲನ ನಿಮಿತ್ತ ಯೋರಾಮನೂ ಸ
ಮಸ್ತ ಇಸ್ರಯೇಲ್ಯರೂ ಗಿಲ್ಯಾದಿನ ರಾಮೋತಿನಲ್ಲಿ ಕಾಯುತ್ತಾ
ಇದ್ದರು. ಆದರೆ ಅರಸನಾದ ಯೋರಾಮನು ಅರಾಮಿನ ಅರಸ
ನಾದ ಹಜಯೇಲನ ಸಂಗಡ ಯುದ್ಧ ಮಾಡುವಾಗ, ಅರಾಮ್ಯರು
ತನ್ನನ್ನು ಹೊಡೆದ ಘಾಯಗಳನ್ನು ಸ್ವಸ್ಥ ಮಾಡಿ ಕೊಳ್ಳುವ
ನಿಮಿತ್ತ ಇಜ್ರೇಲಿಗೆ ಹೋಗಿದ್ದನು.
೧೬ ಆಗ ಯೇಹುವು, ನಿಮಗೆ ಮನಸ್ಸಾದರೆ, ಇದನ್ನು ಇಜ್ರೇಲಿ
ನಲ್ಲಿ ಹೋಗಿ ತಿಳಿಸ, ಪಟ್ಟಣದಿಂದ ಯಾರೂ ತಪ್ಪಿಸಿ ಕೊಂಡು
ಹೊರಡದೆ ಇರಲಿ, ಅಂದನು. ಮತ್ತು ಯೇಹುವು ರಥದ ಮೇಲೆ
ಏರಿ, ಇಜ್ರೇಲಿಗೆ ಹೋದನು. ಯಾಕಂದರೆ ಯೋರಾಮನು ಅಲ್ಲಿ
ಬಿದ್ದಿದ್ದನು. ಇದಲ್ಲದೆ ಯೋರಾಮನನ್ನು ನೋಡುವದಕ್ಕೆ, ಯೆ
೧೭ ಹೂದದ ಅರಸನಾದ ಅಹಜ್ಯನು ಅಲ್ಲಿಗೆ ಬಂದಿದ್ದನು. ಆದರೆ ಇ
ಜ್ರೇಲಿನ ಬುರುಜಿನ ಮೇಲೆ ಕೋವರದವನು ನಿಂತಿದನು. ಇವನು
ಬರುವ ಯೇಹುವಿನ ಗುಂಪನ್ನು ಕಂಡು, ನಾನು ಗುಂಪನ್ನು

ನೋಡುತ್ತೇನೆ, ಅಂದನು. ಅದಕ್ಕೆ ಯೋರಮನು ರಾಹುತನ
ನ್ನು ಕಳಿಸಿ, ಅವರಿಗೆ ಎದುರಾಗಿ ಕಳುಹಿಸಿ, ಸಮಾಧಾನವೋ!
೧೮ ಎಂದು ಕೇಳಲಿ, ಅಂದನು. ಆದದರಿಂದ ಬಬ್ಬನು ಕುದುರೆಯನ್ನು
ಹತ್ತಿ, ಅವನಿಗೆ ಎದುರಾಗಿ ಹೋಗಿ, ಸಮಾಧಾನವೋ! ಎಂದು
ಅರಸನು ಕೇಳುತ್ತಾನೆ, ಅಂದನು. ಅದಕ್ಕೆ ಯೇಹುವು, ಸಮಾ
ಧಾನ ನಿನಗೆ ಏನು! ನನ್ನ ಹಿಂದಕ್ಕೆ ಹೋಗು, ಅಂದನು. ಆಗ
ಕೋವರದವನು, ದೂತನು ಅವರ ಬಳಿಗೆ ಹೋಗಿ, ತಿರಿಗಿ ಬರಲಿ
೧೯ ಲ್ಲ, ಅಂದನು. ಆಗ ಬೇರೆ ರಾಹುತನನ್ನು ಕಳುಹಿಸಿದನು. ಇವ
ನು ಅವರ ಬಳಿಗೆ ಹೋಗಿ, ಸಮಾಧಾನವೋ! ಎಂದು ಅರಸನು
ಕೇಳುತ್ತಾನೆ, ಅಂದನು. ಅದಕ್ಕೆ ಯೇಹುವು, ಸಮಾಧಾನ ನಿನಗೆ
೨೦ ಏನು! ನನ್ನ ಹಿಂದಕ್ಕೆ ಹೋಗು, ಅಂದನು. ಆಗ ಕೋವರದವ
ನು, ಇವನೂ ಅವರ ಬಳಿಗೆ ಹೋಗಿ, ತಿರಿಗಿ ಬರಲಿಲ್ಲ. ಇದಲ್ಲದೆ
ಹೊಡೆಯುವದು ನಿಂಷಿಯ ಮಗನಾದ ಯೇಹುವು ಹೊಡೆಯು
ವ ಹಾಗಿದೆ; ಯಾಕಂದರೆ ಅವನು ಹುಚ್ಚುತನವಾಗಿ ಹೊಡೆಯು
೨೧ ತ್ತಾನೆ, ಅಂದನು. ಆಗ ಯೋರಮನು, ಕಟ್ಟು, ಅಂದನು. ಅವ
ನ ರಥವನ್ನು ಕಟ್ಟಿದರು. ಆಗ ಇಸ್ರಯೇಲಿನ ಅರಸನಾದ
ಯೋರಮನೂ ಯೆಹೂದದ ಅರಸನಾದ ಅಹಜ್ಯನೂ ಹೊರಟ
ರು, ಅವನವನು ತನ್ನ ತನ್ನ ರಥದಲ್ಲಿ ಏರಿ, ಯೇಹುವಿಗೆ ಎದು
ರಾಗಿ ಹೊರಟು, ಇಜ್ರೇಲ್ಯನಾದ ನಬೋತನ ಪಾಲಿನಲ್ಲಿ ಅವನ
ನ್ನು ಕಂಡು ಕೊಂಡರು.

೨೨ ಯೋರಮನು ಯೇಹುವನ್ನು ನೋಡಿದಾಗ, ಯೇಹುವೇ,
ಸಮಾಧಾನವೋ! ಅಂದನು. ಅದಕ್ಕವನು, ನಿನ್ನ ತಾಯಿಯಾ
ದ ಇಜೆಬೇಲಳ ಜಾರತ್ವಗಳೂ ಅವಳ ಮಾಟಗಳೂ ಅಧಿಕವಾಗಿ
೨೩ ರುವಾಗ, ಸಮಾಧಾನವೇನು! ಅಂದನು. ಆಗ ಯೋರಮನು ಅ
ಹಜ್ಯನಿಗೆ, ಅಹಜ್ಯನೇ, ದ್ರೋಹ ಎಂಥೇಳಿ, ತನ್ನ ಕೈ ತಿರುಗಿಸಿ
೨೪ ಕೊಂಡು, ಓಡಿ ಹೋದನು. ಆದರೆ ಯೇಹುವು ಬಿಲ್ಲಿನಿಂದ ತನ್ನ
ಕೈ ತುಂಬಿಸಿ, ಯೋರಮನನ್ನು, ಅವನ ಕೋಳುಗಳ ನಡುವೇ
ಹೊಡೆದನು. ಬಾಣ ಹೃದಯದಲ್ಲಿ ತೂರಿ, ಹೊರಟಿತು; ಅವನು
೨೫ ರಥದಲ್ಲಿ ಬಾಗಿ, ಬಿದ್ದನು. ಆಗ ಯೇಹುವು ತನ್ನ ಅಧಿಪತಿಯಾದ
ಬಿದ್ಕಾರನಿಗೆ, ನೀನು ಅವನನ್ನು ತೆಗೆದು ಕೊಂಡು ಹೋಗಿ, ಇಜ್ರೆ
ಲ್ಯನಾದ ನಬೋತನ ಪಾಲಾಗಿರುವ ಹೊಲದಲ್ಲಿ ಹಾಕಿ ಬಿಡು.
೨೬ ಯಾಕಂದರೆ ನಾನೂ ನೀನೂ ಅವನ ತಂದೆಯಾದ ಅಹಾಬನ
ಹಿಂದೆ ಕುದುರೆ ಏರಿ ಕೊಂಡು ಹೋಗುತ್ತಿರುವಾಗ, ಕರ್ತನು ಈ
ಭಾರವನ್ನು ಅವನ ಮೇಲೆ ಹೊರಿಸಿದನೆಂದು ಜ್ಞಾಪಕ ಮಾಡಿಕೋ.
ಏನಂದರೆ—ನಬೋತನ ರಕ್ತವನೂ ಅವನ ಕುಮಾರರ ರಕ್ತವ
ನೂ ನಿನ್ನೆ ನಾನು ನೋಡಿದೆನಲ್ಲ! ಎಂದು ಕರ್ತನು ಹೇಳುತ್ತಾನೆ.
ಇದಲ್ಲದೆ ಇದೇ ಹೊಲದಲ್ಲಿ ನಿನಗೆ ಮುಯ್ಯಿಗೆ ಮುಯ್ಯಿ ಕೊಡು
ವೆನೆಂದು ಕರ್ತನು ಹೇಳುತ್ತಾನೆ. ಆದದರಿಂದ ಕರ್ತನ ವಾಕ್ಯದ
ಪ್ರಕಾರ ಎತ್ತಿ ಕೊಂಡು, ಆ ಹೊಲದಲ್ಲಿ ಅವನನ್ನು ಹಾಕಿ ಬಿಡು,
ಅಂದನು.

೨೭ ಆದರೆ ಯೆಹೂದದ ಅರಸನಾದ ಅಹಜ್ಯನು ನೋಡಿದಾಗ, ಅವ
ನು ತೋಟದ ಮನೆಯ ಮಾರ್ಗವಾಗಿ ಓಡಿ ಹೋದನು. ಯೇ
ಹುವು ಅವನ ಹಿಂದೆ ಹತ್ತಿ, ರಥದಲ್ಲಿ ಅವನನ್ನು ಸಹ ಹೊಡೆಯಿ
ರಿ, ಅಂದನು. ಇಬ್ಲಾಮಿನ ಬಳಿಯಲ್ಲಿರುವ ಗೂರವು ಎಂಬ ಸ್ಥ
ಳಕ್ಕೆ ಏರಿ ಹೋಗುವ ಮಾರ್ಗದಲ್ಲಿ ಹೊಡೆದರು; ಅವನು
೨೮ ಮೆಗಿದ್ದೋನಿಗೆ ಓಡಿ ಹೋಗಿ, ಅಲ್ಲಿ ಸತ್ತು ಹೋದನು. ಅವ
ನ ಸೇವಕರು ಅವನನ್ನು ರಥದಲ್ಲಿ ಯೆರೂಸಲೇಮಿಗೆ ತಕ್ಕೊಂ
ಡು ಹೋಗಿ, ದಾವೀದನ ಪಟ್ಟಣದಲ್ಲಿ ಹೊಳೆಗೆ, ಅವನ ಪಿತೃಗಳ ಬಳಿಯ
೨೯ ಲ್ಲಿ, ಅವನ ಸಮಾಧಿಯಲ್ಲಿ, ಅವನನ್ನು ಹೂಣಿಟ್ಟರು. ಅಹಾಬನ
ಮಗನಾದ ಯೋರಮನ ಹನ್ನೊಂದನೇ ವರುಷದಲ್ಲಿ ಅಹಜ್ಯನು
ಯೆಹೂದದ ಮೇಲೆ ಆಳ್ವ ಪ್ರಾರಂಭಿಸಿದನು.

೩೦ ಆದರೆ, ಯೇಹುವು ಇಜ್ರೇಲಿಗೆ ಬಂದಿದ್ದಾನೆಂದು, ಇಜೆಬೇಲಳು
ಕೇಳಿ, ಅವಳು ತನ್ನ ಕಣ್ಣುಗಳಿಗೆ ಕಾಡಿಗೆ ಹಚ್ಚಿ ಕೊಂಡು, ತನ್ನ
ತಲೆಯನ್ನು ಶೃಂಗರಿಸಿ ಕೊಂಡು, ಕಿಟಿಕಿಯಿಂದ ಹಣಿಕಿ ನೋ
೩೧ ಡಿದಳು. ಯೇಹುವು ಬಾಗಲಲ್ಲಿ ಪ್ರವೇಶಿಸಿದಾಗ, ಅವಳು, ತನ್ನ
ಯಜಮಾನನನ್ನು ಕೊಂದ ಜಿಮ್ರನಿಗೆ ಸಮಾಧಾನವಿತ್ತೋ!
೩೨ ಅಂದಳು. ಅವನು ತನ್ನ ಮುಖವನ್ನು ಆ ಕಿಟಿಕಿಯ ಕಡೆಗೆ
ಎತ್ತಿ, ನನ್ನ ಕಡೆ ಇರುವವರ್ಯಾರು! ಯಾರು! ಅಂದನು. ಆಗ
ಇಬ್ಬರು ಮೂವರು ನಪುಂಸಕರು ಆ ಕಿಟಿಕಿಯಲ್ಲಿಂದ ಅವನನ್ನು
೩೩ ನೋಡಿದರು. ಅವನು ಅವರಿಗೆ, ಅವಳನ್ನು ಕೆಳಗೆ ಹಳ್ಳಿ ಬಿಡಿರಿ,
ಅಂದನು. ಅವರು ಅವಳನ್ನು ಕೆಳಗೆ ಹಳ್ಳಿ ಬಿಟ್ಟದ್ದರಿಂದ, ಅವಳ
ರಕ್ತವು ಗೋಡೆಯ ಮೇಲೆಯೂ ಕುದುರೆಗಳ ಮೇಲೆಯೂ ಚಲ್ಲ
೩೪ ಲ್ಪಟ್ಟಿತು. ಅವನು ಅವಳನ್ನು ತುಳಿದನು. ಅವನು ಬಳಿಗೆ ಹೋ
ಗಿ, ಉಂಡು, ಕುಡಿದನು; ಆಗ ಅವರಿಗೆ, ನೀವು ಹೋಗಿ, ಆ ಶಪಿ
ಸಲ್ಪಟ್ಟವಳನ್ನು ನೋಡಿ, ಅವಳನ್ನು ಹೂಣಿಡಿರಿ; ಯಾಕಂದರೆ
೩೫ ಅವಳು ಅರಸನ ಮಗಳು, ಅಂದನು. ಅವರು ಅವಳನ್ನು ಹೂಣಿ
ಡ ಹೋದಾಗ, ಅವಳಲ್ಲಿದ್ದ ತಲೆ ಬುರುಡೆಯೂ ಕಾಲುಗಳೂ
ಅಂಗೈಗಳೂ ಹೊರ್ತು ಮತ್ತೇನೂ ಕಾಣಲಿಲ್ಲ. ಆದದರಿಂದ
೩೬ ಅವರು ತಿರಿಗಿ ಬಂದು, ಅವನಿಗೆ ತಿಳಿಸಿದರು. ಅದಕ್ಕವನು, ಕ
ರ್ತನು ತನ್ನ ಸೇವಕನಾಗಿರುವ ತಿಷ್ಬಿಯನಾದ ಎಲೀಯನ ಮು
ಖಾಂತರ ಹೇಳಿದ ವಾಕ್ಯವು ಇದೇ—ಇಜ್ರೇಲಿನ ಪಾಲಿನಲ್ಲಿ ನಾಯಿ
೩೭ ಗಳು ಇಜೆಬೇಲಳ ಮಾಂಸವನ್ನು ತಿನ್ನುವವು. ಇದಲ್ಲದೆ, ಇದೇ
ಇಜೆಬೇಲಳೆಂದು ಹೇಳ ಕೂಡದ ಹಾಗೆ, ಇಜ್ರೇಲಿನ ಪಾಲಿನ ಹೊ
ಲದ ಮೇಲ್ಭಾಗದಲ್ಲಿ ಇಜೆಬೇಲಳ ಹೆಣ ಗೊಬ್ಬರದ ಹಾಗೆ ಇರು
ವದೆಂದು, ಹೇಳಿದನು.

## ೧೦. ೫ ಅಧಿ.

೧ ಆದರೆ ಸಮಾರ್ಯದಲ್ಲಿ ಅಹಾಬನಿಗೆ ಎಪ್ಪತ್ತು ಮಂದಿ ಮಕ್ಕ
ಳು ಇದ್ದದರಿಂದ, ಯೇಹುವು ಸಮಾರ್ಯದಲ್ಲಿರುವ ಇಜ್ರೇಲಿನ
ಪ್ರಧಾನರಿಗೂ, ಹಿರಿಯರಿಗೂ, ಅಹಾಬನ ಮಕ್ಕಳನ್ನು ಬೆಳಸು
ವವರಿಗೂ ಪತ್ರಿಕೆಗಳನ್ನು ಬರೆದು, ಸಮಾರ್ಯಕ್ಕೆ ಕಳುಹಿಸಿ,
೨ ಹೇಳಿದ್ದೇನಂದರೆ—ನಿಮ್ಮ ಯಜಮಾನನ ಮಕ್ಕಳು ನಿಮ್ಮ ಬಳಿ
ಯಲ್ಲಿ ಇದ್ದಾರೆ; ಇದಲ್ಲದೆ ರಥಗಳೂ, ಕುದುರೆಗಳೂ, ಕೋಟೆ
೩ ಯೂ, ಆಯುಧಗಳೂ ನಿಮಗೆ ಉಂಟು. ಆದದರಿಂದ ಈ ಪತ್ರಿ
ಕೆಯು ನಿಮ್ಮ ಬಳಿಗೆ ಬಂದಾಗ, ನೀವು ನಿಮ್ಮ ಯಜಮಾನನ
ಮಕ್ಕಳಲ್ಲಿ ಉತ್ತಮನಾಗಿರುವ ನೆಟ್ಟನೆಯಾದವನನ್ನು ನೋಡಿ
ಕೊಂಡು, ಅವನನ್ನು ಅವನ ತಂದೆಯ ಸಿಂಹಾಸನದ ಮೇಲೆ ಕೂ
ಡ್ರಿಸಿ, ನಿಮ್ಮ ಯಜಮಾನನ ಮನೆಗೋಸ್ಕರ ಯುದ್ಧ ಮಾಡಿರಿ.
೪ ಆದರೆ ಅವರು ಬಹು ಹೆಚ್ಚಾಗಿ ಭಯ ಪಟ್ಟು, ಇಗೋ, ಇಬ್ಬರು
ಅರಸುಗಳು ಅವನ ಮುಂದೆ ನಿಲ್ಲದೆ ಹೋದರು; ನಾವು ನಿಲ್ಲುವ



೫ ದು ಹ್ಯಾಗೆ! ಅಂದರು. ಆಗ ಮನೆಯ ಮೇಲೆ ಇರುವವನೂ,
ಪಟ್ಟಣದ ಮೇಲೆ ಇರುವವನೂ, ಹಿರಿಯರೂ, ಮಕ್ಕಳನ್ನು ಬೆಳಸು
ವವರೂ ಯೇಹುವಿನ ಬಳಿಗೆ ಕಳುಹಿಸಿ, ನಾವು ನಿನ್ನ ಸೇವಕರು;
ನೀನು ನಮಗೆ ಹೇಳುವದನ್ನೆಲ್ಲಾ ಮಾಡುತ್ತೇವೆ; ನಾವು ಯಾವ
ನನ್ನಾದರೂ ಅರಸಾಗ ಮಾಡುವದಿಲ್ಲ; ನಿನ್ನ ಕಣ್ಣುಗಳಿಗೆ
ಬೆಳ್ಳೇದಾಗಿರುವದನ್ನು ಮಾಡು, ಅಂದರು.

೬ ಆಗ ಅವನು ಎರಡನೇ ಸಾರಿ ಪತ್ರಿಕೆಯನ್ನು ಬರೆದು, ನೀವು
ನನ್ನವರಾಗಿದ್ದು, ನನ್ನ ಮಾತು ಕೇಳುವವರಾಗಿದ್ದರೆ, ನಿಮ್ಮ ಯ
ಜಮಾನನ ಮಕ್ಕಳಾಗಿರುವ ಮನುಷ್ಯರ ತಲೆಗಳನ್ನು ತಕ್ಕೊಂ
ಡು, ನಾಳೆ ಇಷ್ಟು ಹೊತ್ತಿಗೆ ಇಜ್ರೇಲಿಗೆ ನನ್ನ ಬಳಿಗೆ ಬನ್ನಿರಿ,
ಎಂದು ಹೇಳಿದನು. ಆದರೆ ಅರಸನ ಮಕ್ಕಳಾದ ಎಪ್ಪತ್ತು ಮಂದಿ
ಮನುಷ್ಯರೂ ತಮ್ಮನ್ನು ಬೆಳಸುವ ಪಟ್ಟಣದ ಹಿರಿಯರ ಬಳಿ
೭ ಯಲ್ಲಿ ಇದ್ದರು. ಈ ಪತ್ರಿಕೆಯು ಅವರ ಬಳಿಗೆ ಬಂದಾಗ, ಏನಾ
ಯಿತಂದರೆ, ಅವರು ಅರಸನ ಮಕ್ಕಳನ್ನು ಹಿಡಿದು, ಎಪ್ಪತ್ತು
ಮಂದಿಯನ್ನು ಕೊಂದು, ಅವರ ತಲೆಗಳನ್ನು ಪುಟ್ಟಿಗಳಲ್ಲಿಟ್ಟು,
೮ ಇಜ್ರೇಲಿಗೆ ಅವನ ಬಳಿಗೆ ಕಳುಹಿಸಿದರು. ಆಗ ಆ ದೂತನು ಬಂ
ದು, ಅವನಿಗೆ, ಅರಸನ ಮಕ್ಕಳ ತಲೆಗಳನ್ನು ತೆಗೆದು ಕೊಂಡು
ಬಂದಿದ್ದಾರೆಂದು ತಿಳಿಸಿದನು. ಅದಕ್ಕವನು, ಉದಯ ಕಾಲದ ವ
ರ್ಯಂತರ ಅವುಗಳನ್ನು ಬಾಗಲ ದ್ವಾರದಲ್ಲಿ ಎರಡು ಕುಪ್ಪೆಗ
೯ ಳಾಗಿ ಹಾಕಿರಿ, ಅಂದನು. ಉದಯದಲ್ಲಿ ಏನಾಯಿತಂದರೆ, ಅವ
ನು ಹೊರಟು, ನಿಂತು, ಸಕಲ ಜನರಿಗೆ ಹೇಳ್ದೇನಂದರೆ—ನೀವು
ನೀತಿವಂತರು; ಇಗೋ, ನಾನು ನನ್ನ ಯಜಮಾನನ ಮೇಲೆ
೧೦ ಬಳ್ಳಸಂಚು ಮಾಡಿ, ಅವನನ್ನು ಕೊಂದು ಹಾಕಿದೆನು. ಆದರೆ
ಇವರೆಲ್ಲರನ್ನು ಹೊಡೆದವರ್ಯಾರು! ಕರ್ತನು ಅಹಾಬನ ಮನೆಯ
ನ್ನು ಕುರಿತು ಹೇಳಿದ ಕರ್ತನ ಮಾತುಗಳಲ್ಲಿ ಒಂದೂ ನೆಲಕ್ಕೆ
ಬೀಳುವದಿಲ್ಲನೆಂದು, ನೀವು ತಿಳಿಯ ಕೊಳ್ಳಿರಿ. ಕರ್ತನು ತನ್ನ ಸೇ
ವಕನಾದ ಎಲೀಯನ ಮುಖಾಂತರ ಹೇಳಿದ್ದನ್ನು ತೀರಿಸಿದ್ದಾನೆ,
೧೧ ಅಂದನು. ಈ ಪ್ರಕಾರ ಯೇಹುವು ಅಹಾಬನಿಗೆ ಯೊರನೂಳ
ಉಳಿಯಗೊಡಿಸದೆ ಇರುವ ಮಟ್ಟಿಗೂ, ಇಜ್ರೇಲಿನಲ್ಲಿ ಅವನಿಗೆ
ಉಳಿದ ಸಮಸ್ತ ಮನೆಯವರನ್ನೂ, ಅವನ ಸಮಸ್ತ ಹಿರಿಯರ
ನ್ನೂ, ಅವನ ನೆಂಟರನ್ನೂ, ಅವನ ಯಾಜಕರನ್ನೂ ಹೊಡೆ
ದನು.

೧೨ ಮತ್ತು ಅವನು ಎದ್ದು, ಹೊರಟು, ಸಮಾರ್ಯಕ್ಕೆ ಬಂದ
೧೩ ನು. ಯೇಹುವು ಹಾದಿಯಲ್ಲಿರುವ, ಕುರುಬರು ಉಣ್ಣೆ ಕತ್ತರಿಸುವ
ಮನೆಯ ಬಳಿಗೆ ಬಂದಾಗ, ಯೆಹೂದದ ಅರಸನಾದ ಅಹಜ್ಯನ
ಸಹೋದರರನ್ನು ಕಂಡು, ಅವರಿಗೆ, ನೀವು ಯಾರು! ಅಂದನು.
ಅದಕ್ಕವರು, ನಾವು ಅಹಜ್ಯನ ಸಹೋದರರು; ಅರಸನ ಮಕ್ಕ
ಳನ್ನೂ, ರಾಣಿಯ ಮಕ್ಕಳನ್ನೂ ದರ್ಶಿಸ ಹೋಗುತ್ತೇವೆ, ಅಂ
೧೪ ದರು. ಆಗ, ಅವರನ್ನು ಜೀವದಿಂದ ಹಿಡಿಯಿರಿ ಎಂದು, ಅವನು
ಹೇಳಿದ್ದರಿಂದ, ಅವರು ಇವರನ್ನು ಜೀವದಿಂದ ಹಿಡಿದು, ಉಣ್ಣೆ ಕ
ತ್ತರಿಸುವ ಮನೆಯ ಕೂಣಿಯ ಬಳಿಯಲ್ಲಿ ಕೊಂದು ಹಾಕಿದರು.
ಅವರಲ್ಲಿ ಒಬ್ಬನನ್ನಾದರೂ ಉಳಿಸಲಿಲ್ಲ.

೧೫ ಯೇಹುವು ಅಲ್ಲಿಂದ ಹೋಗಿ, ತನ್ನನ್ನು ಎದುರ್ಗೊಳ್ಳ ಬ
ರುವ ರೆಕಾಬನ ಮಗನಾದ ಯೆಹೋನದಾಬನನ್ನು ಕಂಡು, ಅವ
ನನ್ನು ಆಶೀರ್ವದಿಸಿ, ಅವನಿಗೆ, ನನ್ನ ಹೃದಯವು ನಿನ್ನ ಹೃದ
ಯದ ಸಂಗಡ ಇರುವ ಹಾಗೆ ನಿನ್ನ ಹೃದಯ ಸರಿಯೋ! ಅಂ
ದನು. ಯೆಹೋನದಾಬನು, ಅದೆ, ಅಂದನು. ಹಾಗಾದರೆ ನಿನ್ನ
ಕೈ ಕೊಡು, ಅಂದನು. ಇವನು ತನ್ನ ಕೈ ಕೊಟ್ಟು, ತನ್ನ ಬ
ಳಿಯ ರಥದ ಮೇಲೆ ಏರಿಸಿ ಕೊಂಡು, ಅವನಿಗೆ, ನೀನು ನನ್ನ
೧೬ ಸಂಗಡ ಬಂದು, ಕರ್ತನಿಗೋಸ್ಕರ ನನಗುಂಟಾದ ಆಸಕ್ತಿಯನ್ನು
ನೋಡು ಎಂಥೇಳಿ, ಅವನನ್ನು ತನ್ನ ರಥದಲ್ಲಿ ಕೂಡ್ರಿಸಿ ಕೊಂ
ಡನು. ಅವನು ಸಮಾರ್ಯಕ್ಕೆ ಬಂದ ತರುವಾಯ ಸಮಾ
ರ್ಯದಲ್ಲಿ, ಕರ್ತನು ಎಲೀಯನಿಗೆ ಹೇಳಿದ ವಾಕ್ಯದ ಪ್ರಕಾರ
ಅವನನ್ನು ನಾಶನ ಮಾಡುವ ಪರ್ಯಂತರ ಅಹಾಬನಿಗೆ ಉಳಿದ
ವರೆಲ್ಲರನ್ನು ಹೊಡೆದು ಬಿಟ್ಟನು.

೧೭ ಮತ್ತು ಯೇಹುವು ಜನರೆಲ್ಲರನ್ನು ಕೂಡಿಸಿ, ಅವರಿಗೆ, ಅಹಾ
ಬನು ಅಲ್ಪವಾಗಿ ಬಾಳ್ವನನ್ನು ಸೇವಿಸಿದನು; ಆದರೆ ಯೇಹುವು ಅ
ವನನ್ನು ಬಹಳವಾಗಿ ಸೇವಿಸುವನು. ಆದದರಿಂದ ಬಾಳ್ವನ ಸಮ
ಸ್ತ ಪ್ರವಾದಿಗಳನ್ನೂ, ಅವನ ಸಮಸ್ತ ಸೇವಕರನ್ನೂ, ಅವನ
ಸಮಸ್ತ ಯಾಜಕರನ್ನೂ ನನ್ನ ಬಳಿಗೆ ಕರೆಯಿರಿ; ಒಬ್ಬನೂ
ಬಾರದೆ ಇರ ಕೂಡದು. ಯಾಕಂದರೆ ಬಾಳ್ವನಿಗೆ ಮಹಾ ಬಲಿ
ಕೊಡುವದು ನನಗುಂಟು. ಯಾವನಾದರೂ ಬಾರದೆ ಹೋದರೆ,
ಅವನು ಬದುಕನು, ಅಂದನು. ಯಾಕಂದರೆ ಯೇಹುವು ಬಾಳ್ವನ
ನ್ನು ಸೇವಿಸುವವರನ್ನು ನಾಶ ಮಾಡುವ ಹಾಗೆ, ತಂತ್ರದಿಂದ
೧೮ ಮಾಡಿದನು. ಆಗ ಯೇಹುವು ಬಾಳ್ವನಿಗೋಸ್ಕರ ಘನಸಂಘವ
೧೯ ನ್ನು ಪರಿಶುದ್ಧ ಮಾಡಿರಿ, ಅಂದನು. ಹಾಗೆಯೇ ಅದನ್ನು ಸಾ
ರಿದರು. ಯೇಹುವು ಇಸ್ರಯೇಲೆಲ್ಲಾದರಲ್ಲಿ ಕಳುಹಿಸಿದ್ದರಿಂದ,
ಬಾಳ್ವನನ್ನು ಸೇವಿಸುವವರೆಲ್ಲರೂ ಬಂದರು. ಬಾರದೆ ಇದ್ದವನು
ಒಬ್ಬನೂ ಇಲ್ಲ. ಅವರು ಬಾಳ್ವನ ಮನೆಯಲ್ಲಿ ಪ್ರವೇಶಿಸಿದಾಗ,
೨೦ ಬಾಳ್ವನ ಮನೆ ತುಂಬಿ ಇತ್ತು. ಆಗ ಅವನು ವಸ್ತ್ರಗಳ ಮನೆಯ
ಮೇಲೆ ಇರುವವನಿಗೆ, ಬಾಳ್ವನನ್ನು ಸೇವಿಸುವ ಸಮಸ್ತರಿಗೋಸ್ಕ
ರ ವಸ್ತ್ರಗಳನ್ನು ತಕ್ಕೊಂಡು ಬಾ, ಎಂದು ಹೇಳಿದ್ದರಿಂದ, ಅವ
೨೧ ನು ಅವರಿಗೋಸ್ಕರ ವಸ್ತ್ರಗಳನ್ನು ತಕ್ಕೊಂಡು ಬಂದನು. ಆಗ
ಯೇಹುವು ರೆಕಾಬನ ಮಗನಾದ ಯೆಹೋನದಾಬನೂ ಬಾಳ್ವನ
ಮನೆಯಲ್ಲಿ ಪ್ರವೇಶಿಸಿದರು. ಮತ್ತು ಬಾಳ್ವನನ್ನು ಸೇವಿಸುವವರ
ಹೊರ್ತು, ಅವರ ಸಂಗಡ ಕರ್ತನ ಸೇವಕರಲ್ಲಿ ಒಬ್ಬನಾದರೂ
ಇರದ ಹಾಗೆ ಶೋಧಿಸಿ ನೋಡಿರಿ ಎಂದು, ಬಾಳ್ವನನ್ನು ಸೇವಿಸು
೨೨ ವವರಿಗೆ ಹೇಳಿದನು. ಅವರು ಬಲಿಗಳನ್ನೂ ಹೋಮಗಳನ್ನೂ
ಅರ್ಪಿಸ ಒಳಗೆ ಪ್ರವೇಶಿಸಿದ ತರುವಾಯ, ಯೇಹುವು ಹೊರಗೆ
ಎಂಭತ್ತು ಮಂದಿಯನ್ನು ಇರಿಸಿ ಕೊಂಡು, ಅವರಿಗೆ, ನಾನು ನಿ
ಮ್ಮ ಕೈಗೆ ಒಪ್ಪಿಸಿದ ಮನುಷ್ಯರಲ್ಲಿ ಯಾವನಾದರೂ ತಪ್ಪಿಸಿ
ಕೊಂಡು ಹೋದರೆ, ಅವನ ಪ್ರಾಣಕ್ಕೆ ನಿಮ್ಮ ಪ್ರಾಣ ಈಡಾಗಿ
ರುವದು, ಅಂದನು.

೨೩ ಅವನು ಹೋಮವನ್ನು ಅರ್ಪಿಸಿ ತೀರಿದ ತರುವಾಯ ಏನಾ
ಯಿತಂದರೆ, ಯೇಹುವು ಓಟಗಾರರಿಗೂ ಅಧಿಪತಿಗಳಿಗೂ, ನೀವು
ಒಳಗೆ ಹೋಗಿ, ಯಾವನೂ ಹೊರಗೆ ಬಾರದ ಹಾಗೆ, ಅವರ
೨೬ ನ್ನು ಹೊಡೆಯಿರಿ, ಅಂದನು. ಹಾಗೆಯೇ ಅವರನ್ನು ಕತ್ತಿಯಿಂ
ದ ಹೊಡೆದರು. ಓಟಗಾರರೂ ಅಧಿಪತಿಗಳೂ ಅವರನ್ನು ಹೊ
ರಗೆ ಹಾಕಿದ ತರುವಾಯ, ಬಾಳ್ವನ ಮನೆಯ ಪಟ್ಟಣಕ್ಕೆ ಹೋಗಿ,
ಬಾಳ್ವನ ಮನೆಯಿಂದ ವಿಗ್ರಹಗಳನ್ನು ತಂದು, ಅವುಗಳನ್ನು ಸು

೨೭ ಟ್ಟು ಬಿಟ್ಟರು. ಇದಲ್ಲದೆ ಅವರು ಬಾಳನ ವಿಗ್ರಹವನ್ನು ಕಿತ್ತು
ಹಾಕಿ, ಬಾಳನ ಮನೆಯನ್ನು ಕೆಡವಿ ಬಿಟ್ಟು, ಅದನ್ನು ಈ ಹೊತ್ತಿ
ನ ಮಟ್ಟಿಗೂ ಶಿಟ್ಟೆಯಾಗ ಮಾಡಿದರು.
೨೮ ಹೀಗೆಯೇ ಯೇಹುವು ಬಾಳನನ್ನು ಇಸ್ರಯೇಲಿನಲ್ಲಿಂದ ನಾ
೨೯ ಶನ ಮಾಡಿ ಬಿಟ್ಟನು. ಆದರೆ ಬೇತೆಲಿನಲ್ಲಿಯೂ ದಾನಿನಲ್ಲಿ
ಯೂ ಇರುವ ಭಂಗಾರದ ಹೋರಿಗಳಿಂದ ಇಸ್ರಯೇಲನ್ನು ಪಾಪ
ಮಾಡ ಪ್ರೇರೇಪಿಸಿದ ನೆಬಾಟನ ಮಗನಾದ ಯೆರೊಬಾಮನ ಪಾ
ಪಗಳನ್ನು ಯೇಹುವು ತೊರೆದು ಬಿಡಲಿಲ್ಲ.
೩೦ ಮತ್ತು ಕರ್ತನು ಯೇಹುವಿಗೆ, ನೀನು ನನ್ನ ದೃಷ್ಟಿಗೆ ನೆಟ್ಟನೆ
ಯಾದದ್ದನ್ನು ನಡಿಸಿ, ನನ್ನ ಹೃದಯದಲ್ಲಿದ್ದ ಎಲ್ಲಾದರ ಪ್ರಕಾರ
ಅಹಾಬನ ಮನೆಗೆ ಮಾಡಿ, ಯುಕ್ತವಾಗಿ ಮಾಡಿದ್ದರಿಂದ, ನಿನ್ನ
ಮಕ್ಕಳು ನಾಲ್ಕು ತಲಾಂತರಗಳ ಮಟ್ಟಿಗೂ ಇಸ್ರಯೇಲಿನ ಸಿಂಹಾ
೩೧ ಸನದ ಮೇಲೆ ಕುಳಿತು ಕೊಳ್ಳುವರು, ಅಂದನು. ಆದರೆ ಯೇಹುವು
ತನ್ನ ಪೂರ್ಣ ಹೃದಯದಿಂದ ಇಸ್ರಯೇಲಿನ ದೇವರಾದ ಕರ್ತ
ನ ನ್ಯಾಯಪ್ರಮಾಣದಲ್ಲಿ ನಡಿಯುವ ಹಾಗೆ ಎಚ್ಚರಿಕೆಯಾಗಿರ
ಲಿಲ್ಲ; ಇಸ್ರಯೇಲನ್ನು ಪಾಪ ಮಾಡ ಪ್ರೇರೇಪಿಸಿದ ಯೆರೊಬಾ
ಮನ ಪಾಪಗಳನ್ನು ತೊರೆದು ಬಿಡಲಿಲ್ಲ.
೩೨ ಆ ದಿವಸಗಳಲ್ಲಿ ಕರ್ತನು ಇಸ್ರಯೇಲನ್ನು ಖಂಡ್ರಿಸ ಆರಂಭಿ
ಸಿದನು. ಯಾಕಂದರೆ ಹಜಯೇಲನು ಇಸ್ರಯೇಲಿನ ಸಮಸ್ತ ಮೇ
೩೩ ರೆಗಳಲ್ಲಿ ಅವರನ್ನು ಹೊಡೆದನು. ಮೂರ್ದನ್ನಲ್ಲಿ ಯೊರ್ದನು ಮೊ
ದಲುಗೊಂಡು, ಗಾದಿಯರೂ ರೂಬೆನ್ಯರೂ ನಿವಾಸವಾಗಿದ್ದ ಗಿ
ಲ್ಯಾದಿನ ಸಮಸ್ತ ದೇಶವನ್ನೂ, ಅರ್ನೋನು ನದಿಯ ಬಳಿಯಲ್ಲಿ
ರುವ ಅರೋವೆರ್ ಮೊದಲುಗೊಂಡು, ಮನಸ್ಸೆಯರು ನಿವಾಸವಾಗಿ
ದ್ದ ಗಿಲ್ಯಾದನ್ನೂ ಬಾಶಾನನ್ನೂ ಹೊಡೆದನು.
೩೪ ಆದರೆ ಯೇಹುವಿನ ಇತರ ಕ್ರಿಯೆಗಳೂ, ಅವನು ಮಾಡಿದ್ದೆಲ್ಲ
ವೂ, ಅವನ ಪರಾಕ್ರಮವೆಲ್ಲವೂ ಇಸ್ರಯೇಲಿನ ಅರಸುಗಳ ದಿನ
೩೫ ಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿಲ್ಲವೋ! ಯೇಹುವು ತ
ನ್ನ ಪಿತೃಗಳ ಸಂಗಡ ಮಲಗಿದನು; ಅವನನ್ನು ಸಮಾರ್ಯದಲ್ಲಿ
ಹೂಣಿಟ್ಟರು. ಅವನ ಮಗನಾದ ಯೆಹೋವಹಾಜನು ಅವನಿಗೆ
೩೬ ಬದಲಾಗಿ ಆಳಿದನು. ಯೇಹುವು ಸಮಾರ್ಯದಲ್ಲಿ ಇಸ್ರಯೇಲಿ
ನ ಮೇಲೆ ಆಳಿದ ದಿವಸಗಳು ಇಪ್ಪತ್ತೆಂಟು ವರುಷಗಳು.

## ೧೧. ಸಂಧಿ.

೧ ಅಹಜ್ಯನ ತಾಯಿಯಾದ ಅಟಲ್ಯಳು ತನ್ನ ಮಗನು ಸತ್ತು
ಹೋದದ್ದನ್ನು ನೋಡಿದಾಗ, ಎದ್ದು, ರಾಜ ಬೀಜವನ್ನೆಲ್ಲಾ ನಾ
೨ ಶ ಮಾಡಿದಳು. ಆದರೆ ಅರಸನಾದ ಯೋರಮನಿಗೆ ಮಗಳಾ
ದ ಯೆಹೋಷೇಬಳು ಕೊಂದು ಹಾಕಲ್ಪಟ್ಟ ಅರಸನ ಮಕ್ಕ
ಳ ಮಧ್ಯದಿಂದ ಅಹಜ್ಯನ ಮಗನಾದ ಯೊವಾಷನನ್ನು ಕದ್ದು
ಕೊಂಡಳು. ಆದದರಿಂದ ಅವನು ಕೊಲ್ಲಲ್ಪಡದ ಹಾಗೆ ಅವನನ್ನೂ
ಅವನ ದಾದಿಯನ್ನೂ, ಅಟಲ್ಯಳು ಕಾಣದ ಹಾಗೆ, ಮಂಚಗಳ
೩ ಮನೆಯಲ್ಲಿ ಬಚ್ಚಿಟ್ಟರು. ಹಾಗೆಯೇ ಅವನು ಅವಳ ಸಂಗಡ ಆ
ರು ವರುಷ ಕರ್ತನ ಮನೆಯಲ್ಲಿ ಬಚ್ಚಿಡಲ್ಪಟ್ಟಿದ್ದನು. ಅಟಲ್ಯಳು
ದೇಶದ ಮೇಲೆ ಆಳುತ್ತಾ ಇದ್ದಳು.
೪ ಆದರೆ ಏಳನೇ ವರುಷದಲ್ಲಿ ಯೆಹೋಯದನು ನೂರಕ್ಕೆ ಅಧಿ
ಪತಿಯಾದವರನ್ನೂ, ರಾಣುವೆಯ ಅಧಿಪತಿಗಳನ್ನೂ, ಓಟಗಾ
ರರನ್ನೂ ಕರೆಯ ಕಳುಹಿಸಿ, ತನ್ನ ಬಳಿಗೆ ಕರ್ತನಮನೆಗೆ ಕರ
ಕೊಂಡು, ಅವರ ಸಂಗಡ ಒಡಂಬಡಿಕೆಯನ್ನು ಮಾಡಿ, ಕರ್ತನ
ಮನೆಯಲ್ಲಿ ಅವರಿಂದ ಪ್ರಮಾಣ ತೆಗೆದು ಕೊಂಡು, ಅವರಿಗೆ ಅರ
ಸನ ಮಗನನ್ನು ತೋರಿಸಿ, ಅವರಿಗೆ ಆಜ್ಞಾಪಿಸಿದ್ದೇನಂದರೆ—ನೀ
೫ ವು ಮಾಡ ಬೇಕಾದದ್ದೇನಂದರೆ, ಸಬ್ಬತು ದಿವಸದಲ್ಲಿ ಪ್ರವೇಶಿಸು
ವವರಾದ ನಿಮ್ಮೊಳಗೆ ಮೂರನೇ ಪಾಲು ಅರಸನ ಮನೆಯ ಕಾ
೬ ವಲಿಯ ಮೇಲೆ ಕಾವಲಿಗಾರರಾಗಿ ಇರ್ರಿ. ಮೂರನೇ ಪಾಲು ಸೂ
ರು ಎಂಬ ಬಾಗಲ ಬಳಿಯಲ್ಲಿಯೂ, ಮತ್ತೊಂದು ಮೂರನೇ ಪಾ
ಲು ಕಾವಲಿಯ ಹಿಂದೆ ಇರುವ ಬಾಗಲ ಬಳಿಯಲ್ಲಿಯೂ ಇರ್ರಿ.
ಹೀಗೆಯೇ ಮನೆಯ ಕಾವಲಿಯು ಮುರಿಯಲ್ಪಟದ ಹಾಗೆ, ಅದ
೭ ನ್ನು ಕಾಯಿರಿ. ಇದಲ್ಲದೆ ಸಬ್ಬತು ದಿವಸದಲ್ಲಿ ಹೊರಕುವ ನಿಮ್ಮೆ
ಲ್ಲರಲ್ಲಿ ಎರಡು ಪಾಲು ಅರಸನ ಬಳಿಯಲ್ಲಿ ಕರ್ತನ ಮನೆಯ
೮ ಕಾವಲಿ ಕಾಯುವವರಾಗಿರ್ರಿ. ನಿಮ್ಮಲ್ಲಿ ಪ್ರತಿ ಮನುಷ್ಯನು ತನ್ನ
ಕೈಯಲ್ಲಿ ಆಯುಧಗಳನ್ನು ಹಿಡು ಕೊಂಡು, ಅರಸನನ್ನು ಸುತ್ತಿ
ಕೊಂಡಿರ್ರಿ; ಯಾವನಾದರೂ ಸಾಲುಗಳಲ್ಲಿ ಬಂದರೆ, ಅವನು
ಕೊಲೆ ಪಡಲಿ. ಆದರೆ ಅರಸನು ಹೊರಗೆ ಹೋಗುವಾಗಲೂ,
ಒಳಗೆ ಬರುವಾಗಲೂ ನೀವು ಅವನ ಸಂಗಡ ಇರ್ರಿ.
೯ ಹಾಗೆಯೇ ನೂರಕ್ಕೆ ಅಧಿಪತಿಯಾದವರು ಯಾಜಕನಾದ
ಯೆಹೋಯದನು ಆಜ್ಞಾಪಿಸಿದ ಎಲ್ಲಾದರ ಪ್ರಕಾರ ಮಾಡಿ, ಪ್ರತಿ
ಮನುಷ್ಯನು ಸಬ್ಬತು ದಿವಸದಲ್ಲಿ ಪ್ರವೇಶಿಸ ಬೇಕಾದ ತನ್ನ ತನ್ನ
ಮನುಷ್ಯರನ್ನೂ, ಸಬ್ಬತು ದಿವಸದಲ್ಲಿ ಹೊರಗೆ ಹೋಗ ಬೇ
ಕಾದವರನ್ನೂ ಯಾಜಕನಾದ ಯೆಹೋಯದನ ಬಳಿಗೆ ಕರ
೧೦ ಕೊಂಡು ಬಂದರು. ಆಗ ಯಾಜಕನು ಕರ್ತನ ಮನೆಯಲ್ಲಿದ್ದ
ಅರಸನಾದ ದಾವೀದನ ಈಟಿಗಳನ್ನೂ ಡಾಲುಗಳನ್ನೂ ನೂರಕ್ಕೆ
೧೧ ಅಧಿಪತಿಯಾದವರಿಗೆ ಕೊಟ್ಟನು. ಮತ್ತು ಓಟಗಾರರಲ್ಲಿ ಪ್ರತಿ
ಮನುಷ್ಯನು ತನ್ನ ಆಯುಧಗಳನ್ನು ಕೈಯಲ್ಲಿ ಹಿಡು ಕೊಂಡು,
ಬಲಿಪೀಠದ ಬಳಿಯಲ್ಲಿಯೂ ಮನೆಯ ಬಳಿಯಲ್ಲಿಯೂ, ಮನೆ
ಯ ಬಲಪಾರ್ಶ್ವ ಮೊದಲುಗೊಂಡು ಮನೆಯ ಎಡಪಾರ್ಶ್ವದ
೧೨ ಮಟ್ಟಿಗೂ ಅರಸನ ಸುತ್ತಲೂ ನಿಂತು ಕೊಂಡರು. ಆಗಅವನು
ಅರಸನ ಮಗನನ್ನು ಹೊರಗೆ ಕರ ತಂದು, ಕಿರೀಟವನ್ನು ಅವನ
ತಲೆಯ ಮೇಲೆ ಇರಿಸಿ, ಸಾಕ್ಷಿಯನ್ನು ಕೊಟ್ಟನು; ಅವರು ಅವ
ನನ್ನು ಅರಸನಾಗ ಮಾಡಿ, ಅಭಿಷೇಕಿಸಿ, ಕೈ ಚಪ್ಪಳಿಟ್ಟು, ಅರ
೧೩ ಸನು ಬಾಳಿಲಿ, ಅಂದರು. ಅಟಲ್ಯಳು ಓಟಗಾರರ ಶಬ್ದವನ್ನೂ,
ಜನರ ಶಬ್ದವನ್ನೂ ಕೇಳಿದಾಗ, ಕರ್ತನ ಮನೆಯಲ್ಲಿ ಜನರ ಬಳಿ
೧೪ ಗೆ ಬಂದಳು. ಅವಳು ದೃಷ್ಟಿಸಿ ನೋಡುವಾಗ, ಇಗೋ, ಅರಸ
ನು, ಪದ್ಧತಿಯ ಪ್ರಕಾರ, ಕಂಭದ ಬಳಿಯಲ್ಲಿ ನಿಂತಿದ್ದನು. ಪ್ರ
ಧಾನರೂ ತುತೂರಿ ಊದುವವರೂ ಅರಸನ ಬಳಿಯಲ್ಲಿ ನಿಂತಿದ್ದ
ರು. ಇದಲ್ಲದೆ ದೇಶದ ಜನರೆಲ್ಲರು ಸಂತೋಷ ಪಟ್ಟು, ತುತೂ
ರಿಗಳನ್ನು ಊದಿದರು. ಆಗ ಅಟಲ್ಯಳು ತನ್ನ ವಸ್ತ್ರಗಳನ್ನು ಹ
೧೫ ರು ಕೊಂಡು, ಒಳಸಂಚು, ಒಳಸಂಚು, ಎಂದು ಕೂಗಿದಳು. ಆದ
ರೆ ಯಾಜಕನಾದ ಯೆಹೋಯದನು ರಾಣುವೆಯ ಅಧಿಪತಿಗ
ಳಾಗಿರುವ ನೂರಕ್ಕೆ ಅಧಿಪತಿಗಳಾದವರಿಗೆ, ಸಾಲುಗಳ ಹೊರಗೆ
ಅವಳನ್ನು ಹೊರಡಿಸಿರಿ ಎಂದೂ, ಅವಳ ಹಿಂಬಾಲಿಸುವವನು ಕ
ತ್ತಿಯಿಂದ ಕೊಲ್ಲಲ್ಪಡಲಿ ಎಂದೂ, ಹೇಳಿ, ಆಜ್ಞಾಪಿಸಿದನು. ಯಾ
ಕಂದರೆ ಅವಳು ಕರ್ತನ ಮಂದಿರದಲ್ಲಿ ಕೊಲೆ ಪಡ ಬಾರದೆಂದು,
೧೬ ಯಾಜಕನು ಹೇಳಿದ್ದನು. ಆಗಲವರು ಅವಳ ಮೇಲೆ ಕೈಗಳನ್ನು
ಹಾಕಿದರು; ಕುದುರೆಗಳು ಅರಸನ ಮನೆಯೊಳಕ್ಕೆ ಬರುವ ಮಾ
ರ್ಗವಾಗಿ ಅವಳು ಹೋದಳು; ಅಲ್ಲಿ ಕೊಲೆ ಪಟ್ಟಳು.



೧೭ ಆಗ ಕರ್ತನ ಜನರಾಗಿರುವ ಹಾಗೆ, ಯೆಹೋಯದನು ಕ
ರ್ತನಿಗೂ, ಅರಸನಿಗೂ, ಜನರಿಗೂ ಒಡಂಬಡಿಕೆ ಮಾಡಿದನು.
೧೮ ಮತ್ತು ಅರಸನಿಗೂ ಜನರಿಗೂ ಒಡಂಬಡಿಕೆ ಮಾಡಿದನು. ಮ
ತ್ತು ದೇಶದ ಜನರೆಲ್ಲರೂ ಬಾಳನ ಮನೆಯಲ್ಲಿ ಹೊಕ್ಕು, ಅದ
ನ್ನು ಕೆಡವಿ ಹಾಕಿ, ಅವನ ಬಲಿಪೀಠಗಳನ್ನೂ ಅವನ ವಿಗ್ರಹಗಳ
ನ್ನೂ ಒಡೆದು ಬಿಟ್ಟು, ಬಲಿಪೀಠಗಳ ಮುಂದೆ ಬಾಳನ ಯಾಜಕ
ನಾದ ಮತ್ತಾನನನ್ನು ಕೊಂದು ಹಾಕಿದರು. ಇದಲ್ಲದೆ ಯಾಜಕ
೧೯ ನು ಕರ್ತನ ಮನೆಯಲ್ಲಿ ಪರಿಚಾರಕರನ್ನು ನೇಮಿಸಿದನು. ಆಗ
ಅವನು ನೂರಕ್ಕೆ ಅಧಿಪತಿಗಳನ್ನೂ, ಅಧಿಕಾರರನ್ನೂ ಓಟಗಾ
ರರನ್ನೂ, ದೇಶದ ಜನರೆಲ್ಲರನ್ನೂ ತನ್ನ ಬಳಿಗೆ ಕರಕೊಂಡ
ಮೇಲೆ, ಅವರು ಅರಸನನ್ನು ಕರ್ತನ ಮನೆಯಿಂದ ಓಟಗಾರರ
ಬಾಗಲ ಮಾರ್ಗವಾಗಿ ಅರಮನೆಗೆ ಕರಕೊಂಡು ಬಂದು, ಅರಸು
೨೦ ಗಳ ಸಿಂಹಾಸನದ ಮೇಲೆ ಕೂಪ್ರಿಸಿದರು. ಆಗ ದೇಶದ ಜನರೆಲ್ಲ
ರೂ ಸಂತೋಷ ಪಟ್ಟರು; ಪಟ್ಟಣವು ಶಾಂತವಾಗಿತ್ತು. ಆದರೆ ಅ
೨೧ ಟಲ್ಯಳನ್ನು ಅರಮನೆಯ ಬಳಿಯಲ್ಲಿ ಕತ್ತಿಯಿಂದ ಕೊಂದು ಹಾ
ಕಿದರು. ಯೊವಾಷನು ಏಳು ವರುಷದವನಾಗಿದ್ದಾಗ, ಆಳ್ವಿ ಆ
ರಂಭಿಸಿದನು.

## ೧೨. ಸಂಧಿ.

೧ ಯೇಹುವಿನ ಏಳನೇ ವರುಷದಲ್ಲಿ ಯೊವಾಷನು ಆಳ್ವಿ ಆರಂಭಿ
೨ ಸಿ, ಯೆರೂಸಲೇಮಿನಲ್ಲಿ ನಾಲ್ವತ್ತು ವರುಷ ಆಳಿದನು. ಅವನ
ತಾಯಿ ಬೇರ್ಷೆಬ ಊರಿನವಳಾದ ಜಿಬ್ಯಳೆಂಬವಳು. ಆದರೆ
ಯಾಜಕನಾದ ಯೆಹೋಯದನು ಯೊವಾಷನನ್ನು ಬೋಧಿಸಿ
ದ ಅವನ ಸಮಸ್ತ ದಿವಸಗಳಲ್ಲಿ ಯೊವಾಷನು ಕರ್ತನ ದೃಷ್ಟಿ
೩ ಯಲ್ಲಿ ನೆಟ್ಟನೆಯಾದದ್ದನ್ನು ಮಾಡಿದನು. ಮೇಡುಗಳು ಮಾತ್ರ
ಕೆಡವಲ್ಪಟಕೆ ಇದ್ದವು; ಜನರು ಮೇಡುಗಳ ಮೇಲೆ ಬಲಿಯನ್ನೂ
ಧೂಪವನ್ನೂ ಅರ್ಪಿಸುತ್ತಾ ಇದ್ದರು.
೪ ಆಗ ಯೊವಾಷನು ಯಾಜಕರಿಗೆ ಹೇಳಿದ್ದೇನಂದರೆ, ಕರ್ತ
ನ ಮನೆಗೆ ತರಲ್ಪಟ್ಟ ಪರಿಶುದ್ಧವಾದವುಗಳ ಕೊಖ್ಖವೆಲ್ಲವನ್ನೂ,
ಹಾಮ ಹೋಗುವ ಪ್ರತಿ ಮನುಷ್ಯನ ಕೊಖ್ಖವನ್ನೂ, ಪ್ರಾಣಗ
ಳ ಎಣಿಕೆಯ ಕೊಖ್ಖವನ್ನೂ, ಪ್ರತಿ ಮನುಷ್ಯನು ತನ್ನ ಇಚ್ಛೆ
ಯ ಪ್ರಕಾರ ಕರ್ತನ ಮನೆಗೆ ಕೊಡ ಬೇಕೆಂದು ತಕ್ಕೊಂಡು ಬಂ
೫ ದ ಕೊಖ್ಖವೆಲ್ಲವನ್ನೂ, ಯಾಜಕರಲ್ಲಿ ಅವನವನು ತನ್ನ ತನ್ನ
ಪರಿಚಿತಿಯವರಿಂದ ತಕ್ಕೊಂಡು, ಮನೆಯಲ್ಲಿ ಕಂಡು ಕೊಳ್ಳುವ
೬ ಒಡಕುಗಳನ್ನೆಲ್ಲಾ ನೆಟ್ಟಗೆ ಮಾಡಲಿ, ಅಂದನು. ಆದರೆ ಅರಸನಾದ
ಯೊವಾಷನ ಇಪ್ಪತ್ತು ಮೂರನೇ ವರುಷದ ಮಟ್ಟಿಗೂ, ಯಾ
೭ ಜಕರು ಮನೆಯ ಒಡಕುಗಳನ್ನು ನೆಟ್ಟಗೆ ಮಾಡದೆ ಇದ್ದರು. ಆಗ
ಅರಸನಾದ ಯೊವಾಷನು ಯಾಜಕನಾದ ಯೆಹೋಯದನ
ನ್ನೂ, ಯಾಜಕರನ್ನೂ ಕರೆದು, ಅವರಿಗೆ, ನೀವು ಮನೆಯ ಒಡ
ಕುಗಳನ್ನು ನೆಟ್ಟಗೆ ಮಾಡದೆ ಇರುವದೇನು! ಇನ್ನು ಮೇಲೆ ನೀ
ವು ನಿಮ್ಮ ಪರಿಚಿತಿಯವರಿಂದ ಕೊಖ್ಖವನ್ನು ತೆಗೆದು ಕೊಳ್ಳದೆ,
ಮನೆಯ ಒಡಕುಗಳಿಗೋಸ್ಕರ ಅದನ್ನು ಒಪ್ಪಿಸಿ ಕೊಡಿರಿ, ಅಂ
೮ ದನು.
ಹಾಗೆಯೇ ಯಾಜಕರು ಜನರ ಕೈಯಿಂದ ಕೊಖ್ಖವನ್ನು ತೆ
ಗೆದು ಕೊಳ್ಳದೆ ಇರುವದಕ್ಕೂ, ಮನೆಯ ಒಡಕುಗಳನ್ನು ನೆಟ್ಟ
೯ ಗೆ ಮಾಡದೆ ಇರುವದಕ್ಕೂ ಸಮ್ಮತಿಸಿದರು. ಆದರೆ ಯಾಜಕ
ನಾದ ಯೆಹೋಯದನು ಒಂದು ಪೆಟ್ಟಿಗೆಯನ್ನು ತಕ್ಕೊಂಡು,
ಅದರ ಮುಚ್ಚಳದಲ್ಲಿ ತೂತನ್ನು ಮಾಡಿ, ಅದನ್ನು ಬಲಿಪೀಠದ
ಬಳಿಯಲ್ಲಿ ಕರ್ತನ ಮನೆಯೊಳಗೆ ಪ್ರವೇಶದ ಬಲಪಾರ್ಶ್ವದಲ್ಲಿ
ಇಟ್ಟನು. ಆಗ ಬಾಗಲ ಕಾಯುವ ಯಾಜಕರು ಕರ್ತನ ಮನೆ
ಗೆ ತರಲ್ಪಟ್ಟ ಕೊಖ್ಖವನ್ನೆಲ್ಲಾ ಅದರಲ್ಲಿ ಹಾಕಿದರು.
೧೦ ಪೆಟ್ಟಿಗೆಯಲ್ಲಿ ಬಹಳ ಕೊಖ್ಖ ಉಂಟೆಂದು ಅವರು ನೋಡಿ,
ಅರಸನ ರಾಯಸದವನೂ ಪ್ರಧಾನ ಯಾಜಕನೂ ಏರಿ ಬಂದು,
ಕರ್ತನ ಮನೆಯಲ್ಲಿ ಸಿಕ್ಕಿದ ಕೊಖ್ಖವನ್ನು ಎಣಿಸಿ, ಕಟ್ಟಿಸಿದರು.
೧೧ ಮತ್ತು ಅವರು ಎಣಿಸಿದ ಕೊಖ್ಖವನ್ನು ಕರ್ತನ ಮನೆಯ ವಿಚಾ
ರಕರಾಗಿರುವ ಕೆಲಸ ಮಾಡುವವರ ಕೈಯಲ್ಲಿ ಒಪ್ಪಿಸಿದರು. ಇ
ವರು ಕರ್ತನ ಮನೆಯಲ್ಲಿ ಕೆಲಸ ಮಾಡುವ ಬಡಿಗಿಯವರಿಗೂ,
ಶಿಲ್ಪಿಗಾರರಿಗೂ, ಕಾಮಾಟಿಗರಿಗೂ, ಕಲ್ಲು ಕಾಟಿಗರಿಗೂ ಕೊ
ಟ್ಟರು. ಇದಲ್ಲದೆ ಕರ್ತನ ಮನೆಯ ಒಡಕುಗಳನ್ನು ನೆಟ್ಟಗೆ
ಮಾಡುವದಕ್ಕೆ ಮರವನ್ನೂ, ಕೆತ್ತಿದ ಕಲ್ಲುಗಳನ್ನೂ ತೆಗೆದು
ಕೊಳ್ಳುವದಕ್ಕೂ ಮನೆ ನೆಟ್ಟಗೆ ಮಾಡ ಬೇಕಾದ ಸಮಸ್ತ ಖ
ರ್ಚಿಗೂ ಕೊಟ್ಟರು. ಆದರೆ ಕರ್ತನ ಮನೆಗೋಸ್ಕರ ಬೆಳ್ಳಿ
ಬಟ್ಟಲುಗಳನ್ನೂ, ಕತ್ತರಿಗಳನ್ನೂ, ಪಾತ್ರೆಗಳನ್ನೂ, ತುತೂರಿಗ
ಳನ್ನೂ, ಭಂಗಾರದ ಸಾಮಾನುಗಳನ್ನೂ, ಬೆಳ್ಳಿಯ ಸಾಮಾ
೧೪ ನುಗಳನ್ನೂ ಕರ್ತನ ಮನೆಗೆ ತರಲ್ಪಟ್ಟ ಕೊಖ್ಖದಿಂದ ಮಾಡಿಸ
ದೆ, ಅವರು ಅದನ್ನು ಕೆಲಸದವರಿಗೆ ಕೊಟ್ಟು, ಕರ್ತನ ಮನೆಯ
೧೫ ನ್ನು ನೆಟ್ಟಗೆ ಮಾಡಿಸಿದರು. ಇದಲ್ಲದೆ ಅವರು ಕೆಲಸ ಮಾಡುವವ
ರಿಗೆ ಕೊಡುವದಕ್ಕೆ ಯಾರ ಕೈಯಲ್ಲಿ ಒಪ್ಪಿಸಿದ್ದಕೋ, ಅವರಿಂದ
ಲೆಖ್ಖವನ್ನು ತೆಗೆದು ಕೊಳ್ಳಲಿಲ್ಲ; ಯಾಕಂದರೆ ಅವರು ನಂಬಿಕೆ
೧೬ ಯಾಗಿ ಮಾಡಿದರು. ಆದರೆ ಅಪರಾಧದ ಕೊಖ್ಖವೂ ಪಾಪ
ಪರಿಹಾರದ ಕೊಖ್ಖವೂ ಕರ್ತನ ಮನೆಗೆ ತಕ್ಕೊಂಡು ಬರಲಿಲ್ಲ;
೧೩ ಅದು ಯಾಜಕರದಾಗಿತ್ತು. ಮತ್ತು ಅರಾಮಿನ ಅರಸನಾದ
ಹಜಯೇಲನು ಏರಿ ಹೋಗಿ, ಗಾತಿನ ಮೇಲೆ ಯುದ್ಧ ಮಾಡಿ,
ಅದನ್ನು ಹಿಡು ಕೊಂಡನು. ಮತ್ತು ಹಜಯೇಲನು ಯೆರೂಸ
೧೭ ಲೇಮಿಗೆ ಏರಿ ಹೋಗ, ತನ್ನ ಮುಖವನ್ನು ತಿರುಗಿಸಿದನು. ಆಗ
ಯೆಹೂದದ ಅರಸನಾದ ಯೊವಾಷನೂ ಯೆಹೂದದ ಅರಸುಗ
ಳಾಗಿರುವ ತನ್ನ ತಂದೆಗಳಾದ ಯೆಹೋಷಾಫಾಟನೂ ಯೆಹೋ
ರಮನೂ ಅಹಜ್ಯನೂ ಅರ್ಪಿಸಿದ ಸಮಸ್ತ ಪರಿಶುದ್ಧವಾದವುಗಳ
ನ್ನೂ, ತಾನು ಪರಿಶುದ್ಧ ಮಾಡಿದವುಗಳನ್ನೂ ಕರ್ತನ ಮನೆಯ
ಬೊಕ್ಕಸದಲ್ಲಿಯೂ ಅರಸನ ಮನೆಯಲ್ಲಿಯೂ ಕಿಕ್ಕಿದ ಸಕಲ
ಭಂಗಾರವನ್ನು ತಕ್ಕೊಂಡು, ಅರಾಮಿನ ಅರಸನಾದ ಹಜಯೇಲ
ನಿಗೆ ಕಳುಹಿಸಿದನು. ಆಗಲವನು ಯೆರೂಸಲೇಮನ್ನು ಬಿಟ್ಟು
ಹೋದನು.
೧೯ ಯೊವಾಷನ ಇತರ ಕಾರ್ಯಗಳೂ, ಅವನು ಮಾಡಿದ್ದೆಲ್ಲವೂ,
೨೦ ಯೆಹೂದದ ಅರಸುಗಳ ದಿನಚರ್ಯಗಳ ಪುಸ್ತಕದಲ್ಲಿ ಬರೆಯ
ಲ್ಪಡಲಿಲ್ಲವೋ! ಆದರೆ ಅವನ ಸೇವಕರು ಎದ್ದು, ಅವನ ಮೇಲೆ
ಬಳಸಂಚು ಮಾಡಿ, ಸಿಲ್ಲಕ್ಕೆ ಇಳಿದು ಹೋಗುವ ಮಾರ್ಗವಾದ
೨೧ ಮಿಲ್ಲೋವು ಎಂಬ ಮನೆಯಲ್ಲಿ ಯೊವಾಷನನ್ನು ಹೊಡೆದರು. ಅ
ವನ ಸೇವಕರಾದ ಶಿಮಾಟುವಿನ ಮಗನಾದ ಯೊಜಕಾರನೂ, ಶಿ
ಮ್ರೀತಳ ಮಗನಾದ ಯೆಹೊಜಬಾದನೂ ಅವನನ್ನು ಹೊಡೆದ್ದರಿಂ

ದ, ಸತ್ತು ಹೋದನು. ಮತ್ತು ಅವರು ಅವನನ್ನು ದಾವೀದನ
ಪಟ್ಟಣದಲ್ಲಿ ಅವನ ಪಿತೃಗಳ ಬಳಿಯಲ್ಲಿ ಹೂಣಿಟ್ಟರು; ಅವನ ಮ
ಗನಾದ ಅಮಜೀಯನು ಅವನಿಗೆ ಬದಲಾಗಿ ಅಳ್ಳಿದನು.

## ೧೩. ಸಂಧಿ

೧ ಯೆಹೂದದ ಅರಸನಾಗಿರುವ ಅಹಜ್ಯನ ಮಗನಾದ ಯೊ
ವಾಷನ ಇಪ್ಪತ್ತು ಮೂರನೇ ವರುಷದಲ್ಲಿ ಯೇಹುವಿನ ಮಗನಾ
ದ ಯೆಹೋವಹಾಜನು ಸಮಾರ್ಯದಲ್ಲಿ ಇಸ್ರಯೇಲಿನ ಮೇಲೆ
೨ ಅಳ್ಳ ಅರಂಭಿಸಿ, ಹದಿನೇಳು ವರುಷ ಅಳ್ಳಿ ೦. ಅವನು ಕರ್ತನ
ಸಮುಖದಲ್ಲಿ ಕೆಟ್ಟದ್ದನ್ನು ಮಾಡಿ, ಇಸ್ರಯೇಲನ್ನು ಪಾಪ ಮಾ
ಡ ಪ್ರೇರೇಪಿಸಿದ ನೆಬಾಟನ ಮಗನಾದ ಯೆರೊಬಾಮನ ಪಾಪಗಳ
೩ ನ್ನು ಬಿಟ್ಟು ಬಿಡದೆ, ಅವುಗಳಲ್ಲಿ ನಡೆದನು. ಆದದರಿಂದ ಕರ್ತ
ನು ಇಸ್ರಯೇಲಿನ ಮೇಲೆ ಕೋಪಿಸಿ ಕೊಂಡು, ಅವರನ್ನು ಅರಾ
ಮಿನ ಅರಸನಾದ ಹಜಯೇಲನ ಕೈಯಲ್ಲಿಯೂ, ಹಜಯೇಲನ
ಮಗನಾದ ಬೆನ್ಹದಾದನ ಕೈಯಲ್ಲಿಯೂ ಸಮಸ್ತ ದಿವಸಗಳಲ್ಲಿ
೪ ಒಪ್ಪಿಸಿ ಕೊಟ್ಟನು. ಆದರೆ ಯೆಹೋವಹಾಜನು ಕರ್ತನನ್ನು
ಬೇಡಿ ಕೊಂಡದರಿಂದ, ಕರ್ತನು ಅವನ ಮೊರೆಯನ್ನು ಕೇಳಿದನು.
ಯಾಕಂದರೆ ಅರಾಮಿನ ಅರಸನು ಅವರನ್ನು ಬಾಧೆ ಪಡಿಸಿದ ಇ
೫ ಸ್ರಯೇಲಿನ ಬಾಧೆಯನ್ನು ಅವನು ನೋಡಿದನು. ಮತ್ತು ಕರ್ತ
ನು ಇಸ್ರಯೇಲಿಗೆ ಒಬ್ಬ ರಕ್ಷಕನನ್ನು ಕೊಟ್ಟಿದ್ದರಿಂದ, ಅವರು ಅರಾ
ಮ್ಯರ ಕೈಯಿಂದ ತಪ್ಪಿಸಿ ಕೊಂಡು ಹೋದರು. ಮತ್ತು ಇಸ್ರ
ಯೇಲ್ ಮಕ್ಕಳು ಮುಂಜಿನ ಹಾಗೆ ತಮ್ಮ ಗುಡಾರಗಳಲ್ಲಿ ವಾಸ
೬ ವಾಗಿದ್ದರು. ಆದರೆ ಅವರು ಇಸ್ರಯೇಲನ್ನು ಪಾಪ ಮಾಡ ಪ್ರೇ
ರೇಪಿಸಿದ ಯೆರೊಬಾಮನ ಮನೆಯ ಪಾಪಗಳನ್ನು ಬಿಟ್ಟು ಬಿಡ
ದೆ, ಅವುಗಳಲ್ಲಿ ನಡೆದರು. ಇದಲ್ಲದೆ ಸಮಾರ್ಯದಲ್ಲಿ ತೋಪು
೭ ನೆಲೆಯಾಗಿತ್ತು. ಆದರೂ ಯೆಹೋವಹಾಜನಿಗೆ ಐವತ್ತು ಕುದು
ರೆ ರಾಹುತರನ್ನೂ ಹತ್ತು ರಥಗಳನ್ನೂ ಹತ್ತು ಸಾವಿರ ಕಾಲ್ಬಲ
ವನ್ನೂ ಹೊರತು ಜನರಲ್ಲಿ ಏನೂ ಬಿಡಲಿಲ್ಲ. ಯಾಕಂದರೆ ಅ
ರಾಮಿನ ಅರಸನು ಅವರನ್ನು ಸಂಹರಿಸಿ, ತುಳಿಯಲ್ಪಟ್ಟ ಧೂಳಿ
ಯ ಹಾಗೆ ಮಾಡಿದ್ದನು.
೮ ಯೆಹೋವಹಾಜನ ಇತರ ಕಾರ್ಯಗಳೂ, ಅವನು ಮಾಡಿ
ದ್ದೆಲ್ಲವೂ ಅವನ ಪರಾಕ್ರಮವೂ ಇಸ್ರಯೇಲಿನ ಅರಸುಗಳ ದಿನ
೯ ಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿಲ್ಲವೋ! ಯೆಹೋವ
ಹಾಜನು ತನ್ನ ಪಿತೃಗಳ ಸಂಗಡ ಮಲಗಿದನು; ಅವನನ್ನು ಸ
ಮಾರ್ಯದಲ್ಲಿ ಹೂಣಿಟ್ಟರು; ಅವನ ಮಗನಾದ ಯೊವಾಷನು
ಅವನಿಗೆ ಬದಲಾಗಿ ಅಳ್ಳಿದನು.
೧೦ ಯೆಹೂದದ ಅರಸನಾದ ಯೊವಾಷನ ಮೂವತ್ತೇಳನೇ ವ
ರುಷದಲ್ಲಿ ಯೆಹೋವಹಾಜನ ಮಗನಾದ ಯೊವಾಷನು ಸ
ಮಾರ್ಯದಲ್ಲಿ ಇಸ್ರಯೇಲಿನ ಮೇಲೆ ಅಳ್ಳ ಅರಂಭಿಸಿ, ಹದಿನಾ
೧೧ ರು ವರುಷ ಅಳ್ಳಿದನು. ಅವನು ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು
ಮಾಡಿ, ಇಸ್ರಯೇಲನ್ನು ಪಾಪ ಮಾಡ ಪ್ರೇರೇಪಿಸಿದ ನೆಬಾಟನ
ಮಗನಾದ ಯೆರೊಬಾಮನ ಸಮಸ್ತ ಪಾಪಗಳನ್ನು ತೊರೆದು ಬಿ
೧೨ ಡದೆ, ಅವುಗಳಲ್ಲಿ ನಡೆದನು. ಯೊವಾಷನ ಇತರ ಕ್ರಿಯೆಗಳೂ,
ಅವನು ಮಾಡಿದ್ದೆಲ್ಲವೂ, ಅವನು ಯೆಹೂದದ ಅರಸನಾದ ಅಮ
ಜೀಯನ ಸಂಗಡ ಯುದ್ಧ ಮಾಡಿದ ಅವನ ಪರಾಕ್ರಮವೂ ಇಸ್ರ
ಯೇಲಿನ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟ್ಟ
೧೩ ಿಲ್ಲವೋ! ಯೊವಾಷನು ತನ್ನ ಪಿತೃಗಳ ಸಂಗಡ ಮಲಗಿದನು;
ಸಮಾರ್ಯದಲ್ಲಿ ಇಸ್ರಯೇಲಿನ ಅರಸುಗಳ ಬಳಿಯಲ್ಲಿ ಹೂಣಿ
ಡಲ್ಪಟ್ಟನು. ಮತ್ತು ಯೆರೊಬಾಮನು ಅವನ ಸಿಂಹಾಸನದ ಮೇ
ಲೆ ಕುಳಿತು ಕೊಂಡನು.
೧೪ ಆಗ ಎಲೀಷನು ಮರಣವಾಗುವ ವ್ಯಾಧಿಯಿಂದ ಬಿದ್ದಿದ್ದಾಗ, ಇ
ಸ್ರಯೇಲಿನ ಅರಸನಾದ ಯೊವಾಷನು ಅವನ ಬಳಿಗೆ ಬಂದು, ಅ
ವನ ಮುಖದ ಮೇಲೆ ಅತ್ತು, ಅವನಿಗೆ, ನನ್ನ ತಂದೆಯೇ, ನನ್ನ
ತಂದೆಯೇ, ಇಸ್ರಯೇಲಿನ ರಥವೂ ಅದರ ಕುದುರೆ ರಾಹುತರೂ
೧೫ ಆದವನೇ, ಅಂದನು. ಆಗ ಎಲೀಷನು ಅವನಿಗೆ, ಬಿಲ್ಲನ್ನೂ ಬಾಣ
೧೬ ಗಳನ್ನೂ ತಕ್ಕೊಳ್ಳೀ, ಅಂದನು. ಅವನು ಬಿಲ್ಲು ಬಾಣಗಳನ್ನು ತ
ಕ್ಕೊಂಡನು. ಅವನು ಇಸ್ರಯೇಲಿನ ಅರಸನಿಗೆ, ನಿನ್ನ ಕೈಯನ್ನು
ಬಿಲ್ಲಿನ ಮೇಲೆ ಇರಿಸು, ಅಂದನು. ಅವನು ತನ್ನ ಕೈಯನ್ನು ಇರಿಸಿ
೧೭ ದನು. ಮತ್ತು ಎಲೀಷನು ತನ್ನ ಕೈಗಳನ್ನು ಅರಸನ ಕೈಗಳ ಮೇಲೆ
ಇಟ್ಟನು. ಆಗ ಅವನು ಮೂರ್ತಲ್ಲಿರುವ ಕಿಟಕಿಯನ್ನು ತೆಗೆ, ಅಂ
ದನು. ಅವನು ತೆಗೆದನು. ಎಲೀಷನು, ಎಸೆ, ಅಂದನು. ಅವನು
ಎಸೆದನು. ಕರ್ತನ ರಕ್ಷಣೆಯ ಬಾಣವೇ, ಅರಾಮಿನಿಂದ ತಪ್ಪಿಸುವ
ರಕ್ಷಣೆಯ ಬಾಣವೇ; ಏನಂದರೆ ಅಫೇಕಿನಲ್ಲಿ ಅರಾಮ್ಯರನ್ನು ಶೀ
೧೮ ರಿಸುವ ಮಟ್ಟಿಗೂ ಅವರನ್ನು ಹೊಡೆಯುವಿ, ಅಂದನು. ಮತ್ತು
ಅವನು, ಬಾಣಗಳನ್ನು ತಕ್ಕೊಳ್ಳೀ, ಅಂದನು. ಅವನು ತಕ್ಕೊಂ
ಡನು. ಮತ್ತು ಅವನು ಇಸ್ರಯೇಲಿನ ಅರಸನಿಗೆ, ನೆಲದ ಮೇಲೆ
೧೯ ಹೊಡೆ, ಅಂದನು. ಆಗಲವನು ಮೂರು ಸಾರಿ ಹೊಡೆದು, ನಿಂತ
ನು. ಆದರೆ ದೇವರ ಮನುಷ್ಯನು ಅವನ ಮೇಲೆ ಕೋಪಗೊಂಡ
ನಾಗಿ, ನೀನು ಐದಾರು ಸಾರಿ ಹೊಡೆಯ ಬೇಕಾಗಿತ್ತು; ಆಗ ಅ
ರಾಮ್ಯರನ್ನು ಶೀರಿಸುವ ಮಟ್ಟಿಗೂ ಹೊಡೆಯುವಿ. ಆದರೆ ಈ
ಗ ಅರಾಮ್ಯರನ್ನು ಮೂರು ಸಾರಿ ಹೊಡೆಯುವಿ, ಅಂದನು.
೨೦ ಎಲೀಷನು ಸತ್ತ ತರುವಾಯ, ಅವನನ್ನು ಹೂಣಿಟ್ಟರು. ವ
ರುಷದ ಆರಂಭದಲ್ಲಿ ಮೊವಾಬ್ಯರ ದಂಡುಗಳು ದೇಶದಲ್ಲಿ ಪ್ರವೇ
೨೧ ಶಿಸಿದವು. ಆಗ ಏನಾಯಿತಂದರೆ, ಅವರು ಒಬ್ಬ ಮನುಷ್ಯನನ್ನು
ಹೂಣಿಡ ಹೋಗುವಾಗ, ಇಗೋ, ದಂಡನ್ನು ಕಂಡು, ಆ ಮನು
ಷ್ಯನನ್ನು ಎಲೀಷನ ಸಮಾಧಿಯಲ್ಲಿ ಬಿಸಾಟರು. ಆ ಮನುಷ್ಯ
ನು ಅದರಲ್ಲಿ ಬಿದ್ದಾಗ, ಎಲೀಷನ ಎಲುವುಗಳಿಗೆ ತಗಲಿ, ಜೀವ
ಉಂಟಾದವನಾಗಿ, ತನ್ನ ಕಾಲೂರಿ, ಎದ್ದು, ನಿಂತನು.
೨೨ ಯೆಹೋವಹಾಜನ ದಿವಸಗಳೆಲ್ಲಾ ಅರಾಮಿನ ಅರಸನಾದ ಹ
೨೩ ಜಯೇಲನು ಇಸ್ರಯೇಲನ್ನು ಬಾಧೆ ಪಡಿಸಿದನು. ಆದರೆ ಕರ್ತನು
ಅಬ್ರಹಾಮನ, ಇಸಾಕನ, ಯಾಕೋಬನ, ಸಂಗಡ ಒಡಂಬಡಿಕೆ
ಯನ್ನು ಮಾಡಿದ್ದರಿಂದ, ಅವರಿಗೆ ದಯೆ ಮಾಡಿ, ಅವರ ಮೇಲೆ
ಅಂತಃಕರಣ ಪಟ್ಟು, ಅವರ ಕಡೆಗೆ ತಿರುಗಿದನು. ಇನ್ನೂ ಅವರ
ನ್ನು ನಾಶನ ಮಾಡ ಮನಸ್ಸಾಗಿರಲಿಲ್ಲ; ಅವರನ್ನು ತನ್ನ ಸಮು
೨೪ ಖದಿಂದ ಹೊರಡಿಸಲಿಲ್ಲ. ಅರಾಮಿನ ಅರಸನಾದ ಹಜಯೇಲನು
ಸತ್ತನು; ಅವನ ಮಗನಾದ ಬೆನ್ಹದಾದನು ಅವನಿಗೆ ಬದಲಾಗಿ ಅಳ್ಳಿ
೨೫ ದನು. ಆಗ ಯೆಹೋವಹಾಜನ ಮಗನಾದ ಯೊವಾಷನು ಯು
ದ್ಧದಲ್ಲಿ ತನ್ನ ತಂದೆಯಾದ ಯೆಹೋವಹಾಜನ ಕೈಯಿಂದ ಹಜ
ಯೇಲನು ತಕ್ಕೊಂಡಿದ್ದ ಪಟ್ಟಣಗಳನ್ನು ಅವನ ಮಗನಾದ ಬೆನ್ಹದಾ
ದನ ಕೈಯಿಂದ ತಿರಿಗಿ ತಕ್ಕೊಂಡನು. ಯೊವಾಷನು ಅವನನ್ನು



ಮೂರು ಸಾರಿ ಹೊಡೆದು, ಇಸ್ರಯೇಲಿನ ಪಟ್ಟಣಗಳನ್ನು ತಿರಿಗಿ ತ
ಕ್ಕೊಂಡನು.

## ೧೪. ಸಂಧಿ.

೧ ಇಸ್ರಯೇಲಿನ ಅರಸನಾಗಿರುವ ಯೆಹೋವಹಾಜನ ಮಗನಾ
ದ ಯೊವಾಷನ ಎರಡನೇ ವರುಷದಲ್ಲಿ ಯೆಹೂದದ ಅರಸನಾಗಿ
೨ ರುವ ಯೊವಾಷನ ಮಗನಾದ ಅಮಜೀಯನು ಅಳ್ಳಿದನು. ಅ
ವನು ಅಳ್ಳ ಅರಂಭಿಸಿದಾಗ, ಇಪ್ಪತ್ತೈದು ವರುಷದವನಾಗಿದ್ದು,
ಇಪ್ಪತ್ತೊಂಭತ್ತು ವರುಷ ಯೆರೂಸಲೇಮಿನಲ್ಲಿ ಅಳ್ಳಿದನು. ಅವ
೩ ನ ತಾಯಿ ಯೆಹೊವದ್ದಾನಳು; ಅವಳು ಯೆರೂಸಲೇಮಿನವಳು.
ಅವನು ಕರ್ತನ ದೃಷ್ಟಿಗೆ ನೆಟ್ಟನೆಯಾದದ್ದನ್ನು ಮಾಡಿದನು; ಆ
ದರೆ ತನ್ನ ತಂದೆಯಾದ ದಾವೀದನ ಹಾಗಲ್ಲ; ತನ್ನ ತಂದೆಯಾದ
೪ ಯೊವಾಷನು ಮಾಡಿದ ಹಾಗೆ ಸಮಸ್ತವನ್ನು ಮಾಡಿದನು. ಆ
ದರೆ ಮೇಡುಗಳು ತೆಗೆದು ಹಾಕಲ್ಪಡಲಿಲ್ಲ; ಜನರು ಇನ್ನೂ ಮೇ
ಡುಗಳ ಮೇಲೆ ಬಲಿಯನ್ನೂ ಧೂಪವನ್ನೂ ಅರ್ಪಿಸುತ್ತಾ ಇದ್ದರು.
೫ ರಾಜ್ಯವು ತನ್ನ ಕೈಯಲ್ಲಿ ಸ್ಥಿರ ಪಟ್ಟ ತರುವಾಯ, ತನ್ನ ತಂದೆ
ಯಾದ ಅರಸನನ್ನು ಹೊಡೆದ ತನ್ನ ಸೇವಕರನ್ನು ಹೊಡೆದನು.
೬ ಆದರೆ ತಂದೆಗಳು ತಮ್ಮ ಮಕ್ಕಳ ನಿಮಿತ್ತ ಸಾಯ ಬಾರದು; ಮ
ಕ್ಕಳು ತಮ್ಮ ತಂದೆಗಳ ನಿಮಿತ್ತ ಸಾಯ ಬಾರದು; ಪ್ರತಿ ಮನು
ಷ್ಯನು ತನ್ನ ಪಾಪಕ್ಕೋಸ್ಕರ ಸಾಯ ಬೇಕೆಂದು, ಕರ್ತನು
ಆಜ್ಞಾಪಿಸಿದ ಹಾಗೆ, ಮೋಶೆಯ ನ್ಯಾಯಪ್ರಮಾಣದಲ್ಲಿ ಬರೆದಿ
ರುವ ಪ್ರಕಾರ, ಅವನು ಹೊಡೆದವರ ಮಕ್ಕಳನ್ನು ಸಾಯಿಸಲಿಲ್ಲ.
೭ ಅವನು ಉಪ್ಪಿನ ತಗ್ಗಿನಲ್ಲಿ ಎದೋಮ್ಯರಾದ ಹತ್ತು ಸಾವಿರ ಜನ
ರನ್ನು ಹೊಡೆದು, ಯುದ್ಧದಲ್ಲಿ ಸಿಲ್ಲವನ್ನು ಹಿಡುಕೊಂಡು, ಈ ದಿ
ವಸದ ವರಿಗೂ ಯೊಕ್ತೇಲು ಎಂಬ ಹೆಸರಿಟ್ಟನು.
೮ ಆಗ ಅಮಜೀಯನು ಇಸ್ರಯೇಲಿನ ಅರಸನಾದ ಯೇಹುವಿನ
ಮಗನಾಗಿರುವ ಯೆಹೋವಹಾಜನ ಮಗನಾದ ಯೊವಾಷನ ಬ
ಳಿಗೆ ದೂತರನ್ನು ಕಳುಹಿಸಿ, ನಾವು ಒಬ್ಬರು ಒಬ್ಬರ ಮುಖವನ್ನು
೯ ನೋಡುವ ಹಾಗೆ ಬಾ ಎಂದು ಹೇಳಿದನು. ಆದರೆ ಇಸ್ರಯೇಲಿನ
ಅರಸನಾದ ಯೊವಾಷನು ಯೆಹೂದದ ಅರಸನಾಗಿರುವ ಅಮ
ಜೀಯನಿಗೆ ಹೇಳಿ ಕಳುಹಿಸಿದ್ದೇನಂದರೆ—ಲೆಬನೋನಿನಲ್ಲಿದ್ದ ಮು
ಳ್ಳು ಗಿಡವು ಲೆಬನೋನಿನಲ್ಲಿರುವ ದೇವದಾರಿಗೆ, ನನ್ನ ಮಗನಿಗೆ
ಹೆಂಡತಿಯಾಗಿರ ನೀನು ನಿನ್ನ ಮಗಳನ್ನು ಕೊಡು ಎಂದು ಹೇಳಿ,
ಕಳುಹಿಸಿತು. ಆದರೆ ಲೆಬನೋನಿನಲ್ಲಿದ್ದ ಅಡವಿಯ ಮೃಗವು ಹಾ
ದು ಹೋಗುತ್ತಿರುವಾಗ, ಆ ಮುಳ್ಳು ಗಿಡವನ್ನು ತುಳಿಯಿತು.
೧೦ ನೀನು ಎದೋಮ್ಯರನ್ನು ಹೊಡೆದೇ ಹೊಡೆದ್ದರಿಂದ, ನಿನ್ನ ಹೃದ
ಯವು ನಿನ್ನನ್ನು ಎತ್ತರ ಪಡಿಸಿತು. ಘನಪಡು; ಆದರೆ ಮನೆಯ
ಲ್ಲಿ ಕೂತಿರು; ಕೇಡಿಗಾಗಿ ನೀನು ಯಾಕೆ ಜಗಳವಾಡ ಬೇಕು!
ನೀನೂ ನಿನ್ನ ಸಂಗಡ ಯೆಹೂದವೂ ಬಿದ್ದು ಹೋಗುವಿರಲ್ಲ!
೧೧ ಆದರೆ ಅಮಜೀಯನು ಕೇಳದೆ ಹೋದನು. ಆದದರಿಂದ ಇಸ್ರಯೇ
ಲಿನ ಅರಸನಾದ ಯೆಹೋವಹಾಜನು ಹೊರಟನು; ಅವನೂ ಯೆ
ಹೂದದ ಅರಸನಾದ ಅಮಜೀಯನೂ ಯೆಹೂದಕ್ಕೆ ಕೇರಿದ ಬೆ
೧೨ ತ್ಷೇಮೆಷಿನ ಬಳಿಯಲ್ಲಿ ಒಬ್ಬನು ಒಬ್ಬನ ಮುಖವನ್ನು ನೋಡಿದ
ರು. ಯೆಹೂದ್ಯರು ಇಸ್ರಯೇಲ್ಯರ ಮುಂದೆ ಮುರಿಯಲ್ಪಟ್ಟದ್ದ
ರಿಂದ, ಅವಕ್ಕೆಲ್ಲರು ತಮ್ಮ ತಮ್ಮ ಗುಡಾರಗಳಿಗೆ ಓಡಿ ಹೋದರು.
೧೩ ಆಗ ಇಸ್ರಯೇಲಿನ ಅರಸನಾದ ಯೊವಾಷನು ಅಹಜ್ಯನ ಮಗ
ನಾದ ಯೊವಾಷನ ಮಗನಾಗಿರುವ ಯೆಹೂದದ ಅರಸನಾದ ಅ
ಮಜೀಯನನ್ನು ಬೆತ್ಷೇಮೆಷಿನ ಬಳಿಯಲ್ಲಿ ಹಿಡು ಕೊಂಡು, ಯೆ
ರೂಸಲೇಮಿಗೆ ಬಂದು, ಯೆರೂಸಲೇಮಿನ ಅಲಂಗವನ್ನು ಎಫ್ರ
ಯಾಮನ ಬಾಗಲು ಮೊದಲುಗೊಂಡು, ಮೂಲೆಯ ಬಾಗಲ
೧೪ ಮಟ್ಟಿಗೂ ನಾನೂರು ಮೊಳ ಉದ್ದ ಕೆಡವಿ ಬಿಟ್ಟು, ಕರ್ತನ ಮ
ನೆಯಲ್ಲಿಯೂ ಅರಸನ ಮನೆಯ ಬೊಕ್ಕಸಗಳಲ್ಲಿಯೂ ಶಿಕ್ಕಿದ
ಸಕಲ ಭಂಗಾರವನ್ನೂ, ಬೆಳ್ಳಿಯನ್ನೂ, ಎಲ್ಲಾ ಸಾಮಾನುಗಳ
ನ್ನೂ, ಒಲಿನವರನ್ನೂ ತೆಗೆದು ಕೊಂಡು, ಸಮಾರ್ಯಕ್ಕೆ ತಿರಿಗಿ
ಹೋದನು.
೧೫ ಯೊವಾಷನು ಮಾಡಿದ ಇತರ ಕ್ರಿಯೆಗಳೂ, ಅವನ ಪರಾಕ್ರ
ಮವೂ, ಅವನು ಯೆಹೂದದ ಅರಸನಾದ ಅಮಜೀಯನ ಸಂಗ
ಡ ಯುದ್ಧ ಮಾಡಿದ್ದೂ, ಇಸ್ರಯೇಲಿನ ಅರಸುಗಳ ದಿನಚರ್ಯೆ
೧೬ ಗಳ ಪುಸ್ತಕದಲ್ಲಿ ಬರೆಯಲ್ಪಡಲಿಲ್ಲವೋ! ಯೆಹೋವಹಾಜನು
ತನ್ನ ಪಿತೃಗಳ ಸಂಗಡ ಮಲಗಿದನು; ಅವನು ಸಮಾರ್ಯದಲ್ಲಿ
ಇಸ್ರಯೇಲಿನ ಅರಸುಗಳ ಬಳಿಯಲ್ಲಿ ಹೂಣಿಡಲ್ಪಟ್ಟನು; ಮತ್ತು
ಅವನ ಮಗನಾದ ಯೆರೊಬಾಮನು ಅವನಿಗೆ ಬದಲಾಗಿ ಅಳ್ಳಿದನು.
೧೭ ಆದರೆ ಇಸ್ರಯೇಲಿನ ಅರಸನಾದ ಯೆಹೋವಹಾಜನ ಮಗ
ನಾಗಿರುವ ಯೊವಾಷನು ಸತ್ತ ತರುವಾಯ, ಯೆಹೂದದ ಅರಸ
ನಾದ ಯೊವಾಷನ ಮಗನಾಗಿರುವ ಅಮಜೀಯನು ಹದಿನೈದು
೧೮ ವರುಷ ಬದುಕಿದನು. ಅಮಜೀಯನ ಇತರ ಕ್ರಿಯೆಗಳು ಯೆಹೂ
ದದ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಡಲಿ
೧೯ ಲ್ಲವೋ! ಅವರು ಯೆರೂಸಲೇಮಿನಲ್ಲಿ ಅವನ ಮೇಲೆ ಒಳಸಂಚು
ಮಾಡಿದ್ದರಿಂದ, ಅವನು ಲಕೀಷಿಗೆ ಓಡಿ ಹೋದನು. ಆದರೆ ಅ
ವರು ಅವನ ಹಿಂದೆ ಲಕೀಷಿಗೆ ಜನರನ್ನು ಕಳುಹಿಸಿ, ಅಲ್ಲಿ ಅವನ
೨೦ ನ್ನು ಕೊಂದು ಹಾಕಿದರು. ಅವನು ಕುದುರೆಗಳ ಮೇಲೆ ತರಲ್ಪ
ಟ್ಟು, ದಾವೀದನ ಪಟ್ಟಣವಾದ ಯೆರೂಸಲೇಮಿನಲ್ಲಿ ತನ್ನ ಪಿತೃಗ
ಳ ಸಂಗಡ ಹೂಣಲ್ಪಟ್ಟನು.
೨೧ ಮತ್ತು ಯೆಹೂದ ಜನರು ಹದಿನಾರು ವರುಷದವನಾದ ಅಜ
ರ್ಯನನ್ನು ತಕ್ಕೊಂಡು, ಅವನನ್ನು ಅವನ ತಂದೆಯಾದ ಅಮ
೨೨ ಜೀಯನಿಗೆ ಬದಲಾಗಿ ಅರಸನಾಗ ಮಾಡಿದರು. ಅರಸನು ತನ್ನ
ಪಿತೃಗಳ ಸಂಗಡ ಮಲಗಿದ ತರುವಾಯ, ಇವನು ಏಲತನ್ನು ಕ
ಟ್ಟಿಸಿ, ಅದನ್ನು ತಿರಿಗಿ ಯೆಹೂದಕ್ಕೆ ತಿರಿಗಿ ಕೇರಿಸಿ ಕೊಂಡನು.
೨೩ ಯೆಹೂದದ ಅರಸನಾಗಿರುವ ಯೊವಾಷನ ಮಗನಾದ ಅ
ಮಜೀಯನ ಹದಿನೈದನೇ ವರುಷದಲ್ಲಿ ಇಸ್ರಯೇಲಿನ ಅರಸನಾ
ಗಿರುವ ಯೊವಾಷನ ಮಗನಾದ ಯೆರೊಬಾಮನು ಸಮಾರ್ಯ
೨೪ ದಲ್ಲಿ ಅಳ್ಳ ಅರಂಭಿಸಿ, ನಾಲ್ವತ್ತೊಂದು ವರುಷ ಅಳ್ಳಿದನು. ಆದ
ರೆ ಅವನು ಕರ್ತನ ದೃಷ್ಟಿಗೆ ಕೆಟ್ಟದ್ದನ್ನು ಮಾಡಿದನು; ಇಸ್ರ
ಯೇಲನ್ನು ಪಾಪ ಮಾಡ ಪ್ರೇರೇಪಿಸಿದ ನೆಬಾಟನ ಮಗನಾದ
ಯೆರೊಬಾಮನ ಪಾಪಗಳನ್ನೆಲ್ಲಾ ಅವನು ತೊರೆದು ಬಿಡಲಿಲ್ಲ.
೨೫ ಇದಲ್ಲದೆ ಇಸ್ರಯೇಲಿನ ದೇವರಾದ ಕರ್ತನು ಗಾತ್ಹೆಫೇರಿನವನಾ
ದ ಪ್ರವಾದಿಯಾಗಿರುವ ಅಮಿತಾಯನ ಮಗನಾದ ಯೋನನೆಂ
ಬ ತನ್ನ ಸೇವಕನ ಮುಖಾಂತರ ಹೇಳಿದ ವಾಕ್ಯದ ಪ್ರಕಾರವೇ,
ಅವನು ಹಮಾತಿನ ಪ್ರವೇಶವು ಮೊದಲುಗೊಂಡು, ಬೈಲಿನ
ಸಮುದ್ರದ ಮಟ್ಟಿಗೂ ಇರುವ ಇಸ್ರಯೇಲಿನ ಮೇರೆಯನ್ನು ತಿರಿ

೧೬ ಗಿ ತಕ್ಕೊಂಡನು. ಯಾಕಂದರೆ ಇಸ್ರಯೇಲಿನ ಪ್ರಮೆಯು ಬಹ
ಳ ಕಹಿಯಾಗಿದೆ ಎಂದೂ, ಮುಚ್ಚಲ್ಪಟ್ಟವನಾದರೂ ಬಿಡಲ್ಪಟ್ಟವ
ನಾದರೂ ಇಸ್ರಯೇಲಿಗೆ ಸಹಾಯಕನಾದರೂ ಯಾವನೂ ಇಲ್ಲ
೧೭ ದೆಂದೂ, ಕರ್ತನು ಕಂಡನು. ಇದಲ್ಲದೆ ಇಸ್ರಯೇಲಿನ ನಾಮವ
ನ್ನು ಆಕಾಶದ ಕೆಳಗಿನಿಂದ ಬಕೆಸಿ ಬಿಡುವೆನೆಂದು, ಕರ್ತನು ಹೇಳಿ
ದ್ದಿಲ್ಲ; ಆದರೆ ಯೊವಾಷನ ಮಗನಾದ ಯೆರೊಬಾಮನ ಕೈ
ಯಿಂದ ಅವರನ್ನು ರಕ್ಷಿಸಿದನು.
೧೮ ಯೆರೊಬಾಮನ ಇತರ ಕ್ರಿಯೆಗಳೂ, ಅವನು ಮಾಡಿದ ಸ
ಮಸ್ತವೂ, ಅವನ ಪರಾಕ್ರಮವೂ, ಅವನ ಯುದ್ಧಗಳೂ, ಯೆ
ಹೂದಕ್ಕೆ ಕೇರಿದ ದಮಸ್ಕವನೂ ಹಮಾತನೂ ಇಸ್ರಯೇಲಿ
ಗೋಸ್ಕರ ತಿರಿಗಿ ತಕ್ಕೊಂಡದ್ದೂ ಇಸ್ರಯೇಲಿನ ಅರಸುಗಳ
೧೯ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟ್ಟವಲ್ಲವೋ! ಯೆರೊ
ಬಾಮನು ಇಸ್ರಯೇಲಿನ ಅರಸುಗಳಾದ ತನ್ನ ಪಿತೃಗಳ ಸಂಗಡ
ಮಲಗಿದನು; ಅವನ ಮಗನಾದ ಜೆಕರೀಯನು ಅವನಿಗೆ ಬದಲಾಗಿ
ಆಳ್ವಿದನು.

## ೧೫. ಸಂಧಿ.

೧ ಇಸ್ರಯೇಲಿನ ಅರಸನಾದ ಯೆರೊಬಾಮನ ಇಪ್ಪತ್ತೇಳನೇ
ವರುಷದಲ್ಲಿ ಯೆಹೂದದ ಅರಸನಾಗಿರುವ ಅಮಚ್ಯೀಯನ ಮಗ
೨ ನಾದ ಅಜರ್ಯನು ಆಳ್ವ ಆರಂಭಿಸಿದನು. ಅವನು ಆಳ್ವ ಆರಂಭಿ
ಸಿದಾಗ, ಹದಿನಾರು ವರುಷದವನಾಗಿದ್ದು, ಯೆರೂಸಲೇಮಿನಲ್ಲಿ
ಐವತ್ತೆರಡು ವರುಷ ಆಳ್ವಿದನು. ಅವನ ತಾಯಿಯ ಹೆಸರು ಯೆ
೩ ಕಲ್ಯಳು; ಅವಳು ಯೆರೂಸಲೇಮಿನವಳು. ಅವನು ತನ್ನ ತಂದೆ
ಯಾದ ಅಮಚ್ಯೀಯನು ಮಾಡಿದ ಎಲ್ಲಾದರ ಹಾಗೆ, ಕರ್ತನ ಸ
೪ ಮುಖದಲ್ಲಿ ನೆಟ್ಟನೆಯಾದದ್ದನ್ನು ಮಾಡಿದನು. ಆದರೆ ಮೇಡುಗ
ಳು ಕೆಡವಲ್ಪಡಲಿಲ್ಲ; ಜನರು ಇನ್ನೂ ಮೇಡುಗಳ ಮೇಲೆ ಬಲಿಗಳ
ನ್ನೂ ಧೂಪವನ್ನೂ ಅರ್ಪಿಸುತ್ತಾ ಇದ್ದರು.
೫ ಮತ್ತು ಕರ್ತನು ಅರಸನನ್ನು ಬಡಿದ್ದರಿಂದ, ಅವನು ತನ್ನ ಮ
ರಣ ದಿವಸದ ಮಟ್ಟಿಗೂ ಕುಷ್ಠರೋಗಿಯಾಗಿದ್ದು, ಪ್ರತ್ಯೇಕ
ವಾದ ಮನೆಯಲ್ಲಿ ವಾಸನಾಗಿದ್ದನು. ಅರಸನ ಮಗನಾದ ಯೊ
ತಾಮನು ಮನೇ ಯಜಮಾನನಾಗಿದ್ದು, ದೇಶದ ಜನರಿಗೆ ನ್ಯಾಯ
ತೀರಿಸುತ್ತಿದ್ದನು.
೬ ಅಜರ್ಯನ ಇತರ ಕ್ರಿಯೆಗಳೂ ಅವನು ಮಾಡಿದ ಸಮಸ್ತ
ವೂ ಯೆಹೂದದ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬ
೭ ರೆಯಲ್ಪಟ್ಟವಲ್ಲವೋ! ಅಜರ್ಯನು ತನ್ನ ಪಿತೃಗಳ ಸಂಗಡ
ಮಲಗಿದನು; ಅವನನ್ನು ದಾವೀದನ ಪಟ್ಟಣದಲ್ಲಿ ಅವನ ಪಿತೃಗಳ
ಬಳಿಯಲ್ಲಿ ಹೂಣಿಟ್ಟರು; ಅವನ ಮಗನಾದ ಯೊತಾಮನು ಅ
ವನಿಗೆ ಬದಲಾಗಿ ಆಳ್ವಿದನು.
೮ ಯೆಹೂದದ ಅರಸನಾದ ಅಜರ್ಯನ ಮೂವತ್ತೆಂಟನೇ ವ
ರುಷದಲ್ಲಿ ಯೆರೊಬಾಮನ ಮಗನಾದ ಜೆಕರೀಯನು ಇಸ್ರಯೇ
೯ ಲಿನ ಮೇಲೆ ಸಮಾರ್ಯದಲ್ಲಿ ಆರು ತಿಂಗಳು ಆಳ್ವಿದನು. ಅವನು
ತನ್ನ ಪಿತೃಗಳು ಮಾಡಿದ ಪ್ರಕಾರ ಕರ್ತನ ದೃಷ್ಟಿಗೆ ಕೆಟ್ಟದ್ದ
ನ್ನು ಮಾಡಿದನು. ಅವನು ಇಸ್ರಯೇಲನ್ನು ಪಾಪ ಮಾಡ ಪ್ರೇ
ರೇಪಿಸಿದ ನೆಬಾಟನ ಮಗನಾದ ಯೆರೊಬಾಮನ ಪಾಪಗಳನ್ನು
೧೦ ತೊರೆದು ಬಿಡಲಿಲ್ಲ. ಆಗ ಯಬೇಷನ ಮಗನಾದ ಶಲ್ಲೂಮನು
ಅವನ ಮೇಲೆ ಒಳಸಂಚು ಮಾಡಿ, ಜನರ ಮುಂದೆ ಅವನನ್ನು
ಹೊಡೆದು, ಕೊಂದು ಹಾಕಿ, ಅವನಿಗೆ ಬದಲಾಗಿ ಆಳ್ವಿದನು.
೧೧ ಇಗೋ, ಜೆಕರೀಯನ ಇತರ ಕ್ರಿಯೆಗಳು ಇಸ್ರಯೇಲಿನ ಅರ
೧೨ ಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ. ನಿನ್ನ
ಕುಮಾರರು ನಾಲ್ಕನೇ ತಲಾಂತರದ ಮಟ್ಟಿಗೂ ಇಸ್ರಯೇಲಿನ
ಸಿಂಹಾಸನದ ಮೇಲೆ ಕುಳ್ಳಿರುವರು ಎಂದು, ಕರ್ತನು ಯೇಹು
ಗೆ ಹೇಳಿದ ವಾಕ್ಯವು ಇದೇ; ಹೀಗೆಯೇ ಆಯಿತು.
೧೩ ಯೆಹೂದದ ಅರಸನಾದ ಉಜ್ಜೀಯನ ಮೂವತ್ತೊಂಭತ್ತನೇ
ವರುಷದಲ್ಲಿ ಯಬೇಷನ ಮಗನಾದ ಶಲ್ಲೂಮನು ಆಳ್ವ ಆರಂಭಿ
೧೪ ಸಿ, ಸಮಾರ್ಯದಲ್ಲಿ ಒಂದು ತಿಂಗಳು ಆಳ್ವಿದನು. ಯಾಕಂದರೆ
ಗಾದಿಯ ಮಗನಾದ ಮೆನಹೇಮನು ತಿರ್ಚದಿಂದ ಹೊರಟು ಹೋ
ಗಿ, ಸಮಾರ್ಯಕ್ಕೆ ಬಂದು, ಸಮಾರ್ಯದಲ್ಲಿ ಯಬೇಷನ ಮಗ
ನಾದ ಶಲ್ಲೂಮನನ್ನು ಹೊಡೆದು ಕೊಂದು ಹಾಕಿ ಅವನಿಗೆ ಬದ
ಲಾಗಿ ಆಳ್ವಿದನು.
೧೫ ಇಗೋ, ಶಲ್ಲೂಮನ ಇತರ ಕ್ರಿಯೆಗಳೂ ಅವನು ಮಾಡಿದ
ಒಳಸಂಚೂ ಇಸ್ರಯೇಲಿನ ಅರಸುಗಳ ದಿನಚರ್ಯೆಗಳ ಪುಸ್ತ
೧೬ ಕದಲ್ಲಿ ಬರೆಯಲ್ಪಟ್ಟಿವೆ. ಆಗ ಮೆನಹೇಮನು ತಿಪ್ಸಹನ್ನೂ, ಅದ
ರಲ್ಲಿ ಇದ್ದ ಎಲ್ಲರನ್ನೂ, ತಿರ್ಚ ಪೊದಲುಗೊಂಡು ಅದರ ಮೇರೆ
ಗಳನ್ನು ಹೊಡೆದನು. ಅವರು ತಮ್ಮ ಬಾಗಲುಗಳನ್ನು ತನಗೆ
ತೆಗೆಯದೆ ಇದ್ದದರಿಂದ, ಅವರನ್ನು ಹೊಡೆದನು; ಅದರಲ್ಲಿರುವ
ಗರ್ಭಿಣಿಯರನ್ನು ಸೀಳಿಸಿದನು.
೧೭ ಯೆಹೂದದ ಅರಸನಾದ ಅಜರ್ಯನ ಮೂವತ್ತೊಂಭತ್ತನೇ
ವರುಷದಲ್ಲಿ ಗಾದಿಯ ಮಗನಾದ ಮೆನಹೇಮನು ಇಸ್ರಯೇಲಿನ
ಮೇರೆ ಆಳ್ವ ಆರಂಭಿಸಿ, ಸಮಾರ್ಯದಲ್ಲಿ ಹತ್ತು ವರುಷ ಆಳ್ವಿದ
೧೮ ನು. ಅವನು ಕರ್ತನ ದೃಷ್ಟಿಯಲ್ಲಿ ಕೆಟ್ಟದ್ದನ್ನು ಮಾಡಿದನು;
ಅವನು ತನ್ನ ದಿವಸಗಳೆಲ್ಲೆಲ್ಲಾ ಇಸ್ರಯೇಲನ್ನು ಪಾಪ ಮಾಡ
ಪ್ರೇರೇಪಿಸಿದ ನೆಬಾಟನ ಮಗನಾದ ಯೆರೊಬಾಮನ ಪಾಪಗಳ
೧೯ ನ್ನು ತೊರೆದು ಬಿಡಲಿಲ್ಲ. ಆದರೆ ಅರಾಮ್ಯದ ಅರಸನಾದ ಪೂಲ
ನು ದೇಶದ ಮೇಲೆ ಬಂದನು. ಆಗ ಮೆನಹೇಮನು ರಾಜ್ಯವನ್ನು
ತನ್ನ ಕೈಯಲ್ಲಿ ದೃಢ ಪಡಿಸ, ಅವನ ಕೈ ತನ್ನ ಸಂಗಡ ಇರುವ
ಹಾಗೆ, ಪೂಲನಿಗೆ ಸಾವಿರ ಬೆಳ್ಳಿ ತಲಾಂತುಗಳನ್ನು ಕೊಟ್ಟನು.
೨೦ ಮೆನಹೇಮನು ಈ ಬೆಳ್ಳಿಯನ್ನು ಇಸ್ರಯೇಲಿನವರಿಂದ ಬರ ಮಾ
ಡಿದನು. ಏನಂದರೆ ಅಶೂರದ ಅರಸನಿಗೆ ಕೊಡ, ಸಮಸ್ತ ಧನ್ಯ
ವಂತರಿಂದ ಐವತ್ತು ಐವತ್ತು ಬೆಳ್ಳಿ ಷೆಕೆಲುಗಳನ್ನು ತೆಗೆದು
ಕೊಂಡನು. ಆದದರಿಂದ ಅಶೂರದ ಅರಸನು ದೇಶದಲ್ಲಿ ನಿಲ್ಲದೆ
ತಿರಿಗಿ ಹೋದನು.
೨೧ ಮೆನಹೇಮನ ಇತರ ಕ್ರಿಯೆಗಳೂ, ಅವನು ಮಾಡಿದ ಸಮ
ಸ್ತವೂ ಇಸ್ರಯೇಲಿನ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ
೨೨ ಬರೆಯಲ್ಪಟ್ಟಿವೆ. ಮೆನಹೇಮನು ತನ್ನ ಪಿತೃಗಳ ಸಂಗಡ ಮಲ
ಗಿದನು; ಅವನ ಮಗನಾದ ಪೆಕಾಯನು ಅವನಿಗೆ ಬದಲಾಗಿ ಆಳ್ವ
ದನು.
೨೩ ಯೆಹೂದದ ಅರಸನಾದ ಅಜರ್ಯನ ಐವತ್ತನೇ ವರುಷದಲ್ಲಿ
ಮೆನಹೇಮನ ಮಗನಾದ ಪೆಕಾಯನು ಸಮಾರ್ಯದಲ್ಲಿ ಇಸ್ರ
೨೪ ಯೇಲಿನ ಮೇಲೆ ಆಳ್ವ ಆರಂಭಿಸಿ, ಎರಡು ವರುಷ ಆಳ್ವಿದನು. ಅ
ವನು ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾಡಿದನು; ಅವನು ಇ



ಸ್ರಯೇಲನ್ನು ಪಾಪ ಮಾಡ ಪ್ರೇರೇಪಿಸಿದ ನೆಬಾಟನ ಮಗನಾದ
೨೫ ಯೆರೊಬಾಮನ ಪಾಪಗಳನ್ನು ತೊರೆದು ಬಿಡಲಿಲ್ಲ. ಆದರೆ
ಅವನ ಅಧಿಪತಿಯಾದಂಥ, ರೆಮಲ್ಯನ ಮಗನಾದಂಥ ಪೇಕಹನು
ಅವನ ಮೇರೆ ಒಳಸಂಚು ಮಾಡಿ, ಅರ್ಗೋಬನ್ನೂ ಅರ್ಯೆ
ಯನ್ನೂ ಗಿಲ್ಯಾದಿನ ಜನರಲ್ಲಿ ಐವತ್ತು ಮಂದಿಯನ್ನೂ ತನ್ನ ಸಂ
ಗಡ ಕೂಡಿಸಿ ಕೊಂಡು, ಸಮಾರ್ಯದಲ್ಲಿ ಅರಸನಿಗೆ ಉಂಟಾಗಿ
ದ್ದ ಅರಮನೆಯೊಳಗೆ ಅವನನ್ನು ಕೊಂದು ಹಾಕಿ, ಅವನಿಗೆ
ಬದಲಾಗಿ ಆಳ್ವಿದನು.
೨೬ ಇಗೋ, ಪೆಕಾಯನ ಇತರ ಕ್ರಿಯೆಗಳೂ ಅವನು ಮಾಡಿದ್ದೆ
ಲ್ಲವೂ ಇಸ್ರಯೇಲಿನ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ
ಬರೆಯಲ್ಪಟ್ಟಿವೆ.
೨೭ ಯೆಹೂದದ ಅರಸನಾದ ಅಜರ್ಯನ ಐವತ್ತೆರಡನೇ ವರುಷ
ದಲ್ಲಿ ರೆಮಲ್ಯನ ಮಗನಾದ ಪೇಕಹನು ಇಸ್ರಯೇಲಿನ ಮೇರೆ ಸ
ಮಾರ್ಯದಲ್ಲಿ ಆಳ್ವ ಆರಂಭಿಸಿ, ಇಪ್ಪತ್ತು ವರುಷ ಆಳ್ವಿದನು.
೨೮ ಅವನು ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾಡಿದನು; ಅವನು
ಇಸ್ರಯೇಲನ್ನು ಪಾಪ ಮಾಡ ಪ್ರೇರೇಪಿಸಿದ ನೆಬಾಟನ ಮಗನಾ
ದ ಯೆರೊಬಾಮನ ಪಾಪಗಳನ್ನು ತೊರೆದು ಬಿಡಲಿಲ್ಲ.
೨೯ ಇಸ್ರಯೇಲಿನ ಅರಸನಾದ ಪೇಕಹನ ದಿವಸದಲ್ಲಿ ಅಶೂರದ
ಅರಸನಾದ ತಿಗ್ಲತ್ಪಿಲೇಸರನು ಬಂದು, ನೆಫ್ತಲಿಯ ದೇಶವಾದ ಇ
ಯ್ಯೋನನ್ನೂ, ಆಬೇಲ ಬೆತ್ಮಾಕವನ್ನೂ, ಯನೋಹವನ್ನೂ,
ಕಾದೆಷನ್ನೂ, ಹಚೋರನ್ನೂ, ಗಿಲ್ಯಾದನ್ನೂ, ಗಲಿಲಾಯವ
ನ್ನೂ ಹಿಡುಕೊಂಡು, ಜನರನ್ನು ಕೆಡೆಯಾಗಿ ಅಶೂರಿಗೆ ವೈ
ದನು.
೩೰ ಇದಲ್ಲದೆ ಉಜ್ಜೀಯನ ಮಗನಾದ ಯೊತಾಮನ ಇಪ್ಪತ್ತನೇ
ವರುಷದಲ್ಲಿ ಏಲನ ಮಗನಾದ ಹೊಷೇಯನು ರೆಮಲ್ಯನ ಮಗ
ನಾದ ಪೇಕಹನ ಮೇರೆ ಒಳಸಂಚು ಮಾಡಿ, ಅವನನ್ನು ಹೊಡೆ
ದು, ಅವನಿಗೆ ಬದಲಾಗಿ ಆಳ್ವಿದನು.
೩೧ ಇಗೋ, ಪೇಕಹನ ಇತರ ಕ್ರಿಯೆಗಳೂ ಅವನು ಮಾಡಿದ್ದೆಲ್ಲ
ವೂ ಇಸ್ರಯೇಲಿನ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ
ಬರೆಯಲ್ಪಟ್ಟಿವೆ.
೩೨ ಇಸ್ರಯೇಲಿನ ಅರಸನಾದಂಥ, ರೆಮಲ್ಯನ ಮಗನಾದಂಥ
ಪೇಕಹನ ಎರಡನೇ ವರುಷದಲ್ಲಿ ಯೆಹೂದದ ಅರಸನಾದಂಥ,
ಉಜ್ಜೀಯನ ಮಗನಾದಂಥ ಯೊತಾಮನು ಆಳ್ವ ಆರಂಭಿಸಿದನು.
೩೩ ಅವನು ಆಳ್ವ ಆರಂಭಿಸಿದಾಗ, ಇಪ್ಪತ್ತೈದು ವರುಷದವನಾಗಿದ್ದು,
ಯೆರೂಸಲೇಮಿನಲ್ಲಿ ಹದಿನಾರು ವರುಷ ಆಳ್ವಿದನು. ಅವನ ತಾ
೩೪ ಯಿಯ ಹೆಸರು ಯೆರೂಷ—ಚದೋಕನ ಮಗಳಾಗಿದ್ದಳು. ಅ
ವನು ತನ್ನ ತಂದೆಯಾದ ಉಜ್ಜೀಯನು ಮಾಡಿದ ಪ್ರಕಾರವೆಲ್ಲಾ
ಮಾಡಿ, ಕರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು ಮಾಡಿದನು.
೩೫ ಇವನು ಕರ್ತನ ಮನೆಯ ಎತ್ತರವಾದ ಬಾಗಲನ್ನು ಕಟ್ಟಿಸಿದನು.
ಆದರೆ ಮೇಡುಗಳು ತೆಗೆಯಲ್ಪಡಲಿಲ್ಲ; ಜನರು ಇನ್ನೂ ಮೇಡುಗ
ಳ ಮೇರೆ ಬಲಿಗಳನ್ನೂ ಧೂಪವನ್ನೂ ಅರ್ಪಿಸುತ್ತಿದ್ದರು.
೩೬ ಯೊತಾಮನ ಇತರ ಕ್ರಿಯೆಗಳೂ ಅವನು ಮಾಡಿದ ಸಮಸ್ತ
ವೂ ಯೆಹೂದದ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆ
೩೭ ಯಲ್ಪಟ್ಟಿವೆ. ಆ ದಿವಸಗಳಲ್ಲಿ ಕರ್ತನು ಅರಾಮಿನ ಅರಸನಾ
ದ ರೆಚೇನನನ್ನೂ ರೆಮಲ್ಯನ ಮಗನಾದ ಪೇಕಹನನ್ನೂ ಯೆಹೂ
೩೮ ದದ ಮೇರೆ ಕಳ್ಳಹಿಸ ಆರಂಭಿಸಿದನು. ಯೊತಾಮನು ತನ್ನ ಪಿತೃ
ಗಳ ಸಂಗಡ ಮಲಗಿದನು; ಅವನು ತನ್ನ ತಂದೆಯಾದ ದಾವೀದ
ನ ಪಟ್ಟಣದಲ್ಲಿ ತನ್ನ ಪಿತೃಗಳ ಬಳಿಯಲ್ಲಿ ಹೂಣಲ್ಪಟ್ಟನು; ಅವ
ನ ಮಗನಾದ ಅಹಾಜನು ಅವನಿಗೆ ಬದಲಾಗಿ ಆಳ್ವಿದನು.

## ೧೬. ಸಂಧಿ.

೧ ರೆಮಲ್ಯನ ಮಗನಾದ ಪೇಕಹನ ಹದಿನೇಳನೇ ವರುಷದಲ್ಲಿ
ಯೆಹೂದದ ಅರಸನಾಗಿರುವ ಯೊತಾಮನ ಮಗನಾದ ಅಹಾ
೨ ಜನು ಆಳ್ವ ಆರಂಭಿಸಿದನು. ಅಹಾಜನು ಆಳ್ವ ಆರಂಭಿಸಿದಾಗ,
ಇಪ್ಪತ್ತು ವರುಷದವನಾಗಿದ್ದು, ಯೆರೂಸಲೇಮಿನಲ್ಲಿ ಹದಿನಾರು
೩ ವರುಷ ಆಳ್ವಿದನು. ಅವನು ತನ್ನ ತಂದೆಯಾದ ದಾವೀದನ ಹಾ
ಗೆ ತನ್ನ ದೇವರಾದ ಕರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು
ಮಾಡದೆ, ಇಸ್ರಯೇಲಿನ ಅರಸುಗಳ ಮಾರ್ಗದಲ್ಲಿ ನಡೆದನು.
ಇದಲ್ಲದೆ ಕರ್ತನು ಇಸ್ರಯೇಲಿನ ಮಕ್ಕಳ ಮುಂದೆ ಹೊರಡಿಸಿದ
ಅನ್ಯ ಜನಾಂಗಗಳ ಅಸಹ್ಯವಾದವುಗಳ ಪ್ರಕಾರ, ಅವನು ತನ್ನ
೪ ಮಗನನ್ನು ಬೆಂಕಿ ತುಳ್ಳಿಯ ಮಾಡಿದನು. ಇದಲ್ಲದೆ ಅವನು
ಮೇಡುಗಳ ಮೇಲೆಯೂ ಬೆಟ್ಟಗಳ ಮೇಲೆಯೂ ಹಸುರಾದ
ಎಲ್ಲಾ ಮರಗಳ ಕೆಳಗೂ ಬಲಿಗಳನ್ನೂ ಧೂಪವನ್ನೂ ಅರ್ಪಿಸಿ
ದನು.
೫ ಆಗ ಅವನ ಕಾಲದಲ್ಲಿ ಅರಾಮಿನ ಅರಸನಾದ ರೆಚೇನನೂ
ಇಸ್ರಯೇಲಿನ ಅರಸನಾದಂಥ, ರೆಮಲ್ಯನ ಮಗನಾದ ಪೇಕಹ
ನೂ ಯುದ್ಧ ಮಾಡ ಯೆರೂಸಲೇಮಿಗೆ ಬಂದು, ಅಹಾಜನನ್ನು
ಮುತ್ತಿಗೆ ಹಾಕಿದರು; ಆದರೆ ಯುದ್ಧ ಮಾಡಲಾರದೆ ಹೋದರು.
೬ ಅದೇ ವೇಳೆಯಲ್ಲಿ ಅರಾಮಿನ ಅರಸನಾದ ರೆಚೇನನು ಏಲತನ್ನು
ಅರಾಮಿಗೆ ತಿರಿಗಿ ಕೇರಿಸಿ ಕೊಂಡು, ಏಲತಿನಿಂದ ಯೆಹೂದ್ಯರನ್ನು
ಪೂರ್ತಿಸಿ ಬಿಟ್ಟರು; ಮತ್ತು ಅರಾಮ್ಯರು ಏಲತಿಗೆ ಬಂದರು; ಇಂದಿನ
೭ ಮಟ್ಟಿಗೂ ಅಲ್ಲಿ ವಾಸವಾಗಿದ್ದಾರೆ. ಆದರೆ ಅಹಾಜನು ಅಶೂ
ರಿನ ಅರಸನಾದ ತಿಗ್ಲತ್ಪಿಲೇಸರನ ಬಳಿಗೆ, ನಾನು ನಿನ್ನ ಸೇವಕ
ನೂ ನಿನ್ನ ಮಗನೂ ಆಗಿದ್ದೇನೆ; ನನಗೆ ವಿರೋಧವಾಗಿ ಎದ್ದ ಅ
ರಾಮಿನ ಅರಸನ ಕೈಗೂ ಇಸ್ರಯೇಲಿನ ಅರಸನ ಕೈಗೂ ನನ್ನ
ನ್ನು ತಪ್ಪಿಸಿ ರಕ್ಷಿಸುವ ಹಾಗೆ ಏರಿ ಬರ ಹೇಳಿ ದೂತರನ್ನು ಕಳು
೮ ಹಿಸಿದನು. ಇದಲ್ಲದೆ ಅಹಾಜನು ಕರ್ತನ ಮನೆಯಲ್ಲಿಯೂ ಅರ
ಮನೆಯ ಬೊಕ್ಕಸಗಳಲ್ಲಿಯೂ ಸಿಕ್ಕಿದ ಬೆಳ್ಳಿ ಬಂಗಾರವನ್ನು ತ
೯ ಕ್ಕೊಂಡು, ಕಾಣಿಕೆಯಾಗಿ ಅಶೂರಿನ ಅರಸನಿಗೆ ಕಳುಹಿಸಿದನು.
ಆಗ ಅಶೂರಿನ ಅರಸನು ಅವನ ಮಾತು ಕೇಳಿದನು; ಅಶೂ
ರಿನ ಅರಸನು ದಮಸ್ಕಕ್ಕೆ ಏರಿ ಹೋಗಿ, ಅದನ್ನು ಹಿಡಿದು, ಅದ
ರ ನಿವಾಸಿಗಳನ್ನು ಕೀರಿಗೆ ಕೆಡೆಯಾಗಿ ವೈದು, ರೆಚೇನನನ್ನು
ಕೊಂದು ಹಾಕಿದನು.
೧೦ ಮತ್ತು ಅರಸನಾದ ಅಹಾಜನು ಅಶೂರಿನ ಅರಸನಾದ ತಿ
ಗ್ಲತ್ಪಿಲೇಸರನನ್ನು ಎದುರ್ಗೊಳ್ಳ ದಮಸ್ಕಕ್ಕೆ ಹೋಗಿ, ದಮಸ್ಕ
ದಲ್ಲಿ ಒಂದು ಬಲಿಪೀಠವನ್ನು ಕಂಡನು. ಆಗ ಅರಸನಾದ ಅಹಾ
ಜನು ಆ ಬಲಿಪೀಠದ ರೂಪವನ್ನೂ ಅದರ ಎಲ್ಲಾ ಕೈ ಕೆಲಸದ ಪ್ರ
ಕಾರ ಮಾದ್ರಿಯನ್ನೂ ಯಾಜಕನಾದ ಊರೀಯನಿಗೆ ಕಳುಹಿಸಿ
೧೧ ದನು. ಆಗ ಯಾಜಕನಾದ ಊರೀಯನು ಅರಸನಾದ ಅಹಾಜ
ನು ದಮಸ್ಕದಿಂದ ಕಳುಹಿಸಿದ ಎಲ್ಲಾದರ ಪ್ರಕಾರ ಒಂದು ಬಲಿಪೀಠ

೧೭ ಬಿದ್ದು, ಬಾಳ್ಳನನ್ನು, ಸೇವಿಸಿ, ತಮ್ಮ ಕುಮಾರರನ್ನೂ ಕುಮಾ
ರ್ತಿಗಳನ್ನೂ ಬೆಂಕಿಯ ದಾಟ ಮಾಡಿ, ಕಣಿಗಳನ್ನೂ ಶಕುನಗ
ಳನ್ನೂ ಬಳ್ಳಿಸಿ, ಕರ್ತನಿಗೆ ಕಕೆಕಕೆ ಪಡಿಸಿ, ಅವನ ಸಮುಖದಲ್ಲಿ
೧೮ ಕೆಟ್ಟದ್ದನ್ನು ಮಾಡ ತಮ್ಮನ್ನು ಮಾರಿ ಬಿಟ್ಟರು. ಆದದರಿಂದ
ಕರ್ತನು ಇಸ್ರಯೇಲಿನ ಮೇಲೆ ಬಹು ಕೋಪ ಮಾಡಿ, ಅವರನ್ನು
ತನ್ನ ಸಮುಖದಿಂದ ತೆಗೆದು ಹಾಕಿದನು. ಯೆಹೂದ ಕುಲ ಹೊ
೧೯ ರ್ತಾಗಿ, ಇನ್ನಾರೂ ಉಳಿದದ್ದಿಲ್ಲ. ಆದರೆ ಯೆಹೂದದವರು
ತಮ್ಮ ದೇವರಾದ ಕರ್ತನ ಆಜ್ಞೆಗಳನ್ನು ಕೈ ಕೊಳ್ಳದೆ, ಇ
ಸ್ರಯೇಲು ಮಾಡಿ ಕೊಂಡ ಕಟ್ಟಳೆಗಳಲ್ಲಿ ನಡೆದರು.

೨೦ ಅದದರಿಂದ ಕರ್ತನು ಇಸ್ರಯೇಲಿನ ಬೀಜವನ್ನೆಲ್ಲಾ ಅಲಕ್ಷ್ಯ
ಮಾಡಿ ಬಿಟ್ಟು, ಅವರನ್ನು ಕುಂದಿಸಿ, ಅವರನ್ನು ತನ್ನ ಸಮುಖ
ದಿಂದ ತಳ್ಳಿ ಬಿಡುವ ಪರ್ಯಂತರ ಅವರನ್ನು ಕೊಳ್ಳೆಗಾರರ
೨೧ ಕೈಯಲ್ಲಿ ಒಪ್ಪಿಸಿ ಕೊಟ್ಟನು. ಯಾಕಂದರೆ ಅವನು ಇಸ್ರಯೇ
ಲನ್ನು ದಾವೀದನ ಮನೆಯಿಂದ ಹರಿದು ಬಿಟ್ಟನು; ಮತ್ತು ಅವರು
ನೆಬಾಟನ ಮಗನಾದ ಯೆರೊಬಾಮನನ್ನು ಅರಸನಾಗ ಮಾಡಿ
ಕೊಂಡರು. ಆಗ ಯೆರೊಬಾಮನು ಇಸ್ರಯೇಲನ್ನು ಕರ್ತನ
ಹಿಂದಿನಿಂದ ತಪ್ಪಿಸಿ, ಅವರನ್ನು ಮಹಾ ಪಾಪ ಮಾಡ ಪ್ರೇರೇಪಿಸಿ
೨೨ ದನು. ಕರ್ತನು ಪ್ರವಾದಿಗಳಾದ ತನ್ನ ಸೇವಕರ ಮುಖಾಂತರ
ಹೇಳಿದ ಹಾಗೆ, ಅವನು ಇಸ್ರಯೇಲನ್ನು ತನ್ನ ಸಮುಖದಿಂದ ತೆ
ಗೆದು ಹಾಕುವ ಪರ್ಯಂತರ, ಇಸ್ರಯೇಲಿನ ಮಕ್ಕಳು ಯೆರೊ
ಬಾಮನು ಮಾಡಿದ ಸಮಸ್ತ ಪಾಪಗಳಲ್ಲಿ ನಡೆದರು; ಅವುಗಳನ್ನು
೨೩ ತೊರೆದು ಬಿಡಲಿಲ್ಲ. ಹೀಗೆಯೇ ಇಸ್ರಯೇಲಿನವರು ಇಂದಿನ ವರಿ
ಗೂ ತಮ್ಮ ದೇಶದಿಂದ ಅಶೂರಿಗೆ ಕೆಡೆಯಾಗಿ ಪೈಯಲ್ಪಟ್ಟರು.

೨೪ ಮತ್ತು ಅಶೂರಿನ ಅರಸನು ಬಬೇಲಿನಿಂದಲೂ, ಕೂತಹಿನಿಂ
ದಲೂ, ಅವ್ವದಿಂದಲೂ, ಹಮಾತಿನಿಂದಲೂ, ಸೆಫರ್ವಾಯಿಮಿನಿಂ
ದಲೂ ಜನರನ್ನು ಬರ ಮಾಡಿ, ಅವರನ್ನು ಇಸ್ರಯೇಲ ಮಕ್ಕಳಿಗೆ
ಬದಲಾಗಿ ಸಮಾರ್ಯದ ಪಟ್ಟಣಗಳಲ್ಲಿ ಇರಿಸಿದನು. ಇವರು ಸಮಾ
ರ್ಯವನ್ನು ಸ್ವತಂತ್ರಿಸಿ ಕೊಂಡು, ಅದರ ಪಟ್ಟಣಗಳಲ್ಲಿ ನಿವಾಸವಾ
೨೫ ಗಿದ್ದರು. ಆದರೆ ಅವರು ಅಲ್ಲಿ ನಿವಾಸಿಸ ಆರಂಭಿಸಿದಾಗ, ಅವರು
ಕರ್ತನಿಗೆ ಭಯ ಪಡದ್ದರಿಂದ, ಕರ್ತನು ಅವರ ಮಧ್ಯದಲ್ಲಿ ಸಿಂಹ
ಗಳನ್ನು ಕಳುಹಿಸಿದನು. ಅವು ಅವರಲ್ಲಿ ಕೆಲವರನ್ನು ಕೊಂದು
ಹಾಕಿದವು.

೨೬ ಆದಕಾರಣ ಅವರು ಅಶೂರಿನ ಅರಸನಿಗೆ, ನೀನು ಕೇರಿಸಿ,
ಸಮಾರ್ಯದ ಪಟ್ಟಣಗಳಲ್ಲಿ ಇರಿಸಿದ ಜನಾಂಗಗಳು ಆ ದೇಶದ
ದೇವರ ನ್ಯಾಯವನ್ನು ಶಿಳಿಯದೆ ಇದ್ದಾರೆ. ಅವರು ಆ ದೇಶದ
ದೇವರ ನ್ಯಾಯವನ್ನು ಶಿಳಿಯದೆ ಇದ್ದದರಿಂದ, ಅವನು ಅವರ
ಮಧ್ಯದಲ್ಲಿ ಸಿಂಹಗಳನ್ನು ಕಳುಹಿಸಿದ್ದಾನೆ; ಮತ್ತು, ಇಗೋ, ಅ
೨೭ ವು ಅವರನ್ನು ಕೊಂದು ಹಾಕುತ್ತವೆ, ಅಂದರು. ಆಗ ಅಶೂರಿ
ನ ಅರಸನು, ನೀವು ಅಲ್ಲಿಂದ ತಕ್ಕೊಂಡು ಬಂದ ಯಾಜಕರಲ್ಲಿ
ಒಬ್ಬನನ್ನು ಅಲ್ಲಿಗೆ ಕರ ಕೊಂಡು ಹೋಗಿರಿ; ಅವರು ಅಲ್ಲಿ ನಿವಾ
ಸವಾಗಿರಲಿ; ಅವನು ಅವರಿಗೆ ಆ ದೇಶದ ದೇವರ ನ್ಯಾಯವನ್ನು
೨೮ ಬೋಧಿಸಲಿ, ಎಂದು ಆಜ್ಞಾಪಿಸಿದನು. ಆಗ ಅವರು ಸಮಾರ್ಯ
ದಿಂದ ಸೈದ ಯಾಜಕರಲ್ಲಿ ಒಬ್ಬನು ಬಂದು, ಬೇತೆಲಿನಲ್ಲಿ ನಿವಾಸ
ವಾಗಿದ್ದು, ಅವರು ಕರ್ತನಿಗೆ ಭಯ ಪಡ ತಕ್ಕ ವಿಧವನ್ನು ಅವ
ರಿಗೆ ಬೋಧಿಸಿದನು.

೨೯ ಆದರೆ ಪ್ರತಿ ಜನಾಂಗದವರೂ ತಾವು ನಿವಾಸಿಸಿದ ಪಟ್ಟಣಗಳಲ್ಲಿ
ತಮಗೆ ದೇವರುಗಳನ್ನು ಮಾಡಿ, ಸಮಾರ್ಯದವರು ಮಾಡಿದ
೩೦ ಮೇಡುಗಳ ಮನೆಗಳಲ್ಲಿ ಅವುಗಳನ್ನು ಇರಿಸಿದರು. ಬಬೇಲಿನ
ಮನುಷ್ಯರು ಸುಕ್ಕ ಬೇನೊತನ್ನು ಮಾಡಿದರು; ಕೂತಬನ ಮ
ನುಷ್ಯರು ನೆರ್ಗಲನ್ನು ಮಾಡಿದರು; ಹಮಾತಿನ ಮನುಷ್ಯರು
ಅಷೀಮನನ್ನು ಮಾಡಿದರು; ಅವ್ವಿಯರು ನಿಭಾಜನನ್ನೂ ತರ್ತ
೩೧ ಕನನ್ನೂ ಮಾಡಿದರು. ಸೆಫರ್ವಾಯಿಮಿನವರು ಸೆಫರ್ವಾಯಿಮಿ
ನ ದೇವರುಗಳಾದ ಅದ್ರಮ್ಮೆಲಕಿಗೂ ಅಣಮ್ಮೆಲಕಿಗೂ ತಮ್ಮ
೩೨ ಮಕ್ಕಳನ್ನು ಬೆಂಕಿಯಿಂದ ಸುಟ್ಟು ಬಿಟ್ಟರು. ಹೀಗೆ ಅವರು ಕ
ರ್ತನಿಗೆ ಭಯ ಪಟ್ಟು, ತಮ್ಮಲ್ಲಿರುವ ನೀಚಕೊಳ್ಳಗೆ ಮೇಡುಗಳಿ
ಗೋಸ್ಕರ ಯಾಜಕರನ್ನು ಮಾಡಿ ಕೊಂಡರು. ಇವರು ಮೇ
ಡುಗಳ ಮೇಲಿರುವ ಮನೆಗಳಲ್ಲಿ ಅವರಿಗೋಸ್ಕರ ಬಲಿಗಳನ್ನು
33 ಅರ್ಪಿಸುತ್ತಾ ಇದ್ದರು. ಅವರು ಕರ್ತನಿಗೆ ಭಯ ಪಟ್ಟು, ಅವ
ರು ಅಲ್ಲಿಂದ ಪೈದ ಜನಾಂಗಗಳ ನ್ಯಾಯದ ಪ್ರಕಾರ, ತಮ್ಮ ದೇ
ವರುಗಳನ್ನು ಸೇವಿಸಿದರು.

೩೪ ಈ ದಿವಸದ ವರಿಗೂ ಅವರು ತಮ್ಮ ಪೂರ್ವದ ನ್ಯಾಯಗ
ಳ ಪ್ರಕಾರ ಮಾಡುತ್ತಾರೆ; ಅವರು ಕರ್ತನಿಗೆ ಭಯ ಪಡದೆ,
ತಮ್ಮ ಕಟ್ಟಳೆಗಳ ಪ್ರಕಾರವಾಗಿಯೂ, ತಮ್ಮ ನೀತಿಗಳ ಪ್ರಕಾರ
ವಾಗಿಯೂ, ನ್ಯಾಯಪ್ರಮಾಣದ ಪ್ರಕಾರವಾಗಿಯೂ, ಕರ್ತ
ನು ಇಸ್ರಯೇಲೆಂದು ಹೆಸರಿಟ್ಟ ಯಾಕೋಬನ ಮಕ್ಕಳಿಗೆ ಆಜ್ಞಾ
೩೫ ಪಿಸಿದ ಆಜ್ಞೆಯ ಪ್ರಕಾರವಾಗಿಯೂ ಮಾಡದೆ ಇದ್ದಾರೆ. ಕರ್ತ
ನು ಅವರ ಸಂಗಡ ಒಡಂಬಡಿಕೆ ಮಾಡಿ, ಅವರಿಗೆ ಆಜ್ಞಾಪಿಸಿ ಹೇಳಿ
ದ್ದದ್ದೇನಂದರೆ, ನೀವು ಇತರ ದೆವರುಗಳಿಗೆ ಭಯ ಪಡದೆ, ಅವುಗ
ಳಿಗೆ ಅಡ್ಡ ಬೀಳದೆ, ಅವುಗಳನ್ನು ಸೇವಿಸದೆ, ಅವುಗಳಿಗೆ ಬಲಿಯ
೩೬ ನ್ನು ಅರ್ಪಿಸದೆ ಇರ್ರಿ; ಆದರೆ ಮಹಾ ಶಕ್ತಿಯಿಂದಲೂ, ಚಾಚಿದ
ತೋಳಿನಿಂದಲೂ ಐಗುತ್ತ ದೇಶದಿಂದ ನಿಮ್ಮನ್ನು ಬರ ಮಾಡಿದ
ಕರ್ತನಿಗೆ ನೀವು ಭಯ ಪಟ್ಟು, ಅವನಿಗೆ ಅಡ್ಡ ಬಿದ್ದು, ಅವನಿಗೆ
೩೭ ಬಲಿಯನ್ನು ಅರ್ಪಿಸಿರಿ. ಇದಲ್ಲದೆ ಅವನು ನಿಮಗೆ ಬರೆದು ಕೊಟ್ಟ
ಕಟ್ಟಳೆಗಳನ್ನೂ, ನೀತಿಗಳನ್ನೂ, ನ್ಯಾಯಪ್ರಮಾಣವನ್ನೂ,
ಆಜ್ಞೆಯನ್ನೂ ನೀವು ನಿರಂತರವಾಗಿ ಕೈ ಕೊಳ್ಳ ಎಚ್ಚರಿಕೆಯಾ
೩೮ ಗಿರ ಬೇಕು; ಇತರ ದೇವರುಗಳಿಗೆ ಭಯ ಪಡ ಬೇಡಿರಿ. ನಾನು
ನಿಮ್ಮ ಸಂಗಡ ಮಾಡಿದ ಒಡಂಬಡಿಕೆಯನ್ನು ನೀವು ಮರೆಯದೆ,
ಇತರ ದೇವರುಗಳಿಗೆ ಭಯ ಪಡದೆ, ನಿಮ್ಮ ದೇವರಾದ ಕರ್ತನಿಗೆ
೩೯ ಭಯ ಪಡಿರಿ. ಆಗ ಆತ ನಿಮ್ಮನ್ನು ನಿಮ್ಮ ಶತ್ರುಗಳ ಕೈಯೊ
೪೦ ಳಗಿಂದ ವಿಮೋಚನೆ ಮಾಡುವನು. ಆದರೆ ಅವರು ಕೇಳದೆ, ತಮ್ಮ
ಪೂರ್ವದ ನ್ಯಾಯದ ಹಾಗೆ ಮಾಡಿದರು.

೪೧ ಹೀಗೆಯೇ ಈ ಜನಾಂಗಗಳು ಕರ್ತನಿಗೆ ಭಯ ಪಟ್ಟು, ತ
ಮ್ಮ ಕಟದ ವಿಗ್ರಹಗಳನ್ನು ಸೇವಿಸಿದರು; ತಮ್ಮ ಪಿತೃಗಳು ಮಾ
ಡಿದ ಹಾಗೆ ತಮ್ಮ ಮಕ್ಕಳೂ ಮೊಮ್ಮಕ್ಕಳೂ ಇಂದಿನ ವರಿಗೂ
ಮಾಡುತ್ತಾರೆ.

## ೧೮. ಸಂಧಿ.

೧ ಆದರೆ ಇಸ್ರಯೇಲಿನ ಅರಸನಾಗಿರುವ ಏಲನ ಮಗನಾದ ಹೊ
ಶೇಯನ ಮೂರನೇ ವರುಷದಲ್ಲಿ ಯೆಹೂದದ ಅರಸನಾಗಿರುವ
೨ ಅಹಾಜನ ಮಗನಾದ ಹಿಕ್ಕಿಯೆನು ಆಳ್ವ ಆರಂಭಿಸಿದನು. ಅವ



ನನ್ನು ಕಟ್ಟಿಸಿದನು. ಹಾಗೆಯೇ ಅರಸನಾದ ಅಹಾಜನು ದಮಸ್ಕ
ದಿಂದ ಬರಲದ ಮುಂಚೆ ಯಾಜಕನಾದ ಉರೀಯನು ಅದನ್ನು
೧೦ ಮಾಡಿಸಿದನು. ಅರಸನು ದಮಸ್ಕದಿಂದ ಬಂದ ಮೇಲೆ ಬಲಿಪೀಠವ
ನ್ನು ನೋಡಿದನು. ಮತ್ತು ಅರಸನು ಬಲಿಪೀಠದ ಬಳ್ಳಗೆ ಹೋಗಿ,
೧೩ ಅದರ ಮೇಲೆ ಬಲಿಯನ್ನರ್ಪಿಸಿದನು. ಬಲಿಪೀಠದ ಮೇಲೆ ತನ್ನ
ಹೋಮವನ್ನೂ ತನ್ನ ಕಾಣಿಕೆಯನ್ನೂ ಸುಟ್ಟನು; ತನ್ನ ಹೊ
ಯಿಕೆಯನ್ನೂ ಹೊಯಿದನು; ತನ್ನ ಸಮಾಧಾನದ ಬಲಿಗಳ ರ
೧೪ ಕ್ತವನ್ನು ಚಿಮಿಕಿಸಿದನು. ಆದರೆ ಕರ್ತನ ಸಮುಖದಲ್ಲಿದ್ದ ತಾಂ
ಬ್ರದ ಬಲಿಪೀಠವನ್ನು ಅವನು ಮನೆಯ ಮುಖದಿಂದಲೂ, ಕರ್ತನ
ಮನೆಗೂ ಬಲಿಪೀಠಕ್ಕೂ ಮಧ್ಯದಿಂದಲೂ ತಂದು, ಅದನ್ನು ಈ ಬ
೧೫ ಲಿಪೀಠಕ್ಕೆ ಉತ್ತರ ಪಾರ್ಶ್ವದಲ್ಲಿ ಇಟ್ಟನು. ಇದಲ್ಲದೆ ಅರಸನಾ
ದ ಅಹಾಜನು ಯಾಜಕನಾದ ಉರೀಯನಿಗೆ ಉದಯದ ಹೋ
ಮವನ್ನೂ ಸಾಯಂಕಾಲದ ಕಾಣಿಕೆಯನ್ನೂ ಅರಸನ ಹೋಮ
ವನ್ನೂ ಅವನ ಕಾಣಿಕೆಯನ್ನೂ ದೇಶದ ಜನರೆಲ್ಲರ ಹೋಮವ
ನ್ನೂ ಅವರ ಕಾಣಿಕೆಯನ್ನೂ ಅವರ ಹೊಯಿಕೆಗಳನ್ನೂ ದೊ
ಡ್ಡ ಬಲಿಪೀಠದ ಮೇಲೆ ಸುಟ್ಟು, ಹೋಮದ ರಕ್ತವೆಲ್ಲವನ್ನೂ ಬಲಿ
ಯ ರಕ್ತವೆಲ್ಲವನ್ನೂ ಚಿಮಿಕಿಸು; ಆದರೆ ತಾಂಬ್ರದ ಬಲಿಪೀಠವು
ನಾನು ವಿಚಾರಿಸುವ ನಿಮಿತ್ತವಾಗಿ ಇರಲಿ, ಎಂದು ಆಜ್ಞಾಪಿಸಿದನು.
೧೬ ಅರಸನಾದ ಅಹಾಜನು ಆಜ್ಞಾಪಿಸಿದ ಎಲ್ಲಾದರ ಪ್ರಕಾರ ಯಾಜ
೧೭ ಕನಾದ ಉರೀಯನು ಮಾಡಿದನು. ಇದಲ್ಲದೆ ಅರಸನಾದ ಅಹಾ
ಜನು ಆಧಾರದ ಅಂಚುಗಳನ್ನು ಕೊಯಿದು, ಗಂಗಾಳವನ್ನು ಅ
ದರ ಮೇಲಿನಿಂದ ತೆಗೆದು, ಸಮುದ್ರವನ್ನು ಅದರ ಕೆಳಗಿರುವ ತಾಂ
ಬ್ರದ ಎತ್ತುಗಳ ಮೇಲಿನಿಂದ ಇಳಿಸಿ, ಅದನ್ನು ಕಲ್ಲುಗಳ ಕಟ್ಟಣೆ
೧೮ ಯ ಮೇಲೆ ಇಟ್ಟನು. ಇದಲ್ಲದೆ ಮನೆಯಲ್ಲಿ ಅವರು ಕಟ್ಟಿಸಿದ ಸ
ಬ್ಬತಿಗೋಸ್ಕರ ಇದ್ದ ಒಪ್ಪಾರನ್ನೂ, ಹೊರಗಿದ್ದ ಅರಸನ ಪ್ರವೇ
ಶವನ್ನೂ ಅಶೂರಿನ ಅರಸನ ನಿಮಿತ್ತವಾಗಿ ಕರ್ತನ ಮನೆಯಿಂದ
ತೆಗೆದು ಹಾಕಿದನು.

೧೯ ಆದರೆ ಅಹಾಜನು ಮಾಡಿದ ಇತರ ಕ್ರಿಯೆಗಳು ಯೆಹೂದದ
೨೦ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ. ಅಹಾ
ಜನು ತನ್ನ ಪಿತೃಗಳ ಸಂಗಡ ಮಲಗಿದನು; ಅವನು ದಾವೀದನ
ಪಟ್ಟಣದಲ್ಲಿ ತನ್ನ ಪಿತೃಗಳ ಬಳ್ಳಯಲ್ಲಿ ಹೂಣಲ್ಪಟ್ಟನು; ಅವನ
ಮಗನಾದ ಹಿಕ್ಕಿಯೆನು ಅವನಿಗೆ ಬದಲಾಗಿ ಆಳ್ವದನು.

## ೧೭. ಸಂಧಿ.

೧ ಯೆಹೂದದ ಅರಸನಾದ ಅಹಾಜನ ಹನ್ನೆರಡನೇ ವರುಷದಲ್ಲಿ
ಏಲನ ಮಗನಾದ ಹೊಶೇಯನು ಇಸ್ರಯೇಲಿನ ಮೇಲೆ ಸಮಾ
೨ ರ್ಯದಲ್ಲಿ ಆಳ್ವ ಆರಂಭಿಸಿ, ಒಂಭತ್ತು ವರುಷ ಆಳ್ವದನು. ಅವನು
ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾಡಿದನು; ಆದರೆ ತನಗೆ
೩ ಮುಂಚೆ ಇದ್ದ ಇಸ್ರಯೇಲಿನ ಅರಸುಗಳ ಹಾಗಲ್ಲ. ಅಶೂರಿನ
ಅರಸನಾದ ಶಲ್ಮನೇಸರನು ಅವನ ಮೇಲೆ ಬಂದದರಿಂದ, ಹೊಶೇ
ಯನು ಅವನಿಗೆ ಸೇವಕನಾಗಿ, ಅವನಿಗೆ ಕಪ್ಪವನ್ನು ಕೊಟ್ಟನು.
೪ ಆದರೆ ಅಶೂರಿನ ಅರಸನು ಹೊಶೇಯನಲ್ಲಿ ಒಳ್ಳೆಸಂಚನ್ನು
ಕಂಡು, ಹಿಡಿದನು. ಏನಂದರೆ, ಹೊಶೇಯನು ಅಶೂರಿನ ಅರಸ
ನಿಗೆ ವರುಷ ವರುಷಕ್ಕೂ ಕೊಡುವ ಕಪ್ಪವನ್ನು ಕೊಡದೆ, ಐ
ಗುತ್ತದ ಅರಸನಾದ ಸೋಕನ ಬಳ್ಳಗೆ ದೂತರನ್ನು ಕಳುಹಿಸಿದ್ದ
ನು. ಆದದರಿಂದ ಅಶೂರಿನ ಅರಸನು ಅವನನ್ನು ಕಟ್ಟಿ, ಕೆರವು
ನೆಯಲ್ಲಿ ಬಂಧಿಸಿದನು.

೫ ಆಗ ಅಶೂರಿನ ಅರಸನು ದೇಶವೆಲ್ಲಾದರ ಮೇಲೆ ಬಂದು, ಸ
ಮಾರ್ಯಕ್ಕೆ ಏರಿ ಹೋಗಿ, ಅದನ್ನು ಮೂರು ವರುಷಗಳ ಮಟ್ಟಿ
೬ ಗೂ ಮುತ್ತಿಗೆ ಹಾಕಿದನು. ಹೊಶೇಯನ ಒಂಭತ್ತನೇ ವರುಷ
ದಲ್ಲಿ ಅಶೂರಿನ ಅರಸನು ಸಮಾರ್ಯವನ್ನು ಹಿಡಿದು, ಇಸ್ರ
ಯೇಲನ್ನು ಅಶೂರಿಗೆ ಕೆಡೆಯಾಗಿ ಪೈದು, ಗೊಜಾನು ನದಿಯ
ಬಳ್ಳಿಯಲ್ಲಿರುವ ಹಾಲಹಿನಲ್ಲಿಯೂ, ಹಬೋರಿನಲ್ಲಿಯೂ, ಮೇ
ದ್ಯರ ಪಟ್ಟಣಗಳಲ್ಲಿಯೂ ಅವರನ್ನು ಇರಿಸಿದನು.

೭ ಯಾಕೆ ಹೀಗೆ ಆಯಿತಂದರೆ, ಇಸ್ರಯೇಲಿನ ಮಕ್ಕಳು ಐ
ಗುತ್ತದ ಅರಸನಾದ ಫರೋನನ ಕೈಯಿಂದ ತಪ್ಪಿಸಿ, ಐಗುತ್ತ ದೇಶ
ದೊಳಗಿಂದ ಬರ ಮಾಡಿದ ತಮ್ಮ ದೇವರಾದ ಕರ್ತನಿಗೆ ವಿರೋಧ
೮ ವಾಗಿ ಪಾಪ ಮಾಡಿ, ಇತರ ದೇವರುಗಳಿಗೆ ಭಯ ಪಟ್ಟರು. ಇಸ್ರ
ಯೇಲಿನ ಮಕ್ಕಳ ಮುಂದೆ ಹೊರಡಿಸಿ ಬಿಟ್ಟ ಅನ್ಯ ಜನಾಂಗಗಳ
ಕಟ್ಟಳೆಗಳಲ್ಲಿಯೂ, ಇಸ್ರಯೇಲಿನ ಅರಸುಗಳು ಮಾಡಿದ ಕಟ್ಟ
೯ ಳೆಗಳಲ್ಲಿಯೂ ನಡೆದರು. ಇಸ್ರಯೇಲಿನ ಮಕ್ಕಳು ಏಕಾಂತವಾ
ಗಿ ತಮ್ಮ ದೇವರಾದ ಕರ್ತನಿಗೆ ವಿರೋಧವಾಗಿ ಅಯುಕ್ತವಾದವು
ಗಳನ್ನು ಮಾಡಿ, ಉಕ್ಕಡಗಳು ಮೊದಲುಗೊಂಡು ಕೋಟೆಯುಳ್ಳ
ಪಟ್ಟಣಗಳ ಮಟ್ಟಿಗೂ ತಮ್ಮ ಸಮಸ್ತ ಪಟ್ಟಣಗಳಲ್ಲಿ ತಮಗೆ ಮೇ
೧೦ ಡುಗಳನ್ನು ಕಟ್ಟಿಸಿ ಕೊಂಡಿದ್ದರು. ಇದಲ್ಲದೆ ಅವರು ಎತ್ತರವಾದ
ಎಲ್ಲಾ ಗುಡ್ಡಗಳಲ್ಲಿ ತೋಪುಗಳನ್ನು ಹಾಕಿ, ಹಸುರಾದ ಎಲ್ಲಾ
೧೧ ಮರಗಳ ಕೆಳಗೂ ತಮಗೆ ವಿಗ್ರಹಾದಿಗಳನ್ನು ನಿಲ್ಲಿಸಿ, ಅಲ್ಲಿ ಕ
ರ್ತನು ತಮ್ಮ ಮುಂದೆ ಓಡಿಸಿ ಬಿಟ್ಟ ಅನ್ಯ ಜನಾಂಗಗಳ ಹಾಗೆ
ಅವರು ಎಲ್ಲಾ ಮೇಡುಗಳಲ್ಲಿ ಧೂಪವನ್ನು ಸುಟ್ಟು, ಕರ್ತನನ್ನು
ಕಕೆಕಕೆ ಪಡಿಸುವ ಹಾಗೆ ಕೆಟ್ಟ ಕಾರ್ಯಗಳನ್ನು ಮಾಡಿದರು.
೧೨ ನೀವು ಈ ಕಾರ್ಯವನ್ನು ಮಾಡ ಬೇಡಿರೆಂದು, ಕರ್ತನು ತಮ
ಗೆ ಹೇಳಿದ ಮಣ್ಣು ದೇವರುಗಳಿಗೆ ಸೇವಿಸಿದರು.

೧೩ ನೀವು ನಿಮ್ಮ ದುರ್ಮಾರ್ಗಗಳನ್ನು ಬಿಟ್ಟು ತಿರುಗಿ, ನಾನು
ನಿಮ್ಮ ಪಿತೃಗಳಿಗೆ ಆಜ್ಞಾಪಿಸಿದ, ಪ್ರವಾದಿಗಳಾದ ನನ್ನ ಸೇವಕ
ರ ಮುಖಾಂತರ ನಾನು ನಿಮಗೆ ಕಳುಹಿಸಿದ ನ್ಯಾಯಪ್ರಮಾಣ
ದ ಪ್ರಕಾರ, ನನ್ನ ಆಜ್ಞೆಗಳನ್ನೂ ನನ್ನ ಕಟ್ಟಳೆಗಳನ್ನೂ ಕೈ
ಕೊಳ್ಳಿರೆಂದು, ಕರ್ತನು ಸಮಸ್ತ ಪ್ರವಾದಿಗಳ ಮುಖಾಂತರವಾಗಿ
ಯೂ ಸಮಸ್ತ ದರ್ಶಿಗಳ ಮುಖಾಂತರವಾಗಿಯೂ ಇಸ್ರಯೇಲಿ
೧೪ ಗೂ ಯೆಹೂದಕ್ಕೂ ಸಾಕ್ಷಿ ಹೇಳಿದನು. ಆದರೆ ಅವರು ಕೇಳ
ದೆ ತಮ್ಮ ದೇವರಾದ ಕರ್ತನಲ್ಲಿ ನಂಬಿಕೆ ಇಡದ ತಮ್ಮ ಪಿತೃಗಳ
ಕುತ್ತಿಗೆಯ ಹಾಗೆ ತಮ್ಮ ಕುತ್ತಿಗೆಯನ್ನು ಕಠಿಣ ಪಡಿಸಿ, ಅವನ
ಕಟ್ಟಳೆಗಳನ್ನೂ, ಅವನು ತಮ್ಮ ಪಿತೃಗಳ ಸಂಗಡ ಮಾಡಿದ ಅ
ವನ ಒಡಂಬಡಿಕೆಯನ್ನೂ, ಅವನು ಅವರಿಗೆ ಹೇಳಿದ ಸಾಕ್ಷಿಗಳ
ನ್ನೂ ಅಲಕ್ಷ್ಯ ಮಾಡಿ, ಮಾಯವನ್ನು ಹಿಂಬಾಲಿಸಿ, ಮಾಯ
ಕಾರರಾಗಿ, ನೀವು ಅವರ ಹಾಗೆ ಮಾಡ ಬೇಡಿರೆಂದು, ಕರ್ತನು
ಅವರಿಗೆ ಆಜ್ಞಾಪಿಸಿದ ಅವರ ಸುತ್ತಲಿರುವ ಅನ್ಯ ಜನಾಂಗಳ
೧೬ ಹಿಂದೆ ಹೋದರು. ಇದಲ್ಲದೆ ಅವರು ತಮ್ಮ ದೇವರಾದ ಕರ್ತನ
ಸಮಸ್ತ ಆಜ್ಞೆಗಳನ್ನು ಬಿಟ್ಟು ಬಿಟ್ಟು, ತಮಗೆ ತಾವೇ ಎರಕ ಹೊ
ಯಿದ ವಿಗ್ರಹಗಳಾದ ಎರಡು ಹೋರಿಗಳನ್ನು ಮಾಡಿ ಕೊಂಡು,
ವಿಗ್ರಹಗಳ ತೋಪನ್ನು ನಾಟಿ, ಆಕಾಶದ ಸೈನ್ಯಕ್ಕೆಲ್ಲಾ ಅಡ್ಡ

ನು ಆಳ್ವ ಆರಂಭಿಸಿದಾಗ, ಇಪ್ಪತ್ತೈದು ವರುಷದವನಾಗಿದ್ದು, ಯೆ
ರೂಸಲೇಮಿನಲ್ಲಿ ಇಪ್ಪತ್ತೊಂಭತ್ತು ವರುಷ ಆಳ್ವದನು. ಅವನ
ತಾಯಿಯ ಹೆಸರು ಅಬಿಯು; ಅವಳು ಜೆಕರಿಯನ ಮಗಳಾಗಿ
3 ದ್ದಳು. ಅವನು ತನ್ನ ತಂದೆಯಾದ ದಾವೀದನು ಮಾಡಿದ ಪ್ರಕಾ
ರವೆಲ್ಲಾ ಮಾಡಿ, ಕರ್ತನ ದೃಷ್ಟಿಗೆ ನೆಟ್ಟಗೆಯಾದದ್ದನ್ನು ಮಾ
ಡಿದನು. ಅವನು ಮೇಡುಗಳನ್ನು ತೆಗೆದು ಹಾಕಿ, ವಿಗ್ರಹಗಳನ್ನು
ಒಡೆದು ಬಿಟ್ಟು, ವಿಗ್ರಹಗಳ ತೋಪುಗಳನ್ನು ಕಡಿದು ಹಾಕಿ,
ಪೋಶೆಯು ಮಾಡಿದ ತಾಂಬ್ರದ ಸರ್ಪವನ್ನು ಮುರಿದು ಬಿಟ್ಟನು.
4 ಯಾಕಂದರೆ ಆ ದಿವಸಗಳ ವರಗೂ ಇಸ್ರಯೇಲ್ ಮಕ್ಕಳು ಅ
ದಕ್ಕೆ ಧೂಪ ಸುಡುತ್ತಿದ್ದರು. ಅವನು ಅದನ್ನು, ತಾಂಬ್ರದ ತುಂಡು
ಎಂದು, ಕರೆದನು. ಅವನು ಇಸ್ರಯೇಲಿನ ದೇವರಾದ ಕರ್ತನಲ್ಲಿ
5 ಭರವಸವುಳ್ಳವನಾಗಿದ್ದನು; ಅವನಿಗೆ ಮುಂಚೆ ಇದ್ದವರಲ್ಲಿಯೂ,
ಅವನ ತರುವಾಯ ಯೆಹೂದದ ಸಮಸ್ತ ಅರಸುಗಳಲ್ಲಿಯೂ
6 ಅವನ ಹಾಗೆ ಇದ್ದವನು ಒಬ್ಬನೂ ಇಲ್ಲ. ಯಾಕಂದರೆ ಅವನು
ಕರ್ತನನ್ನು ಹಿಂಬಾಲಿಸುವದನ್ನು ಬಿಟ್ಟು ಬಿಡದೆ, ಅವನಿಗೆ ಹೊಂ
ದಿ ಕೊಂಡು, ಕರ್ತನು ಮೋಶೆಗೆ ಆಜ್ಞಾಪಿಸಿದ ಆಜ್ಞೆಗಳನ್ನು ಕೈ
ಕೊಂಡನು.

7 ಮತ್ತು ಕರ್ತನು ಅವನ ಸಂಗಡ ಇದ್ದನು; ಅವನು ಯಾವ
ಕಡೆ ಹೋದರೂ, ಅವನಿಗೆ ಸಫಲವಾಯಿತು; ಅವನು ಅಶೂರಿ
8 ನ ಅರಸನನ್ನು ಸೇವಿಸದೆ, ಅವನ ಮೇಲೆ ತಿರುಗ ಬಿದ್ದನು. ಅವ
ನು ಫಿಲಿಷ್ಟ್ಯರನ್ನು ಗಾಜದ ಮಟ್ಟಿಗೂ, ಅದರ ಮೇರೆಗಳ ಮಟ್ಟಿ
ಗೂ, ಉಕ್ಕುಡಗಳು ಮೊದಲ್ಗೊಂಡು ಕೋಟೆಯುಳ್ಳ ಪಟ್ಟಣಗಳ
ಮಟ್ಟಿಗೂ ಹೊಡೆದನು.

9 ಇಸ್ರಯೇಲಿನ ಅರಸನಾಗಿರುವ ಏಲನ ಮಗನಾದ ಹೊಶೇ
ಯನ ಏಳನೇ ವರುಷವಾದ, ಅರಸನಾಗಿರುವ ಹೆಜ್ಕೀಯನ ನಾ
ಲ್ಕನೇ ವರುಷದಲ್ಲಿ ಏನಾಯಿತಂದರೆ, ಅಶೂರಿನ ಅರಸನಾದ ಶ
ಲ್ಮನೇಸರನು ಸಮಾರ್ಯದ ಮೇಲೆ ಬಂದು, ಅದನ್ನು ಮುತ್ತಿಗೆ
10 ಹಾಕಿದನು. ಮೂರು ವರುಷವಾದ ತರುವಾಯ ಅವರು ಅದ
ನ್ನು ತೆಗೆದು ಕೊಂಡರು. ಇಸ್ರಯೇಲಿನ ಅರಸನಾಗಿರುವ ಹೊ
ಶೇಯನ ಒಂಭತ್ತನೇ ವರುಷವಾದ, ಹೆಜ್ಕೀಯನ ಅರನೇ ವರು
11 ಷದಲ್ಲಿ ಸಮಾರ್ಯವು ತೆಗೆದು ಕೊಳ್ಳಲ್ಪಟ್ಟಿತು. ಅಶೂರಿನ
ಅರಸನು ಅಶೂರಿಗೆ ಇಸ್ರಯೇಲನ್ನು ಕೆರೆಯಾಗಿ ವೈದು, ಗೊ
ಜಾನು ನದಿಯ ಬಳಿಯಲ್ಲಿರುವ ಹಾಲಹಿನಲ್ಲಿಯೂ, ಹಬೋರಿ
ನಲ್ಲಿಯೂ, ಮೇದ್ಯರ ಪಟ್ಟಣಗಳಲ್ಲಿಯೂ ಅವರನ್ನು ಇರಿಸಿದನು.
12 ಯಾಕಂದರೆ ಅವರು ತಮ್ಮ ದೇವರಾದ ಕರ್ತನ ಶಬ್ದವನ್ನು ಕೇ
ಳದೆ, ಅವನ ಒಡಂಬಡಿಕೆಯನ್ನೂ, ಕರ್ತನ ಸೇವಕನಾದ ಮೋ
ಶೆಯು ಆಜ್ಞಾಪಿಸಿದ್ದ ಸಮಸ್ತವನ್ನೂ ಮೀರಿದರು; ಕೇಳದೆ, ಮಾ
ಡದೆ, ಹೋದರು.

13 ಆದರೆ ಅರಸನಾದ ಹೆಜ್ಕೀಯನ ಹದಿನಾಲ್ಕನೇ ವರುಷದಲ್ಲಿ
ಅಶೂರಿನ ಅರಸನಾದ ಸನ್ಹೇರೀಬನು ಯೆಹೂದದ ಕೋಟೆಯು
ಳ್ಳ ಸಕಲ ಪಟ್ಟಣಗಳ ಮೇಲೆ ಬಂದು, ಅವುಗಳನ್ನು ತೆಗೆದು ಕೊಂ
14 ಡನು. ಆಗ ಯೆಹೂದದ ಅರಸನಾದ ಹೆಜ್ಕೀಯನು ಲಕೀಷಿನ ಬ
ಳಿಯಲ್ಲಿದ್ದ ಅಶೂರಿನ ಅರಸನಿಗೆ, ನಾನು ಪಾಪ ಮಾಡಿದ್ದೇನೆ;
ನನ್ನನ್ನು ಬಿಟ್ಟು, ತಿರಿಗಿ ಹೋಗು; ನೀನು ನನ್ನ ಮೇಲೆ ಹೊರಿಸು
ವದನ್ನು ನಾನು ತಾಳಿ ಕೊಳ್ಳುತ್ತೇನೆ, ಎಂಥೇಳಿ ಕಳುಹಿಸಿದನು.
ಆಗ ಅಶೂರಿನ ಅರಸನು ಯೆಹೂದದ ಅರಸನಾದ ಹೆಜ್ಕೀಯ
ನಿಗೆ ಮುನ್ನೂರು ತಲಾಂತು ಬೆಳ್ಳಿಯನ್ನೂ ಮೂವತ್ತು ತಲಾಂ
15 ತು ಬಂಗಾರವನ್ನೂ ಕೊಡ ನೇಮಕ ಮಾಡಿದನು. ಆದದರಿಂದ ಹೆ
ಜ್ಕೀಯನು ಕರ್ತನ ಮನೆಯಲ್ಲಿಯೂ, ಅರಸನ ಮನೆಯ ಬೊ
16 ಕ್ಕಸಗಳಲ್ಲಿಯೂ ಸಿಕ್ಕಿದ ಸಮಸ್ತ ಬೆಳ್ಳಿಯನ್ನು ಕೊಟ್ಟನು.
ಆ ಕಾಲದಲ್ಲಿ ಯೆಹೂದದ ಅರಸನಾದ ಹೆಜ್ಕೀಯನು ಕರ್ತನ ಮಂ
ದಿರದ ಕದಗಳ ಮೇಲೆಯೂ, ಸ್ತಂಭಗಳ ಮೇಲೆಯೂ ತಾನು
ಹೊದಗಿಸಿದ್ದ ಬಂಗಾರವನ್ನು ಕತ್ತರಿಸಿ, ಅಶೂರಿನ ಅರಸನಿಗೆ
ಕೊಟ್ಟನು.

17 ಮತ್ತು ಅಶೂರಿನ ಅರಸನು ಲಕೀಷಿನಿಂದ ತರ್ತಾನನನ್ನೂ,
ರಾಬ್ಸಾರಿಸನನ್ನೂ, ರಬ್ಷಕೆಯನ್ನೂ, ದೊಡ್ಡ ದಂಡನ್ನೂ ಯೆ
ರೂಸಲೇಮಿನ ಮೇಲೆ ಅರಸನಾದ ಹೆಜ್ಕೀಯನ ಬಳಿಗೆ ಕಳುಹಿಸಿ
ದನು. ಅವರು ಯೆರೂಸಲೇಮಿಗೆ ಏರಿ ಬಂದು, ಅಗಸರ ಹೊಲ
ದ ರಾಜ ಮಾರ್ಗದಲ್ಲಿರುವ ಮೇಲಿನ ಕೆಕೆಯ ಕಾಲಿವೆಯ ಬಳಿ
ಯಲ್ಲಿ ನಿಂತರು. ಅವರು ಅರಸನನ್ನು ಕರೇ ಕಳುಹಿಸಿದರು.
18 ಆದರೆ ಮನುವರ್ತಿಯವನಾದ, ಹಿಲ್ಕೀಯನ ಮಗನಾದ ಎಲ್ಯ
ಕೀಮನೂ, ರಾಯಸವನಾದ ಶೆಬ್ನನೂ, ಸಂಪ್ರತಿಯವನಾದ, ಆ
ಸಾಫನ ಮಗನಾದ ಯೊವಾಹನೂ ಅವರ ಬಳಿಗೆ ಬಂದರು.

19 ಆಗ ರಬ್ಷಾಕೆಯು ಅವರಿಗೆ, ನೀವು ಹೆಜ್ಕೀಯನಿಗೆ ಹೇಳ ಬೇ
ಕಾದದ್ದೇನಂದರೆ—ಮಹಾ ಅರಸನಾದ ಅಶೂರಿನ ಅರಸನು ಹೇ
ಳುವದೇನಂದರೆ, ನೀನು ಭರವಸವಾಗಿರುವ ಈ ಭರವಸವೇನು!
20 ಯುದ್ಧಕ್ಕೆ ಯೋಚನೆಯೂ ಪರಾಕ್ರಮವೂ ಉಂಟೆಂದು ನೀನು
21 ಹೇಳುತ್ತಿ; ಆದರೆ ಅವು ವ್ಯರ್ಥವಾದ ಮಾತುಗಳು. ನೀನು
ನನ್ನ ಮೇಲೆ ತಿರುಗ ಬೀಳುವದಕ್ಕೆ ಯಾರಲ್ಲಿ ಭರವಸ ಇಟ್ಟಿದ್ದಿ!
ಇಗೋ, ನೀನು ಮುರಿದ ಬೆತ್ತದ ಕೋಲಾದ ಐಗುಪ್ತದ ಮೇಲೆ
ಭರವಸವಾಗಿದ್ದೀ. ಅದರ ಮೇಲೆ ಮನುಷ್ಯನು ಊರಿ ಕೊಂಡ
ರೆ, ಅದು ಅವನ ಕೈಯಲ್ಲಿ ಹೊಕ್ಕು, ಚುಚ್ಚುವದು. ಐಗುಪ್ತದ
ಅರಸನಾದ ಫರೋನನು ತನ್ನಲ್ಲಿ ಭರವಸವಾಗಿರುವ ಎಲ್ಲರಿಗೂ
22 ಹೀಗೆಯೇ ಇದ್ದಾನೆ. ಆದರೆ ನೀವು ನನಗೆ, ನಮ್ಮ ದೇವರಾದ
ಕರ್ತನಲ್ಲಿ ಭರವಸವಾಗಿದ್ದೇವೆಂದು ಹೇಳುವರೆ, ಹೆಜ್ಕೀಯನು
ಯಾವನ ಮೇಡುಗಳನ್ನೂ ಬಲಿಪೀಠಗಳನ್ನೂ ತೆಗೆದು ಹಾಕಿ,
ಯೆಹೂದದವರಿಗೂ ಯೆರೂಸಲೇಮಿನವರಿಗೂ, ನೀವು ಯೆರೂ
ಸಲೇಮಿನಲ್ಲಿ ಈ ಬಲಿಪೀಠದ ಮುಂದೆ ಅಡ್ಡ ಬೀಳ ಬೇಕೆಂದು ಹೇಳಿ
23 ದ್ದಾನೋ, ಅವನೇ ಅಲ್ಲವೋ! ಹಾಗಾದರೆ ಈಗ ನೀನು ದಯೆ
ಮಾಡಿ, ಅಶೂರಿನ ಅರಸನಾದ ನನ್ನ ಯಜಮಾನನಿಗೆ ಬಿಲಿನವ
ರನ್ನು ಕೊಡು; ಆಗ ನೀನು ಅವುಗಳ ಮೇಲೆ ಏರುವವರನ್ನು ಇ
ರಿಸ ನಿನಗೆ ಸಾಮರ್ಥ್ಯವಿದ್ದರೆ, ಎರಡು ಸಾವಿರ ಕುದುರೆಗಳನ್ನು
24 ಕೊಡುತ್ತೇನೆ. ಹಾಗೆ ಇಲ್ಲದಿದ್ದರೆ, ನನ್ನ ಯಜಮಾನನ ಚಿಕ್ಕ
ಸೇವಕರಲ್ಲಿ ಒಬ್ಬ ಅಧಿಪತಿಯ ಮುಖವನ್ನು ಹ್ಯಾಗೆ ತಿರುಗಿಸುವಿ!
ಆದರೆ ನೀನು ರಥಗಳಿಗೋಸ್ಕರವೂ, ರಾಹುತರಿಗೋಸ್ಕರವೂ
25 ಐಗುಪ್ತದ ಮೇಲೆ ಭರವಸ ಇಟ್ಟಿದ್ದೀಯೋ! ಈ ಸ್ಥಳವನ್ನು ನಾ
ಶನ ಮಾಡುವದಕ್ಕೆ ಕರ್ತನ ಅಪ್ಪಣೆ ಇಲ್ಲದೆ ಏರಿ ಬಂದಿದ್ದೇ
ನೋ! ಈ ದೇಶದ ಮೇಲೆ ಹೋಗಿ, ಅದನ್ನು ನಾಶನ ಮಾಡೆಂ
ದು, ಕರ್ತನು ನನಗೆ ಹೇಳಿದನು.

26 ಆಗ ಹಿಲ್ಕೀಯನ ಮಗನಾದ ಎಲ್ಯಕೀಮನೂ, ಶೆಬ್ನನೂ,



ಯೊವಾಹನೂ ರಬ್ಷಾಕೆಗೆ, ನೀನು ದಯೆ ಮಾಡಿ, ಅರಾಮ್ಯ ಭಾ
ಷೆಯಲ್ಲಿ ನಿನ್ನ ಸೇವಕರ ಸಂಗಡ ಮಾತಾಡು. ಯಾಕಂದರೆ
ಅದು ನಮಗೆ ಬರುತ್ತದೆ; ಅಲಂಗದ ಮೇಲಿರುವ ಜನರು ಕೇಳುವ
ಹಾಗೆ ಯೆಹೂದ್ಯರ ಭಾಷೆಯಲ್ಲಿ ನಮ್ಮ ಸಂಗಡ ಮಾತಾಡ ಬೇ
27 ಕ, ಅಂದರು. ಆದರೆ ರಬ್ಷಾಕೆಯು ಅವರಿಗೆ, ನನ್ನ ಯಜಮಾನ
ನು ನಿನ್ನ ಯಜಮಾನನಿಗೂ, ನಿನಗೂ ಈ ಮಾತುಗಳನ್ನು
ಹೇಳ ನನ್ನನ್ನು ಕಳುಹಿಸಿದನೋ! ಅಲಂಗದ ಮೇಲೆ ಕುಳಿತ ಮ
ನುಷ್ಯರು ತಮ್ಮ ಮಲವನ್ನು ತಿಂದು, ತಮ್ಮ ಮೂತ್ರವನ್ನು ನಿಮ್ಮ
ಸಂಗಡ ಕುಡಿಯುವ ಹಾಗೆ, ಅವರ ಬಳಿಗೆ ನನ್ನನ್ನು ಕಳುಹಿಸಿಲಿ
ಲ್ಲವೋ? ಎಂದು ಹೇಳಿದನು.

28 ಆಗ ರಬ್ಷಾಕೆಯು ನಿಂತು ಕೊಂಡು, ಯೆಹೂದ್ಯರ ಭಾಷೆ
ಯಲ್ಲಿ ಮಹಾ ಶಬ್ದವಾಗಿ ಕೂಗಿ ಹೇಳಿದ್ದೇನಂದರೆ, ಮಹಾ ಅರ
29 ಸನಾದ ಅಶೂರಿನ ಅರಸನ ಮಾತನ್ನು ಕೇಳಿರಿ. ಅರಸನು ಹೇ
ಳುವದೇನಂದರೆ—ಹೆಜ್ಕೀಯನು ನಿಮ್ಮನ್ನು ಮೋಸ ಗೊಳಿಸದೆ
ಇರಲಿ; ಯಾಕಂದರೆ ಅವನು ನಿಮ್ಮನ್ನು ಅವನ ಕೈಯೊಳಗಿಂದ
30 ತಪ್ಪಿಸಲಾರನು. ಇದಲ್ಲದೆ, ಕರ್ತನು ನಮ್ಮನ್ನು ತಪ್ಪಿಸೇ ತಪ್ಪಿಸು
ವನೆಂದೂ, ಈ ಪಟ್ಟಣವು ಅಶೂರಿನ ಅರಸನ ಕೈಯಲ್ಲಿ ಒಪ್ಪಿಸ
ಲ್ಪಡುವದಿಲ್ಲವೆಂದೂ, ಹೆಜ್ಕೀಯನು ನಿಮಗೆ ಕರ್ತನಲ್ಲಿ ಭರವಸ
31 ಹುಟ್ಟಿಸದೆ ಇರಲಿ. ಹೆಜ್ಕೀಯನ ಮಾತು ಕೇಳ ಬೇಡಿರಿ. ಯಾ
ಕಂದರೆ ಅಶೂರಿನ ಅರಸನು ಹೇಳುವದೇನಂದರೆ—ನೀವು ಸಾಯ
ದೆ, ಬಹುಕುವ ಹಾಗೆ, ಕಾಣಿಕೆಯಿಂದ ನನ್ನ ಸಂಗಡ ಒಡಂಬಡಿಕೆ
32 ಮಾಡಿ, ನನ್ನ ಬಳಿಗೆ ಹೊರಟು ಬನ್ನಿರಿ. ನಾನು ಬಂದು, ನಿಮ್ಮ
ದೇಶದ ಹಾಗೆ, ಧಾನ್ಯವೂ, ದ್ರಾಕ್ಷೇರಸವೂ ಇರುವ ದೇಶಕ್ಕೆ,
ಕೊಟ್ಟಿಯೂ ದ್ರಾಕ್ಷೆಯ ತೋಟಗಳೂ ಇರುವ ದೇಶಕ್ಕೆ, ಎ
ಣ್ಣೆಯನ್ನು ಕೊಡುವ ಇಚ್ಛೇ ಮರಗಳೂ ಜೇನೂ ಇರುವ ದೇ
ಶಕ್ಕೆ ಕರಕೊಂಡು ಹೋಗುವ ಪರ್ಯಂತರಕ್ಕೂ ನಿಮ್ಮಲ್ಲಿ ಪ್ರ
ತಿ ಮನುಷ್ಯನು ತನ್ನ ತನ್ನ ದ್ರಾಕ್ಷೇ ಫಲವನ್ನೂ ಅಂಜೂರದ
ಫಲವನ್ನೂ ತಿಂದು, ಪ್ರತಿ ಮನುಷ್ಯನು ತನ್ನ ತನ್ನ ಭಾವಿಯ
ನೀರನ್ನು ಕುಡಿಯಲಿ. ಆದರೆ ಕರ್ತನು ನಮ್ಮನ್ನು ತಪ್ಪಿಸುವನೆಂ
ದು, ಹೆಜ್ಕೀಯನು ನಿಮ್ಮನ್ನು ಪ್ರೇರೇಪಿಸುವಾಗ, ಅವನ ಮಾತು
33 ಕೇಳ ಬೇಡಿರಿ. ಜನಾಂಗಗಳ ದೇವರುಗಳಲ್ಲಿ ಯಾವನಾದರೂ
ತನ್ನ ದೇಶವನ್ನು ಅಶೂರಿನ ಅರಸನ ಕೈಗೆ ತಪ್ಪಿಸಿ ಬಿಟ್ಟಿದ್ದು
34 ಉಂಟೋ! ಹಮಾತು ಅರ್ಫಾದುಗಳ ದೇವರುಗಳು ಎಲ್ಲಿ? ಸೆಫ
ರ್ವಾಯಿಮ್, ಹೇನ, ಇವ್ವಗಳ ದೇವರುಗಳು ಎಲ್ಲಿ? ಅವರು ನನ್ನ
ಕೈಗೆ ಸಮಾರ್ಯವನ್ನು ತಪ್ಪಿಸಿ ಬಿಟ್ಟದ್ದು ಉಂಟೋ! ಈ ದೇಶ
ಗಳ ದೇವರುಗಳಲ್ಲಿ ತಮ್ಮ ದೇಶವನ್ನು ನನ್ನ ಕೈಗೆ ತಪ್ಪಿಸಿ ಬಿಟ್ಟ
35 ದೇವರುಗಳು ಯಾರು! ಹಾಗಾದರೆ ಕರ್ತನು ಯೆರೂಸಲೇಮ
ನ್ನು ನನ್ನ ಕೈಗೆ ತಪ್ಪಿಸಿ ಬಿಟ್ಟಾನೋ!

36 ಆದರೆ ಜನರು ಅವನಿಗೆ ಪ್ರತ್ಯುತ್ತರವೇನಾದರೂ ಹೇಳಿದೆ,
ಸುಮ್ಮನಿದ್ದರು. ಯಾಕಂದರೆ, ಅವನಿಗೆ ಪ್ರತ್ಯುತ್ತರ ಹೇಳ ಬೇಡಿ
37 ರಿ ಎಂದು, ಅವರಿಗೆ ಅರಸನ ಆಜ್ಞೆ ಇತ್ತು. ಆಗ ಮನುವರ್ತಿ
ಯವನಾದ ಹಿಲ್ಕೀಯನ ಮಗನಾದ ಎಲ್ಯಕೀಮನೂ, ರಾಯಸ
ದವನಾದ ಶೆಬ್ನನೂ, ಸಂಪ್ರತಿಯವನಾದ ಅಸಾಫನ ಮಗನಾದ
ಯೊವಾಹನೂ ತಮ್ಮ ವಸ್ತ್ರಗಳನ್ನು ಹರು ಕೊಂಡು, ಹೆಜ್ಕೀಯ
ನ ಬಳಿಗೆ ಬಂದು, ರಬ್ಷಾಕೆಯು ಹೇಳಿದ ಮಾತುಗಳನ್ನು ಅವನಿ
ಗೆ ತಿಳಿಸಿದರು.

## ೧೯. ಸಂಧಿ.

1 ಅರಸನಾದ ಹೆಜ್ಕೀಯನು ಅದನ್ನು ಕೇಳಿದಾಗ, ತನ್ನ ವಸ್ತ್ರ
ಗಳನ್ನು ಹರು ಕೊಂಡು, ಗೋಣಿಯಿಂದ ತನ್ನನ್ನು ಮುಚ್ಚಿ
2 ಕೊಂಡು, ಕರ್ತನ ಮನೆಯಲ್ಲಿ ಪ್ರವೇಶಿಸಿದನು. ಇದಲ್ಲದೆ ಅವನು
ಮನುವರ್ತಿಯವನಾದ ಎಲ್ಯಕೀಮನನ್ನೂ, ರಾಯಸದವನಾದ
ಶೆಬ್ನನನ್ನೂ, ಯಾಜಕರ ಹಿರಿಯರನ್ನೂ ಗೋಣಿ ಮುಚ್ಚಿ
ಕೊಂಡವರಾಗಿ ಆಮೋಚನ ಮಗನಾದ ಪ್ರವಾದಿಯಾದ ಯೆ
3 ಶಾಯನ ಬಳಿಗೆ ಕಳುಹಿಸಿದನು. ಅವರು ಅವನಿಗೆ ಹೇಳಿದ್ದೇನಂ
ದರೆ—ಹೆಜ್ಕೀಯನು ಹೇಳುವದೇನಂದರೆ, ಇದು ಇಕ್ಕಟ್ಟೂ ಗದ
ರಿಕೆಯೂ, ನಿಂದೆಯೂ ಉಳ್ಳ ದಿವಸ; ಯಾಕಂದರೆ ಮಕ್ಕಳು
4 ಹುಟ್ಟುವದಕ್ಕೆ ಬಂದವು; ಆದರೆ ಹೆರುವ ಶಕ್ತಿ ಇಲ್ಲ. ಒಂದು ವೇ
ಳೆ ನಿನ್ನ ದೇವರಾದ ಕರ್ತನು ಜೀವವುಳ್ಳ ದೇವರನ್ನು ನಿಂದಿಸ,
ತನ್ನ ಯಜಮಾನನಾದ ಅಶೂರಿನ ಅರಸನಿಂದ ಕಳುಹಿಸಲ್ಪಟ್ಟ
ರಬ್ಷಾಕೆಯ ಮಾತುಗಳನ್ನು ಕೇಳಿ, ನಿನ್ನ ದೇವರಾದ ಕರ್ತನು
ಕೇಳಿದ ಮಾತುಗಳಿಗೋಸ್ಕರ ಅವನನ್ನು ಗದರಿಸುವನು. ಆದದ
ರಿಂದ ನೀನು ಉಳಿದವರಿಗೋಸ್ಕರ ಪ್ರಾರ್ಥನೆ ಸಲ್ಲಿಸ ಬೇಕು.

5 ಹಾಗೆಯೇ ಅರಸನಾದ ಹೆಜ್ಕೀಯನ ಸೇವಕರು ಯೆಶಾಯ
6 ನ ಬಳಿಗೆ ಬಂದರು. ಆಗ ಯೆಶಾಯನು ಅವರಿಗೆ ಹೇಳಿದ್ದು—ನೀ
ವು ನಿಮ್ಮ ಯಜಮಾನನಿಗೆ ಹೇಳ ಬೇಕಾದದ್ದೇನಂದರೆ, ನೀನು
ಕೇಳಿದಂಥ ಅಶೂರಿನ ಅರಸನ ಸೇವಕರು ನನ್ನನ್ನು ದೂಷಿಸಿದಂ
ಥ ಮಾತುಗಳನ್ನು ನೀವು ಕೇಳಿದ್ದಕ್ಕೋಸ್ಕರ ಭಯ ಪಡ ಬೇಡಿ
7 ರಿ. ಇಗೋ, ನಾನು ಅವನ ಮೇಲೆ ಘೂಳಿಯನ್ನು ಕಳುಹಿಸುವೆನು.
ಅವನು ಒಂದು ಸುದ್ದಿಯನ್ನು ಕೇಳಿ, ತನ್ನ ದೇಶಕ್ಕೆ ತಿರುಗುವನು.
ಇದಲ್ಲದೆ ತನ್ನ ದೇಶದಲ್ಲಿ ಕತ್ತಿಯಿಂದ ಅವನನ್ನು ಬೀಳ ಮಾಡು
ವೆನು, ಎಂದು ಕರ್ತನು ಹೇಳುತ್ತಾನೆ.

8 ರಬ್ಷಾಕೆಯು ತಿರಿಗಿ ಹೋಗುತ್ತಿರುವಾಗ, ಲಿಬ್ನದ ಮೇಲೆ
ಯುದ್ಧ ಮಾಡುತ್ತಿರುವ ಅಶೂರಿನ ಅರಸನನ್ನು ಕಂಡು ಕೊಂಡ
9 ನು. ಯಾಕಂದರೆ ಲಕೀಷನ್ನು ಬಿಟ್ಟನೆಂದು ಕೇಳಿ ಇದ್ದನು. ಆಗ
ಲವನು ಕೂಷಿನ ಅರಸನಾದ ತಿರ್ರ್ಹಕನನ್ನು ಕುರಿತು, ಇಗೋ, ಅ
ವನು ನಿನ್ನ ಮೇಲೆ ಯುದ್ಧ ಮಾಡ ಹೊರಟಿದ್ದಾನೆಂದು ಕೇಳಿದಾ
ಗ, ತಿರಿಗಿ ಹೆಜ್ಕೀಯನ ಬಳಿಗೆ ಸೇವಕರನ್ನು ಕಳುಹಿಸಿ, ಹೇಳ್ದೇ
10 ನಂದರೆ—ನೀವು ಯೆಹೂದದ ಅರಸನಾದ ಹೆಜ್ಕೀಯನಿಗೆ ಹೇಳ
ಬೇಕಾದದ್ದೇನಂದರೆ, ಯೆರೂಸಲೇಮು ಅಶೂರಿನ ಅರಸನ ಕೈ
ಯಲ್ಲಿ ಒಪ್ಪಿಸಲ್ಪಡುವದಿಲ್ಲವೆಂದು, ನೀನು ನಂಬಿರುವ ನಿನ್ನ ದೇವ
11 ರು ನಿನ್ನನ್ನು ಮೋಸಗೊಳಿಸದಿರಲಿ. ಇಗೋ, ಅಶೂರಿನ ಅರ
ಸುಗಳು ಸಮಸ್ತ ದೇಶಗಳನ್ನು ಶಾಪ ಕೊಟ್ಟು, ನಿರ್ಮೂಲ ಮಾ
ಡಿದ ವರ್ತಮಾನ ಕೇಳಿದಿ. ಆದರೆ ನೀನು ತಪ್ಪಿಸಿ ಕೊಳ್ಳುವಿ
12 ಯೋ! ನನ್ನ ತಂದೆಗಳು ಹಾಳು ಮಾಡಿದ ಗೊಜಾನು, ಹರಾ
13 ನು, ಕೇಚರು, ತೆಲಾಸರಿವಲ್ಲಿದ್ದ ಎಡೇನಿನ ಮಕ್ಕಳು, ಈ ಜನಾಂ
ಗಗಳ ದೇವರುಗಳು ಅವರನ್ನು ತಪ್ಪಿಸಿ ಬಿಟ್ಟನೋ! ಹಮಾತಿನ
ಅರಸನೂ, ಅರ್ಫಾದಿನ ಅರಸನೂ, ಸೆಫರ್ವಾಯಿಮ್ ಪಟ್ಟಣದ,
ಹೇನದ, ಇವ್ವದ ಅರಸನೂ ಎಲ್ಲಿ!

14 ಹೆಜ್ಕೀಯನು ಸೇವಕರ ಕೈಯಿಂದ ಪತ್ರಿಕೆಯನ್ನು ತಕ್ಕೊಂ

ಡು, ಓದಿದಾಗ ಹೆಜ್ಕೀಯನು ಕರ್ತನ ಮನೆಗೆ ಏರಿ ಹೋಗಿ,
೧೫ ಅದನ್ನು ಕರ್ತನ ಮುಂದೆ ಹಾಸಿದನು. ಇದಲ್ಲದೆ ಹೆಜ್ಕೀಯನು
ಕರ್ತನ ಮುಂದೆ ಪ್ರಾರ್ಥನೆ ಮಾಡಿ, ಹೇಳಿದ್ದೇನಂದರೆ, ಕೆರೂಬಿ
ಗಳ ಮಧ್ಯದಲ್ಲಿ ವಾಸವಾಗಿರುವ ಇಸ್ರಯೇಲಿನ ದೇವರಾದ ಕರ್ತ
ನೇ, ನೀನೊಬ್ಬನೇ ಭೂಮಿಯ ಸಮಸ್ತ ರಾಜ್ಯಗಳಿಗೆ ದೇವ
೧೬ ರಾಗಿದ್ದೀ. ನೀನೇ ಆಕಾಶವನ್ನೂ ಭೂಮಿಯನ್ನೂ ಉಂಟು ಮಾ
ಡಿದ್ದೀ. ಕರ್ತನೇ, ನಿನ್ನ ಕಿವಿಯನ್ನು ಚಾಚಿ, ಕೇಳು; ಕರ್ತನೇ,
ನಿನ್ನ ಕಣ್ಣುಗಳನ್ನು ತೆರೆದು, ನೋಡು. ಸನ್ಹೇರೀಬನು ಜೀವವುಳ್ಳ
೧೭ ದೇವರನ್ನು ನಿಂದಿಸಿ ಕಳುಹಿಸಿದ ಮಾತುಗಳನ್ನು ಕೇಳು. ಕರ್ತ
ನೇ, ನಿಶ್ಚಯವಾಗಿ ಅಶೂರಿನ ಅರಸುಗಳು ಜನಾಂಗಗಳನ್ನೂ
ಅವರ ದೇಶಗಳನ್ನೂ ಹಾಳು ಮಾಡಿ, ಅವರ ದೇವರುಗಳನ್ನು
೧೮ ಬೆಂಕಿಯಲ್ಲಿ ಹಾಕಿದ್ದಾರೆ. ಯಾಕಂದರೆ ಅವು ದೇವರುಗಳಲ್ಲ,
ಮನುಷ್ಯನ ಕೈ ಕೆಲಸವಾದ ಕಟ್ಟಿಗೆಯೂ ಕಲ್ಲೂ ಆಗಿದ್ದವು.
೧೯ ಆದದರಿಂದ ಅವರು ಅವುಗಳನ್ನು ನಾಶ ಮಾಡಿದ್ದಾರೆ. ಆದರೆ
ಈಗ, ನಮ್ಮ ದೇವರಾದ ಕರ್ತನೇ, ನೀನೊಬ್ಬನೇ ದೇವರಾದ ಕ
ರ್ತನಾಗಿದ್ದೀ ಎಂದು, ಭೂಮಿಯ ಸಮಸ್ತ ರಾಜ್ಯಗಳೂ ತಿಳಿಯು
ವ ಹಾಗೆ, ನಮ್ಮನ್ನು ಅವನ ಕೈಗೆ ತಪ್ಪಿಸಿ, ರಕ್ಷಿಸು.

೨೦ ಆಗ ಅಮೋಚನ ಮಗನಾದ ಯೆಶಾಯನು ಹೆಜ್ಕೀಯನಿಗೆ
ಹೇಳಿ ಕಳುಹಿಸಿದ್ದೇನಂದರೆ—ಇಸ್ರಯೇಲಿನ ದೇವರಾದ ಕರ್ತನು
ಹೀಗೆ ಹೇಳುತ್ತಾನೆ—ಅಶೂರಿನ ಅರಸನಾದ ಸನ್ಹೇರೀಬನನ್ನು ಕುರಿ
ತು ನೀನು ನನಗೆ ಪ್ರಾರ್ಥನೆ ಮಾಡಿದ್ದನ್ನು ನಾನು ಕೇಳಿದ್ದೇನೆ.
ಕರ್ತನು ಅವನನ್ನು ಕುರಿತು ಹೇಳಿದ ವಾಕ್ಯವೇನಂದರೆ—

೨೧ ಚಿಯೋನಿನ ಮಗಳಾದ ಕನ್ಯಾಸ್ತ್ರೀ ನಿನ್ನನ್ನು ಉದಾಸೀ
ನ ಮಾಡಿ,
ನಿನಗೆ ಅಪಹಾಸ್ಯ ಮಾಡುತ್ತಾಳೆ;
ಯೆರೂಸಲೇಮಿನ ಕುಮಾರ್ತೆ ನಿನ್ನ ಹಿಂದೆ ತಲೆ ಅಲ್ಲಾಡಿಸು
ತ್ತಾಳೆ.
೨೨ ಯಾರನ್ನು ನಿಂದಿಸಿ, ದೂಷಿಸಿದಿ?
ಯಾರಿಗೆ ವಿರೋಧವಾಗಿ ಶಬ್ದವನ್ನು ಎತ್ತಿ, ನಿನ್ನ ಕಣ್ಣುಗಳನ್ನು
ಮೇಲಕ್ಕೆ ಎತ್ತಿದಿ!
೨೩ ಇಸ್ರಯೇಲಿನ ಪರಿಶುದ್ಧನಿಗೆ ವಿರೋಧವಾಗಿಯೇ.
ನಿನ್ನ ಸೇವಕರ ಮುಖಾಂತರ ಕರ್ತನನ್ನು ನಿಂದಿಸಿ ಹೇಳಿದ್ದು—
ನಾನು ನನ್ನ ಹೆಚ್ಚಾದ ರಥಗಳಿಂದ ಪರ್ವತಗಳ ಶಿಖರಕ್ಕೂ,
ಲೆಬನೋನಿನ ಪಾರ್ಶ್ವಗಳಿಗೂ ಏರಿ ಹೋಗಿ,
ಅದರ ಉನ್ನತವಾದ ದೇವದಾರುಗಳನ್ನೂ,
ಅದರ ಮುಖ್ಯವಾದ ತುರಾಯಿ ಮರಗಳನ್ನೂ ಕಡಿದು,
೨೪ ಅದರ ಅಂಚಿನ ಗಟ್ಟಿ ಸ್ಥಳಗಳಲ್ಲಿಯೂ,
ಅದರ ಫಲವುಳ್ಳ ಅಡವಿಯಲ್ಲಿಯೂ ಶೇರುತ್ತೇನೆ.
ನಾನು ಅಗೆದು, ಅನ್ಯರ ನೀರನ್ನು ಕುಡಿದಿದ್ದೇನೆ;
ನನ್ನ ಅಂಗಾಲುಗಳಿಂದ ಕೋಟೇ ಸ್ಥಳಗಳ ಪ್ರವಾಹಗಳನ್ನು
ಬತ್ತಿ ಹೋಗ ಮಾಡಿದ್ದೇನೆ.
೨೫ ನಾನು ಅದನ್ನು ಮಾಡಿದೆನೆಂದು, ನೀನು ಬಹು ಕಾಲದಿಂದಲೂ,
ನಾನು ಅದನ್ನು ನಿರೂಪಿಸಿದೆನೆಂದು,
ನೀನು ಪೂರ್ವದ ದಿವಸಗಳಿಂದಲೂ, ಕೇಳಿಲ್ಲವೋ!
ಈಗ ಅದನ್ನು ನಾನು ಸಂಭವಿಸ ಮಾಡಿದ್ದೇನೆ—
ನೀನು ಬಲವಾದ ಪಟ್ಟಣಗಳನ್ನು ಹಾಳಾದ ದಿಬ್ಬೆಗಳಾಗ ಮಾಡಿ
ಬಿಡುವ ಹಾಗೆ ಇರುವದೇ.
೨೬ ಆದದರಿಂದ ಅವುಗಳ ನಿವಾಸಿಗಳು ಬಲಹೀನರಾಗಿ,
ಹೆದರಿ, ನಾಚಿಕೆ ಪಟ್ಟರು.
ಹೊಲದ ಹುಲ್ಲಿನ ಹಾಗೆಯೂ,
ಹಸರು ಪಲ್ಯದ ಹಾಗೆಯೂ,
ಮಾಳಿಗೆಗಳ ಮೇಲಿರುವ ಹುಲ್ಲಿನ ಹಾಗೆಯೂ,
ಬೆಳೆಯುವದಕ್ಕಿಂತ ಮುಂಚೆ ಬಾಡುವ ಪೈರಿನ ಹಾಗೆಯೂ
ಇದ್ದರು.
೨೭ ಆದರೆ ನಿನ್ನ ಕೂತಿರುವಿಕೆಯನ್ನೂ, ನಿನ್ನ ಹೊರಡುವಿಕೆಯ
ನ್ನೂ, ನಿನ್ನ ಬರುವಿಕೆಯನ್ನೂ,
ನೀನು ನನಗೆ ವಿರೋಧವಾಗಿ ಮಾಡುವ ಕೌದ್ರವನ್ನೂ ನಾನು
ಬಲ್ಲೆನು.
೨೮ ನೀನು ನನಗೆ ವಿರೋಧವಾಗಿ ಮಾಡುವ ನಿನ್ನ ಕೌದ್ರವೂ, ನಿನ್ನ
ಅಹಂಕಾರವೂ ನನ್ನ ಕಿವಿಗಳಲ್ಲಿ ಏರಿ ಬಂದದರಿಂದ,
ನಾನು ನನ್ನ ಕೊಂಡಿಯನ್ನು ನಿನ್ನ ಮೂಗಿನಲ್ಲಿಯೂ, ನನ್ನ
ಕಡಿವಾಣವನ್ನು ನಿನ್ನ ಬಾಯಿಯಲ್ಲಿಯೂ ಹಾಕಿ,
ನೀನು ಬಂದ ಮಾರ್ಗದಲ್ಲಿ ನಿನ್ನನ್ನು ತಿರುಗಿಸುವೆನು.

೨೯ ಮತ್ತು ನಿನಗೆ ಗುರುತು ಇದೇ—ಈ ವರುಷದಲ್ಲಿ ತನಾಯಿದ್ದಕ್ಕೆ
ತಾನೇ ಬೆಳೆದದ್ದನ್ನೂ, ಎರಡನೇ ವರುಷದಲ್ಲಿ ಅದರಿಂದ ಮೊಳೆತ
ದ್ದನ್ನೂ ತಿನ್ನುವಿರಿ; ಆದರೆ ಮೂರನೇ ವರುಷದಲ್ಲಿ ನೀವು ಬಿತ್ತಿ
ಕೊಯ್ಯಿರಿ; ದ್ರಾಕ್ಷೇ ತೋಟಗಳನ್ನು ನೆಟ್ಟು, ಅವುಗಳ ಫಲಗಳ
೩೦ ನ್ನು ತಿನ್ನಿರಿ. ಮತ್ತು ಯೆಹೂದನ ಮನೆಯಲ್ಲಿ ಉಳಿದು ತಪ್ಪಿಸಿ
ಕೊಂಡವರು ತಿರಿಗಿ ಕೆಳಗೆ ಬೇರೂರಿ, ಮೇಲಕ್ಕೆ ಫಲ ಬಿಡುವರು.
೩೧ ಯಾಕಂದರೆ ಯೆರೂಸಲೇಮಿನಿಂದ ಉಳಿದವೂ, ಚಿಯೋನ್ ಪರ್ವ
ತದಿಂದ ತಪ್ಪಿಸಿ ಕೊಂಡವರೂ ಹೊರಡುವರು. ಸೈನ್ಯಗಳ ಕರ್ತ
೩೨ ನ ಆಸಕ್ತಿಯು ಇದನ್ನು ಮಾಡುವದು. ಆದದರಿಂದ ಕರ್ತನು ಅ
ಶೂರಿನ ಅರಸನನ್ನು ಕುರಿತು ಹೇಳುವದೇನಂದರೆ—

ಅವನು ಈ ಪಟ್ಟಣದಲ್ಲಿ ಬರುವದಿಲ್ಲ;
ಅಲ್ಲಿ ಬಾಣವನ್ನು ಎಸೆಯುವದಿಲ್ಲ;
ಗುರಾಣಿ ಹಿಡು ಕೊಂಡು, ಅದರ ಮುಂದೆ ಕೇರುವದಿಲ್ಲ;
ಅದಕ್ಕೆ ವಿರೋಧವಾಗಿ ಮೊಹರ್ಚೆಯನ್ನು ಹಾಕುವದಿಲ್ಲ.
೩೩ ಅವನು ಬಂದ ಮಾರ್ಗವಾಗಿಯೇ ತಿರಿಗಿ ಹೋಗುವನು;
ಆದರೆ ಅವನು ಈ ಪಟ್ಟಣದಲ್ಲಿ ಬರುವದಿಲ್ಲವೆಂದು, ಕರ್ತನು ಹೇಳು
ತ್ತಾನೆ.
೩೪ ಯಾಕಂದರೆ ನನ್ನ ನಿಮಿತ್ತವೂ
ನನ್ನ ಸೇವಕನಾದ ದಾವೀದನ ನಿಮಿತ್ತವೂ
ನಾನು ಈ ಪಟ್ಟಣವನ್ನು ಕಾಪಾಡಿ, ಅದನ್ನು ರಕ್ಷಿಸುವೆನು.

೩೫ ಅದೇ ರಾತ್ರಿಯಲ್ಲಿ ಏನಾಯಿತಂದರೆ, ಕರ್ತನ ದೂತನು ಹೊ
ರಟು, ಅಶೂರಿನ ದಂಡಿನಲ್ಲಿ ಲಕ್ಷಾ ಎಂಭತ್ತೈದು ಸಾವಿರ ಜನರ
ನ್ನು ಹೊಡೆದನು. ಉದಯಲ್ಲಿ ಜನರು ಎದ್ದಾಗ, ಇಗೋ, ಅವರೆ
೩೬ ಲ್ಲರು ಸತ್ತ ಹೆಣಗಳಾಗಿದ್ದರು. ಮತ್ತು ಅಶೂರಿನ ಅರಸನಾದ
ಸನ್ಹೇರೀಬನು ಹೊರಟು ಹೋಗಿ, ತಿರುಗಿ ಕೊಂಡು, ನಿನೆವೆಯಲ್ಲಿ



೩೭ ವಾಸವಾಗಿದ್ದನು. ಆದರೆ ಅವನು ತನ್ನ ದೇವರಾದ ನಿಸ್ರಕನ
ಮನೆಯಲ್ಲಿ ಅಡ್ಡ ಬೀಳುತ್ತಿರುವಾಗ, ಅವನ ಮಕ್ಕಳಾದ ಅದ್ರಮ್ಮೇ
ಲೆಕನೂ ಶರೇಚರನೂ ಅವನನ್ನು ಕತ್ತಿಯಿಂದ ಹೊಡೆದು, ಅರ
ಾಟ ದೇಶಕ್ಕೆ ತಪ್ಪಿಸಿ ಕೊಂಡು ಹೋದರು. ಮತ್ತು ಅವನ ಮ
ಗನಾದ ಎಸರ್ಹದೋನನು ಅವನಿಗೆ ಬದಲಾಗಿ ಆಳಿದನು.

## ೨೦. ಸಂಧಿ.

೧ ಆ ದಿವಸಗಳಲ್ಲಿ ಹೆಜ್ಕೀಯನು ಸಾಯುವ ಹಾಗೆ ಕೋಗದ
ಲ್ಲಿ ಬಿದ್ದಿದ್ದನು. ಆಗ ಆಮೋಚನ ಮಗನಾದ ಪ್ರವಾದಿಯಾದ
ಯೆಶಾಯನು ಅವನ ಬಳಿಗೆ ಬಂದು, ಅವನಿಗೆ, ನೀನು ನಿನ್ನ
೨ ಮನೆಯ ವಿಷಯ ಅಪ್ಪಣೆ ಕೊಡು; ಯಾಕಂದರೆ ನೀನು ಬದುಕ
ದೆ ಸಾಯುವಿ ಎಂದು, ಕರ್ತನು ಹೇಳುತ್ತಾನೆ, ಅಂದನು. ಆಗ
ಅವನು ಗೋಡೆಯ ಕಡೆಗೆ ತನ್ನ ಮುಖವನ್ನು ತಿರುಗಿಸಿ, ಕರ್ತ
೩ ನನ್ನು ಪ್ರಾರ್ಥಿಸಿ ಹೇಳಿದ್ದೇನಂದರೆ—ಓ ಕರ್ತನೇ, ನಾನು ಸತ್ಯ
ದಿಂದಲೂ ಪೂರ್ಣ ಹೃದಯದಿಂದಲೂ ನಿನ್ನ ಮುಂದೆ ನಡೆದು,
ನಿನ್ನ ದೃಷ್ಟಿಯಲ್ಲಿ ಒಳ್ಳೇದನ್ನು ಮಾಡಿದೆನೆಂದು ನೆನಸು, ಅಂದ
ನು. ಮತ್ತು ಹೆಜ್ಕೀಯನು ಬಹಳವಾಗಿ ಅತ್ತನು.

೪ ಆದರೆ ಯೆಶಾಯನು ಮಧ್ಯ ಪಟ್ಟಣಕ್ಕೆ ಹೊರಡುವದಕ್ಕಿಂತ
೫ ಮುಂಚೆ, ಕರ್ತನ ವಾಕ್ಯವು ಅವನಿಗೆ ಉಂಟಾಗಿ ಹೇಳಿದ್ದೇನಂದರೆ,
ನೀನು ತಿರುಗಿ ಕೊಂಡು, ನನ್ನ ಜನರ ನಾಯಕನಾದ ಹೆಜ್ಕೀಯ
ನಿಗೆ ಹೇಳ ಬೇಕಾದದ್ದೇನಂದರೆ—ನಾನು ನಿನ್ನ ಪ್ರಾರ್ಥನೆಯನ್ನು
ಕೇಳಿದ್ದೇನೆ; ನಿನ್ನ ಕಣ್ಣೀರನ್ನು ನೋಡಿದ್ದೇನೆ; ಇಗೋ, ನಾನು
ನಿನ್ನನ್ನು ಸ್ವಸ್ಥ ಮಾಡುತ್ತೇನೆ; ಮೂರನೇ ದಿವಸದಲ್ಲಿ ಕರ್ತನ
೬ ಮನೆಗೆ ಏರಿ ಹೋಗುವಿ. ಇದಲ್ಲದೆ ನಾನು ನಿನ್ನ ದಿವಸಗಳಿಗೆ
ಹದಿನೈದು ವರುಷ ಹೆಚ್ಚಾಗಿ ಕೂಡಿಸುತ್ತೇನೆ; ಮತ್ತು ನಿನ್ನನ್ನೂ
ಈ ಪಟ್ಟಣವನ್ನೂ ಅಶೂರಿನ ಅರಸನ ಕೈಗೆ ತಪ್ಪಿಸಿ ಬಿಡುವೆನು.
ಈ ಪಟ್ಟಣವನ್ನು ನನ್ನ ನಿಮಿತ್ತವಾಗಿಯೂ ನನ್ನ ಸೇವಕನಾದ
ದಾವೀದನ ನಿಮಿತ್ತವಾಗಿಯೂ ಕಾಪಾಡುವೆನೆಂದು, ನಿನ್ನ ತಂದೆ
೭ ಯಾದ ದಾವೀದನ ದೇವರಾದ ಕರ್ತನು ಹೇಳುತ್ತಾನೆ. ಇದಲ್ಲ
ದೆ ಯೆಶಾಯನು ಅಂಜೂರದ ಹಣ್ಣುಗಳ ಅಡೆ ತಕ್ಕೊಂಡು ಬರ
ಹೇಳಿದನು. ಅವರು ಹಾಗೆಯೇ ತಕ್ಕೊಂಡು, ಹುಣ್ಣಿನ ಮೇಲೆ
ಹಾಕಿದ್ದರಿಂದ, ಅವನು ಬದುಕಿದನು.

೮ ಆದರೆ ಹೆಜ್ಕೀಯನು ಯೆಶಾಯನಿಗೆ, ಕರ್ತನು ನನ್ನನ್ನು
ಸ್ವಸ್ಥ ಮಾಡುವನೆಂಬುವದಕ್ಕೂ, ನಾನು ಮೂರನೇ ದಿವಸದಲ್ಲಿ
೯ ಕರ್ತನ ಮನೆಗೆ ಏರಿ ಹೋಗುವೆನೆಂಬುವದಕ್ಕೂ ನನಗೆ ಗುರುತೇ
ನು? ಅಂದನು. ಆಗ ಯೆಶಾಯನು, ಕರ್ತನು ತಾನು ಹೇಳಿದ
ಕಾರ್ಯವನ್ನು ಮಾಡುವನೆಂಬುವದಕ್ಕೆ ಕರ್ತನ ಕಡೆಯಿಂದ ನಿನ
ಗೆ ಉಂಟಾಗುವ ಗುರುತು ಇದೇ—ನೆರಳು ಹತ್ತು ಪಂಜ್ತಿ ಮುಂದ
೧೦ ಕ್ಕೆ ಹೋಗ ಬೇಕೋ! ಇಲ್ಲವೆ ಹತ್ತು ಪಂಜ್ತಿ ಹಿಂದಕ್ಕೆ ಹೋಗ
ಬೇಕೋ! ಎಂದು ಕೇಳಿದನು. ಅದಕ್ಕೆ ಹೆಜ್ಕೀಯನು ನೆರಳು
ಹತ್ತು ಪಂಜ್ತಿ ಇಳಿಯುವದು ಅಲ್ಪವಾದದ್ದು; ಹಾಗಲ್ಲ, ನೆರಳು ಹ
೧೧ ತ್ತು ಪಂಜ್ತಿ ಹಿಂದಕ್ಕೆ ತಿರುಗಲಿ, ಅಂದನು. ಆಗ ಪ್ರವಾದಿಯಾದ
ಯೆಶಾಯನು ಕರ್ತನಿಗೆ ಕೂಗಿದ್ದರಿಂದ, ಅವನು ಅಹಾಜನ ಛಾ
ಯಸ್ತಂಭದಲ್ಲಿ ಇಳಿದು ಹೋದ ನೆರಳನ್ನು ಹತ್ತು ಪಂಜ್ತಿ ಹಿಂದಕ್ಕೆ
ಬರ ಮಾಡಿದನು.

೧೨ ಅದೇ ಕಾಲದಲ್ಲಿ ಬಾಬೆಲಿನ ಅರಸನಾದ ಬಲದಾನನ ಮಗನಾದ
ಬೆರೋದಕ ಬಲದಾನನು, ಹೆಜ್ಕೀಯನು ಕೋಗದಲ್ಲಿದ್ದು, ಸ್ವಸ್ಥ
ವಾದನೆಂದು ಕೇಳಿದ್ದರಿಂದ ಪತ್ರಿಕೆಗಳನ್ನೂ ಕಾಣಿಕೆಯನ್ನೂ
೧೩ ಹೆಜ್ಕೀಯನ ಬಳಿಗೆ ಕಳುಹಿಸಿದನು. ಹೆಜ್ಕೀಯನು ಅವರ ಮಾ
ತು ಕೇಳಿ, ತನ್ನ ಎಲ್ಲಾ ಭಂಡಾರದ ಮನೆಯನ್ನೂ ಬೆಳ್ಳಿಯನ್ನೂ,
ಭಂಗಾರವನ್ನೂ, ಸುಗಂಧಗಳನ್ನೂ ಬಳ್ಳೇ ತೈಲವನ್ನೂ, ತನ್ನ
ಆಯುಧಶಾಲೆಯನ್ನೂ, ತನ್ನ ಬೊಕ್ಕಸಗಳಲ್ಲಿ ಸಿಕ್ಕಿದ್ದೆಲ್ಲವನ್ನೂ
ಅವರಿಗೆ ತೋರಿಸಿದನು. ತನ್ನ ಮನೆಯಲ್ಲಿಯೂ ತನ್ನ ಸಮ
ಸ್ತ ರಾಜ್ಯದಲ್ಲಿಯೂ ಅವರಿಗೆ ತೋರಿಸದೆ ಇದ್ದದ್ದು ಒಂದಾದರೂ
೧೪ ಇಲ್ಲ. ಆಗ ಪ್ರವಾದಿಯಾದ ಯೆಶಾಯನು ಅರಸನಾದ ಹೆಜ್ಕೀ
ಯನ ಬಳಿಗೆ ಬಂದು, ಅವನಿಗೆ, ಆ ಮನುಷ್ಯರು ಏನು ಹೇಳಿದ
ರು? ಅವರು ಎಲ್ಲಿಂದ ನಿನ್ನ ಬಳಿಗೆ ಬಂದರು? ಅಂದನು. ಹೆಜ್ಕೀ
ಯನು, ಅವರು ದೂರ ದೇಶದಿಂದ, ಬಾಬೆಲಿನಿಂದ ನನ್ನ ಬಳಿಗೆ
೧೫ ಬಂದಿದ್ದಾರೆ, ಅಂದನು. ಮತ್ತು ಅವನು, ನಿನ್ನ ಮನೆಯಲ್ಲಿ ಅವ
ರು ಏನು ನೋಡಿದರು? ಅಂದನು. ಹೆಜ್ಕೀಯನು, ನನ್ನ ಮನೆ
ಯಲ್ಲಿ ಇದ್ದ ಎಲ್ಲವನ್ನು ಅವರು ನೋಡಿದ್ದಾರೆ; ನನ್ನ ಬೊಕ್ಕಸ
ಗಳಲ್ಲಿ ನಾನು ಅವರಿಗೆ ತೋರಿಸದೆ ಇದ್ದದ್ದು ಒಂದಾದರೂ ಇಲ್ಲ,
ಅಂದನು.

೧೬ ಆಗ ಯೆಶಾಯನು ಹೆಜ್ಕೀಯನಿಗೆ, ಕರ್ತನ ವಾಕ್ಯವನ್ನು ಕೇ
೧೭ ಳು. ಇಗೋ, ದಿನಗಳು ಬರುವವು; ಆಗ ನಿನ್ನ ಮನೆಯಲ್ಲಿ ಇರು
ವದೆಲ್ಲವೂ, ನಿನ್ನ ತಂದೆಗಳು ಇಂದಿನ ಮಟ್ಟಿಗೂ ಸಂಪಾದಿ
ಸಿ ಇಟ್ಟಿದ್ದದೆಲ್ಲವೂ ಬಾಬೆಲಿಗೆ ಸೈಯಲ್ಪಡುವದು. ಒಂದೂ ಉಳಿ
೧೮ ಯುವದಿಲ್ಲವೆಂದು, ಕರ್ತನು ಹೇಳುತ್ತಾನೆ. ಮತ್ತು ನಿನ್ನಿಂದ ಹು
ಟ್ಟುವಂಥ, ನೀನು ಪಡೆಯುವಂಥ ನಿನ್ನ ಮಕ್ಕಳಲ್ಲಿ ಕೆಲವರನ್ನು
ತಕ್ಕೊಂಡು ಹೋಗುವರು. ಅವರು ಬಾಬೆಲಿನ ಅರಸನ ಮನೆಯ
೧೯ ಲ್ಲಿ ನಪುಂಸಕರಾಗಿರುವರು, ಅಂದನು. ಆಗ ಹೆಜ್ಕೀಯನು ಯೆ
ಶಾಯನಿಗೆ, ನೀನು ಹೇಳಿದ ಕರ್ತನ ವಾಕ್ಯವು ಉತ್ತಮವು, ಅಂ
ದನು. ಮತ್ತು ಅವನು, ನನ್ನ ದಿವಸಗಳಲ್ಲಿ ಸಮಾಧಾನವೂ ಸ
ತ್ಯವೂ ಇದ್ದರೆ, ಹಾಗಲ್ಲವೋ! ಅಂದನು.

೨೦ ಹೆಜ್ಕೀಯನ ಇತರ ಕ್ರಿಯೆಗಳೂ, ಅವನ ಸಮಸ್ತ ಪರಾಕ್ರ
ಮವೂ, ಅವನು ಕೆಕೆಯನ್ನೂ ಕಾರಂಜಿಯನ್ನೂ ಮಾಡಿಸಿ, ಪ
ಟ್ಟಣದಲ್ಲಿ ನೀರನ್ನು ಬರ ಮಾಡಿದ್ದೂ, ಯೆಹೂದದ ಅರಸುಗಳ
೨೧ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಡಲಿಲ್ಲವೋ! ಹೆಜ್ಕೀಯ
ನು ತನ್ನ ಪಿತೃಗಳ ಸಂಗಡ ಮಲಗಿದನು; ಅವನ ಮಗನಾದ ಮ
ನಸ್ಸೆಯು ಅವನಿಗೆ ಬದಲಾಗಿ ಆಳಿದನು.

## ೨೧. ಸಂಧಿ.

೧ ಮನಸ್ಸೆಯು ಆಳ ಆರಂಭಿಸಿದಾಗ ಹನ್ನೆರಡು ವರುಷದವನಾ
೨ ಗಿದ್ದು, ಐವತ್ತೈದು ವರುಷ ಯೆರೂಸಲೇಮಿನಲ್ಲಿ ಆಳಿದನು. ಅವ
ನ ತಾಯಿಯ ಹೆಸರು ಹೆಪ್ಸೀಬಳು. ಕರ್ತನು ಇಸ್ರಯೇಲಿನ
ಮಕ್ಕಳ ಮುಂದೆ ಹೊರಡಿಸಿ ಬಿಟ್ಟ ಜನಾಂಗಗಳ ಅಸಹ್ಯವಾದವು
ಗಳ ಹಾಗೆಯೇ ಅವನು ಕರ್ತನ ದೃಷ್ಟಿಗೆ ಕೆಟ್ಟದ್ದನ್ನು ಮಾಡಿ
೩ ದನು. ಅವನು ತನ್ನ ತಂದೆಯಾದ ಹೆಜ್ಕೀಯನು ನಾಶ ಮಾಡಿ
ದ ಮೇಡುಗಳನ್ನು ತಿರಿಗಿ ಕಟ್ಟಿಸಿ, ಬಾಳಿನಿಗೆ ಬಲಿಪೀಠಗಳನ್ನು
ಉಂಟು ಮಾಡಿ, ಇಸ್ರಯೇಲಿನ ಅರಸನಾದ ಅಹಾಬನು ಮಾಡಿದ

ಹಾಗೆ ವಿಗ್ರಹದ ತೋಪನ್ನು ಮಾಡಿ, ಆಕಾಶದ ಸಮಸ್ತ ಸೈನ್ಯ
೪ ಕ್ಕೆ ಅಡ್ಡ ಬಿದ್ದು, ಅವುಗಳನ್ನು ಸೇವಿಸಿದನು. ಇದಲ್ಲದೆ ಯೆರೂ
ಸಲೇಮಿನಲ್ಲಿ ನನ್ನ ನಾಮವನ್ನು ಇರಿಸುವೆನೆಂದು, ಕರ್ತನು ಯಾ
ವದನ್ನು ಕುರಿತು ಹೇಳಿದ್ದನೋ, ಆ ಕರ್ತನ ಮನೆಯಲ್ಲಿ ಅವನು
೫ ಬಲಿಪೀಠಗಳನ್ನು ಕಟ್ಟಿಸಿದನು. ಕರ್ತನ ಮನೆಯ ಎರಡು ಅಂಗ
ಳಗಳಲ್ಲಿ ಆಕಾಶದ ಸಮಸ್ತ ಸೈನ್ಯಕ್ಕೋಸ್ಕರ ಬಲಿಪೀಠಗಳನ್ನು
೬ ಕಟ್ಟಿಸಿದನು. ಮತ್ತು ಅವನು ತನ್ನ ಮಗನನ್ನು ಬೆಂಕಿಯ ದಾಟ
ಮಾಡಿದನು; ಮೇಘ ಮಂತ್ರಗಳನ್ನೂ ಸರ್ಪ ಮಂತ್ರಗಳನ್ನೂ
ಮಾಡಿದನು; ಯೆಕ್ಷಿಣಿಗಾರರ ಬಳಿಯಲ್ಲೂ ಮಂತ್ರಜ್ಞರ ಬಳಿಯ
ಲ್ಲೂ ವಿಚಾರಿಸಿದನು; ಕರ್ತನಿಗೆ ಕಕೆಕಕೆ ಎಬ್ಬಿಸ ಅವನ ಸಮುಖ
೭ ದಲ್ಲಿ ಅತ್ಯಂತ ಕೆಟ್ಟತನವನ್ನು ಮಾಡಿದನು. ಈ ಮನೆಯಲ್ಲಿ
ಯೂ, ಇಸ್ರಯೇಲಿನ ಸಕಲ ಕುಲಗಳಲ್ಲಿಯೂ ನಾನು ಆರಿ
ಕೊಂಡ ಯೆರೂಸಲೇಮಿನಲ್ಲಿಯೂ ನನ್ನ ನಾಮವನ್ನು ಯುಗ
ಯುಗಕ್ಕೂ ಇರ ಮಾಡುವೆನೆಂದು, ಕರ್ತನು ದಾವೀದನಿಗೂ ಅವ
ನ ಮಗನಾದ ಸೊಲೊಮೋನನಿಗೂ ಯಾವದನ್ನು ಕುರಿತು
ಹೇಳಿದ್ದನೋ, ಆ ಮನೆಯಲ್ಲಿ ತಾನು ಮಾಡಿದ ತೋಪಿನ ಕಟದ
೮ ವಿಗ್ರಹವನ್ನು ಇಟ್ಟನು. ಮತ್ತು ಕರ್ತನು, ನಾನು ಅವರಿಗೆ ಆಜ್ಞಾ
ಪಿಸಿದ ಎಲ್ಲಾದರ ಪ್ರಕಾರವೂ, ನನ್ನ ಸೇವಕನಾದ ಮೋಶೆ ಅವರಿ
ಗೆ ಆಜ್ಞಾಪಿಸಿದ ಸಮಸ್ತ ನ್ಯಾಯಪ್ರಮಾಣದ ಪ್ರಕಾರವೂ ಮಾ
ಡ ಅವರು ಕೈಕೊಂಡರೆ, ನಾನು ಅವರ ತಂದೆಗಳಿಗೆ ಕೊಟ್ಟ
ದೇಶದೊಳಗಿಂದ ಅವರ ಕಾಲುಗಳನ್ನು ಇನ್ನು ಚಲಿಸ ಮಾಡುವ
೯ ದಿಲ್ಲವೆಂದು, ಹೇಳಿದನು. ಆದರೆ ಅವರು ಕೇಳದೆ ಹೋದರು; ಕರ್ತ
ನು ಇಸ್ರಯೇಲ ಮಕ್ಕಳ ಮುಂದೆ ನಾಶನ ಮಾಡಿದ ಜನಾಂಗಗ
ಳ ಕೆಟ್ಟತನಕ್ಕಿಂತ ಅಧಿಕವಾಗಿ ಮಾಡ ಮನಸ್ಸೆಯು ಅವರನ್ನು
ಮಾರ್ಗ ತಪ್ಪಿಸಿದನು.

೧೦ ಆದದರಿಂದ ಕರ್ತನು ಪ್ರವಾದಿಗಳಾದ ತನ್ನ ಸೇವಕರ ಮು
೧೧ ಖಾಂತರ ಹೇಳಿದ್ದೇನಂದರೆ—ಯೆಹೂದದ ಅರಸನಾದ ಮನಸ್ಸೆ
ಯು ತನಗೆ ಮುಂಚೆ ಇದ್ದ ಅಮೋರ್ಯರು ಮಾಡಿದ ಸಮಸ್ತ
ಕ್ಕಿಂತ ಕೆಟ್ಟದ್ದನ್ನು ಮಾಡಿ, ಈ ಅಸಹ್ಯಗಳನ್ನು ಮಾಡಿದ್ದರಿಂದ
೧೨ ಲೂ, ಯೆಹೂದವನ್ನು ತನ್ನ ಮಣ್ಣು ದೇವರುಗಳಿಂದ ಪಾಪ
ಮಾಡಿಸಿದ್ದರಿಂದಲೂ, ಈ ಕಾರಣದಿಂದ ಇಸ್ರಯೇಲಿನ ದೇವರಾದ
ಕರ್ತನು ಹೇಳುವದೇನಂದರೆ—ಇಗೋ, ನಾನು ಯೆರೂಸಲೇಮಿನ
ಮೇಲೆಯೂ ಯೆಹೂದದ ಮೇಲೆಯೂ ಕೇಡನ್ನು ಬರ ಮಾಡುವೆ
ನು; ಅದನ್ನು ಕೇಳುವವನ ಎರಡು ಕಿವಿಗಳು ಕಿರಗುಟ್ಟುವ
೧೩ ವು. ನಾನು ಯೆರೂಸಲೇಮಿನ ಮೇಲೆ ಸಮಾರ್ಯದ ನೂಲನ್ನೂ,
ಅಹಾಬನ ಮನೆಯ ಘುಟ್ಟೆ ತೂಕವನ್ನೂ ಹಿಡಿದು, ಬಂದು ಪರಾ
ತವನ್ನು ಬರಸುವವನು ಬರಸಿ, ಬೋರ್ಲ ಹಾಕುವ ಹಾಗೆ, ನಾ
೧೪ ನು ಯೆರೂಸಲೇಮನ್ನು ಬರಸಿ ಬಿಡುವೆನು. ಇದಲ್ಲದೆ ನಾನು
ನನ್ನ ಬಾಧ್ಯತೆಯ ಉಳಿವನ್ನು ಬಿಟ್ಟು ಬಿಟ್ಟು, ಅವರನ್ನು ಅವ
ರ ಶತ್ರುಗಳ ಕೈಗೆ ಒಪ್ಪಿಸಿ ಬಿಡುವೆನು; ಅವರು ತಮ್ಮ ಶತ್ರುಗಳಿ
೧೫ ಗೆ ಕೊಳ್ಳೆಯೂ ಸೂರೆಯೂ ಆಗಿ ಹೋಗುವರು. ಯಾಕಂ
ದರೆ ಅವರ ತಂದೆಗಳು ಐಗುಪ್ತದಿಂದ ಹೊರಟ ದಿವಸ ಮೊದಲು
ಗೊಂಡು ಇಂದಿನ ಮಟ್ಟಿಗೂ, ಅವರು ನನ್ನ ಸಮುಖದಲ್ಲಿ ಕೆಟ್ಟ
ದ್ದನ್ನು ಮಾಡಿ, ನನಗೆ ಕಕೆಕಕೆ ಎಬ್ಬಿಸಿದ್ದಾರೆ.

೧೬ ಇದಲ್ಲದೆ ಮನಸ್ಸೆಯು ಕರ್ತನ ಸಮುಖದಲ್ಲಿ ಕೇಡನ್ನು ಮಾ
ಡಿದ್ದರಲ್ಲಿ ಯೆಹೂದವು ಪಾಪವನ್ನು ಮಾಡ ಪ್ರೇರೇಪಿಸಿದ ತನ್ನ
ಪಾಪದ ಹೊರ್ತು, ಅವನು ಯೆರೂಸಲೇಮನ್ನು ಕೊನೆ
ಯಿಂದ ಮತ್ತೊಂದು ಕೊನೆಯ ವರಿಗೂ ತಾನು ಬಹು ಹೆಚ್ಚಾ
ಗಿ ಚೆಲ್ಲಿದ ನಿರಾಪರಾಧದ ರಕ್ತದಿಂದ ತುಂಬಿಸಿದನು.

೧೭ ಮನಸ್ಸೆಯ ಇತರ ಕ್ರಿಯೆಗಳೂ, ಅವನು ಮಾಡಿದ ಸಮ
ಸ್ತವೂ, ಅವನು ಮಾಡಿದ ಪಾಪವೂ ಯೆಹೂದದ ಅರಸುಗಳ
೧೮ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಡಲಿಲ್ಲವೋ! ಮನಸ್ಸೆ
ಯು ತನ್ನ ಪಿತೃಗಳ ಸಂಗಡ ಮಲಗಿದನು; ತನ್ನ ಮನೆಯ ತೋ
ಟವಾದ ಉಜ್ಜನ ತೋಟದಲ್ಲಿ ಹೂಣಿಡಲ್ಪಟ್ಟನು; ಅವನ ಮಗ
ನಾದ ಆಮೋನನು ಅವನಿಗೆ ಬದಲಾಗಿ ಆಳ್ವಿದನು.

೧೯ ಆಮೋನನು ಆಳ್ವ ಆರಂಭಿಸಿದಾಗ ಇಪ್ಪತ್ತೆರಡು ವರುಷದವ
ನಾಗಿದ್ದು, ಯೆರೂಸಲೇಮಿನಲ್ಲಿ ಎರಡು ವರುಷ ಆಳ್ವಿದನು. ಅವ
ನ ತಾಯಿ ಯೊಟ್ಟ ಊರಿನವನಾದ ಹರೂಚನ ಮಗಳಾದ ಮೆ
ಷುಲ್ಲೇಮತಳು ಎಂಬ ಹೆಸರುಳ್ಳವಳು. ೨೦ ಅವನು ತನ್ನ ತಂದೆ
ಯಾದ ಮನಸ್ಸೆ ಮಾಡಿದ ಹಾಗೆ, ಕರ್ತನ ದೃಷ್ಟಿಯಲ್ಲಿ ಕೆಟ್ಟ
ದ್ದನ್ನು ಮಾಡಿದನು. ೨೧ ಅವನು ತನ್ನ ಪಿತೃಗಳ ದೇವರಾದ ಕರ್ತ
ನ ಮಾರ್ಗವನ್ನು ಬಿಟ್ಟು ಬಿಟ್ಟು, ತನ್ನ ತಂದೆಯು ನಡೆದ ಸ
೨೨ ಮಸ್ತ ಮಾರ್ಗದಲ್ಲಿ ನಡೆದು, ತನ್ನ ತಂದೆಯು ಸೇವಿಸಿದ ಮಣ್ಣು
ದೇವರುಗಳನ್ನು ಸೇವಿಸಿ, ಅವುಗಳಿಗೆ ಅಡ್ಡ ಬಿದ್ದನು. ಆದರೆ ಆ
೨೩ ಮೋನನ ಸೇವಕರು ಅವನ ಮೇಲೆ ಒಳಸಂಚು ಮಾಡಿ, ಅರಸ
ನನ್ನು ಅವನ ಮನೆಯಲ್ಲಿ ಕೊಂದು ಹಾಕಿದರು. ೨೪ ಮತ್ತು ದೇಶದ
ಜನರು ಅರಸನಾದ ಆಮೋನನ ಮೇಲೆ ಒಳಸಂಚು ಮಾಡಿದ
ಎಲ್ಲರನ್ನು ಹೊಡೆದು ಬಿಟ್ಟು, ಅವನ ಮಗನಾದ ಯೊಷೀಯ
ನನ್ನು ಅವನಿಗೆ ಬದಲಾಗಿ ಅರಸನಾಗ ಮಾಡಿದರು.

೨೫ ಆಮೋನನು ಮಾಡಿದ ಅವನ ಇತರ ಕ್ರಿಯೆಗಳು ಯೆಹೂದ
ದ ಅರಸುಗಳ ದಿನಚರ್ಯೆಗಳ ಪುಸ್ತಕದಲ್ಲಿ ಬರೆಯಲ್ಪಡಲಿಲ್ಲ
೨೬ ವೋ! ಅವನು ಉಜ್ಜನ ತೋಟದಲ್ಲಿದ್ದ ತನ್ನ ಸಮಾಧಿಯಲ್ಲಿ
ಹೂಣಲ್ಪಟ್ಟನು; ಅವನ ಮಗನಾದ ಯೊಷೀಯನು ಅವನಿಗೆ
ಬದಲಾಗಿ ಆಳ್ವಿದನು.

## ೨೨. ಸಂಧಿ.

೧ ಯೊಷೀಯನು ಆಳ್ವ ಆರಂಭಿಸಿದಾಗ ಎಂಟು ವರುಷದವನಾ
ಗಿದ್ದು, ಮೂವತ್ತೊಂದು ವರುಷ ಯೆರೂಸಲೇಮಿನಲ್ಲಿ ಆಳ್ವಿದನು.
ಅವನ ತಾಯಿ ಬೊಚ್ಕತಿನ ಅಡಾಯನ ಮಗಳಾಗಿದ್ದು, ಯೆದಿದ್ಯ
೨ ಳೆಂಬ ಹೆಸರುಳ್ಳವಳಾಗಿದ್ದಳು. ಅವನು ಕರ್ತನ ದೃಷ್ಟಿಗೆ ನೆಟ್ಟ
ನೆಯಾದದ್ದನ್ನು ಮಾಡಿ, ತನ್ನ ತಂದೆಯಾದ ದಾವೀದನ ಸಮಸ್ತ
ಮಾರ್ಗಗಳಲ್ಲಿ ಬಲ ಎಡ ಪಾರ್ಶ್ವವಾಗಿ ತೊಲಗದೆ ನಡೆದನು.

೩ ಅರಸನಾದ ಯೊಷೀಯನ ಹದಿನೆಂಟನೇ ವರುಷದಲ್ಲಿ ಏನಾ
ಯಿತಂದರೆ, ಅರಸನು ರಾಯಸದವನಾದ ಮೆಷುಲ್ಲಾಮನ ಮಗ
ನಾದ ಅಚಲ್ಯನ ಮಗನಾದ ಶಫಾನನನ್ನು ಕರ್ತನ ಮನೆಗೆ ಕಳು
ಹಿಸಿ ಹೇಳಿದ್ದೇನಂದರೆ—ನೀನು ಪ್ರಧಾನ ಯಾಜಕನಾದ ಹಿಲ್ಕೀ
೪ ಯನ ಬಳಿಗೆ ಹೋಗು; ಅವನು ಕರ್ತನ ಮನೆಯಲ್ಲಿ ಬಾಗಲು
ಕಾಯುವವರು ಜನರಿಂದ ತೆಗೆದು ಕೊಂಡು ಕೂಡಿಸಿದ ಕೊಬ್ಬಿನ
೫ ನ್ನು ಒಟ್ಟು ಮಾಡಲಿ. ಮತ್ತು ಅವರು ಅದನ್ನು ಕರ್ತನ ಮನೆ
ಯ ಕೆಲಸ ಮಾಡುವವರ ಮೇಲೆ ಇರುವ ಕಾವಲಿಕಾರರ ಕೈಯ



೬ ಲ್ಲಿ ಒಪ್ಪಿಸಲಿ. ಮತ್ತು ಮನೆ ನೆಟ್ಟಗೆ ಮಾಡುವ ಹಾಗೆ, ಕರ್ತನ
ಮನೆಯಲ್ಲಿ ಕೆಲಸ ಮಾಡುವವರಾದ ಬಡಿಗೆಯವರಿಗೂ, ಶಿಲ್ಪಿಗಾ
ರರಿಗೂ, ಕಾಮಾಟಿಗರಿಗೂ ಕೊಡುವದಕ್ಕೂ, ಮನೆಯನ್ನು ನೆ
ಟ್ಟಗೆ ಮಾಡ, ಮರಗಳನ್ನೂ, ಕಟಿದ ಕಲ್ಲುಗಳನ್ನೂ ಕೊಂಡು
೭ ಕೊಳ್ಳುವದಕ್ಕೂ, ಕೊಡಲಿ. ಆದರೆ ಅವರು ನಂಬಿಕೆಯಾಗಿ ಕೆಲ
ಸ ಮಾಡಿದ್ದರಿಂದ, ಅವರ ಕೈಗೆ ಒಪ್ಪಿಸಿದ ಕೊಬ್ಬಿನನ್ನು ಕುರಿತು
ಅವರಿಂದ ಲೆಖ್ಖ ಕೇಳಲಿಲ್ಲ.

೮ ಆಗ ಪ್ರಧಾನ ಯಾಜಕನಾದ ಹಿಲ್ಕೀಯನು ರಾಯಸದವನಾ
ದ ಶಫಾನನಿಗೆ, ನಾನು ಕರ್ತನ ಮನೆಯಲ್ಲಿ ನ್ಯಾಯಪ್ರಮಾಣ
ದ ಪುಸ್ತಕವನ್ನು ಕಂಡು ಕೊಂಡಿದ್ದೇನೆ, ಅಂದನು; ಮತ್ತು ಹಿಲ್ಕೀ
ಯನು ಆ ಪುಸ್ತಕವನ್ನು ಶಫಾನನಿಗೆ ಕೊಟ್ಟನು; ಅವನು ಅದ
೯ ನ್ನು ಓದಿದನು. ಮತ್ತು ರಾಯಸದವನಾದ ಶಫಾನನು ಅರಸನ
ಬಳಿಗೆ ಬಂದು, ಅರಸನಿಗೆ, ಮನೆಯಲ್ಲಿ ದೊರಕಿದ ಕೊಬ್ಬಿನನ್ನು
ನಿನ್ನ ಸೇವಕರು ಕೂಡಿಸಿ, ಕರ್ತನ ಮನೆಯ ಕೆಲಸ ಮಾಡುವವರ
೧೦ ಮೇಲಿರುವ ಕಾವಲಿಕಾರರ ಕೈಯಲ್ಲಿ ಒಪ್ಪಿಸಿದ್ದಾರೆ, ಅಂದನು.
ಇದಲ್ಲದೆ ರಾಯಸದವನಾದ ಶಫಾನನು ಅರಸನಿಗೆ, ಯಾಜಕನಾ
ದ ಹಿಲ್ಕೀಯನು ನನಗೆ ಪುಸ್ತಕವನ್ನು ಒಪ್ಪಿಸಿದ್ದಾನೆಂದು ತೋರಿಸಿ
೧೧ ದನು; ಮತ್ತು ಶಫಾನನು ಅದನ್ನು ಅರಸನ ಮುಂದೆ ಓದಿದನು. ಅ
ರಸನು ನ್ಯಾಯಪ್ರಮಾಣದ ಪುಸ್ತಕದ ಮಾತುಗಳನ್ನು ಕೇಳಿ
೧೨ ದಾಗ, ತನ್ನ ವಸ್ತ್ರಗಳನ್ನು ಹರು ಕೊಂಡನು. ಇದಲ್ಲದೆ ಅರಸನು
ಯಾಜಕನಾದ ಹಿಲ್ಕೀಯನಿಗೂ, ಶಫಾನನ ಮಗನಾದ ಅಹೀ
ಕಮನಿಗೂ, ಮಿಕಾಯನ ಮಗನಾದ ಅಕ್ಬೋರನಿಗೂ, ರಾಯಸ
ದವನಾದ ಶಫಾನನಿಗೂ, ಅರಸನ ಸೇವಕನಾದ ಅಸಾಯನಿಗೂ,
೧೩ ಆಜ್ಞಾಪಿಸಿ ಹೇಳಿದ್ದೇನಂದರೆ, ನೀವು ಹೋಗಿ, ಶಿಕ್ಕಿದ ಈ ಪುಸ್ತಕದ
ಮಾತುಗಳನ್ನು ಕುರಿತು, ನನಗೋಸ್ಕರವೂ ಜನರಿಗೋಸ್ಕರ
ವೂ ಸಮಸ್ತ ಯೆಹೂದ್ಯರಿಗೋಸ್ಕರವೂ ಕರ್ತನ ಬಳಿಯಲ್ಲಿ
ವಿಚಾರಿಸಿರಿ. ಯಾಕಂದರೆ ನಮ್ಮನ್ನು ಕುರಿತು ಬರೆಯಲ್ಪಟ್ಟ ಎ
ಲ್ಲಾದರ ಪ್ರಕಾರ ಮಾಡ, ನಮ್ಮ ಪಿತೃಗಳು ಈ ಪುಸ್ತಕದ ಮಾ
ತುಗಳನ್ನು ಕೇಳದೆ ಹೋದದರಿಂದ ನಮಗೆ ವಿಕೋಪವಾಗಿ ಹೊ
ತ್ತಿದ ಕರ್ತನ ಉರಿ ದೊಡ್ಡದಾಗಿದೆ, ಅಂದನು.

೧೪ ಹಾಗೆಯೇ ಯಾಜಕನಾದ ಹಿಲ್ಕೀಯನೂ, ಅಹೀಕಮನೂ,
ಅಕ್ಬೋರನೂ, ಶಫಾನನೂ, ಅಸಾಯನೂ ಹರ್ಹಾಸನ ಮಗ
ನಾದ ತಿಕ್ವನ ಮಗನಾದ, ವಸ್ತ್ರಗಳ ಕಾವಲಿಯವನಾದ ಕಲ್ಲೂ
ಮನ ಹೆಂಡತಿಯಾದ ಪ್ರವಾದಿನಿಯಾದ ಹುಲ್ದಳ ಬಳಿಗೆ ಹೋಗಿ,
ಅವಳ ಸಂಗಡ ಮಾತಾಡಿದರು. ಅವಳು ಯೆರೂಸಲೇಮಿನೊಳ
೧೫ ಗೆ ಎರಡನೇ ಭಾಗದಲ್ಲಿ ವಾಸವಾಗಿದ್ದಳು. ಆಗಲವಳು ಅವರಿಗೆ
ಹೇಳಿದ್ದು—ಇಸ್ರಯೇಲಿನ ದೇವರಾದ ಕರ್ತನು ಹೇಳುವದೇನಂದ
ರೆ—ನಿಮ್ಮನ್ನು ನನ್ನ ಬಳಿಗೆ ಕಳುಹಿಸಿದವನಿಗೆ ನೀವು ಹೇಳ ಬೇಕಾ
ದದ್ದು ಇದೇ—ಇಗೋ, ನಾನು ಈ ಸ್ಥಳದ ಮೇಲೆಯೂ ಅದರ ನಿ
೧೬ ವಾಸಿಗಳ ಮೇಲೆಯೂ ಕೇಡನ್ನು—ಯೆಹೂದದ ಅರಸನು ಓದಿದ
ಪುಸ್ತಕದ ಮಾತುಗಳನ್ನಿಲ್ಲಾ—ಬರ ಮಾಡುವೆನು. ಯಾಕಂದರೆ
೧೭ ಅವರು ತಮ್ಮ ಸಮಸ್ತ ಕೈ ಕ್ರಿಯೆಗಳಿಂದ ನನಗೆ ಕಕೆಕಕೆ ಎಬ್ಬಿಸು
ವ ಹಾಗೆ, ನನ್ನನ್ನು ಬಿಟ್ಟು ಬಿಟ್ಟು, ಇತರ ದೇವರುಗಳಿಗೆ ಧೂಪ
ವನ್ನು ಸುಟ್ಟಿದ್ದಾರೆ. ಮತ್ತು ನನ್ನ ಉರಿ ಈ ಸ್ಥಳದ ಮೇಲೆ ಹೊ
೧೮ ತ್ತಿ ಉರಿಯುವದು, ಆರಿ ಹೋಗದು, ಎಂದು, ಕರ್ತನು ಹೇಳು
ತ್ತಾನೆ. ಆದರೆ ಕರ್ತನಿಂದ ವಿಚಾರಿಸ ನಿಮ್ಮನ್ನು ಕಳುಹಿಸಿದ
ಯೆಹೂದದ ಅರಸನಿಗೆ ನೀವು ಹೇಳ ಬೇಕಾದದ್ದು ಇದೇ—ನೀ
ವು ಕೇಳಿದ ಮಾತುಗಳನ್ನು ಕುರಿತು ಇಸ್ರಯೇಲಿನ ದೇವರಾದ
೧೯ ಕರ್ತನು ಹೇಳುವದೇನಂದರೆ, ನಾನು ಈ ಸ್ಥಳಕ್ಕೂ ಅದರ ನಿ
ವಾಸಿಗಳಿಗೂ ವಿಕೋಪವಾಗಿ, ಅವರು ನಾಶವೂ ಶಪನೆಯೂ
ಆಗುವರೆಂದು, ನಾನು ಹೇಳಿದ್ದನ್ನು ನೀನು ಕೇಳಿದಾಗ, ನಿನ್ನ
ಹೃದಯವು ಮೆತ್ತಗಾಗಿ, ನೀನು ನಿನ್ನನ್ನು ಕರ್ತನ ಮುಂದೆ ತ
ಗ್ಗಿಸಿ, ನಿನ್ನ ವಸ್ತ್ರಗಳನ್ನು ಹರು ಕೊಂಡು, ನನ್ನ ಮುಂದೆ ಅತ್ತ
೨೦ ದ್ದರಿಂದ, ನಾನೇ ಕೇಳಿದ್ದೇನೆಂದು, ಕರ್ತನು ಹೇಳುತ್ತಾನೆ. ಆದದ
ರಿಂದ ಇಗೋ, ನಾನು ನಿನ್ನನ್ನು ನಿನ್ನ ಪಿತೃಗಳ ಬಳಿಯಲ್ಲಿ
ಕೇರಿಸಿ ಕೊಳ್ಳುವೆನು; ನೀನು ಸಮಾಧಾನದಿಂದ ನಿನ್ನ ಸಮಾಧಿ
ಗೆ ಬರುವಿ; ನಾನು ಈ ಸ್ಥಳದ ಮೇಲೆ ಬರ ಮಾಡುವ ಕೇಡನ್ನು
ನಿನ್ನ ಕಣ್ಣುಗಳು ಕಾಣುವದಿಲ್ಲ. ಅವರು ಹೋಗಿ, ಈ ಪ್ರತ್ಯು
ತ್ತರವನ್ನು ಅರಸನಿಗೆ ತಿಳಿಸಿದರು.

## ೨೩. ಸಂಧಿ.

೧ ಮತ್ತು ಅರಸನು ಹೇಳ ಕಳುಹಿಸಿದ್ದರಿಂದ, ಯೆಹೂದದ, ಯೆ
ರೂಸಲೇಮಿನ ಹಿರಿಯರೆಲ್ಲರನ್ನು ಅವನ ಬಳಿಗೆ ಕೂಡಿಸಿದರು.
೨ ಆಗ ಅರಸನೂ, ಅವನ ಸಂಗಡ ಯೆಹೂದದ ಮನುಷ್ಯರೆಲ್ಲರೂ,
ಯೆರೂಸಲೇಮಿನ ನಿವಾಸಿಗಳೆಲ್ಲರೂ, ಯಾಜಕರೂ, ಪ್ರವಾದಿಗ
ಳೂ ಹಿರಿ ಕಿರಿಯರಾದ ಸಮಸ್ತ ಜನರೂ ಕರ್ತನ ಮನೆಗೆ ಹೋ
ದರು. ಅವನು, ಅವರು ಕೇಳುವ ಹಾಗೆ, ಕರ್ತನ ಮನೆಯಲ್ಲಿ
ಶಿಕ್ಕಿದ ಒಡಂಬಡಿಕೆಯ ಪುಸ್ತಕದ ಮಾತುಗಳನ್ನೆಲ್ಲಾ ಓದಿದನು.
೩ ಅರಸನು ಸ್ತಂಭದ ಬಳಿಯಲ್ಲಿ ನಿಂತು, ಕರ್ತನನ್ನು ಹಿಂಬಾಲಿಸು
ವದಕ್ಕೂ ಅವನ ಆಜ್ಞೆಗಳನ್ನೂ ಅವನ ಸಾಕ್ಷಿಗಳನ್ನೂ ಅವನು
ಕಟ್ಟಳೆಗಳನ್ನೂ ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾ
ಣದಿಂದಲೂ ಕೈ ಕೊಳ್ಳುವದಕ್ಕೂ, ಈ ಪುಸ್ತಕದಲ್ಲಿ ಬರೆದಿರುವ
ಒಡಂಬಡಿಕೆಯ ವಾಕ್ಯಗಳನ್ನು ಸ್ಥಿರ ಪಡಿಸುವದಕ್ಕೂ, ಕರ್ತನ
ಮುಂದೆ ಒಡಂಬಡಿಕೆಯನ್ನು ಮಾಡಿದನು; ಮತ್ತು ಜನರೆಲ್ಲರು
ಒಡಂಬಡಿಕೆಗೆ ನಿಂತರು.

೪ ಮತ್ತು ಅರಸನು ಬಾಳನಿಗೋಸ್ಕರವೂ, ವಿಗ್ರಹದ ತೋಪು
ಗಳಿಗೋಸ್ಕರವೂ, ಆಕಾಶದ ಸೈನ್ಯಕ್ಕೋಸ್ಕರವೂ ಮಾಡಲ್ಪ
ಟ್ಟಿದ್ದ ಸಮಸ್ತ ಪಾತ್ರೆಗಳನ್ನೂ ಕರ್ತನ ಮನೆಯಿಂದ ಹೊರಗೆ
ತಕ್ಕೊಂಡು ಬರ ಬೇಕೆಂದು, ಪ್ರಧಾನ ಯಾಜಕನಾದ ಹಿಲ್ಕೀಯ
ನಿಗೂ, ಎರಡನೇ ಒಂತಿನವರಾದ ಯಾಜಕರಿಗೂ, ದ್ವಾರಪಾಲ
ಕರಿಗೂ ಆಜ್ಞಾಪಿಸಿದನು. ಮತ್ತು ಅವುಗಳನ್ನು ಯೆರೂಸಲೇಮಿ
ನ ಹೊರಗೆ ಕಿದ್ರೋನಿನ ಹೊಲಗಳಲ್ಲಿ ಸುಡಿಸಿ ಬಿಟ್ಟು, ಅವುಗಳ
೫ ಬೂದಿಯನ್ನು ಬೇತೆಲಿಗೆ ಪೈಯ ಮಾಡಿದನು. ಇದಲ್ಲದೆ ಯೆ
ಹೂದದ ಪಟ್ಟಣಗಳಲ್ಲಿರುವ ಮೇಡುಗಳಲ್ಲಿಯೂ, ಯೆರೂಸಲೇಮಿ
ನ ಸುತ್ತಲಿರುವ ಮೇಡುಗಳಲ್ಲಿಯೂ ಧೂಪವನ್ನು ಸುಡ ಯೆಹೂ
ದದ ಅರಸುಗಳು ನೇಮಿಸಿದ್ದ ಪೂಜಾರಿಗಳನ್ನೂ, ಬಾಳನಿಗೂ,
ಸೂರ್ಯನಿಗೂ, ಚಂದ್ರನಿಗೂ, ಹನ್ನೆರಡು ರಾಶಿಗಳಿಗೂ, ಆಕಾ
ಶದ ಸಮಸ್ತ ಸೈನ್ಯಕ್ಕೂ ಧೂಪ ಸುಡುವವರನ್ನೂ ಇರದ ಹಾ
೬ ಗೆ ಮಾಡಿದನು. ಮತ್ತು ಅವನು ವಿಗ್ರಹದ ತೋಪನ್ನು ಕರ್ತನ

ಮನೆಯೊಳಗಿಂದ ಯೆರೂಸಲೇಮಿನ ಹೊರಗೆ ಕಿದ್ರೋನ್ ಹಳ್ಳ
ಕ್ಕೆ ತರಸಿ, ಅದನ್ನು ಕಿದ್ರೋನ್ ಹಳ್ಳದ ಬಳಿಯಲ್ಲಿ ಸುಟ್ಟು ಬಿ
ಟ್ಟು, ಅದನ್ನು ಧೂಳಾಗ ಪುಡಿ ಮಾಡಿ, ಆ ಧೂಳನ್ನು ಜನರ
೪ ಮಕ್ಕಳ ಸಮಾಧಿಗಳ ಮೇಲೆ ಚೆಲ್ಲಿಸಿ ಬಿಟ್ಟನು. ಸ್ತ್ರೀಯರು
ವಿಗ್ರಹದ ತೋಪಿಗೋಸ್ಕರ ಮನೆಗಳನ್ನು ನೇಯುತ್ತಿದ್ದ ಕಡೆ
ಯಲ್ಲಿ, ಕರ್ತನ ಮನೆಯ ಬಳಿಯಲ್ಲಿ ಇದ್ದ ಪುರುಷಸಂಗಮರ
ಮನೆಗಳನ್ನು ಕೆಡವಿಸಿ ಬಿಟ್ಟನು.
೫ ಇದಲ್ಲದೆ ಅವನು ಯೆಹೂದಿಯ ಪಟ್ಟಣಗಳಿಂದ ಯಾಜಕರೆಲ್ಲರ
ನ್ನು ಬರ ಮಾಡಿ, ಗೇಬವು ಮೊದಲುಗೊಂಡು ಬೇರ್ಷೆಬದ ಮ
ಟ್ಟಿಗೂ ಯಾಜಕರು ಧೂಪ ಸುಡುತ್ತಿದ್ದ ಮೇಡುಗಳನ್ನು ಹೊಲೆ
ಮಾಡಿ, ಪಟ್ಟಣದ ಬಾಗಲ ಎಡಪಾರ್ಶ್ವದಲ್ಲಿದ್ದ, ಪಟ್ಟಣದ ಅಧಿಪತಿ
ಯಾದ ಯೆಹೋಶುವನ ಬಾಗಲ ದ್ವಾರದಲ್ಲಿದ್ದ ಬಾಗಲುಗಳ
೬ ಮೇಡುಗಳನ್ನು ಕೆಡವಿ ಹಾಕಿದನು. ಅದಕೆ ಮೇಡುಗಳ ಯಾಜ
ಕರು ಯೆರೂಸಲೇಮಿನಲ್ಲಿರುವ ಕರ್ತನ ಬಲಿಪೀಠದ ಬಳಿಯಲ್ಲಿ
ಕೇರದೆ, ತಮ್ಮ ಸಹೋದರರ ಮಧ್ಯದಲ್ಲಿ ಹುಳಿ ಇಲ್ಲದ ರೊಟ್ಟಿ
ಯನ್ನು ತಿನ್ನುತ್ತಾ ಇದ್ದರು.
೧೦ ಮತ್ತು ಯಾವನೂ ತನ್ನ ಮಗನನ್ನಾದರೂ ಮಗಳ
ನ್ನಾದರೂ ಮೊಳೊಕನಿಗೋಸ್ಕರ ಬೆಂಕಿ ದಾಟಿಸದ ಹಾಗೆ,
ಹಿನ್ನೊಮನ ಮಕ್ಕಳ ತಗ್ಗಿನಲ್ಲಿದ್ದ ತೋಫೆತನ್ನು ಹೊಲೆ ಮಾ
೧೧ ಡಿದನು. ಬೈಲಲ್ಲಿರುವ ಪ್ರಧಾನನಾದ ನೆತನ್ಮೆಲಕನ ಕೊಠಡಿ
ಯ ಹತ್ರ ಇದ್ದ, ಕರ್ತನ ಮನೆಯ ದ್ವಾರದ ಬಳಿಯಲ್ಲಿ, ಯೆ
ಹೂದದ ಅರಸುಗಳು ಸೂರ್ಯನಿಗೆ ಕೊಟ್ಟ ಕುದುರೆಗಳನ್ನು
ತೆಗೆದು ಹಾಕಿ, ಸೂರ್ಯನ ರಥಗಳನ್ನು ಬೆಂಕಿಯಿಂದ ಸುಟ್ಟು
೧೨ ಬಿಟ್ಟನು. ಯೆಹೂದದ ಅರಸುಗಳು ಉಂಟು ಮಾಡಿದ ಅಹಾಜ
ನ ಮೇಲು ಮಾಳಿಗೆಯ ಮೇಲೆ ಇದ್ದ ಬಲಿಪೀಠಗಳನ್ನೂ, ಮನ
ಸ್ಸೆಯು ಕರ್ತನ ಮನೆಯ ಎರಡು ಅಂಗಳಗಳಲ್ಲಿ ಮಾಡಿದ ಬಲಿ
ಪೀಠಗಳನ್ನೂ ಅರಸನು ಕೆಡವಿಸಿ, ಅಲ್ಲಿಂದ ಓಡಿ, ಅದರ ಧೂಳಿ
೧೩ ಯನ್ನು ಕಿದ್ರೋನ್ ಹಳ್ಳದಲ್ಲಿ ಹಾಕಿಸಿ ಬಿಟ್ಟನು. ಇದಲ್ಲದೆ
ಯೆರೂಸಲೇಮಿನ ಮುಂದೆ, ಕೇಡಿನ ಬೆಟ್ಟದ ಬಲಪಾರ್ಶ್ವದಲ್ಲಿದ್ದ
ಚಿದೋನ್ಯರ ಅಸಹ್ಯಕರವಾದ ಅಷ್ಟರೋಶಿಗೂ, ಮೋವಾಬ್ಯರ
ಅಸಹ್ಯಕರವಾದ ಕೆಮೋಷನಿಗೂ, ಅಮ್ಮೋನನ ಮಕ್ಕಳ ಅಸ
ಹ್ಯಕರವಾದ ಮಿಲ್ಕೋಮನಿಗೂ, ಇಸ್ರಯೇಲಿನ ಅರಸನಾದ
೧೪ ಸೊಲೊಮೋನನು ಕಟ್ಟಿಸಿದ್ದ ಮೇಡುಗಳನ್ನು ಅರಸನು ಹೊಲೆ
ಮಾಡಿ, ವಿಗ್ರಹಗಳನ್ನು ಮುರಿದು, ವಿಗ್ರಹದ ತೋಪುಗಳನ್ನು
ಕಡಿದು ಬಿಟ್ಟು, ಅವುಗಳ ಸ್ಥಳಗಳನ್ನು ಮನುಷ್ಯರ ಎಲುಪುಗ
ಳಿಂದ ತುಂಬಿಸಿದನು.
೧೫ ಇದಲ್ಲದೆ ಬೇತೆಲಿನಲ್ಲಿ ಇದ್ದ ಬಲಿಪೀಠವನ್ನೂ, ಇಸ್ರಯೇಲ
ನ್ನು ಪಾಪ ಮಾಡ ಕ್ರೋಧಿಸಿದ ನೆಬಾಟನ ಮಗನಾದ ಯರೊ
ಬಾಮನು ಮಾಡಿದ ಮೇಡನ್ನೂ, ಅವನು ಕೆಡವಿ ಹಾಕಿ, ಆ ಮೇ
ಡನ್ನು ಸುಟ್ಟು ಬಿಟ್ಟು, ಅದನ್ನು ಧೂಳಾಗ ಪುಡಿ ಮಾಡಿ, ವಿಗ್ರ
೧೬ ಹದ ತೋಪನ್ನು ಸುಟ್ಟು ಬಿಟ್ಟನು. ಮತ್ತು ಯೊಷೀಯನು ತಿ
ರುಗಿ ಕೊಂಡು, ಅಲ್ಲಿ ಬೆಟ್ಟದಲ್ಲಿದ್ದ ಸಮಾಧಿಗಳನ್ನು ಕಂಡು, ಕ
ಳುಹಿಸಿ, ಸಮಾಧಿಗಳಿಂದ ಎಲುಪುಗಳನ್ನು ತೆಗೆದು ಕೊಂಡು, ಈ
ಮಾತುಗಳನ್ನು ಸಾರಿದ ದೇವರ ಮನುಷ್ಯನು ಸಾರಿದ ಕರ್ತ
ನ ವಾಕ್ಯದ ಪ್ರಕಾರ, ಬಲಿಪೀಠದ ಮೇಲೆ ಅವುಗಳನ್ನು ಸುಟ್ಟು
೧೭ ಬಿಟ್ಟು, ಅದನ್ನು ಹೊಲೆ ಮಾಡಿದನು. ಆಗಲವನು, ನಾನು
ನೋಡಿದ ಆ ವಿಗ್ರಹವೇನು? ಅಂದನು. ಅದಕ್ಕೆ ಆ ಪಟ್ಟಣದ ಮ
ನುಷ್ಯರು ಅವನಿಗೆ, ಯೆಹೂದದಿಂದ ಬಂದು, ಬೇತೆಲಿನ ಬಲಿಪೀ
ಠಕ್ಕೆ ವಿರೋಧವಾಗಿ ನೀನು ಮಾಡಿದ ಈ ಕಾರ್ಯಗಳನ್ನು ಸಾ
೧೮ ರಿ ಹೇಳಿದ ದೇವರ ಮನುಷ್ಯನ ಸಮಾಧಿ, ಅಂದರು. ಆಗಲವ
ನು, ಅವನನ್ನು ಬಿಟ್ಟು ಬಿಡಿರಿ; ಯಾವನೂ ಅವನ ಎಲುಪುಗಳನ್ನು
ಮುಟ್ಟದೆ ಇರಲಿ, ಅಂದನು. ಹಾಗೆಯೇ ಅವರು ಅವನ ಎಲುಪು
ಗಳನ್ನು ಸಮಾರ್ಯದಿಂದ ಬಂದ ಪ್ರವಾದಿಯ ಎಲುಪುಗಳ ಸಂ
ಗಡ ಸುಮ್ಮನೇ ಬಿಟ್ಟಿರು.
೧೯ ಕರೆಕರೆ ಎಬ್ಬಿಸಿ, ಇಸ್ರಯೇಲ ಅರಸುಗಳು ಸಮಾರ್ಯದ
ಪಟ್ಟಣಗಳಲ್ಲಿ ಮಾಡಿದ ಮೇಡುಗಳ ಮನೆಗಳನ್ನೆಲ್ಲಾ ಯೊಷೀಯ
ನು ಕೆಡವಿ ಹಾಕಿ, ಬೇತೆಲಿನಲ್ಲಿ ತಾನು ಮಾಡಿದ ಸಮಸ್ತ ಕ್ರಿಯೆ
೨೦ ಗಳ ಪ್ರಕಾರ ಅವುಗಳಿಗೆ ಮಾಡಿ, ಆ ಸ್ಥಳಗಳಲ್ಲಿದ್ದ ಮೇಡುಗಳ
ಯಾಜಕರನ್ನ೿ಲ್ಲಾ ಬಲಿಪೀಠಗಳ ಮೇಲೆ ಕೊಂದು ಹಾಕಿ, ಅವುಗ
ಳ ಮೇಲೆ ಮನುಷ್ಯರ ಎಲುಪುಗಳನ್ನು ಸುಟ್ಟು, ಯೆರೂಸಲೇಮಿ
ಗೆ ತಿರಿಗಿ ಬಂದನು.
೨೧ ಮತ್ತು ಅರಸನು ಸಮಸ್ತ ಜನರಿಗೂ ಈ ಒಡಂಬಡಿಕೆಯ ಪು
ಸ್ತಕದಲ್ಲಿ ಬರೆಯಲ್ಪಟ್ಟ ಹಾಗೆಯೇ, ನಿಮ್ಮ ದೇವರಾದ ಕರ್ತನ
೨೨ ಪಸ್ಕವನ್ನು ಆಚರಿಸಿರಿ, ಎಂದು ಆಜ್ಞಾಪಿಸಿದನು. ನಿಶ್ಚಯವಾಗಿ
ಇಸ್ರಯೇಲಿಗೆ ನ್ಯಾಯ ತೀರಿಸಿದ ನ್ಯಾಯಾಧಿಪತಿಗಳ ದಿವಸಗ
ಳು ಮೊದಲು ಗೊಂಡು, ಇಸ್ರಯೇಲಿನ ಯೆಹೂದದ ಅರಸುಗಳ
ಸಕಲ ದಿವಸಗಳಲ್ಲಿಯೂ ಇಂಥಾ ಪಸ್ಕವು ಆಚರಿಸಲ್ಪಟ್ಟಿದ್ದಿಲ್ಲ.
೨೩ ಅರಸನಾದ ಯೊಷೀಯನ ಹದಿನೆಂಟನೇ ವರುಷದಲ್ಲಿ ಈ ಪಸ್ಕ
ವು ಯೆರೂಸಲೇಮಿನಲ್ಲಿ ಕರ್ತನಿಗೆ ಆಚರಿಸಲ್ಪಟ್ಟಿತು.
೨೪ ಇದಲ್ಲದೆ ಯಾಜಕನಾದ ಹಿಲ್ಕೀಯನು ಕರ್ತನ ಮನೆಯಲ್ಲಿ
ಕಂಡು ಕೊಂಡ ಪುಸ್ತಕದಲ್ಲಿ ಬರೆಯಲ್ಪಟ್ಟ ನ್ಯಾಯಪ್ರಮಾಣದ
ಮಾತುಗಳನ್ನು ಯೊಷೀಯನು ಈಡೇರಿಸುವ ಹಾಗೆ, ಯೆಹೂ
ದ ದೇಶದಲ್ಲಿಯೂ ಯೆರೂಸಲೇಮಿನಲ್ಲಿಯೂ ಕಂಡು ಹಿಡಿಯ
ಲ್ಪಟ್ಟ ಯೆಕ್ಷಿಣಿಗಾರರನ್ನೂ, ಮಂತ್ರಜ್ಞರನ್ನೂ ವಿಗ್ರಹಗಳನ್ನೂ,
ಮಣ್ಣು ದೇವರುಗಳನ್ನೂ, ಸಮಸ್ತ ಅಸಹ್ಯಕರವಾದವುಗಳನ್ನೂ
ತೆಗೆದು ಹಾಕಿ ಬಿಟ್ಟನು. ತನ್ನ ಪೂರ್ಣ ಹೃದಯದಿಂದಲೂ, ತ
೨೫ ನ್ನ ಪೂರ್ಣ ಪ್ರಾಣದಿಂದಲೂ, ತನ್ನ ಪೂರ್ಣ ಬಲದಿಂದಲೂ
ಮೋಶೆಯ ಸಮಸ್ತ ನ್ಯಾಯಪ್ರಮಾಣದ ಪ್ರಕಾರ ಕರ್ತನ ಬಳಿ
ಗೆ ತಿರುಗಿದ ಅರಸನ ಹಾಗೆ ಅವನ ಮುಂದೆ ಯಾವನೂ ಇ
ರಲಿಲ್ಲ; ಅವನ ತರುವಾಯ ಅವನ ಹಾಗೆ ಯಾವನೂ ಎದ್ದಿ
ದ್ದಿಲ್ಲ.
೨೬ ಆದರೆ ಮನಸ್ಸೆಯು ಕರ್ತನಿಗೆ ಕರೆಕರೆ ಎಬ್ಬಿಸ ಮಾಡಿದ
ಎಲ್ಲಾ ಕ್ರಿಯೆಗಳಿಗೋಸ್ಕರ, ಯೆಹೂದಕ್ಕೆ ವಿರೋಧವಾಗಿ ತನ
ಗೆ ಹೊತ್ತಿದ ಕೋಪವನ್ನೂ, ತನ್ನ ಮಹಾ ಕೋಪದ ಉರಿಯ
೨೭ ನ್ನೂ ಕರ್ತನು ಬಿಟ್ಟು ಬಿಡಲಿಲ್ಲ. ಮತ್ತು ಕರ್ತನು—ನಾನು ಇಸ್ರ
ಯೇಲನ್ನು ತೆಗೆದು ಹಾಕಿದ ಹಾಗೆ, ಯೆಹೂದವನ್ನು ಸಹ ನನ್ನ
ಸಮುಖದಿಂದ ತೆಗೆದು ಹಾಕುವೆನು; ಇದಲ್ಲದೆ ನಾನು ಆರಿಸಿ ಕೊಂ
ಡ ಈ ಪಟ್ಟಣವಾದ ಯೆರೂಸಲೇಮನ್ನೂ, ನನ್ನ ಹೆಸರು ಅಲ್ಲಿರು
ವದೆಂದು, ನಾನು ಹೇಳಿದ ಮನೆಯನ್ನೂ ಅಸಹಿಸಿ ಬಿಡುವೆನು,
ಅಂದನು.
೨೮ ಯೊಷೀಯನ ಇತರ ಕ್ರಿಯೆಗಳೂ, ಅವನು ಮಾಡಿದ ಸ



ಮಸ್ತವೂ ಯೆಹೂದದ ಅರಸುಗಳ ದಿನಚರ್ಯೆಗಳ ಪುಸ್ತಕದ
೨೯ ಲ್ಲಿ ಬರೆಯಲ್ಪಟಲಿಲ್ಲವೋ? ಅವನ ದಿವಸಗಳಲ್ಲಿ ಐಗುಪ್ತದ ಅರಸ
ನಾದ ನೇಕೊವೆಂಬ ಫರೋನನು ಅಶೂರಿನ ಅರಸನ ಮೇಲೆ
ಫ್ರಾತು ನದಿಗೆ ಹೋದನು; ಅರಸನಾದ ಯೊಷೀಯನು ಅವನ
ಮೇಲೆ ಹೋದನು; ಇವನು ಅವನನ್ನು ನೋಡಿದಾಗ, ಅವನನ್ನು
೩೦ ಮೆಗಿದ್ದೋವಿನ ಬಳಿಯಲ್ಲಿ ಕೊಂದು ಹಾಕಿದನು. ಮತ್ತು ಅವನ
ಸೇವಕರು ಸತ್ತವನಾದ ಅವನನ್ನು ರಥದಲ್ಲಿ ಮೆಗಿದ್ದೋವಿನಿಂದ
ಯೆರೂಸಲೇಮಿಗೆ ತಕ್ಕೊಂಡು ಬಂದು, ಅವನನ್ನು ತನ್ನ ಸಮಾ
ಧಿಯಲ್ಲಿ ಹೂಣಿಟ್ಟರು. ಆಗ ದೇಶದ ಜನರು ಯೊಷೀಯನ
ಮಗನಾದ ಯೆಹೊವಹಾಜನನ್ನು ತಕ್ಕೊಂಡು, ಅವನನ್ನು ಅಭಿ
ಷೇಕಿಸಿ, ಅವನ ತಂದೆಗೆ ಬದಲಾಗಿ ಅವನನ್ನು ಅರಸನಾಗ ಮಾ
ಡಿದರು.
೩೧ ಯೆಹೊವಹಾಜನು ಆಳ್ವ ಆರಂಭಿಸಿದಾಗ, ಇಪ್ಪತ್ತು ಮೂರು
ವರುಷದವನಾಗಿದ್ದು, ಯೆರೂಸಲೇಮಿನಲ್ಲಿ ಮೂರು ತಿಂಗಳು ಆ
ಳಿದನು. ಅವನ ತಾಯಿ ಲಿಬಾ ಪಟ್ಟಣದ ಯೆಕಮಿಯಾನ ಮಗ
೩೨ ಳಾಗಿದ್ದು, ಹಮುಟಾಲಳೆಂಬ ಹೆಸರುಳ್ಳವಳಾಗಿದ್ದಳು. ಅವನು
ತನ್ನ ತಂದೆಗಳು ಮಾಡಿದ ಎಲ್ಲಾದರ ಪ್ರಕಾರ, ಕರ್ತನ ದೃಷ್ಟಿ
೩೩ ಗೆ ಕೆಟ್ಟದ್ದನ್ನು ಮಾಡಿದನು. ಆದರೆ ಅವನು ಯೆರೂಸಲೇಮಿನ
ಲ್ಲಿ ಆಳ್ವದ ಹಾಗೆ, ನೇಕೊವೆಂಬ ಫರೋನನು ಹಮಾತ್ ದೇಶದ
ರಿಬ್ಲದಲ್ಲಿ ಅವನನ್ನು ಬಂಧಿಸಿ, ದೇಶದ ಮೇಲೆ ನೂರು ತಲಾಂತು
ಬೆಳ್ಳಿಯನ್ನೂ, ಒಂದು ತಲಾಂತು ಬಂಗಾರವನ್ನೂ ಅವರಾಧ
೩೪ ಇಟ್ಟನು. ಮತ್ತು ನೇಕೊವೆಂಬ ಫರೋನನು ಯೊಷೀಯನ
ಮಗನಾದ ಎಲ್ಯಕೀಮನನ್ನು ಅವನ ತಂದೆಯಾದ ಯೊಷೀಯ
ನಿಗೆ ಬದಲಾಗಿ ಅರಸನಾಗ ಮಾಡಿ, ಅವನಿಗೆ ಯೆಹೊಯಕೀಮ
ನೆಂಬ ಬದಲು ಹೆಸರನಿಟ್ಟು, ಯೆಹೊವಹಾಜನನ್ನು ತೆಗೆದು
ಕೊಂಡು ಹೋದನು; ಇವನು ಐಗುಪ್ತಕ್ಕೆ ಬಂದು, ಅಲ್ಲಿ ಸತ್ತನು.
೩೫ ಯೆಹೊಯಕೀಮನು ಬೆಳ್ಳಿಯನ್ನೂ ಬಂಗಾರವನ್ನೂ ಫರೋ
ನನಿಗೆ ಕೊಟ್ಟನು. ನೇಕೊವೆಂಬ ಫರೋನನ ಆಜ್ಞೆಯ ಪ್ರಕಾರ
ಅವನು ಕೊಟ್ಟವನ್ನು ಕೊಡ, ದೇಶಕ್ಕೆ ಕಪ್ಪವನ್ನು ನಿಶ್ಚರ್ಯೆ
ಮಾಡಿದನು. ಅವನು ಬೆಳ್ಳಿಯನ್ನೂ ಬಂಗಾರವನ್ನೂ ನೇಕೊ
ವೆಂಬ ಫರೋನನಿಗೆ ಕೊಡುವ ಹಾಗೆ, ದೇಶದ ಜನರಿಂದ, ಪ್ರತಿ
ಮನುಷ್ಯನ ನಿಶ್ಚರ್ಯೆಯ ಪ್ರಕಾರ ಬಲವಂತವಾಗಿ ತಕ್ಕೊಂ
ಡನು.
೩೬ ಯೆಹೊಯಕೀಮನು ಆಳ್ವ ಆರಂಭಿಸಿದಾಗ ಇಪ್ಪತ್ತೈದು
ವರುಷದವನಾಗಿದ್ದು, ಯೆರೂಸಲೇಮಿನಲ್ಲಿ ಹನ್ನೊಂದು ವರುಷ
ಆಳ್ವಿದನು. ಅವನ ತಾಯಿ ರೂಮದ ಪೆದಾಯನ ಮಗಳಾಗಿದ್ದು,
೩೭ ಜೆಬೂದಳೆಂಬ ಹೆಸರುಳ್ಳವಳಾಗಿದ್ದಳು. ಅವನು ತನ್ನ ತಂದೆಗ
ಳು ಮಾಡಿದ ಎಲ್ಲಾದರ ಪ್ರಕಾರ, ಕರ್ತನ ದೃಷ್ಟಿಗೆ ಕೆಟ್ಟದ್ದನ್ನು
ಮಾಡಿದನು.

## ೨೪. ಸಂಧಿ.

೧ ಅವನ ದಿವಸಗಳಲ್ಲಿ ಬಾಬೆಲಿನ ಅರಸನಾದ ನೆಬುಕದ್ನೇಚರ
ನು ಬಂದನು. ಯೆಹೊಯಕೀಮನು ಮೂರು ವರುಷ ಅವನ
ಸೇವಕನಾಗಿದ್ದು, ತರುವಾಯ ಅವನ ಮೇಲೆ ತಿರುಗ ಬಿದ್ದನು.
೨ ಆದರೆ ಕರ್ತನು ಕಸ್ದೀಯರ ಗುಂಪುಗಳನ್ನೂ, ಅರಾಮ್ಯರ
ಗುಂಪುಗಳನ್ನೂ, ಮೋವಾಬ್ಯರ ಗುಂಪುಗಳನ್ನೂ, ಅಮ್ಮೋನಿನ
ಮಕ್ಕಳ ಗುಂಪುಗಳನ್ನೂ ಅವನ ಮೇಲೆ ಕಳುಹಿಸಿದನು. ಕರ್ತ
ನು ಪ್ರವಾದಿಗಳಾದ ತನ್ನ ಸೇವಕರ ಮುಖಾಂತರ ಹೇಳಿದ ಮಾತಿ
3 ನ ಪ್ರಕಾರ ಯೆಹೂದವನ್ನು ನಾಶನ ಮಾಡ ಅದರ ಮೇಲೆ ಅವ
ನನ್ನು ಬರ ಮಾಡಿದನು. ನಿಶ್ಚಯವಾಗಿ ಕರ್ತನ ಅಪ್ಪಣೆಯಿಂ
ದ ಇದು ಯೆಹೂದದ ಮೇಲೆ ಆಯಿತು—ಮನಸ್ಸೆಯು ತನ್ನ
ಸಮಸ್ತ ಕೃತ್ಯಗಳಿಂದ ಮಾಡಿದ ಪಾಪಗಳ ನಿಮಿತ್ತ ಅವನನ್ನು
೪ ತನ್ನ ಸಮುಖದಿಂದ ತೆಗೆದು ಹಾಕುವದಕ್ಕೋಸ್ಕರವೇ. ಇದಲ್ಲ
ದೆ ಅವನು ಚೆಲ್ಲಿದ ನಿರಾಪರಾಧದ ರಕ್ತದ ನಿಮಿತ್ತ ಉಂಟಾಯಿ
ತು. ಅವನು ನಿರಾಪರಾಧದ ರಕ್ತದಿಂದ ಯೆರೂಸಲೇಮನ್ನು
ತುಂಬಿಸಿದನು. ಕರ್ತನು ಅದನ್ನು ಮನ್ನಿಸಲೊಲ್ಲದೆ ಇದ್ದನು.
೫ ಯೆಹೊಯಕೀಮನ ಇತರ ಕ್ರಿಯೆಗಳೂ, ಅವನು ಮಾಡಿದ
ಸಮಸ್ತವೂ ಯೆಹೂದದ ಅರಸುಗಳ ದಿನಚರ್ಯೆಗಳ ಪುಸ್ತಕ
೬ ದಲ್ಲಿ ಬರೆಯಲ್ಪಟಲಿಲ್ಲವೋ? ಯೆಹೊಯಕೀಮನು ತನ್ನ ಪಿತೃ
ಗಳ ಸಂಗಡ ಮಲಗಿದನು; ಅವನ ಮಗನಾದ ಯೆಹೊಯಕೀಮ
ನು ಅವನಿಗೆ ಬದಲಾಗಿ ಆಳ್ವಿದನು.
೭ ಆದರೆ ಐಗುಪ್ತದ ಅರಸನು ತನ್ನ ದೇಶದಿಂದ ತಿರಿಗ ಬರಲಿಲ್ಲ.
ಯಾಕಂದರೆ ಐಗುಪ್ತದ ನದಿ ಮೊದಲ್ಗೊಂಡು ಫ್ರಾತು ನದಿಯ
ಮಟ್ಟಿಗೂ, ಐಗುಪ್ತದ ಅರಸನಿಗೆ ಇದ್ದದ್ದೆಲ್ಲಾ ಬಾಬೆಲಿನ ಅರಸ
ನು ಹಿಡಿದಿದ್ದನು. ಯೆಹೊಯಕೀಮನು ಆಳ್ವ ಆರಂಭಿಸಿದಾಗ ಹ
ದಿನೆಂಟು ವರುಷದವನಾಗಿದ್ದು, ಯೆರೂಸಲೇಮಿನಲ್ಲಿ ಮೂರು
ತಿಂಗಳು ಆಳ್ವಿದನು. ಅವನ ತಾಯಿ ಯೆರೂಸಲೇಮಿನ ಎಲ್ಯತಾ
೮ ನನ ಮಗಳಾಗಿದ್ದು, ನೆಹುಷ್ಟಳೆಂಬ ಹೆಸರುಳ್ಳವಳಾಗಿದ್ದಳು. ಅ
ವನು ತನ್ನ ತಂದೆಯು ಮಾಡಿದ ಪ್ರಕಾರವೆಲ್ಲಾ, ಕರ್ತನ ದೃ
ಷ್ಟಿಗೆ ಕೆಟ್ಟದ್ದನ್ನು ಮಾಡಿದನು.
೯ ಆ ಕಾಲದಲ್ಲಿ ಬಾಬೆಲಿನ ಅರಸನಾದ ನೆಬುಕದ್ನೇಚರನ ಸೇವ
ಕರು ಯೆರೂಸಲೇಮಿನ ಮೇಲೆ ಬಂದರು; ಆ ಪಟ್ಟಣವು ಮುತ್ತಿಗೆ ಹಾ
೧೦ ಕಲ್ಪಟ್ಟಿತು. ಬಾಬೆಲಿನ ಅರಸನಾದ ನೆಬುಕದ್ನೇಚರನು ಪಟ್ಟಣದ
ಮೇಲೆ ಬಂದನು; ಅವನ ಸೇವಕರು ಅದನ್ನು ಮುತ್ತಿಗೆ ಹಾಕಿದರು.
೧೧ ಆಗ ಯೆಹೂದದ ಅರಸನಾದ ಯೆಹೊಯಕೀಮನು—ಅವನೂ,
ಅವನ ತಾಯಿಯೂ, ಅವನ ಸೇವಕರೂ, ಅವನ ಪ್ರಧಾನರೂ,
ಅವನ ನಪುಂಸಕರೂ, ಪ್ರಧಾನಿಗಳೂ ಸಹಿತವಾಗಿ—ಬಾಬೆಲಿನ ಅ
ರಸನ ಬಳಿಗೆ ಹೊರಟು ಹೋದನು. ಬಾಬೆಲಿನ ಅರಸನು ತನ್ನ ಆ
೧೩ ಳಿಕೆಯ ಎಂಟನೇ ವರುಷದಲ್ಲಿ ಅವನನ್ನು ಹಿಡಿದನು. ಮತ್ತು ಕ
ರ್ತನು ಹೇಳಿದ ಪ್ರಕಾರವೇ, ಅವನು ಅಲ್ಲಿಂದ ಕರ್ತನ ಮನೆಯ
ಸಮಸ್ತ ಬೊಕ್ಕಸಗಳನ್ನೂ, ಅರಮನೆಯ ಬೊಕ್ಕಸಗಳನ್ನೂ,
ಇಸ್ರಯೇಲಿನ ಅರಸನಾದ ಸೊಲೊಮೋನನು ಕರ್ತನ ಮನೆಯ
ಲ್ಲಿ ಮಾಡಿದ ಬಂಗಾರದ ಸಮಸ್ತ ಪಾತ್ರೆಗಳನ್ನೂ ಕತ್ತರಿಸಿ ಬಿ
೧೪ ಟ್ಟನು. ಮತ್ತು ಅವನು ಯೆರೂಸಲೇಮಿನವೆಲ್ಲರನ್ನೂ, ಸಮ
ಸ್ತ ಪ್ರಧಾನರನ್ನೂ, ಸಮಸ್ತ ಸ್ಥಿತಿಯುಳ್ಳ ಪರಾಕ್ರಮಶಾಲಿಗಳ
ನ್ನೂ, ಹತ್ತು ಸಾವಿರ ಕೆಲೆಯವರನ್ನೂ, ಮತ್ತು ಸಮಸ್ತ ಬಡಗಾ
ಳರನ್ನೂ, ಕಮ್ಮಾರರನ್ನೂ ಅಲ್ಲಿಂದ ಪೈದನು; ದೇಶದ ಬಡವರ
ಹೊರ್ತು ಉಳಿದವರು ಯಾರೂ ಇಲ್ಲ.
೧೫ ಮತ್ತು ಯೆಹೊಯಕೀಮನನ್ನು ಬಾಬೆಲಿಗೆ ಪೈದನು; ಮತ್ತು
ಅರಸನ ತಾಯಿಯನ್ನೂ, ಅರಸನ ಹೆಂಡತಿಯರನ್ನೂ, ಅವನ
ನಪುಂಸಕರನ್ನೂ, ದೇಶದ ಶ್ರೇಷ್ಠರನ್ನೂ ಯೆರೂಸಲೇಮಿನಿಂದ

೧೬ ಬಾಬೆಲಿಗೆ ಕೆಳೆಯಾಗಿ ವೈದನು. ಬಾಬೆಲಿನ ಅರಸನು ಸಮಸ್ತ ಸ್ಥಿ
ತಿವಂತರಾದ ಏಳು ಸಾವಿರ ಜನರನ್ನೂ, ಪಂಚಾಳರೂ ಕಮ್ತಾ
ರರೂ ಆದ ಸಾವಿರ ಜನರನ್ನೂ, ಬಲವುಳ್ಳ ಯುದ್ಧ ಮಾಡ ತಕ್ಕ
೧೭ ವರೆಲ್ಲರನ್ನೂ ಬಾಬೆಲಿಗೆ ಕೆಳೆಯಾಗಿ ವೈದನು. ಮತ್ತು ಬಾಬೆಲಿ
ನ ಅರಸನು ಯೆಹೊಯಕೀಮನ ಚಿಕ್ಕಪ್ಪನಾದ ಮತ್ತನ್ಯನನ್ನು
ಅವನಿಗೆ ಬದಲಾಗಿ ಅರಸನಾಗ ಮಾಡಿ, ಅವನಿಗೆ ಚಿದ್ಕಿಯೆನೆಂ
ದು ಬದಲು ಹೆಸರನಿಟ್ಟನು.

೧೮ ಚಿದ್ಕಿಯೆನು ಆಳ್ವ ಆರಂಭಿಸಿದಾಗ ಇಪ್ಪತ್ತೊಂದು ವರುಷದ
ವನಾಗಿದ್ದು, ಯೆರೂಸಲೇಮಿನಲ್ಲಿ ಹನ್ನೊಂದು ವರುಷ ಆಳ್ವದನು.
ಅವನ ತಾಯಿ ಹಿಬೂತ ಯೆಕೆಮಿಯಾಯನ ಮಗಳಾಗಿದ್ದು, ಹಮು
೧೯ ಟಾಲಳು ಎಂಬ ಹೆಸರುಳ್ಳವಳಾಗಿದ್ದಳು. ಅವನು ಯೆಹೊಯಕೀಮ
ನು ಮಾಡಿದ ಎಲ್ಲಾದರ ಪ್ರಕಾರ, ಕರ್ತನ ದೃಷ್ಟಿಗೆ ಕೆಟ್ಟದ್ದ
೨೦ ನ್ನು ಮಾಡಿದನು. ಯಾಕಂದರೆ ಕರ್ತನು ಅವನನ್ನು ತನ್ನ ಸ
ಮುಖದಿಂದ ದೊಬ್ಬಿ ಹಾಕುವ ಪರ್ಯಂತರ, ಯೆರೂಸಲೇಮಿನ,
ಯೆಹೂದದ ಮೇಲೆ ಉಂಟಾದ ಅವನ ಕೋಪದ ನಿಮಿತ್ತ ಚಿದ್ಕಿಯೆ
ನು ಬಾಬೆಲಿನ ಅರಸನ ಮೇಲೆ ತಿರುಗ ಬಿದ್ದನು.

## ೨೫. ಸಂಧಿ.

೧ ಆದರೆ ಅವನ ಆಳಿಕೆಯ ಒಂಭತ್ತನೇ ವರುಷದ ಹತ್ತನೇ ತಿಂಗ
ಳ ಹತ್ತನೇ ದಿವಸದಲ್ಲಿ ಏನಾಯಿತಂದರೆ, ಬಾಬೆಲಿನ ಅರಸನಾದ
ನೆಬುಕದ್ನೇಚರನು, ತಾನೂ ತನ್ನ ಸಮಸ್ತ ಸೈನ್ಯವೂ, ಯೆರೂಸ
ಲೇಮಿನ ಮೇಲೆ ಬಂದು, ಅದಕ್ಕೆ ಎದುರಾಗಿ ದಂಡಿಳಿದು, ಅದರ
೨ ಸುತ್ತಲೂ ಅದರ ಬಳಿಯಲ್ಲಿ ಮೊಹರ್ಕೆಗಳನ್ನು ಹಾಕಿದರು. ಅ
ರಸನಾದ ಚಿದ್ಕಿಯೆನ ಹನ್ನೊಂದನೇ ವರುಷದ ಪರ್ಯಂತರ
೩ ಪಟ್ಟಣವು ಮುತ್ತಿಗೆ ಹಾಕಲ್ಪಟ್ಟಿತು. ನಾಲ್ಕನೇ ತಿಂಗಳ ಒಂಭತ್ತನೇ
ದಿವಸದಲ್ಲಿ ಪಟ್ಟಣದಲ್ಲಿ ಬರವು ಬಲವಾದದರಿಂದ, ದೇಶದ ಜನರಿಗೆ
೪ ಆಹಾರವಿಲ್ಲದೆ ಹೋಯಿತು. ಮತ್ತು ಪಟ್ಟಣವು ಮುರಿಯಲ್ಪಟ್ಟದ್ದ
ರಿಂದ, ಸೈನ್ಯದ ಜನರೆಲ್ಲರೂ ಅರಸನ ತೋಟದ ಬಳಿಯಲ್ಲಿದ್ದ
ಎರಡು ಗೋಡೆಗಳ ಮಧ್ಯದಲ್ಲಿ ಬಾಗಲ ಮಾರ್ಗವಾಗಿ ಓಡಿ
ಹೋದರು; ಆದರೆ ಅರಸನು ಬೈಲು ಮಾರ್ಗವಾಗಿ ಹೋದನು.
೫ ಕಸ್ದೀಯರು ಪಟ್ಟಣದ ಬಳಿಯಲ್ಲಿ ಇದ್ದದರಿಂದ, ಅವರ ದಂಡು ಅರ
ಸನನ್ನು ಹಿಂಬಾಲಿಸಿ, ಯೆರಿಕೋಮಿನ ಬೈಲು ಸ್ಥಳಗಳಲ್ಲಿ ಅವನ
೬ ನ್ನು ಹಿಡು ಕೊಂಡರು. ಮತ್ತು ಅವನ ದಂಡೆಲ್ಲಾ ಅವನ ಕಡೆ
ಯಿಂದ ಚದರಿ ಹೋಯಿತು. ಅವರು ಅರಸನನ್ನು ಹಿಡು ಕೊಂ
ಡು ರಿಬ್ಲದಲ್ಲಿರುವ ಬಾಬೆಲಿನ ಅರಸನ ಬಳಿಗೆ ತಕ್ಕೊಂಡು ಬಂದು,
೭ ಅವನ ಮೇಲೆ ನ್ಯಾಯವನ್ನು ನಿರ್ಣಯಿಸಿದರು. ಅವರು ಚಿದ್ಕಿಯೆ
ನ ಮಕ್ಕಳನ್ನು ಅವನ ಕಣ್ಣುಗಳ ಮುಂದೆ ಕೊಂದ ತರುವಾ
ಯ, ಅವನ ಕಣ್ಣುಗಳನ್ನು ಕುರುಡು ಮಾಡಿ, ಅವನಿಗೆ ಹಿತ್ತಾಳಿ
ಯ ಸಂಕೋಲೆಗಳನ್ನು ಹಾಕಿ, ಅವನನ್ನು ಬಾಬೆಲಿಗೆ ತಕ್ಕೊಂ
ಡು ಹೋದರು.

೮ ಐದನೇ ತಿಂಗಳ ಏಳನೇ ದಿವಸಕ್ಕೆ, ಸರಿಯಾದ ಬಾಬೆಲಿನ
ಅರಸನಾದ ನೆಬುಕದ್ನೇಚರನ ಹತ್ತೊಂಭತ್ತನೇ ವರುಷದಲ್ಲಿ
ಬಾಬೆಲಿನ ಅರಸನ ಸೇವಕನಾದ ಕಾವಲಿಯ ಅಧಿಪತಿಯಾದ ನೆ
೯ ಬುಜರದಾನನು ಯೆರೂಸಲೇಮಿಗೆ ಬಂದು, ಕರ್ತನ ಮನೆಯ
ನ್ನೂ ಅರಮನೆಯನ್ನೂ, ಯೆರೂಸಲೇಮಿನಲ್ಲಿರುವ ಸಮಸ್ತ ಮ
ನೆಗಳನ್ನೂ, ಪ್ರತಿ ದೊಡ್ಡ ಮನುಷ್ಯನ ಮನೆಯನ್ನೂ ಬೆಂಕಿ
೧೦ ಯಿಂದ ಸುಟ್ಟು ಬಿಟ್ಟನು. ಕಾವಲಿಗಾರರ ಅಧಿಪತಿಯ ಸಂಗಡಿ
ದ್ದ ಕಸ್ದೀಯರ ಸೈನ್ಯದವರೆಲ್ಲರೂ ಯೆರೂಸಲೇಮಿನ ಸುತ್ತಲೂ
೧೧ ಇರುವ ಗೋಡೆಗಳನ್ನು ಕೆಡವಿ ಬಿಟ್ಟರು. ಪಟ್ಟಣದಲ್ಲಿ ಉಳಿದ ಜನ
ರನ್ನೂ, ಬಾಬೆಲಿನ ಅರಸನ ಕಡೆಗೆ ಬಿದ್ದವರನ್ನೂ, ಗುಂಪಿನಲ್ಲಿ
ಮಿಕ್ಕ ಜನರನ್ನೂ ಕಾವಲಿಯ ಅಧಿಪತಿಯಾದ ನೆಬುಜರದಾನನು
೧೨ ಕೆಳೆಯಾಗಿ ವೈದನು. ಆದರೆ ಕಾವಲಿಯ ಅಧಿಪತಿಯು ದ್ರಾಕ್ಷೇ
ತೋಟ ಮಾಡುವ ಹಾಗೆಯೂ, ಬೇಸಾಯ ಮಾಡುವ ಹಾಗೆ
ಯೂ, ದೇಶದ ದರಿದ್ರರನ್ನು ಉಳಿಸಿ ಬಿಟ್ಟನು.

೧೩ ಇದಲ್ಲದೆ ಕರ್ತನ ಮನೆಯಲ್ಲಿದ್ದ ತಾಂಬ್ರದ ಸ್ತಂಭಗಳನ್ನೂ,
ಆಧಾರಗಳನ್ನೂ ಕರ್ತನ ಮನೆಯಲ್ಲಿದ್ದ ತಾಂಬ್ರದ ಸಮುದ್ರವ
ನ್ನೂ ಕಸ್ದೀಯರು ಒಡೆದು ಹಾಕಿ, ಅದರ ತಾಂಬ್ರವನ್ನು ಬಾಬೆಲಿ
೧೪ ಗೆ ವೈದರು. ಕಿಟ್ಟಿಗಳನ್ನೂ, ಸಲಿಕೆಗಳನ್ನೂ, ಕತ್ತರಿಗಳನ್ನೂ,
೧೫ ಸಾಟುಗಳನ್ನೂ, ಅವರು ಸೇವಿಸುತ್ತಿದ್ದ ಸಮಸ್ತ ತಾಂಬ್ರದ ಸಾ
ಮಾನುಗಳನ್ನೂ ತಕ್ಕೊಂಡು ಹೋದರು. ಕಾವಲಿಕಾರರ ಅಧಿ
೧೬ ಪತಿಯು ಅಗ್ನಿ ಪಾತ್ರೆಗಳನ್ನೂ, ತಟ್ಟಿಗಳನ್ನೂ, ಧಂಗಾರದವುಗ
ಳಾದ ಧಂಗಾರವನ್ನೂ, ಬೆಳ್ಳಿಯವುಗಳಾದ ಬೆಳ್ಳಿಯನ್ನೂ
ತಕ್ಕೊಂಡನು. ಸೊಲೊಮೋನನು ಕರ್ತನ ಮನೆಗೋಸ್ಕರ
ಮಾಡಿಸಿದ್ದ ಎರಡು ಸ್ತಂಭಗಳೂ, ಸಮುದ್ರವೂ ಆಧಾರಗಳೂ
ಈ ಎಲ್ಲಾ ಸಾಮಾನುಗಳ ತಾಂಬ್ರವು ತೂಗ ಕೂಡದ ಹಾಗೆ
೧೭ ಇತ್ತು. ಒಂದು ಸ್ತಂಭವು ಹದಿನೆಂಟು ಮೊಳ ಎತ್ತರವಾಗಿತ್ತು.
ಅದರ ಮೇಲಿದ್ದ ಕುಂಭವು ತಾಂಬ್ರದ್ದಾಗಿ, ಮೂರು ಮೊಳ ಉದ್ದ
ವಾಗಿತ್ತು. ಕುಂಭದಲ್ಲಿ ಸುತ್ತಲಿದ್ದ ಹೆಣಿತದ ಕೆಲಸವೂ, ಧಾಳಿಂಬ
ರಗಳೂ ಎಲ್ಲಾ ತಾಂಬ್ರವಾಗಿತ್ತು. ಎರಡನೇ ಸ್ತಂಭಕ್ಕೆ ಇದರ
ಹಾಗೆಯೇ ಹೆಣಿತದ ಕೆಲಸ ಉಂಟಾಗಿತ್ತು.

೧೮ ಕಾವಲಿಕಾರರ ಅಧಿಪತಿಯು ಪ್ರಧಾನಾಚಾರ್ಯನಾದ ಸೆರಾ
ಯನನ್ನೂ, ಎರಡನೇ ಯಾಜಕನಾದ ಜೆಫನ್ಯನನ್ನೂ, ಮೂರು
ಮಂದಿ ದ್ವಾರಪಾಲಕರನ್ನೂ ಹಿಡಿದನು. ಇದಲ್ಲದೆ ಪಟ್ಟಣದೊಳಗಿಂ
೧೯ ದ ಯುದ್ಧಸ್ಥರ ಮೇಲಿದ್ದ ಒಬ್ಬ ನಪುಂಸಕನನ್ನೂ, ಪಟ್ಟಣದಲ್ಲಿ ಸಿಕ್ಕಿ
ದ ಅರಸನ ಮುಖ, ಸೋಕುತ್ತಿದ್ದವರಲ್ಲಿ ಐದು ಮಂದಿಯನ್ನೂ,
ದೇಶದ ಜನರನ್ನು ಸೈನ್ಯ ಮಾಡಿದ ಪ್ರಧಾನನ ರಾಯಸದವನ
ನ್ನೂ, ಪಟ್ಟಣದಲ್ಲಿ ಸಿಕ್ಕಿದ ದೇಶದ ಜನವಾದ ಅರುವತ್ತು ಮಂದಿಯ
೨೦ ನ್ನೂ ಅವನು ಹಿಡಿದನು. ಕಾವಲಿಯವರ ಅಧಿಪತಿಯಾದ ನೆಬು
ಜರದಾನನು ಇವರನ್ನು ತಕ್ಕೊಂಡು, ರಿಬ್ಲದಲ್ಲಿದ್ದ ಬಾಬೆಲಿನ ಅರ
೨೧ ಸನ ಬಳಿಗೆ ಕರಕೊಂಡು ಬಂದನು. ಬಾಬೆಲಿನ ಅರಸನು ಹಮಾ
ತಿನ ರಿಬ್ಲದಲ್ಲಿ ಅವರನ್ನು ಹೊಡೆದು, ಕೊಂದು ಹಾಕಿದನು. ಈ
ಪ್ರಕಾರವೇ ಯೆಹೂದ್ಯರು ತಮ್ಮ ದೇಶದಲ್ಲಿಂದ ಕೆಳೆಯಾಗಿ ತ
ಕ್ಕೊಂಡು ಹೋಗಲ್ಪಟ್ಟರು.

೨೨ ಆದರೆ ಬಾಬೆಲಿನ ಅರಸನಾದ ನೆಬುಕದ್ನೇಚರನು ಬಿಟ್ಟಿದ್ದ
ಯೆಹೂದದ ದೇಶದಲ್ಲಿ ಉಳಿದ, ಜನರ ಮೇಲೆ ಶಫಾನನ ಮಗ
ನಾದ ಅಹೀಕಮನ ಮಗನಾದ ಗೆದಲ್ಯನನ್ನು ಅಧಿಪತಿಯಾಗ
ಮಾಡಿದನು.

೨೩ ಆದರೆ ದಂಡುಗಳ ಅಧಿಪತಿಗಳೂ, ಅವರ ಮನುಷ್ಯರೂ ಬಾ
ಬೆಲಿನ ಅರಸನು ಗೆದಲ್ಯನನ್ನು ಅಧಿಪತಿಯಾಗ ಮಾಡಿದ್ದಾನೆಂ
ದು ಕೇಳಿದ ಮೇಲೆ, ನೆತನ್ಯನ ಮಗನಾದ ಇಷ್ಮಾಯೇಲನೂ, ಕರೇ



ಹನ ಮಗನಾದ ಯೊಹಾನನೂ, ನೆಟೋಫಾದವನಾದ, ತನ್ಹುಮೇ
ತನ ಮಗನಾದ ಸೆರಾಯನೂ, ಮಾಕಾತ್ಯರಲ್ಲಿ ಒಬ್ಬನ ಮಗನಾ
ದ ಯಜನ್ಯನೂ, ಅವರ ಮನುಷ್ಯರೂ ಮಿಚ್ಪದಲ್ಲಿದ್ದ ಗೆದಲ್ಯನ
೨೪ ಬಳಿಗೆ ಬಂದರು. ಆಗ ಗೆದಲ್ಯನು ಅವರಿಗೂ, ಅವರ ಮನುಷ್ಯ
ರಿಗೂ ಆಣೆಯನಿಟ್ಟು, ನೀವು ಕಸ್ದೀಯರನ್ನು ಸೇವಿಸ ಭಯ ಪ
ಡ ಬೇಡಿರಿ; ದೇಶದಲ್ಲಿ ವಾಸವಾಗಿದ್ದು, ಬಾಬೆಲಿನ ಅರಸನನ್ನು
ಸೇವಿಸಿರಿ; ಆಗ ನಿಮಗೆ ಒಳ್ಳೇದಾಗಿರುವದು, ಅಂದನು.

೨೫ ಆದರೆ ಏಳನೇ ತಿಂಗಳಲ್ಲಿ ರಾಜ್ಯದ ಬೀಜದವನಾದ, ಎಲಿಷಾ
ಮನ ಮಗನಾದ ನೆತನ್ಯನ ಮಗನಾದ ಇಷ್ಮಾಯೇಲನೂ, ಅವನ
ಸಂಗಡ ಹತ್ತು ಮಂದಿಯೂ ಬಂದು, ಗೆದಲ್ಯನನ್ನೂ, ಅವನ ಸಂ
ಗಡ ಮಿಚ್ಪದಲ್ಲಿದ್ದ ಯೆಹೂದ್ಯರನ್ನೂ ಕಸ್ದೀಯರನ್ನೂ ಹೊಡೆ
೨೬ ದು, ಕೊಂದು ಹಾಕಿದರು. ಆಗ ಹಿರಿ ಕಿರಿಯರಾದ ಸಮಸ್ತ ಜನ
ರೂ, ದಂಡುಗಳ ಅಧಿಪತಿಗಳೂ ಎದ್ದು, ಐಗುಪ್ತಕ್ಕೆ ಹೋದರು;
ಯಾಕಂದರೆ ಕಸ್ದೀಯರಿಗೆ ಭಯ ಪಟ್ಟರು.

# THE FIRST BOOK OF THE CHRONICLES.

ದಿನಚರ್ಯಗಳ ಮೊದಲನೇ ಪುಸ್ತಕವು.

## ೧. ಸಂಧಿ.

೧ ಆದಮನು, ಸೇಥನು, ಎನೋಷನು, ಕೇನಾನನು, ಮಹಲಲ್ಲೇ
೩ ಲನು, ಯೇರೆದನು, ಹನೋಕನು, ಮೆಥೂಸೆಲಹನು, ಲೇಮೆಕನು,
೪ ನೋಹನು, ಶೇಮನು, ಹಾಮನು, ಯಾಫೆತನು.

೫ ಯಾಫೆತನ ಮಕ್ಕಳು—ಗೋಮೆರನು, ಮಾಗೋಗನು, ಮಾದ
೬ ಯಿ, ಯಾವನ, ತುಬಲನು, ಮೆಷೆಕನು, ತೀರಸನು. ಗೋಮೆ
ರನ ಮಕ್ಕಳು—ಅಷ್ಕೆನಸನು, ರೀಫಥನು, ತೊಗರ್ಮಾನು
೭ ಯಾವನನ ಮಕ್ಕಳು—ಎಲೀಷನು, ತರ್ಷೀಷನು, ಕಿತ್ತೀಮನು,
ದೊದನೀಮನು.

೮ ಹಾಮನ ಮಕ್ಕಳು—ಕೂಷನು ಮಿಚ್ರಾಯಿಮನು, ಪೂತ
೯ ನು, ಕನಾನನು. ಕೂಷನ ಮಕ್ಕಳು—ಸೇಬನು, ಹವೀಲನು, ಸಬ್ತ
ನು, ರಾಮನು, ಸಬ್ತೆಕನು. ರಾಮನ ಮಕ್ಕಳು—ಶೇಬನು, ದೇದ
೧೦ ನನು. ಕೂಷನು ನಿಮ್ರೋದನನ್ನು ಪಡೆದನು; ಅವನು ಭೂಮಿಯ
೧೧ ಲ್ಲಿ ಪರಾಕ್ರಮಶಾಲಿಯಾಗ ಪ್ರಾರಂಭಿಸಿದನು. ಮಿಚ್ರಾಯಿಮನ
ನು ಲೂದ್ಯರನ್ನೂ, ಅನಾಮ್ಯರನ್ನೂ, ಲೆಹಾಬ್ಯರನ್ನೂ, ನಫ್ತೂ
೧೨ ಹ್ಯರನ್ನೂ, ಪತ್ರೂಸರನ್ನೂ, ಕಸ್ಲೂಹ್ಯರನ್ನೂ, ಕಸ್ಲೂಹ್ಯರ
ನ್ನೂ ಪಡೆದನು; ಕಸ್ಲೂಹ್ಯರೊಳಗಿಂದ ಫಿಲಿಷ್ಟ್ಯರು ಉಂಟಾದ
೧೩ ರು. ಕನಾನನು ತನ್ನ ಚೊಚ್ಚಲ ಮಗನಾದ ಚಿದೋನನನ್ನೂ,
೧೪ ಹೇತನನ್ನೂ, ಯೆಬೂಸ್ಯರನ್ನೂ, ಅಮೋರ್ಯರನ್ನೂ ಗಿರ್ಗಾ
೧೫ ಸ್ಯರನ್ನೂ, ಹಿವ್ವಿಯರನ್ನೂ, ಅಕಿಕಯರನ್ನೂ ಸೀನ್ಯರನ್ನೂ,
೧೬ ಅರ್ವಾದ್ಯರನ್ನೂ, ಚೆಮಾರ್ಯರನ್ನೂ, ಹಮಾತ್ಯರನ್ನೂ ಪಡೆ
ದನು.

೧೭ ಶೇಮನ ಮಕ್ಕಳು—ಏಲಾಮನು, ಅಷೂರನು, ಅರ್ಪಕ್ಷದನು,
ಲೂದನು, ಆರಾಮನು, ಊಜನು, ಹೂಲನು, ಗೇತೆರನು, ಮೇಷ
೧೮ ಕನು. ಅರ್ಪಕ್ಷದನು ಶೆಲಹನನ್ನು ಪಡೆದನು; ಶೆಲಹನು ಏಬೆರನ
೧೯ ನ್ನು ಪಡೆದನು. ಏಬೆರನಿಗೆ ಇಬ್ಬರು ಕುಮಾರರು ಹುಟ್ಟಿದರು.
ಒಬ್ಬನಿಗೆ ಪೇಲೇಗನೆಂಬ ಹೆಸರಿಡಲ್ಪಟ್ಟಿತು; ಯಾಕಂದರೆ ಅವನ
ದಿವಸಗಳಲ್ಲಿ ಭೂಮಿಯು ವಿಭಾಗಿಸಲ್ಪಟ್ಟಿತು; ಅವನ ತಮ್ಮನ
೨೦ ಹೆಸರು ಯೊಕ್ತಾನನು. ಯೊಕ್ತಾನನು ಅಲ್ಮೊದಾದನನ್ನೂ,
೨೧ ಶೆಲೆಫನನ್ನೂ, ಹಜರ್ಮಾವೇತನನ್ನೂ, ಯೇರಹನನ್ನೂ, ಹ
೨೨ ದೋರಮನನ್ನೂ, ಊಜಲನನ್ನೂ, ದಿಕ್ಲನನ್ನೂ, ಏಬಲನನ್ನೂ,
೨೩ ಅಬಿಮಯೇಲನನ್ನೂ, ಶೇಬನನ್ನೂ, ಓಫಿರನನ್ನೂ, ಹವೀಲನನ್ನೂ
ಯೊಬಾಬನನ್ನೂ ಪಡೆದನು. ಇವರೆಲ್ಲರು ಯೊಕ್ತಾನನ ಮಕ್ಕಳು.

೨೪ ಶೇಮನು, ಅರ್ಪಕ್ಷದನು, ಶೆಲಹನು, ಏಬೆರನು, ಪೆಲೆಗನು.
೨೬ ಶೇಯೂವು, ಸೆರೂಗನು, ನಾಹೊರನು, ತೇರಹನು, ಅಬ್ರಾಹಾಮ
೨೭ ನೆಂಬ ಅಬ್ರಾಮನು.

೨೮ ಅಬ್ರಾಹಾಮನ ಮಕ್ಕಳು—ಇಸಾಕನು, ಇಷ್ಮಾಯೇಲನು. ಇ
ವರ ಮಕಾವಳ್ಳಿ ಏನಂದರೆ—ಇಷ್ಮಾಯೇಲನ ಚೊಚ್ಚಲ ಮಗನು
ನೆಬಾಯೋತನು, ಶರುವಾಯ ಕೆದರನು, ಅದ್ಬೇಲನು, ಮಿಬ್ಸಾ
೩೦ ಮನು, ಮಿಷ್ಮಾನು, ದೂಮನು, ಮಸ್ಸನು, ಹದದನು, ತೇಮಾ
೩೧ ನು, ಎಟ್ಟೂರನು, ನಫೀಷನು, ಕೇದೆಮನು. ಇವರೇ ಇಷ್ಮಾಯೇಲ
ನ ಕುಮಾರರು.

೩೨ ಅಬ್ರಾಹಾಮನ ಉಪಪತ್ನಿಯಾದ ಕೆಟೂರಳ ಮಕ್ಕಳು. ಅ
ವಳು ಜಿಮ್ರಾನನನ್ನೂ, ಯೊಕ್ಷಾನನನ್ನೂ, ಮೆದಾನನನ್ನೂ,
ಮಿದ್ಯಾನನನ್ನೂ, ಇಷ್ಬಾಕನನ್ನೂ, ಶೂಹನನ್ನೂ ಹೆತ್ತಳು.
೩೩ ಯೊಕ್ಷಾನನ ಮಕ್ಕಳು—ಶೇಬನು, ದೆದಾನನು. ಮಿದ್ಯಾನನ ಮ
ಕ್ಕಳು—ಏಫನು, ಏಫರನು, ಹನೋಕನು, ಅಬೀದನು, ಎಲ್ದಾವನು.
ಇವರೆಲ್ಲರು ಕೆಟೂರಳ ಮಕ್ಕಳು.

೩೪ ಅಬ್ರಾಹಾಮನು ಇಸಾಕನನ್ನು ಪಡೆದನು. ಇಸಾಕನ ಮಕ್ಕ
೩೫ ಳು ಎಸಾವನು, ಇಸ್ರಯೇಲನು. ಎಸಾವನ ಮಕ್ಕಳು—ಎಲಿ
ಫಾಜನು, ರೆಯೂವೇಲನು, ಯೆಯೂಷನು, ಯಲ್ಲಾಮನು, ಕೋ
೩೬ ರಹನು. ಎಲಿಫಾಜನ ಮಕ್ಕಳು—ತೇಮನನು, ಓಮರನು, ಜೆಫಿ,

೩೭ ಗಾಟಿಮನು, ಕೆನಾಜನು, ಥಿಮ್ನಳು, ಅಮಲೇಕನು. ಕೆಯುವೇಲ
೩೮ ನ ಮಕ್ಕಳು—ನಾಹಾತನು, ಜೇರಹನು, ಶಮ್ಮನು, ಮಿಜ್ಜನು. ಸೇ
ಯಿರನ ಮಕ್ಕಳು—ಶೋಟಾನನು, ಶೋಬಾಲನು, ಚಿಬ್ಯೋನ
೩೯ ನು, ಅನನು, ದಿಶೋನನು, ಏಚೇರನು ದೀಷಾನನು. ಲೋಟಾ
ನನ ಮಕ್ಕಳು—ಹೋರಿ, ಹೋಮಾಮನು. ಲೋಟಾನನ ಸ
೪೦ ಹೋದರಿ ತಿಮ್ನಳು. ಶೋಬಾಲನ ಮಕ್ಕಳು— ಅಲ್ವಾನನು, ಮ
ನಾಹಾತನು, ಏಬಲನು, ಶೆಫಿಯು, ಒನಾಮನು. ಚಿಬ್ಯೋನನ
೪೧ ಮಕ್ಕಳು—ಆಯನು, ಅನನು ಅನನ ಮಗನು. ದಿಶೋನನು.
ದಿಶೋನನ ಮಕ್ಕಳು—ಹಮ್ರಾನನು, ಎಷ್ಬಾನನು, ಇತ್ರಾನನು,
೪೨ ಕೆರಾನನು. ಏಚೆರನ ಮಕ್ಕಳು—ಬಿನ್ಹಾನನು, ಜಾವಾನನು, ಅಕಾ
ನನು. ದಿಷಾನನ ಮಕ್ಕಳು—ಊಜನು, ಅರಾನನು.

೪೩ ಇಸ್ರಯೇಲಿನ ಮಕ್ಕಳ ಮೇಲೆ ಯಾವ ಅರಸನೂ ಆಳದ
ಮುಂಚೆ ಏದೋಮ್ ದೇಶದಲ್ಲಿ ಆಳುವ ಅರಸುಗಳು ಯಾರಂದರೆ,
೪೪ ಬೆಯೊರನ ಮಗನಾದ ಬೇಲನು; ಅವನ ಪಟ್ಟಣದ ಹೆಸರು ದಿನ್ಹಬ.
ಬೇಲನು ಸತ್ತ ತರುವಾಯ, ಅವನಿಗೆ ಬದಲಾಗಿ ಬೊಚ್ರದವನಾ
೪೫ ದಂಥ, ಜೇರಹನ ಮಗನಾದ ಯೋಬಬನು ಆಳಿದನು. ಯೋಬ
ಬನು ಸತ್ತ ತರುವಾಯ, ಅವನಿಗೆ ಬದಲಾಗಿ ಥೆಮಾನ್ಯರ ದೇಶದ
೪೬ ವನಾದ ಹುಷಾಮನು ಆಳಿದನು. ಹುಷಾಮನು ಸತ್ತಾಗ, ಅವನಿ
ಗೆ ಬದಲಾಗಿ ಮೋವಾಬಿನ ಹೊಲದಲ್ಲಿ ಮಿದ್ಯಾನ್ಯರನ್ನು ಹೊಡೆ
ದ, ಬೆದಾದನ ಮಗನಾದ ಹದಾದನು ಆಳಿದನು. ಅವನ ಪಟ್ಟಣದ
೪೭ ಹೆಸರು ಅವೀತು. ಹದಾದನು ಸತ್ತ ತರುವಾಯ, ಅವನಿಗೆ ಬದ
೪೮ ಲಾಗಿ ಮಸ್ರೆಕದವನಾದ ಸಮ್ಲನು ಆಳಿದನು. ಸಮ್ಲನು ಸತ್ತ ತ
ರುವಾಯ, ಅವನಿಗೆ ಬದಲಾಗಿ ನದಿಯ ತೀರದಲ್ಲಿರುವ ರೆಹೊ
೪೯ ಬೋತ್ ಊರಿನ ಸಾಲನು ಆಳಿದನು. ಸಾಲನು ಸತ್ತ ತರುವಾ
ಯ, ಅವನಿಗೆ ಬದಲಾಗಿ ಅಕ್ಬೊರನ ಮಗನಾದ ಬಾಳ್ಹನಾನನು
೫೦ ಆಳಿದನು. ಬಾಳ್ಹನಾನನು ಸತ್ತ ತರುವಾಯ, ಅವನಿಗೆ ಬದಲಾಗಿ
ಹದಾರನು ಆಳಿದನು. ಅವನ ಪಟ್ಟಣದ ಹೆಸರು ಪಾವಿ. ಅವನ
ಹೆಂಡತಿಯ ಹೆಸರು ಮೆಹೆಟಬೇಲಳು; ಅವಳು ಮಟ್ರೆದನ ಮಗ
೫೧ ಳೂ, ಮೇಜಹಬನ ಮೊಮ್ಮಗಳೂ ಆಗಿದ್ದಳು. ಮತ್ತು ಹದಾದ
ನು ಸತ್ತನು. ಎದೋಮನ ಪ್ರಭುಗಳು ಯಾರಂದರೆ—ತಿಮ್ನ ಪ್ರ
೫೨ ಭು, ಅಲ್ವಾ ಪ್ರಭು, ಯೆತೆತ್ ಪ್ರಭು, ಅಹೊಲೀಬಮ ಪ್ರಭು, ಏಲಾ
೫೩ ಪ್ರಭು, ಪೀನೊನ್ ಪ್ರಭು, ಕೆನಾಜ್ ಪ್ರಭು, ಥೇಮಾನ್ ಪ್ರಭು, ಮಿಬ್ಸರ
೫೪ ಪ್ರಭು, ಮಗ್ದಿಯೇಲ್ ಪ್ರಭು, ಈರಮ್ ಪ್ರಭು. ಇವರೇ ಎದೋ
ಮನ ಪ್ರಭುಗಳು.

## ೨. ಸಂಧಿ.

೧ ಇಸ್ರಯೇಲನ ಮಕ್ಕಳು—ರೂಬೆನನು, ಸಿಮೆಯೋನನು, ಲೇ
೨ ವಿಯು, ಯೆಹೂದನು, ಇಸ್ಸಕಾರನು, ಜೆಬುಲೋನನು, ದಾನನು,
ಯೋಸೆಫನು, ಬೆನ್ಯಮಿನನು, ನೆಫ್ತಲಿಯು, ಗಾದನು, ಅಶೇರನು.
3 ಯೆಹೂದನ ಮಕ್ಕಳು ಏರನು, ಓನಾನನು, ಶೇಲಹನು. ಈ
ಮೂವರು ಅವನಿಗೆ ಕೂವನ ಮಗಳಾದ ಕವಾನ ದೇಶದವಳಿಂದ
ಹುಟ್ಟಿದರು. ಆದರೆ ಯೆಹೂದನ ಜ್ಯೆಷ್ಠ ಮಗನಾದ ಏರನು ಕ
ರ್ತನ ಸಮುಖದಲ್ಲಿ ಕೆಟ್ಟವನಾದದರಿಂದ, ಆತನು ಅವನನ್ನು ಕೊಂ
೪ ದು ಹಾಕಿದನು. ಮತ್ತು ಅವನ ಸೊಸೆಯಾದ ತಾಮರಳು ಅವ
ನಿಗೆ ಪೇರೆಚನನ್ನೂ ಜೇರಹನನ್ನೂ ಹೆತ್ತಳು. ಯೆಹೂದನ ಮ
ಕ್ಕಳೆಲ್ಲರೂ ಐದು ಮಂದಿ.

೫ ಪೇರೆಚನ ಮಕ್ಕಳು—ಹೆಜ್ರೋನನು, ಹಮೂಲನು. ಜೇರಹನ
ಮಕ್ಕಳು ಜಿಮ್ರಿಯು, ಎತಾನನು, ಹೆಮಾನನು, ಕಲ್ಕೋಲನು, ದ
೬ ರಾನನು ಇವರೆಲ್ಲರು ಐದು ಮಂದಿ. ಕರ್ಮಿಯ ಮಕ್ಕಳು—ಶಬಿ
ಲ್ಪಟ್ಟಿದ್ದರಲ್ಲಿ ಅಕೃತ್ಯ ಮಾಡಿದ ಇಸ್ರಯೇಲನ್ನು ತೊಂದರೆ ಪ
೭ ಡಿಸುವವನಾದ ಅಕಾರನು. ಎತಾನನ ಮಕ್ಕಳು—ಅಜರ್ಯನು.
೮ ಹೆಜ್ರೋನನಿಗೆ ಹುಟ್ಟಿದ ಮಕ್ಕಳು ಯೆರಹ್ಮೇಲನು, ರಾಮನು, ಕೆ
ಲುಬಾಯನು.

೯ ರಾಮನು ಅಮ್ಮಿನದಾಬನನ್ನು ಪಡೆದನು. ಅಮ್ಮಿನದಾಬನು
ಯೆಹೂದನ ಮಕ್ಕಳಿಗೆ ಪ್ರಭುವಾದ ನಾಶ್ಶೋನನನ್ನು ಪಡೆದನು
೧೦ ನಾಶ್ಶೋನನು ಸಲ್ಮೋನನನ್ನು ಪಡೆದನು, ಸೂಲ್ಮೋನನು ಬೊ
೧೧ ವಾಜನನ್ನು ಪಡೆದನು; ಬೊವಾಜನು ಒಬೇದನನ್ನು ಪಡೆದನು; ಒ
೧೨ ಬೇದನು ಇಷಾಯನನ್ನು ಪಡೆದನು. ಇಷಾಯನು ತನ್ನ ಹೊ
ಜ್ಜಲ ಮಗನಾದ ಎಲ್ಯಾಬನನ್ನೂ, ಎರಡನೆಯವನಾದ ಅಬಿನದಾಬ
ನನ್ನೂ. ಮೂರನೆಯವನಾದ ಶಿಮ್ಮನನ್ನೂ, ನಾಲ್ಕನೆಯವನಾದ
೧೪ ನೆಥಾನಿಯೇಲನನ್ನೂ, ಐದನೆಯವನಾದ ರದ್ದಾಯನನೂ, ಆರನೆ
ಯವನಾದ ಒಜೇಮನನ್ನೂ, ಏಳನೆಯವನಾದ ದಾವೀದನನ್ನೂ
೧೫ ಪಡೆದನು. ಅವರ ಸಹೋದರಿಗಳು ಜೆರೂಯಳು, ಅಬಿಗಾಯ
ಲು. ಜೆರೂಯಳ ಮಕ್ಕಳು—ಅಬಿಷಯ್ಯನು, ಯೊವಾಬನು,
೧೭ ಅಸಹೇಲನು, ಎಂಬ ಈ ಮೂವರು. ಅಬಿಗಾಯಿಲು ಅಮಾಸ
ನನ್ನು ಹೆತ್ತಳು. ಅಮಾಸನ ತಂದೆಯು ಇಷ್ಮಯೇಲ್ಯನಾದ ಯೇ
ತ್ರನು.

೧೮ ಮತ್ತು ಹೆಜ್ರೋನನ ಮಗನಾದ ಕಾಲೆಬನು ತನ್ನ ಹೆಂಡತಿ
ಯಾದ ಅಜೂಬಳಿಂದ ಯೆರಿಯೋತಳನ್ನೂ ಪಡೆದನು. ಇವಳ
೧೯ ಮಕ್ಕಳು—ಯೇಷೆರನು, ಶೊಬಾಬನು ಅರ್ದೋನನು. ಅಜೂಬ
ಳು ಸತ್ತ ತರುವಾಯ, ಕಾಲೆಬನು ಎಫ್ರಾತಳನ್ನೂ ತಕ್ಕೊಂಡನು;
೨೦ ಅವಳು ಅವನಿಗೆ ಹೂರನನ್ನು ಹೆತ್ತಳು. ಹೂರನು ಊರಿಯನ್ನು
೨೧ ಪಡೆದನು; ಊರಿಯು ಬೆಚಲೇಲನನ್ನು ಪಡೆದನು. ತರುವಾಯ
ಹೆಜ್ರೋನನು ಅವನು ಗಿಲ್ಯಾದನ ತಂದೆಯಾದ ಮಕೀರನ ಮಗ
ಳ ಬಳಿಗೆ ಹೋದನು; ಅವನು ಅರುವತ್ತು ವರುಷದವನಾಗಿರುವಾ
ಗ, ಅವಳನ್ನು ತಕ್ಕೊಂಡನು; ಆವಳು ಅವನಿಗೆ ಸೆಗೂಬನನ್ನು
೨೨ ಹೆತ್ತಳು. ಸೆಗೂಬನು ಯಾಯಿರನನ್ನು ಪಡೆದನು. ಇವನಿಗೆ ಗಿ
ಲ್ಯಾದಿನ ದೇಶದಲ್ಲಿ ಇಪ್ಪತ್ತು ಮೂರು ಪಟ್ಟಣಗಳು ಉಂಟಾಗ್ದ
೨೩ ವು. ಇದಲ್ಲದೆ ಅವನು ಗೆಷೂರನನ್ನೂ, ಅರಾಮನ್ನೂ, ಯಯಿ
ರನ ಪಟ್ಟಣಗಳನ್ನೂ, ಕೇನತನ್ನೂ ಅದರ ಪಟ್ಟಣಗಳನ್ನೂ—ಅರುವ
ತ್ತು ಪಟ್ಟಣಗಳನ್ನು ತೆಗೆದು ಕೊಂಡನು. ಇವುಗಳೆಲ್ಲಾ ಗಿಲ್ಯಾದನ
೨೪ ತಂದೆಯಾದ ಮಕೀರನ ಮಕ್ಕಳಿಗೆ ಇದ್ದವು. ಹೆಜ್ರೋನನು ಕಾ
ಲೆಬನ ಎಫ್ರಾಥದಲ್ಲಿ ಸತ್ತ ತರುವಾಯ, ಹೆಜ್ರೋನನ ಹೆಂಡತಿ
ಯಾದ ಅಬೀಯಳು ಅವನಿಗೆ ಅಷ್ಹೂರನನ್ನು ಹೆತ್ತಳು. ಇವ
ನು ತೆಕೋಯಿನ ತಂದೆಯು.

೨೫ ಹೆಜ್ರೋನನ ಜ್ಯೆಷ್ಠ ಮಗನಾದ ಯೆರಹ್ಮೇಲನ ಮಕ್ಕಳು
—ಜ್ಯೆಷ್ಠ ಮಗನಾದ ರಾಮನು, ಬೂನನು, ಒರೇನನು, ಒಜೇ
೨೬ ಮನು, ಅಹೀಯನು. ಈ ಯೆರಹ್ಮೇಲನಿಗೆ ಮತ್ತೊಬ್ಬ ಹೆಂಡತಿ
ಇದ್ದಳು; ಅವಳ ಹೆಸರು ಅಟಾರಳು; ಅವಳು ಒನಾಮನ ತಾಯಿ
೨೭ ಯೆರಹ್ಮೇಲನ ಜ್ಯೆಷ್ಠ ಮಗನಾದ ರಾಮನ ಮಕ್ಕಳು—ಮಾ.



೨೮ ಚನು, ಯಮಿನಾನನು, ಏಕ್ರನು. ಒನಾಮನ ಮಕ್ಕಳು—ಶಮ್ಮಾ
ಯನು, ಯದಾವನು. ಶಮ್ಮಾಯನ ಮಕ್ಕಳು— ನಾದಬನು,
೨೯ ಅಬಿಷೂರನು. ಅಬಿಷೂರನ ಹೆಂಡತಿಯ ಹೆಸರು ಅಬಿಹಾಯಿಲು;
೩೦ ಅವಳು ಅವನಿಗೆ ಅಹಾನನನ್ನೂ ಮೊಲೀದನನ್ನೂ ಹೆತ್ತಳು. ನಾ
ದಬನ ಮಕ್ಕಳು—ಸೇಲದನು, ಅಪ್ಪಾಯನು. ಸೇಲದನು ಮಕ್ಕ
೩೧ ಳಿಲ್ಲದೆ ಸತ್ತನು. ಅಪ್ಪಾಯನ ಮಗನು ಇಷಿಯು; ಇಷಿಯ ಪ
೩೨ ಗನು ಶೆಷಾನನು; ಶೆಷಾನನ ಮಗನು ಅಹ್ಲಾಯನು. ಶಮ್ಮಾ
ಯನ ಸಹೋದರನಾದ ಯದಾಯನ ಮಕ್ಕಳು—ಯೇತ್ರನು,
೩೩ ಯೆಹೊನತಾನನು. ಯೇತ್ರನ ಮಕ್ಕಳಿಲ್ಲದೆ ಸತ್ತನು. ಯೆಹೊ
ನತಾನನ ಮಕ್ಕಳು—ಪೇಲತನು, ಜಾಜನು. ಇವರೇ ಯೆರಹ್ಮೇ
ಲನ ಮಕ್ಕಳಾಗಿದ್ದರು.

೩೪ ಆದರೆ ಶೆಷಾನನಿಗೆ ಕುಮಾರರಿಲ್ಲದೆ, ಕುಮಾರ್ತೆಗಳಿದ್ದರು.
ಮತ್ತು ಶೆಷಾನನಿಗೆ ಯರ್ಹಾನನೆಂಬ ಹೆಸರುಳ್ಳ ಐಗುಪ್ತ್ಯನಾದ
೩೫ ಸೇವಕನಿದ್ದನು. ಶೆಷಾನನು ತನ್ನ ಕುಮಾರ್ತೆಯನ್ನು ತನ್ನ ಸೇ
ವಕನಾದ ಯರ್ಹಾನನಿಗೆ ಹೆಂಡತಿಯಾಗ ಕೊಟ್ಟನು. ಅವಳು ಅ
೩೬ ವನಿಗೆ ಅಟ್ಟಾಯನನ್ನು ಹೆತ್ತಳು. ಅಟ್ಟಾಯಿ ನತಾನನನ್ನು ಪಡೆ
೩೭ ದನು; ನತಾನನು ಜಬಾದನನ್ನು ಪಡೆದನು. ಜಬಾದನು ಎಫ್ಲಾಲ
೩೮ ನನ್ನು ಪಡೆದನು; ಎಫ್ಲಾಲನು ಒಬೇದನನ್ನು ಪಡೆದನು. ಒಬೇದ
ನು ಯೇಹುವನ್ನು ಪಡೆದನು; ಯೇಹುವು ಅಜರ್ಯನನ್ನು ಪಡೆದ
೩೯ ನು. ಅಜರ್ಯನು ಹೆಲೇಚನನ್ನು ಪಡೆದನು; ಹೆಲೇಚನು ಎಳ್ಳಾಸ
೪೦ ನನ್ನು ಪಡೆದನು. ಎಳ್ಳಾಸನು ಸಿಸ್ಸಾಯನನ್ನು ಪಡೆದನು; ಸಿಸ್ಸಾ
೪೧ ಯಿ ಶಲ್ಲೂಮನನ್ನು ಪಡೆದನು. ಶಲ್ಲೂಮ್ಯನು ಯೆಕಮ್ಯನನ್ನು
ಪಡೆದನು; ಯೆಕಮ್ಯನು ಎಲಿಷಾಮನನ್ನು ಪಡೆದನು.

೪೨ ಯೆರಹ್ಮೇಲನ ಸಹೋದರನಾದ ಕಾಲೆಬನ ಮಕ್ಕಳು—ಅವನ
ಜ್ಯೆಷ್ಠ ಮಗನು ಮೇಷನು; ಇವನು ಜೀಫನಿಗೆ ತಂದೆಯಾಗಿ
ದ್ದನು. ಮತ್ತು ಹೆಬ್ರೋನನ ತಂದೆಯಾದ ಮಶೇಷನಿಗೆ ಮಕ್ಕ
೪೩ ಳು ಉಂಟಾಗಿದ್ದರು. ಹೆಬ್ರೋನನ ಮಕ್ಕಳು—ಕೋರಹನು, ತ
೪೪ ಪ್ಪೂಹನು, ರೇಕಮನು ಶೇಮನು. ಶೇಮನು, ಯೊರ್ಕೋ
ಹಾಮನ ತಂದೆಯಾದ ರಹಾಮನನ್ನು ಪಡೆದನು; ಮತ್ತು ರೇಕಮ
೪೫ ನು ಶಮ್ಮಾಯನ್ನು ಪಡೆದನು. ಶಮ್ಮಾಯಿಯ ಮಗನು ಮಪೋ
೪೬ ನನು; ಈ ಮಪೋನನು ಬೆಚ್ಚೂರಿಗೆ ತಂದೆಯಾಗಿದ್ದನು. ಕಾಲೆ
ಬನ ಉಪಪತ್ನಿಯಾದ ಏಫಳೂ ಹರಾನನನ್ನೂ, ಮೋಚನ
ನ್ನೂ, ಗಜೇಜನನ್ನೂ ಹೆತ್ತಳು. ಮತ್ತು ಹರಾನನು ಗಜೇಜನ
೪೭ ನ್ನು ಪಡೆದನು. ಯೆಡಾಯಿಯ ಮಕ್ಕಳು—ಕೇಸ್ಸನು, ಯೊತಾ
೪೮ ಮನು, ಗೆಷಾನನು, ಪೇಲಟನು, ಏಫನು, ಶವಾಫನು. ಮತ್ತು
ಕಾಲೆಬನ ಉಪಪತ್ನಿಯಾದ ಮಾಕಳು ಶೇಬರನನ್ನೂ, ತಿರ್ಹಾನನ
೪೯ ನ್ನೂ ಹೆತ್ತಳು. ಇದಲ್ಲದೆ ಅವಳು ಮದ್ಮನ್ನನ ತಂದೆಯಾದ ಶ
ವಾಫನನ್ನೂ ಮಕ್ಬೇನನಿಗೂ ಗಿಬ್ಯನಿಗೂ ತಂದೆಯಾದ ಶೀವನ
ನ್ನೂ ಹೆತ್ತಳು. ಕಾಲೆಬನ ಮಗಳು ಅಕ್ಷಳು.

೫೦ ಎಫ್ರಾತನ ಜ್ಯೆಷ್ಠ ಮಗನಾದ ಹೂರನ ಮಗನಾದ ಕಾಲೆ
ಬನ ಮಕ್ಕಳು—ಕಿರ್ಯಾತ್ ಯಾರೀಮಿನವರ ತಂದೆಯಾದ ಹೊ
೫೧ ಬಾಲನು. ಬೆತ್ಲೆಹೇಮ್ಯರಿಗೆ ತಂದೆಯಾದ ಸಲ್ಮನು, ಬೆತ್ಗಾದೇರಿಗೆ
೫೨ ತಂದೆಯಾದ ಹರೇಳನು. ಇದಲ್ಲದೆ ಕಿರ್ಯಾತ್‌ಯಾರೀಮಿನವ
ರ ತಂದೆಯಾದ ಶೋಬಾಲನಿಗೆ ಮಕ್ಕಳಿದ್ದರು; ಅವರು ಯಾರಂ
೫೩ ದರೆ ಹರೋಯೆಯು, ಹಚಿಹಮೆನುಹೊತನು. ಕಿರ್ಯಾತ್
ಯಾರೀಮಿನವರ ಸಂತತಿಗಳು ಯಾರಂದರೆ—ಇತ್ರಿಯರು,
ಪೂತ್ಯರು, ಶುಮಾತ್ಯರು, ಮಿಷ್ರಾಯ್ಯರು; ಮತ್ತು ಇವರಿಂದ
೫೪ ಜೊರಾತ್ಯರೂ ಎಷ್ಟಾಯೋಲ್ಯರೂ ಹುಟ್ಟಿದರು. ಸಲ್ಮನ ಮಕ್ಕ
ಳು—ಬೇತ್ಲೆಹೇಮ್ಯರು, ನೆಟೋಫಾತ್ಯರು, ಅತಕೋತ್ಯರು, ಯೊ
ವಾಬನ ಮನೆಯವರು, ಹಚಿಹಸೆನುನ ಹೊತ್ಯರು, ಜೊರಾತ್ಯರು.
೫೫ ಯಬೇಚೆನಲ್ಲಿ ವಾಸವಾಗಿದ್ದ ಶಾಸ್ತ್ರಿಗಳ ಸಂತತಿಗಳು ಯಾರಂ
ದರೆ, ತಿರ್ಯಾತ್ಯರು, ಶಿಮಾತ್ಯರು, ಸುಕಾತ್ಯರು; ಇವರೇ ರೆಕಾಬನ
ಮನೆಗೆ ತಂದೆಯಾದ ಹಮ್ಮತನಿಂದ ಹುಟ್ಟಿದ ಕೇನಿಯರು.

## ೩. ಸಂಧಿ.

೧ ಹೆಬ್ರೋನಿನಲ್ಲಿ ದಾವೀದನಿಗೆ ಹುಟ್ಟಿದ ಮಕ್ಕಳು ಯಾರಂದ
ರೆ, ಇಜ್ರೇಲ್ಯಳಾದ ಅಹಿನೊವಾಮಳಿಂದ ಜ್ಯೆಷ್ಠ ಮಗನಾದ
ಅಮ್ನೋನನು, ಕರ್ಮೇಲ್ಯಳಾದ ಅಬಿಗಾಯಿಲಿಂದ ಹುಟ್ಟಿ ಎರಡ
೨ ನೆಯವನಾದ ದಾನಿಯೇಲನು, ಗೆಷೂರಿನ ಅರಸನಾಗಿರುವ ತಲ್ಮಾ
ಯಿಯ ಮಗಳಾದ ಮಾಕಳ ಮಗನಾದಂಥ, ಮೂರನೆಯವನಾ
ದ ಅಬ್ಷಲೋಮನು, ಹಗ್ಗೀತಳ ಮಗನಾದ ನಾಲ್ಕನೆಯವನಾದ
೩ ಅದೊನಿಯೆನು, ಅಬಿಟಾಲಳಿಂದ ಹುಟ್ಟಿದ ಐದನೆಯವನಾದ ಶೆಫ
ಟ್ಯನು, ತನ್ನ ಹೆಂಡತಿಯಾದ ಎಗ್ಲಳಿಂದ ಹುಟ್ಟಿದ ಆರನೆಯವ
೪ ನಾದ ಇತ್ರಾಮನು. ಈ ಆರು ಮಂದಿ ಹೆಬ್ರೋನಿನಲ್ಲಿ ಅವನಿಗೆ
ಹುಟ್ಟಿದರು. ಅಲ್ಲಿ ಅವನು ಏಳೂವರೇ ವರುಷ ಆಳಿದನು; ಮತ್ತು
೫ ಯೆರೂಸಲೇಮಿನಲ್ಲಿ ಮೂವತ್ತು ಮೂರು ವರುಷ ಆಳಿದನು.
ಯೆರೂಸಲೇಮಿನಲ್ಲಿ ಅವನಿಗೆ ಹುಟ್ಟಿದವರು ಯಾರಂದರೆ, ಅಮ್ಮಿ
ಯೇಲನ ಮಗಳಾದ ಬತ್ಷೇಬಳಿಂದ ಹುಟ್ಟಿದ ಶಿಮ್ಮನು, ಶೋಬಾಲ
೬ ನು, ನತಾನನು, ಸೊಲೊಮೋನನು ಈ ನಾಲ್ಕು ಮಂದಿಯು.
೭ ಇದಲ್ಲದೆ ಇಭಾರನು, ಎಲಿಷಾಮನು, ಎಲಿಫೇಲಟನು, ನೊಗಾಹ
೮ ನು ನೆಫೆಗನು, ಯೆಫೀಯನು, ಎಲಿಷಾಮನು, ಎಲ್ಯಾದಾವನು, ಎಲಿಫೇ
೯ ಲಟನು ಈ ಒಂಭತ್ತು ಮಂದಿಯು. ಉಪಪತ್ನಿಗಳ ಮಕ್ಕಳು ಹೊ
ರ್ತಾಗಿ, ಇವರೆಲ್ಲರು ದಾವೀದನ ಮಕ್ಕಳಾಗಿದ್ದರು. ತಾಮರಳು
ಇವರ ಸಹೋದರಿಯಾಗಿದ್ದಳು.

೧೦ ಸೊಲೊಮೋನನ ಮಗನು ರೆಹಬಾಮನು; ಅವನ ಮಗನು ಅ
ಬೀಯನು; ಅವನ ಮಗನು ಆಸನು; ಅವನ ಮಗನು ಯೆಹೋಷ
೧೧ ಫಾಟನು. ಅವನ ಮಗನು ಯೊರಾಮನು; ಅವನ ಮಗನು ಅಹ
೧೨ ಜ್ಯನು; ಅವನ ಮಗನು ಯೊವಾಷನು. ಅವನ ಮಗನು ಅಮ
ಚ್ಯೀಯನು ಅವನ ಮಗನು ಅಜರ್ಯನು; ಅವನ ಮಗನು ಯೊ
೧೩ ತಾಮನು. ಅವನು ಮಗನು ಆಹಾಜನು; ಅವನ ಮಗನು ಹಿಜ್ಕೀ
೧೪ ಯನು; ಅವನ ಮಗನು ಮನಸ್ಸೆಯು. ಅವನ ಮಗನು ಆಮೋ
ನನು; ಅವನ ಮಗನು ಯೊಷೀಯನು.

೧೫ ಯೋಷಿಯನ ಮಕ್ಕಳು—ಜ್ಯೆಷ್ಠ ಮಗನಾದ ಯೊಹ
ನಾನನು, ಎರಡನೆಯವನಾದ ಯೆಹೊಯಕೀಮನು, ಮೂರನೆ
ಯವನಾದ ಚಿದ್ಕೀಯನು, ನಾಲ್ಕನೆಯವನಾದ ಶಲ್ಲೂಮನು.
೧೬ ಯೆಹೊಯಕೀಮನ ಮಕ್ಕಳು—ಅವನ ಮಗನಾದ ಯೆಕೊ
ನ್ಯನು; ಅವನ ಮಗನು ಚಿದ್ಕೀಯನು.
೧೭ ಯೆಕೊನ್ಯನ ಮಕ್ಕಳು—ಅಸ್ಸೀರನು; ಅವನ ಮಗನು ಶಲ್ತಿ
೧೮ ಯೇಲನು. ಮತ್ತು ಮಲ್ಕೀರಮನು, ಪೆದಾಯನು, ಶೇನಚ್ಚರನು,
ಯೆಕಮ್ಯನು, ಹೊಷಮಾವನು, ನೆದಬ್ಯನು.

೧೯ ಬೆದಾಯನ ಮಕ್ಕಳು—ಜೆರುಬಾಬೆಲನು, ಶಿಮ್ಮೆಯಿ. ಜೆರು
ಬಾಬೆಲನ ಮಕ್ಕಳು—ಮೆಷುಲ್ಲಾಮನು, ಹನನ್ಯನು, ಇವರ ಸ
೨೦ ಹೋದರಿಯಾದ ಶೆಲೊಮಿತಾಳು. ಮತ್ತು ಹಷೂಬನು, ಓಹಲ
ನು, ಬೆರೆಕ್ಯನು, ಹಸದ್ಯನು, ಯುಷಬ್ಹೇಸದನು; ಈ ಐದು ಮಂ
ದಿಯು.
೨೧ ಹನನ್ಯನ ಮಕ್ಕಳು—ಪೆಲಟ್ಯನು, ಯೆಷಾಯನು; ರೆಫಾಯ
ನ ಮಕ್ಕಳು, ಅರ್ನಾನನ ಮಕ್ಕಳು, ಬಬದ್ಯನ ಮಕ್ಕಳು, ಶೆಕನ್ಯ
ನ ಮಕ್ಕಳು.
೨೨ ಶೆಕನ್ಯನ ಮಗನು, ಶೆಮಾಯನು; ಶೆಮಾಯನ ಮಕ್ಕಳು—
ಹಟೂಷನು, ಇಗಾಲನು, ಬರೀಹನು, ನೆವರ್ಯನು, ಶಫಾಟನು;
ಈ ಆರು ಮಂದಿಯು.
೨೩ ನೆವರ್ಯನ ಮಕ್ಕಳು—ಎಲ್ಯೆಹೊವೆನಾಯನು, ಹಿಜ್ಕೀಯ
ನು, ಅಜ್ರೀಕಮನು, ಈ ಮೂರು ಮಂದಿಯು.
೨೪ ಎಲ್ಯೆಹೊವೆನಾಯನ ಮಕ್ಕಳು—ಹೊದವ್ಯನು, ಎಲ್ಯಾಷೀಬನು
ಪೆಲಾಯನು, ಅಕ್ಕೂಬನು, ಯೊಹನಾನನು, ದೆಲಾಯನು, ಅಣಾ
ನ್ಯನು, ಈ ಏಳು ಮಂದಿಯು.

## ೪. ಸಂಧಿ.

೧ ಯೆಹೂದನ ಮಕ್ಕಳು—ಪೇರಚನು, ಹೆಜ್ರೋನನು, ಕರ್ಮಿ
೨ ಯು, ಹೂರನು, ಶೊಬಾಲನು. ಶೊಬಾಲನ ಮಗನಾದ ರಾಯ
ನು ಯಹಾತನನ್ನು ಪಡೆದನು; ಯಹಾತನು ಅಹುಮಾಯನ್ನೂ
ಲಹಾದನನ್ನೂ ಪಡೆದನು. ಇವರೇ ಚೊರಾತ್ಯರ ಸಂತತಿಗಳು.
೩ ಎಟಾಮಿನ ತಂದೆಯಿಂದ ಹುಟ್ಟಿದವರು ಯಾರಂದರೆ, ಇಜ್ರೇಲ
ನು, ಇಷ್ಮನು, ಇದ್ಬಾಷನು, ಅವರ ಸಹೋದರಿಯಾದ ಹೆಲೆ
೪ ಲ್ಪೋನಿಯು ಎಂಬವಳು. ಪೆನುವೇಲನು ಗೆದೋರಿನವರಿಗೆ ತಂದೆ
ಯಾಗಿದ್ದನು. ಏಜ್ರನು ಹೂರನಿಗೆ ತಂದೆಯಾಗಿದ್ದನು. ಇವರು
ಬೇತ್ಲೆಹೇಮಿಗೆ ತಂದೆಯಾಗಿದ್ದ ಎಫ್ರಾತನ ಹೊಜ್ಜಲ ಮಗನಾ
ದ ಹೂರನ ಮಕ್ಕಳು.
೫ ತೆಕೋವದ ತಂದೆಯಾದ ಅಷ್ಹೂರನಿಗೆ ಹೆಲ್ಯಳು ನವಾರಳು
೬ ಎಂಬ ಇಬ್ಬರು ಹೆಂಡರಿದ್ದರು. ನವಾರಳು ಅವನಿಗೆ ಅಹುಜಾಮ
ನನ್ನೂ, ಹೆಫೆರನನ್ನೂ, ತೆಮೆನಿಯನ್ನೂ, ಅಹಷ್ತರಿಯನ್ನೂ
೭ ಹೆತ್ತಳು. ಇವರೇ ನವಾರಳ ಮಕ್ಕಳು. ಹೆಲ್ಯಳ ಮಕ್ಕಳು—ಜೇ
೮ ರೆತೆನು, ಜೋಹರನು, ಎತ್ನಾನನು. ಕೋಚನು ಅಣೂಬನ
ನ್ನೂ, ಜೊಬೇಬನನ್ನೂ, ಹರೂಮನ ಮಗನಾದ ಅಹರ್ಹೇಲನ
ಸಂತತಿಗಳನ್ನೂ ಪಡೆದನು.
೯ ಯಬೇಚನು ತನ್ನ ಸಹೋದರರಿಗಿಂತ ಘನವುಳ್ಳವನಾಗಿದ್ದ
ನು. ಅವನ ತಾಯಿ, ನಾನು ಇವನನ್ನು ವ್ಯಥೆಯಿಂದ ಹೆತ್ತೆನೆಂ
೧೦ ದು ಅವನಿಗೆ ಯಬೇಚನೆಂಬ ಹೆಸರಿಟ್ಟಳು. ಆದರೆ ಯಬೇಚನು
ಇಸ್ರಯೇಲಿನ ದೇವರನ್ನು ಕೂಗಿ ಹೇಳಿದ್ದು—ನೀನು ನನ್ನನ್ನು ಆ
ಶೀರ್ವದಿಸಲೇ ಆಶೀರ್ವದಿಸ ಬೇಕು; ನನ್ನ ಮೇರೆಯನ್ನು ವಿಸ್ತರಿ
ಸ ಬೇಕು; ನಿನ್ನ ಕೈ ನನ್ನ ಸಂಗಡ ಇರಲಿ; ಆದು ನನ್ನನ್ನು ವ್ಯ
ಥೆ ಪಡಿಸದ ಹಾಗೆ, ನನ್ನನ್ನು ಕೇಡಿನಿಂದ ತಪ್ಪಿಸು. ಮತ್ತು ದೇವ
ರು ಅವನು ಬೇಡಿಕೊಂಡದ್ದನ್ನು ದೊರಕಿಸಿದನು.
೧೧ ಇದಲ್ಲದೆ ಕೂಹನ ಸಹೋದರನಾದ ಕೆಲೂಬನು ಎಹ್ಯೋನನ
೧೨ ತಂದೆಯಾದ ಮೆಹೀರನನ್ನು ಪಡೆದನು. ಎಹ್ಯೋನನು ಬೆತ್ರಾಪ
ನನ್ನೂ, ಪಸೇಹನನ್ನೂ, ಇನಾಹಷಿನವರ ತಂದೆಯಾದ ತೆಹಿ
೧೩ ನ್ನನನ್ನೂ ಪಡೆದನು. ಇವರೇ ರೇಕದ ಮನುಷ್ಯರು. ಕೆನಾಜ
ನ ಮಕ್ಕಳು—ಬತ್ನಿಯೇಲನು, ಸೆರಾಯನು. ಬತ್ನಿಯೇಲನ ಮ
೧೪ ಕ್ಕಳು—ಹತಾತನು. ಮೆಯೊನೊತಾಯನು ಒಫ್ರನನ್ನು ಪಡೆದನು.
ಸೆರಾಯನು ಯಂಚಾಳರಿದ ಹರಶೀಮಿನವರ ತಗ್ಗಿನ ತಂದೆಯಾದ
೧೫ ಯೊವಾಬನನ್ನು ಪಡೆದನು. ಯೆಫುನ್ನೆಯ ಮಗನಾದ ಕಾಲೆಬನ
ಮಕ್ಕಳು—ಈರುವು, ಏಲನು, ನಹಾಮನು; ಏಲನ ಮಗನು ಕೆ
೧೬ ನಾಜನು. ಯೆಹಲ್ಲೇಲನ ಮಕ್ಕಳು—ಜೀಫನು, ಜೀಫ
೧೭ ರ್ಯನು, ಅಸರೇಲನು. ಎಜ್ರನ ಮಕ್ಕಳು—ಯೇತ್ರನು, ಮೆರೆ
ದನು, ಏಫ್ರನು, ಯಲೋನನು. ಮತ್ತು ಪೇರದನ ಹೆಂಡತಿಯು
ಅವನಿಗೆ ಮಿರ್ಯಾಮಳನ್ನೂ, ಷಮ್ಮಾಯನ್ನೂ, ಎಷ್ಟೆ
೧೮ ಮೋವನ ತಂದೆಯಾದ ಇಷ್ಬಾಹನನ್ನೂ ಹೆತ್ತಳು. ಇದಲ್ಲದೆ ಅ
ವನ ಹೆಂಡತಿಯಾದ ಯೆಹೂದಿಯಳು ಗೇದೂರನ ತಂದೆಯಾದ
ಯೆಕೆದನನ್ನೂ, ಸೋಕೋವಿನ ತಂದೆಯಾದ ಹೆಬೇರನನ್ನೂ
ಜನೋಹದ ತಂದೆಯಾದ ಯೆಕತ್ಯೇಲನನ್ನೂ ಹೆತ್ತಳು. ಇವರೇ
ಮೇರದನು ತಕ್ಕೊಂಡ ಪರೋಹನ ಮಗಳಾದ ಬಿತ್ಯಳ ಮಕ್ಕ
೧೯ ಳು. ನಹಾಮನ ಸಹೋದರಿಯಾದ ಹೊದೀಯಳೆಂಬಿ ಅವನ
ಹೆಂಡತಿಯ ಮಕ್ಕಳು—ಗರ್ಮಿಯನಾದ ಕೆಯೀಲನ ತಂದೆಯು,
೨೦ ಮಾಕಾತ್ಯನಾದ ಎಷ್ಟೆಮೋವನು. ಶಿಮೋನನ ಮಕ್ಕಳು—ಅ
ಮ್ನೋನನು, ರಿನ್ನನು, ಬೆನ್ಹಾನಾನನು, ತಿಲೋನನು. ಇಷಿಯ ಮ
ಕ್ಕಳು—ಜೊಹೇತನು, ಬೆನ್ಜೋಹೇತನು.
೨೧ ಯೆಹೂದನ ಮಗನಾದ ಶೇಲಹನ ಮಕ್ಕಳು—ಲೇಕದ ತಂದೆ
ಯಾದ ಏರನು, ಮಾರೇಷದ ತಂದೆಯಾದ ಲಾಹನು, ಅಶ್ಬೇಲನ
ಮನೆಯವರಾಗಿರುವ ನಾರು ಕೆಲಸ ಮಾಡಿದವರ ಮನೆಯ ಸಂ
೨೨ ತತಿಗಳು. ಯೊಕೀಮ್ಯರೂ, ಕೊವಾಬಿನಲ್ಲಿ ಅಧಿಕಾರವುಳ್ಳವ
ರಾದ, ಕೊಜೇಬವು ಯೊವಾಷವು ಸರಾಫವು ಎಂಬ ಸ್ಥಳಗಳ ಮ
ನುಷ್ಯರೂ, ಯೆಹೂಬಿಶೇಹೆಬಿನಲ್ಲಿ ವಾಸವಾಗಿದ್ದವರೂ. ಇವು
೨೩ ಪೂರ್ವದ ಕಾರ್ಯಗಳು. ಇವರೇ ಕುಂಬಾರರು ಇವರು ಗಿಡಗ
ಳ ಕೆಳಗೂ ಪೇಲಿಯ ಅಂಚೆನಲ್ಲಿಯೂ; ವಾಸವಾಗಿರುವರು; ಅಲ್ಲಿ
ಅರಸನ ಕೆಲಕ್ಕೋಸ್ಕರ ವಾಸವಾಗಿದ್ದರು.
೨೪ ಸಿಮೆಯೋನನ ಮಕ್ಕಳು—ನೆಮುವೇಲನು, ಯಮೀನನು, ಯ
೨೫ ರೀಬನು, ಜೇರಹನು, ಷೌಲನು. ಅವನ ಮಗನಾದ ಶಲ್ಲೂಮ
ನು, ಅವನ ಮಗನಾದ ಮಿಬ್ಸಾಮನು, ಅವನ ಮಗನಾದ ಮಿಷ್ಮಾ
೨೬ ವನು. ಮಿಷ್ಮಾವನ ಮಕ್ಕಳು—ಅವನ ಮಗನಾದ ಹಮುವೇಲನು.
ಅವನ ಮಗದಾದ ಜಕ್ಕೂರನು, ಅವನ ಮಗನಾದ ಶಿಮ್ಮೆಯಿ.
೨೭ ಶಿಮ್ಮೆಯಿಗೆ ಹದಿನಾರು ಮಂದಿ ಕುಮಾರರೂ ಆರು ಮಂದಿ ಕು
ಮಾರ್ತೆಯರೂ ಇದ್ದರು. ಆದರೆ ಅವನ ಸಹೋದರರಿಗೆ ಬಹು
ಳ ಮಕ್ಕಳಿಲ್ಲ; ಅವರ ಸಮಸ್ತ ಸಂತತಿ ಯೆಹೂದನ ಮಕ್ಕಳ ಪಾ
೨೮ ಗೆ ಹೆಚ್ಚಾಗಲಿಲ್ಲ. ಇವರು ಬೇರ್ಷೆಬದಲ್ಲಿಯೂ, ಮೊಲಾದಲ್ಲಿ
೨೯ ಯೂ, ಹಚರ್ಷುವಾಲಿನಲ್ಲಿಯೂ, ಬಿಲ್ಹದಲ್ಲಿಯೂ, ಏಚೆಮಿನ
ಲ್ಲಿಯೂ, ತೊಲಾದಿನಲ್ಲಿಯೂ, ಬೆತೂಯೇಲಿನಲ್ಲಿಯೂ, ಹೊ
೩೦ ರ್ಮದಲ್ಲಿಯೂ, ಚಿಕ್ಲಾಗಿನಲ್ಲಿಯೂ, ಬೆತ್ಮರ್ಕಬದಲ್ಲಿಯೂ, ಸ
೩೧ ಚರೂಸಿಯಲ್ಲಿಯೂ, ಬೆಟ್ಬಿರಿಯಲ್ಲಿಯೂ, ಶಅರಯಿಮಲ್ಲಿ
ಯೂ ವಾಸವಾಗಿದ್ದರು. ದಾವೀದನ ಅಳ್ಳಿಕೆಯ ವರೆಗೂ ಇವು
೩೨ ಅವರ ಪಟ್ಟಣಗಳಾಗಿದ್ದವು. ಅವರ ಊರುಗಳು ಯಾವವಂದರೆ,



ಏಟಾಮು, ಅಯಿನು, ರಿಮ್ಮೋನು, ತೊಕೇನು, ಅಷಾನು; ಐ
೩೩ ದು ಊರುಗಳು. ಇದಲ್ಲದೆ ಆ ಪಟ್ಟಣಗಳ ಸುತ್ತಲಿದ್ದ ಊರುಗಳು
ಬಾಳದ ಮಟ್ಟಿಗೂ ಅವರಿಗೆ ಉಂಟಾಗಿದ್ದವು. ಇವೇ ಅವರು ವಾ
೩೪ ಸವಾಗಿರುವ ಸ್ಥಾನಗಳೂ, ಅವರ ವಂಶಾವಳಿಗಳೂ. ಮತ್ತು ಮೆ
ಶೋಬಾಬನು, ಯಮ್ಲೇಕನು, ಅಮಚ್ಯೇಯನ ಮಗನಾದ ಯೋ
೩೫ ಷನು, ಯೊವೇಲನು, ಅಸಿಯೇಲನ ಮಗನಾದ ಸೆರಾಯನ ಮಗ
೩೬ ನಾದ ಯೊಷಿಬ್ಯನ ಮಗನಾದ ಯೇಹುವು. ಎಲ್ಯೊವೆನಾಯನು,
ಯಾಕೋಬನು, ಯೆಶೊಹಾಯನು, ಅಸಾಯನು, ಆದಿಯೇಲ
೩೭ ನು, ಯೆಸಿಮಿಯೇಲನು, ಬೆನಾಯನು. ಶೆಮಾಯನ ಮಗನಾದ
ಶಿಮ್ರಿಯ ಮಗನಾದ ಯೆದಾಯನ ಮಗನಾದ ಅಲ್ಲೋನನ ಮ
೩೮ ಗನಾದ ಶಿಫೀಯ ಮಗನಾದ ಜೀಜನು. ಹೆಸರು ಹೆಸರಾಗಿ ಬರೆಯ
ಲ್ಪಟ್ಟವರಾದ ಇವರು ತಮ್ಮ ಸಂತತಿಗಳಲ್ಲಿ ಪ್ರಭುಗಳಾಗಿದ್ದರು;
ಮತ್ತು ಅವರ ಪಿತೃಗಳ ಮನೆ ಬಹಳ ಅಭಿವೃದ್ಧಿಯಾಯಿತು.
೩೯ ಮತ್ತು ತಮ್ಮ ಮಂದೆಗಳಿಗೆ ಮೇವನ್ನು ಹುಡುಕ, ತಗ್ಗಿನ ಪೂ
ರ್ವದಿಕ್ಕಿನಲ್ಲಿರುವ ಗೆದೋರು ಎಂಬುವ ಸ್ಥಳದ ಪ್ರವೇಶಿಕೆಯ
೪೦ ಪರ್ಯಂತ್ರ ಹೋದರು. ಅವರು ರಸವತ್ತಾದ ಒಳ್ಳೇ ಮೇವನ್ನು
ಕಂಡು ಕೊಂಡರು. ಮತ್ತು ಆ ದೇಶವು ವಿಸ್ತಾರವಾಗಿಯೂ, ಶಾಂ
ತವಾಗಿಯೂ, ಸವಾಧಾನವಾಗಿಯೂ ಇತ್ತು; ಯಾಕಂದರೆ ಪೂ
೪೧ ರ್ವದಲ್ಲಿ ಹಾಮನ ವಂಶದವರು ಅಲ್ಲಿ ವಾಸವಾಗಿದ್ದರು. ಹೆಸರು
ಹೆಸರಾಗಿ ಬರೆಯಲ್ಪಟ್ಟವರಾದ ಇವರು ಯೆಹೂದದ ಅರಸನಾದ
ಯೆಹಿಜ್ಕೀಯನ ದಿವಸಗಳಲ್ಲಿ ಬಂದು, ಅಲ್ಲಿ ಸಿಕ್ಕಿದ ಅವರ ಗುಡಾ
ರಗಳನ್ನೂ, ನಿವಾಸಗಳನ್ನೂ ಹೊಡೆದು, ಅವರನ್ನು ನಿರ್ಮೂಲ
ಮಾಡಿ, ಅಲ್ಲಿ ತಮ್ಮ ಮಂದೆಗಳಿಗೆ ಮೇವು ಇರುವದರಿಂದ ಇಂದಿನ
೪೨ ಪರ್ಯಂತರ ಅವರ ಸ್ಥಳದಲ್ಲಿ ವಾಸವಾಗಿದ್ದಾರೆ. ಇದಲ್ಲದೆ ವ
ರಲ್ಲಿ, ಸಿಮೆಯೋನನ ಕುಮಾರರಲ್ಲಿ ಐನೂರು ಮಂದಿ ಮನುಷ್ಯ
ರು, ಇಷಿಯ ಕುಮಾರರಾದ ಪೆಲಟ್ಯನನ್ನೂ, ನೆವರ್ಯನನ್ನೂ,
ರೆಫಾಯನ್ನೂ, ಉಜ್ಜಿಯೇಲನನ್ನೂ ತಮ್ಮ ಅಧಿಪತಿಗಳಾಗ
೪೩ ಮಾಡಿ ಕೊಂಡು, ಸೇಯಿರ್ ಪರ್ವತಕ್ಕೆ ಹೋಗಿ, ತಪ್ಪಿಸಿಕೊಂಡು
ಹೋದ ಉಳಿದ ಅಮಲೇಕ್ಯರನ್ನು ಹೊಡೆದು, ಅಲ್ಲಿ ಇಂದಿನ ವ
ರಿಗೂ ವಾಸವಾಗಿದ್ದಾರೆ.

## ೫. ಸಂಧಿ.

೧ ಇಸ್ರಯೇಲಿನ ಚೊಚ್ಚಲ ಮಗನಾದ ರೂಬೆನನ ಮಕ್ಕಳು—
ಯಾಕಂದರೆ ಅವನು ಚೊಚ್ಚಲ ಮಗನಾಗಿದ್ದನು; ಆದರೆ ಅವ
ನು ತನ್ನ ತಂದೆಯ ಹಾಸಿಕೆಯನ್ನು ಅಪವಿತ್ರ ಮಾಡಿದ್ದರಿಂದ, ಅ
ವನ ಚೊಚ್ಚಲುತನ ಇಸ್ರಯೇಲನ ಮಗನಾದ ಯೋಸೆಫನ
ಮಕ್ಕಳಿಗೆ ಕೊಡಲ್ಪಟ್ಟಿತು. ಆದದರಿಂದ ಈ ವಂಶಾವಳಿಯು ಚೊ
೨ ಚ್ಚಲುತನದ ಪ್ರಕಾರ ಬರೆಯಲ್ಪಟ್ಟಿದ್ದಲ್ಲ. ಯಾಕಂದರೆ ಯೆ
ಹೂದನು ತನ್ನ ಸಹೋದರರಿಗಿಂತ ಬಲವುಳ್ಳವನಾದನು. ಮತ್ತು
ಅವನಿಂದ ನಾಯಕನು ಹುಟ್ಟಿದನು; ಆದರೆ ಚೊಚ್ಚಲುತನ ಯೋ
೩ ಸೆಫನದಾಗಿತ್ತು. ಇಸ್ರಯೇಲನ ಚೊಚ್ಚಲ ಮಗನಾದ ರೂಬೆನನ
ಮಕ್ಕಳು—ಹನೋಕನು, ಪಲ್ಲು, ಹೆಚ್ರೋನನು, ಕರ್ಮಿಯು.
೪ ಯೋವೆಲನ ಮಕ್ಕಳು—ಅವನ ಮಗನಾದ ಶೆಮಾಯನು, ಅವ
೫ ನ ಮಗನಾದ ಗೋಗನು, ಅವನ ಮಗನಾದ ಶಿಮೆಯಿ, ಅವನ ಮ
ಗನಾದ ಮಿಕಾಯನು, ಅವನ ಮಗನಾದ ರಾಯನು, ಅವನ ಮ
೬ ಗನಾದ ಬಾಳನು, ಅಜೂರಿನ ಅರಸನಾದ ತಿಗ್ಲತ್ಪಿಲೇಸರನಿಂದ ಶೆ
ರೆಯಾಗಿ ಪೈಯಲ್ಪಟ್ಟಿ ಅವನ ಮಗನಾದ ಬೇರನು; ಇವನೇ
ರೂಬೆನ್ಯರಲ್ಲಿ ಪ್ರಭುವಾಗಿದ್ದನು.
೭ ಇವನ ಸಹೋದರರು ತನ್ನ ಸಂತತಿಗಳಲ್ಲಿ, ತಮ್ಮ ವಂಶಗಳ
ವಂಶಾವಳಿಯನ್ನು ಬರೆಯುತ್ತಿರುವಾಗ, ಅವರ ಹಿರಿಯರು ಯಾ
೮ ರಂದರೆ, ಯೆಖಿಯೇಲನು, ಜೆಕರಿಯನು, ಯೊವೇಲನ ಮಗನಾ
ದ ಶೆಮಾಯನ ಮಗನಾದ ಆಜಾಜನ ಮಗನಾದ ಬೇಲನನು; ಇ
ವನು ಅರೋಯೆರು ಮೊದಲ್ಗೊಂಡು, ನೆಬೋ ಬಾಲ್ಮೆಯೋನ್ ಪ
೯ ರ್ಯಂತರ ವಾಸವಾಗಿದ್ದನು. ಮತ್ತು ಗಿಲ್ಯಾದಿನ ದೇಶದಲ್ಲಿ ಅವ
ರ ದನ ಕುರಿಗಳು ಹೆಚ್ಚಾದದರಿಂದ, ಅವನು ಮೂರ್ಲ ದಿಕ್ಕಿನಲ್ಲಿ
ಫ್ರಾತು ನದಿ ಮೊದಲ್ಗೊಂಡು, ಅರಣ್ಯ ಪ್ರವೇಶದ ಪರ್ಯಂತರ
೧೦ ವಾಸವಾಗಿದ್ದನು. ಮತ್ತು ಸೌಲನ ದಿವಸಗಳಲ್ಲಿ ಅವರು ಹಗ್ರಿಯ
ರ ಸಂಗಡ ಯುದ್ಧ ಮಾಡಿ, ಅವರನ್ನು ಬೀಳ್ಚ ಮಾಡಿದರು; ಮ
ತ್ತು ಅವರು ಗಿಲ್ಯಾದಿನ ಸಮಸ್ತವಾದ ಮೂರ್ಲ ದಿಕ್ಕಿನ ಮೇರೆಯ
ಲ್ಲಿ ತಮ್ಮ ಗುಡಾರಗಳೊಳಗೆ ವಾಸವಾಗಿದ್ದರು.
೧೧ ಗಾದನ ಮಕ್ಕಳು ಅವರಿಗೆದುರಾಗಿ ಬಾಶಾನ್ ದೇಶದಲ್ಲಿ ಸಲ್ಕದ
೧೨ ಮಟ್ಟಿಗೂ ವಾಸವಾಗಿದ್ದರು. ಬಾಶಾನಿನಲ್ಲಿ ಮುಖ್ಯನಾದವನ
ಯೊವೇಲನು, ಎರಡನೆಯವನು ಶಫಾಮನು, ಯವನಾಯಿ, ಶ
೧೩ ಫಾಟನು. ಅವರ ಪಿತೃಗಳ ಮನೆಯಲ್ಲಿರುವ ತಮ್ಮ ಸಹೋದ
ರರು ಯಾರಂದರೆ, ಮಿಕಯೇಲನು ಮೆಷುಲ್ಲಾಮನು, ಶೇಬನು,
ಯೊರಾಯನು, ಯಕ್ಕಾನನು, ಜೀಯನು, ಹೆಬೇರನು; ಈ ಏಳು
೧೪ ಮಂದಿಯು. ಇವರು ಹೂರಿಯ ಮಗನಾದ ಅಬಿಹಾಯಿಲಿನ ಮ
ಕ್ಕಳು; ಈ ಹೂರಿಯು ಯೆಶೋಹನ ಮಗನು, ಅವನು ಗಿಲ್ಯಾ
ದನ ಮಗನು, ಅವನು ಮಿಕಯೇಲನ ಮಗನು, ಅವನು ಯೆಷಿಷಾ
ಯನ ಮಗನು, ಅವನು ಯಹೋದನ ಮಗನು, ಅವನು ಬೂಜ
೧೫ ನ ಮಗನು. ಗೂನಿಯ ಮಗನಾದ ಅಬ್ದಿಯೇಲನ ಮಗನಾದ ಅ
೧೬ ಹಿಯು ಅವರ ಪಿತೃಗಳ ಮನೆಯಲ್ಲಿ ಮುಖ್ಯಸ್ಥನು. ಅವರು ಗಿ
ಲ್ಯಾದಿನಲ್ಲಿರುವ ಬಾಶಾನಿನಲ್ಲಿಯೂ, ಅದರ ಊರುಗಳಲ್ಲಿಯೂ
ಅದರ ಮೇರೆಯಲ್ಲಿರುವ ಶರೋನಿನ ಸಮಸ್ತ ಅಗ್ರಹಾರಗಳಲ್ಲಿ
೧೭ ಯೂ ವಾಸವಾಗಿದ್ದರು. ಇವರೆಲ್ಲರು ಯೆಹೂದದ ಅರಸನಾದ
ಯೊತಾಮನ ದಿವಸಗಳಲ್ಲಿಯೂ, ಇಸ್ರಯೇಲಿನ ಅರಸನಾದ
ಯೆರೊಬಾಮನ ದಿವಸಗಳಲ್ಲಿಯೂ ವಂಶಾವಳಿಗಳ ಪ್ರಕಾರ ಬ
ರೆಯಲ್ಪಟ್ಟಿದ್ದರು.
೧೮ ರೂಬೆನನ ಮಕ್ಕಳಲ್ಲಿಯೂ, ಗಾದಿಯರಲ್ಲಿಯೂ, ಮನಸ್ಸೆ
ಯ ಅರ್ಧಕುಲದಲ್ಲಿಯೂ ಗುರಾಣಿಯನ್ನೂ ಕತ್ತಿಯನ್ನೂ ಹಿ
ಡಿಯುವದಕ್ಕೂ, ಬಿಲ್ಲೆಸೆಯುವದಕ್ಕೂ, ಯುದ್ಧದಲ್ಲಿ ಪ್ರವೀಣರಾ
ದ ಪರಾಕ್ರಮಶಾಲಿಗಳಾದ, ಯುದ್ಧಕ್ಕೆ ಹೊರಡುವವರು ನಾಲ್ವ
ತ್ತು ನಾಲ್ಕು ಸಾವಿರದ ಏಳು ನೂರ ಅರುವತ್ತು ಮಂದಿಯಾಗಿ
೧೯ ದ್ದರು. ಇವರು ಹಗ್ರಿಯರಾದ ಯೆಟೂರನು, ನಫೀಷನು, ನೊ
೨೦ ದಾಬನು ಎಂಬ ಇವರ ಸಂಗಡ ಯುದ್ಧ ಮಾಡಿದರು. ಇವರು ಅ
ವರಿಗೆ ವಿರೋಧವಾಗಿ ಸಹಾಯ ಹೊಂದಿದ್ದರಿಂದ, ಹಗ್ರಿಯರೂ,
ಅವರ ಸಂಗಡ ಕೂಡಿದ್ದವರೆಲ್ಲರೂ ಇವರ ಕೈಯಲ್ಲಿ ಒಪ್ಪಿಸಲ್ಪ
ಟ್ಟರು; ಯಾಕಂದರೆ ಅವರು ಯುದ್ಧದಲ್ಲಿ ದೇವರಿಗೆ ಕೂಗಿ, ಅವ
ನಲ್ಲಿ ಭರವಸವಿಟ್ಟದ್ದರಿಂದ, ಅವನು ಅವರ ಮನವಿಯನ್ನು ಕೇಳಿದ
೨೧ ನು. ಅವರು ಸುಲುಕೊಂಡ ಪಶುಗಳು—ಅವರ ಒಂಟೆಗಳು ಐವ

ತ್ತು ಸಾವಿರ, ಕುರಿಗಳು ಏಳುವರೆ ಲಕ್ಷ, ಕತ್ತೆಗಳು ಏಳು ಸಾ
೨೦ ವಿರ, ಮನುಷ್ಯ ಪ್ರಾಣಿಗಳು ಲಕ್ಷ ಮಂದಿ. ಯಾಕಂದರೆ ಯು
ದ್ಧವು ದೇವರಿಂದ ಉಂಟಾದ ಕಾರಣ, ಅನೇಕ ಜನರು ಕೊಲ್ಲಲ್ಪ
ಟ್ಟು, ಬಿದ್ದು ಹೋದರು. ಮತ್ತು ಇವರು ಕೆಲೆ ವೈಯಲ್ಪಡುವ ಪ
ರ್ಯಂತರ ಅವರ ಸ್ಥಳದಲ್ಲಿ ವಾಸವಾಗಿದ್ದರು.

೨೩ ಮತ್ತು ಮನಸ್ಸೆಯ ಅರ್ಧಕುಲದ ಮಕ್ಕಳು ಬೇಶದಲ್ಲಿ ವಾಸ
ಮಾಡಿ, ಬಾಶಾನ್ ಮೊದಲುಗೊಂಡು, ಬಳ್ಹೆಮೋನ್, ಸೆನೀರು,
೨೪ ಹೆರ್ಮೋನ್ ಬೆಟ್ಟದ ವರಿಗೂ ಹಬ್ಬಿ ಕೊಂಡರು. ಮತ್ತು ಅವರ
ಪಿತೃಗಳ ಮನೆಯಲ್ಲಿರುವ ಶ್ರೇಷ್ಠರು ಯಾರಂದರೆ, ಏಫ್ರನು, ಇ
ಷಿಯು, ಎಶ್ಶೇಲನು, ಅಬ್ರಿಯೇಲನು, ಯೆರೆಮಿಯಾನು, ಹೊದ
ವ್ಯನು, ಯಧಿಯೇಲನು; ಇವರು ಪರಾಕ್ರಮಶಾಲಿಗಳಾಗಿಯೂ,
ಹೆಸರ್ಗೊಂಡವರಾಗಿಯೂ, ತಮ್ಮ ಪಿತೃಗಳ ಮನೆಯಲ್ಲಿ ಶ್ರೇಷ್ಠ
ರಾಗಿಯೂ ಇದ್ದರು.

೨೫ ಆದಕೆ ಅವರು ತಮ್ಮ ಪಿತೃಗಳ ದೇವರಿಗೆ ವಿಕೋಥವಾಗಿ ಅ
ಕೃತ್ಯ ಮಾಡಿ, ದೇವರು ತಮ್ಮ ಮುಂದೆ ನಾಶನ ಮಾಡಿದ ಆ ದೇ
೨೬ ಶದ ಜನರ ದೇವರುಗಳ ಹಿಂದೆ ಜಾರರಾಗಿ ಹೋದರು. ಆದಕಾರ
ಣ ಇಸ್ರಯೇಲಿನ ದೇವರು ಅಶೂರಿನ ಅರಸನಾದ ಪೂಲನ ಅತ್ತ
ವನೂ, ಅಶೂರಿನ ಅರಸನಾದ ತಿಗ್ಲತ್ಪಿಲೇಸರನ ಅತ್ತವನೂ
ಎಬ್ಬಿಸಿದ್ದರಿಂದ, ಅವರು ಅವರನ್ನು ಕೆಲೆಯಾಗಿ ವೈದರು. ಆ ರೂ
ಬೆನ್ಯರನೂ, ಗಾದಿಯರನೂ, ಮನಸ್ಸೆಯ ಅರ್ಧಕುಲದವರ
ನೂ ಹೆಲೋನಕ್ಕೂ, ಹಪೋರಿಗೂ, ಹಾರಕ್ಕೂ ಗೊಜಾನ್ ನ
ದಿಗೂ ತಕ್ಕೊಂಡು ಹೋದರು. ಇಂದಿನ ವರಿಗೂ ಇದ್ದಾರೆ.

## ೬. ಸಂಧಿ.

೧ ಲೇವಿಯ ಮಕ್ಕಳು—ಗೆರ್ಶೋನನು, ಕೊಹತನು, ಮೆರಾರಿ
೨ ಯು. ಕೊಹತನ ಮಕ್ಕಳು—ಅಮ್ರಾಮನು, ಇಛಾರನು, ಹೆ
೩ ಬ್ರೋನನು, ಉಜ್ಜಿಯೇಲನು. ಅಮ್ರಾಮನ ಮಕ್ಕಳು—ಆರೋ
ನನು, ಮೋಶೆಯು, ಮಿರ್ಯಾಮಳು. ಆರೋನನ ಮಕ್ಕಳು—
೪ ನಾದಬನು, ಅಬೀಹುವು, ಎಲೆಯಾಜರನು, ಇಥಮಾರನು. ಎಲೆ
ಯಾಜರನು ಫಿನೆಹಾಸನನ್ನು ಪಡೆದನು; ಫಿನೆಹಾಸನು ಅಬಿಶೂವ
೫ ನನ್ನು ಪಡೆದನು; ಅಬಿಶೂವನು ಬುಕ್ಕಿಯನ್ನು ಪಡೆದನು; ಬುಕ್ಕಿ
೬ ಯು ಉಜ್ಜಿಯನ್ನು ಪಡೆದನು. ಉಜ್ಜಿಯು ಜೆರಹ್ಯನನ್ನು ಪಡೆದ
೭ ನು; ಜೆರಹ್ಯನು ಮೆರೆಯೋತನನ್ನು ಪಡೆದನು. ಮೆರೆಯೋತನು
ಅಮರ್ಯನನ್ನು ಪಡೆದನು; ಅಮರ್ಯನು ಅಹೀಟುಬನನ್ನು ಪ
೮ ಡೆದನು. ಅಹೀಟುಬನು ಚಡೋಕನನ್ನು ಪಡೆದನು; ಚಡೋಕನು
೯ ಅಹಿಮಾಚನನ್ನು ಪಡೆದನು. ಅಹಿಮಾಚನು ಅಜರ್ಯನನ್ನು
೧೦ ಪಡೆದನು. ಅಜರ್ಯನು ಯೊಹನಾನನ್ನು ಪಡೆದನು. ಯೊಹ
ನಾನನು ಯೆರೂಸಲೇಮಿನಲ್ಲಿ ಸೊಲೊಮೋನನು ಕಟ್ಟಿಸಿದ ದೇ
ವಾಲಯದೊಳಗೆ ಯಾಜಕ ಸೇವೆ ನಡಿಸಿದ ಅಜರ್ಯನನ್ನು ಪ
೧೧ ಡೆದನು. ಅಜರ್ಯನು ಅಮರ್ಯನನ್ನು ಪಡೆದನು; ಅಮರ್ಯ
೧೨ ನು ಅಹೀಟುಬನನ್ನು ಪಡೆದನು. ಅಹೀಟುಬನು ಚಡೋಕನನ್ನು
೧೩ ಪಡೆದನು; ಚಡೋಕನು ಶಲ್ಲೂಮನನ್ನು ಪಡೆದನು. ಶಲ್ಲೂಮನು
ಹಿಲ್ಕೀಯನನ್ನು ಪಡೆದನು; ಹಿಲ್ಕೀಯನು ಅಜರ್ಯನನ್ನು ಪಡೆ
೧೪ ದನು. ಅಜರ್ಯನು ಸೆರಾಯನನ್ನು ಪಡೆದನು; ಸೆರಾಯನು
೧೫ ಯೆಹೊಚದಾಕನನ್ನು ಪಡೆದನು. ಕರ್ತನು ನೆಬುಕದ್ನೇಚರನ
ಕೈಯಿಂದ ಯೆಹೂದ ಯೆರೂಸಲೇಮಿನವರನ್ನು ಕೆಲೆಯಾಗಿ ವೈ
ಯ ಮಾಡಿದಾಗ, ಯೆಹೊಚದಾಕನು ಕೆಲೆಯಾಗಿ ಹೋದನು.

೧೬ ಲೇವಿಯ ಮಕ್ಕಳು—ಗೆರ್ಶೋನನು, ಕೊಹತನು, ಮೆರಾರಿ
೧೭ ಯು. ಗೆರ್ಶೋನನ ಮಕ್ಕಳ ಹೆಸರುಗಳು—ಲಿಬ್ನಿಯು ಶಿಮ್ಮಿ
೧೮ ಯು. ಕೊಹತನ ಮಕ್ಕಳು—ಅಮ್ರಾಮನು, ಇಛಾರನು, ಹೆ
೧೯ ಬ್ರೋನನು, ಉಜ್ಜಿಯೇಲನು. ಮೆರಾರಿಯ ಮಕ್ಕಳು—ಮಹ್ಲಿ
ಯು, ಮೂಷಿಯು. ಲೇವಿಯರ ಸಂತತಿಗಳು ತಮ್ಮ ಪಿತೃಗಳ
೨೦ ಪ್ರಕಾರವಾಗಿ ಯಾವವಂದರೆ—ಗೆರ್ಶೋನನಿವರು—ಅವನ ಮಗ
ನಾದ ಲಿಬ್ನಿಯು, ಅವನ ಮಗನಾದ ಯಹಾತು, ಅವನ ಮಗ
೨೧ ನಾದ ಜಿಮ್ಮನು, ಅವನ ಮಗನಾದ ಯೊವಾಹನು, ಅವನ ಮಗ
ನಾದ ಇದ್ದೋನು, ಅವನ ಮಗನಾದ ಜೇರಹನು, ಅವನ ಮಗ
೨೨ ನಾದ ಯತ್ರಾಯನು. ಕೊಹತನ ಮಕ್ಕಳು—ಅವನ ಮಗನಾ
ದ ಅಮ್ಮಿನದಾಬನು, ಅವನ ಮಗನಾದ ಕೋರಹನು, ಅವನ ಮ
೨೩ ಗನಾದ ಅಸ್ಸೀರನು, ಅವನ ಮಗನಾದ ಎಲ್ಕಾನನು, ಅವನ ಮ
೨೪ ಗನಾದ ಎಬೆಯಸಾಫನು, ಅವನ ಮಗನಾದ ಅಸ್ಸೀರನು, ಅವನ
ಮಗನಾದ ತಹಾತನು, ಅವನ ಮಗನಾದ ಉರಿಯೇಲನು, ಅವ
೨೫ ನ ಮಗನಾದ ಉಜ್ಜೀಯನು, ಅವನ ಮಗನಾದ ಸೌಲನು. ಎ
೨೬ ಲ್ಕಾನನ ಮಕ್ಕಳು—ಅಮಸಾಯಿಯು, ಅಹಿಮೋತನು ಎಲ್ಕಾ
ನನು. ಈ ಎಲ್ಕಾನನ ಮಕ್ಕಳು ಯಾರಂದರೆ—ಅವನ ಮಗನಾ
೨೭ ದ ಜೊಫಾಯಿಯು, ಅವನ ಮಗನಾದ ನಹಾತನು, ಅವನ ಮ
ಗನಾದ ಎಲ್ಯಾಬನು, ಅವನ ಮಗನಾದ ಯೆರೊಹಾಮನು, ಅವ
೨೮ ನ ಮಗನಾದ ಎಲ್ಕಾನನು. ಸಮುವೇಲನ ಮಕ್ಕಳು—ಜೊಜ್ಜಲ
೨೯ ಮಗನಾದ ವಷ್ಣಿಯು, ಅಬೀಯನು. ಮೆರಾರಿಯ ಮಕ್ಕಳು—
ಮಹ್ಲಿಯು, ಅವನ ಮಗನಾದ ಲಿಬ್ನಿಯು, ಅವನ ಮಗನಾದ ಶಿ
೩೦ ಮ್ಮೆಯಿ, ಅವನ ಮಗನಾದ ಉಜ್ಜನು, ಅವನ ಮಗನಾದ ಷಿಮ್ಮ
ನು, ಅವನ ಮಗನಾದ ಹಗ್ಗಾಯನು, ಅವನ ಮಗನಾದ ಅಸಾ
ಯನು.

೩೧ ಪೆಟ್ಟಿಗೆಯು ನೆಲೆಯಾಗಿ ಇರಿಸಿದ ತರುವಾಯ, ದಾವೀದನು
ಕರ್ತನ ಮನೆಯಲ್ಲಿ ಹಾಡುವ ಸೇವೆಯ ಮೇಲೆ ಇರಿಸಿದವರು ಇ
೩೨ ವರೇ. ಸೊಲೊಮೋನನು ಯೆರೂಸಲೇಮಿನಲ್ಲಿ ಕರ್ತನ ಮನೆ
ಯನ್ನು ಕಟ್ಟುವ ಪರ್ಯಂತರ, ಇವರು ಹಾಡುವ ಸೇವೆಯಲ್ಲಿ
ಸಭೆಯ ಗುಡಾರದ ನಿವಾಸವಾದ ಮುಂದೆ ಸೇವಿಸುತ್ತಾ ಇದ್ದರು;
ಆಗಲವರು ತಮ್ಮ ಸೇವೆಯಲ್ಲಿ ಒಂತಿನ ಪ್ರಕಾರ ನಿಲ್ಲುತ್ತಿದ್ದರು.

೩೩ ತಮ್ಮ ಮಕ್ಕಳ ಸಂಗಡ ನಿಲ್ಲುತ್ತಿದ್ದವರು ಯಾರಂದರೆ—ಕೊ
ಹತ್ಯರ ಮಕ್ಕಳಲ್ಲಿ ಸಂಗೀತಗಾರನಾದ ಹೆಮಾನನು; ಅವನು
೪ ಯೊವೇಲನ ಮಗನು, ಅವನು ಶೆಮುವೇಲನ ಮಗನು, ಅವನು ಎ
ಲ್ಕಾನನ ಮಗನು, ಅವನು ಯೆರೊಹಾಮನ ಮಗನು, ಅವನು ಎ
೩೫ ಶ್ಯೇಲನ ಮಗನು, ಅವನು ತೋಹನ ಮಗನು, ಅವನು ಚೂಫ
ನ ಮಗನು, ಅವನು ಎಲ್ಕಾನನ ಮಗನು, ಅವನು ಮಹಾತನ ಮ
೩೬ ಗನು, ಅವನು ಅಮಸಾಯ ಮಗನು, ಅವನು ಎಲ್ಕಾನನ ಮಗ
ನು, ಅವನು ಯೊವೇಲನ ಮಗನು, ಅವನು ಅಜರ್ಯನ ಮಗ
೩೭ ನು, ಅವನು ಚೆಫನ್ಯನ ಮಗನು, ಅವನು ತಹಾತನ ಮಗನು, ಅ
ವನು ಅಸ್ಸೀರನ ಮಗನು, ಅವನು ಎಬೆಯಸಾಫನ ಮಗನು, ಅವ
೩೮ ನು ಕೋರಹನ ಮಗನು, ಅವನು ಇಛಾರನ ಮಗನು, ಅವನು
ಕೊಹತನ ಮಗನು, ಅವನು ಲೇವಿಯನ ಮಗನು, ಅವನು ಇಸ್ರ



೩೯ ಯೇಲನ ಮಗನು. ಮತ್ತು ಅವನ ಬಲಗಡೆ ನಿಂತಿರುವ ಅವನ ಸ
ಹೋದರನಾದ ಆಸಾಫನು; ಈ ಆಸಾಫನು ಬೆರೆಕ್ಯನ ಮಗನು,
೪೦ ಅವನು ಷಿಮ್ಮನ ಮಗನು, ಅವನು ಮಿಕಯೇಲನ ಮಗನು, ಅವ
೪೧ ನು ಬಸೇಯನ ಮಗನು, ಅವನು ಮಲ್ಕೀಯನ ಮಗನು, ಅವ
ನು ಎತ್ನಿಯ ಮಗನು, ಅವನು ಜೇರಹನ ಮಗನು, ಅವನು ಅಡಾ
೪೨ ಯನ ಮಗನು, ಅವನು ಏತಾನನ ಮಗನು, ಅವನು ಜಿಮ್ಮನ
೪೩ ಮಗನು, ಅವನು ಶಿಮ್ಮಿಯ ಮಗನು, ಅವನು ಯಹಾತನ ಮ
ಗನು, ಅವನು ಗೆರ್ಶೋಮನ ಮಗನು, ಅವನು ಲೇವಿಯ
ಮಗನು.

೪೪ ಮತ್ತು ಅವರ ಸಹೋದರರಾದ ಮೆರಾರಿಯ ಮಕ್ಕಳು ಎಡ
ಗಡೆಯಲ್ಲಿ ನಿಂತಿದ್ದರು. ಏತಾನನು ಕೀಷಿಯ ಮಗನು, ಅವನು
೪೫ ಅಬ್ದಿಯ ಮಗನು, ಅವನು ಮಲ್ಲೂಕನ ಮಗನು, ಅವನು ಹಶ
ಬ್ಯನ ಮಗನು, ಅವನು ಅಮಚ್ಯೀಯನ ಮಗನು, ಅವನು ಹಿಲ್ಕಿ
೪೬ ಯನ ಮಗನು, ಅವನು ಅಮ್ಜಿಯ ಮಗನು, ಅವನು ಬಾನಿಯ
೪೭ ಮಗನು, ಅವನು ಶಮೇರನ ಮಗನು, ಅವನು ಮಹ್ಲಿಯ ಮಗನು,
ಅವನು ಮೂಷಿಯ ಮಗನು, ಅವನು ಮೆರಾರಿಯ ಮಗನು, ಅ
೪೮ ವನು ಲೇವಿಯ ಮಗನು. ಮತ್ತು ಅವರ ಸಹೋದರರಾದ ಲೇವಿ
ಯರು ದೇವರ ಮನೆಯ ಗುಡಾರದ ಸಮಸ್ತ ಸೇವೆಗೆ ನೇಮಿಸಲ್ಪ
ಟ್ಟವರಾಗಿದ್ದರು.

೪೯ ಆದಕೆ ಆರೋನನೂ ಅವನ ಮಕ್ಕಳೂ ಹೋಮ ಪೀಠದ ಮೇ
ಲೆಯೂ, ಧೂಪ ಪೀಠದ ಮೇಲೆಯೂ ಅರ್ಪಿಸುತ್ತಿದ್ದರು. ದೇವ
ರ ಸೇವಕನಾದ ಮೋಶೆ ಆಜ್ಞಾಪಿಸಿದ ಎಲ್ಲಾದರ ಪ್ರಕಾರ ಅವರು
ಮಹಾ ಪರಿಶುದ್ಧ ಸ್ಥಾನದ ಸಮಸ್ತ ಕಾರ್ಯಕ್ಕೂ, ಇಸ್ರಯೇಲಿ
೫೦ ಗೋಸ್ಕರ ಪಾಪ ಮುಚ್ಚುವದಕ್ಕೂ ಇದ್ದರು. ಆರೋನನ ಮ
ಕ್ಕಳು—ಅವನ ಮಗನು ಎಲೆಯಾಜರನು, ಅವನ ಮಗನು ಫಿನೆ
೫೧ ಹಾಸನು, ಅವನ ಮಗನು ಅಬಿಶೂವನು, ಅವನ ಮಗನು ಬುಕ್ಕಿ
ಯು, ಅವನ ಮಗನು ಉಜ್ಜಿಯು, ಅವನ ಮಗನು ಜೆರಹ್ಯನು,
೫೨ ಅವನ ಮಗನು ಮೆರಯೋತನು, ಅವನ ಮಗನು ಅಮರ್ಯನು,
೫೩ ಅವನ ಮಗನು ಅಹೀಟುಬನು, ಅವನ ಮಗನು ಚಡೋಕನು, ಅ
ವನ ಮಗನು ಅಹಿಮಾಚನು.

೫೪ ತಮ್ಮ ಮೇರೆಗಳೊಳಗೆ ಇರುವ ತಮ್ಮ ಕೊಟಿಗಳಲ್ಲಿ ಆರೋ
೫೫ ನನ ಮಕ್ಕಳ ನಿವಾಸ ಸ್ಥಾನಗಳು ಯಾವವಂದರೆ—ಕೊಹತ್ಯರ
ಸಂತತಿಗಳಿಗೆ ಚೀಟು ಬಿದ್ದ ಪ್ರಕಾರ ಯೆಹೂದ ದೇಶದಲ್ಲಿ ಹೆ
ಬ್ರೋನ್ ಪಟ್ಟಣವೂ, ಅದರ ಸುತ್ತಲಿರುವ ಅಗ್ರಹಾರಗಳೂ ಅವರಿ
೫೬ ಗೆ ಕೊಟ್ಟಲ್ಪಟ್ಟವು. ಆದರೆ ಆ ಪಟ್ಟಣದ ಹೊಲಗಳನ್ನೂ ಅದರ
ಗ್ರಾಮಗಳನ್ನೂ ಯೆಫುನ್ನೆಯ ಮಗನಾದ ಕಾಲೆಬನಿಗೆ ಕೊಟ್ಟಿ
೫೭ ರು. ಯೆಹೂದನ ಕುಲದಲ್ಲಿ ಆರೋನನ ಮಕ್ಕಳಿಗೆ ಕೊಟ್ಟ ಪಟ್ಟಿ
ಗಳು ಯಾವವಂದರೆ, ಆಶ್ರಯವಾದ ಹೆಬ್ರೋನೂ, ಲಿಬ್ನಾವೂ,
ಅದರ ಅಗ್ರಹಾರಗಳೂ, ಯತ್ತೀರೂ, ಎಷ್ಟೆಮೋವವೂ, ಅವುಗ
೫೮ ಳ ಅಗ್ರಹಾರಗಳೂ, ಹಿಲೇನೂ, ಅದರ ಅಗ್ರಹಾರಗಳೂ, ದೆಬೀ
೫೯ ರೂ, ಅದರ ಅಗ್ರಹಾರಗಳೂ, ಅಶಾನೂ, ಅದರ ಅಗ್ರಹಾರಗ
೬೦ ಳೂ, ಬೆಥ್ಶೇಮೆಷೂ, ಅದರ ಅಗ್ರಹಾರಗಳೂ. ಬೆನ್ಯಮಾನನ
ಕುಲದಿಂದ ಕೊಟ್ಟಿವುಗಳು—ಗೇಬವೂ, ಅದರ ಅಗ್ರಹಾರಗಳೂ,
ಅಲ್ಲೇಮತೂ, ಅದರ ಅಗ್ರಹಾರಗಳೂ, ಅಣತೋತೂ, ಅದರ
ಅಗ್ರಹಾರಗಳೂ—ಇವರ ಸಂತತಿಗಳಿಗೆ ಉಂಟಾದ ಎಲ್ಲಾ ಪಟ್ಟಿಗ
೬೧ ಳು ಹದಿಮೂರು. ಆ ಕುಲದ ಸಂತತಿಗಳಲ್ಲಿ ಉಳಿದ ಕೊಹತನ
ಮಕ್ಕಳಿಗೂ ಚೀಟು ಹಾಕಿ ಮನಸ್ಸೆಯ ಅರ್ಧಕುಲದಿಂದ ಹತ್ತು
ಪಟ್ಟಣಗಳು ಕೊಟ್ಟಲ್ಪಟ್ಟಿದ್ದವು.

೬೨ ಮತ್ತು ಗೆರ್ಶೋಮನ ಮಕ್ಕಳಿಗೆ ತಮ್ಮ ಸಂತತಿಗಳ ಪ್ರಕಾ
ರವೇ ಇಸ್ಸಾಕಾರನ ಕುಲದಿಂದಲೂ, ಅಶೇರನ ಕುಲದಿಂದಲೂ, ನೆಫ್ತ
ಲಿಯ ಕುಲದಿಂದಲೂ ಬಾಶಾನಿನಲ್ಲಿರುವ ಮನಸ್ಸೆಯ ಕುಲದಿಂದ
ಲೂ ಹದಿಮೂರು ಪಟ್ಟಣಗಳು ಕೊಟ್ಟಲ್ಪಟ್ಟಿದ್ದವು.

೬೩ ಮೆರಾರಿಯ ಮಕ್ಕಳಿಗೂ, ಅವರ ಸಂತತಿಗಳ ಪ್ರಕಾರ, ಚೀ
ಟು ಹಾಕಿ, ರೂಬೆನನ ಕುಲದಿಂದಲೂ, ಗಾದನ ಕುಲದಿಂದಲೂ,
ಜೆಬುಲೋನನ ಕುಲದಿಂದಲೂ, ಹನ್ನೆರಡು ಪಟ್ಟಣಗಳು ಕೊಟ್ಟಲ್ಪಟ್ಟಿ
೬೪ ದ್ದವು. ಇಸ್ರಯೇಲಿನ ಮಕ್ಕಳು ಲೇವ್ಯರಿಗೆ ಈ ಪಟ್ಟಣಗಳನ್ನೂ
೬೫ ಅವುಗಳ ಅಗ್ರಹಾರಗಳನ್ನೂ ಕೂಡಾ ಕೊಟ್ಟರು. ಅವರು ಯೆ
ಹೂದನ ಮಕ್ಕಳ ಕುಲದಿಂದಲೂ, ಸಿಮೆಯೋನನ ಮಕ್ಕಳ ಕುಲ
ದಿಂದಲೂ, ಬೆನ್ಯಮಿನನ ಕುಲದಿಂದಲೂ ಹೆಸರಾಗಿ ಹೇಳಲ್ಪಟ್ಟಿ
ಈ ಪಟ್ಟಣಗಳನ್ನು ಚೀಟುಗಳ ಪ್ರಕಾರ ಕೊಟ್ಟರು.

೬೬ ಕೊಹತನ ಮಕ್ಕಳ ಮಿಕ್ಕಾದ ಸಂತತಿಗಳಿಗೂ ಅವರ ಮೀ
ಕೆಗಳಲ್ಲಿ ಎಫ್ರಯಿಮನ ಕುಲದೊಳಗೆ ಪಟ್ಟಣಗಳು ಉಂಟಾಗಿದ್ದ
೬೭ ವು. ಇದಲ್ಲದೆ ಆಶ್ರಯ ಪಟ್ಟಣಗಳಾಗಿರುವ ಹಾಗೆ ಅವರಿಗೆ ಎಫ್ರ
ಯಿಮಾಂ ಬೆಟ್ಟದಲ್ಲಿರುವ ಶಕೆಮನೂಷ್ಟು, ಅದರ ಅಗ್ರಹಾರಗಳನ್ನೂ,
೬೮ ಗೇಜರನೂ, ಅದರ ಅಗ್ರಹಾರಗಳನ್ನೂ, ಯೊಕ್ಮಾಮನೂಷ್ಟು, ಅ
ದರ ಅಗ್ರಹಾರಗಳನ್ನೂ, ಬೇಥೊರೋನನೂಷ್ಟು, ಅದರ ಅಗ್ರಹಾ
೬೯ ರಗಳನ್ನೂ, ಅಯ್ಯಲೋನನೂಷ್ಟು, ಅದರ ಅಗ್ರಹಾರಗಳನ್ನೂ,
೭೦ ಗತ್ರಿಮ್ಮೋನನೂಷ್ಟು, ಅದರ ಅಗ್ರಹಾರಗಳನ್ನೂ, ಕೊಟ್ಟರು. ಇದ
ಲ್ಲದೆ ಕೊಹತನ ಮಕ್ಕಳ ಮಿಕ್ಕಾದ ಸಂತತಿಗೋಸ್ಕರ ಮನಸ್ಸೆ
ಯ ಅರ್ಧ ಕುಲದಿಂದ ಅಣೇರನೂಷ್ಟು, ಅದರ ಅಗ್ರಹಾರಗಳ
ನೂಷ್ಟು, ಬಿಲ್ಹಾಮನೂಷ್ಟು, ಅದರ ಅಗ್ರಹಾರಗಳನ್ನೂ ಕೊಟ್ಟರು.

೭೧ ಮನಸ್ಸೆಯ ಅರ್ಧ ಕುಲದಿಂದ ಗೆರ್ಶೋಮನ ಮಕ್ಕಳಿಗೆ
ಬಾಶಾನಿನಲ್ಲಿರುವ ಗೋಲನೂ, ಅದರ ಅಗ್ರಹಾರಗಳೂ, ಅಷ್ಟ
೭೨ ರೋತೂ, ಅದರ ಅಗ್ರಹಾರಗಳೂ. ಇಸ್ಸಾಕಾರನ ಕುಲದಿಂದ ಕೇ
ದಮೂ, ಅದರ ಅಗ್ರಹಾರಗಳೂ, ದಬ್ರತೂ, ಅದರ ಅಗ್ರಹಾರಗ
೭೩ ಳೂ, ರಮೋತೂ, ಅದರ ಅಗ್ರಹಾರಗಳೂ, ಅನೇಮೂ, ಅದರ
೭೪ ಅಗ್ರಹಾರಗಳೂ; ಅಶೇರನ ಕುಲದಿಂದ ಮಷಾಲೂ, ಅದರ ಅಗ್ರ
೭೫ ಹಾರಗಳೂ, ಅಬ್ದೋನೂ, ಅದರ ಅಗ್ರಹಾರಗಳೂ, ಹುಕೋ
ಕೂ, ಅದರ ಅಗ್ರಹಾರಗಳೂ, ರೆಹೋಬೂ, ಅದರ ಅಗ್ರಹಾರ
೭೬ ಗಳೂ; ನೆಫ್ತಲಿ ಕುಲದಿಂದ ಗಲಿಲಾಯದಲ್ಲಿರುವ ಕೇದಮೂ, ಅದ
ರ ಅಗ್ರಹಾರಗಳೂ, ಹಮ್ಮೋನೂ, ಅದರ ಅಗ್ರಹಾರಗಳೂ, ಕಿ
ರ್ಯತಾಯಿಮೂ, ಅದರ ಅಗ್ರಹಾರಗಳೂ, ಕೊಟ್ಟಲ್ಪಟ್ಟಿದ್ದವು.

೭೭ ಮೆರಾರಿಯ ಉಳಿದ ಮಕ್ಕಳಿಗೂ ಜೆಬುಲೋನನ ಕುಲದಿಂದ
ರಿಮ್ಮೋನೂ, ಅದರ ಅಗ್ರಹಾರಗಳೂ, ತಬೋರೂ, ಅದರ ಅಗ್ರ
೭೮ ಹಾರಗಳೂ; ಯೊರ್ದನಿನ ಆಚೇ ಕಡೆ ಯೆರಿಕೋವಿನ ಬಳಿಯ
ಲ್ಲಿ, ಯೊರ್ದನಿನ ಮೂಲ್ಲ ದಿಕ್ಕಿನಲ್ಲಿ, ರೂಬೆನನ ಕುಲದಿಂದ ಅ
ರಣ್ಯದಲ್ಲಿರುವ ಬೇಜೆರೂ, ಅದರ ಅಗ್ರಹಾರಗಳೂ, ಯಾಹ
೭೯ ವೂ, ಅದರ ಅಗ್ರಹಾರಗಳೂ, ಕೆದೆಮೋತೂ, ಅದರ ಅಗ್ರಹಾರ
೮೦ ಗಳೂ, ಮೆಫಾಅತೂ, ಅದರ ಅಗ್ರಹಾರಗಳೂ; ಗಾದನ ಕುಲದಿಂದ
ಗಿಲ್ಯಾದಿನಲ್ಲಿರುವ ರಮೋತೂ, ಅದರ ಅಗ್ರಹಾರಗಳೂ, ಮಹ

೨೦ ಸಾಯಿಮೂ, ಅದರ ಅಗ್ರಾಜಾಗಳೂ, ಕಿಬ್ಬಿಯೂ, ಅದರ
ಅಗ್ರಾಜಾಗಳೂ, ಯೆಹೋಯಾದನ ಕೈಯ್ಯಪ್ಪ
ಜ್ಞರು.

## ೭. ಸಂಧಿ.

೧ ಇಷ್ಕಾರನ ಮಕ್ಕಳು—ಕೋರಹನು, ಫೂವನು, ಯಾಶೂಬ
೨ ನು, ಪಿಕ್ರೋಯನು—ಈ ನಾಲ್ಕು ಮಂದಿ. ಕೋರಹ ಮಕ್ಕಳು—
ಉಜ್ಜಿಯು, ರಫಾಯನು, ಯೆರಿಯೇಲನು, ಯಹ್ಮಾಯಿಯು,
ಇಬ್ಸಾಮನು, ಸಮುವೇಲನು. ಇವರು ತಮ್ತು ತಂದೆಯಾದ ಕೋ
ರಹ ಮನೆಗೆ ಶ್ರೇಷ್ಠರಾಗಿದ್ದರು. ಇವರು ತಮ್ತು ವಂಶಗಳಲ್ಲಿ ಸ್ಥಿ
ತಿಯುಳ್ಳ ಪರಾಕ್ರಮಶಾಲಿಗಳಾಗಿದ್ದರು; ದಾವೀದನ ದಿವಸಗಳ
ಲ್ಲಿ ಅವರ ಲೆಖ್ಖ ಇಪ್ಪತ್ತೆರಡು ಸಾವಿರದ ಆರು ನೂರು ಮಂದಿ ಆ
೩ ಗಿತ್ತು. ಉಜ್ಜಿಯ ಮಕ್ಕಳು—ಇಜ್ರಹ್ಯನು. ಇಜ್ರಹ್ಯನ ಮಕ್ಕ
ಳು—ಮಿಕಯೇಲನು, ಒಬದ್ಯನು, ಯೊವೇಲನು, ಇಷೀಯನು—
೪ ಈ ಐದು ಮಂದಿಯು; ಇವರೆಲ್ಲರು ಶ್ರೇಷ್ಠರಾಗಿದ್ದರು. ಇವರ
ಸಂಗಡ ಅವರ ವಂಶಗಳ ಪ್ರಕಾರವೂ, ಅವರ ಪಿತೃಗಳ ಮನೆಯ
ಪ್ರಕಾರವೂ ಯುದ್ಧಕ್ಕೊಳ್ಳತ್ತರ ಮೂವತ್ತಾರು ಸಾವಿರ ಮಂದಿ
ರಾಣಿಯ ಗುಂಪುಗಳಿದ್ದವು; ಯಾಕಂದರೆ ಹೆಂಡರು ಮಕ್ಕಳು
೫ ಅವರಿಗೆ ಬಹಳ ಮಂದಿ ಇದ್ದರು. ಮತ್ತು ಇಷ್ಕಾಕರನ ಸಂತತಿಗ
ಳಾಗಿರುವ ಸಹೋದರರೆಲ್ಲರಿಗೆ ಅವರ ವಂಶಾವಳಿಗಳಲ್ಲಿ ಲೆಖ್ಖಿಸ
ಲ್ಪಟ್ಟ ಸ್ಥಿತಿಯುಳ್ಳ ಪರಾಕ್ರಮಶಾಲಿಗಳೆಲ್ಲರೂ ಎಂಭತ್ತೆಳು ಸಾ
ವಿರ ಮಂದಿಯಾಗಿದ್ದರು.

೬ ಬೆನ್ಯಾಮೀನನ ಮಕ್ಕಳು—ಬೇಲನು, ಬೇಕರನು, ಯೆದೀವ
೭ ಯೇಲನು—ಈ ಮೂರು ಮಂದಿ. ಬೇಲನ ಮಕ್ಕಳು—ಎಹ್ಬೋ
ನನು, ಉಜ್ಜಿಯು, ಉಜ್ಜಿಯೇಲನು, ಯೆರಿಮೋತನು, ಈರಿ
ಯು—ಈ ಐದು ಮಂದಿ ತಮ್ತು ಪಿತೃಗಳ ಮನೆಯಲಿ ಶ್ರೇಷ್ಠರಾ
ಗಿಯೂ, ಸ್ಥಿತಿಯುಳ್ಳ ಪರಾಕ್ರಮಶಾಲಿಗಳಾಗಿಯೂ ಇದ್ದು, ತ
ಮ್ತು ವಂಶಾವಳಿಗಳ ಪ್ರಕಾರ ಇಪ್ಪತ್ತೆರಡು ಸಾವಿರದ ಮೂವ
೮ ತ್ತು ನಾಲ್ಕು ಮಂದಿ ಬರೆಯಲ್ಪಟ್ಟಿದ್ದರು. ಬೇಕರನ ಮಕ್ಕಳು—
ಜೆಮೀರನು, ಯೊವಾಷನು, ಎಲಿಯೇಜರನು, ಎಲ್ಯೊವೆನಾಯಿ
ಯು, ಒಮ್ರಿಯು, ಯೆರೀಮೋತನು, ಅಬೀಯನು, ಅಣಾತೋ
ತನು, ಅಲ್ಲೇಮತನು. ಇವರೆಲ್ಲರು ಬೇಕರನವರ ಕ್ಕಳು. ಇವ
೯ ರ ಲೆಖ್ಖವು ತಮ್ತು ಪಿತೃಗಳ ಮನೆಯ ಶ್ರೇಷ್ಠರ ವಂಶಗ
ಳ ವಂಶಾವಳಿಯ ಪ್ರಕಾರವಾಗಿ, ಸ್ಥಿತಿಯುಳ್ಳ ಪರಾಕ್ರಮಶಾ
೧೦ ಲಿಗಳಾದವರು, ಇಪ್ಪತ್ತು ಸಾವಿರದ ಇನ್ನೂರು ಮಂದಿ. ಯೆದೀ
ವಯೇಲನ ಮಕ್ಕಳು—ಬಿಲ್ಹಾನನು. ಬಿಲ್ಹಾನನ ಮಕ್ಕಳು—ಯೆ
ಊಷನು, ಬೆನ್ಯಮೀನನು, ಎಹೂದನು, ಕೆನಾನನು, ಜೆತಾನನು,
೧೧ ತರ್ಶಿಷನು, ಅಹಿಷಾಹರನು. ಇವರೆಲ್ಲರು ಯೆದೀವಯೇಲನ
ಮಕ್ಕಳು; ಅವರು ತಮ್ತು ಪಿತೃಗಳಲ್ಲಿ ಶ್ರೇಷ್ಠರಾಗಿಯೂ, ಸ್ಥಿತಿ
ಯುಳ್ಳ ಪರಾಕ್ರಮಶಾಲಿಗಳಾಗಿಯೂ, ಯುದ್ಧಕ್ಕೆ ಹೊರಡ ತ
೧೨ ಕ್ಕವರು ಹದಿನೇಳು ಸಾವಿರದ ಇನ್ನೂರು ಮಂದಿಯಾಗಿದ್ದರು.
ಮತ್ತು ಅಹೇರನ ಮಕ್ಕಳಾದ ಈರನೂ ಹೂಷಿಮನೂ ಎಂಬವರ
ಮಕ್ಕಳು ಶಿಫ್ಫಿಮನೂ ಹುಫ್ಫಿಮನೂ ಇದ್ದರು.
೧೩ ನಫ್ತಾಲಿಯ ಮಕ್ಕಳು—ಯಹಜಿಯೇಲನು, ಗೂನಿಯು, ಯ
ಚೇರನು, ಶಲ್ಲೂಮನು. ಇವರು ಬಿಲ್ಹಾಳ ಮಕ್ಕಳು.

೧೪ ಮನಸ್ಸೆಯ ಮಕ್ಕಳು—ಇವರ ಹೆಂಡತಿಯು ಕತ್ತಿ ಅಸ್ರಿಯೇ
ಲನು ಮತ್ತು ಕಾಮ್ಯವಾದ ಉಪಪತ್ನಿಯಲ್ಲಿ ಹುಟ್ಟಿದವನಾ
೧೫ ದ ಮಕೀರನನ್ನು ಹೆತ್ತಳು. ಅವರೆ ಈ ಮಕೀರನು ಹುಪ್ಪಿಮನೂ
ಶುಪ್ಪಿಮನೂ ಎಂಬವರ ಸಹೋದರಿಯಾದ ಮಾಕಳನ್ನು ಹೆಂಡತಿ
ಯಾಗಿ ಕಕೊಂಡಳು. ಅವನ ಮೊದ್ದನ ಹೆಸರು ಹೆಲೊಫಾ
ದನು; ಈ ಹೆಲೊಫಾದನಿಗೆ ಕುಮಾರ್ತೆಗಳು ಇದ್ದವು. ಮತ್ತು
೧೬ ಮಕೀರನ ಹೆಂಡತಿಯಾದ ಮಾಕಳು ಮಗನನ್ನು ಹೆತ್ತು, ಪೇರನ
ನು ಎಂಬ ಹೆಸರಿಟ್ಟಳು. ಅವನ ಸಹೋದರನ ಹೆಸರು ಶೇರು
ನು; ಇವನಿಗೆ ಉಲಾಮನು, ರೇಕೆಮನು ಎಂಬ ಹೆಸರುಳ್ಳ ಮಕ್ಕ
ಳಿದ್ದರು. ಉಲಾಮನ ಮಗ, ಬೆದಾನನು. ಇವರೆಲ್ಲರೂ ಮನಸ್ಸೆಯ
೧೭ ಮಗನಾಗಿರುವ ಮಕೀರನ ಮಗನಾದ ಗಿಲ್ಯಾದನ ಮಕ್ಕಳು. ಅವ
ನ ಸಹೋದರಿಯಾದ ಹಮ್ಮೊಲೆಕಳು ಇಷ್ಹೂದನನ್ನೂ, ಅ
೧೮ ಬೀಯೆಜರನನ್ನೂ, ಮಹಲನನ್ನೂ, ಹೆತ್ತಳು. ಶೆಮೀದಾಳ ಮ
ಕ್ಕಳು—ಅಹಿಯಾನನು, ಶೆಕೆಮನು, ಲಿಕ್ಹಿಯು, ಅನಿಯಾಮನು.
೧೯ ಎಫ್ರಾಯಿಮನ ಮಕ್ಕಳು—ಶುಥೇಲಹನು; ಅವನ ಮಗನು
ಬೇರದನು, ಅವನ ಮಗನು ತಹಾತನು ಅವನ ಮಗನು ಎಗ್ಲಾ
೨೦ ಹನು, ಅವನ ಮಗನು ತಹಾತನು, ಅವನ ಮಗನು ಜಬದನು,
ಅವನ ಮಗನು ಶುಥೇಲಹನು; ಮತ್ತು ಏಜ್ರನೂ, ಎಳಾದನೂ.
ಆ ದೇಶದಲ್ಲಿ ಹುಟ್ಟಿದ ಗಾತಿನವರು ಇವರ ದನಗಳನ್ನು ಸುಲುಕೊ
೨೧ ಳ್ಳ ಇಳಿದು ಬಂದಾಗ, ಇವರನ್ನು ಕೊಂದು ಹಾಕಿದರು. ಅವರ
ತಂದೆಯಾದ ಎಫ್ರಯಿಮನು ಅನೇಕ ದಿವಸಗಳು ದುಃಖ ಪಟ್ಟಿ
ದ್ದರಿಂದ, ಅವನ ಸಹೋದರರು ಅವನನ್ನು ಆದರಿಸ ಬಂದರು.
೨೨ ಅವನು ತನ್ನ ಹೆಂಡತಿಯ ಬಳಿಗೆ ಕೂಡಿದಾಗ, ಅವಳು ಗರ್ಭ ಧರಿ
ಸಿ, ಮಗನನ್ನು ಹೆತ್ತಳು. ಆಗ ತನ್ನ ಮನೆಯಲ್ಲಿ ಕೇಡು ಉಂ
೨೩ ಟಾದದರಿಂದ, ಅವನಿಗೆ ಬೆರೀಯನೆಂಬ ಹೆಸರಿಟ್ಟನು. ಇವನ ಕು
ಮಾರ್ತೆಯ ಹೆಸರು ಶೇರಳು; ಇವಳು ಕೆಳಗಾದ ಬೇಥೊರೋ
ನನ್ನೂ, ಮೇಲಾದ ಬೇಥೊರೋನನ್ನೂ, ಉಜೆನ್ಶೇರವನ್ನೂ
೨೪ ಕಟ್ಟಿಸಿದಳು. ಮತ್ತು ಇವನ ಮಕ್ಕಳು—ರೇಫಹನು, ರೇಫಹನು,
೨೫ ರೇಷಫನ ಮಗನು ತೆಲಹನು, ಅವನ ಮಗನು ತಹಾತನು, ಅವ
ನ ಮಗನು ಲಾದನು, ಅವನ ಮಗನು ಅಮ್ಮಿಹೂದನು, ಅವನ
೨೬ ಮಗನು ಎಲಿಷಾಮನು, ಅವನ ಮಗನು ನೋನನು, ಅವನ ಮಗ
ನು ಯೆಹೋಶುವನು.

೨೭ ಅವರ ಸ್ವಾಸ್ತ್ಯಗಳೂ ನಿವಾಸಗಳೂ ಯಾವವಂದರೆ, ಬೇತೆ
ಲೂ, ಅದರ ಗ್ರಾಮಗಳೂ, ಮೂಲ್ಯ ದಿಕ್ಕಿನಲ್ಲಿ ನಾರಾನೂ, ಪಡ
ವಲ ದಿಕ್ಕಿನಲ್ಲಿ ಗೇಜೂ, ಅದರ ಗ್ರಾಮಗಳೂ, ಶೆಕೇಮೂ, ಅದ
೨೮ ರ ಗ್ರಾಮಗಳೂ, ಗಾಜೂ, ಅದರ ಗ್ರಾಮಗಳೂ, ಮನಸ್ಸೆಯ
ಮಕ್ಕಳ ಮೇರೆಯಲ್ಲಿರುವ ಬೇತ್ಶಾನೂ, ಅದರ ಗ್ರಾಮಗಳೂ,
ತಾಣಕವೂ, ಅದರ ಗ್ರಾಮಗಳೂ, ಮೆಗಿದ್ದೋನೂ, ಅದರ ಗ್ರಾ
ಮಗಳೂ, ದೋರೂ, ಅದರ ಗ್ರಾಮಗಳೂ, ಇವುಗಳಲ್ಲಿ ಇಸ್ರ
ಯೇಲನ ಮಗನಾದ ಯೋಸೆಫನ ಮಕ್ಕಳು ವಾಸವಾಗಿದ್ದರು.

೩೦ ಅಶೇರನ ಮಕ್ಕಳು—ಇಮ್ನನು, ಇಸ್ವನು, ಇಬ್ವನು ಬೆರೀಯ
೩೧ ನು, ಅವರ ಸಹೋದರಿಯಾದ ಸೇರಳು. ಬೆರೀಯನ ಮಕ್ಕಳು
—ಹೆಬೇರನು, ಮಲ್ಕಿಯೇಲನು; ಇವನು ಬಿರ್ಜಾಯಿತನ ತಂದೆ
೩೨ ಯು. ಮತ್ತು ಹೆಬೇರನು ಯಫ್ಲೇಟನನ್ನೂ, ಶೊಮೇರನನ್ನೂ,
ಹೊತಾಮನನ್ನೂ, ಅವರ ಸಹೋದರಿಯಾದ ಶೂವಳನ್ನೂ,



೩೩ ಪಡೆದನು. ಯಫ್ಲೇಟನ ಮಕ್ಕಳು—ಪಾಸಕನು, ಬಿಂಹಲನು, ಅ
೩೪ ಶ್ವಾತನು. ಇವರೇ ಯಫ್ಲೇಟನ ಮಕ್ಕಳು. ಶಮೇರನ ಮಕ್ಕ
೩೫ ಳು—ಅಹಿಯು, ರೋಹುಗನು, ಹುಬ್ಬನು, ಅರಾಮನು. ಅವನ ಸ
ಹೋದರನಾದ ಹೇಲಮನ ಮಕ್ಕಳು—ಜೊಫಾಹನು, ಇಮ್ನನು,
೩೬ ಶೇಲಶನು, ಅಮಾಲನು. ಜೊಫಾಹನ ಮಕ್ಕಳು—ಸೂಹನು,
೩೭ ಹರ್ನೇಫನು, ಶುವಾಲನು, ಬೇರಿಯು, ಇಮ್ರನು, ಬೇಜೆರನು,
೩೮ ಹೋದನು, ಶಮ್ಮನು, ಶಿಲ್ಹನು, ಇತ್ರಾನನು, ಬೇರನು. ಯೇತ್ರ
೩೯ ನ ಮಕ್ಕಳು—ಯೆಫುನ್ನೆಯು, ಪಿಸ್ಪನು, ಆರನು. ಉಲ್ಲನ ಮ
ಕ್ಕಳು—ಅರಾಹನು, ಹನಿಯೇಲನು, ರಿಚ್ಯನು.

೪೦ ಇವರೆಲ್ಲರು ಅಶೇರನ ಮಕ್ಕಳಾಗಿದ್ದು, ತಮ್ತು ತಂದೆಯ ಮನೆ
ಯಲ್ಲಿ ಶ್ರೇಷ್ಠರಾಗಿಯೂ, ಸ್ಥಿತಿಯುಳ್ಳ ಪರಾಕ್ರಮಶಾಲಿಗಳಲ್ಲಿ
ಮುಖ್ಯಸ್ಥರಾಗಿಯೂ ಪ್ರಭುಗಳಲ್ಲಿ ಶ್ರೇಷ್ಠರಾಗಿಯೂ ಇದ್ದರು.
ಅವರ ವಂಶಾವಳಿಯಲ್ಲಿ ಬರೆಯಲ್ಪಟ್ಟ ಲೆಖ್ಖದ ಪ್ರಕಾರ ಯುದ್ಧ
ಕ್ಕೆ ಸಿದ್ಧವಾದವರು ಇಪ್ಪತ್ತಾರು ಸಾವಿರ ಮಂದಿಯಾಗಿದ್ದರು.

## ೮. ಸಂಧಿ.

೧ ಬೆನ್ಯಮೀನನು ತನ್ನ ಹೊಜ್ಜಲ ಮಗನಾದ ಬೇಲನನ್ನೂ, ಎ
ರಡನೆಯವನಾದ ಅಶ್ಬೇಲನನ್ನೂ, ಮೂರನೆಯವನಾದ ಅಹ್ರಾ
೨ ಹನನ್ನೂ, ನಾಲ್ಕನೆಯವನಾದ ನೋಹನನ್ನೂ, ಐದನೆಯವನಾ
೩ ದ ರಾಪನನ್ನೂ ಪಡೆದನು. ಬೇಲನ ಮಕ್ಕಳು—ಅದ್ದಾರನು, ಗೇ
೪ ರನು, ಅಬೀಹೂದನು, ಅಬಿಷೂವನು, ನಾಮಾನನು, ಅಹೋಹನು
೫ ಗೇರನು ಶೆಫೂಫಾನನು, ಹೂರಾಮನು. ಎಹೂದನ ಮಕ್ಕಳು—
೬ ನಾಮಾನನು, ಅಹೀಯನು, ಗೇರನು. ಇವರೇ ಗೇಬದ ನಿವಾಸಿಗ
ಳ ಪಿತೃಗಳಲ್ಲಿ ಶ್ರೇಷ್ಠರಾಗಿದ್ದರು. ಆದರೆ ಅವರನ್ನು ಮನಾಹ
೭ ತಿಗೆ ತಕ್ಕೊಂಡು ಹೋದರು. ಮತ್ತು ಅವರನ್ನು ತಕ್ಕೊಂಡು
ಹೋದ ತರುವಾಯ, ಉಜ್ಜನನ್ನೂ ಅಹೀಹೂದನನ್ನೂ ಪಡೆದ
೮ ನು. ಇದಲ್ಲದೆ ಅವನು ಅವರನ್ನು ಕಳುಹಿಸಿದ ತರುವಾಯ, ಶ
ಹರಾಯಿಮನು ಮೋವಾಬಿನ ದೇಶದಲ್ಲಿ ಮಕ್ಕಳಲ್ಲನ್ನು ಪಡೆದನು.
೯ ಹುಷೀಮಳೂ ಬಾರಳೂ ಅವನಿಗೆ ಹೆಂಡರಾಗಿದ್ದರು. ಇದಲ್ಲದೆ
ಅವನು ತನ್ನ ಹೆಂಡತಿಯಾದ ಹೊದೇಷಳಿಂದ ಯೊಬಾಬನನ್ನೂ,
೧೦ ಚಿಬ್ಯನನ್ನೂ, ಮೇಷನನೂ, ಮಲ್ಕಾಮನನ್ನೂ, ಯೆಊಚನ
ನ್ನೂ, ಶಾಕಿಯನನ್ನೂ, ಮಿರ್ಮನನ್ನೂ ಪಡೆದನು. ಅವನ ಕು
೧೧ ಮಾರರಾದ ಇವರು ಪಿತೃಗಳಲ್ಲಿ ಶ್ರೇಷ್ಠರಾಗಿದ್ದರು. ಮತ್ತು ಹು
ಷೀಮಳಿಂದ ಅವನು ಅಬಿಟೂಬನನ್ನೂ ಎಲ್ಪಾಳನನ್ನೂ ಪಡೆದನು.
೧೨ ಎಲ್ಪಾಳನ ಮಕ್ಕಳು—ಏಬರನು, ಮಿಷಾಮನು, ಶಾಮೆದನು.
ಇವನೇ ಒನೋನನ್ನೂ ಲೋದನ್ನೂ ಅವುಗಳ ಗ್ರಾಮಗಳನ್ನೂ
೧೩ ಕಟ್ಟಿಸಿದನು. ಇದಲ್ಲದೆ ಅವನು ಗಾತಿನವರನ್ನು ಓಡಿಸಿ ಬಿಟ್ಟ ಅ
ಯ್ಯಲೋನಿನ ನಿವಾಸಿಗಳ ಪಿತೃಗಳಲ್ಲಿ ಶ್ರೇಷ್ಠರಾದ ಬೆರೀಯನು,
೧೪ ಶೇಮನು; ಮತ್ತು ಬರೀಯನ ಮಕ್ಕಳು—ಅಹಿಯೋನು, ಶಾಷಕ
೧೫ ನು, ಯೆರೆಮೋತನು, ಜೆಬದ್ಯನು, ಆರದನು, ಎಡ್ರನು, ಮಿಕಯೇಲ
೧೬ ನು, ಇಷ್ಪನು, ಯೋಹನು. ಎಲ್ಪಾಳನ ಮಕ್ಕಳು—ಜೆಬದ್ಯನು,
೧೭ ಮೇಷುಲ್ಲಮನು, ಹಿಜ್ಕಿಯು, ಹೆಬೇರನು, ಇಷ್ಮೆರಾಯಿಯು ಇಜ್ಲೀ
೧೮ ಯನು, ಯೊಬಾಬನು. ಶಿಮ್ಮೈಯ ಮಕ್ಕಳು—ಯಕೀಮನು, ಚಿ
೧೯ ಕ್ರಿಯು, ಜಬ್ದಿಯು, ಎಲ್ಯೇನಾಯಿಯು, ಚಿಲ್ಲೆತಾಯಿಯು, ಎಲ್ಯೇ
೨೦ ಲನು, ಅಡಾಯನು, ಬ್ರಾಯನು, ಶಿಮ್ರಾತನು. ಶಾಷಕನ ಮಕ್ಕ
೨೧ ಳು—ಇಷ್ಪಾನನು, ಹೆಬೇರನು, ಎಲ್ಯೇಲನು, ಅಬ್ದೋನನು, ಚಿಕ್ರಿ
೨೨ ಯು, ಹನನನು, ಹನನ್ಯನು, ಎಲಾಮನು, ಅಂಟೋತಿಯನು,
೨೩ ಇಫ್ದೇಯನು, ಪೆನೂವೇಲನು. ಯೆರೊಹಾಮನ ಮಕ್ಕಳು—ಶಂ
೨೪ ಷ್ರಾಯಿಯು, ಶೆಹರ್ಯನು, ಅಟಲ್ಯನು, ಯಾರೆಶ್ಯನು, ಎಲೀಹ
೨೫ ನು, ಚಿಕ್ರಿಯು. ಇವರೇ ಪಿತೃಗಳಲ್ಲಿ ಶ್ರೇಷ್ಠರಾಗಿದ್ದು, ತಮ್ತು ವಂಶ
೨೬ ಗಳ ಶ್ರೇಷ್ಠರಾಗಿ, ಯೆರೂಸಲೇಮಿನಲ್ಲಿ ವಾಸವಾಗಿದ್ದರು. ಮತ್ತು
ಗಿಬ್ಯೋನಿಯ ತಂದೆ ಗಿಬ್ಯೋನಿನಲ್ಲಿ ವಾಸವಾಗಿದ್ದನು; ಅವನ
೩೦ ಹೆಂಡತಿಯ ಹೆಸರು ಮಾಕಳು, ಅವನ ಹೊಜ್ಜಲ ಮಗನು ಅಬ್ದೋ
೩೧ ನನು; ಮತ್ತು ಚೂರನು, ಕೀಷನು, ಬಾಳನು, ನಾದಬನು, ಗೆದೋರ
೩೨ ನು, ಅಹಿಯೋನು, ಜೇಕರನು. ಮತ್ತು ಮಿಕ್ಲೋತನು ಶಿಮ್ಮನನ್ನು
ಪಡೆದನು. ಇವರು ಸಹ ಯೆರೂಸಲೇಮಿನಲ್ಲಿ ಸಹೋದರರಿಗೆದು
೩೩ ರಾಗಿ, ತಮ್ತು ಸಹೋದರರ ಸಂಗಡ ವಾಸವಾಗಿದ್ದರು. ಮತ್ತು ನೇ
ರನು ಕೀಷನನ್ನು ಪಡೆದನು; ಕೀಷನು ಸೌಲನನ್ನು ಪಡೆದನು; ಸೌ
ಲನು ಯೊನಾತನನ್ನೂ, ಮಲ್ಕಿಷೂವನನ್ನೂ, ಅಬಿನದಾಬ
೩೪ ನನ್ನೂ, ಎಷ್ಬಾಲನನ್ನೂ ಪಡೆದನು. ಯೊನಾತನನ ಮಗನು
೩೫ ಮೆರಿಬ್ಬಾಳನು; ಮೆರಿಬ್ಬಾಳನು ಮಿಕಾಯನನ್ನು ಪಡೆದನು. ಮಿಕಾ
ಯನ ಮಕ್ಕಳು—ಪಿತೋನನು, ಮೇಲಕನು, ತಕೇನನು, ಅಹಾಜ
೩೬ ನು. ಅಹಾಜನು ಯೆಹೊಯದನನ್ನು ಪಡೆದನು. ಯೆಹೊಯ
ದನು ಅಲೇಮತನನ್ನೂ, ಅಜ್ಮಾವೆತನನ್ನೂ, ಜಿಮ್ರಿಯನ್ನೂ ಪಡೆ
೩೭ ದನು. ಜಿಮ್ರಿಯು ಮೋಚನನ್ನು ಪಡೆದನು. ಮೋಚನು ಬಿನ್ನಾ
ನನ್ನು ಪಡೆದನು. ಅವನ ಮಗನು ರಾಫನು; ಅವನ ಮಗನು ಎ
೩೮ ಲಾಸನು; ಅವನ ಮಗನು ಅಜೇಲನು. ಈ ಅಜೇಲನಿಗೆ ಆರು
ಮಂದಿ ಮಕ್ಕಳಿದ್ದರು; ಅವರ ಹೆಸರುಗಳು ಅಜ್ರೀಕಮನು, ಬೊ
ಕ್ರುವು, ಇಷ್ಮಾಯೇಲನು, ಶವರ್ಯನು, ಒಬದ್ಯನು, ಹನಾನನು.
೩೯ ಇವರೆಲ್ಲರು ಅಜೇಲನ ಮಕ್ಕಳು. ಅವನ ಸಹೋದರನಾದ ಏಷ
ಕನ ಮಕ್ಕಳು—ಅವನ ಹೊಜ್ಜಲ ಮಗನಾದ ಉಲಾಮನು, ಎರ
ಡನೆಯವನಾದ ಯೆಹೂಷನು, ಮೂರನೆಯವನಾದ ಎಲಿಪೆಲೆಟ
೪೦ ನು. ಈ ಉಲಾಮನ ಮಕ್ಕಳು ಬಿಲ್ಲುಗಾರರಾಗಿ ಸ್ಥಿತಿಯುಳ್ಳ
ಪರಾಕ್ರಮ ಶಾಲಿಗಳಾಗಿದ್ದರು; ಅವರಿಗೆ ಮಕ್ಕಳೂ ಮೊಮ್ಮಕ್ಕ
ಳೂ ನೂರಾ ಐವತ್ತು ಮಂದಿಯಾಗಿದ್ದರು. ಇವರೆಲ್ಲರು ಬೆನ್ಯ
ಮೀನನ ಮಕ್ಕಳು.

## ೯. ಸಂಧಿ.

೧ ಹೀಗೆಯೇ ಇಸ್ರಯೇಲಿನವರೆಲ್ಲರು ವಂಶಾವಳಿಗಳ ಪ್ರಕಾರ
ಲೆಖ್ಖಿಸಲ್ಪಟ್ಟಿದ್ದರು. ಇಗೋ, ತಮ್ತು ಅಕೃತ್ಯಗಳ ನಿಮಿತ್ತ ಬಾಬೆ
ಲಿಗೆ ಕೆರೆಯಾಗಿ ವೈಯಲ್ಪಟ್ಟ ಇಸ್ರಯೇಲ್ ಯೆಹೂದಗಳ ಅರ
ಸರ ಪುಸ್ತಕಗಳಲ್ಲಿ ಬರೆಯಲ್ಪಟ್ಟಿದ್ದರು.
೨ ಆದರೆ ತಮ್ತು ಸ್ವಾಸ್ತ್ಯಗಳಲ್ಲಿ ತಮ್ತು ಪಟ್ಟಣಗಳಲ್ಲಿ ಮೊದಲು
ವಾಸವಾಗಿದ್ದವರು ಇಸ್ರಯೇಲ್ಯರೂ, ಯಾಜಕರೂ, ಲೇವ್ಯರೂ,
೩ ನೆತಿನಿಯರೂ. ಆದರೆ ಯೆರೂಸಲೇಮಿನಲ್ಲಿ ವಾಸವಾಗಿದ್ದ ಯೆ
ಹೂದನ ಮಕ್ಕಳೂ, ಬೆನ್ಯಮೀನಿನ ಮಕ್ಕಳೂ, ಎಫ್ರಯಿಮಾಂ ಮ
೪ ನಸ್ಸೆ ಎಂಬವರ ಮಕ್ಕಳೂ ಯಾರಂದರೆ, ಯೆಹೂದನ ಮಗ
ನಾದ ಪೇರಚನ ಮಕ್ಕಳಲ್ಲಿ ಒಬ್ಬನಾದ ಬಾನಿಯ ಮಗನಾದ ಇ
ಮ್ರಿಯ ಮಗನಾದ ಬಮ್ರಿಯ ಮಗನಾದ ಅಮ್ರಿಹೂದನ ಮಗ
೫ ನಾದ ಉಟಾಯನು; ಶಿಲೋನ್ಯರಲ್ಲಿ ಹೊಜ್ಜಲ ಮಗನಾದ ಅ

೬ ಹಾಯೆನು; ಅವನ ಮಕ್ಕಳೋ; ಶೇರನ ಮಕ್ಕಳಲ್ಲಿ ಯೆವ್ವೇ
ಹನೂ, ಅವನ ಸಹೋದರರೂ—ಅರು ನೂರ ಬಿಂಭತ್ತು ಮಂದಿ.
೭ ಬೆನ್ಯಾಮಿನನ ಮಕ್ಕಳು ಬೆಲೆನನ ಮಗನಾದ ಹೊದವ್ಯನ
ಮಗನಾದ ಮಿದ್ಲುಮನ ಮಗನಾದ ಸಲ್ಲುವೂ; ಯೆಕೊಹಾಮ
ನ ಮಗನಾದ ಇಜ್ಜೀಯೆನೂ; ಮಿಕ್ರಿಯ ಮಗನಾದ ಉಜ್ಜಿಯ
ಮಗನಾದ ಏಲನೂ; ಇಬ್ನೀಯನ ಮಗನಾದ ಕೆಯುವೇಲನ ಮ
೯ ಗನಾದ ಶಿಫಟ್ಯನ ಮಗನಾದ ಮೆಶುಲ್ಲಮನೂ, ಅವರ ಸಹೋ
ದರರೂ—ತಮ್ಮ ವಂಶಗಳ ಪ್ರಕಾರ ಒಂಭೈನೂರ ಐವತ್ತಾರು ಮಂ
ದಿಯೂ. ಇವರೆಲ್ಲರು ತಮ್ಮ ಪಿತೃಗಳ ಮನೆಯ ಪಿತೃಗಳಲ್ಲಿ
ಶ್ರೇಷ್ಠರಾಗಿದ್ದರು.
೧೦ ಯಾಜಕರಲ್ಲಿ ಯೋರಂದರೆ, ಯೆದಾಯನೂ, ಯೆಹೊಯರೀ
೧೧ ಬನೂ, ಯಾಕೀನನೂ; ದೇವರ ಮನೆಯ ನಾಯಕನಾದ ಅಹೀ
ಟೂಬನ ಮಗನಾದ ಮೆರಯೋತನ ಮಗನಾದ ಚದೋಕನ ಮ
ಗನಾದ ಮೆಶುಲ್ಲಾಮನ ಮಗನಾದ ಹಿಲ್ಕೀಯನ ಮಗನು ಅಜ
೧೨ ರ್ಯನೂ; ಮಲ್ಕೀಯನ ಮಗನಾದ ಪಶೂರನ ಮಗನಾದ ಯೆ
ರೊಹಾಮನ ಮಗನಾದ ಅದಾಯನು. ಇಮ್ಮೇರನ ಮಗನಾದ
ಮಿಷಿಲ್ಲೆಮಿತನ ಮಗನಾದ ಮೆಶುಲ್ಲಾಮನ ಮಗನಾದ ಯಹ್ಜೇ
೧೩ ರನ ಮಗನಾದ ಅದಿಯೇಲನ ಮಗನಾದ ಮಸಾಯನೂ; ಮತ್ತು
ಅವರ ಸಹೋದರರೂ. ತಮ್ಮ ಪಿತೃಗಳ ಮನೆಯಲ್ಲಿ ಶ್ರೇಷ್ಠರು;
ನಾವಿರದ ಏಳೂಸಾವಿರ ಅರವತ್ತು ಮಂದಿಯಾಗಿದ್ದರು. ಇವರು
ದೇವರ ಮನೆಯ ಸೇವೆಯ ಕೆಲಸದಲ್ಲಿ ಪರಾಕ್ರಮವಂತರಾಗಿದ್ದ
ರು.
೧೪ ಮತ್ತು ಲೇವ್ಯರ ಮಕ್ಕಳಲ್ಲಿ ಯೋರಂದರೆ, ಮೆರಾರಿಯ ಮ
ಕ್ಕಳಲ್ಲಿ ಒಬ್ಬನಾದ ಹಷಬ್ಯನ ಮಗನಾದ ಅಜ್ರೀಕಮನ ಮಗನಾ
೧೫ ದ ಹಷೂಬನ ಮಗನಾದ ಶೆಮಾಯನೂ; ಬಕ್ಬಕ್ಕರನೂ, ಹೇರೆ
ಷನೂ, ಗಲಾಲನೂ, ಆಸಾಫನ ಮಗನಾದ ಜಿಕ್ರಿಯ ಮಗನಾದ
೧೬ ಮಿಕಾಯನ ಮಗನಾದ ಮತ್ತನ್ಯನೂ; ಯೆದುತೂನನ ಮಗನಾದ
ಗಲಾಲನ ಮಗನಾದ ಶೆಮಾಯನ ಮಗನಾದ ಬಿಬ್ಬುನೂ; ಎಲ್ಕಾ
ನನ ಮಗನಾದ ಆಸನ ಮಗನಾದ ಬೆರೆಕ್ಯನೂ ಇವರು ನೆಟೋ
೧೭ ಫದವರ ಊರುಗಳಲ್ಲಿ ವಾಸವಾಗಿದ್ದರು. ದ್ವಾರಪಾಲಕರು ಯಾ
ರಂದರೆ, ಶಲ್ಲೂಮನೂ, ಅಕ್ಕೂಬನೂ, ಟಲ್ಮೋನನೂ, ಅಹಿ
ಮಾನನೂ, ಅವರ ಸಹೋದರರೂ. ಅವರಲ್ಲಿ ಶಲ್ಲೂಮನು ಶ್ರೇ
೧೮ ಷ್ಠನಾಗಿದ್ದನು. ಇವರು ಈ ಪರ್ಯಂತರಕ್ಕೂ ಮೂಲ್ಲ ಕಡೆ
ಯಾದ ಅರಸನ ಬಾಗಲಲ್ಲಿ ಕಾದು ಕೊಂಡಿದ್ದರು; ಇವರು ಲೇವಿ
೧೯ ಯ ಮಕ್ಕಳ ದಂಡುಗಳಲ್ಲಿ ದ್ವಾರಪಾಲಕರಾಗಿದ್ದರು. ಇದಲ್ಲದೆ
ಕೋರಹನ ಮಗನಾದ ಎಬ್ಯಸಾಫನ ಮಗನಾದ ಕೋರೆಯ ಮ
ಗನಾದ ಶಲ್ಲೂಮನೂ, ಅವನ ತಂದೆಯ ಮನೆಯವರಾಗಿರುವ ತ
ನ್ನ ಸಹೋದರರಾದ ಕೊರಹೀಯರೂ ಸೇವೆಯ ಕೆಲಸದ ಮೇಲೆ
ಇದ್ದು, ಗುಡಾರದ ಬಾಗಲ ಕಾವಲಿಗಾರರಾಗಿದ್ದರು. ಅವರ ಪಿತೃಗ
ಳು ಕರ್ತನ ಸೈನ್ಯದ ಮೇಲೆ ಇದ್ದು, ಪ್ರವೇಶದ ಕಾವಲಿಯವರಾ
೨೦ ಗಿದ್ದರು. ಎಲೆಯೋಜರನ ಮಗನಾದ ಫಿನೆಹಾಸನು ಪೂರ್ವದಲ್ಲಿ
ಅವರ ಮೇಲೆ ನಾಯಕನಾಗಿದ್ದನು; ಕರ್ತನು ಅವನ ಸಂಗಡಲಿದ್ದ
೨೧ ನು. ಮೆಶೆಲೆಮ್ಯನ ಮಗನಾದ ಜೆಕರೀಯನು ಸಭೆಯ ಗುಡಾರ
೨೨ ದ ದ್ವಾರಪಾಲಕನಾಗಿದ್ದನು. ಬಾಗಲುಗಳಲ್ಲಿ ದ್ವಾರಪಾಲಕರಾ
ಗಿರ ಆಯಲ್ಪಟ್ಟಿ ಇವರೆಲ್ಲರು ಇನ್ನೂರ ಹನ್ನೆರಡು ಮಂದಿಯಾ
ಗಿದ್ದರು. ಇವರು ತಮ್ಮ ಗ್ರಾಮಗಳಲ್ಲಿ ತಮ್ಮ ವಂಶಾವಳಿಯ
ಪ್ರಕಾರವಾಗಿ ಬರೆಯಲ್ಪಟ್ಟಿದ್ದರು. ಏನಂದರೆ ದಾವೀದನೂ ರ್ಷಿ
ಯಾದ ಸಮುವೇಲನೂ ಇವರನ್ನು ಇವರ ನಂಬಿಕೆಯಾದ ಸೇವೆ
೨೩ ಗೆ ನೇಮಿಸಿದರು. ಹೀಗೆಯೇ ಅವರಿಗೂ ಅವರ ಮಕ್ಕಳಿಗೂ ಕ
ರ್ತನ ಮನೆಯ ಬಾಗಲ ಕಾವಲಿಯು ಉಂಟಾಗಿತ್ತು; ಅದು ಗು
೨೪ ಡಾರವೆಂಬ ಮನೆಯ ಪ್ರಕಾರ ಕಾವಲಿ ಕಾವಲಿಯಾಗಿತ್ತು. ಪೂ
ರ್ವ, ಪಶ್ಚಿಮ, ಉತ್ತರ, ದಕ್ಷಿಣ, ನಾಲ್ಕು ದಿಕ್ಕುಗಳಲ್ಲಿ ದ್ವಾರ
೨೫ ಪಾಲಕರಿದ್ದರು. ಗ್ರಾಮಗಳಲ್ಲಿ ಇದ್ದ ಅವರ ಸಹೋದರರು ತ
ಮ್ಮ ಒಂತಿನ ಪ್ರಕಾರವಾಗಿ, ಏಳೇಳು ದಿವಸಗಳಲ್ಲಿ ಬರುವ ನೇಮ
೨೬ ಕವಿತ್ತು; ಯಾಕಂದರೆ ದ್ವಾರಪಾಲಕರಲ್ಲಿರುವ ನಾಲ್ಕು ಮಂದಿ
ಶ್ರೇಷ್ಠರಾದ ಈ ಲೇವ್ಯರು ತಮ್ಮ ನಂಬಿಕೆಯಾದ ಉದ್ಯೋಗದ
ಲ್ಲಿ ಇದ್ದು, ದೇವರ ಮನೆಯ ಉಗ್ರಾಣಗಳ ಮೇಲೆಯೂ ಕೊಕ್ಕ
೨೭ ಸಗಳ ಮೇಲೆಯೂ ಇದ್ದರು. ಈ ಕಾವಲಿ ಅವರದಾಗಿದ್ದದರಿಂದ
ಲೂ, ಪ್ರತಿ ಉದಯದಲ್ಲಿ ತೆರೆಯುವದು ಅವರದಾಗಿದ್ದದರಿಂದಲೂ,
೨೮ ಅವರು ದೇವರ ಮನೆಯ ಬಳಿಯಲ್ಲಿ ವಾಸವಾಗಿದ್ದರು. ಮತ್ತು
ಸೇವೆಯ ಸಾಮಾನುಗಳನ್ನು ಬಳಕೆಗೆ ತೆಳ್ಳದ ಪ್ರಕಾರ ತರುವದ
ಕ್ಕೂ ಹೊರಕ್ಕೂ ತೆಳ್ಳದ ಪ್ರಕಾರ ತರುವದಕ್ಕೂ, ಅವರಲ್ಲಿ
೨೯ ಕೆಲವರು ಅವುಗಳ ಮೇಲೆ ಕಾವಲಿಯಾಗಿದ್ದರು. ಅವರಲ್ಲಿ ಕೆಲವ
ರು ಸಾಮಾನುಗಳನ್ನೂ, ಪರಿಶುದ್ಧಸ್ಥಾನದಲ್ಲಿರುವ ಎಲ್ಲಾ ಸಾ
ಮಾನುಗಳನ್ನೂ, ನಯವಾದ ಹಿಟ್ಟಿನ್ನೂ, ದ್ರಾಕ್ಷೇರಸವನ್ನೂ,
ಎಣ್ಣೆಯನ್ನೂ, ಸಾಂಬ್ರಾಣಿಯನ್ನೂ ಸುಗಂಧಗಳನ್ನೂ ಕಾ
೩೦ ಯ ನೇಮಿಸಲ್ಪಟ್ಟಿದ್ದರು. ಮತ್ತು ಯಾಜಕರ ಕುಮಾರರಲ್ಲಿ ಕೆ
೩೧ ಲವರು ಸುಗಂಧಗಳಿಂದ ತೈಲವನ್ನು ಮಾಡಿದರು. ಕೊರಹೀಯ
ನಾದ ಶಲ್ಲೂಮನ ಜೊಜ್ಜಲ ಮಗನಾದ ಮತ್ತಿತ್ಯನು ಲೇವ್ಯರ
ಲ್ಲಿ ಒಬ್ಬನಾಗಿದ್ದು, ತಟ್ಟಿಗಳ ಮೇಲೆ ಮಾಡಲ್ಪಟ್ಟ ಭಕ್ಷ್ಯಗಳ ಕೆಲ
೩೨ ಸಕ್ಕೆ ನೇಮಿಸಲ್ಪಟ್ಟಿದ್ದನು. ಸಮುಖದ ರೊಟ್ಟಿಯನ್ನು ಪ್ರತಿ ಸ
ಬ್ಬತು ದಿವಸದಲ್ಲಿ ಸಿದ್ಧ ಮಾಡುವದಕ್ಕೆ, ಕೊಹಾತ್ಯರ ಮಕ್ಕಳಾ
ದ ಅವರ ಸಹೋದರರಲ್ಲಿ ಇನ್ನೂ ಕೆಲವರು ನೇಮಿಸಲ್ಪಟ್ಟಿದ್ದರು.
೩೩ ಇದಲ್ಲದೆ ಲೇವ್ಯರ ಪಿತೃಗಳಲ್ಲಿ ಶ್ರೇಷ್ಠರಾದ ಇವರು ಹಾಡುಗಾ
ರಾಗಿದ್ದು, ನೇಮಕವಿಲ್ಲದೆ ಕೊಠಡಿಗಳಲ್ಲಿ ವಾಸವಾಗಿದ್ದರು; ಯಾ
೩೪ ಕಂದರೆ ಅವರು ರಾತ್ರಿ ಹಗಲು ಅದೇ ಕಾರ್ಯದಲ್ಲಿದ್ದರು. ಲೇವ್ಯ
ರ ಪಿತೃಗಳಲ್ಲಿ ಶ್ರೇಷ್ಠರಾದ ಇವರು ತಮ್ಮ ವಂಶಗಳಲ್ಲಿ ಶ್ರೇಷ್ಠ
ರಾಗಿದ್ದು, ಯೆರೂಸಲೇಮಿನಲ್ಲಿ ವಾಸವಾಗಿದ್ದರು.

೩೫ ಇದಲ್ಲದೆ ಗಿಬ್ಯೋನನ ತಂದೆಯಾದ ಯೆಹಿಯೇಲನು ಗಿ
ಬ್ಯೋನಿನಲ್ಲಿ ವಾಸವಾಗಿದ್ದನು. ಅವನ ಹೆಂಡತಿಯ ಹೆಸರು ಮಾ
೩೬ ಕಳ್ಳು. ಅವನ ಜೊಜ್ಜಲ ಮಗನು ಅಬ್ದೋನನು; ಮತ್ತು ಚೂ
೩೭ ರನೂ, ಕೀಷನೂ, ಬಾಳನೂ, ನೇರನೂ, ನಾದಬನೂ; ಗೆದೋ
೩೮ ರನೂ, ಅಹಿಯೋನೂ, ಜೆಕರೀಯನೂ, ಮಿಕ್ಲೋತನೂ. ಮಿ
೩೯ ಕ್ಲೋತನು ಶಿಮಾಮನನ್ನು ಪಡೆದನು. ಇವರು ತಮ್ಮ ಸಹೋ
ದರರಂಗೆದುರಾಗಿ, ತಮ್ಮ ಸಹೋದರರ ಸಂಗಡ ಯೆರೂಸಲೇಮಿನ
೪೦ ಲ್ಲಿ ವಾಸವಾಗಿದ್ದರು. ನೇರನು ಕೀಷನನ್ನು ಪಡೆದನು; ಕೀಷನು
ಸೌಲನನ್ನು ಪಡೆದನು; ಸೌಲನು ಯೊನತಾನನನ್ನೂ, ಮಲ್ಕಿಶೂ
ವನನ್ನೂ, ಅಬಿನದಾಬನನ್ನೂ, ಎಷ್ಬಾಲನನ್ನೂ ಪಡೆದನು.
೪೧ ಯೊನತಾನನ ಮಗನು ಮೆರಿಬ್ಬಾಳನು. ಮೆರಿಬ್ಬಾಳನು ಮೀಕನ
೪೨ ನ್ನು ಪಡೆದನು. ಮೀಕನ ಮಕ್ಕಳು—ಪಿಠೋನನು, ಮೇಲೆಕನು



೪೩ ತಹ್ರಿಯನು ಅಹಾಜನು. ಅಹಾಜನು ಯಾರನನ್ನು ಪಡೆದನು;
ಯಾರನು ಅಲೇಮತನನ್ನೂ, ಅಜ್ಮಾವೆತನನ್ನೂ, ಜಿಮ್ರಿಯ
೪೪ ನ್ನೂ ಪಡೆದನು; ಜಿಮ್ರಿಯು ಮೋಚೆನನ್ನು ಪಡೆದನು. ಮೋಚ
ನು ಬಿಣ್ಣಾನನ್ನು ಪಡೆದನು; ಅವನ ಮಗನು ರೆಫಾಯನು, ಅವನ
೪೫ ಮಗನು ಎಳಾಸನು, ಅವನ ಮಗನು ಅಚೇಲನು. ಈ ಅಚೇಲನಿ
ಗೆ ಅರು ಮಂದಿ ಮಕ್ಕಳು; ಅವರ ಹೆಸರುಗಳು—ಅಜ್ರೀಕಮನು,
ಬೊಕ್ರುವು, ಇಷ್ಮಾಯೇಲನು, ಶೆಯರ್ಯನು, ಒಬದ್ಯನು, ಹನಾನ
ನು. ಇವರೇ ಅಚೇಲನ ಮಕ್ಕಳು.

## ೧೦. ಸಂಧಿ.

೧ ಆದರೆ ಫಿಲಿಷ್ಟ್ಯರು ಇಸ್ರಯೇಲಿನ ಸಂಗಡ ಯುದ್ಧವನ್ನು ಮಾ
ಡಿದರು; ಇಸ್ರಯೇಲಿನ ಮನುಷ್ಯರು ಫಿಲಿಷ್ಟ್ಯರ ಮುಂದೆ ಓಡಿ
ಹೋಗಿ, ಗಿಲ್ಬೋಯೆ ಬೆಟ್ಟದಲ್ಲಿ ಕೊಲ್ಲಲ್ಪಟ್ಟವರಾಗಿ ಬಿದ್ದರು.
೨ ಫಿಲಿಷ್ಟ್ಯರು ಸೌಲನ ಹಿಂದೆಯೂ ಅವನ ಮಕ್ಕಳ ಹಿಂದೆಯೂ
ಹತ್ತಿದರು; ಮತ್ತು ಫಿಲಿಷ್ಟ್ಯರು ಸೌಲನ ಮಕ್ಕಳಾದ ಯೊನತಾನ
ನನ್ನೂ, ಅಬಿನದಾಬನನ್ನೂ, ಮಲ್ಕಿಶೂವನನ್ನೂ ಹೊಡೆದು ಬಿ
೩ ಟ್ಟರು. ಯುದ್ಧವು ಸೌಲನ ಮೇಲೆ ಭಾರವಾಗಿತ್ತು; ಬಿಲ್ಲುಗಾರರು
ಅವನನ್ನು ಕಂಡು ಕೊಂಡರು; ಅವನು ಬಿಲ್ಲುಗಾರರಿಂದ ಘಾಯ
೪ ಪಟ್ಟನು. ಆಗ ಸೌಲನು ತನ್ನ ಆಯುಧಗಳನ್ನು ಹಿಡಿಯುವವ
ನಿಗೆ, ಈ ಪರಿಛೇದನೆ ಇಲ್ಲದವರು ಬಂದು, ನನ್ನನ್ನು ಅವಮಾ
ನ ಮಾಡದ ಹಾಗೆ, ನೀನು ನಿನ್ನ ಕತ್ತಿಯನ್ನು ಕಿತ್ತು, ಅದರಿಂದ
ನನ್ನನ್ನು ತಿವಿ, ಅಂದನು. ಆದರೆ ಅವನ ಆಯುಧ ಹಿಡಿಯುವ
ವನು ಬಹು ಭಯ ಪಟ್ಟದ್ದರಿಂದ ಒಲ್ಲದೆ ಹೋದನು. ಆಗ ಸೌಲ
ನು ತನ್ನ ಕತ್ತಿಯನ್ನು ತೆಗೆದು ಕೊಂಡು, ಅದರ ಮೇಲೆ ಬಿದ್ದನು.
೫ ಸೌಲನು ಸತ್ತನೆಂದು, ಅವನ ಆಯುಧ ಹಿಡಿಯುವವನು ಕಂಡಾ
ಗ, ಅವನು ಹಾಗೆಯೇ ಕತ್ತಿಯ ಮೇಲೆ ಬಿದ್ದು, ಸತ್ತು ಹೋದನು.
೬ ಸೌಲನೂ, ಅವನ ಮೂರು ಮಂದಿ ಮಕ್ಕಳೂ, ಅವನ ಮನೆಯ
೭ ವಕ್ಕೆಲ್ಲರೂ ಕೂಡ ಸತ್ತು ಹೋದರು. ಅವರು ಓಡಿ ಹೋದಕೆಂ
ದೂ, ಸೌಲನೂ ಅವನ ಮಕ್ಕಳೂ ಸತ್ತರೆಂದೂ, ತಗ್ಗಿನಲ್ಲಿದ್ದ
ಇಸ್ರಯೇಲ ಮನುಷ್ಯರೆಲ್ಲರು ಕಂಡಾಗ, ಅವರು ತಮ್ಮ ಪಟ್ಟಣ
ಗಳನ್ನು ಬಿಟ್ಟು, ಓಡಿ ಹೋದರು. ಫಿಲಿಷ್ಟ್ಯರು ಬಂದು, ಅವುಗಳ
ಲ್ಲಿ ವಾಸವಾಗಿದ್ದರು.
೮ ಮಾರನೆ ದಿವಸದಲ್ಲಿ ಏನಾಯಿತಂದರೆ, ಫಿಲಿಷ್ಟ್ಯರು ಕೊಲ್ಲ
ಲ್ಪಟ್ಟವರನ್ನು ಸುಲುಕೊಳ್ಳ ಬಂದಾಗ, ಗಿಲ್ಬೋಯೆ ಬೆಟ್ಟದಲ್ಲಿ
ಬಿದ್ದಿದ್ದ ಸೌಲನನ್ನೂ, ಅವನ ಮಕ್ಕಳನ್ನೂ ಕಂಡು ಕೊಂಡರು.
೯ ಅವರು ಅವನನ್ನು ಸುಲುಕೊಂಡು, ಅವನ ತಲೆಯನ್ನೂ ಅವನ
ಆಯುಧಗಳನ್ನೂ ಎತ್ತಿ ಕೊಂಡು ಹೋಗಿ, ತಮ್ಮ ವಿಗ್ರಹಗಳಿ
ಗೂ ಜನರಿಗೂ ಸಾರುವ ಹಾಗೆ, ಫಿಲಿಷ್ಟ್ಯರ ದೇಶಕ್ಕೆ ಸುತ್ತಲೂ
೧೦ ಕಳುಹಿಸಿದರು. ಮತ್ತು ಅವನ ಆಯುಧಗಳನ್ನು ತಮ್ಮ ದೇವರು
ಗಳ ಮನೆಯಲ್ಲಿ ಇಟ್ಟು, ಅವನ ತಲೆಯನ್ನು ದಗೋನನ ಮನೆ
ಯಲ್ಲಿ ಭದ್ರ ಪಡಿಸಿದರು.
೧೧ ಯಾಬೆಷ್‌ಗಿಲ್ಯಾದಿನವರೆಲ್ಲರು ಫಿಲಿಷ್ಟ್ಯರು ಸೌಲನಿಗೆ ಮಾ
೧೨ ಡಿದ್ದನ್ನೆಲ್ಲಾ ಕೇಳಿದಾಗ, ಅವರಲ್ಲಿರುವ ಸಮಸ್ತ ಪರಾಕ್ರಮಶಾಲಿ
ಗಳು ಎದ್ದು, ಸೌಲನ ಶರೀರವನ್ನೂ ಅವನ ಕುಮಾರರ ಶರೀರಗ
ಳನ್ನೂ ತಕ್ಕೊಂಡು, ಯಾಬೆಷಿಗೆ ತಂದು, ಯಾಬೆಷಿನಲ್ಲಿರುವ
ಒಂದು ಏಲೊನ್ ಮರದ ಕೆಳಗೆ ಅವರ ಎಲುವುಗಳನ್ನು ಹೂಣಿ
ಟ್ಟು, ಏಳು ದಿವಸ ಉಪವಾಸ ಮಾಡಿದರು.
೧೩ ಹೀಗೆಯೇ ಸೌಲನು ಕರ್ತನಿಗೆ ವಿರೋಧವಾಗಿ ಮಾಡಿದ ತ
ನ್ನ ಅಕೃತ್ಯದ ನಿಮಿತ್ತ ಸತ್ತು ಹೋದನು. ಅವನು ಕರ್ತನ ವಾ
ಕ್ಯವನ್ನು ಕೈಕೊಳ್ಳದೆ, ಅದಕ್ಕೆ ವಿರೋಧವಾಗಿ ನಡೆದು, ಕರ್ತ
೧೪ ನನ್ನು ವಿಚಾರಿಸದೆ, ಯಕ್ಷಿಣೀಗಾರರನ್ನು ವಿಚಾರಿಸ ಅವರನ್ನು
ಹುಡುಕಿದ್ದರಿಂದ, ಕರ್ತನು ಅವನನ್ನು ಕೊಂದು ಹಾಕಿ, ರಾಜ್ಯವ
ನ್ನು ಇಷಾಯನ ಮಗನಾದ ದಾವೀದನ ಕಡೆಗೆ ತಿರುಗಿಸಿದನು.

## ೧೧. ಸಂಧಿ.

೧ ಮತ್ತು ಇಸ್ರಯೇಲ್ಯರೆಲ್ಲರು ಹೆಬ್ರೋನಿನಲ್ಲಿದ್ದ ದಾವೀದನ ಬ
ಳಿಗೆ ಕೂಡಿ ಬಂದು, ಹೇಳಿದ್ದೇನಂದರೆ—ಇಗೋ, ನಾವು ನಿನ್ನ ಎ
೨ ಲುವೂ ನಿನ್ನ ಮಾಂಸವೂ ಆಗಿದ್ದೇವೆ. ಇದಲ್ಲದೆ ಪೂರ್ವದಲ್ಲಿ,
ಸೌಲನು ಅರಸನಾಗಿದ್ದಾಗ, ನೀನು ಇಸ್ರಯೇಲನ್ನು ಹೊರಗೆ ನ
ಡಿಸುವವನಾಗಿಯೂ, ಒಳಗೆ ತರುವವನಾಗಿಯೂ ಇದ್ದಿ. ಮ
ತ್ತು ಕರ್ತನಾದ ನಿನ್ನ ದೇವರು ನಿನಗೆ ಹೇಳಿದ್ದು—ನೀನು ನನ್ನ
ಜನರಾದ ಇಸ್ರಯೇಲನ್ನು ಮೇಯಿಸುವವನಾಗಿರುವಿ; ಮತ್ತು ನೀ
೩ ನು ನನ್ನ ಜನರಾದ ಇಸ್ರಯೇಲಿನಮೇಲೆ ನಾಯಕನಾಗಿರುವಿ. ಹಾ
ಗೆಯೇ ಇಸ್ರಯೇಲಿನ ಹಿರಿಯರೆಲ್ಲರು ಹೆಬ್ರೋನಿನಲ್ಲಿದ್ದ ಅರಸ
ನ ಬಳಿಗೆ ಬಂದರು; ದಾವೀದನು ಹೆಬ್ರೋನಿನಲ್ಲಿ ಕರ್ತನ ಮುಂದೆ
ಅವರ ಸಂಗಡ ಒಡಂಬಡಿಕೆ ಮಾಡಿದನು; ಕರ್ತನು ಸಮುವೇಲನ
ಮುಖಾಂತ್ರ ಹೇಳಿದ ವಾಕ್ಯದ ಪ್ರಕಾರ, ಅವರು ದಾವೀದನನ್ನು
೪ ಇಸ್ರಯೇಲಿನ ಮೇಲೆ ಅರಸನಾಗಿರ ಅಭಿಷೇಕ ಮಾಡಿದರು. ತ
ರುವಾಯ ದಾವೀದನೂ ಸಮಸ್ತ ಇಸ್ರಯೇಲ್ಯರೂ ಯೆಬೂಸು
ಎಂಬ ಹೆಸರುಳ್ಳ ಯೆರೂಸಲೇಮಿಗೆ ಹೋದರು. ದೇಶ ನಿವಾಸಿ
೫ ಗಳಾದ ಯೆಬೂಸ್ಯರು ಅಲ್ಲಿ ಇದ್ದರು. ಆಗ ಯೆಬೂಸಿನ ನಿವಾ
ಸಿಗಳು ದಾವೀದನಿಗೆ, ನೀನು ಇಲ್ಲಿ ಬರ ಬೇಡ, ಅಂದರು. ಆದಾ
ಗ್ಯೂ ದಾವೀದನು ದಾವೀದನ ಪಟ್ಟಣವಾದ ಚಿಯೋನೆಂಬ ಕೋ
೬ ಟೆಯನ್ನು ಹಿಡಿದನು. ಏನಂದರೆ ಯಾವನಾದರೂ ಮೊದಲು ಯೆ
ಬೂಸಿಯನ್ನು ಹೊಡೆದರೆ, ಅವನೇ ಶ್ರೇಷ್ಠನಾಗಿಯೂ ಪ್ರಧಾನ
ನಾಗಿಯೂ ಇರುವನೆಂದು, ದಾವೀದನು ಹೇಳಿದನು. ಹಾಗೆಯೇ
ಜೆರೂಯಳ ಮಗನಾದ ಯೊವಾಬನು ಮೊದಲು ಏರಿ ಹೋಗಿ,
೭ ಶ್ರೇಷ್ಠನಾದನು. ಮತ್ತು ದಾವೀದನು ಕೋಟೆಯೊಳಗೆ ವಾಸ
ಮಾಡಿದನು; ಆದಕಾರಣ ಅದಕ್ಕೆ ದಾವೀದನ ಪಟ್ಟಣವೆಂದು ಹೆಸರಿ
೮ ಟ್ಟರು. ಅವನು ಸುತ್ತಲಾಗಿ, ಮಿಲ್ಲೋವು ಮೊದಲುಗೊಂಡು ಸು
ತ್ತಲಾಗಿ ಪಟ್ಟಣವನ್ನು ಕಟ್ಟಿಸಿದನು. ಆದರೆ ಪಟ್ಟಣದಲ್ಲಿ ಮಿಕ್ಕಿದ್ದನ್ನು
೯ ಯೊವಾಬನು ಜೋಕೆ ಮಾಡಿಸಿದನು. ಹೀಗೆಯೇ ದಾವೀದನು
ಬರ ಬರ ದೊಡ್ಡವನಾದನು; ಸೈನ್ಯಗಳ ಕರ್ತನು ಅವನ ಸಂಗಡ
ಇದ್ದನು.
೧೦ ದಾವೀದನಿಗೆ ಉಂಟಾಗಿರುವ ಶ್ರೇಷ್ಠರಾದ ಪರಾಕ್ರಮಶಾಲಿಗ
ಳು ಇವರೇ—ಇಸ್ರಯೇಲನ್ನು ಕುರಿತು ಕರ್ತನು ಹೇಳಿದ ವಾಕ್ಯಾ
ದ ಪ್ರಕಾರ ಅವನನ್ನು ಅರಸನಾಗ ಮಾಡುವದಕ್ಕೆ, ಅವರು ಸ
ಮಸ್ತ ಇಸ್ರಯೇಲಿನ ಸಂಗಡ ಅವನ ರಾಜ್ಯದಲ್ಲಿ ತಮ್ಮನ್ನು ದೃ
೧೧ ಢ ಪಡಿಸಿ ಕೊಂಡರು. ದಾವೀದನಿಗೆ ಉಂಟಾದ ಪರಾಕ್ರಮಶಾಲಿ
ಗಳ ಲೆಖ್ಖವೇನಂದರೆ—ಹಕ್ಮೋನಿಯನಾದ ಯಷಬಾಮನು ಅಧಿ

ಪತಿಗಳಲ್ಲಿ ಶ್ರೇಷ್ಠನಾಗಿದ್ದನು; ಅವನು ಮುನ್ನೂರು ಮಂದಿಗೆ ವಿ
ರೋಧವಾಗಿ ತನ್ನ ಈಟಿಯನ್ನು ಎತ್ತಿ, ಒಂದೇ ಸಾರಿ ಅವರನ್ನು
೧೨ ಕೊಂದು ಹಾಕಿದನು. ಅವನ ತರುವಾಯ ಅಹೋಹ್ಯನಾದಂಥ
ದೋದನ ಮಗನಾದಂಥ ಎಲೆಯೋಜರನು ಮೂರು ಮಂದಿ ಪರಾ
೧೩ ಕ್ರಮಶಾಲಿಗಳಲ್ಲಿ ಒಬ್ಬನಾಗಿದ್ದನು. ಇವನು ದಾವೀದನ ಸಂಗಡ
ಪಸ್ದಮ್ಮಿಮನ ಬಳಿಯಲ್ಲಿದ್ದನು. ಅಲ್ಲಿ ಫಿಲಿಷ್ಟ್ಯರು ಜವೆಗೋಧಿ
ತುಂಬಿರುವ ಹೊಲದಲ್ಲಿ ಯುದ್ಧಕ್ಕೆ ಕೂಡಿಸಲ್ಪಟ್ಟಿರುವಾಗ, ಜನ
೧೪ ರು ಫಿಲಿಷ್ಟ್ಯರ ಮುಂದೆ ಓಡಿ ಹೋದರು. ಆಗ ಇವರು ಆ ಹೊ
ಲದ ಮಧ್ಯದಲ್ಲಿ ನಿಂತುಕೊಂಡು, ಅದನ್ನು ತಪ್ಪಿಸಿ, ಫಿಲಿಷ್ಟ್ಯರನ್ನು
ಕೊಂದು ಹಾಕಿದರು; ಮತ್ತು ಕರ್ತನು ಮಹಾ ರಕ್ಷಣೆಯಿಂದ ರ
ಕ್ಷಿಸಿದನು.

೧೫ ಇದಲ್ಲದೆ ಮೂವತ್ತು ಮಂದಿ ಅಧಿಪತಿಗಳಲ್ಲಿರುವ ಮೂರು
ಮಂದಿ ಅಡುಲ್ಲಮು ಗವಿಯಲ್ಲಿರುವ ದಾವೀದನ ಬಳಿಗೆ ಸುದ್ದಕ್ಕೆ
ಹೋದರು. ಅದೇ ವೇಳೆಯಲ್ಲಿ ಫಿಲಿಷ್ಟ್ಯರ ಸೈನ್ಯವು ರೆಫಾಯಿಮ್
೧೬ ತಗ್ಗಿನಲ್ಲಿ ಇಳಿದಿತ್ತು. ಆಗ ದಾವೀದನು ಗಡೀಸ್ಥಳದಲ್ಲಿ ಇದ್ದನು;
೧೭ ಫಿಲಿಷ್ಟ್ಯರ ದಂಡು ಬೇತ್ಲೆಹೇಮಿನಲ್ಲಿ ಇತ್ತು. ಆಗ ದಾವೀದನು
ಬೇತ್ಲೆಹೇಮಿನ ಬಾಗಲ ಬಳಿಯಲ್ಲಿರುವ ಭಾವಿಯ ನೀರನ್ನು ನನ
೧೮ ಗೆ ಕುಡಿಯ ಕೊಡುವವನ್ಯಾರೆಂದು, ಆಕೆಪಟ್ಟು ಹೇಳಿದನು. ಆಗ
ಆ ಮೂವರು ಫಿಲಿಷ್ಟ್ಯರ ದಂಡಿನಲ್ಲಿ ಹೊಗಬಿದ್ದು, ಬೇತ್ಲೆಹೇಮಿ
ನ ಬಾಗಲ ಬಳಿಯಲ್ಲಿರುವ ಭಾವಿಯ ನೀರನ್ನು ಕೇದಿ, ದಾವೀದನಿ
೧೯ ಗೆ ತೆಗೆದು ಕೊಂಡು ಬಂದರು. ಆದರೆ ದಾವೀದನು ಅದನ್ನು ಕು
ಡಿಯೊಲ್ಲದೆ, ಕರ್ತನಿಗೆ ಹೊಯಿದು, ನನ್ನ ದೇವರು ಇಂಥಾ
ಕಾರ್ಯವನ್ನು ನನಗೆ ದೂರವಾಗ ಮಾಡಲಿ; ನಾನು ಈ ಮನು
ಷ್ಯರ ಪ್ರಾಣ ರಕ್ತವನ್ನು ಕುಡಿಯ ಬಹುದೇ! ತಮ್ಮ ಪ್ರಾಣಗ
ಳಿಂದ ಅದನ್ನು ತಂದರಲ್ಲ? ಎಂಥೇಳಿ, ಕುಡಿಯಲ್ಲೊಲ್ಲದೆ ಇದ್ದನು.
ಈ ಕಾರ್ಯಗಳನ್ನು ಈ ಶ್ರೇಷ್ಠರಾದ ಮೂರು ಮಂದಿ ಪರಾಕ್ರ
ಮಶಾಲಿಗಳು ಮಾಡಿದರು.

೨೦ ಇದಲ್ಲದೆ ಯೊವಾಬನ ಸಹೋದರನಾದ ಅಬಿಷಾಯಿ ಮೂ
ರು ಮಂದಿಯಲ್ಲಿ ಶ್ರೇಷ್ಠನಾಗಿದ್ದನು. ಅವನು ಮುನ್ನೂರು ಮಂ
ದಿಗೆ ವಿರೋಧವಾಗಿ ತನ್ನ ಈಟಿಯನ್ನು ಎತ್ತಿ, ಅವರನ್ನು ಕೊಂ
೨೧ ದು ಹಾಕಿದ್ದರಿಂದ, ಮೂವರಲ್ಲಿ ಹೆಸರ್ಗೊಂಡವನಾಗಿದ್ದನು. ಈ
ಮೂವರಲ್ಲಿ ಅವನು ಇಬ್ಬರಿಗಿಂತ ಘನವುಳ್ಳವನಾಗಿದ್ದನು; ಅವ
ರಿಗೆ ಅವನು ಪ್ರಧಾನನಾಗಿದ್ದನು; ಆದರೆ ಮೂವರ ಪರ್ಯಂತರ
ಕೀರದೆ ಇದ್ದನು.

೨೨ ಕಬಜೇಲಿನವನಾದ ಪರಾಕ್ರಮಶಾಲಿಯ ಮಗನಾದಂಥ ಯೆ
ಹೊಯದಾವನ ಮಗನಾದ ಬೆನಾಯನು ಕ್ರಿಯೆಗಳಲ್ಲಿ ಅಧಿಕ
ನು; ಅವನು ಸಿಂಹದ ಹಾಗಿರುವ ಮೋವಾಬಿನ ಇಬ್ಬರು ಮನುಷ್ಯ
ರನ್ನು ಹೊಡೆದನು. ಇದಲ್ಲದೆ ಹಿಮದ ದಿವಸದಲ್ಲಿ ಇಳಿದು ಹೋಗಿ,
೨೩ ಕೂಣಿಯೊಳಗೆ ಒಂದು ಸಿಂಹವನ್ನು ಹೊಡೆದು ಬಿಟ್ಟನು. ಇದಲ್ಲ
ದೆ ಅವನು ಐದು ಮೊಳ ಉದ್ದವಾದ ಐಗುಪ್ತ್ಯನನ್ನು ಹೊಡೆದು
ಬಿಟ್ಟನು; ಐಗುಪ್ತ್ಯನ ಕೈಯಲ್ಲಿ ಜಾಡರ ಗುಂಟೆಗೆಯ ದಿಂಡಿನ ಹಾ
ಗೆ ಒಂದು ಈಟಿ ಇತ್ತು; ಅವನು ಒಂದು ಕೋಲು ಹಿಡುಕೊಂಡು,
ಅವನ ಬಳಿಗೆ ಹೋಗಿ, ಐಗುಪ್ತ್ಯನ ಕೈಯಿಂದ ಈಟಿಯನ್ನು ಕ
ಸು ಕೊಂಡು, ಅವನ ಈಟಿಯಿಂದಲೇ ಅವನನ್ನು ಕೊಂದು ಹಾಕಿ
೨೪ ದನು. ಯೆಹೊಯದಾವನ ಮಗನಾದ ಬೆನಾಯನು ಇವುಗಳನ್ನು
ಮಾಡಿ, ಮೂರು ಮಂದಿ ಪರಾಕ್ರಮ ಶಾಲಿಗಳಲ್ಲಿ ಹೆಸರ್ಗೊಂಡವ
೨೫ ನಾದನು. ಇಗೋ, ಅವನು ಮೂವತ್ತು ಮಂದಿಯಲ್ಲಿ ಘನವುಳ್ಳ
ವನಾಗಿದ್ದನು; ಆದರೆ ಮೂವರ ಪರ್ಯಂತರ ಕೀರದೆ ಇದ್ದನು. ಮ
ತ್ತು ದಾವೀದನು ಅವನನ್ನು ತನ್ನ ಕಾವಲಿಯವರ ಮೇಲೆ ಇಟ್ಟನು.

೨೬ ಇದಲ್ಲದೆ ದಂಡುಗಳಲ್ಲಿರುವ ಪರಾಕ್ರಮ ಶಾಲಿಗಳು ಯಾರಂ
ದರೆ—ಯೊವಾಬನ ಸಹೋದರನಾದ ಅಸಹೇಲನು, ಬೇತ್ಲೆಹೇಮಿ
೨೭ ನವನಾದ ದೋದನ ಮಗನಾದ ಎಲ್ಹನಾನನು, ಹರೋರಿಯನಾದ
೨೮ ಶಮೋತನು, ಚೆಲೋನ್ಯನಾದ ಹೆಲೇಚನು, ತೆಕೋಯಿಯನಾದ,
ಇಕ್ಕೇಷನ ಮಗನಾದ ಈರನು, ಅಣತೋತ್ಯನಾದ ಅಬ್ಯೇಜರ
೨೯ ನು, ಹುಷಾತ್ಯನಾದ ಸಿಬ್ಬೆಕಾಯನು, ಅಹೋಹ್ಯನಾದ ಇಲಾ
೩೦ ನು, ನೆಟೋಫಾದವನಾದ ಮಹ್ರಾಯನು, ನೆಟೋಫಾದವನಾದ ಬಾ
೩೧ ಣನ ಮಗನಾದ ಹೆಲೇದನು, ಬೆನ್ಯಮಿನನ ಮಕ್ಕಳಿಗೆ ಉಂಟಾದ
ಗಿಬ್ಯದ ರಿಬಾಯನ ಮಗನಾದ ಇತಾಯಿಯು, ಪಿರಟೋನಿಯ
೩೨ ನಾದ ಬೆನಾಯನು. ಗಾಷಿನ ಹಳ್ಳಗಳ ಬಳಿಯಲ್ಲಿರುವ ಹುರಾ
೩೩ ಯನು, ಅರ್ಬಾತ್ಯನಾದ ಅಬಿಯೇಲನು, ಬಹರೂಮ್ಯನಾದ ಅ
೩೪ ಜ್ಮಾವೆತನು, ಶಲ್ಬೋನಿಯನಾದ ಎಲ್ಯಾಬನು, ಗಿಜೋನ್ಯನಾದ
ಹಷೇಮನ ಮಕ್ಕಳು, ಹರಾರಿಯನಾದ ಶಾಗೆಯ ಮಗನಾದ
೩೫ ಯೊನತಾನನು, ಹರಾರಿಯನಾದ ಸಕಾರನ ಮಗನಾದ ಅಹಿಯಾ
೩೬ ಮನು, ಊರನ ಮಗನಾದ ಎಲಿಫಾಲನು, ಮೆಕೆರಾತಿಯನಾದ ಹೇ
೩೭ ಫೆರನು, ಚೆಲೋನ್ಯನಾದ ಅಹೀಯನು, ಕರ್ಮೇಲ್ಯನಾದ ಹೆ
೩೮ ಜ್ರೋನು, ಎಜ್ಬಾಯನ ಮಗನಾದ ನವರಾಯಿಯು, ನತಾನನ
ಸಹೋದರನಾದ ಯೊವೇಲನು, ಹಗ್ರಿಯ ಮಗನಾದ ಮಿಭಾರನು,
೩೯ ಅಮ್ಮೋನ್ಯನಾದ ಜೇಲೆಕನು, ಜೆರೂಯಳ ಮಗನಾದ ಯೊವಾ
ಬನ ಆಯುಧಗಳನ್ನು ಹಿಡಿಯುವವನಾಗಿರುವ ಬೆರೋತ್ಯನಾದ
೪೦ ನಹರಾಯಿಯು, ಇತ್ರಿಯನಾದ ಈರನು, ಇತ್ರಿಯನಾದ ಗಾರೆ
೪೧ ಬನು, ಹಿತ್ತಿಯನಾದ ಊರಿಯನು, ಅಹ್ಲಾಯಿಯ ಮಗನಾದ ಜ
೪೨ ಬಾದನು, ರೂಬೆನ್ಯನಾದ ಶೀಜನ ಮಗನಾದ ಅದೀನನು; ಇವನು
ರೂಬೆನ್ಯರಲ್ಲಿ ಶ್ರೇಷ್ಠನಾಗಿದ್ದನು; ಮೂವತ್ತು ಮಂದಿ ಅವನ ಸಂ
೪೩ ಗಡ ಇದ್ದರು. ಮಾಕನ ಮಗನಾದ ಹನಾನನು, ಮಿಶ್ನಿಯನಾದ
೪೪ ಯೊಷಾಫಟನು, ಅಷ್ಟೋರೆತಿಯನಾದ ಉಜ್ಜೀಯನು, ಅರೋ
ವೇರ್ಯನಾದ ಹೊತಾಮನ ಮಕ್ಕಳಾಗಿರುವ ಶಮಾವನೂ ಯೆಹಿ
೪೫ ಯೇಲನೂ; ಶಿಮ್ರಿಯ ಮಗನಾದ ಯೆದೀಏಯೇಲನು, ಅವನ ಸ
೪೬ ಹೋದರನಾದಂಥ, ತೀಚೆಯನಾದಂಥ, ಯೋಹನು. ಮಹಾವಿ
ಯನಾದ ಎಲ್ಯೇಲನು, ಎಲ್ನಾವಾಮನ ಮಕ್ಕಳಾದ ಯೆರಿಬಾಯ
೪೭ ನೂ ಯೊಷವ್ಯನೂ; ಮೋವಾಬ್ಯನಾದ ಇತ್ಮನು, ಎಲ್ಯೇಲನು,
ಒಬೇದನು, ಮೆಜೊಬಾಯನಾದ ಯಸಿಯೇಲನು.

## ೧೨. ಸಂಧಿ.

೧ ಕೀಷನ ಮಗನಾದ ಸೌಲನ ನಿಮಿತ್ತ ತಾನು ಇನ್ನೂ ಬಚ್ಚಿ
ಟ್ಟು ಕೊಂಡಿರುವಾಗ, ಚಿಕ್ಲಾಗಿನಲ್ಲಿರುವ ದಾವೀದನ ಬಳಿಗೆ ಬಂದ
ವರು ಇವರೇ—ಅವರು ಪರಾಕ್ರಮಶಾಲಿಗಳಲ್ಲಿ ಕೇಡಿದವರೂ,
೨ ಯುದ್ಧಕ್ಕೆ ಸಹಾಯಕರೂ. ಕಲ್ಲುಗಳನ್ನು ಎಸೆಯಲೂ, ಬಿಲ್ಲುಗ
ಳಿಂದ ಅಂಬುಗಳನ್ನು ಹಾಕಲೂ, ಬಲಗಡೆ ಎಡಗಡೆ ಸಾಧಿಸಿಮಾ
ಡುವವರೂ, ಬೆನ್ಯಮಿನನ ಗೊತ್ರದ ಸೌಲನ ಸಹೋದರರೂ ಆ
೩ ಗಿದ್ದರು. ಶ್ರೇಷ್ಠನಾದವನು ಅಹಿಯೇಜರನು, ಮತ್ತು ಯೊವಾ



ದನು. ಇವರು ಗಿಬ್ಯಾತಿಯನಾದ ಶೆಮಾವನ ಮಕ್ಕಳು. ಮ
ತ್ತು ಅಜ್ಮಾವೆತನ ಮಕ್ಕಳಾದ ಯೆಜಿಯೇಲನು, ಪೆಲೆಟನು; ಬೆ
೪ ರಾಕನು, ಅಣತೋತ್ಯನಾದ ಯೇಹುವು, ಗಿಬ್ಯೋನ್ಯನಾದ ಇ
ಷ್ಮಾಯನು; ಇವನು ಮೂವತ್ತು ಮಂದಿಯಲ್ಲಿ ಪರಾಕ್ರಮಶಾಲಿ
ಯಾಗಿದ್ದು, ಮೂವತ್ತು ಮಂದಿಯ ಮೇಲಾದವನಾಗಿದ್ದನು; ಮ
ತ್ತು ಯೆರೆಮಿಯಾಯನು, ಯಹಜಿಯೇಲನು, ಯೊಹನಾನನು, ಗೆ
೫ ದೇರದವನಾದ ಯೊಸಬಾದನು, ಎಳುಜಾಯಿಯು, ಯೆರೀಮೋ
ತನು, ಬೆಯಳ್ಯನು, ಶೆಮರ್ಯನು, ಹರೀಫ್ಯನಾದ ಶೆಫಟ್ಯನು,
೬ ಕೊರಹೀಯರಾದ ಎಲ್ಕಾನನು, ಯೆಶೀಯನು, ಅಜರೇಲನು,
೭ ಯೊವೇಜರನು, ಯಾಶೊಬಾಮನು, ಗೆದೋರಿನಲ್ಲಿರುವ ಯೆರೊಹಾ
ಮನ ಮಕ್ಕಳಾದ ಯೊವೇಲನೂ, ಜೆಬದ್ಯನೂ.

೮ ಇದಲ್ಲದೆ ಅರಣ್ಯದಲ್ಲಿ ಬಲವಾದ ಸ್ಥಳದಲ್ಲಿರುವ ದಾವೀದನ ಬ
ಳಿಯಲ್ಲಿ ತನ್ನುನ್ನು ಪ್ರತ್ಯೇಕಿಸಿದ ಗಾದಿಯರು ಇದ್ದರು. ಇವ
ರು ಪೇಟ್ಯವನನ್ನೂ ಥಲ್ಲೆಯನ್ನೂ ಹಿಡಿದು, ಪರಾಕ್ರಮಶಾಲಿಗಳಾ
ಗಿಯೂ ಯುದ್ಧಕ್ಕೆ ತಕ್ಕ ಸೈನಿಕರಾಗಿಯೂ ಇದ್ದರು; ಅವರ
ಮುಖಗಳು ಸಿಂಹದ ಮುಖಗಳ ಹಾಗಿದ್ದವು; ಪರ್ವತಗಳ ಮೇ
೯ ಲೆ ಇರುವ ಜಿಂಕೆಗಳ ಹಾಗೆ ವೇಗವುಳ್ಳವರಾಗಿದ್ದರು. ಮೊದಲ
ನೆಯವನು ಏಜ್ರನು, ಎರಡನೆಯವನು ಒಬದ್ಯನು, ಮೂರನೆಯ
೧೦ ವನು ಎಲ್ಯಾಬನು, ನಾಲ್ಕನೆಯವನು ಮಿಷ್ಮನ್ನಾನು, ಐದನೆಯವ
೧೧ ನು ಯೆರೆಮಿಯಾಯನು, ಆರನೆಯವನು ಅಟ್ಟಾಯಿಯು, ಏಳನೆಯ
೧೨ ವನು ಎಲ್ಯೇಲನು, ಎಂಟನೆಯವನು ಯೊಹನಾನನು, ಒಂಭತ್ತನೆ
೧೩ ಯವನು ಎಲ್ಜಬಾದನು, ಹತ್ತನೆಯವನು ಯೆರೆಮಿಯಾಯನು,
೧೪ ಹನ್ನೊಂದನೆಯವನು ಮಕ್ಬನಾಯಿಯು. ಗಾದನ ಮಕ್ಕಳಾದ
ಇವರು ಸೈನ್ಯದಲ್ಲಿ ಅಧಿಪತಿಗಳಾಗಿದ್ದರು; ಕಿರಿಯನು ನೂರು ಮಂ
ದಿಯ ಮೇಲೆಯೂ, ಹಿರಿಯನು ಸಾವಿರ ಮಂದಿಯ ಮೇಲೆಯೂ
೧೫ ಇದ್ದರು. ಇವರು ಮೊದಲನೇ ತಿಂಗಳಲ್ಲಿ ಯೊರ್ದನು ತನ್ನ ಎ
ಲ್ಲಾ ಥಡಗಳ ಮೇಲೆ ಹೊರಳಿದಾಗ, ಅದನ್ನು ದಾಟಿ, ಮೂಲ್ಲ
ಕಡೆಯಲ್ಲಿಯೂ ಪಡುವಲ ಕಡೆಯಲ್ಲಿಯೂ ತಗ್ಗುಗಳಲ್ಲಿರುವವ
ಕ್ಕೆಲ್ಲರನ್ನು ಓಡಿಸಿ ಬಿಟ್ಟರು.

೧೬ ಮತ್ತು ಬೆನ್ಯಮಿನನ, ಯೆಹೂದನ ಮಕ್ಕಳಲ್ಲಿ ಕೆಲವರು ಬಲ
೧೭ ವಾದ ಸ್ಥಳದಲ್ಲಿದ್ದ ದಾವೀದನ ಬಳಿಗೆ ಬಂದರು. ಆಗ ದಾವೀದನು
ಅವರನ್ನು ಎದುರ್ಗೊಳ್ಳ ಹೊರಟು ಹೋಗಿ, ಅವರಿಗೆ ಪ್ರತ್ಯು
ತ್ತರವಾಗಿ ಹೇಳಿದ್ದು—ನನಗೆ ಸಹಾಯವಾಗಿ ನನ್ನ ಬಳಿಗೆ ನೀವು
ಸಮಾಧಾನವಾಗಿ ಬಂದರೆ, ನನ್ನ ಹೃದಯವು ನಿಮ್ಮ ಸಂಗಡ ಏ
ಕವಾಗಿರುವದು. ಆದರೆ ಬಲಾತ್ಕಾರವು ನನ್ನ ಕೈಗಳಲ್ಲಿ ಇಲ್ಲದಿ
ರುವಾಗ, ನೀವು ನನ್ನ ವೈರಿಗಳಿಗೆ ನನ್ನನ್ನು ಮೋಸದಿಂದ ಬಪ್ಪಿ
೧೮ ಸಿ ಕೊಡ ಬಂದರೆ, ನಮ್ಮ ಪಿತೃಗಳ ದೇವರು ನೋಡಿ, ಗದರಿಸಲಿ.
ಆಗ ಅತ್ಸಪ್ಪು ಅಧಿಪತಿಗಳ ಶ್ರೇಷ್ಠನಾದ ಅಮಸಾಯಿಯ ಮೇಲೆ
ಬಂತು; ಆಗಲವನು, ದಾವೀದನೇ, ನಾವು ನಿನ್ನವರು; ಇಷಾಯ
ನ ಮಗನೇ, ನಿನ್ನ ಕಡೆಯವರಾಗಿದ್ದೇವೆ; ನಿನಗೆ ಸಮಾಧಾನವು,
ಸಮಾಧಾನವು; ನಿನ್ನ ಸಹಾಯಕರಿಗೆ ಸಮಾಧಾನವು; ಯಾಕಂ
ದರೆ ನಿನ್ನ ದೇವರು ನಿನಗೆ ಸಹಾಯ ಮಾಡುತ್ತಾನೆ, ಅಂದನು.
ಆಗ ದಾವೀದನು ಅವರನ್ನು ಅಂಗೀಕರಿಸಿ, ಅವರನ್ನು ದಂಡಿನ ಅ
ಧಿಪತಿಗಳಾಗ ಮಾಡಿದನು.

೧೯ ಮತ್ತು ದಾವೀದನು ಸೌಲನ ಮೇಲೆ ಯುದ್ಧ ಮಾಡ ಫಿಲಿಷ್ಟ್ಯ
ರ ಸಂಗಡ ಬರುತ್ತಿರುವಾಗ, ಮನಸ್ಸೆಯವರು ಕೆಲವರು ದಾವೀದ
ನ ಕಡೆಗೆ ಬಿದ್ದರು. ಆದರೆ ಇವರು ಅವರಿಗೆ ಸಹಾಯ ಕೊಡದೆ
ಇದ್ದರು. ಯಾಕಂದರೆ ಫಿಲಿಷ್ಟ್ಯರ ಅಧಿಪತಿಗಳು ಯೋಚನೆ
ಮಾಡಿದ ತರುವಾಯ, ಅವನು ನಮ್ಮ ತಲೆಗಳಿಗೆ ಮೋಸ ಮಾ
ಡಿ, ತನ್ನ ಯಜಮಾನನಾದ ಸೌಲನ ಕಡೆಗೆ ಬಿದ್ದು ಹೋಗುವನೆಂ
೨೦ ಥೇಳಿ, ಅವನನ್ನು ಕಳುಹಿಸಿ ಬಿಟ್ಟನು. ಅವನು ಚಿಕ್ಲಾಗಿಗೆ ಹೋ
ಗುತ್ತಿರುವಾಗ, ಮನಸ್ಸೆಯವರಾದಂಥ, ಮನಸ್ಸೆಯ ಸಹಸ್ರಗಳ
ಮೇಲೆ ಅಧಿಪತಿಗಳಾದಂಥ, ಅದ್ನನೂ, ಯೊಜಬಾದನೂ, ಯೆದೀ
ವಯೇಲನೂ, ಮಿಕಯೇಲನೂ, ಯೊಜಬಾದನೂ, ಎಲೀಹುವೂ,
೨೧ ಜಿಲ್ಲೆತಾಯಿಯೂ ಅವನ ಕಡೆಗೆ ಬಿದ್ದರು. ಇವರು ಗುಂಪಿಗೆ ವಿ
ರೋಧವಾಗಿ ದಾವೀದನಿಗೆ ಸಹಾಯಕರಾಗಿದ್ದರು; ಯಾಕಂದರೆ
ಅವರೆಲ್ಲರು ಬಲವುಳ್ಳ ಪರಾಕ್ರಮ ಶಾಲಿಗಳಾಗಿಯೂ, ದಂಡಿನ ಪ್ರ
೨೨ ಧಾನರಾಗಿಯೂ ಇದ್ದರು. ಯಾಕಂದರೆ ಆ ಕಾಲದಲ್ಲಿ ದಿನದಿನ
ದೊಡ್ಡ ಸೈನ್ಯವು ದೇವರ ಸೈನ್ಯದ ಹಾಗೆ ಆಗುವವರ್ಯಂತರ, ದಾ
ವೀದನಿಗೆ ಸಹಾಯ ಕೊಡುವದಕ್ಕೆ, ಅವನ ಕಡೆಗೆ ಬರುತ್ತಿದ್ದರು.

೨೩ ಕರ್ತನ ವಾಕ್ಯದ ಪ್ರಕಾರ ಸೌಲನ ರಾಜ್ಯವನ್ನು ದಾವೀದನ
ಕಡೆಗೆ ತಿರಿಗಿಸುವದಕ್ಕೆ, ಹೆಬ್ರೋನಿನಲ್ಲಿದ್ದ ದಾವೀದನ ಬಳಿಗೆ ಯು
ದ್ಧಕ್ಕೆ ಆಯುಧಗಳನ್ನು ಧರಿಸಿಕೊಂಡು ಬಂದ ದಂಡುಗಳ ಲೆಖ್ಖ
೨೪ ವೇನಂದರೆ—ಪೇಟ್ಯವನ್ನೂ ಥಲ್ಲೆಯನ್ನೂ ಹಿಡುಕೊಂಡು, ಯು
ದ್ಧಕ್ಕೆ ಸಿದ್ಧರಾದ ಯೆಹೂದನ ಮಕ್ಕಳು ಆರು ಸಾವಿರದ ಎಂಟು
೨೫ ನೂರು ಮಂದಿ. ಯುದ್ಧಕ್ಕೆ ಪರಾಕ್ರಮಶಾಲಿಗಳಾದ ಸಿಮೆಯೋ
೨೬ ನನ ಮಕ್ಕಳಲ್ಲಿ ಏಳು ಸಾವಿರದ ನೂರು ಮಂದಿ. ಲೇವಿಯ ಮ
೨೭ ಕ್ಕಳಲ್ಲಿ ನಾಲ್ಕು ಸಾವಿರದ ಆರು ನೂರು ಮಂದಿ. ಅಹೋನಿಯ
ರಲ್ಲಿ ಯೆಹೊಯದಾವನು ನಾಯಕನಾಗಿದ್ದನು; ಅವನ ಸಂಗಡ
೨೮ ಮೂರು ಸಾವಿರದ ಏಳು ನೂರು ಮಂದಿ. ಇದಲ್ಲದೆ ಬಲವುಳ್ಳ
ಪರಾಕ್ರಮಶಾಲಿಯಾದ ಪ್ರಾಯಸ್ತನಾಗಿದ್ದ ಚದೋಕನೂ, ಅ
ವನ ತಂದೆಯ ಮನೆಯಿಂದ ಇಪ್ಪತ್ತೆರಡು ಮಂದಿ ಪ್ರಧಾನರೂ.
೨೯ ಸೌಲನ ಸಹೋದರರಾಗಿರುವ ಬೆನ್ಯಮಿನನ ಮಕ್ಕಳಲ್ಲಿ ಮೂರು
ಸಾವಿರ ಮಂದಿ; ಯಾಕಂದರೆ ಇಂದಿನವರಿಗೂ ಅವರಲ್ಲಿ ಅನೇಕ
ರು ಸೌಲನ ಮನೆಯ ವಿಚಾರಣೆಯನ್ನು ಕೈಕೊಳ್ಳುತ್ತಿದ್ದರು.
೩೦ ಎಫ್ರಯಿಮನ ಮಕ್ಕಳಲ್ಲಿ ಇಪ್ಪತ್ತು ಸಾವಿರದ ಎಂಟು ನೂರು
ಮಂದಿ. ಬಲವುಳ್ಳ ಪರಾಕ್ರಮಶಾಲಿಗಳೂ, ತಮ್ಮ ಪಿತೃಗಳ ಮ
೩೧ ನೆಯಲ್ಲಿ ಹೆಸರ್ಗೊಂಡವರೂ ಆಗಿದ್ದರು. ಮನಸ್ಸೆಯ ಅರ್ಧಕಾ
ಲದಲ್ಲಿ ಹದಿನೆಂಟು ಸಾವಿರ ಮಂದಿ. ಅವರು ದಾವೀದನನ್ನು ಅ
ರಸನಾಗ ಮಾಡ ಬಂದ ಹೆಸರು ಹೆಸರಾಗಿ ಬರೆಯಲ್ಪಟ್ಟವರು.
೩೨ ಮತ್ತು ಇಸ್ಸಕಾರನ ಮಕ್ಕಳಲ್ಲಿ ಇಸ್ರಯೇಲು ಮಾಡ ತಕ್ಕದ್ದು
ಯಾವದೆಂದು, ತಿಳಿಯ ತಕ್ಕಂಥ ಕಾಲಗಳ ಪರಿಕ್ಷೆ ತಿಳಿದವರು ಬಂ
ದರು; ಅವರ ಶ್ರೇಷ್ಠರು ಇನ್ನೂರು ಮಂದಿಯಾಗಿದ್ದರು; ಮತ್ತು
೩೩ ಅವರ ಸಹೋದರರೆಲ್ಲರು ಇವರ ಆಜ್ಞಾಧೀನರಾಗಿದ್ದರು. ಜೆಬು
ಲೋನನವರಲ್ಲಿ ಹೃದಯೆ ಹೃದಯವಿಲ್ಲದೆ, ಸಾಲಾಗಿ ನಡೆಯು
ವ, ಸಕಲ ಆಯುಧಗಳನ್ನು ಧರಿಸಿಕೊಂಡ, ಯುದ್ಧಕ್ಕೆ ಸಿದ್ಧವಾ
೩೪ ದ, ಸೈನ್ಯವಾಗಿ ಹೊರಡುವವರು ಐವತ್ತು ಸಾವಿರ ಮಂದಿ. ನೆ
ಫ್ತಲಿಯವರಲ್ಲಿ ಸಾವಿರ ಮಂದಿ ಪ್ರಧಾನರು; ಮತ್ತು ಅವರ ಸಂ
ಗಡ ಪೇಟ್ಯವನ್ನೂ ಈಟಿಯನ್ನೂ ಧರಿಸಿಕೊಂಡ ಮೂವತ್ತೇಳು
೩೫ ಸಾವಿರ ಮಂದಿ. ದಾನನವರಲ್ಲಿ ಯುದ್ಧಕ್ಕೆ ತಕ್ಕವರು ಇಪ್ಪತ್ತೆಂ

೩೭ ಟು ಸಾವಿರದ ಆರು ನೂರು ಮಂದಿ. ಅಶೇರನವರಲ್ಲಿ ಯುದ್ಧಕ್ಕೆ
ತಕ್ಕ ಹಾಗೆ ಸೈನ್ಯವಾಗಿ ಹೋಗುವವರು ನಾಲ್ಕು ಸಾವಿರ ಮಂದಿ.
೩೮ ಯೊರ್ದನಿನ ಆಚೆಯಲ್ಲಿರುವ ರೂಬೆನ್ಯರಲ್ಲಿಯೂ, ಗಾದನವರ
ಲ್ಲಿಯೂ, ಮನಸ್ಸೆಯ ಅರ್ಧಕುಲದಲ್ಲಿಯೂ ಯುದ್ಧಕ್ಕೆ ತಕ್ಕಂ
ಥ ಸಕಲ ಆಯುಧಗಳನ್ನು ಧರಿಸಿ ಕೊಂಡವರು ಲಕ್ಷಾ ಇಪ್ಪತ್ತು
ಸಾವಿರ ಮಂದಿಯು.

೩೯ ಯುದ್ಧಕ್ಕೆ ಸಿದ್ಧರಾದ ಈ ಸಮಸ್ತ ಸೈನಿಕರು ದಾವೀದನನ್ನು
ಸಮಸ್ತ ಇಸ್ರಯೇಲರ ಮೇಲೆ ಅರಸನಾಗ ಮಾಡ, ಹೆಬ್ರೋನಿಗೆ
ಪೂರ್ಣ ಹೃದಯದಿಂದ ಬಂದರು. ಇದಲ್ಲದೆ ಇಸ್ರಯೇಲಿನಲ್ಲಿದ್ದ
ಮಿಕ್ಕಾದವರೆಲ್ಲರು ದಾವೀದನನ್ನು ಅರಸನಾಗ ಮಾಡ ಬಂದೇ
೪೦ ಹೃದಯವುಳ್ಳವರಾಗಿದ್ದರು. ಅವರು ಅಲ್ಲಿ ದಾವೀದನ ಸಂಗಡ
ಮೂರು ದಿವಸ ಇದ್ದು, ಉಣ್ಣುತ್ತಾ ಕುಡಿಯುತ್ತಾ ಇದ್ದರು. ಯಾ
ಕಂದರೆ ಅವರ ಸಹೋದರರು ಅವರಿಗೋಸ್ಕರ ಸಿದ್ಧ ಮಾಡಿದರು.
೪೧ ಇದಲ್ಲದೆ ಅವರ ಬಳಿಯಲ್ಲಿದ್ದ ಇಸ್ಸಕಾರ್, ಜಬುಲೋನ್, ನೆಫ್ತಲಿ
ಯರು ಮೊದಲ್ಗೊಂಡು, ಎಲ್ಲರೂ ಕತ್ತೆಗಳ ಮೇಲೆಯೂ ಒಂಟೆ
ಗಳ ಮೇಲೆಯೂ ಹಾಸರ ಕತ್ತೆಗಳ ಮೇಲೆಯೂ ಎತ್ತುಗಳ ಮೇ
ಲೆಯೂ ರೊಟ್ಟಿಗಳನ್ನೂ, ಆಹಾರವನ್ನೂ, ಹಿಟ್ಟನ್ನೂ, ಅಂಜೂ
ರದ ಅಡೆಗಳನ್ನೂ, ಒಣಗಿದ ದ್ರಾಕ್ಷೇ ಗೊನೆಗಳನ್ನೂ, ದ್ರಾಕ್ಷೇ
ರಸವನ್ನೂ, ಎಣ್ಣೆಯನ್ನೂ, ಎತ್ತುಗಳನ್ನೂ, ಕುರಿಗಳನ್ನೂ ಬ
ಹಳ್ಳವಾಗಿ ತಂದರು; ಯಾಕಂದರೆ ಇಸ್ರಯೇಲಿನಲ್ಲಿ ಸಂತೋ
ಷವಿತ್ತು.

## ೧೩. ಸಂಧಿ.

೧ ಮತ್ತು ದಾವೀದನು ಸಾವಿರ ಮಂದಿಗೂ ನೂರು ಮಂದಿಗೂ
ಪ್ರಧಾನರ ಸಂಗಡ, ಎಲ್ಲಾ ನಾಯಕರ ಸಂಗಡ ಯೋಚನೆ ಮಾ
೨ ಡಿದನು. ಮತ್ತು ದಾವೀದನು ಇಸ್ರಯೇಲಿನ ಸಮಸ್ತ ಕೂಟಕ್ಕೆ
ಹೇಳಿದ್ದೇನಂದರೆ—ನಿಮಗೆ ಚನ್ನಾಗಿದ್ದರೆ, ನಮ್ಮ ದೇವರಾದ ಕರ್ತ
ನ ಅಪ್ಪಣೆ ಆದರೆ, ಅವರು ನಮ್ಮ ಬಳಿಯಲ್ಲಿ ಕೂಡಿ ಬರುವ ಹಾ
ಗೆ, ಇಸ್ರಯೇಲಿನ ದೇಶವೆಲ್ಲಾದರಲ್ಲಿ ಉಳಿದಿರುವ ನಮ್ಮ ಸಹೋ
ದರರನ್ನೂ ತಮ್ಮ ಪಟ್ಟಣಗಳಲ್ಲಿಯೂ ಅಗ್ರಹಾರಗಳಲ್ಲಿಯೂ ಇ
ರುವ ಯಾಜಕರನ್ನೂ, ಲೇವ್ಯರನ್ನೂ ಎಲ್ಲಾ ಕಡೆಯಿಂದ ಕರೆ
೩ ಯ ಕಳುಹಿಸಿ, ನಮ್ಮ ದೇವರ ಪೆಟ್ಟಿಗೆಯನ್ನು ನಮ್ಮ ಬಳಿಗೆ ತಿರಿ
ಗಿ ತರಿಸುವ; ಯಾಕಂದರೆ ಸೌಲನ ದಿವಸಗಳಲ್ಲಿ ಅದನ್ನು ವಿಚಾ
೪ ರಿಸಲಿಲ್ಲ. ಹಾಗೆಯೇ ಮಾಹೋಣ ಎಂದು ಕೂಟದವರೆಲ್ಲರೂ
ಹೇಳಿದರು. ಯಾಕಂದರೆ ಆ ಕಾರ್ಯವು ಸಮಸ್ತ ಜನರ ದೃ
ಷ್ಟಿಗೆ ಯುಕ್ತವಾಗಿತ್ತು.

೫ ಮತ್ತು ದೇವರ ಪೆಟ್ಟಿಗೆಯನ್ನು ಕಿರ್ಯಾತಯಾರೀಮಿನಿಂದ
ತರುವದಕ್ಕೆ, ದಾವೀದನು ಐಗುಪ್ತದ ಶಿಹೋರು ಮೊದಲ್ಗೊಂಡು,
ಹಮ್ಮತಿನ ಪ್ರವೇಶಿಕೆಯ ಪರ್ಯಂತರ ಇರುವ ಸಮಸ್ತ ಇಸ್ರಯೇ
೬ ಲರನ್ನು ಕೂಡಿಸಿದನು. ಆಗ ದಾವೀದನೂ ಸಮಸ್ತ ಇಸ್ರಯೇ
ಲೂ ಕರ್ತನ ನಾಮ ಇಡಲ್ಪಟ್ಟ ಕೆರೂಬಿಗಳ ಮಧ್ಯದಲ್ಲಿ ವಾಸ
ವಾಗಿರುವ ಕರ್ತನಾದ ದೇವರ ಪೆಟ್ಟಿಗೆಯನ್ನು ಅಲ್ಲಿಂದ ತಕ್ಕೊಂ
ಡು ಬರ ಯೆಹೂದಕ್ಕೆ ಸೇರಿದ ಕಿರ್ಯಾತಯಾರೀಮಿನ ಬಳಿಗೆ,
೭ ಬಾಳಕ್ಕೆ ಏರಿ ಹೋದರು. ಅವರು ಅಬಿನದಾಬನ ಮನೆಯೊಳ
ಗಿಂದ ಕರ್ತನ ಪೆಟ್ಟಿಗೆಯನ್ನು ತಂದು, ಹೊಸ ರಥದ ಮೇಲೆ ಅ
ದನ್ನು ಏರಿಸಿದರು. ಮತ್ತು ಉಜ್ಜನೂ ಅಹಿಯೋನೂ ರಥವ
೮ ನ್ನು ನಡಿಸಿದರು. ಆಗ ದಾವೀದನೂ ಸಮಸ್ತ ಇಸ್ರಯೇಲ್ಯರೂ
ತಮ್ಮ ಸಮಸ್ತ ಬಲದಿಂದಲೂ ಹಾಡುಗಳಿಂದಲೂ ಕಿನ್ನರಿಗಳಿಂದ
ಲೂ ವೀಣೆಗಳಿಂದಲೂ ದಮ್ಮುಡಿಗಳಿಂದಲೂ ತಾಳಗಳಿಂದಲೂ ತು
ತೂರಿಗಳಿಂದಲೂ ದೇವರ ಮುಂದೆ ಆಡಿದರು. ಆದರೆ ಅವರು ಕಿ
೯ ದೋನನ ಕಣದ ಬಳಿಗೆ ಬಂದಾಗ, ಉಜ್ಜನು ಪೆಟ್ಟಿಗೆಯನ್ನು ಹಿ
ಡಿಯುವದಕ್ಕೆ ತನ್ನ ಕೈಯನ್ನು ಚಾಚಿದನು; ಯಾಕಂದರೆ ಎ
೧೦ ತ್ತುಗಳು ಎಡವಿದವು. ಉಜ್ಜನು ಪೆಟ್ಟಿಗೆಗೆ ತನ್ನ ಕೈಯನ್ನು ಚಾ
ಚಿದ್ದರಿಂದ, ಕರ್ತನ ಕೋಪವು ಅವನ ಮೇಲೆ ಉರಿಯಿತು. ಆತ
ನು ಅವನನ್ನು ಹೊಡೆದನು; ಅವನು ಅಲ್ಲಿಯೇ ದೇವರ ಮುಂದೆ
೧೧ ಸತ್ತನು. ಕರ್ತನು ಉಜ್ಜನನ್ನು ಹರಿದು ಬಿಟ್ಟದ್ದರಿಂದ, ದಾವೀದನಿ
ಗೆ ಕೋಪವಾಯಿತು. ಆದಕಾರಣ ಇಂದಿನ ವರಗೂಲಸ್ಥಳಕ್ಕೆ ಪೆ
೧೨ ರಚೂಜ್ಜವೆಂದು ಹೆಸರುಂಟು. ದಾವೀದನು ಆ ದಿನ ಕರ್ತನಿಗೆ ಭ
ಯ ಪಟ್ಟು, ದೇವರ ಪೆಟ್ಟಿಗೆಯನ್ನು ನನ್ನ ಬಳಿಗೆ ತರಿಸುವದು
೧೩ ಹ್ಯಾಗೆ! ಅಂದನು. ಹಾಗೆಯೇ ದಾವೀದನು ಪೆಟ್ಟಿಗೆಯನ್ನು ದಾ
ವೀದನ ಪಟ್ಟಣಕ್ಕೆ ತನ್ನ ಬಳಿಗೆ ಕೇರಿಸಿಕೊಳ್ಳದೆ, ಗಿತ್ತಿಯನಾದ
ಒಬೆದೆದೋಮನ ಮನೆಗೆ ಕೇರಿಸಿ ಬಿಟ್ಟನು.

೧೪ ದೇವರ ಪೆಟ್ಟಿಗೆಯು ಒಬೆದೆದೋಮನ ಮನೆಯವರ ಸಂಗಡ
ಅವನ ಮನೆಯಲ್ಲಿ ಮೂರು ತಿಂಗಳು ಇದ್ದದರಿಂದ, ಕರ್ತನು ಒ
ಬೆದೆದೋಮನ ಮನೆಯನ್ನೂ ಅವನಿಗುಂಟಾದ ಎಲ್ಲವನ್ನೂ ಆ
ಶೀರ್ವದಿಸಿದನು.

## ೧೪. ಸಂಧಿ.

೧ ಮತ್ತು ಹೋರಿನ ಅರಸನಾದ ಹಿರಾಮನು ದಾವೀದನ ಬಳಿಗೆ,
ಅವನಿಗೆ ಮನೆಯನ್ನು ಕಟ್ಟುವ ನಿಮಿತ್ತ, ದೇವದಾರು ಮರಗಳ
ನ್ನೂ, ಕಲ್ಲುಕುಟಿಗರನ್ನೂ ಬಡಿಗೆಯವರನ್ನೂ ಕಳುಹಿಸಿದನು.
೨ ಆಗ ಕರ್ತನು ಇಸ್ರಯೇಲಿನ ಮೇಲೆ ಅರಸನಾಗಿರ ತನ್ನನ್ನು ಸ್ಥಿ
ರ ಪಡಿಸಿದನೆಂದು, ದಾವೀದನು ತಿಳಿಕೊಂಡನು. ಯಾಕಂದರೆ ಆ
ತನ ಜನರಾದ ಇಸ್ರಯೇಲಿನ ನಿಮಿತ್ತ ತನ್ನ ರಾಜ್ಯವು ಮೇಲಕ್ಕೆ
ಎತ್ತಲ್ಪಟ್ಟಿತು.

೩ ಮತ್ತು ದಾವೀದನು ಯೆರೂಸಲೇಮಿನಲ್ಲಿ ಇನ್ನೂ ಹೆಂಡರನ್ನು
ತೆಗೆದು ಕೊಂಡು, ಇನ್ನೂ ಕುಮಾರರನ್ನೂ ಕುಮಾರ್ತೆಗಳ
೪ ನ್ನೂ ಪಡೆದನು. ಯೆರೂಸಲೇಮಿನಲ್ಲಿ ಅವನಿಗೆ ಉಂಟಾದ ಮಕ್ಕ
ಳ ಹೆಸರುಗಳೇನಂದರೆ—ಶಮೂವನು, ಶೊಬಾಬನು, ನತಾನನು,
೪,೫ ಸೊಲೊಮೋನನು, ಇಭಾರನು, ಎಲಿಷೂವನು, ಎಲ್ಪೆಲೆಟನು,
ನೊಗಾಹನು, ನೆಫೆಗನು, ಯಫೀಏನು, ಎಲಿಷಾಮನು, ಬೆಲ್ಯದಾವ
ನು, ಎಲಿಫೆಲೆಟನು.

೮ ದಾವೀದನು ಸಮಸ್ತ ಇಸ್ರಯೇಲಿನ ಮೇಲೆ ಅರಸನಾಗ ಅಭಿ
ಷೇಕಿಸಲ್ಪಟ್ಟಿದ್ದಾನೆಂದು, ಫಿಲಿಷ್ಟ್ಯರು ಕೇಳಿದಾಗ, ಫಿಲಿಷ್ಟ್ಯರೆಲ್ಲ
ರು ದಾವೀದನನ್ನು ಹುಡುಕ ಏರಿ ಹೋದರು. ದಾವೀದನು ಕೇಳಿ,
೯ ಅವರಿಗೆ ವಿರೋಧವಾಗಿ ಹೊರಟನು. ಆಗ ಫಿಲಿಷ್ಟ್ಯರು ಬಂದು,
೧೦ ರೆಫಾಯಿಮ್ ತಗ್ಗಿನಲ್ಲಿ ಇಳು ಕೊಂಡರು. ದಾವೀದನು, ನಾನು
ಫಿಲಿಷ್ಟ್ಯರಿಗೆ ವಿರೋಧವಾಗಿ ಏರಿ ಹೋಗ ಬೇಕೋ! ಅವರನ್ನು
ನನ್ನ ಕೈಯಲ್ಲಿ ಒಪ್ಪಿಸಿ ಕೊಡುವಿಯೋ? ಎಂದು ದೇವರನ್ನು ಕೇ
ಳಿದನು. ಕರ್ತನು ಅವನಿಗೆ, ಏರಿ ಹೋಗು; ಯಾಕಂದರೆ ನಾನು



೧೧ ಅವರನ್ನು ನಿನ್ನ ಕೈಯಲ್ಲಿ ಒಪ್ಪಿಸಿ ಕೊಡುವೆನು, ಅಂದನು. ಹಾ
ಗೆಯೇ ಅವರು ಬಾಳ್ಪೆರಾಜೀಮಿಗೆ ಬಂದ ಮೇಲೆ, ದಾವೀದನು ಅ
ಲ್ಲಿ ಅವರನ್ನು ಹೊಡೆದನು. ಮತ್ತು ದಾವೀದನು, ನೀರು ಹರಿದು
ಬೀಳುವ ಹಾಗೆ, ದೇವರು ನನ್ನ ಕೈಯಿಂದ ನನ್ನ ಶತ್ರುಗಳ ಮೇ
ಲೆ ಹರಿದು ಬಿದ್ದಿದ್ದಾನೆ, ಅಂದನು. ಆದಕಾರಣ ಆ ಸ್ಥಳಕ್ಕೆ ಬಾಳ್
೧೨ ಪೆರಾಜೀಮು ಎಂದು ಹೆಸರಿಟ್ಟರು. ಫಿಲಿಷ್ಟ್ಯರು ತಮ್ಮ ದೇವರು
ಗಳನ್ನು ಅಲ್ಲಿ ಬಿಟ್ಟು ಬಿಟ್ಟದ್ದರಿಂದ, ದಾವೀದನು ಅಪ್ಪಣೆ ಕೊಟ್ಟಾ
ಗ, ಬೆಂಕಿಯಿಂದ ಸುಡಲ್ಪಟ್ಟವು.

೧೩ ಆದರೆ ಫಿಲಿಷ್ಟ್ಯರು ಮತ್ತೂ ಬಂದು, ತಗ್ಗಿನಲ್ಲಿ ವಿಸ್ತಾರವಾಗಿ
೧೪ ಇಳು ಕೊಂಡರು. ಆದದರಿಂದ ದಾವೀದನು ತಿರಿಗಿ ದೇವರನ್ನು ಕೇ
ಳಿದನು. ಆಗ ದೇವರು ಅವನಿಗೆ, ನೀನು ಅವರ ಹಿಂದೆ ಏರಿ ಹೋ
ಗದೆ, ಅವರನ್ನು ಬಿಟ್ಟು, ತಿರುಗಿ, ಹಿಪ್ಪಲಿ ಗಿಡಗಳಿಗೆದುರಾಗಿ ಅವರ
೧೫ ಮೇಲೆ ಬಂದು, ಬೀಳು. ಹಿಪ್ಪಲಿ ಗಿಡಗಳ ಶಿಖರಗಳಲ್ಲಿ ನಡೆದು ಬ
ರುವ ಶಬ್ದವನ್ನು ನೀನು ಕೇಳಿದಾಗಲೇ, ಯುದ್ಧಕ್ಕೆ ಹೊರಟು
ಹೋಗು; ಯಾಕಂದರೆ ಫಿಲಿಷ್ಟ್ಯರ ದಂಡನ್ನು ಹೊಡೆಯ, ದೇ
೧೬ ವರು ನಿನ್ನ ಮುಂದಾಗಿ ಹೊರಟಿದ್ದಾನೆ, ಅಂದನು. ದಾವೀದನು
ದೇವರು ತನಗೆ ಆಜ್ಞಾಪಿಸಿದ ಹಾಗೆ ಮಾಡಿದ್ದರಿಂದ, ಅವರು ಗಿ
ಬ್ಯೋನನ ಮೊದಲುಗೊಂಡು ಗೇಜರಿನ ಪರ್ಯಂತರ ಫಿಲಿಷ್ಟ್ಯರ
೧೭ ದಂಡನ್ನು ಹೊಡೆದರು.

ಮತ್ತು ದಾವೀದನ ಕೀರ್ತಿಯು ಸಮಸ್ತ ದೇಶಗಳಿಗೆ ಹೊರ
ಟಿತು; ಕರ್ತನು ಅವನ ಭಯವನ್ನು ಸಮಸ್ತ ಜನಾಂಗಗಳ ಮೇ
ಲೆ ಬರ ಮಾಡಿದನು.

## ೧೫. ಸಂಧಿ.

೧ ಇದಲ್ಲದೆ ದಾವೀದನ ಪಟ್ಟಣದಲ್ಲಿ ತನಗೆ ಮನೆಗಳನ್ನು ಕಟ್ಟಿಸಿ,
ದೇವರ ಪೆಟ್ಟಿಗೆಗೋಸ್ಕರ ಸ್ಥಳವನ್ನು ಸಿದ್ಧ ಮಾಡಿ, ಅದರ ನಿ
೨ ಮಿತ್ತ ಗುಡಾರ ಹಾಕಿದನು. ಆಗ ದಾವೀದನು, ಲೇವ್ಯರ ಹೊ
ರ್ತಾಗಿ ಮತ್ತ್ಯಾರೂ ದೇವರ ಪೆಟ್ಟಿಗೆಯನ್ನು ಹೊರ ಬಾರದು;
ಯಾಕಂದರೆ ಕರ್ತನು ದೇವರ ಪೆಟ್ಟಿಗೆಯನ್ನು ಹೊರಲೂ, ಯು
ಗ ಯುಗಕ್ಕೂ ಅವನಿಗೆ ಸೇವೆ ಮಾಡಲೂ, ಅವರನ್ನು ಆರಿ
ಕೊಂಡಿದ್ದಾನೆ, ಅಂದನು.

೩ ಮತ್ತು ದಾವೀದನು ಕರ್ತನ ಪೆಟ್ಟಿಗೆಯನ್ನು, ತಾನು ಅದ
ಕ್ಕೋಸ್ಕರ ಸಿದ್ಧ ಮಾಡಿದ ಅದರ ಸ್ಥಳಕ್ಕೆ ತಕ್ಕೊಂಡು ಬರುವ
ನಿಮಿತ್ತ, ಯೆರೂಸಲೇಮಿಗೆ ಸಮಸ್ತ ಇಸ್ರಯೇಲನ್ನು ಕೂಡಿ ಬ
೪ ರ ಮಾಡಿದನು. ಇದಲ್ಲದೆ ದಾವೀದನು ಆರೋನನ ಮಕ್ಕಳನ್ನೂ
೫ ಲೇವ್ಯರನ್ನೂ ಕೂಡಿ ಬರ ಮಾಡಿದನು. ಕೊಹಾತನ ಕುಮಾರರ
ಲ್ಲಿ ಶ್ರೇಷ್ಠನಾದ ಊರಿಯೇಲನೂ, ಅವನ ಸಹೋದರರಾದ ನೂ
೬ ರ ಇಪ್ಪತ್ತು ಮಂದಿಯೂ; ಮೆರಾರಿಯ ಕುಮಾರರಲ್ಲಿ ಶ್ರೇಷ್ಠ
ನಾದ ಅಸಾಯನೂ, ಅವನ ಸಹೋದರರಾದ ಇನ್ನೂರ ಇಪ್ಪ
೭ ತ್ತು ಮಂದಿಯೂ; ಗೆರ್ಷೋಮನ ಕುಮಾರರಲ್ಲಿ ಶ್ರೇಷ್ಠನಾದ
ಯೊವೇಲನೂ, ಅವನ ಸಹೋದರರಾದ ನೂರ ಮೂವತ್ತು ಮಂ
೮ ದಿಯೂ; ಎಲಿಚಫಾನನ ಕುಮಾರರಲ್ಲಿ ಶ್ರೇಷ್ಠನಾದ ಶೆಮಾಯ
೯ ನೂ, ಅವನ ಸಹೋದರರಾದ ಇನ್ನೂರು ಮಂದಿಯೂ; ಹೆಬ್ರೋ
ನನ ಕುಮಾರರಲ್ಲಿ ಶ್ರೇಷ್ಠನಾದ ಎಲ್ಯೇಲನೂ, ಅವನ ಸಹೋದ
೧೦ ರರಾದ ಎಂಭತ್ತು ಮಂದಿಯೂ; ಉಜ್ಜಿಯೇಲನ ಕುಮಾರರಲ್ಲಿ
ಶ್ರೇಷ್ಠನಾದ ಅಮ್ಮಿನದಾಬನೂ, ಅವನ ಸಹೋದರರಾದ ನೂರ
ಹನ್ನೆರಡು ಮಂದಿಯೂ.

೧೧ ಆಗ ದಾವೀದನು ಚದೋಕನು, ಅಬ್ಯಾತಾರನು ಎಂಬ ಯಾಜ
ಕರನ್ನೂ, ಊರಿಯೇಲನು, ಅಸಾಯನು, ಯೊವೇಲನು, ಶೆಮಾ
ಯನು, ಎಲ್ಯೇಲನು, ಅಮ್ಮಿನದಾಬನು ಎಂಬ ಲೇವ್ಯರನ್ನೂ ಕರೇ
೧೨ ಕಳುಹಿಸಿ, ಅವರಿಗೆ ಹೇಳ್ದೆನಂದರೆ—ನೀವು ಲೇವ್ಯರ ಪಿತೃಗಳ
ಲ್ಲಿ ಶ್ರೇಷ್ಠರಾದದರಿಂದ, ಇಸ್ರಯೇಲಿನ ದೇವರಾದ ಕರ್ತನ ಪೆಟ್ಟಿ
ಗೆಯನ್ನು ನಾನು ಅದಕ್ಕೋಸ್ಕರ ಸಿದ್ಧಮಾಡಿದ ಸ್ಥಳಕ್ಕೆ ನೀವು
ತರುವ ಹಾಗೆ, ನಿಮ್ಮನ್ನೂ ನಿಮ್ಮ ಸಹೋದರರನ್ನೂ ಪರಿಶುದ್ಧ
೧೩ ಮಾಡಿಕೊಳ್ಳಿರಿ. ಯಾಕಂದರೆ ನೀವೇ ಮೊದಲಿನಲ್ಲಿ ಹಾಗೆ ಮಾ
ಡದ್ದರಿಂದ, ಕರ್ತನಾದ ನಮ್ಮ ದೇವರು ನಮ್ಮಲ್ಲಿ ಒಂದು ಬಿರುಕ
ನ್ನು ಮಾಡಿದನು; ಯಾಕಂದರೆ ನ್ಯಾಯದ ಪ್ರಕಾರ ನಾವು ಅವ
ನನ್ನು ಹುಡುಕಲಿಲ್ಲ.

೧೪ ಹಾಗೆಯೇ ಇಸ್ರಯೇಲಿನ ದೇವರಾದ ಕರ್ತನ ಪೆಟ್ಟಿಗೆಯ
ನ್ನು ತರುವದಕ್ಕೆ ಯಾಜಕರೂ ಲೇವ್ಯರೂ ತಮ್ಮನ್ನು ಪರಿಶು
೧೫ ದ್ಧ ಮಾಡಿ ಕೊಂಡರು. ಮೋಶೆಯು ಆಜ್ಞಾಪಿಸಿದ ಕರ್ತನ ವಾ
ಕ್ಯದ ಪ್ರಕಾರ ಲೇವ್ಯರ ಮಕ್ಕಳು ಕೋಲುಗಳನ್ನು ಹಾಕಿ, ದೇವ
ರ ಪೆಟ್ಟಿಗೆಯನ್ನು ತಮ್ಮ ಹೆಗಲುಗಳ ಮೇಲೆ ಹೊತ್ತು ಕೊಂಡು
ಹೋದರು.

೧೬ ಇದಲ್ಲದೆ ದಾವೀದನು ವಾದ್ಯ ವಿಶೇಷಗಳಾದ ವೀಣೆಗಳನ್ನೂ
ಕಿನ್ನರಿಗಳನ್ನೂ ತಾಳಗಳನ್ನೂ ಬಾರಿಸಿ, ಸಂತೋಷದಿಂದ ಶಬ್ದ
ವನ್ನು ಎತ್ತುವ ಹಾಗೆ, ತಮ್ಮ ಸಹೋದರರಲ್ಲಿ ಹಾಡುಗಾರರನ್ನು
೧೭ ನೇಮಿಸುವದಕ್ಕೆ ಲೇವ್ಯರ ಪ್ರಧಾನರಿಗೆ ಆಜ್ಞಾಪಿಸಿದನು. ಹಾಗೆ
ಯೇ ಲೇವ್ಯರು ಯೊವೇಲನ ಮಗನಾದ ಹೆಮಾನನನ್ನೂ, ಅವ
ನ ಸಹೋದರರಲ್ಲಿ ಬೆರೆಕ್ಯನ ಮಗನಾದ ಆಸಾಫನನ್ನೂ, ಮೆರಾ
ರಿಯ ಮಕ್ಕಳ ಸಹೋದರರಲ್ಲಿ ಕುಷಾಯನ ಮಗನಾದ ಎತಾ
೧೮ ನನನ್ನೂ ನೇಮಿಸಿದರು. ಅವರ ಸಂಗಡ ಎರಕನೇ ತರವಾದ ತ
ಮ್ಮ ಸಹೋದರರಾಗಿರುವ ಜೆಕರೀಯನನ್ನೂ, ಬೇನನನ್ನೂ, ಯ
ಜಿಯೇಲನನ್ನೂ, ಶೆಮಿರಮೋತನನ್ನೂ, ಯೆಹಿಯೇಲನನ್ನೂ,
ಉನ್ನಿಯನ್ನೂ, ಎಲ್ಯಾಬನನ್ನೂ, ಬೆನಾಯನನ್ನೂ, ಮಸ್ಸೇ
ಯನನ್ನೂ, ಮತ್ತಿತ್ಯನನ್ನೂ, ಎಲಿಫ್ಲೇಹುವನ್ನೂ, ಮಿಕ್ನೇಯ
ನನ್ನೂ, ದ್ವಾರಪಾಲಕರಾದ ಒಬೆದೆದೋಮನನ್ನೂ, ಯೆಯೀಯೇ
೧೯ ಲನನ್ನೂ ನೇಮಿಸಿದರು. ಹಾಡುಗಾರರಾದ ಹೆಮಾನನೂ, ಆಸಾ
ಫನೂ, ಎತಾನನೂ ತಾಂಬ್ರದ ತಾಳಗಳನ್ನು ಬಾರಿಸುವದಕ್ಕೂ;
೨೦ ಜೆಕರೀಯನೂ, ಅಜಿಯೇಲನೂ, ಶೆಮಿರಮೋತನೂ, ಯೆಹಿಯೇ
ಲನೂ, ಉನ್ನಿಯೂ, ಎಲ್ಯಾಬನೂ, ಮಸ್ಸೇಯನೂ, ಬೆನಾಯ
೨೧ ನೂ, ಅಲಮೋತಿನಿಂದ ವೀಣೆಗಳನ್ನು ಬಾರಿಸುವದಕ್ಕೂ; ಮತ್ತಿ
ತ್ಯನೂ ಎಲಿಫ್ಲೇಹುವೂ ಮಿಕ್ನೇಯನೂ, ಒಬೆದೆದೋಮನೂ,
ಯೆಯೀಯೇಲನೂ, ಅಜಜ್ಯನೂ, ಹೆಚ್ಚಳವಾಗಿ ಶಿಮಿನೇಟಿನಿಂದ ಕಿ
ನ್ನರಿಗಳನ್ನು ಬಾರಿಸುವದಕ್ಕೂ ನೇಮಿಸಲ್ಪಟ್ಟಿದ್ದರು.

೨೨ ಆದರೆ ಲೇವ್ಯರ ಪ್ರಧಾನನಾದ ಕೆನನ್ಯನು ಹಾಡುವದಕ್ಕೆ ನೇ
ಮಿಸಲ್ಪಟ್ಟಿದ್ದನು. ಅವನು ಗ್ರಹಿಕೆಯುಳ್ಳವನಾದದರಿಂದ, ಹಾಡು
೨೩ ವದಕ್ಕೆ ಕಲಿಸುತ್ತಿದ್ದನು. ಬೆರೆಕ್ಯನೂ ಎಲ್ಕಾನನೂ ಪೆಟ್ಟಿಗೆಗೆ
ದ್ವಾರಪಾಲಕರಾಗಿದ್ದರು.

೨೪ ಯಾಜಕರಾದ ಶೆಬನ್ಯನೂ, ಯೆಹೊಷಾಫಾಟನೂ, ನೆಥಾನಿ
ಯೇಲನೂ, ಅಮಸಾಯಿಯೂ, ಜೆಕರೀಯನೂ, ಬೆನಾಯ

ನೂ, ಎಲಿಯೇಜರನೂ ದೇವರ ಪೆಟ್ಟಿಗೆಯ ಮುಂದೆ ತುತೂರಿಗ
ಳನ್ನು ಊದುತ್ತಾ ಇದ್ದರು; ಒಬೆದೆದೋಮನೂ ಯೆಹೀಯನೂ
ಪೆಟ್ಟಿಗೆಗೆ ದ್ವಾರಪಾಲಕರಾಗಿದ್ದರು.

೨೫ ಹೀಗೆಯೇ ದಾವೀದನೂ ಇಸ್ರಯೇಲಿನ ಹಿರಿಯರೂ ಸಹಸ್ರ
ಗಳ ಮೇಲೆ ಇರುವ ಪ್ರಧಾನರೂ ಸಂತೋಷವಾಗಿ ಒಬೆದೆದೋ
ಮನ ಮನೆಯೊಳಗಿಂದ ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನು
೨೬ ತರ ಹೋದರು. ಮತ್ತು ಏನಾಯಿತಂದರೆ, ದೇವರು ಕರ್ತನ ಒ
ಡಂಬಡಿಕೆಯ ಪೆಟ್ಟಿಗೆಯನ್ನು ಹೊರ ಲೇವ್ಯರಿಗೆ ಸಹಾಯ ಕೊ
ಟ್ಟಿದ್ದರಿಂದ, ಅವರು ಏಳು ಹೋರಿಗಳನ್ನೂ ಏಳು ಟಗರುಗಳನ್ನೂ
೨೭ ಬಲಿಯಾಗಿ ಅರ್ಪಿಸಿದರು. ದಾವೀದನೂ ಪೆಟ್ಟಿಗೆಯನ್ನು ಹೊರು
ವ ಲೇವ್ಯರೂ, ಹಾಡುಗಾರರೂ ಹಾಡುಗಾರರ ಸಂಗಡ ಇರುವ
ಸಂಗೀತದ ಯಜಮಾನನಾದ ಕೆನನ್ಯನೂ, ನಯವಾದ ನಾರಿನ
ಮೇಲಂಗಿಯನ್ನು ಧರಿಸಿಕೊಂಡಿದ್ದರು. ಇದಲ್ಲದೆ ದಾವೀದನ ಮೇ
೨೮ ಲೆ ನಾರಿನ ಏಫೋದು ಇತ್ತು. ಸಮಸ್ತ ಇಸ್ರಯೇಲ್ಯರೂ ಆರ್ಭ
ಟದಿಂದಲೂ ಕೊಂಬಿನ ಶಬ್ದದಿಂದಲೂ, ತುತೂರಿಗಳಿಂದಲೂ, ತಾ
ಳಗಳಿಂದಲೂ, ವೀಣೆಗಳನ್ನೂ ಕಿನ್ನರಿಗಳನ್ನೂ ಬಾರಿಸುವದರಿಂ
ದಲೂ, ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನು ತಂದರು.

೨೯ ಕರ್ತನ ಒಡಂಬಡಿಕೆಯ ಪೆಟ್ಟಿಗೆಯು ದಾವೀದನ ಪಟ್ಟಣದಲ್ಲಿ
ಕೇರಿವಾಗ, ಏನಾಯಿತಂದರೆ, ಸೌಲನ ಮಗಳಾದ ಮೀಕಳು ಕು
ಣಿಯುತ್ತಾ, ಆಡುತ್ತಾ ಇರುವ ಅರಸನಾದ ದಾವೀದನನ್ನು ಕಿಟಿಕಿ
ಯಿಂದ ನೋಡಿ, ತನ್ನ ಹೃದಯದಲ್ಲಿ ಅವನನ್ನು ಅಲಕ್ಷ್ಯ
ಮಾಡಿದಳು.

## ೧೬. ಸಂಧಿ.

೧ ಮತ್ತು ಅವರು ದೇವರ ಪೆಟ್ಟಿಗೆಯನ್ನು ತಂದು, ದಾವೀದನು
ಅದಕ್ಕೋಸ್ಕರ ಹಾಕಿದ ಗುಡಾರದ ಮಧ್ಯದಲ್ಲಿ ಇರಿಸಿದ ತರುವಾ
ಯ, ಅವರು ದೇವರ ಮುಂದೆ ಹೋಮಗಳನ್ನೂ ಸಮಾಧಾನ
೨ ದ ಬಲಿಗಳನ್ನೂ ಅರ್ಪಿಸಿದರು. ದಾವೀದನು ಹೋಮಗಳನ್ನೂ
ಸಮಾಧಾನದ ಬಲಿಗಳನ್ನೂ ಅರ್ಪಿಸಿ ತೀರಿಸಿದ ತರುವಾಯ, ಅ
೩ ವನು ಕರ್ತನ ಹೆಸರಿನಲ್ಲಿ ಜನರನ್ನು ಆಶೀರ್ವದಿಸಿ, ಇಸ್ರಯೇಲಿ
ನಲ್ಲಿರುವ ಸ್ತ್ರೀ ಪುರುಷರಾದ ಸಮಸ್ತರಿಗೂ, ಒಬ್ಬೊಬ್ಬರಿಗೆ ಒಂ
ದು ಕೊಟ್ಟಿಯನ್ನೂ, ಒಂದು ದೊಡ್ಡ ತುಂಡು ಮಾಂಸವನ್ನೂ,
ಒಂದು ಶೀಸೆ ದ್ರಾಕ್ಷೇರಸವನ್ನೂ ಪಾಲಿಟ್ಟನು.

೪ ಇದಲ್ಲದೆ ಕರ್ತನ ಪೆಟ್ಟಿಗೆಯ ಮುಂದೆ ಸೇವೆ ಮಾಡಲೂ ಇ
ಸ್ರಯೇಲಿನ ದೇವರಾದ ಕರ್ತನನ್ನು ಸ್ಮರಿಸುವದಕ್ಕೂ, ಕೊಂಡಾ
ಡುವದಕ್ಕೂ, ಹೊಗಳುವದಕ್ಕೂ, ಲೇವ್ಯರಲ್ಲಿ ಕೆಲವರನ್ನು ನೇ
೫ ಮಿಸಿದನು. ಅವರು ಯಾರಂದರೆ, ಶ್ರೇಷ್ಠನಾದ ಆಸಾಫನೂ, ಅ
ವನ ತರುವಾಯ ಜೆಕರೀಯನೂ, ಯೆವಿಯೇಲನೂ, ಶೆಮಿರಮೋ
ತನೂ, ಯೆಹಿಯೇಲನೂ, ಮತ್ತಿತ್ಯನೂ, ಎಲ್ಯಾಬನೂ, ಬೆನಾ
ಯನೂ, ಒಬೆದೆದೋಮನೂ, ಯೆವಿಯೇಲನೂ. ಇವರು ವೀಣೆ
ಗಳನ್ನೂ ಕಿನ್ನರಿಗಳನ್ನೂ ಬಾರಿಸುತ್ತಿದ್ದರು; ಆದರೆ ಆಸಾಫನು
೬ ತಾಳಗಳನ್ನು ಬಾರಿಸುತ್ತಿದ್ದನು. ಇದಲ್ಲದೆ ಯಾಜಕರಾದ ಬೆನಾ
ಯನೂ ಯಹಜಿಯೇಲನೂ ದೇವರ ಒಡಂಬಡಿಕೆಯ ಪೆಟ್ಟಿಗೆ
ಯ ಮುಂದೆ ಯಾವಾಗ್ಯೂ ತುತೂರಿಗಳನ್ನು ಊದುವವರಾಗಿ
ದ್ದರು.

೭ ಆಗ ಅದೇ ದಿವಸದಲ್ಲಿ ಕರ್ತನನ್ನು ಕೊಂಡಾಡುವದಕ್ಕೆ ದಾ
ವೀದನು ಮೊದಲು ಆಸಾಫನಿಗೂ ಅವನ ಸಹೋದರರಿಗೂ ಈ
ಸಂಗೀತವನ್ನು ಕೊಟ್ಟನು.

೮ ಕರ್ತನನ್ನು ಕೊಂಡಾಡಿರಿ,
ಅವನ ಹೆಸರನ್ನು ಕರೆಯಿರಿ;
ಜನಗಳಲ್ಲಿ ಅವನ ಕ್ರಿಯೆಗಳನ್ನು ತಿಳಿಯ ಮಾಡಿರಿ.
೯ ಅವನಿಗೆ ಹಾಡಿರಿ, ಅವನನ್ನು ಕೀರ್ತಿಸಿರಿ;
ಅವನ ಅದ್ಭುತಗಳನ್ನೆಲ್ಲಾ ಧ್ಯಾನಿಸಿರಿ.
೧೦ ಅವನ ಪರಿಶುದ್ಧ ನಾಮದಲ್ಲಿ ಹೊಗಳಿ ಕೊಳ್ಳಿರಿ;
ಕರ್ತನನ್ನು ಹುಡುಕುವವರ ಹೃದಯವು ಸಂತೋಷಿಸಲಿ.
೧೧ ಕರ್ತನನ್ನೂ ಅವನ ಬಲವನ್ನೂ ಅರಸಿರಿ;
ಅವನ ಮುಖವನ್ನು ಯಾವಾಗಲೂ ಹುಡುಕಿರಿ.
೧೨ ಅವನು ಮಾಡಿದ ಅದ್ಭುತಗಳನ್ನೂ,
ಅವನ ಲಕ್ಷಣಗಳನ್ನೂ, ಅವನ ಬಾಯಿಯ ನ್ಯಾಯಗಳನ್ನೂ
ಜ್ಞಾಪಕ ಮಾಡಿ ಕೊಳ್ಳಿರಿ;
೧೩ ಅವನ ಸೇವಕನಾದ ಇಸ್ರಯೇಲಿನ ಬೀಜವೇ,
ಅವನು ಆದು ಕೊಂಡ ಯಾಕೋಬನ ಮಕ್ಕಳೇ.
೧೪ ಅವನೇ ನಮ್ಮ ದೇವರಾದ ಯೆಹೋವನಾಗಿದ್ದಾನೆ;
ಅವನ ನ್ಯಾಯಗಳು ಸಮಸ್ತ ಭೂಮಿಯಲ್ಲಿ ಅವೆ.
೧೫ ಅವನ ಒಡಂಬಡಿಕೆಯನ್ನು,
ಸಾವಿರ ತಲಾಂತರಗಳಿಗೆ ಅವನು ಆಜ್ಞಾಪಿಸಿದ ಮಾತನ್ನು,
೧೬ ಅಬ್ರಹಾಮನ ಸಂಗಡ ಮಾಡಿದ ಒಡಂಬಡಿಕೆಯನ್ನು,
ಇಸಾಕನಿಗೆ ಇಟ್ಟ ಆಣೆಯನ್ನು,
ಯುಗ ಯುಗಕ್ಕೂ ಜ್ಞಾಪಕ ಮಾಡಿ ಕೊಳ್ಳಿರಿ.
೧೭ ಅದನ್ನು ಯಾಕೋಬನಿಗೆ ನೇಮಕವಾಗಿಯೂ, ಇಸ್ರಯೇಲಿಗೆ
ನಿತ್ಯ ಒಡಂಬಡಿಕೆಯಾಗಿಯೂ ಸ್ಥಾಪಿಸಿ ಹೇಳಿದ್ದೇನಂದರೆ—ನಿನ
ಗೆ ಕಾನಾನ್ ದೇಶವನ್ನು
ನಿಮ್ಮ ಬಾಧ್ಯತೆಯ ಪಾಲಾಗಿ ಕೊಡುವೆನು.
೧೮ ಆಗ ರೆಪ್ಪಿಕ್ಕೆ ಸ್ವಲ್ಪ ಮಂದಿಯಾಗಿಯೂ,
೧೯ ಪರದೇಶಸ್ಥರಾಗಿಯೂ ಅವರಲ್ಲಿ ಇದ್ದಿರಿ. ಅವರು ಜನಾಂಗದಿಂದ
ಜನಾಂಗಕ್ಕೂ,
ಒಂದು ರಾಜ್ಯದಿಂದ ಮತ್ತೊಂದು ಜನಕ್ಕೂ ಹೋಗುತ್ತಿದ್ದರು.
೨೦ ಅವನು ಯಾವನಾದರೂ ಅವರಿಗೆ ಬಲಾತ್ಕಾರ ಮಾಡ ಗೊಡಿ
ಸಲಿಲ್ಲ;
ಅವರಿಗೋಸ್ಕರ ಅರಸುಗಳನ್ನು ಗದರಿಸಿದನು.
೨೧ ಅಭಿಷಿಕ್ತರನ್ನು ಮುಟ್ಟ ಬೇಡಿರಿ,
ನನ್ನ ಪ್ರವಾದಿಗಳಿಗೆ ಕೇಡು ಮಾಡ ಬೇಡಿರಿ.
೨೨ ಸಮಸ್ತ ಭೂಮಿಯೇ, ಕರ್ತನಿಗೆ ಹಾಡಿರಿ;
ಅವನ ರಕ್ಷಣೆಯನ್ನು ದಿನ ದಿನಕ್ಕೆ ಸಾರಿ ಹೇಳಿರಿ.
೨೪ ಜನಾಂಗಗಳಲ್ಲಿ ಅವನ ಘನತೆಯನ್ನೂ,
ಎಲ್ಲಾ ಜನಗಳಲ್ಲಿ ಅವನ ಅದ್ಭುತಗಳನ್ನೂ ವಿವರಿಸಿರಿ.
೨೫ ಯಾಕಂದರೆ ಕರ್ತನು ದೊಡ್ಡವನೂ, ಬಹಳವಾಗಿ ಸ್ತುತಿಸಲ್ಪ
ಡ ತಕ್ಕವನೂ;
೨೬ ಅವನು ಎಲ್ಲಾ ದೇವರುಗಳ ಮೇಲೆ ಭಯಂಕರನು.
ಯಾಕಂದರೆ ಜನಗಳ ದೇವರುಗಳೆಲ್ಲಾ ಬೊಂಬೆಗಳಾಗಿವೆ.



ಆದರೆ ಯೆಹೋವ ಆಕಾಶಗಳನ್ನು ಉಂಟು ಮಾಡಿದನು.
೨೭ ಮಹಿಮೆಯೂ ಪ್ರಭೆಯೂ ಅವನ ಮುಂದೆ ಅವೆ;
೨೮ ಬಲವೂ ಆನಂದವೂ ಅವನ ಸ್ಥಳದಲ್ಲಿ ಅವೆ.
ಜನ ಸಂತತಿಗಳೇ, ಕರ್ತನಿಗೆ ತನ್ನಿರಿ;
೨೯ ಘನವನ್ನೂ ಬಲವನ್ನೂ ಕರ್ತನಿಗೆ ತನ್ನಿರಿ.
ಕರ್ತನಿಗೆ ಅವನ ಹೆಸರಿನ ಘನವನ್ನು ತನ್ನಿರಿ;
ಅರ್ಪಣೆಯನ್ನು ತೆಗೆದು ಕೊಂಡು, ಅವನ ಮುಂದೆ ಬನ್ನಿರಿ.
೩೦ ಪರಿಶುದ್ಧತ್ವದ ಅಂದದಿಂದ ಕರ್ತನಿಗೆ ಆಡ್ಡ ಬೀಳಿರಿ.
ಅವನ ಮುಂದೆ ನಡುಗಿರಿ, ಸಮಸ್ತ ಭೂಮಿಯೇ.
ಮತ್ತು ಲೋಕವು ಸ್ಥಿರವಾಗಿದೆ; ಕದಲುವದಿಲ್ಲ.
೩೧ ಆಕಾಶಗಳು ಸಂತೋಷಿಸಲಿ. ಭೂಮಿಯು ಉಲ್ಲಾಸ ಪಡಲಿ.
೩೨ ಕರ್ತನು ಆಳುತ್ತಾನೆಂದು, ಜನಾಂಗಗಳಲ್ಲಿ ಹೇಳಲಿ.
ಸಮುದ್ರವೂ ಅದರ ಪರಿಪೂರ್ಣತ್ವವೂ ಘೋಷಿಸಲಿ;
ಹೊಲಗಳೂ ಅವುಗಳಲ್ಲಿರುವ ಸಮಸ್ತವೂ ಉತ್ಸಾಹ ಪಡಲಿ.
೩೩ ಆಗ ಅಡವಿಯ ಮರಗಳೆಲ್ಲಾ ಉತ್ಸಾಹ ಧ್ವನಿ ಮಾಡಲಿ;
ಕರ್ತನ ಮುಂದೆಯೇ;
ಯಾಕಂದರೆ ಭೂಮಿಗೆ ನ್ಯಾಯ ತೀರಿಸ ಬರುತ್ತಾನೆ.
೩೪ ಕರ್ತನನ್ನು ಕೊಂಡಾಡಿರಿ; ಯಾಕಂದರೆ ಅವನು ಒಳ್ಳೆಯ
ವನು;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೩೫ ಮತ್ತು ನಮ್ಮ ರಕ್ಷಣೆಯ ದೇವರೇ,
ನಾವು ನಿನ್ನ ಪರಿಶುದ್ಧ ಹೆಸರನ್ನು ಕೊಂಡಾಡಿ,
ನಿನ್ನ ಸ್ತೋತ್ರದಲ್ಲಿ ಹೆಚ್ಚಳ ಪಡುವ ಹಾಗೆ, ನಮ್ಮನ್ನು ರಕ್ಷಿಸು;
ಜನಾಂಗಗಳೊಳಗಿಂದ ನಮ್ಮನ್ನು ತೆಗೆದು ಕೂಡಿಸು.
೩೬ ಇಸ್ರಯೇಲಿನ ಕರ್ತನಾದ ದೇವರು ಯುಗ ಯುಗಾಂತರಗಳಲ್ಲಿ
ಆಶೀರ್ವದಿಸಲ್ಪಡಲಿ ಎಂದು ಹೇಳಿರಿ.
ಸಮಸ್ತ ಜನನು ಆಮೆನ್ ಎಂಥೇಳಿ, ಕರ್ತನನ್ನು ಸ್ತುತಿಸಿದರು.
೩೭ ಮತ್ತು ದಾವೀದನು ಕರ್ತನ ಒಡಂಬಡಿಕೆಯ ಪೆಟ್ಟಿಗೆಯ
ಮುಂದೆ ಬಿಟ್ಟವರು ಯಾರಂದರೆ—ಪ್ರತಿ ದಿವಸದ ಕಾರ್ಯದ ಪ್ರ
ಕಾರ ಯಾವಾಗ್ಯೂ ಪೆಟ್ಟಿಗೆಯ ಮುಂದೆ ಸೇವೆ ಮಾಡ ಆಸಾ
೩೮ ಫನೂ, ಅವನ ಸಹೋದರನೂ; ಒಬೆದೆದೋಮನೂ, ಅವರ ಸ
ಹೋದರರಾದ ಅರುವತ್ತೆಂಟು ಮಂದಿಯೂ; ದ್ವಾರಪಾಲಕರಾದ
ಯೆದುತೂನನ ಮಗನಾದ ಒಬೆದೆದೋಮನೂ ಹೋಸನೂ.
೩೯ ಅದರೆ ಯಾವಾಗ್ಯೂ ಉದಯ ಕಾಲದಲ್ಲಿಯೂ ಸಾಯಂಕಾಲ
ದಲ್ಲಿಯೂ, ಹೋಮ ಪೀಠದ ಮೇಲೆ ಕರ್ತನಿಗೆ ಹೋಮಗಳನ್ನು
ಅರ್ಪಿಸಲೂ, ಕರ್ತನು ಇಸ್ರಯೇಲಿಗೆ ಆಜ್ಞಾಪಿಸಿದ ನ್ಯಾಯಪ್ರ
ಮಾಣದಲ್ಲಿ ಬರೆದಿದ್ದ ಎಲ್ಲಾದರ ಪ್ರಕಾರ ಮಾಡಲೂ, ಗಿಬ್ಯೋ
೪೦ ನಿನಲ್ಲಿರುವ ಮೇಡಿನಲ್ಲಿ ಕರ್ತನ ಗುಡಾರದ ಮುಂದೆ ಸೇವಿಸುವ
ದಕ್ಕೆ ಯಾಜಕನಾದ ಚದೋಕನೂ ಯಾಜಕರಾದ ಅವನ
೪೧ ಸಹೋದರರೂ, ಮತ್ತು ಅವರ ಸಂಗಡ, ಅವನ ಕೃಪೆ ಯುಗ
ಯುಗಕ್ಕಿರುವ ಕಾರಣ ಕರ್ತನನ್ನು ಕೊಂಡಾಡುವದಕ್ಕೆ ಹೇಮಾ
ನನೂ, ಯೆದುತೂನನೂ, ಹೆಸರಿನಿಂದ ಬರೆಯಲ್ಪಟ್ಟ, ಆಯಲ್ಪಟ್ಟ
೪೨ ಮಿಕ್ಕಾದವರೂ. ಮತ್ತು ಅದರ ಸಂಗಡ ಶಬ್ದ ಮಾಡ ಬೇ
ಕಾದವರಿಗೋಸ್ಕರ ತುತೂರಿಗಳೂ ತಾಳಗಳೂ ದೇವರ ಗೀತ
ವಾದ್ಯಗಳೂ ಸಹಿತವಾಗಿ ಹೇಮಾನನೂ ಯೆದುತೂನನೂ.
ಮತ್ತು ಯೆದುತೂನನ ಕುಮಾರರು ದ್ವಾರಪಾಲಕರಾಗಿದ್ದರು.
೪೩ ತರುವಾಯ ಜನರೆಲ್ಲರು ತಮ್ಮ ತಮ್ಮ ಮನೆಗೆ ಹೋದರು; ದಾ
ವೀದನು ತನ್ನ ಮನೆಯನ್ನು ಆಶೀರ್ವದಿಸುವದಕ್ಕೆ ತಿರುಗಿದನು.

## ೧೭. ಸಂಧಿ.

೧ ಮತ್ತು ದಾವೀದನು ತನ್ನ ಮನೆಯಲ್ಲಿ ವಾಸವಾಗಿರುವಾಗ ಏ
ನಾಯಿತಂದರೆ, ದಾವೀದನು ಪ್ರವಾದಿಯಾದ ನತಾನನಿಗೆ, ಇಗೋ,
ನಾನು ದೇವದಾರು ಮನೆಯಲ್ಲಿ ವಾಸವಾಗಿದ್ದೇನೆ; ಆದರೆ ದೇವರ
ಒಡಂಬಡಿಕೆಯ ಪೆಟ್ಟಿಗೆಯು ಶೆಕೆಗಳಲ್ಲಿ ಇರುತ್ತದೆ, ಅಂದನು.
೨ ಆಗ ನತಾನನು ದಾವೀದನಿಗೆ, ನಿನ್ನ ಹೃದಯದಲ್ಲಿ ಇರುವದೆ
ಲ್ಲಾ ಮಾಡು; ಯಾಕಂದರೆ ದೇವರು ನಿನ್ನ ಸಂಗಡ ಇದ್ದಾನೆ,
ಅಂದನು.
೩ ಅದೇ ರಾತ್ರಿಯಲ್ಲಿ ಏನಾಯಿತಂದರೆ, ಕರ್ತನ ವಾಕ್ಯವು ನ
೪ ತಾನನಿಗೆ ಉಂಟಾಗಿ, ಹೇಳಿದ್ದೇನಂದರೆ—ನೀನು ಹೋಗಿ, ನನ್ನ ಸೇ
ವಕನಾದ ದಾವೀದನಿಗೆ, ಕರ್ತನು ಹೀಗೆ ಹೇಳುತ್ತಾನೆ—ನಾನು ವಾ
೫ ಸವಾಗಿರ ನೀನು ಮನೆಯನ್ನು ನನಗೆ ಕಟ್ಟಿಸ ಬೇಡ. ಯಾಕಂ
ದರೆ ನಾನು ಐಗುಪ್ತದಿಂದ ಇಸ್ರಯೇಲಿನ ಮಕ್ಕಳನ್ನು ಏರಿ ಬರ
ಮಾಡಿದ ದಿವಸ ಮೊದಲುಗೊಂಡು ಇಂದಿನ ವರೆಗೂ ಮನೆಯಲ್ಲಿ
ವಾಸ ಮಾಡದೆ, ಗುಡಾರದಿಂದ ಗುಡಾರಕ್ಕೂ, ತಂಗುವ ಸ್ಥಳದಿಂ
೬ ದ ತಂಗುವ ಸ್ಥಳಕ್ಕೂ ಹೋಗುತ್ತಿದ್ದೆನು. ನಾನು ನನ್ನ ಜನವಾ
ದ ಇಸ್ರಯೇಲನ್ನು ಮೇಯಿಸ ಆಜ್ಞಾಪಿಸಿದ ಇಸ್ರಯೇಲಿನ ಅಧಿ
ಪತಿಗಳಲ್ಲಿ ಒಬ್ಬನ ಸಂಗಡಲಾದರೂ ನೀವು ನನಗೆ ದೇವದಾರು
ಮನೆಯನ್ನು ಯಾಕೆ ಕಟ್ಟಲಿಲ್ಲವೆಂದು, ನಾನು ಸಮಸ್ತ ಇಸ್ರಯೇ
ಲಿನ ಸಂಗಡ ನಡೆದ ಯಾವ ಸ್ಥಳದಲ್ಯಾದರೂ ಏನಾದರೂ ಹೇ
೭ ಳಿದೆನೋ? ಈಗ ನೀನು ನನ್ನ ಸೇವಕನಾದ ದಾವೀದನಿಗೆ ಹೇಳ
ಬೇಕಾದದ್ದೇನಂದರೆ—ಸೈನ್ಯಗಳ ಕರ್ತನು ಹೀಗೆ ಹೇಳುತ್ತಾನೆ—
ನೀನು ನನ್ನ ಜನವಾದ ಇಸ್ರಯೇಲಿನ ಮೇಲೆ ನಾಯಕನಾಗಿರ,
ಕುರಿಗಳ ಹಿಂದೆ ನಡೆದ ನಿನ್ನನ್ನು ನಾನು ಕುರಿಯ ಹಟ್ಟಿಯಿಂದ
೮ ತೆಗೆದು ಕೊಂಡೆನು. ನೀನು ಎಲ್ಲಿಗೆ ಹೋದರೂ, ಅಲ್ಲಿ ನಿನ್ನ
ಸಂಗಡ ಇದ್ದು, ನಿನ್ನ ಶತ್ರುಗಳೆಲ್ಲರನ್ನು ನಿನ್ನ ಮುಂದೆ ಕಡಿದು
ಬಿಟ್ಟು, ಭೂಮಿಯಲ್ಲಿರುವ ದೊಡ್ಡವರ ಹೆಸರಿನ ಹಾಗೆ ಹೆಸರನ್ನು
೯ ನಿನಗೆ ಉಂಟು ಮಾಡಿದೆನು. ಇದಲ್ಲದೆ ನಾನು ನನ್ನ ಜನವಾದ
ಇಸ್ರಯೇಲಿಗೆ ಒಂದು ಸ್ಥಳವನ್ನು ಏರ್ಪಡಿಸಿ, ಅವರು ಇನ್ನು ಮೇ
ಲೆ ಚಲಿಸದೆ, ಸ್ವಸ್ಥಳದಲ್ಲಿ ವಾಸ ಮಾಡುವ ಹಾಗೆ, ಅವರನ್ನು ನೆ
ಡುವೆನು. ಪೂರ್ವದ ಹಾಗೆಯೂ ನನ್ನ ಜನವಾದ ಇಸ್ರಯೇಲಿನ
ಮೇಲೆ ನ್ಯಾಯಾಧಿಪತಿಗಳನ್ನು ನೇಮಿಸಿದ ದಿವಸದಿಂದಾದ ಹಾ
ಗೆಯೂ ಅನ್ಯಾಯದ ಮಕ್ಕಳು ಇನ್ನು ಮೇಲೆ ಅವರನ್ನು ಕುಂ
೧೦ ದಿಸದೆ ಇರುವರು. ನಾನು ನಿನ್ನ ಸಮಸ್ತ ಶತ್ರುಗಳನ್ನು ತಗ್ಗಿಸಿ
ದ್ದೇನೆ. ಮತ್ತು ಕರ್ತನು ನಿನಗೆ ಮನೆಯನ್ನು ಕಟ್ಟುವನೆಂದು, ನಿ
೧೧ ನಗೆ ತಿಳಿಸುತ್ತೇನೆ. ಮತ್ತು ನಿನ್ನ ದಿವಸಗಳು ಪೂರ್ಣವಾಗಿ,
ನೀನು ನಿನ್ನ ಪಿತೃಗಳ ಬಳಿಗೆ ಹೋಗ ಬೇಕಾದಾಗ ಆಗುವದೇ
ನಂದರೆ—ನಾನು ನಿನ್ನ ತರುವಾಯ ನಿನ್ನ ಮಕ್ಕಳಿಂದಾಗುವ ನಿನ್ನ
೧೨ ಬೀಜವನ್ನು ಎಬ್ಬಿಸಿ, ಅವನಿಗೆ ರಾಜ್ಯವನ್ನು ಸ್ಥಿರ ಮಾಡುವೆನು.
ಅವನು ನನಗೆ ಮನೆಯನ್ನು ಕಟ್ಟುವನು. ಅವನ ಸಿಂಹಾಸನವ

೧೩ ನುಳಿ ಯುಗ ಯುಗಕ್ಕೂ ಸ್ಥಿರ ಮಾಡುವೆನು. ನಾನು ಅವನಿಗೆ
ತಂದೆಯಾಗಿರುವೆನು; ಅವನು ನನಗೆ ಮಗನಾಗಿರುವನು. ನಿನಗೆ
ಮುಂಚೆ ಇದ್ದವನಿಂದ ನನ್ನ ಕೃಪೆಯನ್ನು ನಾನು ತೊಲಗಿಸಿದ
ಹಾಗೆ, ಅವನಿಂದ ತೊಲಗಿಸುವದಿಲ್ಲ. ಮತ್ತು ಅವನನ್ನು ನನ್ನ
೧೪ ಮನೆಯಲ್ಲಿಯೂ, ನನ್ನ ರಾಜ್ಯದಲ್ಲಿಯೂ ನಿಲ್ಲಿಸುವೆನು. ಅವನ
ಸಿಂಹಾಸನವು ಯುಗ ಯುಗಕ್ಕೂ ಸ್ಥಿರ ಪಟ್ಟಿರುವದು.

೧೫ ಈ ಸಮಸ್ತ ವಾಕ್ಯಗಳ ಪ್ರಕಾರವೂ, ಈ ಸಮಸ್ತ ದರ್ಶನದ
ಪ್ರಕಾರವೂ ನತಾನನು ದಾವೀದನಿಗೆ ಹೇಳಿದನು.

೧೬ ಆಗ ಅರಸನಾದ ದಾವೀದನು ಬಂದು, ಕರ್ತನ ಮುಂದೆ ಕೂ
ತು ಕೊಂಡು, ಹೇಳಿದ್ದೇನಂದರೆ, ಕರ್ತನಾದ ದೇವರೇ, ನನ್ನನ್ನು
ನೀನು ಇಷ್ಟು ಪರ್ಯಂತರ ತಂದದ್ದಕ್ಕೆ ನಾನು ಎಷ್ಟರವನು? ನ
೧೭ ನ್ನ ಮನೆಯು ಎಷ್ಟರದು! ದೇವರೇ, ಇದು ನಿನ್ನ ಕಣ್ಣುಗಳಿಗೆ ಅ
ಲ್ಪ ಕಾರ್ಯವಾಗಿತ್ತು; ಯಾಕಂದರೆ ನೀನು ನಿನ್ನ ಸೇವಕನ ಮ
ನೆಯನ್ನು ಕುರಿತು ಬಹು ಕಾಲದ ಮಾತು ಹೇಳಿದಿ; ಉನ್ನತ ಮ
ನುಷ್ಯನ ನ್ಯಾಯದ ಪ್ರಕಾರ ನನ್ನನ್ನು ನೋಡಿದಿ, ಕರ್ತನಾದ
೧೮ ದೇವರೇ. ನಿನ್ನ ಸೇವಕನ ಘನದ ನಿಮಿತ್ತ ದಾವೀದನು ಇನ್ನು
೧೯ ಹೇಳುವದೇನು! ಯಾಕಂದರೆ ನೀನು ನಿನ್ನ ಸೇವಕನನ್ನು ಬಲ್ಲಿ.
ಕರ್ತನೇ, ನಿನ್ನ ಸೇವಕನ ನಿಮಿತ್ತವಾಗಿಯೂ, ನಿನ್ನ ಚಿತ್ತದ ಪ್ರ
ಕಾರವಾಗಿಯೂ ಈ ದೊಡ್ಡ ಕಾರ್ಯಗಳನ್ನು ತಿಳಿಯ ಮಾಡು
೨೦ ವದಕ್ಕೆ, ಈ ದೊಡ್ಡ ಸ್ತುತಿಯೆನ್ನೆಲ್ಲಾ ಮಾಡಿದ್ದೀ. ಕರ್ತನೇ, ನಾ
ವು ನಮ್ಮ ಕಿವಿಗಳಿಂದ ಕೇಳಿದ ಎಲ್ಲಾದರ ಪ್ರಕಾರವಾಗಿ ನಿನ್ನ ಹಾ
ಗೆ ಯಾವನೂ ಇಲ್ಲ; ನಿನ್ನ ಹೊರ್ತಾಗಿ, ದೇವರು ಯಾವನೂ
೨೧ ಇಲ್ಲ. ನಿನ್ನ ಜನರಾದ ಇಸ್ರಯೇಲಿನ ಹಾಗೆ ಭೂಮಿಯಲ್ಲಿರುವ
ಜನಗಳೊಳಗೆ ಜನಾಂಗವು ಯಾವದು? ಐಗುಪ್ತದಿಂದ ಬಿಡಿಸಿದ
ನಿನ್ನ ಜನರ ಮುಂದೆ ಜನಾಂಗಗಳನ್ನು ಓಡಿಸಿ, ನಿನಗೆ ದೊಡ್ಡದಾ
ದಂಥ, ಭಯಂಕರವಾದಂಥ ನಾಮವನ್ನು ಉಂಟು ಮಾಡಲಿಕ್ಕೆ,
೨೨ ದೇವರಾದ ನೀನು, ನಿನಗೆ ಜನರಾಗ, ಅವರನ್ನು ಬಿಡಿಸ ಹೋದಿ.
ನೀನು ನಿನ್ನ ಜನವಾದ ಇಸ್ರಯೇಲನ್ನು ಯುಗ ಯುಗಾಂತರ
ಕ್ಕೂ ನಿನ್ನ ಜನರಾಗ ಮಾಡಿದಿ; ನೀನು, ಕರ್ತನೇ, ಅವರ ದೇವ
೨೩ ರಾದಿ. ಈಗ, ಕರ್ತನೇ, ನೀನು ನಿನ್ನ ಸೇವಕನನ್ನು ಕುರಿತೂ
ಅವನ ಮನೆಯನ್ನು ಕುರಿತೂ ಹೇಳಿದ ಮಾತು ಯುಗ ಯು
ಗಾಂತರಕ್ಕೂ ನಿಶ್ಚಯವಾಗಲಿ; ಮತ್ತು ನೀನು ಹೇಳಿದ ಹಾಗೆ
೨೪ ಮಾಡು. ಅದು ನಿಶ್ಚಯವಾಗಲಿ; ಮತ್ತು ಇಸ್ರಯೇಲಿನ ದೇವ
ರಾದ ಸೈನ್ಯಗಳ ಕರ್ತನು ಇಸ್ರಯೇಲಿಗೆ ದೇವರಾಗಿದ್ದಾನೆಂದು,
೨೫ ನಿನ್ನ ನಾಮವು ಯುಗ ಯುಗಾಂತರಕ್ಕೂ ಘನ ಪಡಲಿ; ಮತ್ತು
ನಿನ್ನ ಸೇವಕನಾದ ದಾವೀದನ ಮನೆಯು ನಿನ್ನ ಮುಂದೆ ಸ್ಥಿರ
ಪಟ್ಟಿರಲಿ. ಯಾಕಂದರೆ, ನನ್ನ ದೇವರೇ, ನೀನು ನಿನ್ನ ಸೇವಕನಿ
ಗೆ ಮನೆಯನ್ನು ಕಟ್ಟುವೆನೆಂದು, ಅವನ ಕಿವಿಯಲ್ಲಿ ಹೇಳಿದಿ. ಆದ
ರಿಂದ ನಿನ್ನ ಸೇವಕನು ನಿನ್ನ ಮುಂದೆ ಪ್ರಾರ್ಥನೆ ಮಾಡ ಸ್ಥಳ
೨೬ ಸಿಕ್ಕಿತು. ಈಗ, ಕರ್ತನೇ, ನೀನು ದೇವರಾಗಿದ್ದೀ; ಈ ಒಳ್ಳೇ
೨೭ ಮಾತನ್ನು ನಿನ್ನ ಸೇವಕನಿಗೆ ಹೇಳಿದಿ. ಹಾಗಾದರೆ ನಿನ್ನ ಸೇ
ವಕನ ಮನೆ ನಿನ್ನ ಮುಂದೆ ಯುಗ ಯುಗಕ್ಕೂ ಇರುವ ಹಾಗೆ
ಅದನ್ನು ಆಶೀರ್ವದಿಸ ನಿನಗೆ ಚಿತ್ತವಾಗಲಿ; ಯಾಕಂದರೆ, ಕರ್ತ
ನೇ, ನೀನು ಆಶೀರ್ವದಿಸಿದ್ದು ಯುಗ ಯುಗಕ್ಕೂ ಆಶೀರ್ವದಿಸ
ಲ್ಪಟ್ಟಿರುವದು.

## ೧೮. ಸಂಧಿ.

೧ ಇದರ ತರುವಾಯ ಏನಾಯಿತಂದರೆ, ದಾವೀದನು ಫಿಲಿಷ್ಟಿಯ
ರನ್ನು ಹೊಡೆದು, ಅವರನ್ನು ತಗ್ಗಿಸಿ, ಗಾತನ್ನೂ, ಅದರ ಗ್ರಾಮ
ಗಳನ್ನೂ ಫಿಲಿಷ್ಟಿಯರ ಕೈಯೊಳಗಿಂದ ತೆಗೆದು ಕೊಂಡನು.
೨ ಹಾಗೆಯೇ ಅವನು ಮೋವಾಬ್ಯರನ್ನು ಹೊಡೆದ್ದರಿಂದ, ಮೋ
ವಾಬ್ಯರು ದಾವೀದನಿಗೆ ಸೇವಕರಾಗಿ, ಕಪ್ಪವನ್ನು ಕೊಡುವವರಾ
3 ದರು. ಇದಲ್ಲದೆ ದಾವೀದನು ಫ್ರಾತು ನದಿಯ ಬಳಿಯಲ್ಲಿ ತನ್ನ
ಅಧಿಕಾರವನ್ನು ಸ್ಥಿರ ಪಡಿಸ ಹೋಗುತ್ತಿರುವಾಗ, ಹಮಾತಿನ ಬ
ಳಿಯಲ್ಲಿ ಜೋಬದ ಅರಸನಾದ ಹದರೇಜರನನ್ನು ಹೊಡೆದನು.
೪ ದಾವೀದನು ಅವನಿಂದ ಸಾವಿರ ರಥಗಳನ್ನೂ, ಏಳು ಸಾವಿರ ರಾ
ಹುತರನನ್ನೂ, ಇಪ್ಪತ್ತು ಸಾವಿರ ಕಾಲ್ಬಲವನ್ನೂ ತೆಗೆದು ಕೊಂ
ಡನು. ಮತ್ತು ದಾವೀದನು ನೂರು ರಥಗಳಿಗೆ ತಕ್ಕ ಕುದುರೆಗ
ಳನ್ನು ಉಳಿಸಿ, ಇತರ ಕುದುರೆಗಳ ಕಾಲು ನರಗಳನ್ನು ಕೊಯಿ
ಸಿ ಬಿಟ್ಟನು.
೫ ದಮಸ್ಕದ ಅರಾಮ್ಯರು ಜೋಬದ ಅರಸನಾದ ಹದರೇಜರ
ನಿಗೆ ಸಹಾಯ ಕೊಡ ಬಂದಾಗ, ದಾವೀದನು ಅರಾಮ್ಯರಲ್ಲಿ ಇ
ಪ್ಪತ್ತೆರಡು ಸಾವಿರ ಮಂದಿಯನ್ನು ಹೊಡೆದು ಬಿಟ್ಟನು. ಮತ್ತು
೬ ದಾವೀದನು ದಮಸ್ಕದ ಅರಾಮಿನಲ್ಲಿ ಠಾಣಗಳನ್ನು ಇಟ್ಟನು. ಅ
ರಾಮ್ಯರು ದಾವೀದನಿಗೆ ಸೇವಕರಾಗಿ, ಕಪ್ಪವನ್ನು ಕೊಡುವವ
ರಾದರು. ಕರ್ತನು ದಾವೀದನು ಹೋದ ಸ್ಥಳಗಳಲ್ಲೆಲ್ಲಾ ಅವನ
೭ ನ್ನು ರಕ್ಷಿಸಿದನು. ಆಗ ದಾವೀದನು ಹದರೇಜರನ ಸೇವಕರಿಗುಂ
ಟಾದ ಬಂಗಾರದ ಡಾಲುಗಳನ್ನು ತೆಗೆದು ಕೊಂಡು, ಅವುಗಳನ್ನು
೮ ಯೆರೂಸಲೇಮಿಗೆ ತಂದನು. ಇದಲ್ಲದೆ ಹದರೇಜರನ ಪಟ್ಟಣಗಳಾ
ದ ಟಿಭಾತಿನಿಂದಲೂ ಕೂನಿನಿಂದಲೂ ದಾವೀದನು ಅತ್ಯಧಿಕವಾಗಿ
ತಾಂಬ್ರವನ್ನು ತಂದನು. ಅದರಿಂದ ಸೊಲೊಮೋನನು ತಾಂಬ್ರ
ದ ಸಮುದ್ರವನ್ನೂ, ಸ್ತಂಭಗಳನ್ನೂ, ತಾಂಬ್ರದ ಪಾತ್ರೆಗಳನ್ನೂ
ಮಾಡಿಸಿದನು.
೯ ಆದರೆ ಹಮಾತಿನ ಅರಸನಾದ ತೋಳಿಗೆ ಹದರೇಜರನ
ಸಂಗಡ ಯುದ್ಧ ಉಂಟಾಗಿದ್ದದರಿಂದ, ದಾವೀದನು ಹದರೇಜರನ
ಸಮಸ್ತ ಸೈನ್ಯವನ್ನು ಹೊಡೆದ ವರ್ತಮಾನ ತೋಳಿಗು ಕೇ
೧೦ ಳಿದಾಗ, ಅರಸನಾದ ದಾವೀದನ ಕ್ಷೇಮ ಸಮಾಚಾರವನ್ನು ವಿ
ಚಾರಿಸಲೂ, ಹದರೇಜರನ ಸಂಗಡ ಯುದ್ಧ ಮಾಡಿ, ಅವನನ್ನು
ಹೊಡೆದ್ದಕ್ಕೋಸ್ಕರ ಅವನನ್ನು ಆಶೀರ್ವದಿಸಲೂ, ತೋಳಿಗು
ವು ತನ್ನ ಕುಮಾರನಾದ ಹದೋರಮನನ್ನೂ, ಎಲ್ಲಾ ತರವಾದ
ಬೆಳ್ಳಿ, ಬಂಗಾರ, ತಾಂಬ್ರದ ಪಾತ್ರೆಗಳು ಸಹಿತವಾಗಿ, ಅವನ ಬ
೧೧ ಳಿಗೆ ಕಳುಹಿಸಿದನು. ಇವುಗಳನ್ನು ಅರಸನಾದ ದಾವೀದನು ಎ
ದೋಮ್ಯರು, ಮೋವಾಬ್ಯರು, ಅಮ್ಮೋನನ ಮಕ್ಕಳು, ಫಿಲಿಷ್ಟಿಯ
ರು, ಅಮಲೇಕ್ಯರು ಎಂಬ ಸಕಲ ಜನಾಂಗಗಳ ಬಳಿಯಿಂದ ತ
ಕ್ಕೊಂಡು ಬಂದ ಬೆಳ್ಳಿ ಬಂಗಾರದ ಸಂಗಡ ಕರ್ತನಿಗೆ ಹರಿಕೆ
ಮಾಡಿ ಇಟ್ಟನು.
೧೨ ಇದಲ್ಲದೆ ಜೆರೂಯಳ ಮಗನಾದ ಅಬಿಷಯ್ಯನು ಉಪ್ಪಿನ
ತಗ್ಗಿನಲ್ಲಿ ಎದೋಮ್ಯಕೊಳಗೆ ಹದಿನೆಂಟು ಸಾವಿರ ಮಂದಿಯನ್ನು
ಹೊಡೆದನು. ಎದೋಮಿನಲ್ಲಿ ಠಾಣಗಳನ್ನು ಇಟ್ಟನು. ಎದೋ
ಮ್ಯರೆಲ್ಲರೂ ದಾವೀದನ ಸೇವಕರಾದರು.



೧೩ ದಾವೀದನು ಎಲ್ಲಿ ಹೋದನೋ, ಅಲ್ಲಿ ಕರ್ತನು ಅವನನ್ನು
ರಕ್ಷಿಸಿದನು.
೧೪ ಹೀಗೆಯೇ ದಾವೀದನು ಸಮಸ್ತ ಇಸ್ರಯೇಲಿನ ಮೇಲೆ ಆಳು
೧೫ ತ್ತಾ, ತನ್ನ ಸಮಸ್ತ ಜನರಿಗೂ ನ್ಯಾಯವನ್ನೂ ನೀತಿಯನ್ನೂ
ನಡಿಸಿದನು. ಚೆರೂಯಳ ಮಗನಾದ ಯೊವಾಬನು ಸೈನ್ಯಾಧಿ
ಪತಿಯಾಗಿದ್ದನು; ಅಹೀಲೂದನ ಮಗನಾದ ಯೆಹೊಷಾಫಾಟನು
೧೬ ನಡವಡಿಕೆಗಳನ್ನು ಬರೆಯುವವನಾಗಿದ್ದನು. ಅಹೀಟೂಬನ ಮಗ
ನಾದ ಚಡೋಕನೂ ಅಬ್ಯಾತಾರನ ಮಗನಾದ ಅಬಿಮೇಲೆಕನೂ
೧೭ ಯಾಜಕರಾಗಿದ್ದರು. ಶಾವಷನು ರಾಯಸದವನಾಗಿದ್ದನು. ಯೆ
ಹೊಯದನ ಮಗನಾದ ಬೆನಾಯನು ಕ್ರೇತ್ಯರ ಮೇಲೆಯೂ ಪೆ
ಲೆತ್ಯರ ಮೇಲೆಯೂ ಯಜಮಾನನಾಗಿದ್ದನು. ದಾವೀದನ ಮ
ಕ್ಕಳು ಅರಸನ ಬಳಿಯಲ್ಲಿ ಮುಖ್ಯಸ್ಥರಾಗಿದ್ದರು.

## ೧೯. ಸಂಧಿ.

೧ ಇದರ ತರುವಾಯ ಏನಾಯಿತಂದರೆ, ಅಮ್ಮೋನನ ಮಕ್ಕಳ
ಅರಸನಾದ ನಹಾಷನು ಸತ್ತನು; ಮತ್ತು ಅವನ ಮಗನು ಅವನಿ
೨ ಗೆ ಬದಲಾಗಿ ಆಳಿದನು. ಆಗ ದಾವೀದನು ಹನೂನನ ತಂದೆಯಾ
ದ ನಹಾಷನು ನನಗೆ ಕೃಪೆ ತೋರಿಸಿದ್ದರಿಂದ, ಅವನ ಮಗನಾ
ದ ಹನೂನನಿಗೆ ನಾನು ಕೃಪೆ ತೋರಿಸುವೆನು, ಅಂದನು. ಮ
ತ್ತು ದಾವೀದನು ಅವನ ತಂದೆಯನ್ನು ಕುರಿತು ಅವನಿಗೆ ಆದರಣೆ
ಕೊಡ ಸೇವಕರನ್ನು ಕಳುಹಿಸಿದನು. ಹೀಗೆಯೇ ದಾವೀದನ ಸೇ
ವಕರು ಅವನಿಗೆ ಆದರಣೆ ಕೊಡ ಅಮ್ಮೋನನ ಮಕ್ಕಳ ದೇಶಕ್ಕೆ
3 ಹನೂನನ ಬಳಿಗೆ ಬಂದರು. ಆದರೆ ಅಮ್ಮೋನನ ಮಕ್ಕಳ ಪ್ರಧಾ
ನರು ಹನೂನನಿಗೆ, ದಾವೀದನು ನಿನ್ನ ಬಳಿಗೆ ಆದರಣೆ ಕೊಡುವ
ವರನ್ನು ಕಳುಹಿಸಿದ್ದರಿಂದ, ನಿನ್ನ ತಂದೆಯನ್ನು ಘನ ಪಡಿಸುತ್ತಾ
ನೆಂದು, ನಿನಗೆ ಕಾಣುತ್ತದೋ! ಅವನ ಸೇವಕರು ಕೋಧಿಸಲೂ,
ಕೆಡವಿ ಹಾಕಲೂ, ದೇಶವನ್ನು ಪಾಳ್ತಿ ನೋಡಲೂ, ನಿನ್ನ ಬಳಿಗೆ
೪ ಬರಲಿಲ್ಲವೋ! ಅಂದರು. ಆದದರಿಂದ ಹನೂನನು ದಾವೀದನ
ಸೇವಕರನ್ನು ಹಿಡಿದು, ಅವರನ್ನು ಬೋಳಿಸಿ, ಅವರ ಅಂಗಿಗಳ
ನ್ನು ಮಧ್ಯದಲ್ಲಿ ಪಿಕ್ರಿಗಳ ಪರ್ಯಂತರ ಕತ್ತರಿಸಿ, ಅವರನ್ನು
೫ ಕಳುಹಿಸಿ ಬಿಟ್ಟನು. ಆಗ ಕೆಲವರು ಹೋಗಿ, ಈ ಮನುಷ್ಯರ
ನ್ನು ಕುರಿತು ದಾವೀದನಿಗೆ ತಿಳಿಸಿದರು. ಆ ಮನುಷ್ಯರು ಬಹಳ
ವಾಗಿ ನಾಚಿಕೆ ಪಟ್ಟದ್ದರಿಂದ, ಅವರನ್ನು ಎದುರ್ಗೊಳ್ಳ ಸೇವಕ
ರನ್ನು ಕಳುಹಿಸಿದನು. ಮತ್ತು ಅರಸನು, ನಿಮ್ಮ ಗಡ್ಡಗಳು ಬೆಳೆ
ಯುವ ಮಟ್ಟಿಗೂ ಯೆರಿಕೋವಿನಲ್ಲಿ ಇರ್ರಿ; ಆಗ ತಿರಿಗಿ ಬನ್ನಿರೆಂ
ದು, ಹೇಳಿದನು.
೬ ಅಮ್ಮೋನನ ಮಕ್ಕಳು ತಾವು ದಾವೀದನಿಗೆ ದುರ್ವಾಸನೆ
ಯಾದೆವೆಂದು ಕಂಡಾಗ, ಹನೂನನೂ ಅಮ್ಮೋನನ ಮಕ್ಕಳೂ
ಅರಾಮಿನಲ್ಲಿಯೂ, ಅರಾಮ್ ಮಾಕದಲ್ಲಿಯೂ, ಜೋಬದಲ್ಲಿ
ಯೂ ರಥಗಳನ್ನೂ, ರಾಹುತರನ್ನೂ ಕೂಲಿಗೆ ತೆಗೆದು ಕೊಳ್ಳಿ
೭ ಸಾವಿರ ಬೆಳ್ಳಿ ತಲಾಂತುಗಳನ್ನು ಕಳುಹಿಸಿದರು. ಹೀಗೆಯೇ ಅ
ವರು ಮೂವತ್ತೆರಡು ಸಾವಿರ ರಥಗಳನ್ನೂ, ಮಾಕದ ಅರಸನ
ನ್ನೂ ಅವನ ಜನರನ್ನೂ ಕೂಲಿಗೆ ತೆಗೆದು ಕೊಂಡರು. ಇವರು
ಬಂದು, ಮೇದ್ಬದ ಬಳಿಯಲ್ಲಿ ದಂಡಿಳಿದರು. ಇದಲ್ಲದೆ ಅಮ್ಮೋನ
ನ ಮಕ್ಕಳು ತಮ್ಮ ಪಟ್ಟಣಗಳಿಂದ ಕೂಡಿ ಕೊಂಡು, ಯುದ್ಧಕ್ಕೆ
ಬಂದರು.
೮ ದಾವೀದನು ಕೇಳಿದಾಗ, ಅವನು ಯೊವಾಬನನ್ನೂ ಸಮಸ್ತ
೯ ಪರಾಕ್ರಮ ಶಾಲಿಗಳ ಸೈನ್ಯವನ್ನೂ ಕಳುಹಿಸಿದನು. ಆಗ ಅ
ಮ್ಮೋನನ ಮಕ್ಕಳು ಹೊರಟು, ಪಟ್ಟಣದ ಬಾಗಲ ದ್ವಾರದ ಹತ್ತ
ರ ವ್ಯೂಹ ಕಟ್ಟಿದರು. ಆದರೆ ಬಂದ ಅರಸುಗಳು ಬೇಕೆಯಾಗಿ
ಹೊಬಬಿನಲ್ಲಿ ನಿಂತಿದ್ದರು. ಯೊವಾಬನು ಯುದ್ಧವು ತನಗೆ ವಿ
೧೦ ರೋಧವಾಗಿ ಹಿಂದೆಯೂ ಮುಂದೆಯೂ ಇರುವದನ್ನು ಕಂಡಾಗ,
ಅವನು ಇಸ್ರಯೇಲಿನಲ್ಲಿ ಆಯಲ್ಪಟ್ಟ ಸಮಸ್ತರೊಳಗೆ ಜನರನ್ನು
ಆರಿ ಕೊಂಡು, ಅರಮ್ಯರಿಗೆದುರಾಗಿ ವ್ಯೂಹ ಕಟ್ಟಿ
೧೧ ದನು. ಆದರೆ ಮಿಕ್ಕಾದವರು ಅಮ್ಮೋನನ ಮಕ್ಕಳಿಗೆದುರಾಗಿ
ವ್ಯೂಹ ಕಟ್ಟುವ ಹಾಗೆ, ಅವರನ್ನು ತನ್ನ ಸಹೋದರನಾದ ಅಬಿ
ಷಯ್ಯನ ಕೈಯಲ್ಲಿ ಒಪ್ಪಿಸಿ ಕೊಟ್ಟು, ಅವನಿಗೆ, ಅರಾಮ್ಯರು ನ
ನಗಿಂತ ಬಲವುಳ್ಳವರಾದರೆ, ನೀನು ನನಗೆ ಸಹಾಯ ಕೊಡ
ಬೇಕು; ಅಮ್ಮೋನನ ಮಕ್ಕಳು ನಿನಗಿಂತ ಬಲವುಳ್ಳವರಾಗಿದ್ದರೆ,
೧೨ ನಾನು ನಿನಗೆ ಸಹಾಯ ಮಾಡುವೆನು. ಬಲವಾಗಿರು; ನಾವು ನ
ಮ್ಮ ಜನರಿಗೋಸ್ಕರವೂ, ನಮ್ಮ ದೇವರ ಪಟ್ಟಣಗಳಿಗೋಸ್ಕರವೂ
ಬಲಗೊಳ್ಳುವ; ಕರ್ತನು ತನ್ನ ದೃಷ್ಟಿಗೆ ಉತ್ತಮವಾದದ್ದನ್ನು
ಮಾಡಲಿ, ಅಂದನು.
೧೩ ಆಗ ಯೊವಾಬನೂ ಅವನ ಸಂಗಡ ಇದ್ದ ಜನರೂ ಅರಾಮ್ಯ
ರ ಮೇಲೆ ಯುದ್ಧ ಮಾಡ ಮುಂಕೊಂಡರು. ಅವರು ಅವನ ಎ
ದುರಿನಿಂದ ಓಡಿ ಹೋದರು. ಅರಾಮ್ಯರು ಓಡಿ ಹೋದದ್ದನ್ನು
ಅಮ್ಮೋನನ ಮಕ್ಕಳು ನೋಡಿದಾಗ, ಅವರು ಹಾಗೆಯೇ ಅವನ
ಸಹೋದರನಾದ ಅಬಿಷಯ್ಯನ ಎದುರಿನಿಂದ ಓಡಿ ಹೋಗಿ, ಪಟ್ಟ
ಣದೊಳಗೆ ಹೊಕ್ಕೊಂಡರು. ಆಗ ಯೊವಾಬನು ಯೆರೂಸಲೇಮಿ
ಗೆ ಬಂದನು.
೧೪ ಅರಾಮ್ಯರು ತಾವು ಇಸ್ರಯೇಲಿನ ಮುಂದೆ ಮುರಿಯಲ್ಪಟ್ಟದ್ದ
ನ್ನು ಕಂಡಾಗ, ಅವರು ದೂತರನ್ನು ಕಳುಹಿಸಿ, ನದಿಯ ಆಚೆಯ
ಲ್ಲಿರುವ ಅರಾಮ್ಯರನ್ನು ಕರ ಕೊಂಡರು. ಹದರೇಜರನ ಸೈನ್ಯಾ
೧೫ ಧಿಪತಿಯಾದ ಷೋಬಕನು ಅವರ ಮೇಲೆ ಇದ್ದನು. ಅದು ದಾವೀ
ದನಿಗೆ ತಿಳಿಸಲ್ಪಟ್ಟಾಗ, ಅವನು ಸಮಸ್ತ ಇಸ್ರಯೇಲರನ್ನು ಕೂ
ಡಿಸಿ, ಯೊರ್ದನನ್ನು ದಾಟಿ, ಅವರಿಗೆದುರಾಗಿ ವ್ಯೂಹ ಕಟ್ಟಿದನು.
ದಾವೀದನು ಅರಾಮ್ಯರಿಗೆದುರಾಗಿ ಸೈನ್ಯವನ್ನು ವ್ಯೂಹ ಕಟ್ಟಿದ
೧೭ ಮೇಲೆ, ಅವರು ಅವನ ಸಂಗಡ ಯುದ್ಧ ಮಾಡಿದರು. ಆದರೆ ಅ
ರಾಮ್ಯರು ಇಸ್ರಯೇಲಿನ ಎದುರಿನಿಂದ ಓಡಿ ಹೋದರು. ದಾವೀ
ದನು ಅರಾಮ್ಯರಲ್ಲಿ ಏಳು ಸಾವಿರ ರಥಿಕರನ್ನೂ, ನಾಲ್ವತ್ತು
ಸಾವಿರ ಕಾಲ್ಬಲವನ್ನೂ, ಸೈನ್ಯಾಧಿಪತಿಯಾದ ಷೋಬಕನನ್ನೂ
೧೮ ಕೊಂದು ಹಾಕಿದನು. ಹದರೇಜರನ ಸೇವಕರು ತಾವು ಇಸ್ರಯೇ
ಲಿನ ಮುಂದೆ ಮುರಿಯಲ್ಪಟ್ಟದ್ದನ್ನು ಕಂಡಾಗ, ಅವರು ದಾವೀದನ
ಸಂಗಡ ಸಮಾಧಾನ ಮಾಡಿ ಕೊಂಡು, ಅವನ ಸೇವಕರಾದರು.
ಆ ತರುವಾಯ ಅರಾಮ್ಯರು ಅಮ್ಮೋನನ ಮಕ್ಕಳಿಗೆ ಇನ್ನು ಸ
ಹಾಯ ಕೊಡ ಮನಸ್ಸಿಲ್ಲದೆ ಇದ್ದರು.

## ೨೦. ಸಂಧಿ.

೧ ವರುಷದ ತಕ್ಕ ಕಾಲದಲ್ಲಿ, ಅರಸುಗಳು ಯುದ್ಧಕ್ಕೆ ಹೊರಡು
ವ ಕಾಲದಲ್ಲಿ ಏನಾಯಿತಂದರೆ, ಯೊವಾಬನು ಬಲವಾದ ಸೈನ್ಯ

ವನ್ನು ಕರ ಕೊಂಡು ಹೋಗಿ, ಅವ್ಯೋನನ ಮಕ್ಕಳ ದೇಶವನ್ನು
ಕೆಡಿಸಿ, ಬಂದು, ಕಬ್ಬಿತನ್ನು ಮುತ್ತಿಗೆ ಹಾಕಿದನು. ಆದರೆ ದಾವೀ
ದನು ಯೆರೂಸಲೇಮಿನಲ್ಲಿ ನಿಂತಿದ್ದನು. ಮತ್ತು ಯೊವಾಬನು ರ
೨ ಬ್ಬಿತನ್ನು ಹೊಡೆದು, ಅದನ್ನು ನಿರ್ಮೂಲ ಮಾಡಿದನು. ಇದಲ್ಲದೆ
ದಾವೀದನು ಅವರ ಅರಸನ ತಲೆಯ ಮೇಲೆ ಇದ್ದ ಕಿರೀಟವನ್ನು
ತೆಗೆದು ಕೊಂಡು, ಅದರಲ್ಲಿ ಒಂದು ತಲಾಂತು ತೂಕ ಭಂಗಾರವ
ನ್ನೂ ಅಮೂಲ್ಯವಾದ ರತ್ನಗಳನ್ನೂ ಕಂಡನು. ಮತ್ತು ಅದು
ದಾವೀದನ ತಲೆಯ ಮೇಲೆ ಇಡಲ್ಪಟ್ಟಿತು. ಮತ್ತು ಪಟ್ಟಣದೊಳಗಿಂ
ದ ಅತ್ಯಧಿಕವಾದ ಕೊಳ್ಳೆಯನ್ನೂ ತೆಗೆದು ಕೊಂಡು ಬಂದನು.
೩ ಇದಲ್ಲದೆ ಅವನು ಅದರಲ್ಲಿರುವ ಜನರನ್ನು ಹೊರತಂದು, ಗರಗ
ಸಗಳಿಂದಲೂ ಕಬ್ಬಿಣದ ಸಲಿಕೆಗಳಿಂದಲೂ ಕೊಡ್ಲಿಗಳಿಂದಲೂ
ಕೆಲಸ ಮಾಡಿಸಿದನು. ಅದೇ ಪ್ರಕಾರ ದಾವೀದನು ಅಮ್ಮೋನನ
ಮಕ್ಕಳ ಸಮಸ್ತ ಪಟ್ಟಣಗಳಿಗೆ ಮಾಡಿದನು. ಆಗ ದಾವೀದನೂ
ಸಮಸ್ತ ಜನರೂ ಯೆರೂಸಲೇಮಿಗೆ ತಿರುಗಿದರು. ಇದರ ತರುವಾ
೪ ಯ ಏನಾಯಿತಂದರೆ, ಗೇಜರಿನಲ್ಲಿ ಫಿಲಿಷ್ಟ್ಯರ ಸಂಗಡ ಯುದ್ಧ
ಉಂಟಾಯಿತು. ಆ ಕಾಲದಲ್ಲಿ ಹುಷಾತ್ಯನಾದ ಸಿಬ್ಬೆಕಾಯಿಯು
ರಾಫನ ಮಕ್ಕಳಲ್ಲಿ ಒಬ್ಬನಾದ ಸಿಪ್ಪಾಯನ್ನು ಹೊಡೆದ್ದರಿಂದ,
೫ ಅವರು ತಗ್ಗಿಸಲ್ಪಟ್ಟರು. ತಿರಿಗಿ ಫಿಲಿಷ್ಟ್ಯರ ಸಂಗಡ ಯುದ್ಧ ಉಂ
ಟಾಯಿತು. ಆಗ ಯಾಯಿರನ ಮಗನಾದ ಎಲ್ಹನಾನನು ಗಿತ್ತಿ
ಯನಾಗಿರುವ ಗೊಲಿಯಾತನ ಸಹೋದರನಾದ ಲಹ್ಮಿಯನ್ನು
ಹೊಡೆದನು. ಇವನ ಈಟಿಯ ಕಟ್ಟಿಗೆಯು ನೇಯುವ ದೋಣಿ
ಮರಕ್ಕೆ ಸಮಾನವಾಗಿತ್ತು.

೬ ಮತ್ತು ಗಾತಿನಲ್ಲಿ ಯುದ್ಧ ಉಂಟಾಯಿತು; ಅಲ್ಲಿ ಅರಾ
ರು ಪ್ರಕಾರ ಇಪ್ಪತ್ತು ನಾಲ್ಕು ಬೆರಳುಗಳುಳ್ಳ ಉನ್ನತನಾದ ಒ
೭ ಬ್ಬ ಮನುಷ್ಯನಿದ್ದನು. ಇವನು ಸಹ ರಾಫನ ಮಗನಾಗಿದ್ದನು.
ಇವನು ಇಸ್ರಯೇಲನ್ನು ನಿಂದಿಸಿದಾಗ, ದಾವೀದನ ಸಹೋದರ
ನಾದ ಶಿಮ್ಮನ ಮಗನಾಗಿರುವ ಯೊನತಾನನು ಅವನನ್ನು
೮ ಹೊಡೆದು ಬಿಟ್ಟನು. ಇವರು ಗಾತಿನಲ್ಲಿ ರಾಫನಿಗೆ ಹುಟ್ಟಿದ
ರು; ದಾವೀದನ ಕೈಯಿಂದಲೂ ಅವನ ಸೇವಕರ ಕೈಯಿಂದಲೂ
ಬಿದ್ದರು.

## ೨೧. ಸಂಧಿ.

೧ ಮತ್ತು ಸೈತಾನನು ಇಸ್ರಯೇಲಿಗೆ ವಿರೋಧವಾಗಿ ಎದ್ದು, ಇ
೨ ಸ್ರಯೇಲನ್ನು ಲೆಕ್ಕಿಸ ದಾವೀದನನ್ನು ಪ್ರೇರೇಪಿಸಿದನು. ಆದದರಿಂ
ದ ದಾವೀದನು ಯೊವಾಬನ ಸಂಗಡಲೂ ಜನರ ಪ್ರಧಾನರ ಸಂ
ಗಡಲೂ ನಾನು ಜನರ ಲೆಕ್ಕವನ್ನು ಶಿಳಿಯುವ ಹಾಗೆ, ನೀವು
ಹೋಗಿ, ಬೇರ್ಷೆಬವು ಮೊದಲು ಗೊಂಡು, ದಾನಿನ ಪರ್ಯಂತರ
ಇಸ್ರಯೇಲನ್ನು ಲೆಕ್ಕಿಸಿ, ಅವರ ಲೆಕ್ಕವನ್ನು ನನಗೆ ತಕ್ಕೊಂಡು
೩ ಬಾ, ಅಂದನು. ಅದಕ್ಕೆ ಯೊವಾಬನು, ಕರ್ತನು ತನ್ನ ಜನರ
ನ್ನು ಈಗ ಇರುವದಕ್ಕಿಂತ ನೂರಪಟ್ಟಾಗಿ ಮಾಡಲಿ; ಆದರೆ, ನನ್ನ
ಸ್ವಾಮಿಯಾದ ಅರಸನೇ, ಅವಕ್ಕೆಲ್ಲರು ನನ್ನ ಸ್ವಾಮಿಯ ಸೇವ
ಕರಲ್ಲವೋ! ನನ್ನ ಸ್ವಾಮಿ ಈ ಕಾರ್ಯವನ್ನು ವಿಚಾರಿಸುವದು
೪ ಯಾಕೆ! ಅವನು ಇಸ್ರಯೇಲಿನಲ್ಲಿ ಅಪರಾಧಕ್ಕೆ ಕಾರಣವಾಗು
ವದು ಯಾಕೆ! ಅಂದನು. ಆದರೆ ಅರಸನ ಮಾತು ಯೊವಾಬನ
ಮೇಲೆ ಬಲವಾಗಿತ್ತು; ಆಗ ಯೊವಾಬನು ಹೊರಟು, ಇಸ್ರಯೇ
ಲಿನ ಸಮಸ್ತ ದೇಶದ ಮೇಲೆ ಹೋಗಿ, ಯೆರೂಸಲೇಮಿಗೆ ತಿರಿಗಿ
೫ ಬಂದು, ದಾವೀದನಿಗೆ ಜನರ ಒಟ್ಟು ಲೆಕ್ಕವನ್ನು ಕೊಟ್ಟನು. ಕತ್ತಿ
ಯನ್ನು ಹಿಡಿಯುವ ಸಮಸ್ತ ಇಸ್ರಯೇಲ್ಯರು ಹನ್ನೊಂದು ಲಕ್ಷ
ಜನರಾಗಿದ್ದರು; ಕತ್ತಿಯನ್ನು ಹಿಡಿಯುವ ಯೆಹೂದ ಜನರು ನಾ
ಲ್ಕು ಲಕ್ಷದ ಎಪ್ಪತ್ತು ಸಾವಿರ ಜನರಾಗಿದ್ದರು. ಅದಕೆ ಲೇವ್ಯರ
ನ್ನೂ ಬೆನ್ಯಮಿನ್ಯರನ್ನೂ ಅವರಲ್ಲಿ ಎಣಿಸಲಿಲ್ಲ; ಯಾಕಂದರೆ
ಅರಸನ ಮಾತು ಯೊವಾಬನಿಗೆ ಅಸಹ್ಯಕರವಾಗಿತ್ತು.

೬ ಇದಲ್ಲದೆ ಈ ಕಾರ್ಯವು ದೇವರ ಸಮುಖದಲ್ಲಿ ಕೆಟ್ಟದ್ದಾದ
೭ ದರಿಂದ, ಅವನು ಇಸ್ರಯೇಲನ್ನು ಹೊಡೆದನು. ಆಗ ದಾವೀದ
ನು ದೇವರಿಗೆ, ನಾನು ಈ ಕಾರ್ಯ ಮಾಡಿದ್ದರಿಂದ, ಮಹಾ
ಪಾಪ ಮಾಡಿದ್ದೇನೆ; ಆದರೆ ನೀನು ದಯೆ ಮಾಡಿ, ನಿನ್ನ ಸೇವ
ಕನ ಅಕ್ರಮವನ್ನು ಪರಿಹರಿಸು; ಯಾಕಂದರೆ ನಾನು ಇದರಲ್ಲಿ
ಬುದ್ಧಿಹೀನವಾಗಿ ನಡೆದೆನು, ಅಂದನು.

೮ ಆಗ ಕರ್ತನು ದಾವೀದನ ದರ್ಶಿಯಾದ ಗಾದನಿಗೆ ಹೇಳಿದ್ದೇ
೯ ನಂದರೆ, ನೀನು ದಾವೀದನ ಬಳಿಗೆ ಹೋಗಿ, ಅವನ ಸಂಗಡ ಮಾ
ತಾಡಿ, ಕರ್ತನು ಹೀಗೆ ಹೇಳುತ್ತಾನೆ— ಮೂರು ಕಾರ್ಯಗಳ
ನ್ನು ನಿನ್ನ ಮುಂದೆ ಇಡುತ್ತೇನೆ; ನಾನು ನಿನಗೆ ಮಾಡುವ ಹಾಗೆ,
೧೦ ಅವುಗಳಲ್ಲಿ ಒಂದನ್ನು ಆರಿಸುಕೋ, ಎಂದು ಹೇಳು. ಹಾಗೆ
ಯೇ ಗಾದನು ದಾವೀದನ ಬಳಿಗೆ ಬಂದು, ಅವನಿಗೆ ಹೇಳಿದ್ದು—
ಕರ್ತನು ಹೀಗೆ ಹೇಳುತ್ತಾನೆ—ಮೂರು ವರುಷಗಳ ಬರವನ್ನಾ
ದರೂ, ಇಲ್ಲವೆ ನಿನ್ನ ಶತ್ರುಗಳ ಕತ್ತಿಯು ಹತ್ತಿ ಕೊಳ್ಳಲಾಗಿ,
೧೧ ಮೂರು ತಿಂಗಳು ನಿನ್ನ ವೈರಿಗಳ ಮುಂದೆ ನಾಶನ ಹೊಂದುವ
ದನ್ನಾದರೂ, ಇಲ್ಲವೆ ಕರ್ತನ ದೂತನು ಇಸ್ರಯೇಲಿನ ಸಮಸ್ತ
ಮೇರೆಗಳಲ್ಲಿಯೂ ದೇಶದಲ್ಲಿಯೂ ಕರ್ತನ ಕತ್ತಿ ಎಂಬುವ ಜಾ
೧೨ ಡ್ಯದಿಂದ ಕೆಡಿಸುವದನ್ನಾದರೂ ನಿನಗೆ ತಕ್ಕೋ. ಆದದರಿಂದ ನ
ನ್ನನ್ನು ಕಳುಹಿಸಿದವನಿಗೆ ನಾನು ಹೇಳ ಬೇಕಾದ ಪ್ರತ್ಯುತ್ತರ
೧೩ ವೇನು? ನೋಡಿಕೋ. ಆಗ ದಾವೀದನು ಗಾದನಿಗೆ, ನಾನು ಬ
ಹು ಇಕ್ಕಟ್ಟಿನಲ್ಲಿ ಇದ್ದೇನೆ. ಕರ್ತನ ಕೈಯಲ್ಲಿ ಬೀಳುವೆನಾಗಲಿ,
ಯಾಕಂದರೆ ಅವನ ಅಂತ್ಯಕರಣಗಳು ಬಹಳವಾಗಿರುವವು; ಆದ
ರೆ ಮನುಷ್ಯನ ಕೈಯಲ್ಲಿ ಬೀಳದೆ ಇರುವೆನಾಗಲಿ.

೧೪ ಹಾಗೆಯೇ ಕರ್ತನು ಇಸ್ರಯೇಲಿನ ಮೇಲೆ ಜಾಡ್ಯವನ್ನು ಕ
ಳುಹಿಸಿದನು; ಇಸ್ರಯೇಲಿನಲ್ಲಿ ಎಪ್ಪತ್ತು ಸಾವಿರ ಜನರು ಸತ್ತು
೧೫ ಹೋದರು. ಇದಲ್ಲದೆ ಅದನ್ನು ಕೆಡಿಸುವದಕ್ಕೆ, ದೇವರು ಯೆರೂ
ಸಲೇಮಿಗೆ ದೂತನನ್ನು ಕಳುಹಿಸಿದನು. ಅವನು ಕೆಡಿಸುತ್ತಿರುವಾ
ಗ, ಕರ್ತನು ನೋಡಿ, ಆ ಕೇಡಿಗೋಸ್ಕರ ಪಶ್ಚಾತ್ತಾಪ ಪಟ್ಟು
ಕೆಡಿಸುವ ದೂತನಿಗೆ, ಸಾಕು; ನಿನ್ನ ಕೈಯನ್ನು ಹಿಂದೆಗೆ, ಅಂದ
ನು. ಆದರೆ ಕರ್ತನ ದೂತನು ಯೆಬೂಸ್ಯನಾದ ಒರ್ನಾನನ ಕ
೧೬ ಣದ ಬಳಿಯಲ್ಲಿ ನಿಂತಿದ್ದನು. ಆಗ ದಾವೀದನು ತನ್ನ ಕಣ್ಣುಗ
ಳನ್ನೆತ್ತಿ, ಭೂಮಿಗೂ ಆಕಾಶಕ್ಕೂ ಮಧ್ಯದಲ್ಲಿ ನಿಂತಿರುವ ಕರ್ತ
ನ ದೂತನನ್ನು ಕಂಡನು; ಮತ್ತು ಅವನ ಕೈಯಲ್ಲಿ ಯೆರೂಸಲೇ
ಮಿನ ಮೇಲೆ ಚಾಚಿ ಇದ್ದ ಬೆಚ್ಚುಕತ್ತಿ ಇತ್ತು. ಆಗ ದಾವೀದನೂ
ಇಸ್ರಯೇಲಿನ ಹಿರಿಯರೂ ಗೋಣೀಪಟ್ಟಿಗಳಿಂದ ಮುಚ್ಚಿ ಕೊಂ
೧೭ ಡವರಾಗಿ, ಪೋಕೆ ಕೆಳಗಾಗಿ ಬಿದ್ದರು. ದಾವೀದನು ದೇವರಿಗೆ,
ಜನರನ್ನು ಲೆಕ್ಕ ಮಾಡ ಆಜ್ಞಾಪಿಸಿದವನು ನಾನಲ್ಲವೋ! ಮತ್ತು
ನಾನೇ ಪಾಪವನ್ನು ಮಾಡಿ, ಈ ಕೆಟ್ಟದ್ದನ್ನು ಮಾಡಿದ್ದೇನೆ. ಆ



ದರೆ ಕುರಿಗಳಾದ ಇವರು ಮಾಡಿದ್ದೇನು! ನನ್ನ ದೇವರಾದ ಕರ್ತ
ನೇ, ದಯೆ ಮಾಡು; ನಿನ್ನ ಕೈ ನನ್ನ ಮೇಲೆಯೂ ನನ್ನ ತಂದೆ
ಯ ಮನೆಯ ಮೇಲೆಯೂ ಇರಲಿ. ಆದರೆ ನಿನ್ನ ಜನರು ಬಾಧೆ
ಪಡುವ ಹಾಗೆ, ಅವರ ಮೇಲೆ ಬೇಡ, ಅಂದನು.

೧೮ ಆಗ ಕರ್ತನ ದೂತನು ಗಾದನ ಸಂಗಡ, ದಾವೀದನು ಹೋಗಿ
ಯೆಬೂಸ್ಯನಾದ ಒರ್ನಾನನ ಕಣದಲ್ಲಿ ಕರ್ತನಿಗೆ ಬಲಿಪೀಠವನ್ನು
೧೯ ಕಟ್ಟುವ ಹಾಗೆ ದಾವೀದನಿಗೆ ಹೇಳು, ಅಂದನು. ಗಾದನು ಕರ್ತನ
೨೦ ಹೆಸರಿನಲ್ಲಿ ಹೇಳಿದ ಮಾತಿನ ಪ್ರಕಾರ ದಾವೀದನು ಹೋದನು.
ಆದರೆ ಒರ್ನಾನನು ಗೋಧಿಯನ್ನು ತುಳಿಸುತ್ತಿರುವಾಗ, ಹಿಂದಕ್ಕೆ
ತಿರುಗಿ, ದೂತನನ್ನು ಕಂಡದ್ದರಿಂದ ಅವನೂ ಅವನ ಸಂಗಡ ಇ
೨೧ ದ್ದ ಅವನ ನಾಲ್ಕು ಮಂದಿ ಮಕ್ಕಳೂ ಬಚ್ಚಿಟ್ಟುಕೊಂಡಿದ್ದರು.
ದಾವೀದನು ಒರ್ನಾನನ ಬಳಿಗೆ ಬಂದಾಗ, ಅವನು ದೃಷ್ಟಿಸಿ,
ದಾವೀದನನ್ನು ಕಂಡು, ಕಣದಿಂದ ಹೊರಟು, ದಾವೀದನ ಮುಂ
೨೨ ದೆ ಪೋಕೆ ಕೆಳಗಾಗಿ ನೆಲಕ್ಕೆ ಅಡ್ಡ ಬಿದ್ದನು. ಆಗ ದಾವೀದನು
ಒರ್ನಾನನಿಗೆ, ಈ ಬಾಧೆ ಜನರನ್ನು ಬಿಟ್ಟು ಹೋಗುವ ಹಾಗೆ,
ನಾನು ಅದರಲ್ಲಿ ಕರ್ತನಿಗೆ ಬಲಿಪೀಠವನ್ನು ಕಟ್ಟಿಸುವದಕ್ಕೆ ಈ
ಕಣದ ಸ್ಥಳವನ್ನು ನನಗೆ ಕೊಡು; ಅದನ್ನು ಪೂರ್ಣ ಕ್ರಯಕ್ಕೆ
೨೩ ನನಗೆ ಕೊಡು, ಅಂದನು. ಒರ್ನಾನನು ದಾವೀದನಿಗೆ, ನಿನಗೆ ತ
ಕ್ಕೋ; ಅರಸನಾದ ನನ್ನ ಸ್ವಾಮಿ ತನ್ನ ದೃಷ್ಟಿಗೆ ಉತ್ತಮವಾದ
ದ್ದನ್ನು ಮಾಡಲಿ. ಇಗೋ, ಹೋಮಗಳಿಗೋಸ್ಕರ ಎತ್ತುಗಳ
ನ್ನೂ, ಕಟ್ಟಿಗೆಗಳಿಗೋಸ್ಕರ ಹಂಠಿಯ ಬಾತಿಮುಟ್ಟುಗಳನ್ನೂ,
ಕಾಣಿಕೆಗೋಸ್ಕರ ಗೋಧಿಯನ್ನೂ ಕೊಡುವೆನು; ಸಮಸ್ತವ
೨೪ ನ್ನು ಕೊಡುವೆನು, ಅಂದನು. ಆದರೆ ಅರಸನಾದ ದಾವೀದನು
ಒರ್ನಾನನಿಗೆ, ಹಾಗಲ್ಲ; ಅದನ್ನು ಪೂರ್ಣ ಕ್ರಯಕ್ಕೆ ಕೊಂಡು
ಕೊಳ್ಳುತ್ತೇನೆ; ಯಾಕಂದರೆ ಕರ್ತನಿಗೋಸ್ಕರ ನಿನ್ನದನ್ನು ನಾ
ನು ತಕ್ಕೊಳ್ಳೆನು, ಸುಮ್ಮನೆ ಬಂದ ಹೋಮಗಳನ್ನು ನಾನು ಅ
೨೫ ರ್ಪಿಸುವದಿಲ್ಲ. ದಾಗೆಯೇ ದಾವೀದನು ಒರ್ನಾನನಿಗೆ ಆ ಸ್ಥಳ
ಕ್ಕೋಸ್ಕರ ಅರು ನೂರು ಬೆಕೆಲ್ ತೂಕ ಭಂಗಾರ ಕೊಟ್ಟನು.
೨೬ ಮತ್ತು ದಾವೀದನು ಅಲ್ಲಿ ಕರ್ತನಿಗೆ ಬಲಿಪೀಠವನ್ನು ಕಟ್ಟಿಸಿ, ಅ
ದರ ಮೇಲೆ ಹೋಮಗಳನ್ನೂ ಸಮಾಧಾನದ ಬಲಿಗಳನ್ನೂ ಅ
ರ್ಪಿಸಿ, ಕರ್ತನನ್ನು ಕರೆದನು. ಅವನು ಆಕಾಶದಿಂದ ಹೋಮ
ಪೀಠದ ಮೇಲೆ ಅಗ್ನಿಯನ್ನು ಕಳುಹಿಸಿ, ಅವನಿಗೆ ಪ್ರತ್ಯುತ್ತರ
೨೭ ಕೊಟ್ಟನು. ಆಗ ಕರ್ತನು ದೂತನಿಗೆ ಹೇಳಿದ್ದರಿಂದ, ಅವನು ತ
ನ್ನ ಕತ್ತಿಯನ್ನು ಅದರ ಒರೆಯಲ್ಲಿ ತಿರಿಗಿ ಹಾಕಿದನು.

೨೮ ಕರ್ತನು ಯೆಬೂಸ್ಯನಾದ ಒರ್ನಾನನ ಕಣದಲ್ಲಿ ತನಗೆ ಪ್ರ
ತ್ಯುತ್ತರ ಕೊಟ್ಟನೆಂದು, ದಾವೀದನು ಕಂಡಾಗ, ಅವನು ಅಲ್ಲಿ ಬಲಿ
೨೯ ಗಳನ್ನು ಅರ್ಪಿಸಿದನು. ಅರಣ್ಯದಲ್ಲಿ ಮೋಶೆಯು ಮಾಡಿದ ಕ
ರ್ತನ ನಿವಾಸವೂ, ಹೋಮ ಪೀಠವೂ ಆ ಕಾಲದಲ್ಲಿ ಗಿಬ್ಯೋನಿ
೩೦ ನ ಮೇಲಿನಲ್ಲಿ ಇದ್ದವು. ಆದರೆ ದಾವೀದನು ದೇವರ ಹತ್ತರ ವಿಚಾ
ರಿಸ ಅದರ ಬಳಿಗೆ ಹೋಗಲಾರದೆ ಇದ್ದನು; ಯಾಕಂದರೆ ಅವನು
ಕರ್ತನ ದೂತನ ಕತ್ತಿಯ ನಿಮಿತ್ತ ಹೆದರಿದನು.

## ೨೨. ಸಂಧಿ.

೧ ಆಗ ದಾವೀದನು, ಕರ್ತನಾದ ದೇವರ ಮನೆ ಇದೇ; ಇಸ್ರಯೇ
ಲಿನ ಹೋಮ ಪೀಠವು ಇದೇ, ಅಂದನು.
೨ ಮತ್ತು ದಾವೀದನು ಇಸ್ರಯೇಲಿನ ದೇಶದಲ್ಲಿರುವ ಪರ ದೇಶ
ಸ್ಥರನ್ನು ಕೂಡಿಸ ಹೇಳಿ, ದೇವರ ಮನೆಯನ್ನು ಕಟ್ಟಿಸುವದಕ್ಕೆ,
ಕೆಡದ ಕಲ್ಲುಗಳನ್ನು ಕಡೆಯುವ ಹಾಗೆ, ಕುಶಿಗರನ್ನು ನೇಮಿಸಿದ
೩ ನು. ಇದಲ್ಲದೆ ದಾವೀದನು ಬಾಗಲುಗಳ ಕದಗಳಿಗೂ, ಜೋಡಿಸು
ವದಕ್ಕೂ, ಬೇಕಾದ ಮೊಳೆಗಳಿಗೋಸ್ಕರ ಹೆಚ್ಚಾದ ಕಬ್ಬಿಣವ
ನ್ನೂ, ತೂಗ ಕೂಡದ ಹೆಚ್ಚಾದ ತಾಂಬ್ರವನ್ನೂ ಸಿದ್ಧ ಮಾಡಿಸಿದ
೪ ನು. ಮತ್ತು ಲೆಕ್ಕವಿಲ್ಲದ ದೇವದಾರು ಮರಗಳನ್ನು ಸಿದ್ಧ ಮಾಡಿಸಿ
ದನು; ಯಾಕಂದರೆ ಚಿದೋನ್ಯರೂ ಜೋರಿಯರೂ ದಾವೀದನಿಗೆ
೫ ಹೆಚ್ಚಾಗಿ ದೇವದಾರು ಮರಗಳನ್ನು ತಂದರು. ಇದಲ್ಲದೆ ದಾವೀದ
ನು, ನನ್ನ ಮಗನಾದ ಸೊಲೊಮೋನನು ಹುಡುಗನಾಗಿಯೂ ಮೃ
ದುವಾದವನಾಗಿಯೂ ಇದ್ದಾನೆ; ಮತ್ತು ಕರ್ತನಿಗೆ ಕಟ್ಟ ಬೇಕಾ
ದ ಮನೆ ಸಮಸ್ತ ದೇಶಗಳಲ್ಲಿ ಕೀರ್ತಿಯಲ್ಲಿಯೂ ಸೌಂದರ್ಯದ
ಲ್ಲಿಯೂ ಅಧಿಕ ಘನವಾಗಿರ ಬೇಕು; ನಾನು ಅದಕ್ಕೋಸ್ಕರ
ಈಗ ಸಿದ್ಧ ಮಾಡುವೆನೆಂದು ಹೇಳಿದನು. ಆದದರಿಂದ ದಾವೀದನು
ಸಾಯುವದಕ್ಕಿಂತ ಮುಂಚೆ ಬಹಳವಾಗಿ ಸಿದ್ಧ ಮಾಡಿದನು.

೬ ಆಗ ತನ್ನ ಮಗನಾದ ಸೊಲೊಮೋನನನ್ನು ಕರೇ ಕಳುಹಿ
ಸಿ, ಇಸ್ರಯೇಲಿನ ದೇವರಾದ ಕರ್ತನಿಗೆ ಮನೆಯನ್ನು ಕಟ್ಟಿಸ ಅ
೭ ವನಿಗೆ ಆಜ್ಞಾಪಿಸಿದನು. ಮತ್ತು ದಾವೀದನು ಹೇಳಿದ್ದೇನಂದರೆ—
ನನ್ನ ಮಗನೇ, ನಾನಾದರೆ, ನನ್ನ ದೇವರಾದ ಕರ್ತನ ನಾಮಕ್ಕೆ
೮ ಮನೆಯನ್ನು ಕಟ್ಟಿಸ ಬೇಕೆಂದು, ನನ್ನ ಹೃದಯದಲ್ಲಿ ಇತ್ತು. ಆ
ದರೆ ಕರ್ತನಿಂದ ನನಗುಂಟಾದ ವಾಕ್ಯವೇನಂದರೆ—ನೀನು ಬಹು
ರಕ್ತವನ್ನು ಚೆಲ್ಲಿದಿ; ಮಹಾಯುದ್ಧಗಳನ್ನು ಮಾಡಿದಿ; ನೀನು ನ
ನ್ನ ಹೆಸರಿಗೆ ಮನೆಯನ್ನು ಕಟ್ಟಿಸ ಬೇಡ; ಯಾಕಂದರೆ ನೀನು ನ
ನ್ನ ಸಮುಖದಲ್ಲಿ ಭೂಮಿಯ ಮೇಲೆ ಬಹಳ ರಕ್ತವನ್ನು ಚೆಲ್ಲಿದಿ.
೯ ಇಗೋ, ವಿಶ್ರಾಂತಿಯುಳ್ಳ ಮನುಷ್ಯನಾಗಿರುವ ಒಬ್ಬ ಮಗನು
ನಿನಗೆ ಹುಟ್ಟುವನು; ಸುತ್ತಲಿರುವ ಅವನ ಸಮಸ್ತ ಶತ್ರುಗಳಿಂದ
ನಾನು ಅವನಿಗೆ ವಿಶ್ರಾಂತಿಯನ್ನು ಕೊಡುವೆನು. ಯಾಕಂದರೆ
ಅವನಿಗೆ ಸೊಲೊಮೋನನೆಂಬ ಹೆಸರಾಗುವದು; ಅವನ ದಿವಸಗ
ಳಲ್ಲಿ ನಾನು ಇಸ್ರಯೇಲಿಗೆ ಸಮಾಧಾನವನ್ನೂ ವಿಶ್ರಾಂತಿಯ
೧೦ ನ್ನೂ ಕೊಡುವೆನು. ಅವನು ನನ್ನ ನಾಮಕ್ಕೆ ಮನೆಯನ್ನು ಕಟ್ಟಿ
ಸುವನು; ಅವನು ನನ್ನ ಮಗನಾಗಿರುವನು, ನಾನು ಅವನಿಗೆ ತಂ
ದೆಯಾಗಿರುವೆನು; ಇಸ್ರಯೇಲಿನ ಮೇಲೆ ಅವನ ರಾಜ್ಯದ ಸಿಂಹಾ
೧೧ ಸನವನ್ನು ಯುಗ ಯುಗಾಂತರಕ್ಕೂ ಸ್ಥಿರ ಪಡಿಸುವೆನು. ಈಗ,
ನನ್ನ ಮಗನೇ, ಕರ್ತನು ನಿನ್ನನ್ನು ಕುರಿತು ಹೇಳಿದ ಪ್ರಕಾರ, ನೀ
ನು ಸಿದ್ಧಿಯನ್ನು ಹೊಂದುವ ಹಾಗೆಯೂ, ನೀನು ನಿನ್ನ ದೇವರಾ
ದ ಕರ್ತನ ಮನೆಯನ್ನು ಕಟ್ಟಿಸುವ ಹಾಗೆಯೂ, ಅವನು ನಿನ್ನ
೧೨ ಸಂಗಡ ಇರಲಿ. ಆದರೆ ಕರ್ತನು ನಿನಗೆ ಬುದ್ಧಿಯನ್ನೂ ಗ್ರಹಿಕೆ
ಯನ್ನೂ ಕೊಡಲಿ; ಇಸ್ರಯೇಲನ್ನು ಕುರಿತು ನಿನಗೆ ಆಜ್ಞಾಪಿಸ
ಲಿ; ನಿನ್ನ ದೇವರಾದ ಕರ್ತನ ನ್ಯಾಯಪ್ರಮಾಣವನ್ನು ನೀನು
೧೩ ಕೈ ಕೊಳ್ಳುವ ಹಾಗೆಯೇ. ಕರ್ತನು ಇಸ್ರಯೇಲನ್ನು ಕುರಿತು
ಮೋಶೆಗೆ ಆಜ್ಞಾಪಿಸಿದ ನೇಮಗಳನ್ನೂ ನ್ಯಾಯಗಳನ್ನೂ ಮಾ
ಡ ನೀನು ಜಾಗ್ರತೆಯಾಗಿದ್ದರೆ, ಆಗ ಸಿದ್ಧಿಯನ್ನು ಹೊಂದುವಿ.
ಬಲವಾಗಿರು, ಧೃಢವಾಗಿರು; ಭಯ ಪಡ ಬೇಡ, ಹೆದರ ಬೇಡ.
೧೪ ಇಗೋ, ನನ್ನ ದೀನ ಸ್ಥಿತಿಯಲ್ಲಿ ನಾನು ಕರ್ತನ ಮನೆಗೋ
ಸ್ಕರ ಒಂದು ಲಕ್ಷ ಭಂಗಾರದ ತಲಾಂತುಗಳನ್ನೂ, ಹತ್ತು ಲಕ್ಷ ಬೆ

ಳ್ಳಿಯೂ ತಲಾಂತುಗಳನ್ನೂ, ತೊಕವಿಲ್ಲದ ತಾಂಬ್ರವನ್ನೂ ಕಬ್ಬಿ
ಣವನ್ನೂ ಸಿದ್ಧ ಮಾಡಿದ್ದೇನೆ. ಅದು ಬಹಳವಾಯಿತು. ಹಾಗೆ
ಯೇ ಮರಗಳನ್ನೂ ಕಲ್ಲುಗಳನ್ನೂ ಸಿದ್ಧ ಮಾಡಿದ್ದೇನೆ. ನೀನು
೧೫ ಅವುಗಳಿಗೆ ಬೆಜ್ಜಾಗಿ ಕೇರಿಸ ಬಹುದು. ಇದಲ್ಲದೆ ನಿನ್ನ ಬಳಿಯ
ಲ್ಲಿ ಕೆಲಸದವರೂ ಕಾವಾಟಿಗರೂ, ಕಲ್ಲುಕುಟಿಗರೂ, ಬಡಿಗಿಯ
ವರೂ, ಸಮಸ್ತ ವಿಧ ಕೆಲಸಕ್ಕೆ ಪ್ರವೀಣರೂ ಅನೇಕ ಮಂದಿ ಇ
೧೬ ದ್ದಾರೆ. ಜೆನ್ನ, ಬೆಳ್ಳಿ, ತಾಂಬ್ರ, ಕಬ್ಬಿಣ ಲೆಖ್ಖವಿಲ್ಲದೆ ಇದೆ. ಎ
ದ್ದು, ಕೆಲಸ ಮಾಡು; ಕರ್ತನು ನಿನ್ನ ಸಂಗಡ ಇರಲಿ.

೧೭ ಇದಲ್ಲದೆ ದಾವೀದನು ತನ್ನ ಮಗನಾದ ಸೊಲೊಮೋನನಿಗೆ
ಸಹಾಯ ಕೊಡ ಇಸ್ರಯೇಲಿನ ಪ್ರಧಾನರಿಗೆ ಆಜ್ಞಾಪಿಸಿ ಹೇಳಿದ್ದೇ
೧೮ ನಂದರೆ—ನಿಮ್ಮ ದೇವರಾದ ಕರ್ತನು ನಿಮ್ಮ ಸಂಗಡ ಇಲ್ಲವೋ!
ಎಲ್ಲಾ ಕಡೆಯಲ್ಲಿ ನಿಮಗೆ ವಿಶ್ರಾಂತಿ ಕೊಟ್ಟಿದ್ದಾನಲ್ಲವೋ! ನಿಜ್ಜ
ಯವಾಗಿ ಆತನು ದೇಶ ನಿವಾಸಿಗಳನ್ನು ನನ್ನ ಕೈಯಲ್ಲಿ ಒಪ್ಪಿಸಿ
ದ್ದರಿಂದ, ದೇಶವು ಕರ್ತನ ಮುಂದೆಯೂ ತನ್ನ ಜನರ ಮುಂದೆ
೧೯ ಯೂ ಸ್ವಾಧೀನವಾಯಿತು. ನಿಮ್ಮ ದೇವರಾದ ಕರ್ತನನ್ನು
ಹುಡುಕ ನಿಮ್ಮ ಹೃದಯವನ್ನೂ ನಿಮ್ಮ ಪ್ರಾಣವನ್ನೂ ಒಪ್ಪಿ
ಸಿ, ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನೂ ದೇವರ ಪರಿಶುದ್ಧ
ಪಾತ್ರೆಗಳನ್ನೂ ಕರ್ತನ ನಾಮಕ್ಕೆ ಕಟ್ಟಿಸಲ್ಪಡುವ ಮನೆಯೊ
ಳಗೆ ತರುವ ಹಾಗೆ, ಎದ್ದು, ಕರ್ತನಾದ ದೇವರ ಪರಿಶುದ್ಧ ಸ್ಥಾನ
ವನ್ನು ಕಟ್ಟಿಸಿರಿ.

## ೨೩. ಸಂಧಿ.

೧ ದಾವೀದನು ಮುದುಕನಾಗಿಯೂ ದಿವಸಗಳು ತುಂಬಿದವನಾ
ಗಿಯೂ ಇರುವಾಗ, ತನ್ನ ಮಗನಾದ ಸೊಲೊಮೋನನನ್ನು ಇ
ಸ್ರಯೇಲಿನ ಮೇಲೆ ಅರಸನಾಗ ಮಾಡಿದನು.

೨ ಇದಲ್ಲದೆ ತಾನು ಇಸ್ರಯೇಲಿನ ಸಮಸ್ತ ಪ್ರಧಾನರನ್ನೂ,
3 ಯಾಜಕರನ್ನೂ, ಲೇವ್ಯರನ್ನೂ ಕೂಡಿ ಬರ ಮಾಡಿದನು. ಲೇ
ವ್ಯರು ಮೂವತ್ತು ವರುಷ ಪ್ರಾಯ ಮೊದಲುಗೊಂಡು ಲೆಖ್ಖಿಸ
ಲ್ಪಟ್ಟಿದ್ದರು. ಅವರ ಪುರುಷರ ಲೆಖ್ಖವು ತಲೆ ತಲೆಯ ಪ್ರಕಾರ
೪ ಮೂವತ್ತೆಂಟು ಸಾವಿರವಾಗಿತ್ತು. ಇವರಲ್ಲಿ ಇಪ್ಪತ್ತು ನಾಲ್ಕು
ಸಾವಿರ ಮಂದಿ ಕರ್ತನ ಮನೆಯ ಕೆಲಸವನ್ನು ನಡಿಸುವವರಾಗಿ
ದ್ದರು; ಆರು ಸಾವಿರ ಮಂದಿ ಪಾರುಪತ್ಯಗಾರರೂ ನ್ಯಾಯಾಧಿಪ
೫ತಿಗಳೂ ಆಗಿದ್ದರು. ಇದಲ್ಲದೆ ನಾಲ್ಕು ಸಾವಿರ ಮಂದಿ ದ್ವಾರಪಾ
ಲಕರಾಗಿದ್ದರು; ನಾಲ್ಕು ಸಾವಿರ ಮಂದಿ, ದಾವೀದನು ಸ್ತುತಿಸುವ
ದಕ್ಕೆ ಉಂಟು ಮಾಡಿದ ವಾದ್ಯಗಳಿಂದ, ಕರ್ತನನ್ನು ಸ್ತುತಿಸಿ
ದರು.

೬ ಮತ್ತು ದಾವೀದನು, ಗೆರ್ಶೋನನು, ಕೋಹತನು, ಮೆರಾರಿ
ಯು ಎಂಬ ಲೇವಿಯ ಮಕ್ಕಳಲ್ಲಿ ಅವರನ್ನು ಒಂತುಗಳಾಗಿ ವಿಭಾ
ಗಿಸಿದನು.

೭,೮ ಗೆರ್ಶೋನ್ಯರಲ್ಲಿ ಲಡಾನನು, ಶಿಮ್ಮಿನು. ಲಡಾನನ ಮಕ್ಕ
ಳು—ಶ್ರೇಷ್ಠನಾದ ಯೆಹಿಯೇಲನು, ಜೆತಾಮನು ಯೊವೇಲನು
೯ ಎಂಬ ಮೂರು ಮಂದಿಯು. ಶಿಮ್ಮಿನ ಮಕ್ಕಳು—ಶೆಲೊಮೀತನು,
ಹಜಿಯೇಲನು, ಹರಾನನು ಎಂಬ ಮೂರು ಮಂದಿಯು. ಇವರು
೧೦ ಲಡಾನನ ಪಿತೃಗಳಲ್ಲಿ ಶ್ರೇಷ್ಠರಾಗಿದ್ದರು. ಶಿಮ್ಮಿನ ಮಕ್ಕಳು—
೧೧ ಯಹಾತನು, ಜೀನನು, ಯೆವೂಷನು, ಬೆರೀಯನು. ಶಿಮ್ಮಿನ ಈ
ನಾಲ್ಕು ಮಂದಿ ಮಕ್ಕಳಲ್ಲಿ ಯಹಾತನು ಶ್ರೇಷ್ಠನು, ಜೀನನು ಎ
ರಡನೆಯವನಾಗಿದ್ದನು; ಆದರೆ ಯೆವೂಷನಿಗೂ ಬೇಯನಿಗೂ
ಬಹಳ ಮಂದಿ ಮಕ್ಕಳು ಇಲ್ಲದ್ದರಿಂದ, ಇವರು ತಮ್ಮ ತಂದೆಯ
ಮನೆಯಲ್ಲಿ ಬಂದೇ ಲೆಖ್ಖವಾಗಿ ಎಣಿಸಲ್ಪಟ್ಟಿದ್ದರು.

೧೨ ಕೋಹತನ ಮಕ್ಕಳು—ಅಮ್ರಾಮನು, ಇಚಾರನು, ಹೆಬ್ರೋ
೧೩ನನು, ಉಜ್ಜಿಯೇಲನು ಎಂಬ ಈ ನಾಲ್ಕು ಮಂದಿಯು. ಅಮ್ರಾ
ಮನ ಮಕ್ಕಳು—ಆರೋನನು ಮೋಶೆಯು; ಆರೋನನು ಯು
ಗ ಯುಗಾಂತರಕ್ಕೂ ಕರ್ತನ ಮುಂದೆ ಧೂಪ ಸುಡುವದಕ್ಕೂ,
ಅವನಿಗೆ ಸೇವೆ ಮಾಡುವದಕ್ಕೂ, ಅವನ ಹೆಸರನಲ್ಲಿ ಆಶೀರ್ವದಿ
ಸುವದಕ್ಕೂ, ತಾನೂ ತನ್ನ ಮಕ್ಕಳೂ ಯುಗ ಯುಗಾಂತರಕ್ಕ
ಳಿಗೂ ಮಹಾ ಪರಿಶುದ್ಧವಾದವುಗಳನ್ನು ಪರಿಶುದ್ಧ ಮಾಡುವದ
೧೪ ಕ್ಕೂ ಪ್ರತ್ಯೇಕಿಸಲ್ಪಟ್ಟನು. ದೇವರ ಮನುಷ್ಯನಾದ ಮೋಶೆ
ಯಾದರೆ, ಅವನ ಮಕ್ಕಳು ಲೇವಿಯ ಕುಲದಲ್ಲಿ ಲೆಖ್ಖಿಸಲ್ಪಟ್ಟಿದ್ದ
೧೫ರು. ಮೋಶೆಯ ಮಕ್ಕಳು—ಗೆರ್ಶೋಮನು, ಎಲಿಯೇಜರನು.
೧೬ ಗೆರ್ಶೋಮನ ಮಕ್ಕಳಲ್ಲಿ ಶೆಬುವೇಲನು ಶ್ರೇಷ್ಠನಾಗಿದ್ದನು. ಎಲಿ
ಯೇಜರನ ಮಕ್ಕಳು—ಶ್ರೇಷ್ಠನಾದ ರೆಹಬ್ಯನು. ಇವನ ಹೊ
ರ್ತಾಗಿ, ಎಲಿಯೇಜರನಿಗೆ ಬೇರೆ ಮಕ್ಕಳಿಲ್ಲ; ಆದರೆ ರೆಹಬ್ಯನ ಮ
೧೭ ಕ್ಕಳು ಬಹಳ ಮಂದಿ ಇದ್ದರು. ಇಚಾರನ ಮಕ್ಕಳಲ್ಲಿ ಶೆಲೊ
೧೮ ಮೀತನು ಶ್ರೇಷ್ಠನಾಗಿದ್ದನು. ಹೆಬ್ರೋನನ ಮಕ್ಕಳಲ್ಲಿ ಯೆರೀಯ
ನು ಶ್ರೇಷ್ಠನು, ಅಮರ್ಯನು ಎರಡನೆಯವನು, ಯೆಹಜಿಯೇಲ
೧೯ನು ಮೂರನೆಯವನು, ಯೆಕಮಾಮನು ನಾಲ್ಕನೆಯವನು. ಉ
ಜ್ಜಿಯೇಲನ ಮಕ್ಕಳಲ್ಲಿ ಮೀಕನು ಶ್ರೇಷ್ಠನು, ಯೆಶಾಯನು ಎರ
ಡನೆಯವನು.

೨೦ ಮೆರಾರಿಯ ಮಕ್ಕಳು—ಮಹ್ಲಿಯು, ಮೂಷಿಯು. ಮಹ್ಲಿಯ
೨೧ ಮಕ್ಕಳು—ಎಲಿಯೇಜರನು, ಕೀಷನು. ಮತ್ತು ಎಲಿಯೇಜರನು
ಸತ್ತನು. ಅವನಿಗೆ ಕುಮಾರರಿಲ್ಲ, ಕುಮಾರ್ತೆಗಳು ಮಾತ್ರ ಇ
ದ್ದರು; ಮತ್ತು ಅವರ ಸಹೋದರರಾದ ಕೀಷನ ಕುಮಾರರು ಅ
೨೨ ವರನ್ನು ತೆಗೆದು ಕೊಂಡರು. ಮೂಷಿಯ ಮಕ್ಕಳು—ಮಹ್ಲಿಯು,
ಏದ್ರನು, ಯೆರೆಮೋತನು, ಈ ಮೂರು ಮಂದಿ.

೨೪ ಇವರು ತಮ್ಮ ಪಿತೃಗಳ ವಂಶದ ಪ್ರಕಾರವಾಗಿ, ಲೇವಿಯ ಮ
ಕ್ಕಳಾಗಿದ್ದರು; ಇವರು ತಮ್ಮ ಹೆಸರುಗಳಿಂದಲೂ ತಮ್ಮ ತಲೆಗ
ಳಿಂದಲೂ ಎಣಿಸಲ್ಪಟ್ಟಿದ್ದ ತಮ್ಮ ಪಿತೃಗಳಲ್ಲಿ ಶ್ರೇಷ್ಠರಾಗಿದ್ದರು;
ಇವರು ಇಪ್ಪತ್ತು ವರುಷ ಪ್ರಾಯ ಮೊದಲುಗೊಂಡು ಕರ್ತನ ಮ
೨೫ನೆಯ ಸೇವೆಗೋಸ್ಕರ ಕೆಲಸ ಮಾಡಿದರು. ಯಾಕಂದರೆ ದಾವೀ
ದನು ಇಸ್ರಯೇಲಿನ ದೇವರಾದ ಕರ್ತನು, ಅವರು ಯುಗ ಯು
ಗಾಂತರಕ್ಕೂ ಇಸ್ರಯೇಲಿನಲ್ಲಿ ನಿವಾಸಿಸುವ ಹಾಗೆ, ತನ್ನ ಜನರು
೨೬ಗೆ ವಿಶ್ರಾಂತಿಯನ್ನು ಕೊಟ್ಟಿದ್ದಾನೆ, ಎಂಥೇಳಿ, ಲೇವ್ಯರನ್ನು ಕುರಿ
ತು, ಅವರು ಗುಡಾರವನ್ನೂ ಅದರ ಸೇವೆಗೋಸ್ಕರ ಅದರ ಪಾ
ತ್ರೆಗಳನ್ನೂ ಇನ್ನು ಮೇಲೆ ಹೊರ ಕೆಲಸವಿಲ್ಲವೆಂದು ಹೇಳಿದ್ದನು;
೨೭ ಯಾಕಂದರೆ ದಾವೀದನ ಕಡೇ ಮಾತುಗಳ ಪ್ರಕಾರ, ಲೇವ್ಯರು
ಇಪ್ಪತ್ತು ವರುಷ ಪ್ರಾಯ ಮೊದಲುಗೊಂಡು ಲೆಖ್ಖಿಸಲ್ಪಟ್ಟಿದ್ದರು.
೨೮ ಯಾಕಂದರೆ ಕರ್ತನ ಮನೆಯ ಸೇವೆಗೋಸ್ಕರ ಅಂಗಳಗಳಲ್ಲಿ
ಯೂ ಕೊಠಡಿಗಳಲ್ಲಿಯೂ ಸಮಸ್ತ ಪರಿಶುದ್ಧವಾದವುಗಳನ್ನು
೨೯ ಪರಿಶುದ್ಧ ಮಾಡುವದರಲ್ಲಿಯೂ ಕರ್ತನ ಮಂದಿರದ ಸೇವೆಯ
ಕಾರ್ಯದಲ್ಲಿರುವ ಸಮುಖದ ಕೊಟ್ಟಿಗೋಸ್ಕರವೂ, ಅಪ್ಪಣೆ



ಬಲಿಯ ನಯವಾದ ಹಿಟ್ಟಿಗೋಸ್ಕರವೂ, ಹುಳಿ ಇಲ್ಲದ ಹೋಳಿ
ಗೆಗಳಿಗೋಸ್ಕರವೂ, ಬಾಂಡ್ಲಿಗೆಯಲ್ಲಿ ಮಾಡಿದ್ದಕ್ಕೋಸ್ಕರವೂ,
ಕರಿದ್ದಕ್ಕೋಸ್ಕರವೂ, ಸಮಸ್ತ ವಿಧ ಅಳತೆಗೋಸ್ಕರವೂ ಆ
೩೦ ಕೋನನ ಮಕ್ಕಳಿಗೆ ಜಳಿಯಲ್ಲಿರ ಅವರಿಗೆ ನೇಮಕವಾಗಿತ್ತು. ಇದ
ಲ್ಲದೆ ಉದಯ ಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ನಿಂತು,
ಕರ್ತನನ್ನು ಕೊಂಡಾಡುವದಕ್ಕೂ ಕರ್ತನನ್ನು ಸ್ತುತಿಸುವದ
೩೧ ಕ್ಕೂ ಕರ್ತನ ಮುಂದೆ ನಿರಂತರವಾಗಿ ಅವರಿಗೆ ಆಜ್ಞಾಪಿಸಿದ ಕಟ್ಟ
ಳೆಯ ಪ್ರಕಾರವಾಗಿ, ಸಬ್ಬತು ದಿವಸಗಳಲ್ಲಿಯೂ, ಶುದ್ಧ ಪಾರ್ವ
ಗಳಲ್ಲಿಯೂ, ನೇಮಕವಾದ ಹಬ್ಬಗಳಲ್ಲಿಯೂ, ಲೆಖ್ಖದ ಪ್ರಕಾ
೩೨ ರ ಎಲ್ಲಾ ಹೋಮಗಳನ್ನು ಅರ್ಪಿಸುವದಕ್ಕೂ, ಕರ್ತನ ಮನೆ
ಯ ಸೇವೆಯಲ್ಲಿ ಸಭೆಯ ಗುಡಾರದ ಕಾವಲಿಯನ್ನೂ, ಪರಿಶುದ್ಧ
ಸ್ಥಾನದ ಕಾವಲಿಯನ್ನೂ ತಮ್ಮ ಸಹೋದರರಾದ ಆರೋನನ ಕು
ಮಾರರ ಆಜ್ಞೆಯನ್ನೂ ಕೈಕೊಳ್ಳುವದಕ್ಕೂ, ಅವರಿಗೆ ನೇಮಕ
ವಾಗಿತ್ತು.

## ೨೪. ಸಂಧಿ.

೧ ಆರೋನನ ಕುಮಾರರ ವಿಭಾಗಿಸಿದ ಒಂತುಗಳು. ಆರೋ
ನನ ಕುಮಾರರು—ನಾದಬನೂ, ಅಬೀಹುವೂ, ಎಲೆಯಾಜರ
೨ ನೂ, ಇಥಮಾರನೂ; ಆದರೆ ನಾದಬನೂ, ಅಬೀಹುವೂ ತಮ್ಮ
ತಂದೆಗಿಂತ ಮುಂಚೆ ಸತ್ತು, ಮಕ್ಕಳಿಲ್ಲದೆ ಇದ್ದದರಿಂದ, ಎಲೆಯಾ
3 ಜರನೂ ಇಥಮಾರನೂ ಯಾಜಕ ಸೇವೆ ಮಾಡಿದರು. ಆದ
ದರಿಂದ ದಾವೀದನು ಎಲೆಯಾಜರನ ಮಕ್ಕಳಲ್ಲಿ ಚದೋಕನಿಗೂ
ಇಥಮಾರನ ಮಕ್ಕಳಲ್ಲಿ ಅಹಿಮೇಲೆಕನಿಗೂ ಅವರ ಸೇವೆಯಲ್ಲಿ
ರುವ ವಿಚಾರಗಳ ಪ್ರಕಾರ ಒಂತುಗಳನ್ನು ನೇಮಿಸಿದನು.

೪ ಇಥಮಾರನ ಕುಮಾರರಿಗಿಂತ ಎಲೆಯಾಜರನ ಕುಮಾರರ
ಲ್ಲಿ ಶ್ರೇಷ್ಠರು ಹೆಚ್ಚಾಗಿದ್ದದರಿಂದ, ಅವರು ಹೀಗೆಯೇ ವಿಭಾಗಿಸ
ಲ್ಪಟ್ಟಿದ್ದರು—ಎಲೆಯಾಜರನ ಕುಮಾರರಲ್ಲಿ ತಮ್ಮ ಪಿತೃಗಳ
ಮನೆಯ ಪ್ರಕಾರ ಹದಿನಾರು ಮಂದಿ ಶ್ರೇಷ್ಠರು. ಇಥಮಾರ
ನ ಕುಮಾರರಲ್ಲಿ ತಮ್ಮ ಪಿತೃಗಳ ಮನೆಯ ಪ್ರಕಾರ ಎಂಟು
೫ ಮಂದಿ ಶ್ರೇಷ್ಠರು. ಇವರು ಅವರ ಸಂಗಡ ಕಲಶಿದ್ದು, ಚೀಟುಗ
ಳಿಂದ ವಿಭಾಗಿಸಲ್ಪಟ್ಟಿದ್ದರು; ಯಾಕಂದರೆ ಪರಿಶುದ್ಧ ಸ್ಥಾನದ ಪ್ರ
ಧಾನರೂ, ದೇವರ ಪ್ರಧಾನರೂ ಎಲೆಯಾಜರನ ಕುಮಾರರಿಂ
ದಲೂ ಇಥಮಾರನ ಕುಮಾರರಿಂದಲೂ ಇದ್ದರು.

೬ ಇದಲ್ಲದೆ ಲೇವ್ಯರಲ್ಲಿ ಒಬ್ಬನಾದಂಥ, ನೆಥಾನಿಯೇಲನ ಮಗ
ನಾದ ಶಮಾಯನವನಾದಂಥ ಕೆಮಾಯನು ಅರಸನ ಮುಂದೆ
ಯೂ ಪ್ರಧಾನರು, ಯಾಜಕನಾದ ಚದೋಕನು, ಅಬ್ಯತಾರನ
ಮಗನಾದ ಅಹಿಮೇಲೆಕನು, ಯಾಜಕರ ಲೇವ್ಯರ ಪಿತೃಗಳ
ಶ್ರೇಷ್ಠರು, ಇವರ ಮುಂದೆಯೂ ಅವರನ್ನು ಬರೆದನು. ಎಲೆ
ಯಾಜರನಿಗೋಸ್ಕರ ಒಂದು ಶ್ರೇಷ್ಠವಾದ ಮನೆ ತಕ್ಕೊಳ್ಳಲ್ಪಟ್ಟಿ
ತು; ಇಥಮಾರನಿಗೋಸ್ಕರ ಒಂದು ತಕ್ಕೊಳ್ಳಲ್ಪಟ್ಟಿತು.

೭ ಆದರೆ ಮೊದಲನೇ ಚೀಟು ಯೆಹೊಯರೀಬನಿಗೆ ಹೊರಟು
೮ ಬಂತು, ಎರಡನೇದು ಯೆದಾಯನಿಗೆ, ಮೂರನೇದು ಹರೀಮನಿಗೆ,
೯ ನಾಲ್ಕನೇದು ಸೆಯೋರಿಮನಿಗೆ, ಐದನೇದು ಮಲ್ಕೀಯನಿಗೆ, ಆರ
೧೦ ನೇದು ಮಿಯಮಿನನಿಗೆ, ಏಳನೇದು ಹಕೊಚನಿಗೆ, ಎಂಟನೇದು
೧೧ ಅಬೀಯನಿಗೆ, ಒಂಭತ್ತನೇದು ಯೆಶೂವನಿಗೆ, ಹತ್ತನೇದು ಶೆಕ
೧೨ ನ್ಯನಿಗೆ, ಹನ್ನೊಂದನೇದು ಎಲ್ಯಾಶೀಬನಿಗೆ, ಹನ್ನೆರಡನೇದು ಯ
೧೩ ಕೀಮನಿಗೆ, ಹದಿಮೂರನೇದು ಹುಪ್ಪನಿಗೆ, ಹದಿನಾಲ್ಕನೇದು ಯೆ
೧೪ ಬೆಬಾಬನಿಗೆ, ಹದಿನೈದನೇದು ಬಿಲ್ಗನಿಗೆ, ಹದಿನಾರನೇದು ಇಮ್ಮೇ
೧೫ರನಿಗೆ, ಹದಿನೇಳನೇದು ಹೆಜೀರನಿಗೆ, ಹದಿನೆಂಟನೇದು ಹಪಿಚ್ಚೇಚ
೧೬ನಿಗೆ, ಹತ್ತೊಂಭತ್ತನೇದು ಚೆತಹ್ಯನಿಗೆ, ಇಪ್ಪತ್ತನೇದು ಯೆಹೆ
೧೭ ಜ್ಕೇಲನಿಗೆ, ಇಪ್ಪತ್ತೊಂದನೇದು ಯಕೀನನಿಗೆ, ಇಪ್ಪತ್ತೆರಡನೇದು
೧೮ ಗಮೂಲನಿಗೆ, ಇಪ್ಪತ್ತುಮೂರನೇದು ದೆಲಾಯನಿಗೆ, ಇಪ್ಪತ್ತು
ನಾಲ್ಕನೇದು ಮಹಜ್ಯನಿಗೆ.

೧೯ ಇವೇ ಇಸ್ರಯೇಲಿನ ದೇವರಾದ ಕರ್ತನು ತಮ್ಮ ತಂದೆಯಾ
ದ ಆರೋನನಿಗೆ ಆಜ್ಞಾಪಿಸಿದ ಹಾಗೆ, ಅವನ ಕೈಕೆಳಗೆ ತಮ್ಮ
ತಮ್ಮ ಕಟ್ಟಳೆಗಳಿಗೆ ಪ್ರಕಾರ ಕರ್ತನ ಮನೆಯಲ್ಲಿ ಸೇವೆ ಮಾಡು
ವದಕ್ಕೆ ಬರ ಬೇಕಾದ ಅವರ ನೇಮಗಳು.

೨೦ ಲೇವಿಯ ಮಿಕ್ಕಾದ ಮಕ್ಕಳಲ್ಲಿ ಯಾರಂದರೆ, ಅಮ್ರಾಮನ
ಮಕ್ಕಳಲ್ಲಿ ಶುಬಯೇಲನು; ಶುಬಯೇಲನ ಮಕ್ಕಳಲ್ಲಿ ಯೆಹೇ
೨೧ ಯನು. ರೆಹಬ್ಯನನ್ನು ಕುರಿತು ಏನಂದರೆ—ರೆಹಬ್ಯನ ಮಕ್ಕಳ
೨೨ ಲ್ಲಿ ಇಷ್ಶೀಯನು ಶ್ರೇಷ್ಠನು. ಇಚಾರ್ಯರಲ್ಲಿ ಶೆಲೊಮೀತನು;
೨೩ ಶೆಲೊಮೀತನ ಮಕ್ಕಳಲ್ಲಿ ಯೆಹಾತನು. ಹೆಬ್ರೋನನ ಮಕ್ಕಳ
ಲ್ಲಿ ಯೆರೀಯನು ಮೊದಲನೆಯವನು, ಎರಡನೆಯವನು ಅಮ
ರ್ಯನು, ಮೂರನೆಯವನು ಯೆಹಜಿಯೇಲನು, ನಾಲ್ಕನೆಯವ
೨೪ ನು ಯೆಕಮಾಮನು. ಉಜ್ಜಿಯೇಲನ ಮಕ್ಕಳಲ್ಲಿ ಮೀಕನು;
೨೫ ಮೀಕನ ಮಕ್ಕಳಲ್ಲಿ ಶಮೀರನು. ಮೀಕನ ಸಹೋದರನು ಇ
ಷ್ಶೀಯನು; ಇಷ್ಶೀಯನ ಮಕ್ಕಳಲ್ಲಿ ಜೆಕರೀಯನು. ಮೆರಾರಿ
ಯ ಮಕ್ಕಳಲ್ಲಿ ಮಹ್ಲೀಯನು, ಮೂಷಿಯು; ಯಜೀಯನ ಮ
೨೬ ಗನು ಬೆನೋನನು. ಮೆರಾರಿಯ ಮಕ್ಕಳಲ್ಲಿ ಯಜೀಯನಿಗೆ ಬೆ
ನೋನನು, ಶೋಹಮನು, ಜಕ್ಕೂರನು, ಇಬ್ರೀಯನು ಎಂಬ
೨೭ ಮಕ್ಕಳಿದ್ದರು. ಮಹ್ಲಿಯನಿಗೆ ಎಲಿಯೇಜರನು ಹುಟ್ಟಿದನು; ಅ
೨೮ ವನಿಗೆ ಮಕ್ಕಳಿಲ್ಲ. ಕೀಷನನ್ನು ಕುರಿತು ಏನಂದರೆ—ಕೀಷನ
೩೦ ಮಗನು ಯೆರಹ್ಮೇಲನು. ಮೂಷಿಯ ಮಕ್ಕಳು ಮಹ್ಲಿಯು, ಏ
ದ್ರನು, ಯೆರೆಮೋತನು; ಇವರು ತಮ್ಮ ಪಿತೃಗಳ ಮನೆಯ ಪ್ರ
೩೧ ಕಾರ ಲೇವ್ಯರ ಕುಮಾರರಾಗಿದ್ದರು. ಇವರು ಹಾಗೆಯೇ ಅರಸ
ನಾದ ದಾವೀದನ ಸಮುಖದಲ್ಲಿಯೂ ಚದೋಕನು, ಅಹಿಮೇಲೆ
ಕನು, ಯಾಜಕರ ಮತ್ತು ಲೇವ್ಯರ ಪಿತೃಗಳ ಶ್ರೇಷ್ಠರು, ಇವ
ರ ಸಮುಖದಲ್ಲಿಯೂ ಆರೋನನ ಮಕ್ಕಳಾದ ತಮ್ಮ ಸಹೋ
ದರರಿಗೆದುರಾಗಿ ಶ್ರೇಷ್ಠರಾದ ಪಿತೃಗಳು ತಮ್ಮ ಚಿಕ್ಕ ಸಹೋ
ದರರಿಗೆದುರಾಗಿ, ಚೀಟುಗಳನ್ನು ಹಾಕಿದರು.

## ೨೫. ಸಂಧಿ.

೧ ಇದಲ್ಲದೆ ದಾವೀದನೂ ಸೈನ್ಯಾಧಿಪತಿಗಳೂ ಆಸಾಫ, ಹೆಮಾನ್
ಯೆದುತೂನ್, ಇವರ ಮಕ್ಕಳಲ್ಲಿ ಕಿನ್ನರಿಗಳಿಂದಲೂ, ವೀಣೆಗ
ಳಿಂದಲೂ, ತಾಳಗಳಿಂದಲೂ ಪ್ರವಾದಿಸ ತಕ್ಕವರನ್ನು ಸೇವೆಗೆ
ಪ್ರತ್ಯೇಕಿಸಿದರು. ಮತ್ತು ಕೆಲಸದವರ ಲೆಖ್ಖವು ಅವರ ಸೇವೆಯ
೨ ಪ್ರಕಾರವಾಗಿತ್ತು. ಅವರು ಯಾರಂದರೆ, ಆಸಾಫನ ಮಕ್ಕಳಲ್ಲಿ
ಜಕ್ಕೂರನು, ಯೋಸೆಫನು, ನೆತನ್ಯನು, ಅಸರೇಲನು; ಇವರು
ಆಸಾಫನ ಮಕ್ಕಳು; ಅರಸನ ಆಜ್ಞೆಯ ಪ್ರಕಾರ ಆಸಾಫನ ಕೈ
3 ಕೆಳಗೆ ಪ್ರವಾದಿಸಿದವರು. ಯೆದುತೂನನ ಮಕ್ಕಳಲ್ಲಿ ಗೆದಲ್ಯನು,

ಜೇರಿಯು, ಯೆಧಾಯನು, ಹಚ್ಚಯ್ಯನು, ಮತ್ತಿತ್ಯನು. ಈ ಆ
ರು ಮಂದಿಯು ಯೆದುತೂನನ ಮಕ್ಕಳು; ತಮ್ಮ ತಂದೆಯಾದ
ಯೆದುತೂನನ ಕೈಕೆಳಗೆ ಕರ್ತನನ್ನು ಕೊಂಡಾಡುವದಕ್ಕೂ ಸ್ತು
೪ತಿಸುವದಕ್ಕೂ ಕಿನ್ನರಿಗಳಿಂದ ಪ್ರವಾದಿಸಿದವರು. ಹೆಮಾನನ ಮ
ಕ್ಕಳಲ್ಲಿ ಬುಕ್ಕೀಯನು, ಮತ್ತನ್ಯನು, ಉಜ್ಜಿಯೇಲನು, ಕೆಬುಬೇಲ
ನು, ಯೆರಿಮೋತನು, ಹನನ್ಯನು, ಹನಾನಿಯು, ಎಲಿಯಾತನು,
ಗಿದ್ದಲ್ತಿಯು, ರೊಮಮ್ತಿಯೇಜರನು, ಯೊಶ್ಬೆಕಾಷನು, ಮ
೫ಲ್ಲೋತಿಯು, ಹೊಶೀರನು, ಮಹಜಿಯೋತನು; ಇವರೆಲ್ಲರು ದೇ
ವರ ಕಾರ್ಯಗಳಲ್ಲಿ ಕೊಂಬು ಊದುವ ಅರಸನ ದರ್ಶಿಯಾದ
ಹೆಮಾನನ ಕುಮಾರರು. ದೇವರು ಹೆಮಾನನಿಗೆ ಹದಿನಾಲ್ಕು
ಮಂದಿ ಕುಮಾರರನ್ನೂ ಮೂರು ಮಂದಿ ಕುಮಾರ್ತೆಗಳನ್ನೂ
೬ ಕೊಟ್ಟನು. ಇವರೆಲ್ಲರು ಅರಸನು ಆಸಾಫನಿಗೂ ಯೆದುತೂನ
ನಿಗೂ ಹೆಮಾನನಿಗೂ ಆಜ್ಞಾಪಿಸಿದ ಪ್ರಕಾರ ದೇವರ ಮಂದಿರದ
ಸೇವೆಗೋಸ್ಕರ, ಕರ್ತನ ಮನೆಯಲ್ಲಿ ತಾಳಗಳಿಂದಲೂ, ವೀಣೆಗ
ಳಿಂದಲೂ ಕಿನ್ನರಿಗಳಿಂದಲೂ ಹಾಡುವದಕ್ಕೆ, ತಮ್ಮ ತಂದೆಯ
೭ ಕೈಕೆಳಗೆ ಇದ್ದರು. ಹೀಗೆಯೇ ಅವರ ಲೆಖ್ಖವೂ ಕರ್ತನ ಹಾಡು
ಗಳಲ್ಲಿ ಬೋಧಿಸಲ್ಪಟ್ಟ ಸಮಸ್ತ ಪ್ರವೀಣರ ಲೆಖ್ಖ, ತಮ್ಮ ಸಹೋ
ದರರು ಸಹಿತವಾಗಿ, ಇನ್ನೂರ ಎಂಭತ್ತೆಂಟು ಮಂದಿಯಾಗಿತ್ತು.

೮ ಇದಲ್ಲದೆ ಹಿರಿಯರು ಕಿರಿಯರ ಹಾಗೆಯೂ, ಶಿಷ್ಯನು
ಬೋಧಕನ ಹಾಗೆಯೂ, ಒಂತಿಗೆದುರಾಗಿ ಒಂತಿನವರು ಚೀಟುಗ
೯ ಳನ್ನು ಹಾಕಿದರು. ಆಸಾಫನಿಗೋಸ್ಕರ ಮೊದಲನೇ ಚೀಟು
ಯೋಸೆಫನಿಗೆ ಹೊರಟು ಬಂತು; ಎರಡನೇದು ಗೆದಲ್ಯನಿಗೆ; ಅವ
ನೂ ಅವನ ಸಹೋದರರೂ ಅವನ ಮಕ್ಕಳೂ ಹನ್ನೆರಡು ಮಂ
೧೦ದಿ; ಮೂರನೇದು ಜಕ್ಕೂರನಿಗೆ; ಅವನ ಮಕ್ಕಳೂ ಅವನ ಸ
೧೧ ಹೋದರರೂ ಹನ್ನೆರಡು ಮಂದಿ; ನಾಲ್ಕನೇದು ಇಜ್ರಿಗೆ; ಅವನ
೧೨ ಮಕ್ಕಳೂ ಅವನ ಸಹೋದರರೂ ಹನ್ನೆರಡು ಮಂದಿ; ಐದನೇ
ದು ನೆತನ್ಯನಿಗೆ; ಅವನ ಮಕ್ಕಳೂ ಅವನ ಸಹೋದರರೂ ಹನ್ನೆ
೧೩ ರಡು ಮಂದಿ; ಆರನೇದು ಬುಕ್ಕಿಯನಿಗೆ; ಅವನ ಮಕ್ಕಳೂ ಅವ
೧೪ ನ ಸಹೋದರರೂ ಹನ್ನೆರಡು ಮಂದಿ; ಏಳನೇದು ಯೆಸರೇಲನಿಗೆ;
ಅವನ ಮಕ್ಕಳೂ ಅವನ ಸಹೋದರರೂ ಹನ್ನೆರಡು ಮಂದಿ;
೧೫ ಎಂಟನೇದು ಯೆಷಾಯನಿಗೆ; ಅವನ ಮಕ್ಕಳೂ ಅವನ ಸಹೋ
೧೬ ದರರೂ ಹನ್ನೆರಡು ಮಂದಿ; ಒಂಭತ್ತನೇದು ಮತ್ತನ್ಯನಿಗೆ; ಅವನ
೧೭ ಮಕ್ಕಳೂ ಅವನ ಸಹೋದರರೂ ಹನ್ನೆರಡು ಮಂದಿ; ಹತ್ತನೇ
ದು ಶಿಮ್ಮಿಗೆ; ಅವನ ಮಕ್ಕಳೂ ಅವನ ಸಹೋದರರೂ ಹನ್ನೆರ
೧೮ ಡು ಮಂದಿ; ಹನ್ನೊಂದನೇದು ಅಜರೇಲನಿಗೆ; ಅವನ ಮಕ್ಕಳೂ
೧೯ ಅವನ ಸಹೋದರರೂ ಹನ್ನೆರಡು ಮಂದಿ; ಹನ್ನೆರಡನೇದು ಹಷ
ಬ್ಯನಿಗೆ; ಅವನ ಮಕ್ಕಳೂ ಅವನ ಸಹೋದರರೂ ಹನ್ನೆರಡು
೨೦ ಮಂದಿ, ಹದಿಮೂರನೇದು ಶುಬಯೇಲನಿಗೆ; ಅವನ ಮಕ್ಕಳೂ
೨೧ ಅವನ ಸಹೋದರರೂ ಹನ್ನೆರಡು ಮಂದಿ; ಹದಿನಾಲ್ಕನೇದು ಮ
ತ್ತಿತ್ಯನಿಗೆ; ಅವನ ಮಕ್ಕಳೂ ಅವನ ಸಹೋದರರೂ ಹನ್ನೆರಡು
೨೨ ಮಂದಿ; ಹದಿನೈದನೇದು ಯೆರಿಮೋತನಿಗೆ; ಅವನ ಮಕ್ಕಳೂ ಅ
೨೩ವನ ಸಹೋದರರೂ ಹನ್ನೆರಡು ಮಂದಿ; ಹದಿನಾರನೇದು ಹನನ್ಯ
ನಿಗೆ; ಅವನ ಮಕ್ಕಳೂ ಅವನ ಸಹೋದರರೂ ಹನ್ನೆರಡು ಮಂ
೨೪ದಿ; ಹದಿನೇಳನೇದು ಯೊಶ್ಬೆಕಾಷನಿಗೆ; ಅವನ ಮಕ್ಕಳೂ ಅವ
೨೫ನ ಸಹೋದರರೂ ಹನ್ನೆರಡು ಮಂದಿ; ಹದಿನೆಂಟನೇದು ಹನಾನಿ
ಗೆ; ಅವನ ಮಕ್ಕಳೂ ಅವನ ಸಹೋದರರೂ ಹನ್ನೆರಡು ಮಂದಿ;
೨೬ ಹತ್ತೊಂಭತ್ತನೇದು ಮಲ್ಲೋತಿಗೆ, ಅವನ ಮಕ್ಕಳೂ ಅವನ ಸ
೨೭ ಹೋದರರು ಹನ್ನೆರಡು ಮಂದಿ; ಇಪ್ಪತ್ತನೇದು ಎಲಿಯಾತನಿಗೆ,
ಅವನ ಮಕ್ಕಳೂ ಅವನ ಸಹೋದರರೂ ಹನ್ನೆರಡು ಮಂದಿ;
೨೮ ಇಪ್ಪತ್ತೊಂದನೇದು ಹೊತೀರನಿಗೆ; ಅವನ ಮಕ್ಕಳೂ ಅವನ ಸ
೨೯ ಹೋದರರೂ ಹನ್ನೆರಡು ಮಂದಿ; ಇಪ್ಪತ್ತೆರಡನೇದು ಗಿದ್ದಲ್ತಿಗೆ;
೩೦ ಅವನ ಮಕ್ಕಳೂ ಅವನ ಸಹೋದರರೂ ಹನ್ನೆರಡು ಮಂದಿ, ಇ
ಪ್ಪತ್ತು ಮೂರನೇದು ಮಹಜಿಯೋತನಿಗೆ; ಅವನ ಮಕ್ಕಳೂ ಅ
೩೧ವನ ಸಹೋದರರೂ ಹನ್ನೆರಡು ಮಂದಿ; ಇಪ್ಪತ್ತು ನಾಲ್ಕನೇದು
ರೊಮಮ್ತಿಯೇಜರನಿಗೆ; ಅವನ ಮಕ್ಕಳೂ ಅವನ ಸಹೋದರ
ರೂ ಹನ್ನೆರಡು ಮಂದಿ.

## ೨೬. ಸಂಧಿ.

೧ ದ್ವಾರಪಾಲಕರ ಒಂತುಗಳನ್ನು ಕುರಿತು ಏನಂದರೆ—ಕೊರ
ಹೀಯರೊಳಗೆ ಆಸಾಫನ ಮಕ್ಕಳಲ್ಲಿ ಒಬ್ಬನಾಗಿರುವ ಕೋರೆ
೨ ಯ ಮಗನಾದ ಮೆಷೆಲೆಮ್ಯನು. ಮೆಷೆಲೆಮ್ಯನ ಕುಮಾರರು—
ಜೊಚ್ಚರ ಮಗನು ಜೆಕರೀಯನು, ಎರಡನೆಯವನು ಯೆದೀಯ
ಯೇಲನು, ಮೂರನೆಯವನು ಜೆಬದ್ಯನು, ನಾಲ್ಕನೆಯವನು
ಯತ್ನಿಯೇಲನು, ಐದನೆಯವನು ಎಲಾಮನು, ಆರನೆಯವನು
೩ ಯೆಹೊಹನಾನನು, ಏಳನೆಯವನು ಎಲ್ಯೋವೆನಾಯನು. ಇದ
೪ ಲ್ಲದೆ ಒಬೆದೆದೋಮನ ಕುಮಾರರು—ಜೊಚ್ಚರ ಮಗನು ಶೆ
ಮಾಯನು, ಎರಡನೆಯವನು ಯೆಹೊಜಬಾದನು, ಮೂರನೆಯ
ವನು ಯೊವಾಹನು, ನಾಲ್ಕನೆಯವನು ಸಕಾರನು, ಐದನೆಯವ
೫ ನು ನೆಥಾನಿಯೇಲನು, ಆರನೆಯವನು ಅಮ್ಮಿಯೇಲನು, ಏಳನೆ
ಯವನು ಇಸ್ಸಕಾರನು, ಎಂಟನೆಯವನು ಪುಲ್ಲೆತಾಯನು.
೬ ಯಾಕಂದರೆ ದೇವರು ಅವನನ್ನು ಆಶೀರ್ವದಿಸಿದನು. ಇದಲ್ಲದೆ
ತನ್ನ ಮಗನಾದ ಶೆಮಾಯನಿಗೆ ತಮ್ಮ ತಂದೆಯ ಮನೆಯಲ್ಲಿ
ಆಳುವ ಮಕ್ಕಳು ಹುಟ್ಟಿದರು; ಯಾಕಂದರೆ ಅವರು ಪರಾಕ್ರಮ
೭ ಶಾಲಿಗಳಾಗಿದ್ದರು. ಶೆಮಾಯನ ಮಕ್ಕಳು ಯಾರಂದರೆ—ಒ
ತ್ನಿಯು, ರೆಫಯೇಲನು, ಒಬೇದನು, ಎಲ್ಜಬಾದನು; ಇವರ ಸ
ಹೋದರರಾದ ಪರಾಕ್ರಮವುಳ್ಳ ಎಲೀಹುವು, ಸೆಮಕ್ಯನು. ಇ
೮ವರೆಲ್ಲರು ಒಬೆದೆದೋಮನ ಕುಮಾರರು; ಇವರೂ, ತಮ್ಮ ಮಕ್ಕ
ಳೂ, ತಮ್ಮ ಸಹೋದರರೂ ಸೇವೆಗೆ ಶಕ್ತಿಯುಳ್ಳ ಸ್ಥಿರವಂತ
ರು; ಒಬೆದೆದೋಮನವರು ಅರುವತ್ತೆರಡು ಮಂದಿಯಾಗಿದ್ದರು.
೯ ಮೆಷೆಲೆಮ್ಯನಿಗೂ ಬಲವುಳ್ಳ ಕುಮಾರರೂ, ಸಹೋದರರೂ
೧೦ ಹದಿನೆಂಟು ಮಂದಿಯಾಗಿದ್ದರು. ಇದಲ್ಲದೆ ಮೆರಾರಿಯ ಮಕ್ಕ
ಳಲ್ಲಿರುವ ಹೋಸನಿಗೆ ಮಕ್ಕಳಿದ್ದರು; ಶ್ರೇಷ್ಠನಾದವನು ಶಿಮ್ರಿ
ಯು; ಅವನು ಜೊಚ್ಚರ ಮಗನಲ್ಲ, ಆದರೆ ಅವನ ತಂದೆ ಅವನ
೧೧ನ್ನು ಶ್ರೇಷ್ಠನಾಗ ಮಾಡಿದನು; ಎರಡನೆಯವನು ಹಿಲ್ಕೀಯನು,
ಮೂರನೆಯವನು ಟೆಬಲ್ಯನು, ನಾಲ್ಕನೆಯವನು ಜೆಕರೀಯನು;
ಹೋಸನ ಸಮಸ್ತ ಕುಮಾರರೂ ಹದಿಮೂರು ಮಂದಿಯಾ
ಗಿದ್ದರು.
೧೨ ಇವರಲ್ಲಿ ದ್ವಾರಪಾಲಕರ ಒಂತುಗಳು ಕರ್ತನ ಮನೆಯಲ್ಲಿ
ಸೇವಿಸುವದಕ್ಕೆ ಒಂತು ಒಂತಿಗೆದುರಾಗಿ ಶ್ರೇಷ್ಠರಲ್ಲಿ ವಿಭಾಗಿಸಲ್ಪ
೧೩ ಟ್ಟಿದ್ದವು. ಅವರು ಕಿರಿಯರು ಹಿರಿಯರ ಹಾಗೆ, ತಮ್ಮ ಪಿತೃಗಳ



ಮನೆಯ ಪ್ರಕಾರ, ಬಾಗಲು ಬಾಗಲಿಗೋಸ್ಕರ ಚೀಟುಗಳನ್ನು
೧೪ ಹಾಕಿದರು. ಮೂರ್ಗಲ ಪೌರ್ವವಾದ ಚೀಟು ಶೆಲೆಮ್ಯನಿಗೆ ಬಿತ್ತು.
ಮತ್ತು ಅವನ ಮಗನಾದ ಬುದ್ಧಿಯುಳ್ಳ ಯೋಚನೆ ಕರ್ತನಾಗಿ
ರುವ ಜೆಕರೀಯನಿಗೋಸ್ಕರ ಚೀಟುಗಳನ್ನು ಹಾಕಿದರು; ಅವನ
೧೫ ಚೀಟು ಉತ್ತರ ಪೌರ್ವವಾಗಿ ಹೊರಟು ಬಂತು. ಒಬೆದೆದೋ
ಮನಿಗೆ ದಕ್ಷಿಣ ಪೌರ್ವವಾಗಿ ಬಂತು. ಅವನ ಕುಮಾರರಿಗೆ ಅಸು
೧೬ಪ್ಪಿಂ ಎಂಬ ಮನೆ ಬಂತು. ಶುಪ್ಪಿಮನಿಗೂ ಹೋಸನಿಗೂ ಪಶ್ಚಿ
ಮವಾಗಿರುವ ಶಲ್ಲೆಹತು ಎಂಬ ಬಾಗಲು ಬಂತು. ಏರಿ ಹೋಗುವ
ರಾಜ ಮಾರ್ಗದ ಬಳಿಯಲ್ಲಿ ಒಂದಕ್ಕೊಂದು ಎದುರಾಗಿ ಒಂತುಗ
೧೭ ಳಿದ್ದವು. ಮೂರ್ಗಲ ಪೌರ್ವವಾಗಿ ಆರು ಮಂದಿ ಲೇವ್ಯರಿದ್ದರು. ಉ
ತ್ತರ ಪೌರ್ವವಾಗಿ ದಿನಕ್ಕೆ ನಾಲ್ಕು ಮಂದಿಯೂ ಅಸುಪ್ಪಿಮ
೧೮ನ ಬಳಿಯಲ್ಲಿ ಇಬ್ಬರಿಬ್ಬರಾಗಿಯೂ, ಪಶ್ಚಿಮ ಪೌರ್ವವಾದ
ಪಾರ್ಬಾರಿಗೆ ಹೋಗುವ ರಾಜ ಮಾರ್ಗದಲ್ಲಿ ನಾಲ್ಕು ಮಂದಿ
೧೯ಯೂ ಪಾರ್ಬಾರಿನ ಬಳಿಯಲ್ಲಿ ಇಬ್ಬರೂ ಇದ್ದರು. ಇವು ಕೋ
ಕೆಯ ಮಕ್ಕಳಲ್ಲಿಯೂ ಮೆರಾರಿಯ ಮಕ್ಕಳಲ್ಲಿಯೂ ವಿಭಾಗಿ
ಸಿದ ದ್ವಾರಪಾಲಕರ ಒಂತುಗಳು.

೨೦ ಇದಲ್ಲದೆ ಲೇವ್ಯರಲ್ಲಿ ಅಹೀಯನು ದೇವರ ಮನೆಯ ಬೊಕ್ಕ
ಸದ ಮೇಲೆಯೂ ಪರಿಶುದ್ಧವಾದವುಗಳ ಸೊಕ್ಕಸಗಳ ಮೇಲೆ
೨೧ಯೂ ಅಧಿಕಾರಿಯಾಗಿದ್ದನು. ಲಾದನನ ಕುಮಾರರು—ಗೆ
ರ್ಶೋನ್ಯನಾದ ಲಾದನನ ಮಕ್ಕಳು ಶ್ರೇಷ್ಠರಾದ ಪಿತೃಗಳಾಗಿ
ದ್ದರು. ಈ ಗೆರ್ಶೋನ್ಯನಾದ ಲಾದನನ ಮಗನು ಯೆಹಿಯೇಲ
೨೨ನು. ಯೆಹಿಯೇಲನ ಮಕ್ಕಳು—ಜೆತಾಮನು, ಅವನ ಸಹೋ
ದರನಾದ ಯೊವೇಲನು; ಇವರು ಕರ್ತನ ಮನೆಯ ಬೊಕ್ಕಸಗ
೨೩ಳ ಮೇಲೆ ಇದ್ದರು. ಅಮ್ರಾಮ್ಯರಲ್ಲಿಯೂ, ಇಚಾರ್ಯರಲ್ಲಿ
ಯೂ, ಹೆಬ್ರೋನ್ಯರಲ್ಲಿಯೂ, ಉಜ್ಜಿಯೇಲ್ಯರಲ್ಲಿಯೂ ಕೆಲವ
೨೪ರು ಸಹ. ಮತ್ತು ಮೋಶೆಯ ಮಗನಾದ ಗೆರ್ಶೋನನ ಮಗ
೨೫ನಾದ ಶೆಬುವೇಲನು ಬೊಕ್ಕಸಗಳ ಮೇಲೆ ಶ್ರೇಷ್ಠನಾಗಿದ್ದನು. ಇ
ವನ ಸಹೋದರರು—ಎಲಿಯೇಜರನ ಮಗನು ರೆಹಬ್ಯನು, ಇವ
ನ ಮಗನು ಯೆಷಾಯನು, ಇವನ ಮಗನು ಯೋರಮನು, ಇ
೨೬ವನ ಮಗನು ಜಿಕ್ರಿಯು, ಇವನ ಮಗನು ಶೆಲೊಮಿತನು. ಈ ಶೆ
ಲೊಮಿತನೂ ಅವನ ಸಹೋದರರೂ, ಅರಸನಾದ ದಾವೀದನೂ
ಶ್ರೇಷ್ಠರಾದ ಪಿತೃಗಳೂ ಸೈನ್ಯಾಧಿಪತಿಗಳಾದ ಸಹಸ್ರಗಳ ಮೇ
ಲೆಯೂ ಶತಗಳ ಮೇಲೆಯೂ ಅಧಿಪತಿಗಳಾದವರೂ ಪರಿಶುದ್ಧ
ಮಾಡಿದ ಪರಿಶುದ್ಧವಾದವುಗಳ ಬೊಕ್ಕಸಗಳ ಮೇಲೆ ಇದ್ದರು.
೨೭ ಅವರು ಕರ್ತನ ಮನೆಯನ್ನು ಬಲಪಡಿಸುವದಕ್ಕೆ, ಯುದ್ಧಗ
ಳಿಂದಲೂ ಕೊಳ್ಳೆಯಿಂದಲೂ ಸಂಪಾದಿಸಿದವುಗಳನ್ನೂ ಪರಿಶುದ್ಧ
೨೮ ಮಾಡಿದರು. ಇದಲ್ಲದೆ ಪ್ರವಾದಿಯಾದ ಸಮುವೇಲನೂ, ಕೀಷನ
ಮಗನಾದ ಸೌಲನೂ, ನೇರನ ಮಗನಾದ ಅಬ್ನೇರನೂ, ಚೆ
ರೂಯಳ ಮಗನಾದ ಯೊವಾಬನೂ ಪರಿಶುದ್ಧ ಮಾಡಿದ್ದೆಲ್ಲ
ವೂ, ಮತ್ತು ಯಾರು ಪರಿಶುದ್ಧ ಮಾಡಿದ್ದರೋ, ಅಲ್ಲೆಲ್ಲವೂ
ಶೆಲೊಮಿತನ ಕೈ ಕೆಳಗೂ ಅವನ ಸಹೋದರರ ಕೈ ಕೆಳಗೂ
ಇತ್ತು.
೨೯ ಇಚಾರ್ಯರಲ್ಲಿ ಕೆನನ್ಯನೂ, ಅವನ ಮಕ್ಕಳೂ ಪಾರುಪ
ತ್ಯಗಾರರಿಗೋಸ್ಕರವೂ ನ್ಯಾಯಾಧಿಪತಿಗಳಿಗೋಸ್ಕರವೂ ಇ
ಸ್ರಯೇಲಿನ ಮೇಲೆ ಹೊರಗಿನ ಕಾರ್ಯಗಳನ್ನು ನೋಡ ಇಟ್ಟಲ್ಪ
೩೦ ಟ್ಟಿದ್ದರು. ಹೆಬ್ರೋನ್ಯರಲ್ಲಿ ಬಲವುಳ್ಳವರಾದ ಹದಬ್ಯನೂ ಅವ
ನ ಸಹೋದರರೂ ಕರ್ತನ ಸಮಸ್ತ ಕಾರ್ಯಗಳಲ್ಲಿಯೂ ಅರ
ಸನ ಸೇವೆಯಲ್ಲಿಯೂ ಸಾವಿರದ ಏಳುನೂರು ಮಂದಿ ಪಟ್ಟಿಮವಾ
೩೧ಗಿ ಯೊರ್ದನಿನ ಈಚೆಯಲ್ಲಿ ಇಸ್ರಯೇಲ್ಯರೊಳಗೆ ಅಧಿಪತಿಗ
ಳಾಗಿದ್ದರು. ಹೆಬ್ರೋನ್ಯರಲ್ಲಿ ಯೆರೀಯೇಲನು, ತನ್ನ ಪಿತೃಗಳ
ಸಂತತಿಗಳ ಪ್ರಕಾರ, ಹೆಬ್ರೋನ್ಯರಲ್ಲಿ ಶ್ರೇಷ್ಠನಾಗಿದ್ದನು. ಇವ
ರು ದಾವೀದನ ಆಳಿಕೆಯ ನಾಲ್ವತ್ತನೇ ವರುಷದಲ್ಲಿ ಹುಡುಕಲ್ಪ
ಟ್ಟಿದ್ದರು; ಆಗ ಗಿಲ್ಯಾದಿನ ಯಾಜೆರನಲ್ಲಿ ಅವರೊಳಗೆ ಬಲವು
೩೨ಳ್ಳ ಪರಾಕ್ರಮಶಾಲಿಗಳು ಶಿಕ್ಕಿದರು. ಇದಲ್ಲದೆ ಬಲವುಳ್ಳವರಾದ
ಯೆರೀಯನ ಸಹೋದರರು ಎರಡು ಸಾವಿರದ ಏಳು ನೂರು ಮಂ
ದಿ ಶ್ರೇಷ್ಠರಾದ ಪಿತೃಗಳಾಗಿದ್ದರು. ಅರಸನಾದ ದಾವೀದನು ಇ
ವರನ್ನು ದೇವರ ಸಮಸ್ತ ಕಾರ್ಯಗಳ ನಿಮಿತ್ತವಾಗಿಯೂ, ಅ
ರಸುಗಳ ಕಾರ್ಯಗಳ ನಿಮಿತ್ತವಾಗಿಯೂ, ರೂಬೆನ್ಯರ ಮೇಲೆ
ಯೂ, ಗಾದಿಯರ ಮೇಲೆಯೂ, ಮನಸ್ಸೇಯ ಅರ್ಧಕುಲದ
ಮೇಲೆಯೂ ಅಧಿಪತಿಗಳಾಗ ಮಾಡಿದನು.

## ೨೭. ಸಂಧಿ.

೧ ಅದಕೆ ಇಸ್ರಯೇಲ ಮಕ್ಕಳು ತಮ್ಮ ಲೆಖ್ಖದ ಪ್ರಕಾರವಾಗಿ
ಹೀಗೆಯೇ ಇದ್ದರು; ಹ್ಯಾಗಂದರೆ ಶ್ರೇಷ್ಠರಾದ ಪಿತೃಗಳು ಸಹ
ಸ್ರಗಳಿಗೂ ಶತಗಳಿಗೂ ಅಧಿಪತಿಗಳೂ, ವರುಷದ ಎಲ್ಲಾ ತಿಂಗ
ಳುಗಳಲ್ಲಿ ಪ್ರತಿ ತಿಂಗಳು ಒಳಗೆ ಹೋಗಿ ಬರುವ ಒಂತುಗಳ ಕಾ
ರ್ಯಗಳಲ್ಲಿ ಅರಸನನ್ನು ಸೇವಿಸಿದ ಅವರ ಪಾರುಪತ್ಯಗಾರರೂ
ಪ್ರತಿ ಒಂತಿಗೆ ಇಪ್ಪತ್ತು ನಾಲ್ಕು ಸಾವಿರ ಮಂದಿಯಾಗಿದ್ದರು.

೨ ಮೊದಲನೇ ತಿಂಗಳಿಗೋಸ್ಕರ ಮೊದಲನೇ ಒಂತಿನ ಮೇಲೆ ಜ
ಬ್ದಿಯೇಲನ ಮಗನಾದ ಯೆಷಬಾಮನು; ಅವನ ಒಂತಿನಲ್ಲಿ ಇಪ್ಪ
3 ತ್ತು ನಾಲ್ಕು ಸಾವಿರ ಜನರು. ಮೊದಲನೇ ತಿಂಗಳಿನ ಸೈನ್ಯದ
ಸಮಸ್ತ ಅಧಿಪತಿಗಳಲ್ಲಿದ್ದ ಶ್ರೇಷ್ಠನಾದವನು ಚೇರಚನ ಮಕ್ಕಳ
೪ ಲ್ಲಿ ಒಬ್ಬನಾಗಿದ್ದನು. ಎರಡನೇ ತಿಂಗಳಿನ ಒಂತಿನ ಮೇಲೆ ಅಹೋ
ಹ್ಯನಾದ ದೊದಾಯಿಯು; ಅವನ ಒಂತಿನಲ್ಲಿ ಮಿಕ್ಲೋತನು
ನಾಯಕನಾಗಿದ್ದನು; ಅವನ ಒಂತಿನಲ್ಲಿ ಇಪ್ಪತ್ತು ನಾಲ್ಕು ಸಾವಿ
೫ರ ಜನರು. ಮೂರನೇ ತಿಂಗಳಿನ ಸೈನ್ಯದ ಮೂರನೇ ಅಧಿಪತಿ
ಯು ಶ್ರೇಷ್ಠನಾಗಿರುವ ಯೆಹೊಯದಾವನ ಮಗನಾದ ಬೆನಾ
ಯನು; ಅವನ ಒಂತಿನಲ್ಲಿ ಇಪ್ಪತ್ತು ನಾಲ್ಕು ಸಾವಿರ ಜನವು.
೬ ಈ ಬೆನಾಯನು ಮೂವತ್ತು ಮಂದಿಯಲ್ಲಿ ಪರಾಕ್ರಮಶಾಲಿ
ಯಾದವನಾಗಿ, ಮೂವತ್ತು ಮಂದಿಯ ಮೇಲೆ ಶ್ರೇಷ್ಠನಾಗಿದ್ದ
೭ ನು; ಅವನ ಒಂತಿನಲ್ಲಿ ಅವನ ಮಗನಾದ ಅಮ್ಮಿಜಾಬದನು. ನಾ
ಲ್ಕನೇ ತಿಂಗಳಿನ ನಾಲ್ಕನೆಯವನು ಯೊವಾಬನ ತಮ್ಮನಾದ ಅ
ಸಹೇಲನು; ಅವನ ತರುವಾಯ ಅವನ ಮಗನಾದ ಜೆಬದ್ಯನು;
೮ ಅವನ ಒಂತಿನಲ್ಲಿ ಇಪ್ಪತ್ತು ನಾಲ್ಕು ಸಾವಿರ ಜನರು. ಐದನೇ ತಿಂ
ಗಳಿನ ಐದನೇ ಅಧಿಪತಿಯು ಇಜ್ರಾಹನಾದ ಶಮ್ಹೂತನು; ಅವನ
ಒಂತಿನಲ್ಲಿ ಇಪ್ಪತ್ತು ನಾಲ್ಕು ಸಾವಿರ ಜನರು. ಆರನೇ ತಿಂಗಳಿನ
ಆರನೆಯವನು ತೆಕೋವಿಯನಾಗಿರುವ ಇಕ್ಕೇಷನ ಮಗನಾದ
ಈರನು; ಅವನ ಒಂತಿನಲ್ಲಿ ಇಪ್ಪತ್ತು ನಾಲ್ಕು ಸಾವಿರ ಜನರು.
೧೦ ಏಳನೇ ತಿಂಗಳಿನ ಏಳನೇಯವನು ಎಫ್ರಯಿಮನ ಮಕ್ಕಳಲ್ಲಿ ಒ
ಬ್ಬನಾಗಿರುವ ಪೆಲೋನ್ಯನಾದ ಹೆಲೇಚನು; ಅವನ ಒಂತಿನಲ್ಲಿ ಇ

೧೧ ಪ್ಪತ್ತುನಾಲ್ಕು ಸಾವಿರ ಜನರು. ಎಂಟನೇ ತಿಂಗಳಿನ ಎಂಟನೆಯ
ವನು ಜರ್ಹಿಯರಲ್ಲಿ ಒಬ್ಬನಾಗಿರುವ ಹುಷಾತ್ಯನಾದ ಸಿಬ್ಬೆಕಾ
ಯಿಯು; ಅವನ ಒಂತಿನಲ್ಲಿ ಇಪ್ಪತ್ತು ನಾಲ್ಕು ಸಾವಿರ ಜನರು.
೧೨ ಒಂಭತ್ತನೇ ತಿಂಗಳಿನ ಒಂಭತ್ತನೆಯವನು ಬೆನ್ಯಮಿನ್ಯರಲ್ಲಿ ಒಬ್ಬ
ನಾಗಿರುವ ಅಣತೋತ್ಯನಾದ ಅಬ್ಯೇಜರನು; ಅವನ ಒಂತಿನಲ್ಲಿ
೧೩ ಇಪ್ಪತ್ತು ನಾಲ್ಕು ಸಾವಿರ ಜನರು. ಹತ್ತನೇ ತಿಂಗಳಿನ ಹತ್ತನೆ
ಯವನು ಜರ್ಹಿಯರಲ್ಲಿ ಒಬ್ಬನಾಗಿರುವ ನೆಟೋಫಥವನಾದ ಮ
ಹ್ರಾಯಿಯು; ಅವನ ಒಂತಿನಲ್ಲಿ ಇಪ್ಪತ್ತು ನಾಲ್ಕು ಸಾವಿರ ಜನರು.
೧೪ ಹನ್ನೊಂದನೇ ತಿಂಗಳಿನ ಹನ್ನೊಂದನೆಯವನು ಎಫ್ರಯಿಮನ
ಮಕ್ಕಳಲ್ಲಿ ಒಬ್ಬನಾಗಿರುವ ಪಿರಥೋನಿಯನಾದ ಬೆನಾಯನು;
೧೫ ಅವನ ಒಂತಿನಲ್ಲಿ ಇಪ್ಪತ್ತು ನಾಲ್ಕು ಸಾವಿರ ಜನರು. ಹನ್ನೆರಡ
ನೇ ತಿಂಗಳಿನ ಹನ್ನೆರಡನೆಯವನು ಒಟ್ನಿಯೇಲನ ವಂಶಸ್ಥನಾಗಿ
ರುವ ನೆಟೋಫಥವನಾದ ಹೆಲ್ದಾಯಿಯು; ಅವನ ಒಂತಿನಲ್ಲಿ ಇ
ಪ್ಪತ್ತು ನಾಲ್ಕು ಸಾವಿರ ಜನರು.
೧೬ ಮತ್ತು ಇಸ್ರಯೇಲಿನ ಕುಲಗಳ ಮೇಲೆ ಇರುವವರು ಯಾ
ರಂದರೆ, ರೂಬೆನ್ಯರ ನಾಯಕನು ಜಿಕ್ರಿಯ ಮಗನಾದ ಎಲಿಯೇ
೧೭ ಜರನು. ಸಿಮೆಯೋನ್ಯರಿಗೆ ಮಾಕನ ಮಗನಾದ ಶೆಫಟ್ಯನು. ಲೇ
ವ್ಯರಿಗೆ ಕೆಮುವೇಲನ ಮಗನಾದ ಹಷಬ್ಯನು. ಆರೋನ್ಯರಿಗೆ ಚ
ದೋಕನು; ಯೆಹೂದನ ಕುಲಕ್ಕೆ ದಾವೀದನ ಸಹೋದರರಲ್ಲಿ ಒ
೧೮ ಬ್ಬನಾಗಿರುವ ಎಲೀಹುವು; ಇಸ್ಸಕಾರನ ಕುಲಕ್ಕೆ ಮಿಕಯೇಲನ
ಮಗನಾದ ಒಮ್ರಿಯು; ಜೆಬುಲೋನನ ಕುಲಕ್ಕೆ ಒಬದ್ಯನ ಮಗ
ನಾದ ಇಷ್ಮಾಯನು; ನೆಫ್ತಾಲಿಯ ಕುಲಕ್ಕೆ ಅಜ್ರಿಯೇಲನ ಮಗ
೧೯ ನಾದ ಯೆರಿಮೋತನು; ಎಫ್ರಯಿಮನ ಮಕ್ಕಳಿಗೆ ಅಜಜ್ಯನ
ಮಗನಾದ ಹೊಷೇಯನು; ಮನಸ್ಸೆಯ ಅರ್ಧ ಕುಲಕ್ಕೆ ಪೆ
೨೦ ದಾಯನ ಮಗನಾದ ಯೊವೇಲನು. ಗಿಲ್ಯಾದಿನಲ್ಲಿರುವ ಮನಸ್ಸೆ
ಯ ಅರ್ಧ ಕುಲಕ್ಕೆ ಜೆಕರಿಯನ ಮಗನಾದ ಇದ್ದೋನು. ಬೆ
ನ್ಯಮಿನನ ಕುಲಕ್ಕೆ ಅಬ್ನೇರನ ಮಗನಾದ ಯಸಿಯೇಲನು;
೨೧ ದಾನನ ಕುಲಕ್ಕೆ ಯೆರೊಹಾಮನ ಮಗನಾದ ಅಜರೇಲನು. ಇ
ವರೇ ಇಸ್ರಯೇಲಿನ ಕುಲಗಳ ಪ್ರಧಾನರು.
೨೩ ಆದರೆ ದಾವೀದನು ಇಪ್ಪತ್ತು ವರುಷಕ್ಕೊಳಗಾಗಿ ಇದ್ದವರ
ಲೆಖ್ಖ ತಕ್ಕೊಳ್ಳಲಿಲ್ಲ. ಯಾಕಂದರೆ ಇಸ್ರಯೇಲನು ಆಕಾಶದ
ನಕ್ಷತ್ರಗಳ ಹಾಗೆ ಹೆಚ್ಚಾಗ ಮಾಡುವೆನೆಂದು, ಕರ್ತನು ಹೇಳಿದ್ದ
೨೪ ನು. ಚೆರೂಯಳ ಮಗನಾದ ಯೊವಾಬನು ಎಣಿಸ ಆರಂಭಿಸಿ
ದನು. ಆದರೆ ಇಸ್ರಯೇಲಿಗೆ ವಿರೋಧವಾಗಿ ದೇವರ ಕೋಪ್ರವು
ಬಂದದರಿಂದ, ಅವನು ಶೀರಿಸಲಿಲ್ಲ. ಆ ಲೆಖ್ಖವು ಅರಸನಾದ ದಾ
ವೀದನ ದಿನಚರ್ಯೆಗಳ ಪುಸ್ತಕದಲ್ಲಿ ಸೇರಲಿಲ್ಲ.
೨೫ ಅರಸನ ಬೊಕ್ಕಸಗಳ ಮೇಲೆ ಅದಿಯೇಲನ ಮಗನಾದ ಅ
ಜ್ಮಾವೆತನು. ಹೊಲಗಳಲ್ಲಿಯೂ, ಪಟ್ಟಣಗಳಲ್ಲಿಯೂ, ಗ್ರಾಮಗ
ಳಲ್ಲಿಯೂ, ಗಡೀಸ್ಥಳಗಳಲ್ಲಿಯೂ ಇದ್ದ ಉಗ್ರಾಣಗಳ ಮೇಲೆ
೨೬ ಉಜ್ಜೀಯನ ಮಗನಾದ ಯೆಹೊನತಾನನು. ಹೊಲದಲ್ಲಿ ನೆಲವ
ನ್ನು ಹಸನು ಮಾಡುವ ಕೆಲಸದ ಮೇಲೆ ಕೆಲೂಬನ ಮಗನಾದ ಎ
೨೭ ಜ್ರಿಯು. ದ್ರಾಕ್ಷೇ ತೋಟಗಳ ಮೇಲೆ ರಮಾತ್ಯನಾದ ಶಿಮ್ಮನು.
ಆರೆಗೋಸ್ಕರ ದ್ರಾಕ್ಷೇ ತೋಟಗಳ ಫಲದ ಮೇಲೆ ಶಿಫ್ಮಿಯನಾದ
೨೮ ಜಬ್ದಿಯು. ತಗ್ಗಿನಲ್ಲಿರುವ ಇಪ್ಪೇ ಗಿಡಗಳ ಮೇಲೆಯೂ, ಹಿಪ್ಪಲಿ
ಗಿಡಗಳ ಮೇಲೆಯೂ, ಗೆದೇರ್ಯನಾದ ಬಾಲ್ಹಾನನು; ಎಣ್ಣೆ
೨೯ ಯ ಉಗ್ರಾಣಗಳ ಮೇಲೆ ಯೊವಾಷನು. ಶಕೋನಿನಲ್ಲಿ ಮೇ
ಯಿಸುವ ದನಗಳ ಮೇಲೆ ಶಕೋನಿಯನಾದ ಶಿಟ್ರಾಯಿಯು. ತ
ಗ್ಗುಗಳಲ್ಲಿರುವ ದನಗಳ ಮೇಲೆ ಅಡ್ಲಾಯ ಮಗನಾದ ಶಫಾಟ
೩೦ ನು. ಒಟೆಗಳ ಮೇಲೆ ಇರುವವನು ಇಷ್ಮಾಯೇಲನಾದ ಒಬೀಲ
ನು. ಕತ್ತೆಗಳ ಮೇಲೆ ಇರುವವನು ಮೆರೊನೋತಿನವನಾದ ಯೆ
೩೧ ಥೇಯನು. ಕುರಿ ಮಂದೆಗಳ ಮೇಲೆ ಇರುವವನು ಹಗ್ರಿಯನಾದ
ಯೆಜೀಜನು. ಇವಕೆಲ್ಲರು ಅರಸನಾದ ದಾವೀದನ ಸ್ಥಿತಿಯ ಮೇ
ಲೆ ಪ್ರಧಾನರಾಗಿದ್ದರು.
೩೨ ಇದಲ್ಲದೆ ದಾವೀದನ ಚಿಕ್ಕಪ್ಪನಾದ ಯೊನತಾನನು ಗ್ರಹಿಕೆಯು
ಳ್ಳವನಾಗಿ, ಯೋಚನೆ ಕರ್ತನೂ ರಾಯಸದವನೂ ಆಗಿದ್ದನು.
ಹಕ್ಮೋನಾದ ಯೆಹಿಯೇಲನು ಅರಸನ ಮಕ್ಕಳ ಸಂಗಡ ಇದ್ದ
೩೩ ನು. ಅರಸನ ಯೋಚನೆಗೆ ಕರ್ತನು ಅಹಿತೋಫೆಲನು ಅರಸನ ಸ್ನೇ
ಹಿತನು ಅರ್ಕಿಯನಾದ ಹೂಷಾಯಿಯು. ಅಹಿತೋಫೆಲನ ತರು
೩೪ ವಾಯ ಬೆನಾಯನ ಮಗನಾದ ಯೆಹೋಯದಾವನೂ ಅಬ್ಯಾ
ತಾರನೂ. ಅರಸನ ಸೈನ್ಯದ ಅಧಿಪತಿಯು ಯೊವಾಬನು.

## ೨೯. ಸಂಧಿ.

೧ ಮತ್ತು ದಾವೀದನು ಇಸ್ರಯೇಲಿನ ಸಮಸ್ತ ಪ್ರಧಾನರಾದ ಕು
ಲಗಳ ಪ್ರಧಾನರನೂ, ಒಂತು ಒಂತಾಗಿ ಅರಸನನು ಸೇವಿಸಿದ
ಸಭೆಗಳ ಪ್ರಧಾನರನೂ, ಸಹಸ್ರಾಧಿಪತಿಗಳನೂ, ಶತಾಧಿಪತಿ
ಗಳನೂ, ಅರಸನ ಸ್ಥಿತಿಯ ಮೇಲೆಯೂ ಅವನ ಮಕ್ಕಳ ಸ್ಥಿತಿ
ಗತಿಗಳ ಮೇಲೆಯೂ ಇರುವ ಪ್ರಧಾನರನೂ, ಸಪ್ಪಂಸಕರನೂ,
ಪರಾಕ್ರಮಶಾಲಿಗಳನೂ, ಶೂರರನೂ ಯೆರೂಸಲೇಮಿಗೆ ಕೂ
ಡಿ ಬರ ಮಾಡಿದನು.
೨ ಆಗ ಅರಸನಾದ ದಾವೀದನು ಎದ್ದು, ನಿಂತು, ಹೇಳಿದ್ದೇನಂದ
ರೆ—ನನ್ನ ಸಹೋದರರೇ, ನನ್ನ ಜನರೇ, ನನ್ನ ಮಾತು ಕೇಳಿರಿ;
ಕರ್ತನ ಒಡಂಬಡಿಕೆಯ ಪೆಟ್ಟಿಗೆಯ ನಿಮಿತ್ತವಾಗಿಯೂ, ನಮ್ಮ
ದೇವರ ಪಾದಪೀಠದ ನಿಮಿತ್ತವಾಗಿಯೂ, ಖಾಯಂತಿಯಾದ ಮ
ನೆಯನ್ನು ನಾನು ಕಟ್ಟಿಸ ಮನಸ್ಸಾಗಿದ್ದು, ಕಟ್ಟುವಿಕೆಯ ನಿಮಿತ್ತ
ಸಿದ್ಧ ಮಾಡಿದೆನು. ಆದರೆ ದೇವರು ನನಗೆ, ನೀನು ನನ್ನ ಹೆಸರಿ
೩ ಗೆ ಮನೆಯನ್ನು ಕಟ್ಟ ಬೇಡ; ಯಾಕಂದರೆ ನೀನು ಯುದ್ಧದ ಮ
ನುಷ್ಯನಾಗಿದ್ದೀ; ರಕ್ತವನ್ನು ಚೆಲ್ಲಿದಿ, ಅಂದನು. ಆದರೆ ಇಸ್ರ
೪ ಯೇಲಿನ ಕರ್ತನಾದ ದೇವರು, ಎಂದೆಂದಿಗೂ ಇಸ್ರಯೇಲಿನ ಮೇ
ಲೆ ಅರಸನಾಗಿರ ನನ್ನ ತಂದೆಯ ಮನೆಯ ಸಮಸ್ತರಿಂದ ನನ್ನ
ನ್ನು ಆದು ಕೊಂಡನು. ಯಾಕಂದರೆ, ಅವನು ನಾಯಕನಾಗಿರ,
ಯೆಹೂದನನ್ನೂ, ಯೆಹೂದನ ಮನೆಯಲ್ಲಿ ನನ್ನ ತಂದೆಯ
ಮನೆಯನ್ನೂ ಆದು ಕೊಂಡು, ನನ್ನ ತಂದೆಯ ಮಕ್ಕಳಲ್ಲಿ ನ
ನ್ನನ್ನು ಸಮಸ್ತ ಇಸ್ರಯೇಲಿನ ಮೇಲೆ ಅರಸನಾಗ ಮಾಡ ಚಿ
೫ ತ್ತವುಳ್ಳವನಾಗಿದ್ದನು. ಮತ್ತು ಕರ್ತನು ನನಗೆ ಅನೇಕ ಮಕ್ಕಳ
ನ್ನು ಕೊಟ್ಟಿರುವಾಗ, ನನ್ನ ಸಮಸ್ತ ಮಕ್ಕಳಲ್ಲಿ ಇಸ್ರಯೇಲಿನ
ಮೇಲಾಗಿ ಕರ್ತನ ರಾಜ್ಯದ ಸಿಂಹಾಸನದ ಮೇಲೆ ಕುಳಿತು ಕೊ
ಳ್ಳುವದಕ್ಕೆ, ನನ್ನ ಮಗನಾದ ಸೊಲೊಮೋನನನ್ನು ಆದು
೬ ಕೊಂಡನು. ಅವನು ನನ್ನ ಸಂಗಡ, ನಿನ್ನ ಮಗನಾದ ಸೊಲೊ
ಮೋನನು ತಾನೇ ನನ್ನ ಮನೆಯನ್ನೂ ನನ್ನ ಅಂಗಳಗಳನ್ನೂ
ಕಟ್ಟಿಸುವನು; ಯಾಕಂದರೆ ಅವನನ್ನು ನನಗೆ ಮಗನಾಗಿ ಆದು



೭ ಕೊಂಡೆನು, ಮತ್ತು ನಾನು ಅವನಿಗೆ ತಂದೆಯಾಗಿರುವೆನು. ಇ
ದಲ್ಲದೆ ಈ ಹೊತ್ತಿನ ಹಾಗೆ ನನ್ನ ಆಜ್ಞೆಗಳನ್ನೂ, ನ್ಯಾಯಗ
ಳನ್ನೂ, ಅವನು ನಡಿಸ ದೃಢವಾಗಿದ್ದರೆ, ಅವನ ರಾಜ್ಯವನ್ನು
೮ ಯುಗ ಯುಗಾಂತರಕ್ಕೂ ಸ್ಥಿರ ಪಡಿಸುವೆನು, ಅಂದನು. ಆದ
ದರಿಂದ, ನೀವು ಈ ಉತ್ತಮವಾದ ದೇಶವನ್ನು ಸ್ವತಂತ್ರಿಸಿ
ಕೊಂಡು, ಅದನ್ನು ನಿರಂತರದಲ್ಲಿ ನಿಮ್ಮ ತರುವಾಯ ಇರುವ ನಿ
ಮ್ಮ ಮಕ್ಕಳಿಗೆ ಬಾಧ್ಯತೆಯಾಗಿ ಕೊಡುವ ಹಾಗೆ, ಕರ್ತನ ಕೂ
ಟವಾದ ಸಮಸ್ತ ಇಸ್ರಯೇಲಿನ ಸಮುಖದಲ್ಲಿಯೂ, ನಮ್ಮ ದೇ
ವರ ಕಣ್ಣಿಕೆಯಲ್ಲಿಯೂ, ನಿಮ್ಮ ದೇವರಾದ ಕರ್ತನ ಆಜ್ಞೆಗಳ
ನ್ನೆಲ್ಲಾ ಹುಡುಕಿ ಕೈಕೊಳ್ಳಿರಿ.
೯ ಇದಲ್ಲದೆ ನನ್ನ ಮಗನಾದ ಸೊಲೊಮೋನನೇ, ನೀನು ನಿನ್ನ
ತಂದೆಯ ದೇವರನ್ನು ಶಿಳ್ಳಿರು, ಅವನನ್ನು ಪೂರ್ಣ ಹೃದಯ
ದಿಂದಲೂ, ಪೂರ್ಣ ಪ್ರಾಣದಿಂದಲೂ ಸೇವಿಸು. ಯಾಕಂದರೆ,
ಕರ್ತನು ಸಕಲ ಹೃದಯಗಳನ್ನು ಶೋಧಿಸಿ, ಯೋಚನೆಗಳ
ಕಲ್ಪನೆಯನ್ನೆಲ್ಲಾ ಶಿಳ್ಳಿದಿದ್ದಾನೆ. ನೀನು ಅವನನ್ನು ಹುಡುಕಿದರೆ,
ಅವನು ನಿನಗೆ ಸಿಕ್ಕುವನು; ನೀನು ಅವನನ್ನು ಬಿಟ್ಟು ಬಿಟ್ಟರೆ, ಅ
೧೦ ವನು ನಿನ್ನನ್ನು ಎಂದೆಂದಿಗೂ ಕೈ ಬಿಡುವನು. ಆದದರಿಂದ ಜಾ
ಗ್ರತೆಯಾಗಿರು; ಯಾಕಂದರೆ, ಕರ್ತನು ಪರಿಶುದ್ಧ ಸ್ಥಾನಕ್ಕೋಸ್ಕ
ರ ಮನೆಯನ್ನು ಕಟ್ಟಿಸುವದಕ್ಕೆ ನಿನ್ನನ್ನು ಆದು ಕೊಂಡಿದ್ದಾ
ನೆ; ನೀನು ದೃಢವಾಗಿದ್ದು, ಮಾಡು.
೧೧ ಆಗ ದಾವೀದನು ತನ್ನ ಮಗನಾದ ಸೊಲೊಮೋನನಿಗೆ, ಮಂ
ಟಪದ ಮಾದ್ರಿಯನ್ನೂ, ಅದರ ಮನೆಗಳು, ಅದರ ಉಗ್ರಾಣಗ
ಳು, ಅದರ ಮೇಲಿನ ಕೊಠಡಿಗಳು, ಅದರ ಅಂತರಂಗದ ಕೊಠ
೧೨ ಡಿಗಳು, ಕೃಪಾಸನದ ಸ್ಥಾನವು, ಕರ್ತನ ಮನೆಯ ಅಂಗಳಗ
ಳು, ಸುತ್ತಲಿರುವ ಕೊಠಡಿಗಳಾದ ಕರ್ತನ ಮನೆಯ ಉಗ್ರಾಣಗ
ಳು, ಪರಿಶುದ್ಧ ಮಾಡಿದವುಗಳ ಉಗ್ರಾಣಗಳು, ಅತ್ಯದಿಂದ ತನ
೧೩ ಗುಂಟಾದ ಇವುಗಳ ಸಮಸ್ತ ಮಾದ್ರಿಯನ್ನೂ ಕೊಟ್ಟನು. ಇದ
ಲ್ಲದೆ ಯಾಜಕರ, ಲೇವ್ಯರ ಒಂತುಗಳಿಗೋಸ್ಕರವೂ, ಕರ್ತನ
ಮನೆಯ ಸೇವೆಯ ಸಮಸ್ತ ಕೆಲಸಕ್ಕೋಸ್ಕರವೂ, ಕರ್ತನ ಮನೆ
ಯಲ್ಲಿರುವ ಸೇವೆ ಮಾಡುವ ಸಮಸ್ತ ಪಾತ್ರೆಗಳಿಗೋಸ್ಕರವೂ
೧೪ ಕಟ್ಟಳೆ ಕೊಟ್ಟನು. ಸಕಲ ವಿಧ ಸೇವೆಗೆ ಸಮಸ್ತ ಭಂಗಾರದ
ಸಾಮಾನುಗಳಿಗೋಸ್ಕರ ಭಂಗಾರವನ್ನೂ, ಸಕಲ ವಿಧ ಸೇವೆಗೆ
ಸಮಸ್ತ ಬೆಳ್ಳಿಯ ಸಾಮಾನುಗಳಿಗೋಸ್ಕರ ಬೆಳ್ಳಿಯನ್ನೂ
೧೫ ತೂಗಿ ಕೊಟ್ಟನು. ಏನಂದರೆ ಭಂಗಾರದ ದೀಪಸ್ತಂಭಗಳಿಗೋಸ್ಕ
ರವೂ, ಅದರ ಭಂಗಾರದ ದೀಪಗಳಿಗೋಸ್ಕರವೂ, ಒಂದೊಂದು
ಸ್ತಂಭಕ್ಕೋಸ್ಕರ ತೂಕವಾಗಿ ತೂಗಿ ಕೊಟ್ಟನು. ಹಾಗೆಯೇ
ಬೆಳ್ಳಿಯ ದೀಪಸ್ತಂಭಗಳಿಗೋಸ್ಕರ, ದೀಪಸ್ತಂಭಕ್ಕೂ ಅದರ
ದೀಪಗಳಿಗೂ, ಒಂದೊಂದು ದೀಪಸ್ತಂಭದ ಕೆಲಸದ ಪ್ರಕಾರ ತೂ
೧೬ ಕವಾಗಿ ತೂಗಿ ಕೊಟ್ಟನು. ಆ ಪ್ರಕಾರವೇ ಸಮುಖದ ಕೊಟ್ಟಿಗ
ಳ ಮೇಜುಗಳಿಗೋಸ್ಕರ, ಒಂದೊಂದು ಮೇಜಿಗೆ ತೂಗಿ ಕೊಟ್ಟ
ನು; ಬೆಳ್ಳಿಯ ಮೇಜುಗಳಿಗೋಸ್ಕರ ಹಾಗೆಯೇ ಬೆಳ್ಳಿಯನ್ನು
೧೭ ತೂಗಿ ಕೊಟ್ಟನು. ಅದೇ ಪ್ರಕಾರ ಮುಳ್ಳುಗಳೂ, ಪಾತ್ರೆಗಳೂ,
ಕೂಜೆಗಳೂ ಇವುಗಳಿಗೋಸ್ಕರ ಹೊಕ್ಕ ಭಂಗಾರವನ್ನು ಕೊ
ಟ್ಟನು. ಭಂಗಾರದ ಬಟ್ಟಲುಗಳಿಗೋಸ್ಕರ, ಒಂದೊಂದು ಬಟ್ಟಲಿ
ಗೋಸ್ಕರ ತೂಕವಾಗಿಯೂ, ಬೆಳ್ಳಿಯ ಒಂದೊಂದು ಬಟ್ಟಲಿಗೋ
೧೮ ಸ್ಕರ ತೂಕವಾಗಿಯೂ ಕೊಟ್ಟನು. ಇದಲ್ಲದೆ ಧೂಪ ಪೀಠ
ಕ್ಕೋಸ್ಕರ ಭಂಗಾರವನ್ನೂ, ಜಾಜಿ ಕೊಂಡು, ಕರ್ತನ ಒಡಂ
ಬಡಿಕೆಯ ಪೆಟ್ಟಿಗೆಯನ್ನು ಮುಚ್ಚುವ ಕೆರೂಬಿಗಳ ರಥದ ರೂಪ
ಕ್ಕೋಸ್ಕರ ಭಂಗಾರವನ್ನೂ ತೂಗಿ ಕೊಟ್ಟನು. ಕರ್ತನು ತ
ನ್ನ ಕೈ ನನ್ನ ಮೇಲೆ ಇರಿಸಿ, ಈ ಮಾದ್ರಿಯ ಕೆಲಸಗಳನ್ನೆಲ್ಲಾ ನನ
೧೯ ಗೆ ಶಿಳ್ಳಿಯ ಮಾಡಿದನು, ಅಂದನು.
೨೦ ಮತ್ತು ದಾವೀದನು ತನ್ನ ಮಗನಾದ ಸೊಲೊಮೋನನಿ
ಗೆ ಹೇಳಿದ್ದೇನಂದರೆ, ನೀನು ಬಲಗೊಂಡು, ದೃಢ ಪಟ್ಟು, ಮಾಡು;
ಭಯ ಪಡ ಬೇಡ, ಹೆದರ ಬೇಡ; ಯಾಕಂದರೆ ನನ್ನ ದೇವರಾಗಿ
ರುವ ಕರ್ತನಾದ ದೇವರು ನಿನ್ನ ಸಂಗಡ ಇರುವನು. ಕರ್ತನ
ಮನೆಯ ಸೇವೆಯ ಕಾರ್ಯವನ್ನೆಲ್ಲಾ ನೀನು ಶೀರಿಸುವ ಮಟ್ಟಿ
ಗೂ, ಅವನು ನಿನ್ನನ್ನು ವಿಸರ್ಜಿಸುವದಿಲ್ಲ, ಕೈ ಬಿಡುವದಿಲ್ಲ.
೨೧ ಮತ್ತು, ಇಗೋ, ಕರ್ತನ ಮನೆಯ ಸಮಸ್ತ ಸೇವೆಗೋಸ್ಕರ
ಯಾಜಕರ ಲೇವ್ಯರ ಒಂತುಗಳುಂಟು. ಮತ್ತು ಎಲ್ಲಾ ಕೆಲಸ
ಕ್ಕೂ, ಎಲ್ಲಾ ಸೇವೆಗೂ, ಪೂರ್ಣ ಮನಸ್ಸುಳ್ಳಂಥ, ಜ್ಞಾನವು
ಳ್ಳಂಥ ಪ್ರಜೆಮನುಷ್ಯನು ನಿನ್ನ ಸಂಗಡ ಇರುವನು. ಇದಲ್ಲದೆ
ಪ್ರಧಾನರೂ ಸಕಲ ಜನರೂ ನಿನ್ನ ಮಾತುಗಳಿಗೆಲ್ಲಾ ಇದ್ದಾರೆ.

## ೨೯. ಸಂಧಿ.

೧ ಇದಲ್ಲದೆ ಅರಸನಾದ ದಾವೀದನು ಸಮಸ್ತ ಕೂಟಕ್ಕೆ ಹೇಳಿ
ದ್ದೇನಂದರೆ, ದೇವರು ಒಬ್ಬನನ್ನೇ ಆದು ಕೊಂಡ ನನ್ನ ಮಗನಾದ
ಸೊಲೊಮೋನನು ಚಿಕ್ಕವನಾಗಿಯೂ, ಎಳೆಯವನಾಗಿಯೂ
ಇದ್ದಾನೆ. ಆದರೆ ಕೆಲಸವು ದೊಡ್ಡದು; ಯಾಕಂದರೆ ಈ ಅರಮನೆ
ಯು ಮನುಷ್ಯರಿಗೋಸ್ಕರವಲ್ಲ, ಕರ್ತನಾದ ದೇವರಿಗೋಸ್ಕರ
೨ ವೇ. ಆದರೆ ನಾನು ನನ್ನ ಸಮಸ್ತ ಶಕ್ತಿಯಿಂದ ನನ್ನ ದೇವರ ಮನೆ
ಯ ನಿಮಿತ್ತ, ಭಂಗಾರದ ಕೆಲಸಕ್ಕೋಸ್ಕರ ಭಂಗಾರವನ್ನೂ, ಬೆ
ಳ್ಳಿಯ ಕೆಲಸಕ್ಕೋಸ್ಕರ ಬೆಳ್ಳಿಯನ್ನೂ, ತಾಂಬ್ರದ ಕೆಲಸಕ್ಕೋಸ್ಕ
ರ ತಾಂಬ್ರವನ್ನೂ, ಕಬ್ಬಿಣದ ಕೆಲಸಕ್ಕೋಸ್ಕರ ಕಬ್ಬಿಣವ
ನ್ನೂ, ಮರದ ಕೆಲಸಕ್ಕೋಸ್ಕರ ಮರವನ್ನೂ, ಗೋಮೇಧಿ ಕ
ಲ್ಲುಗಳನ್ನೂ, ಖಚಿಸುವ ನಿಮಿತ್ತ, ಕಾಡಿಗೆ ಬಣ್ಣವಾದಂಥ, ಚಿತ್ರ
ವಾದಂಥ ಕಲ್ಲುಗಳನ್ನೂ, ಸಕಲ ಅಮೂಲ್ಯವಾದ ಕಲ್ಲುಗಳನ್ನೂ,
೩ ಅಮೃತ ಶಿಲೆಗಳನ್ನೂ ಬಹಳವಾಗಿ ಸಿದ್ಧ ಮಾಡಿದ್ದೇನೆ. ಇದಲ್ಲದೆ
ನಾನು ನನ್ನ ದೇವರ ಮನೆಯ ಮೇಲೆ ಪ್ರೀತಿಯಾಗಿರುವದರಿಂದ,
ನಾನು ಪರಿಶುದ್ಧ ಮನೆಗೋಸ್ಕರ ಸಿದ್ಧ ಮಾಡಿದ ಎಲ್ಲಾದರ ಹೊ
ರ್ತು, ನನ್ನ ಸ್ವಸ್ಥಿತಿಯಿಂದ ಭಂಗಾರವನ್ನೂ, ಬೆಳ್ಳಿಯನ್ನೂ ನ
೪ ನ್ನ ದೇವರ ಮನೆಗೆ ಕೊಟ್ಟಿದ್ದೇನೆ. ಮನೆಗಳ ಗೋಡೆಗಳನ್ನು ಹೊ
ದಗಿಸುವದಕ್ಕೆ, ಒಫೀರ್ ಭಂಗಾರದಲ್ಲಿ ಮೂರು ಸಾವಿರ ಭಂಗಾರದ
ತಲಾಂತುಗಳನ್ನೂ, ಏಳು ಸಾವಿರ ಹೊಕ್ಕ ಬೆಳ್ಳಿಯ ತಲಾಂತುಗ
ಳನ್ನೂ, ಈ ಭಂಗಾರವನ್ನು ಭಂಗಾರದ ಕೆಲಸಕ್ಕೋಸ್ಕರ, ಬೆಳ್ಳಿ
ಯನ್ನು ಬೆಳ್ಳಿಯ ಕೆಲಸಕ್ಕೋಸ್ಕರ ಕೈ ಕೆಲಸದವರಿಂದ ಉಂ
ಟಾಗುವ ಎಲ್ಲಾ ಕೆಲಸಕ್ಕೋಸ್ಕರ ಕೊಟ್ಟಿದ್ದೇನೆ. ಇದಲ್ಲದೆ ಇಂದು
ತನ್ನ ಸೇವೆಯನ್ನು ಕರ್ತನಿಗೆ ಒಪ್ಪಿಸುವವನು ಯಾರು! ಅಂದನು.
೬ ಆಗ ಪಿತೃಗಳ ಪ್ರಧಾನರೂ, ಇಸ್ರಯೇಲ ಕುಲಗಳ ಪ್ರಧಾನ
ರೂ, ಸಹಸ್ರಗಳ ಶತಗಳ ಅಧಿಪತಿಗಳೂ, ಅರಸನ ಕೆಲಸದ ಯ
೭ ಜಮಾನರೂ ಉಚಿತಾರ್ಥವಾಗಿ ಕಾಣಿಕೆಗಳನ್ನು ತಂದು, ಕರ್ತ

ನ ಮನೆಯ ಸೇವೆಗೋಸ್ಕರ ಭಂಗಾರದಲ್ಲಿ ಐದು ಸಾವಿರ ತ
ಲಾಂತುಗಳನ್ನೂ, ಹತ್ತು ಸಾವಿರ ದ್ರಾಕ್ಮಗಳನ್ನೂ, ಬೆಳ್ಳಿಯಲ್ಲಿ
ಹತ್ತು ಸಾವಿರ ತಲಾಂತುಗಳನ್ನೂ, ತಾಂಬ್ರದಲ್ಲಿ ಹದಿನೆಂಟು
ಸಾವಿರ ತಲಾಂತುಗಳನ್ನೂ, ಕಬ್ಬಿಣದಲ್ಲಿ ಲಕ್ಷ ತಲಾಂತುಗಳನ್ನೂ
೮ ಕೊಟ್ಟರು. ಇದಲ್ಲದೆ ಯಾರ ಬಳಿಯಲ್ಲಿ ರತ್ನಗಳು ಇದ್ದವೋ,
ಅವರು ಗೆರ್ಶೋನ್ಯನಾದ ಯೆಹಿಯೇಲನ ಕೈಯಿಂದ ಅವುಗಳ
೯ ನ್ನು ಕರ್ತನ ಮನೆಯ ಬೊಕ್ಕಸಕ್ಕೆ ಕೊಟ್ಟರು. ಆಗ ಜನರು
ಉಚಿತಾರ್ಥವಾಗಿ ಕಾಣಿಕೆಗಳನ್ನು ಅರ್ಪಿಸಿದ್ದರಿಂದ, ಜನರು
ಸಂತೋಷಪಟ್ಟರು. ಯಾಕಂದರೆ ಅವರು ಪೂರ್ಣ ಮನಸ್ಸಿ
ನಿಂದ ಉಚಿತಾರ್ಥವಾಗಿ ಕರ್ತನಿಗೆ ಅರ್ಪಿಸಿದರು. ಮತ್ತು
ಅರಸನಾದ ದಾವೀದನು ಮಹಾ ಸಂತೋಷದಿಂದ ಸಂತೋಷ
ಪಟ್ಟನು.

೧೦ ಆಗ ದಾವೀದನು ಸಮಸ್ತ ಕೂಟದ ಮುಂದೆ ಕರ್ತನನ್ನು ಆ
ಶೀರ್ವದಿಸಿ, ಹೇಳಿದ್ದೇನಂದರೆ, ನಮ್ಮ ತಂದೆಯಾದ ಇಸ್ರಯೇಲಿನ
ದೇವರಾದ ಕರ್ತನೇ, ನೀನು ಯುಗ ಯುಗಾಂತರಗಳಿಂದ ಯು
೧೧ ಗ ಯುಗಾಂತರಗಳಿಗೂ ಆಶೀರ್ವದಿಸಲ್ಪಡುವವನಾಗಿದ್ದೀ. ಕರ್ತ
ನೇ, ದೊಡ್ಡಸ್ತಿಕೆಯೂ, ಪರಾಕ್ರಮವೂ, ಸೌಂದರ್ಯವೂ ಜಯ
ವೂ ಮಹಿಮೆಯೂ, ನಿನ್ನವೇ; ಯಾಕಂದರೆ ಆಕಾಶಗಳಲ್ಲಿಯೂ
ಭೂಮಿಯಲ್ಲಿಯೂ ಇರುವದೆಲ್ಲಾ ನಿನ್ನವೇ. ಕರ್ತನೇ, ರಾಜ್ಯ
ವು ನಿನ್ನದು; ನೀನು ಸಮಸ್ತಕ್ಕೂ ತಲೆಯಾಗಿ ಎತ್ತರವಾಗಿದ್ದೀ.
೧೨ ಐಶ್ವರ್ಯವೂ ಘನವೂ ನಿನ್ನ ಬಳಿಯಿಂದ ಬರುತ್ತವೆ. ನೀನು
ಸಮಸ್ತವನ್ನು ಆಳುವವನಾಗಿದ್ದೀ. ಶಕ್ತಿಯೂ ಪರಾಕ್ರಮವೂ
ನಿನ್ನ ಕೈಯಲ್ಲಿ ಅವೆ. ಎಲ್ಲರಿಗೂ ದೊಡ್ಡಸ್ತಿಕೆಯನ್ನೂ ಬಲವ
೧೩ ನ್ನೂ ಕೊಡುವದಕ್ಕೆ ನಿನ್ನ ಕೈಯಲ್ಲಿ ಅವೆ. ಆದದರಿಂದ, ನಮ್ಮ
ದೇವರೇ, ನಾವು ನಿನ್ನನ್ನು ಸ್ತುತಿಸಿ, ನಿನ್ನ ಮಹಿಮೆಯಾದ ನಾ
೧೪ ಮವನ್ನು ಕೊಂಡಾಡುತ್ತೇವೆ. ಆದರೆ ನಾವು ಈ ಪ್ರಕಾರ ಉಚಿ
ತಾರ್ಥವಾಗಿ ಅರ್ಪಿಸುವದಕ್ಕೆ ಶಕ್ತಿಯನ್ನು ಹೊಂದ ನಾನೆಷ್ಟರ
ವನು? ನನ್ನ ಜನರು ಎಷ್ಟರವರು? ಯಾಕಂದರೆ ಸಮಸ್ತವು ನಿನ್ನಿಂ
೧೫ದಲೇ. ನಿನ್ನ ಕೈಯಿಂದ ನಿನಗೆ ಅರ್ಪಿಸಿದೆವು. ಯಾಕಂದರೆ ನಾವು
ನಿನ್ನ ಸಮುಖದಲ್ಲಿ ನಮ್ಮ ಸಮಸ್ತ ಪಿತೃಗಳ ಹಾಗೆ ಪರದೇಶಸ್ಥ
ರೂ ಪರವಾಸಿಗಳೂ ಆಗಿದ್ದೇವೆ. ಭೂಮಿಯ ಮೇಲೆ ನಮ್ಮ ದಿವ
೧೬ಸಗಳು ನೆರಳಿನ ಹಾಗೆ ಅವೆ; ನೆಲೆಯು ಇಲ್ಲ. ನಮ್ಮ ದೇವರಾದ
ಕರ್ತನೇ, ನಿನ್ನ ಪರಿಶುದ್ಧ ನಾಮಕ್ಕೋಸ್ಕರ ನಿನಗೆ ಮನೆಯನ್ನು
ಕಟ್ಟಿಸ, ನಾವು ಸಿದ್ಧ ಮಾಡಿದ ಈ ರಾಶಿಯೆಲ್ಲಾ ನಿನ್ನಿಂದ ಉಂ
೧೭ ಟಾಯಿತು; ಸಮಸ್ತವು ನಿನ್ನದು. ನನ್ನ ಕರ್ತನೇ, ನೀನು ಹೃದ
ಯವನ್ನು ಶೋಧಿಸಿ, ನೆಟ್ಟನೆಯಾದವುಗಳಲ್ಲಿ ಸಂತೋಷವಾಗಿ
ದ್ದೀ ಎಂದು, ನಾನು ಬಲ್ಲೆನು. ನಾನು ನೆಟ್ಟನೆಯಾದ ಹೃದಯ
ದಿಂದ ಇವುಗಳನ್ನೆಲ್ಲಾ ಉಚಿತಾರ್ಥವಾಗಿ ಅರ್ಪಿಸಿದ್ದೇನೆ. ಇದ
ಲ್ಲದೆ ಇಲ್ಲಿರುವ, ನಿನ್ನ ಜನರು ನಿನಗೆ ಉಚಿತಾರ್ಥವಾಗಿ ಅರ್ಪಿ
೧೮ ಸುವದನ್ನು ಈಗ ಸಂತೋಷವಾಗಿ ಕಂಡೆನು. ನಮ್ಮ ಪಿತೃಗ
ಳಾದ ಅಬ್ರಹಾಮನ, ಇಸಾಕನ, ಇಸ್ರಯೇಲನ ದೇವರಾದ ಕರ್ತ
ನೇ, ಇದನ್ನು ನಿನ್ನ ಜನರ ಹೃದಯದ ಯೋಚನೆಗಳ ಭಾವನೆ
ಯಲ್ಲಿ ನಿರಂತರವಾಗಿ ಕಾಪಾಡಿ, ಅವರ ಹೃದಯವನ್ನು ನಿನಗೆ
೧೯ ಸಿದ್ಧ ಮಾಡು. ಇದಲ್ಲದೆ ನಿನ್ನ ಆಜ್ಞೆಗಳನ್ನೂ, ನಿನ್ನ ಸಾಕ್ಷಿಗ
ಳನ್ನೂ, ನಿನ್ನ ಕಟ್ಟಳೆಗಳನ್ನೂ ಕೈಕೊಳ್ಳಲೂ ಸಮಸ್ತವನ್ನು
ಮಾಡಲೂ, ನಾನು ಯಾವದಕ್ಕೋಸ್ಕರ ಸಿದ್ಧ ಮಾಡಿದೆನೋ,
ಆ ಅರಮನೆಯನ್ನು ಕಟ್ಟಿಸಲೂ, ನನ್ನ ಮಗನಾದ ಸೊಲೊ
ಮೋನನಿಗೆ ಪೂರ್ಣ ಹೃದಯವನ್ನು ಕೊಡು.

೨೦ ಮತ್ತು ದಾವೀದನು ಸಮಸ್ತ ಕೂಟಕ್ಕೆ, ಈಗ ನಿನ್ನು ದೇವ
ರಾದ ಕರ್ತನನ್ನು ಆಶೀರ್ವದಿಸಿರಿ, ಅಂದನು. ಆಗ ಕೂಟದವರೆ
ಲ್ಲರು ನಮ್ಮ ಪಿತೃಗಳ ದೇವರಾದ ಕರ್ತನನ್ನು ಆಶೀರ್ವದಿಸಿ, ತ
ಮ್ಮ ತಲೆಗಳನ್ನು ಬಾಗಿ, ಕರ್ತನನ್ನೂ ಅರಸನನ್ನೂ ವಂದಿಸಿದ
೨೧ ರು. ಇದಲ್ಲದೆ ಮಾರನೆ ದಿವಸದಲ್ಲಿ ಅವರು ಕರ್ತನಿಗೆ ಬಲಿಗ
ಳನ್ನು ಕಡಿದು, ಕರ್ತನಿಗೆ ಹೋಮಗಳನ್ನು ಅರ್ಪಿಸಿದರು. ಸಾ
ವಿರ ಹೋರಿಗಳನ್ನೂ, ಸಾವಿರ ಟಗರುಗಳನ್ನೂ, ಸಾವಿರ ಕುರಿ
ಮರಿಗಳನ್ನೂ, ಅವುಗಳ ಪಾನದ ಅರ್ಪಣೆಗಳನ್ನೂ, ಸಮಸ್ತ ಇ
ಸ್ರಯೇಲಿಗೋಸ್ಕರ ಬಹಳವಾಗಿ ಬಲಿಗಳನ್ನೂ ಅರ್ಪಿಸಿದರು.
ಆ ದಿವಸದಲ್ಲಿ ಮಹಾ ಸಂತೋಷದಿಂದ ಕರ್ತನ ಮುಂದೆ ಉಂ
೨೨ ಡು, ಕುಡಿದರು. ಮತ್ತು ಎರಡನೇ ಸಾರಿ ದಾವೀದನ ಮಗನಾದ
ಸೊಲೊಮೋನನನ್ನು ಅರಸನಾಗ ಮಾಡಿ, ಕರ್ತನ ಮುಂದೆ ಅ
ವನನ್ನು ನಾಯಕನಾಗಿಯೂ, ಚಕೋಕನನ್ನು ಯಾಜಕನಾಗಿ
ಯೂ ಅಭಿಷೇಕಿಸಿದರು.

೨೩ ಆಗ ಸೊಲೊಮೋನನು ತನ್ನ ತಂದೆಯಾದ ದಾವೀದನಿಗೆ
ಬದಲಾಗಿ ಅರಸನಾಗಿ, ಕರ್ತನ ಸಿಂಹಾಸನದ ಮೇಲೆ ಕುಳಿತು
ಕೊಂಡು, ಸಫಲ ಹೊಂದಿದನು. ಸಮಸ್ತ ಇಸ್ರಯೇಲ್ಯರು ಅವ
೨೪ ನ ಮಾತು ಕೇಳಿದರು. ಮತ್ತು ಪ್ರಧಾನರೂ, ಪರಾಕ್ರಮಶಾಲಿ
ಗಳೂ, ಅರಸನಾದ ದಾವೀದನ ಸಮಸ್ತ ಕುಮಾರರೂ, ಅರಸ
೨೫ನಾದ ಸೊಲೊಮೋನನ ಕೆಳಗಿರ ಕೈ ಕೊಟ್ಟರು. ಇದಲ್ಲದೆ ಕ
ರ್ತನು ಸಮಸ್ತ ಇಸ್ರಯೇಲಿನ ಸಮುಖದಲ್ಲಿ ಸೊಲೊಮೋನನ
ನ್ನು ಅಧಿಕವಾಗಿ ಹೆಚ್ಚಿಸಿ, ಇಸ್ರಯೇಲಿನಲ್ಲಿ ಅವನಿಗಿಂತ ಮುಂ
ಚೆ ಇದ್ದ ಯಾವ ಅರಸನಿಗಾದರೂ ಇಲ್ಲದಂಥ ರಾಜ್ಯದ ಮಹಿ
ಮೆಯನ್ನು ಅವನಿಗೆ ಕೊಟ್ಟನು.

೨೬ ಈ ಪ್ರಕಾರ ಇಷಾಯನ ಮಗನಾದ ದಾವೀದನು ಸಮಸ್ತ
೨೭ ಇಸ್ರಯೇಲಿನ ಮೇಲೆ ಆಳಿದನು. ಅವನು ಇಸ್ರಯೇಲಿನ ಮೇಲೆ
ಆಳಿದ ದಿವಸಗಳು ನಾಲ್ವತ್ತು ವರುಷ. ಏಳು ವರುಷ ಹೆಬ್ರೋ
ನಿನಲ್ಲಿ ಆಳಿದನು; ಮೂವತ್ತು ಮೂರು ವರುಷ ಯೆರೂಸಲೇಮು
೨೮ ನಲ್ಲಿ ಆಳಿದನು. ಅವನು ದಿವಸಗಳಿಂದಲೂ, ಐಶ್ವರ್ಯದಿಂದ
ಲೂ, ಘನದಿಂದಲೂ ತುಂಬಲ್ಪಟ್ಟು, ಒಳ್ಳೇ ಪ್ರಾಯದಲ್ಲಿ ಸತ್ತು
ಹೋದನು. ಮತ್ತು ಅವನ ಮಗನಾದ ಸೊಲೊಮೋನನು ಅ
೨೯ ವನಿಗೆ ಬದಲಾಗಿ ಆಳಿದನು. ಆದರೆ ಅರಸನಾದ ದಾವೀದನ ಕ್ರಿ
ಯೆಗಳು ಆದಿಯಿಂದ ಅಂತ್ಯದ ಪರ್ಯಂತರ, ಅವನ ಸಮಸ್ತ
ಆಳಿಕೆಯೂ, ಅವನ ಪರಾಕ್ರಮವೂ, ಅವನ ಮೇಲೆಯೂ ಇಸ್ರ
ಯೇಲಿನ ಮೇಲೆಯೂ ದೇಶಗಳ ಸಮಸ್ತ ರಾಜ್ಯಗಳ ಮೇಲೆಯೂ
೩೦ ಗಶಿಸಿದ ಕಾಲಗಳೂ, ಇಗೋ, ದರ್ಶಿಯಾದ ಸಮುವೇಲನ ಪುಸ್ತ
ಕದಲ್ಲಿಯೂ, ಪ್ರವಾದಿಯಾದ ನಾತಾನನ ಪುಸ್ತಕದಲ್ಲಿಯೂ, ದ
ರ್ಶಿಯಾದ ಗಾದನ ಪುಸ್ತಕದಲ್ಲಿಯೂ ಬರೆಯಲ್ಪಟ್ಟಿವೆ.

---

# THE SECOND BOOK OF THE CHRONICLES.

## ದಿನಚರ್ಯೆಗಳ ಎರಡನೇ ಪುಸ್ತಕವು.

### ೧. ಸಂಧಿ.

೧ ಆದರೆ ದಾವೀದನ ಮಗನಾದ ಸೊಲೊಮೋನನು ತನ್ನ ರಾ
ಜ್ಯದಲ್ಲಿ ಬಲಗೊಂಡನು; ಮತ್ತು ಅವನ ದೇವರಾದ ಕರ್ತನು ಅ
೨ ವನ ಸಂಗಡ ಇದ್ದು, ಅವನನ್ನು ಅಧಿಕವಾಗಿ ಹೆಚ್ಚಿಸಿದನು. ಆ
ಗ ಸೊಲೊಮೋನನು ಸಮಸ್ತ ಇಸ್ರಯೇಲ್ಯರಾದ ಸಹಸ್ರಗಳಿ
ಗೂ, ಶತಗಳಿಗೂ ಪ್ರಧಾನರಾದವರಿಗೂ, ನ್ಯಾಯಾಧಿಪತಿಗಳಿ
ಗೂ, ಸಮಸ್ತ ಇಸ್ರಯೇಲಿನಲ್ಲಿರುವ ಪಿತೃಗಳ ಶ್ರೇಷ್ಠರಾದ ಸ
೩ ಮಸ್ತ ಪ್ರಭುಗಳಿಗೂ ಮಾತಾಡಿದನು. ಮತ್ತು ಅವನೂ ಅವನ
ಸಂಗಡ ಸಮಸ್ತ ಕೂಟವೂ ಗಿಬ್ಯೋನಿನಲ್ಲಿರುವ ಮೇಡಿಗೆ ಹೋ
ದರು. ಯಾಕಂದರೆ ಕರ್ತನ ಸೇವಕನಾದ ಮೋಶೆಯು ಅರಣ್ಯಾ
೪ ದಲ್ಲಿ ಮಾಡಿದ ದೇವರ ಸಭೆಯ ಗುಡಾರ ಅಲ್ಲಿ ಇತ್ತು. ಆದರೆ
ದಾವೀದನು ಕರ್ತನ ಪೆಟ್ಟಿಗೆಯನ್ನು ಕಿರ್ಯಾತಯಾರೀಮಿನಿಂ
ದ ತಾನು ಅದಕ್ಕೋಸ್ಕರ ಸಿದ್ಧ ಮಾಡಿದ ಸ್ಥಳಕ್ಕೆ ತೆಗೆದು ಕೊಂ
ಡು ಬಂದಿದ್ದನು. ಯಾಕಂದರೆ ಅವನು ಯೆರೂಸಲೇಮಿನಲ್ಲಿ ಅ
೫ ದಕ್ಕೋಸ್ಕರ ಗುಡಾರವನ್ನು ಹಾಕಿಸಿದ್ದನು. ಇದಲ್ಲದೆ ಹೂರನ
ಮಗನಾದ ಊರಿಯ ಮಗನಾದ ಬೆಚಲೇಲನು ಮಾಡಿದ ತಾಂ
ಬ್ರದ ಬಲಿಪೀಠವನ್ನು ಕರ್ತನ ಗುಡಾರದ ಮುಂದೆ ಇಟ್ಟನು. ಸೊ
೬ ಲೊಮೋನನೂ ಕೂಟವೂ ಅದನ್ನು ಹುಡುಕಿದರು. ಆಗ ಸೊ
ಲೊಮೋನನು ಸಭೆಯ ಗುಡಾರದ ಬಳಿಯಲ್ಲಿ ಕರ್ತನ ಮುಂದೆ
ಇರುವ ತಾಂಬ್ರದ ಪೀಠದ ಬಳಿಗೆ ಹೋಗಿ, ಅದರ ಮೇಲೆ ಸಹಸ್ರ
ಹೋಮಗಳನ್ನು ಅರ್ಪಿಸಿದನು.

೭ ಅದೇ ರಾತ್ರಿಯಲ್ಲಿ ದೇವರು ಸೊಲೊಮೋನನಿಗೆ ಕಾಣಿಸಿ,
ಅವನಿಗೆ, ನಾನು ನಿನಗೆ ಕೊಡ ಬೇಕಾದದ್ದನ್ನು ಕೇಳಿಕೋ, ಅಂ
೮ ದನು. ಆಗ ಸೊಲೊಮೋನನು ದೇವರಿಗೆ, ನೀನು ನನ್ನ ತಂದೆ
ಯಾದ ದಾವೀದನಿಗೆ ಬಹು ಕೃಪೆಯನ್ನು ತೋರಿಸಿ, ಅವನಿಗೆ
೯ ಬದಲಾಗಿ ನನ್ನನ್ನು ಅರಸನಾಗ ಮಾಡಿದಿ. ಈಗ, ಕರ್ತನಾದ
ದೇವರೇ, ನನ್ನ ತಂದೆಯಾದ ದಾವೀದನಿಗೆ ನೀನು ಹೇಳಿದ ವಾ
ಕ್ಯವು ನಿಶ್ಚಯವಾಗಲಿ. ಯಾಕಂದರೆ ಶೆಬ್ಬುದಲ್ಲಿ ಧೂಳಿಯ
ಹಾಗೆ ಹೆಚ್ಚಾಗಿರುವ ಜನರ ಮೇಲೆ ನನ್ನನ್ನು ಅರಸನಾಗ ಮಾ
೧೦ ಡಿದಿ. ನಾನು ಈ ಜನರ ಮುಂದೆ ಹೊರಡುವ ಹಾಗೆಯೂ, ಬ
ರುವ ಹಾಗೆಯೂ ನನಗೆ ಜ್ಞಾನವನ್ನೂ ತಿಳುವಳಿಕೆಯನ್ನೂ
ಕೊಡು. ಯಾಕಂದರೆ ಈ ನಿನ್ನ ಮಹಾ ಜನಕ್ಕೆ ನ್ಯಾಯ ತೀ
ರಿಸ ತಕ್ಕವನು ಯಾರು? ಅಂದನು.

೧೧ ಆಗ ದೇವರು ಸೊಲೊಮೋನನಿಗೆ, ಇದು ನಿನ್ನ ಹೃದಯ
ದಲ್ಲಿ ಇದ್ದದರಿಂದಲೂ, ಮತ್ತು ಐಶ್ವರ್ಯವನ್ನೂ, ಸ್ಥಿತಿಯನ್ನೂ,
ಘನವನ್ನೂ, ನಿನ್ನ ಶತ್ರುಗಳ ಪ್ರಾಣವನ್ನೂ ಕೇಳದೆ, ಹೆಚ್ಚಾ
ದ ದಿವಸಗಳನ್ನು ನೀನು ಕೇಳದೆ, ನಾನು ಯಾರ ಮೇಲೆ ನಿನ್ನನ್ನು
ಅರಸನಾಗ ಮಾಡಿದೆನೋ, ಆ ನನ್ನ ಜನರಿಗೆ ನೀನು ನ್ಯಾಯ
ತೀರಿಸುವ ಹಾಗೆ, ಜ್ಞಾನವನ್ನೂ ತಿಳುವಳಿಕೆಯನ್ನೂ ನೀನು ಕೇಳಿ
ದ್ದರಿಂದಲೂ, ಜ್ಞಾನವೂ ತಿಳುವಳಿಕೆಯೂ ನಿನಗೆ ಕೊಡಲ್ಪಟ್ಟವು.
೧೨ ಇದಲ್ಲದೆ ನಿನಗಿಂತ ಮುಂಚೆ ಇದ್ದ ಅರಸುಗಳಲ್ಲಿ ಯಾರಿಗೂ ಇ
ಲ್ಲದಂಥ, ನಿನ್ನ ತರುವಾಯ ಯಾರಿಗೂ ಇಲ್ಲದಂಥ ಐಶ್ವರ್ಯ
ವನ್ನೂ, ಸ್ಥಿತಿಯನ್ನೂ, ಘನವನ್ನೂ ಕೊಡುವೆನು, ಅಂದನು.

೧೩ ತರುವಾಯ ಸೊಲೊಮೋನನು ಸಭೆಯ ಗುಡಾರವನ್ನು ಬಿ
ಟ್ಟು, ಗಿಬ್ಯೋನಿನಲ್ಲಿರುವ ಮೇಡಿನಿಂದ ಯೆರೂಸಲೇಮಿಗೆ ಬಂದು,
ಇಸ್ರಯೇಲನ್ನು ಆಳಿದನು.

೧೪ ಇದಲ್ಲದೆ ಸೊಲೊಮೋನನು ರಥಗಳನ್ನೂ ರಾಹುತರನ್ನೂ
ಕೂಡಿಸಿದನು. ಸಾವಿರದ ನಾನೂರು ರಥಗಳೂ, ಹನ್ನೆರಡು
ಸಾವಿರ ರಾಹುತರೂ ಅವನಿಗೆ ಉಂಟಾಗಿದ್ದರು. ಇವರನ್ನು ರಥ
ದ ಪಟ್ಣಗಳಲ್ಲಿಯೂ ಯೆರೂಸಲೇಮಿನಲ್ಲಿ ಅರಸನ ಬಳಿಯಲ್ಲಿ
ಯೂ ಇರಿಸಿದನು.

೧೫ ಮತ್ತು ಅರಸನು ಯೆರೂಸಲೇಮಿನಲ್ಲಿ ಬೆಳ್ಳಿ ಭಂಗಾರವನ್ನು
ಕಲ್ಲುಗಳ ಹಾಗೆಯೂ, ದೇವದಾರು ಮರಗಳನ್ನು ತ್ಗ್ಗನಲ್ಲಿರುವ
೧೬ ಹಿಪ್ಪಲಿ ಗಿಡಗಳ ಹಾಗೆಯೂ ಮಾಡಿದನು. ಇದಲ್ಲದೆ ಸೊಲೊ
ಮೋನನಿಗೋಸ್ಕರ ಐಗುಪ್ತದಿಂದ ಕುದುರೆಗಳೂ ಸಣಬಿನ ನೂ
ಲೂ ತರಲ್ಪಟ್ಟವು; ಅರಸನ ವರ್ತಕರು ಈ ಸಣಬಿನ ನೂಲನ್ನು
೧೭ ಕ್ರಯಕ್ಕೆ ತೆಗೆದು ಕೊಂಡರು. ಹಾಗೆಯೇ ಐಗುಪ್ತದಿಂದ ಆರು
ನೂರು ಬೆಳ್ಳಿ ಬೆಕೆಲುಗಳ ಕ್ರಯವಾದ ಒಂದು ರಥವನ್ನೂ, ನೂ
ರ ಐವತ್ತು ಬೆಳ್ಳಿ ಬೆಕೆಲುಗಳ ಕ್ರಯವಾದ ಒಂದು ಕುದುರೆಯ
ನ್ನೂ ತಕ್ಕೊಂಡರು. ಈ ಪ್ರಕಾರ ಹಿತ್ತಿಯರ ಅರಸುಗಳೆಲ್ಲರಿ
ಗೂ ಅರಾಮಿನ ಅರಸುಗಳೆಲ್ಲರಿಗೂ ಅವರ ಕೈಯಿಂದ ತಕ್ಕೊಂ
ಡು ಬಂದರು.

### ೨. ಸಂಧಿ.

೧ ಆದರೆ ಸೊಲೊಮೋನನು ಕರ್ತನ ಹೆಸರಿಗೋಸ್ಕರ ಮನೆಯ
ನ್ನೂ ತನ್ನ ರಾಜ್ಯಕ್ಕೋಸ್ಕರ ಮನೆಯನ್ನೂ ಕಟ್ಟಿಸುತ್ತೇನೆ,
೨ ಅಂದನು. ಆದದರಿಂದ ಸೊಲೊಮೋನನು ಎಪ್ಪತ್ತು ಸಾವಿರ ಹೊ
ಕೆಯವರನ್ನೂ ಎಂಭತ್ತು ಸಾವಿರ ಬೆಟ್ಟದಲ್ಲಿ ಕಡಿಯುವವರ
ನ್ನೂ ಇವರ ಮೇಲೆ ಕಾವಲಿಯಾಗಿರ ಮೂರು ಸಾವಿರದ ಆರು
ನೂರು ಮಂದಿಯನ್ನೂ ಎಣಿಸಿದನು.

೩ ಇದಲ್ಲದೆ ಸೊಲೊಮೋನನು ಹೋರಿನ ಅರಸನಾದ ಹಿರಾ
ಮನಿಗೆ ಹೇಳಿ ಕಳುಹಿಸಿದ್ದೇನಂದರೆ—ವಾಸವಾಗಿರುವ ಮನೆಯ
ನ್ನು ತನಗೆ ಕಟ್ಟಿಸ, ನೀನು ನನ್ನ ತಂದೆಯಾದ ದಾವೀದನಿಗೆ ದೇ
ವದಾರು ಮರಗಳನ್ನು ಕಳುಹಿಸಿ, ಅವನಿಗೋಸ್ಕರ ಹ್ಯಾಗೆ ಮಾ
೪ ಡಿದಿಯೋ, ಹಾಗೆಯೇ ಮಾಡು. ಇಗೋ, ನನ್ನ ದೇವರಾದ ಕ
ರ್ತನಿಗೆ ಅದನ್ನು ಪರಿಶುದ್ಧ ಮಾಡುವದಕ್ಕೂ, ಅವನ ಮುಂದೆ ಪ
ರಿಮಳ್ಳ ಧೂಪವನ್ನು ಸುಡುವದಕ್ಕೂ ನಿತ್ಯ ಸಮುಖದ ಕೊಟ್ಟಿ
ಗೋಸ್ಕರವೂ, ಸ್ಬಬ್ಬತುಗಳಲ್ಲಿಯೂ ತುದ್ದ ಪಾರ್ವಗಳಲ್ಲಿಯೂ
ಇಸ್ರಯೇಲಿಗೆ ನಿರಂತರವಾಗಿರ ನೇಮಿಸಿದ ನಮ್ಮ ದೇವರಾದ ಕರ್ತ
ನ ಹಬ್ಬಗಳಲ್ಲಿಯೂ ಉದಯ ಕಾಲದ ಸಾಯಂಕಾಲದ ಹೋ
ಮಗಳಿಗೋಸ್ಕರವೂ, ಅವನ ನಾಮಕ್ಕೆ ಮನೆಯನ್ನು ಕಟ್ಟಿಸು

೫ ತ್ತೇನೆ. ಇದಲ್ಲದೆ ನಾನು ಕಟ್ಟಿಸುವ ಮನೆಯು ದೊಡ್ಡದು; ಯಾ
ಕಂದರೆ ನಮ್ಮ ದೇವರು ಸಕಲ ದೇವರುಗಳಿಗಿಂತ ದೊಡ್ಡವನಾಗಿ
೬ ದ್ದಾನೆ. ಆದರೆ ಅವನಿಗೆ ಮನೆಯನ್ನು ಕಟ್ಟಿಸ ಶಕ್ತಿಯನ್ನು ಹೊಂ
ದಿದವನ್ಯಾರು! ಯಾಕಂದರೆ ಆಕಾಶಗಳೂ, ಆಕಾಶಾಕಾಶಗಳೂ
ಅವನನ್ನು ಹಿಡಿಯಲಾರವು; ಅವನ ಮುಂದೆ ಧೂಪ ಸುಡುವದಕ್ಕೆ
೭ ಜೊತ್ತಾಗಿ, ಅವನಿಗೆ ಮನೆಯನ್ನು ಕಟ್ಟಿಸ ನಾನೆಷ್ಟವನು! ಆ
ದದಂದ ಭಂಗಾರದಲ್ಲಿಯೂ, ಬೆಳ್ಳಿಯಲ್ಲಿಯೂ ತಾಂಬ್ರದಲ್ಲಿ
ಯೂ, ಕಬ್ಬಿಣದಲ್ಲಿಯೂ, ರಕ್ತವರ್ಣ ಲೋಹಿತವರ್ಣ ನೀಲ
ವರ್ಣಗಳಲ್ಲಿಯೂ ಕೆಲಸವನ್ನು ಮಾಡ ಜ್ಞಾನವುಳ್ಳವನಾಗಿ
ಯೂ, ನನ್ನ ತಂದೆಯಾದ ದಾವೀದನು ಸಿದ್ಧ ಮಾಡಿದ ಯೆ
ಹೂದದಲ್ಲಿಯೂ ಯೆರೂಸಲೇಮಿನಲ್ಲಿಯೂ ನನ್ನ ಬಳಿಯಲ್ಲಿ
ರುವ ಗ್ರಹಿಕೆಯುಳ್ಳವರ ಸಂಗಡ ಕೆತ್ತ ಶಿಳುವಿಕೆಯುಳ್ಳವನಾಗಿ
೮ ಯೂ ಇರುವವನನ್ನು ನನ್ನ ಬಳಿಗೆ ಕಳುಹಿಸು. ಇದಲ್ಲದೆ ನನ್ನ
ಬಳಿಯಲ್ಲಿ ದೇವದಾರು ಮರಗಳನ್ನೂ ತುರಾಯಿ ಮರಗಳ
ನ್ನೂ ಅಲ್ಗುಗ್ ಮರಗಳನ್ನೂ ಲೆಬನೋನಿನಿಂದ ನನ್ನ ಬಳಿಗೆ ಕ
ಳುಹಿಸು. ಯಾಕಂದರೆ ಲೆಬನೋನಿನಲ್ಲಿ ಮರಗಳನ್ನು ಕಡಿಯ
೯ ನಿನ್ನ ಸೇವಕರು ತಿಳಿಯುತ್ತಾರೆ. ಮತ್ತು, ಇಗೋ, ನನಗೆ ಮ
ರಗಳನ್ನು ಬಹಳವಾಗಿ ಸಿದ್ಧ ಮಾಡುವದಕ್ಕೆ ನನ್ನ ಸೇವಕರು
ನಿನ್ನ ಸೇವಕರ ಸಂಗಡ ಇರುವರು. ಯಾಕಂದರೆ ನಾನು ಕಟ್ಟಿ
ಸುವ ಮನೆಯು ದೊಡ್ಡದಾಗಿಯೂ ಆಶ್ಚರ್ಯವಾದದ್ದಾಗಿಯೂ
೧೦ ಇರುವದು. ಮತ್ತು, ಇಗೋ, ನಾನು ನಿನ್ನ ಸೇವಕರಾದ ಮರ
ವನ್ನು ಕಡಿಯುವವರಿಗೆ ಇಪ್ಪತ್ತು ಸಾವಿರ ಕೋರ್ ಗೋಧಿಯ
ನ್ನೂ, ಇಪ್ಪತ್ತು ಸಾವಿರ ಕೋರ್ ಜವೆಗೋಧಿಯನ್ನೂ, ಇಪ್ಪ
ತ್ತು ಸಾವಿರ ಕೊರ್ ದ್ರಾಕ್ಷೇರಸವನ್ನೂ, ಇಪ್ಪತ್ತು ಸಾವಿರ ಕೋರ್
ಎಣ್ಣೆಯನ್ನೂ ಕೊಡುವೆನು.

೧೧ ಆಗ ಜೋರಿನ ಅರಸನಾದ ಹಿರಾಮನು ಪ್ರತ್ಯುತ್ತರವನ್ನು
ಬರೆದು, ಸೊಲೊಮೋನನಿಗೆ ಕಳುಹಿಸಿ, ಹೇಳಿದ್ದೇನಂದರೆ—ಕರ್ತ
ನು ತನ್ನ ಜನರನ್ನು ಪ್ರೀತಿ ಮಾಡಿದ್ದರಿಂದ, ಅವನು ನಿನ್ನನ್ನು ಅ
೧೨ ವರ ಮೇಲೆ ಅರಸನಾಗ ಮಾಡಿದ್ದಾನೆ. ಮತ್ತು ಹಿರಾಮನು ಹೇ
ಳಿದ್ದೇನಂದರೆ— ಕರ್ತನಿಗೋಸ್ಕರ ಮನೆಯನ್ನೂ, ತನ್ನ ರಾಜ್ಯ
ಕ್ಕೋಸ್ಕರ ಮನೆಯನ್ನೂ ಕಟ್ಟಿಸುವದಕ್ಕೆ, ಅರಸನಾದ ದಾವೀ
ದನಿಗೆ ಜ್ಞಾನವುಳ್ಳಂಥ, ಬುದ್ಧಿಯನ್ನೂ ಗ್ರಹಿಕೆಯನ್ನೂ ಶಿಳು
ಕೊಂಡಂಥ ಮಗನನ್ನು ಕೊಟ್ಟ, ಆಕಾಶವನ್ನೂ ಭೂಮಿಯ
ನ್ನೂ ಉಂಟು ಮಾಡಿದ ಇಸ್ರಯೇಲಿನ ದೇವರಾದ ಕರ್ತನು ಆ
೧೩ ಶೀರ್ವದಿಸಲ್ಪಡಲಿ. ಈಗ ನಾನು ಜ್ಞಾನವಂತನಾದಂಥ, ಗ್ರಹಿಕೆ
೧೪ ಯನ್ನು ತಿಳುಕೊಂಡಂಥ ಮನುಷ್ಯನನ್ನು ಕಳುಹಿಸಿದ್ದೇನೆ. ಅ
ವನು ದಾನನ ಕುಮಾರ್ತೆಗಳಲ್ಲಿರುವ ಒಬ್ಬಳ ಮಗನಾಗಿದ್ದಾನೆ;
ಅವನ ತಂದೆ ಜೋರಿನ ಮನುಷ್ಯನು; ಅವನು ಭಂಗಾರ, ಬೆಳ್ಳಿ
ತಾಂಬ್ರ, ಕಬ್ಬಿಣ, ಕಲ್ಲು, ಮರ, ರಕ್ತವರ್ಣ, ನೀಲವರ್ಣ, ನಾರಿ
ನ ವಸ್ತ್ರ, ಲೋಹಿತ ವರ್ಣ ಇವುಗಳಲ್ಲಿ ಕೆಲಸವನ್ನು ಮಾಡು
ವದಕ್ಕೂ, ಸಕಲ ವಿಧವಾದ ಕೆತ್ತಿಗೆಯನ್ನು ಕೆತ್ತುವದಕ್ಕೂ ನಿನ್ನ
ಜ್ಞಾನವುಳ್ಳವರ ಸಂಗಡಲೂ, ನಿನ್ನ ತಂದೆಯಾದ ನನ್ನ ಸ್ವಾಮಿ
ಯಾದ ದಾವೀದನ ಜ್ಞಾನವುಳ್ಳವರ ಸಂಗಡಲೂ ತನಗೆ ಹೇಳಿದ
ಸಮಸ್ತ ಉಪಾಯವನ್ನು ಹಿಡಿಯುವದಕ್ಕೂ ಶಿಳಿದವನಾಗಿದ್ದಾ
೧೫ ನೆ. ಈಗ ನನ್ನ ಸ್ವಾಮಿ ಹೇಳಿದ ಆ ಗೋಧಿಯನ್ನೂ, ಜವೆ
ಗೋಧಿಯನ್ನೂ, ಎಣ್ಣೆಯನ್ನೂ, ದ್ರಾಕ್ಷೇರಸವನ್ನೂ ತನ್ನ ಸೇ
೧೬ ವಕರಿಗೆ ಕಳುಹಿಸಲಿ. ಇದಲ್ಲದೆ ನಾವು ಲೆಬನೋನಿನಲ್ಲಿ ನಿನಗೆ
ಬೇಕಾದಷ್ಟು ಮರಗಳನ್ನು ಕಡಿದು, ತೆಪ್ಪಗಳಲ್ಲಿ ಸಮುದ್ರದ ಮಾ
ರ್ಗವಾಗಿ ಯೊಪ್ಪಕ್ಕೆ ತಕ್ಕೊಂಡು ಬರುತ್ತೇವೆ; ಮತ್ತು ನೀನು
ಅವುಗಳನ್ನು ಯೆರೂಸಲೇಮಿಗೆ ಬೈಯ ಬಹುದು. ಮತ್ತು ಸೊ
೧೭ ಲೊಮೋನನು ಇಸ್ರಯೇಲ್ ದೇಶದಲ್ಲಿದ್ದ ಅನ್ಯದೇಶಸ್ಥರನ್ನು ಲೆ
ಖ್ಖಿಸಿದನು; ತನ್ನ ತಂದೆಯಾದ ದಾವೀದನು ಅವರನ್ನು ಲೆಖ್ಖಿಸಿದ
ತರುವಾಯ ತಾನು ಲೆಖ್ಖಿಸಿದನು; ಅವರು ಲಕ್ಷಾ ಐವತ್ತು ಮೂ
೧೮ ರು ಸಾವಿರದ ಆರು ನೂರು ಮಂದಿ ಕಾಣಲ್ಪಟ್ಟರು. ಆಗ ಅವರ
ಲ್ಲಿ ಎಪ್ಪತ್ತು ಸಾವಿರ ಮಂದಿಯನ್ನು ಹೊರೆ ಹೊರುವದಕ್ಕೂ,
ಎಂಭತ್ತು ಸಾವಿರ ಮಂದಿಯನ್ನು ಬೆಟ್ಟದಲ್ಲಿ ಕಲ್ಲು ಕಡಿಯುವದ
ಕ್ಕೂ, ಮೂರು ಸಾವಿರದ ಆರು ನೂರು ಮಂದಿಯನ್ನು ಕೆಲಸ
ದವರ ಮೇಲೆ ಕಾವಲಿಯಾಗಿರುವದಕ್ಕೂ ಇರಿಸಿದನು.

## ೩. ಸಂಧಿ.

೧ ಆಗ ಸೊಲೊಮೋನನು ಯೆರೂಸಲೇಮಿನಲ್ಲಿ ತನ್ನ ತಂದೆ
ಯಾದ ದಾವೀದನಿಗೆ ಕರ್ತನು ಕಾಣಿಸಿ ಕೊಂಡ ಸ್ಥಳವಾದ ಮೊ
ರೀಯ ಬೆಟ್ಟದ ಮೇಲೆ, ದಾವೀದನು ಸಿದ್ಧ ಮಾಡಿದ ಸ್ಥಳವಾದ
ಯೆಬೂಸ್ಯನಾದ ಬರ್ನಾನನ ಕಣದಲ್ಲಿ ಕರ್ತನ ಮನೆಯನ್ನು
೨ ಕಟ್ಟ ಪ್ರಾರಂಭಿಸಿದನು. ತನ್ನ ಆಳ್ವಿಕೆಯ ನಾಲ್ಕನೇ ವರುಷದ ಎ
ರಡನೇ ತಿಂಗಳ ಎರಡನೇ ದಿವಸದಲ್ಲಿ ಕಟ್ಟಿಸ ಆರಂಭಿಸಿದನು.

೩ ದೇವರ ಮನೆ ಕಟ್ಟುವದಕ್ಕೆ ಸೊಲೊಮೋನನು ಹಾಕಿಸಿದ ಅ
ಸ್ತಿವಾರಗಳು ಏನಂದರೆ—ಮೊದಲಿನ ಅಳತೆಯ ಪ್ರಕಾರವಾಗಿ ಅ
ದರ ಉದ್ದ ಅರವತ್ತು ಮೊಳವು; ಅದರ ಅಗಲ ಇಪ್ಪತ್ತು ಮೊಳ
೪ ವು. ಮುಂದೆ ಇರುವ ಮಂಟಪ, ಮನೆಯ ಅಗಲದ ಪ್ರಕಾರ, ಇ
ಪ್ಪತ್ತು ಮೊಳ ಉದ್ದವಾಗಿತ್ತು; ನೂರ ಇಪ್ಪತ್ತು ಮೊಳ ಎತ್ತರ
ವಾಗಿತ್ತು. ಅವನು ಅದನ್ನು ಒಳಗಡೆ ಶುದ್ಧ ಭಂಗಾರದಿಂದ
ಹೊದಗಿಸಿದನು.

೫ ಮತ್ತು ಅವನು ದೊಡ್ಡ ಮನೆಯನ್ನು ತುರಾಯಿ ಮರಗಳಿಂ
ದ ಮುಚ್ಚಿ, ಅದನ್ನು ಶುದ್ಧ ಭಂಗಾರದಿಂದ ಹೊದಗಿಸಿ, ಅದರ
ಮೇಲೆ ಖರ್ಜೂರದ ಗಿಡಗಳನ್ನೂ ಸರಪಣಿಗಳನ್ನೂ ಕೆತ್ತಿಸಿದ
೬ ನು. ಇದಲ್ಲದೆ ಸೌಂದರ್ಯದ ನಿಮಿತ್ತವಾಗಿ ಅಮೂಲ್ಯವಾದ ಕ
ಲ್ಲುಗಳಿಂದ ಆ ಮನೆಯನ್ನು ಮುಚ್ಚಿದನು; ಅದರ ಭಂಗಾರವು ಪ
೭ ರ್ವಾಯಿಮಿನ ಭಂಗಾರವು. ಮನೆಯ ತೊಲೆಗಳನ್ನೂ, ಸ್ತಂಭ
ಗಳನ್ನೂ, ಗೋಡೆಗಳನ್ನೂ, ಬಾಗಲುಗಳನ್ನೂ, ಅವನು ಭಂ
ಗಾರದಿಂದ ಮುಚ್ಚಿ, ಗೋಡೆಗಳ ಮೇಲೆ ಕೆರೂಬಿಗಳನ್ನು ಕೆ
ತ್ತಿಸಿದನು.

೮ ಮತ್ತು ಮಹಾ ಪರಿಶುದ್ಧವಾದ ಮನೆಯನ್ನು ಮಾಡಿದನು; ಅ
ದರ ಉದ್ದವು, ಮನೆಯ ಅಗಲದ ಪ್ರಕಾರ, ಇಪ್ಪತ್ತು ಮೊಳ; ಅದ
ರ ಅಗಲ ಇಪ್ಪತ್ತು ಮೊಳವಾಗಿ, ಅವನು ಅದನ್ನು ಆರು ನೂ
ರು ತಲಾಂತುಗಳ ಶುದ್ಧ ಭಂಗಾರದಿಂದ ಮುಚ್ಚಿದನು. ಅದರ
೯ ಮೊಳೆಗಳು ಐವತ್ತು ಷೆಕೆಲುಗಳ ತೂಕ ಭಂಗಾರ. ಹಾಗೆಯೇ
ಮೇಲಿನ ಕೊಠಡಿಗಳನ್ನು ಭಂಗಾರದಿಂದ ಮುಚ್ಚಿದನು.



೧೦ ಮಹಾ ಪರಿಶುದ್ಧವಾದ ಮನೆಯಲ್ಲಿ ವಿಚಿತ್ರ ಕೆಲಸವಾದ ಎರ
ಡು ಕೆರೂಬಿಗಳನ್ನು ಮಾಡಿಸಿ, ಭಂಗಾರದಿಂದ ಅವುಗಳನ್ನು
೧೧ ಹೊದಗಿಸಿದನು. ಕೆರೂಬಿಗಳ ಕೆಕ್ಕೆಗಳು ಇಪ್ಪತ್ತು ಮೊಳ ಉ
ದ್ದವಾಗಿದ್ದವು; ಒಂದು ಕೆಕ್ಕೆಯು ಐದು ಮೊಳವಾಗಿದ್ದು, ಮನೆಯ
ಗೋಡೆಯ ಪರ್ಯಂತರ ಅಂದಿ ಕೊಂಡಿತ್ತು; ಮತ್ತೊಂದು ಕೆಕ್ಕೆ
ಐದು ಮೊಳವಾಗಿದ್ದು, ಇನ್ನೊಂದು ಕೆರೂಬಿಯ ಕೆಕ್ಕೆಯ ಮಟ್ಟಿ
೧೨ ಗೂ ಅಂದಿ ಕೊಂಡಿತ್ತು. ಹಾಗೆಯೇ ಮತ್ತೊಂದು ಕೆರೂಬಿಯ
ಕೆಕ್ಕೆಯು ಐದು ಮೊಳವಾಗಿದ್ದು, ಮನೆಯ ಗೋಡೆಯ ಪರ್ಯಂ
ತರ ಅಂದಿ ಕೊಂಡಿತ್ತು; ಇನ್ನೊಂದು ಕೆಕ್ಕೆಯು ಐದು ಮೊಳ
೧೩ ವಾಗಿದ್ದು, ಬೇರೆ ಇರುವ ಕೆರೂಬಿನ ಕೆಕ್ಕೆಗೆ ಕೂಡಿ ಕೊಂಡಿತ್ತು.
ಈ ಕೆರೂಬಿಗಳ ಕೆಕ್ಕೆಗಳು ಇಪ್ಪತ್ತು ಮೊಳಗಳ ಪರ್ಯಂತರ
ಜಾಚಿ ಕೊಂಡವು; ಅವು ತಮ್ಮ ಕಾಲುಗಳ ಮೇಲೆ ನಿಂತವು; ಅ
೧೪ ವುಗಳ ಮುಖಗಳು ಒಳ ಪಾರ್ಶ್ವವಾಗಿದ್ದವು. ತೆರೆಯನ್ನು ನೀ
ಲ, ರಕ್ತ, ಲೋಹಿತ ವರ್ಣಗಳಿಂದಲೂ, ನಾರಿನ ವಸ್ತ್ರದಿಂದಲೂ
ಮಾಡಿಸಿ, ಅದರಲ್ಲಿ ಕೆರೂಬಿಗಳನ್ನು ಮಾಡಿಸಿದನು.

೧೫ ಇದಲ್ಲದೆ ಅವನು ಮನೆಯ ಮುಂದೆ ಮೂವತ್ತೈದು ಮೊಳ
ಉದ್ದವುಳ್ಳ ಎರಡು ಸ್ತಂಭಗಳನ್ನು ಮಾಡಿಸಿದನು; ಒಂದೊಂದರ
೧೬ ತುದಿಯ ಮೇಲೆ ಐದು ಮೊಳ ಉದ್ದ ಬೋದಿಗೆಯನ್ನು ಇಟ್ಟನು.
ಅವನು ವಾಕ್ಯ ಸ್ಥಾನದಲ್ಲಿರುವ ಹಾಗೆ ಸರಪಣಿಗಳನ್ನು ಮಾಡಿ,
ಸ್ತಂಭಗಳ ತುದಿಗಳ ಮೇಲೆ ಇಟ್ಟು, ನೂರು ದಾಳಿಂಬ ಹಣ್ಣುಗ
೧೭ ಳನ್ನು ಮಾಡಿ, ಸರಪಣಿಗಳ ಮೇಲೆ ಇರಿಸಿದನು. ಮತ್ತು ಮಂದಿ
ರದ ಮುಂದೆ ಆ ಸ್ತಂಭಗಳನ್ನು—ಒಂದನ್ನು ಬಲಪಾರ್ಶ್ವದಲ್ಲಿ
ಯೂ, ಒಂದನ್ನು ಎಡಪಾರ್ಶ್ವದಲ್ಲಿಯೂ ನಿಲ್ಲಿಸಿದನು; ಬಲಪಾ
ರ್ಶ್ವದಲ್ಲಿ ಇದ್ದದ್ದಕ್ಕೆ ಯಕೀನೆಂದೂ, ಎಡಪಾರ್ಶ್ವದಲ್ಲಿದ್ದದ್ದಕ್ಕೆ
ಬೋಜೆಂದೂ ಹೆಸರಿಟ್ಟನು.

## ೪. ಸಂಧಿ.

೧ ಇದಲ್ಲದೆ ತಾಂಬ್ರದ ಬಲಿಪೀಠವನ್ನು ಮಾಡಿಸಿದನು; ಅದರ ಉ
ದ್ದ ಇಪ್ಪತ್ತು ಮೊಳವು. ಅದರ ಅಗಲ ಇಪ್ಪತ್ತು ಮೊಳವು; ಅದ
ರ ಎತ್ತರ ಹತ್ತು ಮೊಳವು.

೨ ಮತ್ತು ಎರಕದ ಸಮುದ್ರವನ್ನು ಮಾಡಿಸಿದನು; ಅದು ಬಟುವಾ
ಗಿ ಈ ಅಂಚಿನಿಂದ ಆ ಅಂಚಿಗೆ ಹತ್ತು ಮೊಳವು; ಅದರ ಎತ್ತರ
ಐದು ಮೊಳವು; ಸುತ್ತಳತೆ ಮೂವತ್ತು ಮೊಳ ನೂಲಳತೆಯಾಗಿ
೩ ತ್ತು. ಅದರ ಕೆಳಭಾಗದಲ್ಲಿ ಅದರ ಸುತ್ತಲೂ ಎತ್ತುಗಳ ರೂಪ
ಗಳಿದ್ದವು; ಅವು ಬಂದೊಂದು ಮೊಳಕ್ಕೆ ಹತ್ತಾಗಿ ಆ ಸಮುದ್ರದ
ಸುತ್ತಲೂ ಇದ್ದವು. ಇದು ಎರಕ ಹೊಯ್ಯಲ್ಪಟುವಾಗ, ಎತ್ತುಗ
೪ ಳ ರೂಪ ಎರಡು ಸಾಲಾಗಿ ಎರಕ ಹೊಯ್ಯಲ್ಪಟ್ಟಿದ್ದವು. ಅದು
ಹನ್ನೆರಡು ಎತ್ತುಗಳ ಮೇಲೆ ನಿಂತಿತ್ತು; ಮೂರು ಉತ್ತರಕ್ಕೂ,
ಮೂರು ಪಶ್ಚಿಮಕ್ಕೂ, ಮೂರು ದಕ್ಷಿಣಕ್ಕೂ, ಮೂರು ಪೂರ್ವ
ಕ್ಕೂ ನೋಡುತ್ತಿದ್ದವು. ಆ ಸಮುದ್ರ ಅವುಗಳ ಮೇಲೆ ಇತ್ತು,
೫ ಅವುಗಳ ಹಿಂಭಾಗಗಳೆಲ್ಲಾ ಒಳಗಾಗಿದ್ದವು. ಅದರ ದಪ್ಪವು ನಾ
ಲ್ಕು ಬೆರಳಷ್ಟಾಗಿಯೂ, ಅದರ ಅಂಚು ಪಾತ್ರೆಯ ಅಂಚಿನ
ಹಾಗೆಯೂ, ತಾವರೆ ಪುಷ್ಪದ ಹಾಗೆಯೂ ಇತ್ತು; ಅದು ಮೂ
ರು ಸಾವಿರ ಕೊಳಗ ಹಿಡಿಯುವದಾಗಿತ್ತು.

೬ ಇದಲ್ಲದೆ ಹತ್ತು ತೊಟ್ಟಿಗಳನ್ನು ಮಾಡಿಸಿ, ಅವುಗಳಲ್ಲಿ ತೊ
ಳೆಯುವ ನಿಮಿತ್ತವಾಗಿ, ಬಲಪಾರ್ಶ್ವದಲ್ಲಿ ಐದನ್ನೂ, ಎಡಪಾ
ರ್ಶ್ವದಲ್ಲಿ ಐದನ್ನೂ ಇರಿಸಿದನು. ಹೋಮಕ್ಕೋಸ್ಕರ ಅರ್ಪ
ಸುವವುಗಳನ್ನು ಅವುಗಳಲ್ಲಿ ತೊಳೆದರು. ಆದರೆ ಆ ಸಮುದ್ರ
ವು ಯಾಜಕರುಗೋಸ್ಕರ ತೊಳೆಯುವದಕ್ಕೆ ಇತ್ತು.

೭ ಮತ್ತು, ಅವುಗಳ ಮಾದ್ರಿಯ ಪ್ರಕಾರವಾಗಿ, ಹತ್ತು ಭಂಗಾ
ರದ ದೀಪ ಸ್ತಂಭಗಳನ್ನು ಮಾಡಿಸಿ, ಮಂದಿರದಲ್ಲಿ ಬಲಗಡೆ ಐದ
೮ ನ್ನೂ ಎಡಗಡೆ ಐದನ್ನೂ ಇರಿಸಿದನು. ಹಾಗೆಯೇ ಅವನು ಹತ್ತು
ಮೇಜುಗಳನ್ನು ಮಾಡಿಸಿ, ಮಂದಿರದಲ್ಲಿ ಬಲಗಡೆ ಐದನ್ನೂ, ಎ
ಡಗಡೆ ಐದನ್ನೂ ಇರಿಸಿದನು. ಮತ್ತು ನೂರು ಭಂಗಾರದ ಬ
ಟ್ಟಲುಗಳನ್ನು ಮಾಡಿಸಿದನು.

೯ ಇದಲ್ಲದೆ ಅವನು ಯಾಜಕರ ಅಂಗಳವನ್ನೂ, ದೊಡ್ಡ ಅಂ
ಗಳವನ್ನೂ ಅಂಗಳಗಳಿಗೋಸ್ಕರ ಬಾಗಲುಗಳನ್ನೂ ಮಾಡಿಸಿ,
೧೦ ಆ ಬಾಗಲುಗಳನ್ನು ತಾಂಬ್ರದಿಂದ ಹೊದಗಿಸಿದನು. ಸಮುದ್ರವ
ನ್ನು ಪೂರ್ವಭಾಗದ ಬಲಪಾರ್ಶ್ವದಲ್ಲಿ ದಕ್ಷಿಣಕ್ಕೆ ಎದುರಾಗಿ
ಇರಿಸಿದನು.

೧೧ ಮತ್ತು ಹಿರಾಮನು ಪಾತ್ರೆಗಳನ್ನೂ ಸಲಿಕೆಗಳನ್ನೂ, ಬಟ್ಟಲು
ಗಳನ್ನೂ ಮಾಡಿದನು. ಹೀಗೆಯೇ ಹಿರಾಮನು ದೇವರ ಮನೆ
ಗೋಸ್ಕರ ಅರಸನಾದ ಸೊಲೊಮೋನನಿಗೆ ಮಾಡ ಬೇಕಾದ
೧೨ ಕಾರ್ಯವನ್ನು ಮಾಡಿ ತೀರಿಸಿದನು. ಎರಡು ಸ್ತಂಭಗಳನ್ನೂ,
ಎರಡು ಸ್ತಂಭಗಳ ಮೇಲಿರುವ ಕುಂಭಗಳನ್ನೂ, ಕುಂಭಗಳ ತು
ದಿಯ ಮೇಲಿರುವ ಎರಡು ಕುಂಭಗಳ ಮೇಲೆ ಮುಚ್ಚುವ ಎರಡು
೧೩ ಜಾಲರು ಹೆಣಿತಗಳನ್ನೂ, ಕಂಭಗಳ ಮೇಲಿರುವ ಎರಡು ಕುಂಭ
ಗಳನ್ನು ಮುಚ್ಚ ತಕ್ಕದ್ದಾದ ಒಂದೊಂದು ಜಾಲರು ಹೆಣಿತಕ್ಕೆ
ಎರಡು ಸಾಲು ದಾಳಿಂಬರ ಕಾಯಿಗಳನ್ನೂ, ಎರಡು ಜಾಲರು
ಹೆಣಿತಗಳಿಗೆ ನಾನೂರು ದಾಳಿಂಬರ ಕಾಯಿಗಳನ್ನೂ ಮಾಡಿದ
೧೪ ನು. ಇದಲ್ಲದೆ ಅವನು ಆಧಾರಗಳನ್ನೂ, ಅದರ ಮೇಲೆ ಇರುವ
೧೫ ತೊಟ್ಟಿಗಳನ್ನೂ ಮಾಡಿದನು. ಒಂದು ಸಮುದ್ರವನ್ನೂ, ಅದರ
ಕೆಳಗೆ ಇರುವ ಹನ್ನೆರಡು ಎತ್ತುಗಳನ್ನೂ, ಪಾತ್ರೆಗಳನ್ನೂ ಸ
೧೬ ಲಿಕೆಗಳನ್ನೂ, ಮುಳ್ಳುಗಳನ್ನೂ ಅವುಗಳ ಎಲ್ಲಾ ಸಾಮಾನುಗ
ಳನ್ನೂ ಅರಸನಾದ ಸೊಲೊಮೋನನಿಗೆ ತಂದೆಯಾದ ಹಿರಾಮ
ನು ಹೊಳೆಯುವ ತಾಂಬ್ರದಿಂದ ಕರ್ತನ ಮನೆಗೋಸ್ಕರ ಮಾಡಿ
೧೭ ದನು. ಯೊರ್ದನಿನ ತಗ್ಗಿನಲ್ಲಿ, ಸುಕ್ಕೋತಿಗೂ ಚರೆದದಕ್ಕೂ
ನಡುವೆ ಇರುವ ಜೇಡು ಮಣ್ಣಿನ ಸ್ಥಳದಲ್ಲಿ ಅರಸನು ಅವುಗಳನ್ನು
ಎರಕ ಹೊಯಿಸಿದನು.

೧೮ ಸೊಲೊಮೋನನು ಈ ಸಾಮಾನುಗಳನ್ನೆಲ್ಲಾ ಬಹಳವಾಗಿ
ಮಾಡಿಸಿದನು. ಯಾಕಂದರೆ ಆ ತಾಂಬ್ರದ ತೂಕ ತಿಳಿಯಕೂಡದೆ
೧೯ ಇತ್ತು. ಹೀಗೆಯೇ ಸೊಲೊಮೋನನು ಕರ್ತನ ಮನೆಯ ಎಲ್ಲಾ
ಸಾಮಾನುಗಳನ್ನೂ, ಭಂಗಾರದ ಧೂಪ ಪೀಠವನ್ನೂ, ಸಮುಖ
೨೦ ದ ಕೊಟ್ಟಿಗಳನ್ನು ಇಡುವ ಮೇಜುಗಳನ್ನೂ, ಶುದ್ಧ ಭಂಗಾರವಾ
ದ ವಾಕ್ಯ ಸ್ಥಾನದ ಮುಂದೆ ನ್ಯಾಯದ ಪ್ರಕಾರ ಹತ್ತಿಸುವ ದೀಪ
೨೧ ಸ್ತಂಭಗಳನ್ನೂ, ಅವುಗಳ ದೀಪಗಳನ್ನೂ, ಹೂವುಗಳನ್ನೂ,
ದೀಪಗಳನ್ನೂ ಚಿಮಟಿಗಳನ್ನೂ ಭಂಗಾರದಿಂದ—ನಿರ್ಮಲವಾ
ದ ಭಂಗಾರದಿಂದ ಮಾಡಿಸಿದನು; ಕತ್ತರಿಗಳನ್ನೂ, ಬಟ್ಟಲುಗಳ
ನ್ನೂ, ಚಾಟುಗಳನ್ನೂ, ಅಗ್ನಿ ಪಾತ್ರೆಗಳನ್ನೂ ಶುದ್ಧ ಭಂಗಾ
೨೨ ರದಿಂದ ಮಾಡಿಸಿದನು. ಇದಲ್ಲದೆ ಮನೆಯ ಪ್ರವೇಕದ ಸ್ಥಳವೂ,

ಮಹಾ ಪರಿಶುದ್ಧ ಸ್ಥಾನಕ್ಕೋಸ್ಕರವಾಗಿರುವ ಅದರ ಅಂತರಂಗದ
ಬಾಗಲುಗಳೂ, ಮಂದಿರದ ಮನೇ ಬಾಗಲುಗಳೂ, ಭಂಗಾರ
ವಾಗಿದ್ದವು.

## ೫. ಸಂಧಿ.

೧ ಹೀಗೆಯೇ ಸೊಲೊಮೋನನು ಕರ್ತನ ಮನೆಗೋಸ್ಕರ ಮಾ
ಡಿಸಿದ ಕೆಲಸವೆಲ್ಲಾ ಮುಗಿಯಿತು. ಆಗ ಸೊಲೊಮೋನನು ತ
ನ್ನ ತಂದೆಯಾದ ದಾವೀದನು ಪರಿಶುದ್ಧ ಮಾಡಿದ್ದ ಬೆಳ್ಳಿಯ
ನ್ನೂ, ಭಂಗಾರವನ್ನೂ, ಎಲ್ಲಾ ಸಾಮಾನುಗಳನ್ನೂ ದೇವರ
೨ ಮನೆಯ ಬೊಕ್ಕಸಗಳಲ್ಲಿ ಇಟ್ಟನು. ಆಗ ಚಿಯೋನೆಂಬ ದಾ
ವೀದನ ಪಟ್ಟಣದಿಂದ ಕರ್ತನ ಒಡಂಬಡಿಕೆಯ ಪೆಟ್ಟಿಗೆಯನ್ನು ತ
ರುವ ನಿಮಿತ್ತ, ಸೊಲೊಮೋನನು ಇಸ್ರಯೇಲಿನ ಮಕ್ಕಳಲ್ಲಿರು
ವ ಪ್ರಭುಗಳಾದ ತಂದೆಗಳಾಗಿರುವ ಇಸ್ರಯೇಲಿನ ಹಿರಿಯರ
ನ್ನೂ ಕುಲಗಳ ಯಜಮಾನರನ್ನೂ ಯೆರೂಸಲೇಮಿಗೆ ಕೂಡಿ
ಬರ ಮಾಡಿದನು.
3 ಅದರಿಂದ ಏಳನೇ ತಿಂಗಳಿನ ಹಬ್ಬದಲ್ಲಿ ಇಸ್ರಯೇಲಿನ ಮ
೪ ನುಷ್ಯರೆಲ್ಲರು ಅರಸನ ಬಳಿಗೆ ಬಂದು ಕೂಡಿದರು. ಇಸ್ರಯೇ
ಲ ಹಿರಿಯರೆಲ್ಲರು ಬಂದಾಗ, ಲೇವ್ಯರು ಪೆಟ್ಟಿಗೆಯನ್ನು ಎತ್ತಿಕೊಂ
೫ ಡರು. ಒಡಂಬಡಿಕೆಯ ಪೆಟ್ಟಿಗೆಯನ್ನೂ ಸಭೆಯ ಗುಡಾರವನ್ನೂ
ಗುಡಾರದಲ್ಲಿದ್ದ ಸಮಸ್ತ ಪರಿಶುದ್ಧವಾದ ಪಾತ್ರೆಗಳನ್ನೂ ತಂದರು;
೬ ಇವುಗಳನ್ನು ಯಾಜಕರೂ ಲೇವ್ಯರೂ ತಂದರು. ಆಗ ಅರಸ
ನಾದ ಸೊಲೊಮೋನನೂ ತನ್ನ ಬಳಿಯಲ್ಲಿ ಪೆಟ್ಟಿಗೆಯ ಮುಂ
ದೆ ಕೂಡಿ ಕೊಂಡ ಇಸ್ರಯೇಲ ಸಭೆಯವರೆಲ್ಲರೂ ಲೆಖ್ಖಿಸಲೂ
ಎಣಿಸಲೂ ಕೂಡದ ಕುರಿಗಳನ್ನೂ ದನಗಳನ್ನೂ ಬಲಿಯಾಗಿ
೭ ಅರ್ಪಿಸಿದರು. ಇದಲ್ಲದೆ ಯಾಜಕರು ಕರ್ತನ ಒಡಂಬಡಿಕೆಯ
ಪೆಟ್ಟಿಗೆಯನ್ನು ಮಹಾ ಪರಿಶುದ್ಧ ಸ್ಥಳಕ್ಕೆ—ಮನೆಯ ವಾಕ್ಯ
ಸ್ಥಾನಕ್ಕೆ—ಕೆರೂಬಿಗಳ ಕೆಕ್ಕೆಗಳ ಕೆಳಗಾದ ಅದರ ಸ್ಥಳಕ್ಕೆ
೮ ತಂದು ಬಿಟ್ಟರು. ಕೆರೂಬಿಗಳು ಪೆಟ್ಟಿಗೆಯ ಸ್ಥಳದ ಮೇಲೆ ತಮ್ಮ
ರೆಕ್ಕೆಗಳನ್ನು ಚಾಚಿ ಕೊಂಡಿದ್ದವು; ಹೀಗೆಯೇ ಕೆರೂಬಿಗಳು
ಪೆಟ್ಟಿಗೆಯನ್ನೂ ಅದರ ಕೋಲುಗಳನ್ನೂ ಮೇಲಿನಿಂದ ಮುಚ್ಚಿ
೯ ಕೊಂಡಿದ್ದವು. ಆಗ ಕೋಲುಗಳ ಕೊನೆಗಳು ವಾಕ್ಯಸ್ಥಾನದ
ಮುಂದೆ ಪೆಟ್ಟಿಗೆಯಿಂದ ಕಾಣಲ್ಪಡುವ ಹಾಗೆ, ಕೋಲುಗಳನ್ನು
ಎಳೆಕೊಂಡರು. ಆದರೆ ಅವು ಹೊರಗೆ ಕಾಣಲ್ಪಡಲಿಲ್ಲ. ಅಲ್ಲಿ
೧೦ ಇಂದಿನ ವರಿಗೂ ಇರುತ್ತದೆ. ಇಸ್ರಯೇಲ ಮಕ್ಕಳು ಐಗುಪ್ತ
ದೇಶದಿಂದ ಬಂದಾಗ ಕರ್ತನು ಅವರ ಸಂಗಡ ಒಡಂಬಡಿಕೆಯ
ನ್ನು ಮಾಡಿದಾಗ, ಮೋಶೆಯು ಹೋರೆಬಿನ ಬಳಿಯಲ್ಲಿ ಪೆಟ್ಟಿಗೆ
ಯೊಳಗೆ ಇಟ್ಟ ಕಲ್ಲಿನ ಎರಡು ಹಲಿಗೆಗಳ ಹೊರ್ತು ಅದರಲ್ಲಿ
ಮತ್ತೇನೂ ಇಲ್ಲ.
೧೧ ಇದಲ್ಲದೆ ಅಲ್ಲಿ ಇದ್ದ ಸಮಸ್ತ ಯಾಜಕರು ಪರಿಶುದ್ಧವಾಗಿದ್ದು,
ಒಂತುಗಳ ಪ್ರಕಾರ ಕಾಯದೆ ಇದ್ದದರಿಂದ, ಯಾಜಕರು ಪರಿಶು
ದ್ಧ ಸ್ಥಳದಿಂದ ಹೊರಟಾಗ ಲೇವ್ಯರಾದ ಸಂಗೀತಗಾರರಾಗಿರುವ
ಆಸಾಫನ, ಹೆಮಾನನ, ಯೆದುತೂನನವರೆಲ್ಲರೂ, ಅವರ ಮ
೧೨ ಕ್ಕಳೂ, ಅವರ ಸಹೋದರರೂ ನಾರು ಮಡಿಯನ್ನು ಧರಿಸಿ
ಕೊಂಡು, ತಾಳಗಳನ್ನೂ, ವೀಣೆಗಳನ್ನೂ, ಕಿನ್ನರಿಗಳನ್ನೂ ಹಿ
ಡಿದು, ಬಲಿಪೀಠದ ಮೂಲ್ಲಪಾರ್ಶ್ವದಲ್ಲಿ ನಿಂತು ಕೊಂಡರು; ಅ
ವರ ಸಂಗಡ ನೂರ ಇಪ್ಪತ್ತು ಮಂದಿ ಯಾಜಕರು ತುತೂರಿಗ
೧೩ ಳನ್ನು ಊದುತ್ತಾ ಇದ್ದರು. ತುತೂರಿ ಊದುವವರೂ, ಸಂಗೀತ
ಗಾರರೂ ಕರ್ತನನ್ನು ಕೊಂಡಾಡುತ್ತಾ, ಹೊಗಳುತ್ತಾ ಏಕವಾಗಿ
ಒಂದೇ ಶಬ್ದ ಮಾಡಲಾಗಿ, ತುತೂರಿಗಳೂ ತಾಳಗಳೂ ಮೊದ
ಲಾದ ಗೀತ ವಾದ್ಯಗಳಿಂದ ತಮ್ಮ ಶಬ್ದವನ್ನೆತ್ತಿ, ಅವನು ಉತ್ತಮ
ನೆಂದೂ ಅವನ ಕೃಪೆಯು ಯುಗ ಯುಗಕ್ಕೆ ಇರುವದೆಂದೂ
ಕರ್ತನನ್ನು ಹೊಗಳುವಾಗ, ಏನಾಯಿತಂದರೆ, ಮನೆಯು, ಕ
೧೪ ರ್ತನ ಮನೆಯು ಮೇಘದಿಂದ ತುಂಬಲ್ಪಟ್ಟಿತು. ಮೇಘುಕ್ಕೋ
ಸ್ಕರ ಯಾಜಕರು ಸೇವಿಸ ನಿಲ್ಲಲಾರದೆ ಇದ್ದರು; ಯಾಕಂದರೆ
ಕರ್ತನ ಘನವು ದೇವರ ಮನೆಯನ್ನು ತುಂಬಿತ್ತು.

## ೬. ಸಂಧಿ.

೧ ಆಗ ಸೊಲೊಮೋನನು ಹೇಳಿದ್ದೇನಂದರೆ—ಕಾರ್ಗತ್ತಲಲ್ಲಿ
೨ ವಾಸವಾಗಿರುವೆನೆಂದು, ಕರ್ತನು ಹೇಳಿದ್ದಾನೆ. ಆದರೆ ನಿನಗೆ ನಿ
ವಾಸದ ಮನೆಯನ್ನೂ ನೀನು ಯುಗ ಯುಗಾಂತರಗಳಿಗೂ ವಾ
3 ಸ ಮಾಡ ತಕ್ಕ ಸ್ಥಾನವನ್ನೂ ನಾನು ಕಟ್ಟಿಸಿದ್ದೇನೆ. ಮತ್ತು
ಅರಸನು ತನ್ನ ಮುಖವನ್ನು ತಿರಿಗಿಸಿ, ಇಸ್ರಯೇಲಿನ ಕೂಟವ
ನ್ನೆಲ್ಲಾ ಆಶೀರ್ವದಿಸಿದನು. ಇಸ್ರಯೇಲಿನ ಕೂಟವೆಲ್ಲಾ ನಿಂತಿತ್ತು.
೪ ಅವನು ಹೇಳಿದ್ದೇನಂದರೆ—ನನ್ನ ತಂದೆಯಾದ ದಾವೀದನ ಸಂ
ಗಡ ಮಾತಾಡಿ, ತನ್ನ ಕೈಯಿಂದ ತೀರಿಸಿದ ಇಸ್ರಯೇಲರ ದೇವ
ರಾದ ಕರ್ತನು ಆಶೀರ್ವದಿಸಲ್ಪಟನು. ಆತನು ಹೇಳಿದ್ದೇನಂದರೆ—
೫ ನನ್ನ ಜನವಾದ ಇಸ್ರಯೇಲನ್ನು ಐಗುಪ್ತ ದೇಶದಿಂದ ಬರ ಮಾ
ಡಿದ ದಿನ ಮೊದಲು ಗೊಂಡು ನನ್ನ ಹೆಸರು ಅದರಲ್ಲಿ ಇರುವ ಬ
ಗ್ಯೆ ಮನೆಯನ್ನು ಕಟ್ಟುವದಕ್ಕೆ, ಇಸ್ರಯೇಲಿನ ಸಮಸ್ತ ಕುಲಗ
ಳೊಳಗಿಂದ ಪಟ್ಟಣವನ್ನು ಆದುಕೊಳ್ಳಲಿಲ್ಲ; ನನ್ನ ಜನವಾದ ಇಸ್ರ
ಯೇಲಿನ ಮೇಲೆ ನಾಯಕನಾಗಿರ ನಾನು ಒಬ್ಬನನ್ನಾದರೂ ಆ
೬ ದು ಕೊಳ್ಳಲಿಲ್ಲ. ಆದರೆ ನನ್ನ ಹೆಸರು ಅಲ್ಲಿ ಇರುವ ಬಗ್ಯೆ
ಯೆರೂಸಲೇಮನ್ನೂ ನನ್ನ ಜನವಾದ ಇಸ್ರಯೇಲಿನ ಮೇಲೆ ಇ
೭ ರ ದಾವೀದನನ್ನೂ ಆದು ಕೊಂಡಿದ್ದೇನೆ. ಆದಕಾರಣ ಇಸ್ರಯೇ
ಲಿನ ದೇವರಾದ ಕರ್ತನ ಹೆಸರಿಗೆ ಮನೆಯನ್ನು ಕಟ್ಟಿಸ ನನ್ನ ತಂ
೮ ದೆಯಾದ ದಾವೀದನಿಗೆ ಮನಸ್ಸಿತ್ತು. ಆಗ ಕರ್ತನು ನನ್ನ ತಂ
ದೆಯಾದ ದಾವೀದನಿಗೆ ಹೇಳಿದನು—ನನ್ನ ಹೆಸರಿಗೆ ಮನೆಯನ್ನು
ಕಟ್ಟಿಸ ನಿನಗೆ ಮನಸ್ಸಾಗಿತ್ತಲ್ಲ! ನಿನಗೆ ಮನಸ್ಸಾಗಿರುವದರಿಂದ
೯ ಚನ್ನಾಗಿ ಮಾಡಿದಿ. ಆದರೆ ನೀನು ಮನೆಯನ್ನು ಕಟ್ಟಿಸ ಬೇಡ;
ನಿನ್ನ ತೊಡೆಗಳೊಳಗಿಂದ ಹೊರಡುವ ಮಗನು ಅವನೇ ನನ್ನ
೧೦ ಹೆಸರಿಗೆ ಮನೆಯನ್ನು ಕಟ್ಟಿಸುವನು, ಅಂದನು. ಮತ್ತು ಕರ್ತನು
ತಾನು ಹೇಳಿದ ವಾಕ್ಯವನ್ನು ನಿಲ್ಲಿಸಿದ್ದಾನೆ. ನಾನು ನನ್ನ ತಂದೆ
ಯಾದ ದಾವೀದನಿಗೆ ಬದಲಾಗಿ ಎದ್ದು, ಕರ್ತನು ಮಾತು ಕೊ
ಟ್ಟ ಪ್ರಕಾರ, ಇಸ್ರಯೇಲಿನ ಸಿಂಹಾಸನದ ಮೇಲೆ ಕುಳಿತು ಕೊಂ
ಡು, ಇಸ್ರಯೇಲಿನ ದೇವರಾದ ಕರ್ತನ ಹೆಸರಿಗೆ ಮನೆಯನ್ನು
೧೧ ಕಟ್ಟಿಸಿ, ಕರ್ತನು ಇಸ್ರಯೇಲ ಮಕ್ಕಳ ಸಂಗಡ ಮಾಡಿದ ಕರ್ತ
ನ ಒಡಂಬಡಿಕೆಯು ಇರುವ ಪೆಟ್ಟಿಗೆಯನ್ನು ಅದರಲ್ಲಿ ಇಟ್ಟಿದ್ದೇನೆ.
೧೨ ಆಗ ಇಸ್ರಯೇಲಿನ ಕೂಟದವೆಲ್ಲರ ಸಮುಖದಲ್ಲಿ ದೇವರ
೧೩ ಬಲಿಪೀಠದ ಮುಂದೆ ನಿಂತು, ತನ್ನ ಕೈಗಳನ್ನು ಚಾಚಿದೆನು. ಯಾ
ಕಂದರೆ ಸೊಲೊಮೋನನು ಐದು ಮೊಳ ಉದ್ದವೂ, ಐದು ಮೊ



ಳ ಅಗಲವೂ, ಮೂರು ಮೊಳ ಎತ್ತರವೂ ಆಗಿರುವ ಒಂದು ತಾಂ
ಬ್ರದ ಪೀಠವನ್ನು ಮಾಡಿಸಿ, ಅಂಗಳದ ಮಧ್ಯದಲ್ಲಿ ಅದನ್ನು ಇರಿ
ಸಿ, ತಾನು ಅದರ ಮೇಲೆ ನಿಂತನು. ಮತ್ತು ಇಸ್ರಯೇಲಿನ ಸಮ
ಸ್ತ ಕೂಟದ ಮುಂದೆ ಮೊಣಕಾಲೂರಿ, ಆಕಾಶಕ್ಕೆ ತನ್ನ ಕೈಗಳ
ನ್ನು ಚಾಚಿ ಹೇಳಿದ್ದೇನಂದರೆ—
೧೪ ಇಸ್ರಯೇಲಿನ ದೇವರಾದ ಕರ್ತನೇ, ಆಕಾಶದಲ್ಲಾದರೂ ಭೂ
ಮಿಯಲ್ಲಾದರೂ ನಿನ್ನ ಹಾಗೆ ದೇವರು ಯಾರೂ ಇಲ್ಲ. ತಮ್ಮ
ಸಂಪೂರ್ಣ ಹೃದಯದಿಂದ ನಡೆಯುವ ನಿನ್ನ ಸೇವಕರಿಗೋ
೧೫ ಸ್ಕರ ಕೃಪೆಯನ್ನೂ ಒಡಂಬಡಿಕೆಯನ್ನೂ ಕೈಕೊಳ್ಳುತ್ತೀ.
ನೀನು ನಿನ್ನ ಸೇವಕನಾದಂಥ, ನನ್ನ ತಂದೆಯಾದ ದಾವೀದನಿ
ಗೋಸ್ಕರ ಕೊಟ್ಟ ಮಾತನ್ನು ಕೈಕೊಂಡಿ; ನೀನು ನಿನ್ನ ಬಾಯಿ
೧೬ ಯಿಂದ ಹೇಳಿದ್ದನ್ನು ಇಂದು ನಿನ್ನ ಕೈಯಿಂದ ತೀರಿಸಿದಿ. ಆದ
ಕಾರಣ, ಇಸ್ರಯೇಲಿನ ದೇವರಾದ ಕರ್ತನೇ, ನಿನ್ನ ಮಕ್ಕಳು
ತಮ್ಮ ಮಾರ್ಗಕ್ಕೆ ಜಾಗ್ರತೆಯಾಗಿದ್ದು, ನೀನು ನನ್ನ ಮುಂದೆ
ನಡೆದ ಹಾಗೆ, ಅವರು ನನ್ನ ನ್ಯಾಯ ಪ್ರಮಾಣದ ಪ್ರಕಾರ ನ
ಡೆದರೆ, ಇಸ್ರಯೇಲಿನ ಸಿಂಹಾಸನದ ಮೇಲೆ ನನ್ನ ಸಮುಖದಲ್ಲಿ
ಕುಳಿತು ಕೊಳ್ಳ ನಿನಗೆ ಮನುಷ್ಯನು ಕೊರತೆಯಾಗುವದಿಲ್ಲ
ವೆಂದು, ನೀನು ನನ್ನ ತಂದೆಯಾದ, ನಿನ್ನ ಸೇವಕನಾದ ದಾವೀ
೧೭ ದನಿಗೆ ಹೇಳಿದ್ದನ್ನು ನಡಿಸು. ಈಗ, ಇಸ್ರಯೇಲಿನ ದೇವರಾದ
ಕರ್ತನೇ, ನನ್ನ ತಂದೆಯಾದ, ನಿನ್ನ ಸೇವಕನಾದ ದಾವೀದನಿಗೆ
ಹೇಳಿದ ವಾಕ್ಯವು ನಿಶ್ಚಯವಾಗಲಿ.
೧೮ ಆದರೆ ದೇವರು ನಿಶ್ಚಯವಾಗಿ ಭೂಮಿಯ ಮೇಲೆ ಮನುಷ್ಯ
ರ ಸಂಗಡ ವಾಸವಾಗಿರುವನೋ! ಇಗೋ, ಆಕಾಶಗಳೂ, ಆಕಾ
ಶಾಕಾಶಗಳೂ ನಿನ್ನನ್ನು ಹಿಡಿಯಲಾರವು; ಹಾಗಾದರೆ, ನಾನು
೧೯ ಕಟ್ಟಿಸಿದ ಈ ಮನೆಯು ನಿನ್ನನ್ನು ಹಿಡಿಯುವದು ಹ್ಯಾಗೆ! ಆದ
ರೆ, ನನ್ನ ದೇವರಾದ ಕರ್ತನೇ, ನಿನ್ನ ಸೇವಕನು ನಿನ್ನ ಮುಂದೆ
ಪ್ರಾರ್ಥಿಸಿದ ಪ್ರಾರ್ಥನೆಯನ್ನೂ ಪೊರೆಯನ್ನೂ ಕೇಳುವ ಹಾ
ಗೆ, ನಿನ್ನ ಸೇವಕನ ಪ್ರಾರ್ಥನೆಯನ್ನೂ ಅವನ ವಿಜ್ಞಾಪನೆಯ
೨೦ ನ್ನೂ ಕಟಾಕ್ಷಿಸು. ನಿನ್ನ ಸೇವಕನು ಈ ಸ್ಥಳದಲ್ಲಿ ಮಾಡುವ
ಪ್ರಾರ್ಥನೆಯನ್ನು ನೀನು ಕೇಳುವ ಹಾಗೆ, ಅಲ್ಲಿ ನನ್ನ ಹೆಸರು
ಇರುವದೆಂದು ನೀನು ಹೇಳಿದ ಈ ಸ್ಥಳದ ಮೇಲೆ, ಈ ಮನೆಯ
೨೧ ಮೇಲೆ ರಾತ್ರಿ ಹಗಲೂ ನಿನ್ನ ಕಣ್ಣುಗಳು ತೆರೆದಿರಲಿ. ಇದಲ್ಲದೆ
ನೀನು ನಿನ್ನ ಸೇವಕನ ವಿಜ್ಞಾಪನೆಯನ್ನೂ ನಿನ್ನ ಜನರಾದ ಇ
ಸ್ರಯೇಲಿನ ವಿಜ್ಞಾಪನೆಯನ್ನೂ ಕೇಳು. ಅವರು ಈ ಸ್ಥಳದ ಕ
ಡೆಗೆ ಪ್ರಾರ್ಥಿಸುವಾಗ, ನೀನು ವಾಸ ಮಾಡುವ ಸ್ಥಳದಿಂದ, ಆ
ಕಾಶದಿಂದ ನೀನು ಕೇಳು; ಕೇಳಿದಾಗ, ಮನ್ನಿಸು.
೨೨ ಯಾವನಾದರೂ ತನ್ನ ನೆರೆಯವನಿಗೆ ವಿರೋಧವಾಗಿ ಪಾ
ಪ ಮಾಡಲು, ಅವನು ಆಣೆ ಇಡ ಬೇಕೆಂದು, ಆಣೆ ನೇಮಿಸಲು,
೨3 ಈ ಮನೆಯಲ್ಲಿ ನಿನ್ನ ಬಲಿಪೀಠದ ಮುಂದೆ ಈ ಆಣೆ ಬಂದರೆ,
ನೀನು ದುಷ್ಟನ ಮಾರ್ಗವನ್ನು ಅವನ ತಲೆಯ ಮೇಲೆ ಬರ ಮಾ
ಡಿ, ಅವನಿಗೆ ಬದಲು ಕೊಡುವ ಹಾಗೆಯೂ, ನೀತಿವಂತನನ್ನು
ನೀತಿವಂತನಾಗ ಮಾಡಿ, ಅವನ ನೀತಿಯ ಪ್ರಕಾರ ಅವನಿಗೆ ಕೊ
ಡುವ ಹಾಗೆಯೂ, ನೀನು ಆಕಾಶದಿಂದ ಕೇಳಿ, ನಡಿಸಿ, ನಿನ್ನ ಸೇ
ವಕರ ನ್ಯಾಯವನ್ನು ತೀರಿಸು.
೨೪ ನಿನ್ನ ಜನರಾದ ಇಸ್ರಯೇಲರು ನಿನಗೆ ವಿರೋಧವಾಗಿ ಪಾ
ಪ ಮಾಡಿದ್ದರಿಂದ, ಶತ್ರುವಿನ ಮುಂದೆ ಮುರಿಯಲ್ಪಟ್ಟಾಗ ಅವ
ರು ತಿರುಗಿ, ಈ ಮನೆಯಲ್ಲಿ ನಿನ್ನ ಮುಂದೆ ನಿನ್ನ ಹೆಸರನ್ನು ಕೊಂ
೨೫ ಡಾಡಿ, ಪ್ರಾರ್ಥಿಸಿ, ವಿಜ್ಞಾಪನೆ ಮಾಡಿದರೆ, ಆಗ ನೀನು ಆಕಾಶದಿಂ
ದ ಕೇಳಿ, ನಿನ್ನ ಜನರಾದ ಇಸ್ರಯೇಲಿನ ಪಾಪವನ್ನು ಮನ್ನಿಸಿ,
ನೀನು ಅವರಿಗೂ ಅವರ ತಂದೆಗಳಿಗೂ ಕೊಟ್ಟ ದೇಶಕ್ಕೆ ಅವರ
ನ್ನು ತಿರಿಗಿ ಬರ ಮಾಡು.
೨೬ ಅವರು ನಿನಗೆ ವಿರೋಧವಾಗಿ ಪಾಪ ಮಾಡಿದ್ದರಿಂದ, ಆಕಾಶ
ವು ಮುಚ್ಚಲ್ಪಟ್ಟು, ಮಳೆ ಇಲ್ಲದಿರುವಾಗ, ನೀನು ಅವರನ್ನು ಕಂ
ದಿಸಿದ್ದರಿಂದ, ಅವರು ಈ ಸ್ಥಳದ ಕಡೆಗೆ ಪ್ರಾರ್ಥಿಸಿ, ನಿನ್ನ ಹೆಸರ
೨೭ ನ್ನು ಕೊಂಡಾಡಿ, ತಮ್ಮ ಪಾಪವನ್ನು ಬಿಟ್ಟು ತಿರುಗಿದರೆ, ಆಗ
ನೀನು ಆಕಾಶದಿಂದ ಕೇಳಿ, ನಿನ್ನ ಸೇವಕರ, ಇಸ್ರಯೇಲ ಜನ
ರ ಪಾಪವನ್ನು ಮನ್ನಿಸಿ, ಅವರು ನಡಿಯ ಬೇಕಾದ ಒಳ್ಳೇ ಮಾ
ರ್ಗವನ್ನು ಕಲಿಸಿ, ಬಾಧ್ಯತೆಯಾಗಿ ನಿನ್ನ ಜನರಿಗೆ ಕೊಟ್ಟ ಭೂ
೨೮ ಮಿಯ ಮೇಲೆ ಮಳೆಯನ್ನು ಕೊಡು. ದೇಶದಲ್ಲಿ ಬರವಾದರೂ,
ಜಾಡ್ಯವು, ಉರಿಘುಳ್ಳಿಯು, ಕಾಡಿಗೆಯು, ಬಿಡಿತೆಗಳು, ಕಂಬಳಿ
ಹುಳಿಗಳು, ಇವುಗಳಾದರೂ ಇದ್ದರೆ, ಅವರ ಶತ್ರುಗಳು ಅವರ
ಸ್ವದೇಶದ ಪಟ್ಟಣಗಳಲ್ಲಿ ಅವರನ್ನು ಇಕ್ಕಟ್ಟು ಮಾಡಿದರೆ, ಯಾ
ವ ಬಾಧೆ ಯಾವ ಬೇನೆ ಇದ್ದರೂ, ತನ್ನ ಬಾಧೆಯನ್ನೂ ತನ್ನ
೨೯ ವ್ಯಸನವನ್ನೂ ಶಿಳ್ಳಿಯುವ ಯಾವ ಮನುಷ್ಯನಾದರೂ, ನಿನ್ನ
ಜನವಾದ ಸಮಸ್ತ ಇಸ್ರಯೇಲರದೂ ಯಾವ ಪ್ರಾರ್ಥನೆಯ
ನ್ನೂ ಯಾವ ವಿಜ್ಞಾಪನೆಯನ್ನೂ ಮಾಡ ಅವರು ತಮ್ಮ ಕೈ
ಗಳನ್ನು ಈ ಮನೆಯ ಕಡೆಗೆ ಚಾಚಿದರೆ, ಆಗ ನೀನು ನಮ್ಮ
೩೦ ತಂದೆಗಳಿಗೆ ಕೊಟ್ಟ ದೇಶದಲ್ಲಿ ಅವರು ಬದುಕುವ ಪರ್ಯಂತರ
ಅವರು ನಿನಗೆ ಭಯ ಪಟ್ಟು, ನಿನ್ನ ಮಾರ್ಗಗಳಲ್ಲಿ ನಡೆಯುವ
ಹಾಗೆ, ನೀನು ಆಕಾಶದಿಂದ, ನೀನು ವಾಸ ಮಾಡುವ ಸ್ಥಳದಿಂದ
೩೧ ಕೇಳಿ, ಮನ್ನಿಸಿ, ಮನುಷ್ಯನ ಹೃದಯವನ್ನು ಶಿಳ್ಳಿಯುವ ನೀ
ನು ಪ್ರತಿ ಮನುಷ್ಯನಿಗೂ ಅವನವನ ಮಾರ್ಗದ ಪ್ರಕಾರ ಕೊಡು;
ಯಾಕಂದರೆ ನೀನೊಬ್ಬನೇ ಸಮಸ್ತ ಮನುಷ್ಯರ ಮಕ್ಕಳ ಹೃ
ದಯಗಳನ್ನು ಶಿಳ್ಳಿದವನಾಗಿದ್ದೀ.
೩೨ ಮತ್ತು ನಿನ್ನ ದೊಡ್ಡ ಹೆಸರು, ನಿನ್ನ ಬಲವಾದ ಕೈ ನಿನ್ನ ಚಾ
ಚಿದ ತೋಳು, ಇವುಗಳ ನಿಮಿತ್ತ ನಿನ್ನ ಜನವಾದ ಇಸ್ರಯೇಲಿ
ನವನಲ್ಲದ ದೂರ ದೇಶದಿಂದ ಬಂದ ಪರದೇಶಸ್ಥನನ್ನು ಕುರಿತು
ಏನಂದರೆ, ಅವರು ಬಂದು, ಈ ಮನೆಯಲ್ಲಿ ಪ್ರಾರ್ಥನೆ ಮಾಡಿದ
೩3 ರೆ, ಆಗ ನಿನ್ನ ಜನರಾದ ಇಸ್ರಯೇಲಿನ ಪ್ರಕಾರ, ಭೂಲೋಕದ
ಲ್ಲಿರುವ ಸಮಸ್ತರೂ ನಿನಗೆ ಭಯ ಪಟ್ಟು, ನಿನ್ನ ಹೆಸರನ್ನು ಶಿಳ್ಳಿ
ಯುವ ಹಾಗೆಯೂ, ನಾನು ಕಟ್ಟಿಸಿದ ಈ ಮನೆಯು ನಿನ್ನ ಹೆ
ಸರಿನಿಂದ ಕರೆಯಲ್ಪಟ್ಟಿತೆಂದು, ಅವರು ಶಿಳ್ಳಿಯುವ ಹಾಗೆಯೂ,
ನೀನು ಆಕಾಶದಿಂದ, ನೀನು ವಾಸ ಮಾಡುವ ಸ್ಥಳದಿಂದ ಕೇಳಿ,
ಪರದೇಶಸ್ಥನು ನಿನಗೆ ಕೂಗಿದ ಎಲ್ಲಾದರ ಹಾಗೆ ಮಾಡು.
೩೪ ನಿನ್ನ ಜನರು ನೀನು ಕಳುಹಿಸುವ ಯಾವ ಸ್ಥಳದಲ್ಲಾದರೂ
ತಮ್ಮ ಶತ್ರುಗಳ ಸಂಗಡ ಯುದ್ಧ ಮಾಡ ಹೊರಟು ಹೋಗಿ,
ನೀನು ಆದು ಕೊಂಡ ಪಟ್ಟದ ಮಾರ್ಗವಾಗಿಯೂ, ನಾನು ನಿನ್ನ
ಹೆಸರಿಗೆ ಕಟ್ಟಿಸಿದ ಈ ಮನೆಯ ಮಾರ್ಗವಾಗಿಯೂ ಅವರು
೩೫ ನಿನಗೆ ಪ್ರಾರ್ಥನೆ ಮಾಡಿದರೆ, ಆಗ ನೀನು ಆಕಾಶದಿಂದ ಅವರ
ಪ್ರಾರ್ಥನೆಯನ್ನೂ ಅವರ ವಿಜ್ಞಾಪನೆಯನ್ನೂ ಕೇಳಿ, ಅವರ

೩೭ ನ್ಯಾಯವನ್ನು ತೀರಿಸು. ಪಾಪ ಮಾಡದವನು ಯಾವನೂ ಇ
ಲ್ಲದ್ದರಿಂದ, ಅವರು ನಿನಗೆ ವಿರೋಧವಾಗಿ ಪಾಪ ಮಾಡಲು, ನೀ
ನು ಅವರ ಮೇಲೆ ಕೋಪಿಸಿ ಕೊಂಡು, ದೂರವಾದರೂ ಸವಿಾಪ
ವಾದರೂ ಶತ್ರುವಿನ ದೇಶಕ್ಕೆ ಅವರು ಕೆಕೆಯಾಗಿ ವೈಯಲ್ಪಡು
೩೮ ವ ಹಾಗೆ, ನೀನು ಅವರನ್ನು ಶತ್ರುವಿನ ಕೈಯಲ್ಲಿ ಒಪ್ಪಿಸಿದರೆ,
ಮತ್ತು ಅವರು ಕೆಕೆಯಾಗಿ ವೈಯಲ್ಪಟ್ಟ ದೇಶದಲ್ಲಿ ಮನಸ್ಸು ತಿ
ರುಗಿಸಿ, ಪಶ್ಚಾತ್ತಾಪ ಪಟ್ಟು, ನಾವು ಪಾಪ ಮಾಡಿದ್ದೇವೆ, ಅಕೃತ್ಯ
ಮಾಡಿ, ದುಷ್ಟರಾಗಿ ನಡೆದಿದ್ದೇವೆಂದು, ತಮ್ಮನ್ನು ಕೆಕೆಯಾಗಿ ವೈ
೩೯ ಯುವವರ ದೇಶದಲ್ಲಿ ನಿನಗೆ ಬಿನ್ನಹ ಮಾಡಿ, ಅವರನ್ನು ಕೆಕೆ
ಯಾಗಿ ವೈದ ದೇಶದಲ್ಲಿ, ತಮ್ಮ ಪೂರ್ಣ ಹೃದಯದಿಂದಲೂ
ತಮ್ಮ ಪೂರ್ಣ ಪ್ರಾಣದಿಂದಲೂ ನಿನ್ನ ಕಡೆಗೆ ತಿರುಗಿ, ನೀನು
ಅವರ ಪಿತೃಗಳಿಗೆ ಕೊಟ್ಟ ತಮ್ಮ ದೇಶದ ಮಾರ್ಗವಾಗಿಯೂ,
ನೀನು ಆದು ಕೊಂಡ ಪಟ್ಟಣದ ಮಾರ್ಗವಾಗಿಯೂ, ನಿನ್ನ ಹೆಸರಿ
ಗೋಸ್ಕರ ನಾನು ಕಟ್ಟಿಸಿದ ಈ ಮನೆಯ ಮಾರ್ಗವಾಗಿಯೂ
೪೦ ಅವರು ಪ್ರಾರ್ಥನೆಯನ್ನು ಮಾಡಿದರೆ, ಅಗ ನೀನು ಆಕಾಶದಿಂ
ದ, ನೀನು ವಾಸ ಮಾಡುವ ಸ್ಥಳದಿಂದ ಅವರ ಪ್ರಾರ್ಥನೆಯ
ನ್ನೂ ವಿಜ್ಞಾಪನೆಯನ್ನೂ ಕೇಳಿ, ಅವರ ನ್ಯಾಯವನ್ನು ತೀರಿಸಿ,
ನಿನ್ನ ಜನರು ನಿನಗೆ ವಿರೋಧವಾಗಿ ಮಾಡಿದ ಪಾಪಗಳನ್ನು
ಮನ್ನಿಸು.
೪೧ ಈಗ, ನನ್ನ ದೇವಕೇ, ಈ ಸ್ಥಳದಲ್ಲಿ ಮಾಡಿದ ಪ್ರಾರ್ಥ
ನೆಗೆ ನಿನ್ನ ಕಣ್ಣುಗಳು ತೆಕೆದಿರಲಿ, ನಿನ್ನ ಕಿವಿಗಳು ಆಲೈಸುತ್ತಾ
೪೨ ಇರಲಿ. ಮತ್ತು ಈಗ, ದೇವರಾದ ಕರ್ತನೇ, ನೀನು ನಿನ್ನ ಬಲದ
ಪೆಟ್ಟಿಗೆಯ ಸಂಗಡ ನಿನ್ನ ವಿಶ್ರಾಂತಿಗೆ ಏರು; ದೇವರಾದ ಕರ್ತ
ನೇ, ನಿನ್ನ ಯಾಜಕರು ರಕ್ಷಣೆಯನ್ನು ಧರಿಸಿ ಕೊಳ್ಳಲಿ; ನಿ
೪೩ ನ್ನ ಭಕ್ತರು ಒಳ್ಳೇದರಲ್ಲಿ ಸಂತೋಷ ಪಡಲಿ. ದೇವರಾದ ಕ
ರ್ತನೇ, ನಿನ್ನ ಅಭಿಷಿಕ್ತನ ಮುಖವನ್ನು ತಿರುಗಿಸಿ ಬಿಡ ಬೇಡ;
ನಿನ್ನ ಸೇವಕನಾದ ದಾವೀದನ ಕೃಪೆಗಳನ್ನು ಜ್ಞಾಪಕ
ಮಾಡು.

## ೭. ಸಂಧಿ.

೧ ಸೊಲೊಮೋನನು ಪ್ರಾರ್ಥಿಸಿ, ತೀರಿದಾಗ, ಬೆಂಕಿ ಆಕಾಶದಿಂ
ದ ಇಳಿದು, ಹೋಮವನ್ನೂ ಬಲಿಗಳನ್ನೂ ತಿಂದು ಬಿಟ್ಟಿತು.
೨ ಮತ್ತು ಕರ್ತನ ಘನವು ಮನೆಯನ್ನು ತುಂಬಿತು. ಕರ್ತನ ಘ
ನವು ಕರ್ತನ ಮನೆಯನ್ನು ತುಂಬಿದ್ದರಿಂದ, ಯಾಜಕರು ಕರ್ತ
೩ ನ ಮನೆಯಲ್ಲಿ ಹೊಗಲಾರದೆ ಇದ್ದರು. ಇಸ್ರಯೇಲಿನ ಮಕ್ಕ
ಳೆಲ್ಲರು ಬೆಂಕಿಯು ಇಳಿದದ್ದನ್ನೂ, ಮನೆಯ ಮೇಲೆ ಇರುವ ಕ
ರ್ತನ ಘನವನ್ನೂ ಕಂಡಾಗ, ಅವರು ನೆಲಕ್ಕೆ ತಮ್ಮ ಮುಖ
ಗಳನ್ನು ಬೊಗ್ಗಿಸಿ, ವಂದಿಸಿ, ಕರ್ತನನ್ನು ಕೊಂಡಾಡಿ, ಅವನು ಬ
ಳ್ಳೆಯವನು, ಅವನ ಕೃಪೆಯು ಯುಗ ಯುಗಕ್ಕೂ ಇರುವ
ದೆಂದು ಹೇಳಿದರು.
೪ ಆಗ ಅರಸನೂ ಸಮಸ್ತ ಜನರೂ ಕರ್ತನಿಗೆ ಬಲಿಗಳನ್ನು ಅ
೫ ರ್ಪಿಸಿದರು. ಅರಸನಾದ ಸೊಲೊಮೋನನು ಇಪ್ಪತ್ತೆರಡು ಸಾವಿ
ರ ಎತ್ತುಗಳನ್ನೂ ಲಕ್ಷಾ ಇಪ್ಪತ್ತು ಸಾವಿರ ಕುರಿಗಳನ್ನೂ ಬಲಿ
ಯಾಗಿ ಅರ್ಪಿಸಿದನು. ಹೀಗೆಯೇ ಅರಸನೂ ಸಮಸ್ತ ಜನರೂ
೬ ದೇವರ ಮನೆಯನ್ನು ಪ್ರತಿಷ್ಠೆ ಮಾಡಿದರು. ಮತ್ತು ಯಾಜಕ
ರು ತಮ್ಮ ವಿಚಾರಣೆಗಳಲ್ಲಿ ನಿಲ್ಲುತ್ತಿದ್ದರು; ಹಾಗೆಯೇ ಲೇವ್ಯರು
ದಾವೀದನು ತಮ್ಮ ಮುಖಾಂತರ ಹೊಗಳುತ್ತಾ, ಅವನ ಕೃಪೆ
ಯು ಯುಗ ಯುಗಕ್ಕೂ ಇರುವದೆಂದು, ಅರಸನಾದ ದಾವೀದ
ನು ಕರ್ತನನ್ನು ಕೊಂಡಾಡುವದಕ್ಕೆ ಮಾಡಿಸಿದ ಕರ್ತನ ಗೀತ
ವಾದ್ಯಗಳನ್ನು ಹಿಡಿ ಕೊಂಡಿದ್ದರು. ಯಾಜಕರು ಅವರ ಮು
ದೆ ತುತೂರಿಗಳನ್ನು ಊದಿದರು; ಮತ್ತು ಸಮಸ್ತ ಇಸ್ರಯೇಲ್ಯ
೭ ರು ನಿಂತಿದ್ದರು. ಇದಲ್ಲದೆ ಸೊಲೊಮೋನನು ಕರ್ತನ ಮನೆ
ಯ ಮುಂದಿರುವ ಮಧ್ಯ ಅಂಗಳವನ್ನು ಪರಿಶುದ್ಧ ಮಾಡಿದನು;
ಯಾಕಂದರೆ ಸೊಲೊಮೋನನು ಮಾಡಿಸಿದ ತಾಂಬ್ರದ ಪೀಠದ
ಮೇಲೆ ಹೋಮಗಳನ್ನೂ ಕಾಣಿಕೆಗಳನ್ನೂ ಕೊಬ್ಬನ್ನೂ ಇರು
ವದಕ್ಕೆ ಸ್ಥಳ ಸಾಲದೆ ಇದ್ದದರಿಂದ, ಅಲ್ಲಿ ಅವನು ಹೋಮಗಳ
ನ್ನೂ ಸಮಾಧಾನದ ಬಲಿಗಳ ಕೊಬ್ಬನ್ನೂ ಅರ್ಪಿಸಿದನು.
೮ ಅದೇ ಕಾಲದಲ್ಲಿ ಸೊಲೊಮೋನನು ಹಮಾತಿನ ಪ್ರವೇಶ ಮೊ
ದಲುಗೊಂಡು, ಐಗುಪ್ತ ನದಿಯ ಪರ್ಯಂತರ ಇರುವ ಮಹಾ
ಕೂಟವಾದ ಸಮಸ್ತ ಇಸ್ರಯೇಲ್ಯರೂ ಅವನ ಸಂಗಡ ಏಳು ದಿ
ವಸ ಹಬ್ಬವನ್ನು ಮಾಡಿದರು. ಎಂಟನೇ ದಿವಸದಲ್ಲಿ ಘನ ಸಂ
೯ ಗವನ್ನು ಮಾಡಿ ಕೊಂಡರು; ಯಾಕಂದರೆ ಬಲಿಪೀಠದ ಪ್ರತಿಷ್ಠೆ
ಯನ್ನು ಏಳು ದಿವಸ, ಹಬ್ಬವನ್ನು ಏಳು ದಿವಸ ಕೈಕೊಂಡರು.
೧೦ ಏಳನೇ ತಿಂಗಳ ಇಪ್ಪತ್ತು ಮೂರನೇ ದಿವಸದಲ್ಲಿ ಅವನು ಜನರ
ನ್ನು ತಮ್ಮ ಗುಡಾರಗಳಿಗೆ ಕಳುಹಿಸಿ ಬಿಟ್ಟನು. ಕರ್ತನು ದಾವೀ
ದನಿಗೂ, ಸೊಲೊಮೋನನಿಗೂ, ತನ್ನ ಜನವಾದ ಇಸ್ರಯೇಲಿ
ಗೂ ಮಾಡಿದ ಉಪಕಾರಕ್ಕೋಸ್ಕರ ಅವರು ಹೃದಯದಲ್ಲಿ ಆ
ನಂದವಾಗಿ ಸಂತೋಷ ಪಡುತ್ತಾ ಹೋದರು.
೧೧ ಹೀಗೆಯೇ ಸೊಲೊಮೋನನು ಕರ್ತನ ಮನೆಯನ್ನೂ, ಅ
ರಸನ ಮನೆಯನ್ನೂ ತೀರಿಸಿದನು. ಕರ್ತನ ಮನೆಯಲ್ಲಿಯೂ
ತನ್ನ ಮನೆಯಲ್ಲಿಯೂ ಮಾಡ ಸೊಲೊಮೋನನ ಹೃದಯದ
ಲ್ಲಿ ಬಂದದ್ದನ್ನೆಲ್ಲಾ ಅವನು ಸಾಧಿಸಿದನು.
೧೨ ಮತ್ತು ಕರ್ತನು ರಾತ್ರಿಯಲ್ಲಿ ಸೊಲೊಮೋನನಿಗೆ ಕಾಣಿಸಿ
ಕೊಂಡು, ಅವನಿಗೆ ಹೇಳಿದ್ದೇನಂದರೆ—ನಾನು ನಿನ್ನ ಪ್ರಾರ್ಥನೆ
ಯನ್ನು ಕೇಳಿ, ಬಲಿಯರ್ಪಿಸುವ ಮನೆಯಾಗ ನನಗೆ ಈ ಸ್ಥಳ
೧೩ ವನ್ನು ಆದು ಕೊಂಡಿದ್ದೇನೆ. ಮಳೆ ಇಲ್ಲದ ಹಾಗೆ ನಾನು ಆಕಾ
ಶವನ್ನು ಮುಚ್ಚಿದರೂ, ದೇಶವನ್ನು ತಿಂದು ಬಿಡ ಬಿಡಿತೆಗಳಿಗೆ
೧೪ ಆಜ್ಞಾಪಿಸಿದರೂ, ಇಲ್ಲವೆ ನನ್ನ ಜನರ ಮಧ್ಯದಲ್ಲಿ ಜಾಡ್ಯವನ್ನು
ಕಳುಹಿಸಿದರೂ, ನನ್ನ ಹೆಸರಿನಿಂದ ಕರೆಯಲ್ಪಟ್ಟ ನನ್ನ ಜನರು
ತಮ್ಮನ್ನು ತಗ್ಗಿಸಿ ಕೊಂಡು, ಪ್ರಾರ್ಥನೆ ಮಾಡಿ, ನನ್ನ ಮುಖ
ವನ್ನು ಹುಡುಕಿ, ತಮ್ಮ ದುರ್ಮಾರ್ಗಗಳಿಂದ ತಿರುಗಿದರೆ, ಅಗ
ನಾನು ಆಕಾಶದಿಂದ ಕೇಳಿ, ಅವರ ಪಾಪವನ್ನು ಮನ್ನಿಸಿ, ಅವರ
೧೫ ದೇಶವನ್ನು ಗುಣ ಮಾಡುವೆನು. ಈಗ ಈ ಸ್ಥಳದ ಪ್ರಾರ್ಥನೆಗೆ
ನನ್ನ ಕಣ್ಣುಗಳು ತೆಕೆದಿರುವವು, ನನ್ನ ಕಿವಿಗಳು ಆಲೈಸುತ್ತಿರುವ
೧೬ವು. ಯಾಕಂದರೆ ನನ್ನ ಹೆಸರು ಯುಗ ಯುಗಾಂತರಕ್ಕೂ ಅ
ಲ್ಲಿ ಇರುವ ಹಾಗೆ, ಈ ಮನೆಯನ್ನು ಆದು ಕೊಂಡು, ಪರಿಶುದ್ಧ
ಮಾಡಿದ್ದೇನೆ; ನನ್ನ ಕಣ್ಣುಗಳೂ ನನ್ನ ಹೃದಯವೂ ಅಲ್ಲಿ
ಸಕಲ ದಿವಸಗಳಲ್ಲಿ ಇರುವವು.
೧೭ ನೀನಾದರೆ, ನಿನ್ನ ತಂದೆಯಾದ ದಾವೀದನು ನಡೆದ ಹಾಗೆ ನೀ
ನು ನನ್ನ ಮುಂದೆ ನಡೆದು, ನಾನು ನಿನಗೆ ಆಜ್ಞಾಪಿಸಿದ್ದೆಲ್ಲದರ



ಪ್ರಕಾರ ಮಾಡಿ, ನನ್ನ ನೇಮಕಗಳನ್ನೂ ನ್ಯಾಯಗಳನ್ನೂ ಕೈ
೧೮ ಕೊಂಡರೆ, ಅಗ ಇಸ್ರಯೇಲನ್ನು ಆಳುವ ಮನುಷ್ಯನು ನಿನಗೆ
ಕೊರತೆಯಾಗುವದಿಲ್ಲವೆಂದು, ನಿನ್ನ ತಂದೆಯಾದ ದಾವೀದನ
ಸಂಗಡ ನಾನು ಮಾಡಿದ ಒಡಂಬಡಿಕೆಯ ಪ್ರಕಾರ ನಿನ್ನ ರಾಜ್ಯದ
ಸಿಂಹಾಸನವನ್ನು ನಿಲ್ಲಿಸುತ್ತೇನೆ.
೧೯ ಆದರೆ ನೀವು ಹಿಂದಿರುಗಿ, ನಾನು ನಿಮ್ಮ ಮುಂದೆ ಇಟ್ಟ ನನ್ನ
ಕಟ್ಟಳೆಗಳನ್ನೂ ನನ್ನ ಆಜ್ಞೆಗಳನ್ನೂ ಬಿಟ್ಟುಬಿಟ್ಟು, ಹೋಗಿ, ಅ
೨೦ ನ್ಯ ದೇವರುಗಳನ್ನು ಸೇವಿಸಿ, ಅವುಗಳಿಗೆ ಅಡ್ಡ ಬಿದ್ದರೆ, ಅಗ ನಾ
ನವರಿಗೆ ಕೊಟ್ಟ ನನ್ನ ದೇಶದೊಳಗಿಂದ ಅವರನ್ನು ನಿರ್ಮೂಲ
ಮಾಡುವೆನು. ಇದಲ್ಲದೆ ನನ್ನ ಹೆಸರಿಗೋಸ್ಕರ ನಾನು ಪರಿಶುದ್ಧ
ಮಾಡಿದ ಈ ಮನೆಯನ್ನು ನನ್ನ ಸಮುಖದಿಂದ ಬಿಸಾಟು, ಅ
ದನ್ನು ಸಮಸ್ತ ಜನಗಳಲ್ಲಿ ಗಾದೆಯಾಗಿಯೂ ಹಾಸ್ಯವಾಗಿ
೨೧ಯೂ ಮಾಡುವೆನು. ಮತ್ತು ಎತ್ತರವಾಗಿರುವ ಈ ಮನೆಯು
ಹಾದು ಹೋಗುವ ಪ್ರತಿ ಮನುಷ್ಯನಿಗೆ ಆಶ್ಚರ್ಯವಾಗಿರು
ವದು; ಮತ್ತು ಅವನು, ಕರ್ತನು ಈ ದೇಶಕ್ಕೂ ಈ ಮನೆಗೂ
೨೨ ಹೀಗೆ ಯಾಕೆ ಮಾಡಿದನು! ಅನ್ನುವನು. ಅದಕ್ಕೆ ಹೇಳುವರು—
ಅವರು ತಮ್ಮ ತಂದೆಗಳನ್ನು ಐಗುಪ್ತ ದೇಶದೊಳಗಿಂದ ಬರ ಮಾ
ಡಿದ ತಮ್ಮ ದೇವರಾದ ಕರ್ತನನ್ನು ಬಿಟ್ಟು ಬಿಟ್ಟು, ಅನ್ಯ ದೇವ
ರುಗಳನ್ನು ಹಿಡುಕೊಂಡು, ಅವುಗಳಿಗೆ ಅಡ್ಡ ಬಿದ್ದು, ಸೇವಿಸಿದ್ದರಿಂ
ದ, ಅವನು ಈ ಕೇಡೆಲ್ಲಾ ಅವರ ಮೇಲೆ ಬರ ಮಾಡಿದನು.

## ೮. ಸಂಧಿ.

೧ ಸೊಲೊಮೋನನು ಕರ್ತನ ಮನೆಯನ್ನೂ ತನ್ನ ಮನೆಯ
ನ್ನೂ ಇಪ್ಪತ್ತು ವರುಷಗಳಲ್ಲಿ ಕಟ್ಟಿ ತೀರಿಸಿದ ತರುವಾಯ ಆದ
೨ ದೇನಂದರೆ, ಹಿರಾಮನು ಸೊಲೊಮೋನನಿಗೆ ತಿರಿಗಿ ಕೊಟ್ಟ ಪ
ಟ್ಟಣಗಳನ್ನು ಸೊಲೊಮೋನನು ಕಟ್ಟಿಸಿ, ಇಸ್ರಯೇಲ ಮಕ್ಕಳ
೩ ನ್ನು ಅಲ್ಲಿ ನಿವಾಸವಾಗಿರ ಮಾಡಿದನು.
೪ ಮತ್ತು ಸೊಲೊಮೋನನು ಹಮಾತು ಜೋಬಕ್ಕೆ ಹೋಗಿ,
೫ ಅದನ್ನು ಜಯಿಸಿದನು. ಅವನು ಅರಣ್ಯಾದಲ್ಲಿರುವ ತಹ್ಮೋರ
ನ್ನೂ ಹಮಾತಿನಲ್ಲಿರುವ ಉಗ್ರಾಣದ ಪಟ್ಟಣಗಳನ್ನೂ ಕಟ್ಟಿಸಿದ
೬ ನು. ಮತ್ತು ಅಲಂಗಸಗಳೂ, ಬಾಗಲುಗಳೂ, ಅಗುಳಿಗಳೂ ಉ
ಳ್ಳ ಕೋಟೆ ಪಟ್ಟಣಗಳಾದ ಮೇಲಿನ ಬೇಥೋರೋನನ್ನೂ, ಕೆಳಗಿ
ನ ಬೇಥೋರೋನನ್ನೂ, ಬಾಳತನ್ನೂ, ಸೊಲೊಮೋನನಿಗೆ
ಉಂಟಾದ ಸಮಸ್ತ ಉಗ್ರಾಣದ ಪಟ್ಟಣಗಳನ್ನೂ, ಸಮಸ್ತ ರಥದ
೭ ಪಟ್ಟಣಗಳನ್ನೂ, ರಾಹುತರ ಪಟ್ಟಣಗಳನ್ನೂ ಕಟ್ಟಿಸಿದನು. ಸೊ
ಲೊಮೋನನು ಯೆರೂಸಲೇಮಿನಲ್ಲಿಯೂ ಲೆಬನೋನಿನಲ್ಲಿಯೂ
ತಾನು ಆಳುವ ಸಮಸ್ತ ದೇಶದಲ್ಲೆಲ್ಲಿಯೂ ಕಟ್ಟಿಸ ಇಚ್ಛೆಯಾದ
ದ್ದನ್ನು ಕಟ್ಟಿಸಿದನು.
೮ ಮತ್ತು ಸೊಲೊಮೋನನು ಇಸ್ರಯೇಲಿನ ಮಕ್ಕಳಲ್ಲದ ಹಿತ್ತಿ
ಯರೂ ಅಮೋರ್ಯರೂ ಪೆರಿಜ್ಜಿಯರೂ ಹಿವ್ವಿಯರೂ ಯೆ
ಬೂಸ್ಯರೂ ಇವರಲ್ಲಿ ಉಳಿದ ಸಮಸ್ತ ಜನರೂ, ಇವರ ತರು
೯ ವಾಯ ದೇಶದಲ್ಲಿ ಇಸ್ರಯೇಲ ಮಕ್ಕಳು ತೀರಿಸಿ ಬಿಡದ ಅವರ
ಮಕ್ಕಳೂ, ಇಂದಿನ ವರೆಗೂ ಕಪ್ಪವನ್ನು ಕೊಡ ಮಾಡಿದನು.
ಆದರೆ ಇಸ್ರಯೇಲಿನ ಮಕ್ಕಳಲ್ಲಿ ಸೊಲೊಮೋನನು ತನ್ನ ಕೆಲ
ಸಕ್ಕೆ ದಾಸರಾಗ ಮಾಡಿಲ್ಲ; ಆದರೆ ಅವರು ಯುದ್ಧಸ್ತರಾಗಿ
ಯೂ, ಅಧಿಪತಿಗಳಲ್ಲಿ ಪ್ರಧಾನರಾಗಿಯೂ, ತನ್ನ ರಥಗಳ ಮೇ
ಲೆಯೂ, ರಾಹುತರ ಮೇಲೆಯೂ ಅಧಿಪತಿಗಳಾಗಿಯೂ ಇರ
ಮಾಡಿದನು.
೧೦ ಇವರು ಅರಸನಾದ ಸೊಲೊಮೋನನ ಅಧಿಪತಿಗಳಲ್ಲಿ ಪ್ರ
ಧಾನರಾಗಿದ್ದರು. ಜನರನ್ನು ಆಳುವವರು ಇನ್ನೂರ ಐವತ್ತು
ಮಂದಿ ಇದ್ದರು.
೧೧ ಮತ್ತು ಸೊಲೊಮೋನನು ಫರೋವನ ಕುಮಾರ್ತೆಯನ್ನು
ದಾವೀದನ ಪಟ್ಟಣದಿಂದ ತಾನು ಅವಳಿಗೋಸ್ಕರ ಕಟ್ಟಿಸಿದ ಮನೆಗೆ
ಬರ ಮಾಡಿದನು. ಯಾಕಂದರೆ ಅವನು, ಕರ್ತನ ಒಡಂಬಡಿಕೆ
ಯ ಪೆಟ್ಟಿಗೆಯು ಬಂದ ಸ್ಥಳಗಳು ಪರಿಶುದ್ಧವಾಗಿರುವದರಿಂದ ನ
ನ್ನ ಹೆಂಡತಿಯು ಇಸ್ರಯೇಲಿನ ಅರಸನಾದ ದಾವೀದನ ಮನೆಯ
ಲ್ಲಿ ವಾಸವಾಗಿರ ಕೂಡದೆಂದು, ಹೇಳಿದನು.
೧೨ ಆಗ ಸೊಲೊಮೋನನು ಮಂಟಪದ ಮುಂದೆ ತಾನು ಕಟ್ಟಿಸಿದ
ಕರ್ತನ ಬಲಿಪೀಠದ ಮೇಲೆ ಕರ್ತನಿಗೆ ಹೋಮಗಳನ್ನು ಅರ್ಪಿಸಿ
೧೩ ದನು. ದಿನಂಪ್ರತಿಯಲ್ಲಿ ಕಟ್ಟಳೆಯ ಪ್ರಕಾರ, ಮೋಶೆಯ ಆಜ್ಞೆಯ
ಪ್ರಕಾರ ಸಬ್ಬತುಗಳಲ್ಲಿಯೂ, ಶುದ್ಧ ಪಾರ್ವಗಳಲ್ಲಿಯೂ, ವರು
ಷದಲ್ಲಿ ಮೂರು ಸಾರಿ ಹಬ್ಬಗಳಾದ ಹುಳಿ ಇಲ್ಲದ ಕೊಟ್ಟಿಯ
ಹಬ್ಬದಲ್ಲಿಯೂ, ವಾರಗಳ ಹಬ್ಬದಲ್ಲಿಯೂ, ಪರ್ಣಶಾಲೆಗಳ ಹ
ಬ್ಬದಲ್ಲಿಯೂ ಬಲಿಗಳನ್ನು ಅರ್ಪಿಸಿದನು. ಮತ್ತು ಅವನು ತನ್ನ
೧೪ ತಂದೆಯಾದ ದಾವೀದನ ಕಟ್ಟಳೆಯ ಪ್ರಕಾರ ಅವರ ಸೇವೆಗೆ ಯಾ
ಜಕರ ಒಂತುಗಳನ್ನೂ ಪ್ರತಿ ದಿವಸಕ್ಕೆ ಬೇಕಾದ ಕಾರ್ಯದ ಪ್ರ
ಕಾರ ಯಾಜಕರ ಮುಂದೆ ಸ್ತುತಿಸಲಿಕ್ಕೂ ಸೇವೆ ಮಾಡಲಿಕ್ಕೂ
ತಮ್ಮ ವಿಚಾರಗಳಲ್ಲಿ ಲೇವ್ಯರನ್ನೂ, ಬಾಗಲು ಬಾಗಲಲ್ಲಿ ತಮ್ಮ
ಒಂತುಗಳಾಗಿ ದ್ವಾರಪಾಲಕರನ್ನೂ ನೇಮಿಸಿದನು. ಯಾಕಂದ
ಕೆ ದೇವರ ಮನುಷ್ಯನಾದ ದಾವೀದನು ಹಾಗೆಯೇ ನೇಮಿಸಿ ಇ
೧೫ದ್ದನು. ಅವರು ಯಾವ ಕಾರ್ಯದಲ್ಲಾದರೂ ಬೊಕ್ಕಸಗಳಲ್ಲಾ
ದರೂ ಅರಸನು ಯಾಜಕರಿಗೂ ಲೇವ್ಯರಿಗೂ ಹೇಳಿದ ಆಜ್ಞೆಯ
೧೬ ನ್ನು ತೊರೆದು ಬಿಡಲಿಲ್ಲ. ಆದರೆ ಸೊಲೊಮೋನನ ಕೆಲಸವೆಲ್ಲಾ
ಕರ್ತನ ಮನೆಯ ಅಸ್ತಿವಾರ ಹಾಕಿದ ದಿವಸದ ಮಟ್ಟಿಗೂ, ಅದ
ನ್ನು ತೀರಿಸುವ ಮಟ್ಟಿಗೂ, ಸಿದ್ಧ ಮಾಡಲ್ಪಟ್ಟಿತು. ಹೀಗೆಯೇ
ಕರ್ತನ ಮನೆಯು ತೀರಿತು.
೧೭ ಆಗ ಸೊಲೊಮೋನನು ಎದೋಮ ದೇಶದ ಸಮುದ್ರ ತೀರ
ದ ಬಳಿಯಲ್ಲಿರುವ ಎಜ್ಯೊನ್ಗೆಬರಿಗೂ ಎಲೋತಿಗೂ ಹೊರಟು
೧೮ ಹೋದನು. ಮತ್ತು ಹಿರಾಮನು ತನ್ನ ಸೇವಕರ ಕೈಯಿಂದ ಹ
ಡಗಗಳನ್ನೂ, ಸಮುದ್ರ ತಿಳಿದವರಾದ ಸೇವಕರನ್ನೂ ಅವನ ಬ
ಳಿಗೆ ಕಳುಹಿಸಿದನು. ಅವರು ಸೊಲೊಮೋನನ ಸೇವಕರ ಸಂಗ
ಡ ಓಫಿರಿಗೆ ಹೋಗಿ, ಅಲ್ಲಿಂದ ಸೊಲೊಮೋನನಿಗೆ ನಾನೂರ ಐ
ವತ್ತು ತಲಾಂತು ತೂಕ ಭಂಗಾರವನ್ನು ತೆಗೆದು ಕೊಂಡು ಬಂದರು.

## ೯. ಸಂಧಿ.

೧ ಶೆಬದ ರಾಣಿಯು ಸೊಲೊಮೋನನ ಕೀರ್ತಿಯನ್ನು ಕೇಳಿ
ದಾಗ, ಒಗಟಿಗಳಿಂದ ಅವನನ್ನು ಶೋಧಿಸ, ಅವಳು ಮಹಾ ಗುಂ
ಪಿನ ಸಂಗಡಲೂ ಸುಗಂಧಗಳನ್ನೂ, ಬಹು ಭಂಗಾರವನ್ನೂ ಅ

ಮೂಲ್ಯವಾದ ಕಲ್ಲುಗಳನ್ನೂ ಹೊತ್ತು ಕೊಂಡಿರುವ ಒಂಟಿಗಳ
ಸಂಗಡಲೂ ಯೆರೂಸಲೇಮಿಗೆ ಬಂದಳು. ಅವಳು ಸೊಲೊಮೋ
ನನ ಬಳಿಗೆ ಬಂದ ಮೇಲೆ, ತನ್ನ ಹೃದಯದಲ್ಲಿದ್ದ ಎಲ್ಲವನ್ನು ಕು
೨ ರಿತು ಅವನ ಸಂಗಡ ಮಾತಾಡಿದಳು. ಆಗ ಸೊಲೊಮೋನನು
ಅವಳ ಮಾತುಗಳನ್ನೆಲ್ಲಾ ಅವಳಿಗೆ ತಿಳಿಯ ಮಾಡಿದನು; ಸೊ
ಲೊಮೋನನು ಅವಳಿಗೆ ತಿಳಿಯ ಮಾಡದಂಥ, ಅವನಿಗೆ ಬಚ್ಚಿಡ
ಲ್ಪಟ್ಟದ್ದು ಒಂದೂ ಇಲ್ಲ.

೩ ಶೇಬದ ರಾಣಿಯು ಸೊಲೊಮೋನನ ಜ್ಞಾನವನ್ನೂ, ಅವನು
೪ ಕಟ್ಟಿಸಿದ ಮನೆಯನ್ನೂ, ಅವನ ಮೇಜಿನ ಭೋಜನವನ್ನೂ, ಅ
ವನ ದಾಸರ ಕೂತಿರುವಿಕೆಯನ್ನೂ, ಅವನ ಸೇವಕರು ನಿಂತಿರು
ವದನ್ನೂ, ಅವರ ವಸ್ತ್ರಗಳನ್ನೂ, ಅವನ ಪಾನದಾಯಕರ
ನ್ನೂ, ಅವರ ವಸ್ತ್ರಗಳನ್ನೂ, ಅವನು ಕರ್ತನ ಮನೆಗೆ ಏರಿ
೫ ಹೋಗುವ ಮಾರ್ಗವನ್ನೂ ನೋಡಿದಾಗ, ಅವಳಲ್ಲಿ ಆತ್ಮ ಇಲ್ಲ
ದೆ ಹೋಯಿತು. ಮತ್ತು ಅವಳು ಅರಸನಿಗೆ ಹೇಳಿದ್ದೇನಂದರೆ—
ನನ್ನ ದೇಶದಲ್ಲಿ ನಿನ್ನ ಕ್ರಿಯೆಗಳನ್ನು ಕುರಿತೂ ನಿನ್ನ ಜ್ಞಾನವ
೬ ನ್ನು ಕುರಿತೂ ನಾನು ಕೇಳಿದ ಮಾತು ಸತ್ಯವು. ಆದರೆ ನಾ
ನು ಬಂದು, ನನ್ನ ಕಣ್ಣುಗಳಿಂದ ನೋಡುವ ಪರ್ಯಂತರ ಆ
ಮಾತುಗಳನ್ನು ನಂಬದೆ ಹೋದೆನು; ಇಗೋ, ನಿನ್ನ ಮಹಾ
ಜ್ಞಾನದಲ್ಲಿ ಅರ್ಧವಾದರೂ ನನಗೆ ಹೇಳಲ್ಪಟ್ಟಿದ್ದಿಲ್ಲ; ನಾನು ಕೇಳಿ
೭ ದ್ದಕ್ಕಿಂತ ನಿನ್ನ ಕೀರ್ತಿ ಅಧಿಕವಾಗಿರುವದು. ನಿನ್ನ ಮನುಷ್ಯ
ರು ಭಾಗ್ಯವಂತರು; ನಿನ್ನ ಮುಂದೆ ಯಾವಾಗಲೂ ನಿಂತು, ನಿನ್ನ
ಜ್ಞಾನವನ್ನು ಕೇಳುವ ಈ ನಿನ್ನ ಸೇವಕರು ಭಾಗ್ಯವಂತರು. ನಿ
೮ ನ್ನ ಕರ್ತನಾದ ದೇವರಿಗೋಸ್ಕರ ಅರಸನಾಗಿರ, ತನ್ನ ಸಿಂಹಾ
ಸನದ ಮೇಲೆ ನಿನ್ನನ್ನು ಇರಿಸ ನಿನ್ನಲ್ಲಿ ಇಷ್ಟ ಪಟ್ಟ ನಿನ್ನ ದೇವ
ರಾದ ಕರ್ತನು ಆಶೀರ್ವದಿಸಲ್ಪಡಲಿ. ನಿನ್ನ ದೇವರು ಇಸ್ರಯೇ
ಲನ್ನು ಯುಗ ಯುಗಕ್ಕೂ ನಿಲ್ಲಿಸ ಅವರನ್ನು ಪ್ರೀತಿ ಮಾಡಿದ್ದ
ರಿಂದ, ನ್ಯಾಯವನ್ನೂ ನೀತಿಯನ್ನೂ ನಡಿಸ, ಅವನು ನಿನ್ನನ್ನು
೯ ಅವರ ಮೇಲೆ ಅರಸನಾಗಿರ ಮಾಡಿದನು. ಮತ್ತು ಅವಳು ಅರ
ಸನಿಗೆ ನೂರ ಇಪ್ಪತ್ತು ತಲಾಂತು ತೂಕ ಭಂಗಾರವನ್ನೂ, ಬ
ಹು ಹೆಚ್ಚಾದ ಸುಗಂಧಗಳನ್ನೂ ಅಮೂಲ್ಯವಾದ ಕಲ್ಲುಗಳನ್ನೂ
ಕೊಟ್ಟಳು. ಶೇಬದ ರಾಣಿಯು ಅರಸನಾದ ಸೊಲೊಮೋನನಿ
ಗೆ ಕೊಟ್ಟಂಥ ಸುಗಂಧಗಳು ಇನ್ನು ಬಂದಿದ್ದಿಲ್ಲ.

೧೦ ಇದಲ್ಲದೆ ಓಫಿರಿನಿಂದ ಭಂಗಾರವನ್ನು ತಂದ ಹಿರಾಮನ ಸೇವ
ಕರೂ ಸೊಲೊಮೋನನ ಸೇವಕರೂ ಅಲ್ಮುಗ್ ಮರಗಳನ್ನೂ
೧೧ ಅಮೂಲ್ಯವಾದ ಕಲ್ಲುಗಳನ್ನೂ ತಂದರು. ಅರಸನು ಆ ಅಲ್ಮುಗ್
ಮರಗಳಿಂದ ಕರ್ತನ ಮನೆಗೋಸ್ಕರವೂ, ಅರಸನ ಮನೆಗೋಸ್ಕ
ರವೂ ರಾಜ ಮಾರ್ಗಗಳನ್ನೂ ಹಾಡುವವರಿಗೋಸ್ಕರ ಕಿನ್ನರಿ
ಗಳನ್ನೂ ವೀಣೆಗಳನ್ನೂ ಮಾಡಿಸಿದನು; ಯೆಹೂದ ದೇಶದಲ್ಲಿ
ಅದಕ್ಕಿಂತ ಮುಂಚೆ ಅಂಥಾವುಗಳು ಕಾಣಲ್ಪಟ್ಟಿದ್ದಿಲ್ಲ.

೧೨ ಅರಸನಾದ ಸೊಲೊಮೋನನು ಶೇಬದ ರಾಣಿಯು ಅರಸನಿ
ಗೆ ತಂದದ್ದಕ್ಕೆ ಬದಲಾಗಿ ಕೊಟ್ಟದ್ದು ಹೊರ್ತಾಗಿ, ಅವಳು ಇಷ್ಟೈ
ಸಿ ಕೇಳಿದ್ದನ್ನೆಲ್ಲಾ ಅವಳಿಗೆ ಕೊಟ್ಟನು. ಆಗ ಅವಳು ತಿರುಗಿ
ಕೊಂಡು, ತನ್ನ ದೇಶಕ್ಕೆ ಹೋದಳು—ಅವಳೂ ಅವಳ ಸೇವಕ
ರೂ ಕೂಡ.

೧೩ ಆದರೆ ವರ್ತಕರೂ ವ್ಯಾಪಾರಸ್ತರೂ ತಂದದ್ದು ಹೊರ್ತಾಗಿ,
ಒಂದು ವರುಷದಲ್ಲಿ ಸೊಲೊಮೋನನಿಗೆ ಬಂದ ಭಂಗಾರದ ತೂ
ಕವು ಆರು ನೂರ ಅರುವತ್ತಾರು ತಲಾಂತು ತೂಕ ಭಂಗಾರವಾ
೧೪ ಗಿತ್ತು. ಇದಲ್ಲದೆ ಅರಬ್ಬಿಯ ಅರಸುಗಳೂ, ದೇಶದ ಅಧಿಪತಿಗ
ಳೂ ಸೊಲೊಮೋನನಿಗೆ ಬೆಳ್ಳಿ ಭಂಗಾರವನ್ನು ತಂದರು.

೧೫ ಅರಸನಾದ ಸೊಲೊಮೋನನು ಅಪರಂಜಿಯಿಂದ ಇನ್ನೂರು
ಪೇಟ್ಯಗಳನ್ನು ಮಾಡಿಸಿದನು. ಒಂದೊಂದು ಪೇಟ್ಯಕ್ಕೆ ಆ
೧೬ ರು ನೂರು ಬೆಕೆಲು ತೂಕ ಅಪರಂಜಿ ಇತ್ತು. ಹಾಗೆಯೇ ಅಪ
ರಂಜಿಯಿಂದ ಮುನ್ನೂರು ಗುರಾಣಿಗಳನ್ನು ಮಾಡಿಸಿದನು.
ಒಂದೊಂದು ಗುರಾಣಿಗೆ ಮುನ್ನೂರು ಬೆಕೆಲು ಅಪರಂಜಿ ಇತ್ತು.
ಅರಸನು ಇವುಗಳನ್ನು ಲೆಬನೋನಿನ ಅಡವಿಯ ಮನೆಯಲ್ಲಿ
ಇಟ್ಟನು.

೧೭ ಇದಲ್ಲದೆ ಅರಸನು ದಂತದಿಂದ ದೊಡ್ಡ ಸಿಂಹಾಸನವನ್ನು ಮಾ
ಡಿಸಿ, ಅದನ್ನು ಅಪರಂಜಿಯಿಂದ ಹೊದಗಿಸಿದನು. ಈ ಸಿಂಹಾಸ
೧೮ ನಕ್ಕೆ ಆರು ಪಾವಟಿಗೆಗಳು ಇದ್ದವು. ಸಿಂಹಾಸನಕ್ಕೆ ತಗಲಿಸ್ಪ
ಟ್ಟ ಭಂಗಾರದ ಪಾದ ಪೀಠ ಇತ್ತು. ಮತ್ತು ಕುಳಿತು ಕೊಳ್ಳುವ
ಸ್ಥಳದ ಎರಡು ಪಾರ್ಶ್ವದಲ್ಲಿಯೂ ಕೈಗಳಿದ್ದವು; ಆ ಕೈಗಳ ಬಳಿ
ಯಲ್ಲಿ ಎರಡು ಸಿಂಹಗಳು ನಿಂತಿದ್ದವು. ಮತ್ತು ಹನ್ನೆರಡು ಸಿಂಹ
೧೯ ಗಳು ಆರು ಪಾವಟಿಗೆಗಳ ಮೇಲೆ ಎರಡು ಪಾರ್ಶ್ವದಲ್ಲಿ ನಿಂತಿದ್ದ
ವು. ಯಾವ ರಾಜ್ಯದಲ್ಲಿಯೂ ಅಂಥಾದ್ದು ಮಾಡಿದ್ದಿಲ್ಲ. ಅರ
೨೦ ಸನಾದ ಸೊಲೊಮೋನನು ಕುಡಿಯುವ ಪಾತ್ರೆಗಳೆಲ್ಲಾ ಭಂಗಾ
ರದವುಗಳು. ಲೆಬನೋನಿನ ಅಡವಿಯ ಮನೆಯ ಪಾತ್ರೆಗಳೆಲ್ಲಾ
ಹಾಗೆಯೇ ಅಪರಂಜಿಯವುಗಳು. ಬೆಳ್ಳಿಯಾದದ್ದು ಒಂದೂ
ಇಲ್ಲ. ಸೊಲೊಮೋನನ ದಿವಸಗಳಲ್ಲಿ ಅದು ಏನೂ ಇಲ್ಲದ್ದಾಗಿ
೨೧ ಎಣಿಸಲ್ಪಟ್ಟಿತು. ಯಾಕಂದರೆ ಹಿರಾಮನ ಸೇವಕರ ಸಂಗಡ ಅ
ರಸನ ಹಡಗಗಳು ತರ್ಷೀಷಿಗೆ ಹೋಗಿ, ಮೂರು ವರುಷಕ್ಕೆ ಬಂ
ದುಸಾರಿ ಭಂಗಾರವನ್ನೂ, ಬೆಳ್ಳಿಯನ್ನೂ, ದಂತವನ್ನೂ, ಕೋ
ತಿಗಳನ್ನೂ, ನೌಲುಗಳನ್ನೂ ತಕ್ಕೊಂಡು ಬರುತ್ತಾ ಇದ್ದವು.

೨೨ ಹೀಗೆಯೇ ಅರಸನಾದ ಸೊಲೊಮೋನನು ಐಶ್ವರ್ಯದಲ್ಲಿ
ಯೂ ಜ್ಞಾನದಲ್ಲಿಯೂ ಭೂಮಿಯ ಸಮಸ್ತ ಅರಸುಗಳಿಗಂತ
೨೩ ದೊಡ್ಡವನಾಗಿದ್ದನು. ಮತ್ತು ದೇವರು ಸೊಲೊಮೋನನ ಹೃದ
ಯದಲ್ಲಿ ಉಂಟು ಮಾಡಿದ ಅವನ ಜ್ಞಾನವನ್ನು ಕೇಳುವದಕ್ಕಾಗಿ,
ಭೂಮಿಯ ಸಮಸ್ತ ಅರಸುಗಳೂ ಸೊಲೊಮೋನನ ಮುಖ ದ
೨೪ ರುಶನವನ್ನು ಹುಡುಕಿದರು. ಅವರವರು ಕಾಣಿಕೆಯಾಗಿ ಬೆಳ್ಳಿ
ಯ ಪಾತ್ರೆಗಳನ್ನೂ, ಭಂಗಾರದ ಪಾತ್ರೆಗಳನ್ನೂ, ವಸ್ತ್ರಗಳ
ನ್ನೂ, ಆಯುಧಗಳನ್ನೂ, ಸುಗಂಧಗಳನ್ನೂ, ಕುದುರೆಗಳನ್ನೂ
ಹಾಸರ ಕತ್ತೆಗಳನ್ನೂ, ವರುಷ ವರುಷಕ್ಕೂ ನೇಮಕದ ಪ್ರಕಾ
ರ ತರುತ್ತಾ ಇದ್ದರು.

೨೫ ಮತ್ತು ಸೊಲೊಮೋನನಿಗೆ ನಾಲ್ಕು ಸಾವಿರ ಜೋಡು ಕು
ದುಕೆಗಳೂ, ರಥಗಳೂ ಇದ್ದವು. ಇದಲ್ಲದೆ ಹನ್ನೆರಡು ಸಾವಿರ
ರಾಹುತರಿದ್ದರು; ಅವರನ್ನು ರಥಗಳ ಪಟ್ಟಣಗಳಲ್ಲಿಯೂ ಅರಸನ
ಬಳಿಯಲ್ಲಿ ಯೆರೂಸಲೇಮಿನಲ್ಲಿಯೂ ಇರಿಸಿದನು.

೨೬ ಮತ್ತು ಅವನು ನದಿ ಮೊದಲ್ಗೊಂಡು, ಫಿಲಿಷ್ಟ್ಯರ ದೇಶವನ್ನು
ಹಿಡಿದು ಐಗುಪ್ತದ ಮೇಲೆಯ ಮಟ್ಟಿಗೂ ಇರುವ ಸಮಸ್ತ ಅರ
೨೭ ಸುಗಳ ಮೇಲೆ ಆಳುತ್ತಾ ಇದ್ದನು. ಮತ್ತು ಅರಸನು ಯೆರೂಸ
ಲೇಮಿನಲ್ಲಿ ಬೆಳ್ಳಿಯನ್ನು ಕಲ್ಲುಗಳ ಹಾಗೆಯೂ ದೇವದಾರು ಮ



ರಗಳನ್ನು ತಗ್ಗಿನಲ್ಲಿರುವ ಹಿಪ್ಪಲಿ ಗಿಡಗಳ ಹಾಗೆಯೂ ಬಹಳ
೨೮ ವಾಗಿ ಮಾಡಿದನು. ಇದಲ್ಲದೆ ಐಗುಪ್ತದಿಂದಲೂ ಸಮಸ್ತ ದೇಶಗ
ಳಿಂದಲೂ ಸೊಲೊಮೋನನಿಗೆ ಕುದುರೆಗಳನ್ನು ತಕ್ಕೊಂಡು
ಬಂದರು.

೨೯ ಆದರೆ ಸೊಲೊಮೋನನ ಮಿಕ್ಕಾದ ಕ್ರಿಯೆಗಳು, ಮೊದಲನೆ
ಯವುಗಳೂ ಕಡೆಯವುಗಳೂ ಪ್ರವಾದಿಯಾದ ನತಾನನ ಪುಸ್ತ
ಕದಲ್ಲಿಯೂ, ಶಿಲೋನ್ಯನಾದ ಅಹೀಯನ ಪ್ರವಾದನೆಯಲ್ಲಿ
ಯೂ, ದರ್ಶಿಯಾದ ಇದ್ದೋನು ನೆಬಾಟನ ಮಗನಾದ ಯೆ
ರೊಬಾಮನಿಗೆ ವಿರೋಧವಾಗಿ ಹೇಳಿದ ದರ್ಶನಗಳಲ್ಲಿಯೂ ಅ
೩೦ ವು ಬರೆಯಲ್ಪಟ್ಟವಲ್ಲವೋ? ಹೀಗೆಯೇ ಸೊಲೋಮೋನನು ಯೆ
ರೂಸಲೇಮಿನಲ್ಲಿ ಸಮಸ್ತ ಇಸ್ರಯೇಲಿನ ಮೇಲೆ ನಾಲ್ವತ್ತು ವರು
೩೧ ಷಗಳು ಆಳಿದನು. ಮತ್ತು ಸೊಲೊಮೋನನು ತನ್ನ ಪಿತೃಗಳ
ಸಂಗಡ ಮಲಗಿದನು; ತನ್ನ ತಂದೆಯಾದ ದಾವೀದನ ಪಟ್ಟಣದಲ್ಲಿ
ಹೂಣಿಡಲ್ಪಟ್ಟನು; ಮತ್ತು ಅವನ ಮಗನಾದ ರೆಹಬಾಮನು ಅವ
ನಿಗೆ ಬದಲಾಗಿ ಆಳಿದನು.

## ೧೦. ಸಂಧಿ.

೧ ಆಗ ರೆಹಬಾಮನು ಶೆಕೆಮಿಗೆ ಹೋದನು; ಯಾಕಂದರೆ ಅವ
ನನ್ನು ಅರಸನಾಗ ಮಾಡುವದಕ್ಕೆ ಸಮಸ್ತ ಇಸ್ರಯೇಲ್ಯರು ಶೆಕೆ
ಮಿಗೆ ಬಂದರು.

೨ ಮತ್ತು ಏನಾಯಿತಂದರೆ ಅರಸನಾದ ಸೊಲೊಮೋನನ ಸ
ಮುಖದಿಂದ ಓಡಿ ಹೋಗಿ, ಐಗುಪ್ತದಲ್ಲಿ ವಾಸವಾಗಿದ್ದು, ಐಗುಪ್ತ
ದಲ್ಲಿರುವ ನೆಬಾಟನ ಮಗನಾದ ಯೆರೊಬಾಮನು ಇದನ್ನು ಕೇ
೩ ಳಿದಾಗ, ಅವನು ಐಗುಪ್ತದಿಂದ ತಿರಿಗಿ ಬಂದನು. ಅವರು ಅವನ
ನ್ನು ಕರೇ ಕಳುಹಿಸಿದರು. ಆಗ ಯೆರೊಬಾಮನೂ ಸಮಸ್ತ ಇಸ್ರ
೪ ಯೇಲ್ಯರೂ ರೆಹಬಾಮನ ಬಳಿಗೆ ಬಂದು, ಅವನ ಸಂಗಡ ಮಾ
ತಾಡಿ, ನಿನ್ನ ತಂದೆಯು ನಮ್ಮ ನೊಗವನ್ನು ಕಠಿಣವಾಗ ಮಾಡಿ
ದನು; ಈಗ ನೀನು ನಿನ್ನ ತಂದೆಯ ಕಠಿಣವಾದ ಸೇವೆಯನ್ನೂ,
ಅವನು ನಮ್ಮ ಮೇಲೆ ಹಾಕಿದ ಅವನ ಭಾರವಾದ ನೊಗವನ್ನೂ
೫ ಹೌರ ಮಾಡಿದರೆ, ನಾವು ನಿನ್ನನ್ನು ಸೇವಿಸುವೆವು, ಅಂದರು
ಅವನು ಅವರಿಗೆ, ಮೂರು ದಿವಸಗಳಾದ ತರುವಾಯ ತಿರಿಗಿ ನನ್ನ
ಬಳಿಗೆ ಬನ್ನಿರಿ, ಎಂದು ಹೇಳಿದ್ದರಿಂದ, ಜನರು ಹೋದರು.

೬ ಆಗ ಅರಸನಾದ ರೆಹಬಾಮನು, ತನ್ನ ತಂದೆಯಾದ ಸೊಲೊ
ಮೋನನು ಬದುಕಿರುವಾಗ ಅವನ ಮುಂದೆ ನಿಲ್ಲುತ್ತಾ ಇದ್ದ ಹಿರಿ
ಯರ ಆಲೋಚನೆ ಕೇಳಿ, ಈ ಜನರಿಗೆ ಪ್ರತ್ಯುತ್ತರ ಕೊಡ, ನೀ
೭ ವು ಏನು ಆಲೋಚನೆ ಹೇಳುತ್ತೀರಿ! ಅಂದನು. ಅವರು ಅವನಿಗೆ,
ನೀನು ಈ ಜನರಿಗೆ ದಯವಂತನಾಗಿ, ಅವರನ್ನು ಮೆಚ್ಚಿಸಿ, ಅವರಿ
ಗೆ ಒಳ್ಳೇ ಮಾತುಗಳನ್ನು ಅಡಿದರೆ, ಅವರು ಎಂದೆಂದಿಗೂ ನಿನ್ನ
ಸೇವಕರಾಗಿರುವರು, ಅಂದರು.

೮ ಆದರೆ ಅವನು ಹಿರಿಯರು ತನಗೆ ಹೇಳಿದ ಆಲೋಚನೆಯನ್ನು
ಬಿಟ್ಟು, ತನ್ನ ಸಂಗಡ ಬೆಳೆದ ತನ್ನ ಮುಂದೆ ನಿಂತಿರುವ ಪ್ರಾಯ
೯ ಸ್ಥರ ಆಲೋಚನೆ ಕೇಳಿ, ಅವರಿಗೆ, ನಿನ್ನ ತಂದೆಯು ನಮ್ಮ ಮೇಲೆ
ಹಾಕಿದ ನೊಗವನ್ನು ಹೌರ ಮಾಡೆಂದು, ನನಗೆ ಹೇಳಿದ ಈ ಜ
ನರಿಗೆ ಪ್ರತ್ಯುತ್ತರ ಕೊಡ, ನೀವು ಏನು ಯೋಚನೆ ಹೇಳುತ್ತೀರಿ!
೧೦ ಅಂದನು. ಆಗ ಅವನ ಕೂಡ ಬೆಳೆದ ಪ್ರಾಯಸ್ಥರು ಅವನಿಗೆ ಹೇ
ಳಿದ್ದೇನಂದರೆ—ನಿನ್ನ ತಂದೆಯು ನಮ್ಮ ನೊಗವನ್ನು ಭಾರ ಮಾ
ಡಿದನು; ಆದರೆ ನೀನು ಅದನ್ನು ನಮಗೆ ಹೌರ ಮಾಡೆಂದು, ನಿನ್ನ
೧೧ ಸಂಗಡ ಮಾತಾಡಿ ಹೇಳಿದ ಈ ಜನರಿಗೆ ನೀನು ಹೀಗೆ ಹೇಳ ಬೇ
ಕು—ನನ್ನ ಕಿರು ಬೆರಳು ನನ್ನ ತಂದೆಯ ನಡುವಿಗಿಂತ ದಪ್ಪವಾಗಿ
ರುವದು. ಹಾಗಾದರೆ ನನ್ನ ತಂದೆಯು ನಿಮ್ಮ ಮೇಲೆ ಭಾರವಾದ
ನೊಗವನ್ನು ಹೊರಿಸಿದನು; ನಾನು ನಿಮ್ಮ ನೊಗಕ್ಕೆ ಮತ್ತೂ
ಭಾರವಾಗ ಮಾಡುವೆನು. ನನ್ನ ತಂದೆಯು ನಿಮ್ಮನ್ನು ಬೆತ್ತಗ
ಳಿಂದ ಶಿಕ್ಷಿಸಿದನು; ಆದರೆ ನಾನು ನಿಮ್ಮನ್ನು ಚೇಳುಗಳಿಂದ ಶಿಕ್ಷಿ
ಸುವೆನು.

೧೨ ಆಗ ಮೂರನೇ ದಿವಸದಲ್ಲಿ ನನ್ನ ಬಳಿಗೆ ಬನ್ನಿರಿ ಎಂದು ಅರ
ಸನು ಹೇಳಿದ ಪ್ರಕಾರ, ಮೂರನೇ ದಿವಸದಲ್ಲಿ ಯೆರೊಬಾಮನೂ
೧೩ ಸಮಸ್ತ ಜನರೂ ರೆಹಬಾಮನ ಬಳಿಗೆ ಬಂದರು. ಆದರೆ ಅರಸನು
ಜನರಿಗೆ ಕಠಿಣವಾದ ಪ್ರತ್ಯುತ್ತರ ಹೇಳಿ, ಹಿರಿಯರು ಅವನಿಗೆ
ಕೊಟ್ಟ ಯೋಚನೆಯನ್ನು ಬಿಟ್ಟು, ಪ್ರಾಯಸ್ಥರ ಆಲೋಚನೆ
ಯ ಪ್ರಕಾರ ಅವರ ಸಂಗಡ ಮಾತಾಡಿ ಹೇಳಿದ್ದೇನಂದರೆ, ನನ್ನ
೧೪ ತಂದೆಯು ನಿಮ್ಮ ನೊಗವನ್ನು ಭಾರ ಮಾಡಿದನು; ನಾನು ಅದ
ನ್ನು ಮತ್ತೂ ಭಾರ ಮಾಡುತ್ತೇನೆ. ನನ್ನ ತಂದೆಯು ನಿಮ್ಮನ್ನು
ಬೆತ್ತಗಳಿಂದ ಶಿಕ್ಷಿಸಿದನು; ನಾನು ನಿಮ್ಮನ್ನು ಚೇಳುಗಳಿಂದ ಶಿಕ್ಷಿ
ಸುವೆನು.

೧೫ ಹೀಗೆಯೇ ಅರಸನು ಜನರ ಮಾತು ಕೇಳದೆ ಹೋದನು.
ಯಾಕಂದರೆ ಕರ್ತನು ನೆಬಾಟನ ಮಗನಾದ ಯೆರೊಬಾಮನಿಗೆ
ಶಿಲೋನ್ಯನಾದ ಅಹೀಯನ ಮುಖಾಂತರ ಹೇಳಿದ ವಾಕ್ಯವು ಈ
ದೇರುವದಕ್ಕೆ ಈ ಹೆಸುವೆ ದೇವರಿಂದ ಉಂಟಾಯಿತು. ಅರಸ
೧೬ ನು ಅವರ ಮಾತನ್ನು ಕೇಳದೆ ಹೋದನೆಂದು, ಸಮಸ್ತ ಇಸ್ರಯೇ
ಲ್ಯರು ನೋಡಿದಾಗ, ಜನರು ಅರಸನಿಗೆ ಪ್ರತ್ಯುತ್ತರವಾಗಿ, ದಾವೀ
ದನಲ್ಲಿ ನಮಗೆ ಭಾಗವೇನು! ಇಷಾಯನ ಮಗನಲ್ಲಿ ನಮಗೆ ಭಾಗ್ಯ
ತೆ ಇಲ್ಲ. ಇಸ್ರಯೇಲ್ಯರೇ, ನಿಮ್ಮ ಗುಡಾರಗಳಿಗೆ ಹೋಗಿರಿ;
ದಾವೀದನೇ, ನಿನ್ನ ಮನೆಯನ್ನು ನೋಡಿಕೋ ಎಂಥೇಳಿ, ಇಸ್ರ
೧೭ ಯೇಲ್ಯರೆಲ್ಲರು ತಮ್ಮ ಗುಡಾರಗಳಿಗೆ ಹೋದರು. ಆದರೆ ಯೆ
ಹೂದದ ಪಟ್ಟಣಗಳಲ್ಲಿ ವಾಸವಾಗಿರುವ ಇಸ್ರಯೇಲ ಮಕ್ಕಳ ಮೇ
೧೮ ಲೆ ರೆಹಬಾಮನು ಅಲ್ಲಿದನು. ಆಗ ರೆಹಬಾಮನು ಕಪ್ಪಕ್ಕೆ ಗೊ
ತ್ತುಗಾರನಾದ ಹದೋರಮನನ್ನು ಕಳುಹಿಸಿದನು. ಆದರೆ ಇಸ್ರ
ಯೇಲಿನ ಮಕ್ಕಳು ಅವನ ಮೇಲೆ ಕಲ್ಲೆಸೆದು, ಕೊಂದು ಹಾಕಿದ
ರು ಆದದರಿಂದ ಅರಸನಾದ ರೆಹಬಾಮನು ಯೆರೂಸಲೇಮಿಗೆ
೧೯ ಓಡಿ ಹೋಗ ಬಲಗೊಂಡು, ತನ್ನ ರಥದ ಮೇಲೆ ಏರಿದನು. ಹೀಗೆ
ಯೇ ಇಂದಿನ ವರಿಗೂ ಇಸ್ರಯೇಲ್ಯರು ದಾವೀದನ ಮನೆಯ ಮೇ
ಲೆ ತಿರುಗ ಬಿದ್ದರು.

## ೧೧. ಸಂಧಿ.

೧ ರೆಹಬಾಮನು ಯೆರೂಸಲೇಮಿಗೆ ಬಂದ ತರುವಾಯ, ಅವನು
ರೆಹಬಾಮನಿಗೆ ರಾಜ್ಯವನ್ನು ತಿರಿಗಿ ಬರ ಮಾಡುವ ಹಾಗೆ, ಇಸ್ರ
ಯೇಲಿನ ಸಂಗಡ ಯುದ್ಧ ಮಾಡ, ಯೆಹೂದ ಬೆನ್ಯಾಮಿನಿನ
ವರ ಮನೆಯಿಂದ ಯುದ್ಧ ಮಾಡ ತಕ್ಕವರಾಗಿರುವ ಒಕ್ಕಾ ಎಂಭ
ತ್ತು ಸಾವಿರ ಆಯಲ್ಪಟ್ಟ ಜನರನ್ನು ಕೂಡಿಸಿದನು. ಆದರೆ ಕ
ರ್ತನ ವಾಕ್ಯವು ದೇವರ ಮನುಷ್ಯನಾಗಿರುವ ಶೆಮಾಯನಿಗೆ

೩ ಉಂಟಾಯಿತು; ಏನಂದರೆ, ನೀನು ಯೆಹೂದದ ಅರಸನಾದ ಸೊ
ಲೊಮೋನನ ಮಗನಾಗಿರುವ ರೆಹಬಾಮನಿಗೂ ಯೆಹೂದ ಬೆ
೪ ನ್ಯಮಿನಿನಲ್ಲಿರುವ ಸಮಸ್ತ ಇಸ್ರಯೇಲರಿಗೂ ಹೇಳಿ ಬೇಕಾದ
ದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ನೀವು ನಿಮ್ಮ ಸಹೋ
ದರರಿಗೆ ವಿರೋಧವಾಗಿ ಯುದ್ಧ ಮಾಡ ಏರಿ ಹೋಗ ಬೇಡಿರಿ;
ಪ್ರತಿ ಮನುಷ್ಯನು ತನ್ನ ಮನೆಗೆ ತಿರುಗಲಿ. ಯಾಕಂದರೆ ಈ
ಕಾರ್ಯವು ನನ್ನಿಂದ ಉಂಟಾಯಿತು. ಆದಕಾರಣ ಅವರು ಕ
ರ್ತನ ವಾಕ್ಯ ಕೇಳಿ, ಯೆರೊಬಾಮನ ಮೇಲೆ ಹೋಗದೆ ತಿರು
ಗಿದರು.

೫ ಮತ್ತು ರೆಹಬಾಮನು ಯೆರೂಸಲೇಮಿನಲ್ಲಿ ನಿವಾಸ ಮಾಡಿ,
೬ ಯೆಹೂದದಲ್ಲಿ ಕೋಟೆಯಾದ ಪಟ್ಟಣಗಳನ್ನು ಕಟ್ಟಿಸಿದನು. ಅವ
೭ ನು ಬೇತ್ಲೆಹೇಮನೂ, ಎಟಾಮನೂ, ತೆಕೋವನೂ, ಬೆಚ್ಚೂ
೮ ರನೂ, ಸೋಕವನೂ, ಅದುಲ್ಲಮನೂ, ಗಾತನೂ, ಮರೇ
೯ ಷನೂ, ಜೀಫನೂ, ಅಡೋರಾಯನೂ, ಲಕೀಷನೂ,
೧೦ ಅಜೇಕವನೂ, ಜೋರವನೂ, ಅಯ್ಯಲೋನನೂ, ಹೆಬ್ರೋ
ನನ್ನೂ ಕಟ್ಟಿಸಿದನು. ಇವು ಯೆಹೂದದಲ್ಲಿಯೂ, ಬೆನ್ಯಮಿನಿ
೧೧ ನಲ್ಲಿಯೂ ಕೋಟೆಯಾದ ಪಟ್ಟಣಗಳಾಗಿವೆ. ಇದಲ್ಲದೆ ಅವನು
ಕೊಟೆಗಳನ್ನು ಬಲಪಡಿಸಿ, ಅವುಗಳಲ್ಲಿ ನಾಯಕರನ್ನೂ ಆಹಾ
ರ, ಎಣ್ಣೆ ದ್ರಾಕ್ಷೇರಸ ಉಂಟಾಗಿರುವ ಉಗ್ರಾಣಗಳನ್ನೂ ಇಟ್ಟ
೧೨ ನು. ಮತ್ತು ಪ್ರತಿಪಟ್ಟಣದಲ್ಲಿ ಬೇಟ್ಯಗಳನ್ನೂ, ಈಟಿಗಳನ್ನೂ ಇ
ಟ್ಟು, ಯೆಹೂದ ಬೆನ್ಯಮಿನಿನವರು ಅವನ ಕಡೆ ಇದ್ದದರಿಂದ,
ಅವುಗಳನ್ನು ಬಹಳ ಭದ್ರ ಪಡಿಸಿದನು.

೧೩ ಇದಲ್ಲದೆ ಸಮಸ್ತ ಇಸ್ರಯೇಲಿನಲ್ಲಿದ್ದ ಯಾಜಕರೂ ಲೇವ್ಯ
ರೂ ತಮ್ಮ ಸಮಸ್ತ ಪ್ರಾಂತ್ಯಗಳಿಂದ ಅವನ ಬಳಿಗೆ ಬಂದರು
೧೪ ಯಾಕಂದರೆ ಲೇವ್ಯರು ಕರ್ತನಿಗೆ ಯಾಜಕ ಸೇವೆ ಮಾಡದ ಹಾ
ಗೆ, ಯೆರೊಬಾಮನೂ ಅವನ ಮಕ್ಕಳೂ ಅವರನ್ನು ತೆಗೆದು
೧೫ ಹಾಕಿ, ಮೇಕುಗಳಿಗೋಸ್ಕರವೂ, ಹೋತ-ರೂಪ ದೆವ್ವಗಳಿ
ಗೋಸ್ಕರವೂ, ಯೆರೊಬಾಮನು ಮಾಡಿದ ಹೋರಿಗಳಿಗೋಸ್ಕ
ರವೂ ತನಗೆ ಯಾಜಕರನ್ನು ನೇಮಿಸಿದ್ದರಿಂದ, ಲೇವ್ಯರು ತಮ್ಮ
ಅಗ್ರಹಾರಗಳನ್ನೂ ತಮ್ಮ ಸ್ವಾಸ್ತ್ಯಗಳನ್ನೂ ಬಿಟ್ಟು ಬಿಟ್ಟು,
೧೬ ಯೆಹೂದಕ್ಕೂ ಯೆರೂಸಲೇಮಿಗೂ ಬಂದರು. ಇವರ ತರುವಾ
ಯ ಇಸ್ರಯೇಲಿನ ಕರ್ತನಾದ ದೇವರನ್ನು ಹುಡುಕ ತಮ್ಮ ಹೃ
ದಯಗಳನ್ನು ಕೊಟ್ಟವರು ತಮ್ಮ ಪಿತೃಗಳ ದೇವರಾದ ಕರ್ತನಿ
ಗೆ ಬಲಿ ಅರ್ಪಿಸ ಇಸ್ರಯೇಲಿನ ಸಮಸ್ತ ಕುಲಗಳಿಂದ ಯೆರೂಸ
೧೭ ಲೇಮಿಗೆ ಬಂದರು. ಹೀಗೆಯೇ ಅವರು ಯೆಹೂದನ ರಾಜ್ಯವನ್ನು
ದೃಢ ಪಡಿಸಿ, ಸೊಲೊಮೋನನ ಮಗನಾದ ರೆಹಬಾಮನನ್ನು
ಮೂರು ವರುಷಗಳ ಮಟ್ಟಿಗೂ ಬಲ ಪಡಿಸಿದರು. ಯಾಕಂದರೆ
ಅವರು ಮೂರು ವರುಷಗಳ ಮಟ್ಟಿಗೂ ದಾವೀದನ, ಸೊಲೊ
ಮೋನನ ಮಾರ್ಗದಲ್ಲಿ ನಡೆದರು.

೧೮ ರೆಹಬಾಮನು ದಾವೀದನ ಮಗನಾಗಿರುವ ಯೆರೆಮೋತನ ಮ
ಗಳಾದ ಮಹಲಾತಳನ್ನೂ ಇಷಾಯನ ಮಗನಾಗಿರುವ ಎಲ್ಯಾಬ
ನ ಮಗಳಾದ ಅಬಿಹಾಯಿಲಳನ್ನೂ ಹೆಂಡತಿಯರಾಗ ತಕ್ಕೊಂಡ
೧೯ ನು. ಅಬಿಹಾಯಿಲಳು ಯೆಊಷ, ಶೆಮರ್ಯಾ, ಜಹಾಮ್ ಎಂ
೨೦ ಬ ಮಕ್ಕಳನ್ನು ಅವನಿಗೆ ಹೆತ್ತಳು. ಇವಳ ತರುವಾಯ ಅವನು
ಅಬ್ಶಲೋಮನ ಮಗಳಾದ ಮಾಕಳನ್ನು ಹೆಂಡತಿಯಾಗ ತ
ಕ್ಕೊಂಡನು. ಇವಳು ಅವನಿಗೆ ಅಬೀಯನನ್ನೂ, ಅತ್ತಾಯ
೨೧ ನ್ನೂ, ಜೀಜನನ್ನೂ, ಶೆಲೊಮಿತನನ್ನೂ ಹೆತ್ತಳು. ರೆಹಬಾಮ
ನಿಗೆ ಹದಿನೆಂಟು ಮಂದಿ ಹೆಂಡರೂ ಅರವತ್ತು ಮಂದಿ ಉಪಪತ್ನಿ
ಗಳೂ ಇದ್ದರು; ಅವನು ಇಪ್ಪತ್ತೆಂಟು ಮಂದಿ ಕುಮಾರಕರನ್ನೂ
ಅರವತ್ತು ಮಂದಿ ಕುಮಾರ್ತೆಗಳನ್ನೂ ಪಡೆದನು. ಆದರೆ ಅವ
ನು ತನ್ನ ಎಲ್ಲಾ ಹೆಂಡರಿಗಿಂತಲೂ ಉಪಪತ್ನಿಗಳಿಗಿಂತಲೂ ಅಬ್ಶ
೨೨ ಲೋಮನ ಮಗಳಾದ ಮಾಕಳನ್ನು ಪ್ರೀತಿ ಮಾಡಿದನು. ರೆಹಬಾ
ಮನು ಮಾಕಳ ಮಗನಾದ ಅಬೀಯನನ್ನು ಅವನ ಸಹೋದರ
೨೩ ರಲ್ಲಿ ನಾಯಕನಾಗಿರ ಶ್ರೇಷ್ಠನಾಗ ಮಾಡಿದನು. ಯಾಕಂದರೆ
ಅವನನ್ನು ಅರಸನಾಗ ಮಾಡ ಮನಸ್ಸಾಗಿದ್ದನು. ಇದಲ್ಲದೆ
ಅವನು ವಿವೇಕವಾಗಿ ನಡೆದು, ತನ್ನ ಎಲ್ಲಾ ಮಕ್ಕಳನ್ನು ಯೆಹೂ
ದ ಬೆನ್ಯಮಿನಿನ ದೇಶಗಳಲ್ಲಿ ಇರುವ ಎಲ್ಲಾ ಬಲವಾದ ಪಟ್ಟಣಗಳ
ಲ್ಲಿ ಚದರ ಮಾಡಿ, ಅವರಿಗೆ ಬಹಳ ಜೀವನವನ್ನು ಕೊಟ್ಟನು.
ಆದರೆ ಹೆಂಡರ ಸಮೂಹವನ್ನು ಕೇಳಿದನು.

## ೧೨. ಸಂಧಿ.

೧ ಮತ್ತು ರೆಹಬಾಮನು ರಾಜ್ಯವನ್ನು ಸ್ಥಿರ ಮಾಡಿ, ತನ್ನನ್ನು ಬ
ಲಪಡಿಸಿದಾಗ, ಏನಾಯಿತಂದರೆ, ಅವನೂ ಅವನ ಸಂಗಡ ಸಮ
ಸ್ತ ಇಸ್ರಯೇಲ್ಯರೂ ಕರ್ತನ ನ್ಯಾಯಪ್ರಮಾಣವನ್ನು ಬಿಟ್ಟು
ಬಿಟ್ಟರು.

೨ ಮತ್ತು ರೆಹಬಾಮನು ಅರಸನಾದ ಐದನೇ ವರುಷದಲ್ಲಿ ಏನಾ
ಯಿತಂದರೆ, ಅವರು ಕರ್ತನಿಗೆ ವಿರೋಧವಾಗಿ, ಅಕೃತ್ಯ ಮಾ
ಡಿದ್ದರಿಂದ ಐಗುಪ್ತದ ಅರಸನಾದ ಶೀಷಕನು ಯೆರೂಸಲೇಮಿನ
೩ ಮೇಲೆ ಬಂದನು. ಅವನ ಸಂಗಡ ಸಾವಿರ ಇನ್ನೂರು ರಥಗ
ಳೂ, ಅರವತ್ತು ಸಾವಿರ ರಾಹುತರೂ ಇದ್ದರು. ಇದಲ್ಲದೆ ತ
ನ್ನ ಸಂಗಡ ಐಗುಪ್ತದಿಂದ ಬಂದ ಲೂಬ್ಯರೂ, ಸುಕ್ಕೀಯರೂ,
೪ ಕೂಷಿಯರೂ ಲೆಖ್ಖವಿಲ್ಲದೆ ಇದ್ದರು. ಅವನು ಯೆಹೂದಕ್ಕೆ ಉಂ
ಟಾದ ಕೋಟೆಯುಳ್ಳ ಪಟ್ಟಣಗಳನ್ನು ಹಿಡಿದು, ಯೆರೂಸಲೇಮಿ
ಗೆ ಬಂದನು.

೫ ಆಗ ಪ್ರವಾದಿಯಾದ ಶೆಮಾಯನು ರೆಹಬಾಮನ ಬಳಿಗೂ ಶೀ
ಷಕನ ನಿಮಿತ್ತ ಯೆರೂಸಲೇಮಿನಲ್ಲಿ ಕೂಡಿ ಕೊಂಡ ಯೆಹೂದದ
ಪ್ರಧಾನರ, ಬಳಿಗೂ ಬಂದು, ಅವರಿಗೆ ನೀವು ನನ್ನನ್ನು ಬಿಟ್ಟು ಬಿ
ಟ್ಟಿದ್ದರಿಂದ, ನಾನು ನಿಮ್ಮನ್ನು ಶೀಷಕನ ಕೈಯಲ್ಲಿ ಬಿಟ್ಟು ಬಿಟ್ಟಿನೆಂ
೬ ದು, ಕರ್ತನು ನಿಮಗೆ ಹೇಳುತ್ತಾನೆ, ಅಂದನು. ಆದದರಿಂದ ಇಸ್ರ
ಯೇಲಿನ ಪ್ರಧಾನರೂ ಅರಸನೂ, ತಮ್ಮನ್ನು ತಗ್ಗಿಸಿ ಕೊಂಡು,
ಕರ್ತನು ನೀತಿವಂತನು, ಅಂದರು.

೭ ಅವರು ತಮ್ಮನ್ನು ತಗ್ಗಿಸಿಕೊಂಡದ್ದನ್ನು ಕರ್ತನು ನೋಡಿದಾ
ಗ, ಕರ್ತನ ವಾಕ್ಯವು ಶೆಮಾಯನಿಗೆ ಉಂಟಾಯಿತು; ಏನಂದ
ರೆ—ಅವರು ತಮ್ಮನ್ನು ತಗ್ಗಿಸಿ ಕೊಂಡದ್ದರಿಂದ, ನಾನು ಅವರನ್ನು
ನಾಶನ ಮಾಡದೆ ಅವರು ಸ್ವಲ್ಪ ತಪ್ಪಿಸಿ ಕೊಳ್ಳ ಮಾಡುವೆನು,
ಶೀಷಕನ ಕೈಯಿಂದ ನನ್ನ ಕೋಪವು ಯೆರೂಸಲೇಮಿನ ಮೇಲೆ
೮ ಹೊಯ್ಯಲ್ಪಡುವದಿಲ್ಲ. ಆದರೆ ಅವರು ನನ್ನ ಸೇವೆಯನೂ
ದೇಶಗಳ ಅರಸುಗಳ ಸೇವೆಯನ್ನೂ ತಿಳಿಯುವ ಹಾಗೆ, ಅವನಿಗೆ
ಸೇವಕರಾಗುವರು.



೯ ಹಾಗೆಯೇ ಐಗುಪ್ತದ ಅರಸನಾದ ಶೀಷಕನು ಯೆರೂಸಲೇ
ಮಿಗೆ ವಿರೋಧವಾಗಿ ಏರಿ ಬಂದು, ಕರ್ತನ ಮನೆಯ ಬೊಕ್ಕಸಗ
ಳನ್ನೂ, ಅರಸನ ಮನೆಯ ಬೊಕ್ಕಸಗಳನ್ನೂ ತೆಗೆದು ಕೊಂಡ
ನು. ಎಲ್ಲವನ್ನೂ ತೆಗೆದು ಕೊಂಡನು. ಇದಲ್ಲದೆ ಸೊಲೊಮೋ
ನನು ಮಾಡಿಸಿದ ಭಂಗಾರದ ಗುರಾಣಿಗಳನ್ನು ತಕ್ಕೊಂಡು
೧೦ ಹೋದನು. ಇವಕ್ಕೆ ಬದಲಾಗಿ ಅರಸನಾದ ರೆಹಬಾಮನು ತಾಂ
ಬ್ರದ ಗುರಾಣಿಗಳನ್ನು ಮಾಡಿಸಿ, ಅರಸನ ಮನೆಯ ಬಾಗಲನ್ನು
ಕಾಯುವ ಕಾವಲಿಯ ಅಧಿಪತಿಗಳ ಕೈಯಲ್ಲಿ ಅವುಗಳನ್ನು ಒ
೧೧ ಪ್ಪಿಸಿದನು. ಅಸನರು ಕರ್ತನ ಮನೆಯಲ್ಲಿ ಪ್ರವೇಶಿಸುವಾಗ ಕಾ
ವಲಿಯವರು ಬಂದು, ಅವುಗಳನ್ನು ತಕ್ಕೊಂಡು ಬಂದರು; ಮ
೧೨ ತ್ತು ಕಾವಲಿಯವರ ಚಾವಡಿಗೆ ಅವುಗಳನ್ನು ತಿರಿಗಿ ತಂದರು.
ಅವನು ತನ್ನನ್ನು ತಗ್ಗಿಸಿ ಕೊಂಡಾಗ, ಕರ್ತನ ಕೋಪ ಅವನನ್ನು
ಬಿಟ್ಟು ತಿರುಗಿತು; ಪೂರ್ಣವಾಗಿ ನಾಶನ ಮಾಡ ಮನಸ್ಸಿಲ್ಲದೆ
ಇದ್ದನು; ಮತ್ತು ಯೆಹೂದದಲ್ಲಿ ಕಾರ್ಯಗಳು ಚನ್ನಾಗಿ ನ
ಡೆದವು.

೧೩ ರೆಹಬಾಮನು ಯೆರೂಸಲೇಮಿನಲ್ಲಿ ತನ್ನನ್ನು ಬಲ ಪಡಿಸಿ, ರಾ
ಜ್ಯವನ್ನು ಆಳಿದನು. ಯಾಕಂದರೆ ರೆಹಬಾಮನು ಆಳ್ವ ಆರಂಭಿ
ಸಿದಾಗ ನಾಲ್ವತ್ತೊಂದು ವರುಷದವನಾಗಿದ್ದು, ಅಲ್ಲಿ ತನ್ನ ನಾ
ಮವನ್ನು ಇರಿಸ ಇಸ್ರಯೇಲಿನ ಸಮಸ್ತ ಕುಲಗಳಲ್ಲಿ ಕರ್ತನು
ಆದು ಕೊಂಡ ಪಟ್ಟಣದ ಯೆರೂಸಲೇಮಿನಲ್ಲಿ ಹದಿನೇಳು ವರು
ಷ ಆಳಿದನು. ಅವನ ತಾಯಿಯ ಹೆಸರು ನಾಮಾಳು; ಅಮ್ಮೋ
೧೪ ನ್ಯಳಾಗಿದ್ದಳು. ಆದರೆ ಅವನು ಕರ್ತನನ್ನು ಹುಡುಕ ತನ್ನ
ಹೃದಯವನ್ನು ದೃಢ ಪಡಿಸದೆ ಇದ್ದದರಿಂದ, ಕೆಟ್ಟದ್ದನ್ನು
ಮಾಡಿದನು.

೧೫ ರೆಹಬಾಮನ ಕ್ರಿಯೆಗಳು—ಮೊದಲನೆಯವುಗಳೂ ಕಡೆಯ
ವುಗಳೂ—ಪ್ರವಾದಿಯಾದ ಶೆಮಾಯನ ಪುಸ್ತಕದಲ್ಲಿಯೂ,
ವಂಶಾವಳಿಗಳನ್ನು ಕುರಿತು ಬರೆದ ದರ್ಶಿಯಾದ ಇದ್ದೋನನ ಪು
ಸ್ತಕದಲ್ಲಿಯೂ ಬರೆಯಲ್ಪಟ್ಟವಲ್ಲವೇ! ಇದಲ್ಲದೆ ರೆಹಬಾಮನಿಗೂ
೧೬ ಯೆರೊಬಾಮನಿಗೂ ಯಾವಾಗಲೂ ಯುದ್ಧ ಉಂಟಾಗಿತ್ತು. ರೆ
ಹಬಾಮನು ತನ್ನ ಪಿತೃಗಳ ಸಂಗಡ ಮಲಗಿದನು; ದಾವೀದನ ಪ
ಟ್ಟಣದಲ್ಲಿ ಹೂಣಲ್ಪಟ್ಟನು; ಅವನ ಮಗನಾದ ಅಬೀಯೆನು ಅವನಿ
ಗೆ ಬದಲಾಗಿ ಆಳಿದನು.

## ೧೩. ಸಂಧಿ.

೧ ಅರಸನಾದ ಯೆರೊಬಾಮನ ಹದಿನೆಂಟನೇ ವರುಷದಲ್ಲಿ ಅ
೨ ಬೀಯೆನು ಯೆಹೂದದ ಮೇಲೆ ಆಳ್ವ ಆರಂಭಿಸಿದನು. ಅವನು ಯೆ
ರೂಸಲೇಮಿನಲ್ಲಿ ಮೂರು ವರುಷ ಆಳಿದನು. ಅವನ ತಾಯಿ
ಯ ಹೆಸರು ಮಿಕಾಯಳು; ಗಿಬ್ಯದ ಊರಿಯೇಲನ ಮಗಳು.

೩ ಮತ್ತು ಅಬೀಯೆನಿಗೂ ಯೆರೊಬಾಮನಿಗೂ ಯುದ್ಧ ಉಂ
ಟಾಗಿತ್ತು. ಆಗ ಅಬೀಯೆನು ಯುದ್ಧಸ್ಥರಾದ ಪರಾಕ್ರಮಶಾಲಿ
ಗಳ ಸೈನ್ಯವನ್ನು ಯುದ್ಧಕ್ಕೆ ಸಿದ್ಧ ಮಾಡಿದನು. ಅಯ್ಯಲ್ಪಟ್ಟ
ನಾಲ್ಕು ಲಕ್ಷ ಜನರಿದ್ದರು. ಯೆರೊಬಾಮನು ಅವನಿಗೆದುರಾಗಿ
ಎಂಟು ಲಕ್ಷ ಮಂದಿ ಆಯ್ಯಲ್ಪಟ್ಟ ಪರಾಕ್ರಮಶಾಲಿಗಳನ್ನು ಯು
ದ್ಧಕ್ಕೆ ನಿಲ್ಲಿಸಿದನು.

೪ ಆಗ ಅಬೀಯೆನು ಎಫ್ರಯಿಾಂ ಬೆಟ್ಟದಲ್ಲಿರುವ ಜೆಮರಾಯಿ
ಮೆಂಬ ಬೆಟ್ಟದ ಮೇಲಕ್ಕೆ ಏರಿ, ನಿಂತು, ಹೇಳಿದ್ದೇನಂದರೆ—ಯೆರೊ
೫ ಬಾಮನೇ, ಸಮಸ್ತ ಇಸ್ರಯೇಲೇ, ನನ್ನ ಮಾತು ಕೇಳಿರಿ. ಇಸ್ರ
ಯೇಲಿನ ದೇವರಾದ ಕರ್ತನು ಇಸ್ರಯೇಲಿನ ಮೇಲೆ ರಾಜ್ಯವನ್ನು
ಎಂದೆಂದಿಗೂ ದಾವೀದನಿಗೆ, ಅವನಿಗೂ ಅವನ ಮಕ್ಕಳಿಗೂ ಉಪ್ಪಿ
ನ ಬಡಂಬಡಿಕೆಯಿಂದ ಕೊಟ್ಟನೆಂದು ನೀವು ತಿಳಿಯ ತಕ್ಕದ್ದಲ್ಲ
೬ ವೋ! ಆದರೆ ದಾವೀದನ ಮಗನಾದ ಸೊಲೊಮೋನನ ಸೇವಕ
ನಾಗಿದ್ದ ನೆಬಾಟನ ಮಗನಾದ ಯೆರೊಬಾಮನು ಎದ್ದು, ತನ್ನ
೭ ಯಜಮಾನನ ಮೇಲೆ ತಿರುಗ ಬಿದ್ದಿದ್ದಾನೆ. ಇದಲ್ಲದೆ ನಿಷ್ಪ್ರಯೋ
ಜಕರಾದ ಬೆಲಿಯಾಳನ ಮಕ್ಕಳು ಅವನ ಬಳಿಗೆ ಕೂಡಿ ಬಂದು,
ಸೊಲೊಮೋನನ ಮಗನಾದ ರೆಹಬಾಮನು ಹುಡುಗನಾಗಿಯೂ
ಮೃದು ಹೃದಯವುಳ್ಳವನಾಗಿಯೂ ಅವರನ್ನು ಎದುರಿಸ ಬಲ
ವಿಲ್ಲದೆ ಇರುವಾಗ, ಅವನಿಗೆ ವಿರೋಧವಾಗಿ ತಮ್ಮನ್ನು ಬಲ ಪಡಿ
೮ ಸಿದ್ದಾರೆ. ಮತ್ತು ಈಗ ದಾವೀದನ ಕುಮಾರರ ಕೈಯ್ಯಲ್ಲಿರುವ
ಕರ್ತನ ರಾಜ್ಯವನ್ನು ಎದುರಿಸುತ್ತೇವೆಂದು ನೀವು ಹೇಳಿ ಕೊಳ್ಳು
ತ್ತೀರಿ. ಇದಲ್ಲದೆ ನೀವು ಬಹು ಗುಂಪಾಗಿದ್ದೀರಿ. ಯೆರೊಬಾಮ
ನು ದೇವರುಗಳಾಗಿ ನಿಮಗೆ ಮಾಡಿದ ಭಂಗಾರದ ಕರುವುಗಳು
೯ ನಿಮ್ಮಲ್ಲಿ ಉಂಟು. ನೀವು ಆರೋನನ ಮಕ್ಕಳಾದ ಕರ್ತನ
ಯಾಜಕರನ್ನೂ ಲೇವ್ಯರನ್ನೂ ತಳ್ಳಿ ಹಾಕಿ, ದೇಶಗಳ ಜನರ
ಹಾಗೆ ನಿಮಗೆ ಯಾಜಕರನ್ನು ಮಾಡಲಿಲ್ಲವೋ! ಯಾವನಾದ
ರೂ ದನದ ಮರಿಯಾದ ಹೋರಿಯನ್ನೂ ಏಳು ಟಗರುಗಳ
ನ್ನೂ ತಕ್ಕೊಂಡು ಬಂದು, ತನ್ನನ್ನು ಪ್ರತಿಷ್ಠೆ ಮಾಡಿದರೆ, ಅವ
೧೦ ನು ದೇವರಲ್ಲದವುಗಳಿಗೆ ಯಾಜಕನಾಗಿರುವನು. ನಾವಾದರೆ, ಯೆ
ಹೋವ ನಮಗೆ ದೇವರಾಗಿದ್ದಾನೆ; ನಾವು ಅವನನ್ನು ಬಿಡಲಿಲ್ಲ.
ಇದಲ್ಲದೆ ಕರ್ತನಿಗೆ ಸೇವೆ ಮಾಡುವ ಯಾಜಕರು ಆರೋನನ
೧೧ ಮಕ್ಕಳು; ಮತ್ತು ಲೇವ್ಯರು ಕೆಲಸದಲ್ಲಿ ಇದ್ದಾರೆ. ಅವರು ಪ್ರತಿ
ಉದಯದಲ್ಲಿಯೂ ಪ್ರತಿ ಸಾಯಂಕಾಲದಲ್ಲಿಯೂ ಕರ್ತನಿಗೆ
ಹೋಮಗಳನ್ನೂ ಸುಗಂಧ ಧೂಪವನ್ನೂ ಸುಡುತ್ತಾರೆ. ಇದ
ಲ್ಲದೆ ಪರಿಶುದ್ಧ ಮೇಜಿನ ಮೇಲೆ ಕೊಟ್ಟಿಗಳನ್ನು ಇಡುವದುಂಟು;
ಪ್ರತಿ ಸಾಯಂಕಾಲದಲ್ಲಿ ಭಂಗಾರದ ದೀಪಸ್ತಂಭವನ್ನೂ ಅದರ
ದೀಪಗಳನ್ನೂ ಸಿದ್ಧ ಮಾಡಿ ಹಚ್ಚುತ್ತಾರೆ. ಯಾಕಂದರೆ ನಾವು
ನಮ್ಮ ದೇವರಾದ ಕರ್ತನ ಕಟ್ಟಳೆಯನ್ನು ಕೈ ಕೊಳ್ಳುತ್ತೇವೆ
ಆದರೆ ನೀವು ಅವನನ್ನು ಬಿಟ್ಟಿದ್ದೀರಿ. ಇಗೋ, ದೇವರು ತಾನೆ.
೧೨ ಅಧಿಪತಿಯಾಗಿ ನಮ್ಮ ಸಂಗಡ ಇದ್ದಾನೆ. ಇದಲ್ಲದೆ ನಿಮಗೆ ವಿ
ರೋಧವಾಗಿ ಜಯ ಧ್ವನಿ ಮಾಡುವ ತುತೂರಿಗಳನ್ನು ಹಿಡು
ಕೊಂಡ ಅವನ ಯಾಜಕರುಂಟು. ಇಸ್ರಯೇಲಿನ ಮಕ್ಕಳೇ, ನೀ
ವು ನಿಮ್ಮ ಪಿತೃಗಳ ದೇವರಾದ ಕರ್ತನಿಗೆ ವಿರೋಧವಾಗಿ ಯು
ದ್ಧ ಮಾಡ ಬೇಡಿರಿ. ಯಾಕಂದರೆ ನೀವು ಸಿದ್ಧಿ ಹೊಂದುವದಿಲ್ಲ,
ಅಂದನು.

೧೩ ಆದರೆ ಯೆರೊಬಾಮನು ಅಡಗಿ ಕೊಂಡವರನ್ನು ಸುತ್ತಾ ಅವ
ರ ಹಿಂದೆ ಬರ ಮಾಡಿದನು. ಆದದರಿಂದ ಅವರು ಯೆಹೂದನ
ವರ ಮುಂದೆಯೂ, ಅಡಗಿ ಕೊಂಡವರು ಅವರ ಹಿಂದೆಯೂ ಇ
೧೪ ದ್ದರು. ಯೆಹೂದನವರು ಹಿಂದಕ್ಕೆ ನೋಡಿದಾಗ, ಇಗೋ,
ಯುದ್ಧವು ಅವರ ಮುಂದೆಯೂ ಹಿಂದೆಯೂ ಇತ್ತು. ಆಗ ಕರ್
ತನಿಗೆ ಕೂಗಿದರು; ಯಾಜಕರು ತುತೂರಿಗಳನ್ನು ಊದಿದರು.
೧೫ ಇದಲ್ಲದೆ ಯೆಹೂದದ ಮನುಷ್ಯರು ಅರ್ಭಟಿಸಿದರು. ಯೆಹೂ

ದದ ಮನುಷ್ಯರು ಅರ್ಭಟಿಸಿದಾಗ ಏನಾಯಿತಂದರೆ, ದೇವರು ಅ
ಬೀಯನ, ಯೆಹೂದನವರ ಮುಂದೆ ಯೆರೊಬಾಮನನ್ನೂ ಸಮ
೧೬ ಸ್ತ ಇಸ್ರಯೇಲನ್ನೂ ಮುರಿಯ ಬಡಿದನು. ಇಸ್ರಯೇಲಿನ ಮಕ್ಕ
ಳು ಯೆಹೂದನವರ ಎದುರಿನಿಂದ ಓಡಿ ಹೋದರು. ದೇವರು ಅ
೧೭ ವರನ್ನು ಅವರ ಕೈಯಲ್ಲಿ ಒಪ್ಪಿಸಿದನು. ಅಬೀಯನೂ ಅವನ
ಜನರೂ ಅವರಲ್ಲಿ ಬಹಳ ಮಂದಿಯನ್ನು ಹೊಡೆದು ಬಿಟ್ಟರು.
ಇಸ್ರಯೇಲಿನವರಲ್ಲಿ ಐದು ಲಕ್ಷ ಮಂದಿ ಆಯಲ್ಪಟ್ಟವರು ಬಿ
ದ್ದರು.

೧೮ ಹೀಗೆಯೇ ಆ ಕಾಲದಲ್ಲಿ ಇಸ್ರಯೇಲಿನ ಮಕ್ಕಳು ತಗ್ಗಿಸಲ್ಪ
ಟ್ಟರು. ಆದರೆ ಯೆಹೂದನ ಮಕ್ಕಳು ತಮ್ಮ ಪಿತೃಗಳ ದೇವ
೧೯ ರಾದ ಕರ್ತನ ಮೇಲೆ ಆತು ಕೊಂಡದರಿಂದ ದೃಢ ಪಟ್ಟರು. ಅ
ಬೀಯನು ಯೆರೊಬಾಮನನ್ನು ಹಿಂದಟ್ಟಿ, ಅವನಿಂದ ಬೇತೆಲು,
ಯೆಷಾನವು, ಎಫ್ರಾಯಿನು ಎಂಬ ಪಟ್ಟಣಗಳನ್ನೂ ಅವುಗಳ ಗ್ರಾ
೨೦ ಮಗಳನ್ನೂ ತೆಗೆದು ಕೊಂಡನು. ಯೆರೊಬಾಮನು ಅಬೀಯ
ನ ದಿನಗಳಲ್ಲಿ ತಿರಿಗಿ ಶಕ್ತಿಯನ್ನು ಹೊಂದಲಿಲ್ಲ. ಮತ್ತು ಕರ್ತ
ನು ಅವನನ್ನು ಹೊಡೆದ್ದರಿಂದ, ಅವನು ಸತ್ತನು.

೨೧ ಆದರೆ ಅಬೀಯನು ಬಲ ಗೊಂಡು, ಹದಿನಾಲ್ಕು ಮಂದಿ ಹೆಂ
ಡತನ್ನು ಮದುವೆ ಮಾಡಿ ಕೊಂಡು, ಇಪ್ಪತ್ತೆರಡು ಮಂದಿ
ಕುಮಾರರನ್ನೂ ಹದಿನಾರು ಮಂದಿ ಕುಮಾರ್ತೆಗಳನ್ನೂ ಪ
ಡೆದನು.

೨೨ ಅಬೀಯನ ಮಿಕ್ಕಾದ ಕ್ರಿಯೆಗಳೂ ಅವನ ನಡತೆಗಳೂ ಅವ
ನ ವಾಕ್ಯಗಳೂ ಪ್ರವಾದಿಯಾದ ಇದ್ದೋನನ ವರ್ತಮಾನಗಳಲ್ಲಿ
ಬರೆಯಲ್ಪಟ್ಟಿವೆ.

## ೧೪. ಸಂಧಿ.

೧ ಮತ್ತು ಅಬೀಯನು ತನ್ನ ಪಿತೃಗಳ ಸಂಗಡ ಮಲಗಿದನು;
ದಾವೀದನ ಪಟ್ಟಣದಲ್ಲಿ ಹೂಣಲ್ಪಟ್ಟನು; ಮತ್ತು ಅವನ ಮಗನಾದ
ಆಸನು ಅವನಿಗೆ ಬದಲಾಗಿ ಆಳಿದನು. ಅವನ ದಿವಸಗಳಲ್ಲಿ ಹತ್ತು
ವರುಷ ದೇಶವು ಶಾಂತವಾಗಿತ್ತು.

೨ ಆಸನು ತನ್ನ ದೇವರಾದ ಕರ್ತನ ದೃಷ್ಟಿಯಲ್ಲಿ ಒಳ್ಳೇದ
3 ನ್ನೂ ನೆಟ್ಟನೆಯಾದದ್ದನ್ನೂ ಮಾಡಿದನು. ಅದನು ಅನ್ಯ ದೈವ
ಗಳ ಬಲಿಪೀಠಗಳನ್ನೂ, ಮೇಡುಗಳನ್ನೂ ತೆಗೆದು ಹಾಕಿ, ವಿಗ್ರಹಾ
ದಿಗಳನ್ನು ಒಡೆದು ಬಿಟ್ಟು, ಅವುಗಳ ತೋಪುಗಳನ್ನು ಕಡಿದು ಹಾ
೪ ಕಿ, ತಮ್ಮ ಪಿತೃಗಳ ದೇವರಾದ ಕರ್ತನನ್ನು ಹುಡುಕಲೂ, ನ್ಯಾ
ಯಪ್ರಮಾಣವನ್ನೂ ಆಜ್ಞೆಯನ್ನೂ ಕೈ ಕೊಳ್ಳಲೂ ಯೆಹೂ,
೫ ದ್ಯರಿಗೆ ಹೇಳಿದನು. ಇದಲ್ಲದೆ ಅವನು ಮೇಡುಗಳನ್ನೂ ಸೂ
ರ್ಯ ಸ್ತಂಭಗಳನ್ನೂ ಯೆಹೂದದ ಸಮಸ್ತ ಪಟ್ಟಣಗಳಿಂದ ತೆಗೆ
ದು ಹಾಕಿದನು. ರಾಜ್ಯವು ಅವನ ಮುಂದೆ ಶಾಂತವಾಗಿತ್ತು.

೬ ಇದಲ್ಲದೆ ಅವನು ಯೆಹೂದದಲ್ಲಿ ಕೋಟೆಗಳುಳ್ಳ ಪಟ್ಟಣಗಳ
ನ್ನು ಕಟ್ಟಿಸಿದನು. ಯಾಕಂದರೆ ದೇಶವು ಶಾಂತವಾಗಿತ್ತು. ಕ
ರ್ತನು ಅವನಿಗೆ ವಿಶ್ರಾಂತಿ ಕೊಟ್ಟದ್ದರಿಂದ, ಆ ವರುಷಗಳಲ್ಲಿ ಅವ
೭ ನಿಗೆ ಯುದ್ಧವಿರಲಿಲ್ಲ. ಅವನು ಯೆಹೂದದವರಿಗೆ, ದೇಶವು ನಮ್ಮ
ಮುಂದೆ ಇರುವಾಗ ಈ ಪಟ್ಟಣಗಳನ್ನು ಕಟ್ಟಿಸಿ, ಅವುಗಳ ಸುತ್ತ
ಲೂ ಅಲಂಗಗಳನ್ನೂ, ಬುರುಜುಗಳನ್ನೂ, ಬಾಗಲುಗಳನ್ನೂ
ಅಗುಳಿಗಳನ್ನೂ ಮಾಡುವ; ಯಾಕಂದರೆ ನಾವು ನಮ್ಮ ದೇವ
ರಾದ ಕರ್ತನನ್ನು ಹುಡುಕಿದೆವು; ನಾವು ಅವನನ್ನು ಹುಡುಕಿದ್ದ
ರಿಂದ, ಅವನು ಎಲ್ಲ ಕಡೆಯಲ್ಲಿ ನಮಗೆ ವಿಶ್ರಾಂತಿ ಕೊಟ್ಟಿದ್ದಾ
೮ ನೆ, ಅಂದನು. ಹಾಗೆಯೇ ಅವರು ಕಟ್ಟಿಸಿ, ಸಿದ್ಧಿ ಹೊಂದಿದರು.
ಇದಲ್ಲದೆ ಆಸನಿಗೆ ಖೇಡ್ಯಗಳನ್ನೂ ಈಟಿಗಳನ್ನೂ ಹಿಡಿಯುವ
ರಾಣುವೆ ಇತ್ತು. ಯೆಹೂದದವರು ಮೂರು ಲಕ್ಷ ಮಂದಿಯೂ
ಬೆನ್ಯಾಮಿನಿನವರು ಗುರಾಣಿಗಳನ್ನು ಹಿಡಿಯುವ ಬಿಲ್ಲುಗಳನ್ನು
ಎಸೆಯುವ ಎರಡು ಲಕ್ಷದ ಎಂಭತ್ತು ಸಾವಿರ ಮಂದಿಯೂ ಇದ್ದ
ರು. ಇವರೆಲ್ಲರು ಪರಾಕ್ರಮಶಾಲಿಗಳಾಗಿದ್ದರು.

೯ ಆದರೆ ಕೂಷಿಯನಾದ ಜೇರಹನು ಅವರಿಗೆ ವಿರೋಧವಾಗಿ
ಹೊರಟು, ಮರೇಷದ ಮಟ್ಟಿಗೂ ಬಂದನು. ಅವನ ಸಂಗಡ ಹ
ತ್ತುಲಕ್ಷ ಜನ ರಾಣುವೆಯೂ ಮುನ್ನೂರು ರಥಗಳೂ ಇದ್ದವು.
೧೦ ಆಸನು ಅವನಿಗೆದುರಾಗಿ ಹೊರಟು ಹೋದನು. ಮರೇಷದ ಬಳಿ
ಯಲ್ಲಿ ಜೆಫಾತದ ತಗ್ಗಿನಲ್ಲಿ ವ್ಯೂಹ ಕಟ್ಟಿದರು.
೧೧ ಆಸನು ಆಸನು
ತನ್ನ ದೇವರಾದ ಕರ್ತನನ್ನು ಕರೆದು ಹೇಳಿದ್ದೇನಂದರೆ—ಕರ್ತ
ನೇ, ಅನೇಕರ ಮಧ್ಯದಲ್ಲಿ ಬಲಹೀನರಿಗೆ ಸಹಾಯ ಕೊಡುವದು
ನಿನಗೆ ಏನೂ ಇಲ್ಲ. ನಮ್ಮ ದೇವರಾದ ಕರ್ತನೇ, ನಮಗೆ ಸಹಾಯ
ಕೊಡು; ಯಾಕಂದರೆ ನಾವು ನಿನ್ನ ಮೇಲೆ ಆತು ಕೊಂಡಿದ್ದೇವೆ,
ನಿನ್ನ ಹೆಸರಿನಲ್ಲಿ ನಾವು ಈ ಗುಂಪಿನ ಮೇಲೆ ಹೋಗುತ್ತೇವೆ;
ಕರ್ತನೇ, ನೀನೇ ನಮ್ಮ ದೇವರು; ಮನುಷ್ಯನು ನಿನ್ನಿದುರಿನಲ್ಲಿ
೧೨ ಬಲ ಕೊಳ್ಳದಿರಲಿ. ಆಗ ಕರ್ತನು ಕೂಷಿಯರನ್ನು ಆಸನ ಮು
ದೆಯೂ ಯೆಹೂದದವರ ಮುಂದೆಯೂ ಮುರಿಯ ಬಡಿದ್ದರಿ
೧೩ ದ, ಕೂಷಿಯರು ಓಡಿ ಹೋದರು. ಆಗ ಆಸನೂ ಅವನ ಸಂ
ಗಡ ಇದ್ದ ಜನರೂ ಅವರನ್ನು ಗೆರಾರಿನ ವರಿಗೂ ಹಿಂದಟ್ಟಿದರು.
ಮತ್ತು ಕೂಷಿಯರು ತಮಗೆ ಜೀವವಿಲ್ಲದ ಹಾಗೆ ಮುರಿಯಲ್ಪಟ್ಟಿ
ದ್ದರು. ಯಾಕಂದರೆ ಅವರು ಕರ್ತನ ಮುಂದೆಯೂ ಅವನ ಸೈ
ನ್ಯದ ಮುಂದೆಯೂ ಮುರಿಯಲ್ಪಟ್ಟರು. ಮತ್ತು ಬಹು ಕೊಳ್ಳೆ
೧೪ ಯನ್ನು ಕೈದರು. ಇದಲ್ಲದೆ ಅವರು ಗೆರಾರಿನ ಸುತ್ತಲಿರುವ ಸ
ಮಸ್ತ ಪಟ್ಟಣಗಳನ್ನು ಹೊಡೆದರು. ಯಾಕಂದರೆ ಕರ್ತನ ಭಯ
ವು ಅವರ ಮೇಲೆ ಬಂತು. ಆ ಪಟ್ಟಣಗಳಲ್ಲಿ ಬಹು ಕೊಳ್ಳೆ ಇದ್ದ
೧೫ ದ್ದರಿಂದ, ಅವುಗಳನ್ನೆಲ್ಲಾ ಕೊಳ್ಳೆ ಮಾಡಿದರು. ಪಶುಗಳಂಪಾ
ದವರ ಗುಡಾರಗಳನ್ನು ಹೊಡೆದು, ಕುರಿಗಳನ್ನೂ ಒಟೆಗ
ಳನ್ನೂ ಬಹಳವಾಗಿ ತೆಗೆದು ಕೊಂಡು, ಯೆರೂಸಲೇಮಿಗೆ ತಿರು
ಗಿದರು.

## ೧೫. ಸಂಧಿ.

೧ ಆಗ ದೇವರ ಆತ್ಮವು ಒಡೇದನ ಮಗನಾದ ಅಜರ್ಯನ ಮೇ
ಲೆ ಬಂದದ್ದರಿಂದ, ಅವನು ಆಸನನ್ನು ಎದುರ್ಗೊಳ್ಳ ಹೊರಟು
೨ ಬಂದು, ಅವನಿಗೆ ಹೇಳಿದ್ದೇನಂದರೆ, ಆಸನೇ, ಯೆಹೂದ, ಬೆನ್ಯಾ
ಮಿನಿನ ಸಮಸ್ತರೇ, ನನ್ನ ಮಾತನ್ನು ಕೇಳಿರಿ. ನೀವು ಕರ್ತನ
ಸಂಗಡ ಇರುವದರಿಂದ ಆತನ ಸಂಗಡ ಇರುವನು;
ನೀವು ಅವನನ್ನು ಹುಡುಕಿದರೆ, ಅವನು ನಿಮಗೆ ಶಿಕ್ಕುವನು. ಆದ
ರೆ ನೀವು ಅವನನ್ನು ಬಿಟ್ಟು ಬಿಟ್ಟರೆ, ಅವನು ನಿಮ್ಮನ್ನು ಬಿಟ್ಟು
3 ಬಿಡುವನು. ಬಹು ಕಾಲ ಇಸ್ರಯೇಲ್ಯರು ನಿಜವಾದ ದೇವರಲ್ಲದೆ,
ಬೋಧಿಸುವ ಯಾಜಕನಿಲ್ಲದೆ, ನ್ಯಾಯಪ್ರಮಾಣವಿಲ್ಲದೆ ಇದ್ದ
೪ ರು. ಆದರೆ ಅವರು ತಮ್ಮ ಇಕ್ಕಟ್ಟಿನಲ್ಲಿ ಇಸ್ರಯೇಲಿನ ದೇವರಾ



ದ ಕರ್ತನ ಕಡೆಗೆ ತಿರುಗಿ, ಅವನನ್ನು ಹುಡುಕಿದಾಗ, ಅವರಿಗೆ
೫ ಶಿಕ್ಕಿದನು. ಆ ಕಾಲಗಳಲ್ಲಿ ಹೊರಗೆ ಹೋಗುವವನಿಗೂ ಒಳಗೆ
ಬರುವವನಿಗೂ ಸಮಾಧಾನವಿಲ್ಲದೆ ಇತ್ತು; ಯಾಕಂದರೆ ದೇಶಗಳ
೬ ನಿವಾಸಿಗಳ ಮೇಲೆ ಬಹು ಗಾಬರಿಗಳು ಇದ್ದವು. ಜನಾಂಗವು ಜನಾಂ
ಗದಿಂದಲೂ, ಪಟ್ಟಣವು ಪಟ್ಟಣದಿಂದಲೂ ಮುರಿಯಲ್ಪಟ್ಟಿತು. ಯಾಕಂ
ದರೆ ದೇವರು ಸಕಲ ಇಕ್ಕಟ್ಟುಗಳಿಂದ ಅವರನ್ನು ತೊಂದರೆ ಪಡಿ
೭ ಸಿದನು. ಆದದರಿಂದ ನೀವು ಬಲವಾಗಿರ್ರಿ; ನಿಮ್ಮ ಕೈಗಳು ಜೋ
ಲವೆ ಇರಲಿ. ಯಾಕಂದರೆ ನಿಮ್ಮ ಕೃತ್ಯಗಳಿಗೆ ಸಂಬಳ ಉಂಟು.

೮ ಆಸನು ಈ ಮಾತುಗಳನ್ನೂ, ಪ್ರವಾದಿಯಾದ ಒಡೇದನ
ಪ್ರವಾದನೆಯನ್ನೂ ಕೇಳಿದಾಗ, ಅವನು ಬಲಗೊಂಡು, ಯೆಹೂ
ದ ಬೆನ್ಯಾಮಿನಿನ ಸಮಸ್ತ ದೇಶದೊಳಗಿಂದಲೂ, ಎಫ್ರಯಿಮಿನ
ಬೆಟ್ಟದಲ್ಲಿ ತಾನು ಹಿಡಿದ ಪಟ್ಟಣಗಳೊಳಗಿಂದಲೂ ಅಸಹ್ಯಕರಗ
ಳನ್ನು ತೆಗೆದು ಹಾಕಿ, ಕರ್ತನ ಮಂಟಪದ ಮುಂದೆ ಇದ್ದ ಕರ್ತ
೯ ನ ಬಲಿಪೀಠವನ್ನು ನೂತನ ಪಡಿಸಿದನು. ಇದಲ್ಲದೆ ಅವನು ಯೆ
ಹೂದ ಬೆನ್ಯಾಮಿನಿನ ಸಮಸ್ತರನ್ನೂ, ಎಫ್ರಯಿಮಿನಿಂದಲೂ
ಮನಸ್ಸೆಯಿಂದಲೂ ಸಿಮೆಯೋನಿನಿಂದಲೂ ಅವರ ಕಡೆಗೆ ಬಂದ
ಅನ್ಯರನ್ನೂ ಕೂಡಿಸಿದನು. ಯಾಕಂದರೆ ಅವನ ದೇವರಾದ ಕ
ರ್ತನು ಅವನ ಸಂಗಡ ಇದ್ದಾನೆಂದು ಇವರು ಕಂಡಾಗ, ಇಸ್ರಯೇ
೧೦ ಲಿನೊಳಗಿಂದ ಅನೇಕರು ಅವನ ಕಡೆಗೆ ಬಿದ್ದರು. ಹೀಗೆಯೇ ಆಸ
ನ ಆಳಿಕೆಯ ಹದಿನೈದನೇ ವರುಷದ ಮೂರನೇ ತಿಂಗಳಲ್ಲಿ ಅವ
೧೧ ರು ಯೆರೂಸಲೇಮಿನಲ್ಲಿ ಕೂಡಿ ಕೊಂಡರು. ಅದೇ ಕಾಲದಲ್ಲಿ
ತಾವು ತಂದ ಕೊಳ್ಳೆಯಿಂದ ಏಳುನೂರು ಎತ್ತುಗಳನ್ನೂ ಏಳು
೧೨ ಸಾವಿರ ಕುರಿಗಳನ್ನೂ ಕರ್ತನಿಗೆ ಬಲಿ ಅರ್ಪಿಸಿದರು. ಇದಲ್ಲದೆ
ತಮ್ಮ ಪಿತೃಗಳ ದೇವರಾದ ಕರ್ತನನ್ನು ತಮ್ಮ ಪೂರ್ಣ ಹೃದ
ಯದಿಂದಲೂ ತಮ್ಮ ಪೂರ್ಣ ಪ್ರಾಣದಿಂದಲೂ ಹುಡುಕ ಬೇ
೧೩ ಕೆಂದೂ, ಯಾವನಾದರೂ ಇಸ್ರಯೇಲಿನ ದೇವರಾದ ಕರ್ತನ
ನ್ನು ಹುಡುಕದೆ ಹೋದರೆ, ಹಿರಿಯನಾದರೂ, ಕಿರಿಯನಾದರೂ,
ಪುರುಷನಾದರೂ, ಸ್ತ್ರೀಯಾದರೂ ಸಾಯ ಬೇಕೆಂದೂ, ಬಹಿ
೧೪ ಬಿಡಿಕೆಯನ್ನು ಮಾಡಿ ಕೊಂಡರು. ಮತ್ತು ಮಹಾ ಶಬ್ದದಿಂದಲೂ
ಅರ್ಭಟದಿಂದಲೂ ತುತೂರಿಗಳ ಶಬ್ದದಿಂದಲೂ ಕೊಂಬುಗಳ ಶ
೧೫ ಬ್ದದಿಂದಲೂ ಕರ್ತನ ಮುಂದೆ ಆಣೆ ಇಟ್ಟರು. ಇದಲ್ಲದೆ ಯೆಹೂ
ದದವರೆಲ್ಲರು ಪ್ರಮಾಣಕ್ಕೆ ಸಂತೋಷ ಪಟ್ಟರು. ಯಾಕಂದರೆ
ಅವರು ತಮ್ಮ ಪೂರ್ಣ ಹೃದಯದಿಂದ ಆಣೆ ಇಟ್ಟು, ತಮ್ಮ ಪೂ
ರ್ಣ ಇಷ್ಟದಿಂದ ಅವನನ್ನು ಹುಡುಕಿದರು; ಅವನು ಅವರಿಗೆ ಶಿಕ್ಕಿದ
ನು. ಮತ್ತು ಕರ್ತನು ಸುತ್ತಲೂ ಅವರಿಗೆ ವಿಶ್ರಾಂತಿ ಕೊಟ್ಟನು.

೧೬ ಮತ್ತು ಅರಸನಾಗಿರುವ ಆಸನ ತಾಯಿಯಾದ ಮಾಕಳನ್ನು
ಕುರಿತು ಏನಂದರೆ—ಅವಳು ಒಂದು ವಿಗ್ರಹವನ್ನು ಮಾಡಿಸಿ,
ತೋಪಿನಲ್ಲಿ ಇರಿಸಿದ್ದರಿಂದ, ಅವಳನ್ನು ರಾಣಿಯಾಗಿರದ ಹಾಗೆ
ತೆಗೆದು ಹಾಕಿದನು. ಇದಲ್ಲದೆ ಆಸನು ಅವಳ ವಿಗ್ರಹವನ್ನು ಕಡಿ
ದು ಹಾಕಿ, ಅದನ್ನು ಕುಟ್ಟಿ, ಕಿದ್ರೋನು ಹಳ್ಳದ ಬಳಿಯಲ್ಲಿ ಅದ
೧೭ ನ್ನು ಸುಟ್ಟು ಬಿಟ್ಟನು. ಇಸ್ರಯೇಲಿನೊಳಗಿಂದ ಮೇಡುಗಳು ತೆಗೆ
ದು ಹಾಕಲ್ಪಟಲಿಲ್ಲ. ಆದರೂ ಆಸನ ಹೃದಯವು ತನ್ನ ಸಮಸ್ತ
೧೮ ದಿವಸಗಳಲ್ಲಿ ಪೂರ್ಣವಾಗಿತ್ತು. ಅವನು ದೇವರ ಮನೆಯಲ್ಲಿ
ತನ್ನ ತಂದೆಯೂ ತಾನೂ ಪರಿಶುದ್ಧ ಮಾಡಿದ ಬೆಳ್ಳಿಯನ್ನೂ
೧೯ ಭಂಗಾರವನ್ನೂ ಚಿತ್ರೆಗಳನ್ನೂ ಕೇರಿಸಿದನು. ಮತ್ತು ಆಸನ
ಆಳಿಕೆಯಲ್ಲಿ ಮೂವತ್ತೈದನೇ ವರುಷದ ಪರ್ಯಂತರ ಯುದ್ಧವಿ
ಲ್ಲದೆ ಇತ್ತು.

## ೧೬. ಸಂಧಿ.

೧ ಆಸನ ಆಳಿಕೆಯ ಮೂವತ್ತಾರನೇ ವರುಷದಲ್ಲಿ ಇಸ್ರಯೇ
ಲಿನ ಅರಸನಾದ ಬಾಷನು ಯೆಹೂದಕ್ಕೆ ವಿರೋಧವಾಗಿ ಏರಿ
ಬಂದು, ಯೆಹೂದದ ಅರಸನಾದ ಆಸನ ಬಳಿಗೆ ಯಾರೂ ಹೊ
ರಟು ಹೋಗಲಿಕ್ಕೂ ಬರಲಿಕ್ಕೂ ಕೂಡದ ಹಾಗೆ, ರಾಮವ
ನ್ನು ಕಟ್ಟಿಸಿದನು.

೨ ಆಗ ಆಸನು ಕರ್ತನ ಮನೆಯ ಬೊಕ್ಕಸಗಳಿಂದಲೂ ಅರಸ
ನ ಮನೆಯ ಬೊಕ್ಕಸದಿಂದಲೂ ಬೆಳ್ಳಿ ಭಂಗಾರವನ್ನು ತೆಗೆದು
ಕೊಂಡು, ದಮಸ್ಕದಲ್ಲಿ ವಾಸವಾಗಿರುವ ಅರಾಮಿನ ಅರಸನಾದ
3 ಬೆನ್ಹದಾದನ ಬಳಿಗೆ ಕಳುಹಿಸಿ, ಅವನಿಗೆ, ನನ್ನ ತಂದೆಗೂ ನಿನ್ನ
ತಂದೆಗೂ ಇದ್ದ ಹಾಗೆ ನನಗೂ ನಿನಗೂ ಒಡಂಬಡಿಕೆ ಉಂಟು;
ಇಗೋ, ನಾನು ಬೆಳ್ಳಿ ಭಂಗಾರವನ್ನು ನಿನಗೆ ಕಳುಹಿಸಿದ್ದೇನೆ;
ಇಸ್ರಯೇಲಿನ ಅರಸನಾದ ಬಾಷನು ನನ್ನನ್ನು ಬಿಟ್ಟು ಹೋಗು
ವ ಹಾಗೆ, ನೀನು ಹೋಗಿ, ಅವನ ಸಂಗಡ ಮಾಡಿದ ಒಡಂಬಡಿಕೆ
೪ ಯನ್ನು ಮೀರು, ಎಂದು ಹೇಳಿದನು. ಬೆನ್ಹದಾದನು ಅರಸನಾದ
ಆಸನ ಮಾತು ಕೇಳಿ, ತನ್ನ ಸೈನ್ಯಾಧಿಪತಿಗಳನ್ನು ಇಸ್ರಯೇಲಿ
ನ ಪಟ್ಟಣಗಳ ಮೇಲೆ ಕಳುಹಿಸಿದನು. ಅವರು ಇಯ್ಯೋನನನ್ನೂ,
ದಾನನ್ನೂ, ಅಬೆಲ್ಮಯಿಮನ್ನೂ ನೆಫ್ತಾಲಿಯ ಸಮಸ್ತ ಉಗ್ರಾಣ
ಗಳ ಪಟ್ಟಣಗಳನ್ನೂ ಹೊಡೆದರು.

೫ ಬಾಷನು ಇದನ್ನು ಕೇಳಿದಾಗ, ರಾಮಾ ಕಟ್ಟಿಸುವದನ್ನು ಬಿ
ಟ್ಟು, ತನ್ನ ಕೆಲಸವನ್ನು ನಿಲ್ಲಿಸಿ ಬಿಟ್ಟನು. ಆಗ ಅರಸನಾದ ಆ
ಸನು ಯೆಹೂದದವರೆಲ್ಲರನ್ನು ಕರೆ ಕೊಂಡು ಹೋದನು; ಬಾಷ
ನು ಕಟ್ಟಿಸುತ್ತಾ ಇದ್ದ ರಾಮದ ಕಲ್ಲುಗಳನ್ನೂ ಅದರ ತೊಲೆಗ
ಳನ್ನೂ ತಕ್ಕೊಂಡು ಹೋದರು; ಅವುಗಳಿಂದ ಗೇಬವನ್ನೂ ಮಿ
ಜ್ಪೆಯನ್ನೂ ಕಟ್ಟಿಸಿದನು.

೬ ಅದೇ ಕಾಲದಲ್ಲಿ ಪ್ರವಾದಿಯಾದ ಹನಾನಿಯು ಯೆಹೂದದ
ಅರಸನಾದ ಆಸನ ಬಳಿಗೆ ಬಂದು, ಅವನಿಗೆ ಹೇಳಿದನು—ನೀನು
ನಿನ್ನ ದೇವರಾದ ಕರ್ತನ ಮೇಲೆ ಆತು ಕೊಳ್ಳದೆ, ಅರಾಮಿನ
ಅರಸನ ಮೇಲೆ ಆತು ಕೊಂಡದ್ದರಿಂದ, ಅರಾಮಿನ ಅರಸನ ಸೈನ್ಯ
೭ ವು ನಿನ್ನ ಕೈಗೆ ತಪ್ಪಿ ಹೋಯಿತು. ಕೂಷಿಯರೂ ಲೂಬ್ಯರೂ
ಮಹಾ ಸೈನ್ಯವಲ್ಲವೋ? ಅವರ ಸಂಗಡ ಅನೇಕ ರಥಗಳೂ ರಾ
ಹುತರೂ ಇಲ್ಲವೋ? ಆದರೆ ನೀನು ಕರ್ತನ ಮೇಲೆ ಆತು ಕೊಂ
ಡದ್ದರಿಂದ, ಅವನು ಅವರನ್ನು ನಿನ್ನ ಕೈಯಲ್ಲಿ ಒಪ್ಪಿಸಿದನು.
೮ ಯಾಕಂದರೆ ಕರ್ತನ ಸಮುಖದಲ್ಲಿ ಪೂರ್ಣ ಹೃದಯವುಳ್ಳವ
ರ ನಿಮಿತ್ತ ಬಲವನ್ನು ತೋರಿಸುವದಕ್ಕೆ ಅವನ ಕಣ್ಣುಗಳು ಸ
ಮಸ್ತ ಭೂಮಿಯಲ್ಲಿ ಓಡ್ಯಾಡುತ್ತವೆ. ಇದರಲ್ಲಿ ನೀನು ಬುದ್ಧಿಹೀ
ನವಾಗಿ ಮಾಡಿದಿ. ನಿಶ್ಚಯವಾಗಿ ಈ ಕಾಲದಿಂದ ನಿನಗೆ ಯುದ್ಧ
ಗಳು ಉಂಟಾಗಿರುವವು.

೯ ಆಗ ಆಸನು ದರ್ಶಿಯ ಮೇಲೆ ಕರಕಕೆ ಪಟ್ಟು, ಅವನನ್ನು ತೆಕೆ
ಮನೆಯಲ್ಲಿ ಹಾಕಿಸಿದನು. ಯಾಕಂದರೆ ಇದರ ನಿಮಿತ್ತ ಅವನ
ಮೇಲೆ ಕಾದ್ರುಳ್ಳವನಾಗಿದ್ದನು. ಇದಲ್ಲದೆ ಅದೇ ಕಾಲದಲ್ಲಿ ಆ
ಸನು ಜನರಲ್ಲಿ ಕೆಲವರನ್ನು ಒಡೆದು ಬಿಟ್ಟನು.

೧೧ ಮತ್ತು, ಇಗೋ, ಅಸನ ಕಾರ್ಯೆಗಳು, ಮೊದಲನೆಯವುಗ
ಳೂ ಕಡೆಯವುಗಳೂ, ಯೆಹೂದದ ಇಸ್ರಯೇಲಿನ ಪುಸ್ತಕದಲ್ಲಿ
ಬರೆಯಲ್ಪಟ್ಟಿವೆ.

೧೨ ಅದಕೆ ಅಸನು ತನ್ನ ಆಳ್ವಿಕೆಯ ಮೂವತ್ತೊಂಭತ್ತನೇ ವರು
ಷದಲ್ಲಿ ತನ್ನ ಕಾಲುಗಳಲ್ಲಿ ರೋಗವುಳ್ಳವನಾಗಿದ್ದನು; ಅವನ
ರೋಗ ಮೇಲಕ್ಕೆ ಬಂತು. ಆದರೆ ಅವನು ತನ್ನ ರೋಗದಲ್ಲಿ
೧೩ ಕರ್ತನನ್ನು ಹುಡುಕದೆ, ವೈದ್ಯರನ್ನು ಹುಡುಕಿದನು. ಮತ್ತು
ಅಸನು ತನ್ನ ಪಿತೃಗಳ ಸಂಗಡ ಮಲಗಿದನು; ತನ್ನ ಆಳ್ವಿಕೆಯ
೧೪ ನಾಲ್ವತ್ತೊಂದನೇ ವರುಷದಲ್ಲಿ ಸತ್ತನು. ಅವನು ತನಗೋಸ್ಕರ
ದಾವೀದನ ಪಟ್ಟಣದಲ್ಲಿ ಅಗಿಸಿದ ಅವನ ಸ್ವಂತ ಸಮಾಧಿಯಲ್ಲಿ ಅ
ವನನ್ನು ಹೂಣಿಟ್ಟರು. ಅವರು ತೈಲಗಾರರ ವಿದ್ಯೆಯಿಂದ ಸಿದ್ಧ
ಮಾಡಿದ ಸುಗಂಧಗಳಿಂದಲೂ ನಾನಾ ವಿಧವಾದ ಪದಾರ್ಥಗಳಿಂ
ದಲೂ ತುಂಬಲ್ಪಟ್ಟ ಹಾಸಿಗೆಯ ಮೇಲೆ ಅವನನ್ನು ಮಲಗಿಸಿ, ಅ
ವನಿಗೋಸ್ಕರ ಬಹಳವಾಗಿ, ದೊಡ್ಡ ಸುಡುವಿಕೆಯಿಂದ ಸುಟ್ಟರು.

## ೧೭. ಸಂಧಿ.

೧ ಮತ್ತು ಅವನ ಮಗನಾದ ಯೆಹೋಷಫಾಟನು ಅವನಿಗೆ ಬ
ದಲಾಗಿ ಆಳ್ವಿದನು; ಇಸ್ರಯೇಲಿಗೆ ವಿರೋಧವಾಗಿ ತನ್ನನ್ನು ಬಲ ಪ
೨ ಡಿಸಿ ಕೊಂಡನು. ಇದಲ್ಲದೆ ಅವನು ಯೆಹೂದದಲ್ಲಿ ಸಮಸ್ತ ಕೋ
ಟೆಯುಳ್ಳ ಪಟ್ಟಣಗಳಲ್ಲಿ ಸೈನ್ಯವನ್ನು ಇಟ್ಟು, ಯೆಹೂದದಲ್ಲಿಟ್ಟ
ಹಾಗೆ ತನ್ನ ತಂದೆಯಾದ ಅಸನು ತೆಗೆದು ಕೊಂಡ ಎಫ್ರಯಿಮಿ
3 ನ ಪಟ್ಟಣಗಳಲ್ಲಿ ಕಾಣುವೆಗಳನ್ನು ಇಟ್ಟನು. ಮತ್ತು ಯೆಹೋಷ
೪ ಫಾಟನು ತನ್ನ ತಂದೆಯಾದ ದಾವೀದನ ಪೂರ್ವಾರ್ಜ
ಲ್ಲಿ ನಡೆದ್ದರಿಂದ, ಕರ್ತನು ಅವನ ಸಂಗಡ ಇದ್ದನು. ಯಾಕಂದ
ರೆ ಅವನು ಬಾಳೀಮುಗಳನ್ನು ಹುಡುಕದೆ, ತನ್ನ ತಂದೆಯ ದೇವ
೫ ನನ್ನು ಹುಡುಕಿ, ಇಸ್ರಯೇಲಿನ ಕ್ರಿಯೆಗಳ ಪ್ರಕಾರ ನಡೆಯದೆ,
ಅವನ ಆಜ್ಞೆಗಳಲ್ಲಿ ನಡೆದನು. ಆದದರಿಂದ ಕರ್ತನು ರಾಜ್ಯವನ್ನು
ಅವನ ಕೈಯಲ್ಲಿ ಸ್ಥಿರ ಪಡಿಸಿದನು. ಮತ್ತು ಯೆಹೂದವೆಲ್ಲವೂ
ಯೆಹೋಷಫಾಟನಿಗೆ ಕಾಣಿಕೆಯನ್ನು ಕೊಟ್ಟದ್ದರಿಂದ, ಅವನಿಗೆ
೬ ಐಶ್ವರ್ಯವೂ ಘನವೂ ಅಧಿಕವಾಗಿ ಉಂಟಾಯಿತು. ಮತ್ತು
ಅವನ ಹೃದಯವು ಕರ್ತನ ಮಾರ್ಗಗಳಲ್ಲಿ ಎತ್ತರವಾಯಿತು.
ಇದಲ್ಲದೆ ಅವನು ಯೆಹೂದದಲ್ಲಿದ್ದ ಪೇಡುಗಳನ್ನೂ ತೋಪುಗ
ಳನ್ನೂ ತೆಗೆದು ಹಾಕಿದನು.

೭ ಇದಲ್ಲದೆ ಅವನ ಆಳ್ವಿಕೆಯ ಮೂರನೇ ವರುಷದಲ್ಲಿ ಅವನು
ತನ್ನ ಪ್ರಧಾನರಾದ ಬೆನ್ಹಾಯಿಲನನ್ನೂ, ಒಬದ್ಯನನ್ನೂ, ಜೆಕರೀ
ಯನನ್ನೂ, ನೆಥಾನಿಯೇಲನನ್ನೂ, ಮಿಕಾಯನನ್ನೂ, ಯೆಹೂ
೮ ದದ ಪಟ್ಟಣಗಳಲ್ಲಿ ಬೋಧಿಸ ಕಳಿಸಿದನು. ಅವರ ಸಂ
ಗಡ ಶೇಮ್ಯರಾದ ಶೆಮಾಯನನ್ನೂ, ನೆತನ್ಯನನ್ನೂ, ಜೆಬದ್ಯನ
ನ್ನೂ, ಅಸಹೇಲನನ್ನೂ, ಶೆಮಿರಮೋತನನ್ನೂ, ಯೆಹೊನಾತಾ
ನನ್ನೂ, ಅದೋನೀಯನನ್ನೂ ಟೊಬೀಯನನ್ನೂ, ಟೊಬದೊ
ನೀಯನನ್ನೂ, ಇವರ ಸಂಗಡ ಯಾಜಕರಾದ ಎಲಿಷಾಮನನ್ನೂ,
೯ ಯೆಹೋರಾಮನನ್ನೂ ಕಳಿಸಿದನು. ಇವರು ಯೆಹೂದದಲ್ಲಿ
ಬೋಧಿಸಿದರು. ಅವರ ಬಳಿಯ ಕರ್ತನ ನ್ಯಾಯ ಪ್ರಮಾಣದ
ಪುಸ್ತಕ ಇತ್ತು; ಯೆಹೂದದ ಸಮಸ್ತ ಪಟ್ಟಣಗಳನ್ನು ಸಂಚರಿಸಿ,
ಜನರನ್ನು ಬೋಧಿಸಿದರು.

೧೦ ಮತ್ತು ಕರ್ತನ ಭಯವು ಯೆಹೂದದ ಸುತ್ತಲಿರುವ ದೇಶಗ
ಳ ಸಮಸ್ತ ರಾಜ್ಯಗಳ ಮೇಲೆ ಇದ್ದದರಿಂದ, ಅವರು ಯೆಹೋಷ
೧೧ ಫಾಟನ ಮೇಲೆ ಯುದ್ಧ ಮಾಡಲಿಲ್ಲ. ಇದಲ್ಲದೆ ಫಿಲಿಷ್ಟಿಯರಲ್ಲಿ
ಕೆಲವರು ಯೆಹೋಷಫಾಟನಿಗೆ ಕಾಣಿಕೆಗಳನ್ನೂ ಕಪ್ಪದ ಹಣ
ವನ್ನೂ ತಂದರು. ಮತ್ತು ಅರಬ್ಬಿ ದೇಶದವರು ತಮ್ಮು ಮಂಡೆಗ
ಳಿಂದ ಏಳು ಸಾವಿರದ ಏಳ್ನೂರು ಟಗರುಗಳನ್ನೂ, ಏಳು ಸಾವಿ
ರದ ಏಳ್ನೂರು ಹೋತುಗಳನ್ನೂ ತಂದರು. ಹೀಗೆಯೇ ಯೆ
೧೨ ಹೋಷಫಾಟನು ಬರ ಬರ ಬಹಳ ದೊಡ್ಡವನಾಗಿ, ಯೆಹೂದದ
ಲ್ಲಿ ಅರಮನೆಗಳನ್ನೂ ಉಗ್ರಾಣದ ಪಟ್ಟಣಗಳನ್ನೂ ಕಟ್ಟಿಸಿದನು.
ಇದಲ್ಲದೆ ಯೆಹೂದದ ಪಟ್ಟಣಗಳಲ್ಲಿ ಬಹಳ ಕೆಲಸಗಳನ್ನು ನಡಿಸು
೧೩ ತ್ತಾ ಇದ್ದನು. ಪರಾಕ್ರಮಶಾಲಿಗಳಾದ ಯುದ್ಧದ ಮನುಷ್ಯರು
ಯೆರೂಸಲೇಮಿನಲ್ಲಿದ್ದರು.

೧೪ ತಮ್ಮ ಪಿತೃಗಳ ಮನೆಯ ಪ್ರಕಾರವಾಗಿರುವ ಅವರ ಲೆಕ್ಕ
ವೇನಂದರೆ—ಯೆಹೂದನ ಸಹಸ್ರಗಳ ಅಧಿಪತಿಗಳಲ್ಲಿ ಅಡ್ನನು ಶ್ರೇ
ಷ್ಠನಾಗಿದ್ದನು; ಅವನ ಸಂಗಡ ಪರಾಕ್ರಮಶಾಲಿಗಳು ಮೂರು
೧೫ ಲಕ್ಷ ಮಂದಿ ಇದ್ದರು. ಅವನ ಕೈಹತ್ತರ ಅಧಿಪತಿಯಾದ ಯೆ
ಹೊಹನಾನನು; ಅವನ ಸಂಗಡ ಎರಡು ಲಕ್ಷದ ಎಂಭತ್ತು ಸಾವಿರ
೧೬ ಮಂದಿಯು. ಇವನ ಕೈ ಹತ್ತರ ಕರ್ತನಿಗೆ ತನ್ನನ್ನು ಮನಃ
ಪೂರ್ವಕವಾಗಿ ಒಪ್ಪಿಸಿದ ಚಿಕ್ರಿಯ ಮಗನಾದ ಅಮಸ್ಯನು; ಅ
೧೭ ವನ ಸಂಗಡ ಎರಡು ಲಕ್ಷ ಮಂದಿ ಪರಾಕ್ರಮಶಾಲಿಗಳು. ಮತ್ತು
ಬೆನ್ಯಮಿನ್ಯರಲ್ಲಿ ಪರಾಕ್ರಮಶಾಲಿಯಾದ ಎಲ್ಯದಾವನು; ಅವನ
ಸಂಗಡ ಬಿಲ್ಲನ್ನೂ ಗುರಾಣಿಯನ್ನೂ ಧರಿಸಿ ಕೊಂಡಿರುವ ಎರ
೧೮ ಡು ಲಕ್ಷ ಮಂದಿಯು. ಇವನ ಕೈಹತ್ತರ ಯೆಹೊಜಬಾದನು;
ಅವನ ಸಂಗಡ ಯುದ್ಧಕ್ಕೆ ಸಿದ್ಧವಾಗಿರುವ ಲಕ್ಷಾ ಎಂಭತ್ತು ಸಾ
೧೯ ವಿರ ಮಂದಿಯು. ಅರಸನಿಂದ ಸಮಸ್ತ ಯೆಹೂದದಲ್ಲಿರುವ
ಕೋಟೆಯುಳ್ಳ ಪಟ್ಟಣಗಳಲ್ಲಿ ಇರಿಸಲ್ಪಟ್ಟವರ ಹೊತ್ತಾಗಿ, ಇವ
ರು ಅರಸನ ಬಳಿಯಲ್ಲಿ ಕಾಯುತ್ತಿದ್ದರು.

## ೧೮. ಸಂಧಿ.

೧ ಅದಕೆ ಯೆಹೋಷಫಾಟನಿಗೆ ಐಶ್ವರ್ಯವೂ ಘನವೂ ಅಧಿ
ಕವಾಗಿರುವಾಗ, ಅವನು ಅಹಾಬನ ಸಂಗಡ ಬಂಧುತ್ವ ಮಾಡಿದ
೨ ನು. ಮತ್ತು ಕೆಲವು ವರುಷಗಳ ತರುವಾಯ ಅವನು ಅಹಾಬನ
ಬಳಿಗೆ ಸಮಾರ್ಯಕ್ಕೆ ಹೋದನು; ಆಗ ಅಹಾಬನು ಅವನಿಗೋ
ಸ್ಕರವೂ ಅವನ ಸಂಗಡ ಇದ್ದ ಜನರಿಗೋಸ್ಕರವೂ ಅನೇಕ ಕು
ರಿ ದನಗಳನ್ನು ಕೊಯಿಸಿ, ತನ್ನ ಸಂಗಡ ಗಿಲ್ಯಾದಿನಲ್ಲಿರುವ ರಾ
೩ ಮೋತಿಗೆ ಏರಿ ಹೋಗ ಪ್ರೇರೇಪಿಸಿದನು. ಇಸ್ರಯೇಲಿನ ಅರಸನಾ
ದ ಅಹಾಬನು ಯೆಹೂದದ ಅರಸನಾದ ಯೆಹೋಷಫಾಟನಿಗೆ, ಗಿ
ಲ್ಯಾದಿನಲ್ಲಿರುವ ರಾಮೋತಿಗೆ ನೀನು ನನ್ನ ಸಂಗಡ ಬರುತ್ತೀಯಾ!
ಅಂದನು. ಅದಕ್ಕವನು, ನಾನು ನಿನ್ನ ಹಾಗೆಯೂ, ನನ್ನ ಜನ
ರು ನಿನ್ನ ಜನರ ಹಾಗೆಯೂ, ಯುದ್ಧದಲ್ಲಿ ನಿನ್ನ ಸಂಗಡ ಇರುವೆ
ವು, ಅಂದನು.

೪ ಅದಕೆ ಯೆಹೋಷಫಾಟನು ಇಸ್ರಯೇಲಿನ ಅರಸನಿಗೆ, ದ
ಯೆ ಮಾಡಿ, ಈ ಹೊತ್ತು ಕರ್ತನ ವಾಕ್ಯವನ್ನು ವಿಚಾರಿಸು
ಅಂದನು. ಆಗ ಇಸ್ರಯೇಲಿನ ಅರಸನು ನಾನೂರು ಮಂದಿ ಪ್ರ
೫ ವಾದಿಗಳನ್ನು ಕೂಡಿಸಿ, ಅವರಿಗೆ, ನಾವು ಗಿಲ್ಯಾದಿನಲ್ಲಿರುವ ರಾ



ಮೋತಿಗೆ ಯುದ್ಧಕ್ಕೆ ಹೋಗ ಬಹುದೋ? ಬೇಡವೋ! ಅಂದ
ನು. ಅದಕ್ಕವರು, ಹೋಗು; ದೇವರು ಅದನ್ನು ಅರಸನ ಕೈಯ
ಲ್ಲಿ ಒಪ್ಪಿಸಿ ಕೊಡುವನು, ಅಂದರು.

೬ ಅದಕೆ ಯೆಹೋಷಫಾಟನು, ಇವರ ಹೊರತು, ನಾವು ಅವ
ನಿಂದ ವಿಚಾರಿಸುವ ಹಾಗೆ, ಇಲ್ಲಿ ಕರ್ತನ ಪ್ರವಾದಿಯು ಯಾವ
೭ ನೂ ಇಲ್ಲವೋ! ಅಂದನು. ಆಗ ಇಸ್ರಯೇಲಿನ ಅರಸನು ಯೆ
ಹೋಷಫಾಟನಿಗೆ, ನಾವು ಕರ್ತನಿಂದ ವಿಚಾರಿಸುವ ಹಾಗೆ ಇ
ವ್ಲನ ಮಗನಾದ ಮಿಕಾಯನೆಂಬವನು ಇನ್ನೊಬ್ಬನಿದ್ದಾನೆ. ಆ
ದರೆ ನಾನು ಅವನನ್ನು ಹಗೆ ಮಾಡುತ್ತೇನೆ; ಯಾಕಂದರೆ ಅವ
ನು ನನ್ನನ್ನು ಕುರಿತು ಒಳ್ಳೇದನ್ನಲ್ಲ, ಕೆಟ್ಟದ್ದನ್ನು ಪ್ರವಾದಿಸು
ತ್ತಾನೆ, ಅಂದನು. ಅದಕ್ಕೆ ಯೆಹೋಷಫಾಟನು, ಅರಸನು ಹಾ
ಗೆ ಅನ್ನದಿರಲಿ, ಅಂದನು.

೮ ಇಸ್ರಯೇಲಿನ ಅರಸನು ಒಬ್ಬ ನಪುಂಸಕನನ್ನು ಕರೆದು, ಇ
ವ್ಲನ ಮಗನಾದ ಮಿಕಾಯನನ್ನು ಶೀಘ್ರವಾಗಿ ಕರಕೊಂಡು ಬಾ,
೯ ಅಂದನು. ಆದರೆ ಇಸ್ರಯೇಲಿನ ಅರಸನೂ ಯೆಹೂದದ ಅರಸ
ನಾದ ಯೆಹೋಷಫಾಟನೂ ವಸ್ತ್ರಗಳನ್ನು ಧರಿಸಿ ಕೊಂಡು,
ಸಮಾರ್ಯದ ಬಾಗಲ ಮುಂದೆ ಕಣದಲ್ಲಿ ತನ್ನ ತನ್ನ ಸಿಂಹಾಸ
ನದ ಮೇಲೆ ಕುಳಿತಿದ್ದರು. ಸಕಲ ಪ್ರವಾದಿಗಳೂ ಅವರ ಮುಂ
೧೦ ದೆ ಪ್ರವಾದಿಸಿದರು. ಆಗ ಕೆನಾನನ ಮಗನಾದ ಚಿದ್ಕೀಯನು
ತನಗೆ ಕಬ್ಬಿಣದ ಕೊಂಬುಗಳನ್ನು ಮಾಡಿಕೊಂಡು, ಇವುಗಳಿಂ
ದ ನೀನು ಅರಾಮ್ಯರನ್ನು ನಿರ್ಮೂಲ ಮಾಡುವ ಮಟ್ಟಿಗೂ ಇ
೧೧ರಿದು ಹಾಕುವಿ ಎಂದು, ಕರ್ತನು ಹೇಳುತ್ತಾನೆ, ಅಂದನು. ಸಮ
ಸ್ತ ಪ್ರವಾದಿಗಳೂ ಹಾಗೆಯೇ ಪ್ರವಾದಿಸಿ, ಗಿಲ್ಯಾದಿನಲ್ಲಿರುವ ರಾ
ಮೋತಿಗೆ ಹೋಗಿ, ಸಿದ್ಧಿ ಹೊಂದು; ಕರ್ತನು ಅದನ್ನು ಅರಸನ
ಕೈಯಲ್ಲಿ ಒಪ್ಪಿಸಿ ಕೊಡುವನು, ಅಂದರು.

೧೨ ಅದಕೆ ಮಿಕಾಯನನ್ನು ಕರೆಯ ಹೋದ ದೂತನು ಅವನಿಗೆ,
ಇಗೋ, ಪ್ರವಾದಿಗಳ ವಾಕ್ಯಗಳು ಒಂದೇ ಬಾಯಿಯಿಂದ ಅರಸ
ನಿಗೆ ಒಳ್ಳೇದಾಗಿವೆ; ನಿನ್ನ ವಾಕ್ಯವು ಅವರಲ್ಲಿ ಒಬ್ಬನ ವಾಕ್ಯದ
೧೩ ಹಾಗೆಯೇ ಇರಲಿ; ಒಳ್ಳೇ ಮಾತು ಆಡು, ಅಂದನು. ಅದಕ್ಕೆ
ಮಿಕಾಯನು, ಕರ್ತನ ಜೀವದಾಣೆ—ನನ್ನ ದೇವರು ಏನು ಹೇ
ಳುವನೋ, ಅದನ್ನು ಹೇಳುವೆನು, ಅಂದನು.

೧೪ ಅವನು ಅರಸನ ಬಳಿಗೆ ಬಂದಾಗ, ಅರಸನು ಅವನಿಗೆ, ಮಿಕಾ
ಯನೇ, ನಾವು ಗಿಲ್ಯಾದಿನಲ್ಲಿರುವ ರಾಮೋತಿಗೆ ಯುದ್ಧಕ್ಕೆ ಹೋ
ಗಲೋ! ಬೇಡವೋ! ಅಂದನು. ಇವನು, ಹೋಗಿ, ಸಿದ್ಧಿ ಹೊಂ
೧೫ದಿರಿ ನಿಮ್ಮ ಕೈಯಲ್ಲಿ ಒಪ್ಪಿಸಲ್ಪಡುವರು, ಅಂದನು. ಆಗ ಅರಸನು
ಅವನಿಗೆ, ನೀನು ಕರ್ತನ ಹೆಸರಿನಲ್ಲಿ ಸತ್ಯವನ್ನಲ್ಲದೆ, ಬೇರೊಂ
ದು ನನಗೆ ಹೇಳ್ಳ ಬಾರದೆಂದು, ನಾನು ಎಷ್ಟುಸಾರಿ ನಿನಗೆ ಆಣೆ
ಇಡ ಬೇಕು! ಅಂದನು.

೧೬ ಅದಕ್ಕವನು ಕಾಯುವವನಿಲ್ಲದ ಕುರಿಗಳ ಹಾಗೆ ಬೆಟ್ಟಗಳ
ಮೇಲೆ ಚದರಲ್ಪಟ್ಟ ಸಮಸ್ತ ಇಸ್ರಯೇಲನ್ನು ಕಂಡೆನು. ಆಗ
ಕರ್ತನು, ಇವರಿಗೆ ಯಜಮಾನನು ಇಲ್ಲ; ಪ್ರತಿ ಮನುಷ್ಯನು ತ
೧೭ ನ್ನ ಮನೆಗೆ ಸಮಾಧಾನವಾಗಿ ತಿರುಗಲಿ, ಅಂದನು. ಆಗ ಇಸ್ರ
ಯೇಲಿನ ಅರಸನು ಯೆಹೋಷಫಾಟನಿಗೆ, ಇವನು ನನ್ನನ್ನು
೧೮ ಕುರಿತು ಒಳ್ಳೇದನ್ನಲ್ಲ, ಕೆಟ್ಟದ್ದನ್ನೇ ಪ್ರವಾದಿಸುವನೆಂದು, ನಾ
ನು ನಿನಗೆ ಹೇಳಿರಲಿಲ್ಲವೇ! ಅಂದನು. ಮತ್ತು ಅವನು ಹೇಳಿದ್ದೇ
ನಂದರೆ—ಅದದರಿಂದ ಕರ್ತನ ವಾಕ್ಯವನ್ನು ಕೇಳು. ಕರ್ತನು
ತನ್ನ ಸಿಂಹಾಸನದ ಮೇಲೆ ಕುಳಿತಿರುವದನ್ನೂ, ಆಕಾಶದ ಸಮ
ಸ್ತ ಸೈನ್ಯವು ಅವನ ಬಲಪಾರ್ಶ್ವದಲ್ಲಿಯೂ ಎಡಪಾರ್ಶ್ವದಲ್ಲಿ
೧೯ ಯೂ ನಿಂತಿರುವದನ್ನೂ ನಾನು ಕಂಡೆನು. ಆಗ ಕರ್ತನು, ಇ
ಸ್ರಯೇಲಿನ ಅರಸನಾದ ಅಹಾಬನು ಹೋಗಿ, ಗಿಲ್ಯಾದಿನಲ್ಲಿರುವ
ರಾಮೋತಿನಲ್ಲಿ ಬೀಳುವ ಹಾಗೆ, ಅವನನ್ನು ಮರುಳುಗೊಳಿಸು
೨೦ ವವನ್ಯಾರು! ಅಂದನು. ಒಬ್ಬನು ಹೀಗೆಯೂ ಮತ್ತೊಬ್ಬನು
ಹಾಗೆಯೂ ಹೇಳುತ್ತಿರುವಾಗ, ಒಂದು ಆತ್ಮ ಹೊರಟು ಬಂದು,
ಕರ್ತನ ಮುಂದೆ ನಿಂತು, ನಾನು ಅವನನ್ನು ಮರುಳುಗೊಳಿಸುತ್ತೇ
೨೧ನೆ, ಅಂದಿತು. ಆಗ ಕರ್ತನು ಅದಕ್ಕೆ, ಯಾವದರಿಂದ! ಅಂದ
ನು. ಅದು, ನಾನು ಹೊರಟು, ಅವನ ಎಲ್ಲಾ ಪ್ರವಾದಿಗಳ ಬಾ
ಯಿಯಲ್ಲಿ ಅಪದ್ಧವಾದ ಆತ್ಮವಾಗಿರುವೆನು, ಅಂದಿತು. ಅದಕ್ಕೆ ಅ
ವನು, ನೀನು ಅವನನ್ನು ಮರುಳು ಗೊಳಿಸುವಿ, ಮತ್ತು ಜಯಿಸು
೨೨ವಿ; ಹೊರಟು ಹೋಗಿ, ಹಾಗೆ ಮಾಡು, ಅಂದನು. ಆದದರಿಂದ,
ಇಗೋ, ಕರ್ತನು ಈ ಸಮಸ್ತವಾದ ನಿನ್ನ ಪ್ರವಾದಿಗಳ ಬಾಯಿ
ಯಲ್ಲಿ ಅಪದ್ಧವಾದ ಆತ್ಮವನ್ನು ಇಟ್ಟಿದ್ದಾನೆ. ಮತ್ತು ಕರ್ತನು
ನಿನ್ನನ್ನು ಕುರಿತು ಕೇಡನ್ನು ಹೇಳಿದ್ದಾನೆ, ಅಂದನು.

೨೩ ಆಗ ಕೆನಾನನ ಕುಮಾರನಾದ ಚಿದ್ಕೀಯನು ಸಮೀಪಕ್ಕೆ
ಬಂದು, ಮಿಕಾಯನ ಕೆನ್ನೆಯ ಮೇಲೆ ಬಡಿದು, ಕರ್ತನ ಆತ್ಮವು
ನನ್ನನ್ನು ಬಿಟ್ಟು, ನಿನ್ನ ಸಂಗಡ ಮಾತಾಡ ಯಾವ ಮಾರ್ಗವಾ
ಗಿ ಬಂತು! ಅಂದನು. ಅದಕ್ಕೆ ಮಿಕಾಯನು, ಇಗೋ, ನಿನ್ನನ್ನು
ಬಚ್ಚಿಟ್ಟುಕೊಳ್ಳ ಒಳಕೊಠಡಿಗೆ ನೀನು ಹೋಗುವ ದಿವಸದಲ್ಲಿ
ನೋಡುವಿ, ಅಂದನು.

೨೪ ಆಗ ಇಸ್ರಯೇಲಿನ ಅರಸನು ಹೇಳಿದನು—ನೀವು ಮಿಕಾಯನ
ನ್ನು ಹಿಡಿದು, ಪಟ್ಟಣದ ಅಧಿಪತಿಯಾದ ಆಮೋನನ ಬಳಿಗೂ ಅರ
ಸನ ಮಗನಾದ ಯೊವಾಷನ ಬಳಿಗೂ ಅವನನ್ನು ಹಿಂದಕ್ಕೆ ಮೈ
೨೫ದು, ಹೀಗೆ ಹೇಳಿರಿ—ಅರಸನು ಹೇಳುವದೇನಂದರೆ—ನೀವು ಇವನ
ನ್ನು ಕೆರೆಮನೆಯಲ್ಲಿಟ್ಟು, ನಾನು ಸಮಾಧಾನವಾಗಿ ಬರುವ ಮ
ಟ್ಟಿಗೂ ಅವನಿಗೆ ಬಾಧೆಯ ಕೊಟ್ಟಿಯನ್ನೂ ಬಾಧೆಯ ನೀರ
೨೬ನ್ನೂ ಕೊಡಿರಿ. ಅದಕ್ಕೆ ಮಿಕಾಯನು, ನೀನು ಸಮಾ
ಧಾನದಿಂದ ತಿರಿಗಿ ಬರಲೇ ಬಂದರೆ, ಕರ್ತನು ನನ್ನ ಮುಖಾಂತರ
ಮಾತಾಡಿದ್ದಿಲ್ಲ, ಎಂಬೇಳಿ, ಜನರೇ, ನೀವೆಲ್ಲರು ಕೇಳಿರಿ, ಅಂದನು.

೨೭ ಹೀಗೆಯೇ ಇಸ್ರಯೇಲಿನ ಅರಸನೂ ಯೆಹೂದದ ಅರಸನಾ
ದ ಯೆಹೋಷಫಾಟನೂ ಗಿಲ್ಯಾದಿನಲ್ಲಿರುವ ರಾಮೋತಿಗೆ ಹೋ
೨೮ದರು. ಆಗ ಇಸ್ರಯೇಲಿನ ಅರಸನು ಯೆಹೋಷಫಾಟನಿಗೆ,
ನಾನು ನನ್ನನ್ನು ಮಾಚಿ, ಯುದ್ಧದಲ್ಲಿ ಪ್ರವೇಶಿಸುವೆನು; ಆದರೆ ನೀ
ನು ನಿನ್ನ ವಸ್ತ್ರಗಳನ್ನು ಧರಿಸಿ ಕೊಂಡಿರು, ಅಂದನು. ಹಾಗೆ
ಯೇ ಇಸ್ರಯೇಲಿನ ಅರಸನು ತನ್ನನ್ನು ಮಾಚಿದನು; ಅವರು
೩೦ ಯುದ್ಧಕ್ಕೆ ಹೋದರು. ಆದರೆ ಅರಾಮಿನ ಅರಸನು ತನ್ನ ರಥಗ
ಳ ಮೇಲೆ ಅಧಿಕಾರವುಳ್ಳವರಿಗೆ, ನೀವು ಹಿರಿಕಿರಿಯರ ಸಂಗಡ
ಯುದ್ಧ ಮಾಡದೆ, ಇಸ್ರಯೇಲಿನ ಅರಸನ ಸಂಗಡಲೇ ಯುದ್ಧ
೩೧ ಮಾಡಿರಿ, ಎಂದು ಆಜ್ಞಾಪಿಸಿದ್ದನು. ಆದದರಿಂದ ರಥಗಳ ಅಧಿಪತಿ
ಗಳು ಯೆಹೋಷಫಾಟನನ್ನು ನೋಡಿದಾಗ, ನಿಶ್ಚಯವಾಗಿ ಇ
ವನೇ ಇಸ್ರಯೇಲಿನ ಅರಸನೆಂದು ಹೇಳಿ, ಅವನ ಸಂಗಡ ಯುದ್ಧ
ಮಾಡುವದಕ್ಕೆ ತಿರುಗಿ ಕೊಂಡರು. ಆಗ ಯೆಹೋಷಫಾಟನು
ಕೂಗಿದನು. ಮತ್ತು ಕರ್ತನು ಅವನಿಗೆ ಸಹಾಯ ಕೊಟ್ಟನು;
ಇದಲ್ಲದೆ ದೇವರು ಅವನನ್ನು ಬಿಟ್ಟುಬಿಡ ಅವರನ್ನು ಪ್ರೇರೇಪಿಸಿದ

೩೦ ನು. ಅವನು ಇಸ್ರಯೇಲಿನ ಅರಸನಲ್ಲವೆಂದು ರಥಗಳ ಅಧಿಪ
೩೩ತಿಗಳು ನೋಡಿದಾಗ, ಅವನನ್ನು ಬಿಟ್ಟು ತಿರುಗಿ ಕೊಂಡರು. ಆ
ದರೆ ಒಬ್ಬ ಮನುಷ್ಯನು ಸುಮ್ಮನೆ ಬಿಲ್ಲಿಗೆ ಬಾಣವನ್ನೆಳರಿಸಿ, ಇ
ಸ್ರಯೇಲಿನ ಅರಸನನ್ನು ಜಿಕಾಭತ್ತರ ಸಂದುಗಳಲ್ಲಿ ಹೊಡೆದನು.
ಆದದರಿಂದ ಅವನು ತನ್ನ ರಥಿಕನಿಗೆ, ನೀನು ನಿನ್ನ ಕೈಯನ್ನು
ತಿರುಗಿಸಿ, ನನ್ನನ್ನು ಸೈನ್ಯದೊಳಗಿಂದ ಆಚೇ ಕಡೆ ಮೈಯಿ;
೩೪ ಯಾಕಂದರೆ ಘಾಯ ಪಟ್ಟಿದ್ದೇನೆ, ಅಂದನು. ಆ ದಿನ ಯುದ್ಧ
ಪ್ರಬಲವಾದದರಿಂದ, ಇಸ್ರಯೇಲಿನ ಅರಸನು ಸಾಯಂಕಾಲದ ಮ
ಟ್ಟಿಗೂ ಅರಾಮ್ಯರಿಗೆ ಎದುರಾಗಿ ರಥದ ಮೇಲೆ ನಿಲ್ಲಿಸಲ್ಪಟ್ಟು,
ಸೂರ್ಯನು ಅಸ್ತಮಿಸಿದಾಗ ಸತ್ತನು.

## ೧೯. ಸಂಧಿ.

೧ ಆದರೆ ಯೆಹೂದದ ಅರಸನಾದ ಯೆಹೋಷಾಫಾಟನು ಸ
ಮಾಧಾನವಾಗಿ ಯೆರೂಸಲೇಮಿನಲ್ಲಿರುವ ತನ್ನ ಮನೆಗೆ ತಿರಿಗಿ ಬಂ
೨ ದನು. ಆಗ ದರ್ಶಿಯೋಗಿರುವ ಹನಾನಿಯ ಮಗನಾದ ಯೇಹು
ವು ಅವನನ್ನು ಎದುರ್ಗೊಳ್ಳ ಕೋದನು. ಮತ್ತು ಅರಸನಾದ ಯೆ
ಹೋಷಾಫಾಟನಿಗೆ ಅವನು ಹೇಳಿದನು—ದುಷ್ಟನಿಗೆ ಸಹಾಯ
ಕೊಟ್ಟು, ಕರ್ತನನ್ನು ಪಗೆ ಮಾಡುವವರನ್ನು ಪ್ರೀತಿ ಮಾಡ ಬಹು
ದೋ! ಆದಕಾರಣ ನಿನ್ನ ಮೇಲೆ ಕರ್ತನ ಸನ್ನಿಧಿಯಿಂದ ಕೌದ್ರ
3 ಉಂಟು. ಆದರೆ ನೀನು ದೇಶದಿಂದ ತೋಪುಗಳನ್ನು ತೆಗೆದು ಹಾ
ಕಿ, ದೇವರನ್ನು ಹುಡುಕ ನಿನ್ನ ಹೃದಯವನ್ನು ಸಿದ್ಧ ಪಡಿಸಿದ್ದರಿಂ
ದ, ನಿನ್ನಲ್ಲಿ ಉತ್ತಮವಾದ ಕಾರ್ಯಗಳು ಕಾಣಲ್ಪಟ್ಟವೆ.
೪ ಮತ್ತು ಯೆಹೋಷಾಫಾಟನು ಯೆರೂಸಲೇಮಿನಲ್ಲಿ ವಾಸವಾ
ಗಿದ್ದನು. ಮತ್ತು ಅವನು ತಿರಿಗಿ ಹೊರಟು, ಬೇರ್ಷೆಬ ಮೊದಲು
ಗೊಂಡು ಎಫ್ರಯಿಮಿನ ಬೆಟ್ಟದ ಮಟ್ಟಿಗೂ ಜನರಲ್ಲಿ ಸಂಚರಿಸಿ,
ತನ್ನ ಪಿತೃಗಳ ದೇವರಾದ ಕರ್ತನ ಕಡೆಗೆ ಅವರನ್ನು ತಿರುಗಿ
ಸಿದನು.
೫ ಇದಲ್ಲದೆ ಅವನು ದೇಶದೊಳಗೆ ಪಟ್ಟಣ ಪಟ್ಟಣದಲ್ಲಿ ಯೆಹೂದದ
ಸಮಸ್ತ ಕೋಟೆಗಳುಳ್ಳ ಪಟ್ಟಣಗಳೊಳಗೆ ನ್ಯಾಯಾಧಿಪತಿಗಳನ್ನು
೬ ನೇಮಿಸಿದನು. ಮತ್ತು ನ್ಯಾಯಾಧಿಪತಿಗಳಿಗೆ ಹೇಳಿದ್ದೇನಂದ
ರೆ—ನೀವು ಮಾಡುವದನ್ನು ನೋಡಿ ಕೊಳ್ಳಿರಿ; ಯಾಕಂದರೆ
ನೀವು ಮನುಷ್ಯರಿಗೋಸ್ಕರವಲ್ಲ, ನ್ಯಾಯ ತೀರಿಸುವ ಕಾರ್ಯ
ದಲ್ಲಿ ನಿಮ್ಮ ಸಂಗಡ ಇರುವ ಕರ್ತನಿಗೋಸ್ಕರ ನ್ಯಾಯ ತೀರಿ
7 ಸುತ್ತೀರಿ. ಆದಕಾರಣ ಕರ್ತನ ಭಯವು ನಿಮ್ಮ ಮೇಲೆ ಇರಲಿ.
ನೀವು ಜಾಗ್ರತೆಯಾಗಿದ್ದು, ನಡಿಸಿರಿ. ಯಾಕಂದರೆ ನಮ್ಮ ಕರ್ತ
ನಾದ ದೇವರ ಬಳಿಯಲ್ಲಿ ಅನ್ಯಾಯವಾದರೂ, ಮುಖದಾಕ್ಷಿಣ್ಯ
ವಾದರೂ, ಲಂಚ ತೆಗೆದು ಕೊಳ್ಳುವದಾದರೂ ಇಲ್ಲ.
೮ ಇದಲ್ಲದೆ ಅವರು ಯೆರೂಸಲೇಮಿಗೆ ತಿರಿಗಿ ಬಂದ ತರುವಾ
ಯ, ಯೆಹೋಷಾಫಾಟನು ಕರ್ತನ ನ್ಯಾಯ ತೀರ್ಪಿಕೆಗೋಸ್ಕರ
ಪೂ ಪ್ಯಾಜ್ಯಗಳಿಗೋಸ್ಕರವೂ ಯೆರೂಸಲೇಮಿನೊಳಗೆ ಲೇವ್ಯ
ರಲ್ಲಿಯೂ ಯಾಜಕರಲ್ಲಿಯೂ ಪಿತೃಗಳ ಶ್ರೇಷ್ಠರಲ್ಲಿಯೂ ಕೆ
೯ ಲವರನ್ನು ನೇಮಿಸಿ, ಅವರಿಗೆ ಆಜ್ಞಾಪಿಸಿದ್ದೇನಂದರೆ—ನೀವು ಈ
ಕಾರ್ಯವನ್ನು ಕರ್ತನ ಭಯದಿಂದಲೂ ನಂಬಿಕೆಯಿಂದಲೂ
೧೦ ಪೂರ್ಣ ಹೃದಯದಿಂದಲೂ ಮಾಡ ಬೇಕು. ಇದಲ್ಲದೆ ರಕ್ತ
ರಕ್ತಕ್ಕೂ, ನ್ಯಾಯಕ್ಕೂ ಆಜ್ಞೆಗೂ, ನೇಮಗಳಿಗೂ ನ್ಯಾಯ
ತೀರ್ಪಿಕೆಗಳಿಗೂ ತಮ್ಮ ಪಟ್ಟಣಗಳಲ್ಲಿ ವಾಸವಾಗಿರುವ ನಿಮ್ಮ ಸ
ಹೋದರರಿಂದ ಯಾವ ಕಾರ್ಯವಾದರೂ ನಿಮ್ಮ ಮುಂದೆ ಬಂ
ದರೆ, ಕಾದ್ರವು ನಿಮ್ಮ ಮೇಲೆಯೂ ನಿಮ್ಮ ಸಹೋದರರ ಮೇಲೆ
ಯೂ ಬಾರದ ಹಾಗೆ, ಕರ್ತನಿಗೆ ವಿರೋಧವಾಗಿ ಅಪರಾಧ ಮಾ
ಡದಂತೆ ನೀವು ಅವರನ್ನು ಎಚ್ಚರಿಸ ಬೇಕು. ಇದನ್ನು ಮಾಡಿರಿ,
೧೧ ಆಗ ನೀವು ಅಪರಾಧವಿಲ್ಲದವರಾಗಿರುವಿರಿ. ಇಗೋ, ಪ್ರಧಾನ
ಯಾಜಕನಾದ ಅಮರ್ಯನು ಕರ್ತನ ಸಮಸ್ತ ಕಾರ್ಯಗಳಲ್ಲಿ
ಯೂ ಯೆಹೂದನ ಮನೆಯ ನಾಯಕನಾಗಿರುವ ಇಷ್ಮಾಯೇಲ
ನ ಮಗನಾದ ಜೆಬದ್ಯನು ಅರಸನ ಸಮಸ್ತ ಕಾರ್ಯಗಳಲ್ಲಿಯೂ
ಇದ್ದಾರೆ. ಇದಲ್ಲದೆ ಲೇವ್ಯರು ನಿಮ್ಮ ಮುಂದೆ ಪಾರುಪತ್ಯಗಾರ
ರಾಗಿರುವರು. ನೀವು ಬಲಗೊಂಡು, ಕೆಲಸ ನಡಿಸಿರಿ; ಕರ್ತನು ಒ
ಳ್ಳೆಯವನ ಸಂಗಡ ಇರುವನು.

## ೨೦. ಸಂಧಿ.

೧ ಇದರ ತರುವಾಯ ಏನಾಯಿತಂದರೆ, ಮೋವಾಬಿನ ಮಕ್ಕ
ಳೂ, ಅಮ್ಮೋನಿನ ಮಕ್ಕಳೂ ಅಮ್ಮೋನ್ಯರ ಹೊರತು ಇತರ
ರೂ ಯೆಹೋಷಾಫಾಟನ ಮೇಲೆ ಯುದ್ಧ ಮಾಡ ಬಂದರು. ಆ
೨ ಗ ಕೆಲವರು ಬಂದು, ಯೆಹೋಷಾಫಾಟನಿಗೆ, ಅರಾಮಿನ ಈಚೆಯ
ಲ್ಲಿರುವ ಸಮುದ್ರದ ಆಚೆಯಿಂದ ನಿನಗೆ ವಿರೋಧವಾಗಿ ಬಹು ಗುಂ
ಪು ಬರುತ್ತದೆ; ಇಗೋ, ಅವರು ಎಂಗೇದಿ ಎಂಬ ಹಚಚೊಂತ
ಮಾರಿನಲ್ಲಿ ಇದ್ದಾರೆಂದು ಹೇಳಿದರು. ಆಗ ಯೆಹೋಷಾಫಾಟ
3 ನು ಭಯ ಪಟ್ಟು, ಕರ್ತನನ್ನು ಹುಡುಕ ತನ್ನ ಮುಖವನ್ನಿಟ್ಟು,
ಸಮಸ್ತ ಯೆಹೂದದಲ್ಲಿ ಉಪವಾಸ ಮಾಡ ಬೇಕೆಂದು ಸಾರಿಸಿ
೪ ದನು. ಆದದರಿಂದ ಯೆಹೂದದವರು ಕರ್ತನನ್ನು ಹುಡುಕ ಕೂ
ಡಿಕೊಂಡರು. ನಿಶ್ಚಯವಾಗಿ ಸಮಸ್ತ ಯೆಹೂದದ ಪಟ್ಟಣಗಳಿಂದ
ಕರ್ತನನ್ನು ಹುಡುಕ ಬಂದರು.
೫ ಆಗ ಯೆಹೋಷಾಫಾಟನು ಹೊಸ ಅಂಗಳದ ಮುಂದೆ ಕರ್ತ
ನ ಮಂದಿರದಲ್ಲಿರುವ ಯೆಹೂದದ ಯೆರೂಸಲೇಮಿನ ಕೂಡದ
ಮಧ್ಯದಲ್ಲಿ ನಿಂತು ಹೇಳಿದ್ದೇನಂದರೆ—ನಮ್ಮ ಪಿತೃಗಳ ದೇವಾ
೬ ದ ಕರ್ತನೇ, ಆಕಾಶದಲ್ಲಿರುವ ದೇವರು ನೀನಲ್ಲವೋ! ನೀನು
ಜನಾಂಗಗಳ ಸಕಲ ರಾಜ್ಯಗಳ ಮೇಲೆ ಆಳುತ್ತೀಯಲ್ಲವೋ!
ಯಾವನೂ ನಿನ್ನನ್ನು ಎದುರಿಸ ಕೂಡದ ಹಾಗೆ, ನಿನ್ನ ಕೈಯ
೭ ಲ್ಲಿ ಶಕ್ತಿಯೂ ಪರಾಕ್ರಮವೂ ಇಲ್ಲವೋ! ನೀನು ನಿನ್ನ ಜನಾ
ದ ಇಸ್ರಯೇಲಿನ ಎದುರಿನಿಂದ ಈ ದೇಶದ ನಿವಾಸಿಗಳನ್ನು ಹಿರಿ
ಸಿ ಬಿಟ್ಟು, ಅದನ್ನು ನಿನ್ನ ಸ್ನೇಹಿತನಾದ ಅಬ್ರಹಾಮನ ಬೀಜಕ್ಕೆ
೮ ಎಂದೆಂದಿಗೂ ಕೊಟ್ಟ ನೀನು ನಮ್ಮ ದೇವರಲ್ಲವೋ! ಅವರು ಅ
ದರಲ್ಲಿ ನಿವಾಸ ಮಾಡಿ, ಅದರಲ್ಲಿ ನಿನ್ನ ಹೆಸರಿಗೆ ಪರಿಶುದ್ಧವಾದ
ಸ್ಥಾನವನ್ನು ಕಟ್ಟಿಸಿ, ನಿನ್ನ ಹೆಸರು ಈ ಮನೆಯಲ್ಲಿರುವದರಿಂದ
೯ ಕತ್ತಿಯೂ, ನ್ಯಾಯ ತೀರಿಸುವ ಶಿಕ್ಷೆಯೂ, ಜಾಡ್ಯವೂ, ಕೇಡೇ
ನಾದರೂ ನಮ್ಮ ಮೇಲೆ ಬಂದರೆ, ನಾವು ಈ ಮನೆಯ ಮುಂದೆ
ಯೂ ನಿನ್ನ ಸಮುಖದಲ್ಲಿಯೂ ನಿಂತು, ನಮ್ಮ ಇಕ್ಕಟ್ಟಿನಲ್ಲಿ ನಿ
ನ್ನನ್ನು ಕೂಗುವಾಗ, ನೀನು ಕೇಳಿ, ರಕ್ಷಿಸ ಬೇಕೆಂದು, ಹೇಳಿದ
೧೦ ರು. ಈಗ, ಇಗೋ, ಅಮ್ಮೋನ್, ಮೋವಾಬ್, ಸೇಯಿರ್ ಬೆಟ್ಟ
ದ ಮಕ್ಕಳು—ಇಸ್ರಯೇಲ್ಯರು ಐಗುಪ್ತ ದೇಶದೊಳಗಿಂದ ಹೊರ
ಟು ಬರುವಾಗ, ಅವರ ಕಡೆ ಹೋಗ ನೀನು ಇವರಿಗೆ ಅಪ್ಪಣೆ



ಕೊಟ್ಟದ್ದರಿಂದ, ಇವರು ಅವರನ್ನು ಬಿಟ್ಟು ಕೊಲಗಿ, ಅವರನ್ನು
ನಾಶನ ಮಾಡದೆ ಹೋದರು. ಇಗೋ, ಅವರು ಬಂದು, ನೀನು
ನಮಗೆ ಸ್ವತಂತ್ರಿಸಿ ಕೊಳ್ಳ ಕೊಟ್ಟ ನಿನ್ನ ಸ್ವಾಸ್ತ್ಯದೊಳಗಿಂದ
೧೧ ಹೊರಡಿಸುವದರಿಂದ ನಮಗೆ ಬದಲು ಮಾಡುತ್ತಾರೆ. ನಮ್ಮ ದೇ
ವಕೇ, ನೀನು ಅವರಿಗೆ ನ್ಯಾಯ ತೀರಿಸುವದಿಲ್ಲವೋ! ಯಾಕಂದ
ರೆ ನಮಗೆ ವಿರೋಧವಾಗಿ ಬರುವ ಈ ಮಹಾ ಗುಂಪನ್ನು ಎದುರಿ
ಸ ನಮಗೆ ಶಕ್ತಿ ಇಲ್ಲ. ನಾವು ಏನು ಮಾಡಬೇಕೋ, ಶಿಳ್ಳುವಿ
ಲ್ಲ. ಆದರೆ ನಮ್ಮ ಕಣ್ಣುಗಳು ನಿನ್ನ ಮೇಲೆ ಅವೆ.
೧೩ ಹೀಗೆಯೇ ಯೆಹೂದದವರೆಲ್ಲರು, ತಮ್ಮ ಹೆಂಡರು, ಮಕ್ಕಳು,
ಚಿಕ್ಕವರು ಸಹಿತವಾಗಿ, ಕರ್ತನ ಮುಂದೆ ನಿಂತರು.
೧೪ ಆಗ ಕೂಟದ ಮಧ್ಯದಲ್ಲಿದ್ದ ಆಸಾಫನ ಮಕ್ಕಳಲ್ಲಿ ಬಿಬ್ಬನಾ
ದಂಥ, ಲೇವ್ಯನಾದಂಥ, ಮತ್ತನ್ಯನ ಮಗನಾದ ಯೆಖಿಯೇಲನ
ಮಗನಾದ ಬೆನಾಯನ ಮಗನಾದ ಜೆಕರೀಯನ ಮಗನಾದ ಯೆ
೧೫ ಹಜಿಯೇಲನ ಮೇಲೆ ಕರ್ತನ ಆತ್ಮವು ಬಂತು. ಆಗಲವನು, ಯೆ
ಹೂದದ ಸಮಸ್ತರೇ, ಯೆರೂಸಲೇಮಿನ ನಿವಾಸಿಗಳೇ, ಅರಸನಾ
ದ ಯೆಹೋಷಾಫಾಟನೇ, ಕೇಳಿರಿ. ಕರ್ತನು ನಿಮಗೆ ಹೀಗೆ ಹೇ
ಳುತ್ತಾನೆ—ಈ ಮಹಾ ಗುಂಪಿನ ನಿಮಿತ್ತ ನೀವು ಭಯ ಪಡಬೇಡಿ
೧೬ ರಿ, ಹೆದರ ಬೇಡಿರಿ. ಯಾಕಂದರೆ ಯುದ್ಧವು ನಿಮ್ಮದಲ್ಲ, ದೇವರ
ದೇ. ಮಾರನೆ ದಿವಸ ನೀವು ಅವರ ಮೇಲೆ ಇಳಿದು ಹೋಗಿರಿ.
ಇಗೋ, ಅವರು ಜೇಚು ಎಂಬ ಕಣಿವೆಯಿಂದ ಏರಿ ಬರುತ್ತಾರೆ;
ಯೆರುವೇಲಿನ ಅರಣ್ಯದ ಮುಂಭಾಗದಲ್ಲಿರುವ ಹಳ್ಳದ ಅತ್ಯಂದ
೧೭ ಲ್ಲಿ ಅವರನ್ನು ಕಂಡುಕೊಳ್ಳುವಿರಿ. ಇದರಲ್ಲಿ ನೀವು ಯುದ್ಧ ಮಾ
ಡ ಕೆಲಸವಿಲ್ಲ; ನೀವು ನೆಲೆಯಾಗಿ ನಿಂತುಕೊಂಡು, ಕರ್ತನು ನಿಮ
ಗೆ ಮಾಡುವ ರಕ್ಷಣೆಯನ್ನು ನೋಡಿರಿ, ಯೆಹೂದದವರೇ, ಯೆ
ರೂಸಲೇಮಿನವರೇ, ಭಯವನ ಬೇಡಿರಿ, ಹೆದರ ಬೇಡಿರಿ; ಮಾರ
ನೆ ದಿವಸ ಅವರೆದುರಿಗೆ ಹೊರಟು ಹೋಗಿರಿ; ಕರ್ತನು ನಿಮ್ಮ
೧೮ ಸಂಗಡ ಇದ್ದಾನೆ, ಅಂದನು. ಆಗ ಯೆಹೋಷಾಫಾಟನು ತನ್ನ
ಮುಖವನ್ನು ನೆಲಕ್ಕೆ ಬಾಗಿಸಿದನು; ಮತ್ತು ಯೆಹೂದದವರೆಲ್ಲ
ರೂ ಯೆರೂಸಲೇಮಿನ ನಿವಾಸಿಗಳೂ ಕರ್ತನ ಮುಂದೆ ಅಡ್ಡ ಬಿ
ದ್ದು, ಕರ್ತನನ್ನು ಪಂದಿಸಿದರು. ಇದಲ್ಲದೆ ಕೊಹತ್ಯರ ಮಕ್ಕಳಲ್ಲಿ
ಯೂ ಕೊರಹೀಯರ ಮಕ್ಕಳಲ್ಲಿಯೂ ಇರುವ ಲೇವ್ಯರು ಎತ್ತ
ರವಾದ ದೊಡ್ಡ ಶಬ್ದದಿಂದ ಇಸ್ರಯೇಲಿನ ದೇವರಾದ ಕರ್ತನನ್ನು
ಸ್ತುತಿಸ ಎದ್ದು ನಿಂತರು.
೧೯ ಮತ್ತು ಅವರು ಉದಯದಲ್ಲಿ ಎದ್ದು, ತೆಕೋವದ ಅರಣ್ಯಕ್ಕೆ
ಹೊರಟರು. ಹೊರಟು ಹೋಗುತ್ತಿರುವಾಗ, ಯೆಹೋಷಾಫಾ
ಟನು ನಿಂತು ಕೊಂಡು, ಯೆಹೂದದವರೇ, ಯೆರೂಸಲೇಮಿನ
ನಿವಾಸಿಗಳೇ, ನನ್ನ ಮಾತು ಕೇಳಿರಿ. ನಿಮ್ಮ ದೇವರಾದ ಕರ್ತನ
ನ್ನು ನಂಬಿಕೊಳ್ಳಿರಿ, ಆಗ ಸ್ಥಿರವಾಗುವಿರಿ; ಅವನ ಪ್ರವಾದಿಗಳನ್ನು
೨೦ ನಂಬಿಕೊಳ್ಳಿರಿ, ಆಗ ಸಿದ್ಧಿಹೊಂದುವಿರಿ, ಅಂದನು. ಅವನು ಜನ
ರ ಸಂಗಡ ಆಲೋಚನೆ ಮಾಡಿದ ತರುವಾಯ, ಸೈನ್ಯದ ಮುಂದೆ
ಅವರು ಹೊರಡುವಾಗ, ಪರಿಶುದ್ಧತ್ವದ ಪ್ರಭೆಯನ್ನು ಸ್ತುತಿಸುವದ
ಕ್ಕೂ, ಕರ್ತನನ್ನು ಕೊಂಡಾಡಿರಿ, ಯಾಕಂದರೆ ಅವನ ಕೃಪೆ
ಯು ಯುಗಯುಗಕ್ಕೂ ಇರುವದೆಂದು ಹೇಳುವದಕ್ಕೂ, ಕರ್ತ
ನಿಗೆ ಸಂಗೀತಗಾರರನ್ನು ನೇಮಿಸಿದನು.
೨೨ ಅವರು ಹಾಡುವದಕ್ಕೂ ಸ್ತುತಿಸುವದಕ್ಕೂ ಆರಂಭಿಸಿದಾಗ
ಲೇ, ಕರ್ತನು ಯೆಹೂದದ ಮೇಲೆ ಬಂದ ಅಮ್ಮೋನ್, ಮೋ
ವಾಬ್, ಸೇಯಿರ್ ಪರ್ವತದ ಮಕ್ಕಳಿಗೆ ವಿರೋಧವಾಗಿ ಹೊಂ
ಚಿಕೊಳ್ಳುವವರನ್ನು ಕಳುಹಿಸಿದ್ದರಿಂದ, ಅವರು ಮುರಿಯಲ್ಪಟ್ಟಿ
೨೩ ದ್ದರು. ಅಮ್ಮೋನ್, ಮೋವಾಬ್ಯರ ಮಕ್ಕಳು ಸೇಯಿರ್ ಪರ್ವತದ
ನಿವಾಸಿಗಳನ್ನು ನಿರ್ಮೂಲವಾಗಿ ನಾಶನ ಮಾಡ ನಿಂತರು.
ಅವರು ಸೇಯಿರನ ನಿವಾಸಿಗಳನ್ನು ಮುಗಿಸಿದ ತರುವಾಯ, ಪ್ರ
ತಿ ಮನುಷ್ಯನೂ ಮತ್ತೊಬ್ಬನನ್ನು ನಾಶನ ಮಾಡ ಸಹಾಯ
ಕೊಟ್ಟನು.
೨೪ ಯೆಹೂದದವರು ಅರಣ್ಯದಲ್ಲಿರುವ ಕೋವರದ ಸ್ಥಳಕ್ಕೆ
ಬಂದಾಗ, ಅವರು ಗುಂಪನ್ನು ದೃಷ್ಟಿಸಿದರು; ಇಗೋ, ಅವರ
ಲ್ಲಿ ಒಂದೂ ತಪ್ಪದ ಹಾಗೆ ನೆಲಕ್ಕೆ ಬಿದ್ದ ಹೆಣಗಳಾಗಿದ್ದರು. ಯೆ
ಹೋಷಾಫಾಟನೂ ಅವನ ಜನರೂ ಅವರ ವಸ್ತುಗಳನ್ನು ಕೊಳ್ಳೆ
ಮಾಡ ಬಂದಾಗ, ಅವರು ಹೆಣಗಳ ಬಳಿಯಲ್ಲಿ ದ್ರವ್ಯವನ್ನೂ ಪ್ರಿ
ಯವಾದ ಆಭರಣಗಳನ್ನೂ ಬಹಳವಾಗಿ ಕಂಡು ಕೊಂಡು, ತಾ
ವು ವೈಯಕೂಡದ ಹಾಗೆ ಸುಲಕೊಂಡರು. ಕೊಳ್ಳೆಯು ಅ
ಷ್ಟು ಅಧಿಕವಾದದರಿಂದ, ಅದನ್ನು ಮೂರು ದಿವಸಗಳ ಮಟ್ಟಿಗೂ
೨೬ ಸುಲಕೊಳ್ಳುತ್ತಾ ಇದ್ದರು. ನಾಲ್ಕನೇ ದಿವಸದಲ್ಲಿ ಅವರು ಬೆರಾ
ಕವೆಂಬ ತಗ್ಗಿನಲ್ಲಿ ಕೂಡಿ ಕೊಂಡರು. ಯಾಕಂದರೆ ಅಲ್ಲಿ ಕರ್ತ
ನನ್ನು ಆಶೀರ್ವದಿಸಿದರು. ಆದಕಾರಣ ಇಂದಿನ ಮಟ್ಟಿಗೂ ಆ
ಸ್ಥಳಕ್ಕೆ ಬೆರಾಕ ತಗ್ಗೆಂದು ಕರೆಯುತ್ತಾರೆ. ಮತ್ತು ಕರ್ತನು ಅ
೨೭ ವರ ಶತ್ರುಗಳ ಮೇಲೆ ಅವರನ್ನು ಸಂತೋಷ ಪಡವಾಡಿದ್ದರಿಂದ,
ಅವರು ಸಂತೋಷವಾಗಿ ಯೆರೂಸಲೇಮಿಗೆ ತಿರಿಗಿ ಹೋಗುವ
ದಕ್ಕೆ, ಯೆಹೂದ ಯೆರೂಸಲೇಮಿನವರೆಲ್ಲರೂ, ಅವರ ಮುಂಭಾ
೨೮ ಗದಲ್ಲಿ ಯೆಹೋಷಾಫಾಟನೂ ಹೊರಟು, ವೀಣೆಗಳಿಂದಲೂ,
ಕಿನ್ನರಿಗಳಿಂದಲೂ, ತುತೂರಿಗಳಿಂದಲೂ ಯೆರೂಸಲೇಮಿನಲ್ಲಿ ಪ್ರ
೨೯ವೇಶಿಸಿ, ಕರ್ತನ ಮನೆಗೆ ಬಂದರು. ಕರ್ತನು ಇಸ್ರಯೇಲಿನ ಶತ್ರು
ಗಳ ಮೇಲೆ ಯುದ್ಧ ಮಾಡಿದನೆಂದು, ಅವರು ಕೇಳಿದಾಗ, ದೇವ
30 ರ ಭಯವು ಆಲೇಶಗಳ ಸಕಲ ರಾಜ್ಯಗಳ ಮೇಲೆ ಬಿತ್ತು. ಆದದ
ರಿಂದ ಯೆಹೋಷಾಫಾಟನ ರಾಜ್ಯವು ಶಾಂತವಾಗಿತ್ತು; ಯಾ
ಕಂದರೆ ಅವನ ದೇವರು ಸುತ್ತಲೂ ಅವನಿಗೆ ವಿಶ್ರಾಂತಿ ಕೊಟ್ಟನು.
೩೧ ಹೀಗೆಯೇ ಯೆಹೋಷಾಫಾಟನು ಯೆಹೂದದ ಮೇಲೆ ಆಳ್ವ
ದನು. ಅವನು ಆಳ್ವ ಆರಂಭಿಸಿದಾಗ, ಮೂವತ್ತೈದು ವರುಷದ
ವನಾಗಿ, ಯೆರೂಸಲೇಮಿನಲ್ಲಿ ಇಪ್ಪತ್ತೈದು ವರುಷ ಆಳ್ವದನು.
ಅವನ ತಾಯಿ ಹೆಸರು ಅಜೂಬಳು; ಶಿಳ್ಹಿಯ ಮಗಳಾಗಿದ್ದಳು.
೩೨ ಅವನು ತನ್ನ ತಂದೆಯಾದ ಆಸನ ಮಾರ್ಗದಲ್ಲಿ ನಡೆದು, ಅದ
ನ್ನು ಬಿಟ್ಟು ಬಿಡದೆ, ಕರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು
33 ಮಾಡಿದನು. ಆದರೆ ಮೇಡುಗಳು ಇನ್ನೂ ತೆಗೆದು ಹಾಕಲ್ಪಡಲಿ
ಲ್ಲ. ಯಾಕಂದರೆ ತಮ್ಮ ಹೃದಯಗಳನ್ನು ತಮ್ಮ ಪಿತೃಗಳ
ದೇವರ ಕಡೆಗೆ ಇನ್ನೂ ಸಿದ್ಧ ಮಾಡಲಿಲ್ಲ.
೩೪ ಯೆಹೋಷಾಫಾಟನ ಇತರ ಕ್ರಿಯೆಗಳು, ಮೊದಲನೆಯವು
ಗಳೂ ಕಡೆಯವುಗಳೂ, ಇಗೋ, ಇಸ್ರಯೇಲಿನ ಅರಸುಗಳ
ಪುಸ್ತಕದಲ್ಲಿ ಎತ್ತಲ್ಪಟ್ಟಿ ಹನಾನಿಯ ಮಗನಾದ ಯೇಹುವಿನ ವಾ
ಕ್ಯಗಳಲ್ಲಿ ಬರೆಯಲ್ಪಟ್ಟಿವೆ.
೩೫ ಇದರ ತರುವಾಯ ಯೆಹೂದದ ಅರಸನಾದ ಯೆಹೋಷಾಫಾ
ಟನು ಬಹು ದುಷ್ಟನಾಗಿ ನಡೆದ ಇಸ್ರಯೇಲಿನ ಅರಸನಾದ ಅಹಜ್ಯನ

೩೭ ಸಂಗತ ಸಹವಾಸ ಮಾಡಿದನು. ಇದ್ದಲ್ಲದೆ ತರ್ಷಿಷಿಗೆ ಹೋ-
ಗುವ ನಿಮಿತ್ತ ಹಡಗಗಳನ್ನು ಮಾಡಿಸ, ಅವನ ಸಂಗತ ಸಹವಾ-
ಸ ಮಾಡಿದನು. ಎಜ್ಯೊನ್ಗೇಬರಿನಲ್ಲಿ ಹಡಗಗಳನ್ನು ಮಾಡಿಸಿದ
೩೮ ರು. ಆಗ ಮರೇಷದವನಾಗಿರುವ ದೋದವನ ಮಗನಾದ ಎಲಿ-
ಯೇಜರನು ಯೆಹೋಷಾಫಾಟನಿಗೆ ವಿರೋಧವಾಗಿ ಪ್ರವಾದಿಸಿ,
ನೀನು ಅಹಜ್ಯನ ಸಂಗತ ಸಹವಾಸ ಮಾಡಿದ್ದರಿಂದ, ಕರ್ತನು
ನಿನ್ನ ಕ್ರಿಯೆಗಳನ್ನು ವ್ಯರ್ಥಮಾಡಿ ಬಿಟ್ಟನೆಂದು, ಹೇಳಿದನು. ಮ-
ತ್ತು ಹಡಗಗಳು ತರ್ಷಿಷಿಗೆ ಹೋಗ ಕೂಡದ ಹಾಗೆ, ಮುರಿಯ-
ಲ್ಪಟ್ಟವು.

## ೨೧. ಸಂಧಿ.

೧ ಆದರೆ ಯೆಹೋಷಾಫಾಟನು ತನ್ನ ಪಿತೃಗಳ ಸಂಗತ ಮಲ-
ಗಿದನು; ದಾವೀದನ ಪಟ್ಟದಲ್ಲಿ ತನ್ನ ಪಿತೃಗಳ ಸಂಗತ ಹೂಣ-
ಲ್ಪಟ್ಟನು. ಮತ್ತು ಅವನ ಮಗನಾದ ಯೆಹೋರಮನು ಅವನಿ-
೨ ಗೆ ಬದಲಾಗಿ ಆಳಿದನು. ಇವನ ಸಹೋದರರಾಗಿರುವ ಯೆಹೋ-
ಷಾಫಾಟನ ಕುಮಾರರಾದ ಅಜರ್ಯನೂ, ಯೆಹಿಯೇಲನೂ,
ಜೆಕರೀಯನೂ, ಅಜರ್ಯನೂ, ಮಿಕಯೇಲನೂ ಶೆಫಟ್ಯನೂ
ಇದ್ದರು. ಇವರೆಲ್ಲರು ಇಸ್ರಯೇಲಿನ ಅರಸನಾದ ಯೆಹೋಷ-
3 ಫಾಟನ ಕುಮಾರರು. ಅವರ ತಂದೆಯು ಯೆಹೂದದಲ್ಲಿ ಕೋ-
ಟಿಯುಳ್ಳ ಪಟ್ಟಣಗಳ ಸಂಗತ ಬೆಳ್ಳಿಯನೂ, ಭಂಗಾರವನೂ,
ಪ್ರಿಯವಾದ ವಸ್ತುಗಳನ್ನೂ ಅವರಿಗೆ ದಾನಗಳಾಗಿ ಕೊಟ್ಟನು.
ಆದರೆ ಯೆಹೋರಮನು ಜೊಟ್ಟುಲ ಮಗನಾದದರಿಂದ, ಅವನಿ-
೪ ಗೆ ರಾಜ್ಯವನ್ನು ಕೊಟ್ಟನು. ಯೆಹೋರಮನು ತನ್ನ ತಂದೆಯ
ರಾಜ್ಯಕ್ಕೆ ಎದ್ದು ಬಂದ ತರುವಾಯ, ಅವನು ತನ್ನನ್ನು ಬಲ ಪಡಿ-
ಸಿ ಕೊಂಡು, ತನ್ನ ಸಮಸ್ತ ಸಹೋದರರನ್ನೂ, ಇಸ್ರಯೇಲಿ-
ನ ಪ್ರಧಾನರಲ್ಲಿ ಕೆಲವರನ್ನೂ ಕತ್ತಿಯಿಂದ ಕೊಂದು ಹಾಕಿದನು.

೫ ಯೆಹೋರಮನು ಆಳ್ಳ ಆರಂಭಿಸಿದಾಗ, ಮೂವತ್ತೆರಡು ವ-
ರುಷದವನಾಗಿದ್ದು, ಯೆರೂಸಲೇಮಿನಲ್ಲಿ ಎಂಟು ವರುಷ ಆಳ್ಳಿ-
೭ ದನು. ಅವನು ಅಹಾಬನ ಮನೆಯವರು ನಡೆದ ಹಾಗೆ, ಇಸ್ರ-
ಯೇಲಿನ ಅರಸುಗಳ ಮಾರ್ಗದಲ್ಲಿ ನಡೆದನು. ಯಾಕಂದರೆ ಅ-
ಹಾಬನ ಮಗಳು ಅವನಿಗೆ ಹೆಂಡತಿಯಾಗಿದ್ದಳು. ಆದದರಿಂದ ಕ-
೮ ರ್ತನ ಕಣ್ಣುಗಳ ಮುಂದೆ ಕೆಟ್ಟದ್ದನ್ನು ಮಾಡಿದನು. ಆದರೆ ಕ-
ರ್ತನು ದಾವೀದನ ಸಂಗತ ಮಾಡಿದ ಬಡಬಡಿಕೆಗೋಸ್ಕರವೂ,
ಆತನು ಅವನಿಗೂ ಅವನ ಮಕ್ಕಳಿಗೂ ಸರ್ವಕಾಲಕ್ಕೂ ದೀಪ-
ವನ್ನು ಕೊಡುವೆನೆಂದು ಹೇಳಿದ್ದರಿಂದಲೂ ಆತನು ದಾವೀದನ
ಮನೆಯನ್ನು ಕೆಡಿಸ ಮನಸ್ಸಿಲ್ಲದೆ ಇದ್ದನು.

೯ ಯೆಹೋರಮನ ದಿನಗಳಲ್ಲಿ ಎದೋಮ್ಯರು ಯೆಹೂದನ ಕೈ-
ಗೆ ತಪ್ಪಿ ತಿರುಗ ಬಿದ್ದು, ತಮಗೆ ತಾವೇ ಅರಸನನ್ನು ಮಾಡಿ-
೧೦ ಕೊಂಡರು. ಆಗ ಅವನು ತನ್ನ ಪ್ರಧಾನರ ಸಂಗಡಲೂ, ತನ್ನ
ಸಮಸ್ತ ರಥಗಳ ಸಂಗಡಲೂ ಹೊರಟು ಹೋಗಿ, ರಾತ್ರಿಯಲ್ಲಿ
ಎದ್ದು, ತನ್ನನ್ನೂ ರಥಗಳ ಅಧಿಪತಿಗಳನ್ನೂ ಸುತ್ತಿ ಕೊಂಡಿದ್ದ
ಎದೋಮ್ಯರನ್ನು ಹೊಡೆದನು. ಹೀಗೆಯೇ ಇಂದಿನ ವರೆಗೂ
ಎದೋಮ್ಯರು ಯೆಹೂದನ ಕೈಗೆ ತಪ್ಪಿ ತಿರುಗ ಬಿದ್ದರು. ಅ-
ದೇ ಕಾಲದಲ್ಲಿ ಅವನು ತನ್ನ ಪಿತೃಗಳ ದೇವರಾದ ಕರ್ತನನ್ನು
ಬಿಟ್ಟು ಬಿಟ್ಟದ್ದರಿಂದ, ಲಿಬ್ನವು ಅವನ ಕೈಗೆ ತಪ್ಪಿ ತಿರುಗ ಬಿತ್ತು.

೧೧ ಮತ್ತು ಅವನು ಯೆಹೂದದ ಪರ್ವತಗಳಲ್ಲಿ ಮೇಕುಗಳನ್ನು
ಮಾಡಿ, ಯೆರೂಸಲೇಮಿನ ನಿವಾಸಿಗಳನ್ನು ವ್ಯಭಿಚಾರ ಮಾಡ-
ಲ್ಪೇಕೇಪಿಸಿ, ಹಾಗೆಯೇ ಮಾಡ ಯೆಹೂದದವರನ್ನು ಬಲವಂತ
೧೨ ಮಾಡಿದನು. ಆದಕಾರಣ ಪ್ರವಾದಿಯಾದ ಎಲೀಯನಿಂದ ಅವನಿ-
ಗೆ ಒಂದು ಕಾಗದವು ಬಂತು. ಏನಂದರೆ—ನಿನ್ನ ತಂದೆಯಾದ
ದಾವೀದನ ದೇವರಾದ ಕರ್ತನು ಹೀಗೆ ಹೇಳುತ್ತಾನೆ—ನೀನು
ನಿನ್ನ ತಂದೆಯಾದ ಯೆಹೋಷಾಫಾಟನ ಮಾರ್ಗಗಳಲ್ಲಿ
ಯೂ, ಯೆಹೂದದ ಅರಸನಾದ ಆಸನ ಮಾರ್ಗಗಳಲ್ಲಿಯೂ
೧೩ ನಡೆಯದೆ, ಇಸ್ರಯೇಲಿನ ಅರಸುಗಳ ಮಾರ್ಗದಲ್ಲಿ ನಡೆದು, ಅ-
ಹಾಬನ ಮನೆಯ ವ್ಯಭಿಚಾರಗಳ ಹಾಗೆ, ಯೆಹೂದದವರನ್ನೂ,
ಯೆರೂಸಲೇಮಿನ ನಿವಾಸಿಗಳನ್ನೂ ವ್ಯಭಿಚಾರ ಮಾಡ ಪ್ರೇಕೇ-
ಪಿಸಿ, ನಿನಗಿಂತ ಉತ್ತಮರಾಗಿರುವ ನಿನ್ನ ತಂದೆಯ ಮನೆಯವ-
೧೪ ರಾದ ನಿನ್ನ ಸಹೋದರರನ್ನು ಕೊಂದು ಹಾಕಿದ್ದರಿಂದ, ಇಗೋ,
ಕರ್ತನು ದೊಡ್ಡ ಬಾಧೆಯಿಂದ ನಿನ್ನ ಜನರನ್ನೂ, ನಿನ್ನ ಮಕ್ಕ-
ಳನ್ನೂ, ನಿನ್ನ ಹೆಂಡತಿಯರನ್ನೂ, ನಿನ್ನ ಸಮಸ್ತ ಸ್ಥಿತಿಯನ್ನೂ ಬಾ-
೧೫ ಧಿಸುತ್ತಾನೆ. ಇದಲ್ಲದೆ ದಿನ ದಿನಕ್ಕೆ ರೋಗ ಅನುಭವಿಸುವದರಿಂ-
ದ, ನಿನ್ನ ಕರುಳುಗಳು ಹೊರಕ್ಕೆ ಹೊರಡುವ ಪರ್ಯಂತರ ನಿ-
ನ್ನ ಕರುಳುಗಳ ರೋಗದಿಂದ ನಿನಗೆ ಮಹಾ ರೋಗ ಉಂಟಾಗಿ-
ರುವದು.

೧೬ ಇದಲ್ಲದೆ ಕರ್ತನು ಯೆಹೋರಮನಿಗೆ ವಿರೋಧವಾಗಿ ಫಿಲಿ-
ಷ್ಟ್ಯರ ಆತ್ಮವನ್ನೂ, ಕೂಷಿಯರ ಬಳಿಯಲಿದ್ದ ಅರಬ್ಬಿಯರ
ಆತ್ಮವನ್ನೂ ಎಬ್ಬಿಸಿದನು. ಅವರು ಯೆಹೂದದ ಮೇಲೆ ಏರಿ
೧೭ ಬಂದು, ಅದರಲ್ಲಿ ಹೊಕ್ಕು, ಅರಸನ ಮನೆಯಲ್ಲಿ ಸಿಕ್ಕಿದ ಸಮ-
ಸ್ತ ಸ್ಥಿತಿಯನ್ನೂ, ಅವನ ಕುಮಾರರನ್ನೂ, ಅವನ ಹೆಂಡತಿಯರನ್ನೂ,
ತಕ್ಕೊಂಡು ಹೋದರು. ಆದದರಿಂದ ಅವನ ಕುಮಾರರಲ್ಲಿ ಚಿ-
ಕ್ಕವನಾದ ಯೆಹೋವಹಾಜನ ಹೊರ್ತು ಅವನಿಗೆ ಕುಮಾರ-
೧೮ ರು ಯಾರೂ ಬಿಡಲ್ಪಡಲಿಲ್ಲ. ಇದೆಲ್ಲಾದರ ತರುವಾಯ, ಕರ್ತ-
ನು ಅವನ ಕರುಳುಗಳಲ್ಲಿ ವಾಸಿ ಮಾಡ ಕೂಡದ ರೋಗದಿಂದ
೧೯ ಅವನನ್ನು ಬಾಧಿಸಿದನು. ಎರಡು ವರುಷವಾದ ತರುವಾಯ ಪಿ-
ನಾಯಿತಂದರೆ, ಅವನ ರೋಗದಿಂದ ಅವನ ಕರುಳುಗಳು ಹೊ-
ರಕ್ಕೆ ಬಂದವು. ಹೀಗೆಯೇ ಅವನು ಕೆಟ್ಟ ರೋಗಗಳಿಂದ ಸತ್ತ-
ನು. ಅವನ ಜನರು ಅವನ ಪಿತೃಗಳಿಗೋಸ್ಕರ ಸುಟ್ಟ ಹಾಗೆ
೨೦ ಅವನಿಗೋಸ್ಕರ ಸುಡಲಿಲ್ಲ. ಅವನು ಆಳ್ಳ ಆರಂಭಿಸಿದಾಗ
ಮೂವತ್ತೆರಡು ವರುಷದವನಾಗಿದ್ದು, ಯೆರೂಸಲೇಮಿನಲ್ಲಿ ಎಂ-
ಟು ವರುಷ ಆಳ್ಳಿ ಇಚ್ಛೈಸಲ್ಪಡದೆ ಹೋದನು. ಆದರೂ ಅವ-
ರು ಅವನನ್ನು ದಾವೀದನ ಪಟ್ಟದಲ್ಲಿ ಹೂಣಿಟ್ಟರು; ಆದರೆ ಅರ-
ಸುಗಳ ಸಮಾಧಿಗಳಲ್ಲಿ ಅಲ್ಲ.

## ೨೨. ಸಂಧಿ.

೧ ಮತ್ತು ಯೆರೂಸಲೇಮಿನ ನಿವಾಸಿಗಳು ಅವನಿಗೆ ಬದಲಾಗಿ
ಅವನ ಚಿಕ್ಕಮಗನಾದ ಅಹಜ್ಯನನ್ನು ಅರಸನಾಗ ಮಾಡಿದರು.
ಯಾಕಂದರೆ ದಂಡಿಗೆ ಬಂದ ಅರಬ್ಬಿಯರ ಗುಂಪು ಹಿರಿಯರನೆ-
ಲ್ಲಾ ಕೊಂದು ಹಾಕಿದರು. ಹೀಗೆಯೇ ಯೆಹೋರಮನ ಮಗನಾ-
೨ ದ ಅಹಜ್ಯನು ಯೆಹೂದದ ಅರಸನಾಗಿ ಆಳ್ಳಿದನು. ಅಹಜ್ಯನು ಆ-



ಳ್ಳ ಆರಂಭಿಸಿದಾಗ ಇಪ್ಪತ್ತೆರಡು ವರುಷದವನಾಗಿದ್ದು, ಯೆರೂ-
ಸಲೇಮಿನಲ್ಲಿ ಒಂದು ವರುಷ ಆಳ್ಳಿದನು. ಅವನ ತಾಯಿಯ ಹೆ-
3 ಸರು ಅಟಲ್ಯಳು; ಒಮ್ರಿಯ ಮಗಳಾಗಿದ್ದಳು. ಅವನು ಅಹಾಬ-
ನ ಮನೆಯವರ ಮಾರ್ಗದಲ್ಲಿ ನಡೆದನು; ಏನಂದರೆ ದುಷ್ಟನಾ-
ಗಿರುವದಕ್ಕೆ ಅವನ ತಾಯಿ ಅವನಿಗೆ ಯೋಚನೆ ಹೇಳುವವಳಾ-
4 ಗಿದ್ದಳು. ಆದಕಾರಣ ಅವನು ಅಹಾಬನ ಮನೆಯವರ ಹಾಗೆ ಕ-
ರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾಡಿದನು. ಯಾಕಂದರೆ ಅ-
ವನ ತಂದೆ ಸತ್ತ ತರುವಾಯ ಇವರು ಅವನ ನಾಶನಕ್ಕೆ ಅವನ
5 ಯೋಚನೆ ಕರ್ತರಾಗಿದ್ದರು. ಅವನು ಇವರ ಯೋಚನೆಯ
ಪ್ರಕಾರ ನಡೆದು, ಗಿಲ್ಯಾದಿನಲ್ಲಿರುವ ರಾಮೋತಿನ ಬಳಿಯಲ್ಲಿ ಅರಾ-
ಮಿನ ಅರಸನಾದ ಹಜಯೇಲಿನ ಮೇಲೆ ಯುದ್ಧ ಮಾಡ ಇಸ್ರಯೇ-
ಲಿನ ಅರಸನಾಗಿರುವ ಅಹಾಬನ ಮಗನಾದ ಯೆಹೋರಮನ ಸಂ-
6 ಗತ ಹೋದನು. ಆದರೆ ಅರಾಮ್ಯರು ಯೆಹೋರಮನನ್ನು ಹೊ-
ಡೆದರು. ಅವನು ಅರಾಮಿನ ಹಜಯೇಲಿನ ಸಂಗತ ಯುದ್ಧಮಾ-
3 ಡುವಾಗ, ರಾಮದಲ್ಲಿ ದೆಬ್ಬೆಗಳನ್ನು ಪಟ್ಟದ್ದರಿಂದ, ಇಜ್ರೇಲಿನಲ್ಲಿ
ಗುಣ ಮಾಡಿ ಕೊಳ್ಳ ಹಿರುಗಿದನು.

ಮತ್ತು ಯೆಹೂದದ ಅರಸನಾಗಿರುವ ಯೆಹೋರಮನ ಮಗ-
ನಾದ ಅಹಜ್ಯನು ಇಜ್ರೇಲಿನಲ್ಲಿರುವ ಅಹಾಬನ ಮಗನಾದ ಯೆ-
ಹೋರಮನನ್ನು ನೋಡ ಬಂದನು; ಯಾಕಂದರೆ ಇವನು ಕೋ-
7 ಗಸ್ಥನಾಗಿದ್ದನು. ಯೆಹೋರಮನ ಬಳಿಗೆ ಬಂದದರಿಂದ ಅಹಜ್ಯ-
ನಿಗೆ ಉಂಟಾದ ನಷ್ಟವು ದೇವರಿಂದ ಆಯಿತು. ಹ್ಯಾಗಂದರೆ ಅ-
ವನು ಬಂದ ತರುವಾಯ ಕರ್ತನು ಅಹಾಬನ ಮನೆಯನ್ನು ಕ-
ಡಿದು ಬಿಡ ಅಭಿಷೇಕಿಸಿದ ನಿಂಷಿಯ ಮಗನಾದ ಯೇಹುವಿನ ಮೇ-
8 ಲೆ ಯೆಹೋರಮನ ಸಂಗತ ಹೊರಟನು. ಮತ್ತು ಏನಾಯಿತಂ-
ದರೆ, ಯೇಹುವು ಅಹಾಬನ ಮನೆಗೆ ನ್ಯಾಯಶೀರಿಸುವಾಗ, ಅ-
ವನು ಯೆಹೂದ್ಯರ ಪ್ರಧಾನರನ್ನೂ, ಅಹಜ್ಯನನ್ನು ಸೇವಿಸು-
ತ್ತಿರುವ ಅಹಜ್ಯನ ಸಹೋದರರ ಮಕ್ಕಳನ್ನೂ ಕಂಡು ಹಿಡಿದು,
9 ಅವರನ್ನು ಕೊಂದು ಹಾಕಿದನು. ಇದಲ್ಲದೆ ಅಹಜ್ಯನನ್ನು ಹು-
ಡುಕಿದನು; ಅವನು ಸಮಾರ್ಯದಲ್ಲಿ ಬಚ್ಚಿಟ್ಟು ಕೊಂಡದ್ದರಿಂದ,
ಅವನನ್ನು ಕಂಡು ಹಿಡಿದು, ಯೇಹುವಿನ ಬಳಿಗೆ ಅವನನ್ನು ತ-
ಕ್ಕೊಂಡು ಬಂದರು. ಅವನನ್ನು ಕೊಂದು ಹಾಕಿ, ಹೂಣಿಟ್ಟರು;
ಯಾಕಂದರೆ ಇವನು ತನ್ನ ಪೂರ್ಣ ಹೃದಯದಿಂದ ಕರ್ತನನ್ನು
ಹುಡುಕಿದ ಯೆಹೋಷಾಫಾಟನ ಮಗನು, ಅಂದರು. ಹೀಗೆಯೇ ರಾ-
ಜ್ಯವನ್ನು ಸ್ಥಿರಪಡಿಸ ಅಹಜ್ಯನ ಮನೆಗೆ ಶಕ್ತಿ ಇಲ್ಲದೆ ಹೋಯಿತು.

10 ಅಹಜ್ಯನ ತಾಯಿಯಾದ ಅಟಲ್ಯಳು ತನ್ನ ಮಗನು ಸತ್ತನೆಂ-
ದು ಕಂಡಾಗ, ಅವಳು ಎದ್ದು, ಯೆಹೂದನ ಮನೆಯ ರಾಜ್ಯದ
11 ಬೀಜವನ್ನೆಲ್ಲಾ ನಾಶ ಮಾಡಿದಳು. ಆದರೆ ಅರಸನ ಮಗಳಾದ
ಯೆಹೋಷಬಾಟಳು ಅಹಜ್ಯನ ಮಗನಾದ ಯೊವಾಷನನ್ನು ತ-
ಕ್ಕೊಂಡು, ಕೊಂದು ಹಾಕಲ್ಪಟ್ಟ ಅರಸನ ಮಕ್ಕಳ ಮಧ್ಯದಿಂದ
ಅವನನ್ನು ಕದ್ದು ಕೊಂಡು, ಅವನನ್ನೂ ಅವನ ದಾದಿಯನ್ನೂ
ಮಂಚಗಳ ಮನೆಯಲ್ಲಿ ಇಟ್ಟಳು. ಹೀಗೆಯೇ ಅರಸನಾದ ಯೆ-
ಹೋರಮನ ಕುಮಾರ್ತೆಯಾಗಿರುವ ಯಾಜಕನಾದ ಯೆಹೋ-
ಯದನ ಹೆಂಡತಿಯಾಗಿರುವ ಅಹಜ್ಯನ ಸಹೋದರಿಯಾದ ಯೆ-
12 ಹೋಷಬಾಟಳು—ಅಟಲ್ಯಳು ಅವನನ್ನು ಕೊಲ್ಲದ ಹಾಗೆ—ಬ-
ಚ್ಚಿಟ್ಟಳು. ಹೀಗೆಯೇ ಇವನು ಅವರ ಸಂಗತ ದೇವರ ಮನೆ-
ಯಲ್ಲಿ ಆರು ವರುಷ ಬಚ್ಚಿಟ್ಟು ಕೊಂಡಿದ್ದನು. ಆದರೆ ಅಟಲ್ಯ-
ಳು ದೇಶದ ಮೇಲೆ ಆಳುತ್ತಿದ್ದಳು.

## ೨೩. ಸಂಧಿ.

೧ ಆದರೆ ಏಳನೇ ವರುಷದಲ್ಲಿ ಯೆಹೋಯದನು ತನ್ನನ್ನು ಬ-
ಲಪಡಿಸಿಕೊಂಡು, ನೂರಕ್ಕೆ ಅಧಿಪತಿಗಳಾಗಿರುವ ಯೆರೊಹಾ-
ಮನ ಮಗನಾದ ಅಜರ್ಯನನ್ನೂ, ಯೆಹೊಹನಾನನ ಮಗ-
ನಾದ ಇಷ್ಮಯೇಲನನ್ನೂ, ಬಚೇದನ ಮಗನಾದ ಅಜರ್ಯನ-
ನ್ನೂ, ಅಡಾಯನ ಮಗನಾದ ಮಸೇಯನನ್ನೂ, ಜಿಕ್ರಿಯ ಮ-
ಗನಾದ ಎಲಿಷಫಾಟನನ್ನೂ ಕರಕೊಂಡು, ಅವರ ಸಂಗತ ಒಡಂ-
2 ಬಡಿಕೆ ಮಾಡಿದನು. ಮತ್ತು ಇವರು ಯೆಹೂದವನ್ನು ಸಂಚರಿ-
ಸಿ, ಯೆಹೂದದ ಸಮಸ್ತ ಪಟ್ಟಣಗಳಿಂದ ಲೇವ್ಯರನ್ನೂ, ಇಸ್ರ-
ಯೇಲಿನ ಶ್ರೀಮಂತರಾದ ಪಿತೃಗಳನ್ನೂ ಕೂಡಿಸಿ ಕೊಂಡು, ಯೆ-
3 ರೂಸಲೇಮಿಗೆ ಬಂದರು. ಆಗ ಕೂಟದವರೆಲ್ಲರು ದೇವರ ಮನೆ-
ಯಲ್ಲಿ ಅರಸನ ಸಂಗತ ಒಡಂಬಡಿಕೆ ಮಾಡಿದರು. ಮತ್ತು ಅವ-
ರಿಗೆ ಹೇಳಿದ್ದೇನಂದರೆ—ಇಗೋ, ದಾವೀದನ ಕುಮಾರರನ್ನು
ಕುರಿತು ಕರ್ತನು ಹೇಳಿದ ಹಾಗೆ, ಅರಸನ ಕುಮಾರನು ಆಳ್ಳುವ-
4 ನು. ನೀವು ಮಾಡ ಬೇಕಾದ ಕಾರ್ಯವೇನಂದರೆ—ಸಬ್ಬತಿನಲ್ಲಿ
ಪ್ರವೇಶಿಸುವ ಯಾಜಕರೂ ಲೇವ್ಯರೂ ಆದ ನಿಮ್ಮಲ್ಲಿರುವ
ಮೂರನೇ ಪಾಲು ದ್ವಾರಪಾಲಕರಾಗಿರ ಬೇಕು. ಮೂರನೇ
ಪಾಲು ಅರಸನ ಬಳಿಯಲ್ಲಿಯೂ, ಇನ್ನೊಂದು ಮೂರನೇ ಪಾ-
ಲು ಅಸ್ತಿವಾರದ ಬಾಗಲ ಬಳಿಯಲ್ಲಿಯೂ ಸಮಸ್ತ ಜನರೂ ಕ-
5 ರ್ತನ ಮನೆಯ ಅಂಗಳಗಳಲ್ಲಿಯೂ ಇರಬೇಕು. ಆದರೆ ಯಾ-
ಜಕರೂ ಲೇವ್ಯರಲ್ಲಿ ಸೇವೆ ಮಾಡುವವರೂ ಅಲ್ಲದೆ, ಮತ್ತ್ಯಾ-
ರೂ ಕರ್ತನ ಮನೆಯಲ್ಲಿ ಪ್ರವೇಶಿಸ ಕೂಡದು. ಅವರು ಪರಿ-
ಶುದ್ಧರಾದದರಿಂದ, ಒಳಗೆ ಪ್ರವೇಶಿಸಲಿ. ಆದರೆ ಸಮಸ್ತ ಜನರೂ
6 ಕರ್ತನ ಕಾವಲಿಯನ್ನು ಕಾಯಲಿ. ಇದಲ್ಲದೆ ಲೇವ್ಯರು ಪ್ರತಿ
ಮನುಷ್ಯನು ತನ್ನ ಕೈಯಲ್ಲಿ ಆಯುಧಗಳನ್ನು ಹಿಡು ಕೊಂಡು,
ಅರಸನ ಸುತ್ತಲೂ ಇರಬೇಕು. ಇವರ ಹೊರ್ತು ಯಾವನಾದ
ರೂ ಮನೆಯಲ್ಲಿ ಬಂದರೆ, ಅವನು ಕೊಲ್ಲಲ್ಪಡಲಿ. ಆದರೆ ಅರ-
ಸನು ಒಳಗೆ ಬರುವಾಗಲೂ ಹೊರಗೆ ಹೋಗುವಾಗಲೂ ನೀವು
ಅವನ ಸಂಗತ ಇರ್ರಿ.

7 ಹೀಗೆಯೇ ಲೇವ್ಯರೂ, ಸಮಸ್ತ ಯೆಹೂದದವರೂ ಯಾ-
ಜಕನಾದ ಯೆಹೋಯದನು ಆಜ್ಞಾಪಿಸಿದ ಎಲ್ಲಾದರ ಪ್ರಕಾರ
ಮಾಡಿ, ಪ್ರತಿ ಮನುಷ್ಯನು ಸಬ್ಬತಿನಲ್ಲಿ ಒಳಗೆ ಬರ ಬೇಕಾದ
ತನ್ನ ಮನುಷ್ಯರನ್ನೂ ಸಬ್ಬತಿನಲ್ಲಿ ಹೊರಟು ಹೋಗ ಬೇಕಾ-
ದವರನ್ನೂ ತೆಗೆದು ಕೊಂಡನು. ಯಾಕಂದರೆ ಯಾಜಕನಾದ
8 ಯೆಹೋಯದನು ಬಂತುಗಳನ್ನು ತಪ್ಪಿಸಲಿಲ್ಲ. ಇದಲ್ಲದೆ ಯಾ-
ಜಕನಾದ ಯೆಹೋಯದನು ದೇವರ ಮನೆಯಲ್ಲಿದ್ದ ಅರಸನಾದ
ದಾವೀದನ ಈಟಿಗಳನ್ನೂ, ಗುರಾಣಿಗಳನ್ನೂ, ಡಾಲುಗಳನ್ನೂ
10 ನೂರಕ್ಕೆ ಅಧಿಪತಿಗಳಾದವರಿಗೆ ಕೊಟ್ಟು, ಅರಸನ ಸುತ್ತಲೂ
ಇರುವದಕ್ಕೆ, ಬಲಿಪೀಠಕ್ಕೂ ಮನೆಗೂ ಎದುರಾಗಿ ಮನೆಯ ಬಲ
ಪಾರ್ಶ್ವ ಮೊದಲು ಗೊಂಡು ಮನೆಯ ಎಡಪಾರ್ಶ್ವದ ಮಟ್ಟಿ-
ಗೂ, ಪ್ರತಿ ಮನುಷ್ಯನು ತನ್ನ ಕೈಯಲ್ಲಿ ತನ್ನ ಆಯುಧ ಹಿಡಿ-
11 ದವರಾಗಿ, ಸಮಸ್ತ ಜನರನ್ನೂ ಇರಿಸಿದನು. ಆಗ ಅವರು ಅರ

ಸನ ಮಗನನ್ನು ಹೊರಕ್ಕೆ ಕರತಂದು, ಅವನ ತಲೆಯ ಮೇಲೆ
ಕಿರೀಟವನ್ನಿಟ್ಟು, ಸಾಕ್ಷಿಯನ್ನು ಕೊಟ್ಟು, ಅವನನ್ನು ಅರಸನಾ
ಗ ಮಾಡಿದರು. ಮತ್ತು ಯೆಹೋಯದನೂ ಅವನ ಮಕ್ಕಳೂ
ಅವನನ್ನು ಅಭಿಷೇಕಿಸಿ, ಅರಸನು ಬಾಳಿ, ಅಂದರು.

೧೨ ಆದರೆ ಓಸುತ್ತಾ, ಅರಸನನ್ನು ಸ್ತುತಿಸುತ್ತಾ ಇದ್ದ ಜನರ
ಶಬ್ದವನ್ನು ಅಟ್ಲಯ್ಯಳು ಕೇಳಿದಾಗ, ಅವಳು ಕರ್ತನ ಮನೆಯಲ್ಲಿ
೧೩ ಜನರ ಬಳಿಗೆ ಬಂದು, ನೋಡಿದಳು. ಮತ್ತು, ಇಗೋ, ಅರಸನು
ಪ್ರವೇಶಿಸುವ ಸ್ಥಳದಲ್ಲಿ ತನ್ನ ಸ್ತಂಭದ ಬಳಿಯ ನಿಂತಿದ್ದನು. ಪ್ರ
ಧಾನರೂ ತುತೂರಿ ಹಿಡಿಯುವವರೂ ಅರಸನ ಬಳಿಯಲ್ಲಿ ಇ
ದ್ದರು. ಇದಲ್ಲದೆ ದೇಶದ ಜನರೆಲ್ಲರು ಸಂತೋಷ ಪಟ್ಟು, ತು
ತೂರಿಗಳನ್ನು ಊದಿದರು. ಹಾಗೆಯೇ ಹಾಡುಗಾರರು ಗೀತವಾ
ದ್ಯಗಳನ್ನು ಹಿಡಿದು, ಸ್ತುತಿಸ ಬೋಧಿಸುವವರೂ ಇದ್ದರು. ಆಗ
ಅಟ್ಲಯ್ಯಳು ತನ್ನ ವಸ್ತ್ರಗಳನ್ನು ಹರುಕೊಂಡು, ಬಳಸಂಚು, ಬ
೧೪ ಳಸಂಚು ಎಂದು ಕೂಗಿದಳು. ಆಗ ಯಾಜಕನಾದ ಯೆಹೋ
ಯದನು ಸೈನ್ಯದ ಮೇಲೆ ಇರುವ ನೂರಕ್ಕೆ ಅಧಿಪತಿಗಳನ್ನು
ಹೊರಗೆ ಕರತಂದು, ಅವರಿಗೆ, ಅವಳನ್ನು ಸಾಲುಗಳ ಹೊರಗೆ
ಹೊರಡಿಸಿರಿ, ಅವಳನ್ನು ಹಿಂಬಾಲಿಸುವವರನ್ನು ಕತ್ತಿಯಿಂದ
ಕೊಂದು ಹಾಕಿರಿ, ಅಂದನು. ಯಾಕಂದರೆ ಕರ್ತನ ಮನೆಯಲ್ಲಿ
೧೫ ಅವಳನ್ನು ಕೊಲ್ಲ ಬೇಡಿರಿ ಎಂದು, ಯಾಜಕನು ಹೇಳಿದನು.
ಹಾಗೆಯೇ ಅವರು ಅವಳ ಮೇಲೆ ಕೈ ಹಾಕಿದರು. ಅವಳು ಅ
ರಸನ ಮನೆಯ ಬಳಿಯಲ್ಲಿ ಕುದುರೆ ಬಾಗಲ ಪ್ರವೇಶದಲ್ಲಿ ಬಂದಾಗ,
ಅಲ್ಲಿ ಅವಳನ್ನು ಕೊಂದು ಹಾಕಿದರು.

೧೬ ಆಗ ಅವರು ಕರ್ತನ ಜನರಾಗಿರುವ ಹಾಗೆ, ಯೆಹೋಯದ
ನು ತನಗೂ, ಸಮಸ್ತ ಜನರಿಗೂ, ಅರಸನಿಗೂ ಒಡಂಬಡಿಕೆ ಮಾ
೧೭ ಡಿದನು. ಮತ್ತು ಸಮಸ್ತ ಜನರು ಬಾಳಿನ ಮನೆಗೆ ಹೋಗಿ, ಅ
ದನ್ನು ಕೆಡವಿ ಹಾಕಿ, ಅದರ ಬಲಿಪೀಠಗಳನ್ನೂ ಅದರ ವಿಗ್ರಹಗ
ಳನ್ನೂ ಒಡೆದು ಬಿಟ್ಟು, ಬಾಳಿನ ಯಾಜಕನಾದ ಮತ್ತಾನನನ್ನು
೧೮ ಬಲಿಪೀಠಗಳ ಮುಂದೆ ಕೊಂದು ಹಾಕಿದರು. ಇದಲ್ಲದೆ ಯೆಹೋ
ಯದನು ಕರ್ತನ ಮನೆಯ ಪರಿಚಾರಕರನ್ನು ನೇಮಿಸಿದನು.
ಮೋಶೆಯ ನ್ಯಾಯಪ್ರಮಾಣದಲ್ಲಿ ಬರೆದಿರುವ ಹಾಗೆಯೂ,
ಸಂತೋಷದಿಂದಲೂ ಸಂಗೀತದಿಂದಲೂ ದಾವೀದನಿಂದ ನೇಮಿಸ
ಲ್ಪಟ್ಟ ಹಾಗೆಯೂ, ದಾವೀದನು ಕರ್ತನ ಹೋಮಗಳನ್ನು ಅ
ರ್ಪಿಸುವದಕ್ಕೆ ಕರ್ತನ ಮನೆಯಲ್ಲಿ ವಿಭಾಗಿಸಿದ ಲೇವ್ಯರಾದ
೧೯ ಯಾಜಕರಿಂದ ಅವರನ್ನು ನೇಮಿಸಿದನು. ಇದಲ್ಲದೆ ಕರ್ತನ ಮ
ನೆಯಲ್ಲಿ ಯಾವ ಅಪವಿತ್ರವಾದದ್ದೂ ಒಳಗೆ ಪ್ರವೇಶಿಸದ ಹಾಗೆ
೨೦ ಬಾಗಲುಗಳ ಬಳಿಯಲ್ಲಿ ದ್ವಾರಪಾಲಕರನ್ನು ಇರಿಸಿದನು. ಮ
ತ್ತು ಅವನು ನೂರಕ್ಕೆ ಪ್ರಧಾನರನ್ನೂ, ಶ್ರೇಷ್ಠರನ್ನೂ, ಜನರ
ಅಧಿಪತಿಗಳನ್ನೂ ದೇಶದ ಜನರೆಲ್ಲರನ್ನೂ ಕರಕೊಂಡು, ಅರಸ
ನನ್ನು ಕರ್ತನ ಮನೆಯಿಂದ ಕರತಂದನು. ಅವರು ಎತ್ತರವಾದ
ಬಾಗಲಿನಿಂದ ಅರಸನ ಮನೆಗೆ ಬಂದು, ಅರಸನನ್ನು ರಾಜ್ಯದ ಸಿಂ
೨೧ ಹಾಸನದ ಮೇಲೆ ಕೂಡ್ರಿಸಿದರು. ಅವರು ಅಟ್ಲಯ್ಯಳನ್ನು ಕತ್ತಿ
ಯಿಂದ ಕೊಂದ ತರುವಾಯ ದೇಶದ ಜನರೆಲ್ಲರೂ ಸಂತೋಷ
ಪಟ್ಟರು; ಪಟ್ಟಣವು ಶಾಂತವಾಯಿತು.

## ೨೪. ಸಂಧಿ

೧ ಯೊವಾಷನು ಆಳ ಆರಂಭಿಸಿದಾಗ ಏಳು ವರುಷದವನಾಗಿ
ದ್ದು, ಯೆರೂಸಲೇಮಿನಲ್ಲಿ ನಾಲ್ವತ್ತು ವರುಷ ಆಳಿದನು. ಅವನ
೨ ತಾಯಿ ಬೇರ್ಷೆಬ ಊರಿನವಳಾದ ಜಿಬ್ಯಾಳೆಂಬವಳು. ಯೊವಾ
ಷನು ಯಾಜಕನಾದ ಯೆಹೋಯದನ ಸಮಸ್ತ ದಿವಸಗಳಲ್ಲಿ ಕ
3 ರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು ಮಾಡಿದನು. ಮತ್ತು
ಯೆಹೋಯದನು ಅವನಿಗೋಸ್ಕರ ಇಬ್ಬರು ಹೆಂಡತಿಯರನ್ನು
ತಕ್ಕೊಂಡನು. ಅವನು ಕುಮಾರರನ್ನೂ ಕುಮಾರ್ತೆಗಳನ್ನೂ
ಪಡೆದನು.

೪ ಇದರ ತರುವಾಯ ಏನಾಯಿತಂದರೆ, ಯೊವಾಷನು ಕರ್ತ
ನ ಮನೆಯನ್ನು ನೂತನ ಪಡಿಸ ಮನಸ್ಸಾಗಿದ್ದನು. ಆದದರಿಂದ
೫ ಅವನು ಯಾಜಕರನ್ನೂ ಲೇವ್ಯರನ್ನೂ ಕೂಡಿಸಿ ಕೊಂಡು, ಅ
ವರಿಗೆ ಹೇಳಿದನು—ನೀವು ಯೆಹೂದ ಪಟ್ಟಣಗಳಿಗೆ ಹೊರಟು ಹೋ
ಗಿ, ವರುಷ ವರುಷಕ್ಕೆ ನಿಮ್ಮ ದೇವರ ಮನೆಯನ್ನು ಭದ್ರಮಾ
ಡುವದಕ್ಕೆ ಸಮಸ್ತ ಇಸ್ರಾಯೇಲ್ಯರಿಂದ ಕೊಟ್ಟುವನ್ನು ಕೂಡಿಸಿರಿ.
ಮತ್ತು ಕೆಲಸವನ್ನು ಶೀಘ್ರವಾಗಿ ನಡಿಸಿರಿ. ಆದರೆ ಲೇವ್ಯರು ಜಾ
ಗ್ರತೆಯಾಗಿ ಮಾಡದೆ ಇದ್ದರು.

೬ ಆಗ ಅರಸನು ಶ್ರೇಷ್ಠನಾದ ಯೆಹೋಯದನನ್ನು ಕರೇಕ
ಳುಹಿಸಿ, ಅವನಿಗೆ ಹೇಳಿದನು—ಕರ್ತನ ಸೇವಕನಾದ ಮೋಶೆ
ಯೂ ಇಸ್ರಾಯೇಲಿನ ಕೂಟವೂ ಸಾಕ್ಷಿಯ ಗುಡಾರದ ನಿಮಿ
ತ್ತ ಆಜ್ಞಾಪಿಸಿದ ಜಮೆಯನ್ನು ಯೆಹೂದದಿಂದಲೂ ಯೆರೂಸ
ಲೇಮಿನಿಂದಲೂ ಬರ ಮಾಡ, ನೀನು ಲೇವ್ಯರನ್ನು ಯಾಕೆ ವಿ
೭ ಚಾರಿಸಲಿಲ್ಲ! ಯಾಕಂದರೆ ಆ ದುರ್ವ್ವಸ್ತ್ರೀಯಳಾದ ಅಟ್ಲಯ್ಯಳ
ಮಕ್ಕಳು ಕರ್ತನ ಮನೆಯನ್ನು ಒಡೆದು ಬಿಟ್ಟು, ಕರ್ತನ ಮನೆಗೆ
ಪರಿಶುದ್ಧ ಮಾಡಲ್ಪಟ್ಟಿದ್ದುಗಳನ್ನೆಲ್ಲಾ ಬಾಳನಿಗೆ ಕೊಟ್ಟರು.

೮ ಮತ್ತು ಅರಸನು ಹೇಳಿದ್ದರಿಂದ, ಅವರು ಬಂದು ಪೆಟ್ಟಿಗೆಯ
ನ್ನು ಮಾಡಿ, ಕರ್ತನ ಮನೆಯ ಬಾಗಲ ಹೊರಗೆ ಇಟ್ಟರು. ಮತ್ತು
೯ ದೇವರ ಸೇವಕನಾದ ಮೋಶೆಯು ಅರಣ್ಯದಲ್ಲಿ ಇಸ್ರಾಯೇಲರಿಗೆ
ಆಜ್ಞಾಪಿಸಿದ ಜಮೆಯನ್ನು ಕರ್ತನಿಗೆ ತರಬೇಕೆಂದು, ಯೆಹೂದ
ದಲ್ಲೆಲ್ಲಿಯೂ ಯೆರೂಸಲೇಮಿನಲ್ಲೆಲ್ಲಿಯೂ ಪ್ರಕಟಮಾಡಿದರು.
೧೦ ಆಗ ಪ್ರಧಾನರೆಲ್ಲರೂ ಜನರೆಲ್ಲರೂ ಸಂತೋಷಪಟ್ಟು, ತಕ್ಕೊಂ
ಡು ಬಂದು, ಶೀಘ್ರಿಸುವ ಪರ್ಯಂತರ ಪೆಟ್ಟಿಗೆಯೊಳಗೆ ಹಾಕಿದ
ರು. ಮತ್ತು ಏನಾಯಿತಂದರೆ ಪೆಟ್ಟಿಗೆಯು ಲೇವ್ಯರ ಕೈಯಿಂ
೧೧ ದ ಅರಸನ ಚಾವಡಿಗೆ ತರಲ್ಪಟ್ಟಾಗ, ಅದರಲ್ಲಿ ಬಹಳ ಕೊಟ್ಟು
ಕಾಣಿಸಿದರೆ, ಅರಸನ ರಾಯಸದವನೂ ಪ್ರಧಾನ ಯಾಜಕನ
ಪರಿಚಾರಕನೂ ಬಂದು, ಪೆಟ್ಟಿಗೆಯನ್ನು ಬರಿದು ಮಾಡಿ, ತಕ್ಕೊಂ
ಡು, ತಿರಿಗಿ ಅದರ ಸ್ಥಳಕ್ಕೆ ಪೈದಿಟ್ಟರು. ಹೀಗೆಯೇ ಅವರು ದಿ
೧೨ ನ ದಿನ ಮಾಡಿ, ಕೊಟ್ಟುವನ್ನು ಬಹಳ ಜಮೆ ಮಾಡಿದರು. ಆಗ
ಅರಸನೂ ಯೆಹೋಯದನೂ ಅದನ್ನು ಕರ್ತನ ಮನೆಯ ಸೇ
ವೆಯ ಕಾರ್ಯವನ್ನು ಮಾಡುವವರಿಗೆ ಕೊಟ್ಟು, ಅವರಿಂದ
ಮಾಡಿಸಿದರು. ಕರ್ತನ ಮನೆಯನ್ನು ನೂತನ ಪಡಿಸುವ ನಿಮಿ
ತ್ತ, ಕಾಸಾಟಿಗರನ್ನೂ ಬಡಿಗಿಯವರನ್ನೂ ಕೂಲಿಗೆ ಕರಕೊಂ
ಡರು. ಮತ್ತು ಕರ್ತನ ಮನೆಯನ್ನು ಭದ್ರ ಮಾಡುವ ನಿಮಿತ್ತ
ಕಬ್ಬಿಣ ಹಿತ್ತಾಳೆ ಕೆಲಸ ಮಾಡುವವರನ್ನು ಕೂಲಿಗೆ ಕರಕೊಂ
೧೩ ಡರು. ಹೀಗೆಯೇ ಕೆಲಸದವರು ಕೆಲಸವನ್ನು ನಡಿಸಿದ್ದರಿಂದ, ಕೆಲ
ಸವು ಅವರ ಕೈಯಿಂದ ತೀರಿಸಲ್ಪಟ್ಟಿತು. ಮತ್ತು ಅವರು ಕರ್ತ
ನ ಮನೆಯನ್ನು ಇದ್ದ ಸ್ಥಿತಿಯಾಗಿ ನಿಲ್ಲಿಸಿ, ಅದನ್ನು ಬಲ ಪಡಿಸಿ



೧೪ ದರು. ಅವರು ತೀರಿಸಿದ ಮೇಲೆ ಮಿಕ್ಕ ಕೊಟ್ಟುವನ್ನು ಅರಸನ
ಮುಂದೆಯೂ ಯೆಹೋಯದನ ಮುಂದೆಯೂ ತಂದರು. ಅ
ದರಿಂದ ಕರ್ತನ ಮನೆಗೋಸ್ಕರ ಬೆಳ್ಳಿ ಭಂಗಾರದ ಪಾತ್ರೆಗಳಾದ
ಸೇವೆಯ ಪಾತ್ರೆಗಳೂ ಅರ್ಪಣೆಯ ಪಾತ್ರೆಗಳೂ ಜಾಟುಗ
ಳೂ ಮಾಡಲ್ಪಟ್ಟವು. ಮತ್ತು ಯೆಹೋಯದನ ಸಮಸ್ತ ದಿವ
ಸಗಳಲ್ಲಿ ಯಾವಾಗಲೂ ಕರ್ತನ ಮನೆಯಲ್ಲಿ ಹೋಮಗಳನ್ನು
ಅರ್ಪಿಸಿದರು.

೧೫ ಆದರೆ ಯೆಹೋಯದನು ಮುದುಕನಾಗಿ, ದಿವಸಗಳು ತುಂಬಿ,
ಸತ್ತು ಹೋದನು. ಅವನು ಸಾಯುವಾಗ, ನೂರ ಮೂವತ್ತು ವರು
೧೬ ಷಗಳುಳ್ಳವನಾಗಿದ್ದನು ಅವನು ದೇವರಿಗೋಸ್ಕರವಾಗಿಯೂ
ಅತನ ಮನೆಗೋಸ್ಕರವಾಗಿಯೂ ಇಸ್ರಾಯೇಲಿನಲ್ಲಿ ಒಳ್ಳೇದನ್ನು
ಮಾಡಿದ್ದರಿಂದ, ಅವರು ಅವನನ್ನು ದಾವೀದನ ಪಟ್ಟದಲ್ಲಿ ಅರಸು
ಗಳ ಬಳಿಯಲ್ಲಿ ಹೂಣಿಟ್ಟರು.

೧೭ ಆದರೆ ಯೆಹೋಯದನು ಸತ್ತ ತರುವಾಯ ಯೆಹೂದದ ಪ್ರ
ಧಾನರು ಬಂದು, ಅರಸನಿಗೆ ಅಡ್ಡಬಿದ್ದರು. ಆಗ ಅರಸನು ಅವರ
೧೮ ಮಾತು ಕೇಳಿದನು. ಮತ್ತು ಅವರು ತನ್ನು ಪಿತೃಗಳ ದೇವರಾದ
ಕರ್ತನ ಮನೆಯನ್ನು ಬಿಟ್ಟು, ಶೋಪುಗಳನ್ನೂ ವಿಗ್ರಹಗಳನ್ನೂ
ಸೇವಿಸಿದರು. ಆದಕಾರಣ ಅವರ ಈ ಅಪರಾಧದ ನಿಮಿತ್ತ ಯೆ
೧೯ ಹೂದ ಯೆರೂಸಲೇಮಿನ ಮೇಲೆ ಕೋಪ ಬಂತು. ಆಗ ಕರ್ತನು
ತನ್ನ ಕಡೆಗೆ ಅವರನ್ನು ತಿರುಗಿಸುವದಕ್ಕೆ ಪ್ರವಾದಿಗಳನ್ನು ಅ
ವರ ಬಳಿಗೆ ಕಳುಹಿಸಿದನು; ಇವರು ಅವರಿಗೆ ಸಾಕ್ಷಿಯಾಗಿ ಹೇ
ಳಿದರು; ಆದರೆ ಅವರು ಕಿವಿ ಕೊಡದೆ ಹೋದರು.

೨೦ ಆಗ ದೇವರ ಆತ್ಮವು ಯಾಜಕನಾಗಿರುವ ಯೆಹೋಯದ
ನ ಮಗನಾದ ಜೆಕರ್ಯನ ಮೇಲೆ ಬಂತು. ಅವನು ಜನರೊಳ
ಗೆ ಎತ್ತರವಾದ ಸ್ಥಳದಲ್ಲಿ ನಿಂತು, ಅವರಿಗೆ ಹೇಳಿದನು—ನೀವು ಸಿ
ದ್ಧಿ ಹೊಂದ ಕೂಡದ ಹಾಗೆ, ಕರ್ತನ ಆಜ್ಞೆಗಳನ್ನು ಮೀರುವ
ದೇನು? ನೀವು ಕರ್ತನನ್ನು ಬಿಟ್ಟು ಬಿಟ್ಟಿದ್ದರಿಂದ, ಅವನು ನಿಮ್ಮ
೨೧ ನ್ನು ಬಿಟ್ಟು ಬಿಟ್ಟಿದ್ದಾನೆಂದು, ಕರ್ತನು ಹೇಳುತ್ತಾನೆ. ಆದದರಿಂದ
ಅವರು ಅವನಿಗೆ ವಿರೋಧವಾಗಿ ಒಳಸಂಚು ಮಾಡಿ, ಕರ್ತನ
ಮನೆಯ ಅಂಗಳದಲ್ಲಿ ಅರಸನ ಅಪ್ಪಣೆಯಿಂದ ಅವನನ್ನು ಕಲ್ಲೆ
೨೨ ಸೆದರು. ಹೀಗೆಯೇ ಅರಸನಾದ ಯೊವಾಷನು ಇವನ ತಂದೆ
ಯಾದ ಯೆಹೋಯದನು ತನಗೆ ತೋರಿಸಿದ ಕೃಪೆಯನ್ನು
ಜ್ಞಾಪಕ ಮಾಡದೆ, ಅವನ ಮಗನನ್ನು ಕೊಂದು ಹಾಕಿದನು. ಇ
ವನು ಸಾಯುವಾಗ, ಕರ್ತನು ನೋಡಿ ವಿಚಾರಿಸಲೆಂದು, ಹೇ
ಳಿದನು.

೨೩ ವರುಷಾಂತ್ಯದಲ್ಲಿ ಏನಾಯಿತಂದರೆ, ಅರಾಮಿನ ಸೈನ್ಯದವರು
ಅವನಿಗೆ ವಿರೋಧವಾಗಿ ಹೊರಟು, ಯೆಹೂದ ಯೆರೂಸಲೇಮಿ
ಗೆ ಬಂದು, ಜನರ ಪ್ರಧಾನರನ್ನು ಅವಕೊಳ್ಳಗಿಂದ ನಾಶನ ಮಾಡಿ,
ಅವರಿಂದ ತೆಗೆದು ಕೊಂಡ ಕೊಳ್ಳೆಯನ್ನೆಲ್ಲಾ ದಮಸ್ಕದ ಅರ
೨೪ ಸನಿಗೆ ಕಳುಹಿಸಿದರು. ಯಾಕಂದರೆ ಅವರು ತಮ್ಮ ಪಿತೃಗಳ
ದೇವರಾದ ಕರ್ತನನ್ನು ಬಿಟ್ಟು ಬಿಟ್ಟಿದ್ದರಿಂದ, ಅರಾಮ್ಯರು ಅಲ್ಪ
ಜನವಾದ ಸೈನ್ಯದ ಸಂಗಡ ಬಂದಾಗ, ಕರ್ತನು ಬಹು ಅಧಿಕವಾ
ದ ಸೈನ್ಯವನ್ನು ಅವರ ಕೈಯಲ್ಲಿ ಒಪ್ಪಿಸಿದನು. ಹೀಗೆಯೇ ಅವ
ರು ಯೊವಾಷನಿಗೆ ನ್ಯಾಯ ತೀರ್ಪಿಕೆ ಮಾಡಿ, ಅವನು ಬಹು
ಕೋಗದಲ್ಲಿ ಬಿದ್ದಿರುವಾಗ, ಅವನನ್ನು ಬಿಟ್ಟು ಬಿಟ್ಟರು.

೨೫ ಇವರು ಅವನನ್ನು ಬಿಟ್ಟು ತರುವಾಯ ಯಾಜಕನಾದ ಯೆ
ಹೋಯದನ ಮಕ್ಕಳ ರಕ್ತಾಪರಾಧದ ನಿಮಿತ್ತವಾಗಿ ಅವನ ಸ್ವಂ
ತ ಸೇವಕರು ಅವನಿಗೆ ವಿರೋಧವಾಗಿ ಒಳಸಂಚು ಮಾಡಿ, ಅವ
ನು ಸಾಯುವ ಹಾಗೆ, ಅವನ ಮಂಚದ ಮೇಲೆ ಅವನನ್ನು ಕೊಂ
ದು ಹಾಕಿದರು. ಮತ್ತು ಅವರು ಅವನನ್ನು ದಾವೀದನ ಪಟ್ಟದಲ್ಲಿ
ಹೂಣಿಟ್ಟರು; ಆದರೆ ಅರಸುಗಳ ಸಮಾಧಿಗಳ ಬಳಿಯಲ್ಲಿ
೨೬ ಅವನನ್ನು ಹೂಣಿಡಲಿಲ್ಲ. ಅವನಿಗೆ ವಿರೋಧವಾಗಿ ಒಳಸಂ
ಚು ಮಾಡಿದವರ್ಯಾರಂದರೆ, ಅಮ್ಮೋನ್ಯಳಾಗಿರುವ ಶಿಮಾಟಳ
ಮಗನಾದ ಜಬಾದನು, ಮೋವಾಬ್ಯಳಾಗಿರುವ ಶಿಮ್ರಿತಳ ಮ
೨೭ ಗನಾದ ಯೆಹೋಜಬಾದನು. ಆದರೆ ಅವನ ಕುಮಾರರನ್ನು
ಕುರಿತೂ, ಅವನ ಮೇಲೆ ಹಾಕಿದ ಭಾರಗಳನ್ನು ಕುರಿತೂ ದೇವ
ರ ಮನೆಯ ಸ್ಥಿರ ಪಡಿಸುವದನ್ನು ಕುರಿತೂ, ಇಗೋ, ಅವು ಅ
ರಸುಗಳ ವರ್ತಮಾನದ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ. ಮ
ತ್ತು ಅವನ ಮಗನಾದ ಅಮಚ್ಯೇಯನು ಅವನಿಗೆ ಬದಲಾಗಿ ಅ
ಳಿದನು.

## ೨೫. ಸಂಧಿ.

೧ ಅಮಚ್ಯೇಯನು ಆಳ ಆರಂಭಿಸಿದಾಗ, ಇಪ್ಪತ್ತೈದು ವರುಷ
ದವನಾಗಿದ್ದು, ಯೆರೂಸಲೇಮಿನಲ್ಲಿ ಇಪ್ಪತ್ತೊಂಭತ್ತು ವರುಷ
ಆಳಿದನು. ಅವನತಾಯಿಯ ಹೆಸರು ಯೆಹೊದ್ದಾನಳು; ಯೆ
ರೂಸಲೇಮಿನವಳಾಗಿದ್ದಳು. ಅವನು ಕರ್ತನ ಸಮುಖದಲ್ಲಿ ನೆಟ್ಟ
೨ ನೆಯಾದದ್ದನ್ನು ಮಾಡಿದನು; ಆದರೆ ಪೂರ್ಣ ಹೃದಯದಿಂದ
3 ಲ್ಲ. ರಾಜ್ಯವು ಅವನಿಗೆ ಸ್ಥಿರ ಮಾಡಲ್ಪಟ್ಟ ತರುವಾಯ ಅವನು
ಅರಸನಾದ ತನ್ನ ತಂದೆಯನ್ನು ಹೊಡೆದ ತನ್ನ ಸೇವಕರನ್ನು
೪ ಕೊಂದು ಹಾಕಿದನು. ಆದರೆ ತಂದೆಗಳು ಮಕ್ಕಳಿಗೋಸ್ಕರ ಸಾ
ಯುವದಿಲ್ಲ, ಮಕ್ಕಳು ತಂದೆಗಳಿಗೋಸ್ಕರ ಸಾಯುವದಿಲ್ಲ; ಪ್ರ
ತಿ ಮನುಷ್ಯನು ತನ್ನ ಪಾಪದಲ್ಲಿ ಸಾಯಿ ಬೇಕೆಂದು, ಕರ್ತ
ನು ಆಜ್ಞಾಪಿಸಿದ್ದು ಮೋಶೆಯ ನ್ಯಾಯಪ್ರಮಾಣದ ಪುಸ್ತಕದಲ್ಲಿ
ಬರೆಯಲ್ಪಟ್ಟ ಹಾಗೆ, ಅವನು ಅವರ ಮಕ್ಕಳನ್ನು ಕೊಲ್ಲಲಿಲ್ಲ.

೫ ಇದಲ್ಲದೆ ಅಮಚ್ಯೇಯನು ಯೆಹೂದದವರನ್ನು ಕೂಡಿಸಿ
ಕೊಂಡು, ಯೆಹೂದ ಬೆನ್ಯಾಮಿನ್ಯರೆಲ್ಲರಲ್ಲಿ ತಮ್ಮ ಪಿತೃಗಳ
ಮನೆಗಳ ಪ್ರಕಾರ, ಅವರನ್ನು ಸಹಸ್ರಗಳ ಮೇಲೆ ಅಧಿಪತಿಗ
ಳಾಗಿಯೂ ಶತಗಳ ಮೇಲೆ ಅಧಿಪತಿಗಳಾಗಿಯೂ ಮಾಡಿದನು.
ಮತ್ತು ಅವನು ಇಪ್ಪತ್ತು ವರುಷ ಮೊದಲುಗೊಂಡು ಹೆಚ್ಚಾದ
ಪ್ರಾಯವುಳ್ಳವರನ್ನು ಲೆಕ್ಕಿಸಿ, ಅದು ಕೊಂತಂಥ, ಯುದ್ಧಕ್ಕೆ
ಹೋಗ ತಕ್ಕಂಥ, ಈಟಿಯನ್ನೂ ಪೇಟ್ಯವನ್ನೂ ಹಿಡಿದು ಕೊಂಡಿ
ರುವ ಮೂರು ಲಕ್ಷ ಮಂದಿಯನ್ನು ಕಂಡನು.

೬ ಇದಲ್ಲದೆ ಇಸ್ರಾಯೇಲಿನವರಲ್ಲಿ ನೂರು ಬೆಳ್ಳಿ ತಲಂತುಗಳಿಂ
ದ ಪರಾಕ್ರಮಶಾಲಿಗಳಾದ ಒಂದು ಲಕ್ಷ ಮಂದಿಯನ್ನು ತೆಗೆದು
3 ಕೊಂಡನು. ಆಗ ದೇವರ ಮನುಷ್ಯನಾದ ಒಬ್ಬನು ಅವನ ಬ
ಳಿಗೆ ಬಂದು, ಅವನಿಗೆ ಹೇಳಿದ್ದೇನಂದರೆ ಅರಸನೇ, ಇಸ್ರಾಯೇಲಿನ
ಸೈನ್ಯವು ನಿನ್ನ ಸಂಗಡ ಹೋಗದೆ ಇರಲಿ; ಯಾಕಂದರೆ ಕರ್ತ
ನು ಇಸ್ರಾಯೇಲ್ಯಾದ ಎಫ್ರಯಿಮಾದ ಸಮಸ್ತ ಮಕ್ಕಳ ಸಂಗಡ
೮ ಇರುವದಿಲ್ಲ. ನೀನು ಹೋದರೆ, ಮಾಡು; ಯುದ್ಧಕ್ಕೆ ಬಲಗೊಳ್ಳು.
ದೇವರು ತತ್ರುವಿನ ಮುಂದೆ ನಿನ್ನನ್ನು ಬೀಳ ಮಾಡುವನು;

ಯಾಕಂದರೆ ಸಹಾಯ ಕೊಡುವದಕ್ಕೂ ಬೀಳಿಸಿ ಮಾಡುವದಕ್ಕೂ
೯ ದೇವರಿಗೆ ಶಕ್ತಿ ಉಂಟು. ಆಗ ಅಮಚೀಯನು ದೇವರ ಮನುಷ್ಯ-
ನಿಗೆ, ಅದಕೆ ಇಸ್ರಯೇಲಿನ ದಂಡಿಗೆ ನಾನು ಕೊಟ್ಟ ನೂರು ತಲಾಂ-
ತುಗಳಿಗೋಸ್ಕರ ಏನು ಮಾಡುವ! ಅಂದನು. ಅದಕ್ಕೆ ದೇವರ
ಮನುಷ್ಯನು, ಕರ್ತನು ಇದಕ್ಕಿಂತ ಅಧಿಕವಾಗಿ ನಿನಗೆ ಕೊಡ
೧೦ ಬಲ್ಲನು, ಅಂದನು. ಆಗ ಅಮಚೀಯನು ಎಫ್ರಯಿಮಿನಿಂದ ತನ್ನ
ಬಳಿಗೆ ಬಂದ ಸೈನಿಕರು ತಮ್ಮ ಸ್ಥಳಕ್ಕೆ ತಿರಿಗಿ ಹೋಗುವ ಹಾಗೆ,
ಅವರನ್ನು ಪ್ರತ್ಯೇಕಿಸಿದನು. ಅದಕಾರಣ ಅವರ ಕೋಪವು ಯೆ-
ಹೂದದ ಮೇಲೆ ಬಹಳವಾಗಿ ಉರಿಯಿತು. ಅವರು ಕೋಪದ
ಉರಿಯಿಂದ ತಮ್ಮ ಸ್ಥಳಕ್ಕೆ ತಿರುಗಿದರು.

೧೧ ಮತ್ತು ಅಮಚೀಯನು ತನ್ನನ್ನು ಬಲಪಡಿಸಿ, ತನ್ನ ಜನರ-
ನ್ನು ನಡಿಸಿ ಕೊಂಡು, ಉಪ್ಪಿನ ತಗ್ಗಿಗೆ ಹೋಗಿ, ಅಲ್ಲಿ ಸೇಯಿರಿನ
೧೨ ಮಕ್ಕಳ್ಳೊಳಗೆ ಹತ್ತು ಸಾವಿರ ಮಂದಿಯನ್ನು ಹೊಡೆದನು. ಬ-
ದುಕಿದ್ದ ಬೇರೆ ಹತ್ತು ಸಾವಿರ ಮಂದಿಯನ್ನು ಯೆಹೂದನ ಮಕ್ಕ-
ಳು ಸೆರೆಯಾಗಿ ಹೈದು, ಗುಡ್ಡದ ಶಿಖರಕ್ಕೆ ಅವರನ್ನು ಕರ ಕೊಂ-
ಡು ಹೋಗಿ ಗುಡ್ಡದ ಶಿಖರದಿಂದ ಅವರನ್ನು ದೊಬ್ಬಿದರು. ಅದದ-
ರಿಂದ ಅವರೆಲ್ಲರು ತುಂಡು ತುಂಡಾದರು.

೧೩ ಆದರೆ ಅವರು ತನ್ನ ಸಂಗಡ ಯುದ್ಧಕ್ಕೆ ಹೋಗದ ಹಾಗೆ,
ಅಮಚೀಯನು ಹಿಂದಕ್ಕೆ ಕಳುಹಿಸಿದ ಗುಂಪಿನವರು ಯೆಹೂದ-
ದ ಪಟ್ಟಣಗಳ ಮೇಲೆ ಬಿದ್ದು, ಸಮಾರ್ಯ ಮೊದಲ್ಗೊಂಡು ಬೇ-
ಥೊರೋನಿನ ಮಟ್ಟಿಗೂ ಮೂರು ಸಾವಿರ ಮಂದಿಯನ್ನು ಹೊ-
ಡೆದು ಬಿಟ್ಟು, ಬಹು ಕೊಳ್ಳೆಯನ್ನು ತೆಗೆದು ಕೊಂಡರು.

೧೪ ಅಮಚೀಯನು ಎದೋಮ್ಯರನ್ನು ಹೊಡೆದು, ತಿರಿಗಿ ಬಂದ
ತರುವಾಯ, ಏನಾಯಿತಂದರೆ, ತಾನು ಅವರ ದೇವರುಗಳನ್ನು ತ-
ಕ್ಕೊಂಡು ಬಂದು, ಅವು ತನಗೆ ದೇವರುಗಳಾಗಿರುವ ಹಾಗೆ ನಿಲ್ಲಿ-
ಸಿ ಕೊಂಡು, ಅವುಗಳಮುಂದೆ ಅಡ್ಡ ಬಿದ್ದು, ಅವುಗಳಿಗೆ ಧೂಪ
೧೫ ವನ್ನು ಸುಟ್ಟನು. ಆದಕಾರಣ ಕರ್ತನ ಕೋಪವು ಅಮಚೀಯ-
ನ ಮೇಲೆ ಹೊತ್ತಿತು; ಆತನು ಅವನ ಬಳಿಗೆ ಪ್ರವಾದಿಯನ್ನು
ಕಳುಹಿಸಿದನು. ಅವನು ಅವನಿಗೆ, ತಮ್ಮ ಜನರನ್ನು ನಿನ್ನ ಕೈಯಿಂ-
ದ ತಪ್ಪಿಸಲಾರದ ದೇವರುಗಳನ್ನು ನೀನು ಹುಡುಕುವದೇನು! ಅಂ-
೧೬ ದನು. ಅವನು ಅರಸನ ಸಂಗಡ ಮಾತಾಡುತ್ತಿರುವಾಗ, ಅರಸ-
ನು ಅವನಿಗೆ ಅಂದನು—ಅರಸನ ಯೋಚನೆ ಕರ್ತರಲ್ಲಿ ನೀನು
ಬಬ್ಬನಾಗಿದ್ದೀಯಾ! ಬಿಡು; ನೀನು ಯಾಕೆ ಹೊಡೆಯಲ್ಪಡ-
ಬೇಕು! ಆಗ ಪ್ರವಾದಿಯು—ನೀನು ನನ್ನ ಯೋಚನೆಯನ್ನು
ಕೇಳ್ಳದೆ ಇದನ್ನು ಮಾಡಿದ್ದರಿಂದ ದೇವರು ನಿನ್ನನ್ನು ನಾಶನ ಮಾ-
ಡ ಯೋಚಿಸಿದ್ದಾನೆಂದು, ನಾನು ಬಲ್ಲೆನು ಎಂಥೇಳಿ, ಬಿಟ್ಟನು.

೧೭ ಆಗ ಯೆಹೂದದ ಅರಸನಾದ ಅಮಚೀಯನು ಆಲೋಚ-
ನೆ ಕೇಳ್ಳಿ, ಇಸ್ರಯೇಲಿನ ಅರಸನಾದ ಯೇಹುವಿನ ಮಗನಾದ
ಯೆಹೊವಹಾಜನ ಮಗನಾದ ಯೊವಾಷನಿಗೆ—ನಾವು ಒಬ್ಬನು
ಬಬ್ಬನ ಮುಖವನ್ನು ನೋಡುವ ಬಾ, ಎಂಥೇಳಿ ಕಳುಹಿಸಿದನು.
೧೮ ಆದರೆ ಇಸ್ರಯೇಲಿನ ಅರಸನಾದ ಯೊವಾಷನು ಯೆಹೂದದ
ಅರಸನಾಗಿರುವ ಅಮಚೀಯನಿಗೆ ಹೇಳ್ಳಿ ಕಳುಹಿಸಿದ್ದೇನಂದರೆ—
ಲೆಬನೋನಿನಲ್ಲಿದ್ದ ಒಂದು ಮುಳ್ಳು ಗಿಡವು ಲೆಬನೋನಿನಲ್ಲಿರುವ
ದೇವದಾರಿಗೆ, ನೀನು ನನ್ನ ಮಗನಿಗೆ ಹೆಂಡತಿಯಾಗಿರ ನಿನ್ನ ಮ-
ಗಳನ್ನು ಕೊಡು, ಎಂಥೇಳ್ಳಿ ಕಳುಹಿಸಿತು. ಆದರೆ ಲೆಬನೋನಿನ
ಲ್ಲಿದ್ದ ಅಡವಿಯ ಮೃಗವು ಹಾದು ಹೋಗುತ್ತಿರುವಾಗ, ಆ ಮು-
೧೯ ಳ್ಳು ಗಿಡವನ್ನು ತುಳ್ಳಿಯಿತು. ಇಗೋ, ನಾನು ಎದೋಮ್ಯರ-
ನ್ನು ಹೊಡೆದಿದ್ದೇನೆಂದು ಹೇಳ್ಳಿ ಕೊಳ್ಳುತ್ತೀ; ಅದರಿಂದ ನಿನ್ನ
ಹೃದಯವು ನಿನ್ನನ್ನು ಏತ್ತರ ಮಾಡುತ್ತದೆ. ಮನೆಯಲ್ಲಿ ಕೂ-
ತಿರು. ನೀನೂ ನಿನ್ನ ಸಂಗಡ ಯೆಹೂದವೂ ಬಿದ್ದು ಹೋಗುವ
೨೦ ಹಾಗೆ ನಿನ್ನ ಕೇಡಿಗೆ ನೀನು ಕೈ ಮಟ್ಟುವದೇನು! ಆದರೆ ಅಮ-
ಚೀಯನು ಕೇಳ್ಳದೆ ಹೋದನು. ಯಾಕಂದರೆ ಅವರು ಎದೋಮ್ಯ-
ರ ದೇವರುಗಳನ್ನು ಹುಡುಕಿದ ನಿಮಿತ್ತ ಅವರನ್ನು ಕೈಯಲ್ಲಿ ಬ-
೨೧ ಪ್ಪಿಸುವ ಹಾಗೆ, ಇದು ದೇವರಿಂದ ಉಂಟಾಯಿತು. ಹಾಗೆಯೇ
ಇಸ್ರಯೇಲಿನ ಅರಸನಾದ ಯೊವಾಷನು ಹೊರಟು ಹೋದನು;
ಅವನೂ ಯೆಹೂದದ ಅರಸನಾದ ಅಮಚೀಯನೂ ಯೆಹೂದ-
ಕ್ಕೆ ಸೇರಿದ ಬೆತ್ಷೇಮಷಿನ ಬಳಿಯಲ್ಲಿ ಬಬ್ಬನು ಬಬ್ಬನ ಮುಖವ-
೨೨ ನ್ನು ನೋಡಿದರು. ಯೆಹೂದದವರು ಇಸ್ರಯೇಲಿನವರ ಮುಂ-
ದೆ ಮುರಿಯಲ್ಪಟ್ಟರು; ಅವರು ತಮ್ಮ ತಮ್ಮ ಗುಡಾರಕ್ಕೆ ಓಡಿ
೨೩ ಹೋದರು. ಆಗ ಇಸ್ರಯೇಲಿನ ಅರಸನಾದಯೊವಾಷನು ಯೆ-
ಹೋವಹಾಜನ ಮಗನಾದ ಯೊವಾಷನ ಮಗನಾದ ಯೆಹೂ-
ದದ ಅರಸನಾಗಿರುವ ಅಮಚೀಯನನ್ನು ಬೆತ್ಷೇಮಷಿನ ಬಳಿಯ-
ಲ್ಲಿ ಹಿಡುಕೊಂಡು, ಅವನನ್ನು ಯೆರೂಸಲೇಮಿಗೆ ತಕ್ಕೊಂಡು ಬಂ-
ದು, ಯೆರೂಸಲೇಮಿನ ಅಲಂಗವನ್ನು, ಎಫ್ರಯಿಮಿನ ಬಾಗಲ-
ವೊದಲುಗೊಂಡು ಮೂಲೆಯ ಬಾಗಲ ಮಟ್ಟಿಗೂ, ನಾನೂರು
೨೪ ಮೊಳ ಉದ್ದ ಕೆಡವಿ ಬಿಟ್ಟು, ಅವನು ಒಬೆದೆದೋಮನ ಬಳಿಯ-
ಲ್ಲಿ ಕರ್ತನ ಮನೆಯಲ್ಲಿ ಶಿಕ್ಕಿದ ಬೆಳ್ಳಿ ಭಂಗಾರವನ್ನೂ, ಎಲ್ಲಾ
ಸಾಮಾನುಗಳನ್ನೂ, ಅರಸನ ಮನೆಯ ಬೊಕ್ಕಸಗಳನ್ನೂ,
ಓಲಿನವರನ್ನೂ ತೆಗೆದು ಕೊಂಡು, ಸಮಾರ್ಯಕ್ಕೆ ತಿರುಗಿ
ಹೋದನು.

೨೫ ಮತ್ತು ಯೆಹೂದದ ಅರಸನಾಗಿರುವ ಯೊವಾಷನ ಮಗನಾ-
ದ ಅಮಚೀಯನು ಇಸ್ರಯೇಲಿನ ಅರಸನಾದ ಯೆಹೋವಹಾ-
ಜನ ಮಗನಾದ ಯೊವಾಷನು ಸತ್ತ ಮೇಲೆ ಹದಿನೈದು ವರುಷ
೨೬ ಬದುಕಿದನು. ಆದರೆ ಅಮಚೀಯನ ಮಿಕ್ಕಾದ ಕ್ರಿಯೆಗಳು—
ಮೊದಲನೆಯವುಗಳೂ ಕಡೆಯವುಗಳೂ—ಇಗೋ, ಅವು ಯೆ-
ಹೂದ ಇಸ್ರಯೇಲ್ಯರ ಅರಸುಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿ-
೨೭ ವೋ! ಆದರೆ ಅಮಚೀಯನು ಕರ್ತನ ಕಡೆಯಿಂದ ತೊಲಗಿ
ಹೋದ ತರುವಾಯ, ಅವರು ಯೆರೂಸಲೇಮಿನಲ್ಲಿ ಅವನ ಮೇಲೆ
ಬಳ್ಳಸಂಚು ಮಾಡಿದರು. ಆದಕಾರಣ ಅವನು ಲಕೀಷಿಗೆ ಓಡಿ
ಹೋದನು. ಆದರೆ ಅವರು ಅವನ ಹಿಂದೆ ಲಕೀಷಿಗೆ ಕಳುಹಿಸಿ,
೨೮ ಅಲ್ಲಿ ಅವನನ್ನು ಕೊಂದು ಹಾಕಿದರು. ಅವರು ಅವನನ್ನು ಕು-
ದುರೆಗಳ ಮೇಲೆ ತಕ್ಕೊಂಡು ಬಂದು, ಯೆಹೂದದ ಪಟ್ಟಣದಲ್ಲಿ ಅ-
ವನ ಪಿತೃಗಳ ಬಳಿಯಲ್ಲಿ ಅವನನ್ನು ಹೂಣಿಟ್ಟರು.

## ೨೬. ಸಂಧಿ.

೧ ಆಗ ಯೆಹೂದ ಜನರೆಲ್ಲರು ಹದಿನಾರು ವರುಷದವನಾದ ಅ-
ಜರ್ಯನನ್ನು ತಕ್ಕೊಂಡು, ಅವನನ್ನು ಅವನ ತಂದೆಯಾದ ಅ-
೨ ಮಚೀಯನಿಗೆ ಬದಲಾಗಿ ಅರಸನಾಗ ಮಾಡಿದರು. ಅರಸನು ತ-
ನ್ನ ಪಿತೃಗಳ ಸಂಗಡ ಮಲಗಿದ ತರುವಾಯ, ಅವನು ಎರೋತ-
ನ್ನು ಕಟ್ಟಿಸಿ, ಅದನ್ನು ಯೆಹೂದಕ್ಕೆ ತಿರಿಗಿ ಕೇಳಿಸಿದನು.



೩ ಅಜರ್ಯನು ಆಳ್ಳ ಆರಂಭಿಸಿದಾಗ ಹದಿನಾರು ವರುಷದವ-
ನಾಗಿದ್ದು, ಯೆರೂಸಲೇಮಿನಲ್ಲಿ ಐವತ್ತೆರಡು ವರುಷ ಆಳ್ಳದನು.
ಅವನ ತಾಯಿಯ ಹೆಸರು ಯೆಕೊಲ್ಯಳು; ಯೆರೂಸಲೇಮಿನವಳಾಗಿ-
೪ ದ್ದಳು. ಅವನು ತನ್ನ ತಂದೆಯಾದ ಅಮಚೀಯನು ಮಾಡಿದ
ಎಲ್ಲಾದರ ಪ್ರಕಾರ, ಕರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು
೫ ಮಾಡಿದನು. ದೇವರ ದರ್ಶನಗಳಲ್ಲಿ ಗ್ರಹಿಕೆಯುಳ್ಳವನಾಗಿದ್ದ
ಜೆಕರ್ಯನ ದಿವಸಗಳಲ್ಲಿ ಅವನು ದೇವರನ್ನು ಹುಡುಕಿದನು.
ಕರ್ತನನ್ನು ಹುಡುಕುವ ದಿವಸಗಳ ಮಟ್ಟಿಗೂ ದೇವರು ಅವನಿಗೆ
ಸಿದ್ಧಿ ಹೊಂದಿಸಿದನು.

೬ ಅವನು ಹೊರಟು ಹೋಗಿ, ಫಿಲಿಷ್ಟ್ಯರ ಮೇಲೆ ಯುದ್ಧ ಮಾ-
ಡಿ, ಗಾತಿನ ಗೋಡೆಯನ್ನೂ, ಯಬ್ನೆಯ ಗೋಡೆಯನ್ನೂ,
ಅಶ್ದೋದಿನ ಗೋಡೆಯನ್ನೂ ಕೆಡವಿ ಬಿಟ್ಟು, ಫಿಲಿಷ್ಟ್ಯರ ಮಧ್ಯ-
೭ ದಲ್ಲಿ ಅಶ್ದೋದಿನ ಬಳಿಯಲ್ಲಿ ಪಟ್ಟಣಗಳನ್ನು ಕಟ್ಟಿಸಿದನು. ಇದ-
ಲ್ಲದೆ ಫಿಲಿಷ್ಟ್ಯರ ಮೇಲೆಯೂ ಗುರ್ಬಾಳಿನಲ್ಲಿ ವಾಸವಾಗಿದ್ದ ಅ-
ರಬ್ಬಿಯರ ಮೇಲೆಯೂ, ಮೆಊನ್ಯರ ಮೇಲೆಯೂ ಅವನು ಯು-
೮ ದ್ಧ ಮಾಡಿದಾಗ, ದೇವರು ಅವನಿಗೆ ಸಹಾಯ ಕೊಟ್ಟನು. ಇದ-
ಲ್ಲದೆ ಅಮ್ಮೋನ್ಯರು ಅಜರ್ಯನಿಗೆ ಕಾಣಿಕೆಗಳನ್ನು ಕೊಟ್ಟರು.
ಅದದರಿಂದ ಅವನ ಹೆಸರು ಐಗುಪ್ತದ ಪ್ರವೇಶದ ಮಟ್ಟಿಗೂ ಪ್ರಸಿ-
ದ್ಧಿಯಾಯಿತು. ಯಾಕಂದರೆ ಅವನು ತನ್ನನ್ನು ಬಹಳ ಬಲ-
ಪಡಿಸಿ ಕೊಂಡನು.

೯ ಮತ್ತು ಅಜರ್ಯನು ಯೆರೂಸಲೇಮಿನಲ್ಲಿ ಮೂಲೆ ಬಾಗಲ
ಬಳಿಯಲ್ಲಿಯೂ, ತಗ್ಗಿನ ಬಾಗಲ ಬಳಿಯಲ್ಲಿಯೂ, ಕೋಟೆಯ
ಮೂಲೆಯಲ್ಲಿಯೂ ಬುರುಜುಗಳನ್ನು ಕಟ್ಟಿಸಿ, ಅವುಗಳನ್ನು ಬ-
೧೦ ಲಪಡಿಸಿದನು. ಮತ್ತು ಅವನು ಅರಣ್ಯದಲ್ಲಿ ಗಡೀಸ್ಥಳಗಳನ್ನು
ಕಟ್ಟಿಸಿ, ಅನೇಕ ಭಾವಿಗಳನ್ನು ಅಗಿಸಿದನು; ಯಾಕಂದರೆ ತಗ್ಗಿನ
ದೇಶದಲ್ಲಿಯೂ ಬೈಲು ದೇಶದಲ್ಲಿಯೂ ಅವನಿಗೆ ಬಹು ಕುರಿದ
ನಗಳಿದ್ದವು. ಹಾಗೆಯೇ ಪರ್ವತಗಳಲ್ಲಿಯೂ ಕರ್ಮೇಲಿನಲ್ಲಿ-
ಯೂ ಅವನಿಗೆ ಒಕ್ಕಲಿಗರೂ ದ್ರಾಕ್ಷೇವ್ಯವಸಾಯದವರೂ ಇ-
ದ್ದರು. ಯಾಕಂದರೆ ಅವನು ವ್ಯವಸಾಯದಲ್ಲಿ ಪ್ರೀತಿ ಪಡುತ್ತಾ
ಇದ್ದನು.

೧೧ ಇದಲ್ಲದೆ ರಾಯಸದವನಾದ ಯೆಯಿಯೇಲನ ಕೈಯಿಂದಲೂ
ಅಧಿಪತಿಯಾದ ಮಸೇಯನ ಕೈಯಿಂದಲೂ ಬರೆಯಲ್ಪಟ್ಟ ಲೆ-
ಖ್ಖದ ಪ್ರಕಾರ ಗುಂಪು ಗುಂಪಾಗಿ ಯುದ್ಧಕ್ಕೆ ಹೋಗುವ ರಾಣು-
ವೆಯವರ ಸೈನ್ಯವು ಅಜರ್ಯನಿಗೆ ಇತ್ತು. ಆ ಸೈನ್ಯವು ಅರಸ-
೧೨ ನ ಪ್ರಧಾನರಲ್ಲಿ ಒಬ್ಬನಾದ ಹನನ್ಯನ ಕೈಕೆಳಗೆ ಇತ್ತು, ಪರಾಕ್ರ-
ಮಶಾಲಿಗಳಲ್ಲಿ ಪಿತೃಗಳ ಶ್ರೇಷ್ಠರ ಲೆಖ್ಖವು ಎರಡು ಸಾವಿರದ ಆ-
೧೩ ರು ನೂರು ಮಂದಿಯು. ಮತ್ತು ಅವರ ಕೈಕೆಳಗೆ ಅರಸನಿಗೆ
ಸಹಾಯವಾಗಿ ಶತ್ರುವಿನ ಮೇಲೆ ಬಹಳ ಪರಾಕ್ರಮದಿಂದ ಯು-
ದ್ಧ ಮಾಡುವ ಮೂರು ಲಕ್ಷದ ಏಳು ಸಾವಿರದ ಐನೂರು ಮಂದಿ-
೧೪ ಯುಳ್ಳ ಸೈನ್ಯವಿತ್ತು. ಮತ್ತು ಅಜರ್ಯನು ಸಮಸ್ತ ದಂಡಿನಲ್ಲಿ
ಅವರ ನಿಮಿತ್ತ ಗುರಾಣಿಗಳನ್ನೂ ಈಟಿಗಳನ್ನೂ, ಶಿರಸ್ತ್ರಾಣ-
ಗಳನ್ನೂ, ಬಿರಾಭತ್ತರ ಕವಚಗಳನ್ನೂ, ಬಿಲ್ಲುಗಳನ್ನೂ, ಕವ-
೧೫ ಣೆಗಳನ್ನೂ ಸಿದ್ಧ ಮಾಡಿದನು. ಇದಲ್ಲದೆ ಬಾಣಗಳನ್ನೂ ದೊ-
ಡ್ಡ ಕಲ್ಲುಗಳನ್ನೂ ಎಸೆಯುವ ನಿಮಿತ್ತ, ಬುರುಜುಗಳ ಮೇಲೆ-
ಯೂ ಅಲಂಗಗಳ ಮೇಲೆಯೂ ಇರ, ಪ್ರವೀಣರಿಂದ ಉಂಟಾದ
ಯಂತ್ರಗಳನ್ನೂ ಯೆರೂಸಲೇಮಿನಲ್ಲಿ ಮಾಡಿಸಿದನು. ಆದದರಿಂ-
ದ ಅವನ ಹೆಸರು ಬಹಳ ದೂರ ಪ್ರಸಿದ್ಧಿಯಾಯಿತು. ಯಾ-
ಕಂದರೆ ಬಹು ಬಲಳ್ಳವನಾಗುವ ಪರ್ಯಂತರ ಅವನು ಬಹು
ಆಶ್ಚರ್ಯವಾಗಿ ಸಹಾಯ ಹೊಂದಿದನು.

೧೬ ಆದರೆ ಅವನು ಬಲ ಹೊಂದಿದ ಮೇಲೆ ಅವನ ಹೃದಯವು
ನಾಶನಕ್ಕೆ ಎತ್ತಲ್ಪಟ್ಟಿತು. ಏನಂದರೆ ಅವನು ಧೂಪಪೀಠದ ಮೇ-
ಲೆ ಧೂಪ ಸುಡುವದಕ್ಕೆ ಕರ್ತನ ಮಂದಿರದಲ್ಲಿ ಪ್ರವೇಶಿಸಿ, ತನ್ನ
೧೭ ದೇವರಾದ ಕರ್ತನಿಗೆ ವಿರೋಧವಾಗಿ ಅಕೃತ್ಯ ಮಾಡಿದನು. ಆ-
ಗ ಯಾಜಕನಾದ ಅಜರ್ಯನೂ, ಅವನ ಸಂಗಡ ಪರಾಕ್ರಮ-
ಳ್ಳ ಕರ್ತನ ಯಾಜಕರಾದ ಎಂಭತ್ತು ಮಂದಿಯೂ ಅರಸ-
೧೮ ನಾದ ಅಜರ್ಯನ ಹಿಂದೆ ಪ್ರವೇಶಿಸಿ, ಅವನನ್ನು ಎದುರಿಸಿ, ಅಜ-
ರ್ಯನೇ, ಕರ್ತನಿಗೆ ಧೂಪ ಸುಡುವದು ನಿನಗೆ ಬಾಧ್ಯವಿಲ್ಲ;
ಧೂಪ ಸುಡುವದಕ್ಕೆ ಪರಿಶುದ್ಧ ಮಾಡಲ್ಪಟ್ಟ ಆರೋನನ ಮ-
ಕ್ಕಳಾದ ಯಾಜಕರಿಗೆ ಬಾಧ್ಯವು ಅದೆ; ನೀನು ಪರಿಶುದ್ಧ-
ಸ್ಥಾನದಿಂದ ಹೊರಟು ಹೋಗು; ಯಾಕಂದರೆ ಅಕೃತ್ಯ-
ಮಾಡಿದ್ದೀ. ದೇವರಾದ ಕರ್ತನಿಂದ ಇದು ನಿನಗೆ ಘನವಲ್ಲ,
ಅಂದರು.

೧೯ ಆಗ ಅಜರ್ಯನು ಕೋಪಿಸಿ ಕೊಂಡನು; ಮತ್ತು ಧೂಪವ-
ನ್ನು ಸುಡ ಅವನ ಕೈಯಲ್ಲಿ ಧೂಪಾರ್ತಿ ಇತ್ತು. ಆದರೆ ಅವ-
ನು ಯಾಜಕರ ಮೇಲೆ ಕೋಪ ಮಾಡುವಾಗ, ಕರ್ತನ ಮಂದಿ-
ರದಲ್ಲಿರುವ ಧೂಪ ಪೀಠದ ಬಳಿಯಲ್ಲಿ ನಿಂತ ಯಾಜಕರ ಮುಂ-
೨೦ ದೆ ಅವನ ಹಣೆಯಲ್ಲಿ ಕುಷ್ಠವು ಎದ್ದಿತು. ಆಗ ಪ್ರಧಾನ ಯಾ-
ಜಕನಾದ ಅಜರ್ಯನೂ ಯಾಜಕರೆಲ್ಲರೂ ಅವನನ್ನು ದೃಷ್ಟಿ-
ಸಿದಾಗ, ಇಗೋ, ಅವನು ತನ್ನ ಹಣೆಯಲ್ಲಿ ಕುಷ್ಠವುಳ್ಳವನಾ-
ಗಿದ್ದನು. ಆದದರಿಂದ ಅವರು ಅವನನ್ನು ಅಲ್ಲಿಂದ ದೊಬ್ಬಿ ಹಾಕಿ-
ದರು. ಮತ್ತು ಕರ್ತನು ಅವನನ್ನು ಹೊಡೆದ್ದರಿಂದ, ಅವನೇ
೨೧ ಹೊರಗೆ ಹೋಗ ಶ್ರಮೆ ಪಟ್ಟನು. ಮತ್ತು ಅರಸನಾದ ಅಜರ್ಯ-
ನು ಸಾಯುವ ದಿವಸದ ಮಟ್ಟಿಗೂ ಕುಷ್ಠಕೋಗಿಯಾಗಿದ್ದನು.
ಅವನು ಕುಷ್ಠಕೋಗವುಳ್ಳವನಾದದರಿಂದ, ಪ್ರತ್ಯೇಕವಾದ ಮನೆ-
ಯಲ್ಲಿ ವಾಸವಾಗಿದ್ದನು. ಯಾಕಂದರೆ ಅವನು ಕರ್ತನ ಮನೆ-
ಯಿಂದ ಅಗಲಿಸಲ್ಪಟ್ಟವನಾಗಿದ್ದನು. ಮತ್ತು ಅವನ ಮಗನಾದ
ಯೊತಾಮನು ಅರಸನ ಮನೆಯ ಮೇಲೆ ಇದ್ದು, ದೇಶದ ಜನರಿಗೆ
ನ್ಯಾಯ ತೀರಿಸುತ್ತಾ ಇದ್ದನು.

೨೦ ಆದರೆ ಅಜರ್ಯನ ಮಿಕ್ಕಾದ ಕ್ರಿಯೆಗಳನ್ನು—ಮೊದಲನೆಯ-
ವುಗಳನ್ನೂ ಕಡೆಯವುಗಳನ್ನೂ—ಆಮೋಚನ ಮಗನಾದ ಯೆ-
ಶಾಯನು ಬರೆದನು. ಅಜರ್ಯನು ತನ್ನ ಪಿತೃಗಳ ಸಂಗಡ
ಮಲಗಿದನು; ಅವರು ಅರಸುಗಳಿಗೆ ಬಿಟಿದಾದ ಸ್ವಸ್ಥಾನ ಭೂಮಿ-
ಯಲ್ಲಿ ಅವನ ಪಿತೃಗಳ ಸಂಗಡ ಅವನನ್ನು ಹೂಣಿಟ್ಟರು. ಯಾ-
ಕಂದರೆ ಅವನು ಕುಷ್ಠಕೋಗವುಳ್ಳವನು, ಅಂದು ಕೊಂಡರು.
ಮತ್ತು ಅವನ ಮಗನಾದ ಯೊತಾಮನು ಅವನಿಗೆ ಬದಲಾಗಿ ಆ-
ಳ್ಳಿದನು.

## ೨೭. ಸಂಧಿ.

೧ ಯೊತಾಮನು ಆಳ್ಳ ಆರಂಭಿಸಿದಾಗ ಇಪ್ಪತ್ತೈದು ವರುಷದ-
ವನಾಗಿದ್ದು, ಯೆರೂಸಲೇಮಿನಲ್ಲಿ ಹದಿನಾರು ವರುಷಗಳು ಆಳ್ಳಿ

ದನು. ಅವನ ತಾಯಿಯ ಹೆಸರು ಯೆರೂಷಳ್ಳಿ; ಚಿದೋಕ
೨ ನ ಮಗಳು. ಅವನು ತನ್ನ ತಂದೆಯಾದ ಅಜರ್ಯನು ಮಾಡಿ
ದ ಎಲ್ಲಾದರ ಪ್ರಕಾರ, ಕರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು
ಮಾಡಿದನು. ಆದರೆ ಕರ್ತನ ಮನೆಯಲ್ಲಿ ಪ್ರವೇಶಿಸಿಲಿಲ್ಲ. ಆದ
೩ ರೆ ಜನರು ಇನ್ನೂ ಕೆಟ್ಟದ್ದನ್ನು ಮಾಡುತ್ತಾ ಇದ್ದರು. ಅವನು
ಕರ್ತನ ಮಂದಿರದ ಎತ್ತರವಾದ ಬಾಗಲನ್ನು ಕಟ್ಟಿಸಿ, ಓಫಲು ಎಂ
ಬ ಗೋಡೆಯ ಮೇಲೆ ಬಹಳವಾಗಿ ಕಟ್ಟಿಸಿದನು.

೪ ಇದಲ್ಲದೆ ಯೆಹೂದ ಪರ್ವತಗಳಲ್ಲಿ ಪಟ್ಟಣಗಳನ್ನೂ ಅರಣ್ಯ
೫ ದಲ್ಲಿ ಕೋಟೆಗಳನ್ನೂ ಗಡೀಸ್ಥಾನಗಳನ್ನೂ ಕಟ್ಟಿಸಿದನು. ಅ
ವನು ಅಮ್ಮೋನ್ಯರ ಅರಸನ ಸಂಗಡ ಯುದ್ಧಮಾಡಿ, ಅವನನ್ನು
ಜಯಿಸಿದನು. ಆದದರಿಂದ ಅಮ್ಮೋನನ ಮಕ್ಕಳು ಅದೇ ವರುಷ
ದಲ್ಲಿ ನೂರು ಬೆಳ್ಳಿ ತಲಾಂತುಗಳನ್ನೂ, ಹತ್ತುಸಾವಿರ ಕೋರ್
ಗೋಧಿಯನ್ನೂ, ಹತ್ತು ಸಾವಿರಕೋರ್ ಜವೆಗೋಧಿಯನ್ನೂ ಅ
ವನಿಗೆ ಕೊಟ್ಟರು. ಅಮ್ಮೋನನ ಮಕ್ಕಳು ಎರಡನೇ ವರುಷದಲ್ಲಿ
ಯೂ ಮೂರನೇ ವರುಷದಲ್ಲಿಯೂ ಅದೇ ಪ್ರಕಾರ ಅವನಿಗೆ
೬ ಕೊಟ್ಟರು. ಹೀಗೆಯೇ ಯೊತಾಮನು ತನ್ನ ದೇವರಾದ ಕರ್ತ
ನ ಮುಂದೆ ತನ್ನ ಮಾರ್ಗಗಳನ್ನು ಸ್ಥಿರ ಪಡಿಸಿದ್ದರಿಂದ, ಅವನು
ಬಲಗೊಂಡನು.

೭ ಆದರೆ ಯೊತಾಮನ ಮಿಕ್ಕಾದ ಕ್ರಿಯೆಗಳೂ, ಅವನು ಮಾ
ಡಿದ ಯುದ್ಧಗಳೂ, ಅವನ ಮಾರ್ಗಗಳೂ, ಇಗೋ, ಅವು ಇ
ಸ್ರಯೇಲ್ ಯೆಹೂದ ಅರಸುಗಳ ಪುಸ್ತಕದಲ್ಲಿ ಬರೆಯಲ್ಪಟ್ಟಿವೆ
೮ ಅವನು ಆಳ್ವಿಕೆ ಆರಂಭಿಸಿದಾಗ ಇಪ್ಪತ್ತೈದು, ವರುಷದವನಾಗಿದ್ದು,
ಯೆರೂಸಲೇಮಿನಲ್ಲಿ ಹದಿನಾರು ವರುಷ ಆಳಿದನು. ಯೊತಾ
ಮನು ತನ್ನ ಪಿತೃಗಳ ಸಂಗಡ ಮಲಗಿದನು; ಅವರು ಅವನನ್ನು
ದಾವೀದನ ಪಟ್ಟಣದಲ್ಲಿ ಹೂಣಿಟ್ಟರು. ಮತ್ತು ಅವನ ಮಗನಾದ
ಅಹಾಜನು ಅವನಿಗೆ ಬದಲಾಗಿ ಆಳಿದನು.

## ೨೮. ಸಂಧಿ.

೧ ಅಹಾಜನು ಆಳ್ವಿಕೆ ಆರಂಭಿಸಿದಾಗ ಇಪ್ಪತ್ತು ವರುಷದವನಾಗಿ
ದ್ದು, ಯೆರೂಸಲೇಮಿನಲ್ಲಿ ಹದಿನಾರು ವರುಷ ಆಳಿದನು. ಆದರೆ
ಅವನು ತನ್ನ ಪಿತೃವಾದ ದಾವೀದನ ಹಾಗೆ ಕರ್ತನ ಸಮುಖದ
೨ ಲ್ಲಿ ನೆಟ್ಟನೆಯಾದದ್ದನ್ನು ಮಾಡಿದವನಲ್ಲ. ಅವನು ಇಸ್ರಯೇ
ಲಿನ ಅರಸುಗಳ ಮಾರ್ಗಗಳಲ್ಲಿ ನಡೆದು, ಬಾಳ್ವಿಗೋಸ್ಕರ ಎ
೩ ರಕ ಹೊಯಿದ ವಿಗ್ರಹಗಳನ್ನು ಮಾಡಿಸಿದನು. ಇದಲ್ಲದೆ ಅವ
ನು ಹಿನ್ನೋಮನ ಮಗನ ತಗ್ಗಿನಲ್ಲಿ ಧೂಪವರ್ಪಿಸಿ, ಕರ್ತನು
ಇಸ್ರಯೇಲಿನ ಮಕ್ಕಳ ಮುಂದೆ ಹೊರಡಿಸಿದ ಜನಾಂಗಗಳ ಅಸ
೪ ಹ್ಯಗಳ ಪ್ರಕಾರ ಬೆಂಕಿಯಲ್ಲಿ ತನ್ನ ಮಕ್ಕಳನ್ನು ಸುಟ್ಟನು.
ಹಾಗೆಯೇ ಅವನು ಮೇಡುಗಳಲ್ಲಿಯೂ ಗುಡ್ಡಗಳ ಮೇಲೆಯೂ
ಎಲ್ಲಾ ಹಸುರು ಗಿಡಗಳ ಕೆಳಗೂ ಬಲಿಗಳನ್ನೂ ಧೂಪವನ್ನೂ
ಅರ್ಪಿಸಿದನು.

೫ ಆದದರಿಂದ ಅವನ ದೇವರಾದ ಕರ್ತನು ಅರಾಮಿನ ಅರಸ
ನ ಕೈಯಲ್ಲಿ ಅವನನ್ನು ಬಪ್ಪಿಸಿದನು. ಅರಾಮ್ಯರು ಅವನನ್ನು
ಹೊಡೆದು, ಅವರಲ್ಲಿ ಅನೇಕರನ್ನು ಕೆಳೆಯಾಗಿ ಹಿಡಿದು, ದಮಸ್ಕ
ಕ್ಕೆ ಪೈದರು. ಇದಲ್ಲದೆ ಅವನು ಇಸ್ರಯೇಲಿನ ಅರಸನ ಕೈಯ
ಲ್ಲಿ ಬಪ್ಪಿಸಲ್ಪಟ್ಟಿದ್ದರಿಂದ, ಇವನು ಅವನನ್ನು ದೊಡ್ಡ ಸಂಹಾರ
೬ ದಿಂದ ಹೊಡೆದನು. ಅವರು ತಮ್ಮ ಪಿತೃಗಳ ಕರ್ತನಾದ ದೇವ
ರನ್ನು ಬಿಟ್ಟು ಬಿಟ್ಟಿದ್ದರಿಂದ, ರೆಮಲ್ಯನ ಮಗನಾದ ಪೇಕಹನು
ಒಂದೇ ದಿವಸದೊಳಗೆ ಯೆಹೂದದವರಲ್ಲಿ ಲಕ್ಷಾ ಇಪ್ಪತ್ತು ಸಾ
ವಿರ ಮಂದಿಯನ್ನು ಕೊಂದು ಹಾಕಿದನು; ಇವರೆಲ್ಲರು ಪರಾಕ್ರಮ
೭ ಶಾಲಿಗಳಾಗಿದ್ದರು. ಇದಲ್ಲದೆ ಎಫ್ರಯಿಮ್ಯನಾಗಿರುವ ಪರಾ
ಕ್ರಮಶಾಲಿಯಾದ ಚಿಕ್ರಿಯು ಅರಸನ ಮಗನಾದ ಮಸೇಯನ
ನ್ನೂ, ಅರಮನೆಯ ನಾಯಕನಾದ ಅಜ್ರೀಕಮನನ್ನೂ, ಅರಸು
೮ ನಿಗೆ ಎರಡನೆಯವನಾದ ಎಲ್ಕಾನನನ್ನೂ ಕೊಂದು ಹಾಕಿದನು.
ಮತ್ತು ಇಸ್ರಯೇಲಿನ ಮಕ್ಕಳು ತಮ್ಮ ಸಹೋದರರಲ್ಲಿ ಎರಡು
ಲಕ್ಷ ಮಂದಿ ಸ್ತ್ರೀಯರನ್ನೂ, ಕುಮಾರರನ್ನೂ, ಕುಮಾರ್ತೆಗ
ಳನ್ನೂ ಕೆಳೆಯಾಗಿ ಪೈದರು. ಮತ್ತು ಅವರಿಂದ ಬಹು ಕೊಳ್ಳೆ
ಯನ್ನು ತಕ್ಕೊಂಡು, ಆ ಕೊಳ್ಳೆಯನ್ನು ಸಮಾರ್ಯಕ್ಕೆ ತಂ
ದರು.

೯ ಆದರೆ ಕರ್ತನ ಪ್ರವಾದಿ ಅಲ್ಲಿ ಇದ್ದನು; ಅವನ ಹೆಸರು ಒಡೇದ
ನು. ಅವನು ಸಮಾರ್ಯಕ್ಕೆ ಬಂದ ಸೈನ್ಯಕ್ಕೆದುರಾಗಿ ಹೊರಟು
ಹೋಗಿ, ಅವರಿಗೆ ಹೇಳಿದನು—ಇಗೋ, ನಿಮ್ಮ ಪಿತೃಗಳ ಕರ್ತ
ನಾದ ದೇವರು ಯೆಹೂದದ ಮೇಲೆ ಉರಿಗೊಂಡದ್ದರಿಂದ, ಆತ
ನು ಅವರನ್ನು ನಿಮ್ಮ ಕೈಯಲ್ಲಿ ಒಪ್ಪಿಸಿದ್ದಾನೆ ಮತ್ತು ನೀವು ಅ
೧೦ ಕಾಶಕ್ಕೆ ಮುಟ್ಟುವ ಉಗ್ರದಿಂದ ಅವರನ್ನು ಕೊಂದು ಹಾಕಿದ್ದೀರಿ.
ಈಗ ನಿಮಗೆ ದಾಸರೂ ದಾಸಿಗಳೂ ಆಗಿರುವ ಹಾಗೆ, ಯೆಹೂ
ದದ, ಯೆರೂಸಲೇಮಿನ ಮಕ್ಕಳನ್ನು ನಮ್ಮ ವಶ ಮಾಡ ಬೇಕೆಂ
ದು ಅಂದು ಕೊಳ್ಳುತ್ತೀರಿ. ಆದರೆ ನಿಮ್ಮಲ್ಲಿಯೇ ನಿಮ್ಮ ದೇವ
೧೧ ರಾದ ಕರ್ತನಿಗೆ ವಿರೋಧವಾಗಿ ಅಪರಾಧಗಳು ಇಲ್ಲವೋ! ಆದ
ದರಿಂದ ನೀವು ನನ್ನ ಮಾತು ಕೇಳಿ. ನಿಮ್ಮ ಸಹೋದರರಲ್ಲಿ ನೀ
ವು ಕೆಳೆಯಾಗಿ ತಕ್ಕೊಂಡ ಕೆಳೆಯವರನ್ನು ಬಿಟ್ಟು ಬಿಡಿರಿ.
ಯಾಕಂದರೆ ಕರ್ತನ ಉರಿಯು ಕೋಪವು ನಿಮ್ಮ ಮೇಲೆ ಇರು
೧೨ ವದು. ಆಗ ಎಫ್ರಯಿಮಿನ ಮಕ್ಕಳ ಶ್ರೇಷ್ಠರಲ್ಲಿ ಕೆಲವರಾಗಿರು
ವ ಯೊಹನಾನನ ಮಗನಾದ ಅಜರ್ಯನೂ, ಮೆಷಿಲ್ಲೆಮೋತನ
ಮಗನಾದ ಬೆರಕ್ಯನೂ, ಶಲ್ಲೂಮನ ಮಗನಾದ ಯೆಹಿಜ್ಕಿಯ
ನೂ, ಹದ್ಲಾಯನ ಮಗನಾದ ಅಮಾಸನೂ ಯುದ್ಧದಿಂದ ಬಂದ
೧೩ ವರಿಗೆ ವಿರೋಧವಾಗಿ ಎದ್ದು, ಅವರಿಗೆ ಹೇಳಿದರು—ನೀವು ಕೆಳೆಯ
ವರನ್ನು ಇಲ್ಲಿಗೆ ತರ ಬೇಡಿರಿ. ಯಾಕಂದರೆ ನಾವು ಕರ್ತನಿಗೆ
ವಿರೋಧವಾಗಿ ಅಪರಾಧ ಮಾಡಿದ್ದೇವೆ. ನೀವು ನಮ್ಮ ಪಾಪ
ಗಳನ್ನೂ ನಮ್ಮ ಅಪರಾಧಗಳನ್ನೂ ಹೆಚ್ಚಿಸ ಬೇಕೆಂದಿದ್ದೀರಿ. ನಿಶ್ಚ
ಯವಾಗಿ ನಮ್ಮ ಅಪರಾಧವು ದೊಡ್ಡದಾಗಿದೆ; ಇಸ್ರಯೇಲಿನ
೧೪ ಮೇಲೆ ಉರಿಯ ಕೋಪವು ಉಂಟಾಯಿತು. ಆಗ ಸೈನ್ಯದವರು
ಕೆಳೆಯವರನ್ನೂ ಕೊಳ್ಳೆಯನ್ನೂ ಪ್ರಧಾನರಮುಂದೆಯೂ ಸಮ
ಸ್ತ ಕೂಟದ ಮುಂದೆಯೂ ಬಿಟ್ಟು ಬಿಟ್ಟರು. ಆಗ ಹೆಸರಿನಿಂದ
೧೫ ಹೇಳಲ್ಪಟ್ಟ ಅಮನುಷ್ಯರು ಎದ್ದು, ಕೆಳೆಯವರನ್ನು ತೆಗೆದು ಕೊಂ
ಡು, ಅವರಲ್ಲಿ ಬೆತ್ತಲೆಯಾದವರಿಗೆ ಕೊಳ್ಳೆಯ ವಸ್ತ್ರಗಳನ್ನು
ತೊಡಿಸಿ, ಉಡಿಸಿ, ಅವರಿಗೆ ಕೆರಗಳನ್ನು ಕೊಟ್ಟು, ಉಗ್ರಾಣದ
ಕ್ಕೂ ಕಾಡಿಯುವದಕ್ಕೂ ಕೊಟ್ಟು, ಅವರ ತಲೆಗಳಿಗೆ ಎಣ್ಣೆಯ
ನ್ನೂ ಹಚ್ಚಿ, ಅವರಲ್ಲಿ ಇರುವ ಬಲಹೀನರನ್ನು ಕತ್ತೆಗಳ ಮೇಲೆ ಏ
ರಿಸಿ, ಯೆರಿಕೋವೆಂಬ ಖರ್ಜೂರದ ಪಟ್ಟಣಕ್ಕೆ ಅವರ ಸಹೋದರರ
ಬಳಿಗೆ ತಕ್ಕೊಂಡು ಬಂದರು. ಆಗ ಸಮಾರ್ಯಕ್ಕೆ ತಿರುಗಿದರು.



೧೬ ಅದೇ ಕಾಲದಲ್ಲಿ ಅರಸನಾದ ಅಹಾಜನು ಅದೂರಿನ ಅರಸುಗ
೧೭ ಳ ಬಳಿಗೆ ಕಳುಹಿಸಿ, ಸಹಾಯ ಬೇಡಿ ಕೊಂಡನು. ಯಾಕಂದರೆ
ಎದೋಮ್ಯರು ತಿರಿಗಿ ಬಂದು, ಯೆಹೂದವನ್ನು ಹೊಡೆದು, ಕೆಲ
೧೮ ವರನ್ನು ಕೆಳೆಯಾಗಿ ತಕ್ಕೊಂಡು ಹೋದರು. ಇದಲ್ಲದೆ ಫಿಲಿಷ್ಟ್ಯರು
ತಗ್ಗಿನ ದೇಶದ ಪಟ್ಟಣಗಳಲ್ಲಿಯೂ, ಯೆಹೂದದ ದಕ್ಷಿಣ ಪಾ
ರ್ಶ್ವದಲ್ಲಿಯೂ ಹೊಕ್ಕು, ಬೆಥ್ಶೇಮೆದನನ್ನೂ, ಅಯ್ಯಲೋನ
ನ್ನೂ, ಗೆದೆರೋತನನ್ನೂ, ಸೋಕೋವನ್ನೂ, ಅದರ ಗ್ರಾಮಗಳ
ನ್ನೂ, ತಿಮ್ನವನ್ನೂ, ಅದರ ಗ್ರಾಮಗಳನ್ನೂ, ಗಿಮ್ಜವನ್ನೂ,
ಅದರ ಗ್ರಾಮಗಳನ್ನೂ ತಕ್ಕೊಂಡು, ಅಲ್ಲಿ ವಾಸವಾಗಿದ್ದರು.
೧೯ ಯಾಕಂದರೆ ಇಸ್ರಯೇಲಿನ ಅರಸನಾದ ಅಹಾಜನ ನಿಮಿತ್ತ ಕ
ರ್ತನು ಯೆಹೂದವನ್ನು ತಗ್ಗಿಸಿದನು. ಯಾಕಂದರೆ ಅವನು ಯೆ
ಹೂದವನ್ನು ಬೆತ್ತಲೆಯಾಗ ಮಾಡಿ, ಕರ್ತನಿಗೆ ವಿರೋಧವಾಗಿ
೨೦ ಬಹು ಅಕೃತ್ಯ ಮಾಡಿದನು. ಆಗ ಅದೂರಿನ ಅರಸನಾದ ತಿ
ಗ್ಲತ್ಪಿಲೇಸರನು ಅವನ ಬಳಿಗೆ ಬಂದು, ಅವನನ್ನು ಬಲಪಡಿಸದೆ, ಇ
೨೧ ಕ್ಕಟ್ಟು ಪಡಿಸಿದನು. ಯಾಕಂದರೆ ಅಹಾಜನು ಕರ್ತನ ಮನೆ
ಯಿಂದಲೂ, ಅರಮನೆಯಿಂದಲೂ, ಪ್ರಧಾನರಿಂದಲೂ ಒಂದು
ಪಾಲನ್ನು ತೆಗೆದು ಕೊಂಡು, ಅದೂರಿನ ಅರಸನಿಗೆ ಕೊಟ್ಟನು;
ಆದರೆ ಅವನು ಇವನಿಗೆ ಸಹಾಯ ಕೊಡದೆ ಹೋದನು.

೨೨ ಇದಲ್ಲದೆ ಈ ಅರಸನಾದ ಅಹಾಜನು ತನ್ನ ಇಕ್ಕಟ್ಟಿನ ಕಾಲ
ದಲ್ಲಿ ಇನ್ನೂ ಅಧಿಕವಾಗಿ ಕರ್ತನಿಗೆ ವಿರೋಧವಾಗಿ ಅಕೃತ್ಯ
೨೩ ಮಾಡಿದನು. ಏನಂದರೆ ಅವನು ಅರಾಮಿನ ಅರಸುಗಳ ದೇವರು
ಗಳು ಅವರಿಗೆ ಸಹಾಯ ಕೊಟ್ಟದ್ದರಿಂದ, ಅವು ನನಗೆ ಸಹಾಯ
ಕೊಡುವ ಹಾಗೆ, ನಾನು ಅವುಗಳಿಗೆ ಬಲಿಯನ್ನು ಅರ್ಪಿಸುತ್ತೇನೆ,
ಅಂದು ಕೊಂಡು, ತನ್ನನ್ನು ಹೊಡೆದ ದಮಸ್ಕದವರ ದೇವರುಗ
ಳಿಗೆ ಬಲಿಗಳನ್ನು ಅರ್ಪಿಸಿದನು. ಆದರೆ ಅವು ಅವನನ್ನೂ ಸಮ
೨೪ ಸ್ತ ಇಸ್ರಯೇಲರನ್ನೂ ಬೀಳ ಮಾಡಿದವು. ಇದಲ್ಲದೆ ಅಹಾಜನು
ದೇವರ ಮನೆಯ ಸಾಮಾನುಗಳನ್ನು ಕೂಡಿಸಿ, ದೇವರ ಮನೆ
ಯ ಸಾಮಾನುಗಳನ್ನು ತುಂಡುಗಳಾಗಿ ಕತ್ತರಿಸಿ, ಕರ್ತನ ಮ
ನೆಯ ಬಾಗಲುಗಳನ್ನು ಮುಚ್ಚಿ ಬಿಟ್ಟು, ಯೆರೂಸಲೇಮಿನ ಸಮ
೨೫ ಸ್ತ ಮೂಲೆಗಳಲ್ಲಿ ಬಲಿಪೀಠಗಳನ್ನು ಕಟ್ಟಿಸಿದನು. ಮತ್ತು ಯೆ
ಹೂದದ ಸಮಸ್ತ ಪಟ್ಟಣಗಳಲ್ಲಿ ಅನ್ಯ ದೇವರುಗಳಿಗೆ ಧೂಪ ಸು
ಡುವದಕ್ಕೆ ಮೇಡುಗಳನ್ನು ಕಟ್ಟಿಸಿ, ತನ್ನ ಪಿತೃಗಳ ದೇವರಾದ
ಕರ್ತನಿಗೆ ಕರಕಕೆ ಎಬ್ಬಿಸಿದನು.

೨೬ ಮತ್ತು ಅವನ ಇತರ ಕ್ರಿಯೆಗಳೂ, ಅವನ ಸಕಲ ಮಾರ್ಗ
ಗಳೂ—ಮೊದಲನೆಯವುಗಳೂ ಕಡೆಯವುಗಳೂ, ಇಗೋ, ಅ
ವು ಯೆಹೂದ ಇಸ್ರಯೇಲ್ಯರ ಅರಸುಗಳ ಪುಸ್ತಕದಲ್ಲಿ ಬರೆಯ
೨೭ ಲ್ಪಟ್ಟಿವೆ. ಅಹಾಜನು ತನ್ನ ಪಿತೃಗಳ ಸಂಗಡ ಮಲಗಿದನು; ಅ
ವರು ಅವನನ್ನು ಯೆರೂಸಲೇಮು ಪಟ್ಟಣದಲ್ಲಿ ಹೂಣಿಟ್ಟರು. ಆ
ದರೆ ಇಸ್ರಯೇಲಿನ ಅರಸುಗಳ ಸಮಾಧಿ ಸ್ಥಳದಲ್ಲಿ ಅವನನ್ನು
ಸೇರಿಸಲಿಲ್ಲ. ಮತ್ತು ಅವನ ಮಗನಾದ ಹಿಜ್ಕೀಯನು ಅವನಿಗೆ
ಬದಲಾಗಿ ಆಳ್ವಿಕೆ ಮಾಡಿದನು.

## ೨೯. ಸಂಧಿ.

೧ ಹಿಜ್ಕೀಯನು ಆಳ್ವಿಕೆ ಆರಂಭಿಸಿದಾಗ ಇಪ್ಪತ್ತೈದು ವರುಷದವ
ನಾಗಿದ್ದು, ಯೆರೂಸಲೇಮಿನಲ್ಲಿ ಇಪ್ಪತ್ತೊಂಭತ್ತು ವರುಷ ಆಳಿ
ದನು. ಅವನ ತಾಯಿಯ ಹೆಸರು ಅಬೀಯಳ್ಳು; ಜೆಕರೀಯನ ಮ
೨ ಗಳಾಗಿದ್ದಳು. ಅವನು ತನ್ನ ಪಿತೃವಾದ ದಾವೀದನು ಮಾಡಿದ
ಎಲ್ಲಾದರ ಪ್ರಕಾರ, ಕರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು
ಮಾಡಿದನು.

೩ ಅವನು ತನ್ನ ಆಳ್ವಿಕೆಯ ಮೊದಲನೇ ವರುಷದ ಮೊದಲನೇ
ತಿಂಗಳಲ್ಲಿ ಕರ್ತನ ಮನೆಯ ಬಾಗಲುಗಳನ್ನು ತೆರೆದು, ಅವುಗಳ
೪ ನ್ನು ಭದ್ರ ಮಾಡಿಸಿದನು. ಇದಲ್ಲದೆ ಅವನು ಯಾಜಕರನ್ನೂ
ಲೇವ್ಯರನ್ನೂ ಕರೆಯ ಕಳುಹಿಸಿ, ಅವರನ್ನು ಮೂಲ್ಲ ಬೀದಿಯ
೫ ಲ್ಲಿ ಕೂಡಿಸಿ ಕೊಂಡು, ಅವರಿಗೆ ಹೇಳಿದ್ದೇನಂದರೆ—ಲೇವ್ಯರೇ, ನ
ನ್ನ ಮಾತು ಕೇಳಿರಿ; ನೀವು ನಿಮ್ಮನ್ನು ಪರಿಶುದ್ಧ ಮಾಡಿ ಕೊಂ
ಡು, ನಿಮ್ಮ ಪಿತೃಗಳ ಕರ್ತನಾದ ದೇವರ ಮನೆಯನ್ನು ಪರಿಶುದ್ಧ
ಮಾಡಿ, ಅದರ ಕೈಯಿಗೆಯನ್ನು ಪರಿಶುದ್ಧ ಸ್ಥಾನದಿಂದ ತೆಗೆದು
೬ ಹಾಕಿರಿ. ಯಾಕಂದರೆ ನಮ್ಮ ಪಿತೃಗಳು ಅಕೃತ್ಯ ಮಾಡಿ, ನ
ಮ್ಮ ದೇವರಾದ ಕರ್ತನ ದೃಷ್ಟಿಗೆ ಕೆಟ್ಟದ್ದನ್ನು ಮಾಡಿ, ಅವನ
ನ್ನು ಬಿಟ್ಟು ಬಿಟ್ಟು, ಕರ್ತನ ನಿವಾಸಸ್ಥಾನದ ಕಡೆಯಿಂದ ತಮ್ಮ
ಮುಖಗಳನ್ನು ತಿರುಗಿಸಿ, ತಮ್ಮ ಬೆನ್ನುಗಳನ್ನು ತೋರಿಸಿದ್ದಾರೆ.
೭ ಇದಲ್ಲದೆ ಅವರು ಮಂಟಪದ ಬಾಗಲುಗಳನ್ನು ಮುಚ್ಚಿ, ದೀಪಗ
ಳನ್ನು ಆರಿಸಿ, ಇಸ್ರಯೇಲಿನ ದೇವರಿಗೆ ಪರಿಶುದ್ಧ ಸ್ಥಾನದಲ್ಲಿ
ಧೂಪವನ್ನು ಸುಡದೆ, ಹೋಮಗಳನ್ನು ಅರ್ಪಿಸದೆ ಹೋದರು.
೮ ಆದದರಿಂದ ಯೆಹೂದ ಯೆರೂಸಲೇಮಿನವರ ಮೇಲೆ ಕರ್ತನ
ಕೌದ್ರವಾಯಿತು; ನೀವು ನಿಮ್ಮ ಕಣ್ಣುಗಳಿಂದ ನೋಡುವ ಹಾಗೆ,
ಆತನು ಅವರನ್ನು ಕಲಬಪಕ್ಕೂ, ವಿಸ್ಮಯಕ್ಕೂ ಅಪಹಾಸ್ಯಕ್ಕೂ
೯ ಒಪ್ಪಿಸಿ ಕೊಟ್ಟನು. ಮತ್ತು, ಇಗೋ, ಇದಕ್ಕೋಸ್ಕರ ನಮ್ಮ
ಪಿತೃಗಳು ಕತ್ತಿಯಿಂದ ಬಿದ್ದಿದ್ದಾರೆ; ನಮ್ಮ ಕುಮಾರರೂ, ನಮ್ಮ
೧೦ ಕುಮಾರ್ತೆಗಳೂ, ನಮ್ಮ ಹೆಂಡರೂ ಕೆಳೆಯಲ್ಲಿದ್ದಾರೆ. ಈಗ, ಇ
ಸ್ರಯೇಲಿನ ದೇವರಾದ ಕರ್ತನ ಉರಿಯ ಕೋಪವು ನಮ್ಮನ್ನು
ಬಿಟ್ಟು ಹೋಗುವ ಹಾಗೆ, ನಾನು ಅವನ ಸಂಗಡ ಒಡಂಬಡಿಕೆಯ
೧೧ ನ್ನು ಮಾಡ ಮನಸ್ಸಾಗಿದ್ದೇನೆ. ನನ್ನ ಮಕ್ಕಳೇ, ಮೋಸ
ಮಾಡ ಬೇಡಿರಿ; ಯಾಕಂದರೆ ತನ್ನ ಸಮುಖದಲ್ಲಿ ನಿಲ್ಲುವದಕ್ಕೂ
ತನ್ನನ್ನು ಸೇವಿಸುವದಕ್ಕೂ, ತನಗೆ ಸೇವಕರಾಗಿರುವದಕ್ಕೂ ತ
ನಗೆ ಧೂಪವರ್ಪಿಸುವದಕ್ಕೂ ಕರ್ತನು ನಿಮ್ಮನ್ನು ಆರಿಸಿ ಕೊಂ
ಡಿದ್ದಾನೆ.

೧೨ ಆಗ ಲೇವ್ಯರಾದ ಕೊಹತ್ಯರ ಮಕ್ಕಳಲ್ಲಿ ಅಮಸಾಯನ ಮ
ಗನಾದ ಮಹಾತನೂ, ಅಜರ್ಯನ ಮಗನಾದ ಯೊವೇಲನೂ;
ಮೆರಾರಿಯ ಮಕ್ಕಳಲ್ಲಿ ಅಬ್ದಿಯ ಮಗನಾದ ಕೀಷನೂ, ಯೆಹ
ಲ್ಲೇಲನ ಮಗನಾದ ಅಜರ್ಯನೂ; ಗೆರ್ಷೋನ್ಯರಲ್ಲಿ ಜಿಮ್ಮಳ
ಮಗನಾದ ಯೊವಾಹನೂ, ಯೊವಾಹನ ಮಗನಾದ ಏದೇನೂ;
೧೩ ಎಲಿಚಫಾನನ ಮಕ್ಕಳಲ್ಲಿ ಶಿಮ್ರಿಯೂ, ಯೆಯಿಯೇಲನೂ, ಆ
೧೪ ಸಾಫನ ಮಕ್ಕಳಲ್ಲಿ ಜೆಕರೀಯನೂ, ಮತ್ತನ್ಯನೂ; ಹೆಮಾನನ
ಮಕ್ಕಳಲ್ಲಿ ಯೆಹಿಯೇಲನೂ, ಶಿಮ್ಮನೂ; ಯೆದುತೂನನ ಮಕ್ಕ
೧೫ ಳಲ್ಲಿ ಶೆಮಾಯನೂ, ಉಜ್ಜಿಯೇಲನೂ ಎದ್ದರು. ಇವರು ತಮ್ಮ
ಸಹೋದರರನ್ನು ಕೂಡಿಸಿ, ತಮ್ಮನ್ನು ಪರಿಶುದ್ಧ ಮಾಡಿ ಕೊಂ
ಡು, ಕರ್ತನ ವಾಕ್ಯದಿಂದ ಅರಸನ ಆಜ್ಞೆಯ ಪ್ರಕಾರ, ಕರ್ತನ
೧೬ ಮನೆಯನ್ನು ಶುಚಿ ಮಾಡ ಬಂದರು. ಮತ್ತು ಯಾಜಕರು ಕ
ರ್ತನ ಮನೆಯನ್ನು ಶುಚಿ ಮಾಡ, ಅದರ ಒಳಭಾಗದಲ್ಲಿ ಪ್ರವೇ

ಕೆಸಿ, ಕರ್ತನ ಮಂದಿರದಲ್ಲಿ ಕಂಡ ಮೈಲಿಗೆಯನ್ನು ಕರ್ತನ ಮ
ನೆಯ ಅಂಗಳದೊಳಗೆ ತಂದರು; ಆಗ ಲೇವ್ಯರು ಅದನ್ನು ತೆಗೆ
ದು ಕೊಂಡು, ಕಿದ್ರೋನು ಹಳ್ಳದಲ್ಲಿ ಹಾಕ ಹೊರಗೆ ಬೈದರು.
೧೭ ಅವರು ಮೊದಲನೇ ತಿಂಗಳ ಮೊದಲನೇ ದಿವಸದಲ್ಲಿ ಪರಿಶುದ್ಧ
ಮಾಡ ಆರಂಭಿಸಿ, ಆ ತಿಂಗಳ ಎಂಟನೇ ದಿವಸದಲ್ಲಿ ಕರ್ತನ ಮಂ
ಟಪದ ಮಟ್ಟಿಗೂ ಬಂದರು. ಹೀಗೆಯೇ ಎಂಟು ದಿವಸಗಳಲ್ಲಿ ಕ
ರ್ತನ ಮನೆಯನ್ನು ಪರಿಶುದ್ಧ ಮಾಡಿದರು. ಮತ್ತು ಮೊದಲನೇ
೧೮ ತಿಂಗಳ ಹದಿನಾರನೇ ದಿವಸದಲ್ಲಿ ತೀರಿಸಿದರು. ಆಗ ಅವರು ಅ
ರಸನಾದ ಹಿಜ್ಕೀಯನ ಬಳಿಗೆ ಬಂದು, ಅವನಿಗೆ ಹೇಳಿದರು—ಕರ್ತ
ನ ಎಲ್ಲಾ ಮನೆಯನ್ನೂ, ಹೋಮಪೀಠವನ್ನೂ, ಅದರ ಎಲ್ಲಾ
ಸಾಮಾನುಗಳನ್ನೂ, ಸಮುಖದ ಕೊಟ್ಟಿಯ ಮೇಜನ್ನೂ, ಅದ
೧೯ ರ ಎಲ್ಲಾ ಸಾಮಾನುಗಳನ್ನೂ, ಕುಚಿ ಮಾಡಿದೆವು. ಇದಲ್ಲದೆ ಅ
ರಸನಾದ ಅಹಾಜನು ಅಳ್ಳಿದಾಗ, ತನ್ನ ಅಕೃತ್ಯದಿಂದ ಬಿಸಾಟಿ
ಎಲ್ಲಾ ಸಾಮಾನುಗಳನ್ನು ಸಿದ್ಧ ಮಾಡಿ, ಪರಿಶುದ್ಧ ಮಾಡಿದೆವು;
ಇಗೋ, ಅವು ಕರ್ತನ ಪೀಠದ ಮುಂದೆ ಅವೆ.

೨೦ ಆಗ ಅರಸನಾದ ಹಿಜ್ಕೀಯನು ಉದಯದಲ್ಲಿ ಎದ್ದು, ಪಟ್ಣದ
೨೧ ಪ್ರಧಾನರನ್ನು ಕೂಡಿಸಿ, ಕರ್ತನ ಮನೆಗೆ ಏರಿ ಹೋದನು. ಮ
ತ್ತು ಅವರು ರಾಜ್ಯಕ್ಕೋಸ್ಕರವೂ, ಪರಿಶುದ್ಧ ಸ್ಥಾನಕ್ಕೋಸ್ಕರ
ವೂ, ಯೆಹೂದಕ್ಕೋಸ್ಕರವೂ ಪಾಪದ ಬಲಿಯಾಗಿ ಏಳು
ಹೋರಿಗಳನ್ನೂ, ಏಳು ಟಗರುಗಳನ್ನೂ, ಏಳು ಕುರಿ ಮರಿಗಳ
ನ್ನೂ ಏಳು ಮೇಕೆ ಹೋತುಗಳನ್ನೂ ತಂದರು. ಆಗ ಕರ್ತನ
ಬಲಿಪೀಠದ ಮೇಲೆ ಅವುಗಳನ್ನು ಅರ್ಪಿಸ ಆರೋನನ ಮಕ್ಕಳಾ
೨೨ ದ ಯಾಜಕರಿಗೆ ಹೇಳಿದನು. ಅವರು ಹೋರಿಗಳನ್ನು ಕಡಿದ
ರು. ಆಗ ಯಾಜಕರು ರಕ್ತವನ್ನು ತೆಗೆದು ಕೊಂಡು, ಪೀಠದ
ಮೇಲೆ ಚಿಮಿಕಿಸಿದರು; ಟಗರುಗಳನ್ನು ಕಡಿದು, ರಕ್ತವನ್ನು ತೆಗೆ
ದು ಕೊಂಡು, ಪೀಠದ ಮೇಲೆ ಚಿಮಿಕಿಸಿದರು; ಕುರಿ ಮರಿಗಳನ್ನು
ಕಡಿದು, ರಕ್ತವನ್ನು ತೆಗೆದು ಕೊಂಡು, ಪೀಠದ ಮೇಲೆ ಚಿಮಿಕಿಸಿ
೨೩ ದರು. ಮತ್ತು ಅರಸನ ಮುಂದೆಯೂ ಕೂಟದ ಮುಂದೆಯೂ
ಪಾಪದ ಬಲಿಯಾದ ಮೇಕೆ ಹೋತುಗಳನ್ನು ಹತ್ತರ ತಕ್ಕೊಂ
೨೪ ಡು ಬಂದು, ತಮ್ಮ ಕೈಗಳನ್ನು ಅವುಗಳ ಮೇಲೆ ಇಟ್ಟರು. ಆಗ
ಸಮಸ್ತ ಇಸ್ರಯೇಲಿಗೋಸ್ಕರ ಪಾಪ ಮುಚ್ಚುವದಕ್ಕೆ ಯಾಜ
ಕರು ಅವುಗಳನ್ನು ಕಡಿದು, ಪೀಠದ ಮೇಲೆ ಅವುಗಳ ರಕ್ತದಿಂದ
ಪಾಪ ನಿವಾರಣೆ ಮಾಡಿದರು. ಹೋಮವೂ ಪಾಪದ ಬಲಿಯೂ
೨೫ ಸಮಸ್ತ ಇಸ್ರಯೇಲಿಗೋಸ್ಕರ ಆಗ ಬೇಕೆಂದು, ಅರಸನು ಹೇಳಿ
ದನು. ಇದಲ್ಲದೆ ದಾವೀದನೂ, ಅರಸನ ದರ್ಶಿಯಾದ ಗಾದನೂ,
ಪ್ರವಾದಿಯಾದ ನತಾನನೂ, ಇವರ ಆಜ್ಞೆಯ ಪ್ರಕಾರ, ಅವನು
ತಾಳಗಳನ್ನೂ ವೀಣೆಗಳನ್ನೂ ಕಿನ್ನರಿಗಳನ್ನೂ ಹಿಡಿದವರಾಗಿ ಕ
ರ್ತನ ಮನೆಯಲ್ಲಿ ಲೇವ್ಯರನ್ನು ನಿಲ್ಲಿಸಿದನು. ಯಾಕಂದರೆ ಕರ್ತ
೨೬ ನ ಆಜ್ಞೆಯು ಅವನ ಪ್ರವಾದಿಗಳ ಮುಖಾಂತರ ಹಾಗೆ ಇತ್ತು. ಲೇ
ವ್ಯರು ದಾವೀದನ ವಾದ್ಯಗಳನ್ನೂ, ಯಾಜಕರು ತುತೂರಿಗಳ
೨೭ ನ್ನೂ ಹಿಡಿದು ನಿಂತಿರುವಾಗ, ಹಿಜ್ಕೀಯನು ಪೀಠದ ಮೇಲೆ ಹೋ
ಮವನ್ನು ಅರ್ಪಿಸ ಹೇಳಿದನು. ಹೋಮ ಅರ್ಪಿಸ ಆರಂಭಿಸಿದಾ
ಗ, ತುತೂರಿಗಳಿಂದಲೂ ಇಸ್ರಯೇಲಿನ ಅರಸನಾದ ದಾವೀದನ ವಾ
೨೮ ದ್ಯಗಳಿಂದಲೂ ಕರ್ತನ ಹಾಡು ಆರಂಭವಾಯಿತು. ಆಗ ಕೂಟ
ದವರೆಲ್ಲರೂ ಅಡ್ಡ ಬಿದ್ದರು. ಹೋಮ ಅರ್ಪಿಸಿ ತೀರುವ ಪರ್ಯಂ
ತರ ಹಾಡುಗಾರರು ಹಾಡಿದರು, ತುತೂರಿ ಊದುವವರು ಊದಿದ
೨೯ ರು. ಅವರು ಅರ್ಪಿಸುವದು ತೀರಿದಾಗ, ಅರಸನೂ ಅವನ ಸಂ
೩೦ ಗಡ ಇದ್ದವರೆಲ್ಲರೂ ಬೊಗ್ಗಿ ವಂದಿಸಿದರು. ಇದಲ್ಲದೆ ಅರಸನಾ
ದ ಹಿಜ್ಕೀಯನೂ ಪ್ರಧಾನರೂ ದಾವೀದನ ಮಾತುಗಳಿಂದಲೂ,
ದರ್ಶಿಯಾದ ಆಸಾಫನ ಮಾತುಗಳಿಂದಲೂ ಕರ್ತನನ್ನು ಹೊಗ
ಳ ಬೇಕೆಂದು, ಲೇವ್ಯರಿಗೆ ಹೇಳಿದರು. ಆಗ ಅವರು ಸಂತೋಷ
ವಾಗಿ ಹೊಗಳ್ಳಿ, ಬೊಗ್ಗಿ ಕೊಂಡು, ವಂದಿಸಿದರು.

೩೧ ಮತ್ತು ಹಿಜ್ಕೀಯನು ಅವರಿಗೆ ಉತ್ತರ ಕೊಟ್ಟು—ಈಗ ನೀ
ವು ನಿಮ್ಮನ್ನು ಕರ್ತನಿಗೆ ಪ್ರತಿಷ್ಠೆ ಮಾಡಿದ್ದರಿಂದ, ಸಮೀಪಕ್ಕೆ
ಬಂದು, ಬಲಿಗಳನ್ನೂ ಸ್ತೋತ್ರದ ಬಲಿಗಳನ್ನೂ ಕರ್ತನ ಮನೆಗೆ
ತಕ್ಕೊಂಡು ಬನ್ನಿರಿ, ಅಂದನು. ಆಗ ಕೂಟದವರು ಬಲಿಗಳನ್ನೂ
ಸ್ತೋತ್ರದ ಬಲಿಗಳನ್ನೂ, ಮತ್ತು ಉಚಿತಾರ್ಥವಾಗಿ ಕೊಡ ಮ
೩೨ ನಸ್ಸುಳ್ಳವರು ಹೋಮಗಳನ್ನೂ ತಂದರು. ಕೂಟವು ತಂದ
ಹೋಮಗಳ ಲೆಖ್ಖವೇನಂದರೆ—ಎಪ್ಪತ್ತು ಹೋರಿಗಳು, ನೂರು
ಟಗರುಗಳು, ಇನ್ನೂರು ಕುರಿ ಮರಿಗಳು—ಇವೆಲ್ಲಾ ಕರ್ತನಿಗೆ
33 ಅರ್ಪಿಸಿದ ಹೋಮಗಳಾಗಿದ್ದವು. ಮತ್ತು ಪರಿಶುದ್ಧ ಮಾಡಲ್ಪಟ್ಟಿ
ವುಗಳು ಅರು ನೂರು ಹೋರಿಗಳೂ ಮೂರು ಸಾವಿರ ಕುರಿಗಳೂ
ಇದ್ದವು. ಆದರೆ ಯಾಜಕರು ಸ್ವಲ್ಪ ಜನರಾಗಿದ್ದು, ಹೋಮಗ
೩೪ ಳನ್ನೆಲ್ಲಾ ಸುಲಿಯಲಾರದೆ ಇದ್ದದರಿಂದ, ಕೆಲಸವು ತೀರುವ ಮಟ್ಟಿ
ಗೂ, ಯಾಜಕರು ತಮ್ಮನ್ನು ಪರಿಶುದ್ಧ ಮಾಡಿ ಕೊಳ್ಳುವ ಮ
ಟ್ಟಿಗೂ, ಲೇವ್ಯರಾದ ಅವರ ಸಹೋದರರು ಅವರಿಗೆ ಸಹಾಯ
ವಾಗಿದ್ದರು. ಯಾಕಂದರೆ ಯಾಜಕರಿಗಿಂತ ತಮ್ಮನ್ನು ಪರಿಶು
೩೫ ದ್ಧ ಮಾಡಿ ಕೊಳ್ಳ್ಳ ಲೇವ್ಯರು ಸುಹೃದಯರಾಗಿದ್ದರು. ಇದಲ್ಲ
ದೆ ಹೋಮಗಳೂ, ಸಮಾಧಾನದ ಬಲಿಗಳ ಕೊಬ್ಬೂ, ಹೋಮ
ಕ್ಕೆ ಬೇಕಾದ ಪಾನದ ಅರ್ಪಣೆಗಳೂ ಬಹಳವಾಗಿದ್ದವು. ಹೀಗೆ
೩೬ ಯೇ ಕರ್ತನ ಮನೆಯ ಸೇವೆಯು ಸಿದ್ಧವಾಯಿತು. ಆಗ ದೇವ
ರು ಜನರನ್ನು ಸಿದ್ಧ ಮಾಡಿದ್ದರಿಂದ, ಹಿಜ್ಕೀಯನೂ ಜನರೆಲ್ಲರೂ
ಸಂತೋಷ ಪಟ್ಟರು; ಯಾಕಂದರೆ ಈ ಕಾರ್ಯವು ಅಕಸ್ಮಾ
ತ್ತಾಗಿ ಆಯಿತು.

## ೩೦. ಸಂಧಿ.

೧ ಆಗ ಅವರು ಇಸ್ರಯೇಲಿನ ದೇವರಾದ ಕರ್ತನ ಪಸ್ಕವನ್ನು
ಆಚರಿಸ, ಯೆರೂಸಲೇಮಿನಲ್ಲಿ ಕರ್ತನ ಮನೆಗೆ ಬರುವ ಹಾಗೆ,
ಹಿಜ್ಕೀಯನು ಸಮಸ್ತ ಇಸ್ರಯೇಲಿಗೂ ಹೇಳಿ ಕಳುಹಿಸಿ, ಎಫ್ರ
ಯಿಮ್ಯರಿಗೂ ಮನಸ್ಸೆಯವರಿಗೂ ನಿರೂಪಗಳನ್ನು ಬರೆದ
೨ ನು. ಯೆರೂಸಲೇಮಿನಲ್ಲಿರುವ ಅರಸನೂ ಅವನ ಪ್ರಧಾನರೂ
ಸಮಸ್ತ ಕೂಟವೂ ಎರಡನೇ ತಿಂಗಳಲ್ಲಿ ಪಸ್ಕವನ್ನು ಆಚರಿಸ
3 ಯೋಚಿಸಿ ಕೊಂಡರು. ಯಾಕಂದರೆ ಯಾಜಕರು ತಮ್ಮನ್ನು
ತಕ್ಕ ಹಾಗೆ ಪರಿಶುದ್ಧ ಮಾಡಿ ಕೊಳ್ಳದೆ ಇದ್ದದರಿಂದಲೂ, ಜನರು
ಯೆರೂಸಲೇಮಿಗೆ ಕೂಡಿ ಬಾರದೆ ಇದ್ದದರಿಂದಲೂ, ಆ ಕಾಲ
೪ ದಲ್ಲಿ ಆಚರಿಸಲಾರದೆ ಇದ್ದರು. ಈ ಕಾರ್ಯವು ಅರಸನ ದೃ
ಷ್ಟಿಗೂ ಸಮಸ್ತ ಕೂಟದ ದೃಷ್ಟಿಗೂ ನೆಟ್ಟಿಗೆಯಾಗಿ ಕಾಣ
೫ ಸಿತು. ಆದದರಿಂದ ಅವರು ಯೆರೂಸಲೇಮಿನಲ್ಲಿ ಇಸ್ರಯೇಲಿನ
ದೇವರಾದ ಕರ್ತನಿಗೆ ಪಸ್ಕವನ್ನು ಆಚರಿಸ ಬರ ಬೇಕೆಂದು, ಬೇ
ರ್ಷೆಬವು ಮೊದಲುಗೊಂಡು ದಾನಿನ ಮಟ್ಟಿಗೂ ಸಮಸ್ತ ಇ



ಸ್ರಯೇಲಿನಲ್ಲಿ ಕೂಗಿ ಸಾರ ನಿರ್ಣಯಿಸಿದರು. ಯಾಕಂದರೆ
ಬರೆಯಲ್ಪಟ್ಟ ಹಾಗೆ ಅವರು ಅದನ್ನು ಬಹು ಕಾಲದಿಂದ ಆಚರಿ
ಸಿದ್ದಿಲ್ಲ.

೬ ಅದೇ ಪ್ರಕಾರ ಓಟಗಾರರು ಅರಸನ ಕೈಯಿಂದಲೂ ಅವನ
ಪ್ರಧಾನರ ಕೈಯಿಂದಲೂ ನಿರೂಪಗಳನ್ನು ತಕ್ಕೊಂಡು, ಅರಸ
ನ ಅಪ್ಪಣೆಯ ಪ್ರಕಾರ ಸಮಸ್ತ ಇಸ್ರಯೇಲ್ ಯೆಹೂದ ದೇಶ
ಗಳ ಮೇಲೆ ಹೋಗಿ, ಹೇಳಿದ್ದೇನಂದರೆ—ಇಸ್ರಯೇಲ ಮಕ್ಕಳೇ,
ಅಬ್ರಹಾಮನ, ಇಸಾಕನ, ಇಸ್ರಯೆಲನ ಕರ್ತನಾದ ದೇವರ ಕ
ಡೆಗೆ ತಿರುಗಿರಿ. ಆಗ ಅವನು ಅಡೂರಿನ ಅರಸುಗಳ ಕೈಗೆ ತಪ್ಪಿ
೭ ಸಿ ಕೊಂಡ ನಿಮ್ಮ ಉಳಿದವರ ಬಳಿಗೆ ತಿರುಗುವನು. ತಮ್ಮ
ಪಿತೃಗಳ ದೇವರಾದ ಕರ್ತನಿಗೆ ಅಕೃತ್ಯ ಮಾಡದಿಂಥ, ನೀ
ವು ನೋಡುವ ಹಾಗೆ ನಾಶನಕ್ಕೆ ಒಪ್ಪಿಸಲ್ಪಟ್ಟಂಥ ನಿಮ್ಮ ಪಿತೃ
ಗಳ ಹಾಗೆಯೂ, ನಿಮ್ಮ ಸಹೋದರರ ಹಾಗೆಯೂ ಇರ ಬೇ
೮ ಡಿರಿ. ಆದದರಿಂದ ನಿಮ್ಮ ಪಿತೃಗಳ ಹಾಗೆ ನಿಮ್ಮ ಕುತ್ತಿಗೆಯ
ನ್ನು ಕಠಿಣ ಪಡಿಸ ಬೇಡಿರಿ; ಕರ್ತನಿಗೆ ಕೈ ಕೊಟ್ಟು, ಅವನು
ಯುಗ ಯುಗಕ್ಕೂ ಪರಿಶುದ್ಧ ಮಾಡಿದ ಅವನ ಪರಿಶುದ್ಧ ಸ್ಥಾ
ನದಲ್ಲಿ ಪ್ರವೇಶಿಸಿ, ನಿಮ್ಮ ದೇವರಾದ ಕರ್ತನನ್ನು ಸೇವಿಸಿರಿ; ಆ
೯ ಗ ಕೋಪದ ಉರಿಯು ಕೋಪವನ್ನು ಬಿಟ್ಟು ತಿರುಗುವನು. ಯಾ
ಕಂದರೆ ನೀವು ಕರ್ತನ ಕಡೆಗೆ ತಿರುಗಿದರೆ, ನಿಮ್ಮ ಸಹೋದರರೂ
ನಿಮ್ಮ ಮಕ್ಕಳೂ ತಿರಿಗಿ ಈ ದೇಶಕ್ಕೆ ಬರುವ ಹಾಗೆ, ತಮ್ಮನ್ನು
ಕೆಡೆಯಾಗಿ ಪೈದವರ ಸಮುಖದಲ್ಲಿ ಅಂತಃಕರಣವನ್ನು ಹೊಂ
ದುವರು. ಯಾಕಂದರೆ ನಿಮ್ಮ ದೇವರಾದ ಕರ್ತನು ದಯವೂ
ಅಂತಃಕರಣವೂ ಉಳ್ಳವನಾಗಿದ್ದಾನೆ; ನೀವು ಅವನ ಕಡೆಗೆ ತಿ
ರುಗಿದರೆ, ಅವನು ನಿಮ್ಮ ಕಡೆಯಿಂದ ತನ್ನ ಮುಖ ತೊಲಗಿಸ
೧೦ ನು. ಹೀಗೆಯೇ ಓಟಗಾರರು ಎಫ್ರಯಿಮನ, ಮನಸ್ಸೆಯ ದೇ
ಶದಲ್ಲಿ ಜೆಬುಲೋನ್ ಪರ್ಯಂತರ ಸಂಚರಿಸಿ, ಪಟ್ಣ ಪಟ್ಣವನ್ನು
ಹಾದು ಹೋದರು. ಆದರೆ ಅವರು ಇವರನ್ನು ನೋಡಿ, ನಕ್ಕು,
೧೧ ಗೇಲಿ ಮಾಡಿದರು. ಆದರೆ ಆಶೇರನು ಮನಸ್ಸೆ ಜೆಬುಲೋನ್
ಇವರವರಲ್ಲಿ ಕೆಲವರು ತಮ್ಮನ್ನು ತಗ್ಗಿಸಿ ಕೊಂಡು, ಯೆರೂಸಲೇ
೧೨ ಮಿಗೆ ಬಂದರು. ಇದಲ್ಲದೆ ಕರ್ತನ ವಾಕ್ಯದಿಂದುಂಟಾದ ಅರಸ
ನ, ಪ್ರಧಾನರ ಆಜ್ಞೆಯನ್ನು ಕೈ ಕೊಳ್ಳ್ಳ, ಅವರಿಗೆ ಒಂದೇ ಹೃ
ದಯವನ್ನು ಕೊಡ ದೇವರ ಕೈ ಯೆಹೂದದವರಲ್ಲಿ ಇತ್ತು.

೧೩ ಆದದರಿಂದ ಎರಡನೇ ತಿಂಗಳಲ್ಲಿ ಹುಳಿ ಇಲ್ಲದ ಕೊಟ್ಟಿಯ
ಹಬ್ಬವನ್ನು ಆಚರಿಸುವದಕ್ಕೆ ಯೆರೂಸಲೇಮಿನಲ್ಲಿ ಬಹಳ ಜನ
೧೪ ರು ಕೂಡಿ ಕೊಂಡು, ಮಹಾ ದೊಡ್ಡ ಕೂಟವಾಯಿತು. ಆಗ
ಅವರು ಎದ್ದು, ಯೆರೂಸಲೇಮಿನಲ್ಲಿದ್ದ ಬಲಿಪೀಠಗಳನ್ನು ತೆಗೆ
ದು ಹಾಕಿದರು; ಮತ್ತು ಧೂಪಪೀಠಗಳನ್ನೆಲ್ಲಾ ತೆಗೆದು ಬಿಟ್ಟು,
೧೫ ಕಿದ್ರೋನ್ ಹಳ್ಳ್ಳದಲ್ಲಿ ಹಾಕಿದರು. ಮತ್ತು ಎರಡನೇ ತಿಂಗಳ ಹ
ದಿನಾಲ್ಕನೇ ದಿವಸದಲ್ಲಿ ಪಸ್ಕವನ್ನು ಕಡಿದರು. ಮತ್ತು ಯಾಜಕ
ರೂ ಲೇವ್ಯರೂ ಲಜ್ಜೆಯನ್ನು ಹೊಂದಿ, ತಮ್ಮನ್ನು ಪರಿಶುದ್ಧ
ಮಾಡಿ ಕೊಂಡು, ಕರ್ತನ ಮನೆಯೊಳಗೆ ಹೋಮಗಳನ್ನು ತಂ
೧೬ ದರು. ಇದಲ್ಲದೆ ಅವರು ದೇವರ ಮನುಷ್ಯನಾದ ಮೋಶೆಯ
ನ್ಯಾಯ ಪ್ರಮಾಣದ ಹಾಗೆ, ತಮ್ಮ ಪದ್ಧತಿಯ ಪ್ರಕಾರ, ತಮ್ಮ
ತಮ್ಮ ಸ್ಥಳದಲ್ಲಿ ನಿಂತು, ಯಾಜಕರು ಲೇವ್ಯರ ಕೈಯಿಂದ ರಕ್ತ
ವನ್ನು ತೆಗೆದು ಕೊಂಡು, ಚಿಮಿಕಿಸಿದರು.

೧೭ ಯಾಕಂದರೆ ಕೂಟದಲ್ಲಿ ಅನೇಕರು ಅಪರಿಶುದ್ಧರಾಗಿದ್ದರು.
ಆದದರಿಂದ ಲೇವ್ಯರು ಅಶುದ್ಧರಾದ ಎಲ್ಲರ ನಿಮಿತ್ತ ಅವರನ್ನು
ಕರ್ತನಿಗೆ ಪರಿಶುದ್ಧ ಮಾಡುವ ಹಾಗೆ ಪಸ್ಕ ಬಲಿಗಳನ್ನು ಕಡಿಯು
೧೮ ವದಕ್ಕೆ ಇದ್ದರು. ಯಾಕಂದರೆ ಜನರಲ್ಲಿ ಅನೇಕರು—ಎಫ್ರ
ಯಿಮಾ, ಮನಸ್ಸೆ, ಇಸ್ಸಕಾರ್, ಜೆಬುಲೋನ್, ಇವರವರಲ್ಲಿ ಅನೇ
ಕರು ತಮ್ಮನ್ನು ಶುದ್ಧ ಮಾಡಿಕೊಳ್ಳ್ಳದೆ, ಬರಹದ ಪ್ರಕಾರವಲ್ಲದೆ
೧೯ ಪಸ್ಕವನ್ನು ಉಂಡರು. ಆದರೆ ಹಿಜ್ಕೀಯನು ಅವರಿಗೋಸ್ಕರ
ಪ್ರಾರ್ಥಿಸಿದ್ದೇನಂದರೆ—ಯಾವನಾದರೂ ಪರಿಶುದ್ಧ ಸ್ಥಾನದ ಶು
ದ್ಧಿಯ ಪ್ರಕಾರ ಶುಚಿಯಾಗದೆ ಇದ್ದರೂ, ತನ್ನ ಪಿತೃಗಳ ಕ
ರ್ತನಾದ ದೇವರಾಗಿರುವ ದೇವರನ್ನು ಹುಡುಕ ತನ್ನ ಹೃದಯ
ವನ್ನು ಸಿದ್ಧ ಮಾಡುವವನ ಪಾಪವನ್ನು ಒಳ್ಳೇ ಕರ್ತನು ಮು
೨೦ ಚ್ಚಲಿ. ಕರ್ತನು ಹಿಜ್ಕೀಯನ ಮಾತು ಕೇಳ್ಳಿ, ಜನರನ್ನು ಗುಣ
ಮಾಡಿದನು.

೨೧ ಆದದರಿಂದ ಯೆರೂಸಲೇಮಿನಲ್ಲಿದ್ದ ಇಸ್ರಯೇಲಿನ ಮಕ್ಕಳು
ಹುಳಿ ಇಲ್ಲದ ಕೊಟ್ಟಿಯ ಹಬ್ಬವನ್ನು ಏಳು ದಿವಸ ಸಂತೋಷ
ದಿಂದ ಆಚರಿಸಿದರು. ಇದಲ್ಲದೆ ಲೇವ್ಯರೂ ಯಾಜಕರೂ ಬಲ
ದ ವಾದ್ಯಗಳಿಂದ ಕರ್ತನನ್ನು ಹೊಗಳ್ಳಿ, ಪ್ರತಿ ದಿನದಲ್ಲಿಯೂ ಕ
೨೨ ರ್ತನನ್ನು ಸ್ತುತಿಸಿದರು. ಇದಲ್ಲದೆ ಹಿಜ್ಕೀಯನು ಕರ್ತನ ಉತ್ತ
ಮವಾದ ಬೋಧನೆಯನ್ನು ಬೋಧಿಸಿದ ಸಮಸ್ತ ಲೇವ್ಯರಿಗೆ ಸ
ಮಾಧಾನವಾಗಿ ಮಾತಾಡಿದನು. ಮತ್ತು ಅವರು ಹಬ್ಬವೆಲ್ಲಾ ಏ
ಳು ದಿವಸದ ಪರ್ಯಂತರ ಭೋಜಿಸುತ್ತಾ, ಸಮಾಧಾನದ ಬಲಿ
ಗಳನ್ನು ಅರ್ಪಿಸುತ್ತಾ, ತಮ್ಮ ಪಿತೃಗಳ ದೇವರಾದ ಕರ್ತನಿಗೆ
ಅರಿಕೆ ಮಾಡುತ್ತಾ ಇದ್ದರು.

೨3 ಆದರೆ ಕೂಟವೆಲ್ಲಾ ಮತ್ತೂ ಏಳು ದಿವಸ ಆಚರಿಸುವದಕ್ಕೆ
ಯೋಚಿಸಿ ಕೊಂಡ ಮೇಲೆ, ಏಳು ದಿವಸ ಸಂತೋಷವಾಗಿ ಆ
೨೪ ಚರಿಸಿದರು. ಯಾಕಂದರೆ ಯೆಹೂದದ ಅರಸನಾದ ಹಿಜ್ಕೀಯ
ನು ಕೂಟಕ್ಕೆ ಸಾವಿರ ಹೋರಿಗಳನ್ನೂ ಏಳು ಸಾವಿರ ಕುರಿಗ
ಳನ್ನೂ ಅರ್ಪಿಸ ಕೊಟ್ಟನು. ಇದಲ್ಲದೆ ಪ್ರಧಾನರು ಕೂಟಕ್ಕೆ
ಸಾವಿರ ಹೋರಿಗಳನ್ನೂ ಹತ್ತು ಸಾವಿರ ಕುರಿಗಳನ್ನೂ ಅರ್ಪಿಸ
ಕೊಟ್ಟರು. ಮತ್ತು ಯಾಜಕರಲ್ಲಿ ಅನೇಕರು ತಮ್ಮನ್ನು ಪರಿಶು
೨೫ ದ್ಧ ಮಾಡಿ ಕೊಂಡರು. ಯೆಹೂದದ ಕೂಟದವರೆಲ್ಲರೂ, ಯಾ
ಜಕರೂ, ಲೇವ್ಯರೂ ಇಸ್ರಯೇಲಿನಿಂದ ಬಂದ ಸಮಸ್ತ ಕೂಟ
ವೂ ಇಸ್ರಯೇಲಿನ ದೇಶದಿಂದ ಬಂದ ಪರದೇಶಿಗಳೂ ಯೆಹೂದ
೨೬ ದಲ್ಲಿ ವಾಸವಾಗಿರುವವರೂ ಸಂತೋಷ ಪಟ್ಟರು. ಹೀಗೆಯೇ
ಯೆರೂಸಲೇಮಿನಲ್ಲಿ ಮಹಾ ಸಂತೋಷ ಉಂಟಾಗಿತ್ತು. ನಿಶ್ಚ
ಯವಾಗಿ ಇಸ್ರಯೇಲಿನ ಅರಸನಾಗಿರುವ ದಾವೀದನ ಮಗನಾದ
ಸೊಲೊಮೊನನ ಕಾಲ ಮೊದಲ್ಗೊಂಡು ಯೆರೂಸಲೇಮಿನಲ್ಲಿ
೨೭ ಇದರ ಹಾಗೆ ಇದ್ದದ್ದಿಲ್ಲ. ಆಗ ಯಾಜಕರೂ ಲೇವ್ಯರೂ ಎದ್ದು,
ಜನರನ್ನು ಆಶೀರ್ವದಿಸಿದರು. ಮತ್ತು ಅವರ ಶಬ್ದವು ಕೇಳ್ಳಲ್ಪಟ್ಟಿ
ತು; ಅವರ ಪ್ರಾರ್ಥನೆಯು ಅವನ ಪರಿಶುದ್ಧವಾದ ನಿವಾಸಸ್ಥಾನ
ಕ್ಕೆ ಆಕಾಶಕ್ಕೆ ಬಂತು.

## ೩೧. ಸಂಧಿ.

೧ ಇವೆಲ್ಲಾ ತೀರಿದ ತರುವಾಯ ಅಲ್ಲಿ ಇರುವವರಾದ ಸಮಸ್ತ
ಇಸ್ರಯೇಲ್ಯರೂ ಯೆಹೂದದ ಪಟ್ಣಗಳಿಗೆ ಹೊರಟು ಹೋಗಿ,

ವಿಗ್ರಹಗಳನ್ನು ಮುರಿದು, ತೋಪುಗಳನ್ನು ಕತ್ತಿದು, ಸಮಸ್ತ ಯೆ
ಹೂದ ಬೆನ್ಯಮಿನ್ ಎಫ್ರಯಿಾಂ ಮನಸ್ಸೆ ದೇಶಗಳಲ್ಲಿ ಅವುಗಳ
ನ್ನೆಲ್ಲಾ ತೀರಿಸುವ ಪರ್ಯಂತರ, ಮೇಡುಗಳನ್ನೂ ಬಲಿಪೀಠಗ
ಳನ್ನೂ ಕೆಡವಿ ಹಾಕಿದರು. ಆಗ ಇಸ್ರಯೇಲ ಮಕ್ಕಳೆಲ್ಲರು ತ
ಮ್ಮ ತಮ್ಮ ಸ್ವಾಸ್ಥ್ಯಗಳಿಗೂ ತಮ್ಮ ತಮ್ಮ ಪಟ್ಟಣಗಳಿಗೂ ತಿರಿ
ಗಿ ಹೋದರು.

೨ ಮತ್ತು ಹೆಜ್ಕೀಯನು ಅವನವನ ಸೇವೆಯ ಪ್ರಕಾರ ಯಾಜ
೩ ಕರ ಲೇವ್ಯರ ಒಂತುಗಳನ್ನು ನೇಮಿಸಿದನು. ಹೋಮಗಳನ್ನೂ
ಸಮಾಧಾನದ ಬಲಿಗಳನ್ನೂ ಅರ್ಪಿಸುವದಕ್ಕೂ, ಸೇವಿಸುವದ
ಕ್ಕೂ, ಕರ್ತನ ಗುಡಾರಗಳ ಬಾಗಲುಗಳಲ್ಲಿ ಸ್ತೊತ್ರಗಳನ್ನು
ಕೊಂಡಾಡುವದಕ್ಕೂ ಹೊಗಳುವದಕ್ಕೂ ಯಾಜಕರನ್ನೂ ಲೇ
೪ ವ್ಯರನ್ನೂ ನೇಮಿಸಿದನು. ಮತ್ತು ಅವನು ಕರ್ತನ ನ್ಯಾಯ ಪ್ರ
ಮಾಣದಲ್ಲಿ ಬಕೆದ ಪ್ರಕಾರ, ಉದಯಕಾಲದ ಸಾಯಂಕಾಲದ
ಹೋಮಗಳಿಗೋಸ್ಕರವೂ, ಸಬ್ಬತುಗಳಲ್ಲಿಯೂ ಶುದ್ಧ ಪಾ
ತ್ರಗಳಲ್ಲಿಯೂ ನೇಮಿಸಿದ ಹಬ್ಬಗಳಲ್ಲಿಯೂ ಬೇಕಾದ ಹೋ
ಮಗಳಿಗೋಸ್ಕರವೂ ಅರಸನ ಸ್ಥಿತಿಯಿಂದ ಅವನ ಭಾಗವನ್ನು
೫ ನೇಮಿಸಿದನು. ಮತ್ತು ಯಾಜಕರೂ ಲೇವ್ಯರೂ ಕರ್ತನ ನ್ಯಾಯ
ಪ್ರಮಾಣದಲ್ಲಿ ಬಲಗೊಳ್ಳುವ ನಿಮಿತ್ತ, ಅವರಿಗೆ ತಕ್ಕ ಭಾಗವ
ನ್ನು ಕೊಡ ಬೇಕೆಂದು ಯೆರೂಸಲೇಮಿನಲ್ಲಿರುವ ಜನರಿಗೆ ಹೇಳಿ
೬ ದನು. ಈ ಮಾತು ಹೊರಗೆ ಬಂದಾಗಲೇ ಇಸ್ರಯೇಲ ಮಕ್ಕಳು
ಧಾನ್ಯ, ದ್ರಾಕ್ಷೇರಸ, ಎಣ್ಣೆ, ಜೇನುತುಪ್ಪ, ಹೊಲಗಳ ಹುಟ್ಟುವ
ಳಿ, ಇವುಗಳ ಮೊದಲನೇ ಪಾಲನ್ನು ಬಹಳವಾಗಿ ಬಳಗೆ ತಂದರು.
ಹಾಗೆಯೇ ಸಮಸ್ತ ವಸ್ತುಗಳಲ್ಲಿ ಹತ್ತರಲ್ಲೊಂದು ಪಾಲನ್ನು
೭ ಬಹಳವಾಗಿ ತಂದರು. ಇದಲ್ಲದೆ ಯೆಹೂದ ಪಟ್ಟಣಗಳಲ್ಲಿ ನಿವಾಸ
ವಾಗಿರುವ ಇಸ್ರಯೇಲ್ ಯೆಹೂದ ಮಕ್ಕಳು ದನಗಳಲ್ಲಿಯೂ
ಕುರಿಗಳಲ್ಲಿಯೂ ಹತ್ತರಲ್ಲೊಂದು ತಂದರು. ಮತ್ತು ತಮ್ಮ ದೇ
ವರಾದ ಕರ್ತನಿಗೆ ಪರಿಶುದ್ಧ ಮಾಡಿದ ಪರಿಶುದ್ಧ ವಸ್ತುಗಳಲ್ಲಿ ಹ
ತ್ತರಲ್ಲೊಂದು ಪಾಲು ತಂದು, ಕುಪ್ಪೆ ಕುಪ್ಪೆಯಾಗಿ ಇಟ್ಟರು.
೮ ಮೂರನೇ ತಿಂಗಳಲ್ಲಿ ಕುಪ್ಪೆಗಳ ತಳವಿಡ ಆರಂಭಿಸಿ, ಏಳನೇ ತಿಂ
೯ ಗಳಲ್ಲಿ ತೀರಿಸಿದರು. ಹೆಜ್ಕೀಯನೂ ಪ್ರಧಾನರೂ ಬಂದು, ಕುಪ್ಪೆಗ
ಳನ್ನು ನೋಡಿದಾಗ, ಅವರು ಕರ್ತನನ್ನೂ ಅವನ ಜನವಾದ ಇ
೧೦ ಸ್ರಯೇಲನ್ನೂ ಆಶೀರ್ವದಿಸಿದರು. ಆಗ ಹೆಜ್ಕೀಯನು ಕುಪ್ಪೆಗ
ಳನ್ನು ಕುರಿತು ಯಾಜಕರನ್ನೂ ಲೇವ್ಯರನ್ನೂ ವಿಚಾರಿಸಿದನು.

೧೧ ಮತ್ತು ಚದೋಕನ ಮನೆಯವನಾಗಿರುವ ಪ್ರಧಾನ ಯಾಜ
ಕನಾದ ಅಜರ್ಯನು ಅವನಿಗೆ ಹೇಳಿದ್ದೇನಂದರೆ—ಕರ್ತನ ಮನೆ
ಗೆ ಕಾಣಿಕೆಗಳನ್ನು ತರ ಆರಂಭಿಸಿದಂದಿನಿಂದ ನಮಗೆ ತಿನ್ನುವದ
ಕ್ಕೆ ಸಂಪೂರ್ಣವಿತ್ತು; ಮತ್ತು ಉಳಿದದ್ದು ಬಹಳವಾಯಿತು;
ಯಾಕಂದರೆ ಕರ್ತನು ತನ್ನ ಜನರನ್ನು ಆಶೀರ್ವದಿಸಿದ್ದಾನೆ.
೧೨ ಆದದರಿಂದ ಉಳಿದದ್ದು ಈ ರಾಶಿಯಾಯಿತು, ಅಂದನು. ಆಗ ಹೆ
ಜ್ಕೀಯನು ಕರ್ತನ ಮನೆಯಲ್ಲಿ ಉಗ್ರಾಣಗಳನ್ನು ಸಿದ್ಧ ಮಾ
೧೩ ಡ ಹೇಳಿದನು. ಅವರು ಅವುಗಳನ್ನು ಸಿದ್ಧ ಮಾಡಿದ ಮೇಲೆ ಕಾ
ಣಿಕೆಗಳನ್ನೂ ಹತ್ತರಲ್ಲಿ ಒಂದನೇ ಭಾಗಗಳನ್ನೂ ಪರಿಶುದ್ಧ ಮಾ
ಡಲ್ಪಟ್ಟಿವುಗಳನ್ನೂ ನಂಬಿಕೆಯಾಗಿ ಬಳಗೆ ತಂದರು. ಇವುಗಳ
ಮೇಲೆ ಲೇವ್ಯನಾದ ಕೆನನ್ಯನು ನಾಯಕನಾಗಿದ್ದನು; ಅವನ ಸ
೧೪ ಹೋದರನಾದ ಶಿಮ್ಮನು ಎರಡನೆಯವನಾಗಿದ್ದನು. ಇದಲ್ಲದೆ ಅ
ರಸನಾದ ಹೆಜ್ಕೀಯನ ಅಪ್ಪಣೆಯಿಂದಲೂ, ದೇವರ ಮನೆಯ
ನಾಯಕನಾದ ಅಜರ್ಯನ ಅಪ್ಪಣೆಯಿಂದಲೂ ಯೆಹಿಯೇಲ
ನೂ, ಅಜಜ್ಯನೂ, ನಹಾತನೂ, ಅಸಹೇಲನೂ, ಯೆರೀಮೋತ
ನೂ, ಯೊಜಬಾದನೂ, ಎಲ್ಯೇಲನೂ, ಇಸ್ಮಕ್ಯನೂ, ಮಹಾತ
ನೂ, ಬೆನಾಯನೂ, ಇವರು ಕೆನನ್ಯನ, ಅವನ ಸಹೋದರನಾ
೧೫ ದ ಶಿಮ್ಮನ ಕೈ ಕೆಳಗೆ ವಿಚಾರಣೇ ಕರ್ತರಾಗಿದ್ದರು. ಇದಲ್ಲದೆ
ಲೇವ್ಯನಾಗಿರುವ ಇಮ್ನನ ಮಗನಾದ ಕೋರೆಯು ಎಂಬ ಪೂ
ರ್ವದಿಕ್ಕಿನಲ್ಲಿರುವ ದ್ವಾರಪಾಲಕನು ಕರ್ತನ ಕಾಣಿಕೆಗಳನ್ನೂ
ಮಹಾ ಪರಿಶುದ್ಧವಾದವುಗಳನ್ನೂ ಪಾಲು ಹಂಚುವದಕ್ಕೆ, ದೇವ
ರಿಗೆ ಉಚಿತಾರ್ಥವಾಗಿ ಅರ್ಪಿಸಿದ ಅರ್ಪಣೆಗಳ ಮೇಲೆ ಇದ್ದ
೧೬ ನು. ಇವನ ತರುವಾಯ ಯಾಜಕರ ಪಟ್ಟಣಗಳಲ್ಲಿ ತಮ್ಮ ಸಹೋ
ದರರಿಗೆ ಒಂತು ಒಂತಾಗಿ ಹಿರಿಯರಿಗೂ ಕಿರಿಯರಿಗೂ ಪಾಲು
ಹಂಚುವದಕ್ಕೆ, ಎಡೇನನೂ, ಮಿನ್ಯಮಿನನೂ, ಯೆಷೂವನೂ,
೧೭ ಕೆಮಾಯನೂ, ಅಮರ್ಯನೂ, ಶೆಕನ್ಯನೂ ಇದ್ದರು. ಶೆಬ್ಬದ
ಲ್ಲಿ ಬಕೆಯೆಲ್ಪಟ್ಟ ಮೂರು ವರುಷ ಪ್ರಾಯ ಮೊದಲ್ಗೊಂಡು
ಮೇಲಿರುವ ಗಂಡು ಮಕ್ಕಳು ಹೊರ್ತಾಗಿ, ಕರ್ತನ ಮನೆಯ
ಲ್ಲಿ ಪ್ರವೇಶಿಸುವವರೆಲ್ಲರಿಗೆ, ಅವರ ಕಾವಲಿಗಳಲ್ಲಿ ಅವರ ಒಂತು
ಗಳ ಪ್ರಕಾರ ಅವರ ಸೇವೆಗೆ ಅವರವರ ದಿನಕಟ್ಟಳೆಯನ್ನು ಕೊ
ಡುವದಕ್ಕೂ, ಹಾಗೆಯೇ ಇಪ್ಪತ್ತು ವರುಷ ಪ್ರಾಯ ಮೊದ
ಲ್ಗೊಂಡು ಅವರ ತಂದೆಗಳ ಮನೆಯ ಹಾಗೆ ಬಕೆಯೆಲ್ಪಟ್ಟ, ಅವ
ರವರ ಕಾವಲಿಗಳಲ್ಲಿಯೂ ಅವರವರ ಒಂತುಗಳಲ್ಲಿಯೂ ಇರು
೧೮ ವ ಯಾಜಕರಿಗೂ, ಲೇವ್ಯರಿಗೂ, ಅವರ ಸಮಸ್ತ ಕೂಟದಲ್ಲಿ
ಲೆಖ್ಖದೊಳಗೆ ಬಕೆಯೆಲ್ಪಟ್ಟ ಅವರ ಚಿಕ್ಕವರಿಗೂ, ಹೆಂಡರಿಗೂ,
ಕುಮಾರರಿಗೂ, ಕುಮಾರ್ತೆಗಳಿಗೂ, ಕೊಡುವದಕ್ಕೂ ಇದ್ದ
ರು. ಯಾಕಂದರೆ ಅವರು ತಮ್ಮ ಉದ್ಯೋಗದಲ್ಲಿ ತಮ್ಮನ್ನು
೧೯ ಪರಿಶುದ್ಧವಾಗಿ ಪರಿಶುದ್ಧ ಮಾಡಿ ಕೊಂಡರು. ಇದಲ್ಲದೆ ಯಾಜ
ಕರಲ್ಲಿರುವ ಸಮಸ್ತ ಗಂಡುಸರಿಗೂ ಲೇವ್ಯರಲ್ಲಿ ಬಕೆಯೆಲ್ಪಟ್ಟಿದ್ದ
ಸಮಸ್ತರಿಗೂ ಪಾಲನ್ನು ಕೊಡುವದಕ್ಕೆ, ತಮ್ಮ ಪಟ್ಟಣಗಳ ಅಗ್ರ
ಹಾರಗಳಲ್ಲಿರುವ ಯಾಜಕರಾದ ಆರೋನನ ಮಕ್ಕಳಲ್ಲಿ ಹೆಸರಿ
ನಿಂದ ಬಕೆಯೆಲ್ಪಟ್ಟ ಮನುಷ್ಯರು ಪ್ರತಿಪಟ್ಟಣದಲ್ಲಿ ಇದ್ದರು.

೨೦ ಹೀಗೆಯೇ ಹೆಜ್ಕೀಯನು ಸಮಸ್ತ ಯೆಹೂದದಲ್ಲಿ ತನ್ನ ದೇ
ವರಾದ ಕರ್ತನ ಸಮುಖದಲ್ಲಿ ಉತ್ತಮವಾದದ್ದನ್ನೂ, ನೆಟ್ಟನೆ
೨೧ ಯಾದದ್ದನ್ನೂ ಸತ್ಯವಾದದನ್ನೂ ನಡಿಸಿದನು. ಇದಲ್ಲದೆ ದೇವ
ರ ಮನೆಯ ಸೇವೆಯಲ್ಲಿಯೂ, ನ್ಯಾಯ ಪ್ರಮಾಣದಲ್ಲಿ
ಯೂ, ಅಜ್ಞೆಗಳಲ್ಲಿಯೂ ತನ್ನ ದೇವರನ್ನು ಹುಡುಕ ಆರಂಭಿಸಿ
ದ ಸಮಸ್ತ ಕಾರ್ಯಗಳಲ್ಲಿ ಅವನು ತನ್ನ ಪೂರ್ಣ ಹೃದಯ
ದಿಂದ ಮಾಡಿ, ಸಿದ್ಧಿ ಹೊಂದಿದನು.

## ೨೨. ಸಂಧಿ.

೧ ಈ ಕಾರ್ಯಗಳೂ ಇವುಗಳ ಸತ್ಯವೂ ಇದ್ದ ತರುವಾಯ
ಅಷೂರಿನ ಅರಸನಾದ ಸನ್ಹೇರೀಬನು ಹೊರಟು ಬಂದು, ಯೆಹೂ
ದದಲ್ಲಿ ಪ್ರವೇಶಿಸಿ, ಕೋಟೆಯುಳ್ಳ ಪಟ್ಟಣಗಳ ಬಳಿಯಲ್ಲಿ ದಂಡಿ
ಳಿದು, ಅವುಗಳನ್ನು ತನಗಾಗಿ ಸೀಳಿ ಬಿಡ ಬೇಕೆಂದು, ಅಂದು
ಕೊಂಡನು.
೨ ಸನ್ಹೇರೀಬನು ಬಂದದ್ದನ್ನೂ, ಅವನು ಯೆರೂಸಲೇಮಿನ ಮೇಲೆ



ಯುದ್ಧ ಮಾಡ ಮುಖ ತಿರುಗಿಸಿದ್ದನ್ನೂ ಹೆಜ್ಕೀಯನು ಕಂಡಾಗ,
೩ ಅವನು ಪಟ್ಟಣದ ಹೊರಗಿರುವ ನೀರು ಬುಗ್ಗೆಗಳನ್ನು ಮುಚ್ಚಿ ಸುವ
ದಕ್ಕೆ, ತನ್ನ ಪ್ರಧಾನರ ಸಂಗಡಲೂ ತನ್ನ ಪರಾಕ್ರಮಶಾಲಿಗಳ
ಸಂಗಡಲೂ ಯೋಚಿಸಿ ಕೊಂಡನು. ಅವರು ಅವನಿಗೆ ಸಹಾ
೪ ಯ ಕೊಟ್ಟಿರು. ಆದದರಿಂದ ಅನೇಕ ಜನರು ಕೂಡಿಕೊಂಡು,
ನೀರು ಬುಗ್ಗೆಗಳನ್ನೂ ದೇಶದ ಮಧ್ಯದಲ್ಲಿ ಹರಿಯುವ ಹಳ್ಳವ
ನ್ನೂ ಮುಚ್ಚಿ ಬಿಟ್ಟು, ಅಷೂರಿನ ಅರಸುಗಳು ಬಂದು, ಬಹಳ
೫ ನೀರು ದೊರಕಿಸಿ ಕೊಳ್ಳುವದು ಯಾಕೆ! ಅಂದರು. ಇದಲ್ಲದೆ
ಅವನು ತನ್ನನ್ನು ಬಲ ಪಡಿಸಿ ಕೊಂಡು, ಕೆಡವಲ್ಪಟ್ಟ ಗೋಡೆಯ
ನ್ನೆಲ್ಲಾ ಕಟ್ಟಿಸಿ, ಬುರುಜುಗಳ ಪರ್ಯಂತರ ಅದನ್ನು ಎತ್ತರ ಮಾ
ಡಿ, ಅದರ ಹೊರ ಭಾಗದಲ್ಲಿ ಮತ್ತೊಂದು ಗೋಡೆಯನ್ನು ಕ
ಟ್ಟಿಸಿ, ದಾವೀದನ ಪಟ್ಟಣದಲ್ಲಿರುವ ಮಿಲ್ಲೋವನ್ನು ಬಲ ಪಡಿಸಿ, ಈ
೬ ಟಿಗಳನ್ನೂ ಗುರಾಣಿಗಳನ್ನೂ ಬಹಳವಾಗಿ ಮಾಡಿಸಿದನು. ಮ
ತ್ತು ಜನರ ಮೇಲೆ ಸೈನ್ಯಗಳ ಅಧಿಪತಿಗಳನ್ನು ಇರಿಸಿ, ಪಟ್ಟಣದ
ಬಾಗಲ ಬೀದಿಯಲ್ಲಿ ತನ್ನ ಬಳಿಗೆ ಅವರನ್ನು ಕೂಡಿಸಿ ಕೊಂಡು,
ಗುಂಡಿ ಗೊಳ್ಳುವ ಹಾಗೆ ಅವರ ಸಂಗಡ ಮಾತಾಡಿ, ಹೇಳಿದ್ದೇ
೭ ನಂದರೆ—ಬಲ ಗೊಳ್ಳಿರಿ; ಧೈರ್ಯವಾಗಿರ್ರಿ; ಅಷೂರಿನ ಅರಸನ
ನಿಮಿತ್ತವೂ ಅವನ ಸಂಗಡ ಕೂಡಿರುವ ಮಹಾ ಗುಂಪಿನ ನಿಮಿತ್ತ
ವೂ ಭಯ ಪಡ ಬೇಡಿರಿ; ಹೆದರ ಬೇಡಿರಿ. ಯಾಕಂದರೆ ಅವನ
೮ ಸಂಗಡ ಇರುವವರಿಗಿಂತ ನಮ್ಮ ಸಂಗಡ ಅನೇಕರು ಇದ್ದಾರೆ.
ಅವನ ಸಂಗಡ ಮಾಂಸದ ತೋಳು; ಆದರೆ ನಮ್ಮ ಸಂಗಡ ನಮ
ಗೆ ಸಹಾಯ ಕೊಡುವದಕ್ಕೂ, ನಮ್ಮ ಯುದ್ಧಗಳನ್ನು ನಡಿಸುವ
ದಕ್ಕೂ ನಮ್ಮ ದೇವರಾದ ಕರ್ತನು. ಆದದರಿಂದ ಜನರು ಯೆ
ಹೂದದ ಅರಸನಾದ ಹೆಜ್ಕೀಯನ ಮಾತುಗಳಲ್ಲಿ ಆತು ಕೊಂ
ಡರು.

೯ ಇದರ ತರುವಾಯ ಅಷೂರಿನ ಅರಸನಾದ ಸನ್ಹೇರೀಬನೂ,
ಅವನ ಸಂಗಡ ಕೂಡಿರುವ ಅವನ ಸಮಸ್ತ ಬಲವೂ ಲಕೀಷನ್ನು
ಇರಿಕಿಸಿದಾಗ, ಅವನು ಯೆರೂಸಲೇಮಿನಲ್ಲಿ ಯೆಹೂದದ ಅರಸ
ನಾದ ಹೆಜ್ಕೀಯನ ಬಳಿಗೂ, ಯೆರೂಸಲೇಮಿನಲ್ಲಿರುವ ಸಮಸ್ತ
ಯೆಹೂದದವರ ಬಳಿಗೂ ತನ್ನ ಸೇವಕರನ್ನು ಕಳುಹಿಸಿ, ಹೇಳಿ
ದ್ದೇನಂದರೆ—ಅಷೂರಿನ ಅರಸನಾದ ಸನ್ಹೇರೀಬನು ಹೀಗೆ ಹೇಳು
೧೦ ತ್ತಾನೆ—ನೀವು ಯೆರೂಸಲೇಮಿನ ಗಡಿಸ್ಥಳದಲ್ಲಿ ವಾಸವಾಗಿರುವ
೧೧ ಹಾಗೆ, ಯಾವದರ ಮೇಲೆ ಭರವಸವುಳ್ಳವರಾಗಿದ್ದೀರಿ. ನಮ್ಮ
ದೇವರಾದ ಕರ್ತನು ಅಷೂರಿನ ಅರಸನ ಕೈಯಿಂದ ನಮ್ಮನ್ನು
ಬಿಡಿಸುವನೆಂದು, ಹೆಜ್ಕೀಯನು ಹೇಳಿ, ಹಸಿವಿಯಿಂದಲೂ ದಾಹ
ದಿಂದಲೂ ಸಾಯುವದಕ್ಕೆನಿಮ್ಮನ್ನು ಬಪ್ಪಿಸಿ ಕೊಡ ಪ್ರೇರೇಪಿಸು
೧೨ ತ್ತಾನಲ್ಲವೇ! ಈ ಹೆಜ್ಕೀಯನು ಆತನ ಮೇಡುಗಳನ್ನೂ ಬಲಿಪೀಠ
ಗಳನ್ನೂ ತೆಗೆದು ಹಾಕಿ, ಯೆಹೂದ ಯೆರೂಸಲೇಮಿನವರಿಗೆ, ನೀ
ವು ಒಂದೇ ಬಲಿ ಪೀಠದ ಮುಂದೆ ಅಡ್ಡ ಬಿದ್ದು, ಅದರ ಮೇಲೆ ಧೂ
೧೩ ಪವನ್ನರ್ಪಿಸ ಬೇಕೆಂದು ಹೇಳಿದ್ದಾನಲ್ಲವೇ! ನಾನೂ ನನ್ನ ಪಿತೃ
ಗಳೂ ದೇಶಗಳ ಜನರಿಗೆ ಮಾಡಿದ್ದನ್ನು ನೀವು ತಿಳಿಯಲಿಲ್ಲವೋ!
ಆ ದೇಶಗಳ ಜನಾಂಗಗಳ ದೇವರುಗಳು ಆ ದೇಶಗಳನ್ನು ನನ್ನ
ಕೈಯೊಳಗಿಂದ ಹ್ಯಾಗಾದರೂ ಬಿಡಿಸ ಸಾಮರ್ಥ್ಯವುಳ್ಳವುಗಳಾ
೧೪ ಗಿದ್ದವೋ! ನನ್ನ ಪಿತೃಗಳು ನಿರ್ಮೂಲ ಮಾಡಿದ ಆ ಜನಾಂಗ
ಗಳ ಸಮಸ್ತ ದೇವರುಗಳಲ್ಲಿ ನನ್ನ ಕೈಯೊಳಗಿಂದ ತನ್ನ ಜನ
ರನ್ನು ಬಿಡಿಸ ಸಾಮರ್ಥ್ಯವುಳ್ಳದ್ದು ಯಾವದು! ಹಾಗಾದರೆ ನಿ
ಮ್ಮ ದೇವರು ನನ್ನ ಕೈಯೊಳಗಿಂದ ನಿಮ್ಮನ್ನು ಹ್ಯಾಗೆ ಬಿಡಿಸ
೧೫ ಬಹುದು! ಆದದರಿಂದ ಹೆಜ್ಕೀಯನು ನಿಮ್ಮನ್ನು ವಂಚಿಸದಿರಲಿ;
ಈ ಪ್ರಕಾರ ನಿಮ್ಮನ್ನು ಪ್ರೇರೇಪಿಸದಿರಲಿ; ಅವನ ಮಾತು ನಂಬ
ಬೇಡಿರಿ. ಯಾಕಂದರೆ ನನ್ನ ಕೈಯೊಳಗಿಂದಲೂ ನನ್ನ ಪಿತೃ
ಗಳ ಕೈಯೊಳಗಿಂದಲೂ ತಮ್ಮ ಜನರನ್ನು ಬಿಡಿಸ ಸಕಲ ಜನಾಂ
ಗ ರಾಜ್ಯಗಳ ದೇವರುಗಳಲ್ಲಿ ಸಾಮರ್ಥ್ಯವುಳ್ಳ ದೇವರು ಒಂದೂ
ಇಲ್ಲ; ನನ್ನ ಕೈಯೊಳಗಿಂದ ನಿಮ್ಮನ್ನು ಬಿಡಿಸ ನಿಮ್ಮ ದೇವರು ಎ
೧೬ ದ್ದರವನು! ಅವನ ಸೇವಕರು ಇನ್ನೂ ಕರ್ತನಾದ ದೇವರಿಗೆ ವಿ
ರೋಧವಾಗಿಯೂ ಆತನ ಸೇವಕನಾದ ಹೆಜ್ಕೀಯನಿಗೆ ವಿರೋ
ಧವಾಗಿಯೂ ಮಾತಾಡಿದರು.

೧೭ ಇದಲ್ಲದೆ ಅವನು ಇಸ್ರಯೇಲಿನ ದೇವರಾದ ಕರ್ತನನ್ನು ನಿಂ
ದಿಸುವದಕ್ಕೂ ಅವನಿಗೆ ವಿರೋಧವಾಗಿ ಮಾತಾಡುವದಕ್ಕೂ ಪ
ತ್ರಿಕೆಗಳನ್ನು ಬಕೆದನು. ಏನಂದರೆ—ಇತರ ದೇಶಗಳ ಜನಾಂಗಗ
ಳ ದೇವರುಗಳು ತಮ್ಮ ಜನರನ್ನು ನನ್ನ ಕೈಯೊಳಗಿಂದ ಹ್ಯಾಗೆ
ಬಿಡಿಸಲಿಲ್ಲವೋ, ಹಾಗೆಯೇ ಹೆಜ್ಕೀಯನ ದೇವರು ತನ್ನ ಜನ
೧೮ ರನ್ನು ನನ್ನ ಕೈಯೊಳಗಿಂದ ಬಿಡಿಸನು. ಇದಲ್ಲದೆ ಅವರು ಪಟ್ಟಣ
ವನ್ನು ಹಿಡಿಯುವ ಹಾಗೆ, ಅಲಂಗದ ಮೇಲೆ ಇರುವ ಯೆರೂಸ
ಲೇಮಿನ ಜನರನ್ನು ಭಯ ಪಡಿಸುವದಕ್ಕೂ ಅವರನ್ನು ತಲ್ಲಣ
ಪಡಿಸುವದಕ್ಕೂ ಯೆಹೂದ್ಯರ ಭಾಷೆಯಲ್ಲಿ ದೊಡ್ಡ ಶಬ್ದದಿಂದ
೧೯ ಅವರಿಗೆ ಕೂಗಿದರು. ಮತ್ತು ಮನುಷ್ಯರ ಕೈ ಕೆಲಸವಾದ ಭೂ
ಮಿಯ ಜನಗಳ ದೇವರುಗಳಿಗೆ ವಿರೋಧವಾಗಿ ಮಾತಾಡಿದ ಹಾ
ಗೆ, ಯೆರೂಸಲೇಮಿನ ದೇವರಿಗೆ ವಿರೋಧವಾಗಿ ಮಾತಾಡಿದರು.

೨೦ ಇದರ ನಿಮಿತ್ತ ಅರಸನಾದ ಹೆಜ್ಕೀಯನೂ ಅಮೋಚನ ಮ
ಗನಾದ, ಪ್ರವಾದಿಯಾದ ಯೆಶಾಯನೂ ಪ್ರಾರ್ಥನೆ ಮಾಡಿ,
೨೧ ಆಕಾಶಕ್ಕೆ ಕೂಗಿದರು. ಆಗ ಕರ್ತನು ತನ್ನ ದೂತನನ್ನು ಕ
ಳುಹಿಸಿದನು; ಅವನು ಅಷೂರಿನ ಅರಸನ ದಂಡಿನಲ್ಲಿರುವ ಸಮ
ಸ್ತ ಪರಾಕ್ರಮಶಾಲಿಗಳನ್ನೂ, ನಾಯಕರನ್ನೂ, ಅಧಿಪತಿಗಳ
ನ್ನೂ ನಿರ್ಮೂಲ ಮಾಡಿದನು. ಇವನು ಲಜ್ಜೆ ಮುಖದಿಂದ ತ
ನ್ನ ದೇಶಕ್ಕೆ ತಿರುಗಿದನು. ಅವನು ತನ್ನ ದೇವರ ಮನೆಯಲ್ಲಿ
ಪ್ರವೇಶಿಸಿದಾಗ, ಅವನ ಹೊಟ್ಟೆಯಲ್ಲಿ ಹುಟ್ಟಿದವರು ಅವನನ್ನು
೨೨ ಕತ್ತಿಯಿಂದ ಬೀಳ ಮಾಡಿದರು. ಹೀಗೆಯೇ ಕರ್ತನು ಹೆಜ್ಕೀ
ಯನನ್ನೂ ಯೆರೂಸಲೇಮಿನ ನಿವಾಸಿಗಳನ್ನೂ ಅಷೂರಿನ ಅರ
ಸನಾದ ಸನ್ಹೇರೀಬನ ಕೈಯೊಳಗಿಂದಲೂ ಸಮಸ್ತರ ಕೈಯೊಳ
ಗಿಂದಲೂ ರಕ್ಷಿಸಿ, ಸಮಸ್ತ ಕಡೆಯಿಂದ ಅವರನ್ನು ನಡಿಸಿದನು.
೨೩ ಮತ್ತು ಅನೇಕರು ಯೆರೂಸಲೇಮಿನಲ್ಲಿರುವ ಕರ್ತನಿಗೆ ಕಾಣಿಕೆ
ಗಳನ್ನೂ, ಯೆಹೂದದ ಅರಸನಾದ ಹೆಜ್ಕೀಯನಿಗೆ ಪ್ರಿಯವಾದ
ವಸ್ತುಗಳನ್ನೂ ತಂದರು. ಅಂದಿನಿಂದ ಅವನು ಸಮಸ್ತ ಜನಾಂ
ಗಗಳ ಸಮುಖದಲ್ಲಿ ಉನ್ನತ ಮಾಡಲ್ಪಟ್ಟನು.
೨೪ ಆ ದಿನಗಳಲ್ಲಿ ಹೆಜ್ಕೀಯನು ಸಾಯುವ ಹಾಗೆ ಕೋಗಿಟ್ಟ
ನಾದದರಿಂದ, ಅವನು ಕರ್ತನಿಗೆ ಪ್ರಾರ್ಥನೆ ಮಾಡಿದನು. ಆಗ
ಆತನು ಅವನ ಸಂಗಡ ಮಾತಾಡಿ, ಅವನಿಗೆ ಗುರುತನ್ನು ಕೊ
೨೫ ಟ್ಟನು. ಆದರೆ ಹೆಜ್ಕೀಯನು ತನಗೆ ಆದ ಉಪಕಾರಕ್ಕೆ ಪ್ರತಿ
ಕೊಡದೆ ಇದ್ದನು; ಯಾಕಂದರೆ ಅವನ ಹೃದಯವು ಎತ್ತಲ್ಪಟ್ಟಿ
ತು; ಆದದರಿಂದ ಅವನ ಮೇಲೆಯೂ ಯೆಹೂದ ಯೆರೂಸಲೇ

೨೬ ಮಿನ ಮೇಲೆಯೂ ಕಾದ್ರ ಉಂಟಾಯಿತು. ಆದರೆ ಹೆಜ್ಕೀಯೆ
ನು ತನ್ನ ಹೃದಯ ಎತ್ತರವಾದದ್ದರ ವಿಷಯ ತನ್ನನ್ನು ತಗ್ಗಿ
ಸಿ ಕೊಂಡನು—ತಾನೂ ಯೆರೂಸಲೇಮಿನ ನಿವಾಸಿಗಳೂ; ಆದರ
ಿಂದ ಹೆಜ್ಕೀಯನ ದಿವಸಗಳಲ್ಲಿ ಕರ್ತನ ಕಾದ್ರವು ಅವರ ಮೇ
ಲೆ ಬರಲಿಲ್ಲ.

೨೭ ಹೆಜ್ಕೀಯನಿಗೆ ಅತ್ಯಧಿಕವಾದ ಐಶ್ವರ್ಯವೂ ಘನವೂ ಇ
ದ್ದದರಿಂದ, ಅವನು ಬೆಳ್ಳಿಗೋಸ್ಕರವೂ, ಭಂಗಾರಕ್ಕೋಸ್ಕರ
ವೂ, ರತ್ನಗಳಿಗೋಸ್ಕರವೂ, ಸುಗಂಧಗಳಿಗೋಸ್ಕರವೂ, ಗು
ರಾಣಿಗಳಿಗೋಸ್ಕರವೂ, ಇಷ್ಟೈಸಲ್ಪಡ ತಕ್ಕ ಎಲ್ಲಾ ಪಾತ್ರೆಗಳಿ
೨೮ ಗೋಸ್ಕರವೂ ತನಗೆ ಉಗ್ರಾಣಗಳನ್ನು ಮಾಡಿದನು. ಇದಲ್ಲದೆ
ಧಾನ್ಯದ ಹುಟ್ಟುವಳಿಯೂ, ದ್ರಾಕ್ಷೇರಸವೂ, ಎಣ್ಣೆಯೂ, ಇವು
ಗಳ ನಿಮಿತ್ತವಾಗಿ ಉಗ್ರಾಣಗಳನ್ನೂ, ಸಕಲ ವಿಧ ಪಶುಗಳ ನಿ
ಮಿತ್ತವಾಗಿ ಕೊಟ್ಟಿಗೆಗಳನ್ನೂ, ಕುರಿ ಮಂದೆಯ ನಿಮಿತ್ತವಾಗಿ
೨೯ ಹಟ್ಟಿಗಳನ್ನೂ ಮಾಡಿದನು. ಇದಲ್ಲದೆ ತನಗೆ ಪಟ್ಟಣಗಳನ್ನೂ,
ದನ ಕುರಿಗಳ ಸ್ಥಿತಿಗಳನ್ನೂ ಬಹಳವಾಗಿ ಮಾಡಿ ಕೊಂಡನು;
ಯಾಕಂದರೆ ದೇವರು ಅವನಿಗೆ ಬಹು ಹೆಚ್ಚಾಗಿ ಸ್ಥಿತಿಯನ್ನು
ಕೊಟ್ಟನು.

೩೦ ಈ ಹೆಜ್ಕೀಯೆನು ಗಿಹೋನೆಂಬ ಮೇಲಿನ ಕಾಲುವೆಯನ್ನು ಮು
ಚ್ಚಿ ಬಿಟ್ಟು, ಅದನ್ನು ದಾವೀದನ ಪಟ್ಟಣದಲ್ಲಿ ಪಶ್ಚಿಮ ದಿಗ್ಭಾಗಕ್ಕೆ
ಕಾರಂಜಿಯಾಗಿ ಬರ ಮಾಡಿದನು. ಹೀಗೆಯೇ ಹೆಜ್ಕೀಯೆನು ತ
೩೧ ನ್ನ ಸಮಸ್ತ ಕ್ರಿಯೆಗಳಲ್ಲಿ ಸಿದ್ಧಿ ಹೊಂದಿದನು. ಆದರೆ ದೇಶದಲ್ಲಿ
ಅದ್ಭುತಕ್ಕೋಸ್ಕರ ವಿಚಾರಣೆ ಮಾಡ ಬಾಬೆಲಿನ ಅಧಿಪತಿಗಳಿಂ
ದ ತನ್ನ ಬಳಿಗೆ ಕಳುಹಿಸಲ್ಪಟ್ಟ ರಾಯಭಾರಿಗಳ ಕಾರ್ಯದಲ್ಲಿ,
ಅವನು ತನ್ನ ಹೃದಯದೊಳಗಿದ್ದದ್ದೆಲ್ಲಾ ತಿಳಿಕೊಳ್ಳುವ ಹಾಗೆ,
ಅವನನ್ನು ಶೋಧಿಸುವದಕ್ಕೆ ದೇವರು ಅವನನ್ನು ಬಿಟ್ಟು ಬಿಟ್ಟನು.

೩೨ ಹೆಜ್ಕೀಯೆನ ಮಿಕ್ಕಾದ ಕಾರ್ಯಗಳೂ, ಅವನ ಉಪಕಾರಗ
ಳೂ, ಇಗೋ, ಅವು ಅಮೋಚನ ಮಗನಾದ ಪ್ರವಾದಿಯಾದ
ಯೆಶಾಯನ ದರ್ಶನದ ಪುಸ್ತಕದಲ್ಲಿಯೂ, ಯೆಹೂದ ಇಸ್ರಯೇ
33 ಲ ಅರಸುಗಳ ಪುಸ್ತಕದಲ್ಲಿಯೂ ಬರೆಯಲ್ಪಟ್ಟಿವೆ. ಹೆಜ್ಕೀಯೆ
ನು ತನ್ನ ಪಿತೃಗಳ ಸಂಗಡ ಮಲಗಿದನು; ಅವರು ದಾವೀದನ ಮ
ಕ್ಕಳ ಸಮಾಧಿಗಳಲ್ಲಿರುವ ಶ್ರೇಷ್ಠವಾದದರಲ್ಲಿ ಅವನನ್ನು ಹೂಣಿ
ಟ್ಟರು. ಮತ್ತು ಅವನ ಮರಣದಲ್ಲಿ ಸಮಸ್ತ ಯೆಹೂದದವರೂ,
ಯೆರೂಸಲೇಮಿನ ನಿವಾಸಿಗಳೂ ಅವನನ್ನು ಘನ ಪಡಿಸಿದರು.
ಮತ್ತು ಅವನ ಮಗನಾದ ಮನಸ್ಸೆಯು ಅವನಿಗೆ ಬದಲಾಗಿ ಆಳಿ
ದನು.

## 33. ಸಂಧಿ.

೧ ಮನಸ್ಸೆಯು ಆಳ್ವ ಆರಂಭಿಸಿದಾಗ ಹನ್ನಿರಡು ವರುಷದವನಾ
೨ ಗಿದ್ದು, ಯೆರೂಸಲೇಮಿನಲ್ಲಿ ಐವತ್ತೈದು ವರುಷ ಆಳಿದನು. ಆ
ದರೆ ಕರ್ತನು ಇಸ್ರಯೇಲಿನ ಮಕ್ಕಳ ಮುಂದೆ ಹೊರಡಿಸಿದ ಜ
ನಾಂಗಗಳ ಅಸಹ್ಯಗಳ ಪ್ರಕಾರವೇ ಅವನು ಕರ್ತನ ಸಮುಖದ
3 ಲ್ಲಿ ಕೆಟ್ಟದ್ದನ್ನು ಮಾಡಿದನು. ಏನಂದರೆ ಅವನು ತನ್ನ ತಂದೆ
ಯಾದ ಹೆಜ್ಕೀಯೆನು ಕೆಡವಿ ಹಾಕಿದ ಮೇಡುಗಳನ್ನು ತಿರಿಗಿ ಕ
ಟ್ಟಿಸಿ, ಬಾಳನಿಗೆ ಬಲಿಪೀಠಗಳನ್ನು ಎಬ್ಬಿಸಿ, ಶೋಪುಗಳನ್ನು ಹಾ
ಕಿ, ಆಕಾಶದ ಸೈನ್ಯಕ್ಕೆಲ್ಲಾ ಅಡ್ಡ ಬಿದ್ದು, ಅವುಗಳನ್ನು ಸೇವಿಸಿದ
೪ ನು. ಇದಲ್ಲದೆ ಯೆರೂಸಲೇಮಿನಲ್ಲಿ ನನ್ನ ಹೆಸರು ಯುಗ ಯು
ಗಕ್ಕೂ ಇರುವದೆಂದು, ಕರ್ತನು ಹೇಳಿದ ಕರ್ತನ ಮನೆಯಲ್ಲಿ
೫ ಬಲಿಪೀಠಗಳನ್ನು ಕಟ್ಟಿಸಿದನು. ಕರ್ತನ ಮನೆಯ ಎರಡು ಅಂಗ
ಳಗಳಲ್ಲಿ ಆಕಾಶದ ಎಲ್ಲಾ ಸೈನ್ಯಕ್ಕೋಸ್ಕರ ಬಲಿಪೀಠಗಳನ್ನು ಕ
೬ ಟ್ಟಿಸಿದನು. ಮತ್ತು ಹಿನ್ನೋಮನ ಮಗನ ತಗ್ಗಿನಲ್ಲಿ ತನ್ನ ಮ
ಕ್ಕಳನ್ನು ಬೆಂಕಿ ದಾಟ ಮಾಡಿದನು; ಮೇಘ ಮಂತ್ರಗಳನ್ನೂ ಸ
ರ್ಪ ಮಂತ್ರಗಳನ್ನೂ ಮಾಡಿದನು; ಮಾಟ ಮಾಡಿದನು; ಯೆಕ್ಷಿ
ಣಿಗಾರರ ಜಳಿಯಲ್ಲೂ ಮಂತ್ರಜ್ಞರ ಜಳಿಯಲ್ಲೂ ವಿಚಾರಿಸಿದನು;
ಕರ್ತನಿಗೆ ಕರಕಕೆ ಎಬ್ಬಿಸ, ಅವನ ಸಮುಖದಲ್ಲಿ ಬಹಳವಾಗಿ ಕೆ
೭ ಟ್ಟತನ ಮಾಡಿದನು. ಈ ಮನೆಯಲ್ಲಿಯೂ ಇಸ್ರಯೇಲಿನ ಸಮ
ಸ್ತ ಕುಲಗಳಿಂದ ನಾನು ಆದು ಕೊಂಡ ಯೆರೂಸಲೇಮಿನಲ್ಲಿಯೂ
ನಾನು ನನ್ನ ಹೆಸರನ್ನು ಯುಗ ಯುಗಕ್ಕೂ ಇರಿಸುವೆನೆಂದೂ,
ಮೊಸೆಯಿಂದ ಉಂಟಾದ ಸಮಸ್ತ ನ್ಯಾಯಪ್ರಮಾಣವೂ ಆಜ್ಞೆ
೮ ಗಳೂ ಕಟ್ಟಳೆಗಳೂ ಇವುಗಳ ಪ್ರಕಾರ ನಾನವರಿಗೆ ಆಜ್ಞಾಪಿಸಿದ
ನೆಲ್ಲಾ ಅವರು ಮಾಡ ಜಾಗ್ರತೆಯಾಗಿದ್ದರೆ, ನಾನು ನಿಮ್ಮ ಪಿತೃ
ಗಳಿಗೋಸ್ಕರ ನೇಮಿಸಿದ ದೇಶದೊಳಗಿಂದ ಇಸ್ರಯೇಲಿನ ಕಾಲ
ನ್ನು ನಾನು ಇನ್ನು ಮೇಲೆ ಚಲಿಸ ಮಾಡುವದಿಲ್ಲವೆಂದು, ದೇವರು
ದಾವೀದನಿಗೂ ಅವನ ಮಗನಾದ ಸೊಲೊಮೋನನಿಗೂ ಹೇಳಿ
ದ ದೇವರ ಮನೆಯಲ್ಲಿ ಅವನು ಮಾಡಿದ ಕಟಿದ ವಿಗ್ರಹವನ್ನು
ಇರಿಸಿದನು.

೯ ಹೀಗೆಯೇ ಯೆಹೂದದವರೂ ಯೆರೂಸಲೇಮಿನ ನಿವಾಸಿಗ
ಳೂ, ಕರ್ತನು ಇಸ್ರಯೇಲಿನ ಮಕ್ಕಳ ಮುಂದೆ ನಾಸನ ಮಾಡಿ
ದ ಜನಾಂಗಗಳಿಗಿಂತ ಕೆಟ್ಟದ್ದನ್ನು ಮಾಡುವದಕ್ಕೆ, ತಪ್ಪಿ ಹೋಗ
೧೦ ಮನಸ್ಸೆಯು ಮಾಡಿದನು. ಕರ್ತನು ಮನಸ್ಸೆಗೂ ಅವನ ಜನ
ರಿಗೂ ಮಾತಾಡಿದನು; ಆದರೆ ಅವರು ಅಕ್ಕೆಸದೆ ಹೋದರು.
೧೧ ಆದಕಾರಣ ಕರ್ತನು ಅಪೂರಿನ ಅರಸನ ಸೈನ್ಯದ ಅಧಿಪತಿಗಳ
ನ್ನು ಬರ ಮಾಡಿದನು. ಅವರು ಮನಸ್ಸೆಯನ್ನು ಮುಳ್ಳುಗಿಡಗಳ
ಲ್ಲಿ ಹಿಡಿದು, ಅವನಿಗೆ ಸಂಕೋಲೆಗಳನ್ನು ಹಾಕಿ, ಅವನನ್ನು ಬಾ
೧೨ ಬೆಲಿಗೆ ಪೈದರು. ಅವನು ಇಕ್ಕಟ್ಟಿನಲ್ಲಿರುವಾಗ, ತನ್ನ ದೇವರಾ
ದ ಕರ್ತನ ಕಟಾಕ್ಷವನ್ನು ಬೇಡಿ ಕೊಂಡು, ತನ್ನ ಪಿತೃಗಳ ದೇ
ವರ ಮುಂದೆ ತನ್ನನ್ನು ಬಹಳವಾಗಿ ತಗ್ಗಿಸಿಕೊಂಡು, ಅವನಿಗೆ
೧೩ ಪ್ರಾರ್ಥನೆ ಮಾಡಿದನು. ಆತನು ಕನಿಕರಪಟ್ಟು, ಅವನ ಬಿನ್ನಹ
ವನ್ನು ಕೇಳಿ, ಯೆರೂಸಲೇಮಿಗೆ ತನ್ನ ರಾಜ್ಯಕ್ಕೆ ಅವನನ್ನು ತಿರಿ
ಗಿ ಬರ ಮಾಡಿದನು. ಆಗ ಯೆಹೋವನೇ ದೇವರೆಂದು, ಮನಸ್ಸೆ
ಯು ತಿಳಿಕೊಂಡನು.

೧೪ ಇದಾದ ತರುವಾಯ ಮನಸ್ಸೆಯು ದಾವೀದನ ಪಟ್ಟಣದ ಹೊ
ರಭಾಗದಲ್ಲಿ ಗಿಹೋನಿನ ಪಶ್ಚಿಮ ಕಡೆಯ ತಗ್ಗಿನಲ್ಲಿ ಮೀನುಬಾ
ಗಲ ದ್ವಾರದ ಮಟ್ಟಿಗೂ ಗೋಡೆಯನ್ನು ಕಟ್ಟಿಸಿ, ದುರ್ಗವನ್ನು
ಸುತ್ತಲು ಕಟ್ಟಿಸಿ, ಅದನ್ನು ಬಹಳ ಎತ್ತರ ಮಾಡಿ, ಯೆಹೂದದ
ಸಮಸ್ತ ಕೋಟೆಯುಳ್ಳ ಪಟ್ಟಣಗಳಲ್ಲಿ ಸೈನ್ಯದ ಅಧಿಪತಿಗಳನ್ನು
೧೫ ಇಟ್ಟನು. ಇದಲ್ಲದೆ ಅವನು ಅನ್ಯ ದೇವರುಗಳನ್ನೂ, ಕರ್ತನ
ಮನೆಯಲ್ಲಿರುವ ವಿಗ್ರಹವನ್ನೂ, ಕರ್ತನ ಮನೆಯ ಪರ್ವತದಲ್ಲಿ
ಯೂ ಯೆರೂಸಲೇಮಿನಲ್ಲಿಯೂ ತಾನು ಕಟ್ಟಿಸಿದ ಸಮಸ್ತ ಬ
ಲಿಪೀಠಗಳನ್ನೂ ತೆಗೆದು ಹಾಕಿ, ಅವುಗಳನ್ನು ಪಟ್ಟಣದ ಹೊರಗೆ
೧೬ ಬಿಸಾಟು ಬಿಟ್ಟನು. ಮತ್ತು ಅವನು ಕರ್ತನ ಬಲಿಪೀಠವನ್ನು ಕ



ಟ್ಟಿಸಿ, ಅದರ ಮೇಲೆ ಸಮಾಧಾನದ ಬಲಿಗಳನ್ನೂ ಸ್ತೋತ್ರದ
ಬಲಿಗಳನ್ನೂ ಅರ್ಪಿಸಿ, ಇಸ್ರಯೇಲಿನ ದೇವರಾದ ಕರ್ತನನ್ನು
೧೭ ಸೇವಿಸ ಯೆಹೂದದವರಿಗೆ ಹೇಳಿದನು. ಆದರೆ ಜನರು ಇನ್ನೂ
ಮೇಡುಗಳಲ್ಲಿ ಬಲಿಯನರ್ಪಿಸುತ್ತಾ ಇದ್ದರು; ಆದರೂ ತಮ್ಮ
ದೇವರಾದ ಯೆಹೋವನಿಗೆ ಮಾತ್ರ.

೧೮ ಮನಸ್ಸೆಯ ಇತರ ಕ್ರಿಯೆಗಳೂ, ಅವನು ತನ್ನ ದೇವರಿಗೆ
ಮಾಡಿದ ಪ್ರಾರ್ಥನೆಯೂ, ಇಸ್ರಯೇಲಿನ ದೇವರಾದ ಕರ್ತನ
ನಾಮದಲ್ಲಿ ಅವನ ಸಂಗಡ ಮಾತಾಡಿದ ದರ್ಶಿಗಳ ಮಾತುಗ
ಳೂ, ಇಗೋ, ಇಸ್ರಯೇಲಿನ ಅರಸುಗಳ ಪುಸ್ತಕದಲ್ಲಿ ಬರೆಯ
೧೯ ಲ್ಪಟ್ಟಿವೆ. ಇದಲ್ಲದೆ ಅವನ ಪ್ರಾರ್ಥನೆಯೂ, ಅವನ ಬಿನ್ನಹ
ಸಂದದ್ದೂ, ಅವನ ಸಮಸ್ತ ಪಾಪವೂ, ಅವನ ಅಕೃತ್ಯವೂ,
ಅವನು ತಗ್ಗಿಸಿಕೊಳ್ಳುವದಕ್ಕಿಂತ ಮುಂಚೆ ಮೇಡುಗಳನ್ನು ಕಟ್ಟಿ
ಸಿ, ಶೋಪುಗಳನ್ನೂ ಕಟಿದ ವಿಗ್ರಹಗಳನ್ನೂ ನ್ಥಾಪಿಸಿದ ಸ್ಥಳಗ
ಳೂ, ಇಗೋ, ಅವು ದರ್ಶಿಗಳ ವಾಕ್ಯಗಳಲ್ಲಿ ಬರೆಯಲ್ಪಟ್ಟಿವೆ.
೨೦ ಮತ್ತು ಮನಸ್ಸೆಯು ತನ್ನ ಪಿತೃಗಳ ಸಂಗಡ ಮಲಗಿದನು; ಅ
ವನನ್ನು ಅವನ ಸ್ವಂತ ಮನೆಯಲ್ಲಿ ಹೂಣಿಟ್ಟರು; ಅವನ ಮಗ
ನಾದ ಅಮೋನನು ಅವನಿಗೆ ಬದಲಾಗಿ ಆಳಿದನು.

೨೧ ಅಮೋನನು ಆಳ್ವ ಆರಂಭಿಸಿದಾಗ ಇಪ್ಪತ್ತೆರಡು ವರುಷದವ
೨೨ ನಾಗಿದ್ದು, ಯೆರೂಸಲೇಮಿನಲ್ಲಿ ಎರಡು ವರುಷ ಆಳಿದನು. ಆದ
ರೆ ಅವನು ತನ್ನ ತಂದೆಯಾದ ಮನಸ್ಸೆಯು ಮಾಡಿದ ಹಾಗೆ ಕ
ರ್ತನ ಸಮುಖದಲ್ಲಿ ಕೆಟ್ಟದ್ದನ್ನು ಮಾಡಿದನು. ಅಮೋನನು ತ
ನ್ನ ತಂದೆಯಾದ ಮನಸ್ಸೆಯು ಮಾಡಿದ ಕಟಿದ ವಿಗ್ರಹಗಳಿಗೆ
೨೩ ಬಲಿಗಳನರ್ಪಿಸಿ, ಅವುಗಳನ್ನು ಸೇವಿಸಿದನು. ಅಮೋನನು ತ
ನ್ನ ತಂದೆಯಾದ ಮನಸ್ಸೆಯು ತನ್ನನ್ನು ತಗ್ಗಿಸಿ ಕೊಂಡ ಹಾ
ಗೆ, ಕರ್ತನ ಮುಂದೆ ತನ್ನನ್ನು ತಗ್ಗಿಸಿ ಕೊಳ್ಳಲಿಲ್ಲ; ಆದರೆ ಅ
೨೪ ಮೋನನು ಅಧಿಕವಾಗಿ ಅಪರಾಧ ಮಾಡಿದನು. ಆದದರಿಂದ ಅ
ವನ ಸೇವಕರು ಅವನ ಮೇಲೆ ಬಳಸಂಚು ಮಾಡಿ, ಅವನ ಸ್ವಂ
೨೫ ತ ಮನೆಯಲ್ಲಿ ಅವನನ್ನು ಕೊಂದು ಹಾಕಿದರು. ಆದರೆ ದೇಶದ
ಜನರು ಅರಸನಾದ ಅಮೋನನ ಮೇಲೆ ಬಳಸಂಚು ಮಾಡಿದವರ
ನ್ನೆಲ್ಲಾ ಹೊಡೆದು ಬಿಟ್ಟರು. ಮತ್ತು ದೇಶದ ಜನರು ಅವನ ಮಗ
ನಾದ ಯೊಷೀಯನನ್ನು ಅರಸನಾಗ ಮಾಡಿದರು.

## ೩೪. ಸಂಧಿ.

೧ ಯೊಷೀಯನು ಆಳ್ವ ಆರಂಭಿಸಿದಾಗ ಎಂಟು ವರುಷದವನಾ
ಗಿದ್ದು, ಯೆರೂಸಲೇಮಿನಲ್ಲಿ ಮೂವತ್ತೊಂದು ವರುಷ ಆಳಿದನು.
೨ ಅವನು ಕರ್ತನ ಸಮುಖದಲ್ಲಿ ನೆಟ್ಟನೆಯಾದದ್ದನ್ನು ಮಾಡಿದ
ನು; ಎಡಗಡೆಗಾದರೂ ಬಲಗಡೆಗಾದರೂ ತೊಲಗದೆ, ತನ್ನ ಪಿತೃ
3 ವಾದ ದಾವೀದನ ಮಾರ್ಗಗಳಲ್ಲಿ ನಡೆದನು. ಅವನು ಇನ್ನೂ
ಹುಡುಗನಾಗಿರುವಾಗ, ತನ್ನ ಆಳ್ವಿಕೆಯ ಎಂಟನೇ ವರುಷದಲ್ಲಿ ತ
ನ್ನ ಪಿತೃವಾದ ದಾವೀದನ ದೇವರನ್ನು ಹುಡುಕ ಆರಂಭಿಸಿದನು.
ಮತ್ತು ಅವನ ಆಳ್ವಿಕೆಯ ಹನ್ನಿರಡನೇ ವರುಷದಲ್ಲಿ ಮೇಡುಗಳ
ನ್ನೂ, ಶೋಪುಗಳನ್ನೂ, ಕಟಿದ ವಿಗ್ರಹಗಳನ್ನೂ, ಎರಕ ಹೊ
ಯಿದ ವಿಗ್ರಹಗಳನ್ನೂ ತೆಗೆದು ಹಾಕಿ, ಯೆಹೂದ ಯೆರೂಸಲೇ
೪ ಮನ್ನು ಶುಚಿ ಮಾಡ ಆರಂಭಿಸಿದನು. ಅವರು ಬಾಳನ ಬಲಿಪೀ
ಠಗಳನ್ನು ಅವನ ಸಮುಖದಿಂದ ಕೆಡವಿ ಹಾಕಿದರು. ಅವುಗಳ
ಮೇಲಿರುವ ಸೂರ್ಯ ಸ್ತಂಭಗಳನ್ನು ಕಡಿದು ಹಾಕಿ, ಶೋಪುಗ
ಳನ್ನೂ, ಕಟಿದ ವಿಗ್ರಹಗಳನ್ನೂ, ಎರಕ ಹೊಯಿದ ವಿಗ್ರಹಗಳ
ನ್ನೂ ಮುರಿದು ಬಿಟ್ಟು, ಪುಡಿ ಪುಡಿ ಮಾಡಿ, ಅವುಗಳಿಗೆ ಬಲಿ ಅ
೫ ರ್ಪಿಸಿದವರ ಸಮಾಧಿಗಳ ಮೇಲೆ ಚೆಲ್ಲಿಸಿ, ಯಾಜಕರ ಎಲುಬುಗ
ಳನ್ನು ಅವರ ಬಲಿಪೀಠಗಳ ಮೇಲೆ ಸುಟ್ಟು ಬಿಟ್ಟು, ಯೆಹೂದವ
ನ್ನೂ ಯೆರೂಸಲೇಮನ್ನೂ ಶುಚಿ ಮಾಡಿದರು. ಹೀಗೆಯೇ ಅ
ವರು ತಮ್ಮ ಗುದ್ದಲಿಗಳಿಂದ ಮನಸ್ಸೆ ಎಫ್ರಯಿಮ್ ಸಿಮೆಯೋನ್
ಪಟ್ಟಣಗಳು ಪೊಪ್ಪಲ್ಲೊಂದು, ನೆಫ್ತಲಿಯ ಪರ್ಯಂತರ ಸುತ್ತಲೂ
೬ ಮಾಡಿದರು. ಅವನು ಬಲಿಪೀಠಗಳನ್ನೂ ಶೋಪುಗಳನ್ನೂ ಕೆ
ಡವಿ ಹಾಕಿ, ಕಟಿದ ವಿಗ್ರಹಗಳನ್ನು ಕುಟ್ಟಿ, ಪುಡಿ ಪುಡಿ ಮಾಡಿ,
ಇಸ್ರಯೇಲ್ ದೇಶದಲ್ಲೆಲ್ಲಿಯೂ ಇರುವ ಸಮಸ್ತ ವಿಗ್ರಹಗಳನ್ನು
ಕೆಡಿಸಿದ ತರುವಾಯ, ಯೆರೂಸಲೇಮಿಗೆ ತಿರುಗಿದನು.

೭ ಆದರೆ ಯೊಷೀಯನ ಆಳ್ವಿಕೆಯ ಹದಿನೆಂಟನೇ ವರುಷದಲ್ಲಿ
ಅವನು ದೇಶವನ್ನೂ ಮನೆಯನ್ನೂ ಶುಚಿ ಮಾಡಿದ ತರುವಾ
ಯ, ತನ್ನ ದೇವರಾದ ಕರ್ತನ ಮನೆಯನ್ನು ಬಲ ಪಡಿಸುವದ
ಕ್ಕೆ, ಅಚಲ್ಯನ ಮಗನಾದ ಶಫಾನನನ್ನೂ, ಪಟ್ಟಣದ ಅಧಿಪತಿಯಾ
ದ ಮಸೇಯನನ್ನೂ, ರಾಯಸದವನಾದ ಯೊವಹಾಜನ ಮಗ
೮ ನಾದ ಯೊವಾಹನನ್ನೂ ಕಳುಹಿಸಿದನು. ಅವರು ಪ್ರಧಾನ ಯಾ
ಜಕನಾದ ಹಿಲ್ಕೀಯನ ಬಳಿಗೆ ಬಂದು, ದ್ವಾರಪಾಲಕರಾದ ಲೇ
ವ್ಯರು ಮನಸ್ಸೆ ಎಫ್ರಯಿಮಿನವರ ಕೈಯಿಂದಲೂ, ಇಸ್ರಯೇಲಿ
ನ ಉಳಿದವರ ಕೈಯಿಂದಲೂ, ಯೆಹೂದ ಬೆನ್ಯಮಿನಿನವರೆಲ್ಲ
ರ ಕೈಯಿಂದಲೂ ಕೂಡಿಸಿ, ಯೆರೂಸಲೇಮಿಗೆ ತಿರಿಗಿ ಬಂದು, ದೇ
೯ ವರ ಮನೆಗೆ ತಂದ ಕೊಖ್ಖವನ್ನು ಕೊಟ್ಟರು. ಕರ್ತನ ಮನೆಯ
ಕೆಲಸದವರ ವಿಚಾರಣೆಕಾರರ ಕೈಯಲ್ಲಿ ಒಪ್ಪಿಸಿದರು. ಇವರು ಮ
ನೆಯನ್ನು ಭದ್ರ ಮಾಡಿ, ಬಲ ಪಡಿಸ ಕರ್ತನ ಮನೆಯಲ್ಲಿ ಕೆಲಸ
೧೦ ಮಾಡುವವರಿಗೆ ಅದನ್ನು ಕೊಟ್ಟರು. ಕಟಿದ ಕಲ್ಲುಗಳನ್ನೂ
ಜಂತೆಗಳಿಗೋಸ್ಕರ ಮರಗಳನ್ನೂ, ಯೆಹೂದದ ಅರಸುಗಳು
ಕೆಡಿಸಿದ ಕೊಠಡಿಗಳಿಗೋಸ್ಕರ ನೆಲಕ್ಕೆ ಹಾಸುವ ಹಲಿಗೆಗಳ
ನ್ನೂ ಕೊಂಡು ಕೊಳ್ಳ ಕೆಲಸದವರಿಗೂ ಕಾಮಾಟಿಗರಿಗೂ
೧೧ ಕೊಟ್ಟರು. ಈ ಮನುಷ್ಯರು ಕೆಲಸವನ್ನು ನಂಬಿಕೆಯಿಂದ ಮಾ
ಡಿದರು. ಅವರ ವಿಚಾರಣೆ ಕರ್ತರು ಯಾರಂದರೆ—ಮೆರಾರಿಯ
ಕುಮಾರರಲ್ಲಿ ಲೇವ್ಯರಾದ ಯಹತನೂ, ಒಬದ್ಯನೂ; ಕೊ
ಹಾತ್ಯರ ಮಕ್ಕಳಲ್ಲಿ ಜೆಕರೀಯನೂ, ಮೆಷುಲ್ಲಾಮನೂ; ಗೀತ
ವಾದ್ಯಗಳಲ್ಲಿ ಬುದ್ಧಿಯುಳ್ಳವರಾದ ಲೇವ್ಯರೆಲ್ಲರೂ ಅದನ್ನು ನಡಿ
೧೨ ಸುತ್ತಾ ಇದ್ದರು. ಇದಲ್ಲದೆ ಹೊರೆಗಾರರ ಮೇಲೆಯೂ, ಬೇಕೆ
ಬೇಕೆ ಸೇವೆಯ ಕೆಲಸವನ್ನು ಮಾಡುವವರ ಮೇಲೆಯೂ ಅವ
ರು ವಿಚಾರಣೆ ಕರ್ತರಾಗಿದ್ದರು. ಮತ್ತು ಲೇವ್ಯರಲ್ಲಿ ಕೆಲವರು ರಾ
ಯಸದವರೂ, ಯಜಮಾನರೂ ದ್ವಾರಪಾಲಕರೂ ಆಗಿದ್ದರು.

೧೩ ಆದರೆ ಕರ್ತನ ಮನೆಗೆ ತಂದ ಕೊಖ್ಖವನ್ನು ಅವರು ಹೊರ
ಗೆ ತಕ್ಕೊಂಡು ಬರುವಾಗ, ಯಾಜಕನಾದ ಹಿಲ್ಕೀಯೆನು ಮೋ
ಶೆಯ ಕೈಯಿಂದಾದ ಕರ್ತನ ನ್ಯಾಯಪ್ರಮಾಣದ ಪುಸ್ತಕವ
೧೪ ನ್ನು ಕಂಡು ಕೊಂಡನು. ಆಗ ಹಿಲ್ಕೀಯೆನು ಪ್ರತ್ಯುತ್ತರ ಕೊ
ಟ್ಟು, ರಾಯಸದವನಾದ ಶಫಾನನಿಗೆ ಹೇಳಿದನು—ಕರ್ತನ ಮ
ನೆಯಲ್ಲಿ ನ್ಯಾಯಪ್ರಮಾಣದ ಪುಸ್ತಕವು ನನಗೆ ಸಿಕ್ಕಿತು. ಮ
ತ್ತು ಹಿಲ್ಕೀಯೆನು ಆ ಪುಸ್ತಕವನ್ನು ಶಫಾನನಿಗೆ ಒಪ್ಪಿಸಿದನು.

೧೬ ಶಫಾನನು ಆ ಪುಸ್ತಕವನ್ನು ಅರಸನ ಬಳಿಗೆ ತಕ್ಕೊಂಡು ಹೋ-
ಗಿ, ಅರಸನಿಗೆ ಮಾತು ತಿರಿಗಿ ಹೇಳಿದನು—ಏನಂದರೆ, ನಿನ್ನ ಸೇ-
೧೭ ವಕರ ಕೈಗೆ ಒಪ್ಪಿಸಿದ್ದವೆಲ್ಲಾ ಮಾಡುತ್ತಾರೆ. ಇದಲ್ಲದೆ ಅವರು
ಕರ್ತನ ಮಂದಿರದಲ್ಲಿ ಶಿಕ್ಕಿದ ಕೊಬ್ಬನ್ನು ಸುರಿದು, ವಿಚಾರಣೆ
ಕರ್ತರ ಕೈಯಲ್ಲಿಯೂ ಕೆಲಸದವರ ಕೈಯಲ್ಲಿಯೂ ಒಪ್ಪಿ-
೧೮ ದ್ದಾರೆ. ಮತ್ತು ರಾಯಸದವನಾದ ಶಫಾನನು ಅರಸನ ಸಂಗಡ
ಯಾಜಕನಾದ ಹಿಲ್ಕೀಯನು ನನಗೆ ಪುಸ್ತಕವನ್ನು ಕೊಟ್ಟಿದ್ದಾ-
ನೆಂದು ತಿಳಿಸಿದನು; ಆಗ ಶಫಾನನು ಅದನ್ನು ಅರಸನ ಮುಂದೆ ಓ-
೧೯ದಿದನು. ಅರಸನು ನ್ಯಾಯಪ್ರಮಾಣದ ವಾಕ್ಯಗಳನ್ನು ಕೇಳಿ-
೨೦ದಾಗ, ತನ್ನ ವಸ್ತ್ರಗಳನ್ನು ಹರಿದು ಕೊಂಡನು. ಮತ್ತು ಅರ-
ಸನು ಹಿಲ್ಕೀಯನಿಗೂ, ಶಫಾನನ ಮಗನಾದ ಅಹೀಕಾಮನಿಗೂ,
ಮಿಕಾಯನ ಮಗನಾದ ಅಬ್ದೋನನಿಗೂ, ರಾಯಸದವನಾದ ಶ-
ಫಾನನಿಗೂ ಅರಸನ ಸೇವಕನಾದ ಅಸಾಯನಿಗೂ ಆಜ್ಞಾಪಿಸಿ-
೨೧ ಹೇಳಿದ್ದೇನಂದರೆ, ನೀವು ಹೋಗಿ, ನನಗೋಸ್ಕರವೂ, ಇಸ್ರಯೇ-
ಲಿನಲ್ಲಿಯೂ ಯೆಹೂದದಲ್ಲಿಯೂ ಉಳಿದವರಿಗೋಸ್ಕರವೂ ಶಿ-
ಕ್ಕಿದ ಪುಸ್ತಕದ ಮಾತುಗಳನ್ನು ಕುರಿತು ಕರ್ತನನ್ನು ವಿಚಾರಿಸಿ-
ರಿ. ಯಾಕಂದರೆ ನಮ್ಮ ಪಿತೃಗಳು ಈ ಪುಸ್ತಕದಲ್ಲಿ ಬರೆದ ಎ-
ಲ್ಲಾದರ ಪ್ರಕಾರ ಮಾಡ ಕರ್ತನ ವಾಕ್ಯವನ್ನು ಕೈಕೊಳ್ಳದೆ ಇ-
ದ್ದದರಿಂದ, ನಮ್ಮ ಮೇಲೆ ಸುರಿದ ಕರ್ತನ ಉರಿಯು ದೊಡ್ಡ-
ದಾಗಿದೆ.

೨೨ ಆಗ ಹಿಲ್ಕೀಯನೂ ಅರಸನಿಂದ ನೇಮಿಸಲ್ಪಟ್ಟವರೂ ಹರ್ಹಾ-
ಸನ ಮಗನಾದ ತಿಕ್ವನ ಮಗನಾದ ವಸ್ತ್ರಗಳ ಕಾವಲಿಯವನಾ-
ದ ಶಲ್ಲೂಮನ ಹೆಂಡತಿಯಾದ ಪ್ರವಾದಿನಿಯಾದ ಹುಲ್ದಳ ಬಳಿಗೆ
ಹೋಗಿ, ಅವಳ ಸಂಗಡ ಅದನ್ನು ಕುರಿತು ಮಾತಾಡಿದರು. ಅ-
ವಳು ಯೆರೂಸಲೇಮಿನೊಳಗೆ ಎರಡನೇ ಭಾಗದಲ್ಲಿ ವಾಸವಾಗಿ-
೨೩ದ್ದಳು. ಆಗಲವಳು ಅವರಿಗೆ ಹೇಳಿದಳು—ಇಸ್ರಯೇಲಿನ ದೇವ-
ರಾದ ಯೆಹೋವ ಹೀಗೆ ಹೇಳುತ್ತಾನೆ—ನಿಮ್ಮನ್ನು ನನ್ನ ಬಳಿಗೆ
೨೪ ಕಳುಹಿಸಿದವನಿಗೆ ನೀವು ಹೇಳ ಬೇಕಾದದ್ದೇನಂದರೆ—ಕರ್ತನು
ಹೀಗೆ ಹೇಳುತ್ತಾನೆ—ಇಗೋ, ನಾನು ಈ ಸ್ಥಳದ ಮೇಲೆಯೂ,
ಅದರ ನಿವಾಸಿಗಳ ಮೇಲೆಯೂ ಕೇಡನ್ನೂ, ಯೆಹೂದದ ಅರಸ-
ನ ಮುಂದೆ ಅವರು ಓದಿದ ಪುಸ್ತಕದಲ್ಲಿ ಬರೆಯಲ್ಪಟ್ಟ ಎಲ್ಲಾ ಶಾ-
೨೫ಪಗಳನ್ನೂ ಬರ ಮಾಡುವೆನು. ಯಾಕಂದರೆ ತಮ್ಮ ಸಮಸ್ತ ಕೈ-
ಕ್ರಿಯೆಗಳಿಂದ ನನಗೆ ಕರಕರೆ ಎಬ್ಬಿಸುವ ಹಾಗೆ, ಅವರು ನನ್ನ-
ನ್ನು ಬಿಟ್ಟು ಬಿಟ್ಟು, ಇತರ ದೇವರುಗಳಿಗೆ ಧೂಪವನ್ನು ಸುಟ್ಟಿ-
ದ್ದಾರೆ. ಆದದರಿಂದ ನನ್ನ ಉರಿಯು ಈ ಸ್ಥಳದ ಮೇಲೆ ಹೊ-
೨೬ಯ್ಯಲ್ಪಟ್ಟುವದು; ಅದು ಆರಿ ಹೋಗುವದಿಲ್ಲ. ಆದರೆ ಕರ್ತನಿಂ-
ದ ವಿಚಾರಿಸ ನಿಮ್ಮನ್ನು ಕಳುಹಿಸಿದ ಯೆಹೂದದ ಅರಸನಿಗೆ ನೀ-
ವು ಹೇಳ ಬೇಕಾದದ್ದೇನಂದರೆ—ನೀನು ಕೇಳಿದ ಮಾತುಗಳನ್ನು-
೨೭ ಕುರಿತು ಇಸ್ರಯೇಲಿನ ದೇವರಾದ ಕರ್ತನು ಹೀಗೆ ಹೇಳುತ್ತಾನೆ—
ನೀನು ಈ ಸ್ಥಳಕ್ಕೆ ವಿರೋಧವಾಗಿಯೂ, ಅದರ ನಿವಾಸಿಗಳಿಗೆ
ವಿರೋಧವಾಗಿಯೂ ದೇವರು ಹೇಳಿದ ಮಾತುಗಳನ್ನು ನೀನು
ಕೇಳಿದಾಗ, ನಿನ್ನ ಹೃದಯವು ಮೆತ್ತಗಾಗಿ, ನೀನು ಅವನ ಮುಂ-
ದೆ ನಿನ್ನನ್ನು ತಗ್ಗಿಸಿ ಕೊಂಡಿ, ನಿನ್ನನ್ನು ನನ್ನ ಮುಂದೆ ತಗ್ಗಿಸಿ
ಕೊಂಡು, ನಿನ್ನ ವಸ್ತ್ರಗಳನ್ನು ಹರು ಕೊಂಡು, ನನ್ನ ಮುಂದೆ
ಅತ್ತದ್ದರಿಂದ, ನಾನು ನಿನ್ನನ್ನು ಕೇಳಿದೆನೆಂದು, ಕರ್ತನು ಹೇಳುತ್ತಾ-
೨೮ ನೆ. ಆದದರಿಂದ, ಇಗೋ, ನಾನು ನಿನ್ನನ್ನು ನಿನ್ನ ಪಿತೃಗಳ ಬಳಿ-
ಯಲ್ಲಿ ಕೇರಿಸಿ ಕೊಳ್ಳುವೆನು; ಸಮಾಧಾನದಿಂದ ನಿನ್ನ ಸಮಾಧಿ-
ಗೆ ತರಲ್ಪಟುವಿ. ನಾನು ಈ ಸ್ಥಳದ ಮೇಲೆಯೂ ಅದರ ನಿವಾಸಿಗಳ
ಮೇಲೆಯೂ ಬರ ಮಾಡುವ ಕೇಡನ್ನು ನಿನ್ನ ಕಣ್ಣುಗಳು ನೋ-
ಡುವದಿಲ್ಲ. ಅವರು ಹೋಗಿ, ಈ ಪ್ರತ್ಯುತ್ತರವನ್ನು ಅರಸನಿಗೆ
ಹೇಳಿದರು.

೨೯ ಮತ್ತು ಅರಸನು ಕಳುಹಿಸಿ, ಯೆಹೂದ ಯೆರೂಸಲೇಮಿನ
೩೦ ಹಿರಿಯರೆಲ್ಲರನ್ನು ತನ್ನ ಬಳಿಯಲ್ಲಿ ಕೂಡಿಸಿದನು. ಆಗ ಅರಸ-
ನೂ, ಯೆಹೂದದ ಸಮಸ್ತ ಮನುಷ್ಯರೂ, ಯೆರೂಸಲೇಮಿನ
ನಿವಾಸಿಗಳೂ, ಯಾಜಕರೂ, ಲೇವ್ಯರೂ, ಹಿರಿಕಿರಿಯರಾದ ಸ-
ಮಸ್ತ ಜನರೂ ಕರ್ತನ ಮನೆಗೆ ಏರಿ ಹೋದರು. ಅವನು ಕರ್ತ-
ನ ಮನೆಯಲ್ಲಿ ಕಂಡು ಕೊಂಡ ಬಡಂಬಡಿಕೆಯ ಪುಸ್ತಕದ ಮಾ-
೩೧ತುಗಳನ್ನೆಲ್ಲಾ ಅವರು ಕೇಳುವ ಹಾಗೆ ಓದಿದನು. ಅರಸನು ತ-
ನ್ನ ಸ್ಥಳದಲ್ಲಿ ನಿಂತು ಕೊಂಡು, ಕರ್ತನನ್ನು ಹಿಂಬಾಲಿಸುವ-
ಕ್ಕೂ, ಆತನ ಆಜ್ಞೆಗಳನ್ನೂ, ಆತನ ಸಾಕ್ಷಿಗಳನ್ನೂ, ಆತನ ಕ-
ಟ್ಟಳೆಗಳನ್ನೂ ತನ್ನ ಪೂರ್ಣ ಹೃದಯದಿಂದಲೂ ತನ್ನ ಪೂ-
ರ್ಣ ಪ್ರಾಣದಿಂದಲೂ ಕೈಕೊಳ್ಳುವದಕ್ಕೂ, ಈ ಪುಸ್ತಕದಲ್ಲಿ
ಬರೆದಿರುವ ಬಡಂಬಡಿಕೆಯ ವಾಕ್ಯಗಳ ಹಾಗೆ ಮಾಡುವದಕ್ಕೂ
೩೨ ಕರ್ತನ ಮುಂದೆ ಬಡಂಬಡಿಕೆ ಮಾಡಿದನು. ಇದಲ್ಲದೆ ಅವನು
ಯೆರೂಸಲೇಮಿನಲ್ಲಿಯೂ ಬೆನ್ಯಮೀನಿನಲ್ಲಿಯೂ ಶಿಕ್ಕಿದವರೆಲ್ಲ-
ರನ್ನು ಅದಕ್ಕೆ ಒಪ್ಪ ಮಾಡಿದನು. ಹಾಗೆಯೇ ಯೆರೂಸಲೇಮಿ-
ನ ನಿವಾಸಿಗಳು ತಮ್ಮ ಪಿತೃಗಳ ದೇವರಾದ ದೇವರ ಬಡಂಬ-
ಡಿಕೆಯ ಪ್ರಕಾರ ಮಾಡಿದರು.

೩೩ ಹೀಗೆಯೇ ಯೊಷೀಯನು ಇಸ್ರಯೇಲ ಮಕ್ಕಳಿಗೆ ಉಂಟಾ-
ದ ಎಲ್ಲಾ ದೇಶಗಳೊಳಗಿಂದ ಸಮಸ್ತ ಅಸಹ್ಯಗಳನ್ನು ತೆಗದು
ಹಾಕಿ, ಇಸ್ರಯೇಲಿನಲ್ಲಿ ಶಿಕ್ಕಿದವರೆಲ್ಲರು ಸೇವಿಸುವ ಹಾಗೆ—ತ-
ಮ್ಮ ದೇವರಾದ ಕರ್ತನನ್ನು ಸೇವಿಸುವ ಹಾಗೆ ಮಾಡಿದನು. ಅ-
ವನ ದಿವಸಗಳೆಲ್ಲಾ ಅವರು ತಮ್ಮ ಪಿತೃಗಳ ದೇವರಾದ ಕರ್ತ-
ನನ್ನು ಹಿಂಬಾಲಿಸುವದನ್ನು ಬಿಡದೆ ಇದ್ದರು.

## ೩೫. ಸಂಧಿ.

೧ ಇದಲ್ಲದೆ ಯೊಷೀಯನು ಯೆರೂಸಲೇಮಿನಲ್ಲಿ ಕರ್ತನಿಗೆ ಪ-
ಸ್ಕವನ್ನು ಆಚರಿಸಿದನು; ಮೊದಲನೇ ತಿಂಗಳ ಹದಿನಾಲ್ಕನೇ ದಿ-
೬ ವಸದಲ್ಲಿ ಪಸ್ಕವನ್ನು ಕಡಿದರು. ಆಗಲವನು ಯಾಜಕರನ್ನು ಅ-
ವರವರ ವಿಚಾರಣೆಗಳಲ್ಲಿ ನಿಲ್ಲಿಸಿ, ಕರ್ತನ ಮನೆಯ ಸೇವೆ ಮಾ-
೩ ಡುವದಕ್ಕೆ ಅವರನ್ನು ದೃಢ ಪಡಿಸಿ, ಸಮಸ್ತ ಇಸ್ರಯೇಲರನ್ನು
ಬೋಧಿಸಿದ, ಕರ್ತನಿಗೆ ಪರಿಶುದ್ಧರಾದ ಲೇವ್ಯರಿಗೆ ಹೇಳಿದ್ದೇನಂದ-
ರೆ, ಪರಿಶುದ್ಧವಾದ ಪೆಟ್ಟಿಗೆಯು ನಿಮ್ಮ ಭುಜಗಳ ಮೇಲೆ ಭಾರವಿಲ್ಲ-
ದ ಹಾಗೆ, ನೀವು ಅದನ್ನು ಇಸ್ರಯೇಲಿನ ಅರಸನಾಗಿರುವ ದಾವೀ-
ದನ ಮಗನಾದ ಸೊಲೊಮೋನನು ಕಟ್ಟಿಸಿದ ಮನೆಯಲ್ಲಿ ಇರಿ-
ಸಿ, ನಿಮ್ಮ ದೇವರಾದ ಕರ್ತನನ್ನೂ ಆತನ ಜನವಾದ ಇಸ್ರಯೇಲ-
೪ ನ್ನೂ ಸೇವಿಸಿರಿ. ಇದಲ್ಲದೆ ಇಸ್ರಯೇಲಿನ ಅರಸನಾದ ದಾವೀದನ
ಬರಹದ ಪ್ರಕಾರವಾಗಿಯೂ, ಅವನ ಮಗನಾದ ಸೊಲೊಮೋ-
ನನ ಬರಹದ ಪ್ರಕಾರವಾಗಿಯೂ, ನಿಮ್ಮ ಒಂತುಗಳಲ್ಲಿ ನಿಮ್ಮ
೫ ಪಿತೃಗಳ ಮನೆಗಳ ಪ್ರಕಾರ ಸಿದ್ಧ ಮಾಡಿ ಕೊಂಡು, ಜನವಾಗಿ-



ರುವ ನಿಮ್ಮ ಸಹೋದರರ ಪಿತೃಗಳ ವಂಶಗಳ ವಿಭಾಗದ ಪ್ರ-
ಕಾರವಾಗಿಯೂ, ಲೇವ್ಯರ ವಂಶಗಳ ವಿಭಾಗದ ಪ್ರಕಾರವಾಗಿ-
೬ ಯೂ ಪರಿಶುದ್ಧ ಸ್ಥಾನದಲ್ಲಿ ನಿಲ್ಲಿರಿ. ಮತ್ತು ಪಸ್ಕವನ್ನು
ಕೊಯಿದು, ನಿಮ್ಮನ್ನು ಪರಿಶುದ್ಧ ಮಾಡಿಕೊಂಡು, ಕರ್ತನು
ಮೋಶೆಯ ಮುಖಾಂತರವಾಗಿ ಹೇಳಿದ ವಾಕ್ಯದ ಪ್ರಕಾರ,
ನಿಮ್ಮ ಸಹೋದರರು ಮಾಡುವ ಹಾಗೆ, ಅವರನ್ನು ಸಿದ್ಧ-
ಮಾಡಿರಿ.

೭ ಆಗ ಯೊಷೀಯನು ಸಿದ್ಧವಾಗಿದ್ದ ಸಮಸ್ತ ಜನರಿಗೆ ಪಸ್ಕದ
ಬಲಿಗೋಸ್ಕರ ಮಂದೆಯಿಂದ ಕುರಿ ಮರಿಗಳನ್ನೂ, ಮೇಕೆಯ
ಮರಿಗಳನ್ನೂ, ಮೂವತ್ತು ಸಾವಿರ ಕೊಟ್ಟನು; ಇದಲ್ಲದೆ ಮೂ-
ರು ಸಾವಿರ ಎತ್ತುಗಳನ್ನು ಕೊಟ್ಟನು; ಇವು ಅರಸನ ಸ್ಥಿತಿಯಿಂ-
೮ದಲೇ. ಹಾಗೆಯೇ ಅವನ ಪ್ರಧಾನರು ಜನರಿಗೂ, ಯಾಜಕರಿ-
ಗೂ, ಲೇವ್ಯರಿಗೂ ಮನಃಪೂರ್ವಕವಾಗಿ ಕೊಟ್ಟರು. ದೇವರ
ಮನೆಯ ನಾಯಕರಾದ ಹಿಲ್ಕೀಯನೂ, ಜೆಕರ್ಯನೂ, ಯೆ-
ಹಿಯೇಲನೂ ಪಸ್ಕದ ಬಲಿಗೋಸ್ಕರ ಎರಡು ಸಾವಿರದ ಅರು ನೂ-
ರು ಮರಿಗಳನ್ನೂ ಮುನ್ನೂರು ಎತ್ತುಗಳನ್ನೂ ಯಾಜಕರಿಗೆ
೯ ಕೊಟ್ಟರು. ಇದಲ್ಲದೆ ಲೇವ್ಯರಲ್ಲಿ ಪ್ರಧಾನರಾದ ಕೊನನ್ಯನೂ,
ಅವನ ಸಹೋದರರಾದ ಶೆಮಾಯನೂ, ನೆಥಾನಿಯೇಲನೂ,
ಹಷಬ್ಯನೂ, ಯೆಯಿಯೇಲನೂ, ಯೊಜಬಾದನೂ ಪಸ್ಕದ ಬಲಿಗ-
ಳ ನಿಮಿತ್ತವಾಗಿ ಐದು ಸಾವಿರ ಮರಿಗಳನ್ನೂ ಐನೂರು ಎತ್ತುಗ-
ಳನ್ನೂ ಲೇವ್ಯರಿಗೆ ಕೊಟ್ಟರು.

೧೦ ಹೀಗೆಯೇ ಅರಸನ ಆಜ್ಞೆಯ ಪ್ರಕಾರ ಸೇವೆಯು ಸಿದ್ಧ ಮಾಡ-
ಲ್ಪಟ್ಟಿತು. ಮತ್ತು ಯಾಜಕರು ತಮ್ಮ ತಮ್ಮ ಸ್ಥಳಗಳಲ್ಲಿಯೂ,
೧೧ ಲೇವ್ಯರು ತಮ್ಮ ತಮ್ಮ ಒಂತುಗಳಲ್ಲಿಯೂ ನಿಂತಿದ್ದರು. ಲೇವ್ಯ-
ರು ಪಸ್ಕವನ್ನು ಕಡಿದ ತರುವಾಯ, ಯಾಜಕರು ಅವರ ಕೈ-
ಯಿಂದ ರಕ್ತವನ್ನು ತಕ್ಕೊಂಡು, ಚೆಮಿಕಿಸಿದರು; ಆದರೆ ಲೇವ್ಯ-
೧೨ ರು ಸುಲಿದರು. ಮತ್ತು ಮೋಶೆಯ ಪುಸ್ತಕದಲ್ಲಿ ಬರೆಯಲ್ಪಟ್ಟ
ಹಾಗೆ, ಜನರ ವಂಶಗಳ ಮನೆಗಳ ಪ್ರಕಾರ, ಕರ್ತನಿಗೆ ಅರ್ಪಿಸ-
ಅವರು ಕೊಡುವ ಹಾಗೆ, ಹೋಮಗಳನ್ನು ತೆಗೆದು ಇಟ್ಟರು;
೧೩ ಹಾಗೆಯೇ ಎತ್ತುಗಳನ್ನು ತೆಗೆದು ಇಟ್ಟರು. ಹಾಗೆಯೇ ಕಟ್ಟಳೆ-
ಯ ಪ್ರಕಾರ ಪಸ್ಕವನ್ನು ಬೆಂಕಿಯಿಂದ ಬೇಯಿಸಿದರು. ಆದರೆ
ಪರಿಶುದ್ಧವಾದವುಗಳನ್ನು ಗಡಿಗೆಗಳಲ್ಲಿಯೂ ತಪಲೆಗಳಲ್ಲಿಯೂ
ಕೊಪ್ಪರಿಗೆಗಳಲ್ಲಿಯೂ ಬೇಯಿಸಿ, ಶೀಘ್ರವಾಗಿ ಜನರೆಲ್ಲರಿಗೆ ಕ-
ಳುಹಿಸಿದರು.

೧೪ ತರುವಾಯ ತಮಗೋಸ್ಕರವೂ ಯಾಜಕರಿಗೋಸ್ಕರವೂ
ಸಿದ್ಧ ಮಾಡಿದರು. ಯಾಕಂದರೆ ಅರೋನನ ಮಕ್ಕಳಾದ ಯಾ-
ಜಕರು ರಾತ್ರಿಯ ಪರ್ಯಂತರ ಹೋಮಗಳನ್ನೂ ಕೊಬ್ಬನ್ನೂ
ಅರ್ಪಿಸುವದರಲ್ಲಿದ್ದರು. ಆದದರಿಂದ ಲೇವ್ಯರು ತಮಗೋಸ್ಕರ-
೧೫ವೂ, ಅರೋನನ ಮಕ್ಕಳಾದ ಯಾಜಕರಿಗೋಸ್ಕರವೂ ಸಿದ್ಧ
ಮಾಡಿದರು. ಹಾಪೀದನೂ, ಆಸಾಫನೂ, ಹೆಮಾನನೂ, ಅರ-
ಸನ ದರ್ಶಿಯಾದ ಯೆದುತೂನನೂ, ಇವರ ಆಜ್ಞೆಯ ಪ್ರಕಾರ,
ಆಸಾಫನ ಮಕ್ಕಳಾದ ಹಾಡುಗಾರರು ತಮ್ಮ ಸ್ಥಳದಲ್ಲಿದ್ದರು;
ಹಾಗೆಯೇ ದ್ವಾರಪಾಲಕರು ಬಾಗಲು ಬಾಗಲಲ್ಲಿ ಇದ್ದರು;
ಅವರು ತಮ್ಮ ಸೇವೆಯನ್ನು ಬಿಡ ಕೂಡದೆ ಇತ್ತು; ಯಾಕಂದರೆ
ಅವರ ಸಹೋದರರಾದ ಲೇವ್ಯರು ಅವರ ನಿಮಿತ್ತ ಸಿದ್ಧ ಮಾಡಿದ-
೧೬ ರು. ಹೀಗೆಯೇ ಅರಸನಾದ ಯೊಷೀಯನ ಆಜ್ಞೆಯ ಪ್ರಕಾರ,
ಪಸ್ಕವನ್ನು ಆಚರಿಸುವದಕ್ಕೂ, ಕರ್ತನ ಬಲಿಪೀಠದ ಮೇಲೆ ಹೋ-
ಮಗಳನ್ನು ಅರ್ಪಿಸುವದಕ್ಕೂ, ಅದೇ ದಿವಸದಲ್ಲಿ ಕರ್ತನ ಸೇವೆ-
೧೭ಯು ಸಿದ್ಧವಾಯಿತು. ಮತ್ತು ಸಿದ್ಧವಾಗಿದ್ದ ಇಸ್ರಯೇಲಿನ ಮ-
ಕ್ಕಳು ಆ ಕಾಲದಲ್ಲಿ ಪಸ್ಕವನ್ನೂ, ಹುಳಿ ಇಲ್ಲದ ಕೊಟ್ಟಿಯ ಹ-
ಬ್ಬವನ್ನೂ ಏಳು ದಿವಸ ಆಚರಿಸಿದರು.

೧೮ ಪ್ರವಾದಿಯಾದ ಸಮುವೇಲನ ದಿವಸಗಳು ಮೊದಲುಗೊಂಡು
ಇಸ್ರಯೇಲಿನಲ್ಲಿ ಇಂಥಾ ಪಸ್ಕವನ್ನು ಆಚರಿಸಿದ್ದಿಲ್ಲ. ಇಸ್ರಯೇ-
ಲಿನ ಸಮಸ್ತ ಅರಸುಗಳಲ್ಲಿ, ಯೊಷೀಯನೂ ಯಾಜಕರೂ
ಲೇವ್ಯರೂ ಸಿದ್ಧವಾಗಿದ್ದ ಯೆಹೂದ ಇಸ್ರಯೇಲ್ಯರೆಲ್ಲರೂ ಯೆ-
ರೂಸಲೇಮಿನ ನಿವಾಸಿಗಳೂ ಆಚರಿಸಿದ ಪಸ್ಕದ ಹಾಗೆ, ಯಾ-
೧೯ರೂ ಆಚರಿಸಲಿಲ್ಲ. ಯೊಷೀಯನ ಆಳಿಕೆಯ ಹದಿನೆಂಟನೇ ವ-
ರುಷದಲ್ಲಿ ಈ ಪಸ್ಕವು ಆಚರಿಸಲ್ಪಟ್ಟಿತು.

೨೦ ಇದೆಲ್ಲಾ ಆದ ತರುವಾಯ, ಯೊಷೀಯನು ಮಂದಿರವನ್ನು
ಸಿದ್ಧ ಮಾಡಿದ ಮೇಲೆ, ಐಗುಪ್ತದ ಅರಸನಾದ ನೇಕೊ ಫ್ರಾತಿನ
ಬಳಿಯಲ್ಲಿ ಕರ್ಕೆಮೀಷನ ಸಂಗಡ ಯುದ್ಧ ಮಾಡ ಬಂದನು;
೨೧ ಯೊಷೀಯನು ಅವನ ಮೇಲೆ ಹೊರಟು ಹೋದನು. ಆದರೆ
ಇವನು ಯೊಷೀಯನ ಬಳಿಗೆ ದೂತರನ್ನು ಕಳುಹಿಸಿ, ಹೇಳಿದ್ದೇ-
ನಂದರೆ—ಯೆಹೂದದ ಅರಸನೇ, ನನಗೆ ನಿನಗೆ ಏನು! ಈ ಹೊ-
ತ್ತು ನಿನ್ನ ಮೇಲೆ ಅಲ್ಲ, ನಾನು ಯುದ್ಧ ಮಾಡುವ ಮನೆಯ ಮೇ-
ಲೆ ಬರುತ್ತೇನೆ; ತ್ವರೆ ಮಾಡು ಎಂದು, ದೇವರು ನನಗೆ ಹೇಳಿದ್ದಾ-
ನೆ. ನನ್ನ ಸಂಗಡ ಇರುವ ದೇವರು ನಿನ್ನನ್ನು ಕೆಡಿಸದ ಹಾಗೆ
ನೀನು ಆತನಿಗೆ ಸುಮ್ಮನೆ ಇರು. ಆದರೆ ಯೊಷೀಯನು ತನ್ನ
ಮುಖವನ್ನು ಅವನ ಕಡೆಯಿಂದ ತಿರುಗಿಸದೆ, ಅವನ ಸಂಗಡ ಯು-
ದ್ಧ ಮಾಡ ತನ್ನನ್ನು ಮಾಜಿದನು. ಅವನು ದೇವರ ಬಾಯಿಂದ
ಬಂದ ನೇಕೊವನ ಮಾತುಗಳನ್ನು ಕೇಳದೆ, ಮೆಗಿದ್ದೋನು ತಗ್ಗಿ-
೨೩ನಲ್ಲಿ ಯುದ್ಧ ಮಾಡ ಬಂದನು. ಆಗ ಬಿಲ್ಲುಗಾರರು ಅರಸನಾ-
ದ ಯೊಷೀಯನ ಮೇಲೆ ಎಸೆದರು; ಅರಸನು ತನ್ನ ಸೇವಕರಿಗೆ,
ನನ್ನನ್ನು ಆಚೆಗೆ ಒಯ್ಯಿರಿ; ಯಾಕಂದರೆ ಬಹು ಘಾಯ ಪಟ್ಟಿ-
೨೪ದ್ದೇನೆ, ಅಂದನು. ಆದದರಿಂದ ಅವನ ಸೇವಕರು ಆ ರಥದೊಳ-
ಗಿಂದ ಅವನನ್ನು ತೆಗೆದು ಕೊಂಡು, ಅವನಿಗುಂಟಾದ ಎರಡನೇ
ರಥದಲ್ಲಿ ಅವನನ್ನು ಇರಿಸಿ, ಯೆರೂಸಲೇಮಿಗೆ ತಂದರು. ಅವ-
ನು ಸತ್ತು, ತನ್ನ ಪಿತೃಗಳ ಸಮಾಧಿಗಳಲ್ಲಿ ಹೂಣಲ್ಪಟ್ಟನು.
ಮತ್ತು ಸಮಸ್ತ ಯೆಹೂದ ಯೆರೂಸಲೇಮಿನವರು ಯೊಷೀಯ-
೨೫ನಿಗೋಸ್ಕರ ದುಃಖ ಪಟ್ಟರು. ಇದಲ್ಲದೆ ಯೆರೆಮಿಯನು ಯೊ-
ಷೀಯನಿಗೋಸ್ಕರ ಗೋಳಾಡಿದನು. ಮತ್ತು ಹಾಡುಗಾರರೂ
ಹಾಡುಗಾರ್ತಿಗಳೂ ಯೊಷೀಯನಿಗೋಸ್ಕರ ಇದು ವರಿಗೂ ತ-
ಮ್ಮ ಗೋಳಾಟಗಳಲ್ಲಿ ಹೇಳುತ್ತಾರೆ. ಮತ್ತು ಇದು ಇಸ್ರಯೇಲಿ-
ನಲ್ಲಿ ನೇಮಕವಾಯಿತು. ಇಗೋ, ಅವು ಗೋಳಾಟಗಳಲ್ಲಿ ಬರೆ-
ಯಲ್ಪಟ್ಟಿವೆ.

೨೬ ಆದರೆ ಯೊಷೀಯನ ಮಿಕ್ಕಾದ ಕ್ರಿಯೆಗಳೂ, ಕರ್ತನ
ನ್ಯಾಯಪ್ರಮಾಣದಲ್ಲಿ ಬರೆಯಲ್ಪಟ್ಟ ಹಾಗೆ ಅವನು ಮಾಡಿದ
ಉಪಕಾರಗಳೂ, ಅವನ ಕ್ರಿಯೆಗಳೂ—ಮೊದಲನೆಯವುಗಳೂ
ಕಡೆಯವುಗಳೂ—ಇಸ್ರಯೇಲ್ ಯೆಹೂದ ಅರಸುಗಳ ಪುಸ್ತಕ-
ದಲ್ಲಿ ಬರೆಯಲ್ಪಟ್ಟಿವೆ.

## ೩೬. ಸಂಧಿ.

೧ ಆಗ ದೇಶದ ಜನರು ಯೊಷೀಯನ ಮಗನಾದ ಯೆಹೊವ
ಹಾಜನನ್ನು ತಕ್ಕೊಂಡು, ಯೆರೂಸಲೇಮಿನಲ್ಲಿ ಅವನ ತಂದೆಗೆ
೨ ಬದಲಾಗಿ ಅವನನ್ನು ಅರಸನಾಗ ಮಾಡಿದರು. ಯೆಹೊವಹಾ
ಜನು ಆಳ್ವ ಆರಂಭಿಸಿದಾಗ, ಇಪ್ಪತ್ತು ಮೂರು ವರುಷದವನಾಗಿ
೩ ದ್ದು, ಯೆರೂಸಲೇಮಿನಲ್ಲಿ ಮೂರು ತಿಂಗಳು ಆಳ್ವದನು. ಐಗು
ಪ್ತದ ಅರಸನು ಯೆರೂಸಲೇಮಿನಲ್ಲಿ ಅವನನ್ನು ತೆಗೆದು ಹಾಕಿ,
ದೇಶದಿಂದ ನೂರು ತಲಾಂತು ಬೆಳ್ಳಿಯನ್ನೂ ಒಂದು ತಲಾಂತು
೪ ಭಂಗಾರವನ್ನೂ ಅಪರಾಧ ತಕ್ಕೊಂಡನು. ಇದಲ್ಲದೆ ಐಗುಪ್ತದ
ಅರಸನು ಅವನ ಸಹೋದರನಾದ ಎಲ್ಯಾಕೀಮನನ್ನು ಯೆಹೂದ
ಯೆರೂಸಲೇಮಿನ ಮೇಲೆ ಅರಸನಾಗ ಮಾಡಿ, ಯೆಹೊಯಕೀ
ಮನೆಂಬ ಬದಲು ಹೆಸರನ್ನು ಅವನಿಗೆ ಇಟ್ಟನು. ಮತ್ತು ನೇಕೊ
ಅವನ ಸಹೋದರನಾದ ಯೆಹೊವಹಾಜನನ್ನು ತಕ್ಕೊಂಡು,
ಐಗುಪ್ತಕ್ಕೆ ಒಯ್ದನು.

೫ ಯೆಹೊಯಕೀಮನು ಆಳ್ವ ಆರಂಭಿಸಿದಾಗ, ಇಪ್ಪತ್ತೈದು ವ
ರುಷದವನಾಗಿದ್ದು, ಯೆರೂಸಲೇಮಿನಲ್ಲಿ ಹನ್ನೊಂದು ವರುಷ ಆ
ಳ್ವದನು. ಆದರೆ ತನ್ನ ದೇವರಾದ ಕರ್ತನ ಸಮುಖದಲ್ಲಿ ಅವ
೬ ನು ಕೆಟ್ಟದ್ದನ್ನು ಮಾಡಿದನು. ಬಾಬೆಲಿನ ಅರಸನಾದ ನೆಬುಕದ್ನೆಜ
ರನು ಅವನ ಮೇಲೆ ಬಂದು, ಬಾಬೆಲಿಗೆ ಒಯ್ಯುವ ಹಾಗೆ, ಅ
೭ ವನಿಗೆ ಸಂಕೋಲೆಗಳನ್ನು ಹಾಕಿಸಿದನು. ಇದಲ್ಲದೆ ನೆಬುಕದ್ನೆಜ
ರನು ಕರ್ತನ ಮನೆಯ ಪಾತ್ರೆಗಳಲ್ಲಿ ಕೆಲವನ್ನು ಬಾಬೆಲಿಗೆ ತ
ಕ್ಕೊಂಡು ಹೋಗಿ, ಬಾಬೆಲಿನಲ್ಲಿರುವ ತನ್ನ ಮಂದಿರದಲ್ಲಿ ಇರಿ
ಸಿದನು.

೮ ಆದರೆ ಯೆಹೊಯಕೀಮನ ಮಿಕ್ಕಾದ ಕ್ರಿಯೆಗಳೂ, ಅವನು
ಮಾಡಿದ ಅಸಹ್ಯಗಳೂ ಅವನಲ್ಲಿ ಕಂಡು ಕೊಂಡದ್ದೂ, ಇಗೋ,
ಅವು ಇಸ್ರಯೇಲ್ ಯೆಹೂದ ಅರಸುಗಳ ಪುಸ್ತಕದಲ್ಲಿ ಬರೆಯ
ಲ್ಪಟ್ಟವೆ. ಅವನಿಗೆ ಬದಲಾಗಿ ಅವನ ಮಗನಾದ ಯೆಹೋಯ
ಕೀಮನು ಆಳ್ವದನು.

೯ ಯೆಹೊಯಕೀಮನು ಆಳ್ವ ಆರಂಭಿಸಿದಾಗ, ಹದಿನೆಂಟು ವರು
ಷದವನಾಗಿದ್ದು, ಯೆರೂಸಲೇಮಿನಲ್ಲಿ ಮೂರು ತಿಂಗಳ ಹತ್ತು
೧೦ ದಿವಸ ಆಳ್ವದನು. ಅವನು ಕರ್ತನ ಸಮುಖದಲ್ಲಿ ಕೆಟ್ಟದ್ದನ್ನು
ಮಾಡಿದನು. ಆದರೆ ವರುಷವು ತೀರಿದ ಮೇಲೆ ಅರಸನಾದ ನೆ
ಬುಕದ್ನೆಜರನು ಜನರನ್ನು ಕಳ್ಳಹಿಸಿ, ಅವನನ್ನೂ ಮತ್ತು ಕ
ರ್ತನ ಮನೆಯ ಇಷ್ಟೈಶ್ವರ್ಯದ ತಕ್ಕ ಪಾತ್ರೆಗಳನ್ನೂ ಬಾಬೆಲಿಗೆ
ತಕ್ಕೊಂಡು ಬರ ಮಾಡಿ, ಅವನ ಸಹೋದರನಾದ ಚಿದ್ಕೀಯನ
ನ್ನು ಯೆಹೂದ ಯೆರೂಸಲೇಮಿನ ಮೇಲೆ ಅರಸನಾಗ ಮಾಡಿದನು.

೧೧ ಚಿದ್ಕೀಯನು ಆಳ್ವ ಆರಂಭಿಸಿದಾಗ ಅವನು ಇಪ್ಪತ್ತೊಂದು
ವರುಷದವನಾಗಿದ್ದು, ಯೆರೂಸಲೇಮಿನಲ್ಲಿ ಹನ್ನೊಂದು ವರುಷ
೧೨ ಆಳ್ವದನು. ಅವನು ತನ್ನ ದೇವರಾದ ಕರ್ತನ ಸಮುಖದಲ್ಲಿ ಕೆ
ಟ್ಟದ್ದನ್ನು ಮಾಡಿ, ಕರ್ತನ ಬಾಯಿ ಮಾತು ಹೇಳಿದ ಪ್ರವಾದಿ
ಯಾದ ಯೆರೆಮಿಯಾನ ಮುಂದೆ ತನ್ನನ್ನು ತಗ್ಗಿಸದೆ ಇದ್ದನು.
೧೩ ಇದಲ್ಲದೆ ಅವನು ದೇವರ ಮೇಲೆ ಆಣೆ ಇಡ ಮಾಡಿದ ಅರಸನಾದನೆ
ಬುಕದ್ನೆಜರನಿಗೆ ತಿರುಗ ಬಿದ್ದನು. ಏನಂದರೆ ಅವನು ಇಸ್ರಯೇ
ಲಿನ ದೇವರಾದ ಕರ್ತನ ಕಡೆಗೆ ತಿರುಗದೆ, ತನ್ನ ಕುತ್ತಿಗೆಯನ್ನು
ಕಠಿಣ ಪಡಿಸಿ, ತನ್ನ ಹೃದಯವನ್ನು ಒರಟು ಮಾಡಿ ಕೊಂಡನು.

೧೪ ಇದಲ್ಲದೆ ಯಾಜಕರಲ್ಲಿರುವ ಪ್ರಧಾನರೂ ಜನರೂ ಜನಾಂಗ
ಗಳ ಅಸಹ್ಯಗಳನ್ನು ಹಿಂಬಾಲಿಸಿ, ಬಹಳವಾಗಿ ಅಕೃತ್ಯ ಮಾಡಿ,
ಕರ್ತನು ಯೆರೂಸಲೇಮಿನಲ್ಲಿ ಪರಿಶುದ್ಧ ಮಾಡಿದ ಅವನ ಮನೆಯ
೧೫ ನ್ನು ಅಶುಚಿ ಮಾಡಿದರು. ಅವರ ಪಿತೃಗಳ ಕರ್ತನಾದ ದೇವ
ರು ತನ್ನ ದೂತರನ್ನು ಅವರ ಬಳಿಗೆ ಕಳ್ಳಹಿಸಿದನು. ಹೊತ್ತೊ
ಟೆ ಎದ್ದು, ಕಳ್ಳಹಿಸುತ್ತಾ ಬಂದನು. ಯಾಕಂದರೆ ತನ್ನ ಜನರ
ಮೇಲೆಯೂ ತನ್ನ ನಿವಾಸ ಸ್ಥಾನದ ಮೇಲೆಯೂ ಕನಿಕರ ಪಟ್ಟಿ
೧೬ ನು. ಆದರೆ ಕರ್ತನ ಊರಿಯ ತನ್ನ ಜನರಿಗೆ ವಿರೋಧವಾಗಿ ಪಟ್ಟಿ
ಳುವ ಮಟ್ಟಿಗೂ, ಸ್ವಸ್ಥವಾಗ ಕೂಡದೆ ಇರುವ ಮಟ್ಟಿಗೂ, ಅ
ವರು ದೇವರ ದೂತರನ್ನು ಅಪಹಾಸ್ಯ ಮಾಡಿ, ಅವನ ವಾಕ್ಯಗಳ
ನ್ನು ತಿರಸ್ಕರಿಸಿ, ಅವನ ಪ್ರವಾದಿಗಳಿಗೆ ವಂಚನೆ ಮಾಡಿದರು.

೧೭ ಆದದರಿಂದ ಅವರ ಮೇಲೆ ಕಸ್ದೀಯರ ಅರಸನನ್ನು ಬರ ಮಾ
ಡಿದನು. ಅವನು ಅವರ ಪರಿಶುದ್ಧ ಸ್ಥಾನವಾದ ಮನೆಯಲ್ಲಿ ಅವ
ರ ಪ್ರಾಯಸ್ಥರನ್ನು ಕತ್ತಿಯಿಂದ ಕೊಂದು ಹಾಕಿದನು. ಪ್ರಾಯ
ಸ್ಥನ ಮೇಲಾದರೂ, ಕನ್ಯಾ ಸ್ತ್ರೀಯ ಮೇಲಾದರೂ, ವೃದ್ಧನ
ಮೇಲಾದರೂ, ಬಲಹೀನನ ಮೇಲಾದರೂ ಕನಿಕರ ಪಡಲಿಲ್ಲ. ಅ
೧೮ ತನು ಸಮಸ್ತವನ್ನು ಅವನ ಕೈಯಲ್ಲಿ ಒಪ್ಪಿಸಿದನು. ಇದಲ್ಲದೆ
ದೊಡ್ಡವೂ ಸಣ್ಣವೂ ಆದ ಕರ್ತನ ಮನೆಯ ಎಲ್ಲಾ ಸಾಮಾನು
ಗಳು, ಕರ್ತನ ಮನೆಯ ಬೊಕ್ಕಸಗಳು, ಅರಸನ ಬೊಕ್ಕಸಗ
ಳು, ಅವನ ಪ್ರಧಾನರ ಬೊಕ್ಕಸಗಳು ಇವುಗಳನ್ನೆಲ್ಲಾ ಬಾಬೆಲಿಗೆ
೧೯ ತರಿಸಿದನು. ಮತ್ತು ಅವರು ದೇವರ ಮನೆಯನ್ನು ಸುಟ್ಟು ಬಿಟ್ಟು
ಯೆರೂಸಲೇಮಿನ ಗೋಡೆಯನ್ನು ಕೆಡವಿ ಹಾಕಿ, ಅದರ ಅರಮ
ನೆಗಳನ್ನು ಸುಟ್ಟು ಬಿಟ್ಟು, ಅದರ ಇಷ್ಟೈಶ್ವರ್ಯದ ತಕ್ಕ ಸಾಮಾ
೨೦ ನುಗಳನ್ನೆಲ್ಲಾ ಕೆಡಿಸಿದರು. ಇದಲ್ಲದೆ ಕತ್ತಿಗೆ ತಪ್ಪಿದವರನ್ನು ಅ
ವನು ಬಾಬೆಲಿಗೆ ಒಯ್ದನು. ಅವರು ಅಲ್ಲಿ ಪಾರ್ಸಿಯ ರಾಜ್ಯದ
ಆಳ್ವಿಕೆಯ ಪರ್ಯಂತರ, ದೇಶವು ಅದರ ಸಬ್ಬತುಗಳನ್ನು ಅನು
ಭವಿಸುವ ಪರ್ಯಂತರ, ಯೆರೆಮಿಯಾನ ಮುಖಾಂತರವಾಗಿ ಹೇ
ಳಿದ ಕರ್ತನ ವಾಕ್ಯವು ಈಡೇರುವದಕ್ಕೆ, ಅವನಿಗೂ ಅವನ ಮ
೨೧ ಕ್ಕಳಿಗೂ ಸೇವಕರಾಗಿದ್ದರು. ದೇಶವು ಎಪ್ಪತ್ತು ವರುಷ ತೀರುವ
ಪರ್ಯಂತರ ಹಾಳಾಗಿದ್ದು, ಸಬ್ಬತನ್ನು ಅನುಭವಿಸುತ್ತಾ ಇತ್ತು.

೨೨ ಆದರೆ ಪಾರ್ಸ್ಯದ ಅರಸನಾದ ಕೊರೇಷನ ಮೊದಲನೇ ವರು
ಷದಲ್ಲಿ ಕರ್ತನು ಯೆರೆಮಿಯಾನ ಮೂಲಕವಾಗಿ ಹೇಳಿದ ವಾ
ಕ್ಯವು ಈಡೇರುವ ಹಾಗೆ, ಕರ್ತನು ಪಾರ್ಸ್ಯದ ಅರಸನಾದ
ಕೊರೇಷನ ಆತ್ಮವನ್ನು ಎಬ್ಬಿಸಿದ್ದರಿಂದ, ಅವನು ತನ್ನ ಸಮಸ್ತ
ರಾಜ್ಯದಲ್ಲಿ ಎಲ್ಲಿಯೂ ಕೂಗಿನಿಂದಲೂ ಬರಹದಿಂದಲೂ ಸಾರಿ
೨೩ ಸಿ, ಹೇಳಿದ್ದೇನಂದರೆ—ಪಾರ್ಸ್ಯದ ಅರಸನಾದ ಕೊರೇಷನು ಹೀ
ಗೆ ಹೇಳುತ್ತಾನೆ—ಆಕಾಶ ಲೋಕದ ದೇವರಾದ ಕರ್ತನು ಭೂ
ಲೋಕದ ರಾಜ್ಯಗಳನ್ನೆಲ್ಲಾ ನನಗೆ ಕೊಟ್ಟಿದ್ದಾನೆ; ಮತ್ತು ಅವ
ನು ಯೆಹೂದ ದೇಶದೊಳಗೆ ಯೆರೂಸಲೇಮಿನಲ್ಲಿ ತನಗೆ ಮನೆ
ಯನ್ನು ಕಟ್ಟಿಸ ನನಗೆ ಆಜ್ಞಾಪಿಸಿದ್ದಾನೆ. ಅವನ ಸಮಸ್ತ ಜನ
ರಾದ ನಿಮ್ಮಲ್ಲಿ ಹೋಗುವವನ್ಯಾರು? ಅವನ ದೇವರಾದ ಕರ್ತ
ನು ಅವನ ಸಂಗಡ ಇರಲಿ; ಅವನು ಏರಿ ಹೋಗಲಿ.

# THE BOOK OF EZRA.

## ಎಜ್ರನ ಪುಸ್ತಕ.

### ೧. ಸಂಧಿ.

೧ ಯೆರೆಮಿಯಾನ ಮುಖಾಂತರ ಕರ್ತನು ಹೇಳಿದ ವಾಕ್ಯವು
ಈಡೇರುವ ಹಾಗೆ, ಪಾರ್ಸ್ಯದ ಅರಸನಾದ ಕೊರೇಷನ ಮೊದ
ಲನೇ ವರುಷದಲ್ಲಿ ಕರ್ತನು ಪಾರ್ಸ್ಯದ ಅರಸನಾದ ಕೊರೇಷನ
ಆತ್ಮವನ್ನು ಎಬ್ಬಿಸಿದ್ದರಿಂದ, ಅವನು ತನ್ನ ರಾಜ್ಯದಲ್ಲಿ ಎಲ್ಲೆಲ್ಲಿ
೨ ಯು ಕೂಗಿನಿಂದಲೂ ಬರಹದಿಂದಲೂ ಸಾರಿಸಿ ಹೇಳಿದ್ದೇನಂ
ದರೆ—

೩ ಪಾರ್ಸ್ಯದ ಅರಸನಾದ ಕೊರೇಷನು ಹೀಗೆ ಹೇಳುತ್ತಾನೆ—
ಆಕಾಶ ಲೋಕದ ದೇವರಾಗಿರುವ ಕರ್ತನು ಭೂಮಿಯ ರಾಜ್ಯಗ
ಳನ್ನೆಲ್ಲಾ ನನಗೆ ಕೊಟ್ಟಿದ್ದಾನೆ; ಮತ್ತು ಅವನು ಯೆಹೂದದಲ್ಲಿ
೪ ರುವ ಯೆರೂಸಲೇಮಿನಲ್ಲಿ ತನಗೆ ಮನೆಯನ್ನು ಕಟ್ಟಿಸ ನನಗೆ
ಆಜ್ಞಾಪಿಸಿದ್ದಾನೆ. ಅವನ ಸಮಸ್ತ ಜನರಾದ ನಿಮ್ಮಲ್ಲಿರುವವನ್ಯಾ
ರು! ಅವನ ಸಂಗಡ ಅವನ ದೇವರು ಇರಲಿ. ಅವನು ಯೆಹೂದ
ದಲ್ಲಿರುವ ಯೆರೂಸಲೇಮಿಗೆ ಏರಿ ಹೋಗಿ, ಇಸ್ರಯೇಲಿನ ದೇವ
ರಾದ ಕರ್ತನ ಮನೆಯನ್ನು ಕಟ್ಟಲಿ. ಯೆರೂಸಲೇಮಿನಲ್ಲಿರುವ
೫ ಅವನೇ ದೇವರು. ಇದಲ್ಲದೆ ಯಾವ ಸ್ಥಳದಲ್ಲಾದರೂ ಯಾವ
ನಾದರೂ ಪರದೇಶಸ್ಥನಾಗಿ ಉಳಿದಿದ್ದರೆ, ಅವನ ಸ್ಥಳದ ಮನು
ಷ್ಯರೂ, ಯೆರೂಸಲೇಮಿನಲ್ಲಿರುವ ದೇವರ ಮನೆಗೆ ಕೊಡುವ
ಉಚಿತವಾದ ಕಾಣಿಕೆ ಅಲ್ಲದೆ, ಅವನಿಗೆ ಬೆಳ್ಳಿಯಿಂದಲೂ, ಭಂ
ಗಾರದಿಂದಲೂ, ವಸ್ತುಗಳಿಂದಲೂ, ಪಶುಗಳಿಂದಲೂ ಸಹಾಯ
ಮಾಡಲಿ.

೬ ಆಗ ಯೆಹೂದ, ಬೆನ್ಯಮಿನ್ ತಂದೆಗಳಲ್ಲಿ ಶ್ರೇಷ್ಠರೂ,
ಯಾಜಕರೂ, ಲೇವ್ಯರೂ, ಯೆರೂಸಲೇಮಿನಲ್ಲಿರುವ ಕರ್ತನ
ಮನೆಯನ್ನು ಕಟ್ಟಲಿಕ್ಕೆ ಹೋಗ ಕರ್ತನಿಂದ ಎಬ್ಬಿಸಲ್ಪಟ್ಟವರೆ
೭ ಲ್ಲರೂ ಎದ್ದರು. ಮತ್ತು ಅವರ ಸುತ್ತಲಿರುವವರೆಲ್ಲರು, ಉಚಿತಾ
ರ್ಥವಾದ ಎಲ್ಲಾ ಕಾಣಿಕೆಗಳ ಹೊರ್ತಾಗಿ, ಬೆಳ್ಳಿ ಸಾಮಾನು
ಗಳಿಂದಲೂ, ಭಂಗಾರದಿಂದಲೂ, ವಸ್ತುಗಳಿಂದಲೂ, ಪಶುಗಳಿಂದ
ಲೂ, ಬೆಲೆಯುಳ್ಳವುಗಳಿಂದಲೂ ಅವರಿಗೆ ಸಹಾಯ ಮಾಡಿದರು.

೮ ಇದಲ್ಲದೆ ನೆಬುಕದ್ನೆಜರನು ಯೆರೂಸಲೇಮಿನಿಂದ ತಂದು
ತನ ದೇವರುಗಳ ಮನೆಯಲ್ಲಿ ಇರಿಸಿದ್ದ ಕರ್ತನ ಮನೆಯ ಸಾ
೯ ಮಾನುಗಳನ್ನು ಅರಸನಾದ ಕೊರೇಷನು ತರಿಸಿದನು. ಅವುಗಳ
ನ್ನು ಪಾರ್ಸ್ಯದ ಅರಸನಾದ ಕೊರೇಷನು ಬೊಕ್ಕಸದವನಾದ
ಮಿತ್ರದಾತನ ಕೈಯಿಂದ ತರಿಸಿ, ಯೆಹೂದದ ಪ್ರಭುವಾದ ಶೇಷ
೧೦ ಬಜ್ಜರನಿಗೆ ಎಣಿಸಿ ಕೊಟ್ಟನು. ಅವುಗಳ ಲೆಖ್ಖವೇನಂದರೆ—ಮೂ
ವತ್ತು ಭಂಗಾರದ ತಟ್ಟೆಗಳು, ಸಾವಿರ ಬೆಳ್ಳಿಯ ತಟ್ಟೆಗಳು, ಇ
ಪ್ಪತ್ತೊಂಭತ್ತು ಕತ್ತಿಗಳು, ಮೂವತ್ತು ಭಂಗಾರದ ಬಟ್ಲುಗಳು,
೧೧ ನಾನೂರು ಹತ್ತು ಬೆಳ್ಳಿಯ ಬಟ್ಲುಗಳು, ಸಾವಿರ ಬೇರೆ ಸಾಮಾ
ನುಗಳು. ಭಂಗಾರ ಬೆಳ್ಳಿ ಸಾಮಾನುಗಳೆಲ್ಲಾ ಐದು ಸಾವಿರದ
ನಾನೂರು ಇದ್ದವು. ಇವುಗಳನ್ನೆಲ್ಲಾ ಬಾಬೆಲಿನಿಂದ ಯೆರೂಸಲೇ
ಮಿಗೆ ಕೆಲವರ ಸಂಗಡ ಶೇಷಬಜ್ಜರನು ತಕ್ಕೊಂಡು ಹೋದನು.

### ೨. ಸಂಧಿ.

೧ ಬಾಬೆಲಿನ ಅರಸನಾದ ನೆಬುಕದ್ನೆಜರನು ಬಾಬೆಲಿಗೆ ಕೆಡೆ
ಯಾಗಿ ಹಿಡುಕೊಂಡು ಹೋದಂಥ, ಯೆರೂಸಲೇಮಿಗೂ, ಯೆ
ಹೂದದಲ್ಲಿರುವ ತಮ್ಮ ತಮ್ಮ ಪಟ್ಟಣಗಳಿಗೂ ಕೆಲೆಯಿಂದ ತಿರುಗಿ
೨ ದಂಥ, ಜೆರುಬಾಬೆಲನ ಸಂಗಡ ಬಂದ ಶೀಮೆಗಳ ಮಕ್ಕಳು ಯಾ
ರಂದರೆ—ಯೆಷೂವನು, ನೆಹೆಮಿಯಾನು, ಸೆರಾಯನು, ರೆಲಾಯ
ನು, ಪೊರ್ಬೆಕಾಯನು, ಬಿಲ್ಷಾನನು, ಮಿಸ್ಪೇರತನು, ಬಿಗ್ವಾಯ
ನು, ರೆಹೂಮನು, ಬಾಣನು. ಇಸ್ರಯೇಲ್ ಜನರಾದ ಮನುಷ್ಯ
೩ ರ ಲೆಖ್ಖವೇನಂದರೆ—ಪರೋಷನ ಮಕ್ಕಳು—ಎರಡು ಸಾವಿರದ
೪ ನೂರ ಎಪ್ಪತ್ತೆರಡು ಮಂದಿಯು. ಶೆಫಟ್ಯನ ಮಕ್ಕಳು—ಮು
೫ ನೂರಾರ ಎಪ್ಪತ್ತೆರಡು ಮಂದಿಯು. ಆರನ ಮಕ್ಕಳು—ಏಳು ನೂ
೬ ರ ಎಪ್ಪತ್ತೈದು ಮಂದಿಯು. ಯೆಷೂವನ, ಯೊವಾಬನ ಮಕ್ಕ
ಳಿಗೆ ಇದ್ದ ಪಹತ್ಮೊವಾಬನ ಮಕ್ಕಳು—ಎರಡು ಸಾವಿರದ ಎಂ
೭ ಟು ನೂರ ಹನ್ನೆರಡು ಮಂದಿಯು. ಏಲಾಮನ ಮಕ್ಕಳು—ಸಾ
೮ ವಿರದ ಇನ್ನೂರ ಐವತ್ತು ನಾಲ್ಕು ಮಂದಿಯು. ಜತ್ತುವಿನ ಮಕ್ಕ
೯ ಳು—ಒಂಭೈನೂರ ನಾಲ್ವತ್ತೈದು ಮಂದಿಯು. ಜಕ್ಕಾಯನ
೧೦ ಮಕ್ಕಳು—ಏಳ್ನೂರ ಅರುವತ್ತು ಮಂದಿಯು. ಬಾನಿಯ ಮಕ್ಕ
೧೧ ಳು—ಆರು ನೂರ ನಾಲ್ವತ್ತೆರಡು ಮಂದಿಯು. ಬೆಬಾಯ ಮಕ್ಕ
೧೨ ಳು—ಆರು ನೂರ ಇಪ್ಪತ್ತು ಮೂರು ಮಂದಿಯು. ಅಜ್ಗಾದನ
೧೩ ಮಕ್ಕಳು—ಸಾವಿರದ ಇನ್ನೂರ ಇಪ್ಪತ್ತೆರಡು ಮಂದಿಯು. ಅ
ದೊನೀಕಮನ ಮಕ್ಕಳು—ಆರು ನೂರ ಅರುವತ್ತಾರು ಮಂದಿ
೧೪ ಯು. ಬಿಗ್ವಾಯ ಮಕ್ಕಳು—ಎರಡು ಸಾವಿರದ ಐವತ್ತಾರು ಮಂ
೧೫ ದಿಯು. ಅದೀನನ ಮಕ್ಕಳು—ನಾನೂರ ಐವತ್ತು ನಾಲ್ಕು ಮಂ
೧೬ ದಿಯು. ಹಿಜ್ಕೀಯನ ಸಂತತಿಯಾದ ಅಟೇರನ ಮಕ್ಕಳು—
೧೭ ತೊಂಭತ್ತೆಂಟು ಮಂದಿಯು. ಬೆಜಾಯ ಮಕ್ಕಳು—ಮುನ್ನೂರ
೧೮ ಇಪ್ಪತ್ತು ಮೂರು ಮಂದಿಯು. ಯೋರನ ಮಕ್ಕಳು—ನೂರ
೧೯ ಹನ್ನೆರಡು ಮಂದಿಯು. ಹಷೂಮನ ಮಕ್ಕಳು—ಇನ್ನೂರ ಇ
೨೦ ಪ್ಪತ್ತು ಮೂರು ಮಂದಿಯು. ಗಿಬ್ಬಾರನ ಮಕ್ಕಳು—ತೊಂಭ
೨೧ ತ್ತೈದು ಮಂದಿಯು. ಬೇತ್ಲೆಹೇಮನ ಮಕ್ಕಳು—ನೂರ ಇಪ್ಪತ್ತು
೨೨ ಮೂರು ಮಂದಿಯು. ನೆಟೋಫದ ಮನುಷ್ಯರು—ಐವತ್ತಾರು
೨೩ ಮಂದಿಯು. ಅಣಾತೋತದ ಮನುಷ್ಯರು—ನೂರ ಇಪ್ಪತ್ತೆಂಟು
೨೪ ಮಂದಿಯು. ಅಜ್ಮಾವೆತನ ಮಕ್ಕಳು—ನಾಲ್ವತ್ತೆರಡು ಮಂದಿ
೨೫ ಯು. ಕಿರ್ಯಾತ್ ಯಾರೀಮ್, ಕೆಫೀರ, ಬೆರೋತಿನ ಮಕ್ಕ
೨೬ ಳು—ಏಳು ನೂರ ನಾಲ್ವತ್ತು ಮೂರು ಮಂದಿಯು. ರಾಮ,
ಗೇಬದ ಮಕ್ಕಳು—ಆರು ನೂರ ಇಪ್ಪತ್ತೊಂದು ಮಂದಿಯು.
೨೭ ಮಿಕ್ಮಾಸದ ಮನುಷ್ಯರು—ನೂರ ಇಪ್ಪತ್ತೆರಡು ಮಂದಿಯು.
೨೮ ಬೇತೇಲಿನ, ಆಯಿಯ ಮನುಷ್ಯರು—ಇನ್ನೂರ ಇಪ್ಪತ್ತು ಮೂ
೨೯ ರು ಮಂದಿಯು. ನೆಬೋವಿನ ಮಕ್ಕಳು—ಐವತ್ತೆರಡು ಮಂದಿ
೩೦ ಯು. ಮಗ್ಬೀಷನ ಮಕ್ಕಳು—ನೂರ ಐವತ್ತಾರು ಮಂದಿ
೩೧ ಯು. ಬೇರೆ ಏಲಾಮನ ಮಕ್ಕಳು—ಸಾವಿರದ ಇನ್ನೂರ ಐವತ್ತು
೩೨ ನಾಲ್ಕು ಮಂದಿಯು. ಹರೀಮನ ಮಕ್ಕಳು—ಮುನ್ನೂರ ಇಪ್ಪ

೩೩ ತ್ತು ಮಂದಿಯು. ಶೋದು, ಹದೀದು, ಬನೋನಿನ ಮಕ್ಕಳು—
೩೪ ಏಳುನೂರ ಇಪ್ಪತ್ತೈದು ಮಂದಿಯು. ಯೆರಿಕೋವಿನ ಮಕ್ಕ
೩೫ ಳು—ಮುನ್ನೂರ ನಾಲ್ವತ್ತೈದು ಮಂದಿಯು. ಸೆನಾಯದ ಮಕ್ಕ
ಳು—ಮೂರು ಸಾವಿರದ ಆರು ನೂರ ಮೂವತ್ತು ಮಂದಿಯು.

೩೬ ಯಾಜಕರ ಲೆಖ್ಖವೇನಂದರೆ—ಯೆಶೂವನ ಮನೆಯವರಾದ
ಯೆದಾಯನ ಮಕ್ಕಳು—ಒಂಭೈನೂರ ಎಪ್ಪತ್ತು ಮೂರು ಮಂದಿ
೩೭ ಯು. ಇಮ್ಮೇರನ ಮಕ್ಕಳು—ಸಾವಿರದ ಐವತ್ತೆರಡು ಮಂದಿಯು.
೩೮ ಪಷೂರನ ಮಕ್ಕಳು—ಸಾವಿರದ ಇನ್ನೂರ ನಾಲ್ವತ್ತೇಳು ಮಂದಿ
೩೯ ಯು. ಹರೀಮನ ಮಕ್ಕಳು—ಸಾವಿರದ ಹದಿನೇಳು ಮಂದಿಯು.

೪೦ ಲೇವ್ಯರ ಲೆಖ್ಖವೇನಂದರೆ—ಹೊದವ್ಯನ ಸಂತತಿಯಾದ ಯೆ
ಶೂವನ, ಕದ್ಮಿಯೇಲನ ಮಕ್ಕಳು—ಎಪ್ಪತ್ತು ನಾಲ್ಕು ಮಂದಿಯು.
೪೧ ಹಾಡುಗಾರರಾದ ಆಸಾಫನ ಮಕ್ಕಳು—ನೂರಾ ಇಪ್ಪತ್ತೆಂಟು
೪೨ ಮಂದಿಯು. ಬಾಗಲು ಕಾಯುವವರಾದ ಶಲ್ಲೂಮನ ಮಕ್ಕಳೂ,
ಅಟೇರನ ಮಕ್ಕಳೂ, ಟಲ್ಮೋನನ ಮಕ್ಕಳೂ, ಅಕ್ಕೂಬನ ಮ
ಕ್ಕಳೂ. ಹಟೀಟನ ಮಕ್ಕಳೂ, ಶೊಬಾಯ ಮಕ್ಕಳೂ—ಇವರೆ
ಲ್ಲರು ನೂರ ಮೂವತ್ತೊಂಭತ್ತು ಮಂದಿಯು.

೪೩ ನೆತಿನಿಯರಾದ ಜೀಹನ ಮಕ್ಕಳೂ, ಹಬೂಪನ ಮಕ್ಕಳೂ,
೪೪ ಟಬ್ಬಾಯೋತನ ಮಕ್ಕಳೂ, ಕೆರೋಸನ ಮಕ್ಕಳೂ, ಸೀವನ ಮ
೪೫ ಕ್ಕಳೂ, ಪದೋನನ ಮಕ್ಕಳೂ, ಲೆಬಾನನ ಮಕ್ಕಳೂ, ಹಗಾಬ
೪೬ ನ ಮಕ್ಕಳೂ, ಅಕ್ಕೂಬನ ಮಕ್ಕಳೂ, ಹಗಾಬನ ಮಕ್ಕಳೂ, ಶ
೪೭ ಮ್ಲಾಯ ಮಕ್ಕಳೂ, ಹನಾನನ ಮಕ್ಕಳೂ, ಗಿದ್ದೇಲನ ಮಕ್ಕ
೪೮ ಳೂ, ಗಹಾರನ ಮಕ್ಕಳೂ, ರಾಯ ಮಕ್ಕಳೂ, ರೆಚೇನನ ಮ
೪೯ ಕ್ಕಳೂ, ನೆಕೋದನ ಮಕ್ಕಳೂ, ಗಜಾಮನ ಮಕ್ಕಳೂ, ಉಜ್ಜ
೫೦ ನ ಮಕ್ಕಳೂ, ಪಸೇಹನ ಮಕ್ಕಳೂ, ಬೆಸಾಯ ಮಕ್ಕಳೂ, ಅ
ಸ್ನನ ಮಕ್ಕಳೂ, ಮೆಹೂನ್ಯರ ಮಕ್ಕಳೂ, ನೆಫುಸೀಮನ ಮಕ್ಕ
೫೧ ಳೂ, ಬಕ್ಬೂಕನ ಮಕ್ಕಳೂ, ಹಕೂಫನ ಮಕ್ಕಳೂ, ಹರ್ಹೂರನ
೫೨ ಮಕ್ಕಳೂ, ಬಜ್ಲೂತನ ಮಕ್ಕಳೂ, ಮೆಹೀದನ ಮಕ್ಕಳೂ, ಹ
೫೩ ರ್ಷನ ಮಕ್ಕಳೂ, ಬರ್ಕೋಸನ ಮಕ್ಕಳೂ, ಸಿಸ್ರನ ಮಕ್ಕಳೂ,
೫೪ ತೇಮನ ಮಕ್ಕಳೂ, ನೆಚೀಹನ ಮಕ್ಕಳೂ, ಹಟೀಪನ ಮಕ್ಕಳೂ,
೫೫ ಸೊಲೊಮೋನನ ಸೇವಕರ ಮಕ್ಕಳಾದ ಸೊಟಾಯಮಕ್ಕಳೂ,
೫೬ ಸೊಫೇರತ್ಯ ಮಕ್ಕಳೂ, ಪೆರೂದನ ಮಕ್ಕಳೂ, ಯಾವಾಲ ಮ
೫೭ ಕ್ಕಳೂ, ದರ್ಕೋನನ ಮಕ್ಕಳೂ, ಗಿದ್ದೇಲನ ಮಕ್ಕಳೂ, ಶೆಫಟ್ಯ
ನ ಮಕ್ಕಳೂ, ಹಟ್ಟೀಲನ ಮಕ್ಕಳೂ, ಪೆಚೋಯಿಮ ಊರಿನ
೫೮ ಪೊಕೇರತನ ಮಕ್ಕಳೂ, ಆಮಿಯ ಮಕ್ಕಳೂ. ನೆತಿನಿಯರೆಲ್ಲ
ರೂ, ಸೊಲೊಮೋನನ ಸೇವಕರ ಮಕ್ಕಳೂ—ಮುನ್ನೂರ ತೊಂ
ಭತ್ತೆರಡು ಮಂದಿಯು.

೫೯ ತೆಲ್ಮೇಲಹ ತೆಲ್ಮರ್ಷ, ಕೆರೂಬ, ಅದ್ದಾನ, ಇಮ್ಮೇರ್ ಎಂಬುವ
ಸ್ಥಳಗಳನ್ನು ಬಿಟ್ಟು ಏರಿ ಬಂದವರ್ಯಾರಂದರೆ, ದೆಲಾಯನ ಮಕ್ಕ
ಳೂ, ಟೊಬೀಯನ ಮಕ್ಕಳೂ, ನೆಕೋದನ ಮಕ್ಕಳೂ—ಆರು
೬೦ ನೂರ ಐವತ್ತೆರಡು ಮಂದಿಯು. ಆದರೆ ಇವರು ಇಸ್ರಯೇಲ್ಯರು
ಹಾವೋ, ಅಲ್ಲವೋ, ಎಂದು, ತಮ್ಮ ತಂದೆಯ ಮನೆಯನ್ನೂ,
೬೧ ತಮ್ಮ ಬೀಜವನ್ನೂ ತಿಳಿಸಲಾರದೆ ಇದ್ದರು. ಇದಲ್ಲದೆ ಯಾಜ
ಕರ ಮಕ್ಕಳಲ್ಲಿ ಹಬಾಯನ ಮಕ್ಕಳೂ, ಕೋಚನ ಮಕ್ಕಳೂ,
ಗಿಲ್ಯಾದ್ಯನಾದ ಬರ್ಜಿಲ್ಲಾಯ ಕುಮಾರ್ತೆಗಳಲ್ಲಿ ಒಬ್ಬಳನ್ನು
ಹೆಂಡತಿಯಾಗಿ ತಕ್ಕೊಂಡು, ಅವಳ ಹೆಸರಿನಿಂದ ಕರೆಯಲ್ಪಟ್ಟಿ ಬ
೬೨ ರ್ಜಿಲ್ಲಾಯ ಮಕ್ಕಳೂ. ಇವರು ವಂಶಾವಳಿಯ ಪ್ರಕಾರ ಲೆಖ್ಖಿ
ಸಲ್ಪಟ್ಟವರಲ್ಲಿ ತಮ್ಮ ವಂಶಾವಳಿಯನ್ನು ಹುಡುಕಿದರು; ಅದು ಸಿ
ಕ್ಕದೆ ಹೋದದರಿಂದ ಅವರು ಅಶುದ್ಧರೆಂದು ಯಾಜಕ ಉದ್ಯೋ
೬೩ ಗದಿಂದ ತೆಗೆಯಲ್ಪಟ್ಟರು. ಮತ್ತು ಊರೀಮ್ ತುಮ್ಮಿಮ್ ಉಳ್ಳ
ಯಾಜಕನು ಏಳುವ ಮಟ್ಟಿಗೂ, ಮಹಾ ಪರಿಶುದ್ಧವಾದವುಗಳ
ನ್ನು ತಿನ್ನ ಬಾರದೆಂದು, ತಿರ್ಷಾತನು ಅವರಿಗೆ ಹೇಳಿದನು.

೬೪ ಈ ಕೂಟವೆಲ್ಲಾ ಒಟ್ಟಾಗಿ ನಾಲ್ವತ್ತೆರಡು ಸಾವಿರದ ಮುನ್ನೂ
೬೫ ರ ಅರುವತ್ತು ಮಂದಿಯಾಗಿತ್ತು. ಅವರ ಹೊರತು ಅವರ ದಾ
ಸರೂ ದಾಸಿಗಳೂ ಏಳು ಸಾವಿರದ ಮುನ್ನೂರ ಮೂವತ್ತೇಳು
ಮಂದಿ ಇದ್ದರು. ಮತ್ತು ಅವರಿಗೆ ಹಾಡುಗಾರರೂ ಹಾಡುಗಾರ್ತಿ
೬೬ ಯರೂ ಇನ್ನೂರು ಮಂದಿ ಇದ್ದರು. ಅವರ ಕುದುರೆಗಳು ಏಳೂರ
ರ ಮೂವತ್ತಾರು; ಅವರ ಹಾಸರ ಕತ್ತೆಗಳು ಇನ್ನೂರ ನಾಲ್ವ
೬೭ ತ್ತೈದು; ಅವರ ಒಂಟೆಗಳು ನಾನೂರ ಮೂವತ್ತೈದು; ಅವರ
ಕತ್ತೆಗಳು ಆರು ಸಾವಿರದ ಏಳೂರ ಇಪ್ಪತ್ತು.

೬೮ ಪಿತೃಗಳಲ್ಲಿ ಶ್ರೇಷ್ಠರಾದ ಕೆಲಬರು ಯೆರೂಸಲೇಮಿನಲ್ಲಿರುವ
ಕರ್ತನ ಮನೆಗೆ ಬಂದ ತರುವಾಯ, ದೇವರ ಮನೆಯನ್ನು ಅದರ
ಸ್ಥಾನದಲ್ಲಿ ನಿಲ್ಲಿಸುವದಕ್ಕೆ ಉಚಿತವಾದ ಕಾಣಿಕೆಗಳನ್ನು ಕೊ
೬೯ ಟ್ಟರು. ಅವರು ತಮ್ಮ ಶಕ್ತಿಗೆ ತಕ್ಕ ಹಾಗೆ ಕೆಲಸದ ಖಜಾನ
ಕ್ಕೆ ಅರುವತ್ತೊಂದು ಸಾವಿರ ಭಂಗಾರದ ದ್ರಾಕ್ಮಗಳನ್ನೂ, ಐ
ದು ಸಾವಿರ ಮಿನಾ ತೂಕ ಬೆಳ್ಳಿಯನ್ನೂ, ನೂರು ಯಾಜಕರ
ಅಂಗಿಗಳನ್ನೂ ಕೊಟ್ಟರು.

೭೦ ಯಾಜಕರೂ, ಲೇವ್ಯರೂ, ಜನರಲ್ಲಿ ಕೆಲಬರೂ, ಹಾಡುಗಾರ
ರೂ, ಬಾಗಲು ಕಾಯುವವರೂ, ನೆತಿನಿಯರೂ ತಮ್ಮ ತಮ್ಮ
ಪಟ್ಟಣಗಳಲ್ಲಿಯೂ, ಇಸ್ರಯೇಲ್ಯರು ತಮ್ಮ ಪಟ್ಟಣಗಳಲ್ಲಿಯೂ ವಾ
ಸವಾಗಿದ್ದರು.

## ೩. ಸಂಧಿ.

೧ ಏಳನೇ ತಿಂಗಳು ಬಂದ ತರುವಾಯ, ಇಸ್ರಯೇಲ್ ಮಕ್ಕಳು
ಪಟ್ಟಣಗಳಲ್ಲಿ ಇರುವಾಗ, ಜನರು ಒಬ್ಬ ಮನುಷ್ಯನ ಹಾಗೆಯೇ
೨ ಯೆರೂಸಲೇಮಿನಲ್ಲಿ ಕೂಡಿಕೊಂಡರು. ಆಗ ಯೊಚದಾಕನ ಮ
ಗನಾದ ಯೆಶೂವನೂ, ಅವನ ಸಹೋದರರಾದ ಯಾಜಕರೂ
ಶಲ್ತಿಯೇಲನ ಮಗನಾದ ಜೆರುಬಾಬೆಲನೂ, ಅವನ ಸಹೋದರ
ರೂ ಎದ್ದು, ದೇವರ ಮನುಷ್ಯನಾದ ಮೋಶೆಯ ನ್ಯಾಯಪ್ರ
ಮಾಣದಲ್ಲಿ ಬರೆದಿರುವ ಹಾಗೆ, ಹೋಮಗಳನ್ನು ಅರ್ಪಿಸುವದಕ್ಕೆ
ಇಸ್ರಯೇಲ ದೇವರ ಬಲಿಪೀಠವನ್ನು ಕಟ್ಟಿಸಿದರು.

೩ ಮತ್ತು ಬಲಿಪೀಠವನ್ನು ಅದರ ಆಧಾರಗಳ ಮೇಲೆ ಇಟ್ಟರು;
ಯಾಕಂದರೆ ಆ ದೇಶದ ಜನರಿಗೋಸ್ಕರ ಅವರಿಗೆ ಹೆದರಿಕೆ ಇ
ತ್ತು. ಮತ್ತು ಅವರು ಅದರ ಮೇಲೆ ಹೋಮಗಳನ್ನು, ಉದಯದ
೪ ಲ್ಲಿಯೂ ಸಾಯಂಕಾಲದಲ್ಲಿಯೂ ಹೋಮಗಳನ್ನು ಅರ್ಪಿಸಿದ
ರು. ಇದಲ್ಲದೆ ಬರೆಯಲ್ಪಟ್ಟಿ ಹಾಗೆಯೇ ಅವರು ಪರ್ಣಶಾಲೆಗಳ
ಹಬ್ಬವನ್ನು ಆಚರಿಸಿ, ಪ್ರತಿ ದಿನದ ಕಾರ್ಯಕ್ಕೆ ತಕ್ಕ ನೇಮಕದ
೫ ಹಾಗೆ ಲೆಖ್ಖದಿಂದ ದಿನ ದಿನದ ಹೋಮಗಳನ್ನು ಅರ್ಪಿಸಿದರು. ಅ
ದರ ತರುವಾಯ ಅವರು ನಿತ್ಯವೂ ತಿಂಗಳ ಮೊದಲನೇ ದಿನದಲ್ಲಿ
ಯೂ ಕರ್ತನ ಎಲ್ಲಾ ಪರಿಶುದ್ಧ ಹಬ್ಬಗಳಲ್ಲಿಯೂ ಅರ್ಪಿಸುವ
ಹೋಮವನ್ನೂ, ಅನನವನು ಕರ್ತನಿಗೆ ಅರ್ಪಿಸುವ ಉಚಿತಾರ್ಥ



೬ ವಾದ ಬಲಿಯನ್ನೂ ಅರ್ಪಿಸಿದರು. ಏಳನೇ ತಿಂಗಳ ಮೊದಲನೇ
ದಿವಸದಲ್ಲಿ ಕರ್ತನಿಗೆ ಹೋಮಗಳನ್ನು ಅರ್ಪಿಸ ಪ್ರಾರಂಭಿಸಿದರು.
ಆದರೆ ಕರ್ತನ ಮಂದಿರದ ಅಸ್ತಿವಾರವು ಇನ್ನೂ ಹಾಕಲ್ಪಟ್ಟಿದ್ದಿ
೭ ಲ್ಲ. ಇದಲ್ಲದೆ ಅವರು ಕಲ್ಲುಕುಟಿಗರೂ, ಬಡಿಗೆಯವರೂ
ಕೊಖ್ಖವನ್ನು ಕೊಟ್ಟು, ಪಾರ್ಸ್ಯದ ಅರಸನಾದ ಕೊರೇಷನಿಂದ
ಹೊಂದಿದ ಅಪ್ಪಣೆಯ ಪ್ರಕಾರ, ಲೆಬನೋನಿನಿಂದ ಯಾಪದ ಸ
ಮುದ್ರದ ಮಟ್ಟಿಗೂ, ದೇವದಾರು ಮರಗಳನ್ನು ತಕ್ಕೊಂಡು ಬ
ರ, ಚಿಕೋನ್ಯರಿಗೂ ಚೋರ್ಯರಿಗೂ ಅನ್ನ ಪಾನಗಳನ್ನೂ
ಎಣ್ಣೆಯನ್ನೂ ಕೊಟ್ಟನು.

೮ ಅವರು ಯೆರೂಸಲೇಮಿನಲ್ಲಿದ್ದ ದೇವರ ಮನೆಗೆ ಬಂದ ಎರಡ
ನೇ ವರುಷದ ಎರಡನೇ ತಿಂಗಳಲ್ಲಿ ಶಲ್ತಿಯೇಲನ ಮಗನಾದ ಜೆ
ರುಬಾಬೆಲನೂ, ಯೊಚದಾಕನ ಮಗನಾದ ಯೆಶೂವನೂ, ಅ
ವರ ಸಹೋದರರಾದ ಯಾಜಕರೂ, ಲೇವ್ಯರೂ ಸೆಕೆಯಿಂದ
ಯೆರೂಸಲೇಮಿಗೆ ಬಂದ ಎಲ್ಲರೂ ಪ್ರಾರಂಭಿಸಿ, ಇಪ್ಪತ್ತು ವರುಷ
ಪ್ರಾಯಕ್ಕೆ ಅಧಿಕರಾದ ಲೇವ್ಯರನ್ನು ಕರ್ತನ ಮನೆಯ ಕೆಲಸ
೯ ನಡಿಸುವದಕ್ಕೆ ಇಟ್ಟರು. ಆಗ ಯೆಶೂವನೂ, ಅವನ ಮಕ್ಕಳೂ,
ಅವನ ಸಹೋದರರೂ, ಕದ್ಮಿಯೇಲನೂ, ಅವನ ಮಕ್ಕಳೂ, ಯೆ
ಹೂದನ ಮಕ್ಕಳೂ ಹೆನದಾದನ ಮಕ್ಕಳೂ, ಅವರ ಮಕ್ಕಳೂ,
ಅವರ ಸಹೋದರರಾದ ಲೇವ್ಯರೂ ದೇವರ ಮನೆಯಲ್ಲಿರುವ ಕೆ
ಲಸದವರನ್ನು ನಡಿಸ ಎದ್ದರು.

೧೦ ಕಟ್ಟುವವರು ಕರ್ತನ ಮಂದಿರಕ್ಕೆ ಅಸ್ತಿವಾರ ಹಾಕುವಾಗ,
ಇಸ್ರಯೇಲಿನ ಅರಸನಾದ ದಾವೀದನ ಕಟ್ಟಳೆಯ ಪ್ರಕಾರ, ಕರ್ತ
ನನ್ನು ಸ್ತುತಿಸುವದಕ್ಕೆ, ವಸ್ತ್ರಗಳನ್ನು ಧರಿಸಿ ಕೊಂಬವರಾಗಿ,
ತುತೂರಿಗಳನ್ನೂದುವ ಯಾಜಕರನ್ನೂ, ತಾಳಗಳನ್ನು ಬಡಿಯು
೧೧ ವ ಆಸಾಫನ ಮಕ್ಕಳಾದ ಲೇವ್ಯರನ್ನೂ ಇಟ್ಟರು. ಆಗ ಅವರು
ಕರ್ತನನ್ನು ಕೊಂಡಾಡಿ, ಹೊಗಳ್ಳಿ, ಅವನು ಉತ್ತಮನೆಂದೂ, ಅ
ವನ ಕೃಪೆಯು ಯುಗಕ್ಕೂ ಇಸ್ರಯೇಲದ ಮೇಲೆ ಉಂಟೆಂದೂ,
ಪ್ರತಿ ಪ್ರತಿಯಾಗಿ ಹಾಡಿದರು. ಅವರು ಕರ್ತನನ್ನು ಹೊಗಳಿದಾ
ಗ, ಕರ್ತನ ಮಂದಿರದ ಅಸ್ತಿವಾರವನ್ನು ಹಾಕುವ ನಿಮಿತ್ತ ಜನರೆ
೧೨ ಲ್ಲರು ಮಹಾ ಧ್ವನಿಯಾಗಿ ಆರ್ಭಟಿಸಿದರು. ಮೊದಲಿನ ಮನೆಯ
ನ್ನು ನೋಡಿದ್ದ ವೃದ್ಧರಾದ ಯಾಜಕರಲ್ಲಿಯೂ ಲೇವ್ಯರಲ್ಲಿ
ಯೂ ತಂದೆಗಳ ಶ್ರೇಷ್ಠರಲ್ಲಿಯೂ ಅನೇಕರು ಈ ಮನೆಯ ಅ
ಸ್ತಿವಾರವನ್ನು ತಮ್ಮ ದೃಷ್ಟಿಯ ಮುಂದೆ ಹಾಕುತ್ತಿರುವಾಗ, ದೊ
೧೩ ಡ್ಡ ಶಬ್ದದಿಂದ ಅತ್ತರು. ಆದರೆ ಅನೇಕರು ಸಂತೋಷದಿಂದ ಶಬ್ದ
ವನ್ನೆತ್ತಿ, ಆರ್ಭಟಿಸಿದರು. ಆದಕಾರಣ ಸಂತೋಷದಿಂದ ಆರ್ಭ
ಟಿಸಿದ ಶಬ್ದ ಯಾವದೋ, ಜನರ ಅಳುವಿಕೆಯ ಶಬ್ದ ಯಾವ
ದೋ, ಎಂದು ಜನವು ತಿಳಿಯ ಕೂಡದೆ ಇತ್ತು. ಯಾಕಂದರೆ
ಜನವು ಮಹಾ ಧ್ವನಿಯಾಗಿ ಆರ್ಭಟಿಸಿದ್ದರಿಂದ, ಅವರ ಶಬ್ದವು
ದೂರ ಕೇಳಲ್ಪಟ್ಟಿತು.

## ೪. ಸಂಧಿ.

೧ ಕೆಳೆ ಇರುವಿಕೆಯ ಮಕ್ಕಳು ಇಸ್ರಯೇಲ ದೇವರಾಗಿರುವ ಕ
ರ್ತನಿಗೆ ಮಂದಿರವನ್ನು ಕಟ್ಟುತ್ತಾರೆಂದು, ಯೆಹೂದ ಪೈನ್ಯವಿಾ
೨ ನನ ಶತ್ರುಗಳು ಕೇಳಿದಾಗ, ಅವರು ಜೆರುಬಾಬೆಲನ ಬಳಿಗೂ ಪಿ
ತೃಗಳ ಶ್ರೇಷ್ಠರ ಬಳಿಗೂ ಬಂದು, ಅವರಿಗೆ ಹೇಳಿದರು—ನಾವು
ನಿಮ್ಮ ಕೂಡ ಕಟ್ಟುತ್ತೇವೆ; ಯಾಕಂದರೆ ನಾವು ನಿಮ್ಮ ಹಾಗೆ
ನಿಮ್ಮ ದೇವರನ್ನು ಹುಡುಕುತ್ತೇವೆ; ನಮ್ಮನ್ನು ಇಲ್ಲಿಗೆ ಬರ ಮಾ
ಡಿದ ಅಶೂರಿನ ಅರಸನಾದ ಎಸರ್ಹದೋನನ ದಿವಸಗಳು ಮೊ
ದಲ್ಗೊಂಡು ಅವನಿಗೆ ನಾವೂ ಬಲಿಯನ್ನು ಅರ್ಪಿಸುತ್ತಾ ಇದ್ದೇ
೩ ವೆ. ಆದರೆ ಜೆರುಬಾಬೆಲನೂ, ಯೆಶೂವನೂ, ಮಿಕ್ಕಾದ ಇಸ್ರ
ಯೇಲಿನ ಪಿತೃಗಳಲ್ಲಿ ಶ್ರೇಷ್ಠರೂ ಅವರಿಗೆ ಹೇಳಿದ್ದೇನಂದರೆ—
ನಮ್ಮ ದೇವರಿಗೆ ಮನೆಯನ್ನು ಕಟ್ಟುವದಕ್ಕೆ ನಮಗೂ ನಿಮಗೂ
ಏನು? ಪಾರ್ಸ್ಯದ ಅರಸನಾದ ಕೊರೇಷನೆಂಬ ಅರಸನು ನಮ
ಗೆ ನೇಮಿಸಿದ ಹಾಗೆ, ನಾವು ಇಸ್ರಯೇಲ ದೇವರಾಗಿರುವ ಕರ್ತ
ನಿಗೆ ಅದನ್ನು ಕಟ್ಟುವೆವು.

೪ ಆದದರಿಂದ ಆ ದೇಶದ ಜನರು ಯೆಹೂದ ಜನರ ಕೈಗಳ
ನ್ನು ಬಲಹೀನ ಮಾಡಿ, ಕಟ್ಟುವದರಲ್ಲಿ ಅವರನ್ನು ತಲ್ಲಣ ಪಡಿ
೫ ಸಿದರು. ಪಾರ್ಸ್ಯದ ಅರಸನಾದ ಕೊರೇಷನ ದಿನವೆಲ್ಲಾ ಪಾ
ರ್ಸ್ಯದ ಅರಸನಾದ ದಾರ್ಯವೆಷನ ಆಳಿಕೆಯ ಪರ್ಯಂತ
ರ ಅವರ ಯೋಚನೆಯನ್ನು ವ್ಯರ್ಥ ಮಾಡುವದಕ್ಕೆ, ಅವ
ರಿಗೆ ವಿರೋಧವಾಗಿ ಯೋಚನೆ ಕರ್ತರನ್ನು ಕೂಲಿಗೆ ಇಟ್ಟು
ಕೊಂಡರು.

೬ ಆದರೆ ಅಹಷ್ವೇರಸನು ಆಳುವಾಗ, ಅವನ ಆಳಿಕೆಯ ಪ್ರಾ
ರಂಭದಲ್ಲಿ, ಅವರು ಯೆಹೂದ ಯೆರೂಸಲೇಮಿನ ನಿವಾಸಿಗಳಿಗೆ
೭ ವಿರೋಧವಾಗಿ ದೂರು ಕಾಗದ ಬರೆದರು. ಆದರೆ ಅರ್ತಷಷ್ಟನ
ದಿವಸಗಳಲ್ಲಿ ಬಿಷ್ಲಾಮನೂ, ಮಿತ್ರದಾತನೂ, ಟಬೇಲನೂ, ಮಿ
ಕ್ಕಾದ ಅವರ ಜತೆಗಾರರೂ ಪಾರ್ಸ್ಯದ ಅರಸನಾದ ಅರ್ತ
ಷಷ್ಟನಿಗೆ ಒಂದು ಪತ್ರಿಕೆ ಬರೆದರು. ಆ ಬರೆದ ಪತ್ರಿಕೆಯು ಅ
ರಾಮ್ಯರ ಭಾಷೆಯಲ್ಲಿ ಟೀಕಿಸಲ್ಪಟ್ಟು, ಅರಾಮ್ಯರ ಅಕ್ಷರದಲ್ಲಿ
೮ ಬರೆಯಲ್ಪಟ್ಟಿತ್ತು. ಆಲೋಚನೆಗೆ ಕರ್ತನಾದ ಕೆಹೂಮನೂ, ರಾ
ಯಸದವನಾದ ಶಿಂಷಾಯಿಯೂ ಯೆರೂಸಲೇಮಿಗೆ ವಿರೋಧ
೯ ವಾಗಿ ಅರಸನಾದ ಅರ್ತಷಷ್ಟನಿಗೆ ಬರೆದದ್ದೇನಂದರೆ,—ಆಲೋ
ಚನೆ ಕರ್ತನಾದ ಕೆಹೂಮನೂ, ರಾಯಸದವನಾದ ಶಿಂಷಾಯಿ
ಯೂ, ಮಿಕ್ಕಾದ ಅವರ ಜತೆಗಾರರೂ, ದಿನಾಯರೂ, ಅಪರ್ಸ
ತ್ಕಾಯರೂ, ಟರ್ಪೇಲ್ಯರೂ, ಅಪರಸಾಯರೂ, ಅರ್ಕೆವಾಯ
ರೂ, ಬಾಬೆಲ್ಯರೂ, ಶುಷಾನ್ಯರೂ, ದಾಹ್ಯರೂ, ಎಲಾಮ್ಯರೂ,
೧೦ ಮಹಾ ಘನವುಳ್ಳ ಒಸ್ನಪ್ಪರನು ಬರ ಮಾಡಿ, ಸಮಾರ್ಯದ
ಪಟ್ಟಣಗಳಲ್ಲಿ ಇಳಿಸಿದ ಮಿಕ್ಕಾದ ಜನಗಳೂ, ನದಿಯ ಈಚೆಯಲ್ಲಿ
೧೧ ರುವ ಇತರ ಜನಗಳೂ—ಫಲಾನಿ ಇಸಿವಿ—ನದಿಯ ಈಚೆಯಲ್ಲಿ
ರುವ ನಿನ್ನ ಸೇವಕ ಜನರಾದ ನಾವು—ಫಲಾನಿ ಇಸಿವಿ—ಅರಸ
ನಾದ ಅರ್ತಷಷ್ಟನಿಗೆ ಬರೆದು ಕಳುಹಿಸಿದ ಪತ್ರಿಕೆಯ ಪ್ರತಿಯು
ಏನಂದರೆ—

೧೨ ನಿಮ್ಮಿಂದ ನಮ್ಮ ಬಳಿಗೆ ಬಂದ ಯೆಹೂದ್ಯರು ಯೆರೂಸಲೇ
ಮಿಗೆ ಬಂದು, ಶಿಯಸ ಬಿದ್ದ ಆ ಕೆಟ್ಟ ಪಟ್ಟಣವನ್ನು ಕಟ್ಟಿಸುತ್ತಾರೆ.
ಅವರು ಅದರ ಗೋಡೆಗಳನ್ನು ಎಬ್ಬಿಸಿ, ಅಸ್ತಿವಾರಗಳನ್ನು ಹೊಂ
೧೩ ದಿಸಿದ್ದಾರೆಂದು, ಅರಸನಿಗೆ ತಿಳಿದಿರಲಿ. ಈ ಪಟ್ಟಣವು ಕಟ್ಟಿಸಲ್ಪ
ಟ್ಟು, ಅದರ ಗೋಡೆ ಶೀರಿಸಲ್ಪಟ್ಟರೆ, ಅವರು ಸುಂಕವನ್ನೂ, ಕ
ಪ್ಪವನ್ನೂ, ತೆಂಗೆಯನ್ನೂ ಕೊಡದೆ ಇರುವರು. ಆಗ ನೀನು
ಅರಸುಗಳಿಗೆ ಬರುವ ಹುಟ್ಟುವಳ್ಳಿಗೆ ನಷ್ಟ ಮಾಡುವಿ ಎಂದು ಅ
೧೪ ರಸನಿಗೆ ತಿಳಿದಿರಲಿ. ಆದರೆ ನಾವು ಅರಮನೆಯ ಉಪ್ಪನ್ನು ತಿಂ

ದದರಿಂದ, ಅರಸನ ಅವಮಾನವನ್ನು ನೋಡುವದು ನಮಗೆ ತ
ಕ್ಕದ್ದಲ್ಲ; ಆದದರಿಂದ ನಾವು ಅರಸನ ಬಳಿಗೆ ಇದನ್ನು ಕಳುಹಿಸಿ
೧೫ ಶಿಳ್ಳೆಯ ಮಾಡಿದ್ದೇವೆ. ನಿನ್ನ ತಂದೆಗಳ ದಿನಚರ್ಯೆ ಪುಸ್ತಕದ
ಲ್ಲಿ ವಿಚಾರಿಸಿದರೆ, ಈ ಪಟ್ಟಣವು ತಿರುಗ ಬೀಳುವ ಪಟ್ಟಣವು; ಅರಸು
ಗಳಿಗೂ ದೇಶಗಳಿಗೂ ನಷ್ಟಕರವಾದದ್ದು; ಪೂರ್ವಕಾಲದಲ್ಲಿ ಅ
ದರೊಳಗಿದ್ದವರು ತಿರುಗ ಬಿದ್ದಿದ್ದಾರೆ; ಅದರ ನಿಮಿತ್ತ ಈ ಪಟ್ಟಣ
ವು ನಾಶವಾಯಿತೆಂದು, ನೀನು ದಿನಚರ್ಯೆ ಪುಸ್ತಕದಲ್ಲಿ ಕಂಡು,
೧೬ ಶಿಳ್ಳೆಯುವಿ. ಈ ಪಟ್ಟಣವು ತಿರಿಗಿ ಕಟ್ಟಿಸಲ್ಪಟ್ಟು, ಅದರ ಗೋಡೆ
ತೀರಿಸಲ್ಪಟ್ಟರೆ, ಇದರಿಂದ ನದಿಯ ಈಚೆಯಲ್ಲಿ ನಿನಗೆ ಭಾಗವಿ
ರುವದಿಲ್ಲ ಎಂಬದಾಗಿ ನಾವು ಅರಸನಿಗೆ ಶಿಳ್ಳೆಯ ಮಾಡುತ್ತೇವೆ.

೧೭ ಆಗ ಅರಸನು ಆಲೋಚನೆ ಕರ್ತನಾದ ರೆಹೂಮನಿಗೂ,
ರಾಯಸದವನಾದ ಶಿಂಷಾಯಿಗೂ, ಸಮಾರ್ಯದಲ್ಲಿರುವ ಮಿ
ಕ್ಕಾದ ಅವರ ಜತೆಗಾರರಿಗೂ, ನದಿಯ ಆಚೆಯಲ್ಲಿರುವ ಉಳಿ
೧೮ ದವರಿಗೂ ಬರೆದದ್ದೇನಂದರೆ—ನಿಮಗೆ ಸಮಾಧಾನವು. ಫಲಾನಿ
ಇಸಿವಿ—ನೀವು ನನಗೆ ಕಳುಹಿಸಿದ ಪತ್ರಿಕೆಯು ನನ್ನ ಮುಂದೆ ವಿ
೧೯ ವರವಾಗಿ ಓದಲ್ಪಟ್ಟಿತು. ಆಗ ನಾನು ಆಜ್ಞಾಪಿಸಿದ್ದರಿಂದ, ಶೋಧಿ
ಸಿ ನೋಡುವಾಗ, ಆ ಪಟ್ಟಣವು ಪೂರ್ವ ಕಾಲದಿಂದ ಅರಸುಗಳಿಗೆ
ವಿರೋಧವಾಗಿ ತಿರುಗ ಬಿದ್ದಿತ್ತು; ಅದರಲ್ಲಿ ಕಲಹವೂ ದುರಾಲೋ
೨೦ ಚನೆಯೂ ಮಾಡಲ್ಪಟ್ಟಿತ್ತು; ನದಿಯ ಆಚೇಲಿರುವ ಎಲ್ಲಾ ಸ್ಥಳಗಳ
ಮೇಲೆ ಅಳುತ್ತಾ ಇದ್ದ ಯೆರೂಸಲೇಮಿನ ಪರಾಕ್ರಮಶಾಲಿಗ
ಳಾದ ಅರಸುಗಳು ಇದ್ದರು; ಸುಂಕವೂ ಕಪ್ಪವೂ ತೆರಿಗೆಯೂ
೨೧ ಅವರಿಗೆ ಕೊಡಲ್ಪಟ್ಟಿವು, ಎಂದು ಕಾಣಿಸಿತು. ಆದಕಾರಣ ಮ
ತ್ತೊಂದು ಆಜ್ಞೆಯು ನನ್ನಿಂದ ಕೊಡಲ್ಪಡುವ ಮಟ್ಟಿಗೂ, ಆ ಪ
ಟ್ಟಣವನ್ನು ಕಟ್ಟದಂತೆ, ಆ ಮನುಷ್ಯರನ್ನು ನಿಲ್ಲಿಸ ಬೇಕೆಂದು
೨೨ ಆಜ್ಞಾಪಿಸಿರಿ. ನೀವು ಇದರಲ್ಲಿ ತಪ್ಪು ಮಾಡದ ಹಾಗೆ ಜಾಗ್ರ
ತೆಯಾಗಿರ್ರಿ; ಅರಸುಗಳಿಗೆ ಕೇಡೂ ನಷ್ಟವೂ ಸಂಭವಿಸುವದು
ಯಾಕೆ!

೨೩ ಅರಸನಾದ ಅರ್ತಷಸ್ಟನ ಪತ್ರಿಕೆಯ ಪ್ರತಿಯು ರೆಹೂಮ
ನಿಗೂ, ರಾಯಸದವನಾದ ಶಿಂಷಾಯಿಗೂ, ಅವರ ಜತೆಗಾರರಿ
ಗೂ ಓದಿದ ತರುವಾಯ, ಅವರು ಯೆರೂಸಲೇಮಿನಲ್ಲಿ ಇರುವ
ಯೆಹೂದ್ಯರ ಬಳಿಗೆ ತ್ವರೆಯಾಗಿ ಹೋಗಿ, ಭುಜ ಬಲದಿಂದ ಅ
೨೪ ವರನ್ನು ನಿಲ್ಲಿಸ ಮಾಡಿದರು. ಆಗ ಯೆರೂಸಲೇಮಿನಲ್ಲಿರುವ ದೇ
ವರ ಮನೆಯ ಕೆಲಸವು ನಿಲ್ಲಿಸಲ್ಪಟ್ಟಿತು. ಪಾರ್ಸ್ಯದ ಅರಸನಾದ
ದಾರ್ಯವೇಷನ ಆಳಿಕೆಯ ಎರಡನೇ ವರುಷದ ಪರ್ಯಂತರ
ನಿಲ್ಲಿಸಲ್ಪಟ್ಟಿತು.

## ೫. ಸಂಧಿ.

೧ ಆದರೆ ಪ್ರವಾದಿಗಳಾದ ಹಗ್ಗಾಯನೂ, ಇದ್ದೋನ ಮಗನಾ
ದ ಜೆಕರೀಯನೂ ಯೆಹೂದ ಯೆರೂಸಲೇಮಿನಲ್ಲಿ ಇರುವ ಯೆ
ಹೂದ್ಯರಿಗೆ, ಇಸ್ರಯೇಲ ದೇವರ ನಾಮದಲ್ಲಿ ಅವರಿಗೆ ಪ್ರವಾದಿಸಿ
೨ ದರು. ಆಗ ಶಲ್ತಿಯೇಲನ ಮಗನಾದ ಜೆರುಬಾಬೆಲನೂ, ಯೊಚ
ದಾಕನ ಮಗನಾದ ಯೆಶೂವನೂ ಎದ್ದು, ಯೆರೂಸಲೇಮಿನಲ್ಲಿ
ರುವ ದೇವರ ಮನೆಯನ್ನು ಕಟ್ಟಿಸ ಪ್ರಾರಂಭಿಸಿದರು. ಅವರಿಗೆ
ಸಹಾಯಕರಾಗಿ ದೇವರ ಪ್ರವಾದಿಗಳು ಅವರ ಸಂಗಡ ಇದ್ದರು.

3 ಆ ವೇಳೆಯಲ್ಲಿ ನದಿಯ ಈಚೆಯಲ್ಲಿರುವ ತತ್ತೆನಾಯನೆಂಬ
ಅಧಿಪತಿಯೂ, ಶೆತಬೋಸ್ನಾಯಿಯೂ, ಅವರ ಜತೆಗಾರರೂ
ಅವರ ಬಳಿಗೆ ಬಂದು—ಈ ಮನೆಯನ್ನು ಕಟ್ಟುವದಕ್ಕೂ, ಈ
ಗೋಡೆಯನ್ನು ತೀರಿಸುವದಕ್ಕೂ, ನಿಮಗೆ ಅಪ್ಪಣೆ ಕೊಟ್ಟವರು
೪ ಯಾರೆಂದು, ಅವರನ್ನು ಕೇಳಿದರು. ನಾವು ಅವರಿಗೆ ಪ್ರತ್ಯುತ್ತರ
ಕೊಟ್ಟ ತರುವಾಯ, ಈ ಕಟ್ಟುವಿಕೆಯನ್ನು ಮಾಡುವ ಮನು
೫ ಷ್ಯರ ಹೆಸರುಗಳೇನೆಂದು, ಕೇಳಿದರು. ಆದರೆ ಈ ಕಾರ್ಯವು
ದಾರ್ಯವೇಷನ ಬಳಿಗೆ ಬರುವ ಮಟ್ಟಿಗೂ, ಅವರು ಇದನ್ನು
ನಿಲ್ಲಿಸದ ಹಾಗೆ, ಇವರ ದೇವರ ಕಣ್ಣು ಯೆಹೂದ್ಯರ ಹಿರಿಯ
ರ ಮೇಲೆ ಇತ್ತು. ಆಗ ಇದನ್ನು ಕುರಿತು ಅವರು ಪ್ರತ್ಯುತ್ತರವ
ನ್ನು ಪತ್ರಿಕೆಯಲ್ಲಿ ಕಳುಹಿಸಿದರು.

೬ ನದಿಯ ಈಚೆಯಲ್ಲಿರುವ ಅಧಿಪತಿಯಾದ ತತ್ತೆನಾಯನೂ,
ಶೆತಬೋಸ್ನಾಯಿಯೂ, ನದಿಯ ಈಚೆಯಲ್ಲಿರುವ ಅರ್ಪ
ತ್ಕಾಯರಾದ ಅವನ ಜತೆಗಾರರೂ ಅರಸನಾದ ದಾರ್ಯವೇಷ
೭ ನಿಗೆ ಬರೆದು ಕಳುಹಿಸಿದ ಪತ್ರಿಕೆಯ ಪ್ರತಿ. ಅವರು ಅವನ ಬಳಿ
ಗೆ ಕಳುಹಿಸಿದ ಪತ್ರಿಕೆಯಲ್ಲಿ ಬರೆದದ್ದೇನಂದರೆ—

೮ ಅರಸನಾದ ದಾರ್ಯವೇಷನಿಗೆ ಸಮಸ್ತ ಸಮಾಧಾನವು. ಅ
ರಸನಿಗೆ ಶಿಳ್ಳೆಯ ಬೇಕಾದದ್ದೇನಂದರೆ—ನಾವು ಯೆಹೂದ್ಯರ
ದೇಶದಲ್ಲಿರುವ ಮಹಾ ದೇವರ ಮನೆಗೆ ಹೋದೆವು; ಅದು ದೊ
ಡ್ಡ ಕಲ್ಲುಗಳಿಂದ ಕಟ್ಟಲ್ಪಟ್ಟಿದೆ; ಗೋಡೆಗಳ ಮೇಲೆ ತೊಲೆಗಳು
ಹೊಂದಿಸಲ್ಪಟ್ಟವೆ. ಆ ಕೆಲಸ ಶೀಘ್ರವಾಗಿ ನಡೆಯುತ್ತದೆ; ಅವರ
೯ ಕೈಗಳಲ್ಲಿ ಸಿದ್ಧಿಯಾಗುತ್ತದೆ. ಆಗ ಈ ಮನೆಯನ್ನು ಕಟ್ಟಿಸು
ವದಕ್ಕೂ ಈ ಗೋಡೆಗಳನ್ನು ತೀರಿಸುವದಕ್ಕೂ ನಿಮಗೆ ಅಪ್ಪ
ಣೆ ಕೊಟ್ಟವರು ಯಾರೆಂದು, ನಾವು ಆ ಹಿರಿಯರನ್ನು ಕೇಳಿದೆ
೧೦ ವು. ಇದಲ್ಲದೆ ಅವರಲ್ಲಿರುವ ಶ್ರೇಷ್ಠರಾದ ಮನುಷ್ಯರ ಹೆಸರು
ಗಳನ್ನು ನಿನಗೆ ಬರೆದು ತಿಳಿಸುವ ಹಾಗೆ, ಅವರ ಹೆಸರುಗಳನ್ನು
೧೧ ಕೇಳಿದೆವು. ಅವರು ನಮಗೆ ಕೊಟ್ಟ ಪ್ರತ್ಯುತ್ತರವೇನಂದರೆ—ನಾ
ವು ಆಕಾಶಲೋಕ ಭೂಲೋಕಗಳ ದೇವರ ಸೇವಕರಾಗಿದ್ದೇವೆ.
ಅನೇಕ ವರುಷಗಳ ಹಿಂದೆ ಇಸ್ರಯೇಲಿನಲ್ಲಿದ್ದ ಒಬ್ಬ ಮಹಾ ಅ
ರಸನು ಕಟ್ಟಿಸಿ ತೀರಿಸಿದ್ದ ಮನೆಯನ್ನು ನಾವು ಕಟ್ಟಿಸುತ್ತೇವೆ.
೧೨ ಆದರೆ ನಮ್ಮ ತಂದೆಗಳು ಆಕಾಶಲೋಕದ ದೇವರಿಗೆ ಕೋಪವ
ನ್ನು ಎಬ್ಬಿಸಿದ ತರುವಾಯ, ಅವನು ಅವರನ್ನು ಬಾಬೆಲಿನ ಅರ
ಸನಾಗಿದ್ದ ಕಸ್ದೀಯರ ದೇಶದವನಾದ ನೆಬುಕದ್ನೇಚರನ ಕೈಯ
ಲ್ಲಿ ಒಪ್ಪಿಸಿ ಕೊಟ್ಟನು. ಅವನು ಈ ಮನೆಯನ್ನು ಹಾಳು ಮಾಡಿ,
೧೩ ಜನರನ್ನು ಬಾಬೆಲಿಗೆ ತಕ್ಕೊಂಡು ಹೋದನು. ಆದರೆ ಬಾಬೆಲಿ
ನ ಅರಸನಾದ ಕೊರೇಷನ ಮೊದಲನೇ ವರುಷದಲ್ಲಿ ಅರಸನಾ
ದ ಕೊರೇಷನು ದೇವರ ಈ ಮನೆಯನ್ನು ಕಟ್ಟಿ ಅಜ್ಞೆಯನ್ನು
೧೪ ಕೊಟ್ಟನು. ಇದಲ್ಲದೆ ನೆಬುಕದ್ನೇಚರನು ಯೆರೂಸಲೇಮಿನಲ್ಲಿರು
ವ ಮಂದಿರದಿಂದ ತಕ್ಕೊಂಡು ಬಾಬೆಲಿನ ಮಂದಿರಕ್ಕೆ ತಂದ ದೇ
ವರ ಮನೆಯ ಬೆಳ್ಳಿ ಭಂಗಾರದ ಸಾಮಾನುಗಳನ್ನು ಅರಸನಾ
ದ ಕೊರೇಷನು ಬಾಬೆಲಿನ ಮಂದಿರದಿಂದ ತಕ್ಕೊಂಡು, ತಾನು
೧೫ ನೇಮಿಸಿದ ಅಧಿಪತಿಯಾದ ಶೇಷಬಜ್ಜರನಿಗೆ ಒಪ್ಪಿಸಿ, ಅವನಿಗೆ,
ಈ ಸಾಮಾನುಗಳನ್ನು ತೆಗೆದುಕೊಂಡು, ಯೆರೂಸಲೇಮಿನಲ್ಲಿರು
ವ ಮಂದಿರಕ್ಕೆ ಹೈದು ಹೋಗು; ದೇವರ ಮನೆಯು ಅದರ ಸ್ಥಳ
೧೬ ದಲ್ಲಿ ಕಟ್ಟಿಸಲ್ಪಡಲಿ, ಅಂದನು. ಆಗ ಶೇಷಬಜ್ಜರನು ಬಂದು, ಯೆ
ರೂಸಲೇಮಿನಲ್ಲಿರುವ ದೇವರ ಮನೆಯ ಅಸ್ತಿವಾರವನ್ನು ಹಾಕಿಸಿದ



ನು. ಆ ದಿವಸದಿಂದ ಇದು ವರೆಗೂ ಅದು ಕಟ್ಟಲ್ಪಡುತ್ತದೆ; ಇ
೧೭ ನ್ನೂ ಮುಗಿಯಲಿಲ್ಲ; ಅಂದರು. ಆದದರಿಂದ ಅರಸನಿಗೆ ಚನ್ನಾ
ಗಿ ಕಾಣಿಸಿದರೆ, ಯೆರೂಸಲೇಮಿನಲ್ಲಿರುವ ದೇವರ ಮನೆಯನ್ನು
ಕಟ್ಟ ಅರಸನಾದ ಕೊರೇಷನು ಅಪ್ಪಣೆ ಮಾಡಿದ್ದು ಉಂಟೋ!
ಇಲ್ಲವೋ! ಬಾಬೆಲಿನಲ್ಲಿರುವ ಅರಸನ ಬೊಕ್ಕಸದ ಮನೆಯಲ್ಲಿ
ವಿಚಾರಿಸಲ್ಪಡಲಿ. ತರುವಾಯ ಅರಸನು ಈ ಕಾರ್ಯಕ್ಕೋಸ್ಕರ
ತನ್ನ ಚಿತ್ತವೇನೆಂದು ನಮಗೆ ಕಳುಹಿಸಲಿ.

## ೬. ಸಂಧಿ.

೧ ಆಗ ಅರಸನಾದ ದಾರ್ಯವೇಷನು ಕಟ್ಟಳೆ ಮಾಡಿದನು.
ಅವರು ಪುಸ್ತಕಶಾಲೆಯಲ್ಲಿ, ಬಾಬೆಲಿನಲ್ಲಿ ಬೊಕ್ಕಸಗಳು ಇಡಲ್ಪ
೨ ಟ್ಟಿರುವಲ್ಲಿ, ಹುಡುಕಿದರು. ಮತ್ತು ಮಾದ್ಯರ ದೇಶದಲ್ಲಿರುವ
ಅಕ್ಮೇತ ಪಟ್ಟಣದಲ್ಲಿ ಒಂದು ಸುರಳಿಯು, ಅದರಲ್ಲಿ ಬರೆಯಲ್ಪ
ಟ್ಟಿ ಜ್ಞಾಪಕಾರ್ಥವು ಸಿಕ್ಕಿತು.

3 ಅರಸನಾದ ಕೊರೇಷನ ಮೊದಲನೇ ವರುಷದಲ್ಲಿ ಅರಸನಾ
ದ ಕೊರೇಷನು ಯೆರೂಸಲೇಮಿನಲ್ಲಿರುವ ದೇವರ ಮನೆಗೋಸ್ಕ
ರ ಕೊಟ್ಟ ಅಪ್ಪಣೆ ಏನಂದರೆ—ಅವರು ಬಲಿಗಳನ್ನು ಅರ್ಪಿಸಿದ
ಸ್ಥಳವಾದ ಮನೆಯು ಕಟ್ಟಲ್ಪಡಲಿ. ಅದರ ಅಸ್ತಿವಾರಗಳು ಬಲ
ವಾಗಿ ಇರಿಸಲ್ಪಡಲಿ; ಅದರ ಎತ್ತರ ಅರುವತ್ತು ಮೊಳವೂ, ಅದ
೪ ರ ಅಗಲ ಅರುವತ್ತು ಮೊಳವೂ ಆಗಿರಲಿ. ದೊಡ್ಡ ಕಲ್ಲುಗಳ
ಮೂರು ಸಾಲುಗಳೂ, ಹೊಸ ತೊಲೆಗಳ ಒಂದು ಸಾಲೂ ಇರ
೫ ಲಿ. ಅದರ ಖರ್ಚು ಅರಮನೆಯಿಂದ ಕೊಡಲ್ಪಡಲಿ. ಇದಲ್ಲದೆ
ನೆಬುಕದ್ನೇಚರನು ಯೆರೂಸಲೇಮಿನಲ್ಲಿರುವ ಮಂದಿರದಿಂದ ತೆಗೆ
ದು ಕೊಂಡು ಬಾಬೆಲಿಗೆ ಹೈದ ದೇವರ ಮನೆಯ ಬೆಳ್ಳಿ ಭಂಗಾರ
ದ ಸಾಮಾನುಗಳನ್ನು ತಿರಿಗಿ ಯೆರೂಸಲೇಮಿನಲ್ಲಿರುವ ಮಂದಿ
ರಕ್ಕೆ ತಕ್ಕೊಂಡು ಹೋಗಿ, ದೇವರ ಮನೆಯೊಳಗೆ ಅದರದರ
೬ ಸ್ಥಳದಲ್ಲಿ ಇರಿಸಲೆಂಬುವದೇ. ಆದಕಾರಣ ನದಿಯ ಆಚೆಯಲ್ಲಿ
ರುವ ಅಧಿಪತಿಯಾದ ತತ್ತೆನಾಯನೇ, ಶೆತಬೋಸ್ನಾಯಿಯೇ,
ನದಿಯ ಆಚೆಯಲ್ಲಿರುವ ಅರ್ಪತ್ಕಾಯರಾದ ನಿಮ್ಮ ಜತೆಗಾ
೭ ರರು ಸಹ, ಆ ಸ್ಥಳವನ್ನು ಬಿಟ್ಟು, ದೂರವಾಗಿರ್ರಿ. ದೇವರ ಮ
ನೆಯ ಈ ಕಾರ್ಯವನ್ನು ನೀವು ಬಿಡಿರಿ. ಯೆಹೂದ್ಯರ ಅಧಿಪ
ತಿಯೂ ಯೆಹೂದ್ಯರ ಹಿರಿಯರೂ ಅದರ ಸ್ಥಳದಲ್ಲಿ ದೇವರ
೮ ಮನೆಯನ್ನು ಕಟ್ಟಿಸಲಿ. ಇದಲ್ಲದೆ ದೇವರ ಈ ಮನೆಯನ್ನು ಕ
ಟ್ಟುವದಕ್ಕೆ, ಯೆಹೂದ್ಯರ ಹಿರಿಯರಿಗೆ ನೀವು ಮಾಡ ತಕ್ಕದ್ದನ್ನು
ಕುರಿತು ನಾನು ಕೊಡುವ ಅಪ್ಪಣೆ ಏನಂದರೆ—ಅವರು ಅಭ್ಯಂತ
ರ ಮಾಡದ ಹಾಗೆ ನದಿಯ ಆಚೆಯಲ್ಲಿಂದ ಬರುವ ಕಪ್ಪವಾದ
ಅರಸನ ಸ್ಥಿತಿಯಿಂದ ಸಂಗಡಲೇ ಈ ಮನುಷ್ಯರಿಗೆ ಖರ್ಚು ಕೊ
೯ ಡಲ್ಪಡಲಿ. ಇದಲ್ಲದೆ ಅವರು ಆಕಾಶಲೋಕದ ದೇವರಿಗೆ ಸುವಾಸ
ನೆಯುಳ್ಳ ಬಲಿಗಳನ್ನು ಅರ್ಪಿಸುವ ಹಾಗೆಯೂ, ಅರಸನ ಪ್ರಾ
ಣಕ್ಕೋಸ್ಕರವೂ ಅವನ ಮಕ್ಕಳ ಪ್ರಾಣಕ್ಕೋಸ್ಕರವೂ ಪ್ರಾ
ರ್ಥನೆ ಮಾಡುವ ಹಾಗೆಯೂ, ಆಕಾಶಲೋಕದ ದೇವರಿಗೆ ಹೋ
೧೦ ಮಗಳ ನಿಮಿತ್ತ, ಅವರಿಗೆ ಬೇಕಾದ ಹೋರಿಗಳೂ, ಟಗರುಗ
ಳೂ, ಕುರಿ ಮರಿಗಳೂ, ಗೋಧಿಯೂ, ಉಪ್ಪೂ, ದ್ರಾಕ್ಷೇರಸ
ವೂ, ಎಸ್ಸೈಯೂ, ದಿನ ದಿನ ತಪ್ಪದೆ, ಯೆರೂಸಲೇಮಿನಲ್ಲಿರುವ
೧೧ ಯಾಜಕರ ನೇಮಕದ ಪ್ರಕಾರ, ಅವರಿಗೆ ಕೊಡಲ್ಪಡಲಿ. ಮತ್ತು
ನಾನು ಕೊಡುವ ಅಪ್ಪಣೆ ಏನಂದರೆ—ಯಾವನಾದರೂ ಈ ಮಾ
ತನ್ನು ಬದಲು ಮಾಡಿದರೆ, ಅವನ ಮನೆಯಿಂದ ಮರ ಕಿತ್ತು
ನೆಡಲ್ಪಡಲಿ; ಅವನು ಅದರಲ್ಲಿ ಗಲ್ಲಿಗೆ ಹಾಕಲ್ಪಡಲಿ; ಅವನ ಮನೆ
೧೨ ಯು ಇದರ ನಿಮಿತ್ತ ತಿಪ್ಪೆ ಮಾಡಲ್ಪಡಲಿ. ಇದಲ್ಲದೆ ಅಲ್ಲಿ ತನ್ನ
ನಾಮವನ್ನು ನಿವಾಸಿಸ ಮಾಡಿದ ದೇವರು, ಯೆರೂಸಲೇಮಿನಲ್ಲಿ
ರುವ ದೇವರ ಈ ಮನೆಯನ್ನು ಬದಲು ಮಾಡಲಿಕ್ಕೂ ಕೆಡಿಸಲಿ
ಕ್ಕೂ, ತಮ್ಮ ಕೈಯನ್ನು ಚಾಚುವ ಎಲ್ಲಾ ಅರಸುಗಳನ್ನೂ ಜ
ನರನ್ನೂ ಕೆಡಿಸಲಿ. ದಾರ್ಯವೇಷನಾದ ನಾನು ಅಪ್ಪಣೆ ಕೊ
ಟ್ಟಿದ್ದೇಸೆ; ಅದು ತ್ವರೆಯಾಗಿ ಮಾಡಲ್ಪಡಲಿ.

೧೩ ಆಗ ನದಿಯ ಈಚೆಯಲ್ಲಿರುವ ಅಧಿಪತಿಯಾದ ತತ್ತೆನಾಯ
ನೂ, ಶೆತಬೋಸ್ನಾಯಿಯೂ ಅವರ ಜತೆಗಾರರೂ, ಅರಸನಾ
ದ ದಾರ್ಯವೇಷನು ಕಳುಹಿಸಿದ ಆಜ್ಞೆಯ ಪ್ರಕಾರ, ತ್ವರೆಯಾ
೧೪ ಗಿ ಮಾಡಿದರು. ಹಾಗೆಯೇ ಯೆಹೂದ್ಯರ ಹಿರಿಯರು ಕಟ್ಟಿಸಿ,
ಪ್ರವಾದಿಗಳಾದ ಹಗ್ಗಾಯನೂ ಇದ್ದೋನ ಮಗನಾದ ಜೆಕರೀಯ
ನೂ ಪ್ರವಾದಿಸಿದ್ದರಿಂದ ಸಿದ್ಧಿಯನ್ನು ಹೊಂದಿದರು. ಅವರು ಇ
ಸ್ರಯೇಲ ದೇವರ ಅಪ್ಪಣೆಯ ಪ್ರಕಾರವೂ, ಕೊರೇಷನು ದಾ
ರ್ಯವೇಷನು ಪಾರ್ಸ್ಯದ ಅರಸನಾದ ಅರ್ತಷಸ್ಟನು ಎಂಬವ
೧೫ ರ ಅಪ್ಪಣೆಯ ಪ್ರಕಾರವೂ ಕಟ್ಟಿ ತೀರಿಸಿದರು. ಅರಸನಾದ ದಾ
ರ್ಯವೇಷನ ಆಳಿಕೆಯ ಆರನೇ ವರುಷದ ಅದಾರ್ ತಿಂಗಳ
ಮೂರನೇ ದಿವಸದಲ್ಲಿ ಈ ಮನೆಯು ಕಟ್ಟಿ ತೀರಿಸಲ್ಪಟಿತು.

೧೬ ಆಗ ಇಸ್ರಯೇಲ್ಯರ ಮಕ್ಕಳೂ, ಯಾಜಕರೂ, ಲೇವ್ಯ
ರೂ, ಕೆಲೆಯಿಂದ ಬಂದ ಮಿಕ್ಕಾದವರೂ ದೇವರ ಮನೆಯನ್ನು
೧೭ ಸಂತೋಷದಿಂದ ಪ್ರತಿಷ್ಠೆ ಮಾಡಿದರು. ದೇವರ ಮನೆಯ ಪ್ರತಿ
ಷ್ಠೆಗೋಸ್ಕರ ನೂರು ಹೋರಿಗಳನ್ನೂ, ಇನ್ನೂರು ಟಗರುಗಳ
ನ್ನೂ, ನಾನೂರು ಕುರಿಮರಿಗಳನ್ನೂ, ಇಸ್ರಯೇಲ ಕುಲಗಳ ಲೆ
ಖ್ಖದ ಪ್ರಕಾರ ಸಮಸ್ತ ಇಸ್ರಯೇಲರ ಪಾಪ ಕಳಿಯುವದಕ್ಕೋಸ್ಕ
ರ ಹನ್ನೆರಡು ಮೇಕೆಯ ಹೋತುಗಳನ್ನೂ ಬಲಿ ಅರ್ಪಿಸಿದರು.
೧೮ ಮತ್ತು ಮೋಶೆಯ ಪುಸ್ತಕದಲ್ಲಿ ಬರೆಯಲ್ಪಟ್ಟ ಹಾಗೆ, ಯೆರೂ
ಸಲೇಮಿನಲ್ಲಿ ವಾಸವಾಗಿರುವ ದೇವರ ಆರಾಧನೆಗೋಸ್ಕರ ಯಾ
ಜಕರನ್ನು ಅವರ ಒಂತಿನ ಪ್ರಕಾರವೂ ಲೇವ್ಯರನ್ನು ಅವರ ಒಂತಿ
ನ ಪ್ರಕಾರವೂ ನಿಲ್ಲಿಸಿದರು.

೧೯ ಇದಲ್ಲದೆ ಕೆಲೆಯ ಮಕ್ಕಳು ಮೊದಲನೇ ತಿಂಗಳ ಹದಿನಾಲ್ಕ
೨೦ ನೇ ದಿವಸದಲ್ಲಿ ಪಸ್ಕವನ್ನು ಆಚರಿಸಿದರು. ಯಾಕಂದರೆ ಯಾಜ
ಕರೂ ಲೇವ್ಯರೂ ಕೂಡ ಶುಚಿ ಮಾಡಿಕೊಂಡಿದ್ದರು; ಅವರೆಲ್ಲ
ರು ಶುಚಿಯಾಗಿದ್ದು, ಕೆಲೆಯ ಸಮಸ್ತ ಮಕ್ಕಳಿಗೋಸ್ಕರವೂ
ಯಾಜಕರಾದ ತಮ್ಮ ಸಹೋದರರಿಗೋಸ್ಕರವೂ ತಮಗೋಸ್ಕ
೨೧ ರವೂ ಪಸ್ಕವನ್ನು ಕಡಿದರು. ಹಾಗೆಯೇ ಕೆಲೆಯಿಂದ ತಿರಿಗಿ ಬಂದ
ಇಸ್ರಯೇಲ ಮಕ್ಕಳು ಇಸ್ರಯೇಲ ದೇವರಾಗಿರುವ ಕರ್ತನನ್ನು
ಹುಡುಕ, ದೇಶದ ಜನಾಂಗಗಳ ಅಶುಚಿಯಿಂದ ತಮ್ಮನ್ನು ಪ್ರತ್ಯೇ
ಕಿಸಿಕೊಂಡು, ಅವರ ಕಡೆಗೆ ಕೇರಿದ ಸಮಸ್ತರೂ ಅದನ್ನು ತಿಂದು,
ಹುಳಿ ಇಲ್ಲದ ಕೊಟ್ಟಿಯ ಹಬ್ಬವನ್ನು ಸಂತೋಷದಿಂದ ಏಳು ದಿ
೨೨ ವಸ ಆಚರಿಸಿದರು. ಯಾಕಂದರೆ ಇಸ್ರಯೇಲ ದೇವರಾಗಿರುವ
ದೇವರ ಮನೆಯ ಕಾರ್ಯದಲ್ಲಿ ಅವರ ಕೈಗಳನ್ನು ಬಲ ಪಡಿಸು
ವದಕ್ಕೆ ಅಶೂರ್ ದೇಶದ ಅರಸನ ಹೃದಯವನ್ನು ಅವರ ಕಡೆ
ಗೆ ತಿರುಗಿಸಿದ್ದರಿಂದ, ಕರ್ತನು ಅವರನ್ನು ಸಂತೋಷ ಪಡಿಸಿದೆನು.

## ೭. ಸಂಧಿ.

೧ ಈ ಕಾರ್ಯಗಳಾದ ತರುವಾಯ, ಎಜ್ರನು ಪಾರ್ಸ್ಯದ ಅರಸನಾದ ಅರ್ತಷಸ್ಟನ ಆಳಿಕೆಯಲ್ಲಿ ಬಾಬೆಲಿನಿಂದ ಹೊರಟು ಹೋದನು. ಅವನು ಸೆರಾಯನ ಮಗನು, ಅವನು ಅಜರ್ಯನ ಮಗ
೨ ನು, ಅವನು ಹಿಲ್ಕಿಯನ ಮಗನು, ಅವನು ಶಲ್ಲೂಮನ ಮಗ
೩ ನು, ಅವನು ಚಡೋಕನ ಮಗನು, ಅವನು ಅಹೀಟುಬನ ಮಗ
೪ ನು, ಅವನು ಅಮರ್ಯನ ಮಗನು, ಅವನು ಅಜರ್ಯನ ಮಗ
೫ ನು, ಅವನು ಮೆರೆಯೋತನ ಮಗನು, ಅವನು ಜೆರಹ್ಯನ ಮಗ
೬ ನು, ಅವನು ಉಜ್ಜಿಯ ಮಗನು, ಅವನು ಬುಕ್ಕಿಯ ಮಗನು, ಅವನು ಅಬಿಷೂವನ ಮಗನು, ಅವನು ಫಿನೆಹಾಸನ ಮಗನು, ಅವನು ಎಲೆಯಾಜರನ ಮಗನು, ಅವನು ಪ್ರಧಾನ ಯಾಜಕನಾ
೭ ದ ಅರೋನನ ಮಗನು. ಈ ಎಜ್ರನು ಇಸ್ರಯೇಲ ದೇವರಾಗಿರುವ ಕರ್ತನು ಕೊಟ್ಟ ಮೋಶೆಯ ನ್ಯಾಯಪ್ರಮಾಣದಲ್ಲಿ ಜಾಗ್ರತೆಯುಳ್ಳ ಶಾಸ್ತ್ರಿಯಾಗಿದ್ದನು. ಅವನ ಮೇಲೆ ಅವನ ದೇವರಾಗಿರುವ ಕರ್ತನ ಕೈ ಇದ್ದ ಪ್ರಕಾರವೇ ಅರಸನು ಅವನಿಗೆ ಕೇಳಿದ್ದ
೮ ನ್ನೆಲ್ಲಾ ಕೊಟ್ಟನು. ಇದಲ್ಲದೆ ಅವನ ಸಂಗಡ ಇಸ್ರಯೇಲ ಮಕ್ಕಳಲ್ಲಿಯೂ ಯಾಜಕರಲ್ಲಿಯೂ, ಲೇವ್ಯರಲ್ಲಿಯೂ, ಹಾಡುಗಾರರಲ್ಲಿಯೂ, ದ್ವಾರಪಾಲಕರಲ್ಲಿಯೂ, ನೆತಿನಿಯರಲ್ಲಿಯೂ ಕೆಲಬರು ಅರ್ತಷಸ್ಟನ ಆಳಿಕೆಯ ಏಳನೇ ವರುಷದಲ್ಲಿ ಯೆರೂಸಲೇ
೯ ಮಿಗೆ ಏರಿ ಹೋದರು. ಅರಸನ ಏಳನೇ ವರುಷದ ಐದನೇ ತಿಂಗ
೧೦ ಳಲ್ಲಿ, ಅವನು ಯೆರೂಸಲೇಮಿಗೆ ಬಂದನು. ಯಾಕಂದರೆ ಅವನು ಮೊದಲನೇ ತಿಂಗಳ ಮೊದಲನೇ ದಿವಸದಲ್ಲಿ ಬಾಬೆಲಿನಿಂದ ಹೋಗುವದಕ್ಕೆ ಯತ್ನಿಸಿ, ತನ್ನ ದೇವರ ಒಳ್ಳೇ ಕೈ ಅವನ ಮೇಲೆ ಇದ್ದದರಿಂದ, ಅವನು ಐದನೇ ತಿಂಗಳ ಮೊದಲನೇ ದಿವಸದಲ್ಲಿ ಯೆರೂಸಲೇಮಿನಲ್ಲಿ ಬಂದು ಸೇರಿದನು. ಯಾಕಂದರೆ ಎಜ್ರನು ಕರ್ತನ ನ್ಯಾಯಪ್ರಮಾಣವನ್ನು ವಿಚಾರಿಸುವದಕ್ಕೂ, ಅದರ ಪ್ರಕಾರ ಮಾಡುವದಕ್ಕೂ, ಇಸ್ರಯೇಲಿನಲ್ಲಿ ನೇಮ ನ್ಯಾಯಗಳನ್ನು ಕಲಿಸುವದಕ್ಕೂ ತನ್ನ ಹೃದಯವನ್ನು ಸಿದ್ಧ ಮಾಡಿದನು.

೧೧ ಕರ್ತನ ಆಜ್ಞೆಗಳ ವಾಕ್ಯಗಳನ್ನೂ, ಆತನು ಇಸ್ರಯೇಲಿಗೆ ಕೊಟ್ಟ ಕಟ್ಟಳೆಗಳನ್ನೂ ಬೋಧಿಸ ತಕ್ಕ ಶಾಸ್ತ್ರಿಯಾದಂಥ ಯಾಜಕನಾದಂಥ ಎಜ್ರನಿಗೆ ಅರಸನಾದ ಅರ್ತಷಸ್ಟನು ಕೊಟ್ಟ ಪತ್ರಿಕೆಯ ಪ್ರತಿ ಏನಂದರೆ—

೧೨ ಅರಸುಗಳಿಗೆ ಅರಸನಾದ ಅರ್ತಷಸ್ಟನು ಆಕಾಶ ಲೋಕದ ದೇವರ ನ್ಯಾಯಪ್ರಮಾಣದ ವಿಷಯ ಶಾಸ್ತ್ರಿಯಾದ ಎಜ್ರನೆಂಬ
೧೩ ಯಾಜಕನಿಗೆ ಪೂರ್ಣ ಸಮಾಧಾನವಾಗಲಿ—ಫಲಾನಿ ಇನಿನನ್ನ ರಾಜ್ಯದಲ್ಲಿರುವ ಇಸ್ರಯೇಲಿನ ಸಮಸ್ತ ಜನರಲ್ಲಿಯೂ, ಅವರ ಯಾಜಕರಲ್ಲಿಯೂ, ಲೇವ್ಯರಲ್ಲಿಯೂ, ಯಾರಾದರೂ ನಿನ್ನ ಸಂಗಡ ಯೆರೂಸಲೇಮಿಗೆ ಹೋಗ ಮನಸ್ಸಾಗಿದ್ದರೆ, ಅವರು
೧೪ ಹೋಗ ಬಹುದೆಂದು, ಅಪ್ಪಣೆಯನ್ನು ಕೊಟ್ಟಿದ್ದೇನೆ. ಯಾಕಂದರೆ ನೀನು ನಿನ್ನ ಕೈಯಲ್ಲಿರುವ ನಿನ್ನ ದೇವರ ನ್ಯಾಯಪ್ರಮಾಣದ ಹಾಗೆ, ಯೆಹೂದ ಯೆರೂಸಲೇಮನ್ನು ಕುರಿತು ವಿಚಾರಿ
೧೫ ಸುವದಕ್ಕೂ, ಅರಸನೂ ಅವನ ಆಲೋಚನೆ ಕರ್ತರೂ ಯೆರೂಸಲೇಮಿನಲ್ಲಿ ನಿವಾಸವಾಗಿರುವ ಇಸ್ರಯೇಲ ದೇವರಿಗೆ ಮನ್ನಿ
ಪೂರ್ವಕವಾಗಿ ಅರ್ಪಿಸಿದ ಬೆಳ್ಳಿ ಭಂಗಾರವನ್ನೂ, ನೀನು ಬಾ
೧೬ ಬೆಲಿನ ಸಮಸ್ತ ಪ್ರಿಮೆಯಲ್ಲಿ ಸಂಪಾದಿಸಿದ ಬೆಳ್ಳಿ ಭಂಗಾರವನ್ನೂ, ಅದರ ಸಂಗಡ ಯೆರೂಸಲೇಮಿನಲ್ಲಿರುವ ತಮ್ಮ ದೇವರ
೧೭ ಮನೆಗೋಸ್ಕರ ಜನರಿಂದಲೂ ಯಾಜಕರಿಂದಲೂ ಕೊಳ್ಳಪ್ಪಟ್ಟ ಮನ್ನಿ ಪೂರ್ವಕವಾದ ಅರ್ಪಣೆಯನ್ನೂ ಪೈಯುವದಕ್ಕೂ, ಅ
೧೮ ಕೊಬ್ಬುದಿಂದ ನೀನು ತ್ವರೆಯಾಗಿ ಹೋರಿಗಳನ್ನೂ, ಟಗರುಗಳನ್ನೂ, ಅವುಗಳಿಗೆ ಕಾಣಿಕೆಗಳನ್ನೂ ಪಾನದ ಅರ್ಪಣೆಗಳನ್ನೂ ಕೊಂಡು ಕೊಂಡು, ಅವುಗಳನ್ನು ಯೆರೂಸಲೇಮಿನಲ್ಲಿರುವ ನಿಮ್ಮ ದೇವರ ಮನೆಯ ಬಲಿಪೀಠದ ಮೇಲೆ ಅರ್ಪಿಸುವದಕ್ಕೂ, ನೀನು ಅರಸನಿಂದಲೂ ಅವನ ಏಳು ಮಂದಿ ಆಲೋಚನೆ ಕರ್ತ
೧೯ ರಿಂದಲೂ ಕಳುಹಿಸಲ್ಪಟ್ಟಿದ್ದೀ. ಮಿಕ್ಕಾದ ಬೆಳ್ಳಿ ಭಂಗಾರದಿಂದ ನಿನಗೂ ನಿನ್ನ ಸಹೋದರರಿಗೂ ಯಾವದನ್ನು ಮಾಡ ಯುಕ್ತವಾಗಿ ಕಾಣಿಸುವದೋ, ಅದೇ ಪ್ರಕಾರ ನಿಮ್ಮ ದೇವರ ಚಿತ್ತದ
೨೦ ಹಾಗೆಯೇ ಮಾಡಿರಿ. ಇದಲ್ಲದೆ ನಿನ್ನ ದೇವರ ಮನೆಯ ಸೇವೆಯ ನಿಮಿತ್ತವಾಗಿ ನಿನಗೆ ಕೊಡಲ್ಪಟ್ಟ ಸಾಮಾನುಗಳನ್ನು ನೀನು ಯೆರೂಸಲೇಮಿನ ದೇವರ ಮುಂದೆ ಒಪ್ಪಿಸಿ ಬಿಡು. ಇನ್ನು ಏನಾ
೨೧ ದರೂ ನಿನ್ನ ದೇವರ ಮನೆಗೋಸ್ಕರ ಅಗತ್ಯವಿದ್ದರೆ, ನೀನು ಕೊಡ ಬೇಕಾಗಿರುವಾಗ, ಅದನ್ನು ಅರಸನ ಬೊಕ್ಕಸದಲ್ಲಿ ತಕ್ಕೊಂ
೨೨ ಡು ಕೊಡು. ಇದಲ್ಲದೆ ನಾನು, ಅರಸನಾಗಿರುವ ಅರ್ತಷಸ್ಟನಾದ ನಾನು ನದಿಯ ಆಚೆಯಲ್ಲಿರುವ ಎಲ್ಲಾ ಬೊಕ್ಕಸದವರಿಗೆ ಕೊಡುವ ಅಪ್ಪಣೆ ಏನಂದರೆ—ಆಕಾಶಲೋಕದ ದೇವರ ನ್ಯಾಯ
೨೩ ಪ್ರಮಾಣ ಶಾಸ್ತ್ರಿಯಾಗಿರುವ ಯಾಜಕನಾದ ಎಜ್ರನು ನಿಮ್ಮಿಂದ ಏನಾದರೂ ಕೇಳಿದರೆ, ಬೆಳ್ಳಿಯು ನೂರು ತಲಾಂತಿನ ಮಟ್ಟಿಗೂ, ಗೋಧಿಯು ನೂರು ಕೊಳಗದ ಮಟ್ಟಿಗೂ, ದ್ರಾಕ್ಷೇರಸವು ನೂರು ಬಳ್ಳದ ಮಟ್ಟಿಗೂ, ಎಣ್ಣೆಯು ನೂರು ಬಳ್ಳದ ಮಟ್ಟಿಗೂ, ಉಪ್ಪು ಬೇಕಾದಷ್ಟು ತ್ವರೆಯಾಗಿ ಕೊಡಲ್ಪಡಲಿ. ಆ
೨೪ ಕಾಶಲೋಕದ ದೇವರಿಂದ ಏನಾದರೂ ಆಜ್ಞಾಪಿಸಲ್ಪಟ್ಟಿರೆ, ಅದು ಆಕಾಶಲೋಕದ ದೇವರ ಮನೆಗೋಸ್ಕರ ಜಾಗ್ರತೆಯಾಗಿ ಮಾಡಲ್ಪಡಲಿ. ಯಾಕಂದರೆ ಅರಸನೂ ಅವನ ಕುಮಾರರೂ
೨೫ ಆಳುವ ರಾಜ್ಯದ ಮೇಲೆ ಕೋಪ ಯಾಕೆ ಇರ ಬೇಕು? ಇದಲ್ಲದೆ ಯಾಜಕರೂ, ಲೇವ್ಯರೂ, ಹಾಡುಗಾರರೂ, ದ್ವಾರಪಾಲಕರೂ, ನೆತಿನಿಯರೂ ಮೊದಲಾದ ದೇವರ ಮನೆಯ ಸೇವಕರನ್ನು ಕುರಿತು ಏನಂದರೆ, ಅವರ ಮೇಲೆ ತೆರಿಗೆಯನ್ನಾದರೂ ಕಪ್ಪವನ್ನಾದರೂ ಸುಂಕವನ್ನಾದರೂ ಹೊರಿಸ ಅಪ್ಪಣೆ ಇಲ್ಲದೆಂದು, ನಿಮಗೆ
೨೬ ತಿಳಿಸುತ್ತೇವೆ. ಆದರೆ, ಎಜ್ರನೇ, ನೀನು ನಿನ್ನ ದೇವರ ನ್ಯಾಯಪ್ರಮಾಣಗಳನ್ನು ತಿಳಿದಿರುವಂಥ, ನದಿಯ ಆಚೆಯಲ್ಲಿರುವ ಸಮಸ್ತ ಜನರಿಗೆ ನ್ಯಾಯ ತೀರಿಸುವ ಹಾಗೆಯೂ, ಅವುಗಳನ್ನು ಅರಿಯದವರಿಗೆ ಬೋಧಿಸುವ ಹಾಗೆಯೂ, ನಿನ್ನ ಕೈಯಲ್ಲಿರುವ ನಿನ್ನ ದೇವರ ಜ್ಞಾನದ ಪ್ರಕಾರ ಯಜಮಾನರನ್ನೂ ನ್ಯಾಯಾ
೨೭ ಧಿಪತಿಗಳನ್ನೂ ನೇಮಿಸು. ಇದಲ್ಲದೆ ಯಾವನಾದರೂ ನಿನ್ನ ದೇವರ ಕಟ್ಟಳೆಯನ್ನೂ ಅರಸನ ಕಟ್ಟಳೆಯನ್ನೂ ಕೈಕೊಳ್ಳದಿದ್ದರೆ, ಮರಣಕ್ಕಾದರೂ, ಗಡಿದಾಟಿಕೆಗಾದರೂ ಸ್ಥಿತಿಯಹಿಡಿಯುವದಕ್ಕಾದರೂ, ಕೆಡೆಗಾದರೂ, ಅವನಿಗೆ ಬೇಗ ನ್ಯಾಯ ತೀರಿಸಲ್ಪಡಲಿ.

೨೮ ಯೆರೂಸಲೇಮಿನಲ್ಲಿರುವ ಕರ್ತನ ಮನೆಯನ್ನು ಅಲಂಕರಿಸುವದಕ್ಕೆ, ಅರಸನ ಹೃದಯದಲ್ಲಿ ಇಂಥಾದ್ದನ್ನು ಇಟ್ಟು, ಅರಸನ



ಮುಂದೆಯೂ ಅವನ ಯೋಚನೇ ಕರ್ತರ ಮುಂದೆಯೂ, ಅರಸನ ಪರಾಕ್ರಮವುಳ್ಳ ಪ್ರಧಾನರ ಮುಂದೆಯೂ ನನಗೆ ಕೃಪೆಯನ್ನು ಇಳಿಯ ಮಾಡಿದ ನಮ್ಮ ತಂದೆಗಳ ದೇವರಾಗಿರುವ ಯೆ
೮೮ ಹೋವ ಆಶೀರ್ವದಿಸಲ್ಪಡಲಿ. ಹೀಗೆಯೇ ನನ್ನ ದೇವರಾಗಿರುವ ಕರ್ತನ ಕೈಯಿ ನನ್ನ ಮೇಲೆ ಇದ್ದದರಿಂದ ನಾನು ಬಲಗೊಂಡು, ಇಸ್ರಯೇಲಿನೊಳಗಿಂದ ಶ್ರೇಷ್ಠರನ್ನು ನನ್ನ ಸಂಗಡ ಏರಿ ಹೋಗ ಕೂಡಿಸಿ ಕೊಂಡೆನು.

## ೮. ಸಂಧಿ.

೧ ಅರಸನಾದ ಅರ್ತಷಸ್ಟನ ಆಳಿಕೆಯಲ್ಲಿ ಬಾಬೆಲಿನಿಂದ ನನ್ನ ಸಂಗಡ ಹೊರಟು ಬಂದವರ ವಂಶಾವಳಿಯೂ, ಅವರ ತಂದೆಗ
೨ ಳಲ್ಲಿ ಶ್ರೇಷ್ಠರೂ ಯಾರಂದರೆ—ಫಿನೆಹಾಸನ ಮಕ್ಕಳಲ್ಲಿ ಗೆರ್ಶೋಮನೂ, ಇಥಮಾರನ ಮಕ್ಕಳಲ್ಲಿ ದಾನಿಯೇಲನೂ,
೩ ದಾವೀದನ ಮಕ್ಕಳಲ್ಲಿ ಹಟೂಷನೂ. ಶೆಕನ್ಯನ ವಂಶದ ಖೆರೋಷನ ಮಕ್ಕಳಲ್ಲಿ ಜೆಕರ್ಯನೂ ಅವನ ಸಂಗಡ ವಂಶಾವಳಿಯ
೪ ಲ್ಲಿ ಬರೆದಿರುವ ನೂರಾ ಐವತ್ತು ಮಂದಿ ಗಂಡುಸರೂ. ಪಹತ್ಮೊವಾಬನ ಮಕ್ಕಳಲ್ಲಿ ಜೆರಹ್ಯನ ಮಗನಾದ ಎಲಿಹೊಯೆನೈನೂ; ಅವನ ಸಂಗಡ ಇನ್ನೂರು ಮಂದಿ ಗಂಡುಸರೂ. ಶೆಕನ್ಯನ ಮಕ್ಕ
೫ ಳಲ್ಲಿ ಯಹಜಿಯೇಲನ ಮಗನೂ; ಅವನ ಸಂಗಡ ಮುನ್ನೂರು ಮಂದಿ ಗಂಡುಸರೂ. ಅದೀನನ ಮಕ್ಕಳಲ್ಲಿ ಯೊನತಾನನ ಮಗ
೬ ನಾದ ಏಬದನೂ; ಅವನ ಸಂಗಡ ಐವತ್ತು ಮಂದಿ ಗಂಡುಸರೂ. ಏಲಾಮನ ಮಕ್ಕಳಲ್ಲಿ ಅಟಲ್ಯನ ಮಗನಾದ ಯೆಷಾಯನೂ; ಅ
೭ ವನ ಸಂಗಡ ಎಪ್ಪತ್ತು ಮಂದಿ ಗಂಡುಸರೂ. ಶೆಫಟ್ಯನ ಮಕ್ಕಳಲ್ಲಿ ಮಿಕಯೇಲನ ಮಗನಾದ ಜೆಬದ್ಯನೂ; ಅವನ ಸಂಗಡ ಎಂ
೮ ಭತ್ತು ಮಂದಿ ಗಂಡುಸರೂ. ಯೊವಾಬನ ಮಕ್ಕಳಲ್ಲಿ ಯೆಹಿಯೇಲನ ಮಗನಾದ ಒಬದ್ಯನೂ; ಅವನ ಸಂಗಡ ಇನ್ನೂರ ಹ
೯ ದಿನೆಂಟು ಮಂದಿ ಗಂಡುಸರೂ. ಶೆಲೊಮಿತನ ಮಕ್ಕಳಲ್ಲಿ ಯೊಸಿಫ್ಯನ ಮಗನೂ; ಅವನ ಸಂಗಡ ನೂರಾ ಅರುವತ್ತು ಮಂದಿ
೧೦ ಗಂಡುಸರೂ. ಬೆಬಾಯ ಮಕ್ಕಳಲ್ಲಿ ಬೆಬಾಯ ಮಗನಾದ ಜೆಕರ್ಯನೂ; ಅವನ ಸಂಗಡ ಇಪ್ಪತ್ತೆಂಟು ಮಂದಿ ಗಂಡುಸರೂ.
೧೧ ಅಜಾದನ ಮಕ್ಕಳಲ್ಲಿ ಕಟಾನನ ಮಗನಾದ ಯೊಹನಾನನೂ,
೧೨ ಅವನ ಸಂಗಡ ನೂರಾ ಹತ್ತು ಮಂದಿ ಗಂಡುಸರೂ. ಅದೊನೀಕಮನ ಕಡೇ ಮಕ್ಕಳಾದ ಎಲಿಷೇಲಟನೂ, ಯೆವಿಯೇಲನೂ;
೧೩ ಶೆಮಾಯನು ಎಂಬ ಹೆಸರುಳ್ಳವರೂ; ಅವರ ಸಂಗಡ ಅರುವತ್ತು ಮಂದಿ ಗಂಡುಸರೂ. ಬಿಗ್ವಾಯನ ಮಕ್ಕಳಲ್ಲಿ ಊಟಾಯನೂ ಜಬ್ಬೂದನೂ; ಅವರ ಸಂಗಡ ಎಪ್ಪತ್ತು ಮಂದಿ ಗಂ
೧೪ ಡುಸರೂ.

ಇವರನ್ನು ನಾನು ಅಹಾವಕ್ಕೆ ಹರಿಯುವ ನದಿಯ ಬಳಿಯಲ್ಲಿ ಕೂಡಿಸಿ ಕೊಂಡೆನು. ಅಲ್ಲಿ ಮೂರು ದಿವಸ ಗುಡಾರಗಳಲ್ಲಿ ವಾಸಿಸಿದ್ದೆವು. ನಾನು ಜನರನ್ನೂ ಯಾಜಕರನ್ನೂ ಕೋಧಿಸಿ
೧೫ ನೋಡುವಾಗ, ಲೇವ್ಯರ ಮಕ್ಕಳಲ್ಲಿ ಒಬ್ಬನೂ ಅಲ್ಲಿ ಕಿಕ್ಕಲಿಲ್ಲ.
೧೬ ಆಗ ನಾನು ಎಲಿಯೇಜರನು, ಅರಿಯೇಲನು, ಶೆಮಾಯನು, ಎಲ್ನಾತಾನನು, ಯರೀಬನು, ಎಲ್ನಾತಾನನು, ನತಾನನು, ಜೆಕರ್ಯನು, ಮೆಷುಲ್ಲಾಮನು ಎಂಬ ಶ್ರೇಷ್ಠರನ್ನೂ, ಯೊಯರೀಬನು,
೧೭ ಎಲ್ನಾತಾನನು ಎಂಬ ಗ್ರಹಿಕೆಯುಳ್ಳವರನ್ನೂ ಕರೇ ಕಳುಹಿಸಿ, ಕಸಿಫ್ಯದಲ್ಲಿರುವ ಅಧಿಪತಿಯಾದ ಇದ್ದೋನ ಬಳಿಗೆ ಅಪ್ಪಣೆ ಕೊಟ್ಟು ಕಳುಹಿಸಿ, ಅವರು ನಮ್ಮ ದೇವರ ಮನೆಗೋಸ್ಕರ ಸೇವಕರನ್ನು ತರುವ ಹಾಗೆ, ಅವರು ಕಸಿಫ್ಯವೆಂಬ ಸ್ಥಳದಲ್ಲಿರುವ ಇದ್ದೋನಿಗೂ ಅವನ ಸಹೋದರರಾದ ನೆತಿನಿಯರಿಗೂ ಹೇಳಿಬೇ
೧೮ ಕಾದದ್ದನ್ನು ತಿಳಿಸಿದೆನು. ನಮ್ಮ ದೇವರ ಒಳ್ಳೇ ಕೈ ನಮ್ಮ ಮೇಲೆ ಇದ್ದದರಿಂದ, ಅವರು ಇಸ್ರಯೇಲನ ಮಗನಾಗಿರುವ ಲೇವಿಯ ಮಗನಾದ ಮಹ್ಲಿಯ ಮಕ್ಕಳಲ್ಲಿ ಬುದ್ಧಿಯುಳ್ಳವನಾದ ಶೆಬ್ಯನೂ, ಅವನ ಮಕ್ಕಳೂ ಸಹೋದರರೂ ಆದ ಹದಿನೆಂಟು
೧೯ ಮಂದಿಯನ್ನೂ; ಹಷಬ್ಯನೂ, ಅವನ ಸಂಗಡ ಮೆರಾರಿಯ ಮಕ್ಕಳಲ್ಲಿ ಯೆಷಾಯನೂ, ಅವನ ಸಹೋದರರೂ, ಅವರ ಮ
೨೦ ಕ್ಕಳೂ ಆದ ಇಪ್ಪತ್ತು ಮಂದಿಯನ್ನೂ; ದಾವೀದನೂ ಪ್ರಧಾನರೂ ಲೇವ್ಯರನ್ನು ಸೇವಿಸುವದಕ್ಕೆ ನೇಮಿಸಿದ ನೆತಿನಿಯರಲ್ಲಿ ಇನ್ನೂರ ಇಪ್ಪತ್ತು ಮಂದಿ ನೆತಿನಿಯರನ್ನೂ ನಮ್ಮ ಬಳಿಗೆ ಕರಕೊಂಡು ಬಂದರು. ಅವರೆಲ್ಲರು ಹೆಸರು ಹೆಸರಾಗಿ ಬರೆಯಲ್ಪಟ್ಟಿದ್ದರು.

೨೧ ಆಗ, ನಾವು ನಮ್ಮ ದೇವರ ಮುಂದೆ ನಮ್ಮನ್ನು ಕುಂದಿಸಿ ಕೊಳ್ಳುವದಕ್ಕೂ, ನಮಗೂ ನಮ್ಮ ಮಕ್ಕಳಿಗೂ ನಮ್ಮ ಎಲ್ಲಾ ಸ್ಥಿತಿಗೂ ಅವನಿಂದ ನೆಟ್ಟನೆಯಾದ ಮಾರ್ಗವನ್ನು ಹುಡುಕುವದಕ್ಕೂ, ನಾನು ಅಲ್ಲಿ ಅಹಾವ ನದಿಯ ಬಳಿಯಲ್ಲಿ ಉಪವಾಸವನ್ನು ಮಾಡ ಸಾರಿದೆನು. ಯಾಕಂದರೆ ಅವನನ್ನು ಹುಡುಕುವವ
೨೨ ಕೆಲ್ಲರ ಮೇಲೆ, ಒಳ್ಳೇದು ಆಗುವದಕ್ಕೆ, ನಮ್ಮ ದೇವರ ಕೈ ಉಂಟು. ಆದರೆ ಅವನನ್ನು ಬಿಡುವವರ ಮೇಲೆ ಅವನ ಬಲವೂ ಅವನ ಕೋಪವೂ ಉಂಟು ಎಂದು ನಾವು ಅರಸನಿಗೆ ಹೇಳಿದ್ದರಿಂದ, ಮಾರ್ಗದಲ್ಲಿ ಶತ್ರುವಿಗೆ ವಿರೋಧವಾಗಿ ನಮಗೆ ಸಹಾಯ ಕೊಡ ಕಾಲ್ಬಲವನ್ನೂ ರಾಹುತರನ್ನೂ ಅರಸನಿಂದ ಕೇಳ ನಾಚಿಕೆ
೨೩ ಪಟ್ಟೆವು. ಆದದರಿಂದ ನಾವು ಉಪವಾಸ ಮಾಡಿ, ಇದಕ್ಕೋಸ್ಕರ ನಮ್ಮ ದೇವರನ್ನು ಬೇಡಿ ಕೊಂಡೆವು. ಅವನು ನಮ್ಮ ವಿಜ್ಞಾಪನೆಯನ್ನು ಕೇಳಿದನು.

೨೪ ಮತ್ತು ನಾನು ಯಾಜಕರ ಶ್ರೇಷ್ಠರಲ್ಲಿ ಹನ್ನೆರಡು ಮಂದಿ ಯಾಗಿರುವ ಶೆಬ್ಯನನ್ನೂ, ಹಷಬ್ಯನನ್ನೂ, ಅವರ ಸಂಗಡ ಅ
೨೫ ವರ ಸಹೋದರರಲ್ಲಿ ಹತ್ತು ಮಂದಿಯನ್ನೂ ಪ್ರತ್ಯೇಕಿಸಿ; ಅರಸನೂ, ಅವನ ಯೋಚನೆಕರ್ತರೂ, ಅವನ ಪ್ರಧಾನರೂ, ಅಲ್ಲಿದ್ದ ಎಲ್ಲಾ ಇಸ್ರಯೇಲ್ಯರೂ, ನಮ್ಮ ದೇವರ ಮನೆಗೆ ಅರ್ಪಿಸಿದ ಕಾಣಿಕೆಯಾದ ಬೆಳ್ಳಿಯನ್ನೂ ಭಂಗಾರವನ್ನೂ ಸಾಮಾನುಗಳನ್ನೂ ಅವರಿಗೆ ತೂಗಿ ಕೊಟ್ಟೆನು. ಅವರ ಕೈಯಲ್ಲಿ ನಾನು
೨೬ ಅರುನೂರಾ ಐವತ್ತು ತಲಾಂತು ಬೆಳ್ಳಿಯನ್ನೂ ನೂರು ತಲಾಂ
೨೭ ತು ತೂಕವಾದ ಬೆಳ್ಳಿಯ ಸಾಮಾನುಗಳನ್ನೂ, ನೂರು ತಲಾಂತು ಭಂಗಾರವನ್ನೂ, ಸಾವಿರ ದ್ರಾಕ್ಮ ಬೆಲೆಯುಳ್ಳ ಇಪ್ಪತ್ತು ಭಂಗಾರದ ಬಟ್ಟಲುಗಳನ್ನೂ ಭಂಗಾರದ ಹಾಗೆ ಇಷ್ಟೈಸ ತಕ್ಕ ಥಳಥಳಿಸುವಂಥಾ ಒಳ್ಳೇ ತಾಮ್ರದ ಎರಡು ಪಾತ್ರೆಗಳನ್ನೂ ತೂಗಿ
೨೮ ಕೊಟ್ಟೆನು. ಮತ್ತು ನಾನು ಅವರಿಗೆ ಹೇಳ್ದೆನೆಂದರೆ—ನೀವು ಕರ್ತನಿಗೆ ಪರಿಶುದ್ಧರಾಗಿದ್ದೀರಿ. ಈ ಸಾಮಾನುಗಳು ಹಾಗೆಯೇ ಪರಿಶುದ್ಧವು. ಈ ಬೆಳ್ಳಿ ಭಂಗಾರವು ನಿಮ್ಮ ತಂದೆಗಳ ದೇವರಾ
೨೯ ರುವ ಕರ್ತನಿಗೆ ಉಚಿತಾರ್ಥವಾದ ಅರ್ಪಣೆಯಾಗಿದೆ. ನೀವು ಯೆರೂಸಲೇಮಿನಲ್ಲಿ ಕರ್ತನ ಮನೆಯ ಕೊಠಡಿಗಳೊಳಗೆ ಯಾ

ಜಕರ, ಲೇವ್ಯರ ಪ್ರಧಾನರ ಮುಂದೆಯೂ, ಇಸ್ರಯೇಲ್ ಪಿತೃಗ
ಳ ಪ್ರಧಾನರ ಮುಂದೆಯೂ ತೂಗುವ ಪರ್ಯಂತರ, ಜಾಗ್ರತೆ
೩೦ ಯಾಗಿ ಕಾಪಾಡಿರಿ. ಹಾಗೆಯೇ ಯೊಜಕರೂ ಲೇವ್ಯರೂ ತೂ
ಕದ ಹಾಗೆ ಬೆಳ್ಳಿಯನ್ನೂ, ಭಂಗಾರವನ್ನೂ, ಸಾಮಾನುಗಳ
ನ್ನೂ ಯೆರೂಸಲೇಮಿನಲ್ಲಿರುವ ನಮ್ಮ ದೇವರ ಮನೆಗೆ ತರ ತೆಗೆ
ದು ಕೊಂಡರು.

೩೧ ಮತ್ತು ನಾವು ಯೆರೂಸಲೇಮಿಗೆ ಹೋಗ ಪೊದಲನೇ ತಿಂಗ
ಳ ಹನ್ನೆರಡನೇ ದಿವಸದಲ್ಲಿ ಅಹಾವ ನದಿಯನ್ನು ಬಿಟ್ಟು ಹೊರ
ಟಿವು. ನಮ್ಮ ದೇವರ ಕೈ ನಮ್ಮ ಮೇಲೆ ಇದ್ದದರಿಂದ, ಅವನು
ಶತ್ರುವಿನ ಕೈಗೂ, ಮಾರ್ಗದಲ್ಲಿ ಹೊಂಚಿ ಕೊಂಡವರ ಕೈಗೂ
೩೨ ನಮ್ಮನ್ನು ತಪ್ಪಿಸಿ ಬಿಟ್ಟನು. ನಾವು ಯೆರೂಸಲೇಮಿಗೆ ಬಂದು
ಅಲ್ಲಿ ಮೂರು ದಿವಸ ವಾಸವಾಗಿದ್ದ ತರುವಾಯ, ನಾಲ್ಕನೇ ದಿವ
ಸದಲ್ಲಿ ಆ ಬೆಳ್ಳಿಯೂ, ಭಂಗಾರವೂ, ಸಾಮಾನುಗಳೂ, ನಮ್ಮ
ದೇವರ ಮನೆಯಲ್ಲಿ ಯಾಜಕನಾಗಿರುವ ಊರೀಯನ ಮಗನಾದ
೩೩ ಮೆರೆಮೋತನ ಕೈಯಿಂದ ತೂಗ ಹಾಕಲ್ಪಟ್ಟವು. ಅವನ ಸಂಗಡ
ಲೇವ್ಯನಾದ ಫಿನೆಹಾಸನ ಮಗನಾಗಿರುವ ಎಲೆಯಾಜರನೂ, ಯೆ
ಶೂವನ ಮಗನಾದ ಯೊಜಬಾದನೂ, ಬಿನ್ನೂಯಿ ಮಗನಾ
೩೪ ದ ನೊವದ್ಯನೂ ಇದ್ದರು. ಆ ತೂಕವೆಲ್ಲೂ ಅದೇ ಕಾಲದಲ್ಲಿ
ಅದರದರ ತೆಖ್ಖದ ಪ್ರಕಾರವೂ ತೂಕದ ಪ್ರಕಾರವೂ ಬರೆಯ
ಲ್ಪಟ್ಟಿತು.

೩೫ ಕೆಕೆಯಿಂದ ಬಂದ ಕೆಕೆಯಾಗಿ ಸೆರೆಯಲ್ಪಟ್ಟಿದ್ದವರ ಮಕ್ಕ
ಳು ಇಸ್ರಯೇಲ ದೇವರಿಗೆ ಹೋಮಗಳನ್ನು ಅರ್ಪಿಸಿದರು.
ಸಮಸ್ತ ಇಸ್ರಯೇಲರಿಗೋಸ್ಕರ ಹನ್ನೆರಡು ಹೋರಿಗಳನ್ನೂ,
ತೊಂಭತ್ತಾರು ಟಿಗರುಗಳನ್ನೂ ಎಪ್ಪತ್ತೇಳು ಕುರಿಮರಿಗಳನ್ನೂ
ಪಾಪ ಕಳೆಯುವದಕ್ಕಾಗಿ ಹನ್ನೆರಡು ಮೇಕೆಯ ಹೋತುಗಳ
ನ್ನೂ ಅರ್ಪಿಸಿದರು. ಇವಕ್ಕೂ ಕರ್ತನಿಗೆ ಹೋಮವಾಗಿತ್ತು.
೩೬ ಮತ್ತು ಅವರು ಅರಸನ ಕಟ್ಟಳೆಗಳನ್ನು ನದಿಯ ಈಚೆಯಲ್ಲಿರು
ವ ಅರಸನ ಅಧಿಪತಿಗಳಿಗೂ ಯೆಜಮಾನರಿಗೂ ಒಪ್ಪಿಸಿದರು.
ಆಗ ಅವರು ಜನರಿಗೂ ದೇವರ ಮನೆಗೂ ಸಹಾಯ ಮಾ
ಡಿದರು.

## ೯. ಸಂಧಿ.

೧ ಆದರೆ ಇವುಗಳಾದ ತರುವಾಯ, ಪ್ರಧಾನರು ನನ್ನ ಬಳಿಗೆ ಬಂ
ದು ಹೇಳಿದ್ದೇನಂದರೆ—ಇಸ್ರಯೇಲ ಜನರೂ, ಯಾಜಕರೂ,
ಲೇವ್ಯರೂ ದೇಶಗಳ ಜನಗಳೊಳಗಿಂದ ತಮ್ಮನ್ನು ಪ್ರತ್ಯೇಕಿಸ
ದೆ, ಕನಾನ್ಯರು, ಹಿತ್ತಿಯರು, ಪೆರಿಜ್ಜಿಯರು, ಯೆಬೂಸ್ಯರು, ಅ
ಮ್ಮೋನ್ಯರು, ಮೋವಾಬ್ಯರು, ಐಗುಪ್ತ್ಯರು, ಅಮೋರ್ಯರು, ಇ
೨ ವರ ಅಸಹ್ಯಗಳ ಪ್ರಕಾರ ಮಾಡುತ್ತಾ ಇದ್ದಾರೆ. ಏನಂದರೆ, ಅ
ವರು ತಮಗೂ ತಮ್ಮ ಕುಮಾರರಿಗೂ ಅವರ ಕುಮಾರ್ತೆಗಳ
ನ್ನು ತಕ್ಕೊಂಡರು. ಆದಕಾರಣ ಪರಿಶುದ್ಧ ಬೀಜವಾದವರು ಈ
ದೇಶದ ಜನರ ಸಂಗಡ ಕಲೆತು ಕೊಂಡಿದ್ದಾರೆ. ನಿಶ್ಚಯವಾಗಿ
ಪ್ರಧಾನರ, ಅಧಿಕಾರಸ್ತರ ಕೈ ಈ ಅಕೃತ್ಯದಲ್ಲಿ ಮುಖ್ಯವಾಗಿದೆ.
3 ನಾನು ಈ ಕಾರ್ಯವನ್ನು ಕೇಳಿದಾಗ, ನನ್ನ ವಸ್ತ್ರವನ್ನೂ ನ
ನ್ನ ನಿಲುವಂಗಿಯನ್ನೂ ಹರಿದು, ನನ್ನ ತಲೆಯ, ಗಡ್ಡದ ಕೂದ
೪ ಲನ್ನು ಕಿತ್ತು, ಭ್ರಮೆಗೊಂಡು ಕುಳಿತಿದ್ದೆನು. ಆಗ ಕೆಕೆಯಾಗಿ
ಸೆರೆಯಲ್ಪಟ್ಟು ತಿರುಗಿ ಬಂದವರ ಅಪರಾಧಕ್ಕೋಸ್ಕರ ಇಸ್ರಯೇ
ಲ ದೇವರ ಮಾತುಗಳಿಗೆ ಹೆದರಿ ಕೊಂಡಿದ್ದ ಮನುಷ್ಯರೆಲ್ಲರೂ
ನನ್ನ ಬಳಿಗೆ ಕೂಡಿ ಬಂದರು. ಅದಕೆ ನಾನು ಸಾಯಂಕಾಲದ
ಬಲಿಯನ್ನು ಅರ್ಪಿಸುವ ಪರ್ಯಂತರ ಭ್ರಮೆಗೊಂಡು ಕುಳಿತು
ಕೊಂಡಿದ್ದೆನು.

೫ ಆದರೆ ಸಾಯಂಕಾಲದ ಬಲಿಯನ್ನರ್ಪಿಸುವಾಗ ನಾನು ನನ್ನ
ಕ್ರಮಿಯಿಂದೆದ್ದು, ನನ್ನ ವಸ್ತ್ರವನ್ನೂ ನನ್ನ ನಿಲುವಂಗಿಯನ್ನೂ
ಹರುಕೊಂಡವನಾಗಿ, ನನ್ನ ಮೊಣಕಾಲುಗಳನ್ನೂರಿ, ನನ್ನ ಕೈ
ಗಳನ್ನು ನನ್ನ ದೇವರಾಗಿರುವ ಕರ್ತನ ಮುಂದೆ ಚಾಚಿ, ಹೇಳಿ
ದ್ದೇನಂದರೆ,—

೬ ನನ್ನ ದೇವರೇ, ನಾನು ನನ್ನ ಮುಖವನ್ನು ನಿನ್ನ ಮುಂದೆ
ಎತ್ತುವಾಗ್ಯೆ, ನನ್ನ ದೇವರೇ, ನಾಚಿಕೆಯನ್ನೂ ಲಜ್ಜೆಯನ್ನೂ
ಪಡುತ್ತೇನೆ. ಯಾಕಂದರೆ ನಮ್ಮ ಅಕ್ರಮಗಳು ನಮ್ಮ ತಲೆಯ
ಮೇಲೆ ಹೆಚ್ಚಿದವು; ನಮ್ಮ ಅಪರಾಧವು ಆಕಾಶದ ಪರ್ಯಂತರ
೭ ಬೆಳೆಯಿತು. ನಮ್ಮ ತಂದೆಗಳ ದಿವಸಗಳು ಮೊದಲ್ಗೊಂಡು ಈ
ದಿವಸದ ಪರ್ಯಂತರ ದೊಡ್ಡ ಅಪರಾಧಕ್ಕೋಸ್ಕರ ಇದ್ದೇವೆ.
ಇಂದಿನ ಪ್ರಕಾರವೇ ನಮ್ಮ ಅಕ್ರಮಗಳಿಗೋಸ್ಕರ ನಾವೂ, ನಮ್ಮ
ಅರಸುಗಳೂ, ನಮ್ಮ ಯಾಜಕರೂ ಕತ್ತಿಗೂ ಕೆಕೆಗೂ ಕೊಳ್ಳೆ
ಗೂ ಮುಖದ ನಾಚಿಕೆಗೂ ಒಪ್ಪಿಸಲ್ಪಟ್ಟಿದ್ದೇವೆ. ಈಗ ನಮ್ಮ ದೇ
ವರು ನಮ್ಮ ಕಣ್ಣುಗಳಿಗೆ ಬೆಳಕು ಕೊಡುವ ಹಾಗೆಯೂ, ನಮ್ಮ
ದಾಸತ್ವದಲ್ಲಿ ನಮಗೆ ಸ್ವಲ್ಪ ಉಜೀವವನ್ನು ಕೊಡುವ ಹಾ
ಯೂ, ನಮ್ಮಲ್ಲಿ ತಪ್ಪಿಸಿ ಕೊಂಡ ಉಳಿವನ್ನು ಬಿಟ್ಟು ಬಿಡಲಿಕ್ಕೂ,
ತನ್ನ ಪರಿಶುದ್ಧ ಸ್ಥಾನದಲ್ಲಿ ನಮಗೆ ಗೂಟವನ್ನು ಕೊಡಲಿಕ್ಕೂ,
ಸ್ವಲ್ಪಹೊತ್ತು ನಮ್ಮ ದೇವರಾಗಿರುವ ಕರ್ತನಿಂದ ನಮಗೆ ದಯೆ
೮ ವು ದೊರಕಿತು. ಯಾಕಂದರೆ ನಾವು ದಾಸರಾಗಿದ್ದೆವು; ಆದರೆ
ನಮ್ಮ ದೇವರು ನಮ್ಮ ದಾಸತ್ವದಲ್ಲಿ ನಮ್ಮನ್ನು ಕೈ ಬಿಟ್ಟು ಬಿಡದೆ,
ನಮಗೆ ಉಪಜೀವವನ್ನು ಕೊಡುವದಕ್ಕೂ, ದೇವರ ಮನೆಯನ್ನು
ಎಬ್ಬಿಸುವದಕ್ಕೂ, ಅದರ ಹಾಳಾದವುಗಳನ್ನು ನಿಲ್ಲಿಸುವದಕ್ಕೂ,
ಯೆಹೂದದಲ್ಲಿಯೂ ಯೆರೂಸಲೇಮಿನಲ್ಲಿಯೂ ನಮಗೆ ಗೋ
ಡೆಯನ್ನು ಕೊಡುವದಕ್ಕೂ, ಪಾರ್ಸ್ಯದ ಅರಸುಗಳ ಸಮುಖದ
೯ ಲ್ಲಿ ನಮ್ಮ ಮೇಲೆ ಕೃಪೆಯನ್ನು ಇಳಿಯ ಮಾಡಿದ್ದಾನೆ. ಹಾ
ಗಾದರೆ, ನನ್ನ ದೇವರೇ, ಇದರ ತರುವಾಯ ನಾವು ಏನು ಹೇ
ಳುವ! ಯಾಕಂದರೆ ಪ್ರವಾದಿಗಳಾದ ನಿನ್ನ ಸೇವಕರ ಮುಖಾಂ
೧೦ ತರ ನೀನು ಅಜ್ಞಾಪಿಸಿದ ನಿನ್ನ ಆಜ್ಞೆಗಳನ್ನು ಬಿಟ್ಟಿದ್ದೇವೆ. ನೀ
ನು ಹೇಳಿದ್ದು—ನೀವು ಸ್ವತಂತ್ರಿಸಿ ಕೊಳ್ಳ ಹೋಗುವ ದೇಶವು
ಆ ದೇಶಗಳ ಜನರ ಮೈಲಿಗೆಯಿಂದ ಮೈಲಿಗೆಯಾದ ದೇಶವಾಗಿ
ದೆ. ಅವರು ತಮ್ಮ ಅಸಹ್ಯಗಳಿಂದಲೂ ಹೊಲೆಯಿಂದಲೂ ಅದ
ನ್ನು ಒಂದು ಮೂಲೆಯಿಂದ ಮತ್ತೊಂದು ಮೂಲೆಯ ಮಟ್ಟಿ
೧೧ ಗೂ ತುಂಬಿಸಿದ್ದಾರೆ. ಆದದರಿಂದ ನೀವು ಪ್ರಬಲವಾಗಿ, ದೇಶದ ಬ
ಳ್ಳೇದನ್ನು ತಿಂದು, ಅದನ್ನು ಯುಗ ಯುಗಕ್ಕೂ ನಿಮ್ಮ ಮಕ್ಕ
ಳಿಗೆ ಸ್ವಾಸ್ತ್ಯವಾಗಿ ಕೊಡುವ ಹಾಗೆ, ನೀವು ನಿಮ್ಮ ಕುಮಾರ್ತೆ
ಗಳನ್ನು ಅವರ ಕುಮಾರರಿಗೆ ಕೊಡ ಬೇಡಿರಿ; ಅವರ ಕುಮಾರ್ತೆ
ಗಳನ್ನು ನಿಮ್ಮ ಕುಮಾರರಿಗೆ ತಕ್ಕೊಳ್ಳ ಬೇಡಿರಿ; ಅವರ ಸಮಾ
ಧಾನವನ್ನೂ ಅವರ ಮೇಲನ್ನೂ ಯುಗ ಯುಗಕ್ಕೂ ಹುಡುಕ
೧೨ ಬೇಡಿರಿ. ನಮ್ಮ ದುಷ್ಕರ್ಮಗಳಿಗೋಸ್ಕರವೂ, ನಮ್ಮ ಮಹಾ



ಅಪರಾಧಕ್ಕೋಸ್ಕರವೂ ನಮ್ಮ ಮೇಲೆ ಬಂದದ್ದೆಲ್ಲಾ ಬಂದ ತ
ರುವಾಯ, ನಮ್ಮ ದೇವರಾಗಿರುವ ನೀನು ನಮ್ಮ ಅಕ್ರಮಗಳಿಗೆ ತ
ಕ್ಕದ್ದಾಗಿ ನಮ್ಮನ್ನು ಶಿಕ್ಷಿಸದೆ, ಈಗ ಇರುವ ಪ್ರಕಾರ ನಮಗೆ ವಿ
೧೪ ಮೋಚನೆಯನ್ನು ಕೊಟ್ಟು ತರುವಾಯ, ನಾವು ನಿನ್ನ ಆಜ್ಞೆಗಳ
ನ್ನು ಮತ್ತೂ ಮೀರಿ, ಈ ಅಸಹ್ಯಗಳನ್ನು ಮಾಡುವ ಜನರ ಸಂ
ಗಡ ಬಂಧುತ್ವ ಮಾಡ ಬಹುದೋ! ಹಾಗಾದರೆ ಉಳಿವೂ ತ
ಪ್ಪಿಸಿ ಕೊಂಡವರೂ ಇಲ್ಲದೆ ಇರುವ ಹಾಗೆ, ಶೀರಿಸಿ ಬಿಡುವ ಮಟ್ಟಿ
೧೫ ಗೂ, ನೀನು ನಮ್ಮ ಮೇಲೆ ಕೋಪ ಮಾಡುವದಿಲ್ಲವೋ! ಇಸ್ರ
ಯೇಲ ದೇವರಾಗಿರುವ ಕರ್ತನೇ, ನೀನು ನೀತಿವಂತನಾಗಿದ್ದೀ;
ಯಾಕಂದರೆ ಇಂದಿನ ಪ್ರಕಾರ ನಾವು ತಪ್ಪಿಸಿ ಕೊಂಡವರಾಗಿ ಉ
ಳಿದಿದ್ದೇವೆ. ಇಗೋ, ನಾವು ನಿನ್ನ ಮುಂದೆ ನಮ್ಮ ಅಪರಾಧಗ
ಳಲ್ಲಿದ್ದೇವೆ. ಯಾಕಂದರೆ ಇದರ ನಿಮಿತ್ತವಾಗಿ ನಿನ್ನ ಮುಂದೆ
ನಿಲ್ಲಲಾರದವರಾಗಿದ್ದೇವೆ.

## ೧೦. ಸಂಧಿ.

೧ ಎಜ್ರನು ಪ್ರಾರ್ಥಿಸಿ, ಅರಿಕೆ ಮಾಡಿ, ಅತ್ತು, ದೇವರ ಮನೆಯ
ಮುಂದೆ ಬಿದ್ದ ತರುವಾಯ, ಇಸ್ರಯೇಲ್ಯರಲ್ಲಿ ಸ್ತ್ರೀಯರೂ ಪು
ರುಷರೂ ಮಕ್ಕಳೂ ಮಹಾ ದೊಡ್ಡ ಕೂಟವಾಗಿ ಅವನ ಬಳಿಯ
ಲ್ಲಿ ಕೂಡಿಕೊಂಡರು. ಯಾಕಂದರೆ ಜನರು ಬಹಳವಾಗಿ ಅತ್ತರು.
೨ ಆಗ ಎಲಾಮನ ಮಕ್ಕಳಲ್ಲಿ ಒಬ್ಬನಾದ, ಯೆಹಿಯೇಲನ ಮಗನಾ
ದ ಶೆಕನ್ಯನು ಎಜ್ರನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ—ನಾ
ವು ದೇಶದ ಜನಗಳಲ್ಲಿ ಅನ್ಯ ಸ್ತ್ರೀಯರನ್ನು ತೆಗೆದು ಕೊಂಡದ್ದ
ರಿಂದ, ನಮ್ಮ ದೇವರಿಗೆ ವಿರೋಧವಾಗಿ ಅಕೃತ್ಯ ಮಾಡಿದ್ದೇವೆ.
ಆದರೆ ಈಗ ಈ ಕಾರ್ಯವನ್ನು ಕುರಿತು ಇಸ್ರಯೇಲಲ್ಲಿ ನಿರೀ
3 ಕ್ಷಣೆ ಉಂಟು. ಆದಕಾರಣ ನನ್ನ ಸ್ವಾಮಿಯ ಯೋಚನೆಯ
ಪ್ರಕಾರವಾಗಿಯೂ, ನಮ್ಮ ದೇವರ ಆಜ್ಞೆಗೆ ನಡುಗುವವರ ಯೋ
ಚನೆಯ ಪ್ರಕಾರವಾಗಿಯೂ ಆ ಸಮಸ್ತ ಸ್ತ್ರೀಯರನ್ನೂ, ಅ
ವರಿಂದ ಹುಟ್ಟಿದವರನ್ನೂ ಹೊರದಿಸಿ ಬಿಡ ನಮ್ಮ ದೇವರ ಸಂಗಡ
ಒಡಂಬಡಿಕೆ ಮಾಡುವ; ಇದು ನ್ಯಾಯಪ್ರಮಾಣದ ಪ್ರಕಾರ
೪ ಮಾಡಲ್ಪಡಲಿ. ನೀನು ಎದ್ದಿರು; ಯಾಕಂದರೆ ಈ ಕಾರ್ಯ ನಿ
ನ್ನ ಮೇಲದೆ; ನಾವು ನಿನ್ನ ಸಂಗಡ ಇರುವೆವು; ಬಲಗೊಂಡು,
ಮಾಡು.

೫ ಆಗ ಎಜ್ರನು ಎದ್ದು, ಪ್ರಧಾನ ಯಾಜಕರೂ ಲೇವ್ಯರೂ ಸ
ಮಸ್ತ ಇಸ್ರಯೇಲ್ಯರೂ ಈ ಮಾತಿನ ಪ್ರಕಾರವಾಗಿ ಮಾಡ ಅ
ವರು ಆಣೆ ಇಡುವ ಹಾಗೆ ಮಾಡಿದನು. ಅವರು ಆಣೆ ಇಟ್ಟಿ
೬ ರು. ಮತ್ತು ಎಜ್ರನು ದೇವರ ಮನೆಯ ಮುಂದಿನಿಂದ ಎದ್ದು, ಎ
ಲ್ಯಾಷೀಬನ ಮಗನಾದ ಯೊಹಾನನ ಕೊಠಡಿಯಲ್ಲಿ ಪ್ರವೇಶಿಸಿ,
ಅಲ್ಲಿಗೆ ಬಂದಾಗ, ಕೊಟ್ಟಿಯನ್ನು ತಿನ್ನವೆ, ನೀರನ್ನು ಕುಡಿಯದೆ,
ಇದ್ದನು; ಯಾಕಂದರೆ ಶೆಕೆಯಾಗಿ ಸೆರೆಯಲ್ಪಟ್ಟವರ ಅಕೃತ್ಯ
೭ ಕ್ಕೋಸ್ಕರ ದುಃಖಿಸಿದನು. ಆಗ ಶೆಕೆ ಇರುಬಿಕೆಯ ಮಕ್ಕಳೆಲ್ಲ
ರೂ ಯೆರೂಸಲೇಮಿಗೆ ಕೂಡಿ ಬರ ಬೇಕೆಂದು, ಯೆಹೂದ ಯೆ
೮ ರೂಸಲೇಮಿನಲ್ಲಿ ಎಲ್ಲಿಯೂ ಕೂಗಿನಿಂದ ಸಾರಿಸಿದರು. ಇದಲ್ಲ
ದೆ ಯಾವನಾದರೂ ಪ್ರಧಾನರ, ಹಿರಿಯರ ಯೋಚನೆಯ ಪ್ರಕಾ
ರ ಮೂರು ದಿವಸದಲ್ಲಿ ಬಾರದೆ ಇದ್ದರೆ, ಅವನ ಸ್ಥಿತಿಯೆಲ್ಲಾ
ದಂಡವಾಗಿ ತಕ್ಕೊಳ್ಳಲ್ಪಡುವದೆಂದೂ, ಅವನೇ ಶೆಕೆಯಾಗಿ ಸೆ
ಯಲ್ಪಟ್ಟವರ ಕೂಟದಿಂದ ಹೊರಗೆ ಹಾಕಲ್ಪಡುವನೆಂದೂ ಸಾ
ರಿದರು.

೯ ಆಗ ಯೆಹೂದ ಬೆನ್ಯಮೀನನ ಮನುಷ್ಯರೆಲ್ಲರೂ ಮೂರು
ದಿವಸಗಳೊಳಗೆ ಯೆರೂಸಲೇಮಿನಲ್ಲಿ ಕೂಡಿದರು. ಅದು ಒಂಭ
ತ್ತನೇ ತಿಂಗಳ ಇಪ್ಪತ್ತನೇ ದಿವಸವಾಗಿತ್ತು. ಜನರೆಲ್ಲರು ದೇವರ
ಮನೆಯ ಬೀದಿಯಲ್ಲಿ ಆ ಕಾರ್ಯಕ್ಕೋಸ್ಕರವೂ ಮಳೆಗೋ
೧೦ ಸ್ಕರವೂ ನಡುಗಿ ಕೊಂಡಿದ್ದರು. ಆಗ ಯಾಜಕನಾದ ಎಜ್ರನು
ಎದ್ದು, ಅವರಿಗೆ ಹೇಳಿದನು—ನೀವು ಇಸ್ರಯೇಲರ ಅಪರಾಧವನ್ನು
ಅಧಿಕವಾಗಿ ಮಾಡ, ಅನ್ಯಸ್ತ್ರೀಯರನ್ನು ಮದುವೆ ಮಾಡಿ ಕೊಂ
೧೧ ಡದಂದ ಅಕೃತ್ಯ ಮಾಡಿದಿರಿ. ಆದದರಿಂದ ನೀವು ನಿಮ್ಮ ಪಿತೃ
ಗಳ ದೇವರಾಗಿರುವ ಕರ್ತನ ಮುಂದೆ ಅರಿಕೆ ಮಾಡಿ, ಅವನ
ಚಿತ್ತದ ಪ್ರಕಾರ ಮಾಡಿ, ಈ ದೇಶದ ಜನರಿಂದಲೂ ಅನ್ಯ ಸ್ತ್ರೀ
ಯರಿಂದಲೂ ನಿಮ್ಮನ್ನು ಪ್ರತ್ಯೇಕಿಸಿ ಕೊಳ್ಳಿರಿ.

೧೨ ಆಗ ಕೂಟವೆಲ್ಲಾ ಪ್ರತ್ಯುತ್ತರವಾಗಿ ಬಹಳ ಶಬ್ದದಿಂದ ಅಂದ
೧೩ ರು—ನೀನು ಹೇಳಿದ ಪ್ರಕಾರವೇ ನಾವು ಮಾಡ ಬೇಕು. ಆದರೆ
ಜನರು ಅನೇಕರು; ಮತ್ತು ಇದು ಮಳೆಕಾಲವಾಗಿರುವದರಿಂದ ಹೊ
ರಗೆ ಇರಲಾರೆವು; ಇದಲ್ಲದೆ ಇದು ಒಂದು ದಿವಸ ಎರಡು ದಿವಸದ
ಕೆಲಸವಲ್ಲ. ಯಾಕಂದರೆ ಈ ಕಾರ್ಯದಲ್ಲಿ ದ್ರೋಹ ಮಾಡಿ
೧೪ ದ ನಾವು ಅನೇಕರಾಗಿದ್ದೇವೆ. ಆದಕಾರಣ ನೀನು ದಯೆ ಮಾಡಿ
—ಕೂಟವೆಲ್ಲಾದರಲ್ಲಿ ನಮ್ಮ ಪ್ರಧಾನರು ನಿಲ್ಲಲಿ. ಮತ್ತು ಈ
ಕಾರ್ಯದ ನಿಮಿತ್ತ ನಮ್ಮ ದೇವರ ಉರಿಯ ಕೋಪವು ನಮ್ಮ
ನ್ನು ಬಿಟ್ಟು ಹೋಗುವ ಪರ್ಯಂತರ, ನಮ್ಮ ಪಟ್ಟಣಗಳಲ್ಲಿ ಅನ್ಯ
ಸ್ತ್ರೀಯರನ್ನು ತಕ್ಕೊಂಡವರು ನೇಮಿಸಿದ ಕಾಲದಲ್ಲಿ ಬಂದು, ಅ
ವರ ಸಂಗಡ ಪ್ರತಿ ಪಟ್ಟಣದ ಹಿರಿಯರೂ ಅದರ ನ್ಯಾಯಾಧಿಪತಿ
೧೫ ಗಳೂ ಬರಲಿ. ಆದರೆ ಅಸಹೇಲನ ಮಗನಾದ ಯೊನತಾನ
ನೂ, ತಿಕ್ವನ ಮಗನಾದ ಯೆಹ್ಯೋಯೆನೂ ಇವರೇ ಇದಕ್ಕೆ ನಿಂ
ತರು. ಮೆಷುಲ್ಲಾಮನೂ ಲೇವ್ಯನಾದ ಶಬ್ಬೆತಾಯನೂ ಅವರಿಗೆ
೧೬ ಸಹಾಯಕರಾಗಿದ್ದರು. ಶೆಕೆ ಇರುಬಿಕೆಯ ಮಕ್ಕಳು ಇದೇ ಪ್ರ
ಕಾರ ಮಾಡಿದರು.

ಆದದರಿಂದ ಯಾಜಕನಾದ ಎಜ್ರನು ತಮ್ಮ ತಂದೆಗಳ ಮನೆ
ಯ ಪ್ರಕಾರ ತಂದೆಗಳಲ್ಲಿ ಶ್ರೇಷ್ಠರಾದ ಕೆಲಬರು ಹೆಸರು ಹೆಸರಾ
ಗಿ ಪ್ರತ್ಯೇಕಿಸಲ್ಪಟ್ಟು, ಈ ಕಾರ್ಯವನ್ನು ಶೋಧಿಸ ಹತ್ತನೇ
೧೭ ತಿಂಗಳ ಮೊದಲನೇ ದಿವಸದಲ್ಲಿ ಕುಳಿತು ಕೊಂಡರು. ಅನ್ಯಸ್ತ್ರೀ
ಯರನ್ನು ಹೊಂದಿದವರೆಲ್ಲರ ಕಾರ್ಯವನ್ನು ಮೊದಲನೇ ತಿಂ
೧೮ ಗಳ ಮೊದಲನೇ ದಿವಸದಲ್ಲಿ ಮುಗಿಸಿದರು. ಯಾಜಕರ ಮಕ್ಕಳ
ಲ್ಲಿ ಅನ್ಯ ಸ್ತ್ರೀಯರನ್ನು ತಕ್ಕೊಂಡವರಾಗಿ ಕಾಣಿಸಲ್ಪಟ್ಟವರು
ಯಾರಂದರೆ—ಯೊಚದಾಕನ ಮಗನಾದ ಯೆಷೂವನ ಮಕ್ಕ
ಳಲ್ಲಿಯೂ ಅವನ ಸಹೋದರರಲ್ಲಿಯೂ ಮಸ್ಸೇಯನು, ಎಲಿ
೧೯ ಯೇಜರನು, ಯರೀಬನು, ಗೆದಲ್ಯನು. ಇವರು ತಮ್ಮ ಸ್ತ್ರೀಯ
ರನ್ನು ಹೊರದಿಸಿ ಬಿಡುವೆವೆಂದು ತಮ್ಮ ಕೈ ಕೊಟ್ಟು, ತಾವು ಅ
ಪರಾಧಸ್ತರಾದದರಿಂದ ಅಪರಾಧ ಕಳ್ಳಯುವದಕ್ಕೆ ಮಂದೆಯಿಂದ
೨೦ ತಂದ ಒಂದು ಟಗರನ್ನು ಅರ್ಪಿಸಿದರು. ಇಮ್ಮೇರನ ಮಕ್ಕಳಲ್ಲಿ
೨೧ ಹನಾನಿಯು, ಜೆಬದ್ಯನು. ಹರೀಮನ ಮಕ್ಕಳಲ್ಲಿ ಮಸ್ಸೇಯನು,
೨೨ ಎಲೀಯನು, ಶೆಮಾಯನು, ಯೆಹಿಯೇಲನು, ಉಜ್ಜಿಯನು. ಪ
ಷೂರನ ಮಕ್ಕಳಲ್ಲಿ ಎಲ್ಯೊವೆನಾಯನು, ಮಸ್ಸೇಯನು, ಇಷ್ಮ

೨೩ ಯೇಲನು, ನೆಫಾನಿಯೇಲನು, ಯೊಜಬಾದನು, ಎಳಾಸನು. ಲೇ
ವ್ಯರಲ್ಲಿ ಯೊಜಬಾದನು, ಪಿಮ್ಯನು, ಕೆಲೀಟೆನೆಂಬ ಕೆಲಾಯನು,
೨೪ ಪೆತಹ್ಯನು, ಯೆಹೂದನು, ಎಲಿಯೇಜರನು. ಹಾಡುಗಾರರಲ್ಲಿ ಎಲ್ಯ
ಷೀಬನು; ದ್ವಾರಪಾಲಕರಲ್ಲಿ ಶಲ್ಲೂಮನು, ಟೆಲೇಮನು, ಊರಿ
೨೫ಯು. ಮತ್ತು ಇಸ್ರಯೇಲ್ಯರಲ್ಲಿ ಪರೋಷನ ಮಕ್ಕಳೊಳಗೆ ರ
ಮ್ಯನು, ಇಜ್ಜೀಯನು, ಮಲ್ಕೀಯನು, ಮಿಯಮಿನಾನು, ಎಲೆಯಾ
೨೬ ಜರನು, ಮಲ್ಕೀಯನು, ಬೆನಾಯನು. ಎಲಾಮನ ಮಕ್ಕಳಲ್ಲಿ ಮ
ತ್ತನ್ಯನು, ಜೆಕರೀಯನು, ಯೆಹಿಯೇಲನು, ಅಬ್ದಿಯು, ಯೆರೆಮೋ
೨೭ತನು, ಎಲೀಯನು. ಜತ್ತುವಿನ ಮಕ್ಕಳಲ್ಲಿ ಎಲ್ಯೊವೆನಾಯನು,
ಎಲ್ಯಷೀಬನು, ಮತ್ತನ್ಯನು, ಯೆರೆಮೋತನು, ಜಬಾದನು, ಅಜೀ
೨೮ಜನು. ಬೆಬಾಯನ ಮಕ್ಕಳಲ್ಲಿ ಯೆಹೊಹನಾನನು, ಹನನ್ಯನು,
೨೯ ಜೆಬೀದನು, ಅಟ್ಲಾಯನು. ಬಾನಿಯ ಮಕ್ಕಳಲ್ಲಿ ಮೆಷುಲ್ಲಾಮನು,
ಮಲ್ಲೂಕನು, ಅದಾಯನು, ಯಾಶೂಬನು, ಶಾಲನು, ಶಕೋತ
೩೦ನು. ಪಹತ್ಮೊವಾಬನ ಮಕ್ಕಳಲ್ಲಿ ಅಲ್ಲೂನು, ಕೆಲಾಲನು, ಬೆನಾಯ
ನು, ಮಸ್ಸೇಯನು, ಮತ್ತನ್ಯನು, ಬೆಚಲೇಲನು, ಬಿನೂಯನು,
೩೧ ಮನಸ್ಸೆಯು. ಹರೀಮನ ಮಕ್ಕಳಲ್ಲಿ ಎಲಿಯೇಜರನು, ಇಷ್ಶೀಯ
ನು; ಮಲ್ಕೀಯನು, ಶೆಮಾಯನು, ಶಿಮೋನನು. ಪನ್ಯಲಿಾನನು,
೩೨ ಮಲ್ಲೂಕನು, ಶೆಮರ್ಯನು. ಹರೂಮನ ಮಕ್ಕಳಲ್ಲಿ ಮಕ್ನಾ
ಯನು, ಮತ್ತತ್ತನು, ಜಬಾದನು, ಎಲಿಫೆಲೆಟನು, ಯೆರೆಮಾಯ
ನು, ಮನಸ್ಸೆಯು, ಶಿಮ್ಮೆಯು. ಬಾನಿಯ ಮಕ್ಕಳಲ್ಲಿ ಮಹಾಯನು,
೩೪ ಅಮ್ರಾಮನು, ಉರೇಲನು, ಬೆನಾಯನು, ಬೇಲ್ಯನು, ಕೆಲೂಹುವು,
೩೫ ವನ್ಯನು, ಮೆರೆಮೋತನು, ಎಲ್ಯಷೀಬನು, ಮತ್ತನ್ಯನು, ಮಕ್ನಾ
೩೬ ಯನು, ಯುವಸಾಯನು, ಬಾನಿಯು, ಬಿನೂಯನು, ಶಿಮ್ಮೆಯು,
೩೭ ಶೆಲೆಮ್ಯನು, ನತಾನನು, ಅದಾಯನು, ಮಕ್ನದ್ಬಾಯನು, ಶಾಷಾಯ
೩೮ನು, ಶಾರಾಯನು, ಅಜರೇಲನು, ಶೆಲೆಮ್ಯನು, ಶೆಮರ್ಯನು, ಶಲ್ಲೂ
೩೯ಮನು, ಅಮರ್ಯನು, ಯೋಸೆಫನು. ನೆಬೋನ ಮಕ್ಕಳಲ್ಲಿಯೆ
೪೦ ವಿಯೇಲನು, ಮತ್ತಿತ್ಯನು, ಜಬಾದನು, ಜೆಬೀನನು, ಯದಾವನು,
ಯೊವೇಲನು, ಬೆನಾಯನು. ಇವರೆಲ್ಲರು ಅನ್ಯ ಸ್ತ್ರೀಯರನ್ನು
೪೧ ತಕ್ಕೊಂಡವರಾಗಿದ್ದರು; ಇವರಲ್ಲಿ ಕೆಲವರು ತಮಗೆ ಮಕ್ಕಳನ್ನು
ಹೆತ್ತ ಸ್ತ್ರೀಯರನ್ನು ತಕ್ಕೊಂಡವರಾಗಿದ್ದರು.

# THE BOOK OF NEHEMIAH.

## ನೆಹೆಮಿಯನ ಪುಸ್ತಕವು.

### ೧. ಸಂಧಿ.

೧ ಹಕಲ್ಯನ ಮಗನಾದ ನೆಹೆಮಿಯನ ವಾಕ್ಯಗಳು. ಇಪ್ಪತ್ತ
ನೇ ವರುಷದ ಕಿಸ್ಲೇವ್ ತಿಂಗಳಲ್ಲಿ ನಾನು ಶುಷಾನ್ ಅರಮನೆಯ
೨ ಲ್ಲಿರುವಾಗ, ಏನಾಯಿತಂದರೆ, ನನ್ನ ಸಹೋದರರಲ್ಲಿ ಒಬ್ಬನಾದ
ಹನಾನಿಯೂ, ಯೆಹೂದದಲ್ಲಿದ್ದ ಕೆಲವರೂ ಬಂದರು. ಆಗ
ನಾನು ಕೆರೆಯಿಂದ ತಪ್ಪಿಸಿ ಕೊಂಡು ಉಳುಕೊಂಡ ಯೆಹೂದ್ಯರ
ನ್ನು ಕುರಿತೂ ಯೆರೂಸಲೇಮನ್ನು ಕುರಿತೂ ಅವರಿಂದ ವಿಚಾ
೩ ರಿಸಿದೆನು. ಅವರು ನನಗೆ, ಕೆರೆಯನ್ನು ಬಿಟ್ಟು ಉಳಿದವರು ಆ ಪ್ರಾ
ಮೆಯಲ್ಲಿದ್ದು, ಮಹಾಕೇಡನ್ನೂ ನಿಂದೆಯನ್ನೂ ಅನುಭವಿಸುತ್ತಾ
ಕೆ. ಇದಲ್ಲದೆ ಯೆರೂಸಲೇಮಿನ ಗೋಡೆಯು ಒಡೆಯಲ್ಪಟ್ಟಿದೆ; ಅ
ದರ ಬಾಗಲುಗಳು ಬೆಂಕಿಯಿಂದ ಸುಡಲ್ಪಟ್ಟವೆ ಎಂದು ಹೇಳಿದರು.
೪ ಈ ಮಾತುಗಳನ್ನು ಕೇಳಿದಾಗ, ನಾನು ಕುಳಿತುಕೊಂಡು,
ಅತ್ತು, ಕೆಲವು ದಿವಸ ದುಃಖಿಸಿ, ಉಪವಾಸವಾಡಿ, ಆಕಾಶಲೋ
೫ ಕದ ದೇವರ ಮುಂದೆ ಪ್ರಾರ್ಥನೆ ಮಾಡಿ ಹೇಳಿದ್ದೇನಂದರೆ,—ಓ
ಆಕಾಶ ಲೋಕದ ದೇವರಾದ ಕರ್ತನೇ, ತನ್ನನ್ನು ಪ್ರೀತಿ ಮಾಡಿ,
ತನ್ನ ಆಜ್ಞೆಗಳನ್ನು ಕೈಕೊಳ್ಳುವವರಿಗೆ ಒಡಂಬಡಿಕೆಯನ್ನೂ
ಕೃಪೆಯನ್ನೂ ಕೈಕೊಳ್ಳುವವನಾದ ಮಹಾ ಭಯಂಕರವುಳ್ಳ
೬ ದೇವರೇ, ನಿನ್ನ ಸೇವಕರಾದ ಇಸ್ರಯೇಲ ಮಕ್ಕಳಿಗೋಸ್ಕರ
ಈಗ ದಿವಾರಾತ್ರಿಯಲ್ಲಿ ನಿನ್ನ ಸೇವಕನು ನಿನ್ನ ಮುಂದೆ ಪ್ರಾರ್ಥಿ
ಸಿದ ಪ್ರಾರ್ಥನೆಯನ್ನೂ ನಿನಗೆ ವಿರೋಧವಾಗಿ ನಾವು ಮಾಡಿದ
ಇಸ್ರಯೇಲ ಮಕ್ಕಳ ಪಾಪಗಳ ಅರಿಕೆ ಮಾಡುವಿಕೆಯನ್ನೂ ನೀ
ನು ಕೇಳುವ ಹಾಗೆ ನಿನ್ನ ಕಿವಿ ಆಲೈಸುತ್ತಾ ಇರಲಿ, ನಿನ್ನ ಕಣ್ಣು
೭ ಗಳು ತೆರೆದಿರಲಿ. ನಾನೂ ನನ್ನ ತಂದೆಯ ಮನೆಯವರೂ ಪಾ
ಪ ಮಾಡಿದ್ದೆವೆ. ನಿನಗೆ ವಿರೋಧವಾಗಿ ಬಹು ಕೆಟ್ಟತನ ಮಾಡಿ
ದ್ದೇವೆ; ನೀನು ನಿನ್ನ ಸೇವಕನಾದ ಮೋಶೆಗೆ ಆಜ್ಞಾಪಿಸಿದ ಆಜ್ಞೆಗ
ಳನ್ನೂ ಕಟ್ಟಳೆಗಳನ್ನೂ ನ್ಯಾಯಗಳನ್ನೂ ನಾವು ಕೈಕೊಳ್ಳ
೮ ಲಿಲ್ಲ. ದಯೆ ಮಾಡಿ ನಿನ್ನ ಸೇವಕನಾದ ಮೋಶೆಗೆ ಹೇಳಿದ ಮಾ
ತನ್ನು ಜ್ಞಾಪಕ ಮಾಡು; ಏನಂದರೆ—ನೀವು ಅಕ್ರಮ ಮಾಡಿದ
ರೆ, ನಾನು ನಿಮ್ಮನ್ನು ಜನಗಳ ಮಧ್ಯದಲ್ಲಿ ಚದರ ಮಾಡುವೆನು
೯ ಆದರೆ ನೀವು ನನ್ನ ಬಳಿಗೆ ತಿರುಗಿ, ನನ್ನ ಆಜ್ಞೆಗಳನ್ನು ಕೈಕೊಂ
ಡು, ಅವುಗಳ ಪ್ರಕಾರ ಮಾಡಿದರೆ, ನಿಮ್ಮಲ್ಲಿರುವ ಕೆಲವರು ಆಕಾ
ಶದ ಅಂತ್ಯದ ಮಟ್ಟಿಗೂ ಹೊರಡಿಸಲ್ಪಟ್ಟಿದ್ದರೂ, ನಾನು ಅಲ್ಲಿಂ
ದ ಅವರನ್ನು ಕೂಡಿಸಿ, ನನ್ನ ಹೆಸರನ್ನಿಡಲು ಆರಿಸಿ ಕೊಂಡ ಸ್ಥಳಕ್ಕೆ
೧೦ ಅವರನ್ನು ಬರ ಮಾಡುವೆನು. ನಿನ್ನ ಮಹಾ ಶಕ್ತಿಯಿಂದಲೂ
ನಿನ್ನ ಬಲವಾದ ಕೈಯಿಂದಲೂ ನೀನು ವಿಮೋಚಿಸಿದ ನಿನ್ನ ಸೇ
೧೧ ವಕರೂ ನಿನ್ನ ಜನರು ಇವರೇ. ಓ ಕರ್ತನೇ, ನಿನ್ನ ನಾಮಕ್ಕೆ
ಭಯ ಪಡ ಇಚ್ಛೈಸುವ ನಿನ್ನ ಸೇವಕನ ಪ್ರಾರ್ಥನೆಯನ್ನೂ
ನಿನ್ನ ಸೇವಕರ ಪ್ರಾರ್ಥನೆಯನ್ನೂ ನಿನ್ನ ಕಿವಿ ಆಲೈಸುತ್ತಾ ಇರ
ಲಿ; ಇಂದು ನಿನ್ನ ಸೇವಕನಿಗೆ ಸಿದ್ಧಿಯನ್ನು ಕೊಟ್ಟು, ಈ ಮನು
ಷ್ಯನ ಸಮುಖದಲ್ಲಿ ಅವನಿಗೆ ಅಂತಃಕರಣ ದೊರಕುವ ಹಾಗ
ಮಾಡು. ನಾನು ಅರಸನಿಗೆ ಪಾನ ಕೊಡುವವನಾಗಿದ್ದೆನು.

### ೨. ಸಂಧಿ.

೧ ಅರಸನಾದ ಅರ್ತಕ್ಷಸ್ಸನ ಇಪ್ಪತ್ತನೇ ವರುಷದ ನೀಸ
ತಿಂಗಳಲ್ಲಿ ಏನಾಯಿತಂದರೆ, ಅವನ ಮುಂದೆ ದ್ರಾಕ್ಷೇರಸವಿರುವಾ
ಗ, ನಾನು ಆ ದ್ರಾಕ್ಷೇರಸವನ್ನು ತಕ್ಕೊಂಡು ಅರಸನಿಗೆ ಕೊಟ್ಟೆ
ನು. ಆದರೆ ಇದಕ್ಕೆಮುಂಚೆ ನಾನು ಅವನ ಸಮುಖದಲ್ಲಿ ದುಃಖಿ
೨ ತನಾಗಿದ್ದದ್ದಿಲ್ಲ. ಆದಕಾರಣ ಅರಸನು ನನಗೆ—ನಿನಗೆ ರೋಗವಿ
ಲ್ಲದೆ ನಿನ್ನ ಮುಖವು ದುಃಖವಾಗಿರುವದೇನು! ನಿನಗೆ ರೋಗವಿಲ್ಲದ
೩ ಲ್ಲ! ಇದು ಮನೋದುಃಖವಲ್ಲದೆ ಮತ್ತೊಂದಲ್ಲ, ಅಂದನು. ಆಗ
ನಾನು ಬಹು ಭಯಪಟ್ಟು, ಅರಸನಿಗೆ ಹೇಳಿದೆನು—ಅರಸನು ಎಂ
ದೆಂದಿಗೂ ಬಾಳಲಿ; ನನ್ನ ತಂದೆಗಳ ಸಮಾಧಿಗಳಿರುವ ಸ್ಥಳವಾದ
ಆ ಪಟ್ಟಣವು ಹಾಳಾಗಿದ್ದು, ಅದರ ಬಾಗಲುಗಳು ಬೆಂಕಿಯಿಂದ
ಸುಡಲ್ಪಟ್ಟಿರುವಾಗ, ನನ್ನ ಮುಖವು ದುಃಖವಿಲ್ಲದೆ ಇರುವರು
ಹ್ಯಾಗೆ!
೪ ಅದಕ್ಕೆ ಅರಸನು ನನಗೆ, ನೀನು ಕೇಳುವದೇನು! ಅಂದನು.
೫ ಆಗ ನಾನು ಆಕಾಶಲೋಕದ ದೇವರಿಗೆ ಪ್ರಾರ್ಥನೆ ಮಾಡಿ, ಅ
ರಸನಿಗೆ ಹೇಳಿದ್ದೇನಂದರೆ—ಅರಸನಿಗೆ ಚನಾಗಾಗಿದ್ದರೆ, ಮತ್ತು ನಿ
ನ್ನ ಸೇವಕನಿಗೆ ನಿನ್ನ ಮುಂದೆ ದಯೆ ದೊರಕಿದರೆ, ನೀನು ನನ್ನ
ನ್ನು ನನ್ನ ತಂದೆಗಳ ಸಮಾಧಿಗಳಿರುವ ಪಟ್ಟಣವನ್ನು ಕಟ್ಟಿಸುವ
ದಕ್ಕಾಗಿ, ಯೆಹೂದಕ್ಕೆ ನನ್ನನ್ನು ಕಳುಹಿಸ ಬೇಕು.
೬ ರಾಣಿಯು ತನ್ನ ಬಳಿಯಲ್ಲಿ ಕುಳಿತಿರುವಾಗ ಅರಸನು ನನಗೆ,
ನಿನ್ನ ಪ್ರಯಾಣ ಎಷ್ಟು ದಿವಸ! ನೀನು ತಿರಿಗಿ ಯಾವಾಗ ಬ
ರುತ್ತೀ? ಅಂದನು. ಆಗ ಅರಸನು ನನ್ನನ್ನು ಕಳುಹಿಸ ಸಮ್ಮತಿ
ಪಟ್ಟನು; ಮತ್ತು ನಾನು ಅವನಿಗೆ ಕಾಲ ಗೊತ್ತು ಮಾಡಿದೆನು.
೭ ಇದಲ್ಲದೆ ನಾನು ಅರಸನಿಗೆ ಹೇಳಿದ್ದೇನಂದರೆ—ಅರಸನಿಗೆ ಸಮ್ಮತಿ
ಇದ್ದರೆ, ನಾನು ಯೆಹೂದಕ್ಕೆ ಹೋಗಿ, ಕೇರುವ ಪರ್ಯಂತರ,
ನದಿಯ ಆಚೆಯಲ್ಲಿ ಇರುವ ಅಧಿಪತಿಗಳು ನನ್ನನ್ನು ಸಾಗ ಕಳು
ಹಿಸುವ ಹಾಗೆ ಅವರಿಗೋಸ್ಕರ ನನಗೆ ಪತ್ರಿಕೆಗಳು ಕೊಡಲ್ಪಡಲಿ.
೮ ಇದಲ್ಲದೆ ಮಂದಿರದ ಸಮ್ತಂಭವಾದ ಅರಮನೆಯ ಬಾಗಲಿಗೋ
ಸ್ಕರವೂ, ಪಟ್ಟಣದ ಗೋಡೆಗೋಸ್ಕರವೂ, ನಾನು ಪ್ರವೇಶಿಸುವ
ಮನೆಗೋಸ್ಕರವೂ, ತೊಲೆಗಳನ್ನು ಮಾಡ ಮರಗಳನ್ನು ಕೊ
ಡುವ ಹಾಗೆ, ಅರಸನ ವನಾಧಿಪತಿಯಾದ ಆಸಾಫನಿಗೋಸ್ಕರ
ನನಗೆ ಪತ್ರಿಕೆ ಕೊಡಲ್ಪಡಲಿ. ಆಗ ದೇವರ ಬಳ್ಳೀ ಕೈ ನನ್ನ
ಮೇಲೆ ಇರುವ ಪ್ರಕಾರ, ಅರಸನು ನನಗೆ ಕೊಟ್ಟನು.
೯ ಆಗ ನಾನು ನದಿಯ ಆಚೆಯಲ್ಲಿರುವ ಅಧಿಪತಿಗಳ ಬಳಿಗೆ
ಬಂದು, ಅರಸನ ಪತ್ರಿಕೆಗಳನ್ನು ಅವರಿಗೆ ಕೊಟ್ಟೆನು. ಅರಸನು
ನನ್ನ ಸಂಗಡ ಸೈನ್ಯಾಧಿಪತಿಗಳನ್ನೂ ರಾಹುತರನ್ನೂ ಕಳುಹಿಸಿ
೧೦ ದನು. ಹೊರೋನ್ಯನಾದ ಸನ್ಬಲ್ಲಾಟನೂ ಅಮ್ಮೋನ್ಯನಾಗಿ
ರುವ ದಾಸನಾದ ಟೊಬೀಯನೂ ಕೇಳಿದಾಗ, ಇಸ್ರಯೇಲಮ
ಕ್ಕಳ ಮೇಲನ್ನು ಹುಡುಕ ಮನುಷ್ಯನು ಬಂದದರಿಂದ, ಅವರು ಬ
ಹಳವಾಗಿ ವ್ಯಸನ ಪಟ್ಟರು.
೧೧ ನಾನು ಯೆರೂಸಲೇಮಿಗೆ ಬಂದು, ಅಲ್ಲಿ ಮೂರು ದಿವಸ ಇದ್ದ
ತರುವಾಯ, ನಾನೂ ನನ್ನ ಸಂಗಡ ಇರುವ ಕೆಲವರೂ ರಾತ್ರಿ
೧೨ ಯಲ್ಲಿ ಎದ್ದೆವು. ಅದರೆ ಯೆರೂಸಲೇಮಿಗೋಸ್ಕರ ಮಾಡ ನನ್ನ
ದೇವರು ನನ್ನ ಹೃದಯದಲ್ಲಿ ಇಟ್ಟದ್ದನ್ನು ಯಾರಿಗೂ ತಿಳಿಸ
ದೆ ಇದ್ದೆನು; ಮತ್ತು ನಾನು ಹತ್ತಿಕೊಂಡಿದ್ದ ಮೃಗದ ಹೊರ್ತು
೧೩ ಮತ್ತೊಂದು ಮೃಗ ನನ್ನ ಸಂಗಡ ಇರಲಿಲ್ಲ. ನಾನು ರಾತ್ರಿಯ
ಲ್ಲಿ ತಗ್ಗಿನ ಬಾಗಲಿಂದ ಹೊರಟು, ಮಹಾ ಮೀನ ಭಾವಿಯನ್ನು
ದಾಟಿ, ಶಿಪ್ಪೇದಿಬ್ಬೆಯ ಬಾಗಲಿಗೆ ಬಂದು, ಯೆರೂಸಲೇಮಿನ ಕೆ
ಡವಿ ಹಾಕಲ್ಪಟ್ಟ ಗೋಡೆಗಳನ್ನೂ, ಬೆಂಕಿಯಿಂದ ಸುಡಲ್ಪಟ್ಟ ಅ
೧೪ ದರ ಬಾಗಲುಗಳನ್ನೂ ಚನಾಗಾಗಿ ನೋಡಿದೆನು. ಆಗ ಬುಗ್ಗೆಯ
ಬಾಗಲಿಗೂ ಅರಸನ ಭಾವಿಗೂ ಹಾದು ಬಂದೆನು. ಆದರೆ ನಾನು
೧೫ ಹತ್ತಿದ್ದ ಮೃಗ ಹೋಗಲಿಕ್ಕೆ ಸ್ಥಳವಿಲ್ಲದೆ ಇತ್ತು. ಮತ್ತು ಆ
ರಾತ್ರಿಯಲ್ಲಿ ನಾನು ಹಳ್ಳದ ಮಾರ್ಗವಾಗಿ ಹೋಗಿ, ಗೋಡೆಯ
ನ್ನು ಚನಾಗಿ ನೋಡಿ, ತಿರುಗಿ ಕೊಂಡು, ತಗ್ಗಿನ ಬಾಗಲಿಂದ
ಪ್ರವೇಶಿಸಿ, ತಿರಿಗಿ ಬಂದೆನು.
೧೬ ನಾನು ಎಲ್ಲಿ ಹೋದೆನೆಂದೂ, ಏನು ಮಾಡಿದೆನೆಂದೂ ಅಧಿಕಾ
ರಸ್ತರು ತಿಳಿಯದೆ ಇದ್ದರು. ಆ ಪರ್ಯಂತರ ನಾನು ಯೆಹೂ
ದ್ಯರಿಗಾದರೂ, ಯಾಜಕರಿಗಾದರೂ, ಹಿರಿಯರಿಗಾದರೂ, ಅ
ಧಿಕಾರಸ್ತರಿಗಾದರೂ, ಕೆಲಸ ಮಾಡುವ ಇತರ ಜನರಿಗಾದರೂ
ತಿಳಿಸಿದ್ದಿಲ್ಲ. ಆಗ ನಾನು ಅವರಿಗೆ ಹೇಳಿದೆನು—ನಮಗೆ ಇರುವ
ಕೇಡನ್ನು ನೀವು ನೋಡುತ್ತೀರಿ. ಯೆರೂಸಲೇಮು ಹಾಳಾಗಿ, ಅ
ದರ ಬಾಗಲುಗಳು ಬೆಂಕಿಯಿಂದ ಸುಡಲ್ಪಟ್ಟವಲ್ಲ! ನಾವು ಇನ್ನು
ಮೇಲೆ ನಿಂದೆಗೊಳಗಾಗಿರದ ಹಾಗೆ ಯೆರೂಸಲೇಮಿನ ಗೋಡೆ
೧೭ ಯನ್ನು ಕಟ್ಟುವ ಬನ್ನಿರಿ. ಮತ್ತು ನನ್ನ ಮೇಲೆ ಬಳ್ಳೀದಾಗಿದ್ದ
ನನ್ನ ದೇವರ ಕೈಯನ್ನೂ, ಅರಸನು ನನಗೆ ಹೇಳಿದ ಮಾತು
ಗಳನ್ನೂ ಅವರಿಗೆ ತಿಳಿಸಿದೆನು. ಆಗಲವರು, ನಾವು ಎದ್ದು ಕಟ್ಟು
ವ ಎಂದು ಹೇಳಿ, ತಮ್ಮ ಕೈಗಳನ್ನು ಈ ಒಳ್ಳೇ ಕೆಲಸಕ್ಕೆ ಬಲ
ಪಡಿಸಿದರು.
೧೮ ಆದರೆ ಹೊರೋನ್ಯನಾದ ಸನ್ಬಲ್ಲಾಟನೂ, ಅಮ್ಮೋನ್ಯನಾ
ದ, ದಾಸನಾದ ಟೊಬೀಯನೂ, ಅರಾಬ್ಯನಾದ ಗೆಷೇಮನೂ
ಇದನ್ನು ಕೇಳಿದಾಗ, ಅವರು ನಮ್ಮನ್ನು ಗೇಲಿ ಮಾಡಿ, ತಿರಸ್ಕ
ರಿಸಿ, ನೀವು ಮಾಡುವ ಈ ಕಾರ್ಯವೇನು! ನೀವು ಅರಸನಿಗೆ
೧೯ ವಿರೋಧವಾಗಿ ತಿರುಗ ಬೀಳುವಿರೋ! ಅಂದರು. ಆಗ ನಾನು
ಅವರಿಗೆ ಪ್ರತ್ಯುತ್ತರವಾಗಿ, ಆಕಾಶಲೋಕದ ದೇವರು ನಮಗೆ ಕೈ
ಕೂಡಿ ಬರ ಮಾಡುವನು; ಅವನ ಸೇವಕರಾದ ನಾವು ಎದ್ದು,
ಕಟ್ಟುವೆವು. ಆದರೆ ನಿಮಗೆ ಯೆರೂಸಲೇಮಿನಲ್ಲಿ ಪಾಲಾದರೂ
ನೀತಿಯಾದರೂ ಜ್ಞಾಪಕಾರ್ಥವಾದ ಗುರುತಾದರೂ ಇಲ್ಲವೆಂದು,
ಹೇಳಿದೆನು.

### ೩. ಸಂಧಿ.

೧ ಆಗ ಪ್ರಧಾನ ಯಾಜಕನಾದ ಎಲ್ಯಷೀಬನೂ ಅವನ ಸಹೋ
ದರರಾದ ಯಾಜಕರೂ ಎದ್ದು, ಕುರಿ ಬಾಗಲನ್ನು ಕಟ್ಟಿದರು. ಅ
ವರು ಅದನ್ನು ಪರಿಶುದ್ಧ ಮಾಡಿ, ಅದರ ಬಾಗಲುಗಳನ್ನು ನಿಲ್ಲಿ
ಸಿದರು. ಮೇಯದ ಗೋಪುರದ ಮಟ್ಟಿಗೂ, ಹನನೇಲನ ಗೋ
೨ ಪುರದ ಮಟ್ಟಿಗೂ ಅದನ್ನು ಪರಿಶುದ್ಧ ಮಾಡಿದರು. ಅವನ ಕೈ
ಹತ್ತರ ಯೆರಿಕೋವಿನ ಮನುಷ್ಯರು ಕಟ್ಟಿದರು. ಅವರ ಕೈ ಹ
ತ್ತರ ಇಮ್ರಿಯ ಮಗನಾದ ಜಕ್ಕೂರನು ಕಟ್ಟಿದನು.
೩ ಆದರೆ ಮೀನಿನ ಬಾಗಲನ್ನು ಹಸ್ನೇನಾಯನ ಮಕ್ಕಳು ಕಟ್ಟಿ
ದರು; ಅವರು ಅದರ ತೊಲೆಗಳನ್ನು ಹೊಂದಿಸಿ, ಅದರ ಕದಗಳ
ನ್ನೂ, ಅದರ ಬೀಗಗಳನ್ನೂ, ಅದರ ಅಗುಳಿಗಳನ್ನೂ ನಿಲ್ಲಿಸಿದ
೪ ರು. ಅವರ ಕೈ ಹತ್ತರ ಕೋಚನ ಮಗನಾದ ಉರೀಯನ ಮ
ಗನಾದ ಮೆರೆಮೋತನು ಹಳೇದನ್ನು ಭದ್ರ ಪಡಿಸಿದನು. ಅವರ
ಕೈ ಹತ್ತರ ಮೆಷೆಜಬೇಲನ ಮಗನಾದ ಬೆರೆಕ್ಯನ ಮಗನಾದ ಮೆ
ಷುಲ್ಲಾಮನು ಹಳೇದನ್ನು ಭದ್ರ ಪಡಿಸಿದನು. ಅವರ ಕೈ ಹತ್ತ
೫ ರ ಬಾಣನ ಮಗನಾದ ಚದೋಕನು ಭದ್ರ ಪಡಿಸಿದನು. ಅವರ
ಕೈ ಹತ್ತರ ತೆಕೋವಿಯರು ಭದ್ರ ಪಡಿಸಿದರು. ಆದರೆ ಅವರ
ಶ್ರೇಷ್ಠರು ತಮ್ಮ ಕರ್ತನ ಕೆಲಸಕ್ಕೆ ತಮ್ಮ ಕುತ್ತಿಗೆಗಳನ್ನು ಹೊ
ಗ್ಗಿಸಲಿಲ್ಲ.
೬ ಇದಲ್ಲದೆ ಪಸೇಹನ ಮಗನಾದ ಯೆಹೊಯದಾವನೂ, ಬೆ
ಸೋದ್ಯನ ಮಗನಾದ ಮೆಷುಲ್ಲಾಮನೂ ಹಳೇ ಬಾಗಲನ್ನು ಭ
ದ್ರ ಪಡಿಸಿದರು; ಅವರು ಅದರ ತೊಲೆಗಳನ್ನು ಹೊಂದಿಸಿ, ಅದ

ರ ಕದಗಳನ್ನೂ, ಅದರ ಬೀಗಗಳನ್ನೂ, ಅದರ ಅಗುಳಿಗಳನ್ನೂ
೭ ನಿಲ್ಲಿಸಿದರು. ಅವರ ಕೈ ಹತ್ತರ ಗಿಬ್ಯೋನು ಮಿಚ್ಪೆ ಎಂಬ ಊ
ರುಗಳ ಮನುಷ್ಯರಾದ ಗಿಬ್ಯೋನಿಯನಾದ ಮೆಲಟ್ಯನೂ, ಮೆ
ರೊನೋತಿನವನಾದ ಯೆದೋನನೂ ನದಿಯ ಈಚೆಯಲ್ಲಿರುವ
೮ ಅಧಿಪತಿಯ ಪೀಠದ ಮಟ್ಟಿಗೂ ಭದ್ರ ಪಡಿಸಿದರು. ಅವನ ಕೈ
ಹತ್ತರ ಅಕ್ಕಸಾಲೆಯರಲ್ಲಿ ಒಬ್ಬನಾದಂಥ, ಹರ್ಹಾಯನ ಮಗನಾ
ದ ಉಜ್ಜಿಯೇಲನು ಭದ್ರ ಪಡಿಸಿದನು. ಅವನ ಕೈ ಹತ್ತರ ಶೈಲ
ಗಾರರಲ್ಲಿ ಒಬ್ಬನ ಮಗನಾದ ಹನನ್ಯನು ಭದ್ರ ಪಡಿಸಿದನು. ಇವ
ರು ಅಗಲವಾದ ಗೋಡೆಯ ಪರ್ಯಂತರ ಯೆರೂಸಲೇಮನ್ನು
೯ ಬಲ ಪಡಿಸಿದರು. ಅವರ ಕೈ ಹತ್ತರ ಯೆರೂಸಲೇಮಿನ ಅರ್ಧ
ಕ್ಕೆ ಅಧಿಪತಿಯಾದ ಹೂರನ ಮಗನಾದ ರೆಫಾಯನು ಭದ್ರ ಪ
೧೦ ಡಿಸಿದನು. ಅವರ ಕೈ ಹತ್ತರ ಹರುಮಾಪನ ಮಗನಾದ ಯೆದಾ
ಯನು ತನ್ನ ಮನೆಗೆ ಎದುರಾಗಿದ್ದದ್ದನ್ನು ಭದ್ರ ಪಡಿಸಿದನು. ಅ
ವನ ಕೈ ಹತ್ತರ ಹಷಬ್ನ್ಯನ ಮಗನಾದ ಹಟೂಷನು ಭದ್ರ ಪಡಿ
೧೧ ಸಿದನು. ಹೇಮನ ಮಗನಾದ ಮಲ್ಕೀಯನೂ, ಪಹತ್ಮೋಾಬ
ನ ಮಗನಾದ ಹಷೂಬನೂ ಎರಡನೇ ಪಾಲನ್ನೂ ಭಟ್ಟಿಗಳ ಬ
೧೨ ಳಿಯಲ್ಲಿರುವ ಗೋಪುರವನ್ನೂ ಭದ್ರ ಪಡಿಸಿದರು. ಇವನ ಕೈ
ಹತ್ತರ ಯೆರೂಸಲೇಮಿನ ಅರ್ಧಕ್ಕೆ ಅಧಿಪತಿಯಾದ ಹೊಹೇಷ
ನ ಮಗನಾದ ಶಲ್ಲೂಮನೂ, ಅವನ ಕುಮಾರ್ತೆಗಳೂ ಭದ್ರ
ಪಡಿಸಿದರು.

೧೩ ತಗ್ಗಿನ ಬಾಗಲನ್ನು ಹನೂನನೂ, ಜನೋಹಿನ ನಿವಾಸಿಗಳೂ
ಭದ್ರ ಪಡಿಸಿದರು; ಅವರು ಅದನ್ನು ಕಟ್ಟಿ, ಅದರ ಕದಗಳನ್ನೂ,
ಅದರ ಬೀಗಗಳನ್ನೂ, ಅದರ ಅಗುಳಿಗಳನ್ನೂ ನಿಲ್ಲಿಸಿ, ಶಿಲ್ಪೋ
ದಿಬ್ಬೆಯ ಬಾಗಲ ಪರ್ಯಂತರ ಸಾವಿರ ಮೊಳ ಗೋಡೆಯನ್ನು
೧೪ ಕಟ್ಟಿದರು. ಆದರೆ ಬೆತ್ಕೇರಮದ ಅರ್ಧಚಾವಿಗೆ ಅಧಿಪತಿಯಾ
ಗಿರುವ ರೆಕಾಬನ ಮಗನಾದ ಮಲ್ಕೀಯನು ಶಿಲ್ಪೋದಿಬ್ಬೆಯ ಬಾ
ಗಲನ್ನು ಭದ್ರ ಪಡಿಸಿದನು. ಅವನು ಅದನ್ನು ಕಟ್ಟಿಸಿ, ಅದರ ಕ
ದಗಳನ್ನೂ, ಅದರ ಬೀಗಗಳನ್ನೂ, ಅದರ ಅಗುಳಿಗಳನ್ನೂ
ನಿಲ್ಲಿಸಿದನು.

೧೫ ಆದರೆ ಮಿಚ್ಪದ ಅರ್ಧಚಾವಿಗೆ ಅಧಿಪತಿಯಾದ ಕೊಲ್ಹೊಜೆ
ಯ ಮಗನಾದ ಶಲ್ಲೂನನು ಬುಗ್ಗೆಯ ಬಾಗಲನ್ನು ಭದ್ರ ಪಡಿಸಿ,
ಮಾಳಿಗೆಯನ್ನು ಹಾಕಿಸಿ, ಅದರ ಕದಗಳನ್ನೂ, ಬೀಗಗಳನ್ನೂ,
ಅಗುಳಿಗಳನ್ನೂ ನಿಲ್ಲಿಸಿ, ಅರಸನ ತೋಟದ ಬಳಿಯಲ್ಲಿರುವ
ಸಿಲೊವ ಎಂಬ ಕೊಳದ ಗೋಡೆಯನ್ನು ದಾವೀದನ ಪಟ್ಟಣಿಂ
೧೬ ದ ಇಳಿಯುವ ಮೆಟ್ಲುಗಳ ಮಟ್ಟಿಗೂ ಕಟ್ಟಿಸಿದನು. ಅವನ ಬೆಂ
ಬಲಿಯ ಬೇಕ್ಬೂಕನ ಅರ್ಧ ಚಾವಿಗೆ ಅಧಿಪತಿಯಾದ ಅಜ್ಬೂ
ಕನ ಮಗನಾದ ನೆಹೆಮಿಯಾನು ದಾವೀದನ ಸಮಾಧಿಗಳಿಗೆ ಎದು
ರಾಗಿರುವ ಸ್ಥಳದ ಮಟ್ಟಿಗೂ, ಅಗಿಯೆಲ್ಪಟ್ಟ ಕುಂಡಿಯ ಮಟ್ಟಿ
ಗೂ, ಪರಾಕ್ರಮಿಗಳ ಮನೆಯ ಮಟ್ಟಿಗೂ ಇರುವದನ್ನು ಭದ್ರ
೧೭ ಪಡಿಸಿದನು. ಅವನ ಹಿಂಬಳಿಯ ಲೇವ್ಯರಲ್ಲಿರುವ ಬಾನಿಯ ಮ
ಗನಾದ ರೆಹೂಮನು ಭದ್ರ ಪಡಿಸಿದನು. ಅವನ ಕೈ ಹತ್ತರ ಕೆ
ಯಿಲಾದಲ್ಲಿ ಅರ್ಧಚಾವಿಗೆ ಅಧಿಪತಿಯಾದ ಹಷಬ್ಯನು ಭದ್ರ ಪ
೧೮ ಡಿಸಿದನು. ಅವನ ಹಿಂಬಳಿಯಲ್ಲಿ ಅವನ ಸಹೋದರರಕೊಳಗೆ ಕೆ
೧೯ ಬಾಯನು ಭದ್ರ ಪಡಿಸಿದನು. ಅವನ ಕೈ ಹತ್ತರ ಮಿಚ್ಪದ ಅ
ಧಿಪತಿಯಾದ ಯೆಷೂವನ ಮಗನಾದ ಏಜ್ರನು ಮೂಲೆಯಲ್ಲಿ
ಅಯುಧ ಶಾಲೆಗೆ ಏರಿ ಹೋಗುವ ಸ್ಥಳಕ್ಕೆ ಎದುರಾಗಿ ಮತ್ತೊಂ
೨೦ ದು ಪಾಲನ್ನು ಭದ್ರ ಪಡಿಸಿದನು. ಅವನ ಹಿಂಬಳಿ ಜಬ್ಬಾಯನ
ಮಗನಾದ ಬರೂಕನು ಆ ಮೂಲೆಯಿಂದ ಪ್ರಧಾನಯಾಜಕನಾ
ದ ಎಲ್ಯಷೀಬನ ಮನೆಯ ಬಾಗಲ ಮಟ್ಟಿಗೂ ಜಾಗ್ರತೆಯಾಗಿ
೨೧ ಮತ್ತೊಂದು ಪಾಲನ್ನು ಭದ್ರ ಪಡಿಸಿದನು. ಅವನ ಬೆಂಬಳಿಯ
ಕೋಚನ ಮಗನಾದ ಊರಿಯನ ಮಗನಾದ ಮೆರೆಮೋತನು
ಎಲ್ಯಷೀಬನ ಮನೆಯ ಬಾಗಲಿಂದ ಎಲ್ಯಷೀಬನ ಮನೆಯ ಕೊ
ನೆಯ ಪರ್ಯಂತರ ಇರುವ ಮತ್ತೊಂದು ಪಾಲನ್ನು ಭದ್ರ ಪಡಿ
೨೨ ಸಿದನು. ಅವನ ಕೈ ಹತ್ತರ ಪೈಲಿನ ಮನುಷ್ಯರಾದ ಯಾಜಕ
೨೩ ರು ಭದ್ರ ಪಡಿಸಿದರು. ಅವನ ಹಿಂಬಳಿಯ ಬೆನ್ಯಮಿನಾನೂ ಹ
ಷೂಬನೂ ತಮ್ಮ ಮನೆಗೆ ಎದುರಾಗಿರುವದನ್ನು ಭದ್ರಪಡಿಸಿದನು.
ಅವನ ಹಿಂಬಳಿಯ ಅಣಾಯನ ಮಗನಾದ ಮಸ್ನೇಯನ ಮ
ಗನಾದ ಅಜರ್ಯನು ತನ್ನ ಮನೆಯ ಬಳಿಯಲ್ಲಿರುವದನ್ನು ಭ
೨೪ ದ್ರಪಡಿಸಿದನು. ಅವನ ಹಿಂಬಳಿಯ ಹೆನದಾದನ ಮಗನಾದ ಬಿ
ನ್ನೂಯನು ಅಜರ್ಯನ ಮನೆಯಿಂದ ಅಲಂಗದ ತಿರುಗುಬಿಕೆ
ಯ ಕೊನೆಯ ಪರ್ಯಂತರ ಮತ್ತೊಂದು ಪಾಲನ್ನು ಭದ್ರ ಪ
೨೫ ಡಿಸಿದನು. ಊಚನ ಮಗನಾದ ಪಲಾಲನು ಆ ಕೊನೆಗೆ ಎದುರಾ
ಗಿದ್ದದನ್ನೂ, ಕೆರೆಮನೆಯ ಬಳಿಯಲ್ಲಿರುವ ಅರಮನೆಗೆ ಹೊರ
ಪಾರ್ಶ್ವವಾದ ಗೋಪುರವನ್ನೂ ಕಟ್ಟಿಸಿದನು. ಅವನ ಹಿಂಬಳಿಯ
೨೬ ಪರೋಷನ ಮಗನಾದ ಪೆದಾಯನು ಭದ್ರ ಪಡಿಸಿದನು. ಓಫಲಿನ
ಲ್ಲಿ ವಾಸವಾಗಿರುವ ನಿತಿನಿಯರು ಮೂಲ್ಲ ಪಾರ್ಶ್ವವಾಗಿರುವ ನೀ
ರು ಬಾಗಲಿಗೆದುರಾದ ಹೊರ ಪಾರ್ಶ್ವದಲ್ಲಿರುವ ಗೋಪುರದ ಪ
ರ್ಯಂತರಕ್ಕೂ ಭದ್ರ ಪಡಿಸಿದರು.

೨೭ ಅವರ ಹಿಂಬಳಿಯಲ್ಲಿ ತೆಕೋಯಿಯರು ಹೊರ ಪಾರ್ಶ್ವದಲ್ಲಿ
ರುವ ದೊಡ್ಡ ಗೋಪುರಕ್ಕೆದುರಾದ ಮತ್ತೊಂದು ಪಾಲನ್ನು ಓ
ಫಲಿನ ಗೋಡೆಯ ಮಟ್ಟಿಗೂ ಭದ್ರ ಪಡಿಸಿದರು.

೨೮ ಯಾಜಕರು ಕುದುರೆ ಬಾಗಲ ಮೊದಲ್ಗೊಂಡು ತಮ್ಮ ತಮ್ಮ
೨೯ ಮನೆಗೆದುರಾಗಿರುವದನ್ನು ಭದ್ರ ಪಡಿಸಿದರು. ಅವರ ಹಿಂಬಳಿಯ
ಇಮ್ಮೇರನ ಮಗನಾದ ಚದೋಕನು ತನ್ನ ಮನೆಗೆ ಎದುರಾಗಿ
ರುವದನ್ನು ಭದ್ರ ಪಡಿಸಿದನು. ಅವನ ಬೆಂಬಳಿಯ ಮೂಲ್ಲ ಬಾಗ
ಲನ್ನು ಕಾಯುವ ಶೆಕನ್ಯನ ಮಗನಾದ ಶೆಮಾಯನು ಭದ್ರ ಪಡಿಸಿ
೩೦ ದನು. ಅವನ ಹಿಂಬಳಿಯ ಶೆಲೆಮ್ಯನ ಮಗನಾದ ಹನನ್ಯನೂ ಚ
ಲಾಫನ ಆರನೇ ಮಗನಾದ ಹನೂನನೂ ಮತ್ತೊಂದು ಪಾಲನ್ನು
ಭದ್ರ ಪಡಿಸಿದರು. ಅವರ ಹಿಂಬಳಿಯ ಬೆರೆಕ್ಯನ ಮಗನಾದ ಮೆ
ಷುಲ್ಲಾಮನು ತನ್ನ ಕೊಠಡಿಗೆ ಎದುರಾಗಿರುವದನ್ನು ಭದ್ರ ಪಡಿ
೩೧ ಸಿದನು. ಅವನ ಹಿಂಬಳಿಯ ಅಕ್ಕಸಾಲೆಯನ ಮಗನಾದ ಮ
ಲ್ಕೀಯನು ಮಿಫ್ಕಾದೆಂಬ ಬಾಗಲಿಗೆದುರಾದ ನೆತಿನಿಯರ ಸ್ಥಳವೂ
ವರ್ತಕರ ಸ್ಥಳವೂ ಮೊದಲ್ಗೊಂಡು ಮೂಲೆಯ ಮಟ್ಟಿಗೂ ಭದ್ರ
೩೨ ಪಡಿಸಿದನು. ಮೂಲೆ ಮೊದಲ್ಗೊಂಡು ಕುರಿ ಬಾಗಲ ಮಟ್ಟಿಗೂ ಇ
ರುವದನ್ನು ಅಕ್ಕಸಾಲೆಯರೂ ವರ್ತಕರೂ ಭದ್ರ ಪಡಿಸಿದರು.

## ೪. ಸಂಧಿ.

೧ ಆದರೆ ನಾವು ಗೋಡೆಯನ್ನು ಕಟ್ಟುವ ವರ್ತಮಾನ ಸನ್ಬ
ಲ್ಲಾಟನು ಕೇಳಿದಾಗ, ಏನಾಯಿತಂದರೆ, ಅವನು ಕೋಪ ಗೊಂ



ಡು, ಬಹಳ ಕರಕರೆ ಪಟ್ಟು, ಯೆಹೂದ್ಯರಿಗೆ ಗೇಲಿ ಮಾಡಿ, ತನ್ನ
ಸಹೋದರರ ಮುಂದೆಯೂ ಸಮಾರ್ಯದಲ್ಲಿರುವ ಸೈನ್ಯದ
೨ ಮುಂದೆಯೂ ಹೇಳಿದನು—ಈ ಬಲಹೀನರಾದ ಯೆಹೂದ್ಯರು
ಮಾಡುವದೇನು! ತಮ್ಮನ್ನು ಬಲ ಪಡಿಸುವರೋ! ಬಲಿಯನ್ನು
ಅರ್ಪಿಸುವರೋ! ಒಂದೇ ದಿವಸದಲ್ಲಿ ಶೀಘ್ರಿಸುವರೋ! ಮಣ್ಣು
ದಿಬ್ಬೆಗಳಲ್ಲಿರುವ ಸುಡಲ್ಪಟ್ಟ ಕಲ್ಲುಗಳನ್ನು ಉಪಜೀವಿಸ ಮಾಡು
3 ವರೋ! ಅಂದನು. ಇದಲ್ಲದೆ ಅಮ್ಮೋನ್ಯನಾದ ಟೊಬೀಯನು
ಅವನ ಬಳಿಯಲ್ಲಿದ್ದು, ಒಂದು ನರಿಯು ಅವರು ಕಟ್ಟಿದದರ ಮೇ
ಲೆ ಏರಿದರೆ, ಅದು ಅವರ ಕಲ್ಲು ಗೋಡೆಯನ್ನು ಕೆಡವಿ ಹಾಕುವದು,
ಅಂದನು.

೪ ನಮ್ಮ ದೇವರೇ, ಕೇಳು; ಯಾಕಂದರೆ ನಾವು ತಿರಸ್ಕರಿಸಲ್ಪ
ಟ್ಟವರಾಗಿದ್ದೇವೆ. ನೀನು ಅವರ ನಿಂದೆಯನ್ನು ಅವರ ತಲೆಗಳ
ಮೇಲೆ ತಿರುಗ ಮಾಡಿ, ಶೆರೆಯ ದೇಶದಲ್ಲಿ ಅವರನ್ನುಕೊಳ್ಳೆ
೫ ಯಾಗ ಒಪ್ಪಿಸು. ಅವರು ಕಟ್ಟುವವರ ಮುಂದೆ ನಿನಗೆ ಕರಕರೆ
ಎಬ್ಬಿಸಿದ್ದರಿಂದ, ನೀನು ಅವರ ಅಕ್ರಮವನ್ನು ಮುಚ್ಚ ಬೇಡ. ಅ
ವರ ಪಾಪವು ನಿನ್ನ ಮುಂದೆ ಅಳಿಸಲ್ಪಡದೆ ಇರಲಿ.

೬ ಹೀಗೆಯೇ ನಾವು ಗೋಡೆಯನ್ನು ಕಟ್ಟಿದೆವು; ಗೋಡೆಯೆ
ಲ್ಲಾ ಅರ್ಧಮಟ್ಟು ಒಂದಾಗಿ ಕೂಡಿತು. ಯಾಕಂದರೆ ಜನರು
ಕೆಲಸ ಮಾಡುವದಕ್ಕೆ ಮನಸ್ಸಾಗಿದ್ದರು.

೭ ಯೆರೂಸಲೇಮಿನ ಗೋಡೆಗಳು ಕಟ್ಟಲ್ಪಟ್ಟವೆಂದೂ, ಅದರ
ಸಂದುಗಳು ಮುಚ್ಚಲ್ಪಟ್ಟವೆಂದೂ, ಸನ್ಬಲ್ಲಾಟನೂ, ಟೊಬೀಯ
ನೂ, ಅರಾಬ್ಯರೂ, ಅಮ್ಮೋನ್ಯರೂ, ಅಶ್ದೋದ್ಯರೂ ಕೇಳಿ
೮ ದಾಗ, ಏನಾಯಿತಂದರೆ, ಅವರೆಲ್ಲಾ ಬಹು ಕೋಪಗೊಂಡು, ಯೆ
ರೂಸಲೇಮಿಗೆ ವಿರೋಧವಾಗಿ ಯುದ್ಧ ಮಾಡುವದಕ್ಕೂ ಅಭ್ಯಾ
೯ ತರಿಸುವದಕ್ಕೂ ಬರ ಏಕವಾಗಿ ಒಳಸಂಚು ಮಾಡಿದರು. ಆದ
ರೆ ನಾವು ನಮ್ಮ ದೇವರಿಗೆ ಪ್ರಾರ್ಥನೆ ಮಾಡಿ, ಅವರ ನಿಮಿತ್ತ
೧೦ ಅವರಿಗೆ ಎದುರಾಗಿ ರಾತ್ರಿ ಹಗಲು ಕಾವಲಿಯನ್ನು ಇಟ್ಟೆವು. ಆ
ಗ ಯೆಹೂದದವರು ಅಂದರು—ಹೊರೆ ಹೊರುವವರ ಬಲವು ಕ
ಡಿಮೆ ಆಯಿತು; ಮಣ್ಣು ಬಹಳವಾಗಿದೆ; ಗೋಡೆಯನ್ನು ನಾವು
೧೧ ಕಟ್ಟಲಾರೆವು, ಅಂದರು. ನಮ್ಮ ವೈರಿಗಳು ಅಂದರು—ಅವರು ತಿ
ಳಿಯದೆ ಹಾಗೆಯೂ, ನೋಡದ ಹಾಗೆಯೂ, ನಾವು ಅವರ ನ
ಡುವೆ ಬಂದು, ಅವರನ್ನು ಕೊಂದು ಹಾಕಿ, ಕೆಲಸವನ್ನು ನಿಲ್ಲಿಸಿ
ಬಿಡುವೆವು.

೧೨ ಮತ್ತು ಏನಾಯಿತಂದರೆ, ಅವರ ಬಳಿಯಲ್ಲಿ ವಾಸವಾಗಿರುವ
ಯೆಹೂದ್ಯರು ನಮ್ಮ ಬಳಿಗೆ ಬಂದಾಗ, ನೀವು ತಿರುಗುವ ಎಲ್ಲಾ
ಸ್ಥಳಗಳಿಂದ ನಮ್ಮ ಮೇಲೆ ಬಂದಾರು, ಎಂದು ನಮಗೆ ಹತ್ತು ಸಾ
೧೩ ರಿ ಹೇಳಿದರು. ಆದಕಾರಣ ನಾನು ಗೋಡೆಗೆ ಹಿಂದಾಗಿರುವ ತ
ಗ್ಗಿನ ಸ್ಥಳಗಳಲ್ಲಿಯೂ, ಎತ್ತರವಾದ ಸ್ಥಳಗಳಲ್ಲಿಯೂ ಜನರನ್ನು
ನಿಲ್ಲಿಸಿದೆನು; ತಮ್ಮ ಕತ್ತಿಗಳನ್ನೂ, ತಮ್ಮ ಈಟಿಗಳನ್ನೂ, ತಮ್ಮ
ಬಿಲ್ಲುಗಳನ್ನೂ ಹಿಡುಕೊಂಡಿರುವ ಜನವನ್ನು ಅವರವರ ವಂಶಗ
೧೪ ಳ ಪ್ರಕಾರ ನಿಲ್ಲಿಸಿದೆನು. ನಾನು ನೋಡಿದ ತರುವಾಯ, ಎದ್ದು,
ಶ್ರೇಷ್ಠರಿಗೂ, ಅಧಿಕಾರಸ್ತರಿಗೂ, ಇತರ ಜನರಿಗೂ ಹೇಳಿದೆ
ನು—ನೀವು ಅವರಿಗೋಸ್ಕರ ಭಯ ಪಡ ಬೇಡಿರಿ; ದೊಡ್ಡವನಾ
ಗಿಯೂ ಭಯಂಕರನಾಗಿಯೂ ಇರುವ ಕರ್ತನನ್ನು ಜ್ಞಾಪಕ
ಮಾಡಿ ಕೊಂಡು, ನಿಮ್ಮ ಸಹೋದರರಿಗೋಸ್ಕರ, ನಿಮ್ಮ ಕು
ಮಾರರಿಗೋಸ್ಕರ ಕುಮಾರ್ತೆಗಳಿಗೋಸ್ಕರ ನಿಮ್ಮ ಹೆಂಡರಿ
ಗೋಸ್ಕರ ನಿಮ್ಮ ಮನೆಗಳಿಗೋಸ್ಕರ ಯುದ್ಧ ಮಾಡಿರಿ.

೧೫ ಆ ವರ್ತಮಾನ ನಮಗೆ ತಿಳಿಯಿತೆಂದೂ, ದೇವರು ತಮ್ಮ
ಆಲೋಚನೆಯನ್ನು ವ್ಯರ್ಥ ಮಾಡಿದನೆಂದೂ, ನಮ್ಮ ಶತ್ರುಗಳು
ಕೇಳಿದಾಗ, ನಾವೆಲ್ಲರು ಗೋಡೆಗೆ ತಿರುಗಿ ಬಂದೆವು; ಪ್ರತಿ ಮನು
ಷ್ಯನು ತನ್ನ ಕೆಲಸಕ್ಕೆ ಶೇರಿದನು. ಅಂದಿನಿಂದ ಏನಾಯಿತಂದ
ರೆ—ನನ್ನ ಸೇವಕರಲ್ಲಿ ಅರ್ಧ ಜನರು ಕೆಲಸವನ್ನು ನಡಿಸಿದರು;
ಮಿಕ್ಕಾದ ಅರ್ಧ ಜನರು ಈಟಿಗಳನ್ನೂ, ಗುರಾಣಿಗಳನ್ನೂ,
ಬಿಲ್ಲುಗಳನ್ನೂ, ಜಿರಾಯಿಗಳನ್ನೂ, ಧರಿಸಿದರು. ಪ್ರಧಾನರು ಯೆ
೧೭ ಹೂದ ಮನೆಯವರ ಹಿಂದೆ ನಿಂತರು. ಗೋಡೆಯ ಮೇಲೆ ಕಟ್ಟು
ವವರೂ, ಹೊರೆಕಾರರೂ, ಹೊರಿಸುವವರೂ ಒಂದು ಕೈಯಲ್ಲಿ
ಕೆಲಸವನ್ನು ನಡಿಸಿ, ಮತ್ತೊಂದು ಕೈಯಲ್ಲಿ ಆಯುಧವನ್ನು ಹಿ
ಡುಕೊಂಡಿದ್ದರು. ಕಟ್ಟುವವರು ಒಬ್ಬೊಬ್ಬರು ತಮ್ಮ ಕತ್ತಿಯನ್ನು
ತಮ್ಮ ನಡುವಿನಲ್ಲಿ ಕಟ್ಟಿಕೊಂಡು, ಕಟ್ಟುತ್ತಿದ್ದರು. ಮತ್ತು ತುತೂ
೧೯ ರಿ ಊದುವವನು ನನ್ನ ಬಳಿಯಲ್ಲಿದ್ದನು. ಆಗ ನಾನು ಶ್ರೇಷ್ಠರಿ
ಗೂ ಅಧಿಕಾರಸ್ತರಿಗೂ ಇತರ ಜನರಿಗೂ ಹೇಳಿದೆನು—ಕೆಲಸವು
ದೊಡ್ಡದೂ ವಿಸ್ತಾರವೂ ಆದದ್ದು. ನಾವು ಗೋಡೆಯ ಮೇಲೆ
೨೦ ಚದರಿ, ಒಬ್ಬರಿಗೊಬ್ಬರು ದೂರವಾಗಿದ್ದೇವೆ. ನೀವು ಎಲ್ಲಿ ತುತೂ
ರಿಯ ಶಬ್ದವನ್ನು ಕೇಳುವಿರೋ, ಅಲ್ಲಿ ಬಂದು, ನಮ್ಮ ಸಂಗಡ
ಕೂಡಿ ಕೊಳ್ಳಿರಿ. ನಮ್ಮ ದೇವರು ನಮಗೋಸ್ಕರ ಯುದ್ಧ ಮಾ
ಡುವನು.

೨೧ ಹೀಗೆಯೇ ಅರ್ಧ ಜನರು ಈಟಿಗಳನ್ನು ಹಿಡು ಕೊಂಡು,
ಉದಯ ಮೊದಲು ಗೊಂಡು, ನಕ್ಷತ್ರಗಳನ್ನು ಕಾಣುವ ಮಟ್ಟಿಗೂ,
೨೨ ನಾವು ಕೆಲಸದಲ್ಲಿ ಕಟ್ಟು ಪಟ್ಟಿವು. ಇದಲ್ಲದೆ ಆ ಕಾಲದಲ್ಲಿ ನಾನು
ಜನರಿಗೆ ಹೇಳಿದೆನು—ರಾತ್ರಿಯಲ್ಲಿ ಅವರು ನಮಗೆ ಕಾವಲಿಯಾ
ಗಿರುವ ಹಾಗೆಯೂ, ಹಗಲಲ್ಲಿ ಕೆಲಸ ಮಾಡುವ ಹಾಗೆಯೂ,
ಪ್ರತಿ ಮನುಷ್ಯನು ತನ್ನ ಸೇವಕನ ಸಂಗಡ ಯೆರೂಸಲೇಮಿನೊ
೨೩ ಳಗೆ ರಾತ್ರಿಯಲ್ಲಿ ವಸ್ತಿಯಾಗಿರಲಿ. ಹೀಗೆಯೇ ನಾನಾದರೂ ನ
ನ್ನ ಸಹೋದರರಾದರೂ, ನನ್ನ ಸೇವಕರಾದರೂ, ನನ್ನನ್ನು ಹಿಂ
ಬಾಲಿಸಿದ ಕಾವಲಿಕಾರರಾದರೂ, ನಮ್ಮಲ್ಲಿ ಯಾವನಾದರೂ ತನ್ನ
ವಸ್ತ್ರಗಳನ್ನು ತೆಗೆದು ಹಾಕಲಿಲ್ಲ. ಪ್ರತಿ ಮನುಷ್ಯನು ಆಯು
ಧ ಹಿಡುಕೊಂಡು ನೀರಿಗೆ ಹೋದನು.

## ೫. ಸಂಧಿ.

೧ ಆದರೆ ಜನರಿಂದಲೂ ಅವರ ಹೆಂಡರಿಂದಲೂ ತಮ್ಮ ಸಹೋ
ದರರಾದ ಯೆಹೂದ್ಯರ ಮೇಲೆ ದೊಡ್ಡ ಕೂಗು ಉಂಟಾಯಿತು.
೨ ಏನಂದರೆ, ಅವರಲ್ಲಿ ಕೆಲವರು—ನಾವೂ, ನಮ್ಮ ಕುಮಾರರೂ, ನ
ಮ್ಮ ಕುಮಾರ್ತೆಗಳೂ ಅನೇಕರಾದದರಿಂದ ನಾವು ಉಂಡು ಬದು
3 ಕುವ ಹಾಗೆ, ಧಾನ್ಯವನ್ನು ತಕ್ಕೊಂಡೆವು, ಅಂದರು. ಮತ್ತು ಕೆ
ಲವರು ಈ ಬರದಲ್ಲಿ ನಾವು ಧಾನ್ಯ ಕೊಂಡು ಕೊಳ್ಳುವ ಹಾಗೆ,
ನಮ್ಮ ಹೊಲಗಳನ್ನೂ, ದ್ರಾಕ್ಷೇತೋಟಗಳನ್ನೂ, ಮನೆಗಳ
೪ ನ್ನೂ ಒತ್ತೆ ಇಟ್ಟಿವು, ಅಂದರು. ಇನ್ನು ಕೆಲವರು—ಅರಸನಿಗೆ
ಕಪ್ಪವನ್ನು ಕೊಡ, ನಾವು ನಮ್ಮ ಹೊಲಗಳ ಮೇಲೆಯೂ ನಮ್ಮ
ದ್ರಾಕ್ಷೇತೋಟಗಳ ಮೇಲೆಯೂ ಸಾಲವನ್ನು ತೆಗೆದು ಕೊಂಡಿ
೫ ದ್ದೇವೆ. ಈಗ ನಮ್ಮ ಶರೀರವು ನಮ್ಮ ಸಹೋದರರ ಶರೀರದ

ಹಾಗೆ, ನಮ್ಮ ಮಕ್ಕಳಿಗೆ ಅವರ ಮಕ್ಕಳ ಹಾಗೆ. ಆದರೆ, ಇಗೋ, ಸೇವಕರಾಗಿರ ನಮ್ಮ ಕುಮಾರರನ್ನೂ ಕುಮಾರ್ತೆಗಳನ್ನೂ ವಶ ಮಾಡಿದ್ದೇವೆ; ನಮ್ಮ ಕುಮಾರ್ತೆಗಳಲ್ಲಿ ಕೆಲವರು ವಶವಾದರು. ಅವರನ್ನು ಬಿಡಿಸ ನಮಗೆ ಗತಿ ಇಲ್ಲ. ನಮ್ಮ ಹೊಲಗಳೂ ದ್ರಾಕ್ಷೇ ತೋಟಗಳೂ ಅನ್ಯರಿಗೆ ಸೇರಿದವು, ಅಂದರು.

೬ ೭ ಅವರ ಕೂಗನ್ನೂ ಈ ಮಾತುಗಳನ್ನೂ ನಾನು ಕೇಳಿದಾಗ, ಬಹಳ ಕೋಪಿಸಿ ಕೊಂಡೆನು. ಮತ್ತು ಹೃದಯದಲ್ಲಿ ಯೋಚನೆ ಮಾಡಿ ಕೊಂಡು, ಶ್ರೇಷ್ಠರನ್ನೂ ಅಧಿಕಾರಸ್ಥರನ್ನೂ ಗದರಿಸಿ, ಅವರಿಗೆ ಹೇಳಿದೆನು—ನೀವು ಪ್ರತಿ ಮನುಷ್ಯನು ಅವನವನ ಸಹೋದರನಿಂದ ಬಡ್ಡಿಯನ್ನು ಕಕ್ಕಲಾತಿಯಿಂದ ತಕ್ಕೊಳ್ಳುತ್ತೀರಿ. ಅವರ ಮೇಲೆ ದೊಡ್ಡ ಕೂಟನನ್ನು ನೇಮಿಸಿದೆನು. ಮತ್ತು ೮ ಅವರಿಗೆ ಹೇಳಿದೆನು—ಜನಾಂಗಗಳಿಗೆ ಮಾರಲ್ಪಟ್ಟ ಯೆಹೂದ್ಯರಾದ ನಮ್ಮ ಸಹೋದರರನ್ನು ನಾವು ನಮಗೆ ಗತಿ ಇದ್ದ ಹಾಗೆ ಕೊಂಡು ಕೊಂಡೆವು. ನೀವು ನಿಮ್ಮ ಸಹೋದರರನ್ನು ಮಾರಿ ಬಿಡುವಿರೋ! ಇಲ್ಲದೆ ಅವರು ನಮಗೆ ಮಾರಲ್ಪಡುವರೋ! ಆಗಲವರು ೯ ಮೌನವಾಗಿದ್ದರು; ಅವರಿಗೆ ಮಾತು ಇಲ್ಲದೆ ಹೋಯಿತು. ಮತ್ತು ನಾನು ಹೇಳ್ದೇನಂದರೆ—ನೀವು ಮಾಡುವದು ಬಳ್ಳೇದಲ್ಲ; ನಮ್ಮ ಶತ್ರುಗಳಾದ ಜನಾಂಗಗಳ ನಿಂದೆಯ ನಿಮಿತ್ತ ನೀವು ನಮ್ಮ ದೇವರ ಭಯದಲ್ಲಿ ನಡೆಯ ಬೇಕಲ್ಲ! ನಾನೂ ಕೂಡ, ನನ್ನ ಸಹೋದರರೂ, ನನ್ನ ಸೇವಕರೂ ಅವರಿಂದ ಕೊಳ್ಳುವನ್ನೂ ಧಾನ್ಯವನ್ನೂ ಕಕ್ಕಲಾತಿಯಿಂದ ತಕ್ಕೊಳ್ಳ ಬಹುದಾಗಿತ್ತು. ದಯ ೧೦ ಮಾಡಿ, ಈ ಬಡ್ಡಿಯನ್ನು ಬಿಟ್ಟು ಬಿಡುವ, ನೀವು ಅವರಿಂದ ಕಕ್ಕಲಾತಿಯಾಗಿ ತೆಗೆದು ಕೊಂಡ ಅವರ ಹೊಲಗಳನ್ನೂ, ಅವರ ದ್ರಾಕ್ಷೇ ತೋಟಗಳನ್ನೂ, ಅವರ ಇಪ್ಪೇತೋಪುಗಳನ್ನೂ, ಅವರ ಮನೆಗಳನ್ನೂ, ನೂರಕ್ಕೆ ಬಂದಾದ ಕೊಳ್ಳುವನ್ನೂ, ಧಾನ್ಯವನ್ನೂ, ದ್ರಾಕ್ಷೇ ರಸವನ್ನೂ, ಎಣ್ಣೆಯನ್ನೂ ಇಂದು ಅವರಿಗೆ ತಿರಿಗಿ ಕೊಡಿರಿ.

೧೧ ೧೨ ಅದಕ್ಕವರು, ನಾವು ತಿರಿಗಿ ಕೊಡುತ್ತೇವೆ; ಅವರಿಂದ ಕೇಳುವದಿಲ್ಲ. ನೀನು ಹೇಳಿದ ಹಾಗೆ ಮಾಡುತ್ತೇನೆ, ಅಂದರು. ಆಗ ನಾನು ಯಾಜಕರನ್ನು ಕರೆದು, ಅವರು ಈ ಮಾತಿನ ಪ್ರಕಾರ ಮಾಡುವ ಹಾಗೆ, ಅವರಿಂದ ಪ್ರಮಾಣವನ್ನು ತಕ್ಕೊಂಡೆನು.

೧೩ ೧೪ ನಾನು ನನ್ನ ಶರಗನ್ನು ಝಾಡಿಸಿ—ಈ ಮಾತಿನ ಪ್ರಕಾರ ಮಾಡದೆ ಇರುವ ಪ್ರತಿ ಮನುಷ್ಯನನ್ನು ದೇವರು ಅವನ ಮನೆಯಿಂದಲೂ ಅವನ ಕಷ್ಟಾರ್ಜಿತದಿಂದಲೂ ಝಾಡಿಸಲಿ. ಅವನು ಇದೇ ಪ್ರಕಾರ ಝಾಡಿಸಲ್ಪಟ್ಟು, ಬರಿದಾಗಲಿ, ಅಂದೆನು. ಅದಕ್ಕೆ ಕೂಟದವರೆಲ್ಲರೂ ಆಮೆನ್ ಎಂಥೇಳಿ, ಕರ್ತನನ್ನು ಸ್ತುತಿಸಿದರು. ಜನರು ಈ ಮಾತಿನ ಪ್ರಕಾರ ಮಾಡಿದರು.

೧೪ ೧೫ ಇದಲ್ಲದೆ ನಾನು ಯೆಹೂದ ದೇಶದಲ್ಲಿ ಅವರ ಅಧಿಪತಿಯಾಗಿದ್ದ ಕಾಲ ಮೊದಲ್ಗೊಂಡು, ಅರಸನಾದ ಅರ್ತಷಸ್ಟನ ಇಪ್ಪತ್ತನೇ ವರುಷ ಮೊದಲ್ಗೊಂಡು, ಮೂವತ್ತೆರಡನೇ ವರುಷದ ಪರ್ಯಂತರ ಹನ್ನೆರಡು ವರುಷವಾಗಿ ನಾನೂ ನನ್ನ ಸಹೋದರರೂ ಅಧಿಪತಿಯಾದವನ ಕೊಟ್ಟಿಯನ್ನು, ತಿನ್ನಲಿಲ್ಲ. ಆದರೆ ನನಗಿಂತ ಮುಂಜೆ ಇದ್ದ ಅಧಿಪತಿಗಳು ಜನರಿಗೆ ಭಾರವಾಗಿದ್ದು, ನಾಲ್ವತ್ತು ಬೆಳ್ಳಿಯ ಶೆಕೆಲುಗಳ ಹೊರ್ತಾಗಿ, ಅವರಿಂದ ಕೊಟ್ಟಿಯನ್ನೂ ದ್ರಾಕ್ಷೇ ರಸವನ್ನೂ ತೆಗೆದು ಕೊಳ್ಳುತ್ತಾ ಇದ್ದರು. ಅವರ ಸೇವಕರು ಸಹ ಜನರನ್ನು ಆಳುತ್ತಾ ಇದ್ದರು. ಆದರೆ ದೇವರ ಭಯದ ನಿಮಿತ್ತ ನಾನು ಹೀಗೆ ಮಾಡಿದವನಲ್ಲ. ೧೬ ಇದಲ್ಲದೆ ನಾನು ಈ ಗೋಡೆಯ ಕಾರ್ಯದಲ್ಲಿ ನೆಲೆಯಾಗಿದ್ದೆನು. ನಾವು ಭೂಮಿಯನ್ನು ಕೊಂಡು ಕೊಳ್ಳಲಿಲ್ಲ. ಮತ್ತು ನನ್ನ ಸೇವಕರೆಲ್ಲರು ಕೆಲಸಕ್ಕೆ ಕೂಡಿ ಬಂದರು. ೧೭ ಮತ್ತು ನಮ್ಮ ಸುತ್ತಲೂ ಇರುವ ಜನಾಂಗಗಳಿಂದ ಬಂದವರ ಹೊರ್ತು, ಯೆಹೂದ್ಯರೂ ಅಧಿಕಾರಸ್ಥರೂ ನಾನೂರ ಐವತ್ತು ಮಂದಿ ನನ್ನ ಮೇಜಿಗೆ ಶೇರುತ್ತಿದ್ದರು. ೧೮ ಪ್ರತಿ ದಿನಕ್ಕೆ ಸಿದ್ಧ ಮಾಡಿದ್ದೇನಂದರೆ—ಒಂದು ಎತ್ತೂ, ಉತ್ತಮವಾದ ಆರು ಕುರಿಗಳೂ; ಮತ್ತು ಕೋಳಿಗಳೂ, ಹತ್ತು ದಿವಸಕ್ಕೆ ಒಂದು ಸಾರಿ ಸಕಲ ವಿಧ ದ್ರಾಕ್ಷೇರಸವೂ ನನಗೋಸ್ಕರ ಸಿದ್ಧ ಮಾಡಲ್ಪಟ್ಟವು. ಆದರೆ ಈ ಜನರ ಮೇಲೆ ಇದ್ದ ದಾಸತ್ವ ಭಾರವಾಗಿದ್ದದರಿಂದ, ನಾನು ಅಧಿಪತಿಯಾದವನ ಕೊಟ್ಟಿಯನ್ನು ಇದಕ್ಕೋಸ್ಕರ ಕೇಳಿದ್ದಿಲ್ಲ.

೧೯ ನನ್ನ ದೇವರೇ, ನನಗೆ ಮೇಲನ್ನು ಮಾಡ, ನಾನು ಈ ಜನರಿಗೆ ಮಾಡಿದ ಎಲ್ಲವನ್ನು ಜ್ಞಾಪಕ ಮಾಡು.

## ೬. ಸಂಧಿ.

೧ ನಾನು ಕದಗಳನ್ನು ಬಾಗಲುದ್ವಾರಗಳಲ್ಲಿ ನಿಲ್ಲಿಸುವದಕ್ಕಿಂತ ಮುಂಚೆ, ನಾನು ಗೋಡೆಯನ್ನು ಕಟ್ಟಿಸಿದೆನೆಂದೂ, ಅದರಲ್ಲಿ ಒಂದು ಸಂದು ಬಿಡಲ್ಪಡಲಿಲ್ಲವೆಂದೂ ಸನ್ಬಲ್ಲಾಟನೂ, ಟೊಬೀಯನೂ, ಅರಾಬ್ಯನಾದ ಗೆಷೇಮನೂ ಮಿಕ್ಕಾದ ನಮ್ಮ ಶತ್ರುಗಳೂ ಕೇಳ್ದಾಗ, ಸನ್ಬಲ್ಲಾಟನೂ ಗೆಷೇಮನೂ ನನಗೆ ಹೇಳ್ ಕಳುಹಿಸಿದ್ದೇನಂದರೆ—ಒನೋನು ಎಂಬ ಬೈಲಿನಲ್ಲಿರುವ ಗ್ರಾಮಗಳಲ್ಲಿ ಕಲತು ಕೊಳ್ಳುವ, ಬಾ. ಆದರೆ ಅವರು ನನಗೆ ಕೇಡು ಮಾಡ ನೆನಸಿ ಕೊಂಡಿದ್ದರು. ೩ ಆದಕಾರಣ ನಾನು ಅವರ ಬಳಿಗೆ ದೂತರನ್ನು ಕಳುಹಿಸಿ ಹೇಳ್ದೆನೆನು—ನಾನು ದೊಡ್ಡ ಕಾರ್ಯವನ್ನು ಮಾಡುತ್ತಾ ಇದ್ದೇನೆ; ಇಳ್ಳದು ಬರಲಾರೆನು; ನಾನು ಅದನ್ನು ಬಿಟ್ಟು, ನಿಮ್ಮ ಬಳಿಗೆ ಇಳ್ಳದು ಬರುವಲ್ಲಿ, ಆ ಕೆಲಸ ಯಾಕೆ ನಿಂತು ಹೋಗ ಬೇಕು! ಅವರು ಈ ಪ್ರಕಾರ ನಾಲ್ಕುಸಾರಿ ನನ್ನ ಬಳಿಗೆ ಕಳುಹಿಸಿದರು. ನಾನು ಅದೇ ಪ್ರಕಾರ ಅವರಿಗೆ ಪ್ರತ್ಯುತ್ತರ ಕಳುಹಿಸಿದೆನು.

೪ ೫ ಮತ್ತು ಐದನೇಸಾರಿ ಸನ್ಬಲ್ಲಾಟನು ತನ್ನ ಸೇವಕನ ಕೈಯಲ್ಲಿ ಶೆಕೆದಿರುವ ಪತ್ರಿಕೆಯನ್ನು ಕಳುಹಿಸಿದನು. ಅದರಲ್ಲಿ ಬರೆದಿದ್ದದ್ದೇನಂದರೆ—ನೀನೂ ಯೆಹೂದ್ಯರೂ ಶಿರುಗ ಬೀಳ ಯೋಚಿಸುತ್ತೀರಿ. ಆದಕಾರಣ ಈ ಮಾತುಗಳ ಪ್ರಕಾರ ನೀನು ಅವರಿಗೆ ೬ ಅರಸನಾಗಿರುವ ಹಾಗೆ, ಗೋಡೆಯನ್ನು ಕಟ್ಟಿಸುತ್ತಿದ್ದೀ. ಇದಲ್ಲದೆ ಯೆಹೂದದಲ್ಲಿ ಅರಸನು ಉಂಟೆಂದು ಯೆರೂಸಲೇಮಿನಲ್ಲಿ ನಿನ್ನನ್ನು ಕುರಿತು ಕೂಗುವದಕ್ಕೆ ನೀನು ಪ್ರವಾದಿಗಳನ್ನು ನೇಮಿಸಿದಿ ಎಂಬದಾಗಿ ಜನಾಂಗಗಳಲ್ಲಿ ಸುದ್ದಿ ಉಂಟು; ಮತ್ತು ಗಷ್ಮನು ಹಾಗೆಯೇ ಹೇಳುತ್ತಾನೆ. ಈಗ ಈ ವರ್ತಮಾನ ಅರಸನಿಗೆ ತಿಳಿಸಲ್ಪಡುವದು. ಆದಕಾರಣ ನಾವು ಯೋಚನೆ ಮಾಡಿ ಕೊಳ್ಳುವ ಹಾಗೆ, ಬಾ.

೭ ಆಗ ನಾನು ನೀನು ಹೇಳಿದ ಕಾರ್ಯಗಳಲ್ಲಿ ಒಂದನ್ನಾದರು ಮಾಡಿದ್ದಿಲ್ಲ. ನೀನು ಅವುಗಳನ್ನು ನಿನ್ನ ಹೃದಯದಲ್ಲಿ ಕಲ್ಪಿಸುತ್ತಾ ಇದ್ದೀ ಎಂದು, ಹೇಳ್ ಕಳುಹಿಸಿದೆನು. ೮ ಯಾಕಂದರೆ ಅದು ಆಗದ ಹಾಗೆ, ಆ ಕೆಲಸ ಬಿಟ್ಟು ಬಿಟ್ಟು, ಅವರ ಕೈಗಳು ಬಲಹೀನವಾಗುವವು, ಅಂದು ಕೊಂಡು, ಅವರೆಲ್ಲರು ನಮ್ಮನ್ನು ಭಯ ಪಡಿಸಿದರು. ಆದಕಾರಣ ನನ್ನ ಕೈಗಳನ್ನು ಬಲಪಡಿಸು.

೯ ತರುವಾಯ ನಾನು ಅಡಗಿ ಕೊಂಡಿದ್ದ ಮೆಹೆಟಬೇಲನ ಮಗನಾದ ದೆಲಾಯನ ಮಗನಾದ ಶೆಮಾಯನ ಮನೆಗೆ ಬಂದೆನು. ಅವನು ಅಂದನು—ನಾವಿಬ್ಬರೂ ದೇವರ ಮನೆಯಲ್ಲಿ, ಮಂದಿರದೊಳಗೆ ಪ್ರವೇಶಿಸಿ, ಮಂದಿರದ ಬಾಗಲುಗಳನ್ನು ಮುಚ್ಚುವ ಬಾ. ಯಾಕಂದರೆ ನಿನ್ನನ್ನು ಕೊಂದು ಹಾಕ ಬರುತ್ತಾರೆ; ರಾತ್ರಿಯಲ್ಲಿ ನಿನ್ನನ್ನು ಕೊಂದು ಹಾಕ ಬರುತ್ತಾರೆ. ೧೦ ಅದಕ್ಕೆ ನಾನು—ನನ್ನಂಥಾ ಮನುಷ್ಯನು ಓಡಿ ಹೋಗುವನೋ! ನನ್ನಂಥವನು ಬದುಕ ಬೇಕೆಂದು, ಮಂದಿರದೊಳಕ್ಕೆ ಹೋಗುವವನ್ಯಾರು! ನಾನು ಒಳಗೆ ಹೋಗುವದಿಲ್ಲ, ಅಂದೆನು. ೧೧ ಆಗ, ಇಗೋ, ದೇವರು ಅವನನ್ನು ಕಳುಹಿಸಲಿಲ್ಲ; ಅವನೇ ನನಗೆ ವಿರೋಧವಾಗಿ ಈ ಪ್ರವಾದನೆ ಹೇಳ್ದನೆಂದು, ನಾನು ಗ್ರಹಿಸಿ ಕೊಂಡೆನು. ಟೊಬೀಯನೂ ಸನ್ಬಲ್ಲಾಟನೂ ಅವನಿಗೆ ಲಂಚ ಕೊಟ್ಟಿರು. ೧೩ ನಾನು ಭಯಪಟ್ಟು, ಹೀಗೆ ಮಾಡಿ, ಪಾಪ ಮಾಡುವ ಹಾಗೆಯೂ, ಅವರು ನನ್ನನ್ನು ನಿಂದಿಸುವದಕ್ಕೆ ಅಪಕೀರ್ತಿಯಾದ ಕಾರಣವು ಅವರಿಗೆ ಉಂಟಾಗುವ ಹಾಗೆಯೂ, ಅವನಿಗೆ ಲಂಚ ಕೊಡಲ್ಪಟ್ಟಿತು.

೧೪ ನನ್ನ ದೇವರೇ, ನೀನು ಅವರ ಈ ಕಾರ್ಯಗಳ ಪ್ರಕಾರ ಟೊಬೀಯನನ್ನೂ, ಸನ್ಬಲ್ಲಾಟನನ್ನೂ, ನನ್ನನ್ನು ಭಯ ಪಡಿಸುವವರಾಗಿದ್ದ, ಪ್ರವಾದಿನಿಯಾದ ನೊವದ್ಯಳನ್ನೂ, ಮಿಕ್ಕಾದ ಪ್ರವಾದಿಗಳನ್ನೂ ಜ್ಞಾಪಕ ಮಾಡಿಕೋ.

೧೫ ೧೬ ಹೀಗೆಯೇ ಗೋಡೆಯು ಐವತ್ತೆರಡು ದಿವಸಗಳಲ್ಲಿ, ಎಲುಲ್ ತಿಂಗಳ ಇಪ್ಪತ್ತೈದನೇ ದಿವಸದಲ್ಲಿ ತೀರಿತು. ನಮ್ಮ ಶತ್ರುಗಳು ಅದನ್ನು ಕೇಳ್ದಾಗಲೂ, ನಮ್ಮ ಸುತ್ತಲಿದ್ದ ಜನಾಂಗಗಳು ಇದನ್ನು ನೋಡಿದಾಗಲೂ, ಅವರು ತಮ್ಮ ದೃಷ್ಟಿಯಲ್ಲಿ ಬಹಳ ಬಿದ್ದವರಾದರು. ಮತ್ತು ಈ ಕಾರ್ಯವು ನಮ್ಮ ದೇವರಿಂದ ಉಂಟಾಯಿತೆಂದು ಅವರು ತಿಳಿಕೊಂಡರು.

೧೭ ೧೮ ಇದಲ್ಲದೆ ಆ ದಿವಸಗಳಲ್ಲಿ ಯೆಹೂದದಲ್ಲಿದ್ದ ಶ್ರೇಷ್ಠರು ಟೊಬೀಯನ ಬಳಿಗೆ ಪತ್ರಿಕೆಗಳನ್ನು ಕಳುಹಿಸಿದರು. ಮತ್ತು ಟೊಬೀಯನ ಪ್ರತ್ಯುತ್ತರಗಳು ಅವರಿಗೆ ಬಂದವು. ಯಾಕಂದರೆ ಅವನು ಅರಾಹನ ಮಗನಾದ ಶೆಕನ್ಯನ ಅಳಿಯನಾದದರಿಂದಲೂ, ಅವನ ಮಗನಾದ ಯೊಹನಾನನು ಬೆರೆಕ್ಯನ ಮಗನಾದ ಮೆಷುಲ್ಲಾಮನ ಮಗಳನ್ನು ತಕ್ಕೊಂಡದ್ದರಿಂದಲೂ, ಯೆಹೂದದಲ್ಲಿ ೧೯ ಅನೇಕರು ಅವನಿಗೆ ಪ್ರಮಾಣ ಮಾಡಿ ಕೊಟ್ಟಿದ್ದರು. ಇದಲ್ಲದೆ ಅವರು ಅವನ ಸತ್ಕರ್ಮಗಳನ್ನು ನನ್ನ ಮುಂದೆ ಹೇಳ್ದಿ, ನನ್ನ ಕಾರ್ಯಗಳನ್ನು ಅವನಿಗೆ ತಿಳಿಸಿದರು. ಆದರೆ ಟೊಬೀಯನು ನನ್ನನ್ನು ಭಯ ಪಡಿಸುವದಕ್ಕೆ ಪತ್ರಿಕೆಗಳನ್ನು ಕಳುಹಿಸಿದನು.

## ೭. ಸಂಧಿ.

೧ ನಾನು ಗೋಡೆಯನ್ನು ಕಟ್ಟಿಸಿ ಬಾಗಲುಗಳನ್ನು ನಿಲ್ಲಿಸಿದ ತರುವಾಯ, ಬಾಗಲು ಕಾಯುವವರೂ, ಹಾಡುಗಾರರೂ, ಲೇವ್ಯರೂ ನೇಮಿಸಲ್ಪಟ್ಟರು. ೨ ಆಗ ನಾನು ನನ್ನ ಸಹೋದರನಾದ ಹನಾನಿಗೂ ಅರಮನೆಯ ಅಧಿಪತಿಯಾದ ಹನನ್ಯನಿಗೂ ಯೆರೂಸಲೇಮಿನ ಕಾವಲಿಯನ್ನು ಒಪ್ಪಿಸಿದೆನು. ಯಾಕಂದರೆ ಇವನು ಸತ್ಯವುಳ್ಳವನಾಗಿಯೂ ಅನೇಕರಿಗಿಂತ ಹೆಚ್ಚಾಗಿ ದೇವರಿಗೆ ಭಯ ಪಡುವವನಾಗಿಯೂ ಇದ್ದನು. ೩ ಆಗ ನಾನು ಅವರಿಗೆ, ಬಿಸಲು ಏರುವ ಪರ್ಯಂತರಕ್ಕೂ ಯೆರೂಸಲೇಮಿನ ಬಾಗಲುಗಳನ್ನು ತೆಕೆಯ ಬಾರದು; ಇದಲ್ಲದೆ ನೀವು ಸವಿಾಪದಲ್ಲಿ ನಿಂತಿರುವಾಗ, ಕದಗಳನ್ನು ಮುಚ್ಚಿ, ಅಗುಳಿಗಳನ್ನು ಹಾಕಲಿ; ಯೆರೂಸಲೇಮಿನ ನಿವಾಸಿಗಳಿಂದ ಪ್ರತಿಮನುಷ್ಯನು ತನ್ನ ಕಾವಲಿಯಲ್ಲಿಯೂ ಪ್ರತಿ ಮನುಷ್ಯನು ತನ್ನ ಮನೆಗೆ ಎದುರಾಗಿಯೂ ಕಾವಲಿಯಾಗಿರ ನೇಮಿಸಿರೆಂದು, ಹೇಳ್ದೆನು.

೪ ಪಟ್ಟಣವು ವಿಸ್ತಾರವಾಗಿಯೂ ದೊಡ್ಡದಾಗಿಯೂ ಇತ್ತು. ಆದರೆ ಅದರಲ್ಲಿರುವ ಜನರು ಕೊಂಚವಾಗಿದ್ದರು; ಮನೆಗಳು ಕಟ್ಟಲ್ಪಡಲಿಲ್ಲ.

೫ ತರುವಾಯ ಅವರು ವಂಶಾವಳಿಯಿಂದ ತೆಬ್ಬಿಸಲ್ಪಡುವ ಹಾಗೆ ಶ್ರೇಷ್ಠರನ್ನೂ, ಅಧಿಕಾರಸ್ಥರನ್ನೂ, ಜನರನ್ನೂ ಕೂಡಿಸಿ ಕೊಳ್ಳ, ನನ್ನ ದೇವರು ನನ್ನ ಹೃದಯದಲ್ಲಿ ಪ್ರೇರೇಪಿಸಿದನು. ಆಗ ನಾನು ಮೊದಲಿನಲ್ಲಿ ಬಂದವರ ವಂಶಾವಳಿಯ ಪತ್ರಿಕೆಯನ್ನು ಕಂಡೆನು. ಅದರಲ್ಲಿ ಬರೆದಿದ್ದದ್ದೇನಂದರೆ,

೬ ಬಾಬೆಲಿನ ಅರಸನಾದ ನೆಬುಕದ್ನೇಚರನು ಶೆರೆಯಾಗಿ ಪೈದವರು, ಶೆರೆಯಾಗಿ ವೈಯಲ್ಪಟ್ಟು, ಶೆರೆಯಿಂದ ಹೊರಟು ಯೆರೂಸಲೇಮಿಗೂ ಯೆಹೂದಕ್ಕೂ ತಮ್ಮ ತಮ್ಮ ಪಟ್ಟಣಕ್ಕೂ ಜೆರುಬಾಬೆಲನ ಸಂಗಡ ಬಂದ ದೇಶದ ಮಕ್ಕಳು, ಯಾರಂದರೆ—ಯೆಶೂವನು, ನೆಹೆಮಿಾಯನು, ಅಜರ್ಯನು, ರಮ್ಯನು, ನಹಮಾನ್ಯನು, ಮೊರ್ದೆಕಾಯನು, ಬಿಲ್ಶಾನನು, ಮಿಸ್ಪೇರತನು, ಬಿಗ್ವಾಯಿಯು, ನೆಹೂಮನು, ಬಾಣನು. ಇಸ್ರಯೇಲ್ ಜನರ ಮನುಷ್ಯರ ಲೆಖ್ಖವು—ಫರೋಷನ ಮಕ್ಕಳು, ಎರಡು ಸಾವಿರದ ೮ ನೂರ ಎಪ್ಪತ್ತೆರಡು ಮಂದಿಯು. ಶೆಫಟ್ಯನ ಮಕ್ಕಳು, ಮುನ್ನೂರ ಎಪ್ಪತ್ತೆರಡು ಮಂದಿಯು. ೧೦ ಆರನ ಮಕ್ಕಳು, ಆರು ನೂರ ಐವತ್ತೆರಡು ಮಂದಿಯು. ೧೧ ಯೆಶೂವನು ಯೊವಾಬನು ಎಂಬವರ ಮಕ್ಕಳಲ್ಲಿ ಸಹಸ್ರೊವಾಬನ ಮಕ್ಕಳು, ಎರಡು ಸಾವಿರದ ೧೨ ಎಂಟು ನೂರ ಹದಿನೆಂಟು ಮಂದಿಯು. ಏಲಾಮನ ಮಕ್ಕಳು, ೧೩ ಸಾವಿರದ ಇನ್ನೂರ ಐವತ್ತು ನಾಲ್ಕು ಮಂದಿಯು. ಜತ್ತುವಿನ ೧೪ ಮಕ್ಕಳು, ಎಂಟು ನೂರ ನಾಲ್ವತ್ತೈದು ಮಂದಿಯು. ಜಕ್ಕಾಯ ೧೫ ಮಕ್ಕಳು, ಏಳು ನೂರ ಅರುವತ್ತು ಮಂದಿಯು. ಬಿನ್ನೂಯ ೧೬ ಮಕ್ಕಳು, ಆರು ನೂರ ನಾಲ್ವತ್ತೆಂಟು ಮಂದಿಯು. ಬೆಬಾಯ ೧೭ ಮಕ್ಕಳು, ಆರು ನೂರ ಇಪ್ಪತ್ತೆಂಟು ಮಂದಿಯು. ಅಜ್ಗಾದನ ಮಕ್ಕಳು, ಎರಡು ಸಾವಿರದ ಮುನ್ನೂರ ಇಪ್ಪತ್ತೆರಡು ಮಂದಿಯು. ೧೮ ಅದೊನೀಕಮನ ಮಕ್ಕಳು, ಆರು ನೂರ ಅರುವತ್ತೇಳು ೧೯ ಮಂದಿಯು. ಬಿಗ್ವಾಯ ಮಕ್ಕಳು, ಎರಡು ಸಾವಿರದ ಅರುವತ್ತೇಳು ಮಂದಿಯು. ೨೦ ಅದೀನನ ಮಕ್ಕಳು, ಆರು ನೂರ ಐವತ್ತೈದು ಮಂದಿಯು. ೨೧ ಹಿಜ್ಕೀಯನ ಮಗನಾದ ಅಟೇರನ ಮಕ್ಕಳು, ೨೨ ಶೊಭತ್ತೆಂಟು ಮಂದಿಯು. ಹರೂಮನ ಮಕ್ಕಳು ೨೩ ಮುನ್ನೂರ ಇಪ್ಪತ್ತೆಂಟು ಮಂದಿಯು. ಬೆಜಾಯ ಮಕ್ಕಳು, ೨೪ ಮುನ್ನೂರ ಇಪ್ಪತ್ತು ನಾಲ್ಕು ಮಂದಿಯು. ಹರೀಫನ ಮಕ್ಕಳು, ೨೫ ನೂರ ಹನ್ನೆರಡು ಮಂದಿಯು. ಗಿಬ್ಯೋನನ ಮಕ್ಕಳು, ತೊಂ ೨೬ ಭತ್ತೈದು ಮಂದಿಯು. ಬೇತ್ಲೆಹೇಮಿನವರೂ ನೆಟೋಫದವರೂ,

೨೭ ನೂರ ಎಂಭತ್ತೆಂಟು ಮಂದಿಯು. ಅಣತೋತಿನ ಮನುಷ್ಯ
೨೮ ರು, ನೂರ ಇಪ್ಪತ್ತೆಂಟು ಮಂದಿಯು. ಬೆತಜ್ಮಾವೆತಿನವರು, ನಾ
೨೯ ಲ್ವತ್ತೆರಡು ಮಂದಿಯು. ಕಿರ್ಯಾತ್‌ಯಾರೀಮ್ ಕೆಫೀರವು ಬೆ
ರೋತು ಎಂಬ ಪಟ್ಟಣಗಳ ಮನುಷ್ಯರು, ಏಳು ನೂರ ನಾಲ್ವತ್ತು
೩೦ ಮೂರು ಮಂದಿಯು. ರಾಮವು ಗೇಬವು ಎಂಬ ಪಟ್ಟಣಗಳ ಮ
೩೦ ನುಷ್ಯರು, ಆರು ನೂರ ಇಪ್ಪತ್ತೊಂದು ಮಂದಿಯು. ಮಿಕ್ಮಾಷಿ
೩೧ ನವರು ನೂರ ಇಪ್ಪತ್ತೆರಡು ಮಂದಿಯು. ಬೇತೇಲು ಆಯವು ಎಂ
ಬ ಪಟ್ಟಣಗಳ ಮನುಷ್ಯರು, ನೂರ ಇಪ್ಪತ್ತು ಮೂರು ಮಂದಿಯು.
೩೩ ಮತ್ತೊಂದು ನೆಬೋಮಿನವರು ಐವತ್ತೆರಡು ಮಂದಿಯು. ಮತ್ತೊ
ಬ್ಬ ಎಲಾಮನ ಮಕ್ಕಳು, ಸಾವಿರದ ಇನ್ನೂರ ಐವತ್ತು ನಾಲ್ಕು
೩೫ ಮಂದಿಯು. ಹರೀಮನ ಮಕ್ಕಳು, ಮುನ್ನೂರ ಇಪ್ಪತ್ತು ಮಂ
೩೬ ದಿಯು. ಯೆರಿಕೋಮಿನ ಮಕ್ಕಳು ಮುನ್ನೂರ ನಾಲ್ವತ್ತೈದು
೩೭ ಮಂದಿಯು. ಲೋದು ಹದೀದು ಒನೋನು ಎಂಬವರ ಮಕ್ಕ
೩೮ ಳು, ಏಳು ನೂರ ಇಪ್ಪತ್ತೊಂದು ಮಂದಿಯು. ಸೆನಾಯನ ಮ
ಕ್ಕಳು, ಮೂರು ಸಾವಿರದ ಬಂಭೈನೂರ ಮೂವತ್ತು ಮಂದಿಯು.

೩೯ ಯಾಜಕರು ಯಾರಂದರೆ—ಯೆಶೂವನ ಮನೆಯವನಾದ
ಯೆದಾಯನ ಮಕ್ಕಳು, ಒಂಭೈನೂರ ಎಪ್ಪತ್ತು ಮೂರು ಮಂದಿ
೪೦ ಯು. ಇಮ್ಮೇರನ ಮಕ್ಕಳು, ಸಾವಿರದ ಐವತ್ತೆರಡು ಮಂದಿ
೪೧ ಯು. ಪಷೂರನ ಮಕ್ಕಳು, ಸಾವಿರದ ಇನ್ನೂರ ನಾಲ್ವತ್ತೈಳು
೪೨ ಮಂದಿಯು. ಹರೀಮನ ಮಕ್ಕಳು, ಸಾವಿರದ ಹದಿನೇಳು ಮಂ
ದಿಯು.

೪೩ ಲೇವ್ಯರು ಯಾರಂದರೆ—ಕದ್ಮಿಯೇಲನ ಮನೆಯವನಾದ
ಯೆಶೂವನ ಮಕ್ಕಳೂ ಹೊದವ್ಯನ ಮಕ್ಕಳೂ, ಎಪ್ಪತ್ತು ನಾ
೪೪ ಲ್ಕು ಮಂದಿಯು. ಹಾಡುಗಾರರು—ಆಸಾಫನ ಮಕ್ಕಳು, ನೂ
೪೫ ರ ನಾಲ್ವತೆಂಟು ಮಂದಿಯು. ದ್ವಾರಪಾಲಕರಾದ ಶಲ್ಲೂಮನ
ಮಕ್ಕಳೂ, ಅಟೇರನ ಮಕ್ಕಳೂ, ಟಲ್ಮೋನನ ಮಕ್ಕಳೂ, ಅ
ಕ್ಕೂಬನ ಮಕ್ಕಳೂ, ಹಟೀಟನ ಮಕ್ಕಳೂ, ಶೊಬಾಯ ಮಕ್ಕ
ಳೂ, ನೂರ ಮೂವತ್ತೆಂಟು ಮಂದಿಯು.

೪೬ ನೆತಿನಿಯರು—ಚೀಹನ ಮಕ್ಕಳು, ಹಷೂಪನ ಮಕ್ಕಳು,
೪೭ ಟಬ್ಬಾಯೋತನ ಮಕ್ಕಳು, ಕೆರೋಸನ ಮಕ್ಕಳು, ಸೀಯನ ಮಕ್ಕ
೪೮ ಳು, ಪದೋನನ ಮಕ್ಕಳು, ಲೆಬಾನನ ಮಕ್ಕಳು, ಹಗಾಬನ ಮ
೪೯ ಕ್ಕಳು, ಶಲ್ಮಾಯ ಮಕ್ಕಳು, ಹನಾನನ ಮಕ್ಕಳು, ಗಿದ್ದೇಲನ
೫೦ ಮಕ್ಕಳು, ಗಹಾರನ ಮಕ್ಕಳು, ರಾಯನ ಮಕ್ಕಳು, ರೆಚೀನನ
೫೧ ಮಕ್ಕಳು, ನೆಕೋದನ ಮಕ್ಕಳು, ಗಜಾಮನ ಮಕ್ಕಳು, ಉಜ್ಜ
೫೨ ನ ಮಕ್ಕಳು, ಪಸೇಹನ ಮಕ್ಕಳು, ಬೆಸಾಯನ ಮಕ್ಕಳು, ಮೆ
೫೩ ವೂನ್ಯರ ಮಕ್ಕಳು, ನೆಫುಷೇಮನ ಮಕ್ಕಳು, ಬಕ್ಬೂಕನ ಮ
೫೪ ಕ್ಕಳು, ಹಕೂಫನ ಮಕ್ಕಳು, ಹರ್ಹೂರನ ಮಕ್ಕಳು, ಬಚ್ಲೂ
೫೫ ತನ ಮಕ್ಕಳು, ಮೆಹೀದನ ಮಕ್ಕಳು, ಹರ್ಷನ ಮಕ್ಕಳು, ಬ
ರ್ಕೋಸನ ಮಕ್ಕಳು, ಸಿಸ್ರನ ಮಕ್ಕಳು, ಶೇಮಹನ ಮಕ್ಕಳು,
೫೬ ನೆಚೀಹನ ಮಕ್ಕಳು, ಹಟೀಫನ ಮಕ್ಕಳು. ಸೊಲೊಮೋನನ
ಸೇವಕರ ಮಕ್ಕಳು ಯಾರಂದರೆ—ಸೊಟಾಯ ಮಕ್ಕಳು, ಸೊ
೫೭ ಫೇರತಳ ಮಕ್ಕಳು, ಪೆರೂದನ ಮಕ್ಕಳು, ಯಾವಾಲನ ಮಕ್ಕ
೫೮ ಳು, ದರ್ಕೋನನ ಮಕ್ಕಳು, ಗಿದ್ದೇಲನ ಮಕ್ಕಳು, ಶೆಫಟ್ಯನ
ಮಕ್ಕಳು, ಹಟ್ಟಿಲನ ಮಕ್ಕಳು, ಪೆಚೇರೋಯಿಮಿನ ಪೊಕೇರತ
೫೯ ನ ಮಕ್ಕಳು, ಆಮೋನನ ಮಕ್ಕಳು. ನೆತಿನಿಯರೂ ಸೊಲೊ
ಮೋನನ ಸೇವಕರ ಮಕ್ಕಳೂ ಕೂಡ, ಮುನ್ನೂರ ತೊಂಭತ್ತೆ
೬೦ ರಡು ಮಂದಿಯು.

೬೧ ಮೇಲಹ ಗುಡ್ಡವು ಹರ್ಷ ಗುಡ್ಡವು ಕೆರೂಬ ಅರ್ದೋನ್ ಇ
ಮ್ಮೇರ್ ಎಂಬ ಸ್ಥಳಗಳಿಂದ ಹೊರಟು, ತಾವು ಇಸ್ರಾಯೇಲ್ಯರು
ಹೌದೋ, ಅಲ್ಲವೋ ಎಂದು, ತಮ್ಮ ತಂದೆಗಳ ಮನೆಯನ್ನಾಧಾ
ರೂ, ತಮ್ಮ ಬೀಜವನ್ನಾದರೂ ತೋರಿಸಲಾರದೆ ಇದ್ದವರು ಯಾ
೬೨ ರಂದರೆ—ದೆಲಾಯನ ಮಕ್ಕಳೂ, ಟೊಬೀಯನ ಮಕ್ಕಳೂ, ನೆ
ಕೋದನ ಮಕ್ಕಳೂ, ಆರು ನೂರ ನಾಲ್ವತ್ತೆರಡು ಮಂದಿಯು.
೬೩ ಯಾಜಕರಲ್ಲಿ—ಹಾಬಾಯನ ಮಕ್ಕಳೂ, ಬರ್ಜಿಲ್ಲಾಯನ ಮಂ
ಶಸ್ತನಾದ ಕೋಚನ ಮಕ್ಕಳೂ; ಇವನು ಗಿಲ್ಯಾದ್ಯನಾದ ಬರ್ಜಿ
ಲ್ಲಾಯನ ಕುಮಾರ್ತೆಗಳಲ್ಲಿ ಒಬ್ಬಳನ್ನು ತಕ್ಕೊಂಡ ಕಾರಣ,
೬೪ ಅವರ ಹೆಸರಿನಿಂದ ಕರೆಯಲ್ಪಟ್ಟವನಾದನು. ಇವರು ವಂಶಾವ
ಳಿಯಾಗಿ ಬರೆಯಲ್ಪಟ್ಟವರಲ್ಲಿ ತಮ್ಮ ಹೆಸರುಗಳನ್ನು ಹುಡುಕಿ
ದರು; ಅದರೆ ಶಿಕ್ಕರೆ ಹೋದದರಿಂದ, ಅವರು ಅಶುಚಿಯಾದವ
ರೆಂದು ಎಣಿಸಲ್ಪಟ್ಟು, ಯಾಜಕ ಉದ್ಯೋಗದಿಂದ ಹೊರಡಿಸ
೬೫ ಲ್ಪಟ್ಟರು. ಇದಲ್ಲದೆ ತಿರ್ಷತನು ಅವರಿಗೆ ಊರಿಮ್ ತುಮ್ಮಿಮ್
ಉಳ್ಳ ಒಬ್ಬ ಯಾಜಕನು ಏಳುವ ಪರ್ಯಂತರ ಮಹಾ ಪರಿಶು
ದ್ಧವಾದವುಗಳನ್ನು ತಿನ್ನ ಬಾರದೆಂದು, ಹೇಳಿದನು.

೬೬ ಈ ಕೂಟದವರೆಲ್ಲಾ ನಾಲ್ವತ್ತೆರಡು ಸಾವಿರದ ಮುನ್ನೂರ
೬೭ ಅರುವತ್ತು ಮಂದಿಯಾಗಿದ್ದರು. ಇವರು ಹೊರ್ತಾಗಿ, ಇವರ
ದಾಸರೂ ದಾಸಿಗಳೂ ಏಳು ಸಾವಿರದ ಮುನ್ನೂರ ಮೂವತ್ತೇ
ಳು ಮಂದಿಯೂ, ಅವರ ಹಾಡುಗಾರರೂ ಹಾಡುಗಾರ್ತಿಯರೂ
೬೮ ಇನ್ನೂರ ನಾಲ್ವತ್ತೈದು ಮಂದಿಯೂ ಇದ್ದರು. ಅವರ ಕುದುರೆ
ಗಳು ಏಳುನೂರ ಮೂವತ್ತಾರು, ಅವರ ಹಾಸರ ಕತ್ತೆಗಳು ಇ
೬೯ ನ್ನೂರ ನಾಲ್ವತ್ತೈದು; ಒಂಟೆಗಳು ನಾನೂರ ಮೂವತ್ತೈದು;
ಕತ್ತೆಗಳು ಆರು ಸಾವಿರದ ಏಳು ನೂರ ಇಪ್ಪತ್ತು ಇದ್ದವು.

೭೦ ಮುಖ್ಯವಾದ ಪಿತೃಗಳಲ್ಲಿರುವ ಕೆಲವರು ಕೆಲಸಕ್ಕೆ ಕಾಣಿಕೆ
ಗಳನ್ನು ಕೊಟ್ಟರು. ತಿರ್ಷತನು ಬೊಕ್ಕಸಕ್ಕೆ ಸಾವಿರ ಭಂಗಾ
ರದ ದ್ರಾಕ್ಮಗಳನ್ನೂ, ಐವತ್ತು ಚಾತ್ರೆಗಳನ್ನೂ, ಐನೂರ ಮೂ
೭೧ ವತ್ತು ಯಾಜಕರ ಅಂಗಿಗಳನ್ನೂ ಕೊಟ್ಟನು. ಇದಲ್ಲದೆ ಮು
ಖ್ಯವಾದ ಪಿತೃಗಳಲ್ಲಿ ಕೆಲವರು ಕೆಲಸದ ಬೊಕ್ಕಸಕ್ಕೆ ಇಪ್ಪತ್ತು
ಸಾವಿರ ಭಂಗಾರದ ದ್ರಾಕ್ಮಗಳನ್ನೂ, ಎರಡು ಸಾವಿರದ ಇನ್ನೂ
೭೨ ರು ಬೆಳ್ಳಿ ಮಿನಗಳನ್ನೂ ಕೊಟ್ಟರು. ಮಿಕ್ಕಾದ ಜನರು ಕೊಟ್ಟ
ದ್ದೇನಂದರೆ, ಇಪ್ಪತ್ತು ಸಾವಿರ ಭಂಗಾರದ ದ್ರಾಕ್ಮಗಳನ್ನೂ, ಎರ
ಡು ಸಾವಿರ ಮಿನಾ ಬೆಳ್ಳಿಯನ್ನೂ, ಅರುವತ್ತೇಳು ಯಾಜಕರ
ಅಂಗಿಗಳನ್ನೂ ಕೊಟ್ಟರು.

೭೩ ಹೀಗೆಯೇ ಯಾಜಕರೂ, ಲೇವ್ಯರೂ, ದ್ವಾರಪಾಲಕರೂ
ಹಾಡುಗಾರರೂ, ಜನರಲ್ಲಿ ಕೆಲವರೂ, ನೆತಿನಿಯರೂ ಸಮಸ್ತ ಇ
ಸ್ರಯೇಲ್ಯರೂ ತಮ್ಮ ತಮ್ಮ ಪಟ್ಟಣಗಳಲ್ಲಿ ನಿವಾಸವಾಗಿದ್ದರು. ಏ
ಳನೇ ತಿಂಗಳು ಬಂದಾಗ, ಇಸ್ರಯೇಲ ಮಕ್ಕಳು ತಮ್ಮ ತಮ್ಮ
ಪಟ್ಟಣಗಳಲ್ಲಿದ್ದರು.

## ೮. ಸಂಧಿ.

೧ ಮತ್ತು ಜನರೆಲ್ಲರು ಏಕವಾಗಿ ನೀರು ಬಾಗಲಿಗೆದುರಾಗಿರುವ
ಬೀದಿಯಲ್ಲಿ ಕೂಡಿ ಕೊಂಡು, ಕರ್ತನು ಇಸ್ರಯೇಲರಿಗೆ ಆಜ್ಞಾ



ಪಿಸಿದ ಮೋಶೆಯ ನ್ಯಾಯಪ್ರಮಾಣದ ಪುಸ್ತಕವನ್ನು ತಕ್ಕೊಂ
೨ ಡು ಬರ ಶಾಸ್ತ್ರಿಯಾದ ಎಜ್ರನಿಗೆ ಹೇಳಿದರು. ಹೀಗೆಯೇ ಏಳ
ನೇ ತಿಂಗಳ ಪೊದಲನೇ ದಿವಸದಲ್ಲಿ ಕೂಟದ ಸ್ತ್ರೀ ಪುರುಷರ
ಮುಂದೆಯೂ ಗ್ರಹಿಕೆಯಿಂದ ಕೇಳುವವರೆಲ್ಲರ ಮುಂದೆಯೂ,
೩ ಎಜ್ರನು ನ್ಯಾಯ ಪ್ರಮಾಣವನ್ನು ತಕ್ಕೊಂಡು ಬಂದು, ನೀರಿನ
ಬಾಗಲ ಮುಂಭಾಗದಲ್ಲಿರುವ ಬೀದಿಯಲ್ಲಿ ಸ್ತ್ರೀ ಪುರುಷರ ಮುಂ
ದೆಯೂ ಗ್ರಹಿಕೆಯುಳ್ಳ ಎಲ್ಲರ ಮುಂದೆಯೂ ಬೆಳಗಿನಿಂದ ಮ
ಧ್ಯಾನ್ಹದ ಪರ್ಯಂತರ ಓದಿದನು. ಜನರೆಲ್ಲರು ನ್ಯಾಯ ಪ್ರಮಾ
೪ ಣದ ಪುಸ್ತಕಕ್ಕೆ ಕಿವಿ ಕೊಟ್ಟರು. ಆಗ ಶಾಸ್ತ್ರಿಯಾದ ಎಜ್ರನು
ಅದಕ್ಕೋಸ್ಕರ ಮಾಡಲ್ಪಟ್ಟ ಒಂದು ಮರದ ಪೀಠದ ಮೇಲೆ ನಿಂ
ತನು. ಅವನ ಬಲ್ಗಯಲ್ಲಿ ಅವನಿಗೆ ಬಲಪಾರ್ಶ್ವವಾಗಿ ಮತ್ತಿತ್ಯಾ
ನೂ, ಶೇಮವನೂ, ಅಣಾಯನೂ, ಊರೀಯನೂ, ಹಿಲ್ಕೀಯ
ನೂ, ಮಸ್ಸೇಯನೂ, ಅವನಿಗೆ ಎಡಪಾರ್ಶ್ವವಾಗಿ ಪೆದಾಯ
ನೂ, ಮಿಶಯೇಲನೂ, ಮಲ್ಕೀಯನೂ, ಹಷೂಮನೂ, ಹಬ್ಬ
೫ ದ್ದಾನನೂ, ಜೆಕರೀಯನೂ, ಮೆಷುಲ್ಲಾಮನೂ ನಿಂತಿದ್ದರು. ಎ
ಜ್ರನು ಸಕಲ ಜನರ ಕಣ್ಣು ಮುಂದೆ ಪುಸ್ತಕವನ್ನು ತೆರೆದನು;
ಯಾಕಂದರೆ ಸಕಲ ಜನರಿಗಿಂತ ಎತ್ತರದ ಮೇಲೆ ಇದ್ದನು; ಅವ
೬ ನು ಅದನ್ನು ತೆರೆದಾಗ, ಜನರೆಲ್ಲರು ಎದ್ದು ನಿಂತರು. ಆಗ ಎಜ್ರ
ನು ಮಹಾ ದೇವರಾಗಿರುವ ಕರ್ತನನ್ನು ಆಶೀರ್ವದಿಸಿದನು. ಅ
ದಕ್ಕೆ ಜನರೆಲ್ಲರು ತಮ್ಮ ಕೈಗಳನ್ನೆತ್ತಿ ಪ್ರತ್ಯುತ್ತರವಾಗಿ, ಆಮೆನ್,
ಆಮೆನ್ ಎಂದು ಹೇಳಿ, ನೆಲದ ಮಟ್ಟಿಗೂ ತಮ್ಮ ತಲೆಗಳನ್ನು
೭ ಬೊಗ್ಗಿಸಿ, ವಂದಿಸಿದರು. ಇದಲ್ಲದೆ ಯೆಶೂವನೂ, ಬಾನಿಯೂ,
ಶೆರೆಬ್ಯನೂ, ಯಮೀನನೂ, ಅಕ್ಕೂಬನೂ, ಶಬ್ಬೆತಾಯನೂ,
ಹೊದೀಯನೂ, ಮಸ್ಸೇಯನೂ, ಕೆಲೀಟನೂ, ಅಜರ್ಯನೂ,
ಯೊಜಬಾದನೂ, ಹನಾನನೂ, ಪೆಲಾಯನೂ, ಲೇವ್ಯರೂ ಜನ
ರಿಗೆ ನ್ಯಾಯಪ್ರಮಾಣವನ್ನು ತಿಳಿಯ ಹೇಳಿದರು. ಜನರು ತ
೮ ಮ್ಮ ಸ್ಥಳಗಳಲ್ಲಿ ನಿಂತು ಕೊಂಡಿದ್ದರು. ಹೀಗೆಯೇ ಅವರು ದೇ
ವರ ನ್ಯಾಯಪ್ರಮಾಣದ ಪುಸ್ತಕವನ್ನು ಸ್ಪಷ್ಟವಾಗಿ ಓದಿ, ಅದರ
ಅರ್ಥವನ್ನು ಹೇಳಿ, ಓದಿದ್ದನ್ನು ಜನರಿಗೆ ತಿಳಿಯ ಮಾಡಿದರು.

೯ ಇನಲ್ಲದೆ ತಿರ್ಷತನಾದ ನೆಹೆಮಿಾಯನೂ, ಶಾಸ್ತ್ರಿಯಾದಂ
ಥ, ಯಾಜಕನಾದಂಥ ಎಜ್ರನೂ ಜನರನ್ನು ಬೋಧಿಸಿದ ಲೇವ್ಯ
ರೂ ಜನರೆಲ್ಲರಿಗೆ ಹೇಳಿದ್ದೇನಂದರೆ—ಈ ದಿನವು ನಿಮ್ಮ ದೇವರಾ
ಗಿರುವ ಕರ್ತನಿಗೆ ಪರಿಶುದ್ಧವಾದದರಿಂದ, ದುಃಖಿಸದೆ, ಅಳದೆ, ಇ
ರ್ರಿ. ಯಾಕಂದರೆ ಜನರೆಲ್ಲರು ನ್ಯಾಯಪ್ರಮಾಣದ ಮಾತುಗ
೧೦ ಳನ್ನು ಕೇಳಿದಾಗ, ಅತ್ತರು. ಇದಲ್ಲದೆ ಅವನು ಅವರಿಗೆ—ನೀವು
ಹೋಗಿ, ಕೊಬ್ಬಿದ್ದನ್ನು ತಿಂದು, ಪೀಯಾದದ್ದನ್ನು ಕುಡಿದು, ಯಾ
ರಿಗೆ ಸಿದ್ಧ ಮಾಡಿದ್ದು ಏನೂ ಇಲ್ಲವೋ, ಅವರಿಗೆ ಭಾಗಗಳನ್ನು
ಕಳುಹಿಸಿ ಕೊಡಿರಿ. ಯಾಕಂದರೆ ಈ ದಿನವು ನಮ್ಮ ಕರ್ತನಿಗೆ
ಪರಿಶುದ್ಧವಾಗಿದೆ. ಕರ್ತನ ಆನಂದವು ನಿಮ್ಮ ಬಲವಾಗಿರುವದರಿಂ
೧೧ ದ, ನೀವು ವ್ಯಥೆ ಪಡ ಬೇಡಿರಿ. ಹೀಗೆಯೇ ಲೇವ್ಯರು ಈ ದಿನವು
ಪರಿಶುದ್ಧವಾದದರಿಂದ, ನೀವು ಮೌನವಾಗಿದ್ದು, ವ್ಯಥೆ ಪಡ ಬೇಡಿ
೧೨ ರೆಂದು ಹೇಳಿ, ಜನರನ್ನು ಸುಮ್ಮನಿರಿಸಿದರು. ಆಗ ಜನರೆಲ್ಲರೂ
ಅವರಿಗೆ ತಿಳಿಸಿದ ಮಾತುಗಳನ್ನು ಗ್ರಹಿಸಿದ್ದರಿಂದ, ಅವರು ಉ
ಣ್ಣಲೂ, ಕುಡಿಯಲೂ, ಭಾಗಗಳನ್ನು ಕಳುಹಿಸಲೂ, ಸಂತೋ
ಷಿಸಲೂ, ಹೊರಟು ಹೋದರು.

೧೩ ಎರಡನೇ ದಿವಸದಲ್ಲಿ ಸಮಸ್ತ ಜನರ ಪಿತೃಗಳಲ್ಲಿರುವ ಮು
ಖ್ಯವಾದವರೂ, ಯಾಜಕರೂ, ಲೇವ್ಯರೂ ನ್ಯಾಯಪ್ರಮಾಣ
ದ ಮಾತುಗಳನ್ನು ತಿಳುಕೊಳ್ಳುವ ಹಾಗೆ, ಶಾಸ್ತ್ರಿಯಾದ ಎಜ್ರ
೧೪ ನ ಬಳಿಗೆ ಬಂದರು. ಆಗ ಅವರು ಏಳನೇ ತಿಂಗಳ ಹಬ್ಬದಲ್ಲಿ
ಇಸ್ರಯೇಲ ಮಕ್ಕಳು ಪರ್ಣಶಾಲೆಗಳಲ್ಲಿ ವಾಸಿಸಿ ಇರ ಬೇಕೆಂ
ದು, ಕರ್ತನು ಮೋಶೆಯ ಮುಖಾಂತರ ಆಜ್ಞಾಪಿಸಿದ ನ್ಯಾಯ
೧೫ ಪ್ರಮಾಣದಲ್ಲಿ ಬರೆದಿದ್ದದ್ದನ್ನು ಕಂಡರು. ಏನಂದರೆ, ಬರೆದಿರುವ
ಪ್ರಕಾರ ಪರ್ಣಶಾಲೆಗಳನ್ನು ಹಾಕುವ ಹಾಗೆ, ಪಟ್ಟಣಕ್ಕೆ ಹೋಗಿ,
ಇಪ್ಪೆಯ ಕೊಂಬೆಗಳನ್ನೂ ತೈಲದ ಗಿಡದ ಕೊಂಬೆಗಳನ್ನೂ,
ಗಂಧ ಗಿಡದ ಕೊಂಬೆಗಳನ್ನೂ, ಖರ್ಜೂರ ಮರದ ಕೊಂಬೆಗಳ
ನ್ನೂ, ದಟ್ಟವಾಗಿರುವ ಗಿಡದ ಕೊಂಬೆಗಳನ್ನೂ ತಕ್ಕೊಂಡು ಬ
ನ್ನಿರಿ ಎಂದು, ತಮ್ಮ ಸಕಲ ಪಟ್ಟಣಗಳಲ್ಲಿಯೂ ಯೆರೂಸಲೇಮಿನ
೧೬ ಲ್ಲಿಯೂ ಕೂಗಿನಿಂದ ಸಾರಿಸ ಬೇಕೆಂಬುವದೇ. ಹಾಗೆಯೇ ಜ
ನರು ಹೊರಟು, ತಕ್ಕೊಂಡು ಬಂದು, ಅವರವರು ತಮ್ಮ ಮನೆಗಳ
ಮೇಲೆಯೂ, ತಮ್ಮ ಅಂಗಳಗಳಲ್ಲಿಯೂ, ದೇವರ ಮನೆಯ ಅಂ
ಗಳಗಳಲ್ಲಿಯೂ, ನೀರಿನ ಬಾಗಲ ಬೀದಿಯಲ್ಲಿಯೂ, ಎಫ್ರಯಿಾ
ಮಿನ ಬಾಗಲ ಬೀದಿಯಲ್ಲಿಯೂ ತಮಗೆ ಪರ್ಣಶಾಲೆಗಳನ್ನು ಹಾ
೧೭ ಕಿದರು. ಈ ಪ್ರಕಾರ ಕೆರೆಯಿಂದ ಶಿರಿಗಿ ಬಂದ ಕೂಟದವರೆಲ್ಲರು
ಪರ್ಣಶಾಲೆಗಳನ್ನು ಹಾಕಿ, ಪರ್ಣಶಾಲೆಗಳಲ್ಲಿ ವಾಸವಾಗಿದ್ದರು.
ಯಾಕಂದರೆ ನೂನನ ಮಗನಾದ ಯೆಹೋಶುವನ ದಿನವು ಮೊ
ದಲುಗೊಂಡು ಆ ದಿವಸದ ಮಟ್ಟಿಗೂ ಇಸ್ರಯೇಲ ಮಕ್ಕಳು ಹಾ
ಗೆ ಮಾಡಿದ್ದಿಲ್ಲ. ಅವರಿಗೆ ಬಹಳ ಸಂತೋಷ ಇತ್ತು.

೧೮ ಮೊದಲನೇ ದಿವಸದಿಂದ ಕಡೇ ದಿವಸದ ಮಟ್ಟಿಗೂ ದಿನ ದಿ
ನವೂ ದೇವರ ನ್ಯಾಯಪ್ರಮಾಣದ ಪುಸ್ತಕವನ್ನು ಓದುತ್ತಿದ್ದನು.
ಹೀಗೆಯೇ ಅವರು ಏಳು ದಿವಸ ಹಬ್ಬವನ್ನು ಆಚರಿಸಿದರು. ಎಂ
ಟನೇ ದಿವಸದಲ್ಲಿ ಪದ್ಧತಿಯ ಪ್ರಕಾರ ಘನಸಂಗವು ಇತ್ತು.

## ೯. ಸಂಧಿ.

೧ ಅದಕೆ ಆ ತಿಂಗಳ ಇಪ್ಪತ್ತು ನಾಲ್ಕನೇ ದಿವಸದಲ್ಲಿ ಇಸ್ರಯೇ
ಲ ಮಕ್ಕಳು ಉಪವಾಸ ಮಾಡಿ, ಗೋಣಿಯನ್ನು ಉಟ್ಟು ಕೊಂ
ಡು, ತಮ್ಮ ಮೇಲೆ ಧೂಳಿಯನ್ನು ಹಾಕಿ ಕೊಂಡು, ಕೂಡಿ ಇದ್ದ
೨ ರು. ಆಗ ಇಸ್ರಯೇಲ ಬೀಜವಾದವರು ತಮ್ಮನ್ನು ಸಮಸ್ತ ಅನ್ಯ
ಜನರಿಂದ ಪ್ರತ್ಯೇಕಿಸಿಕೊಂಡು, ನಿಂತು, ತಮ್ಮ ಪಾಪಗಳನ್ನೂ
೩ ತಮ್ಮ ತಂದೆಗಳ ಅಕ್ರಮಗಳನ್ನೂ ಅರಿಕೆ ಮಾಡಿದರು. ಅವರು
ತಮ್ಮ ಸ್ಥಳಗಳಲ್ಲಿ ನಿಂತು, ಒಂದು ಝಾವ ತಮ್ಮ ದೇವರಾಗಿರುವ
ಕರ್ತನ ನ್ಯಾಯಪ್ರಮಾಣದ ಪುಸ್ತಕವನ್ನು ಓದಿ, ಮತ್ತೊಂದು
ಝಾವ ತಮ್ಮ ಪಾಪಗಳನ್ನು ಅರಿಕೆ ಮಾಡಿ, ತಮ್ಮ ದೇವರಾಗಿ
೪ ರುವ ಕರ್ತನಿಗೆ ಅಡ್ಡ ಬಿದ್ದರು. ಆಗ ಜಗಲಿಯ ಮೇಲೆ ಲೇವ್ಯರ
ಲ್ಲಿ ಯೆಶೂವನೂ, ಬಾನಿಯೂ, ಕದ್ಮಿಯೇಲನೂ, ಶೆಬನ್ಯನೂ,
ಬುನ್ನಿಯೂ, ಶೆರೆಬ್ಯನೂ, ಬಾನಿಯೂ, ಕೆನಾನಿಯೂ ನಿಂತು,
ಮಹಾ ಶಬ್ದದಿಂದ ತಮ್ಮ ದೇವರಾಗಿರುವ ಕರ್ತನಿಗೆ ಕೂಗಿದರು.

೫ ಮತ್ತು ಲೇವ್ಯರಾದ ಯೆಶೂವನೂ, ಕದ್ಮಿಯೇಲನೂ, ಬಾನಿ
ಯೂ, ಹಷಬ್ನಯೂ, ಶೆರೆಬ್ಯನೂ, ಹೊದೀಯನೂ, ಶೆಬನ್ಯನೂ,
ಪೆತಹ್ಯನೂ ಹೇಳಿದ್ದೇನಂದರೆ—

ನೀವು ಎದ್ದು, ಯುಗ ಯುಗದಿಂದ ಯುಗ ಯುಗಕ್ಕೂ ನಿ
ಮ್ಮ ದೇವರಾಗಿರುವ ಕರ್ತನನ್ನು ಆಶೀರ್ವದಿಸಿರಿ. ಸಕಲ ಆಶೀ
ರ್ವಾದ ಸ್ತೋತ್ರಗಳಿಗಿಂತ ಉನ್ನತವಾದ ನಿನ್ನ ಘನವುಳ್ಳ ನಾ
೬ ಮವನ್ನು ಆಶೀರ್ವದಿಸುವರು. ನೀನು ಒಬ್ಬನೇ ಕರ್ತನಾಗಿದ್ದೀ.
ನೀನು ಆಕಾಶವನ್ನೂ, ಆಕಾಶಾಕಾಶಗಳನ್ನೂ, ಅವುಗಳ ಸಮಸ್ತ
ಸೈನ್ಯವನ್ನೂ, ಭೂಮಿಯನ್ನೂ, ಅದರಲ್ಲಿರುವವುಗಳನ್ನೂ, ಸ
ಮುದ್ರಗಳನ್ನೂ, ಅವುಗಳೊಳಗಿರುವ ಸಮಸ್ತವನ್ನೂ ಉಂಟು
ಮಾಡಿದಿ; ಅವುಗಳನ್ನೆಲ್ಲಾ ಬದುಕಿಸುತ್ತೀ. ಇದಲ್ಲದೆ ಆಕಾಶಗಳ
ಸೈನ್ಯವು ನಿನಗೆ ಅಡ್ಡ ಬೀಳುತ್ತದೆ.
೭ ನೀನು ಅಬ್ರಾಮನನ್ನು ಆದು ಕೊಂಡ ದೇವರಾಗಿರುವ ಕರ್ತ
ನು. ನೀನು ಅವನನ್ನು ಊರವು ಎಂಬ ಕಸ್ದೀಯರ ಪಟ್ಟಣದಿಂದ
೮ ಹೊರಕ ಮಾಡಿ, ಅವನಿಗೆ ಅಬ್ರಹಾಮ ಎಂದು ಹೆಸರಿಟ್ಟು, ಅವ
ನ ಹೃದಯವು ನಿನ್ನ ಮುಂದೆ ನಂಬಿಕೆಯುಳ್ಳದ್ದೆಂದು ಕಂಡು,
ಕನಾನ್ಯರೂ, ಹಿತ್ತಿಯರೂ, ಅಮೋರ್ಯರೂ, ಪೆರಿಜ್ಜಿಯರೂ,
ಯೆಬೂಸ್ಯರೂ, ಗಿರ್ಗಾಸ್ಯರೂ, ಇವರ ದೇಶವನ್ನು ಅವನ ಬೀ
ಜಕ್ಕೆ ಕೊಡುವದಕ್ಕೆ, ಅವನ ಸಂಗಡ ಬಹುಬಡಿಕೆಯನ್ನು ಮಾಡಿದಿ
ಮತ್ತು ನೀನು ಸತ್ಯವುಳ್ಳವನಾಗಿರುವದರಿಂದ, ನಿನ್ನ ಮಾತುಗಳ
ನ್ನು ಈಡೇರಿಸಿದಿ.
೯ ಇದಲ್ಲದೆ ಐಗುತ್ತಿದಲ್ಲಿ ನಮ್ಮ ಪಿತೃಗಳ ದೀನ ಸ್ಥಿತಿಯನ್ನು
ನೋಡಿದಿ; ಕೆಂಪು ಸಮುದ್ರದ ಬಳಿಯಲ್ಲಿ ಅವರ ಕೂಗನ್ನು ಕೇ
೧೦ ಳ್ಳಿದಿ. ಫರೋವನ ಮೇಲೆಯೂ, ಅವನ ಸಮಸ್ತ ಸೇವಕರ ಮೇ
ಲೆಯೂ, ಅವನ ಸಮಸ್ತ ದೇಶದ ಜನರ ಮೇಲೆಯೂ ಗುರುತುಗ
ಳನ್ನೂ ಲಕ್ಷಣಗಳನ್ನೂ ತೋರಿಸಿದಿ. ಯಾಕಂದರೆ ಇವರು
ಅವರಿಗೆ ಅಹಂಕಾರವಾಗಿ ನಡೆದರೆಂದು, ತಿಳ್ಳಿದಿದ್ದಿ. ಈ ಪ್ರಕಾರವೇ
೧೧ ನೀನು ಇಂದಿನ ಹಾಗೆ ನಿನಗೆ ಹೆಸರನ್ನು ಮಾಡಿ ಕೊಂಡಿ. ಮ
ತ್ತು ನೀನು ಅವರ ಮುಂದೆ ಸಮುದ್ರವನ್ನು ವಿಭೇದಿಸಿದ್ದರಿಂದ, ಅ
ವರು ಸಮುದ್ರದ ಮಧ್ಯದಲ್ಲಿ ಒಣ ಭೂಮಿಯಲ್ಲಿ ಹಾದು ಹೋ
ದರು. ಆದರೆ ಅವರ ಹಿಂದೆ ಹತ್ತಿದವರನ್ನು ಅಗಾಧಗಳಲ್ಲಿ ಕ
೧೨ ಲ್ಲಿನ ಹಾಗೆ ಬಲವಾದ ಜಲಗಳಲ್ಲಿ ಕೊಟ್ಟಿ ಬಿಟ್ಟಿ. ಇದಲ್ಲದೆ ಹಗ
ಲಿನಲ್ಲಿ ಮೇಘ ಸ್ತಂಭದಿಂದಲೂ, ಅವರು ನಡೆಯ ಬೇಕಾದ
ಮಾರ್ಗದಲ್ಲಿ ಅವರಿಗೆ ಬೆಳಕಾಗುವ ಹಾಗೆ, ರಾತ್ರಿಯಲ್ಲಿ ಅಗ್ನಿ
ಸ್ತಂಭದಿಂದಲೂ ಅವರನ್ನು ನಡಿಸಿದಿ.
೧೩ ಮತ್ತು ಸಿನಾಯ ಪರ್ವತದ ಮೇಲಕ್ಕೆ ಇಳಿದು ಬಂದಿ; ಆಕಾ
ಶದಿಂದ ಅವರ ಸಂಗಡ ಮಾತಾಡಿದಿ; ನೆಟ್ಟನೆಯಾದ ನ್ಯಾಯಗ
ಳನ್ನೂ ಸತ್ಯವಾದ ಪ್ರಮಾಣಗಳನ್ನೂ ಉತ್ತಮವಾದ ಕಟ್ಟಳೆಗ
೧೪ ಳನ್ನೂ ಆಜ್ಞೆಗಳನ್ನೂ ಕೊಟ್ಟಿ. ನೀನು ಪರಿಶುದ್ಧ ಸಬ್ಬತ್ ದಿವ
ಸವನ್ನು ಅವರಿಗೆ ತಿಳ್ಳಿಸಿ, ನಿನ್ನ ಸೇವಕನಾದ ಮೋಶೆಯ ಮು
ಖಾಂತರ ಅವರಿಗೆ ಆಜ್ಞೆಗಳನ್ನೂ, ಕಟ್ಟಳೆಗಳನ್ನೂ, ನ್ಯಾಯ
೧೫ ಪ್ರಮಾಣವನ್ನೂ ಆಜ್ಞಾಪಿಸಿದಿ. ಅವರ ಹಸಿವೆಗೋಸ್ಕರ ಆ
ಕಾಶದಿಂದ ಆಹಾರವನ್ನು ಕೊಟ್ಟಿ; ಅವರ ದಾಹಕ್ಕೋಸ್ಕರ ಬಂ
ಡೆಯಿಂದ ನೀರನ್ನು ಹೊರಕ ಮಾಡಿದಿ; ನೀನು ಅವರಿಗೆ ಕೊಡ
ಪ್ರಮಾಣ ಮಾಡಿದ ದೇಶವನ್ನು ಸ್ವತಂತ್ರಿಸಿ ಕೊಳ್ಳ ಹೋಗು
ವ ಹಾಗೆ, ಅವರಿಗೆ ಮಾತನ್ನು ಕೊಟ್ಟಿ.
೧೬ ಆದರೆ ಅವರೂ ನಮ್ಮ ತಂದೆಗಳೂ ಅಹಂಕಾರವಾಗಿ ನಡೆದು ತ
ಮ್ಮ ಕುತ್ತಿಗೆಯನ್ನು ಕಠಿಣ ಮಾಡಿ, ನಿನ್ನ ಆಜ್ಞೆಗಳನ್ನು ಕೇಳದೆ
೧೭ ಹೋದರು. ಮತ್ತು ಕೇಳಲೊಲ್ಲದೆ, ನೀನು ಅವರ ಮಧ್ಯದಲ್ಲಿ ಮಾ
ಡಿದ ಆಶ್ಚರ್ಯಗಳನ್ನು ಜ್ಞಾಪಕ ಮಾಡದೆ, ತಮ್ಮ ಕುತ್ತಿಗೆಯನ್ನು
ಕಠಿಣ ಮಾಡಿ, ತಮ್ಮ ತಿರುಗ ಬೀಳ್ವಿಕೆಯಲ್ಲಿ ತಮ್ಮ ದಾಸತ್ವಕ್ಕೆ
ತಿರಿಗಿ ಹೋಗುವ ಹಾಗೆ, ಅಧಿಪತಿಯನ್ನು ಸೇವಿಸಿದರು. ಆದರೆ
ನೀನು ಮನ್ನಿಸುವ ದೇವರಾಗಿಯೂ, ದಯೆವೂ, ಅಂತಃಕರಣ
ವೂ, ದೀರ್ಘಶಾಂತಿಯೂ, ಬಹು ಕೃಪೆಯೂ ಉಳ್ಳವನಾ
೧೮ ಗಿಯೂ ಇರುವದರಿಂದ, ಅವರನ್ನು ಕೈ ಬಿಡಲಿಲ್ಲ. ಅವರು ತಮ
ಗೆ ಎರಕಹೊಯಿದ ಒಂದು ಕರುವನ್ನು ಮಾಡಿಕೊಂಡು, ಐಗುತ್ತ
ದೊಳಗಿಂದ ನಿನ್ನನ್ನು ಬರ ಮಾಡಿದ ನಿನ್ನ ದೇವರು ಇದೇ ಎಂ
ದು ಹೇಳಿ, ಬಹು ಅಲಕ್ಷ್ಯವಾದ ಕಾರ್ಯಗಳನ್ನು ಮಾಡಿದಾಗ,
೧೯ ಕೂಡ, ನೀನು ನಿನ್ನ ಬಹಳವಾದ ಅಂತಃಕರಣಗಳಿಂದ ಅರಣ್ಯ
ದಲ್ಲಿ ಅವರನ್ನು ಕೈ ಬಿಡದೆ ಇದ್ದಿ. ಹಗಲಿನಲ್ಲಿ ಅವರಿಗೆ ದಾರಿ
ತೋರಿಸ ತಕ್ಕ ಮೇಘಸ್ತಂಭವಾದರೂ, ರಾತ್ರಿಯಲ್ಲಿ ಅವರಿಗೆ
ಬೆಳಕನ್ನೂ, ಅವರು ನಡಿಯ ತಕ್ಕ ಮಾರ್ಗವನ್ನೂ ತೋರಿಸು
ವ ಅಗ್ನಿಸ್ತಂಭವಾದರೂ ಅವರನ್ನು ಬಿಟ್ಟು ತೊಲಗಲಿಲ್ಲ.
೨೦ ಇದಲ್ಲದೆ ನೀನು ಅವರನ್ನು ಬೋಧಿಸುವ ಹಾಗೆ ನಿನ್ನ ಒಳ್ಳೇ
ಆತ್ಮವನ್ನು ಕೊಟ್ಟಿ; ಅವರ ಬಾಯಿಗೆ ನಿನ್ನ ಮನ್ನವನ್ನು ತಡೆ
೨೧ ಯಲಿಲ್ಲ; ಅವರ ದಾಹಕ್ಕೆ ನೀರನ್ನು ಕೊಟ್ಟಿ. ಹೀಗೆಯೇ ಅ
ರ್ಣ್ಯದಲ್ಲಿ ನಾಲ್ವತ್ತು ವರುಷ ಅವರನ್ನು ಪೋಷಿಸುತ್ತಿದ್ದಿ; ಅವ
ರು ಕೊರತೆ ಪಡಲಿಲ್ಲ; ಅವರ ವಸ್ತ್ರಗಳು ಜೀರ್ಣವಾಗಲಿಲ್ಲ; ಅ
೨೨ ರ ಕಾಲುಗಳು ಬಾತು ಹೋಗಲಿಲ್ಲವು. ಇದಲ್ಲದೆ ನೀನು ಅವರಿಗೆ
ರಾಜ್ಯಗಳನ್ನೂ ಜನಗಳನ್ನೂ ಒಪ್ಪಿಸಿ ಕೊಟ್ಟು, ಅವರಿಗೆ ಮೇಲೆ
ಗಳನ್ನು ಪಾಲಿಟ್ಟಿ. ಹೀಗೆಯೇ ಅವರು ಸೀಹೋನನ ದೇಶವ
ನ್ನೂ, ಹೆಶ್ಬೋನಿನ ಅರಸನ ದೇಶವನ್ನೂ, ಬಾಶಾನಿನ ಅರಸ
೨೩ ನಾದ ಓಗನ ದೇಶವನ್ನೂ ಸ್ವತಂತ್ರಿಸಿ ಕೊಂಡರು. ಇದಲ್ಲದೆ ಅ
ವರ ಮಕ್ಕಳನ್ನು ಆಕಾಶದ ನಕ್ಷತ್ರಗಳ ಹಾಗೆ ಹೆಚ್ಚಿಸಿ, ಅವರು
ಸ್ವತಂತ್ರಿಸಿ ಕೊಳ್ಳ ಹೋಗುವರೆಂದು, ನೀನು ಅವರ ತಂದೆಗಳ
೨೪ ಗೆ ಹೇಳಿದ ದೇಶದಲ್ಲಿ ಅವರನ್ನು ಬರ ಮಾಡಿದಿ. ಹೀಗೆಯೇ
ಮಕ್ಕಳು ಪ್ರವೇಶಿಸಿ, ದೇಶವನ್ನು ಸ್ವತಂತ್ರಿಸಿ ಕೊಂಡರು. ನೀನು
ಅವರ ಮುಂದೆ ದೇಶದ ನಿವಾಸಿಗಳಾದ ಕನಾನ್ಯರನ್ನು ತಗ್ಗ ಮಾ
ಡಿ, ಅವರಿಗೆ ತಮ್ಮ ಇಚ್ಛೆಯ ಪ್ರಕಾರ ಮಾಡಲಿಕ್ಕೆ, ಅವರನ್ನೂ,
ಅವರ ಅರಸುಗಳನ್ನೂ, ದೇಶದ ಜನರನ್ನೂ ಅವರ ಕೈಯಲ್ಲಿ
೨೫ ಒಪ್ಪಿಸಿ ಕೊಟ್ಟಿ. ಅವರು ಬಲವಾದ ಪಟ್ಟಣಗಳನ್ನೂ, ರಸವತ್ತಾದ
ಭೂಮಿಯನ್ನೂ ಹೆಗೆದು ಕೊಂಡು, ಬಳ್ಳೋದೆಲ್ಲಾ ತುಂಬಿದ ಮ
ನೆಗಳನ್ನೂ, ಅಗಿದ ಭಾವಿಗಳನ್ನೂ, ದ್ರಾಕ್ಷೇ ತೋಟಗಳನ್ನೂ,
ಇಪ್ಪೇ ತೋಪುಗಳನ್ನೂ ಆಹಾರವುಳ್ಳ ಮರಗಳನ್ನೂ ಬಹಳ
ವಾಗಿ ಸ್ವತಂತ್ರಿಸಿ ಕೊಂಡು, ಭೋಜಿಸಿ, ತೃಪ್ತಿ ಪಟ್ಟು, ಪುಷ್ಟಿ
ಯಾಗಿ, ನಿನ್ನ ದೊಡ್ಡ ಉಪಕಾರದಲ್ಲಿ ಸಂಭ್ರಮ ಪಟ್ಟರು.
೨೬ ಆದರೆ ಅವರು ನಿನಗೆ ವಿರೋಧ ಮಾಡಿ, ತಿರುಗ ಬಿದ್ದು, ನಿನ್ನ
ನ್ಯಾಯ ಪ್ರಮಾಣವನ್ನು ತಮ್ಮ ಬೆನ್ನಿನ ಹಿಂದಕ್ಕೆ ಬಿಸಾಟು,
ಅವರು ನಿನ್ನ ಬಳಿಗೆ ತಿರುಗ ಬೇಕೆಂದು, ಸಾಕ್ಷಿ ಹೇಳಿದ ನಿನ್ನ ಪ್ರ
ವಾದಿಗಳನ್ನು ಕೊಂದು, ಬಹು ಅಲಕ್ಷ್ಯವಾದ ಕಾರ್ಯಗಳನ್ನು
೨೭ ಮಾಡಿದರು. ಆದದರಿಂದ ನೀನು ಇಕ್ಕಟ್ಟು ಮಾಡಿದ ಅವರ ವೈ
ರಿಗಳ ಕೈಯಲ್ಲಿ ಅವರನ್ನು ಒಪ್ಪಿಸಿದಿ. ಆದರೆ ತಮ್ಮ ಇಕ್ಕಟ್ಟಿನ
ಕಾಲದಲ್ಲಿ ಅವರು ನಿನ್ನನ್ನು ಕೂಗಿದಾಗ, ನೀನು ಆಕಾಶದಿಂದ



ಕೇಳಿ, ನಿನ್ನ ಅಧಿಕವಾದ ಅಂತಃಕರಣಗಳ ಪ್ರಕಾರ, ಅವರ ವೈ
ರಿಗಳ ಕೈಯಿಂದ ರಕ್ಷಿಸುವದಕ್ಕೆ, ರಕ್ಷಕರನ್ನು ಅವರಿಗೆ ಕೊಟ್ಟಿ.
೨೮ ಆದರೆ ಅವರು ವಿಶ್ರಾಂತಿಯನ್ನು ಹೊಂದಿದ ತರುವಾಯ, ನಿನ್ನ
ಮುಂದೆ ಕೆಟ್ಟದ್ದನ್ನು ಮಾಡ ತಿರುಗಿದರು. ಆದಕಾರಣ ಅವರ ಶ
ತ್ರುಗಳು ಅವರನ್ನು ಆಳುವ ಹಾಗೆ, ಅವರ ಕೈಯಲ್ಲಿ ಅವರನ್ನು
ಒಪ್ಪಿಸಿದಿ. ಆದರೆ ಅವರು ತಿರುಗಿ ನಿನ್ನನ್ನು ಕೂಗಿದಾಗ, ನೀನು
ಆಕಾಶದಿಂದ ಕೇಳಿ, ಅವರನ್ನು ನಿನ್ನ ಅಂತಃಕರಣಗಳ ಪ್ರಕಾರ
೨೯ ಅನೇಕ ಸಾರಿ ವಿಮೋಚನೆ ಮಾಡಿದಿ. ಮತ್ತು ನೀನು ಅವರನ್ನು
ನಿನ್ನ ನ್ಯಾಯಪ್ರಮಾಣಕ್ಕೆ ತಿರಿಗಿ ಬರುವ ಹಾಗೆ, ಅವರಿಗೆ ವಿ
ರೋಧವಾಗಿ ಸಾಕ್ಷಿ ಹೇಳಿದಿ. ಆದರೆ ಅವರು ಗರ್ವ ಪಟ್ಟು, ನಿ
ನ್ನ ಆಜ್ಞೆಗಳನ್ನು ಕೇಳದೆ, ಮನುಷ್ಯನು ಅವುಗಳನ್ನು ಕೈಕೊಂ
ಡರೆ, ಯಾವವುಗಳಿಂದ ಬದುಕುವನೋ, ಆ ನಿನ್ನ ನ್ಯಾಯಗಳಿ
ಗೆ ವಿರೋಧವಾಗಿ ಪಾಪ ಮಾಡಿ, ಭುಜವನ್ನು ಹಿಂದಕ್ಕೆ ಎಳೆಕೊಂ
೩೦ ಡು, ಕುತ್ತಿಗೆಯನ್ನು ಕಠಿಣ ಪಡಿಸಿ, ಕೇಳದೆ ಹೋದರು. ನೀನು
ಅನೇಕ ವರುಷ ಅವರನ್ನು ತಾಳ್ಳಿ ಕೊಂಡಿದ್ದು, ನಿನ್ನ ಪ್ರವಾದಿಗಳ
ಮುಖಾಂತರ ನಿನ್ನ ಆತ್ಮದಿಂದ ಅವರಿಗೆ ವಿರೋಧವಾಗಿ ಸಾಕ್ಷಿ
ಹೇಳ್ಳಿದಿ. ಆದರೆ ಅವರು ಕಿವಿಕೊಡದ್ದರಿಂದ, ನೀನು ಅವರನ್ನು ದೇ
೩೧ ಶಗಳ ಜನರ ಕೈಯಲ್ಲಿ ಒಪ್ಪಿಸಿದಿ. ಆದರೂ ನೀನು ನಿನ್ನ ಹೆಚ್ಚಾ
ದ ಅಂತಃಕರಣಗಳ ಪ್ರಕಾರ, ಅವರನ್ನು ಶೀಘಿಸಿ ಬಿಡಲಿಲ್ಲ; ಅವ
ರನ್ನು ಕೈ ಬಿಡಲಿಲ್ಲ. ಯಾಕಂದರೆ ನೀನು ಕೃಪೆಯೂ ಅಂತಃಕ
೩೨ ರಣವೂ ಉಳ್ಳ ದೇವರಾಗಿದ್ದೀ. ಆದಕಾರಣ, ನಮ್ಮ ದೇವರೇ,
ಬಹುಬಡಿಕೆಯನ್ನೂ ಕೃಪೆಯನ್ನೂ ಕೈಕೊಳ್ಳುವಂಥ, ಕೊ
ಡ್ಡವನಾದಂಥ, ಪರಾಕ್ರಮವುಳ್ಳಂಥ, ಭಯಂಕರನಾದ ದೇವರೇ,
ಅಶೂರಿನ ಅರಸುಗಳ ಕಾಲ ಮೊದಲ್ಗೊಂಡು, ಇಂದಿನ ಮಟ್ಟಿಗೂ,
ನಮ್ಮ ಮೇಲೆಯೂ, ನಮ್ಮ ಅರಸುಗಳ ಮೇಲೆಯೂ, ನಮ್ಮ ಪ್ರ
ಧಾನರ ಮೇಲೆಯೂ, ನಮ್ಮ ಯಾಜಕರ ಮೇಲೆಯೂ, ನಮ್ಮ ಪ್ರ
ವಾದಿಗಳ ಮೇಲೆಯೂ, ನಮ್ಮ ಪಿತೃಗಳ ಮೇಲೆಯೂ, ನಿನ್ನ ಸ
ಮಸ್ತ ಜನರ ಮೇಲೆಯೂ ಬಂದ ಪ್ರಮೆಯು ನಿನಗೆ ಅಲ್ಪವಾಗಿ ಕಾ
೩೩ ಣಲ್ಪಡದೆ ಇರಲಿ. ಆದರೆ ನೀನು ನಮ್ಮ ಮೇಲೆ ಬರ ಮಾಡಿದ ಎ
ಲ್ಲಾದರಲ್ಲಿ ನೀತಿಪರನಾಗಿದ್ದೀ; ಯಾಕಂದರೆ ನೀನು ಮಾಡಿದ್ದು ಸ
ತ್ಯ; ಆದರೆ ನಾವು ದುಷ್ಟರಾಗಿ ನಡೆದೆವು. ನಮ್ಮ ಅರಸುಗಳೂ,
ನಮ್ಮ ಪ್ರಧಾನರೂ, ನಮ್ಮ ಯಾಜಕರೂ, ನಮ್ಮ ಪಿತೃಗಳೂ,
ನಿನ್ನ ನ್ಯಾಯಪ್ರಮಾಣವನ್ನು ಕೈಕೊಳ್ಳದೆ, ನಿನ್ನ ಆಜ್ಞೆಗಳ
೩೪ ನ್ನೂ, ನೀನು ಅವರಿಗೆ ಸಾಕ್ಷಿಯಾಗಿ ಹೇಳಿದ ನಿನ್ನ ಸಾಕ್ಷಿಗಳ
ನ್ನೂ ಆಲೈಸದೆ ಹೋದರು. ಅವರು ತಮ್ಮ ರಾಜ್ಯದಲ್ಲಿಯೂ,
ನೀನು ಅವರಿಗೆ ಮಾಡಿದ ಮಹಾ ಉಪಕಾರದಲ್ಲಿಯೂ, ನೀನು ಅ
ವರಿಗೆ ಕೊಟ್ಟ ವಿಸ್ತಾರವಾದ, ರಸವತ್ತಾದ ದೇಶದಲ್ಲಿಯೂ ನಿನ್ನ
೩೫ ನ್ನು ಸೇವಿಸಲಿಲ್ಲ; ತಮ್ಮ ಕೆಟ್ಟ ಕಾರ್ಯಗಳನ್ನು ಬಿಟ್ಟು, ತಿರುಗ
ಲಿಲ್ಲ. ಇಗೋ, ಈ ದಿವಸ ನಾವು ದಾಸರಾಗಿದ್ದೇವೆ; ಅದರ ಫ
ವನ್ನೂ ಅದರ ಉತ್ತಮವಾದದನ್ನೂ ತಿನ್ನುವದಕ್ಕೆ ನೀನು ನ
ಮ್ಮ ಪಿತೃಗಳಿಗೆ ಕೊಟ್ಟ ದೇಶದಲ್ಲಿ, ಇಗೋ, ನಾವು ದಾಸರಾ
೩೬ ಗಿದ್ದೇವೆ. ನಮ್ಮ ಪಾಪಗಳಿಗೋಸ್ಕರ ನೀನು ನಮ್ಮ ಮೇಲೆ ಇಟ್ಟ
ಅರಸುಗಳಿಗೆ ಅದರ ಹುಟ್ಟುವಳ್ಳ ಬಹಳ. ಇದಲ್ಲದೆ ಅವರು ತಮ್ಮ
ಇಚ್ಛೆಯ ಪ್ರಕಾರ ನಮ್ಮ ಶರೀರಗಳ ಮೇಲೆಯೂ, ನಮ್ಮ ಪಶು
ಗಳ ಮೇಲೆಯೂ ಆಳುತ್ತಾರೆ; ನಾವು ಬಹು ಇಕ್ಕಟ್ಟಿನಲ್ಲಿದ್ದೇವೆ.
೩೭ ಇದೆಲ್ಲಾದರ ನಿಮಿತ್ತ ನಾವು ಒಡಂಬಡಿಕೆಯನ್ನು ಸ್ಥಿರ ಮಾಡಿ,
ಬರೆಯುತ್ತೇವೆ; ನಮ್ಮ ಪ್ರಧಾನರೂ, ಶೇಮ್ಯರೂ, ಯಾಜಕರೂ
ಅದಕ್ಕೆ ಮುದ್ರೆ ಹಾಕುತ್ತಾರೆ.

## ೧೦. ಸಂಧಿ.

೧ ಮುದ್ರೆ ಹಾಕಿದವರು ಯಾರಂದರೆ—ಹಕಲ್ಯನ ಮಗನಾದಂಥ,
೨ ಅಧಿಪತಿಯಾದ ನೆಹೆಮಿಯಾನು, ಚಿದ್ಕಿಯನು, ಸೆರಾಯನು,
೩ ಅಜರ್ಯನು, ಯೆರೆಮಿಯಾನು, ಪಷ್ಹೂರನು, ಅಮರ್ಯನು,
೪ ಮಲ್ಕಿಯನು, ಹಟೂಷನು, ಶೆಬನ್ಯನು, ಮಲ್ಲೂಕನು, ಹರೀಮ
೫ ನು, ಮೆರೆಮೋತನು, ಒಬದ್ಯನು, ದಾನಿಯೇಲನು, ಗಿಂತೋನ
೬ ನು, ಬರೂಕನು, ಮೆಷುಲ್ಲಾಮನು, ಅಬೀಯನು, ಮಿಯಮಿನಾ
೭ ನು, ಮಅಜ್ಯನು, ಬಿಲ್ಗಾಯು, ಶೆಮಾಯನು, ಇವರು ಯಾಜಕ
ರಾಗಿದ್ದರು.
೮ ಲೇವ್ಯರು—ಅಜನ್ಯನ ಮಗನಾದ ಯೆಶೂವನು, ಹೆನದಾದನ
೯ ಮಕ್ಕಳಲ್ಲಿ ಬಿನ್ನೂಯಿ, ಕದ್ಮಿಯೇಲನು; ಅವರ ಸಹೋದರರಾ
ದ ಶೆಬನ್ಯನು, ಹೊದೀಯನು, ಕೆಲೀಟನು, ಪೆಲಾಯನು, ಹನಾ
೧೦ ನನು, ಮೀಕನು, ರೆಹೋಬನು, ಹಷಬ್ಯನು, ಜಕ್ಕೂರನು, ಶೆರೆ
೧೧ ಬ್ಯನು, ಶೆಬನ್ಯನು, ಹೊದೀಯನು, ಬಾನಿಯು, ಬೆನೀನುವು. ಜ
೧೧೫ ನರ ಮುಖ್ಯಸ್ಥರು—ಪರೋಷನು, ಪಹತ್ಮೊವಾಬನು, ಎಲಾಮ
೧೩ ನು, ಜತ್ತುವು, ಬಾನಿಯು, ಬುನ್ನಿಯು, ಅಜ್ಗಾದನು, ಬೆಬಾಯಿ
೧೪ ಯು, ಅದೊನೀಯನು, ಬಿಗ್ವಾಯಿಯು, ಅದೀನನು, ಅಟೇರ
೧೫ ನು, ಹಿಜ್ಕಿಯನು, ಅಜ್ಜೂರನು, ಹೊದೀಯನು, ಹಷೂಮನು,
೧೬ ಬೆಚಾಯಿಯು, ಹರೀಫನು, ಅನಾತೋತನು, ನೆಬಾಯಿಯು, ಮ
೧೭ ಗ್ಪಿವಾಷನು, ಮೆಷುಲ್ಲಾಮನು, ಹಿಜೀರನು, ಮೆಷೆಜಬೇಲನು, ಚ
೧೮ ದೋಕನು, ಯದ್ದೂವನು, ಪೆಲಟ್ಯನು, ಹನಾನನು, ಅನಾಯ
೧೯೫ ನು, ಹೊಷೇಯನು, ಹನನ್ಯನು, ಹಷೂಬನು, ಲೊಹೇಷನು,
ಪಿಲ್ಹನು, ಶೊಬೇಕನು, ರೆಹೂಮನು, ಹಷಬ್ನನು, ಮಸ್ಸೇಯನು,
೧೯ ಅಹೀಯನು, ಹನಾನನು, ಅನಾನನು, ಮಲ್ಲೂಕನು, ಹರೀಮ
ನು, ಬಾನನು.
೧೮ ಜನರಲ್ಲಿ ಉಳ್ಳದವರಾದ ಯಾಜಕರೂ, ಲೇವ್ಯರೂ, ದ್ವಾರ
ಪಾಲಕರೂ, ಹಾಡುಗಾರರೂ, ನಿತಿನಿಯರೂ, ದೇವರ ನ್ಯಾಯ
ಪ್ರಮಾಣದ ಪ್ರಕಾರವಾಗಿ ಆ ದೇಶಗಳ ಜನರೊಳಗಿಂದ ತಮ್ಮ
ನ್ನು ಪ್ರತ್ಯೇಕಿಸಿ ಕೊಂಡವರೆಲ್ಲರೂ, ಅವರ ಹೆಂಡರೂ, ಅವರ
ಕುಮಾರರೂ ಅವರ ಕುಮಾರ್ತೆಗಳೂ ತಿಳ್ಳುವಳ್ಳಿಕೆಯೂ ಗ್ರಹಿ
೧೯ ಕೆಯೂ ಉಳ್ಳವರೆಲ್ಲರೂ; ಇವರು ತಮ್ಮ ಸಹೋದರರಾದ ತಮ್ಮ
ಶ್ರೇಷ್ಠರ ಸಂಗಡ ಕೂಡಿ ಕೊಂಡು, ದೇವರ ಸೇವಕನಾದ ಮೋಶೆ
ಯ ಕೈಯಿಂದ ಕೊಟ್ಟ ದೇವರ ನ್ಯಾಯ ಪ್ರಮಾಣದಲ್ಲಿ ನಡೆ
ಯುತ್ತೇವೆಂದೂ, ಕರ್ತನಾದ ನಮ್ಮ ಕರ್ತನ ಆಜ್ಞೆಗಳನ್ನೂ, ಅ
ವನ ನ್ಯಾಯಗಳನ್ನೂ, ಅವನ ಕಟ್ಟಳೆಗಳನ್ನೂ ಎಲ್ಲಾ ಕೈ ಕೊಂ
೩೦ ಡು ಮಾಡುತ್ತೇವೆಂದೂ; ನಾವು ನಮ್ಮ ಕುಮಾರ್ತೆಗಳನ್ನು ದೇ
ಶದ ಜನರಿಗೆ ಕೊಡುವದಿಲ್ಲ, ನಮ್ಮ ಕುಮಾರರಿಗೆ ಅವರ ಕುಮಾ
೩೧ ರ್ತೆಗಳನ್ನು ತಕ್ಕೊಳ್ಳುವದಿಲ್ಲ, ಎಂದೂ, ದೇಶದ ಜನರು ಸಬ್ಬತ್
ದಿವಸದಲ್ಲಿ ಸರಕುಗಳನ್ನೂ ಧಾನ್ಯವನ್ನೂ ಮಾರಲಿಕ್ಕೆ ತಕ್ಕೊಂ
ಡು ಬಂದರೆ, ನಾವು ಅವುಗಳನ್ನು ಸಬ್ಬತ್ ದಿವಸದಲ್ಲಾದರೂ ಪ
ರಿಶುದ್ಧ ದಿವಸದಲ್ಲಾದರೂ ಅವರಿಂದ ಕೊಂಡು ಕೊಳ್ಳುವದಿಲ್ಲವೆಂ

ದೂ, ನಾವು ಏಳನೇ ವರುಷವನ್ನೂ ಎಲ್ಲಾ ಕೈಸಾಲವನ್ನೂ
ಬಿಟ್ಟು ಬಿಡುತ್ತೇವೆಂದೂ, ಕಪಥಕ್ಕೂ ಆಣೆಗೂ ಒಳಗಾದರು.

೩೦ ಇದಲ್ಲದೆ ಸನುಬಿದ ಕೊಟ್ಟಿಗೋಸ್ಕರವೂ, ನಿತ್ಯ ಕಾಣಿಕೆ
ಗೋಸ್ಕರವೂ, ಸಬ್ಬತುಗಳಲ್ಲಿಯೂ ಶುದ್ಧ ಪಾತ್ರಗಳಲ್ಲಿಯೂ
ಅರ್ಪಿಸುವ ನಿತ್ಯ ಹೋಮಗಳಿಗೋಸ್ಕರವೂ, ನೇಮಿಸಿದ ಹಬ್ಬ
ಗಳಿಗೋಸ್ಕರವೂ, ಪರಿಶುದ್ಧವಾದವುಗಳಿಗೋಸ್ಕರವೂ, ಇಸ್ರ
ಯೇಲ್ಯರ ಪಾಪ ಮುಚ್ಚ ತಕ್ಕ ಪಾಪ ಬಲಿಗೋಸ್ಕರವೂ, ನ
೩೩ ಮ್ಮ ದೇವರ ಮನೆಯ ಸಮಸ್ತ ಕಾರ್ಯಕ್ಕೋಸ್ಕರವೂ, ನಮ್ಮ
ದೇವರ ಮನೆಯ ಸೇವೆಯ ನಿಮಿತ್ತವಾಗಿ ವರುಷಕ್ಕೆ ಸೆಕೆಲಿನಲ್ಲಿ
ಮೂರರಲ್ಲಿ ಒಂದು ಪಾಲು ಕೊಡ ನಮಗೆ ನಾವು ನೇಮಕ
ಮಾಡಿ ಕೊಂಡೆವು.

೩೪ ಮತ್ತು ನ್ಯಾಯಪ್ರಮಾಣದಲ್ಲಿ ಬರೆದ ಹಾಗೆ, ನಮ್ಮ ದೇವ
ರಾಗಿರುವ ಕರ್ತನ ಬಲಿಪೀಠದ ಮೇಲೆ ಸುಡುವದಕ್ಕೆ, ನೇಮಿಸಲ್ಪ
ಟ್ಟ ಕಾಲಗಳಲ್ಲಿ ವರುಷ ವರುಷಕ್ಕೆ ನಮ್ಮ ಪಿತೃಗಳ ಮನೆಗಳ
ಪ್ರಕಾರ ನಮ್ಮ ದೇವರ ಮನೆಯೊಳಗೆ ತಕ್ಕೊಂಡು ಬರ ಬೇಕಾದ
ಸಾದೆಯ ಕಾಣಿಕೆಗೋಸ್ಕರ ಯಾಜಕರಿಗೂ ಲೇವ್ಯರಿಗೂ ಜ
೩೫ ನಕ್ಕೂ ಚೀಟುಗಳನ್ನು ಹಾಕಿದೆವು. ಮತ್ತು ಕರ್ತನ ಮನೆಗೆ ಪ್ರ
ತಿವರುಷದಲ್ಲಿಯೂ ನಮ್ಮ ಭೂಮಿಯ ಪ್ರಥಮ ಫಲಗಳನ್ನೂ,
ಎಲ್ಲಾ ಮರಗಳ ಸಕಲ ಫಲಗಳಿಂದ ಪ್ರಥಮ ಫಲಗಳನ್ನೂ ತರುವ
೩೬ ದಕ್ಕೂ; ನ್ಯಾಯ ಪ್ರಮಾಣದಲ್ಲಿ ಬರೆದಿರುವ ಹಾಗೆ, ನಮ್ಮ ಮ
ಕ್ಕಳಲ್ಲಿಯೂ ನಮ್ಮ ಪಶುಗಳಲ್ಲಿಯೂ ಜೊಚ್ಚುಲಾದವುಗಳ
ನ್ನೂ, ನಮ್ಮ ದನಗಳಲ್ಲಿಯೂ ಮಂದೆಗಳಲ್ಲಿಯೂ ಜೊಚ್ಚುಲಾ
ದವುಗಳನ್ನೂ ನಮ್ಮ ದೇವರ ಮನೆಗೆ, ನಮ್ಮ ದೇವರ ಮನೆಯಲ್ಲಿ
ಸೇವಿಸುವ ಯಾಜಕರ ಬಳಿಗೆ, ತರುವದಕ್ಕೂ; ನಮ್ಮ ಹಿಟ್ಟಿನ
೩೭ ಲ್ಲಿ ಪೊದಲಿನ ಪಾಲನ್ನೂ, ನಮ್ಮ ಕಾಣಿಕೆಗಳನ್ನೂ, ಸಕಲ ಮ
ರಗಳ ಫಲವನ್ನೂ, ದ್ರಾಕ್ಷೇರಸವನ್ನೂ, ಎಣ್ಣೆಯನ್ನೂ ಯಾಜ
ಕರ ಬಳಿಗೆ ನಮ್ಮ ದೇವರ ಮನೆಯ ಕೊಠಡಿಗಳಲ್ಲಿ ತಂದಿಡುವ
ದಕ್ಕೂ; ಲೇವ್ಯರು ಒಕ್ಕಲುತನದವರಿರುವ ಊರುಗಳಿಂದ ಹತ್ತರ
ಲ್ಲೊಂದು ಪಾಲನ್ನು ಹೊಂದುವ ಹಾಗೆ, ನಮ್ಮ ಭೂಮಿಯ ಹ
ತ್ತರಲ್ಲೊಂದು ಪಾಲನ್ನು ಲೇವ್ಯರಿಗೆ ತರುವದಕ್ಕೂ ಪ್ರಮಾಣ
೩೮ ಮಾಡಿದೆವು. ಇದಲ್ಲದೆ ಲೇವ್ಯರು ಹತ್ತರಲ್ಲೊಂದು ಪಾಲನ್ನು ತೆ
ಗೆದು ಕೊಳ್ಳುವಾಗ, ಆರೋನನ ಮಗನಾದ ಯಾಜಕನು ಲೇ
ವ್ಯರ ಸಂಗಡ ಇರ ಬೇಕು. ಲೇವ್ಯರು ಹತ್ತರಲ್ಲೊಂದು ಪಾಲಾದ
ದರಲ್ಲಿ ಹತ್ತರಲ್ಲೊಂದು ಪಾಲನ್ನು ತೆಗೆದು ಕೊಂಡು, ನಮ್ಮ ದೇ
ವರ ಮನೆಯಲ್ಲಿ ಕೊಠಡಿಗಳ ಬಳಿಯ ಬೊಕ್ಕಸದ ಮನೆಗೆ ತರ
೩೯ ಬೇಕು. ಯಾಕಂದರೆ ಪರಿಶುದ್ಧ ಸ್ಥಾನದ ಸಾಮಾನುಗಳೂ, ಸೇ
ವೆ ಮಾಡುವ ಯಾಜಕರೂ, ದ್ವಾರಪಾಲಕರೂ, ಹಾಡುಗಾರ
ರೂ ಇರುವ ಕೊಠಡಿಗಳಿಗೆ, ಇಸ್ರಯೇಲ ಮಕ್ಕಳೂ ಲೇವ್ಯರ
ಮಕ್ಕಳೂ ಕಾಣಿಕೆಯಾದ ಧಾನ್ಯವನ್ನೂ, ದ್ರಾಕ್ಷೇರಸವನ್ನೂ,
ಎಣ್ಣೆಯನ್ನೂ ತರ ಬೇಕು. ಮತ್ತು ನಾವು ನಮ್ಮ ದೇವರ ಮನೆ
ಯನ್ನು ಬಿಡುವದಿಲ್ಲ.

## ೧೧. ಸಂಧಿ.

೧ ಆದರೆ ಜನರ ಪ್ರಧಾನರು ಯೆರೂಸಲೇಮಿನಲ್ಲಿ ವಾಸವಾಗಿದ್ದರು.
ಇದಲ್ಲದೆ ಹತ್ತು ಮಂದಿಯಲ್ಲಿ ಒಬ್ಬನು ಪರಿಶುದ್ಧ ಪಟ್ಟಣವಾದ ಯೆ
ರೂಸಲೇಮಿನಲ್ಲಿ ವಾಸವಾಗಿರುವದಕ್ಕೂ ಒಂಭತ್ತು ಮಂದಿ ಇತರ
ಪಟ್ಟಣಗಳಲ್ಲಿ ವಾಸವಾಗಿರುವದಕ್ಕೂ ಮಿಕ್ಕಾದ ಜನರು ಚೀಟುಗಳ
೨ ನ್ನು ಹಾಕಿದರು. ಆಗ ಜನರು ಯೆರೂಸಲೇಮಿನಲ್ಲಿ ವಾಸವಾಗಿ
ರ ಸಮ್ಮತಿ ಪಟ್ಟವರೆಲ್ಲರನ್ನು ಆಶೀರ್ವದಿಸಿದರು.

೩ ಯೆಹೂದ ಪಟ್ಟಣಗಳಲ್ಲಿ ಇಸ್ರಯೇಲರೂ ಯಾಜಕರೂ ಲೇ
ವ್ಯರೂ ನೆತಿನಿಯರೂ ಸೊಲೊಮೋನನ ಸೇವಕರ ಮಕ್ಕಳೂ
ಅವರವರು ತಮ್ಮ ತಮ್ಮ ಪಟ್ಟಣಗಳ ಸ್ವಾಸ್ತ್ಯಗಳಲ್ಲಿ ವಾಸವಾಗಿ
ದ್ದರು. ಆದರೆ ವಾಸವಾಗಿದ್ದ ಶೀಮೆಯ ಮುಖ್ಯಸ್ಥರು ಯಾರಂದ
೪ ರೆ—ಯೆರೂಸಲೇಮಿನೊಳಗೆ ಯೆಹೂದನ ಮಕ್ಕಳಲ್ಲಿಯೂ ಬೆ
ನ್ಯಮಿನನ ಮಕ್ಕಳಲ್ಲಿಯೂ ಕೆಲವರು ವಾಸವಾಗಿದ್ದರು.

ಯೆಹೂದನ ಮಕ್ಕಳ್ಯಾರಂದರೆ—ಪೇರಚನ ಮಕ್ಕಳಲ್ಲಿ, ಮ
ಹಲಲೇಲನ ಮಗನಾದ ಶಿಫಟ್ಯನ ಮಗನಾದ ಅಮರ್ಯನ ಮಗ
ನಾದ ಜೆಕರೀಯನ ಮಗನಾದ ಉಜ್ಜೀಯನ ಮಗನಾದ ಅಟ್ಟಾ
೫ ಯನೂ, ಶಿಲೋನಿಯ ಮಗನಾದ ಜೆಕರೀಯನ ಮಗನಾದ ಯೊ
ಯರೀಬನ ಮಗನಾದ ಅಡಾಯನ ಮಗನಾದ ಹಜಾಯನ ಮಗ
ನಾದ ಕೊಲ್ಹೊಜೆಯ ಮಗನಾದ ಬರೂಕನ ಮಗನಾದ ಮಸ್ಸೇ
೬ ಯನೂ ಯೆರೂಸಲೇಮಿನಲ್ಲಿ ವಾಸವಾಗಿರುವ ಪೇರಚನ ಕು
ಮಾರಕರೆಲ್ಲಾ ನಾನೂರ ಅರುವತ್ತೆಂಟು ಮಂದಿ. ಇವರು ಪರಾಕ್ರ
ಮಶಾಲಿಗಳು.

೭ ಬೆನ್ಯಮಿನನ ಕುಮಾರರು ಯಾರಂದರೆ—ಯೆಶಾಯನ
ಮಗನಾದ ಇತಿಯೇಲನ ಮಗನಾದ ಮಸ್ಸೇಯನ ಮಗನಾದ ಕೊ
ಲಾಯನ ಮಗನಾದ ಪೆದಾಯನಮಗನಾದ ಯೊವೇದನ ಮಗ
೮ ನಾದ ಮೆಶುಲ್ಲಾಮನ ಮಗನಾದ ಸಲ್ಲುವು. ಅವನ ತರುವಾಯ
ಗಬ್ಬಾಯನು, ಸಲ್ಲಾಯನು, ಒಂದಲಾದ ಒಂಭೈನೂರ ಇಪ್ಪತ್ತೆಂ
೯ ಟು ಮಂದಿಯು. ಚಿಕ್ರಿಯ ಮಗನಾದ ಯೊವೇಲನು ಅವರಿಗೆ
ಅಧಿಪತಿಯಾಗಿದ್ದನು. ಸೆನೂವನ ಮಗನಾದ ಯೆಹೂದನು ಪ
ಟ್ಟಣದ ಮೇಲೆ ಎರಡನೆಯವನಾಗಿದ್ದನು.

೧೦ ಯಾಜಕರಲ್ಲಿ ಯಾರಂದರೆ—ಯೊಯರೀಬನ ಮಗನಾದ
೧೧ ಯೆದಾಯನು, ಯಕೀನನು. ಅಹೀಟುಬನ ಮಗನಾದ ಸೆರಿ
ಯೋತನ ಮಗನಾದ ಚದೋಕನ ಮಗನಾದ ಮೆಷುಲ್ಲಾಮನ
ಮಗನಾದ ಹಿಲ್ಕೀಯನ ಮಗನಾದ ಸೆರಾಯನು ದೇವರ ಮನೆ
೧೨ ಯ ನಾಯಕನಾಗಿದ್ದನು. ಮನೆಯ ಕೆಲಸವನ್ನು ನಡಿಸುವ ಅ
ವರ ಸಹೋದರರು ಎಂಟು ನೂರ ಇಪ್ಪತ್ತೆರಡು ಮಂದಿ ಇದ್ದರು.
ಮಲ್ಕೀಯನ ಮಗನಾದ ಪಶೂರನ ಮಗನಾದ ಜೆಕರೀಯನ ಮ
ಗನಾದ ಅಮ್ಜಿಯ ಮಗನಾದ ಬೆಲ್ಯನ ಮಗನಾದ ಯೆಶೋಹಾ
೧೩ ಮನ ಮಗನಾದ ಅಡಾಯನೂ, ಪಿತೃಗಳಲ್ಲಿ ಮುಖ್ಯಸ್ಥರಾದ ಅ
ವನ ಸಹೋದರರೂ ಇನ್ನೂರ ನಾಲ್ವತ್ತೆರಡು ಮಂದಿಯಾಗಿದ್ದ
ರು. ಇಮ್ಮೇರನ ಮಗನಾದ ಮೆಷಿಲ್ಲೆಮೋತನ ಮಗನಾದ ಹ
ಜಾಯಿಯ ಮಗನಾದ ಅಜರೇಲನ ಮಗನಾದ ಅಮಸಾಯಿ
೧೪ ಯೂ, ಅವರ ಸಹೋದರರಾದ ಪರಾಕ್ರಮಶಾಲಿಗಳೂ ನೂರ
ಇಪ್ಪತ್ತೆಂಟು ಮಂದಿಯಾಗಿದ್ದರು. ಒಬ್ಬ ಶ್ರೇಷ್ಠನ ಮಗನಾದ ಜ
ಬ್ದಿಯೇಲನು ಅವರಿಗೆ ಅಧಿಪತಿಯಾಗಿದ್ದನು.

೧೫ ಲೇವ್ಯರಲ್ಲಿ ಯಾರಂದರೆ—ಲೇವ್ಯರ ಯಜಮಾನರಲ್ಲಿ ಬುನಿ
ಯ ಮಗನಾದ ಹಷಬ್ಯನ ಮಗನಾದ ಅಜ್ರೀಕಮನ ಮಗನಾದ
೧೬ ಹಷೂಬನ ಮಗನಾದ ಶೆಮಾಯನು; ಶಬ್ಬೆತಾಯನೂ, ಯೊ
ಜಬಾದನೂ ದೇವರ ಮನೆಯ ಹೊರಗಿನ ಕೆಲಸವನ್ನು ವಿಚಾರಿಸು
೧೭ ವವರಾಗಿದ್ದರು. ಇದಲ್ಲದೆ ಆಸಾಫನ ಮಗನಾದ ಜಬ್ದಿಯ ಮಗ
ನಾದ ಮಿಕಾಯನ ಮಗನಾದ ಮತ್ತನ್ಯನು ಪ್ರಾರ್ಥನೆಯಲ್ಲಿ ಸ್ತು
ತಿಯನ್ನು ಪ್ರಾರಂಭಿಸ ಶ್ರೇಷ್ಠನಾಗಿದ್ದನು. ಅವನ ಸಹೋದರ
ರಲ್ಲಿ ಎರಡನೆಯವನು ಬಕ್ಬಕ್ಯನು ಅವನ ಸಂಗಡ ಯೆದುತೂನ
ನ ಮಗನಾದ ಗಲಾಲನ ಮಗನಾದ ಶಮೂವನ ಮಗನಾದ ಅ
೧೮ ಬ್ದನು. ಪರಿಶುದ್ಧ ಪಟ್ಟಣದಲ್ಲಿರುವ ಲೇವ್ಯರೆಲ್ಲಾ ಇನ್ನೂರ ಎಂಭ
ತ್ತು ನಾಲ್ಕು ಮಂದಿಯಾಗಿದ್ದರು.

೧೯ ದ್ವಾರಪಾಲಕರಾದ ಅಕ್ಕೂಬನೂ ಟಲ್ಮೋನನೂ, ಬಾಗಲು
ಗಳನ್ನು ಕಾಯುವವರಾದ ಅವರ ಸಹೋದರರೂ, ನೂರ ಎಪ್ಪ
ತ್ತೆರಡು ಮಂದಿಯಾಗಿದ್ದರು.

೨೦ ಇಸ್ರಯೇಲ್ಯರ ಮಿಕ್ಕಾದ ಯಾಜಕರೂ ಲೇವ್ಯರೂ ತಮ್ಮ
ತಮ್ಮ ಸ್ವಾಸ್ತ್ಯಗಳಲ್ಲಿ ಯೆಹೂದದ ಎಲ್ಲಾ ಪಟ್ಟಣಗಳಲ್ಲಿ ವಾಸ
ವಾಗಿದ್ದರು.

೨೧ ಆದರೆ ನೆತಿನಿಯರು ಓಫಲಿನಲ್ಲಿ ವಾಸವಾಗಿದ್ದರು. ಚೀಹ
ನೂ ಗಿಷ್ಪನೂ ನೆತಿನಿಯರ ಮೇಲಿದ್ದರು.

೨೨ ಬಾಕನ ಮಗನಾದ ಮತ್ತನ್ಯನ ಮಗನಾದ ಹಷಬ್ಯನ ಮಗ
ನಾದ ಬಾನಿಯ ಮಗನಾದ ಉಜ್ಜಿಯು ಯೆರೂಸಲೇಮಿನಲ್ಲಿರು
೨೩ ವ ಲೇವ್ಯರ ಅಧಿಪತಿಯಾಗಿದ್ದನು. ಆಸಾಫನ ಮಕ್ಕಳಲ್ಲಿರುವ
ಹಾಡುಗಾರರು ದೇವರ ಮನೆಯ ಕಾರ್ಯದ ಮೇಲೆ ವಿಚಾರಣೆ
ಕರ್ತರಾಗಿದ್ದರು. ಯಾಕಂದರೆ ದಿನದಿನಕ್ಕೆ ಹಾಡುಗಾರರಿಗೋ
ಸ್ಕರ ನಿತ್ಯ ಕಟ್ಟಳೆ ಇರ ಬೇಕೆಂದು, ಅರಸನು ಅವರನ್ನು ಕುರಿ
ತು ಆಜ್ಞಾಪಿಸಿದ್ದನು.

೨೪ ಇದಲ್ಲದೆ ಯೆಹೂದನ ಮಗನಾದ ಜೇರಹನ ಕುಮಾರರಲ್ಲಿ
ಒಬ್ಬನಾಗಿರುವ ಮೆಷೆಜಬೇಲನ ಮಗನಾದ ಪೆತಹ್ಯನು ಜನರಿ
ಗೋಸ್ಕರ ಸಕಲ ಕಾರ್ಯಗಳಲ್ಲಿ ಅರಸನ ಕೈಹತ್ತರ ಇದ್ದನು.

೨೫ ಗ್ರಾಮಗಳಲ್ಲಿಯೂ ಅವುಗಳ ಹೊಲಗಳಲ್ಲಿಯೂ ಇದ್ದವರು
ಯಾರಂದರೆ—ಯೆಹೂದನ ಮಕ್ಕಳಲ್ಲಿ ಕೆಲವರು ಕಿರ್ಯಾತ್ ಅ
ರ್ಬದಲ್ಲಿಯೂ ಅದರ ಗ್ರಾಮಗಳಲ್ಲಿಯೂ, ದೀಬೋನಿನಲ್ಲಿಯೂ
ಅದರ ಗ್ರಾಮಗಳಲ್ಲಿಯೂ, ಯೆಕಬ್ಜೇಲಿನಲ್ಲಿಯೂ ಅದರ ಗ್ರಾ
೨೬ ಮಗಳಲ್ಲಿಯೂ, ಯೆಶೂವದಲ್ಲಿಯೂ, ಮೊಲಾದದಲ್ಲಿಯೂ, ಬೆ
೨೭ ತ್ಪೆಲಟೆದಲ್ಲಿಯೂ, ಹಚರ್ಶೂವಲಿನಲ್ಲಿಯೂ, ಬೇರ್ಷೆಬದಲ್ಲಿ
೨೮ ಯೂ, ಅವುಗಳ ಗ್ರಾಮಗಳಲ್ಲಿಯೂ, ಚಿಕ್ಲಗಿನಲ್ಲಿಯೂ, ಮೆ
೨೯ ಕೋನದಲ್ಲಿಯೂ, ಅವುಗಳ ಗ್ರಾಮಗಳಲ್ಲಿಯೂ, ಎನ್ರಿಮ್ಮೋ
೩೦ ನದಲ್ಲಿಯೂ, ಜೋರ್ಯದಲ್ಲಿಯೂ, ಯರ್ಮೂತಿನಲ್ಲಿಯೂ,
ಜನೋಹಾಹಿನಲ್ಲಿಯೂ, ಅಡುಲ್ಲಾಮಿನಲ್ಲಿಯೂ, ಅವುಗಳ ಗ್ರಾಮಗ
ಳಲ್ಲಿಯೂ, ಲಕೀಷಿನಲ್ಲಿಯೂ ಅದರ ಹೊಲಗಳಲ್ಲಿಯೂ, ಅಜೇ
ಕದಲ್ಲಿಯೂ ಅದರ ಗ್ರಾಮಗಳಲ್ಲಿಯೂ ವಾಸವಾಗಿದ್ದರು. ಅವ
ರು ಬೇರ್ಷೆಬವು ಮೊದಲ್ಗೊಂಡು ಹಿನ್ನೋಮನ ತಗ್ಗಿನ ಮಟ್ಟಿ
ಗೂ ವಾಸವಾಗಿದ್ದರು.

೩೧ ಇದಲ್ಲದೆ ಬೆನ್ಯಮಿನನ ಮಕ್ಕಳು ಗೇಬವು ಮೊದಲ್ಗೊಂಡು
ಮಿಕ್ಮಾಷಿನ ಮಟ್ಟಿಗೂ ವಾಸವಾಗಿದ್ದರು. ಮತ್ತು ಆಯೆವು, ಬೇ
೩೨ ತೇಲು, ಇವುಗಳ ಗ್ರಾಮಗಳೂ, ಅನಾತೋತು, ನೋಬು, ಅ
೩೩ ನ್ಯವು, ಹಚೋರು, ರಾಮವು, ಗಿತ್ತಾಯಿಮ್, ಹದೀದು, ಜೆಬೋ
೩೪ ಯಿಮ್, ನೆಬಲ್ಲಾಟು, ಲೋದು, ಒನೋನು ಎಂಬ ಕರ್ಮಕಾರರ
೩೫ ತಗ್ಗೂ, ಇವರಿಗೆ ಉಂಟಾಗಿದ್ದವು. ಲೇವ್ಯರಲ್ಲಿ ಮಿಕ್ಕಾದವರು
ಯೆಹೂದದಲ್ಲಿಯೂ ಬೆನ್ಯಮಿನಾನಲ್ಲಿಯೂ ವಿಭಾಗಸಲ್ಪಟ್ಟಿ
ದ್ದರು.

## ೧೨. ಸಂಧಿ.

೧ ಶಲ್ತಿಯೇಲನ ಮಗನಾದ ಜೆರುಬಾಬೆಲನ ಸಂಗಡಲೂ ಯೆಶೂ
ವನ ಸಂಗಡಲೂ ಏರಿ ಹೋದ ಯಾಜಕರೂ ಲೇವ್ಯರೂ ಯಾ
೨ ರಂದರೆ—ಸೆರಾಯನು, ಯೆರೆಮಿಯನು, ಎಜ್ರನು, ಅಮರ್ಯ
೩ ನು, ಮಲ್ಲೂಕನು, ಹಟೂಷನು, ಶೆಕನ್ಯನು, ರೆಹೂಮನು, ಮೆರೆ
೪ ಮೋತನು, ಇದ್ದೋನು, ಗಿಂತೊಯನು, ಅಬೀಯನು, ಮಿಯ
೫ ಮಿನನು, ಮಾದ್ಯನು, ಬಿಲ್ಗಾಯನು, ಶೆಮಾಯನು, ಯೊಯ
೬ ರೀಬನು, ಯೆದಾಯನು, ಸಲ್ಲುವು, ಅಮೋಕನು, ಹಿಲ್ಕೀಯನು,
ಯೆದಾಯನು. ಇವರು ಯೆಶೂವನ ದಿವಸಗಳಲ್ಲಿ ಯಾಜಕರ
ಲ್ಲಿಯೂ ಅವರ ಸಹೋದರರಲ್ಲಿಯೂ ಶ್ರೇಷ್ಠರಾಗಿದ್ದರು.

೭ ಲೇವ್ಯರು ಯಾರಂದರೆ—ಯೆಶೂವನು, ಬಿನ್ನೂಯನು, ಕ
ದ್ಮಿಯೇಲನು, ಶೆಕಬ್ಯನು, ಯೆಹೂದನು, ಸ್ತುತಿಸುವ ಕಾರ್ಯ
೮ ದ ಮೇಲಾಗಿದ್ದ ಮತ್ತನ್ಯನೂ ಅವನ ಸಹೋದರರೂ. ಇದಲ್ಲ
ದೆ ಅವರ ಸಹೋದರರಾದ ಬಕ್ಬಕ್ಯನು, ಉನ್ನೀಯು ಒಂತುಗ
ಳಲ್ಲಿ ಅವರಿಗೆ ಎದುರಾಗಿದ್ದರು.

೧೦ ಇದಲ್ಲದೆ ಯೆಶೂವನು ಯೊಯಕೀಮನನ್ನು ಪಡೆದನು;
ಯೊಯಕೀಮನು ಎಲ್ಯಷೀಬನನ್ನು ಪಡೆದನು; ಎಲ್ಯಷೀಬನು
೧೧ ಯೊಯದಾವನನ್ನು ಪಡೆದನು; ಯೊಯದಾವನು ಯೊನತಾನ
ನನ್ನು ಪಡೆದನು; ಯೊನತಾನನು ಯದ್ದೂವನನ್ನು ಪಡೆದನು.

೧೨ ಯೊಯಕೀಮನ ದಿವಸಗಳೊಳಗೆ ಪಿತೃಗಳಲ್ಲಿ ಶ್ರೇಷ್ಠರಾಗಿ
ದ್ದ ಯಾಜಕರು ಯಾರಂದರೆ—ಸೆರಾಯನ ವಂಶದವನಾದ ಮೆ
೧೩ ರಾಯನು, ಯೆರೆಮಿಯನ ವಂಶದವನಾದ ಹನನ್ಯನು, ಎಜ್ರನ
ವಂಶದವನಾದ ಮೆಶುಲ್ಲಾಮನು, ಅಮರ್ಯನ ವಂಶದವನಾದ
೧೪ ಯೆಹೊಹನಾನನು, ಮೆಲೀಕುವಿನ ವಂಶದವನಾದ ಯೊನತಾನನು,
೧೫ ಶೆಬನ್ಯನ ವಂಶದವನಾದ ಯೋಸೆಫನು, ಹರೀಮನ ವಂಶದವನಾ
೧೬ ದ ಅದ್ನನು, ಮೆರೆಯೋತನ ವಂಶದವನಾದ ಹೆಲ್ಕಾಯನು, ಇ
ದ್ದೋನನ ವಂಶದವನಾದ ಜೆಕರೀಯನು, ಗಿಂತೋನನ ವಂಶದ
೧೭ ವನಾದ ಮೆಶುಲ್ಲಾಮನು, ಅಬೀಯನ ವಂಶದವನಾದ ಜಿಕ್ರಿಯು,
೧೮ ಮಿನ್ಯಮಿನಾನನ ಮೊವದ್ಯನ ವಂಶದವನಾದ ಪಿಲ್ತಾಯನು, ಬಿಲ್ಗನ
ವಂಶದವನಾದ ಶಮೂವನು, ಶೆಮಾಯನ ವಂಶದವನಾದ ಯೆ
೧೯ ಹೊನತಾನನು, ಯೊಯರೀಬನ ವಂಶದವನಾದ ಮತ್ತಾಯನು,
೨೦ ಯೆದಾಯನ ವಂಶದವನಾದ ಉಜ್ಜಿಯು, ಸಲ್ಲಾಯನ ವಂಶದವ
೨೧ ನಾದ ಕಲ್ಲಾಯನು, ಅಮೋಕನ ವಂಶದವನಾದ ಏಬರನು, ಹಿ
ಲ್ಕೀಯನ ವಂಶದವನಾದ ಹಷಬ್ಯನು, ಯೆದಾಯನ ವಂಶದವ
ನಾದ ನೆಥಾನಿಯೇಲನು.

೨೨ ಎಲ್ಯಷೀಬನು, ಯೊಯದಾವನು, ಯೊಹಾನನು, ಯದ್ದೂ
ವನು, ಇವರ ದಿವಸಗಳಲ್ಲಿ ಲೇವ್ಯರೂ ಯಾಜಕರೂ ಪಾರ್ಸ್ಯ
ನಾದ ದಾರ್ಯವೇಷನ ಆಳಿಕೆಯ ಪರ್ಯಂತರ ಪಿತೃಗಳ ಶ್ರೇ
ಷ್ಠರಾಗಿ ಬರೆಯಲ್ಪಟ್ಟಿದರು. ಎಲ್ಯಷೀಬನ ಮಗನಾದ ಯೊಹ
ಾನನ ಕಾಲದ ಪರ್ಯಂತರ ಲೇವಿ ಎಂಬವನ ಪುತ್ರರಾದ ಪಿತೃ
ಗಳ ಶ್ರೇಷ್ಠರು ದಿನಚರ್ಯೆ ಪುಸ್ತಕದಲ್ಲಿ ಬರೆಯಲ್ಪಟ್ಟಿದ್ದರು.

೨೪ ಲೇವ್ಯರ ಶ್ರೇಷ್ಠರಾದ ಹಷಬ್ಯನೂ, ಶೆರೆಬ್ಯನೂ, ಕದ್ಮಿಯೇಲನ ಮಗನಾದ ಯೇಶೂವನೂ, ಅವರಿಗೆದುರಾಗಿ ನಿಂತ ಅವರ ಸಹೋದರರೂ ದೇವರ ಮನುಷ್ಯನಾದ ದಾವೀದನ ಆಜ್ಞೆಯ ಪ್ರಕಾರ ಹೊಗಳುವದಕ್ಕೂ ಸ್ತೋತ್ರ ಮಾಡುವದಕ್ಕೂ ಒಂತು ೨೫ ಒಂತುಗಳಾಗಿದ್ದರು. ಮತ್ತನ್ಯನೂ, ಬಕ್ಬುಕ್ಯನೂ, ಒಬದ್ಯನೂ, ಮೆಷುಲ್ಲಾಮನೂ, ಟಲ್ಮೋನನೂ, ಅಕ್ಕೂಬನೂ ಬೊಕ್ಕಸಗಳ ಬಾಗಲುಗಳನ್ನು ಕಾಯುವವರಾಗಿದ್ದರು. ೨೬ ಯೊಚದಾಕನ ಮಗನಾದ ಯೇಶೂವನ ಮಗನಾದ ಯೊಯಕೀಮನ ದಿವಸಗಳಲ್ಲಿಯೂ ಅಧಿಪತಿಯಾದ ನೆಹೆಮಿಯನ ದಿವಸಗಳಲ್ಲಿಯೂ ಶಾಸ್ತ್ರಿಯೂ ಯಾಜಕನೂ ಆದ ಎಜ್ರನ ದಿವಸಗಳಲ್ಲಿಯೂ ಇವರು ಇದ್ದರು.

೨೭ ಯೆರೂಸಲೇಮಿನ ಗೋಡೆಯನ್ನು ಪ್ರತಿಷ್ಠೆ ಮಾಡುವಾಗ, ಸ್ತುತಿಗಳಿಂದಲೂ, ಹಾಡುವದರಿಂದಲೂ, ತಾಳಗಳಿಂದಲೂ, ವೀಣೆಗಳಿಂದಲೂ, ಕಿನ್ನರಿಗಳಿಂದಲೂ ಪ್ರತಿಷ್ಠೆಯನ್ನು ಸಂತೋಷವಾಗಿ ಆಚರಿಸುವದಕ್ಕೆ, ಲೇವ್ಯರನ್ನು ಯೆರೂಸಲೇಮಿಗೆ ಬರ ಮಾಡುವ ನಿಮಿತ್ತವಾಗಿ ಅವರನ್ನು ಅವರ ಸಮಸ್ತ ಸ್ಥಳಗಳಲ್ಲಿ ಹುಡುಕಿದರು. ೨೮ ಮತ್ತು ಹಾಡುಗಾರರ ಮಕ್ಕಳು ಯೆರೂಸಲೇಮಿನ ಸುತ್ತಲಿರುವ ಬೈಲಿನಿಂದಲೂ, ನೆಟೋಫದ ಗ್ರಾಮಗಳಿಂದಲೂ, ಗಿಲ್ಗಾಲನ ಮನೆಯಿಂದಲೂ, ಗೇಬದ ಅಜ್ಮಾವೇತಿನ ಹೊಲಗಳಿಂದಲೂ ಕೂಡಿಕೊಂಡರು. ೨೯ ಯಾಕಂದರೆ ಹಾಡುಗಾರರು ತಮಗೋಸ್ಕರ ಯೆರೂಸಲೇಮಿನ ಸುತ್ತಲೂ ಗ್ರಾಮಗಳನ್ನು ಕಟ್ಟಿಸಿಕೊಂಡಿದ್ದರು. ೩೦ ಯಾಜಕರೂ ಲೇವ್ಯರೂ ತಮ್ಮನ್ನು ಶುದ್ಧ ಮಾಡಿಕೊಂಡು, ಜನರನ್ನೂ, ಬಾಗಲುಗಳನ್ನೂ, ಗೋಡೆಯನ್ನೂ ಶುದ್ಧ ಮಾಡಿದರು.

೩೧ ಆಗ ನಾನು ಯೆಹೂದದ ಪ್ರಧಾನರನ್ನು ಗೋಡೆಯ ಮೇಲೆ ಬರ ಮಾಡಿ, ಸ್ತುತಿಸ ಎರಡು ಗುಂಪುಗಳನ್ನು ನೇಮಿಸಿದೆನು; ಒಂದು ಗುಂಪಿನವರು ಗೋಡೆಯ ಮೇಲೆ ಬಲಗಡೆಯಾಗಿ ಶಿಪ್ಪೇ ಬಾ ೩೨ ಗಲ ಕಡೆಗೆ ಹೋದರು. ಅವರ ಹಿಂಭಾಗದಲ್ಲಿ ಹೊಶಾಯ್ಯನೂ ೩೩ ಯೆಹೂದದ ಪ್ರಧಾನರಲ್ಲಿ ಅರ್ಧ ಜನರೂ, ಅಜರ್ಯನೂ, ಎಜ್ರನೂ, ಮೆಷುಲ್ಲಾಮನೂ, ಯೆಹೂದನೂ, ಬೆನ್ಯಮಿನನೂ, ಶೆ ೩೪ ಮಾಯನೂ ಯೆಕೆಮಿಯಾನೂ, ತುತೂರಿಗಳನ್ನು ಹಿಡಿಯುವ ಯಾಜಕರ ಮಕ್ಕಳಲ್ಲಿ, ಆಸಾಫನ ಮಗನಾದ ಜಕ್ಕೂರನ ಮಗನಾದ ಮಿಕಾಯನ ಮಗನಾದ ಮತ್ತನ್ಯನ ಮಗನಾದ ಶೆಮಾಯನ ಮಗನಾದ ಯೊನತಾನನ ಮಗನಾದ ಜೆಕರೀಯನೂ, ೩೬ ದೇವರ ಮನುಷ್ಯನಾದ ದಾವೀದನ ಗೀತವಾದ್ಯಗಳನ್ನು ಹಿಡಿಯುವ ಜೆಕರೀಯನ ಸಹೋದರರಾದ ಸೆಮಾಯನೂ, ಅಜರೇಲನೂ, ಮಿಲಲಾಯನೂ, ಗಿಲಲಾಯನೂ, ಮಾವಾಯನೂ, ನೆಥಾನಿಯೇಲನೂ, ಯೆಹೂದನೂ, ಹನಾನಿಯೂ ನಡೆದರು; ಶಾಸ್ತ್ರಿ ೩೭ ಯಾದ ಎಜ್ರನು ಇವರ ಮುಂದೆ ನಡೆದನು. ತಮಗೆ ಎದುರಾದ ಬಾವಿಯ ಬಾಗಲಿಗೆ ಬಂದಾಗ, ಗೋಡೆಯಲ್ಲಿ ಎತ್ತರವಾದ ದಾವೀದನ ಪಟ್ಟಣದ ಮೆಟ್ಟುಗಳಿಂದ ಏರಿ, ದಾವೀದನ ಮನೆಯ ಮೇಲೆ ಮೂಡಣ ಕಡೆ ಇರುವ ನೀರಿನ ಬಾಗಲಿಗೆ ಹೋದರು.

೩೮ ಸ್ತುತಿಸುವ ಮತ್ತೊಂದು ಗುಂಪಿನವರು ಅವರಿಗೆದುರಾಗಿ ನಡೆದರು; ನಾನು ಅವರ ಹಿಂದೆ ನಡೆದೆನು. ಗೋಡೆಯ ಮೇಲೆ ಇದ್ದ ಅರ್ಧ ಜನರು ಭಟ್ಟಿಗಳ ಗೋಪುರದ ಅಕೆಯಿಂದ ನಡೆದು, ಅಗಲವಾದ ಗೋಡೆಯನ್ನು ದಾಟಿ, ಎಫ್ರಯಿಮನ ಬಾಗಲ ಮೇಲೆಯೂ ಹಳೇ ಬಾಗಲ ಮೇಲೆಯೂ ಮೀನಿನ ಬಾಗಲ ಮೇಲೆಯೂ ಹಾದು, ಹನನೇಲನ ಗೋಪುರವನ್ನೂ ಮೇಯದ ಗೋಪುರವನ್ನೂ ದಾಟಿ, ಕುರಿ ಬಾಗಲ ಪರ್ಯಂತರ ಬಂದು, ಕೆಳೆ ಮನೆಯ ಬಾಗಲ ಬಳಿಯಲ್ಲಿ ನಿಂತರು.

೪೦ ತರುವಾಯ ಸ್ತುತಿ ಮಾಡುವ ಎರಡು ಗುಂಪುಗಳೂ ನಾನೂ ನನ್ನ ಸಂಗಡ ಇದ್ದ ಅರ್ಧ ಮಂದಿ ಅಧಿಕಾರಸ್ತರೂ ದೇವರ ಮನೆಯಲ್ಲಿ ನಿಂತಿದ್ದೆವು. ೪೧ ಆಗ ಯಾಜಕರಾದ ಎಲ್ಯಕೀಮನೂ, ಮಸ್ಸೇಯನೂ, ಮಿನ್ಯಮಿನನು, ಮಿಕಾಯನೂ, ಎಲ್ಯೊವೆನಾಯನೂ, ಜೆಕರೀಯನೂ, ಹನನ್ಯನೂ ತುತೂರಿಗಳನ್ನು ಹಿಡುಕೊಂಡವರು; ೪೨ ಮತ್ತು ಮಸ್ಸೇಯನೂ, ಶೆಮಾಯನೂ, ಎಲೆಯಾಜರನೂ, ಉಜ್ಜಿಯೂ, ಯೆಹೊಹನಾನನೂ, ಮಲ್ಕೀಯನೂ, ಎಲಾಮನೂ, ಏಕರನೂ; ತಮ್ಮ ಅಧಿಪತಿಯಾದ ಯಿಜ್ರಾಹ್ಯನ ಸಂಗಡ ಹಾಡುಗಾರರು ಭುಟ್ಟಿಯಾಗಿ ಹಾಡಿದರು. ೪೩ ಮತ್ತು ಆ ದಿವಸದಲ್ಲಿ ಮಹಾ ಬಲಿಗಳನ್ನು ಅರ್ಪಿಸಿ, ದೇವರು ಅವರನ್ನು ಮಹಾ ಸಂತೋಷದಿಂದ ಸಂತೋಷಿಸ ಮಾಡಿದ್ದರಿಂದ, ಅವರು ಸಂತೋಷ ಪಟ್ಟರು. ಇದಲ್ಲದೆ ಹೆಂಡರೂ ಮಕ್ಕಳೂ ಕೂಡ ಸಂತೋಷಿಸಿದರು. ಅದರಿಂದ ಯೆರೂಸಲೇಮಿನ ಸಂತೋಷದ ಬಹು ದೂರ ಕೇಳಲ್ಪಟ್ಟಿತು.

೪೪ ಅದೇಕಾಲದಲ್ಲಿ ಯಾಜಕರಿಗೋಸ್ಕರವೂ ಲೇವ್ಯರಿಗೋಸ್ಕರವೂ, ನ್ಯಾಯಪ್ರಮಾಣದಲ್ಲಿ ನೇಮಿಸಲ್ಪಟ್ಟ ಪ್ರಕಾರ, ಪಟ್ಟಣಗಳ ಹೊಲಗಳಿಂದ ಬರ ಬೇಕಾದ ಪಾಲುಗಳನ್ನು ಕೂಡಿಸುವ ಹಾಗೆ, ಬೊಕ್ಕಸಗಳನ್ನೂ, ಕಾಣಿಕೆಗಳನ್ನೂ, ಕೊದಲು ಫಲಗಳನ್ನೂ, ಹತ್ತನೇ ಪಾಲುಗಳನ್ನೂ ಇರಿಸುವ ಉಗ್ರಾಣಗಳ ಮೇಲೆ ಕೆಲವರು ನೇಮಿಸಲ್ಪಟ್ಟಿದ್ದರು. ಯಾಕಂದರೆ ಸೇವಿಸುವ ಯಾಜಕರನ್ನೂ ಲೇವ್ಯರನ್ನೂ ಕುರಿತು ಯೆಹೂದದವರು ಸಂತೋಷ ಪಟ್ಟರು. ೪೫ ಇದಲ್ಲದೆ ದಾವೀದನು, ಅವನ ಮಗನಾದ ಸೊಲೊಮೋನನು, ಇವರ ಆಜ್ಞೆಯ ಪ್ರಕಾರ ಹಾಡುಗಾರರೂ ದ್ವಾರಪಾಲಕರೂ ತಮ್ಮ ದೇವರ ಕಾವಲಿಯನ್ನೂ ಶುದ್ಧೀಕರಣದ ಕಾವಲಿಯನ್ನೂ ಕಾಯುತ್ತಿದ್ದರು. ೪೬ ಯಾಕಂದರೆ ದಾವೀದನ, ಆಸಾಫನ ದಿವಸಗಳಲ್ಲಿ, ಪೂರ್ವ ಕಾಲದಲ್ಲಿ, ದೇವರಿಗೆ ಸ್ತೋತ್ರವನ್ನೂ ಕೊಂಡಾಟವನ್ನೂ ಹಾಡತಕ್ಕ ಹಾಡುಗಾರರಲ್ಲಿ ಶ್ರೇಷ್ಠರಾಗಿದ್ದರು. ೪೭ ಆದದರಿಂದ ಜೆರುಬಾಬೆಲನ ದಿವಸಗಳಲ್ಲಿಯೂ ನೆಹೆಮಿಯನ ದಿವಸಗಳಲ್ಲಿಯೂ ಇಸ್ರಯೇಲ್ಯರೆಲ್ಲರು ಹಾಡುಗಾರರಿಗೂ ದ್ವಾರಪಾಲಕರಿಗೂ ನಿತ್ಯಕಟ್ಟಳೆಯಾದ ಅವರವರ ಪಾಲನ್ನು ಕೊಟ್ಟರು. ಇದಲ್ಲದೆ ಅವರು ಲೇವ್ಯರಿಗೋಸ್ಕರ ಪರಿಶುದ್ಧ ಮಾಡಿದರು; ಲೇವ್ಯರು ಹಾಗೆಯೇ ಆರೋನನ ಮಕ್ಕಳಿಗೆ ಪರಿಶುದ್ಧ ಮಾಡಿದರು.

## ೧೩. ಸಂಧಿ.

೧ ಅದೇ ದಿವಸದಲ್ಲಿ ಜನರು ಕೇಳುವ ಹಾಗೆ ಮೋಶೆಯ ಪುಸ್ತಕದೊಳಗೆ ಓದುವಾಗ, ಅಮ್ಮೋನ್ಯರೂ ಮೊವಾಬ್ಯರೂ ಎಂದಿಗೂ ದೇವರ ಕೂಟದಲ್ಲಿ ಬರಕೂಡದೆಂದು ಅದರಲ್ಲಿ ಬರೆದದ್ದು ಶಿಕ್ಕಿತು. ೨ ಯಾಕಂದರೆ ಅವರು ಕೊಟ್ಟಿಯನ್ನೂ ನೀರನ್ನೂ ತಂದು ಇಸ್ರಯೇಲ ಮಕ್ಕಳನ್ನು ಎದುರುಗೊಳ್ಳದೆ, ಅವರನ್ನು ಶಪಿಸ ಅವರಿಗೆ ವಿರೋಧವಾಗಿ, ಬಿಳಾಮನನ್ನು ಕೂಲಿಗೆ ಕರಕೊಂಡರು; ಆದರೆ ನಮ್ಮ ದೇವರು ಆ ಶಪನೆಯನ್ನು ಆಶೀರ್ವಾದವಾಗ ಮಾ ೩ ಡಿದನು. ಏನಾಯಿತಂದರೆ, ಅವರು ನ್ಯಾಯಪ್ರಮಾಣವನ್ನು ಕೇಳಿದಾಗ, ಇಸ್ರಯೇಲ್ಯರೊಳಗಿಂದ ಪರ ಜನವನ್ನು ಪ್ರತ್ಯೇಕಿಸಿದರು.

೪ ಇದಕ್ಕೆ ಮುಂಚೆ ನಮ್ಮ ದೇವರ ಮನೆಯ ಉಗ್ರಾಣದ ಮೇಲೆ ಇಷ್ಟಪಟ್ಟ ವಿಚಾರಣೆ ಕರ್ತನಾದ ಎಲ್ಯಾಷೀಬನೆಂಬ ಯಾಜಕನು ಟೊಬೀಯನ ಸಂಗಡ ಬಂಧುತ್ವವನ್ನು ಮಾಡಿ ಇದ್ದು, ೫ ಲೇವ್ಯರಿಗೂ, ಹಾಡುಗಾರರಿಗೂ, ದ್ವಾರಪಾಲಕರಿಗೂ ನೇಮಿಸಲ್ಪಟ್ಟ ಕಾಣಿಕೆಗಳನ್ನೂ, ಧೂಪವನ್ನೂ, ಸಾಮಾನುಗಳನ್ನೂ, ಧಾನ್ಯದ ಹತ್ತನೇ ಪಾಲುಗಳನ್ನೂ, ದ್ರಾಕ್ಷೇರಸವನ್ನೂ, ಎಣ್ಣೆಯನ್ನೂ, ಯಾಜಕರ ಕಾಣಿಕೆಗಳನ್ನೂ ಪೂರ್ವಕಾಲದಲ್ಲಿ ಇರಿಸುತ್ತಿದ್ದ ದೊಡ್ಡ ಕೊಠಡಿಯನ್ನು ಅವನಿಗೋಸ್ಕರ ಸಿದ್ಧ ಮಾಡಿದನು. ೬ ಆದರೆ ಇಷ್ಟುಕಾಲಕ್ಕೆ ನಾನು ಯೆರೂಸಲೇಮಿನಲ್ಲಿ ಇರಲಿಲ್ಲ; ಯಾಕಂದರೆ ಬಾಬೆಲಿನ ಅರಸನಾದ ಅರ್ತಷಸ್ಟನ ಮೂವತ್ತೆರಡನೇ ವರುಷದಲ್ಲಿ ನಾನು ಅರಸನ ಬಳಿಗೆ ಬಂದು, ಸ್ವಲ್ಪಕಾಲದ ತರುವಾಯ ನಾನು ಅರಸನಿಂದ ಅಪ್ಪಣೆಯನ್ನು ತೆಗೆದು ೭ ಕೊಂಡೆನು. ನಾನು ಯೆರೂಸಲೇಮಿಗೆ ಬಂದು, ಎಲ್ಯಾಷೀಬನು ಟೊಬೀಯನಿಗೋಸ್ಕರ ದೇವರ ಮನೆಯ ಅಂಗಳಗಳಲ್ಲಿ ಒಂದು ಕೊಠಡಿಯನ್ನು ಸಿದ್ಧ ಮಾಡಿ, ಮಾಡಿದ ಕೇಡನ್ನು ನಾನು ತಿಳಿ ೮ ಕೊಂಡಾಗ, ಅದು ನನಗೆ ಬಹಳ ವ್ಯಸನಕರವಾಗಿತ್ತು; ಆದಕಾರಣ ಆ ಕೊಠಡಿಯೊಳಗಿಂದ ಟೊಬೀಯನ ಸಾಮಾನೆಲ್ಲಾ ಹೊರ ೯ ಗೆ ಹಾಕಿಸಿದೆನು. ಆಗ ನಾನು ಹೇಳಿದ್ದರಿಂದ ಅವರು ಕೊಠಡಿಗಳನ್ನು ಶುಚಿ ಮಾಡಿದರು. ತರುವಾಯ ದೇವರ ಮನೆಯ ಸಾಮಾನುಗಳನ್ನೂ, ಕಾಣಿಕೆಗಳನ್ನೂ, ಧೂಪವರ್ಗವನ್ನೂ ತಿರಿಗಿ ಅಲ್ಲಿಗೆ ತಂದು ಇಡಿಸಿದೆನು.

೧೦ ಮತ್ತು ಲೇವ್ಯರ ಪಾಲುಗಳು ಅವರಿಗೆ ಕೊಡಲ್ಪಟ್ಟದ್ದಿಲ್ಲವೆಂದು ನನಗೆ ತಿಳಿಯಿತು. ಸೇವೆಯನ್ನು ಮಾಡುವ ಲೇವ್ಯರೂ ಹಾಡು ೧೧ ಗಾರರೂ ತಮ್ಮ ತಮ್ಮ ಹೊಲಕ್ಕೆ ಓಡಿ ಹೋಗುತ್ತಿದ್ದರು. ಆಗ ನಾನು ಅಧಿಕಾರಸ್ತರನ್ನು ಗದರಿಸಿ, ಅವರಿಗೆ ದೇವರ ಮಂದಿರವನ್ನು ಬಿಟ್ಟಿದ್ದೇನೆಂದು ಹೇಳಿದೆನು. ಮತ್ತು ಅವರನ್ನು ಕೂಡಿಸಿ, ಅವ ೧೨ ರನ್ನು ಅವರ ಸ್ಥಳದಲ್ಲಿ ಇಟ್ಟೆನು. ಆಗ ಯೆಹೂದದವರೆಲ್ಲರು ಧಾನ್ಯ, ದ್ರಾಕ್ಷೇರಸ, ಎಣ್ಣೆ, ಇವುಗಳಲ್ಲಿ ಹತ್ತರಲ್ಲೊಂದು ಪಾಲು ೧೩ ಕೊಠಡಿಗಳಿಗೆ ತಂದರು. ಆಗ ನಾನು ಯಾಜಕನಾದ ಶೆಲೆಮ್ಯನನ್ನೂ, ಶಾಸ್ತ್ರಿಯಾದ ಚದೋಕನನ್ನೂ, ಲೇವ್ಯರಲ್ಲಿರುವ ಪೆದಾಯನನ್ನೂ, ಅವರಿಗೆ ಸಹಾಯವಾಗಿ ಮತ್ತನ್ಯನ ಮಗನಾದ ಜಕ್ಕೂರನ ಮಗನಾದ ಹನಾನನನ್ನೂ ಬೊಕ್ಕಸಗಳ ಮೇಲೆ ನೇಮಿಸಿದೆನು; ಯಾಕಂದರೆ ಅವರು ನಂಬಿಗಸ್ತರೆಂದು ಎಣಿಸಲ್ಪಟ್ಟಿದ್ದರು; ತಮ್ಮ ಸಹೋದರರಿಗೆ ವಿಭಾಗಿಸುವದು ಅವರ ಕೆಲಸವಾಗಿತ್ತು.

೧೪ ನನ್ನ ದೇವರೇ, ಇದಕ್ಕೋಸ್ಕರ ನನ್ನನ್ನು ಜ್ಞಾಪಕ ಮಾಡು; ನಾನು ದೇವರ ಮನೆಗೋಸ್ಕರವೂ ಅದರ ವಿಚಾರಗಳಿಗೋಸ್ಕರವೂ ಮಾಡಿದ ನನ್ನ ಉಪಕಾರಗಳನ್ನು ಅಳಿಸಿ ಬಿಡ ಬೇಡ.

೧೫ ಆ ದಿವಸಗಳಲ್ಲಿ ನಾನು ಯೆಹೂದದೊಳಗೆ ಸಬ್ಬತ್ ದಿವಸಗಳಲ್ಲಿ ಕೆಲವರು ಆಲೆಗಳನ್ನು ತುಳಿಯುವದನ್ನೂ, ಸೂಡುಗಳನ್ನು ತರುವದನ್ನೂ, ಕತ್ತೆಗಳ ಮೇಲೆ ಹೇರಿಕೊಂಡು ಬರುವದನ್ನೂ, ಮತ್ತು ಸಬ್ಬತ್ ದಿವಸದಲ್ಲಿ ಯೆರೂಸಲೇಮಿಗೆ ದ್ರಾಕ್ಷೇರಸವನ್ನೂ, ದ್ರಾಕ್ಷೇ ಹಣ್ಣುಗಳನ್ನೂ ಅಂಜೂರದ ಹಣ್ಣುಗಳನ್ನೂ ಎಲ್ಲಾ ಹೊರೆಗಳನ್ನೂ ತರುವದನ್ನೂ ನಾನು ನೋಡಿದ್ದರಿಂದ, ಸಂತೆಯ ದಿವಸದಲ್ಲಿ ನಾನು ಸಾಕ್ಷಿಯಾಗಿ ಹೇಳಿದೆನು. ೧೬ ಇದಲ್ಲದೆ ಮೀನುಗಳನ್ನೂ ಎಲ್ಲಾ ಸರಕುಗಳನ್ನೂ ತಕ್ಕೊಂಡು ಬಂದು, ಸಬ್ಬತ್ ದಿವಸದಲ್ಲಿ ಯೆಹೂದದ ಮಕ್ಕಳಿಗೆ ಮಾರುವ ೧೭ ಹೋರಿಯರು ಯೆರೂಸಲೇಮಿನಲ್ಲಿ ವಾಸವಾಗಿದ್ದರು. ಆಗ ನಾನು ಯೆಹೂದದ ಶ್ರೇಷ್ಠರನ್ನು ಗದರಿಸಿ, ಅವರಿಗೆ ಹೇಳಿದೆನು—ಸಬ್ಬತ್ ದಿವಸವನ್ನು ನೀವು ಅಪವಿತ್ರ ಮಾಡುವ ಈ ಕೆಟ್ಟಕಾರ್ಯವೇನು! ೧೮ ನಿಮ್ಮ ತಂದೆಗಳು ಈ ಪ್ರಕಾರ ಮಾಡಿದ್ದರಿಂದ, ನಮ್ಮ ದೇವರು ನಮ್ಮ ಮೇಲೆಯೂ, ಈ ಪಟ್ಟಣದ ಮೇಲೆಯೂ ಈ ಕೇಡನ್ನೆಲ್ಲಾ ಬರ ಮಾಡಲಿಲ್ಲವೋ! ಆದರೆ ನೀವು ಸಬ್ಬತ್ ದಿವಸವನ್ನು ಅಪವಿತ್ರ ಮಾಡುವದರಿಂದ ಇಸ್ರಯೇಲಿನ ಮೇಲೆ ಇನ್ನೂ ಉರಿಯನ್ನು ಬರ ಮಾಡುವಿರಿ.

೧೯ ಆದಕಾರಣ ಸಬ್ಬತ್ ಆಗುವದಕ್ಕಿಂತ ಮುಂಚೆ ಯೆರೂಸಲೇಮಿನ ಬಾಗಲುಗಳಲ್ಲಿ ಕತ್ತಲು ಆಗಲಾರಂಭಿಸಿದಾಗ, ಬಾಗಲುಗಳನ್ನು ಹಾಕುವ ಹಾಗೆಯೂ, ಸಬ್ಬತ್ ದಿವಸವು ತೀರುವ ಪರ್ಯಂತರ ಅವುಗಳನ್ನು ತೆಕೆಯದೆ ಇರುವ ಹಾಗೆಯೂ, ನಾನು ಅವರಿಗೆ ಹೇಳಿದೆನು. ಮತ್ತು ಸಬ್ಬತ್ ದಿವಸದಲ್ಲಿ ಹೊರೆ ಏನಾದರೂ ಒಳಗೆ ತಾರದ ಹಾಗೆ ನನ್ನ ಸೇವಕರಲ್ಲಿ ಕೆಲವರನ್ನು ಬಾಗಲುಗ ೨೦ ಳ ಬಳಿಯಲ್ಲಿ ಇಟ್ಟೆನು. ಆಗ ವರ್ತಕರೂ ಎಲ್ಲಾ ಸರಕುಗಳನ್ನು ಮಾರುವವರೂ ಒಂದೆರಡು ಸಾರಿ ಯೆರೂಸಲೇಮಿನ ಹೊರಗೆ ೨೧ ರಾತ್ರಿ ಕಳೆದರು. ಆಗ ನಾನು ಅವರನ್ನು ಗದರಿಸಿ, ಅವರಿಗೆ ಹೇಳಿದೆನು—ನೀವು ಕೋಟೆಯ ಮುಂದೆ ವಸ್ತಿ ಮಾಡುವದೇನು! ನೀವು ಇನ್ನು ಮೇಲೆ ಹಾಗೆ ಮಾಡಿದರೆ, ನಿಮ್ಮ ಮೇಲೆ ಕೈ ಹಾಕುವೆನು. ಆ ಹೊತ್ತಿನಿಂದ ಅವರು ಸಬ್ಬತ್ ದಿವಸದಲ್ಲಿ ಬರಲಿಲ್ಲ.

೨೨ ಆಗ ಲೇವ್ಯರು ತಮ್ಮನ್ನು ಶುಚಿ ಮಾಡಿ ಕೊಳ್ಳ ಬೇಕೆಂದೂ, ಸಬ್ಬತ್ ದಿವಸವನ್ನು ಪರಿಶುದ್ಧ ಮಾಡುವ ಹಾಗೆ, ಅವರು ಬಂದು, ಬಾಗಲುಗಳನ್ನು ಕಾಯ ಬೇಕೆಂದೂ ಅವರಿಗೆ ಹೇಳಿದೆನು.

ನನ್ನ ದೇವರೇ, ಇದಕ್ಕೋಸ್ಕರ ನೀನು ನನ್ನನ್ನು ನೆನಸಿ ನಿನ್ನ ಮಹಾ ಕೃಪೆಯ ಪ್ರಕಾರ ನನ್ನನ್ನು ಕರುಣಿಸು.

೨೩ ಆ ದಿವಸಗಳಲ್ಲಿ ಅಶ್ದೋದಿನ ಅಮ್ಮೋನ್ಯರ ಮತ್ತು ಅಶ್ದೋದಿನ ಯೆಹೂದ್ಯರ ೨೪ ಸ್ತ್ರೀಯರನ್ನು ಮದುವೆ ಮಾಡಿ ಕೊಂಡ ಯೆಹೂದ್ಯರನ್ನು ಕಂಡೆನು. ಇವರ ಮಕ್ಕಳು ಅರ್ಧ ಅಶ್ದೋದಿನ ಮಾತು ಆಡಿದರು; ಅವರು ಯೆಹೂದ್ಯರ ಮಾತು ಆಡಲಾರದೆ, ಈ ಜನ ೨೫ ಆ ಜನರ ಮಾತು ಆಡಿದರು. ಆಗ ನಾನು ಅವರನ್ನು ಗದರಿಸಿ, ಶಪಿಸಿ ಅವರಲ್ಲಿ ಕೆಲವರನ್ನು ಹೊಡೆದು, ಅವರ ಕೂದಲನ್ನು ಕಿತ್ತು, ನೀವು ನಿಮ್ಮ ಕುಮಾರ್ತೆಗಳನ್ನು ಅವರ ಕುಮಾರರಿಗೂ, ಅವರ ಕುಮಾರ್ತೆಗಳನ್ನು ನಿಮ್ಮ ಕುಮಾರರಿಗೂ ನಿಮಗೂ ತಕ್ಕೊಳ್ಳದೆ, ಕೊಡದೆ ಇರಿ ಎಂದು, ದೇವರ ಹೆಸರಿನಲ್ಲಿ ಅವರಿಗೆ ಆಣೆ ೨೬ ಇಟ್ಟೆನು. ಇಸ್ರಯೇಲಿನ ಅರಸನಾದ ಸೊಲೊಮೋನನು ಇವುಗಳಿಂದ ಪಾಪ ಮಾಡಿದನಲ್ಲವೇ! ಆದರೆ ಅನೇಕ ಜನಗಳಲ್ಲಿ ಅವನ ಹಾಗೆ ಮತ್ತೊಬ್ಬ ಅರಸನು ಇದ್ದದ್ದಿಲ್ಲ; ಅವನು ತನ್ನ ದೇವರಿ

ಗೆ ಪ್ರಿಯವಾಗಿದ್ದ ಕಾರಣ, ದೇವರು ಅವನನ್ನು ಸಮಸ್ತ ಇಸ್ರಾ
ಯೇಲಿನ ಮೇಲೆ ಅರಸನಾಗ ಮಾಡಿದನು. ಆದರೆ ಅನ್ಯಾಸ್ತ್ರೀಯರು
೮ ಅವನನ್ನು ಕೂತ ಪಾಪ ಮಾಡುವ ಹಾಗೆ ಮಾಡಿದರು. ನೀ
ವು ಅನ್ಯಾಸ್ತ್ರೀಯರನ್ನು ಮದುವೆ ಮಾಡಿಕೊಳ್ಳುವದರಿಂದ, ನ
ಮ್ಮ ದೇವರಿಗೆ ಅಕ್ಕಾಸ್ಯ ಮಾಡಿ, ಈ ಸಮಸ್ತವಾದ ದೊಡ್ಡ ಕೇ
ಡು ಮಾಡುವ ಹಾಗೆ, ನಾವು ನಿಮ್ಮ ಮಾತು ಕೇಳ ಬಹುದೋ!
೧೮ ಯಾಜಕನಾದ ಎಲ್ಯಾಶೀಬನ ಮಗನಾದ ಯೊಯದಾವನ
ಮಕ್ಕಳಲ್ಲಿ ಒಬ್ಬನು ಹೊರೋನ್ಯವಾದ ಸನ್ಬಲ್ಲಾಟನಿಗೆ ಅಳಿಯ
ನಾದ್ದಕಾರಣ, ನಾನು ಅವನನ್ನು ನನ್ನ ಜಳ್ಳಿಯಿಂದ ಹೆರಿಸಿ ಬಿ
೧೯ ಟ್ಟೆನು. ನನ್ನ ದೇವರೇ, ಅವರು ಯಾಜಕತ್ವವನ್ನೂ, ಯಾಜ
ಕ ಸೇವೆಯ ಒಡಂಬಡಿಕೆಯನ್ನೂ, ಲೇವ್ಯರ ಒಡಂಬಡಿಕೆಯ
ನ್ನೂ ಅಶುದ್ಧ ಮಾಡಿದ್ದರಿಂದ, ಅವರನ್ನು ನೆನಪು.
೩೦ ಹೀಗೆಯೇ ನಾನು ಅವರನ್ನು ಅನ್ಯ ಜನರಿಂದ ಬೆರಿಸಿ, ಶುಚಿ
ಮಾಡಿ, ಅವರವರ ಕೆಲಸದ ಪ್ರಕಾರ, ಯಾಜಕರಿಗೂ ಲೇವ್ಯರಿ
೩೧ ಗೂ ಒಂತುಗಳನ್ನೂ, ಅರ್ಪಣೆಯ ಕಟ್ಟಿಗೆಗಳ್ಳಿಗೋಸ್ಕರವೂ,
ಪ್ರಥಮ ಫಲಗಳ್ಳಿಗೋಸ್ಕರವೂ ದಿಟ್ಟವಾದ ಕಾಲಗಳನ್ನೂ ನೇ
ಮಿಸಿದೆನು.
ನನ್ನ ದೇವರೇ, ಒಳ್ಳೇದಕ್ಕಾಗಿ ನನ್ನನ್ನು ಜ್ಞಾಪಕ ಮಾಡು.

---

# THE BOOK OF ESTHER.

## ಎಸ್ತೇರಳು ಎಂಬವಳ ಚರಿತ್ರೆಯು.

### ೧. ಸಂಧಿ.

೧ ಅಹಷ್ವೇರಸನ ದಿವಸಗಳ್ಳಲ್ಲಿ ಆದದ್ದು—ಆ ಅಹಷ್ವೇರಸನು
ಹಿಂದೂಸ್ಥಾನ ಮೊದಲ್ಗೊಂಡು, ಕೂಷಿನ ಪರ್ಯಂತರ ಇರುವ
೨ ನೂರ ಇಪ್ಪತ್ತೈಳ್ಳು ಪ್ರಿಮೆಗಳನ್ನು ಆಳ್ಳಿದನು; ಆ ದಿವಸಗಳ್ಳಲ್ಲಿ ಅ
ರಸನಾದ ಅಹಷ್ವೇರಸನು ರಾಜಧಾನಿಯಾದ ಶುಷಾನಲ್ಲಿರುವ
೩ ತನ್ನ ರಾಜ ಸಿಂಹಾಸನದ ಮೇಲೆ ಕುಳ್ಳಿತಿರುವಾಗ, ತನ್ನ ಆಳ್ಳಿಕೆ
ಯ ಮೂರನೇ ವರುಷದಲ್ಲಿ ಅವನು ತನ್ನ ಸಮಸ್ತ ಪ್ರಧಾನರಿ
ಗೂ ಸೇವಕರಿಗೂ ಹಬ್ಬವನ್ನು ಮಾಡಿಸಿದನು; ಪಾರ್ಸ್ಯ ಮಾ
ದ್ಯಗಳ ಸೈನ್ಯವೂ ಪ್ರಿಮೆಗಳ ಶ್ರೇಷ್ಠರೂ ಪ್ರಧಾನರೂ ಅವನ
೪ ಬಳ್ಳಿಯಲ್ಲಿದ್ದರು. ಅವನು ಅನೇಕ ದಿನಸ, ನೂರ ಎಂಭತ್ತು ದಿವ
ಸಗಳ ಪರ್ಯಂತರ, ತನ್ನ ಘನವುಳ್ಳ ರಾಜ್ಯದ ಐಶ್ವರ್ಯವ
ನ್ನೂ ತನ್ನ ಅತ್ಯುತ್ತಮವಾಗಿದ್ದ ಮಹಿಮೆಯ ಸೌಂದರ್ಯವ
೫ ನ್ನೂ ತೋರಿಸಿದನು. ಆ ದಿವಸಗಳ್ಳು ತೀರಿದ ತರುವಾಯ ಅ
ರಸನು ರಾಜಧಾನಿಯಾದ ಶುಷಾನಲ್ಲಿರುವ ಹಿರಿಕಿರಿಯರಾದ ಸ
ಮಸ್ತ ಜನರಿಗೂ ಏಳು ದಿವಸಗಳ ಪರ್ಯಂತರ ಅರಸನ ಅರ
ಮನೆಯ ತೋಟದ ಅಂಗಳದಲ್ಲಿ ಹಬ್ಬವನ್ನು ಮಾಡಿಸಿದನು.
೬ ಅಲ್ಲಿ ಬಿಳ್ಳೇ ಕಲ್ಲಿನ ಕಂಭಗಳ್ಳಿಗೆ ಬೆಳ್ಳಿಯ ಉಂಗರಗಳ್ಳಿಂದಲೂ,
ರಕ್ತವರ್ಣವಾದ ನಾರು ಹಗ್ಗಗಳ್ಳಿಂದಲೂ ತಗಲ ಹಾಕಲ್ಪಟ್ಟ ಬಿ
ಳ್ಳುಪೂ ಹಸುರೂ ನೀಲವರ್ಣವೂ ಆದ ತೆರೆಗಳ್ಳಿದ್ದವು. ಮಂಚ
ಗಳು ಬೆಳ್ಳಿ ಭಂಗಾರದವುಗಳ್ಳಾಗಿ, ಕೆಂಪು, ನೀಲ, ಬಿಳ್ಳುಪು, ಕಪ್ಪು
ಬಣ್ಣಗಳ್ಳಾದ ಕಲ್ಲುಗಳ್ಳಿಂದ ಮಾಡಲ್ಪಟ್ಟ ನೆಲದ ಮೇಲೆ ಇಡಲ್ಪಟ್ಟ
೭ ದ್ದವು. ಇದಲ್ಲದೆ ನಾನಾ ವಿಧವಾದ ಭಂಗಾರದ ಪಾತ್ರೆಗಳ್ಳಲ್ಲಿ ಕು
ಡಿಯ ಕೊಟ್ಟರು. ಮೇಲ್ತರವಾದ ದ್ರಾಕ್ಷೇರಸವು ಅರಸನ ಸ್ಥಿತಿಗೆ
೮ ತಕ್ಕ ಹಾಗೆ ಸಂಪೂರ್ಣವಾಗಿತ್ತು. ಆದರೆ ಬಲಾತ್ಕಾರ ಮಾಡು
ವದು ಇಲ್ಲವೆಂಬ ಕಟ್ಟಳೆಯ ಪ್ರಕಾರ ಕುಡಿದರು. ಯಾಕಂದರೆ ಅ
ರಸನು ಪ್ರತಿ ಮನುಷ್ಯನು ತನ್ನ ಇಚ್ಛೆಯ ಪ್ರಕಾರ ಮಾಡ ಬಹು
ದೆಂದು, ತನ್ನ ಮನೆಯ ಯಜಮಾನರೆಲ್ಲರಿಗೂ ನೇಮಿಸಿದ್ದನು.
೯ ಇದಲ್ಲದೆ ವಷ್ಟಿ ಎಂಬ ರಾಣಿಯು ಅರಸನಾದ ಅಹಷ್ವೇರಸನ ಅ
ರಮನೆಯಲ್ಲಿದ್ದ ಸ್ತ್ರೀಯರಿಗೆ ಔತಣವನ್ನು ಮಾಡಿಸಿದಳು.
೧೦ ಏಳನೇ ದಿವಸದಲ್ಲಿ, ಅರಸನು ದ್ರಾಕ್ಷೇರಸದಿಂದ ಮನಸ್ಸಂ
ತೋಷವಾಗಿರುವಾಗ, ವಷ್ಟಿ ಎಂಬ ರಾಣಿಯು ಬಹು ರೂಪವತಿ
ಯಾದದರಿಂದ, ಜನರಿಗೂ ಪ್ರಧಾನರಿಗೂ ಅವಳ ಸೌಂದರ್ಯವ
ನ್ನು ತೋರಿಸುವದಕ್ಕೆ, ರಾಣಿಗೆ ರಾಜ ಕಿರೀಟವನ್ನು ಧರಿಸ
ಮಾಡಿ, ಅರಸನ ಮುಂದೆ ಕರಕೊಂಡು ಬರುವದಕ್ಕೆ, ಅರಸನಾ
೧೧ ದ ಅಹಷ್ವೇರಸನ ಸಮುಖದಲ್ಲಿ ಸೇವಿಸುವ ಮೆಹುಮಾನನು,
ಬಿಜ್ದನು, ಹರ್ಬೋನನು, ಬಿಕ್ತನು, ಅಬಗ್ತನು, ಜೆತಾರನು, ಕರ್ಕಾ
೧೨ ಶನು ಎಂಬ ಏಳು ಮಂದಿ ನಪುಂಸಕರಿಗೆ ಹೇಳಿದನು. ಆದರೆ ಅರ
ಸನು ನಪುಂಸಕರ ಕೈಯಿಂದ ಹೇಳ್ಳಿ ಕಳ್ಳುಹಿಸಿದ ಮಾತಿಗೆ ರಾಣಿ
ಯಾದ ವಷ್ಟಿಯು, ನಾನು ಬರುವದಿಲ್ಲವೆಂದು, ಹೇಳ್ಳಿದಳು. ಆದ
ದರಿಂದ ಅರಸನಿಗೆ ಬಹು ಕ್ರೌದ್ರವಾಯಿತು ಅವನಲ್ಲಿ ಉಗ್ರವು
ಉರಿಯಿತು.
೧೩ ಆಗ ನೀತಿ ನ್ಯಾಯಗಳನ್ನು ತಿಳ್ಳಿದವರೆಲ್ಲರಿಗೂ ಅರಸನ ರೀ
ತಿಯ ಪ್ರಕಾರವಾಗಿ, ಅರಸನು ಕಾಲಜ್ಞಾನಿಗಳಾದ ಪಂಡಿತರ ಸಂ
೧೪ ಗಡಲೂ, ರಾಜ್ಯದಲ್ಲಿ ಶ್ರೇಷ್ಠರಾಗಿ ಕುಳ್ಳಿತು ಕೊಂಡು, ಅರಸನ
ಮುಖವನ್ನು ನೋಡುತ್ತಿರುವ ಪಾರ್ಸ್ಯ ಮಾದ್ಯಗಳ ಏಳು ಮಂ
ದಿ ಪ್ರಧಾನರಾದ ಕರ್ಷ್ಣನು, ಶೆತಾರನು, ಅದ್ಮಾತನು, ತರ್ಷೀಷ
೧೫ ನು, ಮೇರಸನು, ಮರ್ಸ್ಣನು, ಮೆಮುಕಾನನು, ಇವರ ಸಂಗಡ
ಲೂ, ರಾಣಿಯಾದ ವಷ್ಟಿಯು ಅರಸನಾದ ಅಹಷ್ವೇರಸನ ನ
ಪುಂಸಕರ ಕೈಯಿಂದ ಕಳ್ಳುಹಿಸಿದ ಮಾತಿನ ಪ್ರಕಾರ ಮಾಡದೆ ಇ
ರುವದರಿಂದ, ನಾವು ನ್ಯಾಯದ ಪ್ರಕಾರ ಅವಳ್ಳಿಗೆ ಮಾಡ ಬೇಕಾ
ದದ್ದೇನು! ಎಂದು ಕೇಳ್ಳಿದನು.
೧೬ ಮೆಮುಕಾನನು ಅರಸನ ಮುಂದೆಯೂ ಪ್ರಧಾನರ ಮುಂದೆ
ಯೂ ಹೇಳ್ಳಿದ್ದೇನಂದರೆ, ರಾಣಿಯಾದ ವಷ್ಟಿಯು ಅರಸನಿಗೆ



ಮಾತ್ರವಲ್ಲ, ಅರಸನಾದ ಅಹಷ್ವೇರಸನ ಸಮಸ್ತ ಪ್ರಿಮೆಗಳ್ಳಲ್ಲಿ
ರುವ ಸಮಸ್ತ ಪ್ರಧಾನರಿಗೂ ಸಮಸ್ತ ಜನರಿಗೂ ಅಪರಾಧ ಮಾ
೧೭ ಡಿದ್ದಾಳೆ. ಯಾಕಂದರೆ ರಾಣಿಯ ಮಾತು ಸಮಸ್ತ ಸ್ತ್ರೀಯರಿ
ಗೆ ಹೊರಟು ಬರುವದು. ಅರಸನಾದ ಅಹಷ್ವೇರಸನು ರಾಣಿ
ಯಾದ ವಷ್ಟಿಯಳ್ಳನ್ನು ತನ್ನ ಮುಂದೆ ಕರಕೊಂಡು ಬರ ಹೇಳ್ಳಿ
ದನು; ಆದರೆ ಅವಳ್ಳು ಬಾರದೆ ಹೋದಳೆಂದು, ಹೇಳ್ಳಲ್ಪಟ್ಟಾಗ,
ಅವರು ತಮ್ಮ ಯಜಮಾನರನ್ನು ತಮ್ಮ ಕಣ್ಣುಗಳ ಮುಂದೆ ತಿ
೧೮ ರಸ್ಕರಿಸುವರು. ಇದಲ್ಲದೆ ರಾಣಿಯ ಮಾತನ್ನು ಕೇಳ್ಳಿದ ಪಾ
ರ್ಸ್ಯ ಮಾದ್ಯಗಳ್ಳ ದೊರೆತನಿಗಳ್ಳು ಈ ಹೊತ್ತು ಅರಸನ ಪ್ರ
ಧಾನರಿಗೆ ಹಾಗೆಯೇ ಹೇಳ್ಳುವರು. ಹೀಗೆಯೇ ತಿರಸ್ಕಾರವೂ
೧೯ ಕ್ರೌದ್ರವೂ ಬಹಳ್ಳ ಉಂಟಾಗುವದು. ಅರಸನಿಗೆ ಸಮ್ಮತಿಯಾದ
ರೆ ವಷ್ಟಿಯು ಅರಸನಾದ ಅಹಷ್ವೇರಸನ ಮುಂದೆ ಇನ್ನು ಮೇಲೆ
ಬರುವದಕ್ಕಿಲ್ಲವೆಂದೂ, ಅರಸನು ಅವಳ್ಳ ರಾಜಸ್ಥಿತಿಯನ್ನು ಅವ
ಳ್ಳಿಗಿಂತ ಉತ್ತಮಳ್ಳಾದ ಮತ್ತೊಬ್ಬಳ್ಳಿಗೆ ಕೊಡತಿ ಎಂದೂ ರಾಜಾ
ಜ್ಞೆಯು ಹೊರಟು, ಅಧು ಗತಿಸಿ ಹೋಗದ ಹಾಗೆ, ಪಾರ್ಸ್ಯ
೨೦ ಮಾದ್ಯಗಳ್ಳವರ ನ್ಯಾಯಗಳ್ಳಲ್ಲಿ ಬರೆಯಲ್ಪಡತಿ. ಈ ಪ್ರಕಾರ
ಅರಸನು ಮಾಡಿದ ಆಜ್ಞೆಯು ತನ್ನ ವಿಸ್ತಾರವಾದ ರಾಜ್ಯವೆಲ್ಲಾ
ದರಲ್ಲಿ ಕೇಳ್ಳಲ್ಪಟ್ಟಾಗ, ಸ್ತ್ರೀಯರೆಲ್ಲರೂ, ಹಿರಿಯರಿಂದ ಚಿಕ್ಕವರ
ಮಟ್ಟಿಗೂ, ತಮ್ಮ ಯಜಮಾನರಿಗೆ ಮಾನ ಕೊಡುವರೆಂದು,
ಹೇಳ್ಳಿದನು.
೨೧ ಈ ಮಾತು ಅರಸನಿಗೂ ಪ್ರಧಾನರಿಗೂ ಚನ್ನಾಗಿ ಕಾಣಿಸಿ
೨೨ ದ್ದರಿಂದ, ಅರಸನು ಮೆಮುಕಾನನ ಪ್ರಕಾರ ಮಾಡಿ, ಪ್ರತಿ ಮನು
ಷ್ಯನು ತನ್ನ ಮನೆಯಲ್ಲಿ ಅಧಿಕಾರ ನಡಿಸ ಬೇಕೆಂದೂ, ತನ್ನ
ಜನರ ಭಾಷೆಯ ಪ್ರಕಾರ ಮಾತಾಡ ಬೇಕೆಂದೂ, ಪ್ರಿಮೆ ಪ್ರಿಮೆ
ಯಲ್ಲಿ ಅದರ ಬರಹಿಕೆಯ ಪ್ರಕಾರವೂ, ಜನ ಜನಗಳ್ಳಲ್ಲಿ ಅವರ
ಭಾಷೆಯ ಪ್ರಕಾರವೂ, ಅರಸನ ಸಮಸ್ತ ಪ್ರಿಮೆಗಳ್ಳಲ್ಲಿ ಪತ್ರಿಕೆಗ
ಳನ್ನು ಕಳ್ಳುಹಿಸಿದನು.

### ೨. ಸಂಧಿ.

೧ ಈ ಕಾರ್ಯಗಳ್ಳಾದ ತರುವಾಯ ಅರಸನಾದ ಅಹಷ್ವೇರಸ
ನ ಉರಿಯು ಶಾಂತವಾದಾಗ, ಅವನು ವಷ್ಟಿಯನ್ನೂ, ಅವಳ್ಳು
ಮಾಡಿದ್ದನ್ನೂ, ಅವಳ್ಳಿಗೆ ವಿರೋಧವಾಗಿ ನೇಮಿಸಿದ್ದನ್ನೂ ಜ್ಞಾ
೨ ಪಕ ಮಾಡಿಕೊಂಡನು. ಆಗ ಅರಸನನ್ನು ಸೇವಿಸುವ ದಾಸರು
ಅವನಿಗೆ ಹೇಳ್ಳಿದ್ದೇನಂದರೆ—ಅರಸನಿಗೋಸ್ಕರ ರೂಪವತಿಗಳ್ಳಾದ
೩ ಕನ್ಯಾಸ್ತ್ರೀಯರು ಹುಡುಕಲ್ಪಡತಿ. ರೂಪವತಿಗಳ್ಳಾದ ಸಮಸ್ತ
ಕನ್ಯಾ ಸ್ತ್ರೀಯರು ರಾಜಧಾನಿಯಾದ ಶುಷಾನಿಗೆ ಸ್ತ್ರೀಯರು
ಇರುವ ಮನೆಗೆ, ಸ್ತ್ರೀಯರ ಮೇಲೆ ಕಾವಲಿಯಾಗಿರುವ ಅರಸ
ನ ನಪುಂಸಕನಾದ ಹೇಗ್ಯನೆಂಬವನ ಕೈಗೆ ಕೂಡಿಸಲ್ಪಡುವ ಹಾ
ಗೆ, ಅರಸನು ತನ್ನ ರಾಜ್ಯದ ಸಮಸ್ತ ಪ್ರಿಮೆಗಳ್ಳಲ್ಲಿ ವಿಚಾರಕರನ್ನು
ನೇಮಿಸಲಿ; ಅವರಿಗೆ ಶುಚಿ ಮಾಡಿ ಕೊಳ್ಳುವವುಗಳು ಕೊಡಲ್ಪಡ
೪ ಲಿ. ಮತ್ತು ಅರಸನ ಕಣ್ಣುಗಳ್ಳಿಗೆ ಚನ್ನಾಗಿರುವ ಕನ್ಯಾಕೆಯು
ವಷ್ಟಿಗೆ ಬದಲಾಗಿ ರಾಣಿಯಾಗಲಿ. ಆ ಮಾತು ಅರಸನಿಗೆ ಚ
ನ್ನಾಗಿ ಕಾಣಿಸಿದ್ದರಿಂದ, ಹಾಗೆಯೇ ಮಾಡಿದನು.
೫ ಆದರೆ ರಾಜಧಾನಿಯಾದ ಶುಷಾನಲ್ಲಿ ಬೆನ್ಯಮೀನಿನವನಾದ,
ಕೀಷನ ಮಗನಾದ, ಶಿಮ್ಮನ ಮಗನಾದ ಯಯಿರನ ಮಗನಾದ
೬ ಮೊರ್ದೆಕಾಯಿಯು ಎಂಬ ಹೆಸರುಳ್ಳ ಒಬ್ಬ ಯೆಹೂದ್ಯನಿದ್ದ
ನು. ಅವನು ಬಾಬೆಲಿನ ಅರಸನಾದ ನೆಬುಕದ್ನೆಜ್ಜರನು ಕೆರೆ
ಯಾಗಿ ಸೈದಂಥ, ಯೆಹೂದದ ಅರಸನಾಗಿರುವ ಯೆಕೊನ್ಯನ
ಸಂಗಡ ಯೆರೂಸಲೇಮಿನಿಂದ ಕೆರೆಯಾಗಿ ಸೈಯಲ್ಪಟ್ಟವರಲ್ಲಿ
೭ ಒಬ್ಬನಾಗಿದ್ದನು. ಅವನು ತನ್ನ ಚಿಕ್ಕಪ್ಪನ ಮಗಳಾದ ಎಸ್ತೇರ
ಳೆಂಬ ಹದಸ್ಸಳ್ಳನ್ನು ಸಾಕಿದವನಾಗಿದ್ದನು; ಯಾಕಂದರೆ ಅವಳ್ಳಿ
ಗೆ ತಂದೆ ತಾಯಿಗಳು ಇರಲಿಲ್ಲ. ಈ ಕನ್ಯಾಕೆಯು ರೂಪವತಿ
ಯಾಗಿಯೂ ಸೌಂದರ್ಯವಂತಳ್ಳಾಗಿಯೂ ಇದ್ದಳು. ಅವಳ್ಳ
ತಂದೆ ತಾಯಿಗಳು ಸತ್ತು ಹೋದ ತರುವಾಯ ಮೊರ್ದೆಕಾಯಿ
ಅವಳ್ಳನ್ನು ತನ್ನ ಮಗಳ್ಳ ಹಾಗೆ ತೆಗೆದು ಕೊಂಡನು.
೮ ಅರಸನ ಮಾತೂ ಅವನ ಕಟ್ಟಳೆಯೂ ಕೇಳ್ಳಲ್ಪಟ್ಟ ತರುವಾ
ಯ, ರಾಜಧಾನಿಯಾದ ಶುಷಾನಲ್ಲಿ ಹೆಗಾಯಿಯ ಕೈಗೆ ಅನೇ
ಕ ಕನ್ಯಾಸ್ತ್ರೀಯರು ಕೂಡಿಸಲ್ಪಡುವಾಗ, ಏನಾಯಿತಂದರೆ ಎ
ಸ್ತೇರಳ್ಳು ಅರಸನ ಮನೆಯಲ್ಲಿ ಸ್ತ್ರೀಯರ ಕಾವಲಿಯವನಾದ
೯ ಹೆಗಾಯಿಯ ಕೈಗೆ ತರಲ್ಪಟ್ಟಳ್ಳು. ಆ ಕನ್ಯಾಕೆಯು ಅವನ ದೃ
ಷ್ಟಿಗೆ ಉತ್ತಮಳ್ಳೆಂದು ಕಾಣಿಸಿದ್ದರಿಂದ, ಅವನ ಸಮುಖದಲ್ಲಿ ಅ
ವಳ್ಳಿಗೆ ದಯೆ ದೊರಕಿತು. ಆದುಕಾರಣ ಅವನು ತ್ವರೆಯಾಗಿ
ಶುಚಿ ಮಾಡುವದಕ್ಕೋಸ್ಕರ ಬೇಕಾದವುಗಳ್ಳನ್ನೂ, ಅವಳ್ಳಿಗೆ
ಕೊಡ ತಕ್ಕವುಗಳ್ಳನ್ನೂ, ಅರಸನ ಮನೆಯಿಂದ ಕೊಡ ತಕ್ಕ ಏ
ಳು ಮಂದಿ ದಾಸಿಯರನ್ನೂ ಕೊಟ್ಟನು. ಇದಲ್ಲದೆ ಸ್ತ್ರೀಯರ
ಮನೆಯಲ್ಲಿ ಉತ್ತಮವಾದ ಸ್ಥಳವನ್ನು ಅವಳ್ಳಿಗೂ ಅವಳ್ಳ ದಾಸಿ
೧೦ ಯರಿಗೂ ಕೊಟ್ಟನು. ಆದರೆ ಎಸ್ತೇರಳ್ಳು ತನ್ನ ಜನರನ್ನೂ ತ
ನ್ನ ಬಂಧುಗಳ್ಳನ್ನೂ ತಿಳ್ಳಿಸದೆ ಇದ್ದಳ್ಳು. ಯಾಕಂದರೆ ತಿಳ್ಳಿಸ ಬೇ
೧೧ ಡ ಎಂದು ಮೊರ್ದೆಕಾಯಿ ಅವಳ್ಳಿಗೆ ಆಜ್ಞಾಪಿಸಿದ್ದನು. ಆದರೆ ಎ
ಸ್ತೇರಳ್ಳು ಕ್ಷೇಮವನ್ನೂ ಅವಳ್ಳಿಗೆ ಆಗುವಂಥಾದ್ದನ್ನೂ ತಿಳ್ಳುಕೊ
ಳ್ಳುವದಕ್ಕೆ ಮೊರ್ದೆಕಾಯಿ ದಿನಂಪ್ರತಿಯಲ್ಲಿ ಸ್ತ್ರೀಯರ ಮನೆಯ
ಅಂಗಳದ ಮುಂದೆ ತಿರುಗಾಡುತ್ತಿದ್ದನು.
೧೨ ಆದರೆ ಒಬ್ಬೊಬ್ಬ ಕನ್ಯಾಕೆಯು ಆರು ತಿಂಗಳು ಬೋಳ ತೈ
ಲದಿಂದಲೂ, ಆರು ತಿಂಗಳು ಸುಗಂಧಗಳ್ಳಿಂದಲೂ, ಸ್ತ್ರೀಯರು ಶು
ಚಿ ಮಾಡಿ ಕೊಳ್ಳ ತಕ್ಕವುಗಳ್ಳಿಂದಲೂ ಶುಚಿ ಯಾಗುವ ದಿವಸ
ಗಳನ್ನು ತೀರಿಸಿದರು. ಹೀಗೆಯೇ ಸ್ತ್ರೀಯರ ಮರ್ಯಾದೆಯ
ಪ್ರಕಾರ ಹನ್ನೆರಡು ತಿಂಗಳಾದ ತರುವಾಯ ಅರಸನಾದ ಅಹಷ್ವೇ
೧೩ ರಸನ ಜಳ್ಳಿಗೆ ಹೋಗ ಅವಳ್ಳವಳ್ಳ ಬಂತು ಬಂತು. ಈ ಪ್ರಕಾರ ಕ
ನ್ಯಾಸ್ತ್ರೀಯು ಅರಸನ ಜಳ್ಳಿಗೆ ಪ್ರವೇಶಿಸುವಾಗ, ಸ್ತ್ರೀಯರ ಮ
ನೆಯೊಳ್ಳಗಿಂದ ತನ್ನ ಸಂಗಡ ಅರಸನ ಮನೆಗೆ ಹೋಗ ಅವಳ್ಳು
೧೪ ಏನು ಬೇಡುವಳ್ಳೋ, ಅದು ಅವಳ್ಳಿಗೆ ಕೊಡಲ್ಪಡುವದು. ಅವಳ್ಳು
ಸಾಯಂಕಾಲದಲ್ಲಿ ಪ್ರವೇಶಿಸಿ, ಮಾರನೆ ದಿವಸದಲ್ಲಿ ಉಪಪತ್ನಿಗಳ್ಳ
ಕಾವಲಿಯವನಾದಂಥ, ಅರಸನ ನಪುಂಸಕನಾದ ಶಾಷ್ಗಜನ ಕೈ
ಗೆ, ಸ್ತ್ರೀಯರ ಎರಡನೇ ಮನೆಗೆ ತಿರುಗುವಳ್ಳು. ಅರಸನು ಅವ
ಳ್ಳಲ್ಲಿ ಸಂತೋಷ ಪಟ್ಟು, ಅವಳ್ಳನ್ನು ಹೆಸರಿನಿದ ಕರೆದ ಹೊ
ರ್ತು, ಅವಳ್ಳು ಇನ್ನು ಮೇಲೆ ಅರಸನ ಜಳ್ಳಿಯಲ್ಲಿ ಪ್ರವೇಶಿಸದೆ
ಇರುವಳ್ಳು.
೧೫ ತನ್ನ ಕುಮಾರ್ತೆಯಾಗಿ ತೆಗೆದು ಕೊಂಡಂಥ ಮೊರ್ದೆಕಾ
ಯಿಯ ಚಿಕ್ಕಪ್ಪನಾದ ಅಬಿಹಾಯಿಲನ ಮಗಳಾದ ಎಸ್ತೇರಳ್ಳು ಅ
ರಸನ ಜಳ್ಳಿಗೆ ಹೋಗ ಬಂತು ಬಂದಾಗ, ಅವಳ್ಳು ಸ್ತ್ರೀಯರ ಕಾ

ವಲಿಗಾರನಾದಂಥ ಅರಸನ ನಪುಂಸಕನಾದ ಹೆಗಾಯಿ ನೇಮಿಸಿದ
ವುಗಳ ಹೊರ್ತಾಗಿ ಮತ್ತೇನೂ ಬೇಕಾಗಿಲ್ಲ. ಇದಲ್ಲದೆ ಎಸ್ತೇರ
೧೭ ಳು ತನ್ನನ್ನು ನೋಡುವ ಎಲ್ಲರಿಂದ ದಯೆ ಹೊಂದಿದಳು. ಎಸ್ತೇ
ರಳು ಅರಸನಾದ ಅಹಷ್ವೇರನ ಅಳಿಕೆಯ ಏಳನೇ ವರುಷದ
ತೇಬೆತ್ ಎಂಬ ತಿಂಗಳ ಹತ್ತನೇ ದಿವಸದಲ್ಲಿ ಅವನ ಅರಮನೆಯ
೧೭ ಲ್ಲಿ ತಕ್ಕೊಳ್ಳಲ್ಪಟ್ಟಳು. ಅರಸನು ಸಕಲ ಸ್ತ್ರೀಯರಿಗಿಂತ ಎಸ್ತೇ
ರಳ ಮೇಲೆ ಪ್ರೀತಿ ಪಟ್ಟನು. ಅವಳಿಗೆ ಅವನ ಸಮುಖದಲ್ಲಿ
ಸಮಸ್ತ ಕನ್ಯಾ ಸ್ತ್ರೀಯರಿಗಿಂತ ದಯವೂ ಕೃಪೆಯೂ ದೊರ
ಕಿತು. ಆದದರಿಂದ ಅವನು ರಾಜಕಿರೀಟವನ್ನು ಅವಳ ತಲೆಯ
ಮೇಲೆ ಇರಿಸಿ, ಅವಳಿನ್ನು ವಷ್ತಿಗೆ ಬದಲಾಗಿ ರಾಣಿಯಾಗ ಮಾ
೧೮ ಡಿದನು. ಆಗ ಅರಸನು ತನ್ನ ಸಮಸ್ತ ಪ್ರಧಾನರಿಗೂ ಸೇವಕರಿ
ಗೂ ಎಸ್ತೇರಳ ಹಬ್ಬವೆಂದು ದೊಡ್ಡ ಹಬ್ಬವನ್ನು ಮಾಡಿಸಿ, ಶೀಮೆ
ಗಳಿಗೆ ಬಿಡುಗಡೆಯನ್ನು ಕೊಟ್ಟು, ಅರಸನ ಸ್ಥಿತಿಗೆ ತಕ್ಕಂಥ ಬ
ಹುಮಾನಗಳನ್ನು ಕೊಟ್ಟನು.

೧೯ ಆದರೆ ಕನ್ಯಾಸ್ತ್ರೀಯರು ಎರಡನೇ ಸಾರಿ ಕೂಡಿಸಲ್ಪಡುವಾಗ,
೨೦ ಮೊರ್ದೆಕಾಯಿ ಅರಮನೆಯ ಬಾಗಲಲ್ಲಿ ಕುಳಿತಿದ್ದನು. ಎಸ್ತೇರ
ಳು, ಮೊರ್ದೆಕಾಯಿ ತನಗೆ ಆಜ್ಞಾಪಿಸಿದ ಹಾಗೆ, ತನ್ನ ಬಂಧುಗ
ಳನ್ನೂ ತನ್ನ ಜನರನ್ನು ತಿಳಿಸದೆ ಇದ್ದಳು. ಯಾಕಂದರೆ ಎ
ಸ್ತೇರಳು ಮೊರ್ದೆಕಾಯಿಯ ವಿಚಾರದಲ್ಲಿ ಇದ್ದಾಗ, ಅವನ ಆ
ಜ್ಞೆಯನ್ನು ಕೈಕೊಂಡಿದ್ದ ಹಾಗೆ, ಇನ್ನೂ ಮಾಡಿದಳು.

೨೧ ಆ ದಿವಸಗಳಲ್ಲಿ, ಮೊರ್ದೆಕಾಯಿ ಅರಮನೆಯ ಬಾಗಲಲ್ಲಿ
ಕುಳಿತಿರುವಾಗ, ದ್ವಾರಪಾಲಕರಾದಂಥ, ಅರಸನ ನಪುಂಸಕರಾ
ದ ಬಿಕ್ತಾನನೂ, ತೇರಷನೂ ಕೌಪ್ರವುಳ್ಳವರಾಗಿ, ಅರಸನಾದ
೨೨ ಅಹಷ್ವೇರನ ಮೇಲೆ ಕೈ ಹಾಕ ಹುಡುಕಿದರು. ಈ ಕಾರ್ಯ
ವು ಮೊರ್ದೆಕಾಯಿಗೆ ತಿಳಿದದ್ದರಿಂದ, ಅವನು ಅದನ್ನು ರಾಣಿಯಾ
ದ ಎಸ್ತೇರಳಿಗೆ ತಿಳಿಸಿದನು; ಎಸ್ತೇರಳು ಮೊರ್ದೆಕಾಯಿಯ ಹೆಸ
೨೩ ರಿನಲ್ಲಿ ಅದನ್ನು ಅರಸನಿಗೆ ತಿಳಿಸಿದಳು. ಈ ಮಾತು ವಿಚಾರಿಸಿದಾ
ಗ, ನಿಜವಾಯಿತು; ಅವರಿಬ್ಬರೂ ಮರದಲ್ಲಿ ತೂಗ ಹಾಕಲ್ಪಟ್ಟಿ
ರು. ಇದು ಅರಸನ ಮುಂದೆ ಇರುವ ರಾಜನ ದಿನಚರ್ಯೆಗಳ
ಪುಸ್ತಕದಲ್ಲಿ ಬರೆಯಲ್ಪಟ್ಟಿತು.

## ೩. ಸಂಧಿ.

೧ ಈ ಕಾರ್ಯಗಳಾದ ತರುವಾಯ, ಅರಸನಾದ ಅಹಷ್ವೇರಸ
ನು ಅಗಾಗ್ಯನಾದ, ಹಮ್ದಾತನ ಮಗನಾದ ಹಮಾನನನ್ನು ದೊ
ಡ್ಡವನಾಗ ಮಾಡಿ, ಅವನನ್ನು ಎತ್ತಿ, ತನ್ನ ಬಳಿಯಲ್ಲಿರುವ ಸ
ಮಸ್ತ ಪ್ರಧಾನರಿಗಿಂತ ಅವನ ಆಸನವನ್ನು ಉನ್ನತ ಮಾಡಿದನು.
೨ ಆದಕಾರಣ ಅರಮನೆಯ ಬಾಗಲಲ್ಲಿರುವ ಅರಸನ ಸಮಸ್ತ ಸೇ
ವಕರು ಬೊಗ್ಗಿ, ಹಮಾನನಿಗೆ ಅಡ್ಡ ಬಿದ್ದರು. ಯಾಕಂದರೆ ಅ
ರಸನು ಅವನನ್ನು ಕುರಿತು ಹಾಗೆಯೇ ಆಜ್ಞಾಪಿಸಿದನು, ಆದರೆ
೩ ಮೊರ್ದೆಕಾಯಿ ಬೊಗ್ಗದೆ ಅಡ್ಡ ಬೀಳದೆ ಇದ್ದನು. ಆಗ ಅರಮನೆ
ಯ ಬಾಗಲಲ್ಲಿರುವ ಅರಸನ ಸೇವಕರು ಮೊರ್ದೆಕಾಯಿಗೆ, ನೀನು
ಅರಸನ ಆಜ್ಞೆಯನ್ನು ವಿಾರುವದೇನು? ಅಂದರು.

೪ ಆದರೆ ಅವರು ದಿನ ದಿನ ಅವನಿಗೆ ಹೇಳಿದಾಗ್ಯೂ, ಅವನು ಅ
ವರ ಮಾತು ಕೇಳದೆ ಹೋದದರಿಂದ, ಅವರು ಮೊರ್ದೆಕಾಯಿಯ
ಮಾತುಗಳು ನಿಲ್ಲುವವೋ! ಎಂದು ನೋಡಿ ಕೊಳ್ಳ, ಹಮಾನ
ನಿಗೆ ತಿಳಿಸಿದರು. ಯಾಕಂದರೆ ತಾನು ಯೆಹೂದ್ಯನೆಂದು ಅವರಿಗೆ
೫ ಹೇಳಿದ್ದನು. ಹಮಾನನು ಮೊರ್ದೆಕಾಯಿ ತನಗೆ ಬೊಗ್ಗಿ ಅಡ್ಡಬೀ
ಳದೆ ಇರುವದನ್ನು ನೋಡಿದಾಗ, ಹಮಾನನು ಉರಿಯಿಂದ ತುಂ
೬ ಬಿದ್ದನು. ಆದರೆ ಮೊರ್ದೆಕಾಯಿಯ ಮೇಲೆ ಮಾತ್ರ ಕೈ ಹಾ
ಕುವದು ಅವನಿಗೆ ಅಲಕ್ಷ್ಯವಾಗಿ ತೋರಿತು. ಯಾಕಂದರೆ ಅ
ರು ಮೊರ್ದೆಕಾಯಿಯ ಜನವನ್ನು ಅವನಿಗೆ ತೋರಿಸಿದ್ದರು. ಆ
ದದರಿಂದ ಹಮಾನನು ಅಹಷ್ವೇರಸನ ಸಮಸ್ತ ರಾಜ್ಯದಲ್ಲಿರುವ
ಮೊರ್ದೆಕಾಯಿಯ ಜನವಾದ ಯೆಹೂದ್ಯರನ್ನೆಲ್ಲಾ ಸಂಹಾರ
ಹುಡುಕಿದನು.

೭ ಅರಸನಾದ ಅಹಷ್ವೇರಸನ ಹನ್ನೆರಡನೇ ವರುಷದಲ್ಲಿ ನೀ
ರ್ಸಾ ಎಂಬ ಮೊದಲನೇ ತಿಂಗಳಲ್ಲಿ ಹಮಾನನ ಮುಂದೆ ಪೂರ್
ಎಂಬ ಚೀಟನ್ನು ದಿನ ದಿನಕ್ಕೂ ತಿಂಗಳು ತಿಂಗಳಿಗೂ ಅದಾರ್
೮ ಎಂಬ ಹನ್ನೆರಡನೇ ತಿಂಗಳ ಪರ್ಯಂತರ ಹಾಕಿದರು. ಆಗ ಹ
ಮಾನನು ಅರಸನಾದ ಅಹಷ್ವೇರಸನ ಸಂಗಡ ಹೇಳ್ದೇನಂದರೆ—
ನಿನ್ನ ರಾಜ್ಯದ ಸಕಲ ಶೀಮೆಗಳಲ್ಲಿರುವ ಜನಕ್ಕೊಳಗೆ ಚದರಲ್ಪ
ಟ್ಟು, ವ್ಯಾಪಿಸಿದ್ದಾದ ಒಂದು ಜನ ಉಂಟು. ಅವರ ನ್ಯಾಯಪ್ರ
ಮಾಣಗಳು ಸಕಲ ಜನರಿಗೆ ಪ್ರತಿಕೂಲವಾಗಿವೆ. ಅವರು ಅರಸ
ನ ನ್ಯಾಯಗಳನ್ನು ಕೈಕೊಳ್ಳುವದಿಲ್ಲ. ಆದಕಾರಣ ಅವರನ್ನು
೮ ಇರಗೊಡಿಸುವದು ಅರಸನ ಪ್ರಯೋಜನಕ್ಕೆ ತಕ್ಕದ್ದಲ್ಲ. ಅದು
ಅರಸನಿಗೆ ಸಮ್ಮತಿಯಾದರೆ, ಅವರು ಸಂಹರಿಸಲ್ಪಡುವ ಹಾಗೆ ಬ
ರೆಯಲ್ಪಡಲಿ. ಆಗ ನಾನು ಅರಸನ ಬೊಕ್ಕಸಕ್ಕೆ ತರುವದಕ್ಕೆ,
ಈ ಕೆಲಸ ಮಾಡುವವರ ಕೈಗಳಲ್ಲಿ ಹತ್ತು ಸಾವಿರ ಬೆಳ್ಳಿಯ
೧೦ ತಲಂತುಗಳನ್ನು ಕೊಡುವೆನು. ಆಗ ಅರಸನು ತನ್ನ ಕೈಯ
ಲ್ಲಿದ್ದ ಉಂಗರವನ್ನು ತೆಗೆದು, ಯೆಹೂದ್ಯರ ವೈರಿಯಾದ, ಅಗಾ
೧೧ ಗ್ಯನಾದ, ಹಮ್ದಾತನ ಮಗನಾದ ಹಮಾನನಿಗೆ ಕೊಟ್ಟನು. ಮ
ತ್ತು ಅರಸನು ಹಮಾನನಿಗೆ—ಬೆಳ್ಳಿಯೂ, ಆ ಜನವೂ, ನಿನಗೆಸ
ರಿಯಾಗಿ ತೋರುವ ಹಾಗೆ ಅವರಿಗೆ ಮಾಡುವದಕ್ಕೆ, ನಿನ್ನ
ಕೈಯಲ್ಲಿ ಒಪ್ಪಿಸಲ್ಪಟ್ಟಿವೆ, ಅಂದನು.

೧೨ ಆಗ ಮೊದಲನೇ ತಿಂಗಳ ಹದಿಮೂರನೇ ದಿವಸದಲ್ಲಿ ಅರಸ
ನ ರಾಯಸದವರು ಕರೆಯಲ್ಪಟ್ಟರು. ಹಮಾನನು ಆಜ್ಞಾಪಿಸಿದ
ಎಲ್ಲದರ ಪ್ರಕಾರ ಪ್ರತಿ ಶೀಮೆಯ ಮೇಲಿರುವ ಅರಸನ ಕೈಕೆಳ
ಗಿನ ದೊರೆಗಳಿಗೂ ಅಧಿಪತಿಗಳಿಗೂ ಪ್ರತಿ ಶೀಮೆಯಲ್ಲಿ ಜನ ಜನ
ಗಳ ಮೇಲಿರುವ ಪ್ರಧಾನರಿಗೂ, ಅದರದರ ಬರಹದ ಪ್ರಕಾರವಾ
ಗಿಯೂ, ಜನ ಜನಕ್ಕೂ, ಪ್ರತಿ ಜನದ ಭಾಷೆಯ ಪ್ರಕಾರವಾಗಿ
ಯೂ, ಬರೆಯಲ್ಪಟ್ಟಿತು. ಅದು ಅರಸನಾದ ಅಹಷ್ವೇರಸನ
ಹೆಸರಿನಲ್ಲಿ ಬರೆಯಲ್ಪಟ್ಟು, ಅರಸನ ಉಂಗರದಿಂದ ಮುದ್ರೆ ಹಾ
ಕಲ್ಪಟ್ಟಿತು. ಅದಾರ್ ತಿಂಗಳೆಂಬ ಹನ್ನೆರಡನೇ ತಿಂಗಳ ಹದಿಮೂ
೧೩ ರನೇ ದಿವಸದಲ್ಲಿ, ಒಂದೇ ದಿವಸದಲ್ಲಿ ಹಿರಿಯರೂ, ಕಿರಿಯರೂ,
ಮಕ್ಕಳೂ, ಸ್ತ್ರೀಯರೂ ಸಹಿತವಾಗಿ, ಎಲ್ಲಾ ಯೆಹೂದ್ಯರನ್ನು
ಸಂಪರಿಸಲಿಕ್ಕೂ, ಕೊಂದು ಹಾಕಲಿಕ್ಕೂ, ನಾಶ ಮಾಡಲಿಕ್ಕೂ
ಅವರ ಸ್ಥಿತಿಯನ್ನು ಕೊಳ್ಳೆ ಇಡಲಿಕ್ಕೂ, ಅರಸನ ಸಮಸ್ತ ಶೀಮೆ
೧೪ ಗಳಿಗೆ ಓಡುವವರ ಕೈಯಿಂದ ಪತ್ರಿಕೆಗಳು ಕಳುಹಿಸಲ್ಪಟ್ಟವು. ಅ
ವರು ಆ ದಿವಸಕ್ಕೆ ಸಿದ್ಧವಾಗಿರುವ ಹಾಗೆ, ಪ್ರತಿ ಶೀಮೆಯಲ್ಲಿ ಕ
ಟ್ಟಳೆಯಾಗಿ, ಬರಹಿಕೆಯ ಪ್ರತಿ ಎಲ್ಲಾ ಜನಗಳಿಗೆ ಪ್ರಸಿದ್ಧ ಮಾ
೧೫ ಡಲ್ಪಟ್ಟಿತು. ಓಡುವವರು ಅರಸನ ಆಜ್ಞೆಯಿಂದ ತೀವ್ರ ಪಟ್ಟಣ,



ಹೊರಟರು. ಮತ್ತು ರಾಜಧಾನಿಯಾದ ಶುಷಾನಿಲ್ಲಿ ಆ ಆಜ್ಞೆ
ಯು ಕೊಡಲ್ಪಟ್ಟಿತು. ಅರಸನೂ ಹಮಾನನೂ ಕುಡಿಯ ಕುಳಿ
ತು ಕೊಂಡರು. ಆದರೆ ಶುಷಾನು ಪಟ್ಟಣವು ತಲ್ಲಣ ಗೊಂಡಿತು.

## ೪. ಸಂಧಿ.

೧ ಆದದ್ದನ್ನೆಲ್ಲಾ ಮೊರ್ದೆಕಾಯಿ ತಿಳಿದಾಗ, ಮೊರ್ದೆಕಾಯಿ ತ
ನ್ನ ವಸ್ತ್ರಗಳನ್ನು ಹರಕೊಂಡು, ಗೋಣಿಯ ತಟ್ಟನ್ನು ಉ
ಟ್ಟು ಕೊಂಡು, ಬೂದಿಯನ್ನು ಹಚ್ಚಿ ಕೊಂಡು, ಪಟ್ಟಣದ ಮಧ್ಯ
ದಲ್ಲಿ ಹೋಗಿ, ಕೊಡ್ಡದಾದ, ಕಹಿಯಾದ ಕೂಗಿನಿಂದ ಕೂಗಿದ
೨ ನು. ಅರಸನ ಅರಮನೆಯ ಬಾಗಲ ಮುಖದ ಪರ್ಯಂತರ ಬಂ
ದನು. ಯಾಕಂದರೆ ಗೋಣಿಯ ತಟ್ಟನ್ನು ಉಟ್ಟು ಕೊಂಡು,
ಅರಸನ ಅರಮನೆಯ ಬಾಗಲಲ್ಲಿ ಪ್ರವೇಶಿಸ ಒಬ್ಬನಿಗೂ ಅಪ್ಪಣೆ
೩ ಇಲ್ಲ. ಇದಲ್ಲದೆ ಅರಸನ ಮಾತೂ ಅವನ ಕಟ್ಟಳೆಯೂ ಯಾ
ವ ಯಾವ ಶೀಮೆಯಲ್ಲಿ ಯಾವ ಯಾವ ಸ್ಥಳಕ್ಕೆ ಬಂತೋ,
ಅಲ್ಲಿ ಯೆಹೂದ್ಯರೆಲ್ಲಿಗೆ ಮಹಾ ದುಖ್ಖವೂ ಉಪವಾಸವೂ ಅ
ಳುವಿಕೆಯೂ ಸೋಳಾಡುವಿಕೆಯೂ ಉಂಟಾಗಿತ್ತು. ಅನೇಕರು
ಗೋಣಿಯ ತಟ್ಟನ್ನು ಉಟ್ಟುಕೊಂಡು, ಬೂದಿಯಲ್ಲಿ ಮಲಗಿ
ಕೊಂಡರು.

೪ ಆಗ ಎಸ್ತೇರಳ ದಾಸಿಗಳೂ ಅವಳ ನಪುಂಸಕರೂ ಬಂದು,
ಅವಳಿಗೆ ತಿಳಿಸಿದರು. ಆದದರಿಂದ ರಾಣಿಯು ಬಹು ವ್ಯಥೆ ಪಟ್ಟಿ
ಳು. ಇದಲ್ಲದೆ ಮೊರ್ದೆಕಾಯಿಯ ಗೋಣಿಯ ತಟ್ಟನ್ನು ತೆಗೆ
ದು ಹಾಕಿ, ಥರಿಸಿ ಕೊಳ್ಳುವದಕ್ಕೆ ವಸ್ತ್ರವನ್ನು ಕಳುಹಿಸಿದಳು.
೫ ಆದರೆ ಅವನು ತಕ್ಕೊಳ್ಳಲಿಲ್ಲ. ಆಗ ಎಸ್ತೇರಳು ತನ್ನ ಬಳಿಯ
ಲ್ಲಿ ಇರಿಸಲ್ಪಟ್ಟ ಅರಸನ ನಪುಂಸಕರಲ್ಲಿರುವ ಹತಾಕನನ್ನು ಕರೆ
ದು, ಇದೇನೆಂದೂ, ಯಾತಕ್ಕೆಂದೂ, ಮೊರ್ದೆಕಾಯಿಂದ ತಿಳಿದು
೬ ಕೊಳ್ಳ ಬೇಕೆಂದು ಅವನಿಗೆ ಆಜ್ಞಾಪಿಸಿದಳು. ಹಾಗೆಯೇ ಹತಾ
ಕನು ಅರಸನ ಅರಮನೆಯ ಬಾಗಲ ಮುಂದಿರುವ ಪಟ್ಟಣದ ಬೀದಿ
ಯಲ್ಲಿದ್ದ ಮೊರ್ದೆಕಾಯಿಯ ಬಳಿಗೆ ಹೊರಟು ಹೋದನು. ಆ
೭ ಗ ಮೊರ್ದೆಕಾಯಿ ತನಗೆ ಆದದ್ದನ್ನೂ, ಹಮಾನನು ಯೆಹೂದ್ಯ
ರನ್ನು ನಾಶ ಮಾಡುವ ನಿಮಿತ್ತ ಅರಸನ ಬೊಕ್ಕಸಕ್ಕೆ ಕೊಡ
ಬೇಕಾದ್ದರ್ಥ ಮಾಡಿ ಕೊಂಡ ಕೊಖ್ಖವನ್ನೂ ಅವನಿಗೆ ತಿಳಿಸಿದರು.
೮ ಮತ್ತು ಯೆಹೂದ್ಯರನ್ನು ನಾಶ ಮಾಡ ಶುಷಾನಿನಲ್ಲಿ ಕೊಡಲ್ಪ
ಟ್ಟ ಆಜ್ಞಾ ಪತ್ರಿಕೆಯ ಪ್ರತಿಯನ್ನು ಅವನ ಕೈಯಲ್ಲಿ ಕೊಟ್ಟು,
ಅದನ್ನು ಎಸ್ತೇರಳಿಗೆ ತೋರಿಸಿ, ತಿಳಿಸುವದಕ್ಕೂ, ಅವಳು ತನ್ನ
ಜನಕ್ಕೋಸ್ಕರ ಅರಸನ ಮುಂದೆ ಬಿನ್ನಹ ಮಾಡಿ, ಬೇಡಿ ಕೊ
ಳ್ಳುವದಕ್ಕೂ, ಅವನ ಬಳಿಗೆ ಹೋಗ ಬೇಕೆಂದು, ಅವಳಿಗೆ ಆ
ಜ್ಞಾಪಿಸ ಹೇಳಿದನು.

೯ ಆಗ ಹತಾಕನು ಬಂದು, ಮೊರ್ದೆಕಾಯಿಯ ಮಾತುಗಳನ್ನು
೧೦ ಎಸ್ತೇರಳಿಗೆ ತಿಳಿಸಿದನು. ಮತ್ತು ಎಸ್ತೇರಳು ಮೊರ್ದೆಕಾಯಿಗೆ
೧೧ ಹೇಳ್ದ ಹತಾಕನಿಗೆ ಆಜ್ಞಾಪಿಸಿದ್ದೇನಂದರೆ—ಕರಿಸಲ್ಪಡದೆ ಅರಸನ
ಬಳಿಗೆ ಬಳ್ಳವನೆಯಲ್ಲಿ ಪ್ರವೇಶಿಸುವ ಯಾವನಾದರೂ—ಗಂಡಾ
ದರೂ ಸರಿ ಹೆಣ್ಣಾದರೂ ಸರಿ—ಬದುಕುವ ಹಾಗೆ, ಅರಸನು
ಥಂಗಾರದ ಮುದ್ರೆ ಕೋಲನ್ನು ಅವನ ಬಳಿಗೆ ಚಾಚಿದರೆ ಹೊ
ರ್ತು, ಅವನನ್ನು ಕೊಲ್ಲ ಬೇಕೆಂಬುವ ಅವನ ಆಜ್ಞೆ ಒಂದೇ ಉಂ
ಟೆಂದು, ಅರಸನ ಸಮಸ್ತ ಸೇವಕರೂ ಅರಸನ ಶೀಮೆಗಳ ಜನ
ರೂ ತಿಳಿದು ಇದ್ದಾರೆ. ಆದರೆ ನಾನು ಈ ಮೂವತ್ತು ದಿವಸದಿಂ
೧೨ ದ ಅರಸನ ಬಳಿಗೆ ಕರೆಯಲ್ಪಡಲಿಲ್ಲ. ಅವರು ಎಸ್ತೇರಳ ಮಾತು
ಗಳನ್ನು ಮೊರ್ದೆಕಾಯಿಗೆ ತಿಳಿಸಿದರು.

೧೩ ಆಗ ಮೊರ್ದೆಕಾಯಿ ಎಸ್ತೇರಳಿಗೆ ಹೇಳಿ ಕಳುಹಿಸಿದ ಪ್ರತ್ಯುತ್ತ
ರವೇನಂದರೆ—ನೀನು ಅರಮನೆಯಲ್ಲಿರುವದರಿಂದ ಸಮಸ್ತ ಯೆ
ಹೂದ್ಯರಲ್ಲಿ ತಪ್ಪುವೆನೆಂದು, ನಿನ್ನ ಪ್ರಾಣದಲ್ಲಿ ನೆನಸ ಬೇಡ.
೧೪ ಯಾಕಂದರೆ ನೀನು ಈ ಕಾಲದಲ್ಲಿ ಮೌನವಾಗಿಯೇ ಇದ್ದರೆ,
ಮತ್ತೊಂದು ಕಡೆಯಿಂದ ಯೆಹೂದ್ಯರಿಗೆ ವಿಶ್ರಾಂತಿಯೂ ಬಿಡುಗ
ಡೆಯೂ ಉಂಟಾಗುವವು; ಆದರೆ ನೀನೂ ನಿನ್ನ ತಂದೆಯ
ಮನೆಯೂ ನಾಶವಾಗಿ ಹೋಗುವಿರಿ. ಇಂಥಾ ಕಾಲಕ್ಕೋಸ್ಕರ
ನೀನು ರಾಜತ್ವಕ್ಕೆ ಬಂದಿ ಏನೋ! ತಿಳ್ಕದವರು ಯಾರು!

೧೫ ಎಸ್ತೇರಳು ಮೊರ್ದೆಕಾಯಿಗೆ ಹೇಳ್ಳ ಕಳುಹಿಸಿದ ಪ್ರತ್ಯುತ್ತರ
ವೇನಂದರೆ—ನೀನು ಹೋಗಿ, ಶುಷಾನಿನಲ್ಲಿರುವ ಸಮಸ್ತ ಯೆ
ಹೂದ್ಯರನ್ನು ಕೂಡಿಸಿ, ನನಗೋಸ್ಕರ ರಾತ್ರಿ ಹಗಲು ಮೂರು
೧೬ ದಿವಸ ಉಣ್ಣದೆ, ಕುಡಿಯದೆ, ಉಪವಾಸ ಮಾಡಿರಿ. ನಾನೂ ನ
ನ್ನ ದಾಸಿಗಳೂ ಕೂಡ ಹಾಗೆಯೇ ಉಪವಾಸ ಮಾಡುವೆವು.
ಮತ್ತು ಹೀಗೆಯೇ ಆಜ್ಞೆಯನ್ನು ವಿಾರಿ, ಅರಸನ ಬಳಿಗೆ ಪ್ರವೇಶಿ
೧೭ ಸುವೆನು. ನಾನು ನಾಶವಾದರೆ, ನಾಶವಾಗುವೆನು. ಆಗ ಮೊ
ರ್ದೆಕಾಯಿ ಹೊರಟು ಹೋಗಿ, ಎಸ್ತೇರಳು ತನಗೆ ಆಜ್ಞಾಪಿಸಿದ್ದ
ನ್ನೆಲ್ಲಾ ಮಾಡಿದನು.

## ೫. ಸಂಧಿ.

೧ ಮೂರನೇ ದಿವಸದಲ್ಲಿ ಏನಾಯಿತಂದರೆ, ಎಸ್ತೇರಳು ರಾಜ
ಭೂಷಣಗಳನ್ನು ಧರಿಸಿ ಕೊಂಡು, ಅರಮನೆಗೆ ಎದುರಾಗಿರುವ
ಅರಸನ ಮನೆಯ ಅಂಗಳದಲ್ಲಿ ಹೋಗಿ, ನಿಂತಳು. ಅರಸನು
ರಾಜ ಮನೆಯಲ್ಲಿ, ಮನೆಯ ಬಾಗಲಿಗೆದುರಾಗಿ, ತನ್ನ ರಾಜ
೨ ಸಿಂಹಾಸನದ ಮೇಲೆ ಕುಳಿತಿದ್ದನು. ಅರಸನು ಅಂಗಳದಲ್ಲಿ ನಿಂತಿ
ರುವ ರಾಣಿಯಾದ ಎಸ್ತೇರಳನ್ನು ಕಂಡಾಗ, ಏನಾಯಿತಂದರೆ,
ಅವಳು ಅವನ ಸಮುಖದಲ್ಲಿ ದಯೆ ಹೊಂದಿದ್ದರಿಂದ, ಅರಸನು ತ
ನ್ನ ಕೈಯಲ್ಲಿದ್ದ ಥಂಗಾರದ ಮುದ್ರೆ ಕೋಲನ್ನು ಎಸ್ತೇರಳ ಬಳಿ
ಗೆ ಚಾಚಿದನು. ಎಸ್ತೇರಳು ಸವಿಾಪಕ್ಕೆ ಬಂದು, ಕೋಲಿನ ತಲೆ
3 ಯನ್ನು ಮುಟ್ಟಿದಳು. ಆಗ ಅರಸನು ಅವಳಿಗೆ, ರಾಣಿಯಾದ
ಎಸ್ತೇರಳೇ, ನಿನಗೆ ಏನು ಬೇಕು! ನಿನ್ನ ವಿಜ್ಞಾಪನೆ ಏನು! ಅದು
ರಾಜ್ಯದ ಅರ್ಧ ಪರ್ಯಂತರಕ್ಕಿದ್ದರೂ, ನಿನಗೆ ಕೊಡಲ್ಪಡುವದು,
೪ ಅಂದನು. ಅದಕ್ಕೆ ಎಸ್ತೇರಳು, ಅರಸನಿಗೆ ಸಮ್ಮತಿಯಾದರೆ,
ನಾನು ಅವನಿಗೋಸ್ಕರ ಸಿದ್ಧ ಮಾಡಿದ ಔತಣಕ್ಕೆ ಅರಸನೂ
೫ ಹಮಾನನೂ ಈ ಹೊತ್ತು ಬರ ಬೇಕು, ಅಂದಳು. ಆಗ ಅರಸ
ನು, ಎಸ್ತೇರಳು ಹೇಳ್ದಿದ ಪ್ರಕಾರ ಮಾಡ ಹಮಾನನನ್ನು ತ್ವರೆ ಪ
ಡಿಸಿರಿ, ಅಂದನು. ಎಸ್ತೇರಳು ಮಾಡಿಸಿದ ಔತಣಕ್ಕೆ ಅರಸನೂ
ಹಮಾನನೂ ಬಂದರು.

೬ ದ್ರಾಕ್ಷೇರಸದ ಔತಣದಲ್ಲಿ ಅರಸನು ಎಸ್ತೇರಳಿಗೆ—ನೀನು ಬೇ
ಡಿ ಕೊಳ್ಳುವದೇನು! ಅದು ನಿನಗೆ ಕೊಡಲ್ಪಡುವದು ನಿನ್ನ ವಿಜ್ಞಾ
ಪನೆ ಏನು! ಅದು ಅರ್ಧ ರಾಜ್ಯದ ಪರ್ಯಂತರಕ್ಕಿದ್ದರೂ, ಕೊಡ
೭ ಲ್ಪಡುವದು, ಅಂದನು. ಎಸ್ತೇರಳು ಪ್ರತ್ಯುತ್ತರ ಕೊಟ್ಟಳು—ನನ್ನ
೮ ವಿಜ್ಞಾಪನೆಯೂ ನನ್ನ ಬೇಡುವಿಕೆಯೂ ಏನಂದರೆ, ನಾನು ಅರ

ನನ ಸಮುಖದಲ್ಲಿ ದಯೆ ಹೊಂದಿದ್ದರೆ, ನನ್ನ ಬೇಡುವಿಕೆಯ ಪ್ರ
ಕಾರ ಕೊಡಲೂ, ನನ್ನ ವಿಜ್ಞಾಪನೆಯ ಪ್ರಕಾರ ಮಾಡಲೂ, ಅರ
ಸನಿಗೆ ಸಮ್ಮತಿಯಾದರೆ, ಅರಸನಿಗೂ ಹಮಾನನಿಗೂ ನಾನು
ಇನ್ನೂ ಮಾಡುವ ಔತಣಕ್ಕೆ ಬರ ಬೇಕು. ನಾಳೆ ಅರಸನು ಹೇ
ಳಿದ ಪ್ರಕಾರ ಮಾಡುವೆನು, ಅಂದಳು.

೯ ಆ ದಿವಸದಲ್ಲಿ ಹಮಾನನು ಸಂತೋಷವುಳ್ಳವನಾಗಿಯೂ
ಆನಂದ ಹೃದಯವುಳ್ಳವನಾಗಿಯೂ ಹೊರಟು ಹೋದನು. ಆ
ದರೆ ಅರಮನೆಯ ಬಾಗಲಲ್ಲಿರುವ ಮೊರ್ದೆಕಾಯಿ ತನಗೆ ಏಳದೆ
ಕದಲದೆ ಇರುವದನ್ನು ಹಮಾನನು ನೋಡಿದಾಗ, ಅವನು ಮೊ
೧೦ ರ್ದೆಕಾಯಿಯ ಮೇಲೆ ಉರಿಯಿಂದ ತುಂಬಿದವನಾದನು. ಆದ
ರೂ ಹಮಾನನು ಬಿಗಿ ಹಿಡುಕೊಂಡು, ತನ್ನ ಮನೆಗೆ ಬಂದು, ತ
ನ್ನ ಸ್ನೇಹಿತರನ್ನೂ ತನ್ನ ಹೆಂಡತಿಯಾದ ಜೆರೇಷಳನ್ನೂ ಕರೇ
೧೧ ಕಳುಹಿಸಿದನು. ಮತ್ತು ಹಮಾನನು ತನ್ನ ಐಶ್ವರ್ಯದ ಘನವ
ನ್ನೂ, ತನ್ನ ಮಕ್ಕಳ ಹೆಚ್ಚಳವನ್ನೂ, ಅರಸನು ತನ್ನನ್ನು
ಯಾವದರಲ್ಲಿ ಹೆಚ್ಚಿಸಿದ್ದಾನೋ, ಅರಸನ ಪ್ರಭುಗಳ ಮೇಲೆ
ಯೂ, ಸೇವಕರ ಮೇಲೆಯೂ ತನ್ನನ್ನು ಹ್ಯಾಗೆ ಎತ್ತಿದ್ದಾನೋ,
೧೨ ಅದೆಲ್ಲವನ್ನೂ ಅವರಿಗೆ ವಿವರವಾಗಿ ಹೇಳಿದನು. ಇದಲ್ಲದೆ ರಾಣಿ
ಯಾದ ಎಸ್ತೇರಳು ತಾನು ಮಾಡಿಸಿದ ಔತಣಕ್ಕೆ ನನ್ನ ಹೊ
ರ್ತು, ಅರಸನ ಸಂಗಡ ಬೇರೊಬ್ಬರನ್ನು ಕರೆಯಲಿಲ್ಲ. ನಾಳೆ
ಗೂ ಅವಳಿಂದ ನಾನು ಅರಸನ ಸಂಗಡ ಅವಳ ಬಳಿಗೆ ಕರೆಯ
೧೩ ಲ್ಪಟ್ಟಿದ್ದೇನೆ. ಆದರೆ ಯೆಹೂದ್ಯನಾದ ಮೊರ್ದೆಕಾಯಿ ಅರಮ
ನೆಯ ಬಾಗಲಲ್ಲಿ ಕುಳಿತಿರುವದನ್ನು ನಾನು ನೋಡುವ ಪರ್ಯಂ
೧೪ ತರ ಇದಷ್ಟೂ ನನಗೆ ಪ್ರಯೋಜನವಿಲ್ಲ, ಅಂದನು. ಆಗ ಅವನ
ಹೆಂಡತಿಯಾದ ಜೆರೇಷಳೂ, ಅವನ ಸಮಸ್ತ ಸ್ನೇಹಿತರೂ ಅವ
ನಿಗೆ—ಐವತ್ತು ಮೊಳ ಉದ್ದವಾದ ಒಂದು ಗಲ್ಲಿನ ಮರವು
ಮಾಡಲ್ಪಡಲಿ; ಮೊರ್ದೆಕಾಯಿ ಅದರಲ್ಲಿ ಹಾಕಲ್ಪಡುವ ಹಾಗೆ ನಾಳೆ
ಅರಸನ ಸಂಗಡ ಮಾತಾಡು; ತರುವಾಯ ಅರಸನ ಸಂಗಡ ಔ
ತಣಕ್ಕೆ ಸಂತೋಷವಾಗಿ ಹೋಗು, ಅಂದರು. ಈ ಮಾತು
ಹಮಾನನಿಗೆ ಚನ್ನಾಗಿ ಕಾಣಿಸಿದ್ದರಿಂದ ಗಲ್ಲಿನ ಮರವನ್ನು ಸಿ
ದ್ಧ ಮಾಡಿಸಿದನು.

## ೬. ಸಂಧಿ.

೧ ಆ ರಾತ್ರಿ ಅರಸನ ನಿದ್ರೆ ಬೆಡಿ ಹೋದದರಿಂದ, ದಿನಚರ್ಯೆ
ಗಳನ್ನು ಬರೆದಿರುವ ಪುಸ್ತಕವನ್ನು ತಕ್ಕೊಂಡು ಬರ ಹೇಳಿದನು.
೨ ಅವು ಅರಸನ ಮುಂದೆ ಓದಲ್ಪಟ್ಟಾಗ, ದ್ವಾರಪಾಲಕರಾಗಿದ್ದ ಅ
ರಸನ ನಪುಂಸಕರಲ್ಲಿ ಇಬ್ಬರಾದ ಬಿಕ್ತಾನನೂ ತೇರಷನೂ ಅರ
ಸನಾದ ಅಹಷ್ವೇರಸನ ಮೇಲೆ ಕೈ ಹಾಕ ಹುಡುಕುತ್ತಾ ಇದ್ದರೆಂ
ಬುವ ವರ್ತಮಾನವನ್ನು ಮೊರ್ದೆಕಾಯಿಯು ತಿಳಿಸಿದನೆಂದು ಬ
ರೆಯಲ್ಪಟ್ಟದ್ದು ಸಿಕ್ಕಿತು.
3 ಆಗ ಅರಸನು ಇದಕ್ಕೋಸ್ಕರ ಮೊರ್ದೆಕಾಯಿಗೆ ಏನಾದ
ರೂ ಘನವೂ ಮಹಿಮೆಯೂ ಮಾಡಲ್ಪಟ್ಟಿದೋ? ಅಂದನು. ಅ
ವನಿಗೆ ಮಾಡಿದ್ದು ಏನೂ ಇಲ್ಲವೆಂದು, ಅರಸನನ್ನು ಸೇವಿಸುವ ಅ
೪ ವನ ಸೇವಕರು ಹೇಳಿದರು. ಆಗ ಅರಸನು ಯಾರು ಅಂಗಳದ
ಲ್ಲಿ? ಅಂದನು. ಆದರೆ ಹಮಾನನು ಮೊರ್ದೆಕಾಯಿಗೋಸ್ಕರ
ಸಿದ್ಧ ಮಾಡಿದ ಗಲ್ಲಿನ ಮರದಲ್ಲಿ ಅವನನ್ನು ಹಾಕುವ ಹಾಗೆ, ಅ
೫ ರಸನ ಸಂಗಡ ಮಾತಾಡ ಅರಮನೆಯ ಹೊರಗಿನ ಅಂಗಳದಲ್ಲಿ
ಬಂದಿದ್ದನು. ಅರಸನ ಸೇವಕರು ಅವನಿಗೆ, ಇಗೋ, ಹಮಾನನು
ಅಂಗಳದಲ್ಲಿ ನಿಂತಿದ್ದಾನೆ, ಅಂದರು. ಅರಸನು, ಅವನು ಒಳಗೆ ಬ
ರಲಿ, ಅಂದನು.
೬ ಹಮಾನನು ಒಳಕ್ಕೆ ಬಂದಾಗ, ಅರಸನು ಅವನಿಗೆ—ಅರಸ
ನು ಘನ ಪಡಿಸ ಬೇಕೆಂದಿರುವ ಮನುಷ್ಯನಿಗೆ ಮಾಡ ಬೇಕಾದ
ದ್ದೇನು? ಅಂದನು. ಆಗ ಹಮಾನನು ತನ್ನ ಹೃದಯದಲ್ಲಿ—ಅ
ರಸನು ನನಗಿಂತ ಹೆಚ್ಚಾಗಿ ಮತ್ಯಾರನ್ನು ಘನ ಪಡಿಸ ಬೇಕೆಂ
೭ ದಿರುವನು? ಅಂದು ಕೊಂಡನು. ಮತ್ತು ಹಮಾನನು ಅರಸನಿಗೆ ಹೇ
ಳಿದನು—ಅರಸನು ಘನ ಪಡಿಸ ಬೇಕೆಂದಿರುವ ಮನುಷ್ಯನಿಗೆ
೮ ಮಾಡ ಬೇಕಾದದ್ದೇನಂದರೆ, ಅರಸನು ಧರಿಸಿ ಕೊಳ್ಳುವ ರಾಜವ
ಸ್ತ್ರಗಳೂ, ಅರಸನು ಹತ್ತುವ ಕುದುರೆಯೂ, ಅವನ ತಲೆಯ
೯ ಮೇಲೆ ಇಟ್ಟು ಕೊಳ್ಳುವ ರಾಜಕಿರೀಟವೂ ತರಲ್ಪಡಲಿ; ಆ ವಸ್ತ್ರ
ವೂ ಕುದುರೆಯೂ ಅರಸನ ಶ್ರೇಷ್ಠರಾದ ಪ್ರಧಾನರಲ್ಲಿ ಒಬ್ಬನ
ಕೈಗೆ ಕೊಡಲ್ಪತಲಿ; ಅರಸನು ಘನ ಪಡಿಸ ಬೇಕೆಂಬವನನ್ನು ಅವ
ರು ಧರಿಸ ಮಾಡಿದ ತರುವಾಯ, ಅವನನ್ನು ಕುದುರೆಯ ಮೇಲೆ
ಹತ್ತಿಸಿ, ಪಟ್ಟಿದ ಬೀದಿಯಲ್ಲಿ ತಕ್ಕೊಂಡು ಹೋಗಿ, ಅವನ ಮುಂ
ದೆ, ಅರಸನು ಘನ ಪಡಿಸ ಬೇಕೆಂದಿರುವ ಮನುಷ್ಯನಿಗೆ ಈ ಪ್ರ
ಕಾರ ಮಾಡಲ್ಪಡುವದು ಎಂದು ಸಾರ ಬೇಕು.
೧೦ ಆಗ ಅರಸನು ಹಮಾನನಿಗೆ—ನೀನು ಹೇಳಿದ ಪ್ರಕಾರವೇ ಶ್ವ
ರೆ ಮಾಡಿ ವಸ್ತ್ರವನ್ನೂ ಕುದುರೆಯನ್ನೂ ತಕ್ಕೊಂಡು ಅರಮ
ನೆಯ ಬಾಗಲಲ್ಲಿ ಕುಳಿತಿರುವ ಯೆಹೂದ್ಯನಾದ ಮೊರ್ದೆಕಾಯಿ
ಗೆ ಆ ಪ್ರಕಾರ ಮಾಡು. ನೀನು ಹೇಳಿದ್ದೆಲ್ಲಾದರಲ್ಲಿ ಒಂದಾದ
೧೧ ರೂ ತಪ್ಪ ಬಾರದು, ಅಂದನು. ಆಗ ಹಮಾನನು ವಸ್ತ್ರವನ್ನೂ
ಕುದುರೆಯನ್ನೂ ತಕ್ಕೊಂಡು, ಮೊರ್ದೆಕಾಯಿಯನ್ನು ಧರಿಸ
ಮಾಡಿ, ಕುದುರೆಯ ಮೇಲೆ ಹತ್ತಿಸಿ, ಪಟ್ಟಿದ ಬೀದಿಯಲ್ಲಿ ತ
ಕ್ಕೊಂಡು ಹೋಗಿ, ಅವನ ಮುಂದೆ, ಅರಸನು ಘನ ಪಡಿಸ ಬೇ
ಕೆಂದಿರುವ ಮನುಷ್ಯನಿಗೆ ಈ ಪ್ರಕಾರ ಮಾಡಲ್ಪಡುವದೆಂದು ಸಾ
ರಿ ಹೇಳಿದನು.
೧೨ ಮತ್ತು ಮೊರ್ದೆಕಾಯಿ ಅರಮನೆಯ ಬಾಗಲಿಗೆ ತಿರಿಗಿ ಬಂ
ದನು. ಆದರೆ ಹಮಾನನು ದುಃಖ ಪಟ್ಟು, ತಲೆಯನ್ನು ಮುಚ್ಚಿ
೧೩ ಕೊಂಡು, ತನ್ನ ಮನೆಗೆ ಶೀಘ್ರವಾಗಿ ಹೋದನು. ಆಗ ಹಮಾನ
ನು ತನ್ನ ಹೆಂಡತಿಯಾದ ಜೆರೇಷಳಿಗೂ ತನ್ನ ಸಮಸ್ತ ಸ್ನೇಹಿ
ತರಿಗೂ ತನಗೆ ಆದದ್ದನ್ನೆಲ್ಲಾ ವಿವರವಾಗಿ ಹೇಳಿದನು. ಆಗ ಅ
ವನ ಜ್ಞಾನಿಗಳೂ ಅವನ ಹೆಂಡತಿಯಾದ ಜೆರೇಷಳೂ ಅವನಿ
ಗೆ—ನೀನು ಯಾವನ ಮುಂದೆ ಬೀಳಲಾರಂಭಿಸಿದ್ದಿಯೋ, ಆ ಮೊ
ರ್ದೆಕಾಯಿ ಯೆಹೂದ್ಯರ ವಂಶಸ್ತನಾಗಿದ್ದರೆ, ನೀನು ಅವನನ್ನು
ಜಯಿಸಲಾರಿ; ಅವನ ಮುಂದೆ ಬೀಳಲೇ ಬೀಳುವಿ, ಅಂದರು.
೧೪ ಅವರು ಇನ್ನೂ ಅವನ ಸಂಗಡ ಮಾತಾಡುತ್ತಿರುವಾಗ, ಅರ
ಸನ ನಪುಂಸಕರು ಬಂದು, ಎಸ್ತೇರಳು ಸಿದ್ಧ ಮಾಡಿಸಿದ ಔತಣಕ್ಕೆ
ಹಮಾನನನ್ನು ಕರಕೊಂಡು ಹೋಗ ಶೀಘ್ರಿಸಿದರು.

## ೭. ಸಂಧಿ.

೧ ಅರಸನೂ ಹಮಾನನೂ ರಾಣಿಯಾದ ಎಸ್ತೇರಳ ಔತಣಕ್ಕೆ
೨ ಬಂದರು. ಎರಡನೇ ದಿವಸ ದ್ರಾಕ್ಷೇ ರಸದ ಔತಣಕ್ಕೆ ಬಂದಾಗ,



ಅರಸನು ಮತ್ತೂ ಎಸ್ತೇರಳಿಗೆ, ರಾಣಿಯಾದ ಎಸ್ತೇರಳೇ, ನಿ
ನ್ನ ಬೇಡುವಿಕೆ ಏನು? ಅದು ನಿನಗೆ ಕೊಡಲ್ಪಡುವದು; ನಿನ್ನ ವಿ
ಜ್ಞಾಪನೆ ಏನು? ಅದು ನನ್ನ ರಾಜ್ಯದ ಅರ್ಧದ ಪರ್ಯಂತರಕ್ಕಿ
ದ್ದರೂ, ಮಾಡಲ್ಪಡುವದು, ಅಂದನು.
3 ಆಗ ರಾಣಿಯಾದ ಎಸ್ತೇರಳು ಪ್ರತ್ಯುತ್ತರ ಕೊಟ್ಟಿಳು—ಅ
ರಸನೇ, ನಾನು ನಿನ್ನ ಸಮುಖದಲ್ಲಿ ದಯೆ ಹೊಂದಿದವಳಾಗಿದ್ದ
ಕೆ, ಅದು ಅರಸನಿಗೆ ಚನ್ನಾಗಿದ್ದರೆ, ನನ್ನ ಬೇಡುವಿಕೆಗೆ ನನ್ನ
ಪ್ರಾಣವೂ, ನನ್ನ ವಿಜ್ಞಾಪನೆಗೆ ನನ್ನ ಜನವೂ ಕೊಡಲ್ಪತಲಿ.
೪ ಯಾಕಂದರೆ ನಾನೂ ನನ್ನ ಜನವೂ ಸಂಹರಿಸಲ್ಪಡುವದಕ್ಕೂ,
ಕೊಲ್ಲಲ್ಪಡುವದಕ್ಕೂ, ನಾಶ ಮಾಡಲ್ಪಡುವದಕ್ಕೂ, ಮಾರಲ್ಪ
ಟ್ಟಿವು. ನಾವು ದಾಸ ದಾಸಿಗಳಾಗಿ ಮಾರಲ್ಪಟ್ಟಿದ್ದರೆ, ನಾನು ಸು
ಮ್ಮನೆ ಇರುತ್ತಿದ್ದೆನು; ಆದರೆ ವೈರಿ ಅರಸನ ನಷ್ಟಕ್ಕೆ ಸರಿಯಾಗಿ
ಕೊಡಲಾನನು, ಅಂದಳು.
೫ ಆಗ ಅರಸನಾದ ಅಹಷ್ವೇರಸನು ಹೇಳಿದನು—ರಾಣಿಯಾದ
ಎಸ್ತೇರಳಿಗೆ ಹೇಳಿದನು—ಅವನು ಯಾರು? ಅವನು ಎಲ್ಲಿ? ಈ
೬ ಪ್ರಕಾರ ಮಾಡ ತನ್ನ ಹೃದಯ ತುಂಬಿ ಕೊಂಡವನು. ಅದಕ್ಕೆ
ಎಸ್ತೇರಳು—ವೈರಿಯೂ ಶತ್ರುವೂ ಯಾರುಂದರೆ, ಈ ಕೆಟ್ಟವನಾ
ದ ಹಮಾನನೇ, ಅಂದಳು. ಆಗ ಹಮಾನನು ಅರಸನ, ರಾಣಿ
ಯ ಸಮುಖದಲ್ಲಿ ಹೆದರಿ ಗೊಂಡನು.
೭ ಅರಸನು ಉರಿಯುಳ್ಳವನಾಗಿ ದ್ರಾಕ್ಷೇ ರಸದ ಔತಣದಿಂದ
ಎದ್ದು, ಅರಮನೆಯ ತೋಟಕ್ಕೆ ಹೋದನು. ಆದರೆ ಹಮಾನ
ನು ರಾಣಿಯಾದ ಎಸ್ತೇರಳ ಮುಂದೆ ತನ್ನ ಪ್ರಾಣಕ್ಕೋಸ್ಕರ
ಬೇಡಿಕೊಳ್ಳುತ್ತಾ ನಿಂತನು; ಯಾಕಂದರೆ ಅರಸನಿಂದ ತನಗೆ ಕೇ
ಡು ನಿರ್ಣಯವಾಯಿತೆಂದು, ಕಂಡನು.
೮ ಅರಸನು ಅರಮನೆಯ ತೋಟದಿಂದ ದ್ರಾಕ್ಷೇ ರಸದ ಔತಣ
ಸ್ಥಳಕ್ಕೆ ತಿರಿಗಿ ಬಂದಾಗ, ಹಮಾನನು ಎಸ್ತೇರಳು ಕುಳಿತಿರುವ
ಹಾಸಿಗೆಯ ಮೇಲೆ ಬಿದ್ದಿದ್ದನು. ಆಗ ಅರಸನು ನನ್ನ ಮುಂದೆ
ಅವನು ರಾಣಿಯನ್ನು ಬಲಾತ್ಕಾರ ಮಾಡುವನೋ? ಅಂದನು. ಆ
ಮಾತು ಅರಸನ ಬಾಯಿಂದ ಹೊರಟಾಗ, ಅವರು ಹಮಾನನ
೯ ಮುಖವನ್ನು ಮುಚ್ಚಿದರು. ಆಗ ನಪುಂಸಕರಲ್ಲಿ ಒಬ್ಬನಾದ ಹ
ರ್ಬೋನನು ಅರಸನ ಮುಂದೆ, ಇಗೋ, ಅರಸನನ್ನು ಕುರಿತು
ಒಳ್ಳೇದನ್ನು ಹೇಳಿದ ಮೊರ್ದೆಕಾಯಿಗೋಸ್ಕರ ಹಮಾನನು
ಮಾಡಿಸಿದ ಐವತ್ತು ಮೊಳ ಉದ್ದವಾದ ಗಲ್ಲಿನ ಮರವು ಹಮಾ
ನನ ಮನೆಯಲ್ಲಿ ಅದೆ, ಅಂದನು. ಅದಕ್ಕೆ ಅರಸನು, ಅವನನ್ನು
೧೦ ಅದರಲ್ಲಿ ಹಾಕಿರಿ, ಅಂದನು. ಅವರು ಮೊರ್ದೆಕಾಯಿಗೋಸ್ಕರ
ಹಮಾನನು ಸಿದ್ಧ ಮಾಡಿಸಿದ ಗಲ್ಲಿನ ಮರದಲ್ಲಿ ಅವನನ್ನು ಹಾ
ಕಿದರು. ಆಗ ಅರಸನ ಉರಿ ಶಾಂತವಾಯಿತು.

## ೯. ಸಂಧಿ.

೧ ಅದೇ ದಿವಸದಲ್ಲಿ ಅರಸನಾದ ಅಹಷ್ವೇರಸನು ಯೆಹೂದ್ಯ
ರ ವೈರಿಯಾದ ಹಮಾನನ ಮನೆಯನ್ನು ರಾಣಿಯಾದ ಎಸ್ತೇ
ರಳಿಗೆ ಕೊಟ್ಟನು. ಇದಲ್ಲದೆ ಮೊರ್ದೆಕಾಯಿ ಅರಸನ ಬಳಿಗೆ ಬಂ
೨ ದನು; ಯಾಕಂದರೆ ಅವನು ತನಗೆ ಏನಾಗ ಬೇಕೋ, ಅದನ್ನು
ಎಸ್ತೇರಳು ತಿಳಿಸಿದ್ದಳು. ಆಗ ಅರಸನು ತಾನು ಹಮಾನನಿಂದ
ತಕ್ಕೊಂಡ ತನ್ನ ಉಂಗರವನ್ನು ತೆಗೆದು, ಮೊರ್ದೆಕಾಯಿಗೆ ಕೊ
ಟ್ಟನು. ಇದಲ್ಲದೆ ಎಸ್ತೇರಳು ಮೊರ್ದೆಕಾಯಿಯನ್ನು ಹಮಾನ
ನ ಮನೆಯ ಅಧಿಕಾರಿಯಾಗಿ ಇರಿಸಿದಳು.
3 ಮತ್ತು ಎಸ್ತೇರಳು ಅರಸನ ಮುಂದೆ ತಿರಿಗಿ ಮಾತನಾಡಿ, ಅವ
ನ ಪಾದಗಳ ಮುಂದೆ ಬಿದ್ದು, ಅತ್ತು, ಅಗಾಧ್ಯನಾದ ಹಮಾನ
ನ ಕೇಡನ್ನೂ, ಅವನು ಯೆಹೂದ್ಯರಿಗೆ ವಿರೋಧವಾಗಿ ಯೋ
ಚಿಸಿದ ಯೋಜನೆಯನ್ನೂ ತೆಗೆದು ಹಾಕ ಬೇಡಿ ಕೊಂಡಳು.
೪ ಆಗ ಅರಸನು ಎಸ್ತೇರಳ ಕಡೆಗೆ ಭಂಗಾರದ ಮುದ್ರೆ ಕೋಲನ್ನು
ಚಾಚಿದ್ದರಿಂದ, ಎಸ್ತೇರಳು ಎದ್ದು, ಅರಸನ ಮುಂದೆ ನಿಂತು, ಹೇ
೫ ಳಿದ್ದೇನಂದರೆ—ಅರಸನಿಗೆ ಒಳ್ಳೇದಾಗಿದ್ದರೆ, ಅವನ ಸಮುಖದಲ್ಲಿ
ನಾನು ದಯೆ ಹೊಂದಿದವಳಾದರೆ, ಕಾರ್ಯವು ಅರಸನಿಗೆ ಯು
ಕ್ತವಾಗಿ ಕಾಣಿಸಲ್ಪಟ್ಟರೆ, ನಾನು ಅವನ ಸಮುಖದಲ್ಲಿ ಒಳ್ಳೇಯ
ವಳೆಂದು ಕಾಣಿಸಲ್ಪಟ್ಟರೆ, ಅರಸನ ಸಮಸ್ತ ಶೀಮೆಗಳಲ್ಲಿರುವ ಯೆ
ಹೂದ್ಯರನ್ನು ನಾಶ ಮಾಡುವದಕ್ಕೆ ಅವನು ಬರೆದ, ಅಗಾಧ್ಯನಾ
ದ ಹಮ್ದಾತ್ತನ ಮಗನಾದ ಹಮಾನನು ಯೋಚಿಸಿದ ಪತ್ರಿಕೆಗಳ
೬ ನ್ನು ತೆಗೆದು ಹಾಕ ಬರೆಯಲ್ಪತಲಿ. ಯಾಕಂದರೆ ನನ್ನ ಜನರ
ಮೇಲೆ ಬರುವ ಕೇಡನ್ನು ನಾನು ಹ್ಯಾಗೆ ನೋಡ ಬಹುದು? ಇಲ್ಲ
ವೆ ನನ್ನ ಬಂಧುಗಳ ನಷ್ಟವನ್ನು ನಾನು ಹ್ಯಾಗೆ ನೋಡ ಬಹುದು?
೭ ಆಗ ಅರಸನಾದ ಅಹಷ್ವೇರಸನು ರಾಣಿಯಾದ ಎಸ್ತೇರಳಿ
ಗೂ ಯೆಹೂದ್ಯನಾದ ಮೊರ್ದೆಕಾಯಿಗೂ ಹೇಳಿದ್ದೇನಂದರೆ—
ಇಗೋ, ಹಮಾನನು ಯೆಹೂದ್ಯರ ಮೇಲೆ ತನ್ನ ಕೈ ಹಾಕಿದ್ದ
ರಿಂದ, ಅವನ ಮನೆಯನ್ನು ಎಸ್ತೇರಳಿಗೆ ಕೊಟ್ಟೆನು; ಅವನನ್ನು
೮ ಗಲ್ಲಿಗೆ ಹಾಕಿದ್ದಾರೆ. ನೀವು ಯೆಹೂದ್ಯರಿಗೋಸ್ಕರ ಅರಸನ
ಹೆಸರಿನಿಂದ ನಿಮ್ಮ ಕಣ್ಣುಗಳಿಗೆ ಒಳ್ಳೇದಾಗಿ ತೋರುವ ಹಾಗೆ
ಬರೆದು, ಅರಸನ ಉಂಗರದಿಂದ ಮುದ್ರೆಯನ್ನು ಹಾಕಿರಿ. ಯಾ
ಕಂದರೆ ಅರಸನ ಹೆಸರಿನಿಂದ ಬರೆಯಲ್ಪಟ್ಟು ಅರಸನ ಉಂಗರದಿಂ
ದ ಮುದ್ರೆ ಹಾಕಲ್ಪಟ್ಟ ಬರಹವನ್ನು ಯಾರೂ ತಿರುಗಿಸಿ ಬಿಡುವ
ದಕ್ಕಿಲ್ಲ.
೯ ಆಗ ಅದೇ ಕಾಲದಲ್ಲಿ ಶೀವಾನ್ ಎಂಬುವ ಮೂರನೇ ತಿಂಗಳ
ಇಪ್ಪತ್ತು ಮೂರನೇ ದಿವಸದಲ್ಲಿ ಅರಸನ ರಾಯಸದವರು ಕರೆ
ಯಲ್ಪಟ್ಟರು; ಮೊರ್ದೆಕಾಯಿ ಆಜ್ಞಾಪಿಸಿದ ಎಲ್ಲಾದರ ಪ್ರಕಾರ
ಸಕಲ ಯೆಹೂದ್ಯರಿಗೂ, ಹಿಂದೂಸ್ಥಾನ ಮೊದಲುಗೊಂಡು ಕೂ
ಷಿನ ಪರ್ಯಂತರಕ್ಕೂ ಇರುವ ನೂರಿಪ್ಪತ್ತೇಳು ಶೀಮೆಗಳ ಯೆ
ಜಮಾನರಿಗೂ, ಅಧಿಪತಿಗಳಿಗೂ, ಪ್ರಧಾನರಿಗೂ ಪ್ರತಿ ಶೀಮೆಗೆ
ಅದರ ಬರಹಿಕೆಯ ಪ್ರಕಾರವೂ, ಪ್ರತಿ ಜನರಿಗೆ ಅವರ ಭಾಷೆಯ
ಪ್ರಕಾರವೂ, ಯೆಹೂದ್ಯರಿಗೆ ಅವರ ಬರಹಿಕೆಯ ಪ್ರಕಾರವೂ ಅ
ವರ ಭಾಷೆಯ ಪ್ರಕಾರವೂ ಬರೆಯಲ್ಪಟ್ಟಿತು.
೧೦ ಅವನು ಅರಸನಾದ ಅಹಷ್ವೇರಸನ ಹೆಸರಿನಲ್ಲಿ ಬರೆದು, ಅ
ರಸನ ಉಂಗರದಿಂದ ಮುದ್ರೆ ಹಾಕಿ, ಪತ್ರಿಕೆಗಳನ್ನು ಕುದುರೆಗಳ
ಮೇಲೆಯೂ ವೇಗವಾದ ವಾಹನಗಳ ಮೇಲೆಯೂ, ಹಾಸರಕತ್ತೆ
ಗಳ ಮೇಲೆಯೂ ಏರಿದ ಓಟುವವರ ಕೈಯಲ್ಲಿ ಕಳುಹಿಸಿದನು.
೧೧ ಅವುಗಳಲ್ಲಿ ಅರಸನು ಯೆಹೂದ್ಯರಿಗೆ ಕೊಟ್ಟದ್ದೇನಂದರೆ—ಅರ
ಸನಾದ ಅಹಷ್ವೇರಸನ ಸಮಸ್ತ ಶೀಮೆಗಳಲ್ಲಿ, ಒಂದು ದಿವಸದ
ಲ್ಲಿ, ಅಡಾರ್ ತಿಂಗಳೆಂಬುವ ಹನ್ನೆರಡನೇ ತಿಂಗಳ ಹದಿನೂರನೇ
೧೨ ದಿವಸದಲ್ಲಿ, ಅವರು ಪ್ರತಿ ಪಟ್ಟಣದಲ್ಲಿ ಕೂಡಿ ಕೊಂಡು, ತಮ್ಮ ಪ್ರಾ
ಣಕ್ಕೋಸ್ಕರ ಎದ್ದು, ಆ ಶೀಮೆಯ, ಆ ಜನರ ಸೈನ್ಯದಲ್ಲಿ ಯಾ

ರಾದರೂ ಅವರಿಗೆ ವಿಕೋಧವಾಗಿ ಎದ್ದರೆ, ಅವರನ್ನೂ, ಚಿಕ್ಕವ
ರನ್ನೂ ಸ್ತ್ರೀಯರನ್ನೂ ಕೂಡಾ, ಸಂಹರಿಸುವದಕ್ಕೂ, ಕೊಂ
ದು ಹಾಕುವದಕ್ಕೂ, ನಾಶ ಮಾಡುವದಕ್ಕೂ, ಅವರ ಸ್ಥಿತಿಯ
ನ್ನು ಕೊಳ್ಳೆ ಇಡುವದಕ್ಕೂ ಅಪ್ಪಣೆ ಕೊಟ್ಟನು.
೧೩ ಯೆಹೂದ್ಯರು ತಮ್ಮ ಶತ್ರುಗಳ ಮೇಲೆ ಮುಯ್ಯಿಗೆ ಮುಯ್ಯಿ
ಮಾಡ ಆ ದಿನಕ್ಕೆ ಅವರು ಸಿದ್ಧವಾಗಿರುವ ಹಾಗೆ, ಈ ಆಜ್ಞಾ
ಪತ್ರಿಕೆಯ ಪತ್ರಿಯು ಶೀಮೆ ಶೀಮೆಯಲ್ಲಿ ಸಕಲ ಜನರಿಗೂ ಸಾ
೧೪ ರಿ ಹೇಳಲ್ಪಟ್ಟಿತು. ಓಡುವವರು ಅರಸನ ಆಜ್ಞೆಯಿಂದ ತೀವ್ರಿಸಿ
ನೂಕಲ್ಪಟ್ಟ ಕಾರಣ, ಹಾಸರಕತ್ತೆಗಳ ಮೇಲೆಯೂ ವೇಗವಾ
ದ ವಾಹನಗಳ ಮೇಲೆಯೂ ಏರಿ ಹೊರಟರು. ಈ ಆಜ್ಞೆಯು ರಾ
ಜಧಾನಿಯಾದ ಶುಷಾನಿನಲ್ಲಿ ಕೊಡಲ್ಪಟ್ಟಿತು.
೧೫ ಮತ್ತು ಮೊರ್ದೆಕಾಯಿ ನೀಲಶುಭ್ರವಾದ ರಾಜ ವಸ್ತ್ರ ಧರಿಸಿ
ಕೊಂಡು, ಭಂಗಾರದ ದೊಡ್ಡ ಕಿರೀಟವನ್ನು ಇಟ್ಟು ಕೊಂಡು, ರ
ಕ್ತ ವರ್ಣವುಳ್ಳ ನಯವಾದ ವಸ್ತ್ರ ಧರಿಸಿ ಕೊಂಡು, ಅರಸನ ಸ
ಮುಖದಿಂದ ಹೊರಟು ಹೋದನು. ಆಗ ಶುಷಾನು ಪಟ್ಟಣವು ಸಂ
೧೬ ಭ್ರಮವೂ ಸಂತೋಷವೂ ಉಳ್ಳದ್ದಾಗಿತ್ತು. ಯೆಹೂದ್ಯರಿಗೆ ಬೆಳ
ಕೂ, ಸಂತೋಷವೂ, ಆನಂದವೂ ಘನವೂ ಉಂಟಾಗಿದ್ದವು.
೧೭ ಪ್ರತಿ ಶೀಮೆಯಲ್ಲಿಯೂ ಪ್ರತಿ ಪಟ್ಟಣದಲ್ಲಿಯೂ ಅರಸನ ಮಾತೂ
ಅವನ ಆಜ್ಞೆಯೂ ಎಲ್ಲಿಗೆ ಬಂತೋ, ಅಲ್ಲಿ ಯೆಹೂದ್ಯರಿಗೆ ಸಂ
ತೋಷವೂ, ಆನಂದವೂ, ಹಬ್ಬವೂ, ಸುದಿವಸವೂ ಉಂಟಾಗಿ
ದ್ದವು. ಇದಲ್ಲದೆ ಆ ದೇಶದ ಅನೇಕ ಜನರು ಯೆಹೂದ್ಯರಾದ
ರು. ಯಾಕಂದರೆ ಯೆಹೂದ್ಯರ ಭಯವು ಅವರ ಮೇಲೆ ಇತ್ತು.

## ೯. ಸಂಧಿ.

೧ ಅದಾರ್ ತಿಂಗಳೆಂಬ ಹನ್ನೆರಡನೇ ತಿಂಗಳ ಹದಿಮೂರನೇ ದಿವ
ಸದಲ್ಲಿ ಅರಸನ ಮಾತೂ ಅವನ ಆಜ್ಞೆಯೂ ಮಾಡಲ್ಪಡುವದ
ಕ್ಕೆ ಸಮಿಪಿಸಿದಾಗ, ಯೆಹೂದ್ಯರ ಶತ್ರುಗಳು ಅದೇ ದಿವಸದ
ಲ್ಲಿ ಅವರ ಮೇಲೆ ಘೊರೆತನ ಮಾಡುವೆವೆಂದು, ಕಾದು ಕೊಂಡಿದ್ದ
ರು; ಅದಕ್ಕೆ ಬದಲಾಗಿ ಯೆಹೂದ್ಯರು ತಮ್ಮನ್ನು ಹಗೆ ಮಾಡು
೨ ವವರ ಮೇಲೆ ಘೊರೆತನ ಮಾಡಿದರು; ಅದೇ ದಿವಸದಲ್ಲಿ ಯೆ
ಹೂದ್ಯರು ಅರಸನಾದ ಅಹಷ್ವೇರಸನ ಸಮಸ್ತ ಶೀಮೆಗಳಲ್ಲಿರು
ವ ತಮ್ಮ ತಮ್ಮ ಪಟ್ಟಣಗಳಲ್ಲಿ ತಮ್ಮನ್ನು ಕೆಡಿಸ ಹುಡುಕುವವರ
ಮೇಲೆ ಕೈ ಹಾಕ ಕೂಡಿ ಕೊಂಡರು. ಆಗ ಅವರ ಭಯವು ಸ
ಮಸ್ತ ಜನರ ಮೇಲೆ ಬಿದ್ದದರಿಂದ, ಅವರ ಮುಂದೆ ನಿಲ್ಲುವವನು
೩ ಒಬ್ಬನೂ ಇರಲಿಲ್ಲ. ಇದಲ್ಲದೆ ಶೀಮೆಗಳ ಪ್ರಧಾನರೂ ಯಜಮಾ
ನರೂ ಅಧಿಪತಿಗಳೂ ಅರಸನ ಕೆಲಸದವರೂ ಯೆಹೂದ್ಯರನ್ನು
ಸನ್ಮಾನಿಸಿದರು. ಯಾಕಂದರೆ ಮೊರ್ದೆಕಾಯಿಯ ಭಯ ಅವರ
೪ ಮೇಲೆ ಬಂತು. ಯಾಕಂದರೆ ಮೊರ್ದೆಕಾಯಿ ಅರಮನೆಯಲ್ಲಿ
ದೊಡ್ಡವನಾಗಿದ್ದನು. ಅವನ ಕೀರ್ತಿಯು ಸಮಸ್ತ ಶೀಮೆಗಳ
ಮೇಲೆ ಹೋಗುತ್ತಾ ಇತ್ತು. ಈ ಮೊರ್ದೆಕಾಯಿ ಅಧಿಕಾಧಿಕ
ವಾಗಿ ದೊಡ್ಡವನಾದನು.
೫ ಹೀಗೆಯೇ ಯೆಹೂದ್ಯರು ಕತ್ತಿ ಹೊಸತದಿಂದಲೂ, ಕೊಲೆ
ಯಿಂದಲೂ, ಕೇಡಿನಿಂದಲೂ, ತಮ್ಮ ಶತ್ರುಗಳೆಲ್ಲರನ್ನು ಹೊಡೆ
ದು, ತಮ್ಮನ್ನು ಹಗೆ ಮಾಡುವವರಿಗೆ ತಮ್ಮ ಇಷ್ಟ ಬಂದ ಹಾ
೬ ಗೆ ಮಾಡಿದರು. ರಾಜಧಾನಿಯಾದ ಶುಷಾನಿನಲ್ಲಿ ಯೆಹೂದ್ಯರು
೭ ಐನೂರು ಮಂದಿಯನ್ನು ಕೊಂದರು. ಇದಲ್ಲದೆ ಯೆಹೂದ್ಯರ
ವೈರಿಯಾದ, ಹಮ್ಮದತ್ತನ ಮಗನಾದ ಹಮಾನನ ಹತ್ತು ಮಂ
೮ ದಿ ಮಕ್ಕಳಾದ ಪರ್ಶಂದತ್ತನು, ದಲ್ಫೋನನು, ಅಸ್ಪಾತನು,
೯ ಪೊರಾತನು, ಅದಲ್ಯನು, ಅರಿದತ್ತನು, ಪರ್ಮಷ್ಟನು, ಅರಿಸಾಯ
ನು, ಅರಿದಾಯನು, ವೈಜಾತನು ಎಂಬವರನ್ನು ಕೊಂದರು. ಆ
೧೦ ದರೆ ಅವರು ಕೊಳ್ಳೆಯ ಮೇಲೆ ಕೈ ಹಾಕಲಿಲ್ಲ.
೧೧ ಅದೇ ದಿವಸ ರಾಜಧಾನಿಯಾದ ಶುಷಾನಿನಲ್ಲಿ ಕೊಂದು ಹಾ
೧೨ ಕಲ್ಪಟ್ಟವರ ಲೆಖ್ಖವು ಅರಸನ ಮುಂದೆ ತರಲ್ಪಟ್ಟಿತು. ಆಗ ಅರ
ಸನು ರಾಣಿಯಾದ ಎಸ್ತೇರಳಿಗೆ ಹೇಳಿದನು—ಯೆಹೂದ್ಯರು ರಾ
ಜಧಾನಿಯಾದ ಶುಷಾನಿನಲ್ಲಿ ಐನೂರು ಮಂದಿಯನ್ನೂ ಹಮಾ
ನನ ಹತ್ತು ಮಕ್ಕಳನ್ನೂ ಕೊಂದು ನಾಶ ಮಾಡಿದ್ದಾರೆ. ಅವ
ರು ಅರಸನ ಮಿಕ್ಕಾದ ಶೀಮೆಗಳಲ್ಲಿ ಮಾಡಿದ್ದೇನೋ! ಈಗ ನಿ
ನ್ನ ವಿಜ್ಞಾಪನೆ ಏನು! ಅದು ನಿನಗೆ ಕೊಡಲ್ಪಟ್ಟುದು; ಇನ್ನೂ ನಿ
ನ್ನ ಬೇಡುವಿಕೆ ಏನು! ಅದು ಮಾಡಲ್ಪಡುವದು.
೧೩ ಎಸ್ತೇರಳು ಅಂದಳು—ಅರಸನಿಗೆ ಸಮ್ಮತಿಯಾದರೆ, ಇಂದಿ
ನ ಆಜ್ಞೆಯ ಪ್ರಕಾರ ನಾಳಿನ ದಿವಸವೂ ಶುಷಾನಿನಲ್ಲಿ ಮಾಡ
ಯೆಹೂದ್ಯರಿಗೆ ಅಪ್ಪಣೆ ಆಗಲಿ; ಮತ್ತು ಹಮಾನನ ಹತ್ತು ಮಂ
೧೪ ದಿ ಮಕ್ಕಳು ಗಲ್ಲಿಗೆ ಹಾಕಲ್ಪಡಲಿ. ಆಗ ಅರಸನು ಹಾಗೆಯೇ
ಮಾಡ ಆಜ್ಞಾಪಿಸಿದನು. ಆ ಆಜ್ಞೆಯು ಶುಷಾನಿನಲ್ಲಿ ಕೊಡಲ್ಪ
ಟ್ಟಾಗ, ಅವರು ಹಮಾನನ ಹತ್ತು ಮಂದಿ ಮಕ್ಕಳನ್ನು ಗಲ್ಲಿಗೆ
೧೫ ಹಾಕಿದರು. ಇದಲ್ಲದೆ ಶುಷಾನಿನಲ್ಲಿರುವ ಯೆಹೂದ್ಯರು ಆದಾ
ರ್ಕೆಂಬ ತಿಂಗಳ ಹದಿನಾಲ್ಕನೇ ದಿವಸದಲ್ಲಿ ಕೂಡಿ ಕೊಂಡು ಶುಷಾ
ನಿನಲ್ಲಿ ಮುನ್ನೂರು ಮಂದಿಯನ್ನು ಕೊಂದರು. ಆದರೆ ಅವರು
ಕೊಳ್ಳೆಯ ಮೇಲೆ ಕೈ ಹಾಕಲಿಲ್ಲ.
೧೬ ಹಾಗೆಯೇ ಅರಸನ ಶೀಮೆಗಳಲ್ಲಿರುವ ಮಿಕ್ಕ ಯೆಹೂದ್ಯರು
ಕೂಡಿ ಕೊಂಡು, ತಮ್ಮ ಪ್ರಾಣಗಳಿಗೋಸ್ಕರ ಎದ್ದು ನಿಂತು, ತ
ಮ್ಮ ಶತ್ರುಗಳಿಂದ ತಪ್ಪಿ, ವಿಶ್ರಾಂತಿಯನ್ನು ಹೊಂದಿ, ತಮ್ಮ ಹಗೆ
ಯವರಲ್ಲಿ ಎಪ್ಪತ್ತೈದು ಸಾವಿರ ಮಂದಿಯನ್ನು ಕೊಂದರು; ಆದ
ರೆ ಅವರು ಕೊಳ್ಳೆಯ ಮೇಲೆ ಕೈ ಹಾಕಲಿಲ್ಲ. ಅದಾರ್ ತಿಂಗಳ ಹ
೧೭ ದಿಮೂರನೇ ದಿವಸ ಇದು ಆಯಿತು. ಅದರ ಹದಿನಾಲ್ಕನೇ ದಿ
ವಸದಲ್ಲಿ ಅವರು ವಿಶ್ರಾಂತಿಯಾಗಿದ್ದು, ಅದನ್ನು ಹಬ್ಬದ, ಸಂ
ತೋಷದ ದಿವಸವಾಗ ಮಾಡಿದರು. ಆದರೆ ಶುಷಾನಿನಲ್ಲಿರುವ
೧೮ ಯೆಹೂದ್ಯರು ಅದರ ಹದಿಮೂರನೇ ದಿವಸದಲ್ಲಿಯೂ ಹದಿನಾ
ಲ್ಕನೇ ದಿವಸದಲ್ಲಿಯೂ ಕೂಡಿ ಕೊಂಡರು. ಅದರ ಹದಿನೈದನೇ
ದಿವಸದಲ್ಲಿ ಅವರು ವಿಶ್ರಾಂತಿಯಾಗಿದ್ದು, ಅದನ್ನು ಹಬ್ಬದ, ಸಂ
ತೋಷದ ದಿವಸವಾಗ ಮಾಡಿದರು. ಆದಕಾರಣ ಗ್ರಾಮಗಳಲ್ಲಿ
೧೯ ಯೂ, ಪೈಲು ಶೀಮೆಗಳ ಪಟ್ಟಣಗಳಲ್ಲಿಯೂ ವಾಸವಾಗಿರುವ ಯೆ
ಹೂದ್ಯರು ಅದಾರ್ ತಿಂಗಳ ಹದಿನಾಲ್ಕನೇ ದಿವಸವನ್ನು ಸಂತೋ
ಷದ ದಿವಸವಾಗಿಯೂ, ಹಬ್ಬದ ದಿವಸವಾಗಿಯೂ, ಸುದಿವಸ
ವಾಗಿಯೂ, ಒಬ್ಬರಿಗೊಬ್ಬರು ವರಿಕೆಗಳನ್ನು ಕಳುಹಿಸುವ ದಿವ
ಸವಾಗಿಯೂ ಮಾಡಿದರು.
೨೦ ಮತ್ತು ಯೆಹೂದ್ಯರು ಅದಾರ್ ತಿಂಗಳ ಹದಿನಾಲ್ಕನೇ ದಿವಸ
ವನ್ನೂ ಹದಿನೈದನೇ ದಿವಸವನ್ನೂ ಪ್ರತಿ ವರುಷದಲ್ಲಿ ಆಚರಿಸ
೨೧ ಅವರಲ್ಲಿ ಸ್ಥಿರ ಮಾಡುವ ಹಾಗೆ, ಮೊರ್ದೆಕಾಯಿ ಈ ವರ್ತಮಾ
ನಗಳನ್ನು ಬರೆದು, ಅಹಷ್ವೇರಸನ ಸಕಲ ಶೀಮೆಗಳಲ್ಲಿ ಸಮೀಪ



ವಾಗಿಯೂ ದೂರವಾಗಿಯೂ ಇರುವ ಸಕಲ ಯೆಹೂದ್ಯರಿಗೆ ಪ
೨೨ ತ್ರಿಕೆಗಳನ್ನು ಕಳುಹಿಸಿದನು. ಏನಂದರೆ ಆ ದಿವಸಗಳಲ್ಲಿ ಯೆ
ಹೂದ್ಯರು ತಮ್ಮ ಶತ್ರುಗಳಿಂದ ತಪ್ಪಿ ವಿಶ್ರಾಂತಿ ಹೊಂದಿದರು.
ಆ ತಿಂಗಳು ದುಃಖದಿಂದ ಸಂತೋಷಕ್ಕೂ, ಗೋಳಾಡುವಿಕೆಯಿಂ
ದ ಸುದಿವಸಕ್ಕೂ ಅವರಿಗೆ ಬದಲಾಯಿತು. ಆದದರಿಂದ ಅವರು
ಆ ದಿವಸಗಳನ್ನು ಹಬ್ಬದ ದಿವಸಗಳಾಗಿಯೂ, ಸಂತೋಷದ ದಿ
ವಸಗಳಾಗಿಯೂ, ಒಬ್ಬರಿಗೊಬ್ಬರು ವರಿಕೆಗಳನ್ನು ಕಳುಹಿಸುವ
ದಿವಸಗಳಾಗಿಯೂ, ಬಡವರಿಗೆ ದಾನಗಳನ್ನು ಕೊಡುವ ದಿವಸ
೨೩ ಗಳಾಗಿಯೂ ಮಾಡ ಬೇಕು. ಆಗ ಯೆಹೂದ್ಯರು ತಾವು ಆ
ರಂಭ ಮಾಡಿದ ಹಾಗೆಯೂ ಮೊರ್ದೆಕಾಯಿ ತಮಗೆ ಬರೆದ ಪ್ರ
೨೪ ಕಾರವಾಗಿಯೂ ಮಾಡ ಒಪ್ಪಿ ಕೊಂಡರು. ಯಾಕಂದರೆ ಸಮ
ಸ್ತ ಯೆಹೂದ್ಯರಿಗೂ ವೈರಿಯಾದ ಅಗಾಗ್ಯನಾದ, ಹಮ್ಮದತ್ತನ
ಮಗನಾದ ಹಮಾನನು ಯೆಹೂದ್ಯರನ್ನು ನಾಶ ಮಾಡ ಯೋ
ಚನೆ ಮಾಡಿ ಕೊಂಡು, ಅವರನ್ನು ಹಾಳು ಮಾಡುವ ಹಾಗೆಯೂ
ನಾಶ ಮಾಡುವ ಹಾಗೆಯೂ ಪೂರೆಂಬ ಚೀಟನ್ನು ಹಾಕಿದನು;
೨೫ ಮತ್ತು ಎಸ್ತೇರಳು ಅರಸನ ಮುಂದೆ ಬಂದಾಗ, ಹಮಾನನು ಯೆ
ಹೂದ್ಯರಿಗೆ ವಿಕೋಧವಾಗಿ ಯೋಚಿಸಿದ ದುರಾಲೋಚನೆಯು
ಅವನ ತಲೆಯ ಮೇಲೆ ಬರುವ ಹಾಗೆಯೂ, ಅವನೂ ಅವನ ಮ
ಕ್ಕಳೂ ಗಲ್ಲಿಗೆ ಹಾಕಲ್ಪಡುವ ಹಾಗೆಯೂ, ಅರಸನು ಪತ್ರಿಕೆಗ
೨೬ ಳಿಂದ ಆಜ್ಞಾಪಿಸಿದನು; ಆದದರಿಂದ ಅವರು ಈ ದಿವಸಗಳನ್ನು
೨೭ ಪೂರೆಂಬ ನಾಮದಿಂದ ಪೂರೀಂ ದಿವಸಗಳೆಂದು ಕರೆದರು. ಆದದ
ರಿಂದ ಈ ಪತ್ರಿಕೆಯ ಸಮಸ್ತ ವಾರ್ತೆಗಳಿಗೋಸ್ಕರವೂ, ಅವರು
ಈ ಕಾರ್ಯವನ್ನು ಕುರಿತು ನೋಡಿದ್ದಕ್ಕೋಸ್ಕರವೂ, ತಮಗೆ
ಸಂಭವಿಸಿದ್ದಕ್ಕೋಸ್ಕರವೂ, ಯೆಹೂದ್ಯರು, ತಾವೂ, ತಮ್ಮ ಬೀ
ಜವಾದವರೂ, ತಮಗೆ ಸೇರಿದವರೆಲ್ಲರೂ ತಪ್ಪದ ಹಾಗೆ ಪ್ರತಿ ವರು
ಷದಲ್ಲಿ, ನೇಮಕದ ಕಾಲದಲ್ಲಿ, ಬರಹಿಕೆಯ ಪ್ರಕಾರ ಈ ಎರಡು
೨೮ ದಿವಸಗಳನ್ನು ಆಚರಿಸ ಒಪ್ಪಿ ಕೊಂಡು, ಸ್ಥಿರ ಮಾಡಿದರು. ಇ
ದಲ್ಲದೆ ಈ ದಿವಸಗಳು ಜ್ಞಾಪಕ ಮಾಡಲ್ಪಡುವವು; ಪ್ರತಿ ವಂಶದ
ಲ್ಲಿಯೂ ಪ್ರತಿ ಸಂಸಾರದಲ್ಲಿಯೂ ಪ್ರತಿ ಶೀಮೆಯಲ್ಲಿಯೂ ಪ್ರತಿ
ಪಟ್ಟಣದಲ್ಲಿಯೂ ಆಚರಿಸಲ್ಪಡ ಬೇಕು; ಈ ಪೂರೀಮೆಂಬ ದಿವಸಗ
ಳು ಯೆಹೂದ್ಯರೊಳಗಿಂದ ಗತಿಸಿ ಹೋಗ ಬಾರದು; ಅವರ ಬೀ
ಜವಾದವರಲ್ಲಿ ಅವುಗಳ ಜ್ಞಾಪಕವು ಇಲ್ಲದೆ ಹೋಗ ಬಾರದು,
ಎಂದು ನೇಮಕ ಮಾಡಿದರು.
೨೯ ಆಗ ಅಬಿಹಾಯಿಲನ ಮಗಳಾದ ಎಸ್ತೇರಳೆಂಬ ರಾಣಿಯೂ
ಯೆಹೂದ್ಯನಾದ ಮೊರ್ದೆಕಾಯಿಯೂ ಈ ಪೂರೀಮೆಂಬ ದಿವ
ಸಗಳನ್ನು ಕುರಿತಂಥಾ ಎರಡನೇ ಪತ್ರಿಕೆಯನ್ನು ಸ್ಥಿರ ಪಡಿಸ ಸ
ಮಸ್ತ ಅಧಿಕಾರದಿಂದ ಬರೆಸಿದರು. ಇದಲ್ಲದೆ ಈ ಪೂರೀಮೆಂಬ
ದಿವಸಗಳನ್ನು ಯೆಹೂದ್ಯನಾದ ಮೊರ್ದೆಕಾಯಿಯೂ ರಾಣಿ
ಯಾದ ಎಸ್ತೇರಳೂ ಅವರಿಗೆ ಹೇಳಿದ ಪ್ರಕಾರ, ಅವರು ತಮ
ಗೋಸ್ಕರವಾಗಿಯೂ ತಮ್ಮ ಬೀಜವಾದವರಿಗೋಸ್ಕರವಾಗಿಯೂ
ಅವುಗಳ ನೇಮಕದ ಕಾಲಗಳಲ್ಲಿ ಸ್ಥಿರ ಪಡಿಸುವದಕ್ಕೂ, ಅವರ
ಉಪವಾಸ, ಮೊರೆ ಇಡುವಿಕೆಯ ಕಾರ್ಯಗಳನ್ನು ತಿಳಿಸುವದ
ಕ್ಕೂ, ಸಮಾಧಾನವೂ ಸತ್ಯವೂ ಆದ ಮಾತುಗಳಿಂದ ಅಹ
ಷ್ವೇರಸನ ರಾಜ್ಯದ ನೂರ ಇಪ್ಪತ್ತೇಳು ಶೀಮೆಗಳಲ್ಲಿರುವ ಸ
ಮಸ್ತ ಯೆಹೂದ್ಯರಿಗೆ ಪತ್ರಿಕೆಗಳನ್ನು ಕಳುಹಿಸಿದರು. ಹೀಗೆ
ಯೇ ಎಸ್ತೇರಳ ಆಜ್ಞೆಯು ಈ ಪೂರೀಮೆಂಬ ದಿವಸಗಳ ಕಾರ್ಯ
ಗಳನ್ನು ಸ್ಥಿರ ಪಡಿಸಿದ್ದರಿಂದ, ಅದು ಪುಸ್ತಕದಲ್ಲಿ ಬರೆಯಲ್ಪಟ್ಟಿತು.

## ೧೦. ಸಂಧಿ.

೧ ಮತ್ತು ಅರಸನಾದ ಅಹಷ್ವೇರಸನು ದೇಶದ ಮೇಲೆಯೂ ಸ
ಮುದ್ರದ ದ್ವೀಪಗಳ ಮೇಲೆಯೂ ಕೆರಿಗೆಯನ್ನು ನೇಮಿಸಿದನು.
೨ ಅವನ ಅಧಿಕಾರದ ಕ್ರಿಯೆಗಳೂ, ಅವನ ಪರಾಕ್ರಮವೂ ಅರಸನು
ಮೊರ್ದೆಕಾಯಿಯನ್ನು ಹೆಚ್ಚಿಸಿದ ಮಹತ್ತಿನ ಪ್ರಸಿದ್ಧಿಯೂ, ಇ
ವು ಮಾದ್ಯ ಪಾರ್ಸ್ಯಗಳ ಅರಸರ ರಾಜ ದಿನಚರ್ಯಗಳ ಪು
೩ ಸ್ತಕದಲ್ಲಿ ಬರೆಯಲ್ಪಟ್ಟವಲ್ಲವೋ! ಯಾಕಂದರೆ ಯೆಹೂದ್ಯನಾ
ದ ಮೊರ್ದೆಕಾಯಿ ಅರಸನಾದ ಅಹಷ್ವೇರಸನಿಗೆ ಎರಡನೆಯವ
ನೂ, ಯೆಹೂದ್ಯರಲ್ಲಿ ದೊಡ್ಡವನೂ, ತನ್ನ ಸಹೋದರರ ಸಮೂ
ಹದಲ್ಲಿ ಸಮರ್ಪಕನೂ, ತನ್ನ ಜನರ ಮೇಲನ್ನು ಹುಡುಕುವವ
ನೂ, ತನ್ನ ಸಮಸ್ತ ಬೀಜವಾದವರಿಗೆ ಸಮಾಧಾನವನ್ನು ಮಾ
ತಾಡುವವನೂ ಆಗಿದ್ದನು.

---

# THE BOOK OF JOB.

## ಯೋಬನು.

## ೧. ಸಂಧಿ.

೧ ಊಚ ದೇಶದಲ್ಲಿ ಒಬ್ಬ ಮನುಷ್ಯನು ಇದ್ದನು; ಅವನ ಹೆಸರು
ಯೋಬ್. ಆ ಮನುಷ್ಯನು ಸಂಪೂರ್ಣನೂ, ನೆಟ್ಟಿನೆಯವನೂ,
ದೇವರಿಗೆ ಭಯ ಪಡುವವನೂ, ಕೇಡನ್ನು ಬಿಟ್ಟು ತೊಲಗುವವ
೨ ನೂ ಆಗಿದ್ದನು. ಏಳು ಮಂದಿ ಕುಮಾರರೂ ಮೂರು ಮಂದಿ
೩ ಕುಮಾರ್ತೆಗಳೂ ಅವನಿಗೆ ಹುಟ್ಟಿದರು. ಅವನ ಸಂಪತ್ತು ಏನಾ
ಗಿತ್ತಂದರೆ—ಏಳು ಸಾವಿರ ಕುರಿ, ಮೂರು ಸಾವಿರ ಒಂಟೆ, ಐನೂ
ರು ಜೋಡು ಎತ್ತು, ಐನೂರು ಹೆಣ್ಣು ಕತ್ತೆ, ಬಹು ಸೇವಕರ ಸ
ಮೂಹವು. ಮತ್ತು ಆ ಮನುಷ್ಯನು ಎಲ್ಲಾ ಮೂಡಲಿನವರಿಗಿಂತ
ದೊಡ್ಡವನಾಗಿದ್ದನು.
೪ ಅವನ ಕುಮಾರರು ಹೋಗಿ, ತಮ್ಮ ತಮ್ಮ ಮನೆಗಳಲ್ಲಿ, ಅ
ವನವನ ದಿವಸದಲ್ಲಿ, ಔತಣ ಮಾಡಿಸಿ, ತಮ್ಮ ಸಂಗಡ ಉಣ್ಣು
ವದಕ್ಕೂ ಕುಡಿಯುವದಕ್ಕೂ ತಮ್ಮ ಮೂವರು ಸಹೋದರಿಗಳ
೫ ನ್ನು ಕರೇ ಕಳುಹಿಸುತ್ತಿದ್ದರು. ಮತ್ತು ಔತಣದ ದಿವಸಗಳು
ಆದ ಮೇಲೆ, ಯೋಬನು ಕರೇ ಕಳುಹಿಸಿ, ಅವರನ್ನು ಶುದ್ಧ ಮಾ
ಡಿ, ಮುಂಜಾನೆ ಎದ್ದು, ಅವರೆಲ್ಲರ ಲೆಖ್ಖದ ಪ್ರಕಾರ ಹೋಮಗಳ
ನ್ನು ಅರ್ಪಿಸಿದನು; ಯಾಕಂದರೆ ಯೋಬನು, ಒಂದು ವೇಳೆ ನ
ನ್ನ ಮಕ್ಕಳು ಪಾಪ ಮಾಡಿ, ತಮ್ಮ ಹೃದಯಗಳಲ್ಲಿ ದೇವರ
ನ್ನು ಶಪಿಸಿರ ಬಹುದು, ಅಂದು ಕೊಂಡನು. ಹಾಗೆಯೇ ಯೋ
ಬನು ಎಲ್ಲಾ ದಿವಸಗಳಲ್ಲಿ ಮಾಡುತ್ತಿದ್ದನು.
೬ ಮತ್ತು ಒಂದು ದಿನ ಏನಾಯಿತಂದರೆ—ದೇವರ ಮಕ್ಕಳು ಕ
ರ್ತನ ಮುಂದೆ ನಿಂತು ಕೊಳ್ಳುವದಕ್ಕೆ ಬಂದಾಗ, ಸೈತಾನನು

೭ ಸಹ ಅವಕೊಳ್ಳಿಗೆ ಬಂದನು. ಕರ್ತನು ಸೈತಾನನಿಗೆ ಎಲ್ಲಿಂದ
ಬಂದಿ! ಅಂದನು. ಸೈತಾನನು ಕರ್ತನಿಗೆ ಪ್ರತ್ಯುತ್ತರವಾಗಿ, ಭೂ
ಮಿಯಲ್ಲಿ ತಿರುಗಾಡಿ, ಅದರಲ್ಲಿ ನಡೆದಾಡಿ ಬಂದೆನು, ಅಂದನು.
೮ ಕರ್ತನು ಸೈತಾನನಿಗೆ, ನನ್ನ ಸೇವಕನಾದ ಯೋಬನ ಮೇಲೆ ನಿ
ನ್ನ ಮನಸ್ಸು ಇಟ್ಟಿಯೋ! ಅವನ ಹಾಗೆ ಭೂಮಿಯಲ್ಲಿ ಒಬ್ಬನೂ
ಇಲ್ಲವಲ್ಲ! ಸಂಪೂರ್ಣನೂ, ನೆಟ್ಟನೆಯವನೂ, ದೇವರಿಗೆ ಭಯ
೯ ಪಡುವವನೂ, ಕೇಡನ್ನು ಬಿಟ್ಟು ತೊಲಗುವವನೂ. ಸೈತಾನನು
ಕರ್ತನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ—ಯೋಬನು ಸುಮ್ಮ
೧೦ ನೆ ದೇವರಿಗೆ ಭಯ ಪಡುತ್ತಾನೋ! ನೀನು ಅವನಿಗೂ, ಅವನ
ಮನೆಗೂ, ಅವನಿಗೆ ಉಂಟಾದ ಎಲ್ಲವುಗಳಿಗೂ ಸುತ್ತಲು ಬೇಲಿ
ಕಟ್ಟಿಲಿಲ್ಲವೋ! ಅವನ ಕೈ ಕೆಲಸವನ್ನು ಆಶೀರ್ವದಿಸಿದಿ; ಅವನ
೧೧ ಸಂಪತ್ತು ದೇಶದಲ್ಲಿ ಹಬ್ಬಿಯದೆ. ಆದರೆ ನಿನ್ನ ಕೈ ಚಾಚಿ, ಅವ
ನಿಗೆ ಇದ್ದದ್ದನ್ನೆಲ್ಲಾ ಮುಟ್ಟು; ಅವನು ನಿನ್ನೆದುರಿನಲ್ಲಿ ನಿನ್ನನ್ನು
೧೨ ಶಪಿಸನೇ! ಕರ್ತನು ಸೈತಾನನಿಗೆ, ಇಗೋ, ಅವನದೆಲ್ಲಾ ನಿನ್ನ
ಕೈಯಲ್ಲಿ ಅದೆ; ಅವನ ಮೇಲೆ ಮಾತ್ರ ನಿನ್ನ ಕೈ ಹಾಕ ಬೇಡ,
ಅಂದನು. ಆಗ ಸೈತಾನನು ಕರ್ತನ ಸಮುಖದಿಂದ ಹೊರಟನು.

೧೩ ಮತ್ತು ಒಂದು ದಿನ ಅವನ ಕುಮಾರರೂ ಕುಮಾರ್ತೆಗಳೂ
ತಮ್ಮ ಹಿರೇ ಅಣ್ಣನ ಮನೆಯಲ್ಲಿ ಉಂಡು, ದ್ರಾಕ್ಷೇರಸ ಕುಡಿಯು
೧೪ ತ್ತಿದ್ದರು. ಆಗ ದೂತನು ಯೋಬನ ಬಳಿಗೆ ಬಂದು, ಹೇಳಿದ್ದೇ
ನಂದರೆ—ಎತ್ತುಗಳು ಹೂಡುತ್ತಾ, ಹೆಣ್ಣು ಕತ್ತೆಗಳು ಅವುಗಳ
೧೫ ಪಕ್ಕದ ಮೇಯುತ್ತಾ ಇರಲಾಗಿ, ಶೇಬದವರು ಅವುಗಳ ಮೇಲೆ ಬಿ
ದ್ದು, ಅವುಗಳನ್ನು, ತಕ್ಕೊಂಡು ಹೋದರು; ಯೌವನಸ್ಥರನ್ನು
ಸಹಾ ಕತ್ತಿಯ ಬಾಯಿಂದ ಹೊಡೆದರು; ನಾನೊಬ್ಬನೇ ಮಾತ್ರ
೧೬ ನಿನಗೆ ಶಿಳ್ಳಿಸುವದಕ್ಕೆ ತಪ್ಪಿಸಿ ಕೊಂಡೆನು. ಅವನು ಇನ್ನು ಮಾ
ತಾಡುತ್ತಿರಲು, ಮತ್ತೊಬ್ಬನು ಬಂದು, ಹೇಳಿದ್ದೇನಂದರೆ—ದೇವರ
ಬೆಂಕಿ ಆಕಾಶದಿಂದ ಬಿದ್ದು, ಕುರಿಗಳಲ್ಲಿಯೂ ಯೌವನಸ್ಥರಲ್ಲಿ
ಯೂ ಉರಿದು, ಅವರನ್ನು ತಿಂದುಬಿಟ್ಟಿತು; ನಾನೊಬ್ಬನೇ ಮಾತ್ರ
೧೭ ನಿನಗೆ ಶಿಳ್ಳಿಸುವದಕ್ಕೆ ತಪ್ಪಿಸಿ ಕೊಂಡೆನು. ಅವನು ಇನ್ನು ಮಾತಾ
ಡುತ್ತಿರಲು, ಮತ್ತೊಬ್ಬನು ಬಂದು, ಹೇಳಿದ್ದೇನಂದರೆ—ಕಸ್ದೀಯರು
ಮೂರು ದಂಡುಗಳನ್ನು ಕಟ್ಟಿ, ಒಂಟೆಗಳ ಮೇಲೆ ಬಿದ್ದು, ಅವುಗ
ಳನ್ನು ತಕ್ಕೊಂಡು ಹೋದರು; ಯೌವನಸ್ಥರನ್ನು ಕತ್ತಿಯ ಬಾ
ಯಿಂದ ಹೊಡೆದರು; ನಾನೊಬ್ಬನೇ ಮಾತ್ರ ನಿನಗೆ ಶಿಳ್ಳಿಸುವದಕ್ಕೆ
೧೮ ತಪ್ಪಿಸಿ ಕೊಂಡೆನು. ಅವನು ಇನ್ನು ಮಾತಾಡುತ್ತಿರಲು, ಮತ್ತೊ
ಬ್ಬನು ಬಂದು, ಹೇಳಿದ್ದೇನಂದರೆ—ನಿನ್ನ ಕುಮಾರರೂ ಕುಮಾರ್ತೆ
ಗಳೂ ತಮ್ಮ ಹಿರೇ ಅಣ್ಣನ ಮನೆಯಲ್ಲಿ ಉಂಡು, ದ್ರಾಕ್ಷೇರಸವನ್ನು
೧೯ ಕುಡಿಯುತ್ತಿರಲು, ಅಗೋ, ಕಾಡಿನ ಕೆಡೆಯಿಂದ ದೊಡ್ಡ ಭೂಳಿ ಬಂ
ದು, ಮನೆಯ ನಾಲ್ಕು ಮೂಲೆಗಳಿಗೆ ತಗಲಿದ್ದರಿಂದ, ಅದು ಯೌ
ವನಸ್ಥರ ಮೇಲೆ ಬಿತ್ತು; ಅವರು ಸತ್ತರು; ನಾನೊಬ್ಬನೇ ಮಾ
ತ್ರ ನಿನಗೆ ಶಿಳ್ಳಿಸುವದಕ್ಕೆ ತಪ್ಪಿಸಿ ಕೊಂಡೆನು.

೨೦ ಆಗ ಯೋಬನು ಎದ್ದು, ತನ್ನ ನಿಲುವಂಗಿಯನ್ನು ಹರಿದು, ತ
೨೧ ನ್ನ ತಲೆ ಬೋಳಿಸಿ ಕೊಂಡು, ನೆಲಕ್ಕೆ ಬಿದ್ದು, ವಂದನೆ ಮಾಡಿ, ಬೆ
ತ್ತಲೆಯಾಗಿ ನನ್ನ ತಾಯಿ ಗರ್ಭದಿಂದ ಹೊರಟು ಬಂದೆನು; ಬೆ
ತ್ತಲೆಯಾಗಿ ತಿರಿಗಿ ಹೋಗ ಬೇಕು; ಕರ್ತನು ಕೊಟ್ಟನು; ಕ
ರ್ತನು ತಕ್ಕೊಂಡನು; ಕರ್ತನ ಹೆಸರಿಗೆ ಆಶೀರ್ವಾದ, ಅಂದನು.
೨೨ ಇದೆಲ್ಲಾದರಲ್ಲಿ ಯೋಬನು ಪಾಪ ಮಾಡಲಿಲ್ಲ; ದೇವರ ಮೇಲೆ
ತಪ್ಪು ಹೊರಿಸಲಿಲ್ಲ.

## ೨. ಸಂಧಿ.

೧ ಮತ್ತು ಒಂದು ದಿನ ಏನಾಯಿತಂದರೆ—ಕರ್ತನ ಬಳಿಯಲ್ಲಿ ನಿಂ
ತು ಕೊಳ್ಳುವದಕ್ಕೆ ದೇವರ ಮಕ್ಕಳು ಬಂದರು; ಕರ್ತನ ಬಳಿ
ಯಲ್ಲಿ ನಿಂತುಕೊಳ್ಳುವದಕ್ಕೆ ಸೈತಾನನು ಅವರೊಳ್ಳಿಗೆ ಬಂದನು.
೨ ಆಗ ಕರ್ತನು ಸೈತಾನನಿಗೆ, ನೀನು ಎಲ್ಲಿಂದ ಬಂದಿ! ಅಂದನು.
ಸೈತಾನನು ಕರ್ತನಿಗೆ ಪ್ರತ್ಯುತ್ತರವಾಗಿ, ಭೂಮಿಯಲ್ಲಿ ತಿರುಗಾ
೩ ಡಿ, ಅದರಲ್ಲಿ ನಡೆದಾಡಿ ಬಂದೆನು, ಅಂದನು. ಆಗ ಕರ್ತನು ಸೈತಾ
ನನಿಗೆ ಹೇಳಿದ್ದೇನಂದರೆ—ನಿನ್ನ ಮನಸ್ಸು ನನ್ನ ಸೇವಕನಾದ
ಯೋಬನ ಮೇಲೆ ಇಟ್ಟಿಯೋ! ಅವನ ಹಾಗೆ ಭೂಮಿಯಲ್ಲಿ ಯಾ
ವನೂ ಇಲ್ಲವಲ್ಲ! ಸಂಪೂರ್ಣನೂ, ನೆಟ್ಟನೆಯವನೂ, ದೇವರಿಗೆ
ಭಯ ಪಡುವವನೂ, ಕೇಡಿನಿಂದ ತೊಲಗುವವನೂ. ಅವನನ್ನು
ಸುಮ್ಮನೆ ನಾಶ ಮಾಡುವದಕ್ಕೆ ನೀನು ನನ್ನನ್ನು ಪ್ರೇರೇಪಿಸಿದ್ದರೂ,
೪ ಅವನು ಇನ್ನೂ ತನ್ನ ಸಂಪೂರ್ಣತ್ವದಲ್ಲಿ ದೃಢವಾಗಿದ್ದಾನೆ. ಸೈ
ತಾನನು ಕರ್ತನಿಗೆ ಪ್ರತ್ಯುತ್ತರವಾಗಿ, ತೊಗಲಿಗೆ ತೊಗಲು; ತನ
ಗೆ ಉಂಟಾದದ್ದನ್ನೆಲ್ಲಾ ತನ್ನ ಪ್ರಾಣಕ್ಕೋಸ್ಕರ ಮನುಷ್ಯನು
ಕೊಡುವನು. ಆದರೆ ನಿನ್ನ ಕೈ ಚಾಚಿ, ಅವನ ಎಲುಬನ್ನೂ ಅ
ವನ ಮಾಂಸವನ್ನೂ ಮುಟ್ಟಿದರೆ, ಅವನು ನಿನ್ನ ಎದುರಿನಲ್ಲಿ ನಿ
ನ್ನನ್ನು ಶಪಿಸನೇ! ಅಂದನು. ಆಗ ಕರ್ತನು ಸೈತಾನನಿಗೆ, ಇ
ಗೋ, ಅವನು ನಿನ್ನ ಕೈಯಲ್ಲಿ ಇದ್ದಾನೆ; ಅವನ ಪ್ರಾಣ ಮಾತ್ರ
ಕಾಪಾಡು, ಅಂದನು.

೫ ಆಗ ಸೈತಾನನು ಕರ್ತನ ಸಮುಖದಿಂದ ಹೊರಟು, ಯೋ
ಬನಿಗೆ ಅಂಗಾಲಿನಿಂದ ನೆತ್ತಿಯ ವರಿಗೂ ಕೆಟ್ಟಿ ಹುಣ್ಣುಗಳನ್ನು ಬ
೬ ರ ಹೊಡೆದನು. ಅವನು ಬೋಕಿ ತಕ್ಕೊಂಡು, ತನ್ನನ್ನು ಕುರಿ
ಸಿ ಕೊಂಡು, ಬೂದಿಯ ನಡುವೆ ಕೂತನು.

೭ ಆಗ ಅವನ ಹೆಂಡತಿ ಅವನಿಗೆ, ಇನ್ನೂ ಸಂಪೂರ್ಣತ್ವದಲ್ಲಿ
ದೃಢವಾಗಿದ್ದೀಯೋ! ದೇವರನ್ನು ಶಪಿಸಿ, ಸಾಯಿ, ಅಂದಳು.
೮ ಅವನು ಅವಳಿಗೆ, ಹುಚ್ಚ ಹೆಂಗಸರಲ್ಲಿ ಒಬ್ಬಳು ಮಾತಾಡುವ
ಪ್ರಕಾರ, ನೀನು ಮಾತಾಡುತ್ತೀ, ದೇವರ ಕೈಯಿಂದ ಒಳ್ಳೇದನ್ನು
ಹೊಂದುತ್ತೇವಲ್ಲ! ಕೆಟ್ಟದ್ದನ್ನು ಕೂಡ ಹೊಂದ ಬೇಡವೋ! ಅಂ
ದನು. ಇವೆಲ್ಲವುಗಳಲ್ಲಿ ಯೋಬನು ತನ್ನ ತುಟಿಗಳಿಂದ ಪಾಪ
ಮಾಡಲಿಲ್ಲ.

೧೧ ಇದಲ್ಲದೆ ಯೋಬನ ಮೂವರು ಸ್ನೇಹಿತರು ಅವನ ಮೇಲೆ
ಬಂದ ಈ ಕೇಡುಗಳೆಲ್ಲಾ ಕುರಿತು ಕೇಳಿ, ತಮ್ಮ ತಮ್ಮ ಸ್ಥಳಗಳಿಂದ
ಬಂದರು; ಅವರ್ಯಾರಂದರೆ, ಥೆಮಾನ್ಯನಾದ ಎಲಿಫಾಜನು, ಶೂ
ಕ್ಯನಾದ ಬಿಲ್ದದನು, ನಾಮಾಥ್ಯನಾದ ಜೊಫಾರನು; ಇವರು ಅ
ವನಿಗೋಸ್ಕರ ಗೋಳಾಡುವದಕ್ಕೂ, ಅವನನ್ನು ಸಂತೈಸುವದ
ಕ್ಕೂ, ಬರ ಬೇಕೆಂದು, ತಮ್ಮಲ್ಲಿ ಆಲೋಚನೆ ಮಾಡಿ ಕೊಂಡರು.
೧೨ ಅವರು ದೂರದಿಂದ ತಮ್ಮ ಕಣ್ಣುಗಳನ್ನು ಎತ್ತಿ, ಅವನ ಗುರುತು
ಶಿಳ್ಳಿಯದೆ, ತಮ್ಮ ಶಬ್ದವನ್ನೆತ್ತಿ, ಅತ್ತು, ತಮ್ಮ ತಮ್ಮ ನಿಲುವಂಗಿ
ಗಳನ್ನು ಹರಿದು, ತಮ್ಮ ತಲೆಗಳ ಮೇಲೆ ಧೂಳನ್ನು ಆಕಾಶದ ಕ
೧೩ ಡೆಗೆ ಹಾಕಿ ಕೊಂಡರು. ಅವರು ಅವನ ಸಂಗಡ ಏಳು ಹಗಲು ಏ
ಳು ರಾತ್ರಿ ನೆಲದ ಮೇಲೆ ಕೂತು ಕೊಂಡರು. ಬಿಟ್ಟನು ಒಂದು
ಮಾತನ್ನೂ ಅವನಿಗೆ ಹೇಳಲಿಲ್ಲ; ಯಾಕಂದರೆ ಅವನ ದುಃಖವು
ಬಹಳ ದೊಡ್ಡದೆಂದು, ನೋಡಿದರು.



## ೩. ಸಂಧಿ.

೧ ಹೀಗಾದ ಮೇಲೆ ಯೋಬನು ತನ್ನ ಬಾಯಿ ತೆರೆದು, ತನ್ನ ದಿ
ವಸವನ್ನು ಶಪಿಸಿದನು.
೨ ಯೋಬನು ಹೇಳಿದ್ದೇನಂದರೆ—

೩ ನಾನು ಹುಟ್ಟಿದ ದಿವಸವೂ,
ಗಂಡು ಹುಟ್ಟಿತೆಂದು ಹೇಳಿದ ರಾತ್ರಿಯೂ ಹಾಳಾಗಲಿ.
೪ ಆ ದಿವಸವು ಕತ್ತಲಾಗಲಿ;
ಮೇಲಿನಿಂದ ದೇವರು ಅದನ್ನು ಪರಾಮರಿಸದಿರಲಿ;
ಅದರ ಮೇಲೆ ಬೆಳಕು ಪ್ರಕಾಶಿಸದಿರಲಿ.
೫ ಕತ್ತಲೂ ಮರಣದ ನೆರಳೂ ಅದನ್ನು ಅಶುದ್ಧ ಮಾಡಲಿ;
ಮೋಡವು ಅದರ ಮೇಲೆ ವಾಸ ಮಾಡಲಿ;
ಹಗಲಿನ ಮೊಬ್ಬುಗಳು ಅದನ್ನು ಹೆದರಿಸಲಿ.
೬ ಆ ರಾತ್ರಿಯನ್ನು ಅಂಧಕಾರ ಹಿಡಿಯಲಿ;
ಅದು ವರುಷದ ದಿವಸಗಳಲ್ಲಿ ಸಂತೋಷ ಪಡದಿರಲಿ;
ತಿಂಗಳುಗಳ ಲೆಕ್ಕದಲ್ಲಿ ಕೇರದಿರಲಿ.
೭ ಇಗೋ, ಆ ರಾತ್ರಿ ಬಂಜೆಯಾಗಿರಲಿ;
ಉತ್ಸಾಹವು ಅದಕ್ಕೆ ಬಾರದಿರಲಿ.
೮ ದಿವಸ ಶಪಿಸುವವರೂ,
ಲೆವಿಯಾತನನ್ನು ಎಚ್ಚರಿಸ ಸಿದ್ಧವಾದವರೂ ಅದನ್ನು ಶಪಿಸಲಿ.
೯ ಅದರ ಸಂಧ್ಯಾರುಣದ ನಕ್ಷತ್ರಗಳು ಕಪ್ಪಾಗಲಿ;
ಅದು ಬೆಳಕಿಗೋಸ್ಕರ ಕಾದು ಕೊಳ್ಳಲು ಬಾರದಿರಲಿ;
ಅದು ಉದಯದ ರೆಪ್ಪೆಗಳನ್ನು ನೋಡದಿರಲಿ.
೧೦ ಯಾಕಂದರೆ ಅದು ನನ್ನ ಗರ್ಭದ ಬಾಗಲನ್ನು ಮುಚ್ಚಲಿಲ್ಲ;
ಕಾಟವನ್ನು ನನ್ನ ಕಣ್ಣುಗಳಿಗೆ ಮರೆ ಮಾಡಲಿಲ್ಲ.

೧೧ ನಾನು ಗರ್ಭ ಬಿಟ್ಟಾಗಲೇ ಯಾಕೆ ಸಾಯಲಿಲ್ಲ!
ಹೊಟ್ಟೆಯೊಳ್ಳಿಗಿಂದ ಹೊರಟಾಗಲೇ ಯಾಕೆ ಶೀರಿ ಹೋಗಲಿಲ್ಲ!
೧೨ ಮೊಣಕಾಲುಗಳು ನನ್ನನ್ನು ಎದುರುಗೊಂಡದ್ದು ಯಾಕೆ!
ನಾನು ಕುಡಿಯುವ ಹಾಗೆ ಮೊಲೆಗಳು ಯಾಕೆ!
೧೩ ಹಾಗಾದರೆ ಈಗ ಮಲಗಿ ವಿಶ್ರಮಿಸಿ ಕೊಳ್ಳುತ್ತಿರುವೆನು;
ನಿದ್ದೆ ಹೋಗಿರುವೆನು.
೧೪ ತಮಗೆ ಹಾಳು ಮನೆಗಳನ್ನು ಕಟ್ಟುವ
ಅರಸುಗಳ ಸಂಗಡಲೂ ಜೇಷದ ಆಲೋಚನೆ ಕರ್ತರ ಸಂಗಡಲೂ;
೧೫ ಇಲ್ಲವೆ ಹೊನ್ನು ಉಂಟಾದಂಥ,
ತಮ್ಮ ಮನೆಗಳನ್ನು ಬೆಳ್ಳಿಯಿಂದ ತುಂಬಿಸುವಂಥ,
ಪ್ರಧಾನರ ಸಂಗಡ ಆಗಲೇ ನನಗೆ ಶಾಂತಿಯಾಗಿರುವದು.
೧೬ ಇಲ್ಲವೆ ಮಕೆಯಾದ ಗರ್ಭ ಪತನದ ಹಾಗೆಯೂ,
ಬೆಳಕನ್ನು ನೋಡದ ಕೂಸುಗಳ ಹಾಗೆಯೂ ಇಲ್ಲದೆ ಇರುವೆನು.
೧೭ ಅಲ್ಲಿ ದುಷ್ಟರು ನಡುಗನ್ನು ಬಿಟ್ಟು ಬಿಡುತ್ತಾರೆ;
ಶಕ್ತಿ ಕುಂದಿದವರು ಅಲ್ಲಿ ವಿಶ್ರಾಂತಿ ಹೊಂದಿದ್ದಾರೆ.
೧೮ ಕೆಲೆಯವರು ಕೂಡಾ ಶಾಂತವಾಗಿದ್ದಾರೆ;
ತಿಪ್ಪಲು ಪಡಿಸುವವನ ಶಬ್ದವನ್ನು ಕೇಳುವದಿಲ್ಲ.
೧೯ ಕಿರಿಯನೂ ಹಿರಿಯನೂ ಅಲ್ಲಿ ಸಮ;
ದಾಸನು ಯಜಮಾನನಿಂದ ಬಿಡುಗಡೆಯಾಗಿದ್ದಾನೆ.
೨೦ ಕಾಟ ಪಟ್ಟವನಿಗೆ ಬೆಳಕೂ,
ಕಹಿಯಾದ ಪ್ರಾಣವುಳ್ಳವರಿಗೆ ಜೀವವೂ ಯಾಕೆ ಕೊಡಲ್ಪ
ಟ್ಟಿವೆ!
೨೧ ಬಾರದಿರುವ ಮರಣಕ್ಕೋಸ್ಕರ ಕಾದು ಕೊಂಡವರಿಗೂ,
ನಿಕ್ಷೇಪಗಳಿಗಿಂತ ಹೆಚ್ಚಾಗಿ ಅದನ್ನು ಆಗಿಯುವವರಿಗೂ,
೨೨ ಸಮಾಧಿ ಕಂಡು ಕೊಂಡೆನೆಂದು ಸಂತೋಷ ಸಂಭ್ರಮವಾಗಿ
ಹರ್ಷಿಸುವವರಿಗೂ,
೨೩ ದೇವರು ಸುತ್ತು ಬೇಲಿ ಹಾಕಿದ್ದರಿಂದ,
ಅಡಗಿದ ಮಾರ್ಗವುಳ್ಳವರಿಗೂ ಬೆಳಕೂ ಜೀವವೂ ಯಾಕೆ!
೨೪ ಯಾಕಂದರೆ ನನ್ನ ರೊಟ್ಟಿಯ ಮುಂದೆ ನನ್ನ ಮೂಲ್ಗುಬಿಕೆ
ಯು ಬರುವದು;
ನೀರಿನಂತೆ ನನ್ನ ಗರ್ಜನೆಗಳು ಹೊಯ್ಯಲ್ಪಟ್ಟಿವೆ.
೨೫ ಯಾಕಂದರೆ ಹೆದರಿದ ಹೆದರಿಕೆ ನನ್ನ ಮೇಲೆ ಬಂತು;
ನಾನು ಅಂಜಿದ್ದೇ ನನಗೆ ಮುಟ್ಟಿತು.
೨೬ ನಾನು ಭದ್ರವಾಗಿರಲಿಲ್ಲ, ಶಾಂತಿಯಾಗಿರಲಿಲ್ಲ, ವಿಶ್ರಾಂತಿ ಹೊಂ
ದಿರಲಿಲ್ಲ;
ಮತ್ತು ನಡುಗು ಬಂತು.

## ೪. ಸಂಧಿ.

೧ ಥೆಮಾನ್ಯನಾದ ಎಲಿಫಾಜನು ಉತ್ತರ ಕೊಟ್ಟು ಹೇಳಿದ್ದೇ
ನಂದರೆ—
೨ ನಿನಗೆ ಮಾತನ್ನು ಹೇಳ ಮುಂಕೊಂಡರೆ ನಿನಗೆ ಆಯಾಸವೋ!
ಆದಾಗ್ಯೂ ನುಡಿಗಳನ್ನು ಯಾವನು ಬಿಗಿ ಹಿಡಿಯ ಬಲ್ಲನು!
೩ ಇಗೋ, ಅನೇಕರನ್ನು ಶಿಕ್ಷಿಸಿದಿ;
ಸಡ್ಲಾದ ಕೈಗಳನ್ನು ಬಲ ಪಡಿಸಿದಿ.
೪ ಎಡವಿ ಬೀಳ್ಳುವವನನ್ನು ನಿನ್ನ ನುಡಿಗಳು ಎಬ್ಬಿಸಿದವು;
ಬೊಗ್ಗಿದ ಮೊಣಕಾಲುಗಳನ್ನು ದೃಢ ಪಡಿಸಿದಿ.
೫ ಈಗ ಅದು ನಿನ್ನ ಮೇಲೆ ಬಂದದ್ದರಿಂದ, ದಣಿಯುತ್ತೀ;
ನಿನಗೂ ಮುಟ್ಟಿದ್ದರಿಂದ, ತಲ್ಲಣ ಪಡುತ್ತೀ.
೬ ನಿನ್ನ ದೇವ ಭಯ ನಿನ್ನ ಕೋರಿಕೆಯಲ್ಲವೋ!
ನಿನ್ನ ಮಾರ್ಗದ ಸಂಪೂರ್ಣತ್ವ ನಿನ್ನ ನಂಬಿಗೆಯಲ್ಲವೋ!
೭ ನೆನಸಿಕೋ, ನಿರಾಪರಾಧಿಯಾಗಿ ನಾಶವಾದವನು ಯಾವನು!
ನೆಟ್ಟನೆಯವರು ಕಡಿಯಲ್ಪಟ್ಟದ್ದು ಎಲ್ಲಿ!
೮ ನಾನು ಕಂಡ ಹಾಗೆ, ಅಕ್ರಮವನ್ನು ಉಳುವವರೂ ಕಾಟವನ್ನು
ಬಿತ್ತುವವರೂ ಅದನ್ನು ಕೊಯ್ಯುತ್ತಾರೆ.
೯ ದೇವರ ಶ್ವಾಸದಿಂದ ಅವರು ನಾಶವಾಗುತ್ತಾರೆ;
ಅವನ ಮೂಗಿನ ಭೂಳಿಯಿಂದ ಶೀರಿ ಹೋಗುತ್ತಾರೆ.
೧೦ ಸಿಂಹದ ಗರ್ಜನೆಯೂ, ಮೃಗೇಂದ್ರದ ಶಬ್ದವೂ;
ಸಿಂಹದ ಮರಿಗಳ ಹಲ್ಲುಗಳೂ ಮುರಿಯಲ್ಪಟ್ಟಿವೆ.
೧೧ ಪ್ರಾಯವುಳ್ಳ ಸಿಂಹವು ಕೊಳ್ಳೆ ಇಲ್ಲದ್ದರಿಂದ ನಾಶವಾಗುತ್ತದೆ;
ಸಿಂಹಿಣಿಯ ಮರಿಗಳು ಚದರಲ್ಪಡುತ್ತವೆ.

೧೨ ಒಂದು ಮಾತು ನನಗೆ ಗುಪ್ತವಾಗಿ ಬಂತು;
ನನ್ನ ಕಿವಿ ಅದರಿಂದ ಪಿಸುಗುಟ್ಟು ಕೊಂಡಿತು.

೧೩ ರಾತ್ರಿಯ ದರ್ಶನಗಳ ಆಲೋಚನೆಗಳಲ್ಲಿ;
ಗಾಢ ನಿದ್ರೆ ಜನರ ಮೇಲೆ ಬೀಳುವಲ್ಲಿ;
೧೪ ಭಯವೂ ನಡುಗೂ ನನ್ನನ್ನು ಹಿಡಿದವು;
ನನ್ನ ಎಲುಬುಗಳ ಸಮೂಹವನ್ನು ಹೆದರ ಮಾಡಿತು.
೧೫ ಒಂದು ಆತ್ಮವು ನನ್ನ ಮುಂದೆ ಹಾದು ಹೋಯಿತು;
ನನ್ನ ಮಾಂಸದ ಕೂದಲು ಅಲ್ಲಾಡಿತು.
೧೬ ಅದು ನಿಂತಿತು; ಅದರ ರೂಪವನ್ನು ನಾನು ತಿಳು ಕೊಳ್ಳಲಿಲ್ಲ;
ನನ್ನ ಕಣ್ಣುಗಳ ಮುಂದೆ ಮೂರ್ತಿ ಇತ್ತು;
ಮೆಲ್ಲಗೆಯಾದ ಶಬ್ದವನ್ನು ಕೇಳಿದೆನು.
೧೭ ದೇವರಿಗಿಂತ ಮನುಷ್ಯನು ನೀತಿವಂತನೋ!
ಪುರುಷನು ತನ್ನನ್ನು ಉಂಟು ಮಾಡಿದವನಿಗಿಂತ ನಿರ್ಮಲನೋ!
೧೮ ಇಗೋ, ತನ್ನ ಸೇವಕರಲ್ಲಿ ಅವನು ನಂಬಿಕೆ ಇಡುವದಿಲ್ಲ;
ತನ್ನ ದೂತರಲ್ಲಿ ಬುದ್ಧಿ ಹೀನತ್ವ ಎಣಿಸುತ್ತಾನೆ.
೧೯ ಧೂಳಿಯಲ್ಲಿ ಅಸ್ತಿವಾರ ಇರುವ ಮಣ್ಣಿನ ಮನೆಗಳ ನಿವಾಸಿಗಳು
ಎಷ್ಟು ಕಡಿಮೆ!
ನುಸಿಯ ಮುಂದೆ ಅವರನ್ನು ಜಜ್ಜುವನು.
೨೦ ಬೆಳ್ಳಿಗ್ಗಿನಿಂದ ಸಂಜೆಯ ವರಿಗೆ ಬಡಿಯಲ್ಪಟ್ಟು ಚೂರಾಗುವರು;
ಲಕ್ಷ್ಯವಿಲ್ಲದೆ ನಿತ್ಯ ನಾಶವಾಗುವದು.
೨೧ ಅವರಲ್ಲಿರುವ ಅವರ ಹೆಜ್ಜೆಗೆ ಕೀಳ್ಪಟ್ಟಿರುವದಿಲ್ಲವೋ!
ಜ್ಞಾನವಿಲ್ಲದೆ ಸಾಯುತ್ತಾರೆ.

## ೫. ಸಂಧಿ.

೧ ಈಗ ಕರೆ; ನಿನಗೆ ಉತ್ತರ ಕೊಡುವವನು ಇದ್ದಾನೋ!
ಪರಿಶುದ್ಧರಲ್ಲಿ ಯಾರ ಕಡೆಗೆ ತಿರುಗಿ ಕೊಳ್ಳುವಿಯೋ!
೨ ಯಾಕಂದರೆ ಮೂಢನನ್ನು ಕರಕರೆ ಕೊಲ್ಲುವದು;
ಯುಕ್ತಿಹೀನನನ್ನು ಕೋಪ ಸಾಯ ಮಾಡುವದು.
೩ ಮೂಢನು ಬೇರೂರುವದನ್ನು ನಾನು ನೋಡಿದೆನು;
ಸಂಗಡಲೇ ಅವನ ಸ್ಥಾನವನ್ನು ಶಪಿಸಿದೆನು.
೪ ಅವನ ಮಕ್ಕಳು ರಕ್ಷಣೆಗೆ ದೂರವಾಗುವರು;
ತಪ್ಪಿಸುವವನಿಲ್ಲದೆ, ಬಾಗಲಲ್ಲಿ ಜಜ್ಜಲ್ಪಡುವರು.
೫ ಹಸಿದವನು ಅವನ ಬೈರನ್ನು ತಿನ್ನುವನು,
ಮುಳ್ಳುಗಳೊಳಗಿಂದಲೂ ಅದನ್ನು ತೆಗೆದು ಕೊಳ್ಳುವನು;
ಕೊಳ್ಳೆಗಾರನು ಅವರ ಆಸ್ತಿಯನ್ನು ಭಕ್ಕನೆ ನುಂಗಿ ಬಿಡುವನು.
೬ ಯಾಕಂದರೆ ಧೂಳಿಯಿಂದ ಕೇಡು ಹುಟ್ಟುವದಿಲ್ಲ.
ಭೂಮಿಯಿಂದ ಕಷ್ಟ ಮೊಳೆಯುವದಿಲ್ಲ.
೭ ಯಾಕಂದರೆ ಮನುಷ್ಯನು ಕಷ್ಟಕ್ಕಾಗಿ ಹುಟ್ಟುತ್ತಾನೆ;
ಜ್ವಾಲೆಯ ಮಕ್ಕಳು ಎತ್ತರಕ್ಕೆ ಹಾರುವ ಪ್ರಕಾರವೇ.
೮ ಹ್ಯಾಗಾದರೂ ನಾನು ದೇವರ ವಿಷಯ ವಿಚಾರಿಸುವೆನು;
ನನ್ನ ಕಾರ್ಯವನ್ನು ದೇವರ ಮೇಲೆ ಇಡುವೆನು.
೯ ಅವನು ಅಶೋಧ್ಯವಾದಂಥ ದೊಡ್ಡವುಗಳನ್ನು ಮಾಡುತ್ತಾನೆ;
ಎಣಿಕೆಯಿಲ್ಲದ ಅದ್ಭುತಗಳನ್ನು ಮಾಡುತ್ತಾನೆ.
೧೦ ಭೂಮಿಯ ಮೇಲೆ ಮಳೆಯನ್ನು ಕೊಡುತ್ತಾನೆ;
ಬೈಲು ಸ್ಥಳಗಳ ಮೇಲೆ ನೀರನ್ನು ಕಳುಹಿಸುತ್ತಾನೆ.
೧೧ ಹೀಗೆ ತಗ್ಗಿದವರನ್ನು ಉನ್ನತದಲ್ಲಿ ಇಡುತ್ತಾನೆ;
ದುಃಖವುಳ್ಳವರು ರಕ್ಷಣೆಗೆ ಎತ್ತಲ್ಪಡುತ್ತಾರೆ.
೧೨ ಅವನು ಯುಕ್ತಿವಂತರ ಯೋಚನೆಗಳನ್ನು ಮುರಿಯುತ್ತಾನೆ;
ಅವರ ಕೈಗಳು ಶಾಶ್ವರ್ಯವನ್ನು ನಡಿಸುವದಿಲ್ಲ.
೧೩ ಜ್ಞಾನಿಗಳನ್ನು ಅವರ ಯುಕ್ತಿಯಲ್ಲಿ ಹಿಡಿಯುತ್ತಾನೆ;
ಮೂರ್ಖರ ಆಲೋಚನೆ ಉರುಳಿ ಬೀಳುವದು.
೧೪ ಹಗಲಲ್ಲಿ ಕತ್ತಲೆಗೆ ಎದುರುತ್ತಾರೆ;
ರಾತ್ರಿಯಲ್ಲಿ ಇದ್ದ ಹಾಗೆ ಮಧ್ಯಾನ್ಹದಲ್ಲಿ ತಡವ್ಯಾಡುತ್ತಾರೆ.
೧೫ ಅವನು ಕತ್ತಿಯಿಂದಲೂ, ಅವರ ಬಾಯಿಂದಲೂ,
ಬಲಿಷ್ಠನ ಕೈಯೊಳಗಿಂದಲೂ ಬಡವನನ್ನು ರಕ್ಷಿಸುತ್ತಾನೆ.
೧೬ ಆದದರಿಂದ ದರಿದ್ರನಿಗೆ ನಿರೀಕ್ಷಣೆ ಆಗುವದು;
ಅನ್ಯಾಯವು ಬಾಯಿ ಮುಚ್ಚುವದು.

೧೭ ಇಗೋ, ದೇವರು ಗದರಿಸುವ ಮನುಷ್ಯನು ಭಾಗ್ಯವಂತನು;
ಸರ್ವ ಶಕ್ತನ ಶಿಕ್ಷೆಯನ್ನು ಅಲಕ್ಷ್ಯ ಮಾಡ ಬೇಡ.
೧೮ ಯಾಕಂದರೆ ಅವನು ನೋಯಿಸುತ್ತಾನೆ, ಕಟ್ಟುತ್ತಾನೆ;
ಘಾಯ ಮಾಡುತ್ತಾನೆ; ಅವನ ಕೈಗಳು ಸ್ವಸ್ಥ ಮಾಡುತ್ತವೆ.
೧೯ ಆರು ಇಕ್ಕಟ್ಟುಗಳಿಗೆ ನಿನ್ನನ್ನು ತಪ್ಪಿಸುವನು;
ಏಳರಲ್ಲಿಯೂ ಕೇಡು ನಿನಗೆ ಮುಟ್ಟದು.
೨೦ ಬರದಲ್ಲಿ ನಿನ್ನನ್ನು ಮರಣದೊಳಗಿಂದ,
ಯುದ್ಧದಲ್ಲಿ ಕತ್ತಿಯ ಕೈಯಿಂದ ಬಿಡಿಸುವನು.
೨೧ ನಾಲಿಗೆಯೆಂಬ ಚಬುಕಿಗೆ ಮರೆಯಾಗಿರುವಿ;
ಅದು ಬಂದಾಗ ನೀನು ನಾಶನಕ್ಕೆ ಭಯ ಪಡುವದಿಲ್ಲ.
೨೨ ನಾಶನಕ್ಕೂ ಕೊರತೆಗೂ ನಗುವಿ;
ಭೂಮಿಯ ಮೃಗಗಳಿಗೂ ಭಯ ಪಡುವದಿಲ್ಲ.
೨೩ ಯಾಕಂದರೆ ಹೊಲದ ಕಲ್ಲುಗಳ ಸಂಗಡ ನಿನಗೆ ಒಡಂಬಡಿಕೆ
ಇರುವದು;
ಹೊಲದ ಮೃಗಗಳು ನಿನಗೆ ಸಮಾಧಾನವಾಗಿರುವವು.
೨೪ ನಿನ್ನ ಗುಡಾರವು ಕ್ಷೇಮವಾಗಿದೆ ಎಂದು ತಿಳು ಕೊಳ್ಳುವಿ;
ನಿನ್ನ ನಿವಾಸವನ್ನು ವಿಚಾರಿಸಿದರೆ, ನಿನಗೆ ತಪ್ಪು ಬಾರದು.
೨೫ ನಿನ್ನ ಬೀಜವು ಬಹಳವಾಗಿದೆ ಎಂದೂ,
ನಿನ್ನ ಮೊಳಕೆಗಳು ಭೂಮಿಯ ಪಲ್ಯದ ಹಾಗೆ ಎಂದೂ ತಿಳು
ಕೊಳ್ಳುವಿ.
೨೬ ಸೂರು ತನ್ನ ಕಾಲದಲ್ಲಿ ಏಳುವಂತೆ,
ಪೂರ್ಣ ಪ್ರಾಯದವನಾಗಿ ಸಮಾಧಿಗೆ ಬರುವಿ.
೨೭ ಇಗೋ, ಇದನ್ನು ವಿಚಾರಿಸಿದೆವು; ಹೀಗೆ ಅದೇ;
ಇದನ್ನು ಕೇಳು; ನಿನಗೆ ನೀನೇ ತಿಳುಕೋ.

## ೬. ಸಂಧಿ.

೧ ಯೋಬನು ಉತ್ತರ ಕೊಟ್ಟು ಹೇಳಿದ್ದೇನಂದರೆ—
೨ ನನ್ನ ಕರಕರೆಯನ್ನೂ ತೂಗೇ ತೂಗಿದರೆ,
ನನ್ನ ಕ್ರಮೆಯನ್ನು ತ್ರಾಸಿನಲ್ಲಿ ಇಟ್ಟರೆ, ಲೇಸು.
೩ ಯಾಕಂದರೆ ಈಗಲೇ ಸಮುದ್ರದ ಮರಳಿಗಿಂತ ಭಾರವಾಗಿದೆ;
ಆದದರಿಂದ ನನ್ನ ಮಾತುಗಳು ನುಂಗಲ್ಪಟ್ಟವು.
೪ ಯಾಕಂದರೆ ಸರ್ವಶಕ್ತನ ಬಾಣಗಳು ನನ್ನಲ್ಲಿ ಅವೆ;
ಅವುಗಳ ವಿಷ ನನ್ನ ಆತ್ಮವನ್ನು ಕುಡಿಯುತ್ತದೆ;
ದೇವರ ಹೆದರಿಕೆಗಳು ನನ್ನ ಸುತ್ತಲು ಇಳಿದವು.



೫ ಕಾಡ ಕತ್ತೆ ಹುಲ್ಲು ಇದ್ದಲ್ಲಿ ಕೂಗುವದೋ!
ಇಲ್ಲದೆ ಎತ್ತು ಮೇವಿದ್ದಲ್ಲಿ ಒದರುವದೋ!
೬ ಸವಿ ಇಲ್ಲದ್ದನ್ನು ಉಪ್ಪಿಲ್ಲದೆ ಉಣ್ಣಾ ಬಹುದೋ!
ಇಲ್ಲದೆ ಕೋಳೀ ಪೊಟ್ಟೆಯ ಲೋಳೆಯಲ್ಲಿ ರುಚಿ ಉಂಟೋ!
೭ ನನ್ನ ಪ್ರಾಣವು ಮುಟ್ಟಲೊಲ್ಲದೆ ಇರುವಂಥವುಗಳೇ
ನನ್ನ ವ್ಯಾಧಿಯ ಆಹಾರದ ಹಾಗೆ ಅವೆ.

೮ ನನ್ನ ವಿಜ್ಞಾಪನೆ ಸಂದರೆ,
ನಾನು ನಿರೀಕ್ಷಿಸಿದ್ದನ್ನು ದೇವರು ಕೊಟ್ಟರೆ, ಲೇಸು.
೯ ದೇವರು ಬಲಿದು, ನನ್ನನ್ನು ಜಜ್ಜಿದರೆ,
ತನ್ನ ಕೈ ಚಾಚಿ, ನನ್ನನ್ನು ಕತ್ತರಿಸಿದರೆ, ವಾಸಿ.
೧೦ ಹೀಗಿದ್ದರೆ, ನನಗೆ ಇನ್ನೂ ಆದರಣೆ ಇರುವದು;
ನಾನು ಕನಿಕರವಿಲ್ಲದ ನೋವಿನಲ್ಲಿ ಕುಣಿಯುವೆನು;
ಯಾಕಂದರೆ ಪರಿಶುದ್ಧನ ನುಡಿಗಳನ್ನು ನಾನು ಮರೆ ಮಾಡಲಿಲ್ಲ.
೧೧ ನಾನು ನಿರೀಕ್ಷಿಸುವ ಹಾಗೆ, ನನ್ನ ಶಕ್ತಿ ಏನು!
ನಾನು ನನ್ನ ಆಯುಸ್ಸನ್ನು ಹೆಚ್ಚಿಸುವ ಹಾಗೆ, ನನ್ನ ಅಂತ್ಯ
ಏನು!
೧೨ ನನ್ನ ಶಕ್ತಿ ಕಲ್ಲುಗಳ ಶಕ್ತಿಯೋ!
ನನ್ನ ಮಾಂಸವು ಹಿತ್ತಾಳಿಯೋ!
೧೩ ನನ್ನೊಳಗಿನ ಸಹಾಯವು ಇಲ್ಲದೆ ಹೋಯಿತಲ್ಲವೋ!
ಜಾತುರ್ಯವು ನನ್ನಿಂದ ನೂಕಲ್ಪಡಲಿಲ್ಲವೋ!

೧೪ ಕರಗಿದವನಿಗೆ ಸ್ನೇಹಿತನಿಂದ ದಯವಾಗ ತಕ್ಕದ್ದು;
ಆದರೆ ಅವನು ಸರ್ವ ಶಕ್ತನ ಭಯವನ್ನು ಬಿಡುತ್ತಾನೆ.
೧೫ ನನ್ನ ಸಹೋದರರು ಹಳ್ಳದ ಹಾಗೆ ಮೋಸ ಮಾಡಿದ್ದಾರೆ;
ಹಳ್ಳಗಳ ಪ್ರವಾಹದಂತೆ ಹಾದು ಹೋಗುತ್ತಾರೆ.
೧೬ ಅವು ಮಂಜು ಗಡ್ಡೆಯಿಂದ ಮಲಿನವಾಗಿವೆ;
ಅವುಗಳಲ್ಲಿ ಹಿಮವು ಅಡಗಿ ಕೊಳ್ಳುತ್ತದೆ.
೧೭ ಉಷ್ಣವಾದ ವೇಳೆಯಲ್ಲಿ ಮುಗಿದು ಹೋಗುತ್ತವೆ;
ಕೆಪೆಯಾದಾಗ, ತಮ್ಮ ಸ್ಥಳ ಬಿಟ್ಟು ಅರಿ ಹೋಗುತ್ತವೆ.
೧೮ ಪರಕೆಗಳು ಅವುಗಳ ಮಾರ್ಗವಾಗಿ ಓಲೆ ಹೋಗುತ್ತವೆ;
ವಾಯವಾಗಿ, ನಾಶವಾಗುತ್ತವೆ.
೧೯ ಥೇಮದ ಪರಕೆಗಳು ದೃಷ್ಟಿಸುತ್ತವೆ;
ಶೇಬದ ಸಮೂಹಗಳು ಅವುಗಳನ್ನು ಎದುರು ನೋಡುತ್ತವೆ.
೨೦ ಭರವಸವಿಟ್ಟದ್ದರಿಂದ, ನಾಚುತ್ತಾರೆ;
ಅವುಗಳ ಬಳಿಗೆ ಬಂದು, ಲಜ್ಜೆ ಗೊಂಡರು.
೨೧ ಯಾಕಂದರೆ ಈಗ ನೀವು ಏನೂ ಇಲ್ಲದೆ ಹೋದಿರಿ;
ದಿಗುಲನ್ನು ನೋಡಿ, ಭಯ ಪಡುತ್ತೀರಿ.
೨೨ ನನಗೆ ತನ್ನಿರಿ, ಎಂದೂ,
ನಿಮ್ಮ ಸಂಪತ್ತಿನಿಂದ ನನಗೋಸ್ಕರ ಲಂಚ ಕೊಡಿರಿ ಎಂದೂ,
೨೩ ಶತ್ರುವಿನ ಕೈಗೆ ನನ್ನನ್ನು ತಪ್ಪಿಸಿರಿ ಎಂದೂ,
ಬಲಾತ್ಕಾರಿಗಳ ಕೈಯೊಳಗಿಂದ ನನ್ನನ್ನು ರಕ್ಷಿಸಿರಿ ಎಂದೂ ನಾ
ನು ಹೇಳಿದೆನೋ!
೨೪ ನನಗೆ ಬೋಧಿಸಿರಿ, ನಾನು ಮೌನವಾಗಿರುವೆನು;
ನಾನು ಮಾಡಿದ ತಪ್ಪನ್ನು ನನಗೆ ತಿಳಿಸಿರಿ.
೨೫ ನೆಟ್ಟಿಗೆಯಾದ ಮಾತುಗಳು ಎಷ್ಟು ಬಲವಾಗಿವೆ!
ಆದರೆ ನೀವು ಗದರಿಸಿದ್ದು ಎಂಥಾ ಗದರಿಕೆ!
೨೬ ಮಾತುಗಳನ್ನು ನೀವು ಗದರಿಸ ಯೋಚಿಸಿದ್ದಿರೋ!
ದಿಕ್ಕು ಕಾಣದವನ ಮಾತುಗಳು ಧೂಳಾಗುವವೆ.
೨೭ ಹೌದು, ದಿಕ್ಕಿಲ್ಲದವನ ಮೇಲೆ ಬಲೆ ಹಾಕುತ್ತೀರಿ,
ನಿಮ್ಮ ಸ್ನೇಹಿತನಿಗೋಸ್ಕರ ಕುಣಿಯನ್ನು ಅಗಿಯುತ್ತೀರಿ.
೨೮ ಆದರೆ ಈಗ ಬಲಿದು, ನನ್ನನ್ನು ದೃಷ್ಟಿಸಿರಿ;
ನಾನು ಸುಳ್ಳು ಹೇಳಿದರೆ ನಿಮ್ಮ ಕಣ್ಣಿಗೆ ಕಾಣುವದು.
೨೯ ತಿರುಗಿ ಕೊಳ್ಳಿರಿ, ಅನ್ಯಾಯವಾಗದಿರಲಿ;
ತಿರುಗಿ ಕೊಳ್ಳಿರಿ; ಇನ್ನು ನನ್ನ ನೀತಿಯು ಇವುಗಳಲ್ಲಿ ಇರು
ವದು.
೩೦ ನನ್ನ ನಾಲಿಗೆಯಲ್ಲಿ ಅನ್ಯಾಯ ಉಂಟೋ!
ಇಲ್ಲದೆ ನನ್ನ ಅಂಗಳವು ಕೇಡುಗಳನ್ನು ರುಚಿ ನೋಡುವದಿಲ್ಲ
ವೋ!

## ೭. ಸಂಧಿ.

೧ ಮನುಷ್ಯನಿಗೆ ಭೂಮಿಯ ಮೇಲೆ ಯುದ್ಧ ಕಾಲ ಉಂಟಲ್ಲ
ವೋ!
ಅವನ ದಿವಸಗಳು ಕೂಲಿಯವನ ದಿವಸಗಳ ಹಾಗಲ್ಲವೋ!
೨ ಸೇವಕನು ನೆರಳನ್ನು ಅಪೇಕ್ಷಿಸುವ ಪ್ರಕಾರವೂ,
ಕೂಲಿಯವನು ತನ್ನ ಕೂಲಿ ಕೋರುವ ಪ್ರಕಾರವೂ,
೩ ಹಾಗೆಯೇ ನಾನು ಅವಸ್ಥೆಯ ತಿಂಗಳುಗಳನ್ನು ಬಾಧ್ಯವಾಗಿ ತ
ಕ್ಕೊಳ್ಳ ಬೇಕಾಯಿತು;
ಕಷ್ಟದ ರಾತ್ರಿಗಳು ನನಗೆ ಎಣಿಸಲ್ಪಟ್ಟವು.
೪ ಮಲಗಿ ಕೊಳ್ಳಲು, ಯಾವಾಗ ಏಳುವೆನೆಂದೂ, ಸಂಜೆ ಯಾ
ವಾಗ ಸಮಾಪ್ತವಾಗುವದೆಂದೂ, ಅನುತ್ಪೈನೆ;
ಮುಂಜಾನೇ ಪರ್ಯಂತರ ಹೊರಳುವದು ನನಗೆ ಸಾಕಾಗುತ್ತದೆ.
೫ ನನ್ನ ಮಾಂಸವೂ ಹುಳುಗಳನ್ನೂ ಮಣ್ಣಿನ ಹೆಂಟೆಯನ್ನೂ
ಧರಿಸಿ ಕೊಂಡದೆ;
ನನ್ನ ಚರ್ಮವು ಭಿನ್ನವಾಗಿ ಸೋರುತ್ತದೆ.
೬ ನನ್ನ ದಿವಸಗಳು ಲಾಳಿಗಿಂತ ತ್ವರೆಯೆಯಾಗಿವೆ;
ನಿರೀಕ್ಷಣೆ ಇಲ್ಲದೆ ಅವು ಮುಗಿಯುತ್ತವೆ.
೭ ನನ್ನ ಜೀವವು ಉಸುರೇ ಎಂದು ಜ್ಞಾಪಕ ಮಾಡಿಕೋ,
ನನ್ನ ಕಣ್ಣು ತಿರಿಗಿ ಸೌಲನ್ನು ನೋಡದು.
೮ ನನ್ನನ್ನು ನೋಡುವವನ ಕಣ್ಣು ನನ್ನನ್ನು ಇನ್ನೂ ನೋಡದು;
ನಿನ್ನ ಕಣ್ಣುಗಳು ನನ್ನ ಮೇಲೆ ಇರಲು, ನಾನು ಇಲ್ಲ.
೯ ಮೋಡವು ತೀರಿ, ಹೋಗುವ ಹಾಗೆಯೇ,
ಪಾತಾಳಕ್ಕೆ ಇಳಿದವನು ಏರಿ ಬರುವದಿಲ್ಲ.
೧೦ ಅವನು ಇನ್ನೂ ತನ್ನ ಮನೆಗೆ ತಿರುಗಿ ಕೊಳ್ಳುವದಿಲ್ಲ;
ಅವನ ಸ್ಥಳವು ಇನ್ನೂ ಅವನ ಗುರುತನ್ನು ಅರಿಯದು.

೧೧ ನಾನು ಸಹ ನನ್ನ ಬಾಯಿ ಬಿಗಿ ಮಾಡಿದೆನು;
ನನ್ನ ಆತ್ಮದ ಇಕ್ಕಟ್ಟಿನಲ್ಲಿ ಮಾತಾಡುವೆನು;
ನನ್ನ ಪ್ರಾಣದ ಕಹಿಯಲ್ಲಿ ಹಲಬಿಸುವೆನು.

೧೨ ನೀನು ನನಗೆ ಕಾವಲಿರುವ ಹಾಗೆ, ನಾನು ಸಮುದ್ರವೋ! ಮಹಾ
ಬಿಸಾನೋ!
೧೩ ನನ್ನ ಮಂಚವು ನನ್ನನ್ನು ಆದರಿಸಲಿ,
ನನ್ನ ಹಾಸಿಕೆಯು ನನ್ನ ಚಿಂತೆಯನ್ನು ಎತ್ತಲಿ, ಅನ್ನಲಾಗಿ;
೧೪ ಸ್ವಪ್ನಗಳಿಂದ ನನ್ನನ್ನು ಹೆದರಿಸುತ್ತೀ,
ಕನಸುಗಳಿಂದ ನನ್ನನ್ನು ನಡುಗಿಸುತ್ತೀ.
೧೫ ಆದರಿಂದ ನನ್ನ ಪ್ರಾಣವು ಕೊರಳನ್ನು ಹಿಸುಕುವದನ್ನೂ,
ಈ ಎಲುಬುಗಳಿಗಂತ ಮರಣವನ್ನೂ ಆರಿಸಿ ಕೊಳ್ಳುತ್ತದೆ.
೧೬ ನಾನು ಹೇಸುತ್ತೇನೆ; ನಿತ್ಯವಾಗಿ ನಾನು ಬದುಕಲೊಲ್ಲೆನು;
ನನ್ನನ್ನು ಬಿಡು; ಯಾಕಂದರೆ ನನ್ನ ದಿವಸಗಳು ಮಾಯವಾಗಿವೆ.
೧೭ ನೀನು ಅವನನ್ನು ಅಲ್ಪಿಸುವ ಹಾಗೆಯೂ,
ನೀನು ಅವನ ಮೇಲೆ ನಿನ್ನ ಹೃದಯೆ ಇಡುವ ಹಾಗೆಯೂ,
೧೮ ಅವನನ್ನು ಪ್ರತಿ ಉದಯದಲ್ಲಿ ದರ್ಶಿಸುವ ಹಾಗೆಯೂ,
ಕ್ಷಣ ಕ್ಷಣಕ್ಕೆ ಅವನನ್ನು ಪರೀಕ್ಷಿಸುವ ಹಾಗೆಯೂ, ಮನುಷ್ಯ
ನು ಯಾರು!
೧೯ ಎಷ್ಟು ಮಟ್ಟಿಗೂ ನನ್ನ ಕಡೆಯಿಂದ ದೃಷ್ಟಿ ತೊಲಗಿಸುವದಿಲ್ಲ!
ನಾನು ಉಗುಳು ನುಂಗುವ ವರಿಗೆ, ನನ್ನನ್ನು ಬಿಡುವದಿಲ್ಲ!
೨೦ ಪಾಪ ಮಾಡಿದ್ದೇನೆ; ಮನುಷ್ಯನ ಕಾವಲದವನೇ, ನಿನಗೆ ಏನು
ಮಾಡಲಿ;
ನನಗೆ ನಾನೇ ಭಾರವಾಗುವ ಹಾಗೆ,
ನನ್ನನ್ನು ನಿನಗೆ ಗುರಿಯಾಗಿ ಇಟ್ಟು ಕೊಳ್ಳುವದು ಯಾಕೆ ?
೨೧ ಯಾಕೆ ನನ್ನ ಪ್ರೋಹವನ್ನು ಮನ್ನಿಸುವದಿಲ್ಲ,
ನನ್ನ ಅಕ್ರಮವನ್ನು ಪರಿಹರಿಸುವದಿಲ್ಲ?
ಯಾಕಂದರೆ ಈಗ ಧೂಳಿಯಲ್ಲಿ ಮಲಗಿ ಕೊಳ್ಳುವೆನು;
ನೀನು ಮುಂಜಾನೆ ನನ್ನನ್ನು ಹುಡಿಕಿದರೆ, ನಾನು ಇರುವದಿಲ್ಲ.

## ೮. ಸಂಧಿ.

೧ ಮತ್ತು ಶೂಕ್ಯನಾದ ಬಿಲ್ದದನು ಉತ್ತರ ಕೊಟ್ಟು ಹೇಳಿ
ದ್ದೇನಂದರೆ—

೨ ನೀನು ಇವುಗಳನ್ನು ನುಡಿಯುವದೂ.
ನಿನ್ನ ಬಾಯಿಯ ಮಾತುಗಳು ಬಿರು ಘುಳಿಯಾಗಿರುವದೂ
ಎಷ್ಟು ವರಿಗೆ!
೩ ದೇವರು ನ್ಯಾಯವನ್ನು ಓರೆ ಮಾಡುವನೋ!
ಸರ್ವ ಶಕ್ತನು ನೀತಿಯನ್ನು ಓರೆ ಮಾಡುವನೋ!
೪ ನಿನ್ನ ಮಕ್ಕಳು ಅವನಿಗೆ ಪಾಪ ಮಾಡಿದ್ದರೆ,
ಅವರ ದ್ರೋಹದ ಕೈಗೆ ಅವರನ್ನು ಒಪ್ಪಿಸಿ ಇರುವನು.
೫ ನೀನೇ ದೇವರನ್ನು ಜಾಗ್ರತೆಯಾಗಿ ಹುಡುಕಿ,
ಸರ್ವ ಶಕ್ತನಿಗೆ ಬಿನ್ನಪ ಮಾಡಿದರೆ,
೬ ನೀನು ಶುದ್ಧನೂ ನೆಟ್ಟನೆಯವನೂ ಆಗಿದ್ದರೆ,
ನಿಶ್ಚಯವಾಗಿ ಈಗಲೇ ಅವನು ನಿನಗೋಸ್ಕರ ಎಚ್ಚತ್ತು,
ನಿನ್ನ ನೀತಿಯ ಸ್ಥಾನಕ್ಕೆ ಕ್ಷೇಮ ಕೊಡುವನು.
೭ ನಿನ್ನ ಆರಂಭ ಅಲ್ಪವಾಗಿದ್ದರೂ,
ನಿನ್ನ ಅಂತ್ಯವು ಬಹಳವಾಗಿ ಬೆಳೆಯುವದು.
೮ ಪೂರ್ವ ತಲಾಂತರವನ್ನು ಕೇಳು;
ಅವರ ತಂದೆಗಳನ್ನು ವಿಚಾರಿಸಿದ್ದ ಮಾಡಿಕೋ.
೯ ಯಾಕಂದರೆ ನಾವು ನಿನ್ನಿನವರೂ ಅರಿಯದವರೂ ಆಗಿದ್ದೇವೆ;
ಯಾಕಂದರೆ ನಮ್ಮ ದಿವಸಗಳು ಭೂಮಿಯ ಮೇಲೆ ನಿರ್ಳಾಗಿವೆ.
೧೦ ಅವರು ನಿನಗೆ ಬೋಧಿಸುವದಿಲ್ಲವೋ! ನಿನಗೆ ಮಾತಾಡುವದಿ
ಲ್ಲವೋ!
ತಮ್ಮ ಹೃದಯದೊಳಗಿಂದ ಮಾತುಗಳನ್ನು ಹೊರಗೆ ತರುವ
ದಿಲ್ಲವೋ!
೧೧ ಕೆಸರಿಲ್ಲದೆ ಅಪು ಏರುವದೋ!
ನೀರಿಲ್ಲದೆ ಜಂಬು ಬೆಳೆಯುವದೋ!
೧೨ ಅದು ಹಸಿಯಾಗಿರಲೂ, ಕೊಯ್ಯದ ವೇಳೆಯಲ್ಲಿ,
ಎಲ್ಲಾ ಹುಲ್ಲಿನ ಮೊದಲು ಬಾಡುವದು.
೧೩ ದೇವರನ್ನು ಮರೆಯುವವರೆಲ್ಲರ ಹಾದಿಗಳು ಹಾಗೆಯೇ;
ಮತ್ತು ಭ್ರಷ್ಟರ ನಿರೀಕ್ಷಣೆ ನಾಶವಾಗುವದು.
೧೪ ಅವನ ನಂಬಿಕೆ ಕತ್ತರಿಸಲ್ಪಡುವದು;
ಅವನ ಭರವಸ ಜಾಡರ ಹುಳದ ಮನೆಯೇ.
೧೫ ಅವನು ತನ್ನ ಮನೆಗೆ ಆತು ಕೊಂಡರೆ, ಅದು ನಿಲ್ಲದು;
ಅದನ್ನು ಬಿಗಿದು ಹಿಡಿದರೆ, ನಿಲ್ಲದು.
೧೬ ಸೂರ್ಯನ ಮುಂದೆ ಅವನು ಹಸಿಯಾಗಿದ್ದಾನೆ;
ಅವನ ಒಳ್ಳಿ ಅವನ ತೋಟದಲ್ಲಿ ಹಬ್ಬುವದು.
೧೭ ಕಲ್ಲಿನ ರಾಶಿಯ ಮೇಲೆ ಅವನ ಬೇರುಗಳು ಸುತ್ತಿ ಕೊಳ್ಳುತ್ತವೆ;
ಕಲ್ಲಿನ ಮನೆಯನ್ನು ದೃಷ್ಟಿಸುತ್ತದೆ.
೧೮ ಅವನನ್ನು ಅವನ ಸ್ಥಳದಿಂದ ಕಿತ್ತರೆ,
ಅದು, ನಿನ್ನನ್ನು ನೋಡಲಿಲ್ಲವೆಂದು, ಅವನನ್ನು ಬೊಕುವದು.
೧೯ ಇಗೋ, ಇದು ಅವನ ಮಾರ್ಗದ ಆನಂದವು;
ಆದರೆ ಧೂಳಿಯೊಳಗಿಂದ ಮತ್ತೊಬ್ಬರು ಬೊಳೆಯುವರು.
೨೦ ಇಗೋ, ದೇವರು ಸಂಪೂರ್ಣನನ್ನು ತಿರಸ್ಕರಿಸುವದಿಲ್ಲ;
ಕೆಡಕರ ಕೈಯನ್ನು ಹಿಡಿಯುವದಿಲ್ಲ.
೨೧ ಇನ್ನು ಅವನು ನಿನ್ನ ಬಾಯನ್ನು ನಗೆಯಿಂದ, ನಿನ್ನ ತುಟಿಗಳ
ನ್ನು ಜಯ ಧ್ವನಿಯಿಂದ ತುಂಬಿಸುವನು.
೨೨ ನಿನ್ನ ಹಗೆಯವರು ನಾಚಿಕೆಯನ್ನು ಧರಿಸಿ ಕೊಳ್ಳುವರು;
ದುಷ್ಟರ ಗುಡಾರವು ಇಲ್ಲದೆ ಹೋಗುವದು.

## ೯. ಸಂಧಿ.

೧ ಯೋಬನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ನಿಶ್ಚಯವಾಗಿ ಹೀಗೆ ಇರುವದೆಂದು ಬಲ್ಲೆನು.
ಮನುಷ್ಯನು ದೇವರ ಮುಂದೆ ನೀತಿವಂತನಾಗುವದು ಹ್ಯಾಗೆ!
೩ ಅವನ ಸಂಗಡ ವ್ಯಾಜ್ಯವಾಡ ಇಷ್ಟಪಟ್ಟರೆ,
ಅವನಿಗೆ ಸಾವಿರದರಲ್ಲಿ ಒಂದು ಉತ್ತರ ಕೊಡನು.
೪ ಅವನು ಹೃದಯದಲ್ಲಿ ಜ್ಞಾನಿಯೂ ಬಲದಲ್ಲಿ ಶಕ್ತನೂ ಆಗಿ
ದ್ದಾನೆ;
ಅವನಿಗೆ ವಿರೋಧವಾಗಿ ತನ್ನನ್ನು ಕಠಿಣ ಪಡಿಸಿ, ಕ್ಷೇಮವಾಗಿದ್ದ
ವನ್ಯಾರು!
೫ ಪರ್ವತಗಳನ್ನು, ಅವುಗಳಿಗೆ ತಿಳಿಯದ ಹಾಗೆ, ನೂಕುತ್ತಾನೆ;
ತನ್ನ ಕೋಪದಿಂದ ಅವುಗಳನ್ನು ತಿರುಗಿಸುತ್ತಾನೆ.



೬ ಭೂಮಿಯನ್ನು ಅದರ ಸ್ಥಳದೊಳಗಿಂದ ಕದಲಿಸುತ್ತಾನೆ;
ಅದರ ಸ್ತಂಭಗಳು ಅಲ್ಲಾಡುತ್ತವೆ.
೭ ಮೂಸದ ಹಾಗೆ, ಸೂರ್ಯನಿಗೆ ಹೇಳುತ್ತಾನೆ;
ನಕ್ಷತ್ರಗಳನ್ನು ಮುದ್ರೆ ಹಾಕಿ ಮುಚ್ಚುತ್ತಾನೆ.
೮ ಅವನೊಬ್ಬನೇ ಆಕಾಶವನ್ನು ಹೊಗ್ಗಿಸುತ್ತಾನೆ;
ಸಮುದ್ರದ ಏರಿಕೆಗಳ ಮೇಲೆ ನಡೆಯುತ್ತಾನೆ.
೯ ಸಪ್ತ ತಾರಕಗಳನ್ನೂ, ಮೃಗ ಶಿರವನ್ನೂ, ವೃಷಭ ರಾಶಿಯನ್ನೂ,
ದಕ್ಷಿಣದ ಕೋಣೆಗಳನ್ನೂ ಮಾಡಿದವನು ಅವನೇ.
೧೦ ಕೋಥನೆಯಿಲ್ಲದ ವರಗೂ ದೊಡ್ಡವುಗಳನ್ನೂ,
ಲೆಖ್ಖವಿಲ್ಲದ ವರಗೂ ಅದ್ಭುತಗಳನ್ನೂ ಮಾಡುತ್ತಾನೆ.
೧೧ ಇಗೋ, ನನ್ನ ಮುಂದೆ ಹಾದು ಹೋಗುತ್ತಾನೆ, ನನಗೆ ಕಾಣು
ವದಿಲ್ಲ;
ಹಾಟುತ್ತಾನೆ, ನಾನು ಅವನನ್ನು ಗ್ರಹಿಸಿ ಕೊಳ್ಳುವದಿಲ್ಲ.
೧೨ ಇಗೋ, ಹಿಡು ಕೊಂಡು ಹೋಗುತ್ತಾನೆ, ಅವನನ್ನು ತಿರುಗಿಸುವ
ವನ್ಯಾವನು!
ಏನು ಮಾಡುತ್ತೀ! ಎಂದು ಅವನಿಗೆ ಹೇಳುವವನ್ಯಾರು!
೧೩ ದೇವರು ತನ್ನ ಕೋಪವನ್ನು ತಿರುಗಿಸುವದಿಲ್ಲ;
ಗರ್ವವುಳ್ಳ ಸಹಾಯಕರು ಅವನ ಕೆಳಗೆ ಬೊಗ್ಗಿ ಕೊಳ್ಳುತ್ತಾರೆ.

೧೪ ಅವನಿಗೆ ಉತ್ತರ ಕೊಡುವದಕ್ಕೂ,
ಅವನ ಮುಂದೆ ಮಾತುಗಳನ್ನು ಆರಿಸಿ ಕೊಳ್ಳುವದಕ್ಕೂ, ನಾನು
ಎಷ್ಟು ಮಾತ್ರದವನು!
೧೫ ನಾನು ನೀತಿವಂತನಾಗಿದ್ದರೂ, ಉತ್ತರ ಕೊಡೆನು;
ನನ್ನ ನ್ಯಾಯಾಧಿಪತಿಗೆ ಬೊರೆ ಇಡುವೆನು.
೧೬ ನಾನು ಕರೆಯಲು, ಅವನು ಉತ್ತರ ಕೊಟ್ಟರೂ,
ಅವನು ನನ್ನ ಶಬ್ದಕ್ಕೆ ಕಿವಿ ಕೊಡುತ್ತಾನೆಂದು ನಂಬೆನು.
೧೭ ಅವನು ಬಿರುಘುಳಿಯಿಂದ ನನ್ನನ್ನು ಒಡಿಯುತ್ತಾನೆ;
ನನ್ನ ಘಾಯಗಳನ್ನು ಸುಮ್ಮನೆ ಹೆಚ್ಚಿಸುತ್ತಾನೆ.
೧೮ ನನ್ನನ್ನು ಸಂಪ್ರಾಣಿಸ ಗೊಡದೆ,
ನನ್ನನ್ನು ಕಹಿಯಾದವುಗಳಿಂದ ತೃಪ್ತಿ ಪಡಿಸುತ್ತಾನೆ.
೧೯ ಶಕ್ತಿಯನ್ನು ಹೇಳಿದರೆ, ಇಗೋ, ಬಲವುಳ್ಳವನಾಗಿದ್ದಾನೆ;
ನ್ಯಾಯ ಅಂದರೆ, ನನಗೆ ಕಾಲ ನೇಮಿಸುವವನ್ಯಾರು!
೨೦ ನಾನು ನೀತಿವಂತನಾಗಿದ್ದರೆ, ನನ್ನ ಬಾಯಿ ನನ್ನನ್ನು ಕೆಟ್ಟವನಾ
ಗ ಮಾಡುವದು;
ನಾನು ಸಂಪೂರ್ಣನಾಗಿದ್ದರೆ, ನನ್ನನ್ನು ವಕ್ರನಾಗ ಮಾಡುವದು.

೨೧ ನಾನು ಸಂಪೂರ್ಣನಾಗಿದ್ದರೆ, ನನ್ನ ಪ್ರಾಣವನ್ನು ನಾನೇ
ಅರಿಯದಿರುವೆನು;
ನನ್ನ ಜೀವವನ್ನು ಅಲಕ್ಷ್ಯ ಮಾಡುವೆನು.
೨೨ ಇದು ಒಂದು; ಆದದರಿಂದ ಹೇಳ್ದೇನೆ—
ಸಂಪೂರ್ಣನನ್ನೂ ಕೆಟ್ಟವನನ್ನೂ ಅವನು ಮುಗಿಸುತ್ತಾನೆ.
೨೩ ಚಬುಕು ಛಕ್ಕನೆ ಕೊಂದರೆ,
ಅಪರಾಧವಿಲ್ಲದವರ ಪರೀಕ್ಷೆಗೆ ಗೇಲಿ ಮಾಡುತ್ತಾನೆ.
೨೪ ದೇಶವು ಕೆಟ್ಟವರ ಕೈಯಲ್ಲಿ ಕೊಟ್ಟಲ್ಪಟ್ಟಿದೆ;
ಅದರ ನ್ಯಾಯಾಧಿಪತಿಗಳ ಮುಖ ಮುಚ್ಚುತ್ತಾನೆ;
ಇಲ್ಲದಿದ್ದರೆ, ಅವನು ಎಲ್ಲಿಯೋ! ಯಾಕೋ!
೨೫ ಆದರೆ ನನ್ನ ದಿವಸಗಳು ಓಡುವವನಿಗಿಂತ ತ್ವರಿಕೆಯಾಗಿವೆ;
ಮೇಲನ್ನು ನೋಡದೆ ಓಡುತ್ತವೆ.
೨೬ ಹದ್ದು ಆಹಾರದ ಮೇಲೆ ಹಾರಿ ಬೀಳುವ ಪ್ರಕಾರ,
ತೀವ್ರವಾದ ಹಡಗಗಳ ಸಂಗಡ ಹಾರಿ ಹೋಗುತ್ತವೆ.
೨೭ ನನ್ನ ಚಿಂತೆ ಮರೆತು,
ನನ್ನ ದುಃಖದ ಮುಖ ಬಿಟ್ಟು, ಮೋಲೇ ಕಳೆ ಗೊಳ್ಳುವೆನೆಂದು,
ಹೇಳಿ ಕೊಂಡರೆ,
೨೮ ನನ್ನ ವ್ಯಥೆಗಳೆಲ್ಲಾ ದಿಗುಲು ಪಡುತ್ತೇನೆ;
ನೀನು ನನ್ನನ್ನು ನಿರಪರಾಧಿಯೆಂದು ತೀರಿಸುವದಿಲ್ಲವಂತ ತಿಳಿ
ದಿದ್ದೇನೆ.
೨೯ ನಾನು ಕೆಟ್ಟವನಾದೆನು; ಯಾಕೆ ಈ ಮಾಯದಿಂದ ಅಯಾಸ
ಪಡುತ್ತೇನೆ!
೩೦ ನಾನು ಹಿಮದ ನೀರಿನಲ್ಲಿ ತೊಳೆ ಕೊಂಡು,
ನನ್ನ ಕೈಗಳನ್ನು ಶುಚಿ ಮಾಡೇ ಮಾಡಿದರೂ,
೩೧ ಆಗಲೇ ನನ್ನನ್ನು ಕೂಣೆಯಲ್ಲಿ ಮುಣುಗಿಸಿ ಬಿಡುವಿ;
ನನ್ನ ವಸ್ತ್ರಗಳು ನನ್ನನ್ನು ಹೇಸುವವು.
೩೨ ಯಾಕಂದರೆ ನಾನು ಅವನಿಗೆ ಉತ್ತರ ಕೊಡುವ ಹಾಗೆಯೂ,
ನಾವು ಕೂಡ ನ್ಯಾಯದಲ್ಲಿ ಸೇರುವ ಹಾಗೆಯೂ, ಅವನು ನ
ನ್ನಂಥಾ ಮನುಷ್ಯನಲ್ಲ.
೩೩ ನಮ್ಮಿಬ್ಬರ ಮೇಲೆ ಕೈ ಇಡ ತಕ್ಕ,
ಒತ್ತಾಳು ನಮ್ಮ ಮಧ್ಯದಲ್ಲಿಲ್ಲ.
೩೪ ಅವನು ತನ್ನ ಕೋಲನ್ನು ನನ್ನ ಮೇಲಿನಿಂದ ತೊಲಗಿಸಲಿ,
ಅವನ ಭೀತಿ ನನ್ನನ್ನು ಹೆದರಿಸದಿರಲಿ,
೩೫ ಆಗ ಅವನಿಗೆ ಭಯ ಪಡದೆ ಮಾತಾಡುವೆನು;
ಆದರೆ ನಾನು ನನ್ನ ದೃಷ್ಟಿಯಲ್ಲಿ ಇಂಥವನಲ್ಲ.

## ೧೦. ಸಂಧಿ.

೧ ನನ್ನ ಪ್ರಾಣವು ನನ್ನ ಜೀವವನ್ನು ಹೇಸುತ್ತದೆ;
ನನ್ನ ಗೋಳಾಟವನ್ನು ನನ್ನ ಮೇಲೆಯೇ ಬಿಡುವೆನು;
ನನ್ನ ಪ್ರಾಣದ ಕಹಿಯಿಂದ ಮಾತಾಡುವೆನು.
೨ ದೇವರಿಗೆ ಹೇಳುತ್ತೇನೆ—ನನ್ನನ್ನು ಕೆಟ್ಟವನೆಂದು ತೀರಿಸ ಬೇಡ;
ಯಾವದಕ್ಕೋಸ್ಕರ ನನ್ನ ಸಂಗಡ ವ್ಯಾಜ್ಯವಾಡುತ್ತೀ ಎಂದು
ನನಗೆ ತಿಳಿಸು.
೩ ನೀನು ಬಲಾತ್ಕಾರ ಮಾಡುವದೂ,
ನಿನ್ನ ಕೈ ಕೆಲಸವನ್ನು ಅಲಕ್ಷ್ಯ ಮಾಡುವದೂ,
ದುಷ್ಟರ ಆಲೋಚನೆಯ ಮೇಲೆ ಪ್ರಕಾಶಿಸುವದೂ, ನಿನಗೆ ಒ
ಳ್ಳೇದೋ!
೪ ನಿನಗೆ ಮಾಂಸದ ಕಣ್ಣುಗಳು ಉಂಟೋ!
ಇಲ್ಲವೆ ಮನುಷ್ಯನು ನೋಡುವಂತೆ ನೋಡುತ್ತೀಯೋ!
೫ ನಿನ್ನ ದಿವಸಗಳು ಮನುಷ್ಯನ ದಿವಸಗಳ ಹಾಗೋ!
ಇಲ್ಲವೆ ನಿನ್ನ ವರುಷಗಳು ಮನುಷ್ಯನ ದಿವಸಗಳ ಹಾಗೋ!
೬ ಯಾಕಂದರೆ ನನ್ನ ಅಕ್ರಮವನ್ನು ಹುಡುಕಿ,
ನನ್ನ ಪಾಪವನ್ನು ವಿಚಾರಿಸುತ್ತೀ.
೭ ನಾನು ದುಷ್ಟನಲ್ಲವೆಂದೂ,

ನಿನ್ನ ಕೈಗೆ ತಪ್ಪಿಸುವವನಿಲ್ಲವೆಂದೂ, ನೀನು ತಿಳಿಯ ಕೊಳ್ಳತ್ತೀಯಲ್ಲ?

೮ ನಿನ್ನ ಕೈಗಳು ನನ್ನನ್ನು ನಿರ್ಮಿಸಿ, ನನ್ನನ್ನು ಸುತ್ತಲೆಲ್ಲಾ ರೂಪಿಸಿದವು;
ಆದಾಗ್ಯೂ ನನ್ನನ್ನು ನುಂಗುತ್ತೀ.
೯ ದಯೆ ಮಾಡಿ, ಕುಂಬಾರರ ಮಣ್ಣೆನಂತೆ ನನ್ನನ್ನು ರೂಪಿಸಿದಿ ಎಂದೂ,
ಧೂಳಿಗೆ ನನ್ನನ್ನು ತಿರುಗಿಸುತ್ತೀ ಎಂದೂ, ಜ್ಞಾಪಕ ಮಾಡಿಕೋ,
೧೦ ಹಾಲಿನಂತೆ ನನ್ನನ್ನು ಹೊಯ್ಯಲಿಲ್ಲವೋ!
ಮೊಸರಿನಂತೆ ನನ್ನನ್ನು ಹೆಪ್ಪಾಗ ಮಾತಲಿಲ್ಲವೋ!
೧೧ ಚರ್ಮವನ್ನೂ ಮಾಂಸವನ್ನೂ ನನಗೆ ತೊಡಿಸಿ,
ಎಲುವುಗಳಿಂದಲೂ ನರಗಳಿಂದಲೂ ನನಗೆ ಬೇಲಿ ಹಾಕಿದಿ.
೧೨ ಜೀವವನ್ನೂ ಕೃಪೆಯನ್ನೂ ನನ್ನಲ್ಲಿ ಮಾಡಿದಿ:
ನಿನ್ನ ಪರಾಮರಿಕೆ ನನ್ನ ಆತ್ಮನನ್ನು ಕಾಪಾಡಿತು.
೧೩ ಆದಾಗ್ಯೂ ಇವುಗಳನ್ನು ನಿನ್ನ ಹೃದಯದಲ್ಲಿ ಮರೆ ಮಾಡಿದಿ;
ಇದು ನಿನ್ನ ಬಳಿಯಲ್ಲಿ ಅದೆ, ಎಂದು ತಿಳಿದಿದ್ದೇನೆ.

೧೪ ನಾನು ಪಾಪ ಮಾಡಿದಾಗ, ನನ್ನನ್ನು ನೋಡಿ ಕೊಂಡಿ,
ನನ್ನ ಅಕ್ರಮವನ್ನು ಪರಿಹರಿಸಲಿಲ್ಲ.
೧೫ ನಾನು ದುಷ್ಟನಾಗಿದ್ದರೆ, ನನಗೆ ಅಯ್ಯೋ!
ನೀತಿವಂತನಾಗಿದ್ದರೂ, ನನ್ನ ತಲೆ ಎತ್ತುವದಿಲ್ಲ;
ಉದಾಸೀನ ನನಗೆ ಸಾಕಾಯಿತು; ನನ್ನ ದೀನ ಸ್ಥಿತಿ ನೋಡು.
೧೬ ಅದು ಎತ್ತಿ ಕೊಂಡರೆ, ಸಿಂಹದಂತೆ ನನ್ನನ್ನು ಬೇಟೆಯಾಡುವಿ;
ಇನ್ನೂ ನನಗೆ ಆಶ್ಚರ್ಯವಾದವುಗಳನ್ನು ಮಾಡುವಿ.
೧೭ ಹೊಸ ಸಾಕ್ಷಿಗಳನ್ನು ನನಗೆ ಮುಂದಿರಿಸುತ್ತೀ;
ನಿನ್ನ ಕರಕರೆಯನ್ನು ನನ್ನ ಮೇಲೆ ಬಹಳ ಮಾಡುತ್ತೀ;
ಸೈನ್ಯದ ಮೇಲೆ ಸೈನ್ಯ ನನ್ನ ಬಳಿಯಲ್ಲಿ ಅದೆ.

೧೮ ಹಾಗಾದರೆ ಯಾಕೆ ನನ್ನನ್ನು ಗರ್ಭದಿಂದ ಹೊರಗೆ ಮಾಡಿದಿ?
ಕಣ್ಣು ನನ್ನನ್ನು ನೋಡದ ಹಾಗೆ ನಾನು ಶೀರಿದ್ದರೆ ಛಾಸಿ.
೧೯ ನಾನು ಇರದವನ ಹಾಗಿದ್ದು,
ಗರ್ಭದೊಳಗಿಂದ ಸಮಾಧಿಗೆ ಬಂದಿದ್ದರೆ ಲೇಸು.
೨೦ ನನ್ನ ದಿವಸಗಳು ಸ್ವಲ್ಪವಲ್ಲವೋ?
ಅವನು ಬಿಡಲಿ; ನನ್ನ ಬಳಿಯಿಂದ ತೊಲಗಲಿ.
೨೧ ಆಗ ನಾನು ತಿರುಗಿ ಕೊಳ್ಳದವನಾಗಿ,
ಕತ್ತಲೆಯ, ಮರಣದ ನೆರಳ ದೇಶಕ್ಕೆ,
೨೨ ಮರಣದ ನೆರಳಿನ ಅಂಧಕಾರದ ಹಾಗೆ ಮೊಬ್ಬಿರುವಂಥ,
ಕ್ರಮವಿಲ್ಲದಂಥ, ಪ್ರಕಾಶವೇ ಅಂಧಕಾರದ ಹಾಗಿರುವಂಥ,
ದೇಶಕ್ಕೆ ಹೋಗುವದಕ್ಕಿಂತ ಮುಂಚೆ,
ಸ್ವಲ್ಪ ವಿಶ್ರಮಿಸಿ ಕೊಳ್ಳುವೆನು.

## ೧೧. ಸಂಧಿ.

೧ ಮತ್ತು ನಾಮಾಥ್ಯವಾದ ಜೋಫರನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಮಾತುಗಳ ಬಹುಳ್ಯಕ್ಕೆ ಪ್ರತ್ಯುತ್ತರವಾಗುವದಿಲ್ಲವೋ?
ಬಾಯಿಬಡಕನು ನೀತಿವಂತನೆಂದು ಎಣಿಸಲ್ಪಡುವನೋ?
೩ ನಿನ್ನ ಹರಟೆಗೆ ಮನುಷ್ಯರು ಮೌನವಾಗಿರ ಬೇಕೋ?
ನೀನು ಗೇಲಿ ಮಾಡುವಾಗ, ಬ್ಬರು ನಾಚಿಸುವದಿಲ್ಲವೋ?
೪ ನನ್ನ ಬೋಧನೆ ನಿರ್ಮಲವಾದದ್ದು,
ನಿನ್ನ ಕಣ್ಣುಗಳ ಮುಂದೆ ಶುದ್ಧವಾಗಿದ್ದೇನೆಂದು ಹೇಳುತ್ತೀ.
೫ ಹಾಗಲ್ಲ; ದೇವರು ಮಾತಾಡಿ,
ನಿನ್ನ ಕಡೆಗೆ ತುಟಿಗಳನ್ನು ತೆರೆದು,
ಜ್ಞಾನದ ಮರ್ಮಗಳನ್ನು ನಿನಗೆ ತೋರಿಸಿದರೆ, ವಾಸಿ.
೬ ಯಾಕಂದರೆ ಸುಜ್ಞಾನವು ಇಮ್ಮಡಿಯಾಗಿದೆ.
ಹಾಗಾದರೆ ದೇವರು ನಿನ್ನ ಅಕ್ರಮದ ಒಂದು ಪಾಲನ್ನು ನಿನಗೆ ಮನ್ನಿಸಿ ಬಿಡುತ್ತಾನೆಂದು, ತಿಳಿಕೋ.

೭ ದೇವರನ್ನು ಶೋಧಿಸಿ ಕಂಡು ಕೊಳ್ಳಬಲ್ಲಿಯೋ?
ಇಲ್ಲವೆ ಸರ್ವ ಶಕ್ತನ ಸಂಪೂರ್ಣತ್ವವನ್ನು ಕಂಡು ಕೊಳ್ಳಬಲ್ಲಿಯೋ?
೮ ಅದು ಆಕಾಶಕಿಂತ ಎತ್ತರವಾದದ್ದು; ನೀನೇನು ಮಾಡುವಿ!
ಪಾತಾಳಕ್ಕಿಂತ ಅಗಾಧವಾದದ್ದು; ನೀನೇನು ತಿಳಿಯ ಕೊಳ್ಳುವಿ!
೯ ಅದರ ಅಳತೆ ಭೂಮಿಗಿಂತ ಉದ್ದವೂ,
ಸಮುದ್ರಕ್ಕಿಂತ ಅಗಲವೂ ಆಗಿದೆ.
೧೦ ಅವನು ಹಾದು ಹೋಗಿ, ಮುಚ್ಚಿದರೆ, ಸಭೆ ಮಾಡಿದರೆ,
ಅವನನ್ನು ತಿರುಗಿಸುವವನು ಯಾರು!
೧೧ ಯಾಕಂದರೆ ಅವನು ವ್ಯರ್ಥ ಜನರನ್ನು ತಿಳಿದಿದ್ದಾನೆ;
ಪಾತಕವನ್ನು ನೋಡುತ್ತಾನೆ;
ಅದನ್ನು ಗ್ರಹಿಸಿ ಕೊಳ್ಳದೇನೋ!
೧೨ ಮೂಢ ಮನುಷ್ಯನು ಗುಂಡೆ ಕೊಳ್ಳುತ್ತಾನೆ;
ಕಾಡು ಕತ್ತೆ ಮರಿಯ ಹಾಗೆ ಮನುಷ್ಯನು ಹುಟ್ಟುತ್ತಾನೆ.

೧೩ ನೀನು ನಿನ್ನ ಹೃದಯವನ್ನು ಸಿದ್ಧ ಮಾಡಿ,
ನಿನ್ನ ಕೈಗಳನ್ನು ಅವನ ಕಡೆಗೆ ಚಾಚಿದರೆ,
೧೪ ನಿನ್ನ ಕೈಯಲ್ಲಿರುವ ಪಾತಕವನ್ನು ದೂರ ಹಾಕಿ,
ಅನ್ಯಾಯವನ್ನು ನಿನ್ನ ಗುಡಾರದಲ್ಲಿ ವಾಸ ಮಾಡ ಗೊಡಿಸದಿದ್ದರೆ
೧೫ ಆಗ ನಿನ್ನ ಮುಖವನ್ನು ದೋಷವಿಲ್ಲದೆ ಎತ್ತುವಿ;
ಘಟ್ಟಿಯಾಗಿದ್ದು, ಹೆದರದೆ ಇರುವಿ.
೧೬ ಹ್ಯಾಗಂದರೆ ನೀನು ಕಷ್ಟವನ್ನು ಮರೆತು ಬಿಡುವಿ;
ಹರಿದು ಹೋದ ನೀರಿನ ಹಾಗೆ ಅದನ್ನು ಜ್ಞಾಪಕ ಮಾಡಿ ಕೊಳ್ಳುವಿ.
೧೭ ಮಧ್ಯಾಹ್ನಕ್ಕಿಂತ ನಿನ್ನ ಪ್ರಾಯವು ಚನಾಗಿ ಏಳುವದು;
ಕತ್ತಲಾದರೂ, ಪ್ರಾತಃಕಾಲದ ಹಾಗೆಯೇ ಇರುವಿ.
೧೮ ನಿರೀಕ್ಷಣೆ ಉಂಟೆಂದು, ಭರವಸವಾಗಿರುವಿ;
ನೀನು ಅಗೆದು, ಭರವಸವಾಗಿ ಮಲಗಿ ಕೊಳ್ಳುವಿ.
೧೯ ನೀನು ಮಲಗಲು, ಯಾರೂ ಹೆದರಿಸುವದಿಲ್ಲ;
ಅನೇಕರು ನಿನ್ನ ಕಟಾಕ್ಷ ಬೇಡುವರು.
೨೦ ಆದರೆ ದುಷ್ಟರ ಕಣ್ಣುಗಳು ಕ್ಷೀಣವಾಗುವವು;



ಆಶ್ರಯವು ಅವರಿಗಿಲ್ಲದೆ ಹೋಗುವದು;
ಅವರ ನಿರೀಕ್ಷಣೆ ಪ್ರಾಣದ ಕಡೇ ಶ್ವಾಸವೇ.

## ೧೨. ಸಂಧಿ.

೧ ಯೋಬನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ನಿಶ್ಚಯವಾಗಿ ನೀವೇ ಜನ;
ನಿಮ್ಮ ಸಂಗಡ ಜ್ಞಾನವು ಸಾಯುವದು.
3 ನಿಮ್ಮ ಹಾಗೆ ನನಗೆ ಸಹ ಹೃದಯ ಉಂಟು;
ನಾನು ನಿಮಗಿಂತ ಕಡಿಮೆಯಲ್ಲ;
ಇಂಥಾ ಮಾತುಗಳು ಇಲ್ಲದವನ್ಯಾರು!
೪ ನಾನು ನಿಕಟೆಯವನಿಗೆ ನಗೆಯಾದವನು;
ದೇವರಿಗೆ ಕೂಗುತ್ತೇನೆ, ಅವನು ಉತ್ತರ ಕೊಡುತ್ತಾನೆ;
ನೀತಿವಂತನಾದ ಸಂಪೂರ್ಣನು ನಗೆಯೇ.
೫ ನೆಮ್ಮದಿಯಾಗಿರುವವನ ಯೋಚನೆಯಲ್ಲಿ ತಿರಸ್ಕಾರದ ದೀವಟಿಗೆಯಾಗಿದ್ದಾನೆ;
ಕದಲುವ ಕಾಲಿನವರಿಗೋಸ್ಕರ ಅದು ಸಿದ್ಧವಾಗಿದೆ.
೬ ನಾಶ ಮಾಡುವವರ ಗುಡಾರಗಳು ಸೌಖ್ಯವಾಗಿವೆ;
ದೇವರಿಗೆ ಕೌದ್ರ ಎಬ್ಬಿಸುವವರಿಗೆ ಭರವಸ ಉಂಟು;
ದೇವರು ಅವರ ಕೈಯಲ್ಲಿ ಬರ ಮಾಡುತ್ತಾನೆ.

೭ ಆದರೂ ಪಶುಗಳನ್ನು ಕೇಳು;
ಅವು ನಿನಗೆ ಬೋಧಿಸುವವು;
ಆಕಾಶದ ಪಕ್ಷಿಗಳನ್ನು ಕೇಳು; ಅವು ನಿನಗೆ ತಿಳಿಸುವವು.
೮ ಇಲ್ಲವೆ ಭೂಮಿಯ ಸಂಗಡ ಮಾತಾಡು; ಅದು ನಿನಗೆ ಬೋಧಿಸುವದು;
ಸಮುದ್ರದ ಮೀನುಗಳು ನಿನಗೆ ವಿವರಿಸುವವು.
೯ ಕರ್ತನ ಕೈ ಇದನ್ನು ಮಾಡಿತೆಂದು,
ಇವೆಲ್ಲವುಗಳಲ್ಲಿ ತಿಳಿಯದ್ದು ಯಾವದು!
೧೦ ಅವನ ಕೈಯಲ್ಲಿ ಎಲ್ಲಾ ಜೀವಿಗಳ ಪ್ರಾಣವೂ,
ಎಲ್ಲಾ ಮನುಷ್ಯರ ಮಾಂಸದ ಆತ್ಮವೂ ಅದೆ.
೧೧ ಕಿವಿಯು ನುತಿಗಳನ್ನು ಶೋಧಿಸುತ್ತದಲ್ಲ!
ಅಂಗಳ ಆಹಾರವನ್ನು ರುಚಿನೋಡಿ ಕೊಳ್ಳುತ್ತದಲ್ಲ!
೧೨ ಮುದುಕರಲ್ಲಿ ಜ್ಞಾನವೂ,
ದಿವಸಗಳು ಬಹಳವಿದ್ದಲ್ಲಿ ಗ್ರಹಿಕೆಯೂ ಅದೆ.
೧೩ ಜ್ಞಾನವೂ ಪರಾಕ್ರಮವೂ ಅವನಲ್ಲಿ ಅದೆ,
ಆಲೋಚನೆಯೂ ಗ್ರಹಿಕೆಯೂ ಅವನವೇ.
೧೪ ಇಗೋ, ಅವನು ಕೆಡವುತ್ತಾನೆ, ಯಾರೂ ಕಟ್ಟುವದಿಲ್ಲ;
ಅವನು ಮನುಷ್ಯನನ್ನು ಮುಚ್ಚಿ ಬಿಡುತ್ತಾನೆ, ಯಾರೂ ತೆಗೆದು ಬಿಡುವದಿಲ್ಲ.
೧೫ ಇಗೋ, ಅವನು ಜಲಗಳನ್ನು ಬಿಗಿ ಹಿಡಿಯುತ್ತಾನೆ, ಅವು ಬತ್ತಿ ಹೋಗುತ್ತವೆ;
ಅವುಗಳನ್ನು ಕಳುಹಿಸುತ್ತಾನೆ, ಅವು ಭೂಮಿಯನ್ನು ತಿರುಗಿಸಿ ಬಿಡುತ್ತವೆ.
೧೬ ಬಲವೂ ಸುಜ್ಞಾನವೂ ಅವನಲ್ಲಿ ಅದೆ;
ಮೋಸಗೊಳ್ಳುವವನೂ ಮೋಸಗೊಳಿಸುವವನೂ ಅವನವೇ.
೧೭ ಅವನು ಆಲೋಚನೇ ಕರ್ತರನ್ನು ಕೊಳ್ಳೆಯಾಗಿ ಪೈಯುತ್ತಾನೆ;
ನ್ಯಾಯಾಧಿಪತಿಗಳನ್ನು ಮರುಳಾಗ ಮಾಡುತ್ತಾನೆ.
೧೮ ಅರಸುಗಳ ಶಿಕ್ಷೆಯನ್ನು ಬಿಜ್ಜೆ,
ಅವರ ನಡುಗಳಿಗೆ ನಡುಕಟ್ಟು ಕಟ್ಟುತ್ತಾನೆ.
೧೯ ಯಾಜಕರನ್ನು ಕೊಳ್ಳೆಯಾಗಿ ಪೈಯುತ್ತಾನೆ;
ದೃಢರನ್ನು ಕೆಡವುತ್ತಾನೆ.
೨೦ ನಂಬಿಕೆಯುಳ್ಳವರ ಮಾತನ್ನು ತೆಗೆದು ಬಿಡುತ್ತಾನೆ;
ಮುದುಕರ ವಿವೇಕವನ್ನು ತಕ್ಕೊಂಡು ಹೋಗುತ್ತಾನೆ.
೨೧ ಶ್ರೇಷ್ಠರ ಮೇಲೆ ತಿರಸ್ಕಾರವನ್ನು ಹೊಯ್ಯುತ್ತಾನೆ;
ಶಕ್ತರ ನಡುಕಟ್ಟನ್ನು ಸಡ್ಲಿಸುತ್ತಾನೆ.
೨೨ ಅಗಾಧಗಳನ್ನು ಕತ್ತಲೊಳಗಿಂದ ಪ್ರಕಟಿ ಮಾಡುತ್ತಾನೆ,
ಮರಣದ ನೆರಳನ್ನು ಬೆಳಕಿಗೆ ಹೊರಗೆ ತರುತ್ತಾನೆ.
೨3 ಜನಾಂಗಗಳನ್ನು ಬೆಳೆಯ ಮಾಡಿ, ಅವುಗಳನ್ನು ನಾಶ ಮಾಡುತ್ತಾನೆ;
ಜನಾಂಗಗಳನ್ನು ವಿಸ್ತಾರ ಮಾಡಿ, ಅವುಗಳನ್ನು ನಡಿಸುತ್ತಾನೆ.
೨೪ ದೇಶದ ಪ್ರಜಾಧಿಪತಿಗಳ ಹೃದಯವನ್ನು ಅಪಹರಿಸಿ,
ಮಾರ್ಗವಿಲ್ಲದ ಕಾಡಿನಲ್ಲಿ ಅವರನ್ನು ಅಲೆಯ ಮಾಡುತ್ತಾನೆ.
೨೫ ಬೆಳಕಿಲ್ಲದೆ ಕತ್ತಲೆಯಲ್ಲಿ ತಡವಾಡುತ್ತಾರೆ;
ಮತ್ತನ ಹಾಗೆ ಅವರನ್ನು ಅಲೆಯ ಮಾಡುತ್ತಾನೆ.

## ೧೩. ಸಂಧಿ.

೧ ಇಗೋ, ನನ್ನ ಕಣ್ಣು ಎಲ್ಲಾ ನೋಡಿತು;
ನನ್ನ ಕಿವಿ ಕೇಳಿ, ಅದನ್ನು ಗ್ರಹಿಸಿ ಕೊಂಡಿತು.
೨ ನೀವು ತಿಳಿಕೊಳ್ಳುವ ಪ್ರಕಾರ, ನಾನೂ ತಿಳಿಕೊಂಡಿದ್ದೇನೆ;
ನಾನು ನಿಮಗಿಂತ ಕಡಿಮೆಯಾದವನಲ್ಲ.

3 ಆದರೂ ನಾನು ಸರ್ವ ಶಕ್ತನಿಗೆ ಮಾತಾಡುವೆನು;
ದೇವರ ಸಂಗಡ ವಾದಿಸ ಮನಸ್ಸಾಗಿದ್ದೇನೆ.
೪ ಆದರೂ ನೀವು ಸುಳ್ಳು ಕಲ್ಪಿಸುವವರು;
ನೀವೆಲ್ಲರು, ಪೊಂಪೆ ವೈದ್ಯರೇ.
೫ ನೀವು ಮೌನವಾಗಿಯೇ ಇದ್ದರೆ, ಎಷ್ಟೋ ಒಳ್ಳೇದು!
ಅದು ನಿಮಗೆ ಜ್ಞಾನವಾಗಿರುವದು.
೬ ದಯೆ ಮಾಡಿ ನನ್ನ ವಾದ ಕೇಳಿರಿ;
ನನ್ನ ತುಟಿಗಳ ತರ್ಕಗಳನ್ನು ಆಲೈಸಿರಿ.
೭ ದೇವರಿಗೋಸ್ಕರ ನೀವು ಅನ್ಯಾಯ ನುಡಿಯುವಿರೋ!
ಅವನಿಗೋಸ್ಕರ ಮೋಸ ನುಡಿಯುವಿರೋ!
೮ ಅವನ ಮುಖದಾಕ್ಷಿಣ್ಯ ನೋಡುವಿರೋ!
ದೇವರಿಗೋಸ್ಕರ ತರ್ಕ ಮಾಡುವಿರೋ!
೯ ಅವನು ನಿಮ್ಮನ್ನು ವಿಚಾರಿಸಿದರೆ, ಒಳ್ಳೇದೋ!
ಮನುಷ್ಯನನ್ನು ವಂಚಿಸುವ ಪ್ರಕಾರ, ಅವನನ್ನು ವಂಚಿಸುವಿರೋ!
೧೦ ನೀವು ಅಂತರಂಗವಾಗಿ ಮುಖದಾಕ್ಷಿಣ್ಯ ನೋಡಿದರೆ,
ನಿಮ್ಮನ್ನು ಗದರಿಸೇ ಗದರಿಸುವನು.
೧೧ ಅವನ ಘನತೆಯು ನಿಮ್ಮನ್ನು ಹೆದರಿಸುವದಿಲ್ಲವೋ!
ಅವನ ಭಯ ನಿಮ್ಮ ಮೇಲೆ ಬೀಳುವದಿಲ್ಲವೋ!

೧೨ ನಿಮ್ಮ ಜ್ಞಾಪಕ ವಾಕ್ಯಗಳು ಬೂದಿ ಗಾದೆಗಳು;
ನಿಮ್ಮ ಡಾಲುಗಳು ಮಣ್ಣಿನ ಡಾಲುಗಳು.

೧೩ ನನ್ನನ್ನು ಬಿಟ್ಟು ಮೌನವಾಗಿರಿ;
ಆಗ ನಾನು ಮಾತಾಡುವೆನು; ಏನಾದರೂ ನನ್ನ ಮೇಲೆ ಬರಲಿ.
೧೪ ಯಾತಕ್ಕೆ ನಾನು ನನ್ನ ಮಾಂಸವನ್ನು ನನ್ನ ಹಲ್ಲುಗಳಿಂದ ಹಿಡಿದು,
ನನ್ನ ಪ್ರಾಣವನ್ನು ನನ್ನ ಅಂಗೈಗಳಲ್ಲಿ ಹಿಡಿದುಕೊಳ್ಳಬೇಕು?
೧೫ ಇಗೋ, ನನ್ನನ್ನು ಕೊಲ್ಲುವನು: ಇನ್ನೂ ನಿರೀಕ್ಷಿಸೆನು;
ನನ್ನ ಮಾರ್ಗಗಳಿಗೋಸ್ಕರ ಮಾತ್ರ ಅವನ ಮುಂದೆ ವಾದಿಸುವೆನು.
೧೬ ಮತ್ತು ಅವನೇ ನನಗೆ ರಕ್ಷಣೆಯಾಗಿರುವನು;
ಯಾಕಂದರೆ ಅವನ ಮುಂದೆ ಭ್ರಷ್ಟನು ಬರುವದಿಲ್ಲ.
೧೭ ನನ್ನ ನುಡಿ ಕೇಳೇ ಕೇಳಿರಿ;
ನನ್ನ ಅರಿಕೆ ನಿಮ್ಮ ಕಿವಿಗಳಲ್ಲಿ ಇರಲಿ.
೧೮ ಇಗೋ, ನ್ಯಾಯವನ್ನು ಸರಿಯಾಗಿ ಇಟ್ಟಿನು;
ನಾನು ನೀತಿವಂತನಾಗುವೆನೆಂದು, ಶಿಳಿದಿದ್ದೇನೆ.
೧೯ ನನ್ನ ಸಂಗಡ ವಿವಾದಿಸುವವನು ಯಾವನು!
ಯಾಕಂದರೆ ಈಗಲೇ ಮೌನವಾಗಿ, ಶ್ವಾಸ ಬಿಡುವೆನು.
೨೦ ಎರಡನ್ನು ಮಾತ್ರ ನನ್ನ ವಿಷಯ ಮಾಡ ಬೇಡ,
ಆಗ ನಿನ್ನ ದೃಷ್ಟಿಗೆ ಅಡಗಿ ಕೊಳ್ಳೇನು.
೨೧ ನಿನ್ನ ಕೈಯನ್ನು ನನಗೆ ದೂರ ಮಾಡು;
ನಿನ್ನ ಬೆದರಿಕೆ ನನ್ನನ್ನು ಹೆದರಿಸದಿರಲಿ.
೨೨ ಮತ್ತು ಕರೆ, ಆಗ ನಾನು ಉತ್ತರ ಕೊಡುವೆನು;
ಇಲ್ಲವೆ ನಾನು ಮಾತಾಡುವೆನು, ನೀನು ನನಗೆ ಪ್ರತ್ಯುತ್ತರ ಕೊಡು.
೨೩ ನನ್ನ ಅಕ್ರಮಗಳೂ ಪಾಪಗಳೂ ಎಷ್ಟು?
ನನ್ನ ಪಾತಕವನ್ನೂ ಪಾಪವನ್ನೂ ನನಗೆ ತಿಳಿಸು.
೨೪ ಯಾಕೆ ನಿನ್ನ ಮುಖವನ್ನು ಮರೆ ಮಾಡಿ,
ನನ್ನನ್ನು ನಿನಗೆ ಶತ್ರುವೆಂದು ಎಣಿಸುತ್ತೀ?
೨೫ ಬಡಿಯಲ್ಪಟ್ಟ ಎಲೆಯನ್ನು ಸಲಿಗಸುವಿಯೋ!
ಒಣಗಿದ ಕೂಳೆಯನ್ನು ಹಿಂದಟ್ಟುವಿಯೋ?
೨೬ ಯಾಕಂದರೆ ನನಗೆ ಕಹಿಯಾದವುಗಳನ್ನು ಬರೆದು ಕೊಂಡಿದ್ದೀ;
ನನ್ನ ಯೌವನದ ಅಕ್ರಮಗಳನ್ನು ನನಗೆ ಬಾಧ್ಯವಾಗಿ ಕೊಡುತ್ತೀ.
೨೭ ನನ್ನ ಕಾಲುಗಳನ್ನು ಕೋಳದಲ್ಲಿಟ್ಟು,
ನನ್ನ ಹಾದಿಗಳನ್ನೆಲ್ಲಾ ನೋಡಿ ಕೊಳ್ಳುತ್ತೀ;
ನನ್ನ ಪಾದಗಳ ಹೆಜ್ಜೆಗಳಿಗೆ ಗುರಿ ಇಡುತ್ತೀ.
೨೮ ಆದರೆ ಅವನು ಕೊಳೆತು ಹೋದದರ ಹಾಗೆಯೂ,
ಹುಳಿ ತಿಂದ ವಸ್ತ್ರದ ಹಾಗೆಯೂ ಕಳೆದು ಹೋಗುವನು.

## ೧೪. ಸಂಧಿ.

೧ ಸ್ತ್ರೀಯಿಂದ ಹುಟ್ಟಿದ ಮನುಷ್ಯನು ಕಡಿಮೆ ದಿವಸದವನೂ ನಡುಗು ತುಂಬಿದವನೂ ಆಗಿದ್ದಾನೆ.
೨ ಹೂವಿನಂತೆ ಮೊಳೆತು, ಕೊಯ್ಯಲ್ಪಡುತ್ತಾನೆ;
ನೆರಳಿನಂತೆ ನಿಲ್ಲದೆ, ಓಡಿ ಹೋಗುತ್ತಾನೆ.
೩ ಹಾಗಾದರೆ, ಇಂಥವನ ಮೇಲೆ ನಿನ್ನ ಕಣ್ಣುಗಳನ್ನು ತೆರೆಯುತ್ತೀಯೋ!
ನನ್ನನ್ನು ನಿನ್ನ ಸಂಗಡ ನ್ಯಾಯಕ್ಕೆ ಬರ ಮಾಡುತ್ತೀಯೋ!
೪ ಅಪವಿತ್ರವಾದದ್ದರಲ್ಲಿಂದ ಶುದ್ಧವಾದದ್ದನ್ನು ತರುವವನ್ಯಾವನು?
ಒಬ್ಬನೂ ಇಲ್ಲ.
೫ ಅವನ ದಿವಸಗಳು ನೇಮಕವಾಗಿವೆ;
ಅವನ ತಿಂಗಳುಗಳ ಲೆಖ್ಖ ನಿನ್ನ ಬಳಿಯಲ್ಲಿ ಅದೆ;
ಮೀರಲಾರದ ಹಾಗೆ, ಅವನ ಕಟ್ಟಳೆ ಮಾಡಿದಿ.
೬ ಹೀಗಿರುವದರಿಂದ ಅವನು ಕೂಲಿಯವನ ಹಾಗೆ, ತನ್ನ ದಿವಸದಲ್ಲಿ ಸುತೋಷ ಪಡುವ ಮಟ್ಟಿಗೂ,
ಅವನು ತೀರ್ಪಾಟು ಹೊಂದುವ ಹಾಗೆ, ಅವನ ಮೇಲೆ ಕಣ್ಣಿಡುವದನ್ನು ಬಿಡು.
೭ ಯಾಕಂದರೆ ಮರಕ್ಕೆ ನಿರೀಕ್ಷಣೆ ಉಂಟು, ಅದು ಕೊಯಿದ ಮೇಲೆ, ಇನ್ನೂ ಚಿಗುರುವದು;
ಅದರ ಕೊಳೆಕೆ ತೀರದು.
೮ ಅದರ ಬೇರು ಭೂಮಿಯಲ್ಲಿ ಹಳೇದಾದರೂ;
ಧೂಳಿಯಲ್ಲಿ ಅದರ ಬುಡ ಸತ್ತರೂ;
೯ ನೀರಿನ ವಾಸನೆಯಿಂದ ಚಿಗುರಿ,
ಸಸಿಯ ಹಾಗೆ ಕೊಂಬೆ ಬಿಡುವದು.
೧೦ ಆದರೂ ಪುರುಷನು ಸತ್ತು, ಮುರಿದು ಹೋಗುತ್ತಾನೆ;
ಮನುಷ್ಯನು ಶ್ವಾಸ ಬಿಡುತ್ತಾನೆ; ಅವನು ಎಲ್ಲಿ?
೧೧ ನೀರು ಸಮುದ್ರದಿಂದ ಮುಗಿದು ಹೋಗುತ್ತದೆ;
ನದಿಯು ಆರಿ, ಬತ್ತಿ ಹೋಗುವದು.
೧೨ ಹಾಗೆ ಮನುಷ್ಯನು ಮಲಗಿ ಏಳುವದಿಲ್ಲ;
ಆಕಾಶಗಳು ಇಲ್ಲದೆ ಹೋಗುವ ಮಟ್ಟಿಗೂ, ಅವರು ಎಚ್ಚರವಾಗುವದಿಲ್ಲ;
ತನ್ನ ನಿದ್ದೆ ತಿಳಿದು ಏಳುವದಿಲ್ಲ.
೧೩ ಪಾತಾಳದಲ್ಲಿ ನೀನು ನನ್ನನ್ನು ಮರೆ ಮಾಡಿ,
ನಿನ್ನ ಕೋಪ ತಿರುಗುವ ಮಟ್ಟಿಗೂ, ನನ್ನನ್ನು ಅಡಗಿಸಿ,
ನನಗೆ ನೇಮಕ ಇಟ್ಟು, ನನ್ನನ್ನು ಜ್ಞಾಪಕ ಮಾಡಿ ಕೊಂಡರೆ, ಶೇಸು.
೧೪ ಮನುಷ್ಯನು ಸತ್ತರೆ, ಮತ್ತೆ ಬದುಕುವನೋ!
ನನ್ನ ಯುದ್ಧ ದಿವಸಗಳೆಲ್ಲಾ, ನನಗೆ ಬದಲು ಬರುವ ಮಟ್ಟಿಗೆ ಕಾದು ಕೊಂಡಿರುವೆನು.
೧೫ ನೀನು ಕರೆಯುವಿ, ನಾನು ನಿನಗೆ ಉತ್ತರ ಕೊಡುವೆನು;
ನಿನ್ನ ಕೈ ಕೆಲಸವನ್ನು ಬಯಸುವಿ.
೧೬ ಯಾಕಂದರೆ ಈಗ ನನ್ನ ಹೆಜ್ಜೆಗಳನ್ನು ಎಣಿಕೆ ಮಾಡುತ್ತೀ;
ನನ್ನ ಪಾಪವನ್ನು ನೋಡಿಕೊಳ್ಳುತ್ತೀಯಲ್ಲವೋ?
೧೭ ನನ್ನ ದ್ರೋಹವು ಚೀಲದಲ್ಲಿ ಮುದ್ರೆ ಹಾಕಿದೆ;
ನನ್ನ ಅಕ್ರಮವನ್ನು ಮುಚ್ಚಿ ಹೊಲಿದಿದ್ದೀ.
೧೮ ಆದರೂ ಬೆಟ್ಟ ಬಿದ್ದು ಕರಗಿ ಹೋಗುವದು;
ಬಂಡೆಯು ತನ್ನ ಸ್ಥಳದಿಂದ ತೊಲಗಿ ಹೋಗುವದು.
೧೯ ಕಲ್ಲುಗಳನ್ನು ನೀರು ಕೊರೆಯುವದು;



ಅದರ ತಟುಕುಗಳು ಭೂಮಿಯ ಧೂಳನ್ನು ಕೊಚ್ಚಿ ಕೊಂಡು ಹೋಗುತ್ತವೆ;
ಹಾಗೆ ಮನುಷ್ಯನ ನಿರೀಕ್ಷಣೆಯನ್ನು ನಾಶ ಮಾಡುತ್ತೀ.
೨೦ ಅವನನ್ನು ನಿತ್ಯವಾಗಿ ಅಣಗಿಸುತ್ತೀ; ಅವನು ಹೋಗಿ ಬಿಡುತ್ತಾನೆ;
ಅವನ ಮುಖವನ್ನು ಮಾರ್ಪಡಿಸಿ, ಅವನನ್ನು ಕಳುಹಿಸಿ ಬಿಡುತ್ತೀ.
೨೧ ಅವನ ಮಕ್ಕಳು ಘನವುಳ್ಳವರಾದರೆ, ಅವನಿಗೆ ತಿಳಿಯುವದಿಲ್ಲ;
ಅವರು ಹೀನರಾದರೆ, ಅವನು ಗ್ರಹಿಸಿ ಕೊಳ್ಳುವದಿಲ್ಲ.
೨೨ ಅವನ ಮೇಲಿರುವ ಅವನ ಮಾಂಸವು ಮಾತ್ರ ನೋಯುವದು;
ಅವನಲ್ಲಿರುವ ಅವನ ಪ್ರಾಣವು ದುಃಖ ಪಡುವದು.

## ೧೫. ಸಂಧಿ.

೧ ಮತ್ತು ಥೆಮಾನ್ಯನಾದ ಎಲಿಫಾಜನು ಉತ್ತರ ಕೊಟ್ಟು ಹೇಳಿದ್ದೇನಂದರೆ—
೨ ಜ್ಞಾನಿಯು ವ್ಯರ್ಥ ತಿಳುವಿಕೆಯನ್ನು ಪ್ರತ್ಯುತ್ತರವಾಗಿ ಹೇಳುವದೂ,
ಮೂರ್ಣ ಘಾಳಿಯಿಂದ ತನ್ನ ಹೊಟ್ಟೆ ತುಂಬುವದೂ ಉಂಟೋ!
೩ ನಿಷ್ಪ್ರಯೋಜನವಾದ ನುಡಿಗಳಿಂದಲೂ,
ಕೆಲಸಕ್ಕೆ ಬಾರದ ಮಾತುಗಳಿಂದಲೂ ವಾದಿಸುವನೋ!
೪ ಆದರೆ ನೀನು ಭಯವನ್ನು ವಿಸರ್ಜಿಸಿ,
ದೇವರ ಮುಂದಿನ ಧ್ಯಾನವನ್ನು ಕಡಿಮೆ ಮಾಡುತ್ತೀ.
೫ ಯಾಕಂದರೆ ನಿನ್ನ ಬಾಯಿ ನಿನ್ನ ಅಕ್ರಮವನ್ನು ಬೋಧಿಸುತ್ತದೆ;
ನೀನು ದುರುಕ್ತಿಯುಳ್ಳವರ ನಾಲಿಗೆಯನ್ನು ಆರಿಸಿ ಕೊಳ್ಳುತ್ತೀ.
೬ ನಾನಲ್ಲ, ನಿನ್ನ ಬಾಯಿ ನಿನ್ನನ್ನು ದುಷ್ಟನಾಗ ಮಾಡುತ್ತದೆ,
ನಿನ್ನ ತುಟಿಗಳು ನಿನಗೆ ವಿರೋಧವಾಗಿ ಸಾಕ್ಷಿ ಕೊಡುತ್ತವೆ.
೭ ಮೊದಲನೇ ಮನುಷ್ಯನಾಗಿ ಹುಟ್ಟಿದಿಯೋ!
ಗುಡ್ಡಗಳಿಗಿಂತ ಮುಂಚೆ ಉಂಟಾದಿಯೋ!
೮ ದೇವರ ಗುಟ್ಟು ಕೇಳಿದಿಯೋ!
ಜ್ಞಾನವನ್ನು ನಿನಗೆ ನೀನೇ ಇಟ್ಟು ಕೊಂಡಿಯೋ!
೯ ನಮಗೆ ತಿಳಿಯದ್ದೇನು ತಿಳಿಕೊಂಡಿ!
ನಮ್ಮಲ್ಲಿ ಇಲ್ಲದ್ದೇನು ಗ್ರಹಿಸಿದಿ!
೧೦ ನೆರೆಯವರೂ ಮುದುಕರೂ ನಮ್ಮಲಿದ್ದಾರೆ;
ನಿನ್ನ ತಂದೆಗಿಂತ ದಿನ ತುಂಬಿದವರು.
೧೧ ದೇವರ ಆದರಣೆಗಳೂ,
ನಿನಗೆ ಬಂದ ಬೆಂತ್ತಾನ ಮಾತೂ ನಿನಗೆ ಅಲ್ಪವೋ!
೧೨ ನಿನ್ನ ಹೃದಯವು ನಿನ್ನನ್ನು ಸೈಯುವದೇನು!
ನಿನ್ನ ಕಣ್ಣುಗಳು ಚಿಮಟುವದೇನು!
೧೩ ದೇವರಿಗೆ ವಿರೋಧವಾಗಿ ನಿನ್ನ ಆತ್ಮವನ್ನು ತಿರುಗಿಸಿ,
ನಿನ್ನ ಬಾಯಿಯೊಳಗಿಂದ ಮಾತುಗಳನ್ನು ಹೊರಡಿಸುತ್ತೀಯಲ್ಲ?
೧೪ ನಿರ್ಮಲನಾಗುವ ಹಾಗೆ, ಮನುಷ್ಯನು ಏನು!
ನೀತಿವಂತನಾಗಿರುವ ಹಾಗೆ, ಸ್ತ್ರೀಯಿಂದ ಹುಟ್ಟಿದವನು ಏನು!
೧೫ ಇಗೋ, ತನ್ನ ಪರಿಶುದ್ಧರಲ್ಲಿ ಅವನು ನಂಬಿಕೆ ಇಡುವದಿಲ್ಲ;
ಆಕಾಶಗಳು ಅವನ ಕಣ್ಣುಗಳ ಮುಂದೆ ನಿರ್ಮಲವಲ್ಲ.
೧೬ ನೀರಿನಂತೆ ಅನ್ಯಾಯವನ್ನು ಕುಡಿಯುವ
ಮನುಷ್ಯನು ಎಷ್ಟು ಹೆಚ್ಚಾಗಿ ಕೆಟ್ಟು ಹೋದವನಾಗಿಯೂ, ಅಸಹ್ಯವಾದವನಾಗಿಯೂ, ಇದ್ದಾನೆ!
೧೭ ನಿನಗೆ ಕಲಿಸುತ್ತೇನೆ; ನನ್ನನ್ನು ಕೇಳು;
ನಾನು ನೋಡಿದ್ದನ್ನು ನಿನಗೆ ವಿವರಿಸುತ್ತೇನೆ.
೧೮ ಜ್ಞಾನಿಗಳು ಅದನ್ನು ತಿಳಿಸಿದರು;
ತಮ್ಮ ಹಿರಿಯರ ಕಾಲದಿಂದ ಮರೆ ಮಾಡಲಿಲ್ಲ.
೧೯ ಅವರಿಗೆ ಮಾತ್ರ ದೇಶವು ಕೊಡಲ್ಪಟ್ಟಿತು;
ಅವರ ಮಧ್ಯದಲ್ಲಿ ಪರನು ದಾಟಿಲ್ಲ.
೨೦ ದುಷ್ಟನು ತನ್ನ ದಿವಸಗಳೆಲ್ಲಾ ವೇದನೆ ಪಡುತ್ತಾನೆ;
ಪರುಷಗಳ ಲೆಖ್ಖವು ಬಲಾತ್ಕಾರಿಗೆ ಮರೆಯಾಗಿದೆ.
೨೧ ಭಯಂಕರವಾದ ಶಬ್ದ ಅವನ ಕಿವಿಗಳಲ್ಲಿ ಅದೆ;
ಸುಖದಲ್ಲಿ ಹಾಳು ಮಾಡುವವನು ಅವನ ಮೇಲೆ ಬರುತ್ತಾನೆ.
೨೨ ಕತ್ತಲೆಯೊಳಗಿಂದ ತಿರುಗುತ್ತೇನೆಂದು, ಅವನು ನಂಬುವದಿಲ್ಲ;
ಅವನು ಕತ್ತಿಗೋಸ್ಕರ ಗುರಿಯಾಗಿದ್ದಾನೆ.
೨೩ ಅವನು ಕೊಟ್ಟಿಗೋಸ್ಕರ, ಅದು ಎಲ್ಲಿ ಎಂದು ಅಲೆಯುತ್ತಾನೆ;
ಕತ್ತಲೆಯ ದಿನ ತನ್ನ ಕೈ ಹತ್ತರ ಸಿದ್ಧವಾಗಿದೆ ಎಂದು ತಿಳಿದಿದ್ದಾನೆ.
೨೪ ಇಕ್ಕಟ್ಟೂ ಸಂಕಟವೂ ಅವನನ್ನು ಹೆದರಿಸಿ,
ಯುದ್ಧಕ್ಕೆ ಸಿದ್ಧವಾದ ಅರಸನಂತೆ, ಅವನ ಮೇಲೆ ಬೀಳುತ್ತವೆ.
೨೫ ಯಾಕಂದರೆ ದೇವರಿಗೆ ವಿರೋಧವಾಗಿ ತನ್ನ ಕೈ ಚಾಚಿ,
ಸರ್ವ ಶಕ್ತನಿಗೆ ವಿರೋಧವಾಗಿ ಬಲ ಗೊಂಡಿದ್ದಾನೆ.
೨೬ ಅವನೆದುರಿಗೆ ಕತ್ತಿಗೆಯಿಂದಲೂ,
ತನ್ನ ಗುರಾಣಿಯ ದಪ್ಪವಾದ ಗುಬ್ಬಿಯಿಂದಲೂ ಓಡುತ್ತಾನೆ.
೨೭ ಯಾಕಂದರೆ ತನ್ನ ಮುಖವನ್ನು ಕೊಬ್ಬಿನಿಂದ ಮುಚ್ಚಿ ಕೊಂಡು,
ತನ್ನ ನಡುವಿನ ಮೇಲೆ ಪೊಜ್ಜು ಕಟ್ಟಿ ಕೊಂಡಿದ್ದಾನೆ.
೨೮ ಮತ್ತು ಹಾಳಾದ ಪಟ್ಟಣಗಳಲ್ಲಿಯೂ,
ನಿವಾಸಿಗಳಿಲ್ಲದಂಥ, ದಿಬ್ಬೆಗಳಾಗುವದಕ್ಕೆ ಸಿದ್ಧವಾದಂಥ
ಮನೆಗಳಲ್ಲಿಯೂ ವಾಸ ಮಾಡುತ್ತಾನೆ.
೨೯ ಅವನು ಐಶ್ವರ್ಯವಂತನಾಗುವದಿಲ್ಲ; ಅವನ ಸ್ಥಿತಿ ನಿಲ್ಲುವದಿಲ್ಲ;
ಅವನ ಸ್ವಾಸ್ಥ್ಯವು ಭೂಮಿಯ ಮೇಲೆ ವಿಸ್ತಾರವಾಗುವದಿಲ್ಲ.
೩೦ ಕತ್ತಲೆಯೊಳಗಿಂದ ಅವನು ತೊಲಗುವದಿಲ್ಲ;
ಅವನ ಚಿಗುರನ್ನು ಜ್ವಾಲೆಯು ಬಾಡಿಸುವದು;
ಅವನ ಬಾಯಿಯ ಶ್ವಾಸದಿಂದ ತೊಲಗಿ ಹೋಗುತ್ತಾನೆ.
೩೧ ಮೋಸ ಹೋದವನು ಮಾಯವನ್ನು ನಂಬಬೆ ಇರಲಿ;
ಯಾಕಂದರೆ ಮಾಯವೇ ಅವನ ಪ್ರತಿ ಫಲವಾಗಿರುವದು.
೩೨ ಅವನ ದಿನವಿಲ್ಲದಾಗ ತೀರುವದು;
ಅವನ ಕೊಂಬೆ ಹಸುರಾಗುವದಿಲ್ಲ.
೩೩ ದ್ರಾಕ್ಷೇ ಗಿಡದಂತೆ ತನ್ನ ಕಾಯಿ ಉದರಿಸಿ,
ಇಪ್ಪೇ ಗಿಡದಂತೆ ತನ್ನ ಹೂವು ಚದರಿಸುವನು.
೩೪ ಯಾಕಂದರೆ ಭ್ರಷ್ಟರ ಸಭೆ ಕ್ಷಯವಾಗುವದು;
ಲಂಚದ ಗುಡಾರಗಳನ್ನು ಬೆಂಕಿ ದಹಿಸುವದು.
೩೫ ಕಾಟದಿಂದ ಬಸುರಾಗಿ, ಪಾತಕವನ್ನು ಹೆರುವರು;
ಅವರ ಗರ್ಭ ಮೋಸವನ್ನು ಸಿದ್ಧ ಮಾಡುವದು.

## ೧೬. ಸಂಧಿ.

೧ ಯೋಬನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಇವುಗಳ ಹಾಗೆ ಅನೇಕಗಳನ್ನು ಕೇಳಿದೆ;
ನೀವೆಲ್ಲರೂ ಕಾಟದ ಆದರಣೆ ಕೊಡುವವರೇ.
3 ಘುಳಿಯ ಮಾತುಗಳಿಗೆ ಅಂತ್ಯ ಉಂಟೋ!
ಉತ್ತರ ಕೊಡುವ ಹಾಗೆ ನಿನ್ನನ್ನು ಕೆಣಕುವದೇನು?
೪ ನಿಮ್ಮ ಪ್ರಾಣ ನನ್ನ ಪ್ರಾಣದ ಸ್ಥಳದಲ್ಲಿ ಇದ್ದರೆ,
ನಾನು ಸಹ ನಿಮ್ಮ ಹಾಗೆ ಮಾತಾಡ ಬಹುದು;
ಮಾತುಗಳನ್ನು ನಿಮ್ಮ ಮೇಲೆ ಕೂಡಿಸ ಬಹುದು;
ನಿಮಗೆ ವಿರೋಧವಾಗಿ ನನ್ನ ತಲೆ ಅಲ್ಲಾಡಿಸ ಬಹುದು.
೫ ನನ್ನ ಬಾಯಿಂದ ನಿಮ್ಮನ್ನು ಬಲ ಪಡಿಸುವೆನು;
ನನ್ನ ತುಟಿಗಳ ಆದರಣೆ ಉಪಶಮನ ಮಾಡುವದು.

೬ ನಾನು ಮಾತಾಡಿದರೆ, ನನ್ನ ನೋವಿಗೆ ಉಪಶಮನವಾಗುವದಿಲ್ಲ;
ನಾನು ಬಿಟ್ಟರೆ, ನನಗೆ ಏನು ಶಮೆ ಹೋಗುವದು!
೭ ಈಗ ನನ್ನನ್ನು ದಣಿಸಿದ್ದಾನೆ;
ನನ್ನ ಕೂಟವನ್ನೆಲ್ಲಾ ಹಾಳು ಮಾಡಿದಿ.
೮ ನನ್ನನ್ನು ಹಿಡು ಕೊಂಡಿ; ಅದು ಸಾಕ್ಷಿಯಾಯಿತು;
ನನ್ನ ಬಡತನ ನನಗೆ ವಿರೋಧವಾಗಿ ಎದ್ದು, ನನ್ನ ಮುಖದ ಎದುರು ಉತ್ತರ ಕೊಡುತ್ತದೆ.
೯ ಅವನ ಕೋಪ ಹರಿದು ಬಿಡುತ್ತದೆ; ನನ್ನನ್ನು ಹಗೆ ಮಾಡುತ್ತಾನೆ.
ತನ್ನ ಹಲ್ಲುಗಳನ್ನು ನನ್ನ ಮೇಲೆ ಕಡಿಯುತ್ತಾನೆ;
ನನ್ನ ವೈರಿ ತನ್ನ ಕಣ್ಣುಗಳನ್ನು ನನ್ನ ಮೇಲೆ ಮಸೆಯುತ್ತಾನೆ.
೧೦ ನನ್ನ ಮೇಲೆ ತಮ್ಮ ಬಾಯಿ ತೆರೆಯುತ್ತಾರೆ;
ನಿಂದೆಗಾಗಿ ನನ್ನ ಕೆನ್ನೆಗಳನ್ನು ಬಡಿಯುತ್ತಾರೆ,
ಏಕವಾಗಿ ನನ್ನ ಮೇಲೆ ಕೂಡಿ ಕೊಳ್ಳುತ್ತಾರೆ.

೧೧ ದೇವರು ನನ್ನನ್ನು ಅನ್ಯಾಯವಂತನಿಗೆ ಒಪ್ಪಿಸುತ್ತಾನೆ;
ದುಷ್ಟರ ಕೈಗೆ ನನ್ನನ್ನು ಕೊಟ್ಟು ಬಿಡುತ್ತಾನೆ.
೧೨ ನಾನು ಶಾಂತವಾಗಿದ್ದೆನು; ಆಗ ನನ್ನನ್ನು ಚೂರು ಚೂರಾಗ ಮಾಡಿದನು;
ನನ್ನ ಕುತ್ತಿಗೆ ಹಿಡಿದು, ಪುಡಿ ಪುಡಿ ಮಾಡಿದನು.
೧೩ ನನ್ನನ್ನು ತನಗೆ ಗುರಿಯಾಗಿ ನಿಲ್ಲಿಸಿದನು;
ಅವನ ಬಿಲ್ಲುಗಾರರು ನನ್ನ ಮೇಲೆ ಸುತ್ತಲು ಬರುತ್ತಾರೆ;
ನನ್ನ ಗುಂಡಿಗೆಗಳನ್ನು ಕಡಿಯುತ್ತಾನೆ; ಕರುಣಿಸುವದಿಲ್ಲ;
ನನ್ನ ಪಿತ್ತವನ್ನು ಭೂಮಿಗೆ ಚೆಲ್ಲುತ್ತಾನೆ.
೧೪ ನನ್ನನ್ನು ಹರುಕು ಹರುಕಾಗಿ ಹರಿಯುತ್ತಾನೆ;
ಶೂರನಂತೆ ನನ್ನ ಮೇಲೆ ಓಡಿ ಬರುತ್ತಾನೆ.
೧೫ ನನ್ನ ಮೈ ಮೇಲೆ ಗೋಣಿ ತಟ್ಟು ಹೊಲಿದು, ಧರಿಸಿದೆನು;
ಧೂಳಿಯಲ್ಲಿ ನನ್ನ ಕೊಂಬು ಅಪವಿತ್ರ ಮಾಡಿದೆನು.
೧೬ ನನ್ನ ಮುಖ ಅಳುವದರಿಂದ ಉಬ್ಬಿ ಕೆಂಪಾಯಿತು;
ನನ್ನ ರೆಪ್ಪೆಗಳ ಮೇಲೆ ಮರಣದ ನೆರಳು ಅದೆ.
೧೭ ಆದರೂ ನನ್ನ ಅಂಗೈಗಳಲ್ಲಿ ಬಲಾತ್ಕಾರವಿಲ್ಲ;
ನನ್ನ ಪ್ರಾರ್ಥನೆ ನಿರ್ಮಲವಾಗಿದೆ.
೧೮ ಭೂಮಿಯೇ, ನನ್ನ ರಕ್ತ ಮುಚ್ಚ ಬೇಡ;
ನನ್ನ ಕೂಗಿಗೆ ಸ್ಥಳ ಇಲ್ಲದೆ ಇರಲಿ.
೧೯ ಮತ್ತು ಈಗ, ಇಗೋ, ಆಕಾಶದಲ್ಲಿ ಉಂಟು ನನ್ನ ಸಾಕ್ಷಿ;
ನನ್ನ ಗೊತ್ತುಗಾರನು ಉನ್ನತವಾದವುಗಳಲ್ಲಿ ಇದ್ದಾನೆ.

೨೦ ನನ್ನ ಸ್ನೇಹಿತರೇ ನನ್ನನ್ನು ಹಾಸ್ಯ ಮಾಡುತ್ತಾರೆ;
ದೇವರ ಕಡೆಗೆ ನನ್ನ ಕಣ್ಣು ನೀರನ್ನು ಸುರಿಸುತ್ತದೆ.
೨೧ ಪುರುಷನಿಗೋಸ್ಕರ ದೇವರ ಮುಂದೆಯೂ,
ಮನುಷ್ಯನ ಮಗನಿಗೋಸ್ಕರ ತನ್ನ ಸ್ನೇಹಿತನ ಮುಂದೆಯೂ ವಾದಿಸಲಿ.
೨೨ ಎಣಿಸಿದ ವರುಷಗಳು ಬಂದಾಗ,
ತಿರಿಗಿ ಬಾರದ ಹಾದಿ ಹಿಡಿದು ಹೋಗುತ್ತೇನೆ.

## ೧೭. ಸಂಧಿ.

೧ ನನ್ನ ಆತ್ಮವು ಮುರಿದದೆ; ನನ್ನ ದಿವಸಗಳು ತೀರಿ ಹೋಗಿವೆ;
ಸಮಾಧಿಗಳು ನನಗೆ ಸಿದ್ಧವಾಗಿವೆ.
೨ ವಂಚಕರು ನನ್ನ ಬಳಿಯಲ್ಲಿ ಇದ್ದಾರಲ್ಲವೋ!
ಅವರ ಎದುರಾಟದಲ್ಲಿ ನನ್ನ ಕಣ್ಣು ಉಳಿ ಕೊಳ್ಳುತ್ತದಲ್ಲವೋ!
3 ದಯ ಮಾಡಿ ನನಗೋಸ್ಕರ ಹೊಣೆ ಇಡು;
ನನ್ನ ಕೈ ತಟ್ಟುವವನ್ಯಾರು!
೪ ಯಾಕಂದರೆ ಅವರ ಹೃದಯವನ್ನು ಬುದ್ಧಿಗೆ ಅಡಗಿಸಿದಿ;
ಆದದರಿಂದ ಅವರನ್ನು ಉನ್ನತ ಮಾಡುವದಿಲ್ಲ.
೫ ಹಂಚಿಕೆಗೆ ಸ್ನೇಹಿತರನ್ನು ತೋರಿಸಿ ಕೊಡುವವನ್ಯಾವನೋ,
ಅವನ ಮಕ್ಕಳ ಕಣ್ಣುಗಳು ಕ್ಷೀಣವಾಗುವವು.

೬ ನನ್ನನ್ನು ಜನರಿಗೆ ಗಾದೆಯಾಗ ಮಾಡಿದನು;
ಅವರ ಮುಂದೆ ಹೇಸಿಗೆಯಾಗಿರುತ್ತೇನೆ.
೭ ನನ್ನ ಕಣ್ಣು ಕರಕರೆಯಿಂದ ಮೊಬ್ಬಾಯಿತು;
ನನ್ನ ಅಂಗಗಳೆಲ್ಲಾ ನೆರಳಿನ ಹಾಗೆ ಅವೆ.
೮ ಇದಕ್ಕೋಸ್ಕರ ನಿಟ್ಟುಸಿರೆಯವರು ಆಶ್ಚರ್ಯ ಪಡುವರು;
ನಿರ್ಮಲನು ಭ್ರಷ್ಟನಿಗೆ ವಿರೋಧವಾಗಿ ಎಬ್ಬಿಸಿ ಕೊಳ್ಳುವನು.
೯ ಆದರೆ ನೀತಿವಂತನು ತನ್ನ ಮಾರ್ಗವನ್ನು ಹಿಡಿದು ಕೊಳ್ಳುವನು;
ಶುದ್ಧ ಕೈಗಳುಳ್ಳವನು ಬರಬರ ಬಲಗೊಳ್ಳುವನು.
೧೦ ಆದಾಗ್ಯೂ ನೀವೆಲ್ಲರು ತಿರುಗಿ ಕೊಂಡು ಬನ್ನಿರಿ;
ನಿಮ್ಮಲ್ಲಿ ನಾನು ಜ್ಞಾನಿಯನ್ನು ಕಂಡು ಕೊಳ್ಳಲಿಲ್ಲ.

೧೧ ನನ್ನ ದಿವಸಗಳು ಹಾದು ಹೋದವು;
ನನ್ನ ಹೃದಯಕ್ಕೆ ಸ್ವಂತವಾಗಿರುವ ನನ್ನ ಯೋಚನೆಗಳು ಭಂಗವಾದವು.
೧೨ ರಾತ್ರಿಯನ್ನು ಹಗಲಾಗ ಮಾಡುತ್ತಾರೆ;
ಬೆಳಕು ಕತ್ತಲೆಯ ಮುಂದೆ ಸಮೀಪವಾಗಿದೆ.
೧೩ ನಾನು ನಿರೀಕ್ಷಿಸಿದರೆ, ಪಾತಾಳವೇ ನನ್ನ ಮನೆ;
ಕತ್ತಲೆಯಲ್ಲಿ ನನ್ನ ಮಂಚ ಹಾಸಿದ್ದೇನೆ.



೧೪ ಕೊಳೆಯುವಿಕೆಗೆ, ನೀನು ನನ್ನ ತಂದೆ ಎಂದೂ,
ಹುಳಕ್ಕೆ, ನನ್ನ ತಾಯಿಯೇ, ನನ್ನ ಅಕ್ಕನೇ ಎಂದೂ, ಹೇಳಿದೆ.
೧೫ ಹಾಗಾದರೆ ನನ್ನ ನಿರೀಕ್ಷೆ ಎಲ್ಲಿ!
ನನ್ನ ನಿರೀಕ್ಷೆಯನ್ನು ಯಾರು ನೋಡುವರು!
೧೬ ನನ್ನ ಕೂಡಾ ಧೂಳಿಯ ಮೇಲೆ ವಿಶ್ರಾಂತಿ ಇರುವಾಗ,
ಪಾತಾಳದ ಅಗುಳಿಗಳಿಗೆ ಇಳಿದು ಹೋಗುವದು.

## ೧೮. ಸಂಧಿ.

೧ ಮತ್ತು ಶುಕ್ಯನಾದ ಬಿಲ್ದದನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಎಲ್ಲಿಯ ವರಿಗೆ ಮಾತುಗಳ ಮೇರೆಗಳನ್ನು ಇಡುವಿರಿ!
ಗ್ರಹಿಸಿ ಕೊಳ್ಳಿರಿ; ಆ ಮೇಲೆ ಮಾತಾಡೋಣ.
3 ಯಾಕೆ ಪಶುಗಳ ಹಾಗೆ ಎಣಿಸಲ್ಪಟ್ಟಿವು?
ಯಾಕೆ ನಿಮ್ಮ ಕಣ್ಣುಗಳಿಗೆ ಅಪವಿತ್ರರಾಗಿದ್ದೇವೆ!
೪ ಕೋಪದಿಂದ ಪ್ರಾಣ ಹರಿಯುವವನೇ,
ನಿನ್ನ ನಿಮಿತ್ತ ಭೂಮಿ ಬಿಡಲ್ಪಡ ಬೇಕೋ!
ಬಂಡೆ ತನ್ನ ಸ್ಥಳದಿಂದ ತೊಲಗ ಬೇಕೋ!

೫ ನಿಶ್ಚಯವಾಗಿ ದುಷ್ಟರ ಬೆಳಕು ಆರಿ ಹೋಗುವದು;
ಅವನ ಬೆಂಕಿಯ ಜ್ವಾಲೆ ಪ್ರಕಾಶಿಸದು.
೬ ಬೆಳಕು ಅವನ ಗುಡಾರದಲ್ಲಿ ಕತ್ತಲಾಗುವದು;
ಅವನ ದೀಪ ಅವನ ಮೇಲೆ ಆರಿ ಹೋಗುವದು.
೭ ಅವನ ಬಲದ ಹೆಜ್ಜೆಗಳು ಇಕ್ಕಟ್ಟಾಗುವವು;
ಅವನ ಆಲೋಚನೆ ಅವನನ್ನು ದೊಬ್ಬುವದು.
೮ ಯಾಕಂದರೆ ತನ್ನ ಕಾಲುಗಳಿಂದ ಬಲೆಯಲ್ಲಿ ಶಿಕ್ಕೊಂಡನು;
ಉರ್ಲಿನ ಮೇಲೆ ನಡೆದು ಕೊಳ್ಳುತ್ತಾನೆ.
೯ ನೋಣು ಅವನ ಹಿಮ್ಮಡಿಯನ್ನು ಹಿಡುಕೊಳ್ಳುವದು;
ಕೊಳ್ಳೆಗಾರನು ಅವನ ಮೇಲೆ ಬಲಗೊಳ್ಳುವನು.
೧೦ ಅವನ ಪಾಶ ಭೂಮಿಯಲ್ಲಿಯೂ,
ಅವನ ಕೊಂಡಿ ಹಾದಿಯಲ್ಲಿಯೂ ಮರೆಯಾಗಿವೆ.
೧೧ ಸುತ್ತಲು ದಿಗುಲುಗಳು ಅವನನ್ನು ಹೆದರಿಸಿ,
ಅವನ ಕಾಲುಗಳಿಗೆ ಎಬ್ಬಿಸುತ್ತವೆ.
೧೨ ಅವನ ಬಲವು ಹಸಿಯುವದು;
ಆಪತ್ತು ಅವನ ಬಳಿಯಲ್ಲಿ ಸಿದ್ಧವಾಗಿರುವದು.
೧3 ಅವನ ಚರ್ಮದ ಅಗುಳಿಗಳನ್ನು ತಿನ್ನುವದು;
ಮರಣದ ಹೊಚ್ಚಲ ಮಗನು ಅವನ ಅಗುಳಿಗಳನ್ನು ತಿನ್ನುವನು.
೧೪ ಅವನ ಭರವಸವು ಅವನ ಗುಡಾರದೊಳಗಿಂದ ಕೀಳ್ಪಡುವದು;
ಅವನನ್ನು ದಿಗುಲುಗಳ ಅರಸನ ಬಳಿಗೆ ನಡಿಸುವದು.
೧೫ ಅವನಿಗಿಲ್ಲದ ಅವನ ಗುಡಾರದಲ್ಲಿ ವಾಸಿಸುವದು;
ಅವನ ನಿವಾಸದ ಮೇಲೆ ಗಂಧ ಚದರಿ ಬರುವದು.
೧೬ ಕೆಳಗಿನಿಂದ ಅವನ ಬೇರುಗಳು ಒಣಗುವವು;
ಮೇಲಿನಿಂದ ಅವನ ಕೊಂಬೆ ಕೊಯ್ಯಲ್ಪಡುವದು.
೧೭ ಅವನ ಜ್ಞಾಪಕ ದೇಶದೊಳಗಿಂದ ನಾಶವಾಗುವದು;
ಬೀದಿಗಳಲ್ಲಿ ಅವನಿಗೆ ಹೆಸರು ಇಲ್ಲದೆ ಇರುವದು.
೧೮ ಬೆಳಕಿನಿಂದ ಅವನನ್ನು ಕತ್ತಲೆಗೆ ದೊಬ್ಬುವರು;
ಲೋಕದಿಂದ ಓಡಿಸುವರು.
೧೯ ಅವನ ಜನರಲ್ಲಿ ಅವನಿಗೆ ಮಗನೂ ಇಲ್ಲ, ಮೊಮ್ಮಗನೂ ಇಲ್ಲ;
ಅವನ ನಿವಾಸಗಳಲ್ಲಿ ಉಳಿದವನೂ ಇಲ್ಲ.
೨೦ ಅವನ ದಿವಸಕ್ಕೆ ಮುಂದಿನವರು ಆಶ್ಚರ್ಯ ಪಡುವರು;
ಹಿಂದಿನವರನ್ನು ದಿಗುಲು ಹಿಡಿಯುವದು.
೨೧ ಅನ್ಯಾಯಗಾರನ ಮನೆಗಳು ಇಂಥವುಗಳೇ;
ದೇವರನ್ನು ಶಿಳಿಯದವನ ಸ್ಥಳವು ಇದೇ.

## ೧೯. ಸಂಧಿ.

೧ ಯೋಬನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಎಷ್ಟು ವರಿಗೆ ನನ್ನ ಪ್ರಾಣವನ್ನು ನೋಯಿಸಿ,
ನನ್ನನ್ನು ಮಾತುಗಳಿಂದ ಜಜ್ಜುವಿರಿ!
3 ಈಗ ಹತ್ತುಸಾರಿ ನನ್ನನ್ನು ಅವಮಾನ ಪಡಿಸಿದಿರಿ.
ನೀವು ನನಗೆ ಬೇಸರ ಮಾಡುವದಕ್ಕೆ ನಾಚಿಕೆ ಪಡುವದಿಲ್ಲ.
೪ ನಿಶ್ಚಯವಾಗಿ ನಾನು ತಪ್ಪು ಮಾಡಿದ್ದರೆ,
ನನ್ನ ತಪ್ಪು ನನ್ನ ಸಂಗತ ಉಳುಕೊಳ್ಳುವದು.
೫ ನಿಶ್ಚಯವಾಗಿ ನನ್ನ ಮೇಲೆ ನಿಮ್ಮನ್ನು ಹೆಚ್ಚಿಸಿ ಕೊಂಡರೆ,
ನನ್ನ ನಿಂದೆಯನ್ನು ನನ್ನ ಮೇಲೆ ಹೊರಿಸಿ ವಾದಿಸಿದರೆ,
೬ ದೇವರು ನನ್ನನ್ನು ತೊಲಗಿಸಿ ಬಿಟ್ಟು,
ತನ್ನ ಬಲೆಯನ್ನು ನನ್ನ ಮೇಲೆ ಬೀಸಿದನೆಂದು, ತಿಳಿಯ ಬೇಕಷ್ಟೆ.

೭ ಇಗೋ, ಬಲಾತ್ಕಾರ ಎಂದು ಕೂಗುತ್ತೇನೆ, ಉತ್ತರ ಕೊಡುವವನಿಲ್ಲ;
ಮೊರೆ ಇಡುತ್ತೇನೆ, ನ್ಯಾಯ ತೀರ್ಪಿಕೆ ಇಲ್ಲ.
೮ ನನ್ನ ಹಾದಿಗೆ ಬೇಲಿ ಹಾಕಿದ್ದಾನೆ, ನಾನು ದಾಟಿ ಕೂಡದು;
ನನ್ನ ದಾರಿಗಳಲ್ಲಿ ಕತ್ತಲೆ ಇಡುತ್ತಾನೆ.
೯ ನನ್ನ ಘನವನ್ನು ನನ್ನಲ್ಲಿಂದ ಸುಲಿದು ಕೊಂಡನು;
ನನ್ನ ತಲೆಯ ಕಿರೀಟವನ್ನು ತೆಗೆದು ಹಾಕಿದನು.
೧೦ ಸುತ್ತಲು ನನ್ನನ್ನು ಬಡೆದ್ದರಿಂದ, ನಾನು ಹೋಗುತ್ತೇನೆ;
ಮರದ ಹಾಗೆ ನನ್ನ ನಿರೀಕ್ಷೆಯನ್ನು ಕಿತ್ತನು.
೧೧ ಅವನ ಕೋಪವು ನನ್ನ ಮೇಲೆ ಹೊತ್ತಿ ಅದೆ;
ತನ್ನ ವೈರಿಗಳ ಹಾಗೆ ನನ್ನನ್ನು ಎಣಿಸುತ್ತಾನೆ.
೧೨ ಅವನ ಗುಂಪುಗಳು ಕೂಡಾ ಬಂದು, ನನಗೆ ವಿರೋಧವಾಗಿ ತಮ್ಮ ಮಾರ್ಗ ಕಟ್ಟುತ್ತವೆ;
ನನ್ನ ಗುಡಾರದ ಸುತ್ತು ದಂಡು ಇಳಿಯುತ್ತವೆ.
೧3 ನನ್ನ ಸಹೋದರರನ್ನು ನನಗೆ ದೂರ ಮಾಡುತ್ತಾನೆ;
ನನ್ನ ಪರಿಚಿತರು ನನಗೆ ಅನ್ಯರೇ ಆದರು.
೧೪ ನನ್ನ ನೆರೆಯವರು ತಡೆಯುತ್ತಾರೆ;
ನನ್ನ ಪರಿಚಿತರು ನನ್ನನ್ನು ಮರತಿದ್ದಾರೆ.
೧೫ ನನ್ನ ಮನೆಯಲ್ಲಿ ತಂಗುವವರೂ ನನ್ನ ದಾಸಿಗಳೂ ನನ್ನನ್ನು ಪರನೆಂದು ಎಣಿಸುತ್ತಾರೆ;
ಅವರ ದೃಷ್ಟಿಗೆ ನಾನು ಪರದೇಶದವನ ಹಾಗೆ ಇದ್ದೇನೆ.
೧೬ ನನ್ನ ಸೇವಕನನ್ನು ಕರೆದರೆ, ಅವನು ನನಗೆ ಉತ್ತರ ಕೊಡುವದಿಲ್ಲ;
ನನ್ನ ಬಾಯಿಯಿಂದ ಅವನನ್ನು ಬೇಡ ಬೇಕಾಯಿತು.

೧೭ ನನ್ನ ಶ್ವಾಸವು ನನ್ನ ಹೆಂಡತಿಗೆ ಶಿಳ್ಳಿಯದ್ದಾಗಿದೆ,
ನನ್ನ ಹೊಟ್ಟೇ ಮಕ್ಕಳಗನ್ನು ದೇಗುತ್ತೇನೆ.
೧೮ ಬಾಲಕರು ಸಹ ನನ್ನನ್ನು ತಿರಸ್ಕರಿಸುತ್ತಾರೆ;
ನಾನು ಎದ್ದರೆ, ನನಗೆ ಎದುರು ಮಾತಾಡುತ್ತಾರೆ.
೧೯ ನನ್ನ ಆಪ್ತ ಸ್ನೇಹಿತರೆಲ್ಲಾ ನನ್ನನ್ನು ಅಸಹಿಸುತ್ತಾರೆ;
ನಾನು ಪ್ರೀತಿ ಮಾಡಿದವರೇ ನನಗೆ ವಿರೋಧವಾಗಿ ತಿರುಗಿದ್ದಾರೆ.
೨೦ ನನ್ನ ಚರ್ಮಕ್ಕೂ ನನ್ನ ಮಾಂಸಕ್ಕೂ ನನ್ನ ಎಲುವು ಅಂಟುತ್ತದೆ;
ನನ್ನ ಹಲ್ಲುಗಳ ಬೊಗಸೊಂದಿಗೆ ತಪ್ಪಿಸಿ ಕೊಂಡೆನು.
೨೧ ನನ್ನ ಸ್ನೇಹಿತರಾದ ನೀವೇ ನನ್ನನ್ನು ಕನಿಕರಿಸಿರಿ, ನನ್ನನ್ನು ಕನಿಕರಿಸಿರಿ;
ಯಾಕಂದರೆ ದೇವರ ಕೈ ನನ್ನನ್ನು ಮುಟ್ಟಿ ಅದೆ.
೨೨ ಯಾಕೆ ದೇವರ ಹಾಗೆ ನೀವು ನನ್ನನ್ನು ಹಿಂದಟ್ಟಿ,
ನನ್ನ ಮಾಂಸದಿಂದ ತೃಪ್ತಿಯಾಗದೆ ಇದ್ದೀರಿ.
೨೩ ಆಹಾ, ನನ್ನ ಮಾತುಗಳು ಬರೆಯಲ್ಪಟ್ಟಿದ್ದರೆ,
ಅವು ಪುಸ್ತಕದಲ್ಲಿ ರಚಿಸಲ್ಪಟ್ಟಿದ್ದರೆ,
೨೪ ಕಬ್ಬಿಣದ ಕಂಠದಿಂದ ಸೀಸದ ಸಂಗತಿ
ನಿತ್ಯವಾಗಿ ಬಂಡೆಯಲ್ಲಿ ಅವುಗಳ ಕೆತ್ತಲ್ಪಟ್ಟಿದ್ದರೆ ಎಷ್ಟೋ ಒಳ್ಳೇದು!
೨೫ ಆದರೆ ನನ್ನ ವಿಮೋಚಕನು ಬದುಕುತ್ತಾನೆಂದೂ,
ಕಡೆಯವನಾಗಿ ಧೂಳಿಯ ಮೇಲೆ ನಿಲ್ಲುವನೆಂದೂ, ತಿಳಿದಿದ್ದೇನೆ;
೨೬ ಮತ್ತು ಈ ನನ್ನ ಚರ್ಮ ಕಡಿದ ಮೇಲೆ,
ನನ್ನ ಮಾಂಸದಲ್ಲಿಂದ ದೇವರನ್ನು ನೋಡುವೆನು;
೨೭ ಅವನನ್ನು ನನಗೆ ನಾನೇ ದೃಷ್ಟಿಸುವೆನು;
ನನ್ನ ಕಣ್ಣುಗಳು ನೋಡುವವು; ಅನ್ಯನಲ್ಲ;
ಒಡಲಲ್ಲಿ ನನ್ನ ಅಂತರಿಂದ್ರಿಯಗಳು ಲಯವಾಗಿವೆ.
೨೮ ನೀವು ಹೇಳುವಿರಿ—ಅವನನ್ನು ಯಾಕೆ ಹಿಂದಟ್ಟಿನೆವು!
ಮಾತಿನ ಬೇರು ನನಲ್ಲಿ ಶಿಕ್ಕುವದು.
ಕತ್ತಿಯ ಮುಂದೆ ಅಂಜಿ ಕೊಳ್ಳಿರಿ;
ಯಾಕಂದರೆ ನ್ಯಾಯತೀರ್ವಿಕೆ ಉಂಟೆಂದು ನೀವು ತಿಳಿಕೊಳ್ಳುವ ಹಾಗೆ,
೨೯ ಉಗ್ರವು ಕತ್ತಿಯ ದಂಡನೆಯಾಗಿರುವದು.

## ೨೦. ಸಂಧಿ.

೧ ಮತ್ತು ನಾಮಾಥ್ಯವಾದ ಜೋಫರನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಆದದರಿಂದ ನನ್ನ ಆಲೋಚನೆಗಳು ನನಗೆ ಉತ್ತರ ಕೊಡುತ್ತವೆ;
ನನ್ನಲ್ಲಿರುವ ಆತುರಕ್ಕೋಸ್ಕರವೇ.
೩ ನನ್ನನ್ನು ನಿಂದಿಸುವ ಶಿಕ್ಷೆಯನ್ನು ಕೇಳುತ್ತೇನೆ;
ಆದರೆ ನನ್ನ ಆತ್ಮವು ನನ್ನ ಗ್ರಹಿಕೆಯ ಪ್ರಕಾರ ನನಗೆ ಉತ್ತರ ಕೊಡುವದು.
೪ ಇದನ್ನು ಅರಿಯಿಂದಲೂ,
ಮನುಷ್ಯನನ್ನು ಭೂಮಿಯ ಮೇಲೆ ಇಟ್ಟಂದಿನಿಂದಲೂ ನೀನು ತಿಳಿಯಲಿಲ್ಲವೋ!
೫ ಏನಂದರೆ, ದುಷ್ಟರ ಉಲ್ಲಾಸವು ಸ್ವಲ್ಪ ಕಾಲದ್ದೂ,
ಭ್ರಷ್ಟನ ಸಂತೋಷವು ಕ್ಷಣ ಮಾತ್ರದ್ದೂ.
೬ ಅವನ ಮಹತ್ತು ಆಕಾಶಕ್ಕೆ ಏರಿದರೂ,
ಅವನ ತಲೆ ಮೇಘಕ್ಕೆ ಮುಟ್ಟಿದರೂ,
೭ ತನ್ನ ಅಮೇಧ್ಯದ ಹಾಗೆ ನಿತ್ಯವಾಗಿ ನಾಶವಾಗುವನು;
ಅವನನ್ನು ನೋಡಿದವರು ಅವನು ಎಲ್ಲಿ? ಅನ್ನುವರು.
೮ ಕನಸಿನ ಹಾಗೆ ಅವನು ಹಾರಿ, ಕಾಣದೆ ಹೋಗುವನು;
ರಾತ್ರಿಯ ದರ್ಶನದ ಹಾಗೆ ಓಡಿಸಲ್ಪಡುವನು.
೯ ಅವನನ್ನು ನೋಡಿದ ಕಣ್ಣು ಇನ್ನೂ ನೋಡದು;
ಅವನ ಸ್ಥಳ ಇನ್ನೂ ಅವನನ್ನು ಕಾಣದು.
೧೦ ಅವನ ಮಕ್ಕಳು ಬಡವರನ್ನು ಮೆಚ್ಚಿಸುತ್ತಾರೆ;
ಅವನ ಕೈಗಳು ಅವರ ಸ್ಥಿತಿಯನ್ನು ತಿರಿಗಿ ಕೊಡುತ್ತವೆ.
೧೧ ಅವನ ಎಲುಬುಗಳು ಯೌವನ ತುಂಬಾಗಿದ್ದರೂ,
ಅದು ಅವನ ಸಂಗಡ ಧೂಳಿನಲ್ಲಿ ಮಲಗುವದು.
೧೨ ಅವನ ಬಾಯಿಗೆ ಕೆಟ್ಟತನವು ಶೀಯಾಗಿದ್ದಾಗ್ಯೂ,
ನಾಲಿಗೆಯ ಕೆಳಗೆ ಅದನ್ನು ಬಚ್ಚಿಟ್ಟರೂ,
೧೩ ಅದನ್ನು ಕನಿಕರಿಸಿ, ಅದನ್ನು ಬಿಡದೆ,
ತನ್ನ ಬಾಯಿಯೊಳಗೆ ಇಟ್ಟು ಕೊಂಡರೂ,
೧೪ ಅವನ ಕೊಟ್ಟಿ ಅವನ ಕರುಳುಗಳಲ್ಲಿ ಮಾರ್ಪಟ್ಟು,
ಅವನ ಉದರಲ್ಲಿ ಸರ್ಪದ ಪಿತ್ತವಾಗುವದು.
೧೫ ಅವನು ನುಂಗಿದ ದ್ರವ್ಯವನ್ನು ಕಾರಿ ಬಿಡುವನು;
ಅವನ ಹೊಟ್ಟೆಯೊಳಗಿಂದ ದೇವರು ಅದನ್ನು ಹೊರಡ ಮಾಡುವನು.
೧೬ ಸರ್ಪಗಳ ವಿಷವನ್ನು ಹೀರುವನು;
ಹಾವಿನ ನಾಲಿಗೆ ಅವನನ್ನು ಕೊಲ್ಲುವದು.
೧೭ ಅವನು ಜೇನೂ ಹಾಲೂ ಹರಿಯುವ
ಹಳ್ಳಗಳನ್ನು, ನದಿಗಳನ್ನು, ಕಾಲಿವೆಗಳನ್ನು ನೋಡನು.
೧೮ ಸಂಪತ್ತನ್ನು ನುಂಗದೆ, ತಿರಿಗಿ ಕೊಡುವನು;
ಸ್ಥಿತಿಯ ಮೇರೆಗೆ ಬದಲು ಕೊಡುವನು;
ಅವನು ಉಲ್ಲಾಸ ಹೊಂದುವದಿಲ್ಲ.
೧೯ ಯಾಕಂದರೆ ದೀನರನ್ನು ಜಜ್ಜಿ, ಬಿಟ್ಟು ಹೋದನು;
ತಾನು ಕಟ್ಟದ ಮನೆಯನ್ನು ಕೆಡವಿ ಬಿಟ್ಟನು.
೨೦ ನಿಶ್ಚಯವಾಗಿ ಅವನು ತನ್ನ ಹೊಟ್ಟೆಯಲ್ಲಿ ಸೌಖ್ಯ ತಿಳಿಯ ಕೊಳ್ಳವದಿಲ್ಲ;
ತನಗೆ ಇಷ್ಟವಾದದರಲ್ಲಿ ಏನೂ ಉಳಿಸಿ ಕೊಳ್ಳವದಿಲ್ಲ.
೨೧ ಅವನ ಉಟದಲ್ಲಿ ಉಳಿಹು ಇರದು;
ಆದದರಿಂದ ಅವನ ಸುಖವು ನಿಲ್ಲುವದಿಲ್ಲ.
೨೨ ಅವನ ಪೂರ್ಣತೆಯ ಹೆಚ್ಚಿಗೆಯಲ್ಲಿ ಅವನಿಗೆ ಇಕ್ಕಟ್ಟಾಗಿದೆ;
ಕಾಡುವವರ ಕೈಗಳೆಲ್ಲಾ ಅವನ ಮೇಲೆ ಬರುವವು.
೨೩ ಏನಾಗುವದಂದರೆ—ಅವನ ಹೊಟ್ಟೆಯನ್ನು ತುಂಬುವದಕ್ಕೆ, ದೇವರು ತನ್ನ ಕೋಪದ ಉರಿಯನ್ನು ಅವನ ಮೇಲೆ ಕಳುಹಿಸುವನು;



ಅವನ ಆಹಾರಕ್ಕಾಗಿ ಅವನ ಮೇಲೆ ಸುರಿಸುವನು.
೨೪ ಅವನು ಕಬ್ಬಿಣದ ಆಯುಧಕ್ಕೆ ಓಡಿ ಹೋದರೆ,
ಹಿತ್ತಾಳೆಯ ಬಿಲ್ಲು ಅವನನ್ನು ತಿವಿಯುವದು.
೨೫ ಅವನು ಎಳೆದರೆ, ಅದು ಬೆನ್ನಿನಿಂದ ಹೊರಡುವದು;
ಅವನ ಪಿತ್ತದೊಳಗಿಂದ ಮಿಂಚುವ ಶಸ್ತ್ರ ಬರುವದು;
ಅವನ ಮೇಲೆ ಹೆದರಿಕೆಗಳು ಅವೆ.
೨೬ ಎಲ್ಲಾ ಅಂಧಕಾರವು ಅವನ ದ್ರವ್ಯಗಳಿಗಾಗಿ ಇಡಲ್ಪಟ್ಟಿದೆ;
ಊದದ ಬೆಂಕಿ ಅವನನ್ನು ತಿನ್ನುವದು;
ಅವನ ಗುಡಾರದಲ್ಲಿ ಉಳಿದವನು ಕೆಟ್ಟು ಹೋಗುವನು.
೨೭ ಆಕಾಶಗಳು ಅವನ ಅಕ್ರಮವನ್ನು ಪ್ರಕಟ ಮಾಡುವವು;
ಭೂಮಿಯು ಅವನಿಗೆ ವಿರೋಧವಾಗಿ ಏಳುವದು.
೨೮ ಅವನ ಮನೆಯ ಆದಾಯವು ಕೆಡೆ ಹೋಗುವದು;
ಅವನ ಕೋಪದ ದಿವಸದಲ್ಲಿ ಅದು ಕರಗಿ ಹೋಗುವದು.
೨೯ ದುಷ್ಟ ಮನುಷ್ಯನಿಗೆ ದೇವರಿಂದ ಬರುವ ಪಾಲು,
ದೇವರಿಂದ ಅವನಿಗೆ ನೇಮಿಸಲ್ಪಟ್ಟಿರುವ ಬಾಧ್ಯತೆಯೂ ಇದೇ.

## ೨೧. ಸಂಧಿ.

೧ ಯೋಬನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ನನ್ನ ಮಾತನ್ನು ಕೇಳ್ಳೇ ಕೇಳ್ಳಿರಿ;
ಇದು ನಿಮ್ಮ ಆದರಣೆಯಾಗಲಿ.
೩ ನನಗೆ ತಾಳ್ಮೆ ಕೊಳ್ಳಿರಿ, ನಾನು ಮಾತಾಡುವೆನು;
ನಾನು ಮಾತಾಡಿದ ಮೇಲೆ, ನೀನು ಹಾಸ್ಯ ಮಾಡ ಬಹುದು.
೪ ನಾನಾದರೆ, ಮನುಷ್ಯನ ಕಡೆಗೆ ನನ್ನ ಗೊಳಾಟ ಉಂಟೋ!
ಇದ್ದರೂ ನನ್ನ ಆತ್ಮವು ಯಾಕೆ ವ್ಯಾಕುಲ ಪಡ ಬಾರದು!
೫ ನನ್ನ ಕಡೆಗೆ ತಿರುಗಿ ಕೊಂಡು, ಆಶ್ಚರ್ಯ ಪಡಿರಿ;
ಬಾಯಿಗೆ ಕೈ ಹಾಕಿರಿ.
೬ ನಾನು ನೆನಪು ಮಾಡಿ ಕೊಂಡರೆ, ತಲ್ಲಣ ಪಡುತ್ತೇನೆ;
ನಡುಗುವಿಕೆಯು ನನ್ನ ಮಾಂಸವನ್ನು ಹಿಡಿಯುತ್ತದೆ.
೭ ದುಷ್ಟರು ಯಾಕೆ ಬದುಕಿ,
ಮುದುಕರಾಗಿ, ಶ್ರಾಣದಿಂದ ಬಲಗೊಳ್ಳುತ್ತಾರೆ!
೮ ಅವರ ಬೀಜವಾದವರು ಅವರ ಮುಂದೆ ಅವರ ಸಂಗಡ ದೃಢವಾಗಿದ್ದಾರೆ;
ಅವರ ಚಿಗುರುಗಳಾದವರು ಅವರ ಕಣ್ಣುಗಳ ಮುಂದೆ ಇದ್ದಾರೆ.
೯ ಅವರ ಮನೆಗಳು ಅಂಜಿಕೆ ಇಲ್ಲದೆ ಸಮಾಧಾನವಾಗಿವೆ;
ದೇವರ ಕೋಲು ಅವರ ಮೇಲೆ ಇಲ್ಲ.
೧೦ ಅವನ ಗೂಳಿ ಹೇಸದೆ ಬಸುರು ಮಾಡುತ್ತದೆ;
ಅವನ ಆಕಳು ತಪ್ಪದೆ ಈಯುತ್ತದೆ.
೧೧ ತಮ್ಮ ಚಿಕ್ಕವರನ್ನು ಮಂದೆಯ ಹಾಗೆ ಕಳುಹಿಸುತ್ತಾರೆ;
ಅವರ ಮಕ್ಕಳು ಕುಣಿದಾಡುತ್ತಾರೆ.
೧೨ ದಮ್ಮಡಿಯಿಂದಲೂ ಕಿನ್ನರಿಯಿಂದಲೂ ಹಾಡುತ್ತಾರೆ;
ಕೊಳಲಿನ ಶಬ್ದಕ್ಕೆ ಸಂತೋಷಿಸುತ್ತಾರೆ.
೧೩ ಸುಖದಿಂದ ತಮ್ಮ ದಿವಸಗಳನ್ನು ಕಳೆಯುತ್ತಾರೆ;
ಕ್ಷಣದಲ್ಲಿ ಪಾತಾಳಕ್ಕೆ ಇಳಿಯುತ್ತಾರೆ.
೧೪ ಅವರು ದೇವರಿಗೆ ಹೇಳುತ್ತಾರೆ—ನಮ್ಮನ್ನು ಬಿಟ್ಟು ಹೋಗು;
ನಿನ್ನ ಮಾರ್ಗಗಳ ತಿಳುವಿಕೆಯನ್ನು ನಾವು ಮೆಚ್ಚುವದಿಲ್ಲ.
೧೫ ನಾವು ಅವನನ್ನು ಸೇವಿಸುವ ಹಾಗೆ, ಸರ್ವಶಕ್ತನು ಯಾರು!
ನಾವು ಅವನಿಗೆ ಬಿನ್ನಹ ಮಾಡುವದರಲ್ಲಿ ನಮಗೆ ಪ್ರಯೋಜನವೇನು!
೧೬ ಇಗೋ, ಅವರ ಸುಖವು ಅವರ ಕೈಯಲ್ಲಿ ಇಲ್ಲ,
ದುಷ್ಟರ ಆಲೋಚನೆ ನನಗೆ ದೂರವಾಗಿದೆ.
೧೭ ಎಷ್ಟು ಸಾರಿ ದುಷ್ಟರ ದೀಪವು ಆರಿ ಹೋಗುತ್ತದೆ;
ಅವರ ಆಪತ್ತು ಅವರ ಮೇಲೆ ಬರುತ್ತದೆ;
ವೇದನೆಗಳನ್ನು ತನ್ನ ಕೋಪದಿಂದ ಹಂಚುತ್ತಾನೆ.
೧೮ ಅವರು ಧೂಳಿಯ ಮುಂದಿನ ಹುಲ್ಲಿನ ಹಾಗೆಯೂ,
ಬಿರು ಧೂಳಿ ಕೊಂಡು ಹೋಗುವ ಹೊಟ್ಟಿನ ಹಾಗೆಯೂ ಇದ್ದಾರೆ.
೧೯ ದೇವರು ಅವನ ಮಕ್ಕಳಿಗೆ ಶಿಕ್ಷೆಯನ್ನು ಇಡುತ್ತಾನೆ;
ಅವನು ತಿಳಿಕೊಳ್ಳುವ ಹಾಗೆ, ಅವನಿಗೆ ಮುಯಿಗೆ ಮುಯಿ ಕೊಡುತ್ತಾನೆ.
೨೦ ಅವನ ಕಣ್ಣುಗಳು ಸ್ವಂತ ನಷ್ಟವನ್ನು ನೋಡುವವು;
ಸರ್ವಶಕ್ತನ ಉಗ್ರ ಅವನು ಕುಡಿಯುವನು.
೨೧ ಯಾಕಂದರೆ ಅವನ ಬಳಿಕ ಅವನ ತಿಂಗಳ ಲೆಖ್ಖ ಹರಿದ ಮೇಲೆ,
ಅವನ ಮನೆಯಲ್ಲಿ ಅವನಿಗೆ ಏನು ಮೆಚ್ಚಿಕೆ!
೨೨ ದೇವರಿಗೆ ತಿಳುವಿಕೆಯನ್ನು ಕಲಿಸುವದುಂಟೋ!
ಎತ್ತರವಾದವರಿಗೆ ಅವನೇ ನ್ಯಾಯ ತೀರಿಸುತ್ತಾನಲ್ಲ!
೨೩ ಒಬ್ಬನು ತನ್ನ ಬಲ ಸಂಪೂರ್ಣತ್ವದಲ್ಲಿ ಸಾಯುತ್ತಾನೆ;
ಎಲ್ಲಾ ಶಾಂತವಾಗಿಯೂ ಸುಖವಾಗಿಯೂ ಇರುವಾಗಲೇ.
೨೪ ಅವನ ತೊಟ್ಟಿಗಳು ಹಾಲು ತುಂಬಿಯವೆ;
ಅವನ ಎಲುಬುಗಳ ಮೆದುಳು ಹಸಿಯಾಗಿದೆ.
೨೫ ಮತ್ತೊಬ್ಬನು ಕಹಿಯಾದ ಪ್ರಾಣದಿಂದ ಸಾಯುತ್ತಾನೆ;
ಅವನು ಒಳ್ಳೇದರಲ್ಲಿ ಏನೂ ಉಣ್ಣುವದಿಲ್ಲ.
೨೬ ಕೂಡಾ ಧೂಳಿನಲ್ಲಿ ಮಲಗುತ್ತಾರೆ;
ಹುಳಗಳು ಅವರನ್ನು ಅಡಗಿಸುತ್ತವೆ.
೨೭ ಇಗೋ, ನಿಮ್ಮ ಆಲೋಚನೆಗಳನ್ನೂ,
ನೀವು ನನ್ನ ಮೇಲೆ ಬಲಾತ್ಕಾರಿಗಳಾಗಿ ಮಾಡುವ ಯೋಚನೆಗಳನ್ನೂ ತಿಳಿದಿದ್ದೇನೆ.
೨೮ ಯಾಕಂದರೆ ನೀವು ಅನ್ನುತ್ತೀರಿ—ಪ್ರಭುವಿನ ಮನೆ ಎಲ್ಲಿ!
ದುಷ್ಟರ ನಿವಾಸಗಳ ಗುಡಾರವು ಎಲ್ಲಿ?
೨೯ ಮಾರ್ಗದಲ್ಲಿ ಹಾದು ಹೋಗುವವರನ್ನು ಕೇಳಿಲ್ಲವೋ!
ಅವರ ಗುರುತುಗಳನ್ನು ನೀವು ಗೊತ್ತು ಮಾಡಲಿಲ್ಲವೋ!
೩೦ ಯಾಕಂದರೆ ಆಪತ್ತಿನ ದಿವಸಕ್ಕೆ ಕೆಟ್ಟವನು ಇಡಲ್ಪಟ್ಟಿದ್ದಾನೆ;
ಉಗ್ರದ ದಿವಸಕ್ಕೆ ಹೊರಗೆ ತರಲ್ಪಡುವನು.
೩೧ ಅವನ ಮಾರ್ಗವನ್ನು ಮುಖಾಮುಖಿಯಾಗಿ ಅವನಿಗೆ ತೋರಿಸಿ,
ಅವನು ಮಾಡಿದ್ದಕ್ಕೋಸ್ಕರ ಅವನಿಗೆ ಮುಯಿಗೆ ಮುಯಿ ಕೊಡುವವನ್ಯಾರು!
೩೨ ಅವನು ಸಮಾಧಿಗಳಿಗೆ ವೈಯಲ್ಪಡುವನು;
ಗೋರಿಯ ಮೇಲೆ ಕಾದಿರುವನು.

೨೩ ತಗ್ಗಿನ ಗದ್ದೆಗಳು ಅವನಿಗೆ ರಮ್ಯವಾಗಿರುವವು;
ಎಲ್ಲಾ ಮನುಷ್ಯರನ್ನು ತನ್ನ ಹಿಂದೆ ಎಳ್ಳಯುತ್ತಾನೆ;
ಅವನ ಮುಂದಿನವರಿಗೆ ಲೆಖ್ಖವಿಲ್ಲ.
೨೪ ಮಾಯದಿಂದ ನೀವು ನನ್ನನ್ನು ಸಂಪೈಸುವದು ಹ್ಯಾಗೆ?
ನಿಮ್ಮ ಉತ್ತರಗಳಲ್ಲಿ ಮೋಸವೇ ಉಳಿಯ ಕೊಳ್ಳುವದು.

## ೨೨. ಸಂಧಿ.

೧ ಮತ್ತು ಥೆಮಾನ್ಯನಾದ ಎಲಿಫಾಜನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಮನುಷ್ಯನು ದೇವರಿಗೆ ಪ್ರಯೋಜಕನಾಗಿರುವನೋ?
ಬುದ್ಧಿವಂತನು ಪ್ರಯೋಜಕನಾಗಿರುವದು ತನಗೆ ಸರಿ.
3 ನೀನು ನೀತಿವಂತನಾಗಿದ್ದರೆ, ಸರ್ವ ಶಕ್ತನು ಮೆಚ್ಚ ಬೇಕೋ!
ನೀನು ನಿನ್ನ ಮಾರ್ಗಗಳನ್ನು ಸಂಪೂರ್ಣ ಮಾಡಿ ಕೊಂಡರೆ
ಅವನಿಗೆ ಲಾಭ ಉಂಟೋ!
೪ ನಿನ್ನ ಭಯದಿಂದ ನಿನ್ನನ್ನು ಗದರಿಸಿ,
ನಿನ್ನ ಸಂಗತ ನ್ಯಾಯಕ್ಕೆ ಬರುವನೋ!

೫ ನಿನ್ನ ಕೆಟ್ಟತನವು ಬಹಳವಲ್ಲವೋ!
ನಿನ್ನ ಅಕ್ರಮಗಳಿಗೆ ಅಂತ್ಯವಿಲ್ಲವಲ್ಲೆ!
೬ ಯಾಕಂದರೆ ಸುಮ್ಮನೇ ನಿನ್ನ ಸಹೋದರರಿಂದ ಈಡು ತೆಗೆದು
ಕೊಂಡಿ;
ಬತ್ತಲೆಯಾಗಿರುವವರ ವಸ್ತ್ರಗಳನ್ನು ನೀನು ಸುಲು ಕೊಂಡಿ.
೭ ದಣಿದವನಿಗೆ ನೀರನ್ನು ಕುಡಿಯ ಕೊಡಲಿಲ್ಲ;
ಹಸಿದವನಿಂದ ಕೊಟ್ಟಿ ಹಿಂದೆಗೆದಿ.
೮ ಶೋಳ್ಳುವನಾದರೆ, ದೇಶವು ಅವನದೇ;
ಎತ್ತಿದ ತಲೆಯವನು ಅದರಲ್ಲಿ ವಾಸಿಸುವನು.
೯ ವಿಧವೆಗಳನ್ನು ಬರಿದಾಗಿ ಕಳುಹಿಸಿದಿ;
ದಿಕ್ಕಿಲ್ಲದವರ ತೋಳುಗಳನ್ನು ಜಜ್ಜಿದಿ.
೧೦ ಆದದರಿಂದ ನಿನ್ನ ಸುತ್ತಲು ಉರುಲುಗಳು ಉಂಟು;
ಭಯವು ನಿನ್ನನ್ನು ಥಕ್ಕನೇ ತಲ್ಲಣ ಪಡಿಸುತ್ತದೆ.
೧೧ ಇಲ್ಲವೆ ನೀನು ನೋಡದ ಹಾಗೆ ಕತ್ತಲುಂಟು;
ಜಲಗಳ ಸಮೂಹವು ನಿನ್ನನ್ನು ಮುಚ್ಚುತ್ತದೆ.

೧೨ ದೇವರು ಆಕಾಶದ ಎತ್ತರದಲ್ಲಿದ್ದಾನಲ್ಲವೋ!
ನಕ್ಷತ್ರಗಳ ತುದಿ ನೋಡು; ಅವು ಎಷ್ಟು ಉನ್ನತ!
೧೩ ಆದರೆ ನೀನು ಹೇಳುತ್ತೀ—ದೇವರು ಏನು ಬಲ್ಲನು?
ಅವನು ಕಾರ್ಗತ್ತಲಲ್ಲಿಂದ ನ್ಯಾಯ ತೀರಿಸುವನೋ!
೧೪ ಮೇಘಗಳು ಅವನ ಮರೆ; ಅವನು ನೋಡುವದಿಲ್ಲ;
ಅವನು ಆಕಾಶ ಮಂಡಲದ ಮೇಲೆ ನಡೆದು ಕೊಳ್ಳುತ್ತಾನೆ.
೧೫ ಪಾತಕ ಜನರು ನಡೆದ,
ಪೂರ್ವಕಾಲದ ಹಾದಿಯನ್ನು ನೋಡಿ ಕೊಂಡಿಯೋ?
೧೬ ಅವರು ತಿಳಿಯದ ಕಾಲದಲ್ಲಿ ಹಿಡಿಯಲ್ಪಟ್ಟರು;
ಅವರ ಅಸ್ತಿವಾರವು ನದಿಯಾಗಿ ಕೊರದು ಹೋಯಿತು.
೧೭ ನಮ್ಮನ್ನು ಬಿಟ್ಟು ಹೋಗು, ಎಂದೂ,
ಸರ್ವಶಕ್ತನು ನಮಗೆ ಏನು ಮಾಡುವನೆಂದೂ, ದೇವರಿಗೆ
ಹೇಳಿದವರು ಅವರೇ.
೧೮ ಆದರೆ ಅವನು ಅವರ ಮನೆಗಳನ್ನು ಒಳ್ಳೇದರಿಂದ ತುಂಬಿದ್ದಾನೆ;
ಆದರೆ ದುಷ್ಟರ ಆಲೋಚನೆಯು ನನಗೆ ದೂರವಾಗಿದೆ.
೧೯ ನೀತಿವಂತರು ನೋಡಿ, ಸಂತೋಷ ಪಡುವರು;
ನಿರಪರಾಧಿಯು ಅವರಿಗೆ ಗೇಲಿ ಮಾಡುವನು.
೨೦ ನಿಶ್ಚಯವಾಗಿ ನಮ್ಮ ಅಸ್ತಿ ಕಡಿಯಲ್ಪಟಲಿಲ್ಲ;
ಅವರ ಉಳಿವನ್ನು ಬೆಂಕಿ ಭಕ್ಷಿಸಿತು.

೨೧ ಅವನಿಗೆ ಪರಿಚಿತನಾಗಿ, ಸಮಾಧಾನದಿಂದಿರು,
ಇದರಿಂದ ನಿನಗೆ ಮೇಲು ಬರುವದು.
೨೨ ಅವನ ಬಾಯಿಯಿಂದ ಬೋಧನೆಯನ್ನು ತಕ್ಕೊ
ಅವನ ಮಾತುಗಳನ್ನು ನಿನ್ನ ಹೃದಯದಲ್ಲಿ ಇಟ್ಟುಕೋ.
೨೩ ಸರ್ವಶಕ್ತನ ಕಡೆಗೆ ನೀನು ತಿರುಗಿ ಕೊಂಡರೆ, ಕಟ್ಟಲ್ಪಟುವಿ;
ಮತ್ತು ನಿನ್ನ ಗುಡಾರಗಳಿಂದ ಅನ್ಯಾಯವನ್ನು ದೂರ ಮಾ
ಡುವಿ.
೨೪ ಧೂಳಿಯಲ್ಲಿ ಕುಂದಣವನ್ನೂ,
ಹಳ್ಳಗಳ ಹರಳುಗಳಲ್ಲಿ ಓಫಿರ್ ಭಂಗಾರವನ್ನೂ ಹಾಕುವಿ;
೨೫ ಆಗ ಸರ್ವಶಕ್ತನು ನಿನಗೆ ಕುಂದಣವೂ,
ಹೊಳೆಯುವ ಬೆಳ್ಳಿಯ ಬೊಕ್ಕಸಗಳೂ ಆಗಿರುವನು.
೨೬ ಯಾಕಂದರೆ ಆಗ ಸರ್ವತ್ರಾಣಿಯಲ್ಲಿ ಆನಂದಗೊಂಡು,
ನಿನ್ನ ಮೋರೆ ದೇವರ ಕಡೆಗೆ ಎತ್ತುವಿ.
೨೭ ನೀನು ಅವನಿಗೆ ವಿಜ್ಞಾಪನೆ ಮಾಡಲು, ನಿನ್ನನ್ನು ಕೇಳುವನು;
ನಿನ್ನ ಹರಕೆಗಳನ್ನು ಸಲ್ಲಿಸುವಿ.
೨೮ ನೀನು ಬಂದು ಮಾತನ್ನು ನಿರ್ಣಯಿಸಿದರೆ,
ಅದು ನಿನಗೆ ನಿಲ್ಲುವದು;
ಮತ್ತು ನಿನ್ನ ಮಾರ್ಗಗಳಲ್ಲಿ ಬೆಳಕು ಮೂಡುವದು.
೨೯ ಬಬ್ಬರು ತಗ್ಗುವಲ್ಲಿ, ಎತ್ತುವದುಂಟು, ಅನ್ನುವಿ;
ತಗ್ಗಿದ ಕಣ್ಣುಳ್ಳವನನ್ನು ಅವನು ರಕ್ಷಿಸುವನು.
೩೦ ನಿರಪರಾಧಿಯಲ್ಲದವನನ್ನು ತಪ್ಪಿಸುವನು;
ನಿನ್ನ ಕೈಗಳ ಶುಚಿತ್ವದಿಂದ ಅವನು ತಪ್ಪಿಸಿ ಕೊಳ್ಳುವನು.

## ೨೩. ಸಂಧಿ.

೧ ಯೋಬನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಈ ಹೊತ್ತೇ ನನ್ನ ನರಳುವಿಕೆ ಕಹಿಯಾಗಿದೆ;
ನನ್ನ ಬಾಧೆ ನನ್ನ ನಿಟ್ಟುಸುರಿಗಿಂತ ಭಾರವಾಗಿದೆ.
3 ನಾನು ತಿಳಿದು ಕೊಂಡು, ಅವನನ್ನು ಕಂಡುಕೊಂಡರೆ, ಎಷ್ಟೋ
ಬಳ್ಳೇದು!
ಅವನ ಪೀಠದತನಕ ಬರುವೆನು.
೪ ನ್ಯಾಯವನ್ನು ಅವನ ಮುಂದೆ ಸಿದ್ಧ ಮಾಡುವೆನು;
ನನ್ನ ಬಾಯಿ ಪ್ರತಿವಾದಗಳಿಂದ ತುಂಬಿಸುವೆನು.
೫ ಅವನು ನನಗೆ ಪ್ರತ್ಯುತ್ತರವಾಗಿ ಕೊಡುವ ಮಾತುಗಳನ್ನು
ತಿಳಿದು,
ಅವನು ಹೇಳುವದನ್ನು ಗ್ರಹಿಸುವೆನು.



೬ ಬಹು ಶಕ್ತಿಯಿಂದ ನನ್ನ ಸಂಗತ ವಾದಿಸುವನೋ!
ಇಲ್ಲ, ನನ್ನಲ್ಲಿ ಶಕ್ತಿ ಇಡುವನು.
೭ ಅಲ್ಲಿ ನೆಟ್ಟನೆಯವನು ಅವನ ಸಂಗತ ತರ್ಕ ಮಾಡುವನು;
ನಾನು ನಿತ್ಯವಾಗಿ ನನ್ನ ನ್ಯಾಯಾಧಿಪತಿಗೆ ತಪ್ಪಿಸಿ ಕೊಳ್ಳು
ವೆನು.
೮ ಇಗೋ, ನಾನು ಮುಂದೆ ನಡೆದರೆ, ಅವನು ಇಲ್ಲ;
ಹಿಂತಿರುಗಿದರೆ, ಅವನನ್ನು ಗ್ರಹಿಸುವದಿಲ್ಲ.
೯ ಎಡ ಕಡೆಯಲ್ಲಿ, ಅವನು ಕೆಲಸ ಮಾಡುವಲ್ಲಿ,
ಅವನನ್ನು ಹಿಡಿಯುವದಿಲ್ಲ;
ಬಲಗಡೆಯಲ್ಲಿ ಅವನು ಅಡಗಿಸಿ ಕೊಳ್ಳುತ್ತಾನೆ,
ನಾನು ಕಾಣುವದಿಲ್ಲ.

೧೦ ಆದರೆ ನನ್ನಲ್ಲಿರುವ ಮಾರ್ಗವನ್ನು ಅವನು ತಿಳಿದಿದ್ದಾನೆ;
ನನ್ನನ್ನು ಶೋಧಿಸಿದಾಗ, ನಾನು ಭಂಗಾರದ ಹಾಗೆ ಹೊರಗೆ
ಬರುವೆನು.
೧೧ ಅವನ ಹೆಜ್ಜೆಯನ್ನು ನನ್ನ ಕಾಲು ಹಿಡಿಯಿತು;
ಅವನ ಮಾರ್ಗವನ್ನು ನಾನು ತೊಲಗದೆ ನೋಡಿ ಕೊಂಡೆನು.
೧೨ ಅವನ ತುಟಿಗಳ ಆಜ್ಞೆಗೆ ನಾನು ಹಿಂಜರಿಯಲಿಲ್ಲ;
ನನ್ನ ಕಟ್ಟಳೆಗೆ ಊಟಕ್ಕಿಂತ ಅವನ ಬಾಯಿಯ ಮಾತುಗಳ
ನ್ನು ಹೆಚ್ಚಾಗಿ ಲಕ್ಷಿಸಿದೆನು.

೧೩ ಆದರೆ ಅವನು ಒಂದೇ ಚಿತ್ತವುಳ್ಳವನು, ಅವನನ್ನು ತಿರು
ಗಿಸುವವನ್ಯಾರು!
ತನ್ನ ಪ್ರಾಣವು ಅಪೇಕ್ಷಿಸುವ ಪ್ರಕಾರವೇ ಮಾಡುತ್ತಾನೆ.
೧೪ ನನಗೆ ನೇಮಿಸಿದ್ದನ್ನು ಅವನು ಈಡೇರಿಸುತ್ತಾನೆ;
ಮತ್ತು ಇವುಗಳಂತೆ ಅನೇಕವು ಅವನಲ್ಲಿ ಅವೆ.
೧೫ ಆದದರಿಂದ ಅವನ ಮುಂದೆ ತಲ್ಲಣ ಪಡುತ್ತೇನೆ;
ಗ್ರಹಿಸಿಕೊಂಡು, ಅವನಿಗೆ ಭಯ ಪಡುತ್ತೇನೆ.
೧೬ ದೇವರು ನನ್ನ ಹೃದಯವನ್ನು ಮೆತ್ತಗೆ ಮಾಡಿದ್ದಾನಲ್ಲ!
ಸರ್ವಶಕ್ತನು ನನ್ನನ್ನು ತಲ್ಲಣ ಪಡಿಸಿದ್ದಾನಲ್ಲ!
೧೭ ಯಾಕಂದರೆ ಕತ್ತಲೆಯ ಮುಂದೆ ನಾನು ನಾಶವಾಗಲಿಲ್ಲ;
ಅಂಧಕಾರವನ್ನು ನನ್ನ ಮುಂದೆ ಅಡಗಿಸಿದ್ದಾನೆ.

## ೨೪. ಸಂಧಿ.

೧ ಸರ್ವತ್ರಾಣಿಗೆ ಕಾಲಗಳು ಮರೆಯಾಗದೆ ಇರಲಾಗಿ,
ಅವನನ್ನು ತಿಳಿದವರು ಅವನ ದಿವಸಗಳನ್ನು ನೋಡದೆ ಇರು
ವದು ಯಾಕೆ!
೨ ಗಡಿಗಳನ್ನು ಬದಲಿಸುತ್ತಾರೆ,
ಮಂದೆಗಳನ್ನು ಸುಲುಕೊಂಡು, ಮೇಯಿಸುತ್ತಾರೆ.
3 ದಿಕ್ಕಿಲ್ಲದವರ ಕತ್ತೆಯನ್ನು ತಕ್ಕೊಂಡು ಹೋಗುತ್ತಾರೆ;
ವಿಧವೆಯ ಎತ್ತನ್ನು ಒತ್ತೆಯಾಗಿ ತಕ್ಕೊಳ್ಳುತ್ತಾರೆ.
೪ ದರಿದ್ರನನ್ನು ಮಾರ್ಗದಿಂದ ತೊಲಗಿಸುತ್ತಾರೆ;
ದೇಶದ ದೀನರು ಕೂಡಾ ಅಡಗಿ ಕೊಳ್ಳುತ್ತಾರೆ.
೫ ಇಗೋ, ಅವರು ಕಾಡಕತ್ತೆಗಳ ಹಾಗೆ ತಮ್ಮ ಕೆಲಸಕ್ಕೆ ಹೊರ
ಡುತ್ತಾರೆ;
ಬೆಳಗ್ಯೆ ಕೊಳ್ಳೆ ಹುಡುಕುತ್ತಾರೆ;
ಅರಣ್ಯವು ಅವರಿಗೂ ಮಕ್ಕಳಿಗೂ ಆಹಾರ ಕೊಡುತ್ತದೆ.
೬ ಹೊಲದಲ್ಲಿ ತಮ್ಮ ತಮ್ಮ ಬೆಳೆಯನ್ನು ಕೊಯಿದು,
ದುಷ್ಟನ ದ್ರಾಕ್ಷೆಯ ತೋಟದಲ್ಲಿ ಹಣ್ಣು ಆರಿಸುತ್ತಾರೆ.
೭ ಬತ್ತಲೆಯಾಗಿ ಬಟ್ಟೆ ಇಲ್ಲದೆ ಮಲಗುತ್ತಾರೆ;
ಛಳಿಯಲ್ಲಿ ಅವರಿಗೆ ಹೊದ್ದು ಕೊಳ್ಳಲಿಕ್ಕೆ ಇಲ್ಲ.
೮ ಬೆಟ್ಟಗಳ ಮಳೆಯಿಂದ ತೊಯಿದಿದ್ದಾರೆ;
ಆಶ್ರಯವಿಲ್ಲದೆ ಬಂಡೆಯನ್ನು ಅಪ್ಪಿ ಕೊಳ್ಳುತ್ತಾರೆ.
೯ ದಿಕ್ಕಿಲ್ಲದವರನ್ನು ಮೊಲೆಯಿಂದ ಕಸು ಕೊಳ್ಳುತ್ತಾರೆ;
ಬಡವನ ಮೇಲಿನವುಗಳನ್ನು ಒತ್ತೆಯಾಗಿ ತಕ್ಕೊಳ್ಳುತ್ತಾರೆ.
೧೦ ಬತ್ತಲೆಯಾಗಿರುವವರನ್ನು ವಸ್ತ್ರವಿಲ್ಲದೆ ತಿರುಗಾಡಿಸುತ್ತಾರೆ;
ಹಸಿದವರು ಸೂಡುಗಳನ್ನು ಹೊರುತ್ತಾರೆ.
೧೧ ಅವರ ಗೋಡೆಗಳ ನಡುವೆ ಎಣ್ಣೆ ಗಾಣ ಆಡುತ್ತಾರೆ;
ತೊಟ್ಟಿಗಳನ್ನು ತುಳಿದು ದಾಹ ಪಡುತ್ತಾರೆ.
೧೨ ಪಟ್ಟಣದೊಳಗಿಂದ ಸಾಯುವವರು ನರಳುತ್ತಾರೆ;
ಕೊಲ್ಲಲ್ಪಟ್ಟವರ ಪ್ರಾಣವು ಕೂಗುತ್ತದೆ;
ದೇವರು ತಪ್ಪು ಹೊರಿಸುವದಿಲ್ಲ.

೧೩ ಅವರು ಬೆಳಕಿಗೆ ದ್ರೋಹ ಮಾಡಿದವರಲ್ಲಿ ಇದ್ದಾರೆ;
ಅದರ ಮಾರ್ಗಗಳನ್ನು ಅರಿಯರು;
ಅದರ ಹಾದಿಗಳಲ್ಲಿ ವಾಸವಾಗಿರುವದಿಲ್ಲ.
೧೪ ಬೆಳ್ಳಗ್ಯೆ ಕೊಲೆಗಾರನು ಎದ್ದು,
ದೀನನನ್ನೂ, ದರಿದ್ರನನ್ನೂ ಕೊಲ್ಲುತ್ತಾನೆ;
ಮತ್ತು ರಾತ್ರಿಯಲ್ಲಿ ಕಳ್ಳನ ಹಾಗೆ ಇದ್ದಾನೆ.
೧೫ ವ್ಯಭಿಚಾರಿಯ ಕಣ್ಣು ಮುಂಗತ್ತಲೆಗೆ ಕಾದು ಕೊಳ್ಳುತ್ತದೆ;
ಯಾವ ಕಣ್ಣು ನನ್ನನ್ನು ಕಾದು ಕೊಳ್ಳ ಬಾರದೆಂದು, ಹೇಳು
ತ್ತಾನೆ;
ಮತ್ತು ಮರೆಗೆ ಮೋರೆ ಇಡುತ್ತಾನೆ.
೧೬ ಹಗಲು ಹೊತ್ತು ಗೊತ್ತು ಮಾಡಿ ಕೊಂಡ
ಮನೆಗಳನ್ನು ಕತ್ತಲೆಯಲ್ಲಿ ಕೊರೆಯುತ್ತಾರೆ;
ಬೆಳಕನ್ನು ತಿಳಿಯರು.
೧೭ ಯಾಕಂದರೆ ಉದಯ ಕಾಲವು ಅವರಿಗೆ ಮರಣದ ನೆರಳಿನ
ಹಾಗೆಯೇ ಇರುವದು;
ಯಾಕಂದರೆ ಮರಣದ ನೆರಳಿನ ದಿಗುಲುಗಳನ್ನು ತಿಳುಕೊಳ್ಳು
ತ್ತಾರೆ.

೧೮ ನೀರುಗಳ ಮೇಲೆ ಹಗುರವಾಗಿ ತೇಲಾಡುತ್ತಾನೆ;
ಅವರ ಭಾಗವು ಭೂಮಿಯ ಮೇಲೆ ಶಪಿಸಲ್ಪಟ್ಟಿದೆ;
ಅವನು ತೋಟಗಳ ಮಾರ್ಗಕ್ಕೆ ತಿರುಗುವದಿಲ್ಲ.
೧೯ ಹಿಮದ ನೀರನ್ನು ಒಣ ಭೂಮಿಯೂ ಬಿಸಿಲೂ ಸುಲು ಕೊಳ್ಳು
ತ್ತವೆ;
ಪಾಪ ಮಾಡಿದವರನ್ನು ಪಾತಾಳವೇ.
೨೦ ಗರ್ಭವು ಅವನನ್ನು ಮರೆತು ಬಿಡುವದು;
ಹುಳ ಅವನಲ್ಲಿ ಸಿಹಿ ಊಟ ಹೊಂದುವದು;
ಇನ್ನು ಅವನ ನೆನಪು ಇರುವದಿಲ್ಲ;
ಮರದ ಹಾಗೆ ಅನ್ಯಾಯವು ಮುರಿಯಲ್ಪಡುವದು.

೨೧ ಹೆರದ ಬಂಜೆಯನ್ನು ಅವನು ಉಪದ್ರ ಪಡಿಸಿದನು;
ವಿಧವೆಗೆ ಉಪಕಾರ ಮಾಡಲಿಲ್ಲ.
೨೨ ಬಲಿಷ್ಠರನ್ನು ತನ್ನ ಶಕ್ತಿಯಿಂದ ಎಳೆಯುತ್ತಾನೆ;
ಅವನು ಎದ್ದರೆ ಜೀವದಲ್ಲಿ ನಂಬಿಕೆ ಇಲ್ಲ.
೨೩ ಅವನನ್ನು ಭದ್ರ ಪಡಿಸುತ್ತಾನೆ; ಅವನು ಅತು ಕೊಳ್ಳುತ್ತಾನೆ;
ಆದಾಗ್ಯೂ ಅವನ ಕಣ್ಣುಗಳು ಅವರ ಮಾರ್ಗಗಳ ಮೇಲೆ ಅವೆ.
೨೪ ಸ್ವಲ್ಪ ಕಾಲ ಉನ್ನತವಾಗಿದ್ದು, ಇಲ್ಲದೆ ಹೋಗುತ್ತಾರೆ; ಕುಗ್ಗಿ ಹೋಗುತ್ತಾರೆ;
ಎಲ್ಲರ ಹಾಗೆ ಮುಚ್ಚಲ್ಪಡುತ್ತಾರೆ!
ತೆನೆಗಳ ತಲೆಯಂತೆ ಕೊಯ್ಯಲ್ಪಡುತ್ತಾರೆ.
೨೫ ಈಗ ಹೀಗೆ ಇಲ್ಲದಿದ್ದರೆ, ಯಾವನು ನನ್ನನ್ನು ಸುಳ್ಳುಗಾರನಾಗ ಮಾಡಿ,
ನನ್ನ ನುಡಿಯನ್ನು ಹೀನ ಮಾಡುವನು!

## ೨೫. ಸಂಧಿ.

೧ ಮತ್ತು ಶೂಕ್ಯನಾದ ಬಿಲ್ದದನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಥೊಕೆತನವೂ ಹೆದರಿಕೆಯೂ ಅವನಲ್ಲಿ ಅನೆ;
ತನ್ನ ಉನ್ನತ ಸ್ಥಳಗಳಲ್ಲಿ ಅವನು ಸಮಾಧಾನ ಮಾಡುತ್ತಾನೆ.
೩ ಅವನ ದಂಡಿನವರಿಗೆ ಲೆಖ್ಖ ಉಂಟೋ!
ಅವನ ಬೆಳಕು ಯಾರ ಮೇಲೆ ಮೂಡುವದಿಲ್ಲ?
೪ ಮನುಷ್ಯನು ದೇವರ ಬಳಿಯಲ್ಲಿ ನೀತಿವಂತನಾಗುವದು ಹ್ಯಾಗೆ?
ಸ್ತ್ರೀಯಿಂದ ಹುಟ್ಟಿದವನು ನಿರ್ಮಲನಾಗಿರುವದು ಹ್ಯಾಗೆ!
೫ ಇಗೋ, ಚಂದ್ರನಾದರೂ ಹೊಳೆಯುವದಿಲ್ಲ;
ನಕ್ಷತ್ರಗಳಾದರೂ ಅವನ ದೃಷ್ಟಿಗೆ ನಿರ್ಮಲವಾಗಿರುವದಿಲ್ಲ.
೬ ಮನುಷ್ಯನೆಂಬ ಹುಳವೂ,
ಮನುಷ್ಯನ ಮಗನೆಂಬ ಕ್ರಿಮಿಯೂ ಎದ್ದು ಮಾತ್ರ!

## ೨೬. ಸಂಧಿ.

೧ ಯೋಬನು ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಶಕ್ತಿಯಿಲ್ಲದವನಿಗೆ ನೀನು ಏನು ಸಹಾಯ ಮಾಡಿದಿ?
ತ್ರಾಣವಿಲ್ಲದ ಕೈಗೆ ಏನು ರಕ್ಷಣೆ ಮಾಡಿದಿ!
೩ ಜ್ಞಾನವಿಲ್ಲದವನಿಗೆ ಏನು ಆಲೋಚನೆ ಹೇಳಿದಿ?
ಸುಜ್ಞಾನವನ್ನು ಬಹಳವಾಗಿ ಬೋಧಿಸಿದಿಯಲ್ಲ!
೪ ಯಾವನ ಸಂಗಡ ಮಾತುಗಳಾಡುತ್ತೀ?
ಯಾವನ ಶ್ವಾಸವು ನಿನ್ನಿಂದ ಹೊರಡುತ್ತದೆ!

೫ ರಾಕ್ಷಸರು ನೀರಿನ ಕೆಳಗೆ ವೇದನೆ ಪಡುತ್ತಾರೆ;
ಅದರ ನಿವಾಸಿಗಳು ಸಹ.
೬ ಅವನ ಮುಂದೆ ಪಾತಾಳ ಬೆತ್ತಲೆಯಾಗಿದೆ;
ನಾಶಸ್ಥಾನಕ್ಕೆ ಮರೆ ಇಲ್ಲ.
೭ ಉತ್ತರವನ್ನು ಶೂನ್ಯದ ಮೇಲೆ ವಿಸ್ತರಿಸುತ್ತಾನೆ;
ಭೂಮಿಯನ್ನು ಏನಿಲ್ಲದ್ದರ ಮೇಲೆ ತೂಗ ಹಾಕುತ್ತಾನೆ.
೮ ನೀರನ್ನು ತನ್ನ ಮೇಘಗಳಲ್ಲಿ ಕಟ್ಟುತ್ತಾನೆ;
ಮೇಘವು ಅದರ ಕೆಳಗೆ ಹೀಳಿ ಹೋಗದು;
೯ ನಿಲಾಸನದ ಮುಖವನ್ನು ಹಿಂದೆಗೆಯುತ್ತಾನೆ;
ಅದರ ಮುಂದೆ ತನ್ನ ಮೇಘವನ್ನು ವಿಸ್ತರಿಸುತ್ತಾನೆ.
೧೦ ಬೆಳಕು ಕತ್ತಲೆಯ ಸಂಗಡ ಮುಡಿಯುವ ತನಕ,
ನೀರಿನ ಸುತ್ತಲು ಮೇರೆಯನ್ನು ಕಟ್ಟಿದ್ದಾನೆ.
೧೧ ಆಕಾಶದ ಸ್ತಂಭಗಳು ಅಲ್ಲಾಡುತ್ತವೆ;
ಅವನ ಗದರಿಕೆಗೆ ಆಶ್ಚರ್ಯ ಪಡುತ್ತವೆ.
೧೨ ತನ್ನ ಶಕ್ತಿಯಿಂದ ಸಮುದ್ರವನ್ನು ಛೇದಿಸುತ್ತಾನೆ;
ತನ್ನ ವಿವೇಕದಿಂದ ಗರ್ವಿಷ್ಠನನ್ನು ಘಾಯ ಮಾಡುತ್ತಾನೆ.
೧೩ ಅವನ ಆತ್ಮದಿಂದ ಆಕಾಶವು ಶೃಂಗಾರವಾಗಿದೆ;
ಅವನ ಕೈ ಓಡುವ ಸರ್ಪವನ್ನು ರೂಪಿಸಿತು.
೧೪ ಇಗೋ, ಇವು ಅವನ ಮಾರ್ಗದ ಅಂತ್ಯಗಳು; ಅವನನ್ನು ಕುಶಿತು ಪಿಸುಗುಟ್ಟು ಮಾತ್ರ ಕೇಳ್ದಿದ್ದೇವೆ;
ಆದರೆ ಅವನ ಪರಾಕ್ರಮದ ಗುಡುಗನ್ನು ಯಾವನು ಗ್ರಹಿಸಿ ಕೊಳ್ಳುವನು!

## ೨೭. ಸಂಧಿ.

೧ ಯೋಬನು ಮತ್ತು ತನ್ನ ಸಾಮತಿ ಎತ್ತಿ ಹೇಳ್ದಿದ್ದೇನಂದರೆ—

೨ ನನ್ನ ನ್ಯಾಯವನ್ನು ತೊಲಗಿಸಿದ ದೇವಾಣೆ—
ನನ್ನ ಜೀವವನ್ನು ಕಹಿ ಮಾಡಿದ ಸರ್ವ ಶಕ್ತನ ಆಣೆ—
೩ ನನ್ನ ಶ್ವಾಸವು ನನ್ನಲ್ಲಿಯೂ,
ದೇವರ ಆತ್ಮವು ನನ್ನ ಮೂಗಿನಲ್ಲಿಯೂ ಇರುವ ಸರ್ವ ಕಾಲದ ವರೆಗೂ,
೪ ನನ್ನ ತುಟಿಗಳು ಅನ್ಯಾಯ ಮಾತಾಡವು;
ನನ್ನ ನಾಲಿಗೆ ಮೋಸ ನುಡಿಯದು.
೫ ನಿಮ್ಮನ್ನು ನೀತಿವಂತರನ್ನುವದು ನನಗೆ ದೂರವಿರಲಿ;
ನಾನು ಶೀರಿ ಹೋಗುವ ವರಿಗೂ ನನ್ನ ಸಂಪೂರ್ಣತ್ವವನ್ನು ನನ್ನಿಂದ ತೊಲಗಿಸಲಿಕ್ಕಿಲ್ಲ.
೬ ನನ್ನ ನೀತಿಯನ್ನು, ದೃಢವಾಗಿ ಹಿಡು ಕೊಂಡಿದ್ದೇನೆ.
ಅದನ್ನು ನಾನು ಸಡ್ಲ ಬಿಡುವದಿಲ್ಲ;
ನಾನು ಇರುವ ಮಟ್ಟಿಗೂ ನನ್ನ ಹೃದಯವು ನನ್ನನ್ನು ನಿಂದಿಸುವದಿಲ್ಲ.

೭ ನನ್ನ ಶತ್ರು ದುಷ್ಟನ ಹಾಗಿರಲಿ;
ನನಗೆ ವಿರೋಧವಾಗಿ ಏಳುವವನು ಅನ್ಯಾಯವಂತನ ಹಾಗಿರಲಿ.
೮ ಯಾಕಂದರೆ, ದೇವರು ಅವನ ಪ್ರಾಣವನ್ನು ಎಳೆದರೆ,
ಲಾಭ ಮಾಡುವದರಲ್ಲಿ ಭ್ರಷ್ಟನ ನಿರೀಕ್ಷೆ ಏನು!
೯ ಅವನ ಮೇಲೆ ಇಕ್ಕಟ್ಟು ಬಂದರೆ, ಅವನ ಮೊರೆಯನ್ನು ದೇವರು ಕೇಳುವನೋ!
೧೦ ಇಲ್ಲವೆ ಸರ್ವ ಶಕ್ತನಲ್ಲಿ ಆನಂದವಾಗಿರುವನೋ!
ಸರ್ವ ಕಾಲದಲ್ಲಿ ದೇವರನ್ನು ಕರೆಯುವನೋ!

೧೧ ದೇವರ ಕೈಯನ್ನು ಕುರಿತು ನಿಮ್ಮನ್ನು ಬೋಧಿಸುವೆನು;
ಸರ್ವ ಶಕ್ತನಲ್ಲಿ ಇರುವವುಗಳನ್ನು ಮರೆ ಮಾಡೆನು.



೧೨ ಇಗೋ, ನೀವೆಲ್ಲರು ದೃಷ್ಟಿಸಿದ್ದೀರಿ;
ಯಾಕೆ ಈ ಪ್ರಕಾರ ಕೇವಲ ಮಾಯವಾಗಿ ಹೋಗಿದ್ದೀರಿ!
೧೩ ಇದು ದೇವರ ಬಳಿಯ ದುಷ್ಟ ಮನುಷ್ಯನ ಪಾಲಾಗಿದೆ;
ಹಟದವರು ಸರ್ವ ಶಕ್ತನಿಂದ ಹೊಂದುವ ಬಾಧ್ಯತೆ ಇದೇ.
೧೪ ಅವನ ಮಕ್ಕಳು ಹೆಚ್ಚಿದರೆ, ಖಡ್ಗಕ್ಕೆ ಆಗುವರು;
ಅವನ ವೊಳಿಕೆಯಾದವರು ಕೊಟ್ಟಿಯಿಂದ ತೃಪ್ತಿ ಹೊಂದರು.
೧೫ ಅವನ ಉಳಿದವರು ಮರಣದಲ್ಲಿ ಹೂಣಲ್ಪಡುವರು;
ಅವನ ವಿಧವೆಗಳು ಅಳಲೆ ಇರುವರು.
೧೬ ಅವನು ಧೂಳಿಯಂತೆ ಬೆಳ್ಳಿ ಕೂಡಿಸಿಟ್ಟು,
ಮಣ್ಣಿನಂತೆ ವಸ್ತ್ರಗಳನ್ನು ಸಿದ್ಧ ಮಾಡಿ ಕೊಂಡರೆ,
೧೭ ಸಿದ್ಧ ಮಾಡಿ ಕೊಳ್ಳುತ್ತಾನಷ್ಟೆ, ನೀತಿವಂತನು ಉಟ್ಟು ಕೊಳ್ಳುತ್ತಾನೆ;
ಮತ್ತು ಬೆಳ್ಳಿಯನ್ನು ನಿರಪರಾಧಿ ಪಾಲಿಡುತ್ತಾನೆ.
೧೮ ಹುಳದ ಹಾಗೆ ಮನೆಯನ್ನೂ,
ಕಾವಲಗಾರನು ಮಾಡಿದ್ದರ ಹಾಗೆ ತನ್ನ ಗುಡುಸಲನ್ನೂ ಕಟ್ಟಿದ್ದಾನೆ.
೧೯ ಐಶ್ವರ್ಯವಂತನು ಮಲಗುತ್ತಾನೆ; ಕೂಡಿಸಲ್ಪಡುವದಿಲ್ಲ;
ಕಣ್ಣು ತೆರೆದರೆ, ಅವನು ಇಲ್ಲ.
೨೦ ದಿಗುಲುಗಳು ನೀರಿನಂತೆ ಅವನನ್ನು ಒತ್ತುತ್ತವೆ;
ರಾತ್ರಿಯಲ್ಲಿ ಬಿರು ಘುಳಿ ಅವನನ್ನು ಸುಲು ಕೊಳ್ಳುತ್ತದೆ.
೨೧ ಮೂಡಣ ಘುಳಿ ಅವನನ್ನು ಎತ್ತುತ್ತದೆ; ಅವನು ಹೋಗಿ ಬಿಡುತ್ತಾನೆ;
ಅದು ಅವನನ್ನು ಅವನ ಸ್ಥಳದಿಂದ ಹಾರಿಸಿ ಬಿಡುತ್ತದೆ.
೨೨ ಕರುಣ ಗೊಳ್ಳದೆ, ಅವನ ಮೇಲೆ ಹಾಕುತ್ತಾನೆ;
ಅವನ ಕೈಯಲ್ಲಿಂದ ಅವನು ಓಡಿಯೇ ಓಡುತ್ತಾನೆ.
೨೩ ಅವನ ಮೇಲೆ ಚಪ್ಪಳೆ ಬಡಿಯುತ್ತಾರೆ;
ಅವನ ಸ್ಥಳದೊಳಗಿಂದ ಅವನನ್ನು ಛೀ ಎಂದು ಹೊರಡಿಸುತ್ತಾರೆ.

## ೨೮. ಸಂಧಿ.

೧ ಬೆಳ್ಳಿಗೆ ಗಣಿಯೂ,
ಭಂಗಾರಕ್ಕೆ ಜೊಕ್ಕ ಮಾಡುವ ಸ್ಥಳವೂ ಉಂಟಲ್ಲ!
೨ ಕಬ್ಬಿಣವನ್ನು ಧೂಳಿಯಿಂದ ತೆಗೆಯುತ್ತಾರೆ;
ಕಲ್ಲನ್ನು ತಾಂಬ್ರವಾಗ ಕರಗಿಸುತ್ತಾರೆ.
೩ ಕತ್ತಲೆಗೆ ಮೇರೆ ಇಡುತ್ತಾರೆ;
ಅಂಧಕಾರದಲ್ಲಿಯೂ ಮರಣದ ನೆರಳಿನಲ್ಲಿಯೂ ಇರುವ ಕಲ್ಲುಗಳನ್ನು
ಕಟ್ಟಿಕಡೇ ವರಿಗೂ ಅವರು ಶೋಧಿಸುತ್ತಾರೆ.
೪ ನಿವಾಸಿಗೆ ದೂರವಾಗಿ ಹಳ್ಳ ಅಗಿಯುತ್ತಾರೆ;
ಕಾಲು ತಪ್ಪಿ ತೂಗ್ಯಾಡುತ್ತಾರೆ; ಮನುಷ್ಯರಿಗೆ ದೂರವಾಗಿ ತಿರುಗಾಡುತ್ತಾರೆ.
೫ ಭೂಮಿ ಆದರೆ, ಅದಕೊಳಗಿಂದ ರೊಟ್ಟಿ ಬೊಳೆಯುವದು;
ಆದರೆ ಅದರ ಕೆಳಗಿನದು
ಬೆಂಕಿಯಿಂದಾದ ಹಾಗೆ ಬದಲಾಗುವದು.
೬ ಅದರ ಕಲ್ಲುಗಳು ನೀಲಗಳ ಸ್ಥಳವಾಗಿವೆ;
ಭಂಗಾರದ ಧೂಳು ಅದಕ್ಕೆ ಉಂಟು.
೭ ಆ ಹಾದಿಯನ್ನು ಪಕ್ಷಿ ತಿಳಿಯಲಿಲ್ಲ;
ಹದ್ದಿನ ಕಣ್ಣು ಅದನ್ನು ದೃಷ್ಟಿಸಲಿಲ್ಲ.
೮ ಮದದ ಮಕ್ಕಳು ಅದರಲ್ಲಿ ನಡಿಯಲಿಲ್ಲ;
ಸಿಂಹವು ಅದನ್ನು ದಾಟಲಿಲ್ಲ.
೯ ಬೊಣಚು ಕಲ್ಲಿನ ಮೇಲೆ ಕೈ ಹಾಕುತ್ತಾರೆ;
ಪರ್ವತಗಳನ್ನು ಬುಡದಿಂದ ಮಗುಚುತ್ತಾರೆ.
೧೦ ಬಂಡೆಗಳಲ್ಲಿ ಮಾರ್ಗ ಕೊರೆದು ಬಿಡುತ್ತಾರೆ;
ಅವರ ಕಣ್ಣು ಪ್ರಿಯನಾದದ್ದನ್ನೆಲ್ಲಾ ನೋಡುತ್ತದೆ.
೧೧ ಹಳ್ಳಗಳ ಸೋರುವಿಕೆಯನ್ನು ಕಟ್ಟಿ,
ಮರೆಯಾದದ್ದನ್ನು ಬೆಳಕಿಗೆ ತರುತ್ತಾರೆ.

೧೨ ಆದರೆ ಜ್ಞಾನವು ಎಲ್ಲಿ ದೊರಕುವದು?
ಗ್ರಹಿಕೆ ಇರುವ ಸ್ಥಳ ಎಲ್ಲಿ?
೧೩ ಮನುಷ್ಯನು ಅದರ ಬೆಲೆಯನ್ನು ತಿಳುಕೊಳ್ಳುವದಿಲ್ಲ;
ಜೀವಿತರ ಭೂಮಿಯಲ್ಲಿ ಅದು ದೊರಕುವದಿಲ್ಲ.
೧೪ ಅಗಾಧವು, ಅದು ನನ್ನಲ್ಲಿ ಇಲ್ಲ, ಅನ್ನುತ್ತದೆ;
ಸಮುದ್ರವು, ನನ್ನ ಬಳಿಯಲ್ಲಿ ಇಲ್ಲ, ಅನ್ನುತ್ತದೆ.
೧೫ ಅವರಂಜಿಯನ್ನು ಅದಕ್ಕೆ ಬದಲಾಗಿ ಕೊಡುವದಿಲ್ಲ;
ಅದರ ಕ್ರಯಕ್ಕಾಗಿ ಬೆಳ್ಳಿ ತೂಗುವದಿಲ್ಲ.
೧೬ ಅದನ್ನು ಓಫಿರಿನ ಭಂಗಾರಕ್ಕೂ
ಪ್ರಿಯವಾದ ಗೋಮೇಧಿಕಕ್ಕೂ ನೀಲಕ್ಕೂ ತೂಗಿ ಕೊಡುವದಿಲ್ಲ.
೧೭ ಭಂಗಾರವೂ ಸ್ಫಟಿಕವೂ ಅದಕ್ಕೆ ಈಡಾಗಿರುವದಿಲ್ಲ;
ಕುಂದಣದ ಸಾಮಗ್ರಿಗಳು ಅದರ ಕ್ರಯವಾಗಿರುವದಿಲ್ಲ.
೧೮ ಹವಳವನ್ನೂ ತೃಣಗ್ರಾಹಿಯನ್ನೂ ನೆನಪು ಮಾಡುವದಿಲ್ಲ;
ಜ್ಞಾನದ ಸಂಪತ್ತು ಮುತ್ತುಗಳಿಗಿಂತ ವಾಸಿ.
೧೯ ಕೂಷಿನ ಪುಷ್ಯರಾಗ ಅದಕ್ಕೆ ಈಡಾಗಿರುವದಿಲ್ಲ;
ಶುದ್ಧ ಭಂಗಾರಕ್ಕೆ ಅದನ್ನು ತೂಗಿಸುವದಿಲ್ಲ.
೨೦ ಆದರೆ ಜ್ಞಾನವು ಎಲ್ಲಿಂದ ಬರುವದು?
ಗ್ರಹಿಕೆಯ ಸ್ಥಳವು ಎಲ್ಲಿ?
೨೧ ಎಲ್ಲಾ ಜೀವಿಗಳ ಕಣ್ಣುಗಳಿಗೆ ಅದು ಮರೆಯಾಗಿದೆ;
ಆಕಾಶದ ಪಕ್ಷಿಗಳಿಗೆ ಅಡಗಿ ಕೊಂಡಿದೆ.
೨೨ ನಾಶಸ್ಥಾನವೂ ಮರಣವೂ ಅನ್ನುತ್ತವೆ—
ಅದರ ಸುದ್ದಿಯನ್ನು ನನ್ನು ಕಿವಿಗಳಿಂದ ಕೇಳ್ದಿದ್ದೇವೆ.

೨೩ ದೇವರು ಅದರ ಮಾರ್ಗವನ್ನುಗ್ರಹಿಸಿ ಕೊಂಡಿದ್ದಾನೆ;
ಅವನೇ ಅದರ ಸ್ಥಳವನ್ನು ತಿಳ್ದಿದ್ದಾನೆ.
೨೪ ಯಾಕಂದರೆ ಘುಳಿಯನ್ನು ತೂಗ ಹಾಕುವದಕ್ಕೆ,
ಅವನು ಭೂಮಿಯ ಅಂತ್ಯಗಳಿಗೆ ದೃಷ್ಟಿಸಿ,
ಆಕಾಶವೆಲ್ಲಾದರ ಕೆಳಗೆ ನೋಡುತ್ತಾನೆ.
೨೫ ನೀರನ್ನು ಅಳತೆಯಿಂದ ಪ್ರಮಾಣ ನೋಡಿದ್ದಾನೆ.
೨೬ ಅವನು ಮಳೆಗೆ ಕಟ್ಟಳೆಯನ್ನೂ,
ಗುಡುಗುಗಳ ಶಿಡಿಲಿಗೆ ಮಾರ್ಗವನ್ನೂ ಮಾಡಿದಾಗ,

೨೫ ಆಗಲೇ ಅದನ್ನು ನೋಡಿ, ವಿವರಿಸಿದನು;
ಅದನ್ನು ಸ್ಥಾಪಿಸಿ, ಪರಿಶೋಧಿಸಿದನು.
೨೮ ಮತ್ತು ಮನುಷ್ಯನಿಗೆ ಹೇಳಿದ್ದೇನಂದರೆ—ಇಗೋ,
ಕರ್ತನ ಭಯವೇ ಜ್ಞಾನ; ಕೇಡಿನಿಂದ ತೊಲಗುವದೇ ಗ್ರಹಿಕೆ.

## ೨೯. ಸಂಧಿ.

೧ ಯೋಬನು ಮತ್ತು ತನ್ನ ಸಾಮತಿ ಎತ್ತಿ ಹೇಳಿದ್ದೇನಂದರೆ—

೨ ಓ ಹೋ, ಮುಂಚಿನ ತಿಂಗಳುಗಳ ಹಾಗೆಯೂ,
ದೇವರು ನನ್ನನ್ನು ಕಾಪಾಡಿದ ದಿವಸಗಳ ಹಾಗೆಯೂ ನನಗೆ
ಆದರೆ, ಒಳ್ಳೇದು.
3 ಆಗ ಅವನ ದೀಪ ನನ್ನ ತಲೆಯ ಮೇಲೆ ಹೊಳೆಯಿತು;
ಅವನ ಬೆಳಕಿನಿಂದ ಕತ್ತಲಲ್ಲಿ ನಡೆದೆನು.
೪ ನಾನು ನನ್ನ ಬೈರಿನ ದಿವಸಗಳಲ್ಲಿದ್ದಾಗ,
ದೇವರ ಅನ್ಯೋನ್ಯವು ನನ್ನ ಗುಡಾರದ ಮೇಲೆ ಇತ್ತು.
೫ ಸರ್ವ ಶಕ್ತನು ಇನೂಂ ನನ್ನ ಸಂಗಡ ಇದ್ದನು;
ನನ್ನ ಸುತ್ತಲೂ ನನ್ನ ಹುಡುಗರು ಇದ್ದರು.
೬ ನನ್ನ ಚರಣಗಳನ್ನು ಬೆಣ್ಣೆಯಿಂದ ತೊಳೆಯುತ್ತಾ ಇದ್ದೆನು;
ಬಂಡೆಯು ನನ್ನ ಬಳಿಯಲ್ಲಿ ಎಣ್ಣೆಯ ಪ್ರವಾಹಗಳನ್ನೂ ಹೋ
ಯ್ಯುತ್ತಿತ್ತು.

೭ ಪಟ್ಟಣವನ್ನು ಹಾದು, ಬಾಗಲಿಗೆ ಹೊರಟು ಹೋಗಿ,
ನನ್ನ ಮಣೆಯನ್ನು ಬೀದಿಯಲ್ಲಿ ಹಾಕುತ್ತಾ ಇದ್ದೆನು.
೮ ಹುಡುಗರು ನನ್ನನ್ನು ನೋಡಿ, ಅಡಗಿ ಕೊಳ್ಳುತ್ತಿದ್ದರು;
ನಕೆಯವರು ಎದ್ದು ನಿಂತರು.
೯ ಪ್ರಧಾನರು ನುಡಿಗಳನ್ನು ಬಿಗಿ ಹಿಡಿದು,
ತಮ್ಮ ಬಾಯಿಯ ಮೇಲೆ ಕೈ ಹಾಕಿ ಕೊಂಡರು.
೧೦ ಘನವುಳ್ಳವರ ಕಣ್ಣು ಅಡಗಿತು;
ಅವರ ನಾಲಿಗೆ ಅವರ ಅಂಗಳಕ್ಕೆ ಅಂಟಿತು.
೧೧ ಕೇಳುವ ಕಿವಿ ನನ್ನನ್ನು ಭಾಗ್ಯವಂತನನ್ನುತ್ತಿತ್ತು;
ಕಾಣುವ ಕಣ್ಣು ನನಗೆ ಸಾಕ್ಷಿ ಕೊಡುತ್ತಿತ್ತು.
೧೨ ಯಾಕಂದರೆ ಬೊಕೆ ಇಡುವ ದೀನನನೂಂ,
ಸಹಾಯವಿಲ್ಲದ ದಿಕ್ಕಿಲ್ಲದವರನ್ನೂ ತಪ್ಪಿಸಿದೆನು.
೧೩ ನಾಶವಾಗುವವನ ಆಶೀರ್ವಾದವು ನನ್ನ ಮೇಲೆ ಬರುತ್ತಿತ್ತು;
ವಿಧವೆಯ ಹೃದಯವನ್ನು ಉತ್ಸಾಹ ಪಡಿಸಿದೆನು.
೧೪ ನೀತಿಯನ್ನು ಧರಿಸಿ ಕೊಂಡೆನು; ಅದೇ ನನಗೆ ವಸ್ತ್ರವಾಗಿತ್ತು;
ನಿಲುವಂಗಿಯ ಹಾಗೆಯೂ ಮುಂಡಾಸದ ಹಾಗೆಯೂ ನನ್ನ
ನ್ಯಾಯವು ನನಗೆ ಇತ್ತು.
೧೫ ನಾನು ಕುರುಡನಿಗೆ ಕಣ್ಣೂ,
ಕುಂಟನಿಗೆ ಕಾಲೂ ಆಗಿದ್ದೆನು.
೧೬ ದರಿದ್ರರಿಗೆ ನಾನು ತಂದೆಯಾಗಿದ್ದೆನು;
ನಾನರಿಯದವನ ವ್ಯಾಜ್ಯವನ್ನು ಪರಿಶೋಧಿಸಿದೆನು.
೧೭ ಅನ್ಯಾಯದವನ ದವಡೆ ಹಲ್ಲುಗಳನ್ನು ಮುರಿದೆನು;
ಅವನ ಹಲ್ಲುಗಳೊಳಗಿಂದ ಬೇಟೆಯನ್ನು ತೆಗೆದೆನು.
೧೮ ನನ್ನ ಗೂಡಿನಲ್ಲಿ ಉಸುರು ಬಿಡುವೆನು;
ಮರಳಿನಂತೆ ನನ್ನ ದಿವಸಗಳನ್ನು ಹೆಚ್ಚಿಸುವೆನು, ಅಂದೆನು.
೧೯ ನನ್ನ ಬೇರು ನೀರಿನ ಬಳಿಯ ಹಬ್ಬಿ ಇತ್ತು;
ನನ್ನ ಕೊಂಬೆಯ ಮೇಲೆ ಮಂಜು ಉಳುಕೊಳ್ಳುತ್ತಾ ಇತ್ತು.
೨೦ ನನ್ನ ಘನವು ನನ್ನಲ್ಲಿ ಹೊಸದಾಗಿತ್ತು;
ನನ್ನ ಬಿಲ್ಲು ನನ್ನ ಕೈಯಲ್ಲಿ ಎಳೆದಾಗಿತ್ತು.

೨೧ ನನಗೆ ಕಿವಿ ಕೊಟ್ಟು, ಎದುರು ನೋಡಿ,
ನನ್ನ ಆಲೋಚನೆಗೆ ಮೌನವಾಗಿದ್ದರು.
೨೨ ನನ್ನ ಮಾತಿನ ಮೇಲೆ ಅವರು ಬೇರೆ ಮಾತಾಡಲಿಲ್ಲ;
ನನ್ನ ನುಡಿ ಅವರ ಮೇಲೆ ಸುರಿಯಿತು.
೨೩ ಮಳೆಯಂತೆ ನನ್ನನ್ನು ಎದುರು ನೋಡುತ್ತಿದ್ದರು;
ಹಿಂಗಾರು ಮಳೆಗೆಂಬ ಹಾಗೆ ಬಾಯಿ ತೆರೆದರು.
೨೪ ನಂಬಿಕೆ ಇಲ್ಲದವರ ಕಡೆಗೆ ನಗೆ ತೋರಿಸಿದೆನು;
ನನ್ನ ಮುಖದ ಕಳೆ ಅವರು ಕುಂದಿಸಲಿಲ್ಲ.
೨೫ ಅವರ ಮಾರ್ಗವನ್ನು ಆರಿಸಿ ಕೊಂಡು, ತಲೆಯಾಗಿ ಕೂತು,
ಅರಸನಂತೆ ಸಂಗಿನಲ್ಲಿ ಆಸೀನನಾಗಿದ್ದೆನು,
ಗೋಳಾಡುವವರನ್ನು ಸಂತೈಸುವವನಾಗಿಯೇ.

## ೩೦. ಸಂಧಿ.

೧ ಆದರೆ ಈಗ ದಿವಸಗಳಲ್ಲಿ ನನಗಿಂತ ಚಿಕ್ಕವರು ನನ್ನನ್ನು
ನೋಡಿ ನಗುತ್ತಾರೆ;
ಅವರ ತಂದೆಗಳನ್ನು ನನ್ನ ಕುರಿ ಮಂದೆಯ ನಾಯಿಗಳ ಸಂಗ
ಡ ಸೇರಿಸುವದಕ್ಕೆ ಉದಾಸೀನ ಮಾಡಿದೆನು.
೨ ಅವರ ಕೈಗಳ ಶಕ್ತಿ ಸಹ ನನಗೆ ಯಾಕೆ?
ಅವರಲ್ಲಿ ಪೂರ್ಣತ್ವವು ನಾಶವಾಯಿತು.
3 ಕೊರತೆಯಿಂದಲೂ ಬರದಿಂದಲೂ ಆರಿದವರಾಗಿ,
ಪೂರ್ವದಲ್ಲಿ ಹಾಳೂ ಬೈಲೂ ಆದ ಅರಣ್ಯದಲ್ಲಿ ಅಗಿದು, ತಿ
ನ್ನುತ್ತಾರೆ.
೪ ಪೊದೆಯ ಹತ್ತರ ಉಪ್ಪಿನ ಸೊಪ್ಪು ಕೀಳುವವರೇ;
ಜಾಲಿಯ ಬೇರುಗಳೇ ಅವರ ಕೊಟ್ಟಿ.
೫ ಜನರ ವಾಸದಿಂದ ಅವರನ್ನು ಹೊರಗೆ ಹಾಕುತ್ತಾರೆ;
ಕಳ್ಳರ ಹಿಂದಿನಂತೆ ಅವರ ಹಿಂದೆ ಕೂಗುತ್ತಾರೆ.
೬ ಭಯಂಕರವಾದ ತಗ್ಗುಗಳಲ್ಲಿಯೂ,
ಮಣ್ಣಿನ ಬಂಡೆಯ ಗುಹೆಗಳಲ್ಲಿಯೂ ಅವರು ವಾಸವಾಗಿರ
ಬೇಕು.
೭ ಪೊದೆಗಳ ನಡುವೆ ಕೂಗುತ್ತಾರೆ;
ತುರಿಕೆಗಳ ಕೆಳಗೆ ಕೂಡುತ್ತಾರೆ.
೮ ಹುಚ್ಚರ ಮಕ್ಕಳಾಗಿಯೂ,
ಹೆಸರಿಲ್ಲದವರ ಮಕ್ಕಳಾಗಿಯೂ,
ದೇಶದೊಳಗಿಂದ ದೊಬ್ಬಲ್ಪಡುತ್ತಾರೆ.
೯ ಆದರೆ ಈಗ ಅವರ ಹಾಸ್ಯದ ರಾಗವೂ,
ಅವರ ಗಾದೆಯೂ ಆದೆನು.
೧೦ ನನ್ನನ್ನು ಅಸಂಹಿಸುತ್ತಾರೆ; ನನಗೆ ದೂರ ಹೋಗುತ್ತಾರೆ;
ನನ್ನ ಮುಖದ ಮುಂದೆ ಉಗುಳ್ಳ ಹಿಂದೆಗೆಯುವದಿಲ್ಲ.
೧೧ ಯಾಕಂದರೆ ತನ್ನ ಹಗ್ಗವನ್ನು ಸಡ್ಡಿಸಿ, ನನ್ನನ್ನು ಶ್ರಮೆ ಪಡಿ
ಸುತ್ತಾನೆ;



ನನ್ನ ಮುಖದ ಮುಂದೆ ಕಡಿವಾಣ ಬಿಡುತ್ತಾರೆ;
೧೨ ಬಲಕಡೆಯಲ್ಲಿ ಹಿಂಡಾಗಿ ಏಳುತ್ತಾರೆ;
ನನ್ನ ಕಾಲುಗಳಿಗೆ ಎಸೆಯುತ್ತಾರೆ;
ನಾಶನಕರವಾದ ತಮ್ಮ ಹಾದಿಗಳನ್ನು ನನಗೆ ವಿರೋಧವಾಗಿ ಕ
ಟ್ಟುತ್ತಾರೆ.
೧3 ನನ್ನ ದಾರಿಯನ್ನು ಕೆಡಿಸುತ್ತಾರೆ;
ನನ್ನ ನಷ್ಟಕ್ಕಾಗಿ ಸಹಾಯ ಮಾಡುತ್ತಾರೆ;
ಅವರಿಗೆ ಸಹಾಯವಿಲ್ಲ.
೧೪ ಅಗಲವಾದ ಬಿರಿಕಿನಂತೆ ಬರುತ್ತಾರೆ;
ನಾಶನದೊಂದಿಗೆ ಹೊರಳಿ ಬರುತ್ತಾರೆ.
೧೫ ದಿಗುಲುಗಳು ನನಗೆ ವಿರೋಧವಾಗಿ ತಿರಿಗಿ ಅವೆ;
ಅವು ಘಾಳಿಯ ಹಾಗೆ ನನ್ನ ಘನವನ್ನು ಹಿಂದಟ್ಟಿತ್ತವೆ;
ಮೇಘದ ಹಾಗೆ ನನ್ನ ರಕ್ಷಣೆಯು ದಾಟಿ ಹೋಗುತ್ತದೆ.

೧೬ ಆದರೆ ಈಗ ನನ್ನ ಪ್ರಾಣವು ನನ್ನಲ್ಲಿ ಹೊಯ್ಯ ಪಡುವ ದು
ದೀನತ್ವದ ದಿವಸಗಳು ನನ್ನನ್ನು ಹಿಡಿದವೆ.
೧೭ ರಾತ್ರಿಗೆ ನನ್ನ ಎಲುಬುಗಳು ನನ್ನಲ್ಲಿ ತಿವಿಯಲ್ಪಡುತ್ತವೆ;
ನನ್ನನ್ನು ಅಗಿಯುವವುಗಳು ಮಲಗಿ ಕೊಳ್ಳುವದಿಲ್ಲ.
೧೮ ಮಹಾ ಶಕ್ತಿಯಿಂದ ನನ್ನ ವಸ್ತ್ರ ಬದಲಾಗುತ್ತದೆ;
ನನ್ನ ರೋಗವು ನನ್ನ ಅಂಗಿಯ ಹಾಗೆ ನನ್ನನ್ನು ಹತ್ತಿ ಕೊಂ
ಡದೆ.
೧೯ ಕೆಸರಿನಲ್ಲಿ ನನ್ನನ್ನು ದೊಬ್ಬುತ್ತಾನೆ;
ಧೂಳಿಗೂ ಬೂದಿಗೂ ಸಮಾನವಾದೆನು.
೨೦ ನಿನಗೆ ಮೊರೆ ಇಡುತ್ತೇನೆ, ಆದರೆ ನೀನು ಉತ್ತರ ಕೊಡುವದಿಲ್ಲ;
ನಿಂತು ಕೊಳ್ಳುತ್ತೇನೆ, ಆದರೆ ನೀನು ನನ್ನನ್ನು ಲಕ್ಷಿಸುವದಿಲ್ಲ.
೨೧ ನೀನು ಮಾರ್ಪಟ್ಟು, ನನಗೆ ಕ್ರೂರವಾದಿ;
ನಿನ್ನ ಕೈಯ ಶಕ್ತಿಯಿಂದ ನನ್ನನ್ನು ಎದುರಿಸುತ್ತೀ.
೨೨ ನನ್ನನ್ನು ಘಾಳಿಗೆ ಎತ್ತುತ್ತೀ;
ಅದನ್ನು ಹತ್ತಿ ಹೋಗುವ ಹಾಗೆ ಮಾಡಿ, ನನ್ನನ್ನು ಪೂರ್ಣ
ವಾಗಿ ಕ್ಷೀಣ ಮಾಡುತ್ತೀ.
೨3 ಯಾಕಂದರೆ ಮರಣಕ್ಕೂ,
ಎಲ್ಲಾ ಜೀವಿಗಳ ನೇಮಕವಾದ ಮನೆಗೂ ನನ್ನನ್ನು ತಿರುಗಿಸುವಿ,
ಎಂದು ತಿಳಿದಿದ್ದೇನೆ.
೨೪ ಆದರೆ ಅವನ ನಾಶನದಲ್ಲಿ ಅವರು ಬೊಕೆ ಇಟ್ಟರೆ,
ಸಮಾಧಿಗೆ ಅವನು ಕೈ ಚಾಚುವದಿಲ್ಲ.
೨೫ ಕಷ್ಟದ ದಿವಸಗಳಲ್ಲಿ ವರಿಗೋಸ್ಕರ ಅತ್ತೆನಲ್ಲವೋ?
ದರಿದ್ರನಿಗೋಸ್ಕರ ನನ್ನ ಪ್ರಾಣವು ನಿಟ್ಟುಸುರು ಬಿಟ್ಟಿತಲ್ಲ
ವೋ!
೨೬ ನಾನು ಒಳ್ಳೇದನ್ನು ನಿರೀಕ್ಷಿಸಲು, ಕೇಡು ಬಂತು;
ಬೆಳಕನ್ನು ಎದುರು ನೋಡಲು, ಅಂಧಕಾರ ಬಂತು.

೨೭ ನನ್ನ ಕರುಳುಗಳು ಸುಮ್ಮನಿರದೆ ಬೇಯುತ್ತವೆ.
ದೀನತ್ವದ ದಿವಸಗಳು ನನಗೆ ಮುಂಗೊಂಡವು.
೨೮ ಬಿಸಲು ಇಲ್ಲದೆ ಕರಿಯನಾಗಿ ನಡೆಯುತ್ತೇನೆ;
ಸಭೆಯಲ್ಲಿ ಎದ್ದು ಕೂಗುತ್ತೇನೆ.
೨೯ ನರಿಗಳಿಗೆ ಸಹೋದರನಾದೆನು;
ಅಡವಿಯ ಮಕ್ಕಳಿಗೆ ಜತೆಯವನಾದೆನು.
3೦ ನನ್ನ ಮೇಲಿನ ತೊಗಲು ಕರ್ರಗಾಯಿತು;
ನನ್ನ ಎಲುಬುಗಳು ಉಷ್ಣದಿಂದ ಬೆಂದವೆ.
3೧ ನನ್ನ ಕಿನ್ನರಿ ಗೋಳಾಟವೂ,
ನನ್ನ ಕೊಳಲು ಅಳುವ ಶಬ್ದವೂ ಆಯಿತು.

## ೩೧. ಸಂಧಿ.

೧ ನನ್ನ ಕಣ್ಣುಗಳಿಗೆ ಒಡಂಬಡಿಕೆ ಮಾಡಿದೆನು;
ಕನ್ನಿಕೆಯ ಮೇಲೆ ಲಕ್ಷ್ಯವಿಡುವದು ಹ್ಯಾಗೆ!
೨ ಮೇಲಿನಿಂದ ದೇವರ ಭಾಗವೂ,
ಉನ್ನತವಾದ ಸ್ಥಳಗಳಿಂದ ಸರ್ವಶಕ್ತನ ಬಾಧ್ಯತೆಯೂ ಏನು!
3 ಅನ್ಯಾಯಕನಿಗೆ ಆಪತ್ತಲ್ಲವೋ!
ಪಾತಕ ಮಾಡುವವರಿಗೆ ಅನ್ಯ ಸ್ಥಿತಿ ಅಲ್ಲವೋ!
೪ ಅವನು ನನ್ನ ಮಾರ್ಗಗಳನ್ನು ನೋಡಿ,
ನನ್ನ ಹೆಜ್ಜೆಗಳನ್ನೆಲ್ಲಾ ಎಣಿಸುವವನಲ್ಲವೋ!
೫ ನಾನು ಮಾಯೆಯೊಂದಿಗೆ ನಡೆದು ಕೊಂಡಿದ್ದರೆ,
ಮೋಸಕ್ಕೆ ನನ್ನ ಕಾಲು ತ್ವರೆಯಾಗಿ ಹೋಯಿತಾದರೆ,
೬ ನೀತಿಯ ತ್ರಾಸಿನಲ್ಲಿ ನನ್ನನ್ನು ತೂಗಲಿ;
ದೇವರು ನನ್ನ ಸಂಪೂರ್ಣತೆಯನ್ನು ತಿಳಿದು ಕೊಳ್ಳಲಿ.
೭ ನನ್ನ ಹೆಜ್ಜೆಗಳು ದಾರಿಯಿಂದ ತೊಲಗಿದ್ದರೆ,
ನನ್ನ ಕಣ್ಣುಗಳ ಹಿಂದೆ ನನ್ನ ಹೃದಯವು ಹೋಗಿದ್ದರೆ,
ನನ್ನ ಅಂಗೈಗಳಲ್ಲಿ ದೋಷ ಹತ್ತಿದ್ದರೆ,
೮ ನಾನು ಬಿತ್ತಿದ್ದನ್ನು ಬೇರೊಬ್ಬನು ತಿನ್ನಲಿ;
ನನ್ನ ಪೊಳಕೆಗಳು ನಿರ್ಮೂಲವಾಗಲಿ.
೯ ನನ್ನ ಹೃದಯವು ಸ್ತ್ರೀಗೋಸ್ಕರ ಮರುಳು ಗೊಂಡಿದ್ದರೆ,
ನನ್ನ ನೆರೆಯವನ ಬಾಗಲ ಹತ್ತರ ನಾನು ಹೊಂಚೆ ಕೊಂಡಿದ್ದರೆ,
೧೦ ನನ್ನ ಹೆಂಡತಿ ಮತ್ತೊಬ್ಬನಿಗೋಸ್ಕರ ಬೀಸಲಿ;
ಮತ್ತೊಬ್ಬರು ಅವಳ ಮೇಲೆ ಬಿಗಲಿ.
೧೧ ಯಾಕಂದರೆ ಅದು ಮಹಾ ಪಾಪವೂ,
ನ್ಯಾಯಾಧಿಪತಿಗಳಿಗೆ ಬರುವ ಅಕ್ರಮವೂ ಆಗಿರುವದು.
೧೨ ನಿಶ್ಚಯವಾಗಿ ಅದು ನಾಶಸ್ಥಾನದ ವರೆಗೆ ದಹಿಸುವಂಥಾ,
ಆದಾಯವನ್ನೆಲ್ಲಾ ನಿರ್ಮೂಲ ಮಾಡುವಂಥಾ ಅಗ್ನಿಯಾಗಿರು
ವದು.

೧3 ಅವರು ನನ್ನ ಸಂಗಡ ವಾದಿಸುವಾಗ,
ನಾನು ನನ್ನ ದಾಸನ, ದಾಸಿಯ ನ್ಯಾಯವನ್ನು ತಿರಸ್ಕರಿಸಿದ್ದರೆ,
೧೪ ದೇವರು ಏಳುವಾಗ, ಏನು ಮಾಡುವೆನು!
ಅವನು ವಿಚಾರಿಸುವಾಗ, ಅವನಿಗೆ ಏನು ಉತ್ತರ ಕೊಡುವೆನು!
೧೫ ಹೊಟ್ಟೆಯಲ್ಲಿ ನನ್ನನ್ನು ಉಂಟು ಮಾಡಿದವನು ಅವನನ್ನು
ಉಂಟು ಮಾಡಿದ್ದಾನಲ್ಲ!
ನಮ್ಮನ್ನು ಗರ್ಭದಲ್ಲಿ ಸಿದ್ಧ ಮಾಡಿದವನು ಒಬ್ಬನೇ ಅಲ್ಲವೋ!

೧೬ ನಾನು ಬಡವರ ಇಷ್ಟವನ್ನು ಹಿಂದೆಳೆದಿದ್ದರೆ,
ವಿಧವೆಯ ಕಣ್ಣುಗಳನ್ನು ಕುಂದ ಮಾಡಿದ್ದರೆ,
೧೭ ದಿಕ್ಕಿಲ್ಲದವನು ಅದರಲ್ಲಿ ಉಣ್ಣದ ಹಾಗೆ,
ನಾನು ಮಾತ್ರ ನನ್ನ ತುತ್ತು ಉಂಡಿದ್ದರೆ,

೧೯ ನನ್ನ ಯೌವನದಿಂದ ನಾನು ಅವನನ್ನು ತಂದೆಯಂತೆ ಬೆಳೆಸಿ
ದೆನಲ್ಲ!
ನನ್ನ ತಾಯಿಯ ಗರ್ಭದಿಂದ ಅವಳನ್ನು ನಡಿಸಿದೆನಲ್ಲ!
೧೯ ನಾನು ಬಟ್ಟೆ ಇಲ್ಲದೆ ನಾಶವಾಗುವವನನ್ನೂ,
ದರಿದ್ರನಿಗೆ ವಸ್ತ್ರವಿಲ್ಲದೆ ಇರುವದನ್ನೂ ನೋಡಿದ್ದರೆ,
೨೦ ಅವನ ಸೊಂಟವು ನನ್ನನ್ನು ಆಶೀರ್ವದಿಸದಿದ್ದರೆ,
ನನ್ನ ಕುರಿ ಮಂದೆಯ ಉಣ್ಣೆಯಿಂದ ಅವನಿಗೆ ಸೆಕೆ ಉಂಟಾಗ
ದಿದ್ದರೆ,
೨೧ ದ್ವಾರದಲ್ಲಿ ನನ್ನ ಸಹಾಯವನ್ನು ಕಂಡು,
ನಾನು ದಿಕ್ಕಿಲ್ಲದವನ ಮೇಲೆ ನನ್ನ ಕೈ ಚಾಚಿದ್ದರೆ,
೨೨ ನನ್ನ ಹೆಗಲು ಬೆನ್ನಿನ ಗುಬ್ಬೆಯಿಂದ ಬೀಳಲಿ;
ನನ್ನ ತೋಳು ಸಂದಿನಿಂದ ಮುರಿದು ಹೋಗಲಿ.
೨೩ ಯಾಕಂದರೆ ದೇವರಿಂದ ಬರುವ ಆಪತ್ತು ನನಗೆ ಹೆದರಿಕೆಯಾ
ಗಿತ್ತು;
ಅವನ ಉನ್ನತತ್ವಕ್ಕೋಸ್ಕರ ನಾನು ಮಾಡಲಾರದೆ ಇದ್ದೆನು.

೨೪ ನಾನು ಭಂಗಾರವನ್ನು ನನ್ನ ಭರವಸವಾಗಿ ಇಟ್ಟಿದ್ದರೆ,
ಕುಂದಣಕ್ಕೆ ನನ್ನ ನಂಬಿಕೆ ಎಂದು ಹೇಳಿದ್ದರೆ,
೨೫ ನನ್ನ ಸ್ಥಿತಿ ಬಹಳವಾಗಿದೆ ಎಂದೂ,
ನನ್ನ ಕೈ ಭಾರವಾದದ್ದನ್ನು ದೊರಕಿಸಿ ಕೊಂಡಿತೆಂದೂ, ನಾನು
ಸಂತೋಷಿಸಿದ್ದರೆ,
೨೬ ನಾನು ಬೆಳಕು ಹೊಳೆಯುವದನ್ನೂ,
ಚಂದ್ರನು ಘನವಾಗಿ ನಡೆಯುವದನ್ನೂ ನೋಡಲಾಗಿ,
೨೭ ನನ್ನ ಹೃದಯವು ಅಂತರಂಗದಲ್ಲಿ ಮರುಳು ಗೊಂಡು,
ನನ್ನ ಕೈ ನನ್ನ ಬಾಯಿಯಿಂದ ಮುದ್ದಿಟ್ಟಿದ್ದರೆ,
೨೮ ಇದು ಸಹ ನ್ಯಾಯಾಧಿಪತಿಗೆ ಬರುವ ಅಕ್ರಮವಾಗಿರುವದು.
ಯಾಕಂದರೆ ಉನ್ನತದಲ್ಲಿರುವ ದೇವರನ್ನು ಬೊಂಕುತ್ತಿರುವೆನು.
೨೯ ನಾನು ನನಗೆ ಹಗೆ ಮಾಡುವವನ ನಾಶನಕ್ಕೆ ಸಂತೋಷಪಟ್ಟು,
ಅವನನ್ನು ಕೇಡು ಕಂಡು ಹಿಡಿಯಿತೆಂದು ಉತ್ಸಹ ಗೊಂಡಿದ್ದರೆ,
೩೦ ಶಾಪದಿಂದ ಅವನ ಪ್ರಾಣವನ್ನು ಕೇಳುವದರಿಂದ,
ನನ್ನ ಬಾಯಿ ಪಾಪ ಮಾಡ ಗೊಡಿಸಲಿಲ್ಲ.
೩೧ ಅವನ ಮಾಂಸದಿಂದ ನಮಗೆ ತೃಪ್ತಿ ಕೊಡುವವನ್ಯಾರು? ಎಂದು,
ನನ್ನ ಗುಡಾರದ ಮನುಷ್ಯರು ಹೇಳಲಿಲ್ಲವೋ!
೩೨ ಬಯಲೇಹಗ್ಗನು ಬೀದಿಯಲ್ಲಿ ಇಳಿದು ಕೊಳ್ಳಲಿಲ್ಲ;
ನನ್ನ ಬಾಗಲನ್ನು ಮಾರ್ಗಸ್ಥರಿಗೆ ತೆರೆಯುತ್ತಾ ಇದ್ದೆನು.
೩೩ ನಾನು ಎದೆಯಲ್ಲಿ ನನ್ನ ಅನ್ಯಾಯ ಅಡಗಿಸಿ,
ಆದಾಮನ ಪ್ರಕಾರ ನನ್ನ ದ್ರೋಹವನ್ನು ಮುಚ್ಚಿ ಕೊಳ್ಳಲಿಲ್ಲ.
೩೪ ಯಾಕಂದರೆ ದೊಡ್ಡ ಸಮೂಹಕ್ಕೆ ಹೆದರಿದೆನೋ!
ಕುಲಗಳ ಉದಾಸೀನದಿಂದ ಕಳವಳ ಗೊಂಡೆನೋ!
ಹೊರಗೆ ಬಾರದೆ ಮೌನವಾಗಿದ್ದೆನೋ!

೩೫ ಕೇಳುವವನು ನನಗೆ ಶಿಕ್ಕಿದರೆ ಪಾಪಿ;
ಇಗೋ, ಇದೇ ನನ್ನ ಆಶೆ—ಸರ್ವಶಕ್ತನು ನನಗೆ ಉತ್ತರ ಕೊಡಲಿ;
ನನ್ನ ವ್ಯಾಜ್ಯದ ಮನುಷ್ಯನು ಪುಸ್ತಕವನ್ನು ಬರೆಯಲಿ.
೩೬ ನನ್ನ ಹೆಗಲಲ್ಲಿ ಅದನ್ನು ನಿಶ್ಚಯವಾಗಿ ಹೊರುವೆನು;
ಅದನ್ನು ಕಿರೀಟವಾಗಿ ಕಟ್ಟಿ ಕೊಳ್ಳುವೆನು.
೩೭ ನನ್ನ ಹೆಜ್ಜೆಗಳ ಎಣಿಕೆಯನ್ನು ಅವನಿಗೆ ತೋರಿಸುವೆನು;
ಅಧಿಪತಿಯಾಗಿ ಅವನ ಸಮೀಪಕ್ಕೆ ಬರುವೆನು.

೩೮ ನನ್ನ ಭೂಮಿಯು ನನಗೆ ವಿರೋಧವಾಗಿ ಕೂಗಿದರೆ,
ಅದರ ಸಾಲುಗಳು ಕೂಡ ಅತ್ತರೆ,
೩೯ ಅದರ ಬಲವನ್ನು ನಾನು ಬೆಲ್ಲ ಕೊಡದೆ ತಿಂದಿದ್ದರೆ,
ಅದರ ಯಜಮಾನರ ಪ್ರಾಣವನ್ನು ಉದಿ ಬಿಟ್ಟಿದ್ದರೆ,

೪೦ ಗೋಧಿಗೆ ಬದಲಾಗಿ ಮುಳ್ಳು, ಜವೆಗೋಧಿಗೆ ಬದಲಾಗಿ ಕಳೆ
ಯೂ ಬೆಳೆಯಲಿ.

ಯೋಬನ ನುಡಿಗಳು ಮುಗಿದವೆ.

## ೩೨. ಸಂಧಿ.

೧ ಆಗ ಆ ಮೂರು ಜನರು ಯೋಬನಿಗೆ ಉತ್ತರ ಕೊಡುವದ
ನ್ನು ಬಿಟ್ಟರು; ಯಾಕಂದರೆ ಅವನು ತನ್ನ ದೃಷ್ಟಿಗೆ ನೀತಿವಂತ
ನಾಗಿದ್ದನು.
೨ ಆಗ ರಾಮನ ಸಂತತಿಯವನಾದ, ಬೂಜ್ಯನಾದ, ಬರಕೇಲನ
ಮಗನಾದ ಎಲೀಹುವಿನ ಕೋಪ ಉರಿಯಿತು; ಯೋಬನ ಮೇಲೆ,
ಅವನು ದೇವರಿಗಿಂತ ತನ್ನನ್ನು ನೀತಿವಂತನೆಂದು ಸ್ಥಾಪಿಸಿದ್ದರಿಂದ,
೩ ಅವನ ಕೋಪ ಉರಿಯಿತು. ಅವನ ಮೂವರು ಸ್ನೇಹಿತರ ಮೇ
ಲೆಯೂ, ಅವರು ಉತ್ತರ ಕಂಡುಕೊಳ್ಳದೆ, ಯೋಬನನ್ನು ದುಷ್ಟ
೪ ನೆಂದು ತೀರಿಸಿದ್ದರಿಂದ, ಅವನ ಕೋಪ ಉರಿಯಿತು. ಆ ಎಲೀಹು
ಯೋಬನ ಮಾತುಗಳು ಮುಗಿಯುವ ಮಟ್ಟಿಗೂ ಕಾದು ಕೊಂ
೫ ಡನು; ಯಾಕಂದರೆ ಅವರು ತನಗಿಂತ ಹಿರಿಯರಾಗಿದ್ದರು. ಆ
ಮೂರು ಮಂದಿಗಳ ಬಾಯಿಯಲ್ಲಿ ಏನೂ ಉತ್ತರವಿಲ್ಲವೆಂದು ಎ
೬ ಲೀಹು ನೋಡಿದಾಗ, ಅವನ ಕೋಪ ಉರಿಯಿತು. ಆಗ ಬೂಜ್ಯ
ನಾದ ಬರಕೇಲನ ಮಗನಾದ ಎಲೀಹು ಉತ್ತರ ಕೊಟ್ಟು ಹೇಳಿ
ದ್ದೇನಂದರೆ—

ನಾನು ಎಳೇ ಪ್ರಾಯದವನು, ನೀವು ನರೆಯವರು;
ಆದದರಿಂದ ನಾನು ನಡುಗಿ,
ನನ್ನ ಶಿಳುವಿಕೆಯನ್ನು ನಿಮಗೆ ಉಸುರುವದಕ್ಕೆ ಭಯ ಪಟ್ಟೆನು.
೭ ದಿನಗಳಿದವರು ಮಾತಾಡಲಿ,
ಬಹಳ ವರುಷದವರು ಜ್ಞಾನ ತಿಳಿಸಲಿ, ಅಂದೆನು.
೮ ಆದರೆ ಮನುಷ್ಯನಲ್ಲಿ ಆತ್ಮ ಉಂಟು;
ಸರ್ವ ಶಕ್ತನ ಶ್ವಾಸವು ಅವನಿಗೆ ಗ್ರಹಿಕೆ ಕೊಡುತ್ತದೆ.
೯ ಹೆಚ್ಚು ಪ್ರಾಯದವರೇ ಬುದ್ಧಿವಂತರಲ್ಲ;
ಮುದುಕರೇ ನ್ಯಾಯವನ್ನು ಗ್ರಹಿಸಿ ಕೊಳ್ಳುವವರಲ್ಲ.
೧೦ ಆದದರಿಂದ ನನ್ನನ್ನು ಕೇಳು;
ತಿಳುವಿಕೆಯನ್ನು ನಾನು ಉಸುರುವೆನು, ಅಂದೆನು.

೧೧ ಇಗೋ, ನಿಮ್ಮ ಮಾತುಗಳಿಗೋಸ್ಕರ ನಾನು ಎದುರ
ನೋಡಿದೆನು;
ನೀವು ನುಡಿಗಳನ್ನು ವಿಚಾರಿಸುವ ಪರ್ಯಂತರ,
ನಿಮ್ಮ ವಿವೇಕಗಳಿಗೆ ಕಿವಿ ಕೊಟ್ಟೆನು.
೧೨ ನಿಮ್ಮ ಮಾತುಗಳಿಗೆ ಮನಸ್ಸು ಕೊಟ್ಟೆನು;



ಆದರೆ, ಇಗೋ, ಯೋಬನನ್ನು ಶಿಕ್ಷಿಸುವವನೂ,
ಅವನ ಮಾತುಗಳಿಗೆ ಉತ್ತರ ಕೊಡುವವನೂ ನಿಮ್ಮಲ್ಲಿ ಒಬ್ಬ
ನೂ ಇಲ್ಲ.
೧೩ ನಾವು ಜ್ಞಾನವನ್ನು ಕಂಡು ಕೊಂಡೆವು;
ಮನುಷ್ಯನು ಅಲ್ಲ, ದೇವರು ಅವನನ್ನು ತಳ್ಳುತ್ತಾನೆಂದು, ಹೇ
ಳ ಬೇಡಿರಿ.
೧೪ ನನಗೆ ವಿರೋಧವಾಗಿ ಅವನು ನುಡಿಗಳನ್ನು ಸಿದ್ಧ ಮಾತಲಿಲ್ಲ;
ನಿಮ್ಮ ಮಾತುಗಳಿಂದ ನಾನು ಅವನಿಗೆ ಉತ್ತರ ಕೊಡುವದಿಲ್ಲ.

೧೫ ಅವರು ಹೆದರಿ, ಇನ್ನು ಉತ್ತರ ಕೊಡಲಿಲ್ಲ;
ನುಡಿಗಳನ್ನು ತಮಗೆ ದೂರ ಹಾಕಿದರು.
೧೬ ಅವರು ಮಾತಾಡದೆ ಇರುವದರಿಂದ, ನಾನು ಎದುರು ನೋಡಿದೆನು;
ಯಾಕಂದರೆ ಇನ್ನೂ ಉತ್ತರ ಕೊಡದೆ ನಿಂತಿದ್ದಾರೆ.
೧೭ ನಾನು ನನ್ನ ಚಾಲಾಗಿ ಉತ್ತರ ಕೊಡುವೆನು;
ನಾನೇ ನನ್ನ ತಿಳುವಿಕೆಯನ್ನು ಉಸುರುವೆನು.
೧೮ ಯಾಕಂದರೆ ನುಡಿಗಳಿಂದ ತುಂಬಿದ್ದೇನೆ;
ನನ್ನ ಒಡಲಿನ ಆತ್ಮವು ನನ್ನನ್ನು ಇರಿಕಿಸುತ್ತದೆ.
೧೯ ಇಗೋ, ನನ್ನ ಒಡಲು ತೆರೆಯಲ್ಪಡದ ದ್ರಾಕ್ಷೇರಸದ ಹಾಗೆಯೂ,
ಒಡದು ಹೋಗುವ ಹೊಸ ಬುದ್ದಲಿಗಳ ಹಾಗೆಯೂ ಅದೆ.
೨೦ ನನಗೆ ಶ್ವಾಸ ಬರುವ ಹಾಗೆ, ಮಾತಾಡ ಬೇಕು;
ನನ್ನ ತುಟಿಗಳನ್ನು ತೆರೆದು, ಉತ್ತರ ಕೊಡ ಬೇಕು.
೨೧ ನಾನು ಮನುಷ್ಯನ ಮುಖದಾಕ್ಷಿಣ್ಯ ನೋಡೆನು;
ಮನುಷ್ಯನನ್ನು ಆಲೈಸೆನು.
೨೨ ಯಾಕಂದರೆ ಆಲೈಸುವದನ್ನು ಅರಿಯೆನು;
ಸ್ವಲ್ಪ ಕಾಲದಲ್ಲಿ ನನ್ನ ನಿರ್ಮಾಣಿಕನು ನನ್ನನ್ನು ವೈಯುವ
ನೇನೋ?

## ೩೩. ಸಂಧಿ.

೧ ಆದರೂ, ಯೋಬನೇ, ನನ್ನ ಮಾತುಗಳನ್ನು ಕೇಳು;
ನನ್ನ ಎಲ್ಲಾ ನುಡಿಗಳಿಗೆ ಕಿವಿ ಕೊಡು.
೨ ಇಗೋ, ನನ್ನ ಬಾಯಿ ತೆರೆದಿದ್ದೇನೆ;
ನನ್ನ ನಾಲಿಗೆ ನನ್ನ ಬಾಯಿಯಲ್ಲಿ ಮಾತಾಡುತ್ತದೆ.
೩ ನನ್ನ ಮಾತುಗಳು ನನ್ನ ಹೃದಯದ ನೆಟ್ಟನೆತನದಿಂದ ಆಗಿವೆ;
ನನ್ನ ತುಟಿಗಳ ತಿಳುವಿಕೆಯನ್ನು ನಿರ್ಮಲವಾಗಿ ಉಚ್ಚರಿಸುತ್ತವೆ.
೪ ದೇವರ ಆತ್ಮವು ನನ್ನನ್ನು ಉಂಟು ಮಾಡಿತು;
ಸರ್ವ ಶಕ್ತನ ಶ್ವಾಸವು ನನ್ನನ್ನು ಬದುಕಿಸಿತು.
೫ ನಿನಗೆ ಸಾಧ್ಯವಾದರೆ, ನನಗೆ ಪ್ರತ್ಯುತ್ತರ ಕೊಡು;
ಸಿದ್ಧ ಮಾಡಿ ಕೊಂಡು, ನನ್ನ ಮುಂದೆ ನಿಂತುಕೋ.
೬ ಇಗೋ, ನಾನು ದೇವರ ಮುಂದೆ ನಿನ್ನ ತರದವನಾಗಿದ್ದೇನೆ;
ಮಣ್ಣಿನಿಂದ ನಾನು ರೂಪವಾದೆನು.
೭ ಇಗೋ, ನನ್ನ ಭೀತಿಯು ನಿನ್ನನ್ನು ಹೆದರಿಸಲಾರದು;
ನನ್ನ ಹೊರೆಯು ನಿನ್ನ ಮೇಲೆ ಭಾರವಾಗದು.

೮ ನಿಶ್ಚಯವಾಗಿ ನೀನು ನನ್ನ ಕಿವಿಗಳಲ್ಲಿ ಹೇಳಿದ್ದೀ;
ಮಾತುಗಳ ಶಬ್ದವನ್ನು ಕೇಳಿದ್ದೇನೆ.
೯ ನಾನು ದ್ರೋಹವಿಲ್ಲದವನಾಗಿ, ಶುಚಿಯಾಗಿದ್ದೇನೆ; ನಾನು ಶು
ದ್ಧನಾಗಿದ್ದೇನೆ;
ನನ್ನಲ್ಲಿ ಅಕ್ರಮವಿಲ್ಲ.
೧೦ ಇಗೋ, ವಾದಗಳನ್ನು ನನ್ನ ಮೇಲೆ ಕಂಡು ಕೊಂಡು,
ತನಗೆ ಶತ್ರುವೆಂದು ನನ್ನನ್ನು ಎಣಿಸುತ್ತಾನೆ.
೧೧ ನನ್ನ ಕಾಲುಗಳನ್ನು ಕೋಳಕ್ಕೆ ಸೇರಿಸಿದ್ದಾನೆ;
ನನ್ನ ಪಾದಿಗಳನ್ನೆಲ್ಲಾ ನೋಡಿ ಕೊಳ್ಳುತ್ತಾನೆ.
೧೨ ಇಗೋ, ಈ ವಿಷಯವಾಗಿ ನೀನು ನೀತಿವಂತನಲ್ಲ;
ನಾನು ನಿನಗೆ ಉತ್ತರ ಕೊಡುತ್ತೇನೆ;
ಏನಂದರೆ, ದೇವರು ಮನುಷ್ಯನಿಗಿಂತ ಹೆಚ್ಚಾಗಿದ್ದಾನೆ.

೧೩ ಯಾಕೆ ಅವನ ಸಂಗಡ ವಾದಿಸಿದಿ?
ಯಾಕಂದರೆ ತನ್ನ ಎಲ್ಲಾ ಸಂಗತಿಗಳ ವಿಷಯ ಉತ್ತರ ಕೊಡು
ವದಿಲ್ಲ.
೧೪ ಯಾಕಂದರೆ ಒಂದು ಸಾರಿ, ಹೌದು, ಎರಡು ಸಾರಿ ದೇವರು
ಮಾತಾಡುತ್ತಾನೆ;
ಅವರು ಅದನ್ನು ಗ್ರಹಿಸಿ ಕೊಳ್ಳುವದಿಲ್ಲ.
೧೫ ಸ್ವಪ್ನದಲ್ಲಿ, ರಾತ್ರಿಯ ದರ್ಶನದಲ್ಲಿ,
ಗಾಢಾ ನಿದ್ರೆ ಮನುಷ್ಯರ ಮೇಲೆ ಬೀಳುವಲ್ಲಿ, ಮಂಚದ ಮೇಲಿ
ನ ತೂಕರಿಕೆಗಳಲ್ಲಿ,
೧೬ ಆಗ ಮನುಷ್ಯರ ಕಿವಿಯನ್ನು ತೆರೆದು,
ಶಿಕ್ಷೇ ಮಾತುಗಳನ್ನು ಅವರಿಗೆ ಮುದ್ರೆ ಹಾಕುತ್ತಾನೆ.
೧೭ ಮನುಷ್ಯನನ್ನು ಕೆಲಸದಿಂದ ತೊಲಗಿಸುವದಕ್ಕೂ,
ಪುರುಷನಿಗೆ ಗರ್ವವನ್ನು ಅಡಗಿಸುವದಕ್ಕೂ,
೧೮ ಅವನ ಪ್ರಾಣವನ್ನು ಕುಣಿಯಿಂದಲೂ,
ಅವನ ಜೀವವನ್ನು ಆಯುಧದ ದೆಬ್ಬೆಯಿಂದಲೂ ಹಿಂದೆಳೆಯುವ
ದಕ್ಕೂ, ಹೀಗೆ ಮಾಡುತ್ತಾನೆ.
೧೯ ಮತ್ತು ತನ್ನ ಹಾಸಿಕೆಯಲ್ಲಿ ಬೇನೆಗಳಿಂದ ಶಿಕ್ಷಿಸಲ್ಪಡುತ್ತಾನೆ;
ಅವನ ಎಲುವುಗಳ ಸಮೂಹಕ್ಕೆ ಶಿಕ್ಷಣವಾದ ನೋವು ಉಂಟು.
೨೦ ಅವನ ಜೀವಕ್ಕೆ ಕೊಟ್ಟಿಯೂ,
ಅವನ ಪ್ರಾಣಕ್ಕೆ ಸವಿ ಊಟವೂ ಅಸಹ್ಯವಾಗಿವೆ.
೨೧ ಅವನ ಮಾಂಸವು ಕಾಣದ ಹಾಗೆ, ಸವೆಯುತ್ತದೆ;
ಕಾಣದಿದ್ದ ಅವನ ಎಲುಬುಗಳು ಬೈಲಾಗುತ್ತದೆ.
೨೨ ಅವನ ಪ್ರಾಣವು ಕುಣಿಗೂ,
ಅವನ ಜೀವವು ಕೊಲೆಗಾರರಿಗೂ ಸಮೀಪವಾಗುವದು.
೨೩ ಸಹಸ್ರ ಜನರಲ್ಲಿ ಒಬ್ಬನಾದ, ಮಧ್ಯಸ್ಥನಾಗಿರುವ ದೂತನು
ಮನುಷ್ಯನಿಗೆ ಅವನ ನೆಟ್ಟನೆತನವನ್ನು ತಿಳಿಸುವದಕ್ಕೆ,
ಅವನ ಬಳಿಯಲ್ಲಿದ್ದರೆ,
೨೪ ಆಗಲವನಿಗೆ ಆತನು ದಯೆ ಮಾಡಿ, ಹೇಳುವದೇನಂದರೆ—
ಕುಣಿಗೆ ಇಳಿಯುವದರಿಂದ ಅವನನ್ನು ಬಿಡಿಸು;
ವಿಮೋಚನೆಯ ಕ್ರಯ ನನಗೆ ಶಿಕ್ಕಿತು.
೨೫ ಆಗ ಅವನ ಮಾಂಸವು ಹುಡುಗನ ಮಾಂಸಕ್ಕಿಂತ ಚೆಗುರು
ವದು.
ತನ್ನ ಯೌವನ ದಿವಸಗಳಿಗೆ ತಿರಿಗಿ ಬರುವನು.
೨೬ ಅವನು ದೇವರ ಕಡೆಗೆ ಬಿನ್ನಹ ಮಾಡುವನು;
ಇವನು ತನ್ನ ಮುಖವನ್ನು ಉತ್ಸಹದಿಂದ ನೋಡುವ ಹಾಗೆ,
ಅವನಿಗೆ ದಯಪಾಲಿಸುವನು;
ಮನುಷ್ಯನಿಗೆ ತನ್ನ ನೀತಿಯನ್ನು ತಿರಿಗಿ ಕೊಡುವನು.

೨೩ ಮನುಷ್ಯರ ಮುಂದೆ ಅವನು ಹಾಡುವದೇನಂದರೆ—
ನಾನು ಪಾಪ ಮಾಡಿದ್ದೇನೆ; ನೆಟ್ಟಗಾದದ್ದನ್ನು ಸೊಟ್ಟಗಾಗ
ಮಾಡಿದ್ದೇನೆ;
ಆದರೆ ನನಗೆ ಪ್ರತಿ ಫಲ ಸಿಕ್ಕಲಿಲ್ಲ.
೨೮ ಅವನು ನನ್ನ ಪ್ರಾಣವನ್ನು ಕೂಣೆಗೆ ಇಳಿಯುವದರಿಂದ ವಿಮೋ
ಚಿಸಿದ ಕಾರಣ,
ನನ್ನ ಜೀವವು ಬೆಳಕನ್ನು ನೋಡುವದು.

೨೯ ಇಗೋ, ಇವೆಲ್ಲಾ
ದೇವರು ಎರಡು ಮೂರು ಸಾರಿ ಪುರುಷನಿಗೆ ಮಾಡುತ್ತಾನೆ.
೩೦ ಅವನ ಪ್ರಾಣವನ್ನು ಕೂಣೆಯಿಂದ ತಿರಿಗಿಸುವದಕ್ಕೆ,
ಜೀವದ ಬೆಳಕಿನಿಂದ ಅವನು ಬೆಳಗಾಗುವ ಹಾಗೆಯೇ.

೩೧ ಯೋಬನೇ, ಆಲೈಸು; ನನಗೆ ಕಿವಿ ಕೊಡು;
ಮೌನವಾಗಿರು; ನಾನು ಮಾತಾಡುತ್ತೇನೆ.
೩೨ ನಿನಗೆ ಮಾತುಗಳಿದ್ದರೆ, ನನಗೆ ಉತ್ತರ ಕೊಡು;
ನುಡಿ; ಯಾಕಂದರೆ ನಿನ್ನನ್ನು ನೀತಿವಂತನೆಂದು ತೀರಿಸ ಇಚ್ಛೈ
ಸುತ್ತೇನೆ.
೩೩ ನಿನಗೆ ಇಲ್ಲದಿದ್ದರೆ, ನನಗೆ ಕಿವಿ ಕೊಡು;
ಮೌನವಾಗಿರು; ನಿನಗೆ ಜ್ಞಾನವನ್ನು ಕಲಿಸುತ್ತೇನೆ.

## ೩೪. ಸಂಧಿ.

೧ ಮತ್ತು ಎಲೀಹು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ—

೨ ಜ್ಞಾನಿಗಳೇ, ನನ್ನ ನುಡಿಗಳನ್ನು ಕೇಳಿರಿ;
ತಿಳಿದವರೇ, ನನಗೆ ಕಿವಿ ಕೊಡಿರಿ.
೩ ಯಾಕಂದರೆ ಕಿವಿಯು ನುಡಿಗಳನ್ನು ಪರಿಶೋಧಿಸುತ್ತದೆ;
ತಿನ್ನುವಿಕ್ಕೆ ಅಂಗಳ ರುಚಿ ನೋಡುತ್ತದೆ.
೪ ನ್ಯಾಯವನ್ನು ನಮಗೆ ಆದು ಕೊಳ್ಳೋಣ;
ಒಳ್ಳೇದೇನೆಂದು ನಮ್ಮೊಳಗೆ ತಿಳಿದು ಕೊಳ್ಳೋಣ.
೫ ಯಾಕಂದರೆ ಯೋಬನು ಹೇಳಿದನು—ನಾನು ನೀತಿವಂತನಾಗಿ
ದ್ದೇನೆ;
ದೇವರು ನನ್ನ ನ್ಯಾಯವನ್ನು ತೊಲಗಿಸಿದನು.
೬ ನನ್ನ ನ್ಯಾಯದ ಮೇಲೆ ನಾನು ಹುಸಿಗಾರನಾದೆನು;
ದ್ರೋಹವಿಲ್ಲದೆ ನನ್ನ ಘಾಯವು ಮಾಯದಂಥಾದ್ದು.
೭ ಯೋಬನ ಪ್ರಕಾರ
ನೀರಿನಂತೆ ಹಾಸ್ಯ ಕುಡಿಯುವ ಪುರುಷನು ಯಾರು!
೮ ಪಾತಕ ಮಾಡುವವರ ಸಹವಾಸಕ್ಕೂ,
ಜನರ ಸಂಗಡ ನಡೆದು ಕೊಳ್ಳುವದಕ್ಕೂ ಪ್ರವರ್ತಿಸುವವನ್ಯಾ
ವನು!
೯ ಯಾಕಂದರೆ ದೇವರ ಸಂಗಡ ಒಪ್ಪಿಗೆಯಾಗಿರುವದರಿಂದ,
ಪುರುಷನಿಗೆ ಉಪಯೋಗವಿಲ್ಲವೆಂದು ಹೇಳುತ್ತಾನೆ.
೧೦ ಅದರಿಂದ ಒಳ್ಳೇ ಹೃದಯದವರೇ, ನನ್ನ ಮಾತು ಕೇ
ಳಿರಿ.
ದೇವರಿಗೆ, ದುಷ್ಟತ್ವವೂ, ಸರ್ವಶಕ್ತನಿಗೆ ಅನ್ಯಾಯವೂ ದೂ
ರವಾಗಿರ ಬೇಕು.
೧೧ ಯಾಕಂದರೆ ಮನುಷ್ಯನ ಕೆಲಸಕ್ಕೆ ಅವನು ಮುಯಿ ಕೊಡು
ತ್ತಾನೆ;
ಮನುಷ್ಯನ ಮಾರ್ಗದ ಪ್ರಕಾರ ಅವನಿಗೆ ಒರಕಿಸುತ್ತಾನೆ.
೧೨ ನಿಶ್ಚಯವಾಗಿ ದೇವರು ದುಷ್ಟತ್ವ ಮಾಡುವದಿಲ್ಲ;
ಸರ್ವ ಶಕ್ತನು ನ್ಯಾಯವನ್ನು ಕೊಂಕು ಮಾಡುವದಿಲ್ಲ;
೧೩ ಯಾವನು ಅವನಿಗೆ ಭೂಮಿಯ ವಿಚಾರಣೆ ಕೊಟ್ಟಿದ್ದಾನೆ!
ಯಾವನು ಸರ್ವ ಲೋಕವನ್ನು ಉಂಟು ಮಾಡಿದ್ದಾನೆ!
೧೪ ಅವನು ತನ್ನ ಮೇಲೆ ಮನಸ್ಸಿಟ್ಟಿರೆ,
ತನ್ನ ಆತ್ಮವನ್ನೂ ಶ್ವಾಸವನ್ನೂ ತನ್ನಲ್ಲಿ ಕೂಡಿಸಿದರೆ;
೧೫ ಮಾಂಸವೆಲ್ಲಾ ಕೂಡ ಉಸುರು ಬಿಡುವದು;
ಮನುಷ್ಯನು ಧೂಳಿಗೆ ತಿರುಗುವನು.

೧೬ ಗ್ರಹಿಕೆ ಇದ್ದರೆ, ಇವುಗಳನ್ನು ಕೇಳು;
ನನ್ನ ನುಡಿಗಳ ಶಬ್ದಕ್ಕೆ ಕಿವಿಗೊಡು.
೧೭ ನ್ಯಾಯವನ್ನು ಹಗೆ ಮಾಡುವವನು ಆಳುವನೋ!
ಘನವಾದ ನೀತಿವಂತನನ್ನು ದುಷ್ಟನೆಂದು ನೆನಸುತ್ತೀಯೋ!
೧೮ ಅರಸನಿಗೆ ಕೇಳನೆಂದೂ,
ಶ್ರೇಷ್ಟರಿಗೆ ದುಷ್ಟನೆಂದೂ, ಹೇಳುವದುಂಟೋ!
೧೯ ಅವನು ಪ್ರಧಾನರ ಮುಖದಾಕ್ಷಿಣ್ಯ ನೋಡುವದಿಲ್ಲ;
ಧನಿಕನನ್ನು ಬಡವನಿಗಿಂತ ಹೆಚ್ಚೆಂದು ಲಕ್ಷಿಸುವದಿಲ್ಲ;
ಯಾಕಂದರೆ ಇಬ್ಬರೂ ಅವನ ಕೈ ಕೆಲಸವಾಗಿದ್ದಾರೆ.
೨೦ ಕ್ಷಣದಲ್ಲಿ ಸಾಯುತ್ತಾರೆ;
ಮಧ್ಯ ರಾತ್ರಿಯಲ್ಲಿ ಜನರು ಕದಲಿ, ಹಾದು ಹೋಗುತ್ತಾರೆ;
ಪರಾಕ್ರಮಿಗಳು ಕೈ ಇಲ್ಲದೆ ತೆಗೆಯಲ್ಪಡುತ್ತಾರೆ.
೨೧ ಯಾಕಂದರೆ ಅವನ ಕಣ್ಣುಗಳು ಮನುಷ್ಯನ ಮಾರ್ಗಗಳ
ಮೇಲೆ ಇರುತ್ತವೆ;
ಅವನ ಹೆಜ್ಜೆಗಳನ್ನೆಲ್ಲಾ ನೋಡುತ್ತಾನೆ.
೨೨ ಪಾತಕ ಮಾಡುವವರು ಅಲ್ಲಿ ಅಡಗಿ ಕೊಳ್ಳುವ ಹಾಗೆ,
ಕತ್ತಲೂ ಇಲ್ಲ, ಮರಣದ ನೆರಳೂ ಇಲ್ಲ.
೨೩ ಯಾಕಂದರೆ ದೇವರ ಬಳಿಯ ನ್ಯಾಯಕ್ಕೆ ಬರುವ ಹಾಗೆ,
ಮನುಷ್ಯನ ಮೇಲೆ ಹೆಚ್ಚು ಇಡುವದಿಲ್ಲ.
೨೪ ಪರಾಕ್ರಮಿಗಳನ್ನು ವಿಚಾರಣೆ ಇಲ್ಲದೆ ಚೂರ ಮಾಡಿ,
ಮತ್ತೊಬ್ಬರನ್ನು ಅವರಿಗೆ ಬದಲಾಗಿ ನಿಲ್ಲಿಸುತ್ತಾನೆ.
೨೫ ಆದದರಿಂದ ಅವರ ಕೆಲಸಗಳನ್ನು ತಿಳಿದು ಕೊಂಡು,
ರಾತ್ರಿಯಲ್ಲಿ ತಿರುಗಿಸಿ ಬಿಡುತ್ತಾನೆ; ಅವರು ಜಜ್ಜಲ್ಪಡುತ್ತಾರೆ.
೨೬ ಅವರು ದುಷ್ಟರಾಗಿದ್ದದರಿಂದ,
ನೋಡುವವರ ಸ್ಥಳದಲ್ಲಿ ಅವರನ್ನು ಬಡಿಯುತ್ತಾನೆ.
೨೭ ಯಾಕಂದರೆ ಅವರು ಅವನ ಹಿಂದಿನಿಂದ ತೊಲಗಿ,
೨೮ ಬಡವರ ಕೂಗನ್ನು ಅವನ ಮುಂದೆ ಬರ ಮಾಡಿ,
ದೀನರ ಕೂಗನ್ನು ಅವನು ಕೇಳುವ ಹಾಗೆ ಮಾಡಿ,
ಅವನ ಮಾರ್ಗಗಳನ್ನೆಲ್ಲಾ ಲಕ್ಷಿಸಲಿಲ್ಲ.
೨೯ ಅವನು ಶಾಂತ ಮಾಡಿದರೆ, ಯಾವನು ಕೇಡು ಮಾಡುವನು!
ಅವನು ಮುಖವನ್ನು ಮರೆ ಮಾಡಿದರೆ, ಅವನನ್ನು ದೃಷ್ಟಿಸುವ
ವನ್ಯಾವನು?



ಜನಾಂಗಕ್ಕಾದರೂ, ಸರಿ, ಮನುಷ್ಯನಿಗಾದರೂ ಸರಿ.
೩೦ ಆಗ ಭಕ್ತಿಯ ಮನುಷ್ಯನು ಆಳುವದಿಲ್ಲ;
ಜನರ ಉರ್ಲುಗಳಾಗಿರುವದಿಲ್ಲ.

೩೧ ದೇವರಿಗೆ ಹೇಳ ತಕ್ಕದೇನಂದರೆ—
ನಾನು ಪ್ರಮೆ ಪಟ್ಟೆನು; ಕೆಟ್ಟತನ ಮಾಡುವದಿಲ್ಲ;
೩೨ ನಾನು ನೋಡದ್ದನ್ನು ನೀನು ನನಗೆ ಬೋಧಿಸು;
ನಾನು ಅನ್ಯಾಯವನ್ನು ಮಾಡಿದ್ದರೆ, ತಿರಿಗಿ ಮಾಡೆನು.
೩೩ ನಿನ್ನ ಮನಸ್ಸಿನ ಪ್ರಕಾರ ಪ್ರತಿಫಲ ಕೊಡುವನೋ!
ಯಾಕಂದರೆ ನೀನು ತಿರಸ್ಕರಿಸಿದಿ;
ನೀನು ಆದು ಕೊಳ್ಳುತ್ತೀ, ನಾನಲ್ಲ;
ತಿಳುಕೊಂಡದ್ದನ್ನು ಹೇಳು.
೩೪ ಬುದ್ಧೇ ಹೃದಯದವರು ನನಗೆ ಹೇಳುವರು;
ಜ್ಞಾನಿಯಾದ ಪುರುಷನು ನನ್ನ ಮಾತು ಕೇಳುತ್ತಾನೆ;
೩೫ ಯೋಬನು ತಿಳುವಿಕೆಯಿಲ್ಲದೆ ಮಾತಾಡುತ್ತಾನೆ;
ಅವನ ಮಾತುಗಳು ಬುದ್ಧಿಯುಳ್ಳವುಗಳಲ್ಲ.
೩೬ ಪಾತಕದ ಜನರಲ್ಲಿ ಆದ ಪ್ರತ್ಯುತ್ತರಗಳಿಗೋಸ್ಕರ
ಯೋಬನು ನಿತ್ಯವಾಗಿ ಶೋಧಿಸಲ್ಪಡ ಬೇಕೆಂದು ನನ್ನ ಅಪೇಕ್ಷೆ.
೩೭ ಯಾಕಂದರೆ ತನ್ನ ಪಾಪದ ಮೇಲೆ ದ್ರೋಹವನ್ನು ಕೂಡಿಸು
ತ್ತಾನೆ;
ನಮ್ಮ ಮಧ್ಯದಲ್ಲಿ ಚಪ್ಪಳೆ ಬಡಿಯುತ್ತಾನೆ;
ದೇವರಿಗೆ ವಿರೋಧವಾಗಿ ತನ್ನ ಮಾತುಗಳನ್ನು ಬಹಳ ಮಾಡು
ತ್ತಾನೆ.

## ೩೫. ಸಂಧಿ.

೧ ಮತ್ತು ಎಲೀಹು ಪ್ರತ್ಯುತ್ತರವಾಗಿ ಹೇಳಿದೇನಂದರೆ—

೨ ನನ್ನ ನೀತಿಯು ದೇವರ ನೀತಿಗಿಂತ ದೊಡ್ಡದು ಎಂದು ಹೇ
ಳಿದಿಯಲ್ಲ?
ಇದು ನ್ಯಾಯವೆಂದು ನೆನಸುತ್ತೀಯೋ!
೩ ಯಾಕಂದರೆ ನೀನು ಹೇಳ್ದಿ—ನಿನಗೆ ಏನು ಉಪಯೋಗವಾಗಿ
ರುವದು!
ನನ್ನ ಪಾಪ ಹೋದರೆ, ನನಗೆ ಪ್ರಯೋಜನವೇನು!
೪ ನಾನು ನಿನಗೆ ಉತ್ತರ ಕೊಡುತ್ತೇನೆ;
ನಿನ್ನ ಸಂಗಡ ಇರುವ ಸ್ನೇಹಿತರಿಗೆ ಸಹ.

೫ ಆಕಾಶವನ್ನು ದೃಷ್ಟಿಸಿ ನೋಡು;
ಮೇಘಗಳನ್ನು ದೃಷ್ಟಿಸು; ಅವು ನಿನಗಿಂತ ಎತ್ತರವಾಗಿವೆ.
೬ ನೀನು ಪಾಪ ಮಾಡಿದರೆ, ಅವನಿಗೆ ಏನು ಮಾಡುವಿ!
ನಿನ್ನ ಪಾತಕಗಳು ಹೆಚ್ಚಿದರೆ, ಅವನಿಗೆ ಏನು ಮಾಡುವಿ!
೭ ನೀನು ನೀತಿವಂತನಾಗಿದ್ದರೆ, ಅವನಿಗೇನು ಕೊಡುವಿ!
ಇಲ್ಲವೆ ಅವನು ನಿನ್ನ ಕೈಯಿಂದ ಏನು ತೆಗೆದು ಕೊಳ್ಳುವನು!
೮ ನಿನ್ನ ಹಾಗಿರುವ ಮನುಷ್ಯನಿಗೆ ನಿನ್ನ ದುಷ್ಟತ್ವವೂ,
ಮನುಷ್ಯನ ಮಗನಿಗೆ ನಿನ್ನ ನೀತಿಯೂ ಇರುವದು.
೯ ಬಹು ಬಲಾತ್ಕಾರಕ್ಕೋಸ್ಕರ ಕೂಗುತ್ತಾರೆ;
ದೊಡ್ಡವರ ತೋಳಿಗೋಸ್ಕರ ಮೊರೆ ಇಡುತ್ತಾರೆ.
೧೦ ಆದರೆ ರಾತ್ರಿಯಲ್ಲಿ ಗೀತಗಳನ್ನು ಕೊಡುವ,
ನನ್ನ ನಿರ್ಮಾಣಿಕನಾದ ದೇವರು ಎಲ್ಲಿ ಎಂದು, ಯಾರೂ ಹೇ
ಳುವದಿಲ್ಲ.
೧೧ ಅವನು ಭೂಮಿಯ ಮೃಗಗಳಿಗಿಂತ ನಮಗೆ ಹೆಚ್ಚು ಕಲಿಸಿ,
ಆಕಾಶದ ಪಕ್ಷಿಗಳಿಗಿಂತ ನಮಗೆ ಅಧಿಕ ಜ್ಞಾನ ಕೊಡುತ್ತಾನೆ.
೧೨ ಅಲ್ಲಿ ಅವರು ಕೆಟ್ಟವರ ಗರ್ವದ ನಿಮಿತ್ತ ಮೊರೆ ಇಡಲು,
ಅವನು ಉತ್ತರ ಕೊಡುವದಿಲ್ಲ.

೧೩ ಮಾಯವನ್ನು ದೇವರು ಕೇಳುವದಿಲ್ಲವೇ ಸರಿ;
ಸರ್ವಶಕ್ತನು ಅದನ್ನು ದೃಷ್ಟಿಸುವದಿಲ್ಲ.
೧೪ ನೀನು ಅವನನ್ನು ದೃಷ್ಟಿಸುವದಿಲ್ಲವೆಂದು, ನೀನು ಹೇಳಿದರೂ,
ವ್ಯಾಜ್ಯವು ಅವನ ಮುಂದೆ ಇರುವದು;
ಹ್ಯಾಗಾದರೂ ಅವನನ್ನು ಎದುರು ನೋಡು.
೧೫ ಆದರೆ ಈಗ ಕೋಪದಿಂದ ಏನೂ ವಿಚಾರಿಸದೆ ಇದ್ದಾನೆ;
ದೊಡ್ಡ ತಪ್ಪನ್ನು ತಿಳುಕೊಂಬುವದಿಲ್ಲ.
೧೬ ಆದದರಿಂದ ಯೋಬನು ವ್ಯರ್ಥವಾಗಿ ಬಾಯಿ ತೆರೆದು,
ತಿಳುವಿಕೆ ಇಲ್ಲದೆ, ನುಡಿಗಳನ್ನು ಹೆಚ್ಚಿಸುತ್ತಾನೆ.

## ೩೬. ಸಂಧಿ.

೧ ಮತ್ತು ಎಲೀಹು ಹೇಳಿದ್ದೇನಂದರೆ—

೨ ನನಗೋಸ್ಕರ ಸ್ವಲ್ಪ ಇರು; ಆಗ ನಿನಗೆ ಪ್ರಕಟಿ ಮಾಡುವೆನು;
ಯಾಕಂದರೆ ದೇವರಿಗೋಸ್ಕರ ಇನ್ನೂ ಮಾತುಗಳುಂಟು.
೩ ನನ್ನ ತಿಳುವಿಕೆಯನ್ನು ದೂರದಿಂದ ತಕ್ಕೊಂಡು ಬರುವೆನು;
ನನ್ನ ನಿರ್ಮಾಣಿಕನಿಗೆ ನೀತಿಯನ್ನು ಸಲ್ಲಿಸುವೆನು.
೪ ನಿಶ್ಚಯವಾಗಿ ನನ್ನ ಮಾತುಗಳು ಸುಳ್ಳಲ್ಲ;
ತಿಳುವಿಕೆಯಲ್ಲಿ ಸಂಪೂರ್ಣನು ನಿನ್ನ ಬಳಿಯಲ್ಲಿದ್ದಾನೆ.

೫ ಇಗೋ, ದೇವರು ತ್ರಾಣಿಯಾಗಿದ್ದಾನೆ;
ಆದರೆ ಮನೋ ಶಕ್ತಿಯಿಂದ ತ್ರಾಣಿಯಾಗಿದ್ದರೂ, ತಿರಸ್ಕಾರ
ಮಾಡುವದಿಲ್ಲ.
೬ ದುಷ್ಟನನ್ನು ಅವನು ಬದುಕಿಸುವದಿಲ್ಲ;
ಆದರೆ ದೀನರ ನ್ಯಾಯವನ್ನು ಸ್ಥಾಪಿಸುತ್ತಾನೆ.
೭ ನೀತಿವಂತರಿಂದ ತನ್ನ ಕಣ್ಣುಗಳನ್ನು ತೊಲಗಿಸುವದಿಲ್ಲ;
ಅರಸುಗಳ ಸಂಗಡ ಸಿಂಹಾಸನದಲ್ಲಿ ಅವರನ್ನು ನಿತ್ಯವಾಗಿ ಕುಂ
ತ್ರಿಸುತ್ತಾನೆ,
ಆಗಲು ಎತ್ತರವಾಗಿದ್ದಾರೆ.
೮ ಆದರೆ ಸಂಕೋಲೆಗಳಿಂದ ಕೆಡೆಯಲ್ಪಟ್ಟರಾಗಿ,
ದೀನತೆಯ ಬಂಧಗಳಿಂದ ಕಟ್ಟಲ್ಪಟ್ಟರೆ,
೯ ಅವರ ಕೃತ್ಯವನ್ನೂ, ಅವರ ದ್ರೋಹಗಳನ್ನೂ,
ಅವುಗಳಲ್ಲಿ ಬಲಗೊಂಡರೆಂದು, ಅವರಿಗೆ ತೋರಿಸುತ್ತಾನೆ.
೧೦ ಅವರ ಕಿವಿಯನ್ನು ಶಿಕ್ಷೆಗಾಗಿ ತೆರೆದು,
ಪಾತಕ ಬಿಟ್ಟು ತಿರುಗಿರೆಂದು, ಅವರಿಗೆ ಹೇಳುತ್ತಾನೆ.
೧೧ ಅವರು ಕೇಳಿ, ಸೇವಿಸಿದರೆ,

ತಮ್ಮ ದಿವಸಗಳನ್ನು ಮೇಲಿನಲ್ಲಿಯೂ,
ತಮ್ಮ ವರುಷಗಳನ್ನು ಸುಖದಲ್ಲಿಯೂ ಪೂರೈಸುವರು.
೧೨ ಅವರು ಕ್ಷೇಮದಿದ್ದಕೆ, ಅಯುಧಗಳಿಂದ ತೀರಿ ಹೋಗುವರು;
ತಿಳಿಯದೆ ಶ್ವಾಸ ಬಿಡುವರು.
೧೩ ಭ್ರಷ್ಟ ಹೃದಯದವರು ಕೋಪ ಇಡುತ್ತಾರೆ;
ಅವನು ಅವರನ್ನು ಬಂಧಿಸಿದರೆ, ಅವರು ಮೊರೆ ಇಡುವದಿಲ್ಲ.
೧೪ ಯೌವನದಲ್ಲಿ ಅವರ ಪ್ರಾಣವೂ,
ಜಾರರಲ್ಲಿ ಅವರ ಜೀವವೂ ಸಾಯುವದು.

೧೫ ದೀನನನ್ನು ಅವನ ದೀನ ಸ್ಥಿತಿಯಿಂದ ತಪ್ಪಿಸುತ್ತಾನೆ;
ಬಾಧೆಯಲ್ಲಿ ಅವರ ಕಿವಿಯನ್ನು ತೆರೆಯುತ್ತಾನೆ.
೧೬ ನಿನ್ನನ್ನು ಹಾಗೆ ಇಕ್ಕಟ್ಟಿನ ಬಾಯಿಯಿಂದ ತೆಗದಿಡುವನು;
ಅದಕ್ಕೆ ಬದಲಾಗಿ ಇಕ್ಕಟ್ಟು ಇಲ್ಲದೆ ಅಗಲವು ಬರುವದು;
ನಿನ್ನ ಮೇಜಿಗೆ ಇಕ್ಕುವದು ಕೊಬ್ಬಿನಿಂದ ತುಂಬಾಗಿರುವದು.
೧೭ ಆದರೆ ನೀನು ದುಷ್ಟನ ನ್ಯಾಯವನ್ನು ತುಂಬಿಸಿದರೆ,
ನ್ಯಾಯವೂ ತೀರ್ಪೂ ನಿನ್ನನ್ನು ಹಿಡಿಯುವವು.
೧೮ ಯಾಕಂದರೆ ಉರಿ ಉಂಟು; ಅವನು ನಿನ್ನನ್ನು ಒಂದೇ ಪೆಟ್ಟಿನಿಂದ ಕೈಯದ ಹಾಗೆ, ನೋಡು;
ಬಹಳ ವಿಮೋಚನೆಯ ಕ್ರಯ ನಿನ್ನನ್ನು ಬಿಡಿಸದು.
೧೯ ಅವನು ನಿನ್ನ ಐಶ್ವರ್ಯವನ್ನು ಎಣಿಸುವನೋ!
ಭಂಗಾರವನ್ನೂ ಬಲದ ಎಲ್ಲಾ ಶಕ್ತಿಗಳನ್ನೂ ಎಣಿಸನು.
೨೦ ಜನಗಳು ತಮ್ಮ ಸ್ಥಳ ಬಿಟ್ಟು ಎತ್ತಲ್ಪಟ್ಟಿರುವ ರಾತ್ರಿಯನ್ನು ಬಯಸಿಸ ಬೇಡ.
೨೧ ಚಾತಕಕ್ಕೆ ತಿರುಗದ ಹಾಗೆ, ಭದ್ರವಾಗಿರು;
ಯಾಕಂದರೆ ಇದನ್ನು ಕಷ್ಟಕ್ಕಿಂತ ಆದು ಕೊಂಡಿ.

೨೨ ಇಗೋ ದೇವರು ತನ್ನ ಶಕ್ತಿಯಲ್ಲಿ ಉನ್ನತನಾಗಿದ್ದಾನೆ;
ಅವನ ಹಾಗೆ ಬೋಧಿಸುವವನು ಯಾರು!
೨೩ ಅವನ ಮಾರ್ಗವನ್ನು ಅವನಿಗೆ ನೇಮಿಸಿದವನ್ಯಾರು!
ನೀನು ಅನ್ಯಾಯ ಮಾಡಿದಿ ಎಂದು ಹೇಳುವವನ್ಯಾರು!
೨೪ ಮನುಷ್ಯರು ಹಾಡುವ
ಅವನ ಕೃತ್ಯಗಳನ್ನು ಉನ್ನತ ಪಡಿಸುವದಕ್ಕೆ ನೆನಸಿಕೋ.
೨೫ ಎಲ್ಲಾ ಮನುಷ್ಯರು ಅದನ್ನು ನೋಡುತ್ತಾರೆ;
ಜನರು ದೂರದಿಂದ ದೃಷ್ಟಿಸುತ್ತಾರೆ.
೨೬ ಇಗೋ, ದೇವರು ನಾವು ತಿಳಿಯದಷ್ಟು ಉನ್ನತನಾಗಿದ್ದಾನೆ;
ಅವನ ವರುಷಗಳ ಲೆಖ್ಖಕ್ಕೆ ಕೊಥನೆ ಇಲ್ಲ.

೨೭ ಅವನು ನೀರಿನ ತಟಕುಗಳನ್ನು ಕೂಡಿಸಿದಾಗ,
ಅವನ ಮಂಜಿನ ಮಳೆಯನ್ನು ಸುರಿಸುತ್ತವೆ.
೨೮ ಮೋಡಗಳು ಅದನ್ನು ಸುರಿಸಿ,
ಬಹಳ ಜನರ ಮೇಲೆ ಸೋರ ಮಾಡುತ್ತವೆ.
೨೯ ಮೋಡದ ವಿಸ್ತೀರ್ಣತೆಯನ್ನೂ,
ಅವನ ಗುಡಾರದ ಅಬ್ಬರವನ್ನೂ ತಿಳಿಕೊಳ್ಳುವವನ್ಯಾರು!
೩೦ ಇಗೋ, ತನ್ನ ಸುತ್ತಲು ತನ್ನ ಬೆಳಕನ್ನು ವಿಸ್ತರಿಸಿ,
ಸಮುದ್ರದ ಅಗಾಧಗಳನ್ನು ಮುಚ್ಚುತ್ತಾನೆ.
೩೧ ಯಾಕಂದರೆ ಅವುಗಳಿಂದ ಜನಗಳಿಗೆ ನ್ಯಾಯ ತೀರಿಸುತ್ತಾನೆ;
ದೊಡ್ಡ ಸಮೂಹಕ್ಕೆ ಆಹಾರ ಕೊಡುತ್ತಾನೆ.
೩೨ ತನ್ನ ಕೈಗಳನ್ನು ಬೆಳಕಿನಿಂದ ಮುಚ್ಚುತ್ತಾನೆ;
ಅದನ್ನು ವಿರೋಧಿಯ ಎದುರಿಗೆ ಕಳುಹಿಸುತ್ತಾನೆ.
೩೩ ಅವನ ಗುಡುಗು ಅವನನ್ನೂ,
ಪಶುಗಳಿಗೆ ಸಹ ಅವನು ಬರುವದನ್ನೂ ಪ್ರಕಟಿ ಮಾಡುತ್ತದೆ.

## ೩೭. ಸಂಧಿ.

೧ ನಿಶ್ಚಯವಾಗಿ ಇದಕ್ಕೋಸ್ಕರ ನನ್ನ ಹೃದಯವು ಕಂಪಿಸಿ,
ತನ್ನ ಸ್ಥಳದಿಂದ ಹಾರುವದು.
೨ ಅವನ ಶಬ್ದದ ಅಬ್ಬರವನ್ನೂ, ಅವನ ಬಾಯಿಯಿಂದ ಹೊರಡುವ
ಸ್ವರವನ್ನೂ ಕೇಳೇ ಕೇಳ್ರಿರಿ.
3 ಎಲ್ಲಾ ಆಕಾಶದ ಕೆಳಗೆ ಅದನ್ನು ನಡಿಸುತ್ತಾನೆ;
ತನ್ನ ಬೆಳಕನ್ನು ಕೂಡಾ ಭೂಮಿಯ ಅಂಚುಗಳ ಪರ್ಯಂತರವೇ.
೪ ಅದರ ತರುವಾಯ ಶಬ್ದವು ಗರ್ಜಿಸುತ್ತದೆ;
ತನ್ನ ಮಹತ್ತಿನ ಶಬದಿಂದ ಗುಡುಗುತ್ತಾನೆ;
ಅವನ ಶಬ್ದ ಕೇಳಲ್ಪಡುವಾಗ, ಅವುಗಳನ್ನು ಹಿಂದೆಗಿಯುವದಿಲ್ಲ.
೫ ದೇವರು ಆಶ್ಚರ್ಯವಾಗಿ ತನ್ನ ಶಬ್ದದಿಂದ ಗುಡುಗುತ್ತಾನೆ;
ನಾವು ತಿಳಿಯದ ದೊಡ್ಡವುಗಳನ್ನು ಮಾಡುತ್ತಾನೆ.
೬ ಅವನು ಹಿಮಕ್ಕೂ, ಮಳೆ ಗರಿಯುವಿಕೆಗೂ,
ಮಳೆಯ ಬಲವಾದ ಹೊಯ್ಯುವಿಕೆಗೂ,
ಭೂಮಿಯ ಮೇಲೆ ಬೀಳು, ಅನ್ನಲಾಗಿ,
೭ ಅವನ ಕೃತ್ಯದ ಜನರೆಲ್ಲರು ತಿಳಿಯ ಕೊಳ್ಳುವ ಹಾಗೆ,
ಎಲ್ಲಾ ಮನುಷ್ಯರ ಕೈಯನ್ನು ಮುಚ್ಚುತ್ತಾನೆ.
೮ ಆಗ ಮೃಗಗಳು ಹೊಂಚುವ ಸ್ಥಳಗಳಲ್ಲಿ ಸೇರಿ,
ತಮ್ಮ ಗವಿಗಳಲ್ಲಿ ಮಲಗುತ್ತವೆ.
೯ ದಕ್ಷಿಣದಿಂದ ಬಿರುಘೂಳಿಯೂ,
ಉತ್ತರದಿಂದ ಛಳಿಯೂ ಬರುತ್ತದೆ.
೧೦ ದೇವರ ಶ್ವಾಸದಿಂದ ನೀರು ಗಡ್ಡೆ ಆಗುವದು;
ವಿಸ್ತಾರವಾದ ನೀರು ಇಕ್ಕಟ್ಟಾಗುವದು.
೧೧ ಮತ್ತು ತೋಯಿಕೆಯಿಂದ ಮೋಡವನ್ನು ಭಾರ ಮಾಡುತ್ತಾನೆ;
ತನ್ನ ಬೆಳಕಿನ ಮೇಘವನ್ನು ಚದರಿಸುತ್ತಾನೆ.
೧೨ ಅವನು ಆಜ್ಞಾಪಿಸುವ ಪ್ರಕಾರ,
ಭೂಲೋಕದ ಮೇಲೆ ಅವನು ಅವುಗಳಿಗೆ ನೇಮಿಸಿದ ಎಲ್ಲಾ ಕೆಲಸ ಮಾಡುವದಕ್ಕೆ,
ಅದು ಸುತ್ತಲು ತಿರುಗುತ್ತದೆ.
೧೩ ಶಿಕ್ಷೆಗಾಗಲಿ, ಭೂಮಿಗಾಗಲಿ,
ಕೃಪೆಗಾಗಲಿ, ಅದನ್ನು ಬರ ಮಾಡುತ್ತಾನೆ.

೧೪ ಯೋಬನೇ, ಇದಕ್ಕೆ ಕಿವಿ ಕೊಡು;
ನಿಂತು ದೇವರ ಅದ್ಭುತಗಳನ್ನು ಗ್ರಹಿಸಿಕೋ.
೧೫ ದೇವರು ಅವುಗಳಿಗೆ ಅಪ್ಪಣೆ ಕೊಡುವದನ್ನೂ,
ಅವನ ಮೇಘದ ಬೆಳಕು ಹೊಳೆಯುವದನ್ನೂ ತಿಳಿಕೊಳ್ಳುತ್ತೀಯೋ?



೧೬ ಮೋಡಗಳ ತೂಗಾಟವನ್ನೂ,
ತಿಳುವಿಕೆಯಲ್ಲಿ ಸಂಪೂರ್ಣನ ಅದ್ಭುತಗಳನ್ನೂ ತಿಳುಕೊಳ್ಳುತ್ತೀಯೋ?
೧೭ ದಕ್ಷಣ ಘೂಳಿಯಿಂದ ಭೂಮಿ ಕಾಯುವಾಗ,
ನಿನ್ನ ವಸ್ತ್ರಗಳು ಬಿಸಿಯಾಗುತ್ತವಲ್ಲ?
೧೮ ಎಕಕ ಹೊಯಿದ ಕನ್ನಡಿಯ ಹಾಗೆ ಘಟ್ಟಿಯಾಗಿರುವ,
ಬಿಳಿ ಮೋಡಗಳನ್ನು ಅವನ ಸಂಗಡ ಮಂಡಲವಾಗಿ ವಿಸ್ತರಿಸುವಿಯೋ?
೧೯ ಅವನಿಗೆ ಏನು ಹೇಳ ಬೇಕೆಂದು ನಮಗೆ ತಿಳಿಸು.
ಕತ್ತಲೆಗೋಸ್ಕರ ನಾವು ಸಿದ್ಧವಾಗಿರುವದಿಲ್ಲ.
೨೦ ನಾನು ಮಾತಾಡುತ್ತೇನೆಂದು, ಅವನಿಗೆ ತಿಳಿಸಲ್ಪಡ ಬೇಕೋ!
ಪುರುಷನು ಮಾತಾಡಿದರೆ ನುಂಗಲ್ಪಡುವನು ಸರಿ.
೨೧ ಆದರೆ ಈಗ ಅವರು ಮೋಡಗಳಲ್ಲಿ ಹೊಳೆಯುವ ಬೆಳಕನ್ನು ನೋಡುವದಿಲ್ಲ;
ಘೂಳಿಯು ಹಾದು, ಅವುಗಳನ್ನು ನಿರ್ಮಲ ಮಾಡುವದು.
೨೨ ಉತ್ತರದಿಂದ ಭಂಗಾರದ ಪ್ರಕಾಶ ಬರುತ್ತದೆ;
ದೇವರ ಬಳಿಯಲ್ಲಿ ಭಯಂಕರವಾದ ಮಹಿಮೆ ಉಂಟು.

೨೩ ಸರ್ವ ಶಕ್ತನನ್ನು ನಾವು ಕಂಡು ಕೊಳ್ಳುವದಿಲ್ಲ; ಶಕ್ತಿಯಲ್ಲಿ ಉನ್ನತನಾಗಿದ್ದಾನೆ;
ನ್ಯಾಯವೂ ಬಹು ನೀತಿಯೂ ಉಳ್ಳವನಾಗಿ, ಕ್ರಮೆ ಪಡಿಸುವದಿಲ್ಲ.
೨೪ ಆದದರಿಂದ ಮನುಷ್ಯರು ಅವನಿಗೆ ಭಯ ಪಡಲಿ;
ಹೃದಯದಲ್ಲಿ ಜ್ಞಾನಿಗಳಾದವರೆಲ್ಲರನ್ನು ನೋಡುವದಿಲ್ಲ.

## ೩೮. ಸಂಧಿ.

೧ ಆಗ ಕರ್ತನು ಯೋಬನಿಗೆ ಬಿರು ಘೂಳಿಯೊಳಗಿಂದ ಉತ್ತರ ಕೊಟ್ಟು ಹೇಳಿದ್ದೇನಂದರೆ—
೨ ತಿಳುವಿಕೆ ಇಲ್ಲದ ಮಾತುಗಳಿಂದ,
ಆಲೋಚನೆಯನ್ನು ಕತ್ತಲಾಗ ಮಾಡುವವನ್ಯಾರು!
3 ಪುರುಷನ ಹಾಗೆ, ನಡುವನ್ನು ಕಟ್ಟು;
ನಾನು ನಿನ್ನನ್ನು ಕೇಳುವೆನು; ನೀನು ನನಗೆ ತಿಳಿಸು.
೪ ನಾನು ಭೂಮಿಯ ಅಸ್ತಿವಾರ ಹಾಕಿದ್ದಾಗ, ನೀನು ಎಲ್ಲಿ ಇದ್ದಿ?
ನಿನಗೆ ಗ್ರಹಿಕೆ ಇದ್ದರೆ, ತಿಳಿಯ ಪಡಿಸು.
೫ ಅದರ ಅಳತೆಯ ಕೋಲುಗಳನ್ನು ಹಾಕಿದವನ್ಯಾರು! ತಿಳಿಯುತ್ತೀಯೋ!
ಅದರ ಮೇಲೆ ಧಾರ ಇಟ್ಟವನ್ಯಾರು!
೬ ಯಾತರ ಮೇಲೆ ಅದರ ಅಡಿಗಳು ಕೂತವೆ!
೭ ಉದಯದ ನಕ್ಷತ್ರಗಳು ಕೂಡಾ ಹರ್ಷ ಧ್ವನಿ ಮಾಡುವಾಗ,
ದೇವರ ಮಕ್ಕಳೆಲ್ಲಾ ಉಲ್ಲಾಸದಿಂದ ಆರ್ಭಟಿಸುವಾಗ,
ಇಲ್ಲವೆ ಅದರ ಮೂಲೇ ಕಲ್ಲನ್ನು ಹಾಕಿದವನ್ಯಾರು!
೮ ಸಮುದ್ರವು ಗರ್ಭದೊಳಗಿಂದ ನೆಗದು ಬರುವಾಗ,
ಅದಕ್ಕೆ ಬಾಗಲುಗಳನ್ನು ಇಟ್ಟವನ್ಯಾರು!
೯ ನಾನು ಅದರ ವಸ್ತ್ರವಾಗಿ ಮೇಘವನ್ನೂ,
ಅದಕ್ಕೆ ಬಟ್ಟೆಯಾಗಿ ಅಂಧಕಾರವನ್ನೂ ಕೊಟ್ಟಾಗ,
೧೦ ಅದಕ್ಕೆ ನನ್ನ ನೇಮ ನಿರ್ಣಯಿಸಿದೆನು;
ಅದಕ್ಕೆ ಅಗುಳಿಗಳನ್ನೂ ಬಾಗಲುಗಳನ್ನೂ ಇಟ್ಟೆನು.
೧೧ ಇಲ್ಲಿಯ ತನಕ ಬರುವಿ; ಮುಂದರಿಯ ಕೂಡದು;
ಇಲ್ಲಿ ನಿನ್ನ ತೆರೆಗಳ ಅಹಂಕಾರ ನಿಲ್ಲಲಿ, ಅಂದೆನು.

೧೨ ನಿನ್ನ ದಿವಸಗಳಾರಭ್ಯ ಬೆಳಿಗ್ಯೆಗೆ ಅಪ್ಪಣೆ ಕೊಟ್ಟಿಯೋ!
೧೩ ಅದು ಭೂಮಿಯ ಅಂಚುಗಳನ್ನು ಹಿಡಿಯುವ ಹಾಗೆಯೂ,
ದುಷ್ಟರು ಅದರೊಳಗಿಂದ ಝಾಡಿಸಲ್ಪಡುವ ಹಾಗೆಯೂ,
ಉದಯಕ್ಕೆ ಸ್ಥಳ ತೋರಿಸಿದಿಯೋ!
೧೪ ಮುದ್ರೆಯಿಂದ ಮಣ್ಣು ಆಗುವ ಹಾಗೆ, ಅದು ಮಾರ್ಪಡುತ್ತದೆ;
ವಸ್ತ್ರದ ಹಾಗೆ ನಿಂತಿರುತ್ತದೆ.
೧೫ ಮತ್ತು ದುಷ್ಟರಿಂದ ಅವರ ಬೆಳಕು ಹಿಂಜರಿಯುತ್ತದೆ;
ಎತ್ತಿದ ತೋಳು ಮುರಿದು ಹೋಗುವದು.

೧೬ ನೀನು ಸಮುದ್ರದ ಬುಗ್ಗೆಗಳ ತನಕ ಬಂದು,
ಅಗಾಧದ ನೀರಿನ ಗುಂಡಿಯಲ್ಲಿ ತಿರುಗಾಡಿದಿಯೋ!
೧೭ ನಿನಗೆ ಮರಣದ ಬಾಗಲುಗಳು ತೆರೆಯಲ್ಪಟ್ಟವೋ!
ಮರಣದ ನೆರಳಿನ ಬಾಗಲುಗಳನ್ನು ನೀನು ನೋಡಿದಿಯೋ!
೧೮ ಭೂಮಿಯ ವಿಸ್ತಾರಗಳ ತನಕ ನೀನು ಗ್ರಹಿಸಿದಿಯೋ!
ಇದನ್ನೆಲ್ಲಾ ತಿಳಿ ಕೊಂಡಕೆ ತಿಳಿಯ ಪಡಿಸು.
೧೯ ಬೆಳಕಿನ ನಿವಾಸಕ್ಕೆ ದಾರಿ ಯಾವದು?
ಕತ್ತಲೆಯ ಸ್ಥಳವು ಯಾವದು?
೨೦ ಅದರ ಗಡಿಯ ತನಕ ಅದನ್ನು ತಿಳಿದು ಕೊಂಡಿಯೋ?
ಅದರ ಮನೆಗೆ ಹೋಗುವ ಹಾದಿಗಳನ್ನು ಗ್ರಹಿಸಿದಿಯೋ?
೨೧ ಅಂದೇ ಹುಟ್ಟಿದ್ದರಿಂದ ನಿನಗೆ ತಿಳಿಯುವದೋ?
ನಿನ್ನ ದಿವಸಗಳ ಲೆಖ್ಖವು ಬಹಳವಾಗಿರುವದರಿಂದ?

೨೨ ಹಿಮದ ಉಗ್ರಾಣಗಳ ತನಕ ಬಂದಿಯೋ?
ಆನೇಕಲ್ಲಿನ ಉಗ್ರಾಣಗಳನ್ನು ನೋಡಿದಿಯೋ?
೨೩ ಅವುಗಳನ್ನು ನಾನು ಇಕ್ಕಟ್ಟಿನ ಕಾಲಕ್ಕಾಗಿಯೂ,
ಸಂಗರ ಯುದ್ಧಗಳ ದಿವಸಕ್ಕಾಗಿಯೂ ಇಟ್ಟು ಕೊಂಡಿದ್ದೇನೆ.
೨೪ ಬೆಳಕು ಭಾಗವಾಗುವಂಥ,
ಮೂಡಣ ಘೂಳಿ ಭೂಮಿಯ ಮೇಲೆ ಚದರುವಂಥ ಮಾರ್ಗವು ಎಲ್ಲಿ?
೨೫ ದೊಡ್ಡ ಮಳೆಗೆ ಜಲಧಾರೆಗಳನ್ನೂ,
ಗುಡುಗುಗಳ ಮಿಂಚಿಗೆ ಮಾರ್ಗವನ್ನೂ ನೇಮಿಸಿದವನ್ಯಾರು?
೨೬ ಅದು ಮನುಷ್ಯನಿಲ್ಲದ ಭೂಮಿಯ ಮೇಲೆಯೂ,
ಜನರಿಲ್ಲದ ಅರಣ್ಯದಲ್ಲಿಯೂ ಸುರಿಯುವದು;
೨೭ ಹಾಳು ಬೈಲುಗಳಿಗೆ ತೃಪ್ತಿ ಉಂಟು ಮಾಡುವದು;
ಪಲ್ಯಗಳ ಮೊಳಿಕೆಯನ್ನು ಮೊಳಿಸುವದು.
೨೮ ಮಳೆಗೆ ತಂದೆ ಇದ್ದಾನೋ?
ಇಲ್ಲವೆ ಮಂಜಿನ ಹನಿಗಳನ್ನು ಹುಟ್ಟಿಸುವವನ್ಯಾರು?
೨೯ ಯಾವನ ಹೊಟ್ಟೆಯೊಳಗಿಂದ ನೀರು ಗಡ್ಡೆ ಹೊರಡುತ್ತದೆ?
ಆಕಾಶದ ಹಿಮವನ್ನು ಹುಟ್ಟಿಸಿದವನ್ಯಾರು?

೩೦ ಕಲ್ಲಿನ ಹಾಗೆ ನೀರು ಅಡಗುತ್ತದೆ;
ನೀರಿನ ಮೇಲ್ಬಾಗವು ಅಂಟಿ ಕೊಳ್ಳುತ್ತದೆ.

೩೧ ನೀನು ವೃಷಭ ರಾಶಿಯ ಬಂಧಗಳನ್ನು ಕಟ್ಟಿ ಬಲ್ಲಿಯೋ?
ಇಲ್ಲವೆ ಮೃಗಶಿರದ ಸಂಕೋಲೆಗಳನ್ನು ಬಿಚ್ಚ ಬಲ್ಲಿಯೋ?
೩೨ ನೀನು ರಾಶಿಗಳನ್ನು ಅವುಗಳ ಕಾಲದಲ್ಲಿ ಹೊರಗೆ ತರುತ್ತೀಯೋ?
ಸಪ್ತತಾರಗಳನ್ನು, ಅವುಗಳ ಮಕ್ಕಳ ಸಹಿತವಾಗಿ, ನೀನು ನಡಿಸುತ್ತೀಯೋ?
೩೩ ಆಕಾಶದ ಕಟ್ಟಳೆಗಳನ್ನು ನೀನು ತಿಳುಕೊಳ್ಳುತ್ತೀಯೋ?
ಇಲ್ಲವೆ ಅದರ ಅಧಿಕಾರವನ್ನು ಭೂಮಿಯಲ್ಲಿ ನಿರ್ಣಯಿಸುತ್ತೀಯೋ?
೩೪ ನೀರಿನ ಸಂಪೂರ್ಣತೆ ನಿನ್ನನ್ನು ಮುಚ್ಚುವ ಹಾಗೆ,
ನಿನ್ನ ಶಬ್ದವನ್ನು ಮೋಡಗಳ ಕಡೆಗೆ ಎತ್ತುತ್ತೀಯೋ?
೩೫ ಮಿಂಚುಗಳು ಹೋಗಿ, ಇಗೋ, ಇದ್ದೇವೆಂದು, ನಿನಗೆ ಹೇಳುವ ಹಾಗೆ,
ನೀನು ಅವುಗಳನ್ನು ಕಳುಹಿಸುತ್ತೀಯೋ?
೩೬ ಯಾವನು ಅಂತರ್ಯದಲ್ಲಿ ಜ್ಞಾನ ಇಡುತ್ತಾನೆ?
ಯಾವನು ಮನಸ್ಸಿಗೆ ಗ್ರಹಿಕೆಯನ್ನು ಕೊಟ್ಟಿದ್ದಾನೆ?
೩೭ ಯಾವನು ಮೋಡಗಳನ್ನು ಜ್ಞಾನದಿಂದ ಎಣಿಸುತ್ತಾನೆ?
೩೮ ಧೂಳಿಯು ಎರಕ ಹೊಯಿದ ಹಾಗೆ ಕರಗುವಾಗ,
ಮತ್ತು ಗಡ್ಡೆಗಳು ಅಂಟುವಾಗ,
ಆಕಾಶದ ಬುದ್ದಲಿಗಳನ್ನು ಹೊಯ್ಯುವವನ್ಯಾರು!

೩೯ ಸಿಂಹಕ್ಕೋಸ್ಕರ ನೀನು ಬೇಟೆಯಾಡುವಿಯೋ?
೪೦ ಅವು ವಾಸ ಸ್ಥಳಗಳಲ್ಲಿ ಕೂತು ಕೊಳ್ಳುವಾಗ,
ಗವಿಯಲ್ಲಿ ಹೊಂಚಿ ಮಲಗಿರುವಾಗ,
ಎಳೇ ಸಿಂಹಗಳ ಆಶೆಯನ್ನು ಪೂರೈಸುವಿಯೋ?
೪೧ ಅದರ ಮರಿಗಳು ತಿನ್ನುವಿಕ್ಕೆ ಇಲ್ಲದೆ ಅಲೆದು,
ದೇವರಿಗೆ ಮೊರೆ ಇಡುವಾಗ,
ಕಾಗೆಗೆ ಅದರ ಆಹಾರವನ್ನು ಸಿದ್ಧ ಮಾಡುವವನ್ಯಾರು!

## ೩೯. ಸಂಧಿ.

೧ ಬಂಡೆಗಳ ಕಾಡ ಮೇಕೆಗಳು ಈಯುವ ಕಾಲವನ್ನು ನೀನು ತಿಳಿಯುತ್ತೀಯೋ?
ದುಬ್ಬಿಗಳಿಗೆ ವೇದನೆ ಬರುವದನ್ನು ಪರಾಮರಿಸುತ್ತೀಯೋ?
೨ ಅವುಗಳ ಗರ್ಭ ತುಂಬುವ ತಿಂಗಳುಗಳನ್ನು ಎಣಿಸುತ್ತೀಯೋ?
ಅವು ಈಯುವ ಕಾಲವನ್ನು ತಿಳಿಯುತ್ತೀಯೋ?
೩ ಅವು ಬೊಗ್ಗಿ ಕೊಂಡು, ಮರಿಗಳನ್ನು ಹಾಕುತ್ತವೆ.
ವೇದನೆಗಳನ್ನು ಪರಿಹರಿಸಿ ಕೊಳ್ಳುತ್ತವೆ.
೪ ಅವುಗಳ ಮರಿಗಳು ಬಲಗೊಳ್ಳುತ್ತವೆ; ಬೈರಿನಲ್ಲಿ ಬೆಳೆಯುತ್ತವೆ;
ಅವು ಹೊರಟು ಹೋಗಿ, ಅವುಗಳ ಬಳಿಗೆ ತಿರಿಗಿ ಬರುವದಿಲ್ಲ.
೫ ಕಾಡ ಕತ್ತೆಯನ್ನು ಬಿಡುಗಡೆಯಾಗಿ ಕಳುಹಿಸಿದವನ್ಯಾರು?
ಕಾಡ ಕತ್ತೆಯ ಸಂಕೋಲೆಗಳನ್ನು ಬಿಡಿಸಿದವನ್ಯಾರು?
೬ ಅರಣ್ಯವನ್ನು ಅದರ ಮನೆಯಾಗಿಯೂ,
ಉಪ್ಪಿನ ಬೈಲನ್ನು ಅದರ ವಾಸ ಸ್ಥಳವಾಗಿಯೂ ನೇಮಿಸಿದ್ದೇನಲ್ಲ?
೭ ಪಟ್ಟಣದ ಗುಲ್ಲಿಗೆ ನಗುತ್ತದೆ;
ಹೊಡೆಯುವವನ ಚಪ್ಪರಣೆಯನ್ನು ಕೇಳುವದಿಲ್ಲ.
೮ ಪರ್ವತಗಳಲ್ಲಿ ಕಂಡದ್ದೆಲ್ಲಾ ಅದರ ಮೇವು;
ಹಸುರಾದದ್ದನ್ನೆಲ್ಲಾ ಹುಡುಕುತ್ತದೆ.

೯ ಕಾಡ ಕೋಣ ನಿನ್ನನ್ನು ಸೇವಿಸ ಮನಸ್ಸಾಗಿರುವದೋ?
ನಿನ್ನ ಗೋದಲಿಯ ಬಳಿಯ ಉಳಕೊಳ್ಳುವದೋ?
೧೦ ಕಾಡ ಕೋಣವನ್ನು ಹುರಿಯಿಂದ ಸಾಲಿಗೆ ಕಟ್ಟುವಿಯೋ?
ಅದು ನಿನ್ನ ಹಿಂದೆ ಹೊಲಗಳಿಗೆ ಹಲಿಗೆ ಹೊಡೆಯುವದೋ?
೧೧ ಅದರ ಶಕ್ತಿ ಬಹಳವಾಗಿರುವದರಿಂದ, ಅದರಲ್ಲಿ ಭರವಸ ಇಡುವಿಯೋ?
ನಿನ್ನ ಕೆಲಸವನ್ನು ಅದಕ್ಕೆ ಒಪ್ಪಿಸುವಿಯೋ?
೧೨ ಅದು ನಿನ್ನ ಬೀಜವನ್ನು ತಿರಿಗಿ ಕೊಡುವದೆಂದೂ,
ನಿನ್ನ ಕಣ ಕೂಡಿಸುವದೆಂದೂ ಅದನ್ನು ನಂಬುವಿಯೋ?
೧೩ ಉಟ್ಟ್ರ ಪಕ್ಷಿಯ ಕೆಕ್ಕೆ ಅಲ್ಲಾಡುತ್ತದೆ;
ಆದರೆ ಅದರ ಕೆಕ್ಕೆಯೂ ಗರಿಯೂ ವಾತ್ಸಲ್ಯವುಳ್ಳದ್ದಾಗಿದೆಯೋ?
೧೪ ಯಾಕಂದರೆ ಅದು ತನ್ನ ಮೊಟ್ಟೆಗಳನ್ನು ಭೂಮಿಯಲ್ಲಿ ಬಿಟ್ಟು,
ಧೂಳಿಯಲ್ಲಿ ಅವುಗಳನ್ನು ಬೆಳೆಸುತ್ತದೆ.
೧೫ ಕಾಲು ಅದನ್ನು ತುಳಿದೀತು,
ಅಡವಿಯ ಮೃಗ ಅದನ್ನು ಜಜ್ಜೀತು, ಎಂದು ಮರೆತುಬಿಡುತ್ತದೆ.
೧೬ ತನ್ನ ಮರಿಗಳನ್ನು, ತನ್ನವುಗಳಲ್ಲವೆಂದು, ಕಠಿಣವಾಗಿ ನಡಿಸುತ್ತದೆ;
ತನ್ನ ಕಷ್ಟವು ವ್ಯರ್ಥ ಎಂಬ ಹೆದರಿಕೆಯು ಇಲ್ಲ.
೧೭ ಯಾಕಂದರೆ ದೇವರು ಅದಕ್ಕೆ ಜ್ಞಾನ ತಪ್ಪಿಸಿದ್ದಾನೆ;
ಗ್ರಹಿಕೆಯಲ್ಲಿ ಪಾಲು ಅದಕ್ಕೆ ಕೊಡಲಿಲ್ಲ.
೧೮ ಉನ್ನತಕ್ಕೆ ಏರುವ ಸಮಯದಲ್ಲಿ
ಕುದುರೆಯನ್ನೂ ರಾಹುತನನ್ನೂ ನೋಡಿ, ನಗುತ್ತದೆ.

೧೯ ನೀನು ಕುದುರೆಗೆ ತ್ರಾಣವನ್ನು ಕೊಟ್ಟ್ಯ,
ಅದರ ಕುತ್ತಿಗೆಗೆ ಭಯಂಕರವಾದ ಕೂದಲನ್ನು ಹೊದ್ದಿಸಿದಿಯೋ!
೨೦ ಮಿಡಿತೆಯ ಹಾಗೆ ಅದನ್ನು ಹಾರ ಮಾಡುತ್ತೀಯೋ!
ಅದರ ಹೂಂಕಾರದ ಮಹಿಮೆ ಭಯಂಕರವಾಗಿದೆ.
೨೧ ಅದು ತಗ್ಗಿನಲ್ಲಿ ಕೆರಿಯುತ್ತದೆ; ತನ್ನ ಶಕ್ತಿಯಲ್ಲಿ ಸಂತೋಷಿಸುತ್ತದೆ;
ಯುದ್ಧ ಸನ್ನಾಹಕ್ಕೆ ಎದುರಾಗಿ ಹೊರಡುತ್ತದೆ.
೨೨ ಭಯಕ್ಕೆ ನಗುತ್ತದೆ; ಹೆದರುವದಿಲ್ಲ;
ಕತ್ತಿಯ ಎದುರಿನಿಂದ ತಿರುಗುವದಿಲ್ಲ.
೨೩ ಅದರ ಮೇಲೆ ಬತ್ತಳಿಕೆಯೂ,
ಪ್ರಜ್ವಲಿಸುವ ಭಲ್ಲೆಯೂ, ಭರ್ಜಿಯೂ ಕರಕರಿಸುತ್ತದೆ.
೨೪ ಹಾರುತ್ತಾ, ಅಲ್ಲಾಡುತ್ತಾ, ನೆಲ ನುಂಗುತ್ತದೆ;
ತುತೂರಿಯ ಶಬ್ದ ಅದೆ, ಎಂದು ನಂಬುವದಿಲ್ಲ.
೨೫ ತುತೂರಿ ಊದುತ್ತಲೇ ಹುಯಿಲು ಇಕ್ಕುತ್ತದೆ;



ದೂರದಿಂದ ಕಾಳಗವನ್ನೂ ಅಧಿಪತಿಗಳ ಅಬ್ಬರವನ್ನೂ ಯುದ್ಧದ ಧ್ವನಿಯನ್ನೂ ಮೂಸಿ ನೋಡುತ್ತದೆ.

೨೬ ಹದ್ದು ಹಾರುವದೂ,
ತನ್ನ ಕೆಕ್ಕೆ ದಕ್ಷಿಣ ಕಡೆಗೆ ಹರಹುವದೂ, ನಿನ್ನ ವಿವೇಕದಿಂದಲೋ!
೨೭ ಕಣ ಹದ್ದು ಎತ್ತರಕ್ಕೆ ಹೋಗುವದೂ,
ತನ್ನ ಗೂಡನ್ನು ಎತ್ತುವದೂ ನಿನ್ನ ಅಪ್ಪಣೆಯ ಪ್ರಕಾರವೋ!
೨೮ ಬಂಡೆಯಲ್ಲಿ ವಾಸಿಸುತ್ತದೆ;
ಬಂಡೆಯ ಸಂದುಗಳಲ್ಲಿಯೂ ದುರ್ಗಗಳಲ್ಲಿಯೂ ಉಳುಕೊಳ್ಳುತ್ತದೆ.
೨೯ ಅಲ್ಲಿಂದ ಆಹಾರವನ್ನು ದೃಷ್ಟಿಸುತ್ತದೆ;
ಅದರ ಕಣ್ಣುಗಳು ದೂರಕ್ಕೆ ನೋಕುತ್ತವೆ.
೩೦ ಅದರ ಮರಿಗಳು ರಕ್ತವನ್ನು ಹೀರುತ್ತವೆ;
ಹೆಣ ಇದ್ದಲ್ಲೇ ಅದು ಇರುವದು.

## ೪೦. ಸಂಧಿ.

೧ ಮತ್ತು ಕರ್ತನು ಯೋಬನಿಗೆ ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ಸರ್ವ ಶಕ್ತನ ಸಂಗಡ ವಾದಿಸುವವನು ಶಿಕ್ಷಿಸುವವನೋ!
ದೇವರನ್ನು ಗದರಿಸುವವನು ಅದಕ್ಕೆ ಉತ್ತರ ಕೊಡಲಿ.

೩ ಆಗ ಯೋಬನು ಕರ್ತನಿಗೆ ಉತ್ತರ ಕೊಟ್ಟು ಹೇಳಿದ್ದೇನಂದರೆ—

೪ ಇಗೋ, ನೀಚನಾಗಿದ್ದೇನೆ; ನಿನಗೆ ಏನು ಪ್ರತ್ಯುತ್ತರ ಕೊಡಲಿ!
ನನ್ನ ಕೈಯಿಂದ ಬಾಯಿ ಮುಚ್ಚಿಕೊಳ್ಳುತ್ತೇನೆ.
೫ ಒಂದು ಸಾರಿ ಮಾತಾಡಿದೆನು, ತಿರಿಗಿ ಉತ್ತರ ಕೊಡೆನು;
ಎರಡು ಸಾರಿ. ಆದರೆ ಹೆಚ್ಚು ಮಾತಾಡೆನು.
೬ ಆಗ ಕರ್ತನು ಬಿರುಘುಳಿಯೊಳಗಿಂದ ಯೋಬನಿಗೆ ಉತ್ತರ ಕೊಟ್ಟು ಹೇಳಿದ್ದೇನಂದರೆ—

೭ ಪುರುಷನ ಹಾಗೆ ನಿನ್ನ ನಡುವನ್ನು ಕಟ್ಟಿಕೋ;
ನಿನ್ನನ್ನು ಕೇಳುವೆನು, ನನಗೆ ತಿಳಿಸು.
೮ ನೀನು ನನ್ನ ನ್ಯಾಯತೀರ್ಪಿಕೆಯನ್ನು ಮುರಿಯುವಿಯೋ!
ನೀನು ನೀತಿವಂತನಾಗುವ ಹಾಗೆ, ನನ್ನನ್ನು ದುಷ್ಟನಾಗ ಮಾಡುವಿಯೋ!
೯ ಇಲ್ಲವೆ ದೇವರ ಹಾಗೆ ತೋಳುಳ್ಳವನಾಗಿದ್ದೀಯೋ!
ಅವನ ಹಾಗೆ ಗುಡುಗಿನಿಂದ ಆರ್ಭಟ ಮಾಡುವಿಯೋ!
೧೦ ಘನತೆಯಿಂದಲೂ ಉನ್ನತತ್ವದಿಂದಲೂ ನಿನ್ನನ್ನು ಅಲಂಕರಿಸಿಕೋ;
ಮಹಿಮೆಯನ್ನೂ ಪ್ರಭೆಯನ್ನೂ ಧರಿಸಿಕೋ.
೧೧ ನಿನ್ನ ಕೋಪದ ಉರಿಯನ್ನು ಚದರಿಸು;
ಗರ್ವಿಷ್ಟರನ್ನೆಲ್ಲಾ ನೋಡಿ ತಗ್ಗಿಸು.
೧೨ ಗರ್ವಿಷ್ಟರನ್ನೆಲ್ಲಾ ನೋಡಿ, ಕುಂಗ ಮಾಡು;
ದುಷ್ಟರನ್ನು ಅವರ ಸ್ಥಳದಲ್ಲಿ ತುಳಿದು ಬಿಡು.
೧೩ ಅವರನ್ನು ಕೂಡ ಧೂಳಿಯಲ್ಲಿ ಅಡಗಿಸು;
ಅವರ ಮುಖಗಳನ್ನು ಮರೆ ಮಾಡಿ ಮುಚ್ಚು.
೧೪ ಆಗ ನಾನೂ ನಿನ್ನ ಬಲಗೈ ನಿನ್ನನ್ನು ರಕ್ಷಿಸಿತೆಂದು, ನಿನಗೆ ಅರಿಕೆ ಮಾಡುವೆನು.

೧೫ ನಾನು ನಿನ್ನ ಹಾಗೆ ನಿರ್ಮಿಸಿದ ಬೆಹೆಮೋತನ್ನು ನೋಡು;
ಅದು ದನದ ಹಾಗೆ ಹುಲ್ಲು ತಿನ್ನುತ್ತದೆ.
೧೬ ಅದರ ಸೊಂಟದಲ್ಲಿರುವ ಅದರ ಶಕ್ತಿಯನ್ನೂ,
ಅದರ ಹೊಟ್ಟೆಯ ನರಗಳಲ್ಲಿರುವ ಅದರ ತ್ರಾಣವನ್ನೂ ನೋಡು.
೧೭ ತನ್ನ ಬಾಲವನ್ನು ದೇವದಾರಿನ ಹಾಗೆ ಬೊಗ್ಗಿಸುತ್ತದೆ;
ಅದರ ಸೊಂಟದ ನರಗಳು ಸುತ್ತಿ ಹೆಣೆದು ಅವೆ.
೧೮ ಅದರ ಎಲುಬುಗಳು ಹಿತ್ತಾಳೆಯ ಸಳಿಗೆಗಳಾಗಿವೆ;
ಅದರ ಅಸ್ತಿಗಳು ಕಬ್ಬಿಣದ ಕೋಲುಗಳ ಹಾಗೆ ಅವೆ.
೧೯ ಅದೇ ದೇವರ ಮಾರ್ಗಗಳ ಆದಿ;
ಅದನ್ನು ನಿರ್ಮಿಸಿದವನು ಅದರ ಖಡ್ಗವನ್ನು ಶಂದಿಟ್ಟಿದ್ದಾನೆ.
೨೦ ಯಾಕಂದರೆ ಪರ್ವತಗಳು ಅದಕ್ಕೆ ಮೇವು ಕೊಡುತ್ತವೆ;
ಅಡವಿಯ ಎಲ್ಲಾ ಮೃಗಗಳು ಅಲ್ಲಿ ಆಡುತ್ತವೆ.
೨೧ ನೆರಳಾದ ಗಿಡಗಳ ಕೆಳಗೆ,
ಆಪಿನ ಮರೆಯಲ್ಲಿಯೂ, ಕೆಸರಿನಲ್ಲಿಯೂ ಮಲಗುತ್ತದೆ.
೨೨ ನೆರಳಾದ ಗಿಡಗಳು ತಮ್ಮ ನೆರಳಾಗಿ ಅದನ್ನು ಅಡಗಿಸುತ್ತವೆ,
ನದಿಯ ನೀರವಂಚಿ ಮರಗಳು ಅದನ್ನು ಅಡಗಿಸುತ್ತವೆ.
೨೩ ಇಗೋ, ನದಿ ಬಲವಾದರೂ, ಅದು ನಡುಗುವದಿಲ್ಲ;
ಯೋರ್ದನ್ ಅದರ ಬಾಯಿಯಲ್ಲಿ ಹೇರಿದರೂ, ಅದು ಶಾಂತವಾಗಿದೆ.
೨೪ ಅದರ ಕಣ್ಣುಗಳ ಮುಂದೆ ಅದನ್ನು ಹಿಡಿಯುತ್ತಾರೋ!
ಅದರ ಮೂಗು ಉರ್ಲುಗಳಿಂದ ಬಿಗಿಯುತ್ತಾರೆ.

## ೪೧. ಸಂಧಿ.

೧ ಲೆವಿಯಾತಾನನ್ನು ಗಾಳದಿಂದ ಎಳೆಯುವಿಯೋ!
ಹಗ್ಗದಿಂದ ಅದರ ನಾಲಿಗೆ ಬಿಗಿಯುವಿಯೋ!
೨ ಅದರ ಮೂಗಿನಲ್ಲಿ ದರ್ಭೆ ಇಡುವಿಯೋ!
ಅದರ ಕೆನ್ನೆ ಮುಳ್ಳಿನಿಂದ ಚುಚ್ಚುವಿಯೋ!
೩ ಅದು ನಿನಗೆ ಬಹಳ ಬಿನ್ನಹಗಳನ್ನು ಮಾಡುವದೋ!
ನಿನ್ನ ಸಂಗಡ ಮೃದುವಾದ ಮಾತು ಆಡುವದೋ!
೪ ನಿನ್ನ ಸಂಗಡ ಒಡಂಬಡಿಕೆ ಮಾಡುವದೋ!
ಅದನ್ನು ಎಂದೆಂದಿಗೂ ದಾಸನಾಗಿ ತಕ್ಕೊಳ್ಳುವಿಯೋ!
೫ ಪಕ್ಷಿಯ ಹಾಗೆ ಅದರ ಸಂಗಡ ಆಡುವಿಯೋ!
ನಿನ್ನ ಹುಡುಗಿಯರಿಗೋಸ್ಕರ ಅದನ್ನು ಕಟ್ಟಿ ಹಾಕುವಿಯೋ!
೬ ಜತೆಯವರು ಅದರ ವಿಷಯದ ವ್ಯಾಪಾರ ಮಾಡುವರೋ!
ಅದನ್ನು ಕಾನಾನ್ಯರ ಮಕ್ಕಳಿಗೆ ಪಾಲಿಡುವರೋ!
೭ ಅದರ ತೊಗಲು ಮುಳ್ಳುಗಳಿಂದ,
ಅದರ ತಲೆ ಮೀನುಗಾರರ ಭಲ್ಲೆಯಿಂದ ತುಂಬುವಿಯೋ!

೪ ಅದರ ಮೇಲೆ ನಿನ್ನ ಕೈ ಹಾಕು;
ಯುದ್ಧವನ್ನು ನೆನಸಿಕೋ; ಅದಕೆ ಮುಂದರಿಯಲಾರೆ.
೯ ಇಗೋ, ಅದನ್ನು ಹಿಡಿಯ ಬೇಕೆಂಬ ನಿರೀಕ್ಷೆ ಮೋಸ ಹೋಗುವದು;
ಅದನ್ನು ನೋಡುತ್ತಲೇ ಕೆಡವಲ್ಪಡುತ್ತಾನಲ್ಲ?
೧೦ ಅದನ್ನು ಎಚ್ಚರಿಸುವ ಹಾಗೆ ಕಠಿಣನು ಇಲ್ಲ;
ಹಾಗಾದರೆ ನನ್ನ ಮುಂದೆ ನಿಂತು ಕೊಳ್ಳುವವನ್ಯಾರು?
೧೧ ನಾನು ತಿರಿಗಿ ಕೊಡುವ ಹಾಗೆ ನನಗೆ ಮುಂಗೊಂಡವನ್ಯಾರು?
ಆಕಾಶನೆಲ್ಲಾದರ ಕೆಳಗೆ ಇರುವಂಥಾದ್ದು ನನ್ನದೇ.
೧೨ ನಾನು ಅದರ ಅವಯವಗಳನ್ನೂ, ಅದರ ಶ್ರಾಣ ಸಂಗತಿಯನ್ನೂ,
ಅದರ ಸನ್ನಾಹದ ಸೊಬಗನ್ನು ಕುರಿತು ಮೌನವಾಗಿರೆನು.
೧೩ ಅದರ ಮೇಲಿನ ವಸ್ತ್ರವನ್ನು ತೆರೆಯುವವನ್ಯಾರು?
ಅದರ ಹಲ್ಲಿನ ಗೂಡಿನೊಳಗೆ ಶೇರುವವನ್ಯಾರು?
೧೪ ಅದರ ಮುಖದ ಕದಗಳನ್ನು ತೆರೆಯುವವನ್ಯಾರು?
ಅದರ ಹಲ್ಲುಗಳು ಸುತ್ತಲೂ ಭಯಂಕರವಾಗಿವೆ.
೧೫ ಬಲವಾದ ಗುರಾಣಿಗಳು ಅದರ ಗರ್ವವಾಗಿವೆ;
ಬತ್ತಿದ ಮುದ್ರೆಯ ಹಾಗೆ ಬಿಗಿದವೆ.
೧೬ ಒಂದಕ್ಕೊಂದು ಹೊಂದಿ ಅವೆ;
ಘುಳಿಯಾದರೂ ಅವುಗಳ ಮಧ್ಯದಲ್ಲಿ ಶೇರುವದಿಲ್ಲ.
೧೭ ಒಂದಕ್ಕೊಂದು ಅಂಟುತ್ತವೆ;
ಹಿಡುಕೊಂಡು ಪ್ರತ್ಯೇಕವಾಗುವದಿಲ್ಲ.
೧೮ ಅದರ ಶೀನುವಿಕೆಯಿಂದ ಬೆಳಕು ಹುಟ್ಟುವದು;
ಅದರ ಕಣ್ಣುಗಳು ಉದಯದ ರೆಪ್ಪೆಗಳ ಹಾಗಿವೆ.
೧೯ ಅದರ ಬಾಯಿಯಿಂದ ದೀವಟಿಗೆಗಳು ಹೊರಡುತ್ತವೆ;
ಬೆಂಕಿಯ ಕಿಡಿಗಳು ಹಾರುತ್ತವೆ.
೨೦ ಕುದಿಯುವ ಗಡಿಗೆಯೊಳಗಿಂದಲೂ ಕೊಪ್ಪರಿಗೆಯೊಳಗಿಂದಲೂ ಅದ ಹಾಗೆ,
ಅದರ ಮೂಗಿನೊಳಗಿಂದ ಹೊಗೆ ಹಾಯುವದು.
೨೧ ಅದರ ಶ್ವಾಸ ಕೆಂಡಗಳನ್ನು ಹೊತ್ತಿಸುವದು;
ಜ್ವಾಲೆಯು ಅದರ ಬಾಯಿಯೊಳಗಿಂದ ಹೊರಡುವದು.
೨೨ ಅದರ ಕುತ್ತಿಗೆಯಲ್ಲಿ ಬಲವು ವಾಸಿಸುವದು;
ಅದರ ಮುಂದೆ ಅಳುಕು ಕೂಣೆಯುತ್ತದೆ.
೨೩ ಅದರ ಮಾಂಸದ ಖಂಡಗಳು ಘಟ್ಟಿಯಾಗಿವೆ;
ಅದರ ಮೈಯಲ್ಲಿ 'ಕದಲದ ಹಾಗೆ ಏಕಕವಾಗಿದೆ.
೨೪ ಅದರ ಹೃದಯವು ಕಲ್ಲಿನ ಹಾಗೆಯೂ,
ಬೀಸುವ ಕಲ್ಲಿನ ಅಡಿಯ ಹಾಗೆಯೂ ಏಕಕವಾಗಿದೆ.

೨೫ ಅದು ಏಳುವಾಗ, ಶೂರರು ಹೆದರುತ್ತಾರೆ;
ಕದಲಿಕೆಗಳಿಗೋಸ್ಕರ ಭ್ರಮೆ ಗೊಳ್ಳುತ್ತಾರೆ.
೨೬ ಒಬ್ಬನು ಸವಿಾಪ ಬಂದರೆ, ಖಡ್ಗವು ನಿಲ್ಲದು;
ಈಟಿಯೂ, ಬಾಣವೂ, ಕವಚವೂ ನಿಲ್ಲವು.
೨೭ ಅದು ಕಬ್ಬಿಣವು ಹುಲ್ಲೆಂದೂ,
ಹಿತ್ತಾಳೆಯು ಕೊಳೆತ ಕಟ್ಟಿಗೆ ಎಂದೂ ಎಣಿಸುವದು.
೨೮ ಬಿಲ್ಲಿನ ಮಗ ಅದನ್ನು ಓಡಿಸುವದಿಲ್ಲ,
ಕವಣೆಯ ಕಲ್ಲು ಕೂಳೆಯ ಹಾಗೆ ಆಗುತ್ತದೆ.
೨೯ ಟೊಣಾಬೆಗಳು ಕೂಳೆಯ ಹಾಗೆ ಎಣಿಸಲ್ಪಟ್ಟಿವೆ;
ಭರ್ಜಿ ಕದಲಿದರೆ, ಅದು ನಗುವದು.

೩೦ ಅದರ ಅಡಿಯಲ್ಲಿ ಹದವಾದ ಹರಳುಗಳು ಅವೆ;
ಕೆಸರಿನ ಮೇಲೆ ಉರುಳು ಕೋಲನ್ನು ನಡಿಸುತ್ತದೆ.
೩೧ ಆಳವಾದ ನೀರನ್ನು ಗಡಿಗೆಯ ಹಾಗೆಯೂ,
ಸಮುದ್ರವನ್ನು ತೈಲ ಪಾತ್ರೆಯ ಹಾಗೆಯೂ ಕುದಿಯ ಮಾಡುತ್ತದೆ.
೩೨ ಅದರ ಹಿಂದೆ ಹಾದಿ ಬೆಳಗುವದು;
ಅಗಾಧ ನೀರು ನರೆ ಕೂದಲಿನ ಹಾಗೆ ಕಾಣುವದು.
೩೩ ಧೂಳಿಯ ಮೇಲೆ ಅದಕ್ಕೆ ಸಮಾನವಾದ್ದು ಇಲ್ಲ;
ಭಯವಿಲ್ಲದೆ ಇರುವದಕ್ಕಾಗಿ ಮಾಡಿದ್ದು.
೩೪ ಉನ್ನತವಾದದ್ದನ್ನೆಲ್ಲಾ ಅದು ನೋಡುವದು;
ಗರ್ವದ ಮಕ್ಕಳೆಲ್ಲರ ಮೇಲೆ ಅದು ಅರಸಾಗಿದೆ.

## ೪೦. ಸಂಧಿ.

೧ ಯೋಬನು ಕರ್ತನಿಗೆ ಉತ್ತರ ಕೊಟ್ಟು ಹೇಳಿದ್ದೇನಂದರೆ—

೨ ನಿನಗೆ ಎಲ್ಲಾ ಸಾಧ್ಯವಾಗಿದೆ;
ನಿನಗೆ ಯಾವ ಆಲೋಚನೆಯೂ ತಪೆಯಲ್ಪಡುವದಿಲ್ಲವೆಂದು ತಿಳಿದಿದ್ದೇನೆ.
೩ ಆಲೋಚನೆಯನ್ನು ತಿಳುವಿಕೆ ಇಲ್ಲದೆ ಕತ್ತಲಾಗ ಮಾಡುವವನ್ಯಾರು?
ಆದದರಿಂದ ನಾನು ಗ್ರಹಿಸದೆ ಇದ್ದವುಗಳನ್ನು,
ನಾನು ತಿಳಿಯದಂಥ, ನನಗೆ ಆಶ್ಚರ್ಯವಾದವುಗಳನ್ನು ಉಚ್ಚರಿಸಿದೆನು.
೪ ದಯೆ ಮಾಡಿ ಕೇಳು, ನಾನು ಮಾತಾಡುವೆನು;
ನಾನು ಕೇಳುತ್ತೇನೆ, ನೀನು ನನಗೆ ತಿಳಿಸು.
೫ ಕಿವಿಯ ಕೇಳುವಿಕೆಯಿಂದ ನಿನ್ನನ್ನು ಕುರಿತು ಕೇಳಿದ್ದೆನು;
ಮತ್ತು ಈಗ ನನ್ನ ಕಣ್ಣು ನಿನ್ನನ್ನು ನೋಡಿ ಅದೆ.
೬ ಆದದರಿಂದ ಅಸಹ್ಯಿಸಿ ಕೊಂಡು,
ಧೂಳಿಯಲ್ಲಿಯೂ ಬೂದಿಯಲ್ಲಿಯೂ ಪಶ್ಚಾತ್ತಾಪ ಪಡುತ್ತೇನೆ.

೭ ಮತ್ತು ಕರ್ತನು ಈ ಮಾತುಗಳನ್ನೆಲ್ಲಾ ಯೋಬನಿಗೆ ಹೇಳಿದ ಮೇಲೆ ಕರ್ತನು ಥೆಮಾನ್ಯನಾದ ಎಲಿಫಾಜನಿಗೆ ಹೇಳಿದ್ದೇನಂದರೆ, ನನ್ನ ಕೋಪ ನಿನ್ನ ಮೇಲೆಯೂ ನಿನ್ನ ಸ್ನೇಹಿತರಿಬ್ಬರ ಮೇಲೆಯೂ ಹೊತ್ತಿ ಅದೆ; ಯಾಕಂದರೆ ನೀವು ನನ್ನ ಸೇವಕನಾದ ಯೋಬನ ಪ್ರಕಾರ ನನ್ನ ವಿಷಯವಾಗಿ ನೆಟ್ಟಗಾದವುಗಳನ್ನು ಮಾತಾಡಲಿಲ್ಲ. ಹಾಗಾದರೆ ಈಗ ಏಳು ಎತ್ತು, ಏಳು ಹೋತು ನಿಮಗೋಸ್ಕರ ತಕ್ಕೊಂಡು, ನನ್ನ ಸೇವಕನಾದ ಯೋಬನ ಬಳಿಗೆ ಬನ್ನಿರಿ; ಅವುಗಳನ್ನು ನಿಮಗೋಸ್ಕರ ಹೋಮಕ್ಕಾಗಿ ಅರ್ಪಿಸಿರಿ; ನನ್ನ ಸೇವಕನಾದ ಯೋಬನು ನಿಮಗೋಸ್ಕರ ಪ್ರಾರ್ಥನೆ ಮಾಡಲಿ; ಯಾಕಂದರೆ ನಾನು ನಿಮ್ಮ ಬುದ್ಧಿಹೀನತ್ವದ ಪ್ರಕಾರ ಮಾಡದ ಹಾಗೆ, ಅವನ ಮುಖದಾಕ್ಷಿಣ್ಯ ನೋಡುವೆನು. ಯಾಕಂದರೆ ನೀವು ನನ್ನ ಸೇವಕನಾದ ಯೋಬನ ಪ್ರಕಾರ ನನ್ನ ವಿಷಯವಾಗಿ ನೆಟ್ಟಗಾದವುಗಳನ್ನು ಮಾತಾಡಲಿಲ್ಲ.



೮ ಥೆಮಾನ್ಯನಾದ ಎಲಿಫಾಜನೂ, ಶೂಹ್ಯನಾದ ಬಿಲ್ದದನೂ, ನಾಮಾಥ್ಯನಾದ ಜೋಫರನೂ ಹೋಗಿ, ಕರ್ತನು ಅವರಿಗೆ ಹೇಳಿದ ಪ್ರಕಾರ ಮಾಡಿದರು. ಮತ್ತು ಕರ್ತನು ಯೋಬನ ಮುಖದಾಕ್ಷಿಣ್ಯ ಮಾಡಿದನು.
೯ ಮತ್ತು ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥನೆ ಮಾಡುವಾಗ, ಕರ್ತನು ಅವನ ಸೆರೆಯನ್ನು ತಿರುಗಿಸಿದನು. ಕರ್ತನು ಯೋಬನಿಗೆ ಇದ್ದವುಗಳನ್ನೆಲ್ಲಾ ಇಮ್ಮಡಿಸಿದನು. ಆಗ ಅವನ ಸಹೋದರರೆಲ್ಲರೂ, ಅವನ ಸಹೋದರಿಗಳೆಲರೂ, ಅವನ ಮುಂಚಿನ ಪರಿಚಿತಿಯವರೆಲ್ಲರೂ ಅವನ ಬಳಿಗೆ ಬಂದು, ಅವನ ಸಂಗಡ, ಅವನ ಮನೆಯಲ್ಲಿ ಕೊಟ್ಟಿ ತಿಂದು, ಕರ್ತನು ಅವನ ಮೇಲೆ ಬರ ಮಾಡಿದ ಎಲ್ಲಾ ಕೇಡಿಗೋಸ್ಕರ ಅವನ ಸಂಗಡ ದುಃಖ ಪಟ್ಟು, ಅವನನ್ನು ಸಮಧಾನಪಡಿಸಿದರು. ಅವರು ಅವನಿಗೆ ಪ್ರತಿ ಮನುಷ್ಯನು ಬಂದು ಹಣವನ್ನೂ, ಪ್ರತಿ ಮನುಷ್ಯನು ಬಂಗಾರದ ಬಂದು ಉಂಗರವನ್ನೂ ಕೊಟ್ಟರು. ಇದಲ್ಲದೆ ಕರ್ತನು ಯೋಬನ ಆರಂಭಕ್ಕಿಂತ ಅವನ ಅಂತ್ಯವನ್ನು ಆಶೀರ್ವದಿಸಿದನು. ಮತ್ತು ಅವನಿಗೆ ಹದಿನಾಲ್ಕು ಸಾವಿರ ಕುರಿಗಳೂ, ಆರು ಸಾವಿರ ಒಂಟೆಗಳೂ, ಸಾವಿರ ಗಳೇದ ಎತ್ತುಗಳೂ, ಸಾವಿರ ಹೆಣ್ಣು ಕತ್ತೆಗಳೂ ಇದ್ದವು. ಮತ್ತು ಅವನಿಗೆ ಏಳು ಕುಮಾರರೂ ಮೂರು ಕುಮಾರ್ತೆಗಳೂ ಇದ್ದರು. ಅವನು ಒಬ್ಬಳಿಗೆ ಯೆಮಿಾಮಳೆಂದೂ, ಒಬ್ಬಳಿಗೆ ಕೆಜೆಯಳೆಂದೂ, ಮೂರನೆಯವಳಿಗೆ ಕೇರೆನೀಹಪ್ಪುಕೆಂದೂ, ಹೆಸರಿಟ್ಟನು. ಯೋಬನ ಕುಮಾರ್ತೆಗಳ ಹಾಗೆ ಸೌಂದರ್ಯವಾದ ಸ್ತ್ರೀಯರು ದೇಶದಲ್ಲೆಲ್ಲಾ ಕಾಣಲಿಲ್ಲ; ಮತ್ತು ಅವರ ತಂದೆ ಅವರ ಸಹೋದರರ ಮಧ್ಯದಲ್ಲಿ ಅವರಿಗೆ ಬಾಧ್ಯತೆಯನ್ನು ಕೊಟ್ಟನು.
೧೬ ತರುವಾಯ ಯೋಬನು ನೂರಾ ನಾಲ್ವತ್ತು ವರುಷ ಬದುಕಿ, ಮಕ್ಕಳನ್ನೂ ಮಕ್ಕಳ ಮಕ್ಕಳನ್ನೂ ನಾಲ್ಕನೇ ತಲಾಂತರದ ವರಿಗೆ ನೋಡಿದನು. ಮತ್ತು ಯೋಬನು ಮುದುಕನಾಗಿಯೂ ದಿನ ತೃಪ್ತನಾಗಿಯೂ ಸತ್ತನು.

# THE PSALMS.

## ಕೀರ್ತನೆಗಳು. ೧.

### ೧. ಕೀರ್ತನೆ.

೧ ದುಷ್ಟರ ಆಲೋಚನೆಯಲ್ಲಿ ನಡೆಯದೆ,
ಪಾಪಾತ್ಮರ ಮಾರ್ಗದಲ್ಲಿ ನಿಲ್ಲದೆ,
ಕುಚೋದ್ಯಗಾರರು ಕೂತು ಕೊಳ್ಳುವಲ್ಲಿ ಕೂತು ಕೊಳ್ಳದೆ,
೨ ಕರ್ತನ ನ್ಯಾಯಪ್ರಮಾಣದಲ್ಲಿ ಸಂತೋಷಿಸಿ,
ಅವನ ನ್ಯಾಯಪ್ರಮಾಣವನ್ನೇ ರಾತ್ರಿ ಹಗಲು ಧ್ಯಾನಿಸುವ
ಮನುಷ್ಯನೇ ಭಾಗ್ಯವಂತನು.
೩ ತನ್ನ ಕಾಲದಲ್ಲಿ ತನ್ನ ಫಲ ಕೊಡುವಂಥ,
ಎಲೆ ಬಾಡದಂಥ,
ನೀರಿನ ಕಾಲಿವೆಗಳ ಬಳಿಯಲ್ಲಿ ನೆಟ್ಟ ಮರದ ಹಾಗಿರುವನು;
ಅವನು ಮಾಡುವದೆಲ್ಲಾ ಸಫಲವಾಗುವದು.

೪ ದುಷ್ಟರು ಹಾಗಲ್ಲ—
ಧೂಳಿ ಹಾರಿಸುವ ಹೊಟ್ಟಿನ ಹಾಗೆಯೇ ಇದ್ದಾರೆ.
೫ ಆದದರಿಂದ ದುಷ್ಟರು ನ್ಯಾಯತೀರ್ಪಿನಲ್ಲಿ,
ಪಾಪಾತ್ಮರು ನೀತಿವಂತರ ಸಭೆಯಲ್ಲಿ, ನಿಲ್ಲರು.
೬ ಯಾಕಂದರೆ ನೀತಿವಂತರ ಮಾರ್ಗವನ್ನು ಕರ್ತನು ಅರಿತಿ
ದ್ದಾನೆ;
ಆದರೆ ದುಷ್ಟರ ಮಾರ್ಗವು ನಾಶವಾಗುವದು.

### ೨. ಕೀರ್ತನೆ.

೧ ಜನಾಂಗಗಳು ಗುಲ್ಲು ಮಾಡುವದೂ,
ಪ್ರಜೆಗಳು ವ್ಯರ್ಥವಾದದ್ದನ್ನು ಯೋಚಿಸುವದೂ, ಯಾಕೆ!
೨ ಕರ್ತನಿಗೆ ವಿರೋಧವಾಗಿಯೂ, ಅವನ ಅಭಿಷಿಕ್ತನಿಗೆ ವಿರೋಧ
ವಾಗಿಯೂ,
ಭೂರಾಜರು ನಿಂತು ಕೊಳ್ಳುತ್ತಾರೆ;
ಪ್ರಭುಗಳು ಕೂಡಾ ಆಲೋಚಿಸುತ್ತಾರೆ.
೩ ಅವರ ಬಂಧಗಳನ್ನು ಹರಿದು ಬಿಡುವ;
ಅವರ ಹಗ್ಗಗಳನ್ನು ನಮ್ಮಿಂದ ಬಿಸಾಡುವ.
೪ ಆಕಾಶದಲ್ಲಿ ಕೂತು ಕೊಳ್ಳುವವನು ನಗುವನು;
ಕರ್ತನು ಅವರನ್ನು ಗೇಲಿ ಮಾಡುವನು.
೫ ಆಗ ತನ್ನ ಕೋಪದಿಂದ ಅವರ ಸಂಗಡ ಮಾತಾಡುವನು;
ತನ್ನ ಉರಿಯಿಂದ ಅವರನ್ನು ತಲ್ಲಣ ಪಡಿಸುವನು.
೬ ಆದರೆ ನಾನು ನನ್ನ ಅರಸನನ್ನು
ನನ್ನ ಪರಿಶುದ್ಧ ಪರ್ವತವಾದ ಚಿಯೋನಿನ ಮೇಲೆ ಅಭಿಷೇಕಿ
ಸಿದ್ದೇನೆ.
೭ ನೇಮಕವನ್ನು ಸಾರುತ್ತೇನೆ—
ಕರ್ತನು ನನಗೆ ಹೇಳಿದ್ದು—
ನೀನು ನನ್ನ ಮಗನು,
ನಾನು ಈ ಹೊತ್ತು ನಿನ್ನನ್ನು ಪಡೆದಿದ್ದೇನೆ.
೮ ನನ್ನನ್ನು ಕೇಳು;
ಆಗ ಜನಾಂಗಗಳನ್ನು ನಿನಗೆ ಬಾಧ್ಯತೆಯಾಗಿಯೂ,
ಭೂಮಿಯ ಕೊನೆಗಳನ್ನು ನಿನಗೆ ಸ್ವಾಸ್ತ್ಯವಾಗಿಯೂ, ಕೊ
ಡುವೆನು.
೯ ಕಬ್ಬಿಣದ ಗದೆಯಿಂದ ಅವರನ್ನು ಜಜ್ಜುವಿ;
ಕುಂಬಾರನ ಗಡಿಗೆಯ ಹಾಗೆ ಅವರನ್ನು ಒಡೆದು ಬಿಡುವಿ.
೧೦ ಆದದರಿಂದ, ಅರಸುಗಳೇ, ಈಗ ಬುದ್ಧಿವಂತರಾಗಿರಿ;
ಭೂಮಿಯ ನ್ಯಾಯಾಧಿಪತಿಗಳೇ, ಶಿಕ್ಷೆ ತಕ್ಕೊಳ್ಳಿರಿ.
೧೧ ಭಯದಿಂದ ಕರ್ತನನ್ನು ಸೇವಿಸಿರಿ;
ನಡುಗುತ್ತಾ ಉಲ್ಲಾಸ ಪಡಿರಿ.
೧೨ ಅವನು ಕೋಪ ಮಾಡುವಾಗ,
ನೀವು, ಅವನ ಕೋಪವು ಕಿಂಚಿತ್ತಾದರೂ ಉರಿಯಲು,
ಮಾರ್ಗದಿಂದ ನಾಶವಾಗದ ಹಾಗೆ,
ಮಗನಿಗೆ ಮುದ್ದು ಕೊಡಿರಿ.
ಅವನನ್ನು ಆಶ್ರಯಿಸಿ ಕೊಳ್ಳುವವರೆಲ್ಲರು ಭಾಗ್ಯವಂತರು.

### ೩. ಕೀರ್ತನೆ.

ದಾವೀದನ ಗೀತವು. ತನ್ನ ಮಗನಾದ ಅಬ್ಸಲೋಮನ ಬಳಿಯಿಂದ ಓಡುವಾಗ್ಯೆ.

೧ ಕರ್ತನೇ, ನನ್ನ ವೈರಿಗಳು ಎಷ್ಟು ಹೆಚ್ಚಿದ್ದಾರೆ!
ನನಗೆ ವಿರೋಧವಾಗಿ ಏಳುವವರು ಅನೇಕರು.
೨ ದೇವರಲ್ಲಿ ಇವನಿಗೆ ಏನೂ ರಕ್ಷಣೆ ಇಲ್ಲವೆಂದು,
ನನ್ನ ಪ್ರಾಣವನ್ನು ಕುರಿತು ಅನೇಕರು ಹೇಳುತ್ತಾರೆ. ಸೇಲಾ.
೩ ಆದರೆ, ಕರ್ತನೇ, ನನ್ನ ಸುತ್ತಲಿನ ಗುರಾಣಿಯೂ,
ನನ್ನ ಘನವೂ, ನನ್ನ ತಲೆ ಎತ್ತುವವನೂ, ನೀನೇ.
೪ ನನ್ನ ಶಬ್ದದಿಂದ ಕರ್ತನಿಗೆ ಕೂಗಿದೆನು;
ತನ್ನ ಪರಿಶುದ್ಧ ಪರ್ವತದಿಂದ ನನಗೆ ಉತ್ತರ ಕೊಟ್ಟನು.
ಸೇಲಾ.
೫ ನಾನು ಮಲಗಿದೆನು, ನಿದ್ದೆಗೈದೆನು, ಎಚ್ಚತ್ತೆನು;
ಯಾಕಂದರೆ ಕರ್ತನು ನನ್ನನ್ನು ಉದ್ಧಾರ ಮಾಡಿದನು.
೬ ನನಗೆ ವಿರೋಧವಾಗಿ ಸುತ್ತಲು ಮುತ್ತಿದ
ಹತ್ತು ಸಾವಿರ ಜನರಿಗೆ ಭಯ ಪಡೆನು.
೭ ಕರ್ತನೇ, ಏಳು; ನನ್ನ ದೇವರೇ, ನನ್ನನ್ನು ರಕ್ಷಿಸು.
ಯಾಕಂದರೆ ನನ್ನ ಶತ್ರುಗಳೆಲ್ಲರ ದವಡೆಗೆ ಹೊಡೆದು,
ದುಷ್ಟರ ಹಲ್ಲುಗಳನ್ನು ಮುರಿದಿದ್ದೀ.
೮ ರಕ್ಷಣೆಯು ಕರ್ತನದು;
ನಿನ್ನ ಜನರ ಮೇಲೆ ನಿನ್ನ ಆಶೀರ್ವಾದ ಉಂಟು. ಸೇಲಾ.

## ೪. ಕೀರ್ತನೆ.

ಗಾಯಕಾಧಿಕಾರಿಗೆ; ತಂತಿವಾದ್ಯಗಳಲ್ಲಿ; ದಾವೀದನ ಗೀತವು.

೧ ನಾನು ಕೂಗಲು, ನನಗೆ ಉತ್ತರ ಕೊಡು, ನನ್ನ ನೀತಿಯ
ದೇವಕೇ.
ಇಕ್ಕಟ್ಟಿನಲ್ಲಿ ನನಗೆ ಅಗಲ ಮಾಡಿದಿ.
ನನಗೆ ದಯೆ ಮಾಡಿ, ನನ್ನ ಪ್ರಾರ್ಥನೆಯನ್ನು ಕೇಳು.

೨ ಮನುಷ್ಯರ ಮಕ್ಕಳೇ, ನನ್ನ ಘನವು ಅವಮಾನವಾಗಿರು
ವದೂ,
ನೀವು ವ್ಯರ್ಥವಾದದ್ದನ್ನು ಪ್ರೀತಿ ಮಾಡಿ, ಸುಳ್ಳನ್ನು ಹುಡು
ಕುವದೂ, ಎಷ್ಟು ವರಿಗೆ! ಸೇಲಾ.

೩ ಕರ್ತನು ಭಕ್ತನನ್ನು ತನಗೆ ಪ್ರತ್ಯೇಕಿಸಿದ್ದಾನೆಂದು ತಿಳಿಯ ಕೊ
ಳ್ಳಿರಿ.
ನಾನು ಕರ್ತನ ಕಡೆಗೆ ಕೂಗಲು, ಅವನು ಕೇಳುವನು.

೪ ನಡುಗಿ ಕೊಳ್ಳಿರಿ, ಪಾಪ ಮಾಡ ಬೇಡಿರಿ;
ನಿಮ್ಮ ಹಾಸಿಗೆಗಳ ಮೇಲೆ ನಿಮ್ಮ ಹೃದಯಗಳಲ್ಲಿ ಮಾತಾಡಿ,
ಮೌನವಾಗಿರ್ರಿ. ಸೇಲಾ.

೫ ನೀತಿಯ ಬಲಿಗಳನ್ನು ಅರ್ಪಿಸಿರಿ, ಕರ್ತನಲ್ಲಿ ಭರವಸವಿಡಿರಿ.

೬ ನಮಗೆ ಒಳ್ಳೇದನ್ನು ತೋರಿಸುವವನ್ಯಾರೆಂದು ಹೇಳುವ
ವರು ಅನೇಕರು.
ಕರ್ತನೇ, ನಿನ್ನ ಮುಖದ ಬೆಳಕನ್ನು ನಮ್ಮ ಮೇಲೆ ಎತ್ತು.

೭ ಅವರ ಧಾನ್ಯವೂ ದ್ರಾಕ್ಷೇರಸವೂ ಹೆಚ್ಚಿದ ಕಾಲಕ್ಕಿಂತ,
ಅಧಿಕವಾಗಿ ನನ್ನ ಹೃದಯದಲ್ಲಿ ಸಂತೋಷವನ್ನು ಇಟ್ಟಿದ್ದೀ.

೮ ಸಮಾಧಾನವಾಗಿ ಮಲಗಿ, ನಿದ್ದೆ ಸಹ ಮಾಡುವೆನು;
ಯಾಕಂದರೆ, ಕರ್ತನೇ, ನೀನೊಬ್ಬನೇ ನನ್ನನ್ನು ಭರವಸ
ವಾಗಿ ವಾಸಿಸ ಮಾಡುತ್ತೀ.

## ೫ ಕೀರ್ತನೆ.

ಗಾಯಕಾಧಿಕಾರಿಗೆ; ಪಿಳ್ಳಗೋವಿಗಳ ಮೇಲೆ; ದಾವೀದನ ಗೀತವು.

೧ ಕರ್ತನೇ, ನನ್ನ ಮಾತುಗಳಿಗೆ ಕಿವಿಗೊಡು,
ನನ್ನ ಧ್ಯಾನವನ್ನು ಪರಾಮರಿಸು.

೨ ನನ್ನ ಅರಸನೇ, ನನ್ನ ದೇವರೇ, ನನ್ನ ಮೊರೆಯ ಶಬ್ದವನ್ನು
ಆಲೈಸು;
ಯಾಕಂದರೆ ನಿನಗೆ ಪ್ರಾರ್ಥಿಸುತ್ತೇನೆ.

೩ ಕರ್ತನೇ, ಬೆಳಿಗ್ಯೆ ನನ್ನ ಶಬ್ದವನ್ನು ಕೇಳುವಿ;
ಬೆಳಿಗ್ಯೆ ನಿನಗೆ ನಿದ್ಧ ಮಾಡಿ ಕೊಂಡು, ದೃಷ್ಟಿಸುವೆನು.

೪ ಯಾಕಂದರೆ ನೀನು ದುಷ್ಟತ್ವದಲ್ಲಿ ಸಂತೋಷಿಸುವ ದೇವರಲ್ಲ;
ಕೆಟ್ಟತನವು ನಿನ್ನ ಬಳಿಯಲ್ಲಿ ತಂಗದು.

೫ ನಿನ್ನ ಕಣ್ಣುಗಳ ಎದುರಿನಲ್ಲಿ ಹೆಮ್ಮನವರು ನಿಂತು ಕೊಳ್ಳರು;
ಪಾತಕ ಮಾಡುವವರೆಲ್ಲರನ್ನು ನೀನು ಹಗೆ ಮಾಡುತ್ತೀ.

೬ ಸುಳ್ಳು ಆಡುವವರನ್ನು ನಾಶನ ಮಾಡುತ್ತೀ;
ರಕ್ತಪ್ರಿಯನಾದ ಮೋಸಗಾರನನ್ನು ಕರ್ತನು ಅಸಂಹಿಸುತ್ತಾನೆ.

೭ ಆದರೆ ನಾನು ನಿನ್ನ ಕೃಪಾಪೂರ್ತಿಯಿಂದ ನಿನ್ನ ಮನೆಗೆ
ಬರುವೆನು;
ನಿನಗೆ ಭಯೆ ಪಟ್ಟು, ನಿನ್ನ ಪರಿಶುದ್ಧ ಮಂದಿರದ ಕಡೆಗೆ ಅಡ್ಡ
ಬೀಳುವೆನು.

೮ ಕರ್ತನೇ, ನನ್ನ ವಿರೋಧಿಗಳ ನಿಮಿತ್ತ ನಿನ್ನ ನೀತಿಯಲ್ಲಿ
ನನ್ನನ್ನು ನಡಿಸು;
ನಿನ್ನ ಮಾರ್ಗವನ್ನು ನನ್ನ ಮುಂದೆ ಸರಾಗ ಮಾಡು.

೯ ಯಾಕಂದರೆ ಅವರ ಬಾಯಿಯಲ್ಲಿ ದೃಢವಿಲ್ಲ;
ಅವರ ಅಂತರಂಗವು ನಷ್ಟವೇ;
ಅವರ ಗಂಟ್ಲು ತೆರೆದ ಸಮಾಧಿಯೇ;
ತಮ್ಮ ನಾಲಿಗೆಯನ್ನು ನುಣುಪು ಮಾಡುತ್ತಾರೆ.

೧೦ ದೇವಕೇ, ಅವರ ಮೇಲೆ ಅಪರಾಧ ಹೊರಿಸು;
ತಮ್ಮ ಆಲೋಚನೆಗಳಿಂದ ಬೀಳಲಿ;
ಅವರ ದ್ರೋಹಗಳ ಬಾಹುಳ್ಯದ ನಿಮಿತ್ತ ಅವರನ್ನು ಹೊರಗೆ
ಹಾಕು;
ಯಾಕಂದರೆ ನಿನಗೆ ವಿರೋಧವಾಗಿ ತಿರುಗಿ ಬಿದ್ದಿದ್ದಾರೆ.

೧೧ ಆದರೆ ನಿನ್ನನ್ನು ಆಶ್ರಯಿಸಿ ಕೊಳ್ಳುವವರೆಲ್ಲರು ಸಂತೋಷಿಸಲಿ;
ನೀನು ಅವರನ್ನು ಕಾಯುವದರಿಂದ ಯುಗ ಯುಗಕ್ಕೂ
ಹರ್ಷಿಸಲಿ;
ನಿನ್ನ ನಾಮವನ್ನು ಪ್ರೀತಿ ಮಾಡುವವರು ನಿನ್ನಲ್ಲಿ ಉತ್ಸಾಹ
ಪಡಲಿ.

೧೨ ಯಾಕಂದರೆ, ಕರ್ತನೇ, ನೀನು ನೀತಿವಂತನನ್ನು ಆಶೀರ್ವದಿ
ಸುತ್ತೀ,
ಪೇಡ್ಯದ ಹಾಗೆ ಅನುಗ್ರಹದಿಂದ ಅವನನ್ನು ಸುತ್ತುತ್ತೀ.

## ೬. ಕೀರ್ತನೆ.

ಗಾಯಕಾಧಿಕಾರಿಗೆ; ತಂತಿವಾದ್ಯಗಳಲ್ಲಿ; ಅಷ್ಟಮದ ಪ್ರಕಾರ; ದಾವೀದನ ಗೀತವು.

೧ ಕರ್ತನೇ, ನಿನ್ನ ಕೋಪದಿಂದ ನನ್ನನ್ನು ಗದರಿಸ ಬೇಡ;
ನಿನ್ನ ಉರಿಯಿಂದ ನನ್ನನ್ನು ದಂಡಿಸ ಬೇಡ.

೨ ಕರ್ತನೇ, ನನಗೆ ದಯೆ ಮಾಡು;
ಯಾಕಂದರೆ ನಾನು ಬಲಹೀನನಾಗಿದ್ದೇನೆ.
ಕರ್ತನೇ, ನನ್ನನ್ನು ಸ್ವಸ್ಥ ಮಾಡು; ಯಾಕಂದರೆ ನನ್ನ ಎ
ಲುವುಗಳು ತಲ್ಲಣಿಸುತ್ತವೆ.

೩ ನನ್ನ ಪ್ರಾಣವು ಬಹಳವಾಗಿ ತಲ್ಲಣಿಸುತ್ತದೆ;
ಆದರೆ ನೀನು, ಕರ್ತನೇ, ಎಷ್ಟು ವರಿಗೂ!

೪ ಕರ್ತನೇ, ತಿರುಗು; ನನ್ನ ಪ್ರಾಣವನ್ನು ತಪ್ಪಿಸಿ ಬಿಡು.
ನಿನ್ನ ಕೃಪೆಯ ನಿಮಿತ್ತ ನನ್ನನ್ನು ರಕ್ಷಿಸು.

೫ ಯಾಕಂದರೆ ಮರಣದಲ್ಲಿ ನಿನ್ನ ಜ್ಞಾಪಕವಿಲ್ಲ;
ಪಾತಾಳದಲ್ಲಿ ನಿನ್ನನ್ನು ಕೊಂಡಾಡುವವರು ಯಾರು!

೬ ನನ್ನ ನಿಟ್ಟುಸುರಿನಿಂದ ದಣಿದಿದ್ದೇನೆ.
ಪ್ರತಿ ರಾತ್ರಿಯಲ್ಲಿ ನನ್ನ ಹಾಸಿಗೆ ತೇಲಾಡಿಸುತ್ತೇನೆ;
ನನ್ನ ಕಣ್ಣೀರಿನಿಂದ ನನ್ನ ಮಂಚ ತ್ಯಾವ ಮಾಡುತ್ತೇನೆ.

೭ ನನ್ನ ಕಣ್ಣು ಕರಕರೆಯಿಂದ ಹೊಗರು ಬೀಳುತ್ತದೆ;
ನನ್ನ ಸಕಲ ವೈರಿಗಳಿಂದ ಮುದಿಯಾಗುತ್ತದೆ.



೮ ನನ್ನ ಬಳಿಯಿಂದ ತೊಲಗಿರಿ, ಪಾತಕ ಮಾಡುವವರೆಲ್ಲರೇ;
ಯಾಕಂದರೆ ನನ್ನ ಅಳುವಿಕೆಯ ಶಬ್ದವನ್ನು ಕರ್ತನು
ಕೇಳಿದ್ದಾನೆ.

೯ ಕರ್ತನು ನನ್ನ ವಿಜ್ಞಾಪನೆ ಕೇಳಿದ್ದಾನೆ;
ಕರ್ತನು ನನ್ನ ಪ್ರಾರ್ಥನೆ ಅಂಗೀಕರಿಸುವನು.

೧೦ ನನ್ನ ಶತ್ರುಗಳೆಲ್ಲರು ನಾಚಿಕೆ ಪಟ್ಟು, ಬಹಳವಾಗಿ ತಲ್ಲಣಿಸಲಿ;
ಅವರು ತಿರುಗಿ ಕೊಂಡು, ಕ್ಷಣದಲ್ಲಿ ನಾಚಿಕೆ ಪಡಲಿ.

## ೭. ಕೀರ್ತನೆ.

ಬೆನ್ಯಮಿನ್ಯನಾದ ಕೂಷನ ಮಾತುಗಳಿಗೋಸ್ಕರ ಕರ್ತನಿಗೆ ದಾವೀದನು ಹಾಡಿದ ಆಕುರ ಗೀತವು.

೧ ನನ್ನ ದೇವರಾದ ಕರ್ತನೇ, ನಿನ್ನನ್ನು ಆಶ್ರಯಿಸಿ ಕೊಂಡಿ
ದ್ದೇನೆ;
ನನ್ನ ಹಿಂದಟ್ಟುವವರೆಲ್ಲರಿಂದ ನನ್ನನ್ನು ರಕ್ಷಿಸು.

೨ ಅವನು ಸಿಂಹದಂತೆ ನನ್ನ ಪ್ರಾಣವನ್ನು ಸುಲಿದು,
ಬಿಡಿಸುವವನಿಲ್ಲದೆ ಹರಿಯದ ಹಾಗೆ, ನನ್ನನ್ನು ಬಿಡಿಸು.

೩ ನನ್ನ ದೇವರಾದ ಕರ್ತನೇ, ಇದನ್ನು ನಾನು ಮಾಡಿದ್ದರೆ,
ನನ್ನ ಅಂಗೈಗಳಲ್ಲಿ ಅನ್ಯಾಯವಿದ್ದರೆ,

೪ ನನ್ನ ಆಪ್ತನಿಗೆ ನಾನು ಕೇಡು ಸಲ್ಲಿಸಿ ಇದ್ದರೆ—
ನನಗೆ ಸುಮ್ಮನೆ ವೈರಿ ಆಗಿರುವವನನ್ನು ತಪ್ಪಿಸಿ ಬಿಟ್ಟಿನಲ್ಲ!—

೫ ಶತ್ರು ನನ್ನ ಪ್ರಾಣವನ್ನು ಹಿಂದಟ್ಟಿ, ಹಿಡಿದು,
ನನ್ನ ಜೀವವನ್ನು ಭೂಮಿಗೆ ತುಳಿದು,
ನನ್ನ ಘನವನ್ನು ಧೂಳಿಯೊಳಗೆ ವಾಸಿಸ ಮಾಡಿದಿ. ಸೇಲಾ.

೬ ಕರ್ತನೇ, ನಿನ್ನ ಕೋಪದಿಂದ ಏಳು;
ನನ್ನ ವೈರಿಗಳ ಉಸ್ರದ ಸಲವಾಗಿ ಏರು;
ನನ್ನ ನಿಮಿತ್ತ ಎಚ್ಚರಿಕೆಯಾಗು; ನ್ಯಾಯತೀರ್ವಿಕೆ ಆಜ್ಞಾಪಿಸಿ
ದ್ದೀಯಲ್ಲ?

೭ ಆಗ ಪ್ರಜೆಗಳ ಸಭೆಯು ನಿನ್ನನ್ನು ಸುತ್ತಿ ಕೊಳ್ಳುವದು.
ಅದರ ನಿಮಿತ್ತ ಉನ್ನತಕ್ಕೆ ತಿರುಗು.

೮ ಕರ್ತನು ಜನಗಳಿಗೆ ನ್ಯಾಯ ತೀರಿಸುವನು.
ಕರ್ತನೇ, ನನ್ನಲ್ಲಿರುವ ನನ್ನ ನೀತಿಯ ಪ್ರಕಾರವೂ
ಪೂರ್ಣತ್ವದ ಪ್ರಕಾರವೂ ನನಗೆ ನ್ಯಾಯ ತೀರಿಸು.

೯ ದುಷ್ಟರ ಕೇಡು ಮುಗಿದೇ ಮುಗಿಯಲಿ;
ಆದರೆ ನೀತಿವಂತನನ್ನು ದೃಢ ಪಡಿಸು.
ನೀತಿಯುಳ್ಳ ದೇವರು ಹೃದಯಗಳನ್ನು ಅಂತರಿಂದ್ರಿಯಗಳ
ನ್ನು ಶೋಧಿಸುತ್ತಾನಲ್ಲ!

೧೦ ನೆಟ್ಟನೆ ಹೃದಯವುಳ್ಳವನನ್ನು ರಕ್ಷಿಸುವ
ದೇವರಲ್ಲಿ ನನ್ನ ಗುರಾಣಿ ಉಂಟು.

೧೧ ದೇವರು ನೀತಿಯುಳ್ಳ ನ್ಯಾಯಾಧಿಪತಿಯು;
ದೇವರು ಪ್ರತಿ ದಿನದಲ್ಲಿ ಕೋಪವುಳ್ಳವನು.

೧೨ ತಿರುಗಿ ಕೊಳ್ಳದಿದ್ದರೆ, ತನ್ನ ಕತ್ತಿ ಮಸೆಯುವನು;
ತನ್ನ ಬಿಲ್ಲು ಬೊಗ್ಗಿಸಿ, ಅದನ್ನು ಸಿದ್ಧ ಮಾಡಿದ್ದಾನೆ.

೧೩ ಅವನಿಗೆ ಮರಣಾಯುಧಗಳನ್ನು ಸಿದ್ಧ ಮಾಡಿ,
ಅಟ್ಟುವವರಿಗೋಸ್ಕರ ತನ್ನ ಬಾಣಗಳನ್ನು ಮಾಡುತ್ತಾನೆ.

೧೪ ಇಗೋ, ಪಾತಕದಿಂದ ಪ್ರಸವ ವೇದನೆ ಪಡುತ್ತಾನೆ!
ಕಾಟವನ್ನು ಗರ್ಭ ಧರಿಸಿ ಕೊಂಡು, ಸುಳ್ಳನ್ನು ಹೆರುವನು.

೧೫ ಕೂಣಿ ಅಗೆದು, ತೋಡಿದ್ದಾನೆ;
ಆದರೆ ಮಾಡಿದ ಕೂಣಿಯೊಳಗೆ ಬಿದ್ದಿದ್ದಾನೆ.

೧೬ ಅವನ ಕಾಟವು ಅವನ ತಲೆಯ ಮೇಲೆ ತಿರುಗುವದು;
ಅವನ ನೆತ್ತಿಯ ಮೇಲೆ ಅವನ ಬಲಾತ್ಕಾರವು ಇಳಿಯುವದು.

೧೭ ಕರ್ತನನ್ನು ಅವನ ನೀತಿಯ ಪ್ರಕಾರ ಕೊಂಡಾಡುವೆನು;
ಮಹೋನ್ನತನಾದ ಕರ್ತನ ನಾಮವನ್ನು ಕೀರ್ತಿಸುವೆನು.

## ೮. ಕೀರ್ತನೆ.

ಗಾಯಕಾಧಿಕಾರಿಗೆ; ಗಿತ್ತಿತ್ ವಾದ್ಯದ ಮೇಲೆ; ದಾವೀದನ ಗೀತವು.

೧ ನಮ್ಮ ಕರ್ತನಾದ ಯೆಹೋವಾ,
ನಿನ್ನ ಹೆಸರು ಎಲ್ಲಾ ಭೂಮಿಯಲ್ಲಿ ಎಷ್ಟೋ ಶ್ರೇಷ್ಠವಾಗಿದೆ!
ನಿನ್ನ ಮಹಿಮೆಯನ್ನು ಆಕಾಶಗಳ ಮೇಲೆ ಇಟ್ಟಿದ್ದೀ.

೨ ಶತ್ರುವನ್ನೂ, ಮುಯ್ಯಿಗೆ ಮುಯ್ಯಿ ಕೊಡುವವನನ್ನೂ,
ನಿಲ್ಲಿಸಿ ಬಿಡುವದಕ್ಕೆ ನಿನ್ನ ವೈರಿಗಳ ನಿಮಿತ್ತ
ಶಿಶುಗಳ, ಪೊಲೆ ಕೂಸುಗಳ ಬಾಯಿಂದ ಬಲವನ್ನು ಸ್ಥಾಪಿಸಿದ್ದೀ.

೩ ನಿನ್ನ ಬೆರಳುಗಳ ಕೆಲಸವಾದ ನಿನ್ನ ಆಕಾಶಗಳನ್ನೂ,
ನೀನು ಸಿದ್ಧ ಮಾಡಿದ ಚಂದ್ರ ನಕ್ಷತ್ರಗಳನ್ನೂ ನಾನು
ನೋಡುವಾಗ,

೪ ನೀನು ಅವನನ್ನು ನೆನಸುವ ಹಾಗೆ, ಮನುಷ್ಯನು ಏನು!
ಅವನನ್ನು ದರ್ಶಿಸುವ ಹಾಗೆ, ಮನುಷ್ಯನ ಮಗನು ಏನು!

೫ ದೂತರಿಗಿಂತ ಅವನನ್ನು ಸ್ವಲ್ಪ ಕಡಿಮೆ ಮಾಡಿ,
ಘನವನ್ನೂ ಪ್ರಭೆಯನ್ನೂ ಅವನಿಗೆ ಕಿರೀಟವಾಗಿ ಇಟ್ಟಿದ್ದೀ.

೬ ನಿನ್ನ ಕೈ ಕೆಲಸಗಳ ಮೇಲೆ ಅವನನ್ನು ಅಳ ಮಾಡಿದ್ದೀ;

೭ ಎಲ್ಲಾ ಕುರಿ ದನಗಳನ್ನೂ, ಅಡವಿಯ ಮೃಗಗಳನ್ನೂ,

೮ ಆಕಾಶದ ಪಕ್ಷಿಗಳನ್ನೂ, ಸಮುದ್ರದ ಮೀನುಗಳನ್ನೂ,
ಸಮುದ್ರದ ಹಾದಿಗಳಲ್ಲಿ ಸಂಚರಿಸುವಂಥಾದ್ದನ್ನೂ,
ಎಲ್ಲಾ ಅವನ ಪಾದಗಳ ಕೆಳಗೆ ಇಟ್ಟಿದ್ದೀ.

೯ ನಮ್ಮ ಕರ್ತನಾದ ಯೆಹೋವಾ,
ನಿನ್ನ ಹೆಸರು ಎಲ್ಲಾ ಭೂಮಿಯಲ್ಲಿ ಎಷ್ಟೋ ಶ್ರೇಷ್ಠವಾಗಿದೆ!

## ೯. ಕೀರ್ತನೆ.

ಗಾಯಕಾಧಿಕಾರಿಗೆ; ಮಗನ ಮರಣದ ಮೇಲೆ; ದಾವೀದನ ಗೀತವು.

೧ ನನ್ನ ಪೂರ್ಣ ಹೃದಯದಿಂದ ಕರ್ತನನ್ನು ಕೊಂಡಾಡು
ವೆನು;
ನಿನ್ನ ಅದ್ಭುತಗಳನ್ನೆಲ್ಲಾ ಸಾರುವೆನು.

೨ ನಿನ್ನಲ್ಲಿ ಸಂತೋಷಿಸಿ, ಉತ್ಸಾಹ ಪಡುವೆನು;
ಮಹೋನ್ನತನೇ, ನಿನ್ನ ಹೆಸರನ್ನು ಕೀರ್ತಿಸುವೆನು.

೩ ನನ್ನ ಶತ್ರುಗಳು ಹಿಂದಕ್ಕೆ ತಿರುಗಲು,
ಎಡವಿ, ನಿನ್ನ ಸಮುಖದಿಂದ ನಾಶವಾಗುವರು.

೪ ಯಾಕಂದರೆ ನೀನು ನನ್ನ ನ್ಯಾಯವನ್ನೂ ವ್ಯಾಜ್ಯವನ್ನೂ
ತೀರಿಸಿ,

ನೀತಿಯುಳ್ಳ ನ್ಯಾಯಾಧಿಪತಿಯಾಗಿ ಸಿಂಹಾಸನದಲ್ಲಿ ಕೂತು ಕೊಂಡಿ.

೫ ಜನಾಂಗಗಳನ್ನು ಗದರಿಸಿ,
ದುಷ್ಟನನ್ನು ನಾಶ ಮಾಡಿದ್ದಿ;
ಅವರ ಹೆಸರನ್ನು ಯುಗ ಯುಗಾಂತರಗಳ್ಳಿಗೂ ಅಳಿಸಿ ಬಿಟ್ಟಿದ್ದೀ.
೬ ಶತ್ರುವಾದರೆ, ಹಾಳಾದವುಗಳು ಸದಾ ಕಾಲಕ್ಕೆ ಮುಗಿದವೆ;
ಪಟ್ಟಣಗಳನ್ನು ಕಿತ್ತು ಹಾಕಿದ್ದಿ; ಅವರ ಜ್ಞಾಪಕವೇ ನಾಶವಾಯಿತು.

೭ ಆದರೆ ಕರ್ತನು ಯುಗ ಯುಗಕ್ಕೂ ಕೂತು ಕೊಳ್ಳುವನು;
ನ್ಯಾಯಕ್ಕಾಗಿ ತನ್ನ ಸಿಂಹಾಸನವನ್ನು ಸ್ಥಾಪಿಸಿದ್ದಾನೆ.
೮ ಅವನೇ ನೀತಿಯಿಂದ ಲೋಕಕ್ಕೆ ನ್ಯಾಯ ತೀರಿಸುವನು;
ಪ್ರಜೆಗಳಿಗೆ ನೆಟ್ಟಗೆ ತೀರ್ಪು ಮಾಡುವನು.
೯ ಕರ್ತನು ಕುಗ್ಗಿದವನಿಗೆ ದುರ್ಗವು;
ಇಕ್ಕಟ್ಟಿನ ಕಾಲಗಳ್ಳಿಲ್ಲಿ ದುರ್ಗವಾಗಿ ಇರುವನು.
೧೦ ಮತ್ತು ನಿನ್ನ ಹೆಸರನ್ನು ಶಿಳ್ಳಿದವರು ನಿನ್ನಲ್ಲಿ ಭರವಸ ಇಡುವರು;
ಯಾಕಂದರೆ, ಕರ್ತನೇ, ನಿನ್ನನ್ನು ಹುಡುಕುವವರನ್ನು ನೀನು ಕೈ ಬಿಡಲಿಲ್ಲ.

೧೧ ಜಿಯೋನಿನಲ್ಲಿ ವಾಸಿಸುವ ಕರ್ತನನ್ನು ಕೀರ್ತಿಸಿರಿ;
ಅವನ ಕ್ರಿಯೆಗಳನ್ನು ಜನಗಳ್ಳಲ್ಲಿ ಶಿಳ್ಳಿಸಿರಿ.
೧೨ ಯಾಕಂದರೆ ರಕ್ತಗಳನ್ನು ವಿಚಾರಿಸುವವನಾಗಿ ಅವರನ್ನು ಜ್ಞಾಪಕ ಮಾಡಿ ಕೊಳ್ಳುವನು;
ದೀನರ ಕೂಗು ಮರೆತು ಬಿಡನು.

೧೩ ನನಗೆ ದಯೆ ಮಾಡು ಕರ್ತನೇ,
ಮರಣದ ಬಾಗಲುಗಳ್ಳಿಂದ ನನ್ನನ್ನು ಎತ್ತುವವನೇ;
ನಾನು ನಿನ್ನ ಸ್ತೋತ್ರವನ್ನೆಲ್ಲಾ ಚಿಯೋನಿನ ಮಗಳ ಬಾಗಲುಗಳ್ಳಲ್ಲಿ ಸಾರುವ ಹಾಗೆ,
ನನ್ನನ್ನು ಹಗೆ ಮಾಡುವವರಿಂದ ನನಗೆ ಬಂದ ಶ್ರಮೆಯನ್ನು ನೋಡು.
೧೪ ನಿನ್ನ ರಕ್ಷಣೆಯಲ್ಲಿ ಉಲ್ಲಾಸ ಪಡುವೆನು.

೧೫ ಜನಾಂಗಗಳು ತಾವು ಮಾಡಿದ ಕುಣಿಯಲ್ಲಿ ಇಳಿಯ ಬಿದ್ದಿದ್ದಾರೆ;
ತಾವು ಒಡ್ಡಿದ ಬಲೆಯಲ್ಲಿ ಅವರ ಪಾದ ಸಿಕ್ಕಿ ಕೊಂಡಿತು.
೧೬ ಕರ್ತನು ತಿಳಿಯಲ್ಪಟ್ಟಿದ್ದಾನೆ; ನ್ಯಾಯ ತೀರಿಸಿದ್ದಾನೆ;
ದುಷ್ಟನು ತನ್ನ ಕೈ ಕೆಲಸದಲ್ಲಿಯೇ ಸಿಕ್ಕಿ ಬಿದ್ದಿದ್ದಾನೆ. ಹಿಗ್ಗಾಯೋನ್. ಸೇಲಾ.

೧೭ ದುಷ್ಟರು, ದೇವರನ್ನು ಮರೆಯುವ ಎಲ್ಲಾ ಜನಾಂಗಗಳು, ಪಾತಾಳಕ್ಕೆ ತಿರುಗುವರು.
೧೮ ಯಾಕಂದರೆ ಬಡವನು ಸದಾ ಕಾಲಕ್ಕೆ ಮರೆಯಲ್ಪಡುವದಿಲ್ಲ; ದೀನರ ನಿರೀಕ್ಷೆ ಎಂದೆಂದಿಗೂ ನಾಶವಾಗುವದಿಲ್ಲ.
೧೯ ಕರ್ತನೇ, ಏಳು; ಮನುಷ್ಯನು ಬಲಗೊಳ್ಳದೆ ಇರಲಿ;
ನಿನ್ನ ಸಮುಖದಲ್ಲಿ ಜನಾಂಗಗಳಿಗೆ ನ್ಯಾಯ ತೀರ್ಪಿಕೆ ಆಗಲಿ.
೨೦ ಕರ್ತನೇ, ಅವರಿಗೆ ಭಯವಿಡು;
ಜನಾಂಗಗಳು ತಾವು ಮನುಷ್ಯರೇ ಎಂದು ತಿಳಿಕೊಳ್ಳಲಿ. ಸೇಲಾ.

## ೧೦. ಕೀರ್ತನೆ.

೧ ಕರ್ತನೇ, ನೀನು ದೂರದಲ್ಲಿ ನಿಂತು ಕೊಳ್ಳುವದೂ,
ಇಕ್ಕಟ್ಟಿನ ಕಾಲಗಳ್ಳಲ್ಲಿ ಅತಿಗೆ ಕೊಳ್ಳುವದೂ ಯಾಕೆ?
೨ ದುಷ್ಟನ ಗರ್ವದಿಂದ ದೀನನು ಹಿಂಸೆ ಪಡುತ್ತಾನೆ;
ಅವರು ಕಲ್ಪಿಸಿದ ಯುಕ್ತಿಗಳ್ಳಲ್ಲಿ ಹಿಡಿಯಲ್ಪಡುತ್ತಾರೆ.
3 ಯಾಕಂದರೆ ದುಷ್ಟನು ತನ್ನ ಪ್ರಾಣದ ಆಶೆಗೋಸ್ಕರ ಹೊಗಳ್ಳಿ ಕೊಳ್ಳುತ್ತಾನೆ;
ಕರ್ತನು ಅಸಂಹಿಸುವ ಲೋಭಿಯನ್ನು ಆಶೀರ್ವದಿಸುತ್ತಾನೆ.
೪ ದುಷ್ಟನು ತನ್ನ ಉನ್ನತ ಮುಖದಿಂದ ವಿಚಾರಿಸುವದಿಲ್ಲ;
ಅವನ ಯೋಚನೆಗಳೆಲ್ಲಾ ದೇವರಿಲ್ಲವೆಂಬುವದೇ.
೫ ಅವನ ಮಾರ್ಗಗಳು ಎಲ್ಲಾ ಕಾಲದಲ್ಲಿ ವ್ಯಸನಕರವಾಗಿವೆ;
ನಿನ್ನ ನ್ಯಾಯತೀರ್ಪುಗಳು ಅವನ ದೃಷ್ಟಿಗೆ ಉನ್ನತವಾಗಿವೆ;
ತನ್ನ ವೈರಿಗಳ್ಳೆಲ್ಲರಿಗೆ ಊದಿ ಬಿಡುತ್ತಾನೆ.
೬ ಕೇಡಿನಲ್ಲಿ ಇರವೆ ತಲತಲಾಂತರಕ್ಕೂ ಕದಲೆನೆಂದು,
ತನ್ನ ಹೃದಯದಲ್ಲಿ ಅಂದು ಕೊಂಡಿದ್ದಾನೆ.
೭ ಅವನ ಬಾಯಿ ಶಾಪದಿಂದಲೂ ಮೋಸದಿಂದಲೂ ತಂಟೆಯಿಂದಲೂ ತುಂಬಿ ಅವೆ;
ಅವನ ನಾಲಿಗೆಯ ಕೆಳಗೆ ಕಷ್ಟವೂ ಪಾತಕವೂ ಅವೆ.
೮ ಅವನು ಗ್ರಾಮಗಳ್ಳ ನಂದು ಗೊಂದುಗಳ್ಳಲ್ಲಿ ಕೂತು ಕೊಂಡು,
ಮರೆಯಾದ ಸ್ಥಳಗಳ್ಳಲ್ಲಿ ನಿರಪರಾಧಿಯನ್ನು ಕೊಲ್ಲುತ್ತಾನೆ.
ಅವನ ಕಣ್ಣುಗಳು ಗತಿಯಿಲ್ಲದವನನ್ನು ಹೊಂಚಿ ನೋಡುತ್ತವೆ;
೯ ತನ್ನ ಗವಿಯಲ್ಲಿರುವ ಸಿಂಹದ ಹಾಗೆ ಮರೆಯಲ್ಲಿ ಹೊಂಚುತ್ತಾನೆ;
ದೀನನನ್ನು ಹಿಡಿಯುವದಕ್ಕೆ ಹೊಂಚುತ್ತಾನೆ;
ದೀನನನ್ನು ತನ್ನ ಬಲೆಯಲ್ಲಿ ಎಳೆದು ಹಿಡಿಯುತ್ತಾನೆ.
೧೦ ಕುಗ್ಗಿ ಬೊಗ್ಗುತ್ತಾನೆ;
ಗತಿಯಿಲ್ಲದವರು ಅವನ ಬಲವಾದವುಗಳ್ಳಲ್ಲಿ ಬೀಳುತ್ತಾರೆ.
೧೧ ದೇವರು ಮರೆತು ಬಿಟ್ಟಿದ್ದಾನೆ;
ತನ್ನ ಮುಖವನ್ನು ಮರೆ ಮಾಡುತ್ತಾನೆ;
ಸದಾ ಕಾಲಕ್ಕೆ ನೋಡನು ಎಂದು, ತನ್ನ ಹೃದಯದಲ್ಲಿ ಹೇಳಿ ಕೊಂಡಿದ್ದಾನೆ.

೧೨ ಕರ್ತನೇ, ಏಳು; ದೇವರೇ, ನಿನ್ನ ಕೈ ಎತ್ತು;
ದೀನರನ್ನು ಮರೆತು ಬಿಡ ಬೇಡ.
೧೩ ದುಷ್ಟನು ದೇವರನ್ನು ಅಸಂಹಿಸುವದು ಯಾಕೆ?
ನೀನು ವಿಚಾರಿಸುವದಿಲ್ಲವೆಂದು, ತನ್ನ ಹೃದಯದಲ್ಲಿ ಹೇಳಿದ್ದಾನೆ.
೧೪ ನೀನು ನೋಡಿದ್ದೀ;
ಯಾಕಂದರೆ ನಿನ್ನ ಕೈಯಿಂದ ಬದಲು ಕೊಡುವದಕ್ಕೆ, ಕಷ್ಟವನ್ನೂ ಕರಕರೆಯನ್ನೂ ದೃಷ್ಟಿಸುತ್ತೀ.
ಗತಿಯಿಲ್ಲದವನು ನಿನಗೆ ತನ್ನನ್ನು ಒಪ್ಪಿಸುತ್ತಾನೆ;
ದಿಕ್ಕಿಲ್ಲದವನಿಗೆ ಸಹಾಯಕನು ನೀನೇ.
೧೫ ದುಷ್ಟನ, ಕೆಟ್ಟವನ ತೋಳ್ಳನ್ನು ಮುರಿ;
ಅದು ಸಿಕ್ಕದೆ ಹೋಗುವ ಮಟ್ಟಿಗೂ, ಅವನ ದುಷ್ಟತ್ವವನ್ನು ಹುಡುಕು.



೧೬ ಕರ್ತನು ಯುಗ ಯುಗಾಂತರಗಳ್ಳಿಗೂ ಅರಸನಾಗಿದ್ದಾನೆ;
ಜನಾಂಗಗಳು ಅವನ ದೇಶದೊಳ್ಳಿಗಿಂದ ನಾಶವಾದರು.
೧೭ ದೀನರ ಆಶೆ ಕೇಳ್ಳಿದ್ದೀ, ಕರ್ತನೇ;
ನೀನು ಅವರ ಹೃದಯ ದೃಢ ಪಡಿಸಿ,
೧೮ ಭೂಮಿಯಿಂದಾದ ಮನುಷ್ಯನು ಇನ್ನು ಭಯ ಪಡಿಸದ ಹಾಗೆ, ದಿಕ್ಕಿಲ್ಲದವನಿಗೂ ಕುಗ್ಗಿದವನಿಗೂ ನ್ಯಾಯ ತೀರಿಸುವದಕ್ಕೆ ಕಿವಿಗೊಟ್ಟಿದ್ದೀ.

## ೧೧. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನದು.

೧ ಕರ್ತನನ್ನು ಆಶ್ರಯಿಸಿ ಕೊಂಡಿದ್ದೇನೆ;
ಪಕ್ಷಿಯಂತೆ ನಿನ್ನು ಬೆಟ್ಟಕ್ಕೆ ಓಡು ಎಂದು, ನನ್ನ ಪ್ರಾಣಕ್ಕೆ ನೀವು ಹೇಳುವದು ಹ್ಯಾಗೆ!
೨ ಯಾಕಂದರೆ, ಇಗೋ, ದುಷ್ಟರು ಬಿಲ್ಲುಪೊಗ್ಗಿಸಿ,
ನೆಟ್ಟನೆ ಹೃದಯವುಳ್ಳವರ ಮೇಲೆ ಅಂಧಕಾರದಲ್ಲಿ ಎಸೆಯುವದಕ್ಕೆ,
ತನ್ನು ಬಾಣವನ್ನು ಹೆದೆಗೆ ಹೂಡುತ್ತಾರೆ.
3 ಅಸ್ತಿವಾರಗಳು ನಿರ್ಮೂಲವಾದರೆ,
ನೀತಿವಂತನು ಏನು ಮಾಡುವನು!
೪ ಕರ್ತನು ತನ್ನ ಪರಿಶುದ್ಧ ಮಂದಿರದಲ್ಲಿ ಇದ್ದಾನೆ;
ಕರ್ತನ ಸಿಂಹಾಸನವು ಆಕಾಶದಲ್ಲಿ ಅವೆ;
ಅವನ ಕಣ್ಣುಗಳು ದೃಷ್ಟಿಸುತ್ತವೆ; ಅವನ ಕೆಪ್ಪೆಗಳು ಮನುಷ್ಯನ ಮಕ್ಕಳ್ಳನ್ನು ಶೋಧಿಸುತ್ತವೆ.
೫ ಕರ್ತನು ನೀತಿವಂತನನ್ನು ಶೋಧಿಸುತ್ತಾನೆ;
ದುಷ್ಟನನ್ನೂ ಬಲಾತ್ಕಾರ ಪ್ರಿಯನನ್ನೂ ಅವನ ಪ್ರಾಣವು ಹಗೆ ಮಾಡುತ್ತದೆ.
೬ ದುಷ್ಟರ ಮೇಲೆ ಉರ್ಲುಗಳ್ಳನ್ನು ಸುರಿಸುವನು.
ಬೆಂಕಿಯೂ, ಗಂಧಕವೂ, ಉರಿ ಝಳ್ಳಿಯೂ,
ಅವರ ಪಾತ್ರೆಯ ಭಾಗವಾಗಿವೆ;
೭ ಯಾಕಂದರೆ ಕರ್ತನು ನೀತಿವಂತನೇ, ನೀತಿಗಳ್ಳನ್ನು ಪ್ರೀತಿ ಮಾಡುತ್ತಾನೆ;
ಅವನ ಮುಖವು ನೆಟ್ಟನೆಯವನನ್ನು ದೃಷ್ಟಿಸುತ್ತದೆ.

## ೧೨. ಕೀರ್ತನೆ.

ಗಾಯಕಾಧಿಕಾರಿಗೆ; ಅಷ್ಟಮದ ಪ್ರಕಾರ; ದಾವೀದನ ಗೀತವು.

೧ ಕರ್ತನೇ, ರಕ್ಷಿಸು; ಯಾಕಂದರೆ ಭಕ್ತನು ಮುಗಿದು ಹೋಗುತ್ತಾನೆ;
ನಂಬಿಕೆಯುಳ್ಳವರು ಮನುಷ್ಯನ ಮಕ್ಕಳ್ಳೊಳ್ಳಗಿಂದ ಇಲ್ಲದೆ ಹೋಗುತ್ತಾರೆ.
೨ ಒಬ್ಬೊಬ್ಬನು ತನ್ನ ನೆರೆಯವನ ಸಂಗಡ ವ್ಯರ್ಥವಾದ ಮಾತು ಆಡುತ್ತಾನೆ;
ನುಣ್ಣುಟಿಯಿಂದಲೂ ದ್ವಂದ್ವ ಹೃದಯದಿಂದಲೂ ಮಾತಾಡುತ್ತಾರೆ.
3 ಎಲ್ಲಾ ನುಣ್ಣುಟಿಗಳ್ಳನ್ನೂ,
ದೊಡ್ಡವುಗಳ್ಳನ್ನು ಆಡುವ ನಾಲಿಗೆಯನ್ನೂ ಕರ್ತನು ಕತ್ತರಿಸಿ ಬಿಡುವನು.
೪ ನಮ್ಮ ನಾಲಿಗೆಯಿಂದ ಬಲಗೊಳ್ಳುವೆವು;
ನಮ್ಮ ತುಟಿಗಳು ನಮ್ಮವೇ; ನಮಗೆ ಯಜಮಾನನು ಯಾರು? ಅನ್ನುತ್ತಾರೆ.
೫ ದೀನರ ಸೂಕೆಗೋಸ್ಕರವೂ, ಬಡವರ ನರಳುವಿಕೆಗೋಸ್ಕರವೂ ನಾನೀಗಲೇ ಏಳುವೆನು;
ಅವನಿಗೆ ಊದಿ ಬಿಡುವವನ ಕೈಯೊಳ್ಳಗಿಂದ ಅವನನ್ನು ರಕ್ಷಣೆಯಲ್ಲಿ ಇಡುವೆನೆಂದು ಕರ್ತನು ಹೇಳುತ್ತಾನೆ.
೬ ಕರ್ತನ ವಾಕ್ಯಗಳು ಶುದ್ಧ ವಾಕ್ಯಗಳಾಗಿವೆ;
ಮಣ್ಣಿನ ಮೂಸೆಯಲ್ಲಿ ಏಳು ಸಾರಿ ಕರಗಿ, ಪುಟಕ್ಕೆ ಹಾಕಿದ ಬೆಳ್ಳಿಯೇ.
೭ ಕರ್ತನೇ, ನೀನು ಅವರನ್ನು ಕಾಪಾಡಿ,
ಯುಗ ಯುಗಕ್ಕೂ ಈ ಸಂತತಿಯಿಂದ ಅವರನ್ನು ಬಿಡಿಸಿ ಕಾಯುವಿ.
೮ ಮನುಷ್ಯನ ಮಕ್ಕಳ್ಳಲ್ಲಿ ನೀಚರು ಏರುವಾಗ,
ದುಷ್ಟರು ಸುತ್ತಲು ತಿರುಗಾಡುತ್ತಾರೆ.

## ೧೩. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ಕರ್ತನೇ, ಎಷ್ಟು ವರಿಗೆ ನನ್ನನ್ನು ಯಾವಾಗ್ಯೂ ಮರೆತು ಬಿಡುವಿ!
ಎಷ್ಟು ವರಿಗೆ ನಿನ್ನ ಮುಖವನ್ನು ನನಗೆ ಮರೆ ಮಾಡುವಿ!
೨ ಎಷ್ಟು ವರಿಗೆ ನನ್ನ ಪ್ರಾಣದಲ್ಲಿ ಆಲೋಚನೆಗಳ್ಳನ್ನು,
ನನ್ನ ಹೃದಯದಲ್ಲಿ ಚಿಂತೆಯನ್ನು, ದಿನಾಲು ಇಟ್ಟು ಕೊಳ್ಳಬೇಕು!
ಎಷ್ಟು ವರಿಗೆ ನನ್ನ ಶತ್ರು ನನ್ನ ಮೇಲೆ ಏಳುವನು!
3 ನನ್ನ ದೇವರಾದ ಕರ್ತನೇ, ದೃಷ್ಟಿಸಿ, ನನಗೆ ಉತ್ತರಕೊಡು,
ನಾನು ಮರಣದ ನಿದ್ದೆ ಗೈಯದ ಹಾಗೆಯೂ,
೪ ನನ್ನ ಶತ್ರುವು—ಅವನನ್ನು ಗೆದ್ದೆನೆಂದು ಹೇಳದ ಹಾಗೆಯೂ,
ನನ್ನ ವೈರಿಗಳು ನಾನು ಕದಲುವಾಗ ಉಲ್ಲಾಸ ಪಡದ ಹಾಗೆಯೂ,
ನನ್ನ ಕಣ್ಣುಗಳ್ಳನ್ನು ಬೆಳಗ ಮಾಡು.
೫ ನಾನಾದರೆ, ನಿನ್ನ ಕೃಪೆಯಲ್ಲಿ ಭರವಸವಿಟ್ಟಿದ್ದೇನೆ;
ನಿನ್ನ ರಕ್ಷಣೆಯಲ್ಲಿ ನನ್ನ ಹೃದಯವು ಉಲ್ಲಾಸ ಪಡುವದು.
೬ ಕರ್ತನಿಗೆ ಹಾಡುವೆನು;
ಯಾಕಂದರೆ ನನಗೆ ಮೇಲು ಮಾಡಿದ್ದಾನೆ.

## ೧೪. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನದು.

೧ ದೇವರಿಲ್ಲವೆಂದು ಬುದ್ಧಿಹೀನನು ತನ್ನ ಹೃದಯದಲ್ಲಿ ಹೇಳಿ ಕೊಂಡಿದ್ದಾನೆ.
ಅವರು ಕೆಟ್ಟು ಹೋಗಿ, ಕರ್ಮದಲ್ಲಿ ಅಸಹ್ಯರಾಗಿದ್ದಾರೆ;
ಒಳ್ಳೇದನ್ನು ಮಾಡುವವನು ಯಾವನೂ ಇಲ್ಲ.

  type೦ಗಳು. ೧೫–೧೭.

೨ ಬುದ್ಧಿವಂತನು, ದೇವರನ್ನು ಹುಡುಕುವವನು, ಇದ್ದಾನೋ!
ಎಂದು ನೋಡುವದಕ್ಕೆ,
ಕರ್ತನು ಆಕಾಶದಿಂದ ಮನುಷ್ಯನ ಮಕ್ಕಳ ಮೇಲೆ ಕಣ್ಣಿಟ್ಟನು.
೩ ಎಲ್ಲರು ತಪ್ಪಿದ್ದಾರೆ;
ಏಕವಾಗಿ ಕೆಟ್ಟು ಹೋಗಿದ್ದಾರೆ;
ಒಳ್ಳೇದನ್ನು ಮಾಡುವವನು ಇಲ್ಲ; ಒಬ್ಬನಾದರೂ ಇಲ್ಲ.
೪ ಕೊಟ್ಟಿ ತಿನ್ನುವ ಪ್ರಕಾರ, ನನ್ನ ಜನರನ್ನು ತಿಂದು,
ಕರ್ತನನ್ನು ಕರೆಯದೆ ಇರುವ ಪಾತಕ ಮಾಡುವವರೆಲ್ಲರು
ಅರಿಯರೋ!
೫ ಅಲ್ಲಿ ಅವರು ಭಯಭ್ರಾಂತರಾದರು;
ಯಾಕಂದರೆ ದೇವರು ನೀತಿವಂತನ ಸಂತತಿಯಲ್ಲಿ ಇದ್ದಾನೆ.
೬ ಕರ್ತನು ಅವನ ಆಶ್ರಯವಾಗಿರುವದರಿಂದ,
ದೀನನ ಆಲೋಚನೆಯನ್ನು ನಾಚಿಕೆ ಪಡಿಸಿದ್ದೀರಿ.
೭ ಚಿಯೋನಿನಿಂದ ಇಸ್ರಯೇಲಿನ ರಕ್ಷಣೆಯನ್ನು ಕೊಡುವವನ್ಯಾರು!
ಕರ್ತನು ತನ್ನ ಜನರ ಸೆರೆಗೆ ತಿರುಗಿ ಕೊಳ್ಳುವಾಗ,
ಯಾಕೋಬನು ಉಲ್ಲಾಸಿಸುವನು, ಇಸ್ರಯೇಲನು ಸಂತೋಷಿಸುವನು.

## ೧೫. ಕೀರ್ತನೆ.

ದಾವೀದನ ಗೀತವು.

೧ ಕರ್ತನೇ, ನಿನ್ನ ಗುಡಾರದಲ್ಲಿ ತಂಗುವವನ್ಯಾರು?
ನಿನ್ನ ಪರಿಶುದ್ಧ ಪರ್ವತದಲ್ಲಿ ವಾಸ ಮಾಡುವವನ್ಯಾರು!
೨ ಸಂಪೂರ್ಣನಾಗಿ ನಡೆದು, ನೀತಿಯನ್ನು ಮಾಡಿ,
ತನ್ನ ಹೃದಯದಲ್ಲಿ ಸತ್ಯವನ್ನಾಡುವವನೇ.
೩ ಅವನು ತನ್ನ ನಾಲಿಗೆಯಿಂದ ಚಾಡಿ ಹೇಳುವದಿಲ್ಲ;
ತನ್ನ ನೆರೆಯವನಿಗೆ ಕೇಡು ಮಾಡುವದಿಲ್ಲ;
ತನ್ನ ಹತ್ರವನ ಮೇಲೆ ನಿಂದೆ ಎತ್ತುವದಿಲ್ಲ.
೪ ಅವನ ಕಣ್ಣುಗಳಿಗೆ ನೀಚನು ತಿರಸ್ಕರಿಸಲ್ಪಟ್ಟಿದ್ದಾನೆ;
ಆದರೆ ಕರ್ತನಿಗೆ ಭಯ ಪಡುವವರನ್ನು ಘನ ಪಡಿಸುತ್ತಾನೆ;
ತನ್ನ ಕೇಡಿಗೆ ಆಣೆ ಇಟ್ಟು ಮಾರುವದಿಲ್ಲ.
೫ ತನ್ನ ಹಣವನ್ನು ಬಡ್ಡಿಗೆ ಕೊಡುವದಿಲ್ಲ;
ನಿರಪರಾಧಿಗೆ ವಿರೋಧವಾಗಿ ಲಂಚ ತಕ್ಕೊಳ್ಳುವದಿಲ್ಲ.
ಇವುಗಳನ್ನು ಮಾಡುವವನು ಯುಗ ಯುಗಕ್ಕೂ ಕದಲದೆ
ಇರುವನು.

## ೧೬. ಕೀರ್ತನೆ.

ಸ್ವರ್ಣ ಗೀತವು. ದಾವೀದನದು.

೧ ದೇವಕೇ, ನನ್ನನ್ನು ಕಾಪಾಡು;
ಯಾಕಂದರೆ ನಿನ್ನನ್ನು ಆಶ್ರಯಿಸಿ ಕೊಂಡಿದ್ದೇನೆ.
೨ ನೀನೇ ನನ್ನ ಕರ್ತನು; ನನ್ನ ಒಳ್ಳೇತನ ನಿನಗೆ ಅಲ್ಲ,
೩ ಭೂಮಿಯಲ್ಲಿರುವ ಪರಿಶುದ್ಧರಿಗೂ, ನನ್ನ ಎಲ್ಲಾ ಸಂತೋಷ
ವಾಗಿರುವ ಪ್ರೇಮ್ಯರಿಗೂ,
ಸೇರುತ್ತದೆಂದು, ಕರ್ತನಿಗೆ ಹೇಳಿದ್ದೀ, ಅತ್ಯವೇ.
೪ ಬೇರೊಬ್ಬನ ಹಿಂದೆ ತ್ವರೆ ಪಡುವವರ ವ್ಯಥೆಗಳು ಹೆಚ್ಚಾ
ಗುವವು.
ಅವರ ರಕ್ತದ ಹೊಯಿಕೆಗಳನ್ನು ನಾನು ಹೊಯ್ಯೆನು;
ಅವರ ಹೆಸರುಗಳನ್ನು ನನ್ನ ತುಟಿಗಳ ಮೇಲೆ ಎತ್ತೆನು.
೫ ಕರ್ತನು ನನ್ನ ಪಾಲಿನ, ನನ್ನ ಪಾತ್ರೆಯ ಭಾಗವಾಗಿದ್ದಾನೆ;
ನೀನು ನನ್ನ ಸ್ವಾಸ್ತ್ಯವನ್ನು ಸ್ಥಿರವಾಗಿ ಹಿಡಿಯುತ್ತೀ.
೬ ರಮ್ಯ ಸ್ಥಳಗಳಲ್ಲಿ ನನಗೆ ಅಳತೆ ಬಿದ್ದವೆ;
ಮತ್ತು ಸೌಖ್ಯವಾದ ಬಾಧ್ಯತೆ ನನಗೆ ಅವೆ.
೭ ನನಗೆ ಆಲೋಚನೆ ಹೇಳಿದ ಕರ್ತನನ್ನು ಆಶೀರ್ವದಿ
ಸುವೆನು.
ರಾತ್ರಿಯಲ್ಲಿಯೂ ನನ್ನ ಅಂತರಿಂದ್ರಿಯಗಳು ನನ್ನನ್ನು ಶಿಕ್ಷಿಸು
ತ್ತವೆ.
೮ ಕರ್ತನನ್ನು ಯಾವಾಗಲೂ ನನ್ನ ಮುಂದೆ ಇಟ್ಟಿದ್ದೇನೆ;
ಅವನು ನನ್ನ ಬಲಗಡೆಯಲ್ಲಿ ಇರುವದರಿಂದ, ಕದಲೆನು.
೯ ಆದದರಿಂದ ನನ್ನ ಹೃದಯವು ಸಂತೋಷಿಸಿ, ನನ್ನ ಘನವು
ಉಲ್ಲಾಸ ಪಡುತ್ತದೆ.
ನನ್ನ ಮಾಂಸವು ಸುಖ ಭರವಸವಾಗಿ ವಾಸಿಸುವದು.
೧೦ ಯಾಕಂದರೆ ನೀನು ನನ್ನ ಪ್ರಾಣವನ್ನು ಪಾತಾಳದಲ್ಲಿ ಬಿಟ್ಟು
ಬಿಡುವದಿಲ್ಲ;
ನಿನ್ನ ಭಕ್ತನನ್ನು ಕೊಳೆಯುವಿಕೆಯನ್ನು ನೋಡ ಗೊಡಿಸುವ
ದಿಲ್ಲ.
೧೧ ಜೀವದ ಮಾರ್ಗ ನನಗೆ ತೀಳಿಸುವಿ.
ನಿನ್ನ ಸಮುಖದಲ್ಲಿ ಸಂತೋಷಗಳ ತೃಪ್ತಿಯೂ,
ನಿನ್ನ ಬಲಗಡೆಯಲ್ಲಿ ಸದಾ ಕಾಲಕ್ಕೆ ಆನಂದಗಳೂ ಇರುತ್ತವೆ.

## ೧೭. ಕೀರ್ತನೆ.

ದಾವೀದನ ಪ್ರಾರ್ಥನೆಯು.

೧ ಕರ್ತನೇ, ನೀತಿಯನ್ನು ಕೇಳು;
ನನ್ನ ಕೂಗನ್ನು ಆಲೈಸು; ನನ್ನ ಪ್ರಾರ್ಥನೆಗೆ ಕಿವಿಗೊಡು;
ಅದು ಮೋಸದ ತುಟಿಗಳಿಂದಾದದ್ದಲ್ಲ.
೨ ನಿನ್ನ ಸನ್ನಿಧಿಯೊಳಗಿಂದ ನನ್ನ ನ್ಯಾಯ ತೀರ್ಪು ಹೊರಡಲಿ;
ನಿನ್ನ ಕಣ್ಣುಗಳು ನೆಟ್ಟನೆಯವುಗಳನ್ನು ದೃಷ್ಟಿಸಲಿ.
೩ ನನ್ನ ಹೃದಯವನ್ನು ಶೋಧಿಸಿದ್ದೀ,
ರಾತ್ರಿಯಲ್ಲಿ ದರ್ಶಿಸಿದ್ದೀ;
ನನ್ನನ್ನು ಪುಟಕ್ಕೆ ಹಾಕಿದ್ದೀ; ಏನೂ ದೊರಕಿನಿ ಕೊಳ್ಳ
ದಿಲ್ಲ;
ನನ್ನ ಬಾಯಿ ಅತಿಕ್ರಮಿಸುವದಿಲ್ಲವೆಂದು, ನಿಶ್ಚಯ ಮಾಡಿದ್ದೇನೆ.
೪ ಮನುಷ್ಯರ ಕ್ರಿಯೆಗಳ ವಿಷಯವಾಗಿ,
ನಿನ್ನ ತುಟಿಗಳ ಮಾತಿನಿಂದ ಕೊಳ್ಳೆಗಾರನ ಹಾದಿಗಳಿಗೆ ನನ್ನ
ನ್ನು ತಪ್ಪಿಸಿ ಕಾಪಾಡಿ ಕೊಂಡೆನು.
೫ ನನ್ನ ಅಡಿಗಳು ಕದಲದ ಹಾಗೆ,
ನನ್ನ ನಡೆಗಳನ್ನು ನಿನ್ನ ಹಾದಿಗಳಲ್ಲಿ ಸ್ಥಿರ ಪಡಿಸು.
೬ ನಾನು ನಿನ್ನನ್ನು ಕರೆದಿದ್ದೇನೆ; ಯಾಕಂದರೆ, ದೇವಕೇ, ನನಗೆ
ಉತ್ತರ ಕೊಡುವಿ;
ನಿನ್ನ ಕಿವಿ ನನಗೆ ಬೊಗ್ಗಿಸಿ, ನನ್ನ ಮಾತು ಕೇಳು.

  type೦ಗಳು. ೧೮.

೭ ನಿನ್ನ ಬಲಗೈಗೆ ವಿರೋಧವಾಗಿ ಏಳುವವರಿಂದ
ನಿನ್ನನ್ನು ಆಶ್ರಯಿಸಿ ಕೊಳ್ಳುವವರನ್ನು ರಕ್ಷಿಸುವವನೇ,
ನಿನ್ನ ಕೃಪೆಗಳನ್ನು ವಿಶೇಷ ಮಾಡು.
೮ ಕಣ್ಣಿನ ಗೊಂಬೆಯ ಹಾಗೆ ನನ್ನನ್ನು ಕಾಪಾಡು.
೯ ನನ್ನನ್ನು ಸೂರೆ ಮಾಡುವ ದುಷ್ಟರಿಗೂ,
ನನ್ನನ್ನು ಸುತ್ತಿ ಕೊಳ್ಳುವ ಪ್ರಾಣ ಶತ್ರುಗಳಿಗೂ,
ನಿನ್ನ ರೆಕ್ಕೆಗಳ ನೆರಳಿನಲ್ಲಿ ನನ್ನನ್ನು ಮರೆ ಮಾಡು.
೧೦ ಅವರು ತಮ್ಮ ಕೊಬ್ಬಿನಲ್ಲಿ ಮುಚ್ಚಿದ್ದಾರೆ;
ತಮ್ಮ ಬಾಯಿಯಿಂದ ಗರ್ವವಾಗಿ ಮಾತಾಡುತ್ತಾರೆ.
೧೧ ನಮ್ಮ ನಡೆಗಳಲ್ಲಿ ಈಗ ನಮ್ಮನ್ನು ಸುತ್ತಿದ್ದಾರೆ;
ತಮ್ಮ ಕಣ್ಣುಗಳನ್ನು ಭೂಮಿಗೆ ಬೊಗ್ಗಿಸಿ ಇಡುತ್ತಾರೆ.
೧೨ ಅವನು ಕೀಳ್ಳಿ ಬಿಡಲಾಸಿಸುವ ಸಿಂಹದ ಹಾಗೆಯೂ,
ಮರೆಯಾದ ಸ್ಥಳಗಳಲ್ಲಿ ಕೂತಿರುವ ಸಿಂಹದ ಮರಿಯ ಹಾಗೆ
ಯೂ, ಇದ್ದಾನೆ.
೧೩ ಕರ್ತನೇ, ಎದ್ದು, ಅವನನ್ನು ಮುಂಕೊಂಡು, ಬೀಳ್ಳ ಕೆಡವು;
ನಿನ್ನ ಕತ್ತಿಯಿಂದ ದುಷ್ಟರಿಗೆ,
೧೪ ಕರ್ತನೇ, ನಿನ್ನ ಕೈಯಿಂದ ಮನುಷ್ಯರಿಗೆ, ಪ್ರಪಂಚದ ಮನು
ಷ್ಯರಿಗೆ, ನನ್ನ ಪ್ರಾಣವನ್ನು ತಪ್ಪಿಸು.
ಅವರ ಪಾಲು ಈ ಜೀವದಲ್ಲಿ ಅವೆ;
ಅವರ ಹೊಟ್ಟೆಯನ್ನು ನಿನ್ನ ನಿಕ್ಷೇಪದಿಂದ ತುಂಬಿಸುತ್ತೀ;
ಅವರು ಮಕ್ಕಳಿಂದ ತೃಪ್ತರಾಗಿ, ತಮ್ಮ ಮಿಕ್ಕ ಆಸ್ತಿಯನ್ನು
ತಮ್ಮ ಕೂಸುಗಳಿಗೆ ಉಳಿಸುತ್ತಾರೆ.
೧೫ ನಾನಾದರೆ, ನೀತಿಯಲ್ಲಿ ನಿನ್ನ ಮುಖವನ್ನು ದೃಷ್ಟಿಸುವೆನು;
ಎಚ್ಚರವಾಗುವಾಗ, ನಿನ್ನ ರೂಪದಿಂದ ತೃಪ್ತಿ ಪಡುವೆನು.

## ೧೮. ಕೀರ್ತನೆ.

ಗಾಯಕಾಧಿಕಾರಿಗೆ; ಕರ್ತನ ದೇವಕನಾದ ದಾವೀದನದು.
ಕರ್ತನು ಅವನನ್ನು ಅವನ ಸಮಸ್ತ ಶತ್ರುಗಳ ಕೈಯೊಳಗಿಂದಲೂ, ಸೌಲನ ಕೈಯೊಳಗಿಂದಲೂ, ಬಿಡಿಸಿದ
ದಿವಸದಲ್ಲಿ ಅವನು ಕರ್ತನಿಗೆ ಈ ಹಾಡಿನ ಮಾತುಗಳನ್ನು ನುಡಿದನು. ಹ್ಯಾಗಂದರೆ,

೧ ನನ್ನ ಬಲವಾಗಿರುವ ಕರ್ತನೇ, ನಿನ್ನಲ್ಲಿ ಮನತೆ ಇಡುತ್ತೇನೆ.
೨ ಕರ್ತನು ನನ್ನ ಬುಡೆಯೂ, ನನ್ನ ಕೋಟೆಯೂ, ನನ್ನನ್ನು
ತಪ್ಪಿಸುವವನೂ,
ನನ್ನ ದೇವರೂ, ನಾನು ಆಶ್ರಯಿಸಿ ಕೊಳ್ಳುವ ಅರೆಯೂ,
ನನ್ನ ಗುರಾಣಿಯೂ, ನನ್ನ ರಕ್ಷಣೆಯ ಕೊಂಬೂ, ನನ್ನ
ದುರ್ಗವೂ, ಆಗಿದ್ದಾನೆ.
೩ ಸ್ತುತಿಸ ತಕ್ಕ ಕರ್ತನನ್ನು ಕೂಗುತ್ತೇನೆ;
ನನ್ನ ಶತ್ರುಗಳ್ಳಿಗಿಂದ ರಕ್ಷಿಸಲ್ಪಡುತ್ತೇನೆ.
೪ ಮರಣ ಪಾಶಗಳು ನನ್ನನ್ನು ಅವರಿಸಿ ಕೊಂಡವು;
ಬೆಲಿಯಾಳಿನ ಹಳ್ಳಗಳು ನನ್ನನ್ನು ಹೆದರಿಸಿದವು.
೫ ಪಾತಾಳ ಪಾಶಗಳು ನನ್ನನ್ನು ಸುತ್ತಿ ಕೊಂಡವು;
ಮರಣದ ನೇಣುಗಳು ನನ್ನನ್ನು ಮುಂಕೊಂಡವು.
೬ ನನ್ನ ಇಕ್ಕಟ್ಟಿನಲ್ಲಿ ಕರ್ತನನ್ನು ಕರೆದೆನು; ನನ್ನ ದೇವರಿಗೆ
ಮೊರೆ ಇಟ್ಟೆನು;
ಅವನು ತನ್ನ ಮಂದಿರದೊಳಗಿಂದ ನನ್ನ ಶಬ್ದವನ್ನು ಕೇಳಿದನು;
ನನ್ನ ಮೊರೆಯು ಅವನ ಸನ್ನಿಧಿಗೂ, ಅವನ ಕಿವಿಗಳಲ್ಲಿಯೂ,
ಬಂತು.
೭ ಆಗ ಭೂಮಿಯು ಕದಲಿ, ಕಂಪಿಸಿತು;
ಪರ್ವತಗಳ ಅಸ್ತಿವಾರಗಳು ನಡುಗಿ, ಕದಲಿದವು;
ಯಾಕಂದರೆ ಅವನಿಗೆ ಕೋಪ ಬಂತು.
೮ ಅವನ ಮೂಗಿನಿಂದ ಹೊಗೆ ಎದ್ದು,
ಅವನ ಬಾಯಿಯೊಳಗಿಂದ ಬೆಂಕಿ ದಹಿಸಿತು;
ಕೆಂಡಗಳು ಅದರಿಂದ ಉರಿದವು.
೯ ಆಕಾಶವನ್ನು ಬೊಗ್ಗಿಸಿ, ಇಳ್ಳಿದನು;
ಅವನ ಪಾದಗಳ ಕೆಳಗೆ ಕಾರ್ಗತ್ತಲು.
೧೦ ಕೆರೂಬನ ಮೇಲೆ ಕೂತು, ಹಾರಿದನು;
ಘೂಳ್ಳಿಯ ರೆಕ್ಕೆಗಳ ಮೇಲೆ ಹಾರಿದನು.
೧೧ ಕತ್ತಲನ್ನು ತನಗೆ ಮರೆಯಾಗಿಯೂ,
ಕತ್ತಲಿನ ನೀರುಗಳನ್ನೂ ಆಕಾಶದ ಮೋಡಗಳನ್ನೂ ತನ್ನ ಸುತ್ತ
ಲು ಡೇರವಾಗಿಯೂ, ಮಾಡಿದನು.
೧೨ ಅವನ ಮುಂದಿನ ಪ್ರಕಾಶದಿಂದ ಅವನ ಮೋಡಗಳು ಹಾದು ಹೋ
ದವು—
ಕಲ್ಮಳೆಯೂ, ಉರಿ ಕೆಂಡಗಳೂ.
೧೩ ಕರ್ತನು ಆಕಾಶದಲ್ಲಿ ಗುಡುಗಿದನು;
ಮಹೋನ್ನತನು ತನ್ನ ಶಬ್ದವನ್ನು ಕೊಟ್ಟನು—
ಕಲ್ಮಳೆಯೂ ಉರಿ ಕೆಂಡಗಳೂ.
೧೪ ತನ್ನ ಬಾಣಗಳನ್ನು ಕಳುಹಿಸಿ, ಅವರನ್ನು ಚದರಿಸಿದನು;
ಮಿಂಚುಗಳನ್ನಿಸದು, ಅವರನ್ನು ಗಲಿಬಿಲಿ ಮಾಡಿದನು.
೧೫ ಆಗ, ಕರ್ತನೇ, ನಿನ್ನ ಗದರಿಕೆಯಿಂದಲೂ, ನಿನ್ನ ಮೂಗಿನ
ಶ್ವಾಸದ ಘೂಳ್ಳಿಯಿಂದಲೂ,
ಹಳ್ಳಗಳ ನೆಲೆಯು ಕಾಣ ಬಂದು,
ಭೂಮಿಯ ಅಸ್ತಿವಾರಗಳು ಬೈಲಾದವು.
೧೬ ಮೇಲಿನಿಂದ ಕೈ ಚಾಚಿ, ನನ್ನನ್ನು ಹಿಡಿದು,
ಬಹಳ್ಳ ನೀರುಗಳ್ಳೊಳ್ಳಗಿಂದ ಎಳ್ಳೆದನು.
೧೭ ಬಲವುಳ್ಳ ನನ್ನ ಶತ್ರುವಿನಿಂದಲೂ
ನನ್ನ ಹಗೆಯವರಿಂದಲೂ ನನ್ನನ್ನು ಬಿಡಿಸಿದನು;
ಯಾಕಂದರೆ ನನಗಿಂತ ಬಲಿಷ್ಠರಾಗಿದ್ದರು.
೧೮ ನನ್ನ ಆಪತ್ತಿನ ದಿವಸದಲ್ಲಿ ನನ್ನನ್ನು ಮುಂಕೊಂಡರು;
ಆದರೆ ಕರ್ತನು ನನಗೆ ಆಧಾರವಾದನು.
೧೯ ನನ್ನನ್ನು ವಿಶಾಲ ಸ್ಥಳಕ್ಕೆ ಹೊರಗೆ ತಂದು,
ನನ್ನಲ್ಲಿ ಸಂತೋಷ ಪಟ್ಟದರಿಂದ, ನನ್ನನ್ನು ತಪ್ಪಿಸಿ ಬಿಟ್ಟನು.
೨೦ ಕರ್ತನು ನನ್ನ ನೀತಿಯ ಪ್ರಕಾರ ನನಗೆ ಸಲ್ಲಿಸಿ,
ನನ್ನ ಕೈಗಳ ಶುದ್ಧತ್ವದ ಪ್ರಕಾರ ನನಗೆ ಬದಲು ಕೊಟ್ಟನು.
೨೧ ಯಾಕಂದರೆ ನಾನು ಕರ್ತನ ಮಾರ್ಗಗಳನ್ನು ಕೈ ಕೊಂಡು,
ನನ್ನ ದೇವರನ್ನು ಬಿಡುವ ದುಷ್ಟತ್ವ ಮಾಡಲಿಲ್ಲ.
೨೨ ಯಾಕಂದರೆ ಅವನ ನ್ಯಾಯಗಳ್ಳೆಲ್ಲಾ ನನ್ನ ಮುಂದೆ ಇದ್ದವು;
ಅವನ ನೇಮಕಗಳನ್ನು ನನ್ನಿಂದ ತೊಲಗಿಸಲಿಲ್ಲ.
೨೩ ಅವನ ಸಂಗತಿ ಸಂಪೂರ್ಣನಾಗಿದ್ದು,
ನನ್ನ ಅಕ್ರಮದಿಂದ ನನ್ನನ್ನು ತಪ್ಪಿಸಿ ಕಾಪಾಡಿ ಕೊಂಡೆನು.
೨೪ ಆದದರಿಂದ ಕರ್ತನು ನನ್ನ ನೀತಿಯ ಪ್ರಕಾರವೂ,

ಅವನ ಕಣ್ಣುಗಳ ಮುಂದಿನ ನನ್ನ ಕೈಗಳ ಶುದ್ಧತ್ವದ ಪ್ರಕಾರವೂ,
ನನಗೆ ಬದಲು ಕೊಟ್ಟನು.
೨೫ ಕೃಪೆಯುಳ್ಳವನಿಗೆ ಕೃಪೆಯುಳ್ಳವನಾಗಿರುವಿ;
ಸಂಪೂರ್ಣವಾದ ಮನುಷ್ಯನಿಗೆ ಸಂಪೂರ್ಣನಾಗಿರುವಿ;
೨೬ ಶುದ್ಧನಿಗೆ ಶುದ್ಧನಾಗಿರುವಿ;
ಮೂರ್ಖನ ಸಂಗತಿ ಹೋರಾಡುವಿ.
೨೭ ಯಾಕಂದರೆ ನೀನು ದೀನ ಜನರನ್ನು ರಕ್ಷಿಸುವಿ;
ಎತ್ತರವಾದ ಕಣ್ಣುಗಳನ್ನು ತಗ್ಗಿಸುವಿ.

೨೮ ಯಾಕಂದರೆ ನೀನು ನನ್ನ ದೀಪವನ್ನು ಬೆಳಗ ಮಾಡುವಿ;
ನನ್ನ ದೇವರಾದ ಕರ್ತನು ನನ್ನ ಕತ್ತಲೆಯನ್ನು ಪ್ರಕಾಶಿಸ ಮಾಡುವನು.
೨೯ ಯಾಕಂದರೆ ನಿನ್ನಿಂದ ಸುಂಪಿನ ಮೇಲೆ ಬಿದ್ದೆನು;
ನನ್ನ ದೇವರಿಂದ ಗೋಡೆ ನೆಗಿದೆನು.
೩೦ ದೇವರಾದರೆ, ಅವನ ಮಾರ್ಗವು ಸಂಪೂರ್ಣವಾದದ್ದು;
ಕರ್ತನ ವಾಕ್ಯವು ಪುಟಕ್ಕೆ ಹಾಕಿದ್ದಾಗಿದೆ;
ಅವನು ತನ್ನನ್ನು ಆಶ್ರಯಿಸಿ ಕೊಳ್ಳುವವರೆಲ್ಲರಿಗೆ ಗುರಾಣಿಯಾಗಿದ್ದಾನೆ.
೩೧ ಯಾಕಂದರೆ ಯೆಹೋವನಲ್ಲದೆ ದೇವರು ಯಾರು?
ನಮ್ಮ ದೇವರು ಹೊರ್ತು ಬಂಡೆಯು ಯಾರು?
೩೨ ಪರಾಕ್ರಮದಿಂದ ನನ್ನ ನಡುವನ್ನು ಕಟ್ಟಿ,
ನನ್ನ ಮಾರ್ಗವನ್ನು ಸಂಪೂರ್ಣ ಮಾಡುವ ದೇವರು ಅವನೇ.
೩೩ ನನ್ನ ಕಾಲುಗಳನ್ನು ದುಪ್ಪಿಗಳ ಹಾಗೆ ಮಾಡಿ,
ನನ್ನ ಮೇಡುಗಳ ಮೇಲೆ ನನ್ನನ್ನು ನಿಲ್ಲಿಸುತ್ತಾನೆ.
೩೪ ನನ್ನ ಕೈಗಳಿಗೆ ಯುದ್ಧ ಕಲಿಸುತ್ತಾನೆ;
ನನ್ನ ತೋಳುಗಳು ಹಿತ್ತಾಳೆಯ ಬಿಲ್ಲು ಬೊಗ್ಗಿಸುತ್ತವೆ.
೩೫ ನಿನ್ನ ರಕ್ಷಣೆಯ ಗುರಾಣಿಯನ್ನು ನನಗೆ ಕೊಟ್ಟಿದ್ದೀ;
ನಿನ್ನ ಬಲಗೈ ನನ್ನನ್ನು ಆಧಾರ ಮಾಡಿ ಅದೆ;
ನಿನ್ನ ದೀನತ್ವವು ನನ್ನನ್ನು ಹೆಚ್ಚಿಸಿ ಅದೆ.
೩೬ ನನ್ನ ಹೆಜ್ಜೆಗಳನ್ನು ನನ್ನ ಕೆಳಗೆ ಅಗಲ ಮಾಡಿದ್ದೀ;
ನನ್ನ ಗಿರಿಗೆಗಳು ಹೊರಳಲಿಲ್ಲ.
೩೭ ನನ್ನ ಶತ್ರುಗಳನ್ನು ಹಿಂದಟ್ಟಿ, ಹಿಡಿದಿದ್ದೇನೆ;
ಅವರನ್ನು ತೀರಿಸಿ ಬಿಡುವ ಪರ್ಯಂತರ ನಾನು ತಿರುಗಲಿಲ್ಲ.
೩೮ ಅವರು ಏಳಲಾರದ ಹಾಗೆ, ಅವರಿಗೆ ಘಾಯ ಮಾಡಿದೆನು;
ನನ್ನ ಪಾದಗಳ ಕೆಳಗೆ ಬಿದ್ದಿದ್ದಾರೆ.
೩೯ ನೀನು ಯುದ್ಧಕ್ಕೆ ಪರಾಕ್ರಮದಿಂದ ನನ್ನ ನಡು ಕಟ್ಟಿ,
ನನ್ನ ಎದುರಾಳಿಗಳನ್ನು ನನ್ನ ಕೆಳಗೆ ಎರಗ ಮಾಡಿದ್ದೀ.
೪೦ ನನ್ನ ಶತ್ರುಗಳನ್ನು ನನಗೆ ಬೆನ್ನು ಕೊಡ ಮಾಡಿದ್ದೀ;
ನನ್ನ ಹಗೆಯವರನ್ನು ಸಂಹರಿಸಿದ್ದೇನೆ.
೪೧ ಪೊರೆ ಇಟ್ಟರು, ಆದರೆ ರಕ್ಷಿಸುವವನಿಲ್ಲ;
ಕರ್ತನಿಗೆ ಪೊರೆ ಇಟ್ಟರು, ಆದರೆ ಅವರಿಗೆ ಉತ್ತರ ಕೊಡಲಿಲ್ಲ.
೪೨ ಘೂಳಿಯ ಮುಂದಿನ ಧೂಳಿನ ಹಾಗೆ ಅವರನ್ನು ಪುಡಿ ಪುಡಿ ಮಾಡಿದೆನು;
ಬೀದಿಯ ಕೆಸರಿನ ಹಾಗೆ ಅವರನ್ನು ಚೆಲ್ಲಿ ಬಿಟ್ಟೆನು.
೪೩ ನೀನು ಜನರ ವಿವಾದಗಳಿಂದ ನನ್ನನ್ನು ತಪ್ಪಿಸಿದ್ದೀ;
ಜನಾಂಗಗಳ ತಲೆಯಾಗಿ ನನ್ನನ್ನು ಇರಿಸಿದ್ದೀ;
ನಾನರಿಯದ ಜನರು ನನ್ನನ್ನು ಸೇವಿಸುವರು.
೪೪ ಕಿವಿಯ ಕೇಳ್ವಿಕೆಯಿಂದ ನನಗೆ ಕೇಳಿಸಿದ
ಅನ್ಯರ ಮಕ್ಕಳು ನನಗೆ ಸುಳ್ಳು ಹೇಳುವರು.
೪೫ ಅನ್ಯರ ಮಕ್ಕಳು ಬಾತಿ,
ತಮ್ಮ ದುರ್ಗಗಳೊಳಗಿಂದ ನಡುಗುತ್ತಾ ಬರುವರು.
೪೬ ಕರ್ತನು ಜೀವಿತನಾಗಿದ್ದಾನೆ;
ನನ್ನ ಬಂಡೆಗೆ ಆಶೀರ್ವಾದವಾಗಲಿ;
ನನ್ನ ರಕ್ಷಣೆಯ ದೇವರು ಉನ್ನತನಾಗಲಿ.
೪೭ ನನಗೋಸ್ಕರ ಮುಯ್ಯಿಗೆ ಮುಯ್ಯಿ ತೀರಿಸಿ,
ಜನರನ್ನು ನನ್ನ ಕೆಳಗೆ ಅಣಗಿಸುವ ದೇವರು ಅವನೇ.
೪೮ ನನ್ನ ಶತ್ರುಗಳಿಂದ ನನ್ನನ್ನು ತಪ್ಪಿಸುವವನೇ;
ಹೌದು, ನನ್ನ ಎದುರಾಳಿಗಳಿಂದ ನನ್ನನ್ನು ತಪ್ಪಿಸಿ, ಏರ ಮಾಡುತ್ತೀ;
ಬಲಾತ್ಕಾರಿಯಿಂದ ನನ್ನನ್ನು ಬಿಡಿಸುತ್ತೀ.
೪೯ ಆದದರಿಂದ, ಕರ್ತನೇ, ಜನಾಂಗಗಳಲ್ಲಿ ನಿನ್ನನ್ನು ಕೊಂಡಾಡಿ,
ನಿನ್ನ ಹೆಸರನ್ನು ಕೀರ್ತಿಸುವೆನು.
೫೦ ಅವನು ತನ್ನ ಅರಸನಿಗೆ ರಕ್ಷಣೆಯನ್ನು ದೊಡ್ಡದಾಗಿ ಮಾಡಿ,
ತನ್ನ ಅಭಿಷಿಕ್ತನಾದ ದಾವೀದನಿಗೂ,
ಅವನ ಬೀಜಕ್ಕೂ, ಕೃಪೆಯನ್ನು ಯುಗ ಯುಗಕ್ಕೂ ಮಾಡುತ್ತಾನೆ.

## ೧೯. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ಆಕಾಶಗಳು ದೇವರ ಘನವನ್ನು ಸಾರುತ್ತವೆ;
ಅಂತರಿಕ್ಷವು ಅವನ ಕೈ ಕೆಲಸವನ್ನು ತಿಳಿಸುತ್ತವೆ.
೨ ದಿವಸವು ದಿವಸಕ್ಕೆ ಮಾತನ್ನು ಉಕ್ಕಿಸಿ,
ರಾತ್ರಿಯು ರಾತ್ರಿಗೆ ತಿಳುವಿಕೆಯನ್ನು ಅರುಹುತ್ತದೆ.
೩ ಮಾತು ಇಲ್ಲ; ವಾಕ್ಯಗಳೂ ಇಲ್ಲ;
ಅವುಗಳ ಶಬ್ದವು ಕೇಳಲ್ಪಡುವದಿಲ್ಲ.
೪ ಎಲ್ಲಾ ಭೂಮಿಯ ಮೇಲೆ ಅವುಗಳ ಧಾರವೂ,
ಭೂಲೋಕದ ಅಂತ್ಯದ ಪರ್ಯಂತರ ಅವುಗಳ ನುಡಿಗಳೂ, ಹೊರಡುತ್ತವೆ;
ಅವುಗಳಲ್ಲಿ ಸೂರ್ಯನಿಗೆ ಗುಡಾರವನ್ನು ಹಾಕಿದ್ದಾನೆ.
೫ ಅವನು ಮದಲಿಂಗನ ಹಾಗೆ ತನ್ನ ಕೊಠಡಿಯಿಂದ ಹೊರಟು,
ಪರಾಕ್ರಮಶಾಲಿಯ ಹಾಗೆ ಹಾದಿಯಲ್ಲಿ ಓಡ ಸಂತೋಷಿಸುತ್ತಾನೆ.
೬ ಆಕಾಶದ ಅಂತ್ಯದಿಂದ ಹೊರಟು,
ಅದರ ಅಂತ್ಯಗಳ ವರೆಗೆ ಬಳಿಗುತ್ತಾನೆ;
ಅವನ ಬಿಸಲಿಗೆ ಮರೆಯಾದದ್ದು ಒಂದೂ ಇಲ್ಲ.
೭ ಕರ್ತನ ನ್ಯಾಯಪ್ರಮಾಣವು ಸಂಪೂರ್ಣವಾಗಿದ್ದು, ಪ್ರಾಣಕ್ಕೆ ಜೀವಕರವಾಗಿದೆ;
ಕರ್ತನ ಸಾಕ್ಷಿಯು ನಂಬಿಕೆಯಾಗಿದ್ದು, ಯುಕ್ತಿಹೀನನಿಗೆ ಜ್ಞಾನಕರವಾಗಿದೆ.



೮ ಕರ್ತನ ಕಟ್ಟಳೆಗಳು ನೆಟ್ಟಿನೆಯವುಗಳಾಗಿದ್ದು, ಹೃದಯಕ್ಕೆ ಸಂತೋಷಕರವಾಗಿವೆ;
ಕರ್ತನ ಆಜ್ಞೆಯು ಶುದ್ಧವಾಗಿದ್ದು, ಕಣ್ಣುಗಳಿಗೆ ಪ್ರಕಾಶಕರವಾಗಿದೆ.
೯ ಕರ್ತನ ಭಯವು ಪವಿತ್ರವಾಗಿದ್ದು, ಎಂದೆಂದಿಗೂ ನೆಲೆಯಾಗಿದೆ;
ಕರ್ತನ ನ್ಯಾಯಗಳು ಸತ್ಯವಾಗಿದ್ದು, ಒಟ್ಟಾಗಿ ನೀತಿಯುಳ್ಳವುಗಳಾಗಿವೆ.
೧೦ ಅವು ಭಂಗಾರಕ್ಕಿಂತಲೂ ಬಹಳ ಅರಂಜಿಗಿಂತಲೂ ಅಪೇಕ್ಷಿಸತಕ್ಕವುಗಳೂ,
ಜೇನಿಗಿಂತಲೂ ಜೇನು ತೊಟ್ಟಿಯ ತುಪ್ಪಕ್ಕಿಂತಲೂ ಹೀಯಾದವುಗಳೂ, ಆಗಿವೆ.
೧೧ ಮತ್ತು ನಿನ್ನ ಸೇವಕನು ಅವುಗಳಿಂದ ಎಚ್ಚರಿಸಲ್ಪಡುತ್ತಾನೆ;
ಅವುಗಳನ್ನು ಕೈ ಕೊಳ್ಳುವದರಲ್ಲಿ ಬಹಳ ಫಲ ಉಂಟು.

೧೨ ತನ್ನ ತಪ್ಪುಗಳನ್ನು ತಿಳಿದು ಕೊಳ್ಳುವವನ್ಯಾರು?
ಮರೆಯಾದವುಗಳಿಂದ ನನ್ನನ್ನು ನಿರ್ಮಲ ಮಾಡು.
೧೩ ಹೆಮ್ಮೆ ಪಾಪಗಳಿಗೆ ನಿನ್ನ ಸೇವಕನನ್ನು ದೂರ ಮಾಡು;
ಅವು ನನ್ನನ್ನು ಆಳದೆ ಇರಲಿ;
ಆಗ ನಾನು ಸಂಪೂರ್ಣನಾಗಿದ್ದು, ದೊಡ್ಡ ದ್ರೋಹದಿಂದ ನಿರ್ಮಲನಾಗಿರುವೆನು.
೧೪ ನನ್ನ ಬಂಡೆಯೂ ನನ್ನ ವಿಮೋಚಕನೂ ಆಗಿರುವ ಕರ್ತನೇ,
ನನ್ನ ಬಾಯಿಯ ಮಾತುಗಳೂ, ನನ್ನ ಹೃದಯದ ಧ್ಯಾನವೂ ನಿನ್ನ ಮುಂದೆ ಮೆಚ್ಚಿಕೆಯಾಗಿರಲಿ.

## ೨೦. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ಕರ್ತನು ಇಕ್ಕಟ್ಟಿನ ದಿವಸದಲ್ಲಿ ನಿನಗೆ ಉತ್ತರ ಕೊಡಲಿ;
ಯಾಕೋಬನ ದೇವರ ಹೆಸರು ನಿನ್ನನ್ನು ಭದ್ರ ಮಾಡಲಿ.
೨ ಪರಿಶುದ್ಧ ಸ್ಥಳದೊಳಗಿಂದ ನಿನಗೆ ಸಹಾಯ ಕಳುಹಿಸಲಿ;
ಚಿಯೋನಿನಿಂದ ನಿನಗೆ ಆಧಾರ ಮಾಡಲಿ.
೩ ನಿನ್ನ ಅರ್ಪಣೆಗಳನ್ನೆಲ್ಲಾ ಜ್ಞಾಪಕ ಮಾಡಿ, ನಿನ್ನ ಹೋಮಕ್ಕೆ ಮೆಚ್ಚಲಿ.
೪ ನಿನ್ನ ಹೃದಯದ ಪ್ರಕಾರ ನಿನಗೆ ಕೊಟ್ಟು,
ನಿನ್ನ ಆಲೋಚನೆಯನ್ನೆಲ್ಲಾ ಪೂರೈಸಲಿ.
೫ ನಾವು ನಿನ್ನ ರಕ್ಷಣೆಯಲ್ಲಿ ಹರ್ಷಿಸಿ,
ನಮ್ಮ ದೇವರ ಹೆಸರಿನಲ್ಲಿ ಧ್ವಜ ಎತ್ತುವೆವು.
ಕರ್ತನು ನಿನ್ನ ಬಿನ್ನಹಗಳನ್ನೆಲ್ಲಾ ಪೂರೈಸಲಿ.
೬ ಕರ್ತನು ತನ್ನ ಅಭಿಷಿಕ್ತನನ್ನು ರಕ್ಷಿಸುತ್ತಾನೆಂದೂ,
ತನ್ನ ಪರಿಶುದ್ಧ ಆಕಾಶದೊಳಗಿಂದ ತನ್ನ ಬಲಗೈಯ ರಕ್ಷಣಕರವಾದ ಪರಾಕ್ರಮದಿಂದ
ಅವನಿಗೆ ಉತ್ತರ ಕೊಡುವನೆಂದೂ, ಈಗ ಬಲ್ಲೆನು.
೭ ಇವರು ರಥಗಳನ್ನು, ಅವರು ಕುದುರೆಗಳನ್ನು;
ಆದರೆ ನಾವು ನಮ್ಮ ದೇವರಾದ ಕರ್ತನ ಹೆಸರನ್ನು, ಜ್ಞಾಪಕ ಮಾಡುತ್ತೇವೆ.
೮ ಅವರು ಬೊಗ್ಗಿ ಬೀಳುತ್ತಾರೆ;
ಆದರೆ ನಾವು ಎದ್ದು, ನಿಂತು ಕೊಳ್ಳುತ್ತೇವೆ.
೯ ಕರ್ತನೇ, ರಕ್ಷಿಸು;
ನಾವು ಕರೆಯುವ ದಿವಸದಲ್ಲಿ ಅರಸನು ನಮಗೆ ಉತ್ತರ ಕೊಡಲಿ.

## ೨೧. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ಕರ್ತನೇ, ನಿನ್ನ ಬಲದಲ್ಲಿ ಅರಸನು ಸಂತೋಷ ಪಡುತ್ತಾನೆ:
ನಿನ್ನ ರಕ್ಷಣೆಯಲ್ಲಿ ಎದ್ದು ಅಧಿಕವಾಗಿ ಉಲ್ಲಾಸ ಪಡುತ್ತಾನೆ!
೨ ಅವನ ಹೃದಯದ ಆಶೆಯನ್ನು ನೀನು ಅವನಿಗೆ ಕೊಟ್ಟು,
ಅವನ ತುಟಿಗಳ ಬಿನ್ನಹವನ್ನು ತಡೆಯಲಿಲ್ಲ. ಸೇಲಾ.
೩ ಯಾಕಂದರೆ ಅವನಿಗೆ ಒಳ್ಳೇ ಆಶೀರ್ವಾದಗಳನ್ನು ಮುಂಕೊಟ್ಟು,
ಅಪರಂಜಿಯ ಕಿರೀಟವನ್ನು ಅವನ ತಲೆಗೆ ಇಡುತ್ತೀ.
೪ ಜೀವವನ್ನು ಅವನು ನಿನ್ನಿಂದ ಬೇಡಲು,
ನೀನು ಅವನಿಗೆ ಯುಗ ಯುಗಾಂತರಗಳಿಗೂ ಧೀರ್ಘಾಯುಷ್ಯವನ್ನು ಕೊಟ್ಟೆ.
೫ ನಿನ್ನ ರಕ್ಷಣೆಯಲ್ಲಿ ಅವನ ಘನವು ದೊಡ್ಡದಾಗಿದೆ,
ಮಹಿಮೆಯನ್ನೂ ಪ್ರಭೆಯನ್ನೂ ಅವನ ಮೇಲೆ ಇಡುತ್ತೀ.
೬ ಯಾಕಂದರೆ ನೀನು ಎಂದೆಂದಿಗೂ ಅವನನ್ನು ಆಶೀರ್ವಾದಗಳಾಗಿ ಇಡುತ್ತೀ;
ನಿನ್ನ ಮುಖದ ಮುಂದೆ ಅವನನ್ನು ಸಂತೋಷ ಭರಿತನಾಗ ಮಾಡುತ್ತೀ.
೭ ಯಾಕಂದರೆ ಅರಸನು ಕರ್ತನಲ್ಲಿ ಭರವಸವಿಡುತ್ತಾನೆ;
ಮಹೋನ್ನತನ ಕೃಪೆಯಿಂದ ಅವನು ಕದಲದೆ ಇರುವನು.
೮ ನಿನ್ನ ಶತ್ರುಗಳೆಲ್ಲಾ ನಿನ್ನ ಕೈಗೆ ಸಿಕ್ಕುವರು;
ನಿನ್ನ ಬಲಗೈಗೆ ನಿನ್ನ ಹಗೆಯವರು ಸಿಕ್ಕುವರು.
೯ ನೀನು ದೃಷ್ಟಿಸುವ ಕಾಲದಲ್ಲಿ ಅವರನ್ನು ಬೆಂಕಿಯ ಒಲೆಯ ಹಾಗೆ ಮಾಡುವಿ;
ಕರ್ತನು ತನ್ನ ಕೋಪದಿಂದ ಅವರನ್ನು ನುಂಗಿ ಬಿಡುವನು;
ಬೆಂಕಿಯು ಅವರನ್ನು ತಿನ್ನುವದು.
೧೦ ಅವರ ಫಲವನ್ನು ಭೂಮಿಯೊಳಗಿಂದಲೂ,
ಅವರ ಬೀಜವನ್ನು ಮನುಷ್ಯರ ಮಕ್ಕಳೊಳಗಿಂದಲೂ, ನಾಶ ಮಾಡುವಿ.
೧೧ ಯಾಕಂದರೆ ನಿನಗೆ ವಿರೋಧವಾಗಿ ಕೇಡನ್ನು ಯೆತ್ನಿಸಿದರು;
ಮಾಡಲಾರದ ಯುಕ್ತಿಯನ್ನು ಕಲ್ಪಿಸಿದರು.
೧೨ ಯಾಕಂದರೆ ನೀನು ಅವರನ್ನು ಬೆನ್ನು ಕೊಡ ಮಾಡಿ,
ಅವರ ಮುಖಕ್ಕೆ ಗುರಿಯಾಗಿ ನಿನ್ನ ಬಿಲ್ಲಿನ ಹೆದೆಗಳಲ್ಲಿ ಹೂಡುವಿ.
೧೩ ಕರ್ತನೇ, ನಿನ್ನ ಬಲದಿಂದ ಏಳು;
ನಿನ್ನ ಪರಾಕ್ರಮವನ್ನು ಹಾಡಿ, ಕೀರ್ತಿಸುವೆವು.

## ೨೨. ಕೀರ್ತನೆ.

ಗಾಯಕಾಧಿಕಾರಿಗೆ; ಸೂರ್ಯೋದಯದ ಪರಿಯನ್ನು ಕುರಿತು; ದಾವೀದನ ಗೀತವು.

೧ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ
ಬಿಟ್ಟಿದ್ದೀ!
ನನ್ನ ರಕ್ಷಣೆಗೂ ನನ್ನ ಕೂಗಿನ ಮಾತುಗಳಿಗೂ ದೂರವಾಗಿ
ದ್ದೀ.
೨ ನನ್ನ ದೇವರೇ, ಹಗಲಿನಲ್ಲಿ ಕರೆಯುತ್ತೇನೆ; ನೀನು ಉತ್ತರ ಕೊ
ಡುವದಿಲ್ಲ;
ರಾತ್ರಿಯಲ್ಲಿಯೂ ನಾನು ಮೌನವಾಗಿರುವದಿಲ್ಲ.
3 ಆದರೆ ನೀನು ಪರಿಶುದ್ಧನಾಗಿದ್ದೀ,
ಇಸ್ರಯೇಲಿನ ಸ್ತೋತ್ರಗಳಲ್ಲಿ ವಾಸ ಮಾಡುವವನೇ.
೪ ನಿನ್ನಲ್ಲಿ ನಮ್ಮ ತಂದೆಗಳು ಭರವಸಟ್ಟಿರು;
ಭರವಸಟ್ಟಿದರಿಂದ, ನೀನು ಅವರನ್ನು ತಪ್ಪಿಸಿದಿ.
೫ ನಿನಗೆ ಮೊರೆ ಇಟ್ಟದರಿಂದ, ತಪ್ಪಿಸಲ್ಪಟ್ಟಿರು;
ನಿನ್ನಲ್ಲಿ ಭರವಸಟ್ಟದರಿಂದ, ಅವರು ನಾಚಿಕೆ ಪಡಲಿಲ್ಲ.
೬ ಆದರೆ ನಾನು ಹುಳವೇ, ಮನುಷ್ಯನಲ್ಲ;
ಮನುಷ್ಯರ ನಿಂದೆಯೂ ಜನರಿಂದ ತಿರಸ್ಕರಿಸಲ್ಪಟ್ಟಿನನೂ.
೭ ನನ್ನನ್ನು ನೋಡುವವರೆಲ್ಲರು ನನ್ನನ್ನು ಗೇಲಿ ಮಾಡಿ,
ತುಟಿ ಅಗಲ ಮಾಡಿ, ತಲೆ ಅಲ್ಲಾಡಿಸುತ್ತಾರೆ.
೮ ಕರ್ತನ ಮೇಲೆ ಹೊರಳಿಸಿ ಕೊಂಡನಲ್ಲ! ಅವನು ಅವನನ್ನು
ತಪ್ಪಿಸಲಿ;
ಅವನನ್ನು ಬಿಡಿಸಲಿ; ಅವನಲ್ಲಿ ಸಂತೋಷ ಪಡುತ್ತಾನಲ್ಲ! ಅನ್ನು
ತ್ತಾರೆ.
೯ ಆದರೆ ನೀನು ಹೊಟ್ಟೆಯಿಂದ ನನ್ನನ್ನು ತೆಗೆದಿ;
ನನ್ನ ತಾಯಿಯ ಮೊಲೆಗಳಲ್ಲಿ ನನಗೆ ಭರವಸ ಕೊಟ್ಟಿ.
೧೦ ಗರ್ಭದಿಂದ ನಿನ್ನ ಮೇಲೆ ಹಾಕಲ್ಪಟ್ಟೆನು;
ನನ್ನ ತಾಯಿಯ ಹೊಟ್ಟೆಯಿಂದ ನನ್ನ ದೇವರು ನೀನೇ.
೧೧ ನನಗೆ ದೂರವಾಗಿರ ಬೇಡ; ಯಾಕಂದರೆ ಇಕ್ಕಟ್ಟು ಸಮೀಪ
ವಾಗಿದೆ;
ಸಹಾಯಕನು ಇಲ್ಲ.
೧೨ ಬಹಳ ಹೋರಿಗಳು ನನ್ನನ್ನು ಸುತ್ತಿ ಕೊಂಡವೆ;
ಬಾಶಾನಿನ ಬಲವಾದವುಗಳು ನನ್ನನ್ನು ಮುತ್ತಿ ಕೊಂಡವೆ.
೧೩ ಹರಿದು ಬಿಡುವ, ಗರ್ಜಿಸುವ ಸಿಂಹದ ಹಾಗೆ
ನನ್ನ ಮೇಲೆ ತಮ್ಮ ಬಾಯಿ ತೆರೆಯುತ್ತವೆ.
೧೪ ನೀರಿನ ಹಾಗೆ ಹೊಯ್ಯಲ್ಪಟ್ಟಿದ್ದೇನೆ;
ನನ್ನ ಎಲುಬುಗಳೆಲ್ಲಾ ಕೀಲು ತಪ್ಪಿ ಅವೆ;
ನನ್ನ ಹೃದಯವು ಮೇಣದ ಹಾಗೆ ನನ್ನ ಕರುಳುಗಳ ಮಧ್ಯ
ದಲ್ಲಿ ಕರಗಿ ಹೋಗಿದೆ.
೧೫ ನನ್ನ ಶಕ್ತಿ ಬೋಕಿಯ ಹಾಗೆ ಒಣಗಿ ಹೋಗಿದೆ;
ನನ್ನ ನಾಲಿಗೆ ಅಂಗಳಕ್ಕೆ ಹತ್ತುತ್ತದೆ;
ಮರಣದ ಧೂಳಿಗೆ ನನ್ನನ್ನು ಹಾಕುತ್ತೀ.
೧೬ ಯಾಕಂದರೆ ನಾಯಿಗಳು ನನ್ನನ್ನು ಸುತ್ತಿ ಕೊಂಡವೆ;
ದುರ್ಮಾರ್ಗರ ಸಭೆಯು ನನ್ನನ್ನು ಮುತ್ತಿ ಕೊಂಡವೆ;
ನನ್ನ ಕೈಗಳನ್ನೂ ಕಾಲುಗಳನ್ನೂ ತಿವಿದರು.
೧೭ ನನ್ನ ಎಲುಬುಗಳನ್ನೆಲ್ಲಾ ಎಣಿಸುತ್ತೇನೆ;
ಅವರು ನನ್ನನ್ನು ದೃಷ್ಟಿಸಿ ನೋಡುತ್ತಾರೆ,
೧೮ ನನ್ನ ವಸ್ತ್ರಗಳನ್ನು ತಮ್ಮಲ್ಲಿ ಪಾಲಿಸುತ್ತಾರೆ;
ನನ್ನ ಅಂಗಗೋಸ್ಕರ ಚೀಟು ಹಾಕುತ್ತಾರೆ.
೧೯ ಆದರೆ, ಕರ್ತನೇ, ನೀನು ದೂರವಾಗಿರ ಬೇಡ;
ನನ್ನ ಬಲವೇ, ನನ್ನ ಸಹಾಯಕ್ಕೆ ತ್ವರೆ ಪಡು.
೨೦ ನನ್ನ ಪ್ರಾಣವನ್ನು ಕತ್ತಿಯಿಂದಲೂ,
ನನ್ನ ಏಕವಾದದ್ದನ್ನು ನಾಯಿಯ ಪಕದಿಂದಲೂ, ಬಿಡಿಸು.
೨೧ ಸಿಂಹದ ಬಾಯಿಯಿಂದ ನನ್ನನ್ನು ರಕ್ಷಿಸು;
ಕಾಡ ಕೋಣಗಳ ಕೊಂಬುಗಳಿಂದ ನನ್ನನ್ನು ತಪ್ಪಿಸಿ, ಉತ್ತರ
ಕೊಟ್ಟಿ.
೨೨ ನಿನ್ನ ಹೆಸರನ್ನು ನನ್ನ ಸಹೋದರರಿಗೆ ಸಾರುವೆನು;
ಕೂಟದ ಮಧ್ಯದಲ್ಲಿ ನಿನ್ನನ್ನು ಸ್ತುತಿಸುವೆನು.
೨೩ ಕರ್ತನಿಗೆ ಭಯ ಪಡುವವರೇ, ಅವನನ್ನು ಸ್ತುತಿಸಿರಿ;
ಯಾಕೋಬನ ಎಲ್ಲಾ ಬೀಜವೇ, ಅವನನ್ನು ಘನ ಪಡಿಸಿರಿ;
ಇಸ್ರಯೇಲಿನ ಎಲ್ಲಾ ಬೀಜವೇ, ಅವನಿಗೆ ಅಂಜಿ ಕೊಳ್ಳಿರಿ.
೨೪ ಯಾಕಂದರೆ ದೀನನ ದೀನತೆಯನ್ನು ಅವನು ತಿರಸ್ಕರಿಸಲಿಲ್ಲ,
ಅಸಹಿಸಲಿಲ್ಲ;
ತನ್ನ ಮುಖವನ್ನು ಅವನಿಗೆ ಮರೆ ಮಾಡಲಿಲ್ಲ.
ಅವನಿಗೆ ಮೊರೆ ಇಡಲು, ಕೇಳಿದನು.
೨೫ ನಿನ್ನನ್ನು ಕುರಿತು ನನ್ನ ಸ್ತೋತ್ರವು ದೊಡ್ಡ ಸಭೆಯಲ್ಲಿ
ಇರುವದು;
ನನ್ನ ಹರಕೆಗಳನ್ನು ಅವನಿಗೆ ಭಯ ಪಡುವವರ ಮುಂದೆ
ಸಲ್ಲಿಸುವೆನು.
೨೬ ದೀನರು ಉಂಡು, ತೃಪ್ತಿಯಾಗುವರು;
ಕರ್ತನನ್ನು ಹುಡುಕುವವರು ಅವನನ್ನು ಸ್ತುತಿಸುವರು;
ನಿಮ್ಮ ಹೃದಯವು ಎಂದೆಂದಿಗೂ ಬದುಕಲಿ.
೨೭ ಭೂಮಿಯ ಕೊನೆಗಳೆಲ್ಲಾ ಜ್ಞಾಪಕ ಮಾಡಿ, ಕರ್ತನ ಕಡೆಗೆ
ತಿರುಗಿ ಕೊಳ್ಳುವವು;
ಜನಾಂಗಗಳ ಗೋತ್ರಗಳೆಲ್ಲಾ ನಿನ್ನ ಮುಂದೆ ಅಡ್ಡ ಬೀಳುವವು.
೨೮ ಯಾಕಂದರೆ ರಾಜ್ಯವು ಕರ್ತನದೇ;
ಜನಾಂಗಗಳಲ್ಲಿ ಆಳುವವನು ಅವನೇ.
೨೯ ಭೂಮಿಯ ಪುಷ್ಟರೆಲ್ಲರು ಉಂಡು, ಅಡ್ಡ ಬೀಳುವರು;
ತಮ್ಮ ಪ್ರಾಣವನ್ನು ಬದುಕಿಸಲಾರದೆ, ಧೂಳಿನಲ್ಲಿ ಇಳಿಯು
ವವರೆಲ್ಲರು ಅವನ ಮುಂದೆ ಬೊಗ್ಗುವರು.
30 ಬೀಜವು ಅವನನ್ನು ಸೇವಿಸುವದು;
ಅದು ಕರ್ತನಿಗೆ ಸಂತತಿ ಎಂದು ಎಣಿಸಲ್ಪಡುವದು.
31 ಅವರು ಬಂದು, ಅವನೇ ಮಾಡಿದ್ದಾನೆಂದು,
ಹುಟ್ಟಿರುವ ಜನರಿಗೆ ಅವನ ನೀತಿಯನ್ನು ತಿಳಿಸುವರು.

## ೨೩. ಕೀರ್ತನೆ.

ದಾವೀದನ ಗೀತವು.

೧ ಕರ್ತನು ನನ್ನ ಕುರುಬನು;
ಕೊರತೆ ಪಡೆನು.



೨ ಹಸರುಗಾವಲುಗಳಲ್ಲಿ ನನ್ನನ್ನು ಮಲಗಿಸಿ,
ಶಾಂತವಾದ ನೀರುಗಳ ಬಳಿಯ ನನ್ನನ್ನು ನಡಿಸುತ್ತಾನೆ.
3 ನನ್ನ ಪ್ರಾಣವನ್ನು ಪುನರ್ಜೀವಿಸ ಮಾಡಿ,
ನೀತಿಯ ಹಾದಿಗಳಲ್ಲಿ ತನ್ನ ಹೆಸರಿನ ನಿಮಿತ್ತ ನನ್ನನ್ನು
ನಡಿಸುತ್ತಾನೆ.
೪ ಮರಣದ ನೆರಳಿನ ತಗ್ಗಿನಲಿ ನಡೆದರೂ,
ಕೇಡಿಗೆ ಭಯ ಪಡೆನು;
ಯಾಕಂದರೆ ನೀನು ನನ್ನ ಸಂಗಡ ಇದ್ದೀ;
ನಿನ್ನ ಬೆತ್ತವೂ ನಿನ್ನ ಊರು ಕೋಲೂ ಇವು ನನ್ನನ್ನು
ಆದರಿಸುತ್ತವೆ.
೫ ನನ್ನ ವೈರಿಗಳ ಎದುರಿನಲ್ಲಿ ನನ್ನ ಮುಂದೆ ಮೇಜನ್ನು ಸಿದ
ಮಾಡುತ್ತೀ;
ನನ್ನ ತಲೆಗೆ ಎಣ್ಣೆ ಹಚ್ಚುತ್ತೀ;
ನನ್ನ ಪಾತ್ರೆ ತುಂಬಿ ಹೊರಳುತ್ತದೆ.
೬ ನಿಶ್ಚಯವಾಗಿ ಸುಖವೂ ಕೃಪೆಯೂ ನನ್ನ ಜೀವದ ದಿವಸಗ
ಳೆಲ್ಲಾ ನನ್ನನ್ನು ಹಿಂದಟ್ಟುವವು;
ಕರ್ತನ ಮನೆಯಲ್ಲಿ ಎಂದೆಂದಿಗೂ ವಾಸ ಮಾಡುವೆನು.

## ೨೪. ಕೀರ್ತನೆ.

ದಾವೀದನ ಗೀತವು.

೧ ಭೂಮಿಯೂ ಅದರ ಪೂರ್ಣತೆಯೂ,
ಭೂಲೋಕವೂ ಅದರ ನಿವಾಸಿಗಳೂ, ಕರ್ತನವೇ.
೨ ಯಾಕಂದರೆ ಅವನು ಸಮುದ್ರಗಳ ಮೇಲೆ ಅದನ್ನು ಸ್ಥಾಪಿಸಿ,
ನದಿಗಳ ಮೇಲೆ ಅದನ್ನು ಸ್ಥಿರ ಪಡಿಸಿದ್ದಾನೆ.
3 ಕರ್ತನ ಪರ್ವತವನ್ನು ಏರುವವನ್ಯಾರು?
ಅವನ ಪರಿಶುದ್ಧ ಸ್ಥಳದಲ್ಲಿ ನಿಲ್ಲುವವನ್ಯಾರು?
೪ ನಿರ್ಮಲ ಕೈಗಳೂ ಶುದ್ಧ ಹೃದಯವೂ ಉಳ್ಳವನಾಗಿದ್ದು,
ತನ್ನ ಪ್ರಾಣವನ್ನು ವ್ಯರ್ಥತ್ವಕ್ಕೆ ಎತ್ತದೆ, ಮೋಸಕ್ಕೆ ಆಣೆ
ಇಡದೆ ಇರುವವನೇ.
೫ ಅವನೇ ಕರ್ತನ ಕಡೆಯಿಂದ ಆಶೀರ್ವಾದವನ್ನೂ,
ತನ್ನ ರಕ್ಷಕನಾದ ದೇವರಿಂದ ನೀತಿಯನ್ನೂ ಹೊಂದುವನು.
೬ ಇದೇ ಅವನನ್ನು ವಿಚಾರಿಸುವವರ ಸಂತತಿಯು;
ನಿನ್ನ ಮುಖವನ್ನು ಹುಡುಕುವವರುಯಾಕೋಬನೇ. ಸೇಲಾ.
೭ ಬಾಗಲುಗಳೇ, ನಿಮ್ಮ ತಲೆಗಳನ್ನೆತ್ತಿರಿ;
ನಿತ್ಯ ದ್ವಾರಗಳೇ, ಎತ್ತಲ್ಪಡಿರಿ;
ಘನದ ಅರಸನು ಬರುತ್ತಾನೆ.
೮ ಈ ಘನದ ಅರಸನು ಯಾರು!
ಬಲವೂ ಪರಾಕ್ರಮವೂ ಉಳ್ಳ ಯೆಹೋವ—
ಯುದ್ಧದಲ್ಲಿ ಪರಾಕ್ರಮವುಳ್ಳ ಯೆಹೋವ.
೯ ಬಾಗಲುಗಳೇ, ನಿಮ್ಮ ತಲೆಗಳನ್ನೆತ್ತಿರಿ;
ನಿತ್ಯ ದ್ವಾರಗಳೇ, ಎತ್ತಲ್ಪಡಿರಿ;
ಘನದ ಅರಸನು ಬರುತ್ತಾನೆ.
೧೦ ಘನದ ಅರಸನಾದ ಇವನು ಯಾರು!
ಸೈನ್ಯಗಳ ಯೆಹೋವ; ಇವನೇ ಘನದ ಅರಸನು. ಸೇಲಾ.

## ೨೫. ಕೀರ್ತನೆ.

ದಾವೀದನದು.

೧ ಕರ್ತನೇ, ನಿನ್ನ ಕಡೆಗೆ ನನ್ನ ಪ್ರಾಣವನ್ನು ಎತ್ತುತ್ತೇನೆ.
೨ ನನ್ನ ದೇವರೇ, ನಿನ್ನಲ್ಲಿ ಭರವಸಟ್ಟಿದ್ದೇನೆ;
ನಾನು ನಾಚಿಕೆ ಪಡದೆ ಇರಲಿ;
ನನ್ನ ಶತ್ರುಗಳು ನನ್ನ ಮೇಲೆ ಉತ್ಸಾಹ ಮಾಡದೆ ಇರಲಿ.
3 ನಿನ್ನನ್ನು ನಿರೀಕ್ಷಿಸುವವರಲ್ಲಿ ಯಾರೂ ನಾಚಿಕೆ ಪಡದೆ ಇರಲಿ;
ಸುಮ್ಮನೆ ವಂಚನೆ ಮಾಡುವವರೇ ನಾಚಿಕೆ ಪಡಲಿ.
೪ ಕರ್ತನೇ, ನಿನ್ನ ಮಾರ್ಗಗಳನ್ನು ನನಗೆ ತಿಳಿಸು;
ನಿನ್ನ ಹಾದಿಗಳನ್ನು ನನಗೆ ಕಲಿಸು.
೫ ನಿನ್ನ ಸತ್ಯದಲ್ಲಿ ನನ್ನನ್ನು ನಡಿಸಿ, ನನಗೆ ಕಲಿಸು;
ಯಾಕಂದರೆ ನೀನು ನನ್ನ ರಕ್ಷಣೆಯ ದೇವರೇ;
ನಿನ್ನನ್ನು ದಿನವೆಲ್ಲಾ ನಿರೀಕ್ಷಿಸುತ್ತೇನೆ.
೬ ಕರ್ತನೇ, ನಿನ್ನ ಅಂತ್ಯಕರಣಗಳನ್ನೂ ನಿನ್ನ ಕೃಪೆಗಳನ್ನೂ
ಜ್ಞಾಪಕ ಮಾಡಿಕೋ;
ಯಾಕಂದರೆ ಅವು ಅನಾದಿಯಿಂದ ಅವೆ.
೭ ಕರ್ತನೇ, ನನ್ನ ಯೌವನದ ಪಾಪಗಳನ್ನೂ ನನ್ನ ದ್ರೋಹ
ಗಳನ್ನೂ ಜ್ಞಾಪಕ ಮಾಡಿ ಕೊಳ್ಳದೆ,
ನಿನ್ನ ಕೃಪೆಯ ಪ್ರಕಾರ ನಿನ್ನ ಒಳ್ಳೇತನದ ನಿಮಿತ್ತ ನೀನು
ನನ್ನನ್ನು ಜ್ಞಾಪಕ ಮಾಡಿಕೋ.
೮ ಕರ್ತನು ಒಳ್ಳೆಯವನೂ ನೆಟ್ಟನೆಯವನೂ ಆಗಿದ್ದಾನೆ;
ಆದದರಿಂದ ಪಾಪಾತ್ಮಕನ್ನು ಮಾರ್ಗದಲ್ಲಿ ಬೋಧಿಸುವನು.
೯ ದೀನರನ್ನು ನ್ಯಾಯದಲ್ಲಿ ನಡಿಸಿ,
ದೀನರಿಗೆ ತನ್ನ ಮಾರ್ಗವನ್ನು ಕಲಿಸುವನು.
೧೦ ಅವನ ಒಡಂಬಡಿಕೆಯನ್ನೂ, ಅವನ ಸಾಕ್ಷಿಗಳನ್ನೂ ಕೈಕೊ
ಳ್ಳುವವರಿಗೆ ಕರ್ತನ ಹಾದಿಗಳೆಲ್ಲಾ
ಕೃಪೆಯೂ ಸತ್ಯವೂ ಆಗಿವೆ.
೧೧ ನಿನ್ನ ಹೆಸರಿನ ನಿಮಿತ್ತ, ಕರ್ತನೇ, ನನ್ನ ಅಕ್ರಮವನ್ನು
ಮನ್ನಿಸು;
ಯಾಕಂದರೆ ಅದು ಬಹಳ.
೧೨ ಕರ್ತನಿಗೆ ಭಯ ಪಡುವ ಮನುಷ್ಯನು ಯಾರು!
ಅವನು ಆದು ಕೊಳ್ಳುವ ಮಾರ್ಗದಲ್ಲಿ ಅವನನ್ನು ಬೋಧಿ
ಸುವನು.
೧೩ ಅವನ ಪ್ರಾಣವು ಸುಖದಲ್ಲಿ ಉಳಿಯ ಕೊಳ್ಳುವದು;
ಅವನ ಬೀಜವು ದೇಶವನ್ನು ಸ್ವತಂತ್ರಿಸಿ ಕೊಳ್ಳುವದು.
೧೪ ಕರ್ತನ ಗುಟ್ಟು ಅವನಿಗೆ ಭಯ ಪಡುವವರಲ್ಲಿ ಅವೆ;
ತನ್ನ ಒಡಂಬಡಿಕೆಯನ್ನು ಅವರಿಗೆ ತಿಳಿಸುವನು.
೧೫ ನನ್ನ ಕಣ್ಣುಗಳು ಯಾವಾಗಲೂ ಕರ್ತನ ಮೇಲೆ ಅವೆ;
ಯಾಕಂದರೆ ಅವನೇ ನನ್ನ ಪಾದಗಳನ್ನು ಬಲೆಯಿಂದ
ಹೊರಗೆ ಬರ ಮಾಡುವನು.

೧೬ ನನ್ನ ಕಡೆಗೆ ತಿರುಗಿ, ನನಗೆ ದಯೆ ಮಾಡು;
ಯಾಕಂದರೆ ಒಂಟಿಗನಾಗಿಯೂ ದೀನನಾಗಿಯೂ ಇದ್ದೇನೆ.
೧೭ ನನ್ನ ಹೃದಯದ ಇಕ್ಕಟ್ಟುಗಳನ್ನು ಅಪಾರ ಮಾಡಿದ್ದಾರೆ;
ನನ್ನ ಸಂಕಟಗಳೊಳಗಿಂದ ನನ್ನನ್ನು ಹೊರಗೆ ಬರ ಮಾಡು.
೧೮ ನನ್ನ ದೀನತೆಯನ್ನೂ ಕಷ್ಟವನ್ನೂ ನೋಡು;
ನನ್ನ ಪಾಪಗಳನ್ನೆಲ್ಲಾ ಪರಿಹರಿಸು.
೧೯ ನನ್ನ ಶತ್ರುಗಳನ್ನು ನೋಡು, ಯಾಕಂದರೆ ಹೆಚ್ಚಿದ್ದಾರೆ;
ಬಲಾತ್ಕಾರವಾದ ಹಗೆಯಿಂದ ನನ್ನನ್ನು ಹಗೆ ಮಾಡುತ್ತಾರೆ.
೨೦ ನನ್ನ ಪ್ರಾಣವನ್ನು ಕಾಪಾಡಿ, ನನ್ನನ್ನು ಬಿಡಿಸು;
ನಾನು ನಾಚಿಕೆ ಪಡದೆ ಇರಲಿ; ಯಾಕಂದರೆ ನಿನ್ನಲ್ಲಿ ಆಶ್ರಯಿಸಿ
ಕೊಂಡಿದ್ದೇನೆ.
೨೧ ಸಂಪೂರ್ಣತ್ವವೂ ನೆಟ್ಟನೆತನವೂ ನನ್ನನ್ನು ಕಾಯಲಿ;
ಯಾಕಂದರೆ ನಿನ್ನನ್ನು ನಿರೀಕ್ಷಿಸುತ್ತೇನೆ.
೨೨ ದೇವಕೇ, ಇಸ್ರಯೇಲನನ್ನು, ಅವನ ಎಲ್ಲಾ ಇಕ್ಕಟ್ಟುಗಳೊಳ
ಗಿಂದ ವಿಮೋಚಿಸು.

## ೨೬. ಕೀರ್ತನೆ.

ದಾವೀದನದು.

೧ ಕರ್ತನೇ, ನನಗೆ ನ್ಯಾಯ ತೀರಿಸು;
ಯಾಕಂದರೆ ನಾನು ನನ್ನ ಸಂಪೂರ್ಣತ್ವದಲ್ಲಿ ನಡೆದು
ಕೊಂಡಿದ್ದೇನೆ.
ಕರ್ತನಲ್ಲಿ ಭರವಸವಿಟ್ಟಿದ್ದೇನೆ;
ನಾನು ಕದಲುವದಿಲ್ಲ.
೨ ಕರ್ತನೇ, ನನ್ನನ್ನು ಶೋಧಿಸಿ, ಪರೀಕ್ಷಿಸು;
ನನ್ನ ಅಂತರಿಂದ್ರಿಯಗಳನ್ನೂ ನನ್ನ ಹೃದಯವನ್ನೂ ಪುಟಕ್ಕಿ
ಹಾಕು.
3 ಯಾಕಂದರೆ ನಿನ್ನ ಕೃಪೆಯು ನನ್ನ ಕಣ್ಣುಗಳ ಮುಂದೆ
ಅದೆ;
ನಿನ್ನ ಸತ್ಯದಲ್ಲಿ ನಡೆದು ಕೊಂಡಿದ್ದೇನೆ.
೪ ವ್ಯರ್ಥ ಪುರುಷರ ಸಂಗಡ ನಾನು ಕೂತು ಕೊಳ್ಳಲಿಲ್ಲ;
ವಂಚಕರ ಸಂಗಡ ನಾನು ಬರುವದಿಲ್ಲ.
೫ ದುರ್ಮಾರ್ಗರ ಕೂಟವನ್ನು ಹಗೆ ಮಾಡಿದ್ದೇನೆ;
ದುಷ್ಟರ ಸಂಗಡ ಕೂತು ಕೊಳ್ಳುವದಿಲ್ಲ.
೬ ಸ್ತೋತ್ರದ ಶಬ್ದದಿಂದ ತಿಳಿಸಿ,
ನಿನ್ನ ಅದ್ಭುತಗಳನ್ನೆಲ್ಲಾ ಸಾರುವ ಹಾಗೆ,
೭ ನನ್ನ ಕೈಗಳನ್ನು ನಿರ್ಮಲತ್ವದಲ್ಲಿ ತೊಳೆದು,
ನಿನ್ನ ಬಲಿಪೀಠವನ್ನು ಸುತ್ತಿ ಕೊಳ್ಳುವೆನು, ಕರ್ತನೇ.
೮ ಕರ್ತನೇ, ನಿನ್ನ ಮನೆಯ ಸ್ಥಾನವನ್ನೂ
ನಿನ್ನ ಘನದ ನಿವಾಸವನ್ನೂ ಪ್ರೀತಿ ಮಾಡುತ್ತೇನೆ.

೯ ಪಾಪಾತ್ಮರ ಸಂಗಡ ನನ್ನ ಪ್ರಾಣವನ್ನು,
ರಕ್ತ ಪ್ರಿಯರ ಸಂಗಡ ನನ್ನ ಜೀವವನ್ನು, ಕೂಡಿಸ ಬೇಡ.
೧೦ ಅವರ ಕೈಗಳಲ್ಲಿ ದುಷ್ಕರ್ಮ ಉಂಟು;
ಅವರ ಬಲಗೈ ಲಂಚದಿಂದ ತುಂಬಿ ಅದೆ.
೧೧ ಆದರೆ ನಾನು ನನ್ನ ಸಂಪೂರ್ಣತ್ವದಲ್ಲಿ ನಡೆಯುತ್ತೇನೆ;
ನನ್ನನ್ನು ವಿಮೋಚಿಸು; ನನಗೆ ದಯೆ ಮಾಡು.
೧೨ ನನ್ನ ಪಾದ ಸಮ ಸ್ಥಳದಲ್ಲಿ ನಿಲ್ಲುತ್ತದೆ;
ಕೂಟಗಳಲ್ಲಿ ಕರ್ತನನ್ನು ಆಶೀರ್ವದಿಸುವೆನು.

## ೨೭. ಕೀರ್ತನೆ.

ದಾವೀದನದು.

೧ ಕರ್ತನು ನನ್ನ ಬೆಳಕೂ ನನ್ನ ರಕ್ಷಣೆಯೂ ಆಗಿದ್ದಾನೆ;
ಯಾರಿಗೆ ಭಯ ಪಡುವೆನು?
ಕರ್ತನು ನನ್ನ ಜೀವದ ಬಲಸ್ಥಾನವು;
ಯಾರಿಗೆ ಹೆದರುವೆನು?
೨ ನನ್ನ ಮಾಂಸ ತಿನ್ನ ಬೇಕೆಂದು, ದುರ್ಮಾರ್ಗರು ನನಗೆ
ವಿರೋಧವಾಗಿ ಸಮೀಪಿಸುವಾಗ,
ನನ್ನ ವೈರಿಗಳು ನನ್ನ ಶತ್ರುಗಳೂ ಆದ ಅವರು ಎಡವಿ
ಬಿದ್ದರು.
3 ನನಗೆ ವಿರೋಧವಾಗಿ ದಂಡು ಇಳಿದರೂ,
ನನ್ನ ಹೃದಯವು ಭಯ ಪಡದು;
ಯುದ್ಧವು ನನ್ನ ಮೇಲೆ ಎದ್ದರೂ,
ಇದರಲ್ಲಿಯೂ ನಾನು ಭರವಸವಾಗಿರುವೆನು.
೪ ಒಂದನ್ನು ಕರ್ತನ ಬಳಿಯ ಕೇಳಿ ಕೊಂಡೆನು;
ಅದನ್ನೇ ಹುಡುಕುವೆನು—
ಕರ್ತನ ರಮ್ಯತೆಯನ್ನು ದೃಷ್ಟಿಸುವದಕ್ಕೂ, ಅವನ
ಮಂದಿರದಲ್ಲಿ ವಿಚಾರಿಸುವದಕ್ಕೂ,
ನನ್ನ ಜೀವದ ದಿನಗಳೆಲ್ಲಾ ಕರ್ತನ ಮನೆಯಲ್ಲಿ ವಾಸ
ಮಾಡುವದನ್ನೇ.
೫ ಯಾಕಂದರೆ ಕೇಡಿನ ದಿವಸದಲ್ಲಿ ತನ್ನ ಡೇರದಲ್ಲಿ ನನ್ನನ್ನು
ಬಚ್ಚಿಡುವನು;
ತನ್ನ ಗುಡಾರದ ಮರೆಯಲ್ಲಿ ನನ್ನನ್ನು ಮರೆ ಮಾಡುವನು;
ಬಂಡೆಯ ಮೇಲೆ ನನ್ನನ್ನು ಎತ್ತಿಡುವನು.
೬ ಮತ್ತು ಈಗ ನನ್ನ ತಲೆಯು ನನ್ನ ಸುತ್ತಲಿರುವ ನನ್ನ ಶತ್ರುಗಳ
ಮೇಲೆ ಏರುವದು;
ಆಗ ಅವನ ಗುಡಾರದಲ್ಲಿ ಉತ್ಸಾಹದ ಬಲಿಗಳನ್ನು ಅರ್ಪಿ
ಸುವೆನು;
ಕರ್ತನಿಗೆ ಹಾಡಿ, ಕೀರ್ತಿಸುವೆನು.

೭ ಕರ್ತನೇ, ನಾನು ಕೂಗುವ ಶಬ್ದವನ್ನು ಕೇಳು;
ನನಗೆ ದಯೆ ಮಾಡಿ, ನನಗೆ ಉತ್ತರ ಕೊಡು.
೮ ನನ್ನ ಮುಖವನ್ನು ಹುಡುಕಿರಿ, ಅಂದು;
ನಿನ್ನ ಮುಖವನ್ನು, ಕರ್ತನೇ, ಹುಡುಕುವೆನೆಂದು, ನನ್ನ
ಹೃದಯವು ನಿನಗೆ ಹೇಳಿತು.
೯ ನಿನ್ನ ಮುಖವನ್ನು ನನಗೆ ಮರೆ ಮಾಡ ಬೇಡ;
ನಿನ್ನ ಸೇವಕನನ್ನು ಕೋಪದಿಂದ ತಳ್ಳ ಬೇಡ;
ನನಗೆ ಸಹಾಯವಾಗಿದ್ದೀ;
ನನ್ನನ್ನು ವಿಸರ್ಜಿಸ ಬೇಡ;
ನನ್ನನ್ನು ಬಿಟ್ಟು ಬಿಡ ಬೇಡ, ನನ್ನ ರಕ್ಷಣೆಯ ದೇವರೇ.



೧೦ ಯಾಕಂದರೆ ನನ್ನ ತಂದೆ ತಾಯಿಗಳು ನನ್ನನ್ನು ಬಿಟ್ಟು
ಬಿಟ್ಟರೂ,
ಕರ್ತನು ನನ್ನನ್ನು ಕೇರಿಸಿ ಕೊಳ್ಳುತ್ತಾನೆ.
೧೧ ಕರ್ತನೇ, ನಿನ್ನ ಮಾರ್ಗವನ್ನು ನನಗೆ ಬೋಧಿಸು;
ನನ್ನ ವಿರೋಧಿಗಳ ನಿಮಿತ್ತ ಸಮವಾದ ಹಾದಿಯಲ್ಲಿ ನನ್ನನ್ನು
ನಡಿಸು.
೧೨ ನನ್ನ ವೈರಿಗಳ ಚಿತ್ತಕ್ಕೆ ನನ್ನನ್ನು ಕೊಟ್ಟು ಬಿಡ ಬೇಡ;
ಯಾಕಂದರೆ ಸುಳ್ಳು ಸಾಕ್ಷಿಗಳೂ ಬಲಾತ್ಕಾರ ಶ್ವಾಸ ಬಿಡು
ವವರೂ ನನಗೆ ವಿರೋಧವಾಗಿ ಎದ್ದಿದ್ದಾರೆ.
೧೩ ಜೀವಿತರ ದೇಶದಲ್ಲಿ ಕರ್ತನ ಒಳ್ಳೇತನವನ್ನು ನೋಡುವೆ
ನೆಂದು ನಂಬದಿದ್ದರೆ, ಏನೋ!
೧೪ ಕರ್ತನನ್ನು ನಿರೀಕ್ಷಿಸು, ಬಲವಾಗಿರು;
ನಿನ್ನ ಹೃದಯವನ್ನು ದೃಢ ಪಡಿಸುವನು—
ಹೌದು, ಕರ್ತನನ್ನು ನಿರೀಕ್ಷಿಸು.

## ೨೮. ಕೀರ್ತನೆ.

ದಾವೀದನದು.

೧ ಕರ್ತನೇ, ನಿನಗೆ ಕೂಗುತ್ತೇನೆ, ನನ್ನ ಬಂಡೆಯೇ; ನನಗೆ
ಮೌನವಾಗಿರ ಬೇಡ;
ಯಾಕಂದರೆ ನೀನು ನನಗೆ ಸುಮ್ಮನಿದ್ದರೆ, ನಾನು ಕುಣಿಯಲ್ಲಿ
ಇಳಿಯುವವರಿಗೆ ಸಮಾನನಾಗುವೆನು.
೨ ನಾನು ನಿನಗೆ ಮೊರೆ ಇಡುವಾಗ,
ನನ್ನ ಕೈಗಳನ್ನು ನಿನ್ನ ಪರಿಶುದ್ಧ ವಾಕ್ಯಸ್ಥಾನದ ಕಡೆಗೆ
ಎತ್ತುವಾಗ,
ನನ್ನ ವಿಜ್ಞಾಪನೆಗಳ ಶಬ್ದವನ್ನು ಕೇಳು.
3 ದುಷ್ಟರ ಸಂಗಡಲೂ, ಪಾತಕ ಮಾಡುವವರ ಸಂಗಡಲೂ,
ನನ್ನನ್ನು ಎಳೆಯ ಬೇಡ;
ತಮ್ಮ ನೆರೆಯವರಿಗೆ ಸಮಾಧಾನ ಮಾತಾಡುತ್ತಾರೆ; ಆದರೆ
ಕೇಡು ಅವರ ಹೃದಯದಲ್ಲಿ ಅದೆ.
೪ ಅವರ ಕರ್ಮದ ಪ್ರಕಾರವಾಗಿಯೂ, ಅವರ ಕ್ರಿಯೆಗಳ ಕೆಟ್ಟ
ತನದ ಪ್ರಕಾರವಾಗಿಯೂ, ಅವರಿಗೆ ಕೊಡು;
ಅವರ ಕೈಗಳ ಕೆಲಸದ ಪ್ರಕಾರವಾಗಿ ಅವರಿಗೆ ಕೊಡು;
ಅವರ ಪ್ರತಿಕಾರವನ್ನು ಅವರಿಗೆ ತಿರುಗ ಮಾಡು.
೫ ಯಾಕಂದರೆ ಕರ್ತನ ಕೃತ್ಯಗಳನ್ನೂ ಅವನ ಕೈಗಳ
ಕೆಲಸವನ್ನೂ ಅವರು ಗ್ರಹಿಸುವದಿಲ್ಲ;
ಆದದರಿಂದ ಅವರ ಮನೆ ಬೆಳಿಸದೆ, ಅವರನ್ನು ನಿರ್ಮೂಲ
ಮಾಡುವನು.
೬ ಕರ್ತನಿಗೆ ಆಶೀರ್ವಾದವಾಗಲಿ;
ಯಾಕಂದರೆ ನನ್ನ ವಿಜ್ಞಾಪನೆಗಳ ಶಬ್ದವನ್ನು ಕೇಳಿದ್ದಾನೆ.
೭ ಕರ್ತನು ನನ್ನ ಬಲವೂ ನನ್ನ ಗುರಾಣಿಯೂ ಆಗಿದ್ದಾನೆ;
ನನ್ನ ಹೃದಯವು ಅವನಲ್ಲಿ ಭರವಸವಿಟ್ಟದರಿಂದ ಸಹಾಯ
ಹೊಂದಿದೆನು;
ಆದದರಿಂದ ನನ್ನ ಹೃದಯವು ಉತ್ಸಾಹ ಪಡುವದು;
ನನ್ನ ಹಾಡಿನಿಂದ ಅವನನ್ನು ಕೊಂಡಾಡುವೆನು.
೮ ಕರ್ತನು ಅವರಿಗೆ ಬಲವಾಗಿದ್ದಾನೆ;
ತನ್ನ ಅಭಿಷಿಕ್ತನ ರಕ್ಷಣೆಗಳ ಬಲಸ್ಥಾನವು ಅವನೇ.
೯ ನಿನ್ನ ಜನರನ್ನು ರಕ್ಷಿಸು; ನಿನ್ನ ಬಾಧ್ಯತೆಯನ್ನು ಆಶೀ
ರ್ವದಿಸು;
ಅವರನ್ನು ಮೇಯಿಸಿ, ಯುಗ ಯುಗಕ್ಕೂ ಅವರನ್ನು ಮೇಲಕ್ಕೆ
ಎತ್ತು.

## ೨೯. ಕೀರ್ತನೆ.

ದಾವೀದನ ಗೀತವು.

೧ ಪರಾಕ್ರಮಶಾಲಿಗಳ ಪುತ್ರರೇ, ಕರ್ತನಿಗೆ ತನ್ನಿರಿ;
ಕರ್ತನಿಗೆ ಘನವನ್ನೂ ಬಲವನ್ನೂ ತನ್ನಿರಿ.
೨ ಕರ್ತನಿಗೆ ಅವನ ಹೆಸರಿನ ಘನವನ್ನು ತನ್ನಿರಿ;
ಕರ್ತನಿಗೆ ಪರಿಶುದ್ಧತ್ವದ ಅಂದದಲ್ಲಿ ಅಡ್ಡ ಬೀಳಿರಿ.
3 ಕರ್ತನ ಶಬ್ದವು ನೀರುಗಳ ಮೇಲೆ ಅದೆ;
ಘನದ ದೇವರು ಗುಡುಗುತ್ತಾನೆ;
ಕರ್ತನು ಬಹಳ ನೀರುಗಳ ಮೇಲೆ ಇದ್ದಾನೆ.
೪ ಕರ್ತನ ಶಬ್ದವು ಶಕ್ತಿಯುಳ್ಳದ್ದು;
ಕರ್ತನ ಶಬ್ದವು ಪ್ರಭೆಯುಳ್ಳದ್ದು.
೫ ಕರ್ತನ ಶಬ್ದವು ದೇವದಾರುಗಳನ್ನು ಮುರಿಯುತ್ತದೆ;
ಕರ್ತನು ಲೆಬನೋನಿನ ದೇವದಾರುಗಳನ್ನು ಮುರಿಯುತ್ತಾನೆ.
೬ ಅವುಗಳನ್ನು ಕರುವಿನ ಹಾಗೆಯೂ,
ಲೆಬನೋನನ್ನೂ ಸಿರಿಯೋನನ್ನೂ ಎಳೇ ಕಾಡ ಕೋಣದ
ಹಾಗೆಯೂ,
ಹಾರ್ಯಾಡಿಸುತ್ತಾನೆ.
೭ ಕರ್ತನ ಶಬ್ದವು ಅಗ್ನಿ ಜ್ವಾಲೆಗಳನ್ನು ಭೇದಿಸುತ್ತದೆ.
೮ ಕರ್ತನ ಶಬ್ದವು ಅರಣ್ಯವನ್ನು ಕದಲಿಸುತ್ತದೆ;
ಕರ್ತನು ಕಾದೆಷ್ ಅರಣ್ಯವನ್ನು ಕದಲಿಸುತ್ತಾನೆ.
೯ ಕರ್ತನ ಶಬ್ದವು ಹುಲ್ಲೆಗಳನ್ನು ಈಯ ಮಾಡಿ,
ಅಡವಿಗಳನ್ನು ಬೆತ್ತಲೆ ಮಾಡುತ್ತದೆ;
ಅವನ ಮಂದಿರದಲ್ಲಿ, ಘನ ಎಂದು, ಸರ್ವವು ಹೇಳುತ್ತದೆ.
೧೦ ಕರ್ತನು ಪ್ರಳಯದ ಬಳಿಯಲ್ಲಿ ಕೂತು ಕೊಳ್ಳುತ್ತಾನೆ;
ಮತ್ತು ಯುಗ ಯುಗಕ್ಕೂ ಕರ್ತನು ಅರಸನಾಗಿ ಕೂತು
ಕೊಳ್ಳುವನು.
೧೧ ಕರ್ತನು ತನ್ನ ಜನರಿಗೆ ಬಲವನ್ನು ಕೊಡುವನು;
ಕರ್ತನು ತನ್ನ ಜನರನ್ನು ಸಮಾಧಾನದಿಂದ ಆಶೀರ್ವದಿ
ಸುವನು.

## ೩೦. ಕೀರ್ತನೆ.

ದಾವೀದನ ಮನೆಯ ಪ್ರತಿಷ್ಠೆಗೆ ಹಾಡಿದ ಗೀತವು.

೧ ಕರ್ತನೇ, ನಿನ್ನನ್ನು ಉನ್ನತ ಮಾಡುವೆನು;
ಯಾಕಂದರೆ ನೀನು ನನ್ನ ಶತ್ರುಗಳನ್ನು ನನ್ನಲ್ಲಿ ಸಂತೋಷ
ಪಡಿಸದೆ,
ನನ್ನನ್ನು ಮೇಲಕ್ಕೆ ಎತ್ತಿದ್ದೀ.

೨ ನನ್ನ ದೇವರಾದ ಕರ್ತನೇ, ನಿನಗೆ ಮೊರೆ ಇಡಲು,
ನನ್ನನ್ನು ಪಾಪಿ ಮಾಡಿದ್ದೀ.
೩ ಕರ್ತನೇ, ನನ್ನ ಪ್ರಾಣವನ್ನು ಪಾತಾಳದೊಳಗಿಂದ ಎತ್ತಿದ್ದೀ;
ಕೂಪಿಯಲ್ಲಿ ಇಳಿಯುವವರೊಳಗಿಂದ ನನ್ನನ್ನು ಬದುಕಿಸಿದ್ದೀ.

೪ ಕರ್ತನನ್ನು ಕೀರ್ತಿಸಿರಿ, ಅವನ ಭಕ್ತರೇ;
ಅವನ ಪರಿಶುದ್ಧತ್ವದ ಜ್ಞಪ್ತಿಗೆ ಕೊಂಡಾಡಿರಿ.
೫ ಯಾಕಂದರೆ ಅವನ ಕೋಪವು ಕ್ಷಣ ಮಾತ್ರ;
ಅವನ ಕಟಾಕ್ಷವು ಜೀವವೇ;
ಸಂಜೆಯಲ್ಲಿ ಅಳುವು ತಂಗುವದು;
ಬೆಳಗ್ಯ ಉತ್ಸಾಹ ಧ್ವನಿಯೇ.
೬ ಮತ್ತು, ಯುಗ ಯುಗಕ್ಕೂ ಕದಲೆನೆಂದು,
ನನ್ನ ಸಾಮ್ಯದಲ್ಲಿ ಹೇಳಿದೆನು.
೭ ಕರ್ತನೇ, ನಿನ್ನ ಕಟಾಕ್ಷದಿಂದ ನನ್ನ ಪೆಟ್ಟಕ್ಕೆ ಬಲವನ್ನು ಸ್ಥಿರ
ಮಾಡಿದ್ದೀ;
ನೀನು ನಿನ್ನ ಮುಖವನ್ನು ಮರೆ ಮಾಡಲು, ತಲ್ಲಣ ಪಟ್ಟವ
ನಾದೆನು.
೮ ಕರ್ತನೇ, ನಿನಗೆ ಕೂಗಿದೆನು;
ಕರ್ತನಿಗೆ ವಿಜ್ಞಾಪನೆ ಮಾಡಿದೆನು.

೯ ನಾನು ಕೂಪಿಯಲ್ಲಿ ಇಳಿದರೆ, ನನ್ನ ರಕ್ತದಲ್ಲಿ ಲಾಭವೇನು!
ಧೂಳು ನಿನ್ನನ್ನು ಕೊಂಡಾಡುವದೋ!
ನಿನ್ನ ಸತ್ಯವನ್ನು ತಿಳಿಸುವದೋ!
೧೦ ಕರ್ತನೇ, ಕೇಳಿ, ನನಗೆ ದಯೆ ಮಾಡು;
ಕರ್ತನೇ, ನನಗೆ ಸಹಾಯಕನಾಗಿರು.
೧೧ ನನ್ನ ಘನವು ಮೌನವಾಗಿರದೆ, ನಿನ್ನನ್ನು ಕೀರ್ತಿಸುವ ಹಾಗೆ,
ನನ್ನ ಗೋಳಾಟವನ್ನು ನನಗೆ ನಾಟ್ಯಕ್ಕೆ ಪಾರ್ಪಡಿಸಿದ್ದೀ;
ನನ್ನ ಗೋಣಿ ತಟ್ಟನ್ನು ಬಿಚ್ಚಿ, ಸಂತೋಷದಿಂದ ನನ್ನ ನಡು
ಕಟ್ಟಿದ್ದೀ.
೧೨ ನನ್ನ ದೇವರಾದ ಕರ್ತನೇ, ಯುಗ ಯುಗಕ್ಕೂ ನಿನ್ನನ್ನು
ಕೊಂಡಾಡುವೆನು.

## ೩೧. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ಕರ್ತನೇ, ನಿನ್ನನ್ನು ಆಶ್ರಯಿಸಿ ಕೊಂಡಿದ್ದೇನೆ;
ನಾನು ಯುಗ ಯುಗಕ್ಕೂ ನಾಚಿಕೆ ಪಡದೆ ಇರಲಿ;
ನಿನ್ನ ನೀತಿಯಲ್ಲಿ ನನ್ನನ್ನು ತಪ್ಪಿಸು.
೨ ನಿನ್ನ ಕಿವಿಯನ್ನು ನನ್ನ ಕಡೆಗೆ ಬೊಗ್ಗಿಸು;
ಬೇಗ ನನ್ನನ್ನು ಬಿಡಿಸು;
ನನ್ನನ್ನು ರಕ್ಷಿಸುವದಕ್ಕೆ ನನಗೆ ಬಲಸ್ಥಾನವಾದ ಬಂಡೆಯೂ
ಕೋಟೇ ಮನೆಯೂ ಆಗಿರು.
೩ ಯಾಕಂದರೆ ನನ್ನ ಅರೆಯೂ ನನ್ನ ಕೋಟೆಯೂ ನೀನೇ;
ನಿನ್ನ ಹೆಸರಿನ ನಿಮಿತ್ತ ನನ್ನನ್ನು ನಡಿಸು; ನನಗೆ ಹಾದಿ
ತೋರಿಸು.
೪ ಅವರು ನನಗೆ ಒಡ್ಡಿದ ಬಲೆಯೊಳಗಿಂದ ನನ್ನನ್ನು ಹೊರಗೆ ಬರ
ಮಾಡು.
ಯಾಕಂದರೆ ನೀನು ನನ್ನ ಬಲಸ್ಥಾನವಾಗಿದ್ದೀ.
೫ ನಿನ್ನ ಕೈಗೆ ನನ್ನ ಆತ್ಮವನ್ನು ಒಪ್ಪಿಸುತ್ತೇನೆ;
ಸತ್ಯದ ದೇವರಾದ ಕರ್ತನೇ, ನೀನು ನನ್ನನ್ನು ವಿಮೋಚನೆ
ಮಾಡಿದ್ದೀ.
೬ ವ್ಯರ್ಥ ಮಾಯೆಗಳನ್ನು ಅನುಸರಿಸುವವರನ್ನು ಹಗೆ
ಮಾಡುತ್ತೇನೆ;
ಆದರೆ ನಾನು ಕರ್ತನಲ್ಲಿ ಭರವಸಬಿಡುತ್ತೇನೆ.
೭ ನಿನ್ನ ಕೃಪೆಯಲ್ಲಿ ಉಲ್ಲಾಸಿಸಿ, ಸಂತೋಷ ಪಡುವೆನು;
ಯಾಕಂದರೆ ನೀನು ನನ್ನ ದೀನತೆಯನ್ನು ನೋಡಿ,
ನನ್ನ ಪ್ರಾಣವನ್ನು ಇಕ್ಕಟ್ಟುಗಳಲ್ಲಿ ಅರಿತಿದ್ದೀ.
೮ ಶತ್ರುವಿನ ಕೈಯಲ್ಲಿ ನನ್ನನ್ನು ಮುಚ್ಚಿ ಬಿಡಲಿಲ್ಲ;
ನನ್ನ ಪಾದಗಳನ್ನು ಅಗಲವಾದ ಸ್ಥಳದಲ್ಲಿ ನಿಲ್ಲಿಸಿದ್ದೀ.

೯ ಕರ್ತನೇ, ನನಗೆ ದಯೆ ಮಾಡು; ಯಾಕಂದರೆ ನನಗೆ
ಇಕ್ಕಟ್ಟು ಅದೆ;
ನನ್ನ ಕಣ್ಣೂ, ನನ್ನ ಪ್ರಾಣವೂ, ನನ್ನ ಹೊಟ್ಟೆಯೂ ಕರಕರಿ
ಯಿಂದ ಕ್ಷೀಣವಾಗಿವೆ.
೧೦ ಯಾಕಂದರೆ ನನ್ನ ಜೀವವು ಚಿಂತೆಯಿಂದಲೂ, ನನ್ನ ವರುಷ
ಗಳು ನಿಟ್ಟುಸುರಿನಿಂದಲೂ, ಶೀರಿ ಹೋಗಿವೆ;
ನನ್ನ ಶಕ್ತಿಯು ನನ್ನ ಅಕ್ರಮದಿಂದ ಕುಂದಿ ಅದೆ;
ನನ್ನ ಎಲುಬುಗಳು ಕ್ಷೀಣವಾಗಿವೆ.
೧೧ ನನ್ನ ವೈರಿಗಳೆಲ್ಲರಲ್ಲಿ,
ವಿಶೇಷವಾಗಿ ನನ್ನ ನೆರೆಯವರಿಗೆ ನಿಂದೆಯೂ, ನನ್ನ ಪರಿಚಿತರಿಗೆ
ಹೆದರಿಕೆಯೂ, ಆದೆನು;
ಬೀದಿಯಲ್ಲಿ ನನ್ನನ್ನು ನೋಡಿದವರು ನನ್ನನ್ನು ಬಿಟ್ಟು ಓಡಿ
ಹೋದರು.
೧೨ ಸತ್ತವನ ಹಾಗೆ ಹೃದಯದಲ್ಲಿ ಮರೆತು ಬಿಡಲ್ಪಟ್ಟಿದ್ದೇನೆ;
ಒಡೆದ ಪಾತ್ರೆಯ ಹಾಗೆ ಆದೆನು.
೧೩ ಯಾಕಂದರೆ ಅನೇಕರ ಚಾಡಿಯನ್ನು ಕೇಳಿದ್ದೇನೆ;
ಸುತ್ತಲು ಅಂಜಿಕೆ ಅದೆ;
ನನ್ನ ಮೇಲೆ ಕೂಡ ಆಲೋಚನೆ ಮಾಡುವದರಲ್ಲಿ ನನ್ನ ಪ್ರಾಣ
ತೆಗೆದು ಕೊಳ್ಳಲಿಕ್ಕೆ ಯೋಚಿಸುತ್ತಾರೆ.

೧೪ ಆದರೆ ನಾನು ನಿನ್ನಲ್ಲಿ ಭರವಸಪಟ್ಟಿದ್ದೇನೆ, ಕರ್ತನೇ;
ನನ್ನ ದೇವರು ನೀನೇ, ಎಂದು ಹೇಳಿದ್ದೇನೆ.
೧೫ ನನ್ನ ಕಾಲಗಳು ನಿನ್ನ ಕೈಯಲ್ಲಿ ಅವೆ;
ನನ್ನ ಶತ್ರುಗಳ ಕೈಯಿಂದಲೂ,
ನನ್ನನ್ನು ಹಿಂದಟ್ಟುವವರಿಂದಲೂ ನನ್ನನ್ನು ಬಿಡಿಸು.
೧೬ ನಿನ್ನ ಮುಖವನ್ನು ನಿನ್ನ ಸೇವಕನ ಮೇಲೆ ಬೆಳಗ ಮಾಡು;
ನಿನ್ನ ಕೃಪೆಯಿಂದ ನನ್ನನ್ನು ರಕ್ಷಿಸು.
೧೭ ಕರ್ತನೇ, ನಾನು ನಾಚಿಕೆ ಪಡದೆ ಇರಲಿ; ಯಾಕಂದರೆ ನಿನ್ನನ್ನು
ಕರೆದಿದ್ದೇನೆ;
ದುಷ್ಟರು ನಾಚಿಕೆ ಪಡಲಿ; ಅವರು ಪಾತಾಳದಲ್ಲಿ ಮೌನ
ವಾಗಿರಲಿ.



೧೮ ನೀತಿವಂತನ ಮೇಲೆ ಗರ್ವದಿಂದಲೂ ತಿರಸ್ಕಾರದಿಂದಲೂ
ಕಠಿಣವಾಗಿ ಮಾತಾಡುವ ಸುಳ್ಳಿನ ತುಟಿಗಳು ಕಟ್ಟಲ್ಪಡಲಿ.

೧೯ ನಿನ್ನ ಒಳ್ಳೇತನವು ಎಷ್ಟೋ ದೊಡ್ಡದು! ಅದನ್ನು ನಿನಗೆ
ಭಯ ಪಡುವವರಿಗೋಸ್ಕರ ನಿಕ್ಷೇಪವಾಗಿ ಇಟ್ಟು,
ನಿನ್ನನ್ನು ಆಶ್ರಯಿಸಿ ಕೊಳ್ಳುವವರಿಗೋಸ್ಕರ ಮನುಷ್ಯನ
ಮಕ್ಕಳ ಮುಂದೆ ನಡಿಸುತ್ತೀ.
೨೦ ಅವರನ್ನು ನಿನ್ನ ಮುಖದ ಮರೆಯಲ್ಲಿ ಮನುಷ್ಯರ ಒಗ್ಗಟ್ಟು
ಗಳಿಗೆ ಮರೆ ಮಾಡುತ್ತೀ;
ನಾಲಿಗೆಗಳ ವಿವಾದಕ್ಕೆ ದೇರದಲ್ಲಿ ಅವರನ್ನು ಅಡಗಿಸುತ್ತೀ.
೨೧ ಕರ್ತನಿಗೆ ಆಶೀರ್ವಾದವಾಗಲಿ;
ಯಾಕಂದರೆ ತನ್ನ ಕೃಪೆಯನ್ನು ಕೋಟೆಯ ಪಟ್ಟಣದಲ್ಲಿ ನನಗೆ
ಆಶ್ಚರ್ಯವಾಗಿ ತೋರಿಸಿದ್ದಾನೆ.
೨೨ ಆದರೆ ನಾನು ನಿನ್ನ ಕಣ್ಣುಗಳ ಮುಂದಿನಿಂದ ಕಡೆದು ಹಾಕಲ್ಪ
ಟ್ಟಿದ್ದೇನೆಂದು, ನನ್ನ ಭಯ ಭ್ರಾಂತಿಯಲ್ಲಿ ಹೇಳಿದೆನು;
ಆದರೂ ನಾನು ನಿನಗೆ ಮೊರೆ ಇಡುವಾಗ, ನನ್ನ ವಿಜ್ಞಾಪನೆಗಳ
ಶಬ್ದವನ್ನು ಕೇಳಿದಿ.
೨3 ಕರ್ತನನ್ನು ಪ್ರೀತಿ ಮಾಡಿರಿ, ಅವನ ಭಕ್ತರೆಲ್ಲರೇ;
ಕರ್ತನು ನಂಬಿಕೆಯುಳ್ಳವರನ್ನು ಕಾಯುತ್ತಾನೆ.
ಅಹಂಕಾರ ಮಾಡುವವನಿಗೆ ಬಹಳವಾಗಿ ಮುಯ್ಯಿಗೆ ಮುಯ್ಯಿ
ಕೊಡುತ್ತಾನೆ.
೨೪ ಕರ್ತನನ್ನು ಎದುರು ನೋಡುವ ನೀವೆಲ್ಲರೇ, ಬಲವಾಗಿರ್ರಿ;
ನಿಮ್ಮ ಹೃದಯವನ್ನು ದೃಢ ಪಡಿಸುವನು.

## ೩೨. ಕೀರ್ತನೆ.

ದಾವೀದನ ಬೋಧನೆಯು.

೧ ಯಾವನ ದ್ರೋಹವು ಪರಿಹಾರವಾಗಿದೆಯೋ,
ಯಾವನ ಪಾಪವು ಮುಚ್ಚಿದೆಯೋ, ಅವನು ಭಾಗ್ಯವಂತನು.
೨ ಕರ್ತನು ಯಾವನಿಗೆ ಅಕ್ರಮವನ್ನು ಎಣಿಸುವದಿಲ್ಲವೋ,
ಯಾವನ ಆತ್ಮದಲ್ಲಿ ಮೋಸ ಇರುವದಿಲ್ಲವೋ, ಆ ಮನುಷ್ಯ
ನು ಭಾಗ್ಯವಂತನು.

3 ನಾನು ಮೌನವಾಗಿದ್ದಾಗ, ದಿನವೆಲ್ಲಾ ಅಳುವದರಿಂದ
ನನ್ನ ಎಲುಬುಗಳು ಜೀರ್ಣವಾದವು.
೪ ಯಾಕಂದರೆ ರಾತ್ರಿ ಹಗಲು ನಿನ್ನ ಕೈ ನನ್ನ ಮೇಲೆ ಭಾರ
ವಾಗಿತ್ತು;
ನನ್ನ ಜೀವ ರಸವು ಬೇಸಿಗೆ ಕಾಲದ ಕೆಬೆಯಾಗಿ ಬದಲಾಯಿತು.
ಸೇಲಾ.

೫ ನನ್ನ ಪಾಪವನ್ನು ನಿನಗೆ ತಿಳಿಸಿ, ನನ್ನ ಅಕ್ರಮವನ್ನು
ಮುಚ್ಚದೆ,
ನನ್ನ ದ್ರೋಹಗಳನ್ನು ಕುರಿತು ಕರ್ತನಿಗೆ ಅರಿಕೆ ಮಾಡುವೆ
ನೆಂದು, ಹೇಳಿದೆನು;
ಆಗ ನೀನು ನನ್ನ ಪಾಪದ ಅಕ್ರಮವನ್ನು ಪರಿಹರಿಸಿದಿ. ಸೇಲಾ.
೬ ಇದಕ್ಕೋಸ್ಕರ ಭಕ್ತರೆಲ್ಲರು ಕಂಡು ಕೊಳ್ಳುವ ಕಾಲದಲ್ಲಿ
ನಿನಗೆ ಪ್ರಾರ್ಥನೆ ಮಾಡುವರು;
ನಿಶ್ಚಯವಾಗಿ ಬಹಳ ನೀರುಗಳು ಹರಿಯುವಾಗ, ಅವನಿಗೆ
ಮುಟ್ಟದೆ ಇರುವವು.
೭ ನೀನು ನನ್ನ ಮರೆಯು;
ಇಕ್ಕಟ್ಟಿನಿಂದ ನನ್ನನ್ನು ಕಾಯುತ್ತೀ;
ಬಿಡುಗಡೆಯ ಉತ್ಸಾಹ ಧ್ವನಿಗಳನ್ನು ನನಗೆ ಸುತ್ತಿ ಕೊಳ್ಳು
ಮಾಡುತ್ತೀ. ಸೇಲಾ.
೮ ನಿನಗೆ ಬುದ್ಧಿ ಹೇಳುವೆನು; ನೀನು ಹೋಗ ತಕ್ಕ
ಮಾರ್ಗವನ್ನು ನಿನಗೆ ಬೋಧಿಸುವೆನು;
ನಿನ್ನ ಮೇಲೆ ನನ್ನ ಕಣ್ಣಿಟ್ಟು, ಆಲೋಚನೆ ಕೊಡುವೆನು.
೯ ವಿವೇಕವಿಲ್ಲದ ಕುದುರೆಯ ಹಾಗೆಯೂ,
ಹಾಸರ ಕತ್ತೆಯ ಹಾಗೆಯೂ, ಇರ ಬೇಡಿರಿ;
ಅವು ನಿನ್ನ ಸಮೀಪಕ್ಕೆ ಬಾರದ ಹಾಗೆ,
ಅವುಗಳಿಗೆ ಅಲಂಕಾರವಾದ ಬಾರಿನಿಂದಲೂ ಕಡಿವಾಣದಿಂದಲೂ
ಬಿಗಿಸಲ್ಪಡುತ್ತವೆ.
೧೦ ದುಷ್ಟನಿಗೆ ವ್ಯಥೆಗಳು ಬಹಳ;
ಆದರೆ ಕರ್ತನಲ್ಲಿ ಭರವಸವಿಡುವವನನ್ನು ಕೃಪೆಯು ಸುತ್ತಿ
ಕೊಳ್ಳುವದು.
೧೧ ನೀತಿವಂತರೇ, ಕರ್ತನಲ್ಲಿ ಸಂತೋಷಿಸಿ, ಉಲ್ಲಾಸ ಪಡಿರಿ;
ನೆಟ್ಟನೇ ಹೃದಯವುಳ್ಳವರೆಲ್ಲರೇ, ಉತ್ಸಾಹ ಧ್ವನಿ ಮಾಡಿರಿ.

## 33. ಕೀರ್ತನೆ.

೧ ನೀತಿವಂತರೇ, ಕರ್ತನಲ್ಲಿ ಉತ್ಸಾಹ ಧ್ವನಿ ಮಾಡಿರಿ;
ನೆಟ್ಟನೆಯವರಿಗೆ ಸ್ತೋತ್ರವು ಯೋಗ್ಯವಾಗಿದೆ.
೨ ಕರ್ತನನ್ನು ಕಿನ್ನರಿಯಿಂದ ಕೊಂಡಾಡಿರಿ;
ಹತ್ತು ತಂತಿಗಳ ವೀಣೆಯಿಂದ ಅವನನ್ನು ಕೀರ್ತಿಸಿರಿ.
3 ಅವನಿಗೆ ಹೊಸ ಹಾಡನ್ನು ಹಾಡಿರಿ;
ವಾದ್ಯವನ್ನು ಉತ್ಸಾಹದಿಂದ ಚನ್ನಾಗಿ ಬಾರಿಸಿರಿ.

೪ ಯಾಕಂದರೆ ಕರ್ತನ ವಾಕ್ಯವು ನೆಟ್ಟನೆಯದು;
ಅವನ ಕೆಲಸಗಳೆಲ್ಲಾ ನಂಬಿಕೆಯಾಗಿವೆ.
೫ ನೀತಿಯನ್ನೂ ನ್ಯಾಯವನ್ನೂ ಪ್ರೀತಿ ಮಾಡುತ್ತಾನೆ;
ಭೂಮಿಯು ಕರ್ತನ ಕೃಪೆಯಿಂದ ತುಂಬಿ ಅದೆ.
೬ ಕರ್ತನ ವಾಕ್ಯದಿಂದ ಆಕಾಶವೂ,
ಅವನ ಬಾಯಿಯ ಉಸುರಿನಿಂದ ಅದರ ಸೈನ್ಯವೆಲ್ಲವೂ,
ಉಂಟಾದವು.
೭ ಸಮುದ್ರದ ನೀರು ಕುಪ್ಪೆಯ ಹಾಗೆ ಕೂಡಿಸುತ್ತಾನೆ;
ಜಲಾಗಾಧಗಳನ್ನು ಉಗ್ರಾಣಗಳಲ್ಲಿ ಇಡುತ್ತಾನೆ.
೮ ಭೂಮಿಯೆಲ್ಲಾ ಕರ್ತನಿಗೆ ಭಯ ಪಡಲಿ;
ಭೂಲೋಕ ನಿವಾಸಿಗಳೆಲ್ಲರು ಅವನಿಗೆ ಅಂಜಲಿ.
೯ ಯಾಕಂದರೆ ಅವನು ಹೇಳಲು ಆಯಿತು;
ಅವನು ಆಜ್ಞಾಪಿಸಲು ಸ್ಥಿರವಾಯಿತು.

೧ ಕರ್ತನು ಜನಾಂಗಗಳ ಆಲೋಚನೆಯನ್ನು ಮುರಿದು,
ಜನರ ಯೋಚನೆಗಳನ್ನು ವ್ಯರ್ಥ ಮಾಡುತ್ತಾನೆ.
೧೧ ಕರ್ತನ ಆಲೋಚನೆಯು ಯುಗ ಯುಗಕ್ಕೂ,
ಅವನ ಹೃದಯದ ಯೋಚನೆಗಳು ತಲತಲಾಂತರಕ್ಕೂ,
ನಿಲ್ಲುವವು.
೧೦ ಯೆಹೋವನನ್ನು ದೇವರಾಗಿ ಹೊಂದಿದ ಜನಾಂಗವೂ,
ಅವನು ತನಗೆ ಬಾಧ್ಯತೆಯಾಗಿ ಆರಿಸಿಕೊಂಡ ಜನರೂ,
ಭಾಗ್ಯವಂತರು.

೧೩ ಆಕಾಶದಿಂದ ಕರ್ತನು ದೃಷ್ಟಿಸಿ,
ಮನುಷ್ಯರ ಮಕ್ಕಳೆಲ್ಲರನ್ನು ನೋಡುತ್ತಾನೆ.
೧೪ ತನ್ನ ನಿವಾಸಸ್ಥಳದಿಂದ
ಭೂನಿವಾಸಿಗಳೆಲ್ಲರ ಮೇಲೆ ಕಣ್ಣಿಡುತ್ತಾನೆ.
೧೫ ಅವರ ಹೃದಯಗಳನ್ನು ಏಕವಾಗಿ ರೂಪಿಸಿ,
ಅವರ ಕೆಲಸಗಳನ್ನೆಲ್ಲಾ ಗ್ರಹಿಸಿ ಕೊಳ್ಳುವವನು ಅವನೇ.
೧೬ ಅರಸನು ಸೈನ್ಯದ ಬಾಹುಳ್ಯದಿಂದ ರಕ್ಷಿಸಲ್ಪಡುವದಿಲ್ಲ;
ಪರಾಕ್ರಮಶಾಲಿಯು ಶಕ್ತಿಯ ಬಾಹುಳ್ಯದಿಂದ ಬಿಡಿಸಲ್ಪಡುವದಿಲ್ಲ.
೧೭ ಕುದುರೆಯು ರಕ್ಷಣೆಗೆ ವ್ಯರ್ಥವಾಗಿದೆ;
ತನ್ನ ಬಲದ ಬಾಹುಳ್ಯದಿಂದ ತಪ್ಪಿಸುವದಿಲ್ಲ.
೧೮ ಇಗೋ, ಕರ್ತನ ಕಣ್ಣು ಅವನಿಗೆ ಭಯ ಪಡುವವರ ಮೇಲೆ,
ಅವನ ಕೃಪೆಯನ್ನು ಎದುರು ನೋಡುವವರ ಮೇಲೆ, ಅದೆ.
೧೯ ಅವರ ಪ್ರಾಣವನ್ನು ಮರಣದಿಂದ ಬಿಡಿಸಿ,
ಬರವಲ್ಲಿ ಅವರ ಜೀವವನ್ನು ಉಳಿಸುವದಕ್ಕಾಗಿಯೇ.

೨೦ ನಮ್ಮ ಪ್ರಾಣವು ಕರ್ತನಿಗೆ ಕಾದು ಕೊಳ್ಳುತ್ತದೆ;
ನಮ್ಮ ಸಹಾಯವೂ ನಮ್ಮ ಗುರಾಣಿಯೂ ಅವನೇ.
೨೧ ಯಾಕಂದರೆ ಅವನಲ್ಲಿ ನಮ್ಮ ಹೃದಯವು ಸಂತೋಷಿಸುತ್ತದೆ;
ಯಾಕಂದರೆ ಅವನ ಪರಿಶುದ್ಧವಾದ ಹೆಸರಿನಲ್ಲಿ ಭರವಸ
ಇಟ್ಟಿದ್ದೇವೆ.
೨೨ ನಾವು ನಿನ್ನನ್ನು ಎದುರು ನೋಡುವ ಪ್ರಕಾರ,
ಕರ್ತನೇ, ನಿನ್ನ ಕೃಪೆಯು ನಮ್ಮ ಮೇಲೆ ಇರಲಿ.

## ೩೪. ಕೀರ್ತನೆ.

ದಾವೀದನದು; ಆವನು ಅಬಿಮೆಲೆಕನ ಮುಂದೆ ತನ್ನ ಬುದ್ಧಿ ಬೇರೆ ಮಾಡಲು, ಇವನಿಂದ ಹೊರಗೆ ಹಾಕಲ್ಪಟ್ಟು, ಹೋದಾಗ.

೧ ಎಲ್ಲಾ ಕಾಲಗಳಲ್ಲಿ ಕರ್ತನನ್ನು ಆಶೀರ್ವದಿಸುವೆನು;
ಅವನ ಸ್ತೋತ್ರವು ಯಾವಾಗಲೂ ನನ್ನ ಬಾಯಿಯಲ್ಲಿ
ಇರುವದು.
೨ ಕರ್ತನಲ್ಲಿ ನನ್ನ ಪ್ರಾಣವು ಹೊಗಳಿ ಕೊಳ್ಳುವದು;
ದೀನರು ಕೇಳಿ, ಸಂತೋಷ ಪಡುವರು.
೩ ನನ್ನ ಸಂಗಡ ಕರ್ತನಿಗೆ ಮಹಿಮೆ ಕೊಡಿರಿ;
ಅವನ ಹೆಸರನ್ನು ಕೂಡ ಉನ್ನತ ಮಾಡುವ.
೪ ಕರ್ತನನ್ನು ಹುಡುಕಿದೆನು; ಆಗ ನನಗೆ ಉತ್ತರ ಕೊಟ್ಟು,
ನನ್ನ ಸಕಲ ಅಂಜಿಕೆಗಳಿಂದ ನನ್ನನ್ನು ಬಿಡಿಸಿದನು.
೫ ಅವನನ್ನು ದೃಷ್ಟಿಸಿ, ಪ್ರಕಾಶವಾದರು;
ಅವರ ಮುಖಗಳು ನಾಚಿಕೆ ಪಡಲಿಲ್ಲ.
೬ ಈ ದೀನನು ಕೂಗಿದನು; ಕರ್ತನು ಕೇಳಿ,
ಅವನ ಎಲ್ಲಾ ಇಕ್ಕಟ್ಟುಗಳೊಳಗಿಂದ ಅವನನ್ನು ರಕ್ಷಿಸಿದನು.
೭ ಕರ್ತನ ದೂತನು ಅವನಿಗೆ ಭಯ ಪಡುವವರ ಸುತ್ತಲು ಇಳಿ
ಕೊಳ್ಳುತ್ತಾ,
ಅವರನ್ನು ತಪ್ಪಿಸಿ ಬಿಡುತ್ತಾನೆ.

೮ ಕರ್ತನು ಒಳ್ಳೆಯವನು ಎಂದು, ಸವಿದು ನೋಡಿರಿ;
ಅವನಲ್ಲಿ ಆಶ್ರಯಿಸಿ ಕೊಳ್ಳುವ ಮನುಷ್ಯನು ಭಾಗ್ಯವಂತನು.
೯ ಕರ್ತನಿಗೆ ಭಯ ಪಡಿರಿ, ಅವನ ಪರಿಶುದ್ಧರೇ;
ಯಾಕಂದರೆ ಅವನಿಗೆ ಭಯ ಪಡುವವರಿಗೆ ಕೊರತೆ ಏನೂ
ಇಲ್ಲ.
೧೦ ಸಿಂಹಗಳು ಬಡವಾಗಿ, ಹಸಿಯುತ್ತವೆ;
ಆದರೆ ಕರ್ತನನ್ನು ಹುಡುಕುವವರು ಯಾವ ಒಳ್ಳೇದಕ್ಕಾದ
ರೂ ಕೊರತೆ ಪಡುವದಿಲ್ಲ.
೧೧ ಎಲೇ ಮಕ್ಕಳೇ, ನನ್ನನ್ನು ಕೇಳಿರಿ;
ಕರ್ತನ ಭಯವನ್ನು ನಿಮಗೆ ಕಲಿಸುವೆನು.
೧೨ ಒಳ್ಳೇದನ್ನು ನೋಡುವದಕ್ಕೆ ದಿವಸಗಳನ್ನು ಪ್ರೀತಿ ಮಾಡಿ,
ಜೀವವನ್ನು ಕೋರುವ ಮನುಷ್ಯನು ಯಾರು?
೧೩ ಕೇಡಾದದ ಹಾಗೆ, ನಿನ್ನ ನಾಲಿಗೆಯನ್ನೂ,
ಮೋಸ ನುಡಿಯದ ಹಾಗೆ, ನಿನ್ನ ತುಟಿಗಳನ್ನು ಕಾಯಿ.
೧೪ ಕೇಡಿನಿಂದ ತೊಲಗಿ, ಒಳ್ಳೇದನ್ನು ಮಾಡು;
ಸಮಾಧಾನವನ್ನು ಹುಡುಕಿ, ಅದನ್ನು ಹಿಂದಟ್ಟು.

೧೫ ಕರ್ತನ ಕಣ್ಣುಗಳು ನೀತಿವಂತರ ಮೇಲೆಯೂ,
ಅವನ ಕಿವಿಗಳು ಅವರ ಮೊರೆಯ ಕಡೆಗೂ, ಅವೆ.
೧೬ ಅವರ ಜ್ಞಾಪಕವನ್ನು ಭೂಮಿಯೊಳಗಿಂದ ಕಡಿದು
ಹಾಕುವದಕ್ಕೆ,
ಕರ್ತನ ಮುಖವು ಕೇಡನ್ನು ಮಾಡುವವರಿಗೆ ವಿರೋಧವಾಗಿದೆ.
೧೭ ಕೂಗುತ್ತಾರೆ; ಆಗ ಕರ್ತನು ಕೇಳಿ,
ಅವರ ಎಲ್ಲಾ ಇಕ್ಕಟ್ಟುಗಳೊಳಗಿಂದ ಅವರನ್ನು ಬಿಡಿಸುತ್ತಾನೆ.
೧೮ ಮುರಿದ ಹೃದಯದವರಿಗೆ ಕರ್ತನು ಸಮೀಪವಾಗಿದ್ದಾನೆ;
ಜಜ್ಜಿದ ಆತ್ಮನನ್ನು ರಕ್ಷಿಸುತ್ತಾನೆ.
೧೯ ನೀತಿವಂತನ ಕೇಡುಗಳು ಬಹಳವಾಗಿವೆ;
ಆದರೆ ಅವೆಲ್ಲವುಗಳೊಳಗಿಂದ ಕರ್ತನು ಅವನನ್ನು ಬಿಡಿ
ಸುತ್ತಾನೆ.
೨೦ ಅವನ ಎಲುಬುಗಳನ್ನೆಲ್ಲಾ ಕಾಪಾಡುತ್ತಾನೆ;
ಅವುಗಳಲ್ಲಿ ಒಂದಾದರೂ ಮುರಿಯಲ್ಪಡುವದಿಲ್ಲ.
೨೧ ಕೇಡು ದುಷ್ಟನನ್ನು ಕೊಲ್ಲುವದು;
ನೀತಿವಂತನನ್ನು ಹಗೆ ಮಾಡುವವರು ಅಪರಾಧಿಗಳಾಗುವರು.
೨೨ ಕರ್ತನು ತನ್ನ ಸೇವಕರ ಪ್ರಾಣವನ್ನು ವಿಮೋಚಿಸುತ್ತಾನೆ;
ಅವನನ್ನು ಆಶ್ರಯಿಸಿ ಕೊಳ್ಳುವವರೆಲ್ಲರು ಅಪರಾಧಿಗಳಾ
ಗುವದಿಲ್ಲ.



## ೩೫. ಕೀರ್ತನೆ.

ದಾವೀದನದು.

೧ ಕರ್ತನೇ, ನನ್ನ ಸಂಗಡ ವಿವಾದ ಮಾಡುವವರ ಸಂಗಡ
ವಿವಾದ ಮಾಡು;
ನನ್ನ ಸಂಗಡ ಯುದ್ಧ ಮಾಡುವವರ ಸಂಗಡ ಯುದ್ಧ ಮಾಡು.
೨ ಗುರಾಣಿಯನ್ನೂ ಖೇಡ್ಯವನ್ನೂ ಹಿಡಿ ಕೊಂಡು,
ನನ್ನ ಸಹಾಯಕ್ಕೆ ಏಳು.
೩ ಭಲ್ಲೆಯನ್ನು ಹಿಡಿದು,
ನನ್ನನ್ನು ಹಿಂದಟ್ಟುವವರಿಗೆ ಎದುರಾಗಿ ಅಡ್ಡ ಕಟ್ಟು;
ನಾನೇ ನಿನ್ನ ರಕ್ಷಣೆ ಎಂದು, ನನ್ನ ಪ್ರಾಣಕ್ಕೆ ಹೇಳು.
೪ ನನ್ನ ಪ್ರಾಣ ಹುಡುಕುವವರು ನಾಚಿಕೆ ಪಟ್ಟು, ಅವಮಾನವಾಗಲಿ;
ನನಗೆ ಕೇಡನ್ನು ಕಲ್ಪಿಸುವವರು ಹಿಂದಿರುಗಿ, ಲಜ್ಜೆ ಪಡಲಿ.
೫ ಅವರು ಗಾಳಿಯ ಮುಂದಿನ ಹೊಟ್ಟಿನ ಹಾಗೆ ಆಗಲಿ;
ಕರ್ತನ ದೂತನು ಅವರನ್ನು ನೂಕಲಿ.
೬ ಅವರ ಮಾರ್ಗವು ಕತ್ತಲೆಯೂ ಜಾರಿಕೆಯೂ ಆಗಲಿ;
ಕರ್ತನ ದೂತನು ಅವರನ್ನು ಹಿಂದಟ್ಟಲಿ.
೭ ಯಾಕಂದರೆ ಸುಮ್ಮನೆ ತಮ್ಮ ಬಲೆಯನ್ನು ಕೂಣಿಯಲ್ಲಿ ನನ
ಗೋಸ್ಕರ ಮರೆ ಮಾಡಿದ್ದಾರೆ;
ಸುಮ್ಮನೆ ನನ್ನ ಪ್ರಾಣಕ್ಕೋಸ್ಕರ ಅಗಿದಿದ್ದಾರೆ.
೮ ನಾಶವು ಅವನಿಗೆ ತಿಳಿಯದೆ ಬರಲಿ;
ಅವನು ಮರೆ ಮಾಡಿದ ಬಲೆಯು ಅವನನ್ನು ಹಿಡಿಯಲಿ;
ನಾಶನಕ್ಕಾಗಿ ಅದರಲ್ಲಿ ಬೀಳಲಿ.
೯ ಆದರೆ ನನ್ನ ಪ್ರಾಣವು ಕರ್ತನಲ್ಲಿ ಉಲ್ಲಾಸಿಸಿ,
ಅವನ ರಕ್ಷಣೆಯಲ್ಲಿ ಸಂತೋಷಿಸುವದು.
೧೦ ಕರ್ತನೇ, ದೀನನನ್ನು ಅವನಿಗಿಂತ ಬಲವಂತನ ಕೈಯೊಳ
ಗಿಂದಲೂ,
ದೀನನಾದ ಬಡವನನ್ನು ಅವನನ್ನು ಸುಲು ಕೊಳ್ಳುವವನ ಕೈ
ಯೊಳಗಿಂದಲೂ, ಬಿಡಿಸುವವನಾದ ನಿನ್ನ ಹಾಗೆ ಯಾರು?
ಎಂದು, ನನ್ನ ಎಲುವುಗಳೆಲ್ಲಾ ಹೇಳುವವು.
೧೧ ಬಲಾತ್ಕಾರವಾದ ಸಾಕ್ಷಿಗಳು ಎದ್ದು,
ನಾನು ತಿಳಿಯದ್ದು ನನ್ನನ್ನು ಕೇಳಿದರು.
೧೨ ಮೇಲಿಗೆ ಬದಲಾಗಿ ಕೇಡನ್ನು ನನಗೆ ಮಾಡಿದರು;
ನನ್ನ ಪ್ರಾಣಕ್ಕೆ ದಿಕ್ಕು ಇಲ್ಲ.
೧೩ ಆದರೆ ನಾನು ಅವರು ಅಸ್ವಸ್ಥವಾದಾಗ, ಗೋಣಿ ತಟ್ಟು
ಹೊದ್ದು ಕೊಂಡು,
ನನ್ನ ಪ್ರಾಣವನ್ನು ಉಪವಾಸದಿಂದ ಕುಂದಿಸಿದೆನು;
ನನ್ನ ಪ್ರಾರ್ಥನೆಯು ನನ್ನ ಎದೆಗೆ ತಿರಿಗಿತು.
೧೪ ಅವನು ನನಗೆ ಸ್ನೇಹಿತನೂ ಸಹೋದರನೂ ಆದ ಹಾಗೆ ನಡೆ
ದು ಕೊಂಡೆನು;
ತಾಯಿಗೆ ದುಃಖ ಪಡುವವನ ಹಾಗೆ ಮಲಿನವುಳ್ಳವನಾಗಿ ಬೊಗ್ಗಿ
ಕೊಂಡೆನು.
೧೫ ಮತ್ತು ನಾನು ಕುಂಟುವಾಗ ಸಂತೋಷ ಪಟ್ಟು, ಕೂಡಿ ಕೊಂ
ಡರು;
ನಾನರಿಯದ ದೂಷಕರು ನನ್ನ ಮೇಲೆ ಕೂಡಿ ಕೊಂಡರು;
ಸುಮ್ಮನಿರದೆ, ಹರು ಕೊಂಡರು.
೧೬ ದೋಷಕೋಸ್ಕರ ಗೇಲಿ ಮಾಡುವ ಭ್ರಷ್ಟರ ಸಂಗಡ ನನ್ನ ಮೇ
ಲೆ ತಮ್ಮ ಹಲ್ಲುಗಳನ್ನು ಕಡಿಯುತ್ತಾರೆ.
೧೭ ಕರ್ತನೇ, ಎಷ್ಟು ಪರ್ಯಂತರ ನೋಡುವಿ?
ಅವರ ನಾಶನಗಳಿಂದ ನನ್ನ ಪ್ರಾಣವನ್ನೂ,
ಎಳೇ ಸಿಂಹಗಳಿಂದ ನನ್ನ ಏಕವಾದದ್ದನ್ನೂ, ತಿರುಗಿಸು.
೧೮ ದೊಡ್ಡ ಕೂಟದಲ್ಲಿ ನಿನ್ನನ್ನು ಕೊಂಡಾಡುವೆನು;
ಪ್ರಬಲವಾದ ಜನರಲ್ಲಿ ನಿನ್ನನ್ನು ಸ್ತುತಿಸುವೆನು.
೧೯ ಸುಳ್ಳುಗಾರರಾದ ನನ್ನ ಶತ್ರುಗಳು ನನ್ನ ಮೇಲೆ ಸಂತೋಷ
ಪಡದೆ ಇರಲಿ;
ನನಗೆ ಸುಮ್ಮನೆ ಹಗೆ ಮಾಡುವವರು ಕಣ್ಣು ಸೂಚ್ಯೆ ಮಾಡದೆ
ಇರಲಿ.
೨೦ ಯಾಕಂದರೆ ಅಸಮಾಧಾನವಾಗಿ ಮಾತಾಡಿ,
ದೇಶದಲ್ಲಿರುವ ಶಾಂತರ ಮೇಲೆ ಮೋಸದ ವಾಕ್ಯಗಳನ್ನು
ಕಲ್ಪಿಸುತ್ತಾರೆ.
೨೧ ಮತ್ತು ತಮ್ಮ ಬಾಯಿಯನ್ನು ನನ್ನ ಮೇಲೆ ಅಗಲ ಮಾಡಿ,
ಆಹ, ಆಹ, ನಮ್ಮ ಕಣ್ಣು ನೋಡಿತು, ಅನ್ನುತ್ತಾರೆ.
೨೨ ಕರ್ತನೇ, ನೀನು ನೋಡಿದ್ದೀ;
ಕರ್ತನೇ, ಮೌನವಾಗಿರ ಬೇಡ; ನನಗೆ ದೂರವಾಗಿರ ಬೇಡ.
೨೩ ನನ್ನ ನ್ಯಾಯಕ್ಕೆ, ನನ್ನ ದೇವರಾದ ಕರ್ತನೇ
ನನ್ನ ವ್ಯಾಜ್ಯಕ್ಕೆ ಎದ್ದು, ಎಚ್ಚರವಾಗಿರು.
೨೪ ನನ್ನ ದೇವರಾದ ಕರ್ತನೇ, ನಿನ್ನ ನೀತಿಯ ಪ್ರಕಾರ ನನಗೆ
ನ್ಯಾಯ ತೀರಿಸು;
ಅವರು ನನ್ನ ಮೇಲೆ ಸಂತೋಷ ಪಡದೆ ಇರಲಿ.
೨೫ ಅವರು ತಮ್ಮ ಹೃದಯದಲ್ಲಿ—ಆಹ, ನಮ್ಮ ಇಷ್ಟವೇ, ಎಂದು
ಹೇಳದೆ ಇರಲಿ;
ಅವನನ್ನು ನುಂಗಿ ಬಿಟ್ಟೆವೆಂದು, ಅವರು ಹೇಳದೆ ಇರಲಿ.
೨೬ ನನ್ನ ಕೇಡಿನಲ್ಲಿ ಸಂತೋಷ ಪಡುವವರು
ಕೂಡ ನಾಚಿ ಕೊಂಡು, ಲಜ್ಜೆ ಪಡಲಿ;
ನನ್ನ ಮೇಲೆ ತಮ್ಮನ್ನು ಹೆಚ್ಚಿಸಿ ಕೊಳ್ಳುವವರು
ನಾಚಿಕೆಯನ್ನೂ ಅವಮಾನವನ್ನೂ ಹೊದ್ದು ಕೊಳ್ಳಲಿ.
೨೭ ನನ್ನ ನೀತಿಯಲ್ಲಿ ಸಂತೋಷ ಪಡುವವರು
ಉತ್ಸಾಹ ಧ್ವನಿ ಮಾಡಿ, ಆನಂದ ಪಡಲಿ;
ತನ್ನ ಸೇವಕನ ಸಮಾಧಾನದಲ್ಲಿ ಸಂತೋಷ ಪಡುವ
ಕರ್ತನು ಮಹಿಮೆ ಪಡಲಿ ಎಂದು, ಅವರು ಯಾವಾಗಲೂ
ಹೇಳಲಿ.
೨೮ ಆಗ ನನ್ನ ನಾಲಿಗೆಯು ನಿನ್ನ ನೀತಿಯನ್ನೂ,
ದಿನವೆಲ್ಲಾ ನಿನ್ನ ಸ್ತೋತ್ರವನ್ನೂ, ಉಚ್ಚರಿಸುವದು.

## ೩೬. ಕೀರ್ತನೆ.

ಗಾಯಕಾಧಿಕಾರಿಗೆ; ಕರ್ತನ ಸೇವಕನಾದ ದಾವೀದನದು.

೧ ನನ್ನ ಹೃದಯದೊಳಗೆ ದುಷ್ಟನ ದ್ರೋಹವು ಹೇಳುವದೇ
ನಂದರೆ—
ಅವನ ಕಣ್ಣುಗಳ ಮುಂದೆ ದೇವರ ಹೆದರಿಕೆ ಇಲ್ಲ.

೨ ಯಾಕಂದರೆ ಹುಗೆಗೆ ತಕ್ಕ ತನ್ನ ಅಕ್ರಮ ದೊರಕಿಸಿ ಕೊಳ್ಳುವ
ದನ್ನು ಕುರಿತು
ತನ್ನ ದೃಷ್ಟಿಯಲ್ಲಿ ತನ್ನನ್ನು ಹೊಗಳಿ ಕೊಳ್ಳುತ್ತಾನೆ.
೩ ಅವನ ಬಾಯಿಯ ಮಾತುಗಳು ಪಾತಕವೂ ಮೋಸವೂ ಆಗಿವೆ;
ಬುದ್ಧಿಯಿಂದ ನಡಿಯುವದನ್ನೂ, ಒಳ್ಳೇದು ಮಾಡುವದನ್ನೂ
ಬಿಟ್ಟಿದ್ದಾನೆ.
೪ ಪಾತಕವನ್ನು ತನ್ನ ಹಾಸಿಗೆಯ ಮೇಲೆ ಕಲ್ಪಿಸುತ್ತಾನೆ;
ಒಳ್ಳೇದಲ್ಲದ ಮಾರ್ಗದಲ್ಲಿ ನಿಂತು ಕೊಳ್ಳುತ್ತಾನೆ;
ಕೆಟ್ಟದ್ದನ್ನು ಅಸಂಹಿಸುವದಿಲ್ಲ.

೫ ಕರ್ತನೇ, ಆಕಾಶಗಳಲ್ಲಿ ನಿನ್ನ ಕೃಪೆಯು ಅದೆ;
ನಿನ್ನ ನಂಬಿಕೆಯು ಮೇಘಗಳ ಮಟ್ಟಿಗೂ ಅದೆ.
೬ ನಿನ್ನ ನೀತಿಯು ದೇವರ ಪರ್ವತಗಳ ಹಾಗಿದೆ;
ನಿನ್ನ ನ್ಯಾಯ ತೀರ್ಪುಗಳು ಮಹಾ ಅಗಾಧವೇ.
ಮನುಷ್ಯರನ್ನೂ ಮೃಗಗಳನ್ನೂ ಸಂರಕ್ಷಿಸುತ್ತೀ, ಕರ್ತನೇ.
೭ ದೇವರೇ, ನಿನ್ನ ಕೃಪೆಯು ಎಷ್ಟೋ ಅಮೂಲ್ಯವಾದದ್ದು!
ಮನುಷ್ಯನ ಮಕ್ಕಳು ನಿನ್ನ ರೆಕ್ಕೆಗಳ ನೆರಳನ್ನು ಆಶ್ರಯಿಸಿ
ಕೊಳ್ಳುತ್ತಾರೆ.
೮ ನಿನ್ನ ಮನೆಯ ಪರಿಪೂರ್ಣತೆಯಿಂದ ತೃಪ್ತಿಯಾಗುವರು;
ನಿನ್ನ ಸಂಭ್ರಮದ ನದಿಯಿಂದ ಅವರಿಗೆ ಕುಡಿಯ ಕೊಡುವಿ.
೯ ಯಾಕಂದರೆ ನಿನ್ನ ಬಳಿಯಲ್ಲಿ ಜೀವದ ಬುಗ್ಗೆ ಉಂಟು.
ನಿನ್ನ ಬೆಳಕಿನಿಂದ ಬೆಳಕನ್ನು ನೋಡುವೆವು.

೧೦ ನಿನ್ನನ್ನು ಶ್ರೀಮದವರಿಗೆ ನಿನ್ನ ಕೃಪೆಯನ್ನೂ,
ನೆಟ್ಟನೆಯ ಹೃದಯದವರಿಗೆ ನಿನ್ನ ನೀತಿಯನ್ನೂ ನೆಲೆಯಾಗಿರ
ಮಾಡು.
೧೧ ಗರ್ವದ ಪಾದ ನನ್ನ ಮೇಲೆ ಬಾರದೆ ಇರಲಿ;
ದುಷ್ಟರ ಕೈ ನನ್ನನ್ನು ಓಡಿಸದೆ ಇರಲಿ.
೧೨ ಅಲ್ಲಿ ಪಾತಕ ಮಾಡುವವರು ಬಿದ್ದಿದ್ದಾರೆ;
ಅವರು ನೂಕಲ್ಪಟ್ಟು, ಏಳಲಾರದೆ ಇದ್ದಾರೆ.

## ೩೭. ಕೀರ್ತನೆ.

ದಾವೀದನದು.

೧ ದುರ್ಮಾರ್ಗರಿಗೋಸ್ಕರ ಕೋಪವಾಗಿರ ಬೇಡ;
ಅನ್ಯಾಯ ಮಾಡುವವರ ಮೇಲೆ ಹೊಟ್ಟೇಕಿಚ್ಚು ಪಡ ಬೇಡ.
೨ ಯಾಕಂದರೆ ಹುಲ್ಲಿನ ಹಾಗೆ ಬೇಗ ಕೊಯ್ಯಲ್ಪಟ್ಟು,
ಹಸುರಾದ ಸೊಪ್ಪಿನ ಹಾಗೆ ಬಾಡಿ ಹೋಗುವರು.
೩ ಕರ್ತನಲ್ಲಿ ಭರವಸವಿಟ್ಟು, ಒಳ್ಳೇದನ್ನು ಮಾಡು;
ಆಗ ದೇಶದಲ್ಲಿ ವಾಸ ಮಾಡಿ, ನಿಜವಾಗಿ ಬಾಳುವಿ.
೪ ಕರ್ತನಲ್ಲಿ ಆನಂದವಾಗಿರು;
ಆಗ ನಿನ್ನ ಹೃದಯದ ಅಪೇಕ್ಷೆಗಳನ್ನು ನಿನಗೆ ಕೊಡುವನು.
೫ ನಿನ್ನ ಮಾರ್ಗವನ್ನು ಕರ್ತನ ಮೇಲೆ ಹೊರಳಿಸು;
ಅವನಲ್ಲಿ ಭರವಸವಿಡು; ಆಗಲವನು ನಡಿಸುವನು.
೬ ನಿನ್ನ ನೀತಿಯನ್ನು ಬೆಳಕಿನ ಹಾಗೆಯೂ,
ನಿನ್ನ ನ್ಯಾಯಗಳನ್ನು ಮಧ್ಯಾಹ್ನದ ಹಾಗೆಯೂ, ಹೊರಗೆ
ಬರ ಮಾಡುವನು.
೭ ಕರ್ತನಿಗಾಗಿ ಮೌನವಾಗಿರು; ಅವನನ್ನು ಎದುರು ನೋಡು;
ತನ್ನ ಮಾರ್ಗವನ್ನು ಸಫಲ ಮಾಡುವವನಿಗೋಸ್ಕರವೂ,
ಯುಕ್ತಿಗಳನ್ನು ನಡಿಸುವ ಮನುಷ್ಯನಿಗೋಸ್ಕರವೂ, ಕೋಪ
ವಾಗಿರ ಬೇಡ.
೮ ಕೋಪವನ್ನು ನಿಲ್ಲಿಸು; ಉರಿಯನ್ನು ಬಿಡು;
ಹ್ಯಾಗಾದರೂ ಕೇಡು ಮಾಡದ ಹಾಗೆ ಕೋಪವಾಗಿರ ಬೇಡ.
೯ ಯಾಕಂದರೆ ದುರ್ಮಾರ್ಗರು ಕಡಿದು ಹಾಕಲ್ಪಡುವರು;
ಕರ್ತನನ್ನು ನಿರೀಕ್ಷಿಸುವವರೇ ಭೂಮಿಯನ್ನು ಸ್ವತಂತ್ರಿಸಿ
ಕೊಳ್ಳುವರು.
೧೦ ಇನ್ನು ಸ್ವಲ್ಪ ವೇಳೆಯಲ್ಲಿ ದುಷ್ಟನು ಇರನು;
ಅವನ ಸ್ಥಳವನ್ನು ವಿಚಾರಿಸಿದರೆ, ಇಗೋ, ಅದು ಇಲ್ಲ.
೧೧ ಆದರೆ ದೀನರು ಭೂಮಿಯನ್ನು ಸ್ವತಂತ್ರಿಸಿ ಕೊಂಡು,
ಬಹಳ ಸಮಾಧಾನದಲ್ಲಿ ಆನಂದ ಪಡುವರು.

೧೨ ದುಷ್ಟನು ನೀತಿವಂತನಿಗೆ ಹೊಂಚಿ,
ಅವನ ಮೇಲೆ ತನ್ನ ಹಲ್ಲುಗಳನ್ನು ಕಡಿಯುತ್ತಾನೆ.
೧೩ ಕರ್ತನು ಅವನಿಗೆ ನಗುತ್ತಾನೆ;
ಯಾಕಂದರೆ ಅವನ ದಿವಸ ಬರುತ್ತದೆಂದು ನೋಡಿದ್ದಾನೆ.
೧೪ ದುಷ್ಟರು ದೀನನನ್ನೂ ಬಡವನನ್ನೂ ಬೀಳ್ಳ ಮಾಡುವದಕ್ಕೂ,
ಸನ್ಮಾರ್ಗದವರನ್ನು ಕೊಲ್ಲುವದಕ್ಕೂ,
ಕತ್ತಿಯನ್ನು ಕಿತ್ತು, ತಮ್ಮ ಬಿಲ್ಲನ್ನು ಬೊಗ್ಗಿಸಿದ್ದಾರೆ.
೧೫ ಅವರ ಕತ್ತಿಯು ಅವರ ಹೃದಯದಲ್ಲಿ ಹೊಗುವದು;
ಅವರ ಬಿಲ್ಲುಗಳು ಮುರಿದು ಹೋಗುವವು.

೧೬ ನೀತಿವಂತನ ಸ್ವಲ್ಪವಾದದ್ದು
ಅನೇಕ ದುಷ್ಟರ ಬಾಹುಳ್ಯಕ್ಕಿಂತ ಒಳ್ಳೇದಾಗಿದೆ.
೧೭ ಯಾಕಂದರೆ ದುಷ್ಟರ ತೋಳುಗಳು ಮುರಿದು ಹೋಗುವವು;
ಆದರೆ ನೀತಿವಂತರನ್ನು ಕರ್ತನು ಉದ್ಧಾರ ಮಾಡುತ್ತಾನೆ.

೧೮ ಕರ್ತನು ಸಂಪೂರ್ಣರ ದಿವಸಗಳನ್ನು ಅರಿತಿದ್ದಾನೆ;
ಅವರ ಬಾಧ್ಯತೆಯು ಯುಗ ಯುಗಕ್ಕೂ ಇರುವದು.
೧೯ ದುಷ್ಕಾಲದಲ್ಲಿ ಅವರು ನಾಚಿಕೆ ಪಡುವದಿಲ್ಲ;
ಕ್ಷಾಮದ ದಿವಸಗಳಲ್ಲಿ ತೃಪ್ತಿ ಪಡುವರು.
೨೦ ಯಾಕಂದರೆ ದುಷ್ಟರು ನಾಶವಾಗುವರು;
ಕರ್ತನ ಶತ್ರುಗಳು ಕುರಿ ಮರಿಗಳ ಕೊಬ್ಬಿನ ಹಾಗೆ ಇರುವರು;
ಕಳೆದು ಹೋಗುವರು; ಹೊಗೆಯಾಗಿ ಕಳೆದು ಹೋಗುವರು.
೨೧ ದುಷ್ಟನು ಸಾಲ ಮಾಡಿ, ಸಲ್ಲಿಸುವದಿಲ್ಲ;
ನೀತಿವಂತನು ದಯಾಳನಾಗಿ ಕೊಡುತ್ತಾನೆ.
೨೨ ಯಾಕಂದರೆ ಅವನು ಆಶೀರ್ವದಿಸಿದವರು ಭೂಮಿಯನ್ನು
ಸ್ವತಂತ್ರಿಸಿ ಕೊಳ್ಳುವರು;
ಅವನು ಶಪಿಸಿದವರು ಕಡಿದು ಹಾಕಲ್ಪಡುವರು.
೨೩ ಕರ್ತನಿಂದ ಮನುಷ್ಯನ ನಡತೆಗಳು ದೃಢವಾಗುತ್ತವೆ;
ಅವನ ಮಾರ್ಗದಲ್ಲಿ ಸಂತೋಷ ಪಡುತ್ತಾನೆ.
೨೪ ಅವನು ಬಿದ್ದರೆ, ಕೆಡವಲ್ಪಡುವದಿಲ್ಲ;



ಯಾಕಂದರೆ ಕರ್ತನು ತನ್ನ ಕೈಯಿಂದ ಉದ್ಧಾರ ಮಾಡು
ತ್ತಾನೆ.
೨೫ ಹುಡುಗನಾಗಿದ್ದೆನು, ಮುದುಕನಾಗಿದ್ದೇನೆ;
ಆದರೆ ನೀತಿವಂತನು ಬಿಡಲ್ಪಟ್ಟಿದ್ದನ್ನೂ,
ಅವನ ಬೀಜವು ಕೊಟ್ಟಿ ಹುಡುಕುವದನ್ನೂ, ನೋಡಲಿಲ್ಲ.
೨೬ ದಿನವೆಲ್ಲಾ ದಯಾಳನಾಗಿ ಸಾಲ ಕೊಡುತ್ತಾನೆ;
ಅವನ ಬೀಜವು ಆಶೀರ್ವಾದಕ್ಕಾಗಿರುವದು.

೨೭ ಕೇಡಿನಿಂದ ತೊಲಗಿ, ಒಳ್ಳೇದನ್ನು ಮಾಡಿ,
ಯುಗ ಯುಗಕ್ಕೂ ವಾಸ ಮಾಡು.
೨೮ ಯಾಕಂದರೆ ಕರ್ತನು ನ್ಯಾಯವನ್ನು ಪ್ರೀತಿ ಮಾಡುತ್ತಾನೆ;
ತನ್ನ ಭಕ್ತರನ್ನು ಬಿಡನು;
ಅವರು ಯುಗ ಯುಗಕ್ಕೂ ಕಾಪಾಡಲ್ಪಡುವರು;
ಆದರೆ ದುಷ್ಟರ ಬೀಜವು ಕಡಿದು ಹಾಕಲ್ಪಡುವದು.
೨೯ ನೀತಿವಂತರು ಭೂಮಿಯನ್ನು ಸ್ವತಂತ್ರಿಸಿ ಕೊಂಡು,
ಎಂದೆಂದಿಗೂ ಅದರಲ್ಲಿ ವಾಸವಾಗಿರುವರು.

೩೦ ನೀತಿವಂತನ ಬಾಯಿ ಜ್ಞಾನವನ್ನು ಉಚ್ಚರಿಸುವದು;
ಅವನ ನಾಲಿಗೆ ನ್ಯಾಯವನ್ನು ನುಡಿಯುವದು.
೩೧ ಅವನ ದೇವರ ನ್ಯಾಯಪ್ರಮಾಣವು ಅವನ ಹೃದಯದಲ್ಲಿ ಅದೆ;
ಅವನ ನಡೆಗಳು ಕದಲುವದಿಲ್ಲ.
೩೨ ದುಷ್ಟನು ನೀತಿವಂತನಿಗೆ ಹೊಂಚಿ,
ಅವನನ್ನು ಕೊಲ್ಲ ಹುಡುಕುತ್ತಾನೆ.
೩೩ ಕರ್ತನು ಅವನನ್ನು ಅವನ ಕೈಯಲ್ಲಿ ಬಿಡುವದಿಲ್ಲ;
ಅವನ ನ್ಯಾಯ ವಿಚಾರಿಸುವಾಗ, ಅವನನ್ನು ದುಷ್ಟನೆಂದು
ತೀರಿಸುವದಿಲ್ಲ.
೩೪ ಕರ್ತನನ್ನು ನಿರೀಕ್ಷಿಸು, ಅವನ ಮಾರ್ಗವನ್ನು ಕೈಕೊಳ್ಳು;
ಆಗ ಭೂಮಿಯನ್ನು ಸ್ವತಂತ್ರಿಸಿ ಕೊಳ್ಳುವ ಹಾಗೆ ನಿನ್ನನ್ನು
ಎತ್ತುವನು;
ಮತ್ತು ದುಷ್ಟರು ಕಡಿದು ಹಾಕಲ್ಪಡುವಾಗ, ನೋಡುವಿ.
೩೫ ಬಲಿಷ್ಠನಾದ ದುಷ್ಟನನ್ನು
ಮೊಳೆತಲ್ಲಿಯೇ ಹಸುರಾಗಿ, ವಿಸ್ತರಿಸಿ ಕೊಂಡ ಮರದ ಹಾಗೆ
ನೋಡಿದೆನು.
೩೬ ಆದರೆ ಕಳೆದು ಹೋದನು; ಇಗೋ, ಅವನು ಇಲ್ಲ;
ಅವನನ್ನು ಹುಡುಕಿದೆನು; ಆದರೆ ಶಿಕ್ಕಲಿಲ್ಲ.
೩೭ ಸಂಪೂರ್ಣನ ಮೇಲೆ ಕಣ್ಣಿಡು; ನೆಟ್ಟನೆಯವನನ್ನು ನೋಡು;
ಯಾಕಂದರೆ ಸಮಾಧಾನದ ಮನುಷ್ಯನಿಗೆ ಗತಿ ಉಂಟು.
೩೮ ದ್ರೋಹಿಗಳು ಏಕವಾಗಿ ನಾಶವಾಗುವರು;
ದುಷ್ಟರ ಗತಿ ಕಡಿದು ಹಾಕಲ್ಪಡುವದು.
೩೯ ನೀತಿವಂತರ ರಕ್ಷಣೆಯು ಕರ್ತನಿಂದಲೇ;
ಇಕ್ಕಟ್ಟಿನ ಕಾಲದಲ್ಲಿ ಅವರ ಬಲಸ್ಥಾನವು ಅವನೇ.
೪೦ ಕರ್ತನು ಅವರಿಗೆ ಸಹಾಯ ಮಾಡಿ, ಅವರನ್ನು ತಪ್ಪಿಸುವನು;
ದುಷ್ಟರಿಂದ ಅವರನ್ನು ತಪ್ಪಿಸಿ, ಅವರನ್ನು ರಕ್ಷಿಸುವನು;
ಯಾಕಂದರೆ ಅವನನ್ನು ಆಶ್ರಯಿಸಿ ಕೊಂಡಿದ್ದಾರೆ.

## ೩೮. ಕೀರ್ತನೆ.

ದಾವೀದನ ಗೀತವು; ಜ್ಞಾಪಕಾರ್ಥವಾದದ್ದು.

೧ ಕರ್ತನೇ, ನಿನ್ನ ಕೌದ್ರದಿಂದ ನನ್ನನ್ನು ಗದರಿಸ ಬೇಡ;
ನಿನ್ನ ಉರಿಯಿಂದ ನನ್ನನ್ನು ಶಿಕ್ಷಿಸ ಬೇಡ.
೨ ಯಾಕಂದರೆ ನಿನ್ನ ಬಾಣಗಳು ನನ್ನಲ್ಲಿ ನೆಟ್ಟು ಕೊಂಡವೆ;
ನಿನ್ನ ಕೈ ನನ್ನ ಮೇಲೆ ಬಿದ್ದದೆ.
೩ ನಿನ್ನ ಕೋಪದ ನಿಮಿತ್ತ ನನ್ನ ಮಾಂಸದಲ್ಲಿ ವಾಸಿಯಾದದ್ದು
ಏನೂ ಇಲ್ಲ;
ನನ್ನ ಪಾಪದ ನಿಮಿತ್ತ ನನ್ನ ಎಲುವುಗಳಲ್ಲಿ ಸಮಾಧಾನವು
ಏನೂ ಇಲ್ಲ.
೪ ಯಾಕಂದರೆ ನನ್ನ ಅಕ್ರಮಗಳು ನನ್ನ ತಲೆಯ ಮೇಲೆ ಏರಿ
ಹೋಗಿವೆ;
ಭಾರವಾದ ಹೊರೆಯ ಹಾಗೆ ನನಗೆ ಬಿಗಿದ ಭಾರವಾಗಿವೆ.
೫ ನನ್ನ ಬಾಸುಂಡೆಗಳು ನನ್ನ ಮೂಢತ್ವದ ನಿಮಿತ್ತ ನಾರುತ್ತಾ,
ಕೀವು ತುಂಬಿ ಅವೆ.
೬ ಕುಗ್ಗಿದ್ದೇನೆ, ಬಹಳವಾಗಿ ಬೊಗ್ಗಿದ್ದೇನೆ;
ದಿನವೆಲ್ಲಾ ಮಲಿನವುಳ್ಳವನಾಗಿ ತಿರುಗಾಡುತ್ತೇನೆ.
೭ ಯಾಕಂದರೆ ನನ್ನ ನಡುವು ಉರಿಯಿಂದ ತುಂಬಿ ಅದೆ;
ನನ್ನ ಮಾಂಸದಲ್ಲಿ ವಾಸಿಯಾದದ್ದು ಏನೂ ಇಲ್ಲ.
೮ ಸವೆದು ಹೋಗಿದ್ದೇನೆ, ಬಹಳವಾಗಿ ಜಜ್ಜಲ್ಪಟ್ಟಿದ್ದೇನೆ;
ನನ್ನ ಹೃದಯದ ನರಳುವಿಕೆಯಿಂದ ಗರ್ಜಿಸುತ್ತೇನೆ.
೯ ಕರ್ತನೇ, ನಿನ್ನ ಮುಂದೆ ನನ್ನ ಆಶೆಯೆಲ್ಲಾ ಅದೆ;
ನನ್ನ ನಿಟ್ಟುಸುರು ನಿನಗೆ ಮರೆಯಾದದ್ದಲ್ಲ.
೧೦ ನನ್ನ ಹೃದಯವು ಬಡಿದು ಕೊಳ್ಳುತ್ತದೆ; ನನ್ನ ಶಕ್ತಿಯು
ನನ್ನನ್ನು ಬಿಟ್ಟು ಹೋಗಿದೆ;
ನನ್ನ ಕಣ್ಣುಗಳ ಬೆಳಕು ಸಹ ನನ್ನಲ್ಲಿ ಇಲ್ಲ.

೧೧ ನನ್ನ ಪ್ರಿಯರೂ, ನನ್ನ ಸ್ನೇಹಿತರೂ ನನ್ನ ಬಾಧೆಗೆ
ವಾಕೆಯಾಗಿ ನಿಲ್ಲುತ್ತಾರೆ;
ನನ್ನ ನೆರೆಯವರು ದೂರದಲ್ಲಿ ನಿಂತಿದ್ದಾರೆ.
೧೨ ನನ್ನ ಪ್ರಾಣವನ್ನು ಹುಡುಕುವವರು ಬಲೆ ಒಡ್ಡುತ್ತಾರೆ;
ನನ್ನ ಕೇಡನ್ನು ಅರಸುವವರು ನಷ್ಟವಾದವುಗಳನ್ನು ಆಡುತ್ತಾರೆ;
ದಿನವೆಲ್ಲಾ ಮೋಸಗಳನ್ನು ಧ್ಯಾನಿಸುತ್ತಾರೆ.
೧೩ ಆದರೆ ನಾನು ಕಿವಿಡನ ಹಾಗೆ ಕೇಳುವದಿಲ್ಲ;
ತನ್ನ ಬಾಯಿ ತೆರೆಯದ ಮೂಗನ ಹಾಗಿದ್ದೇನೆ.
೧೪ ಕೇಳದಂಥ, ಬಾಯಿಯಲ್ಲಿ ಗದರಿಕೆ ಇಲ್ಲದಂಥ ಮನುಷ್ಯನ
ಹಾಗಿದ್ದೇನೆ.
೧೫ ಯಾಕಂದರೆ, ಕರ್ತನೇ, ನಿನ್ನನ್ನು ಎದುರು ನೋಡುತ್ತೇನೆ;
ನನ್ನ ದೇವರಾದ ಕರ್ತನೇ, ನೀನು ಉತ್ತರ ಕೊಡುವಿ.
೧೬ ಯಾಕಂದರೆ ಅವರು ನನಗೋಸ್ಕರ ಸಂತೋಷ ಪಡದೆ ಇರಲಿ,
ಅಂದು ಕೊಂಡೆನು;
ನನ್ನ ಪಾದ ಕದಲುವಾಗ, ನನಗೆ ವಿರೋಧವಾಗಿ ತಮ್ಮನ್ನು
ಹೆಚ್ಚಿಸಿ ಕೊಳ್ಳುತ್ತಾರೆ.

೧೭ ಯಾಕಂದರೆ ನಾನು ಕುಂಟುವದಕ್ಕೆ ಸಿದ್ಧವಾಗಿದ್ದೇನೆ;
ನನ್ನ ವ್ಯಸನವು ಯಾವಾಗಲೂ ನನ್ನ ಮುಂದೆ ಅದೆ.
೧೮ ಯಾಕಂದರೆ ನನ್ನ ಅಕ್ರಮವನ್ನು ಶಿಳ್ಳಿಸುವೆನು;
ನನ್ನ ಪಾಪಕ್ಕೋಸ್ಕರ ಚಿಂತೆ ಪಡುವೆನು.
೧೯ ಆದರೆ ನನ್ನ ಶತ್ರುಗಳು ಜೀವಿತರಾಗಿ ಬಲವಾಗಿದ್ದಾರೆ;
ನನ್ನನ್ನು ಸುಮ್ಮನೆ ಹಗೆ ಮಾಡುವವರು ಹೆಚ್ಚಿದ್ದಾರೆ.
೨೦ ಒಳ್ಳೇದಕ್ಕೆ ಬದಲಾಗಿ ಕೇಡನ್ನು ಸಲ್ಲಿಸುವವರು,
ನಾನು ಒಳ್ಳೇದನ್ನು ಹಿಂದಟ್ಟುವ ಕಾರಣ, ನನ್ನನ್ನು ಎದುರಿಸುತ್ತಾರೆ.
೨೧ ಕರ್ತನೇ, ನನ್ನನ್ನು ಬಿಡ ಬೇಡ;
ನನ್ನ ದೇವರೇ, ನನಗೆ ದೂರವಾಗಿರ ಬೇಡ.
೨೨ ನನ್ನ ರಕ್ಷಣೆಯಾಗಿರುವ ಕರ್ತನೇ,
ನನ್ನ ಸಹಾಯಕ್ಕೆ ಬೇಗ ಬಾ.

## ೩೯. ಕೀರ್ತನೆ.

ಗಾಯಕಾಧಿಕಾರಿಯಾದ ಯೆದುತೂನನಿಗೆ; ದಾವೀದನ ಗೀತವು.

೧ ನನ್ನ ನಾಲಿಗೆಯಿಂದ ಪಾಪ ಮಾಡದ ಹಾಗೆ,
ನನ್ನ ಮಾರ್ಗಗಳನ್ನು ಕಾಪಾಡಿ ಕೊಳ್ಳುವೆನೆಂದೂ,
ದುಷ್ಟನು ಇನ್ನು ನನ್ನ ಮುಂದೆ ಇರುವಾಗ,
ನನ್ನ ಬಾಯಿಗೆ ಚೆಕ್ಕ ಇಟ್ಟು ಕೊಳ್ಳುವೆನೆಂದೂ, ಹೇಳಿದೆನು.
೨ ಮೌನದಿಂದ ಮೂಗನಾದೆನು;
ಒಳ್ಳೇದನ್ನಾದರೂ ಆಡದೆ, ಸುಮ್ಮನಿದ್ದೆನು;
ಆದರೆ ನನ್ನ ವ್ಯಥೆಯು ಕಲಕಿತು.
3 ನನ್ನ ಹೃದಯವು ನನ್ನ ಎದೆಯಲ್ಲಿ ಕಾಯಿತು;
ನನ್ನ ಧ್ಯಾನದಲ್ಲಿ ಬೆಂಕಿ ಉರಿಯಿತು;
ನನ್ನ ನಾಲಿಗೆಯಿಂದ ಮಾತಾಡಿದೆನು.
೪ ಕರ್ತನೇ, ನಾನು ಎದ್ದು ಅಸ್ಥಿರನೆಂದು ತಿಳಿಯುವ ಹಾಗೆ,
ನನ್ನ ಅಂತ್ಯವನ್ನೂ,
ನನ್ನ ದಿವಸಗಳ ಅಳತೆ ಇಷ್ಟೆಂಬುವದನ್ನೂ, ನನಗೆ ತಿಳಿಸು.
೫ ಇಗೋ, ನನ್ನ ದಿವಸಗಳನ್ನು ಗೇಣುದ್ದವಾಗಿ ಕೊಟ್ಟಿದ್ದೀ;
ನನ್ನ ಆಯುಸ್ಸು ನಿನ್ನ ಮುಂದೆ ಏನೂ ಇಲ್ಲದ ಹಾಗಿದೆ;
ನಿಶ್ಚಯವಾಗಿ ಸ್ಥಿರವಾಗಿರುವ ಪ್ರತಿ ಮನುಷ್ಯನು ಶುದ್ಧ ಮಾಯವೇ. ಸೇಲಾ.
೬ ನಿಶ್ಚಯವಾಗಿ ಮನುಷ್ಯನು ಚಿತ್ತಾರದ ರೂಪವಾಗಿದ್ದು, ನಡೆದುಕೊಳ್ಳುತ್ತಾನೆ;
ನಿಶ್ಚಯವಾಗಿ ಮಾಯದ ಗದ್ದಲ ಮಾಡುತ್ತಾರೆ;
ಕುಪ್ಪೆ ಮಾಡುತ್ತಾನೆ; ಆದರೆ ಅದನ್ನು ಕೂಡಿಸುವವರು ಯಾರೋ, ಅರಿಯೆನು.
೭ ಹೀಗಿರಲಾಗಿ ನಾನು ನಿರೀಕ್ಷಿಸುವದೇನು?
ಕರ್ತನೇ, ನನ್ನ ನಿರೀಕ್ಷೆ ನಿನ್ನಲ್ಲಿ ಅದೆ.
೮ ನನ್ನ ಎಲ್ಲಾ ದ್ರೋಹಗಳಿಂದ ನನ್ನನ್ನು ಬಿಡಿಸು;
ಬುದ್ಧಿ ಹೀನನ ನಿಂದೆಗೆ ನನ್ನನ್ನು ಗುರಿ ಮಾಡ ಬೇಡ.
೯ ಮೌನವಾದೆನು, ನನ್ನ ಬಾಯಿ ತೆರೆಯಲಿಲ್ಲ;
ಯಾಕಂದರೆ ನೀನು ಅದನ್ನು ಮಾಡಿದಿ.
೧೦ ನನ್ನ ಮೇಲಿರುವ ನಿನ್ನ ಬಾಧೆಯನ್ನು ತೊಲಗಿಸು;
ನಿನ್ನ ಕೈಯ ಜಗಳದಿಂದ ನಾನು ತೀರಿ ಹೋಗುತ್ತೇನೆ.
೧೧ ಅಕ್ರಮಕ್ಕೋಸ್ಕರ ಗದರಿಕೆಗಳಿಂದ ನೀನು ಮನುಷ್ಯನನ್ನು ಶಿಕ್ಷಿಸಿದರೆ,
ಅವನಿಗೆ ಇಷ್ಟವಾದದ್ದನ್ನು ನಸಿಯ ಹಾಗೆ ಕರಗಿಸುತ್ತೀ;
ನಿಶ್ಚಯವಾಗಿ ಪ್ರತಿ ಮನುಷ್ಯನು ಮಾಯವೇ. ಸೇಲಾ.
೧೨ ಕರ್ತನೇ, ನನ್ನ ಪ್ರಾರ್ಥನೆಯನ್ನು ಕೇಳು;
ನನ್ನ ಮೊರೆಗೆ ಕಿವಿಗೊಡು;
ನನ್ನ ಕಣ್ಣೀರಿಗೆ ಮೌನವಾಗಿರ ಬೇಡ.
ಯಾಕಂದರೆ ನಾನು ನಿನ್ನ ಸನ್ನಿಧಿಯಲ್ಲಿ ಪರದೇಶಸ್ಥನು;
ನನ್ನ ತಂದೆಗಳೆಲ್ಲರ ಹಾಗೆ ಪರವಾಸ ಮಾಡುತ್ತೇನೆ.
೧3 ನನ್ನಿಂದ ನಿನ್ನ ದೃಷ್ಟಿ ತಿರುಗಿಸು;
ಆಗ ನಾನು ಹೋಗಿ ಬಿಟ್ಟು, ಇಲ್ಲದೆ ಹೋಗುವದಕ್ಕಿಂತ ಮುಂಚೆ ಮುಖ ಪ್ರಕಾಶವನ್ನು ಹೊಂದುವೆನು.

## ೪೦. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ಕರ್ತನನ್ನು ನಿರೀಕ್ಷಿಸೇ ನಿರೀಕ್ಷಿಸಿದೆನು;
ಆಗ ನನ್ನ ಕಡೆಗೆ ಬೊಗ್ಗಿ, ನನ್ನ ಮೊರೆಯನ್ನು ಕೇಳಿದನು.
೨ ನನ್ನನ್ನು ನಾಶನದ ಕುಣಿಯಿಂದಲೂ
ಬುರುದೆ ಕೆಸರಿನಿಂದಲೂ ಎತ್ತಿ,
ನನ್ನ ಪಾದಗಳನ್ನು ಬಂಡೆಯ ಮೇಲೆ ನಿಲ್ಲಿಸಿ,
ನನ್ನ ನಡೆಗಳನ್ನು ಸ್ಥಿರ ಪಡಿಸಿದನು.
3 ಮತ್ತು ನನ್ನ ಬಾಯಿಯಲ್ಲಿ ಹೊಸ ಹಾಡನ್ನೂ
ದೇವರಿಗಾಗುವ ಸ್ತೋತ್ರವನ್ನೂ ಕೊಟ್ಟನು;
ಅನೇಕರು ನೋಡಿ, ಭಯ ಪಟ್ಟು, ಕರ್ತನಲ್ಲಿ ಭರವಸ ಇಡುವರು.
೪ ಕರ್ತನನ್ನು ತನಗೆ ಭರವಸ ಮಾಡಿ ಕೊಂಡು,
ಅಹಂಕಾರಿಗಳ ಕಡೆಗೂ ಸುಳ್ಳಿಗೆ ಹೋಗುವವರ ಕಡೆಗೂ ತಿರುಗಿ ಕೊಳ್ಳದ ಮನುಷ್ಯನು ಭಾಗ್ಯವಂತನು.
೫ ನನ್ನ ದೇವರಾದ ಕರ್ತನೇ, ನೀನು ನಿನ್ನ ಅದ್ಭುತಗಳನ್ನೂ,
ನಮ್ಮ ಕಡೆಗಾಗಿರುವ ನಿನ್ನ ಯೋಚನೆಗಳನ್ನೂ, ಬಹಳ ಮಾಡಿದಿ;
ನಿನಗೆ ವಿವರಿಸಲಾಗದು;
ಅವುಗಳನ್ನು ನಾನು ತಿಳಿಸಿ ಹೇಳ ಬೇಕಾದರೆ, ಎಣಿಸುವದಕ್ಕಿಂತ ಪ್ರಬಲವಾಗಿವೆ.
೬ ಬಲಿಯಲ್ಲಿಯೂ, ಅರ್ಪಣೆಯಲ್ಲಿಯೂ, ನೀನು ಸಂತೋಷ ಪಡಲಿಲ್ಲ;
ನನ್ನ ಕಿವಿಗಳನ್ನು ಚುಚ್ಚಿದಿ;
ಹೋಮವನ್ನೂ ಪಾಪದ ಬಲಿಯನ್ನೂ ನೀನು ಕೇಳಲಿಲ್ಲ.
೭ ಆಗ ನಾನು ಹೇಳಿದೆನು; ಇಗೋ, ಬರುತ್ತೇನೆ;
ಪುಸ್ತಕದ ಸುರಳಿಯಲ್ಲಿ ನನ್ನನ್ನು ಕುರಿತು ಬರೆದದೆ.



೮ ನನ್ನ ದೇವರೇ, ನಿನಗೆ ಮೆಚ್ಚಿಕೆಯಾದದ್ದನ್ನು ಮಾಡ ಸಂತೋಷಿಸುತ್ತೇನೆ;
ನಿನ್ನ ನ್ಯಾಯಪ್ರಮಾಣವು ನನ್ನ ಅಂತರಂಗದಲ್ಲಿ ಅದೆ.
೯ ನೀತಿಯನ್ನು ದೊಡ್ಡ ಕೂಟದಲ್ಲಿ ಸಾರಿದೆನು;
ಇಗೋ, ನನ್ನ ತುಟಿಗಳಿಗೆ ಅಡ್ಡಿ ಮಾಡುವದಿಲ್ಲ; ಕರ್ತನೇ, ನೀನು ತಿಳಿದಿದ್ದೀ.
೧೦ ನಿನ್ನ ನೀತಿಯನ್ನು ನನ್ನ ಹೃದಯದ ಮಧ್ಯದಲ್ಲಿ ಮುಚ್ಚಿ ಕೊಳ್ಳಲಿಲ್ಲ;
ನಿನ್ನ ನಂಬಿಕೆಯನ್ನೂ ನಿನ್ನ ರಕ್ಷಣೆಯನ್ನೂ ಹೇಳಿದ್ದೇನೆ;
ನಿನ್ನ ಕೃಪೆಯನ್ನೂ ಸತ್ಯವನ್ನೂ ದೊಡ್ಡ ಕೂಟಕ್ಕೆ ನಾನು ಅಡಗಿಸಲಿಲ್ಲ.
೧೧ ನೀನು, ಕರ್ತನೇ, ನಿನ್ನ ಅಂತಃಕರಣಗಳನ್ನು ನನಗೆ ಅಡ್ಡಿ ಮಾಡ ಬೇಡ;
ನಿನ್ನ ಕೃಪೆಯೂ ನಿನ್ನ ಸತ್ಯವೂ ಯಾವಾಗಲೂ ನನ್ನನ್ನು ಕಾಯಲಿ.
೧೨ ಯಾಕಂದರೆ ಲೆಖ್ಖವಿಲ್ಲದಷ್ಟು ಕೇಡುಗಳು ನನ್ನನ್ನು ಆವರಿಸಿ ಕೊಂಡವೆ;
ನನ್ನ ಅಕ್ರಮಗಳು ನನ್ನನ್ನು ಹಿಡಿದವೆ, ನಾನು ನೋಡಲಾರೆನು;
ಅವು ನನ್ನ ತಲೆಯ ಕೂದಲುಗಳಿಗಿಂತ ಪ್ರಬಲವಾಗಿವೆ;
ನನ್ನ ಹೃದಯವು ನನ್ನನ್ನು ಬಿಟ್ಟು ಹೋಯಿತು.
೧3 ಕರ್ತನೇ, ನನ್ನನ್ನು ಬಿಡಿಸುವದಕ್ಕೆ ಇಷ್ಟ ಪಡು;
ಕರ್ತನೇ, ನನ್ನ ಸಹಾಯಕ್ಕೆ ಬೇಗ ಬಾ.
೧೪ ನನ್ನ ಪ್ರಾಣವನ್ನು ತೆಗೆಯುವದಕ್ಕೆ ಅದನ್ನು ಹುಡುಕುವವರು ಕೂಡ ನಾಚಿ ಕೊಂಡು, ಲಜ್ಜೆ ಪಡಲಿ;
ನನ್ನ ಕೇಡಿನಲ್ಲಿ ಸಂತೋಷ ಪಡುವವರು ಹಿಂದಿರುಗಿ, ಅವಮಾನವಾಗಲಿ.
೧೫ ಆಹ, ಆಹ, ಎಂದು, ನನಗೆ ಹೇಳುವವರು
ತಮ್ಮ ನಾಚಿಕೆಯ ಫಲಕ್ಕಾಗಿ ಹಾಳಾಗಲಿ.
೧೬ ನಿನ್ನನ್ನು ಹುಡುಕುವವರೆಲ್ಲರು ನಿನ್ನಲ್ಲಿ ಆನಂದ ಪಟ್ಟು, ಸಂತೋಷಿಸಲಿ;
ನಿನ್ನ ರಕ್ಷಣೆಯನ್ನು ಪ್ರೀತಿ ಮಾಡುವವರು, ಕರ್ತನು ಮಹಿಮೆ ಪಡಲಿ ಎಂದು, ಯಾವಾಗಲೂ ಹೇಳಲಿ.
೧೭ ಆದರೆ ನಾನು ದೀನನೂ ಬಡವನೂ ಆಗಿದ್ದೇನೆ;
ಕರ್ತನು ನನಗೋಸ್ಕರ ಯೋಚಿಸುತ್ತಾನೆ;
ನನ್ನ ಸಹಾಯವೂ ನನ್ನನ್ನು ತಪ್ಪಿಸುವವನೂ ನೀನೇ;
ನನ್ನ ದೇವರೇ, ತಡ ಮಾಡ ಬೇಡ.

## ೪೧. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ದರಿದ್ರನನ್ನು ಪರಾಮರಿಸ ಬುದ್ಧಿಯುಳ್ಳವನು ಭಾಗ್ಯವಂತನು;
ಕೇಡಿನ ದಿವಸದಲ್ಲಿ ಕರ್ತನು ಅವನನ್ನು ತಪ್ಪಿಸುವನು.
೨ ಕರ್ತನು ಅವನನ್ನು ಕಾಪಾಡಿ, ಬದುಕಿಸುವನು;
ಅವನು ಭೂಮಿಯಲ್ಲಿ ಭಾಗ್ಯವುಳ್ಳವನಾಗಿರುವನು;
ನೀನು ಅವನ ಶತ್ರುಗಳ ಚಿತ್ತಕ್ಕೆ ಅವನನ್ನು ಕೊಡದೆ ಇರುವಿ.
3 ಕರ್ತನು ವ್ಯಾಧಿಯ ಮಂಚದಲ್ಲಿ ಅವನನ್ನು ಉದ್ಧಾರ ಮಾಡುವನು.
ಅವನ ಅಸ್ವಸ್ಥದಲ್ಲಿ ಅವನ ಹಾಸಿಗೆಯನ್ನೆಲ್ಲಾ ತಿರುಗಿಸಿ ಹಾಕುವಿ.
೪ ಕರ್ತನೇ, ನನಗೆ ದಯೆ ಮಾಡಿ, ನನ್ನ ಪ್ರಾಣವನ್ನು ಸ್ವಸ್ಥ ಮಾಡು;
ಯಾಕಂದರೆ ನಿನಗೆ ವಿರೋಧವಾಗಿ ಪಾಪ ಮಾಡಿದೆನೆಂದು, ನಾನು ಹೇಳಿದೆನು.
೫ ಅವನು ಸತ್ತು, ಅವನ ಹೆಸರು ನಾಶವಾಗುವದು ಯಾವಾಗ? ಎಂದು,
ನನ್ನ ಶತ್ರುಗಳು ನನ್ನನ್ನು ಕುರಿತು ಕೇಡನ್ನು ಹೇಳುತ್ತಾರೆ.
೬ ನೋಡುವದಕ್ಕೆ ಬಂದರೆ, ವ್ಯರ್ಥ ಮಾತು ಆಡುತ್ತಾನೆ;
ಅವನ ಹೃದಯವು ಅವನಿಗೆ ಪಾತಕವನ್ನು ಕೂಡಿಸುತ್ತದೆ;
ಅವನು ಹೊರಗೆ ಹೋಗಿ, ಮಾತಾಡುತ್ತಾನೆ.
೭ ನನ್ನನ್ನು ಹಗೆ ಮಾಡುವವರೆಲ್ಲರು ಕೂಡ ನನ್ನ ಮೇಲೆ ಪಿಸುಗುಟ್ಟುತ್ತಾರೆ;
ನನಗೆ ವಿರೋಧವಾಗಿ ಕೇಡನ್ನು ಕಲ್ಪಿಸುತ್ತಾರೆ.
೮ ಬೆಲಿಯಾಳಿನ ಕಾರ್ಯವು ಅವನಿಗೆ ಹತ್ತಿ ಅದೆ;
ಮಲಗಿ ಕೊಂಡವನಾಗಿ ತಿರಿಗಿ ಏಳನು, ಅನ್ನುತ್ತಾರೆ.
೯ ನನ್ನ ಕೊಟ್ಟೆಯನ್ನು ತಿಂದಂಥ,
ನಾನು ಭರವಸವಿಟ್ಟಿಂಥ, ನನ್ನ ಆಪ್ತ ಸ್ನೇಹಿತನು ಸಹ
ನನ್ನ ಮೇಲೆ ಹಿಮ್ಮಡಿಯನ್ನು ಎತ್ತಿದ್ದಾನೆ.
೧೦ ಆದರೆ ನೀನು, ಕರ್ತನೇ, ನನಗೆ ದಯೆ ಮಾಡಿ, ನನ್ನನ್ನು ಏಳ ಮಾಡು;
ಆಗಲವರಿಗೆ ಮುಯ್ಯಿಗೆ ಮುಯ್ಯಿ ಕೊಡುವೆನು.
೧೧ ನನ್ನ ಶತ್ರು ನನ್ನ ಮೇಲೆ ಜಯ ಧ್ವನಿ ಮಾಡದೆ ಇರುವದರಿಂದಲೇ,
ನೀನು ನನ್ನಲ್ಲಿ ಸಂತೋಷ ಪಡುತ್ತೀ ಎಂದು, ಬಲ್ಲೆನು.
೧೨ ನಾನಾದರೆ, ನನ್ನ ಸಂಪೂರ್ಣತ್ವದಲ್ಲಿ ನನ್ನನ್ನು ಸ್ಥಿರ ಹಿಡಿದಿದ್ದೀ;
ಮತ್ತು ನನ್ನನ್ನು ಯುಗ ಯುಗಕ್ಕೂ ನಿನ್ನ ಸಮುಖದಲ್ಲಿ ನಿಲ್ಲಿಸಿದ್ದೀ.
೧3 ಇಸ್ರಯೇಲಿನ ದೇವರಾದ ಕರ್ತನಿಗೆ
ಯುಗ ಯುಗದಿಂದ ಯುಗ ಯುಗಕ್ಕೂ ಆಶೀರ್ವಾದ ವಾಗಲಿ. ಆಮೆನ್. ಆಮೆನ್.

## ೪೨. ಕೀರ್ತನೆ.

ಗಾಯಕಾಧಿಕಾರಿಗೆ; ಕೊರಹನ ಮಕ್ಕಳ ಮೇಲೆಯೆ.

೧ ದುಪ್ಪಿಯು ನೀರಿನ ತೊರೆಗಳನ್ನು ಹ್ಯಾಗೆ ಬಯಸುವದೋ,
ಹಾಗೆಯೇ ನನ್ನ ಪ್ರಾಣವು ನಿನ್ನನ್ನು ಬಯಸುತ್ತದೆ, ದೇವರೇ.

೨ ದೇವರಿಗೋಸ್ಕರ, ಜೀವವುಳ್ಳ ದೇವರಿಗೋಸ್ಕರ, ನನ್ನ
ಪ್ರಾಣವು ದಾಹಗೊಳ್ಳುತ್ತದೆ;
ಯಾವಾಗ ಬಂದು, ದೇವರ ಮುಂದೆ ಕಾಣಿಸಿ ಕೊಳ್ಳುವೆನು!
3 ನಿನ್ನ ದೇವರು ಎಲ್ಲಿ? ಎಂದು, ಅವರು ದಿನವೆಲ್ಲಾ ನನಗೆ
ಹೇಳುವದರಿಂದ,
ನನ್ನ ಕಣ್ಣೀರು ನನಗೆ ರಾತ್ರಿ ಹಗಲು ಆಹಾರವಾಗಿದೆ.
೪ ಇವುಗಳನ್ನು ಜ್ಞಾಪಕ ಮಾಡಿ ಕೊಂಡು, ನನ್ನ ಪ್ರಾಣವನ್ನು
ನನ್ನಲ್ಲಿ ಹೊಯಿದು ಕೊಳ್ಳುತ್ತೇನೆ;
ಗುಂಪಿನಲ್ಲಿ ನಡೆದು ಕೊಂಡು,
ಉತ್ಸಾಹ ಧ್ವನಿಯಿಂದಲೂ ಸ್ತೋತ್ರದಿಂದಲೂ ಹಬ್ಬವಾಚರಿ
ಸುವ ಸಮೂಹದ ಸಂಗಡ
ದೇವರ ಮನೆಗೆ ಅವರೊಂದಿಗೆ ಹೋದೆನಲ್ಲ!
೫ ನನ್ನ ಪ್ರಾಣವೇ, ಯಾಕೆ ಕುಗ್ಗಿ, ನನ್ನಲ್ಲಿ ಕುದಿಯುತ್ತೀ!
ದೇವರನ್ನು ಎದುರು ನೋಡು;
ಯಾಕಂದರೆ ಅವನನ್ನೂ ಅವನ ಮುಖದ ರಕ್ಷಣೆಯನ್ನೂ
ಇನ್ನು ಕೊಂಡಾಡುವೆನು.
೬ ನನ್ನ ದೇವರೇ, ನನ್ನ ಪ್ರಾಣವು ನನ್ನಲ್ಲಿ ಕುಗ್ಗುತ್ತದೆ;
ಆದದರಿಂದ ಯೋರ್ದನ್ ಪ್ರದೇಶದಿಂದಲೂ,
ಹೆರ್ಮೋನ್ ಗುಡ್ಡಗಳಿಂದಲೂ, ಸಣ್ಣ ಬೆಟ್ಟದಿಂದಲೂ ನಿನ್ನನ್ನು
ಜ್ಞಾಪಕ ಮಾಡಿ ಕೊಳ್ಳುತ್ತೇನೆ.
೭ ನಿನ್ನ ಜರಿಗಳ ಶಬ್ದದಿಂದ ಅಗಾಧವು ಅಗಾಧಕ್ಕೆ ಕೂಗುತ್ತದೆ;
ನಿನ್ನ ಅಲೆಗಳೂ ನಿನ್ನ ತೆರೆಗಳೂ ಎಲ್ಲಾ ನನ್ನ ಮೇಲೆ ಹೊರಳಿ
ಹೋಗಿವೆ.
೮ ಹಗಲಿನಲ್ಲಿ ಕರ್ತನು ತನ್ನ ಕೃಪೆಯನ್ನು ಆಜ್ಞಾಪಿಸುತ್ತಾನೆ;
ರಾತ್ರಿಯಲ್ಲಿಯೂ ಅವನ ಹಾಡು ನನ್ನ ಬಳಿಯಲ್ಲಿ ಇರುವದು—
ನನ್ನ ಜೀವದ ದೇವರಿಗೆ ಪ್ರಾರ್ಥನೆಯೇ.
೯ ಯಾಕೆ ನನ್ನನ್ನು ಮರೆತು ಬಿಟ್ಟಿದ್ದೀ!
ಯಾಕೆ ನಾನು ಶತ್ರುವಿನ ಬಾಧೆಯಲ್ಲಿ ಇದ್ದು, ಮಲಿನನಾಗಿ
ನಡೆದು ಕೊಳ್ಳಬೇಕೆಂದು,
ನನ್ನ ಬಂಟೆಯಾದ ದೇವರಿಗೆ ಹೇಳುವೆನು.
೧೦ ನನ್ನ ಎಲುಬುಗಳಲ್ಲಿ ಕೊಲೆಯಾದ ಹಾಗೆ,
ನನ್ನ ವೈರಿಗಳು ನಿನ್ನ ದೇವರು ಎಲ್ಲಿ! ಎಂದು, ದಿನವೆಲ್ಲಾ
ನನಗೆ ಹೇಳಿ,
ನನ್ನನ್ನು ನಿಂದಿಸುತ್ತಾರೆ.
೧೧ ನನ್ನ ಪ್ರಾಣವೇ, ಯಾಕೆ ಕುಗ್ಗುತ್ತೀ!
ಯಾಕೆ ನನ್ನಲ್ಲಿ ಕುದಿಯುತ್ತೀ!
ದೇವರನ್ನು ಎದುರು ನೋಡು;
ಯಾಕಂದರೆ ನನ್ನ ಮುಖದ ರಕ್ಷಣೆಯೂ ನನ್ನ ದೇವರೂ
ಆಗಿರುವವನನ್ನು ಇನ್ನು ಕೊಂಡಾಡುವೆನು.

## ೪೩. ಕೀರ್ತನೆ.

೧ ದೇವರೇ, ನನಗೆ ನ್ಯಾಯ ತೀರಿಸು. ಭಕ್ತಿ ಇಲ್ಲದ ಜನಾಂಗ
ದ ಸಂಗಡ ನನ್ನ ವಾದವನ್ನು ವಾದಿಸು;
ಮೋಸವೂ ಅನ್ಯಾಯವೂ ಉಳ್ಳ ಮನುಷ್ಯನಿಂದ ನನ್ನನ್ನು
ತಪ್ಪಿಸು.
೨ ಯಾಕಂದರೆ ನೀನು ನನ್ನ ಬಲಸ್ಥಾನವಾದ ದೇವರಾಗಿದ್ದೀ;
ಯಾಕೆ ನನ್ನನ್ನು ಅಸಂಹಿಸಿ ಬಿಟ್ಟಿದ್ದೀ!
ಯಾಕೆ ನಾನು ಶತ್ರುವಿನ ಬಾಧೆಯಲ್ಲಿ ಇದ್ದು, ಮಲಿನನಾಗಿ
ನಡೆದು ಕೊಳ್ಳಬೇಕು!
3 ನಿನ್ನ ಬೆಳಕನ್ನೂ ನಿನ್ನ ಸತ್ಯವನ್ನೂ ಕಳುಹಿಸು;
ಅವು ನನ್ನನ್ನು ನಡಿಸಿ,
ನಿನ್ನ ಪರಿಶುದ್ಧ ಪರ್ವತಕ್ಕೂ ನಿನ್ನ ನಿವಾಸಕ್ಕೂ ನನ್ನನ್ನು
ಬರ ಮಾಡಲಿ.
೪ ಆಗ ದೇವರ ಬಲಿಪೀಠದ ಬಳಿಗೂ,
ನನ್ನ ಉಲ್ಲಾಸದ ಸಂತೋಷವಾದ ದೇವರ ಬಳಿಗೂ ಬಂದು,
ಕಿನ್ನರಿಯಿಂದ, ನನ್ನ ದೇವರಾದ ದೇವರೇ, ನಿನ್ನನ್ನು
ಕೊಂಡಾಡುವೆನು.
೫ ನನ್ನ ಪ್ರಾಣವೇ, ಯಾಕೆ ಕುಗ್ಗುತ್ತೀ!
ಯಾಕೆ ನನ್ನಲ್ಲಿ ಕುದಿಯುತ್ತೀ!
ದೇವರನ್ನು ಎದುರು ನೋಡು;
ಯಾಕಂದರೆ ನನ್ನ ಮುಖದ ರಕ್ಷಣೆಯೂ ನನ್ನ ದೇವರೂ
ಆಗಿರುವವನನ್ನು ಇನ್ನು ಕೊಂಡಾಡುವೆನು.

## ೪೪. ಕೀರ್ತನೆ.

ಗಾಯಕಾಧಿಕಾರಿಗೆ; ಕೊರಾಹನ ಮಕ್ಕಳ ಬೋಧನೆಯು.

೧ ದೇವರೇ, ನಮ್ಮ ಕಿವಿಗಳಿಂದ ಕೇಳಿದ್ದೇವೆ;
ನಮ್ಮ ತಂದೆಗಳು ನೀನು ಪೂರ್ವ ದಿವಸಗಳಾದ
ಅವರ ದಿವಸಗಳಲ್ಲಿ ಮಾಡಿದ ಕಾರ್ಯವನ್ನು
ನಮಗೆ ವಿವರಿಸಿದ್ದಾರೆ.
೨ ನೀನು ನಿನ್ನ ಕೈಯಿಂದ ಜನಾಂಗಗಳನ್ನು ಹೊರಡಿಸಿ,
ಇವರನ್ನು ನೆಟ್ಟೆ;
ಪ್ರಜೆಗಳಿಗೆ ಕೇಡು ಮಾಡಿ, ಇವರನ್ನು ಹಬ್ಬ ಮಾಡಿದಿ.
3 ಯಾಕಂದರೆ ಅವರು ತಮ್ಮ ಕತ್ತಿಯಿಂದ ದೇಶವನ್ನು ಸ್ವತಂತ್ರಿ
ಸಿ ಕೊಳ್ಳಲಿಲ್ಲ;
ಅವರ ತೋಳ್ಳು ಅವರನ್ನು ರಕ್ಷಿಸಲಿಲ್ಲ;
ಆದರೆ ನಿನ್ನ ಬಲಗೈಯೂ, ನಿನ್ನ ತೋಳ್ಳೂ, ನಿನ್ನ ಮುಖದ
ಬೆಳಕೂ, ಇವುಗಳೇ;
ಯಾಕಂದರೆ ಅವರಲ್ಲಿ ಇಷ್ಟ ಪಟ್ಟಿ.
೪ ದೇವರೇ, ನೀನೇ ನನ್ನ ಅರಸನು;
ಯಾಕೋಬನಿಗೆ ರಕ್ಷಣೆಗಳನ್ನು ಆಜ್ಞಾಪಿಸು.
೫ ನಿನ್ನಿಂದ ನಮ್ಮ ವೈರಿಗಳನ್ನು ಹಾಯುವೆವು!
ನಿನ್ನ ಹೆಸರಿನಲ್ಲಿ ನಮ್ಮ ಎದುರಾಳಿಗಳನ್ನು ತುಳಿಯುವೆವು.
೬ ಯಾಕಂದರೆ ನನ್ನ ಬಿಲ್ಲಿನಲ್ಲಿ ಭರವಸವಿಡುವದಿಲ್ಲ;
ನನ್ನ ಕತ್ತಿಯು ನನ್ನನ್ನು ರಕ್ಷಿಸುವದಿಲ್ಲ.
೭ ಯಾಕಂದರೆ ನೀನು ನಮ್ಮ ವೈರಿಗಳಿಂದ ನಮ್ಮನ್ನು ರಕ್ಷಿಸಿದಿ;
ನಮಗೆ ಹಗೆ ಮಾಡುವವರನ್ನು ನಾಚಿಕೆ ಪಡಿಸಿದಿ.



೮ ದೇವರಲ್ಲಿ ದಿನವೆಲ್ಲಾ ಹೆಚ್ಚಳ ಪಡುವೆವು;
ನಿನ್ನ ಹೆಸರನ್ನು ಯುಗ ಯುಗಕ್ಕೂ ಕೊಂಡಾಡುವೆವು. ಸೇಲಾ.
೯ ಆದರೆ ಅಸಂಹಿಸಿ ಬಿಟ್ಟು, ನಮ್ಮನ್ನು ಅವಮಾನ ಪಡಿಸುತ್ತೀ;
ನಮ್ಮ ಸೈನ್ಯಗಳ ಸಂಗಡ ನೀನು ಹೊರಟು ಹೋಗುವದಿಲ್ಲ.
೧೦ ವೈರಿಯ ಮುಂದೆ ನಮ್ಮನ್ನು ಹಿಂದಿರುಗ ಮಾಡುತ್ತೀ;
ನಮ್ಮ ಹಗೆಯವರು ತಮಗೋಸ್ಕರ ಕೊಳ್ಳೆ ಇಡುತ್ತಾರೆ.
೧೧ ತಿನ್ನ ತಕ್ಕ ಕುರಿಗಳ ಹಾಗೆ ನಮ್ಮನ್ನು ಒಪ್ಪಿಸಿದ್ದೀ;
ಜನಾಂಗಗಳಲ್ಲಿ ನಮ್ಮನ್ನು ಚದರಿಸಿದ್ದೀ.
೧೨ ನಿನ್ನ ಜನರನ್ನು ಕ್ರಯವಿಲ್ಲದೆ ಮಾರಿ ಬಿಡುತ್ತೀ;
ಅವರ ಬೆಲೆಯಿಂದ ನೀನು ಹೆಚ್ಚು ಮಾಡಲಿಲ್ಲ.
೧೩ ನಮ್ಮ ನೆರೆಯವರಿಗೆ ನಮ್ಮನ್ನು ನಿಂದೆಗೂ,
ನಮ್ಮ ಸುತ್ತಲಿರುವವರಿಗೆ ಗೇಲಿಯಾಗಿಯೂ ಹಾಸ್ಯವಾಗಿಯೂ,
ನಮ್ಮನ್ನು ಇಡುತ್ತೀ.
೧೪ ಜನಾಂಗಗಳಲ್ಲಿ ಗಾದೆಯಾಗಿಯೂ,
ಪ್ರಜೆಗಳಲ್ಲಿ ತಲೆ ತೂಗುವಿಕೆಯಾಗಿಯೂ, ನಮ್ಮನ್ನು ಇಡುತ್ತೀ.
೧೫ ನಿಂದಕನ, ದೂಷಕನ ಶಬ್ದಕ್ಕೋಸ್ಕರವೂ,
ಶತ್ರುವಿನ ಮುಯ್ಯಿಗೆ ಮುಯ್ಯಿ ಕೊಡುವವನ ನಿಮಿತ್ತವೂ,
೧೬ ದಿನವೆಲ್ಲಾ ನನ್ನ ಅವಮಾನವು ನನ್ನ ಮುಂದೆ ಅದೆ;
ನನ್ನ ಮುಖದ ನಾಚಿಕೆಯು ನನ್ನನ್ನು ಮುಚ್ಚುತ್ತದೆ.
೧೭ ಇದೆಲ್ಲಾ ನಮ್ಮ ಮೇಲೆ ಬಂತು; ಆದರೆ ನಿನ್ನನ್ನು ಮರೆತು
ಬಿಡಲಿಲ್ಲ;
ನಿನ್ನ ಒಡಂಬಡಿಕೆಯಲ್ಲಿ ಸುಳ್ಳಾಡಲಿಲ್ಲ.
೧೮ ನಮ್ಮ ಹೃದಯವು ಹಿಂದಿರುಗಲಿಲ್ಲ;
ನಮ್ಮ ನಡೆಗಳು ನಿನ್ನ ಹಾದಿಯಿಂದ ತೊಲಗಲಿಲ್ಲ.
೧೯ ಆದಾಗ್ಯೂ ಮಹಾ ಮಾನಗಳ ಸ್ಥಳದಲ್ಲಿ ನಮ್ಮನ್ನು ಜಜ್ಜಿ,
ಮರಣದ ನೆರಳಿನಿಂದ ನಮ್ಮನ್ನು ಮುಚ್ಚಿ ಬಿಟ್ಟಿದ್ದೀ.
೨೦ ನಾವು ನಮ್ಮ ದೇವರ ಹೆಸರನ್ನು ಮರೆತು,
ಅನ್ಯ ದೈವಕ್ಕೆ ನಮ್ಮ ಅಂಗೈಗಳನ್ನು ಚಾಚಿ ಇದ್ದರೆ,
೨೧ ದೇವರು ಅದನ್ನು ವಿಚಾರಿಸನೋ!
ಯಾಕಂದರೆ ಅವನು ಹೃದಯದ ಮರ್ಮಗಳನ್ನು
ತಿಳಿದಿದ್ದಾನೆ.
೨೨ ನಿಶ್ಚಯವಾಗಿ ನಿನ್ನ ನಿಮಿತ್ತ ದಿನವೆಲ್ಲಾ ಕೊಲ್ಲಲ್ಪಡುತ್ತೇವೆ;
ಕೊಲೆಯ ಕುರಿಗಳ ಹಾಗೆ ಎಣಿಸಲ್ಪಡುತ್ತೇವೆ.
೨೩ ಕರ್ತನೇ, ಎಚ್ಚರವಾಗು; ಯಾಕೆ ನಿದ್ರೆ ಮಾಡುತ್ತೀ!
ಎಚ್ಚತ್ತಿರು; ಸದಾಕಾಲಕ್ಕೆ ಅಸಂಹಿಸಿ ಬಿಡ ಬೇಡ.
೨೪ ಯಾಕೆ ನಿನ್ನ ಮುಖವನ್ನು ಮರೆ ಮಾಡಿ,
ನಮ್ಮ ದೀನತೆಯನ್ನೂ ನಮ್ಮ ಬಾಧೆಗಳನ್ನೂ ಮರೆತು ಬಿಡುತ್ತೀ!
೨೫ ಯಾಕಂದರೆ ನಮ್ಮ ಪ್ರಾಣವು ಧೂಳಿಯ ಮಟ್ಟಿಗೂ ಬೊಗ್ಗಿ
ಅದೆ;
ನಮ್ಮ ಹೊಟ್ಟೆಯು ಭೂಮಿಗೆ ಹತ್ತುತ್ತದೆ.
೨೬ ನಮಗೆ ಸಹಾಯವಾಗಿ ಏಳು;
ನಿನ್ನ ಕೃಪೆಯ ನಿಮಿತ್ತ ನಮ್ಮನ್ನು ವಿಮೋಚಿಸು.

## ೪೫. ಕೀರ್ತನೆ.

ಗಾಯಕಾಧಿಕಾರಿಗೆ; ಶೈರಿಲೆ ವಾದ್ಯಗಳ ಮೇಲೆ; ಕೊರಾಹನ ಮಕ್ಕಳ ಬೋಧನೆಯು;
ಪ್ರೀತಿಗಳ ಹಾಡು.

೧ ನನ್ನ ಹೃದಯದಲ್ಲಿ ಒಳ್ಳೇ ವಾಕ್ಯ ಉಕ್ಕುತ್ತದೆ;
ನನ್ನ ಕಾವ್ಯಗಳನ್ನು ಅರಸನನ್ನು ಕುರಿತು ಹೇಳುತ್ತೇನೆ;
ನನ್ನ ನಾಲಿಗೆಯು ಬೇಗ ಬರೆಯುವವನ ಕಂಠವು.
೨ ಮನುಷ್ಯನ ಮಕ್ಕಳಿಗಿಂತ ಅತಿ ಸೌಂದರ್ಯವಾಗಿದ್ದೀ;
ನಿನ್ನ ತುಟಿಗಳಲ್ಲಿ ದಯೆವು ಹೊಯಿದದೆ;
ಆದದರಿಂದ ದೇವರು ಯುಗ ಯುಗಕ್ಕೂ ನಿನ್ನನ್ನು ಆಶೀರ್ವ
ದಿಸಿದ್ದಾನೆ.
3 ಪರಾಕ್ರಮಶಾಲಿಯೇ, ನಿನ್ನ ಮಹಿಮೆಯೂ ನಿನ್ನ ಪ್ರಭೆಯೂ
ಆದ
ನಿನ್ನ ಕತ್ತಿಯನ್ನು ಸೊಂಟಕ್ಕೆ ಬಿಗಿದುಕೋ.
೪ ಸತ್ಯಕ್ಕೋಸ್ಕರವೂ ನೀತಿ ದೈನ್ಯಗಳಿಗೋಸ್ಕರವೂ,
ನಿನ್ನ ಪ್ರಭೆಯಿಂದ ಸಾಧಿಸಿ, ರಥ ನಡಿಸು;
ನಿನ್ನ ಬಲಗೈ ಭಯಂಕರವಾದವುಗಳನ್ನು ನಿನಗೆ ತೋರಿಸುವದು;
೫ ನಿನ್ನ ಬಾಣಗಳು ಅರಸನ ಶತ್ರುಗಳ ಹೃದಯದಲ್ಲಿ
ಹದವಾಗಿವೆ;
ಜನರು ನಿನ್ನ ಕೆಳಗೆ ಬೀಳುತ್ತಾರೆ.
೬ ದೇವರೇ, ನಿನ್ನ ಸಿಂಹಾಸನವು ಯುಗ ಯುಗಾಂತರಗಳಿಗೂ
ಅದೆ;
ನಿನ್ನ ರಾಜ್ಯದ ಕೋಲು ನೆಟ್ಟಿನೆಯ ಕೋಲಾಗಿದೆ.
೭ ನೀತಿಯನ್ನು ಪ್ರೀತಿ ಮಾಡಿದ್ದೀ; ದುಷ್ಟತ್ವವನ್ನು ಹಗೆ ಮಾಡಿ
ದ್ದೀ;
ಆದದರಿಂದ ನಿನ್ನ ದೇವರಾದ ದೇವರು ನಿನ್ನ ಸಂಗಡಿಗರಿಗಿಂತ
ಹೆಚ್ಚಾಗಿ
ನಿನ್ನನ್ನು ಆನಂದ ತೈಲದಿಂದ ಅಭಿಷೇಕಿಸಿದ್ದಾನೆ.
೮ ನಿನ್ನ ವಸ್ತ್ರಗಳೆಲ್ಲಾ ಬೋಳವೂ, ಅಗರೂ, ಲವಂಗಗಳೂ
ಆಗಿವೆ;
ಜಂತದ ಅರಮನೆಗಳೊಳಗಿಂದ ನಿನ್ನನ್ನು ಸಂತೋಷ
ಪಡಿಸುತ್ತಾರೆ.
೯ ಅರಸುಗಳ ಕುಮಾರ್ತೆಯರು ನಿನ್ನ ಘನವುಳ್ಳವರಲ್ಲಿ ಇದ್ದಾರೆ;
ಅರಸಿಯು ನಿನ್ನ ಬಲಕಡೆ ಓಫಿರ್ ಭಂಗಾರ ಮಯವಾಗಿ ನಿಲ್ಲು
ತ್ತಾಳೆ.
೧೦ ಮಗಳೇ, ಕೇಳು, ನೋಡು, ನಿನ್ನ ಕಿವಿ ಬೊಗ್ಗಿಸು;
ನಿನ್ನ ಜನರನ್ನೂ, ನಿನ್ನ ತಂದೆಯ ಮನೆಯನ್ನೂ, ಮರೆತು
ಬಿಡು.
೧೧ ಆಗ ಅರಸನು ನಿನ್ನ ಸೌಂದರ್ಯವನ್ನು ಅಪೇಕ್ಷಿಸುವನು;
ಯಾಕಂದರೆ ಅವನು ನಿನ್ನ ಕರ್ತನು; ಅವನಿಗೆ ಅಡ್ಡ ಬೀಳು.
೧೨ ಮತ್ತು ತೂರಿನ ಮಗಳೂ,
ಜನರ ಐಶ್ವರ್ಯವಂತರೂ ಕಾಣಿಕೆಯಿಂದ ನಿನ್ನ ಕಟಾಕ್ಷ
ವನ್ನು ಬೇಡಿ ಕೊಳ್ಳುವರು.

೧೩ ಅರಸನ ಮಗಳು ಅಂತರಂಗದಲ್ಲಿ ಪೂರ್ಣ ಘನವುಳ್ಳವಳಾಗಿದ್ದಾಳೆ;
ಅವಳ ವಸ್ತ್ರವು ಚಿನ್ನದಿಂದ ನೆಯಿದದೆ.
೧೪ ಚಿತ್ರ ವಸ್ತ್ರಗಳನ್ನುಟ್ಟು, ಅರಸನ ಬಳಿಗೆ ತರಲ್ಪಡುತ್ತಾಳೆ;
ಅವಳ ಹಿಂದೆ ಇರುವ ಕನ್ಯೆಯರಾದ ಅವಳ ಸಂಗಡಿಗರು ನಿನ್ನ ಬಳಿಗೆ ತರಲ್ಪಡುತ್ತಾರೆ.
೧೫ ಸಂತೋಷದಿಂದಲೂ ಉಲ್ಲಾಸದಿಂದಲೂ ತರಲ್ಪಡುತ್ತಾರೆ;
ಅರಸನ ಮನೆಗೆ ಬರುತ್ತಾರೆ.

೧೬ ನಿನ್ನ ತಂದೆಗಳಿಗೆ ಬದಲಾಗಿ ನಿನ್ನ ಮಕ್ಕಳು ಇರುವರು;
ಅವರನ್ನು ಎಲ್ಲಾ ಭೂಮಿಯ ಮೇಲೆ ಪ್ರಧಾನರಾಗಿ ಇರಿಸುವಿ.
೧೭ ತಲತಲಾಂತರಗಳಲ್ಲೆಲ್ಲಾ ನಿನ್ನ ಹೆಸರನ್ನು ಜ್ಞಾಪಕ ಪಡಿಸುವೆನು;
ಆದದರಿಂದ ಜನರು ಯುಗ ಯುಗಾಂತರಗಳಿಗೂ ನಿನ್ನನ್ನು ಕೊಂಡಾಡುವರು.

## ೪೬. ಕೀರ್ತನೆ.

ಗಾಯಕಾಧಿಕಾರಿಗೆ; ಕೊರಾಹನ ಮಕ್ಕಳದು; ಕನ್ಯಾ ಸ್ವರದ ಪ್ರಕಾರವಾದ ಹಾಡು.

೧ ದೇವರು ನಮಗೆ ಆಶ್ರಯವೂ ಬಲವೂ ಆಗಿದ್ದಾನೆ;
ಇಕ್ಕಟ್ಟುಗಳಲ್ಲಿ ವಿಶೇಷವಾಗಿ ಸಹಾಯಕನಾಗಿ ಕಾಣಿಸಿಕೊಳ್ಳುತ್ತಾನೆ.
೨ ಆದದರಿಂದ ಭೂಮಿಯು ಮಾರ್ಪಟ್ಟರೂ,
ಬೆಟ್ಟಗಳು ಸಮುದ್ರದ ಮಧ್ಯದಲ್ಲಿ ಕದಲಿದರೂ, ನಾವು ಭಯಪಡೆವು.
೩ ಅದರ ನೀರುಗಳು ಘೋಷಿಸಿ ಉಕ್ಕುತ್ತವೆ;
ಅದರ ಉಬ್ಬಿನಿಂದ ಬೆಟ್ಟಗಳು ಕದಲುತ್ತವೆ. ಸೇಲಾ.

೪ ನದಿ ಅದೆ; ಅದರ ಕಾಲಿವೆಗಳು ದೇವರ ಪಟ್ಟಣವನ್ನೂ,
ಮಹೋನ್ನತನ ನಿವಾಸಗಳ ಪರಿಶುದ್ಧ ಸ್ಥಳವನ್ನೂ, ಸಂತೋಷಪಡಿಸುತ್ತವೆ.
೫ ದೇವರು ಅದರ ಮಧ್ಯದಲ್ಲಿ ಇದ್ದಾನೆ; ಅದು ಕದಲದು—
ದೇವರು ಪ್ರಾತಃಕಾಲದಲ್ಲಿ ಅದಕ್ಕೆ ಸಹಾಯ ಮಾಡುವನು.
೬ ಜನಾಂಗಗಳು ಘೋಷಿಸುತ್ತವೆ, ರಾಜ್ಯಗಳು ಕದಲುತ್ತವೆ;
ತನ್ನ ಶಬ್ದವನ್ನು ಕೊಡುತ್ತಾನೆ, ಭೂಮಿಯು ಕರಗುತ್ತದೆ.
೭ ಸೈನ್ಯಗಳ ಕರ್ತನು ನಮ್ಮ ಸಂಗಡ ಇದ್ದಾನೆ;
ಯಾಕೋಬನ ದೇವರು ನಮಗೆ ದುರ್ಗವಾಗಿದ್ದಾನೆ. ಸೇಲಾ.

೮ ಬನ್ನಿರಿ, ಭೂಮಿಯಲ್ಲಿ ನಾಶನಗಳನ್ನು ಮಾಡುವ
ಕರ್ತನ ಕ್ರಿಯೆಗಳನ್ನು ದೃಷ್ಟಿಸಿರಿ.
೯ ಯುದ್ಧಗಳನ್ನು ಭೂಮಿಯ ಅಂತ್ಯದ ಪರ್ಯಂತರ ನಿಲ್ಲಿಸಿ
ಬಿಲ್ಲನ್ನು ಮುರಿದು, ಭಲ್ಲೆಯನ್ನು ಕಡಿದು, [ಬಿಟ್ಟು,
ರಥಗಳನ್ನು ಬೆಂಕಿಯಿಂದ ಸುಡುತ್ತಾನೆ.
೧೦ ತಾಳಿರಿ; ನಾನು ದೇವರೆಂದು ತಿಳಿದುಕೊಳ್ಳಿರಿ;
ಜನಾಂಗಗಳಲ್ಲಿ ಉನ್ನತನಾಗಿರುವೆನು;
ಭೂಮಿಯಲ್ಲಿ ಉನ್ನತನಾಗಿರುವೆನು.
೧೧ ಸೈನ್ಯಗಳ ಕರ್ತನು ನಮ್ಮ ಸಂಗಡ ಇದ್ದಾನೆ;
ಯಾಕೋಬನ ದೇವರು ನಮಗೆ ದುರ್ಗವಾಗಿದ್ದಾನೆ. ಸೇಲಾ.

## ೪೭. ಕೀರ್ತನೆ.

ಗಾಯಕಾಧಿಕಾರಿಗೆ; ಕೊರಾಹನ ಮಕ್ಕಳದು.

೧ ಎಲ್ಲಾ ಜನರೇ, ಕೈ ತಟ್ಟಿರಿ;
ಉತ್ಸಾಹ ಶಬ್ದದಿಂದ ದೇವರಿಗೆ ಧ್ವನಿಗೈಯಿರಿ.
೨ ಯಾಕಂದರೆ ಮಹೋನ್ನತನಾದ ಕರ್ತನು ಭಯಂಕರನೂ,
ಎಲ್ಲಾ ಭೂಮಿಯ ಮೇಲೆ ದೊಡ್ಡ ಅರಸನೂ, ಆಗಿದ್ದಾನೆ.
೩ ಜನರನ್ನು ನಮ್ಮ ಕೆಳಗೂ,
ಪ್ರಜೆಗಳನ್ನು ನಮ್ಮ ಪಾದಗಳ ಕೆಳಗೂ, ಅಣಗಿಸುತ್ತಾನೆ.
೪ ಅವನು ಪ್ರೀತಿ ಮಾಡುವ ಯಾಕೋಬನ ಘನತೆಯಾದ
ನಮ್ಮ ಬಾಧ್ಯತೆಯನ್ನು ನಮಗೆ ಆರಿಸಿಕೊಳ್ಳುತ್ತಾನೆ. ಸೇಲಾ.

೫ ದೇವರು ಜಯಧ್ವನಿಯಿಂದ,
ಕರ್ತನು ತುತೂರಿಯ ಶಬ್ದದಿಂದ, ಏರಿ ಹೋಗಿದ್ದಾನೆ.
೬ ಕೀರ್ತಿಸಿರಿ, ದೇವರನ್ನು ಕೀರ್ತಿಸಿರಿ;
ಕೀರ್ತಿಸಿರಿ, ನಮ್ಮ ಅರಸನನ್ನು ಕೀರ್ತಿಸಿರಿ.
೭ ಯಾಕಂದರೆ ದೇವರು ಎಲ್ಲಾ ಭೂಮಿಗೆ ಅರಸನು;
ಬುದ್ಧಿಯಿಂದ ಕೀರ್ತಿಸಿರಿ.
೮ ದೇವರು ಜನಾಂಗಗಳನ್ನು ಆಳುತ್ತಾನೆ;
ದೇವರು ತನ್ನ ಪರಿಶುದ್ಧ ಸಿಂಹಾಸನದಲ್ಲಿ ಕೂತಿದ್ದಾನೆ.
೯ ಜನರ ಅಧಿಪತಿಗಳು ಅಬ್ರಹಾಮನ ದೇವರ ಜನರ ಸಂಗಡ
ಕೂಡಿದ್ದಾರೆ;
ಯಾಕಂದರೆ ಭೂಮಿಯ ಗುರಾಣಿಗಳು ದೇವರವೇ;
ಅವನು ಬಹಳವಾಗಿ ಎತ್ತಲ್ಪಟ್ಟಿದ್ದಾನೆ.

## ೪೮. ಕೀರ್ತನೆ.

ಗೀತವಾದ ಹಾಡು; ಕೊರಾಹನ ಮಕ್ಕಳದು.

೧ ನಮ್ಮ ದೇವರ ಪಟ್ಟಣದಲ್ಲಿ—ಅವನ ಪರಿಶುದ್ಧ ಪರ್ವತದಲ್ಲಿ
ಕರ್ತನು ದೊಡ್ಡವನೂ, ಬಹಳವಾಗಿ ಸ್ತುತಿಸತಕ್ಕವನೂ,
ಆಗಿದ್ದಾನೆ.
೨ ಚಿಯೋನ್ ಪರ್ವತವು ಉನ್ನತದಿಂದ ಚೆಲುವಿಕೆಯಾದದ್ದೂ,
ಎಲ್ಲಾ ಭೂಮಿಗೆ ಸಂತೋಷವಾದದ್ದೂ;
ಉತ್ತರದ ಪಾರ್ಶ್ವಗಳಲ್ಲಿ ದೊಡ್ಡ ಅರಸನ ಪಟ್ಟಣವೆ.
೩ ಅದರ ಅರಮನೆಗಳಲ್ಲಿ ದೇವರು ದುರ್ಗವೆಂದು, ಅರಿಯಲ್ಪಟ್ಟಿದ್ದಾನೆ.

೪ ಯಾಕಂದರೆ, ಇಗೋ, ಅರಸುಗಳು ಕೂಡಿ ಬಂದರು;
ಕೂಡ ಹಾದು ಹೋದರು.
೫ ಅವರು ನೋಡಿದಾಗಲೇ ಆಶ್ಚರ್ಯ ಪಟ್ಟರು;
ತಲ್ಲಣಿಸಿ, ಓಡಿ ಹೋದರು.
೬ ನಡುಗುವಿಕೆಯೂ,
ಹೆರುವವಳ ಹಾಗೆ ನೋವೂ, ಅಲ್ಲಿ ಅವರನ್ನು ಹಿಡಿಯಿತು.
೭ ಮೂಡಣ ಘೂಳಿಯಿಂದ
ತಾರ್ಷೀಷ್ ಹಡಗಗಳನ್ನು ಒಡೆಯುತ್ತೀ.
೮ ಹ್ಯಾಗೆ ಕೇಳಿದೆವೋ, ಹಾಗೆಯೇ



ಸೈನ್ಯಗಳ ಕರ್ತನ ಪಟ್ಟಣದಲ್ಲಿ—ನಮ್ಮ ದೇವರ ಪಟ್ಟಣದಲ್ಲಿಯೇ
—ನೋಡಿದೆವು;
ದೇವರು ಅದನ್ನು ಯುಗಯುಗಕ್ಕೂ ಸ್ಥಿರ ಪಡಿಸುವನು. ಸೇಲಾ.

೯ ದೇವರೇ, ನಿನ್ನ ಕೃಪೆಯನ್ನು
ನಿನ್ನ ಮಂದಿರದ ಮಧ್ಯದಲ್ಲಿ ನೆನಸಿದ್ದೇವೆ.
೧೦ ದೇವರೇ, ನಿನ್ನ ಹೆಸರು ಹ್ಯಾಗೋ, [ಅದೆ;
ಹಾಗೆಯೇ ನಿನ್ನ ಸ್ತೋತ್ರವು ಭೂಮಿಯ ಅಂತ್ಯಗಳ ಪರಿಗೂ
ನಿನ್ನ ಬಲಗೈ ನೀತಿಯಿಂದ ತುಂಬಿ ಅದೆ.
೧೧ ನಿನ್ನ ನ್ಯಾಯತೀರ್ಪುಗಳ ನಿಮಿತ್ತ
ಚಿಯೋನ್ ಪರ್ವತವು ಸಂತೋಷ ಪಡಲಿ;
ಯೆಹೂದದ ಕುಮಾರ್ತೆಯರು ಉಲ್ಲಾಸ ಪಡಲಿ.
೧೨ ಚಿಯೋನನ್ನು ಸುತ್ತಿ, ತಿರುಗಾಡಿ,
ಅದರ ಬುರುಜುಗಳನ್ನು ಎಣಿಸಿರಿ.
೧೩ ಮುಂದಿನ ತಲಾಂತರಕ್ಕೆ ತಿಳಿಸುವದಕ್ಕೋಸ್ಕರ
ಅದರ ಗೋಡೆಗಳ ಮೇಲೆ ಮನಸ್ಸಿಟ್ಟು, ಅದರ ಅರಮನೆಗಳನ್ನು ದೃಷ್ಟಿಸಿರಿ.
೧೪ ಯಾಕಂದರೆ ಈ ದೇವರು ಯುಗ ಯುಗಾಂತರಗಳಿಗೂ ನಮ್ಮ
ದೇವರಾಗಿದ್ದಾನೆ;
ಅವನು ಮರಣದ ಮಟ್ಟಿಗೂ ನಮ್ಮನ್ನು ನಡಿಸುವನು.

## ೪೯. ಕೀರ್ತನೆ.

ಗಾಯಕಾಧಿಕಾರಿಗೆ; ಕೊರಾಹನ ಮಕ್ಕಳ ಗೀತವು.

೧ ಎಲ್ಲಾ ಜನರೇ, ಇದನ್ನು ಕೇಳಿರಿ;
ಪೃಥ್ವಿಯ ನಿವಾಸಿಗಳೆಲ್ಲರೇ,
೨ ಕಿರಿಯರೇ, ಹಿರಿಯರೇ,
ಐಶ್ವರ್ಯವಂತರೇ, ಬಡವರೇ, ಕೂಡ ಕಿವಿ ಗೊಡಿರಿ.
೩ ನನ್ನ ಬಾಯಿ ಜ್ಞಾನಗಳನ್ನು ನುಡಿಯುವದು,
ನನ್ನ ಹೃದಯದ ಧ್ಯಾನವು ವಿವೇಕವಾಗಿರುವದು.
೪ ನಾಮ್ಯಕ್ಕೆ ನನ್ನ ಕಿವಿ ಕೊಟ್ಟು,
ನನ್ನ ಒಗಟೆಯನ್ನು ಕಿನ್ನರಿಯಿಂದ ಬಿಚ್ಚುವೆನು.

೫ ಕೇಡಿನ ದಿವಸಗಳಲ್ಲಿ
ನನಗೆ ಹೊಂಚಿ ಕೊಳ್ಳುವವರ ಅಕ್ರಮವು ನನ್ನನ್ನು ಸುತ್ತಿ
ಕೊಳ್ಳುವಾಗ,
ನಾನು ಯಾಕೆ ಭಯ ಪಡ ಬೇಕು!
೬ ಅವರು ತಮ್ಮ ಬಾಳಿನಲ್ಲಿ ಭರವಸವಿಟ್ಟು,
ತಮ್ಮ ಐಶ್ವರ್ಯದ ಬಾಹುಳ್ಯದಲ್ಲಿ ಹೆಚ್ಚಳ ಪಡುತ್ತಾರೆ.
೭ ಸದಾ ಕಾಲಕ್ಕೆ ಬದುಕಿ,
ಕೊಳೆಯುವಿಕೆಯನ್ನು ನೋಡದ ಹಾಗೆ,
ತನ್ನ ಸಹೋದರನನ್ನು ಮನುಷ್ಯನು ವಿಮೋಚಿಸೇ ವಿಮೋಚಿಸಲಾರನು.
೮ ೯ ಅವನ ಅಪರಾಧದ ಹಣವನ್ನು ದೇವರಿಗೆ ಕೊಡಲಾರನು.
ಯಾಕಂದರೆ ಅವರ ಪ್ರಾಣ ವಿಮೋಚನೆಯ ಹಣವು ಅಮೂಲ್ಯವಾಗಿದೆ;
ಯುಗ ಯುಗಕ್ಕೂ ಆಗದು.

೧೦ ಯಾಕಂದರೆ ಜ್ಞಾನಿಗಳು ಸತ್ತು,
ಹುಚ್ಚನೂ ಪಶುಪ್ರಾಣಿಯೂ ಕೂಡ ನಾಶವಾಗಿ,
ಬೇರೊಬ್ಬರಿಗೆ ತಮ್ಮ ಬಾಳು ಬಿಡುವದನ್ನು ನೋಡುತ್ತಾನೆ.
೧೧ ತಮ್ಮ ಮನೆಗಳು ಯುಗ ಯುಗಕ್ಕೂ,
ತಮ್ಮ ನಿವಾಸಗಳು ತಲತಲಾಂತರಕ್ಕೂ ಇರ ಬೇಕೆಂಬುವದು
ಅವರ ಅಂತರ್ಯೋಚನೆ;
ಭೂಮಿಗಳಿಗೆ ತಮ್ಮ ಹೆಸರುಗಳನ್ನು ಇಡುತ್ತಾರೆ.
೧೨ ಆದರೆ ಮನುಷ್ಯನು ಘನತೆಯಲ್ಲಿ ಇದ್ದು ಕೊಳ್ಳದೆ,
ಮಡಿದು ಹೋಗುವ ಪಶುಗಳಿಗೆ ಸಮಾನವಾಗಿದ್ದಾನೆ.

೧೩ ಅವರ ಈ ಮಾರ್ಗವು ಅವರ ಹುಚ್ಚುತನವಾಗಿದೆ;
ಆದರೆ ಅವರ ಹಿಂದೆ ಬರುವವರು ಅವರ ಮಾತುಗಳನ್ನು
ಮೆಚ್ಚುತ್ತಾರೆ. ಸೇಲಾ.
೧೪ ಕುರಿಗಳಂತೆ ಪಾತಾಳದಲ್ಲಿ ಹಾಕಲ್ಪಡುತ್ತಾರೆ;
ಮರಣವು ಅವರನ್ನು ತಿನ್ನುತ್ತದೆ;
ನೆಟ್ಟಗೆಯವರು ಬೆಳಗ್ಗೆ ಅವರ ಮೇಲೆ ಆಳುವರು;
ಅವನಿಗೆ ನಿವಾಸವಿಲ್ಲದ ಹಾಗೆ, ಪಾತಾಳವು ಅವರ ರೂಪವನ್ನು
ಕ್ಷಯ ಮಾಡುವದು.
೧೫ ಆದರೆ ದೇವರು ನನ್ನ ಪ್ರಾಣವನ್ನು ಪಾತಾಳದ ಕೈಯೊಳಗಿಂದ ವಿಮೋಚನೆ ಮಾಡುವನು;
ಯಾಕಂದರೆ ನನ್ನನ್ನು ಅಂಗೀಕರಿಸುವನು. ಸೇಲಾ.
೧೬ ಒಬ್ಬನು ಐಶ್ವರ್ಯವಂತನಾದರೆ,
ಅವನ ಮನೆಯ ಘನವು ದೊಡ್ಡದಾದರೆ, ಭಯ ಪಡ ಬೇಡ.
೧೭ ಯಾಕಂದರೆ ಅವನು ಸಾಯುವಾಗ, ಏನಾದರೂ ತೆಗೆದುಕೊಂಡು ಹೋಗನು;
ಅವನ ಘನವು ಅವನ ಹಿಂದೆ ಇಳಿದು ಹೋಗದು.
೧೮ ಬದುಕಿದ್ದಾಗ ತನ್ನ ಪ್ರಾಣವನ್ನು ಆಶೀರ್ವದಿಸಿ ಕೊಂಡನು;
ನೀನು ನಿನಗೆ ಒಳ್ಳೇದನ್ನು ಮಾಡಿ ಕೊಂಡರೆ, ನಿನ್ನನ್ನು
ಕೊಂಡಾಡುವರಲ್ಲ!
೧೯ ಆದರೂ ತನ್ನ ತಂದೆಗಳ ವಂಶದ ಬಳಿಗೆ ಹೋಗುವನು;
ಅವರು ಸದಾ ಕಾಲಕ್ಕೆ ಬೆಳಕನ್ನು ನೋಡರು.
೨೦ ಮನುಷ್ಯನು ಘನತೆಯಲ್ಲಿದ್ದು, ವಿವೇಕವಿಲ್ಲದವನಾದರೆ,
ಮಡಿದು ಹೋಗುವ ಪಶುಗಳಿಗೆ ಸಮಾನವಾಗಿದ್ದಾನೆ.

## ೫೦. ಕೀರ್ತನೆ.

ಆಸಾಫನ ಗೀತವು.

೧ ತ್ರಾಣವುಳ್ಳ ದೇವರಾದ ಯೆಹೋವ ನುಡಿದಿದ್ದಾನೆ;
ಸೂರ್ಯೋದಯದಿಂದ ಅಸ್ತಮಯದ ಪರಿಗೂ ಭೂಮಿಯನ್ನು
ಕರೆದಿದ್ದಾನೆ.
೨ ಸೌಂದರ್ಯದ ಪರಿಪೂರ್ಣತೆಯಾದ ಚಿಯೋನಿನಿಂದ
ದೇವರು ಹೊಳೆಯುತ್ತಾನೆ.
೩ ನಮ್ಮ ದೇವರು ಬರುವನು, ಮೌನವಾಗಿರನು;
ಬೆಂಕಿಯು ಅವನ ಮುಂದೆ ದಹಿಸುವದು;
ಅವನ ಸುತ್ತಲು ದೊಡ್ಡ ಬಿರು ಘೂಳಿಯು ಬೀಸುತ್ತದೆ.

೪ ತನ್ನ ಜನರಿಗೆ ನ್ಯಾಯ ತೀರಿಸುವದಕ್ಕೆ,
ಮೇಲಿನಿಂದ ಆಕಾಶವನ್ನೂ
ಭೂಮಿಯನ್ನೂ ಕರೆಯುತ್ತಾನೆ.
೫ ಬಲಿಗಳಿಂದ ನನ್ನ ಸಂಗತ ಒಡಂಬಡಿಕೆ ಮಾಡಿದ
ನನ್ನ ಭಕ್ತರನ್ನು ನನಗೆ ಕೂಡಿಸಿರಿ.
೬ ಮತ್ತು ಆಕಾಶಗಳು ಅವನ ನೀತಿಯನ್ನು ತಿಳಿಸುತ್ತವೆ;
ಯಾಕಂದರೆ ದೇವರು ತಾನೇ ನ್ಯಾಯ ತೀರಿಸುವವನಾಗಿದ್ದಾನೆ.
ಸೇಲಾ.

೭ ನನ್ನ ಜನರೇ, ಕೇಳಿರಿ; ನಾನು ನುಡಿಯುವೆನು;
ಇಸ್ರಯೇಲೇ, ನಿನಗೆ ವಿರೋಧವಾಗಿ ಸಾಕ್ಷಿ ಇಡುತ್ತೇನೆ;
ನಿನ್ನ ದೇವರಾದ ದೇವರು ನಾನೇ.
೮ ನಿನ್ನ ಬಲಿಗಳಿಗೋಸ್ಕರ ನಿನ್ನನ್ನು ಗದರಿಸೆನು;
ನಿನ್ನ ಹೋಮಗಳು ಯಾವಾಗಲೂ ನನ್ನ ಮುಂದೆ ಅವೆ.
೯ ನಿನ್ನ ಮನೆಯಿಂದ ಹೋರಿಯನ್ನೂ,
ನಿನ್ನ ದೊಡ್ಡಿಗಳಿಂದ ಹೋತಗಳನ್ನೂ ತೆಗೆದು ಕೊಳ್ಳೆನು.
೧೦ ಯಾಕಂದರೆ ಅಡವಿಯ ಮೃಗಗಳೆಲ್ಲವೂ,
ಸಾವಿರ ಬೆಟ್ಟಗಳಲ್ಲಿರುವ ಪಶುಗಳೂ ನನ್ನವೇ.
೧೧ ಬೆಟ್ಟಗಳ ಪಕ್ಷಿಗಳನ್ನೆಲ್ಲಾ ಬಲ್ಲೆನು;
ಬೈಲಿನ ಮೃಗಗಳು ನನ್ನ ಬಳಿಯಲ್ಲಿ ಅವೆ.
೧೨ ನಾನು ಹಸಿದರೆ, ನಿನಗೆ ಹೇಳೆನು;
ಯಾಕಂದರೆ ಭೂಲೋಕವೂ, ಅದರ ಪೂರ್ಣತೆಯೂ ನನ್ನವೇ.
೧೩ ಹೋರಿಗಳ ಮಾಂಸವನ್ನು ತಿನ್ನುವೆನೋ?
ಹೋತಗಳ ರಕ್ತವನ್ನು ಕುಡಿಯುವೆನೋ?
೧೪ ದೇವರಿಗೆ ಸ್ತೋತ್ರವನ್ನು ಬಲಿಯಾಗಿ ಅರ್ಪಿಸು;
ಮಹೋನ್ನತನಿಗೆ ನಿನ್ನ ಹರಿಕೆಗಳನ್ನು ಸಲ್ಲಿಸು.
೧೫ ಮತ್ತು ಇಕ್ಕಟ್ಟಿನ ದಿವಸದಲ್ಲಿ ನನ್ನನ್ನು ಕರೆ;
ನಾನು ನಿನ್ನನ್ನು ತಪ್ಪಿಸಿ ಬಿಡುವೆನು; ನೀನು ನನ್ನನ್ನು ಘನ
ಪಡಿಸುವಿ.

೧೬ ಆದರೆ ದುಷ್ಟನಿಗೆ ದೇವರು ಹೇಳುವದೇನಂದರೆ—
ನನ್ನ ನೇಮಕಗಳನ್ನು ಸಾರುವದು ನಿನಗೇನು?
ನನ್ನ ಒಡಂಬಡಿಕೆಯನ್ನು ನಿನ್ನ ಬಾಯಿಯಲ್ಲಿ ಎತ್ತುವದೇನು?
೧೭ ನೀನು ಶಿಕ್ಷೆಯನ್ನು ಹಗೆ ಮಾಡಿ,
ನನ್ನ ವಾಕ್ಯಗಳನ್ನು ನಿನ್ನ ಹಿಂದೆ ಹಾಕಿ ಬಿಡುತ್ತೀಯಲ್ಲ?
೧೮ ಕಳ್ಳನನ್ನು ನೋಡಿದರೆ, ಅವನಿಗೆ ಒಪ್ಪುತ್ತೀ;
ಜಾರರ ಸಂಗತ ನಿನ್ನ ಪಾಲು ಅವೆ.
೧೯ ನಿನ್ನ ಬಾಯಿಯನ್ನು ಕೇಡಿನಲ್ಲಿ ಸೇರಿಸುತ್ತೀ;
ನಿನ್ನ ನಾಲಿಗೆಯು ಮೋಸವನ್ನು ಜೋಡಿಸುತ್ತದೆ.
೨೦ ಕೂತು ಕೊಂಡು, ನಿನ್ನ ಸಹೋದರನಿಗೆ ವಿರೋಧವಾಗಿ
ನುಡಿಯುತ್ತೀ;
ನಿನ್ನ ತಾಯಿಯ ಮಗನ ಮೇಲೆ ಚಾಡಿ ಹೇಳುತ್ತೀ.
೨೧ ಇವುಗಳನ್ನು ಮಾಡಿದ್ದೀ, ನಾನು ಮೌನವಾಗಿದ್ದೆನು;
ನಾನು ನಿನ್ನ ಹಾಗೆ ಇದ್ದೇ ಇದ್ದೇನೆಂದು, ನೆನಸಿದಿ;
ನಿನ್ನನ್ನು ಗದರಿಸಿ, ನಿನ್ನ ಕಣ್ಣುಗಳ ಮುಂದೆ ಕಾರ್ಯವನ್ನು
ಕ್ರಮವಾಗಿ ನಿಲ್ಲಿಸುವೆನು.
೨೨ ದೇವರನ್ನು ಮರೆತು ಬಿಡುವವರೇ,
ಬಿಡಿಸುವವನಿಲ್ಲದೆ ನಾನು ನಿಮ್ಮನ್ನು ಹರಿಯದ ಹಾಗೆ,
ಇದನ್ನು ಗ್ರಹಿಸಿ ಕೊಳ್ಳಿರಿ.

೨೩ ಸ್ತೋತ್ರವನ್ನು ಬಲಿಯಾಗಿ ಅರ್ಪಿಸುವವನು ನನ್ನನ್ನು
ಘನ ಪಡಿಸುತ್ತಾನೆ;
ತನ್ನ ಮಾರ್ಗವನ್ನು ಸಿದ್ಧ ಮಾಡುವವನಿಗೆ
ದೇವರ ರಕ್ಷಣೆಯನ್ನು ತೋರಿಸುವೆನು.

## ೫೧. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು; ಅವನು ಬತ್ಶೆಬಳ ಬಳಿಗೆ ಹೋದ ಮೇಲೆ,
ಪ್ರವಾದಿಯಾದ ನಾತಾನನು ಅವನ ಬಳಿಗೆ ಬಂದಾಗ.

೧ ದೇವರೇ, ನಿನ್ನ ಕೃಪೆಯ ಪ್ರಕಾರ ನನಗೆ ದಯೆ ಮಾಡು;
ನಿನ್ನ ಅಂತ್ಯಕರುಣದ ಬಾಹುಳ್ಯದ ಪ್ರಕಾರ ನನ್ನ ದ್ರೋಹ
ಗಳನ್ನು ಅಳಿಸಿ ಬಿಡು.
೨ ನನ್ನ ಅಕ್ರಮದಿಂದ ನನ್ನನ್ನು ಪೂರ್ಣವಾಗಿ ತೊಳೆ;
ನನ್ನ ಪಾಪದಿಂದ ನನ್ನನ್ನು ಶುಚಿ ಮಾಡು.
೩ ಯಾಕಂದರೆ ನನ್ನ ದ್ರೋಹಗಳನ್ನು ನಾನು ತಿಳಿದಿದ್ದೇನೆ;
ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಅವೆ.
೪ ನೀನು ನಿನ್ನ ಮಾತುಗಳಲ್ಲಿ ನೀತಿವಂತನಾಗಿಯೂ,
ನಿನ್ನ ನ್ಯಾಯತೀರ್ಪಿಕೆಯಲ್ಲಿ ನಿರ್ಮಲನಾಗಿಯೂ ತೋರುವ
ಹಾಗೆ,
ನಿನಗೆ ನಿನಗೊಬ್ಬನಿಗೆ ವಿರೋಧವಾಗಿ ಪಾಪ ಮಾಡಿ,
ನಿನ್ನ ದೃಷ್ಟಿಯಲ್ಲಿ ಈ ಕೇಡನ್ನು ಮಾಡಿದ್ದೇನೆಂದು, ಅರಿಕೆ
ಮಾಡುತ್ತೇನೆ.
೫ ಇಗೋ, ಅಕ್ರಮದಲ್ಲಿ ಹುಟ್ಟಿದೆನು;
ಪಾಪದಲ್ಲಿ ನನ್ನ ತಾಯಿ ನನ್ನನ್ನು ಗರ್ಭದೊಳಗೆ ಧರಿಸಿ
ಕೊಂಡಳು.
೬ ಇಗೋ, ಅಂತರಂಗದಲ್ಲಿ ಸತ್ಯವನ್ನು ಅಪೇಕ್ಷಿಸುತ್ತೀ;
ರಹಸ್ಯದಲ್ಲಿ ನನಗೆ ಜ್ಞಾನವನ್ನು ತಿಳಿಯ ಮಾಡು.
೭ ಇಸೊಪಿನಿಂದ ನನ್ನ ಪಾಪ ವಿಮೋಚನೆ ಮಾಡು; ಆಗ ಶುಚಿ
ಯಾಗುವೆನು.
ನನ್ನನ್ನು ತೊಳೆ; ಆಗ ಹಿಮಕ್ಕಿಂತ ಬಿಳುಪಾಗುವೆನು.
೮ ನಾನು ಉತ್ಸಾಹವನ್ನೂ ಸಂತೋಷವನ್ನೂ ಕೇಳುವ ಹಾಗೆ
ಮಾಡು.
ನೀನು ಜಜ್ಜಿದ ಎಲುವುಗಳು ಆನಂದ ಪಡಲಿ.

೯ ನನ್ನ ಪಾಪಗಳಿಗೆ ನಿನ್ನ ಮುಖವನ್ನು ಮರೆ ಮಾಡು;
ನನ್ನ ಅಕ್ರಮಗಳನ್ನೆಲ್ಲಾ ಅಳಿಸಿ ಬಿಡು.
೧೦ ಶುದ್ಧ ಹೃದಯವನ್ನು ನನ್ನಲ್ಲಿ ಸೃಷ್ಟಿಸು, ದೇವರೇ;
ದೃಢವಾದ ಆತ್ಮವನ್ನು ನನ್ನ ಅಂತರಂಗದಲ್ಲಿ ನೂತನ ಪಡಿಸು.
೧೧ ನಿನ್ನ ಸಮುಖದಿಂದ ನನ್ನನ್ನು ಹೊರಗೆ ಹಾಕ ಬೇಡ;
ನಿನ್ನ ಪರಿಶುದ್ಧಾತ್ಮವನ್ನು ನನ್ನಿಂದ ತೆಗೆದು ಕೊಳ್ಳ ಬೇಡ.
೧೨ ನಿನ್ನ ರಕ್ಷಣೆಯ ಆನಂದವನ್ನು ನನಗೆ ತಿರಿಗಿ ಕೊಡು;
ಉಚಿತವಾದ ಆತ್ಮದಿಂದ ನನ್ನನ್ನು ಉದ್ಧಾರ ಮಾಡು.



೧೩ ದ್ರೋಹಿಗಳಿಗೆ ನಿನ್ನ ಮಾರ್ಗಗಳನ್ನು ಕಲಿಸುವೆನು;
ಮತ್ತು ಪಾಪಾತ್ಮರು ನಿನ್ನ ಕಡೆಗೆ ತಿರುಗುವರು.
೧೪ ರಕ್ತಾಪರಾಧಗಳಿಂದ ನನ್ನನ್ನು ಬಿಡಿಸು, ನನ್ನ ರಕ್ಷಣೆಯ ದೇವ
ರಾದ ದೇವರೇ;
ನನ್ನ ನಾಲಿಗೆಯು ನಿನ್ನ ನೀತಿಯ ಸ್ತೋತ್ರವನ್ನು ಹಾಡುವದು.
೧೫ ಕರ್ತನೇ, ನನ್ನ ತುಟಿಗಳನ್ನು ತೆಗೆ;
ಆಗ ನನ್ನ ಬಾಯಿ ನಿನ್ನ ಸ್ತೋತ್ರವನ್ನು ಪ್ರಸಿದ್ಧಿ ಮಾಡುವದು.
೧೬ ಯಾಕಂದರೆ ಬಲಿಯಲ್ಲಿ ನೀನು ಸಂತೋಷ ಪಡುವದಿಲ್ಲ; ಸಟ್ಟಕೆ,
ಕೊಡುವೆನು.
ಹೋಮದಲ್ಲಿ ನೀನು ಇಷ್ಟ ಪಡುವದಿಲ್ಲ;
೧೭ ದೇವರ ಬಲಿಗಳು ಮುರಿದ ಆತ್ಮವೇ;
ಮುರಿದಂಥ, ಜಜ್ಜಿದಂಥ ಹೃದಯವನ್ನು, ದೇವರೇ, ನೀನು
ತಿರಸ್ಕರಿಸುವದಿಲ್ಲ.

೧೮ ನಿನ್ನ ಕಟಾಕ್ಷದ ಪ್ರಕಾರ ಚಿಯೋನಿಗೆ ಒಳ್ಳೇದು ಮಾಡು;
ಯೆರೂಸಲೇಮಿನ ಗೋಡೆಗಳನ್ನು ಕಟ್ಟು.
೧೯ ಆಗ ನೀತಿಯ ಬಲಿಗಳಲ್ಲಿಯೂ,
ಹೋಮದಲ್ಲಿಯೂ, ಪೂರ್ಣಾಂಗ ಬಲಿಯಲ್ಲಿಯೂ ಸಂತೋಷ
ಪಡುವಿ;
ಆಗ ನಿನ್ನ ಬಲಿಪೀಠದ ಮೇಲೆ ಹೋರಿಗಳನ್ನು ಅರ್ಪಿಸುವರು.

## ೫೨. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ದೋಷಣೆಯು; ಏದೋಮ್ಯನಾದ ದೋಯೇಗನು ಬಂದು, ಸೌಲಭಗೆ—
ದಾವೀದನು ಅಹಿಮೆಲೆಕನ ಮನೆಗೆ ಬಂದಿದ್ದಾನೆಂದು, ಚೀಳಿ ಹಿಳಿದಾಗ.

೧ ಬಲಿಷ್ಠನೇ, ಕೆಟ್ಟತನದಲ್ಲಿ ಹೆಚ್ಚಳ ಪಡುವದು ಯಾಕೆ?
ಪರಾಕ್ರಮಶಾಲಿಯೇ, ದೇವರ ಕೃಪೆಯು ದಿನವೆಲ್ಲಾ ಇರುವದು.
೨ ಮೋಸ ಮಾಡುವ ಹದವಾದ ಕ್ಷೌರಕತ್ತಿಯ ಹಾಗೆ,
ನಿನ್ನ ನಾಲಿಗೆಯು ನಡ್ಡಗಳನ್ನು ಕಲ್ಪಿಸುತ್ತದೆ.
೩ ಒಳ್ಳೇದಕ್ಕಿಂತ ಕೆಟ್ಟದ್ದನ್ನೂ,
ನೀತಿ ಮಾಡುವದಕ್ಕಿಂತ ಸುಳ್ಳನ್ನೂ ಪ್ರೀತಿ ಮಾಡುತ್ತೀ.
ಸೇಲಾ.
೪ ನಾಶನದ ವಾಕ್ಯಗಳನ್ನೆಲ್ಲಾ ಪ್ರೀತಿ ಮಾಡುತ್ತೀ,
ಮೋಸದ ನಾಲಿಗೆಯೇ.

೫ ಆದದರಿಂದ ದೇವರು ನಿನ್ನನ್ನು ಸದಾ ಕಾಲಕ್ಕೆ ಕೆಡವುವನು;
ನಿನ್ನನ್ನು ಹಿಡಿಯುವನು; ಗುಡಾರದಿಂದ ಕಿತ್ತು ಹಾಕುವನು;
ಬದುಕುವವರ ದೇಶದೊಳಗಿಂದ ನಿನ್ನನ್ನು ಬೇರೊಂದಿಗೆ ಕೀಳು
ವನು. ಸೇಲಾ.
೬ ನೀತಿವಂತರು ನೋಡಿ, ಭಯ ಪಟ್ಟು,
ಅವನಿಗೆ ನಗುವರು.
೭ ಇಗೋ, ದೇವರನ್ನು ತನ್ನ ಬಲಸ್ಥಾನವಾಗಿ ಮಾಡದೆ,
ತನ್ನ ಐಶ್ವರ್ಯದ ಬಾಹುಳ್ಯದಲ್ಲಿ ಭರವಸವಿಟ್ಟು,
ತನ್ನ ಕೆಟ್ಟತನದಲ್ಲಿ ಬಲಗೊಂಡ ಮನುಷ್ಯನು ಇವನೇ.
೮ ಆದರೆ ನಾನು ದೇವರ ಮನೆಯಲ್ಲಿರುವ ಹಸುರಾದ ಇಪ್ಪೇ
ಮರದ ಹಾಗೆ ಇದ್ದೇನೆ;
ದೇವರ ಕೃಪೆಯಲ್ಲಿ ಯುಗ ಯುಗಾಂತರಗಳಿಗೂ ಭರವಸಟ್ಟಿ
ದ್ದೇನೆ.
೯ ಯುಗ ಯುಗಕ್ಕೂ ನಿನ್ನನ್ನು ಕೊಂಡಾಡುವೆನು; ಯಾಕಂದರೆ
ನೀನು ಅದನ್ನು ಮಾಡಿದಿ;
ನಿನ್ನ ಹೆಸರನ್ನು ನಿರೀಕ್ಷಿಸುವೆನು; ಯಾಕಂದರೆ ನಿನ್ನ ಭಕ್ತರ
ಮುಂದೆ ಅದು ಒಳ್ಳೇದಾಗಿದೆ.

## ೫೩. ಕೀರ್ತನೆ.

ಗಾಯಕಾಧಿಕಾರಿಗೆ ಮಹಲತ್ ವಾದ್ಯದ ಮೇಲೆ; ದಾವೀದನ ಮೋಷಣೆಯು.

೧ ದೇವರಿಲ್ಲವೆಂದು, ಬುದ್ಧಿಹೀನನು ತನ್ನ ಹೃದಯದಲ್ಲಿ ಹೇಳಿ
ಕೊಂಡಿದ್ದಾನೆ.
ಅವರು ಕೆಟ್ಟು ಹೋಗಿ, ಅನ್ಯಾಯದಿಂದ ಅಸಂಖ್ಯರಾಗಿದ್ದಾರೆ;
ಒಳ್ಳೇದನ್ನು ಮಾಡುವವನು ಯಾವನೂ ಇಲ್ಲ.
೨ ಬುದ್ಧಿವಂತನು, ದೇವರನ್ನು ಹುಡುಕುವವನು, ಇದ್ದಾನೋ! ಎಂದು
ನೋಡುವದಕ್ಕೆ,
ದೇವರು ಆಕಾಶದಿಂದ ಮನುಷ್ಯನ ಮಕ್ಕಳ ಮೇಲೆ ಕಣ್ಣಿಟ್ಟನು.
೩ ಎಲ್ಲರು ಹಿಂದಿರುಗಿದ್ದಾರೆ;
ಏಕವಾಗಿ ಕೆಟ್ಟು ಹೋಗಿದ್ದಾರೆ;
ಒಳ್ಳೇದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ.
೪ ಕೊಚ್ಚಿ ತಿನ್ನುವ ಪ್ರಕಾರ ನನ್ನ ಜನರನ್ನು ತಿಂದು,
ದೇವರನ್ನು ಕರೆಯದೆ ಇರುವ
ಪಾತಕ ಮಾಡುವವರೆಲ್ಲರು ಅರಿಯರೋ?
೫ ಭಯವಿಲ್ಲದಲ್ಲಿ ಭಯಭ್ರಾಂತರಾದರು;
ಯಾಕಂದರೆ ನಿನಗೆ ವಿರೋಧವಾಗಿ ದಂಡು ಇಳಿಸುವವರ ಎಲು
ವುಗಳನ್ನು ದೇವರು ಚದರ ಮಾಡಿದ್ದಾನೆ.
ಅವರನ್ನು ನಾಚಿಕೆ ಪಡಿಸಿದ್ದೀ; ಯಾಕಂದರೆ ದೇವರು ಅವರನ್ನು
ತಿರಸ್ಕರಿಸಿದ್ದಾನೆ.
೬ ಚಿಯೋನಿನಿಂದ ಇಸ್ರಯೇಲಿನ ರಕ್ಷಣೆಯನ್ನು ಕೊಡುವವ
ನ್ಯಾರು?
ದೇವರು ತನ್ನ ಜನರ ಸೆರೆಗೆ ತಿರುಗಿ ಕೊಳ್ಳುವಾಗ,
ಯಾಕೋಬನು ಉಲ್ಲಾಸಿಸುವನು, ಇಸ್ರಯೇಲನು ಸುತೋಷಿ
ಸುವನು.

## ೫೪. ಕೀರ್ತನೆ.

ಕಂಠ ವಾದ್ಯಗಳಿಗೆ; ಗಾಯಕಾಧಿಕಾರಿಗೆ; ದಾವೀದನ ಮೋಷಣೆಯು, ಏಫ್ರದ ಜನರು ಬಂದು, ಸೌಲನಿಗೆ—
ದಾವೀದನು ಮರೆಯಲ್ಲಿ ಅಡಗಿ ಕೊಳ್ಳುತ್ತಾನಲ್ಲವೋ? ಎಂದು ಹೇಳಿದಾಗ.

೧ ದೇವರೇ, ನಿನ್ನ ಹೆಸರಿನಿಂದ ನನ್ನನ್ನು ರಕ್ಷಿಸಿ,
ನಿನ್ನ ಪರಾಕ್ರಮದಿಂದ ನನಗೆ ನ್ಯಾಯ ತೀರಿಸು.
೨ ದೇವರೇ, ನನ್ನ ಪ್ರಾರ್ಥನೆಯನ್ನು ಕೇಳು;
ನನ್ನ ಬಾಯಿಯ ಮಾತುಗಳಿಗೆ ಕಿವಿ ಕೊಡು.
೩ ಯಾಕಂದರೆ ಅನ್ಯರು ನನಗೆ ವಿರೋಧವಾಗಿ ಎದ್ದಿದ್ದಾರೆ;
ಬಲಿಷ್ಠರು ನನ್ನ ಪ್ರಾಣ ಹುಡುಕುತ್ತಾರೆ;
ದೇವರನ್ನು ತಮ್ಮ ಮುಂದೆ ಇಟ್ಟು ಕೊಳ್ಳಲಿಲ್ಲ. ಸೇಲಾ.

೪ ಇಗೋ, ದೇವರು ನನಗೆ ಸಹಾಯಕನು;
ಕರ್ತನು ನನ್ನ ಪ್ರಾಣವನ್ನು ಉದ್ಧಾರ ಮಾಡುವವರಲ್ಲಿ
ಇದ್ದಾನೆ.
೫ ಕೇಡನ್ನು ನನ್ನ ವಿರೋಧಿಗಳಿಗೆ ಬದಲು ಕೊಡುವನು;
ನಿನ್ನ ಸತ್ಯದಿಂದ ಅವರನ್ನು ಸಂಹರಿಸು.
೬ ಉಚಿತವಾದ ಬಲಿಯನ್ನು ನಿನಗೆ ಅರ್ಪಿಸುವೆನು;
ನಿನ್ನ ಹೆಸರನ್ನು ಕೊಂಡಾಡುವೆನು, ಕರ್ತನೇ; ಯಾಕಂದರೆ
ಅದು ಒಳ್ಳೇದು.
೭ ಯಾಕಂದರೆ ಎಲ್ಲಾ ಇಕ್ಕಟ್ಟಿನಿಂದ ನನ್ನನ್ನು ಬಿಡಿಸಿದ್ದಾನೆ;
ನನ್ನ ಶತ್ರುಗಳ ಮೇಲೆ ನನ್ನ ಕಣ್ಣು ದೃಷ್ಟಿ ಇಡುತ್ತದೆ.

## ೫೫. ಕೀರ್ತನೆ.

ತಂತಿ ವಾದ್ಯಗಳಲ್ಲಿ; ಗಾಯಕಾಧಿಕಾರಿಗೆ; ದಾವೀದನ ಶೋಕನೆಯು.

೧ ದೇವರೇ, ನನ್ನ ಪ್ರಾರ್ಥನೆಗೆ ಕಿವಿ ಕೊಡು;
ನನ್ನ ವಿಜ್ಞಾಪನೆಗೆ ನಿನ್ನನ್ನು ಮರೆ ಮಾಡಿ ಕೊಳ್ಳ ಬೇಡ.
೨ ನನ್ನನ್ನು ಆಲೈಸಿ, ನನಗೆ ಉತ್ತರ ಕೊಡು;
ನನ್ನ ಚಿಂತೆಯಲ್ಲಿ ಅಲೆದು,
೩ ಶತ್ರುವಿನ ಶಬ್ದಕ್ಕೋಸ್ಕರವೂ,
ದುಷ್ಟನ ಉಪದ್ರವ ನಿಮಿತ್ತವೂ, ಮೂಲುಗುತ್ತೇನೆ;
ಯಾಕಂದರೆ ಪಾತಕವನ್ನು ನನ್ನ ಮೇಲೆ ಬೀಳ ಮಾಡಿ,
ಕೋಪದಿಂದ ನನ್ನನ್ನು ಹಗೆ ಮಾಡುತ್ತಾರೆ.
೪ ನನ್ನ ಹೃದಯವು ನನ್ನ ಅಂತರಂಗದಲ್ಲಿ ನೊಂದು ಕೊಳ್ಳು
ತ್ತದೆ;
ಮರಣದ ಬೆದರಿಕೆಗಳು ನನ್ನ ಮೇಲೆ ಬಿದ್ದವೆ.
೫ ಭಯವೂ ನಡುಗೂ ನನಗೆ ಬಂದವೆ;
ದಿಗುಲು ನನ್ನನ್ನು ಮುಚ್ಚಿ ಅವೆ.
೬ ಪಾರಿವಾಳದಂತೆ ನನಗೆ ರೆಕ್ಕೆ ಯಾರು ಕೊಡುವರು?
ಹಾರಿ ಹೋಗಿ, ವಾಸವಾಗಿರುವೆನು, ಅಂದೆನು.
೭ ಇಗೋ, ದೂರವಾಗಿ ಓಡಿ ಹೋಗಿ,
ಅರಣ್ಯದಲ್ಲಿ ತಂಗುವೆನು. ಸೇಲಾ.
೮ ಪ್ರಳಯ ವಾಯುವಿಗೂ ಬಿರು ಘುಳಿಗೂ
ತಪ್ಪಿ ಹೋಗ ತ್ವರೆ ಪಡುವೆನು.

೯ ಕರ್ತನೇ, ಅವರನ್ನು ನುಂಗಿ ಬಿಡು; ಅವರ ನಾಲಿಗೆಯನ್ನು
ಭೇದಿಸು;
ಯಾಕಂದರೆ ಬಲಾತ್ಕಾರವನ್ನೂ ವಿವಾದವನ್ನೂ ಪಟ್ಟಣದಲ್ಲಿ
ನೋಡಿದ್ದೇನೆ.
೧೦ ಹಗಲು ಇರಳು ಅದರ ಗೋಡೆಗಳ ಮೇಲೆ ಅದನ್ನು ಸುತ್ತುತ್ತಾರೆ;
ಪಾತಕವೂ ಕಷ್ಟವೂ ಅದರ ಮಧ್ಯದಲ್ಲಿ ಅವೆ.
೧೧ ನಷ್ಟಗಳು ಅದರ ಮಧ್ಯದಲ್ಲಿ ಅವೆ;
ಅದರ ಬೀದಿಗಳ್ಳೊಳಗಿಂದ ತಂಟೆಯೂ ಮೋಸವೂ ತೊಲಗುವ
ದಿಲ್ಲ.
೧೨ ಯಾಕಂದರೆ ನನ್ನನ್ನು ನಿಂದಿಸುವವನು ಶತ್ರುವಲ್ಲ; ಶತ್ರುವಾ
ದರೆ, ತಾಳಿ ಕೊಳ್ಳುವೆನು;
ನನ್ನ ಮೇಲೆ ಹೆಚ್ಚಿಸಿ ಕೊಳ್ಳುವವನು ನನ್ನ ಹಗೆಯವನಲ್ಲ;
ಹಗೆಯವನಾದರೆ, ಅವನಿಗೆ ಅದರ ಕೊಳ್ಳುವೆನು.
೧೩ ಆದರೆ ನೀನು ನನ್ನ ಜತೆಗಾರನೂ,
ನನ್ನ ಆಪ್ತನೂ, ನನ್ನ ಪರಿಚಿತನೂ ಆಗಿದ್ದೀ.
೧೪ ಕೂಡ ಇಂಪಾದ ಸಂಭಾಷಣೆ ಮಾಡಿದೆವು;
ದೇವರ ಮನೆಗೆ ಗುಂಪಿನೊಂದಿಗೆ ನಡೆದೆವು.
೧೫ ಮರಣವು ಅವರನ್ನು ಹಿಡಿಯಲಿ;
ಜೀವಿತರಾಗಿ ಪಾತಾಳಕ್ಕೆ ಇಳಿದು ಹೋಗಲಿ;
ಯಾಕಂದರೆ ಅವರ ವಾಸಸ್ಥಳದಲ್ಲಿಯೂ ಅವರ ಅಂತರಂಗದ
ಲ್ಲಿಯೂ ಕೇಡುಗಳು ಅವೆ.
೧೬ ಆದರೆ ನಾನು ದೇವರನ್ನು ಕರೆಯುವೆನು;
ಮತ್ತು ಕರ್ತನು ನನ್ನನ್ನು ರಕ್ಷಿಸುವನು.
೧೭ ಸಂಜೆ ಮುಂಜಾನೆ ಮಧ್ಯಾಹ್ನಗಳಲ್ಲಿ ಚಿಂತಿಸಿ, ಮೂಲುಗುವೆನು;
ಮತ್ತು ನನ್ನ ಶಬ್ದವನ್ನು ಕೇಳುವನು.
೧೮ ಸಮಾಧಾನವಾಗಿ ನನ್ನ ಪ್ರಾಣವನ್ನು ನನಗೆ ಬಂದ ಕಾಳಗದಿಂ
ದ ವಿಮೋಚಿಸಿದ್ದಾನೆ;
ಹ್ಯಾಗಂದರೆ ಅನೇಕರು ನನ್ನ ಸಂಗಡ ಇದ್ದರು.
೧೯ ಅನಾದಿಯಿಂದ ಕೂತು ಕೊಂಡಿರುವ
ದೇವರು ಕೇಳಿ, ಅವರನ್ನು ಕುಗ್ಗಿಸುವನು. ಸೇಲಾ.

ಅವರಿಗೆ ಮಾರ್ಪಡುವಿಕೆಗಳು ಇಲ್ಲ;
ಆದಕಾರಣ ದೇವರಿಗೆ ಭಯ ಪಡುವದಿಲ್ಲ.
೨೦ ತನ್ನ ಸಂಗಡ ಸಮಾಧಾನವುಳ್ಳವರ ಮೇಲೆ ತನ್ನ ಕೈಗಳನ್ನು
ಹಾಕಿದ್ದಾನೆ;
ತನ್ನ ಒಡಂಬಡಿಕೆಯನ್ನು ಹೊಲೆ ಮಾಡಿದ್ದಾನೆ.
೨೧ ಅವನ ಬಾಯಿ ಬೆಣ್ಣೆಗಿಂತ ನುಣ್ಣಗಾಗಿದೆ;
ಅವನ ಹೃದಯ ಕಾಳಗ;
ಅವನ ಮಾತುಗಳು ಎಣ್ಣೆಗಿಂತ ನಯವಾಗಿವೆ;
ಆದರೆ ಅವು ಬಿಚ್ಚು ಕತ್ತಿಗಳಾಗಿವೆ.
೨೨ ಕರ್ತನ ಮೇಲೆ ನಿನ್ನ ಭಾರವನ್ನು ಹಾಕು; ಅವನು ನಿನಗೆ
ಆಸ್ಪದವಾಗಿರುವನು;
ಯುಗ ಯುಗಕ್ಕೂ ನೀತಿವಂತನನ್ನು ಕದಲಿಸನು.
೨೩ ಆದರೆ ನೀನು, ದೇವರೇ, ಅವರನ್ನು ನಾಶನದ ಕುಣಿಯಲ್ಲಿ ಇಳಿ
ಯ ಮಾಡುವಿ.
ರಕ್ತಪ್ರಿಯರೂ ಮೋಸಗಾರರೂ ತಮ್ಮ ದಿವಸಗಳನ್ನು ಅರೆವಾಸಿ
ಯಾದರೂ ಮಾಡಿ ಕೊಳ್ಳುವದಿಲ್ಲ;
ಆದರೆ ನಾನು ನಿನ್ನಲ್ಲಿ ಭರವಸವಿಡುತ್ತೇನೆ.

## ೫೬. ಕೀರ್ತನೆ.

ಗಾಯಕಾಧಿಕಾರಿಗೆ; ದೂರವಾಗಿರುವವರಲ್ಲಿ, ಮೌನವಾದ ಪಾರಿವಾಳದ ವಿಷಯ ಸ್ವರ್ಣ ಗೀತವು; ದಾವೀದನದು; ಫಿಲಿಷ್ಟಿಯರು ಅವನನ್ನು ಗಾತಿಪಟ್ಟಣ್ಣಲ್ಲಿ ಹಿಡಿದು ಕೊಂಡಾಗ.

೧ ನನಗೆ ದಯೆ ಮಾಡು, ದೇವರೇ; ಯಾಕಂದರೆ ಮನುಷ್ಯನು
ನನ್ನನ್ನು ನುಂಗ ಬೇಕೆಂದಿದ್ದಾನೆ;
ದಿನವೆಲ್ಲಾ ಯುದ್ಧ ಮಾಡುತ್ತಾ, ನನ್ನನ್ನು ಬಾಧಿಸುತ್ತಾನೆ



೨ ನನ್ನ ವಿರೋಧಿಗಳು ದಿನವೆಲ್ಲಾ ನನ್ನನ್ನು ನುಂಗ ಬೇ
ಕೆಂದಿದ್ದಾರೆ;
ನನಗೆ ವಿರೋಧವಾಗಿ ಗರ್ವದಿಂದ ಯುದ್ಧ ಮಾಡುವವರು
ಅನೇಕರಾಗಿದ್ದಾರೆ.
೩ ನಾನು ಭಯ ಪಡುವ ದಿನದಲ್ಲಿ ನಿನ್ನಲ್ಲಿ ಭರವಸವಿಡುವೆನು.
೪ ದೇವರಲ್ಲಿ ಅವನ ವಾಕ್ಯವನ್ನು ಸ್ತುತಿಸುವೆನು;
ದೇವರಲ್ಲಿ ಭರವಸವಿಟ್ಟು, ಭಯ ಪಡೆನು;
ಮಾಂಸವು ನನಗೆ ಏನು ಮಾಡುವದು?

೫ ದಿನವೆಲ್ಲಾ ನನ್ನ ವಾಕ್ಯಗಳನ್ನು ಸೊಟ್ಟಗೆ ಮಾಡುತ್ತಾರೆ.
ನನಗೆ ವಿರೋಧವಾಗಿರುವ ಅವರ ಕಲ್ಪನೆಗಳೆಲ್ಲಾ ಕೇಡಿಗಾಗಿವೆ
೬ ಕೂಡಿ ಕೊಳ್ಳುತ್ತಾರೆ; ಹೊಂಚಿ ಕೊಳ್ಳುತ್ತಾರೆ;
ನನ್ನ ಪ್ರಾಣವನ್ನು ನಿರೀಕ್ಷಿಸುವವರಾಗಿ, ನನ್ನ ಹೆಜ್ಜೆಗಳನ್ನು
ಹಿಡಿಯುತ್ತಾರೆ.
೭ ಪಾತಕದಿಂದ ತಪ್ಪಿಸಿ ಕೊಂಡಾರೋ?
ಕೋಪದಿಂದ ಜನರನ್ನು ಇಳಿಯ ಮಾಡು, ದೇವರೇ.
೮ ನನ್ನ ಅಲೆಯುವಿಕೆಯನ್ನು ನೀನು ಎಣಿಸಿದ್ದೀ;
ನನ್ನ ಕಣ್ಣೀರನ್ನು ನಿನ್ನ ಶಿದ್ದಿಗೆಯಲ್ಲಿ ಹಾಕು;
ಅದು ನಿನ್ನ ಪುಸ್ತಕದಲ್ಲಿ ಇಲ್ಲವೋ?
೯ ಆಗ ನಾನು ಕೂಗುವ ದಿನದಲ್ಲಿ ನನ್ನ ಶತ್ರುಗಳು ಹಿಂದಿರುಗುವರು;
ದೇವರು ನನಗಿದ್ದಾನೆ; ಇದನ್ನು ಬಲ್ಲೆನು.
೧೦ ದೇವರಲ್ಲಿ ಅವನ ವಾಕ್ಯವನ್ನು ಸ್ತುತಿಸುವೆನು;
ಕರ್ತನಲ್ಲಿ ಅವನ ವಾಕ್ಯವನ್ನು ಸ್ತುತಿಸುವೆನು.
೧೧ ದೇವರಲ್ಲಿ ಭರವಸವಿಟ್ಟಿದ್ದೇನೆ;
ಭಯ ಪಡೆನು; ಮನುಷ್ಯನು ನನಗೆ ಏನು ಮಾಡುವನು?

೧೨ ದೇವರೇ, ನಿನ್ನ ಹರಿಕೆಗಳು ನನ್ನ ಮೇಲೆ ಅವೆ;
ಸ್ತೋತ್ರಗಳನ್ನು ನಿನಗೆ ಸಲ್ಲಿಸುವೆನು.
೧೩ ಯಾಕಂದರೆ ನನ್ನ ಪ್ರಾಣವನ್ನು ಮರಣದಿಂದ ಬಿಡಿಸಿದ್ದಿ. [ಹಾಗೆ,
ನಾನು ಜೀವಿತರ ಬೆಳಕಿನಲ್ಲಿ ದೇವರ ಮುಂದೆ ನಡೆದು ಕೊಳ್ಳುವ
ನನ್ನ ಪಾದಗಳನ್ನು ಬೀಳುವಿಕೆಯಿಂದ, ಬಿಡಿಸಿದ್ದೀಯಲ್ಲ!

## ೫೭. ಕೀರ್ತನೆ.

ಗಾಯಕಾಧಿಕಾರಿಗೆ; ನಾಶ ಮಾಡ ಬೇಡ; ಸ್ವರ್ಣ ಗೀತವು; ದಾವೀದನದು; ಶೌಲನ ಮುಂದಿಂದ ಓಡಿ ಹೋಗಿ, ಗವಿಯಲ್ಲಿದ್ದಾಗ.

೧ ನನಗೆ ದಯೆ ಮಾಡು, ದೇವರೇ; ನನಗೆ ದಯೆ ಮಾಡು;
ಯಾಕಂದರೆ ನನ್ನ ಪ್ರಾಣವು ನಿನ್ನನ್ನು ಆಶ್ರಯಿಸಿ ಕೊಳ್ಳು
ತ್ತದೆ.
ನಷ್ಟಗಳು ಹಾಟುವ ಮಟ್ಟಿಗೂ
ನಿನ್ನ ರೆಕ್ಕೆಗಳ ನೆರಳನ್ನೇ ಆಶ್ರಯಿಸಿ ಕೊಳ್ಳುತ್ತೇನೆ.
೨ ಮಹೋನ್ನತನಾದ ದೇವರಿಗೆ—
ನನಗೋಸ್ಕರ ಪೂರೈಸುವ ದೇವರಿಗೆ—ಕೂಗುತ್ತೇನೆ.
೩ ಆಕಾಶದಿಂದ ಕಳುಹಿಸಿ,
ನನ್ನನ್ನು ನುಂಗಲಿಕ್ಕಿರುವವನನ್ನು ನಿಂದಿಸಿ, ನನ್ನನ್ನು ರಕ್ಷಿಸು
ವನು. ಸೇಲಾ.
ದೇವರು ತನ್ನ ಕೃಪೆಯನ್ನೂ, ತನ್ನ ಸತ್ಯವನ್ನೂ ಕಳುಹಿಸು
ವನು.
೪ ನನ್ನ ಪ್ರಾಣವು ಸಿಂಹಗಳ ಮಧ್ಯದಲ್ಲಿ ಅವೆ;
ಉರಿಯುವವರಾದ ಮನುಷ್ಯನ ಮಕ್ಕಳ್ಳಲ್ಲಿ ವಾಸಿಸುತ್ತೇನೆ.
ಅವರ ಹಲ್ಲುಗಳು ಭಲ್ಲೆಯೂ, ಬಾಣಗಳೂ;
ಅವರ ನಾಲಿಗೆ ಹದವಾದ ಕತ್ತಿಯೂ, ಆಗಿವೆ.
೫ ಆಕಾಶಗಳ ಮೇಲೆ ಉನ್ನತನಾಗು, ದೇವರೇ;
ಎಲ್ಲಾ ಭೂಮಿಯ ಮೇಲೆ ನಿನ್ನ ಘನವು ಇರಲಿ.

೬ ನನ್ನ ಹೆಜ್ಜೆಗಳಿಗೆ ಬಲೆ ಒಡ್ಡಿದ್ದಾರೆ; ನನ್ನ ಪ್ರಾಣವು ಬೊಗ್ಗಿ
ಅದೆ;
ನನ್ನ ಮುಂದೆ ಕುಣಿಯನ್ನು ಅಗೆದಿದ್ದಾರೆ;
ಅದರ ಮಧ್ಯದಲ್ಲಿ ತಾವೇ ಬಿದ್ದಿದ್ದಾರೆ. ಸೇಲಾ.
೭ ನನ್ನ ಹೃದಯವು ಸಿದ್ಧವಾಗಿದೆ, ದೇವರೇ; ನನ್ನ ಹೃದಯವು
ಸಿದ್ಧವಾಗಿದೆ;
ಹಾಡುವೆನು, ಕೀರ್ತಿಸುವೆನು.
೮ ಎಚ್ಚರವಾಗು, ನನ್ನ ಘನವೇ; ಎಚ್ಚರವಾಗು, ವೀಣೆಯೇ, ಕಿನ್ನ
ರಿಯೇ;
ಉದಯವನ್ನು ಎಚ್ಚರಿಸುವೆನು.
೯ ಜನರಲ್ಲಿ ನಿನ್ನನ್ನು ಕೊಂಡಾಡುವೆನು, ನನ್ನ ಕರ್ತನೇ;
ಜನಗಳ್ಳಲ್ಲಿ ನಿನ್ನನ್ನು ಕೀರ್ತಿಸುವೆನು.
೧೦ ಯಾಕಂದರೆ ಆಕಾಶದ ವರೆಗೆ ನಿನ್ನ ಕೃಪೆಯೂ,
ಮೇಘಗಳ ವರೆಗೆ ನಿನ್ನ ಸತ್ಯವೂ ದೊಡ್ಡವಾಗಿವೆ.
೧೧ ಆಕಾಶಗಳ ಮೇಲೆ ಉನ್ನತನಾಗು, ದೇವರೇ;
ಎಲ್ಲಾ ಭೂಮಿಯ ಮೇಲೆ ನಿನ್ನ ಘನವು ಇರಲಿ.

## ೫೮. ಕೀರ್ತನೆ.

ಗಾಯಕಾಧಿಕಾರಿಗೆ; ನಾಶ ಮಾಡ ಬೇಡ; ಸ್ವರ್ಣ ಗೀತವು; ದಾವೀದನದು.

೧ ನಿಶ್ಚಯವಾಗಿ ಮೌನವಾಗಿದ್ದೀರೋ?
ನೀತಿಯನ್ನು ನುಡಿಯಿರಿ; ಸರಿಯಾಗಿ ನ್ಯಾಯ ತೀರಿಸಿರಿ, ಮನು
ಷ್ಯನ ಮಕ್ಕಳ್ಳೇ.
೨ ಹೃದಯದಲ್ಲಿ ಅನ್ಯಾಯಗಳನ್ನು ಮಾಡುತ್ತೀರಲ್ಲ!
ದೇಶದಲ್ಲಿ ನಿಮ್ಮ ಕೈಗಳ ಬಲಾತ್ಕಾರವನ್ನು ತೂಗುತ್ತೀರಲ್ಲ!
೩ ದುಷ್ಟರು ಗರ್ಭದಿಂದಲೇ ಅನ್ಯರಾಗುತ್ತಾರೆ;
ಹೊಟ್ಟೆಯಿಂದಲೇ ಸುಳ್ಳಾಡುವವರಾಗಿ, ತಪ್ಪಿ ಹೋಗುತ್ತಾರೆ.
೪ ಹಾವಿನ ವಿಷದ ಹಾಗೆ ಅವರಿಗೆ ವಿಷ ಉಂಟು; [ರೆ.
ತನ್ನ ಕಿವಿಯನ್ನು ಮುಚ್ಚಿ ಕೊಳ್ಳುವ ಕಿವಡ ಸರ್ಪದ ಹಾಗಿದ್ದಾ
೫ ಮಂತ್ರಗಾರರ ಚಮತ್ಕಾರದಿಂದ ಅಡಿಸುವ
ಗಾರಡಿಗಾರನ ಶಬ್ದವನ್ನು ಅದು ಕೇಳುವದಿಲ್ಲ.
೬ ದೇವರೇ, ಅವರ ಹಲ್ಲುಗಳನ್ನು ಅವರ ಬಾಯಿಯಲ್ಲಿ ಮುರಿ
ದು ಬಿಡು;
ಬಾಲ ಸಿಂಹಗಳ ಕೋರೆ ಹಲ್ಲುಗಳನ್ನು ಬಡೆದು ಬಿಡು, ಕರ್ತನೇ.
೭ ನೀರಿನಂತೆ ಕರಗಿ, ಹರಿದು ಹೋಗುವರು;
ತನ್ನ ಬಾಣಗಳನ್ನು ಗುರಿ ಇಡುತ್ತಾನೆ; ಅವು ಕಡಿಯಲ್ಪಟ್ಟ
ಹಾಗಿವೆ.

೯ ಕರಗುವ ಬಸವನ ಹುಳದಂತೆ ಹೋಗುತ್ತಾನೆ;
ಹೆಗಸಿನ ಇಳಿದ ಬಸುರಿನಂತೆ ಸೂರ್ಯನನ್ನು ದೃಷ್ಟಿಸರು.
೯ ನಿಮ್ಮ ಗಡಿಗೆಗಳು ಮುಳ್ಳು ತಿಳಿಯುವದಕ್ಕಿಂತ ಮುಂಚೆ,
ಹಸಿಯಾಗಲಿ, ಬೆಂದಾಗಲಿ, ಅವನನ್ನು ಹಾರಿಸಿ ಬಿಡುವನು.
೧೦ ನೀತಿವಂತನು ಮುಯ್ಯಿಗೆ ಮುಯ್ಯನ್ನು ದೃಷ್ಟಿಸುವಾಗ,
ಸಂತೋಷ ಪಡುವನು;
ತನ್ನ ಅಡಿಗಳನ್ನು ದುಷ್ಟನ ರಕ್ತದಲ್ಲಿ ತೊಳೆಯುವನು.
೧೧ ನಿಶ್ಚಯವಾಗಿ ನೀತಿವಂತನಿಗೆ ಫಲ ಅದೆ;
ನಿಶ್ಚಯವಾಗಿ ಭೂಮಿಯಲ್ಲಿ ನ್ಯಾಯ ತೀರಿಸುವ ದೇವರು ಉಂಟು, ಎಂದು ಮನುಷ್ಯನು ಹೇಳುವನು.

## ೫೯. ಕೀರ್ತನೆ.

ಗಾಯಕಾಧಿಕಾರಿಗೆ; ನಾಶ ಮಾಡ ಬೇಡ; ಸ್ತುತಿ ಗೀತವು ದಾವೀದನದು; ಶೌಲನು ಆಳುಹಿಟಿದವರು ಅವನನ್ನು ಕೊಲ್ಲ ಬೇಕೆಂದು ಮನೆಯನ್ನು ಕಾದು ಕೊಂಡಾಗ.

೧ ನನ್ನ ದೇವರೇ, ನನ್ನ ಶತ್ರುಗಳಿಂದ ನನ್ನನ್ನು ಬಿಡಿಸು;
ನನ್ನ ಮೇಲೆ ಎದ್ದವರಿಗೆ ನನ್ನನ್ನು ತಪ್ಪಿಸಿ, ಭದ್ರ ಮಾಡು.
೨ ಪಾತಕ ಮಾಡುವವರಿಂದ ನನ್ನನ್ನು ಬಿಡಿಸು;
ರಕ್ತಪ್ರಿಯರಿಂದ ನನ್ನನ್ನು ರಕ್ಷಿಸು.
೩ ಯಾಕಂದರೆ, ಇಗೋ, ನನ್ನ ಪ್ರಾಣಕ್ಕೆ ಹೊಂಚಿ ಕೊಳ್ಳುತ್ತಾರೆ;
ಬಲವಂತರು ನನಗೆ ವಿರೋಧವಾಗಿ ಕೂಡಿ ಕೊಳ್ಳುತ್ತಾರೆ;
ನನ್ನಲ್ಲಿ ದ್ರೋಹವೂ ಇಲ್ಲ; ನನ್ನಲ್ಲಿ ಪಾಪವೂ ಇಲ್ಲ, ಕರ್ತನೇ.
೪ ನನ್ನಲ್ಲಿ ಅಕ್ರಮವಿಲ್ಲದಿರಲಾಗಿ, ಓಡ್ಯಾಡಿ, ಸಿದ್ಧ ಮಾಡಿ ಕೊಳ್ಳುತ್ತಾರೆ;
ನನ್ನನ್ನು ಎದುರುಗೊಳ್ಳುವದಕ್ಕೆ ಎಚ್ಚತ್ತು, ನೋಡು.
೫ ನೀನೇ, ಸೈನ್ಯಗಳ ದೇವರಾದ ಕರ್ತನೇ, ಇಸ್ರಯೇಲನ ದೇವರೇ,
ಎಲ್ಲಾ ಜನಾಂಗಗಳನ್ನು ದರ್ಶಿಸುವದಕ್ಕೆ ಎಚ್ಚರವಾಗು;
ಪಾತಕಿಗಳಾದ ವಂಚಕರಲ್ಲಿ ಯಾರಿಗಾದರೂ ದಯೆ ಮಾಡ ಬೇಡ. ಸೇಲಾ.
೬ ಸಂಜೆಗೆ ತಿರುಗುವರು;
ನಾಯಿಯ ಹಾಗೆ ಗುರುಕಾಯಿಸುವರು; ಪಟ್ಟಣವನ್ನು ಸುತ್ಯಾಡುವರು.
೭ ಇಗೋ, ತಮ್ಮ ಬಾಯಿಯಿಂದ ಉಕ್ಕಿಸುತ್ತಾರೆ;
ಅವರ ತುಟಿಗಳಲ್ಲಿ ಕತ್ತಿಗಳು ಅವೆ;
ಯಾಕಂದರೆ ಕೇಳುವವನ್ಯಾರು! ಅನ್ನುತ್ತಾರೆ.
೮ ಆದರೆ ನೀನು, ಕರ್ತನೇ, ಅವರಿಗೆ ನಗುವಿ;
ಎಲ್ಲಾ ಜನಾಂಗಗಳನ್ನು ಗೇಲಿ ಮಾಡುವಿ.
೯ ಅವನ ಬಲದ ನಿಮಿತ್ತ ನಿನಗೆ ಕಾದು ಕೊಳ್ಳುವೆನು;
ಯಾಕಂದರೆ ದೇವರು ನನ್ನ ದುರ್ಗವಾಗಿದ್ದಾನೆ.
೧೦ ಕೃಪೆಯುಳ್ಳ ನನ್ನ ದೇವರು ನನ್ನನ್ನು ಮುಂಗೊಳ್ಳುವನು;
ದೇವರು ನನ್ನ ವಿರೋಧಿಗಳ ಮೇಲೆ ನನ್ನನ್ನು ಕಣ್ಣಿಡೆ ಮಾಡುವನು.
೧೧ ನನ್ನ ಜನರು ಮರೆತು ಬಿಡದ ಹಾಗೆ, ಅವರನ್ನು ಕೊಲ್ಲ ಬೇಡ;
ನಿನ್ನ ಪರಾಕ್ರಮದಿಂದ ಅವರನ್ನು ಅಲೆಯ ಮಾಡಿ,
ಅವರನ್ನು ಕೆಡವಿ ಹಾಕು, ನಮ್ಮ ಗುರಾಣಿಯಾದ ಕರ್ತನೇ.
೧೨ ಅವರ ಬಾಯಿಯ ಪಾಪಕ್ಕೂ, ಅವರ ತುಟಿಗಳ ಮಾತಿಗೂ,
ಅವರು ನುಡಿಯುವ ಶಾಪಕ್ಕೋಸ್ಕರವೂ ಸುಳ್ಳುಗಳಿಗೋಸ್ಕರವೂ, ಅವರ ಗರ್ವದಲ್ಲಿ ಹಿಡಿಯಲ್ಪಡಲಿ.
೧೩ ಉರಿಯಿಂದ ತೀರಿಸಿ ಬಿಡು;
ಅವರು ಇರದ ಹಾಗೆ ತೀರಿಸಿ ಬಿಡು;
ಆಗ ದೇವರು ಯಾಕೋಬನಲ್ಲಿ ಭೂಮಿಯ ಕೊನೆಗಳ ತನಕ ಆಳುವವನಾಗಿದ್ದಾನೆಂದು, ತಿಳಿ ಕೊಳ್ಳುವರು. ಸೇಲಾ.
೧೪ ಸಂಜೆಗೆ ತಿರುಗುವರು;
ನಾಯಿಯ ಹಾಗೆ ಗುರುಕಾಯಿಸುವರು;
ಪಟ್ಟಣವನ್ನು ಸುತ್ಯಾಡುವರು.
೧೫ ಅವರು ತಿನ್ನುವದಕ್ಕೆ ತಿರುಗಾಡುವರು;
ತೃಪ್ತಿಯಾಗದಿದ್ದರೆ, ಗುಣುಗುಟ್ಟುವರು.
೧೬ ಆದರೆ ನಾನು ನಿನ್ನ ಬಲವನ್ನು ಹಾಡುವೆನು;
ಹೊತಾರೆ ನಿನ್ನ ಕೃಪೆಗೆ ಉತ್ಸಾಹ ಪಡುವೆನು;
ಯಾಕಂದರೆ ನೀನು ನನಗೆ ದುರ್ಗವಾಗಿಯೂ, ನನ್ನ ಇಕ್ಕಟ್ಟಿನ ದಿವಸದಲ್ಲಿ ಆಶ್ರಯವಾಗಿಯೂ, ಇದ್ದೀ.
೧೭ ನನ್ನ ಬಲವೇ, ನಿನ್ನನ್ನು ಕೀರ್ತಿಸುವೆನು;
ಯಾಕಂದರೆ ದೇವರು ನನ್ನ ದುರ್ಗವೂ, ನನ್ನ ಕೃಪೆಯ ದೇವರೂ, ಆಗಿದ್ದಾನೆ.

## ೬೦. ಕೀರ್ತನೆ.

ಗಾಯಕಾಧಿಕಾರಿಗೆ; ಶೂಷನ್ ಏದೂತ್ ವಾದ್ಯದ ಮೇಲೆ; ಸ್ತುತಿ ಗೀತವು; ದಾವೀದನದು; ಕಲಿತ ಕಳ್ಳನು; ಅರಾಮ ನಹರಾಯಿಗಳ ಅರಾಮಿನ ಸಂಗತಲೂ ಚೋಬ ಅರಾಮಿನ ಸಂಗತಲೂ ಹೋರಾಡಿದ ಕಾಲದಲ್ಲಿ, ಯೋವಬನು ತಿರುಗಿ ಕೊಂಡು, ಎದೋಮಿನ ಹನ್ನೆರಡು ಸಾವಿರ ಜನರನ್ನು ಉಪ್ಪಿನ ತಗ್ಗಿನಲ್ಲಿ ಹೊಡೆದಾಗ

೧ ದೇವರೇ, ನಮ್ಮನ್ನು ಅಸಂಹಿಸಿ ಬಿಟ್ಟು, ನಮ್ಮನ್ನು ಚದರಿಸಿದ್ದಿ;
ಕೋಪಿಸಿದ್ದೀ. ನಮ್ಮ ಕಡೆಗೆ ತಿರುಗಿಕೋ.
೨ ಭೂಮಿಯನ್ನು ಕದಲ ಮಾಡಿ, ಬಿರಿಸಿದ್ದೀ;
ಅದರ ಬಿರುಕುಗಳನ್ನು ಸ್ವಸ್ಥ ಮಾಡು; ಯಾಕಂದರೆ ಅದು ಕದಲುತ್ತದೆ.
೩ ನಿನ್ನ ಜನರನ್ನು ಕಠಿಣವಾದದ್ದನ್ನು ನೋಡ ಮಾಡಿದ್ದೀ;
ಅಮಲಿನ ದ್ರಾಕ್ಷೇ ರಸವನ್ನು ನಮಗೆ ಕುಡಿಸಿದ್ದೀ.
೪ ನಿನಗೆ ಭಯ ಪಡುವವರಿಗೆ
ನಿನ್ನ ಸತ್ಯದ ನಿಮಿತ್ತ ಎತ್ತುವ ಧ್ವಜವನ್ನು ಕೊಟ್ಟಿದ್ದೀ. ಸೇಲಾ.
೫ ನಿನ್ನ ಪ್ರಿಯರು ತಪ್ಪಿಸಲ್ಪಡುವ ಹಾಗೆ,
ನಿನ್ನ ಬಲಗೈಯಿಂದ ರಕ್ಷಿಸಿ, ನಮಗೆ ಉತ್ತರ ಕೊಡು.
೬ ದೇವರು ತನ್ನ ಪರಿಶುದ್ಧತ್ವದಿಂದ ನುಡಿದಿದ್ದಾನೆ;
ನಾನು ಉತ್ಸಾಹ ಪಡುವೆನು; ಶಿಖೆಮನ್ನು ಪಾಲಿಕುವೆನು;
ಸುಕೋತಿನ ತಗ್ಗನ್ನು ಅಳತೆ ಮಾಡುವೆನು.
೭ ಗಿಲ್ಯಾದ್ ನನ್ನದು, ಮನಸ್ಸೆ ನನ್ನದು;



ಎಫ್ರಾಯಿಮ್ ನನ್ನ ತಲೆಯ ಬಲಸ್ಥಾನವು;
ಯೆಹೂದ ನನ್ನ ನ್ಯಾಯ ಕರ್ತನು;
೮ ಮೋವಾಬ್ ನನ್ನ ತೊಳೆಯುವ ಪಾತ್ರೆಯು;
ಎದೋಮಿನ ಮೇಲೆ ನನ್ನ ಕೆರವನ್ನು ಹಾಕುವೆನು;
ಫಿಲಿಷ್ಟ್ಯರುವು ನನ್ನ ನಿಮಿತ್ತ ಜಯ ಧ್ವನಿ ಗೈಯಲಿ.
೯ ಕೋಟೆಯ ಪಟ್ಟಣಕ್ಕೆ ನನ್ನನ್ನು ಕರತರುವವನ್ಯಾರು?
ಎದೋಮಿನ ತನಕ ನನ್ನನ್ನು ನಡಿಸುವವನ್ಯಾರು?
೧೦ ನಮ್ಮನ್ನು ಅಸಂಹಿಸಿ ಬಿಟ್ಟು,
ನಮ್ಮ ಸೈನ್ಯಗಳ ಸಂಗತ ಹೊರಟು ಹೋಗದೆ ಇದ್ದ ದೇವರೇ, ನೀನಲ್ಲವೋ!
೧೧ ಇಕ್ಕಟ್ಟಿನೊಳಗಿಂದ ನಮಗೆ ಸಹಾಯ ಕೊಡು;
ಯಾಕಂದರೆ ಮನುಷ್ಯನ ರಕ್ಷಣೆಯು ವ್ಯರ್ಥವಾಗಿದೆ.
೧೨ ದೇವರಿಂದ ಪರಾಕ್ರಮವನ್ನು ಮಾಡುವೆವು;
ಅವನೇ ನಮ್ಮ ವೈರಿಗಳನ್ನು ತುಳಿದು ಬಿಡುವನು.

## ೬೧. ಕೀರ್ತನೆ.

ಗಾಯಕಾಧಿಕಾರಿಗೆ; ತಂತಿ ವಾದ್ಯದಲ್ಲಿ; ದಾವೀದನದು.

೧ ದೇವರೇ, ನನ್ನ ಕೂಗನ್ನು ಕೇಳು;
ನನ್ನ ಪ್ರಾರ್ಥನೆಯನ್ನು ಆಲೈಸು.
೨ ನನ್ನ ಹೃದಯವು ಕುಂದಿ ಹೋಗಲಾಗಿ, ಭೂಮಿಯ ಅಂತ್ಯದಿಂದ ನಿನಗೆ ಕೂಗುತ್ತೇನೆ;
ನನಗಿಂತ ಎತ್ತರವಾದ ಬಂಡೆಗೆ ನನ್ನನ್ನು ನಡಿಸು.
೩ ಯಾಕಂದರೆ ನನಗೆ ಆಶ್ರಯವಾಗಿದ್ದೀ;
ಶತ್ರುವಿಗೆದುರು ಬಲವಾದ ಬುರುಜಾಗಿದ್ದೀ;
೪ ನಿನ್ನ ಗುಡಾರದಲ್ಲಿ ಯುಗ ಯುಗಕ್ಕೂ ವಾಸಿಸುವೆನು;
ನಿನ್ನ ರೆಕ್ಕೆಗಳ ಮರೆಯನ್ನು ಆಶ್ರಯಿಸಿ ಕೊಳ್ಳುವೆನು. ಸೇಲಾ.
೫ ಯಾಕಂದರೆ, ದೇವರೇ, ನೀನು ನನ್ನ ಹರಿಕೆಗಳನ್ನು ಕೇಳಿದ್ದೀ;
ನಿನ್ನ ಹೆಸರಿಗೆ ಭಯ ಪಡುವವರ ಸ್ವತಂತ್ರವನ್ನು ನನಗೆ ಕೊಟ್ಟಿದ್ದೀ.
೬ ಅರಸನ ದಿನಗಳಿಗೆ ದಿನಗಳನ್ನು ಕೂಡಿಸುವಿ;
ಅವನ ವರುಷಗಳು ತಲತಲಾಂತರಗಳಾಗಿರುವವು.
೭ ಯುಗ ಯುಗಕ್ಕೂ ದೇವರ ಮುಂದೆ ಕೂತು ಕೊಳ್ಳುವನು;
ಅವನನ್ನು ಕಾಯುವ ಹಾಗೆ ಕೃಪೆಯನ್ನೂ ಸತ್ಯವನ್ನೂ ಸಿದ್ಧ ಮಾಡು.
೮ ಹಾಗಾದರೆ ನನ್ನ ಹರಿಕೆಗಳನ್ನು ದಿನ ದಿನಕ್ಕೆ ಸಲ್ಲಿಸುವದಕ್ಕೆ,
ನಿನ್ನ ಹೆಸರನ್ನು ಎಂದೆಂದಿಗೂ ಕೀರ್ತಿಸುವೆನು.

## ೬೨. ಕೀರ್ತನೆ.

ಯೆದುತೂನ್ನರ ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ನಿಶ್ಚಯವಾಗಿ ದೇವರನ್ನು ನೋಡಿ, ನನ್ನ ಪ್ರಾಣವು ಮೌನವಾಗಿದೆ;
ನನ್ನ ರಕ್ಷಣೆಯು ಅವನಿಂದಲೇ.
೨ ನಿಶ್ಚಯವಾಗಿ ಅವನೇ ನನ್ನ ಬಂಡೆಯೂ, ನನ್ನ ರಕ್ಷಣೆಯೂ, ನನ್ನ ದುರ್ಗವೂ, ಆಗಿದ್ದಾನೆ; ಬಹಳವಾಗಿ ಕದಲೆನು.
೩ ಎಷ್ಟು ಪರ್ಯಂತರ ನೀವೆಲ್ಲರು ಕೊಲೆ ಮಾಡುವ ಹಾಗೆ, ಬಾಗುವ ಗೋಡೆಯಂತೆ, ನೂಕಲ್ಪಡುವ ಬೊಕ್ಕಿಯಂತೆ, ಮನುಷ್ಯನ ಮೇಲೆ ಬೀಳುತ್ತೀರಿ!
೪ ಅವನ ಎತ್ತರದಿಂದ ಅವನನ್ನು ಕೆಡವುವದಕ್ಕೆ ಮಾತ್ರ ಆಲೋಚಿಸುತ್ತಾರೆ;
ಸುಳ್ಳಲ್ಲಿ ಇಷ್ಟು ಪಡುತ್ತಾರೆ;
ಬಾಯಿಯಿಂದ ಆಶೀರ್ವದಿಸಿ, ತಮ್ಮ ಅಂತರಂಗದಲ್ಲಿ ಶಪಿಸುತ್ತಾರೆ. ಸೇಲಾ.
೫ ನಿಶ್ಚಯವಾಗಿ ದೇವರನ್ನು ನಂಬಿ, ಮೌನವಾಗಿರು, ನನ್ನ ಪ್ರಾಣವೇ.
ಯಾಕಂದರೆ ನನ್ನ ನಿರೀಕ್ಷೆ ಅವನಿಂದಲೇ.
೬ ನಿಶ್ಚಯವಾಗಿ ಅವನೇ ನನ್ನ ಬಂಡೆಯೂ, ನನ್ನ ರಕ್ಷಣೆಯೂ, ನನ್ನ ದುರ್ಗವೂ, ಆಗಿದ್ದಾನೆ; ನಾನು ಕದಲೆನು.
೭ ದೇವರಲ್ಲಿ ನನ್ನ ರಕ್ಷಣೆಯೂ ನನ್ನ ಘನವೂ ಅವೆ;
ನನ್ನ ಬಲದ ಬಂಡೆಯೂ ನನ್ನ ಆಶ್ರಯವೂ ದೇವರಲ್ಲಿ ಅವೆ.
೮ ಎಲ್ಲಾ ಕಾಲದಲ್ಲಿ ಅವನಲ್ಲಿ ಭರವಸುಡಿರಿ, ಜನರೇ;
ನಿಮ್ಮ ಹೃದಯವನ್ನು ಅವನ ಮುಂದೆ ಹೊಯ್ಯಿರಿ;
ದೇವರು ನಮಗೆ ಆಶ್ರಯವಾಗಿದ್ದಾನೆ. ಸೇಲಾ.
೯ ನಿಶ್ಚಯವಾಗಿ ಕಿರಿಯರು ಮಾಯವೇ,
ಹಿರಿಯರು ಸುಳ್ಳೇ;
ತ್ರಾಸಿನಲ್ಲಿ ಏಳುವ ಹಾಗೆ,
ಅವರು ಏಕವಾಗಿ ಮಾಯವೇ.
೧೦ ಬಲಾತ್ಕಾರದಲ್ಲಿ ಭರವಸಬಿಡ ಬೇಡಿರಿ;
ಸುಲಿಗೆಯಲ್ಲಿ ವ್ಯರ್ಥರಾಗ ಬೇಡಿರಿ;
ಆಸ್ತಿಯು ಬೆಳೆದರೆ, ಅದರ ಮೇಲೆ ಹೃದಯವಿಡ ಬೇಡಿರಿ.
೧೧ ಒಂದು ಸಾರಿ ದೇವರು ಮಾತಾಡಿದ್ದಾನೆ;
ಎರಡು ಸಾರಿ ಇದನ್ನು ಕೇಳಿದ್ದೇನೆ;
ಏನಂದರೆ, ದೇವರಿಗೆ ಬಲ ಉಂಟು.
೧೨ ಮತ್ತು ನಿನಗೆ, ಕರ್ತನೇ, ಕೃಪೆ ಉಂಟು;
ಯಾಕಂದರೆ ನೀನು ಮನುಷ್ಯನಿಗೆ ಅವನ ಕೆಲಸದ ಪ್ರಕಾರ ಸಲ್ಲಿಸುವಿ.

## ೬೩. ಕೀರ್ತನೆ.

ದಾವೀದನ ಗೀತವು; ಅವನು ಯೆಹೂದನ ಅರಣ್ಯದಲ್ಲಿ ಇದ್ದಾಗ.

೧ ದೇವರೇ, ನನ್ನ ದೇವರು ನೀನೇ. ನಿನ್ನನ್ನು ಹೊತಾರೆ ಹುಡುಕುತ್ತೇನೆ;
ಒಣಗಿದಂಥ, ನೀರಿಲ್ಲದೆ ದಣಿದಂಥ ಭೂಮಿಯಲ್ಲಿ ನಿನಗೋಸ್ಕರ ನನ್ನ ಪ್ರಾಣವು ದಾಹಗೊಳ್ಳುತ್ತದೆ;
ನನ್ನ ಮಾಂಸವು ನಿನ್ನನ್ನು ಅಪೇಕ್ಷಿಸುತ್ತದೆ.

೨ ಹಾಗ ನಿನ್ನ ಬಲವನ್ನೂ ನಿನ್ನ ಘನವನ್ನೂ ನೋಡಿ,
ಪರಿಶುದ್ಧ ಸ್ಥಳದಲ್ಲಿ ನಿನ್ನನ್ನು ದೃಷ್ಟಿಸಿದ್ದೇನೆ.

೩ ಯಾಕಂದರೆ ನಿನ್ನ ಕೃಪೆಯು ಜೀವಕ್ಕಿಂತ ಒಳ್ಳೇದು;
ನನ್ನ ತುಟಿಗಳು ನಿನ್ನನ್ನು ಹೊಗಳುವವು.

೪ ಹಾಗೆ ನಿನ್ನನ್ನು ನನ್ನ ಯಾವಜ್ಜೀವದಲ್ಲಿ ಆಶೀರ್ವದಿಸುವೆನು;
ನಿನ್ನ ಹೆಸರಿನಲ್ಲಿ ನನ್ನ ಕೈಗಳನ್ನು ಎತ್ತುವೆನು.

೫ ಕೊಬ್ಬಿನಿಂದಲೂ ಸಾರದಿಂದಲೂ ಆಗುವ ಪ್ರಕಾರ, ನನ್ನ ಪ್ರಾಣವು ತೃಪ್ತಿಯಾಗುವದು;
ಉತ್ಸಾಹದ ತುಟಿಗಳಿಂದ ನನ್ನ ಬಾಯಿಯು ಸ್ತುತಿಸುವದು.

೬ ನಿನ್ನನ್ನು ನನ್ನ ಹಾಸಿಗೆಯ ಮೇಲೆ ಜ್ಞಾಪಕ ಮಾಡಿ ಕೊಳ್ಳುವಾಗ,
ರಾತ್ರಿಯ ಝಾವುಗಳಲ್ಲಿ ನಿನ್ನನ್ನು ಧ್ಯಾನಿಸುತ್ತೇನೆ.

೭ ಯಾಕಂದರೆ ನನಗೆ ಸಹಾಯವಾಗಿದ್ದೀ;
ಆದದರಿಂದ ನಿನ್ನ ರೆಕ್ಕೆಗಳ ನೆರಳಿನಲ್ಲಿ ಉತ್ಸಾಹ ಪಡುವೆನು.

೮ ನನ್ನ ಪ್ರಾಣವು ನಿನ್ನ ಹಿಂದೆ ಹತ್ತುತ್ತದೆ;
ನಿನ್ನ ಬಲಗೈ ನನ್ನನ್ನು ಸ್ಥಿರ ಹಿಡಿಯುತ್ತದೆ.

೯ ಆದರೆ ನಾಶನ ಮಾಡುವದಕ್ಕೆ ನನ್ನ ಪ್ರಾಣವನ್ನು ಹುಡುಕುವವರು
ಭೂಮಿಯ ಕೆಳಗಣ ಸ್ಥಳಗಳಿಗೆ ಸೇರುವರು.

೧೦ ಕತ್ತಿಯ ಕೈಯಿಂದ ಅವನನ್ನು ಹೊಯ್ಯುವರು;
ನರಿಗಳಿಗೆ ಭಾಗವಾಗುವರು.

೧೧ ಆದರೆ ಅರಸು ದೇವರಲ್ಲಿ ಸಂತೋಷಿಸುವನು;
ಅವನ ಮೇಲೆ ಆಣೆ ಇಡುವವರೆಲ್ಲರು ಹೆಚ್ಚಳ ಪಡುವರು;
ಯಾಕಂದರೆ ಸುಳ್ಳಾಡುವವರ ಬಾಯಿ ಮುಚ್ಚಲ್ಪಡುವದು.

## ೬೪. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ದೇವರೇ, ನನ್ನ ಚಿಂತೆಯಲ್ಲಿ ನನ್ನ ಶಬ್ದವನ್ನು ಕೇಳು;
ಶತ್ರುವಿನ ಹೆದರಿಕೆಯಿಂದ ನನ್ನ ಜೀವವನ್ನು ಕಾಯಿ.

೨ ದುರ್ಮಾರ್ಗರ ಗುಟ್ಟಿಗೂ,
ಪಾತಕ ಮಾಡುವವರ ಗುಲ್ಲಿಗೂ, ನನ್ನನ್ನು ಮರೆ ಮಾಡು.

೩ ಅವರು ತಮ್ಮ ನಾಲಿಗೆಯನ್ನು ಕತ್ತಿಯ ಹಾಗೆ ಮಸೆಯುತ್ತಾರೆ;
ಮರೆಯಲ್ಲಿ ಸಂಪೂರ್ಣನನ್ನು ಎಸೆಯುವದಕ್ಕೆ ವಿಷ ವಾಕ್ಯವಾದ ತಮ್ಮ ಬಾಣವನ್ನು ಹೂಡುತ್ತಾರೆ.

೪ ಭಕ್ಕನೆ ಅವನನ್ನು ಎಸೆದು, ಭಯ ಪಡುವದಿಲ್ಲ.

೫ ತಪ್ಪೊಳಗೆ ಕೆಟ್ಟ ಕಾರ್ಯವನ್ನು ಬಲ ಮಾಡುತ್ತಾರೆ;
ನೇಣುಗಳನ್ನು ಬಡ್ಡುವದಕ್ಕೆ ಮಾತಾಡಿ,
ನಮ್ಮನ್ನು ನೋಡುವವರ್ಯಾರೆಂದು, ಹೇಳುತ್ತಾರೆ.

೬ ಅನ್ಯಾಯಗಳನ್ನು ಪರಿಶೋಧಿಸುತ್ತಾರೆ;
ಯುಕ್ತವಾದ ಯುಕ್ತಿಯನ್ನು ಮುಗಿಸಿದ್ದೇವೆ, ಅನ್ನುತ್ತಾರೆ;
ಅವರೆಲ್ಲರ ಅಂತರ್ಯವೂ ಹೃದಯವೂ ಆಳವಾಗಿವೆ.

೭ ಆದರೆ ದೇವರು ಅವರನ್ನು ಎಸೆಯುವನು;
ಭಕ್ಕನೆ ಬಾಣದಿಂದ ಅವರಿಗೆ ಘಾಯಗಳಾಗುವವು.

೮ ತಮ್ಮ ನಾಲಿಗೆಯಿಂದ ಎತವು ಬೀಳುವರು;
ಅವರನ್ನು ನೋಡುವವರೆಲ್ಲರು ಓಡಿ ಹೋಗುವರು.

೯ ಮತ್ತು ಎಲ್ಲಾ ಮನುಷ್ಯರು ಭಯ ಪಡುವರು; ದೇವರ ಕೃತ್ಯವನ್ನು ತಿಳಿಸುವರು;
ಅವನ ಕೆಲಸವನ್ನು ಬುದ್ಧಿಗೆ ತರುವರು.

೧೦ ನೀತಿವಂತನು ಕರ್ತನಲ್ಲಿ ಸಂತೋಷ ಪಟ್ಟು, ಅವನನ್ನು ಆಶ್ರಯಿಸಿ ಕೊಳ್ಳುವನು;
ನೆಟ್ಟನೆಯ ಹೃದಯವುಳ್ಳವರೆಲ್ಲರು ಹೆಚ್ಚಳ ಪಡುವರು.

## ೬೫. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವಾದ ಹಾಡು.

೧ ದೇವರೇ, ಚಿಯೋನಿನಲ್ಲಿ ನಿನಗೋಸ್ಕರ ಸ್ತೋತ್ರವು ಮೌನವಾಗಿದೆ.
ನಿನಗೆ ಹರಿಕೆ ಸಲ್ಲಿಸಲ್ಪಡುವದು.

೨ ಪ್ರಾರ್ಥನೆಯನ್ನು ಕೇಳುವವನೇ,
ನಿನ್ನ ಬಳಿಗೆ ಎಲ್ಲಾ ಮಾಂಸವು ಬರುವದು.

೩ ಅಕ್ರಮ ಕಾರ್ಯಗಳು ನನಗಿಂತ ಬಲಗೊಂಡವೆ;
ನಮ್ಮ ದ್ರೋಹಗಳನ್ನು ನೀನು ಮುಚ್ಚಿ ಬಿಡುವಿ.

೪ ನೀನು ಆದು ಕೊಂಡು, ಸೇರಿಸಿ ಕೊಳ್ಳುವವನು ಭಾಗ್ಯವಂತನು;
ನಿನ್ನ ಅಂಗಳಗಳಲ್ಲಿ ವಾಸವಾಗಿರುವನು;
ನಿನ್ನ ಪರಿಶುದ್ಧ ಮಂದಿರವಾದ ನಿನ್ನ ಮನೆಯ ಒಳ್ಳೇದರಿಂದ ತೃಪ್ತಿಯಾಗುವೆವು.

೫ ಭಯಂಕರವಾದವುಗಳಿಂದ ನೀತಿಯಲ್ಲಿ ನಮಗೆ ಉತ್ತರ ಕೊಡುವಿ,
ನಮ್ಮ ರಕ್ಷಣೆಯ ದೇವರೇ;
ಎಲ್ಲಾ ಭೂಮ್ಯಂತ್ಯಗಳಿಗೂ,
ಸಮುದ್ರದಲ್ಲಿ ದೂರವಾದವರಿಗೂ ಭರವಸವೇ;

೬ ಬೆಟ್ಟಗಳನ್ನು ತನ್ನ ಶಕ್ತಿಯಿಂದ ನಿಲ್ಲಿಸುವವನೇ;
ಪರಾಕ್ರಮದಿಂದ ನಡು ಕಟ್ಟಿ ಕೊಂಡವನೇ;

೭ ಸಮುದ್ರಗಳ ಘೋಷವನ್ನೂ,
ಅವುಗಳ ತೆರೆಗಳ ಘೋಷವನ್ನೂ, ಪ್ರಜೆಗಳ ಸಂಚಲತೆಯನ್ನೂ, ಅಣಗಿಸುವವನೇ.

೮ ಅಂತ್ಯ ವಾಸಿಗಳು ನಿನ್ನ ಗುರುತುಗಳಿಗೆ ಭಯ ಪಡುವರು.

ಉದಯೊಸ್ತಮಾನಗಳ ಹೊರವೋಗಳನ್ನು ಉತ್ಸಾಹ ಧ್ವನಿಗೈಯ ಮಾಡುತ್ತೀ.

೯ ಭೂಮಿಯನ್ನು ದರ್ಶಿಸಿ, ಅದನ್ನು ತ್ಯಾವಿಸಿ,
ಬಹಳ ಐಶ್ವರ್ಯವಾಗ ಮಾಡುತ್ತೀ; ದೇವರ ಕಾಲಿನ ನೀರಿನಿಂದ ತುಂಬಿ ಅದೆ;
ಹಾಗೆ ಅದನ್ನು ಸಿದ್ಧ ಮಾಡಿದ ಮೇಲೆ,
ಅವರ ಧಾನ್ಯವನ್ನು ಸಿದ್ಧ ಮಾಡುತ್ತೀ;

೧೦ ಅದರ ಮಡಿಕೆ ಸಾಲುಗಳನ್ನು ನೆನಸುತ್ತೀ;
ಅದರ ಬದಗಳನ್ನು ತಗ್ಗಿಸುತ್ತೀ;



ಸುರಿಯುವ ಮಳೆಗಳಿಂದ ಅದನ್ನು ಕರಗಿಸುತ್ತೀ;
ಅದರ ಪೊಳ್ಳಿಕೆಯನ್ನು ಆಶೀರ್ವದಿಸುತ್ತೀ.

೧೧ ವರುಷಕ್ಕೆ ನಿನ್ನ ಒಳ್ಳೇತನದ ಕಿರೀಟ ಇಡುತ್ತೀ;
ನಿನ್ನ ಹಾದಿಗಳು ಸಾರ ಹನಿಯುತ್ತವೆ.

೧೨ ಅರಣ್ಯದ ಹೊಲಗಳು ಹನಿಯುತ್ತವೆ;
ಗುಡ್ಡಗಳು ಉಲ್ಲಾಸದಿಂದ ನಡು ಕಟ್ಟಿ ಕೊಳ್ಳುತ್ತವೆ.

೧೩ ಹೊಲಗಳು ಮಂದೆಗಳನ್ನು ಹೊದ್ದು ಕೊಳ್ಳುತ್ತವೆ;
ತಗ್ಗುಗಳು ಧಾನ್ಯದಿಂದ ಮುಚ್ಚಿಕುತ್ತವೆ;
ಉತ್ಸಾಹ ಪಡುತ್ತವೆ, ಮತ್ತು ಹಾಡುತ್ತವೆ.

## ೬೬. ಕೀರ್ತನೆ.

ಗಾಯಕಾಧಿಕಾರಿಗೆ; ಗೀತವಾದ ಹಾಡು.

೧ ದೇವರಿಗೆ ಉತ್ಸಾಹ ಧ್ವನಿ ಗೈಯಿರಿ, ಸಮಸ್ತ ಭೂಮಿಯೇ.

೨ ಅವನ ಹೆಸರಿನ ಘನವನ್ನು ಕೀರ್ತಿಸಿರಿ;
ಅವನ ಸ್ತೋತ್ರವನ್ನು ಘನ ಮಾಡಿರಿ.

೩ ನಿನ್ನ ಕೆಲಸಗಳಿಂದ ಎಷ್ಟು ಭಯಂಕರವಾಗಿದ್ದೀ!
ನಿನ್ನ ಬಲದ ಬಾಹುಳ್ಯದ ನಿಮಿತ್ತ
ನಿನ್ನ ಶತ್ರುಗಳು ನಿನಗೆ ತಕ್ಕು ಮರ್ಯಾದೆ ಮಾಡುವರು.

೪ ಭೂಮಿಯೆಲ್ಲಾ ನಿನಗೆ ಅಡ್ಡ ಬೀಳುವದು,
ನಿನ್ನನ್ನು ಕೀರ್ತಿಸುವದು, ನಿನ್ನ ನಾಮವನ್ನು ಕೀರ್ತಿಸುವದು,
ಎಂದು ದೇವರಿಗೆ ಹೇಳಿರಿ. ಸೇಲಾ.

೫ ಬನ್ನಿರಿ, ದೇವರ ಕ್ರಿಯೆಗಳನ್ನು ನೋಡಿರಿ;
ಮನುಷ್ಯನ ಮಕ್ಕಳ ವಿಷಯವಾದ ಕೃತ್ಯಗಳಿಂದ ಭಯಂಕರನಾಗಿದ್ದಾನೆ.

೬ ಸಮುದ್ರವನ್ನು ಒಣಗಿದ ಭೂಮಿಯಾಗ ಮಾರ್ಪಡಿಸಿದನು;
ಅವರು ಕಾಲಿನಿಂದ ನದಿಯನ್ನು ದಾಟಿದರು;
ಅಲ್ಲಿ ಅವನಲ್ಲಿ ಸಂತೋಷಿಸಿದೆವು.

೭ ತನ್ನ ಪರಾಕ್ರಮದಿಂದ ಯುಗ ಯುಗಕ್ಕೂ ಆಳುವವನಾಗಿದ್ದಾನೆ;
ಅವನ ಕಣ್ಣುಗಳು ಜನಾಂಗಗಳನ್ನು ದೃಷ್ಟಿಸುತ್ತವೆ;
ಮಾರ್ಮಅವರು ಎದ್ದು ಕೊಳ್ಳದೆ ಇರಲಿ. ಸೇಲಾ.

೮ ಜನರೇ, ನಮ್ಮ ದೇವರನ್ನು ಆಶೀರ್ವದಿಸಿರಿ;
ಅವನ ಸ್ತೋತ್ರದ ಶಬ್ದವನ್ನು ಕೇಳಿಸ ಮಾಡಿರಿ.

೯ ನಮ್ಮ ಪ್ರಾಣವನ್ನು ಜೀವದಲ್ಲಿಟ್ಟು,
ನಮ್ಮ ಪಾದಗಳನ್ನು ಕದಲಲೀಸದೆ ಇದ್ದಾನೆ;

೧೦ ಯಾಕಂದರೆ ನಮ್ಮನ್ನು ಶೋಧಿಸಿದ್ದೀ, ದೇವರೇ;
ಬೆಳ್ಳಿ ಪುಟಕ್ಕೆ ಹಾಕುವ ಪ್ರಕಾರ ನಮ್ಮನ್ನು ಪುಟಕ್ಕೆ ಹಾಕಿದ್ದೀ.

೧೧ ಬಲೆಯೊಳಗೆ ನಮ್ಮನ್ನು ಶಿಕ್ಕ ಮಾಡಿದ್ದೀ;
ಭಾರವನ್ನು ನಮ್ಮ ಸೊಂಟಗಳಲ್ಲಿ ಇಟ್ಟಿದ್ದೀ.

೧೨ ಮನುಷ್ಯರನ್ನು ನಮ್ಮ ತಲೆಗಳ ಮೇಲೆ ಏರಿಸಿದ್ದೀ;
ಬೆಂಕಿಯಲ್ಲಿಯೂ ನೀರಿನಲ್ಲಿಯೂ ಸೇರಿದೆವು;
ಆದರೆ ನೀನು ನಮ್ಮನ್ನು ಐಶ್ವರ್ಯ ಪೂರ್ತಿಗೆ ಹೊರಗೆ ಬರ ಮಾಡಿದಿ.

೧೩ ಹೋಮಗಳಿಂದ ನಿನ್ನ ಮನೆಗೆ ಬರುವೆನು;
೧೪ ನನ್ನ ತುಟಿಗಳು ಉಚ್ಚರಿಸಿದಂಥ,
ನನ್ನ ಇಕ್ಕಟ್ಟಿನಲ್ಲಿ ನನ್ನ ಬಾಯಿ ನುಡಿದಂಥ
ನನ್ನ ಹರಿಕೆಗಳನ್ನು ನಿನಗೆ ಸಲ್ಲಿಸುವೆನು.

೧೫ ಕೊಬ್ಬಿದವುಗಳ ಹೋಮಗಳನ್ನು ಟಗರುಗಳ ಧೂಪದ ಸಂಗಡ ನಿನಗೆ ಅರ್ಪಿಸುವೆನು;
ಹೋತಗಳ ಸಂಗಡ ಎತ್ತುಗಳನ್ನು ತಂದಿಡುವೆನು. ಸೇಲಾ.

೧೬ ಬನ್ನಿರಿ, ಕೇಳಿರಿ, ದೇವರಿಗೆ ಭಯ ಪಡುವವರೆಲ್ಲರೇ;
ಅವನು ನನ್ನ ಪ್ರಾಣಕ್ಕೆ ಮಾಡಿದ್ದನ್ನು ಸಾರುವೆನು.

೧೭ ಅವನಿಗೆ ನನ್ನ ಬಾಯಿಯಿಂದ ಕೂಗಿದೆನು;
ನನ್ನ ನಾಲಿಗೆಯ ಕೆಳಗೆ ಉನ್ನತ ಸ್ತೋತ್ರವಿತ್ತು.

೧೮ ಪಾತಕವನ್ನು ನನ್ನ ಹೃದಯದಲ್ಲಿ ನಾನು ನೋಡಿದ್ದರೆ,
ಕರ್ತನು ಕೇಳುವದಿಲ್ಲ.

೧೯ ಆದರೆ ದೇವರು ಕೇಳಿದ್ದಾನಲ್ಲ!
ನನ್ನ ಪ್ರಾರ್ಥನೆಯ ಶಬ್ದವನ್ನು ಆಲೈಸಿದ್ದಾನಲ್ಲ!

೨೦ ನನ್ನ ಪ್ರಾರ್ಥನೆಯನ್ನೂ,
ನನ್ನ ಬಳಿಯಿಂದ ತನ್ನ ಕೃಪೆಯನ್ನೂ, ತೊಲಗಿಸದೆ ಇರುವ ದೇವರಿಗೆ ಆಶೀರ್ವಾದವಾಗಲಿ.

## ೬೭. ಕೀರ್ತನೆ.

ಗಾಯಕಾಧಿಕಾರಿಗೆ; ತಂತಿ ವಾದ್ಯಗಳಲ್ಲಿ; ಗೀತವಾದ ಹಾಡು.

೧ ದೇವರು ನಮ್ಮನ್ನು ಕರುಣಿಸಿ, ನಮ್ಮನ್ನು ಆಶೀರ್ವದಿಸಲಿ;
ತನ್ನ ಮುಖವನ್ನು ನಮ್ಮ ಬಳಿಯಲ್ಲಿ ಬೆಳಗ ಮಾಡಲಿ. ಸೇಲಾ.

೨ ಆಗ ನಿನ್ನ ಮಾರ್ಗವು ಭೂಮಿಯಲ್ಲಿ,
ನಿನ್ನ ರಕ್ಷಣೆಯು ಎಲ್ಲಾ ಜನಾಂಗಗಳಲ್ಲಿ ತಿಳಿಯಲ್ಪಡುವದು.

೩ ಜನರು ನಿನ್ನನ್ನು ಕೊಂಡಾಡಲಿ, ದೇವರೇ;
ಜನರೆಲ್ಲಾ ನಿನ್ನನ್ನು ಕೊಂಡಾಡಲಿ.

೪ ಪ್ರಜೆಗಳು ಸಂತೋಷ ಪಟ್ಟು, ಉತ್ಸಾಹ ಧ್ವನಿ ಗೈಯಲಿ;
ಯಾಕಂದರೆ ನೀನು ಜನರನ್ನು ಸರಿಯಾಗಿ ನ್ಯಾಯ ತೀರಿಸಿ,
ಪ್ರಜೆಗಳನ್ನು ಭೂಮಿಯಲ್ಲಿ ನಡಿಸುತ್ತೀ. ಸೇಲಾ.

೫ ಜನರು ನಿನ್ನನ್ನು ಕೊಂಡಾಡಲಿ, ದೇವರೇ;
ಜನರೆಲ್ಲಾ ನಿನ್ನನ್ನು ಕೊಂಡಾಡಲಿ.

೬ ಭೂಮಿಯು ತನ್ನ ಬೆಳೆಯನ್ನು ಕೊಡುವದು;
ನಮ್ಮ ದೇವರಾದ ದೇವರು ನಮ್ಮನ್ನು ಆಶೀರ್ವದಿಸುವನು.

೭ ದೇವರು ನಮ್ಮನ್ನು ಆಶೀರ್ವದಿಸುವನು;
ಭೂಮಿಯ ಕೊನೆಗಳೆಲ್ಲಾ ಅವನಿಗೆ ಭಯ ಪಡುವವು.

## ೬೮. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನದು; ಗೀತವಾದ ಹಾಡು.

೧ ದೇವರು ಏಳುತ್ತಾನೆ; ಅವನ ಶತ್ರುಗಳು ಚದರಿ ಹೋಗುತ್ತಾರೆ;
ಅವನ ಹಗೆಯವರು ಅವನ ಸಮುಖದಿಂದ ಓಡಿ ಹೋಗುತ್ತಾರೆ.

೨ ಹೊಗೆ ಹಾರಿ ಹೋಗುವ ಮೇರೆಗೆ, ಅವರನ್ನು ಹಾರಿಸುತ್ತೀ;
ಮೇಣವು ಬೆಂಕಿಯ ಮುಂದೆ ಕರಗುವ ಮೇರೆಗೆ, ದುಷ್ಟರು ದೇವರ
ಮುಂದೆ ನಾಶವಾಗುತ್ತಾರೆ.
3 ಆದರೆ ನೀತಿವಂತರು ಸಂತೋಷಿಸಿ,
ದೇವರ ಮುಂದೆ ಉತ್ಸಾಹ ಪಟ್ಟು,
ಸಂತೋಷದಿಂದ ಹರ್ಷಿಸುತ್ತಾರೆ.

೪ ದೇವರಿಗೆ ಹಾಡಿರಿ, ಅವನ ಹೆಸರನ್ನು ಕೀರ್ತಿಸಿರಿ;
ಅರಣ್ಯಗಳಲ್ಲಿ ರಥವೇರಿದವನಿಗೆ ಮಾರ್ಗವನ್ನು ಮಾಡಿರಿ;
ಅವನ ಹೆಸರು ಯೆಹೋವ; ಅವನ ಮುಂದೆ ಉತ್ಸಾಹ ಪಡಿರಿ.
೫ ದೇವರು ತನ್ನ ಪರಿಶುದ್ಧ ಸ್ಥಾನದಲ್ಲಿ
ದಿಕ್ಕಿಲ್ಲದವರಿಗೆ ತಂದೆಯೂ, ವಿಧವೆಯರಿಗೆ ನ್ಯಾಯಾಧಿಪತಿಯೂ,
ಆಗಿದ್ದಾನೆ.
೬ ದೇವರು ಒಂಟಿಗರನ್ನು ಮನೆಯಲ್ಲಿ ವಾಸಿಸ ಮಾಡುತ್ತಾನೆ;
ಕೆಲೆಯವರನ್ನು ಸಾಖ್ಯಕ್ಕೆ ಹೊರಗೆ ಬರ ಮಾಡುತ್ತಾನೆ;
ಆದರೆ ಮಾರ್ಮಲವರು ಒಣ ಭೂಮಿಯಲ್ಲಿ ವಾಸ ಮಾ
ಡುತ್ತಾರೆ.
೭ ದೇವರೇ, ನೀನು ನಿನ್ನ ಜನರ ಮುಂದೆ ಹೊರಟು,
ಕಾಡಿನಲ್ಲಿ ನಡೆದಾಗ, ಸೇಲಾ;
೮ ಭೂಮಿಯು ಕದಲಿತು; ಆಕಾಶವು ಸಹ ದೇವರ ಮುಂದೆ
ಸುರಿಯಿತು;
ಈ ಸೀನಾಯಿ ಕದಲಿತು; ಇಸ್ರಯೇಲನ ದೇವರಾದ ದೇವರ
ಮುಂದೆಯೇ.
೯ ಉದಾರವಾದ ಮಳೆಯನ್ನು ಸುರಿಸಿದಿ, ದೇವರೇ;
ದಣಿದ ನಿನ್ನ ಬಾಧ್ಯತೆಯನ್ನು ನೀನು ಸ್ಥಿರ ಪಡಿಸಿದಿ.
೧೦ ನಿನ್ನ ಗುಂಪುಗಳು ಅದರಲ್ಲಿ ವಾಸ ಮಾಡಿದವು;
ದೇವರೇ, ನಿನ್ನ ಒಳ್ಳೇತನದಿಂದ ದೀನನಿಗೋಸ್ಕರ ಸಿದ್ಧ
ಮಾಡಿದಿ.
೧೧ ಕರ್ತನು ಮಾತನ್ನು ಕೊಟ್ಟನು;
ಸುವಾರ್ತೆ ಹೇಳುವವರು ದೊಡ್ಡ ಸೈನ್ಯವಾಗಿದ್ದರು.
೧೨ ಸೈನ್ಯಗಳ ಅರಸರು ಓಡಿ, ಓಡಿ, ಹೋದರು;
ಮನೆಯಲ್ಲಿ ವಾಸಿಸುವವಳು ಕೊಳ್ಳೆಯನ್ನು ಪಾಲಿಟ್ಟಳು.
೧೩ ನೀವು ಹಟ್ಟಿಗಳ ಮಧ್ಯದಲ್ಲಿ ಮಲಗಿರುವಾಗ,
ಬೆಳ್ಳಿಯ ಗರಿಗಳು ಹಳದಿ ಚಿನ್ನದ ನೀರು ಬಿಟ್ಟಂಥ ಪಾರಿವಾಳದ
ರೆಕ್ಕೆಗಳ ಹಾಗಿದ್ದಿರಿ.
೧೪ ಸರ್ವ ಶಕ್ತನು ಅರಸುಗಳನ್ನು ಅದರಲ್ಲಿ ಚದರಿಸುವಾಗ,
ಸಲ್ಮೋನಿನಲ್ಲಿ ಹಿಮದ ಹಾಗಿತ್ತು.

೧೫ ಬಾಶಾನ್ ಬೆಟ್ಟವು ದಿವ್ಯ ಬೆಟ್ಟವಾಗಿದೆ;
ಬಾಶಾನ್ ಬೆಟ್ಟವು ಉನ್ನತಾಗ್ರಗಳ ಬೆಟ್ಟವಾಗಿದೆ.
೧೬ ಉನ್ನತಾಗ್ರಗಳ ಬೆಟ್ಟಗಳೇ, ಯಾಕೆ ಹೊಂಚಿ ಕೊಳ್ಳುತ್ತೀರಿ?
ದೇವರು ತನಗೆ ನಿವಾಸಕ್ಕಾಗಿ ಈ ಬೆಟ್ಟವನ್ನು ಅಪೇಕ್ಷಿಸುತ್ತಾನೆ;
ನಿಜವಾಗಿ ಕರ್ತನು ಅದರಲ್ಲಿ ಸದಾಕಾಲಕ್ಕೆ ವಾಸಿಸುವನು.
೧೭ ದೇವರ ರಥಗಳು ಅಯುತಗಳೂ, ಸಹಸ್ರ ಸಹಸ್ರಗಳೂ, ಆಗಿವೆ.
ಕರ್ತನು ಸೀನಾಯಿಯಲ್ಲಿ ಇದ್ದ ಹಾಗೆ, ಅವಕೊಳಗೆ ಪರಿಶುದ್ಧ
ಸ್ಥಳದಲ್ಲಿ ಇದ್ದಾನೆ.
೧೮ ಉನ್ನತಕ್ಕೆ ಏರಿ ಹೋಗಿದ್ದೀ;
ಕೆಲೆಯನ್ನು ಕೆಳೆ ಹಿಡಿದಿದ್ದೀ;
ಮಾರ್ಮಲವರು ಸಹ ಕರ್ತನಾದ ದೇವರ ಸಂಗಡ ನಿವಾಸಿಸು
ವ ಹಾಗೆ,
ಮನುಷ್ಯರಿಗೋಸ್ಕರ ವರಗಳನ್ನು ತೆಗೆದು ಕೊಂಡಿದ್ದೀ.
೧೯ ಕರ್ತನಿಗೆ ದಿನ ದಿನಕ್ಕೆ ಆಶೀರ್ವಾದವಾಗಲಿ. ಭಾರಿ ಉಪಕಾರ
ನಮಗೆ ಮಾಡುತ್ತಾನೆ;
ದೇವರು ನಮ್ಮ ರಕ್ಷಣೆಯಾಗಿದ್ದಾನೆ. ಸೇಲಾ.

೨೦ ದೇವರು ನಮಗೆ ರಕ್ಷಣೆಗಳ ದೇವರಾಗಿದ್ದಾನೆ;
ನಮ್ಮ ಕರ್ತನಾದ ಯೆಹೋವನಿಗೆ ಮರಣದಿಂದ ಹೊರಡೋ
ಣಗಳು ಉಂಟು.
೨೧ ನಿಶ್ಚಯವಾಗಿ ದೇವರು ತನ್ನ ಶತ್ರುಗಳ ತಲೆಯನ್ನೂ,
ತನ್ನ ಅಪರಾಧಗಳಲ್ಲಿ ನಡೆದು ಕೊಳ್ಳುವವನ ಕೂದಲುಳ್ಳ
ಮಂಡೆಯನ್ನೂ ಘಾಯ ಮಾಡುವನು.
೨೨ ಕರ್ತನು ಹೇಳಿದ್ದಾನೆ—ನಿನ್ನ ಪಾದವೂ,
ನಿನ್ನ ನಾಯಿಗಳ ನಾಲಿಗೆಯೂ ನಿನ್ನ ಶತ್ರುಗಳಲ್ಲಿ ಒಬ್ಬೊಬ್ಬರ
ರಕ್ತದಲ್ಲಿ ಕಲಕಾಡುವ ಹಾಗೆ,
೨೩ ಬಾಶಾನಿಂದ ನನ್ನ ಜನರನ್ನು ತಿರಿಗಿ ಬರ ಮಾಡುವೆನು;
ಸಮುದ್ರದ ಅಗಾಧಗಳಿಂದ ತಿರಿಗಿ ಬರ ಮಾಡುವೆನು.

೨೪ ನಿನ್ನ ನಡೆಗಳನ್ನು, ದೇವರೇ,
ಪರಿಶುದ್ಧ ಸ್ಥಳದಲ್ಲಿ ನನ್ನ ದೇವರ, ನನ್ನ ಅರಸನ ನಡೆಗಳನ್ನೇ
ನೋಡಿದ್ದಾರೆ.
೨೫ ಹಾಡುವವರು ಮುಂದಾಗಿಯೂ, ಬಾರಿಸುವವರು ಹಿಂದಾಗಿಯೂ,
ದಮ್ಮಡಿ ಬಡಿಯುವ ಕನ್ಯೆಯರು ಮಧ್ಯದಲ್ಲಿಯೂ, ನಡೆಯು
ತ್ತಾರೆ.
೨೬ ಕೂಟಗಳಲ್ಲಿ ಕರ್ತನಾದ ದೇವರನ್ನು ಆಶೀರ್ವದಿಸಿರಿ,
ಇಸ್ರಯೇಲನ ಬುಗ್ಗೆಯವರೇ, ಕರ್ತನನ್ನು ಆಶೀರ್ವದಿಸಿರಿ.
೨೭ ಅಲ್ಲಿ ಅವರನ್ನಾಳುವವನಾದ ಸಣ್ಣ ಬೆನ್ಯಾಮೀನನೂ,
ಅವರ ನಾಯಕರಾದ ಯೆಹೂದನ ಪ್ರಧಾನರೂ,
ಜೆಬುಲೋನನ ಪ್ರಧಾನರೂ, ನೆಫ್ತಾಲೀಮನ ಪ್ರಧಾನರೂ, ಇದ್ದಾರೆ.

೨೮ ನಿನ್ನ ದೇವರು ನಿನ್ನ ಬಲವನ್ನು ಆಜ್ಞಾಪಿಸಿದ್ದಾನೆ;
ದೇವರೇ, ನಮಗೋಸ್ಕರ ನಡಿಸಿದ ಕಾರ್ಯ ಬಲ ಪಡಿಸು.
೨೯ ಯೆರೂಸಲೇಮಿನಲ್ಲಿರುವ ನಿನ್ನ ಮಂದಿರದ ನಿಮಿತ್ತ
ಅರಸುಗಳು ನಿನಗೆ ಕಾಣಿಕೆಗಳನ್ನು ತರುವರು.
೩೦ ಜೆಂಬಿನಲ್ಲಿರುವ ಮೃಗವನ್ನೂ,
ಬೆಳ್ಳಿಯ ಗಟ್ಟಿಗಳಿಂದ ಅಡ್ಡ ಬೀಳುವ ಹಾಗೆ,
ಜನರ ಕರುಗಳ ಸಂಗಡ ಹೋರಿಗಳ ಗುಂಪನ್ನೂ, ಗದರಿಸು.
ಕಾಳಗದಲ್ಲಿ ಸಂತೋಷ ಪಡುವ ಜನರನ್ನು ಚದರಿಸುತ್ತಾನೆ.
೩೧ ಶ್ರೇಷ್ಠರು ಬಿಚ್ಚಾದಿಂದ ಬರುವರು;
ಕೂಷ್ ತನ್ನ ಕೈಗಳನ್ನು ದೇವರ ಕಡೆಗೆ ಬೇಗ ಚಾಚುವರು.

೩೨ ಭೂಮಿಯ ರಾಜ್ಯಗಳೇ, ದೇವರಿಗೆ ಹಾಡಿರಿ;
ಕರ್ತನನ್ನು ಕೀರ್ತಿಸಿರಿ. ಸೇಲಾ.



೩೩ ಪೂರ್ವದ ಆಕಾಶಗಳ ಆಕಾಶಗಳಲ್ಲಿ ಸಂಚರಿಸುವವನಿಗೆ ಹಾಡಿರಿ;
ಇಗೋ, ಬಲವುಳ್ಳ ಶಬ್ದವಾದ ತನ್ನ ಶಬ್ದವನ್ನು ಕೊಡುತ್ತಾನೆ.
೩೪ ಬಲವನ್ನು ದೇವರಿಗೆ ಕೊಡಿರಿ;
ಇಸ್ರಯೇಲನ ಮೇಲೆ ಅವನ ಘನತೆಯೂ,
ಮೇಘಗಳಲ್ಲಿ ಅವನ ಬಲವೂ, ಆಗಿವೆ.
೩೫ ದೇವರೇ, ನಿನ್ನ ಪರಿಶುದ್ಧ ಸ್ಥಳಗಳಿಂದ ಭಯಂಕರನಾಗಿದೀ;
ಇಸ್ರಯೇಲಿನ ದೇವರು, ಇವನೇ ಜನರಿಗೆ ಬಲವನ್ನೂ ಶಕ್ತಿಯ
ನ್ನೂ ಕೊಡುತ್ತಾನೆ.
ದೇವರಿಗೆ ಆಶೀರ್ವಾದವಾಗಲಿ.

## ೬೯. ಕೀರ್ತನೇ.

ಗಾಯಕಾಧಿಕಾರಿಗೆ; ಶೂಶನೆಲೆ ವಾದ್ಯಗಳ ಮೇಲೆ; ದಾವೀದನದು.

೧ ದೇವರೇ, ನನ್ನನ್ನು ರಕ್ಷಿಸು;
ಯಾಕಂದರೆ ನೀರುಗಳು ಪ್ರಾಣದ ವರೆಗೂ ಬಂದವೆ.
೨ ಆಳವಾದ ಬುರುದೆಯಲ್ಲಿ ಮುಣುಗುತ್ತೇನೆ, ನೆಲವಿಲ್ಲ;
ನೀರಿನ ಅಗಾಧಗಳಲ್ಲಿ ಸೇರಿದ್ದೇನೆ; ಪ್ರವಾಹವು ನನ್ನ ಮೇಲೆ
ಹೊರಳುತ್ತದೆ.
3 ನಾನು ಕೂಗಿ ದಣಿದಿದ್ದೇನೆ; ನನ್ನ ಗಂಟಲು ಉರಿಯುತ್ತದೆ;
ನಾನು ದೇವರನ್ನು ಎದುರು ನೋಡುವದರಿಂದ ನನ್ನ ಕಣ್ಣು
ಗಳು ಕ್ಷೀಣಿಸುತ್ತವೆ.
೪ ನಮ್ಮನೆ ನನ್ನನ್ನು ಹಗೆ ಮಾಡುವವರು ನನ್ನ ತಲೆಯ
ಕೂದಲುಗಳಿಗಿಂತ ಹೆಚ್ಚಾಗಿದ್ದಾರೆ;
ನನ್ನನ್ನು ಸಂಹರಿಸುವವರೂ, ಸುಳ್ಳಾಡುವ ನನ್ನ ಶತ್ರುಗಳೂ
ಪ್ರಬಲವಾಗಿದ್ದಾರೆ;
ನಾನು ಸುಲಿಯದ್ದನ್ನು ತಿರಿಗಿ ಕೊಡ ಬೇಕಾಯಿತು.

೫ ದೇವರೇ, ನೀನು ನನ್ನ ಮೂಢತ್ವವನ್ನು ಶಿಳ್ಳಿದಿದ್ದೀ;
ನನ್ನ ಅಪರಾಧಗಳು ನಿನಗೆ ಮರೆಯಾಗಿಲ್ಲ.
೬ ಸೈನ್ಯಗಳ ಕರ್ತನಾದ ಯೆಹೋವನೇ, ನಿನ್ನನ್ನು ನಿರೀಕ್ಷಿಸು
ವವರು ನನ್ನಿಂದ ನಾಚಿಕೆ ಪಡದೆ ಇರಲಿ;
ಇಸ್ರಯೇಲಿನ ದೇವರೇ, ನಿನ್ನನ್ನು ಹುಡುಕುವವರು ನನ್ನಿಂದ
ಅವಮಾನ ಪಡದೆ ಇರಲಿ.
೭ ಯಾಕಂದರೆ ನಿನ್ನ ನಿಮಿತ್ತ ನಿಂದೆಯನ್ನು ತಾಳಿದ್ದೇನೆ;
ಅವಮಾನವು ನನ್ನ ಮುಖವನ್ನು ಮುಚ್ಚಿ ಅದೆ.
೮ ನನ್ನ ಸಹೋದರರಿಗೆ ಅನ್ಯನಾಗಿದ್ದೇನೆ;
ನನ್ನ ತಾಯಿಯ ಮಕ್ಕಳಿಗೆ ಪರನಾಗಿದ್ದೇನೆ.
೯ ಯಾಕಂದರೆ ನಿನ್ನ ಮನೆಯ ಆಸಕ್ತಿಯು ನನ್ನನ್ನು ತಿಂದು
ಬಿಟ್ಟದೆ;
ನಿನ್ನನ್ನು ನಿಂದಿಸುವವರ ನಿಂದೆಗಳು ನನ್ನ ಮೇಲೆ ಬಿದ್ದವೆ.
೧೦ ನನ್ನ ಪ್ರಾಣವು ಉಪವಾಸದಲ್ಲಿ ಅತ್ತೆನು;
ಅದು ನನಗೆ ನಿಂದೆಗಳಾಯಿತು.
೧೧ ಗೋಣಿ ತಟ್ಟು ಹೊದ್ದು ಕೊಂಡಿದ್ದೇನೆ;
ಅವರಿಗೆ ಗಾದೆ ಆದೆನು.
೧೨ ಬಾಗಲಲ್ಲಿ ಕೂತು ಕೊಳ್ಳುವವರು ನನಗೆ ವಿರೋಧವಾಗಿ ಮಾ
ತಾಡುತ್ತಾರೆ;
ನಾನು ಮದ್ಯಪಾನಿಗಳಿಗೆ ಹಾಡುಗಳಾದೆನು.
೧೩ ನಾನಾದರೆ, ಕರ್ತನೇ, ನನ್ನ ಪ್ರಾರ್ಥನೆಯು ಹಿತವಾದ
ಕಾಲದಲ್ಲಿ ನಿನಗೆ ಆಗಿದೆ;
ದೇವರೇ, ನಿನ್ನ ಕೃಪೆಯ ಬಾಹುಳ್ಯದಲ್ಲಿಯೂ, ನಿನ್ನ ರಕ್ಷಣೆ
ಯ ಸತ್ಯದಲ್ಲಿಯೂ, ನನಗೆ ಉತ್ತರ ಕೊಡು.
೧೪ ನನ್ನನ್ನು ಕೆಸರನೊಳಗಿಂದ ಬಿಡಿಸು; ನಾನು ಮುಣುಗದಿರಲಿ;
ನನ್ನ ಹಗೆಯವರಿಂದಲೂ, ನೀರಿನ ಅಗಾಧಗಳೊಳಗಿಂದಲೂ ನ
ನಗೆ ಬಿಡುಗಡೆಯಾಗಲಿ.
೧೫ ನೀರಿನ ಪ್ರವಾಹವು ನನ್ನ ಮೇಲೆ ಹೊರಳದೆ ಇರಲಿ;
ಅಗಾಧವು ನನ್ನನ್ನು ನುಂಗದೆ ಇರಲಿ;
ಕೂಣಿಯು ನನ್ನ ಮೇಲೆ ತನ್ನ ಬಾಯಿಯನ್ನು ಮುಚ್ಚದೆ
ಇರಲಿ.
೧೬ ಕರ್ತನೇ, ನನಗೆ ಉತ್ತರ ಕೊಡು; ಯಾಕಂದರೆ ನಿನ್ನ ಕೃಪೆ
ಯು ಒಳ್ಳೇದಾಗಿದೆ;
ನಿನ್ನ ಅಂತಃಕರಣಗಳ ಬಾಹುಳ್ಯದ ಪ್ರಕಾರ ನನ್ನ ಕಡೆಗೆ
ತಿರುಗು.
೧೭ ನಿನ್ನ ಮುಖವನ್ನು ನಿನ್ನ ಸೇವಕನಿಗೆ ಮರೆ ಮಾಡ ಬೇಡ;
ಯಾಕಂದರೆ ನನಗೆ ಇಕ್ಕಟ್ಟು ಅದೆ; ಬೇಗ ನನಗೆ ಉತ್ತರ
ಕೊಡು.
೧೮ ನನ್ನ ಪ್ರಾಣಕ್ಕೆ ಸಮೀಪವಾಗು; ಅದನ್ನು ಬಿಡುಗಡೆ ಮಾಡು;
ನನ್ನ ಶತ್ರುಗಳ ನಿಮಿತ್ತ ನನ್ನನ್ನು ವಿಮೋಚಿಸು.
೧೯ ನೀನು ನನ್ನ ನಿಂದೆಯನ್ನೂ ನನ್ನ ನಾಚಿಕೆಯನ್ನೂ ನನ್ನ
ಅವಮಾನವನ್ನೂ ಶಿಳ್ಳಿದಿದ್ದೀ;
ನನ್ನ ವೈರಿಗಳೆಲ್ಲರು ನಿನ್ನ ಮುಂದೆ ಇದ್ದಾರೆ.
೨೦ ನಿಂದೆಯು ನನ್ನ ಹೃದಯವನ್ನು ಮುರಿದದೆ;
ರೋಗಿಯಾಗಿದ್ದೇನೆ.
ಕನಿಕರಕ್ಕೋಸ್ಕರ ನಿರೀಕ್ಷಿಸಿದೆನು, ಆದರೆ ಕಾಣಲಿಲ್ಲ;
ಆದರಿಸುವವರಿಗೋಸ್ಕರ ಸಹ, ಆದರೆ ಶಿಕ್ಕಲಿಲ್ಲ.
೨೧ ನನ್ನ ಆಹಾರಕ್ಕಾಗಿ ಪಿತ್ತವಾದದ್ದನ್ನು ಕೊಟ್ಟರು;
ನನ್ನ ದಾಹಕ್ಕಾಗಿ ನನಗೆ ಹುಳಿಯನ್ನು ಕುಡಿಯ ಕೊಟ್ಟರು.

೨೨ ಅವರ ಮೇಜು ಅವರ ಮುಂದೆ ಉರ್ಲೂ,
ಸಮಾಧಾನವಾಗಿರುವವರಿಗೆ ನೇಣೂ, ಆಗಲಿ.
೨೩ ಅವರ ಕಣ್ಣುಗಳು ಕಾಣದ ಹಾಗೆ ಕತ್ತಲಾಗಲಿ;
ಅವರ ಸೊಂಟಗಳನ್ನು ಯಾವಾಗಲೂ ಕದಲಿಸು.
೨೪ ಅವರ ಮೇಲೆ ನಿನ್ನ ಕೋಪವನ್ನು ಹೊಯಿ;
ನಿನ್ನ ಕೋಪದ ಉರಿಯು ಅವರನ್ನು ಹಿಡಿಯಲಿ.
೨೫ ಅವರ ವಠಾರವು ನಾಶವಾಗಲಿ;
ಅವರ ಗುಡಾರಗಳಲ್ಲಿ ನಿವಾಸಿಯು ಇಲ್ಲದೆ ಹೋಗಲಿ.
೨೬ ಯಾಕಂದರೆ ನೀನು ಹೊಡೆದವನನ್ನು ಹಿಂದಟ್ಟುತ್ತಾರೆ;
ನೀನು ಘಾಯ ಮಾಡಿದವರ ವ್ಯಸನಗಳನ್ನು ಸಾರುತ್ತಾರೆ.
೨೭ ಅವರ ಅಕ್ರಮದ ಮೇಲೆ ಅಕ್ರಮವನ್ನು ಇಡು;
ಅವರು ನಿನ್ನ ನೀತಿಯಲ್ಲಿ ಸೇರದೆ ಇರಲಿ.
೨೮ ಜೀವದ ಪುಸ್ತಕದೊಳಗಿಂದ ಅಳಿಸಲ್ಪಡದೆ;
ನೀತಿವಂತರ ಸಂಗಡ ಬರೆಯಲ್ಪಡದೆ ಇರಲಿ.

೨೯ ಆದರೆ ನಾನು ದೀನನಾಗಿಯೂ ವ್ಯಸನವುಳ್ಳವನಾಗಿಯೂ
ಇದ್ದೇನೆ;
ದೇವರೇ, ನಿನ್ನ ರಕ್ಷಣೆಯು ನನ್ನನ್ನು ಭದ್ರ ಮಾಡಲಿ.
೩೦ ದೇವರ ಹೆಸರನ್ನು ಹಾಡಿನಿಂದ ಸ್ತುತಿಸುವೆನು;
ಸ್ತೋತ್ರದಿಂದ ಅವನಿಗೆ ಮಹಿಮೆ ಕೊಡುವೆನು.
೩೧ ಅದು ಕರ್ತನಿಗೆ ಕೊಂಬೂ ಗೊರಸೆಯೂ ಉಳ್ಳ
ಎತ್ತು ಹೋರಿಗಳಿಗಿಂತ ಹಿತವಾಗಿರುವದು.
೩೨ ದೀನರು ನೋಡಿ, ಸಂತೋಷಿಸುವರು;
ದೇವರನ್ನು ಹುಡುಕುವವರೇ, ನಿಮ್ಮ ಹೃದಯವು ಬದುಕಲಿ.
೩೩ ಯಾಕಂದರೆ ಕರ್ತನು ಬಡವರನ್ನು ಕೇಳಿ,
ತನ್ನ ಕೆಳೆಯವರನ್ನು ತಿರಸ್ಕರಿಸುವದಿಲ್ಲ.

೩೪ ಆಕಾಶವೂ, ಭೂಮಿಯೂ,
ಸಮುದ್ರಗಳೂ, ಅವುಗಳಲ್ಲಿ ಸಂಚರಿಸುವದೆಲ್ಲವೂ ಅವನನ್ನು
ಸ್ತುತಿಸಲಿ.
೩೫ ಯಾಕಂದರೆ ದೇವರು ಚಿಯೋನನ್ನು ರಕ್ಷಿಸುವನು; ಯೆಹೂ
ದದ ಪಟ್ಟಣಗಳನ್ನು ಕಟ್ಟುವನು.
ಅಲ್ಲಿ ವಾಸ ಮಾಡಿ, ಅದನ್ನು ಸ್ವತಂತ್ರಿಸಿ ಕೊಳ್ಳುವರು.
೩೬ ಮತ್ತು ಅವನ ಸೇವಕರ ಬೀಜವು ಅದನ್ನು ಬಾಧ್ಯವಾಗಿ ಹೊಂ
ದುವದು;
ಅವನ ಹೆಸರನ್ನು ಪ್ರೀತಿ ಮಾಡುವವರು ಅದರಲ್ಲಿ ವಾಸ ಮಾಡು
ವರು.

## ೭೦. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನದು; ಜ್ಞಾಪಕಾರ್ಥವಾದದ್ದು.

೧ ದೇವರೇ, ನನ್ನನ್ನು ಬಿಡಿಸುವದಕ್ಕೆ,
ಕರ್ತನೇ, ನನ್ನ ಸಹಾಯಕ್ಕೆ ತ್ವರೆ ಪಡು.
೨ ನನ್ನ ಪ್ರಾಣವನ್ನು ಹುಡುಕುವವರು ನಾಚಿಕೊಂಡು, ಲಜ್ಜೆ ಪಡಲಿ;
ನನ್ನ ಕೇಡಿನಲ್ಲಿ ಸಂತೋಷಿಸುವವರು ಹಿಂದಿರುಗಿ, ಅವಮಾನ
ಪಡಲಿ.
೩ ಆಹ, ಆಹ, ಎಂದು ಹೇಳುವವರು ತಮ್ಮ ನಾಚಿಕೆಯ ಫಲಕ್ಕಾಗಿ
ತಿರುಗಲಿ.
೪ ನಿನ್ನನ್ನು ಹುಡುಕುವವರೆಲ್ಲರು ನಿನ್ನಲ್ಲಿ ಆನಂದ ಪಟ್ಟು,
ಸಂತೋಷಿಸಲಿ;
ನಿನ್ನ ರಕ್ಷಣೆಯನ್ನು ಪ್ರೀತಿ ಮಾಡುವವರು—ಕರ್ತನು ಮಹಿಮೆ
ಪಡಲಿ ಎಂದು, ಯಾವಾಗಲೂ ಹೇಳಲಿ.
೫ ಆದರೆ ನಾನು ದೀನನೂ ಬಡವನೂ ಆಗಿದ್ದೇನೆ;
ದೇವರೇ, ನನಗೋಸ್ಕರ ತ್ವರೆ ಪಡು;
ನನ್ನ ಸಹಾಯವೂ, ನನ್ನನ್ನು ತಪ್ಪಿಸುವವನೂ ನೀನೇ.
ಕರ್ತನೇ, ತಡೆ ಮಾಡ ಬೇಡ.

## ೭೧. ಕೀರ್ತನೆ.

೧ ಕರ್ತನೇ, ನಿನ್ನನ್ನು ಆಶ್ರಯಿಸಿ ಕೊಂಡಿದ್ದೇನೆ;
ನಾನು ಯುಗ ಯುಗಕ್ಕೂ ನಾಚಿಕೆ ಪಡದೆ ಇರಲಿ.
೨ ನಿನ್ನ ನೀತಿಯಲ್ಲಿ ನನ್ನನ್ನು ಬಿಡಿಸಿ, ನನ್ನನ್ನು ತಪ್ಪಿಸು;
ನಿನ್ನ ಕಿವಿಯನ್ನು ನನ್ನ ಕಡೆಗೆ ಬೊಗ್ಗಿಸಿ ನನ್ನನ್ನು ರಕ್ಷಿಸು.
೩ ನಾನು ಯಾವಾಗಲೂ ಹೊಕ್ಕುಳ್ಳುವ ಬಲಸ್ಥಾನದ ಬಂಡೆಯಾ
ಗಿ ನನಗೆ ಇರು.
ನನ್ನನ್ನು ರಕ್ಷಿಸುವದಕ್ಕೆ ಆಜ್ಞಾಪಿಸಿದ್ದೀ;
ಯಾಕಂದರೆ ನನ್ನ ಅರೆಯೂ, ನನ್ನ ಕೋಟೆಯೂ ನೀನೇ.
೪ ನನ್ನ ದೇವರೇ, ದುಷ್ಟನ ಕೈಗೂ,
ಅನ್ಯಾಯ ಮಾಡುವವನ ಕ್ರೂರನ ಅಂಗೈಗೂ, ನನ್ನನ್ನು
ತಪ್ಪಿಸು.
೫ ಯಾಕಂದರೆ, ಕರ್ತನಾದ ಯೆಹೋವನೇ, ನೀನು ನನ್ನ
ನಿರೀಕ್ಷೆಯೂ,
ನನ್ನ ಯೌವನದಿಂದ ನನ್ನ ಭರವಸವೂ ಆಗಿದ್ದೀ.
೬ ಹೊಟ್ಟೆಯಿಂದ ನಿನ್ನ ಮೇಲೆ ಆತು ಕೊಂಡಿದ್ದೇನೆ;
ತಾಯಿಯ ಗರ್ಭದಿಂದ ನೀನು ನನ್ನನ್ನು ತೆಗೆದಿ;
ಯಾವಾಗಲೂ ನಿನ್ನಲ್ಲಿ ನನ್ನ ಸ್ತೋತ್ರವು ಇರುವದು.
೭ ಅನೇಕರಿಗೆ ಆಶ್ಚರ್ಯವಾಗಿದ್ದೇನೆ;
ಆದರೆ ನೀನು ನನ್ನ ಬಲವಾದ ಆಶ್ರಯವಾಗಿದ್ದೀ.
೮ ನನ್ನ ಬಾಯಿ ನಿನ್ನ ಸ್ತೋತ್ರದಿಂದಲೂ,
ದಿನವೆಲ್ಲಾ ನಿನ್ನ ಸೌಂದರ್ಯದಿಂದಲೂ, ತುಂಬಿರಲಿ.

೯ ನನ್ನ ಮುಪ್ಪಿನಲ್ಲಿ ನನ್ನನ್ನು ತಳ್ಳಿ ಬಿಡ ಬೇಡ;
ನನ್ನ ಶಕ್ತಿಯು ಕಳೆದು ಹೋಗುವಾಗ, ನನ್ನನ್ನು ಕೈಬಿಡ ಬೇಡ.
೧೦ ಯಾಕಂದರೆ ನನ್ನ ಶತ್ರುಗಳು ನನಗೆ ವಿರೋಧವಾಗಿ ಮಾ
ತಾಡುತ್ತಾರೆ;
ನನ್ನ ಪ್ರಾಣಕ್ಕೆ ಹೊಂಚುವವರು ಕೂಡ ಆಲೋಚನೆ ಮಾ
ಡುತ್ತಾರೆ.
೧೧ ಏನಂದರೆ, ದೇವರು ಅವನನ್ನು ಕೈ ಬಿಟ್ಟಿದ್ದಾನೆ;
ಹಿಂದಟ್ಟಿ, ಅವನನ್ನು ಹಿಡಿದು ಕೊಳ್ಳಿರಿ; ಯಾಕಂದರೆ ಬಿಡಿಸು
ವವನು ಯಾರೂ ಇಲ್ಲ.
೧೨ ದೇವರೇ, ನನಗೆ ದೂರವಾಗಿರ ಬೇಡ;
ನನ್ನ ಸಹಾಯಕ್ಕೆ ತ್ವರೆ ಪಡು.
೧೩ ನನ್ನ ಪ್ರಾಣವನ್ನು ಎದುರಿಸುವವರು ನಾಚಿಕೆ ಪಟ್ಟು, ಕೆಡೆದು
ಹೋಗಲಿ;
ನಿಂದೆಯೂ ಅವಮಾನವೂ ನನ್ನ ಕೇಡು ಹುಡುಕುವವರನ್ನು
ಮುಚ್ಚಿ ಬಿಡಲಿ.

೧೪ ಆದರೆ ನಾನು ಯಾವಾಗಲೂ ಎದುರು ನೋಡಿ,
ನಿನ್ನ ಸ್ತೋತ್ರವನ್ನೆಲ್ಲಾ ಹೆಚ್ಚಿಸುವೆನು.
೧೫ ನನ್ನ ಬಾಯಿ ನಿನ್ನ ನೀತಿಯನ್ನು, ದಿನವೆಲ್ಲಾ ನಿನ್ನ ರಕ್ಷಣೆ
ಯನ್ನು, ಸಾರುವದು;
ಯಾಕಂದರೆ ಅವುಗಳ ಲೆಕ್ಕವು ನನಗೆ ತಿಳಿಯದು.
೧೬ ಕರ್ತನಾದ ಯೆಹೋವನ ಪರಾಕ್ರಮ ಕ್ರಿಯೆಗಳನ್ನು ಬಂದು
ಹೇಳುವೆನು;
ನಿನ್ನ ನೀತಿಯನ್ನು, ನಿನ್ನದನ್ನೇ, ಜ್ಞಾಪಕ ಪಡಿಸುವೆನು.
೧೭ ದೇವರೇ, ನನ್ನ ಯೌವನದಿಂದ ನನಗೆ ಕಲಿಸಿದ್ದೀ;
ಈ ವರಗೂ ನಿನ್ನ ಅದ್ಭುತಗಳನ್ನು ತಿಳಿಸುವೆನು.



೧೮ ದೇವರೇ, ಮುಪ್ಪಿನ ವರಗೂ, ನರೆ ಕೂದಲಿನ ವರಗೂ,
ನಾನು ನಿನ್ನ ತೋಳ್ಬಲವನ್ನು ವಂಶಕ್ಕೆ,
ನಿನ್ನ ಪರಾಕ್ರಮವನ್ನು ಬರುವವರೆಲ್ಲರಿಗೆ, ತಿಳಿಸುವ ಮಟ್ಟಿಗೂ,
ನನ್ನನ್ನು ಕೈ ಬಿಡ ಬೇಡ.
೧೯ ದೇವರೇ, ನಿನ್ನ ನೀತಿಯು ಉನ್ನತಕ್ಕೆ ಮುಟ್ಟುತ್ತದೆ;
ದೊಡ್ಡವುಗಳನ್ನು ಮಾಡಿದ ದೇವರೇ, ನಿನ್ನ ಹಾಗೆ ಯಾರು!
೨೦ ಅನೇಕ ಕೆಟ್ಟ ಇಕ್ಕಟ್ಟುಗಳನ್ನು ನನ್ನನ್ನು ನೋಡ ಮಾಡಿದ
ನೀನು ತಿರುಗಿ ಕೊಂಡು, ನನ್ನನ್ನು ಬದುಕಿಸುವಿ;
ತಿರುಗಿ ಕೊಂಡು, ಭೂಮಿಯ ಅಗಾಧಗಳೊಳಗಿಂದ ನನ್ನನ್ನು
ಏಳ ಮಾಡುವಿ.
೨೧ ನನ್ನ ದೊಡ್ಡಸ್ತಿಕೆಯನ್ನು ಹೆಚ್ಚಿಸುವಿ;
ಮರಳಿ ಕೊಂಡು, ನನ್ನನ್ನು ಆದರಿಸುವಿ.

೨೨ ನಾನು ಸಹ ನಿನ್ನನ್ನೂ ನಿನ್ನ ಸತ್ಯವನ್ನೂ ವೀಣೆಯಿಂದ
ಕೊಂಡಾಡುವೆನು, ನನ್ನ ದೇವರೇ;
ಕಿನ್ನರಿಯಿಂದ ನಿನ್ನನ್ನು ಕೀರ್ತಿಸುವೆನು, ಇಸ್ರಯೇಲಿನ
ಪರಿಶುದ್ಧನೇ.
೨೩ ನಾನು ನಿನ್ನನ್ನು ಕೀರ್ತಿಸುವಾಗ, ನನ್ನ ತುಟಿಗಳೂ,
ನೀನು ವಿಮೋಚಿಸಿದ ನನ್ನ ಪ್ರಾಣವೂ ಉತ್ಸಾಹ ಧ್ವನಿಗೈ
ಯುವವು.
೨೪ ಮತ್ತು ನನ್ನ ನಾಲಿಗೆಯು ದಿನವೆಲ್ಲಾ ನಿನ್ನ ನೀತಿಯನ್ನು ಉಚ್ಚ
ರಿಸುವದು;
ಯಾಕಂದರೆ ನನ್ನ ಕೇಡನ್ನು ಹುಡುಕುವವರು ನಾಚಿ ಕೊಂಡು,
ಲಜ್ಜೆ ಪಡುತ್ತಾರೆ.

## ೭೨. ಕೀರ್ತನೆ.

ಸೊಲೊಮೋನನದು.

೧ ದೇವರೇ, ನಿನ್ನ ನ್ಯಾಯ ಶೀರ್ಪುಗಳನ್ನು ಅರಸನಿಗೂ,
ನಿನ್ನ ನೀತಿಯನ್ನು ಅರಸನ ಮಗನಿಗೂ, ಕೊಡು.
೨ ನಿನ್ನ ಜನರಿಗೆ ನೀತಿಯಿಂದಲೂ,
ನಿನ್ನ ದೀನರಿಗೆ ನ್ಯಾಯದಿಂದಲೂ ನಿರ್ಣಯ ಮಾಡುವನು.
೩ ಬೆಟ್ಟಗಳೂ ಗುಡ್ಡಗಳೂ ನೀತಿಯಿಂದ ಸಮಾಧಾನವನ್ನು ಜನರಿ
ಗೆ ತರುವವು.
೪ ಜನರಲ್ಲಿ ದೀನರಿಗೆ ನ್ಯಾಯ ತೀರಿಸುವನು;
ಬಡವನ ಮಕ್ಕಳನ್ನು ರಕ್ಷಿಸುವನು;
ಬಲಾತ್ಕಾರಿಯನ್ನು ಕುಗ್ಗಿಸುವನು.

೫ ಸೂರ್ಯನೂ ಚಂದ್ರನೂ ಇರುವ ಪರ್ಯಂತರ,
ತಲತಲಾಂತರಗಳು ನಿನಗೆ ಭಯ ಪಡುವವು.
೬ ಕೊಯಿದ ಹೊಲದ ಮೇಲೆ ಬೀಳುವ ಮಳೆಯ ಹಾಗೆಯೂ,
ಭೂಮಿಯನ್ನು ತ್ಯಾವಿಸುವ ಸುರಿಯುವ ಮಳೆಗಳ ಹಾಗೆಯೂ,
ಇಳಿದು ಬರುವನು.
೭ ಅವನ ದಿವಸಗಳಲ್ಲಿ ನೀತಿವಂತನು ಚಿಗುರುವನು;
ಸಮಾಧಾನದ ಬಾಹುಳ್ಯವು, ಚಂದ್ರನು ಇಲ್ಲದೆ ಹೊಸುವ
ಪರ್ಯಂತರ, ಇರುವದು.
೮ ಸಮುದ್ರದಿಂದ ಸಮುದ್ರದ ವರಗೂ,
ನದಿಯಿಂದ ಭೂಮಿಯ ಕೊನೆಗಳ ವರಗೂ ಆಳುವನು.
೯ ಅವನ ಮುಂದೆ ಅರಣ್ಯದವರು ಎರಗುವರು;
ಅವನ ಶತ್ರುಗಳು ಧೂಳಿಯನ್ನು ನೆಕ್ಕುವರು.
೧೦ ತಾರ್ಷೀಷಿನ ಅರಸುಗಳೂ, ದ್ವೀಪಗಳ ಅರಸುಗಳೂ ಕಾಣಿ
ಕೆಗಳನ್ನು ಅರ್ಪಿಸುವರು;
ಶೇಬ ಸೇಬಗಳ ಅರಸುಗಳು ದಾನಗಳನ್ನು ಸಮಾಪಕ್ಕೆ ತರು
ವರು.
೧೧ ಎಲ್ಲಾ ಅರಸುಗಳು ಅವನಿಗೆ ಅಡ್ಡ ಬೀಳುವರು;
ಎಲ್ಲಾ ಜನಾಂಗಗಳು ಅವನನ್ನು ಸೇವಿಸುವವು.

೧೨ ಯಾಕಂದರೆ ಮೊರೆ ಇಡುವ ಬಡವರನ್ನೂ,
ಸಹಾಯಕನಿಲ್ಲದ ದೀನನನ್ನೂ ಬಿಡಿಸುವನು.
೧೩ ದರಿದ್ರನನ್ನೂ ಬಡವನನ್ನೂ ಕರುಣಿಸುವನು;
ಬಡವರ ಪ್ರಾಣಗಳನ್ನು ರಕ್ಷಿಸುವನು.
೧೪ ತುಂಟಿಯಿಂದಲೂ ಬಲಾತ್ಕಾರದಿಂದಲೂ ಅವರ ಪ್ರಾಣವನ್ನು
ಬಿಡುಗಡೆ ಮಾಡುವನು;
ಅವರ ರಕ್ತವು ಅವನ ದೃಷ್ಟಿಯಲ್ಲಿ ಪ್ರಿಯವಾಗಿರುವದು.
೧೫ ಅವನು ಬದುಕುವನು; ಅವನಿಗೆ ಶೇಬದ ಚಿನ್ನವನ್ನು ಕೊ
ಡುವರು;
ಅವನಿಗೋಸ್ಕರ ಯಾವಾಗಲೂ ಪ್ರಾರ್ಥನೆ ಮಾಡುವರು;
ದಿನವೆಲ್ಲಾ ಅವನನ್ನು ಆಶೀರ್ವದಿಸುವರು.
೧೬ ಧಾನ್ಯದ ಹೆಚ್ಚಿಗೆಯು ದೇಶದಲ್ಲಿ, ಬೆಟ್ಟಗಳ ತಲೆಯ ಮೇಲೆ,
ಇರುವದು;
ಅದರ ಫಲವು ಲೆಬನೋನಿನ ಹಾಗೆ ಕದಲುವದು.
ಪಟ್ಟಣದವರು ಭೂಮಿಯ ಸೊಪ್ಪಿನ ಹಾಗೆ ಅರಳುವರು.
೧೭ ಅವನ ಹೆಸರು ಯುಗ ಯುಗಕ್ಕೂ ಇರುವದು;
ಸೂರ್ಯನಿರುವ ಮಟ್ಟಿಗೂ ಅವನ ಹೆಸರು ಬಾಳುವದು;
ಅವನಲ್ಲಿ ಆಶೀರ್ವದಿಸಿ ಕೊಳ್ಳುವರು;
ಎಲ್ಲಾ ಜನಾಂಗಗಳು ಅವನನ್ನು ಭಾಗ್ಯವಂತನನ್ನುವವು.

೧೮ ಒಬ್ಬನೇ ಅದ್ಭುತಗಳನ್ನು ಮಾಡುವ
ಇಸ್ರಯೇಲಿನ ದೇವರಾಗಿರುವ ದೇವರಾದ ಯೆಹೋವನಿಗೆ
ಆಶೀರ್ವಾದವಾಗಲಿ.
೧೯ ಅವನ ಘನವುಳ್ಳ ಹೆಸರಿಗೆ ಯುಗ ಯುಗಕ್ಕೂ ಆಶೀರ್ವಾದ
ವಾಗಲಿ;
ಅವನ ಘನವು ಭೂಮಿಯನ್ನೆಲ್ಲಾ ತುಂಬಿರಲಿ. ಆರ್ಮೆ,
ಆರ್ಮೆ.
೨೦ ಇಷಾಯನ ಮಗನಾದ ದಾವೀದನ ಪ್ರಾರ್ಥನೆಗಳು ತೀರಿ
ಅವೆ.

## ೭೩. ಕೀರ್ತನೆ.

ಆಸಾಫನ ಗೀತವು.

೧ ನಿಶ್ಚಯವಾಗಿ ದೇವರು ಇಸ್ರಯೇಲಿಗೂ,
ಶುದ್ಧ ಹೃದಯದವರಿಗೂ ಒಳ್ಳೆಯವನು.

೨ ನಾನಾದರೆ, ನನ್ನ ಪಾದಗಳು ಜಾರುವ ಹಾಗಿದ್ದವು;
ನನ್ನ ನಡೆಗಳು ಮುಗ್ಗರಿಸುವದಕ್ಕೆ ತೃಣ ಮಾತ್ರ ತಪ್ಪಿತು.
೩ ಯಾಕಂದರೆ ದುಷ್ಟರ ಸಮೃದ್ಧಾನವನ್ನು ನೋಡಿ,
ಹಮ್ಮಿನವರಿಗೆ ಹೊಟ್ಟೆಕಿಚ್ಚು ಪಟ್ಟೆನು.
೪ ಯಾಕಂದರೆ ಅವರ ಮರಣಕ್ಕೆ ಬಂಧಗಳು ಇಲ್ಲ;
ಅವರ ತ್ರಾಣವು ಪುಷ್ಟಿಯಾಗಿದೆ.
೫ ನರರ ಕಷ್ಟವು ಅವರಿಗೆ ಇಲ್ಲ;
ಮನುಷ್ಯರ ಹಾಗೆ ಅವರು ಬಾಧಿಸಲ್ಪಡುವವರಲ್ಲ.
೬ ಆದದರಿಂದ ಗರ್ವವು ಅವರ ಕಂಠಮಾಲೆಯಾಗಿದೆ;
ಬಲಾತ್ಕಾರವು ಅವರನ್ನು ಬಟ್ಟೆಯ ಹಾಗೆ ಮುಚ್ಚುತ್ತದೆ.
೭ ಅವರ ಕಣ್ಣುಗಳು ಕೊಬ್ಬಿನಿಂದ ಉಬ್ಬಿ ಕೊಂತಿರುತ್ತವೆ;
ಅವರ ಹೃದಯದ ಆಲೋಚನೆಗಳು ಮಿತಿ ಮೀರುತ್ತವೆ.
೮ ಹಾಸ್ಯ ಮಾಡುತ್ತಾರೆ; ಕೆಟ್ಟತನದಿಂದ ಬಲಾತ್ಕಾರವನ್ನು
ನುಡಿಯುತ್ತಾರೆ;
ಎತ್ತರದಿಂದ ನುಡಿಯುತ್ತಾರೆ.
೯ ಆಕಾಶದಲ್ಲಿ ತಮ್ಮ ಬಾಯಿಯನ್ನು ಇಡುತ್ತಾರೆ;
ಅವರ ನಾಲಿಗೆ ಭೂಮಿಯಲ್ಲಿ ನಡೆದಾಡುತ್ತದೆ.
೧೦ ಆದದರಿಂದ ಅವನ ಜನರು ಇತ್ತಲು ತಿರುಗುತ್ತಾರೆ;
ಮತ್ತು ತುಂಬಿದ ನೀರುಗಳನ್ನು ಹೀರಿ ಕುಡಿಯುತ್ತಾರೆ.
೧೧ ಮತ್ತು—ದೇವರು ಹ್ಯಾಗೆ ಬಲ್ಲನು!
ಮಹೋನ್ನತನಲ್ಲಿ ತಿಳುವಿಕೆ ಉಂಟೋ! ಅನ್ನುತ್ತಾರೆ.

೧೨ ಇಗೋ, ಇವರು ದುಷ್ಟರೇ; ಲೋಕದಲ್ಲಿ ಸಾಖ್ಯವಾಗಿ
ದ್ದಾರೆ;
ಬಾಳಿಕೆಯನ್ನು ಬೆಳಿಸುತ್ತಾರೆ.
೧೩ ನಿಶ್ಚಯವಾಗಿ ನನ್ನ ಹೃದಯವನ್ನು ವ್ಯರ್ಥವಾಗಿ ನಿರ್ಮಲ
ಮಾಡಿ,
ನನ್ನ ಅಂಗೈಗಳನ್ನು ನಿರಪರಾಧತ್ವದಲ್ಲಿ ತೊಳೆದಿದ್ದೇನೆ.
೧೪ ದಿನವೆಲ್ಲಾ ಬಾಧಿಸಲ್ಪಟ್ಟಿದ್ದೇನೆ;
ಪ್ರತಿ ಉದಯದಲ್ಲಿ ನನಗೆ ಗದರಿಕೆ ಆಯಿತು.
೧೫ ಹೀಗೆ ನಾರುವೆನೆಂದು, ನಾನು ಹೇಳಿದರೆ,
ಇಗೋ, ನಿನ್ನ ಮಕ್ಕಳ ವಂಶಕ್ಕೆ ವಂಚನೆ ಮಾಡುವೆನು.
೧೬ ಇದನ್ನು ತಿಳಿಯುವದಕ್ಕೆ ಯೋಚಿಸಿದೆನು;
ನಾನು ದೇವರ ಪರಿಶುದ್ಧ ಸ್ಥಳಗಳಿಗೆ ಬರುವ ಪರ್ಯಂತರ,
ಅದು ನನ್ನ ದೃಷ್ಟಿಗೆ ಕಷ್ಟವಾಗಿತ್ತು.

೧೭ ಅವರ ಅಂತ್ಯವನ್ನು ಗ್ರಹಿಸಿ ಕೊಂಡೆನು.
೧೮ ನಿಶ್ಚಯವಾಗಿ ಜಾರುವ ಸ್ಥಳಗಳಲ್ಲಿ ಅವರನ್ನು ಇಡುತ್ತೀ;
ಅವರನ್ನು ಹಾಳಾಗಿ ಬೀಳ ಮಾಡುತ್ತೀ.
೧೯ ಕ್ಷಣದಲ್ಲಿ ಅವರು ಹ್ಯಾಗೆ ನಾಶವಾಗಿದ್ದಾರೆ!
ಮಡಿದು, ದಿಗಿಲುಗಳಿಂದ ಮುಗಿದು ಹೋಗುತ್ತಾರೆ.
೨೦ ಎಚ್ಚತ್ತ ಮೇಲೆ ಕನಸು ಹ್ಯಾಗೋ,
ಹಾಗಯೇ, ಕರ್ತನೇ, ನೀನು ಎಚ್ಚರವಾಗಲು, ಅವರ ರೂಪವ
ನ್ನು ತಿರಸ್ಕರಿಸುವಿ.

೨೧ ನನ್ನ ಹೃದಯವು ಉರಿಯುವಾಗ,
ನನ್ನ ಅಂತರಿಂದ್ರಿಯಗಳು ತಿವಿಯಲ್ಪಡುವಾಗ,
೨೨ ನಾನು ಪಶುಪ್ರಾಣಿಯಾಗಿ, ಏನು ತಿಳಿಯದೆ ಇದ್ದೆನು;
ನಿನ್ನ ಮುಂದೆ ಮೃಗವಾಗಿದ್ದೆನು.

೨೩ ಆದರೆ ನಿನ್ನ ಸಂಗಡ ಯಾವಾಗಲೂ ಇದ್ದೇನೆ;
ನೀನು ನನ್ನ ಬಲಗೈಯನ್ನು ಹಿಡಿದಿದ್ದೀ.
೨೪ ನಿನ್ನ ಆಲೋಚನೆಯಿಂದ ನನ್ನನ್ನು ನಡಿಸುವಿ;
ತರುವಾಯ ಘನತೆಗೆ ನನ್ನನ್ನು ತಕ್ಕೊಳ್ಳುವಿ.
೨೫ ಆಕಾಶದಲ್ಲಿ ನನಗೆ ಯಾರು!
ನಿನ್ನ ಹೊರ್ತಾಗಿ ಭೂಮಿಯಲ್ಲಿ ನನಗೆ ಸಂತೋಷವಿಲ್ಲ.
೨೬ ನನ್ನ ಮಾಂಸವೂ ನನ್ನ ಹೃದಯವೂ ಕಳೆಯುತ್ತವೆ;
ದೇವರು ಯುಗ ಯುಗಕ್ಕೂ ನನ್ನ ಹೃದಯದ ಬಂಡೆಯೂ
ನನ್ನ ಪಾಲೂ ಆಗಿದ್ದಾನೆ.

೨೭ ಯಾಕಂದರೆ, ಇಗೋ, ನಿನಗೆ ದೂರವಾಗಿರುವವರು ನಾಶ
ವಾಗುತ್ತಾರೆ;
ನಿನ್ನನ್ನು ಬಿಟ್ಟು, ಜಾರತ್ವ ಮಾಡುವವರೆಲ್ಲರನ್ನು ಸಂಹರಿಸುತ್ತೀ.
೨೮ ನಾನಾದರೆ, ದೇವರ ಬಳಿಗೆ ಬರುವದು ನನಗೆ ಬಳ್ಳೇದಾಗಿದೆ;
ನಿನ್ನ ಕ್ರಿಯೆಗಳನ್ನೆಲ್ಲಾ ಸಾರುವದಕ್ಕೆ ಕರ್ತನಾದ ಯೆಹೋ
ವನಲ್ಲಿ ನನ್ನ ಆಶ್ರಯವನ್ನು ಇಟ್ಟಿದ್ದೇನೆ.

## ೭೪. ಕೀರ್ತನೆ.

ಆಸಾಫನ ಶ್ರೇಷ್ಠಗೀತೆಯು.

೧ ದೇವರೇ, ನೀನು ಸದಾ ಕಾಲಕ್ಕೆ ಅಸಂತುಷ್ಟಿ ಬಿಡುವದೂ,
ನಿನ್ನ ಮೇಯಿನ ಮಂದೆಯ ಮೇಲೆ ನಿನ್ನ ಕೋಪವು ಹೊಗೆಯುವ
ದೂ, ಯಾಕೆ!
೨ ಪೂರ್ವದಲ್ಲಿ ನೀನು ಕೊಂಡು ಕೊಂಡ ನಿನ್ನ ಸಭೆಯನ್ನೂ,
ನೀನು ವಿಮೋಚಿಸಿದ ನಿನ್ನ ಬಾಧ್ಯತೆಯ ಕೋಲನ್ನೂ,
ನೀನು ವಾಸ ಮಾಡಿದ ಚಿಯೋನ್ ಪರ್ವತವನ್ನೂ, ಜ್ಞಾಪಕ
ಮಾಡಿಕೋ.
೩ ನಿನ್ನ ಹೆಜ್ಜೆಗಳನ್ನು ಸದಾ ಕಾಲದ ನಾಶನಗಳಿಗೆ ಎತ್ತು;
ಶತ್ರುವು ಪರಿಶುದ್ಧ ಸ್ಥಳದಲ್ಲಿ ಎಲ್ಲವನ್ನು ಕೆಡಿಸಿದ್ದಾನೆ.
೪ ನಿನ್ನ ವೈರಿಗಳು ನಿನ್ನ ಸಭಾಸ್ಥಾನಗಳ ಮಧ್ಯದಲ್ಲಿ ಗರ್ಜಿ
ಸುತ್ತಾರೆ;
ತಮ್ಮ ಗುರುತುಗಳನ್ನು ಗುರುತುಗಳಾಗಿ ಇಟ್ಟಿದ್ದಾರೆ.
೫ ಬತ್ತಾದ ಮರಗಳಲ್ಲಿ ಕೊಡ್ಲಿ ಎತ್ತುವವನ ಹಾಗೆ ಕಾಣುತ್ತಾನೆ.
೬ ಈಗ ಅದರ ಚೆತ್ರ ಕೆಲಸಗಳನ್ನು ಏಕವಾಗಿ ಕೊಡ್ಲಿಯಿಂದಲೂ
ಸುತ್ತಿಗೆಯಿಂದಲೂ ಹೊಡೆದು ಬಿಡುತ್ತಾರೆ.
೭ ನಿನ್ನ ಪರಿಶುದ್ಧ ಸ್ಥಳಕ್ಕೆ ಬೆಂಕಿ ಹಚ್ಚುತ್ತಾರೆ;
ನಿನ್ನ ಹೆಸರಿನ ನಿವಾಸವನ್ನು ಭೂಮಿಗೆ ಕೆಡವಿ, ಹೊಲೆ ಮಾಡು
ತ್ತಾರೆ.
೮ ಅವುಗಳನ್ನು ಏಕವಾಗಿ ಕೆಡವಿ ಬಿಡುವ, ಎಂದು ತಮ್ಮ ಹೃದಯ
ದಲ್ಲಿ ಹೇಳಿ ಕೊಳ್ಳುತ್ತಾರೆ;
ದೇಶದಲ್ಲಿರುವ ದೇವರ ಸಭಾಸ್ಥಾನಗಳನ್ನೆಲ್ಲಾ ಸುಟ್ಟು
ಬಿಡುತ್ತಾರೆ.



೯ ನಮ್ಮ ಗುರುತುಗಳನ್ನು ನೋಡದೆ ಇದ್ದೇವೆ; ಇನ್ನು ಪ್ರವಾದಿಯು
ಇಲ್ಲ;
ಎಷ್ಟು ಮಟ್ಟಿಗೂ ಎಂದು ತಿಳಿದವನು ನಮ್ಮಲ್ಲಿ ಇಲ್ಲ.

೧೦ ದೇವರೇ, ವೈರಿಯು ನಿಂದಿಸುವದೂ,
ಶತ್ರುವು ನಿನ್ನ ಹೆಸರನ್ನು ಯಾವಾಗ್ಯೂ ಅಸಂತುಷ್ಟಿಸುವದೂ
ಎಷ್ಟು ಮಟ್ಟಿಗೂ!
೧೧ ಯಾಕೆ ನಿನ್ನ ಕೈಯನ್ನು, ನಿನ್ನ ಬಲಗೈಯನ್ನು, ಹಿಂದೆಳೆ
ಯುತ್ತೀ!
ನಿನ್ನ ಎದೆಯೊಳಗಿಂದ ತೆಗೆದು, ತೀರಿಸು.
೧೨ ದೇವರು ಪೂರ್ವದಿಂದ ನನ್ನ ಅರಸನೂ,
ಭೂಮಿಯ ಮಧ್ಯದಲ್ಲಿ ರಕ್ಷಣೆಗಳನ್ನು ಮಾಡುವವನೂ, ಆಗಿ
ದ್ದಾನೆ.
೧೩ ನೀನು ನಿನ್ನ ಬಲದಿಂದ ಸಮುದ್ರವನ್ನು ಭೇದಿಸಿದಿ;
ಮಹಾ ಮೀನಗಳ ತಲೆಗಳನ್ನು ನೀರುಗಳಲ್ಲಿ ಮುರಿದು ಬಿಟ್ಟೆ.
೧೪ ನೀನು ಲೆವಿಯಾತಾನದ ತಲೆಗಳನ್ನು ಒಡೆದು ಬಿಟ್ಟು,
ಅದನ್ನು ಅರಣ್ಯದ ಜನರಿಗೆ ಆಹಾರವಾಗಿ ಕೊಟ್ಟೆ.
೧೫ ನೀನು ಬುಗ್ಗೆಯನ್ನೂ ಹೊಳೆಯನ್ನೂ ಬೀಳಿಡಿ;
ನೀನು ಮಹಾ ನದಿಗಳನ್ನು ಒಣಗಿಸಿದಿ.
೧೬ ಹಗಲು ನಿನ್ನದು; ರಾತ್ರಿಯು ಸಹಾ ನಿನ್ನದು;
ನೀನು ಬೆಳಕನ್ನೂ ಸೂರ್ಯನನ್ನೂ ಸಿದ್ಧ ಮಾಡಿದ್ದೀ.
೧೭ ನೀನು ಭೂಮಿಯ ಮೇರೆಗಳನ್ನೆಲ್ಲಾ ನಿರ್ಣಯಿಸಿದ್ದೀ;
ಬೇಸಿಗೆ ಉಷ್ಣ ಕಾಲಗಳನ್ನು ನೀನು ನಿರ್ಮಿಸಿದ್ದೀ.

೧೮ ಇದನ್ನು ಜ್ಞಾಪಕ ಮಾಡಿಕೋ—ಶತ್ರುವು ನಿಂದಿಸುತ್ತಾನೆ,
ಕರ್ತನೇ;
ಬುದ್ಧಿಹೀನ ಜನರು ನಿನ್ನ ಹೆಸರನ್ನು ಅಸಂತುಷ್ಟಿಸುತ್ತಾರೆ.
೧೯ ನಿನ್ನ ಬೆಳ್ಳವದ ಪ್ರಾಣವನ್ನು ಮೃಗಕ್ಕೆ ಕೊಡ ಬೇಡ;
ನಿನ್ನ ದೀನರ ಜೀವನನ್ನು ಸದಾ ಕಾಲಕ್ಕೆ ಮರೆತು ಬಿಡ ಬೇಡ.
೨೦ ಒಡಂಬಡಿಕೆಯ ಮೇಲೆ ದೃಷ್ಟಿ ಇಡು;
ಯಾಕಂದರೆ ಭೂಮಿಯ ಕತ್ತಲಿನ ಸ್ಥಳಗಳು ಬಲಾತ್ಕಾರದ ನಿವಾ
ಸಗಳಿಂದ ತುಂಬಿ ಅವೆ.
೨೧ ಕುಗ್ಗಿದವನು ಅವಮಾನವಾಗಿ ತಿರುಗಿ ಕೊಳ್ಳದೆ ಇರಲಿ;
ದೀನನೂ ಬಡವನೂ ನಿನ್ನ ಹೆಸರನ್ನು ಸ್ತುತಿಸಲಿ.
೨೨ ದೇವರೇ, ಏಳು; ನಿನ್ನ ವಿವಾದವನ್ನು ವಾದಿಸು;
ದಿನವೆಲ್ಲಾ ಬುದ್ಧಿಹೀನನಿಂದ ನೀನು ಪಟ್ಟ ನಿಂದೆಯನ್ನು ಜ್ಞಾಪಕ
ಮಾಡಿಕೋ.
೨೩ ನಿನ್ನ ವೈರಿಗಳ ಶಬ್ದವನ್ನು ಮರೆತು ಬಿಡ ಬೇಡ;
ನಿನ್ನ ವಿರೋಧಿಗಳ ಘೋಷವು ಯಾವಾಗಲೂ ಏಳುತ್ತದೆ.

## ೭೫. ಕೀರ್ತನೆ.

ಗಾಯಕಾಧಿಕಾರಿಗೆ; ನಾಶ ಮಾಡ ಬೇಡ; ಆಸಾಫನ ಗೀತವಾದ ಹಾಡು.

೧ ನಿನ್ನನ್ನು ಕೊಂಡಾಡುತ್ತೇವೆ, ದೇವರೇ;
ಕೊಂಡಾಡುತ್ತೇವೆ;
ನಿನ್ನ ನಾಮವು ಸಮೀಪವಾಗಿದೆ;
ನಿನ್ನ ಅದ್ಭುತಗಳನ್ನು ಸಾರುತ್ತಾರೆ.
೨ ನಾನು ಸಭೆಯನ್ನು ಅಂಗೀಕರಿಸುವಾಗ,
ಸರಿಯಾಗಿ ನ್ಯಾಯ ತೀರಿಸುವೆನು.
೩ ಭೂಮಿಯೂ, ಅದರ ನಿವಾಸಿಗಳೆಲ್ಲರೂ ಕರಗಿದ್ದಾಗ;
ನಾನು ಅದರ ಸ್ತಂಭಗಳನ್ನು ನಿಲ್ಲಿಸಿದ್ದೇನೆ. ಸೇಲಾ.
೪ ಹಮ್ಮಿನವರಿಗೆ—ಹಮ್ಮು ಮಾಡ ಬೇಡಿರಿ;
ದುಷ್ಟರಿಗೆ—ಕೊಂಬು ಎತ್ತ ಬೇಡಿರಿ, ಎಂದು ಹೇಳಿದೆನು.
೫ ನಿಮ್ಮ ಕೊಂಬು ಎತ್ತರಕ್ಕೆ ಎತ್ತ ಬೇಡಿರಿ;
ಕುಟ್ಟಿ ಕುತ್ತಿಗೆಯಿಂದ ಮಾತಾಡ ಬೇಡಿರಿ.
೬ ಯಾಕಂದರೆ ಮೂಡಣದಿಂದಲೂ ಪಡವಲಿಂದಲೂ ಅಲ್ಲ;
ಬೆಟ್ಟಗಳ ಅರಣ್ಯದಿಂದ ಅಲ್ಲ;
೭ ದೇವರೇ ನ್ಯಾಯ ತೀರಿಸುವವನಾಗಿದ್ದಾನೆ;
ಇವನನ್ನು ತಗ್ಗಿಸುತ್ತಾನೆ; ಅವನನ್ನು ಎತ್ತುತ್ತಾನೆ.
೮ ಯಾಕಂದರೆ ಕರ್ತನ ಕೈಯಲ್ಲಿ ಪಾತ್ರೆಯು ಉಂಟು;
ದ್ರಾಕ್ಷೇರಸವು ಉಕ್ಕುತ್ತದೆ.
ಕಲಬೆರಿಕೆ ತುಂಬಿ ಅದೆ; ಅದರಿಂದ ಹೊಯ್ಯುತ್ತಾನೆ;
ಅದರ ಮಡ್ಡಿಯನ್ನು ಸಹಾ ಭೂಮಿಯ ದುಷ್ಟರೆಲ್ಲರು ಹೀರಿ
ಕೊಂಡು, ಕುಡಿಯುವರು.

೯ ಆದರೆ ನಾನು ಯುಗ ಯುಗಕ್ಕೂ ತಿಳಿಸಿ,
ಯಾಕೋಬನ ದೇವರನ್ನು ಕೀರ್ತಿಸುವೆನು.
೧೦ ಆದರೆ ದುಷ್ಟರ ಕೊಂಬುಗಳನ್ನೆಲ್ಲಾ ಕಡಿದು ಬಿಡುವೆನು;
ನೀತಿವಂತನ ಕೊಂಬುಗಳು ಎತ್ತಲ್ಪಡುವವು.

## ೭೬. ಕೀರ್ತನೆ.

ಗಾಯಕಾಧಿಕಾರಿಗೆ; ತಂತಿ ವಾದ್ಯಗಳಲ್ಲಿ; ಆಸಾಫನ ಗೀತವಾದ ಹಾಡು.

೧ ದೇವರು ಯೆಹೂದದಲ್ಲಿ ಅರಿಯಲ್ಪಟ್ಟಿದ್ದಾನೆ;
ಇಸ್ರಯೇಲಿನಲ್ಲಿ ಅವನ ಹೆಸರು ದೊಡ್ಡದಾಗಿದೆ.
೨ ಸಾಲೆಮಿನಲ್ಲಿ ಅವನ ಡೇರವೂ,
ಚಿಯೋನಿನಲ್ಲಿ ಅವನ ವಾಸಸ್ಥಾನವೂ, ಉಂಟು.
೩ ಅಲ್ಲಿಯೇ ಬಿಲ್ಲಿನ ಉರಿ ಬಾಣಗಳನ್ನೂ,
ಗುರಾಣಿಯನ್ನೂ, ಕತ್ತಿಯನ್ನೂ, ಯುದ್ಧವನ್ನೂ, ಮುರಿದು
ಬಿಟ್ಟನು. ಸೇಲಾ.
೪ ನೀನು ಕೊಳ್ಳೆಯ ಬೆಟ್ಟಗಳಿಗಿಂತ
ಪ್ರಕಾಶವುಳ್ಳವನೂ ಪ್ರೇಷ್ಠನೂ ಆಗಿದ್ದೀ.
೫ ಬಲವಾದ ಹೃದಯದವರು ಕೊಳ್ಳೆ ಮಾತಲ್ಪಟ್ಟಿದ್ದಾರೆ, ತೂ
ಕಡಿಸಿ, ನಿದ್ದೆ ಹೋಗಿದ್ದಾರೆ;
ಪರಾಕ್ರಮಿಗಳಲಿ ಒಬ್ಬನೂ ತನ್ನ ಕೈಗಳನ್ನು ಕಂಡು ಕೊ
ಳ್ಳಲಿಲ್ಲ.
೬ ಯಾಕೋಬನ ದೇವರೇ, ನಿನ್ನ ಗದರಿಕೆಯಿಂದ
ರಥವೂ ಕುದುರೆಯೂ ಗಾಢ ನಿದ್ರೆಯಲ್ಲಿ ಬಿದ್ದವೆ.

೭ ನೀನು, ನೀನೇ, ಭಯಂಕರನಾಗಿದ್ದೀ;
ನಿನಗೆ ಕೋಪ ಬಂದಕೆ, ನಿನ್ನ ಮುಂದೆ ನಿಲ್ಲುವವನ್ಯಾರು!
೮ ಆಕಾಶದಿಂದ ನ್ಯಾಯತೀರ್ಪಿಕೆಯನ್ನು ಕೇಳಿಸ ಮಾಡಿದಿ.

೯ ದೇವರು ನ್ಯಾಯ ತೀರಿಸುವದಕ್ಕೂ,
ಭೂಮಿಯ ದೀನರೆಲ್ಲರನ್ನು ರಕ್ಷಿಸುವದಕ್ಕೂ ಏಳುವಾಗ, ಸೆಲಾ.

೧೦ ನಿಶ್ಚಯವಾಗಿ ಮನುಷ್ಯನ ಉರಿಯು ನಿನ್ನನ್ನು ಕೊಂಡಾಡುವದು;
ಮಿಕ್ಕ ಉರಿಯನ್ನು ಬಿಗಿದು ಕೊಳ್ಳುವಿ.

೧೧ ನಿಮ್ಮ ದೇವರಾದ ಯೆಹೋವನಿಗೆ ಹರಕೆ ಮಾಡಿ, ಸಲ್ಲಿಸಿರಿ;
ಅವನ ಸುತ್ತಲಿರುವವರೆಲ್ಲರು ಭಯಂಕರನಿಗೆ ಕಾಣಿಕೆಗಳನ್ನು ತರಲಿ.

೧೨ ಅವನು ನಾಯಕರ ಆತ್ಮವನ್ನು ಕೊಯಿದು ಹಾಕುತ್ತಾನೆ;
ಭೂಮಿಯ ಅರಸುಗಳಿಗೆ ಭಯಂಕರನಾಗಿದ್ದಾನೆ.

## ೭೭. ಕೀರ್ತನೆ.

ಯೆದುತೂನ್ಯರ ಗಾಯಕಾಧಿಕಾರಿಗೆ; ಆಸಾಫನ ಗೀತವು.

೧ ನನ್ನ ಶಬ್ದವು ದೇವರ ಕಡೆಗೆ ಅದೆ; ಕೂಗುತ್ತೇನೆ;
ನನ್ನ ಶಬ್ದವು ದೇವರ ಕಡೆಗೆ ಅದೆ; ನನಗೆ ಕಿವಿ ಕೊಡುತ್ತಾನೆ.

೨ ನನ್ನ ಇಕ್ಕಟ್ಟಿನ ದಿವಸದಲ್ಲಿ ಕರ್ತನನ್ನು ಹುಡುಕುತ್ತೇನೆ;
ನನ್ನ ಕೈ ರಾತ್ರಿಯಲ್ಲಿ ಬಿಡದೆ ಚಾಚಿ ಅದೆ;
ನನ್ನ ಪ್ರಾಣವು ಆದರಣೆ ಹೊಂದಲೊಲ್ಲದು.

3 ದೇವರನ್ನು ಜ್ಞಾಪಕ ಮಾಡಿ ಕೊಂಡು, ಕುದಿಯುತ್ತೇನೆ;
ಚಿಂತಿಸುತ್ತೇನೆ; ನನ್ನ ಆತ್ಮವು ಬಳಲಿ ಹೋಗುತ್ತದೆ. ಸೆಲಾ.

೪ ನನ್ನ ಕಣ್ಣುಗಳನ್ನು ಎಚ್ಚರಿಕೆಯಾಗಿ ಹಿಡಿಯುತ್ತೀ;
ಕಳವಳ ಪಟ್ಟು, ಮಾತಾಡಲಾರೆನು.

೫ ಪೂರ್ವದ ದಿವಸಗಳನ್ನೂ,
ಆದಿ ಕಾಲದ ವರುಷಗಳನ್ನೂ ಯೋಚಿಸುತ್ತೇನೆ.

೬ ನನ್ನ ತಂತಿವಾದ್ಯವನ್ನು ರಾತ್ರಿಯಲ್ಲಿ ಜ್ಞಾಪಕ ಮಾಡಿ ಕೊಳ್ಳುತ್ತೇನೆ;
ನನ್ನ ಹೃದಯದ ಸಂಗಡ ಮಾತಾಡುತ್ತೇನೆ;
ನನ್ನ ಆತ್ಮವು ಪರಿಶೋಧನೆ ಮಾಡುತ್ತದೆ.

೭ ನಿರಂತರವಾಗಿ ಕರ್ತನು ಅಸಂಹಿಸಿ ಬಿಡುವನೋ!
ಇನ್ನು ದಯೆ ಮಾಡದೆ ಇರುವನೋ!

೮ ಅವನ ಕೃಪೆಯು ಸದಾ ಕಾಲಕ್ಕೆ ನಿಂತು ಹೋಯಿತೋ!
ತಲತಲಾಂತರಕ್ಕೂ ಮಾತು ಮುಗಿದು ಹೋಯಿತೋ!

೯ ದೇವರು ಕರುಣೆಸ ಮರೆತು ಬಿಟ್ಟಿದ್ದಾನೋ!
ತನ್ನ ಅಂತಃಕರಣಗಳನ್ನು ಕೋಪದಿಂದ ಮುಚ್ಚಿ ಕೊಂಡಿದ್ದಾನೋ! ಸೆಲಾ.

೧೦ ಆಗ ಹೇಳಿದೆನು—ಇದೇ ನನ್ನ ಅಸ್ವಸ್ಥವು;
ಮಹೋನ್ನತನ ಬಲಗೈಯ ವರುಷಗಳು.

೧೧ ಕರ್ತನ ಕ್ರಿಯೆಗಳನ್ನು ಜ್ಞಾಪಕ ಮಾಡಿ ಕೊಳ್ಳುವೆನು;
ನಿಶ್ಚಯವಾಗಿ ನಿನ್ನ ಪೂರ್ವದ ಅದ್ಭುತಗಳನ್ನು ಜ್ಞಾಪಕ ಮಾಡಿ ಕೊಳ್ಳುವೆನು.

೧೨ ಮತ್ತು ನಿನ್ನ ಕೆಲಸಗಳನ್ನೆಲ್ಲಾ ಧ್ಯಾನಿಸಿ,
ನಿನ್ನ ಮಹಾ ಕೃತ್ಯಗಳನ್ನು ಆಲೋಚಿಸುವೆನು.

೧೩ ದೇವರೇ, ನಿನ್ನ ಮಾರ್ಗವು ಪರಿಶುದ್ಧತ್ವದಲ್ಲಿ ಅದೆ;
ದೇವರ ಹಾಗೆ ದೊಡ್ಡ ದೇವರು ಯಾರು!

೧೪ ಅದ್ಭುತ ಮಾಡುವ ದೇವರು ನೀನೇ;
ಜನರಲ್ಲಿ ನಿನ್ನ ಬಲವನ್ನು ತಿಳಿಯ ಮಾಡಿದ್ದೀ.

೧೫ ಯಾಕೋಬನ ಯೋಸೆಫನ ಮಕ್ಕಳಾದ
ನಿನ್ನ ಜನರನ್ನು ತೋಳಿನಿಂದ ಬಿಡುಗಡೆ ಮಾಡಿದ್ದೀ. ಸೆಲಾ.

೧೬ ನೀರುಗಳು ನಿನ್ನನ್ನು ನೋಡಿದವು;
ದೇವರೇ, ನೀರುಗಳು ನಿನ್ನನ್ನು ನೋಡಿ, ಭ್ರಮೆಗೊಂಡವು;
ಅಗಾಧಗಳು ನಡುಗಿದವು.

೧೭ ಮೋಡಗಳು ನೀರನ್ನು ಸುರಿಸಿದವು;
ಮೇಘಗಳು ಶಬ್ದ ಕೊಟ್ಟವು;
ನಿನ್ನ ಬಾಣಗಳು ಸಹ ಹಾರಿ ಬಂದವು.

೧೮ ನಿನ್ನ ಸುಡುಗಿನ ಶಬ್ದವು ಆಕಾಶ ಮಂಡಲದಲ್ಲಿ ಇತ್ತು;
ಮಿಂಚುಗಳು ಜಗತ್ತನ್ನು ಬೆಳಗ ಮಾಡಿದವು;
ಭೂಮಿಯು ನಡುಗಿ ಕದಲಿತು.

೧೯ ನಿನ್ನ ಮಾರ್ಗವು ಸಮುದ್ರದಲ್ಲಿ ಅದೆ;
ನಿನ್ನ ಹಾದಿಗಳು ಬಹಳ ನೀರುಗಳಲ್ಲಿ ಅವೆ;
ನಿನ್ನ ಹೆಜ್ಜೆಗಳು ತಿಳಿಯಲ್ಪಡಲಿಲ್ಲ.

೨೦ ಮೋಶೆಯ, ಆರೋನನ ಕೈಯಿಂದ
ನಿನ್ನ ಜನರನ್ನು ಮಂದೆಯ ಹಾಗೆ ನಡಿಸಿದಿ.

## ೭೮. ಕೀರ್ತನೆ.

ಆಸಾಫನ ಬೋಧನೆಯು.

೧ ನನ್ನ ಜನರೇ, ನನ್ನ ನ್ಯಾಯಪ್ರಮಾಣಕ್ಕೆ ಕಿವಿ ಕೊಡಿರಿ;
ನನ್ನ ಬಾಯ ಮಾತುಗಳಿಗೆ ನಿಮ್ಮ ಕಿವಿಗಳನ್ನು ಬೊಗ್ಗಿಸಿರಿ.

೨ ನಾಮಶಿ ಹೇಳಿ ನನ್ನ ಬಾಯಿ ತೆರೆಯುವೆನು;
ಪೂರ್ವದಿಂದಿರುವ ಒಗಟೆಗಳನ್ನು ಉಕ್ಕಿಸುವೆನು.

3 ಅವುಗಳನ್ನು ಕೇಳಿ, ತಿಳಿದಿದ್ದೇವೆ;
ನಮ್ಮ ತಂದೆಗಳು ನಮಗೆ ವಿವರಿಸಿದರು.

೪ ನಾವು ಕರ್ತನ ಸ್ತೋತ್ರಗಳನ್ನೂ
ಅವನ ಶ್ರಾಣವನ್ನೂ, ಅವನು ಮಾಡಿದ ಅದ್ಭುತಗಳನ್ನೂ ವಿವರಿಸುತ್ತಾ,
ಅವರ ಮಕ್ಕಳಿಗೆ, ಮುಂದಿನ ವಂಶಕ್ಕೆ, ಅಡಗಿಸುವದಿಲ್ಲ.

೫ ಅವನು ಯಾಕೋಬನಲ್ಲಿ ಸಾಕ್ಷಿಯನ್ನು ಸ್ಥಾಪಿಸಿ,
ಇಸ್ರಯೇಲಿನಲ್ಲಿ ನ್ಯಾಯ ಪ್ರಮಾಣವನ್ನು ಇಟ್ಟು,
೬ ಮುಂದಿನ ವಂಶವು, ಹುಟ್ಟುವದಕ್ಕಿರುವ ಮಕ್ಕಳು, ತಿಳಿದು,
ಎದ್ದು, ತಮ್ಮ ಮಕ್ಕಳಿಗೆ ವಿವರಿಸಲಾಗಿ;

೭ ಇವರು ದೇವರಲ್ಲಿ ತಮ್ಮ ನಂಬಿಕೆ ಇಟ್ಟು,
ದೇವರ ಕ್ರಿಯೆಗಳನ್ನು ಮರೆತು ಬಿಡದೆ,
ಅವನ ಆಜ್ಞೆಗಳನ್ನು ಕೈ ಕೊಂಡು,

೮ ತಮ್ಮ ತಂದೆಗಳ ಹಾಗೆ ತಮ್ಮ ಹೃದಯವನ್ನು ಸ್ಥಿರ ಪಡಿಸದೆ,
ತಮ್ಮ ಆತ್ಮದಿಂದ ದೇವರನ್ನು ನಂಬದೆ,
ಮಾರ್ಮಲೆಯುವಂಥ ತಿರುಗಿ ಬೀಳುವಂಥ ವಂಶವಾಗಿರದ ಹಾಗೆ,



ಅದನ್ನು ತಮ್ಮ ಮಕ್ಕಳಿಗೆ ತಿಳಿಯ ಮಾಡ ಬೇಕೆಂದು,
ನಮ್ಮ ತಂದೆಗಳಿಗೆ ಆಜ್ಞಾಪಿಸಿದನು.

೯ ಎಫ್ರಯಿಮನ ಮಕ್ಕಳು ಬಿಲ್ಲುಗಾರರಲ್ಲಿ ಪ್ರವೀಣರಾಗಿದ್ದು,
ಕಾಳಗದ ದಿವಸದಲ್ಲಿ ತಿರುಗಿ ಕೊಂಡರು.

೧೦ ದೇವರ ಬಡಂಬಡಿಕೆಯನ್ನು ಕೈಕೊಳ್ಳದೆ,
ಅವನ ನ್ಯಾಯಪ್ರಮಾಣದಲ್ಲಿ ನಡೆಯಲೊಲ್ಲದೆ ಇದ್ದರು.

೧೧ ಅವನು ಅವರಿಗೆ ತೋರಿಸಿದ ಅವನ ಕೃತ್ಯಗಳನ್ನೂ
ಅವನ ಅದ್ಭುತಗಳನ್ನೂ ಮರೆತು ಬಿಟ್ಟರು.

೧೨ ಅವರ ತಂದೆಗಳ ಮುಂದೆ ಮಿಚ್ರ ದೇಶದಲ್ಲಿ,
ಜೋವಾನ್ ಬೈಲಿನಲ್ಲಿ, ಅವನು ಅದ್ಭುತಗಳನ್ನು ಮಾಡಿದನು.

೧3 ಸಮುದ್ರವನ್ನು ಶೀಳಿ, ಅವರನ್ನು ದಾಟಿಸಿದನು;
ನೀರನ್ನು ಕುಪ್ಪೆಯಾಗಿ ನಿಲ್ಲಿಸಿದನು.

೧೪ ಹಗಲಿನಲ್ಲಿ ಮೇಘದಿಂದ,
ರಾತ್ರಿಯೆಲ್ಲಾ ಬೆಂಕಿಯ ಬೆಳಕಿನಿಂದ ಅವರನ್ನು ನಡಿಸಿದನು.

೧೫ ಅರಣ್ಯದಲ್ಲಿ ಬಂಡೆಗಳನ್ನು ಶೀಳಿ,
ಅವರಿಗೆ ಮಹಾ ಜಲಾಗಾಧಗಳ ಹಾಗೆ ನೀರು ಕುಡಿಯ ಕೊಟ್ಟನು.

೧೬ ಬಂಡೆಯೊಳಗಿಂದ ಹೊಳೆಗಳನ್ನು ಹೊರಗೆ ತಂದು,
ನದಿಗಳಂತೆ ನೀರು ಇಳಿಯ ಮಾಡಿದನು.

೧೭ ಆದರೆ ಅವರು ಇನ್ನು ಅವನಿಗೆ ವಿರೋಧವಾಗಿ ಪಾಪ ಮಾಡಿ,
ಅರಣ್ಯದಲ್ಲಿ ಮಹೋನ್ನತನನ್ನು ಕೆಣಕಿ,

೧೮ ದೇವರನ್ನು ತಮ್ಮ ಹೃದಯದಲ್ಲಿ ಪರೀಕ್ಷಿಸಿ,
ತಮ್ಮ ಪ್ರಾಣಕ್ಕೋಸ್ಕರ ಆಹಾರವನ್ನು ಕೇಳಿದರು.

೧೯ ದೇವರಿಗೆ ವಿರೋಧವಾಗಿ ಮಾತಾಡಿ—
ದೇವರು ಅರಣ್ಯದಲ್ಲಿ ಮೇಜನ್ನು ಸಿದ್ಧ ಮಾಡ ಬಲ್ಲನೋ! ಅಂದರು.

೨೦ ಇಗೋ, ಅವನು ಬಂಡೆಯನ್ನು ಹೊಡೆಯಲಾಗಿ, ನೀರು ಹೊರಟಿತು;
ಹಳ್ಳಗಳು ಹರಿದವು;
ಕೊಟ್ಟಿಯನ್ನು ಸಹ ಕೊಡ ಬಲ್ಲನೋ!
ತನ್ನ ಜನರಿಗೆ ಬಾಡನ್ನು ಸಿದ್ಧ ಮಾಡುವನೋ! ಅಂದರು.

೨೧ ಆದದರಿಂದ ಕರ್ತನು ಕೇಳಲು, ಉಗ್ರನಾದನು;
ಯಾಕೋಬನಲ್ಲಿ ಬೆಂಕಿ ಹೊತ್ತಿತು;
ಇಸ್ರಯೇಲಿನ ಮೇಲೆ ಕೋಪವು ಸಹ ಎದ್ದಿತು.

೨೨ ಯಾಕಂದರೆ ಅವರು ದೇವರಲ್ಲಿ ನಂಬಿಕೆ ಇಡಲಿಲ್ಲ;
ಅವನ ರಕ್ಷಣೆಯಲ್ಲಿ ಭರವಸವಿಡಲಿಲ್ಲ.

೨3 ಆದರೆ ಮೇಲಿರುವ ಮೇಘಗಳಿಗೆ ಆಜ್ಞಾಪಿಸಿ,
ಆಕಾಶದ ಕದಗಳನ್ನು ತೆರೆದನು.

೨೪ ಉಣ್ಣುವದಕ್ಕೆ ಮನ್ನವನ್ನು ಅವರ ಮೇಲೆ ಸುರಿಸಿ,
ಆಕಾಶದ ಧಾನ್ಯವನ್ನು ಅವರಿಗೆ ಕೊಟ್ಟನು.

೨೫ ಬಲಿಷ್ಟರ ಕೊಟ್ಟಿಯನ್ನು ಒಬ್ಬೊಬ್ಬನು ತಿಂದನು;
ತೃಪ್ತಿಯಾಗುವದ್ದು ಆಹಾರವನ್ನು ಅವರಿಗೆ ಕಳುಹಿಸಿದನು.

೨೬ ಮೂಡಣ ಘೂಳಿಯನ್ನು ಆಕಾಶದಲ್ಲಿ ಹುಟ್ಟಿಸಿ,
ತನ್ನ ಬಲದಿಂದ ದಕ್ಷಿಣ ಘೂಳಿಯನ್ನು ತಂದನು.

೨೭ ಘೂಳಿಯಂತೆ ಬಾಡನ್ನೂ,
ಸಮುದ್ರದ ಮರಳಿನಂತೆ ರೆಕ್ಕೆಯುಳ್ಳ ಪಕ್ಷಿಗಳನ್ನೂ, ಅವರ ಮೇಲೆ ಸುರಿಸಿ,

೨೮ ಅವರ ಮಧ್ಯದಲ್ಲಿಯೂ,
ಅವರ ನಿವಾಸಗಳ ಸುತ್ತಲೂ, ಬೀಳ ಮಾಡಿದನು.

೨೯ ಆಗಲವರು ತಿಂದು, ಬಹಳ ತೃಪ್ತಿಯಾದರು;
ಅವರು ಆಶಿಸಿದ್ದನ್ನು ಅವರಿಗೆ ತರಿಸಿದನು.

3೦ ಅವರು ತಮ್ಮ ಆಶೆಯನ್ನು ಬಿಡದೆ,
ಅವರ ಊಟವು ಇನ್ನು ಅವರ ಬಾಯಿಯಲ್ಲಿ ಇರುವಾಗ,

3೧ ದೇವರ ಕೋಪವು ಅವರ ಮೇಲೆ ಎದ್ದು,
ಅವರಲ್ಲಿ ಕೊಬ್ಬಿದವರನ್ನು ಕೊಂದು ಹಾಕಿ,
ಇಸ್ರಯೇಲಿನ ಪ್ರಾಯಸ್ಥರನ್ನು ಬೀಳ ಕೆಡಿಸಿತು.

3೨ ಇದೆಲ್ಲಾ ಆದಾಗ್ಯೂ ಅವರು ಇನ್ನು ಪಾಪ ಮಾಡಿ,
ಅವನ ಅದ್ಭುತಗಳನ್ನು ನಂಬಲಿಲ್ಲ.

33 ಆಗಲವನು ಅವರ ದಿವಸಗಳನ್ನು ಮಾಯದಲ್ಲಿಯೂ,
ಅವರ ವರುಷಗಳನ್ನು ತಲ್ಲಣದಲ್ಲಿಯೂ, ಮುಗಿಸಿದನು.

3೪ ಅವರನ್ನು ಕೊಲ್ಲುವಾಗ, ಅವರು ಅವನನ್ನು ಹುಡುಕಿ,
ತಿರುಗಿ ಕೊಂಡು, ದೇವರನ್ನು ಹೊತಾಕೆ ಹಾಕೈಸಿ,

3೫ ದೇವರು ತಮ್ಮ ಬಂಡೆ ಎಂದೂ,
ಮಹೋನ್ನತನಾದ ದೇವರು ತಮ್ಮ ವಿಮೋಚಕನೆಂದೂ,
ಜ್ಞಾಪಕ ಮಾಡಿ ಕೊಂಡರು.

3೬ ಮತ್ತು ತಮ್ಮ ಬಾಯಿಗಳಿಂದ ಅವನಿಗೆ ಶಕ್ಕು ಮಾಡಿ,
ತಮ್ಮ ನಾಲಿಗೆಗಳಿಂದ ಅವನಿಗೆ ಸುಳ್ಳು ಹೇಳಿದರು.

3೭ ಅವರ ಹೃದಯವು ಅವನ ಸಂಗಡ ಸ್ಥಿರವಾಗಿರಲಿಲ್ಲ;
ಅವನ ಬಡಂಬಡಿಕೆಯಲ್ಲಿ ನಂಬಿಕೆಯಾಗಿರಲಿಲ್ಲ.

3೮ ಆದಾಗ್ಯೂ ಅವನು ಅಂತಃಕರಣವುಳ್ಳವನಾಗಿ, ಅಕ್ರಮವನ್ನು ಮುಚ್ಚಿ,
ನಾಶ ಮಾಡದೆ,
ಅನೇಕ ಸಾರಿ ತನ್ನ ಕೋಪವನ್ನು ತಿರುಗಿಸಿ,
ತನ್ನ ಉರಿಯನ್ನೆಲ್ಲಾ ಎಬ್ಬಿಸಲಿಲ್ಲ.

3೯ ಅವರು ಮಾಂಸವೂ,
ತಿರುಗಿ ಕೊಳ್ಳದೆ ಹೋಗಿ ಬಿಡುವ ಘೂಳಿಯೂ, ಆಗಿದ್ದಾರೆಂದು,
ಜ್ಞಾಪಕ ಮಾಡಿ ಕೊಂಡನು.

೪೦ ಎಷ್ಟೋ ಸಾರಿ ಅವರು ಅರಣ್ಯದಲ್ಲಿ ಅವನನ್ನು ಕೆಣಕಿ,
ಕಾಡಿನಲ್ಲಿ ಅವನನ್ನು ದುಃಖ ಪಡಿಸಿದರು!

೪೧ ಮತ್ತು ತಿರುಗಿ ಕೊಂಡು, ದೇವರನ್ನು ಪರೀಕ್ಷಿಸಿ,
ಇಸ್ರಯೇಲಿನ ಪರಿಶುದ್ಧರಿಗೆ ಮಟ್ಟು ಎಣಿಸಿದರು.

೪೨ ಅವನು ಅವರನ್ನು ವೈರಿಯಿಂದ ವಿಮೋಚಿಸಿದಂಥ,
೪3 ಮಿಚ್ರದಲ್ಲಿ ತನ್ನ ಗುರುತುಗಳನ್ನೂ
ಜೋವಾನ್ ಬೈಲಿನಲ್ಲಿ ತನ್ನ ಲಕ್ಷಣಗಳನ್ನು ಇಟ್ಟಂಥ ದಿವಸವನ್ನೂ,
ಅವನ ಕೈಯನ್ನೂ, ಅವರು ಜ್ಞಾಪಕ ಮಾಡಿ ಕೊಳ್ಳಲಿಲ್ಲ.

೪೪ ಅವರು ಕುಡಿಯಲಾರದ ಹಾಗೆ, ಅವರ ನದಿಗಳನ್ನೂ,
ಅವರ ಹೊಳೆಗಳನ್ನೂ, ರಕ್ತಕ್ಕೆ ಮಾರ್ಪಡಿಸಿದನು.

೪೫ ಅವರಲ್ಲಿ ನೊಣದ ಗುಂಪುಗಳನ್ನು ಕಳುಹಿಸಿದನು;
ಅವು ಅವರನ್ನು ತಿಂದು ಬಿಟ್ಟವು;
ಕಪ್ಪೆಗಳನ್ನು ಸಹ; ಅವು ಅವರನ್ನು ನಾಶ ಮಾಡಿದವು
೪೬ ಮತ್ತು ಅವರ ಬೆಳೆಯನ್ನು ಕೊಂಡ್ಲಿ ಹುಳುಗಳಿಗೂ,
ಅವರ ವ್ಯವಸಾಯವನ್ನು ಮಿಡತೆಗಳಿಗೂ ಕೊಟ್ಟು,
೪೭ ಅವರ ದ್ರಾಕ್ಷೇ ಬಳ್ಳಿಗಳನ್ನು ಕಲ್ಮಳೆಯಿಂದಲೂ,
ಅವರ ಹಿಪ್ಪಲಿ ನೇರಳೆ ಗಿಡಗಳನ್ನು ಆನೆ ಕಲ್ಲುಗಳಿಂದಲೂ
ಕೊಂದು,
೪೮ ಅವರ ದನಗಳನ್ನು ಕಲ್ಮಳೆಗೂ,
ಅವರ ಮಂದೆಗಳನ್ನು ಕಿಲ್ಲಿಗೂ, ಒಪ್ಪಿಸಿ ಬಿಟ್ಟನು.
೪೯ ಕೇಡಿನ ದೂತರನ್ನು ಕಳುಹಿಸುತ್ತಾ,
ತನ್ನ ಕೋಪದ ಉರಿಯನ್ನೂ,
ಉಗ್ರ ರೋಷ ಇಕ್ಕಟ್ಟುಗಳನ್ನೂ, ಅವರಲ್ಲಿ ಕಳುಹಿಸಿದನು.
೫೦ ತನ್ನ ಕೋಪಕ್ಕೆ ದಾರಿಯನ್ನು ಮಾಡಿ,
ಅವರ ಪ್ರಾಣಗಳನ್ನು ಸಾವಿಗೆ ಹಿಂದೆಗೆಯದೆ,
ಅವರ ಜೀವವನ್ನು ಜಾಡ್ಯಕ್ಕೆ ಒಪ್ಪಿಸಿ ಬಿಟ್ಟು,
೫೧ ಮಿಚ್ರದಲ್ಲಿ ಹೊಚ್ಚಲಕೆಲ್ಲರನ್ನೂ,
ಹಾಮನ ಗುಡಾರಗಳಲ್ಲಿ ಶಕ್ತಿಯ ಪ್ರಥಮ ಫಲವನ್ನೂ, ಹೊಡೆದನು.
೫೨ ಮತ್ತು ಕುರಿಗಳ ಹಾಗೆ ತನ್ನ ಜನರನ್ನು ಹೊರ ತಂದು,
ಮಂದೆಯ ಹಾಗೆ ಅರಣ್ಯದಲ್ಲಿ ಅವರನ್ನು ನಡಿಸಿದನು.
೫೩ ಅವರನ್ನು ಭದ್ರವಾಗಿ ನಡಿಸಿದ ಕಾರಣ, ಅವರು ಹೆದರಲಿಲ್ಲ;
ಆದರೆ ಸಮುದ್ರವು ಅವರ ಶತ್ರುಗಳನ್ನು ಮುಚ್ಚಿ ಬಿಟ್ಟಿತು.
೫೪ ಮತ್ತು ತನ್ನ ಪರಿಶುದ್ಧವಾದ ಮೇರೆಗೂ,
ಅವನ ಬಲಗೈ ಸಂಪಾದಿಸಿದ ಪರ್ವತಕ್ಕೂ, ಅವರನ್ನು ಬರ ಮಾಡಿದನು.
೫೫ ಮತ್ತು ಜನಾಂಗಗಳನ್ನು ಅವರ ಮುಂದೆ ಹೊರಗೆ ಹಾಕಿ,
ಅವರನ್ನು ಬಾಧ್ಯತೆಯ ಅಳತೆಯಿಂದ ಹಂಚಿ,
ಅವರ ಗುಡಾರಗಳಲ್ಲಿ ಇಸ್ರಯೇಲಿನ ಕುಲಗಳನ್ನು ವಾಸಿಸ ಮಾಡಿದನು.
೫೬ ಆದರೆ ಅವರು ಮಹೋನ್ನತನಾದ ದೇವರನ್ನು ಪರೀಕ್ಷಿಸಿ,
ಕೆಣಕಿ,
ಅವನ ಸಾಕ್ಷಿಗಳನ್ನು ಕೈಕೊಳ್ಳಲಿಲ್ಲ.
೫೭ ತಮ್ಮ ತಂದೆಗಳ ಹಾಗೆ ಹಿಂದಿರುಗಿ, ವಂಚನೆ ಮಾಡಿ,
ಮೋಸದ ಬಿಲ್ಲಿನ ಹಾಗೆ ವಾಕೆಯಾದರು.
೫೮ ತಮ್ಮ ಮೇಡುಗಳಿಂದ ಅವನಿಗೆ ಕರಕಲೆ ಎಬ್ಬಿಸಿ,
ಕೆತ್ತಿದ ತಮ್ಮ ವಿಗ್ರಹಗಳಿಂದ ಅವನನ್ನು ರೋಷ ಪಡಿಸಿದರು.
೫೯ ದೇವರು ಕೇಳಿ, ಉಗ್ರನಾಗಿ,
ಇಸ್ರಯೇಲನ್ನು ಬಹು ಅಸಂಹಿಸಿ ಬಿಟ್ಟು,
೬೦ ಶಿಲೋಹಿನ ನಿವಾಸವನ್ನೂ,
ಮನುಷ್ಯರೊಳಗೆ ಅವನು ಹಾಕಿದ ಗುಡಾರವನ್ನೂ ಬಿಟ್ಟು,
೬೧ ತನ್ನ ಬಲವನ್ನು ಶೆರೆಗೂ,
ತನ್ನ ಮಹಿಮೆಯನ್ನು ವೈರಿಯ ಕೈಗೂ ಕೊಟ್ಟು ಬಿಟ್ಟನು.
೬೨ ಮತ್ತು ತನ್ನ ಜನರನ್ನು ಕತ್ತಿಗೆ ಒಪ್ಪಿಸಿ ಕೊಟ್ಟು,
ತನ್ನ ಬಾಧ್ಯತೆಗೆ ವಿರೋಧವಾಗಿ ಉಗ್ರನಾದನು.
೬೩ ಅವರ ಪ್ರಾಯಸ್ಥರನ್ನು ಬೆಂಕಿಯು ತಿಂದು ಬಿಟ್ಟಿತು;
ಅವರ ಕನ್ಯೆಯರು ಹೊಗಳಲ್ಪಡಲಿಲ್ಲ.
೬೪ ಅವರ ಯಾಜಕರು ಕತ್ತಿಯಿಂದ ಬಿದ್ದರು;
ಅವರ ವೆಧವೆಗಳು ಗೋಳಾಡಲಿಲ್ಲ.
೬೫ ಆಗ ಕರ್ತನು ನಿದ್ದೆ ಗೈಯುವವನ ಹಾಗೆಯೂ,
ದ್ರಾಕ್ಷೇ ರಸದಿಂದ ಅರ್ಭಟಿಸುವ ಪರಾಕ್ರಮ ಶಾಲಿಯ ಹಾಗೆಯೂ, ಎಚ್ಚತ್ತು,
೬೬ ತನ್ನ ವೈರಿಗಳನ್ನು ಹಿಂದಕ್ಕೆ ಹೊಡೆದು,
ನಿತ್ಯ ನಿಂದೆಯನ್ನು ಅವರಿಗೆ ಕೊಟ್ಟನು.
೬೭ ಅವನು ಯೋಸೆಫನ ಗುಡಾರವನ್ನು ಅಸಂಹಿಸಿ ಬಿಟ್ಟು,
ಎಫ್ರಯಿಮನ ಕುಲವನ್ನು ಆದು ಕೊಳ್ಳದೆ,
೬೮ ಯೆಹೂದನ ಕುಲವನ್ನೂ,
ತಾನು ಪ್ರೀತಿ ಮಾಡಿದ ಚಿಯೋನ್ ಪರ್ವತವನ್ನೂ ಆದು ಕೊಂಡು,
೬೯ ಉನ್ನತವಾದುವುಗಳಂತೆಯೂ,
ಯುಗ ಯುಗಕ್ಕೂ ತಾನು ಅಸ್ತಿವಾರ ಹಾಕಿದ ಭೂಮಿಯಂತೆಯೂ,
ತನ್ನ ಪರಿಶುದ್ಧ ಸ್ಥಳವನ್ನು ಕಟ್ಟಿದನು.
೭೦ ಮತ್ತು ತನ್ನ ಸೇವಕನಾದ ದಾವೀದನನ್ನು ಆದು ಕೊಂಡು,
ಕುರಿ ಹಟ್ಟಿಗಳಿಂದ ಅವನನ್ನು ತೆಗೆದು,
೭೧ ತನ್ನ ಪ್ರಜೆಯಾದ ಯಾಕೋಬನನ್ನೂ,
ತನ್ನ ಬಾಧ್ಯತೆಯಾದ ಇಸ್ರಯೇಲನನ್ನೂ ಮೇಯಿಸುವ ಹಾಗೆ,
ಅವನನ್ನು ಮೊಲೆ ಕುರಿಗಳ ಹಿಂದಿನಿಂದ ತಂದನು.
೭೨ ಅವನು ತನ್ನ ಹೃದಯದ ಸಂಪೂರ್ಣತ್ವದ ಪ್ರಕಾರ ಅವರನ್ನು ಮೇಯಿಸಿ,
ತನ್ನ ಕೈಗಳ ವಿವೇಕದ ಪ್ರಕಾರ ಅವರನ್ನು ನಡಿಸಿದನು.

## ೭೯. ಕೀರ್ತನೆ.

ಆಸಾಫನ ಗೀತವು.

೧ ದೇವಕೇ, ಜನಾಂಗಗಳು ನಿನ್ನ ಬಾಧ್ಯತೆಯೊಳಗೆ ಬಂದು,
ನಿನ್ನ ಪರಿಶುದ್ಧ ಮಂದಿರವನ್ನು ಅಪವಿತ್ರ ಮಾಡಿ,
ಯೆರೂಸಲೇಮನ್ನು ಹಾಳು ಮಾಡಿದ್ದಾರೆ.
೨ ನಿನ್ನ ಸೇವಕರ ಹೆಣಗಳನ್ನು ಆಕಾಶದ ಪಕ್ಷಿಗಳಿಗೂ,
ನಿನ್ನ ಭಕ್ತರ ಮಾಂಸವನ್ನು ಭೂಮಿಯ ಮೃಗಗಳಿಗೂ,
ಆಹಾರವಾಗಿ ಕೊಟ್ಟಿದ್ದಾರೆ.
3 ಅವರ ರಕ್ತವನ್ನು ಯೆರೂಸಲೇಮಿನ ಸುತ್ತಲು ನೀರಿನ ಹಾಗೆ ಚೆಲ್ಲಿದ್ದಾರೆ;
ಹೂಣಿಡುವವನೊಬ್ಬನೂ ಇಲ್ಲ.
೪ ನಮ್ಮ ನೆರೆಯವರಿಗೆ ನಿಂದೆಯೂ,
ನಮ್ಮ ಸುತ್ತಲಿರುವವರಿಗೆ ಗೇಲಿಯೂ, ಹಾಸ್ಯವೂ, ಆಗಿದ್ದೇವೆ.
೫ ಕರ್ತನೇ, ನೀನು ಯಾವಾಗಲೂ ಕೋಪ ಮಾಡುವದೂ,
ನಿನ್ನ ಪ್ರೇಮೋಗ್ರವು ಬೆಂಕಿಯ ಹಾಗೆ ಉರಿಯುವದೂ, ಎಷ್ಟು ವರಿಗೆ!



೬ ನಿನ್ನನ್ನು ತಿಳಿಯದ ಜನಾಂಗಗಳ ಮೇಲೆಯೂ,
ನಿನ್ನ ಹೆಸರನ್ನು ಕರೆಯದ ರಾಜ್ಯಗಳ ಮೇಲೆಯೂ,
ನಿನ್ನ ಉರಿಯನ್ನು ಹೊಯಿದು ಬಿಡು.
೭ ಯಾಕಂದರೆ ಯಾಕೋಬನನ್ನು ತಿಂದು ಬಿಟ್ಟಿದ್ದಾರೆ;
ಅವನ ನಿವಾಸವನ್ನು ಹಾಳು ಮಾಡಿದ್ದಾರೆ.
೮ ಪೂರ್ವಿಕರ ಅಕ್ರಮಗಳನ್ನು ನಮಗೆ ವಿರೋಧವಾಗಿ ಜ್ಞಾಪಕ ಮಾಡಿ ಕೊಳ್ಳ ಬೇಡ.
ನಿನ್ನ ಅಂತಃಕರಣಗಳು ಬೇಗ ನಮ್ಮನ್ನು ಎದುರು ಗೊಳ್ಳಲಿ;
ಯಾಕಂದರೆ ಬಹಳ ಕ್ಷೀಣರಾದೆವು.
೯ ನಮ್ಮ ರಕ್ಷಣೆಯ ದೇವಕೇ,
ನಿನ್ನ ಹೆಸರಿನ ಘನದ ನಿಮಿತ್ತ ನಮಗೆ ಸಹಾಯ ಮಾಡು;
ನಿನ್ನ ಹೆಸರಿನ ಸಲವಾಗಿ ನಮ್ಮನ್ನು ಬಿಡಿಸಿ,
ನಮ್ಮ ಪಾಪಗಳನ್ನು ಮುಚ್ಚಿ ಬಿಡು.
೧೦ ಅವರ ದೇವರು ಎಲ್ಲಿ? ಎಂದು, ಜನಾಂಗಗಳು ಯಾಕೆ ಹೇಳಬೇಕು!
ಚೆಲ್ಲಿರುವ ನಿನ್ನ ಸೇವಕರ ರಕ್ತದ ಪ್ರತಿ ದಂಡನೆಯು
ನಮ್ಮ ಕಣ್ಣುಗಳ ಮುಂದೆ ಜನಾಂಗಗಳಲ್ಲಿ ತಿಳಿಯಲ್ಪಡಲಿ.
೧೧ ಶೆರೆಯವನ ನರಳುವಿಕೆಯು ನಿನ್ನ ಮುಂದೆ ಬರಲಿ;
ನಿನ್ನ ತೋಳಿನ ಮಹತ್ತಿನ ಪ್ರಕಾರ
ಸಾಯುವದಕ್ಕಿರುವವರನ್ನು ಉಳಿಸು.
೧೨ ಮತ್ತು, ಕರ್ತನೇ, ನಿನಗೆ ನಿಂದಿಸಿದ ನಿಂದೆಯನ್ನು
ನಮ್ಮ ನೆರೆಯವರಿಗೆ ಏಳಪ್ಪು ಅವರ ಎದೆಯಲ್ಲಿ ತಿರಿಗಿ ಹಾಕು.
೧೩ ಆಗ ನಿನ್ನ ಜನರೂ, ನಿನ್ನ ಮೇಯಿನ ಕುರಿಗಳೂ, ಆಗಿರುವ
ನಾವು ಯುಗ ಯುಗಕ್ಕೂ ನಿನ್ನನ್ನು ಕೊಂಡಾಡಿ,
ತಲ ತಲಾಂತರಕ್ಕೂ ನಿನ್ನ ಸ್ತೋತ್ರವನ್ನು ಸಾರುವೆವು.

## ೮೦. ಕೀರ್ತನೆ.

ಗಾಯಕಾಧಿಕಾರಿಗೆ; ಸಾಕ್ಷಿ ಸ್ಥಿತಿಲಿ ವಾದ್ಯಗಳ ಮೇಲೆ; ಆಸಾಫನ ಗೀತವು.

೧ ಇಸ್ರಯೇಲನ್ನು ಮೇಯಿಸುವವನೇ, ಕಿವಿ ಗೊಡು;
ಕುರಿಗಳಂತೆ ಯೋಸೆಫನನ್ನು ನಡಿಸುವವನೇ,
ಕೆರೂಬಿಗಳಲ್ಲಿ ಕೂತವನೇ, ಹೊಳೆಯ ಬೇಕು.
೨ ಎಫ್ರಯಿಮ್ ಬೆನ್ಯಮೀನ್ ಮನಸ್ಸೆಯರ ಮುಂದೆ
ನಿನ್ನ ಪರಾಕ್ರಮವನ್ನು ಎಬ್ಬಿಸಿ, ನಮ್ಮ ರಕ್ಷಣೆಗೆ ಬಾ.
3 ದೇವಕೇ, ನಮ್ಮನ್ನು ತಿರಿಗಿ ಬರ ಮಾಡಿ,
ನಿನ್ನ ಮುಖವನ್ನು ಬೆಳಗ ಮಾಡು; ಆಗ ರಕ್ಷಿಸಲ್ಪಡುವೆವು.
೪ ಸೈನ್ಯಗಳ ದೇವರಾದ ಕರ್ತನೇ,
ಎಷ್ಟು ವರಿಗೆ ನಿನ್ನ ಜನರ ಪ್ರಾರ್ಥನೆಗೆ ವಿರೋಧವಾಗಿ ಹೊಗೆ ಹಾಯುತ್ತೀ!
೫ ಕಣ್ಣೀರಿನ ಕೊಟ್ಟಿಯನ್ನು ಅವರಿಗೆ ತಿನ್ನಿಸಿ,
ಬಹಳ ಕಣ್ಣೀರು ಅವರಿಗೆ ಕುಡಿಸುತ್ತೀ.
೬ ನಮ್ಮ ನೆರೆಯವರಿಗೆ ನಮ್ಮನ್ನು ಜಗಳಾಟಕ್ಕೆ ಇಡುತ್ತೀ;
ನಮ್ಮ ಶತ್ರುಗಳು ನಮ್ಮನ್ನು ಗೇಲಿ ಮಾಡುತ್ತಾರೆ.
೭ ಸೈನ್ಯಗಳ ದೇವಕೇ, ನಮ್ಮನ್ನು ತಿರಿಗಿ ಬರ ಮಾಡಿ,
ನಿನ್ನ ಮುಖವನ್ನು ಬೆಳಗ ಮಾಡು; ಆಗ ರಕ್ಷಿಸಲ್ಪಡುವೆವು.
೮ ದ್ರಾಕ್ಷೇ ಗಿಡವನ್ನು ಮಿಚ್ರದಿಂದ ತಂದಿ;
ಜನಾಂಗಗಳನ್ನು ಹೊರಡಿಸಿ, ಅದನ್ನು ನೆಟ್ಟಿ.
೯ ಅದರ ಮುಂದೆ ಸ್ಥಳ ಮಾಡಿದಿ;
ಆಗಲದು ಬೇರೂರಿ, ದೇಶವನ್ನು ತುಂಬಿತು.
೧೦ ಅದರ ನೆರಳಿನಿಂದ ಬೆಟ್ಟಗಳೂ,
ಅದರ ಕೊಂಬೆಗಳಿಂದ ದೇವದಾರುಗಳೂ, ಮುಚ್ಚಲ್ಪಟ್ಟವು.
೧೧ ಅದು ತನ್ನ ರೆಂಬೆಗಳನ್ನು ಸಮುದ್ರದ ವರಿಗೂ,
ತನ್ನ ಬಳ್ಳಿಗಳನ್ನು ನದಿಗೂ, ಬಿಟ್ಟಿತು.
೧೨ ಮಾರ್ಗದಲ್ಲಿ ಹಾದು ಹೋಗುವವರೆಲ್ಲರು ಅದನ್ನು ಕೀಳುವ ಹಾಗೆ,
ಯಾಕೆ ಅದರ ಬೇಲಿಗಳನ್ನು ಮುರಿದು ಬಿಟ್ಟಿದ್ದೀ?
೧೩ ಅಡವಿಯಿಂದ ಬಂದ ಹಂದಿಯು ಅದನ್ನು ಹಾಳು ಮಾಡುತ್ತದೆ;
ಬೈಲಿನ ಮೃಗಗಳು ಅದನ್ನು ಮೇದು ಬಿಡುತ್ತವೆ.
೧೪ ಓ ಸೈನ್ಯಗಳ ದೇವಕೇ, ತಿರುಗಿಕೋ;
ಆಕಾಶದಿಂದ ದೃಷ್ಟಿಸಿ ನೋಡು. ಈ ದ್ರಾಕ್ಷೇ ಗಿಡವನ್ನೂ,
೧೫ ನಿನ್ನ ಬಲಗೈ ನೆಟ್ಟಿ ಸಸಿಯನ್ನೂ,
ನೀನು ನಿನಗೆ ದೃಢ ಪಡಿಸಿ ಕೊಂಡ ಮಗನನ್ನೂ, ಪರಾಮರಿಸು.
೧೬ ಅದು ಬೆಂಕಿಯಿಂದ ಸುಡಲ್ಪಟ್ಟು, ಕೊಯ್ಯಲ್ಪಟ್ಟದೆ;
ನಿನ್ನ ಮುಖದ ಗದರಿಕೆಯಿಂದ ನಾಶವಾಗುತ್ತಾರೆ.
೧೭ ನಿನ್ನ ಬಲಗೈಯ ಮನುಷ್ಯನ ಮೇಲೆ,
ನೀನು ನಿನಗೆ ದೃಢ ಪಡಿಸಿ ಕೊಂಡ ಮನುಷ್ಯನ ಮಗನ ಮೇಲೆ, ನಿನ್ನ ಕೈ ಇರಲಿ.
೧೮ ಆಗ ನಾವು ನಿನ್ನಿಂದ ಹಿಂದಿರುಗುವದಿಲ್ಲ;
ನಮ್ಮನ್ನು ಬದುಕಿಸು, ಆಗ ನಿನ್ನ ಹೆಸರನ್ನು ಕರೆಯುವೆವು.
೧೯ ಸೈನ್ಯಗಳ ದೇವರಾದ ಯೆಹೋವನೇ, ನಮ್ಮನ್ನು ತಿರಿಗಿ ಬರ ಮಾಡಿ,
ನಿನ್ನ ಮುಖವನ್ನು ಬೆಳಗ ಮಾಡು; ಆಗ ರಕ್ಷಿಸಲ್ಪಡುವೆವು.

## ೮೧. ಕೀರ್ತನೆ.

ಗಾಯಕಾಧಿಕಾರಿಗೆ; ಗಿತ್ತೀತ್ ವಾದ್ಯದ ಮೇಲೆ; ಆಸಾಫನದು.

೧ ನಮ್ಮ ಬಲವಾಗಿರುವ ದೇವರಿಗೆ ಉತ್ಸಾಹ ಧ್ವನಿ ಮಾಡಿರಿ;
ಯಾಕೋಬನ ದೇವರಿಗೆ ಜಯಧ್ವನಿ ಗೈಯಿರಿ.
೨ ಕೀರ್ತನೆಯನ್ನು ಎತ್ತಿರಿ; ದಮ್ಮಡಿಯನ್ನೂ,
ರಮ್ಯವಾದ ಕಿನ್ನರಿಯನ್ನೂ, ವೀಣೆಯ ಸಂಗಡ ಕೊಡಿರಿ.
3 ತಿಂಗಳಾರಂಭದಲ್ಲಿಯೂ,
ನಮ್ಮ ಹಬ್ಬದ ದಿವಸವಾದ ಹುಣ್ಣುಮೆಯಲ್ಲಿಯೂ, ತುತೂರಿಯನ್ನು ಊದಿರಿ.
೪ ಯಾಕಂದರೆ ಅದು ಇಸ್ರಯೇಲಿಗೆ ನೇಮಕವೇ;
ಯಾಕೋಬನ ದೇವರ ನ್ಯಾಯವೇ.
೫ ನಾನು ತಿಳಿಯದ ಭಾಷೆಯನ್ನು ಕೇಳಿದ
ಮಿಚ್ರ ದೇಶಕ್ಕೆ ವಿರೋಧವಾಗಿ ಅವನು ಹೊರಟಾಗ,
ಅದನ್ನು ಯೋಸೆಫನಲ್ಲಿ ಸಾಕ್ಷಿಯಾಗಿ ಇಟ್ಟನು.

೬ ಹೊರೆಯಿಂದ ಅವನ ಪೆನ್ನುನ್ನು ತೊಲಗಿಸಿದೆನು;
ಅವನ ಕೈಗಳು ಪುಟ್ಟಿಗಳನ್ನು ಬಿಟ್ಟು ಬಿಟ್ಟವು.
೭ ಇಕ್ಕಟ್ಟಿನಲ್ಲಿ ಕರೆದೆ; ಆಗ ನಿನ್ನನ್ನು ತಪ್ಪಿಸಿ ಬಿಟ್ಟೆನು;
ಗುಡುಗಿನ ಮರೆಯಲ್ಲಿ ನಿನಗೆ ಉತ್ತರ ಕೊಟ್ಟು,
ವಿವಾದದ ನೀರುಗಳ ಹತ್ತರ ನಿನ್ನನ್ನು ಶೋಧಿಸಿದೆನು. ಸೇಲಾ.

೮ ನನ್ನ ಜನರೇ, ಕೇಳಿರಿ;
ಇಸ್ರಯೇಲೇ, ನೀನು ನನ್ನನ್ನು ಕೇಳಿದರೆ, ನಿನಗೆ ಸಾಕ್ಷಿ ಕೊಡುವೆನು.
೯ ನಿನ್ನಲ್ಲಿ ಅನ್ಯ ದೇವರು ಇರ ಬಾರದು;
ಪರ ದೇವರಿಗೆ ಅಡ್ಡ ಬೀಳ ಬಾರದು.
೧೦ ಮಿಚ್ರ ದೇಶದಿಂದ ನಿನ್ನನ್ನು ಏಳ್ಪ ಮಾಡಿದ
ನಿನ್ನ ದೇವರಾದ ಯೆಹೋವ ನಾನೇ;
ನಿನ್ನ ಬಾಯಿಯನ್ನು ಅಗಲವಾಗಿ ತೆರೆ, ಆಗ ಅದನ್ನು ತುಂಬಿಸುವೆನು.
೧೧ ಆದರೆ ನನ್ನ ಜನರು ನನ್ನ ಶಬ್ದವನ್ನು ಕೇಳಲಿಲ್ಲ;
ಇಸ್ರಯೇಲು ನನ್ನ ಮೇಲೆ ಮನಸ್ಸಿಡಲಿಲ್ಲ.
೧೨ ಆದದರಿಂದ ಅವರ ಹೃದಯದ ಕಾಠಿಣ್ಯಕ್ಕೆ ಅವರನ್ನು ಒಪ್ಪಿಸಿದೆನು;
ಅವರು ತಮ್ಮ ಆಲೋಚನೆಗಳಲ್ಲಿ ನಡೆದು ಕೊಂಡರು.

೧೩ ಆಹ, ನನ್ನ ಜನರು ನನ್ನನ್ನು ಕೇಳಿದರೆ,
ಇಸ್ರಯೇಲು ನನ್ನ ಮಾರ್ಗದಲ್ಲಿ ನಡೆದು ಕೊಂಡರೆ,
೧೪ ಸ್ವಲ್ಪವರಲ್ಲಿ ಅವರ ಶತ್ರುಗಳನ್ನು ಅಣಗಿಸುವೆನು;
ಅವರ ವೈರಿಗಳ ಮೇಲೆ ನನ್ನ ಕೈಯನ್ನು ತಿರುಗಿಸುವೆನು.
೧೫ ಕರ್ತನನ್ನು ಹಗೆ ಮಾಡುವವರು ಅವನಿಗೆ ಸುಳ್ಳು ಹೇಳುವರು;
ಮತ್ತು ಅವರ ಕಾಲವು ಯುಗ ಯುಗಕ್ಕೂ ಇರುವದು.
೧೬ ಇದಲ್ಲದೆ ನಾನು ಉತ್ತಮವಾದ ಗೋಧಿಯಿಂದ ಅವನಿಗೆ ಉಣ್ಣಲಿಕ್ಕೆ ಕೊಟ್ಟು,
ಬಂಡೆಯೊಳಗಿನ ಜೇನಿನಿಂದ ನಿನ್ನನ್ನು ತೃಪ್ತಿ ಪಡಿಸುವೆನು.

## ೮೨. ಕೀರ್ತನೆ.

ಆಸಾಫನ ಗೀತವು.

೧ ದೇವರು ದೇವರ ಸಭೆಯಲ್ಲಿ ನಿಂತು,
ದೇವರುಗಳ ಮಧ್ಯದಲ್ಲಿ ನ್ಯಾಯ ತೀರಿಸುತ್ತಾನೆ.
೨ ಎಷ್ಟು ವರಿಗೂ ಅನ್ಯಾಯವಾಗಿ ನ್ಯಾಯ ತೀರಿಸಿ,
ದುಷ್ಟರಿಗೆ ಮುಖದಾಕ್ಷಿಣ್ಯ ಮಾಡುವಿರಿ! ಸೇಲಾ.
೩ ದರಿದ್ರನಿಗೂ ದಿಕ್ಕಿಲ್ಲದವನಿಗೂ ನ್ಯಾಯ ತೀರಿಸಿ,
ದೀನನಿಗೂ ಬಡವನಿಗೂ ನೀತಿಯನ್ನು ಮಾಡಿರಿ.
೪ ದರಿದ್ರನನ್ನೂ ಬಡವನನ್ನೂ ತಪ್ಪಿಸಿರಿ;
ದುಷ್ಟರ ಕೈಯೊಳಗಿಂದ ಬಿಡಿಸಿರಿ.
೫ ಅವರು ಅರಿಯರು; ಅವರು ಗ್ರಹಿಸುವದಿಲ್ಲ;
ಕತ್ತಲೆಯಲ್ಲಿ ನಡೆದು ಕೊಳ್ಳುತ್ತಾರೆ.
ಭೂಮಿಯ ಅಸ್ತಿವಾರಗಳೆಲ್ಲಾ ಕದಲುತ್ತವೆ.

೬ ನಾನು ಹೇಳಿದೆನು—ನೀವು ದೇವರುಗಳು,
ನೀವೆಲ್ಲರು ಮಹೋನ್ನತನ ಮಕ್ಕಳು.
೭ ಆದಾಗ್ಯೂ ಮನುಷ್ಯರ ಹಾಗೆ ಸಾಯುವಿರಿ;
ಪ್ರಧಾನರಲ್ಲಿ ಒಬ್ಬನ ಹಾಗೆ ಬೀಳುವಿರಿ.

೮ ದೇವರೇ, ಏಳು; ಭೂಮಿಗೆ ನ್ಯಾಯ ತೀರಿಸು;
ಯಾಕಂದರೆ ನೀನು ಜನಾಂಗಗಳನ್ನೆಲ್ಲಾ ಬಾಧ್ಯವಾಗಿ ಹೊಂದುವಿ.

## ೮೩. ಕೀರ್ತನೆ.

ಆಸಾಫನ ಗೀತವಾದ ಹಾಡು.

೧ ಕರ್ತನೇ, ಮೌನವಾಗಿರ ಬೇಡ;
ಮೂಕನಾಗಿರ ಬೇಡ; ಸುಮ್ಮನಿರ ಬೇಡ, ದೇವರೇ.

೨ ಯಾಕಂದರೆ, ಇಗೋ, ನಿನ್ನ ಶತ್ರುಗಳು ಗದ್ದಲ ಮಾಡುತ್ತಾರೆ;
ನಿನ್ನ ಹಗೆಯವರು ತಲೆ ಎತ್ತುತ್ತಾರೆ.
೩ ನಿನ್ನ ಜನರಿಗೆ ವಿರೋಧವಾಗಿ ರಹಸ್ಯ ಯುಕ್ತಿ ಕಲ್ಪಿಸುತ್ತಾರೆ;
ನೀನು ಅಡಗಿಸಿದವರಿಗೆ ವಿರೋಧವಾಗಿ ಆಲೋಚಿಸಿ ಕೊಳ್ಳುತ್ತಾರೆ.
೪ ಬನ್ನಿರಿ, ಜನಾಂಗವಾಗಿರದ ಹಾಗೆ, ಅವರನ್ನು ನಿರ್ಮೂಲ ಮಾಡುವ;
ಇಸ್ರಯೇಲಿನ ಹೆಸರು ಇನ್ನು ಜ್ಞಾಪಕಕ್ಕೆ ಬಾರದಿರಲಿ, ಅನ್ನುತ್ತಾರೆ.
೫ ಯಾಕಂದರೆ ಅವರು ಕೂಡ ಏಕ ಮನಸ್ಸಾಗಿ ಆಲೋಚನೆ ಮಾಡಿ ಕೊಂಡಿದ್ದಾರೆ;
ನಿನಗೆ ವಿರೋಧವಾಗಿ ಒಡಂಬಟ್ಟಿದ್ದಾರೆ.
೬ ಎದೋಮ್ಯರು, ಇಷ್ಮಯೇಲರ ಗುಡಾರಗಳೂ,
ಮೊವಾಬೂ, ಹಗಾರ್ಯರೂ,
೭ ಗೆಬಾಲೂ, ಅಮ್ಮೋನೂ, ಅಮಲೇಕೂ,
ತೂರಿನ ನಿವಾಸಿಗಳು ಸಹಿತವಾಗಿ ಒಪ್ಪಿದ್ದಾರೆ;
೮ ಅಸ್ಸೂರು ಸಹ ಅವರಲ್ಲಿ ಕೂಡಿ ಕೊಂಡಿತು;
ಅವರು ಲೋಟನ ಮಕ್ಕಳಿಗೆ ಶೋಳು ಆಗಿದ್ದಾರೆ. ಸೇಲಾ.

೯ ಮಿದ್ಯಾನಿಗೂ, ಸೀಸೆರನಿಗೂ, ಯಾಬೀನನಿಗೂ,
ಕೀಶೋನ್ ಹಳ್ಳದಲ್ಲಿ ಮಾಡಿದ ಹಾಗೆ, ಅವರಿಗೆ ಮಾಡು.
೧೦ ಇವರು ಎನ್ದೋರಿನಲ್ಲಿ ನಾಶವಾಗಿ,
ಭೂಮಿಗೆ ಗೊಬ್ಬರವಾದರು.
೧೧ ಅವರನ್ನೂ, ಅವರ ಅಧಿಪತಿಗಳನ್ನೂ ಓರೆಬ್, ಜೀಯೆಬರ ಹಾಗೆಯೂ,
ಅವರ ಪ್ರೇಷ್ಠರೆಲ್ಲರನ್ನೂ ಜೇಬಹ ಚಲ್ಮುನ್ನರ ಹಾಗೆಯೂ, ಮಾಡು.
೧೨ ನಾವು ದೇವರ ನಿವಾಸಗಳನ್ನು ಸ್ವತಂತ್ರಿಸಿ ಕೊಳ್ಳುವ, ಅನ್ನುತ್ತಾರೆ.



೧೩ ನನ್ನ ದೇವರೇ, ಅವರನ್ನು ಬಿರು ಘುಳ್ಳಿಯ ಹಾಗೆಯೂ,
ಘುಳ್ಳಿಯ ಮುಂದಿರುವ ಕಸದ ಹಾಗೆಯೂ, ಮಾಡು.
೧೪ ಅಡವಿ ಸುಡುವ ಬೆಂಕಿಯ ಹಾಗೆಯೂ,
ಬೆಟ್ಟಗಳನ್ನು ದಹಿಸುವ ಜ್ವಾಲೆಯ ಹಾಗೆಯೂ,
೧೫ ನಿನ್ನ ಬಿರು ಘುಳ್ಳಿಯಿಂದ ಅವರನ್ನು ಹಿಂದಟ್ಟಿ,
ನಿನ್ನ ಸುಳಿ ಘುಳ್ಳಿಯಿಂದ ಅವರನ್ನು ತಲ್ಲಣ ಪಡಿಸು.
೧೬ ಕರ್ತನೇ, ನಿನ್ನ ನಾಮವನ್ನು ಹುಡುಕುವ ಹಾಗೆ,
ಅವರ ಮುಖವನ್ನು ಮಾನ ಭಂಗದಿಂದ ತುಂಬಿಸು.
೧೭ ಅವರು ನಾಚಿಕೆ ಪಟ್ಟು, ಎಂದೆಂದಿಗೂ ತಲ್ಲಣಿಸಲಿ;
ಲಜ್ಜೆ ಪಟ್ಟು, ನಾಶವಾಗಲಿ.
೧೮ ಮತ್ತು ಒಬ್ಬನಾಗಿ ಯೆಹೋವನೆಂಬ ಹೆಸರುಳ್ಳ ನೀನು
ಸಮಸ್ತ ಭೂಮಿಯ ಮೇಲೆ ಮಹೋನ್ನತನಾಗಿದ್ದೀ, ಎಂದು ತಿಳಿಯ ಕೊಳ್ಳಲಿ.

## ೮೪. ಕೀರ್ತನೆ.

ಗಾಯಕಾಧಿಕಾರಿಗೆ; ಗಿತ್ತೀತ್ ವಾದ್ಯದ ಮೇಲೆ; ಕೊರಹನ ಮಕ್ಕಳದು; ಗೀತವು.

೧ ಸೈನ್ಯಗಳ ಕರ್ತನೇ, ನಿನ್ನ ನಿವಾಸಗಳು ಎಷ್ಟೋ ಪ್ರಿಯವಾಗಿವೆ!
೨ ಕರ್ತನ ಅಂಗಳಗಳಿಗೆ ನನ್ನ ಪ್ರಾಣವು ಬಯಸಿ, ಕುಂದುತ್ತದೆ;
ನನ್ನ ಹೃದಯವೂ ನನ್ನ ಮಾಂಸವೂ ಜೀವವುಳ್ಳ ದೇವರ ಕಡೆಗೆ ಧ್ವನಿಗೈಯುತ್ತವೆ.
೩ ಗುಬ್ಬಿಯು ಮನೆಯನ್ನೂ,
ಜಾನಕ್ಕಿಯು ಸಪ ತನ್ನ ಮರಿಗಳನ್ನಿಡುವ ಗೂಡನ್ನೂ,
ನಿನ್ನ ಬಲಿಪೀಠಗಳ ಬಳಿಯಲ್ಲಿ ಕಂಡು ಕೊಂಡವೆ,
ಸೈನ್ಯಗಳ ಕರ್ತನೇ, ನನ್ನ ಅರಸನೇ, ನನ್ನ ದೇವರೇ.
೪ ನಿನ್ನ ಮನೆಯಲ್ಲಿ ವಾಸವಾಗಿರುವವರು ಭಾಗ್ಯವಂತರು;
ಇನ್ನು ನಿನ್ನನ್ನು ಸ್ತುತಿಸುವರು. ಸೇಲಾ.
೫ ನಿನ್ನಲ್ಲಿ ಬಲ ಉಂಟಾದ ಮನುಷ್ಯನು ಭಾಗ್ಯವಂತನು;
ದಾರಿಗಳು ಅವರ ಹೃದಯಗಳಲ್ಲಿ ಅವೆ.
೬ ಅಳುಖಿಕೆಯ ತಗ್ಗನ್ನು ದಾಟುವವರು ಅದನ್ನು ಬುಗ್ಗೆಯಾಗಿ ಮಾಡುತ್ತಾರೆ;
ಮತ್ತು ಮಳೆಯು ಆಶೀರ್ವಾದಗಳಿಂದ ಅದನ್ನು ಮುಚ್ಚುತ್ತದೆ.
೭ ಬಲದಿಂದ ಬಲಕ್ಕೆ ಹೋಗುತ್ತಾರೆ;
ಚಿಯೋನಿನಲ್ಲಿ ದೇವರ ಮುಂದೆ ಕಾಣಿಸಿ ಕೊಳ್ಳುತ್ತಾರೆ.

೮ ಸೈನ್ಯಗಳ ದೇವರಾದ ಕರ್ತನೇ, ನನ್ನ ಪ್ರಾರ್ಥನೆಯನ್ನು ಕೇಳು;
ಯಾಕೋಬನ ದೇವರೇ, ಕಿವಿ ಕೊಡು. ಸೇಲಾ.
೯ ನಮ್ಮ ಗುರಾಣಿಯೇ, ದೇವರೇ, ನೋಡು;
ನಿನ್ನ ಅಭಿಷಿಕ್ತನ ಮುಖವನ್ನು ದೃಷ್ಟಿಸು.
೧೦ ಯಾಕಂದರೆ ನಾವಿರ ದಿವಸಗಳಿಗಿಂತ ನಿನ್ನ ಅಂಗಳಗಳಲ್ಲಿ ಒಂದೇ ದಿವಸವು ಒಳ್ಳೇದಾಗಿದೆ;
ದುಷ್ಟತ್ವದ ಗುಡಾರಗಳಲ್ಲಿ ವಾಸ ಮಾಡುವದಕ್ಕಿಂತ,
ನನ್ನ ದೇವರ ಮನೆಯ ಹೊಸ್ತಲಲ್ಲಿ ನಿಂತು ಕೊಂಡಿರುವದನ್ನು ಆರಿಸಿ ಕೊಳ್ಳುತ್ತೇನೆ.

೧೧ ಯಾಕಂದರೆ ದೇವರಾದ ಯೆಹೋವ ಸೂರ್ಯನೂ ಗುರಾಣಿಯೂ ಆಗಿದ್ದಾನೆ;
ಯೆಹೋವ ದಯವನ್ನೂ ಘನವನ್ನೂ ಕೊಡುತ್ತಾನೆ; ಸಂಪೂರ್ಣವಾಗಿ ನಡೆದು ಕೊಳ್ಳುವವರಿಗೆ
ಅವನು ಒಳ್ಳೇದನ್ನು ಹಿಂಡೆಗೆಯುವದಿಲ್ಲ.
೧೨ ಸೈನ್ಯಗಳ ಕರ್ತನೇ,
ನಿನ್ನಲ್ಲಿ ಭರವಸವಿಡುವ ಮನುಷ್ಯನು ಭಾಗ್ಯವಂತನು.

## ೮೫. ಕೀರ್ತನೆ.

ಗಾಯಕಾಧಿಕಾರಿಗೆ; ಕೊರಹನ ಮಕ್ಕಳದು; ಗೀತವು.

೧ ಕರ್ತನೇ, ನಿನ್ನ ದೇಶದಲ್ಲಿ ಇಷ್ಟು ಪಟ್ಟಿದ್ದೀ;
ಯಾಕೋಬನ ಸೆರೆಗೆ ತಿರುಗಿ ಕೊಂಡಿದ್ದೀ.
೨ ನಿನ್ನ ಜನರ ಅಕ್ರಮವನ್ನು ಪರಿಹರಿಸಿದ್ದೀ;
ಅವರ ಪಾಪವನ್ನೆಲ್ಲಾ ಮುಚ್ಚಿದ್ದೀ. ಸೇಲಾ.
೩ ನಿನ್ನ ಉಗ್ರವನ್ನೆಲ್ಲಾ ತೆಗೆದು ಬಿಟ್ಟಿದ್ದೀ;
ನಿನ್ನ ಕೋಪದ ಉರಿಯಿಂದ ತಿರುಗಿ ಕೊಂಡಿದ್ದೀ.

೪ ನಮ್ಮ ರಕ್ಷಣೆಯ ದೇವರೇ, ನಮ್ಮ ಕಡೆಗೆ ತಿರುಗು;
ನಮ್ಮ ಮೇಲಿರುವ ನಿನ್ನ ಕರಕಳೆಯನ್ನು ತೊಲಗಿಸು.
೫ ಯುಗ ಯುಗಕ್ಕೂ ನಮ್ಮ ಮೇಲೆ ಕೋಪಿಸುವಿಯೋ!
ತಲ ತಲಾಂತರಕ್ಕೂ ನಿನ್ನ ಕೋಪವನ್ನು ಎಳೆಯುವಿಯೋ!
೬ ನಿನ್ನ ಜನರು ನಿನ್ನಲ್ಲಿ ಸಂತೋಷ ಪಡುವ ಹಾಗೆ,
ನೀನು ತಿರುಗಿ ಕೊಂಡು, ನಮ್ಮನ್ನು ಬದುಕಿಸುವದಿಲ್ಲವೋ!
೭ ಕರ್ತನೇ, ನಿನ್ನ ಕೃಪೆಯನ್ನು ನಮಗೆ ತೋರಿಸು;
ನಿನ್ನ ರಕ್ಷಣೆಯನ್ನು ನಮಗೆ ಕೊಡು.

೮ ಕರ್ತನಾದ ದೇವರು ಏನು ಹೇಳುವನೋ! ಕೇಳುವೆನು;
ನಿಶ್ಚಯವಾಗಿ ತನ್ನ ಜನರಿಗೂ ತನ್ನ ಭಕ್ತರಿಗೂ ಸಮಾಧಾನದ ಮಾತು ಹೇಳುವನು;
ಬುದ್ಧಿಹೀನತ್ವಕ್ಕೆ ಮಾತ್ರ ಅವರು ತಿರುಗಿ ಕೊಳ್ಳದೆ ಇರಲಿ.
೯ ನಿಶ್ಚಯವಾಗಿ ಘನವು ನಮ್ಮ ದೇಶದಲ್ಲಿ ವಾಸವಾಗಿರುವ ಹಾಗೆ,
ಅವನಿಗೆ ಭಯ ಪಡುವವರಿಗೆ ಅವನ ರಕ್ಷಣೆಯು ಸಮೀಪವಾಗಿದೆ.
೧೦ ಕೃಪೆಯೂ ಸತ್ಯವೂ ಸಂಧಿಸಿ ಕೊಳ್ಳುತ್ತವೆ;
ನೀತಿಯೂ ಸಮಾಧಾನವೂ ಮುದ್ದಿಟ್ಟು ಕೊಳ್ಳುತ್ತವೆ.
೧೧ ಸತ್ಯವು ಭೂಮಿಯಿಂದ ಮೊಳೆಯುವದು;
ಮತ್ತು ನೀತಿಯು ಆಕಾಶದಿಂದ ಕೆಳಗೆ ತಗ್ಗಿಸುವದು.
೧೨ ಇದಲ್ಲದೆ ಕರ್ತನು ಒಳ್ಳೇದನ್ನು ಕೊಡುವನು;
ಮತ್ತು ನಮ್ಮ ಭೂಮಿಯು ಅದರ ಬೆಳೆಯನ್ನು ಕೊಡುವದು.
೧೩ ನೀತಿಯು ಅವನ ಮುಂದೆ ನಡೆದು ಕೊಂಡು,
ತನ್ನ ಹೆಜ್ಜೆಗಳನ್ನು ಮಾರ್ಗದಲ್ಲಿ ಇಡುವದು.

## ೮೬. ಕೀರ್ತನೆ.

ದಾವೀದನ ಪ್ರಾರ್ಥನೆಯು.

೧ ಕರ್ತನೇ, ನಿನ್ನ ಕಿವಿಯನ್ನು ಬೊಗ್ಗಿಸು, ನನಗೆ ಉತ್ತರ ಕೊಡು;
ಯಾಕಂದರೆ ನಾನು ದೀನನೂ ಬಡವನೂ ಆಗಿದ್ದೇನೆ.

೨ ನನ್ನ ಪ್ರಾಣವನ್ನು ಕಾಪಾಡು; ಯಾಕಂದರೆ ನಾನು ಭಕ್ತನು.
ನನ್ನ ದೇವರಾದ ನೀನೇ, ನಿನ್ನಲ್ಲಿ ಭರವಸವಿಟ್ಟಿರುವ ನಿನ್ನ ಸೇವಕ
ನನ್ನು ರಕ್ಷಿಸು.
೩ ಕರ್ತನೇ, ನನ್ನನ್ನು ಕರುಣಿಸು;
ಯಾಕಂದರೆ ನಿನಗೆ ದಿನವೆಲ್ಲಾ ಕೂಗುತ್ತೇನೆ.
೪ ನಿನ್ನ ಸೇವಕನ ಪ್ರಾಣವನ್ನು ಸಂತೋಷ ಪಡಿಸು;
ಯಾಕಂದರೆ, ಕರ್ತನೇ, ನಿನ್ನ ಕಡೆಗೆ ನನ್ನ ಪ್ರಾಣವನ್ನು
ಎತ್ತುತ್ತೇನೆ.

೫ ಯಾಕಂದರೆ, ಕರ್ತನೇ, ನೀನೇ ಒಳ್ಳೆಯವನೂ, ಮ
ನ್ನಿಸುವವನೂ,
ನಿನಗೆ ಕೂಗುವವರೆಲ್ಲರಿಗೆ ಬಹು ಕೃಪೆಯುಳ್ಳವನೂ ಆಗಿದ್ದೀ.
೬ ಕರ್ತನೇ, ನನ್ನ ಪ್ರಾರ್ಥನೆಗೆ ಕಿವಿ ಕೊಡು;
ನನ್ನ ವಿಜ್ಞಾಪನೆಗಳ ಶಬ್ದವನ್ನು ಆಲೈಸು.
೭ ನನ್ನ ಇಕ್ಕಟ್ಟಿನ ದಿವಸದಲ್ಲಿ ನಿನ್ನನ್ನು ಕರೆಯುವೆನು;
ಯಾಕಂದರೆ ನೀನು ನನಗೆ ಉತ್ತರ ಕೊಡುವಿ.

೮ ಕರ್ತನೇ, ದೇವರುಗಳಲ್ಲಿ ನಿನ್ನ ಹಾಗೆ ಒಬ್ಬನೂ ಇಲ್ಲ;
ಮತ್ತು ನಿನ್ನ ಕೆಲಸಗಳ ಹಾಗೆ ಒಂದೂ ಇಲ್ಲ.
೯ ಕರ್ತನೇ, ನೀನು ಉಂಟು ಮಾಡಿದ ಜನಾಂಗಗಳೆಲ್ಲಾ ಬಂದು,
ನಿನ್ನ ಮುಂದೆ ಅಡ್ಡ ಬಿದ್ದು,
ನಿನ್ನ ಹೆಸರಿಗೆ ಘನ ಕೊಡುವರು.
೧೦ ಯಾಕಂದರೆ ನೀನು ದೊಡ್ಡವನೂ ಅದ್ಭುತಗಳನ್ನು ಮಾಡುವವ
ನೂ ಆಗಿದ್ದೀ;
ನೀನೊಬ್ಬನೇ ದೇವರು.
೧೧ ಕರ್ತನೇ, ನಿನ್ನ ಮಾರ್ಗವನ್ನು ನನಗೆ ಬೋಧಿಸು;
ನಿನ್ನ ಸತ್ಯದಲ್ಲಿ ನಡೆದು ಕೊಳ್ಳುವೆನು;
ನಿನ್ನ ಹೆಸರಿಗೆ ಭಯ ಪಡುವ ಹಾಗೆ ನನ್ನ ಹೃದಯವನ್ನು
ಒಂದಾಗಿ ಮಾಡು.
೧೨ ನನ್ನ ದೇವರಾದ ಕರ್ತನೇ, ನನ್ನ ಪೂರ್ಣ ಹೃದಯದಿಂದ
ನಿನ್ನನ್ನು ಕೊಂಡಾಡುವೆನು;
ಮತ್ತು ನಿನ್ನ ಹೆಸರನ್ನು ಯುಗ ಯುಗಕ್ಕೂ ಘನ ಪಡಿಸು
ವೆನು.
೧೩ ಯಾಕಂದರೆ ನಿನ್ನ ಕೃಪೆಯು ನನ್ನ ಮೇಲೆ ದೊಡ್ಡದಾಗಿದೆ;
ಕೆಳಗಿನ ಪಾತಾಳದೊಳಗಿಂದ ನನ್ನ ಪ್ರಾಣವನ್ನು ಬಿಡಿಸಿದ್ದೀ.

೧೪ ದೇವರೇ, ಅಹಂಕಾರಿಗಳು ನನಗೆ ವಿರೋಧವಾಗಿ ಎದ್ದಿದ್ದಾರೆ;
ಬಲಿಷ್ಠರ ಕೂಟವು ನನ್ನ ಪ್ರಾಣವನ್ನು ಹುಡುಕುತ್ತದೆ;
ತಮ್ಮ ಮುಂದೆ ನಿನ್ನನ್ನು ಇಟ್ಟು ಕೊಳ್ಳಲಿಲ್ಲ.
೧೫ ಆದರೆ ನೀನು, ಕರ್ತನೇ, ಅಂತಃಕರಣವೂ ದಯೆವೂ ಉಳ್ಳ
ದೇವರೂ,
ದೀರ್ಘ ಶಾಂತನೂ, ಬಹಳ ಕೃಪೆಯೂ ಸತ್ಯವೂ ಉಳ್ಳವ
ನೂ, ಆಗಿದ್ದೀ.
೧೬ ನನ್ನ ಕಡೆಗೆ ತಿರುಗಿ ಕೊಂಡು, ನನ್ನನ್ನು ಕರುಣಿಸು;
ನಿನ್ನ ಸೇವಕನಿಗೆ ನಿನ್ನ ಬಲವನ್ನು ಕೊಡು;
ನಿನ್ನ ದಾಸಿಯ ಮಗನನ್ನು ರಕ್ಷಿಸು.
೧೭ ಒಳ್ಳೇದಕ್ಕಾಗಿ ನನಗೆ ಒಂದು ಗುರುತು ಕೊಡು;
ಆಗ ನನ್ನ ಹಗೆಯವರು ನೋಡಿ, ನಾಚಿಕೆ ಪಡುವರು;
ಯಾಕಂದರೆ, ಕರ್ತನೇ, ನೀನು ನನಗೆ ಸಹಾಯ ಮಾಡಿ, ನನ್ನ
ನ್ನು ಆದರಿಸಿದ್ದೀ.

## ೮೭. ಕೀರ್ತನೆ.

ಕೊರಾಹನ ಮಕ್ಕಳದು; ಗೀತವಾದ ಹಾಡು.

೧ ಅವನ ಅಸ್ತಿವಾರವು ಪರಿಶುದ್ಧ ಪರ್ವತಗಳಲ್ಲಿ ಅದೆ.
೨ ಕರ್ತನು ಚಿಯೋನಿನ ಬಾಗಲುಗಳನ್ನು,
ಯಾಕೋಬನ ಎಲ್ಲಾ ನಿವಾಸಗಳಿಗಿಂತ, ಪ್ರೀತಿ ಮಾಡುತ್ತಾನೆ.
೩ ಘನವುಳ್ಳವುಗಳು ನಿನ್ನ ವಿಷಯ ಹೇಳಲ್ಪಟ್ಟಿವೆ,
ದೇವರ ಪಟ್ಣವೇ. ಸೇಲಾ.

೪ ರಹಬನ್ನೂ ಬಾಬೆಲನ್ನೂ ನನ್ನನ್ನು ತಿಳಿದವರಲ್ಲಿ ಜ್ಞಾಪಕ
ಮಾಡಿ ಕೊಳ್ಳುವೆನು;
ಇಗೋ, ಫಿಲಿಷ್ಟ್ಯವೂ, ಕೂಷಿನ ಸಂಗಡ ತೂರೂ;
ಇವನು ಅಲ್ಲಿ ಹುಟ್ಟಿದನು.
೫ ಮತ್ತು ಚಿಯೋನಿನ ವಿಷಯ ಹೇಳುವದೇನಂದರೆ—
ಆ ಆ ಮನುಷ್ಯನು ಅದರಲ್ಲಿ ಹುಟ್ಟಿದನು;
ಮತ್ತು ಮಹೋನ್ನತನೇ ಅದನ್ನು ಸ್ಥಿರ ಪಡಿಸುವನು.
೬ ಕರ್ತನು ಜನರನ್ನು ಬರೆಯುವಾಗ—
ಇವನು ಅಲ್ಲಿ ಹುಟ್ಟಿದನೆಂದು, ಎಣಿಸುವನು. ಸೇಲಾ.
೭ ಮತ್ತು ಹಾಡುವವರೂ ನಾಟ್ಯದವರೂ ಇದ್ದಾರೆ;
ನನ್ನ ಬುಗ್ಗೆಗಳೆಲ್ಲಾ ನಿನ್ನಲ್ಲಿಯೇ.

## ೮೮. ಕೀರ್ತನೆ.

ಗೀತವಾದ ಹಾಡು; ಕೊರಾಹನ ಮಕ್ಕಳದು; ಗಾಯಕಾಧಿಕಾರಿಗೆ; ಮಹಲತ್ ವಾದ್ಯದ ಮೇಲೆ ಹಾಡ
ಕ್ಕಳದ್ದು; ಎಜ್ರಾಹ್ಯವಾದ ಹೇಮಾನನ ಬೋಧನೆಯು.

೧ ನನ್ನ ರಕ್ಷಣೆಯ ದೇವರಾದ ಕರ್ತನೇ,
ಹಗಲಿರುಳು ನಿನ್ನ ಮುಂದೆ ಕೂಗುತ್ತೇನೆ.
೨ ನನ್ನ ಪ್ರಾರ್ಥನೆಯು ನಿನ್ನ ಮುಂದೆ ಬರಲಿ;
ನನ್ನ ಮೊರೆಗೆ ನಿನ್ನ ಕಿವಿಯನ್ನು ಬೊಗ್ಗಿಸು.
೩ ಯಾಕಂದರೆ ನನ್ನ ಪ್ರಾಣವು ಕೇಡುಗಳಿಂದ ತುಂಬಾಯಿತು;
ನನ್ನ ಜೀವವು ಪಾತಾಳಕ್ಕೆ ಮುಟ್ಟಿತು.
೪ ಕೂಣಿಗೆ ಇಳಿಯುವವರ ಸಂಗಡ ಎಣಿಸಲ್ಪಟ್ಟಿದ್ದೇನೆ;
ಬಲವಿಲ್ಲದ ಪುರುಷನ ಹಾಗಿದ್ದೇನೆ.
೫ ಸಮಾಧಿಯಲ್ಲಿ ಮಲಗುವಂಥ,
ನೀನು ಇನ್ನು ಜ್ಞಾಪಕ ಮಾಡಿ ಕೊಳ್ಳದಂಥ,
ಕೊಲ್ಲಲ್ಪಟ್ಟವರ ಹಾಗೆ ಸತ್ತವರಲ್ಲಿ ಬೆಲ್ಪಟ್ಟವನಾಗಿದ್ದೇನೆ;
ಅವರು ನಿನ್ನ ಕೈಯಿಂದ ಕಡಿಯಲ್ಪಟ್ಟಿದ್ದಾರೆ.
೬ ಕೆಳಗಿನ ಕೂಣಿಯಲ್ಲಿಯೂ, ಕತ್ತಲೆಗಳಲ್ಲಿಯೂ,
ಅಗಾಧಗಳಲ್ಲಿಯೂ, ನನ್ನನ್ನು ಇಟ್ಟಿದ್ದೀ.
೭ ನಿನ್ನ ಉರಿಯು ನನ್ನ ಮೇಲೆ ನೆಲೆಯಾಗಿದೆ;
ನಿನ್ನ ಅಲೆಗಳಿಂದೆಲ್ಲಾ ನನ್ನನ್ನು ಕುಂದಿಸಿದ್ದೀ. ಸೇಲಾ.



೮ ನನ್ನ ಪರಿಚಿತರನ್ನು ನನಗೆ ದೂರ ಮಾಡಿದ್ದೀ;
ನನ್ನನ್ನು ಅವರಿಗೆ ಅಸಹ್ಯ ಮಾಡಿದ್ದೀ;
ಮುಚ್ಚಲ್ಪಟ್ಟು, ಹೊರಗೆ ಬರಲಾರೆನು.
೯ ನನ್ನ ಕಣ್ಣು ದೀನತೆಯಿಂದ ಬೆಂಡಾಗುತ್ತದೆ;
ಕರ್ತನೇ, ದಿನವೆಲ್ಲಾ ನಿನ್ನನ್ನು ಕರೆಯುತ್ತೇನೆ;
ನಿನ್ನ ಕಡೆಗೆ ನನ್ನ ಕೈಗಳನ್ನು ಚಾಚುತ್ತೇನೆ.

೧೦ ಸತ್ತವರಿಗೆ ಅದ್ಭುತಗಳನ್ನು ಮಾಡುವಿಯೋ!
ಪ್ರೇತಗಳು ಎದ್ದು, ನಿನ್ನನ್ನು ಕೊಂಡಾಡುವವೋ! ಸೇಲಾ.
೧೧ ಸಮಾಧಿಯಲ್ಲಿ ನಿನ್ನ ಕೃಪೆಯೂ,
ನಾಶ ಸ್ಥಳದಲ್ಲಿ ನಿನ್ನ ನಂಬಿಕೆಯೂ, ಸಾರಲ್ಪಡುವವೋ!
೧೨ ಕತ್ತಲೆಯಲಿ ನಿನ್ನ ಅದ್ಭುತಗಳೂ,
ಮರವಿನ ದೇಶದಲ್ಲಿ ನಿನ್ನ ನೀತಿಯೂ, ಅರಿಯಲ್ಪಡುವವೋ!
೧೩ ಆದರೆ ನಾನು, ಕರ್ತನೇ, ನಿನ್ನ ಕಡೆಗೆ ಮೊರೆ ಇಡುತ್ತೇನೆ;
ಹೊತಾರೆ ನನ್ನ ಪ್ರಾರ್ಥನೆಯು ನಿನ್ನನ್ನು ಎದುರುಗೊಳ್ಳು
ವದು.

೧೪ ಕರ್ತನೇ, ಯಾಕೆ ನನ್ನ ಪ್ರಾಣವನ್ನು ಅಸಂಹಿಸಿ
ಬಿಡುತ್ತೀ!
ಯಾಕೆ ನಿನ್ನ ಮುಖವನ್ನು ನನಗೆ ಮರೆ ಮಾಡುತ್ತೀ!
೧೫ ನಾನು ದೀನನೂ ಯೌವನದಾರಭ್ಯ ಸಾಯುವವನೂ, ಆಗಿ
ದ್ದೇನೆ;
ನಿನ್ನ ಬೆದರಿಕೆಗಳನ್ನು ತಾಳುತ್ತಾ, ಭ್ರಮೆಗೊಳ್ಳುತ್ತೇನೆ.
೧೬ ನನ್ನ ಮೇಲೆ ನಿನ್ನ ಉರಿಗಳು ಹೊರಳುತ್ತವೆ;
ನಿನ್ನ ಹೆದರಿಕೆಗಳು ನನ್ನನ್ನು ಸಂಹರಿಸುತ್ತವೆ.
೧೭ ನೀರಿನ ಹಾಗೆ ನನ್ನನ್ನು ದಿನವೆಲ್ಲಾ ಸುತ್ತಿ ಕೊಳ್ಳುತ್ತವೆ;
ಏಕವಾಗಿ ನನ್ನನ್ನು ಮುತ್ತಿ ಕೊಳ್ಳುತ್ತವೆ.
೧೮ ಪ್ರಿಯನನ್ನೂ ನೆಂಟನವನನ್ನೂ ನನಗೆ ದೂರ ಮಾಡಿದ್ದೀ;
ನನ್ನ ಕತ್ತಲೆಯ ಸ್ಥಳವೇ ನನ್ನ ಪರಿಚಿತರು.

## ೮೯. ಕೀರ್ತನೆ.

ಎಜ್ರಾಹ್ಯವಾದ ಏಥಾನನ ಬೋಧನೆಯು.

೧ ಕರ್ತನ ಕೃಪೆಗಳನ್ನು ಯುಗ ಯುಗಕ್ಕೂ ಹಾಡುವೆನು;
ತಲ ತಲಾಂತರಕ್ಕೂ ನಿನ್ನ ನಂಬಿಕೆಯನ್ನು ನನ್ನ ಬಾಯಿಂದ
ತಿಳಿಯ ಮಾಡುವೆನು.
೨ ಯಾಕಂದರೆ ಯುಗ ಯುಗಕ್ಕೂ ಕೃಪೆಯು ಸ್ಥಾಪಿಸಲ್ಪಡು
ವದು;
ಆಕಾಶಗಳಲ್ಲಿಯೂ ನಿನ್ನ ನಂಬಿಕೆಯನ್ನು ಸ್ಥಿರ ಪಡಿಸುವಿ ಎಂದು,
ಹೇಳಿದ್ದೇನೆ.
೩ ನಾನು ಆದು ಕೊಂಡವನಿಗೆ ಒಡಂಬಡಿಕೆ ಮಾಡಿದ್ದೇನೆ;
ನನ್ನ ಸೇವಕನಾದ ದಾವೀದನಿಗೆ ಆಣೆ ಇಟ್ಟು, ಹೇಳಿದ್ದೇನಂದರೆ
೪ ಯುಗ ಯುಗಕ್ಕೂ ನಿನ್ನ ಬೀಜವನ್ನು ಸ್ಥಿರ ಪಡಿಸುವೆನು;
ಮತ್ತು ತಲತಲಾಂತರಕ್ಕೂ ನಿನ್ನ ಸಿಂಹಾಸನವನ್ನು ಕಟ್ಟುವೆನು.
ಸೇಲಾ.
೫ ಇದಲ್ಲದೆ ಆಕಾಶಗಳು, ಕರ್ತನೇ, ನಿನ್ನ ಅದ್ಭುತವನ್ನು
ಕೊಂಡಾಡುವವು;
ಪರಿಶುದ್ಧರ ಕೂಟದಲ್ಲಿ ನಿನ್ನ ನಂಬಿಕೆಯನ್ನು ಸಹ.
೬ ಯಾಕಂದರೆ ಮೇಘ ಮಂಡಲದಲ್ಲಿ ಕರ್ತನಿಗೆ ಸಮಾನವಾದವ
ನ್ಯಾರು!
ಪರಾಕ್ರಮಶಾಲಿಗಳ ಮಕ್ಕಳಲ್ಲಿ ಕರ್ತನಿಗೆ ಸರಿಯಾದವನ್ಯಾರು!
೭ ದೇವರು ಪರಿಶುದ್ಧರ ಸಭೆಯಲ್ಲಿ ಬಹಳ ಭೀಕರನೂ,
ತನ್ನ ಸುತ್ತಲಿರುವವರೆಲ್ಲರಿಗೆ ಭಯಂಕರನೂ, ಆಗಿದಾನೆ.
೮ ಸೈನ್ಯಗಳ ದೇವರಾದ ಕರ್ತನೇ,
ನಿನ್ನ ಹಾಗೆ ಶಕ್ತವಾದ ಕರ್ತನು ಯಾರು!
ಮತ್ತು ನಿನ್ನ ನಂಬಿಕೆಯು ನಿನ್ನ ಸುತ್ತಲು ಅದೆ.
೯ ನೀನು ಸಮುದ್ರದ ಉಬ್ಬನ್ನು ಆಳುತ್ತೀ;
ಅದರ ತೆರೆಗಳು ಏಳುವಾಗ ಅವುಗಳನ್ನು ಸುಮ್ಮನಿರಿಸುತ್ತೀ.
೧೦ ನೀನು ಕೊಲ್ಲಲ್ಪಟ್ಟವನಂತೆ ರಹಬನ್ನು ಜಜ್ಜಿದ್ದೀ;
ನಿನ್ನ ಬಲದ ತೋಳಿನಿಂದ ನಿನ್ನ ಶತ್ರುಗಳನ್ನು ಚದರ ಮಾ
ಡಿದ್ದೀ.
೧೧ ಆಕಾಶವು ನಿನ್ನದು; ಭೂಮಿಯು ಸಹ ನಿನ್ನದು;
ಲೋಕವೂ, ಅದರ ಪೂರ್ಣತೆಯೂ, ಅವುಗಳನ್ನು ನೀನು
ಸ್ಥಿರ ಪಡಿಸಿದ್ದೀ.
೧೨ ಉತ್ತರವೂ, ದಕ್ಷಿಣವೂ, ನೀನೇ ಅವುಗಳನ್ನು ನಿರ್ಮಿಸಿದ್ದೀ;
ತಾಬೊರೂ, ಹೆರ್ಮೋನೂ, ನಿನ್ನ ಹೆಸರಿನಲ್ಲಿ ಉತ್ಸಾಹ
ಧ್ವನಿ ಗೈಯುತ್ತವೆ.
೧೩ ನಿನಗೆ ಪರಾಕ್ರಮವುಳ್ಳ ತೋಳು ಉಂಟು;
ನಿನ್ನ ಕೈ ಬಲವುಳ್ಳದ್ದು; ನಿನ್ನ ಬಲಗೈ ಉನ್ನತವಾದದ್ದು.
೧೪ ನೀತಿಯೂ ನ್ಯಾಯವೂ ನಿನ್ನ ಸಿಂಹಾಸನದ ಅಸ್ತಿವಾರವಾಗಿವೆ;
ಕೃಪೆಯೂ ಸತ್ಯವೂ ನಿನ್ನ ಮುಖದ ಮುಂದೆ ಹೋಗುತ್ತವೆ;

೧೫ ಉತ್ಸಾಹ ಧ್ವನಿ ತಿಳಿದ ಜನರು ಭಾಗ್ಯವಂತರು;
ಕರ್ತನೇ, ನಿನ್ನ ಮುಖದ ಬೆಳಕಿನಲ್ಲಿ ನಡೆದು ಕೊಳ್ಳುವರು.
೧೬ ನಿನ್ನ ಹೆಸರಿನಿಂದ ದಿನವೆಲ್ಲಾ ಉಲ್ಲಾಸ ಪಟ್ಟು,
ನಿನ್ನ ನೀತಿಯಲ್ಲಿ ಉನ್ನತರಾಗುವರು.
೧೭ ಯಾಕಂದರೆ ಅವರ ಬಲದ ಮಹಿಮೆಯು ನೀನೇ;
ಮತ್ತು ನಿನ್ನ ಕಟಾಕ್ಷದಿಂದ ನಮ್ಮ ಕೊಂಬು ಉನ್ನತವಾಗುವದು.
೧೮ ಯಾಕಂದರೆ ನಮ್ಮ ಗುರಾಣಿಯು ಕರ್ತನದೇ;
ನಮ್ಮ ಅರಸನು ಇಸ್ರಯೇಲನ ಪರಿಶುದ್ಧನದೇ.

೧೯ ಆಗ ದರ್ಶನದಲ್ಲಿ ನಿನ್ನ ಭಕ್ತನ ಸಂಗಡ ಮಾತಾಡಿ,
ಹೇಳಿದ್ದೇನಂದರೆ—ಪರಾಕ್ರಮಶಾಲಿಯ ಮೇಲೆ ಸಹಾಯವನ್ನು
ಇಟ್ಟಿದ್ದೇನೆ;
ಆಯಲ್ಪಟ್ಟವನನ್ನು ಜನರೊಳಗಿಂದ ಎಬ್ಬಿಸಿದ್ದೇನೆ.
೨೦ ನನ್ನ ಸೇವಕನಾದ ದಾವೀದನನ್ನು ಕಂಡು ಕೊಂಡಿದ್ದೇನೆ;
ನನ್ನ ಪರಿಶುದ್ಧ ಎಣ್ಣೆಯಿಂದ ಅವನನ್ನು ಅಭಿಷೇಕಿಸಿದ್ದೇನೆ.
೨೧ ಅವನ ಸಂಗಡಲೇ ನನ್ನ ಕೈ ಸ್ಥಿರವಾಗಿರುವದು;
ಮತ್ತು ನನ್ನ ತೋಳು ಅವನನ್ನು ದೃಢ ಪಡಿಸುವದು.
೨೨ ಶತ್ರುವು ಅವನನ್ನು ಕಕಲಾತಿ ಮಾಡನು;
ಮತ್ತು ಅನ್ಯಾಯದ ಮಗನು ಅವನನ್ನು ದೀನ ಮಾಡನು.

೮೩ ಇದಲ್ಲದೆ ಅವನ ಮುಂದೆ ಅವನ ವೈರಿಗಳನ್ನು ಸದೆ ಬಡೆಯು
ವೆನು;
ಮತ್ತು ಅವನ ಹಗೆಯವರನ್ನು ಹೊಡೆಯುವೆನು.
೮೪ ಆದರೆ ನನ್ನ ನಂಬಿಕೆಯೂ ನನ್ನ ಕೃಪೆಯೂ ಅವನ ಸಂಗಡ
ಇರುವವು.
ನನ್ನ ಹೆಸರಿನಲ್ಲಿ ಅವನ ಕೊಂಬು ಉನ್ನತವಾಗುವದು.
೮೫ ಮತ್ತು ಸಮುದ್ರದ ಮೇಲೆ ಅವನ ಕೈಯನ್ನು,
ನದಿಗಳ ಮೇಲೆ ಅವನ ಬಲಗೈಯನ್ನು, ಇರಿಸುವೆನು.
೮೬ ಅವನು—ನೀನು ನನ್ನ ತಂದೆಯೂ,
ನನ್ನ ದೇವರೂ, ನನ್ನ ರಕ್ಷಣೆಯ ಬಂಡೆಯೂ, ಎಂದು ನನ್ನ
ನ್ನು ಕರೆಯುವನು.
೮೭ ಮತ್ತು ನಾನು ಅವನನ್ನು ಜ್ಯೇಷ್ಠನೂ
ಭೂಮಿಯ ಅರಸರಲ್ಲಿ ಮಹೋನ್ನತನೂ ಆಗ ಮಾಡುವೆನು.
೮೮ ಯುಗ ಯುಗಕ್ಕೂ ಅವನಿಗೋಸ್ಕರ ಕೃಪೆಯನ್ನು ಕಾಪಾ
ಡುವೆನು.
ನನ್ನ ಒಡಂಬಡಿಕೆ ಅವನಿಗೆ ನಂಬಿಕೆಯುಳ್ಳದ್ದೇ.
೮೯ ಮತ್ತು ಅವನ ಬೀಜವನ್ನು ಎಂದೆಂದಿಗೂ,
ಅವನ ಸಿಂಹಾಸನವನ್ನು ಆಕಾಶದ ದಿವಸಗಳ ಹಾಗೆಯೂ,
ಇರಿಸುವೆನು.
೯೦ ಅವನ ಮಕ್ಕಳು ನನ್ನ ನ್ಯಾಯಪ್ರಮಾಣವನ್ನು ಬಿಟ್ಟು,
ನನ್ನ ನ್ಯಾಯಗಳಲ್ಲಿ ನಡೆಯದೆ ಹೋದರೆ,
೯೧ ಅವರು ನನ್ನ ನೇಮಕಗಳನ್ನು ಹೊಲೆ ಮಾಡಿ,
ನನ್ನ ಆಜ್ಞೆಗಳನ್ನು ಕೈಕೊಳ್ಳದೆ ಹೋದರೆ,
೯೨ ಕೋಲಿನಿಂದ ಅವರ ದ್ರೋಹವನ್ನೂ,
ಬೆಟ್ಟುಗಳಿಂದ ಅವರ ಅಕ್ರಮವನ್ನೂ, ದರ್ಶಿಸುವೆನು.
೯೩ ಆದರೆ ನನ್ನ ಕೃಪೆಯನ್ನು ಅವನಿಂದ ತೊಲಗಿಸೆನು;
ನನ್ನ ನಂಬಿಕೆಯನ್ನು ಸುಳ್ಳು ಮಾಡೆನು.
೯೪ ನನ್ನ ಒಡಂಬಡಿಕೆಯನ್ನು ಹೊಲೆ ಮಾಡೆನು;
ಮತ್ತು ನನ್ನ ತುಟಿಗಳಿಂದ ಹೊರಟದ್ದನ್ನು ಬದಲಾಯಿಸೆನು.
೯೫ ಒಂದನ್ನು ನನ್ನ ಪರಿಶುದ್ಧತ್ವದಿಂದ ಆಣೆ ಇಟ್ಟು, ಹೇಳಿದ್ದೇನೆ;
ನಿಶ್ಚಯವಾಗಿ ದಾವೀದನಿಗೆ ಸುಳ್ಳಾಡೆನು.
೯೬ ಅವನ ಬೀಜವು ಯುಗ ಯುಗಕ್ಕೂ,
ಅವನ ಸಿಂಹಾಸನವು ನನ್ನ ಮುಂದೆ ಸೂರ್ಯನ ಹಾಗೆಯೂ,
ಇರುವದು.
೯೭ ಚಂದ್ರನ ಹಾಗೆ ಅದು ಯುಗ ಯುಗಕ್ಕೂ, ಸ್ಥಿರವಾಗಿರುವದು;
ಮೇಘ ಮಂಡಲದಲ್ಲಿರುವ ಸಾಕ್ಷಿಯ ಹಾಗೆ ನಂಬಿಕೆಯುಳ್ಳದ್ದಾ
ಗಿರುವದು. ಸೇಲಾ.

೯೮ ಆದರೆ ನೀನು ಅಸಂಹಿಸಿ ಬಿಟ್ಟು, ತಿರಸ್ಕರಿಸಿ,
ನಿನ್ನ ಅಭಿಷಿಕ್ತನಿಗೆ ವಿರೋಧವಾಗಿ ಉಗ್ರನಾದಿ.
೯೯ ನಿನ್ನ ಸೇವಕನ ಒಡಂಬಡಿಕೆಯನ್ನು ಅಸಡ್ಡೆ ಮಾಡಿ,
ಅವನ ಕಿರೀಟವನ್ನು ನೆಲಕ್ಕೆ ಹಾಕಿ, ಹೊಲೆ ಮಾಡಿದ್ದೀ.
೧೦೦ ಅವನ ಬೇಲಿಗಳನ್ನೆಲ್ಲಾ ಮುರಿದು,
ಅವನ ಕೋಟೆಗಳನ್ನು ಹಾಳು ಮಾಡಿದ್ದೀ.
೧೦೧ ಮಾರ್ಗಸ್ಥರೆಲ್ಲರು ಅವನನ್ನು ಕೊಳ್ಳೆ ಇಡುತ್ತಾರೆ;
ತನ್ನ ನೆರೆಯವರಿಗೆ ನಿಂದೆಯಾಗಿದ್ದಾನೆ.
೧೦೨ ಅವನ ವೈರಿಗಳ ಬಲಗೈಯನ್ನು ಉನ್ನತ ಮಾಡಿದ್ದೀ;
ಅವನ ಶತ್ರುಗಳೆಲ್ಲರನ್ನು ಸಂತೋಷ ಪಡಿಸಿದ್ದೀ.
೧೦೩ ಮತ್ತು ಅವನ ಕತ್ತಿಯ ಬಾಯನ್ನು ಹಿಂದಿರುಗಿಸಿ,
ಯುದ್ಧದಲ್ಲಿ ಅವನನ್ನು ನಿಲ್ಲ ಮಾಡಲಿಲ್ಲ.
೧೦೪ ಅವನ ಕಾಂತಿಯನ್ನು ಮುಗಿಸಿ,
ಅವನ ಸಿಂಹಾಸನವನ್ನು ನೆಲಕ್ಕೆ ಹಾಕಿದ್ದೀ.
೧೦೫ ಅವನ ಯೌವನ ದಿವಸಗಳನ್ನು ಕಡಿಮೆ ಮಾಡಿ,
ನಾಚಿಕೆಯಿಂದ ಅವನನ್ನು ಮುಚ್ಚಿದ್ದೀ. ಸೇಲಾ.

೧೦೬ ಎಷ್ಟು ವರಿಗೂ, ಕರ್ತನೇ! ಸದಾ ಕಾಲಕ್ಕೆ ಅಡಗಿ ಕೊಳ್ಳ
ವಿಯೋ!
ನಿನ್ನ ಕಿಚ್ಚು ಬೆಂಕಿಯ ಹಾಗೆ ಉರಿಯುವದೋ!
೧೦೭ ನನ್ನ ಆಯುಸ್ಸು ಏನೆಂದು, ಜ್ಞಾಪಕ ಮಾಡಿಕೋ;
ಯಾಕೆ ಮನುಷ್ಯನ ಮಕ್ಕಳೆಲ್ಲರನ್ನು ವ್ಯರ್ಥವಾಗಿ ನಿರ್ಮಿ
ಸಿದ್ದೀ!
೧೦೮ ಮರಣವನ್ನು ನೋಡದೆ, ಬದುಕುವಂಥ,
ಪಾತಾಳದ ಕೈಯಿಂದ ತನ್ನ ಪ್ರಾಣವನ್ನು ತಪ್ಪಿಸಿ ಕೊಳ್ಳ
ವಂಥ ಪುರುಷನು ಯಾರು! ಸೇಲಾ.
೧೦೯ ಕರ್ತನೇ, ನಿನ್ನ ನಂಬಿಕೆಯಲ್ಲಿ ನೀನು ದಾವೀದನಿಗೆ ಆಣೆ ಇಟ್ಟ
ನಿನ್ನ ಮುಂಚಿನ ಕೃಪೆಗಳು ಎಲ್ಲಿ!
೧೧೦ ಕರ್ತನೇ, ಎಲ್ಲಾ ಮಹಾ ಜನಗಳಿಂದ ನಾನು ನನ್ನ ಎದೆಯಲ್ಲಿ
ಹೊತ್ತು ಕೊಳ್ಳುವಂಥ
ನಿನ್ನ ಸೇವಕರ ನಿಂದೆಯನ್ನು ಜ್ಞಾಪಕ ಮಾಡಿಕೋ!
೧೧೧ ಕರ್ತನೇ, ನಿನ್ನ ಶತ್ರುಗಳು ನಿಂದಿಸುತ್ತಾರಲ್ಲ!
ನಿನ್ನ ಅಭಿಷಿಕ್ತನ ಹೆಜ್ಜೆಗಳನ್ನು ನಿಂದಿಸುತ್ತಾರಲ್ಲ!

೧೧೨ ಕರ್ತನಿಗೆ ಯುಗ ಯುಗಕ್ಕೂ ಆಶೀರ್ವಾದವಾಗಲಿ.
ಆರ್ಮೆ, ಆರ್ಮೆ.

## ೯೦. ಕೀರ್ತನೆ.

ದೇವರ ಮನುಷ್ಯನಾದ ಮೋಶೆಯ ಪ್ರಾರ್ಥನೆಯು.

೧ ಕರ್ತನೇ, ತಲ ತಲಾಂತರಗಳಲ್ಲಿ ನೀನು ನಮ್ಮ ವಾಸಸ್ಥಾನ
ವಾಗಿದ್ದೀ.
೨ ಬೆಟ್ಟಗಳು ಹುಟ್ಟುವದಕ್ಕಿಂತ ಮುಂಚೆಯೂ,
ನೀನು ಭೂಮಿಯನ್ನೂ ಲೋಕವನ್ನೂ ನಿರ್ಮಿಸುವದಕ್ಕಿಂತ
ಮುಂಚೆಯೂ,
ಯುಗ ಯುಗದಿಂದ ಯುಗ ಯುಗಕ್ಕೂ ನೀನು ದೇವರಾಗಿದ್ದೀ.

೩ ನೀನು ಮನುಷ್ಯನನ್ನು ನಾಶನಕ್ಕೆ ತಿರುಗಿಸಿ,—
ಮನುಷ್ಯನ ಮಕ್ಕಳೇ, ತಿರುಗಿರಿ ಎಂದು ಹೇಳುತ್ತೀ.
೪ ಯಾಕಂದರೆ ಸಾವಿರ ವರುಷಗಳು ನಿನ್ನ ದೃಷ್ಟಿಗೆ
ಕಳೆದು ಹೋಗುವ ನಿನ್ನಿನ ದಿವಸದ ಹಾಗೆಯೂ,
ರಾತ್ರಿ ಝಾವದ ಹಾಗೆಯೂ, ಅವೆ.
೫ ಅವರನ್ನು ಪ್ರವಾಹದಿಂದ ಬಡು ಕೊಂಡು ಹೋಗುತ್ತೀ;



ನಿದ್ದೆಯಾಗಿದ್ದಾರೆ;
ಬೆಳಗ್ಗೆ ಬೆಳೆಯುವ ಹುಲ್ಲಿನ ಹಾಗಿದ್ದಾರೆ.
೬ ಅದು ಬೆಳಗ್ಗೆ ಅರಳಿ, ಬೆಳೆಯುತ್ತದೆ;
ಸಂಜೆಯಲ್ಲಿ ಕೊಯ್ಯಲ್ಪಟ್ಟು, ಬಣಗುತ್ತದೆ.

೭ ಯಾಕಂದರೆ ನಿನ್ನ ಕೋಪದಿಂದ ಕಳೆದು ಹೋಗಿ,
ನಿನ್ನ ಉರಿಯಿಂದ ತಲ್ಲಣಿಸುತ್ತೇವೆ.
೮ ನಮ್ಮ ಅಕ್ರಮಗಳನ್ನು ನಿನ್ನ ಮುಂದೆಯೂ,
ನಮ್ಮ ಮರೆಯಾದ ಪಾಪವನ್ನು ನಿನ್ನ ಮುಖದ ಬೆಳಕಿನಲ್ಲಿ
ಯೂ, ಇಡುತ್ತೀ.
೯ ಯಾಕಂದರೆ ನಮ್ಮ ದಿವಸಗಳೆಲ್ಲಾ ನಿನ್ನ ಉಗ್ರದಿಂದ ಹೋಗು
ತ್ತವೆ;
ನಮ್ಮ ವರುಷಗಳನ್ನು ಕಥೆಯ ಹಾಗೆ ಕಳೆಯುತ್ತೇವೆ.
೧೦ ನಮ್ಮ ವರುಷಗಳ ದಿವಸಗಳು ಎಪ್ಪತ್ತು ವರುಷ;
ಬಲದಿಂದಿದ್ದರೆ, ಎಂಭತ್ತು ವರುಷ;
ಆದರೆ ಅವುಗಳ ಅಹಂಕಾರ ಕಷ್ಟವೂ ಆಯಾಸವೂ ಆಗಿದೆ;
ಯಾಕಂದರೆ ಅದು ಬೇಗ ಕೊಯಿದು ಹಾಕಲ್ಪಡುತ್ತದೆ; ಮ
ತ್ತು ನಾವು ಹಾರಿ ಹೋಗುತ್ತೇವೆ.
೧೧ ನಿನ್ನ ಕೋಪದ ಬಲವನ್ನು ತಿಳಿದವನ್ಯಾರು!
ನಿನ್ನ ಭಯದ ಪ್ರಕಾರ ನಿನ್ನ ಉಗ್ರವೆ.

೧೨ ನಾವು ಜ್ಞಾನವುಳ್ಳ ಹೃದಯವನ್ನು ಹೊಂದುವ ಹಾಗೆ,
ನಮ್ಮ ದಿವಸಗಳನ್ನು ಲೆಕ್ಕಿಸುವದಕ್ಕೆ ನಮಗೆ ತಿಳಿಯ ಮಾಡು.
೧೩ ಕರ್ತನೇ, ತಿರುಗು; ಎಷ್ಟು ಮಟ್ಟಿಗೂ!
ನಿನ್ನ ಸೇವಕರ ಮೇಲೆ ಅಂತ್ಯಕರಣ ಪಡು.
೧೪ ಬೆಳಗ್ಗೆ ನಿನ್ನ ಕೃಪೆಯಿಂದ ನಮಗೆ ತೃಪ್ತಿ ಮಾಡು;
ಆಗ ನಮ್ಮ ದಿವಸಗಳೆಲ್ಲಾ ಉತ್ಸಾಹ ಧ್ವನಿಗೈದು, ಸಂತೋಷ
ಪಡುವೆವು.
೧೫ ನೀನು ನಮ್ಮನ್ನು ದೀನ ಮಾಡಿದ ದಿವಸಗಳ ಪ್ರಕಾರವೂ,
ನಾವು ಕೇಡನ್ನು ನೋಡಿದ ವರುಷಗಳ ಪ್ರಕಾರವೂ, ನಮ್ಮನ್ನು
ಸಂತೋಷ ಪಡಿಸು.
೧೬ ನಿನ್ನ ಸೇವಕರಿಗೆ ನಿನ್ನ ಕೆಲಸವೂ,
ಅವರ ಮಕ್ಕಳಿಗೆ ನಿನ್ನ ಪ್ರಭೆಯೂ, ತೋರ ಬರಲಿ.
೧೭ ನಮ್ಮ ದೇವರಾದ ಕರ್ತನ ಕಮ್ಯತೆಯು ನಮ್ಮ ಮೇಲೆ ಇರಲಿ;
ನಮ್ಮ ಕೈಗಳ ಕೆಲಸವನ್ನು ನಮ್ಮ ಮೇಲೆ ಸ್ಥಿರ ಪಡಿಸು;
ನಮ್ಮ ಕೈ ಕೆಲಸವನ್ನೇ ಸ್ಥಿರ ಪಡಿಸು.

## ೯೧. ಕೀರ್ತನೆ.

೧ ಮಹೋನ್ನತನ ಮರೆಯಲ್ಲಿ ವಾಸಿಸುವವನು
ಸರ್ವ ಶಕ್ತನ ನೆರಳಿನಲ್ಲಿ ತಂಗುವನು.
೨ ನನ್ನ ಆಶ್ರಯವೂ, ನನ್ನ ಕೋಟೆಯೂ,
ನಾನು ಭರವಸವಿಡುವ ನನ್ನ ದೇವರೂ ಎಂದು, ಕರ್ತನಿಗೆ
ಹೇಳುತ್ತೇನೆ.
೩ ಯಾಕಂದರೆ ಅವನು ನಿನ್ನನ್ನು ಬೇಡನ ಉರ್ಲಿನಿಂದಲೂ
ನಷ್ಟದ ಜಾಡ್ಯದಿಂದಲೂ ಬಿಡಿಸುವನು.
೪ ತನ್ನ ಗರಿಗಳಿಂದ ನಿನ್ನನ್ನು ಹೊದಗಿಸುವನು;
ಅವನ ರೆಕ್ಕೆಗಳೆಳಗೆ ಆಶ್ರಯಿಸಿ ಕೊಳ್ಳುವಿ;
ಅವನ ಸತ್ಯವು ಖೇಡ್ಯವೂ ಡಾಲೂ ಆಗಿದೆ.
೫ ರಾತ್ರಿಯ ಹೆದರಿಕೆಗೂ,
ಹಗಲಲ್ಲಿ ಹಾರುವ ಬಾಣಕ್ಕೂ,
೬ ಅಂಧಕಾರದಲ್ಲಿ ನಡೆಯುವ ಜಾಡ್ಯಕ್ಕೂ,
ಮಧ್ಯಾಹ್ನದಲ್ಲಿ ಹಾಳು ಮಾಡುವ ನಾಶನಕ್ಕೂ,
ಭಯ ಪಡದೆ ಇರುವಿ.
೭ ನಿನ್ನ ಕಡೆಯಲ್ಲಿ ಸಾವಿರ ಜನರೂ,
ನಿನ್ನ ಬಲ ಕಡೆಯಲ್ಲಿ ಹತ್ತು ಸಾವಿರ ಜನರೂ ಬಿದ್ದರೂ,
ನಿನಗೆ ತಾಗದು.
೮ ನಿನ್ನ ಕಣ್ಣುಗಳಿಂದ ಮಾತ್ರ ದೃಷ್ಟಿಸಿ,
ದುಷ್ಟರಿಗೆ ಮುಯ್ಯಿಗೆ ಮುಯ್ಯಿ ಆಗುವದನ್ನು ನೋಡುವಿ.
೯ ಯಾಕಂದರೆ, ಕರ್ತನೇ, ನೀನು ನನ್ನ ಆಶ್ರಯವಾಗಿದ್ದೀ;
ಮಹೋನ್ನತನನ್ನು ನಿನ್ನ ಸ್ಥಾನವಾಗಿ ಇಟ್ಟಿದ್ದೀ.
೧೦ ನಿನಗೆ ಕೇಡು ಮುಟ್ಟದು;
ಬಾಧೆಯು ನಿನ್ನ ಗುಡಾರಕ್ಕೆ ಸಮೀಪಿಸದು.
೧೧ ಯಾಕಂದರೆ ನಿನ್ನ ಎಲ್ಲಾ ಮಾರ್ಗಗಳಲ್ಲಿ ನಿನ್ನನ್ನು ಕಾಪಾಡು
ವದಕ್ಕೆ,
ತನ್ನ ದೂತರಿಗೆ ನಿನ್ನ ವಿಷಯವಾಗಿ ಆಜ್ಞಾಪಿಸುವನು.
೧೨ ನೀನು ನಿನ್ನ ಪಾದವನ್ನು ಕಲ್ಲಿಗೆ ತಗಲಿಸದ ಹಾಗೆ,
ತಮ್ಮ ಕೈಗಳಲ್ಲಿ ನಿನ್ನನ್ನು ಎತ್ತಿ ಕೊಳ್ಳುವರು.
೧೩ ಸಿಂಹಗಳ ಮೇಲೆಯೂ, ಹಾವುಗಳ ಮೇಲೆಯೂ, ನಡೆಯುವಿ;
ಎಳೆ ಸಿಂಹಗಳನ್ನೂ ಗಡ ಸರ್ಪಗಳನ್ನೂ ತುಳಿದು ಬಿಡುವಿ.

೧೪ ಯಾಕಂದರೆ ನನ್ನನ್ನು ಬಯಸುತ್ತಾನೆ, ಆದದರಿಂದ ಅವನ
ನ್ನು ತಪ್ಪಿಸುವೆನು;
ಅವನು ನನ್ನ ಹೆಸರನ್ನು ತಿಳಿದಿರುವದರಿಂದ, ಅವನನ್ನು ಭದ್ರ
ಮಾಡುವೆನು.
೧೫ ನನ್ನನ್ನು ಕರೆಯುವನು; ಅವನಿಗೆ ಉತ್ತರ ಕೊಡುವೆನು;
ಇಕ್ಕಟ್ಟಿನಲ್ಲಿ ನಾನು ಅವನ ಸಂಗಡ ಇದ್ದೇನೆ;
ಅವನನ್ನು ತಪ್ಪಿಸಿ ಬಿಡುವೆನು; ಅವನನ್ನು ಘನ ಪಡಿಸುವೆನು.
೧೬ ದೀರ್ಘಾಯುಷ್ಯದಿಂದ ಅವನನ್ನು ತೃಪ್ತಿ ಪಡಿಸಿ,
ನನ್ನ ರಕ್ಷಣೆಯನ್ನು ನೋಡ ಮಾಡುವೆನು.

## ೯೨. ಕೀರ್ತನೆ.

ಸೀಕ್ಬತ್ ದಿವಸದ ಹಾಡು.

೧ ಕರ್ತನನ್ನು ಕೊಂಡಾಡುವದೂ,—
ಮಹೋನ್ನತನೇ, ನಿನ್ನ ಹೆಸರನ್ನು ಕೀರ್ತಿಸುವದೂ,—
೨ ಬೆಳಗ್ಗೆ ನಿನ್ನ ಕೃಪೆಯನ್ನೂ,
ಪ್ರತಿ ರಾತ್ರಿಯಲ್ಲಿ ನಿನ್ನ ನಂಬಿಕೆಯನ್ನೂ,
೩ ಹತ್ತು ತಂತಿ ವಾದ್ಯದ ಮೇಲೆಯೂ, ವೀಣೆಯ ಮೇಲೆಯೂ,
ಕಿನ್ನರಿಯ ಘನ ಸ್ವರದಿಂದಲೂ, ತಿಳಿಸುವದೂ,—ಒಳ್ಳೇದು.
೪ ಯಾಕಂದರೆ, ಕರ್ತನೇ, ನಿನ್ನ ಕ್ರಿಯೆಯಿಂದ ನನ್ನನ್ನು
ಸಂತೋಷ ಪಡಿಸಿದ್ದೀ.
ನಿನ್ನ ಕೈ ಕೆಲಸಗಳಲ್ಲಿ ಉತ್ಸಾಹ ಧ್ವನಿ ಗೈಯುತ್ತೇನೆ.

೫ ಕರ್ತನೇ, ನಿನ್ನ ಕೆಲಸಗಳು ಎಷ್ಟೋ ದೊಡ್ಡವು!
ನಿನ್ನ ಯೋಚನೆಗಳು ಬಹಳ ಆಳವಾಗಿವೆ.

೬ ಇದನ್ನು ಪಶುಪ್ರಾಣಿಯಾದ ಮನುಷ್ಯನು ತಿಳಿಯ
ಕೊಳ್ಳನು;
ಹುಚ್ಚನು ಗ್ರಹಿಸನು.
೭ ದುಷ್ಟರು ಹುಲ್ಲಿನ ಹಾಗೆ ಚಿಗುರುವಾಗ,
ಪಾತಕ ಮಾಡುವವರೆಲ್ಲರು ಅರಳುವಾಗ,
ಅವರು ಎಂದೆಂದಿಗೂ ನಿರ್ಮೂಲವಾಗುವ ಹಾಗೆಯೇ
ಆಗುವರು.
೮ ಆದರೆ ನೀನು ಯುಗ ಯುಗಕ್ಕೂ ಉನ್ನತವಾಗಿದ್ದೀ,
ಕರ್ತನೇ.
೯ ಯಾಕಂದರೆ, ಇಗೋ, ನಿನ್ನ ಶತ್ರುಗಳು, ಕರ್ತನೇ,—
ಯಾಕಂದರೆ, ಇಗೋ, ನಿನ್ನ ಶತ್ರುಗಳು ನಾಶವಾಗುವರು;
ಪಾತಕ ಮಾಡುವವರೆಲ್ಲರು ಚದರಿ ಹೋಗುವರು.

೧೦ ನೀನು ನನ್ನ ಕೊಂಬನ್ನು ಕಾಡ ಕೋಣದ ಕೊಂಬಿನ ಹಾಗೆ
ಎತ್ತುವಿ;
ಹಸಿ ಎಣ್ಣೆಯನ್ನು ಹಚ್ಚಿ ಕೊಳ್ಳುವೆನು.
೧೧ ನನ್ನ ಕಣ್ಣು ನನ್ನ ವಿರೋಧಿಗಳ ಮೇಲೆ ದೃಷ್ಟಿಸುವದು;
ನನಗೆ ವಿರೋಧವಾಗಿ ಏಳುವ ದುರ್ಮಾರ್ಗರನ್ನು ಕುರಿತು ನ
ನ್ನ ಕಿವಿಗಳು ಕೇಳುವವು.
೧೨ ನೀತಿವಂತನು ತಾಳೇ ಮರದ ಹಾಗೆ ಚಿಗುರುವನು;
ಲೆಬನೋನಿನಲ್ಲಿರುವ ದೇವದಾರಿನ ಹಾಗೆ ಬೆಳೆಯುವನು.
೧೩ ಅವರು ಕರ್ತನ ಮನೆಯಲ್ಲಿ ನೆಡಲ್ಪಟ್ಟು,
ನಮ್ಮ ದೇವರ ಅಂಗಳಗಳಲ್ಲಿ ಚಿಗುರುವರು.
೧೪ ನರೆ ಕೂದಲಲ್ಲಿ ಇನ್ನು ಪೊಳೆತು,
ಪುಷ್ಟಿಯೂ ಹಸುರೂ ಆಗಿರುವರು.
೧೫ ಕರ್ತನು ನೆಟ್ಟನೆಯವನೂ,
ನನ್ನ ಬಂಡೆಯೂ, ಅನ್ಯಾಯವಿಲ್ಲದವನೂ, ಆಗಿದ್ದಾನೆಂದು, ತಿ
ಳಿಸುವ ಹಾಗೆಯೇ.

## ೯೩. ಕೀರ್ತನೆ.

೧ ಕರ್ತನು ಆಳುತ್ತಾನೆ, ಘನತೆಯನ್ನು ಹೊದ್ದು ಕೊಂಡಿ
ದ್ದಾನೆ;
ಕರ್ತನು ಹೊದ್ದು ಕೊಂಡಿದ್ದಾನೆ, ಬಲದಿಂದ ನಡು ಕಟ್ಟಿ
ಕೊಂಡಿದ್ದಾನೆ;
ಮತ್ತು ಲೋಕವು ಸ್ಥಿರವಾಗಿದೆ; ಕದಲುವದಿಲ್ಲ.
೨ ನಿನ್ನ ಸಿಂಹಾಸನವು ಪೂರ್ವದಿಂದ ಸ್ಥಿರವಾಗಿದೆ;
ಯುಗ ಯುಗದಿಂದ ನೀನು ಇದ್ದೀ.
೩ ಕರ್ತನೇ, ನದಿಗಳು ಎತ್ತುತ್ತವೆ;
ನದಿಗಳು ತಮ್ಮ ಶಬ್ದವನ್ನು ಎತ್ತುತ್ತವೆ;
ನದಿಗಳು ತಮ್ಮ ಘೋಷವನ್ನು ಎತ್ತುತ್ತವೆ.
೪ ಬಹಳ ನೀರುಗಳ ಶಬ್ದಕ್ಕಿಂತಲೂ,
ಸಮುದ್ರದ ಶ್ರೇಷ್ಠವಾದ ಅಲೆಗಳಿಗಿಂತಲೂ,
ಉನ್ನತದಲ್ಲಿ ಕರ್ತನು ಶ್ರೇಷ್ಠನಾಗಿದ್ದಾನೆ.
೫ ನಿನ್ನ ಸಾಕ್ಷಿಗಳು ಬಹಳ ನಂಬಿಕೆಯುಳ್ಳವುಗಳು;
ಕರ್ತನೇ, ಪರಿಶುದ್ಧತ್ವವು ನಿನ್ನ ಮನೆಗೆ ಸದಾ ಕಾಲಕ್ಕೆ ಯೋ
ಗ್ಯವಾಗಿದೆ.

## ೯೪. ಕೀರ್ತನೆ.

೧ ಮುಯ್ಯಿಗೆ ಮುಯ್ಯಿ ಕೊಡುವ ದೇವರಾದ ಕರ್ತನೇ,
ಮುಯ್ಯಿಗೆ ಮುಯ್ಯಿ ಕೊಡುವ ದೇವರೇ, ಹೊಳೆಯ ಪೇಕ.
೨ ಭೂಮಿಯ ನ್ಯಾಯಾಧಿಪತಿಯೇ, ಏಳು;
ಗರ್ವಿಷ್ಠರಿಗೆ ಪ್ರತಿ ಕಾರವನ್ನು ಕೊಡು.

೩ ಕರ್ತನೇ, ದುಷ್ಟರು ಎಷ್ಟು ಮಟ್ಟಿಗೂ!
ಎಷ್ಟು ಮಟ್ಟಿಗೂ ದುಷ್ಟರು ಉತ್ಸಾಹ ಪಡುವರು!
೪ ಕಠೋರವಾದವುಗಳನ್ನು ಉಕ್ಕಿಸಿ, ಮಾತಾಡುತ್ತಾರೆ!
ಪಾತಕ ಮಾಡುವವರೆಲ್ಲರು ಹೆಚ್ಚಿಸಿ ಕೊಳ್ಳುತ್ತಾರೆ!
೫ ಕರ್ತನೇ, ನಿನ್ನ ಜನರನ್ನು ಕುಗ್ಗಿಸುತ್ತಾರೆ;
ನಿನ್ನ ಬಾಧ್ಯತೆಯನ್ನು ದೀನ ಮಾಡುತ್ತಾರೆ.
೬ ವಿಧವೆಯನ್ನೂ ಪರದೇಶಸ್ಥನನ್ನೂ ಕೊಲ್ಲುತ್ತಾರೆ;
ದಿಕ್ಕಿಲ್ಲದವರನ್ನು ಹತ ಮಾಡುತ್ತಾರೆ.
೭ ಮತ್ತು, ಕರ್ತನು ನೋಡುವದಿಲ್ಲ;
ಯಾಕೋಬನ ದೇವರು ಗ್ರಹಿಸುವದಿಲ್ಲ, ಅನ್ನುತ್ತಾರೆ.

೮ ಜನರಲ್ಲಿ ಪಶುಪ್ರಾಣಿಗಳೇ, ಗ್ರಹಿಸಿರಿ;
ಹುಚ್ಚರೇ, ಯಾವಾಗ ಬುದ್ಧಿವಂತರಾಗುವಿರಿ!
೯ ಕಿವಿಯನ್ನು ನೆಡುವವನು ಕೇಳಲೇನೋ!
ಕಣ್ಣನ್ನು ರೂಪಿಸುವವನು ದೃಷ್ಟಿಸನೋ!
೧೦ ಜನಾಂಗಗಳನ್ನು ಶಿಕ್ಷಿಸುವವನೂ,
ಮನುಷ್ಯನಿಗೆ ತಿಳುವಿಕೆಯನ್ನು ಕಲಿಸುವವನೂ, ಗದರಿಸನೋ!
೧೧ ಕರ್ತನು ಮನುಷ್ಯನ ಯೋಚನೆಗಳನ್ನು—
ಅವು ಮಾಯವೆಂದು—ತಿಳಿಯ ಕೊಳ್ಳುತ್ತಾನೆ.

೧೨ ಕರ್ತನೇ, ದುಷ್ಟನಿಗೋಸ್ಕರ ಕುಣಿ ಅಗಿಯಲ್ಪಡುವ ಪ
ರ್ಯಂತರ,
ಕೇಡಿನ ದಿವಸಗಳಲ್ಲಿ ಅವನನ್ನು ಸುಮ್ಮನಿರಿಸುವ ಹಾಗೆ,
೧೩ ನೀನು ದಂಡಿಸುವಂಥ,
ನಿನ್ನ ನ್ಯಾಯಪ್ರಮಾಣದಿಂದ ಕಲಿಸುವಂಥ, ಪುರುಷನು, ಭಾ
ಗ್ಯವಂತನು.
೧೪ ಯಾಕಂದರೆ ಕರ್ತನು ತನ್ನ ಜನರನ್ನು ವಿಸರ್ಜಿಸನು;
ತನ್ನ ಬಾಧ್ಯತೆಯನ್ನು ಬಿಟ್ಟು ಬಿಡನು.
೧೫ ಯಾಕಂದರೆ ನ್ಯಾಯವು ನೀತಿಗೆ ತಿರುಗಿ ಕೊಳ್ಳುವದು;
ನೆಟ್ಟನೆಯ ಹೃದಯದವರೆಲ್ಲರು ಅದನ್ನು ಹಿಂಬಾಲಿಸುವರು.

೧೬ ನನಗೋಸ್ಕರ ದುರ್ಮಾರ್ಗರಿಗೆ ವಿರೋಧವಾಗಿ ಏಳುವ
ವನ್ಯಾರು?
ನನಗೋಸ್ಕರ ಪಾತಕ ಮಾಡುವವರಿಗೆ ವಿರೋಧವಾಗಿ ನಿಂತು
ಕೊಳ್ಳುವವನ್ಯಾರು?



೧೭ ಕರ್ತನು ನನಗೆ ಸಹಾಯವಾಗದಿದ್ದರೆ,
ನನ್ನ ಪ್ರಾಣವು ಮೌನದಲ್ಲಿ ವಾಸಿಸುವ ಹಾಗಿತ್ತು.
೧೮ ನನ್ನ ಕಾಲು ಕದಲುತ್ತದೆಂದು, ನಾನು ಹೇಳಿದರೆ,
ಕರ್ತನೇ, ನಿನ್ನ ಕೃಪೆಯು ನನ್ನನ್ನು ಉದ್ಧಾರ ಮಾಡುವದು.
೧೯ ನನ್ನ ಚಿಂತೆಗಳು ನನ್ನ ಅಂತರಂಗದಲ್ಲಿ ಹೆಚ್ಚುವಾಗ,
ನಿನ್ನ ಆದರಣೆಗಳು ನನ್ನ ಪ್ರಾಣವನ್ನು ಆನಂದ ಪಡಿಸುತ್ತವೆ.

೨೦ ನೇಮಕದಿಂದ ಕಷ್ಟವನ್ನು ಕಲ್ಪಿಸುವ
ನ್ಯಾಯಗಳ ಸಿಂಹಾಸನವು ನಿನ್ನ ಸಂಗಡ ಅನ್ಯೋನ್ಯವಾಗಿರು
ವದೋ!
೨೧ ನೀತಿವಂತನ ಪ್ರಾಣಕ್ಕೆ ವಿರೋಧವಾಗಿ ಕೂಡಿ ಕೊಳ್ಳುತ್ತಾರೆ;
ಅಪರಾಧವಿಲ್ಲದ ರಕ್ತಕ್ಕೆ ಆಜ್ಞೆ ನಿರ್ಣಯಿಸುತ್ತಾರೆ.
೨೨ ಆದರೆ ಕರ್ತನು ನನಗೆ ದುರ್ಗವೂ,
ನನ್ನ ದೇವರು ನನ್ನ ಆಶ್ರಯದ ಬಂಡೆಯೂ, ಆಗಿದ್ದಾನೆ.
೨೩ ಅವರ ಪಾತಕವನ್ನು ಅವರ ಮೇಲೆ ತಿರಿಗಿ ಬರ ಮಾಡುವನು;
ಅವರ ಕೇಡಿನಲ್ಲಿ ಅವರನ್ನು ಸಂಹರಿಸುವನು;
ನಮ್ಮದೇವರಾದ ಯೆಹೋವ ಅವರನ್ನು ಸಂಹರಿಸುವನು.

## ೯೫. ಕೀರ್ತನೆ.

೧ ಬನ್ನಿರಿ, ಕರ್ತನಿಗೆ ಉತ್ಸಾಹ ಧ್ವನಿ ಮಾಡುವ;
ನಮ್ಮ ರಕ್ಷಣೆಯ ಬಂಡೆಗೆ ಜಯಧ್ವನಿ ಮಾಡುವ.
೨ ಸ್ತೋತ್ರದಿಂದ ಅವನ ಮುಖದ ಮುಂದೆ ಬರುವ;
ಕೀರ್ತನೆಗಳಿಂದ ಅವನಿಗೆ ಜಯಧ್ವನಿ ಮಾಡುವ.

೩ ಯಾಕಂದರೆ ಯೆಹೋವ ದೊಡ್ಡ ದೇವರೂ,
ಎಲ್ಲಾ ದೇವರುಗಳ ಮೇಲೆ ದೊಡ್ಡ ಅರಸನೂ, ಆಗಿದ್ದಾನೆ.
೪ ಅವನ ಕೈಯಲ್ಲಿ ಭೂಮಿಯ ಆಳವಾದವುಗಳು ಅವೆ;
ಬೆಟ್ಟಗಳ ಕೊನೆಗಳು ಅವನವೇ.
೫ ಸಮುದ್ರವು ಅವನದು; ಅವನು ಅದನ್ನು ಮಾಡಿದನು;
ಅವನ ಕೈಗಳು ಒಣ ಭೂಮಿಯನ್ನು ರೂಪಿಸಿದವು.

೬ ಬನ್ನಿರಿ, ಅಡ್ಡ ಬೀಳುವ, ಎರಗುವ;
ನಮ್ಮನ್ನು ಉಂಟು ಮಾಡಿದ ಕರ್ತನ ಮುಂದೆ ಮೊಣಕಾಲು
ಊರುವ.
೭ ಯಾಕಂದರೆ ಅವನು ನಮ್ಮ ದೇವರು;
ನಾವು ಅವನ ಮೇವಿನ ಜನರೂ, ಅವನ ಕೈಯ ಮಂದೆಯೂ,
ಆಗಿದ್ದೇವೆ.

ಈ ಹೊತ್ತು ಅವನ ಶಬ್ದವನ್ನು ಕೇಳಿದರೆ,
೮ ವಿವಾದದಲ್ಲಿಯೂ,
ಅರಣ್ಯದಲ್ಲಿ ಆದ ಕೋಥನೆಯ ದಿವಸದಲ್ಲಿಯೂ, ಮಾಡಿದ
ಹಾಗೆ,
ನಿಮ್ಮ ಹೃದಯಗಳನ್ನು ಕಠಿಣ ಪಡಿಸ ಬೇಡಿರಿ.
೯ ಅಲ್ಲಿ ನಿಮ್ಮ ತಂದೆಗಳು ನನ್ನನ್ನು ಶೋಧಿಸಿ,
ನನ್ನನ್ನು ಪರೀಕ್ಷಿಸಿದರು; ಮತ್ತು ನನ್ನ ಕೆಲಸವನ್ನು ನೋಡಿ
ದರು.
೧೦ ನಾಲ್ವತ್ತು ವರುಷ ಆ ಸಂತತಿಗೆ ಬೇಸರ ಗೊಂಡು,
ತಪ್ಪಿ ಹೋಗುವ ಹೃದಯದ ಜನರಾಗಿದ್ದಾರೆ;
ನನ್ನ ಮಾರ್ಗಗಳನ್ನು ಅವರು ಅರಿಯರು, ಅಂದೆನು.
೧೧ ಆದದರಿಂದ ನನ್ನ ವಿಶ್ರಾಂತಿಯಲ್ಲಿ ಅವರು ಪ್ರವೇಶಿಸಕೆಂದು,
ನನ್ನ ಕೋಪದಿಂದ ಆಣೆ ಇಟ್ಟು ಕೊಂಡೆನು.

## ೯೬. ಕೀರ್ತನೆ.

೧ ಕರ್ತನಿಗೆ ಹೊಸ ಹಾಡನ್ನು ಹಾಡಿರಿ;
ಸಮಸ್ತ ಭೂಮಿಯೇ, ಕರ್ತನಿಗೆ ಹಾಡಿರಿ.
೨ ಕರ್ತನಿಗೆ ಹಾಡಿರಿ, ಅವನ ಹೆಸರನ್ನು ಆಶೀರ್ವದಿಸಿರಿ;
ಅವನ ರಕ್ಷಣೆಯನ್ನು ದಿನ ದಿನಕ್ಕೆ ಸಾರಿ ಹೇಳಿರಿ.
೩ ಜನಾಂಗಗಳಲ್ಲಿ ಅವನ ಘನವನ್ನೂ,
ಎಲ್ಲಾ ಜನಗಳಲ್ಲಿ ಅವನ ಅದ್ಭುತಗಳನ್ನೂ, ವಿವರಿಸಿರಿ.
೪ ಏನಂದರೆ ಕರ್ತನು ದೊಡ್ಡವನೂ, ಬಹಳವಾಗಿ ಸ್ತುತಿಸ ತಕ್ಕ
ವನೂ;
ಅವನು ಎಲ್ಲಾ ದೇವರುಗಳ ಮೇಲೆ ಭಯಂಕರನು.
೫ ಯಾಕಂದರೆ ಜನಗಳ ದೇವರುಗಳೆಲ್ಲಾ ಬೊಂಬೆಗಳಾಗಿವೆ;
ಆದರೆ ಯೆಹೋವ ಆಕಾಶವನ್ನು ನಿರ್ಮಿಸಿದನು.
೬ ಮಹಿಮೆಯೂ ಪ್ರಭೆಯೂ ಅವನ ಮುಂದೆ ಅವೆ;
ಬಲವೂ ಶೃಂಗಾರವೂ ಅವನ ಪರಿಶುದ್ಧ ಸ್ಥಳದಲ್ಲಿ ಅವೆ.

೭ ಜನಗಳ ಗೋತ್ರಗಳೇ, ಕರ್ತನಿಗೆ ತನ್ನಿರಿ;
ಘನವನ್ನೂ ಬಲವನ್ನೂ ಕರ್ತನಿಗೆ ತನ್ನಿರಿ.
೮ ಕರ್ತನಿಗೆ ಅವನ ಹೆಸರಿನ ಘನವನ್ನು ತನ್ನಿರಿ;
ಕಾಣಿಕೆ ತೆಗೆದು ಕೊಂಡು, ಅವನ ಅಂಗಳಗಳಿಗೆ ಬನ್ನಿರಿ.
೯ ಪರಿಶುದ್ಧತ್ವದ ಅಂದದಿಂದ ಕರ್ತನಿಗೆ ಅಡ್ಡ ಬೀಳಿರಿ;
ಅವನ ಮುಂದೆ ನಡುಗಿರಿ, ಸಮಸ್ತ ಭೂಮಿಯೇ.
೧೦ ಕರ್ತನು ಅರಸನಾಗಿದ್ದಾನೆ;
ಮತ್ತು ಲೋಕವು ಸ್ಥಿರವಾಗಿದೆ, ಕದಲುವದಿಲ್ಲ.
ಅವನು ಜನಗಳಿಗೆ ಸರಿಯಾಗಿ ನ್ಯಾಯ ತೀರಿಸುವನೆಂದು,
ಜನಾಂಗಗಳಲ್ಲಿ ಹೇಳಿರಿ.

೧೧ ಆಕಾಶವು ಸಂತೋಷಿಸಲಿ; ಭೂಮಿಯು ಉಲ್ಲಾಸ ಪಡಲಿ;
ಸಮುದ್ರವೂ, ಅದರ ಪರಿಪೂರ್ಣತೆಯೂ, ಘೋಷಿಸಲಿ.
೧೨ ಹೊಲವೂ, ಅದರಲ್ಲಿರುವ ಸಮಸ್ತವೂ, ಉತ್ಸಾಹ ಪಡಲಿ;
ಆಗ ಅಡವಿಯ ಮರಗಳೆಲ್ಲಾ ಉತ್ಸಾಹ ಧ್ವನಿ ಮಾಡಲಿ,
೧೩ ಕರ್ತನ ಮುಂದೆಯೇ; ಯಾಕಂದರೆ ಬರುತ್ತಾನೆ;
ಭೂಮಿಗೆ ನ್ಯಾಯ ತೀರಿಸ ಬರುತ್ತಾನೆ;
ಲೋಕಕ್ಕೆ ನೀತಿಯಿಂದಲೂ,
ಜನಗಳಿಗೆ ತನ್ನ ನಂಬಿಕೆಯಿಂದಲೂ ನ್ಯಾಯ ತೀರಿಸುವನು.

## ೯೭. ಕೀರ್ತನೆ.

೧ ಕರ್ತನು ಆಳುತ್ತಾನೆ; ಭೂಮಿಯು ಉಲ್ಲಾಸ ಪಡಲಿ;
ದ್ವೀಪಾಂತರಗಳು ಸಂತೋಷಿಸಲಿ.
೨ ಮೇಘಗಳೂ ಕಾರ್ಗತ್ತಲೂ ಅವನ ಸುತ್ತಲು ಅವೆ;
ನೀತಿಯೂ ನ್ಯಾಯವೂ ಅವನ ಸಿಂಹಾಸನದ ಅಸ್ತಿವಾರವಾಗಿವೆ.

೩ ಬೆಂಕಿಯು ಅವನ ಮುಂದೆ ಹೋಗಿ,
ಅವನ ವೈರಿಗಳನ್ನು ಸುತ್ತಲೂ ದಹಿಸುವದು.
೪ ಅವನ ಮಿಂಚುಗಳು ಲೋಕವನ್ನು ಬೆಳಗ ಮಾಡುತ್ತವೆ;
ಭೂಮಿಯು ನೋಡಿ, ನಡುಗುತ್ತವೆ.
೫ ಬೆಟ್ಟಗಳು ಯೆಹೋವನ ಮುಂದೆ,
ಸಮಸ್ತ ಭೂಮಿಯು ಕರ್ತನ ಮುಂದೆ, ಮೇಣದ ಹಾಗೆ
ಕರಗುತ್ತವೆ.

೬ ಆಕಾಶಗಳು ಅವನ ನೀತಿಯನ್ನು ತಿಳಿಸುತ್ತವೆ;
ಎಲ್ಲಾ ಜನಗಳು ಅವನ ಘನವನ್ನು ನೋಡುತ್ತವೆ.
೭ ವಿಗ್ರಹಗಳನ್ನು ಸೇವಿಸಿ,
ಬೊಂಬೆಗಳಲ್ಲಿ ಹೆಮ್ಮೆ ಪಡುವವರೆಲ್ಲರು ನಾಚಿಕೆ ಪಡಲಿ;
ಎಲ್ಲಾ ದೇವರುಗಳೇ, ಅವನಿಗೆ ಅಡ್ಡ ಬೀಳಿರಿ.

೮ ಚಿಯೋನ್ ಕೇಳಿ, ಸಂತೋಷಿಸುತ್ತದೆ;
ಕರ್ತನೇ, ನಿನ್ನ ನ್ಯಾಯಗಳ ನಿಮಿತ್ತ
ಯೆಹೂದದ ಕುಮಾರ್ತೆಗಳು ಉಲ್ಲಾಸಿಸುತ್ತಾರೆ.
೯ ಯಾಕಂದರೆ, ಕರ್ತನೇ, ನೀನು ಸಮಸ್ತ ಭೂಮಿಯ ಮೇಲೆ
ಮಹೋನ್ನತನಾಗಿದ್ದೀ;
ಎಲ್ಲಾ ದೇವರುಗಳ ಮೇಲೆ ಬಹಳ ಎತ್ತರವಾಗಿದ್ದೀ.

೧೦ ಕರ್ತನನ್ನು ಪ್ರೀತಿ ಮಾಡುವವರೇ, ಕೆಟ್ಟದ್ದನ್ನು ಹಗೆ
ಮಾಡಿರಿ;
ತನ್ನ ಭಕ್ತರ ಪ್ರಾಣಗಳನ್ನು ಕಾಪಾಡಿ,
ದುಷ್ಟರ ಕೈಯೊಳಗಿಂದ ಅವರನ್ನು ಬಿಡಿಸುವನು.
೧೧ ಬೆಳಕು ನೀತಿವಂತನಿಗೋಸ್ಕರವೂ,
ಸಂತೋಷವು ನೆಟ್ಟನೆಯ ಹೃದಯದವರಿಗೋಸ್ಕರವೂ, ಬಿತ್ತಿ
ಅವೆ.
೧೨ ನೀತಿವಂತರೇ, ಕರ್ತನಲ್ಲಿ ಸಂತೋಷಿಸಿರಿ;
ಅವನ ಪರಿಶುದ್ಧತ್ವದ ಜ್ಞಪ್ತಿಗೆ ಕೊಂಡಾಡಿರಿ.

## ೯೮. ಕೀರ್ತನೆ.

ಗೀತವು.

೧ ಕರ್ತನಿಗೆ ಹೊಸ ಹಾಡನ್ನು ಹಾಡಿರಿ;
ಯಾಕಂದರೆ ಅದ್ಭುತಗಳನ್ನು ಮಾಡಿದ್ದಾನೆ;
ಅವನ ಬಲಗೈಯೂ, ಅವನ ಪರಿಶುದ್ಧ ತೋಳೂ
ಅವನಿಗೆ ರಕ್ಷಣೆ ಮಾಡಿ ಅವೆ.
೨ ಕರ್ತನು ತನ್ನ ರಕ್ಷಣೆಯನ್ನು ತಿಳಿಯ ಮಾಡಿದ್ದಾನೆ;
ತನ್ನ ನೀತಿಯನ್ನು ಜನಾಂಗಗಳ ಕಣ್ಣುಗಳಿಗೆ ಪ್ರಕಟಿ ಮಾಡಿ
ದ್ದಾನೆ.
೩ ತನ್ನ ಕೃಪೆಯನ್ನೂ ತನ್ನ ನಂಬಿಕೆಯನ್ನೂ ಇಸ್ರಯೇಲನ
ಮನೆಗೋಸ್ಕರ ಜ್ಞಾಪಕ ಮಾಡಿ ಕೊಂಡಿದ್ದಾನೆ;
ಭೂಮಿಯ ಕೊನೆಗಳೆಲ್ಲಾ ನಮ್ಮ ದೇವರ ರಕ್ಷಣೆಯನ್ನು ಕಂಡವೆ.
೪ ಕರ್ತನಿಗೆ ಜಯಧ್ವನಿ ಮಾಡಿರಿ, ಸಮಸ್ತ ಭೂಮಿಯೇ;
ಆರ್ಭಟಿಸಿರಿ, ಉತ್ಸಾಹ ಧ್ವನಿ ಮಾಡಿರಿ, ಕೀರ್ತಿಸಿರಿ.
೫ ಕರ್ತನಿಗೆ ಕಿನ್ನರಿಯಿಂದ,—
ಕಿನ್ನರಿಯಿಂದಲೂ, ಸಂಗೀತದ ಶಬ್ದದಿಂದಲೂ, ಕೀರ್ತಿಸಿರಿ.
೬ ಕಹಳೆಗಳಿಂದಲೂ, ತುತೂರಿಯ ಶಬ್ದದಿಂದಲೂ,
ಅರಸನಾದ ಕರ್ತನ ಮುಂದೆ ಜಯ ಧ್ವನಿ ಮಾಡಿರಿ.

೭ ಸಮುದ್ರವೂ ಅದರ ಪರಿಪೂರ್ಣತೆಯೂ,
ಲೋಕವೂ ಅದರ ನಿವಾಸಿಗಳೂ, ಘೂಷಿಸಲಿ.
೮ ನದಿಗಳು ಕೈ ತಟ್ಟಲಿ;
ಬೆಟ್ಟಗಳು ಕೂಡ ಉತ್ಸಾಹ ಧ್ವನಿ ಮಾಡಲಿ—
೯ ಕರ್ತನ ಮುಂದೆಯೇ. ಯಾಕಂದರೆ ಭೂಮಿಗೆ ನ್ಯಾಯ ತೀರಿಸ
ಬರುತ್ತಾನೆ.
ಲೋಕಕ್ಕೆ ನೀತಿಯಿಂದಲೂ,
ಜನಗಳಿಗೆ ಸರಿಯಾಗಿ, ನ್ಯಾಯ ತೀರಿಸುವನು.

## ೯೯. ಕೀರ್ತನೆ.

೧ ಕರ್ತನು ಆಳುತ್ತಾನೆ; ಜನಗಳು ನಡುಗಲಿ;
ಕೆರೂಬಿಗಳಲ್ಲಿ ಕೂತಿದ್ದಾನೆ; ಭೂಮಿಯು ಕದಲಲಿ.

೨ ಕರ್ತನು ಚಿಯೋನಿನಲ್ಲಿ ದೊಡ್ಡವನಾಗಿಯೂ,
ಎಲ್ಲಾ ಜನಗಳ ಮೇಲೆ ಉನ್ನತನಾಗಿಯೂ, ಇದ್ದಾನೆ.
೩ ನಿನ್ನ ದೊಡ್ಡ ಭಯಂಕರವಾದ ಹೆಸರನ್ನು ಅವರು ಕೊಂಡಾಡಲಿ;
ಅದು ಪರಿಶುದ್ಧವಾದದ್ದೇ.
೪ ಅರಸನ ಬಲವು ನ್ಯಾಯವನ್ನು ಪ್ರೀತಿ ಮಾಡುತ್ತದೆ;
ನೀನು ನೆಟ್ಟನೆತನವನ್ನು ಸ್ಥಿರ ಪಡಿಸಿದ್ದೀ;
ನ್ಯಾಯವನ್ನೂ ನೀತಿಯನ್ನೂ ಯಾಕೋಬನಲ್ಲಿ ನೀನು
ಮಾಡಿದ್ದೀ.
೫ ನಮ್ಮ ದೇವರಾದ ಯೆಹೋವನನ್ನು ಉನ್ನತ ಮಾಡಿರಿ;
ಅವನ ಪಾದಪೀಠಕ್ಕೆ ಅಡ್ಡ ಬೀಳಿರಿ;
ಅವನು ಪರಿಶುದ್ಧನೇ.

೬ ಅವನ ಯಾಜಕರಲ್ಲಿ ಮೋಶೆಯೂ, ಆರೋನನೂ,—
ಅವನ ಹೆಸರನ್ನು ಕರೆಯುವವರಲ್ಲಿ ಸಮುವೇಲನೂ,—
ಕರ್ತನನ್ನು ಕರೆಯುವಾಗ, ಅವನು ಅವರಿಗೆ ಉತ್ತರ ಕೊಟ್ಟನು.
೭ ಮೇಘ ಸ್ತಂಭದಲ್ಲಿಂದ ಅವರ ಸಂಗಡ ಮಾತಾಡಿದನು;
ಅವನ ಸಾಕ್ಷಿಗಳನ್ನೂ, ಅವನು ಅವರಿಗೆ ಕೊಟ್ಟ ನೇಮಕವ
ನ್ನೂ, ಕೈಕೊಂಡರು.
೮ ನಮ್ಮ ದೇವರಾದ ಯೆಹೋವನೇ, ನೀನು ಅವರಿಗೆ ಉತ್ತರ
ಕೊಟ್ಟೆ;
ಅವರಿಗೆ ಕ್ಷಮಿಸುವ ದೇವರೂ,
ಅವರ ಕಾರ್ಯಗಳಿಗೋಸ್ಕರ ಮುಯ್ಯಿಗೆ ಮುಯ್ಯಿ ಕೊಡು
ವವನೂ, ಆಗಿದ್ದೀ.
೯ ನಮ್ಮ ದೇವರಾದ ಯೆಹೋವನನ್ನು ಉನ್ನತ ಮಾಡಿರಿ;
ಅವನ ಪರಿಶುದ್ಧ ಪರ್ವತಕ್ಕೆ ಅಡ್ಡ ಬೀಳಿರಿ;
ಯಾಕಂದರೆ ನಮ್ಮ ದೇವರಾದ ಯೆಹೋವ ಪರಿಶುದ್ಧನೇ.



## ೧೦೦. ಕೀರ್ತನೆ.

ಸ್ತೋತ್ರದ ಗೀತವು.

೧ ಕರ್ತನಿಗೆ ಜಯ ಧ್ವನಿ ಮಾಡಿರಿ, ಸಮಸ್ತ ಭೂಮಿಯೇ.
೨ ಸಂತೋಷದಿಂದ ಕರ್ತನನ್ನು ಸೇವಿಸಿರಿ;
ಉತ್ಸಾಹ ಧ್ವನಿಯಿಂದ ಅವನ ಮುಂದೆ ಬನ್ನಿರಿ.
೩ ಯೆಹೋವನೇ ದೇವರೆಂದು ತಿಳುಕೊಳ್ಳಿರಿ;
ನಾವಲ್ಲ, ಅವನೇ ನಮ್ಮನ್ನು ಉಂಟು ಮಾಡಿದ್ದಾನೆ;
ನಾವು ಅವನ ಜನರೂ, ಅವನ ಮೇಯಿನ ಮಂದೆಯೂ, ಆಗಿದ್ದೇವೆ.
೪ ಸ್ತೋತ್ರದಿಂದ ಅವನ ಬಾಗಲುಗಳಿಗೂ,
ಕೀರ್ತನೆಯಿಂದ ಅವನ ಅಂಗಳಗಳಿಗೂ, ಬನ್ನಿರಿ;
ಅವನನ್ನು ಕೊಂಡಾಡಿರಿ, ಅವನ ಹೆಸರನ್ನು ಆಶೀರ್ವದಿಸಿರಿ.
೫ ಯಾಕಂದರೆ ಕರ್ತನು ಒಳ್ಳೆಯವನು; ಅವನ ಕೃಪೆಯು ಯು
ಗ ಯುಗಕ್ಕೂ,
ಅವನ ನಂಬಿಕೆಯು ತಲತಲಾಂತರಕ್ಕೂ, ಇರುವವು.

## ೧೦೧. ಕೀರ್ತನೆ.

ದಾವೀದನ ಗೀತವು.

೧ ಕೃಪೆಯನ್ನೂ ನೀತಿಯನ್ನೂ ಹಾಡುವೆನು;
ಕರ್ತನೇ, ನಿನ್ನನ್ನು ಕೀರ್ತಿಸುವೆನು.
೨ ಸಂಪೂರ್ಣ ಮಾರ್ಗದಲ್ಲಿ ಬುದ್ಧಿಯಿಂದ ನಡೆದು ಕೊಳ್ಳು
ವೆನು;
ಯಾವಾಗ ನನ್ನ ಬಳಿಗೆ ಬರುವಿ!
ನನ್ನ ಹೃದಯದ ಸಂಪೂರ್ಣತೆಯಿಂದ ನನ್ನ ಮನೆಯೊಳಗೆ
ನಡೆದು ಕೊಳ್ಳುವೆನು.
೩ ಬೆಲಿಯಾಳ್ಳನ ಕಾರ್ಯವನ್ನು ನನ್ನ ಕಣ್ಣುಗಳ ಮುಂದೆ ನಾನು
ಇಡುವದಿಲ್ಲ;
ಅಕ್ರಮಕಾರರ ಕೆಲಸವನ್ನು ಹಗೆ ಮಾಡುತ್ತೇನೆ;
ಅದು ನನಗೆ ಹತ್ತದು.
೪ ಡೊಂಕಾದ ಹೃದಯವು ನನ್ನನ್ನು ಬಿಟ್ಟು ಹೋಗುವದು;
ಕೆಟ್ಟವನನ್ನು ತಿಳಿಯಲೊಲ್ಲೆನು.
೫ ಮರೆಯಾಗಿ ನೆರೆಯವನ ಮೇಲೆ ಚಾಡಿ ಹೇಳುವವನನ್ನು ಸಂಹ
ರಿಸುವೆನು;
ಎತ್ತರವಾದ ಕಣ್ಣೂ ಉಬ್ಬಿದ ಹೃದಯವೂ ಉಳ್ಳವನನ್ನು
ತಾಳಲಾರೆನು.
೬ ಅವರು ನನ್ನ ಸಂಗಡ ವಾಸಿಸುವ ಹಾಗೆ, ನನ್ನ ಕಣ್ಣುಗಳು ದೇ
ಶದಲ್ಲಿರುವ ನಂಬಿಕೆಯುಳ್ಳವರ ಮೇಲೆ ಅವೆ;
ಸಂಪೂರ್ಣವಾದ ಮಾರ್ಗದಲ್ಲಿ ನಡೆದು ಕೊಳ್ಳುವವನೇ ನನ್ನ
ನ್ನು ಸೇವಿಸುವನು.
೭ ಮೋಸ ಮಾಡುವವನು ನನ್ನ ಮನೆಯೊಳಗೆ ವಾಸ ಮಾಡನು;
ಸುಳ್ಳಾಡುವವನು ನನ್ನ ಕಣ್ಣುಗಳ ಮುಂದೆ ನೆಲೆಯಾಗಿರುವ
ದಿಲ್ಲ.
೮ ಪಾತಕ ಮಾಡುವವರೆಲ್ಲರನ್ನು ಕರ್ತನ ಪಟ್ಟಣದೊಳಗಿಂದ ಕಡಿ
ದು ಬಿಡುವ ಹಾಗೆ,
ಬೆಳಿಗ್ಯೆ ದೇಶದ ದುಷ್ಟರೆಲ್ಲರನ್ನು ಸಂಹರಿಸುವೆನು.

## ೧೦೨. ಕೀರ್ತನೆ.

ಮುಗ್ಗು ಪಟ್ಟು, ಕರ್ತನ ಮುಂದೆ ತನ್ನ ಚಿಂತೆಯನ್ನು ಹೊಯ್ದುವ ದೀನನ ಪ್ರಾರ್ಥನೆಯು.

೧ ಕರ್ತನೇ, ನನ್ನ ಪ್ರಾರ್ಥನೆಯನ್ನು ಕೇಳು;
ನನ್ನ ಪೊರೆಯು ನಿನ್ನ ಬಳಿಗೆ ಶೇರಲಿ.
೨ ನನಗೆ ಇಕ್ಕಟ್ಟು ಇರುವ ದಿವಸದಲ್ಲಿ ನಿನ್ನ ಮುಖವನ್ನು ನನಗೆ
ಮರೆ ಮಾಡ ಬೇಡ;
ನಿನ್ನ ಕಿವಿಯನ್ನು ನನ್ನ ಕಡೆಗೆ ಬೊಗ್ಗಿಸು;
ನಾನು ಕರೆಯುವ ದಿವಸದಲ್ಲಿ ಬೇಗ ನನಗೆ ಉತ್ತರ ಕೊಡು.

೩ ಯಾಕಂದರೆ ನನ್ನ ದಿವಸಗಳು ಹೊಗೆಯಾಗಿ ಕಳೆದು ಹೋ
ಗಿವೆ;
ನನ್ನ ಎಲುವುಗಳು ಕೊಳ್ಳಿಯ ಹಾಗೆ ಸುಟ್ಟು ಹೋಗಿವೆ.
೪ ನನ್ನ ಹೃದಯವು ಬಿಸಲು ತಗಲಿದ ಹುಲ್ಲಿನ ಹಾಗೆ ಒಣಗಿ
ಹೋಗಿದೆ;
ಆದದರಿಂದ ನನ್ನ ರೊಟ್ಟಿ ತಿನ್ನುವದಕ್ಕೆ ಮರೆತು ಬಿಡುತ್ತೇನೆ.
೫ ನನ್ನ ನಿಟ್ಟುಸುರಿನ ಶಬ್ದದಿಂದ
ನನ್ನ ಎಲುವುಗಳು ನನ್ನ ಮಾಂಸಕ್ಕೆ ಅಂಟುತ್ತವೆ.
೬ ನಾನು ಅರಣ್ಯದ ಬಕಕ್ಕೆ ಸಮಾನವಾಗಿದ್ದೇನೆ;
ಹಾಳು ಸ್ಥಳಗಳ ಗೂಬೆಯ ಹಾಗಿದ್ದೇನೆ.
೭ ಜಾಗರನಾಗಿದ್ದೇನೆ; ಮಾಳಿಗೆಯ ಮೇಲಿರುವ ಒಂಟಿಯಾದ ಪಕ್ಷಿ
ಯ ಹಾಗಿದ್ದೇನೆ.
೮ ದಿನವೆಲ್ಲಾ ನನ್ನ ಶತ್ರುಗಳು ನನ್ನನ್ನು ನಿಂದಿಸುತ್ತಾರೆ;
ನನ್ನ ಮೇಲೆ ಹಮ್ಮು ಪಡುವವರು ನನಗೆ ವಿರೋಧವಾಗಿ ಆಣೆ
ಇಡುತ್ತಾರೆ.
೯ ಯಾಕಂದರೆ ಬೂದಿಯನ್ನು ಕೊಟ್ಟಿಯಂತೆ ತಿಂದಿದ್ದೇನೆ;
ನನ್ನ ಪಾನವನ್ನು ಕಣ್ಣೀರಿನಿಂದ ಬೆರೆಸಿದ್ದೇನೆ—
೧೦ ನಿನ್ನ ಕೋಪದ, ನಿನ್ನ ಕಾವ್ರದ ನಿಮಿತ್ತವೇ—
ಯಾಕಂದರೆ ನನ್ನನ್ನು ಎತ್ತಿದ್ದೀ, ನನ್ನನ್ನು ಕೆಡವಿ ಹಾಕಿದ್ದೀ;
೧೧ ನನ್ನ ದಿವಸಗಳು ನೀಳದ ನೆರಳಿನ ಹಾಗಿವೆ;
ನಾನು ಹುಲ್ಲಿನ ಹಾಗೆ ಒಣಗುತ್ತೇನೆ.

೧೨ ಆದರೆ ನೀನು, ಕರ್ತನೇ, ಯುಗ ಯುಗಕ್ಕೂ ಕೂತಿರುತ್ತೀ
ನಿನ್ನ ಸ್ಮರಣೆ ತಲತಲಾಂತರಕ್ಕೂ ಅವೆ.
೧೩ ನೀನು ಎದ್ದು, ಚಿಯೋನನ್ನು ಕನಿಕರಿಸು;
ಯಾಕಂದರೆ ಅದನ್ನು ಕರುಣಿಸುವದಕ್ಕೆ ಕಾಲವಾಯಿತು;
ಹೌದು, ನಿರ್ಣಯಿಸಿದ ಸಮಯವು ಬಂದದೆ.
೧೪ ಯಾಕಂದರೆ ನಿನ್ನ ಸೇವಕರು ಅದರ ಕಲ್ಲುಗಳಲ್ಲಿ ಇಷ್ಟು ಪಡು
ತ್ತಾರೆ,
ಅದರ ಧೂಳಿಯನ್ನು ಕರುಣಿಸುತ್ತಾರೆ.
೧೫ ಮತ್ತು ಜನಾಂಗಗಳು ಕರ್ತನ ಹೆಸರಿಗೂ,
ಭೂರಾಜರೆಲ್ಲರೂ ನಿನ್ನ ಘನಕ್ಕೂ ಭಯ ಪಡುವರು.
೧೬ ಯಾಕಂದರೆ ಕರ್ತನು ಚಿಯೋನನ್ನು ಕಟ್ಟುವನು;
ತನ್ನ ಘನದಿಂದ ಕಾಣಿಸಿ ಕೊಳ್ಳುವನು.

೧೭ ದಿಕ್ಕಿಲ್ಲದವನ ಪ್ರಾರ್ಥನೆಗೆ ತಿರುಗಿ ಕೊಳ್ಳುವನು;
ಅವರ ಪ್ರಾರ್ಥನೆಯನ್ನು ತಿರಸ್ಕರಿಸುವದಿಲ್ಲ.
೧೮ ಇದು ಮುಂದಿನ ಸಂತತಿಗೋಸ್ಕರ ಬರೆಯಲ್ಪಡುವದು;
ನಿರ್ಮಿಸಲ್ಪಟ್ಟಿರುವ ಜನರು ಕರ್ತನನ್ನು ಸ್ತುತಿಸುವರು.
೧೯ ಯಾಕಂದರೆ ಜನಾಂಗಗಳೂ
ರಾಜ್ಯಗಳೂ ಕರ್ತನನ್ನು ಸೇವಿಸುವದಕ್ಕೆ ಏಕವಾಗಿ ಕೂಡಿ
ಬರುವಾಗ,
೨೦ ಚಿಯೋನಿನಲ್ಲಿ ಕರ್ತನ ಹೆಸರೂ,
ಯೆರೂಸಲೇಮಿನಲ್ಲಿ ಅವನ ಸ್ತೋತ್ರವೂ, ಸಾರಲ್ಪಡುವ ಹಾಗೆ,
೨೧ ಕರ್ತನು ಸೆರೆಯವರ ನರಳುವಿಕೆಯನ್ನು ಕೇಳುವದಕ್ಕೂ,
ಮರಣದ ಮಕ್ಕಳನ್ನು ಬಿಡಿಸುವದಕ್ಕೂ,
೨೨ ತನ್ನ ಪರಿಶುದ್ಧವಾದ ಉನ್ನತ ಸ್ಥಳದಿಂದ ಕಣ್ಣಿಟ್ಟು,
ಆಕಾಶದಿಂದ ಭೂಮಿಯನ್ನು ನೋಡಿದ್ದಾನೆ.
೨೩ ಅವನು ನನ್ನ ಶಕ್ತಿಯನ್ನು ಮಾರ್ಗದಲ್ಲಿ ಕುಂದಿಸಿ,
ನನ್ನ ದಿವಸಗಳನ್ನು ಕಡಿಮೆ ಮಾಡಿದನು.
೨೪ ದೇವಕೇ, ನನ್ನ ದಿವಸಗಳ ಅರ್ಧದಲ್ಲಿ ನನ್ನನ್ನು ಕೈಯ
ಬೇಡ;
ನಿನ್ನ ವರುಷಗಳು ತಲತಲಾಂತರಗಳಿಗೂ ಅವೆ, ಅಂದೆನು.
೨೫ ನೀನು ಪೂರ್ವದಲ್ಲಿ ಭೂಮಿಯನ್ನು ಸ್ಥಾಪಿಸಿದಿ;
ಆಕಾಶಗಳು ನಿನ್ನ ಕೈ ಕೆಲಸಗಳಾಗಿವೆ.
೨೬ ಅವು ನಾಶವಾಗುವವು; ಆದರೆ ನೀನು ನೆಲೆಯಾಗಿರುತ್ತೀ;
ಅವುಗಳೆಲ್ಲಾ ವಸ್ತ್ರದ ಹಾಗೆ ಜೀರ್ಣವಾಗುವವು;
ಅಂಗಿಯ ಹಾಗೆ ಅವುಗಳನ್ನು ಬದಲಾಯಿಸುವಿ; ಆಗ ಬದಲಾ
ಗುವವು
೨೭ ಆದರೆ ನೀನು ಅವನೇ;
ನಿನ್ನ ವರುಷಗಳು ಮುಗಿಯವು.
೨೮ ನಿನ್ನ ಸೇವಕರ ಮಕ್ಕಳು ವಾಸವಾಗಿರುವರು;
ಅವರ ಬೀಜವು ನಿನ್ನ ಮುಂದೆ ನೆಲೆಯಾಗಿರುವದು.

## ೧೦೩. ಕೀರ್ತನೆ.

ದಾವೀದನದು.

೧ ನನ್ನ ಪ್ರಾಣವೇ, ಕರ್ತನನ್ನೂ—
ನನ್ನ ಎಲ್ಲಾ ಅಂತರಂಗವೇ, ಅವನ ಪರಿಶುದ್ಧವಾದ ಹೆಸರನ್ನೂ
ಆಶೀರ್ವದಿಸು.
೨ ನನ್ನ ಪ್ರಾಣವೇ, ಕರ್ತನನ್ನು ಆಶೀರ್ವದಿಸು;
ಅವನ ಉಪಕಾರಗಳನ್ನೆಲ್ಲಾ ಮರೆತು ಬಿಡ ಬೇಡ.
೩ ಅವನು ನಿನ್ನ ಅಕ್ರಮಗಳನ್ನೆಲ್ಲಾ ಮನ್ನಿಸಿ,
ನಿನ್ನ ರೋಗಗಳನ್ನೆಲ್ಲಾ ಸ್ವಸ್ಥ ಮಾಡಿ,
೪ ನಿನ್ನ ಜೀವವನ್ನು ನಾಶನದೊಳಗಿಂದ ಬಿಡಿಸಿ,
ಕೃಪೆ ಅಂತ್ಯಕರುಣೆಗಳನ್ನು ನಿನಗೆ ಕಿರೀಟವಾಗಿ ಇಟ್ಟು,
೫ ನಿನ್ನ ಯೌವನವು ಹದ್ದಿನಂತೆ ಹೊಸತಾಗುವ ಹಾಗೆ,
ನಿನ್ನ ಬಾಯಿಯನ್ನು ಒಳ್ಳೇದರಿಂದ ತೃಪ್ತಿ ಪಡಿಸುತ್ತಾನೆ.
೬ ಕರ್ತನು ನೀತಿಗಳನ್ನೂ, ನ್ಯಾಯಗಳನ್ನೂ
ಬಲಾತ್ಕಾರ ಪಡುವವರೆಲ್ಲರಿಗೆ ನಡಿಸುತ್ತಾನೆ.
೭ ತನ್ನ ಮಾರ್ಗಗಳನ್ನೂ ಮೋಶೆಗೂ,
ತನ್ನ ಕ್ರಿಯೆಗಳನ್ನೂ ಇಸ್ರಾಯೇಲಿನ ಮಕ್ಕಳಿಗೂ, ತಿಳಿಯ
ಮಾಡಿದನು.
೮ ಕರ್ತನು ಅಂತ್ಯಕರಣವೂ, ದಯವೂ,
ದೀರ್ಘ ಶಾಂತಿಯೂ, ಬಹಳ ಕೃಪೆಯೂ ಉಳ್ಳವನಾಗಿದ್ದಾನೆ.
೯ ಸದಾ ಕಾಲಕ್ಕೆ ವಾದಿಸುವದಿಲ್ಲ;
ಯುಗ ಯುಗಕ್ಕೂ ಕೋಪ ಇಟ್ಟು ಕೊಳ್ಳುವದಿಲ್ಲ.
೧೦ ನಮ್ಮ ಪಾಪಗಳ ಪ್ರಕಾರ ನಮಗೆ ಮಾಡಲಿಲ್ಲ;
ನಮ್ಮ ಅಕ್ರಮಗಳ ಪ್ರಕಾರ ನಮಗೆ ಮುಯ್ಯಿಗೆ ಮುಯ್ಯಿ
ಕೊಡಲಿಲ್ಲ.
೧೧ ಯಾಕಂದರೆ ಭೂಮಿಯ ಮೇಲೆ ಆಕಾಶವು ಎಷ್ಟು ಎತ್ತರವೋ,
ಅವನ ಕೃಪೆಯು ಅವನಿಗೆ ಭಯ ಪಡುವವರ ಮೇಲೆ ಅಷ್ಟು
ಪ್ರಬಲವಾಗಿದೆ.
೧೨ ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ,
ನಮ್ಮ ದ್ರೋಹಗಳನ್ನು ನಮ್ಮಿಂದ ಅಷ್ಟು ದೂರ ಮಾಡಿದ್ದಾನೆ.
೧೩ ತಂದೆಯು ಮಕ್ಕಳ ಮೇಲೆ ಅಂತ್ಯಕರಣ ಪಡುವ ಪ್ರಕಾರ,
ಕರ್ತನು ತನಗೆ ಭಯ ಪಡುವವರ ಮೇಲೆ ಅಂತ್ಯಕರಣ ಪಡು
ತ್ತಾನೆ.
೧೪ ಯಾಕಂದರೆ ಅವನು ನಮ್ಮ ಸ್ವಭಾವವನ್ನು ತಿಳಿದು ಕೊಂಡು,
ನಾವು ಧೂಳಿಯಾಗಿದ್ದೇವೆಂದು ಜ್ಞಾಪಕ ಮಾಡಿ ಕೊಳ್ಳುತ್ತಾನೆ.
೧೫ ಮನುಷ್ಯನಾದರೆ, ಅವನ ದಿವಸಗಳು ಹುಲ್ಲಿನ ಹಾಗೆ ಅವೆ;
ಹೊಲದ ಹೂವಿನ ಹಾಗೆಯೇ ಅರಳುತ್ತಾನೆ.
೧೬ ಯಾಕಂದರೆ ಧೂಳಿಯು ಅದರ ಮೇಲೆ ಬೀಸುತ್ತಲೇ, ಇಲ್ಲದೆ
ಹೋಗುತ್ತದೆ;
ಅದರ ಸ್ಥಳವು ಅದನ್ನು ಇನ್ನು ಅರಿಯದು.
೧೭ ಆದರೆ ಕರ್ತನ ಕೃಪೆಯು ಅವನಿಗೆ ಭಯ ಪಡುವವರ
ಮೇಲೆಯೂ,
ಅವನ ನೀತಿಯು ಮಕ್ಕಳ ಮಕ್ಕಳಿಗೂ,
೧೮ ಅವನ ಒಡಂಬಡಿಕೆಯನ್ನು ಕೈಕೊಂಡು,
ಅವನ ಕಟ್ಟಳೆಗಳನ್ನು ನೆನಸಿ ಮಾಡುವವರಿಗೂ,
ಯುಗ ಯುಗದಿಂದ ಯುಗ ಯುಗಕ್ಕೂ ಇರುವದು.
೧೯ ಕರ್ತನು ಆಕಾಶಗಳಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿ
ಸಿದ್ದಾನೆ;
ಅವನ ರಾಜ್ಯವು ಸಮಸ್ತವನ್ನು ಆಳುತ್ತದೆ.
೨೦ ಕರ್ತನನ್ನು ಆಶೀರ್ವದಿಸಿರಿ, ಅವನ ದೂತರೇ;
ಅವನ ಮಾತಿನ ಶಬ್ದವನ್ನು ಕೇಳಿ, ಅವನ ಮಾತನ್ನು ನಡಿಸುವ
ಶಕ್ತರಾದ ಶೂರರೇ.
೨೧ ಕರ್ತನನ್ನು ಆಶೀರ್ವದಿಸಿರಿ, ಅವನ ಎಲ್ಲಾ ಸೈನ್ಯಗಳೇ;
ಅವನ ಚಿತ್ತ ನಡಿಸುವ ಅವನ ಸೇವಕರೇ.
೨೨ ಕರ್ತನನ್ನು ಆಶೀರ್ವದಿಸಿರಿ,
ಅವನ ಆಳಿಕೆಯ ಎಲ್ಲಾ ಸ್ಥಳಗಳಲ್ಲಿ ಇರುವ ಅವನ ಎಲ್ಲಾ
ಕೆಲಸಗಳೇ;
ನನ್ನ ಪ್ರಾಣವೇ, ಕರ್ತನನ್ನು ಆಶೀರ್ವದಿಸು.



## ೧೦೪. ಕೀರ್ತನೆ.

೧ ನನ್ನ ಪ್ರಾಣವೇ, ಕರ್ತನನ್ನು ಆಶೀರ್ವದಿಸು;
ನನ್ನ ದೇವರಾದ ಕರ್ತನೇ, ಬಹಳ ದೊಡ್ಡವನಾಗಿದ್ದೀ;
ಮಹಿಮೆಯನ್ನೂ ಪ್ರಭೆಯನ್ನೂ ಹೊದ್ದು ಕೊಂಡಿದ್ದೀ.
೨ ವಸ್ತ್ರದ ಹಾಗೆ ಬೆಳಕನ್ನು ಧರಿಸಿ ಕೊಳ್ಳುವವನೂ,
ಆಕಾಶವನ್ನು ತೆರೆಯ ಹಾಗೆ ಹಾಸುವವನೂ, ಆಗಿದ್ದಾನೆ.
೩ ಅವನು ನೀರುಗಳಲ್ಲಿ ತನ್ನ ಉಪ್ಪರಿಗೆಗಳ ತೊಲೆಗಳನ್ನು
ಇರಿಸುತ್ತಾನೆ;
ಮೋಡಗಳನ್ನು ತನ್ನ ರಥವಾಗಿ ಮಾಡುತ್ತಾನೆ;
ಗಾಳಿಯ ರೆಕ್ಕೆಗಳ ಮೇಲೆ ನಡೆದು ಹೋಗುತ್ತಾನೆ.
೪ ಗಾಳಿಗಳನ್ನು ತನ್ನ ದೂತರಾಗಿಯೂ,
ಉರಿಯುವ ಬೆಂಕಿಯನ್ನು ತನ್ನ ಸೇವಕರಾಗಿಯೂ, ಮಾಡು
ತ್ತಾನೆ.
೫ ಯುಗ ಯುಗಾಂತರಗಳಿಗೂ, ಅದು ಕದಲದ ಹಾಗೆ,
ಭೂಮಿಯನ್ನು ಅದರ ಅಸ್ತಿವಾರಗಳ ಮೇಲೆ ಸ್ಥಾಪಿಸಿದನು.
೬ ಜಲಗಾಥದಿಂದ ವಸ್ತ್ರದ ಹಾಗೆ ಅದನ್ನು ಮುಚ್ಚಿದಿ;
ಬೆಟ್ಟಗಳ ಮೇಲೆ ನೀರುಗಳು ನಿಂತವು.
೭ ನಿನ್ನ ಗದರಿಕೆಯಿಂದ ಓಡಿ ಹೋದವು;
ನಿನ್ನ ಗುಡುಗಿನ ಶಬ್ದದಿಂದ ನಡುಗಿ ಹೋದವು.
೮ ಬೆಟ್ಟಗಳಿಗೆ ಏರಿ, ತಗ್ಗುಗಳಿಗೆ ಇಳಿದು,
ನೀನು ಅವಕ್ಕೆ ಸ್ಥಾಪಿಸಿದ ಸ್ಥಳಕ್ಕೆ ಹೋದವು.
೯ ಅವು ದಾಟದ ಹಾಗೆಯೂ,
ಭೂಮಿಯನ್ನು ಮುಚ್ಚುವದಕ್ಕೆ ತಿರಿಗಿ ಬಾರದ ಹಾಗೆಯೂ,
ಮೇರೆಯನ್ನು ಇಟ್ಟಿದ್ದೀ.
೧೦ ಬುಗ್ಗೆಗಳನ್ನು ಹಳ್ಳಗಳಿಗೆ ಕಳುಹಿಸುತ್ತೀ;
ಬೆಟ್ಟಗಳ ನಡುವೆ ಹರಿಯುತ್ತವೆ;
೧೧ ಬೈಲಿನ ಮೃಗಗಳಿಗೆಲ್ಲಾ ಕುಡಿಸುತ್ತವೆ;
ಕಾಡ ಕತ್ತೆಗಳು ತಮ್ಮ ದಾಹವನ್ನು ತೀರಿಸುತ್ತವೆ.
೧೨ ಆಕಾಶದ ಪಕ್ಷಿಗಳು ಅವುಗಳ ಹತ್ತರ ವಾಸವಾಗಿದ್ದು,
ಕೊಂಬೆಗಳ ಮಧ್ಯದಲ್ಲಿಂದ ಶಬ್ದ ಕೊಡುತ್ತವೆ.
೧೩ ಬೆಟ್ಟಗಳಿಗೆ ತನ್ನ ಉಪ್ಪರಿಗೆಗಳೊಳಗಿಂದ ನೀರು ಹಾಕುತ್ತೀ;
ನಿನ್ನ ಕೆಲಸಗಳ ಫಲದಿಂದ ಭೂಮಿಯು ತೃಪ್ತಿಯಾಗುತ್ತದೆ.
೧೪ ಪಶುಗಳಿಗೋಸ್ಕರ ಹುಲ್ಲನ್ನೂ,
ಮನುಷ್ಯನ ಸೇವೆಗೋಸ್ಕರ ಪಲ್ಯಗಳನ್ನೂ, ಮೊಳಿಸುತ್ತಾನೆ;
ಹೀಗೆ ಭೂಮಿಯೊಳಗಿಂದ ರೊಟ್ಟಿಯನ್ನು ಬರ ಮಾಡುತ್ತಾನೆ.
೧೫ ಮತ್ತು ದ್ರಾಕ್ಷೇ ರಸವು ಮನುಷ್ಯನ ಹೃದಯವನ್ನು ಸಂತೋ
ಷ ಪಡಿಸುತ್ತದೆ;
ಅವನ ಮುಖವನ್ನು ಎಣ್ಣೆಗಿಂತ ಪ್ರಕಾಶಿಸ ಮಾಡುತ್ತದೆ;
ರೊಟ್ಟಿಯು ಮನುಷ್ಯನ ಹೃದಯವನ್ನು ಉದ್ಧಾರ ಮಾಡು
ತ್ತದೆ.
೧೬ ಕರ್ತನ ಮರಗಳಾದ, ಅವನು ನೆಟ್ಟ,
ಲೆಬನೋನಿನ ದೇವದಾರುಗಳು ತೃಪ್ತಿಯಾಗುತ್ತವೆ.
೧೭ ಅಲ್ಲಿ ಹಕ್ಕಿಗಳು ಗೂಡು ಕಟ್ಟುತ್ತವೆ;
ಬಕದ ಮನೆಯು ತುರಾಯಿ ಗಿಡಗಳಲ್ಲಿ ಅದೆ.
೧೮ ಎತ್ತರವಾದ ಬೆಟ್ಟಗಳು ಕಾಡ ಮೇಕೆಗಳಿಗೆ,
ಬಂಡೆಗಳು ಪೊಲಗಳಿಗೆ, ಆಶ್ರಯವಾಗಿವೆ.
೧೯ ನೇಮಿಸಿದ ಕಾಲಗಳಿಗೋಸ್ಕರ ಚಂದ್ರನನ್ನು ಉಂಟು ಮಾ
ಡಿದ್ದಾನೆ;
ಸೂರ್ಯನು ತನ್ನ ಅಸ್ತಮಾನವನ್ನು ತಿಳಿದಿದ್ದಾನೆ.
೨೦ ನೀನು ಕತ್ತಲನ್ನು ಬರ ಮಾಡುತ್ತೀ; ಆಗ ರಾತ್ರಿಯಾಗುತ್ತದೆ;
ಅದರಲ್ಲಿ ಅಡವಿಯ ಮೃಗಗಳೆಲ್ಲಾ ಸಂಚರಿಸುತ್ತವೆ.
೨೧ ಸಿಂಹದ ಮರಿಗಳು ಬೇಟೆಗೋಸ್ಕರವೂ,
ದೇವರಿಂದ ತಮ್ಮ ಆಹಾರವನ್ನು ಹುಡುಕುವದಕ್ಕೋಸ್ಕರವೂ,
ಗರ್ಜಿಸುತ್ತವೆ.
೨೨ ಸೂರ್ಯನು ಹುಟ್ಟಲು, ಅವು ಕೂಡಿ ಬಂದು,
ತಮ್ಮ ಗವಿಗಳಲ್ಲಿ ಮಲಗುತ್ತವೆ.
೨೩ ಮನುಷ್ಯನು ತನ್ನ ಕೆಲಸಕ್ಕೂ,
ಸಾಯಂಕಾಲದ ವರಿಗೆ ತನ್ನ ಸೇವೆಗೂ, ಹೊರಡುತ್ತಾನೆ.
೨೪ ಕರ್ತನೇ, ನಿನ್ನ ಕೆಲಸಗಳು ಎಷ್ಟೋ ಉಂಟು!
ಅವುಗಳನ್ನೆಲ್ಲಾ ಜ್ಞಾನದಿಂದ ಉಂಟು ಮಾಡಿದ್ದೀ;
ಭೂಮಿಯು ನಿನ್ನ ಆಸ್ತಿಯಿಂದ ತುಂಬಿ ಅದೆ.
೨೫ ಅಲ್ಲಿ ಸಮುದ್ರವನೆ; ದೊಡ್ಡದು, ಇಕ್ಕಡೆಗೆ ಅಗಲವಾದದ್ದು;
ಅದರಲ್ಲಿ ಲೆಖ್ಖವಿಲ್ಲದ ಜೀವ ಜಂತುಗಳೂ,
ಸಣ್ಣ ದೊಡ್ಡ ಪ್ರಾಣಿಗಳೂ, ಅವೆ.
೨೬ ಅದರಲ್ಲಿ ಹಡಗಗಳು, ಹೋಗುತ್ತವೆ;
ಅದರಲ್ಲಿ ಆಡುವದಕ್ಕೆ ನೀನು ರೂಪಿಸಿದ ಲೆವಿಯಾತಾನವು
ಅದೆ.
೨೭ ನೀನು ಅವುಗಳ ಆಹಾರವನ್ನು ತಕ್ಕ ಕಾಲದಲ್ಲಿ ಕೊಡುವ
ಹಾಗೆ,
ಅವುಗಳೆಲ್ಲಾ ನಿನ್ನನ್ನು ಕಾದು ಕೊಳ್ಳುತ್ತವೆ.
೨೮ ನೀನು ಅವುಗಳಿಗೆ ಕೊಡಲು, ಅವು ಕೂಡಿಸುತ್ತವೆ;
ನೀನು ನಿನ್ನ ಕೈ ತೆರೆಯಲು, ಒಳ್ಳೇದರಿಂದ ತೃಪ್ತಿಯಾ
ಗುತ್ತವೆ.
೨೯ ನೀನು ನಿನ್ನ ಮುಖವನ್ನು ಮರೆ ಮಾಡಲು, ತಲ್ಲಣಿಸುತ್ತವೆ;
ನೀನು ಅವುಗಳ ಶ್ವಾಸವನ್ನು ತೆಗೆದು ಬಿಡಲು, ಸತ್ತು ಹೋಗಿ,
ತಮ್ಮ ಧೂಳಿಗೆ ತಿರುಗುತ್ತವೆ.
೩೦ ನೀನು ನಿನ್ನ ಆತ್ಮನನ್ನು ಕಳುಹಿಸಲು, ನಿರ್ಮಿಸಲ್ಪಡುತ್ತವೆ;
ನೀನು ಭೂಮಿಯ ಮುಖವನ್ನು ಹೊಸದಾಗಿ ಮಾಡುತ್ತೀ.
೩೧ ಕರ್ತನ ಘನವು ಯುಗ ಯುಗಕ್ಕೂ ಇರಲಿ;
ಕರ್ತನು ತನ್ನ ಕೆಲಸಗಳಲ್ಲಿ ಸಂತೋಷ ಪಡಲಿ.
೩೨ ಅವನು ಭೂಮಿಯನ್ನು ದೃಷ್ಟಿಸಲು, ಅದು ನಡುಗುತ್ತವೆ;
ಬೆಟ್ಟಗಳನ್ನು ಮುಟ್ಟಲು, ಹೊಗೆ ಹಾಯುತ್ತವೆ.
೩೩ ಬದುಕುವ ಮಟ್ಟಿಗೂ ಕರ್ತನಿಗೆ ಹಾಡುವೆನು;
ನಾನು ಇರುವ ತನಕ ದೇವರನ್ನು ಕೀರ್ತಿಸುವೆನು.
೩೪ ನನ್ನ ಧ್ಯಾನವು ಅವನಿಗೆ ಹಿತವಾಗಿರಲಿ;
ನಾನು ಕರ್ತನಲ್ಲಿ ಸಂತೋಷ ಪಡುವೆನು.
೩೫ ಪಾಪಾತ್ಮರು ಭೂಮಿಯೊಳಗಿಂದ ಮುಗಿದು ಹೋಗಲಿ;

ಮುಟ್ಟುರು ಇಲ್ಲದೆ ಹೋಗಲಿ;
ನನ್ನ ಪ್ರಾಣವೇ, ಕರ್ತನನ್ನು ಆಶೀರ್ವದಿಸು.
ಕರ್ತನನ್ನು ಸ್ತುತಿಸಿರಿ.

## ೧೦೫. ಕೀರ್ತನೆ.

೧ ಕರ್ತನನ್ನು ಕೊಂಡಾಡಿರಿ,
ಅವನ ಹೆಸರನ್ನು ಕರೆಯಿರಿ;
ಜನಗಳಲ್ಲಿ ಅವನ ಕ್ರಿಯೆಗಳನ್ನು ತಿಳಿಯ ಮಾಡಿರಿ.
೨ ಅವನಿಗೆ ಹಾಡಿರಿ, ಅವನನ್ನು ಕೀರ್ತಿಸಿರಿ;
ಅವನ ಅದ್ಭುತಗಳನ್ನೆಲ್ಲಾ ಧ್ಯಾನಿಸಿರಿ.
೩ ಅವನ ಪರಿಶುದ್ಧ ನಾಮದಲ್ಲಿ ಹೊಗಳ್ಳಿ ಕೊಳ್ಳಿರಿ;
ಕರ್ತನನ್ನು ಹುಡುಕುವವರ ಹೃದಯವು ಸಂತೋಷಿಸಲಿ.
೪ ಕರ್ತನನ್ನೂ ಅವನ ಬಲವನ್ನೂ ಅರಸಿರಿ;
ಅವನ ಮುಖವನ್ನು ಯಾವಾಗಲೂ ಹುಡುಕಿರಿ.
೫ ಅವನು ಮಾಡಿದ ಅದ್ಭುತಗಳನ್ನೂ,
ಅವನ ಲಕ್ಷಣಗಳನ್ನೂ, ಅವನ ಬಾಯಿಯ ನ್ಯಾಯಗಳನ್ನೂ,
ಜ್ಞಾಪಕ ಮಾಡಿ ಕೊಳ್ಳಿರಿ;
೬ ಅವನ ಸೇವಕನಾದ ಅಬ್ರಹಾಮನ ಬೀಜವೇ,
ಅವನು ಆದು ಕೊಂಡ ಯಾಕೋಬನ ಮಕ್ಕಳೇ.
೭ ಅವನೇ ನಮ್ಮ ದೇವರಾದ ಯೆಹೋವನಾಗಿದ್ದಾನೆ;
ಅವನ ನ್ಯಾಯಗಳು ಸಮಸ್ತ ಭೂಮಿಯಲ್ಲಿ ಅವೆ.

೮ ತನ್ನ ಒಡಂಬಡಿಕೆಯನ್ನೂ,
ಸಾವಿರ ತಲಾಂತರಗಳಿಗೆ ಆಜ್ಞಾಪಿಸಿದ ಮಾತನ್ನೂ,
೯ ಅಬ್ರಹಾಮನ ಸಂಗಡ ಮಾಡಿದ ಒಡಂಬಡಿಕೆಯನ್ನೂ,
ಇಸಾಕನಿಗೆ ಇಟ್ಟ ಆಣೆಯನ್ನೂ,
ಯುಗ ಯುಗಕ್ಕೂ ಜ್ಞಾಪಕ ಮಾಡಿ ಕೊಳ್ಳುವನು.
೧೦ ಅದನ್ನು ಯಾಕೋಬನಿಗೆ ನೇಮಕವಾಗಿಯೂ,
ಇಸ್ರಯೇಲನಿಗೆ ನಿತ್ಯ ಒಡಂಬಡಿಕೆಯಾಗಿಯೂ, ಸ್ಥಾಪಿಸಿ, ಹೇಳಿದ್ದೇನಂದರೆ—
೧೧ ನಿನಗೆ ಕಾನಾನ್ ದೇಶವನ್ನು
ನಿಮ್ಮ ಬಾಧ್ಯತೆಯ ಪಾಲಾಗಿ ಕೊಡುವೆನು.
೧೨ ಆಗಲವರು ಲೆಖ್ಖಕ್ಕೆ ಕಿಲವರಾಗಿಯೂ,
ಸ್ವಲ್ಪ ಮಂದಿಯಾಗಿಯೂ, ಪರದೇಶಸ್ಥರಾಗಿಯೂ, ಅದರಲ್ಲಿ ಇದ್ದರು.
೧೩ ಅವರು ಜನಾಂಗದಿಂದ ಜನಾಂಗಕ್ಕೂ,
ಒಂದು ರಾಜ್ಯದಿಂದ ಬೇರೊಂದು ಪ್ರಜೆಗೂ, ನಡೆದು ಹೋದರು.
೧೪ ಅವನು ಮನುಷ್ಯರನ್ನು ಅವರಿಗೆ ಬಲಾತ್ಕಾರ ಮಾಡ ಗೊಡಿಸಲಿಲ್ಲ;
ಅವರಿಗೋಸ್ಕರ ಅರಸುಗಳನ್ನು ಗದರಿಸಿದನು.
೧೫ ನನ್ನ ಅಭಿಷಿಕ್ತರನ್ನು ಮುಟ್ಟ ಬೇಡಿರಿ,
ನನ್ನ ಪ್ರವಾದಿಗಳಿಗೆ ಕೇಡು ಮಾಡ ಬೇಡಿರಿ.

೧೬ ಮತ್ತು ಬರವನ್ನು ದೇಶದ ಮೇಲೆ ಕರೆದನು;
ಕೊಟ್ಟಿಯಾದ ಕೋಲನ್ನೆಲ್ಲಾ ಮುರಿದನು.
೧೭ ಅವರ ಮುಂದೆ ಒಬ್ಬ ಮನುಷ್ಯನನ್ನು ಕಳುಹಿಸಿದನು;
ಯೋಸೆಫನು ದಾಸನಾಗಿ ಮಾರಲ್ಪಟ್ಟನು.
೧೮ ಸಂಕೋಲೆಗಳಿಂದ ಅವನ ಕಾಲನ್ನು ನೋಯಿಸಿದರು;
ಅವನ ಪ್ರಾಣವು ಕಬ್ಬಿಣದಲ್ಲಿ ಸೇರಿತು.
೧೯ ಅವನ ವಾಕ್ಯವು ಬರುವ ಮಟ್ಟಿಗೆ
ಕರ್ತನ ಮಾತು ಅವನನ್ನು ಪುಟಕ್ಕೆ ಹಾಕಿತು.
೨೦ ಅರಸನು ಕಳುಹಿಸಿ, ಅವನನ್ನು ಬಿಡಿಸಿದನು;
ಜನಗಳ ಅಧಿಪತಿಯು ಅವನನ್ನು ಬಿಡುಗಡೆ ಮಾಡಿದನು.
೨೧ ಅವನನ್ನು ತನ್ನ ಮನೆಗೆ ಯಜಮಾನನಾಗಿಯೂ,
ತನ್ನ ಎಲ್ಲಾ ಆಸ್ತಿಯ ಮೇಲೆ ಅಧಿಪತಿಯಾಗಿಯೂ,
೨೨ ತನ್ನ ಪ್ರಧಾನರನ್ನು ಮನಸ್ಸು ಬಂದ ಹಾಗೆ ಕಟ್ಟುವದಕ್ಕೂ,
ತನ್ನ ಹಿರಿಯರನ್ನು ಬೋಧಿಸುವದಕ್ಕೂ, ಇಟ್ಟನು.
೨೩ ಆಗ ಇಸ್ರಯೇಲನು ಐಗುಪ್ತಕ್ಕೆ ಬಂದನು;
ಯಾಕೋಬನು ಹಾಮನ ದೇಶದಲ್ಲಿ ಪರದೇಶಸ್ಥನಾಗಿದ್ದನು.
೨೪ ಮತ್ತು ತನ್ನ ಜನರನ್ನು ಬಹಳ ಅಭಿವೃದ್ಧಿ ಮಾಡಿ,
ಅವರ ವೈರಿಗಳಿಗಿಂತ ಬಲ ಪಡಿಸಿದನು.

೨೫ ಅವರ ಹೃದಯವನ್ನು—ತನ್ನ ಜನರನ್ನು ಹಗೆ ಮಾಡುವದಕ್ಕೂ,
ತನ್ನ ಸೇವಕರಿಗೆ ತಂತ್ರ ನಡಿಸುವದಕ್ಕೂ—ಮಾರ್ಪಡಿಸಿದನು.
೨೬ ತನ್ನ ಸೇವಕನಾದ ಮೋಸೆಯನ್ನೂ,
ತಾನು ಆದು ಕೊಂಡ ಆರೋನನನ್ನೂ, ಕಳುಹಿಸಿದನು.
೨೭ ಇವರು ಅವನ ಗುರುತುಗಳ ಕಾರ್ಯಗಳನ್ನೂ,
ಹಾಮನ ದೇಶದಲ್ಲಿ ಲಕ್ಷಣಗಳನ್ನೂ, ಅವರೊಳಗೆ ಮಾಡಿದರು.
೨೮ ಅವನು ಕತ್ತಲೆಯನ್ನು ಕಳುಹಿಸಿ, ಕತ್ತಲಾಗ ಮಾಡಿದನು;
ಮತ್ತು ಅವನ ಮಾತುಗಳಿಗೆ ಅವರು ಎದುರಾಡಲಿಲ್ಲ.
೨೯ ಅವರ ನೀರನ್ನು ರಕ್ತವಾಗಿ ಮಾರ್ಪಡಿಸಿದನು;
ಅವರ ಮೀನುಗಳನ್ನು ಸಾಯ ಮಾಡಿದನು.
೩೦ ಅವರ ದೇಶವು ಕಪ್ಪೆಗಳಿಂದ ಹರಿದಾಡಿತು;
ಅವರ ಅರಸುಗಳ ಕೊಠಡಿಗಳಲ್ಲಿ ಸಹ.
೩೧ ಅವನು ಹೇಳಲು, ಸೊಣದ ಗುಂಪುಗಳೂ,
ಅವರ ಮೇರೆಗಳಲ್ಲೆಲ್ಲಾ ಹೇನುಗಳೂ ಬಂದವು.
೩೨ ಅವರ ಮಳೆಯಾಗಿ ಕಲ್ಮಳೆಯನ್ನೂ,
ಅಗ್ನಿ ಜ್ವಾಲೆಗಳನ್ನೂ, ಅವರ ದೇಶದಲ್ಲಿ ಕೊಟ್ಟನು.
೩೩ ಅವರ ದ್ರಾಕ್ಷೇ ಬಳ್ಳಿಯನ್ನೂ, ಅಂಜೂರದ ಗಿಡಗಳನ್ನೂ ಹೊಡೆದು,
ಅವರ ಮೇರೆಗಳ ಮರಗಳನ್ನು ಮುರಿದನು.
೩೪ ಅವನು ಹೇಳಲು, ಮಿಡತೆಗಳೂ,
ಲೆಖ್ಖವಿಲ್ಲದ ಕೊಂಡ್ಲಿ ಹುಳಗಳೂ ಬಂದವು.
೩೫ ಅವು ಅವರ ದೇಶದಲ್ಲಿ ಎಲ್ಲಾ ಪಲ್ಯಗಳನ್ನು ತಿಂದು ಬಿಟ್ಟವು;
ಅವರ ಭೂಮಿಯ ಫಲಗಳನ್ನು ತಿಂದು ಬಿಟ್ಟವು.
೩೬ ಮತ್ತು ಅವರ ದೇಶದಲ್ಲಿ ಎಲ್ಲಾ ಚೊಚ್ಚಲುಗಳನ್ನೂ,
ಅವರ ಎಲ್ಲಾ ಬಾರುಬಲದ ಪ್ರಥಮ ಫಲವನ್ನೂ, ಹೊಡೆದನು.
೩೭ ಬೆಳ್ಳಿ ಭಂಗಾರಗಳ ಸಂಗಡ ಅವರನ್ನು ಹೊರಗೆ ಬರ ಮಾಡಿದನು;
ಅವರ ಕುಲಗಳಲ್ಲಿ ಎಡವುವವನು ಇರಲಿಲ್ಲ.
೩೮ ಅವರು ಹೊರಗೆ ಹೋಗುವಾಗ, ಮಿಚ್ರ ದೇಶವು ಸಂತೋಷಿಸಿತು;
ಯಾಕಂದರೆ ಅವರ ಹೆದರಿಕೆ ಅವರ ಮೇಲೆ ಬಿದ್ದಿತ್ತು.



೩೯ ಮಕೆಯಾಗಿ ಮೇಘವನ್ನೂ,
ರಾತ್ರಿಯಲ್ಲಿ ಬೆಳಕಿಗೋಸ್ಕರ ಬೆಂಕಿಯನ್ನೂ ವಿಸ್ತರಿಸಿದನು.
೪೦ ಅವರು ಕೇಳಿದಾಗ, ಲಾವಕ್ಕಿಗಳನ್ನು ಬರ ಮಾಡಿ,
ಆಕಾಶದ ಕೊಟ್ಟಿಯಿಂದ ಅವರನ್ನು ತೃಪ್ತಿ ಪಡಿಸಿದನು.
೪೧ ಬಂಡೆಯನ್ನು ಅವನು ತೆರೆಯಲು, ನೀರು ಹೊರಟಿತು;
ಅರಣ್ಯಗಳಲ್ಲಿ ನದಿಯಾಗಿ ಹರಿಯಿತು.
೪೨ ಯಾಕಂದರೆ ತನ್ನ ಪರಿಶುದ್ಧ ವಾಕ್ಯವನ್ನೂ,
ತನ್ನ ಸೇವಕನಾದ ಅಬ್ರಹಾಮನನ್ನೂ ಜ್ಞಾಪಕ ಮಾಡಿ ಕೊಂಡನು.
೪೩ ತನ್ನ ಜನರನ್ನು ಆನಂದದಿಂದಲೂ,
ತಾನು ಆದು ಕೊಂಡವರನ್ನು ಉತ್ಸಾಹ ಧ್ವನಿಯಿಂದಲೂ,
ಹೊರಗೆ ಬರ ಮಾಡಿದನು.
೪೪ ಮತ್ತು ಜನಾಂಗಗಳ ದೇಶಗಳನ್ನು ಅವರಿಗೆ ಕೊಟ್ಟನು;
ಪ್ರಜೆಗಳ ಕಷ್ಟಾರ್ಜಿತವನ್ನು ಸ್ವತಂತ್ರಿಸಿ ಕೊಂಡರು.
೪೫ ಅವನ ನೇಮಕಗಳನ್ನು ಕೈ ಕೊಂಡು,
ಅವನ ನ್ಯಾಯಪ್ರಮಾಣಗಳನ್ನು ಕಾಯುವದಕ್ಕಾಗಿಯೇ.
ಕರ್ತನನ್ನು ಸ್ತುತಿಸಿರಿ.

## ೧೦೬. ಕೀರ್ತನೆ.

೧ ಹಲ್ಲೆಲೂಯಾ.
ಕರ್ತನನ್ನು ಕೊಂಡಾಡಿರಿ; ಯಾಕಂದರೆ ಅವನು ಒಳ್ಳೆಯವನು;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅವೆ.
೨ ಕರ್ತನ ಪರಾಕ್ರಮ ಕ್ರಿಯೆಗಳನ್ನು ಉಚ್ಚರಿಸಿ,
ಅವನ ಸ್ತೋತ್ರವನ್ನೆಲ್ಲಾ ಕೇಳಿಸ ಮಾಡುವವನ್ಯಾರು?
೩ ನ್ಯಾಯವನ್ನು ಕೈ ಕೊಂಡು,
ಎಲ್ಲಾ ಕಾಲದಲ್ಲಿ ನೀತಿಯನ್ನು ಮಾಡುವವರು ಭಾಗ್ಯವಂತರು.
೪ ಕರ್ತನೇ, ನೀನು ಆದು ಕೊಂಡವರ ಸುಖವನ್ನು ನಾನು ನೋಡಿ,
ನಿನ್ನ ಜನರ ಸಂತೋಷದಿಂದ ಸಂತೋಷಿಸಿ,
ನಿನ್ನ ಬಾಧ್ಯತೆಯ ಸಂಗಡ ಹೊಗಳ್ಳಿ ಕೊಳ್ಳುವ ಹಾಗೆ,
೫ ನಿನ್ನ ಜನರ ಮೇಲಿರುವ ಕಟಾಕ್ಷದಿಂದ ನನ್ನನ್ನು ಜ್ಞಾಪಕ ಮಾಡಿಕೋ;
ನಿನ್ನ ರಕ್ಷಣೆಯಿಂದ ನನ್ನನ್ನು ದರ್ಶಿಸು.

೬ ನಮ್ಮ ತಂದೆಗಳೂ ನಾವೂ ಪಾಪ ಮಾಡಿದ್ದೇವೆ,
ಅಕ್ರಮ ಮಾಡಿದ್ದೇವೆ, ದುಷ್ಟತ್ವ ನಡಿಸಿದ್ದೇವೆ.
೭ ನಮ್ಮ ತಂದೆಗಳು ಮಿಚ್ರದಲ್ಲಿ ನಿನ್ನ ಅದ್ಭುತಗಳನ್ನು ಲಕ್ಷ್ಯ ಮಾಡದೆ,
ನಿನ್ನ ಕೃಪೆಗಳ ಬಾಹುಳ್ಯವನ್ನು ನೆನಸದೆ,
ಸಮುದ್ರದ ಬಳ್ಳಿಯಲ್ಲಿ—ಕೆಂಪು ಸಮುದ್ರದ ಹತ್ತರ—ತಿರುಗ ಬಿದ್ದರು.
೮ ಆದರೆ ಅವನು ತನ್ನ ಪರಾಕ್ರಮವನ್ನು ಅವನಿಗೆ ತಿಳಿಯ ಮಾಡುವ ಹಾಗೆ,
ತನ್ನ ಹೆಸರಿನ ನಿಮಿತ್ತ ಅವರನ್ನು ರಕ್ಷಿಸಿದನು.
೯ ಮತ್ತು ಅವನು ಕೆಂಪು ಸಮುದ್ರವನ್ನು ಗದರಿಸಲು, ಅದು ಒಣಗಿ ಹೋಯಿತು;
ಜಲಗಾಢದಲ್ಲಿ, ಅರಣ್ಯದಲ್ಲಿದ್ದ ಹಾಗೆ, ಅವರನ್ನು ನಡಿಸಿದನು.
೧೦ ಮತ್ತು ಹಗೆಯವನ ಕೈಯೊಳಗಿಂದ ಅವರನ್ನು ರಕ್ಷಿಸಿ,
ಶತ್ರುವಿನ ಕೈಯಿಂದ ಅವರನ್ನು ಬಿಡುಗಡೆ ಮಾಡಿದನು.
೧೧ ಮತ್ತು ನೀರುಗಳು ಅವರ ವೈರಿಗಳನ್ನು ಮುಚ್ಚಿ ಬಿಟ್ಟವು;
ಅವರಲ್ಲಿ ಒಬ್ಬನಾದರೂ ಉಳಿಯಲಿಲ್ಲ.
೧೨ ಆಗ ಅವನ ಮಾತುಗಳನ್ನು ನಂಬಿ,
ಅವನ ಸ್ತೋತ್ರವನ್ನು ಹಾಡಿದರು.

೧೩ ಬೇಗ ಅವನ ಕೆಲಸಗಳನ್ನು ಮರೆತು ಬಿಟ್ಟು,
ಅವನ ಆಲೋಚನೆಗೆ ಕಾದು ಕೊಳ್ಳದೆ ಇದ್ದರು.
೧೪ ಮತ್ತು ಅರಣ್ಯದಲ್ಲಿ ಆಸೆಯಿಂದ ಆಶಿಸಿ,
ಕಾಡಿನಲ್ಲಿ ದೇವರನ್ನು ಪರೀಕ್ಷಿಸಿದರು.
೧೫ ಆಗ ಅವರ ಬಿನ್ನಹವನ್ನು ಅವರಿಗೆ ಕೊಟ್ಟನು;
ಆದರೆ ಅವರ ಪ್ರಾಣದಲ್ಲಿ ಕ್ಷಯವನ್ನು ಕಳುಹಿಸಿದನು.
೧೬ ಮತ್ತು ಅವರು ದಂಡಿನಲ್ಲಿ ಮೋಶೆಯ ಮೇಲೆಯೂ,
ಕರ್ತನ ಪರಿಶುದ್ಧನಾದ ಆರೋನನ ಮೇಲೆಯೂ, ಹೊಟ್ಟೇ ಕಿಚ್ಚು ಪಟ್ಟರು.
೧೭ ಭೂಮಿಯು ತೆರೆದು, ದಾಥಾನನ್ನು ನುಂಗಿ,
ಅಬೀರಮನ ಗುಂಪನ್ನು ಮುಚ್ಚಿ ಬಿಟ್ಟಿತು.
೧೮ ಬೆಂಕಿಯು ಅವರ ಗುಂಪಿನಲ್ಲಿ ಉರಿದು,
ಜ್ವಾಲೆಯು ದುಷ್ಟರನ್ನು ಸುಟ್ಟಿತು.
೧೯ ಹೋರೆಬಿನಲ್ಲಿ ಕರುವನ್ನು ಮಾಡಿ,
ಎರಕದ್ದಕ್ಕೆ ಅಡ್ಡ ಬಿದ್ದರು.
೨೦ ತಮ್ಮ ಘನವನ್ನು
ಹುಲ್ಲು ತಿನ್ನುವ ಎತ್ತಿನ ರೂಪಕ್ಕೆ ಬದಲಾಯಿಸಿದರು.
೨೧ ತಮ್ಮ ರಕ್ಷಕನಾಗಿ ಮಿಚ್ರ ದೇಶದಲ್ಲಿ ದೊಡ್ಡ ಕೆಲಸಗಳನ್ನೂ,
೨೨ ಹಾಮನ ದೇಶದಲ್ಲಿ ಅದ್ಭುತಗಳನ್ನೂ,
ಕೆಂಪು ಸಮುದ್ರದ ಬಳ್ಳಿಯಲ್ಲಿ ಭಯಂಕರವಾದವುಗಳನ್ನೂ,
ಮಾಡಿದ ದೇವರನ್ನು ಮರೆತು ಬಿಟ್ಟರು.
೨೩ ಆಗ, ಅವರನ್ನು ನಾಶ ಮಾಡುತ್ತೇನೆಂದು, ಹೇಳಿದನು;
ಆದರೆ ಅವನು ಆದು ಕೊಂಡ ಮೋಶೆಯು, ಅವನ ಉರಿ ಕೆಡಿಸದ ಹಾಗೆ,
ಅದನ್ನು ತಿರುಗಿಸುವವನಾಗಿ ಹರಕೆನಲ್ಲಿ ಅವನ ಮುಂದೆ ನಿಂತು ಕೊಂಡನು.

೨೪ ಮತ್ತು ಅವರು ಮನೋಹರವಾದ ದೇಶವನ್ನು ಅಸಂಹಿಸಿ ಬಿಟ್ಟು,
ಅವನ ಮಾತನ್ನು ನಂಬದೆ ಹೋದರು.
೨೫ ತಮ್ಮ ಗುಡಾರಗಳಲ್ಲಿ ಗುಣುಗುಟ್ಟಿ,
ಕರ್ತನ ಶಬ್ದವನ್ನು ಕೇಳದೆ ಹೋದರು.
೨೬ ಆದದರಿಂದ ಅವರನ್ನು ಅರಣ್ಯದಲ್ಲಿ ಕೆಡವುವದಕ್ಕೂ,
೨೭ ಅವರ ಬೀಜವನ್ನು ಜನಾಂಗಗಳಲ್ಲಿ ಕೆಡವಿ,
ಅವರನ್ನು ದೇಶಗಳಲ್ಲಿ ಚದರಿಸುವದಕ್ಕೂ,
ತನ್ನ ಕೈಯನ್ನು ಅವರ ಮೇಲೆ ಎತ್ತಿದನು.

೨೮ ಮತ್ತು ಬಾಳೆಯೋರಿಗೆ ಕೂಡಿ ಕೊಂಡು,
ಸತ್ತವರ ಬಲಿಗಳನ್ನು ಉಂಡರು.
೨೯ ತಮ್ಮ ಕ್ರಿಯೆಗಳಿಂದ ಅವನಿಗೆ ಕರಕರೆ ಎಬ್ಬಿಸಿದರು;
ಆದದರಿಂದ ವ್ಯಾಧಿಯು ಅವರಲ್ಲಿ ಹೊಕ್ಕಿತು.
೩೦ ಆಗ ಫಿನೆಹಾನನು ನಿಂತು ಕೊಂಡು,
ನ್ಯಾಯ ತೀರಿಸಿದ್ದರಿಂದ, ವ್ಯಾಧಿಗೆ ಅಡ್ಡಿ ಆಯಿತು.
೩೧ ಇದು ತಲ ತಲಾಂತರಕ್ಕೂ, ಯುಗ ಯುಗಕ್ಕೂ
ಅವನಿಗೆ ನೀತಿ ಎಂದು ಎಣಿಸಲ್ಪಟ್ಟಿತು.
೩೨ ಮತ್ತು ವಿವಾದದ ನೀರಿನ ಬಳಿಯ ಕಾದ್ರಸೆಬ್ಬಿಸಿದರು;
ಅವರ ನಿಮಿತ್ತ ಮೋಶೆಗೆ ಕೇಡು ಬಂತು.
೩೩ ಯೊಕಂದರೆ ಅವನ ಆತ್ಮವನ್ನು ಕೆಣಕಿದರು;
ಆದದರಿಂದ ಅವನು ಬಾಯಿಗೆ ಬಂದ ಹಾಗೆ ಮಾತಾಡಿದನು.

೩೪ ಕರ್ತನು ಅವರಿಗೆ ಹೇಳಿದ ಜನಗಳನ್ನು
ಅವರು ನಾಶ ಮಾಡದೆ ಹೋದರು.
೩೫ ಆದರೆ ಜನಾಂಗಗಳ ಸಂಗಡ ಕೂಡಿ ಕೊಂಡು,
ಅವರ ಕೆಲಸಗಳನ್ನು ಕಲಿತು ಕೊಂಡರು.
೩೬ ಮತ್ತು ಅವರ ವಿಗ್ರಹಗಳಿಗೆ ಸೇವೆ ಮಾಡಿದರು;
ಅವು ಅವರಿಗೆ ನೇಣು ಆದವು.
೩೭ ಮತ್ತು ತಮ್ಮ ಗಂಡು ಮಕ್ಕಳನ್ನೂ
ಹೆಣ್ಣು ಮಕ್ಕಳನ್ನೂ ಪಿಶಾಚಿಗಳಿಗೆ ಅರ್ಪಿಸಿದರು.
೩೮ ಮತ್ತು ತಮ್ಮ ಗಂಡು ಹೆಣ್ಣು ಮಕ್ಕಳ ರಕ್ತವಾದ ಅಪರಾಧವಿಲ್ಲದ ರಕ್ತವನ್ನು ಚೆಲ್ಲಿ,
ಕಾನಾನಿನ ವಿಗ್ರಹಗಳಿಗೆ ಅರ್ಪಿಸಿದರು;
ದೇಶವನ್ನು ರಕ್ತದಿಂದ ಅಶುದ್ಧ ಮಾಡಿದರು.
೩೯ ಹೀಗೆ ತಮ್ಮನ್ನು ಕೆಲಸಗಳಿಂದ ತಮ್ಮನ್ನು ಹೊಲೆ ಮಾಡಿ ಕೊಂಡು,
ತಮ್ಮ ಕ್ರಿಯೆಗಳಿಂದ ಜಾರರಾದರು.
೪೦ ಆಗ ಕರ್ತನ ಕೋಪವು ಅವನ ಜನರ ಮೇಲೆ ಉರಿಯಿತು;
ಅವನು ತನ್ನ ಬಾಧ್ಯತೆಯನ್ನು ಅಸಂಹಿಸಿದನು.
೪೧ ಮತ್ತು ಅವರನ್ನು ಜನಾಂಗಗಳ ಕೈಗೆ ಕೊಟ್ಟನು;
ಅವರ ಹಗೆಯವರು ಅವರನ್ನು ಆಳಿದರು.
೪೨ ಅವರ ಶತ್ರುಗಳು ಅವರನ್ನು ಬಾಧೆ ಪಡಿಸಿದರು;
ಅವರ ಕೈ ಕೆಳಗೆ ತಗ್ಗಿ ಹೋದರು.
೪೩ ಬಹಳ ಸಾರಿ ಅವರನ್ನು ಬಿಡಿಸಿದನು;
ಆದರೆ ಅವರು ತಮ್ಮ ಆಲೋಚನೆಯಿಂದ ತಿರುಗ ಬಿದ್ದು,
ತಮ್ಮ ಅಕ್ರಮದಿಂದ ಕುಗ್ಗಿ ಹೋದರು.

೪೪ ಆದರೆ ಅವರ ಕೂಗನ್ನು ಕೇಳಿದಾಗ,
ಅವರ ಇಕ್ಕಟ್ಟಿನ ಮೇಲೆ ದೃಷ್ಟಿ ಇಟ್ಟು,
೪೫ ಅವರಿಗಾಗಿ ತನ್ನ ಒಡಂಬಡಿಕೆಯನ್ನು ಜ್ಞಾಪಕ ಮಾಡಿ ಕೊಂಡು,
ತನ್ನ ಕೃಪೆಯ ಬಾಹುಳ್ಯದ ಪ್ರಕಾರ ಕನಿಕರ ಪಟ್ಟನು.
೪೬ ಮತ್ತು ಅವರನ್ನು ಸೆರೆ ಹಿಡಿದವರ ಮುಂದೆ ಕರುಣೆ ಹೊಂದ ಮಾಡಿದನು.
೪೭ ನಮ್ಮ ದೇವರಾದ ಯೆಹೋವನೇ,
ನಾವು ನಿನ್ನ ಪರಿಶುದ್ಧ ಹೆಸರನ್ನು ಕೊಂಡಾಡಿ,
ನಿನ್ನ ಸ್ತೋತ್ರದಲ್ಲಿ ಹೆಚ್ಚಳ ಪಡುವ ಹಾಗೆ, ನಮ್ಮನ್ನು ರಕ್ಷಿಸು;
ಜನಾಂಗಗಳೊಳಗಿಂದ ನಮ್ಮನ್ನು ಶೆಗರು ಕೂಡಿಸು.
೪೮ ಇಸ್ರಯೇಲನ ದೇವರಾದ ಯೆಹೋವನಿಗೆ
ಯುಗ ಯುಗದಿಂದ ಯುಗ ಯುಗಕ್ಕೂ ಆಶೀರ್ವಾದವಾಗಲಿ.

ಮತ್ತು ಜನರೆಲ್ಲಾ, ಆಮೆನ್, ಎಂದು ಹೇಳಲಿ.
ಕರ್ತನನ್ನು ಸ್ತುತಿಸಿರಿ.

## ೧೦೭. ಕೀರ್ತನೆ.

೧ ಕರ್ತನನ್ನು ಕೊಂಡಾಡಿರಿ; ಯೊಕಂದರೆ ಅವನು ಒಳ್ಳೆಯವನು;
ಯೊಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ,
ಎಂದು—

೨ ಕರ್ತನು ಬಿಡುಗಡೆ ಮಾಡಿದವರು—
ಅವನು ವೈರಿಯ ಕೈಯಿಂದ ಬಿಡುಗಡೆ ಮಾಡಿ,
೩ ಮೂಡಣ, ಪಡುವಣ, ಬಡಗಲೂ, ಸಮುದ್ರದ ಅತ್ತಲೂ ಆದ
ದೇಶಗಳಿಂದ ಕೂಡಿಸಿದವರು—ಹೇಳಲಿ.
೪ ಅರಣ್ಯದಲ್ಲಿಯೂ, ಹಾದಿ ಇಲ್ಲದ ಕಾಡಿನಲ್ಲಿಯೂ ಅಲೆದು,
ವಾಸಿಸುವದಕ್ಕೆ ಪಟ್ಣವನ್ನು ಕಂಡು ಕೊಳ್ಳದೆ,
೫ ಹಸಿದು, ದಾಹ ಪಟ್ಟು, ಅವರ ಪ್ರಾಣವು ಅವರಲ್ಲಿ ಮೂರ್ಛೆ ಆಯಿತು.
೬ ಆಗಲವರ ಇಕ್ಕಟ್ಟಿನಲ್ಲಿ ಕರ್ತನಿಗೆ ಕೂಗಿದರು;
ಅವನು ಅವರ ಸಂಕಟಗಳೊಳಗಿಂದ ಅವರನ್ನು ಬಿಡಿಸಿ,
೭ ವಾಸಿಸುವ ಪಟ್ಣಕ್ಕೆ ಹೋಗುವ ಹಾಗೆ,
ಅವರನ್ನು ಸರಿಯಾದ ಹಾದಿಯಲ್ಲಿ ನಡಿಸಿದನು.
೮ ಅವರು ಕರ್ತನನ್ನು, ಅವನ ಕೃಪೆಗೋಸ್ಕರವೂ,
ಮನುಷ್ಯನ ಮಕ್ಕಳಿಗೆ ಅವನು ಮಾಡುವ ಅದ್ಭುತಗಳಿಗೋಸ್ಕರವೂ, ಕೊಂಡಾಡಲಿ.
೯ ಯೊಕಂದರೆ ದಾಹ ಪಟ್ಟ ಪ್ರಾಣವನ್ನು ತೃಪ್ತಿ ಪಡಿಸಿ,
ಹಸಿದ ಪ್ರಾಣವನ್ನು ಒಳ್ಳೇದರಿಂದ ತುಂಬಿಸಿದ್ದಾನೆ.

೧೦ ಕತ್ತಲಲ್ಲಿಯೂ ಮರಣದ ನೆರಳಿನಲ್ಲಿಯೂ ಕೂತವರೂ,
ದೀನತೆಯಲ್ಲಿಯೂ ಕಬ್ಬಿಣದಲ್ಲಿಯೂ ಶೆರೆ ಬಿದ್ದವರೂ,
೧೧ ದೇವರ ಮಾತುಗಳನ್ನು ಎದುರಿಸಿ,
ಮಹೋನ್ನತನ ಆಲೋಚನೆಯನ್ನು ಅಸಂಹಿಸಿದ್ದರಿಂದ,
೧೨ ಅವನು ಅವರ ಹೃದಯವನ್ನು ಕಷ್ಟದಿಂದ ತಗ್ಗಿಸಿದನು;
ಸಹಾಯಕನಿಲ್ಲದೆ ಎಡವಿದರು.
೧೩ ಆಗಲವರ ಇಕ್ಕಟ್ಟಿನಲ್ಲಿ ಕರ್ತನಿಗೆ ಕೂಗಿದರು;
ಅವನು ಅವರ ಸಂಕಟಗಳೊಳಗಿಂದ ಅವರನ್ನು ರಕ್ಷಿಸಿ,
೧೪ ಕತ್ತಲೆಯೊಳಗಿಂದಲೂ ಮರಣದ ನೆರಳಿನಿಂದಲೂ ಅವರನ್ನು ಹೊರಗೆ ತಂದು,
ಅವರ ಬಂಧಗಳನ್ನು ಹರಿದು ಬಿಟ್ಟನು.
೧೫ ಅವರು ಕರ್ತನನ್ನು, ಅವನ ಕೃಪೆಗೋಸ್ಕರವೂ,
ಅವನು ಮನುಷ್ಯನ ಮಕ್ಕಳಿಗೆ ಮಾಡುವ ಅದ್ಭುತಗಳಿಗೋಸ್ಕರವೂ, ಕೊಂಡಾಡಲಿ.
೧೬ ಯೊಕಂದರೆ ಅವನು ಹಿತ್ತಾಳೆಯ ಕದಗಳನ್ನು ಮುರಿದು,
ಕಬ್ಬಿಣದ ಅಗುಳಿಗಳನ್ನು ಕಡಿದು ಬಿಟ್ಟಿದ್ದಾನೆ.



೧೭ ಮೂಢರು ತಮ್ಮ ದ್ರೋಹದಿಂದಲೂ,
ತಮ್ಮ ಅಕ್ರಮಗಳಿಂದಲೂ ಶ್ರಮೆ ಪಡುತ್ತಾರೆ.
೧೮ ಅವರ ಪ್ರಾಣವು ಎಲ್ಲಾ ಆಹಾರವನ್ನು ಅಸಂಹಿಸುತ್ತದೆ;
ಮರಣದ ಬಾಗಲುಗಳಿಗೆ ಸಮೀಪಿಸುತ್ತಾರೆ.
೧೯ ಆಗಲವರ ಇಕ್ಕಟ್ಟಿನಲ್ಲಿ ಕರ್ತನಿಗೆ ಕೂಗಿದರು;
ಅವನು ಅವರ ಸಂಕಟಗಳೊಳಗಿಂದ ಅವರನ್ನು ರಕ್ಷಿಸಿ,
೨೦ ತನ್ನ ವಾಕ್ಯವನ್ನು ಕಳುಹಿಸಿ, ಅವರನ್ನು ಸ್ವಸ್ಥ ಮಾಡಿ,
ಅವರ ನಾಶನಗಳಿಂದ ಅವರನ್ನು ತಪ್ಪಿಸಿದನು.
೨೧ ಅವರು ಕರ್ತನನ್ನು, ಅವನ ಕೃಪೆಗೋಸ್ಕರವೂ,
ಅವನು ಮನುಷ್ಯನ ಮಕ್ಕಳಿಗೆ ಮಾಡುವ ಅದ್ಭುತಗಳಿಗೋಸ್ಕರವೂ, ಕೊಂಡಾಡಲಿ.
೨೨ ಸ್ತೋತ್ರದ ಬಲಿಗಳನ್ನು ಅರ್ಪಿಸಿ,
ಅವನ ಕೆಲಸಗಳನ್ನು ಉತ್ಸಾಹ ಧ್ವನಿಯಿಂದ ಸಾರಲಿ.

೨೩ ಹಡಗಗಳಲ್ಲಿ ಸಮುದ್ರಕ್ಕೆ ಇಳಿದು ಹೋಗಿ,
ಬಹಳ ನೀರುಗಳಲ್ಲಿ ಕೆಲಸ ಮಾಡುವವರು—
೨೪ ಇವರು ಕರ್ತನ ಕೆಲಸಗಳನ್ನೂ,
ಅಗಾಧಗಳಲ್ಲಿ ಅವನ ಅದ್ಭುತಗಳನ್ನೂ ನೋಡುತ್ತಾರೆ.
೨೫ ಅವನು ಹೇಳುವದರಿಂದಲೇ ಬಿರು ಘುಳಿಯನ್ನು ಏಳ ಮಾಡುತ್ತಾನೆ;
ಅದು ಅದರ ತೆರೆಗಳನ್ನು ಎಬ್ಬಿಸುತ್ತದೆ.
೨೬ ಆಕಾಶಕ್ಕೆ ಏರುತ್ತಾರೆ;
ಅಗಾಧಗಳಿಗೆ ಇಳಿಯುತ್ತಾರೆ;
ಅವರ ಪ್ರಾಣವು ಕೇಡಿನಿಂದ ಕರಗಿ ಹೋಗುತ್ತದೆ.
೨೭ ಅವರು ತೂಲಿ ಕೊಂಡು, ಮತ್ತನ ಹಾಗೆ ತತ್ತರಿಸುತ್ತಾರೆ;
ಅವರ ಜ್ಞಾನವೆಲ್ಲಾ ನುಂಗಿ ಹೋಯಿತು.
೨೮ ಆಗಲವರ ಇಕ್ಕಟ್ಟಿನಲ್ಲಿ ಕರ್ತನಿಗೆ ಕೂಗಿದರು;
ಅವನು ಅವರ ಸಂಕಟಗಳೊಳಗಿಂದ ಅವರನ್ನು ಹೊರಗೆ ಬರ ಮಾಡಿ,
೨೯ ಬಿರು ಘುಳಿಯನ್ನು ಮೌನ ಮಾಡುತ್ತಾನೆ;
ಅದರ ತೆರೆಗಳು ಸುಮ್ಮನಾಗುತ್ತವೆ.
೩೦ ಅವು ಶಾಂತಿಯಾಗುವದರಿಂದ ಸಂತೋಷ ಪಡುತ್ತಾರೆ;
ಮತ್ತು ಅವರು ಅಪೇಕ್ಷಿಸಿದ ಕೇಬಿಗೆ ಅವರನ್ನು ನಡಿಸುತ್ತಾನೆ.
೩೧ ಅವರು ಕರ್ತನನ್ನು, ಅವನ ಕೃಪೆಗೋಸ್ಕರವೂ,
ಅವನು ಮನುಷ್ಯನ ಮಕ್ಕಳಿಗೆ ಮಾಡುವ ಅದ್ಭುತಗಳಿಗೋಸ್ಕರವೂ, ಕೊಂಡಾಡಲಿ.
೩೨ ಜನರ ಕೂಟದಲ್ಲಿ ಅವನನ್ನು ಉನ್ನತ ಮಾಡಿ,
ಹಿರಿಯರು ಕೂತು ಕೊಳ್ಳುವಲ್ಲಿ ಅವನನ್ನು ಸ್ತುತಿಸಲಿ.
೩೩ ಅವನು ನದಿಗಳನ್ನು ಅರಣ್ಯವಾಗಿಯೂ,
ನೀರಿನ ಬುಗ್ಗೆಗಳನ್ನು ಒಣ ಭೂಮಿಯಾಗಿಯೂ,
೩೪ ಫಲವುಳ್ಳ ಭೂಮಿಯನ್ನು ಉಪ್ಪಿನ ನೆಲವಾಗಿಯೂ,
ಅದರ ನಿವಾಸಿಗಳ ಕೆಟ್ಟತನಕ್ಕೋಸ್ಕರ ಇರಿಸುತ್ತಾನೆ.
೩೫ ಅವನು ಅರಣ್ಯವನ್ನು ನೀರಿನ ಕೆರೆಯಾಗಿಯೂ,
ಒಣ ಭೂಮಿಯನ್ನು ನೀರಿನ ಬುಗ್ಗೆಗಳಾಗಿಯೂ ಇರಿಸಿ,
೩೬ ಅಲ್ಲಿ ಹಸಿದವರನ್ನು ವಾಸಿಸ ಮಾಡುತ್ತಾನೆ;
ಆಗಲವರು ವಾಸಿಸುವ ಪಟ್ಣವನ್ನು ಸ್ಥಾಪಿಸಿ,
೩೭ ಹೊಲಗಳನ್ನು ಬಿತ್ತಿ, ದ್ರಾಕ್ಷೇ ತೋಟಗಳನ್ನು ನೆಡುವರು;
ಅವು ಹುಟ್ಟುವಳಿಯ ಫಲವನ್ನು ಕೊಡುವವು.
೩೮ ಮತ್ತು ಅವನು ಅವರನ್ನು ಆಶೀರ್ವದಿಸಿದ್ದರಿಂದ, ಅವರು ಬಹಳವಾಗಿ ಹೆಚ್ಚುತ್ತಾರೆ;
ಅವರ ದನಗಳನ್ನು ಸಹ ಅವನು ಕಡಿಮೆ ಮಾಡುವದಿಲ್ಲ.
೩೯ ಮತ್ತು ಅವರು ಕಡಿಮೆಯಾಗಿ,
ಕೇಡು ಚಿಂತೆಗಳ ಸಂಕಟದಿಂದ ಕುಗ್ಗುತ್ತಾರೆ.
೪೦ ಅವನು ಅಧಿಪತಿಗಳ ಮೇಲೆ ತಿರಸ್ಕಾರವನ್ನು ಹೊಯಿದು,
ಅವರನ್ನು ಹಾದಿಯಿಲ್ಲದ ಕಾಡಿನಲ್ಲಿ ಅಲೆಯ ಮಾಡುತ್ತಾನೆ.
೪೧ ಆದರೆ ಅವನು ಬಡವನನ್ನು ದೀನತೆಗೆ ತಪ್ಪಿಸಿ, ಭದ್ರ ಮಾಡಿ,
ಗೋತ್ರಗಳನ್ನು ಮಂದೆಯ ಹಾಗೆ ಇರಿಸುತ್ತಾನೆ.
೪೨ ನೆಟ್ಟಗೆಯವರು ನೋಡಿ, ಸಂತೋಷ ಪಡುವರು;
ಆದರೆ ಎಲ್ಲಾ ಅನ್ಯಾಯವು ತನ್ನ ಬಾಯಿ ಮುಚ್ಚಿ ಕೊಳ್ಳುವದು.
೪೩ ಜ್ಞಾನಿಯು ಯಾವನೋ, ಅವನು ಇವುಗಳನ್ನು ಚಿಂತಿಸುವನು;
ಅವರು ಕರ್ತನ ಕೃಪೆಗಳನ್ನು ಗ್ರಹಿಸಿ ಕೊಳ್ಳುವರು.

## ೧೦೮. ಕೀರ್ತನೆ.

ದಾವೀದನ ಗೀತವಾದ ಜಾತು.

೧ ನನ್ನ ಹೃದಯವು ಸಿದ್ಧವಾಗಿದೆ, ದೇವರೇ;
ನಾನೂ ನನ್ನ ಘನವೂ ಹಾಡುವೆವು, ಕೀರ್ತಿಸುವೆವು.

೨ ಎಚ್ಚರವಾಗು, ವೀಣೆಯೇ, ಕಿನ್ನರಿಯೇ;
ಉದಯವನ್ನು ಎಚ್ಚರಿಸುವೆನು.
೩ ಜನರಲ್ಲಿ ನಿನ್ನನ್ನು ಕೊಂಡಾಡುವೆನು, ಕರ್ತನೇ;
ಪ್ರಜೆಗಳಲ್ಲಿ ನಿನ್ನನ್ನು ಕೀರ್ತಿಸುವೆನು.
೪ ಯೊಕಂದರೆ ಆಕಾಶಕ್ಕಿಂತ ನಿನ್ನ ಕೃಪೆಯೂ,
ಮೇಘಗಳ ವರಗೆ ನಿನ್ನ ಸತ್ಯವೂ ಹೊತ್ತವು.
೫ ಆಕಾಶಗಳ ಮೇಲೆ ಉನ್ನತನಾಗು, ದೇವರೇ;
ಎಲ್ಲಾ ಭೂಮಿಯ ಮೇಲೆ ನಿನ್ನ ಘನವು ಇರಲಿ.

೬ ನಿನ್ನ ಪ್ರಿಯರು ತಪ್ಪಿಸಲ್ಪಡುವ ಹಾಗೆ,
ನಿನ್ನ ಬಲಗೈಯಿಂದ ರಕ್ಷಿಸಿ, ನಮಗೆ ಉತ್ತರ ಕೊಡು.
೭ ದೇವರು ತನ್ನ ಪರಿಶುದ್ಧತ್ವದಿಂದ ನುಡಿದಿದ್ದಾನೆ;
ನಾನು ಉತ್ಸಾಹ ಪಡುವೆನು, ಶೆಕೆಮನ್ನು ಪಾಲಿಸುವೆನು;
ಸುಕ್ಕೋತಿನ ತಗ್ಗನ್ನು ಅಳತೆ ಮಾಡುವೆನು.
೮ ಗಿಲ್ಯಾದ್ ನನ್ನದು; ಮನಸ್ಸೆ ನನ್ನದು;
ಎಫ್ರಾಯಿಮ್ ನನ್ನ ತಲೆಯ ಬಲಸ್ಥಾನವು;
ಯೆಹೂದ ನನ್ನ ನ್ಯಾಯ ಕರ್ತನು;
೯ ಮೋವಾಬ್ ನನ್ನ ತೊಳೆಯುವ ಪಾತ್ರೆಯು;
ಎದೋಮಿನ ಮೇಲೆ ನನ್ನ ಕೆರವನ್ನು ಬಿಸಾಕುವೆನು;
ಫಿಲಿಷ್ಟ್ಯರ ಮೇಲೆ ಜಯಧ್ವನಿ ಗೈಯುವೆನು.
೧೦ ಕೋಟೆಯ ಪಟ್ಣಕ್ಕೆ ನನ್ನನ್ನು ಕರತಕುವವನ್ಯಾರು?
ಎದೋಮಿನ ತನಕ ನನ್ನನ್ನು ನಡಿಸುವವನ್ಯಾರು?

೧೧ ನನ್ನುನ್ನು ಅಸಂಯಿಸಿ ಬಿಟ್ಟು,
ನನ್ನ ಸೈನ್ಯಗಳ ಸಂಗಡ ಹೊರಟು ಹೋಗದೆ ಇದ್ದ ದೇವರೇ, ನೀನಲ್ಲವೋ?
೧೨ ಇಕ್ಕಟ್ಟಿನೊಳಗಿಂದ ನಮಗೆ ಸಹಾಯ ಕೊಡು;
ಯಾಕಂದರೆ ಮನುಷ್ಯನ ರಕ್ಷಣೆಯು ವ್ಯರ್ಥವಾಗಿದೆ.
೧೩ ದೇವರಿಂದ ಪರಾಕ್ರಮ ಕಾರ್ಯಗಳನ್ನು ಮಾಡುವೆವು;
ಅವನೇ ನನ್ನ ವೈರಿಗಳನ್ನು ತುಳಿದು ಬಿಡುವನು.

## ೧೦೯. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತೆ.

೧ ನನ್ನ ಸ್ತೋತ್ರದ ದೇವರೇ, ಮೌನವಾಗಿರ ಬೇಡ.
೨ ಯಾಕಂದರೆ ದುಷ್ಟನ ಬಾಯಿಯನ್ನೂ, ಮೋಸದ ಬಾಯಿಯನ್ನೂ, ನನಗೆ ವಿರೋಧವಾಗಿ ತೆರೆದಿದ್ದಾರೆ;
ಸುಳ್ಳಿನ ನಾಲಿಗೆಯಿಂದ ನನ್ನ ಸಂಗಡ ಮಾತಾಡಿದ್ದಾರೆ.
೩ ಹಗೆಯ ಮಾತುಗಳಿಂದ ನನ್ನನ್ನು ಸುತ್ತಿ ಕೊಂಡು,
ಸುಮ್ಮನೆ ನನ್ನ ಸಂಗಡ ಯುದ್ಧ ಮಾಡಿದ್ದಾರೆ.
೪ ನನ್ನ ಪ್ರೀತಿಗೆ ಬದಲಾಗಿ ನನ್ನನ್ನು ಎದುರಿಸುತ್ತಾರೆ;
ಆದರೆ ನಾನು ಪ್ರಾರ್ಥನೆಯಲ್ಲಿಯೇ ಇದ್ದೇನೆ.
೫ ನನಗೆ ವಿರೋಧವಾಗಿ ಮೇಲಿಗೆ ಬದಲಾಗಿ ಕೇಡನ್ನೂ,
ನನ್ನ ಪ್ರೀತಿಗೆ ಬದಲಾಗಿ ಹಗೆಯನ್ನೂ ಮಾಡಿದ್ದಾರೆ.

೬ ದುಷ್ಟನನ್ನು ಅವನ ಮೇಲೆ ನೇಮಿಸು;
ಎದುರಾಳಿಯು ಅವನ ಬಲ ಕಡೆಯಲ್ಲಿ ನಿಂತು ಕೊಳ್ಳಲಿ.
೭ ಅವನು ನ್ಯಾಯ ತೀರಿಸಲ್ಪಡುವಾಗ, ದುಷ್ಟನೆಂದು ಹೊರ ಬರಲಿ;
ಅವನ ಪ್ರಾರ್ಥನೆಯು ಪಾಪಕ್ಕಾಗಲಿ.
೮ ಅವನ ದಿವಸಗಳು ಸ್ವಲ್ಪವಾಗಿರಲಿ;
ಅವನ ಉದ್ಯೋಗವನ್ನು ಬೇರೊಬ್ಬನು ತಕ್ಕೊಳ್ಳಲಿ.
೯ ಅವನ ಮಕ್ಕಳು ದಿಕ್ಕಿಲ್ಲದವರೂ,
ಅವನ ಹೆಂಡತಿ ವಿಧವೆಯೂ ಆಗಲಿ.
೧೦ ಅವನ ಮಕ್ಕಳು ಅಲೆದಲೆದು, ಭಿಕ್ಷ ಬೇಡಿ,
ತಮ್ಮ ಹಾಳು ಸ್ಥಳಗಳೊಳಗಿಂದ ಅರಸಲಿ.
೧೧ ಸಾಲಗಾರನು ಅವನಿಗೆ ಉಂಟಾದದ್ದಕ್ಕೆಲ್ಲಾ ಹೊಂಚೆ ಕೊಂಡಿರಲಿ;
ಅನ್ಯರು ಅವನ ಕೆಲಸವನ್ನು ಸುಲು ಕೊಳ್ಳಲಿ.
೧೨ ಅವನಿಗೆ ಕೃಪೆ ನೀಡುವವನು ಯಾವನೂ ಇಲ್ಲದೆ ಇರಲಿ;
ದಿಕ್ಕಿಲ್ಲದ ಅವನ ಮಕ್ಕಳನ್ನು ಕರುಣಿಸುವವನು ಯಾವನೂ ಇಲ್ಲದೆ ಇರಲಿ.
೧೩ ಅವನ ಸಂತಾನವು ಕಡೆಯಲ್ಪಡಲಿ;
ಎರಡನೇ ತಲಾಂತರದಲ್ಲಿ ಅವರ ಹೆಸರು ಅಳಿದು ಹೋಗಲಿ.
೧೪ ಅವನ ತಂದೆಗಳ ಅಕ್ರಮವು ಕರ್ತನ ಮುಂದೆ ಜ್ಞಾಪಕವಾಗಲಿ;
ಅವನ ತಾಯಿಯ ಪಾಪವು ಅಳಿದು ಹೋಗದಿರಲಿ.
೧೫ ಅವು ಯಾವಾಗಲೂ ಕರ್ತನ ಮುಂದೆ ಇರಲಿ;
ಅವನು ಅವರ ಜ್ಞಾಪಕವನ್ನು ಭೂಮಿಯೊಳಗಿಂದ ಕಡಿದು ಬಿಡಲಿ.
೧೬ ಯಾಕಂದರೆ ಕೃಪೆ ತೋರಿಸ ಜ್ಞಾಪಕ ಮಾಡಿ ಕೊಳ್ಳದೆ,
ಅವನನ್ನು ಕೊಲ್ಲುವದಕ್ಕೆ
ದೀನ ಬಡವನಾದ ಮನಸ್ಸನ್ನೊಂದ ಮನುಷ್ಯನನ್ನು ಹಿಂದಟ್ಟಿದನು.
೧೭ ಶಾಪವನ್ನು ಪ್ರೀತಿ ಮಾಡಿದನು; ಅದು ಅವನ ಮೇಲೆ ಬರಲಿ;
ಆಶೀರ್ವಾದಕ್ಕೆ ಮೆಚ್ಚಲಿಲ್ಲ; ಅದು ಅವನಿಗೆ ದೂರವಾಗಿರಲಿ.
೧೮ ತನ್ನ ವಸ್ತ್ರದಂತೆ ಶಾಪವನ್ನು ಹೊದ್ದು ಕೊಂಡನು;
ಅದು ನೀರಿನಂತೆ ಅವನ ಅಂತರಂಗದಲ್ಲಿಯೂ, ಎಣ್ಣೆಯಂತೆ ಅವನ ಎಲುವುಗಳಲ್ಲಿಯೂ ಸೇರಲಿ.
೧೯ ಅದು ಅವನಿಗೆ ತೊಟ್ಟು ಕೊಂಡ ಅಂಗಿಯ ಹಾಗೆಯೂ,
ಯಾವಾಗಲೂ ನಡುವಿಗೆ ಕಟ್ಟುವ ಧಟ್ಟಿಯ ಹಾಗೆಯೂ ಇರಲಿ.
೨೦ ಇದು ನನ್ನ ಪ್ರಾಣಕ್ಕೆ ವಿರೋಧವಾಗಿ ಕೇಡು ಮಾತಾಡುವ ನನ್ನ ಎದುರಾಳಿಗಳಿಗೆ ಕರ್ತನಿಂದ ಕೂಲಿಯಾಗಿರಲಿ.

೨೧ ಆದರೆ ನೀನು, ಕರ್ತನಾದ ಯೆಹೋವನೇ, ನಿನ್ನ ಹೆಸರಿಗೋಸ್ಕರ ನನಗೆ ಸಹಾಯ ಮಾಡು;
ನಿನ್ನ ಕೃಪೆಯು ಒಳ್ಳೇದಾಗಿರುವದರಿಂದ ನನ್ನನ್ನು ಬಿಡಿಸು.
೨೨ ಯಾಕಂದರೆ ನಾನು ದೀನನೂ ಬಡವನೂ ಆಗಿದೇನೆ;
ನನ್ನ ಹೃದಯವು ನನ್ನ ಅಂತರಂಗದಲ್ಲಿ ತಿವಿದಿದೆ.
೨೩ ಇಳಿಯುವ ನೆರಳಿನ ಹಾಗೆ ಹೋಗಿದ್ದೇನೆ;
ಬಿಡಿತೆಯ ಹಾಗೆ ಬಡಿಯಲ್ಪಟ್ಟಿದ್ದೇನೆ.
೨೪ ನನ್ನ ಮೊಣ ಕಾಲುಗಳು ಉಪವಾಸದಿಂದ ಎಡವುತ್ತವೆ;
ನನ್ನ ಮಾಂಸಕ್ಕೆ ಎಣ್ಣೆ ಇಲ್ಲದೆ ಹೋಯಿತು.
೨೫ ಮತ್ತು ನಾನು ಅವರಿಗೆ ನಿಂದೆಯಾಗಿದ್ದೇನೆ;
ನನ್ನನ್ನು ನೋಡಿ, ತಮ್ಮ ತಲೆಗಳನ್ನು ಅಲ್ಲಾಡಿಸುತ್ತಾರೆ.
೨೬ ನನ್ನ ದೇವರಾದ ಕರ್ತನೇ, ನನಗೆ ಸಹಾಯ ಮಾಡು;
ನಿನ್ನ ಕೃಪೆಯ ಪ್ರಕಾರ ನನ್ನನ್ನು ರಕ್ಷಿಸು.
೨೭ ಇದು ನಿನ್ನ ಕೈ ಎಂದೂ—ಕರ್ತನೇ,
ಇದನ್ನು ನೀನು ಮಾಡಿದ್ದೀ ಎಂದೂ, ಅವರು ತಿಳಿದು ಕೊಳ್ಳಲಿ.
೨೮ ಅವರು ಶಪಿಸಲಿ; ಆದರೆ ನೀನು ಆಶೀರ್ವದಿಸು;
ಅವರು ಎದ್ದು, ನಾಚಿಕೆ ಪಡಲಿ; ಆದರೆ ನಿನ್ನ ಸೇವಕನು ಸಂತೋಷಿಸಲಿ.
೨೯ ನನ್ನ ಎದುರಾಳಿಗಳು ಅವಮಾನ ಹೊದ್ದು ಕೊಂಡು,
ತಮ್ಮ ನಾಚಿಕೆಯನ್ನು ಅಂಗಿಯಂತೆ ತೊಟ್ಟು ಕೊಳ್ಳಲಿ.
೩೦ ಕರ್ತನನ್ನು ನನ್ನ ಬಾಯಿಯಿಂದ ಬಹಳವಾಗಿ ಕೊಂಡಾಡುವೆನು;
ಅನೇಕರ ಮಧ್ಯದಲ್ಲಿ ಅವನನ್ನು ಸ್ತುತಿಸುವೆನು.
೩೧ ಯಾಕಂದರೆ ಬಡವನ ಬಲ ಪಾರ್ಶ್ವದಲ್ಲಿ,
ಅವನ ಪ್ರಾಣಕ್ಕೆ ನ್ಯಾಯ ತೀರಿಸುವವರೊಳಗಿಂದ ಅವನನ್ನು ರಕ್ಷಿಸುವದಕ್ಕೆ ನಿಂತು ಕೊಳ್ಳುವನು.

## ೧೧೦. ಕೀರ್ತನೆ.

ದಾವೀದನ ಗೀತೆ.

೧ ಯೆಹೋವ ನನ್ನ ಕರ್ತನಿಗೆ ಹೇಳಿದ್ದೇನಂದರೆ—
ನಾನು ನಿನ್ನ ಶತ್ರುಗಳನ್ನು ನಿನ್ನ ಪಾದ ಪೀಠವಾಗಿ ಇರುವ ಪರ್ಯಂತರ, ನನ್ನ ಬಲ ಪಾರ್ಶ್ವದಲ್ಲಿ ಕೂತುಕೋ.



೨ ನಿನ್ನ ಬಲದ ಕೋಲನ್ನು ಕರ್ತನು ಚಿಯೋನಿನಿಂದ ಕಳುಹಿಸುವನು;
ನಿನ್ನ ಶತ್ರುಗಳ ಮಧ್ಯದಲ್ಲಿ ಧೊರೆತನ ಮಾಡು.
೩ ನಿನ್ನ ಜನರು ನಿನ್ನ ಬಲದ ದಿವಸದಲ್ಲಿ ಉಚಿತ ಮನಸ್ಸುಳ್ಳವರಾಗಿರುವರು;
ಪರಿಶುದ್ಧತ್ವದ ಪ್ರಭೆಯಲ್ಲಿ ಉದಯದ ಗರ್ಭದಲ್ಲಿಂದ ನಿನ್ನ ಯೌವನದ ಮಂಜು ನಿನಗೆ ಬರುವದು.

೪ ನೀನು ಮೆಲ್ಕೀಚೆದೆಕನ ತರದ ಪ್ರಕಾರ ಯುಗ ಯುಗಕ್ಕೂ ಯಾಜಕನಾಗಿದ್ದೀ ಎಂದು,
ಕರ್ತನು ಆಣೆ ಇಟ್ಟು, ಪಶ್ಚಾತ್ತಾಪ ಪಡನು.
೫ ಕರ್ತನು ನಿನ್ನ ಬಲ ಪಾರ್ಶ್ವದಲ್ಲಿದ್ದು,
ತನ್ನ ಕೋಪದ ದಿವಸದಲ್ಲಿ ಅರಸುಗಳನ್ನು ಚೂರು ಮಾಡುವನು.
೬ ಅವನು ಜನಾಂಗಗಳಲ್ಲಿ ನ್ಯಾಯ ತೀರಿಸುವನು;
ಹೆಣಗಳಿಂದ ತುಂಬಿಸುವನು;
ಬಹು ದೇಶಗಳ ಮೇಲಿರುವ ತಲೆಯನ್ನು ಚೂರು ಮಾಡುವನು.
೭ ಮಾರ್ಗದಲ್ಲಿ ಹಳ್ಳದಿಂದ ಕುಡಿಯುವನು;
ಆದದರಿಂದ ತಲೆ ಎತ್ತುವನು.

## ೧೧೧. ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ;
ಕರ್ತನನ್ನು ಪೂರ್ಣ ಹೃದಯದಿಂದ,
ನೆಟ್ಟನೆಯವರ ಕೂಟದಲ್ಲಿಯೂ, ಸಭೆಯಲ್ಲಿಯೂ, ಕೊಂಡಾಡುವೆನು.
೨ ಕರ್ತನ ಕೆಲಸಗಳು ಘನ್ದವು;
ಅವುಗಳಲ್ಲಿ ಸಂತೋಷ ಪಡುವವರೆಲ್ಲರು ಅವುಗಳನ್ನು ಶೋಧಿಸುತ್ತಾರೆ.
೩ ಅವನ ಕೆಲಸವು ಮಹಿಮೆಯೂ ಪ್ರಭೆಯೂ ಉಳ್ಳದ್ದು;
ಅವನ ನೀತಿಯು ಎಂದೆಂದಿಗೂ ನಿಲ್ಲುತ್ತದೆ.
೪ ತನ್ನ ಅದ್ಭುತಗಳನ್ನು ಕುರಿತು ಜ್ಞಾಪಕ ಮಾಡಿದ್ದಾನೆ;
ಕರ್ತನು ದಯೆವೂ ಅಂತಃಕರಣವೂ ಉಳ್ಳವನೇ.
೫ ತನಗೆ ಭಯ ಪಡುವವರಿಗೆ ಆಹಾರ ಕೊಟ್ಟಿದ್ದಾನೆ;
ಯುಗ ಯುಗಕ್ಕೂ ತನ್ನ ಒಡಂಬಡಿಕೆಯನ್ನು ಜ್ಞಾಪಕ ಮಾಡಿ ಕೊಳ್ಳುವನು.
೬ ಜನಾಂಗಗಳ ಬಾಧ್ಯತೆಯನ್ನು ಅವರಿಗೆ ಕೊಡುವ ಹಾಗೆ,
ತನ್ನ ಕೆಲಸಗಳ ಬಲವನ್ನು ತನ್ನ ಜನರಿಗೆ ತಿಳಿಸಿದ್ದಾನೆ.
೭ ಅವನ ಕೈಗಳ ಕೆಲಸಗಳು ಸತ್ಯವೂ ನ್ಯಾಯವೂ ಆಗಿವೆ;
ಅವನ ಕಟ್ಟಳೆಗಳೆಲ್ಲಾ ನಂಬಿಕೆಯುಳ್ಳವುಗಳು.
೮ ಅವು ಯುಗ ಯುಗಾಂತರಗಳಿಗೂ ನೆಲೆಯಾಗಿವೆ;
ಅವು ಸತ್ಯದಲ್ಲಿಯೂ, ನೆಟ್ಟನೆತನದಲ್ಲಿಯೂ ಮಾಡಲ್ಪಟ್ಟಿವೆ.
೯ ತನ್ನ ಜನರಿಗೆ ವಿಮೋಚನೆಯನ್ನು ಕಳುಹಿಸಿದನು;
ಯುಗ ಯುಗಕ್ಕೂ ತನ್ನ ಒಡಂಬಡಿಕೆಯನ್ನು ಆಜ್ಞಾಪಿಸಿದನು;
ಅವನ ಹೆಸರು ಪರಿಶುದ್ಧವೂ ಭಯಂಕರವೂ ಆಗಿದೆ.
೧೦ ಕರ್ತನ ಭಯವು ಜ್ಞಾನದ ಮೂಲವು;
ಅವುಗಳನ್ನು ಮಾಡುವವರೆಲ್ಲರಿಗೆ ಒಳ್ಳೆ ಬುದ್ಧಿ ಉಂಟು;
ಅವನ ಸ್ತೋತ್ರವು ಎಂದೆಂದಿಗೂ ನಿಲ್ಲುತ್ತದೆ.

## ೧೧೨. ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ.
ಕರ್ತನಿಗೆ ಭಯ ಪಟ್ಟು,
ಅವನ ಆಜ್ಞೆಗಳಲ್ಲಿ ಬಹಳವಾಗಿ ಸಂತೋಷಿಸುವ ಮನುಷ್ಯನು ಭಾಗ್ಯವಂತನು.
೨ ಅವನ ಬೀಜವು ಭೂಮಿಯಲ್ಲಿ ಪರಾಕ್ರಮಶಾಲಿಯಾಗಿರುವದು;
ನೆಟ್ಟನೆಯವರ ಸಂತತಿಯು ಆಶೀರ್ವಾದ ಹೊಂದುವದು.
೩ ದ್ರವ್ಯವೂ ಐಶ್ವರ್ಯವೂ ಅವನ ಮನೆಯಲ್ಲಿ ಅವೆ;
ಅವನ ನೀತಿಯು ಎಂದೆಂದಿಗೂ ನಿಲ್ಲುತ್ತದೆ.
೪ ನೆಟ್ಟನೆಯವರಿಗೆ ಕತ್ತಲಲ್ಲಿ ಬೆಳಕು ಹುಟ್ಟುತ್ತದೆ;
ಅವನು ದಯೆವೂ ಅಂತಃಕರಣವೂ ನೀತಿಯೂ ಉಳ್ಳವನೇ.
೫ ಒಳ್ಳೆ ಮನುಷ್ಯನು ದಯೆ ಮಾಡಿ, ಸಾಲ ಕೊಡುತ್ತಾನೆ;
ತನ್ನ ಕಾರ್ಯಗಳನ್ನು ನ್ಯಾಯದಿಂದ ನಡಿಸುವನು.
೬ ಯುಗ ಯುಗಕ್ಕೂ ಅವನು ಕದಲನು;
ನೀತಿವಂತನು ನಿತ್ಯವಾಗಿ ಜ್ಞಾಪಕದಲ್ಲಿ ಇರುವನು.
೭ ಕೆಟ್ಟ ಸುದ್ದಿಗೆ ಭಯ ಪಡನು;
ಅವನ ಹೃದಯವು ಕರ್ತನಲ್ಲಿ ಭರವಸವಿಟ್ಟು, ಸ್ಥಿರವಾಗಿದೆ.
೮ ಅವನ ಹೃದಯವು ನೆಲೆಯಾಗಿದೆ;
ಅವನು ತನ್ನ ವೈರಿಗಳಲ್ಲಿ ಇಚ್ಛುವನ್ನು ನೋಡುವ ಮಟ್ಟಿಗೂ ಭಯ ಪಡನು.
೯ ಅವನು ಬಡವರಿಗೆ ಚೆಲ್ಲಿ, ಕೊಡುತ್ತಾನೆ;
ಅವನ ನೀತಿಯು ಎಂದೆಂದಿಗೂ ನಿಲ್ಲುತ್ತದೆ;
ಅವನ ಕೊಂಬು ಘನದಿಂದ ಎತ್ತರವಾಗುವದು.
೧೦ ದುಷ್ಟನು ನೋಡಿ, ಕರಕರೆ ಪಡುವನು;
ತನ್ನ ಹಲ್ಲುಗಳನ್ನು ಕಡೆದು, ಕರಗಿ ಹೋಗುವನು;
ದುಷ್ಟರ ಆಶೆಯು ನಾಶವಾಗುವದು.

## ೧೧೩. ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ.
ಕರ್ತನ ಸೇವಕರೇ, ಸ್ತುತಿಸಿರಿ;
ಕರ್ತನ ಹೆಸರನ್ನು ಸ್ತುತಿಸಿರಿ.
೨ ಇಂದಿನಿಂದ ಯುಗ ಯುಗಕ್ಕೂ
ಕರ್ತನ ಹೆಸರಿಗೆ ಆಶೀರ್ವಾದವಾಗಲಿ.
೩ ಸೂರ್ಯೋದಯದಿಂದ ಅವರ ಅಸ್ತಮಾನದ ವರೆಗೂ
ಕರ್ತನ ಹೆಸರು ಸ್ತುತಿಸ ತಕ್ಕದ್ದು.
೪ ಕರ್ತನು ಎಲ್ಲಾ ಜನಾಂಗಗಳ ಮೇಲೆ ಉನ್ನತವಾದವನು;
ಅವನ ಘನವು ಆಕಾಶಗಳ ಮೇಲೆ ಅದೆ.

೫ ನಮ್ಮ ದೇವರಾದ ಯೆಹೋವನ ಹಾಗೆ ಯಾರು?
ಉನ್ನತದಲ್ಲಿ ಅವನು ವಾಸಿಸುತ್ತಾನೆ.
೬ ಆಕಾಶದ ಮೇಲೆಯೂ, ಭೂಮಿಯ ಮೇಲೆಯೂ, ದೃಷ್ಟಿ
ಇಡುವದಕ್ಕೆ ತನ್ನನ್ನು ತಗ್ಗಿಸಿ ಕೊಳ್ಳುತ್ತಾನೆ.
೭ ಅಧಿಪತಿಗಳ ಸಂಗಡಲೂ,
ತನ್ನ ಜನರ ಅಧಿಪತಿಗಳ ಸಂಗಡಲೂ, ಕುಳ್ಳಿರಿಸುವದಕ್ಕೆ,
೮ ಧೂಳಿಯೊಳಗಿಂದ ದರಿದ್ರನನ್ನು ಏಳ್ಳ ಮಾಡಿ,
ತಿಪ್ಪೆಯೊಳಗಿಂದ ಬಡವನನ್ನು ಎತ್ತುತ್ತಾನೆ.
೯ ಬಂಜೆಯಾದವಳನ್ನು, ಮಕ್ಕಳ ಸಂತೋಷವುಳ್ಳ ತಾಯಿಯಾಗಿ
ಮನೆಯಲ್ಲಿ ನಿವಾಸಿಸ ಮಾಡುತ್ತಾನೆ.
ಕರ್ತನನ್ನು ಸ್ತುತಿಸಿರಿ.

## ೧೧೪. ಕೀರ್ತನೆ.

೧ ಇಸ್ರಯೇಲನು ಮಿಚ್ರದೊಳಗಿಂದಲೂ,
ಯಾಕೋಬನು ಅನ್ಯ ಭಾಷೆಯುಳ್ಳ ಜನರೊಳಗಿಂದಲೂ,
ಹೊರಟಾಗ,
೨ ಯೆಹೂದನು ಅವನ ಪರಿಶುದ್ಧ ಸ್ಥಳವೂ,
ಇಸ್ರಯೇಲನು ಅವನ ಧೊರೆತನವೂ, ಆಗಿದ್ದರು.

೩ ಸಮುದ್ರವು ನೋಡಿ, ಓಡಿ ಹೋಯಿತು;
ಯೊರ್ದನ್ ಹಿಂದಿರುಗಿತು.
೪ ಬೆಟ್ಟಗಳು ಟಗರುಗಳ ಹಾಗೆಯೂ,
ಗುಡ್ಡಗಳು ಕುರಿಮರಿಗಳ ಹಾಗೆಯೂ, ಹಾರ್ಯಾಡಿದವು.

೫ ಸಮುದ್ರವೇ, ನಿನಗೆ ಏನಾಯಿತು? ಯಾಕೆ ಓಡಿ ಹೋ
ಗುತ್ತೀ?
ಯೊರ್ದನೇ, ಯಾಕೆ ಹಿಂದಿರುಗುತ್ತೀ?
೬ ಬೆಟ್ಟಗಳೇ, ಟಗರುಗಳ ಹಾಗೆಯೂ,
ಗುಡ್ಡಗಳೇ, ಕುರಿಮರಿಗಳ ಹಾಗೆಯೂ, ಹಾರ್ಯಾಡುವದು
ಯಾಕೆ?

೭ ಬಂಜೆಯನ್ನು ನೀರಿನ ಕೆರೆಗೂ,
ಬೆಣಚು ಕಲ್ಲನ್ನು ನೀರಿನ ಬುಗ್ಗೆಗೂ, ಮಾರ್ಪಡಿಸುವ
೮ ಕರ್ತನ ಮುಂದೆಯೂ,
ಯಾಕೋಬನ ದೇವರ ಮುಂದೆಯೂ, ಭೂಮಿಯೇ, ನಡುಗು.

## ೧೧೫. ಕೀರ್ತನೆ.

೧ ನಮಗಲ್ಲ, ಕರ್ತನೇ, ನಮಗಲ್ಲ,
ನಿನ್ನ ಹೆಸರಿಗೆ ಮಾತ್ರ,
ನಿನ್ನ ಕೃಪೆಯ ನಿಮಿತ್ತ, ನಿನ್ನ ಸತ್ಯದ ನಿಮಿತ್ತ,
ಘನವನ್ನು ಕೊಡು.
೨ ಅವರ ದೇವರು ಎಲ್ಲಿ? ಎಂದು,
ಜನಾಂಗಗಳು ಯಾಕೆ ಹೇಳ್ಳ ಬೇಕು?
೩ ನಮ್ಮ ದೇವರು ಪರಲೋಕದಲ್ಲಿದ್ದಾನೆ;
ತಾನು ಇಷ್ಟೈಸುವದನ್ನೆಲ್ಲಾ ಮಾಡುತ್ತಾನೆ.
೪ ಅವರ ಬೊಂಬೆಗಳು ಬೆಳ್ಳಿಯೂ, ಬಂಗಾರವೂ,
ಮನುಷ್ಯನ ಕೈ ಕೆಲಸವೂ, ಆಗಿವೆ.
೫ ಅವುಗಳಿಗೆ ಬಾಯಿ ಉಂಟು; ಮಾತಾಡುವದಿಲ್ಲ;
ಕಣ್ಣುಗಳುಂಟು; ಕಾಣುವದಿಲ್ಲ;
೬ ಕಿವಿಗಳುಂಟು; ಕೇಳುವದಿಲ್ಲ;
ಮೂಗು ಉಂಟು; ಮೂಸಿ ನೋಡುವದಿಲ್ಲ;
೭ ಕೈಗಳುಂಟು; ಮುಟ್ಟುವದಿಲ್ಲ;
ಕಾಲುಗಳುಂಟು; ನಡೆಯುವದಿಲ್ಲ;
ತಮ್ಮ ಗಂಟ್ಲಿನಿಂದ ಶಬ್ದ ಮಾಡುವದಿಲ್ಲ.
೮ ಅವುಗಳನ್ನು ಮಾಡುವವರೂ,
ಅವುಗಳಲ್ಲಿ ಭರವಸವಿಡುವವರೆಲ್ಲರೂ, ಅವುಗಳ ಹಾಗೆಯೇ
ಇದ್ದಾರೆ.

೯ ಇಸ್ರಯೇಲೇ, ಕರ್ತನಲ್ಲಿ ಭರವಸವಿಡು;
ಅವನೇ ಅವರ ಸಹಾಯವೂ, ಅವರ ಗುರಾಣಿಯೂ ಆಗಿದ್ದಾನೆ.
೧೦ ಆರೋನನ ಮನೆಯವರೇ, ಕರ್ತನಲ್ಲಿ ಭರವಸವಿಡಿರಿ;
ಅವನೇ ಅವರ ಸಹಾಯವೂ, ಅವರ ಗುರಾಣಿಯೂ ಆಗಿ
ದ್ದಾನೆ.
೧೧ ಕರ್ತನಿಗೆ ಭಯ ಪಡುವವರೇ, ಕರ್ತನಲ್ಲಿ ಭರವಸವಿಡಿರಿ;
ಅವನೇ ಅವರ ಸಹಾಯವೂ, ಅವರ ಗುರಾಣಿಯೂ ಆಗಿದ್ದಾನೆ.

೧೨ ಕರ್ತನು ನಮ್ಮನ್ನು ಜ್ಞಾಪಕ ಮಾಡಿ ಕೊಂಡಿದ್ದಾನೆ;
ಆಶೀರ್ವದಿಸುವನು;
ಇಸ್ರಯೇಲನ ಮನೆಯನ್ನು ಆಶೀರ್ವದಿಸುವನು; ಆರೋನನ
ಮನೆಯನ್ನು ಆಶೀರ್ವದಿಸುವನು.
೧೩ ಕರ್ತನಿಗೆ ಭಯ ಪಡುವವರಾದ
ಹಿರಿಯರ ಸಂಗಡ ಕಿರಿಯರನ್ನು ಆಶೀರ್ವದಿಸುವನು.
೧೪ ಕರ್ತನು ನಿಮ್ಮನ್ನು ಅಭಿವೃದ್ಧಿ ಮಾಡುವನು—
ನಿಮ್ಮನ್ನೂ ನಿಮ್ಮ ಮಕ್ಕಳನ್ನೂ.
೧೫ ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದ ಕರ್ತನಿಂದ
ನೀವು ಆಶೀರ್ವದಿಸಲ್ಪಟ್ಟವರು.

೧೬ ಆಕಾಶವು ಕರ್ತನ ಆಕಾಶವೇ;
ಆದರೆ ಭೂಮಿಯನ್ನು ಮನುಷ್ಯನ ಮಕ್ಕಳಿಗೆ ಕೊಟ್ಟಿದ್ದಾನೆ.
೧೭ ಸತ್ತವರೂ,
ಮೌನಕ್ಕೆ ಇಳಿದವರೆಲ್ಲರೂ, ಕರ್ತನನ್ನು ಸ್ತುತಿಸುವದಿಲ್ಲ.
೧೮ ಆದರೆ ನಾವು ಇಂದಿನಿಂದ ಯುಗ ಯುಗಕ್ಕೂ
ಕರ್ತನನ್ನು ಆಶೀರ್ವದಿಸುವೆವು.
ಕರ್ತನನ್ನು ಸ್ತುತಿಸಿರಿ.

## ೧೧೬. ಕೀರ್ತನೆ.

೧ ನಾನು ಪ್ರೀತಿ ಮಾಡಿದ್ದೇನೆ;
ಯಾಕಂದರೆ ಕರ್ತನು ನನ್ನ ಶಬ್ದವನ್ನೂ, ನನ್ನ ವಿಜ್ಞಾಪನೆ
ಯನ್ನೂ ಕೇಳುತ್ತಾನೆ.



೨ ಅವನು ತನ್ನ ಕಿವಿಯನ್ನು ನನಗೆ ಬೊಗ್ಗಿಸಿದ್ದರಿಂದ,
ನನ್ನ ದಿನಗಳಿರುವ ತನಕ ಅವನನ್ನು ಕರೆಯುವೆನು.
೩ ಮರಣ ಪಾಶಗಳು ನನ್ನನ್ನು ಅವರಿಸಿ ಕೊಂಡವು;
ಪಾತಾಳದ ಇಕ್ಕಟ್ಟುಗಳು ನನ್ನನ್ನು ಹಿಡಿದವು;
ಇಕ್ಕಟ್ಟೂ ಚಿಂತೆಯೂ ನನ್ನನ್ನು ಹಿಡಿದವು.
೪ ಆದರೆ ನಾನು—ಅಯ್ಯೋ, ಕರ್ತನೇ,
ನನ್ನ ಪ್ರಾಣವನ್ನು ತಪ್ಪಿಸೆಂದು, ಕರ್ತನ ಹೆಸರನ್ನು
ಕರೆದೆನು.
೫ ಕರ್ತನು ದಯವೂ ನೀತಿಯೂ ಉಳ್ಳವನು;
ನಮ್ಮ ದೇವರು ಅಂತ್ಯಕರಣವುಳ್ಳವನು.
೬ ಕರ್ತನು ಯುಕ್ತಿಹೀನರನ್ನು ಕಾಪಾಡುತ್ತಾನೆ;
ನಾನು ಕ್ಷೀಣನಾಗಿರಲು, ನನ್ನನ್ನು ರಕ್ಷಿಸಿದನು.
೭ ನನ್ನ ಪ್ರಾಣವೇ, ನಿನ್ನ ವಿಶ್ರಾಂತಿಗೆ ತಿರುಗಿಕೋ;
ಯಾಕಂದರೆ ಕರ್ತನು ನಿನಗೆ ಉಪಕಾರ ಮಾಡಿದ್ದಾನೆ.
೮ ಯಾಕಂದರೆ ನೀನು ನನ್ನ ಪ್ರಾಣವನ್ನು ಮರಣಕ್ಕೂ,
ನನ್ನ ಕಣ್ಣುಗಳನ್ನು ಕಣ್ಣೀರಿಗೂ, ನನ್ನ ಪಾದವನ್ನು ಜಾರುವಿ
ಕೆಗೂ, ತಪ್ಪಿಸಿ ಬಿಟ್ಟಿದ್ದೀ.
೯ ಕರ್ತನ ಮುಂದೆ ಜೀವವುಳ್ಳವರ ದೇಶಗಳಲಿ ನಡೆದು ಕೊಳ್ಳು
ವೆನು.
೧೦ ನಂಬಿದೆನು; ಆದದರಿಂದ ಮಾತಾಡಿದೆನು;
ನಾನು ಬಹಳವಾಗಿ ಕುಗ್ಗಿ ಹೋದೆನು.
೧೧ ಮನುಷ್ಯರೆಲ್ಲರು ಸುಳ್ಳುಗಾರರೆಂದು,
ನನ್ನ ಭಯಭ್ರಾಂತಿಯಲ್ಲಿ ನಾನು ಹೇಳಿದೆನು.

೧೨ ಅವನು ನನಗೆ ಮಾಡಿದ ಎಲ್ಲಾ ಉಪಕಾರಗಳಿಗೋಸ್ಕರ
ನಾನು ಕರ್ತನಿಗೆ ಏನು ಬದಲು ಮಾಡಲಿ?
೧೩ ರಕ್ಷಣೆಯ ಪಾತ್ರೆಯನ್ನು ತಕ್ಕೊಂಡು,
ಕರ್ತನ ಹೆಸರನ್ನು ಕರೆಯುವೆನು.
೧೪ ನನ್ನ ಹರಿಕೆಗಳನ್ನು,
ಅವನ ಜನರೆಲ್ಲರ ಮುಂದೆಯೇ, ಕರ್ತನಿಗೆ ಸಲ್ಲಿಸುವೆನು.
೧೫ ಅವನ ಭಕ್ತರ ಮರಣವು ಕರ್ತನ ದೃಷ್ಟಿಯಲ್ಲಿ ಅಮೂಲ್ಯ
ವಾಗಿದೆ.
೧೬ ಓ ಕರ್ತನೇ, ನಾನು ನಿನ್ನ ಸೇವಕನಲ್ಲವೋ!
ನಾನು ನಿನ್ನ ಸೇವಕನು, ನಿನ್ನ ದಾಸಿಯ ಮಗನು;
ನನ್ನ ಬಂಧಗಳನ್ನು ಬಿಚ್ಚಿದ್ದೀ.
೧೭ ನಿನಗೆ ಸ್ತೋತ್ರದ ಬಲಿಯನ್ನು ಅರ್ಪಿಸುವೆನು;
ಕರ್ತನ ಹೆಸರನ್ನು ಕರೆಯುವೆನು.
೧೮ ನನ್ನ ಹರಿಕೆಗಳನ್ನು,
ಅವನ ಜನರೆಲ್ಲರ ಮುಂದೆಯೇ,
೧೯ ಕರ್ತನ ಮನೆಯ ಅಂಗಳಗಳಲ್ಲಿಯೇ,
ಓ ಯೆರೂಸಲೇಮೇ, ನಿನ್ನಲ್ಲಿಯೇ, ಕರ್ತನಿಗೆ ಸಲ್ಲಿಸುವೆನು.
ಕರ್ತನನ್ನು ಸ್ತುತಿಸಿರಿ.

## ೧೧೭. ಕೀರ್ತನೆ.

೧ ಎಲ್ಲಾ ಜನಾಂಗಗಳೇ, ಕರ್ತನನ್ನು ಸ್ತುತಿಸಿರಿ;
ಎಲ್ಲಾ ಜನಗಳೇ, ಅವನನ್ನು ಹೊಗಳ್ಳಿರಿ.
೨ ಯಾಕಂದರೆ ಅವನ ಕೃಪೆ ನಮ್ಮ ಮೇಲೆ ಹೊತ್ತದು;
ಕರ್ತನ ಸತ್ಯವು ಯುಗ ಯುಗಕ್ಕೂ ಅದೆ.
ಕರ್ತನನ್ನು ಸ್ತುತಿಸಿರಿ.

## ೧೧೮. ಕೀರ್ತನೆ.

೧ ಕರ್ತನನ್ನು ಕೊಂಡಾಡಿರಿ; ಯಾಕಂದರೆ ಅವನು ಒಳ್ಳೆ
ಯವನು;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೨ ಅವನ ಕೃಪೆಯು ಯುಗ ಯುಗಕ್ಕೂ ಅದೆ ಎಂದು,
ಇಸ್ರಯೇಲು ಹೇಳ್ಳಲಿ.
೩ ಅವನ ಕೃಪೆಯು ಯುಗ ಯುಗಕ್ಕೂ ಅದೆ ಎಂದು,
ಆರೋನನ ಮನೆಯವರು ಹೇಳ್ಳಲಿ.
೪ ಅವನ ಕೃಪೆಯು ಯುಗ ಯುಗಕ್ಕೂ ಅದೆ ಎಂದು,
ಕರ್ತನಿಗೆ ಭಯ ಪಡುವವರು ಹೇಳ್ಳಲಿ.

೫ ಇಕ್ಕಟ್ಟಿನೊಳಗಿಂದ ಕರ್ತನಿಗೆ ಕೂಗಿದೆನು;
ಕರ್ತನು ಅಗಲವಾದ ಸ್ಥಳದಲ್ಲಿ ನನಗೆ ಉತ್ತರ ಕೊಟ್ಟನು.
೬ ಕರ್ತನು ನನಗೆ ಇದ್ದಾನೆ; ಭಯ ಪಡೆನು;
ಮನುಷ್ಯನು ನನಗೆ ಏನು ಮಾಡುವನು?
೭ ನನ್ನ ಸಹಾಯಕರೊಳಗೆ ಕರ್ತನು ನನಗೆ ಇದ್ದಾನೆ;
ನಾನು ನನ್ನ ಹಗೆಯವರ ಮೇಲೆ ದೃಷ್ಟಿ ಇಡುವೆನು.
೮ ಮನುಷ್ಯನಲ್ಲಿ ಭರವಸವಿಡುವದಕ್ಕಿಂತ, ಕರ್ತನಲ್ಲಿ ಆಶ್ರಯಿಸಿ
ಕೊಳ್ಳುವದು ಒಳ್ಳೇದು.
೯ ಅಧಿಪತಿಗಳಲ್ಲಿ ಭರವಸವಿಡುವದಕ್ಕಿಂತ, ಕರ್ತನಲ್ಲಿ ಆಶ್ರಯಿಸಿ
ಕೊಳ್ಳುವದು ಒಳ್ಳೇದು.
೧೦ ಎಲ್ಲಾ ಜನಾಂಗದವರು ನನ್ನನ್ನು ಸುತ್ತಿ ಕೊಂಡರು;
ಕರ್ತನ ಹೆಸರಿನಲ್ಲಿ ಅವರನ್ನು ಕಡಿದು ಬಿಡುವೆನು.
೧೧ ನನ್ನನ್ನು ಸುತ್ತಿ ಕೊಂಡರು; ಹೌದು, ನನ್ನನ್ನು ಸುತ್ತಿ
ಕೊಂಡರು;
ಕರ್ತನ ಹೆಸರಿನಲ್ಲಿ ಅವರನ್ನು ಕಡಿದು ಬಿಡುವೆನು.
೧೨ ಜೇನ್ನೊಣಗಳ ಹಾಗೆ ನನ್ನನ್ನು ಸುತ್ತಿ ಕೊಂಡರು;
ಮುಳ್ಳುಗಳ ಬೆಂಕಿಯ ಹಾಗೆ ಆರಿ ಹೋಗುತ್ತಾರೆ;
ಕರ್ತನ ಹೆಸರಿನಲ್ಲಿ ಅವರನ್ನು ಕಡಿದು ಬಿಡುವೆನು.
೧೩ ನಾನು ಬೀಳುವ ಹಾಗೆ ನನ್ನನ್ನು ನೂಕೇ ನೂಕಿದ್ದೀ;
ಆದರೆ ಕರ್ತನು ನನಗೆ ಸಹಾಯ ಮಾಡಿದನು.
೧೪ ನನ್ನ ಬಲವೂ ಕೀರ್ತನೆಯೂ ಕರ್ತನೇ;
ಅವನೇ ನನಗೆ ರಕ್ಷಣೆಯಾದನು.
೧೫ ಉತ್ಸಾಹದ ರಕ್ಷಣೆಯ ಶಬ್ದವು ನೀತಿವಂತರ ಗುಡಾರಗಳಲ್ಲಿ
ಅದೆ;
ಕರ್ತನ ಬಲಗೈ ಪರಾಕ್ರಮವನ್ನು ನಡಿಸುತ್ತದೆ.
೧೬ ಕರ್ತನ ಬಲಗೈ ಎತ್ತರವಾಗಿದೆ;
ಕರ್ತನ ಬಲಗೈ ಪರಾಕ್ರಮವನ್ನು ನಡಿಸುತ್ತದೆ.

೧೭ ನಾನು ಸಾಯದೆ, ಬದುಕಿ,
ಕರ್ತನ ಕೆಲಸಗಳನ್ನು ಸಾರುವೆನು.

೧೮ ಕರ್ತನು ನನ್ನನ್ನು ಶಿಕ್ಷಿಸೇ ಶಿಕ್ಷಿಸಿದನು;
ಆದರೆ ಮರಣಕ್ಕೆ ನನ್ನನ್ನು ಒಪ್ಪಿಸಲಿಲ್ಲ.
೧೯ ನೀತಿಯ ಬಾಗಲುಗಳನ್ನು ನನಗೆ ತೆಕೆಯಿರಿ;
ಅವುಗಳೊಳಗೆ ಪ್ರವೇಶಿಸಿ, ಕರ್ತನನ್ನು ಕೊಂಡಾಡುವೆನು.
೨೦ ಇದೇ ಕರ್ತನ ಬಾಗಲು;
ನೀತಿವಂತರು ಅದರಲ್ಲಿ ಪ್ರವೇಶಿಸುತ್ತಾರೆ.
೨೧ ನಿನ್ನನ್ನು ಕೊಂಡಾಡುವೆನು; ಯಾಕಂದರೆ ನನಗೆ ಉತ್ತರ ಕೊಟ್ಟು,
ನನಗೆ ರಕ್ಷಣೆ ಆದಿ.
೨೨ ಮನೆ ಕಟ್ಟುವವರು ತಳ್ಳಿದ ಕಲ್ಲೇ ಮೂಲೆಗೆ ತಲೇ ಕಲ್ಲಾಯಿತು.
೨೩ ಅದು ಕರ್ತನಿಂದುಂಟಾಗಿ,
ನಮ್ಮ ಕಣ್ಣುಗಳಿಗೆ ಆಶ್ಚರ್ಯವಾಗಿದೆ.
೨೪ ಕರ್ತನು ಮಾಡಿದ ದಿವಸವು ಇದೇ;
ಉಲ್ಲಾಸಿಸಿ, ಅದರಲ್ಲಿ ಸಂತೋಷ ಪಡುವ.
೨೫ ಓ ಕರ್ತನೇ, ರಕ್ಷಿಸ ಬೇಕು;
ಓ ಕರ್ತನೇ, ಸಾಫಲ್ಯವನ್ನು ಕೊಡ ಬೇಕು.
೨೬ ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದವಾಗಲಿ;
ಕರ್ತನ ಮನೆಯಿಂದ ನಿಮ್ಮನ್ನು ಆಶೀರ್ವದಿಸುತ್ತೇವೆ.
೨೭ ಯೆಹೋವ ದೇವರಾಗಿದ್ದಾನೆ; ನಮಗೆ ಬೆಳಕು ಮಾಡಿದ್ದಾನೆ;
ಹಬ್ಬದ ಬಲಿಯನ್ನು ಹಗ್ಗಗಳಿಂದ ಬಲಿಪೀಠದ ಕೊಂಬುಗಳಿಗೆ ಕಟ್ಟಿರಿ.
೨೮ ನೀನು ನನ್ನ ದೇವರಾಗಿದ್ದೀ; ನಿನ್ನನ್ನು ಕೊಂಡಾಡುವೆನು;
ನನ್ನ ದೇವರೇ, ನಿನ್ನನ್ನು ಉನ್ನತ ಮಾಡುವೆನು.
೨೯ ಕರ್ತನನ್ನು ಕೊಂಡಾಡಿರಿ; ಯಾಕಂದರೆ ಅವನು ಒಳ್ಳೆಯವನು;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.

## ೧೧೯. ಕೀರ್ತನೆ.

### ೫ ಅಲೆಫ್.

೧ ಮಾರ್ಗದಲ್ಲಿ ಸಂಪೂರ್ಣರೂ,
ಕರ್ತನ ನ್ಯಾಯಪ್ರಮಾಣದಲ್ಲಿ ನಡೆದು ಕೊಳ್ಳುವವರೂ, ಭಾಗ್ಯವಂತರು.
೨ ಅವನ ಸಾಕ್ಷಿಗಳನ್ನು ಕೈ ಕೊಂಡು,
ಪೂರ್ಣ ಹೃದಯದಿಂದ ಅವನನ್ನು ಹುಡುಕುವವರು ಭಾಗ್ಯವಂತರು.
೩ ನಿಶ್ಚಯವಾಗಿ ಅವರು ಅನ್ಯಾಯವನ್ನು ಮಾಡದೆ,
ಅವನ ಮಾರ್ಗಗಳಲ್ಲಿ ನಡೆದು ಕೊಳ್ಳುತ್ತಾರೆ.
೪ ನಿನ್ನ ಕಟ್ಟಳೆಗಳನ್ನು ಜಾಗ್ರತೆಯಾಗಿ ಕೈಕೊಳ್ಳ ಬೇಕೆಂದು, ನೀನು ಆಜ್ಞಾಪಿಸಿದ್ದೀ.
೫ ಆಹ, ನನ್ನ ಮಾರ್ಗಗಳು ನಿನ್ನ ನೇಮಕಗಳನ್ನು ಕೈ ಕೊಳ್ಳುವದಕ್ಕೆ ಸ್ಥಿರವಾಗಿರಲಿ.
೬ ಆಗ ನಿನ್ನ ಆಜ್ಞೆಗಳನ್ನೆಲ್ಲಾ ದೃಷ್ಟಿಸುವಾಗ,
ನಾಚಿಕೆ ಪಡೆನು.
೭ ನಿನ್ನ ನೀತಿಯ ನ್ಯಾಯಗಳನ್ನು ನಾನು ಕಲಿಯುವಾಗ,
ನೆಟ್ಟನೆಯ ಹೃದಯದಿಂದ ನಿನ್ನನ್ನು ಕೊಂಡಾಡುವೆನು.
೮ ನಿನ್ನ ನೇಮಕಗಳನ್ನು ಕೈ ಕೊಳ್ಳುವೆನು;
ನನ್ನನ್ನು ಪೂರ್ಣವಾಗಿ ಕೈಬಿಡ ಬೇಡ.

### ೨ ಬೇತ್.

೯ ಯೌವನಸ್ಥನು ಯಾವದರಿಂದ ತನ್ನ ಹಾದಿಯನ್ನು ಶುದ್ಧಿ ಮಾಡಿ ಕೊಳ್ಳುವನು?
ನಿನ್ನ ವಾಕ್ಯವನ್ನು ಕೈ ಕೊಳ್ಳುವದರಿಂದಲೇ.
೧೦ ನನ್ನ ಪೂರ್ಣ ಹೃದಯದಿಂದ ನಿನ್ನನ್ನು ಹುಡುಕಿದ್ದೇನೆ;
ನಿನ್ನ ಆಜ್ಞೆಗಳಿಂದ ನನ್ನನ್ನು ತಪ್ಪಿ ಹೋಗಲೀಸ ಬೇಡ.
೧೧ ನಿನಗೆ ಪಾಪ ಮಾಡದ ಹಾಗೆ,
ನನ್ನ ಹೃದಯದಲ್ಲಿ ನಿನ್ನ ವಾಕ್ಯವನ್ನು ಬಚ್ಚಿಟ್ಟಿದ್ದೇನೆ.
೧೨ ಕರ್ತನೇ, ನೀನು ಆಶೀರ್ವದಿಸಲ್ಪಟ್ಟವನು;
ನಿನ್ನ ನೇಮಕಗಳನ್ನು ನನಗೆ ಕಲಿಸು.
೧೩ ನನ್ನ ತುಟಿಗಳಿಂದ ನಿನ್ನ ಬಾಯಿಯ ನ್ಯಾಯಗಳನ್ನೆಲ್ಲಾ ಸಾರಿದ್ದೇನೆ.
೧೪ ನಿನ್ನ ಸಾಕ್ಷಿಗಳ ಮಾರ್ಗದಲ್ಲಿ,
ಸಕಲ ದ್ರವ್ಯದಲ್ಲಿ ಇದ್ದ ಹಾಗೆಯೇ, ಸಂತೋಷಿಸಿದ್ದೇನೆ.
೧೫ ನಿನ್ನ ಕಟ್ಟಳೆಗಳನ್ನು ಧ್ಯಾನ ಮಾಡಿ,
ನಿನ್ನ ಹಾದಿಗಳನ್ನು ದೃಷ್ಟಿಸುವೆನು.
೧೬ ನಿನ್ನ ನೇಮಕಗಳಲ್ಲಿ ಆನಂದ ಪಟ್ಟು,
ನಿನ್ನ ವಾಕ್ಯವನ್ನು ಮರೆತು ಬಿಡೆನು.

### ೩ ಗೀಮೆಲ್.

೧೭ ನಿನ್ನ ಸೇವಕನಿಗೆ ಉಪಕಾರ ಮಾಡು; ಆಗ ಬದುಕಿ,
ನಿನ್ನ ವಾಕ್ಯವನ್ನು ಕೈ ಕೊಳ್ಳುವೆನು.
೧೮ ನನ್ನ ಕಣ್ಣುಗಳನ್ನು ತೆಕೆ;
ಆಗ ನಿನ್ನ ನ್ಯಾಯ ಪ್ರಮಾಣದೊಳಗಿಂದ ಅದ್ಭುತಗಳನ್ನು ನೋಡುವೆನು.
೧೯ ನಾನು ಭೂಮಿಯಲ್ಲಿ ಪರದೇಶಸ್ಥನಾಗಿದ್ದೇನೆ;
ನಿನ್ನ ಆಜ್ಞೆಗಳನ್ನು ನನಗೆ ಮರೆ ಮಾಡ ಬೇಡ.
೨೦ ನಿನ್ನ ನ್ಯಾಯಗಳಿಗೆ ಸರ್ವ ಕಾಲದಲ್ಲಿ ಮಾಡುವ ಅಭಿಲಾಷೆಯಿಂದ ನನ್ನ ಪ್ರಾಣವು ಜಜ್ಜಿ ಅದೆ.
೨೧ ನಿನ್ನ ಆಜ್ಞೆಗಳಿಂದ ತಪ್ಪಿ ಹೋಗುವ ಶಾಪಗ್ರಸ್ತರಾದ ಅಹಂಕಾರಿಗಳನ್ನು ಗದರಿಸಿದ್ದೀ.
೨೨ ನಾನು ನಿನ್ನ ಸಾಕ್ಷಿಗಳನ್ನು ಕೈ ಕೊಂಡ ಕಾರಣ,
ನಿಂದೆಯನ್ನೂ ತಿರಸ್ಕಾರವನ್ನೂ ನನಗೆ ದೂರವಾಗಿ ಹೊರಳಿಸು.
೨೩ ಪ್ರಧಾನರು ಕೂತು ಕೊಂಡು, ನನಗೆ ವಿರೋಧವಾಗಿ ಮಾತಾಡಿ ಕೊಂಡರೂ,
ನಿನ್ನ ಸೇವಕನು ನಿನ್ನ ನೇಮಕಗಳನ್ನು ಧ್ಯಾನ ಮಾಡುವನು.
೨೪ ನಿನ್ನ ಸಾಕ್ಷಿಗಳೇ ನನ್ನ ಆನಂದವೂ, ನನ್ನ ಆಲೋಚನೇ ಕರ್ತರೂ ಆಗಿವೆ.



### ೪ ದಾಲೆತ್.

೨೫ ನನ್ನ ಪ್ರಾಣವು ಧೂಳಿಗೆ ಹತ್ತಿ ಕೊಳ್ಳುತ್ತದೆ;
ನಿನ್ನ ವಾಕ್ಯದ ಪ್ರಕಾರ ನನ್ನನ್ನು ಬದುಕಿಸು.
೨೬ ನಾನು ನನ್ನ ಮಾರ್ಗಗಳನ್ನು ಸಾರಲು, ನನಗೆ ಉತ್ತರ ಕೊಟ್ಟಿ;
ನಿನ್ನ ನೇಮಕಗಳನ್ನು ನನಗೆ ಕಲಿಸು.
೨೭ ನಿನ್ನ ಕಟ್ಟಳೆಗಳ ಮಾರ್ಗವನ್ನು ನನ್ನನ್ನು ಗ್ರಹಿಸ ಮಾಡು;
ಆಗ ನಿನ್ನ ಅದ್ಭುತಗಳಲ್ಲಿ ಧ್ಯಾನ ಇಡುವೆನು.
೨೮ ನನ್ನ ಪ್ರಾಣವು ವ್ಯಸನದಿಂದ ಕಣ್ಣೀರು ಸುರಿಸುತ್ತದೆ;
ನಿನ್ನ ವಾಕ್ಯದ ಪ್ರಕಾರ ನನ್ನನ್ನು ಸ್ಥಿರ ಮಾಡು.
೨೯ ಸುಳ್ಳು ಮಾರ್ಗವನ್ನು ನನ್ನಿಂದ ತೊಲಗಿಸು;
ನಿನ್ನ ನ್ಯಾಯ ಪ್ರಮಾಣವನ್ನು ನನಗೆ ದಯ ಮಾಡು.
೩೦ ನಂಬಿಕೆಯ ಮಾರ್ಗವನ್ನು ಆರಿಸಿ ಕೊಂಡಿದ್ದೇನೆ;
ನಿನ್ನ ನ್ಯಾಯಗಳನ್ನು ಮುಂದಿಟ್ಟು ಕೊಂಡಿದೇನೆ.
೩೧ ನಿನ್ನ ಸಾಕ್ಷಿಗಳಿಗೆ ಹತ್ತಿ ಕೊಂಡಿದ್ದೇನೆ;
ಕರ್ತನೇ, ನನ್ನನ್ನು ನಾಚಿಕೆ ಪಡಿಸ ಬೇಡ.
೩೨ ನಿನ್ನ ಆಜ್ಞೆಗಳ ಮಾರ್ಗದಲ್ಲಿ ಓಡುವೆನು;
ಯಾಕಂದರೆ ನೀನು ನನ್ನ ಹೃದಯವನ್ನು ಅಗಲ ಮಾಡುತ್ತೀ.

### ೫ ಹೇ.

೩೩ ಕರ್ತನೇ, ನಿನ್ನ ನೇಮಕಗಳ ಮಾರ್ಗವನ್ನು ನನಗೆ ಬೋಧಿಸು;
ಅದನ್ನು ಕಡೇ ವರಿಗೂ ಕೈ ಕೊಳ್ಳುವೆನು.
೩೪ ನನಗೆ ಗ್ರಹಿಕೆಯನ್ನು ಕೊಡು; ಆಗ ನಿನ್ನ ನ್ಯಾಯ ಪ್ರಮಾಣವನ್ನು ಕೈ ಕೊಂಡು,
ಪೂರ್ಣ ಹೃದಯದಿಂದ ಅದನ್ನು ಕೈ ಕೊಳ್ಳುವೆನು.
೩೫ ನಿನ್ನ ಆಜ್ಞೆಗಳ ದಾರಿಯಲ್ಲಿ ನನ್ನನ್ನು ನಡೆಯ ಮಾಡು;
ಯಾಕಂದರೆ ಅದರಲ್ಲಿ ಸಂತೋಷಿಸಿದ್ದೇನೆ.
೩೬ ಶೋಭದ ಕಡೆಗಲ್ಲ,
ನಿನ್ನ ಸಾಕ್ಷಿಗಳ ಕಡೆಗೆ ನನ್ನ ಹೃದಯವನ್ನು ಬೊಗ್ಗಿಸು.
೩೭ ವ್ಯರ್ಥತ್ವವನ್ನು ನೋಡದ ಹಾಗೆ ನನ್ನ ಕಣ್ಣುಗಳನ್ನು ತೊಲಗಿಸು;
ನಿನ್ನ ಮಾರ್ಗಗಳಲ್ಲಿ ನನ್ನನ್ನು ಬದುಕಿಸು.
೩೮ ನಿನಗೆ ಭಯ ಪಡುವ
ನಿನ್ನ ಸೇವಕನಿಗೆ ನಿನ್ನ ಮಾತನ್ನು ಸ್ಥಾಪಿಸು.
೩೯ ನಾನು ಅಂಜುವ ನನ್ನ ನಿಂದೆಯನ್ನು ನನ್ನಿಂದ ತೊಲಗಿಸು;
ಯಾಕಂದರೆ ನಿನ್ನ ನ್ಯಾಯಗಳು ಒಳ್ಳೆಯವುಗಳೇ.
೪೦ ಇಗೋ, ನಿನ್ನ ಕಟ್ಟಳೆಗಳಿಗೆ ಆಶೆ ಪಡುತ್ತೇನೆ;
ನಿನ್ನ ನೀತಿಯಿಂದ ನನ್ನನ್ನು ಬದುಕಿಸು.

### ೧ ವಾವ್.

೪೧ ಕರ್ತನೇ, ನಿನ್ನ ವಾಕ್ಯದ ಪ್ರಕಾರ ನಿನ್ನ ಕೃಪೆಗಳೂ,
ನಿನ್ನ ರಕ್ಷಣೆಯೂ, ನನಗೆ ಬರಲಿ.
೪೨ ಆಗ ನನ್ನನ್ನು ನಿಂದಿಸುವವನಿಗೆ ಒಂದು ಮಾತು ಉತ್ತರ ಕೊಡುವೆನು;
ಯಾಕಂದರೆ ನಿನ್ನ ವಾಕ್ಯದಲ್ಲಿ ಭರವಸವಿಟ್ಟಿದ್ದೇನೆ.
೪೩ ಸತ್ಯದ ವಾಕ್ಯವನ್ನು ನನ್ನ ಬಾಯಿಯಿಂದ ಪೂರ್ಣವಾಗಿ ತೆಗೆದು ಹಾಕ ಬೇಡ;
ಯಾಕಂದರೆ ನಿನ್ನ ನ್ಯಾಯಗಳನ್ನು ಎದುರು ನೋಡುತ್ತೇನೆ.
೪೪ ಮತ್ತು ನಿನ್ನ ನ್ಯಾಯ ಪ್ರಮಾಣವನ್ನು ಯಾವಾಗಲೂ,
ಯುಗ ಯುಗಾಂತರಗಳಿಗೂ ಕೈ ಕೊಳ್ಳುವೆನು.
೪೫ ಮತ್ತು ಅಗಲವಾದ ಸ್ಥಳದಲ್ಲಿ ನಡೆದು ಕೊಳ್ಳುವೆನು;
ಯಾಕಂದರೆ ನಿನ್ನ ಕಟ್ಟಳೆಗಳನ್ನು ಹುಡುಕುತ್ತೇನೆ.
೪೬ ನಿನ್ನ ಸಾಕ್ಷಿಗಳನ್ನು ಕುರಿತು ಅರಸರ ಮುಂದೆ ಮಾತಾಡಿ, ನಾಚಿಕೆ ಪಡೆನು.
೪೭ ನಾನು ಪ್ರೀತಿ ಮಾಡುವ
ನಿನ್ನ ಆಜ್ಞೆಗಳಲ್ಲಿ ಆನಂದ ಪಡುವೆನು.
೪೮ ನಾನು ಪ್ರೀತಿ ಮಾಡುವ ನಿನ್ನ ಆಜ್ಞೆಗಳ ಕಡೆಗೆ ನನ್ನ ಕೈಗಳನ್ನೆತ್ತಿ,
ನಿನ್ನ ನೇಮಕಗಳನ್ನು ಧ್ಯಾನ ಮಾಡುವೆನು.

### ೧ ಜಾಯಿನ್.

೪೯ ನೀನು ನನ್ನನ್ನು ಎದುರು ನೋಡ ಮಾಡಿದ
ವಾಕ್ಯವನ್ನು ನಿನ್ನ ಸೇವಕನಿಗೋಸ್ಕರ ಜ್ಞಾಪಕ ಮಾಡಿಕೋ.
೫೦ ನನ್ನ ದೀನತೆಯಲ್ಲಿ ಇದೇ ನನ್ನ ಆದರಣೆಯು;
ಏನಂದರೆ, ನಿನ್ನ ಮಾತು ನನ್ನನ್ನು ಬದುಕಿಸಿತು.
೫೧ ಅಹಂಕಾರಿಗಳು ಬಹಳವಾಗಿ ನನ್ನನ್ನು ಹಾಸ್ಯ ಮಾಡಿದರೂ,
ನಿನ್ನ ನ್ಯಾಯ ಪ್ರಮಾಣದಿಂದ ನಾನು ತೊಲಗಲಿಲ್ಲ.
೫೨ ಕರ್ತನೇ, ಯುಗ ಯುಗದಿಂದಿರುವ ನಿನ್ನ ನ್ಯಾಯಗಳನ್ನು ಜ್ಞಾಪಕ ಮಾಡಿ ಕೊಂಡು,
ಆದರಣೆ ಹೊಂದಿದ್ದೇನೆ.
೫೩ ನಿನ್ನ ನ್ಯಾಯ ಪ್ರಮಾಣವನ್ನು ಬಿಟ್ಟು ಬಿಡುವ ದುಷ್ಟರ ನಿಮಿತ್ತ, ಕಾದ್ರಾಗ್ನಿಯು ನನ್ನನ್ನು ಹಿಡಿ ಕೊಂಡಿತು.
೫೪ ನನ್ನ ಪರವಾಸದ ಮನೆಯಲ್ಲಿ ನಿನ್ನ ನೇಮಕಗಳು ನನಗೆ ಕೀರ್ತನೆಗಳಾಗಿವೆ.
೫೫ ರಾತ್ರಿಯಲ್ಲಿ ನಿನ್ನ ಹೆಸರನ್ನು ಜ್ಞಾಪಕ ಮಾಡಿ ಕೊಂಡಿದ್ದೇನೆ, ಕರ್ತನೇ;
ಮತ್ತು ನಿನ್ನ ನ್ಯಾಯ ಪ್ರಮಾಣವನ್ನು ಕೈ ಕೊಂಡಿದ್ದೇನೆ
೫೬ ಇದೇ ನನಗೆ ಆಯಿತು;
ಯಾಕಂದರೆ ನಿನ್ನ ಕಟ್ಟಳೆಗಳನ್ನು ಕೈ ಕೊಂಡಿದ್ದೇನೆ.

### ೧ ಚೇತ್.

೫೭ ಕರ್ತನೇ ನನ್ನ ಚಾಲು;
ನಿನ್ನ ವಾಕ್ಯಗಳನ್ನು ಕೈ ಕೊಳ್ಳುವೆನೆಂದು, ಹೇಳಿದೆನು.
೫೮ ಪೂರ್ಣ ಹೃದಯದಿಂದ ನಿನ್ನನ್ನು ಬೇಡಿ ಕೊಂಡಿದ್ದೇನೆ;
ನಿನ್ನ ಮಾತಿನ ಪ್ರಕಾರ ನನ್ನನ್ನು ಕರುಣಿಸು.
೫೯ ನನ್ನ ಮಾರ್ಗಗಳನ್ನು ಯೋಚಿಸಿ ಕೊಂಡು,
ನಿನ್ನ ಸಾಕ್ಷಿಗಳ ಕಡೆಗೆ ನನ್ನ ಪಾದಗಳನ್ನು ತಿರುಗಿಸಿದ್ದೇನೆ.
೬೦ ನಿನ್ನ ಆಜ್ಞೆಗಳನ್ನು ಕೈಕೊಳ್ಳುವದಕ್ಕೆ ತಡೆ ಮಾಡದೆ, ತ್ವರೆ ಪಟ್ಟಿದ್ದೇನೆ.

೬೧ ದುಷ್ಟರ ಪಾಶಗಳು ನನ್ನನ್ನು ಸುತ್ತಿ ಕೊಂಡವೆ;
ನಿನ್ನ ನ್ಯಾಯಪ್ರಮಾಣವನ್ನು ನಾನು ಮರೆತು ಬಿಡಲಿಲ್ಲ.
೬೨ ನಿನ್ನ ನೀತಿಯ ನ್ಯಾಯಗಳಿಗೋಸ್ಕರ
ನಿನ್ನನ್ನು ಕೊಂಡಾಡುವದಕ್ಕೆ ಮಧ್ಯ ರಾತ್ರಿಯಲ್ಲಿ ಏಳುತ್ತೇನೆ.
೬೩ ನಿನಗೆ ಭಯ ಪಡುವವರೆಲ್ಲರಿಗೂ,
ನಿನ್ನ ಕಟ್ಟಳೆಗಳನ್ನು ಕೈಕೊಳ್ಳುವವರಿಗೂ, ನಾನು ಸಂಗಡಿಗ
ನಾಗಿದ್ದೇನೆ.
೬೪ ಕರ್ತನೇ, ಭೂಮಿಯು ನಿನ್ನ ಕೃಪೆಯಿಂದ ತುಂಬಿ ಅದೆ;
ನಿನ್ನ ನೇಮಕಗಳನ್ನು ನನಗೆ ಕಲಿಸು.

ಬ ಟೇತ್.

೬೫ ಕರ್ತನೇ, ನಿನ್ನ ವಾಕ್ಯದ ಪ್ರಕಾರ,
ನಿನ್ನ ಸೇವಕನಿಗೆ ಒಳ್ಳೇದನ್ನು ಮಾಡಿದ್ದೀ.
೬೬ ಒಳ್ಳೆ ವಿವೇಕ ತಿಳುವಿಕೆಗಳನ್ನು ನನಗೆ ಕಲಿಸು;
ಯಾಕಂದರೆ ನಿನ್ನ ಆಜ್ಞೆಗಳಲ್ಲಿ ನಂಬಿಕೆ ಇಟ್ಟಿದ್ದೇನೆ.
೬೭ ನಾನು ಶ್ರಮೆ ಪಡುವದಕ್ಕಿಂತ ಮುಂಚೆ ತಪ್ಪಿ ಹೋಗುತ್ತಿದ್ದೆನು;
ಆದರೆ ಈಗ ನಿನ್ನ ವಾಕ್ಯವನ್ನು ಕೈಕೊಳ್ಳುತ್ತೇನೆ.
೬೮ ನೀನು ಒಳ್ಳೆಯವನೂ, ಒಳ್ಳೇದನ್ನು ಮಾಡುವವನೂ, ಆಗಿದ್ದೀ;
ನಿನ್ನ ನೇಮಕಗಳನ್ನು ನನಗೆ ಕಲಿಸು.
೬೯ ಅಹಂಕಾರಿಗಳು ನನಗೆ ವಿರೋಧವಾಗಿ ಸುಳ್ಳು ಕಲ್ಪಿಸಿದರು;
ನಾನು ಪೂರ್ಣ ಹೃದಯದಿಂದ ನಿನ್ನ ಕಟ್ಟಳೆಗಳನ್ನು
ಕೈಕೊಳ್ಳುವೆನು.
೭೦ ಅವರ ಹೃದಯವು ಕೊಬ್ಬಿನ ಹಾಗೆ ಮಂದವಾಗಿದೆ;
ನಾನು ನಿನ್ನ ನ್ಯಾಯಪ್ರಮಾಣದಲ್ಲಿ ಆನಂದ ಪಡುತ್ತೇನೆ.
೭೧ ನಿನ್ನ ನೇಮಕಗಳನ್ನು ಕಲಿಯುವ ಹಾಗೆ,
ನಾನು ಶ್ರಮೆ ಪಟ್ಟದ್ದು ನನಗೆ ಒಳ್ಳೇದು.
೭೨ ಬೆಳ್ಳಿ ಬಂಗಾರಗಳ ಸಾವಿರಗಳಿಗಿಂತ ನಿನ್ನ ಬಾಯಿಯ ನ್ಯಾಯ
ಪ್ರಮಾಣವು ನನಗೆ ಒಳ್ಳೇದು.

ಯ ಯೋದ್.

೭೩ ನಿನ್ನ ಕೈಗಳು ನನ್ನನ್ನು ಮಾಡಿ, ನಿರ್ಮಿಸಿದವು;
ನನಗೆ ಗ್ರಹಿಕೆಯನ್ನು ಕೊಡು; ಆಗ ನಿನ್ನ ಆಜ್ಞೆಗಳನ್ನು ಕಲಿತು
ಕೊಳ್ಳುವೆನು.
೭೪ ನಿನಗೆ ಭಯ ಪಡುವವರು ನನ್ನನ್ನು ನೋಡಿ, ಸಂತೋಷ
ಪಡುವರು;
ಯಾಕಂದರೆ ನಿನ್ನ ವಾಕ್ಯಕ್ಕೆ ಎದುರು ನೋಡುತ್ತೇನೆ.
೭೫ ಕರ್ತನೇ, ನಿನ್ನ ನ್ಯಾಯಗಳು ನೀತಿ ಎಂದೂ,
ನಂಬಿಕೆಯಿಂದಲೇ ನನ್ನನ್ನು ಶ್ರಮೆ ಪಡಿಸಿದ್ದೀ ಎಂದೂ,
ಬಲ್ಲೆನು.
೭೬ ನಿನ್ನ ಸೇವಕನಿಗೆ ನೀನು ಹೇಳಿದ ಮಾತಿನ ಪ್ರಕಾರ,
ನನ್ನನ್ನು ಆದರಿಸುವದಕ್ಕೆ ನಿನ್ನ ಕೃಪೆ ಇರಲಿ.
೭೭ ನಿನ್ನ ಅಂತಃಕರಣವು ನನಗೆ ಬರಲಿ; ಆಗ ಬದುಕುವೆನು;
ಯಾಕಂದರೆ ನಿನ್ನ ನ್ಯಾಯಪ್ರಮಾಣವು ನನ್ನ ಆನಂದವಾಗಿದೆ.
೭೮ ಸುಮ್ಮನೆ ನನಗೆ ಕೇಡು ಮಾಡಿದ ಕಾರಣ ಅಹಂಕಾರಿಗಳು
ನಾಚಿಕೆ ಪಡಲಿ.
ನಾನು ನಿನ್ನ ಕಟ್ಟಳೆಗಳನ್ನು ಧ್ಯಾನ ಮಾಡುವೆನು.
೭೯ ನಿನಗೆ ಭಯ ಪಟ್ಟು,
ನಿನ್ನ ಸಾಕ್ಷಿಗಳನ್ನು ಬಲ್ಲವರು ನನಗೆ ತಿರುಗಲಿ.
೮೦ ನಾನು ನಾಚಿಕೆ ಪಡದ ಹಾಗೆ,
ನನ್ನ ಹೃದಯವು ನಿನ್ನ ನೇಮಕಗಳಲಿ ಸಂಪೂರ್ಣವಾಗಿರಲಿ.

ಕ ಕಾಫ್.

೮೧ ನನ್ನ ಪ್ರಾಣವು, ನಿನ್ನ ರಕ್ಷಣೆ ಬೇಕೆಂದು, ಸವೆಯುತ್ತದೆ;
ನಿನ್ನ ವಾಕ್ಯಕ್ಕೆ ಎದುರು ನೋಡುತ್ತೇನೆ.
೮೨ ಯಾವಾಗ ನನ್ನನ್ನು ಆದರಿಸುವಿ! ಎಂದು,
ನನ್ನ ಕಣ್ಣುಗಳು ನಿನ್ನ ಮಾತಿಗೆ ಡೊಗರು ಬೀಳುತ್ತವೆ.
೮೩ ನಾನು ಹೊಗೆಯಲ್ಲಿರುವ ಬುದ್ದಲಿಯ ಹಾಗೆ ಇದ್ದರೂ,
ನಿನ್ನ ನೇಮಕಗಳನ್ನು ನಾನು ಮರೆತು ಬಿಡಲಿಲ್ಲ.
೮೪ ನಿನ್ನ ಸೇವಕನ ದಿವಸಗಳು ಎಷ್ಟು!
ನನ್ನನ್ನು ಹಿಂದಟ್ಟುವವರಿಗೆ ಯಾವಾಗ ನ್ಯಾಯ ತೀರಿಸುವಿ!
೮೫ ನಿನ್ನ ನ್ಯಾಯಪ್ರಮಾಣದ ಪ್ರಕಾರವಾಗಿರದ
ಅಹಂಕಾರಿಗಳು ನನಗೆ ಕುಣಿಗಳನ್ನು ಅಗಿದಿದ್ದಾರೆ.
೮೬ ನಿನ್ನ ಆಜ್ಞೆಗಳೆಲ್ಲಾ ನಂಬಿಕೆಯಾಗಿವೆ;
ಸುಮ್ಮನೆ ನನ್ನನ್ನು ಹಿಂದಟ್ಟುತ್ತಾರೆ.
ನನಗೆ ಸಹಾಯ ಮಾಡು.
೮೭ ಅವರು ನನ್ನನ್ನು ಭೂಮಿಯಲ್ಲಿ ಮುಗಿಸುವ ಹಾಗಿದ್ದರು;
ಆದರೆ ನಾನು ನಿನ್ನ ಕಟ್ಟಳೆಗಳನ್ನು ಬಿಡಲಿಲ್ಲ.
೮೮ ನಿನ್ನ ಕೃಪೆಯ ಪ್ರಕಾರ ನನ್ನನ್ನು ಬದುಕಿಸು;
ಆಗ ನಿನ್ನ ಬಾಯಿಯ ಸಾಕ್ಷಿಯನ್ನು ಕೈಕೊಳ್ಳುವೆನು.

ಲ ಲಾಮೆದ್.

೮೯ ಕರ್ತನೇ, ಯುಗ ಯುಗಕ್ಕೂ ನಿನ್ನ ವಾಕ್ಯವು ಪರಲೋ
ಕದಲ್ಲಿ ಸ್ಥಿರವಾಗಿದೆ.
೯೦ ತಲ ತಲಾಂತರಕ್ಕೂ ನಿನ್ನ ನಂಬಿಕೆಯು ಅದೆ;
ನೀನು ಭೂಮಿಯನ್ನು ಸ್ಥಾಪಿಸಿದಿ; ಅದು ನೆಲೆಯಾಗಿದೆ.
೯೧ ಇಂದಿನ ವರಿಗೆ ನಿನ್ನ ನಿರ್ಣಯಗಳಿಗೆ ನಿಲ್ಲುತ್ತವೆ;
ಯಾಕಂದರೆ ಸರ್ವವು ನಿನ್ನನ್ನು ಸೇವಿಸುತ್ತದೆ.
೯೨ ನಿನ್ನ ನ್ಯಾಯಪ್ರಮಾಣವು ನನಗೆ ಆನಂದವಾಗಿರದಿದ್ದರೆ,
ನಾನು ನನ್ನ ದೀನತೆಯಲ್ಲಿ ನಾಶವಾಗುತ್ತಿದ್ದೆನು.
೯೩ ಯುಗ ಯುಗಕ್ಕೂ ನಿನ್ನ ಕಟ್ಟಳೆಗಳನ್ನು ಮರೆತು ಬಿಡೆನು;
ಯಾಕಂದರೆ ಅವುಗಳಿಂದ ನನ್ನನ್ನು ಬದುಕಿಸಿದ್ದೀ.
೯೪ ನಾನು ನಿನ್ನವನೇ; ನನ್ನನ್ನು ರಕ್ಷಿಸು;
ಯಾಕಂದರೆ ನಿನ್ನ ಕಟ್ಟಳೆಗಳನ್ನು ಹುಡುಕಿದ್ದೇನೆ.
೯೫ ದುಷ್ಟರು ನನ್ನನ್ನು ನಾಶ ಮಾಡುವದಕ್ಕೆ ನನಗೆ ಕಾದು
ಕೊಳ್ಳುತ್ತಾರೆ.
ನಿನ್ನ ಸಾಕ್ಷಿಗಳನ್ನು ಗ್ರಹಿಸಿ ಕೊಳ್ಳುತ್ತೇನೆ.
೯೬ ಎಲ್ಲಾ ಸಂಪೂರ್ಣತ್ವದ ಅಂತ್ಯವನ್ನು ನೋಡಿದ್ದೇನೆ;
ನಿನ್ನ ಆಜ್ಞೆಯು ಬಹಳ ವಿಸ್ತಾರವಾಗಿದೆ.

ಮ ಮೇಮ್.

೯೭ ನಿನ್ನ ನ್ಯಾಯಪ್ರಮಾಣವನ್ನು ಎಷ್ಟೋ ಪ್ರೀತಿ ಮಾಡು
ತ್ತೇನೆ!



ದಿನವೆಲ್ಲಾ ಅದೇ ನನ್ನ ಧ್ಯಾನವು.
೯೮ ನಿನ್ನ ಆಜ್ಞೆಗಳಿಂದ ನನ್ನ ಶತ್ರುಗಳಿಗಿಂತ ನನ್ನನ್ನು ಜ್ಞಾನಿಯಾ
ಗ ಮಾಡಿದ್ದೀ;
ಯಾಕಂದರೆ ಅವು ಯುಗ ಯುಗಕ್ಕೂ ನನ್ನಲ್ಲಿ ಅವೆ.
೯೯ ನನ್ನ ಬೋಧಕರೆಲ್ಲರಿಗಿಂತ ಬುದ್ಧಿವಂತನಾಗಿದ್ದೇನೆ;
ಯಾಕಂದರೆ ನಿನ್ನ ಸಾಕ್ಷಿಗಳು ನನ್ನ ಧ್ಯಾನವಾಗಿವೆ.
೧೦೦ ನಾನು ಹಿರಿಯರಿಗಿಂತ ವಿವೇಕಿಯಾಗಿದ್ದೇನೆ;
ಯಾಕಂದರೆ ನಿನ್ನ ಕಟ್ಟಳೆಗಳನ್ನು ಕೈಕೊಂಡಿದ್ದೇನೆ.
೧೦೧ ನಿನ್ನ ವಾಕ್ಯವನ್ನು ಕೈಕೊಳ್ಳುವ ಹಾಗೆ,
ಎಲ್ಲಾ ಕೆಟ್ಟ ಹಾದಿಗಳಿಂದ ನನ್ನ ಪಾದಗಳನ್ನು ಹಿಂದೆಗೆದಿದ್ದೇನೆ.
೧೦೨ ನಿನ್ನ ನ್ಯಾಯಗಳಿಂದ ನಾನು ತೊಲಗಲಿಲ್ಲ;
ಯಾಕಂದರೆ ನೀನು ನನ್ನನ್ನು ಉಪದೇಶಿಸಿದ್ದೀ.
೧೦೩ ನಿನ್ನ ಮಾತುಗಳು ನನ್ನ ಅಂಗಳಕ್ಕೆ ಎಷ್ಟೋ ಪೀಯಾಗಿವೆ!
ನನ್ನ ಬಾಯಿಗೆ ಜೇನಿಗಿಂತ ಪೀಯಾಗಿವೆ.
೧೦೪ ನಿನ್ನ ಕಟ್ಟಳೆಗಳಿಂದ ವಿವೇಕಿಯಾಗಿದ್ದೇನೆ;
ಆದದರಿಂದ ಸೋಸ ಮಾರ್ಗಗಳನ್ನೆಲ್ಲಾ ಹಗೆ ಮಾಡಿದ್ದೇನೆ.

ನ ನೂನ್.

೧೦೫ ನಿನ್ನ ವಾಕ್ಯವು ನನ್ನ ಪಾದಕ್ಕೆ ದೀಪವೂ,
ನನ್ನ ದಾರಿಗೆ ಬೆಳಕೂ, ಆಗಿದೆ.
೧೦೬ ನಿನ್ನ ನೀತಿಯ ನ್ಯಾಯಗಳನ್ನು ಕೈಕೊಳ್ಳುವೆನೆಂದು,
ಆಣೆ ಇಟ್ಟಿದ್ದೇನೆ; ಅದನ್ನು ಈಡೇರಿಸುವೆನು.
೧೦೭ ಬಹಳವಾಗಿ ಶ್ರಮೆ ಪಟ್ಟಿದ್ದೇನೆ;
ಕರ್ತನೇ, ನಿನ್ನ ವಾಕ್ಯದ ಪ್ರಕಾರ ನನ್ನನ್ನು ಬದುಕಿಸು.
೧೦೮ ಕರ್ತನೇ, ನನ್ನ ಬಾಯಿಯ ಉಚಿತವಾದ ಬಲಿಗಳಿಗೆ ಮೆಚ್ಚಿ,
ನಿನ್ನ ನ್ಯಾಯಗಳನ್ನು ನನಗೆ ಕಲಿಸು.
೧೦೯ ನನ್ನ ಪ್ರಾಣವು ಯಾವಾಗಲೂ ನನ್ನ ಕೈಯಲ್ಲಿ ಅದೆ;
ನಿನ್ನ ನ್ಯಾಯಪ್ರಮಾಣವನ್ನು ಮರೆತು ಬಿಡೆನು.
೧೧೦ ದುಷ್ಟರು ನನಗೆ ಉರ್ಲು ಹಾಕಿದ್ದಾರೆ;
ಆದರೆ ನಾನು ನಿನ್ನ ಕಟ್ಟಳೆಗಳನ್ನು ಬಿಟ್ಟು, ತಪ್ಪಿ ಹೋಗಲಿಲ್ಲ.
೧೧೧ ನಿನ್ನ ಸಾಕ್ಷಿಗಳನ್ನು ನಿತ್ಯ ಸ್ವಾಸ್ತ್ಯವಾಗಿ ತೆಗೆದು ಕೊಂಡಿದ್ದೇನೆ;
ಯಾಕಂದರೆ ಅವು ನನ್ನ ಹೃದಯದ ಆನಂದವಾಗಿವೆ.
೧೧೨ ನಿನ್ನ ನೇಮಕಗಳನ್ನು ಕಡೇ ವರಿಗೂ ಮಾಡುವದಕ್ಕೆ
ನನ್ನ ಹೃದಯವನ್ನು ಬೊಗ್ಗಿಸಿದ್ದೇನೆ.

ಸ ಸಾಮೆಕ್.

೧೧೩ ಚಂಚಲರನ್ನು ಹಗೆ ಮಾಡುತ್ತೇನೆ;
ಆದರೆ ನಿನ್ನ ನ್ಯಾಯಪ್ರಮಾಣವನ್ನು ಪ್ರೀತಿ ಮಾಡುತ್ತೇನೆ.
೧೧೪ ನನ್ನ ಮರೆಯೂ ನನ್ನ ಗುರಾಣಿಯೂ ನೀನೇ;
ನಿನ್ನ ವಾಕ್ಯಕ್ಕೆ ಎದುರು ನೋಡುತ್ತೇನೆ.
೧೧೫ ದುರ್ಮಾರ್ಗರೇ, ನನ್ನಿಂದ ತೊಲಗಿರಿ;
ನನ್ನ ದೇವರ ಆಜ್ಞೆಗಳನ್ನು ಕೈಕೊಳ್ಳುವೆನು.
೧೧೬ ನಿನ್ನ ವಾಕ್ಯದ ಪ್ರಕಾರ ನನ್ನನ್ನು ಉದ್ಧಾರ ಮಾಡು; ಆಗ
ಬದುಕುವೆನು;
ಮತ್ತು ನನ್ನ ನಿರೀಕ್ಷೆಯ ನಿಮಿತ್ತ ನನ್ನನ್ನು ನಾಚಿಕೆ ಪಡಿಸ
ಬೇಡ.
೧೧೭ ನನ್ನನ್ನು ಆತುಕೋ; ಆಗ ನಾನು ರಕ್ಷಿಸಲ್ಪಟ್ಟು,
ನಿನ್ನ ನೇಮಕಗಳನ್ನು ಯಾವಾಗಲೂ ಲಕ್ಷಿಸುವೆನು.
೧೧೮ ನಿನ್ನ ನೇಮಕಗಳನ್ನು ಬಿಟ್ಟು ತೊಳಲುವವರೆಲ್ಲರನ್ನು ನೀನು
ತಳ್ಳಿದ್ದೀ;
ಯಾಕಂದರೆ ಅವರ ಮೋಸವೆಲ್ಲಾ ಸುಳ್ಳಾಗಿದೆ.
೧೧೯ ಕಿಟ್ಟದ ಹಾಗೆ ಭೂಮಿಯಲ್ಲಿರುವ ದುಷ್ಟರೆಲ್ಲರನ್ನು ಮುಗಿಸಿ
ಬಿಡುತ್ತೀ;
ಆದದರಿಂದ ನಿನ್ನ ಸಾಕ್ಷಿಗಳನ್ನು ಪ್ರೀತಿ ಮಾಡಿದ್ದೇನೆ.
೧೨೦ ನಿನ್ನ ಹೆದರಿಕೆಯಿಂದ ನನ್ನ ಮಾಂಸಕ್ಕೆ ರೋಮಾಂಚವಾಯಿತು;
ನಿನ್ನ ನ್ಯಾಯಗಳಿಗೆ ಭಯ ಪಡುತ್ತೇನೆ.

ಅ ಆಯಿನ್.

೧೨೧ ನ್ಯಾಯನನ್ನೂ ನೀತಿಯನ್ನೂ ಮಾಡಿದ್ದೇನೆ;
ನನಗೆ ಬಲಾತ್ಕಾರ ಮಾಡುವವರಿಗೆ ನನ್ನನ್ನು ಒಪ್ಪಿಸಿ ಬಿಡಬೇಡ.
೧೨೨ ಒಳ್ಳೇದಕ್ಕಾಗಿ ನಿನ್ನ ಸೇವಕನಿಗೆ ಹೊಣೆಯಾಗು;
ಅಹಂಕಾರಿಗಳು ನನಗೆ ಬಲಾತ್ಕಾರ ಮಾಡದಿರಲಿ.
೧೨೩ ನನ್ನ ಕಣ್ಣುಗಳು ನಿನ್ನ ರಕ್ಷಣೆಗೋಸ್ಕರವೂ,
ನಿನ್ನ ನೀತಿಯ ಮಾತಿಗೋಸ್ಕರವೂ, ಡೊಗರು ಬೀಳುತ್ತವೆ.
೧೨೪ ನಿನ್ನ ಕೃಪೆಯ ಪ್ರಕಾರ ನಿನ್ನ ಸೇವಕನಿಗೆ ಮಾಡಿ,
ನಿನ್ನ ನೇಮಕಗಳನ್ನು ನನಗೆ ಕಲಿಸು.
೧೨೫ ನಾನು ನಿನ್ನ ಸೇವಕನು;
ನಿನ್ನ ಸಾಕ್ಷಿಗಳನ್ನು ತಿಳಿಯುವ ಹಾಗೆ, ನನಗೆ ಗ್ರಹಿಕೆಯನ್ನು
ಕೊಡು.
೧೨೬ ಕರ್ತನು ಕ್ರಿಯೆ ಮಾಡುವದಕ್ಕೆ ಸಮಯ ಬಂತು;
ಅವರು ನಿನ್ನ ನ್ಯಾಯಪ್ರಮಾಣವನ್ನು ಮೀರಿದ್ದಾರೆ.
೧೨೭ ಆದದರಿಂದ ನಿನ್ನ ಆಜ್ಞೆಗಳನ್ನು ಬಂಗಾರಕ್ಕಿಂತಲೂ,
ಅಪರಂಜಿಗಿಂತಲೂ, ಹೆಚ್ಚಾಗಿ ಪ್ರೀತಿ ಮಾಡಿದ್ದೇನೆ.
೧೨೮ ಆದದರಿಂದ ನಿನ್ನ ಕಟ್ಟಳೆಗಳೆಲ್ಲಾ—ಅವುಗಳೆಲ್ಲಾ—ಸರಿ ಎಂ
ದೆಣಿಸಿ,
ಮೋಸ ಮಾರ್ಗಗಳನ್ನೆಲ್ಲಾ ಹಗೆ ಮಾಡಿದ್ದೇನೆ.

ಪ ಪೇ.

೧೨೯ ನಿನ್ನ ಸಾಕ್ಷಿಗಳು ಅದ್ಭುತವಾದವುಗಳೇ;
ಆದದರಿಂದ ನನ್ನ ಪ್ರಾಣವು ಅವುಗಳನ್ನು ಕೈಕೊಳ್ಳುತ್ತದೆ.
೧೩೦ ನಿನ್ನ ವಾಕ್ಯಗಳ ವಿವರಣೆಯು ಬೆಳಕನ್ನು ಕೊಟ್ಟು,
ಯುಕ್ತಹೀನರಿಗೆ ಗ್ರಹಿಕೆಯನ್ನು ಉಂಟು ಮಾಡುತ್ತದೆ.
೧೩೧ ನನ್ನ ಬಾಯಿಯನ್ನು ತೆಗೆದು, ಉಬ್ಬಸ ಪಟ್ಟಿದ್ದೇನೆ;
ಯಾಕಂದರೆ ನಿನ್ನ ಆಜ್ಞೆಗಳನ್ನು ಬಯಸಿದ್ದೇನೆ.
೧೩೨ ನನ್ನ ಕಡೆಗೆ ತಿರುಗಿ ಕೃಪೆಂತು,
ನಿನ್ನ ಹೆಸರಿನಲ್ಲಿ ಪ್ರೀತಿ ಇಡುವವರಿಗೆ ಮಾಡುವ ನ್ಯಾಯದ
ಪ್ರಕಾರ ನನ್ನನ್ನು ಕರುಣಿಸು.
೧೩೩ ನನ್ನ ನಡೆಗಳನ್ನು ನಿನ್ನ ಮಾತಿನಿಂದ ದೃಢ ಪಡಿಸು;
ಯಾವ ಪಾತಕವಾದರೂ ನನ್ನ ಮೇಲೆ ಧೊರೆತನ ಮಾಡಲೀ
ಸದಿರು.

೧೩೪ ಮನುಷ್ಯರ ಬಲಾತ್ಕಾರದಿಂದ ನನ್ನನ್ನು ವಿಮೋಚಿಸು;
ಆಗ ನಿನ್ನ ಕಟ್ಟಳೆಗಳನ್ನು ಕೈ ಕೊಳ್ಳುವೆನು.
೧೩೫ ನಿನ್ನ ಮುಖವನ್ನು ನಿನ್ನ ಸೇವಕನ ಮೇಲೆ ಬೆಳಗ ಮಾಡು;
ಮತ್ತು ನಿನ್ನ ನೇಮಕಗಳನ್ನು ನನಗೆ ಕಲಿಸು.
೧೩೬ ಅವರು ನಿನ್ನ ನ್ಯಾಯಪ್ರಮಾಣವನ್ನು ಕೈ ಕೊಳ್ಳದ ನಿಮಿತ್ತ
ನೀರಿನ ಕಾಲುವೆಗಳು ನನ್ನ ಕಣ್ಣುಗಳಿಂದ ಇಳಿಯುತ್ತವೆ.

೪ ಚಾಪೆ.

೧೩೭ ಕರ್ತನೇ, ನೀನು ನೀತಿವಂತನು;
ನಿನ್ನ ನ್ಯಾಯಗಳು ಸರಿಯಾದವುಗಳೇ.
೧೩೮ ನಿನ್ನ ಸಾಕ್ಷಿಗಳನ್ನು ನೀತಿಯಾಗಿಯೂ,
ಬಹು ನಂಬಿಕೆಯಾಗಿಯೂ, ಆಜ್ಞಾಪಿಸಿದ್ದೀ.
೧೩೯ ನನ್ನ ವೈರಿಗಳು ನಿನ್ನ ಮಾತುಗಳನ್ನು ಮರೆತು ಬಿಡುವದರಿಂದ
ನನ್ನ ಆಸಕ್ತಿಯು ನನ್ನನ್ನು ಸಂಹರಿಸಿ ಅದೆ.
೧೪೦ ನಿನ್ನ ವಾಕ್ಯವು ಬಹಳವಾಗಿ ಪುಟಕ್ಕೆ ಹಾಕಲ್ಪಟ್ಟದ್ದಾಗಿದೆ;
ನಿನ್ನ ಸೇವಕನು ಅದನ್ನು ಪ್ರೀತಿ ಮಾಡುತ್ತಾನೆ.
೧೪೧ ನಾನು ಸಣ್ಣವನೂ ತಿರಸ್ಕರಿಸಲ್ಪಟ್ಟವನೂ ಆಗಿದ್ದರೂ,
ನಿನ್ನ ಕಟ್ಟಳೆಗಳನ್ನು ನಾನು ಮರೆತು ಬಿಡಲಿಲ್ಲ.
೧೪೨ ನಿನ್ನ ನೀತಿಯು ನಿತ್ಯ ನೀತಿಯೇ;
ನಿನ್ನ ನ್ಯಾಯಪ್ರಮಾಣವು ಸತ್ಯವೇ.
೧೪೩ ಇಕ್ಕಟ್ಟೂ ಸಂಕಟವೂ ನನ್ನನ್ನು ಹಿಡಿದವೆ;
ನಿನ್ನ ಆಜ್ಞೆಗಳು ನನಗೆ ಆನಂದವಾಗಿವೆ.
೧೪೪ ನಿನ್ನ ಸಾಕ್ಷಿಗಳ ನೀತಿ ನಿತ್ಯವಾದದ್ದು;
ನನಗೆ ಗ್ರಹಿಕೆಯನ್ನು ಕೊಡು; ಆಗ ಬದುಕುವೆನು.

೧ ಕೋಫ್.

೧೪೫ ಪೂರ್ಣ ಹೃದಯದಿಂದ ಕೂಗಿದ್ದೇನೆ; ಕರ್ತನೇ, ನನಗೆ
ಉತ್ತರ ಕೊಡು;
ನಿನ್ನ ನೇಮಕಗಳನ್ನು ಕೈ ಕೊಳ್ಳುವೆನು.
೧೪೬ ನಿನಗೆ ಕೂಗಿದ್ದೇನೆ; ನನ್ನನ್ನು ರಕ್ಷಿಸು;
ಆಗ ನಿನ್ನ ಸಾಕ್ಷಿಗಳನ್ನು ಕೈ ಕೊಳ್ಳುವೆನು.
೧೪೭ ಅರುಣೋದಯವನ್ನು ಮುಂಕೊಂಡು, ಮೊರೆ ಇಟ್ಟಿದ್ದೇನೆ;
ನಿನ್ನ ವಾಕ್ಯಕ್ಕೆ ಎದುರು ನೋಡಿದ್ದೇನೆ.
೧೪೮ ನಿನ್ನ ವಾಕ್ಯದಲ್ಲಿ ಧ್ಯಾನ ಇಡುವ ಹಾಗೆ,
ನನ್ನ ಕಣ್ಣುಗಳು ರಾತ್ರಿ ಝಾವುಗಳನ್ನು ಮುಂಕೊಂಡವೆ.
೧೪೯ ನಿನ್ನ ಕೃಪೆಯ ಪ್ರಕಾರ ನನ್ನ ಶಬ್ದವನ್ನು ಕೇಳು;
ಕರ್ತನೇ, ನಿನ್ನ ನ್ಯಾಯದ ಪ್ರಕಾರ ನನ್ನನ್ನು ಬದುಕಿಸು.
೧೫೦ ದುಷ್ಕರ್ಮವನ್ನು ಹಿಂದಟ್ಟುವವರು ಸಮೀಪವಾಗಿದಾರೆ;
ನಿನ್ನ ನ್ಯಾಯಪ್ರಮಾಣಕ್ಕೆ ದೂರವಾಗಿದ್ದಾರೆ.
೧೫೧ ಕರ್ತನೇ, ನೀನು ಸಮೀಪವೇ;
ಮತ್ತು ನಿನ್ನ ಆಜ್ಞೆಗಳೆಲ್ಲಾ ಸತ್ಯವೇ.
೧೫೨ ನೀನು ಯುಗ ಯುಗಕ್ಕೂ ಅವುಗಳನ್ನು ಸ್ಥಾಪಿಸಿದ್ದೀ ಎಂದು,
ನಿನ್ನ ಸಾಕ್ಷಿಗಳಿಂದ ಪೂರ್ವದಲ್ಲಿ ತಿಳಿದೆನು.

೧ ರೇಷ್.

೧೫೩ ನನ್ನ ದೀನತೆಯನ್ನು ನೋಡಿ, ನನ್ನನ್ನು ತಪ್ಪಿಸಿ ಬಿಡು;
ಯಾಕಂದರೆ ನಿನ್ನ ನ್ಯಾಯಪ್ರಮಾಣವನ್ನು ಮರೆತು ಬಿಟೆನು.
೧೫೪ ನನ್ನ ವಿವಾದವನ್ನು ವಿವಾದಿಸಿ, ನನ್ನನ್ನು ಬಿಡುಗಡೆ ಮಾಡು;
ನಿನ್ನ ಮಾತಿನ ಪ್ರಕಾರ ನನ್ನನ್ನು ಬದುಕಿಸು.
೧೫೫ ದುಷ್ಟರಿಗೆ ರಕ್ಷಣೆಯು ದೂರವಾಗಿದೆ;
ಯಾಕಂದರೆ ನಿನ್ನ ನೇಮಕಗಳನ್ನು ಹುಡುಕರು.
೧೫೬ ಕರ್ತನೇ, ನಿನ್ನ ಅಂತ್ಯಕರಣಗಳು ಬಹಳವಾಗಿವೆ;
ನಿನ್ನ ನ್ಯಾಯಗಳ ಪ್ರಕಾರ ನನ್ನನ್ನು ಬದುಕಿಸು.
೧೫೭ ನನ್ನನ್ನು ಹಿಂದಟ್ಟುವವರೂ, ನನ್ನ ವೈರಿಗಳೂ, ಅನೇಕರಾಗಿದ್ದಾರೆ;
ನಿನ್ನ ಸಾಕ್ಷಿಗಳಿಂದ ನಾನು ತೊಲಗೆನು.
೧೫೮ ನಿನ್ನ ಮಾತು ಕೈ ಕೊಳ್ಳದ ವಂಚಕರನ್ನು ನೋಡಿ,
ಬೇಸರಗೊಂಡಿದ್ದೇನೆ.
೧೫೯ ನಿನ್ನ ಕಟ್ಟಳೆಗಳನ್ನು ಪ್ರೀತಿ ಮಾಡುತ್ತೇನೆಂದು, ನೋಡು;
ಕರ್ತನೇ, ನಿನ್ನ ಕೃಪೆಯ ಪ್ರಕಾರ ನನ್ನನ್ನು ಬದುಕಿಸು.
೧೬೦ ನಿನ್ನ ವಾಕ್ಯದ ಒಟ್ಟರ್ಥವು ಸತ್ಯವೇ;
ನಿನ್ನ ನೀತಿಯ ನ್ಯಾಯಗಳೆಲ್ಲಾ ನಿತ್ಯವಾಗಿವೆ.

೨ ಶೀನ್.

೧೬೧ ಪ್ರಧಾನರು ಸುಮ್ಮನೆ ನನ್ನನ್ನು ಹಿಂದಟ್ಟುತ್ತಾರೆ;
ಆದರೆ ನನ್ನ ಹೃದಯವು ನಿನ್ನ ಮಾತುಗಳಿಗೆ ಹೆದರುತ್ತದೆ.
೧೬೨ ಬಹಳ ಕೊಳ್ಳೆ ಹೊಂದಿದವನ ಹಾಗೆ,
ನಾನು ನಿನ್ನ ಮಾತಿನ ನಿಮಿತ್ತ ಸಂತೋಷ ಪಡುತ್ತೇನೆ.
೧೬೩ ಸುಳ್ಳನ್ನು ಹಗೆ ಮಾಡಿ, ಅಸಂಹಿಸಿ ಬಿಟ್ಟಿದ್ದೇನೆ;
ನಿನ್ನ ನ್ಯಾಯಪ್ರಮಾಣವನ್ನು ಪ್ರೀತಿ ಮಾಡಿದ್ದೇನೆ.
೧೬೪ ನಿನ್ನ ನೀತಿಯ ನ್ಯಾಯಗಳ ನಿಮಿತ್ತ
ದಿವಸಕ್ಕೆ ಏಳು ಸಾರಿ ನಿನ್ನನ್ನು ಸ್ತುತಿಸುತ್ತೇನೆ.
೧೬೫ ನಿನ್ನ ನ್ಯಾಯಪ್ರಮಾಣವನ್ನು ಪ್ರೀತಿ ಮಾಡುವವರಿಗೆ ಬಹು
ಸಮಾಧಾನ ಉಂಟು;
ಅವರಿಗೆ ಆಟಂಕವೇನೂ ಇಲ್ಲ.
೧೬೬ ಕರ್ತನೇ, ನಿನ್ನ ರಕ್ಷಣೆಗೆ ಕಾದು ಕೊಂಡಿದ್ದೇನೆ;
ನಿನ್ನ ಆಜ್ಞೆಗಳನ್ನು ನಡಿಸಿದ್ದೇನೆ.
೧೬೭ ನನ್ನ ಪ್ರಾಣವು ನಿನ್ನ ಸಾಕ್ಷಿಗಳನ್ನು ಕೈ ಕೊಂಡದೆ;
ನಾನು ಅವುಗಳನ್ನು ಬಹಳವಾಗಿ ಪ್ರೀತಿ ಮಾಡುತ್ತೇನೆ;
೧೬೮ ನಿನ್ನ ಕಟ್ಟಳೆಗಳನ್ನೂ ಸಾಕ್ಷಿಗಳನ್ನೂ ಕೈ ಕೊಳ್ಳುತ್ತೇನೆ;
ಯಾಕಂದರೆ ನನ್ನ ಮಾರ್ಗಗಳೆಲ್ಲಾ ನಿನ್ನ ಮುಂದೆ ಅವೆ.

೧ ತಾವ್.

೧೬೯ ಕರ್ತನೇ, ನನ್ನ ಕೂಗು ನಿನ್ನ ಸಮುಖಕ್ಕೆ ಸಮೀಪಿಸಲಿ;
ನಿನ್ನ ವಾಕ್ಯದ ಪ್ರಕಾರ ನನಗೆ ಗ್ರಹಿಕೆಯನ್ನು ಕೊಡು.
೧೭೦ ನನ್ನ ವಿಜ್ಞಾಪನೆಯು ನಿನ್ನ ಸಮುಖಕ್ಕೆ ಬರಲಿ;
ನಿನ್ನ ವಾಕ್ಯದ ಪ್ರಕಾರ ನನ್ನನ್ನು ಬಿಡಿಸು.
೧೭೧ ನೀನು ನಿನ್ನ ನೇಮಕಗಳನ್ನು ನನಗೆ ಕಲಿಸಿದಾಗ,
ನನ್ನ ತುಟಿಗಳು ನಿನ್ನ ಸ್ತೋತ್ರವನ್ನು ಉಕ್ಕಿಸುವವು.



೧೭೨ ನನ್ನ ನಾಲಿಗೆಯು ನಿನ್ನ ಮಾತಿಗೆ ಉತ್ತರ ಕೊಡುವದು;
ಯಾಕಂದರೆ ನಿನ್ನ ಆಜ್ಞೆಗಳೆಲ್ಲಾ ನೀತಿಯೇ.
೧೭೩ ನಿನ್ನ ಕೈ ನನ್ನ ಸಹಾಯಕ್ಕಾಗಿರಲಿ;
ಯಾಕಂದರೆ ನಿನ್ನ ಕಟ್ಟಳೆಗಳನ್ನು ಆದು ಕೊಂಡಿದ್ದೇನೆ.
೧೭೪ ಕರ್ತನೇ, ನಿನ್ನ ರಕ್ಷಣೆಗೆ ಆಶೆ ಪಟ್ಟಿದ್ದೇನೆ;
ನಿನ್ನ ನ್ಯಾಯಪ್ರಮಾಣವು ನನ್ನ ಆನಂದವಾಗಿದೆ.
೧೭೫ ನನ್ನ ಪ್ರಾಣವು ಬದುಕಿ, ನಿನ್ನನ್ನು ಸ್ತುತಿಸಲಿ;
ನಿನ್ನ ನ್ಯಾಯಗಳು ನನಗೆ ಸಹಾಯ ಮಾಡಲಿ.
೧೭೬ ತಪ್ಪಿ ಹೋದ ಕುರಿಯ ಹಾಗೆ ತೊಳಲಿದ್ದೇನೆ; ನಿನ್ನ ಸೇವಕನನ್ನು ಹುಡುಕು;
ಯಾಕಂದರೆ ನಿನ್ನ ಆಜ್ಞೆಗಳನ್ನು ಮರೆತು ಬಿಟೆನು.

## ೧೨೦. ಕೀರ್ತನೆ.

ಯಾತ್ರೆಯ ಹಾಡು.

೧ ನನ್ನ ಇಕ್ಕಟ್ಟಿನಲ್ಲಿ ಕರ್ತನಿಗೆ ಕೂಗಿದೆನು;
ಅವನು ನನಗೆ ಉತ್ತರ ಕೊಟ್ಟನು.
೨ ಕರ್ತನೇ, ನನ್ನ ಪ್ರಾಣವನ್ನು ಸುಳ್ಳು ತುಟಿಯಿಂದಲೂ,
ಮೋಸದ ನಾಲಿಗೆಯಿಂದಲೂ, ಬಿಡಿಸು.
೩ ಮೋಸದ ನಾಲಿಗೆಯೇ, ನಿನಗೆ ಏನು ಕೊಡುವನು!
ನಿನಗೆ ಏನು ಕೂಡಿಸುವನು!
೪ ಪರಾಕ್ರಮ ಶಾಲಿಯ ಹದವಾದ ಬಾಣಗಳು;
ಜಾಲಿ ಮರದ ಕೆಂಡಗಳು ಸಹ.
೫ ನನಗೆ ಅಯ್ಯೋ! ಯಾಕಂದರೆ ಮೇಷೆಕಿನಲ್ಲಿ ತಂಗುತ್ತೇನೆ;
ಕೆದಾರಿನ ಗುಡಾರಗಳ ಬಳಿಯ ವಾಸ ಮಾಡುತ್ತೇನೆ.
೬ ನನ್ನ ಪ್ರಾಣವು ಸಮಾಧಾನವನ್ನು ಹಗೆ ಮಾಡುವವರ ಸಂಗಡ
ವಾಸ ಮಾಡಿ, ಸಾಕಾಯಿತು.
೭ ನಾನು ಸಮಾಧಾನವಾಗಿದ್ದೇನೆ;
ಆದರೆ ನಾನು ಮಾತಾಡಲು, ಅವರು ಯುದ್ಧಕ್ಕಿದ್ದಾರೆ.

## ೧೨೧. ಕೀರ್ತನೆ.

ಯಾತ್ರೆಯ ಹಾಡು.

೧ ನನ್ನ ಕಣ್ಣುಗಳನ್ನು ಬೆಟ್ಟಗಳ ಕಡೆಗೆ ಎತ್ತುತ್ತೇನೆ;
ನನ್ನ ಸಹಾಯವು ಎಲ್ಲಿಂದ ಬರುವದು?
೨ ಆಕಾಶವನ್ನೂ, ಭೂಮಿಯನ್ನೂ, ಉಂಟು ಮಾಡಿದ
ಕರ್ತನ ಬಳಿಯಿಂದಲೇ ನನ್ನ ಸಹಾಯವು ಆಗುತ್ತದೆ.
೩ ಅವನು ನಿನ್ನ ಕಾಲನ್ನು ಕದಲಲೀಸದಿರಲಿ;
ನಿನ್ನನ್ನು ಕಾಪಾಡುವವನು ತೂಕಡಿಸದಿರಲಿ.
೪ ಇಗೋ, ಇಸ್ರಯೇಲನ್ನು ಕಾಪಾಡುವವನು
ತೂಕಡಿಸುವದಿಲ್ಲ, ನಿದ್ದೆ ಮಾಡುವದಿಲ್ಲ.
೫ ಕರ್ತನು ನಿನ್ನನ್ನು ಕಾಪಾಡುವವನಾಗಿದ್ದಾನೆ;
ಕರ್ತನು ನಿನ್ನ ಬಲಕಡೆಯಲ್ಲಿ ನಿನ್ನ ನೆರಳಾಗಿದ್ದಾನೆ.
೬ ಹಗಲಲ್ಲಿ ಸೂರ್ಯನೂ,
ರಾತ್ರಿಯಲ್ಲಿ ಚಂದ್ರನೂ, ನಿನ್ನನ್ನು ಹೊಡೆಯುವದಿಲ್ಲ.
೭ ಕರ್ತನು ಎಲ್ಲ ಕೇಡಿನಿಂದ ನಿನ್ನನ್ನು ಕಾಪಾಡುವನು;
ನಿನ್ನ ಪ್ರಾಣವನ್ನು ಕಾಪಾಡುವನು.
೮ ಕರ್ತನು ನಿನ್ನ ಹೋಗೋಣವನ್ನೂ, ನಿನ್ನ ಬರೋಣವನ್ನೂ,
ಈಗಿನಿಂದ ಯುಗ ಯುಗಕ್ಕೂ ಕಾಪಾಡುವನು.

## ೧೨೨. ಕೀರ್ತನೆ.

ಯಾತ್ರೆಯ ಹಾಡು; ದಾವೀದನದು.

೧ ಕರ್ತನ ಮನೆಗೆ ಹೋಗುವ ಎಂದು,
ನನಗೆ ಹೇಳುವವರಲ್ಲಿ ಸಂತೋಷ ಪಡುತ್ತೇನೆ.
೨ ನಮ್ಮ ಪಾದಗಳು ನಿನ್ನ ಬಾಗಲುಗಳಲ್ಲಿ ನಿಲ್ಲುತ್ತವೆ, ಯೆರೂಸಲೇಮೇ.
೩ ಯೆರೂಸಲೇಮ್ ಒತ್ತಾಗಿ ಜೋಡಿಸಲ್ಪಟ್ಟ ಪಟ್ಣದ ಹಾಗೆ
ಕಟ್ಟಲ್ಪಟ್ಟದೆ.
೪ ಅಲ್ಲಿಗೆ ಕುಲಗಳು—ಕರ್ತನ ಕುಲಗಳು—ಇಸ್ರಯೇಲಿಗೆ
ಸಾಕ್ಷಿಯಾಗಿ,
ಕರ್ತನ ಹೆಸರನ್ನು ಕೊಂಡಾಡುವದಕ್ಕೆ ಏರಿ ಹೋಗುತ್ತವೆ.
೫ ಯಾಕಂದರೆ ಅಲ್ಲಿ ನ್ಯಾಯ ತೀರ್ಪಿಗೆಗೆ ಸಿಂಹಾಸನಗಳೂ,
ದಾವೀದನ ಮನೆಯ ಸಿಂಹಾಸನಗಳೂ, ನಿಂತವೆ.
೬ ಯೆರೂಸಲೇಮಿನ ಸಮಾಧಾನವನ್ನು ಬೇಡಿ ಕೊಳ್ಳಿರಿ;
ನಿನ್ನನ್ನು ಪ್ರೀತಿ ಮಾಡುವವರು ನೆಮ್ಮದಿಯಾಗಿರುವರು.
೭ ನಿನ್ನ ಪ್ರಾಕಾರದಲ್ಲಿ ಸಮಾಧಾನವೂ,
ನಿನ್ನ ಅರಮನೆಗಳಲ್ಲಿ ಸಾಖ್ಯವೂ, ಇರಲಿ.
೮ ನನ್ನ ಸಹೋದರರ ನಿಮಿತ್ತವೂ, ನನ್ನ ಸ್ನೇಹಿತರ ನಿಮಿತ್ತವೂ,
ನಿನ್ನಲ್ಲಿ ಸಮಾಧಾನವಿರಲೆಂದು, ಈಗ ಹೇಳುತ್ತೇನೆ.
೯ ನಮ್ಮ ದೇವರಾದ ಯೆಹೋವನ ಮನೆಯ ನಿಮಿತ್ತ
ನಿನಗೆ ಒಳ್ಳೇದನ್ನು ಹುಡುಕುತ್ತೇನೆ.

## ೧೨೩. ಕೀರ್ತನೆ.

ಯಾತ್ರೆಯ ಹಾಡು.

೧ ಪರಲೋಕದಲ್ಲಿ ವಾಸವಾಗಿರುವವನೇ,
ನಿನ್ನ ಕಡೆಗೆ ನನ್ನ ಕಣ್ಣುಗಳನ್ನು ಎತ್ತುತ್ತೇನೆ.
೨ ಇಗೋ, ದಾಸರ ಕಣ್ಣುಗಳು ತಮ್ಮ ಯಜಮಾನರ ಕೈಗೂ,
ದಾಸಿಯ ಕಣ್ಣುಗಳು ತನ್ನ ಯಜಮಾನಿಯ ಕೈಗೂ, ಇರುವ
ಪ್ರಕಾರವೇ,
ನಮ್ಮ ಕಣ್ಣುಗಳು ನಮ್ಮ ದೇವರಾದ ಯೆಹೋವನಿಗೆ—
ಅವನು ನಮ್ಮನ್ನು ಕರುಣಿಸುವ ಮಟ್ಟಿಗೂ—ಅವೆ.
೩ ನಮ್ಮನ್ನು ಕರುಣಿಸು; ಕರ್ತನೇ, ನಮ್ಮನ್ನು ಕರುಣಿಸು;
ಯಾಕಂದರೆ ತಿರಸ್ಕಾರದಿಂದ ಬಹಳ ತುಂಬಿದ್ದೇವೆ.
೪ ಹಾಂಭಿಕರಾದ ಭೋಗಿಗಳ ಗೇಲಿಯಿಂದಲೂ,
ಗರ್ವಿಷ್ಠರಿಂದಾದ ತಿರಸ್ಕಾರದಿಂದಲೂ, ನಮ್ಮ ಪ್ರಾಣವು
ಬಹಳ ತುಂಬಿ ಅದೆ.

## ೧೨೪. ಕೀರ್ತನೆ.

ಯಾತ್ರೆಯ ಹಾಡು; ದಾವೀದನದು.

೧ ಇಸ್ರಯೇಲ್ ಈಗ ಹೇಳುವದೇನಂದರೆ—
ಕರ್ತನು ನಮಗೆ ಇಲ್ಲದಿದ್ದರೆ—
೨ ಮನುಷ್ಯರು ನಮಗೆ ವಿರೋಧವಾಗಿ ಏಳುವಾಗ,
ಕರ್ತನು ನಮಗೆ ಇಲ್ಲದಿದ್ದರೆ—
೩ ನಮ್ಮ ಮೇಲೆ ಅವರ ಕೋಪವು ಉರಿಯಲು,
ಅವರು ನಮ್ಮನ್ನು ಜೀವಿತರಾಗಿ ನುಂಗುತ್ತಿದ್ದರು.
೪ ಆಗ ನೀರುಗಳು ನಮ್ಮನ್ನು ಮುಣುಗಿಸುತ್ತಿದ್ದವು;
ತೊರೆಯು ನಮ್ಮ ಪ್ರಾಣದ ಮೇಲೆ ಹೊರಳುತ್ತಿತ್ತು.
೫ ಆಗ ನಮ್ಮ ಪ್ರಾಣದ ಮೇಲೆ ಹಬ್ಬಿನ ನೀರುಗಳು ಹೊರಳುತ್ತಿದ್ದವು.
೬ ನಮ್ಮನ್ನು ಅವರ ಹಲ್ಲುಗಳಿಗೆ ಕೊಳ್ಳೆಯಾಗಿ ಕೊಡದೆ ಇದ್ದ ಕರ್ತನಿಗೆ ಆಶೀರ್ವಾದವಾಗಲಿ.
೭ ನಮ್ಮ ಪ್ರಾಣವು ಪಕ್ಷಿಯ ಹಾಗೆ ಬೇಟೆಗಾರರ ಉರ್ಲಿನಿಂದ ತಪ್ಪಿಸಿ ಕೊಂಡಿತು;
ಉರ್ಲು ಹರಿಯಿತು; ನಾವು ತಪ್ಪಿಸಿ ಕೊಂಡೆವು.
೮ ನಮ್ಮ ಸಹಾಯವು ಆಕಾಶವನ್ನೂ, ಭೂಮಿಯನ್ನೂ ಮಾಡಿದ ಕರ್ತನ ಹೆಸರಿನಲ್ಲಿ ಅದೆ.

## ೧೨೫. ಕೀರ್ತನೆ.

ಯಾತ್ರೆಯ ಹಾಡು.

೧ ಕರ್ತನಲ್ಲಿ ಭರವಸವಿಡುವವರು ಚಿಯೋನ್ ಪರ್ವತದ ಹಾಗಿದ್ದಾರೆ;
ಅದು ಕದಲದು; ಯುಗ ಯುಗಕ್ಕೂ ಇರುವದು.
೨ ಯೆರೂಸಲೇಮಿನ ಸುತ್ತಲು ಬೆಟ್ಟಗಳಿವೆ;
ಮತ್ತು ಕರ್ತನು ಈಗಿನಿಂದ ಯುಗ ಯುಗಕ್ಕೂ ತನ್ನ ಜನರ ಸುತ್ತಲು ಇದ್ದಾನೆ.
೩ ಯಾಕಂದರೆ ನೀತಿವಂತರು ತಮ್ಮ ಕೈಗಳನ್ನು ಅನ್ಯಾಯಕ್ಕೆ ಚಾಚದ ಹಾಗೆ,
ದುಷ್ಟನ ಕೋಲು ನೀತಿವಂತರ ಸ್ವಾಸ್ಥ್ಯದ ಮೇಲೆ ನೆಲೆಯಾಗಿರುವದಿಲ್ಲ.
೪ ಕರ್ತನೇ, ಒಳ್ಳೆಯವರಿಗೂ,
ತಮ್ಮ ಹೃದಯಗಳಲ್ಲಿ ನೆಟ್ಟನೆಯವರಿಗೂ, ಒಳ್ಳೇದನ್ನು ಮಾಡು.
೫ ಆದರೆ ತಮ್ಮ ಡೊಂಕು ಮಾರ್ಗಗಳಲ್ಲಿ ಸೇರುವವರನ್ನು
ಕರ್ತನು ಪಾತಕ ಮಾಡುವವರ ಸಂಗಡ ಹೋಗ ಮಾಡುವನು.
ಇಸ್ರಯೇಲನ ಮೇಲೆ ಸಮಾಧಾನವಿರುವದು.

## ೧೨೬. ಕೀರ್ತನೆ.

ಯಾತ್ರೆಯ ಹಾಡು.

೧ ಕರ್ತನು ಚಿಯೋನಿನ ಸೆರೆಯನ್ನು ತಿರುಗಿಸಿದಾಗ,
ಕನಸು ಕಂಡವರ ಹಾಗಿದ್ದೆವು.
೨ ಆಗ ನಮ್ಮ ಬಾಯಿ ನಗೆಯಿಂದಲೂ,
ನಮ್ಮ ನಾಲಿಗೆ ಉತ್ಸಾಹ ಧ್ವನಿಯಿಂದಲೂ, ತುಂಬಿ ಇದ್ದವು;
ಆಗ ಜನಾಂಗಗಳಲ್ಲಿ—
ಕರ್ತನು ಇವರಿಗೆ ದೊಡ್ಡವುಗಳನ್ನು ಮಾಡಿದ್ದಾನೆಂದು, ಹೇಳಿದರು.
೩ ಕರ್ತನು ನಮಗೆ ದೊಡ್ಡವುಗಳನ್ನು ಮಾಡಿದ್ದಾನೆ;
ಸಂತೋಷಿಸುತ್ತಾ ಇದ್ದೇವೆ.
೪ ಕರ್ತನೇ, ದಕ್ಷಿಣದಲ್ಲಿರುವ ಹೊಳೆಗಳ ಹಾಗೆ
ನಮ್ಮ ಸೆರೆಯನ್ನು ತಿರುಗಿಸು.
೫ ಕಣ್ಣೀರಿನಿಂದ ಬಿತ್ತುವವರು
ಉತ್ಸಾಹ ಧ್ವನಿಯಿಂದ ಕೊಯ್ಯುವರು.
ಹೋಗುತ್ತಾ, ಹೋಗುತ್ತಾ, ಅತ್ತು,
ಉತ್ತಮ ಬೀಜವನ್ನು ಹೊರುವವನು,
೬ ತನ್ನ ಸೂಡುಗಳನ್ನು ಹೊರುವವನಾಗಿ,
ಉತ್ಸಾಹ ಧ್ವನಿಯಿಂದ ಬಂದೇ ಬರುವನು.

## ೧೨೭. ಕೀರ್ತನೆ.

ಯಾತ್ರೆಯ ಹಾಡು; ಸೊಲೊಮೋನನದು.

೧ ಕರ್ತನು ಮನೆಯನ್ನು ಕಟ್ಟದೆ ಇದ್ದರೆ,
ಅದನ್ನು ಕಟ್ಟುವವರು ವ್ಯರ್ಥವಾಗಿ ಕಷ್ಟ ಪಡುತ್ತಾರೆ;
ಕರ್ತನು ಪಟ್ಟಣವನ್ನು ಕಾಪಾಡದೆ ಇದ್ದರೆ,
ಕಾಪಾಡುವವನು ವ್ಯರ್ಥವಾಗಿ ಎಚ್ಚರವಾಗಿದ್ದಾನೆ.
೨ ಬೆಳಿಗ್ಗೆ ಏಳುವವರೇ, ಮಲಗುವದಕ್ಕೆ ತಡೆ ಮಾಡುವವರೇ,
ವ್ಯಥೆಗಳ ಕೊಟ್ಟಿಯನ್ನು ಉಣ್ಣುವವರೇ, ಅದು ನಿಮಗೆ ವ್ಯರ್ಥವೇ;
ಅವನು ಹಾಗೆಯೇ ತನ್ನ ಪ್ರಿಯನಿಗೆ ನಿದ್ದೆ ಕೊಡುತ್ತಾನೆ.
೩ ಇಗೋ, ಮಕ್ಕಳು ಕರ್ತನಿಂದ ಬಾಧ್ಯತೆಯಾಗಿದ್ದಾರೆ;
ಗರ್ಭದ ಫಲವು ಸಂಬಳವಾಗಿದೆ.
೪ ಪರಾಕ್ರಮ ಶಾಲಿಯ ಕೈಯಲ್ಲಿ ಬಾಣಗಳು ಹ್ಯಾಗೋ,
ಹಾಗೆಯೇ ಯೌವನದ ಮಕ್ಕಳು.
೫ ತನ್ನ ಬತ್ತಳಿಕೆಯನ್ನು ಅವರಿಂದ ತುಂಬಿಸಿದ ಪುರುಷನು ಭಾಗ್ಯವಂತನು;
ಶತ್ರುಗಳ ಸಂಗಡ ಬಾಗಲಲ್ಲಿ ಮಾತಾಡುವಾಗ,
ಅವರು ನಾಚಿಕೆ ಪಡರು.

## ೧೨೮. ಕೀರ್ತನೆ.

ಯಾತ್ರೆಯ ಹಾಡು.

೧ ಕರ್ತನಿಗೆ ಭಯ ಪಟ್ಟು,
ಅವನ ಮಾರ್ಗಗಳಲ್ಲಿ ನಡೆದು ಕೊಳ್ಳುವವರೆಲ್ಲರು ಭಾಗ್ಯವಂತರು.
೨ ನಿನ್ನ ಕೈಗಳ ಕಷ್ಟಾರ್ಜಿತವನ್ನು ನೀನು ಉಣ್ಣುವಿ;
ನೀನು ಭಾಗ್ಯವಂತನು; ನಿನಗೆ ಒಳ್ಳೇದಾಗುವದು.
೩ ನಿನ್ನ ಹೆಂಡತಿ ನಿನ್ನ ಮನೆಯ ಪಾರ್ಶ್ವದಲ್ಲಿರುವ ಫಲಿತವಾದ ದ್ರಾಕ್ಷೇ ಗಿಡದ ಹಾಗೆಯೂ,
ನಿನ್ನ ಮಕ್ಕಳು ನಿನ್ನ ಮೇಜಿನ ಸುತ್ತಲಿರುವ ಇಪ್ಪೆಯ ಸಸಿಗಳ ಹಾಗೆಯೂ, ಇರುವರು.
೪ ಇಗೋ, ಕರ್ತನಿಗೆ ಭಯ ಪಡುವ ಪುರುಷನು ಹೀಗೆಯೇ ಆಶೀರ್ವದಿಸಲ್ಪಡುವನು.
೫ ಕರ್ತನು ನಿನ್ನನ್ನು ಚಿಯೋನಿನೊಳಗಿಂದ ಆಶೀರ್ವದಿಸುವನು;
ನಿನ್ನ ಜೀವದ ದಿವಸಗಳೆಲಾ ನೀನು ಯೆರೂಸಲೇಮಿನ ಕ್ಷೇಮವನ್ನು ನೋಡುವಿ.
೬ ಮತ್ತು ನಿನ್ನ ಮಕ್ಕಳ ಮಕ್ಕಳನ್ನೂ,
ಇಸ್ರಯೇಲಿನ ಮೇಲಿರುವ ಸಮಾಧಾನವನ್ನೂ, ನೋಡುವಿ.

## ೧೨೯. ಕೀರ್ತನೆ.

ಯಾತ್ರೆಯ ಹಾಡು.

೧ ನನ್ನ ಯೌವನದಿಂದ ನನಗೆ ಬಹಳ ಇಕ್ಕಟ್ಟು ಮಾಡಿದ್ದಾರೆಂದು,
ಇಸ್ರಯೇಲು ಈಗ ಹೇಳಲಿ.
೨ ನನ್ನ ಯೌವನದಿಂದ ನನಗೆ ಬಹಳ ಇಕ್ಕಟ್ಟು ಮಾಡಿದ್ದಾರೆ;
ಆದರೆ ಅವರು ನನ್ನನ್ನು ಗೆಲ್ಲಲಿಲ್ಲ.
೩ ಉಳುವವರು ನನ್ನ ಬೆನ್ನಿನ ಮೇಲೆ ಉತ್ತಿದ್ದಾರೆ;
ತಮ್ಮ ಸಾಲುಗಳನ್ನು ಉದ್ದ ಮಾಡಿದ್ದಾರೆ.
೪ ಕರ್ತನು ನೀತಿವಂತನು;
ದುಷ್ಟರ ಉರ್ಲುಗಳನ್ನು ಕೊಯಿದು ಬಿಟ್ಟಿದ್ದಾನೆ.
೫ ಚಿಯೋನನ್ನು ಪಗೆ ಮಾಡುವವರೆಲ್ಲರು ನಾಚಿಕೆ ಪಟ್ಟು, ಹಿಂದಿರುಗಲಿ.
೬ ಕೀಳುವದಕ್ಕಿಂತ ಮುಂಚೆ ಒಣಗಿ ಹೋಗುವ
ಮಾಳಿಗೇ ಹುಲ್ಲಿನ ಹಾಗೆ ಅವರು ಇರಲಿ.
೭ ಅದರಿಂದ ಕೊಯ್ಯುವವನು ತನ್ನ ಅಂಗೈಯನ್ನೂ,
ಕೆಂಡಿ ಕಟ್ಟುವವನು ತನ್ನ ಉಡಿಲನ್ನೂ, ತುಂಬಿಸನು.
೮ ಹಾದು ಹೋಗುವವರು—ಕರ್ತನ ಆಶೀರ್ವಾದವು ನಿಮ್ಮ ಮೇಲೆ ಇರಲಿ,
ಕರ್ತನ ಹೆಸರಿನಲ್ಲಿ ನಿಮ್ಮನ್ನು ಆಶೀರ್ವದಿಸುತ್ತೇವೆ ಎಂದು ಹೇಳಿರು.

## ೧೩೦. ಕೀರ್ತನೆ.

ಯಾತ್ರೆಯ ಹಾಡು.

೧ ಅಗಾಧಗಳೊಳಗಿಂದ ನಿನಗೆ ಕೂಗುತ್ತೇನೆ, ಕರ್ತನೇ.
೨ ಕರ್ತನೇ, ನನ್ನ ಶಬ್ದವನ್ನು ಕೇಳು;
ನಿನ್ನ ಕಿವಿಗಳು ನನ್ನ ವಿಜ್ಞಾಪನೆಗಳ ಶಬ್ದವನ್ನು ಆಲೈಸುತ್ತಾ ಇರಲಿ.
೩ ಕರ್ತನೇ, ನೀನು ಅಕ್ರಮಗಳ ಮೇಲೆ ಕಣ್ಣಿಟ್ಟರೆ,
ಯಾರು ನಿಲ್ಲುವರು, ಕರ್ತನೇ!
೪ ಆದರೆ ನಿನಗೆ ಭಯ ಪಡುವ ಹಾಗೆ,
ನಿನ್ನ ಬಳಿಯಲ್ಲಿ ಮನ್ನಿಸುವಿಕೆ ಉಂಟು.
೫ ಕರ್ತನನ್ನು ನಿರೀಕ್ಷಿಸುತ್ತೇನೆ; ನನ್ನ ಪ್ರಾಣವು ನಿರೀಕ್ಷಿಸುತ್ತದೆ;
ಅವನ ವಾಕ್ಯಕ್ಕೆ ಎದುರು ನೋಡುತ್ತೇನೆ.
೬ ಉದಯಕ್ಕೆ ಕಾದು ಕೊಳ್ಳುವವರಿಗಿಂತ,
ಹೌದು, ಉದಯಕ್ಕೆ ಕಾದು ಕೊಳ್ಳುವವರಿಗಿಂತ ನನ್ನ ಪ್ರಾಣವು ಕರ್ತನನ್ನು ನಿರೀಕ್ಷಿಸುತ್ತದೆ.
೭ ಇಸ್ರಯೇಲು ಕರ್ತನಿಗೆ ಎದುರು ನೋಡಲಿ;
ಯಾಕಂದರೆ ಕರ್ತನ ಬಳಿಯಲ್ಲಿ ಕೃಪೆಯೂ,
ಅವನ ಬಳಿಯಲ್ಲಿ ವಿಮೋಚನೆಯೂ, ಬಹಳವಾಗಿದೆ.
೮ ಮತ್ತು ಅವನು ಇಸ್ರಯೇಲನ್ನು ಅವನ ಎಲ್ಲಾ ಅಕ್ರಮಗಳಿಂದ ವಿಮೋಚಿಸುವನು.

## ೧೩೧. ಕೀರ್ತನೆ.

ಯಾತ್ರೆಯ ಹಾಡು; ದಾವೀದನದು.

೧ ಕರ್ತನೇ, ನನ್ನ ಹೃದಯವು ಉನ್ನತವಲ್ಲ;
ನನ್ನ ಕಣ್ಣುಗಳು ಎತ್ತರವಲ್ಲ;
ನನಗೆ ದೊಡ್ಡವುಗಳಲ್ಲಿಯೂ, ಅದ್ಭುತವಾದವುಗಳಲ್ಲಿಯೂ, ನಾನು ನಡೆದು ಕೊಳ್ಳುವದಿಲ್ಲ.
೨ ನಿಶ್ಚಯವಾಗಿ, ಮೊಲೆ ಬಿಡಿಸಿದ ಕೂಸು ತನ್ನ ತಾಯಿಯ ಬಳಿಯಲ್ಲಿ ಇರುವ ಪ್ರಕಾರ, ನನ್ನ ಪ್ರಾಣವನ್ನು ಸಂತೈಸಿ, ಸುಮ್ಮನಿರಿಸಿದ್ದೇನೆ;
ನನ್ನ ಪ್ರಾಣವು ಮೊಲೆ ಬಿಡಿಸಿದ ಕೂಸಿನ ಹಾಗೆ ನನ್ನ ಬಳಿಯಲ್ಲಿ ಅದೆ.
೩ ಇಸ್ರಯೇಲು ಈಗಿನಿಂದ ಯುಗ ಯುಗಕ್ಕೂ ಕರ್ತನಿಗೆ ಎದುರು ನೋಡಲಿ.

## ೧೩೨. ಕೀರ್ತನೆ.

ಯಾತ್ರೆಯ ಹಾಡು.

೧ ಕರ್ತನೇ, ದಾವೀದನಿಗೋಸ್ಕರ
ಅವನ ಶ್ರಮೆಗಳನ್ನೆಲ್ಲಾ ಜ್ಞಾಪಕ ಮಾಡಿಕೋ.
೨ ಅವನು ಕರ್ತನಿಗೆ ಆಣೆ ಇಟ್ಟು,
ಯಾಕೋಬನ ಶಕ್ತನಿಗೆ ಹರಕೆ ಹೇಳಿ ಕೊಂಡದ್ದೇನಂದರೆ—
೩ ಕರ್ತನಿಗೆ ಒಂದು ಸ್ಥಳವನ್ನೂ,
ಯಾಕೋಬನ ಶಕ್ತನಿಗೆ ನಿವಾಸಗಳನ್ನೂ, ಕಂಡು ಕೊಳ್ಳುವ ಮಟ್ಟಿಗೆ,
೪ ನನ್ನ ಮನೆಯ ಗುಡಾರದಲ್ಲಿ ಸೇರೆನು;
ನನ್ನ ಮಂಚದ ಹಾಸಿಗೆಯನ್ನು ಏರೆನು;
೫ ನನ್ನ ಕಣ್ಣುಗಳಿಗೆ ನಿದ್ದೆಯನ್ನೂ,
ನನ್ನ ರೆಪ್ಪೆಗಳಿಗೆ ತೂಕಡಿಕೆಯನ್ನೂ, ಕೊಡೆನು.
೬ ಇಗೋ, ಎಫ್ರಥದಲ್ಲಿ ಅದನ್ನು ಕೇಳಿದೆವು;
ಅಡವಿಯ ಪೈಲುಗಳಲ್ಲಿ ಅದನ್ನು ಕಂಡು ಕೊಂಡೆವು.
೭ ಅವನ ನಿವಾಸಗಳಿಗೆ ಬಂದು,
ಅವನ ಪಾದ ಪೀಠಕ್ಕೆ ಅಡ್ಡ ಬೀಳುವ.
೮ ಕರ್ತನೇ, ನೀನು ನಿನ್ನ ತ್ರಾಣದ ಪೆಟ್ಟಿಗೆಯೊಂದಿಗೆ
ನಿನ್ನ ವಿಶ್ರಾಂತಿಗೆ ಏರು.
೯ ನಿನ್ನ ಯಾಜಕರು ನೀತಿಯನ್ನು ಹೊದ್ದು ಕೊಳ್ಳಲಿ;
ನಿನ್ನ ಭಕ್ತರು ಉತ್ಸಾಹ ಧ್ವನಿ ಮಾಡಲಿ.

೧೦ ನಿನ್ನ ಸೇವಕನಾದ ದಾವೀದನ ನಿಮಿತ್ತ
ನಿನ್ನ ಅಭಿಷಿಕ್ತನ ಮುಖವನ್ನು ತಿರುಗಿಸ ಬೇಡ.

೧೧ ಕರ್ತನು ದಾವೀದನಿಗೆ ಸತ್ಯದ ಆಣೆ ಇಟ್ಟಿದ್ದಾನೆ; ಅದರಿಂದ ತಿರುಗಿ ಕೊಳ್ಳನು;—
ನಿನ್ನ ಹೊಟ್ಟೆಯ ಫಲವನ್ನು ನಿನ್ನ ಸಿಂಹಾಸನದ ಮೇಲೆ ಇರಿಸುವೆನು.
೧೨ ನಿನ್ನ ಮಕ್ಕಳು ನಾನು ಅವರಿಗೆ ಕಲಿಸುವ ನನ್ನ ಒಡಂಬಡಿಕೆಯನ್ನೂ, ನನ್ನ ಸಾಕ್ಷಿಯನ್ನೂ ಕೈ ಕೊಂಡರೆ,
ಅವರ ಮಕ್ಕಳು ಸಹ ಎಂದೆಂದಿಗೂ ನಿನ್ನ ಸಿಂಹಾಸನದಲ್ಲಿ ಕೂತ್ತುವರು.
೧೩ ಯಾಕಂದರೆ ಕರ್ತನು ಚಿಯೋನನ್ನು ಆದು ಕೊಂಡು,
ಅದನ್ನು ತನ್ನ ವಾಸಕ್ಕಾಗಿ ಅಪೇಕ್ಷಿಸಿದ್ದಾನೆ.
೧೪ ಇದೇ ಎಂದೆಂದಿಗೂ ನನ್ನ ವಿಶ್ರಾಂತಿಯ ಸ್ಥಳವು;
ಇಲ್ಲೇ ವಾಸಿಸುವೆನು; ಯಾಕಂದರೆ ಇದನ್ನು ಅಪೇಕ್ಷಿಸಿದ್ದೇನೆ.
೧೫ ಅದರ ಆಹಾರವನ್ನು ಆಶೀರ್ವದಿಸೇ ಆಶೀರ್ವದಿಸುವೆನು;
ಅದರ ಬಡವರನ್ನು ರೊಟ್ಟಿಯಿಂದ ತೃಪ್ತಿ ಪಡಿಸುವೆನು.
೧೬ ಮತ್ತು ಅದರ ಯಾಜಕರಿಗೆ ರಕ್ಷಣೆಯನ್ನು ಹೊದ್ದಿಸುವೆನು;
ಅದರ ಭಕ್ತರು ಉತ್ಸಾಹ ಧ್ವನಿ ಮಾಡೇ ಮಾಡುವರು.
೧೭ ಅಲ್ಲಿ ದಾವೀದನಿಗೆ ಕೊಂಬನ್ನು ಮೊಳಿಸುವೆನು;
ನನ್ನ ಅಭಿಷಿಕ್ತನಿಗೆ ದೀಪವನ್ನು ಸಿದ್ಧ ಮಾಡಿದ್ದೇನೆ.
೧೮ ಅವನ ಶತ್ರುಗಳಿಗೆ ನಾಚಿಕೆಯನ್ನು ಹೊದ್ದಿಸುವೆನು;
ಆದರೆ ಅವನ ಮೇಲೆ ಅವನ ಕಿರೀಟವು ಅರಳುವದು.

## ೧೩೩. ಕೀರ್ತನೆ.

ಯಾತ್ರೆಯ ಹಾಡು; ದಾವೀದನದು.

೧ ಇಗೋ, ಸಹೋದರರು ಒಂದೇಯಾಗಿ ವಾಸ ಮಾಡುವದು
ಎಷ್ಟೋ ಒಳ್ಳೇದು! ಎಷ್ಟೋ ರಮ್ಯವಾದದ್ದು!
೨ ತಲೆಯ ಮೇಲಿದ್ದು,
ಗಡ್ಡದ ಮೇಲೆ—ಆರೋನನ ಗಡ್ಡದ ಮೇಲೆ—ಇಳಿದು,
ಅವನ ವಸ್ತ್ರಗಳ ಅಂಚಿನ ಮೇಲೆ ಇಳಿಯುವ ಒಳ್ಳೇ ಎಣ್ಣೆಯ ಹಾಗೆಯೂ,
3 ಚಿಯೋನಿನ ಪರ್ವತಗಳ ಮೇಲೆ ಇಳಿಯುವ
ಹೆರ್ಮೋನಿನ ಮಂಜಿನ ಹಾಗೆಯೂ, ಅದೆ;
ಯಾಕಂದರೆ ಅಲ್ಲಿ ಕರ್ತನು ಆಶೀರ್ವಾದವನ್ನು—
ಯುಗ ಯುಗಕ್ಕಿರುವ ಜೀವವನ್ನು—ಆಜ್ಞಾಪಿಸಿದ್ದಾನೆ.

## ೧೩೪. ಕೀರ್ತನೆ.

ಯಾತ್ರೆಯ ಹಾಡು.

೧ ಇಗೋ, ಕರ್ತನ ಮನೆಯಲ್ಲಿ ಪ್ರತಿ ರಾತ್ರಿ ನಿಲ್ಲುವವರಾದ
ಕರ್ತನ ಸೇವಕರೆಲ್ಲರೇ,
ಕರ್ತನನ್ನು ಆಶೀರ್ವದಿಸಿರಿ.
೨ ನಿಮ್ಮ ಕೈಗಳನ್ನು ಪರಿಶುದ್ಧ ಸ್ಥಳದಲ್ಲಿ ಎತ್ತಿ,
ಕರ್ತನನ್ನು ಆಶೀರ್ವದಿಸಿರಿ.
3 ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದ ಕರ್ತನು
ಚಿಯೋನಿನೊಳಗಿಂದ ನಿನ್ನನ್ನು ಆಶೀರ್ವದಿಸಲಿ.

## ೧೩೫. ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ,
ಕರ್ತನ ಹೆಸರನ್ನು ಸ್ತುತಿಸಿರಿ;
ಕರ್ತನ ಮನೆಯಲ್ಲಿಯೂ,
೨ ನಮ್ಮ ದೇವರ ಮನೆಯ ಅಂಗಳಗಳಲ್ಲಿಯೂ,
ನಿಲ್ಲುವ ಕರ್ತನ ಸೇವಕರೇ, ಸ್ತುತಿಸಿರಿ.
3 ಕರ್ತನನ್ನು ಸ್ತುತಿಸಿರಿ; ಯಾಕಂದರೆ ಕರ್ತನು ಒಳ್ಳೆಯವನು;
ಅವನ ಹೆಸರನ್ನು ಕೀರ್ತಿಸಿರಿ; ಯಾಕಂದರೆ ಅದು ರಮ್ಯವಾದದ್ದು.
೪ ಯಾಕಂದರೆ ಕರ್ತನು ಯಾಕೋಬನನ್ನು ತನಗೋಸ್ಕರವೂ,
ಇಸ್ರಯೇಲನ್ನು ತನ್ನ ಸ್ವಾಸ್ಥ್ಯಕ್ಕಾಗಿಯೂ, ಆದು ಕೊಂಡಿದ್ದಾನೆ.
೫ ಯಾಕಂದರೆ ಕರ್ತನು ದೊಡ್ಡವನು;
ನಮ್ಮ ಕರ್ತನು ಎಲ್ಲಾ ದೇವರುಗಳಿಗಿಂತ ದೊಡ್ಡವನೆಂದು,
ನಾನು ತಿಳಿದಿದ್ದೇನೆ.
೬ ಕರ್ತನು ಆಕಾಶದಲ್ಲಿಯೂ, ಭೂಮಿಯಲ್ಲಿಯೂ,
ಸಮುದ್ರದಲ್ಲಿಯೂ, ಎಲ್ಲಾ ಅಗಾಧಗಳಲ್ಲಿಯೂ, ತಾನು ಅಪೇಕ್ಷಿಸುವದನ್ನೆಲ್ಲಾ ಮಾಡುತ್ತಾನೆ.
೭ ಭೂಮಿಯ ಅಂತ್ಯಗಳಿಂದ ಮೋಡಗಳನ್ನು ಏಳ ಮಾಡಿ,
ಮಳೆಗೋಸ್ಕರ ಮಿಂಚುಗಳನ್ನು ಮಾಡಿ,
ಭಂಡಿಯನ್ನು ತನ್ನ ಉಗ್ರಾಣಗಳಿಂದ ಹೊರಗೆ ಬರ ಮಾಡುತ್ತಾನೆ.
೮ ಅವನು ಮಿಚ್ರದ ಚೊಚ್ಚಲುಗಳನ್ನು,
ಮನುಷ್ಯ ಮೊದಲುಗೊಂಡು ಪಶುಗಳ ಮಟ್ಟಿಗೂ, ಹೊಡೆದನು.
೯ ಮಿಚ್ರವೇ, ನಿನ್ನ ಮಧ್ಯದಲ್ಲಿ ಗುರುತುಗಳನ್ನೂ ಲಕ್ಷಣಗಳನ್ನೂ ಫರೋನನಿಗೂ, ಅವನ ಸಕಲ ಸೇವಕರಿಗೂ, ವಿರೋಧವಾಗಿ ಕಳುಹಿಸಿದನು.
೧೦ ಅವನು ಬಹಳ ಜನಾಂಗಗಳನ್ನು ಹೊಡೆದು,
ಬಲವಾದ ಅರಸುಗಳನ್ನು ಕೊಂದು ಹಾಕಿದನು.
೧೧ ಅಮೊರೀಯರ ಅರಸನಾದ ಸೀಹೋನನೂ,
ಬಾಶಾನಿನ ಅರಸನಾದ ಓಗನೂ,
ಕಾನಾನಿನ ಎಲ್ಲಾ ರಾಜ್ಯಗಳೂ, ತಾನೆ.
೧೨ ಅವರ ದೇಶವನ್ನು ಬಾಧ್ಯತೆಯಾಗಿ
ತನ್ನ ಜನರಾದ ಇಸ್ರಯೇಲಿಗೆ ಬಾಧ್ಯತೆಯಾಗಿಯೂ, ಕೊಟ್ಟನು.
೧೩ ಕರ್ತನೇ, ನಿನ್ನ ಹೆಸರು ಯುಗ ಯುಗಕ್ಕೂ,
ಕರ್ತನೇ, ನಿನ್ನ ಜ್ಞಾಪಕವು ತಲ ತಲಾಂತರಕ್ಕೂ, ಇರುವದು.
೧೪ ಯಾಕಂದರೆ ಕರ್ತನು ತನ್ನ ಜನರಿಗೆ ನ್ಯಾಯ ತೀರಿಸಿ,
ತನ್ನ ಸೇವಕರಿಗೋಸ್ಕರ ಪಶ್ಚಾತ್ತಾಪ ಪಡುವನು.



೧೫ ಜನಾಂಗಗಳ ಬೊಂಬೆಗಳು ಬೆಳ್ಳಿಯೂ, ಭಂಗಾರವೂ,
ಮನುಷ್ಯನ ಕೈ ಕೆಲಸವೂ, ಆಗಿವೆ.
೧೬ ಅವುಗಳಿಗೆ ಬಾಯಿ ಉಂಟು; ಮಾತಾಡುವದಿಲ್ಲ.
ಕಣ್ಣು ಗಳುಂಟು; ಕಾಣುವದಿಲ್ಲ.
೧೭ ಕಿವಿಗಳುಂಟು, ಕಿವಿ ಕೊಡುವದಿಲ್ಲ.
ಮತ್ತು ಅವುಗಳ ಬಾಯಿಯಲ್ಲಿ ಶ್ವಾಸವೇನೂ ಇಲ್ಲ.
೧೮ ಅವುಗಳನ್ನು ಮಾಡುವವರೂ,
ಅವುಗಳಲ್ಲಿ ಭರವಸವಿಡುವವರೆಲ್ಲರೂ ಅವುಗಳ ಹಾಗೆಯೇ ಇದ್ದಾರೆ.
೧೯ ಇಸ್ರಯೇಲನ ಮನೆಯವರೇ, ಕರ್ತನನ್ನು ಆಶೀರ್ವದಿಸಿರಿ.
ಆರೋನನ ಮನೆಯವರೇ, ಕರ್ತನನ್ನು ಆಶೀರ್ವದಿಸಿರಿ.
೨೦ ಲೇವಿಯ ಮನೆಯವರೇ, ಕರ್ತನನ್ನು ಆಶೀರ್ವದಿಸಿರಿ;
ಕರ್ತನಿಗೆ ಭಯ ಪಡುವವರೇ, ಕರ್ತನನ್ನು ಆಶೀರ್ವದಿಸಿರಿ.
೨೧ ಯೆರೂಸಲೇಮಿನಲ್ಲಿ ವಾಸಿಸುವ
ಕರ್ತನಿಗೆ ಚಿಯೋನಿನೊಳಗಿಂದ ಆಶೀರ್ವಾದವಾಗಲಿ.
ಕರ್ತನನ್ನು ಸ್ತುತಿಸಿರಿ.

## ೧೩೬. ಕೀರ್ತನೆ.

೧ ಕರ್ತನನ್ನು ಕೊಂಡಾಡಿರಿ; ಯಾಕಂದರೆ ಅವನು ಒಳ್ಳೆಯವನು;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೨ ದೇವರುಗಳ ದೇವರನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
3 ಕರ್ತರ ಕರ್ತನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೪ ಒಬ್ಬನಾಗಿ ದೊಡ್ಡ ಅದ್ಭುತಗಳನ್ನು ಮಾಡುವವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೫ ಆಕಾಶವನ್ನು ವಿವೇಕದಿಂದ ಉಂಟು ಮಾಡಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೬ ಭೂಮಿಯನ್ನು ನೀರಿನ ಮೇಲೆ ಹಾಸಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೭ ದೊಡ್ಡ ಬೆಳಕುಗಳನ್ನು ಉಂಟು ಮಾಡಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೮ ಹಗಲು ಆಳುವದಕ್ಕೆ ಸೂರ್ಯನನ್ನು ಉಂಟು ಮಾಡಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೯ ಇರಳು ಆಳುವದಕ್ಕೆ ಚಂದ್ರ ನಕ್ಷತ್ರಗಳನ್ನು ಉಂಟು ಮಾಡಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೦ ಮಿಚ್ರದ ಚೊಚ್ಚಲುಗಳನ್ನು ಹೊಡೆದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೧ ಇಸ್ರಯೇಲನನ್ನು ಅವರ ಮಧ್ಯದಲ್ಲಿಂದ ಹೊರಗೆ ಬರ ಮಾಡಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೨ ಬಲವಾದ ಕೈಯಿಂದಲೂ, ನೀಡಿದ ತೋಳಿನಿಂದಲೂ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧3 ಕೆಂಪು ಸಮುದ್ರವನ್ನು ಭಾಗವಾಗಿ ಭಾಗಿಸಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೪ ಇಸ್ರಯೇಲನ್ನು ಅದರ ನಡುವೆ ದಾಟಿಸಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೫ ಫರೋನನನ್ನೂ, ಅವನ ಸೈನ್ಯವನ್ನೂ, ಕೆಂಪು ಸಮುದ್ರದಲ್ಲಿ ಕೆಡವಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೬ ತನ್ನ ಜನರನ್ನು ಅರಣ್ಯದಲ್ಲಿ ನಡಿಸಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೭ ದೊಡ್ಡ ಅರಸುಗಳನ್ನು ಹೊಡೆದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೮ ಶ್ರೇಷ್ಠ ಅರಸುಗಳನ್ನು ಕೊಂದು ಹಾಕಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೧೯ ಅಮೊರೀಯರ ಅರಸನಾದ ಸೀಹೋನನನ್ನು;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೨೦ ಬಾಶಾನಿನ ಅರಸನಾದ ಓಗನನ್ನು;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೨೧ ಅವರ ದೇಶವನ್ನು ಬಾಧ್ಯತೆಯಾಗಿ ಕೊಟ್ಟವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ;
೨೨ ತನ್ನ ಸೇವಕನಾದ ಇಸ್ರಯೇಲನಿಗೆ ಬಾಧ್ಯತೆಯಾಗಿಯೇ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೨3 ನಮ್ಮ ದೀನ ಸ್ಥಿತಿಯಲ್ಲಿ ನಮ್ಮನ್ನು ನೆನಸಿ ಕೊಂಡವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೨೪ ನಮ್ಮ ವೈರಿಗಳ ಕೈಯೊಳಗಿಂದ ನಮ್ಮನ್ನು ಬಿಡಿಸಿದವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೨೫ ಎಲ್ಲಾ ಮಾಂಸಕ್ಕೆ ಕೊಟ್ಟೆ ಕೊಡುವವನನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.
೨೬ ಪರಲೋಕದ ದೇವರನ್ನು ಕೊಂಡಾಡಿರಿ;
ಯಾಕಂದರೆ ಅವನ ಕೃಪೆಯು ಯುಗ ಯುಗಕ್ಕೂ ಅದೆ.

## ೧೩೭. ಕೀರ್ತನೆ.

೧ ಬಾಬೆಲಿನ ನದಿಗಳ ಹತ್ರ, ಅಲ್ಲಿ ಕೂತು ಕೊಂಡು,
ಚಿಯೋನನ್ನು ಜ್ಞಾಪಕ ಮಾಡಿ ಕೊಂಡಾಗ, ಅತ್ತೆವು.
೨ ಅದರ ನಡುವೆ ಇರುವ ನೀರವಂಜಿ ಮರಗಳ ಮೇಲೆ ನಮ್ಮ ಕಿನ್ನರಿಗಳನ್ನು ತೂಗಿಟ್ಟೆವು.

೩ ಯಾಕಂದರೆ ಅಲ್ಲಿ ನಮ್ಮನ್ನು ಸೆರೆ ಹಿಡಿದವರು ಹಾಡಿನ ಮಾತುಗಳನ್ನೂ,
ನಮ್ಮನ್ನು ಅಳಿಸಿ ಮಾಡಿದವರು ಸಂತೋಷವನ್ನೂ, ಕೇಳಿಕೊಂಡು–
ಚಿಯೋನಿನ ಹಾಡುಗಳಲ್ಲಿ ಒಂದು ನಮಗೆ ಹಾಡಿರಿ, ಅಂದರು.

೪ ಅನ್ಯ ದೇಶದಲ್ಲಿ ನಾವು ಕರ್ತನ ಹಾಡನ್ನು ಹಾಡುವದು ಹ್ಯಾಗೆ!
೫ ಯೆರೂಸಲೇಮೇ, ನಾನು ನಿನ್ನನ್ನು ಮರೆತು ಬಿಟ್ಟರೆ,
ನನ್ನ ಬಲಗೈ ಮರೆತು ಹೋಗಲಿ.
೬ ನಾನು ನಿನ್ನನ್ನು ಜ್ಞಾಪಕ ಮಾಡಿ ಕೊಳ್ಳದೆ,
ಯೆರೂಸಲೇಮನ್ನು ನನ್ನ ಮುಖ್ಯ ಸಂತೋಷಕ್ಕಿಂತ ಹೆಚ್ಚಿಸದಿದ್ದರೆ,
ನನ್ನ ನಾಲಿಗೆಯು ನನ್ನ ಅಂಗಳಕ್ಕೆ ಹತ್ತಲಿ.

೭ ಹಾಳು ಮಾಡಿರಿ, ಅದರ ಅಸ್ತಿವಾರದ ವರಿಗೆ ಹಾಳು ಮಾಡಿರಿ,
ಎಂದು ಹೇಳಿದ ಎದೋಮಿನ ಮಕ್ಕಳಿಗೆ
ಯೆರೂಸಲೇಮಿನ ದಿವಸವನ್ನು ಜ್ಞಾಪಕ ಮಾಡಿಕೋ, ಕರ್ತನೇ.
೮ ಸೂಕೆಯಾದ ಬಾಬೆಲಿನ ಮಗಳೇ,
ನೀನು ನಮಗೆ ಮಾಡಿದ ಕಾರ್ಯಕ್ಕೆ ಪ್ರತಿಕಾರವನ್ನು ನಿನಗೆ ಸಲ್ಲಿಸುವವನು ಭಾಗ್ಯವಂತನು.
೯ ನಿನ್ನ ಕೂಸುಗಳನ್ನು ಹಿಡಿದು,
ಬಂಡೆಯ ಮೇಲೆ ಬಡೆದು ಬಿಡುವವನು ಭಾಗ್ಯವಂತನು.

## ೧೩೮. ಕೀರ್ತನೆ.

ದಾವೀದನದು.

೧ ನನ್ನ ಪೂರ್ಣ ಹೃದಯದಿಂದ ನಿನ್ನನ್ನು ಕೊಂಡಾಡುವೆನು;
ದೇವರುಗಳ ಮುಂದೆ ನಿನ್ನನ್ನು ಕೀರ್ತಿಸುವೆನು.
೨ ನಿನ್ನ ಪರಿಶುದ್ಧ ಮಂದಿರದ ಕಡೆಗೆ ಅಡ್ಡ ಬಿದ್ದು,
ನಿನ್ನ ಕೃಪೆಯ ನಿಮಿತ್ತವೂ, ನಿನ್ನ ಸತ್ಯದ ನಿಮಿತ್ತವೂ, ನಿನ್ನ ಹೆಸರನ್ನು ಕೊಂಡಾಡುವೆನು;
ಯಾಕಂದರೆ ನಿನ್ನ ವಾಕ್ಯವನ್ನು ನಿನ್ನ ಎಲ್ಲಾ ಹೆಸರಿನ ಮೇಲೆ ದೊಡ್ಡದಾಗಿ ಮಾಡಿದ್ದೀ.
೩ ನಾನು ಕರೆದ ದಿವಸದಲ್ಲಿ ನೀನು ನನಗೆ ಉತ್ತರ ಕೊಟ್ಟೆ;
ನನ್ನ ಪ್ರಾಣದಲ್ಲಿ ಬಲವನ್ನು ಕೊಟ್ಟು, ನನ್ನನ್ನು ಧೈರ್ಯಪಡಿಸಿದ್ದೀ.

೪ ಕರ್ತನೇ, ನಿನ್ನ ಬಾಯಿಯ ಮಾತುಗಳನ್ನು ಕೇಳುವಾಗ,
ಭೂಮಿಯ ಅರಸುಗಳೆಲ್ಲರು ನಿನ್ನನ್ನು ಕೊಂಡಾಡುವರು.
೫ ಅವರು ಕರ್ತನ ಮಾರ್ಗಗಳಲ್ಲಿ–
ಕರ್ತನ ಘನವು ದೊಡ್ಡದೆಂದು, ಹಾಡುವರು.

೬ ಯಾಕಂದರೆ ಕರ್ತನು ಉನ್ನತನಾಗಿದ್ದು, ದೀನನನ್ನು ನೋಡುತ್ತಾನೆ.
ಎತ್ತವಾರದವನನ್ನು ದೂರದಿಂದ ತಿಳಿಯ ಕೊಳ್ಳುತ್ತಾನೆ.

೭ ನಾನು ಇಕ್ಕಟ್ಟಿನ ನಡುವೆ ನಡೆದರೆ, ನೀನು ನನ್ನನ್ನು ಬದುಕಿಸಿ,
ನನ್ನ ಶತ್ರುಗಳ ಕೋಪಕ್ಕೆ ವಿರೋಧವಾಗಿ ನಿನ್ನ ಕೈಯನ್ನು ಚಾಚುತ್ತೀ;
ನಿನ್ನ ಬಲಗೈ ನನ್ನನ್ನು ರಕ್ಷಿಸುತ್ತದೆ.
೮ ಕರ್ತನು ನನಗೋಸ್ಕರ ಪೂರೈಸುವನು;
ಕರ್ತನೇ, ನಿನ್ನ ಕೃಪೆಯು ಯುಗ ಯುಗಕ್ಕೂ ಅದೆ;
ನಿನ್ನ ಕೈ ಕೆಲಸಗಳನ್ನು ಬಿಟ್ಟು ಬಿಡ ಬೇಡ.

## ೧೩೯. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ಕರ್ತನೇ, ನನ್ನನ್ನು ಪರಿಶೋಧಿಸಿ, ತಿಳಿಯ ಕೊಂಡಿದ್ದೀ;
೨ ನಾನು ಕೂತ್ತುವದನ್ನೂ, ಏಳುವದನ್ನೂ, ನೀನು ತಿಳಿಯ ಕೊಂಡಿದ್ದೀ;
ನನ್ನ ಆಲೋಚನೆಯನ್ನು ದೂರದಿಂದ ಗ್ರಹಿಸಿ ಕೊಂಡಿದ್ದೀ.
೩ ನಾನು ನಡೆಯುವದನ್ನೂ, ನಾನು ಮಲಗುವದನ್ನೂ, ನೀನು ಶೋಧಿಸಿದ್ದೀ;
ನನ್ನ ಮಾರ್ಗಗಳೆಲ್ಲಾ ನಿನಗೆ ಗೊತ್ತಾಗಿವೆ.
೪ ಯಾಕಂದರೆ, ಇಗೋ, ಕರ್ತನೇ, ನನ್ನ ನಾಲಿಗೆಯಲ್ಲಿ
ನಿನಗೆ ಪೂರ್ಣವಾಗಿ ತಿಳಿಯದ ಮಾತು ಒಂದಾದರೂ ಇಲ್ಲ.
೫ ಹಿಂದೆಯೂ ಮುಂದೆಯೂ ನನ್ನನ್ನು ಇರಿಕಿಸಿ,
ನಿನ್ನ ಕೈಯನ್ನು ನನ್ನ ಮೇಲೆ ಇಟ್ಟಿದ್ದೀ.
೬ ಇಂಥ ತಿಳುವಿಕೆಯು ನನಗೆ ಅದ್ಭುತವಾಗಿದೆ;
ಅದು ಉನ್ನತವಾಗಿದೆ; ಅದನ್ನು ಅಂದಲಾರೆನು.

೭ ನಾನು ನಿನ್ನ ಆತ್ಮಕ್ಕೆ ತಪ್ಪಿ, ಎಲ್ಲಿಗೆ ಹೋಗಲಿ!
ನಿನ್ನ ಮುಖಕ್ಕೆ ತಪ್ಪಿ, ಎಲ್ಲಿಗೆ ಓಡಲಿ!
೮ ನಾನು ಆಕಾಶಕ್ಕೆ ಏರಿ ಹೋದರೆ, ನೀನು ಅಲ್ಲಿ ಇದ್ದೀ;
ಪಾತಾಳವನ್ನು ನನ್ನ ಹಾಸಿಗೆಯಾಗಿ ಮಾಡಿದರೆ, ಅಗೋ, ನೀನು ಅಲ್ಲಿ ಇದ್ದೀ.
೯ ಉದಯದ ರೆಕ್ಕೆಗಳನ್ನು ತಕ್ಕೊಂಡು,
ಸಮುದ್ರದ ಕಟ್ಟು ಕಡೆಯಲ್ಲಿ ವಾಸ ಮಾಡಿದರೆ,
೧೦ ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸಿ,
ನಿನ್ನ ಬಲಗೈ ನನ್ನನ್ನು ಹಿಡಿಯುವದು.
೧೧ ನಿಶ್ಚಯವಾಗಿ ಕತ್ತಲೆಯು ನನ್ನನ್ನು ಕೌಚಿ ಕೊಳ್ಳುವದೆಂದು ಹೇಳಿದರೆ,
ರಾತ್ರಿಯು ನನ್ನ ಸುತ್ತಲು ಬೆಳಕಾಗಿರುವದು.
೧೨ ಕತ್ತಲೆಯು ನಿನಗೆ ಮುಚ್ಚುವದಿಲ್ಲ;
ರಾತ್ರಿಯು ಪಗಲಿನ ಹಾಗೆ ಬೆಳಗುವದು;
ಕತ್ತಲೂ ಬೆಳಕೂ ಒಂದೇ.

೧೩ ಯಾಕಂದರೆ ನೀನು ನನ್ನ ಅಂತರಿಂದ್ರಿಯಗಳನ್ನು ಸಿದ್ಧ ಮಾಡಿ,
ನನ್ನ ತಾಯಿಯ ಗರ್ಭದಲ್ಲಿ ನನ್ನನ್ನು ಮುಚ್ಚಿದ್ದೀ.



೧೪ ನಾನು ಭಯಂಕರವಾಗಿಯೂ ಅದ್ಭುತವಾಗಿಯೂ ಉಂಟಾದದರಿಂದ, ನಿನ್ನನ್ನು ಕೊಂಡಾಡುತ್ತೇನೆ;
ನಿನ್ನ ಕೆಲಸಗಳು ಅದ್ಭುತಗಳಾಗಿವೆ ಎಂದು,
ನನ್ನ ಪ್ರಾಣವು ಚನಾಗಿ ತಿಳಿದದೆ.
೧೫ ನಾನು ಮರೆಯಲ್ಲಿ ಮಾಡಲ್ಪಟ್ಟಾಗಲೂ,
ಭೂಮಿಯ ಅಧೋ ಭಾಗಗಳಲ್ಲಿ ವಿಚಿತ್ರವಾಗಿ ಮಾಡಲ್ಪಟ್ಟಾಗಲೂ,
ನನ್ನ ಎಲುವುಗಳು ನಿನಗೆ ಅಡಗಲಿಲ್ಲ.
೧೬ ನನ್ನ ಪಿಂಡವನ್ನೇ ನಿನ್ನ ಕಣ್ಣುಗಳು ನೋಡಿದವು;
ಅವುಗಳಲ್ಲಿ ಒಂದಾದರೂ ಇಲ್ಲದಿರುವಾಗ,
ಆಗ ಬೇಕಾದ ದಿವಸಗಳೆಲ್ಲ ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು.
೧೭ ದೇವರೇ, ನಿನ್ನ ಆಲೋಚನೆಗಳು ನನಗೆ ಎಷ್ಟೋ ಪ್ರಿಯವಾಗಿವೆ!
ಅವುಗಳ ಬಟ್ಟು ಎಷ್ಟೋ ಪ್ರಬಲವಾಗಿದೆ!
೧೮ ಅವುಗಳನ್ನು ಲೆಕ್ಕಿಸಿದರೆ, ಮರಳಿಗಿಂತ ಹೆಚ್ಚಾಗಿವೆ;
ನಾನು ಎಚ್ಚರವಾಗುವಾಗ ಇನ್ನೂ ನಿನ್ನ ಸಂಗಡ ಇದ್ದೇನೆ.

೧೯ ದೇವರೇ, ನಿಶ್ಚಯವಾಗಿ ನೀನು ದುಷ್ಟನನ್ನು ಕೊಂದು ಹಾಕುವಿ;
ಕತ್ತ ಪ್ರಿಯರೇ, ನನ್ನಿಂದ ತೊಲಗಿರಿ.
೨೦ ಅವರು ಕುಯುಕ್ತಿಯಾಗಿ ನಿನ್ನ ಹೆಸರನ್ನು ಹೇಳುತ್ತಾರೆ;
ನಿನ್ನ ವೈರಿಗಳು ವ್ಯರ್ಥವಾಗಿ ಅದನ್ನು ಎತ್ತುತ್ತಾರೆ.
೨೧ ಕರ್ತನೇ, ನಾನು ನಿನ್ನ ಹಗೆಯವರನ್ನು ಹಗೆ ಮಾಡುವದಿಲ್ಲವೋ!
ನಿನ್ನ ವಿರೋಧಿಗಳಿಗೆ ನಾನು ಬೇಸರಗೊಳ್ಳುವದಿಲ್ಲವೋ!
೨೨ ಪೂರ್ಣ ಹಗೆಯಿಂದ ಅವರನ್ನು ಹಗೆ ಮಾಡುತ್ತೇನೆ;
ನನಗೆ ಶತ್ರುಗಳಾಗಿದ್ದಾರೆ.
೨೩ ದೇವರೇ, ನನ್ನನ್ನು ಶೋಧಿಸಿ, ನನ್ನ ಹೃದಯವನ್ನು ತಿಳಿಯಕೋ;
ನನ್ನನ್ನು ಪರೀಕ್ಷಿಸಿ, ನನ್ನ ಚಿಂತೆಗಳನ್ನು ತಿಳಿಯಕೋ.
೨೪ ನನ್ನಲ್ಲಿ ವ್ಯಥೆ ಮಾರ್ಗ ಉಂಟೇನೋ! ನೋಡಿ,
ನಿತ್ಯ ಮಾರ್ಗದಲ್ಲಿ ನನ್ನನ್ನು ನಡಿಸು.

## ೧೪೦. ಕೀರ್ತನೆ.

ಗಾಯಕಾಧಿಕಾರಿಗೆ; ದಾವೀದನ ಗೀತವು.

೧ ಕರ್ತನೇ, ಕೆಟ್ಟ ಮನುಷ್ಯರಿಂದ ನನ್ನನ್ನು ತಪ್ಪಿಸಿ ಬಿಡು;
ಬಲಾತ್ಕಾರಿಗೆ ನನ್ನನ್ನು ತಪ್ಪಿಸಿ ಕಾಯಿ.
೨ ಅವರು ಹೃದಯದಲ್ಲಿ ಕೇಡುಗಳನ್ನು ಕಲ್ಪಿಸುತ್ತಾರೆ;
ದಿನಾಲು ಯುದ್ಧಕ್ಕೆ ಕೂಡಿ ಕೊಳ್ಳುತ್ತಾರೆ.
೩ ತಮ್ಮ ನಾಲಿಗೆಯನ್ನು ಹಾವಿನ ಹಾಗೆ ಹದ ಮಾಡುತ್ತಾರೆ;
ಸರ್ಪಗಳ ವಿಷವು ಅವರ ತುಟಿಗಳ ಕೆಳಗೆ ಅದೆ. ಸೇಲಾ.
೪ ಕರ್ತನೇ, ದುಷ್ಟನ ಕೈಗಳಿಗೆ ನನ್ನನ್ನು ತಪ್ಪಿಸಿ ಕಾಪಾಡು;
ಬಲಾತ್ಕಾರಿಯಿಂದ ನನ್ನನ್ನು ತಪ್ಪಿಸಿ ಕಾಯಿ;
ನನ್ನ ಅಡಿಗಳನ್ನು ಕೆಡವುವದಕ್ಕೆ ಕಲ್ಪಿಸುತ್ತಾರೆ.
೫ ಗರ್ವಿಷ್ಠರು ನನಗೆ ಉರ್ಲನ್ನೂ ಪಾಶಗಳನ್ನೂ ಒಡ್ಡಿದ್ದಾರೆ;
ಬಲೆಯನ್ನು ಹಾದಿಯ ಅಂಚಿನಲ್ಲಿ ಹಾಸಿದ್ದಾರೆ;
ನೇಣುಗಳನ್ನು ನನಗೆ ಇಟ್ಟಿದ್ದಾರೆ. ಸೇಲಾ.

೬ ಕರ್ತನಿಗೆ ಹೇಳಿದೆನು–ನೀನು ನನ್ನ ದೇವರಾಗಿದ್ದೀ;
ನನ್ನ ವಿಜ್ಞಾಪನೆಗಳ ಶಬ್ದಕ್ಕೆ ಕಿವಿಗೊಡು, ಕರ್ತನೇ.
೭ ನನ್ನ ರಕ್ಷಣೆಯ ಬಲವಾಗಿರುವ ಕರ್ತನಾದ ಯೆಹೋವ,
ನನ್ನ ತಲೆಯನ್ನು ಯುದ್ಧ ಸನ್ನಾಹ ದಿವಸದಲ್ಲಿ ಮುಚ್ಚಿದ್ದೀ.
೮ ಕರ್ತನೇ, ದುಷ್ಟನಿಗೆ ಇಚ್ಛಾರ್ಥವನ್ನು ಕೊಡ ಬೇಡ;
ಅವರು ಉನ್ನತವಾಗದ ಹಾಗೆ,
ಅವನ ಯುಕ್ತಿಯನ್ನು ಪೂರೈಸ ಬೇಡ. ಸೇಲಾ.

೯ ನನ್ನ ಸುತ್ತಲಿರುವವರ ವಿಷವೂ,
ಅವರ ತುಟಿಗಳ ಕಾಟವೂ, ಅವರನ್ನು ಮುಚ್ಚಲಿ.
೧೦ ಉರಿ ಕೆಂಡಗಳು ಅವರ ಮೇಲೆ ಬೀಳಲಿ;
ಬೆಂಕಿಯಲ್ಲಿಯೂ, ಅವರು ಏಳಲಾರದ ಹಾಗೆ
ಕೂಪೆಯಲ್ಲಿಯೂ, ಅವನು ಅವರನ್ನು ಕೆಡವಲಿ.
೧೧ ನಾಲಿಗೆಯವನು ಭೂಮಿಯಲ್ಲಿ ಸ್ಥಿರವಾಗಿರನು;
ಬಲಾತ್ಕಾರಿಯನ್ನು ಕೆಡವುವದಕ್ಕೆ ಕೇಡು ಅವನನ್ನು ಬೇಟೆ ಆಡುವದು.
೧೨ ಕರ್ತನು ದೀನನಿಗೆ ವ್ಯಾಜ್ಯವನ್ನೂ,
ಬಡವರಿಗೆ ನ್ಯಾಯವನ್ನೂ ತೀರಿಸುವನೆಂದು, ಬಲ್ಲೆನು.
೧೩ ನಿಶ್ಚಯವಾಗಿ ನೀತಿವಂತರು ನಿನ್ನ ಹೆಸರನ್ನು ಕೊಂಡಾಡುವರು;
ನೆಟ್ಟನೆಯವರು ನಿನ್ನ ಮುಖದ ಮುಂದೆ ವಾಸಿಸುವರು.

## ೧೪೧. ಕೀರ್ತನೆ.

ದಾವೀದನ ಗೀತವು.

೧ ಕರ್ತನೇ, ನಿನ್ನನ್ನು ಕರೆದಿದ್ದೇನೆ; ನನ್ನ ಬಳಿಗೆ ತ್ವರೆ ಪಡು;
ನಾನು ನಿನ್ನನ್ನು ಕರೆಯುವಾಗ, ನನ್ನ ಶಬ್ದಕ್ಕೆ ಕಿವಿಗೊಡು.
೨ ನನ್ನ ಪ್ರಾರ್ಥನೆ ನಿನ್ನ ಮುಂದೆ ಧೂಪವಾಗಿಯೂ,
ನನ್ನ ಕೈ ಎತ್ತುವಿಕೆ ಸಾಯಂಕಾಲದ ಕಾಣಿಕೆಯಾಗಿಯೂ, ಸಿದ್ಧವಾಗಿರಲಿ.
೩ ಕರ್ತನೇ, ನನ್ನ ಬಾಯಿಗೆ ಕಾವಲಿಡು;
ನನ್ನ ತುಟಿಗಳ ಕದವನ್ನು ಕಾಯಿ.
೪ ನನ್ನ ಹೃದಯವನ್ನು ಪಾತಕಿಗಳಾದ ಮನುಷ್ಯರ ಸಂಗಡ,
ದುಷ್ಟತ್ವದಿಂದ ಕರ್ಮಗಳನ್ನು ನಡಿಸುವ ಹಾಗೆ,
ಕೆಟ್ಟ ಕಾರ್ಯಕ್ಕೆ ಬೊಗ್ಗಿಸದೆ ಇರು;
ಅವರ ಸವಿ ಊಟಗಳನ್ನು ನಾನು ಉಣ್ಣುವದಿಲ್ಲ.
೫ ನೀತಿವಂತನು ನನ್ನನ್ನು ಬಡಿಯಲಿ; ಅದು ಕೃಪೆಯೇ.
ನನ್ನನ್ನು ಗದರಿಸಲಿ; ಅದು ತಲೆಗೆ ಎಣ್ಣೆಯೇ. ನನ್ನ ತಲೆ, ಬೇಡನ್ನವಿರಲಿ;
ಅದಕೆ ಇನ್ನೂ ಅವರ ಕೇಡುಗಳಲ್ಲಿ ನನ್ನ ಪ್ರಾರ್ಥನೆ ಇರುವದು.
೬ ಅವರ ನ್ಯಾಯಾಧಿಪತಿಗಳು ಬಂಡೆಯ ಬಳಿಯಲ್ಲಿ ಕೆಡವಲ್ಪಡುವಾಗ,
ನನ್ನ ಮಾತುಗಳನ್ನು–ಅಪುರಮ್ಯವಾಗಿವೆ–ಎಂದು, ಕೇಳುವರು.
೭ ಭೂಮಿಯಲ್ಲಿ ಕಡಿದು, ಕೀಳುವವನ ಮೇಲೆಗೆ
ನಮ್ಮ ಎಲುವುಗಳು ಪಾತಾಳದ ಬಾಯಿಯ ಹತ್ತರ ಚದರಿ ಅವೆ.

೨ ಯಾಕಂದರೆ ಕರ್ತನಾದ ಯೆಹೋವನೇ, ನನ್ನ ಕಣ್ಣುಗ
ಳು ನಿನ್ನ ಕಡೆಗೆ ಅವೆ;
ನಿನ್ನನ್ನು ಆಶ್ರಯಿಸಿ ಕೊಂಡಿದ್ದೇನೆ; ನನ್ನ ಪ್ರಾಣವನ್ನು ಹೊ
ಯಿದು ಬಿಡ ಬೇಡ.
೯ ಅವರು ನನಗೆ ಒಡ್ಡಿದ ಉರ್ಲಿನಿಂದಲೂ,
ಪಾತಕಿಗಳ ನೇಣುಗಳಿಂದಲೂ, ನನ್ನನ್ನು ಕಾಪಾಡು.
೧೦ ನಾನು ಹಾದು ಹೋಗುವಷ್ಟರಲ್ಲಿ
ದುಷ್ಟರು ಏಕವಾಗಿ ತಮ್ಮ ಬಲೆಗಳಲ್ಲಿ ಬೀಳಲಿ.

## ೧೪೨. ಕೀರ್ತನೆ.

ದಾವೀದನ ಬೋಧನೆಯು; ಅವನು ಗವಿಯಲ್ಲಿದ್ದಾಗ ಮಾಡಿದ ಪ್ರಾರ್ಥನೆಯು.

೧ ನನ್ನ ಶಬ್ದದಿಂದ ಕರ್ತನಿಗೆ ಮೊರೆ ಇಡುತ್ತೇನೆ;
ನನ್ನ ಶಬ್ದದಿಂದ ಕರ್ತನಿಗೆ ವಿಜ್ಞಾಪನೆ ಮಾಡುತ್ತೇನೆ.
೨ ಅವನ ಮುಂದೆ ನನ್ನ ಚಿಂತೆಯನ್ನು ಹೊಯ್ಯುತ್ತೇನೆ;
ನನ್ನ ಇಕ್ಕಟ್ಟನ್ನು ಅವನ ಮುಂದೆ ತೀಳಿಸುತ್ತೇನೆ.
3 ನನ್ನ ಆತ್ಮವು ನನ್ನಲ್ಲಿ ಕುಂದಿ ಹೋದಾಗ,
ನೀನು ನನ್ನ ದಾರಿಯನ್ನು ತಿಳಿಯ ಕೊಂಡಿದ್ದೀ;
ನಾನು ನಡೆಯುವ ಹಾದಿಯಲ್ಲಿ
ನನಗೆ ಉರ್ಲನ್ನು ಒಡ್ಡಿದ್ದಾರೆ.
೪ ಬಲಗೈಗೆ ದೃಷ್ಟಿಸಿ ನೋಡು;
ನನ್ನನ್ನು ಪರಾಮರಿಸುವವನು ಯಾವನೂ ಇಲ್ಲ.
ಆಶ್ರಯವು ನನ್ನ ಬಳಿಯಿಂದ ನಾಶವಾಯಿತು;
ನನ್ನ ಪ್ರಾಣವನ್ನು ವಿಚಾರಿಸುವವನು ಇಲ್ಲ.

೫ ನಿನಗೆ ಮೊರೆ ಇಡುತ್ತೇನೆ, ಕರ್ತನೇ.
ನಾನು ಹೇಳುವದೇನಂದರೆ—
ನೀನು ನನ್ನ ಆಶ್ರಯವೂ, ಜೀವಿತರ ದೇಶದಲ್ಲಿ ನನ್ನ ಪಾಲೂ
ಆಗಿದ್ದೀ.
೬ ನನ್ನ ಕೂಗನ್ನು ಆಲೈಸು; ಯಾಕಂದರೆ ನಾನು ಬಹಳ ಕ್ಷೀಣ
ವಾಗಿದ್ದೇನೆ.
ನನ್ನ ಹಿಂದಟ್ಟುವವರಿಂದ ನನ್ನನ್ನು ಬಿಡಿಸು; ಯಾಕಂದರೆ ನನ
ಗಿಂತ ಬಲಪುಳ್ಳವರಾಗಿದ್ದಾರೆ.
೭ ನಿನ್ನ ಹೆಸರನ್ನು ಕೊಂಡಾಡುವ ಹಾಗೆ,
ನನ್ನ ಪ್ರಾಣವನ್ನು ಸೆರೆಯಿಂದ ಹೊರಗೆ ಬರ ಮಾಡು;
ನೀನು ನನಗೆ ಉಪಕಾರ ಮಾಡಿದ್ದರಿಂದ,
ನೀತಿವಂತರು ನನ್ನನ್ನು ಮುತ್ತಿ ಕೊಳ್ಳುವರು.

## ೧೪3. ಕೀರ್ತನೆ.

ದಾವೀದನ ಗೀತವು.

೧ ಕರ್ತನೇ, ನನ್ನ ಪ್ರಾರ್ಥನೆಯನ್ನು ಕೇಳು;
ನನ್ನ ವಿಜ್ಞಾಪನೆಗಳಿಗೆ ಕಿವಿ ಗೊಡು;
ನಿನ್ನ ನಂಬಿಕೆಯಲ್ಲಿಯೂ, ನಿನ್ನ ನೀತಿಯಲ್ಲಿಯೂ, ನನಗೆ ಉ
ತ್ತರ ಕೊಡು.
೨ ನಿನ್ನ ಸೇವಕನ ಸಂಗಡ ನ್ಯಾಯ ವಿಚಾರಣೆಗೆ ಬರ ಬೇಡ;
ಯಾಕಂದರೆ ಜೀವಿತರಲ್ಲಿ ಒಬ್ಬನಾದರೂ ನಿನ್ನ ಮುಂದೆ ನೀತಿ
ವಂತನಾಗುವದಿಲ್ಲ.
3 ಯಾಕಂದರೆ ಶತ್ರುವು ನನ್ನ ಪ್ರಾಣವನ್ನು ಹಿಂದಟ್ಟಿ,
ನನ್ನ ಜೀವವನ್ನು ನೆಲಕ್ಕೆ ಜಜ್ಜಿ,
ಪೂರ್ವದಲ್ಲಿ ಸತ್ತವರ ಹಾಗೆ,
ಕತ್ತಲೆಯಾದವುಗಳಲ್ಲಿ ನನ್ನನ್ನು ವಾಸಿಸ ಮಾಡಿದ್ದಾನೆ.
೪ ನನ್ನ ಆತ್ಮವು ನನ್ನಲ್ಲಿ ಕುಂದಿ ಹೋಗಿದೆ;
ನನ್ನ ಒಳಗೆ ನನ್ನ ಹೃದಯವು ಹಾಳಾಗಿದೆ.
೫ ಪೂರ್ವ ದಿವಸಗಳನ್ನು ಜ್ಞಾಪಕ ಮಾಡಿ ಕೊಂಡು,
ನಿನ್ನ ಎಲ್ಲಾ ಕ್ರಿಯೆಗಳಲ್ಲಿ ಧ್ಯಾನ ಮಾಡಿ,
ನಿನ್ನ ಕೈಗಳ ಕೆಲಸವನ್ನು ಆಲೋಚಿಸುತ್ತೇನೆ.
೬ ನನ್ನ ಕೈಗಳನ್ನು ನಿನ್ನ ಕಡೆಗೆ ಚಾಚುತ್ತೇನೆ;
ನನ್ನ ಪ್ರಾಣವು ನಿನ್ನ ವಿಷಯ ದಣಿದ ಭೂಮಿಯ ಹಾಗಿದೆ.
ಸೇಲಾ.

೭ ನನಗೆ ಬೇಗ ಉತ್ತರ ಕೊಡು, ಕರ್ತನೇ;
ನನ್ನ ಆತ್ಮವು ತೀರಿ ಹೋಗಿದೆ;
ನಾನು ಕೂಣಿಯಲ್ಲಿ ಇಳಿಯುವವರಿಗೆ ಸಮಾನನಾಗದ ಹಾಗೆ,
ನಿನ್ನ ಮುಖವನ್ನು ನನಗೆ ಮರೆ ಮಾಡ ಬೇಡ.
೮ ಬೆಳಿಗ್ಯೆ ನಿನ್ನ ಕೃಪೆಯನ್ನು ನನಗೆ ಕೇಳಿಸ ಮಾಡು;
ಯಾಕಂದರೆ ನಿನ್ನಲ್ಲಿ ಭರವಸವಿಟ್ಟಿದ್ದೇನೆ;
ನಾನು ಹೋಗ ಬೇಕಾದ ಮಾರ್ಗವನ್ನು ನನಗೆ ತಿಳಿಯ ಮಾಡು;
ಯಾಕಂದರೆ ನಿನ್ನ ಕಡೆಗೆ ನನ್ನ ಪ್ರಾಣವನ್ನು ಎತ್ತುತ್ತೇನೆ.
೯ ನನ್ನ ಶತ್ರುಗಳಿಂದ ನನ್ನನ್ನು ಬಿಡಿಸು, ಕರ್ತನೇ;
ನಿನ್ನ ಮರೆ ಹೊಕ್ಕಿದ್ದೇನೆ.
೧೦ ನೀನು ಮೆಚ್ಚುವದನ್ನು ಮಾಡುವದಕ್ಕೆ ನನಗೆ ಬೋಧಿಸು;
ಯಾಕಂದರೆ ನೀನು ನನ್ನ ದೇವರು.
ಒಳ್ಳೇದಾಗಿರುವ ನಿನ್ನ ಆತ್ಮವು ನನ್ನನ್ನು ನೆಟ್ಟಸೆಯ ಭೂಮಿ
ಯಲ್ಲಿ ನಡಿಸಲಿ.
೧೧ ಕರ್ತನೇ, ನಿನ್ನ ಹೆಸರಿನ ನಿಮಿತ್ತ ನನ್ನನ್ನು ಬದುಕಿಸಿ,
ನಿನ್ನ ನೀತಿಯಿಂದ ನನ್ನ ಪ್ರಾಣವನ್ನು ಇಕ್ಕಟ್ಟಿನೊಳಗಿಂದ
ಹೊರಗೆ ಬರ ಮಾಡು.
೧೨ ನಿನ್ನ ಕೃಪೆಯಿಂದ ನನ್ನ ಶತ್ರುಗಳನ್ನು ಸಂಹರಿಸಿ,
ನನ್ನ ಪ್ರಾಣದ ವೈರಿಗಳನ್ನೆಲ್ಲಾ ನಾಶನ ಮಾಡು;
ಯಾಕಂದರೆ ನಾನು ನಿನ್ನ ಸೇವಕನಾಗಿದ್ದೇನೆ.

## ೧೪೪. ಕೀರ್ತನೆ.

ದಾವೀದನದು.

೧ ನನ್ನ ಕೈಗಳಿಗೆ ಕಾಳಗವನ್ನು, ನನ್ನ ಬೆರಳುಗಳಿಗೆ ಯು
ದ್ಧವನ್ನು, ಕಲಿಸಿದ
ನನ್ನ ಬಂಡೆಯಾದ ಕರ್ತನಿಗೆ ಆಶೀರ್ವಾದವಾಗಲಿ.
೨ ಅವನು ನನ್ನ ಕೃಪೆಯೂ, ನನ್ನ ಕೋಟೆಯೂ,
ನನ್ನ ದುರ್ಗವೂ, ನನ್ನನ್ನು ತಪ್ಪಿಸುವವನೂ,
ನನ್ನ ಗುರಾಣಿಯೂ, ನಾನು ಹೊಗುವ ಆಶ್ರಯವೂ,
ನನ್ನ ಜನರನ್ನು ನನಗೆ ವಶ ಮಾಡುವವನೂ, ಆಗಿದ್ದಾನೆ.



3 ಕರ್ತನೇ, ನೀನು ಅವನನ್ನು ತಿಳಿಯಕೊಳ್ಳುವ ಹಾಗೆ, ಮನು
ಷ್ಯನು ಏನು!
ನೀನು ಅವನನ್ನು ನೆನಸುವ ಹಾಗೆ ಮನುಷ್ಯನ ಮಗನು ಏನು!
೪ ಮನುಷ್ಯನು ಮಾಯಕ್ಕೆ ಸಮಾನವಾಗಿದ್ದಾನೆ;
ಅವನ ದಿವಸಗಳು ಕಳೆದು ಹೋಗುವ ನೆರಳಿನ ಹಾಗಿವೆ.

೫ ಕರ್ತನೇ, ನಿನ್ನ ಆಕಾಶಗಳನ್ನು ಬೊಗ್ಗಿಸಿ, ಇಳಿ;
ಬೆಟ್ಟಗಳನ್ನು ಮುಟ್ಟು, ಆಗ ಹೊಗೆ ಹಾಯುವವು.
೬ ಮಿಂಚನ್ನು ಮಿಂಚಿಸಿ, ಅವರನ್ನು ಚದರಿಸು;
ನಿನ್ನ ಬಾಣಗಳನ್ನು ಎಸೆದು, ಅವರನ್ನು ಗಲಿಬಿಲಿ ಮಾಡು.
೭ ನಿನ್ನ ಕೈಗಳನ್ನು ಉನ್ನತದಿಂದ ಚಾಚಿ,
ಮಹಾ ಜಲಗಳಿಂದಲೂ, ಅನ್ಯರ ಮಕ್ಕಳ ಕೈಯಿಂದಲೂ
ನನ್ನನ್ನು ತಪ್ಪಿಸಿ, ನನ್ನನ್ನು ಬಿಡಿಸು.
೮ ಅವರ ಬಾಯಿ ವ್ಯರ್ಥತ್ವವನ್ನು ನುಡಿಯುವದು,
ಅವರ ಬಲಗೈ ಸುಳ್ಳಿನ ಬಲಗೈ ಆಗಿದೆ.

೯ ದೇವರೇ, ಹೊಸ ಹಾಡನ್ನು ನಿನಗೆ ಹಾಡುವೆನು;
ಹತ್ತು ತಂತಿಗಳ ವೀಣೆಯಿಂದ ನಿನ್ನನ್ನು ಕೀರ್ತಿಸುವೆನು.
೧೦ ಅರಸುಗಳಿಗೆ ರಕ್ಷಣೆಯನ್ನು ಕೊಡುವವನೇ,
ತನ್ನ ಸೇವಕನಾದ ದಾವೀದನನ್ನು ಕೇಡಿನ ಕತ್ತಿಯಿಂದ ತಪ್ಪಿಸು
ವವನೇ,
೧೧ ಅನ್ಯರ ಮಕ್ಕಳ ಕೈಯಿಂದ ನನ್ನನ್ನು ತಪ್ಪಿಸಿ, ನನ್ನನ್ನು ಬಿ
ಡಿಸು;
ಅವರ ಬಾಯಿ ವ್ಯರ್ಥತ್ವವನ್ನು ನುಡಿಯುವದು;
ಅವರ ಬಲಗೈ ಸುಳ್ಳಿನ ಬಲಗೈ ಆಗಿದೆ.
೧೨ ನಮ್ಮ ಗಂಡು ಮಕ್ಕಳು ಸಸಿಗಳ ಹಾಗೆ,
ತಮ್ಮ ಯೌವನದಲ್ಲಿ ಬೆಳೆದವರಾಗಿರಲಿ;
ನಮ್ಮ ಹೆಣ್ಣು ಮಕ್ಕಳು ಅರಮನೆಯ ಕಟ್ಟುವಿಕೆಯ ಪ್ರಕಾರ,
ಕೆತ್ತಲ್ಪಟ್ಟ ಕೋಣ ಸ್ತಂಭಗಳ ಹಾಗಿರಲಿ.
೧3 ನಮ್ಮ ಉಗ್ರಾಣಗಳು ತುಂಬಿ,
ನಾನಾ ವಿಧವಾದ ಪದಾರ್ಥಗಳನ್ನು ಹಂಚಲಿ;
ನಮ್ಮ ಕುರಿ ಮಂದೆಗಳು ಸಹಸ್ರ ಸಹಸ್ರವಾಗಿ
ನಮ್ಮ ಬೀದಿಗಳಲ್ಲಿ ಹೆಚ್ಚಲಿ.
೧೪ ನಮ್ಮ ಎತ್ತುಗಳು ಭಾರ ಹೊರುವಂಥವುಗಳಾಗಲಿ;
ಹೊಗ ಬೀಳುವದೂ, ವಲಸೆ ಹೋಗುವದೂ, ಆಗದಿರಲಿ;
ನಮ್ಮ ಬೀದಿಗಳಲ್ಲಿ ಬೊಬ್ಬೆ ಆಗದಿರಲಿ.
೧೫ ಹೀಗಿರುವ ಜನರು ಭಾಗ್ಯವಂತರು;
ಯೆಹೋವ ತಮಗೆ ದೇವರಾಗಿರುವ ಜನರು ಭಾಗ್ಯವಂತರು.

## ೧೪೫. ಕೀರ್ತನೆ.

ದಾವೀದನ ಸ್ತೋತ್ರವು.

೧ ಅರಸನಾದ ನನ್ನ ದೇವರೇ, ನಿನ್ನನ್ನು ಉನ್ನತ ಮಾಡುವೆನು;
ನಿನ್ನ ಹೆಸರನ್ನು ಯುಗ ಯುಗಗಳಿಗೂ, ಆಶೀರ್ವದಿಸುವೆನು.
೨ ದಿನಾಲು ನಿನ್ನನ್ನು ಆಶೀರ್ವದಿಸುವೆನು;
ಯುಗ ಯುಗಾಂತರಗಳಿಗೂ ನಿನ್ನ ಹೆಸರನ್ನು ಸ್ತುತಿಸುವೆನು.
3 ಕರ್ತನು ದೊಡ್ಡವನೂ, ಬಹಳವಾಗಿ ಸ್ತುತಿಸ ತಕ್ಕವನೂ, ಆ
ಗಿದ್ದಾನೆ;
ಅವನ ದೊಡ್ಡಸ್ತಿಕೆಯು ಅಶೋಧ್ಯವಾದದ್ದು.
೪ ತಲಾಂತರಕ್ಕೆ ತಲಾಂತರವು ನಿನ್ನ ಕೆಲಸಗಳನ್ನು ಹೊಗಳುತ್ತದೆ;
ನಿನ್ನ ಪರಾಕ್ರಮಗಳನ್ನು ತಿಳಿಸುತ್ತಾರೆ.
೫ ನಿನ್ನ ಮಹಿಮೆಯ ಘನದ ಪ್ರಭೆಯನ್ನೂ,
ನಿನ್ನ ಅದ್ಭುತಗಳ ಕಾರ್ಯಗಳನ್ನೂ, ಧ್ಯಾನಿಸುವೆನು.
೬ ನಿನ್ನ ಭಯಂಕರವಾದವುಗಳ ಪ್ರಾಣದ ವಿಷಯ ಅವರು ಹೇಳು
ವರು;
ನಿನ್ನ ದೊಡ್ಡಸ್ತಿಕೆಯನ್ನು ನಾನು ಸಾರುವೆನು.
೭ ನಿನ್ನ ಬಹು ಒಳ್ಳೇತನದ ಜ್ಞಾಪಕವನ್ನು ಉಕ್ಕಿಸುವರು;
ನಿನ್ನ ನೀತಿಯ ನಿಮಿತ್ತ ಉತ್ಸಾಹ ಧ್ವನಿ ಮಾಡುವರು.

೮ ಕರ್ತನು ದಯವೂ, ಅಂತಃಕರಣವೂ, ದೀರ್ಘ ಶಾಂತಿ
ಯೂ,
ಮಹಾ ಕೃಪೆಯೂ ಉಳ್ಳವನಾಗಿದ್ದಾನೆ.
೯ ಕರ್ತನು ಸರ್ವಕ್ಕೂ ಒಳ್ಳೇಯವನು;
ಅವನ ಅಂತಃಕರಣವು ಅವನ ಎಲ್ಲಾ ಕೆಲಸಗಳ ಮೇಲೆ ಅದೆ.
೧೦ ಕರ್ತನೇ, ನಿನ್ನ ಕೆಲಸಗಳೆಲ್ಲಾ ನಿನ್ನನ್ನು ಕೊಂಡಾಡುವವು;
ನಿನ್ನ ಭಕ್ತರು ನಿನ್ನನ್ನು ಆಶೀರ್ವದಿಸುವರು.
೧೧ ನಿನ್ನ ರಾಜ್ಯದ ಘನವನ್ನು ಹೇಳುವರು;
ನಿನ್ನ ಪರಾಕ್ರಮವನ್ನು ನುಡಿಯುವರು.
೧೨ ಮನುಷ್ಯನ ಮಕ್ಕಳಿಗೆ ಅವನ ಪರಾಕ್ರಮ ಕ್ರಿಯೆಗಳನ್ನೂ,
ಅವನ ರಾಜ್ಯದ ಪ್ರಭೆಯ ಘನವನ್ನೂ, ತಿಳಿಯ ಮಾಡುವರು.
೧3 ಎಲ್ಲಾ ಯುಗಗಳಿಗೆ ನಿನ್ನ ರಾಜ್ಯವು ರಾಜ್ಯವಾಗಿದೆ;
ನಿನ್ನ ಧೊರೆತನವು ಎಲ್ಲಾ ತಲತಲಾಂತರಗಳಲ್ಲಿ ಇರುವದು.

೧೪ ಕರ್ತನು ಬೀಳುವವರೆಲ್ಲರನ್ನು ಉದ್ಧಾರ ಮಾಡುತ್ತಾನೆ;
ಬೊಗ್ಗುವವರೆಲರನ್ನು ಎತ್ತುತ್ತಾನೆ.
೧೫ ಎಲ್ಲರ ಕಣ್ಣುಗಳು ನಿನಗೆ ಕಾದು ಕೊಳ್ಳುತ್ತವೆ;
ನೀನು ಅವರಿಗೆ ಅವರ ಆಹಾರವನ್ನು ತಕ್ಕಕಾಲದಲ್ಲಿ ಕೊಡುತ್ತೀ.
೧೬ ನಿನ್ನ ಕೈ ತೆರೆದು,
ಎಲ್ಲಾ ಜೀವಿಗಳ ಇಷ್ಟವನ್ನು ತೃಪ್ತಿ ಪಡಿಸುತ್ತೀ.
೧೭ ಕರ್ತನು ತನ್ನ ಎಲ್ಲಾ ಮಾರ್ಗಗಳಲ್ಲಿ ನೀತಿವಂತನೂ,
ತನ್ನ ಎಲ್ಲಾ ಕೆಲಸಗಳಲ್ಲಿ ಕೃಪೆಯುಳ್ಳವನೂ, ಆಗಿದ್ದಾನೆ.

೧೮ ಕರ್ತನು ತನ್ನನ್ನು ಕರೆಯುವವರೆಲ್ಲರಿಗೆ—
ಸತ್ಯದಿಂದ ತನ್ನನ್ನು ಕರೆಯುವವರೆಲ್ಲರಿಗೆ—ಸಮೀಪವಾಗಿದ್ದಾನೆ.
೧೯ ತನಗೆ ಭಯ ಪಡುವವರಿಗೆ ಇಷ್ಟವನ್ನು ತೀರಿಸುತ್ತಾನೆ;
ಅವರ ಮೊರೆಯನ್ನು ಕೇಳಿ, ಅವರನ್ನು ರಕ್ಷಿಸುತ್ತಾನೆ.
೨೦ ಕರ್ತನು ತನ್ನನ್ನು ಪ್ರೀತಿ ಮಾಡುವವರೆಲ್ಲರನ್ನು ಕಾಪಾಡುತ್ತಾನೆ;
ಆದರೆ ದುಷ್ಟರೆಲ್ಲರನ್ನು ನಾಶ ಮಾಡುತ್ತಾನೆ.
೨೧ ನನ್ನ ಬಾಯಿ ಕರ್ತನ ಸ್ತೋತ್ರವನ್ನು ನುಡಿಯಲಿ;
ಎಲ್ಲಾ ಮಾಂಸವು ಅವನ ಪರಿಶುದ್ಧವಾದ ಹೆಸರನ್ನು ಯುಗ ಯು
ಗಾಂತರಗಳಿಗೂ ಆಶೀರ್ವದಿಸಲಿ.

## ೧೪೬. ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ.
ನನ್ನ ಪ್ರಾಣವೇ, ಕರ್ತನನ್ನು ಸ್ತುತಿಸು.

೨ ನಾನು ಬದುಕುವ ಮಟ್ಟಿಗೂ ಕರ್ತನನ್ನು ಸ್ತುತಿಸುವೆನು;
ನಾನು ಇರುವ ಮಟ್ಟಿಗೂ ನನ್ನ ದೇವರಿಗೆ ಕೀರ್ತಿಸುವೆನು.
೩ ಅಧಿಪತಿಗಳಲ್ಲಿಯೂ,
ರಕ್ಷಣೆ ಇಲ್ಲದ ಮನುಷ್ಯನ ಮಗನಲ್ಲಿಯೂ, ಭರವಸ ವಿಡ ಬೇಡಿರಿ.
೪ ಅವನ ಆತ್ಮವು ಹೊರಡಲಾಗಿ, ತನ್ನ ಭೂಮಿಗೆ ತಿರುಗುವನು;
ಅದೇ ದಿವಸದಲ್ಲಿ ಅವನ ಆಲೋಚನೆಗಳೆಲ್ಲಾ ನಾಶವಾಗುತ್ತವೆ

೫ ಯಾಕೋಬನ ದೇವರು ತನಗೆ ಸಹಾಯವಾಗಿರುವವನು—
ತನ್ನ ದೇವರಾದ ಯೆಹೋವನ ಮೇಲೆ ತನ್ನ ನಿರೀಕ್ಷೆ ಇಡುವವನು
—ಭಾಗ್ಯವಂತನು.
೬ ಆಕಾಶವನ್ನೂ, ಭೂಮಿಯನ್ನೂ,
ಸಮುದ್ರವನ್ನೂ, ಅವುಗಳಲ್ಲಿರುವ ಎಲ್ಲವನ್ನೂ, ಉಂಟು ಮಾಡಿದವನು—
ಅವನೇ ಯುಗ ಯುಗಕ್ಕೂ ಸತ್ಯವನ್ನು ಕಾಪಾಡುತ್ತಾನೆ.
೭ ಅವನು ಬಲಾತ್ಕಾರ ಪಡುವವರಿಗೆ ನ್ಯಾಯ ತೀರಿಸಿ,
ಹಸಿದವರಿಗೆ ಕೊಟ್ಟಿಯನ್ನು ಕೊಡುತ್ತಾನೆ;
ಕರ್ತನು ಸೆರೆಯವರನ್ನು ಬಿಡಿಸುತ್ತಾನೆ.

೮ ಕರ್ತನು ಕುರುಡರ ಕಣ್ಣುಗಳನ್ನು ತೆರೆಯುತ್ತಾನೆ;
ಕರ್ತನು ಬೊಗ್ಗಿದವರನ್ನು ಎತ್ತುತ್ತಾನೆ;
ಕರ್ತನು ನೀತಿವಂತರನ್ನು ಪ್ರೀತಿ ಮಾಡುತ್ತಾನೆ;
೯ ಕರ್ತನು ಪರದೇಶಸ್ಥರನ್ನು ಕಾಪಾಡುತ್ತಾನೆ;
ದಿಕ್ಕಿಲ್ಲದವನನ್ನೂ, ವಿಧವೆಯನ್ನೂ, ಪರಾಮರಿಸುತ್ತಾನೆ;
ಆದರೆ ದುಷ್ಟರ ಮಾರ್ಗವನ್ನು ಹೊಂಕು ಮಾಡುತ್ತಾನೆ.
೧೦ ಕರ್ತನು ಯುಗ ಯುಗಕ್ಕೂ,
ಚಿಯೋನೇ, ನಿನ್ನ ದೇವರು ತಲ ತಲಾಂತರಕ್ಕೂ ಆಳುತ್ತಾನೆ.
ಕರ್ತನನ್ನು ಸ್ತುತಿಸಿರಿ.

## ೧೪೭ ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ;
ಯಾಕಂದರೆ ನಮ್ಮ ದೇವರನ್ನು ಕೀರ್ತಿಸುವದು ಒಳ್ಳೇದು;
ಯಾಕಂದರೆ ಸ್ತೋತ್ರವು ರಮ್ಯವೂ ಯೋಗ್ಯವೂ ಆಗಿದೆ.
೨ ಕರ್ತನು ಯೆರೂಸಲೇಮನ್ನು ಕಟ್ಟುತ್ತಾನೆ;
ಇಸ್ರಾಯೇಲನ ಚದರಿ ಹೋದವರನ್ನು ಕೂಡಿಸುತ್ತಾನೆ.
೩ ಮುರಿದ ಹೃದಯದವರನ್ನು ಸ್ವಸ್ಥ ಮಾಡಿ,
ಅವರ ಬೇನೆಗಳನ್ನು ಕಟ್ಟುತ್ತಾನೆ.
೪ ನಕ್ಷತ್ರಗಳ ಲೆಖ್ಖವನ್ನು ಎಣಿಸುತ್ತಾನೆ;
ಅವೆಲ್ಲವುಗಳನ್ನು ಹೆಸರಿಂದ ಕರೆಯುತ್ತಾನೆ.
೫ ನಮ್ಮ ಕರ್ತನು ದೊಡ್ಡವನು, ಬಹು ಶಕ್ತನು;
ಅವನ ವಿವೇಕಕ್ಕೆ ಎಣಿಕೆ ಇಲ್ಲ.
೬ ಕರ್ತನು ದೀನರನ್ನು ಪರಾಮರಿಸುತ್ತಾನೆ;
ದುಷ್ಟರನ್ನು ಭೂಮಿಯ ವರಿಗೆ ತಗ್ಗಿಸುತ್ತಾನೆ.

೭ ಕರ್ತನಿಗೆ ಸ್ತೋತ್ರದಿಂದ ಹಾಡಿರಿ;
ನಮ್ಮ ದೇವರನ್ನು ಕಿನ್ನರಿಯಿಂದ ಕೀರ್ತಿಸಿರಿ.
೮ ಅವನು ಆಕಾಶವನ್ನು ಮೋಡಗಳಿಂದ ಮುಚ್ಚುತ್ತಾನೆ;
ಭೂಮಿಗೆ ಮಳೆಯನ್ನು ಸಿದ್ಧ ಮಾಡುತ್ತಾನೆ;
ಬೆಟ್ಟಗಳಲ್ಲಿ ಹುಲ್ಲನ್ನು ಮೊಳಿಸುತ್ತಾನೆ.
೯ ಅವನು ಪಶುಗಳಿಗೂ,
ಕೂಗುವ ಕಾಗೆಯ ಮರಿಗಳಿಗೂ, ಆಹಾರ ಕೊಡುತ್ತಾನೆ.
೧೦ ಅವನು ಕುದುರೆಯ ಪರಾಕ್ರಮದಲ್ಲಿ ಸಂತೋಷಿಸುವದಿಲ್ಲ;
ಮನುಷ್ಯನ ತೊಡೆಗಳಲ್ಲಿ ಇಷ್ಟ ಪಡುವದಿಲ್ಲ.
೧೧ ಕರ್ತನು ತನಗೆ ಭಯ ಪಡುವವರಲ್ಲಿಯೂ,
ತನ್ನ ಕೃಪೆಗೆ ಎದುರು ನೋಡುವವರಲ್ಲಿಯೂ, ಇಷ್ಟ ಪಡುತ್ತಾನೆ.

೧೨ ಯೆರೂಸಲೇಮೇ, ಕರ್ತನನ್ನು ಹೊಗಳು;
ಚಿಯೋನೇ, ನಿನ್ನ ದೇವರನ್ನು ಸ್ತುತಿಸು.
೧೩ ಯಾಕಂದರೆ ನಿನ್ನ ಬಾಗಲುಗಳ ಅಗುಳಿಗಳನ್ನು ಬಲ ಮಾಡಿ,
ನಿನ್ನ ಮಕ್ಕಳನ್ನು ನಿನ್ನ ಮಧ್ಯದಲ್ಲಿ ಆಶೀರ್ವದಿಸುತ್ತಾನೆ.
೧೪ ಅವನು ನಿನ್ನ ಮೇರೆಯನ್ನು ಸಮಾಧಾನ ಪಡಿಸುತ್ತಾನೆ.
ಉತ್ತಮವಾದ ಗೋಧಿಯಿಂದ ನಿನ್ನನ್ನು ತೃಪ್ತಿ ಪಡಿಸುತ್ತಾನೆ.
೧೫ ಅವನು ತನ್ನ ಮಾತನ್ನು ಭೂಮಿಗೆ ಕಳುಹಿಸುತ್ತಾನೆ;
ಅತಿ ತೀವ್ರವಾಗಿ ಅವನ ವಾಕ್ಯವು ಓಡುತ್ತದೆ.
೧೬ ಅವನು ಹಿಮವನ್ನು ಉಣ್ಣೆಯ ಹಾಗೆ ಕೊಡುತ್ತಾನೆ.
ಮಂಜನ್ನು ಬೂದಿಯ ಹಾಗೆ ಚದರಿಸುತ್ತಾನೆ.
೧೭ ತನ್ನ ನೀರು ಗಡ್ಡೆಯನ್ನು ತುಂಡುಗಳ ಹಾಗೆ ಹಾಕುತ್ತಾನೆ;
ಅವನ ಛಳಿಯ ಮುಂದೆ ಯಾರು ನಿಲ್ಲುವರು!
೧೮ ಅವನು ತನ್ನ ವಾಕ್ಯವನ್ನು ಕಳುಹಿಸಿ, ಅವುಗಳನ್ನು ಕರಗಿಸುತ್ತಾನೆ;
ತನ್ನ ಝಳ್ಳಿಯನ್ನು ಬೀಸ ಮಾಡುತ್ತಾನೆ; ನೀರು ಹರಿಯುತ್ತದೆ.
೧೯ ಅವನು ಯಾಕೋಬನಿಗೆ ತನ್ನ ವಾಕ್ಯವನ್ನೂ,
ಇಸ್ರಾಯೇಲಿಗೆ ತನ್ನ ನೇಮಕಗಳನ್ನೂ, ನ್ಯಾಯಗಳನ್ನೂ,
ತಿಳಿಸುತ್ತಾನೆ.
೨೦ ಯಾವ ಜನಾಂಗಕ್ಕಾದರೂ ಅವನು ಹೀಗೆ ಮಾಡಲಿಲ್ಲ;
ನ್ಯಾಯಗಳನ್ನು ಅವರು ತಿಳಿಯ ಕೊಳ್ಳಲಿಲ್ಲ.
ಕರ್ತನನ್ನು ಸ್ತುತಿಸಿರಿ.

## ೧೪೮. ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ.
ಕರ್ತನನ್ನು ಆಕಾಶದಿಂದ ಸ್ತುತಿಸಿರಿ; ಉನ್ನತವಾದವುಗಳಲ್ಲಿ ಅವನನ್ನು ಸ್ತುತಿಸಿರಿ.
೨ ಅವನ ದೂತರೆಲ್ಲರೇ, ಅವನನ್ನು ಸ್ತುತಿಸಿರಿ;
ಅವನ ಎಲ್ಲಾ ಸೈನ್ಯಗಳೇ, ಅವನನ್ನು ಸ್ತುತಿಸಿರಿ.
೩ ಸೂರ್ಯ ಚಂದ್ರರೇ, ಅವನನ್ನು ಸ್ತುತಿಸಿರಿ;
ಬೆಳಕುಳ್ಳ ಎಲ್ಲಾ ನಕ್ಷತ್ರಗಳೇ, ಅವನನ್ನು ಸ್ತುತಿಸಿರಿ.
೪ ಆಕಾಶಗಳೇ ಆಕಾಶಗಳೇ,
ಆಕಾಶಗಳ ಮೇಲೆ ಇರುವ ನೀರುಗಳೇ, ಅವನನ್ನು ಸ್ತುತಿಸಿರಿ.
೫ ಕರ್ತನ ಹೆಸರನ್ನು ಅವು ಸ್ತುತಿಸಲಿ;
ಯಾಕಂದರೆ ಅವನು ಆಜ್ಞಾಪಿಸಲು ನಿರ್ಮಿಸಲ್ಪಟ್ಟಿವು.



೬ ಅವುಗಳನ್ನು ಯುಗ ಯುಗಗಳಿಗೂ ನಿಲ್ಲಿಸಿದ್ದಾನೆ;
ಅವನು ನೇಮಕವನ್ನು ಕೊಟ್ಟಿದ್ದಾನೆ. ಅದು ಮೀರಿ ಹೋಗುವದಿಲ್ಲ.

೭ ಕರ್ತನನ್ನು ಭೂಮಿಯಿಂದ ಸ್ತುತಿಸಿರಿ;
ಮಹಾ ಮೀನುಗಳೇ, ಎಲ್ಲಾ ಅಗಾಧಗಳೇ,
೮ ಬೆಂಕಿಯೇ, ಕಲ್ಮಳೆಯೇ, ಹಿಮವೇ, ಮಂಜೇ,
ಅವನ ವಾಕ್ಯವನ್ನು ನಡಿಸುವ ಬಿರು ಗಾಳಿಯೇ,
೯ ಬೆಟ್ಟಗಳೇ, ಎಲ್ಲಾ ಗುಡ್ಡಗಳೇ,
ಫಲ ಮರಗಳೇ, ಎಲ್ಲಾ ದೇವದಾರುಗಳೇ,
೧೦ ಮೃಗಗಳೇ, ಎಲ್ಲಾ ಪಶುಗಳೇ,
ಜೀವ ಜಂತುಗಳೇ, ರೆಕ್ಕೆಯುಳ್ಳ ಪಕ್ಷಿಗಳೇ,
೧೧ ಭೂರಾಜರೇ, ಎಲ್ಲಾ ಪ್ರಜೆಗಳೇ,
ಪ್ರಧಾನರೇ, ಭೂಮಿಯ ಎಲ್ಲಾ ನ್ಯಾಯಾಧಿಪತಿಗಳೇ,
೧೨ ಪ್ರಾಯಸ್ಥರೇ, ಕನ್ಯೆಯರೇ,
ಯೌವನಸ್ಥರ ಸಂಗಡ ಮುದುಕರೇ,
೧೩ ಕರ್ತನ ಹೆಸರನ್ನು ಸ್ತುತಿಸಲಿ;
ಯಾಕಂದರೆ ಅವನ ಹೆಸರು ಮಾತ್ರ ಉನ್ನತವಾಗಿದೆ;
ಅವನ ಮಹಿಮೆಯು ಭೂಮ್ಯಾಕಾಶಗಳ ಮೇಲೆ ಅದೆ.
೧೪ ಅವನು ತನ್ನ ಜನರ ಕೊಂಬನ್ನು,
ಅವನ ಭಕ್ತರೆಲ್ಲರು—
ಇಸ್ರಾಯೇಲನ ಮಕ್ಕಳು—ಅವನಿಗೆ ಸಮೀಪವಾದ ಜನರು—
ಇವರ ಸ್ತೋತ್ರವನ್ನು ಉನ್ನತ ಮಾಡುತ್ತಾನೆ.
ಕರ್ತನನ್ನು ಸ್ತುತಿಸಿರಿ.

## ೧೪೯. ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ.
ಕರ್ತನಿಗೆ ಹೊಸ ಹಾಡನ್ನೂ,
ಭಕ್ತರ ಕೂಟದಲ್ಲಿ ಅವನ ಸ್ತೋತ್ರವನ್ನೂ, ಹಾಡಿರಿ.
೨ ಇಸ್ರಾಯೇಲನು ತನ್ನನ್ನು ಉಂಟು ಮಾಡಿದವನಲ್ಲಿ ಸಂತೋಷಿಸಲಿ;
ಚಿಯೋನಿನ ಮಕ್ಕಳು ತಮ್ಮ ಅರಸನಲ್ಲಿ ಉಲ್ಲಾಸಿಸಲಿ.
೩ ಅವನ ಹೆಸರನ್ನು ನಾಟ್ಯದಿಂದ ಸ್ತುತಿಸಲಿ;
ದಮ್ಮಡಿಯಿಂದಲೂ, ಕಿನ್ನರಿಯಿಂದಲೂ, ಅವನನ್ನು ಕೀರ್ತಿಸಲಿ.
೪ ಯಾಕಂದರೆ ಕರ್ತನು ತನ್ನ ಜನರಲ್ಲಿ ಇಷ್ಟ ಪಡುತ್ತಾನೆ;
ದೀನರನ್ನು ರಕ್ಷಣೆಯಿಂದ ಅಲಂಕರಿಸುತ್ತಾನೆ.

೫ ಭಕ್ತರು ಘನದಿಂದ ಉತ್ಸಾಹ ಪಡಲಿ;
ತಮ್ಮ ಹಾಸಿಗೆಗಳ ಮೇಲೆ ಉತ್ಸಾಹ ಧ್ವನಿ ಮಾಡಲಿ.
೬ ದೇವರ ಉನ್ನತ ಸ್ತೋತ್ರಗಳು ಅವರ ಗಂಟ್ಲುಗಳಲ್ಲಿಯೂ,
ಇಬ್ಬಾಯಿ ಕತ್ತಿ ಅವರ ಕೈಗಳಲ್ಲಿಯೂ, ಇರಲಿ.
೭ ಜನಾಂಗಗಳಲ್ಲಿ ಮುಯ್ಯಿಗೆ ಮುಯ್ಯನ್ನೂ,
ಪ್ರಜೆಗಳಲ್ಲಿ ಗದರಿಕೆಗಳನ್ನೂ, ಮಾಡಲಿ.
೮ ಅವರ ಅರಸುಗಳನ್ನು ಸಂಕೋಲೆಗಳಿಂದಲೂ,
ಅವರ ಘನವುಳ್ಳವರನ್ನು ಕಬ್ಬಿಣದ ಬೇಡಿಗಳಿಂದಲೂ, ಬಂಧಿಸಲಿ;
೯ ಅವರಲ್ಲಿ ಬರೆಯಲ್ಪಟ್ಟ ನ್ಯಾಯವನ್ನು ನಡಿಸಲಿ.
ಇದೇ ಪ್ರಭೆಯು ಅವನ ಭಕ್ತರೆಲ್ಲರಿಗೆ ಉಂಟು.
ಕರ್ತನನ್ನು ಸ್ತುತಿಸಿರಿ.

## ೧೫೦. ಕೀರ್ತನೆ.

೧ ಕರ್ತನನ್ನು ಸ್ತುತಿಸಿರಿ.
ದೇವರನ್ನು ಅವನ ಪರಿಶುದ್ಧ ಸ್ಥಳದಲ್ಲಿ ಸ್ತುತಿಸಿರಿ;
ಅವನ ಬಲದ ಅಂತರಿಕ್ಷದಲ್ಲಿ ಅವನನ್ನು ಸ್ತುತಿಸಿರಿ.
೨ ಅವನ ಪರಾಕ್ರಮಗಳಿಗೋಸ್ಕರ ಅವನನ್ನು ಸ್ತುತಿಸಿರಿ;
ಅವನ ದೊಡ್ಡಸ್ತಿಕೆಯ ಬಾಹುಳ್ಯದ ಪ್ರಕಾರ ಅವನನ್ನು ಸ್ತುತಿಸಿರಿ.
ತುತೂರಿಯ ಶಬ್ದದಿಂದ ಅವನನ್ನು ಸ್ತುತಿಸಿರಿ;
ವೀಣೆಯಿಂದಲೂ, ಕಿನ್ನರಿಯಿಂದಲೂ, ಅವನನ್ನು ಸ್ತುತಿಸಿರಿ.
೪ ದಮ್ಮಡಿಯಿಂದಲೂ, ನಾಟ್ಯದಿಂದಲೂ, ಅವನನ್ನು ಸ್ತುತಿಸಿರಿ;
ತಂತಿ ವಾದ್ಯಗಳಿಂದಲೂ, ಕೊಳಲುಗಳಿಂದಲೂ, ಅವನನ್ನು ಸ್ತುತಿಸಿರಿ.
೫ ದೊಡ್ಡ ಸ್ವರದ ತಾಳಗಳಿಂದ ಅವನನ್ನು ಸ್ತುತಿಸಿರಿ;
ಉತ್ಸಾಹದ ತಾಳಗಳಿಂದ ಅವನನ್ನು ಸ್ತುತಿಸಿರಿ.
೬ ಶ್ವಾಸವುಳ್ಳದ್ದೆಲ್ಲಾ ಕರ್ತನನ್ನು ಸ್ತುತಿಸಲಿ.
ಕರ್ತನನ್ನು ಸ್ತುತಿಸಿರಿ.

# THE PROVERBS.

## ಸಾಮತಿಗಳು.

### ಮೊದಲನೇ ಭಾಗ.

#### ೧. ಸಂಧಿ.

೧ ಇಸ್ರಯೇಲನ ಅರಸನಾದ ದಾವೀದನ ಮಗನಾದ ಸೊಲೊ
೧ ಮೋನನ ಸಾಮತಿಗಳು.

೨ ಜ್ಞಾನವನ್ನೂ, ಶಿಕ್ಷೆಯನ್ನೂ, ತಿಳಿಯುವದಕ್ಕೂ—ಗ್ರಹಿಕೆಯ
೩ ವಾಕ್ಯಗಳನ್ನು ಗ್ರಹಿಸುವದಕ್ಕೂ—ಬುದ್ಧಿಯಶಿಕ್ಷೆಯನ್ನೂ, ನೀತಿ
೪ ನ್ಯಾಯ ನೆಟ್ಟನೆತನಗಳನ್ನೂ, ಹೊಂದುವದಕ್ಕೂ—ಯುಕ್ತಿಹೀ
ನರಿಗೆ ಚಾತುರ್ಯವನ್ನೂ, ಯೌವನಸ್ಥರಿಗೆ ತಿಳುವಿಕೆಯನ್ನೂ,
೫ ಯುಕ್ತಿಯನ್ನೂ, ಕೊಡುವದಕ್ಕೂ—ಅವೆ. ಸಾಮತಿಯನ್ನೂ,
ತಾತ್ಪರ್ಯವನ್ನೂ, ಜ್ಞಾನಿಗಳ ವಾಕ್ಯಗಳನ್ನೂ, ಅವರ ಒಗಟಿ
೬ ಗಳನ್ನೂ ಗ್ರಹಿಸುವದಕ್ಕೆ, ಜ್ಞಾನಿಯು ಕೇಳಿ, ಕಲಿಕೆಯನ್ನು ಹೆ
ಚ್ಚಿಸಿ ಕೊಳ್ಳುವನು; ಗ್ರಹಿಕೆಯುಳ್ಳವನು ನಿರ್ವಾಹಗಳನ್ನು ಸಂ
ಪಾದಿಸುವನು.

೭ ಕರ್ತನ ಭಯವು ತಿಳುವಿಕೆಯ ಮೂಲವಾಗಿದೆ; ಮೂಢರು
ಜ್ಞಾನವನ್ನೂ ಶಿಕ್ಷೆಯನ್ನೂ ತಿರಸ್ಕರಿಸುತ್ತಾರೆ.

೮ ನನ್ನ ಮಗನೇ, ನಿನ್ನ ತಂದೆಯ ಶಿಕ್ಷೆಯನ್ನು ಕೇಳು; ನಿನ್ನ
೯ ತಾಯಿ ನ್ಯಾಯಪ್ರಮಾಣವನ್ನು ಬಿಡ ಬೇಡ. ಯಾಕಂದರೆ ಅ
ವು ನಿನ್ನ ತಲೆಗೆ ಸುಂದರ ಮಾಲೆಯೂ, ನಿನ್ನ ಕೊರಳಿಗೆ ಸರಗ
ಳೂ, ಆಗಿರುವವು.

೧೦ ನನ್ನ ಮಗನೇ, ಪಾಪಾತ್ಮರು ನಿನ್ನನ್ನು ಮರುಳು ಗೊಳಿಸಿದ
೧೧ ರೆ, ಒಪ್ಪ ಬೇಡ. ನನ್ನು ಸಂಗಡ ಬಾ; ರಕ್ತಕ್ಕೆ ಹೊಂಚಿ ಕೊಳ್ಳು
ವ; ಸುಮ್ಮನೆ ನಿರಪರಾಧಿಗೋಸ್ಕರ ಅಡಗಿ ಕೊಳ್ಳುವ; ಜೀವಿತರಾ
೧೨ ದವರನ್ನು ಪಾತಾಳದ ಹಾಗೆಯೂ, ಸಂಪೂರ್ಣರಾದವರನ್ನು
ಕೂಣಿಯಲ್ಲಿ ಇಳಿಯುವವರ ಹಾಗೆಯೂ, ನುಂಗಿ ಬಿಡುವ; ಎಲ್ಲಾ
೧೩ ಅಮೂಲ್ಯವಾದ ಆಸ್ತಿಯನ್ನು ದೊರಕಿಸಿ ಕೊಳ್ಳುವೆವು; ನಮ್ಮ
೧೪ ಮನೆಗಳನ್ನು ಕೊಳ್ಳೆಯಿಂದ ತುಂಬಿಸುವೆವು; ನಿನ್ನ ಜೀಟನ್ನು
ನಮ್ಮ ಮಧ್ಯದಲ್ಲಿ ಹಾಕುವಿ; ನಮ್ಮೆಲ್ಲರಿಗೆ ಒಂದೇ ಜೇಲ ಇರುವ
೧೫ ದೆಂದು—ಅವರು ಹೇಳಿದರೆ, ನನ್ನ ಮಗನೇ, ಅವರ ಸಂಗಡ
ಮಾರ್ಗದಲ್ಲಿ ಹೋಗ ಬೇಡ; ನಿನ್ನ ಪಾದವನ್ನು ಅವರ ದಾರಿ
೧೬ ಯಿಂದ ಹಿಂದೆಳೆ. ಯಾಕಂದರೆ ಅವರ ಪಾದಗಳು ಕೇಡಿಗೆ ಓಡು
೧೭ ತ್ತವೆ; ರಕ್ತವನ್ನು ಚೆಲ್ಲುವದಕ್ಕೆ ತ್ವರೆ ಪಡುತ್ತವೆ. ರಕ್ಷಿಸಲ್ಪಟ್ಟ ಕಣ್ಣು
ಗಳ ಮುಂದೆ ಬಲೆಯು ವ್ಯರ್ಥವಾಗಿ ಒಡ್ಡಲ್ಪಡುತ್ತದಲ್ಲ! ಆದರೆ
ಅವರು ಸ್ವಂತ ರಕ್ತಕ್ಕೆ ಹೊಂಚಿ ಕೊಳ್ಳುತ್ತಾರೆ; ಸ್ವಂತ ಪ್ರಾಣ
೧೮ ಗಳಿಗೋಸ್ಕರ ಅಡಗಿ ಕೊಳ್ಳುತ್ತಾರೆ. ದುರ್ಲಾಭ ಆಶಿಸುವವರೆ
ಲ್ಲರ ಹಾದಿಗಳು ಹೀಗೆಯೇ; ಅದು ತನ್ನ ಯಜಮಾನನ ಪ್ರಾಣ
ವನ್ನು ತೆಗೆದು ಕೊಳ್ಳುವದು.

೧೯ ಜ್ಞಾನವು ಹೊರಗೆ ಕೂಗುತ್ತದೆ, ಬೀದಿಗಳಲ್ಲಿ ತನ್ನ ಶಬ್ದವನ್ನು
೨೦ ಎತ್ತುತ್ತದೆ. ಬೇಟೆಗಳ ತುದಿಯಲ್ಲಿ ಕೂಗುತ್ತದೆ; ಪಟ್ಟಣದ ಬಾಗಲು
ಗಳ ದ್ವಾರಗಳಲ್ಲಿ ತನ್ನ ಮಾತುಗಳನ್ನು ಆಡುತ್ತದೆ; ಏನಂದರೆ;
೨೧ ಯುಕ್ತಿಹೀನನೇ, ನೀವು ಯುಕ್ತಿಹೀನತೆಯನ್ನು ಪ್ರೀತಿ ಮಾಡುವ
ದೂ, ಕುಚೋದ್ಯಗಾರರು ಕುಚೋದ್ಯವನ್ನು ತಮಗೆ ಅಪೇಕ್ಷಿ
ಸುವದೂ, ಹುಚ್ಚರು ತಿಳುವಿಕೆಯನ್ನು ಹಗೆ ಮಾಡುವದೂ, ಎ
೨೩ ದ್ದು ಮಟ್ಟಿಗೂ? ನನ್ನ ಗದರಿಕೆಗೆ ತಿರುಗಿ ಕೊಳ್ಳಿರಿ. ಇಗೋ ನ
ನ್ನ ಆತ್ಮವನ್ನು ನಿಮಗೆ ಉಕ್ಕಿಸುವೆನು; ನನ್ನ ಮಾತುಗಳನ್ನು
ನಿಮಗೆ ತಿಳಿಯ ಮಾಡುವೆನು.

೨೪ ನಾನು ಕರೆಯಲು, ನೀವು ಒಲ್ಲದೆ ಇದ್ದದರಿಂದಲೂ, ನಾನು
೨೫ ಕೈ ಚಾಚಲು, ಯಾರೂ ಆಲೈಸದೆ ಇದ್ದದರಿಂದಲೂ, ನೀವು
ನನ್ನ ಆಲೋಚನೆಯನ್ನೆಲ್ಲಾ ಹೀನೈಸಿ, ನನ್ನ ಗದರಿಕೆ ಬೇಡಂ
೨೬ ದದರಿಂದಲೂ, ನಾನು ಸಹ ನಿಮ್ಮ ಆಪತ್ತಿಗೆ ನಗುವೆನು; ನಿಮಗೆ
೨೭ ಹೆದರಿಕೆ ಬರುವಾಗ—ನಾಶನದ ಹಾಗೆ ನಿಮಗೆ ಹೆದರಿಕೆ ಬಂದು,
ಸುಳಿ ಘುಳಿಯ ಹಾಗೆ ನಿಮಗೆ ಆಪತ್ತು ಸುಮಾಸಿ, ಇಕ್ಕಟ್ಟೂ
೨೮ ಸಂಕಟವೂ ನಿಮ್ಮ ಮೇಲೆ ಬರುವಾಗ—ಗೇಶಿಕುವೆನು. ಆಗ ನನ್ನ
ನ್ನು ಕರೆಯುವರು; ಆದರೆ ಉತ್ತರ ಕೊಡೆನು. ಬೆಳಗ್ಯೆ ನನ್ನನ್ನು
೨೯ ಹುಡುಕುವರು; ಆದರೆ ನನ್ನನ್ನು ದೊರಕಿಸಿ ಕೊಳ್ಳರು. ಯಾಕಂ
ದರೆ ಅವರು ತಿಳುವಿಕೆಯನ್ನು ಹಗೆ ಮಾಡಿ, ಕರ್ತನ ಭಯವ
೩೦ ನ್ನು ಆದು ಕೊಳ್ಳದೆ, ನನ್ನ ಆಲೋಚನೆ ಬೇಡಂದು, ನನ್ನ ಗ
೩೧ ದರಿಕೆಯನ್ನೆಲ್ಲಾ ಅಸಂಹಿಸಿ ಬಿಟ್ಟರು. ಆದದರಿಂದ ತಮ್ಮ ಮಾ
ರ್ಗದ ಫಲವನ್ನು ತಿಂದು, ತಮ್ಮ ಆಲೋಚನೆಗಳಿಂದ ತುಂಬಾ
೩೨ ಗುವರು. ಯಾಕಂದರೆ ಯುಕ್ತಿಹೀನರ ಹಿಂದಿರುಗುವಿಕೆಯು ಅ
ವರನ್ನು ಕೊಲ್ಲುವದು; ಹುಚ್ಚರ ಸೌಖ್ಯವು ಅವರನ್ನು ನಾಶ
೩೩ ಮಾಡುವದು. ಆದರೆ ನನ್ನನ್ನು ಕೇಳುವವನು ಭರವಸವಾಗಿ ವಾ
ಸಿಸಿ, ಕೇಡಿನ ಹೆದರಿಕೆ ಇಲ್ಲದೆ ಉರಸೆಮನವಾಗಿರುವನು.

#### ೨ ಸಂಧಿ.

೧ ನನ್ನ ಮಗನೇ, ನನ್ನ ವಾಕ್ಯಗಳನ್ನು ಅಂಗೀಕರಿಸಿ, ನನ್ನ ಆ
೨ ಜ್ಞೆಗಳನ್ನು ನಿನ್ನಲ್ಲಿ ಬಚ್ಚಿಟ್ಟು ಕೊಂಡು, ಜ್ಞಾನಕ್ಕೆ ನಿನ್ನ ಕಿವಿಯ
ನ್ನು ಆಲೈಸ ಮಾಡಿ, ವಿವೇಕಕ್ಕೆ ನಿನ್ನ ಹೃದಯವನ್ನು ಬೊ
೩ ಗ್ಗಿಸಿದರೆ, ಹೌದು, ಗ್ರಹಿಕೆಗೆ ಕರೆದು, ವಿವೇಕಕ್ಕೆ ನಿನ್ನ ಶಬ್ದವ
೪ ನ್ನೆತ್ತಿದರೆ, ಬೆಳ್ಳಿಯ ಹಾಗೆ ಅದನ್ನು ಹುಡುಕಿ, ನಿಕ್ಷೇಪಗಳ ಹಾಗೆ
೫ ಅದಕ್ಕಾಗಿ ಪರಿಶೋಧನೆ ಮಾಡಿದರೆ, ಆಗ ಕರ್ತನ ಭಯವನ್ನು
ಗ್ರಹಿಸುವಿ; ಮತ್ತು ದೇವರ ತಿಳುವಿಕೆಯನ್ನು ದೊರಕಿಸಿ ಕೊಳ್ಳುವಿ.
೬ ಯಾಕಂದರೆ ಕರ್ತನು ಜ್ಞಾನವನ್ನು ಕೊಡುತ್ತಾನೆ; ತಿಳುವಿಕೆ
೭ ಯೂ ವಿವೇಕವೂ ಅವನ ಬಾಯಿಂದ ಬರುತ್ತವೆ. ನೆಟ್ಟನೆಯವ
ರಿಗೆ ಸುಜ್ಞಾನವನ್ನು ಇಟ್ಟು ಕೊಳ್ಳುತ್ತಾನೆ; ಸಂಪೂರ್ಣರಾಗಿ ನ
೮ ಡೆಯುವವರಿಗೆ ಗುರಾಣಿಯಾಗಿದ್ದಾನೆ. ನ್ಯಾಯದ ಹಾದಿಗಳನ್ನು
ಕಾಯುತ್ತಾನೆ; ತನ್ನ ಭಕ್ತರ ಮಾರ್ಗವನ್ನು ಕಾಪಾಡುತ್ತಾನೆ.
೯ ಆಗ ನೀತಿಯನ್ನೂ, ನ್ಯಾಯವನ್ನೂ, ನೆಟ್ಟನೆತನವನ್ನೂ ಎಲ್ಲಾ
ಒಳ್ಳೇ ಹಾದಿಗಳನ್ನೂ, ಗ್ರಹಿಸಿ ಕೊಳ್ಳುವಿ.

೧೦ ಜ್ಞಾನವು ನಿನ್ನ ಹೃದಯದಲ್ಲಿ ಪ್ರವೇಶಿಸಿ, ತಿಳುವಿಕೆಯು ನಿ
೧೧ ನ್ನ ಪ್ರಾಣಕ್ಕೆ ರಮ್ಯವಾಗಿರುವಾಗ. ಯುಕ್ತಿಯು ನಿನ್ನ ಮೇಲೆ

೧೨ ಕಾವಲಾಗಿರುವದು; ವಿವೇಕವು ನಿನ್ನನ್ನು ಕಾಪಾಡುವದು. ಕೆಟ್ಟವ
ನ ಮಾರ್ಗಕ್ಕೂ, ತಕ್ಕು ಮಾತಾಡುವ ಮನುಷ್ಯನಿಗೂ, ನಿನ್ನ
೧೩ ನ್ನು ತಪ್ಪಿಸಿ ಬಿಡುವದು. ಅವರು ಕತ್ತಲೆಯ ಮಾರ್ಗಗಳಲ್ಲಿ ನ
ಡೆಯುವದಕ್ಕೆ ನೆಟ್ಟನೆಯ ಹಾದಿಗಳನ್ನು ಬಿಟ್ಟು ಬಿಡುತ್ತಾರೆ.
೧೪ ಕೆಟ್ಟದ್ದನ್ನು ಮಾಡುವದಕ್ಕೆ ಸಂತೋಷ ಪಟ್ಟು, ಕೆಟ್ಟ ತಕ್ಕುಗ
೧೫ ಳಿಗೆ ಉಲ್ಲಾಸ ಪಡುತ್ತಾರೆ. ಅವರ ಹಾದಿಗಳು ಕೊಂಕಾಗಿವೆ; ಅವ
೧೬ ರ ದಾರಿಗಳಲ್ಲಿ ವಕ್ರವಾಗಿದ್ದಾರೆ. ತನ್ನ ಯೌವನದ ಅತ್ತನನ್ನು ಬಿ
ಟ್ಟು ಬಿಟ್ಟು, ತನ್ನ ದೇವರ ಬಡಂಬಡಿಕೆಯನ್ನು ಮರೆತು ಬಿಟ್ಟು,
೧೭ ನುಣ್ಣಗೆ ಮಾತಾಡುವ ಅನ್ಯಳಾದ ಪರಸ್ತ್ರೀಗೆ ನಿನ್ನನ್ನು ತಪ್ಪಿಸಿ
೧೮ ಬಿಡುವದು. ಯಾಕಂದರೆ ಅವಳ ಮನೆಯು ಮರಣದ ಕಡೆಗೆ,
೧೯ ಅವಳ ಹಾದಿಗಳು ಪ್ರೇತಗಳ ಕಡೆಗೆ, ಇಳಿಯುತ್ತವೆ. ಅವಳ ಬಳಿ
ಗೆ ಹೋಗುವವರಲ್ಲಿ ಒಬ್ಬನೂ ತಿರಿಗಿ ಬರುವದಿಲ್ಲ; ಜೀವದ ಹಾದಿ
೨೦ ಗಳನ್ನು ಹಿಡಿಯುವದಿಲ್ಲ. ಆಗ ಒಳ್ಳೆಯವರ ಮಾರ್ಗದಲ್ಲಿ ನ
ಡೆದು ಕೊಂಡು, ನೀತಿವಂತರ ಹಾದಿಗಳನ್ನು ಕೈಕೊಳ್ಳುವಿ. ಯಾ
೨೧ ಕಂದರೆ ನೆಟ್ಟನೆಯವರು ದೇಶದಲ್ಲಿ ವಾಸಿಸುವರು; ಸಂಪೂರ್ಣ
೨೨ ರು ಅದರಲ್ಲಿ ಉಳಿಯುವರು. ಆದರೆ ದುಷ್ಟರು ಭೂಮಿಯೊ
ಳಗಿಂದ ಕಡಿದು ಹಾಕಲ್ಪಡುವರು; ವಂಚಕರು ಅದರೊಳಗಿಂದ
ಕೀಳಲ್ಪಡುವರು.

## ೩ ಸಂಧಿ.

೧ ನನ್ನ ಮಗನೇ, ನನ್ನ ನ್ಯಾಯಪ್ರಮಾಣವನ್ನು ಮರೆತು ಬಿ
ಡ ಬೇಡ; ನನ್ನ ಆಜ್ಞೆಗಳನ್ನು ನಿನ್ನ ಹೃದಯವು ಕಾಪಾಡಲಿ.
೨ ಯಾಕಂದರೆ ಅವು ದೀರ್ಘಾಯುಷ್ಯವನ್ನೂ, ಜೀವದ ವರು
೩ ಷಗಳನ್ನೂ, ಸಮಾಧಾನವನ್ನೂ, ನಿನಗೆ ಹೆಚ್ಚಿಸುವವು. ಕೃಪೆ
ಯೂ ಸತ್ಯವೂ ನಿನ್ನನ್ನು ಬಿಡದೆ ಇರಲಿ; ನಿನ್ನ ಕೊರಳಿಗೆ ಅ
ವುಗಳನ್ನು ಕಟ್ಟಿಕೋ. ನಿನ್ನ ಹೃದಯದ ಹಲಿಗೆಯ ಮೇಲೆ
೪ ಅವುಗಳನ್ನು ಬರೆದುಕೋ. ಆಗ ಸುಂದರವನ್ನೂ ಒಳ್ಳೇ ಬು
ದ್ಧಿಯನ್ನೂ, ದೇವರ ದೃಷ್ಟಿಯಲ್ಲಿಯೂ, ಮನುಷ್ಯರ ದೃ
ಷ್ಟಿಯಲ್ಲಿಯೂ, ದೊರಕಿಸಿ ಕೊಳ್ಳುವಿ.
೫ ನಿನ್ನ ಪೂರ್ಣ ಹೃದಯದಿಂದ ಕರ್ತನ ಮೇಲೆ ಭರವಸ
೬ ವಿಡು; ಸ್ವಂತ ಗ್ರಹಿಕೆಯ ಮೇಲೆ ಆತು ಕೊಳ್ಳ ಬೇಡ. ನಿನ್ನ
ಸಕಲ ಮಾರ್ಗಗಳಲ್ಲಿ ಅವನನ್ನು ತಿಳಿಕೋ; ಆಗ ಅವನು ನಿನ್ನ
೭ ಹಾದಿಗಳನ್ನು ನೆಟ್ಟಗೆ ಮಾಡುವನು. ಸ್ವಂತ ಕಣ್ಣುಗಳಿಗೆ ಜ್ಞಾನಿ
ಯಾಗಿರ ಬೇಡ; ಕರ್ತನಿಗೆ ಭಯ ಪಟ್ಟು, ಕೆಟ್ಟತನದಿಂದ ತೊ
೮ ಲಗು. ಇದು ನಿನ್ನ ಹೊಕ್ಕಳಿಗೆ ಕ್ಷೇಮಕರವಾಗಿಯೂ, ನಿನ್ನ ಎ
ಲುವುಗಳಿಗೆ ಶಂಪಾಗಿಯೂ, ಇರುವದು.
೯ ಕರ್ತನನ್ನು ನಿನ್ನ ಐಶ್ವರ್ಯದಿಂದಲೂ, ನಿನ್ನ ಎಲ್ಲಾ ಹು
೧೦ ಟ್ಟುವಳಿಯ ಪ್ರಥಮ ಫಲಗಳಿಂದಲೂ, ಘನ ಪಡಿಸು. ಆಗ ನಿನ್ನ
ಕಣಜಗಳು ತೃಪ್ತಿಯಿಂದ ತುಂಬುವವು; ನಿನ್ನ ತೊಟ್ಟಿಗಳು ದ್ರಾ
ಕ್ಷೇ ರಸದಿಂದ ಹೊರಳುವವು.
೧೧ ನನ್ನ ಮಗನೇ, ಕರ್ತನ ಶಿಕ್ಷೆಯನ್ನು ಅಲಕ್ಷ್ಯ ಮಾಡ ಬೇ
೧೨ ಡ; ಅವನ ಗದರಿಕೆಗೆ ಅಸಹ್ಯ ಪಡ ಬೇಡ. ಯಾಕಂದರೆ ಕರ್ತ
ನು ತಾನು ಪ್ರೀತಿ ಮಾಡುವವನನ್ನು, ತಂದೆಯ ಹಾಗೆ ತಾನು ಇ
ಷ್ಟಪಡುವ ಮಗನನ್ನು, ಗದರಿಸುತ್ತಾನೆ.
೧೩ ಜ್ಞಾನವನ್ನು ದೊರಕಿಸಿ ಕೊಳ್ಳುವ ಮನುಷ್ಯನೂ, ವಿವೇಕವ
ನ್ನು ತಂದು ಕೊಳ್ಳುವ ಮನುಷ್ಯನೂ, ಭಾಗ್ಯವಂತರು. ಯಾ
ಕಂದರೆ ಅದರ ವ್ಯಾಪಾರವು ಬೆಳ್ಳಿಯ ವ್ಯಾಪಾರಕ್ಕಿಂತಲೂ,
೧೫ ಅದರ ಆದಾಯವು ಹೊನ್ನಿಗಿಂತಲೂ, ಒಳ್ಳೇದು. ಅದು ಮು
ತ್ತುಗಳಿಗಿಂತ ಪ್ರಿಯವಾಗಿದೆ; ನೀನು ಅಪೇಕ್ಷಿಸುವದೆಲ್ಲಾ ಅದಕ್ಕೆ
೧೬ ಸಮಾನವಲ್ಲ. ಅದರ ಬಲಗೈಯಲ್ಲಿ ದೀರ್ಘಾಯುಷ್ಯವು,
ಅದರ ಎಡಗೈಯಲ್ಲಿ ಐಶ್ವರ್ಯವೂ, ಘನವೂ, ಉಂಟು.
೧೭ ಅದರ ಮಾರ್ಗಗಳು ರಮ್ಯವಾದ ಮಾರ್ಗಗಳೇ; ಅದರ ದಾ
೧೮ ರಿಗಳೆಲ್ಲಾ ಸಮಾಧಾನವೇ. ಅದನ್ನು ಹಿಡಿದು ಕೊಳ್ಳುವವರಿಗೆ, ಅ
ದು ಜೀವದ ಮರವೇ; ಅದನ್ನು ಸ್ಥಿರ ಹಿಡಿಯುವವನು ಭಾಗ್ಯ
ವಂತನು.
೧೯ ಕರ್ತನು ಜ್ಞಾನದಿಂದ ಭೂಮಿಯನ್ನು ಸ್ಥಾಪಿಸಿ, ವಿವೇಕದಿಂ
೨೦ ದ ಆಕಾಶಗಳನ್ನು ಸಿದ್ಧ ಮಾಡಿದನು. ಅವನ ತಿಳುವಿಕೆಯಿಂದ
ಅಗಾಧಗಳು ಬೀಳಿ ಹೋಗಿ, ಮೇಘಗಳು ಮಂಜನ್ನು ಸುರಿಯು
ತ್ತವೆ.
೨೧ ನನ್ನ ಮಗನೇ, ಅವು ನಿನ್ನ ಕಣ್ಣುಗಳಿಂದ ತೊಲಗಿ ಹೋಗ
೨೨ ದ ಹಾಗೆ, ಸುಜ್ಞಾನವನ್ನೂ, ಯುಕ್ತಿಯನ್ನೂ ಕಾಪಾಡು. ಆಗ
ಅವು ನಿನ್ನ ಪ್ರಾಣಕ್ಕೆ ಜೀವವೂ, ನಿನ್ನ ಕೊರಳಿಗೆ ಸುಂದರವೂ,
೨೩ ಆಗಿರುವವು. ಆಗ ಭರವಸವಾಗಿ ನಿನ್ನ ಮಾರ್ಗದಲ್ಲಿ ನಡೆದು ಕೊ
೨೪ ಳ್ಳುವಿ; ನಿನ್ನ ಪಾದ ತಗಲುವದಿಲ್ಲ. ನೀನು ಮಲಗಿದರೆ, ಹೆದರದೆ
ಇರುವಿ; ಮಲಗುವಾಗ, ನಿನ್ನ ನಿದ್ದೆಯು ರುಚಿಯಾಗಿರುವದು.
೨೫ ಭಕ್ಕನೆ ಆಗುವ ಹೆದರಿಕೆಗೂ, ದುಷ್ಟರ ನಾಶಕ್ಕೂ, ಅದು ಬರು
೨೬ ವಾಗ, ಭಯ ಪಡದೆ ಇರುವಿ. ಯಾಕಂದರೆ ಕರ್ತನು ನಿನ್ನ ನಂ
ಬಿಕೆಯಾಗಿದ್ದು, ನಿನ್ನ ಪಾದವು ಹಿಡಿಯಲ್ಪಡದ ಹಾಗೆ, ಕಾಪಾ
ಡುವನು.
೨೭ ಮಾಡುವದಕ್ಕೆ ನಿನ್ನ ಕೈಲಾದರೆ, ಒಳ್ಳೇದನ್ನು, ಅದಕ್ಕೆ ತ
೨೮ ಕ್ಕವರಿಂದ, ಹಿಂದೆಗೆಯ ಬೇಡ. ಅದು ನಿನ್ನ ಬಳಿಯಲ್ಲಿರುವಾಗ-
ಹೋಗಿ ಬಾ, ನಾಳೆ ಕೊಡುತ್ತೇನೆಂದು ನಿನ್ನ ನೆಕೆಯವನಿಗೆ ಹೇಳ
ಬೇಡ.
೨೯ ನಿನ್ನ ನೆಕೆಯವನು ಭರವಸವಾಗಿ ನಿನ್ನ ಸಂಗಡ ವಾಸವಾಗಿರ
೩೦ ಲು, ಅವನಿಗೆ ವಿರೋಧವಾಗಿ ಕೇಡನ್ನು ಕಲ್ಪಿಸ ಬೇಡ. ನಿನಗೆ ಕೇ
ಡನ್ನು ಸಲ್ಲಿಸದಿದ್ದರೆ, ಯಾವನ ಸಂಗಡಲಾದರೂ ಸುಮ್ಮನೆ ವ್ಯಾ
೩೧ ಜ್ಯವಾಡ ಬೇಡ. ಬಲಾತ್ಕಾರ ಮಾಡುವ ಮನುಷ್ಯನಿಗೆ ಹೊಟ್ಟೆ
ಕಿಚ್ಚು ಪಡ ಬೇಡ; ಅವನ ಮಾರ್ಗಗಳಲ್ಲಿ ಒಂದನ್ನಾದರೂ ಆ
೩೨ ದು ಕೊಳ್ಳ ಬೇಡ. ಯಾಕಂದರೆ ವಕ್ರನು ಕರ್ತನಿಗೆ ಅಸಹ್ಯ
ವಾಗಿದ್ದಾನೆ; ಆದರೆ ಅವನ ಗುಟ್ಟು ನೆಟ್ಟನೆಯವರ ಸಂಗಡ ಅದೆ.
೩೩ ಕರ್ತನ ಶಾಪವು ದುಷ್ಟನ ಮನೆಯಲ್ಲಿ ಅದೆ; ಆದರೆ ನೀತಿವಂತ
೩೪ ರ ನಿವಾಸವನ್ನು ಆಶೀರ್ವದಿಸುವನು. ನಿಶ್ಚಯವಾಗಿ ಕುಚೋ
ದ್ಯಗಾರರಿಗೆ ಅವನು ಕುಚೋದ್ಯ ಮಾಡುವನು; ಆದರೆ ದೀನರಿ
೩೫ ಗೆ ದಯೆ ತೋರಿಸುವನು. ಜ್ಞಾನಿಗಳು ಘನವನ್ನು ಬಾಧ್ಯವಾಗಿ
ಹೊಂದುವರು; ಆದರೆ ಮಾನ ಭಂಗವು ಹುಚ್ಚರನ್ನು ಉನ್ನತ
ಮಾಡುವದು.

## ೪ ಸಂಧಿ.

೧ ಮಕ್ಕಳೇ, ತಂದೆಯ ಶಿಕ್ಷೆಯನ್ನು ಕೇಳಿರಿ, ಗ್ರಹಿಕೆಯನ್ನು
೨ ತಿಳಿಯುವದಕ್ಕೆ ಆಲೈಸಿರಿ. ಯಾಕಂದರೆ ಒಳ್ಳೇ ಕಲಿಕೆಯನ್ನು
ನಿಮಗೆ ಕೊಡುತ್ತೇನೆ; ನನ್ನ ನ್ಯಾಯಪ್ರಮಾಣವನ್ನು ಬಿಡ ಬೇಡಿ
೩ ರಿ. ಯಾಕಂದರೆ ನಾನು ನನ್ನ ತಂದೆಗೆ ಮಗನಾಗಿಯೂ, ನನ್ನ
ತಾಯ ಮುಂದೆ ಎಳೆಯವನಾದ ಒಬ್ಬನೇ ಮಗನಾಗಿಯೂ, ಇ
ದ್ದೆನು.
೪ ಅವನು ನನಗೆ ಬೋಧಿಸಿ, ನನಗೆ ಹೇಳಿದ್ದೇನಂದರೆ:—
ನಿನ್ನ ಹೃದಯವು ನನ್ನ ಮಾತುಗಳನ್ನು ಸ್ಥಿರ ಹಿಡಿಯಲಿ;
೫ ನನ್ನ ಆಜ್ಞೆಗಳನ್ನು ಕೈಕೊಂಡು, ಬದುಕು. ಜ್ಞಾನವನ್ನು ಸಂಪಾ
ದಿಸಿಕೋ; ಗ್ರಹಿಕೆಯನ್ನು ಸಂಪಾದಿಸಿಕೋ ಮರೆತು ಬಿಡ ಬೇಡ;
ನನ್ನ ಬಾಯ ಮಾತುಗಳಿಗೆ ತಪ್ಪ ಬೇಡ. ಅದನ್ನು ಬಿಟ್ಟು ಬಿಡ
೬ ಬೇಡ; ಆಗ ಅದು ನಿನ್ನನ್ನು ಕಾಪಾಡುವದು. ಅದನ್ನು ಪ್ರೀತಿ
ಮಾಡು; ಆಗ ಅದು ನಿನ್ನನ್ನು ಕಾಯುವದು. ಜ್ಞಾನವೇ ಮುಖ್ಯ;
೭ ಜ್ಞಾನವನ್ನು ಸಂಪಾದಿಸಿಕೋ; ನಿನ್ನ ಎಲ್ಲಾ ಸಂಪಾದನೆಯಿಂದ
೮ ಗ್ರಹಿಕೆಯನ್ನು ಸಂಪಾದಿಸಿಕೋ. ಅದನ್ನು ಹೆಚ್ಚಿಸು; ಆಗ ಅದು
ನಿನ್ನನ್ನು ಉನ್ನತ ಮಾಡುವದು; ಅದನ್ನು ಅಪ್ಪಿ ಕೊಂಡರೆ, ನಿ
೯ ನ್ನನ್ನು ಘನ ಪಡಿಸುವದು. ಅದು ನಿನ್ನ ತಲೆಗೆ ಸುಂದರ ಮಾಲೆ
ಯನ್ನು ಕೊಡುವದು; ಮಹಿಮೆಯ ಕಿರೀಟವನ್ನು ನಿನಗೆ ಒಪ್ಪಿ
ಸುವದು.
೧೦ ನನ್ನ ಮಗನೇ, ಕೇಳಿ, ನನ್ನ ಮಾತುಗಳನ್ನು ತಕ್ಕೊ; ಆಗ
೧೧ ಜೀವದ ವರುಷಗಳು ನಿನಗೆ ಹೆಚ್ಚಾಗುವವು. ಜ್ಞಾನದ ಮಾರ್ಗ
ದಲ್ಲಿ ನಿನ್ನನ್ನು ಬೋಧಿಸಿದ್ದೇನೆ; ನೆಟ್ಟನೆಯ ಹಾದಿಗಳಲ್ಲಿ ನಿನ್ನ
೧೨ ನ್ನು ನಡಿಸಿದ್ದೇನೆ; ನೀನು ಹೋಗುವಾಗ, ನಿನ್ನ ನಡೆಗೆ ಇಕ್ಕಟ್ಟು
೧೩ ಇರುವದಿಲ್ಲ. ನೀನು ಓಡಿದರೆ, ಎಡವುವದಿಲ್ಲ. ಶಿಕ್ಷೆಯನ್ನು ಹಿಡು
ಕೋ; ಬಿಡ ಬೇಡ; ಅದನ್ನು ಕಾಯಿ; ಯಾಕಂದರೆ ಅದು ನಿನ್ನ
೧೪ ಜೀವವು. ದುಷ್ಟರ ಹಾದಿಗೆ ಹೋಗ ಬೇಡ; ಕೆಟ್ಟವರ ಮಾರ್ಗ
೧೫ ದಲ್ಲಿ ನಡೆಯ ಬೇಡ. ಅದನ್ನು ಬಿಡು; ಅದರಲ್ಲಿ ಹಾದು ಹೋಗ
೧೬ ಬೇಡ; ಅದಕ್ಕೆ ತೊಲಗಿ, ಹಾದು ಹೋಗು. ಯಾಕಂದರೆ ಕೇಡು
ಮಾಡಿದರೆ ಹೊರ್ತು, ಅವರು ನಿದ್ದೆ ಮಾಡರು; ಕೆಡವದೆ ಹೋ
೧೭ ದರೆ, ಅವರ ನಿದ್ದೆ ಸುಲು ಕೊಂಡು ಹೋಯಿತು. ಯಾಕಂದರೆ
ಅವರು ದುಷ್ಟತ್ವದ ಕೊಟ್ಟಿಯನ್ನು ತಿಂದು, ಬಲಾತ್ಕಾರಗಳ
೧೮ ದ್ರಾಕ್ಷೇ ರಸವನ್ನು ಕುಡಿಯುತ್ತಾರೆ. ಆದರೆ ನೀತಿವಂತರ ಹಾದಿ
ಯು ಪೂರ್ಣ ಹಗಲಿನ ವರಿಗೂ ಬೆಳಗುತ್ತಾ ಬರುವ ಪ್ರಕಾಶವಾ
೧೯ ದ ಬೆಳಕಿನ ಹಾಗಿದೆ. ದುಷ್ಟರ ಹಾದಿಯು ಅಂಧಕಾರದ ಹಾಗಿದೆ;
ಯಾವದಕ್ಕೆ ಎಡವುತ್ತಾರೋ, ಅವರಿಗೆ ತಿಳಿಯದು.
೨೦ ನನ್ನ ಮಗನೇ, ನನ್ನ ಮಾತುಗಳನ್ನು ಆಲೈಸು; ನನ್ನ ವಾಕ್ಯ
೨೧ ಗಳಿಗೆ ನಿನ್ನ ಕಿವಿ ಬೊಗ್ಗಿಸು. ಅವು ನಿನ್ನ ಕಣ್ಣುಗಳಿಗೆ ವಾರೆಮೊ
ಗದಿರಲಿ; ನಿನ್ನ ಹೃದಯದ ಮಧ್ಯದಲ್ಲಿ ಅವುಗಳನ್ನು ಕಾಪಾ
೨೨ ಡು. ಯಾಕಂದರೆ ಅವುಗಳನ್ನು ದೊರಕಿಸಿ ಕೊಂಡವರಿಗೆ ಅವು
೨೩ ಜೀವವೇ; ಅವರ ಮಾಂಸಕ್ಕೆಲ್ಲಾ ಸ್ವಸ್ಥವೇ. ಎಲ್ಲಾ ಕಾಪಾಡುವಿಕೆ
ಗಿಂತ ನಿನ್ನ ಹೃದಯವನ್ನು ಕಾಯಿ; ಯಾಕಂದರೆ ಅದರೊ
೨೪ ಳಗಿಂದ ಜೀವದ ಹೊರಕೋಣಗಳು ಅವೆ. ಡೊಂಕು ಬಾಯ
ನ್ನು ನಿನ್ನಿಂದ ತೊಲಗಿಸು; ಸೊಟ್ಟ ತುಟಿಗಳನ್ನು ನಿನಗೆ ದೂರ
೨೫ ಮಾಡಿಕೋ. ನಿನ್ನ ಕಣ್ಣುಗಳು ಸರಿಯಾಗಿ ದೃಷ್ಟಿಸಲಿ; ನಿನ್ನ ಕ
೨೬ ಣ್ಣು ಕೆಪ್ಪಿಸಗಳು ನಿನ್ನ ಮುಂದೆ ನೆಟ್ಟಗಿರಲಿ. ನಿನ್ನ ಪಾದದ ಹಾದಿ
ಯನ್ನು ತೂಗಿ ನೋಡು; ಆಗ ನಿನ್ನ ಮಾರ್ಗಗಳೆಲ್ಲಾ ಸ್ಥಿರವಾ
೨೭ ಗಿರುವವು. ಎಡಕ್ಕೂ ಬಲಕ್ಕೂ ವಾರೆ ಹೋಗದೆ, ಕೇಡಿನಿಂದ ನಿ
ನ್ನ ಪಾದವನ್ನು ತೊಲಗಿಸು.

## ೫ ಸಂಧಿ.

೧ ನನ್ನ ಮಗನೇ, ನೀನು ಯುಕ್ತಿಯನ್ನು ಕಾಪಾಡುವ ಹಾಗೆ
ಯೂ, ನಿನ್ನ ತುಟಿಗಳು ತಿಳುವಿಕೆಯನ್ನು ಕಾಯುವ ಹಾಗೆ
೨ ಯೂ, ನನ್ನ ಜ್ಞಾನವನ್ನು ಆಲೈಸು; ನನ್ನ ವಿವೇಕಕ್ಕೆ ನಿನ್ನ ಕಿ
ವಿಯನ್ನು ಬೊಗ್ಗಿಸು.
೩ ಯಾಕಂದರೆ ಪರಸ್ತ್ರೀಯ ತುಟಿಗಳು ಜೇನು ತೊಟ್ಟಿಯ ಹಾ
೪ ಗೆ ಸೋರುತ್ತವೆ; ಅವಳ ಅಂಗಳ ಎಣ್ಣೆಗಿಂತ ನುಣ್ಣಗಾಗಿದೆ. ಆದರೆ
ಅವಳ ಅಂತ್ಯವು ಮಾಚಿಪತ್ರೆಯ ಹಾಗೆ ಕಹಿಯಾಗಿದೆ; ಇಬ್ಬಾ
೫ ಯಿ ಕತ್ತಿಯ ಹಾಗೆ ಹದವಾಗಿದೆ. ಅವಳ ಪಾದಗಳು ಮರಣಕ್ಕೆ
ಇಳಿಯುತ್ತವೆ; ಅವಳ ನಡೆಗಳು ಪಾತಾಳವನ್ನು ಹಿಡು ಕೊಳ್ಳುತ್ತ
೬ ವೆ. ಜೀವದ ಹಾದಿಯನ್ನು ನೀನು ತೂಗಿ ನೋಡದ ಹಾಗೆ, ಅವಳ
ದಾರಿಗಳು ಚಲವಾಗಿವೆ; ಅವುಗಳನ್ನು ತಿಳಿಯಲಾರಿ.
೭ ಈಗ, ಮಕ್ಕಳೇ, ನನ್ನನ್ನು ಕೇಳಿರಿ; ನನ್ನ ಬಾಯ ವಾಕ್ಯ
೮ ಗಳಿಂದ ತೊಲಗ ಬೇಡಿರಿ. ಅವಳ ಕಡೆಗೆ ನಿನ್ನ ಮಾರ್ಗವನ್ನು
ದೂರ ಮಾಡಿ, ಅವಳ ಮನೆಯ ಬಾಗಲಿನ ಹತ್ರ ಹೋಗ ಬೇಡ.
೯ ಇಲ್ಲವಾದರೆ, ನೀನು ಬೇರೊಬ್ಬನಿಗೆ ನಿನ್ನ ಮಹಿಮೆಯನ್ನೂ,
೧೦ ಕ್ರೂರನಿಗೆ ನಿನ್ನ ವರುಷಗಳನ್ನೂ ಕೊಡುವಿ. ಪರರು ನಿನ್ನ ಶಕ್ತಿ
ಯಿಂದ ತೃಪ್ತಿ ಹೊಂದುವರು, ನಿನ್ನ ಕಷ್ಟಾರ್ಜಿತವು ಅನ್ಯನ
೧೧ ಮನೆಯಲ್ಲಿ ಇರುವದು. ನೀನು ನಿನ್ನ ಅಂತ್ಯದಲ್ಲಿ, ನಿನ್ನ ಮಾಂಸ
೧೨ ವೂ ಶೋರವೂ ಮುಗಿದು ಹೋದಾಗ, ಮೂಲುಗಿ—ಅಯ್ಯೋ!
ಶಿಕ್ಷೆಯನ್ನು ಹಗೆ ಮಾಡಿದೆನು; ನನ್ನ ಹೃದಯವು ಗದರಿಕೆಯ
೧೩ ನ್ನು ಅಸಹಿಸಿತು. ನನ್ನ ಬೋಧಕರ ಶಬ್ದವನ್ನು ನಾನು ಕೇಳಲಿ
ಲ್ಲ; ನನ್ನನ್ನು ಉಪದೇಶಿಸುವವರಿಗೆ ನನ್ನ ಕಿವಿಯನ್ನು ಬೊಗ್ಗಿಸ
೧೪ ಲಿಲ್ಲ; ಕೂಟ ಸಭೆಗಳ ಮಧ್ಯದಲ್ಲಿ ಸ್ವಲ್ಪ ಕಡಿಮೆ ಎಲ್ಲಾ ಕೇಡಿನ
ಲ್ಲಿ ಇದ್ದೆನು ಎಂದು, ಹೇಳುವಿ.
೧೫ ನಿನ್ನ ಕುಂಟೆಯೊಳಗಿಂದ ನೀರನ್ನೂ, ನಿನ್ನ ಭಾವಿಯೊಳ
೧೬ ಗಿಂದ ಜಲಗಳನ್ನೂ, ಕುಡಿ. ಹೊರಗೆ ನಿನ್ನ ಬುಗ್ಗೆಗಳೂ, ಬೀದಿಗ
೧೭ ಳಲ್ಲಿ ನಿನ್ನ ನೀರಿನ ಕಾಲಿವೆಗಳೂ, ವಿಸ್ತರಿಸಲಿ. ಅವು ನಿನಗೆ, ನಿನ
೧೮ ಗೊಬ್ಬನಿಗೆ, ಇರಲಿ, ನಿನ್ನ ಸಂಗಡ ಪರರಿಗೆ ಇಲ್ಲದಿರಲಿ. ನಿನ್ನ ಬು
ಗ್ಗೆಯು ಆಶೀರ್ವದಿಸಲ್ಪಡಲಿ; ಮತ್ತು ನಿನ್ನ ಯೌವನದ ಹೆಂ
೧೯ ಡತಿಯಿಂದ ಸಂತೋಷ ಪಡು. ಅವಳೇ ಅತಿ ಪ್ರಿಯವಾದ ಜಿಂಕೆ
ಯೂ, ಸುಂದರವಾದ ಹುಲ್ಲೆಯೂ, ಆಗಿರಲಿ; ಅವಳ ಮೊಲೆ
ಗಳು ಎಲ್ಲಾ ಕಾಲದಲ್ಲಿ ನಿನ್ನನ್ನು ತೃಪ್ತಿ ಪಡಿಸಲಿ; ಅವಳ ಪ್ರೀತಿಯ
೨೦ ಲ್ಲಿ ಯೋಚಾಗೂ ಭ್ರಮೆಗೊಂಡಿರು. ಆದರೆ, ನನ್ನ ಮಗನೇ,
ಪರಸ್ತ್ರೀಯಲ್ಲಿ ಭ್ರಮೆಗೊಳ್ಳುವದೂ, ಅನ್ಯಳ ಎದೆಯನ್ನು ಅ
೨೧ ಪ್ಪಿ ಕೊಳ್ಳುವದು ಯಾಕೆ! ಯಾಕಂದರೆ ಮನುಷ್ಯನ ಮಾರ್ಗ
ಗಳು ಕರ್ತನ ಕಣ್ಣುಗಳ ಮುಂದೆ ಅವೆ; ಅವನ ಹಾದಿಗಳನ್ನೆಲ್ಲಾ
೨೨ ಅವನೇ ತೂಗಿ ನೋಡುತ್ತಾನೆ. ದುಷ್ಟನ ಅಕ್ರಮಗಳು ಅವನನ್ನೇ
೨೩ ಹಿಡಿಯುವವು; ತನ್ನ ಪಾಪದ ಪಾಶಗಳಿಂದ ಅವನು ಬಿಗಿಸಲ್ಪ
ಡುವನು. ಅವನು ಶಿಕ್ಷೆ ಇಲ್ಲದೆ ಸಾಯುವನು; ತನ್ನ ಮೂಢತ್ವದ
ಬಾಹುಳ್ಯದಲ್ಲಿ ಭ್ರಮೆಗೊಳ್ಳುವನು.

## ೬ ಸಂಧಿ.

೧ ನನ್ನ ಮಗನೇ, ನೀನು ನಿನ್ನ ನೆಕೆಯವನಿಗೆ ಹೊಣೆಯಾಗಿ,
೨ ಪರನಿಗೆ ನಿನ್ನ ಕೈಗಳನ್ನು ಕೊಟ್ಟಿದ್ದರೆ—ನಿನ್ನ ಬಾಯ ವಾಕ್ಯಗ
ಳಿಂದ ಹಿಡಿಯಲ್ಪಟ್ಟಿದ್ದೀ; ನಿನ್ನ ಬಾಯ ವಾಕ್ಯಗಳಿಂದ ಶಿಕ್ಕಿ
೩ ಕೊಂಡಿದ್ದೀ. ಎಲೇ, ನನ್ನ ಮಗನೇ, ಇದನ್ನು ಮಾಡು; ತಪ್ಪಿಸಿ
ಕೋ. ನಿನ್ನ ನೆಕೆಯವನ ಕೈಯಲ್ಲಿ ಶಿಕ್ಕಿ ಕೊಂಡಿದ್ದರೆ, ಹೋ
೪ ಗಿ, ಅಡ್ಡ ಬಿದ್ದು, ನಿನ್ನ ನೆಕೆಯವನನ್ನು ಪೀಡಿಸು. ನಿನ್ನ ಕಣ್ಣು
ಗಳಿಗೆ ನಿದ್ದೆಯನ್ನೂ, ನಿನ್ನ ಕಣ್ಣು ಕೆಪ್ಪೆಗಳಿಗೆ ತೂಕಡಿಕೆಯ
೫ ನ್ನೂ, ಕೊಡ ಬೇಡ. ಕೈಯಿಂದ ಜಿಂಕೆಯ ಹಾಗೆಯೂ, ಉ
೮ ಹಾಕುವವನ ಕೈಯಿಂದ ಪಕ್ಷಿಯ ಹಾಗೆಯೂ, ತಪ್ಪಿಸಿ
ಕೋ.

೬ ಮೈಗಳ್ಳನೇ, ಇರುವೆಯ ಹತ್ತರ ಹೋಗಿ, ಅದರ ನಡತೆಗಳ
೭ ನ್ನು ನೋಡಿ, ಜ್ಞಾನಿಯಾಗು. ಅದಕ್ಕೆ ಅಧಿಕಾರಿಯೂ, ಪಾರು
೮ ಪತ್ಯಗಾರನೂ, ಒಕೆಯೂ, ಇಲ್ಲ. ಅದು ಬೇಸಿಗೆ ಕಾಲದಲ್ಲಿ
ತನ್ನ ಕೊಟ್ಟಿಯನ್ನು ಸಿದ್ಧ ಮಾಡಿ, ಸುಗ್ಗಿ ಕಾಲದಲ್ಲಿ ತನ್ನ ಆ
೯ ಹಾರವನ್ನು ಕೂಡಿಸುತ್ತದೆ. ಮೈಗಳ್ಳನೇ, ಎದ್ದು ಎದ್ದು ಮಲಗು
೧೦ ವಿ! ಯಾವಾಗ ನಿನ್ನ ನಿದ್ದೆ ಶೀಳಿದು, ಏಳುವಿ? ಸ್ವಲ್ಪ ನಿದ್ದೆ, ಸ್ವ
ಲ್ಪ ತೂಕಡಿಕೆ, ಮಲಗುವ ಹಾಗೆ ಸ್ವಲ್ಪ ಕೈ ಕೂಡಿಸುವದು;
೧೧ ಆ ಮೇಲೆ ನಿನ್ನ ಬಡತನವು ಓಡುವವನ ಹಾಗೆಯೂ, ನಿನ್ನ ಕೊ
ರತೆಯು ಗುರಾಣಿ ಹಿಡಿದವನ ಹಾಗೆಯೂ, ಬರುವದು.

೧೨ ಬೆಲಿಯಾಳನ ಮನುಷ್ಯನೂ, ಪಾತಕ ಪುರುಷನೂ, ಜೊಂ
೧೩ ಕು ಬಾಯುಳ್ಳವನಾಗಿ ನಡೆದು ಕೊಂಡು, ತನ್ನ ಕಣ್ಣುಗಳಿಂದ
ಸಂಜ್ಞೆ ಮಾಡಿ, ತನ್ನ ಪಾದಗಳಿಂದ ಮಾತಾಡಿ, ತನ್ನ ಬೆರಳುಗ
೧೪ ಳಿಂದ ಬೋಧಿಸಿ, ತನ್ನ ಹೃದಯದಲ್ಲಿ ತಕ್ಕು ಉಂಟಾಗಿ, ಎ
ಲ್ಲಾ ಕಾಲದಲ್ಲಿ ಕೆಟ್ಟದ್ದನ್ನು ಕಲ್ಪಿಸಿ, ಝಗಳಾಟಿಗಳನ್ನು ಬಿತ್ತುವ
೧೫ ನು. ಆದದರಿಂದ ಫಕ್ಕನೆ ಅವನ ಆಪತ್ತು ಬರುವದು; ಕ್ಷಣದಲ್ಲಿ
ಅವನು ಮುರಿಯಲ್ಪಡುವನು; ಗುಣವಾಗುವದೇ ಇಲ್ಲ.

೧೬ ಈ ಆರನ್ನು ಕರ್ತನು ಹಗೆ ಮಾಡುತ್ತಾನೆ; ಏಳು ಅವನ
೧೭ ಪ್ರಾಣಕ್ಕೆ ಅಸಹ್ಯವಾಗಿವೆ. ಎತ್ತರವಾದ ಕಣ್ಣುಗಳು, ಸುಳ್ಳಾಡು
ವ ನಾಲಿಗೆಯು, ಅಪರಾಧವಿಲ್ಲದ ರಕ್ತವನ್ನು ಚೆಲ್ಲುವ ಕೈಗಳು,
೧೮ ಪಾತಕದ ಆಲೋಚನೆಗಳನ್ನು ಕಲ್ಪಿಸುವ ಹೃದಯವು, ಕೆಟ್ಟ
೧೯ ತನಕ್ಕೆ ಓಡ ತ್ವರೆ ಪಡುವ ಪಾದಗಳು, ಅಬದ್ಧಗಳನ್ನು ಉಸು
ರುವ ಸುಳ್ಳುಸಾಕ್ಷಿಯು, ಸಹೋದರರೊಳಗೆ ಝಗಳಾಟಿಗಳನ್ನು
ಬಿತ್ತುವವನು.

೨೦ ನನ್ನ ಮಗನೇ, ನಿನ್ನ ತಂದೆಯ ಆಜ್ಞೆಯನ್ನು ಕೈಕೋ; ನಿ
೨೧ ನ್ನ ತಾಯ ನ್ಯಾಯಪ್ರಮಾಣವನ್ನು ಬಿಡ ಬೇಡ. ಅವುಗಳನ್ನು
ಯಾವಾಗಲೂ ನಿನ್ನ ಹೃದಯದ ಮೇಲೆ ಕಟ್ಟಿಕೋ; ನಿನ್ನ
೨೨ ಕೊರಳಿಗೆ ಅವುಗಳನ್ನು ಹಾಕಿಕೋ. ನೀನು ಹೋಗುತ್ತಿರುವಾಗ,
ಅದು ನಿನ್ನನ್ನು ನಡಿಸುವದು; ನೀನು ಮಲಗಿ ಕೊಂಡಿರುವಾಗ,
ನಿನ್ನ ಮೇಲೆ ಕಾವಲಾಗಿರುವದು; ಮತ್ತು ಎಚ್ಚತ್ತಾಗ, ನಿನ್ನ ಸಂ
೨೩ ಗಡ ಸಂಭಾಷಿಸುವದು. ಯಾಕಂದರೆ ಆಜ್ಞೆಯೇ ದೀಪವು;
ನ್ಯಾಯಪ್ರಮಾಣವೇ ಬೆಳಕು; ಮತ್ತು ಶಿಕ್ಷೆಯ ಗದರಿಕೆಗಳೇ
೨೪ ಜೀವ ಮಾರ್ಗವು. ಕೆಟ್ಟ ಸ್ತ್ರೀಯಿಂದಲೂ, ಪರಸ್ತ್ರೀಯ ಸು
೨೫ ಣ್ಣ ನಾಲಿಗೆಯಿಂದಲೂ, ಅವು ನಿನ್ನನ್ನು ಕಾಪಾಡುವವು. ಅವಳ
ಸೌಂದರ್ಯವನ್ನು ನಿನ್ನ ಹೃದಯದಲ್ಲಿ ಅಪೇಕ್ಷಿಸ ಬೇಡ;
ಅವಳು ತನ್ನ ಕಣ್ಣು ಕೆಪ್ಪೆಗಳಿಂದ ನಿನ್ನನ್ನು ಹಿಡಿಯದಿರಲಿ.
೨೬ ಯಾಕಂದರೆ ಜಾರ ಸ್ತ್ರೀಯಿಂದ ಕೊಟ್ಟಿಯ ತುಂಡು ಮಾತ್ರ
ಉಳಿದೀತು; ಆದರೆ ಮುತ್ತೈದೆಯು ಬೆಲೆಯುಳ್ಳ ಪ್ರಾಣಕ್ಕೆ
೨೭ ಬೇಟೆ ಆಡುತ್ತಾಳೆ. ಒಬ್ಬನು ತನ್ನ ವಸ್ತ್ರಗಳು ಸುಟ್ಟು ಹೋ
ಗದೆ, ತನ್ನ ಉಡಿಯಲ್ಲಿ ಬೆಂಕಿಯನ್ನು ತಕ್ಕೊಳ್ಳಬಹುದೋ?
೨೮ ಇಲ್ಲನೆ, ತನ್ನ ಪಾದಗಳಿಗೆ ಬೆಂಕಿ ಹತ್ತದೆ, ಒಬ್ಬನು ಕೆಂಡಗಳ
೨೯ ಮೇಲೆ ನಡೆಯ ಬಹುದೋ? ತನ್ನ ನೆಕೆಯವನ ಹೆಂಡತಿಯ ಬ
ಳಿಗೆ ಬರುವವನು ಹಾಗೆಯೇ; ಅವಳನ್ನು ಮುಟ್ಟುವವರಲ್ಲಿ ಒಬ್ಬ
೩೦ ನಾದರೂ ಅಪರಾಧವಿಲ್ಲದೆ ಇರನು. ತಾನು ಹಸಿದಾಗ, ತನ್ನ ಪ್ರಾ
ಣವನ್ನು ತೃಪ್ತಿ ಪಡಿಸುವ ಹಾಗೆ ಕದ್ದರೆ, ಜನರು ಕಳ್ಳನನ್ನು ತಿ
೩೧ ರಸ್ಕರಿಸುವದಿಲ್ಲ; ಆದರೆ ಅವನು ಶಿಕ್ಕಿದರೆ, ಏಳ್ಪಟ್ಟು ಸಲ್ಲಿಸಿ, ತ
೩೨ ನ್ನ ಮನೆಯ ದ್ರವ್ಯವನ್ನೆಲ್ಲಾ ಕೊಡುವನು. ಸ್ತ್ರೀಯ ಸಂಗದ
ವ್ಯಭಿಚಾರ ಮಾಡುವವನು ಬುದ್ಧಿಹೀನನು. ಅದನ್ನು ಮಾಡಿ ತ
೩೩ ನ್ನ ಪ್ರಾಣವನ್ನು ಕೆಡಿಸುತ್ತಾನೆ. ಬಾಧೆಯೂ, ಮಾನ ಭಂಗವೂ
೩೪ ಅವನಿಗೆ ಶಿಕ್ಕುವವು; ಅವನ ನಿಂದೆ ಅಳಿಸಲ್ಪಡದು. ಯಾಕಂದರೆ
ಪ್ರೇಮೋತ್ಸವ ಪುರುಷನ ಉರಿಯಾಗಿದೆ; ಅವನು ಮುಯ್ಯಿಗೆ
೩೫ ಮುಯ್ಯಿ ಕೊಡುವ ದಿವಸದಲ್ಲಿ ಕನಿಕರಿಸನು. ಅವನು ಯಾವ
ಅಪರಾಧದ ಹಣಕ್ಕೋಸ್ಕರ ದಾಕ್ಷಿಣ್ಯ ಮಾಡದೆ, ಲಂಚವನ್ನು
ಹೆಚ್ಚಿಸಿದರೂ, ಒಪ್ಪನು.

## ೭ ಸಂಧಿ.

೧ ನನ್ನ ಮಗನೇ, ನನ್ನ ವಾಕ್ಯಗಳನ್ನು ಕಾಪಾಡು; ನನ್ನ ಆ
೨ ಜ್ಞೆಗಳನ್ನು ನಿನ್ನ ಸಂಗಡ ಅಡಗಿಸಿಕೋ. ನನ್ನ ಆಜ್ಞೆಗಳನ್ನೂ
ನನ್ನ ನ್ಯಾಯಪ್ರಮಾಣವನ್ನೂ, ನಿನ್ನ ಕಣ್ಣುಗೊಂಬೆಯ ಹಾ
೩ ಗೆ ಕಾಪಾಡಿ, ಬದುಕು. ಅವುಗಳನ್ನು ನಿನ್ನ ಬೆರಳುಗಳ ಮೇಲೆ
ಕಟ್ಟು; ನಿನ್ನ ಹೃದಯದ ಹಲಿಗೆಯ ಮೇಲೆ ಅವುಗಳನ್ನು ಬ
೪ ರೆದುಕೋ. ಜ್ಞಾನಕ್ಕೆ—ನೀನು ನನ್ನ ಅಕ್ಕ ಎಂದು, ಹೇಳು;
೫ ಮತ್ತು ಗ್ರಹಿಕೆಗೆ—ನೆಂಟಳೆಂದು, ಕರೆ. ಅವು ಪರಸ್ತ್ರೀಗೂ, ತನ್ನ
ಮಾತುಗಳನ್ನು ನುಣ್ಣಗೆ ಮಾಡುವ ಅನ್ಯಳಿಗೂ, ತಪ್ಪಿಸಿ, ನಿನ್ನ
ನ್ನು ಕಾಪಾಡುವವು.

೬ ಯಾಕಂದರೆ ನನ್ನ ಮನೆಯ ಕಿಟಿಕಿಯಿಂದ, ನನ್ನ ಕಟ್ಟಿ
೭ ಯೊಳಗಿಂದ, ನೋಡಿದೆನು; ಆಗ ಯುಕ್ತಿಹೀನರಲ್ಲಿ ನೋಡಿ,
೮ ಕುಮಾರರಲ್ಲಿ ಬುದ್ಧಿಹೀನ ಯೌವನಸ್ಥನನ್ನು ಕಂಡೆನು. ಅವನು
ಅವಳ ಮೂಲೆಯ ಹತ್ತರ ಬೀದಿಯಲ್ಲಿ ಹಾದು, ಅವಳ ಮನೆಯ
೯ ಮಾರ್ಗದಲ್ಲಿ ನಡೆದು ಹೋದನು. ಸಂಜೆಯಲ್ಲಿ, ಹೊತ್ತು ಇಳಿ
೧೦ ದಾಗ, ರಾತ್ರಿಯಲ್ಲಿ, ಕತ್ತಲಾದಾಗ, ಇಗೋ, ಶಂತ್ರ ಹೃದಯ
ವುಳ್ಳ ಒಬ್ಬ ಸ್ತ್ರೀಯು ಸೂಳೆಯ ವೇಷದಿಂದ ಅವನೆದುರಿಗೆ
೧೧ ಬಂದಳು. ಅವಳು ಕೂಗಾಡುವವಳೂ, ಮೂರ್ಖಳೂ; ಅವಳ
೧೨ ಪಾದಗಳು ಅವಳ ಮನೆಯಲ್ಲಿ ನಿಲ್ಲದವು. ಈಗ ಹೊರಗೆ, ಈಗ
ಬೀದಿಗಳಲ್ಲಿ, ಎಲ್ಲಾ ಮೂಲೆಗಳ ಹತ್ತರ ಹೊಂಚಿ ಕೊಳ್ಳುತ್ತಾಳೆ.
೧೩ ಅವನನ್ನು ಹಿಡಿದಳು; ಅವನಿಗೆ ತನ್ನ ಮುಖವನ್ನು ರೂಪ ಮಾ
೧೪ ಡಿ ಕೊಂಡು, ಅವನಿಗೆ ಹೇಳಿದ್ದೇನಂದರೆ;—ಸಮಾಧಾನದ ಬಲಿಗಳು
ನನ್ನ ಜಿಲ್ಲೆಯಲ್ಲಿ ಅವೆ; ಈ ಹೊತ್ತು ನನ್ನ ಹರಕೆಗಳನ್ನು ಸಲ್ಲಿಸಿ
೧೫ ದ್ದೇನೆ; ಆದದರಿಂದ ನಿನ್ನ ಮುಖವನ್ನು ಹುಡುಕುವದಕ್ಕೆ ನಿನ್ನೆ



ದುರಿಗೆ ಹೊರಟು ಬಂದಿದ್ದೇನೆ; ಮತ್ತು ನಿನ್ನನ್ನು ದೊರಕಿಸಿ ಕೊಂ
೧೬ ಡಿದ್ದೇನೆ; ರತ್ನ ಕಂಬಳಿಗಳಿಗೂ, ಮಿಚ್ಚದ ನೂಲಿನ ಚಿತ್ರ ದು
ಪ್ಪಟಿಗಳನ್ನೂ, ನನ್ನ ಮಂಚದ ಮೇಲೆ ಹಾಸಿದ್ದೇನೆ; ನನ್ನ ಹಾಸಿ
೧೭ ಗೆಗೆ ಬೋಳ, ಅಗರು, ಲವಂಗ ಚಕ್ಕೆ, ಹಾಕಿದ್ದೇನೆ; ಬಾ, ಉದ
೧೮ ಯದ ವರೆಗೂ ಕ್ರೀಡೆಯಲ್ಲಿ ತೃಪ್ತಿಯಾಗುವ; ಕಾಮದಲ್ಲಿ ವಿ
೧೯ ಲಾಸ ಪಡುವ; ಯಾಕಂದರೆ ಗಂಡನು ಮನೆಯಲ್ಲಿ ಇಲ್ಲ; ಅವ
೨೦ ನು ದೂರವಾಗಿ ಪ್ರಯಾಣ ಹೋಗಿದ್ದಾನೆ; ಹಣದ ಚೀಲ ಕೈ
ಯಲ್ಲಿ ತೆಗೆದು ಕೊಂಡಿದ್ದಾನೆ; ಹುಣ್ಣಿಮೆ ದಿವಸದಲ್ಲಿ ಮನೆಗೆ ಬ
೨೧ ರುವನು. ಅವಳು ತನ್ನ ಬಹಳ ಬೋಧನೆಯಿಂದ ಅವನನ್ನು ಸ
ಮ್ಮತಿ ಪಡಿಸಿ, ತನ್ನ ನುಣ್ದುಟಿಗಳಿಂದ ಅವನನ್ನು ಪ್ರೇರೇಪಿಸಿದಳು.
೨೨ ಕೊಯ್ಯುವ ಸ್ಥಳಕ್ಕೆ ಹೋಗುವ ಎತ್ತಿನ ಹಾಗೆಯೂ, ಮೂಢ
ನ ಶಿಕ್ಷೆಗೆ ಹೋಗುವ ಬೇಡಿ ಬಿದ್ದವನ ಹಾಗೆಯೂ, ಸಂಗಡಲೇ
೨೩ ಅವಳ ಹಿಂದೆ ಹೋಗುತ್ತಾನೆ. ಕಡೆಗೆ ಬಾಣವು ಅವನ ಯಕೃತ್ತ
ನ್ನು ಶೀಳುವದು; ಪಕ್ಷಿಯು ಉರ್ಕಿನ ಬಲೆಗೆ ತ್ವರೆ ಪಡುವ ಪ್ರ
ಕಾರ, ತನಗೆ ಪ್ರಾಣ ಸಂಕಟವಾಗುತ್ತದೆಂದು ಅರಿಯನು.

೨೪ ಹಾಗಾದರೆ, ಈಗ, ಮಕ್ಕಳೇ, ನನಗೆ ಕಿವಿಕೊಟ್ಟು, ನನ್ನ
೨೫ ಬಾಯ ವಾಕ್ಯಗಳನ್ನು ಆಲೈಸಿರಿ. ನಿನ್ನ ಹೃದಯವು ಅವಳ
ಮಾರ್ಗಕ್ಕೆ ಕಡೆಗೆ ತೊಲಗದಿರಲಿ; ಅವಳ ದಾರಿಗಳಲ್ಲಿ ತಪ್ಪಿ
೨೬ ಹೋಗ ಬೇಡ. ಯಾಕಂದರೆ ಅನೇಕರನ್ನು ಘಾಯವಾದವರಾ
ಗಿ ಕೆಡವಿದ್ದಾಳೆ; ಅವಳು ಕೊಂದವರೆಲ್ಲಾ ಬಲಿಷ್ಠರಾಗಿದ್ದರು.
೨೭ ಅವಳ ಮನೆಯು ಮರಣದ ಕೊತ್ತಡಿಗಳಿಗೆ ಇಳಿದು ಹೋಗುವ
ಪಾತಾಳದ ಮಾರ್ಗಗಳಾಗಿವೆ.

## ೮ ಸಂಧಿ.

೧ ಜ್ಞಾನವು ಕೂಗುತ್ತದಲ್ಲವೋ? ವಿವೇಕವು ತನ್ನ ಶಬ್ದ ಕೊಡು
೨ ತ್ತದಲ್ಲವೋ? ಎತ್ತರ ಸ್ಥಳಗಳ ತುದಿಯಲ್ಲಿಯೂ, ಮಾರ್ಗದ
೩ ಲ್ಲಿಯೂ, ದಾರಿಗಳಿರುವಲ್ಲಿ ನಿಂತು ಕೊಳ್ಳುತ್ತದೆ. ಬಾಗಲುಗಳ
ಕಡೆಯಲ್ಲಿ, ಕಟ್ಟಿದ ಬಾಯಲ್ಲಿ, ದ್ವಾರಗಳನ್ನು ಪ್ರವೇಶಿಸುವಲ್ಲಿ,
೪ ಅದು ಘಟ್ಟಿಯಾಗಿ ಕೂಗುವದೇನಂದರೆ—ಮನುಷ್ಯರೇ, ನಿಮ
ಗೆ ಕೂಗುತ್ತೇನೆ; ನನ್ನ ಶಬ್ದವು ಮನುಷ್ಯನ ಮಕ್ಕಳಿಗೆ ಅದೆ.
೫ ಯುಕ್ತಿಹೀನರೇ, ಚಾತುರ್ಯವನ್ನು ಗ್ರಹಿಸಿರಿ; ಹುಚ್ಚರೇ, ಹೃ
೬ ದಯದಲ್ಲಿ ಗ್ರಹಿಕೆಯುಳ್ಳವರಾಗಿರಿ. ಕೇಳಿರಿ; ಯಾಕಂದರೆ ಶ್ರೇ
ಷ್ಠ ಕಾರ್ಯಗಳನ್ನು ಮಾತಾಡುವೆನು; ನನ್ನ ತುಟಿಗಳನ್ನು
೭ ತೆರೆಯುವಂಥಾದ್ದು ನೆಟ್ಟಿನೆತನವೇ. ಯಾಕಂದರೆ ನನ್ನ ಬಾಯಿ
ಸತ್ಯವನ್ನು ಹೇಳುವದು; ಮತ್ತು ದುಷ್ಟತ್ವವು ನನ್ನ ತುಟಿಗಳಿ
೮ ಗೆ ಅಸಹ್ಯವಾಗಿದೆ. ನನ್ನ ಬಾಯ ವಾಕ್ಯಗಳೆಲ್ಲಾ ನೀತಿಯಾಗಿವೆ;
ಅವುಗಳಲ್ಲಿ ಸೊಟ್ಟಾದದ್ದೂ, ಡೊಂಕಾದದ್ದೂ, ಒಂದೂ ಇಲ್ಲ.
೯ ಅವೆಲ್ಲಾ ಗ್ರಹಿಸುವವನಿಗೆ ಸರಿಯಾಗಿಯೂ, ಶೀಳುವಿಕೆಯನ್ನು ದೊ
ರಕಿಸಿ ಕೊಳ್ಳುವವರಿಗೆ ನೆಟ್ಟಿಗಾಗಿಯೂ, ಅವೆ. ಬೆಳ್ಳಿಯನ್ನಲ್ಲ,
ನನ್ನ ಶಿಕ್ಷೆಯನ್ನು, ಆಯಲ್ಪಟ್ಟ ಹಂಗಾರಕ್ಕಿಂತ ಶೀಳುವಿಕೆಯ
೧೦ ನ್ನು ತಕ್ಕೊಳ್ಳಿರಿ. ಯಾಕಂದರೆ ಜ್ಞಾನವು ಮುತ್ತುಗಳಿಗಿಂತ ಒ
ಳ್ಳೇದು; ಅಪೇಕ್ಷಿಸ ತಕ್ಕವುಗಳೆಲ್ಲಾ ಅದಕ್ಕೆ ಸಮಾನವಲ್ಲ.
೧೧ ಜ್ಞಾನವೆಂಬ ನಾನು ಚಾತುರ್ಯದ ಸಂಗಡ ವಾಸವಾಗಿದ್ದೇ
ನೆ; ಯುಕ್ತಿಗಳ ಶೀಳುವಿಕೆಯನ್ನು ದೊರಕಿಸಿ ಕೊಳ್ಳುತ್ತೇನೆ. ಕರ್ತ
ನ ಭಯವು ಕೆಟ್ಟದ್ದನ್ನು ಹಗೆ ಮಾಡುವದು; ಗರ್ವವನ್ನೂ, ಅ
ಹಂಕಾರವನ್ನೂ, ದುರ್ಮಾರ್ಗವನ್ನೂ, ತಕ್ಕು ಮಾತಾಡುವ
೧೪ ಬಾಯನ್ನೂ, ಹಗೆ ಮಾಡುತ್ತೇನೆ. ನನಗೆ ಆಲೋಚನೆಯೂ ಸು
ಜ್ಞಾನವೂ ಉಂಟು; ನಾನೇ ಗ್ರಹಿಕೆಯು; ನನಗೆ ಪರಾಕ್ರಮವು ಉಂ
೧೫ ಟು. ನನ್ನಿಂದ ಅರಸುಗಳು ಆಳುತ್ತಾರೆ; ಪ್ರಭುಗಳು ನೀತಿಯನ್ನು
೧೬ ನೇಮಿಸುತ್ತಾರೆ. ನನ್ನಿಂದ ಪ್ರಧಾನರೂ, ಅಧಿಪತಿಗಳೂ, ಭೂಮಿ
೧೭ ಯ ಎಲ್ಲಾ ನ್ಯಾಯಾಧಿಪತಿಗಳೂ, ಅಧಿಕಾರ ನಡಿಸುತ್ತಾರೆ. ನನ್ನ
ನ್ನು ಪ್ರೀತಿ ಮಾಡುವವರನ್ನು ನಾನು ಪ್ರೀತಿ ಮಾಡುತ್ತೇನೆ; ಹೊ
ತಾರೆ ನನ್ನನ್ನು ಹುಡುಕುವವರು, ನನ್ನನ್ನು ದೊರಕಿಸಿ ಕೊಳ್ಳು
೧೮ ವರು. ಐಶ್ವರ್ಯವೂ, ಘನವೂ, ಸ್ಥಿರವಾದ ದ್ರವ್ಯವೂ, ನೀತಿ
೧೯ ಯೂ, ನನ್ನ ಬಳಿಯಲ್ಲಿ ಅವೆ. ನನ್ನ ಫಲವು ಭಂಗಾರಕ್ಕಿಂತಲೂ
ಅರಂಜಿಗಿಂತಲೂ, ನನ್ನ ಆದಾಯವು ಆಯಲ್ಪಟ್ಟ ಬೆಳ್ಳಿಗಿಂತ
೨೦ ಲೂ, ಒಳ್ಳೇದು. ನನ್ನನ್ನು ಪ್ರೀತಿ ಮಾಡುವವರಿಗೆ ಆಸ್ತಿಯನ್ನು
೨೧ ಬಾಧ್ಯವಾಗಿ ಕೊಡುವ ಹಾಗೆಯೂ, ಅವರ ಉಗ್ರಾಣಗಳನ್ನು ತುಂ
ಬಿಸುವ ಹಾಗೆಯೂ, ನೀತಿಯ ಹಾದಿಯಲ್ಲಿಯೂ, ನ್ಯಾಯದ
ದಾರಿಗಳ ಮಧ್ಯದಲ್ಲಿಯೂ, ಅವರನ್ನು ನಡಿಸುತ್ತೇನೆ.

೨೨ ಕರ್ತನು ತನ್ನ ಕ್ರಿಯೆಗಳಿಗೆ ಮುಂಚೆ, ಪೂರ್ವದಲ್ಲಿ ತನ್ನ,
೨೩ ಮಾರ್ಗದ ಆರಂಭದಲ್ಲಿ, ನನ್ನನ್ನು ಪಡೆ ಕೊಂಡಿದ್ದನು. ಯುಗ
ಯುಗದಿಂದ, ಆದಿಯಿಂದ, ಭೂಮಿಯ ಉತ್ಪತ್ತಿಗೆ ಮುಂಚೆ,
೨೪ ನಾನು ಅಭಿಷೇಕಿಸಲ್ಪಟ್ಟಿದ್ದೆನು. ಅಗಾಧಗಳು ಇಲ್ಲದಿರುವಾಗ, ನೀರು
೨೫ ಕುಂಬಿದ ಬುಗ್ಗೆಗಳು ಇಲ್ಲದಿರುವಾಗ, ಹುಟ್ಟಿದೆನು. ಬೆಟ್ಟಗಳು ನಿಲ್ಲಿ
ಸಲ್ಪಡುವದಕ್ಕಿಂತ ಮುಂಚೆ, ಗುಡ್ಡಗಳಿಗೆ ಮುಂಚೆ, ಹುಟ್ಟಿದೆನು.
೨೬ ಅವನು ಭೂಮಿಯನ್ನೂ, ಬೈಲುಗಳನ್ನೂ, ಲೋಕದ ಧೂಳಿಯ
೨೭ ಮೊದಲನ್ನೂ, ಉಂಟು ಮಾಡದೆ ಇದ್ದಾಗಲೇ, ಅವನು ಆಕಾಶವ
ನ್ನು ಸಿದ್ಧ ಮಾಡಿದಾಗ, ಅಲ್ಲೇ ನಾನು ಇದ್ದೆನು; ಅವನು ಅಗಾಧ
೨೮ ದ ಮೇಲೆ ಮಂಡಲವನ್ನು ನೇಮಿಸಿದಾಗ, ಅವನು ಉನ್ನತದಲ್ಲಿ ಮೇ
ಘಗಳನ್ನು ಸ್ಥಿರ ಪಡಿಸಿದಾಗ, ಅಗಾಧದ ಬುಗ್ಗೆಗಳನ್ನು ಸ್ಥಾಪಿಸಿದಾ
೨೯ ಗ, ನೀರುಗಳು ಅವನ ಮಾತನ್ನು ಅತಿಕ್ರಮಿಸದ ಹಾಗೆ, ಅವನು ಸ
ಮುದ್ರಕ್ಕೆ ಅದರ ನೇಮಕವನ್ನು ಇಟ್ಟಾಗ, ಅವನು ಭೂಮಿಯ
೩೦ ಅಸ್ತಿವಾರಗಳನ್ನು ನೇಮಿಸಿದಾಗ, ನಾನು ಶಿಲ್ಪಿಯಾಗಿ ಅವನ ಹ
ತ್ತರ ಇದ್ದೆನು; ಎಲ್ಲಾ ಕಾಲದಲ್ಲಿ ಅವನ ಮುಂದೆ ಆಡುತ್ತಾ, ದಿನ
೩೧ ದಿನಕ್ಕೆ ಆನಂದವಾಗಿದ್ದೆನು. ಅವನ ಭೂಲೋಕದಲ್ಲಿ ಆಡುತ್ತಾ ಇ
ದ್ದೆನು; ಮತ್ತು ಮನುಷ್ಯನ ಮಕ್ಕಳ ಸಂಗಡ ನನ್ನ ಆನಂದ ಅದೆ.

೩೨ ಹಾಗಾದರೆ, ಈಗ, ಮಕ್ಕಳೇ, ನನಗೆ ಕಿವಿ ಕೊಡಿರಿ; ನನ್ನ
೩೩ ಮಾರ್ಗಗಳನ್ನು ಕೈಕೊಳ್ಳುವವರು ಭಾಗ್ಯವಂತರು. ಶಿಕ್ಷೆಯ
೩೪ ನ್ನು ಕೇಳಿ, ಜ್ಞಾನಿಗಳಾಗಿರಿ; ಅದನ್ನು ಹೀನೈಸ ಬೇಡಿರಿ. ನನಗೆ
ಕಿವಿ ಕೊಟ್ಟು, ನನ್ನ ಕದದ ಬಳಿಯಲ್ಲಿ ದಿನ ದಿನಕ್ಕೆ ಎಚ್ಚರವಾ
ಗಿದ್ದು, ನನ್ನ ದ್ವಾರಗಳ ಸ್ತಂಭಗಳ ಹತ್ತರ ಕಾದು ಕೊಳ್ಳುವ ಮ
೩೫ ನುಷ್ಯನು ಭಾಗ್ಯವಂತನು. ಯಾಕಂದರೆ ನನ್ನನ್ನು ಕಂಡು ಕೊ
ಳ್ಳುವವನು ಜೀವವನ್ನು ದೊರಕಿಸಿ ಕೊಂಡು, ಕರ್ತನಿಂದ ಕಟಾ
೩೬ ಕ್ಷನನ್ನು ಹೊಂದುವನು. ಆದರೆ ನನಗೆ ವಿರೋಧವಾಗಿ ಪಾಪ
ಮಾಡುವವನು ತನ್ನ ಪ್ರಾಣಕ್ಕೆ ಬಲಾತ್ಕಾರ ಮಾಡುತ್ತಾನೆ; ನನ್ನ
ನ್ನು ಹಗೆ ಮಾಡುವವರೆಲ್ಲರು ಮರಣವನ್ನು ಪ್ರೀತಿ ಮಾಡುತ್ತಾರೆ.

## ೯ ಸಂಧಿ.

೧ ಜ್ಞಾನವು ತನ್ನ ಮನೆಯನ್ನು ಕಟ್ಟಿ ಅದೆ; ತನ್ನ ಏಳು ಸ್ತಂಭ

೨೦ ಗಳನ್ನು ಕೆತ್ತಿ ಅದೆ. ತಾನು ಕೊಯ್ಯುವ ಪಶುಗಳನ್ನು ಕೊಯಿ
ದು ಅದೆ; ತನ್ನ ದ್ರಾಕ್ಷೇ ರಸವನ್ನು ಕಲಿಸಿ ಅದೆ; ತನ್ನ ಮೇಜನ್ನು
೩ ಸಹ ಸಿದ್ಧ ಮಾಡಿ ಅದೆ. ತನ್ನ ದಾಸಿಯರನ್ನು ಕಳುಹಿಸಿ, ಪಟ್ಟಣದ
೪ ಎತ್ತರವಾದ ದಿಸ್ಸಿಗಳ ಮೇಲೆ—ಯುಕ್ತಿಹೀನನು ಯಾವನೋ,
ಅವನು ಇತ್ತ ಬರಲಿ ಎಂದು, ಕೂಗುತ್ತದೆ. ಮತ್ತು ಬುದ್ಧಿಹೀನನಿಗೆ
೫ ಹೇಳುವದೇನಂದರೆ—ಬಂದು, ನನ್ನ ಕೊಟ್ಟಿ ತಿನ್ನಿರಿ; ನಾನು ಕಲಿಸಿ
೬ ದ ದ್ರಾಕ್ಷೇ ರಸ ಕುಡಿಯಿರಿ. ಯುಕ್ತಿಹೀನತೆಯನ್ನು ಬಿಟ್ಟು, ಬ
ದುಕಿರಿ; ಗ್ರಹಿಕೆಯ ಮಾರ್ಗದಲ್ಲಿ ನಡೆದು ಕೊಳ್ಳಿರಿ.

೭ ಕುಚೋದ್ಯಗಾರನನ್ನು ಶಿಕ್ಷಿಸುವವನು ತನಗೆ ಮಾನಭಂಗವ
ನ್ನೂ, ದುಷ್ಟನನ್ನು ಗದರಿಸುವವನು ತನಗೆ ಕಳಂಕವನ್ನೂ, ಹೊಂ
೮ ದುತ್ತಾನೆ. ಅವನು ನಿನ್ನನ್ನು ಹಗೆ ಮಾಡದ ಹಾಗೆ, ಕುಚೋದ್ಯ
ಗಾರನನ್ನು ಗದರಿಸ ಬೇಡ; ಜ್ಞಾನಿಯನ್ನು ಗದರಿಸು; ಆಗಲವನು
೯ ನಿನ್ನನ್ನು ಪ್ರೀತಿ ಮಾಡುವನು. ಜ್ಞಾನಿಗೆ ಕೊಡು, ಆಗಲವನು ಇ
ನ್ನೂ ಜ್ಞಾನಿಯಾಗುವನು; ನೀತಿವಂತನನ್ನು ಉಪದೇಶಿಸು, ಆಗಲ
೧೦ ವನು ಮತ್ತೂ ಕಲಿಕೆಯನ್ನು ಹೆಚ್ಚಿಸುವನು. ಕರ್ತನ ಭಯವೇ
ಜ್ಞಾನದ ಆರಂಭವು; ಮತ್ತು ಪರಿಶುದ್ಧ ತಿಳುವಿಕೆಯೇ ಗ್ರಹಿಕೆಯಾ
೧೧ ಗಿದೆ. ಯಾಕಂದರೆ ನನ್ನ ಮೂಲವಾಗಿ ನಿನ್ನ ದಿವಸಗಳು ಬಹಳ
ವಾಗುವವು; ಮತ್ತು ಜೀವದ ಸಂವತ್ಸರಗಳು ನಿನಗೆ ಹೆಚ್ಚುವವು.
೧೨ ನೀನು ಜ್ಞಾನಿಯಾಗಿದ್ದರೆ, ನಿನಗೋಸ್ಕರವೇ ಜ್ಞಾನಿಯಾಗಿರುತ್ತಿ;
ಕುಚೋದ್ಯ ಮಾಡಿದರೆ, ನೀನೊಬ್ಬನೇ ಅದನ್ನು ಹೊರುವಿ.

೧೩ ಹುಚ್ಚಸ್ತ್ರೀಯು ಕೂಗಾಡುವವಳೂ, ಯುಕ್ತಿ ಹೀನಳೂ,
೧೪ ಏನೂ ಅರಿಯದವಳೂ. ತನ್ನ ಮನೇ ಬಾಗಲಲ್ಲಿಯೂ, ಊರಿ
೧೫ ನ ಎತ್ತರ ಸ್ಥಳಗಳ ಪೀಠದಲ್ಲಿಯೂ, ಕೂತು ಕೊಂಡು, ತಮ್ಮ
ಹಾದಿಗಳಲ್ಲಿ ನೆಟ್ಟಗೆ ನಡ ಕೊಂಡು, ಮಾರ್ಗದಲ್ಲಿ ಹಾದು ಹೋ
೧೬ ಗುವವರಿಗೆ—ಯುಕ್ತಿಹೀನನು ಯಾವನೋ, ಅವನು ಇತ್ತ ಬರಲಿ
ಎಂದು, ಕೂಗುತ್ತಾಳೆ. ಮತ್ತು ಬುದ್ಧಿಹೀನನಿಗೆ ಅವಳು ಹೇಳುವ
೧೭ ದೇನಂದರೆ—ಕದ್ದ ನೀರುಗಳು ಪೀಯಾಗಿವೆ; ಮತ್ತು ಅಂತರಂಗದ
೧೮ ರೊಟ್ಟಿಯು ರುಚಿಯಾಗಿದೆ. ಆದರೆ—ಅಲ್ಲಿ ಪ್ರೇತಗಳು ಇರು
ತ್ತವೆಂದೂ, ಅವಳು ಕರೆದವರು ಪಾತಾಳದ ತಗ್ಗುಗಳಲ್ಲಿ ಇದ್ದಾ
ರೆಂದೂ, ಅವನಿಗೆ ತಿಳಿಯದು.

## ಎರಡನೇ ಭಾಗ.

### ೧೦ ಸಂಧಿ.

೧ ಸೊಲೊಮೋನನ ಸಾಮತಿಗಳು.

ಜ್ಞಾನವುಳ್ಳ ಮಗನು ತಂದೆಯನ್ನು ಸಂತೋಷ ಪಡಿಸುತ್ತಾನೆ;
ಆದರೆ ಹುಚ್ಚ ಮಗನು ತನ್ನ ತಾಯಿಗೆ ವ್ಯಸನವಾಗಿದ್ದಾನೆ.

೨ ದುಷ್ಟತ್ವದ ದ್ರವ್ಯಗಳಿಂದ ಪ್ರಯೋಜನವಿಲ್ಲ;
ಆದರೆ ನೀತಿಯು ಮರಣದಿಂದ ಬಿಡಿಸುತ್ತದೆ.

೩ ನೀತಿವಂತನ ಪ್ರಾಣವನ್ನು ಕರ್ತನು ಹಸಿಯಗೊಡಿಸನು;
ಆದರೆ ದುಷ್ಟರ ದುರಾಶೆಯನ್ನು ತಳ್ಳಿ ಹಾಕುತ್ತಾನೆ.

೪ ಜೋಲಗೈಯಿಂದ ಕೆಲಸ ಮಾಡುವವನು ಬಡವನಾಗುತ್ತಾನೆ;
ಆದರೆ ಜಾಗ್ರತೆಯುಳ್ಳವರ ಕೈ ಐಶ್ವರ್ಯ ಮಾಡುತ್ತದೆ.

೫ ಬೇಸಿಗೆಯಲ್ಲಿ ಕೂಡಿಸುವವನು ಬುದ್ಧಿಯುಳ್ಳ ಮಗನಾಗಿದ್ದಾನೆ;
ಸುಗ್ಗಿ ಕಾಲದಲ್ಲಿ ನಿದ್ದೆ ಮಾಡುವವನು ನಾಚಿಕೆ ಪಡಿಸುವ ಮಗನಾ
ಗಿದ್ದಾನೆ.

೬ ನೀತಿವಂತನ ತಲೆಗೆ ಆಶೀರ್ವಾದಗಳುಂಟು;
ಆದರೆ ಬಲಾತ್ಕಾರವು ದುಷ್ಟರ ಬಾಯನ್ನು ಮುಚ್ಚುತ್ತದೆ.

೭ ನೀತಿವಂತನ ಜ್ಞಾಪಕವು ಆಶೀರ್ವಾದವಾಗಿದೆ;
ಆದರೆ ದುಷ್ಟರ ಹೆಸರು ಕೊಳೆತು ಹೋಗುತ್ತದೆ.

೮ ಜ್ಞಾನ ಹೃದಯವುಳ್ಳವನು ಆಜ್ಞೆಗಳನ್ನು ತಕ್ಕೊಳ್ಳುತ್ತಾನೆ;
ಆದರೆ ಮೂಢ ತುಟಿಯುಳ್ಳವನು ಕೆಡವಲ್ಪಡುತ್ತಾನೆ.

೯ ಸಂಪೂರ್ಣತೆಯಲ್ಲಿ ನಡೆದು ಕೊಳ್ಳುವವನು ಭರವಸವಾಗಿ ನ
ಡೆದು ಕೊಳ್ಳುತ್ತಾನೆ;
ಆದರೆ ತನ್ನ ಮಾರ್ಗಗಳನ್ನು ಡೊಂಕು ಮಾಡುವವನು ತಿಳಿಯ
ಬರುವನು.

೧೦ ಕಣ್ಣು ಸಾಜ್ಞೆ ಮಾಡುವವನು ವ್ಯಥೆ ಹುಟ್ಟಿಸುತ್ತಾನೆ;
ಆದರೆ ಮೂಢ ತುಟಿಯುಳ್ಳವನು ಕೆಡವಲ್ಪಡುತ್ತಾನೆ.

೧೧ ನೀತಿವಂತನ ಬಾಯಿ ಜೀವದ ಬುಗ್ಗೆಯಾಗಿದೆ;
ಆದರೆ ಬಲಾತ್ಕಾರವು ದುಷ್ಟರ ಬಾಯನ್ನು ಮುಚ್ಚುತ್ತದೆ.

೧೨ ಹಗೆಯು ಝಗಳಾಟಗಳನ್ನು ಎಬ್ಬಿಸುತ್ತದೆ;
ಆದರೆ ಪ್ರೀತಿಯು ಎಲ್ಲಾ ದ್ರೋಹಗಳನ್ನು ಮುಚ್ಚುತ್ತದೆ,

೧೩ ಗ್ರಹಿಕೆಯುಳ್ಳವನ ತುಟಿಗಳಲ್ಲಿ ಜ್ಞಾನವು ಶಿಕ್ಕುತ್ತದೆ;
ಆದರೆ ಬುದ್ಧಿಹೀನನ ಬೆನ್ನಿಗೆ ಬೆತ್ತವು ಜೇಕು.

೧೪ ಜ್ಞಾನಿಗಳು ತಿಳುವಿಕೆಯನ್ನು ಇಟ್ಟು ಕೊಳ್ಳುತ್ತಾರೆ;
ಆದರೆ ಮೂಢನ ಬಾಯಿ ಅಳುವಿಗೆ ಸವಿಾಪವಾಗಿದೆ.

೧೫ ಐಶ್ವರ್ಯವಂತನ ದ್ರವ್ಯವು ಅವನ ಬಲವಾದ ಪಟ್ಟಣವಾಗಿದೆ;
ದರಿದ್ರರ ಬಡತನವು ಅವರ ಅಳುವಾಗಿದೆ.

೧೬ ನೀತಿವಂತನ ಕೆಲಸವು ಜೀವಕ್ಕಾಗಿಯೂ,
ದುಷ್ಟನ ಆದಾಯವು ಪಾಪಕ್ಕಾಗಿಯೂ, ಅದೆ.

೧೭ ಶಿಕ್ಷೆಯನ್ನು ಕೈಕೊಳ್ಳುವವನು ಜೀವದ ಹಾದಿಯಾಗಿದ್ದಾನೆ;
ಆದರೆ ಗದರಿಕೆಯನ್ನು ಬಿಟ್ಟು ಬಿಡುವವನು ತಪ್ಪಿ ಹೋಗ ಮಾ
ಡುತ್ತಾನೆ.

೧೮ ಹಗೆಯನ್ನು ಮುಚ್ಚುವವನು ಸುಳ್ಳು ತುಟಿಗಳುಳ್ಳವನಾಗಿದ್ದಾನೆ;
ಆದರೆ ಅಪಪೂರನ್ನು ಹೊರಗೆ ತರುವವನು ಹುಚ್ಚನಾಗಿದ್ದಾನೆ.

೧೯ ಮಾತುಗಳ ಹೆಚ್ಚಿಗೆಯಲ್ಲಿ ದ್ರೋಹವು ಇಲ್ಲದೆ ಇರದು;
ಆದರೆ ತನ್ನ ತುಟಿಗಳನ್ನು ಬಿಗಿಯುವವನು ಬುದ್ಧಿವಂತನಾಗಿದ್ದಾನೆ.

೨೦ ನೀತಿವಂತನ ನಾಲಿಗೆ ಆಯಲ್ಪಟ್ಟ ಬೆಳ್ಳಿಯಾಗಿದೆ;
ದುಷ್ಟರ ಹೃದಯವು ಅಲ್ಪವಾಗಿದೆ.

೨೧ ನೀತಿವಂತನ ತುಟಿಗಳು ಅನೇಕರನ್ನು ಸಾಕುತ್ತವೆ;
ಆದರೆ ಮೂಢರು ಬುದ್ಧಿಹೀನತೆಯಿಂದ ಸಾಯುತ್ತಾರೆ.

೨೨ ಕರ್ತನ ಆಶೀರ್ವಾದವೇ ಐಶ್ವರ್ಯ ಕೊಡುವದು;
ಅದರ ಸಂಗಡ ವ್ಯಥೆಯನ್ನು ಕೂಡಿಸನು.

೨೩ ದುರ್ಮಾರ್ಗ ಮಾಡುವದು ಹುಚ್ಚನಿಗೆ ನಗೆಯಾಗಿದೆ;
ಆದರೆ ವಿವೇಕಿಗೆ ಜ್ಞಾನ ಉಂಟು.

೨೪ ದುಷ್ಟನು ಅಂಜುವದೇ ಅವನ ಮೇಲೆ ಬರುವದು;
ಆದರೆ ನೀತಿವಂತರ ಆಶೆಯು ಕೊಡಲ್ಪಡುವದು.

೨೫ ಸುಳ್ಳಿಗುಳ್ಳಿ ದಾಟುವ ಪ್ರಕಾರ ದುಷ್ಟನು ಇಲ್ಲದೆ ಹೋಗುತ್ತಾನೆ;
ಆದರೆ ನೀತಿವಂತನು ನಿತ್ಯ ಅಸ್ತಿವಾರವಾಗಿದ್ದಾನೆ.

೨೬ ಹಲ್ಲುಗಳಿಗೆ ಹುಳಿಯೂ, ಕಣ್ಣುಗಳಿಗೆ ಹೊಗೆಯೂ, ಹ್ಯಾಗೋ,
ಹಾಗೆಯೇ ಮೈಗಳ್ಳನು ತನ್ನನ್ನು ಕಳುಹಿಸಿದವರಿಗೆ ಇದ್ದಾನೆ.



೨೭ ಕರ್ತನ ಭಯವು ದಿವಸಗಳನ್ನು ಹೆಚ್ಚಿಸುವದು;
ಆದರೆ ದುಷ್ಟರ ವರುಷಗಳು ಕೊಯ್ಯಲ್ಪಡುವವು.

೨೮ ನೀತಿವಂತರ ನಿರೀಕ್ಷೆಯು ಸಂತೋಷವಾಗಿದೆ;
ಆದರೆ ದುಷ್ಟರ ಎದುರು ನೋಡುವಿಕೆಯು ನಾಶವಾಗುವದು.

೨೯ ಕರ್ತನ ಮಾರ್ಗವು ಸಂಪೂರ್ಣನಿಗೆ ಬಲಸ್ಥಾನವಾಗಿದೆ;
ಆದರೆ ಪಾತಕ ಮಾಡುವವರಿಗೆ ಅಳುವಾಗಿದೆ.

೩೦ ನೀತಿವಂತನು ಯುಗ ಯುಗಕ್ಕೂ ಕದಲನು;
ಆದರೆ ದುಷ್ಟರು ಭೂಮಿಯಲ್ಲಿ ವಾಸ ಮಾಡರು.

೩೧ ನೀತಿವಂತನ ಬಾಯಿ ಜ್ಞಾನವನ್ನು ಪೊಳ್ಳಿಸುವದು;
ಆದರೆ ತಕ್ಕಿನ ನಾಲಿಗೆಯು ಕತ್ತರಿಸಲ್ಪಡುವದು.

೩೨ ನೀತಿವಂತನ ತುಟಿಗಳು ಮೆಚ್ಚಿಸ ಬಲ್ಲವು;
ಆದರೆ ದುಷ್ಟರ ಬಾಯಿ ತಕ್ಕೇ.

### ೧೧ ಸಂಧಿ.

೧ ಕಳ್ಳ ತಕ್ಕಡಿ ಕರ್ತನಿಗೆ ಅಸಹ್ಯವಾಗಿದೆ;
ಆದರೆ ಸರಿಯಾದ ಕಲ್ಲು ಅವನಿಗೆ ಇಷ್ಟವಾಗಿದೆ.

೨ ಅಹಂಕಾರ ಬಂದರೆ, ಮಾನಭಂಗವು ಬರುತ್ತದೆ;
ಆದರೆ ವಿನಯವುಳ್ಳವರಲ್ಲಿ ಜ್ಞಾನ ಉಂಟು.

೩ ನೆಟ್ಟನೆಯವರ ಸಂಪೂರ್ಣತೆಯು ಅವರನ್ನು ನಡಿಸುತ್ತದೆ;
ಆದರೆ ವಂಚಕರ ಕುಯುಕ್ತಿಯು ಅವರನ್ನು ಸೂರೆ ಮಾಡು
ತ್ತದೆ.

೪ ಉಗ್ರದ ದಿವಸದಲ್ಲಿ ದ್ರವ್ಯದಿಂದ ಪ್ರಯೋಜನವಿಲ್ಲ;
ಆದರೆ ನೀತಿಯು ಮರಣದಿಂದ ಬಿಡಿಸುತ್ತದೆ.

೫ ಸಂಪೂರ್ಣನ ನೀತಿಯು ಅವನ ಮಾರ್ಗವನ್ನು ನೆಟ್ಟಗೆ
ಮಾಡುತ್ತದೆ;
ಆದರೆ ತನ್ನ ದುಷ್ಟತ್ವದಿಂದ ದುಷ್ಟನು ಬೀಳುತ್ತಾನೆ.

೬ ನೆಟ್ಟನೆಯವರ ನೀತಿಯು ಅವರನ್ನು ಬಿಡಿಸುತ್ತದೆ;
ಆದರೆ ವಂಚಕರು ತಮ್ಮ ದುರಾಶೆಯಿಂದ ಹಿಡಿಯಲ್ಪಡುತ್ತಾರೆ.

೭ ದುಷ್ಟ ಮನುಷ್ಯನ ಮರಣದಲ್ಲಿ ನಿರೀಕ್ಷೆ ನಾಶವಾಗುತ್ತದೆ.
ಪಾತಕಿಗಳ ಎದುರು ನೋಡುವಿಕೆ ನಾಶವಾಗುತ್ತದೆ.

೮ ನೀತಿವಂತನು ಇಕ್ಕಟ್ಟಿನಿಂದ ತಪ್ಪಿಸಿ ಬಿಡಲ್ಪಡುತ್ತಾನೆ;
ದುಷ್ಟನು ಅವನ ಸ್ಥಳದಲ್ಲಿ ಬರುತ್ತಾನೆ.

೯ ಭ್ರಷ್ಟನು ಬಾಯಿಂದ ತನ್ನ ನೆರೆಯವನನ್ನು ನಾಶ ಮಾಡುತ್ತಾನೆ;
ಆದರೆ ನೀತಿವಂತರು ತಿಳುವಿಕೆಯಿಂದ ತಪ್ಪಿಸಿ ಬಿಡಲ್ಪಡುತ್ತಾರೆ.

೧೦ ನೀತಿವಂತರ ಸುಖದಲ್ಲಿ ಪಟ್ಟಣವು ಉಲ್ಲಾಸ ಪಡುತ್ತದೆ;
ಮತ್ತು ದುಷ್ಟರು ನಾಶವಾದರೆ, ಉತ್ಸಾಹವಾಗುತ್ತದೆ.

೧೧ ನೆಟ್ಟನೆಯವರ ಆಶೀರ್ವಾದದಿಂದ ಪಟ್ಟಣವು ಹೆಚ್ಚಾಗುತ್ತದೆ;
ಆದರೆ ದುಷ್ಟರ ಬಾಯಿಂದ ಹಾಳಾಗುತ್ತದೆ.

೧೨ ಬುದ್ಧಿಹೀನನು ತನ್ನ ನೆರೆಯವನನ್ನು ತಿರಸ್ಕರಿಸುತ್ತಾನೆ;
ಆದರೆ ವಿವೇಕವುಳ್ಳವನು ಮೌನವಾಗಿದ್ದಾನೆ.

೧೩ ತಿರುಗುವ ಚಾಡಿಗಾರನು ಗುಟ್ಟು ಪ್ರಕಟ ಮಾಡುತ್ತಾನೆ;
ಆದರೆ ನಂಬಿಕೆಯಾದ ಆತ್ಮವುಳ್ಳವನುಕಾರ್ಯ ಮುಚ್ಚುತ್ತಾನೆ.

೧೪ ಉಪಾಯಗಳು ಇಲ್ಲದಿರುವಾಗ, ಪ್ರಜೆಯು ಬೀಳುತ್ತದೆ;
ಆದರೆ ಆಲೋಚನೆಯವರ ಸಮೂಹದಲ್ಲಿ ರಕ್ಷಣೆಯು ಅದೆ.

೧೫ ಅನ್ಯನಿಗೋಸ್ಕರ ಹೊಣೆಯಾದವನು ಕೆಟ್ಟೇ ಕೆಡುವನು;
ಆದರೆ ಕೈ ಕೊಡುವದನ್ನು ಹಗೆ ಮಾಡುವವನು ಭದ್ರವಾಗಿರುವನು

೧೬ ಸೌಂದರ್ಯವಾದ ಸ್ತ್ರೀಯು ಘನವನ್ನು ಹೊಂದುತ್ತಾಳೆ.
ಮತ್ತು ಬಲಿಷ್ಠರು ಐಶ್ವರ್ಯವನ್ನು ಹೊಂದುತ್ತಾರೆ.

೧೭ ಕೃಪೆಯುಳ್ಳ ಮನುಷ್ಯನು ತನ್ನ ಪ್ರಾಣಕ್ಕೆ ಉಪಕಾರ ಮಾ
ಡುತ್ತಾನೆ;
ಆದರೆ ಕ್ರೂರನು ತನ್ನ ಮಾಂಸವನ್ನು ತೊಂದರೆ ಪಡಿಸುತ್ತಾನೆ.

೧೮ ದುಷ್ಟನು ವ್ಯರ್ಥ ಕೆಲಸ ಮಾಡುತ್ತಾನೆ;
ಆದರೆ ನೀತಿ ಬಿತ್ತುವವನಿಗೆ ನಿಜವಾದ ಸಂಬಳ ಉಂಟು.

೧೯ ನೀತಿಯು ಹ್ಯಾಗೆ ಜೀವಕ್ಕಾಗಿದೆಯೋ;
ಹಾಗೆಯೇ ಕೆಟ್ಟದ್ದನ್ನು ಹಿಂದಟ್ಟುವವನು ತನ್ನ ಮರಣಕ್ಕಾಗಿ
ಹಿಂದಟ್ಟುತ್ತಾನೆ.

೨೦ ಡೊಂಕು ಹೃದಯದವರು ಕರ್ತನಿಗೆ ಅಸಹ್ಯವಾಗಿದ್ದಾರೆ;
ಆದರೆ ಸಂಪೂರ್ಣ ಮಾರ್ಗದವರು ಅವನಿಗೆ ಸಂತೋಷವಾಗಿ
ದ್ದಾರೆ.

೨೧ ಕೈಗೆ ಕೈ ಕೂಡಿದರೂ, ದುಷ್ಟನು ನಿರಪರಾಧಿಯಾಗಿರನು;
ಆದರೆ ನೀತಿವಂತರ ಬೀಜವು ತಪ್ಪಿಸಲ್ಪಡುವದು.

೨೨ ಹಂದಿಯ ಮೂಗಿನಲ್ಲಿರುವ ಚಿನ್ನವಿದ ಮೂಗುತಿಯೂ,
ವಿವೇಕವಿಲ್ಲದ ಸೌಂದರ್ಯದ ಸ್ತ್ರೀಯೂ, ಒಂದೇ.

೨೩ ನೀತಿವಂತರ ಆಶೆ ಎಷ್ಟೋ ಒಳ್ಳೇದು!
ಆದರೆ ದುಷ್ಟರ ನಿರೀಕ್ಷೆ ಉಗ್ರವು.

೨೪ ಚದರಿಸಿದರೂ, ಇನ್ನು ಹೆಚ್ಚಾಗುವವನು ಇದ್ದಾನೆ;
ಆದರೆ ತಕ್ಕದ್ದಕ್ಕಿಂತ ಅಧಿಕವಾಗಿ ಬಿಗಿ ಹಿಡಿಯುವವನಿಗೆ ಕೊರ
ತೆಯೇ ನಿಶ್ಚಯ.

೨೫ ಆಶೀರ್ವದಿಸುವ ಪ್ರಾಣವು ಪುಷ್ಟಿಯಾಗುವದು;
ಮತ್ತು ತೃಪ್ತಿಯಾಗಿ ಕೂಡಿಸುವವನು ತಾನು ತೃಪ್ತಿಯಾಗಿ
ಕೂಡಿಸಲ್ಪಡುವನು.

೨೬ ಧಾನ್ಯವನ್ನು ಬಿಗಿ ಹಿಡಿಯುವವನನ್ನು ಪ್ರಜೆ ಶಪಿಸುವದು;
ಆದರೆ ಮಾರುವವನ ತಲೆಯ ಮೇಲೆ ಆಶೀರ್ವಾದ ಇರುವದು.

೨೭ ಒಳ್ಳೇದನ್ನು ಜಾಗ್ರತೆಯಾಗಿ ವಿಚಾರಿಸುವವನು ಕಟಾಕ್ಷವನ್ನು
ಹುಡುಕುತ್ತಾನೆ;
ಆದರೆ ಕೇಡು ಅರಸುವವನ ಮೇಲೆ ಇದೇ ಬರುವದು.

೨೮ ತನ್ನ ಐಶ್ವರ್ಯದಲ್ಲಿ ಭರವಸ ಇಡುವವನು ಬೀಳುವನು;
ಆದರೆ ನೀತಿವಂತರು ಎಲೆಯ ಪ್ರಕಾರ ಚಿಗುರುವರು.

೨೯ ತನ್ನ ಮನೆಯನ್ನು ತೊಂದರೆ ಪಡಿಸುವವನು ಘಾಳಿಯನ್ನು
ಸ್ವತಂತ್ರಿಸಿ ಕೊಳ್ಳುತ್ತಾನೆ;
ಜ್ಞಾನವುಳ್ಳ ಹೃಯದವನಿಗೆ ಮೂಢನು ದಾಸನಾಗುತ್ತಾನೆ.

೩೦ ನೀತಿವಂತನ ಫಲವೇ ಜೀವದ ಮರವು;
ಪ್ರಾಣಗಳನ್ನು ಹಿಡಿಯುವವನು ಜ್ಞಾನಿ.

೩೧ ಇಗೋ ನೀತಿವಂತನಿಗೆ ಭೂಮಿಯಲ್ಲಿ ಸಲ್ಲಿಸಲ್ಪಡುವದು;
ದುಷ್ಟನಿಗೂ ಪಾಪಿಗೂ ಎಷ್ಟೋ ಹೆಚ್ಚಾಗಿ!

### ೧೨ ಸಂಧಿ.

೧ ಶಿಕ್ಷೆಯನ್ನು ಪ್ರೀತಿ ಮಾಡುವವನು ತಿಳುವಿಕೆಯನ್ನು ಪ್ರೀತಿ ಮಾ
ಡುತ್ತಾನೆ;
ಆದರೆ ಗದರಿಕೆಯನ್ನು ಹಗೆ ಮಾಡುವವನು ಪಶುಪ್ರಾಣಿಯಾಗಿ
ದ್ದಾನೆ.

೨ ಒಳ್ಳೆಯವನು ಕರ್ತನಿಂದ ಕಟಾಕ್ಷವನ್ನು ಹೊಂದುತ್ತಾನೆ;
ಆದರೆ ಅವನು ಕುಯುಕ್ತಿಯುಳ್ಳ ಮನುಷ್ಯನನ್ನು ದುಷ್ಟನೆಂದು ನಿರ್ಣಯಿಸುತ್ತಾನೆ.

೩ ದಪ್ಪತ್ವದಿಂದ ಮನುಷ್ಯನು ಸ್ಥಿರವಾಗುವದಿಲ್ಲ;
ಆದರೆ ನೀತಿವಂತರ ಬೇರು ಕದಲದು.

೪ ಸಜ್ಜನಳಾದ ಹೆಂಡತಿಯು ತನ್ನ ಗಂಡನಿಗೆ ಕಿರೀಟವಾಗಿದ್ದಾಳೆ;
ಆದರೆ ನಾಚಿಕೆ ಪಡಿಸುವವಳು ಅವನ ಎಲುವುಗಳಲ್ಲಿರುವ ಕೊಳೆಯುವಿಕೆಯ ಹಾಗೆ ಇದ್ದಾಳೆ.

೫ ನೀತಿವಂತರ ಆಲೋಚನೆಗಳೇ ನ್ಯಾಯವು;
ಆದರೆ ದುಷ್ಟರ ಉಪಾಯಗಳು ಮೋಸವಾಗಿವೆ.

೬ ದುಷ್ಟರ ಮಾತುಗಳು ರಕ್ತದ ಹೊಂಚುವಿಕೆಯಾಗಿವೆ;
ಆದರೆ ನೆಟ್ಟನೆಯವರ ಬಾಯಿ ಅವರನ್ನು ಬಿಡಿಸುತ್ತದೆ.

೭ ದುಷ್ಟರು ಕೆಡವಿ ಬಿದ್ದು ಇಲ್ಲದೆ ಹೋಗುತ್ತಾರೆ;
ಆದರೆ ನೀತಿವಂತರ ಮನೆ ನಿಲ್ಲುತ್ತದೆ.

೮ ತನ್ನ ಬುದ್ಧಿಯ ಮೇರೆಗೆ ಮನುಷ್ಯನು ಸ್ತುತಿಸಲ್ಪಡುವನು;
ಆದರೆ ವಕ್ರ ಹೃದಯದವನು ತಿರಸ್ಕಾರಕ್ಕಾಗಿರುವನು.

೯ ಗರ್ವ ಮಾಡಿ ಕೊಟ್ಟಿ ಇಲ್ಲದೆ ಇರುವವನಿಗಿಂತ,
ನೀಚನಾಗಿ ಸೇವಕನಾಗಿರುವವನು ಉತ್ತಮ.

೧೦ ನೀತಿವಂತನು ತನ್ನ ಪಶುವಿನ ಪ್ರಾಣವನ್ನು ಕರಾಮರಿಸುತ್ತಾನೆ;
ಆದರೆ ದುಷ್ಟರ ಅಂತಃಕರಣಗಳು ಕ್ರೂರವಾಗಿವೆ.

೧೧ ತನ್ನ ಹೊಲವನ್ನು ವ್ಯವಸಾಯ ಮಾಡುವವನು ಕೊಟ್ಟಿಯಿಂದ ತೃಪ್ತಿ ಪಡುವನು;
ಆದರೆ ವ್ಯರ್ಥವಾದವರನ್ನು ಹಿಂದಟ್ಟುವವನು ಬುದ್ಧಿಹೀನನು.

೧೨ ದುಷ್ಟನು ಕೆಟ್ಟವುಗಳು ತುಂಬಿದ ಬಲೆಯನ್ನು ಅಪೇಕ್ಷಿಸುತ್ತಾನೆ;
ಆದರೆ ನೀತಿವಂತರ ಬೇರು ಫಲ ಕೊಡುತ್ತದೆ.

೧೩ ತುಟಿಗಳ ದ್ರೋಹವು ಕೆಟ್ಟವನಿಗೆ ಉರ್ಲಾಗಿದೆ;
ಆದರೆ ನೀತಿವಂತನು ಇಕ್ಕಟ್ಟಿನೊಳಗಿಂದ ಹೊರಗೆ ಬರುತ್ತಾನೆ.

೧೪ ತನ್ನ ಬಾಯ ಫಲದಿಂದ ಪ್ರತಿ ಮನುಷ್ಯನು ಒಳ್ಳೇದರಿಂದ ತೃಪ್ತಿ ಹೊಂದುತ್ತಾನೆ;
ಮತ್ತು ಮನುಷ್ಯನ ಕೈಗಳ ಪ್ರತಿಕಾರವು ಅವನಿಗೆ ತಿರಿಗಿ ಬರುವದು.

೧೫ ಮೂಢನ ಮಾರ್ಗವು ಅವನ ಕಣ್ಣಿಗೆ ನೆಟ್ಟನಾಗಿದೆ;
ಆದರೆ ಆಲೋಚನೆಯನ್ನು ಕೇಳುವವನು ಜ್ಞಾನಿಯಾಗಿದ್ದಾನೆ.

೧೬ ಮೂಢನ ಕರಕರೆಯು ಅದೇ ಹೊತ್ತಿನಲ್ಲಿ ತಿಳಿಯಲ್ಪಡುವದು;
ಆದರೆ ಮಾನಭಂಗವನ್ನು ಮುಚ್ಚುವವನು ಚಾತುರ್ಯವುಳ್ಳವನಾಗಿದ್ದಾನೆ.

೧೭ ಸತ್ಯವನ್ನು ಉಸುರುವವನು ನೀತಿಯನ್ನು,
ಸುಳ್ಳು ಸಾಕ್ಷಿಯವನು ಮೋಸವನ್ನು, ತಿಳಿಸುತ್ತಾನೆ.

೧೮ ಕತ್ತಿಯ ಘಾಯಗಳ ಹಾಗೆ ಹರಟುವರು ಇದ್ದಾರೆ;
ಆದರೆ ಜ್ಞಾನಿಗಳ ನಾಲಿಗೆ ಔಷಧವಾಗಿದೆ.

೧೯ ಸತ್ಯದ ತುಟಿಯು ಎಂದೆಂದಿಗೂ ಸ್ಥಿರವಾಗಿರುವದು;
ಆದರೆ ಸುಳ್ಳಾಡುವ ನಾಲಿಗೆಯು ಕ್ಷಣ ಮಾತ್ರ.

೨೦ ಕೇಡು ಕಲ್ಪಿಸುವವರ ಹೃದಯದಲ್ಲಿ ಮೋಸವದೆ;
ಸಮಾಧಾನಕ್ಕೆ ಆಲೋಚನೆ ಹೇಳುವವರಿಗೆ ಸಂತೋಷ.

೨೧ ಯಾವ ನಷ್ಟವಾದರೂ ನೀತಿವಂತನಿಗೆ ಸಂಭವಿಸದು;
ಆದರೆ ದುಷ್ಟರು ಕೇಡಿನಿಂದ ತುಂಬಿ ಇದ್ದಾರೆ.

೨೨ ಸುಳ್ಳು ತುಟಿಗಳು ಕರ್ತನಿಗೆ ಅಸಹ್ಯವಾಗಿವೆ,
ಆದರೆ ಸತ್ಯವನ್ನು ಮಾಡುವವರು ಅವನಿಗೆ ಸಂತೋಷವಾಗಿದ್ದಾರೆ.

೨೩ ಚಾತುರ್ಯವುಳ್ಳ ಮನುಷ್ಯನು ತಿಳಿವಿಕೆಯನ್ನು ಮುಚ್ಚುತ್ತಾನೆ;
ಆದರೆ ಹುಚ್ಚರ ಹೃದಯವು ಮೂಢತ್ವವನ್ನು ಸಾರುತ್ತದೆ.

೨೪ ಜಾಗ್ರತೆಯುಳ್ಳವರ ಕೈ ದೊರೆತನ ಹೊಂದುವದು;
ಆದರೆ ಸೋಮಾರಿಯ ಕೈ ಕಪ್ಪ ಕೂಡ ಬೇಕಾಗುವದು.

೨೫ ಮನುಷ್ಯನ ಹೃದಯದಲ್ಲಿರುವ ದುಃಖವು ಅದನ್ನು ಬೊಗ್ಗಿಸುತ್ತದೆ;
ಆದರೆ ಒಳ್ಳೇ ಮಾತು ಅದನ್ನು ಸಂತೋಷ ಪಡಿಸುತ್ತದೆ.

೨೬ ನೀತಿವಂತನು ತನ್ನ ನೆರೆಯವನಿಗಿಂತ ಶ್ರೇಷ್ಠನಾಗಿದ್ದಾನೆ;
ಆದರೆ ದುಷ್ಟರ ಮಾರ್ಗವು ಅವರನ್ನು ತಪ್ಪಿ ಹೋಗ ಮಾಡುತ್ತದೆ.

೨೭ ಸೋಮಾರಿಯು ಬೇಟೆ ಆಡಿದ್ದನ್ನು ಸುಡುವದಿಲ್ಲ;
ಆದರೆ ಜಾಗ್ರತೆಯುಳ್ಳ ಮನುಷ್ಯನ ದ್ರವ್ಯವು ಪ್ರಿಯವಾಗಿದೆ.

೨೮ ನೀತಿಯ ಹಾದಿಯಲ್ಲಿ ಜೀವವು ಅದೆ;
ಅದರ ಹಾಟೆ ಮಾರ್ಗದಲ್ಲಿ ಮರಣವಿಲ್ಲ.

## ೧೩ ಸಂಧಿ.

೧ ಜ್ಞಾನಿಯಾದ ಮಗನು ತಂದೆಯ ಶಿಕ್ಷೆಯನ್ನು ಕೇಳುತ್ತಾನೆ,
ಆದರೆ ಕುಚೋದ್ಯಗಾರನು ಗದರಿಕೆಯನ್ನು ಕೇಳನು.

೨ ತನ್ನ ಬಾಯ ಫಲದಿಂದ ಮನುಷ್ಯನು ಒಳ್ಳೇದನ್ನು ತಿನ್ನುತ್ತಾನೆ;
ಆದರೆ ವಂಚಕರ ಪ್ರಾಣವು ಬಲಾತ್ಕಾರವನ್ನು ತಿನ್ನುತ್ತದೆ.

೩ ಬಾಯಿ ಕಾಯುವವನು ತನ್ನ ಪ್ರಾಣವನ್ನು ಕಾಪಾಡುತ್ತಾನೆ;
ಆದರೆ ತನ್ನ ತುಟಿಗಳನ್ನು ಅಗಲವಾಗಿ ತೆರೆಯುವವನಿಗೆ ಅಳುವು ಆಗುತ್ತದೆ.

೪ ಮೈಗಳ್ಳನ ಪ್ರಾಣವು ಅಪೇಕ್ಷಿಸಿ, ಏನೂ ಹೊಂದುವದಿಲ್ಲ;
ಆದರೆ ಜಾಗ್ರತೆಯುಳ್ಳವರ ಪ್ರಾಣವು ಪುಷ್ಟಿಯಾಗುವದು.

೫ ನೀತಿವಂತನು ಮೋಸದ ಮಾತು ಹಗೆ ಮಾಡುತ್ತಾನೆ;
ಆದರೆ ದುಷ್ಟನು ನಾರುತ್ತಾ, ಲಜ್ಜೆ ಪಡುತ್ತಾನೆ.

೬ ನೀತಿಯು ಸಂಪೂರ್ಣ ಮಾರ್ಗದವನನ್ನು ಕಾಯುತ್ತದೆ;
ಆದರೆ ದುಷ್ಟತ್ವವು ಪಾಪವನ್ನು ಇನ್ನು ಕೊಂಕು ಮಾಡುತ್ತದೆ.

೭ ತಾನು ಐಶ್ವರ್ಯವಂತನನ್ನಿಸಿ ಕೊಳ್ಳುವ ಏನಿಲ್ಲದವನೂ,
ತಾನು ಬಡವನನ್ನಿಸಿ ಕೊಳ್ಳುವ ಬಹು ದ್ರವ್ಯವಂತನೂ, ಇದ್ದಾರೆ.

೮ ಬಬ್ಬನ ಐಶ್ವರ್ಯವು, ಅವನ ಪ್ರಾಣ ವಿಮೋಚನೆಯಾಗಿದೆ;
ಆದರೆ ಬಡವನು ಗದರಿಕೆಯನ್ನು ಕೇಳುವದಿಲ್ಲ.

೯ ನೀತಿವಂತರ ಬೆಳಕು ಸಂತೋಷಿಸುತ್ತದೆ;
ಆದರೆ ದುಷ್ಟರ ದೀಪವು ಆರಿ ಹೋಗುತ್ತದೆ.

೧೦ ಅಹಂಕಾರದಿಂದಲೇ ಝಗಳಾಟವು ಆಗುತ್ತದೆ;
ಆದರೆ ಆಲೋಚನೆ ಕೇಳುವವರ ಬಳಿಯಲ್ಲಿ ಜ್ಞಾನ ಉಂಟು.

೧೧ ಮಾಯದಿಂದ ಬಂದ ದ್ರವ್ಯವು ಕಡಿಮೆಯಾಗುವದು;
ಆದರೆ ಕೈ ಕಟ್ಟವಿಂದ ಕೂಡಿಸುವವನು ಹೆಚ್ಚು ಹೊಂದುವನು.

೧೨ ತಡೆಯಲ್ಪಟ್ಟ ನಿರೀಕ್ಷೆಯು ಹೃದಯವನ್ನು ಅಸ್ವಸ್ಥ ಮಾಡುತ್ತದೆ;
ಆದರೆ ಸಂದ ಆಶೆಯು ಜೀವದ ಮರವಾಗಿದೆ.



೧೩ ವಾಕ್ಯವನ್ನು ತಿರಸ್ಕರಿಸುವವನು ನಾಶನವಾಗುವನು;
ಆದರೆ ಆಜ್ಞೆಗೆ ಭಯ ಪಡುವವನು ಪ್ರತಿಫಲ ಹೊಂದುವನು.

೧೪ ಜ್ಞಾನಿಯ ನ್ಯಾಯಪ್ರಮಾಣವು ಜೀವದ ಬುಗ್ಗೆ;
ಮರಣದ ನೇಣುಗಳಿಂದ ತೊಲಗುವದಕ್ಕಾಗಿದೆ.

೧೫ ಒಳ್ಳೇ ಬುದ್ಧಿಯು ದಯೆ ಹುಟ್ಟಿಸುತ್ತದೆ;
ಆದರೆ ವಂಚಕರ ಮಾರ್ಗವು ಕಠಿಣವಾಗಿದೆ.

೧೬ ಚಾತುರ್ಯವುಳ್ಳವರೆಲ್ಲರು ತಿಳಿವಿಕೆಯಿಂದ ನಡೆದು ಕೊಳ್ಳುತ್ತಾರೆ;
ಆದರೆ ಹುಚ್ಚನು ತನ್ನ ಮೂಢತ್ವವನ್ನು ಹಬ್ಬಿಸುತ್ತಾನೆ.

೧೭ ದುಷ್ಟ ದೂತನು ಕೇಡಿನಲ್ಲಿ ಬೀಳುತ್ತಾನೆ;
ಆದರೆ ನಂಬಿಕೆಯುಳ್ಳ ರಾಯಭಾರಿಯು ಔಷಧವಾಗಿದ್ದಾನೆ.

೧೮ ಶಿಕ್ಷೆಯನ್ನು ಹೀನೈಸುವವನಿಗೆ ಬಡತನವೂ ಮಾನಭಂಗವೂ ಉಂಟು;
ಆದರೆ ಗದರಿಕೆಯನ್ನು ಕೈಕೊಳ್ಳುವವನು ಘನಹೊಂದುತ್ತಾನೆ.

೧೯ ಸುಂದ ಆಶೆಯು ಪ್ರಾಣಕ್ಕೆ ಪ್ರಿಯವಾಗಿದೆ;
ಆದರೆ ಕೆಟ್ಟತನದಿಂದ ತೊಲಗುವದು ಹುಚ್ಚರಿಗೆ ಅಸಹ್ಯವಾಗಿದೆ.

೨೦ ಜ್ಞಾನಿಗಳ ಸಂಗದ ಪ್ರವರ್ತಿಸುವವನು ಜ್ಞಾನಿಯಾಗುವನು;
ಆದರೆ ಹುಚ್ಚರ ಸಂಗಡಿಗನು ಸಂಕಟ ಪಡುವನು.

೨೧ ಕೇಡು ಪಾಪಾತ್ಮರನ್ನು ಹಿಂದಟ್ಟುತ್ತದೆ;
ಆದರೆ ನೀತಿವಂತರಿಗೆ ಒಳ್ಳೇ ಪ್ರತಿಫಲವಾಗುತ್ತದೆ.

೨೨ ಒಳ್ಳೇಯವನು ಮಕ್ಕಳ ಮಕ್ಕಳಿಗೆ ಬಾಧ್ಯತೆಯನ್ನು ಬಿಡುತ್ತಾನೆ;
ಆದರೆ ಪಾಪಿಯ ಆಸ್ತಿಯು ನೀತಿವಂತನಿಗೋಸ್ಕರ ಇಟ್ಟದೆ.

೨೩ ಬಡವರ ಹೊಸ ಸಾಗುವಳಿಯಲ್ಲಿ ಬಹಳ ಆಹಾರ ಉಂಟು;
ಆದರೆ ವಿವೇಕವಿಲ್ಲದೆ ಇರುವಲ್ಲಿ ಕ್ಷೀಣತ್ವ ಉಂಟು.

೨೪ ತನ್ನ ಕೋಲು ಹಿಂದೆಗೆಯುವವನು ತನ್ನ ಮಗನನ್ನು ಹಗೆ ಮಾಡುತ್ತಾನೆ;
ಆದರೆ ಅವನನ್ನು ಪ್ರೀತಿ ಮಾಡುವವನು ಬಾಲ್ಯದಲ್ಲಿ ಅವನನ್ನು ಶಿಕ್ಷಿಸುತ್ತಾನೆ.

೨೫ ನೀತಿವಂತನು ಪ್ರಾಣಕ್ಕೆ ತೃಪ್ತಿಯಾಗುವ ಪರ್ಯಂತರ ಉಣ್ಣುತ್ತಾನೆ;
ಆದರೆ ದುಷ್ಟರ ಹೊಟ್ಟೆ ಕೊರತೆ ಪಡುವದು.

## ೧೪. ಸಂಧಿ.

೧ ಸ್ತ್ರೀಯರಲ್ಲಿ ಜ್ಞಾನಿಯು ತನ್ನ ಮನೆಯನ್ನು ಕಟ್ಟುತ್ತಾಳೆ;
ಆದರೆ ಮೂಢಳು ಸ್ವಂತ ಕೈಗಳಿಂದ ಅದನ್ನು ಕೆಡವುತ್ತಾಳೆ.

೨ ತನ್ನ ನೆಟ್ಟನೆತನದಲ್ಲಿ ನಡೆದು ಕೊಳ್ಳುವವನು ಕರ್ತನಿಗೆ ಭಯ ಪಡುತ್ತಾನೆ;
ಆದರೆ ವಕ್ರ ಮಾರ್ಗಗಳುಳ್ಳವನು ಅವನನ್ನು ತಿರಸ್ಕರಿಸುತ್ತಾನೆ.

೩ ಮೂಢನ ಬಾಯಲ್ಲಿ ಗರ್ವದ ಬೆತ್ತವದೆ;
ಆದರೆ ಜ್ಞಾನಿಗಳ ತುಟಿಗಳು ಅವರನ್ನು ಕಾಪಾಡುತ್ತವೆ.

೪ ಎತ್ತುಗಳು ಇದ್ದಲ್ಲಿ ಗೋದಲಿ ಶುದ್ಧವಾದೆ;
ಆದರೆ ಎತ್ತುಗಳ ಶಕ್ತಿಯಿಂದ ಹುಟ್ಟುವಲ್ಲಿ ಬಹಳವಾಗುತ್ತದೆ.

೫ ನಂಬಿಕೆಯುಳ್ಳ ಸಾಕ್ಷಿಗಾರನು ಸುಳ್ಳಾಡುವದಿಲ್ಲ;
ಆದರೆ ಅಬದ್ಧ ಸಾಕ್ಷಿಗಾರನು ಸುಳ್ಳಾಡುವನು.

೬ ಕುಚೋದ್ಯಗಾರನು ಜ್ಞಾನವನ್ನು ಹುಡುಕಿ, ಕಂಡು ಕೊಳ್ಳುವದಿಲ್ಲ;
ಆದರೆ ಗ್ರಹಿಕೆಯುಳ್ಳವನಿಗೆ ತಿಳಿವಿಕೆಯು ಸುಲಭವಾಗಿದೆ.

೭ ಹುಚ್ಚ ಮನುಷ್ಯನ ಎದುರಿನಿಂದ ಹೋಗು;
ಇಲ್ಲದಿದ್ದರೆ ತಿಳಿವಿಕೆಯ ತುಟಿಗಳನ್ನು ತಿಳಿಕೊಳ್ಳದೆ ಇರುವಿ.

೮ ತನ್ನ ಮಾರ್ಗವನ್ನು ಗ್ರಹಿಸುವದು ಚಾತುರ್ಯವುಳ್ಳವನ ಜ್ಞಾನವಾಗಿದೆ;
ಆದರೆ ಹುಚ್ಚರ ಮೂಢತ್ವವು ಮೋಸವಾಗಿದೆ.

೯ ಮೂಢರು ಅಪರಾಧಕ್ಕೆ ಹಾಸ್ಯ ಮಾಡುತ್ತಾರೆ;
ಆದರೆ ನೆಟ್ಟನೆಯವರಲ್ಲಿ ಕಟಾಕ್ಷವು ಅದೆ.

೧೦ ಹೃದಯವು ಸ್ವಂತ ದುಃಖವನ್ನು ತಿಳಿಯುತ್ತದೆ;
ಮತ್ತು ಅದರ ಸಂತೋಷದಲ್ಲಿ ಅನ್ಯನು ಸೇರುವದಿಲ್ಲ.

೧೧ ದುಷ್ಟರ ಮನೆಯು ನಾಶವಾಗುವದು;
ಆದರೆ ನೆಟ್ಟನೆಯವರ ಗುಡಾರವು ಚಿಗುರುವದು.

೧೨ ಮನುಷ್ಯನಿಗೆ ನೆಟ್ಟಗೆಂದು ಕಾಣುವ ಮಾರ್ಗ ಉಂಟು;
ಆದರೆ ಅದರ ಅಂತ್ಯವು ಮರಣದ ಮಾರ್ಗಗಳಾಗಿದೆ.

೧೩ ನಗೆಯಲ್ಲಿಯೂ ಹೃದಯವು ದುಃಖದಿಂದಿರ ಬಹುದು;
ಅದರ ಸಂತೋಷದ ಅಂತ್ಯವು ವ್ಯಸನವಾಗಿದೆ.

೧೪ ಹೃದಯದಲ್ಲಿ ಹಿಂಜರಿಯುವವನು ತನ್ನ ಮಾರ್ಗಗಳಿಂದ,
ಆದರೆ ಒಳ್ಳೇ ಮನುಷ್ಯನು ತನ್ನಿಂದಲೇ ತೃಪ್ತಿ ಹೊಂದುತ್ತಾನೆ.

೧೫ ಯುಕ್ತಿಹೀನನು ಎಲ್ಲಾ ಮಾತುಗಳನ್ನು ನಂಬುತ್ತಾನೆ;
ಆದರೆ ಚಾತುರ್ಯವುಳ್ಳವನು ತನ್ನ ನಡೆಗಳನ್ನು ಗ್ರಹಿಸುತ್ತಾನೆ.

೧೬ ಜ್ಞಾನಿಯು ಭಯ ಪಟ್ಟು, ಕೆಟ್ಟತನದಿಂದ ತೊಲಗುತ್ತಾನೆ;
ಆದರೆ ಹುಚ್ಚನು ಉರಿಗೊಂಡು, ಧೈರ್ಯ ಪಡುತ್ತಾನೆ.

೧೭ ಮುಂಗೋಪಿಯು ಮೂಢತ್ವವನ್ನು ಮಾಡುತ್ತಾನೆ;
ಆದರೆ ಕುಯುಕ್ತಿಯುಳ್ಳವನು ಹಗೆ ಪಡುತ್ತಾನೆ.

೧೮ ಯುಕ್ತಿಹೀನರು ಮೂಢತ್ವವನ್ನು ಸ್ವತಂತ್ರಿಸಿ ಕೊಳ್ಳುತ್ತಾರೆ;
ಚಾತುರ್ಯವುಳ್ಳವರಿಗೆ ತಿಳಿವಿಕೆಯು ಕಿರೀಟವಾಗಿದೆ.

೧೯ ಕೆಟ್ಟವರು ಒಳ್ಳೇಯವರ ಮುಂದೆಯೂ,
ದುಷ್ಟರು ನೀತಿವಂತನ ಬಾಗಲುಗಳ ಮುಂದೆಯೂ, ಬೊಗ್ಗಿ ಕೊಳ್ಳುತ್ತಾರೆ.

೨೦ ಬಡವನು ತನ್ನ ನೆರೆಯವನಿಂದಲೂ ಹಗೆ ಪಡುತ್ತಾನೆ;
ಆದರೆ ಐಶ್ವರ್ಯವಂತನನ್ನು ಪ್ರೀತಿ ಮಾಡುವವರು ಅನೇಕರಾಗಿದ್ದಾರೆ.

೨೧ ನೆರೆಯವನನ್ನು ತಿರಸ್ಕರಿಸುವವನು ಪಾಪಿಯಾಗಿದ್ದಾನೆ;
ಆದರೆ ದೀನರನ್ನು ಕರುಣಿಸುವವನು ಭಾಗ್ಯವಂತನು.

೨೨ ಕೆಟ್ಟದ್ದನ್ನು ಕಲ್ಪಿಸುವವರು ತಪ್ಪಿ ಹೋಗುತ್ತಾರಲ್ಲವೋ!
ಆದರೆ ಒಳ್ಳೇದನ್ನು ಕಲ್ಪಿಸುವವರಿಗೆ ಕೃಪೆಯೂ ಸತ್ಯವೂ ಉಂಟು.

೨೩ ಎಲ್ಲಾ ಕಷ್ಟದಲ್ಲಿ ಲಾಭ ಉಂಟು;
ಆದರೆ ತುಟಿಗಳ ಮಾತು ಕೊರತೆಯನ್ನೇ ಮಾಡುತ್ತದೆ.

೨೪ ಜ್ಞಾನಿಗಳ ಐಶ್ವರ್ಯ ಅವರ ಕಿರೀಟವಾಗಿದೆ;
ಆದರೆ ಹುಚ್ಚರ ಮೂಢತ್ವವು ಮೂಢತ್ವವೇ.

೨೫ ಸತ್ಯ ಸಾಕ್ಷಿಗಾರನು ಪ್ರಾಣಗಳನ್ನು ಬಿಡಿಸುತ್ತಾನೆ;
ಆದರೆ ಮೋಸಗಾರನು ಸುಳ್ಳುಗಳನ್ನು ಉಸುರುತ್ತಾನೆ.

೨೬ ಕರ್ತನ ಭಯದಲ್ಲಿ ಬಲವಾದ ಭರವಸ ಉಂಟು;
ಅವನ ಮಕ್ಕಳಿಗೆ ಆಶ್ರಯವಿರುವದು.

೨೭ ಕರ್ತನ ಭಯವು ಜೀವದ ಬುಗ್ಗೆ;
ಮರಣದ ನೇಣುಗಳಿಂದ ತೊಲಗುವದಕ್ಕಾಗಿದೆ.

೨೮ ಜನರ ಹೆಚ್ಚಿಗೆ ಅರಸನ ಅಲಂಕಾರವು;
ಪ್ರಜೆಯ ಕೊರತೆ ಪ್ರಭುವಿನ ಅಳುವು.
೨೯ ದೀರ್ಘಶಾಂತನು ಬಹಳ ವಿವೇಕಿಯಾದ್ದಾನೆ;
ಆದರೆ ಮುಂಗೋಪಿಯು ಮೂಢತ್ವವನ್ನು ಉನ್ನತ ಮಾಡುತ್ತಾನೆ.
೩೦ ಸ್ವಸ್ಥ ಹೃದಯವು ಮಾಂಸದ ಜೀವವಾಗಿದೆ;
ಆದರೆ ಹೊಟ್ಟೆಕಿಚ್ಚು ಎಲುವುಗಳಿಗೆ ಕೊಳೆಯುವಿಕೆಯಾಗಿದೆ.
೩೧ ದುರ್ಜನನ್ನು ಬಲಾತ್ಕಾರ ಮಾಡುವವನು ಅವನ ನಿರ್ಮಾಣಿಕನನ್ನು ನಿಂದಿಸುತ್ತಾನೆ;
ಆದರೆ ಅವನ್ನು ಸನ್ಮಾನಿಸುವವನು ಬಡವನನ್ನು ಕರುಣಿಸುತ್ತಾನೆ.
೩೦ ದುಷ್ಟನು ತನ್ನ ಕೆಟ್ಟತನದಲ್ಲಿ ನೂಕಲ್ಪಡುತ್ತಾನೆ;
ಆದರೆ ನೀತಿವಂತನಿಗೆ, ಸಾಯುವಾಗ, ಆಶ್ರಯ ಉಂಟು.
೩೩ ಗ್ರಹಿಕೆಯುಳ್ಳವನ ಹೃದಯದಲ್ಲಿ ಜ್ಞಾನವು ವಿಶ್ರಮಿಸಿ ಕೊಳ್ಳುತ್ತದೆ;
ಆದರೆ ಹುಚ್ಚರ ಮಧ್ಯದಲ್ಲಿ ತಿಳಿಯ ಬರುತ್ತದೆ.
೩೪ ನೀತಿಯು ಜನಾಂಗವನ್ನು ಉನ್ನತ ಮಾಡುತ್ತದೆ;
ಆದರೆ ಪಾಪವು ಪ್ರಜೆಗಳಿಗೆ ನಾಚಿಕೆಯಾಗಿದೆ.
೩೫ ಬುದ್ಧಿಯುಳ್ಳ ಸೇವಕನಿಗೆ ಅರಸನ ಕಟಾಕ್ಷ ಉಂಟು;
ಆದರೆ ನಾಚಿಕೆ ಪಡಿಸುವವನ ಮೇಲೆ ಅವನ ಉಗ್ರವು ಅದೆ.

## ೧೫ ಸಂಧಿ.

೧ ಶಾಂತವಾದ ಉತ್ತರವು ಉರಿಯನ್ನು ತಿರುಗಿಸಿ ಬಿಡುತ್ತದೆ;
ಆದರೆ ತೀಕ್ಷ್ಣವಾದ ಮಾತು ಕೋಪವನ್ನು ಎಬ್ಬಿಸುತ್ತದೆ
೨ ಜ್ಞಾನಿಗಳ ನಾಲಿಗೆಯು ತಿಳುವಿಕೆಯನ್ನು ಚನ್ನಾಗಿ ಬಳಸುತ್ತದೆ.
ಆದರೆ ಹುಚ್ಚರ ಬಾಯಿ ಮೂಢತ್ವವನ್ನು ಉಕ್ಕಿಸುತ್ತದೆ.
೩ ಕರ್ತನ ಕಣ್ಣುಗಳು ಎಲ್ಲಾ ಸ್ಥಳಗಳಲ್ಲಿ ಇದ್ದು,
ಕೆಟ್ಟವರನ್ನೂ ಬಳ್ಳಿಯವರನ್ನೂ ದೃಷ್ಟಿಸುತ್ತವೆ.
೪ ಕ್ಷೇಮಕರವಾದ ನಾಲಿಗೆಯು ಜೀವದ ಮರವಾಗಿದೆ;
ಅದರಲ್ಲಿರುವ ಕುಯುಕ್ತಿಯು ಆತ್ಮಕ್ಕೆ ಮುರಿಯುವಿಕೆಯಾಗಿದೆ.
೫ ಮೂಢನು ತನ್ನ ತಂದೆಯ ಶಿಕ್ಷೆಯನ್ನು ಅಸಂಹಿಸುತ್ತಾನೆ;
ಆದರೆ ಗದುರಿಕೆಯನ್ನು ಕೈ ಕೊಳ್ಳುವವನು ಚಾತುರ್ಯವುಳ್ಳವನಾಗಿದ್ದಾನೆ.
೬ ನೀತಿವಂತನ ಮನೆಯಲ್ಲಿ ಬಹಳ ನಿಕ್ಷೇಪ ಉಂಟು;
ಆದರೆ ದುಷ್ಟನ ಹುಟ್ಟುವಳಿಯಲ್ಲಿ ಕೊಂದರೆ ಅದೆ.
೭ ಜ್ಞಾನಿಗಳ ತುಟಿಗಳು ತಿಳುವಿಕೆಯನ್ನು ಚೆಲ್ಲುತ್ತವೆ;
ಹುಚ್ಚರ ಹೃದಯವು ಹಾಗಲ್ಲ.
೮ ದುಷ್ಟರ ಬಲಿಯು ಕರ್ತನಿಗೆ ಅಸಹ್ಯವಾಗಿದೆ;
ಆದರೆ ನೀತಿವಂತರ ಪ್ರಾರ್ಥನೆಯು ಅವನಿಗೆ ಸಂತೋಷವಾಗಿದೆ
೯ ದುಷ್ಟನ ಮಾರ್ಗವು ಕರ್ತನಿಗೆ ಅಸಹ್ಯವಾಗಿದೆ;
ಆದರೆ ನೀತಿಯನ್ನು ಹಿಂದಟ್ಟುವವನನ್ನು ಪ್ರೀತಿ ಮಾಡುತ್ತಾನೆ.
೧೦ ಹಾದಿ ಬಿಟ್ಟವನಿಗೆ ಶಿಕ್ಷೆಯು ಕೆಟ್ಟದ್ದಾಗಿದೆ;
ಗದುರಿಕೆಯನ್ನು ಹಗೆ ಮಾಡುವವನು ಸಾಯುವನು.
೧೧ ಪಾತಾಳವೂ, ನಾಸನ ಸ್ಥಳವೂ ಕರ್ತನ ಮುಂದೆ ಅದೆ;
ಮನುಷ್ಯನ ಮಕ್ಕಳ ಹೃದಯಗಳು ಎಷ್ಟೋ ಹೆಚ್ಚಾಗಿ!
೧೨ ಕುಚೋದ್ಯಗಾರನು ತನಗೆ ಆಗುವ ಗದುರಿಕೆಯನ್ನು ಪ್ರೀತಿ ಮಾಡನು;
ಜ್ಞಾನಿಗಳ ಬಳಿಗೆ ಹೋಗನು.
೧೩ ಸಂತೋಷ ಪಡುವ ಹೃದಯವು ಕಾಂತಿಯುಳ್ಳ ಮುಖ ಮಾಡುತ್ತದೆ;
ಆದರೆ ಹೃದಯದ ವ್ಯಥೆಯಿಂದ ಆತ್ಮವು ಕುಂಗುತ್ತದೆ.
೧೪ ಗ್ರಹಿಕೆಯುಳ್ಳವನ ಹೃದಯವು ತಿಳುವಿಕೆಯನ್ನು ಹುಡುಕುತ್ತದೆ;
ಆದರೆ ಹುಚ್ಚರ ಬಾಯಿ ಮೂಢತ್ವವನ್ನು ಮೇಯುತ್ತದೆ.
೧೫ ದೀನನ ದಿನಗಳೆಲ್ಲಾ ಕೆಟ್ಟವುಗಳಾಗಿವೆ;
ಆದರೆ ಬಳ್ಳೇ ಹೃದಯವುಳ್ಳವನಿಗೆ ನಿತ್ಯ ಔತನ ಉಂಟು.
೧೬ ಅಸಮಾಧಾನದ ಸಂಗತ ದೊಡ್ಡ ಬೊಕ್ಕಸಕ್ಕಿಂತ,
ಕರ್ತನ ಭಯದೊಂದಿಗೆ ಸ್ವಲ್ಪವಾದದ್ದು ಬಳ್ಳೇದು.
೧೭ ಹಗೆಯ ಸಂಗತ ಕೊಬ್ಬಿದ ಎತ್ತಿಗಿಂತ,
ಪ್ರೀತಿಯ ಸಂಗತ ಪಲ್ಯದ ಭೋಜನವು ಬಳ್ಳೇದು.
೧೮ ಪಿಟ್ಟಿನವನು ಝಗಳಾಟ ಎಬ್ಬಿಸುತ್ತಾನೆ;
ಆದರೆ ದೀರ್ಘಶಾಂತನು ವಾಸ್ವಾದ ನಿಲ್ಲಿಸುತ್ತಾನೆ.
೧೯ ಮೈಗಳ್ಳನ ಮಾರ್ಗವು ಮುಳ್ಳಿನ ಬೇಲಿಯ ಹಾಗೆ;
ಆದರೆ ನೆಟ್ಟನೆಯವರ ಹಾದಿಯು ಕಡದ ಮಾರ್ಗವಾಗಿದೆ.
೨೦ ಜ್ಞಾನಿಯಾದ ಮಗನು ತಂದೆಯನ್ನು ಸಂತೋಷ ಪಡಿಸುತ್ತಾನೆ;
ಆದರೆ ಹುಚ್ಚ ಮನುಷ್ಯನು ತನ್ನ ತಾಯನ್ನು ತಿರಸ್ಕರಿಸುತ್ತಾನೆ.
೨೧ ಬುದ್ಧಿ ಹೀನನಿಗೆ ಮೂಢತ್ವವು ಸಂತೋಷವಾಗಿದೆ;
ಆದರೆ ವಿವೇಕಿಯು ನೆಟ್ಟಗೆ ನಡೆದು ಕೊಳ್ಳುತ್ತಾನೆ.
೨೨ ಆಲೋಚನೆ ಸಭೆ ಇಲ್ಲದಲ್ಲಿ ಯೋಚನೆಗಳು ವ್ಯರ್ಥವಾಗುತ್ತವೆ.
ಆದರೆ ಆಲೋಚನೆ ಕರ್ತರ ಬಾಹುಳ್ಯದಿಂದ ಸ್ಥಿರವಾಗುತ್ತವೆ.
೨೩ ತನ್ನ ಬಾಯ ಪ್ರತ್ಯುತ್ತರದಿಂದ ಮನುಷ್ಯನಿಗೆ ಸಂತೋಷ ಉಂಟಾಗುತ್ತದೆ;
ತಕ್ಕ ಕಾಲದಲ್ಲಿ ಆಡಿದ ಮಾತು ಎಷ್ಟೋ ಬಳ್ಳೇದು!
೨೪ ಕೆಳಗಿನ ಪಾತಾಳಕ್ಕೆ ತೊಲಗುವ ಹಾಗೆ,
ಜೀವದ ಹಾದಿ ಬುದ್ಧಿವಂತನಿಗೆ ಮೇಲಕ್ಕೆ ಹೋಗುತ್ತದೆ.
೨೫ ಗರ್ವಿಷ್ಠರ ಮನೆಯನ್ನು ಕರ್ತನು ಕೀಳುತ್ತಾನೆ;
ಆದರೆ ವಿಧವೆಯ ಮೇರೆಯನ್ನು ಭದ್ರ ಮಾಡುತ್ತಾನೆ.
೨೬ ಕೆಟ್ಟವನ ಯೋಚನೆಗಳು ಕರ್ತನಿಗೆ ಅಸಂಹ್ಯವಾಗಿವೆ;
ಆದರೆ ನಿರ್ಮಲರ ಮಾತುಗಳು ಆನಂದಕರವಾಗಿವೆ.
೨೭ ದುರಾಭ ಆಶಿಸುವವನು ತನ್ನ ಮನೆಯನ್ನು ತೊಂದರೆಗೆ ಪಡಿಸುತ್ತಾನೆ;
ಆದರೆ ಲಂಚವನ್ನು ಹಗೆ ಮಾಡುವವನು ಬಾಳುವನು.
೨೮ ನೀತಿವಂತನ ಹೃದಯವು ಉತ್ತರ ಕೊಡುವದಕ್ಕೆ ಧ್ಯಾನಿಸುತ್ತದೆ;
ಆದರೆ ದುಷ್ಟರ ಬಾಯಿ ಕೆಟ್ಟದ್ದನ್ನು ಉಕ್ಕಿಸುತ್ತದೆ.
೨೯ ಕರ್ತನು ದುಷ್ಟರಿಗೆ ದೂರವಾಗಿದ್ದಾನೆ;
ಆದರೆ ನೀತಿವಂತರ ಪ್ರಾರ್ಥನೆಯನ್ನು ಕೇಳುತ್ತಾನೆ,
೩೦ ಕಣ್ಣುಗಳ ಬೆಳಕು ಹೃದಯವನ್ನು ಸಂತೋಷ ಪಡಿಸುತ್ತದೆ;
ಬಳ್ಳೇ ಸುದ್ದಿ ಎಲುವುಗಳನ್ನು ಪುಷ್ಟಿ ಮಾಡುತ್ತದೆ.
೩೧ ಜೀವದ ಗದುರಿಕೆಯನ್ನು ಕೇಳುವ ಕಿವಿಯು
ಜ್ಞಾನಿಗಳ ಮಧ್ಯದಲ್ಲಿ ವಾಸಿಸುತ್ತದೆ.
೩೨ ಶಿಕ್ಷೆ ಹೀನೈಸುವವನು ತನ್ನ ಪ್ರಾಣವನ್ನು ಅಸಡ್ಡೆ ಮಾಡುತ್ತಾನೆ;
ಆದರೆ ಗದುರಿಕೆಯನ್ನು ಕೇಳುವವನು ಬುದ್ಧಿ ಸಂಪಾದಿಸಿ ಕೊಳ್ಳುತ್ತಾನೆ.



೩೩ ಕರ್ತನ ಭಯವು ಜ್ಞಾನ ಶಿಕ್ಷೆಯಾಗಿದೆ;
ಘನತೆಕ್ಕೆ ಮುಂಚೆ ದೀನತೆ ಉಂಟು.

## ೧೬ ಸಂಧಿ.

೧ ಹೃದಯದ ಆಲೋಚನೆಗಳು ಮನುಷ್ಯನಲ್ಲಿ ಅದೆ;
ಆದರೆ ನಾಲಿಗೆಯ ಪ್ರತ್ಯುತ್ತರವು ಕರ್ತನಿಂದಲೇ.
೨ ಮನುಷ್ಯನ ಮಾರ್ಗಗಳೆಲ್ಲಾ ತನ್ನ ಕಣ್ಣುಗಳ ಮುಂದೆ ನಿರ್ಮಲವಾಗಿವೆ;
ಆದರೆ ಆತ್ಮಗಳನ್ನು ತೂಗಿ ನೋಡುವವನು ಕರ್ತನೇ.
೩ ನಿನ್ನ ಕೆಲಸಗಳನ್ನು ಕರ್ತನ ಮೇಲೆ ಹೊರಳಿಸು;
ಆಗ ನಿನ್ನ ಯೋಚನೆಗಳು ಸ್ಥಿರವಾಗುವವು.
೪ ಕರ್ತನು ಸರ್ವವನ್ನು ತನಗೋಸ್ಕರ ಮಾಡಿದ್ದಾನೆ;
ಕೆಟ್ಟವನನ್ನು ಸಹ ಕೇಡಿನ ದಿವಸಕ್ಕೋಸ್ಕರವೇ.
೫ ಎತ್ತರವಾದ ಹೃದಯದವರೆಲ್ಲರು ಕರ್ತನಿಗೆ ಅಸಹ್ಯವಾಗಿದ್ದಾರೆ;
ಕೈಗೆ ಕೈ ಕೂಡಿದರೂ, ನಿರಪರಾಧಿಯಾಗಿರರು.
೬ ಕೃಪೆಯಿಂದಲೂ, ಸತ್ಯದಿಂದಲೂ, ಅಕ್ರಮವು ಪರಿಹಾರವಾಗುತ್ತದೆ;
ಮತ್ತು ಕರ್ತನ ಭಯದಿಂದ ಕೆಟ್ಟದ್ದಕ್ಕೆ ತೊಲಗುವದು ಉಂಟು.
೭ ಕರ್ತನು ಮನುಷ್ಯನ ಮಾರ್ಗಗಳನ್ನು ಮೆಚ್ಚಿದರೆ,
ಅವನ ಶತ್ರುಗಳನ್ನು ಸಹ ಅವನ ಸಂಗತ ಸಮಾಧಾನವಾಗ ಮಾಡುತ್ತಾನೆ.
೮ ನ್ಯಾಯವಿಲ್ಲದ ಬಹಳ ಆದಾಯಕ್ಕಿಂತ,
ನೀತಿಗೆ ಕೂಡಿರುವ ಸ್ವಲ್ಪವೇ ಬಳ್ಳೇದು.
೯ ಮನುಷ್ಯನ ಹೃದಯವು ತನ್ನ ಮಾರ್ಗವನ್ನು ಆಲೋಚಿಸುತ್ತದೆ;
ಆದರೆ ಕರ್ತನು ಅವನ ನಡೆಯನ್ನು ಸ್ಥಿರ ಪಡಿಸುತ್ತಾನೆ.
೧೦ ಅರಸನ ತುಟಿಗಳ ಮೇಲೆ ದೈವೋತ್ತರ ಉಂಟು;
ನ್ಯಾಯದಲ್ಲಿ ಅವನ ಬಾಯಿ ತಪ್ಪದು.
೧೧ ನ್ಯಾಯವಾದ ತೂಕದ ಕಲ್ಲೂ, ತ್ರಾಸೂ, ಕರ್ತನವು;
ಚೀಲದಲ್ಲಿರುವ ಎಲ್ಲಾ ಕಲ್ಲುಗಳು ಅವನ ಕೈಕೆಲಸವಾಗಿವೆ.
೧೨ ದುಷ್ಟತ್ವವನ್ನು ಮಾಡುವದು ಅರಸುಗಳಿಗೆ ಅಸಹ್ಯವಾಗಿದೆ;
ಯಾಕಂದರೆ ನೀತಿಯಿಂದ ಸಿಂಹಾಸನವು ಸ್ಥಿರವಾಗುತ್ತದೆ.
೧೩ ನೀತಿಯ ತುಟಿಗಳು ಅರಸುಗಳ ಸಂತೋಷವಾಗಿವೆ;
ನೆಟ್ಟಗೆ ಮಾತಾಡುವವನನ್ನು ಪ್ರೀತಿ ಮಾಡುತ್ತಾನೆ.
೧೪ ಅರಸನ ಉರಿಯು ಮರಣದ ದೂತರ ಹಾಗೆ;
ಆದರೆ ಜ್ಞಾನಿಯಾದ ಮನುಷ್ಯನು ಅದನ್ನು ಶಾಂತ ಪಡಿಸುತ್ತಾನೆ.
೧೫ ಅರಸನ ಮುಖದ ಬೆಳಕಿನಲ್ಲಿ ಜೀವ ಉಂಟು;
ಅವನ ಕೃಪೆಯು ಹಿಂಗಾರಿಯ ಮೋಡದ ಹಾಗಿದೆ.
೧೬ ಜ್ಞಾನ ಸಂಪಾದಿಸುವದು ಭಂಗಾರಕ್ಕಿಂತ ಎಷ್ಟೋ ಬಳ್ಳೇದಾಗಿದೆ;
ಗ್ರಹಿಕೆಯನ್ನು ಸಂಪಾದಿಸುವದು ಬೆಳ್ಳಿಗಿಂತ ಆಯಲ್ಪತ ತಕ್ಕದ್ದಾಗಿದೆ.
೧೭ ಕೆಟ್ಟತನಕ್ಕೆ ತೊಲಗುವದು ನೆಟ್ಟನೆಯವರ ರಾಜ ಮಾರ್ಗವಾಗಿದೆ;
ತನ್ನ ಮಾರ್ಗವನ್ನು ಕಾಯುವವನು ತನ್ನ ಪ್ರಾಣವನ್ನು ಕಾಪಾಡುತ್ತಾನೆ.
೧೮ ನಾಶನಕ್ಕೆ ಮುಂಚೆ ಗರ್ವವೂ,
ಎಡವುವದಕ್ಕಿಂತ ಮುಂಚೆ ಎತ್ತರವಾದ ಮನಸ್ಸು, ಉಂಟು.
೧೯ ಗರ್ವಿಷ್ಠರ ಸಂಗತ ಕೊಳ್ಳೆಯನ್ನು ಪಾಲಿಸುವದಕ್ಕಿಂತ,
ದೀನರ ಸಂಗತ ಆತ್ಮವನ್ನು ತಗ್ಗಿಸುವದು ಬಳ್ಳೇದು.
೨೦ ಕಾರ್ಯವನ್ನು ಬುದ್ಧಿಯಿಂದ ನಡಿಸುವವನು ಬಳ್ಳೇದನ್ನು ದೊರಕಿಸಿ ಕೊಳ್ಳುತ್ತಾನೆ;
ಮತ್ತು ಕರ್ತನಲ್ಲಿ ಭರವಸವಿಡುವವನೇ ಭಾಗ್ಯವಂತನು.
೨೧ ಹೃದಯದಲ್ಲಿ ಜ್ಞಾನವುಳ್ಳವನಿಗೆ ಗ್ರಹಿಕೆಯುಳ್ಳವನೆಂದು ಹೇಳುವರು;
ಮತ್ತು ತುಟಿಗಳ ಮಧುರವು ಕಲಿಕೆಯನ್ನು ಹೆಚ್ಚಿಸುವದು.
೨೨ ಬುದ್ಧಿ ಉಂಟಾದವನಿಗೆ ಅದು ಜೀವದ ಬುಗ್ಗೆಯಾಗಿದೆ;
ಆದರೆ ಮೂಢರ ಶಿಕ್ಷೆಯು ಮೂಢತ್ವವೇ.
೨೩ ಜ್ಞಾನಿಯ ಹೃದಯವು ಅವನ ಬಾಯಿಗೆ ಬುದ್ಧಿ ಕೊಡುತ್ತದೆ;
ಮತ್ತು ಅವನ ತುಟಿಗಳಿಗೆ ಕಲಿಕೆಯನ್ನು ಹೆಚ್ಚಿಸುತ್ತದೆ.
೨೪ ಆನಂದಕರವಾದ ಮಾತುಗಳು ಜೇನಿನ ಧಾರೆಯಾಗಿವೆ;
ಪ್ರಾಣಕ್ಕೆ ಮಧುರವೂ, ಎಲುವುಗಳಿಗೆ ಕ್ಷೇಮಕರವೂ, ಆಗಿವೆ.
೨೫ ಮನುಷ್ಯನಿಗೆ ನೆಟ್ಟಗೆಂದು ಕಾಣುವ ಮಾರ್ಗವು ಉಂಟು;
ಆದರೆ ಅದರ ಅಂತ್ಯವು ಮರಣದ ಮಾರ್ಗಗಳಾಗಿದೆ.
೨೬ ಕಷ್ಟ ಮಾಡುವವನ ಪ್ರಾಣವು ತನಗೋಸ್ಕರ ಕಷ್ಟಮಾಡುತ್ತದೆ;
ಯಾಕಂದರೆ ಅವನ ಬಾಯಿ ಅವನಿಗೆ ಭಾರ ಹೊರಿಸುತ್ತದೆ.
೨೭ ನಿಷ್ಪ್ರಯೋಜಕನು ಕೆಟ್ಟದ್ದನ್ನು ಅಗಿಯುತ್ತಾನೆ;
ಅವನ ತುಟಿಗಳ ಮೇಲೆ ಸುಡುವ ಬೆಂಕಿಯ ಹಾಗಿದೆ.
೨೮ ಕಕ್ಕು ಮನುಷ್ಯನು ಝಗಳಾಟವನ್ನು ಬಿತ್ತುತ್ತಾನೆ;
ಮತ್ತು ಪಿಸುಸುಟ್ಟುವವನು ಅಪ್ತರನ್ನು ಅಗಲಿಸುತ್ತಾನೆ.
೨೯ ಬಲಾತ್ಕಾರಿಯು ತನ್ನ ನೆಕೆಯವನನ್ನು ಮೋಸಗೊಳಿಸಿ,
ಬಳ್ಳೇದಲ್ಲದ ಮಾರ್ಗದಲ್ಲಿ ನಡಿಸುತ್ತಾನೆ.
೩೦ ಕಕ್ಕುಗಳನ್ನು ಕಲ್ಪಿಸುವದಕ್ಕೆ ತನ್ನ ಕಣ್ಣುಗಳನ್ನು ಮುಚ್ಚುವವನು,
ತನ್ನ ತುಟಿಗಳನ್ನು ಬಿಗಿ ಮಾಡುವವನು, ಕೆಟ್ಟದ್ದನ್ನು ತೀರಿಸಿ ಬಿಡುತ್ತಾನೆ.
೩೧ ನೀತಿ ಮಾರ್ಗದಲ್ಲಿ ಶಿಕ್ಕುವ ನರೆ ಕೂದಲು ಸೌಂದರ್ಯದ ಕಿರೀಟವಾಗಿದೆ.
೩೨ ಪರಾಕ್ರಮಶಾಲಿಗಿಂತ ದೀರ್ಘಶಾಂತನೂ,
ಪಟ್ಟಣ ಹಿಡಿಯುವವನಿಗಿಂತ ತನ್ನ ಆತ್ಮವನ್ನು ಆಳಿ ಕೊಳ್ಳುವವನೂ, ವಾಸಿ.
೩೩ ಉಡಿಲಲ್ಲಿ ಚೀಟು ಹಾಕುತ್ತಾರೆ;
ಆದರೆ ಅದರ ತೀರ್ಪೆಲ್ಲಾ ಕರ್ತನಿಂದಲೇ.

## ೧೭ ಸಂಧಿ.

೧ ಝಗಳದ ಸಂಗತ ಬಲಿಗಳು ತುಂಬಿರುವ ಮನೆಗಿಂತ,
ಶಾಂತಿಯೊಂದಿಗೆ ಬೂಗಿದ ತುಂಡು ವಾಸಿ.
೨ ಬುದ್ಧಿಯುಳ್ಳ ಸೇವಕನು ನಾಚಿಕೆ ಪಡಿಸುವ ಮಗನನ್ನು ಆಳುವನು;
ಸಹೋದರರ ಮಧ್ಯದಲ್ಲಿ ಅವನು ಬಾಧ್ಯತೆಯನ್ನು ಪಾಲಿಸುವನು.

೩ ಬೆಳ್ಳಿಗೆ ಮೂಸೆ, ಚಿನ್ನಕ್ಕೆ ಕೋಪೆ;
ಆದರೆ ಹೃದಯಗಳನ್ನು ಶೋಧಿಸುವವನು ಕರ್ತನೇ.
೪ ದುರ್ಮಾರ್ಗನು ಪಾತಕದ ತುಟಿಯನ್ನು ಆಲೈಸುತ್ತಾನೆ;
ಸುಳ್ಳುಗಾರನು ನಷ್ಟ ಮಾಡುವ ನಾಲಿಗೆಗೆ ಕಿವಿ ಕೊಡುತ್ತಾನೆ.
೫ ಬಡವನನ್ನು ಗೇಲಿಮಾಡುವವನು ಅವನ ನಿರ್ಮಾಣಿಕನನ್ನು ನಿಂದಿಸುತ್ತಾನೆ.
ಆಪತ್ತಿಗೆ ಸಂತೋಷ ಪಡುವವನು ಅಪರಾಧವಿಲ್ಲದೆ ಇರನು.
೬ ಮುದುಕರ ಕಿರೀಟವು ಮಕ್ಕಳ ಮಕ್ಕಳೇ; ಮಕ್ಕಳ ಶೌರ್ಯವು ಅವರ ತಂದೆಗಳೇ.
೭ ಘನತೆಯ ತುಟಿಯು ಬುದ್ಧಿಹೀನನಿಗೆ ಯೋಗ್ಯವಲ್ಲ;
ಸುಳ್ಳಿನ ತುಟಿಯು ಅಧಿಪತಿಗೆ ಅದಕ್ಕಿಂತ ಕಡೆ.
೮ ಲಂಚವು ಅದನ್ನು ಹೊಂದುವವನ ಕಣ್ಣುಗಳಿಗೆ ರತ್ನವಾಗಿದೆ;
ಯಾವ ಕಡೆಗೆ ತಿರುಗಿದರೂ, ಸಫಲ ಕೊಡುತ್ತದೆ.
೯ ದ್ರೋಹ ಮುಚ್ಚುವವನು ಪ್ರೀತಿಯನ್ನು ಹುಡುಕುತ್ತಾನೆ;
ಆದರೆ ಮಾತು ತಿರಿಗಿ ತರುವವನು ಅತ್ತರನ್ನು ಅಗಲಿಸುತ್ತಾನೆ.
೧೦ ಹುಚ್ಚನಲ್ಲಿ ನೂರುಸಾರಿ ಹೊಡೆಯುವದಕ್ಕಿಂತ,
ಗ್ರಹಿಕೆಯುಳ್ಳವನಲ್ಲಿ ಗದರಿಸುವದೇ ಹೆಚ್ಚಾಗಿ ಹೊಕ್ಕೊಳ್ಳುತ್ತದೆ.
೧೧ ಕೆಟ್ಟವನು ತಿರುಗಿ ಬೀಳುವದನ್ನು ಹುಡುಕುತ್ತಾನೆ;
ಕ್ರೂರ ದೂತನು ಅವನಿಗೆದುರಾಗಿ ಕಳುಹಿಸಲ್ಪಡುವನು.
೧೨ ಮರಿ ಕಳ್ಳ ಕೊಂಡ ಕರಡಿ ಎದುರಾಗಲಿ;
ಆದರೆ ತನ್ನ ಮೂಢತ್ವದಲ್ಲಿರುವ ಹುಚ್ಚನು ಬೇಡ.
೧೩ ಉಪಕಾರಕ್ಕೆ ಬದಲಾಗಿ ಅಪಕಾರ ಮಾಡುವವನ ಮನೆಯಿಂದ ಕೇಡು ತೊಲಗದು.
೧೪ ಝಗಳಾಟದ ಆರಂಭವು ನೀರಿನ ಕಟ್ಟೆ ಹರಿಯುವವನ ಹಾಗಿದೆ;
ಆದದರಿಂದ ಅದರಲ್ಲಿ ಕೈ ಹಚ್ಚುವದಕ್ಕಿಂತ ಮುಂಚೆ ಝಗಳ ಬಿಡು.
೧೫ ದುಷ್ಟನಿಗೆ ನೀತಿ ನಿರ್ಣಯಿಸುವವನೂ, ನೀತಿವಂತನಿಗೆ ಆಜ್ಞೆ ನಿರ್ಣಯಿಸುವವನೂ, ಇಬ್ಬರು ಕರ್ತನಿಗೆ ಅಸಹ್ಯವಾಗಿದ್ದಾರೆ.
೧೬ ಜ್ಞಾನ ಕೊಂಡು ಕೊಳ್ಳುವದಕ್ಕೆ ಹುಚ್ಚನಿಗೆ ಹಣವು ಯಾಕೆ! ಅವನಿಗೆ ಬುದ್ಧಿ ಇಲ್ಲವಲ್ಲ!
೧೭ ಸ್ನೇಹಿತನು ಎಲ್ಲಾ ಕಾಲದಲ್ಲಿ ಪ್ರೀತಿ ಮಾಡುತ್ತಾನೆ;
ಸಹೋದರನು ಇಕ್ಕಟ್ಟಿಗೋಸ್ಕರ ಹುಟ್ಟುತ್ತಾನೆ.
೧೮ ಬುದ್ಧಿಹೀನ ಮನುಷ್ಯನು ಕೈಕೊಟ್ಟು, ತನ್ನ ಸ್ನೇಹಿತನ ಮುಂದೆ ಹೊಣೆಯಾಗುತ್ತಾನೆ.
೧೯ ವಾಗ್ವಾದ ಪ್ರಿಯನು ದ್ರೋಹ ಪ್ರಿಯನಾಗಿದ್ದಾನೆ;
ತನ್ನ ಬಾಗಲನ್ನು ಎತ್ತರ ಮಾಡುವವನು ನಾಶನವನ್ನು ಹುಡುಕುತ್ತಾನೆ.
೨೦ ಕೊಂಕು ಹೃದಯದವನು ಬಳ್ಳೇದನ್ನು ಕಾಣನು;
ಕಕ್ಕು ನಾಲಿಗೆಯವನು ಕೇಡಿನಲ್ಲಿ ಬೀಳುವನು.
೨೧ ಹುಚ್ಚನನ್ನು ಪಡೆಯುವವನು ತನ್ನ ವ್ಯಸನಕ್ಕೆ ಪಡೆಯುತ್ತಾನೆ;
ಬುದ್ಧಿಹೀನನ ತಂದೆ ಸಂತೋಷ ಪಡನು.
೨೨ ಸಂತೋಷವಾದ ಹೃದಯವು ಬಳ್ಳೇ ಕ್ಷೇಮವನ್ನು ಉಂಟುಮಾಡುತ್ತದೆ.
ಆದರೆ ಜಜ್ಜಿದ ಆತ್ಮವು ಮೂಳೆಯನ್ನು ಬಣಗಿಸುತ್ತದೆ.
೨೩ ನ್ಯಾಯದ ಹಾದಿಗಳನ್ನು ತಿರುಗಿಸಿ ಬಿಡುವದಕ್ಕೆ ದುಡ್ಡನು ಉಡಿಲಿಂದ ಲಂಚವನ್ನು ತೆಗೆದು ಕೊಳ್ಳುತ್ತಾನೆ.
೨೪ ಜ್ಞಾನವು ಗ್ರಹಿಕೆಯುಳ್ಳವನ ಮುಖದ ಮುಂದೆ ಅದೆ;
ಆದರೆ ಹುಚ್ಚನ ಕಣ್ಣುಗಳು ಭೂಮಿಯ ಅಂತ್ಯದಲ್ಲಿ ಅವೆ.
೨೫ ಹುಚ್ಚ ಮಗನು ತನ್ನ ತಂದೆಗೆ ಕರಕರೆಯೂ,
ಅವನನ್ನು ಹೆತ್ತವಳಿಗೆ ಕಹಿಯೂ, ಆಗಿದ್ದಾನೆ.
೨೬ ನೀತಿವಂತನನ್ನು ದಂಡಿಸುವದೂ,
ಅಧಿಪತಿಗಳನ್ನು ಯೋಗ್ಯವಾದದ್ದಕ್ಕೋಸ್ಕರ ಹೊಡೆಯುವದೂ, ಬಳ್ಳೇದಲ್ಲ.
೨೭ ತಿಳುವಿಕೆ ತಿಳಿದವನು ತನ್ನ ವಾಕ್ಯಗಳನ್ನು ಮಿತಿ ಮಾಡುತ್ತಾನೆ;
ಆತ್ಮದಲ್ಲಿ ಶಾಂತನು ವಿವೇಕಿ.
೨೮ ಮೂಢನಾದರೂ, ಮೌನವಾಗಿದ್ದರೆ, ಜ್ಞಾನಿ ಎಂದೂ,
ತುಟಿಗಳನ್ನು ಮುಚ್ಚಿ ಕೊಳ್ಳುವವನು ಗ್ರಹಿಕೆಯುಳ್ಳವನೆಂದೂ, ಎಣಿಸಲ್ಪಡುತ್ತಾರೆ.

## ೧೮ ಸಂಧಿ.

೧ ತನ್ನನ್ನು ಪ್ರತ್ಯೇಕಿಸಿ ಕೊಳ್ಳುವವನು ಅಪೇಕ್ಷೆಯ ಪ್ರಕಾರ ಹುಡುಕುತ್ತಾ,
ಎಲ್ಲಾ ಸುಜ್ಞಾನದಲ್ಲಿ ಕೈ ಹಚ್ಚುತ್ತಾನೆ.
೨ ಹುಚ್ಚನು ವಿವೇಕದಲ್ಲಿ ಅಲ್ಲ,
ತನ್ನ ಹೃದಯದ ಪ್ರಕಟಣೆಯಲ್ಲಿ ಸಂತೋಷ ಪಡುತ್ತಾನೆ.
೩ ದುಷ್ಟನು ಬರುವಾಗ ತಿರಸ್ಕಾರವೂ,
ಮಾನಭಂಗದ ಸಂಗಡ ನಿಂದೆಯೂ, ಬರುತ್ತವೆ.
೪ ಮನುಷ್ಯನ ಬಾಯ ಮಾತುಗಳು ಆಳವಾದ ನೀರುಗಳಾಗಿವೆ;
ಜ್ಞಾನದ ಬುಗ್ಗೆ ಹರಿಯುವ ಹಳ್ಳವಾಗಿದೆ.
೫ ನೀತಿವಂತನನ್ನು ನ್ಯಾಯದಲ್ಲಿ ಬೊಗ್ಗಿಸುವ ಹಾಗೆ,
ದುಷ್ಟರಿಗೆ ಮುಖದಾಕ್ಷಿಣ್ಯ ಮಾಡುವದು ಬಳ್ಳೇದಲ್ಲ.
೬ ಹುಚ್ಚನ ತುಟಿಗಳು ವಾಗ್ವಾದದಲ್ಲಿ ಸೇರುತ್ತವೆ;
ಮತ್ತು ಅವನ ಬಾಯಿ ಪೆಟ್ಟುಗಳನ್ನು ಕರೆಯುತ್ತದೆ.
೭ ಹುಚ್ಚನ ಬಾಯಿ ಅವನಿಗೆ ಅಳುವಾಗುವ ಕಾರಣವೂ,
ಅವನ ತುಟಿಗಳು ಅವನ ಪ್ರಾಣಕ್ಕೆ ಉರ್ಲೂ, ಆಗಿವೆ.
೮ ಪಿಸುಗುಟ್ಟುವವನ ಮಾತುಗಳು ಸವಿ ಉಟಿಗಳ ಹಾಗಿವೆ;
ಆದರೆ ಹೊಟ್ಟೆಯ ಬಳ್ಳ ಭಾಗದಲ್ಲಿ ಇಳಿಯುತ್ತವೆ.
೯ ತನ್ನ ಉದ್ಯೋಗದಲ್ಲಿ ಆಲಸ್ಯ ಮಾಡುವವನು
ಹಾಳು ಮಾಡುವವನಿಗೆ ಸಹೋದರನಾಗಿದ್ದಾನೆ.
೧೦ ಕರ್ತನ ಹೆಸರು ಬಲವಾದ ಬುರುಜಾಗಿದೆ;
ನೀತಿವಂತನು ಅದಕ್ಕೆ ಓಡಿ, ಭದ್ರವಾಗಿರುತ್ತಾನೆ.
೧೧ ಐಶ್ವರ್ಯವಂತನ ದ್ರವ್ಯವು ಅವನ ಬಲವಾದ ಪಟ್ಟಣವಾಗಿದೆ;
ಅವನ ದೃಷ್ಟಿಯಲ್ಲಿ ಎತ್ತರವಾದ ಗೋಡೆಯ ಹಾಗಿದೆ.
೧೨ ನಾಶನಕ್ಕೆ ಮುಂಚೆ ಮನುಷ್ಯನ ಹೃದಯವು ಎತ್ತರವಾಗುತ್ತದೆ;
ಘನತೆಕ್ಕೆ ಮುಂಚೆ ದೈನ್ಯವು ಅದೆ.
೧೩ ಕೇಳುವದಕ್ಕಿಂತ ಮುಂಚೆ ಉತ್ತರ ಕೊಡುವವನಿಗೆ,
ಅದು ಮೂಢತ್ವವೂ ಅವಮಾನವೂ ಆಗಿದೆ.
೧೪ ಮನುಷ್ಯನ ಆತ್ಮವು ಅವನ ಅಸ್ವಸ್ಥವನ್ನು ತಾಳೀತು;
ಆದರೆ ಜಜ್ಜಿದ ಆತ್ಮವನ್ನು ತಾಳುವವರ್ಯಾರು!



೧೫ ಗ್ರಹಿಕೆಯುಳ್ಳವನ ಹೃದಯವು ತಿಳುವಿಕೆಯನ್ನು ಸಂಪಾದಿಸುತ್ತದೆ;
ಮತ್ತು ಜ್ಞಾನಿಗಳ ಕಿವಿಯು ತಿಳುವಿಕೆಯನ್ನು ಹುಡುಕುತ್ತದೆ.
೧೬ ಮನುಷ್ಯನ ಕಾಣಿಕೆಯು ಅವನಿಗೆ ವಿಸ್ತಾರವನ್ನು ಉಂಟುಮಾಡಿ,
ದೊಡ್ಡವರ ಮುಂದಕ್ಕೆ ಅವನನ್ನು ನಡಿಸುತ್ತದೆ.
೧೭ ಮೊದಲನೆಯವನು ತನ್ನ ವಿವಾದದಲ್ಲಿ ನೀತಿವಂತನಾಗಿದ್ದಾನೆ;
ಆದರೆ ಅವನ ನೆರೆಯವನು ಬಂದರೆ, ಅವನನ್ನು ವಿಚಾರಿಸುತ್ತಾನೆ.
೧೮ ಚೀಟು ಝಗಳಾಟಗಳನ್ನು ನಿಲ್ಲಿಸುತ್ತದೆ;
ಮತ್ತು ಪರಾಕ್ರಮಿಗಳನ್ನು ಅಗಲಿಸುತ್ತದೆ.
೧೯ ಅನ್ಯಾಯ ಪಟ್ಟ ಸಹೋದರನು ಬಲವಾದ ಪಟ್ಟಣಕ್ಕಿಂತ ಘಟ್ಟಿಯಾಗಿದ್ದಾನೆ;
ಮತ್ತು ಅವರ ಝಗಳಾಟಗಳು ಅರಮನೆಯ ಅಗುಳಿಯ ಹಾಗಿವೆ.
೨೦ ಮನುಷ್ಯನ ಬಾಯ ಫಲದಿಂದ ಅವನ ಹೊಟ್ಟೆ ತೃಪ್ತಿಯಾಗುತ್ತದೆ;
ತನ್ನ ತುಟಿಗಳ ಆದಾಯದಿಂದ ತೃಪ್ತಿ ಪಡುತ್ತಾನೆ.
೨೧ ಮರಣವೂ ಜೀವವೂ ನಾಲಿಗೆಯ ವಶದಲ್ಲಿ ಅವೆ;
ಅದನ್ನು ಪ್ರೀತಿ ಮಾಡುವವನು ಅದರ ಫಲವನ್ನು ತಿನ್ನುವನು.
೨೨ ಹೆಂಡತಿಯನ್ನು ದೊರಕಿಸಿ ಕೊಂಡವನು ಬಳ್ಳೇದನ್ನು ದೊರಕಿಸಿ ಕೊಂಡಿದ್ದಾನೆ;
ಕರ್ತನಿಂದ ಕಟಾಕ್ಷವನ್ನು ಸಂಪಾದಿಸಿದ್ದಾನೆ.
೨೩ ವಿಜ್ಞಾಪನೆಗಳಿಂದ ಬಡವನು ಮಾತಾಡುತ್ತಾನೆ;
ಐಶ್ವರ್ಯವಂತನು ಕಠಿಣವಾದ ಉತ್ತರ ಕೊಡುತ್ತಾನೆ.
೨೪ ಸ್ನೇಹಿತರು ಉಂಟಾದವನು ಸ್ನೇಹವಾಗಿ ನಡೆದು ಕೊಳ್ಳಬೇಕು;
ಮತ್ತು ಸಹೋದರನಿಗಿಂತ ಹೆಚ್ಚಾಗಿ ಅಂಟಿ ಕೊಳ್ಳುವ ಸ್ನೇಹಿತನು ಇದ್ದಾನೆ.

## ೧೯ ಸಂಧಿ.

೧ ಹುಚ್ಚನಾಗಿದ್ದು, ತುಟಿಗಳಿಂದ ಕೊಂಕು ಮಾತಾಡುವವನಿಗಿಂತ,
ತನ್ನ ಸಂಪೂರ್ಣತೆಯಲ್ಲಿ ನಡೆದು ಕೊಳ್ಳುವ ಬಡವನು ವಾಸಿ.
೨ ಪ್ರಾಣವು ತಿಳುವಿಕೆ ಇಲ್ಲದೆ ಇರುವದು ಬಳ್ಳೇದಲ್ಲ;
ಪಾದಗಳಿಂದ ತ್ವರೆ ಪಡುವವನು ಪಾಪಿಯಾಗಿದ್ದಾನೆ.
೩ ಮನುಷ್ಯನ ಮೂಢತ್ವವು ಅವನ ಮಾರ್ಗವನ್ನು ಕೊಂಕುಮಾಡುತ್ತದೆ;
ಮತ್ತು ಕರ್ತನ ಮೇಲೆ ಅವನ ಹೃದಯವು ಗುಣುಗುಟ್ಟುತ್ತದೆ.
೪ ದ್ರವ್ಯವು ಸ್ನೇಹಿತರನ್ನು ಹೆಚ್ಚಿಸುತ್ತದೆ;
ಆದರೆ ದರಿದ್ರನು ತನ್ನ ನೆರೆಯವನಿಗೆ ಅಗಲಿಸಲ್ಪಡುತ್ತಾನೆ.
೫ ಅಬದ್ಧ ಸಾಕ್ಷಿಯವನು ಅಪರಾಧವಿಲ್ಲದೆ ಇರನು;
ಸುಳ್ಳುಗಳನ್ನು ಉಸುರುವವನು ತಪ್ಪಿಸಲ್ಪಡನು.
೬ ಅನೇಕರು ಅಧಿಪತಿಯ ಮುಂದೆ ಹೊಗಳುತ್ತಾರೆ;
ತ್ಯಾಗಿಗೆ ಎಲ್ಲರು ಸ್ನೇಹಿತರಾಗಿದ್ದಾರೆ.
೭ ಬಡವನ ಸಹೋದರರೆಲ್ಲರು ಅವನನ್ನು ಹಗೆ ಮಾಡುತ್ತಾರೆ;
ಎಷ್ಟೋ ಹೆಚ್ಚಾಗಿ ಅವನ ಸ್ನೇಹಿತರು ಅವನಿಗೆ ದೂರವಾಗುತ್ತಾರೆ!
ಅವರನ್ನು ವಾಕ್ಯಗಳಿಂದ ಹಿಂದಟ್ಟಿದರೂ, ಅವರು ಇಲ್ಲ.
೮ ಬುದ್ಧಿವಂತನು ತನ್ನ ಪ್ರಾಣವನ್ನು ಪ್ರೀತಿ ಮಾಡುತ್ತಾನೆ;
ವಿವೇಕವನ್ನು ಕಾಪಾಡುವವನು ಬಳ್ಳೇದನ್ನು ದೊರಕಿಸಿ ಕೊಳ್ಳುತ್ತಾನೆ.
೯ ಅಬದ್ಧ ಸಾಕ್ಷಿಯವನು ಅಪರಾಧವಿಲ್ಲದೆ ಇರನು;
ಸುಳ್ಳುಗಳನ್ನು ಉಸುರುವವನು ನಾಶವಾಗುವನು.
೧೦ ಪೈಭವವು ಹುಚ್ಚನಿಗೆ ಯೋಗ್ಯವಲ್ಲ;
ಪ್ರಧಾನರನ್ನು ಆಳುವದು ದಾಸನಿಗೆ ಅದಕ್ಕಿಂತ ಕಡೆ.
೧೧ ಮನುಷ್ಯನ ಬುದ್ಧಿಯು ಅವನಿಗೆ ಮನೋಶಾಂತಿಯನ್ನು ಉಂಟುಮಾಡುತ್ತದೆ;
ದ್ರೋಹವನ್ನು ಕ್ಷಮಿಸುವದು ಅವನ ಮಹಿಮೆಯಾಗಿದೆ.
೧೨ ಅರಸನ ಕೋಪವು ಪ್ರಾಯ ಸಿಂಹದ ಗರ್ಜನೆಯ ಹಾಗಿದೆ;
ಅವನ ಕಟಾಕ್ಷವು ಪಲ್ಯದ ಮೇಲೆ ಬೀಳುವ ಮಂಜಿನ ಹಾಗಿದೆ.
೧೩ ಹುಚ್ಚ ಮಗನು ತಂದೆಗೆ ನಷ್ಟವಾಗಿದ್ದಾನೆ;
ಹೆಂಡತಿಯ ಝಗಳಾಟಗಳು ನಿತ್ಯವಾದ ಸೋರಿಕೆಯಾಗಿವೆ.
೧೪ ಮನೆಯೂ ದ್ರವ್ಯವೂ ತಂದೆಗಳ ಬಾಧ್ಯತೆಯಾಗಿವೆ;
ಆದರೆ ಬುದ್ಧಿಯುಳ್ಳ ಹೆಂಡತಿಯು ಕರ್ತನಿಂದಲೇ.
೧೫ ಮೈಗಳ್ಳನ ತನ್ನು ಗಾಢ ನಿದ್ರೆಯಲ್ಲಿ ಬೀಳ ಮಾಡುತ್ತದೆ;
ಜಾಡ್ಯವಾದ ಪ್ರಾಣವು ಹಸಿದಿರುವದು.
೧೬ ಆಜ್ಞೆ ಕಾಪಾಡುವವನು ತನ್ನ ಪ್ರಾಣವನ್ನು ಕಾಪಾಡುತ್ತಾನೆ;
ಆದರೆ ತನ್ನ ಮಾರ್ಗಗಳನ್ನು ಅಲಕ್ಷ್ಯ ಮಾಡುವವನು ಸಾಯುವನು.
೧೭ ದರಿದ್ರನಿಗೆ ದಯೆ ಮಾಡುವವನು ಕರ್ತನಿಗೆ ಸಾಲ ಕೊಡುತ್ತಾನೆ;
ಅವನು ಮಾಡಿದ ಉಪಕಾರವನ್ನು ಅವನಿಗೆ ತಿರಿಗಿ ಸಲ್ಲಿಸುವನು.
೧೮ ನಿರೀಕ್ಷೆ ಇರುವ ಪರ್ಯಂತರ ನಿನ್ನ ಮಗನನ್ನು ಶಿಕ್ಷಿಸು;
ಆದರೆ ಅವನನ್ನು ಕೊಲ್ಲುವ ಹಾಗೆ ನಿನ್ನ ಮನಸ್ಸು ಎಬ್ಬಿಸ ಬೇಡ.
೧೯ ದೊಡ್ಡ ಉರಿಯುಳ್ಳವನು ದಂಡನೆ ಪಡುತ್ತಾನೆ;
ಯಾಕಂದರೆ ನೀನು ಅವನನ್ನು ಬಿಡಿಸಿದರೂ, ಇನ್ನು ಹಾಗೆ ಮಾಡ ಬೇಕು.
೨೦ ನಿನ್ನ ಅಂತ್ಯದಲ್ಲಿ ಜ್ಞಾನಿಯಾಗುವ ಹಾಗೆ,
ಆಲೋಚನೆಯನ್ನು ಕೇಳಿ, ಶಿಕ್ಷೆಯನ್ನು ಅಂಗೀಕರಿಸು.
೨೧ ಮನುಷ್ಯನ ಹೃದಯದಲ್ಲಿ ಅನೇಕ ಯೋಚನೆಗಳು ಅವೆ;
ಆದರೆ ಕರ್ತನ ಆಲೋಚನೆಯೇ ನಿಲ್ಲುವದು.
೨೨ ಮನುಷ್ಯನ ಆಶೆಯು ಅವನ ಕೃಪೆಯಾಗಿದೆ;
ಆದರೆ ಸುಳ್ಳುಗಾರನಿಗಿಂತ ಬಡವನೇ ವಾಸಿ.
೨೩ ಕರ್ತನ ಭಯವು ಜೀವಕ್ಕಾಗಿದೆ;
ಅದರಲ್ಲಿ ತೃಪ್ತಿಯಾಗುವವನು ಕೇಡಿಗೆ ಶಿಕ್ಕದೆ, ವಾಸ ಮಾಡುವನು.
೨೪ ಮೈಗಳ್ಳನು ತನ್ನ ಕೈಯನ್ನು ಪಾತ್ರೆಯಲ್ಲಿ ಮುಣುಗಿಸುತ್ತಾನೆ;
ಅದನ್ನು ತನ್ನ ಬಾಯಿಗಾದರೂ ತಿರುಗಿಸುವದಿಲ್ಲ.
೨೫ ಕುಚೋದ್ಯಗಾರನನ್ನು ಹೊಡೆ, ಆಗ ಯುಕ್ತಿಹೀನನು ಜಾತುರ್ಯವುಳ್ಳವನಾಗುವನು;
ಮತ್ತು ಗ್ರಹಿಕೆಯುಳ್ಳವನನ್ನು ಗದರಿಸು, ಆಗ ತಿಳುವಿಕೆಯನ್ನು ಗ್ರಹಿಸುವನು.
೨೬ ತಂದೆಯನ್ನು ಸೂರೆ ಮಾಡಿ, ತಾಯನ್ನು ಓಡಿಸುವವನು;
ಲಜ್ಜೆಯನೂಳಿ, ನಾಚಿಕೆಯನೂಳಿ, ಹುಟ್ಟಿಸುವ ಮಗನಾಗಿದ್ದಾನೆ.
೨೭ ನನ್ನ ಮಗನೇ, ತಿಳುವಿಕೆಯ ಮಾತುಗಳಿಗೆ ತೊಲಗಿಸುವ ಶಿಕ್ಷೆ ಕೇಳುವದನ್ನು ಬಿಡು.

೨೮ ಭ್ರಷ್ಟನಾದ ಸಾಕ್ಷಿಯವನು ನ್ಯಾಯಕ್ಕೆ ಹಾಸ್ಯ ಮಾಡುತ್ತಾನೆ;
ಮತ್ತು ದುಷ್ಟರ ಬಾಯಿ ಪಾತಕವನ್ನು ನುಂಗಿ ಬಿಡುತ್ತದೆ.
೨೯ ಕುಚೋದ್ಯಗಾರರಿಗೋಸ್ಕರ ನ್ಯಾಯ ತೀರ್ಪುಗಳೂ,
ಹುಚ್ಚರ ಬೆನ್ನಿಗೆ ಬೆಟ್ಟುಗಳೂ, ಸಿದ್ಧವಾಗಿವೆ.

## ೨೦ ಸಂಧಿ.

೧ ದ್ರಾಕ್ಷೇ ರಸವು ಕುಚೋದ್ಯಗಾರ, ಸಾರಾಯಿ ಗುಲ್ಲುಗಾರ;
ಅವುಗಳಿಂದ ಮೋಸ ಹೋಗುವ ಯಾವನಾದರೂ ಜ್ಞಾನಿಯಾಗುವದಿಲ್ಲ.
೨ ಅರಸನ ಬೆದರಿಕೆಯು ಪ್ರಾಯ ಸಿಂಹದ ಗರ್ಜನೆಯ ಹಾಗಿದೆ;
ಅವನಿಗೆ ಕಿಟ್ಟು ಎಬ್ಬಿಸುವವನು ತನ್ನ ಪ್ರಾಣಕ್ಕೆ ಪಾಪ ಮಾಡುತ್ತಾನೆ.
೩ ಝಗಳ ಬಿಡುವದು ಮನುಷ್ಯನಿಗೆ ಘನವಾಗಿದೆ;
ಆದರೆ ಮೂಢಕೆಲ್ಲರು ಅದರಲ್ಲಿ ಕೈ ಹಚ್ಚುವರು.
೪ ಮೈಗಳ್ಳನು ಘಳಿಗೋಸ್ಕರ ಉಳುವದಿಲ್ಲ;
ಸುಗ್ಗಿ ಕಾಲದಲ್ಲಿ ಬೇಡುವನು; ಆದರೆ ಏನೂ ಕಿಕ್ಕುವದಿಲ್ಲ.
೫ ಆಲೋಚನೆಯು ಮನುಷ್ಯನ ಹೃದಯದಲ್ಲಿ ಆಳವಾದ ನೀರಾಗಿದೆ;
ಆದರೆ ವಿವೇಕವುಳ್ಳವನು ಅದನ್ನು ಸೇದುವನು.
೬ ಬಹು ಜನರು ತಮ್ಮ ತಮ್ಮ ಕೃಪೆಯನ್ನು ಸಾರುವರು;
ಆದರೆ ನಂಬಿಕೆಯುಳ್ಳ ಮನುಷ್ಯನನ್ನು ದೊರಕಿಸಿ ಕೊಳ್ಳುವವ ನ್ಯಾರು?
೭ ನೀತಿವಂತನು ತನ್ನ ಸಂಪೂರ್ಣತೆಯಲ್ಲಿ ನಡೆದು ಕೊಳ್ಳುತ್ತಾನೆ;
ಅವನ ತರುವಾಯ ಅವನ ಮಕ್ಕಳು ಭಾಗ್ಯವಂತರಾಗುವರು.
೮ ನ್ಯಾಯಾಸನದ ಮೇಲೆ ಕೂತಿರುವ ಅರಸನು
ತನ್ನ ಕಣ್ಣುಗಳಿಂದ ಎಲ್ಲಾ ಕೆಟ್ಟತನವನ್ನು ಚದರಿಸುತ್ತಾನೆ.
೯ ನನ್ನ ಹೃದಯವನ್ನು ನಿರ್ಮಲ ಮಾಡಿದ್ದೇನೆ,
ನನ್ನ ಪಾಪದಿಂದ ಶುದ್ಧನಾಗಿದ್ದೇನೆ, ಎಂದು ಯಾರು ಹೇಳುವರು?
೧೦ ಬೇರೆ ಬೇರೆ ತೂಕದ ಕಲ್ಲುಗಳೂ, ಬೇರೆ ಬೇರೆ ಶೇರುಗಳೂ,
ಈ ಎರಡು ಕರ್ತನಿಗೆ ಅಸಹ್ಯವಾಗಿವೆ.
೧೧ ಹುಡುಗನು, ಅವನ ಕ್ರಿಯೆಯು ಶುದ್ಧವೋ? ನೆಟ್ಟಗೆಯೋ? ಎಂದು,
ಅವನ ಕೆಲಸಗಳಿಂದಲೇ ಪ್ರತ್ಯಕ್ಷವಾಗುತ್ತಾನೆ.
೧೨ ಕೇಳುವ ಕಿವಿಯನ್ನೂ, ನೋಡುವ ಕಣ್ಣನ್ನೂ,
ಈ ಎರಡು ಕರ್ತನು ಮಾಡಿದ್ದಾನೆ.
೧೩ ಬಡವನಾಗದ ಹಾಗೆ, ನಿದ್ದೆಯನ್ನು ಪ್ರೀತಿ ಮಾಡ ಬೇಡ;
ನಿನ್ನ ಕಣ್ಣುಗಳನ್ನು ತೆಗೆ, ಕೊಟ್ಟಿಯಿಂದ ತೃಪ್ತಿಯಾಗು.
೧೪ ಕೊಳ್ಳುವವನು ಕೆಟ್ಟದ್ದು, ಕೆಟ್ಟದ್ದು, ಅನ್ನುತ್ತಾನೆ;
ಬಿಟ್ಟು ಹೋದ ಮೇಲೆ ಹೊಗಳಿ ಕೊಳ್ಳುತ್ತಾನೆ.
೧೫ ಚಿನ್ನವೂ ಬಹಳ ಮುತ್ತುಗಳೂ ಉಂಟು;
ಆದರೆ ತಿಳುವಿಕೆಯುಳ್ಳ ತುಟಿಗಳು ಬೆಲೆಯುಳ್ಳ ಆಭರಣವಾಗಿವೆ;
೧೬ ಪರನಿಗೋಸ್ಕರ ಹೊಣೆಯಾದವನ ವಸ್ತ್ರ ತಕ್ಕೋ;
ಅನ್ಯಳಿಗೋಸ್ಕರ ಅವನಿಂದ ಬತ್ತೆ ತೆಗೆ.
೧೭ ಕೋಸದ ಕೊಟ್ಟಿ ಮನುಷ್ಯನಿಗೆ ಕುಚಿಯಾಗಿದೆ;
ಆದರೆ ತರುವಾಯ ಅವನ ಬಾಯಿ ಹರಳುಗಳಿಂದ ತುಂಬುವದು.
೧೮ ಯೋಚನೆಗಳು ಆಲೋಚನೆಯಿಂದ ಸ್ಥಿರವಾಗುತ್ತವೆ;
ಮತ್ತು ಉಪಾಯಗಳಿಂದ ಯುದ್ಧ ಮಾಡು.
೧೯ ತಿರುಗುವ ಚಾಡಿಗಾರನು ಗುಟ್ಟು ಪ್ರಕಟಿ ಮಾಡುತ್ತಾನೆ,
ತುಟಿಗಳಿಂದ ಮರುಳುಗೊಳಿಸುವವನ ಗೊಡವೆಗೆ ಹೋಗ ಬೇಡ.
೨೦ ತನ್ನ ತಂದೆ ತಾಯಿಗಳನ್ನು ಶಪಿಸುವವನ
ದೀಪವು ಕಾರ್ಗತ್ತಲಲ್ಲಿ ಆರಿ ಹೋಗುವದು.
೨೧ ಆರಂಭದಲ್ಲಿ ಬಹು ತೀವ್ರವಾಗಿ ಮಾಡಿ ಕೊಂಡ ಬಾಧ್ಯತೆಯು
ಕಡೆಯಲ್ಲಿ ಆಶೀರ್ವಾದ ಹೊಂದದು.
೨೨ ಕೇಡಿಗೆ ಕೇಡು ಮಾಡುವೆನೆಂದು ಹೇಳ ಬೇಡ;
ಕರ್ತನನ್ನು ನಿರೀಕ್ಷಿಸು; ಅವನೇ ನಿನ್ನನ್ನು ರಕ್ಷಿಸುವನು.
೨೩ ಬೇರೆ ಬೇರೆ ತೂಕದ ಕಲ್ಲುಗಳು ಕರ್ತನಿಗೆ ಅಸಹ್ಯವಾಗಿವೆ;
ಕಳ್ಳ ತಕ್ಕಡಿ ಬಳ್ಳೇದಲ್ಲ.
೨೪ ಪುರುಷನ ನಡೆಗಳು ಕರ್ತನಿಂದ ಅವೆ;
ಮನುಷ್ಯನು ತನ್ನ ಮಾರ್ಗವನ್ನು ತಿಳುಕೊಳ್ಳುವದು ಹ್ಯಾಗೆ!
೨೫ ಸುಮ್ಮನೇ ಪರಿಶುದ್ಧ ಮಾತು ಅಡಿ,
ಹರಕೆ ಮಾಡಿದ ಮೇಲೆ ವಿಚಾರಿಸುವದು ಮನುಷ್ಯನಿಗೆ ಉರ್ಕಾಗಿದೆ.
೨೬ ಜ್ಞಾನಿಯಾದ ಅರಸನು ದುಷ್ಟರನ್ನು ಚದರಿಸಿ,
ಅವರ ಮೇಲೆ ಚಕ್ರವನ್ನು ಎಳೆಯುತ್ತಾನೆ.
೨೭ ಮನುಷ್ಯನ ಶ್ವಾಸವು ಕರ್ತನ ದೀಪವಾಗಿದೆ;
ಅದು ಹೊಟ್ಟೆಯ ಕೊಠಡಿಗಳನ್ನೆಲ್ಲಾ ಪರಿಶೋಧಿಸುತ್ತದೆ.
೨೮ ಕೃಪೆಯೂ ಸತ್ಯವೂ ಅರಸನನ್ನು ಕಾಯುತ್ತವೆ;
ಅವನು ಕೃಪೆಯಿಂದ ತನ್ನ ಸಿಂಹಾಸನಕ್ಕೆ ಆಧಾರ ಕೊಡುತ್ತಾನೆ.
೨೯ ಪ್ರಾಯಸ್ಥರಿಗೆ ಅವರ ಶಕ್ತಿ ಮಹಿಮೆಯಾಗಿದೆ;
ಮುದುಕರಿಗೆ ನರೆ ಕೂದಲು ಪ್ರಭೆಯಾಗಿದೆ.
೩೦ ಘಾಯವಾದ ಬಾಚಲುಗಳೂ,
ಹೊಟ್ಟೆಯ ಕೊಠಡಿಗಳಲ್ಲಿ ಶೇರುವ ದೆಬ್ಬೆಗಳೂ, ಕೆಟ್ಟತನದಿಂದ ಶುದ್ಧ ಮಾಡುತ್ತವೆ.

## ೨೧ ಸಂಧಿ.

೧ ಅರಸನ ಹೃದಯವು ಕರ್ತನ ಕೈಯಲ್ಲಿ ನೀರಿನ ಕಾಲಿವೆಗಳ ಹಾಗೆ;
ಇಷ್ಟೆಗುವಲ್ಲಿಗೆ ಅದನ್ನು ತಿರುಗಿಸುತ್ತಾನೆ.
೨ ಮನುಷ್ಯನ ಮಾರ್ಗಗಳೆಲ್ಲಾ ಅವನ ಕಣ್ಣುಗಳ ಮುಂದೆ ನೆಟ್ಟಗಾಗಿವೆ;
ಆದರೆ ಹೃದಯಗಳನ್ನು ತೂಗಿ ನೋಡುವವನು ಕರ್ತನೇ.
೩ ನೀತಿಯನ್ನೂ, ನ್ಯಾಯವನ್ನೂ, ನಡಿಸುವದು
ಕರ್ತನಿಗೆ ಬಲಿಗಿಂತ ಹಿತವಾಗಿದೆ.
೪ ಉನ್ನತವಾದ ಕಣ್ಣುಗಳೂ, ಉಬ್ಬಿದ ಹೃದಯವೂ,
ದುಷ್ಟರ ದೀಪವು ಪಾಪವಾಗಿವೆ.
೫ ಜಾಗ್ರತೆಯುಳ್ಳವನ ಯೋಚನೆಗಳು ಪರಿಪೂರ್ಣತೆಗೆ ಕಾರಣವಾಗಿವೆ;
ತ್ವರೆಗೆ ಪಡುವವರೆಲ್ಲರು ಕೊರತೆಗೆ ಮಾತ್ರ ಬರುವರು.
೬ ಸುಳ್ಳಾಡುವ ನಾಲಿಗೆಯಿಂದಾದ ದ್ರವ್ಯಗಳ ಸಂಪತ್ತು
ಮರಣವನ್ನು ಹುಡುಕುವವರಿಗೆ ಹಾರಿ ಹೋಗುವ ಮಾಯವಾಗಿದೆ.



೭ ದುಷ್ಟರ ಸೂರೆ ಅವರನ್ನು ಕೈಯುವದು;
ಯಾಕಂದರೆ ನ್ಯಾಯವನ್ನು ನಡಿಸುವದಕ್ಕೆ ಬಲ್ಲದೆ ಇದ್ದಾರೆ.
೮ ತಪ್ಪಿ ಹೋಗುವ ಮನುಷ್ಯನ ಮಾರ್ಗವು ಡೊಂಕೇ ಡೊಂಕಾಗಿದೆ;
ಆದರೆ ಶುದ್ಧನ ಕ್ರಿಯೆಯು ನೆಟ್ಟಗಾಗಿದೆ.
೯ ವಿಸ್ತಾರವಾದ ಮನೆಯಲ್ಲಿ ಝಗಳಾಡುವ ಸ್ತ್ರೀಯ ಸಂಗಡ ಇರುವದಕ್ಕಿಂತ,
ಉಪ್ಪರಿಗೆಯ ಮೂಲೆಯಲ್ಲಿ ವಾಸಿಸುವದು ಬಳ್ಳೇದು.
೧೦ ದುಷ್ಟನ ಪ್ರಾಣವು ಕೆಟ್ಟದ್ದನ್ನು ಅಪೇಕ್ಷಿಸುತ್ತದೆ;
ಅವನ ಕಣ್ಣುಗಳಲ್ಲಿ ಸ್ನೇಹಿತನಿಗಾದರೂ ಕರುಣೆ ಕಿಕ್ಕುವದಿಲ್ಲ.
೧೧ ಕುಚೋದ್ಯಗಾರನನ್ನು ದಂಡಿಸಿದರೆ, ಯುಕ್ತಿಹೀನನು ಜ್ಞಾನಿಯಾಗುವನು;
ಜ್ಞಾನಿಗೆ ಬುದ್ಧಿ ಹೇಳಿದರೆ, ಅವನು ತಿಳುವಿಕೆಯನ್ನು ಹೊಂದುವನು.
೧೨ ನೀತಿವಂತನು ದುಷ್ಟನ ಮನೆಯನ್ನು ಬುದ್ಧಿಯಿಂದ ಆಲೋಚಿಸುತ್ತಾನೆ;
ದುಷ್ಟರು ಕೆಟ್ಟತನಕ್ಕೆ ತಿರುಗುತ್ತಾರೆ.
೧೩ ದರಿದ್ರನ ಮೋರೆಗೆ ಕಿವಿ ಮುಚ್ಚುವವನು
ತಾನು ಕರೆಯುವಾಗ ಉತ್ತರ ಹೊಂದನು.
೧೪ ಮರೆಯಾದ ಕಾಣಿಕೆಯು ಕೋಪವನ್ನು ತಗ್ಗಿಸುತ್ತದೆ;
ಉಡಿಲಲ್ಲಿ ಇಟ್ಟ ಲಂಚವು ಬಲವಾದ ಉರಿಯನ್ನು ಅಣಗಿಸುತ್ತದೆ.
೧೫ ನ್ಯಾಯ ನಡಿಸುವದು ನೀತಿವಂತನಿಗೆ ಸಂತೋಷವಾಗಿದೆ;
ಆದರೆ ಪಾತಕ ಮಾಡುವವರು ಹಾಳಾಗುವರು.
೧೬ ಮನುಷ್ಯನು ಬುದ್ಧಿ ಮಾರ್ಗದಿಂದ ತಪ್ಪಿ ಹೋದರೆ,
ಪ್ರೇತಗಳ ಕೂಟದಲ್ಲಿ ವಾಸಿಸುವನು.
೧೭ ಸಂತೋಷವನ್ನು ಪ್ರೀತಿ ಮಾಡುವವನು ಕೊರತೆಗಾರನಾಗುತ್ತಾನೆ;
ದ್ರಾಕ್ಷೇ ರಸವನ್ನೂ, ಎಣ್ಣೆಯನ್ನೂ, ಪ್ರೀತಿ ಮಾಡುವವನು
ಐಶ್ವರ್ಯವಂತನಾಗನು,
೧೮ ದುಷ್ಟನು ನೀತಿವಂತನಿಗೋಸ್ಕರವೂ,
ವಂಚಕನು ನೆಟ್ಟನೆಯವರಿಗೆ ಬದಲಾಗಿಯೂ, ವಿಮೋಚನೆಯ ಹಣವಾಗಿದ್ದಾರೆ.
೧೯ ಝಗಳಾಡುವ ಕರಕರೆಯುಳ್ಳ ಹೆಂಡತಿಯ ಸಂಗಡ ಇರುವದಕ್ಕಿಂತ,
ಅರಣ್ಯದಲ್ಲಿ ವಾಸಿಸುವದು ಬಳ್ಳೇದು.
೨೦ ಇಷ್ಟ ದ್ರವ್ಯವೂ, ಎಣ್ಣೆಯೂ, ಜ್ಞಾನಿಯ ನಿವಾಸದಲ್ಲಿ ಅವೆ;
ಆದರೆ ಹುಚ್ಚ ಮನುಷ್ಯನು ಅದನ್ನು ನುಂಗಿ ಬಿಡುತ್ತಾನೆ.
೨೧ ನೀತಿಯನ್ನೂ, ಕೃಪೆಯನ್ನೂ, ಹಿಂದಟ್ಟುವವನು
ಜೀವವನ್ನೂ, ನೀತಿಯನ್ನೂ, ಘನವನ್ನೂ, ದೊರಕಿಸಿ ಕೊಳ್ಳುವನು.
೨೨ ಜ್ಞಾನಿಯು ಪರಾಕ್ರಮಶಾಲಿಗಳ ಪಟ್ಟಣಕ್ಕೆ ಏರಿ,
ಅವರು ಭರವಸವಿಟ್ಟ ಬಲವನ್ನು ಇಳಿಯ ಮಾಡುತ್ತಾನೆ.
೨೩ ತನ್ನ ಬಾಯನ್ನೂ, ನಾಲಿಗೆಯನ್ನೂ, ಕಾಪಾಡುವವನು
ತನ್ನ ಪ್ರಾಣವನ್ನು ಇಕ್ಕಟ್ಟುಗಳಲ್ಲಿದೆ ಕಾಪಾಡುತ್ತಾನೆ.
೨೪ ಅಹಂಕಾರಿಯಾದ ಗರ್ವಿಷ್ಟನ ಹೆಸರು ಕುಚೋದ್ಯಗಾರನೆಂಬುವದೇ;
ಅವನು ಅಹಂಕಾರದ ಉಗ್ರದಿಂದ ನಡೆಯುತ್ತಾನೆ.
೨೫ ಮೈಗಳ್ಳನ ಆಸೆಯು ಅವನನ್ನು ಕೊಲ್ಲುತ್ತದೆ;
ಯಾಕಂದರೆ ಅವನ ಕೈಗಳು ಕೆಲಸ ಮಾಡಕೊಳ್ಳವು.
೨೬ ದಿನವೆಲ್ಲಾ ಆಶೇ ಆಶಿಸುತ್ತಾನೆ;
ಆದರೆ ನೀತಿವಂತನು ಹಿಂದೆಗೆಯದೆ, ಕೊಡುತ್ತಾನೆ.
೨೭ ದುಷ್ಟರ ಬಲಿ ಅಸಹ್ಯವಾಗಿದೆ;
ಅದನ್ನು ದುರ್ಮನಸ್ಸಿನಿಂದ ತಂದರೆ, ಎಷ್ಟೋ ಹೆಚ್ಚಾಗಿ!
೨೮ ಸುಳ್ಳು ಸಾಕ್ಷಿಯವನು ನಾಶವಾಗುವನು;
ಆದರೆ ಕೇಳುವ ಮನುಷ್ಯನು ಸದಾಕಾಲಕ್ಕೆ ಮಾತಾಡ ತಕ್ಕವನು.
೨೯ ದುಷ್ಟ ಮನುಷ್ಯನು ತನ್ನ ಮುಖವನ್ನು ದೃಢ ಮಾಡುತ್ತಾನೆ;
ಆದರೆ ನೆಟ್ಟನೆಯವನು ತನ್ನ ಮಾರ್ಗವನ್ನು ಸ್ಥಿರ ಪಡಿಸುತ್ತಾನೆ.
೩೦ ಕರ್ತನಿಗೆ ವಿರೋಧವಾಗಿ ಜ್ಞಾನವೂ, ಇಲ್ಲ, ವಿವೇಕವೂ ಇಲ್ಲ,
ಆಲೋಚನೆಯೂ ಇಲ್ಲ.
೩೧ ಕುದುರೆಯು ಯುದ್ಧ ದಿವಸಕ್ಕೆ ಸಿದ್ಧವಾಗಿದೆ;
ಆದರೆ ರಕ್ಷಣೆಯು ಕರ್ತನದು.

## ೨೨ ಸಂಧಿ.

೧ ಕೀರ್ತಿಯು ಬಹಳ ಐಶ್ವರ್ಯಕ್ಕಿಂತ ಹಿತವಾಗಿದೆ;
ದಯವು ಬೆಳ್ಳಿ ಭಂಗಾರಕ್ಕಿಂತ ಬಳ್ಳೇದಾಗಿದೆ.
೨ ಐಶ್ವರ್ಯವಂತನೂ ಬಡವನೂ ಸಂಧಿಸಿ ಕೊಳ್ಳುತ್ತಾರೆ;
ಅವಕೆಲ್ಲರನ್ನು ನಿರ್ಮಿಸಿದವನು ಕರ್ತನೇ.
೩ ಚಾತುರ್ಯವುಳ್ಳವನು ಕೇಡನ್ನು ನೋಡಿ, ಅಡಗಿ ಕೊಳ್ಳುತ್ತಾನೆ;
ಆದರೆ ಯುಕ್ತಿಹೀನರು ಹಾದು ಹೋಗಿ, ದಂಡಿಸಲ್ಪಡುತ್ತಾರೆ.
೪ ಐಶ್ವರ್ಯವೂ, ಘನವೂ, ಜೀವವೂ ದೀನತೆಗೂ, ಕರ್ತನ ಭಯಕ್ಕೂ, ಫಲವಾಗಿವೆ.
೫ ಮುಳ್ಳುಗಳೂ ಉರ್ಲುಗಳೂ ಡೊಂಕನ ಮಾರ್ಗದಲ್ಲಿ ಅವೆ;
ಆದರೆ ತನ್ನ ಪ್ರಾಣವನ್ನು ಕಾಪಾಡುವವನು ಅವುಗಳಿಗೆ ದೂರವಾಗಿರುವನು.
೬ ಹುಡುಗನನ್ನು, ಅವನ ಮಾರ್ಗದ ರೀತಿಯಾಗಿ, ಸಾಧಿಸು;
ಅವನು ಮುದುಕನಾಗುವಾಗ, ಅದರಿಂದ ತೊಲಗನು.
೭ ಐಶ್ವರ್ಯವಂತನು ಬಡವನನ್ನು ಆಳುತ್ತಾನೆ;
ಸಾಲ ತೆಗೆದು ಕೊಳ್ಳುವವನು ಸಾಲಕೊಟ್ಟವನಿಗೆ ದಾಸನಾಗಿದ್ದಾನೆ.
೮ ಅನ್ಯಾಯವನ್ನು ಬಿತ್ತುವವನು ಪಾತಕವನ್ನು ಕೊಯ್ಯುವನು;
ಅವನ ಉಗ್ರದ ಕೋಲು ಮುಗಿದು ಹೋಗುವದು.
೯ ಬಳ್ಳೇ ದೃಷ್ಟಿಯುಳ್ಳವನು ಆಶೀರ್ವದಿಸಲ್ಪಡುವನು;
ಯಾಕಂದರೆ ತನ್ನ ಕೊಟ್ಟಿ ದರಿದ್ರನಿಗೆ ಕೊಡುತ್ತಾನೆ.
೧೦ ಕುಚೋದ್ಯಗಾರನನ್ನು ಹೊರಡಿಸು, ಆಗ ಝಗಳಾಟವು ಹೊರಟು ಹೋಗುವದು;
ವ್ಯಾಜ್ಯವೂ, ಮಾನ ಭಂಗವೂ ನಿಂತು ಹೋಗುವವು.
೧೧ ಹೃದಯದ ಶುದ್ಧತ್ವವನ್ನು ಪ್ರೀತಿ ಮಾಡುವ,
ಇಂಪಾದ ತುಟಿಗಳುಳ್ಳವನಿಗೆ ಅರಸು ಸ್ನೇಹಿತನಾಗಿರುವನು.
೧೨ ಕರ್ತನ ಕಣ್ಣುಗಳು ತಿಳುವಿಕೆಯನ್ನು ಕಾಯುತ್ತವೆ;
ಆದರೆ ವಂಚಕನ ಮಾತುಗಳನ್ನು ದೊಂಕು ಮಾಡುತ್ತಾನೆ.
೧೩ ಹೊರಗೆ ಸಿಂಹವದೆ, ಬೀದಿಗಳ ಮಧ್ಯದಲ್ಲಿ ನಾನು ಕೊಂದು ಹಾಕಲ್ಪಡುವೆನೆಂದು, ಮೈಗಳ್ಳನು ಹೇಳುತ್ತಾನೆ.
೧೪ ಪರಸ್ತ್ರೀಯರ ಬಾಯಿ ಆಳವಾದ ಕೂಪಿಯಾಗಿದೆ;
ಕರ್ತನು ಕೋಪಿಸಿದವನು ಅದರಲ್ಲಿ ಬೀಳುವನು.

೧೫ ಹುಡುಗನ ಹೃದಯದಲ್ಲಿ ಮೂಢತ್ವವು ಕಟ್ಟಿ ಅದೆ;
ಆದರೆ ಶಿಕ್ಷೆಯ ಬೆತ್ತವು ಅದನ್ನು ಅವನಿಗೆ ದೂರ ಮಾಡುವದು.
೧೯ ತನಗೆ ಹೆಚ್ಚು ಮಾಡಿ ಕೊಳ್ಳುವ ಹಾಗೆ ದರಿದ್ರನನ್ನು ಬಲಾತ್ಕಾರ ಮಾಡುವವನು, ಐಶ್ವರ್ಯವಂತನಿಗೆ ಕೊಡುವವನು ಕೊರತೆ ಪಡುವದು, ನಿಜವೇ.

## ಮೂರನೇ ಭಾಗ.

೧೭ ನಿನ್ನ ಕಿವಿಯನ್ನು ಬೊಗ್ಗಿಸಿ, ಜ್ಞಾನಿಗಳ ಮಾತುಗಳನ್ನು ಕೇಳು;
ನನ್ನ ಶಿಳ್ಳುವಿಕೆಗೆ ನಿನ್ನ ಮನಸ್ಸಿಡು.
೧೮ ಯಾಕಂದರೆ ಅವುಗಳನ್ನು ನಿನ್ನ ಹೊಟ್ಟೆಯಲ್ಲಿ ಕಾಪಾಡಿ ಕೊಂಡರೆ, ರಮ್ಯವಾಗಿವೆ;
ಅವು ನಿನ್ನ ತುಟಿಗಳ ಮೇಲೆ ಏಕವಾಗಿ ಸ್ಥಿರವಾಗಿರುವವು.
೧೯ ಕರ್ತನಲ್ಲಿ ನಿನ್ನ ಭರವಸವಿರುವ ಹಾಗೆ,
ನಿನಗೆ, ಹೌದು ನಿನಗೆ, ಈ ಹೊತ್ತು ತಿಳಿಯ ಮಾಡಿದ್ದೇನೆ.
೨೦ ನಿನ್ನನ್ನು ಕಳುಹಿಸುವವರಿಗೆ ಪ್ರತ್ಯುತ್ತರವಾಗಿ ಸತ್ಯದ ಮಾತುಗಳನ್ನು ಹೇಳುವ ಹಾಗೆ,
ನಿನಗೆ ಸತ್ಯದ ಮಾತುಗಳ ನಿಶ್ಚಯವನ್ನು ತಿಳಿಸುವದಕ್ಕೆ,
೨೧ ನಾನು ಆಲೋಚನೆಗಳಿಂದಲೂ, ತಿಳುವಿಕೆಯಿಂದಲೂ, ಉತ್ತಮವಾದವುಗಳನ್ನು ನಿನಗೆ ಬರೆಯಲಿಲ್ಲವೋ!
೨೨ ದರಿದ್ರನನ್ನು ಸುಲುಕೊಳ್ಳ ಬೇಡ; ಯಾಕಂದರೆ ಅವನು ದರಿದ್ರನಾಗಿದ್ದಾನೆ.
ದೀನನನ್ನು ಬಾಗಲಲ್ಲಿ ತುಳಿದು ಬಿಡ ಬೇಡ.
೨೩ ಯಾಕಂದರೆ ಕರ್ತನು ಅವರ ವ್ಯಾಜ್ಯವಾದಿ,
ಅವರನ್ನು ಸುಲು ಕೊಳ್ಳುವವರ ಪ್ರಾಣವನ್ನು ಸುಲುಕೊಳ್ಳುವನು.
೨೪ ನೀನು ಅವನ ಹಾದಿಗಳನ್ನು ಕಲಿತು, ನಿನ್ನ ಪ್ರಾಣಕ್ಕೆ ಉರ್ಲುತಕ್ಕೊಳ್ಳದ ಹಾಗೆ,
೨೫ ಕೊಪಿಷ್ಟನ ಸಂಗಡ ಸ್ನೇಹ ಮಾಡ ಬೇಡ;
ಉರಿಗೊಳ್ಳುವವನ ಹತ್ರ ಬರ ಬೇಡ.
೨೬ ಕೈ ಕೊಡುವವರಲ್ಲಿಯೂ, ಸಾಲಗಳಿಗೆ ಹೊಣೆಯಾಗುವವರಲ್ಲಿಯೂ ಇರ ಬೇಡ.
೨೭ ಸಲ್ಲಿಸುವದಕ್ಕೆ ನಿನಗೆ ಏನೂ ಇಲ್ಲದಿರಲಾಗಿ,
ನಿನ್ನ ಕೆಳಗಿನಿಂದ ನಿನ್ನ ಹಾಸಿಗೆಯನ್ನು ಅವನು ತಕ್ಕೊಳ್ಳುವದು ಯಾಕೆ?
೨೮ ನಿನ್ನ ತಂದೆಗಳು ಇಟ್ಟ ಪೂರ್ವದ ಮೇರೆಯನ್ನು ಬತ್ತ ಬೇಡ.
೨೯ ತನ್ನ ಕೆಲಸದಲ್ಲಿ ಜಾಗ್ರತೆಯುಳ್ಳ ಮನುಷ್ಯನನ್ನು ನೋಡಿದಿಯೋ?
ಅವನು ಕನಿಷ್ಠರ ಮುಂದೆ ಅಲ್ಲ, ಅರಸರ ಮುಂದೆ ನಿಲ್ಲುವನು.

## ೨೩ ಸಂಧಿ.

೧ ಆಳುವವನ ಸಂಗಡ ಊಟಕ್ಕೆ ಕೂತು ಕೊಂಡರೆ,
ನಿನ್ನ ಮುಂದೆ ಇರುವದನ್ನು ಚನ್ನಾಗಿ ತಿಳುಕೋ.
೨ ನೀನು ಭೋಜನ ಪ್ರಿಯನಾಗಿದ್ದರೆ,
ನಿನ್ನ ಕುತ್ತಿಗೆಗೆ ಕತ್ತಿ ಇಟ್ಟುಕೋ.
೩ ಅವನ ಸವಿ ಊಟಗಳನ್ನು ಅಪೇಕ್ಷಿಸ ಬೇಡ;
ಅವು ಕಳ್ಳ ಭೋಜನವಾಗಿವೆ.
೪ ಐಶ್ವರ್ಯವಂತನಾಗ ಬೇಕೆಂದು ದಣಿಯ ಬೇಡ;
ನಿನ್ನ ಸ್ವಂತ ಗ್ರಹಿಕೆಯನ್ನು ಬಿಟ್ಟು ಬಿಡು.
೫ ಅದರ ಮೇಲೆ ನಿನ್ನ ಕಣ್ಣುಗಳನ್ನು ಹಾರಿಸುವದು ಯಾಕೆ!
ಅದೇನು ಇಲ್ಲದಲ್ಲ?
ಅದು ಹದ್ದಿನ ಹಾಗೆ ರೆಕ್ಕೆ ಮಾಡಿ ಕೊಂಡು, ಆಕಾಶಕ್ಕೆ ಹಾರಿ ಹೋಗುತ್ತದೆ.
೬ ಕ್ರೂರ ದೃಷ್ಟಿಯುಳ್ಳವನ ಕೊಟ್ಟಿಯನ್ನು ತಿನ್ನ ಬೇಡ;
ಅವನ ಸವಿ ಊಟಗಳನ್ನು ಅಪೇಕ್ಷಿಸ ಬೇಡ.
೭ ಯಾಕಂದರೆ ಅವನು ತನ್ನ ಮನಸ್ಸಿನಲ್ಲಿ ಕಲ್ಪಿಸಿದ ಹಾಗೆಯೇ ಇದ್ದಾನೆ;
ಉಣ್ಣು, ಕುಡಿ ಎಂದು, ನಿನಗೆ ಹೇಳುತ್ತಾನೆ;
ಆದರೆ ಅವನ ಹೃದಯವು ನಿನ್ನ ಸಂಗಡ ಇಲ್ಲ.
೮ ನೀನು ಉಂಡ ತುಂಡನ್ನು ಕಾರಿ, ನಿನ್ನ ಇಂಪಾದ ಮಾತುಗಳನ್ನು ಕಳ ಕೊಳ್ಳುವಿ.
೯ ಹುಚ್ಚನ ಕಿವಿಗಳಲ್ಲಿ ಮಾತಾಡ ಬೇಡ;
ಯಾಕಂದರೆ ನಿನ್ನ ಮಾತುಗಳ ಬುದ್ಧಿಯನ್ನು ತಿರಸ್ಕರಿಸುವನು.
೧೦ ಪೂರ್ವದ ಮೇರೆಯನ್ನು ಬತ್ತ ಬೇಡ;
ದಿಕ್ಕಿಲ್ಲದವರ ಹೊಲದಲ್ಲಿ ಹೋಗ ಬೇಡ.
೧೧ ಯಾಕಂದರೆ ಅವರ ವಿಮೋಚಕನು ಬಲಿಷ್ಠನಾಗಿದ್ದಾನೆ;
ಅವನು ನಿನ್ನ ಸಂಗಡ ಅವರ ವ್ಯಾಜ್ಯವಾಡುವನು.
೧೨ ಶಿಕ್ಷೆಗೆ ನಿನ್ನ ಹೃದಯವನ್ನೂ,
ತಿಳುವಿಕೆಯ ಮಾತುಗಳಿಗೆ ನಿನ್ನ ಕಿವಿಗಳನ್ನೂ ಕೊಡು.
೧೩ ಹುಡುಗನಿಗೆ ಶಿಕ್ಷೆಯನ್ನು ಹಿಂದೆಗೆಯ ಬೇಡ;
ಯಾಕಂದರೆ ಅವನನ್ನು ಬೆತ್ತದಿಂದ ಹೊಡೆದರೆ, ಸಾಯನು.
೧೪ ನೀನು ಕೋಲಿನಿಂದ ಅವನನ್ನು ಹೊಡೆದರೆ,
ಅವನ ಪ್ರಾಣವನ್ನು ಪಾತಾಳಕ್ಕೆ ತಪ್ಪಿಸುವಿ.
೧೫ ನನ್ನ ಮಗನೇ, ನಿನ್ನ ಹೃದಯವು ಜ್ಞಾನವುಳ್ಳದ್ದಾಗಿದ್ದರೆ,
ನನ್ನ ಹೃದಯವು—ಹೌದು ನನ್ನದೇ—ಸಂತೋಷ ಪಡುವದು.
೧೬ ನಿನ್ನ ತುಟಿಗಳು ನೆಟ್ಟನೆಯವುಗಳನ್ನು ಮಾತಾಡಿದರೆ,
ನನ್ನ ಅಂತರಿಂದ್ರಿಯಗಳು ಉತ್ಸಾಹ ಪಡುವವು.
೧೭ ನಿನ್ನ ಹೃದಯವು ಪಾಪಾತ್ಮರಿಗೆ ಹೊಟ್ಟೆಕಿಚ್ಚು ಪಡದೆ,
ದಿನವೆಲ್ಲಾ ಕರ್ತನ ಭಯದಲ್ಲಿ ಇರಲಿ.
೧೮ ಯಾಕಂದರೆ ನಿಶ್ಚಯವಾಗಿ ಗತಿ ಉಂಟು;
ನಿನ್ನ ನಿರೀಕ್ಷೆಯು ಕಡಿದು ಹಾಕಲ್ಪಡುವದಿಲ್ಲ.
೧೯ ನನ್ನ ಮಗನೇ, ಕೇಳಿ, ಜ್ಞಾನಿಯಾಗು;
ನಿನ್ನ ಹೃದಯವನ್ನು ಮಾರ್ಗದಲ್ಲಿ ನೆಟ್ಟಗೆ ನಡಿಸು.
೨೦ ದ್ರಾಕ್ಷೇರಸ ಕುಡಿಯುವವರಲ್ಲಿಯೂ,
ಮಾಂಸ ಭೋಜನದ ದುಂದುಗಾರರಲ್ಲಿಯೂ ಇರ ಬೇಡ.
೨೧ ಯಾಕಂದರೆ ಕುಡಿಯುವವರೂ, ದುಂದುಗಾರರೂ ಬಡವರಾಗುವರು;
ಮತ್ತು ತೂಕಡಿಕೆಯು ಹರಕು ವಸ್ತ್ರವನ್ನು ಹೊದ್ದಿಸುತ್ತದೆ.
೨೨ ನಿನ್ನನ್ನು ಪಡೆದ ನಿನ್ನ ತಂದೆಗೆ ಕಿವಿ ಕೊಡು;
ನಿನ್ನ ತಾಯಿ ಮುದುಕಿಯಾದಾಗ, ಅವಳನ್ನು ತಿರಸ್ಕರಿಸ ಬೇಡ.



೨೩ ಸತ್ಯವನ್ನೂ, ಜ್ಞಾನ, ಶಿಕ್ಷೆ, ವಿವೇಕಗಳನ್ನೂ ಸಂಪಾದಿಸಿ ಕೊಂಡು, ಮಾರಿ ಬಿಡ ಬೇಡ.
೨೪ ನೀತಿವಂತನ ತಂದೆಯು ಮಹಾ ಉಲ್ಲಾಸ ಪಡುತ್ತಾನೆ;
ಜ್ಞಾನಿಯನ್ನು ಪಡೆದವನು ಅವನಲ್ಲಿ ಸಂತೋಷ ಪಡುತ್ತಾನೆ.
೨೫ ನಿನ್ನ ತಂದೆ ತಾಯಿಗಳು ಸಂತೋಷ ಪಡುವರು;
ನಿನ್ನನ್ನು ಹೆತ್ತವಳು ಉಲ್ಲಾಸ ಪಡುವಳು.
೨೬ ನನ್ನ ಮಗನೇ, ನಿನ್ನ ಹೃದಯವನ್ನು ನನಗೆ ಕೊಡು;
ನಿನ್ನ ಕಣ್ಣುಗಳು ನನ್ನ ಮಾರ್ಗಗಳಲ್ಲಿ ಇಷ್ಟ ಪಡಲಿ.
೨೭ ಯಾಕಂದರೆ ಸೂಳೆಯು ಆಳವಾದ ಕೂಪಿಯಾಗಿದ್ದಾಳೆ;
ಪರ ಸ್ತ್ರೀಯು ಇಕ್ಕಟ್ಟಿನ ಭಾವಿಯಾಗಿದ್ದಾಳೆ.
೨೮ ಅವಳು ಕಳ್ಳನ ಹಾಗೆ ಹೊಂಚಿ ಕೊಂಡು,
ಮನುಷ್ಯರುಳಗೆ ವಂಚಕರನ್ನು ಅನೇಕರಾಗಿ ಮಾಡುತ್ತಾಳೆ.
೨೯ ಅಯ್ಯೋ ಎಂಬುವದು ಯಾರಿಗೆ! ಅಯ್ಯಯ್ಯೋ ಯಾರಿಗೆ!
ಕುಗಳಾಟವು ಯಾರಿಗೆ? ನಿಟ್ಟುಸುರು ಯಾರಿಗೆ?
ಸುಮ್ಮನೆ ಘಾಯಗಳು ಯಾರಿಗೆ? ಉರಿಗಣ್ಣುಗಳು ಯಾರಿಗೆ?
೩೦ ದ್ರಾಕ್ಷೇ ರಸದಲ್ಲಿ ಹೊತ್ತು ಕಳೆಯುವವರಿಗೂ,
ಬೆಕೆಸಿದ ದ್ರಾಕ್ಷೇ ರಸವನ್ನು ರುಚಿ ನೋಡುವದಕ್ಕೆ ಬರುವವರಿಗೂ, ಅಲ್ಲವೋ?
೩೧ ದ್ರಾಕ್ಷೇ ರಸವನ್ನು, ಅದು ಕೆಂಪಾಗಿದೆ ಎಂದೂ,
ಪಾತ್ರೆಯಲ್ಲಿ ತನ್ನ ಕಳೆ ತೋರಿಸುತ್ತದೆಂದೂ,
ಸುಲಭವಾಗಿ ಇಳಿಯುತ್ತದೆಂದೂ, ನೋಡ ಬೇಡ.
೩೨ ಕಡೆಯಲ್ಲಿ ಸರ್ಪದ ಹಾಗೆ ಕಚ್ಚಿ,
ನಾಗರ ಹಾವಿನ ಹಾಗೆ ಕಡಿಯುತ್ತದೆ.
೩೩ ನಿನ್ನ ಕಣ್ಣುಗಳು ಪರ ಸ್ತ್ರೀಯರನ್ನು ನೋಡುವವು;
ನಿನ್ನ ಹೃದಯವು ತಕ್ಕು ಮಾತಾಡುವದು.
೩೪ ಸಮುದ್ರದ ಮಧ್ಯದಲ್ಲಿ ಮಲಗುವವನ ಹಾಗೆಯೂ,
ಹಡಗ ಕಂಭದ ತುದಿಯಲ್ಲಿ ಮಲಗುವವನ ಹಾಗೆಯೂ, ಇರುವಿ.
೩೫ ನನ್ನನ್ನು ಹೊಡೆದರು, ನಾನು ನೋಯಲಿಲ್ಲ;
ನನ್ನನ್ನು ಸುದ್ದಿದರು, ನನಗೆ ತಿಳಿಯಲಿಲ್ಲ; ಯಾವಾಗ ಎಚ್ಚರ ವಾಗುವೆನು!
ಅದನ್ನು ತಿರಿಗಿ ಹುಡುಕುವೆನು, ಅನ್ನುವಿ.

## ೨೪ ಸಂಧಿ.

೧ ಕೆಟ್ಟವರ ಮೇಲೆ ಹೊಟ್ಟೆಕಿಚ್ಚು ಪಡ ಬೇಡ,
ಅವರ ಸಂಗಡ ಇರುವದಕ್ಕೆ ಅಪೇಕ್ಷಿಸ ಬೇಡ.
೨ ಯಾಕಂದರೆ ಅವರ ಹೃದಯವು ಸೂಲೆಯನ್ನು ಧ್ಯಾನಿಸುತ್ತದೆ;
ಅವರ ತುಟಿಗಳು ಕಷ್ಟವನ್ನು ಮಾತಾಡುತ್ತವೆ.
೩ ಜ್ಞಾನದಿಂದ ಮನೆಯು ಕಟ್ಟಲ್ಪಡುತ್ತದೆ;
ವಿವೇಕದಿಂದ ಸ್ಥಿರವಾಗುತ್ತದೆ.
೪ ತಿಳುವಿಕೆಯಿಂದ ಕೊಠಡಿಗಳು ಎಲ್ಲಾ ಪ್ರಿಯ ರಮ್ಯವಾದ ದ್ರವ್ಯಗಳಿಂದ ತುಂಬುತ್ತವೆ.
೫ ಜ್ಞಾನಿಯಾದ ಪುರುಷನು ಬಲವಾಗಿದ್ದಾನೆ;
ತಿಳುವಿಕೆಯುಳ್ಳವನು ಶಕ್ತಿಯಿಂದ ದೃಢವಾಗುತ್ತಾನೆ.
೬ ಯಾಕಂದರೆ ಉಪಾಯಗಳಿಂದ ಯುದ್ಧ ಮಾತುವಿ;
ಆಲೋಚನೆಯವರ ಸಮೂಹದಲ್ಲಿ ರಕ್ಷಣೆ ಉಂಟು.
೭ ಜ್ಞಾನವು ಮೂಢನಿಗೆ ಅತ್ಯುನ್ನತವಾಗಿದೆ;
ಅವನು ಬಾಗಲಲ್ಲಿ ಬಾಯಿ ತೆಕೆಯುವದಿಲ್ಲ.
೮ ಕೇಡು ಮಾಡುವದಕ್ಕೆ ಯೋಚಿಸುವವನನ್ನು ಕುಯುಕ್ತಿವಂತನೆಂದು ಕರೆಯುತ್ತಾರೆ.
೯ ಮೂಢತ್ವದ ಕಲ್ಪನೆಯು ಪಾಪವಾಗಿದೆ;
ಕುಚೋದ್ಯಗಾರನು ಜನರಿಗೆ ಅಸಹ್ಯವಾಗಿದ್ದಾನೆ.
೧೦ ನೀನು ಇಕ್ಕಟ್ಟಿನ ದಿವಸದಲ್ಲಿ ಧೈರ್ಯಗುಂದಿದರೆ,
ನಿನ್ನ ಶಕ್ತಿಯು ಕುಂದುವದು.
೧೧ ಮರಣಕ್ಕೆ ಪೈಯಲ್ಪಡುವವರನ್ನು ಬಿಡಿಸುವದಕ್ಕೂ,
ನಡುಗುತ್ತಾ, ಕೊಲೆಗೆ ಹೋಗುವವರನ್ನು ಸಂರಕ್ಷಿಸುವದಕ್ಕೂ,
ನೀನು ಹಿಂದೆಗೆದರೆ,
೧೨ ಇಗೋ, ಇದು ನಮಗೆ ತಿಳಿಯಲಿಲ್ಲ ಎಂದು, ನೀನು ಹೇಳಿದರೆ,
ಹೃದಯಗಳನ್ನು ತೂಗಿ ನೋಡುವವನು ಗ್ರಹಿಸದೆ ಇರುವನೋ!
ನಿನ್ನ ಪ್ರಾಣವನ್ನು ಕಾಯುವವನು ಅದನ್ನು ತಿಳಿಯನೋ!
ಮನುಷ್ಯನಿಗೆ ಅವನ ಕೆಲಸದ ಪ್ರಕಾರ ಕೊಡನೋ!
೧೩ ನನ್ನ ಮಗನೇ, ಜೇನು ತಿನ್ನು; ಯಾಕಂದರೆ ಅದು ಬಳ್ಳೇದು;
ಮತ್ತು ಜೇನು ತೊಟ್ಟಿಯು ನಿನ್ನ ಅಂಗಳಕ್ಕೆ ಪೀಯಾಗದೆ.
೧೪ ಹಾಗೆಯೇ ನಿನ್ನ ಪ್ರಾಣಕ್ಕೆ ಜ್ಞಾನದ ತಿಳುವಿಕೆಯು ಇರಲಿ;
ಅದನ್ನು ದೊರಕಿಸಿ ಕೊಂಡ ಮೇಲೆ ಗತಿ ಉಂಟು;
ನಿನ್ನ ನಿರೀಕ್ಷೆಯು ಕಡಿದು ಹಾಕಲ್ಪಡದು.
೧೫ ದುಷ್ಟನಾಗಿ, ನೀತಿವಂತನ ನಿವಾಸಕ್ಕೆ ಹೊಂಚಿ ಕೊಳ್ಳ ಬೇಡ;
ಅವನು ಮಲಗುವ ಸ್ಥಳವನ್ನು ಸೂರೆ ಮಾಡ ಬೇಡ.
೧೬ ಯಾಕಂದರೆ ನೀತಿವಂತನು ಏಳು ಸಾರಿ ಬಿದ್ದರೂ, ಏಳುವನು;
ಆದರೆ ದುಷ್ಟರು ಕೇಡಿನಲ್ಲಿ ಎಡವಿ ಬೀಳುವರು.
೧೭ ನಿನ್ನ ಶತ್ರು ಬೀಳುವಾಗ, ಸಂತೋಷ ಪಡ ಬೇಡ;
ಅವನು ಎಡವುವಾಗ, ನಿನ್ನ ಹೃದಯದಲ್ಲಿ ಉಲ್ಲಾಸ ಪಡ ಬೇಡ.
೧೮ ಇಲ್ಲದಿದ್ದರೆ, ಕರ್ತನು ನೋಡಿದರೆ, ಅದು ಅವನ ಕಣ್ಣುಗಳಿಗೆ ಕೆಟ್ಟದ್ದಾಗಿರುವದರಿಂದ, ಅವನು ತನ್ನ ಕೋಪವನ್ನು ಅವನ ಕಡೆಯಿಂದ ತಿರುಗಿಸ್ಯಾನು.
೧೯ ದುರ್ಮಾರ್ಗರ ಮೇಲೆ ಉರಿಗೊಳ್ಳ ಬೇಡ;
ದುಷ್ಟರ ಮೇಲೆ ಹೊಟ್ಟೆಕಿಚ್ಚು ಪಡ ಬೇಡ.
೨೦ ಯಾಕಂದರೆ ಕೆಟ್ಟವನಿಗೆ ಗತಿ ಇಲ್ಲ;
ದುಷ್ಟರ ದೀಪವು ಆರಿ ಹೋಗುವದು.
೨೧ ನನ್ನ ಮಗನೇ, ಕರ್ತನಿಗೂ, ಅರಸನಿಗೂ, ಭಯ ಪಡು;
ಬದಲಾಯಿಸುವವರ ಗೊಡವೆಗೆ ಹೋಗ ಬೇಡ.
೨೨ ಯಾಕಂದರೆ ಫಕ್ಕನೆ ಅವರ ಆಪತ್ತು ಏಳುವದು;
ಅವರಿಬ್ಬರ ಮುಖಾನವನ್ನು ಯಾರು ಬಲ್ಲರು!
೨೩ ಈ ಮಾತುಗಳು ಸಹ ಜ್ಞಾನಿಗಳಿಗೆ ಅವೆ:—
ನ್ಯಾಯದಲ್ಲಿ ದಾಕ್ಷಿಣ್ಯ ಮಾಡುವದು ಬಳ್ಳೇದಲ್ಲ.
೨೪ ದುಷ್ಟನಿಗೆ—ನೀನು ನೀತಿವಂತನೆಂದು ಹೇಳುವವನನ್ನು ಪ್ರಜೆಗಳು ಶಪಿಸುವರು;
ಜನಗಳು ಅವನ ಮೇಲೆ ಕೋಪ ಪಡುವರು.
೨೫ ಆದರೆ ಅವನನ್ನು ಗದರಿಸುವವರಿಗೆ ಆನಂದ ಉಂಟಾಗುವದು;
ಅವರ ಮೇಲೆ ಬಳ್ಳೇ ಆಶೀರ್ವಾದ ಬರುವದು.
೨೬ ಸರಿಯಾದ ಉತ್ತರ ಕೊಡುವವನು ತುಟಿಗಳಿಗೆ ಮುದ್ದಿಕುವವನಾಗಿದ್ದಾನೆ.

೨೭ ನಿನ್ನ ಕೆಲಸವನ್ನು ಹೊರಗೆ ಸಿದ್ಧ ಮಾಡು;
ಹೊಲದಲ್ಲಿ ಅದನ್ನು ತೀರಿಸಿಕೋ;
ಆ ಮೇಲೆ ನಿನ್ನ ಮನೆ ಕಟ್ಟು.
೨೮ ಸುಮ್ಮನೆ ನಿನ್ನ ನೆಕೆಯವನಿಗೆ ವಿರೋಧವಾಗಿ ಸಾಕ್ಷಿಯಾಗಿರ
ಬೇಡ;
ನಿನ್ನ ತುಟಿಗಳಿಂದ ಮೋಸ ಮಾಡ ಬೇಡ.
೨೯ ಅವನು ನನಗೆ ಮಾಡಿದ ಹಾಗೆಯೇ ಅವನಿಗೆ ಮಾಡುತ್ತೇನೆ,
ಬಬ್ಬೊಬ್ಬನಿಗೆ ಅವನವನ ಕ್ರಿಯೆಯ ಪ್ರಕಾರ ಬದಲು ಕೊಡು
ತ್ತೇನೆ, ಅನ್ನ ಬೇಡ.
೩೦ ಮೈಗಳ್ಳನ ಹೊಲವನ್ನೂ,
ಬುದ್ಧಿಹೀನನ ತೋಟವನ್ನೂ, ಹಾದು ಹೋದೆನು.
೩೧ ಇಗೋ, ಅದೆಲ್ಲಾ ದತ್ತೂರಿಗಳು ಬೆಳೆದಿತ್ತು;
ಅದರ ಮುಖವನ್ನು ಶುರಜಿಗೆಗಳು ಮುಚ್ಚಿದ್ದವು;
ಅದರ ಕಲ್ಲಿನ ಗೋಡೆಯು ಬಿದ್ದು ಹೋಗಿತ್ತು.
೩೨ ನಾನು ದೃಷ್ಟಿಸಿ, ಮನಸ್ಸಿಟ್ಟೆನು;
ನೋಡಿ, ಉಪದೇಶ ಹೊಂದಿದೆನು.
೩೩ ಸ್ವಲ್ಪ ನಿದ್ದೆ, ಸ್ವಲ್ಪ ತೂಕಡಿಕೆ,
ಮಲಗುವ ಹಾಗೆ ಸ್ವಲ್ಪ ಕೈಕೂಡಿಸುವದು;
೩೪ ಆ ಮೇಲೆ ನಿನ್ನ ಬಡತನವು ಓಡುವವನ ಹಾಗೆಯೂ,
ನಿನ್ನ ಕೊರತೆಯು ಗುರಾಣಿ ಹಿಡಿದವನ ಹಾಗೆಯೂ, ಬರುವವು.

## ನಾಲ್ಕನೇ ಭಾಗ.

### ೨೫ ಸಂಧಿ.

೧ ಇವು ಸಹ ಸೊಲೊಮೋನನ ನಾಮತಿಗಳು. ಯೆಹೂದದ ಅರ
ಸನಾದ ಹಿಜಿಕೀಯನ ಜನರು ಅವುಗಳ ಪ್ರತಿ ಬಕೆದರು.
೨ ಕಾರ್ಯವನ್ನು ಮರೆ ಮಾಡುವದು ದೇವರ ಘನವಾಗಿದೆ;
ಕಾರ್ಯವನ್ನು ಶೋಧಿಸುವದು ಅರಸರ ಘನವಾಗಿದೆ.
೩ ಎತ್ತರಕ್ಕೆ ಆಕಾಶವೂ, ಆಳಕ್ಕೆ ಭೂಮಿಯೂ;
ಮತ್ತು ಅರಸರ ಹೃದಯವು ಅಶೋಧ್ಯವಾಗಿದೆ.
೪ ಬೆಳ್ಳಿಯಿಂದ ಕಿಟ್ಟನ್ನು ತೆಗೆದು ಹಾಕು;
ಆಗ ಕರ್ಮಸುವವನಿಗೆ ಬಡವೆ ಉಂಟಾಗುವದು.
೫ ದುಷ್ಟನನ್ನು ಅರಸನ ಸಮುಖದಿಂದ ತೆಗೆದು ಹಾಕು;
ಆಗ ಅವನ ಸಿಂಹಾಸನವು ನೀತಿಯಿಂದ ಸ್ಥಿರವಾಗುವದು.
೬ ಅರಸನ ಮುಂದೆ ಪ್ರಭೇ ತೋರಿಸ ಬೇಡ;
ದೊಡ್ಡವರ ಸ್ಥಳದಲ್ಲಿ ನಿಂತು ಕೊಳ್ಳ ಬೇಡ.
೭ ಯಾಕಂದರೆ ನಿನ್ನ ಕಣ್ಣುಗಳು ನೋಡಿದ
ಅಧಿಪತಿಯ ಮುಂದೆ ಅವರು ನಿನ್ನನ್ನು ತಗ್ಗಿಸುವದಕ್ಕಿಂತ,
ಇಲ್ಲಿಗೆ ಏರಿ ಬಾ ಎಂದು, ನಿನಗೆ ಹೇಳುವದು ಬಳ್ಳೇದು.
೮ ವ್ಯಾಜ್ಯಕ್ಕೆ ತ್ವರೆಯಾಗಿ ಹೊರಟು ಹೋಗ ಬೇಡ;
ಹೋದರೆ, ಅದರ ಅಂತ್ಯದಲ್ಲಿ,
ನಿನ್ನ ನೆಕೆಯವನು ನಿನ್ನನ್ನು ಅವಮಾನ ಪಡಿಸುವಾಗ, ಏನು ಮಾ
ಡುವಿ?
೯ ನಿನ್ನ ವ್ಯಾಜ್ಯವನ್ನು ನಿನ್ನ ನೆಕೆಯವನ ಸಂಗಡ ಆಡು;
ಮತ್ತೊಬ್ಬನ ಗುಟ್ಟನ್ನು ಪ್ರಕಟ ಮಾಡ ಬೇಡ.
೧೦ ಹಾಗೆ ಮಾಡಿದರೆ, ಕೇಳುವವನು ನಿನ್ನ ಮೇಲೆ ದೂರು ಹೇಳ್ಯಾನು;
ಮತ್ತು ನಿನ್ನ ಅಪಕೀರ್ತಿ ಹೋಗದೆ ಇದ್ದೀತು.
೧೧ ತಕ್ಕ ಕಾಲದಲ್ಲಿ ಹೇಳಿದ ಮಾತು ಬೆಳ್ಳಿಯ ಚಿತ್ರ ತಟ್ಟಿಗಳಲ್ಲಿರು
ವ ಭಂಗಾರದ ಕಾಯಿಗಳ ಹಾಗೆ.
೧೨ ಗದರುವ ಜ್ಞಾನಿಯು ಕೇಳುವ ಕಿವಿಗೆ
ಭಂಗಾರದ ಕುಂಡಲವೂ, ಕುಂದಣದ ಆಭರಣವೂ, ಆಗಿದ್ದಾನೆ.
೧೩ ಸುಗ್ಗಿಯ ದಿನದಲ್ಲಿ ಹಿಮದ ತಂಪು ಹ್ಯಾಗೋ,
ಹಾಗೆಯೇ ನಂಬಿಕೆಯುಳ್ಳ ದೂತನು ಅವನನ್ನು ಕಳುಹಿಸಿದವರು
ಗೆ ಇದ್ದಾನೆ;
ತನ್ನ ಯಜಮಾನರ ಪ್ರಾಣವನ್ನು ತಣ್ಣಗೆ ಮಾಡುತ್ತಾನೆ.
೧೪ ಕಳ್ಳ ದಾನಗಳನ್ನು ಕುರಿತು ಹೊಗಳಿ ಕೊಳ್ಳುವವನು ಮಳೆ ಇಲ್ಲ
ದ ಮೇಘಗಳಿಗೂ, ಘೂಳಿಗೂ, ಸರಿ.
೧೫ ದೀರ್ಘಶಾಂತಿಯಿಂದ ಅಧಿಕಾರಿಯನ್ನು ಸಮ್ಮತಿ ಪಡಿಸ ಬಹು
ದು;
ಮೃದುವಾದ ನಾಲಿಗೆಯು ಎಲುವನ್ನು ಮುರಿಯುತ್ತದೆ.
೧೬ ಜೇನು ದೊರಕಿನಿ ಕೊಂಡಿಯೋ! ತಕ್ಕದ್ದನ್ನು ತಿನ್ನು;
ಹೊಟ್ಟೆ ತುಂಬ ತಿಂದರೆ, ಕಾರ ಬೇಕಾದೀತು.
೧೭ ನಿನ್ನ ಪಾದವನ್ನು ನಿನ್ನ ನೆಕೆಯವನ ಮನೆಗೆ ಅಪರೂಪ ಮಾಡು;
ಅವನು ನಿನ್ನಿಂದ ತೃಪ್ತಿಯಾಗಿ, ನಿನ್ನನ್ನು ಹಗೆ ಮಾಡ್ಯಾನಲ್ಲ!
೧೮ ತನ್ನ ನೆಕೆಯವನಿಗೆ ವಿರೋಧವಾಗಿ ಸುಳ್ಳು ಸಾಕ್ಷಿ ಹೇಳುವವನು
ಕೊಡತಿಯೂ, ಕತ್ತಿಯೂ, ಹದವಾದ ಬಾಣವೂ, ಆಗಿದ್ದಾನೆ.
೧೯ ಇಕ್ಕಟ್ಟಿನ ದಿವಸದಲ್ಲಿ ವಂಚಕನಲ್ಲಿ ಭರವಸವಿಡುವದು
ಮುರಿಯುವ ಹಲ್ಲಿಗೂ ಕೀಲು ತಪ್ಪುವ ಕಾಲಿಗೂ ಸಮಾನವಾಗಿದೆ.
೨೦ ಛಳಿ ದಿವಸದಲ್ಲಿ ವಸ್ತ್ರ ಕಿತ್ತು ಕೊಳ್ಳುವವನೂ, ಸೋರುವಿನ
ಮೇಲೆ ಹುಳಿಯು ಹ್ಯಾಗೋ,
ಹಾಗೆಯೇ ದುಃಖವುಳ್ಳ ಹೃದಯಕ್ಕೆ ಹಾಡುಗಳನ್ನು ಹಾಡುವ
ವನು ಇದ್ದಾನೆ.
೨೧ ನಿನ್ನ ಹಗೆಯವನು ಹಸಿದರೆ, ಅವನಿಗೆ ಕೊಟ್ಟಿ ತಿನ್ನಿಸು;
ದಾಹವಾದರೆ, ನೀರು ಕುಡಿಸು.
೨೨ ಯಾಕಂದರೆ ಉರಿ ಕೆಂಡಗಳನ್ನು ಅವನ ತಲೆಯ ಮೇಲೆ ಕೂಡಿಸಿ
ದುವಿ;
ಮತ್ತು ಕರ್ತನು ನಿನಗೆ ಪ್ರತಿ ಫಲ ಕೊಡುವನು.
೨೩ ಉತ್ತರ ಘೂಳಿಯು ಮಳೆಯನ್ನೂ,
ಕ್ಷುದ್ರ ನಾಲಿಗೆಯು ಕೋಪ ಮುಖವನ್ನೂ ಹುಟ್ಟಿಸುತ್ತದೆ.
೨೪ ವಿಸ್ತಾರವಾದ ಮನೆಯಲ್ಲಿ ಝಗಳಾಡುವ ಸ್ತ್ರೀಯ ಸಂಗಡ ಇರು
ವದಕ್ಕಿಂತ,
ಉಪ್ಪರಿಗೆಯ ಮೂಲೆಯಲ್ಲಿ ವಾಸಿಸುವದು ಬಳ್ಳೇದು.
೨೫ ದೂರ ದೇಶದಿಂದ ಬರುವ ಬಳ್ಳೇ ಸಮಾಚಾರವು
ದಣಿದ ಪ್ರಾಣಕ್ಕೆ ತಣ್ಣೀರಾಗಿದೆ.
೨೬ ದುಷ್ಟನ ಮುಂದೆ ಕದಲುವ ನೀತಿವಂತನು
ಕೆಸರಿರುವ ಬುಗ್ಗೆಗೂ, ಕೊಳಕು ಬರತೆಗೂ, ಸರಿ.
೨೭ ಬಹಳ ಜೇನು ತಿನ್ನುವದು ಬಳ್ಳೇದಲ್ಲ;
ಸ್ವಂತ ಘನವನ್ನು ಹುಡುಕುವದು ಘನವಲ್ಲ.
೨೮ ಗೋಡೆ ಇಲ್ಲದ ಹಾಳು ಪಟ್ಟಣವು,
ತನ್ನ ಆತ್ಮವನ್ನು ಆಳಿಕೊಳ್ಳದ ಮನುಷ್ಯನೂ, ಬಂದೇ.



### ೨೯ ಸಂಧಿ.

೧ ಬೇಸಿಗೆಯಲ್ಲಿ ಹಿಮವೂ, ಸುಗ್ಗಿ ಕಾಲದಲ್ಲಿ ಮಳೆಯೂ, ಹ್ಯಾ
ಗೋ,
ಹಾಗೆಯೇ ಹುಚ್ಚನಿಗೆ ಘನವು ಯುಕ್ತವಲ್ಲ.
೨ ಗುಬ್ಬಿ ಹಾರ್ಯಾಡುವದು, ಬಾನಕ್ಕಿ ಹಾರುವದು ಹ್ಯಾಗೋ,
ಹಾಗೆಯೇ ಸುಮ್ಮನೆ ಕೊಟ್ಟ ಶಾಪವು ಬರುವದಿಲ್ಲ.
೩ ಕುದುರೆಗೆ ಚಬುಕು, ಕತ್ತೆಗೆ ಕಡಿವಾಣ,
ಹುಚ್ಚರ ಬೆನ್ನಿಗೆ ಬೆತ್ತ.
೪ ಹುಚ್ಚನಿಗೆ ಅವನ ಮೂಢತ್ವದ ಪ್ರಕಾರ ಉತ್ತರ ಕೊಡ
ಬೇಡ;
ಕೊಟ್ಟರೆ, ನೀನು ಸಹ ಅವನಿಗೆ ಸರಿಯಾಗುವಿ.
೫ ಹುಚ್ಚನಿಗೆ ಅವನ ಮೂಢತ್ವದ ಪ್ರಕಾರ ಉತ್ತರ ಕೊಡು;
ಇಲ್ಲದಿದ್ದರೆ, ಅವನು ತನ್ನ ದೃಷ್ಟಿಯಲ್ಲಿ ಜ್ಞಾನಿಯಾಗುವನು.
೬ ಹುಚ್ಚನ ಕೈಯಿಂದ ವರ್ತಮಾನ ಕಳುಹಿಸುವವನು
ಕಾಲುಗಳನ್ನು ಕೊಯಿದು ಕೊಂಡು, ಬಲಾತ್ಕಾರವನ್ನು ಕುಡಿ
ಯುವವನ ಹಾಗೆ ಇದ್ದಾನೆ.
೭ ಕುಂಟನ ತೊಡೆಗಳು ತೂಗಾಡುತ್ತವೆ;
ಹುಚ್ಚರ ಬಾಯಲ್ಲಿ ಸಾಮತಿಯು ಹಾಗೆಯೇ.
೮ ಕವಣೆಯಲ್ಲಿ ಕಲ್ಲು ಕಟ್ಟುವವನು ಹ್ಯಾಗೋ,
ಹಾಗೆಯೇ ಹುಚ್ಚನಿಗೆ ಘನ ಕೊಡುವವನು ಇದ್ದಾನೆ.
೯ ಮತ್ತು ಕೈಯಲ್ಲಿ ಹೊಕ್ಕ ಮುಳ್ಳೂ,
ಹುಚ್ಚರ ಬಾಯಲ್ಲಿರುವ ಸಾಮತಿಯೂ, ಬಂದೇ.
೧೦ ದೊಡ್ಡವನು ಹುಚ್ಚರಿಗೂ, ಅತಿಕ್ರಮಿಸುವವರಿಗೂ ಸಂಬಳ ಕೊಟ್ಟು,
ಎಲ್ಲರನ್ನು ದುಃಖ ಪಡಿಸುತ್ತಾನೆ.
೧೧ ಕಾಲಿದ್ದಕ್ಕೆ ತಿರುಗುವ ನಾಯ ಹಾಗೆ,
ತನ್ನ ಮೂಢತ್ವಕ್ಕೆ ಹುಚ್ಚನು ತಿರಿಗಿ ಹೋಗುತ್ತಾನೆ.
೧೨ ತನ್ನ ದೃಷ್ಟಿಯಲ್ಲಿ ಜ್ಞಾನಿಯಾದ ಮನುಷ್ಯನನ್ನು ಕಂಡಿಯಾ!
ಅವನಿಗಿಂತ ಹುಚ್ಚನನ್ನು ಕುರಿತು ನೀರೀಕ್ಷೆ ಉಂಟು.
೧೩ ಮಾರ್ಗದಲ್ಲಿ ಸಿಂಹವದೆ, ಬೀದಿಗಳ ಮಧ್ಯದಲ್ಲಿ ಮೃಗೇಂದ್ರ
ಉಂಟು ಎಂದು, ಮೈಗಳ್ಳನು ಹೇಳುತ್ತಾನೆ.
೧೪ ಕದವು ತಿರುಗುಣಿಯಲ್ಲಿ ತಿರುಗುತ್ತದೆ;
ಮೈಗಳ್ಳನು ತನ್ನ ಹಾಸಿಗೆಯಲ್ಲಿ ಹಾಗೆಯೇ.
೧೫ ಮೈಗಳ್ಳನು ತನ್ನ ಕೈಯನ್ನು ಪಾತ್ರೆಯಲ್ಲಿ ಮುಣಿಗಿಸಿ,
ತನ್ನ ಬಾಯಿಗೆ ಅದನ್ನು ತಿರುಗಿಸುವದಕ್ಕೆ ಆಯಾಸ ಪಡುತ್ತಾನೆ.
೧೬ ಬುದ್ಧಿಯಿಂದ ಉತ್ತರ ಕೊಡುವ ಏಳು ಮಂದಿಗಿಂತ,
ಮೈಗಳ್ಳನು ಸ್ವಂತ ಕಣ್ಣುಗಳಿಗೆ ಬುದ್ಧಿವಂತನಾಗಿದ್ದಾನೆ.
೧೭ ನಾಯ ಕಿವಿಗಳನ್ನು ಹಿಡಿಯುವವನೂ,
ಹಾದು ಹೋಗುತ್ತಾ, ತನ್ನದಲ್ಲದ ವ್ಯಾಜ್ಯದ ನಿಮಿತ್ತ ಬಿಟ್ಟು ಮಾ
ಡುವವನೂ, ಬಂದೇ.
೧೮ ಕೊಳ್ಳಿಗಳನ್ನೂ, ಬಾಣಗಳನ್ನೂ, ಮರಣವನ್ನೂ, ಎಸೆಯುವ
ಪೈತ್ಯಗಾರನು ಹ್ಯಾಗೋ,
೧೯ ಹಾಗೆಯೇ ತನ್ನ ನೆಕೆಯವನಿಗೆ ಮೋಸ ಮಾಡಿ,—ನಾನು ಆಡಲಿ
ಲ್ಲವೋ! ಎಂದು ಹೇಳುವ ಮನುಷ್ಯನು ಇದ್ದಾನೆ.
೨೦ ಕಟ್ಟಿಗೆ ಇಲ್ಲದಲ್ಲಿ ಬೆಂಕಿ ಆರಿ ಹೋಗುತ್ತದೆ;
ಚಾಡಿಗಾರನು ಇಲ್ಲದಲ್ಲಿ ಝಗಳಾಟವು ಶಾಂತಿಯಾಗುತ್ತದೆ.
೨೧ ಉರಿ ಕೆಂಡಗಳಿಗೆ ಇದ್ದಲೂ, ಬೆಂಕಿಗೆ ಕಟ್ಟಿಗೆಯೂ, ಹ್ಯಾಗೋ,
ಹಾಗೆಯೇ ವಾಗ್ವಾದ ಹೊತ್ತಿಸುವದಕ್ಕೆ ಝಗಳಾಡುವ ಮನು
ಷ್ಯನು ಇದ್ದಾನೆ.
೨೨ ಬಿಸುಕುಟ್ಟುವವನ ಮಾತುಗಳು ಸವಿ ಉಟಿಗಳ ಹಾಗಿದ್ದು,
ಹೊಟ್ಟೆಯ ಒಳ ಭಾಗದಲ್ಲಿ ಇಳಿಯುತ್ತವೆ.
೨೩ ಉರಿಯುವ ತುಟಿಗಳೂ, ಕೆಟ್ಟ ಹೃದಯವೂ,
ಬೆಳ್ಳೀ ನೀರು ಹಚ್ಚಿದ ಬೋಕಿಗೆ ಸರಿ.
೨೪ ಹಗೆಯವನು ತನ್ನ ತುಟಿಗಳಿಂದ ಕಪಟ ಮಾಡಿ,
ತನ್ನ ಹೊಟ್ಟೆಯಲ್ಲಿ ಮೋಸವನ್ನು ಇಟ್ಟು ಕೊಳ್ಳುತ್ತಾನೆ.
೨೫ ಅವನು ತನ್ನ ಶಬ್ದವನ್ನು ಮೃದು ಮಾಡಿದರೆ, ಅವನನ್ನು ನಂಬ
ಬಾರದು;
ಯಾಕಂದರೆ ಅವನ ಹೃದಯದಲ್ಲಿ ಏಳು ಅಸಹ್ಯಗಳು ಅವೆ.
೨೬ ಹಗೆಯನ್ನು ಕಪಟದಿಂದ ಮುಚ್ಚ ಬಹುದು;
ಆದರೆ ಅದರ ಕೆಟ್ಟತನವು ಕೂಟದಲ್ಲಿ ಕಾಣ ಬರುವದು.
೨೭ ಕೂಣಿ ಅಗಿಯುವವನು ಅದರಲ್ಲಿ ಬೀಳುವನು;
ಕಲ್ಲು ಹೊರಳಿಸುವವನ ಮೇಲೆ ಅದು ತಿರಿಗಿ ಬೀಳುವದು.
೨೮ ಸುಳ್ಳಾಡುವ ನಾಲಿಗೆಯು ಅದರಿಂದ ಕುಗ್ಗಿದವರನ್ನು ಹಗೆ
ಮಾಡುತ್ತದೆ;
ನುಣ್ಣಾಯಿ ನಟ್ಟವನ್ನು ಉಂಟು ಮಾಡುತ್ತದೆ.

### ೨೭ ಸಂಧಿ.

೧ ನಾಳೆಯ ದಿವಸವನ್ನು ಕುರಿತು ಹೆಚ್ಚಳ ಪಡ ಬೇಡ;
ಯಾಕಂದರೆ ದಿನವು ಹೆರುವದೇನೆಂದು, ನೀನರಿಯೆ.
೨ ನಿನ್ನ ಬಾಯಿ ಅಲ್ಲ, ಅನ್ಯನು;
ನಿನ್ನ ತುಟಿಗಳಲ್ಲ, ಪರನು, ನಿನ್ನನ್ನು ಸ್ತುತಿಸಲಿ.
೩ ಕಲ್ಲಿಗೆ ಭಾರವೂ, ಮರಳಿಗೆ ತೂಕವೂ;
ಆದರೆ ಈ ಎರಡಕ್ಕಿಂತ ಮೂಢರ ಕರಕರೆಯು ಭಾರವಾಗಿದೆ.
೪ ಉರಿಯು ಕ್ರೂರವಾಗಿದೆ; ಕೋಪವು ಪ್ರವಾಹವಾಗಿದೆ;
ಆದರೆ ಹೊಟ್ಟೆಕಿಚ್ಚಿನ ಮುಂದೆ ನಿಲ್ಲುವವನ್ಯಾರು!
೫ ಮರೆಯಾದ ಪ್ರೀತಿಗಿಂತ ಪ್ರಕಟವಾದ ಗದರಿಕೆಯೇ ವಾಸಿ.
೬ ಸ್ನೇಹಿತನ ಘಾಯಗಳು ನಂಬಿಕೆಯುಳ್ಳವುಗಳು;
ಆದರೆ ಹಗೆಯವನ ಮುದ್ದುಗಳು ವಂಚನೆಯುಳ್ಳವುಗಳು.
೭ ತೃಪ್ತಿಯಾದ ಪ್ರಾಣವು ಜೇನು ತೊಟ್ಟಿಯನ್ನು ತುಳಿದು
ಬಿಡುತ್ತದೆ;
ಆದರೆ ಹಸಿದ ಪ್ರಾಣಕ್ಕೆ ಕಹಿಯಾದದ್ದೆಲ್ಲ ಸೀಮಾಗಿದೆ.
೮ ಗೂಡು ಬಿಟ್ಟು ಹಾರುವ ಪಕ್ಷಿಯು ಹ್ಯಾಗೋ,
ಹಾಗೆಯೇ ಸ್ಥಳ ಬಿಟ್ಟು ಓಡುವ ಮನುಷ್ಯನು ಇದ್ದಾನೆ.
೯ ಎಣ್ಣೆಯೂ, ಘೂಪವೂ, ಹೃದಯವನ್ನು ಸಂತೋಷ
ಪಡಿಸುತ್ತವೆ;
ಹಾಗೆಯೇ ಅವನ ಮನಃಪೂರ್ವಕವಾದ ಆಲೋಚನೆಯಿಂದ
ಅವನ ಸ್ನೇಹಿತನು ಇಂಪು.
೧೦ ನಿನ್ನ ಸ್ನೇಹಿತನನ್ನೂ, ನಿನ್ನ ತಂದೆಯ ಸ್ನೇಹಿತನನ್ನೂ, ಬಿಟ್ಟು
ಬಿಡ ಬೇಡ; [ಬೇಡ;
ನಿನ್ನ ಆಪತ್ತಿನ ದಿವಸದಲ್ಲಿ ನಿನ್ನ ಸಹೋದರನ ಮನೆಗೆ ಹೋಗ
ದೂರವಾಗಿರುವ ಸಹೋದರನಿಗಿಂತ, ಸಮೀಪವಾಗಿರುವ ನೆಕೆಯವ
ನು ವಾಸಿ.

೧೧ ನನ್ನ ಮಗನೇ, ಜ್ಞಾನಿಯಾಗಿದ್ದು, ನನ್ನ ಹೃದಯವನ್ನು ಸಂ
ತೋಷ ಪಡಿಸು;
ಆಗ ನನ್ನನ್ನು ನಿಂದಿಸುವವನಿಗೆ ಪ್ರತ್ಯುತ್ತರ ಕೊಡುವೆನು.
೧೨ ಚಾತುರ್ಯವುಳ್ಳವನು ಕೇಳನ್ನು ನೋಡಿ, ಅಡಗಿ ಕೊಳ್ಳುತ್ತಾನೆ;
ಆದರೆ ಮೆತ್ತಿಕೀನರು ಹಾದು ಹೋಗಿ, ದಂಡಿಸಲ್ಪಡುತ್ತಾರೆ.
೧೩ ಪರನಿಗೋಸ್ಕರ ಜಾಣೆಯಾದವನ ವಸ್ತ್ರ ತಕ್ಕೋಳ;
ಅನ್ಯಸ್ತ್ರೀಗೋಸ್ಕರ ಅವನಿಂದ ಒತ್ತೆ ತೆಗೆ.
೧೪ ಬೆಳ್ಳಿಯ ಎತ್ತು, ತನ್ನ ನೆಕೆಯನವನ್ನು ಖುಷ್ಟಿ ಶಬ್ದದಿಂದ ಅಪೀ
ರ್ವದಿಸುವವನಿಗೆ, ಅದು ಶಾಪವೆಂದು ಎಣಿಸಲ್ಪಡುವದು.
೧೫ ಮಳೆಯ ದಿವಸದಲ್ಲಿ ಬೀಳುವ ನಿತ್ಯವಾದ ಸೋರಿಕೆಯೂ,
ಕುಳ್ಳಗಾದವ ಹೆಂಡತಿಯೂ, ಸಮಾನವಾಗಿವೆ.
೧೬ ಅವನ್ನು ಬಚ್ಚಿಡುವವನು ಗಾಳಿಯನ್ನು ಬಚ್ಚಿಡುತ್ತಾನೆ;
ತನ್ನ ಬಲಗೈಯಿಂದ ಎಣ್ಣೆಯನ್ನು ಹಿಡಿಯುತ್ತಾನೆ.
೧೭ ಕಬ್ಬಿಣವು ಕಬ್ಬಿಣದಿಂದ ಹದವಾಗುತ್ತದೆ;
ಹಾಗೆಯೇ ಮನುಷ್ಯನು ತನ್ನ ಸ್ನೇಹಿತನ ಮುಖವನ್ನು ಹದ
ಮಾಡುತ್ತಾನೆ.
೧೮ ಅಂಜೂರದ ಮರವನ್ನು ಕಾಯುವವನು ಅದರ ಫಲ ತಿನ್ನುವನು;
ತನ್ನ ಯಜಮಾನನನ್ನು ಕಾಪಾಡುವವನು ಘನವನ್ನು ಹೊಂದು
ವನು.
೧೯ ನೀರಿನಲ್ಲಿ ಮುಖವು ಮುಖಕ್ಕೆ ಒಪ್ಪುವ ಪ್ರಕಾರ,
ಮನುಷ್ಯನ ಹೃದಯವು ಮನುಷ್ಯನಿಗೆ ಅದೆ.
೨೦ ಪಾತಾಳವೂ, ನಾಶನ ಸ್ಥಳವೂ ತೃಪ್ತಿಯಾಗುವದಿಲ್ಲ;
ಹಾಗೆಯೇ ಮನುಷ್ಯನ ಕಣ್ಣುಗಳೂ ತೃಪ್ತಿಯಾಗುವದಿಲ್ಲ.
೨೧ ಬೆಳ್ಳಿಗೆ ಮೂಸೆ, ಚಿನ್ನಕ್ಕೆ ಕೋವೆ;
ಮನುಷ್ಯನಿಗೆ ತನ್ನ ಹೊಗಳಿಕೆಯು ಹಾಗೆಯೇ.
೨೨ ಮೂಢನನ್ನು ಬರಳ್ಳಿನ ಕಾಳಿನ ಸಂಗಡ ವನಕೆಯಿಂದ ಕುಟ್ಟಿದರೂ,
ಅವನ ಮೂಢತ್ವವು ಅವನಿಂದ ತೊಲಗದು.
೨೩ ನಿನ್ನ ಕುರಿಗಳ ಸ್ಥಿತಿಯನ್ನು ಚನಾಗಿ ತಿಳಕೋ;
ನಿನ್ನ ಮಂದೆಗಳ ಮೇಲೆ ನಿನ್ನ ಮನಸ್ಸಿನ್ನು.
೨೪ ಯಾಕಂದರೆ ಐಶ್ವರ್ಯ ಯುಗ ಯುಗಕ್ಕಲ್ಲ;
ಕಿರೀಟವು ತಲ ತಲಾಂತರಕ್ಕೂ ಇರುವದೋ?
೨೫ ಹುಲ್ಲು ಕಾಣ ಬಂತು; ಹಸುರು ಹುಲ್ಲು ತೋರಿ ಅದೆ;
ಬೆಟ್ಟಗಳ ಫಲ್ಯಗಳು ಕೂಡಿಸಲ್ಪಟ್ಟಿವೆ.
೨೬ ಕುರಿಮರಿಗಳು ನಿನ್ನ ವಸ್ತ್ರಕ್ಕೂ, ಹೋತಗಳು ಹೊಲದ ಕ್ರಯ
ವೂ, ಆಗುವೆ.
೨೭ ಮತ್ತು ನಿನ್ನ ಆಹಾರಕ್ಕೂ, ನಿನ್ನ ಮನೆಯ ಆಹಾರಕ್ಕೂ,
ನಿನ್ನ ದಾಸಿಯರ ಜೀವಕ್ಕೂ, ಆಡಿನ ಹಾಲು ಸಾಕಾಗುವಷ್ಟು
ಇರುವದು.

## ೨೯ ಸಂಧಿ.

೧ ಹಿಂದಟ್ಟುವವನಿಲ್ಲದೆ, ದುಷ್ಟರು ಓಡಿ ಹೋಗುತ್ತಾರೆ;
ಆದರೆ ನೀತಿವಂತರು ಪ್ರಾಯ ಸಿಂಹದ ಹಾಗೆ ಭರವಸವಾಗಿದ್ದಾರೆ.
೨ ದೇಶದ ದ್ರೋಹಕ್ಕೋಸ್ಕರ ಅದರ ಪ್ರಧಾನರು ಅನೇಕರಾಗಿ
ದ್ದಾರೆ;
ಆದರೆ ಗ್ರಹಿಕೆಯೂ ತಿಳುವಿಕೆಯೂ ಉಳ್ಳ ಜನರಿಂದ ಅದರ ಸ್ಥಿತಿ
ವೃದ್ಧಿಯಾಗುತ್ತದೆ.
೩ ದರಿದ್ರರನ್ನು ಬಲಾತ್ಕಾರ ಮಾಡುವ ಬಡ ಮನುಷ್ಯನೂ,
ಆಹಾರ ಬಿಡದ ಹಾಗೆ ಹೊಯ್ಯುವ ಮಳೆಯೂ, ಒಂದೇ.
೪ ನ್ಯಾಯಪ್ರಮಾಣವನ್ನು ಬಿಟ್ಟು ಬಿಡುವವರು ದುಷ್ಟನನ್ನು ಸ್ತು
ತಿಸುತ್ತಾರೆ;
ಆದರೆ ನ್ಯಾಯಪ್ರಮಾಣವನ್ನು ಕೈಕೊಳ್ಳುವವರು ಅವರ ಸಂ
ಗಡ ವಾಗ್ವಾದ ಮಾಡುತ್ತಾರೆ.
೫ ಕೆಟ್ಟ ಜನರು ನ್ಯಾಯವನ್ನು ಗ್ರಹಿಸುವದಿಲ್ಲ;
ಆದರೆ ಕರ್ತನನ್ನು ಹುಡುಕುವವರು ಎಲ್ಲಾ ಗ್ರಹಿಸುವರು.
೬ ತನ್ನ ಪಂಪೂರ್ಣತೆಯಲ್ಲಿ ನಡೆದು ಕೊಳ್ಳುವ ಬಡವನು,
ಮಾರ್ಗಗಳನ್ನು ಡೊಂಕು ಮಾಡುವ ಐಶ್ವರ್ಯವಂತನಿಗಿಂತ
ವಾಸಿ.
೭ ನ್ಯಾಯಪ್ರಮಾಣವನ್ನು ಕೈಕೊಳ್ಳುವವನು ಗ್ರಹಿಕೆಯುಳ್ಳ
ಮಗನಾಗಿದ್ದಾನೆ;
ಆದರೆ ದುಂದುಗಾರರಿಗೆ ಸ್ನೇಹಿತನಾಗಿರುವವನು ತನ್ನ ತಂದೆಯ
ನ್ನು ಅವಮಾನ ಮಾಡುತ್ತಾನೆ.
೮ ತನ್ನ ದ್ರವ್ಯವನ್ನು ಅನ್ಯಾಯದ ಬಡ್ಡಿಯಿಂದಲೂ, ದುರ್ಲಾಭ
ದಿಂದಲೂ, ಹೆಚ್ಚಿಸುವವನು
ದರಿದ್ರನನ್ನು ಕರುಣಿಸುವವನಿಗೋಸ್ಕರ ಅದನ್ನು ಕೂಡಿಸು
೯ ನ್ಯಾಯಪ್ರಮಾಣವನ್ನು ಕೇಳದ ಹಾಗೆ, [ತ್ತಾನೆ.
ಕಿವಿಯನ್ನು ತಿರುಗಿಸುವವನ ಪ್ರಾರ್ಥನೆಯು ಅಸಹ್ಯವಾಗಿದೆ.
೧೦ ನೆಟ್ಟಿನೆಯವರನ್ನು ಕೆಟ್ಟ ಮಾರ್ಗದಲ್ಲಿ ತಪ್ಪು ಹೋಗ ಮಾಡು
ವವನು ತನ್ನ ಕುಣಿಯಲ್ಲಿ ತಾನೇ ಬೀಳುವನು;
ಆದರೆ ಸಂಪೂರ್ಣರು ಬಳ್ಳೋದನ್ನು ಬಾಧ್ಯವಾಗಿ ಹೊಂದುವರು
೧೧ ಐಶ್ವರ್ಯವಂತನು ಸ್ವಂತ ಕಣ್ಣುಗಳಿಗೆ ಜ್ಞಾನಿಯಾಗಿದ್ದಾನೆ;
ಆದರೆ ಗ್ರಹಿಕೆಯುಳ್ಳ ದರಿದ್ರನು ಅವನನ್ನು ಪರೀಕ್ಷಿಸುವನು.
೧೨ ನೀತಿವಂತರು ಉತ್ಸಾಹ ಪಡುವಾಗ, ಬಹಳ ಮಹಿಮೆಯು ಅದೆ;
ಆದರೆ ದುಷ್ಟರು ಏಳುವಾಗ, ಜನರು ಅಡಗಿ ಕೊಳ್ಳುತ್ತಾರೆ.
೧೩ ತನ್ನ ದ್ರೋಹಗಳನ್ನು ಮುಚ್ಚಿ ಕೊಳ್ಳುವವನು ಸಫಲವಾಗನು;
ಆದರೆ ಅರಿಕೆ ಮಾಡಿ, ಬಿಟ್ಟು ಬಿಡುವವನು ಕರುಣಿಸಲ್ಪಡುವನು.
೧೪ ಯಾವಾಗಲೂ ಹೆದರುವ ಮನುಷ್ಯನು ಭಾಗ್ಯವಂತನು;
ಆದರೆ ತನ್ನ ಹೃದಯವನ್ನು ಕಠಿಣ ಪಡಿಸುವವನು ಕೇಡಿನಲ್ಲಿ
ಬೀಳುವನು.
೧೫ ದರಿದ್ರ ಜನವನ್ನು ಆಳುವ ದುಷ್ಟನು
ಗರ್ಜಿಸುವ ಸಿಂಹವೂ, ತಿರುಗಾಡುವ ಕರಡಿಯೂ, ಆಗಿದ್ದಾನೆ.
೧೬ ವಿವೇಕಹೀನ ನಾಯಕನು ಬಹಳವಾಗಿ ಬಾಧೆ ಪಡಿಸುವವನಾಗಿದ್ದಾನೆ;
ಆದರೆ ದುರ್ಲಾಭ ಹಗೆ ಮಾಡುವವನು ದಿವಸಗಳನ್ನು ದೀರ್ಘ
ಮಾಡುತ್ತಾನೆ.
೧೭ ಮನುಷ್ಯನ ರಕ್ತಪರಾಧ ಹೊರುವವನು
ಕುಣಿಯ ಮಟ್ಟಿಗೂ ಓಡುವನು; ಅವನನ್ನು ಹಿಡಿಯ ಬೇಡ.
೧೮ ಸಂಪೂರ್ಣನಾಗಿ ನಡೆದು ಕೊಳ್ಳುವವನು ರಕ್ಷಿಸಲ್ಪಡುವನು;
ಆದರೆ ಮಾರ್ಗಗಳನ್ನು ಡೊಂಕು ಮಾಡುವವನು ಇದ್ದಕ್ಕಿದ್ದ
ಹಾಗೆ ಬೀಳುವನು.
೧೯ ತನ್ನ ಭೂಮಿಯನ್ನು ಆರಂಭ ಮಾಡುವವನು ಆಹಾರದಿಂದ
ತೃಪ್ತಿಯಾಗುವನು;
ಆದರೆ ವ್ಯರ್ಥರನ್ನು ಹಿಂದಟ್ಟುವವನು ಬಡತನದಿಂದ ತೃಪ್ತಿ
ಯಾಗುವನು.



೨೦ ನಂಬಿಕೆಯುಳ್ಳ ಮನುಷ್ಯನಿಗೆ ಆಶೀರ್ವಾದಗಳು ಬಹಳ;
ಆದರೆ ಐಶ್ವರ್ಯವಂತನಾಗುವದಕ್ಕೆ ತ್ವರೆಕೆ ಪಡುವವನು ಅಪ
ರಾಧವಿಲ್ಲದೆ ಇರನು.
೨೧ ಮುಖವಾಕ್ಷಿಣ್ಯ ಮಾಡುವದು ಬಳ್ಳೋದಲ್ಲ;
ಕೊಟ್ಟಿ ತುಂಡಿಗೋಸ್ಕರ ಅಂಥ ಪುರುಷನು ದ್ರೋಹ ಮಾಡು
ವನು.
೨೨ ದ್ರವ್ಯಕ್ಕೋಸ್ಕರ ಅವಸರ ಪಡುವವನಿಗೆ ಕೆಟ್ಟ ಕಣ್ಣು ಉಂಟು;
ಅವನಿಗೆ ಕೊರತೆ ಬರುವದೆಂದು, ಅವನಿಗೆ ತಿಳಿಯದು.
೨೩ ನಾಲಿಗೆಯನ್ನು ನುಣ್ಣಗೆ ಮಾಡುವವನಿಗಿಂತ
ಮನುಷ್ಯರನ್ನು ಗದರಿಸುವವನು ಕಡೆಯಲ್ಲಿ ಹೆಚ್ಚು ದಯ ಹೊಂ
ದುವನು.
೨೪ ತಂದೆ ತಾಯಿಗಳನ್ನು ಸುಲುಕೊಂಡು, ಅದು ದ್ರೋಹವಲ್ಲವೆಂ
ದು ಹೇಳುವವನು
ನಾಶ ಮಾಡುವ ಮನುಷ್ಯನಿಗೆ ಜತೆಗಾರನಾಗಿದ್ದಾನೆ.
೨೫ ಉಬ್ಬಿದ ಮನಸ್ಸುಳ್ಳವನು ಝಗಳಾಟವನ್ನು ಎಬ್ಬಿಸುತ್ತಾನೆ.
ಆದರೆ ಕರ್ತನ ಮೇಲೆ ಭರವಸವಿಡುವವನು ಪುಷ್ಟಿಯಾಗುವನು;
೨೬ ತನ್ನ ಹೃದಯದಲ್ಲಿ ಭರವಸವಿಡುವವನು ಹುಚ್ಚನಾಗಿದ್ದಾನೆ;
ಆದರೆ ಜ್ಞಾನದಿಂದ ನಡೆಯುವವನು ತಪ್ಪಿಸಲ್ಪಡುವನು.
೨೭ ಬಡವನಿಗೆ ಕೊಡುವವನು ಕೊರತೆ ಪಡನು;
ಆದರೆ ತನ್ನ ಕಣ್ಣುಗಳನ್ನು ಮುಚ್ಚಿ ಕೊಳ್ಳುವವನಿಗೆ ಅನೇಕ
ಶಾಪಗಳು ಇರುವವು.
೨೮ ದುಷ್ಟರು ಏಳುವಾಗ, ಜನರು ಅಡಗಿ ಕೊಳ್ಳುತ್ತಾರೆ;
ಆದರೆ ಅವರು ನಾಶವಾಗುವಾಗ, ನೀತಿವಂತರು ಹೆಚ್ಚುತ್ತಾರೆ.

## ೨೯ ಸಂಧಿ.

೧ ಗದರಿಕೆಗಳನ್ನು ಹೊಂದಿ, ಕುತ್ತಿಗೆ ಘಟ್ಟಿ ಮಾಡಿ ಕೊಳ್ಳುವವನು,
ಕ್ಷಣದಲ್ಲಿ ಮುರಿಯಲ್ಪಡುವನು; ಗುಣವಾಗುವದೇ ಇಲ್ಲ.
೨ ನೀತಿವಂತರು ಹೆಚ್ಚುವಾಗ, ಜನರು ಸಂತೋಷ ಪಡುತ್ತಾರೆ;
ಆದರೆ ದುಷ್ಟನು ಏಳುವಾಗ, ಜನರು ಮೂಲುಗುತ್ತಾರೆ.
೩ ಜ್ಞಾನಪ್ರಿಯ ಮನುಷ್ಯನು ತನ್ನ ತಂದೆಯನ್ನು ಸಂತೋಷ
ಪಡಿಸುತ್ತಾನೆ;
ಆದರೆ ಸೂಳೆಯರ ಗೋಜಿಗೆ ಹೋಗುವವನು ದ್ರವ್ಯವನ್ನು
ನಾಶ ಮಾಡುತ್ತಾನೆ.
೪ ಅರಸನು ನ್ಯಾಯದಿಂದ ದೇಶವನ್ನು ದೃಢ ಪಡಿಸುತ್ತಾನೆ;
ಆದರೆ ಕಾಣಿಕೆಗಳ ಮನುಷ್ಯನು ಅದನ್ನು ಹಾಳು ಮಾಡುತ್ತಾನೆ.
೫ ತನ್ನ ಸ್ನೇಹಿತನಿಗೆ ನುಣ್ಣಗೆ ಮಾತಾಡುವ ಮನುಷ್ಯನು
ಅವನ ಹೆಜ್ಜೆಗಳಿಗೆ ಬಲೆ ಬಿಡುತ್ತಾನೆ.
೬ ಕೆಟ್ಟ ಮನುಷ್ಯನ ದ್ರೋಹದಲ್ಲಿ ಉರ್ಲು ಉಂಟು;
ಆದರೆ ನೀತಿವಂತನು ಆನಂದಸ್ವರ ಮಾಡಿ, ಸಂತೋಷ
ಪಡುತ್ತಾನೆ.
೭ ನೀತಿವಂತನು ದರಿದ್ರರ ನ್ಯಾಯವನ್ನು ತಿಳಕೊಳ್ಳುತ್ತಾನೆ;
ದುಷ್ಟನು ತಿಳುವಿಕೆಯನ್ನು ಗ್ರಹಿಸುವದಿಲ್ಲ.
೮ ಕುಚೋದ್ಯಗಾರರು ಪಟ್ಟಣವನ್ನು ಉರಿಯ ಮಾಡುತ್ತಾರೆ;
ಆದರೆ ಜ್ಞಾನಿಗಳು ಕೋಪವನ್ನು ತಿರಿಗಿಸುತ್ತಾರೆ.
೯ ಜ್ಞಾನಿಯು ಮೂಢನ ಸಂಗಡ ವ್ಯಾಜ್ಯವಾಡಿದರೆ,
ಕೋಪಿಸಿದರೂ, ನಕ್ಕರೂ, ಶಾಂತಿ ಇಲ್ಲ.
೧೦ ರಕ್ತಪ್ರಿಯರು ಸಂಪೂರ್ಣನನ್ನು ಹಗೆ ಮಾಡುತ್ತಾರೆ;
ಆದರೆ ನೆಟ್ಟಿನೆಯವರು ಅವನ ಪ್ರಾಣವನ್ನು ಹುಡುಕುತ್ತಾರೆ.
೧೧ ಹುಚ್ಚನು ತನ್ನ ಆತ್ಮವನ್ನೆಲ್ಲಾ ಹೊರಗೆ ತರುತ್ತಾನೆ;
ಆದರೆ ಜ್ಞಾನಿಯು ಅದನ್ನು ಹಿಂದಕ್ಕೆ ಅಣಗಿಸುತ್ತಾನೆ.
೧೨ ಆಳುವವನು ಸುಳ್ಳು ಮಾತಿಗೆ ಕಿವಿ ಕೊಟ್ಟಿರೆ,
ಅವನ ಸೇವಕರೆಲ್ಲರು ದುಷ್ಟರಾಗುತ್ತಾರೆ.
೧೩ ಬಡವನೂ ತಂಟೆಯವನೂ ಸಂಧಿಸಿ ಕೊಳ್ಳುತ್ತಾರೆ;
ಇಬ್ಬರ ಕಣ್ಣುಗಳನ್ನು ಬೆಳಗ ಮಾಡುವವನು ಕರ್ತನೇ.
೧೪ ಅರಸನು ದರಿದ್ರರಿಗೆ ಸತ್ಯದಿಂದ ನ್ಯಾಯ ತೀರಿಸಿದರೆ,
ಅವನ ಸಿಂಹಾಸನವು ಎಂದೆಂದಿಗೂ ಸ್ಥಿರವಾಗಿರುವದು.
೧೫ ಬೆತ್ತವೂ ಗದರಿಕೆಯೂ ಜ್ಞಾನವನ್ನು ಕೊಡುತ್ತವೆ;
ಆದರೆ ಅಂಕೆ ಇಲ್ಲದ ಹುಡುಗನು ತಾಯಿಗೆ ನಾಚಿಕೆಯಾಗಿದ್ದಾನೆ.
೧೬ ದುಷ್ಟರು ಹೆಚ್ಚುವಾಗ, ದ್ರೋಹವು ಹೆಚ್ಚುತ್ತದೆ;
ಆದರೆ ನೀತಿವಂತರು ಅವರ ಬೀಳುವಿಕೆಯನ್ನು ನೋಡುವರು.
೧೭ ನಿನ್ನ ಮಗನನ್ನು ಶಿಕ್ಷಿಸು; ಆಗಲವನು ನಿನ್ನನ್ನು ಶಾಂತಿಪಡಿಸಿ,
ನಿನ್ನ ಪ್ರಾಣಕ್ಕೆ ಆನಂದ ಕೊಡುವನು.
೧೮ ದರ್ಶನವಿಲ್ಲದಲ್ಲಿ ಜನರು ಸ್ವಯಿಚ್ಛೆಯಾಗಿ ಹೋಗುತ್ತಾರೆ;
ಆದರೆ ನ್ಯಾಯಪ್ರಮಾಣವನ್ನು ಕೈಕೊಳ್ಳುವವನೇ ಭಾಗ್ಯವಂ
೧೯ ದಾಸನು ಮಾತುಗಳಿಂದ ಶಿಕ್ಷಿತನಾಗುವದಿಲ್ಲ; [ತನು.
ಯಾಕಂದರೆ ಗ್ರಹಿಸಿದರೂ, ಉತ್ತರ ಕೊಡುವದಿಲ್ಲ.
೨೦ ತನ್ನ ಮಾತುಗಳಲ್ಲಿ ತ್ವರೆಕೆ ಪಡುವ ಮನುಷ್ಯನನ್ನು ಕಂಡ್ಯಾ?
ಅವನಿಗಿಂತ ಹುಚ್ಚನನ್ನು ಕುರಿತು ನಿರೀಕ್ಷೆ ಉಂಟು.
೨೧ ದಾಸನನ್ನು ಬಾಲ್ಯದಿಂದ ಮೆತ್ತಗೆ ಸಾಕಿದರೆ,
ಕಡೆಯಲ್ಲಿ ಮಗನಾಗುವನು.
೨೨ ಕೋಪಿಷ್ಠನು ಝಗಳಾಟವನ್ನು ಹುಟ್ಟಿಸುತ್ತಾನೆ;
ಉರಿಗೊಂಡವನಲ್ಲಿ ದ್ರೋಹವು ಬಹಳ.
೨೩ ಮನುಷ್ಯನ ಗರ್ವವು ಅವನನ್ನು ತಗ್ಗಿಸುವದು;
ಆದರೆ ತಗ್ಗಾದ ಆತ್ಮವುಳ್ಳವನು ಘನವನ್ನು ಹೊಂದುವನು.
೨೪ ಕಳ್ಳನ ಸಂಗಡ ಪಾಲಿತುವವನು ತನ್ನ ಪ್ರಾಣವನ್ನು ಹಗೆ
ಮಾಡುತ್ತಾನೆ,
ಅವನು ಶಾಪವನ್ನು ಕೇಳಿ, ತಿಳಿಸುವದಿಲ್ಲ.
೨೫ ಮನುಷ್ಯನ ಹೆದರಿಕೆಯು ಉರ್ಲು ಬಿಡುತ್ತದೆ;
ಆದರೆ ಕರ್ತನಲ್ಲಿ ಭರವಸವಿಡುವವನು ಭದ್ರವಾಗಿರುವನು.
೨೬ ಆಳುವವನ ಮುಖವನ್ನು ಹುಡುಕುವವರು ಅನೇಕರು;
ಆದರೆ ಮನುಷ್ಯನ ನ್ಯಾಯತೀರ್ಪು ಕರ್ತನಿಂದಲೇ.
೨೭ ಅನ್ಯಾಯವುಳ್ಳವನು ನೀತಿವಂತರಿಗೆ ಅಸಹ್ಯ;
ನೆಟ್ಟನೆಯ ಮಾರ್ಗದವನು ದುಷ್ಟನಿಗೆ ಅಸಹ್ಯ.

## ಐದನೇ ಭಾಗ.

## ೩೦ ಸಂಧಿ.

೧ ಯಾಕೆಯ ಮಗನಾದ ಅಗೂರನ ದೈವೋತ್ತರ ವಾಕ್ಯಗಳು;
ಆ ಪುರುಷನು ಇತಿಯೇಲನಿಗೆ ಹೇಳಿದ್ದು; ಇತಿಯೇಲನಿಗೂ ಉ
ಕಾಲನಿಗೂ ಸಹ.
೨ ಹೌದು, ಮನುಷ್ಯರಿಗಿಂತ ನಾನು ಪಶುಪ್ರಾಣಿಯಾಗಿದ್ದೇನೆ;
ಮನುಷ್ಯನ ಗ್ರಹಿಕೆಯು ನನ್ನಲ್ಲಿ ಇಲ್ಲ.

೩ ನಾನು ಜ್ಞಾನವನ್ನು ಕಲಿಯಲಿಲ್ಲ;
ಪರಿಶುದ್ಧರ ತಿಳುವಿಕೆಯನ್ನು ತಿಳಿಯಲಿಲ್ಲ.
೪ ಆಕಾಶಕ್ಕೆ ಏರಿ, ಇಳಿದವನ್ಯಾರು?
ಘಾಳಿಯನ್ನು ತನ್ನ ಮುಷ್ಟಿಯಲ್ಲಿ ಕೂಡಿಸಿ ಕೊಂಡವನ್ಯಾರು?
ವಸ್ತ್ರದಲ್ಲಿ ನೀರುಗಳನ್ನು ಕಟ್ಟಿದವನ್ಯಾರು?
ಭೂಮಿಯ ಕೊನೆಗಳನ್ನೆಲ್ಲಾ ಸ್ಥಾಪಿಸಿದವನ್ಯಾರು?
ಅವನ ಹೆಸರೇನು? ಅವನ ಮಗನ ಹೆಸರೇನು? ನಿನಗೆ ತಿಳಿದರೆಯೋ!
೫ ದೇವರ ಮಾತುಗಳೆಲ್ಲಾ ಪುಟಕ್ಕೆ ಹಾಕಲ್ಪಟ್ಟಿವೆ;
ಅವನು ತನ್ನನ್ನು ಆಶ್ರಯಿಸಿಕೊಳ್ಳುವವರಿಗೆ ಗುರಾಣಿಯಾಗಿದ್ದಾನೆ.
೬ ಅವನು ನಿನ್ನನ್ನು ಗದರಿಸಲು, ನೀನು ಸುಳ್ಳುಗಾರನಾಗದ ಹಾಗೆ,
ಅವನ ಮಾತುಗಳಿಗೆ ಏನೂ ಕೂಡಿಸ ಬೇಡ.
೭ ಎರಡನ್ನು ನಿನ್ನಿಂದ ಕೇಳಿ ಕೊಂಡಿದ್ದೇನೆ;
ನಾನು ಸಾಯುವ ಮಟ್ಟಿಗೂ, ಅವುಗಳನ್ನು ನನಗೆ ಹಿಂದೆಗೆಯ ಬೇಡ.
೮ ವ್ಯರ್ಥತ್ವವನ್ನೂ, ಸುಳ್ಳು ಮಾತನ್ನೂ, ನನಗೆ ದೂರ ಮಾಡು;
ಬಡತನವನ್ನಾದರೂ, ಐಶ್ವರ್ಯವನ್ನಾದರೂ ನನಗೆ ಕೊಡ ಬೇಡ;
ಮಿತಿಯಾದ ಆಹಾರವನ್ನು ನನಗೆ ಉಣ್ಣಿಸು.
೯ ಇಲ್ಲದಿದ್ದರೆ, ನಾನು ತೃಪ್ತಿಯಾಗಿದ್ದು, ಅಲ್ಲಗಳೆದು, ಕರ್ತನು ಯಾರೆಂದು ಹೇಳೇನು;
ಇಲ್ಲವೆ ಬಡವನಾಗಿ ಕಳ್ಳತನ ಮಾಡಿ, ನನ್ನ ದೇವರ ಹೆಸರನ್ನು ಅಪವಿತ್ರ ಮಾಡೇನು.
೧೦ ಸೇವಕನ ಮೇಲೆ ಅವನ ಯಜಮಾನನಿಗೆ ಚಾಡಿ ಹೇಳ ಬೇಡ;
ಹೇಳಿದರೆ, ಅವನು ನಿನ್ನನ್ನು ಶಪಿಸುವನು, ನೀನು ಅಪರಾಧಿಯಾಗುವಿ.
೧೧ ತನ್ನ ತಂದೆಯನ್ನು ಶಪಿಸಿ, ತನ್ನ ತಾಯನ್ನು ಆಶೀರ್ವದಿಸದೆ ಇರುವ ವಂಶ ಉಂಟು.
೧೨ ತನ್ನ ಕಣ್ಣುಗಳಿಗೆ ಶುದ್ಧವಾಗಿ, ಮೈಲಿಗೆ ತೊಳೆದು ಕೊಳ್ಳದೆ ಇರುವ ವಂಶ ಉಂಟು.
೧೩ ಬಂದು ವಂಶ ಉಂಟು—ಅದರ ಕಣ್ಣುಗಳು ಎಷ್ಟೋ ಎತ್ತರವಾಗಿವೆ! ಅದರ ಕಣ್ಣು ರೆಪ್ಪೆಗಳು ಎತ್ತಲ್ಪಟ್ಟಿವೆ.
೧೪ ಬಂದು ವಂಶ ಉಂಟು—ಅದರ ಹಲ್ಲುಗಳು ಕತ್ತಿಗಳು; ಅದರ ದವಡೆಗಳು ಚೂರಿಗಳು;
ಅವು ದೀನರನ್ನು ದೇಶದೊಳಗಿಂದಲೂ, ಬಡವರನ್ನು ಮನುಷ್ಯರೊಳಗಿಂದಲೂ, ತಿಂದು ಬಿಡುತ್ತವೆ.
೧೫ ಜಿಗಣಿಗೆ—ಕೊಡು, ಕೊಡು, ಅನ್ನುವ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ.
ಈ ಮೂರು ತೃಪ್ತಿಯಾಗುವದಿಲ್ಲ; ಸಾಕೆಂದು ಹೇಳದವುಗಳು ನಾಲ್ಕು ಉಂಟು—
೧೬ ಪಾತಾಳವೂ, ಬಂಜೆಯಾದ ಗರ್ಭವೂ,
ನೀರು ತುಂಬದ ಭೂಮಿಯು, ಮತ್ತು ಸಾಕನ್ನದ ಬೆಂಕಿಯೂ.
೧೭ ತಂದೆಯನ್ನು ಗೇಲಿ ಮಾಡಿ, ತಾಯಿಗೆ ವಿಧೇಯವಾಗಿರುವದಕ್ಕೆ ತಿರಸ್ಕರಿಸುವ ಕಣ್ಣನ್ನು
ತಗ್ಗಿನ ಕಾಗೆಗಳು ಕಿತ್ತು, ಹದ್ದಿನ ಮರಿಗಳು ತಿನ್ನುವವು.
೧೮ ಈ ಮೂರು ನನಗೆ ಅದ್ಭುತವಾದವುಗಳು;
ನನಗೆ ತಿಳಿಯದವುಗಳು ನಾಲ್ಕು ಉಂಟು—
೧೯ ಆಕಾಶದಲ್ಲಿ ಹದ್ದಿನ ಮಾರ್ಗವೂ,
ಬಂಡೆಯ ಮೇಲೆ ಹಾವಿನ ಮಾರ್ಗವೂ,
ಸಮುದ್ರದ ಮಧ್ಯದಲ್ಲಿ ಹಡಗದ ಮಾರ್ಗವೂ,
ಕನ್ಯೆಯ ಸಂಗಡ ಪುರುಷನ ಮಾರ್ಗವೂ.
೨೦ ವ್ಯಭಿಚಾರಿಯಾದ ಸ್ತ್ರೀಯ ಮಾರ್ಗವು ಹಾಗೆಯೇ;
ಅವಳು ಉಂಡು, ಬಾಯಿ ಬರಸಿ,—ನಾನು ಪಾತಕ ಮಾಡಲಿಲ್ಲವೆಂದು, ಹೇಳುತ್ತಾಳೆ.
೨೧ ಮೂರರ ನಿಮಿತ್ತ ದೇಶವು ಕದಲುತ್ತದೆ;
ನಾಲ್ಕರ ನಿಮಿತ್ತ ಅದು ತಾಳಲಾರದು—
೨೨ ದೊಕೆತನ ಮಾಡುವ ದಾಸನ ನಿಮಿತ್ತವೂ,
ಕೊಟ್ಟಿ ತುಂಬಿದ ಬುದ್ಧಿಹೀನನ ನಿಮಿತ್ತವೂ.
೨೩ ಗಂಡನನ್ನು ಹೊಂದಿದ ಹಗೆ ಮಾತಲ್ಪಟ್ಟವಳ ನಿಮಿತ್ತವೂ;
ತನ್ನ ಯಜಮಾನಿಯ ಬಾಧ್ಯಸ್ಥಳಾದ ದಾಸಿಯ ನಿಮಿತ್ತವೂ.
೨೪ ಈ ನಾಲ್ಕು ಭೂಮಿಯಲ್ಲಿ ಚಿಕ್ಕವುಗಳಾಗಿವೆ—
ಆದರೆ ಜ್ಞಾನವನ್ನು ಕಲಿತ ಜ್ಞಾನಿಗಳಾಗಿವೆ.
೨೫ ಇರುವೆಗಳು ತ್ರಾಣವಿಲ್ಲದ ಪ್ರಜೆ;
ಆದಾಗ್ಯೂ, ಬೇಸಿಗೆ ಕಾಲದಲ್ಲಿ ತಮ್ಮ ಆಹಾರ ಸಿದ್ಧ ಮಾಡಿ ಕೊಳ್ಳುತ್ತವೆ.
೨೬ ಮೊಲಗಳು ಬಲವಿಲ್ಲದ ಪ್ರಜೆ;
ಆದಾಗ್ಯೂ, ಬಂಡೆಯಲ್ಲಿ ತಮ್ಮ ಮನೆ ಇರಿಸುತ್ತವೆ.
೨೭ ಮಿಡತೆಗಳಿಗೆ ಅರಸು ಇಲ್ಲ;
ಆದಾಗ್ಯೂ ಅವುಗಳೆಲ್ಲಾ ಕ್ರಮವಾದ ಗುಂಪಾಗಿ ಹೊರಡುತ್ತವೆ.
೨೮ ಹಲ್ಲಿ ಕೈಗಳಿಂದ ಹಿಡು ಕೊಳ್ಳುತ್ತದೆ;
ಆದಾಗ್ಯೂ ಅರಸರ ಅರಮನೆಗಳಲ್ಲಿ ಇರುತ್ತದೆ.
೨೯ ಈ ಮೂರು ಚನ್ನಾಗಿ ನಡೆಯುತ್ತವೆ;
ನಾಲ್ಕು ಚನ್ನಾಗಿ ಹೋಗುತ್ತವೆ—
೩೦ ಮೃಗಗಳಲ್ಲಿ ಪರಾಕ್ರಮವುಳ್ಳದ್ದಾಗಿ, ಯಾವದರ ಸಮುಖದಿಂದಾದರೂ ಹಿಂದಿರುಗದ ಸಿಂಹವೂ;
೩೧ ಯುದ್ಧ ಕುದುರೆಯೂ; ಹೋತವೂ; ಯಾರೂ ಎದುರಿಸಲಾರದ ಅರಸನೂ.
೩೨ ನೀನು ಉಬ್ಬಿ ಕೊಂಡು, ಹುಚ್ಚು ಮಾಡಿ ಇದ್ದರೆ,
ಕೆಟ್ಟದ್ದನ್ನು ಯೋಚಿಸಿ ಇದ್ದರೆ,
ಬಾಯ ಮೇಲೆ ಕೈ ಹಾಕು.
೩೩ ಹಾಲು ಮಥಿಸಿದರೆ, ಬೆಣ್ಣೆ ಬರುತ್ತದೆ;
ಮೂಗು ಮಥಿಸಿದರೆ, ರಕ್ತ ಬರುತ್ತದೆ;
ಕೋಪ ಮಥಿಸಿದರೆ, ಝಗಳ ಬರುತ್ತದೆ.

## ೩೧ ಸಂಧಿ.

೧ ಅರಸನಾದ ಲೆಮುವೇಲನ ಮಾತುಗಳು; ಅವನ ತಾಯಿ ಅವನಿಗೆ ಬೋಧಿಸಿದ ದೈವೋತ್ತರವು.
೨ ಏನು, ನನ್ನ ಮಗನೇ! ಏನು, ನನ್ನ ಗರ್ಭದ ಮಗನೇ!
ಏನು, ನನ್ನ ಹರಿಕೆಗಳ ಮಗನೇ!



೩ ನಿನ್ನ ಬಲವನ್ನು ಸ್ತ್ರೀಯರಿಗೂ,
ನಿನ್ನ ಮಾರ್ಗಗಳನ್ನು ಅರಸುಗಳನ್ನು ಕೆಡಿಸುವಂಥಾದ್ದಕ್ಕೂ, ಕೊಡ ಬೇಡ.
೪ ದ್ರಾಕ್ಷೇರಸ ಕುಡಿಯುವದು ಅರಸರಿಗೆ ಬೇಡ,
ಲೆಮುವೇಲನೇ, ಅರಸರಿಗೆ ಬೇಡ;
ಪ್ರಭುಗಳಿಗೆ ಸಾರಾಯಿ ಆಶೆ ಬೇಡ.
೫ ಕುಡಿದರೆ, ಅವನು ಕಟ್ಟಳೆಯನ್ನು ಮರೆತು,
ದೈನ್ಯದ ಮಕ್ಕಳೆಲ್ಲರ ನ್ಯಾಯವನ್ನು ತಿರುಗಿಸ್ಯಾನು.
೬ ನಾಶವಾಗುವವನಿಗೆ ಸಾರಾಯಿನೂ,
ಪ್ರಾಣದಲ್ಲಿ ದುಃಖ ಪಡುವವರಿಗೆ ದ್ರಾಕ್ಷೇರಸವನೂ, ಕೊಡಿರಿ.
೭ ಅವನು ಕುಡಿದು, ತನ್ನ ಬಡತನವನ್ನು ಮರೆತು,
ತನ್ನ ಕಷ್ಟವನ್ನು ಇನ್ನು ನೆನಸದೆ ಇರಲಿ.
೮ ಮೂಗನಿಗೋಸ್ಕರವೂ, ದಿಕ್ಕಿಲ್ಲದ ಮಕ್ಕಳೆಲ್ಲರ ನ್ಯಾಯ ಕ್ಕೋಸ್ಕರವೂ, ನಿನ್ನ ಬಾಯಿ ತೆಗೆ.
೯ ನಿನ್ನ ಬಾಯಿ ತೆಗೆ, ನೀತಿಯಿಂದ ನ್ಯಾಯ ತೀರಿಸು;
ದೀನನಿಗೂ, ಬಡವನಿಗೂ ತೀರ್ಪು ಮಾಡು.
೧೦ ಗುಣವತಿಯಾದ ಹೆಂಡತಿಯನ್ನು ಕಂಡು ಕೊಳ್ಳುವವನ್ಯಾರು? ಅವಳ ಕ್ರಯ ಮುತ್ತುಗಳಿಗಿಂತ ಬಹಳ ಹೆಚ್ಚಾಗಿದೆ.
೧೧ ಅವಳ ಗಂಡನ ಹೃದಯವು ಅವಳಲ್ಲಿ ಭರವಸ ಇಡುತ್ತದೆ; ಆದಾಯವು ಕೊರತೆಯಾಗುವದಿಲ್ಲ.
೧೨ ತನ್ನ ಜೀವದ ದಿವಸಗಳೆಲ್ಲಾ ಅವನಿಗೆ ಕೆಟ್ಟದ್ದನ್ನಲ್ಲ, ಒಳ್ಳೇದ ನ್ನೇ ಮಾಡುತ್ತಾಳೆ.
೧೩ ಉಣ್ಣೆಯನ್ನೂ ಸೂಬನ್ನೂ ಹುಡುಕಿ,
ತನ್ನ ಕೈಗಳಿಂದ ಸಂತೋಷವಾಗಿ ಕೆಲಸ ಮಾಡುತ್ತಾಳೆ.
೧೪ ವರ್ತಕನ ಹಡಗಗಳ ಹಾಗಿದ್ದು,
ದೂರದಿಂದ ತನ್ನ ಆಹಾರವನ್ನು ತರುತ್ತಾಳೆ.
೧೫ ರಾತ್ರಿ ಇರುವಾಗಲೇ ಎದ್ದು, ತನ್ನ ಮನೆಗೆ ಭೋಜನವನ್ನೂ,
ತನ್ನ ದಾಸಿಯರಿಗೆ ಭತ್ಯವನ್ನೂ, ಕೊಡುತ್ತಾಳೆ.
೧೬ ಹೊಲವನ್ನು ಆಲೋಚಿಸಿ, ಅದನ್ನು ತೆಗೆದು ಕೊಂಡು,
ತನ್ನ ಕೈಗಳ ಫಲದಿಂದ ದ್ರಾಕ್ಷೇತೋಟವನ್ನು ನೆಡುತ್ತಾಳೆ.
೧೭ ಬಲದಿಂದ ತನ್ನ ನಡುವನ್ನು ಕಟ್ಟಿ ಕೊಂಡು,
ತನ್ನ ತೋಳುಗಳನ್ನು ದೃಢ ಪಡಿಸುತ್ತಾಳೆ.
೧೮ ತನ್ನ ವ್ಯಾಪಾರ ಒಳ್ಳೇದೆಂದು ರುಚಿ ನೋಡುತ್ತಾಳೆ;
ಅವಳ ದೀಪವು ರಾತ್ರಿಯಲ್ಲಿ ಆರಿ ಹೋಗುವದಿಲ್ಲ.
೧೯ ತನ್ನ ಕೈಗಳನ್ನು ರಾಟೆಗೆ ಚಾಚಿ,
ತನ್ನ ಅಂಗೈಯಿಂದ ಕದರನ್ನು ಹಿಡಿಯುತ್ತಾಳೆ.
೨೦ ತನ್ನ ಅಂಗೈ ದೀನನಿಗೆ ನೀಡಿ,
ತನ್ನ ಕೈಗಳನ್ನು ಬಡವನಿಗೆ ಚಾಚುತ್ತಾಳೆ.
೨೧ ತನ್ನ ಮನೆಯವರಿಗೋಸ್ಕರ ಹಿಮಕ್ಕೆ ಭಯ ಪಡುವದಿಲ್ಲ;
ಯಾಕಂದರೆ ಅವಳ ಮನೆಯವರಿಗೆಲ್ಲಾ ರಕ್ತಾಂಬರ ಉಂಟು.
೨೨ ರತ್ನ ಕಂಬಳಿಗಳನ್ನು ಮಾಡಿ ಕೊಳ್ಳುತ್ತಾಳೆ;
ನಾರು ಮಡಿಯೂ ರಕ್ತಾಂಬರವೂ ಅವಳ ಉಡುಪಾಗಿದೆ.
೨೩ ಅವಳ ಗಂಡನು ದೇಶದ ಹಿರಿಯರ ಸಂಗಡ ಕೂತು ಕೊಳ್ಳುವಾಗ, ಬಾಗಲುಗಳಲ್ಲಿ ಹೆಸರ್ಗೊಂಡವನಾಗಿದ್ದಾನೆ.
೨೪ ಚಿತ್ರವಾದ ದುಪ್ಪಟೆಗಳನ್ನು ಮಾಡಿ, ಮಾರುತ್ತಾಳೆ;
ನಡುಕಟ್ಟುಗಳನ್ನು ವರ್ತಕನಿಗೆ ಕೊಡುತ್ತಾಳೆ.
೨೫ ಬಲವೂ ಪ್ರಭೆಯೂ ಅವಳ ಉಡುಪಾಗಿದೆ;
ಬರುವ ದಿವಸವನ್ನು ಕುರಿತು ನಗುತ್ತಾಳೆ.
೨೬ ಜ್ಞಾನದಿಂದ ತನ್ನ ಬಾಯಿ ತೆರೆಯುತ್ತಾಳೆ;
ಕೃಪೆಯ ನ್ಯಾಯಪ್ರಮಾಣವು ಅವಳ ನಾಲಿಗೆಯ ಮೇಲೆ ಅದೆ.
೨೭ ಅವಳು ತನ್ನ ಮನೆಯ ನಡತೆಗಳನ್ನು ಪರಾಮರಿಸಿ,
ಮೈಗಳ್ಳತನದ ರೊಟ್ಟಿ ತಿನ್ನುವದಿಲ್ಲ.
೨೮ ಅವಳ ಮಕ್ಕಳು ಎದ್ದು ಅವಳನ್ನು ಹರಸುತ್ತಾರೆ;
ಅವಳ ಗಂಡನು ಸಹ ಅವಳನ್ನು ಸ್ತುತಿಸುತ್ತಾನೆ.
೨೯ ಅನೇಕ ಕುಮಾರ್ತೆಗಳು ಸಂಪತ್ತು ಉಂಟು ಮಾಡಿದ್ದಾರೆ;
ಆದರೆ ನೀನು ಅವರೆಲ್ಲರಿಗಿಂತ ವಿಶೇಷವಾದಿ.
೩೦ ಸೌಂದರ್ಯವು ಮೋಸವಾಗಿದೆ; ಅಂದವು ಮಾಯವಾಗಿದೆ;
ಆದರೆ ಕರ್ತನಿಗೆ ಭಯ ಪಡುವ ಹೆಂಡತಿ ಸ್ತುತಿಸಲ್ಪಡುವಳು.
೩೧ ಅವಳ ಕೈಗಳ ಫಲದಿಂದ ಅವಳಿಗೆ ಕೊಡಿರಿ;
ಅವಳ ಕೆಲಸಗಳು ಬಾಗಲುಗಳಲ್ಲಿ ಅವಳನ್ನು ಸ್ತುತಿಸಲಿ.

# ECCLESIASTES.

## ಪ್ರಸಂಗಿ.

### ೧ ಸಂಧಿ.

೧ ಯೆರೂಸಲೇಮಿನಲ್ಲಿರುವ ಅರಸನಾದ ದಾವೀದನ ಮಗನಾದ
ಪ್ರಸಂಗಿಯ ಮಾತುಗಳು.

೨ ಮಾಯೆಗಳ ಮಾಯೆವು ಎಂದು, ಪ್ರಸಂಗಿ ಹೇಳಿದನು. ಮಾ
೩ ಯೆಗಳ ಮಾಯೆವು; ಸರ್ವವು ಮಾಯೆವೇ. ಸೂರ್ಯನ ಕೆ
೪ ಳಗೆ ಕಷ್ಟ ಪಟ್ಟು ಮಾಡುವ ಎಲ್ಲಾ ಕಷ್ಟದಿಂದ ಮನುಷ್ಯರಿಗೆ ಲಾ
ಭವೇನು? ತಲಾಂತರ ಹೋಗುತ್ತದೆ, ತಲಾಂತರ ಬರುತ್ತದೆ; ಆದರೆ
೫ ಭೂಮಿಯು ಯುಗ ಯುಗಕ್ಕೂ ನಿಲ್ಲುತ್ತದೆ. ಮತ್ತು ಸೂ
ರ್ಯನು ಹುಟ್ಟುತ್ತಾನೆ, ಸೂರ್ಯನು ಮುಣುಗುತ್ತಾನೆ, ತನ್ನ
೬ ಸ್ಥಳವನ್ನು ಬಯಸುತ್ತಾನೆ; ಅಲ್ಲೇ ಅವನು ತಿರಿಗಿ ಹುಟ್ಟುತ್ತಾನೆ.
ಘೂಳಿಯು ದಕ್ಷಿಣಕ್ಕೆ ಹೋಗುತ್ತದೆ, ಉತ್ತರಕ್ಕೆ ಸುತ್ತುತ್ತದೆ,
ಸುತ್ತ ಮುತ್ತಲು ಹೋಗುತ್ತದೆ; ತನ್ನ ಸುತ್ತಿನ ಪ್ರಕಾರ ಘೂಳಿಯು
೭ ತಿರುಗುತ್ತದೆ. ನದಿಗಳೆಲ್ಲಾ ಸಮುದ್ರಕ್ಕೆ ಹೋಗುತ್ತವೆ; ಆದರೆ ಸ
ಮುದ್ರವು ತಾನು ತುಂಬುವದಿಲ್ಲ. ನದಿಗಳು ಹೊರಟು ಬರುವ ಸ್ಥಳ
೮ ಕ್ಕೆ ತಿರಿಗಿ ಹೋಗುತ್ತವೆ. ಎಲ್ಲಾ ಕಾರ್ಯಗಳು ಆಯಾಸವಾಗಿವೆ;
ಮನುಷ್ಯನು ಅದನ್ನು ಹೇಳಲಾರನು. ಕಣ್ಣು ನೋಡಿ, ತೃಪ್ತಿ
೯ ಪಡುವದಿಲ್ಲ; ಕಿವಿ ಕೇಳುವದರಿಂದ ತುಂಬುವದಿಲ್ಲ. ಇದ್ದದ್ದು ಯಾ
ವದೋ, ಅದು ಇರಲಿಕ್ಕೆ ಇರುವಂಥಾದ್ದೇ. ಆದದ್ದು ಯಾವದೋ,
ಅದು ಆಗಲಿಕ್ಕೆ ಇರುವಂಥಾದ್ದೇ. ಸೂರ್ಯನ ಕೆಳಗೆ ಹೊಸದು
೧೦ ಬಂದೂ ಇಲ್ಲ. ಇದನ್ನು ನೋಡು, ಇದು ಹೊಸದೆಂದು, ಯಾರಾ
ದರೂ ಹೇಳುವ ಕಾರ್ಯವು ಉಂಟೋ? ನಮ್ಮ ಮುಂದೆ ಇರು
೧೧ ವಂಥಾದ್ದು ಯುಗಗಳಿಗೆ ಮುಂಚೆ ಇತ್ತು. ಹಿಂದಿನವುಗಳ ಜ್ಞಾಪಕ
ವಿಲ್ಲ; ಮತ್ತು ಆಗುವ ಮುಂದಿನವುಗಳಿಗೂ ಮುಂದೆ ಇರುವವರಲ್ಲಿ
ಜ್ಞಾಪಕವಿರುವದಿಲ್ಲ.

೧೨ ಪ್ರಸಂಗಿಯಾದ ನಾನು ಯೆರೂಸಲೇಮಿನಲ್ಲಿ ಇಸ್ರಯೇಲಿನ
೧೩ ಮೇಲೆ ಅರಸನಾಗಿದ್ದೆನು. ಆಕಾಶದ ಕೆಳಗೆ ಆಗುವ ಎಲ್ಲಾದರ ವಿ
ಷಯ ಬುದ್ಧಿಯಿಂದ ಹುಡುಕಿ, ಶೋಧನೆ ಮಾಡ ಬೇಕೆಂದು,
ನಾನು ಮನಸ್ಸು ಇಟ್ಟೆನು; ಇದು ಕೆಟ್ಟ ಕಷ್ಟವಾಗಿದೆ. ದೇವರು
ಅದನ್ನು ಮನುಷ್ಯನ ಮಕ್ಕಳಿಗೆ, ಅದರಿಂದ ಕಷ್ಟ ಪಡುವದಕ್ಕೆ,
ಕೊಟ್ಟಿದ್ದಾನೆ.

೧೪ ಸೂರ್ಯನ ಕೆಳಗೆ ಆಗುವಂಥ ಎಲ್ಲಾ ಕೆಲಸಗಳನ್ನು ನೋ
ಡಿದೆನು. ಇಗೋ, ಎಲ್ಲಾ ಮಾಯೆವೂ, ಆತ್ಮಕ್ಕೆ ಬೇಸರವೂ,
೧೫ ಆಗಿದೆ. ಸೊಟ್ಟಗಾದದ್ದನ್ನು ನೆಟ್ಟಗೆ ಮಾಡ ಕೂಡದು; ಕಡಿಮೆ
ಯಾದದ್ದನ್ನು ಎಣಿಸ ಕೂಡದು.

೧೬ ನಾನು ನನ್ನ ಹೃದಯದ ಸಂಗಡ ಮಾತಾಡಿ ಹೇಳಿ ಕೊಂಡ
ದ್ದೇನಂದರೆ, ಇಗೋ, ನಾನು ದೊಡ್ಡವನಾಗಿ, ನನಗೆ ಮುಂಚೆ ಯೆ
ರೂಸಲೇಮಿನ ಮೇಲೆ ಇದ್ದವರೆಲ್ಲರಿಗಿಂತ ಜ್ಞಾನವನ್ನು ಹೆಚ್ಚಿಸಿ
ಕೊಂಡೆನು; ನನ್ನ ಹೃದಯವು ಬಹಳ ಜ್ಞಾನವನ್ನೂ, ತಿಳುವಿಕೆ
೧೭ ಯನ್ನೂ ನೋಡಿ ಅದೆ. ಮತ್ತು ಜ್ಞಾನವನ್ನು ತಿಳಿಯುವದಕ್ಕೂ,
ಮರುಳ್ಳನ್ನೂ, ಹೆಡ್ಡತನವನ್ನೂ ತಿಳಿಯುವದಕ್ಕೂ ನನ್ನ ಹೃ
ದಯ ಕೊಟ್ಟೆನು. ಇದು ಸಹ ಆತ್ಮಕ್ಕೆ ಬೇಸರವೆಂದು ತಿಳಿ
೧೮ ಕೊಂಡೆನು. ಯಾಕಂದರೆ ಬಹು ಜ್ಞಾನದಲ್ಲಿ ಬಹು ಕರಕರೆ ಅದೆ;
ತಿಳುವಿಕೆಯನ್ನು ಹೆಚ್ಚಿಸಿ ಕೊಳ್ಳುವವನು ವ್ಯಸನವನ್ನು ಹೆಚ್ಚಿಸಿ
ಕೊಳ್ಳುತ್ತಾನೆ.

### ೨ ಸಂಧಿ.

೧ ನಾನು ನನ್ನ ಹೃದಯದಲ್ಲಿ—ಎಲೇ, ಬಾ, ಸಂತೋಷದಿಂ
ದ ನಿನ್ನನ್ನು ಪರೀಕ್ಷಿಸುವೆನು; ಬಳ್ಳೇದನ್ನು ಕುಡಿ ನೋಡು,
೨ ಅಂದೆನು. ಇಗೋ, ಇದು ಸಹ ಮಾಯೆವು. ನನಗೆ—ಮರುಳಾ
ಗಿದ್ದೀ, ಸಂತೋಷಕ್ಕೆ—ಅದು ಏನು ಮಾಡುತ್ತದೆ! ಅಂದೆನು.
೩ ನನ್ನ ಹೃದಯವನ್ನು ಜ್ಞಾನದಲ್ಲಿ ಅಭ್ಯಾಸ ಮಾಡುವವನಾ
ಗಿ ನನ್ನ ಮಾಂಸವನ್ನು ದ್ರಾಕ್ಷೇರಸದಿಂದ ಪುಷ್ಟಿ ಮಾಡ ಬೇಕೆ
ದೂ, ತಮ್ಮ ಜೀವದ ದಿವಸಗಳ ತೆಖ್ಖದ ಪ್ರಕಾರ ಮನುಷ್ಯನ
ಮಕ್ಕಳು ಆಕಾಶದ ಕೆಳಗೆ ತಮಗೋಸ್ಕರ ನಡಿಸ ತಕ್ಕ ಬಳ್ಳೇ
ದು ಯಾವದಂತ, ನೋಡುವ ಪರ್ಯಂತರ ಹೆಡ್ಡತನವನ್ನು ಹಿ
ಡಿಯ ಬೇಕೆಂದೂ, ನನ್ನ ಹೃದಯದಲ್ಲಿ ಶೋಧನೆ ಮಾಡಿದೆನು.
೪ ನನ್ನ ಕೆಲಸಗಳನ್ನು ದೊಡ್ಡವಾಗಿ ಮಾಡಿದೆನು; ನನಗೆ ಮನೆ
ಗಳನ್ನು ಕಟ್ಟಿಸಿದೆನು; ನನಗೆ ದ್ರಾಕ್ಷೇತೋಟಗಳನ್ನು ನೆಟ್ಟಿನು.
೫ ನನಗೆ ತೋಟಗಳನ್ನೂ, ಉಪವನಗಳನ್ನೂ ಮಾಡಿದೆನು; ನಾ
೬ ನಾ ಫಲದ ಮರಗಳನ್ನು ಅವುಗಳಲ್ಲಿ ನೆಟ್ಟಿನು. ಮರಗಳನ್ನು
ಪೊಳ್ಳಿಸುವ ಅಡವಿಗೆ ನೀರು ಹಾಕಿಸುವದಕ್ಕೆ ನೀರಿನ ಕೆರೆಗಳನ್ನು
ನನಗೆ ಮಾಡಿದೆನು. ದಾಸರನ್ನೂ ದಾಸಿಯರನ್ನೂ ಸಂಪಾದಿ
೭ ಸಿದೆನು; ಮನೆಯ ಮಕ್ಕಳು ಸಹ ನನಗೆ ಇದ್ದರು. ಮತ್ತು ನನ
ಗೆ ಮುಂಚೆ ಯೆರೂಸಲೇಮಿನಲ್ಲಿ ಇದ್ದವರಿಗಿಂತ ದನ ಕುರಿಗಳ
ಸಂಪತ್ತು ಹೆಚ್ಚಾಗಿ ನನಗೆ ಇತ್ತು. ಬೆಳ್ಳಿಯನ್ನೂ, ಭಂಗಾರವ
೮ ನ್ನೂ, ಅರಸುಗಳ ಶೀಮೆಗಳ ದ್ರವ್ಯಗಳನ್ನೂ ನನಗೆ ಇಟ್ಟು
ಕೊಂಡೆನು. ಗಾಯಕರನ್ನೂ, ಗಾಯಕಿಯರನ್ನೂ, ಮನುಷ್ಯ
ನ ಮಕ್ಕಳ ಭೋಗಗಳನ್ನೂ ರಾಶಿ ರಾಶಿಯಾಗಿ ನನಗೆ ಉಟು
ಮಾಡಿದೆನು. ಮತ್ತು ದೊಡ್ಡವನಾಗಿ, ನನಗೆ ಮುಂಚೆ ಯೆರೂಸ
೯ ಲೇಮಿನಲ್ಲಿ ಇದ್ದವರೆಲ್ಲರಿಗಿಂತ ಹೆಚ್ಚಿದೆನು. ಇದಲ್ಲದೆ ನನ್ನ ಜ್ಞಾ
ನವು ನನ್ನಲ್ಲಿ ನೆಲೆಯಾಗಿತ್ತು. ಮತ್ತು ನನ್ನ ಕಣ್ಣುಗಳು ಕೇಳಿ
೧೦ ಕೊಂಡವುಗಳನ್ನೆಲ್ಲಾ ಅವುಗಳಿಗೆ ನಾನು ಅಡ್ಡಿ ಮಾಡಲಿಲ್ಲ; ನನ್ನ
ಹೃದಯವನ್ನು ಯಾವ ಸಂತೋಷದಿಂದಲಾದರೂ ಹಿಂದೆ
ಯಲಿಲ್ಲ; ಯಾಕಂದರೆ ನನ್ನ ಹೃದಯವು ನನ್ನ ಕಷ್ಟದಿಂದೆ
ಲ್ಲಾ ಸಂತೋಷ ಪಡುತ್ತಾ ಇತ್ತು. ಇದೇ ನನ್ನ ಎಲ್ಲಾ ಕಷ್ಟದಿಂ
೧೧ ದ ನನಗೆ ಬಂದ ಪಾಲಾಗಿತ್ತು. ಆಗ ನಾನು ನನ್ನ ಕೈಗಳು ಮಾ
ಡಿದ ಎಲ್ಲಾ ನನ್ನ ಕೆಲಸಗಳ ಮೇಲೆಯೂ, ನಾನು ಕಷ್ಟ ಮಾಡಿ
ದ ಎಲ್ಲಾ ಕಷ್ಟದ ಮೇಲೆಯೂ ದೃಷ್ಟಿ ಇಟಲೂ, ಇಗೋ, ಸ
ರ್ವವು ಮಾಯೆವೂ, ಆತ್ಮಕ್ಕೆ ಬೇಸರವೂ, ಆಗಿತ್ತು; ಮತ್ತು
ಸೂರ್ಯನ ಕೆಳಗೆ ಲಾಭವೇನೂ ಇಲ್ಲ.

೧೨ ಮತ್ತು ನಾನು ಜ್ಞಾನವನ್ನೂ, ಮರುಳ್ಳನ್ನೂ, ಹೆಡ್ಡತನವನ್ನೂ



ನೋಡುವದಕ್ಕೆ ತಿರುಗಿ ಕೊಂಡೆನು. ಯಾಕಂದರೆ ಅವರು ಮುಂ
ಚೆ ನೇಮಿಸಿದ ಅರಸನ ಬಳಿಕ ಬರುವ ಮನುಷ್ಯನು ಎಂಥವನೋ!
೧೩ ಆಗ ಬೆಳಕು ಕತ್ತಲೆಗಿಂತ ಉತ್ತಮವಾಗಿರುವ ಪ್ರಕಾರ, ಜ್ಞಾನವು
೧೪ ಹೆಡ್ಡತನಕ್ಕಿಂತ ಉತ್ತಮವಾಗಿದೆ ಎಂದು, ಕಂಡೆನು. ಜ್ಞಾನಿಯ ಕ
ಣ್ಣುಗಳು ಅವನ ತಲೆಯಲ್ಲಿ ಅವೆ; ಆದರೆ ಹುಚ್ಚನು ಕತ್ತಲೆಯ
ಲ್ಲಿ ನಡೆಯುತ್ತಾನೆ. ಇದಲ್ಲದೆ ಬಂದೇ ಗತಿ ಅವರೆಲ್ಲರಿಗೆ ಬರುವ
ದೆಂದು, ನಾನು ತಿಳಿಕೊಂಡೆನು.

೧೫ ಮತ್ತು ನಾನು ನನ್ನ ಹೃದಯದಲ್ಲಿ—ಹುಚ್ಚನ ಗತಿಯ
ಹಾಗೆ ನನಗೂ ಬರುವದು; ಹೀಗಿದ್ದರೆ ಯಾಕೆ ನಾನು ಆಗ ಹೆ
ಚ್ಚಾಗಿ ಜ್ಞಾನಿಯಾದೆನು? ಅಂದು ಕೊಂಡೆನು. ಇದು ಸಹ ಮಾ
೧೬ ಯೆವೆಂದು, ನನ್ನ ಹೃದಯದಲ್ಲಿ ಅಂದು ಕೊಂಡೆನು. ಯಾ
ಕಂದರೆ ಜ್ಞಾನಿಯನ್ನು ಕುರಿತಾದರೂ, ಹುಚ್ಚನನ್ನು ಕುರಿತಾದ
ರೂ, ಯುಗ ಯುಗಕ್ಕೂ ಜ್ಞಾಪಕವಿಲ್ಲ. ಈಗ ಇರುವಂಥಾದ್ದೆಲ್ಲಾ
ಬರುವ ದಿವಸಗಳಲ್ಲಿ ಮರೆತು ಹೋಗುವದಷ್ಟೆ. ಹ್ಯಾಗಂದರೆ
ಜ್ಞಾನಿಯು ಹುಚ್ಚನ ಸಂಗಡ ಸಾಯುವನು.

೧೭ ಮತ್ತು ಜೀವವನ್ನು ಹಗೆ ಮಾಡಿದೆನು; ಯಾಕಂದರೆ ಸೂ
ರ್ಯನ ಕೆಳಗೆ ಆಗುವ ಕೆಲಸವು ನನಗೆ ಕೆಟ್ಟದ್ದಾಗಿತ್ತು; ಯಾ
ಕಂದರೆ ಸರ್ವವು ಮಾಯೆವು, ಆತ್ಮಕ್ಕೆ ಬೇಸರವೂ ಆಗಿತ್ತು.
೧೮ ಮತ್ತು ನಾನು ಸೂರ್ಯನ ಕೆಳಗೆ ಕಷ್ಟ ಪಟ್ಟು, ಮಾಡಿದ ನನ್ನ
ಕಷ್ಟವನ್ನೆಲ್ಲಾ ಹಗೆ ಮಾಡಿದೆನು; ಯಾಕಂದರೆ ನನ್ನ ತರುವಾ
೧೯ ಯ ಬರುವ ಮನುಷ್ಯನಿಗೆ ಅದನ್ನು ಉಳಿಸ ಬೇಕು. ಅವನು
ಜ್ಞಾನಿಯಾಗಿರುವನೋ! ಹೆಡ್ಡನಾಗಿರುವನೋ! ಯಾರು ಬಲ್ಲರು!
ಅದಾಗ್ಯೂ ನಾನು ಸೂರ್ಯನ ಕೆಳಗೆ ಕಷ್ಟದಿಂದಲೂ, ಬುದಿ
ಯಿಂದಲೂ, ಮಾಡಿದ ಎಲ್ಲಾ ಕಷ್ಟದಲ್ಲಿ ದೊಕೆತನ ಮಾಡುವನು.
೨೦ ಇದು ಸಹ ಮಾಯೆವು. ಹೀಗಿರಲಾಗಿ ನಾನು ಸೂರ್ಯನ ಕೆ
ಳಗೆ ಕಷ್ಟ ಪಟ್ಟು, ಮಾಡಿದ ಎಲ್ಲಾ ಕಷ್ಟಕ್ಕೋಸ್ಕರ ನನ್ನ ಹೃ
ದಯವು ಕುಂದಿ ಹೋಗುವ ಹಾಗೆ, ಸುತ್ತು ತಿರುಗಾಡಿದೆನು.
೨೧ ಯಾಕಂದರೆ ಜ್ಞಾನದಿಂದಲೂ, ತಿಳುವಿಕೆಯಿಂದಲೂ, ಚಮತ್ಕಾ
ರದಿಂದಲೂ, ಕಷ್ಟ ಮಾಡಿದ ಮನುಷ್ಯನು ಇದ್ದಾನೆ. ಆದರೆ
ಅದರಲ್ಲಿ ಕಷ್ಟ ಮಾಡದ ಮನುಷ್ಯನಿಗೆ ಅವನ ಪಾಲಾಗಿ ಅದ
ನ್ನು ಕೊಡುವನು ಇದು ಸಹ ಮಾಯೆವೂ, ದೊಡ್ಡ ಕೇಡೂ, ಆ
೨೨ ಗಿದೆ. ಯಾಕಂದರೆ ಮನುಷ್ಯನಿಗೆ, ಅವನು ಸೂರ್ಯನ ಕೆಳಗೆ
ಕಷ್ಟ ಮಾಡಿದ ಎಲ್ಲಾ ಕಷ್ಟದಿಂದಲೂ, ಹೃದಯದ ಬೇಸರದಿಂ
೨೩ ದಲೂ, ಏನು ಬರುತ್ತದೆ? ಯಾಕಂದರೆ ಅವನ ದಿವಸಗಳೆಲ್ಲಾ
ವ್ಯಸನಗಳೂ, ಅವನ ಆಯಾಸದಿಂದ ಬರುವ ಕಳವಳಗಳೂ, ಆ
ಗಿದೆ. ರಾತ್ರಿಯಲ್ಲಿಯೂ ಅವನ ಹೃದಯವು ವಿಶ್ರಮವಾಗುವದಿ
ಲ್ಲ. ಇದು ಸಹ ಮಾಯೆವು.

೨೪ ತನ್ನ ಕಷ್ಟದಲ್ಲಿ ಉಂಡು, ಕುಡಿದು, ತನ್ನ ಪ್ರಾಣ ಬಳ್ಳೇ
ದನ್ನು ನೋಡ ಗೊಡಿಸುವದೇ ಹೊರ್ತು ಮನುಷ್ಯನಿಗೆ ಬಳ್ಳೇ
ದು ಏನೂ ಇಲ್ಲ. ಇದು ಸಹ ದೇವರ ಕೈಯಿಂದ ಎಂದು,
೨೫ ನಾನು ನೋಡಿದ್ದೇನೆ. ನನಗಿಂತ ಹೆಚ್ಚಾಗಿ ಉಣ್ಣುವವನ್ಯಾರು!
೨೬ ಅಕ್ಕೆ ತ್ವಕೆ ಪಡುವವನ್ಯಾರು! ಯಾಕಂದರೆ ದೇವರು ತನ್ನ
ಮುಂದೆ ಬಳ್ಳೆಯವನಾಗಿರುವ ಮನುಷ್ಯನಿಗೆ ಜ್ಞಾನವನ್ನೂ, ತಿ
ಳುವಿಕೆಯನ್ನೂ, ಸಂತೋಷವನ್ನೂ, ಕೊಡುತ್ತಾನೆ. ಆದರೆ
ಪಾಪ ಮಾಡುವವನಿಗೆ, ದೇವರ ಮುಂದೆ ಬಳ್ಳೆಯವನಿಗೆ ಕೊ
ಡುವ ಹಾಗೆ, ಕೂಡಿಸಿ ಇಟ್ಟು ಕೊಳ್ಳುವ ಆಯಾಸವನ್ನು ಕೊ
ಡುತ್ತಾನೆ. ಇದು ಸಹ ಮಾಯೆವೂ, ಆತ್ಮಕ್ಕೆ ಬೇಸರವೂ,
ಆಗಿದೆ.

### 3. ಸಂಧಿ.

೧ ಸರ್ವಕ್ಕೂ ಸಮಯ ಉಂಟು.
ಆಕಾಶದ ಕೆಳಗಿರುವ ಎಲ್ಲಾ ಕಾರ್ಯಕ್ಕೂ ಕಾಲ ಉಂಟು.

| | |
|---|---|
| ೨ ಹುಟ್ಟುವ ಕಾಲ; | ಸಾಯುವ ಕಾಲ. |
| ನೆಡುವ ಕಾಲ; | ನೆಟ್ಟದ್ದನ್ನು ಕೀಳುವ ಕಾಲ. |
| ೩ ಕೊಲ್ಲುವ ಕಾಲ; | ಸ್ವಸ್ಥ ಮಾಡುವ ಕಾಲ. |
| ಕೆಡವುವ ಕಾಲ; | ಕಟ್ಟುವ ಕಾಲ. |
| ೪ ಅಳುವ ಕಾಲ; | ನಗುವ ಕಾಲ. |
| ಗೋಳಾಡುವ ಕಾಲ; | ನಾಟ್ಯಾಡುವ ಕಾಲ. |
| ೫ ಕಲ್ಲು ಬಿಸಾಡುವ ಕಾಲ; | ಕಲ್ಲು ಕೂಡಿಸುವ ಕಾಲ. |
| ಆಲಿಂಗನೆ ಮಾಡುವ ಕಾಲ; | ಆಲಿಂಗನೆ ಬಿಡುವ ಕಾಲ. |
| ೬ ಹುಡುಕುವ ಕಾಲ; | ನಾಶ ಮಾಡುವ ಕಾಲ. |
| ಇಟ್ಟು ಕೊಳ್ಳುವ ಕಾಲ; | ಬಿಸಾಡುವ ಕಾಲ. |
| ೭ ಹರಿಯುವ ಕಾಲ; | ಹೊಲಿಯುವ ಕಾಲ. |
| ಸುಮ್ಮನಿರುವ ಕಾಲ; | ಮಾತಾಡುವ ಕಾಲ. |
| ೮ ಪ್ರೀತಿ ಮಾಡುವ ಕಾಲ; | ಹಗೆ ಮಾಡುವ ಕಾಲ. |
| ಯುದ್ಧದ ಕಾಲ; | ಸಮಾಧಾನದ ಕಾಲ. |

೯ ಕೆಲಸ ಮಾಡುವವನಿಗೆ ಕಷ್ಟ ಪಡುವದರಲ್ಲಿ ಲಾಭವೇನು!
೧೦ ದೇವರು ಮನುಷ್ಯನ ಮಕ್ಕಳಿಗೆ, ಅದರಲ್ಲಿ ದಣಿಯುವ ಹಾ
೧೧ ಗೆ, ಕೊಟ್ಟ ಆಯಾಸವನ್ನು ನೋಡಿದೆನು. ಸರ್ವವು ತಕ್ಕ
ಕಾಲದಲ್ಲಿ ಅಂದವಾಗಿ ಮಾಡಿದ್ದಾನೆ. ಲೋಕವನ್ನು ಅವರ ಹೃ
ದಯದಲ್ಲಿ ಇಟ್ಟಿದ್ದಾನೆ. ಆದದರಿಂದ ದೇವರು ಮಾಡಿದ ಕೆಲಸ
ವನ್ನು ಬುದಿಂದ ಕುದಿಯ ವರಿಗೂ ಮನುಷ್ಯನು ಕಂಡು ಕೊ
೧೨ ಳ್ಳಲಾರನು. ಸಂತೋಷ ಪಡುವದನ್ನೂ, ತನ್ನ ಜೀವಕಾಲದಲ್ಲಿ
ಬಳ್ಳೇದು ಮಾಡುವದನ್ನೂ, ಹೊರ್ತು, ಅವುಗಳಲ್ಲಿ ಮನುಷ್ಯ
೧೩ ನಿಗೆ ಬಳ್ಳೇದು ಏನೂ ಇಲ್ಲವೆಂದು, ತಿಳುಕೊಂಡಿದ್ದೇನೆ. ಮತ್ತು
ಯಾವ ಮನುಷ್ಯನಾದರೂ ಉಂಡು, ಕುಡಿದು, ತನ್ನ ಕಷ್ಟದಲ್ಲೆ
೧೪ ಲ್ಲಾ ಬಳ್ಳೇದನ್ನು ನೋಡುವದು, ದೇವರ ದಾನವಾಗಿದೆ. ನಾನು
ತಿಳುಕೊಂಡದ್ದೇನಂದರೆ—ದೇವರು ಮಾಡುವಂಥಾದ್ದೆಲ್ಲಾ ಯುಗ
ಯುಗಕ್ಕೂ ಅದೆ. ಅದಕ್ಕೆ ಏನೂ ಹೆಚ್ಚು ಮಾಡ ಕೂಡದು;
ಅದರಿಂದ ಏನೂ ಕಡಿಮೆ ಮಾಡ ಕೂಡದು. ಮನುಷ್ಯರು ತನ್ನ
ಮುಂದೆ ಭಯ ಪಡುವ ಹಾಗೆ, ದೇವರು ಅದನ್ನು ಮಾಡುತ್ತಾ
೧೫ ನೆ. ಇದ್ದದ್ದು ಯಾವದೋ, ಅದು ಇರುತ್ತದೆ; ಆಗುವಂಥಾದ್ದು,
ಮುಂಚೆ ಇದ್ದದ್ದೇ. ಗತಿಸಿ ಹೋದದ್ದನ್ನು ದೇವರು ಹುಡುಕು
ತ್ತಾನೆ.

೧೬ ಮತ್ತು ಸೂರ್ಯನ ಕೆಳಗೆ ನ್ಯಾಯಸ್ಥಾನವನ್ನು ಕಂಡೆನು;
ಅಲ್ಲಿ ದುಷ್ಟತ್ವವು ಇತ್ತು. ನೀತಿಯ ಸ್ಥಾನವನ್ನು ಕಂಡೆನು; ಅಲ್ಲಿ
೧೭ ದುಷ್ಟತ್ವವು ಇತ್ತು. ನಾನು ನನ್ನ ಹೃದಯದಲ್ಲಿ ಅಂದು ಕೊಂ
ಡದ್ದೇನಂದರೆ—ನೀತಿವಂತನಿಗೂ, ದುಷ್ಟನಿಗೂ, ದೇವರು ನ್ಯಾ
ಯ ತೀರಿಸುವನು. ಯಾಕಂದರೆ ಎಲ್ಲಾ ಕಾರ್ಯಗಳಿಗೂ ಎ
೧೮ ಲ್ಲಾ ಕೆಲಸಗಳಿಗೂ ಅಲ್ಲಿ ಕಾಲವು ಉಂಟು. ಮನುಷ್ಯನ ಮಕ್ಕ

ಳ್ಳ ಸ್ಥಿತಿಯನ್ನು ಕುರಿತು ನಾನು ನನ್ನ ಹೃದಯದಲ್ಲಿ ಅಂದು
ಕೊಂಡದ್ದೇನಂದರೆ—ದೇವರು ಅವನನ್ನು ಶೋಧಿಸುವದಕ್ಕಿದ್ದಾ
ನೆ. ಮತ್ತು ಅವರು ತಮ್ಮಲ್ಲಿ ಪಶುಗಳಾಗಿದ್ದಾರೆಂದು, ಕಾಣಬೇ
೧೯ ಕು, ಯಾಕಂದರೆ ಮನುಷ್ಯನ ಮಕ್ಕಳಿಗೆ ಗತಿಯೊ, ಪಶುವಿನ ಗತಿ
ಯೂ, ಬಂದೇ; ಅವರಿಗೆ ಬಂದೇ ಗತಿ; ಇವುಗಳ ಸಾವಿನ ಪ್ರಕಾರ
ವೇ ಅವರ ಸಾವು. ಸರ್ವಕ್ಕೂ ಬಂದೇ ಆತ್ಮವು; ಪಶುಗಳಿಗಿಂತ
ಮನುಷ್ಯನಿಗೆ ವಿಶೇಷವೇನು? ಯಾಕಂದರೆ ಎಲ್ಲಾ ಮಾಯೆವೇ.
೨೦ ಸರ್ವವು ಬಂದೇ ಸ್ಥಳಕ್ಕೆ ಹೋಗುತ್ತದೆ; ಸರ್ವವು ಧೂಳಿಯಿಂ
೨೦ ದುಂಟಾಯಿತು; ಸರ್ವವು ಧೂಳಿಗೆ ತಿರುಗುತ್ತದೆ. ಮೇಲಕ್ಕೆ ಏ
ರುವ ಮನುಷ್ಯನ ಮಕ್ಕಳ ಆತ್ಮವನ್ನೂ, ಭೂಮಿಗೆ ಇಳಿಯು
೨೧ ವ ಪಶುಗಳ ಆತ್ಮವನ್ನೂ, ಯಾರು ಬಲ್ಲರು? ಹೀಗಿರಲಾಗಿ ಮ
ನುಷ್ಯನು ತನ್ನ ಕೆಲಸಗಳಲ್ಲಿ ಸಂತೋಷ ಪಡುವದಕ್ಕಿಂತ ಬ
ಳ್ಳೇದು ಏನೂ ಇಲ್ಲವೆಂದು, ಕಂಡೆನು; ಯಾಕಂದರೆ ಇದೇ ಅವ
ನ ಪಾಲು. ಯಾಕಂದರೆ ತನ್ನ ತರುವಾಯ ಆಗುವವುಗಳನ್ನು
ನೋಡುವದಕ್ಕೆ ಅವನನ್ನು ಬರ ಮಾಡುವವನ್ಯಾರು?

## ೪. ಸಂಧಿ.

೧ ಮತ್ತು ನಾನು ತಿರುಗಿ ಕೊಂಡು, ಸೂರ್ಯನ ಕೆಳಗೆ ಆಗುವ
ಬಲಾತ್ಕಾರಗಳನ್ನೆಲ್ಲಾ ನೋಡಿದೆನು. ಇಗೋ, ಬಲಾತ್ಕಾರ ಪಡು
ವವರ ಕಣ್ಣೀರು; ಅವರನ್ನು ಆದರಿಸುವವನು ಯಾರು ಇಲ್ಲ. ಅ
ವರನ್ನು ಬಲಾತ್ಕಾರ ಮಾಡುವವರ ಕೈಯ್ಯಲ್ಲಿ ಶಕ್ತಿ ಇತ್ತು;
೨ ಮತ್ತು ಅವರನ್ನು ಆದರಿಸುವವನು ಒಬ್ಬನೂ ಇಲ್ಲ. ಆದದರಿಂದ
ನಾನು ಮುಂಚೆ ಸತ್ತ ಸತ್ತವರನ್ನು ಇನ್ನು ಜೀವಿಸುವವರಾದ
೩ ಈ ಜೀವಿತರಿಗಿಂತ ಹೊಗಳಿದೆನು. ಈ ಇಬ್ಬರಿಗಿಂತ ಸೂರ್ಯನ
ಕೆಳಗೆ ಆಗುವ ಕೆಟ್ಟ ಕೆಲಸವನ್ನು ನೋಡದೆ, ಈ ವರಿಗೆ ಇರದೆ
ಇರುವವನು ವಾಸಿ.
೪ ಮತ್ತು ನಾನು ಎಲ್ಲಾ ಕಷ್ಟವನ್ನೂ ಎಲ್ಲಾ ಕೆಲಸದ ಚಮತ್ಕಾ
ರವನ್ನೂ ನೋಡಿ—ಇದು ಒಬ್ಬರ ಮೇಲೊಬ್ಬರು ಪಡುವ
ಹೊಟ್ಟಿಕಿಚ್ಚು, ಅಂದೆನು. ಇದು ಸಹ ಮಾಯೆವೂ, ಆತ್ಮಕ್ಕೆ
ಬೇಸರವೂ, ಆಗಿದೆ.
೫ ಹುಚ್ಚನು ತನ್ನ ಕೈಗಳನ್ನು ಜೋಡಿಸಿ, ತನ್ನ ಮಾಂಸವನ್ನು
ತಿನ್ನುತ್ತಾನೆ.
೬ ಕಷ್ಟದ ಸಂಗಡಲೂ ಆತ್ಮ ಬೇಸರದ ಸಂಗಡಲೂ ಎರಡು ಹಿ
ಡಿ ತುಂಬಕ್ಕಿಂತ, ಶಾಂತಿಯ ಸಂಗಡ ಅಂಗೈ ತುಂಬ ವಾಸಿ.
೭ ಮತ್ತು ನಾನು ತಿರುಗಿ ಕೊಂಡು, ಸೂರ್ಯನ ಕೆಳಗೆ ಮಾಯೆ
೮ ವನ್ನು ಕಂಡೆನು. ಒಬ್ಬನು ಇದ್ದಾನೆ, ಎರಡನೆಯವನು ಇಲ್ಲ; ಮ
ಗನಾದರೂ, ತಮ್ಮನಾದರೂ, ಅವನಿಗೆ ಇಲ್ಲ. ಆದರೆ ಅವನ ಕಷ್ಟ
ಕ್ಕೆ ಅಂತ್ಯವಿಲ್ಲ; ಅವನ ಕಣ್ಣುಗಳು ಸಹ ಐಶ್ವರ್ಯದಿಂದ
ತೃಪ್ತಿ ಆಗುವದಿಲ್ಲ. ಮತ್ತು ಯಾಕೆ ನಾನು ಕಷ್ಟ ಪಟ್ಟು, ನನ್ನ
ಪ್ರಾಣವನ್ನು, ಅದಕ್ಕೆ ಸುಖವಿಲ್ಲದ ಹಾಗೆ, ಕೊರತೆ ಪಡಿಸುತ್ತೇ
ನೆ? ಇದು ಸಹ ಮಾಯೆವೂ, ಕೆಟ್ಟ ಆಯಾಸವೂ, ಆಗಿದೆ.
೯ ಒಬ್ಬನಿಗಿಂತ ಇಬ್ಬರು ಬಳ್ಳೇದು. ಅವರಿಗೆ ಅವರ ಕಷ್ಟದ
೧೦ ಲ್ಲಿ ಬಳ್ಳೇ ಫಲ ಉಂಟು. ಯಾಕಂದರೆ ಅವರು ಬಿದ್ದರೆ, ಒಬ್ಬನು
ತನ್ನ ಸಂಗಡಿಗನನ್ನು ಎತ್ತುವನು; ಆದರೆ ಎತ್ತುವದಕ್ಕೆ ಎರಡನೆ
೧೧ ಯವನು ಇಲ್ಲದೆ ಬೀಳುವ ಒಬ್ಬನಿಗೆ ಅಯ್ಯೋ! ಮತ್ತು ಇ
ಬ್ಬರು ಮಲಗಿ ಕೊಂಡರೆ, ಕೆಬೆ ಆಗುವದು; ಆದರೆ ಒಬ್ಬನೇ ಇ
೧೨ ದ್ದಲ್ಲಿ ಕೆಬೆ ಆಗುವದು ಹ್ಯಾಗೆ? ಮತ್ತು ಒಬ್ಬನು ಅವನನ್ನು
ಅಣಗಿಸಿದರೆ, ಇಬ್ಬರಾದವರು ಅವನ ಮುಂದೆ ನಿಲ್ಲುವರು. ಮು
ಮ್ಮಡಿ ಹಗ್ಗವು ಬೇಗ ಹರಿಯುವದಿಲ್ಲ
೧೩ ಇನ್ನು ಬೋಧಿಸಲ್ಪಡಲರಿಯದ ಹುಚ್ಚ ಮುದಿ ಅರಸನಿಗಿಂ
೧೪ ತ ಬುದ್ಧಿಯುಳ್ಳ ಬಡ ಹುಡುಗನೇ ವಾಸಿ. ಯಾಕಂದರೆ ಸೆಕ ಮ
ನೆಯಿಂದ ಅರಸನಾಗುವದಕ್ಕೆ ಹೊರಗೆ ಬರುತ್ತಾನೆ. ಮತ್ತು ಅವ
ನ ರಾಜ್ಯದಲ್ಲಿ ಹುಟ್ಟಿದವನು ಬಡವನಾಗುತ್ತಾನೆ. ಅವನ ಸ್ಥಳದಲ್ಲಿ
೧೫ ನಿಲ್ಲುವ ಎರಡನೇ ಮಗನ ಸಂಗಡ, ಸೂರ್ಯನ ಕೆಳಗೆ ನಡೆ
೧೬ ಯುವ ಎಲ್ಲಾ ಜೀವಿತರನ್ನು ಕಂಡೆನು. ಎಲ್ಲಾ ಪ್ರಜೆಗೂ, ಅವರ
ಮುಂದೆ ಇರುವ ಎಲ್ಲಾದಕ್ಕೂ ಅಂತ್ಯವಿಲ್ಲ; ಕಡೆಯವರು ಸಹ ಅ
ವನಲ್ಲಿ ಸಂತೋಷ ಪಡರು. ಇದು ಸಹ ಮಾಯೆವೂ, ಆತ್ಮಕ್ಕೆ
ಬೇಸರವೂ, ಆಗಿದೆ.

## ೫. ಸಂಧಿ.

೧ ದೇವರ ಮನೆಗೆ ಹೋಗುವಾಗ, ನಿನ್ನ ಪಾದಗಳನ್ನು ಕಾಪಾ
ಡು; ಕೇಳುವದಕ್ಕೆ ಸಮೀಪಿಸು; ಇದು ಹುಚ್ಚರ ಬಲಿ ಕೊಡುವದ
ಕ್ಕಿಂತ ಬಳ್ಳೇದು. ಯಾಕಂದರೆ ಅವರು ತಿಳಿಯದೆ ಕೆಟ್ಟದ್ದನ್ನು
೨ ಮಾಡುತ್ತಾರೆ. ದೇವರ ಮುಂದೆ ಮಾತು ಹೊರಗೆ ತರುವದಕ್ಕೆ
ನಿನ್ನ ಬಾಯಿಯಿಂದ ಅವಸರ ಪಡ ಬೇಡ; ನಿನ್ನ ಹೃದಯವು
ತ್ವರೆ ಪಡದಿರಲಿ. ಯಾಕಂದರೆ ದೇವರು ಆಕಾಶದಲ್ಲಿ ಇದ್ದಾನೆ;
ನೀನು ಭೂಮಿಯ ಮೇಲೆ ಇದ್ದೀ. ಆದದರಿಂದ ನಿನ್ನ ಮಾತುಗ
3 ಳು ಸ್ವಲ್ಪವಾಗಿರಲಿ. ಯಾಕಂದರೆ ಆಯಾಸದ ಬಾಹುಳ್ಯದಿಂ
ದ ಕನಸೂ, ಮಾತುಗಳ ಬಾಹುಳ್ಯದಿಂದ ಹುಚ್ಚನ ಶಬ್ದವೂ,
೪ ಬರುತ್ತದೆ. ದೇವರಿಗೆ ಹರಿಕೆ ಮಾಡಿದ ಪ್ರಕಾರವೇ ಸಲ್ಲಿಸುವದಕ್ಕೆ
ತಡೆಯ ಬೇಡ; ಯಾಕಂದರೆ ಹುಚ್ಚರಲ್ಲಿ ಅವನಿಗೆ ಏನೂ ಸಂ
೫ ತೋಷವಿಲ್ಲ. ಹರಿಕೆ ಮಾಡಿದ್ದನ್ನು ಸಲ್ಲಿಸು. ಹರಿಕೆ ಮಾಡಿ ಸ
ಲ್ಲಿಸದೆ ಇರುವದಕ್ಕಿಂತ, ಮಾಡದೆ ಇರುವದು ವಾಸಿ. ನಿನ್ನ ಮಾಂ
ಸವನ್ನು ಪಾಪದಲ್ಲಿ ಸೇರಿಸುವ ಹಾಗೆ, ನಿನ್ನ ಬಾಯಿ ಕೊಡ ಬೇ
ಡ; ತಪ್ಪು ಆಯಿತೆಂದು, ದೂತನ ಮುಂದೆ ಹೇಳ ಬೇಡ. ದೇ
ವರು ನಿನ್ನ ಶಬ್ದಕ್ಕೋಸ್ಕರ ಕೋಪಿಸಿ, ನಿನ್ನ ಕೈ ಕೆಲಸ ಕೆಡಿ
೭ ಸುವದು ಯಾಕೆ? ಯಾಕಂದರೆ ಕನಸುಗಳ ಬಾಹುಳ್ಯದಲ್ಲಿ
ಮಾಯೆಗಳೂ, ಮಾತುಗಳೂ, ಬಹಳ ಉಂಟು. ಆದರೆ ನೀನು
ದೇವರಿಗೆ ಭಯ ಪಡು.
೮ ಬಡವನು ಪಡುವ ಬಲಾತ್ಕಾರವನ್ನೂ, ನ್ಯಾಯ ನೀತಿಗಳ
ಸುಲಿಗೆಯನ್ನೂ, ಶೀಮೆಯಲ್ಲಿ ನೀನು ನೋಡಿದರೆ, ಆ ಸಂತಿಗೆ
ಆಶ್ಚರ್ಯ ಪಡ ಬೇಡ. ಯಾಕಂದರೆ ಉನ್ನತನು ಉನ್ನತನ
ಮೇಲೆ ಕಾವಲಿಗಾರನಾಗಿದ್ದಾನೆ. ಅವರ ಮೇಲೆಯೂ ಉನ್ನತರು
ಇದ್ದಾರೆ. ಭೂಮಿಯ ಲಾಭವು ಇದೆಲ್ಲಾದರಲ್ಲಿ ಅದೆ—ಸೇವಿಸಲ್ಪ
೯ ಡುವ ಹೊಲದ ಅರಸನಿರುವದೇ.
೧೦ ಬೆಳ್ಳಿಯನ್ನು ಪ್ರೀತಿ ಮಾಡುವವನು ಬೆಳ್ಳಿಯಿಂದ ತೃಪ್ತ
ನಾಗುವದಿಲ್ಲ; ಆಸ್ತಿ ಪ್ರಿಯನಿಗೆ ಆದಾಯವಿಲ್ಲ. ಇದು ಸಹ ಮಾ
೧೧ ಯೆವು. ಆಸ್ತಿ ಹೇರಳವಾದರೆ, ಅದನ್ನು ಉಣ್ಣುವವರು ಹೇರಳ
ವಾಗುತ್ತಾರೆ. ಮತ್ತು ಅದರ ಯಜಮಾನರಿಗೆ ಭಾಗ್ಯವೇನು? ಕ
೧೨ ಣ್ಣುಗಳಿಗೆ ನೋಟವೇ ಅಷ್ಟೆ. ದಾಸನು ಸ್ವಲ್ಪ ಉಂಕರೂ, ಬ



ಹಳ್ಳ ಉಂಕರೂ, ಅವನ ನಿದ್ದೆ ಹೀಯಾಗಿದೆ. ಆದರೆ ಐಶ್ವರ್ಯ
ವಂತನ ತೃಪ್ತಿಯು ನಿದ್ದೆ ಮಾಡುವದಕ್ಕೆ ಅವನನ್ನು ಸಂತೈಸು
ವದಿಲ್ಲ.
೧೩ ನಾನು ಸೂರ್ಯನ ಕೆಳಗೆ ನೋಯಿಸುವ ಕೇಡನ್ನು ಕಂಡೆ
ನು; ಏನಂದರೆ, ಅದರ ಯಜಮಾನಗೋಸ್ಕರ ಅವರ ಕೇಡಿನಾ
೧೪ ಗಿ ಕಾಪಾಡಲ್ಪಡುವ ಐಶ್ವರ್ಯವು. ಈ ಐಶ್ವರ್ಯವು ಕೆಟ್ಟ
ಆಯಾಸದಿಂದ ನಾಶವಾಗುತ್ತದೆ; ಅವನು ಮಗನನ್ನು ಪಡೆದರೆ,
೧೫ ಅವನ ಕೈಯ್ಯಲ್ಲಿ ಏನೂ ಇಲ್ಲ. ತನ್ನ ತಾಯ ಗರ್ಭದಿಂದ
ಹೊರಟೆ ಹಾಗೆ—ಬಂದ ಹಾಗೆಯೇ—ಬೆತ್ತಲೆಯಾಗಿ ತಿರಿಗಿ ಹೋ
ಗುವನು. ಮತ್ತು ಕೈಯ್ಯಲ್ಲಿ ಶೆಗೆದು ಕೊಂಡು ಹೋಗುವ ಹಾಗೆ,
೧೬ ತನ್ನ ಕಷ್ಟದಿಂದ ಏನಾದರೂ ಹೊಂದನು. ಇದು ಸಹ ನೋ
ಯಿಸುವ ಕೇಡು. ಬಂದ ಪ್ರಕಾರವೇ ಹೋಗುವನು. ಮತ್ತು
೧೭ ಧೂಳಿಗೋಸ್ಕರ ಕಷ್ಟ ಪಡುವವನಿಗೆ ಲಾಭವೇನು? ಮತ್ತು ತನ್ನ
ದಿವಸಗಳೆಲ್ಲಾ ಕತ್ತಲೆಯಲ್ಲಿ ಉಣ್ಣುತ್ತಾನೆ; ಬಹಳ ಕರಕಡೆ ಪಡು
ತ್ತಾನೆ. ಅವನಿಗೆ ಕೋಗವೂ ಕಾಠ್ರವೂ ಉಂಟು.
೧೮ ಇಗೋ, ನಾನು ನೋಡಿದ್ದು ಇದೇ—ಉಣ್ಣುವದೂ, ಕುಡಿಯು
ವದೂ, ದೇವರು ತನಗೆ ಕೊಟ್ಟ ಜೀವದ ದಿವಸಗಳ ಲೆಖ್ಖದ ಪ್ರಕಾ
ರ ಸೂರ್ಯನ ಕೆಳಗೆ ಕಷ್ಟ ಪಟ್ಟು ಮಾಡುವ ತನ್ನ ಕಷ್ಟದಲ್ಲೆ
ಲ್ಲಾ ಬಳ್ಳೇದನ್ನು ನೋಡುವದೂ, ಬಳ್ಳೇದೂ ಹಿತವೂ ಆಗಿದೆ;
೧೯ ಯಾಕಂದರೆ ಇದೇ ಅವನ ಪಾಲು. ಮತ್ತು ಯಾವ ಮನುಷ್ಯ
ನಿಗೆ ದೇವರು ಐಶ್ವರ್ಯವನ್ನೂ ಆಸ್ತಿಗಳನ್ನೂ ಕೊಟ್ಟು, ಅ
ದರಲ್ಲಿ ಉಣ್ಣುವದಕ್ಕೂ, ತನ್ನ ಪಾಲನ್ನು ಇಟ್ಟು ಕೊಳ್ಳುವದ
ಕ್ಕೂ, ತನ್ನ ಕಷ್ಟದಲ್ಲಿ ಸಂತೋಷ ಪಡುವದಕ್ಕೂ, ಅಧಿಕಾರ
೨೦ ಕೊಟ್ಟಿದ್ದಾನೋ, ಇದು ಸಹ ದೇವರ ದಾನವಾಗಿದೆ. ಯಾಕಂದ
ರೆ ತನ್ನ ಜೀವದ ದಿವಸಗಳನ್ನು ಬಹಳವಾಗಿ ಜ್ಞಾಪಕ ಮಾಡಿ
ಕೊಳ್ಳನು. ಯಾಕಂದರೆ ದೇವರು ಹೃದಯದ ಸಂತೋಷ
ದಿಂದ ಅವನಿಗೆ ಉತ್ತರ ಕೊಡುತ್ತಾನೆ.

## ೬ ಸಂಧಿ.

೧ ಸೂರ್ಯನ ಕೆಳಗೆ ನಾನು ನೋಡಿದ ಕೇಡು ಉಂಟು.
ಅದು ಮನುಷ್ಯರಲ್ಲಿ ಪ್ರಬಲವಾಗಿದೆ. ಅದೇನಂದರೆ—ದೇವರು ಐ
ಶ್ವರ್ಯವನ್ನೂ, ಆಸ್ತಿಯನ್ನೂ, ಮಾನವನ್ನೂ, ಕೊಡುವ
ಮನುಷ್ಯನು ಇದ್ದಾನೆ. ಅವನು ಅಪೇಕ್ಷಿಸುವವುಗಳೆಲ್ಲಾ ಅವನ
ಪ್ರಾಣಕ್ಕೆ ಏನೂ ಕೊರತೆ ಇಲ್ಲ. ಆದರೆ ಅದರಲ್ಲಿ ತಿನ್ನುವದಕ್ಕೆ
ದೇವರು ಅವನಿಗೆ ಅಧಿಕಾರ ಕೊಡಲಿಲ್ಲ. ಪರ ಮನುಷ್ಯನು ಅದ
ನ್ನು ತಿನ್ನುತ್ತಾನೆ. ಇದು ಮಾಯೆವೂ, ಕೆಟ್ಟ ಕೋಗವೂ, ಆ
3 ಗಿದೆ. ಮನುಷ್ಯನು ನೂರು ಮಕ್ಕಳನ್ನು ಪಡೆದರೆ, ಅನೇಕ ವ
ರುಷಗಳು ಬದುಕಿದರೆ, ಅವನ ವರುಷಗಳ ದಿವಸಗಳು ಬಹಳ
ವಾದರೆ, ಅವನ ಪ್ರಾಣ ಬಳ್ಳೇದರಿಂದ ತೃಪ್ತಿಯಾಗದೆ, ಅವನಿಗೆ
ಸಮಾಧಿ ಸಹ ಇಲ್ಲದಿದ್ದರೆ, ಅವನಿಗಿಂತ ಬಿದ್ದ ಬಸುರು ವಾಸಿ
೪ ಎಂದು ಹೇಳುತ್ತೇನೆ. ಯಾಕಂದರೆ ಅದು ಮಾಯದಿಂದ ಬಂ
ದು, ಕತ್ತಲೆಯಲ್ಲಿ ಹೋಗುತ್ತದೆ. ಕತ್ತಲೆಯಿಂದ ಅದರ ಹೆಸರು
೫ ಮುಚ್ಚಲ್ಪಡುವದು. ಸೂರ್ಯನನ್ನಾದರೂ, ಅದು ನೋಡ
ಲಿಲ್ಲ, ತಿಳಿಯಲಿಲ್ಲ; ಅವನಿಗಿಂತ ಇದಕ್ಕೆ ಅಧಿಕ ಶಾಂತಿ ಉಂ
೬ ಟು. ಹೌದು ಅವನು ಎರಡು ಸಾವಿರ ವರುಷ ಬದುಕಿದರೂ, ಬ
ಳ್ಳೇದನ್ನು ನೋಡಲಿಲ್ಲ. ಬಂದೇ ಸ್ಥಳಕ್ಕೆ ಎಲ್ಲಾ ಹೋಗುತ್ತ
ದಲ್ಲ.
೭ ಮನುಷ್ಯರ ಕಷ್ಟವೆಲ್ಲಾ ಬಾಯಿಗೋಸ್ಕರವಾಗಿದೆ; ಆದರೆ
೮ ಪ್ರಾಣವು ತೃಪ್ತಿಯಾಗುವದಿಲ್ಲ. ಯಾಕಂದರೆ ಜ್ಞಾನಿಗೂ, ಜೀ
ವಿತರ ಮುಂದೆ ನಡೆದು ಕೊಳ್ಳ ತಿಳಿಯುವ ದೀನನಿಗೂ, ಹುಚ್ಚ
೯ ನಿಗಿಂತ ಹೆಚ್ಚು ಏನು? ಕಣ್ಣುಗಳ ನೋಟವು ಆಶೆಯ ತಿರುಗಾಡು
ವಿಕೆಗಿಂತ ವಾಸಿ; ಇದು ಸಹ ಮಾಯೆವೂ, ಆತ್ಮಕ್ಕೆ ಬೇಸರವೂ
ಆಗಿದೆ.
೧೦ ಮುಂಚೆ ಹೆಸರೊಂಡವನು ಏನು? ಅವನು ಮನುಷ್ಯನೆಂ
ದು ಗೊತ್ತಾಗಿದೆ; ತನಗಿಂತ ಬಲಿಷ್ಠನ ಸಂಗಡ ವ್ಯಾಜ್ಯ ಮಾಡಲಾ
೧೧ ರನು. ಮಾಯೆವನ್ನು ಹೆಚ್ಚಿಸುವ ಅನೇಕ ಕಾರ್ಯಗಳುಂಟು;
೧೨ ಮನುಷ್ಯನಿಗೆ ಲಾಭವೇನು? ಯಾಕಂದರೆ ಮನುಷ್ಯನಿಗೆ ಅವನು
ನೆರಳಿನ ಹಾಗೆ ಕಳೆಯುವ ಮಾಯೆಯಾದ ಅವನ ಜೀವದ ದಿವಸ
ಗಳ ಲೆಖ್ಖದ ಪ್ರಕಾರವಾದ ಜೀವದಲ್ಲಿ ಬಳ್ಳೇದು ಯಾವದೆಂದು
ಯಾರು ಬಲ್ಲರು? ಯಾಕಂದರೆ ಸೂರ್ಯನ ಕೆಳಗೆ ತನ್ನ ಬ
ಳಿಕ ಏನು ಆಗುವದೆಂದು, ಮನುಷ್ಯನಿಗೆ ತಿಳಿಸುವವನ್ಯಾರು?

## ೭ ಸಂಧಿ.

೧ ಬಳ್ಳೇ ಹೆಸರು ಬಳ್ಳೇ ತೈಲಕ್ಕಿಂತ, ಮರಣದ ದಿವಸವು
ಹುಟ್ಟುವ ದಿವಸಕ್ಕಿಂತ, ಬಳ್ಳೇದು.
೨ ಕುಡಿಯುವ ಮನೆಗೆ ಹೋಗುವದಕ್ಕಿಂತ, ಶೋಕಾಟದ ಮ
ನೆಗೆ ಹೋಗುವದು ಬಳ್ಳೇದು; ಅದರಲ್ಲಿ ಎಲ್ಲಾ ಮನುಷ್ಯರ
ಅಂತ್ಯವು ಕಾಣುತ್ತದೆ; ಜೀವಿತನು ಅದಕ್ಕೆ ಮನಸ್ಸಿಗುವನು.
3 ನಗೆಗಿಂತ ಕರಕಡೆ ಬಳ್ಳೇದು; ಯಾಕಂದರೆ ಮುಖದ ದುಃಖದಿಂ
೪ ದ ಹೃದಯವು ಗುಣವಾಗುತ್ತದೆ. ಜ್ಞಾನಿಗಳ ಹೃದಯವು
ಶೋಕಾಟದ ಮನೆಯಲ್ಲಿ ಅದೆ; ಹುಚ್ಚರ ಹೃದಯವು ಸಂ
ತೋಷದ ಮನೆಯಲ್ಲಿ ಅದೆ.
೫ ಬಿಬ್ಬನು ಹುಚ್ಚರ ಹಾಡು ಕೇಳುವದಕ್ಕಿಂತ, ಜ್ಞಾನಿಗಳ ಗದ
೬ ರಿಕೆ ಕೇಳುವದು ಬಳ್ಳೇದು. ಯಾಕಂದರೆ ಹುಚ್ಚನ ನಗೆಯು
ಗಡಿಗೆಯ ಕೆಳಗಿನ ಮುಳ್ಳುಗಳ ಶಬ್ದದ ಹಾಗಿದೆ; ಇದು ಸಹ
ಮಾಯೆವು.
೭ ನಿಶ್ಚಯವಾಗಿ ಬಲಾತ್ಕಾರವು ಜ್ಞಾನಿಯನ್ನು ಮರುಳು ಮಾ
ಡುತ್ತದೆ. ದಾಕ್ಷಿಣ್ಯವು ಹೃದಯವನ್ನು ನಾಶನ ಮಾಡುತ್ತದೆ.
೮ ಕಾರ್ಯದ ಆರಂಭಕ್ಕಿಂತ ಅದರ ಅಂತ್ಯವು ಬಳ್ಳೇದು; ತಾ
ಳ್ಮೆ ಮನಸ್ಸುಳ್ಳವನು ಎತ್ತರ ಮನಸ್ಸುಳ್ಳವನಿಗಿಂತ ಬಳ್ಳೆಯ
ವನು. ಕರಕಡೆ ಆಗುವ ಹಾಗೆ ನಿನ್ನ ಆತ್ಮದಲ್ಲಿ ತ್ವರೆ ಪಡ ಬೇಡ;
ಯಾಕಂದರೆ ಕರಕಡೆಯು ಹುಚ್ಚರ ಉಡಿಯಲ್ಲಿ ವಿಶ್ರಮಿಸಿ
ಕೊಳ್ಳುತ್ತದೆ.
೧೦ ಮೊದಲಿನ ದಿವಸಗಳು ಇವುಗಳಿಗಿಂತ ಬಳ್ಳೆಯವುಗಳಾಗಿದ್ದ
ದ್ದು ಯಾಕೆ! ಎಂದು ಹೇಳ ಬೇಡ; ಯಾಕಂದರೆ ಇದರ ವಿಷ
ಯ ನೀನು ಜ್ಞಾನದಿಂದ ಕೇಳುವದಿಲ್ಲ.
೧೧ ಜ್ಞಾನವು ಬಾಧ್ಯತೆಯ ಹಾಗೆ ಬಳ್ಳೇದು; ಸೂರ್ಯನನ್ನು
೧೨ ನೋಡುವವರಿಗೆ ಲಾಭವಾಗಿದೆ. ಯಾಕಂದರೆ ಜ್ಞಾನದ ನೆರಳಿನಲ್ಲಿ
ಇರುವದು, ಬೆಳ್ಳಿಯ ನೆರಳಿನಲ್ಲಿರುವ ಹಾಗಿದೆ; ಆದರೆ ಜ್ಞಾನವು
ತನ್ನ ಯಜಮಾನರನ್ನು ಬದುಕಿಸುವದೇ ತಿಳುವಿಕೆಯ ಲಾಭವಾ
ಗಿದೆ.

೧೩ ದೇವರ ಕೆಲಸವನ್ನು ನೋಡು; ಯಾಕಂದರೆ ಅವನು ಕೊಂಕು
೧೪ ಮಾಡಿದ್ದನ್ನು ಯಾರು ನೆಟ್ಟಗೆ ಮಾಡ ಬಲ್ಲರು? ಸುಖದ ದಿವಸ
ದಲ್ಲಿ ಸುಖಿಯಾಗಿರು; ದುಃಖದ ದಿವಸದಲ್ಲಿ ನೋಡಿಕೋ. ಮ
ನುಷ್ಯನು ತನ್ನ ಬಳಿಕ ಬರುವದನ್ನು ಎದ್ದು ಮಾತ್ರ ಕಂದು
ಕೊಳ್ಳದ ಹಾಗೆ, ದೇವರು ಇದನ್ನು ಸಹ ಅದಕ್ಕೆ ಎದುರಾಗಿ
ಮಾಡಿದ್ದಾನೆ.

೧೫ ಇದನ್ನೆಲ್ಲಾ ನನ್ನ ಮಾಯದ ದಿವಸಗಳಲ್ಲಿ ಕಂಡೆನು; ನೀತಿ
ವಂತನು ತನ್ನ ನೀತಿಯಲ್ಲಿ ನಾಶವಾಗುವದುಂಟು; ಮತ್ತು ದುಷ್ಟ
೧೬ ನು ತನ್ನ ದುಷ್ಟತ್ವದಲ್ಲಿ ಬಾಳುವದುಂಟು. ಹೆಚ್ಚಾಗಿ ನೀತಿವಂತ
ನಾಗ ಬೇಡ; ಅಧಿಕ ಜ್ಞಾನವುಳ್ಳವನಾಗಿರ ಬೇಡ; ನಿನ್ನನ್ನು ನೀ
೧೭ ನೇ ನಾಶ ಮಾಡುವದು ಯಾಕೆ? ಹೆಚ್ಚಾಗಿ ದುಷ್ಟನಾಗ ಬೇಡ.
ಹೆಡ್ಡನಾಗ ಬೇಡ. ನಿನ್ನ ಸಮಯವು ಬಾರದೆ, ನೀನು ಸಾ
೧೮ ಯುವದು ಯಾಕೆ? ಇದನ್ನು ಹಿಡಿದು ಕೊಳ್ಳುವದು ಬಳ್ಳೇದು;
ಮತ್ತು ಅದರಿಂದ ನಿನ್ನ ಕೈ ಬಿಡಿಸದೆ ಇರು; ಯಾಕಂದರೆ ದೇ
ವರಿಗೆ ಭಯಪಡುವವನು ಇದೆಲ್ಲಾದರೊಳಗಿಂದ ಹೊರಟು ಹೋ
ಗುವನು.

೧೯ ಜ್ಞಾನವು ಪಟ್ಟಣದಲ್ಲಿರುವ ಹತ್ತು ಪರಾಕ್ರಮಶಾಲಿಗಳಿಗಿಂತ ಜ್ಞಾ
೨೦ ನಿಯನ್ನು ಬಲ ಪಡಿಸುತ್ತದೆ. ಯಾಕಂದರೆ ಮನುಷ್ಯರಲ್ಲಿ ಬ
ಳ್ಳೇದನ್ನು ಮಾಡಿ, ಚಾಪ ಮಾತದೆ ಇರುವ ನೀತಿವಂತನು ಭೂ
ಮಿಯಲ್ಲಿ ಬಬ್ಬನೂ ಇಲ್ಲ.

೨೧ ಮತ್ತು ನಿನ್ನನ್ನು ಸಪಿಸುವ ನಿನ್ನ ಸೇವಕನನ್ನು ನೀನು ಕೇಳ
ದ ಹಾಗೆ, ಜನರು ಆಡುವ ಎಲ್ಲಾ ಮಾತುಗಳ ಮೇಲೆ ಮನಸ್ಸು
೨೨ ಇಡ ಬೇಡ. ಯಾಕಂದರೆ ನೀನು ಸಹ ಮತ್ತೊಬ್ಬರನ್ನು ಸಪಿಸಿ
ದ್ದೀ ಎಂದು, ನಿನ್ನ ಹೃದಯವು ಅನೇಕಾವರ್ತಿ ತಿಳುಕೊಂಡದೆ.

೨೩ ಇದೆಲ್ಲಾ ಜ್ಞಾನದಿಂದ ಪರೀಕ್ಷಿಸಿದೆನು; ಜ್ಞಾನಿಯಾಗಿರ ಬೇಕೆಂ
ದು, ಅಂದು ಕೊಂಡೆನು; ಆದರೆ ಅದು ನನಗೆ ದೂರವಾಗಿತ್ತು.
೨೪ ದೂರವೂ, ಬಹಳ ಆಳವೂ ಆಗಿರುವದನ್ನು ಕಂದು ಕೊಳ್ಳುವ
೨೫ ವನ್ಯಾರು! ಜ್ಞಾನವನ್ನೂ ಮತಿಯನ್ನೂ ತಿಳ್ಳಿಯುವದಕ್ಕೂ, ವಿ
ಚಾರಿಸುವದಕ್ಕೂ, ಹುಡುಕುವದಕ್ಕೂ, ಹುಚ್ಚುತನದ ದುಷ್ಟ
ತ್ವವನ್ನೂ ಮರುಳ್ಳನ ಹೆಡ್ಡತನವನ್ನು ತಿಳ್ಳಿಯುವದಕ್ಕೂ, ನಾನೂ
೨೬ ನನ್ನ ಹೃದಯವೂ, ತಿರುಗಾಡಿದೆವು. ಮತ್ತು ನಾನು ಮರಣ
ಕ್ಕಿಂತ ಕಹಿಯಾದದ್ದನ್ನು ಕಂದು ಕೊಂಡೆನು—ಏನಂದರೆ ಉ
ರ್ಲು ಬಲೆಗಳಾದ ಹೃದಯವುಳ್ಳಂಥ ಸಂಕೋಲೆಗಳಾದ ಕೈ
ಗಳುಳ್ಳಂಥ ಹೆಂಗಸನ್ನೇ; ದೇವರ ಮುಂದೆ ಬಳ್ಳೇದಾದವನು ಅವ
ಳಿಗೆ ತಪ್ಪಿಸಿ ಕೊಳ್ಳುವನು; ಪಾಪಿಯು ಅವಳಿಂದ ಹಿಡಿಯಲ್ಪ
೨೭ ಡುವನು. ನೋಡು; ಮತಿಯನ್ನು ಕಂದು ಕೊಳ್ಳುವದಕ್ಕೆ ಬಂ
ದೊಂದಾಗಿ ಕೋಧಿಸಿ, ಇದನ್ನು ಕಂದು ಕೊಂಡೆನೆಂದು, ಪ್ರಸಂಗಿ
೨೮ ಹೇಳುತ್ತಾನೆ. ಅದನ್ನು ನನ್ನ ಪ್ರಾಣವು ಕಂದು ಕೊಳ್ಳದೆ ಇ
ನ್ನೂ ಹುಡುಕುತ್ತದೆ; ಸಾವಿರದಲ್ಲಿ ಬಬ್ಬ ಮನುಷ್ಯನನ್ನು ಕಂದು
ಕೊಂಡಿದ್ದೇನೆ; ಆದರೆ ಅವರೆಲ್ಲರಲ್ಲಿ ಹೆಂಗಸನ್ನು ಕಂದು ಕೊಳ್ಳ
೨೯ ಲಿಲ್ಲ. ಇದನ್ನು ಮಾತ್ರ ನೋಡು, ನಾನು ಕಂದು ಕೊಂಡದ್ದೇನಂ
ದರೆ—ದೇವರು ಮನುಷ್ಯನನ್ನು ನೆಟ್ಟನೆಯವನಾಗಿ ಮಾಡಿದ
ನು; ಆದರೆ ಅವರು ಅನೇಕ ತಂತ್ರಗಳನ್ನು ಹುಡುಕಿದ್ದಾರೆ.

## ೮ ಸಂಧಿ.

೧ ಜ್ಞಾನಿಯ ಹಾಗೆ ಯಾರು? ಕಾರ್ಯದ ವಿವರವನ್ನು ತಿಳ
ಕೊಳ್ಳುವವನ್ಯಾರು! ಮನುಷ್ಯನ ಜ್ಞಾನವು ಅವನ ಮುಖವನ್ನು
ಬೆಳಗ ಮಾಡುತ್ತದೆ; ಮತ್ತು ಅವನ ಮುಖದ ದೃಢವು ಬದಲಾ
ಗುವದು.

೨ ನಾನು ಹೇಳುವದೇನಂದರೆ—ಅರಸನ ಕಟ್ಟಳೆಯನ್ನೂ, ಮು
೩ ಖ್ಯವಾಗಿ ದೇವರ ಆಣೆಯನ್ನೂ, ಕೈಕೊಳ್ಳು. ಅವನನ್ನು ಬಿ
ಟ್ಟು ಹೋಗುವದಕ್ಕೆ ತ್ವರೆ ಪಡ ಬೇಡ; ಕೆಟ್ಟ ಕಾರ್ಯದಲ್ಲಿ
ನಿಲ್ಲ ಬೇಡ; ಯಾಕಂದರೆ ಅವನು ಇಷ್ಟೈಸುವದೆಲ್ಲಾ ಮಾಡು
೪ ತ್ತಾನೆ. ಯಾಕಂದರೆ ಅರಸನ ಮಾತು ಅಧಿಕಾರವಾಗಿದೆ; ಏನು
೫ ಮಾಡುತ್ತೀ? ಎಂದು, ಅವನಿಗೆ ಹೇಳುವವನ್ಯಾರು! ಆಜ್ಞೆಯನ್ನು
ಕೈಕೊಳ್ಳುವವನು ಕೆಟ್ಟದ್ದನ್ನು ಅನುಭವಿಸನು; ಜ್ಞಾನಿಯ ಹೃ
೬ ದಯವು ಕಾಲವನ್ನೂ, ನ್ಯಾಯವನ್ನೂ, ತಿಳ್ಳಿಯುತ್ತದೆ. ಯಾ
ಕಂದರೆ ಎಲ್ಲಾ ಕೆಲಸಕ್ಕೆ ಕಾಲವೂ ನ್ಯಾಯವೂ ಅವೆ. ಯಾಕಂ
೭ ದರೆ ಮನುಷ್ಯನ ಕೇಡು ಅವನ ಮೇಲೆ ದೊಡ್ಡದಾಗಿದೆ. ಯಾ
ಕಂದರೆ ಇರಲಿಕ್ಕಿರುವಂಥಾದ್ದು ಏನೆಂದು, ತಿಳುಕೊಳ್ಳುವವನು
ಯಾರೂ ಇಲ್ಲ; ಯಾಕಂದರೆ ಹ್ಯಾಗೆ ಇರುವದೆಂದು, ಅವನಿಗೆ
೮ ತಿಳ್ಳಿಸುವವನ್ಯಾರು?

ಮನುಷ್ಯನು ಅತ್ತಾದ ಮೇಲೆ, ಆತ್ಮನನ್ನು ಹಿಡಿದು ಕೊಳ್ಳು
ವದಕ್ಕೆ, ಅಧಿಕಾರಿಯಲ್ಲ; ಸಾಯುವ ದಿವಸದ ಮೇಲೆ ಅಧಿಕಾರ
ವಿಲ್ಲ. ಯುದ್ಧದಲ್ಲಿ ಬಿಡುಗಡೆ ಇಲ್ಲ; ದುಷ್ಟತ್ವವು, ಅದು ಉಂಟಾ
ದವರನ್ನು ತಪ್ಪಿಸುವದಿಲ್ಲ.

೯ ಇದನ್ನೆಲ್ಲಾ ನೋಡಿ, ಸೂರ್ಯನ ಕೆಳಗೆ ಆಗುವ ಎಲ್ಲಾ ಕೆ
ಲಸದ ಮೇಲೆ ಮನಸ್ಸು ಇಟ್ಟೆದ್ದೇನೆ; ಮನುಷ್ಯನು ಮನುಷ್ಯ
ನ ಮೇಲೆ ತನ್ನ ಕೇಡಿಗಾಗಿ ಅಧಿಕಾರ ನಡಿಸುವಂಥಾ ಕಾಲ ಉಂಟು.
೧೦ ಮತ್ತು ಹೀಗಿರಲಾಗಿ ಪರಿಶುದ್ಧ ಸ್ಥಳಕ್ಕೆ ಹೋಗಿ ಬಂದ ದುಷ್ಟ
ರು ಹೂಣಲ್ಪಡುವದನ್ನು ನೋಡಿದೆನು; ಮತ್ತು ಅವರು ಹೀಗೆ
ಮಾಡಿದ ಪಟ್ಟಣದಲ್ಲಿ ಮರೆಯಲ್ಪಟ್ಟರು. ಇದು ಸಹ ಮಾಯವು.

೧೧ ದುಷ್ಟ ಕೆಲಸಕ್ಕೆ ಬೇಗ ನ್ಯಾಯ ತೀರ್ಪು ಆಗದೆ ಇರುವ
ದರಿಂದ ಮನುಷ್ಯನ ಮಕ್ಕಳ ಹೃದಯವು ಕೆಟ್ಟದ್ದನ್ನು ಮಾ
೧೨ ಡುವದಕ್ಕೆ ಅವರಲ್ಲಿ ತುಂಬಿ ಅದೆ. ಪಾಪಿಯು ನೂರು ಸಾರಿ
ಕೆಟ್ಟದ್ದನ್ನು ಮಾಡಿ, ದಿವಸಗಳನ್ನು ಹೆಚ್ಚಿಸಿದರೂ, ದೇವರಿಗೆ ಭ
ಯ ಪಟ್ಟು, ಅವನ ಮುಂದೆ ಭಯ ಪಡುವವರಿಗೆ ಬಳ್ಳೇದಾಗುವ
ದೆಂದು, ಬಲ್ಲೆನು. ಆದರೆ ದುಷ್ಟನಿಗೆ ಬಳ್ಳೇದು ಆಗುವದಿಲ್ಲ; ಅ
೧೩ ವನು ದಿವಸಗಳನ್ನು ಹೆಚ್ಚಿಸುವದಿಲ್ಲ; ನೆರಳಿನ ಹಾಗಿದ್ದಾನೆ; ಯಾ
ಕಂದರೆ ದೇವರ ಮುಂದೆ ಅವನು ಭಯ ಪಡುವವನಲ್ಲ.

೧೪ ಭೂಮಿಯ ಮೇಲೆ ನಡೆಯುವ ಮಾಯ ಉಂಟು; ಏನಂದ
ರೆ, ದುಷ್ಟರ ಕ್ರಿಯೆಯ ಪ್ರಕಾರ ಅನುಭವವಾಗುವ ನೀತಿವಂತರು
ಇದ್ದಾರೆ; ಮತ್ತು ನೀತಿವಂತರ ಕ್ರಿಯೆಯ ಪ್ರಕಾರ ಅನುಭವವಾ
ಗುವ ದುಷ್ಟರು ಇದ್ದಾರೆ. ಇದು ಸಹ ಮಾಯವು, ಅಂದೆನು.
೧೫ ಆಗ ನಾನು ಸಂತೋಷವನ್ನು ಹೊಗಳ್ಳಿದೆನು! ಯಾಕಂದರೆ ಮ
ನುಷ್ಯರಿಗೆ ಉಣ್ಣುವದೂ, ಕುಡಿಯುವದೂ, ಸಂತೋಷ ಪಡು
ವದೂ, ಇವುಗಳೇ ಹೊರ್ತು, ಸೂರ್ಯನ ಕೆಳಗೆ ಬಳ್ಳೇದು
ಏನೂ ಇಲ್ಲ; ಸೂರ್ಯನ ಕೆಳಗೆ ದೇವರು ಅವನಿಗೆ ಕೊಡುವ ಜೀ
ವದ ದಿವಸಗಳಲ್ಲಿ ಅವನ ಕಷ್ಟದಿಂದ ಇದು ಅವನಿಗೆ ಕೇರುತ್ತದೆ.



೧೬ ಜ್ಞಾನ ತಿಳ್ಳಿದು ಕೊಳ್ಳುವದಕ್ಕೂ, ಭೂಮಿಯ ಮೇಲೆ ನಡೆ
ಯುವ ಆಯಾಸ ನೋಡುವದಕ್ಕೂ, ಮನಸ್ಸು ಕೊಟ್ಟೆನು—
ರಾತ್ರಿ ಹಗಲು ತನ್ನ ಕಣ್ಣುಗಳಿಂದ ನಿದ್ದೆ ಕಾಣದವರು ಇದ್ದಾರಲ್ಲ!
೧೭ ಆಗ ದೇವರ ಕೆಲಸವನ್ನೆಲ್ಲಾ ನೋಡಿದೆನು; ಏನಂದರೆ, ಸೂ
ರ್ಯನ ಕೆಳಗೆ ಆಗುವ ಕೆಲಸವನ್ನು ಮನುಷ್ಯನು ಕಂದು ಕೊ
ಳ್ಳಲಾರನು; ಮನುಷ್ಯನು ಅದನ್ನು ಹುಡುಕುವದಕ್ಕೆ ಎದ್ದು
ಕಷ್ಟ ಪಟ್ಟರೂ, ಅದನ್ನು ಕಂದು ಕೊಳ್ಳನು; ಮತ್ತು ಜ್ಞಾನಿ
ಯು ತಿಳುಕೊಳ್ಳ ಬೇಕೆಂದಿದ್ದರೂ, ಅದನ್ನು ಕಂದು ಕೊಳ್ಳ
ಲಾರನು.

## ೯ ಸಂಧಿ.

೧ ಯಾಕಂದರೆ ಇದೆಲ್ಲಾದರ ಮೇಲೆ ನನ್ನ ಮನಸ್ಸು ಇಟ್ಟು,
ಇದನ್ನು ಬೈಲು ಮಾಡಿದೆನು; ಏನಂದರೆ, ನೀತಿವಂತರೂ, ಜ್ಞಾನಿ
ಗಳೂ, ಅವರ ಸೇವೆಯೂ, ದೇವರ ಕೈಯ್ಯಲ್ಲಿ ಉಂಟು; ಅವ
ರ ಮುಂದೆ ಇರುವ ಎಲ್ಲಾದರಿಂದ ಪ್ರೀತಿಯನ್ನೂ, ಹಗೆಯನ್ನೂ
೨ ಯಾವ ಮನುಷ್ಯನು ತಿಳ್ಳಿಯನು. ಎಲ್ಲರಿಗೆ ಎಲ್ಲಾ ಸಮ; ನೀತಿ
ವಂತನಿಗೂ, ದುಷ್ಟನಿಗೂ, ಬಳ್ಳೇಯವನಿಗೂ, ಶುದ್ಧನಿಗೂ, ಅ
ಶುದ್ರನಿಗೂ, ಅರ್ಪಿಸುವವನಿಗೂ, ಅರ್ಪಿಸದವನಿಗೂ, ಬಂದೇ
ಗತಿ; ಬಳ್ಳೇಯವನಿಗೆ ಹ್ಯಾಗೋ, ಹಾಗೆಯೇ ಚಾಪಿಗೆ ಆಣೆ ಇ
ರುವವನಿಗೆ ಹ್ಯಾಗೋ, ಹಾಗೆಯೇ ಆಣೆಗೆ ಭಯ ಪಡುವವನಿಗೆ.
೩ ಸೂರ್ಯನ ಕೆಳಗೆ ಆಗುವ ಎಲ್ಲಾ ಕೆಲಸಗಳಲ್ಲಿ ಇದು ಕೆಟ್ಟದ್ದು;
ಏನಂದರೆ ಎಲ್ಲರಿಗೆ ಬಂದೇ ಗತಿ; ಮನುಷ್ಯನ ಮಕ್ಕಳ ಹೃದ
ಯವು ಸಹ ಕೆಟ್ಟತನದಿಂದ ತುಂಬಿ ಅದೆ; ಅವರ ಜೀವ ಇರುವ
ವರಿಗೆ ಮರುಳು ಅವರ ಹೃದಯದಲ್ಲಿ ಅದೆ; ತರುವಾಯ ಸತ್ತ
೪ ವರ ಬಳಿಗೆ ಹೋಗುತ್ತಾರೆ. ಯಾಕಂದರೆ ಜೀವಿತರೆಲ್ಲರ ಸಂಗತ
ಸೇರಿದವನು ಯಾವನೋ, ಅವನಿಗೆ ನಂಬಿಕೆ ಉಂಟು; ಯಾಕಂ
ದರೆ ಬದುಕುವ ನಾಯಿ ಸತ್ತ ಸಿಂಹಕ್ಕಿಂತ ಬಳ್ಳೇದು. ಯಾ
ಕಂದರೆ ಜೀವಿತರು ತಾವು ಸಾಯುತ್ತೇವೆಂದು ತಿಳ್ಳಿದಿದ್ದಾರೆ; ಸತ್ತ
೫ ವರು ಏನೂ ತಿಳ್ಳಿಯದೆ ಇದ್ದಾರೆ; ಮತ್ತು ಅವರಿಗೆ ಪ್ರತಿ ಫಲವು
ಇಲ್ಲ; ಯಾಕಂದರೆ ಅವರ ಜ್ಞಾಪಕ ಮರತು ಹೋಗಿದೆ. ಅವರ
ಪ್ರೀತಿಯೂ, ಅವರ ಹಗೆಯೂ, ಅವರ ಹೊಟ್ಟೆಕಿಚ್ಚೂ, ಮತಿ
ದು ಹೋಗಿ ಆಯಿತು; ಸೂರ್ಯನ ಕೆಳಗೆ ಆಗುವ ಎಲ್ಲಾ ಕಾ
ರ್ಯಗಳಲ್ಲಿ ಯುಗ ಯುಗಕ್ಕೂ ಅವರಿಗೆ ಚಾಲು ಇಲ್ಲ.

೬ ಹೋಗಿ ಸಂತೋಷದಿಂದ ನಿನ್ನ ಕೊಟ್ಟಿ ತಿಂದು, ಬಳ್ಳೇ
ಹೃದಯದಿಂದ ನಿನ್ನ ದ್ರಾಕ್ಷೇರಸವನ್ನು ಕುಡಿ; ಯಾಕಂದರೆ
ದೇವರು ನಿನ್ನ ಕೆಲಸಗಳನ್ನು ಕಟಾಕ್ಷಿಸಿ ಇದ್ದಾನೆ. ಎಲ್ಲಾ ಕಾಲದ
೭ ಲ್ಲಿ ನಿನ್ನ ವಸ್ತ್ರಗಳು ಬಿಳುಪಾಗಿರಲಿ; ಎಣ್ಣೆಯು ನಿನ್ನ ತಲೆಯ
ಮೇಲೆ ಕಡಿಮೆಯಾಗದಿರಲಿ. ಸೂರ್ಯನ ಕೆಳಗೆ ಅವನು ನಿನಗೆ
ಕೊಟ್ಟ ಮಾಯವಾದ ನಿನ್ನ ಜೀವದ ದಿವಸಗಳಲ್ಲೆಲ್ಲಾ, ನಿನ್ನ
ಮಾಯದ ದಿವಸಗಳಲ್ಲೆಲ್ಲಾ, ನೀನು ಪ್ರೀತಿ ಮಾಡುವ ನಿನ್ನ ಹೆಂ
ಡತಿಯ ಸಂಗಡ ನಿನ್ನ ಜೀವನನ್ನು ಅನುಭವಿಸು; ಯಾಕಂದರೆ
ಜೀವದಲ್ಲಿಯೂ, ಸೂರ್ಯನ ಕೆಳಗೆ ನೀನು ಪಡುವ ಕಷ್ಟದಲ್ಲಿ
೮ ಯೂ, ಇದೇ ನಿನ್ನ ಪಾಲು. ಮಾಡುವದಕ್ಕೆ ನಿನ್ನ ಕೈ ದೊರ
ಕಿನಿ ಕೊಳ್ಳುವದನ್ನೆಲ್ಲಾ ನಿನ್ನ ಬಲದಿಂದ ಮಾಡು; ಯಾಕಂದರೆ
ನೀನು ಹೋಗಲಿಕ್ಕಿರುವ ಪಾತಾಳದಲ್ಲಿ ಕೆಲಸವೂ, ಮತಿಯೂ,
ತಿಳ್ಳುವಿಕೆಯೂ, ಜ್ಞಾನವೂ, ಇಲ್ಲ.

೧೧ ತಿರಿಗಿ ಸೂರ್ಯನ ಕೆಳಗೆ ನಾನು ನೋಡಿದ್ದೇನಂದರೆ—ಓಟವು
ತ್ವರೆಕೆ ಪಡುವವರಿಗೆ ಅಲ್ಲ; ಯುದ್ಧವು ಪರಾಕ್ರಮಶಾಲಿಗಳಿಗೆ ಅಲ್ಲ;
ಮತ್ತು ಕೊಟ್ಟಿಯು ಜ್ಞಾನಿಗಳಿಗೆ ಅಲ್ಲ; ಮತ್ತು ಐಶ್ವರ್ಯವು
ವಿವೇಕಿಗಳಿಗೆ ಅಲ್ಲ; ಮತ್ತು ದಯವು ತಿಳ್ಳಿದವರಿಗೆ ಅಲ್ಲ; ಯಾಕಂ
೧೨ ದರೆ ಕಾಲವೂ ಗತಿಯೂ ಅವರೆಲ್ಲರಿಗೆ ಸಂಭವಿಸುತ್ತದೆ. ಯಾಕಂ
ದರೆ ಮನುಷ್ಯನು ಸಹ ತನ್ನ ಕಾಲ ತಿಳ್ಳಿಯುವದಿಲ್ಲ; ಕೆಟ್ಟ ಬಲೆ
ಯಿಂದ ಹಿಡಿಯಲ್ಪಡುವ ಮೀನುಗಳಂತೆಯೂ, ಉರ್ಲಿನಲ್ಲಿ ಸಿ
ಕ್ಕುವ ಪಕ್ಷಿಗಳಂತೆಯೂ, ಮನುಷ್ಯನ ಮಕ್ಕಳು ಕೇಡಿನ ಕಾಲದ
ಲ್ಲಿ, ಅದು ಫಕ್ಕನೇ ಅವರ ಮೇಲೆ ಬೀಳುವಾಗ, ಹಿಡಿಯಲ್ಪಡು
ತ್ತಾರೆ.

೧೩ ಹಾಗೆಯೇ ಸೂರ್ಯನ ಕೆಳಗೆ ಈ ಜ್ಞಾನವನ್ನು ನೋಡಿದೆ
೧೪ ನು; ಅದು ನನಗೆ ದೊಡ್ಡದಾಗಿತ್ತು—ಸಣ್ಣ ಪಟ್ಟಣವು ಇತ್ತು; ಅದ
ರಲ್ಲಿ ಜನರು ಕೊಂಚವಾಗಿದ್ದರು; ದೊಡ್ಡ ಅರಸನು ಅದಕ್ಕೆ ವಿ
ರೋಧವಾಗಿ ಬಂದು, ಅದನ್ನು ಸುತ್ತಿ, ಅದಕ್ಕೆ ಎದುರಾಗಿ ದೊಡ್ಡ
ದೊತ್ತಲಗಳನ್ನು ಕಟ್ಟಿದನು. ಅದರಲ್ಲಿ ಜ್ಞಾನಿಯಾದ ಬಡ ಮ
೧೫ ನುಷ್ಯನನ್ನು ಕಂದು ಕೊಂಡನು; ಅವನು ತನ್ನ ಜ್ಞಾನದಿಂದ
ಆ ಪಟ್ಟಣವನ್ನು ತಪ್ಪಿಸಿದನು; ಆದರೆ ಆ ಬಡ ಮನುಷ್ಯನನ್ನು
೧೬ ಯಾರೂ ಜ್ಞಾಪಕ ಮಾಡಿ ಕೊಳ್ಳಲಿಲ್ಲ. ಆಗ ನಾನು ಹೇಳ್ಳಿದ್ದೇನಂ
ದರೆ—ಜ್ಞಾನವು ಪರಾಕ್ರಮಕ್ಕಿಂತ ಬಳ್ಳೇದು; ಆದರೆ ಬಡವನ
ಜ್ಞಾನವು ತಿರಸ್ಕಾರವಾಯಿತು; ಅವನ ಮಾತುಗಳು ಕೇಳಲ್ಪ
ಡಲಿಲ್ಲ.

೧೭ ಜ್ಞಾನಿಗಳ ಮಾತುಗಳು ಹುಚ್ಚರಲ್ಲಿ ದೊರೆತನ ಮಾಡುವವನ
೧೮ ಕೂಗಿಗಿಂತ ಸಮಾಧಾನವಾಗಿ ಕೇಳಲ್ಪಡುತ್ತವೆ. ಕಾಳಗದ ಆಯು
ಧಗಳಿಗಿಂತ ಜ್ಞಾನವು ಬಳ್ಳೇದು. ಆದರೆ ಬಬ್ಬ ಪಾಪಿಯು ಬ
ಹಳ ಮೇಲನ್ನು ನಾಶನ ಮಾಡುತ್ತಾನೆ.

## ೧೦ ಸಂಧಿ.

೧ ಸತ್ತ ನೊಣಗಳು ವೈದ್ಯನ ಎಣ್ಣೆಯನ್ನು ನಾತ ಬಡಿಯ
ಮಾಡುತ್ತವೆ; ಸ್ವಲ್ಪ ಹೆಡ್ಡತನವು ಜ್ಞಾನದಿಂದಲೂ, ಘನದಿಂದ
ಲೂ ಪ್ರಿಯನಾದವನನ್ನು ಕೆಡಿಸುತ್ತದೆ.

೨ ಜ್ಞಾನಿಯ ಹೃದಯವು ತನ್ನ ಬಲಗಡೆಯಲ್ಲಿಯೂ, ಹುಚ್ಚ
೩ ನ ಹೃದಯವು ತನ್ನ ಎಡಗಡೆಯಲ್ಲಿಯೂ, ಅದೆ. ಹೆಡ್ಡನು ಮಾ
ರ್ಗದಲ್ಲಿ ನಡೆಯುವಾಗಲೂ, ಅವನ ಬುದ್ಧಿ ಸಾಲದೆ ಹೋಗುತ್ತ
ದೆ; ಮತ್ತು ಎಲ್ಲರಿಗೂ—ಹೆಡ್ಡನೆಂದು ಹೇಳುತ್ತಾನೆ.

೪ ಆಳುವವನ ಅತ್ತುವು ನಿನಗೆ ವಿರೋಧವಾಗಿ ಎದ್ದರೆ, ನಿನ್ನ ಸ್ಥ
ಳವನ್ನು ಬಿಡ ಬೇಡ; ಯಾಕಂದರೆ ತಾಳ್ಮೆಯು ದೊಡ್ಡ ಪಾಪಗ
ಳನ್ನು ಶಾಂತಿ ಪಡಿಸುತ್ತದೆ.

೫ ಅಧಿಕಾರಿಯ ಸಮುಖದಿಂದ ಹೊರಟು ಬರುವ ತಪ್ಪಿನ ಪ್ರಕಾ
೬ ರವಾದ ಕೇಡನ್ನು ಸೂರ್ಯನ ಕೆಳಗೆ ನೋಡಿದ್ದೇನೆ. ಹೆಡ್ಡತನ
ವು ಬಹಳ ಎತ್ತರವಾದ ಸ್ಥಳಗಳಲ್ಲಿ ಇಡಲ್ಪಡುತ್ತವೆ; ಐಶ್ವರ್ಯ
ವಂತರು ಕೆಳಗಿನ ಸ್ಥಳದಲ್ಲಿ ಕೂತು ಕೊಳ್ಳುತ್ತಾರೆ. ಕುದುರೆಗಳ
೭ ಮೇಲೆ ಉಳ್ಳಗದವರನ್ನೂ, ಉಳ್ಳಗದವರ ಹಾಗೆ ಭೂಮಿಯ
ಮೇಲೆ ನಡೆಯುವ ಪ್ರಧಾನರನ್ನೂ, ನೋಡಿದ್ದೇನೆ.

೮ ಕುಣಿ ಅಗೆಯುವವನು ಅದರಲ್ಲಿಯೇ ಬೀಳುವನು; ಬೇಲಿ
೯ ಮುರಿಯುವವನನ್ನು ಹಾವು ಕಚ್ಚುವದು. ಕಲ್ಲುಗಳನ್ನು ಕೀಳುವ

ವನು ಅವುಗಳಿಂದ ನೋವು ಪಡುವನು; ಕಟ್ಟಿಗೆ ಕಡಿಯುವವನು ಅದರಿಂದ ಮೋಸ ಪಡುವನು.

೧೦ ಕಬ್ಬಿಣ ಮೊಂಡಾಗಿರಲು, ಅದರ ಬಾಯಿ ಮಸೆಯದಿದ್ದರೆ, ಬಲವನ್ನು ಹೆಚ್ಚಿಸ ಬೇಕು; ಅದರೆ ಜ್ಞಾನವು ಬಾಳುವಿಕೆಗೆ ಪ್ರಯೋಜನವಾಗಿದೆ.

೧೧ ನಿಶ್ಚಯವಾಗಿ ಹಾವು ಮಂತ್ರವಿಲ್ಲದೆ ಕಚ್ಚುವದು; ಹಾಗೆಯೇ ಹರಟೆಯವನಲ್ಲಿ ಪ್ರಯೋಜನವಿಲ್ಲ.

೧೨ ಜ್ಞಾನಿಯ ಬಾಯ ಮಾತುಗಳು ಆನಂದಕರವಾಗಿವೆ. ಹುಚ್ಚನ ತುಟಿಗಳು ಅವನನ್ನು ನುಂಗಿ ಬಿಡುತ್ತವೆ.

೧೩ ಅವನ ಬಾಯ ಮಾತುಗಳ ಆರಂಭವು ಕೆಡ್ಡತನವಾಗಿದೆ; ಅವನ ಬಾಯ ಅಂತ್ಯವು ಕೆಟ್ಟ ಮರುಳಾಗಿದೆ.

೧೪ ಹೆಚ್ಚನು ಮಾತುಗಳನ್ನು ಹೆಚ್ಚಿಸುತ್ತಾನೆ; ಆಗುವಂಥಾದ್ದು ಮನುಷ್ಯನಿಗೆ ತಿಳಿಯುವದಿಲ್ಲ; [ವರು? ಅವನ ತರುವಾಯ ಆಗುವಂಥಾದ್ದನ್ನು ಅವನಿಗೆ ಯಾರು ತಿಳಿಸು

೧೫ ಹುಚ್ಚರ ಕಷ್ಟವು ಅವನನ್ನು ದಣಿಸುತ್ತದೆ; ಯಾಕಂದರೆ ಪಟ್ಟಣಕ್ಕೆ ಹೋಗ ಅವನಿಗೆ ತಿಳಿಯದು.

೧೬ ಹುಡುಗನು ನಿನ್ನ ಅರಸನಾಗಿದ್ದರೆ, ನಿನ್ನ ಪ್ರಧಾನರು ಬೆಳಿಗ್ಯೆ ಊಟ ಮಾಡಿದರೆ, ಧೇಶವೇ, ನಿನಗೆ ಅಯ್ಯೋ!

೧೭ ಶ್ರೇಷ್ಠರ ಮಗನು ನಿನ್ನ ಅರಸನಾಗಿದ್ದರೆ, ನಿನ್ನ ಪ್ರಧಾನರು ತಕ್ಕ ಕಾಲದಲ್ಲಿ, ಅಮಲಿಗಾಗಿ ಅಲ್ಲ, ಬಲಕ್ಕಾಗಿ ಊಟ ಮಾಡಿದರೆ, ಧೇಶವೇ, ನಿನಗೆ ಭಾಗ್ಯ.

೧೮ ಬಹು ಮೈಗಳ್ಳತನದಿಂದ ತೊಲೆಗಳು ಜಗ್ಗುತ್ತವೆ; ಕೈಗಳ ಸುಸ್ತಿನಿಂದ ಮನೆ ಸೋರುತ್ತದೆ.

೧೯ ನಗೆಗೆ ಕೊಟ್ಟಿ ಮಾಡುತ್ತಾರೆ; ದ್ರಾಕ್ಷೇರಸವು ಜೀವನನ್ನು ಸಂತೋಷ ಪಡಿಸುತ್ತದೆ; ಬೆಳ್ಳಿಯು ಸಮಸ್ತಕ್ಕೂ ಉಪಯೋಗ

೨೦ ವಾಗಿದೆ. ಮನೋಭಾವನೆಯಲ್ಲಾದರೂ ಅರಸನನ್ನು ಶಪಿಸ ಬೇಡ; ನೀನು ಮಲಗುವ ಕೊಠಡಿಯಲ್ಲಿ ಐಶ್ವರ್ಯವಂತನನ್ನು ಶಪಿಸ ಬೇಡ; ಯಾಕಂದರೆ ಆಕಾಶದ ಪಕ್ಷಿಗಳು ಶಬ್ದ ಹೆಗೆದು ಕೊಂಡು ಹೋಗುವವು; ಕೆಕ್ಕೆಯುಳ್ಳದ್ದು ಮಾತು ತಿಳಿಸುವದು.

## ೧೧ ಸಂಧಿ.

೧ ನಿನ್ನ ಕೊಟ್ಟಿ ನೀರಿನ ಮೇಲೆ ಹಾಕು; ಯಾಕಂದರೆ ಬಹಳ ದಿನಗಳ ಮೇಲೆ ಅದನ್ನು ಕಂಡು ಕೊಳ್ಳುವಿ.

೨ ಏಳ್ವರಿಗೂ ಎಣ್ಬರಿಗೂ, ಪಾಲು ಕೊಡು; ಯಾಕಂದರೆ ಭೂಮಿಯ ಮೇಲೆ ಯಾವ ಕೇಡು ಬರುವದೋ, ನೀನರಿಯೆ.

೩ ಮೋಡಗಳು ತುಂಬಿದರೆ, ಭೂಮಿಯ ಮೇಲೆ ಮಳೆಯನ್ನು ಸುರಿಸುತ್ತವೆ; ಮತ್ತು ಮರವು ದಕ್ಷಿಣಕ್ಕೆ ಬಿದ್ದರೆ, ಇಲ್ಲವೆ ಉತ್ತರಕ್ಕೆ ಬಿದ್ದರೆ, ಆ ಮರವು ಬಿದ್ದ ಸ್ಥಳದಲ್ಲಿಯೇ ಇರುವದು.

೪ ಘಾಳಿಯನ್ನು ಲಕ್ಷಿಸುವವನು ಬಿತ್ತುವದಿಲ್ಲ; ಮೋಡಗಳನ್ನು ನೋಡುವವನು ಕೊಯ್ಯುವದಿಲ್ಲ.

೫ ಘಾಳಿಯ ಮಾರ್ಗ ಯಾವದೆಂದೂ, ಎಲುಬುಗಳು ಗರ್ಭವತಿಯ ಗರ್ಭದಲ್ಲಿ ಹ್ಯಾಗೆ ಎಂದೂ, ನೀನು ಅರಿಯದ ಹಾಗೆ, ಸರ್ವವನ್ನು ಮಾಡುವ ದೇವರ ಕೆಲಸವನ್ನು ಅರಿಯದೆ ಇದ್ದೀ.

೬ ಬೆಳಿಗ್ಯೆ ನಿನ್ನ ಬೀಜವನ್ನು ಬಿತ್ತು, ಸಂಜೆಯಲ್ಲಿಯೂ ನಿನ್ನ ಕೈ ವಿಶ್ರಮಿಸಲೀಸದೆ ಇರು; ಯಾಕಂದರೆ ಯಾವದು ಕೈ ಕೂಡಿ ಬರುವದೋ? ಇದೋ? ಅದೋ? ಇಲ್ಲವೆ ಎರಡೂ ಒಂದೇ ಪ್ರಕಾರ ಬಳ್ಳೇವಾಗುವವೋ? ಎಂದು, ನಿನಗೆ ತಿಳಿಯದು.

೭ ಬೆಳಕು ಶೀಯಾಗಿಯೂ, ಸೂರ್ಯನನ್ನು ನೋಡುವದು ಕಣ್ಣುಗಳಿಗೆ ಬಳ್ಳೇದಾಗಿಯೂ, ಅದೆ.

೮ ಅದರೆ ಮನುಷ್ಯನು ಬಹಳ ವರುಷ ಬದುಕಿ, ಅವುಗಳೆಲ್ಲಾ ಸಂತೋಷ ಪಟ್ಟರೂ, ಕತ್ತಲೆಯ ದಿವಸಗಳು ಸಹ ಬಹಳವಾಗಿರುವವೆಂದು, ಜ್ಞಾಪಕ ಮಾಡಿ ಕೊಳ್ಳಲಿ; ಬರುವಂಥಾದ್ದೆಲ್ಲಾ ಮಾಯವಾಗಿದೆ.

೯ ಪ್ರಾಯಸ್ತನೇ, ನಿನ್ನ ಯೌವನದಲ್ಲಿ ಸಂತೋಷ ಪಡು; ನಿನ್ನ ಪ್ರಾಯದ ದಿವಸಗಳಲ್ಲಿ ನಿನ್ನ ಹೃದಯವು ನಿನ್ನನ್ನು ಆನಂದ ಪಡಿಸಲಿ; ನಿನ್ನ ಹೃದಯದ ಮಾರ್ಗಗಳಲ್ಲಿಯೂ, ನಿನ್ನ ಕಣ್ಣುಗಳ ನೋಟದಲ್ಲಿಯೂ, ನಡೆ; ಆದರೆ ಅವೆಲ್ಲಾದಕ್ಕೋಸ್ಕರ ದೇವರು ನಿನ್ನನ್ನು ನ್ಯಾಯ ತೀರ್ವಿಕೆಯಲ್ಲಿ ಸೇರಿಸುವನೆಂದು ತಿಳಿಯಕೋ.

೧೦ ಆದದರಿಂದ ಕರಕಲೆಯನ್ನು ನಿನ್ನ ಹೃದಯದಿಂದ ತೊಲಗಿಸು; ಕೇಡನ್ನು ನಿನ್ನ ಮಾಂಸದಿಂದ ಅಗಲಿಸು; ಯಾಕಂದರೆ ಯೌವನವೂ, ಜೀವೋದಯ ಕಾಲವೂ, ಮಾಯವಾಗಿವೆ.

## ೧೨ ಸಂಧಿ.

೧ ನಿನ್ನ ಯೌವನದ ದಿವಸಗಳಲ್ಲಿ ಕೇಡಿನ ದಿವಸಗಳು ಬರುವದಕ್ಕಿಂತ ಮುಂಚೆಯೂ, ಅವುಗಳಲ್ಲಿ ನನಗೆ ಸಂತೋಷವಿಲ್ಲವೆಂದು ನೀನು ಹೇಳುವ ವರುಷಗಳು ಸಮೀಪವಾಗುವದಕ್ಕಿಂತ ಮುಂಚೆಯೂ, ನಿನ್ನ ಸೃಷ್ಟಿಕರ್ತನನ್ನು ಜ್ಞಾಪಕ ಮಾಡಿಕೋ.

೨ ಸೂರ್ಯನೂ, ಬೆಳಕೂ, ಚಂದ್ರನೂ, ನಕ್ಷತ್ರಗಳೂ ಕತ್ತಲಾಗುವದಕ್ಕಿಂತಲೂ, ಮಳೆಯ ಮೋಡಗಳೂ ತಿರಿಗಿ ಬರುವದಕ್ಕಿಂತಲೂ, ಮುಂಚೆಯೇ.

೩ ಆ ದಿನದಲ್ಲಿ ಮನೆ ಕಾಯುವವರು ನಡುಗುವರು; ಬಲವಂತರು ಬೊಗ್ಗುವರು;

೪ ಬೀಸುವವರು ಸ್ವಲ್ಪವಾದದರಿಂದ ಸುಮ್ಮನಿರುವರು; ಕಿಟಕಿಗಳಿಂದ ನೋಡುವವರು ಕತ್ತಲಾಗುವರು;



ಬೀಸುವ ಶಬ್ದ ಕುಂದುವಾಗ ಬೀದಿಯ ಕಡೆ ಕದಗಳು ಮುಚ್ಚಲ್ಪಡುವವು;
ಪಕ್ಷಿಯ ಶಬ್ದಕ್ಕೆ ಏಳುವನು;
ಗಾನದ ಕುಮಾರ್ತಿಗಳೆಲ್ಲಾ ಮಂದವಾಗುವರು;

೫ ಮತ್ತು ಎತ್ತರಕ್ಕೆ ಹೆದರುವರು; ಮಾರ್ಗದಲ್ಲಿ ಭಯಂಕರಗಳು ಇರುವವು; ಬಾದಾಮಿ ಮರವು ಅರಳುವದು; ಮಿಡತೆಯು ಭಾರವಾಗಿರುವದು; ಆಶೆ ಮುಗಿಯುವದು; ಯಾಕಂದರೆ ಮನುಷ್ಯನು ತನ್ನ ನಿತ್ಯ ಮನೆಗೆ ಹೋಗುತ್ತಾನೆ; ಗೋಳಾಡುವವರು ಬೀದಿಯಲ್ಲಿ ತಿರುಗಾಡುತ್ತಾರೆ;

೬ ಬೆಳ್ಳಿಯ ಸರಿಗೆ ಬಿಚ್ಚಲ್ಪಡುವದು; ಭಂಗಾರದ ಚಂಬು ಜಡೆಯುವದು; ಕೊಡಪಾನವು ಬುಗ್ಗೆಯ ಬಳಿಯ ಭಿನ್ನವಾಗುವದು;

೭ ಭಾವಿಯ ಮೇಲೆ ಇರುವ ಚಕ್ರ ತುಂಡಾಗುವದು. ಮತ್ತು ಧೂಳಿಯು ತನ್ನ ಭೂಮಿಗೆ ತಿರುಗುವದು; ಆತ್ಮವು ಅದನ್ನು ಕೊಟ್ಟ ದೇವರ ಬಳಿಗೆ ತಿರುಗುವದು.

೮ ಮಾಯಗಳ ಮಾಯವು ಎಂದು ಪ್ರಸಂಗಿಯು ಹೇಳಿದನು; ಸರ್ವವು ಮಾಯವೇ.

೯ ಇದಲ್ಲದೆ ಪ್ರಸಂಗಿಯು ಜ್ಞಾನಿಯಾಗಿದ್ದು, ಜನರಿಗೆ ತಿಳುವಿಕೆಯನ್ನು ಕಲಿಸಿದನು; ಅವನು ತೂಗಿ, ನೋಡಿ, ವಿಚಾರಿಸಿ, ಅನೇಕ

೧೦ ನಾಮಕಿಗಳನ್ನು ಕ್ರಮವಾಗಿ ಹೊಂದಿಸಿದನು. ಪ್ರಸಂಗಿಯು ಆನಂದಕರವಾದ ಮಾತುಗಳನ್ನು ಕಂಡು ಕೊಳ್ಳಬೇಕೆಂದು, ಹುಡುಕಿದನು; ಬರೆದವುಗಳು ನೆಚ್ಚನೆಯಾದ ಸತ್ಯದ ಮಾತುಗಳೇ.

೧೧ ಜ್ಞಾನಿಗಳ ಮಾತುಗಳು ಸಲಾಕಿಗಳ ಹಾಗೆಯೂ, ಸಭೆಯ ಯಜಮಾನರು ನೆಟ್ಟ ಮೊಳೆಗಳ ಹಾಗೆಯೂ, ಒಬ್ಬ ಕುರುಬನಿಂದ

೧೨ ಕೊಡಲ್ಪಟ್ಟವೆ. ಕಡೆಗೆ, ನನ್ನ ಮಗನೇ, ಇವುಗಳಿಂದ ಎಚ್ಚರಿಕೆಯಾಗಿರು; ಬಹಳ ಪುಸ್ತಕಗಳ ಮಾಡೋಣಕ್ಕೆ ಅಂತ್ಯವಿಲ್ಲ; ಬಹಳ ವಿದ್ಯಾಭ್ಯಾಸ ಮಾಡುವದು ಮಾಂಸಕ್ಕೆ ದಣಿವು.

೧೩ ಸಮಸ್ತ ಮಾತಿನ ಬಟ್ಟರ್ಥವನ್ನು ಕೇಳು—ದೇವರಿಗೆ ಭಯಪಡು; ಅವನ ಆಜ್ಞೆಗಳನ್ನು ಕೈಕೋ; ಯಾಕಂದರೆ ಇದೇ ಮನುಷ್ಯಕ್ಕೆಲ್ಲರ ಮೇಲೆ ಬಿದ್ದ ಭಾರ.

೧೪ ಯಾಕಂದರೆ ಬಳ್ಳೇದಾಗಲಿ, ಕೆಟ್ಟದ್ದಾಗಲಿ, ಅಂತರಂಗವಾದ ಎಲ್ಲವನ್ನು ಕುರಿತು ಆಗುವ ನ್ಯಾಯ ತೀರ್ವಿಕೆಯಲ್ಲಿ ದೇವರು ಎಲ್ಲಾ ಕೆಲಸಗಳನ್ನು ಸೇರಿಸುವನು.

# THE SONG OF SOLOMON.

## ಸೊಲೊಮೋನನ ಗೀತ.

### ೧. ಸಂಧಿ.

೧ ಸೊಲೊಮೋನನ ಗೀತಗಳ ಗೀತ.

೨ ತನ್ನ ಬಾಯಿಯ ಮುದ್ದುಗಳಿಂದ ನನಗೆ ಮುದ್ದಿಡಲಿ;
ಯಾಕಂದರೆ ನಿನ್ನ ಪ್ರೀತಿಯು ದ್ರಾಕ್ಷೇ ರಸಕ್ಕಿಂತ ಉತ್ತಮ.

೩ ನಿನ್ನ ಒಳ್ಳೇ ತೈಲಗಳ ವಾಸನೆಯಿಂದ,
ನಿನ್ನ ಹೆಸರು ಹೊಯ್ಯಲ್ಪಟ್ಟ ತೈಲವಾಗಿದೆ;
ಆದದರಿಂದ ಕನ್ನಿಕೆಗಳು ನಿನ್ನನ್ನು ಪ್ರೀತಿ ಮಾಡುತ್ತಾರೆ.

೪ ನನ್ನನ್ನು ಎಳೆಕೋ; ನಿನ್ನ ಹಿಂದೆ ಓಡುವೆವು;
ಅರಸನು ನನ್ನನ್ನು ತನ್ನ ಕೊಠಡಿಗಳಲ್ಲಿ ಕರ ಕೊಂಡು ಬಂದಿದ್ದಾನೆ.
ನಾವು ನಿನ್ನಲ್ಲಿ ಉಲ್ಲಾಸ ಪಟ್ಟು, ಸಂತೋಷ ಪಡುತ್ತೇವೆ;
ದ್ರಾಕ್ಷೇ ರಸಕ್ಕಿಂತ ನಿನ್ನ ಪ್ರೀತಿಯನ್ನು ಜ್ಞಾಪಕ ಮಾಡುತ್ತೇವೆ;
ಅವರು ತಕ್ಕದ್ದಾಗಿ ನಿನ್ನನ್ನು ಪ್ರೀತಿ ಮಾಡುತ್ತಾರೆ.

೫ ಕರಿಯಳಾದ ನಾನು ಸುಂದರವುಳ್ಳವಳಾಗಿದ್ದೇನೆ, ಯೆರೂಸಲೇಮಿನ ಕುಮಾರ್ತೆಗಳೇ;
ಕೆದಾರನ ಗುಡಾರಗಳ ಹಾಗೆ, ಸೊಲೊಮೋನನ ತೆರೆಗಳ ಹಾಗೆ ಇದ್ದೇನೆ.

೬ ನನ್ನನ್ನು ನೋಡ ಬೇಡಿರಿ; ಯಾಕಂದರೆ ಕಪ್ಪಾಗಿದ್ದೇನೆ;
ಸೂರ್ಯನು ನನ್ನನ್ನು ದೃಷ್ಟಿಸಿದನು.
ನನ್ನ ತಾಯಿಯ ಮಕ್ಕಳು ನನ್ನ ಮೇಲೆ ಕೋಪ ಮಾಡಿದರು.
ದ್ರಾಕ್ಷೇ ತೋಟಗಳನ್ನು ಕಾಯ ನನ್ನನ್ನು ನೇಮಿಸಿದರು.
ನನ್ನ ಸ್ವಂತ ದ್ರಾಕ್ಷೇ ತೋಟವನ್ನು ನಾನು ಕಾಯಲಿಲ್ಲ.

೭ ನನ್ನ ಪ್ರಾಣಕ್ಕೆ ಪ್ರಿಯನಾದವನೇ,
ನೀನು ನಿನ್ನ ಮಂದೆಯನ್ನು ಮೇಯಿಸಿ,
ಮಧ್ಯಾನ್ಹದಲ್ಲಿ ಮಲಗಿಸಿ ಕೊಳ್ಳುವ ಸ್ಥಳ ಎಲ್ಲಿ? ಎಂದು ನನಗೆ ತಿಳಿಸು.
ಯಾಕಂದರೆ ನಾನು ನಿನ್ನ ಜತೆಗಾರರ ಮಂದೆಗಳ ಬಳಿಯಲ್ಲಿ ಮಾಜಿ ಕೊಳ್ಳುವವಳ ಹಾಗೆ ಇರುವದೇನು?

೮ ನೀನು ತಿಳಿಯದೆ ಇದ್ದರೆ, ಸ್ತ್ರೀಯರಲ್ಲಿ ಸೌಂದರ್ಯವಂತಳೇ,
ನೀನು ಮಂದೆಯ ಜಾಡೆಯನ್ನು ಹಿಡಿದು ಹೊರಟು ಹೋಗಿ,
ಮೇಯಿಸುವವರ ಗುಡಾರಗಳ ಬಳಿಯಲ್ಲಿ ನಿನ್ನ ಮೇಕೆಯ ಮರಿಗಳನ್ನು ಮೇಯಿಸು.

೯ ಫರೋನನ ರಥಗಳಲ್ಲಿರುವ ಕುದುರೆಗಳಿಗೆ
ನಿನ್ನನ್ನು ಸಮಾನ ಮಾಡಿದ್ದೇನೆ, ನನ್ನ ಗೆಣತಿಯೇ.

೧೦ ನಿನ್ನ ದವಡೆಗಳು ಮುಖ ಪಟ್ಟೆಗಳಿಂದಲೂ,
ನಿನ್ನ ಕೊರಳು ಕಂಠಮಾಲೆಗಳಿಂದಲೂ ರಮ್ಯವಾಗಿವೆ.

೧೧ ನಾವು ನಿನಗೋಸ್ಕರ ಭಂಗಾರದ ಅಂಚುಗಳನ್ನೂ ಬೆಳ್ಳಿಯ ಕುಚ್ಚುಗಳನ್ನೂ ಉಂಟು ಮಾಡುವೆವು.

೧೨ ಅರಸನು ಪಂಚ್ಚೆಯಲ್ಲಿರುವಾಗ,
ನನ್ನ ಜಟಾಮಾಂಸಿ ಅದರ ವಾಸನೆಯನ್ನು ಬಿಡುತ್ತದೆ.

೧೩ ನನ್ನ ಪ್ರಿಯನು ನನಗೆ ಬೋಳದ ಗಡ್ಡೆಯ ಹಾಗೆ ಇರುವನು;
ರಾತ್ರಿಯೆಲ್ಲಾ ನನ್ನ ಸ್ತನಗಳ ಮಧ್ಯದಲ್ಲಿ ಇರುವನು.

೧೪ ಎಂಗೇದಿಯ ದ್ರಾಕ್ಷೇ ತೋಟಿಗಳಲ್ಲಿರುವ
ಪಚ್ಚೇ ತೆನೆಯ ಹಾಗೆ, ನನ್ನ ಪ್ರಿಯನು ನನಗೆ ಇರುವನು.

೧೫ ಇಗೋ, ನೀನು ಸೌಂದರ್ಯವಂತೆಯು, ನನ್ನ ಪ್ರಿಯಳೇ,
ಇಗೋ, ನೀನು ಸೌಂದರ್ಯವಂತೆಯು, ನಿನ್ನ ಕಣ್ಣುಗಳು ಪಾರಿವಾಳಗಳಾಗಿವೆ.

೧೬ ನನ್ನ ಪ್ರಿಯನೇ, ಇಗೋ, ನೀನು ಸೌಂದರ್ಯವಂತನು, ಹೌದು ರಮ್ಯವಾದವನು;
ಮತ್ತು ನಮ್ಮ ಹಾಸಿಗೆ ಹಚ್ಚಗೆ ಅದೆ.

೧೭ ನಮ್ಮ ಮನೆಯ ತೊಲೆಗಳು ದೇವದಾರು ಮರಗಳು;
ನಮ್ಮ ಜಂತೆಗಳು ತುರಾಯಿ ಗಿಡಗಳು.

### ೨. ಸಂಧಿ.

೧ ಶಕೋನಿನ ಗುಲಾಬಿ ಹೂವೂ,
ತಗ್ಗುಗಳ ತಾವರೆ ಹೂವೂ ನಾನೇ.

೨ ಮುಳ್ಳಿನ ಪೊದೆಯಲ್ಲಿ ತಾವರೆ ಹೂವು ಹ್ಯಾಗೋ,
ನನ್ನ ಗೆಣತಿ ಕುಮಾರ್ತೆಗಳಲ್ಲಿ ಹಾಗೆಯೇ.

೩ ಅಡವಿಯ ಗಿಡಗಳಲ್ಲಿ ಮಾದಳ ಗಿಡ ಹ್ಯಾಗೋ,
ಕುಮಾರರಲ್ಲಿ ನನ್ನ ಪ್ರಿಯನು ಹಾಗೆಯೇ,
ನಾನು ಅವನ ನೆರಳಿನಲ್ಲಿ ಆನಂದವಾಗಿ ಕುಳಿತು ಕೊಂಡೆನು;
ಅವನ ಫಲವು ನನ್ನ ಬಾಯಿಗೆ ಮಧುರವಾಗಿತ್ತು.

೪ ದ್ರಾಕ್ಷೇ ರಸದ ಮನೆಗೆ ನನ್ನನ್ನು ಕರ ಕೊಂಡು ಬಂದನು;
ನನ್ನ ಮೇಲೆ ಇರಿಸಿದ ಧ್ವಜ ಪ್ರೀತಿಯೇ.

೫ ರಸಗಳಿಂದ ನನ್ನನ್ನು ಆದರಿಸು;
ಮಾದಳ ಫಲದಿಂದ ನನ್ನನ್ನು ಸಮಧಾಯಿಸು;
ಯಾಕಂದರೆ ಪ್ರೀತಿಯ ರೋಗದಲ್ಲಿ ಬಿದ್ದಿದ್ದೇನೆ.

೬ ಅವನ ಎಡಗೈ ನನ್ನ ತಲೆಯ ಕೆಳಗದೆ;
ಅವನ ಬಲಗೈ ನನ್ನನ್ನು ಅಪ್ಪಿ ಕೊಂಡದೆ.

೭ ಯೆರೂಸಲೇಮಿನ ಕುಮಾರ್ತೆಗಳೇ,
ನನ್ನ ಪ್ರಿಯಳಿಗೆ ಮನಸ್ಸಿರುವ ಪರ್ಯಂತರ,
ನೀವು ಅವಳನ್ನು ಎಬ್ಬಿಸ ಬೇಡಿರಿ;
ಎಚ್ಚರಿಸ ಬೇಡಿರಿ; ಎಂದು,
ಅಡವಿಯ ಜಿಂಕೆಗಳಿಂದಲೂ ದುಪ್ಪಿಗಳಿಂದಲೂ ನಿಮಗೆ ಆಣೆ ಇಡುತ್ತೇನೆ.

೯ ನನ್ನ ಪ್ರಿಯನ ಶಬ್ದವು!
ಇಗೋ, ಅವನು ಪರ್ವತಗಳ ಮೇಲೆ ಹಾರುತ್ತಾ,
ಗುಡ್ಡಗಳ ಮೇಲೆ ನೆಗೆಯುತ್ತಾ, ಬರುತ್ತಾನೆ.
೮ ನನ್ನ ಪ್ರಿಯನು ಜಿಂಕೆಯ ಹಾಗೆ, ಇಲ್ಲವೆ,
ದುಪ್ಪಿಯ ಮರಿಯ ಹಾಗೆ, ಇದ್ದಾನೆ.
ಅವನು ನಮ್ಮ ಗೋಡೆಯ ಹಿಂದೆ ನಿಂತು,
ಜಾಲಾಂತರಗಳಿಂದ ತನ್ನನ್ನು ತೋರಿಸಿ,
ಕಿಟಿಕಿಗಳಿಂದ ನೋಡುತ್ತಾನೆ.
೧೦ ನನ್ನ ಪ್ರಿಯನು ಮಾತಾಡಿ,
ನನಗೆ ಹೇಳಿದನು—
ಏಳು, ನನ್ನ ಗೆಣತಿಯೇ;
ನನ್ನ ಸುಂದರಳೇ, ಹೊರಟು ಬಾ.
೧೧ ಯಾಕಂದರೆ, ಇಗೋ, ಛಳಿಕಾಲವು ಗತಿಸಿತು;
ಮಳೆಯು ನಿಂತು ಹೋಯಿತು;
೧೨ ಪುಷ್ಪಗಳು ಭೂಮಿಯ ಮೇಲೆ ಕಾಣಿಸುತ್ತವೆ;
ಪಕ್ಷಿಗಳು ಹಾಡುವ ಕಾಲ ಬಂತು;
ಬೆಳವದ ಶಬ್ದವು ನಮ್ಮ ದೇಶದಲ್ಲಿ ಕೇಳಿಲ್ಪಡುತ್ತದೆ.
೧೩ ಅಂಜೂರದ ಗಿಡವು ಅದರ ಹೀಚುಗಳನ್ನು ಬಿಡುತ್ತದೆ.
ದ್ರಾಕ್ಷೇ ಬಳ್ಳಿಗಳ ಹೂವು ಅದರ ಸುವಾಸನೆಯನ್ನು ಕೊಡುತ್ತದೆ.
ಏಳು, ನನ್ನ ಗೆಣತಿಯೇ; ನನ್ನ ಸುಂದರಳೇ, ಹೊರಟು ಬಾ.
೧೪ ಗುಡ್ಡದ ಸರುಕುಗಳಲ್ಲಿಯೂ, ಕಲ್ಲುಸಂದುಗಳ ಮರೆಯಲ್ಲಿಯೂ ಇರುವ ನನ್ನ ಪಾರಿವಾಳವೇ,
ನಿನ್ನ ಮೋರೆಯನ್ನು ನನಗೆ ತೋರ ಮಾಡು.
ನಿನ್ನ ಶಬ್ದವನ್ನು ಕೇಳಿಸು.
ಯಾಕಂದರೆ ನಿನ್ನ ಶಬ್ದವು ರಮ್ಯವಾಗಿಯೂ,
ನಿನ್ನ ಮೋರೆಯು ಶೋಭಾಯಮಾನವಾಗಿಯೂ ಅದೆ.
೧೫ ನರಿಗಳನ್ನೂ, ದ್ರಾಕ್ಷೇ ಗಿಡಗಳನ್ನು ಕೆಡಿಸುವ ಚಿಕ್ಕ ನರಿಗಳನ್ನೂ ನಮಗೆ ಹಿಡಿಯಿರಿ.
ಯಾಕಂದರೆ ನಮ್ಮ ದ್ರಾಕ್ಷೇ ಗಿಡಗಳಿಗೆ ಹೀಚುಗಳುಂಟು.
೧೬ ನನ್ನ ಪ್ರಿಯನು ನನ್ನವನು, ನಾನು ಅವನವಳು,
ತಾವರೆ ಹೂವುಗಳ ಮಧ್ಯದಲ್ಲಿ ಮೇಯಿಸುತ್ತಾನೆ.
೧೭ ನನ್ನ ಪ್ರಿಯನೇ, ತಿರುಗಿ ಕೊಂಡು,
ದಿನ ಉಸುರಿಡುವ ಮಟ್ಟಿಗೂ,
ನೆರಳುಗಳು ಓಡಿ ಹೋಗುವ ಮಟ್ಟಿಗೂ,
ಬಶೇರ್ ಪರ್ವತಗಳ ಮೇಲಿರುವ
ಜಿಂಕೆಯ ಹಾಗೆ, ಇಲ್ಲವೆ ದುಪ್ಪಿಯ ಮರಿಯ ಹಾಗೆ ಇರು.

## ೩. ಸಂಧಿ.

೧ ರಾತ್ರಿಯಲ್ಲಿ ನನ್ನ ಮಂಚದ ಮೇಲೆ
ನನ್ನ ಪ್ರಾಣ ಪ್ರಿಯನನ್ನು ಹುಡುಕಿದೆನು;
೨ ಅವನನ್ನು ಹುಡುಕಿ, ಕಾಣದೆ ಹೋದೆನು.
ನಾನು ಈಗ ಎದ್ದು, ಪಟ್ಟಣವನ್ನು ಸಂಚರಿಸಿ,
ಬೀದಿಗಳಲ್ಲಿಯೂ ಮಾರ್ಗಗಳಲ್ಲಿಯೂ ನನ್ನ ಪ್ರಾಣ ಪ್ರಿಯನನ್ನು ಹುಡುಕುವೆನು.
ಅವನನ್ನು ಹುಡುಕಿ, ಅವನನ್ನು ಕಾಣದೆ ಹೋದೆನು.
೩ ಪಟ್ಟಣವನ್ನು ಸಂಚರಿಸುವ ಕಾವಲಿಗಾರರು ನನ್ನನ್ನು ಕಂಡಾಗ,
ನನ್ನ ಪ್ರಾಣ ಪ್ರಿಯನನ್ನು ಕಂಡಿರಾ? ಅಂದೆನು.
೪ ನಾನು ಅವರನ್ನು ಬಿಟ್ಟು, ಸ್ವಲ್ಪ ಆಚೆಗೆ ಹೋದ ತರುವಾಯ,
ನನ್ನ ಪ್ರಾಣ ಪ್ರಿಯನನ್ನು ಕಂಡೆನು.
ನಾನು ಆತನನ್ನು ಬಿಗಿ ಹಿಡಿದು,
ನನ್ನ ತಾಯಿಯ ಮನೆಗೂ,
ನನ್ನನ್ನು ಹೆತ್ತವಳ ಕೊಠಡಿಗೂ
ಆತನನ್ನು ಕರ ತರುವ ವರೆಗೆ
ಅವನನ್ನು ಬಿಡಲಿಲ್ಲ.

೫ ಯೆರೂಸಲೇಮಿನ ಕುಮಾರ್ತೆಗಳೇ,
ನನ್ನ ಪ್ರಿಯನಿಗೆ ಮನಸ್ಸಿರುವ ಪರ್ಯಂತರ ನೀವು ಅವಳನ್ನು ಎಬ್ಬಿಸ ಬೇಡಿರಿ;
ಎಚ್ಚರಿಸ ಬೇಡಿರಿ, ಎಂದು,
ಅಡವಿಯ ಜಿಂಕೆಗಳಿಂದಲೂ, ದುಪ್ಪಿಗಳಿಂದಲೂ ನಿಮಗೆ ಆಣೆ ಇಡುತ್ತೇನೆ.

೬ ಬೋಳ ಸಾಂಬ್ರಾಣಿಗಳಿಂದಲೂ,
ವರ್ತಕರ ಸಕಲ ಗಂಧ ವರ್ಗಗಳಿಂದಲೂ ವ್ಯಾಪಿಸಲ್ಪಟ್ಟ
ಹೊಗೆ ಸ್ತಂಭಗಳ ಹಾಗೆ,
ಅಡವಿಯಿಂದ ಬರುವ ಇವಳ್ಯಾರು?
೭ ಇಗೋ, ಅವನ ಮಂಚ; ಸೊಲೊಮೋನನದು;
ಇಸ್ರಯೇಲಿನ ಪರಾಕ್ರಮಶಾಲಿಗಳಲ್ಲಿ
ಅರುವತ್ತು ಮಂದಿ ಪರಾಕ್ರಮಶಾಲಿಗಳು ಅದನ್ನು ಸುತ್ತಿ ಕೊಂಡಿದ್ದಾರೆ.
೮ ಅವರೆಲ್ಲರು ಕತ್ತಿ ಹಿಡಿದವರು, ಯುದ್ಧ ಕಲಿತವರು;
೯ ರಾತ್ರಿಯ ಭಯದ ನಿಮಿತ್ತ
ಪ್ರತಿ ಮನುಷ್ಯನು ತನ್ನ ಕತ್ತಿ ಕಟ್ಟಿ ಕೊಂಡಿದ್ದಾನೆ.
ಅರಸನಾದ ಸೊಲೊಮೋನನು ಲೆಬನೋನಿನ ಮರದಿಂದ ಒಂದು ಪಾಲಕಿಯನ್ನು ತನಗೆ ಮಾಡಿಸಿ ಕೊಂಡನು.
೧೦ ಅವನು ಅದರ ಸ್ತಂಭಗಳನ್ನು ಬೆಳ್ಳಿಯಿಂದಲೂ,
ಅದರ ಕೆಳಗಿನ ಭಾಗವನ್ನು ಭಂಗಾರದಿಂದಲೂ,
ಅದರ ಗೌಸಣಿಗೆಯನ್ನು ರಕ್ತ ವರ್ಣದ ವಸ್ತ್ರದಿಂದಲೂ ಮಾಡಿಸಿದನು.
೧೧ ಯೆರೂಸಲೇಮಿನ ಕುಮಾರ್ತೆಗಳ ನಿಮಿತ್ತ,
ಅದರ ಮಧ್ಯದಲ್ಲಿದ್ದದ್ದು ಪ್ರೀತಿಯಿಂದ ಹಾಸಲ್ಪಟ್ಟಿತು.
ಚಿಯೋನಿನ ಕುಮಾರ್ತೆಗಳೇ, ನೀವು ಹೊರಟು ಹೋಗಿ,
ಅವನ ಮದುವೆಯ ದಿವಸದಲ್ಲಿಯೂ,
ಅವನ ಹೃದಯದ ಸಂತೋಷದ ದಿವಸದಲ್ಲಿಯೂ,
ತನ್ನ ತಾಯಿ ತನಗೆ ಧರಿಸಿದ ಕಿರೀಟ ಉಂಟಾಗಿರುವ ಅರಸನಾದ ಸೊಲೊಮೋನನನ್ನು ನೋಡಿರಿ.

## ೪. ಸಂಧಿ.

೧ ಇಗೋ, ನೀನು ಸುಂದರಳು; ನನ್ನ ಗೆಣತಿಯೇ, ಇಗೋ, ನೀನು ಸುಂದರಳು.



ನಿನ್ನ ಮುಸುಕಿನ ಕೆಳಗೆ ನಿನ್ನ ಕಣ್ಣುಗಳು ಪಾರಿವಾಳಗಳಾಗಿವೆ.
ನಿನ್ನ ಕೂದಲು ಗಿಲ್ಯಾದಿನ ಪರ್ವತದಲ್ಲಿ ಕಾಣಲ್ಪಡುವ
ಮೇಕೆಯ ಮಂದೆಯ ಹಾಗೆ ಅದೆ.
೨ ನಿನ್ನ ಹಲ್ಲುಗಳು ತೊಳೆಯುವಿಕೆಯಿಂದ ಏರಿ ಬರುವ,
ಉಣ್ಣೆ ಕತ್ತರಿಸಿದ ಕುರಿ ಮಂದೆಗೆ ಸಮಾನವಾಗಿವೆ;
ಅವೆಲ್ಲಾ ಅವಳಿ ಜವಳಿ ಈಯುತ್ತವೆ;
ಅವುಗಳಲ್ಲಿ ಒಂದೂ ಗೊಡ್ಡಾಗಿರದು.
೩ ನಿನ್ನ ತುಟಿಗಳು ಕೆಂಪು ಧಾರದ ಹಾಗೆ ಅದೆ;
ನಿನ್ನ ಶಬ್ದವು ರಮ್ಯವಾದದ್ದು;
ನಿನ್ನ ಹಣೆಯು ನಿನ್ನ ಮುಸುಕಿನ ಕೆಳಗೆ ವಿಭಾಗಿಸಿದ ದಾಳಿಂಬರ ಹಣ್ಣಿನ ಹಾಗೆ ಅದೆ.
೪ ನಿನ್ನ ಕುತ್ತಿಗೆ ದಾವೀದನ ಬುರುಜಿನ ಹಾಗೆ ಅದೆ;
ಆಯುಧ ಶಾಲೆಗೋಸ್ಕರ ಕಟ್ಟಿಸಲ್ಪಟ್ಟದ್ದು;
ಅದರಲ್ಲಿ ಸಾವಿರ ಗುರಾಣಿಗಳು ತೂಗ ಹಾಕಿ ಅವೆ;
ಅವುಗಳೆಲ್ಲಾ ಪರಾಕ್ರಮಶಾಲಿಗಳ ಡಾಲುಗಳು.
೫ ನಿನ್ನ ಎರಡು ಸ್ತನಗಳು ತಾವರೆ ಹೂವುಗಳಲ್ಲಿ ಮೇಯುವ
ಅವಳಿ ಜವಳಿಯಾದ ಎರಡು ಜಿಂಕೆಯ ಮರಿಗಳ ಹಾಗೆ ಅವೆ.

೬ ದಿನ ಉಸುರಿಟ್ಟು, ನೆರಳುಗಳು ಹರಿದು ಹೋಗುವ ಪರ್ಯಂತರ,
ನಾನು ಬೋಳದ ಪರ್ವತಕ್ಕೂ, ಸಾಂಬ್ರಾಣಿಯ ಗುಡ್ಡಕ್ಕೂ ಹೋಗುವೆನು.
೭ ನೀನು ಪೂರ್ಣ ಚಲುವಿಕೆಯುಳ್ಳವಳು, ನನ್ನ ಗೆಣತಿಯೇ,
ನಿನ್ನಲ್ಲಿ ಕಳಂಕವೇನೂ ಇಲ್ಲ.
೮ ನನ್ನ ಸಂಗಡ ಲೆಬನೋನಿನಿಂದ ಬಾ, ಪತ್ನಿಯೇ;
ಲೆಬನೋನಿನಿಂದ ನನ್ನ ಸಂಗಡ ಬಾ.
ಅಮಾನದ ಶಿಖರದಿಂದ, ಶೆನೀರನ, ಹೆರ್ಮೋನಿನ ಶಿಖರದಿಂದ,
ಸಿಂಹದ ಗವಿಗಳಿಂದ, ಚಿರತೆಗಳ ಪರ್ವತಗಳಿಂದ ದೃಷ್ಟಿಸಿ ನೋಡು.
೯ ನನ್ನ ಹೃದಯವನ್ನು ಶಳ್ಳ ಕೊಂಡಿ.
ನನ್ನ ಸಹೋದರಿಯೇ, ಪತ್ನಿಯೇ,
ನಿನ್ನ ಕಣ್ಣುಗಳ ಏಕ ದೃಷ್ಟಿಯಿಂದಲೂ,
ನಿನ್ನ ಕೊರಳಲ್ಲಿರುವ ಒಂದು ಕಂಠ ಮಾಲೆಯಿಂದಲೂ ನನ್ನ ಹೃದಯವನ್ನು ಶಳ್ಳ ಕೊಂಡಿ.
೧೦ ನಿನ್ನ ಪ್ರೀತಿಯು ಎಷ್ಟೋ ಚನ್ನಾಗಿದೆ,
ನನ್ನ ಸಹೋದರಿಯೇ, ಪತ್ನಿಯೇ!
ನಿನ್ನ ಪ್ರೀತಿಯು ದ್ರಾಕ್ಷೇ ರಸಕ್ಕಿಂತ ಎಷ್ಟೋ ಉತ್ತಮ!
ಎಲ್ಲಾ ಸುಗಂಧಗಳಿಗಿಂತ ನಿನ್ನ ತೈಲಗಳ ವಾಸನೆಯು ಎಷ್ಟೋ ಉತ್ತಮ!
೧೧ ನಿನ್ನ ತುಟಿಗಳು, ಪತ್ನಿಯೇ, ಜೇನು ತೊಟ್ಟಿಯ ಹಾಗೆ ಸುರಿಯುತ್ತವೆ;
ಹಾಲೂ ಜೇನೂ ನಿನ್ನ ನಾಲಿಗೆಯ ಕೆಳಗೆ ಅದೆ;
ನಿನ್ನ ವಸ್ತ್ರಗಳ ವಾಸನೆಯು ಲೆಬನೋನಿನ ವಾಸನೆಯ ಹಾಗೆ ಅದೆ.
೧೨ ನನ್ನ ಸಹೋದರಿಯು, ಪತ್ನಿಯು ಮುಚ್ಚಲ್ಪಟ್ಟ ತೋಟವೂ,
ಮುಚ್ಚಲ್ಪಟ್ಟ ಜಲೆಯೂ,
ಮುದ್ರೆ ಹಾಕಲ್ಪಟ್ಟ ಬುಗ್ಗೆಯೂ ಆಗಿದ್ದಾಳೆ.
೧೩ ನಿನ್ನ ಗಿಡಗಳಲ್ಲಿ ದಾಳಿಂಬರ ಗಿಡಗಳೂ,
ಫಲ ಕೊಡುವ ರಮ್ಯವಾದ ಗಿಡಗಳೂ,
೧೪ ಕರ್ಪೂರವೂ, ಜಟಾಮಾಂಸಿಯೂ ಕೂಡ;
ಜಟಾಮಾಂಸಿಯೂ, ಅಶಿವೂ,
ಕಬ್ಬು, ಲವಂಗವೂ,
ಎಲ್ಲಾ ಸಾಂಬ್ರಾಣಿ ಗಿಡಗಳೂ,
ಬೋಳವೂ, ಅಗರೂ,
೧೫ ಸಮಸ್ತ ಮುಖ್ಯವಾದ ಸುಗಂಧ ವರ್ಗಗಳೂ,
ತೋಟಗಳ ಬುಗ್ಗೆಯೂ,
ಜೀವ ಜಲಗಳ ಝಾವಿಯೂ,
ಲೆಬನೋನಿನಿಂದ ಹರಿಯುವ ಕಾಲಿವೆಗಳೂ ನಿನ್ನಲ್ಲಿ ಅವೆ.

೧೬ ಉತ್ತರ ಘಾಳಿಯೇ, ಎಚ್ಚರವಾಗು; ದಕ್ಷಿಣ ಘಾಳಿಯೇ, ಬಾ;
ನನ್ನ ತೋಟದ ಮೇಲೆ ಬೀಸು;
ಅದರ ಸುಗಂಧಗಳು ಹರಿಯಲಿ.
ನನ್ನ ಪ್ರಿಯನು ತನ್ನ ತೋಟದಲ್ಲಿ ಬಂದು,
ತನ್ನ ರಮ್ಯವಾದ ಫಲಗಳನ್ನು ತಿನ್ನಲಿ;

## ೫. ಸಂಧಿ.

೧ ನನ್ನ ತೋಟಕ್ಕೆ ಬಂದೆನು,
ನನ್ನ ಸಹೋದರಿಯೇ, ಪತ್ನಿಯೇ;
ನನ್ನ ಬೋಳವನ್ನೂ ನನ್ನ ಸುಗಂಧಗಳನ್ನೂ ಕೂಡಿಸಿದ್ದೇನೆ;
ನನ್ನ ಜೇನು ತುಪ್ಪವನ್ನೂ ಜೇನು ತೊಟ್ಟಿಯನ್ನೂ, ತಿಂದಿದ್ದೇನೆ.
ನನ್ನ ದ್ರಾಕ್ಷೇ ರಸವನ್ನೂ ನನ್ನ ಹಾಲನ್ನೂ ಕುಡಿದಿದ್ದೇನೆ.
ತಿನ್ನಿರಿ, ಸ್ನೇಹಿತರೇ;
ಕುಡಿಯಿರಿ, ಮತ್ತರಾಗಿರಿ, ಪ್ರಿಯರೇ.

೨ ನಾನು ನಿದ್ರೆ ಗೈದರೂ, ನನ್ನ ಹೃದಯವು ಎಚ್ಚರವಾಗುವದು.
ನನ್ನ ಪ್ರಿಯನ ಶಬ್ದ; ತಟ್ಟುತ್ತಾನೆ—
ನನಗೆ ತೆರೆ, ನನ್ನ ಸಹೋದರಿಯೇ, ನನ್ನ ಗೆಣತಿಯೇ,
ನನ್ನ ಪಾರಿವಾಳವೇ, ಪೂರ್ಣ ಗುಣವಂತಳೇ;
ಯಾಕಂದರೆ ನನ್ನ ತಲೆಯು ಮಂಜಿನಿಂದಲೂ,
ನನ್ನ ಜಡೆಗಳು ರಾತ್ರಿಯ ಬಿಂದುಗಳಿಂದಲೂ ತೋಯಲ್ಪಟ್ಟವೆ.

೩ ನನ್ನ ಅಂಗಿಯನ್ನು ತೆಗೆದಿದ್ದೇನೆ;
ಅದನ್ನು ತೊಟ್ಟು ಕೊಳ್ಳುವದು ಹ್ಯಾಗೆ?
ನನ್ನ ಕಾಲುಗಳನ್ನು ತೊಳೆದೆನು;
ಅವುಗಳನ್ನು ಮೈಲಿಗೆ ಮಾಡುವದು ಹ್ಯಾಗೆ?
೪ ನನ್ನ ಪ್ರಿಯನು ಬಾಗಲ ಸಂದಿನಲ್ಲಿ ತನ್ನ ಕೈ ಹಾಕಿದನು;
ನನ್ನ ಕರುಳುಗಳು ನನ್ನಲ್ಲಿ ಕುದಿಯುತ್ತಿದ್ದವು.
೫ ನಾನು ನನ್ನ ಪ್ರಿಯನಿಗೆ ತೆರೆಯ ಎದ್ದಾಗ,

ಬೀಗದ ಹಿಡಿಗಳ ಮೇಲೆ ನನ್ನ ಕೈಗಳಿಂದ ಬೋಳವೂ,
ನನ್ನ ಬೆರಳುಗಳಿಂದ ಸೋರುವ ಬೋಳವೂ ಸುರಿಯಿತು.
೬ ನಾನು ನನ್ನ ಪ್ರಿಯನಿಗೆ ತೆಕೆದೆನು;
ಆದರೆ ನನ್ನ ಪ್ರಿಯನು ಹಿಂಜರಿದು, ಹಾದು ಹೋದನು.
ಅವನು ಮಾತಾಡಿದಾಗ, ನನ್ನ ಪ್ರಾಣವು ಹೊರಟಿತು;
ಅವನನ್ನು ಹುಡುಕಿದೆನು; ಶಿಕ್ಕದೆ ಹೋದನು;
ಅವನನ್ನು ಕರೆದೆನು; ಪ್ರತ್ಯುತ್ತರ ಕೊಡದೆ ಹೋದನು.
೭ ಪಟ್ಟಣದಲ್ಲಿ ಸಂಚರಿಸುವ ಕಾವಲಿಗಾರರು ನನ್ನನ್ನು ಕಂಡು,
ನನ್ನನ್ನು ಬಡಿದು ಘಾಯ ಮಾಡಿದರು;
ಅಲಂಗವನ್ನು ಕಾಯುವವರು ನನ್ನ ಮುಸುಕನ್ನು ಕಸು ಕೊಂಡರು.
೮ ನಿಮಗೆ ಆಣೆ ಇಡುತ್ತೇನೆ, ಯೆರೂಸಲೇಮಿನ ಕುಮಾರ್ತೆಗಳೇ—
ನೀವು ನನ್ನ ಪ್ರಿಯನನ್ನು ಕಂಡರೆ,
ನಾನು ಪ್ರೀತಿ ಕೋಗದಲ್ಲಿ ಬಿದ್ದಿದ್ದೇನೆಂದು ಅವನಿಗೆ ತಿಳಿಸಿರಿ.

೯ ಇತರ ಪ್ರಿಯನಿಗಿಂತ ನಿನ್ನ ಪ್ರಿಯನ ಅತಿಶಯವೇನು,
ಸ್ತ್ರೀಯರಲ್ಲಿ ಚಲ್ವಳೇ?
ನೀನು ನಮಗೆ ಹೀಗೆ ಆಣೆ ಇಡುವದಕ್ಕೆ,
೧೦ ಇತರ ಪ್ರಿಯನಿಗಿಂತ ನಿನ್ನ ಪ್ರಿಯನ ಅತಿಶಯವೇನು?

ನನ್ನ ಪ್ರಿಯನು ಬಿಳುಪೂ ಕೆಂಪೂ ಉಳ್ಳವನು;
ಹತ್ತು ಸಾವಿರ ಮಂದಿಯಲ್ಲಿ ಮುಖ್ಯಸ್ಥನು.
೧೧ ಅವನ ತಲೆಯು ಕುಂದಣದ ಹಾಗೆಯೂ,
ಅವನ ಜಡೆಗಳು ಉಂಗರ ಕೂದಲೂ ಕಾಗೆಯ ಹಾಗೆ ಕಪ್ಪಾಗಿಯೂ ಅವೆ.
೧೨ ಅವನ ಕಣ್ಣುಗಳು ಯುಕ್ತವಾಗಿ ಇರಿಸಲ್ಪಟ್ಟು,
ಹಾಲಿನಿಂದ ತೊಳೆಯಲ್ಪಟ್ಟ,
ಜಲದ ಕಾಲಿವೆಗಳ ಬಳಿಯಲ್ಲಿರುವ ಪಾರಿವಾಳಗಳ ಹಾಗೆ ಅವೆ.
೧೩ ಅವನ ದವಡೆಗಳು ಸುಗಂಧ ಮಡಿಯ ಹಾಗೆಯೂ,
ಸುವಾಸನೆಯ ಪುಷ್ಪಗಳ ಹಾಗೆಯೂ ಅವೆ.
ಅವನ ತುಟಿಗಳು ತಾವರೆಗಳ ಹಾಗೆ, ಸೋರುವ ಬೋಳವನ್ನು ಸುರಿಯುತ್ತವೆ.
೧೪ ಅವನ ಕೈಗಳು ಪೆರುಲ್ಲಗಳಿಂದ ಜೋಡಿಸಲ್ಪಟ್ಟ ಭಂಗಾರದ ಉಂಗರಗಳಾಗಿವೆ.
ಅವನ ಉದರವು ನೀಲಗಳಿಂದ ಖಚಿಸಲ್ಪಟ್ಟ ನಿರ್ಮಲವಾದ ದಂತದ ಹಾಗೆ ಅದೆ.
೧೫ ಅವನ ಕಾಲುಗಳು ಕುಂದಣದ ಗದ್ದಿಗೆಯ ಮೇಲೆ ಇರಿಸಿದ ಬೆಳ್ಳೀ ಕಲ್ಲಿನ ಸ್ತಂಭಗಳ ಹಾಗೆ ಅವೆ.
ಅವನ ಪೋಕೆಯು ಲೆಬನೋನಿನ ಹಾಗೆ;
ದೇವದಾರುಗಳ ಹಾಗೆ ಉತ್ತಮವಾಗಿದೆ.
೧೬ ಅವನ ಬಾಯಿ ಬಹು ಮಧುರವಾಗಿದೆ.
ಅವನು ಮಹಾ ಸುಂದರನಾಗಿದ್ದಾನೆ.
ಇವನೇ ನನ್ನ ಪ್ರಿಯನು,
ಇವನೇ ನನ್ನ ಗೆಳೆಯನು,
ಯೆರೂಸಲೇಮಿನ ಕುಮಾರ್ತೆಗಳೇ!

## ೬. ಸಂಧಿ.

೧ ನಿನ್ನ ಪ್ರಿಯನು ಎಲ್ಲಿಗೆ ಹೋದನು,
ಸ್ತ್ರೀಯರಲ್ಲಿ ಚಲ್ವಳೇ?
ನಿನ್ನ ಪ್ರಿಯನು ಯಾವ ಕಡೆಗೆ ತಿರುಗಿದ್ದಾನೆ?
ನಾವು ಅವನನ್ನು ನಿನ್ನ ಸಂಗಡ ಹುಡುಕುವ.

೨ ನನ್ನ ಪ್ರಿಯನು ತೋಟಗಳಲ್ಲಿ ಮೇಯಿಸಲೂ,
ಕಮಲಗಳನ್ನು ಕಿತ್ತು, ಕೂಡಿಸಲೂ,
ತನ್ನ ತೋಟಕ್ಕೆ,
ಸುಗಂಧಗಳ ಮಡಿಗೆ ಹೋಗಿದ್ದಾನೆ.
೩ ನಾನು ಪ್ರಿಯನವಳು, ನನ್ನ ಪ್ರಿಯನು ನನ್ನವನು;
ತಾವರೆ ಹೂವುಗಳಲ್ಲಿ ಮೇಯಿಸುತ್ತಾನೆ.
೪ ನನ್ನ ಗೆಣತಿಯೇ, ನೀನು ತಿರ್ಚ ಎಂಬದರ ಹಾಗೆ ಚಲ್ವಳು,
ಯೆರೂಸಲೇಮಿನ ಹಾಗೆ ರಮ್ಯಳು,
ಧ್ವಜಗಳಿರುವ ದಂಡಿನ ಹಾಗೆ ಭಯಂಕರಳು.
೫ ನಿನ್ನ ಕಣ್ಣುಗಳನ್ನು ನನ್ನ ಕಡೆಯಿಂದ ತಿರುಗಿಸು;
ಯಾಕಂದರೆ ಅವು ನನ್ನನ್ನು ಜೈಸಿನವು.
ನಿನ್ನ ಕೂದಲು ಗಿಲ್ಯಾದಿನಿಂದ ಕಾಣಿಸಲ್ಪಡುವ ಮೇಕೆಯ ಮಂದೆಯ ಹಾಗೆ ಅದೆ.
೬ ನಿನ್ನ ಹಲ್ಲುಗಳು ತೊಳೆಯುವಿಕೆಯಿಂದ ಏರಿ ಬರುವ ಕುರಿ ಮಂದೆಗೆ ಸಮಾನವಾಗಿವೆ;
ಅವೆಲ್ಲಾ ಅವಳಿ ಜವಳಿ ಈಯುತ್ತವೆ;
ಅವುಗಳಲ್ಲಿ ಒಂದೂ ಗೊಡ್ಡಾಗಿರದು.
೭ ನಿನ್ನ ಹಣೆಯು ನಿನ್ನ ಮುಸುಕಿನ ಕೆಳಗೆ ವಿಭಾಗಿಸಿದ ದಾಳಿಂಬರ ಹಣ್ಣಿನ ಹಾಗೆ ಅದೆ.
೮ ಅರುವತ್ತು ಮಂದಿ ರಾಣಿಗಳೂ; ಎಂಭತ್ತು ಮಂದಿ ಉಪಪತ್ನಿಗಳೂ,
ಲೆಖ್ಖವಿಲ್ಲದ ಕನ್ಯಾಸ್ತ್ರೀಯರೂ ಇದ್ದಾರೆ.
೯ ನನ್ನ ಪಾರಿವಾಳವು, ನನ್ನ ಪೂರ್ಣ ಗುಣವಂತಳು, ಒಬ್ಬಳೇ;
ತನ್ನ ತಾಯಿಗೆ ಅವಳು ಒಬ್ಬಳೇ.
ತನ್ನ ಹೆತ್ತವಳಿಗೆ ಆಯಲ್ಪಟ್ಟವಳಾಗಿದ್ದಾಳೆ.
ಕುಮಾರ್ತೆಗಳು ಅವಳನ್ನು ನೋಡಿ, ಆಶೀರ್ವದಿಸಿದರು;
ರಾಣಿಗಳೂ ಉಪಪತ್ನಿಗಳೂ ಅವಳನ್ನು ನೋಡಿ, ಸ್ತುತಿಸಿದರು.
೧೦ ಚಂದ್ರನ ಹಾಗೆ ಚೆಲುವಿಕೆಯುಳ್ಳವಳು,
ಸೂರ್ಯನ ಹಾಗೆ ನಿರ್ಮಲವಾದವಳು,
ಧ್ವಜಗಳಿರುವ ದಂಡಿನ ಹಾಗೆ ಭಯಂಕರವಾದವಳು, ಆಗಿರುವ ಉದಯದ ಹಾಗೆ ದೃಷ್ಟಿಸಿ ನೋಡುವ ಇವಳ್ಯಾರು?
೧೧ ತಗ್ಗಿನ ಫಲಗಳನ್ನು ನೋಡುವದಕ್ಕೂ,
ದ್ರಾಕ್ಷೇ ಬಳ್ಳಿಯು ಬೆಳೆಯುವದೋ?
ದಾಳಿಂಬರ ಗಿಡಗಳು ಚಿಗುರುತ್ತವೋ? ಎಂದು ನೋಡುವದಕ್ಕೂ
ನಾನು ಬಾದಾಮಿಯ ತೋಟಕ್ಕೆ ಹೋದೆನು.
೧೨ ನಾನು ತಿಳಿಯದೆ ಹಾಗೆ, ನನ್ನ ಪ್ರಾಣ ನನ್ನನ್ನು ಅಮ್ಮಿನದಾಬನ ರಥಗಳ ಹಾಗೆ ಮಾಡಿತು.

೧೩ ತಿರಿಗಿ ಬಾ, ತಿರಿಗಿ ಬಾ, ಓ ಶುಲಮಿತಾತಳ್ಳೇ,
ನಾವು ನಿನ್ನನ್ನು ದೃಷ್ಟಿಸುವ ಹಾಗೆ, ತಿರಿಗಿ ಬಾ, ತಿರಿಗಿಬಾ.



ಶುಲಮಿತಾತಳ್ಳಲ್ಲಿ ನೀವು ದೃಷ್ಟಿಸ ಬೇಕಾದದ್ದೇನು?
ನಾಟ್ಯದ ಎರಡು ಗುಂಪಿನವರ ಹಾಗೆಯೇ.

## ೭. ಸಂಧಿ.

೧ ಕೆರಗಳಂಟಾಗಿರುವ ನಿನ್ನ ಕಾಲುಗಳು ಎಷ್ಟು ಸುಂದರವಾಗಿವೆ, ಅಧಿಪತಿಯ ಮಗಳೇ!
ನಿನ್ನ ಸೊಂಟದ ಕೀಲುಗಳು ಪ್ರವೀಣನ ಕೈ ಕೆಲಸವಾದ ವಿಚಿತ್ರ ಕೆಲಸವಾಗಿವೆ.
೨ ನಿನ್ನ ನಾಭಿಯು ರಸ ಕಡಿಮೆ ಇಲ್ಲದ, ದುಂಡಾಗಿರುವ ಬಟ್ಟಲಿನ ಹಾಗಿದೆ.
ನಿನ್ನ ಉದರವು ತಾವರೆಯ ಹೂವುಗಳು ಸುತ್ತಿಕೊಂಡಿರುವ ಗೋಧಿಯ ರಾಶಿಯಾಗಿದೆ.
೩ ನಿನ್ನ ಎರಡು ಸ್ತನಗಳು ಅವಳಿ ಜವಳಿಯಾದ ಎರಡು ಜಿಂಕೇ ಮರಿಗಳ ಹಾಗಿವೆ.
೪ ನಿನ್ನ ಕುತ್ತಿಗೆ ಜಂತದ ಗೋಪುರದ ಹಾಗಿದೆ;
ನಿನ್ನ ಕಣ್ಣುಗಳು ಬತ್ರಬ್ಬಿಮಿನ ಬಾಗಲ ಬಳಿಯಲ್ಲಿರುವ ಹೆಶ್ಬೋನಿನ ವಿಶಾಲಭಾವಿಗಳಾಗಿವೆ;
ನಿನ್ನ ಮೂಗು ದಮಸ್ಕದ ಕಡೆಗೆ ನೋಡುವ ಲೆಬನೋನಿನ ಗೋಪುರದ ಹಾಗಿದೆ.
೫ ನಿನ್ನ ತಲೆಯು ಕರ್ಮೇಲಿನ ಹಾಗೆ,
ನಿನ್ನ ತಲೆ ಕೂದಲು ರಕ್ತಾಂಬರದ ಹಾಗೆ ಅದೆ.
೬ ಅರಸನು ಅಂತಃಪುರದಲ್ಲಿ ಹಿಡಿಯಲ್ಪಟ್ಟಿದ್ದಾನೆ.

ನೀನು ಎಷ್ಟೋ ಚೆಲುವಿಕೆಯುಳ್ಳವಳು, ಆನಂದಗಳಲ್ಲಿ ಎಷ್ಟೋ ರಮ್ಯವಾದವಳು, ಪ್ರಿಯಳೇ!
೭ ಇದ್ದಾಗಿರುವ ನಿನ್ನ ಉನ್ನತ ಖರ್ಜೂರದ ಮರದ ಹಾಗೆ ಅದೆ;
ನಿನ್ನ ಸ್ತನಗಳು ಗೊಂಚಲುಗಳ ಹಾಗೆ ಅವೆ.
೮ ನಾನು ಅಂದೆನು—ಖರ್ಜೂರದ ಮರದ ಬಳಿಯಲ್ಲಿ ಹೋಗಿ,
ಅದರ ಗರಿಗಳನ್ನು ಹಿಡು ಕೊಳ್ಳುವೆನು.
ಇದಲ್ಲದೆ ಈಗ ನಿನ್ನ ಸ್ತನಗಳು ದ್ರಾಕ್ಷೇ ಗೊಂಚಲುಗಳ ಹಾಗೆಯೂ,
ನಿನ್ನ ಮೂಗಿನ ವಾಸನೆಯು ಮಾದಳ ಫಲದ ಹಾಗೆಯೂ ಇರುವವು.
೯ ನಿನ್ನ ಬಾಯಿಯ ಅಂಗಳವು ಉಕ್ಕುವ ನನ್ನ ಪ್ರಿಯನ ಉತ್ತಮವಾದ ದ್ರಾಕ್ಷೇ ರಸದ ಹಾಗಿರುವದು.

ನನ್ನ ಪ್ರಿಯನಿಗೆ, ಅದು ಸರಿಯಾಗಿ ಹೋಗುವಂಥಾದ್ದು,
ನಿದ್ರೆ ಮಾಡುವವರ ತುಟಿಗಳನ್ನು ಮಾತಾಡಿಸುವಂಥಾದ್ದು.
೧೦ ನಾನು ನನ್ನ ಪ್ರಿಯನವಳು;
ಅವನ ಇಷ್ಟೆಯು ನನ್ನ ಮೇಲಿರುವದು.
೧೧ ನನ್ನ ಪ್ರಿಯನೇ, ನಾವು ಹೊಲಕ್ಕೆ ಹೋಗಿ,
ಗ್ರಾಮಗಳಲ್ಲಿ ವಸ್ತಿಯಾಗಿರುವ ಬಾ.
೧೨ ನಾವು ಉದಯಕ್ಕೆ ಎದ್ದು, ದ್ರಾಕ್ಷೇ ತೋಟಗಳಿಗೆ ಹೋಗಿ,
ದ್ರಾಕ್ಷೇ ಬಳ್ಳಿಯು ಬೆಳೆಯುವದೋ?
ಅದರ ಹೀಚುಗಳು ಕಾಣಿಸುತ್ತವೋ! ದಾಳಿಂಬರ ಗಿಡಗಳು ಚಿಗಿಯುತ್ತವೋ? ನೋಡುವ.
ಅಲ್ಲಿ ನನ್ನ ಪ್ರೀತಿಯನ್ನು ನಿನಗೆ ತೋರಿಸುವೆನು.
೧೩ ದುದಾಯಗಳು ಬಳ್ಳೇ ವಾಸನೆ ಕೊಡುತ್ತವೆ;
ನಮ್ಮ ಬಾಗಲುಗಳ ಬಳಿಯಲ್ಲಿ ನಿನಗೋಸ್ಕರ ನಾನು ಇಟ್ಟು ಕೊಂಡ
ಹೊಸ ಹಳ್ಳೇವಾದ ಉತ್ತಮ ಫಲಗಳು ಅವೆ, ನನ್ನ ಪ್ರಿಯನೇ.

## ೮. ಸಂಧಿ.

೧ ನೀನು ನನ್ನ ತಾಯಿಯ ಸ್ತನಗಳನ್ನು ಕುಡಿದ
ನನ್ನ ಸಹೋದರನ ಹಾಗೆ ಇದ್ದರೆ, ಎಷ್ಟೋ ಉತ್ತಮ!
ನಾನು ನಿನ್ನನ್ನು ಹೊರಗೆ ಕಂಡರೆ, ನಿನಗೆ ಮುದ್ದಿಡುವೆನು;
ನಿಶ್ಚಯವಾಗಿ ನನ್ನನ್ನು ತಿರಸ್ಕರಿಸರು.
೨ ನೀನು ನನ್ನನ್ನು ಉಪದೇಶಿಸುವ ಹಾಗೆ,
ನಾನು ನಿನ್ನನ್ನು ನಡಿಸಿ, ನನ್ನ ತಾಯಿಯ ಮನೆಯೊಳಗೆ ನಿನ್ನನ್ನು ಬರ ಮಾಡಿ, ದಾಳಿಂಬರ ಹಣ್ಣಿನ ರಸವಾದ ಊರಿಟ್ಟಿ ಪಾನವನ್ನು ನಿನ್ನನ್ನು ಕುಡಿಯ ಮಾಡುವೆನು.
೩ ಅವನ ಎಡಗೈ ನನ್ನ ತಲೆಯ ಕೆಳಗಿರುವದು;
ಅವನ ಬಲಗೈ ನನ್ನನ್ನು ಅಪ್ಪಿ ಕೊಳ್ಳುವದು.

೪ ಯೆರೂಸಲೇಮಿನ ಕುಮಾರ್ತೆಗಳೇ, ನಿಮಗೆ ಆಣೆ ಇಡುತ್ತೇನೆ—
ನನ್ನ ಪ್ರಿಯಳಿಗೆ ಮನಸ್ಸಾಗುವ ಪರ್ಯಂತರ, ನೀವು ಅವಳನ್ನು ಎಬ್ಬಿಸ ಬೇಡಿರಿ; ಎಚ್ಚರಿಸ ಬೇಡಿರಿ.

೫ ತನ್ನ ಪ್ರಿಯನ ಮೇಲೆ ಊರಿ,
ಅರಣ್ಯದಿಂದ ಏರಿ ಬರುವ ಇವಳ್ಯಾರು?

ಮಾದಳ ಗಿಡದ ಕೆಳಗೆ ನಿನ್ನನ್ನು ಎಚ್ಚರಿಸಿದೆನು;
ಅಲ್ಲಿ ನಿನ್ನ ತಾಯಿ ನಿನ್ನನ್ನು ಪಡೆದಳು;
ಅಲ್ಲಿ ನಿನ್ನನ್ನು ಹೆತ್ತವಳು ನಿನ್ನನ್ನು ಪಡೆದಳು.
೬ ನಿನ್ನ ಹೃದಯದ ಮೇಲೆ ಒಂದು ಮುದ್ರೆಯ ಹಾಗೆಯೂ,
ನಿನ್ನ ಕೈ ಮೇಲೆ ಒಂದು ಮುದ್ರೆಯ ಹಾಗೆಯೂ ನನ್ನನ್ನು ಹಾಕು;
ಯಾಕಂದರೆ ಪ್ರೀತಿಯು ಮರಣದ ಹಾಗೆ ಬಲವಾಗಿರುವದು;
ಕೋಪವು ಪಾತಾಳದ ಹಾಗೆ ಕ್ರೂರವಾಗಿರುವದು;
ಅದರ ಕಿಡಿಗಳು ಪ್ರಜ್ವಲಿಸುವ
ಬೆಂಕೇ ಕಿಡಿಗಳಾಗಿ ಇರುವವು.
೭ ಅನೇಕ ಜಲಗಳು ಪ್ರೀತಿಯನ್ನು ಆರಿಸ ಕೂಡದು;
ಪ್ರವಾಹಗಳು ಮುಣುಗಿಸಲಾರವು;
ಮನುಷ್ಯನು ತನ್ನ ಮನೆಯ ಸ್ಥಿತಿಯನ್ನೆಲ್ಲಾ ಪ್ರೀತಿಗೋಸ್ಕರ ಕೊಟ್ಟನೆ,
ಅದನ್ನು ತಿರಸ್ಕರಿಸೇ ತಿರಸ್ಕರಿಸುವರು.

೮ ನಮಗೆ ಚಿಕ್ಕವಳಾದ ಒಬ್ಬ ಸಹೋದರಿ ಉಂಟು;
ಅವಳಿಗೆ ಸ್ತನಗಳಿಲ್ಲ.

ಅವಳು ಕೇಳ್ಪಟ್ಟುವ ದಿವಸದಲ್ಲಿ
ನಾವು ನಮ್ಮ ಸಹೋದರಿಗೋಸ್ಕರ ಏನು ಮಾಡುವ?
೯ ಅವಳು ಗೋಡೆಯಾಗಿದ್ದರೆ,
ನಾವು ಅವಳ ಮೇಲೆ ಬೆಳ್ಳಿಯ ಅರಮನೆಯನ್ನು ಕಟ್ಟುವೆವು.
ಅವಳು ಬಾಗಲಾಗಿದ್ದರೆ,
ದೇವದಾರು ಹಲಿಗೆಗಳಿಂದ ಅವಳನ್ನು ಹೊದಗಿಸುವೆವು.
೧೦ ನಾನು ಗೋಡೆಯೇ;
ನನ್ನ ಸ್ತನಗಳು ಬುರುಜುಗಳ ಹಾಗೆ ಅವೆ.
೧೧ ಆಗ ನಾನು ಅವನ ಸಮುಖದಲ್ಲಿ ದಯೆ ಹೊಂದಿದವಳ ಹಾಗಿದ್ದೆನು.
ಬಳ್ಳಹೋನಿನಲ್ಲಿ ಸೊಲೊಮೋನನಿಗೆ ಒಂದು ದ್ರಾಕ್ಷೇ ತೋಟ ಇತ್ತು.
ಅವನು ಆ ದ್ರಾಕ್ಷೇ ತೋಟವನ್ನು ಒಕ್ಕಲ ಜನರಿಗೆ ಗುತ್ತಿಗೆಗೆ ಕೊಟ್ಟನು.
ಒಬ್ಬೊಬ್ಬನು ಅದರ ಫಲಕ್ಕೋಸ್ಕರ ಸಾವಿರ ಬೆಳ್ಳಿ ತೆರ ಬೇಕಾಗಿತ್ತು.
೧೨ ನನ್ನದಾದ ನನ್ನ ದ್ರಾಕ್ಷೇ ತೋಟವು ನನ್ನ ಮುಂದೆ ಅವೆ.
ಸೊಲೊಮೋನನೇ, ನಿನಗೆ ಒಂದು ಸಾವಿರವು,
ಅದರ ಫಲವನ್ನು ಕಾಪಾಡುವವರಿಗೆ ಇನ್ನೂರು ಆಗಲಿ.

೧೩ ತೋಟಗಳಲ್ಲಿ ವಾಸವಾಗಿರುವವನೇ,
ಜತೆಗಾರರು ನಿನ್ನ ಶಬ್ದವನ್ನು ಆಲೈಸುತ್ತಾರೆ.
ನನಗೆ ಕೇಳಿಸು.

೧೪ ತ್ವರೆ ಪರು, ನನ್ನ ಪ್ರಿಯನೇ;
ಜಿಂಕೆಯ ಹಾಗೆ,
ಇಲ್ಲವೆ ಸುಗಂಧವುಳ್ಳ ಪರ್ವತಗಳ ಮೇಲಿರುವ ದುಪ್ಪೀ ಮರಿಯ ಹಾಗೆಯೇ ಇರು.

---

# THE BOOK OF THE PROPHET ISAIAH.

ಪ್ರವಾದಿಯಾದ ಯೆಶಾಯನ ಪುಸ್ತಕವು.

## ೧. ಸಂಧಿ.

೧ ಆಮೋಸನ ಮಗನಾದ ಯೆಶಾಯನು, ಯೆಹೂದದ ಅರಸುಗಳಾದ ಉಜೀಯನ, ಯೊತಾಮನ, ಆಹಜನ, ಹಿಜಿಕೀಯನ ದಿವಸಗಳಲ್ಲಿ, ಯೆಹೂದದ ಯೆರೂಸಲೇಮಿನ ವಿಷಯವಾಗಿ ಕಂಡ ದರ್ಶನವು.

೨ ಆಕಾಶಗಳೇ, ಕೇಳಿರಿ!
ಭೂಮಿಯೇ, ಕಿವಿ ಕೊಡು!
ಯಾಕಂದರೆ, ಕರ್ತನು ಮಾತಾಡುತ್ತಾನೆ—
ಮಕ್ಕಳನ್ನು ಸಾಕಿ, ಬೆಳೆಸಿದೆನು;
ಆದರೆ ಅವರು ನನಗೆ ವಿರೋಧವಾಗಿ ದ್ರೋಹ ಮಾಡಿದ್ದಾರೆ.
೩ ಎತ್ತು ತನ್ನ ಯಜಮಾನನನ್ನೂ,
ಕತ್ತೆಯು ತನ್ನ ಒಡೆಯನ ಗೋದಲಿಯನ್ನೂ, ತಿಳಿಯುತ್ತದೆ.
ಇಸ್ರಯೇಲು ತಿಳಿಯುವದಿಲ್ಲ;
ನನ್ನ ಜನರು ಗ್ರಹಿಸುವದಿಲ್ಲ.
೪ ಅಯ್ಯೋ, ಪಾಪ ಮಾಡುವ ಜನಾಂಗವೇ!
ಅಕ್ರಮದಿಂದ ಭಾರವಾದ ಜನರೇ!
ದುಷ್ಟರ ಬೀಜವೇ!
ಕೆಟ್ಟು ಹೋದ ಮಕ್ಕಳೇ!
ಕರ್ತನನ್ನು ಬಿಟ್ಟಿದ್ದಾರೆ,
ಇಸ್ರಯೇಲಿನ ಪರಿಶುದ್ಧನನ್ನು ಅಸಡ್ಡೆ ಮಾಡಿದ್ದಾರೆ;
ಹಿಂದೆ ಬಿದ್ದಿದ್ದಾರೆ.

೫ ಇನ್ನು ನಿಮ್ಮನ್ನು ಬಡಿಯುವದು ಯಾಕೆ!
ಹೆಚ್ಚಾಗಿ ಹಿಂಜರಿಯುವಿರಿ.
ತಲೆಯೆಲ್ಲಾ ರೋಗವಾಗಿದೆ;
ಹೃದಯವೆಲ್ಲಾ ಕುಂಗಿದೆ.
೬ ಅಂಗಾಲಿನಿಂದ ತಲೆಯ ತನಕ ಅದರಲ್ಲಿ ಸ್ವಸ್ಥವಾದದ್ದು ಒಂದೂ ಇಲ್ಲಾ;
ಘಾಯಗಳೂ ಬಾಸುಂಡೆಗಳೂ ಸೋರುವ ಹುಣ್ಣುಗಳೂ ಅವೆ.
ಅವುಗಳನ್ನು ಯಾರೂ ಕಿವಚಲಿಲ್ಲ; ಯಾರೂ ಕಟ್ಟಿಲಿಲ್ಲ;
ಯಾರೂ ಎಣ್ಣೆಯಿಂದ ಮೆತ್ತಗೆ ಮಾಡಲಿಲ್ಲ.
೭ ನಿಮ್ಮ ದೇಶವು ಹಾಳಾಗಿದೆ,
ನಿಮ್ಮ ಪಟ್ಟಣಗಳು ಬೆಂಕಿಯಿಂದ ಸುಟ್ಟು ಹೋಗವೆ;
ನಿಮ್ಮ ಭೂಮಿಯನ್ನು ನಿಮ್ಮ ಮುಂದೆ ಅನ್ಯರು ತಿಂದು ಬಿಡುತ್ತಾರೆ,
ಅದು ಅನ್ಯರಿಂದ ಕೆಡವಲ್ಪಟ್ಟ ಹಾಗೆ ಹಾಳಾಗಿದೆ.
೮ ಚಿಯೋನಿನ ಮಗಳು ದ್ರಾಕ್ಷೇ ತೋಟದ ಗುಡಸಲಿನ ಹಾಗೆಯೂ,
ಸವುತೆ ತೋಟದ ಮಂಚೆಗೆಯ ಹಾಗೆಯೂ,
ಮುತ್ತಿಗೆಯ ಪಟ್ಟಣದ ಹಾಗೆಯೂ,
ಬಿಡಲ್ಪಟ್ಟಿದ್ದಾಳೆ.
೯ ಸೈನ್ಯಗಳ ಕರ್ತನು ನಮಗೆ ಅಲ್ಪ ಸ್ವಲ್ಪ ಉಳಿವನ್ನು ಬಿಡದಿದ್ದರೆ,
ಸೊದೋಮಿನ ಹಾಗೆ ಇರುತ್ತಿದ್ದೆವು, ಗಮೋರಕ್ಕೆ ಸಮಾನವಾಗುತ್ತಿದ್ದೆವು.

೧೦ ಸೊದೋಮಿನ ಅಧಿಪತಿಗಳೇ, ದೇವರ ವಾಕ್ಯವನ್ನು ಕೇಳಿರಿ!
ಗಮೋರದ ಜನವೇ, ನಮ್ಮ ದೇವರ ನ್ಯಾಯಕ್ಕೆ ಕಿವಿ ಕೊಡಿರಿ!
೧೧ ನಿಮ್ಮ ಬಲಿಗಳ ಬಾಹುಳ್ಯವು ನನಗೆ ಯಾಕೆ! ಎಂದು ಕರ್ತನು ಹೇಳುತ್ತಾನೆ.
ಹೋತುಗಳ ದಹನಗಳೂ, ಪುಷ್ಟಿಯಾದ ಪಶುಗಳ ಕೊಬ್ಬೂ, ನನಗೆ ಸಾಕಾಯಿತು;
ಹೋರಿ, ಕುರಿಮರಿ, ಟಗರುಗಳ ರಕ್ತಕ್ಕೆ ನಾನು ಮೆಚ್ಚೆನು.
೧೨ ನನ್ನ ಮುಂದೆ ಕಾಣಿಸಿ ಕೊಳ್ಳುವದಕ್ಕೆ ನೀವು ಬರುವಾಗ,
ನನ್ನ ಅಂಗಳಗಳನ್ನು ತುಳಿಯುವದಕ್ಕೆ ಇದನ್ನು ನಿಮ್ಮ ಕೈಗಳಿಂದ ಹುಡುಕುವವನ್ಯಾರು!
೧೩ ಇನ್ನು ವ್ಯರ್ಥವಾದ ಕಾಣಿಕೆಯನ್ನು ತರ ಬೇಡಿರಿ;
ಧೂಪವು ನನಗೆ ಅಸಹ್ಯವಾಗಿದೆ;
ಅಮವಾಸೆ, ಸಬ್ಬತು, ಸಭೆಯ ಕೂಟಗಳನ್ನು
ನಾನು ಸಹಿಸೆನು; ಭುನ ಸಂಭುವೇ ಪಾತಕವಾಗಿದೆ.
೧೪ ನಿಮ್ಮ ಅಮವಾಸೆಗಳನ್ನೂ, ನಿಮ್ಮ ಹಬ್ಬಗಳನ್ನೂ, ನನ್ನ ಪ್ರಾಣವು ಹಗೆ ಮಾಡುತ್ತದೆ;
ಅವು ನನಗೆ ಭಾರವಾಗಿವೆ; ಅವುಗಳನ್ನು ತಾಳಿಕೊಂಡು ದಣಿದಿದ್ದೇನೆ.
೧೫ ನೀವು ನಿಮ್ಮ ಕೈಗಳನ್ನು ಚಾಚಲು,
ನನ್ನ ಕಣ್ಣುಗಳನ್ನು ನಿಮಗೆ ಮರೆ ಮಾಡುವೆನು;
ನೀವು ಬಹಳ ಪ್ರಾರ್ಥನೆ ಮಾಡಿದರೂ,
ನಾನು ಕೇಳುವವನಲ್ಲ.
ನಿಮ್ಮ ಕೈಗಳು ರಕ್ತದಿಂದ ತುಂಬಿಯವೆ.

೧೬ ತೊಳಕೊಳ್ಳಿರಿ, ನಿರ್ಮಲ ಮಾಡಿ ಕೊಳ್ಳಿರಿ,
ನಿಮ್ಮ ಕ್ರಿಯೆಗಳ ಕೆಟ್ಟತನವನ್ನು ನನ್ನ ಕಣ್ಣುಗಳ ಮುಂದಿನಿಂದ ತೊಲಗಿಸಿರಿ;
ಕೆಟ್ಟದ್ದನ್ನು ನಿಲ್ಲಿಸಿ ಬಿಡಿರಿ,
೧೭ ಒಳ್ಳೇದನ್ನು ಮಾಡ ಕಲಿತು ಕೊಳ್ಳಿರಿ,
ನ್ಯಾಯವನ್ನು ಹುಡುಕಿರಿ, ಕುಗ್ಗಿದವನನ್ನೂ ಆದರಿಸಿರಿ,
ದಿಕ್ಕಿಲ್ಲದವರಿಗೆ ನ್ಯಾಯ ತೀರಿಸಿರಿ, ವಿಧವೆಯ ವ್ಯಾಜ್ಯವನ್ನು ನಡಿಸಿರಿ.
೧೮ ಎಲೋ ಬನ್ನಿರಿ, ವಾದ ಮಾಡುವ, ಎಂದು ಕರ್ತನು ಹೇಳುತ್ತಾನೆ;
ನಿಮ್ಮ ಪಾಪಗಳು ಲಾಕಿ ಬಣ್ಣದ ಹಾಗಿದ್ದರೂ, ಹಿಮದ ಹಾಗೆ ಬಿಳುಪಾಗುವವು;
ಅವು ರಕ್ತ ವರ್ಣದ ಹಾಗೆ ಕೆಂಪಾಗಿದ್ದರೂ, ಉಣ್ಣೆಯ ಹಾಗೆ ಆಗುವವು.
೧೯ ನೀವು ಮನಸ್ಸು ಕೊಟ್ಟು ಕೇಳಿದರೆ,
ದೇಶದ ಮೇಲನ್ನು ಉಣ್ಣುವಿರಿ;

೨೦ ಆದರೆ ನೀವು ಬಲ್ಲದೆ ತಿರುಗಿ ಬಿದ್ದರೆ,
ಕತ್ತಿಗೆ ಆಹಾರವಾಗುವಿರಿ;
ಯಾಕಂದರೆ ಕರ್ತನ ಬಾಯಿ ಮಾತಾಡಿದೆ.

೨೧ ಅಯ್ಯೋ ನಂಬಿಕೆಯಾದ ಪಟ್ಟಣವು ಹ್ಯಾಗೆ ಜಾರೆಯಾಯಿತು!
ಅದು ನ್ಯಾಯದಿಂದ ತುಂಬಿ ಇತ್ತು;
ನೀತಿಯು ಅದರಲ್ಲಿ ವಾಸವಾಗಿತ್ತು;
ಆದರೆ ಈಗ ಕೊಲೆಗಾರರೇ.
೨೨ ನಿನ್ನ ಬೆಳ್ಳಿ ಕಂದಾಯಿತು;
ನಿನ್ನ ಮದ್ಯವು ನೀರು ಬೆರಸಿದ್ದು.
೨೩ ನಿನ್ನ ಅಧಿಪತಿಗಳು ದ್ರೋಹಿಗಳೂ ಕಳ್ಳರ ಜತೆಯವರೂ ಆಗಿದ್ದಾರೆ;
ಅವರೆಲ್ಲರು ಲಂಚ ಪ್ರಿಯರೂ, ಕಾಣಿಕೆಗಳನ್ನು ಹಿಂದಟ್ಟುವವರೂ,
ದಿಕ್ಕಿಲ್ಲದವನಿಗೆ ನ್ಯಾಯ ತೀರಿಸುವದಿಲ್ಲ;
ವಿಧವೆಯ ವ್ಯಾಜ್ಯ ಅವರ ಬಳಿಗೆ ಬರುವದಿಲ್ಲ.

೨೪ ಆದದರಿಂದ ಸೈನ್ಯಗಳ ಯೆಹೋವನೂ,
ಇಸ್ರಯೇಲಿನ ಪರಾಕ್ರಮಿಯೂ, ಅದ ಕರ್ತನು ಹೇಳುತ್ತಾನೆ—
ಆಹಾ! ನನ್ನ ವೈರಿಗಳ ವಿಷಯ ಆದರಣೆ ಹೊಂದುವೆನು;
ನನ್ನ ಶತ್ರುಗಳಿಗೆ ಮುಯ್ಯಿಗೆ ಮುಯ್ಯಿ ಕೊಡುವೆನು.
೨೫ ನನ್ನ ಕೈ ನಿನಗೆ ವಿರೋಧವಾಗಿ ತಿರುಗಿಸುವೆನು;
ನಿನ್ನ ಕಂದನ್ನು ಶುದ್ಧವಾಗುವ ಹಾಗೆ ಪುಟಕ್ಕೆ ಇಕ್ಕುವೆನು.
ನಿನ್ನ ಕಲ್ಮಷವನ್ನೆಲ್ಲಾ ತೆಗೆದು ಹಾಕುವೆನು.
೨೬ ಮತ್ತು ನಿನ್ನ ನ್ಯಾಯಾಧಿಪತಿಗಳನ್ನು ಮುಂಚಿನ ಹಾಗೆಯೂ,
ನಿನ್ನ ಆಲೋಚನೆ ಕರ್ತರನ್ನು ಆದಿಯಲ್ಲಿ ಇದ್ದ ಹಾಗೆಯೂ ತಿರುಗಿ ತರುವೆನು.
ತರುವಾಯ ನೀತಿಪುರವೆಂದೂ, ನಂಬಿಕೆಯಾದ ಪಟ್ಟಣವೆಂದೂ, ಹೆಸರು ಹೊಂದುವಿ.
೨೭ ಚಿಯೋನಿಗೆ ನ್ಯಾಯದಿಂದಲೂ,
ಅದರ ತಿರಿಗಿಕೊಂಡವರಿಗೆ ನೀತಿಯಿಂದಲೂ,
ವಿಮೋಚನೆಯಾಗುವದು.
೨೮ ಆದರೆ ದ್ರೋಹಿಗಳಿಗೂ ಪಾಪಿಗಳಿಗೂ ಕೂಡಾ ಮುರಿಯೋಣವಾಗುವದು;
ಕರ್ತನನ್ನು ಬಿಟ್ಟು ಬಿಡುವವರು ಕಳೆದು ಹೋಗುವರು.
೨೯ ಯಾಕಂದರೆ, ನೀವು ಮೆಚ್ಚಿದ ವೃಕ್ಷರಾಜಗಳಿಗೋಸ್ಕರ ನಾಚುವಿರಿ;
ನೀವು ಆರಿಸಿಕೊಂಡ ತೋಟಗಳಿಗೋಸ್ಕರ ಲಜ್ಜೆ ಪಡುವಿರಿ.
೩೦ ಯಾಕಂದರೆ, ಎಲೆ ಬಾಡಿದ ವೃಕ್ಷರಾಜದ ಹಾಗೆಯೂ,
ನೀರು ಇಲ್ಲದ ತೋಟದ ಹಾಗೆಯೂ, ಆಗುವಿರಿ.
೩೧ ಮತ್ತು ಬಲಿಷ್ಠನು ಸಣಬಾಗುವನು;
ಅವನ ಕೆಲಸ ಕಿಡಿಯಾಗುವದು;
ಅವನೂ ಇದೂ ಕೂಡಾ,
ಆರಿಸುವವನಿಲ್ಲದೆ, ಸುಟ್ಟು ಹೋಗುವದೇ.

## ೨. ಸಂಧಿ.

೧ ಆಮೋಸನ ಮಗನಾದ ಯೆಶಾಯನು, ಯೆಹೂದದ ಯೆರೂಸಲೇಮಿನ ವಿಷಯ ಕಂಡ ವಾಕ್ಯವು.
೨ ಅಂತ್ಯ ದಿವಸಗಳಲ್ಲಿ ಆಗುವದೇನಂದರೆ—
ಕರ್ತನ ಮನೆಯ ಬೆಟ್ಟವು
ಬೆಟ್ಟಗಳ ತಲೆಯಲ್ಲಿ ನೆಲೆಯಾಗಿ,
ಗುಡ್ಡಗಳಿಗಿಂತ ಎತ್ತರವಾಗಿರುವದು;
ಎಲ್ಲಾ ಜನಾಂಗಗಳು ಅದರ ಬಳಿಗೆ ಹರಿದು ಬರುವವು.
೩ ಅನೇಕ ಜನರು ಬಂದು—
ಬನ್ನಿರಿ, ಕರ್ತನ ಬೆಟ್ಟಕ್ಕೆ,
ಯಾಕೋಬನ ದೇವರ ಮನೆಗೆ, ಏರಿ ಹೋಗುವ;
ಅವನು ತನ್ನ ಮಾರ್ಗಗಳನ್ನು ನಮಗೆ ಬೋಧಿಸುವನು;
ಅವನ ಹಾದಿಗಳಲ್ಲಿ ನಡಿಯುವೆವು, ಎಂದು ಹೇಳುವರು;
ಯಾಕಂದರೆ, ಚಿಯೋನಿನಿಂದ ನ್ಯಾಯಪ್ರಮಾಣವೂ,
ಯೆರೂಸಲೇಮಿನಿಂದ ಕರ್ತನ ವಾಕ್ಯವೂ, ಹೊರಡುವದು.
೪ ಮತ್ತು ಜನಾಂಗಗಳ ಮಧ್ಯದಲ್ಲಿ ನ್ಯಾಯ ತೀರಿಸುವನು;
ಅನೇಕ ಜನರಿಗೆ ತೀರ್ಪು ಕೊಡುವನು;
ಅವರು ತಮ್ಮ ಕತ್ತಿಗಳನ್ನು ನೇಗಿಲಿನ ಗುಳಿಗಳಾಗಿಯೂ,
ತಮ್ಮ ಈಟಿಗಳನ್ನು ಕುಡುಗೋಲುಗಳಾಗಿಯೂ,
ಬಡಿಯುವರು;
ಜನಾಂಗವು ಜನಾಂಗದ ಮೇಲೆ ಕತ್ತಿ ಎತ್ತದು;
ಯುದ್ಧವನ್ನು ಇನ್ನು ಮೇಲೆ ಕಲಿಯರು.

೫ ಯಾಕೋಬನ ಮನೆಯೇ,
ಬನ್ನಿ, ಕರ್ತನ ಬೆಳಕಿನಲ್ಲಿ ನಡಿಯುವ.
೬ ನೀನು ನಿನ್ನ ಜನರಾದ ಯಾಕೋಬನ ಮನೆಯವರನ್ನು ತಳ್ಳಿದ್ದೀ,
ಯಾಕಂದರೆ ಅವರು ಮೂಡಣ ಕಡೆಯಿಂದ ತುಂಬಿ,
ಫಿಲಿಷ್ಟ್ಯರಂತೆ ಮಂತ್ರಗಾರರಾಗಿದ್ದಾರೆ.
ಅನ್ಯರ ಮಕ್ಕಳಿಗೆ ಕೈ ಹಟ್ಟುತ್ತಾರೆ.
೭ ಅವರ ದೇಶವು ಬೆಳ್ಳಿ ಭಂಗಾರಗಳಿಂದ ತುಂಬಿದೆ;
ಅವರ ನಿಧಿಗಳಿಗೆ ಅಂತ್ಯವಿಲ್ಲ.
ಅವರ ದೇಶವು ಕುದುರೆಗಳಿಂದ ತುಂಬಿದೆ;
ಅವರ ರಥಗಳಿಗೆ ಅಂತ್ಯವಿಲ್ಲ.
೮ ಇದಲ್ಲದೆ ಅವರ ದೇಶವು ಬೊಂಬೆಗಳಿಂದ ತುಂಬಿದೆ;
ತಮ್ಮ ಕೈ ಕೆಲಸಕ್ಕೂ,
ತಮ್ಮ ಬೆರಳುಗಳು ಮಾಡಿದ್ದಕ್ಕೂ, ಅಡ್ಡ ಬೀಳುತ್ತಾರೆ.
೯ ಹೀಗೆ ನೀಚನು ಬೊಗ್ಗಿ ಕೊಳ್ಳುತ್ತಾನೆ;
ಉತ್ತಮನು ತಗ್ಗಿಸಿ ಕೊಳ್ಳುತ್ತಾನೆ;
ಆದದರಿಂದ ಅವರನ್ನು ಮನ್ನಿಸ ಬೇಡ.

೧೦ ಕರ್ತನ ಹೆದರಿಕೆಗೂ, ಅವನ ಘನದ ತೇಜಸ್ಸಿಗೂ,
ಬಂಡೆಯಲ್ಲಿ ಕೇರು; ಧೂಳಿಯಲ್ಲಿ ಅಡಗಿಕೋ.
೧೧ ಮನುಷ್ಯರ ಎತ್ತರವಾದ ಕಣ್ಣುಗಳು ತಗ್ಗುವವು;
ಜನರ ಹಮ್ಮೂ ಬೊಗ್ಗುವದು;
ಕರ್ತನು ಒಬ್ಬನೇ ಆ ದಿವಸದಲ್ಲಿ ಉನ್ನತನಾಗುವನು.



೧೨ ಯಾಕಂದರೆ ಎಲ್ಲಾ ಘನ ಉನ್ನತತ್ವಗಳ ಮೇಲೆಯೂ,
ತಗ್ಗ ಬೇಕಾದ ಎತ್ತರವಾದದ್ದೆಲ್ಲಾದರ ಮೇಲೆಯೂ,
೧೩ ಲೆಬನೋನಿನ ಉನ್ನತವಾದ ಎತ್ತರದ ಎಲ್ಲಾ ದೇವದಾರುಗಳ ಮೇಲೆಯೂ,
ಬಾಷಾನಿನ ಎಲ್ಲಾ ವೃಕ್ಷರಾಜರ ಮೇಲೆಯೂ,
೧೪ ಉನ್ನತವಾದ ಎಲ್ಲಾ ಪರ್ವತಗಳ ಮೇಲೆಯೂ,
ಎತ್ತರವಾದ ಎಲ್ಲಾ ಗುಡ್ಡಗಳ ಮೇಲೆಯೂ,
೧೫ ಉದ್ದವಾದ ಎಲ್ಲಾ ಗೋಪುರಗಳ ಮೇಲೆಯೂ,
ಭದ್ರವಾದ ಎಲ್ಲಾ ಗೋಡೆಗಳ ಮೇಲೆಯೂ,
೧೬ ಎಲ್ಲಾ ತಾರ್ಷಿಷ್ ಹಡಗಗಳ ಮೇಲೆಯೂ,
ರಮ್ಯವಾದ ಎಲ್ಲಾ ರೂಪಗಳ ಮೇಲೆಯೂ,
ಸೈನ್ಯಗಳ ಕರ್ತನಿಗೆ ಒಂದು ದಿವಸ ಉಂಟು.
೧೭ ಆಗ ಮನುಷ್ಯನ ಉನ್ನತತ್ವವು ತಗ್ಗುವದು;
ಜನರ ಹಮ್ಮೂ ಬೊಗ್ಗುವದು;
ಕರ್ತನು ಒಬ್ಬನೇ ಆ ದಿವಸದಲ್ಲಿ ಉನ್ನತನಾಗುವನು.
೧೮ ಮತ್ತು ಬೊಂಬೆಗಳು ಶುದ್ಧವಾಗಿ ಇಲ್ಲದೆ ಹೋಗುವವು.
೧೯ ಕರ್ತನು ಭೂಮಿಯನ್ನು ನಡುಗಿಸುವದಕ್ಕೆ ಏಳುವಾಗ,
ಅವನ ಹೆದರಿಕೆಗೂ, ಅವನ ಘನದ ತೇಜಸ್ಸಿಗೂ,
ಬಂಡೆಗಳ ಗವಿಗಳಲ್ಲಿಯೂ,
ಧೂಳಿನ ಕೂಣೆಗಳಲ್ಲಿಯೂ, ಸೇರುವರು.
೨೦ ಆ ದಿವಸದಲ್ಲಿ ಮನುಷ್ಯನು ತನ್ನ ಬೆಳ್ಳಿಯ ಬೊಂಬೆಗಳನ್ನೂ, ಚಿನ್ನದ ಬೊಂಬೆಗಳನ್ನೂ,
ಅಡ್ಡ ಬೀಳುವದಕ್ಕೆ ತಾನು ಮಾಡಿ ಕೊಂಡವುಗಳನ್ನು,
ಅಂಧಕ ಜಂತುಗಳಿಗೂ, ಕಣ್ಣು ಕಪ್ಪಟಿಗಳಿಗೂ, ಬಿಸಾಟು ಬಿಡುವನು.
೨೧ ಭೂಮಿಯನ್ನು ನಡುಗಿಸುವದಕ್ಕೆ ಏಳುವ
ಕರ್ತನ ಹೆದರಿಕೆಗೂ, ಅವನ ಘನದ ತೇಜಸ್ಸಿಗೂ,
ಬಂಡೆಗಳ ಬಿರುಕುಗಳಲ್ಲಿಯೂ, ಶಿಲೆಗಳ ಸಂದುಗಳಲ್ಲಿಯೂ, ಸೇರುವದಕ್ಕಾಗಿಯೇ.
೨೨ ಮೂಗಿನಲ್ಲಿ ಶ್ವಾಸವಿರುವ ಮನುಷ್ಯನನ್ನು ಬಿಡಿರಿ;
ಯಾಕಂದರೆ ಅವನು ಎಷ್ಟರವನೆಂದು ಎಣಿಸ ಬಹುದು!

## 3. ಸಂಧಿ.

೧ ಯಾಕಂದರೆ, ಇಗೋ, ಸೈನ್ಯಗಳ ಯೆಹೋವನೆಂಬ ಕರ್ತನು,
ಯೆರೂಸಲೇಮಿನಿಂದಲೂ, ಯೆಹೂದದಿಂದಲೂ,
ಆಧಾರಕ ಆಧಾರಕಿಯರನ್ನೂ,
ಕೊಟ್ಟಿಯ ಎಲ್ಲಾ ಆಧಾರವನ್ನೂ, ನೀರಿನ ಎಲ್ಲಾ ಆಧಾರವನ್ನೂ,
೨ ಶೂರನನ್ನೂ, ಯುದ್ಧದವನನ್ನೂ,
ನ್ಯಾಯಾಧಿಪತಿಯನ್ನೂ, ಪ್ರವಾದಿಯನ್ನೂ,
ದೈವಜ್ಞನನ್ನೂ, ಹಿರಿಯನನ್ನೂ,
೩ ಪಂಚಾಶತಾಧಿಪತಿಯನ್ನೂ, ಘನವುಳ್ಳವನನ್ನೂ, ಆಲೋಚನೆ ಕರ್ತನನ್ನೂ,
ತಂತ್ರಬಲ್ಲವನನ್ನೂ, ಮಂತ್ರಜ್ಞನನ್ನೂ, ತೊಲಗಿಸುವನು.
೪ ಮತ್ತು ಹುಡುಗರನ್ನು ಅವರ ಅಧಿಪತಿಗಳಾಗಿ ಇಡುವೆನು;
ಎಳ್ಳೇ ಕೂಸುಗಳು ಅವರನ್ನು ಆಳುವವು.
೫ ಮತ್ತು ಜನರು ಒಬ್ಬರಿನ್ನೊಬ್ಬರು,
ನೆರೆಯವರನ್ನು ನೆರೆಯವರು ಶಿಪ್ಪಲು ಪಡಿಸುವರು;
ಹುಡುಗನು ಮುದಕನಿಗೆ,
ನೀಚನು ಘನವಂತನಿಗೆ, ಅಹಂಕಾರ ತೋರಿಸುವರು.
೬ ಒಬ್ಬನು ತನ್ನ ಸಹೋದರನನ್ನು
ತಂದೆಯ ಮನೆಯಲ್ಲಿ ಹಿಡಿದು—
ನಿನಗೆ ವಸ್ತ್ರವದೆ, ನಮಗೆ ಅಧಿಪತಿಯಾಗು;
ಈ ಹಾಳು ನಿನ್ನ ಕೈ ಕೆಳಗೆ ಇರಲಿ, ಅನ್ನಲು;
೭ ಅವನು, ಆ ದಿವಸದಲ್ಲಿ, ಶಬ್ದವೆತ್ತಿ—
ನಾನು ಔಷಧಗಾರನಾಗುವದಿಲ್ಲ;
ನನ್ನ ಮನೆಯಲ್ಲಿ ಕೊಟ್ಟಿ ಇಲ್ಲ, ವಸ್ತ್ರವಿಲ್ಲ;
ನನ್ನನ್ನು ಪ್ರಜಾಧಿಪತಿಯಾಗಿ ಇಡ ಬಾರದು, ಅನ್ನುವನು.
೮ ಯಾಕಂದರೆ, ಯೆರೂಸಲೇಮು ಎಡವುತ್ತದೆ, ಯೊಹೂದವು ಬೀಳುತ್ತದೆ;
ಯಾಕಂದರೆ, ಅವರ ನಾಲಿಗೆಗಳೂ, ಅವರ ಕ್ರಿಯೆಗಳೂ, ಕರ್ತನಿಗೆ ವಿರೋಧವಾಗಿವೆ.
ಅವನ ಘನದ ಕಣ್ಣುಗಳಿಗೆ ದ್ರೋಹ ಮಾಡಿದ್ದಾರೆ.
೯ ಅವರ ಮುಖದ ಕಾಠಿಣ್ಯವು ಅವರಿಗೆ ವಿರೋಧವಾಗಿ ಸಾಕ್ಷಿ ಕೊಡುತ್ತದೆ;
ತಮ್ಮ ಪಾಪವನ್ನು ಸೊದೋಮಿನಂತೆ ಮಾಜದೆ, ಪ್ರಕಟ ಮಾಡುತ್ತಾರೆ;
ಅವರ ಆತ್ಮಕ್ಕೆ ಅಯ್ಯೋ!
ಯಾಕಂದರೆ, ಅವರು ತಮಗೆ ತಾವೇ ಕೇಡನ್ನು ಮಾಡಿ ಕೊಳ್ಳುತ್ತಾರೆ.
೧೦ ನೀತಿವಂತರು ಭಾಗ್ಯವಂತರನ್ನಿರಿ;
ಯಾಕಂದರೆ, ಅವರು ತಮ್ಮ ಕ್ರಿಯೆಗಳ ಫಲವನ್ನು ತಿನ್ನುವರು.
೧೧ ಅಯ್ಯೋ! ಕೆಟ್ಟವನಿಗೆ ಕೇಡಾಗುವದು;
ಯಾಕಂಹರೆ, ಅವನ ಕೈಗಳ ಪ್ರತಿಫಲವು ಅವನಿಗೆ ಮಾಡಲ್ಪಡುವದು.
೧೨ ನನ್ನ ಜನರಾದವರೆ, ಅವರನ್ನು ಶಿಪ್ಪಲು ಪಡಿಸುವವರು ಕೂಸುಗಳೇ;
ಹೆಂಗಸರು ಅವರನ್ನು ಆಳುತ್ತಾರೆ;
ನನ್ನ ಜನವೇ, ನಿನ್ನನ್ನು ನಡಿಸುವವರು ಅಲೆಯ ಮಾಡುವವರಾಗಿದ್ದಾರೆ;
ನಿನ್ನ ಹಾದಿಗಳ ಮಾರ್ಗವನ್ನು ಕೆಡಿಸುತ್ತಾರೆ.
೧೩ ವ್ಯಾಜ್ಯವಾಡುವದಕ್ಕೆ ಕರ್ತನು ನಿಲ್ಲುತ್ತಾನೆ;
ಜನರಿಗೆ ನ್ಯಾಯ ತೀರಿಸಲಿಕ್ಕೆ ನಿಂತು ಕೊಳ್ಳುತ್ತಾನೆ.
೧೪ ಕರ್ತನು ತನ್ನ ಜನರ ಹಿರಿಯರ ಸಂಗಡಲೂ, ಅಧಿಪತಿಗಳ ಸಂಗಡಲೂ,
ನ್ಯಾಯ ತೀರ್ಪಿಕೆಗೆ ಬರುವನು;
ನೀವು ದ್ರಾಕ್ಷೆಯ ತೋಟವನ್ನು ತಿಂದು ಬಿಟ್ಟಿರಿ;
ದೀನನ ಕೊಳ್ಳೆ ನಿಮ್ಮ ಮನೆಗಳಲ್ಲಿ ಅದೆ.

೧೫ ನೀವು ನನ್ನ ಜನರನ್ನು ತಪ್ಪಿಸಿ ಬಿಟ್ಟು,
ನೀವೇ ಮುಖಗಳನ್ನು ಅಕಯುವಕೇನೆಂದು,
ಸೈನ್ಯಗಳ ಕರ್ತನಾದ ಯೆಹೋವನು ಹೇಳುತ್ತಾನೆ.

೧೬ ಮತ್ತು ಕರ್ತನು ಹೇಳುವದೇನಂದರೆ—
ಚಿಯೋನಿನ ಕುಮಾರ್ತೆಗಳು ಅಹಂಕಾರಿಗಳಾಗಿದ್ದು,
ಕೊರಳು ಚಾಚಿಕೊಂಡು ನಡಿಯುತ್ತಾ, ಕಣ್ಣುಗಳನ್ನು ತಿರುಗಿಸುತ್ತಾ,
ಮಂದಗಮನದಿಂದ ನಡಿಯುತ್ತಾ, ಪಾದಗಳಿಂದ ಗಲಿಗಲಿಸುವ ಕಾರಣ,
೧೭ ಕರ್ತನು ಚಿಯೋನಿನ ಕುಮಾರ್ತೆಗಳ ನಡುನೆತ್ತಿಯನ್ನು ಣುಣ್ಣಾಗಾಗ ಮಾಡುವನು;
ಕರ್ತನು ಅವರ ನಾಚಿಕೆಯನ್ನು ಬೈಲು ಮಾಡುವನು.
೧೮ ಆ ದಿವಸದಲ್ಲಿ, ಕರ್ತನು,
ಅಂದುಗೆಗಳ, ಸೂರ್ಯ ಚಂದ್ರಾಭರಣಗಳ, ಅಲಂಕಾರವನ್ನೂ,
೧೯ ಕರ್ಣಾಭರಣಗಳನ್ನೂ, ಭುಜ ಬಾಪುರಿಗಳನ್ನೂ, ಮುಸುಕುಗಳನ್ನೂ,
೨೦ ತಲೆ ಕಟ್ಟುಗಳನ್ನೂ, ಕಡಗಗಳನ್ನೂ, ಒಡ್ಡುವಾಣಗಳನ್ನೂ,
ಗಂಧ ಗೃಹಗಳನ್ನೂ, ಯಂತ್ರಗಳನ್ನೂ,
೨೧ ಉಂಗುರಗಳನ್ನೂ, ಮೂಗುತಿಗಳನ್ನೂ,
೨೨ ಪಟ್ಟಿ ಪೀಠಗಳನ್ನೂ, ಮೇಲು ಹೊದಿಕೆಗಳನ್ನೂ,
ಹಚ್ಚಡಗಳನ್ನೂ, ಚೀಲಗಳನ್ನೂ,
೨೩ ಕೈಲ್ಯಾಗಳನ್ನೂ, ಒಳ ವಸ್ತ್ರಗಳನ್ನೂ,
ಮುಂಡಾಸಗಳನ್ನೂ, ನಾರು ಬಟ್ಟೆಗಳನ್ನೂ, ಹೋಗಲಾಡಿಸುವನು.
೨೪ ಮತ್ತು ಪರಿಮಳಕ್ಕೆ ಬದಲಾಗಿ ಕೊಳೆಕು,
ಪಾಟಿಗೆ ಬದಲಾಗಿ ಹಗ್ಗವು,
ಮುಂಗುರುಳಿಗೆ ಬದಲಾಗಿ ಬೋಳ ತಲೆ,
ದೊಡ್ಡ ಹಚ್ಚಡಕ್ಕೆ ಬದಲಾಗಿ ಗೋಣಿತಟ್ಟು,
ಸೌಂದರ್ಯಕ್ಕೆ ಬದಲಾಗಿ ಬರೆಯು, ಆಗುವದು.
೨೫ ನಿನ್ನ ಗಂಡಸರು ಕತ್ತಿಯಿಂದಲೂ,
ನಿನ್ನ ಶೂರರೂ ಯುದ್ಧದಲ್ಲಿಯೂ, ಬೀಳುವರು.
೨೬ ಅವಳ ಬಾಗಲುಗಳು ನರಳಿ ಗೋಳಾಡುವವು;
ಬರೀಯವಳಾಗಿ ನೆಲದಲ್ಲಿ ಕೂತು ಕೊಳ್ಳುವಳು.

## ೪. ಸಂಧಿ.

೧ ಆ ದಿವಸದಲ್ಲಿ, ಏಳು ಮಂದಿ ಸ್ತ್ರೀಯರು ಒಬ್ಬ ಪುರುಷನನ್ನು ಹಿಡಿದು, ಹೇಳುವದೇನಂದರೆ—
ನಮ್ಮ ಕೊಟ್ಟಿ ನಾವು ತಿನ್ನುತ್ತೇವೆ; ನಮ್ಮ ಬಟ್ಟೆ ನಾವು ಉಡುತ್ತೇವೆ;
ನಮ್ಮ ನಾಚಿಕೆಯನ್ನು ಪರಿಹರಿಸುವದಕ್ಕೆ,
ನಮ್ಮ ಮೇಲೆ ನಿನ್ನ ಹೆಸರು ಮಾತ್ರ ಕರೆಯಲ್ಪಡಲಿ.

೨ ಆ ದಿವಸದಲ್ಲಿ, ಕರ್ತನ ಚಿಗುರು,
ಶೃಂಗಾರವಾಗಿಯೂ ಘನವಾಗಿಯೂ ಇರುವದು;
ಭೂಮಿಯ ಫಲವು, ಇಸ್ರಯೇಲಿನ ಉಳುಖಗೋಸ್ಕರ,
ಮಹಿಮೆಯಾಗಿಯೂ ಅಲಂಕಾರವಾಗಿಯೂ ಇರುವದು.

3 ಇದಲ್ಲದೆ ಚಿಯೋನಿನಲ್ಲಿ ಮಿಕ್ಕವನೂ,
ಯೆರೂಸಲೇಮಿನಲ್ಲಿ ನಿಂತವನೂ,
ಯೆರೂಸಲೇಮಿನಲ್ಲಿ ಜೀವಕ್ಕಾಗಿ ಬರೆದಿರುವ ಪ್ರತಿ ಮನುಷ್ಯನೂ,
ಪರಿಶುದ್ಧನೆಂದೆನಿಸಿ ಕೊಳ್ಳುವನು.
೪ ಕರ್ತನು ಚಿಯೋನಿನ ಕುಮಾರ್ತೆಗಳ ಮಲಿನವನ್ನು ತೊಳೆದು,
ಯೆರೂಸಲೇಮಿನ ರಕ್ತಗಳನ್ನು,
ನ್ಯಾಯ ತೀರ್ಪಿಕೆಯ ಆತ್ಮದಿಂದಲೂ, ಉರಿಯ ಆತ್ಮದಿಂದಲೂ,
ಅದರಲ್ಲಿಂದ ತೆಗೆದು ಹಾಕಿದಾಗಲೇ.
೫ ಆಗ ಕರ್ತನು, ಚಿಯೋನ್ ಬೆಟ್ಟದ ಪ್ರತಿಷ್ಠಾನದ ಮೇಲೆಯೂ,
ಅದರ ಸಭೆಗಳ ಮೇಲೆಯೂ,
ಹಗಲಿನಲ್ಲಿ ಮೇಘವನ್ನೂ, ಹೊಗೆಯನ್ನೂ,
ರಾತ್ರಿಯಲ್ಲಿ ಉಜ್ವಲಿಸುವ ಅಗ್ನಿಯ ಕಾಂತಿಯನ್ನೂ, ಉಂಟುಮಾಡುವನು;
ಯಾಕಂದರೆ, ಎಲ್ಲಾ ಘನದ ಮೇಲೆ ಮುಚ್ಚಳವಿರುವದು.
೬ ಮತ್ತು ಹಗಲಿನಲ್ಲಿ ಬಿಸಲಿಗೆ ನೆರಳಾಗಿಯೂ,
ಬಿರುಗಾಳಿಗೂ ಮಳೆಗೂ,
ಆಶ್ರಯಸ್ಥಾನವಾಗಿಯೂ, ಮರೆಯಾದ ಸ್ಥಳವಾಗಿಯೂ,
ಬಂದು ಗುಡಾರವಿರುವದು.

## ೫. ಸಂಧಿ.

೧ ಈಗ ತನ್ನ ದ್ರಾಕ್ಷೇ ತೋಟವನ್ನು ಕುರಿತಾದ ನನ್ನ ಆತ್ಮನ ಹಾಡನ್ನು ನನ್ನ ಪ್ರಿಯನಿಗೆ ಹಾಡುತ್ತೇನೆ;
ಕೈಲ ಮಯವಾದ ದಿನ್ನಿಯಲ್ಲಿ,
ನನ್ನ ಪ್ರಿಯನಿಗೆ ದ್ರಾಕ್ಷೇ ತೋಟವಿತ್ತು.
೨ ಅವನು ಅದನ್ನು ಅಗದು, ಕಲ್ಲುಗಳನ್ನು ಅದರಿಂದ ಆರಿಸಿ,
ಉತ್ತಮವಾದ ದ್ರಾಕ್ಷೇ ಬಳ್ಳಿಯನ್ನು ಅದರಲ್ಲಿ ನೆಟ್ಟು,
ಅದರ ಮಧ್ಯದಲ್ಲಿ ಗೋಪುರವನ್ನು ಕಟ್ಟಿ,
ಆಲೆಯನ್ನು ಅದರಲ್ಲಿ ತೋಡಿ,
ಅದು ಹಣ್ಣು ಕೊಡುವದೆಂದು ಕಾದು ಕೊಂಡನು;
ಆದರೆ ಅದು ಕಹಿಯಾದ ಕಾಯಿಗಳನ್ನು ಕೊಟ್ಟಿತು.
೩ ಈಗ ಯೆರೂಸಲೇಮಿನ ನಿವಾಸಿಗಳೇ, ಯೆಹೂದದ ಮನುಷ್ಯರೇ,
ಎಲೋ ನನಗೂ ನನ್ನ ದ್ರಾಕ್ಷೆಯ ತೋಟಕ್ಕೂ ನ್ಯಾಯ ತೀರಿಸಿರಿ!
೪ ನನ್ನ ದ್ರಾಕ್ಷೆಯ ತೋಟಕ್ಕೆ,
ಇನ್ನು ಮಾಡಬೇಕಾದ ಯಾವದನ್ನು ಮಾಡದೆ ಹೋದೆನು!
ಅದು ಹಣ್ಣು ಕೊಡುವದೆಂದು ಕಾದು ಕೊಳ್ಳಲು,
ಅದು ಕಹಿಯಾದ ಕಾಯಿ ಕೊಟ್ಟದ್ದು ಯಾಕೆ!
೫ ಹಾಗಾದರೆ, ಈಗ ನಾನು ನನ್ನ ದ್ರಾಕ್ಷೇ ತೋಟಕ್ಕೆ ಮಾಡುವದನ್ನು ನಿಮಗೆ ತಿಳಿಸುತ್ತೇನೆ;
ಅದರ ಬೇಲಿ ತೆಗೆದು ಹಾಕುತ್ತೇನೆ;
ಆಗಲದು ಮೇಯುವ ಹೊಲವಾಗುವದು;
ಅದರ ಗೋಡೆ ಕೆಡವುತ್ತೇನೆ;
ಆಗಲದು ತುಳಿಯುವ ನೆಲವಾಗುವದು.



೬ ಅದನ್ನು ಹಾಳಾಗ ಮಾಡುವೆನು;
ಅದರ ಕುಡಿ ಕೊಯಿಸುವದಿಲ್ಲ; ಅದನ್ನು ಅಗಸುವದಿಲ್ಲ;
ಮುಳ್ಳುಗಳೂ ದತ್ತೂರಿಗಳೂ ಅದರಲ್ಲಿ ಹೊಳೆಯುವವು;
ಮತ್ತು ಅದರ ಮೇಲೆ ಮಳೆ ಸುರಿಸ ಬಾರದೆಂದು,
ಮೋಡಗಳಿಗೆ ಆಜ್ಞಾಪಿಸುವೆನು.
೭ ಯಾಕಂದರೆ, ಸೈನ್ಯಗಳ ಕರ್ತನ ದ್ರಾಕ್ಷೆಯ ತೋಟವು ಇಸ್ರಯೇಲನ ಮನೆಯೇ;
ಯೆಹೂದದ ಮನುಷ್ಯರೇ ಅವನ ಅನಂದ ವನವು;
ಅವನು ನ್ಯಾಯವನ್ನು ನಿರೀಕ್ಷಿಸಲು, ಇಗೋ, ಕೊಲೆ;
ನೀತಿಯನ್ನು ನಿರೀಕ್ಷಿಸಲು, ಇಗೋ, ಕೂಗು.

೮ ಸ್ಥಳ ಮಿಗದೆ,
ನೀವು ಒಂಟಿಯಾಗಿ ದೇಶದಲ್ಲಿ ವಾಸಿಸುವ ಮಟ್ಟಿಗೂ,
ಮನೆಗೆ ಮನೆ ಕೂಡಿಸಿ,
ಹೊಲಕ್ಕೆ ಹೊಲ ಸೇರಿಸುವವರಿಗೆ ಅಯ್ಯೋ!
೯ ಸೈನ್ಯಗಳ ಕರ್ತನು ನನ್ನ ಕಿವಿಗಳಲ್ಲಿ ಹೇಳುವದೇನಂದರೆ—
ಬಹಳ ಮನೆಗಳು ಹಾಳಾಗುವವು,
ದೊಡ್ಡವುಗಳೂ ಒಳ್ಳೆಯವುಗಳೂ ವಕ್ಕಲಿಲ್ಲದವುಗಳಾಗುವವು.
೧೦ ಯಾಕಂದರೆ, ಹತ್ತು ಜೋಡು ಎತ್ತಿನ ದ್ರಾಕ್ಷೇತೋಟ, ಒಂದೇ ಕೊಳಗವನ್ನು ಕೊಡುವದು;
ಮತ್ತು ಹೋಮೆರಡ್ಡು ಬೀಜ, ಎಳವನ್ನು ಕೊಡುವದು.

೧೧ ಉದಯದಲ್ಲೆದ್ದು ಮದ್ಯಪಾನವನ್ನು ಹಿಂದಟ್ಟಿ,
ಸಂಜೆಯಾದ ಮೇಲೆ ತಮ್ಮನ್ನು ದ್ರಾಕ್ಷೇ ರಸದಿಂದ ಉರಿಯ ಮಾಡಿ ಕೊಳ್ಳುವವರಿಗೆ ಅಯ್ಯೋ!
೧೨ ಕಿನ್ನರಿ ವೀಣೆ ದಮ್ಮಡಿ ಕೊಳಲು,
ದ್ರಾಕ್ಷೇರಸ, ಅವರ ಔತಣಗಳಲ್ಲಿ ಅವೆ;
ಆದರೆ ಕರ್ತನ ಕ್ರಿಯೆಯನ್ನು ಅವರು ದೃಷ್ಟಿಸುವದಿಲ್ಲ;
ಅವನ ಕೈ ಕೆಲಸವನ್ನು ನೋಡುವದಿಲ್ಲ.
೧೩ ಆದದರಿಂದ ನನ್ನ ಜನರು ತಿಳಿವಿಕೆ ಇಲ್ಲದೆ ಸೆರೆಯಲ್ಪಡುತ್ತಾರೆ;
ಅವರ ಘನವಂತರು ಹಸಿವಿಯಿಂದ ಸಾಯುತ್ತಾರೆ;
ಅವರ ಸಮೂಹವು ನೀರಡಿಕೆಯಿಂದ ಬಾಯಿ ಆರುತ್ತದೆ.
೧೪ ಆದದರಿಂದ ಪಾತಾಳವು ತನ್ನ ಆಶೆ ವಿಸ್ತರಿಸಿ,
ತನ್ನ ಬಾಯನ್ನೂ ಮಿತಿಯಿಲ್ಲದೆ ತೆರೆಯುತ್ತದೆ.
ಮತ್ತು ಅವಳ ಮಹತ್ತೂ ಅವಳ ಸಮೂಹವೂ
ಅವಳ ಗುಬಾರೂ ಅವಳ ಉಲ್ಲಾಸವೂ ಅದರಲ್ಲಿ ಇಳಿಯುತ್ತವೆ.
೧೫ ಆಗ ನೀಚನು ಇಳಿತರವಾಗುವನು;
ಉತ್ತಮನು ತಗ್ಗಾಗುವನು;
ಉನ್ನತವಾದವರ ಕಣ್ಣುಗಳು ತಗ್ಗಾಗುವವು.
೧೬ ಆದರೆ ಸೈನ್ಯಗಳ ಕರ್ತನು ನ್ಯಾಯದಲ್ಲಿ ಉನ್ನತನಾಗುವನು;
ಪರಿಶುದ್ಧ ದೇವರು ನೀತಿಯಿಂದ ಪರಿಶುದ್ಧನಾಗುವನು.
೧೭ ಆಗ ಕುರಿಮರಿಗಳು, ಮನಸ್ಸು ಬಂದ ಹಾಗೆ ಮೇಯುವವು,
ಕೊಬ್ಬಿನವರ ಹಾಳಾದವುಗಳನ್ನು ಅನ್ಯರು ತಿನ್ನುವರು.

೧೮ ಅಕ್ರಮವನ್ನು ದುಡ್ಡುತ್ವದ ಹಗ್ಗಗಳಿಂದಲೂ,
ಪಾಪವನ್ನು ಗಂಡಿಯ ಹೊರ್ಜಿಗಳಿಂದಲೂ, ಎಳೆದು,
೧೯ ಅವನು ತ್ವರೆ ಪಡಲಿ; ಅವನ ಕ್ರಿಯೆಯು, ನಾವು ಅದನ್ನು ನೋಡುವ ಹಾಗೆ, ಬೇಗ ಆಗಲಿ;
ಇಸ್ರಯೇಲಿನ ಪರಿಶುದ್ಧನ ಆಲೋಚನೆಯು, ನಾವು ಅದನ್ನು ತಿಳಿಂಕೊಳ್ಳುವ ಹಾಗೆ, ಸವಿಾಪಿಸಿ, ಬರಲಿ;
ಅನ್ನುವವರಿಗೆ ಅಯ್ಯೋ!
೨೦ ಕೇಡಿಗೆ ಮೇಲೆಂದೂ ಮೇಲಿಗೆ ಕೇಡೆಂದು ಹೇಳುವವರಿಗೂ,
ಕತ್ತಲೆಯನ್ನು ಬೆಳಕೆಂದು ಬೆಳಕನ್ನು ಕತ್ತಲೆಂದು ಎಣಿಸುವವರಿಗೂ,
ಕಹಿಯನ್ನು ಶೀಯೆಂದು ಶೀಯನ್ನು ಕಹಿಯೆಂದು ಎಣಿಸುವವರಿಗೂ, ಅಯ್ಯೋ!
೨೧ ಸ್ವಂತ ಕಣ್ಣುಗಳಲ್ಲಿ ಬುದ್ಧಿವಂತರಿಗೂ,
ಸ್ವಂತ ಮುಖದ ಮುಂದೆ ವಿವೇಕಿಗಳಿಗೂ, ಅಯ್ಯೋ!
೨೨ ದ್ರಾಕ್ಷೇರಸ ಕುಡಿಯಲಿಕ್ಕೆ ಬಲಿಷ್ಠರಿಗೂ,
ಸಾರಾಯಿ ಬೆರಸುವದಕ್ಕೆ ಶಕ್ತ ಆಳುಗಳಿಗೂ, ಅಯ್ಯೋ!
೨೩ ಲಂಚಕ್ಕೋಸ್ಕರ ದುಷ್ಟನನ್ನು ನೀತಿವಂತನೆಂದು ತೀರಿಸಿ,
ನೀತಿವಂತರ ನೀತಿಯನ್ನು ಅವರಿಂದ ತೊಲಗಿಸುತ್ತಾರೆ;
೨೪ ಆದದರಿಂದ ಬೆಂಕಿಯ ನಾಲಿಗೆ ಕೂಳೆ ತಿನ್ನುವಂತೆಯೂ,
ಸುಡುವ ಹುಲ್ಲು ಕುಗ್ಗುವಂತೆಯೂ,
ಅವರ ಬೇರು ಕೊಳೆಕಿನ ಹಾಗೆ ಇರುವದು;
ಅವರ ಮೊಗ್ಗೆ ಧೂಳಿಯ ಹಾಗೆ ಏರಿ ಹೋಗುವದು;
ಯಾಕಂದರೆ ಸೈನ್ಯಗಳ ಕರ್ತನ ನ್ಯಾಯಪ್ರಮಾಣವನ್ನು ಆಲಕ್ಷ್ಯ ಮಾಡಿ,
ಇಸ್ರಯೇಲಿನ ಪರಿಶುದ್ಧನ ವಾಕ್ಯವನ್ನು ಅಸಂಹಿಸಿದರು.
೨೫ ಆದದರಿಂದ ಕರ್ತನ ಕೋಪವು ತನ್ನ ಜನರ ಮೇಲೆ ಉರಿಯುತ್ತದೆ;
ತನ್ನ ಕೈ ಅವರ ಮೇಲೆ ಚಾಚಿ, ಅವರನ್ನು ಹೊಡದಿದ್ದಾನೆ,
ಆಗ ಬೆಟ್ಟಗಳು ನಡುಗಿದವು;
ಅವರ ಹೆಣಗಳು ಬೀದಿಗಳ ಮಧ್ಯದಲ್ಲಿ ಕಸದಂತೆ ಇದ್ದವು;
ಇವೆಲ್ಲಾದರಿಂದ ಅವನ ಕೋಪವು ಹಿಂದಿರುಗಲಿಲ್ಲ;
ಅವನ ಕೈ ಇನ್ನು ಚಾಚಿಯದೆ.

೨೬ ಮತ್ತು ಜನಾಂಗಗಳಿಗೆ ದೂರದಿಂದ ನಿಶಾನಿ ಎತ್ತಿ,
ಭೂಮಿಯ ಅಂತ್ಯದಿಂದ ಅವರಿಗೆ ಶಿಳ್ಳು ಹಾಕುವನು;
ಅಗೋ, ತ್ವರೆಯಾಗಿ ಭಕ್ಕನೇ ಬರುತ್ತಾರೆ.
೨೭ ದಣಿದವನೂ ಎಡುವುವವನೂ ಅವರಲ್ಲಿ ಇಲ್ಲ;
ಅವರು ತೂಕಡಿಸುವದಿಲ್ಲ;
ನಿದ್ದೆ ಮಾಡುವದಿಲ್ಲ;
ಅವರ ಸೊಂಟದ ಕಟ್ಟು ಬಿಚ್ಚಿ ಕೊಳ್ಳುವದಿಲ್ಲ;
ಅವರ ಮೆಟ್ಟಿನ ಬಾರು ಹರಿಯುವದಿಲ್ಲ;
೨೮ ಅವರ ಬಾಣಗಳು ಹದವಾಗಿವೆ;
ಅವರ ಬಿಲ್ಲುಗಳೆಲ್ಲಾ ಹೂಡಿಯವೆ;
ಅವರ ಕುದುರೆಗಳ ಗೊಕಕೆಗಳು ಕಲ್ಲಿನ ಹಾಗೆ ಎಣಿಸಲ್ಪಡುವವು;
ಅವರ ಗಾಲಿಗಳು ಸುಳಿ ಘುಳಿಯ ಹಾಗಿವೆ.

೨೯ ಸಿಂಹದಂತೆ ಅವರಿಗೆ ಗರ್ಜನೆ ಅದೆ;
ಎಳೇ ಸಿಂಹಗಳ ಹಾಗೆ ಗರ್ಜಿಸಿ,
ಗುರುಕಾಯಿಸಿ, ಬೇಟೆ ಹಿಡಿದು,
ತಪ್ಪಿಸುವವನು ಇಲ್ಲದೆ, ಅದನ್ನು ಛಿದ್ರ ಮಾಡುತ್ತಾರೆ.
೩೦ ಆ ದಿವಸದಲ್ಲಿ ಅವರಿಗೆ ವಿರೋಧವಾಗಿ ಸಮುದ್ರದ ಘೋಷದಂತೆ ಗುರುಕಾಯಿಸುವರು;
ಭೂಮಿಯನ್ನು ದೃಷ್ಟಿಸಿದರೆ, ಅಗೋ, ಮೊಬ್ಬಾದ ಕತ್ತಲೆ;
ಅದರ ಮೇಘ ಮಂಡಲದಲ್ಲಿ ಬೆಳಕು ಕತ್ತಲಾಯಿತು.

## ೬. ಸಂಧಿ.

೧ ಅರಸನಾದ ಉಜೀಯನು ಸತ್ತ ವರುಷದಲ್ಲಿ, ಕರ್ತನು ಎತ್ತಿದ ಉನ್ನತವಾದ ಸಿಂಹಾಸನದ ಮೇಲೆ ಕೂತಿರುವದನ್ನು ಕಂಡೆನು. ಅವನ ಕರಗುಳ್ಳ ದೇವಾಲಯವನ್ನು ತುಂಬಿದವು. ೨ ಅವನ ಬಳಿಯಲ್ಲಿ ಸೆರಫಿಯರು ನಿಂತರು; ಒಬ್ಬೊಬ್ಬನಿಗೆ ಆರಾರು ರೆಕ್ಕೆಗಳು; ಎರಡರಿಂದ ತನ್ನ ಮುಖವನ್ನು ಮುಚ್ಚಿ ಕೊಳ್ಳುವನು; ಎರಡರಿಂದ ತನ್ನ ಕಾಲುಗಳನ್ನು ಮುಚ್ಚಿ ಕೊಳ್ಳುವನು; ಎರಡರಿಂದ ಹಾರುವನು.
೩ ಮತ್ತು ಒಬ್ಬನು ಇನ್ನೊಬ್ಬನಿಗೆ ಕೂಗಿ—
ಸೈನ್ಯಗಳ ಯೆಹೋವನು, ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು,
ಭೂಮಿ ಎಲ್ಲಾ ಅವನ ಘನದಿಂದ ತುಂಬಿಯದೆ, ಎಂದು ಹೇಳುವನು.
೪ ಹೊಸ್ತಿಲುಗಳ ತಳಾದಿಗಳು ಕೂಗುವವನ ಶಬ್ದದಿಂದ ಕದಲಿದವು; ಮಂದಿರವು ಹೊಗೆಯಿಂದ ತುಂಬಿತು.

೫ ಆಗ ನಾನು ಹೇಳಿದ್ದು—ನನಗೆ ಅಯ್ಯೋ! ಮಡಿದೆ ಹೋದೆ. ಯಾಕಂದರೆ, ನಾನು ಅಶುಚಿಯಾದ ತುಟಿಗಳ ಮನುಷ್ಯನಾಗಿದ್ದೇನೆ; ಅಶುಚಿಯಾದ ತುಟಿಗಳ ಜನರ ಮಧ್ಯದಲ್ಲಿ ವಾಸವಾಗಿದ್ದೇನೆ; ಸೈನ್ಯಗಳ ಯೆಹೋವನಾದ ಅರಸನನ್ನು ನನ್ನ ಕಣ್ಣುಗಳು ಕಂಡವಲ್ಲ! ೬ ಆಗ ಸೆರಫಿಯರಲ್ಲಿ ಒಬ್ಬನು ನನ್ನ ಬಳಿಗೆ ಹಾರಿದನು; ಅವನ ಕೈಯಲ್ಲಿ ಉರಿಕೆಂಡವು; ಚಿಮಟೆಯಿಂದ ಅದನ್ನು ಬಲಿಪೀಠದ ಮೇಲಿಂದ ತೆಗೆದಿದ್ದನು. ೭ ಅವನು ನನ್ನ ಬಾಯಿಗೆ ಅದನ್ನು ಮುಟ್ಟಿಸಿ,—ಇಗೋ, ಇದು ನಿನ್ನ ತುಟಿಗಳನ್ನು ಮುಟ್ಟಿ ಅದೆ; ಹೀಗಿರುವದರಿಂದ ನಿನ್ನ ಅಕ್ರಮ ತೊಲಗಿ, ನಿನ್ನ ಪಾಪ ಮುಚ್ಚಿ ಆಯಿತು, ಅಂದನು.

೮ ಮತ್ತು ಯಾವನನ್ನು ಕಳುಹಿಸಲಿ? ಯಾವನು ನಮಗೋಸ್ಕರ ಹೋಗುವನೆಂದು ಹೇಳುವ ಕರ್ತನ ಶಬ್ದವನ್ನು ಕೇಳಿ, ಇಗೋ, ನಾನು; ನನ್ನನ್ನು ಕಳುಹಿಸು, ಅಂದೆನು.
೯ ಆಗಲವನು ಹೇಳಿದ್ದೇನಂದರೆ—
ಹೋಗು, ಈ ಜನಕ್ಕೆ ಹೇಳು—
ನೀವು ಕೇಳ್ಳೇ ಕೇಳ್ಳಿದಾಗ್ಯೂ ಗ್ರಹಿಸದೆ ಇರ್ರಿ;
ಕಂಡೇ ಕಂಡಾಗ್ಯೂ ಅರಿಯದೆ ಇರ್ರಿ.
೧೦ ತಮ್ಮ ಕಣ್ಣುಗಳಿಂದ ನೋಡದ ಹಾಗೆಯೂ, ತಮ್ಮ ಕಿವಿಗಳಿಂದ ಕೇಳದ ಹಾಗೆಯೂ,
ತಮ್ಮ ಹೃದಯದಿಂದ ಗ್ರಹಿಸಿ, ಶಿರುಗಿ ಕೊಂಡು, ಸ್ವಸ್ಥವಾಗದ ಹಾಗೆಯೂ,
ಈ ಜನರ ಹೃದಯವನ್ನು ಕೊಬ್ಬು ಮಾಡಿ,
ಅವರ ಕಿವಿಗಳನ್ನು ಭಾರ ಮಾಡಿ, ಅವರ ಕಣ್ಣುಗಳಿಗೆ ಅಂಟು ಹಚ್ಚು.
೧೧ ನಾನು, ಎಷ್ಟು ಮಟ್ಟಿಗೆ ಕರ್ತನೇ! ಅಂದೆನು; ಅವನು ಹೇಳಿದ್ದು—
ಪಟ್ಟಣಗಳು ನಿವಾಸಿ ಇಲ್ಲದೆ,
ಮನೆಗಳು ಮನುಷ್ಯನಿಲ್ಲದೆ ಹಾಳಾಗುವ ಮಟ್ಟಿಗೂ,
ದೇಶವು ಹಾಳಾಗಿ ಕಾಡಾಗುವ ಮಟ್ಟಿಗೂ,
೧೨ ಕರ್ತನು ಮನುಷ್ಯರನ್ನು ದೂರ ಮಾಡುವ ಮಟ್ಟಿಗೂ,
ದೇಶದ ಮಧ್ಯದಲ್ಲಿಂದ ಬಿಟ್ಟು ಹೋಗುವದು ಬಹಳವಾಗುವ ಮಟ್ಟಿಗೂ, ಅಂದನು.
೧೩ ಆದರೆ ಅದರಲ್ಲಿ ಇನ್ನೂ ಹತ್ತನೇ ಪಾಲು ಇರುವದು;
ಇದು ಸಹ ಶಿಲಿಗೆ ಸುಡುವದಕ್ಕೆ ಆಗುವದು;
ಏಲಿ ಮರದ ಹಾಗೆಯೂ, ವೃಕ್ಷರಾಜದ ಹಾಗೆಯೂ, ಇರುವದು;
ಕಡಿಯುವಾಗ ಅವುಗಳ ಬುಡ ಉಂಟು;
ಅದರ ಬುಡವು, ಪರಿಶುದ್ಧ ಬೀಜವೇ.

## ೭. ಸಂಧಿ.

೧ ಉಜೀಯನ ಮಗನಾದ, ಯೊತಾಮನ ಮಗನಾದ, ಯೆಹೂದದ ಅರಸನಾಗಿರುವ ಆಹಜನ ದಿವಸಗಳಲ್ಲಿ ಆದದ್ದೇನಂದರೆ—ಅರಾಮಿನ ಅರಸನಾದ ರೆಚೇನನೂ, ರೆಮಲ್ಯನ ಮಗನಾದ ಇಸ್ರಯೇಲಿನ ಅರಸನಾಗಿರುವ ಪೆಕಾಹನು, ಯೆರೂಸಲೇಮಕ್ಕೆ ಯುದ್ಧ ಮಾಡ ಬೇಕೆಂದು ಏರಿ, ಅದರ ಸಂಗಡ ಯುದ್ಧ ಮಾಡ ಕೂಡದೆ ಹೋದರು. ೨ ಮತ್ತು ಅರಾಮು ಎಫ್ರಾಯಿಮಿನ ಮೇಲೆ ಆತು ಕೊಂಡಿದೆ ಎಂದು, ದಾವೀದನ ಮನೆಗೆ ತಿಳಿಸಲ್ಪಟ್ಟಾಗ, ಅವನ ಹೃದಯವೂ, ಅವನ ಜನರ ಹೃದಯವೂ, ಘಾಳಿಯ ಮುಂದೆ ಅಡವಿಯ ಮರಗಳು ಅಲ್ಲಾಡುವ ಹಾಗೆ, ಅಲ್ಲಾಡಿತು.

೩ ಆಗ ಕರ್ತನು ಯೆಶಾಯನಿಗೆ ಹೇಳಿದ್ದು—ಎಲಾ ಆಹಜನನ್ನು ಎದುರುಗೊಳ್ಳ ಹೊರಡು; ಶೆಯಾರ್ ಯಾಶೂಬನೆಂಬ ನಿನ್ನ ಮಗನ ಸಂಗಡ, ಮೇಲಿನ ಕೆರೆಯ ಕಾಲಂಜಿಯ ಕಡೆಗೆ ಅಗಸರ ಹೊಲದ ಹಾದಿಗೆ ಹೋಗು. ೪ ಮತ್ತು ಅವನಿಗೆ ಹೇಳು—ಎಚ್ಚರಿಕೆಯಾಗಿರು; ಸುಮ್ಮನೇ ಇರು; ಭಯ ಪಡ ಬೇಡ; ಕೆಚೇನನೂ ಅರಾಮೂ ರೆಮಲ್ಯನ ಮಗನೂ ಇವರ ಕೋಪ ಉರಿಯಲು, ಹೊಗೆ ಹಾಯುವ ಈ ಎರಡು ಕೊಳ್ಳಿ ಗಳಿಗೆ ನಿನ್ನ ಹೃದಯವು ಅಂಜ ಬಾರದು. ೫ ಅರಾಮೂ, ಎಫ್ರಾಯಿಮೂ, ರೆಮಲ್ಯನ ಮಗನೂ, ನಿನಗೆ ವಿರೋಧವಾಗಿ ಆಲೋಚನೆ ಮಾಡಿ—
೬ ಯೆಹೂದಕ್ಕೆ ವಿರೋಧವಾಗಿ ಏರುವ, ಅದನ್ನು ಕೆಡಿಸುವ, ಅದನ್ನು ನಮಗಾಗಿ ತೆಗೆಯುವ, ಮತ್ತು ತಬೇಲನ ಮಗನನ್ನು ಅದರ ಮಧ್ಯದಲ್ಲಿ ಅರಸನನ್ನು ಮಾಡುವ, ಎಂದು ಹೇಳುವದರಿಂದ, ೭ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—
ಅದು ನಿಲ್ಲುವದಿಲ್ಲ, ಆಗುವದಿಲ್ಲ;
೮ ಯಾಕಂದರೆ, ದಮಸ್ಕವು ಅರಾಮಿನ ತಲೆಯಾಗಿದೆ;
ಕೆಚೇನನು ದಮಸ್ಕದ ತಲೆಯಾಗಿದ್ದಾನೆ;
ಅರವತ್ತೈದು ವರುಷದ ಒಳಗೆ,
ಎಫ್ರಾಯಿಮು ಜನಾಂಗವಾಗಿರುವದು ಮುಗಿಯುವದು.
೯ ಸಮಾರ್ಯವು ಎಫ್ರಾಯಿಮಿನ ತಲೆಯಾಗಿದೆ;



ರೆಮಲ್ಯನ ಮಗನು ಸಮಾರ್ಯದ ತಲೆಯಾಗಿದ್ದಾನೆ;
ನೀವು ನಂಬದೆ ಹೋದರೆ, ಸ್ಥಿರ ಪಡದೆ ಇರುವಿರಿ.

೧೦ ಮತ್ತು ಕರ್ತನು ಆಹಜನಿಗೆ ಹೇಳಿದ್ದೇನಂದರೆ—
೧೧ ನಿನ್ನ ದೇವರಾದ ಕರ್ತನಿಂದ ಗುರುತನ್ನು ಕೇಳಿಕೋ;
ಕೆಳಗಾದರೂ ಇಲ್ಲಪೇ ಮೇಲಾದ ಎತ್ತರದಲ್ಲಾದರೂ, ಕೇಳು;
೧೨ ಆದರೆ ಆಹಜನು—ನಾನು ಕೇಳುವದಿಲ್ಲ;
ಕರ್ತನನ್ನು ಕೋಧಿಸುವದಿಲ್ಲ, ಅಂದನು.
೧೩ ಆಗಲವನು ಹೇಳಿದ್ದು—
ಎಲಾ ದಾವೀದನ ಮನೆಯೇ, ಕೇಳಿರಿ,
ಮನುಷ್ಯರನ್ನು ದಣಿಸುವದು ನಿಮಗೆ ಅಲ್ಪವೋ!
ನನ್ನ ದೇವರನ್ನು ಕೂಡ ದಣಿಸುವಿರೋ!
೧೪ ಆದದರಿಂದ ಕರ್ತನು ತಾನೇ ನಿಮಗೆ ಗುರುತು ಕೊಡುವನು;
ಇಗೋ ಕನ್ಯಾಸ್ತ್ರೀ ಬಸುರಾಗಿ, ಮಗನನ್ನು ಹೆತ್ತು,
ಅವನಿಗೆ ಇಮ್ಮಾನುವೇಲನೆಂದು ಹೆಸರಿಡುವಳು.
೧೫ ಕೇಡು ತಳ್ಳಿ, ಮೇಲು ಆದು ಕೊಳ್ಳ, ತಿಳಿದಾಗಲು,
ಮೊಸರೂ, ಜೇನೂ, ಉಣ್ಣುವನು.
೧೬ ಯಾಕಂದರೆ, ಹುಡುಗನು ಕೇಡು ತಳ್ಳಿ, ಮೇಲು ಆದು ಕೊಳ್ಳ, ತಿಳಿಯುವದಕ್ಕಿಂತ ಮುಂಚೆ,
ನೀನು ಭಯ ಪಡುವ ಇಬ್ಬರು ಅರಸುಗಳ ದೇಶವು ಬಿಟ್ಟು ಬಿಡಲ್ಪಡುವದು.

೧೭ ಕರ್ತನು ನಿನ್ನ ಮೇಲೆಯೂ,
ನಿನ್ನ ಜನರ ಮೇಲೆಯೂ, ನಿನ್ನ ತಂದೆಯ ಮನೆಯ ಮೇಲೆಯೂ,
ಎಫ್ರಾಯಿಮು ಯೆಹೂದಕ್ಕೆ ವಿರೋಧವಾಗಿ ಶಿರುಗಿ ಬಿದ್ದಂದಿನಿಂದ,
ಬಾರದ ದಿವಸಗಳನ್ನು ಬರ ಮಾಡುವನು,
ಅವೇನಂದರೆ, ಅಶ್ಶೂರಿನ ಅರಸನೇ.
೧೮ ಆ ದಿವಸದಲ್ಲಿ ಆಗುವದೇನಂದರೆ—
ಕರ್ತನು ಐಗುಪ್ತದ ಪ್ರವಾಹಗಳ ಕಡೆಯಲ್ಲಿರುವ ನೊಣಕ್ಕೂ, ಅಶ್ಶೂರ್ ದೇಶದಲ್ಲಿರುವ ಜೇನು ಹುಳಕ್ಕೂ, ಶಿಳ್ಳು ಹಾಕುವನು.
೧೯ ಅವೆಲ್ಲಾ ಬಂದು, ಕಾಡಿನ ತಗ್ಗುಗಳಲ್ಲಿಯೂ, ಬಂಡೆಗಳ ಬಿರುಕುಗಳಲ್ಲಿಯೂ,
ಎಲ್ಲಾ ಮುಳ್ಳಿನ ಪೊದೆಗಳಲ್ಲಿಯೂ, ಎಲ್ಲಾ ಮೇಯನ ಸ್ಥಳಗಳಲ್ಲಿಯೂ, ನೆಲೆಯಾಗುವವು.
೨೦ ಆ ದಿವಸದಲ್ಲಿ ಕರ್ತನು ನದಿಯ ಆಚೆಯಲ್ಲಿ ಕೂಲಿಗೆ ತಕ್ಕೊಂಡ ಕತ್ತಿಯಿಂದ,
ಅಶ್ಶೂರಿನ ಅರಸನಿಂದ,
ತಲೆಯನ್ನೂ, ಕಾಲುಗಳ ಕೋಮವನ್ನೂ, ಬೋಳಿಸುವನು;
ಅದು ಗಡ್ಡವನ್ನು ಸಹ ತೆಗೆದು ಹಾಕುವದು.

೨೧ ಆ ದಿವಸದಲ್ಲಿ ಆಗುವದೇನಂದರೆ—
ಒಬ್ಬನು ದನದ ಕಡಸನ್ನೂ, ಎರಡು ಕುರಿಗಳನ್ನೂ, ಸಾಕುವನು.
೨೨ ಅದು ಬಹಳ ಹಾಲು ಕೊಡುವದರಿಂದ, ಮೊಸರು ಉಣ್ಣುವನು;
ಯಾಕಂದರೆ, ದೇಶದ ಮಧ್ಯದಲ್ಲಿ ಉಳಿದವರೆಲ್ಲರು, ಮೊಸರನ್ನೂ, ಜೇನನ್ನೂ, ಉಣ್ಣುವರು.
೨೩ ಆ ದಿವಸದಲ್ಲಿ ಆಗುವದೇನಂದರೆ—
ಸಾವಿರ ಬೆಳ್ಳಿಯ ಕ್ರಯದ,
ಸಾವಿರ ದ್ರಾಕ್ಷೇ ಬಳ್ಳಿ ಇದ್ದ, ಸ್ಥಳವೆಲ್ಲಾ,
ಮುಳ್ಳಿಗೂ ದತ್ತೂರಿಗೂ ಆಗುವದು.
೨೪ ಬಾಣ ಬಿಲ್ಲು ತಕ್ಕೊಂಡು ಅಲ್ಲಿಗೆ ಬರುವರು;
ಯಾಕಂದರೆ, ದೇಶವೆಲ್ಲಾ ಮುಳ್ಳು ದತ್ತೂರಿಯೂ ಉಳ್ಳದ್ದಾಗುವದು.
೨೫ ಮತ್ತು ಗುದ್ದಲಿಯಿಂದ ಅಗಿಯುವ ಎಲ್ಲಾ ಬೆಟ್ಟಗಳ ಮೇಲೆ,
ಮುಳ್ಳು ದತ್ತೂರಿಗಳ ಭಯವು ಬಾರದಿರುವದು;
ಅವು ಎತ್ತುಗಳನ್ನು ಬಿಡುವದಕ್ಕೂ,
ಕುರಿಗಳು ತುಳಿಯುವದಕ್ಕೂ, ಆಗುವವು.

## ೮. ಸಂಧಿ.

೧ ಮತ್ತು ಕರ್ತನು ನನಗೆ ಹೇಳಿದ್ದು—ದೊಡ್ಡ ಹಲಿಗೆಯನ್ನು ತಕ್ಕೊಂಡು, ಅದರಲ್ಲಿ ಮನುಷ್ಯನ ಕಂಠದಿಂದ—ತ್ವರೆಯಾದ ೨ ಕೊಳ್ಳೆ ವೇಗವಾದ ಸೂರೆಯನ್ನು ಕುರಿತು ಬರಿ. ಮತ್ತು ನಂಬಿಕೆಯುಳ್ಳ ಸಾಕ್ಷಿಯವರನ್ನು ನನಗೆ ಸಾಕ್ಷಿಯಾಗಿ ಇಟ್ಟೆನು; ಯಾರಂದರೆ, ಯಾಜಕನಾದ ಉರೀಯನನ್ನೂ, ಎಬೆಕ್ಯನ ಮ
೩ ಗನಾದ ಜಕರೀಯನನ್ನೂ. ಮತ್ತು ಪ್ರವಾದಿ ಸ್ತ್ರೀಗೆ ಸೇರಿದೆನು; ಆಗಲು ಅವಳು ಬಸುರಾಗಿ, ಮಗನನ್ನು ಹೆತ್ತಳು; ಮತ್ತು—ತ್ವರೆಯಾದ ಕೊಳ್ಳೆ ವೇಗವಾದ ಸೂರೆ ಎಂದು, ಅವನಿಗೆ ಹೆಸರಿ
೪ ಡು, ಎಂದು ಕರ್ತನು ನನಗೆ ಹೇಳಿದನು. ಯಾಕಂದರೆ, ಹುಡುಗನು, ಅಪ್ಪಾ, ಅಮ್ಮಾ, ಎಂದು ಹೇಳ ತಿಳಿಯುವದಕ್ಕಿಂತ ಮುಂಚೆ, ದಮಸ್ಕದ ಸಂಪತ್ತೂ ಸಮಾರ್ಯದ ಕೊಳ್ಳೆಯೂ, ಅಶ್ಶೂರಿನ ಅರಸನ ಮುಂದೆ ತಕ್ಕೊಂಡು ಹೋಗಲ್ಪಡುವದು.

೫ ಮತ್ತು ಕರ್ತನು ಇನ್ನು ನನಗೆ ಹೇಳಿದ್ದೇನಂದರೆ—
೬ ಈ ಜನರು ಮೆಲ್ಲಗೆ ಹರಿಯುವ ಸಿಲೋವದ ನೀರು ತಳ್ಳುವದರಿಂದಲೂ,
ರೆಚೇನಿನಲ್ಲಿಯೂ, ರೆಮಲ್ಯನ ಮಗನಲ್ಲಿಯೂ, ಸಂತೋಷವಾಗಿರುವದರಿಂದಲೂ,
೭ ಇದುಕಾರಣ, ಇಗೋ, ಕರ್ತನು ನದಿಯ ಬಲವಾದ ಹೆಚ್ಚಾದ ನೀರನ್ನೂ,
ಅಶ್ಶೂರಿನ ಅರಸನನ್ನೂ ಅವನ ಎಲ್ಲಾ ಮಹಿಮೆಯನ್ನೂ,
ಅವರ ಮೇಲೆ ಏರ ಮಾಡುವನು;
ಅದು ತನ್ನ ಎಲ್ಲಾ ಕಾಲಿವೆಗಳನ್ನು ಮೀರಿ,
ತನ್ನ ಎಲ್ಲಾ ಥಡಗಳನ್ನು ದಾಟಿ,
೮ ಯೆಹೂದದ ಮೇಲೆ ಕೆಳೆಪು,
ಉಕ್ಕಿ, ದಾಟಿ, ಕುತ್ತಿಗೆ ಮಟ್ಟಿಗೂ ಮುಟ್ಟುವದು;
ಅದರ ರೆಕ್ಕೆಗಳು ಚಾಚಿ,
ನಿನ್ನ ದೇಶದ ಅಗಲವನ್ನು ತುಂಬುವದು,
ಇಮ್ಮಾನುವೇಲೇ!
೯ ಕೂಡಿ ಕೊಳ್ಳಿರಿ, ಜನಗಳೇ! ಆದರೆ ಮುರಿದು ಹೋಗುವಿರಿ;
ಭೂಮಿಯ ಎಲ್ಲಾ ದೂರದವರೇ! ಕಿವಿ ಕೊಡಿರಿ;
ನಡು ಕಟ್ಟಿ ಕೊಳ್ಳಿರಿ! ಆದರೆ ಮುರಿದು ಹೋಗುವಿರಿ;
ನಡು ಕಟ್ಟಿ ಕೊಳ್ಳಿರಿ! ಆದರೆ ಮುರಿದು ಹೋಗುವಿರಿ.

೧೦ ಆಲೋಚನೆ ಮಾಡಿರಿ, ಅದು ಹೀನವಾಗುವದು;
ಮಾತು ಹೇಳಿರಿ, ಆದರೆ ಅದು ನಿಲ್ಲದು;
ಯಾಕಂದರೆ, ನಮ್ಮ ಸಂಗಡ ದೇವರು ಇದ್ದಾನೆ.

೧೧ ಯಾಕಂದರೆ, ನಾನು ಈ ಜನರ ಮಾರ್ಗದಲ್ಲಿ ನಡೆದು ಕೊಳ್ಳದ ಹಾಗೆ,
ಕರ್ತನು ಬಲವಾದ ಕೈಯಿಂದ ನನ್ನನ್ನು ತೊಲಗಿಸಿ, ನನಗೆ ಹೇಳಿದ್ದೇನಂದರೆ—
೧೨ ಈ ಜನರು ಒಳ್ಳ ಸಂಚು ಎಂದು,
ಹೇಳುವ ಎಲ್ಲವನ್ನು ಕುರಿತು, ನೀವು ಬಳ್ಳ ಸಂಚು ಎಂದು ಅನ್ನಬೇಡಿರಿ;
ಅವರ ಭಯದಿಂದ ಭಯ ಪಡ ಬೇಡಿರಿ;
ನಡುಗ ಬೇಡಿರಿ;
೧೩ ಸೈನ್ಯಗಳ ಕರ್ತನನ್ನು, ಅವನನ್ನೇ, ಪರಿಶುದ್ಧ ಮಾಡಿರಿ;
ಅವನೇ ನಿಮ್ಮ ಭಯವೂ, ಅವನೇ ನಿಮ್ಮ ನಡುಗೂ, ಆಗಲಿ.
೧೪ ಅವನೇ ಪರಿಶುದ್ಧ ಸ್ಥಳವಾಗುವನು;
ಇಸ್ರಯೇಲಿನ ಎರಡು ಮನೆಯವರಿಗೆ,
ಎಡವುವ ಕಲ್ಲೂ, ತೊಡರುವ ಬಂಡೆಯೂ,
ಯೆರೂಸಲೇಮಿನ ನಿವಾಸಿಗಳಿಗೆ, ಪಾಶೆಯೂ, ಉರ್ಲೂ, ಆಗಿರುವನು.
೧೫ ಅವರಲ್ಲಿ ಅನೇಕರು ತೊಡರಿ, ಬಿದ್ದು, ಮುರಿದು ಹೋಗಿ,
ಉರ್ಲಿಗೆ ಸಿಕ್ಕಿ ಹಿಡಿಯಲ್ಪಡುವರು.

೧೬ ಸಾಕ್ಷಿಯನ್ನು ಕಟ್ಟು,
ನ್ಯಾಯ ಪ್ರಮಾಣಕ್ಕೆ ನನ್ನ ಶಿಷ್ಯರಲ್ಲಿ ಮುದ್ರೆ ಹಾಕಿಸು.
ಯಾಕೋಬನ ಮನೆಗೆ ತನ್ನ ಮುಖ ಮರೆ ಮಾಡುವ
೧೭ ಕರ್ತನನ್ನು, ಎದುರು ನೋಡುತ್ತೇನೆ;
ಅವನಲ್ಲಿ ಕೋರಿಕೆ ಇಡುತ್ತೇನೆ.
೧೮ ಇಗೋ ನಾನೂ, ಕರ್ತನು ನನಗೆ ಕೊಟ್ಟ ಮಕ್ಕಳೂ,
ಚಿಯೋನಿನ ಪರ್ವತದಲ್ಲಿ ವಾಸಿಸುವ ಸೈನ್ಯಗಳ ಕರ್ತನ ಕಡೆಯಿಂದ,
ಇಸ್ರಯೇಲಿನಲ್ಲಿ ಗುರುತುಗಳೂ, ಲಕ್ಷಣಗಳೂ, ಆಗಿದ್ದೇವೆ.
೧೯ ಯಕ್ಷಣಿಗಾರರನ್ನೂ, ಮಂತ್ರಜ್ಞರನ್ನೂ,
ಪಿಸುಗುಟ್ಟುವವರನ್ನೂ, ಗುಣುಗುಟ್ಟುವವರನ್ನೂ, ಹುಡುಕಿರಿ, ಎಂದು,
ಅವರು ನಿಮಗೆ ಹೇಳಿದರೆ,
ಜನರು ತಮ್ಮ ದೇವರನ್ನು ಹುಡುಕಕೋ!
ಜೀವಿತರಿಗೋಸ್ಕರ ಸತ್ತವರ ಬಳಿಯಲ್ಲಿ ಹೋಗುವದುಂಟೋ!
೨೦ ನ್ಯಾಯಪ್ರಮಾಣಕ್ಕೂ ಸಾಕ್ಷಿಗೂ ಹೋಗಲಿ;
ಈ ವಾಕ್ಯದ ಪ್ರಕಾರ ಹೇಳದಿದ್ದರೆ,
ಅವರಿಗೆ ಉದಯವಿಲ್ಲ.

೨೧ ಅವರು ಭಾರವೂ ಹಸಿವೆಯೂ ಉಳ್ಳವರಾಗಿ, ದೇಶವನ್ನು ಹಾದು,
ಮತ್ತು, ಹಸಿದು, ಕೋಪಿಸಿ,
ತಮ್ಮ ಅರಸನನ್ನೂ ತಮ್ಮ ದೇವರನ್ನೂ ಶಪಿಸಿ,
ಮೇಲಕ್ಕೆ ನೋಡುವರು.
೨೨ ಮತ್ತು, ಭೂಮಿಯನ್ನು ದೃಷ್ಟಿಸುವರು;
ಇಗೋ, ಇಕ್ಕಟ್ಟೂ, ಕತ್ತಲೆಯೂ, ಭಯದ ಮೊಬ್ಬೂ;
ಅಂಧಕಾರಕ್ಕೆ ಓಡಿಸಲ್ಪಡುವರು.

## ೯. ಸಂಧಿ.

೧ ಆದರೆ ನಲಗಿ ಇದ್ದ ದೇಶಕ್ಕೆ ಮೊಬ್ಬು ಇರುವದಿಲ್ಲ;
ಪೂರ್ವ ಕಾಲದಲ್ಲಿ ಅವನು ಜೆಬುಲೋನ್ ಶೀಮೆಗೂ ನೆಫ್ತಲಿನ್ ಶೀಮೆಗೂ,
ಮಾನಭಂಗ ಮಾಡಿದ ಪ್ರಕಾರ,
ತರುವಾಯ ಅವಕ್ಕೆ ಘನ ಕೊಡುವನು;
ಸಮುದ್ರದ ಮಾರ್ಗದಲ್ಲಿಯೂ, ಯೊರ್ದನಿಗೆ ಆಚೆಯಲ್ಲಿಯೂ ಇರುವ,
ಜನಾಂಗಗಳ ಗಲಿಲಾಯವೇ.
೨ ಕತ್ತಲಲ್ಲಿ ನಡಿಯುವ ಜನರು,
ದೊಡ್ಡ ಬೆಳ್ಳಕನ್ನು ನೋಡುತ್ತಾರೆ;
ಮರಣದ ನೆರಳಿನ ದೇಶದಲ್ಲಿ ವಾಸಿಸುವವರ ಮೇಲೆ,
ಬೆಳ್ಳಕು ಪ್ರಕಾಶಿಸುತ್ತದೆ.
೩ ಜನಾಂಗವನ್ನು ಹೆಚ್ಚಿಸಿದ್ದೀ;
ಅದಕ್ಕೆ ದೊಡ್ಡ ಸಂತೋಷ ಹುಟ್ಟಿಸಿದ್ದೀ;
ಸುಗ್ಗಿ ಕಾಲದ ಸಂತೋಷದಂತೆಯೂ,
ಕೊಳ್ಳೆ ಹಂಚಿ ಕೊಳ್ಳುವಾಗ ಉಲ್ಲಾಸಿಸುವ ಪ್ರಕಾರವೂ,
ನಿನ್ನ ಮುಂದೆ ಸಂತೋಷ ಪಡುತ್ತಾರೆ.
೪ ಯಾಕಂದರೆ, ಅವರ ಭಾರದ ನೊಗವನ್ನೂ,
ಅವರ ಹೆಗಲಿನ ಕೋಲನ್ನೂ,
ಅವರನ್ನು ಹೊಡಿಯುವವನ ಬೆತ್ತವನ್ನೂ,
ಮಿದ್ಯಾನಿನ ದಿವಸದಂತೆ ಮುರಿದು ಬಿಟ್ಟಿದ್ದೀ.
೫ ಯಾಕಂದರೆ, ಯುದ್ಧ ಘೋಷದಲ್ಲಿ ಮೆಟ್ಟಿ ಕೊಂಚವನ ಮೆಟ್ಟಿಲ್ಲವೂ,
ರಕ್ತದಲ್ಲಿ ಹೊರಳಿದ ವಸ್ತ್ರವೂ,
ಬೆಂಕಿಗೆ ಆಹಾರವಾಗಿ, ಸುಡುವದಕ್ಕೆ ಆಗುವವು.
೬ ಯಾಕಂದರೆ, ಮಗು ನಮಗೆ ಹುಟ್ಟಿಯದೆ; ಮಗನು ನಮಗೆ ಕೊಡಲ್ಪಟ್ಟಿದ್ದಾನೆ;
ಅಧಿಕಾರವು ಅವನ ಹೆಗಲಿನ ಮೇಲೆ ಇರುವದು;
ಅವನ ಹೆಸರು, ಆಶ್ಚರ್ಯಕಾದವನು, ಆಲೋಚನೆ ಕರ್ತನು,
ಬಲಿಷ್ಠ ದೇವರು, ನಿತ್ಯ ತಂದೆ, ಸಮಾಧಾನದ ಪ್ರಭುವು, ಎಂದು ಹೇಳಲ್ಪಡುವದು.
೭ ದಾವೀದನ ಸಿಂಹಾಸನದ ಮೇಲೆಯೂ, ಅವನ ರಾಜ್ಯದ ಮೇಲೆಯೂ,
ಅದನ್ನು ಸ್ಥಾಪಿಸಿ,
ಇಂದಿನಿಂದ ಸದಾಕಾಲಕ್ಕೆ,
ನೀತಿ ನ್ಯಾಯಗಳಲ್ಲಿ ದೃಢ ಮಾಡುವ ಬಗ್ಗೆ,
ಅವನ ರಾಜ್ಯಾಧಿಕಾರದ ಅಭಿವೃದ್ಧಿಗೂ, ಸಮಾಧಾನಕ್ಕೂ, ಅಂತ್ಯವಿರುವದಿಲ್ಲ;
ಸೈನ್ಯಗಳ ಕರ್ತನ ಆಸಕ್ತಿ ಇದನ್ನು ಮಾಡುವದು.



೮ ಕರ್ತನು ಯಾಕೋಬನಿಗೆ ವಿರೋಧವಾಗಿ ವಾಕ್ಯವನ್ನು ಕಳ್ಳಹಿಸಿದ್ದಾನೆ,
ಅದು ಇಸ್ರಯೇಲಿನ ಮೇಲೆ ಬಿದ್ದದೆ.
೯ ಜನರೆಲ್ಲರೂ,
ಎಫ್ರಾಯಿಮೂ, ಸಮಾರ್ಯದ ನಿವಾಸಿಯೂ, ಕೇಳುವರು;
ಅಹಂಕಾರದಿಂದಲೂ, ಹೃದಯದ ಹಟ್ಟುನಿಂದಲೂ, ಅವರು ಹೇಳುವದೇನಂದರೆ—
೧೦ ಇಟ್ಟಿಗೆಗಳು ಬಿದ್ದು ಹೋದವು, ಆದರೆ ಕೆತ್ತಿದ ಕಲ್ಲುಗಳಿಂದ ಕಟ್ಟುವೆವು;
ಹಿಪ್ಪಲಿ ಗಿಡಗಳು ಕಡಿಯಲ್ಪಟ್ಟವು, ಆದರೆ ದೇವದಾರುಗಳನ್ನು ನೆಡುವೆವು.
೧೧ ಕರ್ತನು ರೆಜೀನನ ಶತ್ರುಗಳನ್ನು ಅವರಿಗೆ ವಿರೋಧವಾಗಿ ಏಳ ಮಾಡಿ,
ಅವರ ಹಗೆಯವರಿಗೆ ಕವಚ ತೊಡಿಸುವನು.
೧೨ ಅರಾಮು ಪೂರ್ವದಿಂದಲೂ, ಫಿಲಿಷ್ಟ್ಯರು ಪಶ್ಚಿಮದಿಂದಲೂ,
ಇಸ್ರಯೇಲನ್ನು ತೆರೆದ ಬಾಯಿಂದ ತಿಂದು ಬಿಡುವರು.
ಇದೆಲ್ಲಾದರಿಂದ ಅವನ ಕೋಪವು ಹಿಂದಿರುಗಲಿಲ್ಲ;
ಅವನ ಕೈ ಇನ್ನೂ ಚಾಚಿಯದೆ.

೧೩ ಜನರು ತಮ್ಮನ್ನು ಬಡೆದವನ ಕಡೆಗೆ ತಿರುಗದೆ,
ಸೈನ್ಯಗಳ ಕರ್ತನನ್ನು ಹುಡುಕದೆ, ಇದ್ದಾರೆ.
೧೪ ಆದದರಿಂದ ಕರ್ತನು ಇಸ್ರಯೇಲಿಂದ,
ತಲೆಯನ್ನೂ, ಬಾಲವನ್ನೂ, ಕೊಂಬೆಯನ್ನೂ, ತುಂಗೆಯನ್ನೂ,
ಒಂದೇ ದಿವಸದಲ್ಲಿ ಕಡಿಯುತ್ತಾನೆ.
೧೫ ಹಿರಿಯನು, ಘನವುಳ್ಳವನು, ಇವನೇ ತಲೆ;
ಸುಳ್ಳು ಬೋಧಿಸುವ ಪ್ರವಾದಿಯು, ಇವನೇ ಬಾಲ.
೧೬ ಈ ಜನರನ್ನು ನಡಿಸುವವರು ಮೋಸಗಾರರು,
ನಡಿಸಲ್ಪಟ್ಟವರು ಮಡಿದು ಹೋದವರಾಗಿದ್ದಾರೆ.
೧೭ ಆದದರಿಂದ ಕರ್ತನು ಅವರ ಯೌವನಸ್ಥರಲ್ಲಿ ಸಂತೋಷಪಡುವದಿಲ್ಲ;
ಅವರ ದಿಕ್ಕಿಲ್ಲದವರನ್ನೂ, ಅವರ ವಿಧವೆಗಳನ್ನೂ, ಕನಿಕರಿಸುವದಿಲ್ಲ;
ಯಾಕಂದರೆ, ಅವರೆಲ್ಲರು ಅಶುದ್ಧರೂ ಕೆಟ್ಟವರೂ;
ಎಲ್ಲರ ಬಾಯಿ ಹುಚ್ಚಾಟವನ್ನು ನುಡಿಯುತ್ತದೆ;
ಇದೆಲ್ಲಾದರಿಂದ ಅವನ ಕೋಪವು ಹಿಂದಿರುಗಲಿಲ್ಲ;
ಅವನ ಕೈ ಇನ್ನೂ ಚಾಚಿಯದೆ.
೧೮ ಯಾಕಂದರೆ, ದುಷ್ಟತ್ವವು ಬೆಂಕಿಯ ಹಾಗೆ ಉರಿಯುತ್ತದೆ;
ಅದು ಮುಳ್ಳು ದತ್ತೂರಿಗಳನ್ನು ತಿಂದು ಬಿಡುತ್ತದೆ;
ಅಡವಿಯ ಪೊದೆಗಳಲ್ಲಿ ಹತ್ತುತ್ತದೆ;
ಅವು ಹೊಗೆ ಸುತ್ತಿ ಕೊಂಡು ಹಾರಿ ಹೋಗುತ್ತವೆ;
೧೯ ಸೈನ್ಯಗಳ ಕರ್ತನ ಉರಿಯಿಂದ ದೇಶವು ಸುಟ್ಟಿದೆ;
ಜನರು ಬೆಂಕಿಗೆ ಆಹಾರವಾಗಿರುವರು;
ಒಬ್ಬರ ಮೇಲೊಬ್ಬರು ಕನಿಕರ ಪಡುವದಿಲ್ಲ.
೨೦ ಒಬ್ಬನು ಬಲಕಡೆಯಲ್ಲಿ ಕಡಿದು, ಹಸಿಯುತ್ತಾನೆ;
ಎಡಕಡೆಯಲ್ಲಿ ತಿಂದು, ತೃಪ್ತಿ ಹೊಂದುವದಿಲ್ಲ;
ತಮ್ಮ ತಮ್ಮ ಕೆಟ್ಟಿಯ ಮಾಂಸವನ್ನು ತಿನ್ನುತ್ತಾರೆ.
೨೧ ಮನಸ್ಸೆಯು ಎಫ್ರಾಯಿಮನ್ನೂ, ಎಫ್ರಾಯಿಮು ಮನಸ್ಸೆಯನ್ನೂ, ತಿಂದು ಬಿಡುತ್ತಾರೆ;
ಇವರು ಕೂಡಿ, ಯೆಹೂದಕ್ಕೆ ವಿರೋಧವಾಗಿದ್ದಾರೆ;
ಇದೆಲ್ಲಾದರಿಂದ ಅವನ ಕೋಪವು ಹಿಂದಿರುಗಲಿಲ್ಲ,
ಅವನ ಕೈ ಇನ್ನೂ ಚಾಚಿಯದೆ.

## ೧೦. ಸಂಧಿ.

೧ ಅಕ್ರಮದ ನೇಮಕಗಳನ್ನು ನೇಮಿಸಿ,
ಕಟ್ಟದ ಬರಹ ಬರಿಯುವವರಿಗೆ ಅಯ್ಯೋ!
೨ ವಿಧವೆಗಳು ಅವರ ಕೊಳ್ಳೆಯಾಗುವ ಹಾಗೆಯೂ,
ದಿಕ್ಕಿಲ್ಲದವರನ್ನು ಸುಲುಕೊಳ್ಳುವ ಹಾಗೆಯೂ,
ದೀನರಿಗೆ ನ್ಯಾಯ ತಪ್ಪಿಸಿ,
ನನ್ನ ಜನರ ಬಡವರ ನ್ಯಾಯವನ್ನು ಕಸು ಕೊಳ್ಳ ಬೇಕೆಂದಿದ್ದಾರೆ.
೩ ವಿಚಾರಣೆಯ ದಿವಸದಲ್ಲಿಯೂ,
ದೂರದಿಂದ ಬರುವ ನಾಶನದಲ್ಲಿಯೂ,
ಏನು ಮಾಡುವಿರಿ!
ಸಹಾಯಕ್ಕಾಗಿ ಯಾರ ಬಳ್ಳಗೆ ಓಡುವಿರಿ!
ನಿಮ್ಮ ಮಹಿಮೆಯನ್ನು ಎಲ್ಲಿ ಬಿಡುವಿರಿ!
೪ ನಾನಿಲ್ಲದೆ, ಕೆಳೆಯವರಲ್ಲಿ ಬೊಗ್ಗಿ ಕೊಳ್ಳುವರು;
ಕೊಲ್ಲಲ್ಪಟ್ಟವರಲ್ಲಿ ಬೀಳುವರು;
ಇದೆಲ್ಲಾದರಿಂದ ಅವನ ಕೋಪವು ಹಿಂದಿರುಗಲಿಲ್ಲ;
ಅವನ ಕೈ ಇನ್ನೂ ಚಾಚಿಯದೆ.

೫ ನನ್ನ ಕೋಪದ ಕೋಲಾದ ಅಶ್ಶೂರನಿಗೆ ಅಯ್ಯೋ!
ಅವರ ಕೈಯಲ್ಲಿ ಇರುವ ಬೆತ್ತವು ನನ್ನ ಕ್ರೌದ್ರವೇ.
೬ ಭ್ರಷ್ಟ ಜನಾಂಗಕ್ಕೆ ಅವನನ್ನು ಕಳ್ಳಹಿಸುತ್ತೇನೆ;
ನನ್ನ ಉಗ್ರದ ಜನರ ಮೇಲೆ,
ಕೊಳ್ಳೆ ಕೊಳ್ಳೆ ಹಿಡಿಯುವದಕ್ಕೂ, ಸುಲಿಗೆ ಸುಲುಕೊಳ್ಳುವದಕ್ಕೂ,
ಬೀದಿಗಳ ಕೆಸರಿನ ಹಾಗೆ ಅವರನ್ನು ತುಳಿದು ಬಿಡುವದಕ್ಕೂ,
ಅವನಿಗೆ ಅಪ್ಪಣೆ ಕೊಡುತ್ತೇನೆ.
೭ ಅವನಾದರೆ, ಈ ಪ್ರಕಾರ ನೆನಸುವದಿಲ್ಲ;
ಅವನ ಹೃದಯವು ಈ ಪ್ರಕಾರ ಆಲೋಚಿಸುವದಿಲ್ಲ;
ಆದರೆ ನಾಶ ಮಾಡುವದೂ;
ಕೊಂಚವಾಗಿ ಅಲ್ಲ, ಜನಾಂಗಗಳನ್ನು ಕಡಿದು ಬಿಡುವದು;
ಅವನ ಹೃದಯದಲ್ಲಿ ಅದೆ.
೮ ಯಾಕಂದರೆ, ಅವನು ಹೇಳುವದು—
ನನ್ನ ಪ್ರಧಾನಕೆಲ್ಲರು ಅರಸುಗಳಲ್ಲವೋ!
೯ ಕಲೊಖೀ ಕರ್ಕೇಮಿಷಿನ ಹಾಗಲ್ಲವೋ!
ಹಾಮಾತ್ ಅರ್ಪಾದಿನ ಹಾಗಲ್ಲವೋ!
ಸಮಾರ್ಯವು ದಮಸ್ಕದ ಹಾಗಲ್ಲವೋ!
೧೦ ನನ್ನ ಕೈ ಬೊಂಬೆಗಳ ರಾಜ್ಯಗಳನ್ನೂ,
ಯೆರೂಸಲೇಮಿನವಕ್ಕಿಂತಲೂ, ಸಮಾರ್ಯದವಕ್ಕಿಂತಲೂ,
ಹೆಚ್ಚಾಗಿದ್ದ ಅವರ ವಿಗ್ರಹಗಳನ್ನು
ಕಂಡು ಕೊಂಡ ಹಾಗೆ,

೧೧ ನಾನು ಸಮಾರ್ಯಕ್ಕೂ ಅದರ ಬೊಂಬೆಗಳಿಗೂ, ಮಾಡಿದ ಹಾಗೆಯೇ,
ಯೆರೂಸಲೇಮಿಗೂ, ಅದರ ಪ್ರತಿಮೆಗಳಿಗೂ, ಮಾಡೆನೇ!

೧೨ ಆದರೆ ಆಗುವದೇನಂದರೆ—
ಕರ್ತನು ಚಿಯೋನ್ ಪರ್ವತದಲ್ಲಿಯೂ, ಯೆರೂಸಲೇಮಿನಲ್ಲಿಯೂ,
ತನ್ನ ಕೆಲಸವನ್ನೆಲ್ಲಾ ಮುಗಿಸಿದಾಗ,
ಅಶ್ಶೂರನ ಅರಸನ ಹೃದಯದ ದೊಡ್ಡಸ್ತಿಕೆಯ ಫಲವನ್ನೂ,
ಅವನ ಉನ್ನತವಾದ ಕಣ್ಣುಗಳ ಮಹಿಮೆಯನ್ನೂ, ವಿಚಾರಿಸುವೆನು.

೧೩ ಯಾಕಂದರೆ, ಅವನು ಹೇಳಿದ್ದು—
ನನ್ನ ಕೈಯ ಬಲದಿಂದಲೂ,
ನನ್ನ ಜ್ಞಾನದಿಂದಲೂ, ಅದನ್ನು ಮಾಡಿದೆ;
ಯಾಕಂದರೆ, ನಾನು ವಿವೇಕಿ,
ಜನಗಳ ಮೇರೆಗಳನ್ನು ತೆಗೆದೆತ್ತಿ,
ಅವರ ನಿಧಿಗಳನ್ನು ಕೊಳ್ಳೆ ಇಟ್ಟು,
ನಿವಾಸಿಗಳನ್ನು ಪರಾಕ್ರಮಿಯಂತೆ ತಗ್ಗಿಸಿದ್ದೇನೆ.

೧೪ ನನ್ನ ಕೈ ಜನಗಳ ಐಶ್ವರ್ಯವನ್ನು, ಗೂಡಿನ ಹಾಗೆ, ಕಂಡುಕೊಂಡಿತು,
ಬಿಡಲ್ಪಟ್ಟ ಮೊಟ್ಟೆಗಳನ್ನು ಕೂಡಿಸುವ ಪ್ರಕಾರ,
ನಾನು ಭೂಮಿಯನ್ನೆಲ್ಲಾ ಕೂಡಿಸಿದೆ,
ಕೆಕ್ಕೆ ಬಿಡಿಸುವಂಥಾದ್ದೂ,
ಬಾಯಿ ತೆಗೆಯುವಂಥಾದ್ದೂ, ಕೀಚು ಕೀಚು ಅನ್ನುವಂಥಾದ್ದೂ, ಒಂದೂ ಇಲ್ಲ.

೧೫ ಕೊಡ್ಲಿಯು, ಕಡಿಯುವವನ ಮೇಲೆ ವಿರೋಧವಾಗಿ ಉಬ್ಬಿಕೊಂಡೀತೋ!
ಕರಗಸವು, ಅದನ್ನು ಎಳೆಯುವವನ ಮೇಲೆ ದೊಡ್ಡದು ಮಾಡಿಕೊಂಡೀತೋ!
ಇದು, ಕೋಲು ಎತ್ತಿದವನನ್ನು ಬೀಸಿದ ಹಾಗೆಯೂ,
ಬೆತ್ತವು ಮರವಲ್ಲದಪ್ಪಂದ ತನ್ನನ್ನು ಎತ್ತಿ ಕೊಂಡ ಹಾಗೆಯೂ, ಇರುವದು.

೧೬ ಆದದರಿಂದ, ಸೈನ್ಯಗಳ ಕರ್ತನಾದ ಕರ್ತನು ಅವನ ಕೊಬ್ಬಿದವರಲ್ಲಿ ಕ್ಷಯವನ್ನು ಕಳುಹಿಸುವನು;
ಅವನ ಮಹಿಮೆಯ ಕೆಳಗೆ ಬೆಂಕಿಯ ಉರಿಯ ಹಾಗೆ ಉರಿ ಉರಿಸುವನು.

೧೭ ಇಸ್ರಯೇಲಿನ ಬೆಳಕು ಬೆಂಕಿಯಾಗುವದು;
ಅವನ ಪರಿಶುದ್ಧನು ಜ್ವಾಲೆಯಾಗುವನು;
ಅದು ಒಂದೇ ದಿವಸದಲ್ಲಿ,
ಅವನ ಮುಳ್ಳು ದತ್ತೂರಿಗಳನ್ನು ದಹಿಸಿ ತಿನ್ನುವದು.

೧೮ ಅವನ ಅಡವಿಯೂ, ಪೈರಿನ ಹೊಲವೂ,
ಇವುಗಳ ಮಹಿಮೆಯನ್ನು, ಪ್ರಾಣದಿಂದ ಮಾಂಸದ ಪರ್ಯಂತರ, ಅಳಿಸಿ ಬಿಡುವನು;
ರೋಗಿಯು ಕ್ಷಯವಾಗುವ ಪ್ರಕಾರ ಇರುವದು.

೧೯ ಅದರ ಅಡವಿಯ ಮರಗಳ ಉಳುವು ಕೊಂಚವಾಗಿರುವದು;
ಹುಡುಗನು ಅವುಗಳನ್ನು ಬರೆಯ ಬಹುದು.

೨೦ ಆ ದಿವಸದಲ್ಲಿ ಆಗುವದೇನಂದರೆ—
ಇಸ್ರಯೇಲಿನ ಉಳುವು, ಯಾಕೋಬನ ಮನೆಯ ಮಿಗುವೂ,
ತಮ್ಮನ್ನು ಬಡಿಯುವವನ ಮೇಲೆ ಊರಿ ಕೊಳ್ಳುವದನ್ನು ಬಿಟ್ಟು,
ಇಸ್ರಯೇಲಿನ ಪರಿಶುದ್ಧನಾದ ಯೆಹೋವನ ಮೇಲೆ ನಂಬಿಕೆಯಿಂದ ಊರಿ ಕೊಳ್ಳುವರು.

೨೧ ಉಳುವು, ಯಾಕೋಬನ ಉಳುವೇ,
ಬಲಿಷ್ಠನಾದ ದೇವರ ಕಡೆಗೆ ತಿರುಗುವದು.

೨೨ ಯಾಕಂದರೆ, ನಿನ್ನ ಜನರಾದ ಇಸ್ರಯೇಲು ಸಮುದ್ರದ ಮಳ್ಳನ ಹಾಗೆ ಇದ್ದರೂ,
ಅವರ ಉಳುವೇ ತಿರುಗುವದು;
ಸಂಹಾರವು ನೇಮಿಸಿ ಆಯಿತು;
ನೀತಿಯ ಪ್ರವಾಹವೇ.

೨೩ ಯಾಕಂದರೆ, ಸಂಹಾರವನ್ನು, ನೇಮಿಸಿದ್ದನ್ನೇ,
ಸೈನ್ಯಗಳ ಕರ್ತನಾದ ಯೆಹೋವನು, ಸಮಸ್ತ ದೇಶದ ಮಧ್ಯದಲ್ಲಿ, ಉಂಟು ಮಾಡುವನು.

೨೪ ಆದದರಿಂದ, ಸೈನ್ಯಗಳ ಯೆಹೋವನೆಂಬ ಕರ್ತನು ಹೇಳುವದೇನಂದರೆ—
ಚಿಯೋನಿನಲ್ಲಿ ವಾಸಿಸುವ ನನ್ನ ಜನರೇ,
ಅಶ್ಶೂರನಿಗೆ ಭಯ ಪಡ ಬೇಡಿರಿ;
ಬೆತ್ತದಿಂದ ನಿನ್ನನ್ನು ಬಡಿದು,
ತನ್ನ ಕೋಲು, ಐಗುಪ್ತದ ರೀತಿಯಾಗಿ, ನಿನ್ನ ಮೇಲೆ ಎತ್ತ್ಯಾನು.

೨೫ ಆದರೆ ಇನ್ನು ಸ್ವಲ್ಪ ಕಾಲವಾದ ಮೇಲೆ ಉಗ್ರವು ಮುಗಿದಿರುವದು;
ನನ್ನ ಕೋಪವು ಅವರ ನಾಶನದಿಂದ ತೀರುವದು.

೨೬ ಸೈನ್ಯಗಳ ಕರ್ತನು, ಓರೆಬ್ ಬಂಡೆಯ ಬಳಿಯಲ್ಲಿ ಆದ ಮಿದ್ಯಾನಿನ ಹತದ ಪ್ರಕಾರ,
ಅವನ ಮೇಲೆ ಚಬುಕನ್ನು ಎಬ್ಬಿಸುವನು;
ಮತ್ತು ಸಮುದ್ರದ ಮೇಲೆ ಅವನ ಕೋಲಿರುವದು;
ಐಗುಪ್ತದ ರೀತಿಯಾಗಿ ಅದನ್ನು ಎತ್ತುವನು.

೨೭ ಆ ದಿವಸದಲ್ಲಿ ಆಗುವದೇನಂದರೆ—
ಅವನ ಭಾರವು ನಿನ್ನ ಹೆಗಲಿನಿಂದಲೂ,
ಅವನ ನೊಗವು ನಿನ್ನ ಕುತ್ತಿಗೆಯಿಂದಲೂ, ತೊಲಗುವದು;
ತೈಲಾಭಿಷೇಕಕ್ಕೋಸ್ಕರ ನೊಗವು ಒಡೆದು ಹೋಗುವದು.

೨೮ ಅವನು ಆಯಾತಿಗೆ ಬಂದ;
ಮಿಗ್ರೋನನ್ನು ಹಾದು ಹೋದ;
ಮಿಕ್ಮಾಷಿನಲ್ಲಿ ತನ್ನ ಸಾಮಗ್ರಿ ಇಟ್ಟಿದ್ದಾನೆ.

೨೯ ಕಣಿಮೆಯನ್ನು ದಾಟಿದ್ದಾರೆ;
ಗೇಬದಲ್ಲಿ ಇಳಿದಿದ್ದಾರೆ;
ರಾಮ ಅದರುತ್ತದೆ;
ಸೌಲನ ಗಿಬೆಯ ಓಡಿ ಹೋಯಿತು.

೩೦ ಗಲ್ಲೀಮಿನ ಮಗಳೇ, ಧ್ವನಿಯಾಗಿ ಕೂಗು;
ಲೈಷದ ಪರಿಯಂತರಕ್ಕೂ ಕೇಳಿಸು, ಬಡ ಅನತೋಥಳೇ.

೩೧ ಮಬ್ಮೆನ ಓಡಿ ಹೋಯಿತು;
ಗೇಬೀಮಿನ ನಿವಾಸಿಗಳು ಎಲ್ಲಾ ಭದ್ರ ಮಾಡುತ್ತಾರೆ.



೩೨ ಈ ಹೊತ್ತು ನೋಬಿನಲ್ಲಿ ನಿಲ್ಲುವನು;
ಆಗ ಚಿಯೋನ್ ಮಗಳ ಪರ್ವತಕ್ಕೂ,
ಯೆರೂಸಲೇಮಿನ ಗುಡ್ಡಕ್ಕೂ, ವಿರೋಧವಾಗಿ,
ತನ್ನ ಕೈ ಅಲ್ಲಾಡಿಸುವನು.

೩೩ ಇಗೋ ಸೈನ್ಯಗಳ ಯೆಹೋವನೆಂಬ ಕರ್ತನು,
ಭಯಂಕರವಾಗಿ ಕೊಂಬೆಗಳನ್ನೂ ಕೊಯಿದು ಹಾಕುವನು.
ಉದ್ದವಾಗಿ ಬೆಳೆದವರು ಬೀಳುವರು;
ಉನ್ನತವಾದವರು ತಗ್ಗುವರು.

೩೪ ಅಡವಿಯ ಪೊದೆಗಳು ಕಬ್ಬಿಣದಿಂದ ಕಡಿಯಲ್ಪಡುವವು;
ಮತ್ತು ಲೆಬನೋನು ಬಲವಂತನಿಂದ ಬೀಳುವದು.

## ೧೧. ಸಂಧಿ.

೧ ಮತ್ತು ಇಷಾಯನ ಬುಡದಿಂದ ಕೊಂಬೆ ಹೊರಡುವದು;
ಅವನ ಬೇರಿನಿಂದ ಚಿಗುರು ಫಲಿಸುವದು.

೨ ಕರ್ತನ ಆತ್ಮವು,
ಜ್ಞಾನ ಗ್ರಹಿಕೆಗಳ ಆತ್ಮವು,
ಆಲೋಚನೆ ಬಲಗಳ ಆತ್ಮವು,
ತಿಳುವಿಕೆಯ, ಕರ್ತನ ಭಯದ, ಆತ್ಮವು,
ಅವನ ಮೇಲೆ ನಿಲ್ಲುವದು.

೩ ಆದದರಿಂದ ಕರ್ತನ ಭಯದಲ್ಲಿ ಅವನಿಗೆ ಚುರುಕು ಬುದ್ಧಿ ಇರುವದು;
ತನ್ನ ಕಣ್ಣುಗಳ ನೋಟದ ಪ್ರಕಾರ ನ್ಯಾಯ ತೀರಿಸನು;
ತನ್ನ ಕಿವಿಗಳ ಕೇಳ್ವಿಕೆಯ ಪ್ರಕಾರ ತೀರ್ಪು ಮಾಡನು.

೪ ಆದರೆ ಬಡವರಿಗೆ ನೀತಿಯಿಂದ ನ್ಯಾಯ ತೀರಿಸುವನು;
ಭೂಮಿಯ ದೀನರಿಗೆ ಯಥಾರ್ಥದಿಂದ ತೀರ್ಪು ಮಾಡುವನು;
ಭೂಮಿಯನ್ನು ತನ್ನ ಬಾಯಿಯ ಕೋಲಿನಿಂದ ಬಡಿಯುವನು;
ತನ್ನ ತುಟಿಗಳ ಶ್ವಾಸದಿಂದ ದುಷ್ಟನನ್ನು ಸಾಯ ಮಾಡುವನು.

೫ ನೀತಿಯು ಅವನ ಸೊಂಟಗಳ ದಟ್ಟಿಯಾಗಿರುವದು;
ನಂಬಿಕೆಯು ಅವನ ನಡುವುಗಳ ದಟ್ಟಿಯಾಗಿರುವದು.

೬ ಮತ್ತು ತೋಳವು ಕುರಿಯ ಸಂಗಡ ವಾಸ ಮಾಡುವದು;
ಚಿರತೆ ಆಡಿನ ಸಂಗಡ ಮಲಗುವದು;
ಕರುವೂ, ಸಿಂಹದ ಮರಿಯೂ, ಕೊಬ್ಬಿದ ಹೋರಿಯೂ, ಕೂಡ ಇರುವವು;
ಸಣ್ಣ ಹುಡುಗನು ಅವುಗಳನ್ನು ನಡಿಸುವನು.

೭ ಆಕಳು, ಹೆಣ್ಣು ಕರಡಿಯೂ, ಮೇಯುವವು;
ಅವುಗಳ ಮರಿಗಳು ಕೂಡ ಮಲಗುವವು;
ಸಿಂಹವು ಎತ್ತಿನ ಹಾಗೆ ಹುಲ್ಲು ಮೇಯುವದು.

೮ ಮೊಲೆ ಕೂಸು ವಿಷ ಸರ್ಪದ ಹುತ್ತದ ಮೇಲೆ ಆಡುವದು;
ಮೊಲೆ ಬಿಡಿಸಲ್ಪಟ್ಟವನು ಹಾವಿನ ಬಿಲದ ಮೇಲೆ ಕೈ ಹಾಕುವನು.

೯ ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಅವರು ಕೆಡಿಸುವದಿಲ್ಲ;
ನಾಶ ಮಾಡುವದಿಲ್ಲ;
ಯಾಕಂದರೆ, ಸಮುದ್ರವನ್ನು ನೀರು ಮುಚ್ಚುವ ಪ್ರಕಾರ,
ಭೂಮಿಯು ಕರ್ತನ ತಿಳುವಿಕೆಯಿಂದ ತುಂಬಿರುವದು.

೧೦ ಆ ದಿವಸದಲ್ಲಿ ಆಗುವದೇನಂದರೆ—
ಇಷಾಯನ ಬೇರು ಜನರಿಗೆ ಧ್ವಜವಾಗಿ ನಿಲ್ಲುವನು;
ಜನಾಂಗಗಳು ಅವನ ಬಳಿಗೆ ಹುಡುಕಿ ಬರುವರು;
ಅವನ ವಿಶ್ರಾಂತಿ ಮಹಿಮೆಯಾಗಿರುವದು.

೧೧ ಆ ದಿವಸದಲ್ಲಿ ಆಗುವದೇನಂದರೆ—
ಕರ್ತನು ಇನ್ನು ಎರಡನೇ ಸಾರಿ,
ಅಶ್ಶೂರಿನಿಂದಲೂ, ಐಗುಪ್ತದಿಂದಲೂ,
ಪತ್ರೋಸಿನಿಂದಲೂ, ಕೂಷಿನಿಂದಲೂ, ಏಲಾಮಿನಿಂದಲೂ,
ಸೀನಾರಿನಿಂದಲೂ, ಹಾಮಾಥಿನಿಂದಲೂ, ಸಮುದ್ರದ ದ್ವೀಪಗಳಿಂದಲೂ,
ಉಳಿದಿರುವ ತನ್ನ ಜನರ ಉಳುವನ್ನು ಸಂಪಾದಿಸುವ ಹಾಗೆ,
ತನ್ನ ಕೈ ಚಾಚುವನು.

೧೨ ಮತ್ತು ಜನಾಂಗಗಳಿಗೆ ಧ್ವಜವೆತ್ತಿ,
ಇಸ್ರಯೇಲಿನಿಂದ ಕಳ್ಳಿ ಬಿಟ್ಟವರನ್ನು ಕೂಡಿಸುವನು;
ಯೆಹೂದದ ಚದರಿದವರನ್ನು, ಭೂಮಿಯ ನಾಲ್ಕು ಮೂಲೆಗಳಿಂದ, ಒಟ್ಟಿಸುವನು.

೧೩ ಎಫ್ರಾಯಿಮಿನ ಹೊಟ್ಟೆ ಕಿಚ್ಚು ತೊಲಗುವದು;
ಯೆಹೂದದ ಹಿಂಸಕರು ನಿರ್ಮೂಲವಾಗುವರು.
ಎಫ್ರಾಯಿಮು ಯೆಹೂದದ ಮೇಲೆ ಹೊಟ್ಟೆ ಕಿಚ್ಚು ಪಡದು;
ಯೆಹೂದವು ಎಫ್ರಾಯಿಮನ್ನು ಹಿಂಸಿಸದು.

೧೪ ಪಶ್ಚಿಮ ದಿಕ್ಕಿಗೆ ಫಿಲಿಷ್ಟ್ಯರ ಹೆಗಲಿನ ಮೇಲೆ, ಹಾರುವರು;
ಕೂಡಾ ಪೂರ್ವ ದಿಕ್ಕಿನ ಮಕ್ಕಳನ್ನು ಕೊಳ್ಳೆ ಇಡುವರು;
ಎದೋಮಿನ, ಮೋವಾಬಿನ, ಮೇಲೆ, ತಮ್ಮ ಕೈ ಹಾಕುವರು;
ಅಮ್ಮೋನಿನ ಮಕ್ಕಳು ಅವರಿಗೆ ವಿಧೇಯರಾಗಿರುವರು.

೧೫ ಇದಲ್ಲದೆ, ಕರ್ತನು ಐಗುಪ್ತದ ಸಮುದ್ರದ ನಾಲಿಗೆಯನ್ನು ಶುದ್ಧವಾಗಿ ತೆಗೆದು ಹಾಕಿ,
ತನ್ನ ಭಯಂಕರವಾದ ಝಾಳಿಯಿಂದ ತನ್ನ ಕೈಯನ್ನು ನದಿಯ ಮೇಲೆ ಬೀಸಿ,
ಅದನ್ನು ಏಳು ಹಳ್ಳಗಳಾಗ ಬಡಿದು, ಕೆರಗಳು ನೆನೆಯದ ಹಾಗೆ ದಾಟಿಸುವನು.

೧೬ ಮತ್ತು ಇಸ್ರಯೇಲು, ಐಗುಪ್ತ ದೇಶದಿಂದ ಏರಿ ಬಂದ ದಿವಸದಲ್ಲಿ ಅವರಿಗಿದ್ದ ಪ್ರಕಾರ,
ಅಶ್ಶೂರಿನಲ್ಲಿಂದ ಉಳಿದ ಅವನ ಜನರ ಉಳುವಿಗೆ
ರಾಜ ಮಾರ್ಗ ಇರುವದು.

## ೧೨. ಸಂಧಿ.

೧ ಆ ದಿವಸದಲ್ಲಿ ನೀನು ಹೇಳುವದೇನಂದರೆ—
ಕರ್ತನೇ ನಿನ್ನನ್ನು ಹೊಗಳುತ್ತೇನೆ;
ನನ್ನ ಮೇಲೆ ಕೋಪಿಸಿದ್ದಾಗ್ಯು,
ನಿನ್ನ ಕೋಪ ತಿರುಗಿ ಕೊಂಡು, ನನ್ನನ್ನು ಆದರಿಸುತ್ತೀ.

೨ ಇಗೋ ದೇವರೇ ನನ್ನ ರಕ್ಷಣೆಯು;
ನಂಬಿ ಹೆದರೆನು;
ಯಾಕಂದರೆ, ಕರ್ತನಾದ ಯೆಹೋವ, ನನ್ನ ತ್ರಾಣವೂ, ನನ್ನ ಕೀರ್ತನೆಯೂ, ಆಗಿದ್ದಾನೆ;
ಅವನು ನನಗೆ ರಕ್ಷಣೆಯಾದನು.

೩ ಹಾಗಾದರೆ, ಆನಂದವಾಗಿ ರಕ್ಷಣೆಯ ಬುಗ್ಗೆಗಳಿಂದ ನೀರು ಕೇದು ವಿರಿ.

೪ ಮತ್ತು, ಆ ದಿವಸದಲ್ಲಿ ನೀವು ಹೇಳುವದೇನಂದರೆ—
ಕರ್ತನಿಗೆ ಸ್ತೋತ್ರ ಮಾಡಿರಿ;
ಅವನ ಹೆಸರನ್ನು ಸ್ತುತಿಸಿ,
ಜನಗಳಲ್ಲಿ ಅವನ ಕ್ರಿಯೆಗಳನ್ನು ತಿಳಿಸಿರಿ,
ಅವನ ಹೆಸರು ಉನ್ನತವೆಂದು ನೆನಪಿಗೆ ತರ್ರಿ.
೫ ಕರ್ತನನ್ನು ಕೊಂಡಾಡಿರಿ;
ಯಾಕಂದರೆ, ಮಹತ್ತನ್ನು ಮಾಡಿದ್ದಾನೆ;
ಇದು ಸಮಸ್ತ ಭೂಮಿಯಲ್ಲಿ ತಿಳಿದಿರಲಿ.
೬ ಚಿಯೋನಿನ ನಿವಾಸಿಯೇ! ಅರ್ಭಟಿಸಿ, ಜಯ ಧ್ವನಿ ಮಾಡು;
ಯಾಕಂದರೆ, ಇಸ್ರಯೇಲಿನ ಪರಿಶುದ್ಧನು ನಿನ್ನ ಮಧ್ಯದಲ್ಲಿ
ದೊಡ್ಡವನು.

## ೧೩. ಸಂಧಿ.

೧ ಆಮೋಸನ ಮಗನಾದ ಯೆಶಾಯನು ಕಂಡ ಬಾಬೆಲಿನ
ಭಾರವು.

೨ ಬೋಳ ಗುಡ್ಡದ ಮೇಲೆ ಧ್ವಜ ನಿಲ್ಲಿಸಿರಿ;
ಅವರಿಗೆ ಶಬ್ದವನ್ನೆತ್ತಿರಿ;
ಅವರು ಅಧಿಪತಿಗಳ ದ್ವಾರಗಳಿಗೆ ಬರುವ ಹಾಗೆ,
ಅವರಿಗೆ ಕೈ ಬೀಸಿರಿ.
೩ ನನ್ನ ಪರಿಶುದ್ಧರಿಗೆ ನಾನು ಆಜ್ಞಾಪಿಸಿದ್ದೇನೆ;
ನನ್ನ ಬಲಿಷ್ಠರನ್ನೂ, ಉಲ್ಲಾಸಿಸುವ ನನ್ನ ಗರ್ವಿಷ್ಠರನ್ನೂ,
ನನ್ನ ಕೋಪಕ್ಕೆ ಕಳಿದಿದ್ದೇನೆ.
೪ ಪರ್ವತಗಳಲ್ಲಿ ಸಂದಣಿಯ ಶಬ್ದವು, ಬಹು ಜನರಂತಿರುವದು;
ಕೂಡಿದ ಜನಾಂಗಗಳ ರಾಜ್ಯಗಳ ಘೋಷದ ಶಬ್ದವು;
ಸೈನ್ಯಗಳ ಕರ್ತನು ಯುದ್ಧಕ್ಕೆ ಸೈನ್ಯವನ್ನು ಸಿದ್ಧ ಮಾಡು
ತ್ತಾನೆ.
೫ ಕರ್ತನೂ, ಅವನ ಕೋಪದ ಆಯುಧಗಳೂ,
ದೂರ ದೇಶದಿಂದಲೂ, ಆಕಾಶದ ಅಂತ್ಯದಿಂದಲೂ,
ದೇಶವನ್ನೆಲ್ಲಾ ಹಾಳು ಮಾಡುವದಕ್ಕೆ ಬರುತ್ತಾರೆ

೬ ಗೋಳಾಡಿರಿ! ಯಾಕಂದರೆ, ಕರ್ತನ ದಿವಸ ಸಮೀಪವಾಗಿದೆ;
ಸರ್ವ ಶಕ್ತನಿಂದ ಸೂರೆಯ ಹಾಗೆ ಬರುವದು.
೭ ಆದದರಿಂದ ಕೈಗಳೆಲ್ಲಾ ಜೋಲುವವು;
ಮನುಷ್ಯರ ಹೃದಯಗಳೆಲ್ಲಾ ಕರಗುವವು.
೮ ದಿಗಲು ಪಡುವರು;
ನೋವುಗಳೂ, ಬೇನೆಗಳೂ, ಅವರನ್ನು ಹಿಡುಕೊಳ್ಳುವವು;
ಹೆರುವವಳಂತೆ ವ್ಯಥೆ ಪಡುವರು;
ಒಬ್ಬರಿಗೊಬ್ಬರು ಭ್ರಮೆ ಪಡುವರು;
ಅವರ ಮುಖಗಳು ಉರಿ ಮುಖಗಳೇ.

೯ ಇಗೋ ಕರ್ತನ ದಿವಸವು ಬರುತ್ತದೆ;
ಅದು ಕ್ರೂರವಾಗಿದೆ; ಉಗ್ರವೂ, ಕೋಪಾಗ್ನಿಯೂ, ಉ
ಳ್ಳದ್ದು;
ದೇಶವನ್ನು ಹಾಳಾಗಿ ಇಡಲಿಕ್ಕಾಗಿದೆ;
ಅದರ ಪಾಪಿಗಳನ್ನು ಅದರಿಂದ ನಾಶ ಮಾಡುವನು.
೧೦ ಯಾಕಂದರೆ, ಆಕಾಶದ ನಕ್ಷತ್ರಗಳೂ, ಅದರ ರಾಶಿಗಳೂ, ತ
ಮ್ಮ ಬೆಳಕು ಹೊಳಿಸುವದಿಲ್ಲ;
ಸೂರ್ಯನು ಹೊರಡುವಾಗ, ಕತ್ತಲಾಗುವನು;
ಚಂದ್ರನು, ತನ್ನ ಬೆಳಕು ಕಳೆ ಕೊಡುವದಿಲ್ಲ.
೧೧ ಮತ್ತು ಭೂಲೋಕದ ಮೇಲೆ ಕೇಡನ್ನೂ,
ದುಷ್ಟರ ಮೇಲೆ ಅವರ ಅಕ್ರಮವನ್ನೂ, ವಿಚಾರಿಸುತ್ತೇನೆ;
ಗರ್ವಿಷ್ಠರ ಅಹಂಕಾರವನ್ನು ನಿಲ್ಲಿಸುತ್ತೇನೆ;
ಬಲಿಷ್ಠರ ಡಂಭವನ್ನು ತಗ್ಗಿಸುತ್ತೇನೆ.
೧೨ ಮನುಷ್ಯನನ್ನು ಕುಂದಣಕ್ಕಿಂತಲೂ,
ನರರನ್ನು ಓಫಿರ್ ಭಂಗಾರಕ್ಕಿಂತಲೂ,
ಪ್ರಿಯ ಮಾಡುತ್ತೇನೆ.
೧೩ ಆದದರಿಂದ, ಸೈನ್ಯಗಳ ಕರ್ತನ ಉಗ್ರಥಲ್ಲಿಯೂ,
ಅವನ ಕೋಪಾಗ್ನಿಯ ದಿವಸದಲ್ಲಿಯೂ,
ಆಕಾಶವನ್ನು ಕದಲಿಸುವೆನು;
ಭೂಮಿಯು ಅದರ ಸ್ಥಳದಿಂದ ಅದುರುವದು;
೧೪ ಮತ್ತು ಅಟ್ಟಿದ ಜಿಂಕೆಯಂತೆಯೂ,
ಯಾರೂ ಕೂಡಿಸದ ಕುರಿಗಳಂತೆಯೂ, ಇರುವರು;
ಪ್ರತಿ ಮನುಷ್ಯನು ತನ್ನ ಜನಕ್ಕೆ ತಿರುಗಿ,
ಪ್ರತಿ ಮನುಷ್ಯನು ತನ್ನ ದೇಶಕ್ಕೆ ಓಡುವನು.
೧೫ ಸಿಕ್ಕಿದವಕೆಲ್ಲರು ತಿವಿಯಲ್ಪಟ್ಟಿರುವರು;
ಅವರನ್ನು ಹೊಂದಿದವರೆಲ್ಲರು ಕತ್ತಿಯಿಂದ ಬೀಳುವರು.
೧೬ ಅವರ ಕೂಸುಗಳು, ಅವರ ಕಣ್ಣುಗಳ ಮುಂದೆ ನಜ್ಜು ಗುಜ್ಜಾ
ಗುವವು;
ಅವರ ಮನೆಗಳು, ಕೊಳ್ಳೆಯಾಗುವವು;
ಅವರ ಹೆಂಡರು, ಕೆಡಿಸಲ್ಪಟ್ಟಿರುವರು.
೧೭ ಇಗೋ, ಅವರ ಮೇಲೆ ಮೇದ್ಯರನ್ನು ಎಬ್ಬಿಸುತ್ತೇನೆ;
ಅವರು ಬೆಳ್ಳಿ ಎಣಿಸುವದಿಲ್ಲ;
ಭಂಗಾರವಾದರೆ, ಅದಕ್ಕೆ ಮೆಚ್ಚುವದಿಲ್ಲ.
೧೮ ಅವರ ಬಿಲ್ಲುಗಳು, ಯಾವನಸ್ಥರನ್ನು ನಜ್ಜು ಗುಜ್ಜು ಮಾ
ಡುವವು;
ಗರ್ಭದ ಫಲವನ್ನು ಕರುಣಿಸರು;
ಮಕ್ಕಳ ಮೇಲೆ ಅವರ ಕಣ್ಣು ಕನಿಕರ ಪಡುವದಿಲ್ಲ.

೧೯ ಮತ್ತು, ರಾಜ್ಯಗಳ ಅಲಂಕಾರವೂ,
ಶಸ್ದೀಯರ ಅಹಂಕಾರದ ಭೂಷಣೆಯೂ,
ಆದ ಬಾಬೆಲು,
ದೇವರು ಸೊದೊಮ್ ಗಮೋರಗಳನ್ನು ನಾಶ ಮಾಡಿದ ಹಾ
ಗಾಗುವದು.
೨೦ ಎಂದೆಂದಿಗೂ ಅದರಲ್ಲಿ ಒಕ್ಕಲುತನವಿರದು;
ತಲ ತಲಾಂತರಗಳಿಗೂ ಅದು ವಾಸಸ್ಥಳವಾಗುವದಿಲ್ಲ;
ಅರಬಿಯು ಅಲ್ಲಿ ಗುಡಾರ ಹಾಕನು;
ಕುರುಬರು ಅಲ್ಲಿ ಇಳುಕೊಳ್ಳರು.
೨೧ ಕಾಡು ಮೃಗಗಳು ಅಲ್ಲಿ ಮಲಗುವವು;
ಅವರ ಮನೆಗಳಲ್ಲಿ ಗೂಬೆಗಳು ತುಂಬುವವು;
ಉಷ್ಟ್ರಪಕ್ಷಿಗಳು ಅಲ್ಲಿ ವಾಸಿಸುವವು;
ಪಿಶಾಚಿಗಳು ಅಲ್ಲಿ ಕುಣಿದಾಡುವವು



೨೨ ಅದರ ಅರಮನೆಗಳಲ್ಲಿ ನರಿಗಳೂ,
ವೈಭವದ ಮಂದಿರಗಳಲ್ಲಿ ಕೀಳ ನಾಯಿಗಳೂ, ಕೂಗುವವು;
ಅದರ ಕಾಲ ಬರ ಸಮೀಪವಾಯಿತು;
ಅದರ ದಿವಸಗಳು ವೃದ್ಧಿಯಾಗುವದಿಲ್ಲ.

## ೧೪. ಸಂಧಿ.

೧ ಯಾಕಂದರೆ, ಕರ್ತನು ಯಾಕೋಬನ್ನು ಕರುಣಿಸಿ,
ಇಸ್ರಯೇಲನ್ನು ಇನ್ನೂ ಆರಿಸಿ ಕೊಂಡು,
ಅವರಿಗೆ ತಮ್ಮ ದೇಶದಲ್ಲಿ ವಿಶ್ರಾಂತಿ ಕೊಡುವನು;
ಮತ್ತು, ಅನ್ಯರು ಅವರನ್ನು ಕಲತು,
ಯಾಕೋಬನ ಮನೆಯ ಸಂಗಡ ಕೂಡುವರು.
೨ ಮತ್ತು, ಜನಗಳು ಅವರನ್ನು ತೆಗೆದು ಕೊಂಡು,
ತಮ್ಮ ಸ್ಥಳಕ್ಕೆ ಅವರನ್ನು ಬರ ಮಾಡುವರು.
ಮತ್ತು, ಇಸ್ರಯೇಲನ ಮನೆಯು ಅವರನ್ನು ಕರ್ತನ ದೇಶದಲ್ಲಿ,
ದಾಸರಾಗಿಯೂ, ದಾಸಿಗಳಾಗಿಯೂ, ಸ್ವತಂತ್ರಿಸಿ ಕೊಳ್ಳುವದು;
ಮತ್ತು, ತಮ್ಮನ್ನು ಕೆಡೆ ಹಿಡಿದವರನ್ನು ಕೆಡೆ ಹಿಡಿಯುವರು,
ತಮ್ಮನ್ನು ಪೀಡಿಸಿದವರನ್ನು ಅಣಗಿಸುವರು.

೩ ಮತ್ತು, ಕರ್ತನು ನಿನ್ನ ಬೇನೆಯಿಂದಲೂ, ನಿನ್ನ ವ್ಯಥೆಯಿಂ
ದಲೂ,
ನೀನು ದಾಸನಾಗಿದ್ದ ಕಷ್ಟವಾದ ನಿನ್ನ ದಾಸತ್ವದಿಂದಲೂ,
ನಿನ್ನನ್ನು ಶಾಂತಿ ಪಡಿಸುವ ದಿವಸದಲ್ಲಿ,
೪ ಬಾಬೆಲಿನ ಅರಸನ ಮೇಲೆ ಈ ಸಾಮಿತಿ ಎತ್ತುವಿ;
ಏನಂದರೆ—ಪೀಡಿಸುವವನು ಹ್ಯಾಗೆ ಸುಮ್ಮನೇ ಇದ್ದಾನೆ;
ಭಂಗಾರವಾದಾರಿ ಸುಮ್ಮನೇ ಅದೆ.
೫ ಕರ್ತನು ದುಷ್ಟರ ಬೆತ್ತವನ್ನೂ,
ಆಳುವವರ ಕೋಲನ್ನೂ, ಮುರಿದಿದ್ದಾನೆ.
೬ ಉಗ್ರದಿಂದ ಜನರನ್ನು,
ಕಡೆಯಿಲ್ಲದ ಬಡಿತದಿಂದ ಬಡಿದು,
ಕೋಪದಿಂದ ಜನಾಂಗಗಳನ್ನು,
ಕರುಣೆ ಇಲ್ಲದ ಹಿಂಸೆಯಿಂದ ತುಳಿದವನನ್ನೇ.
೭ ಭೂಮಿ ಎಲ್ಲಾ ಶಾಂತವಾಗಿ ವಿಶ್ರಮಿಸಿ ಕೊಳ್ಳುತ್ತದೆ;
ಉತ್ಸಾಹ ಧ್ವನಿಯನ್ನು ಎತ್ತುತ್ತಾರೆ.
೮ ಬೇಕೋಷ್ ಮರಗಳೂ, ಲೆಬನೋನಿನ ದೇವದಾರುಗಳೂ ಸಹ,
ನಿನ್ನನ್ನು ಕುರಿತು ಸಂತೋಷ ಪಡುತ್ತವೆ;
ನೀನು ಬಿದ್ದಂದಿನಿಂದ,
ಕಡಿಯುವವನು ನಮ್ಮ ಮೇಲೆ ಏರಲಿಲ್ಲವೆಂದು ಅನ್ನುತ್ತವೆ.

೯ ನಿನ್ನಗೋಸ್ಕರ, ನಿನ್ನ ಬರೋಣವನ್ನು ಎದುರುಗೊಳ್ಳ
ಲಿಕ್ಕೆ,
ಪಾತಾಳವು ಕೆಳಗಿನಿಂದ ಗುಲ್ಲು ಮಾಡುತ್ತದೆ;
ಪ್ರೇತ್ರಗಳನ್ನೂ, ಭೂಮಿಯ ಎಲ್ಲಾ ಮಧ್ಯಸ್ಥರನ್ನೂ, ನಿನ್ನಗೋ
ಸ್ಕರ ಎಚ್ಚರಿಸಿ,
ಜನಾಂಗಗಳ ಎಲ್ಲಾ ಅರಸುಗಳನ್ನು ತಮ್ಮ ಸಿಂಹಾಸನಗಳಿಂದ
ಎಬ್ಬಿಸುತ್ತದೆ.
೧೦ ಅವರೆಲ್ಲರು ಶಬ್ದವನ್ನೆತ್ತಿ, ನಿನಗೆ ಹೇಳುವರು—
ನೀನು ಸಹಾ ನಮ್ಮ ಹಾಗೆ ಬಲಹೀನನಾದಿಯೋ!
ನಮಗೆ ಸಮಾನವಾದಿಯೋ!
೧೧ ನಿನ್ನ ಅಟ್ಟಹಾಸವೂ, ನಿನ್ನ ವೀಣೆಗಳ ಸ್ವರವೂ, ಪಾತಾಳಕ್ಕೆ
ಇಳಿಸಲ್ಪಟ್ಟವೆ;
ನಿನ್ನ ಕೆಳಗೆ ಕೊಳ್ಳಕು ಹಾಸಿ ಅವೆ;
ನಿನ್ನ ಮುಚ್ಚಳವು ಹುಳವೇ.
೧೨ ಉದಯದ ಮಗನಾದ ಶುಕ್ರನೇ!
ಆಕಾಶದಿಂದ ಹ್ಯಾಗೆ ಬಿದ್ದಿದ್ದೀ.
ಜನಾಂಗಗಳನ್ನು ಜೈಸಿದವನೇ!
ಭೂಮಿಗೆ ಹ್ಯಾಗೆ ಕಡಿಯಲ್ಪಟ್ಟಿದ್ದೀ.
೧೩ ನೀನಾದರೆ, ನಿನ್ನ ಹೃದಯದಲ್ಲಿ—
ಆಕಾಶಕ್ಕೆ ಏರಿ, ದೇವರ ನಕ್ಷತ್ರಗಳ ಮೇಲೆ ನನ್ನ ಸಿಂಹಾಸನವನ್ನು
ಇಡುತ್ತೇನೆ,
ಉತ್ತರದ ಪರ್ವ್ವತಗಳಲ್ಲಿರುವ ಕೂಟದ ಪರ್ವತದಲ್ಲಿ ಕೂತು
ತ್ತೇನೆ.
೧೪ ಉನ್ನತವಾದ ಮೇಘಗಳ ಮೇಲೆ ಏರಿ, ಮಹೋನ್ನತನಿಗೆ ಸಮಾ
ನವಾಗುತ್ತೇನೆ, ಎಂದು ಹೇಳ್ದಿ.
೧೫ ಹಾಗಲ್ಲ! ಪಾತಾಳಕ್ಕೆ, ಕುಣಿಯ ಪಾರ್ಶ್ವಗಳಿಗೆ, ಇಳಿಸಲ್ಪಟುವಿ.
೧೬ ನಿನ್ನನ್ನು ನೋಡುವವರು ನಿನ್ನನ್ನು ದೃಷ್ಟಿಸಿ,
ನಿನ್ನನ್ನು ಧ್ಯಾನಿಸಿ, ಹೇಳುವದೇನಂದರೆ—
ಭೂಮಿಯನ್ನು ಅಲುಕಿಸಿ, ರಾಜ್ಯಗಳನ್ನು ನಡುಗಿಸಿ,
೧೭ ಭೂಮಂಡಲವನ್ನು ಅರಣ್ಯ ಮಾಡಿ,
ಅದರ ಪಟ್ಟಣಗಳನ್ನು ಹಾಳು ಮಾಡಿ,
ಅದರ ಕೆಡೆಯವರನ್ನು ಮನೆಗೆ ಬಿಡದ, ಮನುಷ್ಯನಿವನೇ!
೧೮ ಜನಾಂಗಗಳ ಅರಸುಗಳೆಲ್ಲಾ, ಅವರೆಲ್ಲರೇ,
ಮಹಿಮೆಯಿಂದ ತಮ್ಮ ತಮ್ಮ ಮನೆಗಳಲ್ಲಿ ಮಲಗುತ್ತಾರೆ.
೧೯ ಆದರೆ ನೀನು, ಉದಾಸೀನವಾದ ಕೊಂಬೆಯಂತೆಯೂ,
ಕೊಂದು ಹಾಕಿದವರ, ಕತ್ತಿಯಿಂದ ತಿವಿದವರ,
ಸಮಾಧಿಯ ಕಲ್ಲುಗಳ ಬಳಿಗೆ ಇಳಿಯುವವರ, ವಸ್ತ್ರದಂತೆಯೂ,
ತುಳಿಯಲ್ಪಟ್ಟ ಹೆಣದಂತೆಯೂ,
ನಿನ್ನ ಸಮಾಧಿಯೊಳಗಿಂದ ಹೊರಗೆ ಹಾಕಲ್ಪಟ್ಟಿದ್ದೀ.
೨೦ ಅವರ ಸಂಗಡ ಹೂಣಿಸುವಿಕೆಯಲ್ಲಿ ನೀನು ಕೂತಿಡೆ ಇರುವಿ,
ಯಾಕಂದರೆ, ನಿನ್ನ ದೇಶವನ್ನು ನಾಶ ಮಾಡಿ, ನಿನ್ನ ಜನರನ್ನು
ಕೊಂದು ಹಾಕಿದಿ;
ಕೆಟ್ಟವರ ಸಂತಾನವು ಎಂದೆಂದಿಗೂ ಹೆಸರು ಹೊಂದುವದಿಲ್ಲ.
೨೧ ಅವರು ಎದ್ದು, ಭೂಮಿಯನ್ನು ಸ್ವತಂತ್ರಿಸಿಕೊಂಡು,
ಭೂಮುಖವನ್ನು ಪಟ್ಟಣಗಳಿಂದ ತುಂಬಿಸದ ಹಾಗೆ ಅವರ ತಂದೆಗಳ
ಅಪರಾಧದ ನಿಮಿತ್ತ,
ಅವರ ಮಕ್ಕಳಿಗೆ ಕೊಲೆ ಸಿದ್ಧ ಮಾಡಿರಿ.
೨೨ ಯಾಕಂದರೆ, ನಾನು ಅವರ ಮೇಲೆ ಏಳುತ್ತೇನೆಂದು ಸೈನ್ಯಗಳ
ಕರ್ತನು ಹೇಳುತ್ತಾನೆ;
ಹೆಸರನ್ನೂ, ಉಳುವನ್ನೂ, ಮಗನನ್ನೂ, ಮೊಮ್ಮಗನನ್ನೂ,
ಬಾಬೆಲಿನಿಂದ ನಿರ್ಮೂಲ ಮಾಡುತ್ತೇನೆಂದು, ಯೆಹೋ
ವನು ಹೇಳುತ್ತಾನೆ.
೨೩ ಅದನ್ನು ಮುಳ್ಳು ಹಂದಿಗೆ ಬಾಧ್ಯವಾಗಿಯೂ, ನೀರಿನ ಕೂಟಗಳಾ
ಗಿಯೂ ಮಾಡಿ,

ಹಾಳಿನ ಕಗಬರಿಗೆಯಿಂದ ಗುಡಿಸುತ್ತೇನೆಂದು, ಸೈನ್ಯಗಳ ಕರ್ತನು ಹೇಳುತ್ತಾನೆ.

೨೪ ಸೈನ್ಯಗಳ ಕರ್ತನು ಆಣೆ ಇಟ್ಟದ್ದೇನಂದರೆ—
ನಾನು ನೆನಸಿದ ಪ್ರಕಾರ ಆಗದೇ?
ನಾನು ಆಲೋಚಿಸಿದ ಪ್ರಕಾರ ನಿಲ್ಲದೇ?
೨೫ ಏನಂದರೆ, ಅಶ್ಶೂರನನ್ನು ನನ್ನ ದೇಶದಲ್ಲಿ ಮುರಿದು ಬಿಡುತ್ತೇನೆ;
ನನ್ನ ಪರ್ವತಗಳ ಮೇಲೆ ಅವನನ್ನು ತುಳಿದು ಬಿಡುತ್ತೇನೆ;
ಆಗ ಅವನ ನೊಗವು ಅವರ ಮೇಲಿನಿಂದ ತೊಲಗಿ,
ಅವನ ಭಾರವು ಅವರ ಬೆನ್ನಿನ ಮೇಲಿನಿಂದ ತೊಲಗುವದು.
೨೬ ಸಮಸ್ತ ಭೂಮಿಯ ವಿಷಯ ಆಲೋಚಿಸಿದ ಆಲೋಚನೆ ಇದೇ;
ಎಲ್ಲಾ ಜನಾಂಗಗಳ ಮೇಲೆ ಚಾಚಿದ ಕೈಯು ಇದೇ.
ಯಾಕಂದರೆ, ಸೈನ್ಯಗಳ ಕರ್ತನು ಆಲೋಚಿಸಿದ್ದಾನೆ;
ನಿರಾಕರಿಸುವವನ್ಯಾರು!
ಅವನ ಕೈ ಚಾಚಿ ಅದೆ;
ಅದನ್ನು ತಿರುಗಿಸುವವನ್ಯಾರು!

೨೭ ಅರಸನಾದ ಆಹಜನು ಸತ್ತ ವರುಷದಲ್ಲಿ ಈ ಭಾರವಾಯಿತು.

೨೯ ಸಮಸ್ತ ಫಿಲಿಷ್ಟ್ಯವೇ! ನಿನ್ನನ್ನು ಹೊಡೆದವನ ಕೋಲು ಮುರಿದದರಿಂದ ಸಂತೋಷಿಸ ಬೇಡ;
ಯಾಕಂದರೆ, ಸರ್ಪದ ಬೇರಿನಿಂದ ಹಾವು ಹುಟ್ಟುವದು;
ಅದರ ಫಲವು ಹಾರುವ ಅಗ್ನಿ ಸರ್ಪವೇ.
೩೦ ಆಗ ದೀನರ ಜೊಚ್ಚಲಗಳು ಮೇಯುವವು;
ಬಡವರು ಭದ್ರವಾಗಿ ಮಲಗುವರು;
ಆದರೆ ನಿನ್ನ ಬೇರನ್ನು ಬರದಿಂದ ಸಾಯಿಸುವೆನು;
ನಿನ್ನ ಉಳಿವನ್ನು ಕೊಲ್ಲುವರು.
೩೧ ದ್ವಾರವೇ! ಹುಯಿಲಿಡು. ಪಟ್ಟಣವೇ! ಮೊರೆಯಿಡು.
ಸಮಸ್ತ ಫಿಲಿಷ್ಟ್ಯವೇ! ಕುದ್ಧವಾಗಿ ಕರಗಿ ಹೋಗಿದ್ದೀ.
ಯಾಕಂದರೆ, ಉತ್ತರದಿಂದ ಹೊಗೆ ಬರುವದು;
ಅವನ ಸೈನ್ಯಗಳಲ್ಲಿ ಒಂಟಿಗನು ಇರುವದಿಲ್ಲ.
೩೨ ಆಗ ಜನಾಂಗಗಳ ದೂತರಿಗೆ ಯಾವ ಉತ್ತರ ಕೊಡುವರು?
ಯೆಹೋವ, ಚಿಯೋನನ್ನು ಸ್ಥಾಪಿಸಿದ್ದಾನೆ,
ಅವನ ಜನರ ದೀನರು ಅದರಲ್ಲಿ ಆಶ್ರಯ ಮಾಡಿ ಕೊಳ್ಳುತ್ತಾರೆ,
ಎಂಬುವದನ್ನೇ.

## ೧೫. ಸಂಧಿ.

೧ ಮೋವಾಬಿನ ಭಾರವು.

ರಾತ್ರಿಯಲ್ಲಿ, ಆರ್ ಮೋವಾಬು ಹಾಳಾಗಿ ಲಯವಾಗುತ್ತದೆ;
ರಾತ್ರಿಯಲ್ಲಿ, ಕಿರ್ ಮೋವಾಬು ಹಾಳಾಗಿ ಲಯವಾಗುತ್ತದೆ.
೨ ಬಾಯಿತಿಗೂ, ದೀಬೋನಿಗೂ, ಮೇಡುಗಳಿಗೆ, ಗೋಳಾಡುವದಕ್ಕೆ ಹೋಗುತ್ತಾರೆ;
ನೀಬೋಯಿನ ಮೇಲೆಯೂ, ಮೆದೀಬದ ಮೇಲೆಯೂ, ಮೋವಾಬು ಹುಯಿಲಿಡುತ್ತದೆ;
ಅವರ ತಲೆಗಳೆಲ್ಲಾ ಬೋಳು;
ಗಡ್ಡಗಳೆಲ್ಲಾ ಕೊಯಿದು ಬಿಟ್ಟಿವೆ.
೩ ಅವರ ಬೀದಿಗಳಲ್ಲಿ ಗೋಣಿ ತಟ್ಟು ಕಟ್ಟಿ ಕೊಳ್ಳುತ್ತಾರೆ;
ಅವರ ಮಾಳಿಗೆಗಳ ಮೇಲೆಯೂ, ಅವರ ಚೌಕಗಳಲ್ಲಿಯೂ,
ಎಲ್ಲರು ಹುಯಿಲಿಡುತ್ತಾ, ಗೋಳಾಟದಿಂದ ಇಳಿಯುತ್ತಾರೆ.
೪ ಹೆಷ್ಬೋನೂ, ಎಲೆಯಾಳೆಯೂ, ಕೂಗುತ್ತವೆ;
ಯಹಾಚಿನ ವರೆಗೂ ಅವುಗಳ ಶಬ್ದ ಕೇಳಲ್ಪಡುತ್ತದೆ.
ಆದದರಿಂದ, ಮೋವಾಬಿನ ಯುದ್ಧಸ್ಥರು ಮೊರೆ ಇಡುವರು;
ಅವನ ಪ್ರಾಣವು ಅವನಲ್ಲಿ ನಡುಗುತ್ತದೆ.
೫ ನನ್ನ ಹೃದಯವು ಮೋವಾಬಿನ ನಿಮಿತ್ತ ಕೂಗುತ್ತದೆ;
ಅದರಲ್ಲಿಂದ ಓಡಿ ಹೋದವರು, ಜೋವಾರ್, ಎಗ್ಲಾತ್ ಶೆಲೀಷಿಯದ ಪರ್ಯಂತರ ಬಂದಿದ್ದಾರೆ;
ಯಾಕಂದರೆ, ಲೂಹಿತದ ಘಟ್ಟವನ್ನು ಅಳುತ್ತಾ ಏರುತ್ತಾರೆ;
ಹೊರನಾಯಿಮಿನ ಮಾರ್ಗದಲ್ಲಿ ಕೊಳ್ಳೆಯ ಕೂಗನ್ನು ಎತ್ತುತ್ತಾರೆ.
೬ ಯಾಕಂದರೆ, ನಿಮ್ರಿಮಿನ ನೀರು ಹಾಳಾಯಿತು;
ಹುಲ್ಲು ಬಾಡಿ ಹೋಯಿತು, ಪಲ್ಯವು ಮುಗಿಯಿತು;
ಹಸುರಾದದ್ದು ಏನು ಇಲ್ಲ.
೭ ಆದದರಿಂದ, ದುಡಿದ ಬದುಕನ್ನೂ, ಅವರ ಸಂಪತ್ತನ್ನೂ,
ನೀರವಂಜಿ ಮರಗಳ ಹಳ್ಳದ ಆಚೆಗೆ ಮೈಯುತ್ತಾರೆ.
೮ ಯಾಕಂದರೆ, ಕೂಗು ಮೋವಾಬಿನ ಮೇರೆಗಳನ್ನು ಸುತ್ತುತ್ತದೆ;
ಎಗ್ಲಾಯಿಮಿನ ವರೆಗೆ ಅದರ ಹುಯಿಲೂ,
ಮತ್ತು, ಬೇಯೆರ್ ಎಲೀಮಿನ ವರೆಗೆ ಅದರ ಹುಯಿಲೂ, ಕೇರುತ್ತದೆ.
೯ ಯಾಕಂದರೆ, ದಿಮೋನಿನ ನೀರು ರಕ್ತ ತುಂಬಿ ಅದೆ;
ಆದರೆ ದಿಮೋನಿನ ಮೇಲೆ ಹೆಚ್ಚಾದದ್ದನ್ನು ತರುವೆನು;
ಮೋವಾಬಿನಲ್ಲಿ ತಪ್ಪಿಸಿ ಕೊಂಡವರ ಮೇಲೆಯೂ,
ದೇಶದಲ್ಲಿ ಉಳಿದವರ ಮೇಲೆಯೂ, ಸಿಂಹವನ್ನು ಬರ ಮಾಡುವೆನು.

## ೧೬. ಸಂಧಿ.

೧ ದೇಶವನ್ನು ಆಳುವವನಿಗೆ ಕುರಿ ಮರಿಯನ್ನು,
ಸೇಲದಿಂದ ಅರಣ್ಯದ ಕಡೆಗೆ,
ಚಿಯೋನಿನ ಮಗಳ ಬೆಟ್ಟಕ್ಕೆ, ಕಳುಹಿಸಿರಿ.
೨ ಗೂಡಿನಿಂದ ಹೊರಗಾಗಿ ಓಡುವ ಹಕ್ಕಿಯ ಹಾಗೆ,
ಮೋವಾಬಿನ ಕುಮಾರ್ತೆಗಳು ಅರ್ನೋನ್ ದಾಟುವಲ್ಲಿ ಇರುವರು.
೩ ಆಲೋಚನೆ ತಂದು ಕೊಳ್ಳಿರಿ; ನ್ಯಾಯ ತೀರಿಸಿರಿ;
ಮಧ್ಯಾಹ್ನದಲ್ಲಿ ನಿನ್ನ ನೆರಳು ರಾತ್ರಿಯಂತೆ ಮಾಡು;
ತಳ್ಳಿ ಬಿಟ್ಟವರನ್ನು ಅಡಗಿಸು;
ಓಡಿ ಬಂದವನನ್ನು ತೋರಿಸದೆ ಇರು;
೪ ಮೋವಾಬೇ! ನನ್ನಿಂದ ತಳ್ಳಿ ಬಿಟ್ಟವರು ನಿನ್ನಲ್ಲಿ ವಾಸ ಮಾಡಲಿ.
ನಾಶನ ಮಾಡುವವನ ಕಡೆಯಿಂದ ಅವರಿಗೆ ಮರೆಯಾಗಿರು;
ಯಾಕಂದರೆ, ಪೀಡೆಗಾರನು ತೀರುತ್ತಾನೆ.
ಹಾಳು ಮುಗಿಯುವದು;
ತುಳಿಯುವವರು ಭೂಮಿಯಿಂದ ಲಯವಾಗುತ್ತಾರೆ.



೫ ನಿಂಪಾಸನವು ಕೃಪೆಯಿಂದ ಸ್ಥಾಪಿಸಲ್ಪಡುವದು;
ನ್ಯಾಯ ತೀರಿಸುವವನೂ, ನ್ಯಾಯ ಹುಡುಕುವವನೂ, ನೀತಿಗೆ ತ್ವರೆ ಪಡುವವನೂ,
ದಾವೀದನ ಗುಡಾರದಲ್ಲಿ, ಅದರ ಮೇಲೆ ಸತ್ಯದಿಂದ, ಕೂತುಕೊಳ್ಳುವನು.

೬ ಮೋವಾಬಿನ ಗರ್ವವನ್ನು ಕುರಿತು ಕೇಳಿದ್ದೇವೆ;
ಅದಕ್ಕೆ ಬಹಳ ಗರ್ವ ಉಂಟು;
ಅದರ ಅಹಂಕಾರವೂ, ಗರ್ವವು ವ್ಯರ್ಥವಾದ ಹರಟೆಗಳು.
೭ ಆದದರಿಂದ, ಮೋವಾಬಿನ ನಿಮಿತ್ತ ಮೋವಾಬು ಹುಯಿಲಿಡುವದು;
ಅದೆಲ್ಲಾ ಹುಯಿಲಿಡುವದು;
ಕಿರ್ಹರೆಶೇತಿನ ಹಾಳು ಸ್ಥಳಗಳ ನಿಮಿತ್ತ,
ಪೂರ್ಣ ದುಃಖಾಕ್ರಾಂತರಾಗಿ ದುಃಖಿಸುವಿರಿ.
೮ ಯಾಕಂದರೆ, ಹೆಷ್ಬೋನಿನ ಹೊಲಗಳು ಬಾಡಿ ಹೋಗವೆ;
ಸಿಬ್ಮದ ದ್ರಾಕ್ಷೇ ಗಿಡವಾದರೆ,
ಜನಾಂಗಗಳ ಪ್ರಭುಗಳು ಅದರ ಬಳ್ಳಿಗಳನ್ನು ಮುರಿದು ಹಾಕಿದ್ದಾರೆ;
ಅದರ ಕೊಂಬೆಗಳು ಯಾಜೇರಿನ ವರೆಗೂ ಮುಟ್ಟಿ, ಅರಣ್ಯದಲ್ಲಿ ಹಬ್ಬಿ ಇದ್ದವು;
ವಿಸ್ತಾರವಾಗಿ ಸಮುದ್ರವನ್ನು ಹಾದು ಹೋದವು.
೯ ಆದದರಿಂದ, ಯಾಜೇರಿನ ಅಳುವಿಕೆಯಿಂದ ಸಿಬ್ಮದ ದ್ರಾಕ್ಷೇ ಗಿಡದ ನಿಮಿತ್ತ ಅಳುವೆನು;
ಹೆಷ್ಬೋನೇ! ಎಲೆಯಾಳೆಯೇ! ನನ್ನ ಕಣ್ಣೀರಿನಿಂದ ನಿನ್ನನ್ನು ತೋಯಿಸುವೆನು;
ಯಾಕಂದರೆ, ನಿನ್ನ ಹಣ್ಣುಗಳ ಬೈರಿನ ಮೇಲೆಯೂ, ನಿನ್ನ ಸುಗ್ಗಿಯ ಮೇಲೆಯೂ,
ಆರ್ಭಟವು ಬಿದ್ದದೆ.
೧೦ ಮತ್ತು, ಬೈರಿನ ಹೊಲದಿಂದ, ಸಂತೋಷವೂ, ಉಲ್ಲಾಸವೂ, ತೆಗೆದು ಹಾಕಲ್ಪಡುವದು;
ದ್ರಾಕ್ಷೇ ತೋಟಗಳಲ್ಲಿ, ಇನ್ನು ಹರ್ಷ ಧ್ವನಿಯೂ, ಉಲ್ಲಾಸ ಧ್ವನಿಯೂ, ಆಗುವದಿಲ್ಲ;
ಆಲೆಗಳಲ್ಲಿ ತುಳಿದು, ದ್ರಾಕ್ಷೇ ರಸವನ್ನು ಮಾಡುವದಿಲ್ಲ;
ಸುಗ್ಗಿ ಕಾಲದ ಆರ್ಭಟವನ್ನು ನಾನು ನಿಲ್ಲಿಸಿದ್ದೇನೆ.
ಆದದರಿಂದ, ಮೋವಾಬಿನ ನಿಮಿತ್ತ ನನ್ನ ಕರುಳುಗಳೂ,
೧೧ ಕಿರ್ಹಾರೆಷಿನ ನಿಮಿತ್ತ ನನ್ನ ಅಂತರ್ಯಿಂದ್ರಿಯಗಳೂ,
ಕಿನ್ನರಿಯಂತೆ ಮರಗುತ್ತವೆ.
೧೨ ಮತ್ತು, ಮೋವಾಬು ಉನ್ನತ ಸ್ಥಳದಲ್ಲಿ ಪ್ರಯಾಸ ಪಡ ಕಾಣಿಸಿ ಕೊಂಡರೂ,
ಪ್ರಾರ್ಥಿಸುವದಕ್ಕೆ ತನ್ನ ಪರಿಶುದ್ಧ ಸ್ಥಳಕ್ಕೆ ಬಂದರೂ,
ಕೂಡದೆ ಇರುವದು.

೧೩ ಅಂದಿನಿಂದ ಕರ್ತನು ಮೋವಾಬನ್ನು ಕುರಿತು ಹೇಳಿದ ಮಾತು ಇದೇ;
ಆದರೆ ಈಗ, ಕರ್ತನು ಹೇಳುವದೇನಂದರೆ—
೧೪ ಕೂಲಿಯವನ ವರುಷಗಳ ಹಾಗಿರುವ ಮೂರು ವರುಷಗಳಲ್ಲಿ,
ಮೋವಾಬಿನ ಮಹಿಮೆಯು ಆ ದೊಡ್ಡ ಗುಂಪೆಲ್ಲಾದರ ಸಂಗಡ ಉದಾಸೀನವಾಗುವದು;
ಉಳಿವು ಅಲ್ಪ ಸ್ವಲ್ಪವೂ, ದೊಡ್ಡದಲ್ಲದೆಯೂ, ಇರುವದು.

## ೧೭. ಸಂಧಿ.

೧ ದಮಸ್ಕದ ಭಾರವು.

ಇಗೋ, ದಮಸ್ಕವು ಪಟ್ಟಣವಿಲ್ಲದ ಹಾಗೆ ತೆಗೆದು ಹಾಕಲ್ಪಡುವದು;
ಮತ್ತು, ಹಾಳಿನದಿಬ್ಬೆಯಾಗುವದು.
೨ ಅರೋಯೇರಿನ ಪಟ್ಟಣಗಳು ಬಿಡಲ್ಪಟ್ಟವೆ;
ಅವು ಮಂದೆಗಳಿಗೆ ಆಗುವವು;
ಇವು ಹೆದರಿಸುವವನಿಲ್ಲದೆ ಮಲಗುವವು.
೩ ಮತ್ತು, ಎಫ್ರಾಯಿಮಿನಲ್ಲಿ ಕೋಟೆಯೂ, ದಮಸ್ಕದಲ್ಲಿ ಅರಸತನವೂ,
ಸುರ್ಯದಲ್ಲಿ ಉಳಿಯೂ, ನಿಂತು ಹೋಗುವದು.
ಅವರು ಇಸ್ರಯೇಲಿನ ಮಕ್ಕಳ ಮಹಿಮೆಯ ಹಾಗಿರುವಕೆಂದು,
ಸೈನ್ಯಗಳ ಕರ್ತನು ಹೇಳುತ್ತಾನೆ.
೪ ಆ ದಿವಸದಲ್ಲಿ ಆಗುವದೇನಂದರೆ—
ಯಾಕೋಬನ ಮಹಿಮೆ ತಗ್ಗುವದು;
ಅವನ ಮಾಂಸದ ಕೊಬ್ಬು ಕ್ಷಯವಾಗುವದು.
೫ ಕೊಯ್ಯುವವನು ಬೈರನ್ನು ಕೂಡಿಸಿ, ತೆನೆಗಳನ್ನು ತನ್ನ ಕೈಯಿಂದ ಕೊಯ್ಯುವ ಪ್ರಕಾರವಾಗುವದು;
ರೆಫಾಯಿಮ್ ತಗ್ಗಿನಲ್ಲಿ ತೆನೆಗಳನ್ನು ಆಯುವ ಪ್ರಕಾರವಾಗುವದು;
೬ ಆದರೂ ಇಬ್ಬೆ ಮರವನ್ನು ಬಡಿಯುವಂಥೆ, ಅದರಲ್ಲಿ ಮಿಕ್ಕ ಹಣ್ಣುಗಳು ಉಳಿಯುವವು.
ಮರದ ಕೊಟ್ಟ ಕೊನೆಯಲ್ಲಿ, ಎರಡು ಮೂರು ಹಣ್ಣುಗಳೂ,
ಪ್ರಬಲವಾದ ಕೊಂಬೆಗಳಲ್ಲಿ, ನಾಲ್ಕು ಐದು ಇರುವವೆಂದು,
ಇಸ್ರಯೇಲಿನ ದೇವರಾದ ಕರ್ತನು ಹೇಳುತ್ತಾನೆ.

೭ ಆ ದಿವಸದಲ್ಲಿ, ಮನುಷ್ಯನು ತನ್ನನ್ನು ಉಂಟು ಮಾಡಿದವನ ಮೇಲೆ ದೃಷ್ಟಿ ಇಡುವನು;
ಇಸ್ರಯೇಲನ ಪರಿಶುದ್ಧನ ಕಡೆಗೆ ಅವನ ಕಣ್ಣುಗಳು ನೋಡುವವು.
೮ ಅವನು ತನ್ನ ಕೈ ಕ್ರಿಯೆಗಳಾದ ಬಲಿಪೀಠಗಳನ್ನು ದೃಷ್ಟಿಸನು,
ತನ್ನ ಬೆರಳುಗಳು ಮಾಡಿದ ತೋಪುಗಳನ್ನಾಗಲಿ,
ಸೂರ್ಯಸ್ತಂಭಗಳನ್ನಾಗಲಿ, ನೋಡನು.
೯ ಆ ದಿವಸದಲ್ಲಿ, ಅವನ ಬಲವಾದ ಪಟ್ಟಣಗಳು,
ಬಿಟ್ಟು ಬಿಟ್ಟ ಅಡವಿಯ ಹಾಗೆಯೂ,
ಇಸ್ರಯೇಲಿನ ಮಕ್ಕಳ ಮುಂದೆ ಬಿಡಲ್ಪಟ್ಟ ಕೊನೆಗಳ ಹಾಗೆಯೂ,
ಇರುವವು; ಹಾಳಾಗೋಣವಿರುವದು.
೧೦ ನೀನು ನಿನ್ನ ರಕ್ಷಣೆಯ ದೇವರನ್ನು ಮರೆತು,
ನಿನ್ನ ಬಲದ ಬಂಡೆಯನ್ನು ನೆನಸದೆ ಇದ್ದದರಿಂದ,
ನೀನು ರಮ್ಯವಾದ ಗಿಡಗಳನ್ನು ನೆಡುವಿ;
ಅಪರೂಪವಾದ ಸಸಿಗಳನ್ನು ಹಾಕುವಿ;

೧೧ ನೆಡುವ ದಿವಸದಲ್ಲಿ ಆದಕ್ಕೆ ಬೇಲಿ ಹಾಕುವಿ;
ಹೊತ್ತಾಕೆ ನೀನು ಬಿತ್ತಿದ್ದನ್ನು ಮೊಳಿಸುವಿ;
ಅದಕೆ ಸುಗ್ಗಿಯು, ಕೋಗದ ಕಡು ಬೇನೆಯ ದಿವಸದಲ್ಲಿ,
ಓಡಿ ಹೋಗುವದು.

೧೨ ಬಹು ಜನಗಳ ಘೋಷಕ್ಕೆ ಅಯ್ಯೋ!
ಸಮುದ್ರಗಳು ಘೋಷಿಸುವಂತೆ ಅವರು ಘೋಷಿಸುತ್ತಾರೆ.
ಜನ ಸಮೂಹಗಳ ಭೋರಿಡುವಿಕೆಗೆ ಅಯ್ಯೋ!
ಬಲವುಳ್ಳ ನೀರು ಭೋರಿಡುವಂತೆ ಭೋರಿಡುತ್ತಾರೆ.
೧೩ ಜನ ಸಮೂಹಗಳು ಬಹಳ ನೀರು ಭೋರಿಡುವಂತೆ ಭೋರಿಡುವವು;
ಆದರೆ, ಅವನು ಅವರನ್ನು ಗದರಿಸುತ್ತಲೇ, ಅವರು ದೂರಕ್ಕೆ ಓಡಿ ಹೋಗುವರು;
ಘೂಳಿಯ ಮುಂದೆ ಬೆಟ್ಟಗಳ ಹೊಟ್ಟಿನ ಹಾಗೆಯೂ,
ಸುಳಿ ಘೂಳಿಯ ಮುಂದೆ ಶದೆಯ ಹಾಗೆಯೂ,
ಬಡಿದಾಡುವರು.
೧೪ ಸಾಯಂಕಾಲದಲ್ಲಿ ಇಗೋ, ಭಯ ಭ್ರಾಂತಿ;
ಉದಯಕ್ಕೆ ಮುಂಚೆ ಅವನಿಲ್ಲ;
ಇದೇ ನಮ್ಮನ್ನು ಕೊಳ್ಳೆ ಇಡುವವರ ಪಾಲು;
ನಮ್ಮನ್ನು ಸುಲು ಕೊಳ್ಳುವವರ ಭಾಗವು.

## ೧೮. ಸಂಧಿ.

೧ ಓಹೋ ಕೂಷಿನ ನದಿಗಳ ಆಚೆಯಲ್ಲಿರುವ,
ಗಲಗಲಿಸುವ ಕೆಕ್ಕೆಗಳುಳ್ಳ, ದೇಶವೇ!
೨ ಸಮುದ್ರದ ಮಾರ್ಗದಿಂದಲೂ, ಆಪಿನ ದೋಣಿಗಳಲ್ಲಿ ನೀರಿನ ಮೇಲೆಯೂ,
ರಾಯಭಾರಿಗಳನ್ನು ಕಳುಹಿಸುವಂಥಾದ್ದೇ!
ಶೀಘ್ರವಾದ ದೂತರೇ! ವಿಸ್ತಾರವಾದ ಸೌಂದರ್ಯವಾದ ಜನಾಂಗದ ಬಳಿಗೂ,
ಹುಟ್ಟಿದಂದಿನಿಂದ ಈ ವರೆಗೂ ಭಯಂಕರವಾದ ಜನದ ಬಳಿಗೂ,
ಮಹಾ ಬಲವೂ ಜಯವೂ ಉಳ್ಳಂಥ,
ನದಿಗಳಿಂದ ವಿಭಾಗವಾದ ದೇಶವುಳ್ಳಂಥ,
ಜನಾಂಗದ ಬಳಿಗೂ, ಹೋಗಿರಿ.
೩ ಭೂಲೋಕದ ನಿವಾಸಿಗಳೆಲ್ಲರೇ!
ಭೂಮಿಯಲ್ಲಿ ವಾಸವಾಗಿರುವಕೆಲ್ಲರೇ!
ಬೆಟ್ಟಗಳಲ್ಲಿ ಅವರು ಧ್ವಜವನ್ನೆತ್ತುವಾಗ ನೋಡಿರಿ.
ತುತೂರಿಯೂದುವಾಗ ಕೇಳಿರಿ.

೪ ಯಾಕಂದರೆ, ಕರ್ತನು ನನಗೆ ಹೇಳಿದ್ದೇನಂದರೆ—
ನಾನು ವಿಶ್ರಮಿಸಿ ಕೊಳ್ಳುವೆನು;
ಬಿಸಲಿನ ಕಾಲದಲ್ಲಿರುವ ಪ್ರಕಾಶವುಳ್ಳ ಕೆಕೆಯ ಹಾಗೆಯೂ,
ಸುಗ್ಗಿಯ ಕೆಕೆಯಲ್ಲಿ ಮಂಜಿನ ಮೋಡದ ಹಾಗೆಯೂ,
ನನ್ನ ಸ್ಥಾನದಲ್ಲಿ ನೋಡಿ ಕೊಳ್ಳುವೆನು.
೫ ಯಾಕಂದರೆ, ಸುಗ್ಗಿಗೆ ಮುಂಚೆ, ಪೊಗ್ಗೆ ತುಂಬಿದಾಗ,
ಹೂವಿನಲ್ಲಿ ದ್ರಾಕ್ಷಿಕಾಯಿ ಆಗುವಾಗ,
ಅವನು ಕುಡುಗೋಲುಗಳಿಂದ ಬಳ್ಳಿಗಳನ್ನು ಕೊಯ್ಯುವನು;
ಕೊಂಬೆಗಳನ್ನು ಕಡಿದು ಹಾಕುವನು.
೬ ಅವೆಲ್ಲಾ ಬೆಟ್ಟಗಳ ಪಕ್ಷಿಗಳಿಗೂ,
ಭೂಮಿಯ ಮೃಗಗಳಿಗೂ, ಬಿಡಲ್ಪಡುವವು;
ಪಕ್ಷಿಗಳು ಅವುಗಳ ಮೇಲೆ ಬೇಸಿಗೆಯನ್ನೂ,
ಭೂಮಿಯ ಎಲ್ಲಾ ಮೃಗಗಳು ಅವುಗಳ ಮೇಲೆ ಛಳಿ ಕಾಲವನ್ನೂ, ಕಳೆಯುವವು.

೭ ಆ ಕಾಲದಲ್ಲಿ, ವಿಸ್ತಾರವಾದ ಸೌಂದರ್ಯವಾದ ಜನಾಂಗವೂ,
ಹುಟ್ಟಿದಂದಿನಿಂದ ಈ ವರೆಗೂ ಭಯಂಕರವಾದ ಜನವೂ,
ಮಹಾ ಬಲವೂ ಜಯವೂ ಉಳ್ಳಂಥ,
ನದಿಗಳಿಂದ ವಿಭಾಗವಾದ ದೇಶವುಳ್ಳಂಥ, ಜನಾಂಗವೂ,
ಸೈನ್ಯಗಳ ಕರ್ತನ ಹೆಸರು ಇರುವ ಸ್ಥಳಕ್ಕೆ,
ಚಿಯೋನ್ ಪರ್ವತಕ್ಕೆ,
ಸೈನ್ಯಗಳ ಕರ್ತನಿಗೋಸ್ಕರ, ಕಾಣಿಕೆ ತರುವರು.

## ೧೯. ಸಂಧಿ.

೧ ಐಗುಪ್ತದ ಭಾರವು.

ಇಗೋ, ಕರ್ತನು ವೇಗವುಳ್ಳ ಮೇಘವನ್ನು ಹತ್ತಿಕೊಂಡು,
ಐಗುಪ್ತಕ್ಕೆ ಬರುತ್ತಾನೆ;
ಐಗುಪ್ತದ ಸುಳ್ಳು ದೇವರುಗಳು ಅವನ ಸಮುಖಕ್ಕೆ ಅದರುವವು;
ಐಗುಪ್ತದ ಹೃದಯವು ಅದರಲ್ಲಿ ಕರಗುವದು.
೨ ಇದಲ್ಲದೆ, ನಾನು ಐಗುಪ್ತಕ್ಕೆ ವಿರೋಧವಾಗಿ ಐಗುಪ್ತವನ್ನು ಆಯುಧ ಧರಿಸ ಮಾಡುತ್ತೇನೆ;
ಅವರು ತಮ್ಮ ತಮ್ಮ ಸಹೋದರರಿಗೂ ತಮ್ಮ ತಮ್ಮ ನೆಕೆಯವರಿಗೂ ವಿರೋಧವಾಗಿ,
ಪಟ್ಟಣಕ್ಕೆ ಪಟ್ಟಣವೂ, ರಾಜ್ಯಕ್ಕೆ ರಾಜ್ಯವೂ;
ಯುದ್ಧ ಮಾಡುವರು.
೩ ಮತ್ತು, ಐಗುಪ್ತದ ಆತ್ಮವು ಅದರಲ್ಲಿ ಕುಂದುವದು;
ಮತ್ತು ಅದರ ಆಲೋಚನೆಯನ್ನು ಕೆಡಿಸಿ ಬಿಡುವೆನು;
ಅವರು ಸುಳ್ಳು ದೇವರುಗಳನ್ನೂ, ಮಾಟಗಾರರನ್ನೂ,
ಯಕ್ಷಣಿಗಾರರನ್ನೂ, ಮಂತ್ರಜ್ಞರನ್ನೂ, ಹುಡುಕುವರು.
೪ ಇದಲ್ಲದೆ, ಐಗುಪ್ತವನ್ನು ಕಠಿಣವಾದ ಯಜಮಾನನ ಕೈಯಲ್ಲಿ ಒಪ್ಪಿಸುವೆನು;
ಬಲವುಳ್ಳ ಅರಸನು ಅವರ ಮೇಲೆ ಆಳುವನು,
ಎಂದು ಸೈನ್ಯಗಳ ಯೆಹೋವನಾದ ಕರ್ತನು ಹೇಳುತ್ತಾನೆ.

೫ ಇದಲ್ಲದೆ, ಸಮುದ್ರದ ಕಡೆಯಿಂದ ನೀರು ಬತ್ತಿ ಹೋಗುವದು;
ನದಿಯು ಅರಿ ಒಣಗುವದು.
೬ ನದಿಗಳು ನಾರುವವು;
ಐಗುಪ್ತದ ಪ್ರವಾಹಗಳು ನೀರಿಲ್ಲದೆ ಒಣಗುವವು;
ತುಂಗೆಯೂ, ಆಪೂ, ಬಾಡಿ ಹೋಗುವವು.
೭ ನದಿಯ ಹತ್ತರ, ನದಿ ತೀರದಲ್ಲಿಯೇ, ಇರುವ ಪೈಲುಗಳೂ,
ನದಿಯ ಬಳಿಯಲ್ಲಿ ಬಿತ್ತಿದ ಹೊಲಗಳೆಲ್ಲವೂ,
ಒಣಗಿ, ಬಡಿಯಲ್ಪಟ್ಟು, ಇಲ್ಲದೆ ಹೋಗುವವು.



೮ ವಿಾನುಗಾರರು ದುಃಖಿಸುವರು;
ನದಿಯಲ್ಲಿ ಗಾಲ ಹಾಕುವವರೆಲ್ಲರು ಚಿಂತಿಸುವರು.
ನೀರಿನ ಮೇಲೆ ಬಲೆ ಹಾಕುವವರು ದಿಕ್ಕಿಲ್ಲದೆ ನಿಲ್ಲುವರು.
೯ ನಯ ಮಾಡಿದ ನಾರಿನ ಕೆಲಸದವರೂ,
ಬಟ್ಟೆ ನೇಯುವವರೂ, ಕಳೆ ಗುಂದುವರು.
೧೦ ಅದರ ಅಸ್ತಿವಾರಗಳು ಮುರಿಯಲ್ಪಡುವವು;
ಕೂಲಿ ಕೆಲಸ ಮಾಡುವವರೆಲ್ಲರು ಮನಸ್ಸಿನಲ್ಲಿ ನೊಂದು ಕೊಳ್ಳುವರು.

೧೧ ಜೋವಾನಿನ ಶ್ರೇಷ್ಠರು ಮೂರ್ಖರೇ;
ಫಕೋನನ ಜ್ಞಾನವುಳ್ಳ ಯೋಚನೆಕರ್ತರ ಆಲೋಚನೆಯು ಬುದ್ಧಿಹೀನವೇ;
ನಾನು ಜ್ಞಾನಿಗಳ ಮಗನೆಂದೂ, ಪೂರ್ವ ಅರಸರ ಮಗನೆಂದೂ,
ನೀವು ಫಕೋನನಿಗೆ ಹೇಳುವದು ಹ್ಯಾಗೆ!
೧೨ ಅವರು ಎಲ್ಲಿ! ನಿನ್ನ ಜ್ಞಾನಿಗಳು ಎಲ್ಲಿ!
ಅವರು ನಿನಗೆ ತಿಳಿಸಲಿ.
ಸೈನ್ಯಗಳ ಕರ್ತನು ಐಗುಪ್ತದ ವಿಷಯ ಏನು ಆಲೋಚನೆ ಮಾಡಿದ್ದಾನೋ,
ಅವರು ತಿಳುಕೊಳ್ಳಲಿ.
೧೩ ಜೋವಾನಿನ ಶ್ರೇಷ್ಠರು ಮೂರ್ಖರಾದರು;
ನೋಫಿನ ಶ್ರೇಷ್ಠರು ಮೋಸ ಗೊಂಡರು;
ಕುಲಗಳಿಗೆ ಆಧಾರವಾದವರೇ ಐಗುಪ್ತವನ್ನು ತಪ್ಪ ಮಾಡಿದರು.
೧೪ ಕರ್ತನು ಅದರ ಮಧ್ಯದಲ್ಲಿ ವಕ್ರವಾದ ಆತ್ಮವನ್ನು ಬೆರಸಿದ್ದಾನೆ;
ಮತ್ತನು ತಾನು ಕಾರದರಲ್ಲಿ ತತ್ತರಿಸುವ ಪ್ರಕಾರ,
ಅವರು ಐಗುಪ್ತವನ್ನು ಅದರ ಎಲ್ಲಾ ಕ್ರಿಯೆಗಳಲ್ಲಿ ತಪ್ಪ ಮಾಡಿದ್ದಾರೆ.
೧೫ ಇದಲ್ಲದೆ ತಲೆಯಾಗಲಿ, ಬಾಲವಾಗಲಿ,
ಕೊಂಬೆ ಆಗಲಿ, ತುಂಗೆ ಆಗಲಿ,
ಮಾತತಕ್ಕ ಕ್ರಿಯೆಯು ಒಂದಾದರೂ
ಐಗುಪ್ತದಲ್ಲಿ ಇರುವದಿಲ್ಲ.

೧೬ ಆ ದಿವಸದಲ್ಲಿ ಐಗುಪ್ತವು ಹೆಂಗಸರ ಹಾಗಿರುವದು;
ಸೈನ್ಯಗಳ ಕರ್ತನು ಅದರ ಮೇಲೆ ಅಲ್ಲಾಡಿಸುವ ಕೈಯ್ಯ ಅಲ್ಲಾಡಿದಿಂದ,
ಹೆದರಿ, ಭಯ ಪಡುವದು.
೧೭ ಮತ್ತು, ಯೆಹೂದ ದೇಶವು ಐಗುಪ್ತಕ್ಕೆ ಭಯಕ್ಕಾಗುವದು;
ಅದನ್ನು ನೆನಸುವವರೆಲ್ಲಾ,
ಕರ್ತನು ಅದರ ವಿಷಯ ಮಾಡಿದ ಆಲೋಚನೆಯ ನಿಮಿತ್ತ,
ತಮ್ಮಲ್ಲಿ ತಾವೇ ಭಯ ಪಡುವರು.

೧೮ ಆ ದಿವಸದಲ್ಲಿ, ಐಗುಪ್ತ ದೇಶದಲ್ಲಿ ಐದು ಪಟ್ಟಣಗಳು,
ಕಾನಾನಿನ ಮಾತನ್ನಾಡುವವು;
ಮತ್ತು, ಸೈನ್ಯಗಳ ಕರ್ತನಿಗೆ ಆಣೆ ಇಟ್ಟುಕೊಳ್ಳುವವು.
ಅವುಗಳಲ್ಲಿ ಒಂದರ ಹೆಸರು ಇರ್ಹೇಕಸ್.
೧೯ ಆ ದಿವಸದಲ್ಲಿ, ಐಗುಪ್ತ ದೇಶದ ಮಧ್ಯದಲ್ಲಿ,
ಕರ್ತನಿಗೆ ಬಲಿಪೀಠವೂ,
ಅದರ ಪ್ರಾಂತ್ಯದ ಬಳಿಯಲ್ಲಿ,
ಕರ್ತನಿಗೆ ಸ್ತಂಭವೂ, ಇರುವದು.
೨೦ ಅದು ಸೈನ್ಯಗಳ ಕರ್ತನಿಗೆ ಐಗುಪ್ತ ದೇಶದಲ್ಲಿ,
ಗುರುತಾಗಿಯೂ, ಸಾಕ್ಷಿಯಾಗಿಯೂ, ಇರುವದು;
ಯಾಕಂದರೆ, ಅವರು ಅಣಗಿಸುವವರ ನಿಮಿತ್ತ ಕರ್ತನ ಕಡೆಗೆ ಕೂಗುವರು;
ಅವನು ಅವರಿಗೆ ರಕ್ಷಿಸುವವನನ್ನೂ, ತರ್ಕಿಸುವವನನ್ನೂ, ಕಳುಹಿಸಿ,
ಅವರನ್ನು ವಿಮೋಚಿಸುವನು.
೨೧ ಆಗ ಕರ್ತನು ಐಗುಪ್ತ್ಯರಿಗೆ ತಿಳಿಯ ಬರುವನು;
ಐಗುಪ್ತ್ಯರು ಆ ದಿವಸದಲ್ಲಿ ಕರ್ತನನ್ನು ತಿಳಿಯುವರು
ಬಲಿ ಕಾಣಿಕೆಗಳಿಂದ ಸೇವೆ ಮಾಡುವರು;
ಕರ್ತನಿಗೆ ಹರಿಕೆಗಳನ್ನು ಮಾಡಿ ಸಲ್ಲಿಸುವರು.
೨೨ ಮತ್ತು, ಕರ್ತನು ಐಗುಪ್ತ್ಯರನ್ನು ಹೊಡಿಯುವನು;
ಹೊಡೆದು, ಸ್ವಸ್ಥ ಮಾಡುವನು;
ಅವರು ಕರ್ತನ ಬಳಿಗೆ ತಿರುಗಿ ಕೊಳ್ಳುವರು;
ಅವನು ಅವರನ್ನು ಅಶೈಸಿ, ಸ್ವಸ್ಥ ಮಾಡುವನು.

೨೩ ಆ ದಿವಸದಲ್ಲಿ ಐಗುಪ್ತದಿಂದ ಅಶ್ಶೂರಿಗೆ ರಾಜ ಮಾರ್ಗ ಬರುವದು;
ಅಶ್ಶೂರರು ಐಗುಪ್ತಕ್ಕೂ ಐಗುಪ್ತ್ಯರು ಅಶ್ಶೂರಿಗೂ ಬರುವರು.
ಐಗುಪ್ತ್ಯರು ಅಶ್ಶೂರರ ಸಂಗಡ ಸೇವೆ ಮಾಡುವರು.
೨೪ ಆ ದಿವಸದಲ್ಲಿ ಇಸ್ರಯೇಲು
ಐಗುಪ್ತದ ಸಂಗಡಲೂ ಅಶ್ಶೂರಿನ ಸಂಗಡಲೂ, ಮೂರನೇದಾಗಿ,
ಭೂಮಿಯ ಮಧ್ಯದಲ್ಲಿ ಆಶೀರ್ವಾದವಾಗಿರುವದು.
೨೫ ಹ್ಯಾಗಂದರೆ, ಸೈನ್ಯಗಳ ಕರ್ತನು—
ನನ್ನ ಜನವಾದ ಐಗುಪ್ತದೇ,
ನನ್ನ ಕೈಗಳ ಕೆಲಸವಾದ ಅಶ್ಶೂರೇ,
ನನ್ನ ಸ್ವಾಸ್ಥ್ಯವಾದ ಇಸ್ರಯೇಲೇ,
ನಿನಗಾಶೀರ್ವಾದ, ಎಂದು ಹೇಳಿ,
ಅದಕ್ಕೆ ಆಶೀರ್ವಾದ ಕೊಡುವನು.

## ೨೦. ಸಂಧಿ.

೧ ತರ್ತಾನನು, ಅಶ್ಶೂರಿನ ಅರಸನಾದ ಸರ್ಗೋನನು ಅವನನ್ನು ಕಳುಹಿಸಿದದರಿಂದ, ಅಶ್ದೋದಿಗೆ ಬಂದ ವರುಷದಲ್ಲಿ, ಅವನು ಅಶ್ದೋದಿಗೆ ವಿರೋಧವಾಗಿ ಯುದ್ಧ ಮಾಡಿ, ಅದನ್ನು ಹಿಡಿದಾಗ,
೨ ಆ ಕಾಲದಲ್ಲಿ, ಕರ್ತನು ಆಮೋಸನ ಮಗನಾದ ಯೆಶಾಯನ ಕೈಯಿಂದ ಹೇಳಿಸಿದ್ದೇನಂದರೆ—ಹೋಗಿ, ನಿನ್ನ ನಡುವಿನ ಮೇಲಿರುವ ಗೋಣಿಯನ್ನು ಬಿಚ್ಚು; ನಿನ್ನ ಪಾದಗಳಲ್ಲಿರುವ ಕೆರಗಳನ್ನು ತೆಗದಿಡು. ಅವನು ಹಾಗೆ ಮಾಡಿ, ಪೆತ್ತಲೆಯಾಗಿ, ಕೆಲಗಳಿಲ್ಲದೆ, ನಡೆದನು.
೩ ಆಗ ಕರ್ತನು ಹೇಳಿದ್ದೇನಂದರೆ—ನನ್ನ ಸೇವಕನಾದ ಯೆಶಾಯನು, ಐಗುಪ್ತಕ್ಕೂ ಕೂಷಕ್ಕೂ, ಗುರುತಾಗಿಯೂ, ಲಕ್ಷಣವಾಗಿಯೂ, ಹ್ಯಾಗೆ ಮೂರು ವರುಷ ಪೆತ್ತಲೆಯಾಗಿ, ಕೆರಗಳಿಲ್ಲದೆ, ನಡೆದನೋ, ಹಾಗೆಯೇ, ಅಶ್ಶೂರಿನ ಅರಸನು ಐಗುಪ್ತ್ಯರನ್ನು ಬಂಧಿಸಿ, ಕೂಷಿಯರನ್ನು ಕೆಳೆ ಹಿಡಿದು,
೪ ಐಗುಪ್ತದ ನಾಚಿಕೆಗಾಗಿ, ಹಿರಿಯರನ್ನೂ ಕಿರಿಯರನ್ನೂ, ಪಿಕ್ರಿಗಳು ಮುಚ್ಚದೆ, ಪೆತ್ತಲೆಯಾಗಿ, ಕೆರಗಳಿಲ್ಲದೆ, ವೈಯ್ಯುವನು.

ಅವರು ತಮ್ಮ ಆಶ್ರಯವಾದ ಕೂಷಿನ ವಿಷಯವೂ, ತಮ್ಮ ಮಹಿ
ಮೆಯಾದ ಐಗುಪ್ತದ ವಿಷಯವೂ, ಭಯಪಟ್ಟು, ನಾಚುವರು.
೬ ಆ ದಿವಸದಲ್ಲಿ ಈ ತೀರದ ನಿವಾಸಿ ಹೇಳುವದೇನಂದರೆ—ಇಗೋ
ನಾವು ಅಕ್ಕೂರಿನ ಅರಸನಿಗೆ ಬಿಡಿಸಲ್ಪಡ ಬೇಕೆಂದು ಹೇಳಿ, ಸಹಾ
ಯಕ್ಕೋಸ್ಕರ ಓಡಿ ಹೋದ ನಮ್ಮ ಆಶ್ರಯವು ಹೀಗಾಯಿತು;
ಮತ್ತು ನಾವು ತಪ್ಪಿಸಿ ಕೊಳ್ಳುವದು ಹ್ಯಾಗೆ!

## ೨೧. ಸಂಧಿ.

೧ ಸಮುದ್ರದ ಅರಣ್ಯದ ಭಾರವು.

ದಕ್ಷಿಣದಲ್ಲಿ ಸುಳಿ ಘುಳಿಗಳು ದಾಟಿ ಹೋಗುವಂತೆ,
ಅದು ಅರಣ್ಯದಿಂದ,
ಭಯಂಕರವಾದ ದೇಶದಿಂದ, ಬರುತ್ತದೆ.
೨ ಕಠಿಣವಾದ ನೋಟವು ನನಗೆ ತಿಳಿಯ ಬಂತು;
ದ್ರೋಹಿ, ದ್ರೋಹ ಮಾಡುತ್ತಾನೆ;
ಕೊಳ್ಳೆಗಾರನು ಕೊಳ್ಳೆ ಇಡುತ್ತಾನೆ.
ಏಲಾಮೇ! ಏಳು. ಮೇದ್ಯವೇ! ಮುತ್ತಿಗೆ ಹಾಕು.
ಅದರ ನಿಟ್ಟುಸುರನ್ನೆಲ್ಲಾ ನಿಲ್ಲಿಸಿದ್ದೇನೆ.
೩ ಆದದರಿಂದ ನನ್ನ ಸೊಂಟಗಳು ನೋವಿನಿಂದ ತುಂಬಿಯವೆ;
ಹೆರುವವಳ ವೇದನೆಗಳಂತಿರುವ ವೇದನೆಗಳು ನನ್ನನ್ನು ಹಿಡಿದವೆ;
ಕೇಳ್ದ ಕೂಡದ ಹಾಗೆ ಸಂಕಟ ಪಡುತ್ತೇನೆ;
ನೋಡ ಕೂಡದ ಹಾಗೆ ಭ್ರಾಂತನಾಗಿದ್ದೇನೆ.
೪ ನನ್ನ ಹೃದಯವು ಗಾಬರಿ ಪಡುತ್ತದೆ;
ನಡುಗುವಿಕೆಯು ನನ್ನನ್ನು ಕಳವಳಗೊಳಿಸಿ ಅದೆ;
ನನ್ನ ಆನಂದದ ರಾತ್ರಿಯನ್ನು,
ನನಗೆ ಭಯ ಭ್ರಾಂತಿಯಾಗ ಮಾಡಿದ್ದಾನೆ.

೫ ಮೇಜನ್ನು ಸಿದ್ಧ ಮಾಡು;
ಕೋವರದವನನ್ನು ಇರಿಸು;
ಉಣ್ಣು; ಕುಡಿ;
ಶ್ರೇಷ್ಠಕೇ! ಏಳಿರಿ, ಡಾಲನ್ನು ಅಭಿಷೇಕಿಸಿರಿ.
೬ ಯಾಕಂದರೆ, ಕರ್ತನು ನನಗೆ ಹೇಳುವದೇನಂದರೆ—
ಹೋಗಿ, ಕೋವರದವನನ್ನು ಇರಿಸು;
ಅವನು ನೋಡುವದನ್ನು ತಿಳಿಸಲಿ.
೭ ಅವನು ಸವಾರಿಯನ್ನು ನೋಡಿದನು.
ಎರಡೆರಡು ಕುದುರೆಗಳ ಸವಾರಿಯನ್ನೂ,
ಕತ್ತೆಗಳ ಸವಾರಿಯನ್ನೂ, ಒಂಟೆಗಳ ಸವಾರಿಯನ್ನೂ.
ಆಗ ಬಹಳ ಜಾಗ್ರತೆಯಿಂದ ಕಿವಿ ಕೊಟ್ಟನು.
೮ ಆಗಲವನು ಸಿಂಹದಂತೆ ಕೂಗಿದ್ದೇನಂದರೆ—
ಸ್ವಾಮಿ, ನಾನು ದಿನವೆಲ್ಲಾ ಕೋವರದಲ್ಲಿ ನಿಂತಿದ್ದೇನೆ;
ರಾತ್ರಿಯೆಲ್ಲಾ ನನ್ನ ಕಾವಲಿಯಲ್ಲಿ ಇದ್ದೇನೆ.
೯ ಮತ್ತು ಇಗೋ, ಇಲ್ಲಿ ಎರಡೆರಡು ಕುದುರೆಗಳಾಗಿ,
ಜನರ ಸವಾರಿ ಬಂತು;
ಇದಲ್ಲದೆ, ಅವನು ಉತ್ತರ ಕೊಟ್ಟು ಹೇಳಿದ್ದೇನಂದರೆ—
ಬಿತ್ತು! ಬಿತ್ತು! ಬಾಬೆಲೇ.
ಅದರ ದೇವರುಗಳ ವಿಗ್ರಹಗಳನ್ನೆಲ್ಲಾ ನೆಲಗತವಾಗಿ ಮುರಿದಿ
ದ್ದಾನೆ.
೧೦ ನಾನು ತುಳಿಯುವ ತೆನೆಯೇ! ನನ್ನ ಕಣದ ಧಾನ್ಯವೇ!
ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನ ಕಡೆಯಿಂದ ನಾ
ನು ಕೇಳಿದ್ದನ್ನು,
ನಿಮಗೆ ತಿಳಿಸಿದ್ದೇನೆ.

೧೧ ದೂಮಿನ ಭಾರವು.

ಸೇಯಿರಿನಿಂದ ನನಗೆ ಕರೆದನು;
ಹ್ಯಾಗಂದರೆ—
ಕೋವರದವನೇ! ರಾತ್ರಿಯ ಹೊತ್ತು ಎಷ್ಟು!
ಕೋವರದವನೇ! ರಾತ್ರಿಯ ಹೊತ್ತು ಎಷ್ಟು!
೧೨ ಕೋವರದವನು ಹೇಳುವದೇನಂದರೆ—
ಉದಯ ಬರುತ್ತದೆ; ರಾತ್ರಿಯು ಸಹ;
ನೀವು ವಿಚಾರಿಸಿದರೆ, ವಿಚಾರಿಸಿರಿ;
ಹೋಗಿ ಬನ್ನಿ.

೧೩ ಅರಾಬ್ಯದ ಭಾರವು.

ದೆದಾನ್ಯರ ಪ್ರಯಾಣಸ್ಥರೇ!
ಅರಾಬ್ಯದ ಅಡವಿಯಲ್ಲಿ ಇಳುಕೊಳ್ಳುವಿರಿ.
೧೪ ಬಾಯಾರಿದವನಿಗೆ ನೀರು ತರುತ್ತಾರೆ;
ತೇಮ ದೇಶದ ನಿವಾಸಿಗಳು,
ಓಡಿ ಹೋಗುವವನನ್ನು ತಮ್ಮ ರೊಟ್ಟಿಯಿಂದ ಎದುರ್ಗೊಳ್ಳು
ತ್ತಾರೆ.
೧೫ ಯಾಕಂದರೆ, ಕತ್ತಿಗಳ ಬಾಯಿಗೆ ಅವರು ಓಡಿ ಹೋಗುತ್ತಾರೆ;
ಬೀಸಿದ ಕತ್ತಿಯ ಮುಂದೆಯೂ,
ಬೊಗ್ಗಿದ ಬಿಲ್ಲಿನ ಮುಂದೆಯೂ,
ಯುದ್ಧದ ಕಾಠಿಣ್ಯದ ಮುಂದೆಯೂ, ಓಡಿ ಹೋಗುತ್ತಾರೆ.
೧೬ ಯಾಕಂದರೆ, ಕರ್ತನು ನನಗೆ ಹೀಗೆ ಹೇಳುತ್ತಾನೆ—
ಕೂಲಿಯವನ ವರುಷಗಳಂತೆ, ಇನ್ನೊಂದು ವರುಷಕ್ಕೊ
ಳಗಾಗಿ,
ಕೇದರನ ಮಹಿಮೆ ಎಲ್ಲಾ ಶೀರಿ ಹೋಗುವದು.
೧೭ ಮತ್ತು, ಕೇದರನ ಮಕ್ಕಳಲ್ಲಿ,
ಪರಾಕ್ರಮ ಶಾಲಿಗಳಾದ ಬಿಲ್ಲಿನವರ ಲೆಖ್ಖದ ಉಳುವು, ಸ್ವಲ್ಪಾ
ಗುವದು;
ಯಾಕಂದರೆ, ಇಸ್ರಯೇಲಿನ ದೇವರಾದ ಯೆಹೋವನು ಅದ
ನ್ನು ಹೇಳಿದ್ದಾನೆ.

## ೨೨. ಸಂಧಿ.

೧ ದರ್ಶನದ ತಗ್ಗಿನ ಭಾರವು.

ನಿನ್ನವರೆಲ್ಲರು ಮಾಳಿಗೆಗಳ ಮೇಲೆ ಏರುವ ಹಾಗೆ,
ಈಗ ನಿನಗೆ ಏನಾಯಿತು!
೨ ಗುಬಾರು ತುಂಬಿದವಳೇ!
ಗದ್ದಲದ ಪಟ್ಟಣವೇ! ಉಲ್ಲಾಸದ ಊರೇ!
ನಿನ್ನಲ್ಲಿ ಕೊಂದು ಹಾಕಲ್ಪಟ್ಟವರು,



ಕತ್ತಿಯಿಂದ ಕೊಂದು ಹಾಕಲ್ಪಟ್ಟವರಲ್ಲ;
ಯುದ್ಧದಲ್ಲಿ ಸತ್ತವರಲ್ಲ.
೩ ನಿನ್ನ ಮುಖ್ಯಸ್ಥರೆಲ್ಲರು ಕೂಡ ಓಡಿ ಹೋಗುತ್ತಾರೆ;
ಬಿಲ್ಲಿನವರು ಇಲ್ಲದೆ, ಬಂಧಿಸಲ್ಪಟ್ಟಿದ್ದಾರೆ;
ದೂರದಿಂದ ಓಡಿ ಬಂದು, ನಿನ್ನಲ್ಲಿ ಸಿಕ್ಕಿದವರೆಲ್ಲರು, ಕೂಡ
ಬಂಧಿಸಲ್ಪಟ್ಟಿದ್ದಾರೆ.
೪ ಆದದರಿಂದ ನಾನು ಹೇಳುವದೇನಂದರೆ—
ನನ್ನ ಕಡೆಯಿಂದ ವಾರೆಯಾಗಿ ನೋಡಿರಿ;
ನಾನು ಘೋರವಾಗಿ ಅಳುವೆನು;
ನನ್ನ ಜನರ ಮಗಳ ಹಾಳು ಸ್ಥಿತಿಯ ನಿಮಿತ್ತವೇ.
ನನಗೆ ಉಪಶಮನ ಮಾಡುವದಕ್ಕೆ ಪ್ರಯತ್ನ ಮಾಡ ಬೇಡಿರಿ.
೫ ಯಾಕಂದರೆ, ಸೈನ್ಯಗಳ ಕರ್ತನಾದ ಯೆಹೋವನಿಗೆ, ದರ್ಶನ
ದ ತಗ್ಗಿನಲ್ಲಿ,
ಕ್ರಮೆಯ, ತುಳಿದಾಟದ, ಗಲಿಬಿಲಿಯ, ದಿನವದೆ;
ಗೋಡೆ ಬಡೆಯೋಣವೂ,
ಪರ್ವತದ ಕಡೆಗೆ ಕೂಗೋಣವೂ, ಉಂಟಾಗುವದು.
೬ ಏಲಾಮಿನವರು, ಮನುಷ್ಯರ, ಕುದುರೆಗಳ, ರಥಗಳ ಸಂಗಡ,
ಬತ್ತಳಿಕೆಯನ್ನು ಹೊತ್ತುಕೊಂಡು ಬಂದರು.
ಕೀರಿನವರು ಡಾಲನ್ನು ಬಿಚ್ಚಿದರು.
೭ ಮತ್ತು ಆಗುವದೇನಂದರೆ,
ನಿನ್ನ ಉತ್ತಮವಾದ ತಗ್ಗುಗಳು ರಥಗಳಿಂದ ತುಂಬಿರುವವು,
ರಾಹುತರು ಬಾಗಲಿನ ಹತ್ತಿರ ಸಿದ್ಧ ಮಾಡಿಕೊಳ್ಳುವರು.
೮ ಅವನು ಯೆಹೂದದ ಮುಸುಕನ್ನು ತೆಗೆದಿದ್ದಾನೆ;
ಆ ದಿವಸದಲ್ಲಿ, ಅಡವಿ ಮನೆಯ ಯುದ್ಧ ಸಾಮಗ್ರಿಯ ಕಡೆಗೆ
ದೃಷ್ಟಿ ಇಡುತ್ತೀ.
೯ ಇದಲ್ಲದೆ, ದಾವೀದನ ಪಟ್ಟಣದಲ್ಲಿರುವ ಬೀಳುಗಳನ್ನು, ಅವು ಬಹಳ
ವೆಂದು ನೋಡುತ್ತೀರಿ;
ಮತ್ತು, ಕೆಳಗಿನ ಕೆರೆಯ ನೀರನ್ನು ಕೂಡಿಸುತ್ತೀರಿ.
೧೦ ಮತ್ತು, ಯೆರೂಸಲೇಮಿನ ಮನೆಗಳನ್ನು ಲೆಖ್ಖ ಮಾಡಿ,
ಕೋಟೆಯನ್ನು ಭದ್ರ ಮಾಡುವ ಬಗ್ಗೆ, ಮನೆಗಳನ್ನು ಒಡೆದು
ಹಾಕುತ್ತೀರಿ.
೧೧ ಮತ್ತು, ಹಳೇ ಕೆರೆಯ ನೀರಿಗೋಸ್ಕರ,
ಎರಡು ಗೋಡೆಗಳ ಮಧ್ಯದಲ್ಲಿ ಅಗಳತೆಯನ್ನು ಮಾಡುತ್ತೀರಿ.
ಆದರೆ ಅದನ್ನು ಮಾಡಿದವನನ್ನು ನೀವು ದೃಷ್ಟಿಸುವದಿಲ್ಲ;
ಅದನ್ನು ಪೂರ್ವದಲ್ಲಿ ಆಲೋಚಿಸಿದವನನ್ನು ನೋಡುವದಿಲ್ಲ.
೧೨ ಆ ದಿವಸದಲ್ಲಿ, ಸೈನ್ಯಗಳ ಕರ್ತನಾದ ಯೆಹೋವನು,
ಅಳ ಬೇಕೆಂದೂ, ದುಃಖಿಸ ಬೇಕೆಂದೂ,
ತಲೆ ಬೋಳಿಸಿ ಕೊಳ್ಳ ಬೇಕೆಂದೂ, ಗೋಣಿ ಕಟ್ಟಿ ಕೊಳ್ಳ
ಬೇಕೆಂದೂ, ಕರೆದನು;
೧೩ ಆದರೆ ಅಗೋ, ಉತ್ಸಾಹವೂ, ಸಂತೋಷವೂ,
ದನ ಕೊಲ್ಲುವದೂ, ಕುರಿ ಕೊಯ್ಯುವದೂ,
ಮಾಂಸ ಉಣ್ಣುವದೂ, ದ್ರಾಕ್ಷೆ ರಸ ಕುಡಿಯುವದೂ,
ಉಣ್ಣುವ, ಕುಡಿಯುವ, ನಾಳೆ ಸಾಯುತ್ತೇವೆ, ಅನ್ನುವದೂ,
ಇತ್ತು.
೧೪ ಆದದರಿಂದ, ಸೈನ್ಯಗಳ ಕರ್ತನು,
ನನ್ನ ಕಿವಿಗಳಲ್ಲಿ ಪ್ರಕಟ ಮಾಡಿದ್ದು ಏನಂದರೆ—
ನಿಶ್ಚಯವಾಗಿ ಈ ಅಕ್ರಮವು ನಿಮಗೆ,
ನೀವು ಸಾಯುವ ತನಕ, ಮನ್ನಿಸಲ್ಪಡುವದಿಲ್ಲವೆಂದು,
ಸೈನ್ಯಗಳ ಕರ್ತನಾದ ಯೆಹೋವನು ಹೇಳುತ್ತಾನೆ.
೧೫ ಸೈನ್ಯಗಳ ಕರ್ತನಾದ ಯೆಹೋವನು ಹೇಳುವದೇನಂದರೆ—
ನಡೆ, ಅರಮನೆಯ ಉಗ್ರಾಣದವನಾದ, ಆ ಮಂತ್ರಿಯಾಗಿರುವ,
ಶೆಬ್ನನ ಹತ್ತರ ಹೋಗಿ, ಹೀಗೆ ಹೇಳು, ಏನಂದರೆ—
೧೬ ನಿನಗೆ ಇಲ್ಲಿ ಏನು ಕೆಲಸ! ನಿನಗೆಇಲ್ಲಿ ಯಾರು!
ನೀನು, ಉನ್ನತದಲ್ಲಿ ತನಗೆ ಸಮಾಧಿಯನ್ನು ತೋಡಿಸಿ,
ಬಂಡೆಯಲ್ಲಿ ತನಗೆ ನಿವಾಸವನ್ನು ಕೆತ್ತಿಸುವವನ ಹಾಗೆ,
ನಿನಗೆ ಇಲ್ಲಿ ಸಮಾಧಿಯನ್ನು ತೋಡಿಸಿದಿ ಅಲ್ಲ?
೧೭ ಇಗೋ ಕರ್ತನು ನಿನ್ನನ್ನು ಬೀಸೇ ಬೀಸಿ ಹಾಕುವನು, ಬಲಿ
ಷ್ಠನೇ!
ಹಿಡಿದೇ ಹಿಡಿಯುವನು.
೧೮ ಸುತ್ತೇ ಸುತ್ತು ತಿರುಗಿಸಿ,
ಚಂಡಿನ ಹಾಗೆ ವಿಸ್ತಾರ ದೇಶಕ್ಕೆ ಹಾಕುವನು,
ಅಲ್ಲಿ ಸಾಯುವಿ,
ಅಲ್ಲಿ ನಿನ್ನ ಮಹಿಮೆಯ ರಥಗಳು ಇರುವವು,
ನಿನ್ನ ಯಜಮಾನನ ಮನೆಯ ನಿಂದೆಯೇ!
೧೯ ನೀನು ನಿಂತಲ್ಲಿಂದ ನಿನ್ನನ್ನು ನೂಕಿಸುತ್ತೇನೆ;
ನಿನ್ನ ಸ್ಥಾನದಲ್ಲಿಂದ ಅವನು ನಿನ್ನನ್ನು ಎಳಿಯುವನು.
೨೦ ಆ ದಿವಸದಲ್ಲಿ ಆಗುವದೇನಂದರೆ—
ನಾನು ಹಿಲ್ಕೀಯನ ಮಗನಾದ ನನ್ನ ಸೇವಕನಾದ,
ಎಲ್ಯಾಕೀಮನನ್ನು ಕರೆಯುವೆನು.
೨೧ ಅವನಿಗೆ ನಿನ್ನ ಅಂಗಿಯನ್ನು ತೊಡಿಸುತ್ತೇನೆ;
ನಿನ್ನ ನಡುಕಟ್ಟಿನಿಂದ ಅವನನ್ನು ಬಲ ಪಡಿಸುತ್ತೇನೆ;
ನಿನ್ನ ಅಧಿಕಾರವನ್ನು ಅವನ ಕೈಗೆ ಒಪ್ಪಿಸುತ್ತೇನೆ;
ಅವನು ಯೆರೂಸಲೇಮಿನ ನಿವಾಸಿಗಳಿಗೂ,
ಯೆಹೂದದ ಮನೆಯವರಿಗೂ, ತಂದೆಯಾಗಿರುವನು.
೨೨ ದಾವೀದನ ಮನೆಯ ಬೀಗದ ಕೈಯನ್ನು ಅವನ ಹೆಗಲಿನ ಮೇಲೆ
ಇಡುವೆನು.
ಯಾರೂ ಮುಚ್ಚದ ಹಾಗೆ ಅವನು ತೆರೆಯುವನು;
ಯಾರೂ ತೆರೆಯದ ಹಾಗೆ ಮುಚ್ಚುವನು.
೨೩ ನಾನು ಅವನನ್ನು ಭದ್ರವಾದ ಸ್ಥಳದಲ್ಲಿ ಮೊಳೆಯಾಗಿ ಹೊಡೆ
ಯುವೆನು;
ಅವನು ತನ್ನ ತಂದೆಯ ಮನೆಗೆ ಮಹಿಮೆಯುಳ್ಳ ಸಿಂಹಾಸನ
ವಾಗಿರುವನು.
೨೪ ಅವನ ತಂದೆಯ ಮನೆಯ ಮಹಿಮೆಯನ್ನೆಲ್ಲಾ,
ಉತ್ಪತ್ತಿಯನ್ನೂ, ಸಂತಾನವನ್ನೂ, ಸಣ್ಣ ಪಾತ್ರೆಗಳನ್ನೆಲ್ಲಾ,
ಬಟ್ಲುಗಳು ಮೊದಲ್ಗೊಂಡು ಎಲ್ಲಾ ಪಂಚಪಾತ್ರೆಗಳ ಮಟ್ಟಿಗೂ,
ಅವನ ಮೇಲೆ ತಗಲಿಸುವರು.
೨೫ ಸೈನ್ಯಗಳ ಕರ್ತನು ಹೇಳುವದೇನಂದರೆ—
ಆ ದಿವಸದಲ್ಲಿ ಭದ್ರವಾದ ಸ್ಥಳದಲ್ಲಿ ಹೊಡೆದ ಮೊಳೆ ತೆಗೆದು
ಹಾಕಲ್ಪಡುವದು;
ಅದು ಕೀಳಲ್ಪಟ್ಟು ಬೀಳುವದು;
ಅದರಲ್ಲಿ ಇದ್ದ ಭಾರವು ನಿರ್ಮೂಲವಾಗುವದು;
ಯಾಕಂದರೆ, ಕರ್ತನು ಅದನ್ನು ಹೇಳಿದ್ದಾನೆ.

## ೨೩. ಸಂಧಿ.

೧ ತೂರಿನ ಭಾರವು.

ತಾರ್ಷಿಷಿನ ಹಡಗಗಳೇ! ಹುಯಿಲಿಡಿರಿ.
ಯಾಕಂದರೆ, ಮನೆ ಇಲ್ಲದ ಹಾಗೆಯೂ, ಪ್ರವೇಶವಿಲ್ಲದ ಹಾಗೆಯೂ,
ಹಾಳಾಯಿತು.
ಕಿತ್ತಿಯರ ದೇಶದಿಂದ ಅವರಿಗೆ ತಿಳಿಯ ಮಾಡಲ್ಪಟ್ಟಿದೆ.
೨ ಸಮುದ್ರವನ್ನು ದಾಟುವ ಚಿದೋನಿನ ವರ್ತಕರು ತುಂಬಿಸಿದ
ದ್ವೀಪದ ನಿವಾಸಿಗಳೇ! ಮೌನವಾಗಿರ್ರಿ.
೩ ದೊಡ್ಡ ನೀರುಗಳಿಂದ ಸಿಹೋರಿನ ಧಾನ್ಯವೂ,
ನದಿಯ ಸುಗ್ಗಿಯೂ, ಅದಕ್ಕೆ ಆದಾಯವಾಗಿತ್ತು;
ಅದು ಜನಾಂಗಗಳ ಬಾಜಾರಾಗಿತ್ತು.
೪ ಚಿದೋನೇ! ನಾಚಿಕೆ ಪಡು.
ಯಾಕಂದರೆ, ಸಮುದ್ರವೂ, ಸಮುದ್ರದ ಕೋಟೆಯೂ, ಅನ್ನುವದೇನಂದರೆ—
ನಾನು ಪ್ರಸವ ವೇದನೆ ಪಡುವದಿಲ್ಲ, ಹೆರುವದಿಲ್ಲ;
ಯೌವನಸ್ಥರನ್ನು ಬೆಳೆಸುವದಿಲ್ಲ, ಕನ್ಯಾಸ್ತ್ರೀಯರನ್ನು ಸಾಕುವದಿಲ್ಲ.
೫ ಐಗುಪ್ತಿನ ಸುದ್ದಿಗೆ ಆದ ಹಾಗೆ,
ತೂರಿನ ಸುದ್ದಿಗೆ ವೇದನೆ ಪಡುವರು.
೬ ತಾರ್ಷಿಷಿಗೆ ದಾಟಿ ಹೋಗಿರಿ;
ದ್ವೀಪ ನಿವಾಸಿಗಳೇ! ಹುಯಿಲಿಡಿರಿ.
೭ ನಿಮ್ಮ ಉಲ್ಲಾಸದ ಪಟ್ಟಣವೂ;
ಪೂರ್ವ ದಿವಸಗಳಲ್ಲಿ ಹುಟ್ಟಿದ್ದೂ ಇದೋ!
ಸ್ವಂತ ಕಾಲುಗಳು ಅದನ್ನು ದೂರ ದೇಶದ ವಾಸಾಂತರಕ್ಕೆ ತಕ್ಕೊಂಡು ಹೋಗುವವು.
೮ ಕಿರೀಟ ಧರಿಸುವ ತೂರಿನ ವಿಷಯ,
ಈ ಆಲೋಚನೆ ಮಾಡಿದವರ್ಯಾರು!
ಅದರ ವರ್ತಕರು ಪ್ರಭುಗಳಾಗಿದ್ದರಲ್ಲ!
ಅದರ ವ್ಯಾಪಾರಸ್ಥರು ಭೂಮಿಯಲ್ಲಿ ಘನವುಳ್ಳವರಾಗಿದ್ದರಲ್ಲ!
೯ ಸೈನ್ಯಗಳ ಯೆಹೋವನೇ,
ಎಲ್ಲಾ ಸೌಂದರ್ಯದ ಗರ್ವವನ್ನು ಕೆಡಿಸುವದಕ್ಕೂ,
ಭೂಮಿಯಲ್ಲಿ ಘನವುಳ್ಳವರೆಲ್ಲರನ್ನು ಅವಮಾನ ಮಾಡುವದಕ್ಕೂ,
ಈ ಆಲೋಚನೆ ಮಾಡಿದ್ದಾನೆ.
೧೦ ತಾರ್ಷಿಷಿನ ಮಗಳೇ! ನದಿಯಂತೆ,
ನಿನ್ನ ದೇಶದಲ್ಲಿ ಹಾದು ಹೋಗು;
ಅಭ್ಯಂತರವು ಇನ್ನು ಇಲ್ಲ.
೧೧ ಕರ್ತನು ಸಮುದ್ರದ ಮೇಲೆ ಕೈ ಚಾಚಿ,
ರಾಜ್ಯಗಳನ್ನು ನಡುಗ ಮಾಡಿದ್ದಾನೆ;
ಕಾನಾನಿನ ವಿಷಯ,
ಅದರ ತ್ರಾಣ ಸ್ಥಾನಗಳನ್ನು ಹಾಳು ಮಾಡ ಬೇಕೆಂದು, ಅಪ್ಪಣೆ ಕೊಟ್ಟಿದ್ದಾನೆ.
೧೨ ಅವನು ಹೇಳಿದ್ದೇನಂದರೆ—
ಚಿದೋನಿನ ಮಗಳಾದ, ಕೆಡಿಸಲ್ಪಟ್ಟ ಕನ್ಯಾಸ್ತ್ರೀಯೇ!
ನೀನು ಇನ್ನು ಮೇಲೆ ಉಲ್ಲಾಸ ಪಡುವದಿಲ್ಲ,
ಏಳು, ಆಚೆಗೆ ಕಿತ್ತಿಯರ ಬಳಿಗೆ ಹೋಗು.
ಅಲ್ಲಿ ಸಹ ನಿನಗೆ ವಿಶ್ರಾಂತಿಯಾಗದು.
೧೩ ಇಗೋ, ಕಸ್ದೀಯರ ದೇಶವು!
ಈ ಜನವು ಇದ್ದಿಲ್ಲ;
ಅಶ್ಶೂರರು ಅದನ್ನು ಅರಣ್ಯ ನಿವಾಸಿಗಳಿಗೆ ಸ್ಥಾಪಿಸಿದರು;
ಅವರು ಅದರ ಕೋಟೆಗಳನ್ನು ಎಬ್ಬಿಸಿದರು;
ಅದರ ಅರಮನೆಗಳನ್ನು ಕಟ್ಟಿಸಿದರು;
ಇವಕೇ ಅದನ್ನು ಹಾಳು ಬೀಳ ಮಾಡಿದ್ದಾರೆ.
೧೪ ತಾರ್ಷಿಷಿನ ಹಡಗಗಳೇ! ಹುಯಿಲಿಡಿರಿ.
ಯಾಕಂದರೆ, ನಿಮ್ಮ ತ್ರಾಣಸ್ಥಾನವು ಹಾಳಾಯಿತು.

೧೫ ಆ ದಿವಸದಲ್ಲಿ ಆಗುವದೇನಂದರೆ—
ತೂರು ಒಬ್ಬ ಅರಸನ ದಿವಸಗಳ ಪ್ರಕಾರ,
ಎಪ್ಪತ್ತು ವರುಷ ಮರೆಯಲ್ಪಡುವದು;
ಎಪ್ಪತ್ತು ವರುಷಗಳಾದ ಮೇಲೆ,
ತೂರಿಗೆ ಸೂಳೆಯ ರಾಗದ ಹಾಗಾಗುವದು.
೧೬ ಕಿನ್ನರಿಯನ್ನು ತಕ್ಕೋ, ಊರಿನಲ್ಲಿ ಸುತ್ತಿಕೊ,
ಮರೆತು ಹೋದ ಸೂಳೆಯೇ!
ನೀನು ನೆನಪಾಗುವ ಹಾಗೆ,
ಚನ್ನಾಗಿ ಬಾರಿಸು; ಬಹಳವಾಗಿ ಹಾಡು.
೧೭ ಎಪ್ಪತ್ತು ವರುಷಗಳಾದ ಮೇಲೆ ಆಗುವದೇನಂದರೆ—
ಕರ್ತನು ತೂರನ್ನು ಪರಾಮರಿಸುವನು;
ಅದು ತಿರಿಗಿ ಅದರ ಆದಾಯವನ್ನು ಹೊಂದುವದು;
ಭೂಲೋಕದಲ್ಲಿರುವ ಎಲ್ಲಾ ರಾಜ್ಯಗಳ ಸಂಗಡ,
ಭೂಮಿಯ ಮೇಲೆ ಸೂಳೆತನ ಮಾಡುವದು.
೧೮ ಆದರೆ, ಅದರ ವ್ಯಾಪಾರವೂ, ಅದರ ಆದಾಯವೂ, ಕರ್ತನಿಗೆ ಪರಿಶುದ್ಧವಾಗುವದು;
ಅದನ್ನು ಬೊಕ್ಕಸದಲ್ಲಿ ಹಾಕುವದಿಲ್ಲ, ಇಟ್ಟುಕೊಳ್ಳುವದಿಲ್ಲ;
ಅದರ ವ್ಯಾಪಾರವು, ಕರ್ತನ ಮುಂದೆ ವಾಸ ಮಾಡುವವರಿಗೆ,
ಅವರು ಸಾಕಾದಷ್ಟು ಉಣ್ಣುವ ಹಾಗೆಯೂ, ಘನವಾಗಿ ಹೊದ್ದುಕೊಳ್ಳುವ ಹಾಗೆಯೂ, ಇರುವದು.

## ೨೪. ಸಂಧಿ.

೧ ಇಗೋ, ಕರ್ತನು ದೇಶವನ್ನು ಬರಿದೂ ಹಾಳೂ ಮಾಡುತ್ತಾನೆ;
ಅದನ್ನು ತಲೆ ಕೆಳಗಾಗಿ ಇಡುತ್ತಾನೆ;
ಅದರ ನಿವಾಸಿಗಳನ್ನು ಚದರಿಸುತ್ತಾನೆ.
೨ ಜನಕ್ಕೆ ಹ್ಯಾಗೋ, ಹಾಗೆಯೇ ಯಾಜಕನಿಗೆ;
ದಾಸನಿಗೆ ಹ್ಯಾಗೋ, ಹಾಗೆಯೇ ಅವನ ಯಜಮಾನನಿಗೆ;
ದಾಸಿಗೆ ಹ್ಯಾಗೋ, ಹಾಗೆಯೇ ಅವಳ ಧೊರೆತನಿಗೆ;
ಕೊಳ್ಳುವವನಿಗೆ ಹ್ಯಾಗೋ, ಹಾಗೆಯೇ ಮಾರುವವನಿಗೆ;
ಎರವು ಕೊಡುವವನಿಗೆ ಹ್ಯಾಗೋ, ಹಾಗೆಯೇ ತಕ್ಕೊಳ್ಳುವವನಿಗೆ;
ಬಡ್ಡಿ ಕೊಡುವವನಿಗೆ ಹ್ಯಾಗೋ, ಹಾಗೆಯೇ ತಕ್ಕೊಳ್ಳುವವನಿಗೆ ಆಗುವದು.
೩ ದೇಶವು ಬರಿದೇ, ಬರಿದಾಗುವದು;
ಕೊಳ್ಳೆಯೇ, ಕೊಳ್ಳೆಯಾಗುವದು;
ಯಾಕಂದರೆ, ಕರ್ತನು ಈ ಮಾತನ್ನು ಹೇಳಿದ್ದಾನೆ.



೪ ದೇಶವು ದುಃಖಿಸಿ ಬಾಡಿ ಹೋಗುತ್ತದೆ;
ಭೂಲೋಕವು ಕುಂದಿ ಬಾಡಿ ಹೋಗುತ್ತದೆ;
ದೇಶದ ಜನರಲ್ಲಿ ಉನ್ನತವಾದವರು ಕುಂದುತ್ತಾರೆ.
೫ ದೇಶವು ಸಹ ಅದರ ನಿವಾಸಿಗಳ ಕೆಳಗೆ ಅಪವಿತ್ರವಾಗಿದೆ;
ಯಾಕಂದರೆ, ಅವರು ನ್ಯಾಯಗಳನ್ನು ಮೀರಿ,
ನೇಮವನ್ನು ಬದಲಾಯಿಸಿ,
ನಿತ್ಯವಾದ ಒಡಂಬಡಿಕೆಯನ್ನು ಭಂಗ ಪಡಿಸಿದ್ದಾರೆ.
೬ ಆದದರಿಂದ ಶಾಪವು ದೇಶವನ್ನು ತಿಂದು ಬಿಡುತ್ತದೆ;
ಅದರಲ್ಲಿ ವಾಸವಾಗಿರುವವರು ಅಪರಾಧ ಹೊರುತ್ತಾರೆ;
ಆದದರಿಂದ ದೇಶದ ನಿವಾಸಿಗಳು ಬೆಂದು ಹೋಗುತ್ತಾರೆ;
ಉಳಿದವರು ಸ್ವಲ್ಪ ಮಂದಿಯೇ.
೭ ದ್ರಾಕ್ಷೆರಸ ದುಃಖಿಸುತ್ತದೆ;
ದ್ರಾಕ್ಷೆಬಳ್ಳಿ ಬಾಡುತ್ತದೆ;
ಹೃದಯದಲ್ಲಿ ಸಂತೋಷವುಳ್ಳವರೆಲ್ಲರು ನಿಟ್ಟುಸುರಿಡುತ್ತಾರೆ.
೮ ದಪ್ಪುಡಿಗಳ ಆನಂದ ಸ್ವರ ತೀರಿತು.
ಉಲ್ಲಾಸದವರ ಶಬ್ದ ನಿಂತಿತು;
ಕಿನ್ನರಿಯ ಆನಂದ ಸ್ವರ ತೀರಿತು.
೯ ಅವರು ರಾಗದ ಸಂಗಡ ದ್ರಾಕ್ಷೆರಸ ಕುಡಿಯುವದಿಲ್ಲ;
ಕುಡಿಯುವವರಿಗೆ ಮದ್ಯಪಾನ ಕಹಿಯಾಗುವದು.
೧೦ ಹಾಳಾದ ಪಟ್ಟಣವು ಮುರಿಯಲ್ಪಟ್ಟಿದೆ;
ಮನೆಗಳೆಲ್ಲಾ ಸೇರ ಕೂಡದ ಹಾಗೆ ಮುಚ್ಚಲ್ಪಟ್ಟಿವೆ.
೧೧ ದ್ರಾಕ್ಷೆರಸದ ವಿಷಯ ಬೀದಿಗಳಲ್ಲಿ ಕೂಗು ಅದೆ;
ಸಂತೋಷವೆಲ್ಲಾ ಅಸ್ತಮಾನವಾಯಿತು;
ದೇಶದ ಆನಂದವು ತೆಕೆಗೆ ಹೋಯಿತು.
೧೨ ಪಟ್ಟಣದಲ್ಲಿ ಹಾಳು ಉಳಿಯಿತು;
ಬಾಗಲು ತುಂಡುಗಳಾಗಿ ಬಡಿಯಲ್ಪಟ್ಟಿವೆ.
೧೩ ಭೂಮಿಯ ಮಧ್ಯದಲ್ಲಿ,
ಜನಗಳ ನಡುವೆ, ಹೀಗಾಗುವದು;
ಇಬ್ಬೆ ಬಡಿಯುವದರಲ್ಲಿಯೂ,
ದ್ರಾಕ್ಷೆ ಕೊಯಿದ ಮೇಲೆ ಹಣ್ಣು ಆರಿಸುವದರಲ್ಲಿಯೂ, ಆಗುವ ಪ್ರಕಾರವೇ.
೧೪ ಅವರು ತಮ್ಮ ಶಬ್ದಗಳನ್ನೆತ್ತಿ,
ಕರ್ತನ ಮಹತ್ತಿನ ನಿಮಿತ್ತ ಹಾಡುವರು;
ಸಮುದ್ರದ ಕಡೆಯಿಂದ ಆರ್ಭಟಿಸುವರು.
೧೫ ಆದದರಿಂದ ಪೆಂಕಿಯಲ್ಲಿ ಕರ್ತನಿಗೆ,
ಸಮುದ್ರದ ದ್ವೀಪಗಳಲ್ಲಿ ಇಸ್ರಯೇಲಿನ ದೇವರಾದ ಕರ್ತನ ಹೆಸರಿಗೆ,
ಮಹಿಮೆಯನ್ನು ಕೊಡಿರಿ.

೧೬ ನೀತಿವಂತನಿಗೆ ಮಹತ್ತೆಂದು,
ಭೂಮಿಯ ಅಂತ್ಯದಿಂದ ಹಾಡುಗಳನ್ನು ಕೇಳಿದ್ದೇವೆ;
ಆದರೆ ನಾನು—ನನಗೆ ಕ್ಷಯವೇ! ನನಗೆ ಕ್ಷಯವೇ! ನನಗೆ ಅಯ್ಯೋ!
ದ್ರೋಹಿಗಳು ದ್ರೋಹ ಮಾಡುತ್ತಾರೆ; ದ್ರೋಹಿಗಳು ಬಹು ದ್ರೋಹ ಮಾಡುತ್ತಾರೆಂದು ಹೇಳಿದೆನು.
೧೭ ದೇಶದ ನಿವಾಸಿಯೇ!
ಭಯವೂ, ಕೂಣಿಯೂ, ಬೋನೂ, ನಿನ್ನ ಮೇಲೆ ಅವೆ.
೧೮ ಆಗ ಭಯದ ಶಬ್ದಕ್ಕೆ ಓಡಿ ಹೋಗುವವನು,
ಕೂಣಿಯಲ್ಲಿ ಬೀಳುವನು;
ಕೂಣಿಯೊಳಗಿಂದ ಏರಿ ಬರುವವನು,
ಬೋನಿನಲ್ಲಿ ಸಿಕ್ಕುವನು;
ಯಾಕಂದರೆ, ಮೇಲಿನ ಕಿಟಕಿಗಳು ತೆಕೆಯಲ್ಪಟ್ಟಿವೆ;
ಭೂಮಿಯ ಅಸ್ತಿವಾರಗಳು ನಡುಗುತ್ತವೆ.
೧೯ ದೇಶವು ಮುರಿದೇ ಮುರಿಯಲ್ಪಟ್ಟಿದೆ;
ದೇಶವು ತುಂಡೇ ತುಂಡಾಗಿದೆ;
ದೇಶವು ಚಲಿಸೇ ಚಲಿಸಲ್ಪಟ್ಟಿದೆ.
೨೦ ದೇಶವು ಮತ್ತನ ಹಾಗೆ ಅಲ್ಲಾಡೇ ಅಲ್ಲಾಡುತ್ತದೆ;
ಮಂಚಿಗೆಯ ಹಾಗೆ ಬಡಿದಾಡುತ್ತದೆ;
ಅದರ ಅಪರಾಧವು ಅದರ ಮೇಲೆ ಭಾರವಾಗಿರುತ್ತದೆ;
ಅದು ಬಿದ್ದು, ಇನ್ನು ಮೇಲೆ ಏಳದು.

೨೧ ಆ ದಿವಸದಲ್ಲಿ ಆಗುವದೇನಂದರೆ—
ಕರ್ತನು ಉನ್ನತದಲ್ಲಿರುವ ಉನ್ನತವಾದವರ ಸೈನ್ಯವನ್ನೂ,
ಭೂಮಿಯ ಮೇಲಿರುವ ಭೂಮಿಯ ಅರಸರನ್ನೂ, ಶಿಕ್ಷಿಸುವನು.
೨೨ ಅವರು ತೆಕೆಗೋಸ್ಕರ ಕಟ್ಟಲ್ಪಟ್ಟವರ ಹಾಗೆ,
ಗುಂಪಾಗಿ ಕೂಡಿಸಲ್ಪಟ್ಟು,
ಬಂಧಕದಲ್ಲಿ ಬಂಧಿಸಲ್ಪಡುವರು;
ಬಹಳ ದಿವಸಗಳಾದ ಮೇಲೆ,
ಅವರ ಮೇಲೆ ಪರಾಮರಿಕೆ ಆಗುವದು.
೨೩ ಆಗ ಸೈನ್ಯಗಳ ಕರ್ತನು,
ಚಿಯೋನ್ ಪರ್ವತದಲ್ಲಿಯೂ, ಯೆರೂಸಲೇಮಿನಲ್ಲಿಯೂ,
ತನ್ನ ಹಿರಿಯರ ಮುಂದೆ ಮಹಿಮೆಯಾಗಿ ಆಳುವದರಿಂದ,
ಚಂದ್ರನು ಭ್ರಮೆ ಪಡುವನು, ಸೂರ್ಯನು ನಾಚಿಕೆ ಹೊಂದುವನು.

## ೨೫. ಸಂಧಿ.

೧ ಓ ಯೆಹೋವಾ! ನೀನೇ ನನ್ನ ದೇವರು;
ನಿನ್ನನ್ನು ಉನ್ನತ ಮಾಡುವೆನು; ನಿನ್ನ ಹೆಸರನ್ನು ಸ್ತುತಿಸುವೆನು;
ಯಾಕಂದರೆ, ಅದ್ಭುತಗಳನ್ನು ಮಾಡಿದ್ದೀ.
ನಿನ್ನ ಪೂರ್ವದ ಆಲೋಚನೆಗಳು, ನಂಬಿಕೆಯೂ, ಸತ್ಯವೂ, ಆಗಿವೆ.
೨ ಯಾಕಂದರೆ, ನೀನು ಪಟ್ಟಣವನ್ನು ಹಾಳಾಗಿಯೂ,
ಕೋಟೆಯಾದ ಊರನ್ನು ಬೀಳುವಿಕೆಯಾಗಿಯೂ,
ಅನ್ಯರ ಅರಮನೆಯನ್ನು ಪಟ್ಟಣವಲ್ಲದ ಹಾಗೆಯೂ, ಮಾಡಿದ್ದೀ;
ಅದು ಎಂದೆಂದಿಗೂ ಕಟ್ಟಲ್ಪಡುವದಿಲ್ಲ.
೩ ಆದದರಿಂದ ಬಲವುಳ್ಳ ಜನರು ನಿನ್ನನ್ನು ಮಹಿಮೆ ಪಡಿಸುವರು;
ಭಯಂಕರ ಜನಗಳ ಪಟ್ಟಣವು ನಿನಗೆ ಅಂಜುವದು.
೪ ಯಾಕಂದರೆ, ನೀನು ದೀನನಿಗೆ ತ್ರಾಣಸ್ಥಾನವೂ,
ದರಿದ್ರನಿಗೆ, ಅವನಿಗೆ ಇಕ್ಕಟ್ಟಾಗಿರುವಾಗ, ತ್ರಾಣಸ್ಥಾನವೂ,
ಭಯಂಕರರ ಶ್ವಾಸವು, ಗೋಡೆಗೆ ಬಡಿಯುವ ಬಿರುಗಾಳಿಯಂತಿರುವಾಗ,
ಬಿರುಗಾಳಿಗೋಸ್ಕರ ಆಶ್ರಯವೂ, ಬಿಸಲಿಗೋಸ್ಕರ ನೆರಳೂ, ಆಗಿದ್ದೀ.

೫ ಒಣಗಿದ ಸ್ಥಳದಲ್ಲಿ ಬಿಸಲಿನ ಹಾಗೆ,
ಅನ್ಯರ ಗದ್ದಲವನ್ನು ತಗ್ಗಿಸುವಿ;
ಮೇಘದ ನೆರಳಿನಿಂದ ಬಿಸಲಿನ ಹಾಗೆ,
ಭಯಂಕರರ ಜಯರಾಗವು ಅಡಗಿಸಲ್ಪಡುವದು.

೬ ಮತ್ತು ಸೈನ್ಯಗಳ ಕರ್ತನು,
ಈ ಪರ್ವತದಲ್ಲಿ ಎಲ್ಲಾ ಜನಗಳಿಗೆ,
ಕೊಬ್ಬಿದವುಗಳ ಔತಣವನ್ನೂ,
ರಾಡಿಯುಳ್ಳ ದ್ರಾಕ್ಷಿರಸಗಳ ಔತಣವನ್ನೂ,
ಮೂಳೆ ಕೊಬ್ಬನ್ನೂ, ಶೋಧಿಸಿದ ರಾಡಿಯ ದ್ರಾಕ್ಷಿರಸವನ್ನೂ,
ಸಿದ್ಧ ಮಾಡುವನು.
೭ ಮತ್ತು ಈ ಪರ್ವತದಲ್ಲಿ,
ಎಲ್ಲಾ ಜನಗಳನ್ನು ಮುಚ್ಚುವ ಮುಸುಕನ್ನೂ,
ಎಲ್ಲಾ ಜನಾಂಗಗಳ ಮೇಲೆ ಹಾಕಲ್ಪಟ್ಟ ತೆರೆಯನ್ನೂ,
ತೆಗೆದು ಹಾಕುವನು.
೮ ಮರಣವನ್ನು ನಿತ್ಯವಾಗಿ ನಾಶ ಮಾಡುವನು.
ಮತ್ತು ಕರ್ತನಾದ ಯೆಹೋವನು,
ಎಲ್ಲಾ ಮುಖಗಳಲ್ಲಿರುವ ಕಣ್ಣೀರನ್ನು ಒರಸಿ ಬಿಡುವನು;
ಮತ್ತು ತನ್ನ ಜನರ ನಿಂದೆಯನ್ನು,
ಸಮಸ್ತ ಭೂಮಿಯ ಮೇಲಿನಿಂದ ತೆಗೆದು ಹಾಕುವನು;
ಯಾಕಂದರೆ, ಕರ್ತನು ಅದನ್ನು ಹೇಳಿದ್ದಾನೆ.
೯ ಆ ದಿವಸದಲ್ಲಿ ಹೇಳಲ್ಪಡುವದೇನಂದರೆ—
ಇಗೋ, ಇವನು ನಮ್ಮ ದೇವರು.
ಇವನನ್ನು ನಿರೀಕ್ಷಿಸಿದ್ದೇವೆ; ನಮ್ಮನ್ನು ರಕ್ಷಿಸುವನು;
ಇವನೇ ಕರ್ತನು; ಇವನನ್ನು ನಿರೀಕ್ಷಿಸಿದ್ದೇವೆ;
ಇವನ ರಕ್ಷಣೆಯಲ್ಲಿ ಹರ್ಷಿಸಿ, ಸಂತೋಷ ಪಡುವೆವು.

೧೦ ಯಾಕಂದರೆ, ಈ ಪರ್ವತದಲ್ಲಿ ಕರ್ತನ ಕೈ ವಿಶ್ರಮಿಸಿ ಕೊಳ್ಳುವದು;
ಮತ್ತು, ಹುಲ್ಲನ್ನು ಶಿಟ್ಟೆನೀರಿನಲ್ಲಿ ತುಳಿಯುವಂತೆ,
ಮೋವಾಬು, ಅವನ ಕೆಳಗೆ ತುಳಿಯಲ್ಪಡುವದು.
೧೧ ಈಜುವವನು ಈಜುವದಕ್ಕೆ ಕೈ ಚಾಚುವ ಪ್ರಕಾರ,
ಅದರಲ್ಲಿ ಕೈಗಳನ್ನು ಚಾಚುವನು;
ಅವನ ಗರ್ವವನ್ನೂ,
ಅವನ ಕೈಗಳ ಕೊಳ್ಳೆಯ ಸಂಗಡ, ತಗ್ಗಿಸುವನು.
೧೨ ಮತ್ತು ನಿನ್ನ ಗೋಡೆಗಳ ಉದ್ದವಾದ ಕೋಟೆಯನ್ನು,
ಅವನು ನೆಲಕ್ಕೂ, ಧೂಳಿಗೂ,
ತಗ್ಗಿಸಿ, ಇಳಿಸುವನು.

## ೨೬. ಸಂಧಿ.

೧ ಆ ದಿವಸದಲ್ಲಿ,
ಯೆಹೂದ ದೇಶದಲ್ಲಿ, ಈ ಹಾಡನ್ನು ಹಾಡುವರು—
ನಮಗೆ ಬಲವುಳ್ಳ ಪಟ್ಟಣ ಉಂಟು,
ಗೋಡೆಗಳಿಗಾಗಿಯೂ, ಅಲಂಗಕ್ಕಾಗಿಯೂ,
ದೇವರು ರಕ್ಷಣೆಯನ್ನು ಇರಿಸಿದ್ದಾನೆ.
೨ ಬಾಗಲುಗಳನ್ನು ತೆರೆಯಿರಿ;
ಸತ್ಯವನ್ನು ಕೈ ಕೊಳ್ಳುವ,
ನೀತಿಯುಳ್ಳ ಜನಾಂಗವು, ಪ್ರವೇಶಿಸಲಿ!
೩ ದೃಢ ಮನಸ್ಸುಳ್ಳವನನ್ನು,
ಪೂರ್ಣ ಸಮಾಧಾನದಲ್ಲಿ ಕಾಯುವಿ;
ಯಾಕಂದರೆ, ನಿನ್ನಲ್ಲಿ ನಂಬಿಕೆ ಇಡುತ್ತಾನೆ.
೪ ಕರ್ತನಲ್ಲಿ ಎಂದೆಂದಿಗೂ ನಂಬಿಕೆ ಇಡಿರಿ;
ಯಾಕಂದರೆ, ಕರ್ತನಾದ ಯೆಹೋವನಲ್ಲಿ,
ನಿತ್ಯವಾದ ಬಲ ಉಂಟು.
೫ ಯಾಕಂದರೆ, ಅವನು ಉನ್ನತದಲ್ಲಿ ವಾಸ ಮಾಡುವವರನ್ನು ಇಳಿಸಿದ್ದಾನೆ;
ಎತ್ತರವಾದ ಪಟ್ಟಣವನ್ನು ತಗ್ಗಿಸಿದ್ದಾನೆ;
ನೆಲದ ಪರ್ಯಂತರ ತಗ್ಗಿಸಿ,
ಧೂಳಿಯ ಪರ್ಯಂತರ ಇಳಿಸಿದ್ದಾನೆ.
೬ ಕಾಲೂ, ಹೌದು, ಬಡವರ ಕಾಲುಗಳೂ,
ದೀನರ ಪಾದಗಳೂ, ಅದನ್ನು ತುಳಿಯುವವು;
೭ ನೀತಿವಂತನ ಹಾದಿ ಯಥಾರ್ಥವೇ;
ಓ ಯಥಾರ್ಥನೇ! ನೀನು ನೀತಿವಂತನ ದಾರಿಯನ್ನು ತೂಗ ನೋಡುತ್ತೀ.
೮ ಹೌದು, ನಿನ್ನ ನ್ಯಾಯಗಳ ಹಾದಿಯಲ್ಲಿ, ಕರ್ತನೇ!
ನಿನ್ನನ್ನು ಎದುರು ನೋಡಿದ್ದೇವೆ;
ನಿನ್ನ ಹೆಸರಿನ, ನಿನ್ನ ನೆನಪಿನ ಕಡೆಗೆ,
ನಮ್ಮ ಆತ್ಮದ ಆಶೆ ಉಂಟು.
೯ ನನ್ನ ಪ್ರಾಣದಿಂದ, ನಿನ್ನನ್ನು ರಾತ್ರಿಯಲ್ಲಿ ಬಯಸಿದ್ದೇನೆ;
ನನ್ನಲ್ಲಿರುವ ನನ್ನ ಆತ್ಮದಿಂದ, ನಿನ್ನನ್ನು ಹೊತ್ತಾಕೆಯಲ್ಲಿ ಹುಡುಕಿದ್ದೇನೆ;
ಯಾಕಂದರೆ, ಭೂಮಿಗೆ ನಿನ್ನ ನ್ಯಾಯಶಿಕ್ಷೆಗಳು ಉಂಟಾಗುವಾಗಲೇ,
ಭೂಲೋಕದ ನಿವಾಸಿಗಳು ನೀತಿಯನ್ನು ಕಲಿಯುತ್ತಾರೆ.
೧೦ ದುಷ್ಟನಿಗೆ ಕನಿಕರ ತೋರಿಸಿದರೂ,
ಅವನು ನೀತಿಯನ್ನು ಕಲಿಯುವದಿಲ್ಲ;
ನೆಟ್ಟಗಾದ ದೇಶದಲ್ಲಿ ಅವನು ಅನ್ಯಾಯ ಮಾಡಿ,
ಕರ್ತನ ಮಹತ್ತನ್ನು ನೋಡುವದಿಲ್ಲ.
೧೧ ಕರ್ತನೇ, ನಿನ್ನ ಕೈ ಎತ್ತಿ ಇರಲು, ಅವರು ನೋಡುವದಿಲ್ಲ;
ಆದರೆ ಅವರು ನೋಡಿ,
ನಿನ್ನ ಜನರಿಗೋಸ್ಕರ ಹೊಟ್ಟೆ ಕಿಚ್ಚು ಪಟ್ಟದ್ದಕ್ಕೆ ನಾಚಿಕೆ ಹೊಂದುವರು;
ಹೌದು, ನಿನ್ನ ವೈರಿಗಳಿಗೆ ವಿರೋಧವಾದ ಬೆಂಕಿ,
ಅವರನ್ನು ತಿಂದು ಬಿಡುವದು.
೧೨ ಕರ್ತನೇ ನೀನು ನಮಗೆ ಸಮಾಧಾನವನ್ನು ನೇಮಿಸುವಿ;
ಯಾಕಂದರೆ, ನೀನೇ ನಮ್ಮ ಕ್ರಿಯೆಗಳನ್ನೆಲ್ಲಾ ನಮಗೋಸ್ಕರ ನಡಿಸಿದ್ದೀ.
೧೩ ನಮ್ಮ ದೇವರಾದ ಯೆಹೋವನೇ!
ನೀನಲ್ಲದೆ, ಬೇರೆ ಕರ್ತರು ನಮಗೆ ಯಜಮಾನರಾದರು;



ಆದರೆ ನಿನ್ನನ್ನು, ನಿನ್ನ ಹೆಸರನ್ನೇ, ಜ್ಞಾಪಕ ಮಾಡಿ ಕೊಳ್ಳುವೆವು.
೧೪ ಅವರು ಸತ್ತರು, ಬದುಕುವದಿಲ್ಲ;
ಹೆಣಗಳಾದರು, ಏಳುವದಿಲ್ಲ;
ನೀನು ಅವರನ್ನು ದೃಷ್ಟಿಸಿ, ನಾಶನ ಮಾಡಿ,
ಅವರ ಜ್ಞಾಪಕವೆಲ್ಲಾ ಇಲ್ಲವಾಗ ಮಾಡಿದ್ದದಿಂದಲೇ.
೧೫ ಜನಾಂಗವನ್ನು ಹೆಚ್ಚಿಸಿದ್ದೀ, ಕರ್ತನೇ!
ಜನಾಂಗವನ್ನು ಹೆಚ್ಚಿಸಿದ್ದೀ;
ಘನವನ್ನು ಹೊಂದಿದ್ದೀ;
ದೇಶದ ಎಲ್ಲಾ ಪ್ರಾಂತ್ಯಗಳನ್ನು ವಿಶಾಲ ಮಾಡಿದ್ದೀ.
೧೬ ಕರ್ತನೇ! ಇಕ್ಕಟ್ಟಿನಲ್ಲಿ ನಿನ್ನನ್ನು ಹುಡಿಕಿದರು;
ನಿನ್ನ ಶಿಕ್ಷೆ ಅವರಿಗಿರುವಾಗ, ಪ್ರಾರ್ಥನೆ ಹೊಯಿದರು.
೧೭ ಬಸುರಾದ ಸ್ತ್ರೀಯು ಹೆರುವದಕ್ಕೆ ಸಮೀಪ ಬಂದಾಗ,
ನೋವಿನಲ್ಲಿದ್ದು, ತನ್ನ ಬೇನೆಯಲ್ಲಿ ಹ್ಯಾಗೆ ಕೂಗುವಳೋ,
ಹಾಗೆ, ಕರ್ತನೇ, ನಾವು ನಿನ್ನ ಸಮುಖದಲ್ಲಿ ಇದ್ದೆವು.
೧೮ ಬಸುರಾಗಿದ್ದೆವು; ನೋವಿನಲ್ಲಿದ್ದೆವು;
ಘಾಳಿಯನ್ನು ಹೆತ್ತ ಹಾಗೆ ಇದ್ದೇವೆ;
ನಾವು ದೇಶಕ್ಕೆ ರಕ್ಷಣೆಯನ್ನು ಉಂಟು ಮಾಡಲಿಲ್ಲ;
ಮತ್ತು ಭೂಲೋಕದ ನಿವಾಸಿಗಳು ಬೀಳಲಿಲ್ಲ.
೧೯ ನಿನ್ನ ಸತ್ತವರು ಬದುಕುವರು,
ನನ್ನ ಹೆಣಗಳು ಏಳುವವು;
ಧೂಳಿನ ನಿವಾಸಿಗಳೇ! ಎಚ್ಚತ್ತು ಹರ್ಷಿಸಿರಿ;
ಯಾಕಂದರೆ, ನಿನ್ನ ಮಂಜು ಪಲ್ಯಗಳ ಮಂಜಿನ ಹಾಗಿದೆ;
ಭೂಮಿಯು ತನ್ನ ಸತ್ತವರನ್ನು ಹೊರಡಿಸುವದು.

೨೦ ನನ್ನ ಜನವೇ! ಬನ್ನಿ;
ನಿನ್ನ ಕೊಟ್ಟಿಡಿಗಳಲ್ಲಿ ಸೇರು;
ನಿನ್ನ ಹಿಂದೆ ನಿನ್ನ ಬಾಗಲನ್ನು ಮುಚ್ಚು;
ಶಿಟ್ಟು ಹಾದು ಹೋಗುವ ಪರ್ಯಂತರ,
ಕ್ಷಣ ಮಾತ್ರ ಅಡಗಿಕೋ.
೨೧ ಯಾಕಂದರೆ, ಇಗೋ, ಭೂನಿವಾಸಿಗಳ ಅಕ್ರಮವನ್ನು ಶಿಕ್ಷಿಸುವದಕ್ಕಾಗಿ,
ಕರ್ತನು ತನ್ನ ಸ್ಥಳದಿಂದ ಹೊರಡುತ್ತಾನೆ;
ಭೂಮಿಯು ತನ್ನಲ್ಲಿ ಕೊಂದು ಹಾಕಿದವರನ್ನು ಇನ್ನು ಮುಚ್ಚಿ ಕೊಳ್ಳದೆ,
ತನ್ನಲ್ಲಿರುವ ರಕ್ತಾಪರಾಧವನ್ನು ಪ್ರಕಟಿ ಮಾಡುವದು.

## ೨೭. ಸಂಧಿ.

೧ ಆ ದಿವಸದಲ್ಲಿ ಕರ್ತನು,
ತನ್ನ ಕಠಿಣವಾದ ದೊಡ್ಡ ಬಲವಾದ ಕತ್ತಿಯಿಂದ,
ಓಡುವ ಸರ್ಪವಾದ ಲೆವಿಯಾತಾನವನ್ನೂ,
ಸುತ್ತಿಕೊಳ್ಳುವ ಸರ್ಪವಾದ ಲೆವಿಯಾತಾನವನ್ನೂ, ದಂಡಿಸಿ,
ಸಮುದ್ರದಲ್ಲಿರುವ ಗಡ ಸರ್ಪವನ್ನು ಕೊಂದು ಹಾಕುವನು.
೨ ಆ ದಿವಸದಲ್ಲಿ, ಶ್ರೀಯಾದ ದ್ರಾಕ್ಷಿರಸವುಳ್ಳ ತೋಟದ ವಿಷಯ ಅವಳಿಗೆ ಹಾಡಿರಿ.
೩ ಕರ್ತನಾದ ನಾನೇ ಅದನ್ನು ಕಾಯುತ್ತೇನೆ;
ಕ್ಷಣ ಕ್ಷಣದಲ್ಲಿ ಅದಕ್ಕೆ ನೀರು ಹಾಕುತ್ತೇನೆ;
ಯಾರೂ ಅದಕ್ಕೆ ಕೇಡನ್ನು ಮಾಡದ ಹಾಗೆ,
ರಾತ್ರಿ ಹಗಲು ಅದನ್ನು ಕಾಯುತ್ತೇನೆ.
೪ ಶಿಟ್ಟು ನನ್ನಲ್ಲಿ ಇಲ್ಲ;
ಯಾವನಾದರೂ ಮುಳ್ಳು ದಟ್ಟೂರಿಗಳನ್ನು ನನಗೆ ವಿರೋಧವಾಗಿ ಯುದ್ಧಕ್ಕೆ ಇಟ್ಟರೆ,
ನಾನು ಅವುಗಳನ್ನು ಹಾದು ಹೋಗಿ,
ಅವುಗಳಿಗೆ ಕೂಡ ಬೆಂಕಿ ಹಚ್ಚುವೆನು.
೫ ಇಲ್ಲದಿದ್ದರೆ, ಅವನು ನನ್ನ ಆಶ್ರಯವನ್ನು ಹಿಡು ಕೊಂಡು,
ನನ್ನ ಸಂಗಡ ಸಮಾಧಾನವನ್ನು ಮಾಡಿ ಕೊಳ್ಳಲಿ,
ಸಮಾಧಾನವನ್ನು ನನ್ನ ಸಂಗಡ ಮಾಡಿ ಕೊಳ್ಳುವನು.

೬ ಬರುವ ಕಾಲದಲ್ಲಿ, ಯಾಕೋಬನು ಬೇರೂರಿ,
ಇಸ್ರಯೇಲನು ಹೂವರಳಿ ಚಿಗುರುವನು;
ಅವರು ಭೂಲೋಕದ ಮೇಲ್ಭಾಗವನ್ನು ಫಲದಿಂದ ತುಂಬಿಸುವರು.
೭ ಅವನನ್ನು ಹೊಡೆದವನನ್ನು ಹೊಡೆದ ಪ್ರಕಾರ,
ಅವನನ್ನು ಹೊಡೆದನೋ!
ಇಲ್ಲವೇ ಅವನಿಂದ ಕೊಲ್ಲಲ್ಪಟ್ಟವರು ಕೊಲ್ಲಲ್ಪಟ್ಟ ಪ್ರಕಾರ,
ಅವನನ್ನು ಕೊಂದನೋ!
೮ ಮಿತಿಯಾಗಿಯೇ, ಅವಳನ್ನು ಕಳುಹಿಸಿ ಬಿಡುವಾಗ,
ಅವಳ ಸಂಗಡ ವಿವಾದ ಮಾಡಿದಿ;
ತನ್ನ ಬಲವಾದ ವಾಯುವಿನಿಂದ, ಮೂಡಣ ಘಾಳಿಯ ದಿವಸದಲ್ಲಿ,
ಅವಳನ್ನು ತಕ್ಕೊಂಡು ಹೋದನು.
೯ ಆದಕಾರಣ, ಇದರಿಂದ ಯಾಕೋಬನ ಅಕ್ರಮಕ್ಕೆ,
ಪ್ರಾಯಶ್ಚಿತ್ತವಾಗುವದು.
ಅದರ ಫಲವೆಲ್ಲಾ ಇದೇ—
ಅವನ ಪಾಪವನ್ನು ತೆಗೆದು ಹಾಕುವದೇ.
ಅವನು ಬಲಿಪೀಠದ ಕಲ್ಲುಗಳನ್ನೆಲ್ಲಾ,
ಒಡೆದು ಹೋದ ಸುಣ್ಣದ ಕಲ್ಲುಗಳಂತೆ ಮಾಡುವಾಗ,
ತೋಪುಗಳೂ, ಸೂರ್ಯ ಸ್ತಂಭಗಳೂ, ಏಳುವದಿಲ್ಲ.
೧೦ ಯಾಕಂದರೆ, ಕೋಟೆಯಾದ ಪಟ್ಟಣವು ಏಕಾಂತವಾಗಿದೆ.
ಅದು ಅರಣ್ಯದ ಹಾಗೆ, ಬಿಡಲ್ಪಟ್ಟು ತಳ್ಳಿದ ನಿವಾಸವು;
ಅಲ್ಲಿ ಕರುಗಳು ಮೇಯಿದು, ಮಲಗಿ ಕೊಂಡು,
ಅದರಲ್ಲಿರುವ ಕೊಂಬೆಗಳನ್ನು ತಿಂದು ಬಿಡುವವು.
೧೧ ಅದರ ಕೊಂಬೆಗಳು ಒಣಗಲು ಮುರಿಯಲ್ಪಡುವವು;
ಹೆಂಗಸರು ಬಂದು, ಅವುಗಳಿಂದ ಬೆಂಕಿ ಹಚ್ಚುವರು;
ಯಾಕಂದರೆ, ಅದು ವಿವೇಕವುಳ್ಳ ಜನವಲ್ಲ;
ಆದದರಿಂದ ಅವರನ್ನು ಮಾತಿದವನು ಅವರಿಗೆ ಕನಿಕರ ತೋರಿಸುವದಿಲ್ಲ;
ಅವರನ್ನು ರೂಪಿಸಿದವನು ಅವರನ್ನು ಕರುಣಿಸುವದಿಲ್ಲ.
೧೨ ಆ ದಿವಸದಲ್ಲಿ ಆಗುವದೇನಂದರೆ—
ಕರ್ತನು ನದಿಯ ಕಾಲಿವೆ ಮೊದಲುಗೊಂಡು,
ಐಗುಪ್ತದ ಹಳ್ಳದ ಪರ್ಯಂತರ, ಬಡಿಯುವನು;

ಮತ್ತು ಇನ್ನಯೇಲನ ಮಕ್ಕಳಾದ ನೀವು,
ಒಬ್ಬೊಬ್ಬರಾಗಿ ಒಯ್ಯಲ್ಪಡುವಿರಿ.
೧೩ ಆ ದಿವಸದಲ್ಲಿ ಆಗುವದೇನಂದರೆ—
ಕೊಂದ ಕುತೂರಿಯು ಉದಲ್ಪಡುವದು;
ಆಗ ಅಮ್ಮೂರಿನ ಪೇಟದಲ್ಲಿ ಕಳ್ಳಕೊಂಡವರೂ,
ವಸ್ತ್ರ ಹೇಳದಲ್ಲಿರುವ ಕಳ್ಳಪಟ್ಟವರೂ, ಬಂದು,
ಬಾಯಿದ್ದ ವರತರ ಮೇಲೆ,
ಯೆರೂಷಲೇಮಿನಲ್ಲಿ ಕರ್ತನಿಗೆ ಅಡ್ಡ ಬೀಳುವರು.

೨೨. ಸಂಧಿ.

೧ ಎಫ್ರಾಯೀಮನ ಮತ್ತನ ಗರ್ವದ ಕಿರೀಟಿಕ್ಕೆ ಅಯ್ಯೋ!
ದ್ರಾಕ್ಷಿಸಾರಿಯ ಅಮಲಾದವರ,
ಕೊಬ್ಬಿದ್ದ ಕೊಣ ಕಣಿಯ ಮೇಲಿರುವ,
ಅವರ ಅಲಂಕಾರ ಸೌಂದರ್ಯವು, ಬಾಡುವ ಹೂವಾಗಿದೆ.
೨ ಇಗೊ, ಕರ್ತನಿಗೆ ಒಬ್ಬ ಬಲಿಷ್ಠನೂ, ಶ್ರಾಣವುಳ್ಳವನೂ,
ಇದ್ದಾನೆ;
ಅವನು ಕುಸ್ತಿಯ ಬಿರುಗಾಳಿಯೂ,
ಕೊಚ್ಚಿಹೋಗುವ ಸುಳಿ ಘಾಳಿಯೂ ಆಗಿರುವ
ಪ್ರಳಯದ ಹಾಗೂ ಕೊಚ್ಚಿ ನೀರುಗಳನ್ನು ಕುಡಿಸುವ ಬಿರುಗಾಳಿ
ಯೂ ಆಗಿರುವನು.
ಅವನು ಕೈಯಿಂದ ಇಳಿಸಿ ಕೆಡವುವನು.
3 ಎಫ್ರಾಯೀಮನ ಮತ್ತನ ಗರ್ವದ ಕಿರೀಟವು,
ಕಾಲಿನಲ್ಲಿ ತುಳಿಯಲ್ಪಡುವದು.
೪ ಮತ್ತನ ಕೊಬ್ಬಿದ್ದ ಕಣಿಯ ಮೇಲಿರುವ,
ಬಾಡುವ ಹೂವಾದ ಅವರ ಅಲಂಕಾರ ಸೌಂದರ್ಯವು,
ಸುಗ್ಗಿ ಮುಂಚೆ ಹಣ್ಣಿನ ಹಣ್ಣಿನ ಹಾಗಿರುವದು.
ಅದನ್ನು ನೋಡುವಾತನು ಕೈಯಿದ ಕೂಡಲೆ,
ಕಬಳಿಸಿಬಿಡುವಾಗಲೆ, ಬಂದು ಬಿಡುವನು.

೫ ಆ ದಿವಸದಲ್ಲಿ ಸೈನ್ಯಗಳ ಕರ್ತನು,
ತನ್ನ ಜನರ ಉಳಿಕೆಗೆ,
ಅಲಂಕಾರ ಕಿರೀಟವೂ, ಸೌಂದರ್ಯದ ಮಾಲೆಯೂ,
೬ ನ್ಯಾಯತೀರ್ಪಿನ ಕುಳಿತ ಕೆಲಸಕ್ಕೆ,
ನ್ಯಾಯತೀರ್ಪಿನ ಆತ್ಮನೂ,
ಬಾಗಿಲ ಕಡೆಗೆ ಯುದ್ಧವನ್ನು ತಿರುಗಿಸುವವರಿಗೆ, ಶಾಂತಿ
ಕೊಡುವ,
ಆಗುವನು.
೭ ಅವರು ಇಲ್ಲಿ ಮತ್ತನ ದ್ರಾಕ್ಷಿಕಾರಸದಿಂದ ಕೆಟ್ಟು,
ಮದ್ಯದಿಂದ ತೂಗಿ ತೂಗಾಡುತ್ತಾರೆ;
ಪ್ರವಾದಿಯ ಪ್ರಕಾರದಿಂದ ಮದ್ಯದಿಂದ ಕೆಟ್ಟು,
ದ್ರಾಕ್ಷಾರಸ ಕುಡಿದು, ಮದ್ಯದಿಂದ ತೂಗಿ ತೂಗಾಡುತ್ತಾರೆ;
ದರ್ಶನದಲ್ಲಿ ತಪ್ಪುತ್ತಾರೆ, ನ್ಯಾಯ ತೀರ್ಪಿನಲ್ಲಿ ತಪ್ಪುವರು
ಕೆಟ್ಟರು,
೮ ಮೇಜುಗಳು, ತುಂಬಾ ಕೆಟ್ಟಿವೆ,
ಕೊಳೆಯಿಲ್ಲದ ಸ್ಥಳವಿಲ್ಲ.

ಸ್ಥಳ ಉಳಿಯದ ಹಾಗೆ,
ಅಸಹ್ಯವಾದ ವಾಂತಿಯಿಂದ ತುಂಬಿಯೆವೆ.
೯ ಯಾರಿಗೆ ಬುದ್ಧಿಯನ್ನು ಕಲಿಸುವನು?
ಯಾರಿಗೆ ಕೃತಿಯನ್ನು ತಿಳಿಸುವನು?
ಹಾಲು ತೆಗೆದವರಿಗೆ,
ಮೊಲೆ ಬಿಡಿಸಿದವರಿಗೆ;
೧೦ ಹ್ಯಾಗಂದರೆ—ಅಜ್ಜೆಗೆ ಅಜ್ಜೆ, ಅಜ್ಜೆಗೆ ಅಜ್ಜೆ;
ಸೂತ್ರಕ್ಕೆ ಸೂತ್ರ, ಸೂತ್ರಕ್ಕೆ ಸೂತ್ರ;
ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ.

೧೦ ನಿಜವಾಗಿ ಕೊಂದು ಮಾತುಗಳಿಂದಲೂ, ಅನ್ಯವಾದ
ನಾಲಿಗೆಯಿಂದಲೂ,
ಈ ಜನರ ಸಂಗಡ ಮಾತಾಡುವನು.
೧೧ ಇದೇ ವಿಶ್ರಾಂತಿ—ಆಯಾಸವವನಿಗೆ ವಿಶ್ರಮ ಕೊಡಿರಿ—
ಇದೇ ಉಲಶಮನ, ಎಂದು ಅವರಿಗೆ ಹೇಳಿದಾಗ,
ಅವರು ಕೇಳ್ಳ ಮನಸ್ಸಿಲ್ಲದೆ ಇದ್ದರು.
೧೨ ಆದದರಿಂದ, ಅವರು ಹೋಗಿ,
ಹಿಂದಕ್ಕೆ ಎಡವಿ, ಮುರಿದು ಕೊಳ್ಳುವ ಹಾಗೆಯೂ,
ಪೋಣಿಸಲ್ಪಟ್ಟು ಸಿಕ್ಕಿ ಬಿಳುವ ಹಾಗೆಯೂ,
ಕರ್ತನ ವಾಕ್ಯವು ಅವರಿಗೆ—
ಅಜ್ಜೆಗೆ ಅಜ್ಜೆ, ಅಜ್ಜೆಗೆ ಅಜ್ಜೆ;
ಸೂತ್ರಕ್ಕೆ ಸೂತ್ರ, ಸೂತ್ರಕ್ಕೆ ಸೂತ್ರ;
ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ, ಆಯಿತು.
೧೪ ಆದದರಿಂದ ಮಾನ್ಯರ ಜನರೇ!
ಯೆರೂಷಲೇಮಿನಲ್ಲಿರುವ ಈ ಜನರನ್ನು ಆಳುವಿರಿ!
ಕರ್ತನ ವಾಕ್ಯವನ್ನು ಕೇಳ್ಳಿರಿ.
೧೫ ಮರಣದ ಸಂಗಡ ಒಡಂಬಡಿಕೆಯನ್ನು ಮಾಡಿದ್ದೆವೆ;
ಪಾತಾಳದ ಸಂಗಡ ಸೊತ್ತು ಮಾಡಿದ್ದೆವೆ;
ಪ್ರಳಯದ ಹೆಚ್ಚಿ ಹಾದು ಹೋಗುವಾಗ ನಮ್ಮ ಮೇಲೆ ಬಾರದು;
ಯಾಕಂದರೆ, ಸುಳ್ಳನ್ನು ನಮ್ಮ ಆಶ್ರಯವಾಗಿ ಮಾಡಿ ಕೊಂಡಿ
ದ್ದೇವೆ,
ಕೊಳಕಲ್ಲಿ ಅಡಗಿ ಕೊಂಡಿದ್ದೆವೆ, ಎಂದನ್ನುತ್ತೀರಲ್ಲ?
೧೬ ಆದಾಗ್ಯೂ ಕರ್ತನಾದ ಯೆಹೋವನು ಹೇಳುವದೇನಂದರೆ—
ಇಗೊ, ನಾನು ಚೆಯೋನಿನಲ್ಲಿ
ಒಂದು ಕಲ್ಲನ್ನು ಅಸ್ತಿವಾರವಾಗಿ ಇಟ್ಟೆನೆ;
ಕೊಂಡಿಸಿದ ಕಲ್ಲನ್ನು,
ಬೆಲೆಯುಳ್ಳ ಮೂಲೆ ಕಲ್ಲನ್ನು,
ಸ್ಥಿರವಾದ ಅಸ್ತಿವಾರವನ್ನು;
ಬಿಶ್ವಾಸಿಸುವವನು ಕೂಡಲೆ ಕುಗುವದಿಲ್ಲ.
೧೭ ಮತ್ತು, ನ್ಯಾಯವನ್ನು ಸೂತ್ರಕ್ಕೂ,
ನೀತಿಯನ್ನು ಸೀಸದ ನೂಲಿಗೂ, ಸರಿ ನೋಡುತ್ತೇನೆ;
ಸುಳ್ಳಿನ ಆಶ್ರಯವನ್ನು ಕಲ್ಲು ಮಳೆಯು ಚೆಲ್ಲುವದು;
ಅಡಗುವ ಸ್ಥಾನವನ್ನು ನೀರುಗಳು ಬರು ಕೊಂಡು ಹೋಗು
ವವು;
೧೮ ಮರಣದ ಸಂಗಡ ನೀವು ಮಾಡಿದ ಒಡಂಬಡಿಕೆ ಕೆಡಿಸಲ್ಪಡು
ವದು;



ಪಾತಾಳದ ಸಂಗಡ ನಿಮಗಿರುವ ಸೊತ್ತು ನಿಲ್ಲದು.
ಪ್ರಳಯದ ಹೆಚ್ಚಿ ಹಾದು ಹೋಗುವಾಗ,
ನೀವೇ ಅದರಿಂದ ತುಳಿಯಲ್ಪಡುವಿರಿ.
೧೯ ಅದು ಹಾದು ಹೋಗುವಷ್ಟು ಸಾರಿ ನಿಮ್ಮನ್ನು ಹಿಡಿಯು
ವದು;
ಅದು ಹೊತ್ತಾತೆ ಹೊತ್ತಾತೆ, ಹಗಲು ರಾತ್ರಿ, ಹಾದು ಹೋಗು
ವದು.
ಅದರ ಸುದ್ದಿಯನ್ನು ಮಾತ್ರ ತಿಳಿ ಕೊಳ್ಳುವದರಿಂದ ಭಯವಾ
ಗುವದು.
೨೦ ಯಾಕಂದರೆ, ಮೈ ಚಾಚುವದಕ್ಕೆ ಮಂಚದ ಉದ್ದ ಸಾಲದು;
ಸುತ್ತಿ ಕೊಳ್ಳುವದಕ್ಕೆ ಹಾಸಿಗೆಯ ಅಗಲ ಸಾಲದು.
೨೧ ಯಾಕಂದರೆ, ಕರ್ತನು ಪೆರಾಜಿಮ್ ಗುಡ್ಡದಲ್ಲಿ ಆದ ಹಾಗೆ ಎದ್ದು,
ಗಿಬೆಯೋನ್ ತಗ್ಗಿನಲ್ಲಿ ಆದ ಹಾಗೆ ಕೋಪಿಸಿ,
ತನ್ನ ಕಾರ್ಯವನ್ನೂ, ತನ್ನ ಅಪರೂಪವಾದ ಕಾರ್ಯವನ್ನೂ,
ನಡಿಸಿ,
ತನ್ನ ಕೆಲಸವನ್ನೂ, ತನ್ನ ವಾಡಿಕೆ ಇಲ್ಲದ ಕೆಲಸವನ್ನೂ, ಮಾಡು
ವನು.
೨೨ ಹೀಗಿರುವದರಿಂದ, ನಿಮ್ಮ ಬಂಧಗಳು ಕಠಿಣವಾಗದ ಹಾಗೆ,
ಹಾಸ್ಯಗಾರರಾಗ ಬೇಡಿರಿ;
ಯಾಕಂದರೆ, ಸೈನ್ಯಗಳ ಕರ್ತನಾದ ಯೆಹೋವನ ಕಡೆಯಿಂದ,
ದೇಶವೆಲ್ಲಾದರ ಮೇಲೆ, ಸಂಹಾರವು ನಿರ್ಣಯಿಸಿ ಅದೆ, ಎಂದು
ಕೇಳಿದ್ದೇನೆ.

೨೩ ಕಿವಿ ಕೊಟ್ಟು, ನನ್ನ ಮಾತನ್ನು ಕೇಳ್ಳಿರಿ.
ಲಕ್ಷ್ಯವಿಟ್ಟು, ನನ್ನ ನುಡಿಯನ್ನು ಕೇಳ್ಳಿರಿ.
೨೪ ನೇಗಿಲು ಹೊಡೆಯುವವನು,
ಬೀಜ ಹಾಕುವದಕ್ಕೆ ಹಗಲೆಲ್ಲಾ ಹೊಡೆಯುವನೋ!
ತನ್ನ ಭೂಮಿಯನ್ನು ಹಗಲೆಲ್ಲಾ ತೆರೆದು ಒಡಿಯುವನೋ!
೨೫ ಅದರ ಮೇಲ್ಭಾಗವನ್ನು ನೆಟ್ಟಗೆ ಮಾಡಿದ ಮೇಲೆ,
ಅಗಸೆಯನ್ನು ಚೆಲ್ಲಿ, ಜೀರಿಗೆಯನ್ನು ಹೆದರಿಸಿ,
ಗೋಧಿಯನ್ನು ವರಿಕೆಯಾಗಿಯೂ,
ಜವೆಗೋಧಿಯನ್ನು ತಕ್ಕ ಸ್ಥಳದಲ್ಲಿಯೂ,
ಸಣ್ಣ ಗೋಧಿಯನ್ನು ಅದರ ಅಂಚಿನಲ್ಲಿಯೂ,
ಹಾಕುವನಲ್ಲವೋ!
೨೬ ಯಾಕಂದರೆ, ಅವನ ದೇವರು,
ಅವನಿಗೆ ಸರಿಯಾಗಿ ಕಲಿಸಿ, ಬೋಧಿಸುತ್ತಾನೆ.
೨೭ ಯಾಕಂದರೆ, ಅಗಸೆಯನ್ನು ತುಳಿಯುವ ಯಂತ್ರದಿಂದ ತುಳಿ
ಯುವದಿಲ್ಲ;
ಜೀರಿಗೆಯ ಮೇಲೆ ಛಂಡಿಯ ಗಾಲಿಯನ್ನು ತಿರುಗಿಸುವದಿಲ್ಲ;
ಅದರೆ ಅಗಸೆಯನ್ನು ಕೋಲಿನಿಂದಲೂ,
ಜೀರಿಗೆಯನ್ನು ಬೆತ್ತದಿಂದಲೂ, ಬಡಿಯುವರು.
೨೮ ಧಾನ್ಯವನ್ನು ಮುರಿಯುವರು;
ಅದರೆ ಯಾವಾಗಲೂ ಅದನ್ನು ತುಳಿದೇ ತುಳಿಯುವದಿಲ್ಲ;
ಛಂಡಿಯ ಗಾಲಿಯನ್ನೂ ಕುದುರೆಗಳನ್ನೂ ಅದರ ಮೇಲೆ ನಡಿ
ಸುವದಿಲ್ಲ;
ಅದನ್ನು ಪುಡಿ ಪುಡಿ ಮಾಡುವದಿಲ್ಲ.
೨೯ ಇದು ಸಹ ಸೈನ್ಯಗಳ ಕರ್ತನ ಕಡೆಯಿಂದ ಹೊರಡುತ್ತದೆ;
ಅವನಿಗೆ ಆಶ್ಚರ್ಯವಾದ ಆಲೋಚನೆಯೂ, ಹೆಚ್ಚಿ ಜ್ಞಾನ
ಯೂ ಉಂಟು.

೨೯. ಸಂಧಿ.

೧ ಅರಿಯೇಲಕ್ಕೆ, ಅರಿಯೇಲಕ್ಕೆ,
ದಾವೀದನು ವಾಸಿಸಿದ ಪಟ್ಟಣಕ್ಕೆ, ಅಯ್ಯೋ!
ವರುಷಕ್ಕೆ ವರುಷವನ್ನು ಕೂಡಿಸಿರಿ;
ಹಬ್ಬಗಳು ಕ್ರಮದಿಂದ ನಡಿಯಲಿ;
೨ ಆದರೂ ನಾನು ಅರಿಯೇಲಕ್ಕೆ ಇಕ್ಕಟ್ಟನ್ನು ಉಂಟು ಮಾ
ಡುವೆನು;
ಕಷ್ಟವೂ ಕರ್ಕಶತೆಯೂ ಆಗುವದು.
ಅದು ನನಗೆ ಅರಿಯೇಲದಂತೆಯೇ ಆಗುವದು.
3 ಯಾಕಂದರೆ, ನಿನಗೆ ವಿರೋಧವಾಗಿ ಸುತ್ತಲೂ ದಂಡು ಇಳಿ
ಸುವೆನು;
ನಿನ್ನನ್ನು ಕಾಣ್ಯಗಳಿಂದ ಮುತ್ತಿಗೆ ಹಾಕಿಸುವೆನು;
ನಿನಗೆ ವಿರೋಧವಾಗಿ ಕೋಟೆಗಳನ್ನು ಎಬ್ಬಿಸುವೆನು.
೪ ಆಗ ತಗ್ಗಿ ಸಲ್ಪಟ್ಟು, ಭೂಮಿಯೊಳಗಿಂದ ಮಾತಾಡುವಿ;
ನಿನ್ನ ನುಡಿಯು ಭೂಳಿಯಲ್ಲಿಂದ ಅಂಗಲಾಚುವದು;
ಭೂತದ ಹಾಗೆ ಭೂಮಿಯೊಳಗಿಂದ ನಿನ್ನ ಶಬ್ದ ಇರುವದು;
ಭೂಳಿಯಲ್ಲಿಂದ ನಿನ್ನ ನುಡಿ ಪಿಸುಗುಟ್ಟುವದು.

೫ ಆದರೆ, ನಿನ್ನ ಅನ್ಯರ ಸಮೂಹವು, ಸೂಕ್ಷ್ಮವಾದ ಭೂಳಿಯ
ಹಾಗೆ ಇರುವದು;
ಭಯಂಕರರ ಸಮೂಹವು, ಹಾರಿ ಹೋಗುವ ಹೊಟ್ಟಿನ ಹಾಗೆ
ಇರುವದು;
ಅದು ಕ್ಷಣ ಮಾತ್ರದಲ್ಲಿ ಫಕ್ಕನೆ ಆಗುವದು.
೬ ಸೈನ್ಯಗಳ ಕರ್ತನ ಕಡೆಯಿಂದಲೇ,
ನೀನು ಗುಡುಗಿನಿಂದಲೂ, ಭೂಕಂಪದಿಂದಲೂ,
ಮಹಾ ಶಬ್ದದಿಂದಲೂ, ಸುಳಿ ಭೂಳಿಯಿಂದಲೂ,
ಬಿರು ಭೂಳಿಯಿಂದಲೂ, ದಹಿಸುವ ಅಗ್ನಿಯ ಜ್ವಾಲೆಯಿಂದಲೂ,
ವಿಚಾರಿಸಲ್ಪಡುವಿ.
೭ ಮತ್ತು ಅರಿಯೇಲಕ್ಕೆ ವಿರೋಧವಾಗಿ ಯುದ್ಧ ಮಾಡುವ
ಎಲ್ಲಾ ಜನಾಂಗಗಳ ಸಮೂಹವೂ,
ಅದಕ್ಕೂ ಅದರ ಕೋಟೆಗೂ ವಿರೋಧವಾಗಿ ಯುದ್ಧ ಮಾಡಿ,
ಇಕ್ಕಟ್ಟು ಮಾಡುವವರೆಲ್ಲರೂ,
ಕನಸಿನಂತೆಯೂ, ರಾತ್ರಿಯ ದರ್ಶನದಂತೆಯೂ, ಇರುವರು.
೮ ಹಸಿವೆ ಇದ್ದವನೊಬ್ಬನು ಕನಸು ಕಂಡು, ಅಗೋ ಉಣ್ಣುತ್ತಾನೆ,
ಅದರೆ ಎಚ್ಚರವಾದ ಮೇಲೆ, ಪ್ರಾಣ ತುಂಬದ ಪ್ರಕಾರವೂ,
ನೀರಡಿಕೆಯುಳ್ಳವನು ಕನಸು ಕಂಡು, ಅಗೋ ಕುಡಿಯುತ್ತಾನೆ,
ಅದರೆ ಎಚ್ಚರವಾದ ಮೇಲೆ, ಅಗೋ ಬಲಹೀನನಾಗಿದ್ದು,
ಪ್ರಾಣ ಆಶಿಸುವ ಪ್ರಕಾರವೂ,
ಹಾಗೆಯೇ ಚೆಯೋನ್ ಪರ್ವತಕ್ಕೆ ವಿರೋಧವಾಗಿ ಯುದ್ಧ
ಮಾಡುವ,
ಎಲ್ಲಾ ಜನಾಂಗಗಳ ಸಮೂಹವಿರುವದು.

೯ ತಾಮಸ ಮಾತಿ, ಅಶ್ಚರ್ಯ ಪಡಿರಿ;
ಅನಂದವಾಗಿದ್ದು ಕುರುಡರಾಗಿರಿ.
ಅಮಲಾದರು, ಆದರೆ ದ್ರಾಕ್ಷೆರಸದಿಂದಲ್ಲ;
ತತ್ತರಿಸುತ್ತಾರೆ, ಆದರೆ ಸಾರಾಯಿಂದಲ್ಲ.
೧೦ ಯಾಕಂದರೆ, ಕರ್ತನು ನಿಮ್ಮ ಮೇಲೆ ಗಾಢ ನಿದ್ರೆಯ ಆತ್ಮವನ್ನು ಹೊಯಿದು,
ನಿಮ್ಮ ಕಣ್ಣುಗಳನ್ನು ಕಟ್ಟಿದ್ದಾನೆ;
ಪ್ರವಾದಿಗಳನ್ನೂ, ನಿಮ್ಮ ಮುಖ್ಯಸ್ಥರಾದ ದರ್ಶಿಗಳನ್ನೂ, ಮುಚ್ಚಿದ್ದಾನೆ.
೧೧ ದರುಶನವೆಲ್ಲಾ ನಿಮಗೆ
ಮುದ್ರೆ ಹಾಕಿದ ಪುಸ್ತಕದ ವಾಕ್ಯಗಳ ಹಾಗಾಯಿತು;
ಅದನ್ನು ಬರಹ ತಿಳಿದವನಿಗೆ ಕೊಟ್ಟು—
ಇದನ್ನು ಓದೆಲಾ ಎಂದು ಹೇಳಿದರೆ,
ಅವನು—ಕೂಡದು, ಅದಕ್ಕೆ ಮುದ್ರೆ ಹಾಕಿ ಅದೆ, ಎಂದು ಹೇಳುವನು.
೧೨ ಮತ್ತು, ಆ ಪುಸ್ತಕವನ್ನು ಬರಹ ತಿಳಿಯದವನಿಗೆ ಕೊಟ್ಟು—
ಇದನ್ನು ಓದೆಲಾ ಎಂದು ಹೇಳಿದರೆ,
ಅವನು ನನಗೆ ಬರಹ ತಿಳಿಯುವದಿಲ್ಲವೆಂದು ಹೇಳುವನು.
೧೩ ಹೀಗಿರುವದರಿಂದ ಕರ್ತನು ಹೇಳುವದೇನಂದರೆ—
ಈ ಜನರು, ಬಾಯಿಂದ ನನಗೆ ಸಮೀಪಿಸಿ,
ತುಟಿಗಳಿಂದ ನನ್ನನ್ನು ಸನ್ಮಾನಿಸಿ,
ತಮ್ಮ ಹೃದಯವನ್ನು ನನಗೆ ದೂರ ಮಾಡಿದ ಕಾರಣವೂ;
ಅವರು ನನಗೆ ಪಡುವ ಭಯವು,
ಮನುಷ್ಯರ ಕಟ್ಟಳೆಯಿಂದ ಬೋಧಿಸಲ್ಪಟ್ಟ ಕಾರಣವೂ,
೧೪ ಆದದರಿಂದ ಇಗೋ ನಾನು
ಈ ಜನರಿಗೆ ಇನ್ನೂ ಆಶ್ಚರ್ಯವಾದ ಕಾರ್ಯವನ್ನು ಮಾಡುತ್ತೇನೆ;
ಆಶ್ಚರ್ಯವಾದ ಅದ್ಭುತವಾದದ್ದನ್ನೇ;
ಅವರ ಜ್ಞಾನಿಗಳ ಜ್ಞಾನವು ನಾಶವಾಗುವದು;
ಅವರ ವಿವೇಕಿಗಳ ವಿವೇಕವು ಅಡಗಿ ಕೊಳ್ಳುವದು.

೧೫ ಅಗಾಧದಲ್ಲಿ ಕರ್ತನಿಗೆ ಮರೆಯಾಗಿ ಆಲೋಚನೆಯನ್ನು ಅಡಗಿಸಿ,
ಕತ್ತಲೆಯಲ್ಲಿ ತಮ್ಮ ಕೆಲಸಗಳನ್ನು ಮಾಡಿ,
ನಮ್ಮನ್ನು ಯಾರು ನೋಡಿದರು!
ನಮ್ಮನ್ನು ಯಾರು ಬಲ್ಲರು!
ಎಂದು ಹೇಳುವವರಿಗೆ ಅಯ್ಯೋ!
೧೬ ಓ ನಿಮ್ಮ ವಕ್ರತ್ವವು!
ಕುಂಬಾರನು ಮಣ್ಣಿನ ಹಾಗೆ ಎಣಿಸಲ್ಪಡುವನೋ?
ಉಂಟು ಮಾಡಿದ್ದು ತನ್ನನ್ನು ಉಂಟು ಮಾಡಿದವನಿಗೆ—
ನನ್ನನ್ನು ಉಂಟು ಮಾಡಲಿಲ್ಲವೆಂದು,
ನಿರ್ಮಿಸಿದ್ದು ನಿರ್ಮಿಸಿದವನನ್ನು ಕುರಿತು—
ಅವನಿಗೆ ಬುದ್ಧಿ ಇಲ್ಲವೆಂದು, ಹೇಳುವದುಂಟೇ?

೧೭ ಇನ್ನು ಸ್ವಲ್ಪ ಕಾಲದಲ್ಲಿ ಲೆಬನೋನು,
ಫಲವುಳ್ಳ ಹೊಲವಾಗಿ ಮಾರ್ಪಡುವದು,
ಫಲವುಳ್ಳ ಹೊಲವು ಅಡವಿಯಾಗಿ ಎಣಿಸಲ್ಪಡುವದು, ಅಲ್ಲವೋ!
೧೮ ಆ ದಿವಸದಲ್ಲಿ, ಕಿವಿಡರು ಪುಸ್ತಕದ ಮಾತುಗಳನ್ನು ಕೇಳುವರು;
ಕುರುಡರ ಕಣ್ಣುಗಳು,
ಕತ್ತಲೆಯೊಳಗಿಂದಲೂ, ಅಂಧಕಾರದೊಳಗಿಂದಲೂ ನೋಡುವವು.
೧೯ ಬಡವರು ಕರ್ತನಲ್ಲಿ ಹೆಚ್ಚಾಗಿ ಸಂತೋಷಿಸುವರು;
ಮನುಷ್ಯರಲ್ಲಿ ದರಿದ್ರರು
ಇಸ್ರಯೇಲಿನ ಪರಿಶುದ್ಧನಲ್ಲಿ ಹರ್ಷಿಸುವರು;
೨೦ ಯಾಕಂದರೆ, ಭಯಂಕರನು ಇಲ್ಲವಾಗುತ್ತಾನೆ;
ಹಾಸ್ಯಗಾರನು ತೀರಿ ಹೋಗುತ್ತಾನೆ;
ಪಾತಕಕ್ಕೆ ಎಚ್ಚರವಾಗಿರುವವರೆಲ್ಲರೂ,
೨೧ ಒಂದು ಮಾತಿನ ನಿಮಿತ್ತ ಮನುಷ್ಯನಿಗೆ ಪಾಪ ಹೊರಿಸುವವರೂ,
ಬಾಗಲಲ್ಲಿ ವಾದಿಸುವವನಿಗೆ ಉರ್ಲು ಒಡ್ಡುವವರೂ,
ಏನಿಲ್ಲದ ಕಾರ್ಯಕ್ಕೆ ನೀತಿವಂತನನ್ನು ತಿರುಗಿಸುವವರೂ,
ಕಡಿದು ಹಾಕಲ್ಪಡುವರು.
೨೨ ಆದದರಿಂದ ಅಬ್ರಹಾಮನನ್ನು ವಿಮೋಚಿಸಿದ ಕರ್ತನು,
ಯಾಕೋಬನ ಮನೆಗೆ ಹೇಳುವದೇನಂದರೆ—
ಈಗ ಯಾಕೋಬನು ನಾಚಿಕೆ ಪಡುವದಿಲ್ಲ;
ಈಗ ಅವನ ಮುಖವು ಕಳೆಗುಂದುವದಿಲ್ಲ.
೨೩ ಆದರೆ ಅವನು ನನ್ನ ಕೈ ಕ್ರಿಯೆಗಳಾದ ತನ್ನ ಮಕ್ಕಳನ್ನು,
ತನ್ನ ಮಧ್ಯದಲ್ಲಿ ನೋಡುವಾಗ,
ಅವರು ನನ್ನ ಹೆಸರನ್ನು ಪರಿಶುದ್ಧ ಮಾಡುವರು;
ಯಾಕೋಬನ ಪರಿಶುದ್ಧನನ್ನು ಪರಿಶುದ್ಧ ಮಾಡುವರು.
ಇಸ್ರಯೇಲಿನ ದೇವರಿಗೆ ಭಯ ಪಡುವರು.
೨೪ ಮತ್ತು ತಪ್ಪದ ಆತ್ಮವುಳ್ಳವರು ವಿವೇಕವನ್ನು ತಿಳಿದು ಕೊಳ್ಳುವರು;
ಕಠಿಣ ಮನಸ್ಸುಳ್ಳವರು ಬೋಧೆಯನ್ನು ಕಲಿಯುವರು.

## ೩೦. ಸಂಧಿ.

೧ ತಿರುಗಿ ಬೀಳುವ ಮಕ್ಕಳಿಗೆ ಅಯ್ಯೋ! ಎಂದು ಕರ್ತನು ಹೇಳುತ್ತಾನೆ.
ಅವರು ಆಲೋಚನೆಯನ್ನು ಮಾಡುತ್ತಾರೆ,
ಆದರೆ ನನ್ನಿಂದಲ್ಲ;
ಪಾಪಕ್ಕೆ ಪಾಪವನ್ನು ಕೂಡಿಸುವ ಹಾಗೆ ಹೊಯಿಕೆಗಳನ್ನು ಹೊಯುತ್ತಾರೆ,
ಆದರೆ ನನ್ನ ಆತ್ಮದಿಂದಲ್ಲ.
೨ ನನ್ನ ಬಾಯಿಂದ ಕೇಳದೆ,
ಫರೋನನ ಆಶ್ರಯದಲ್ಲಿ ಬಲಗೊಳ್ಳುವ ಹಾಗೆಯೂ,
ಐಗುಪ್ತದ ಮರೆಯಲ್ಲಿ ನಂಬಿ ಕೊಳ್ಳುವ ಹಾಗೆಯೂ,
ಐಗುಪ್ತಕ್ಕೆ ಇಳಿದು ಹೋಗುತ್ತಾರೆ.
೩ ಆದದರಿಂದ ಫರೋನನ ಆಶ್ರಯವು ನಿಮಗೆ ನಾಚಿಕೆಯೂ,
ಐಗುಪ್ತದ ಮರೆಯಲ್ಲಿ ಮಾಡುವ ನಂಬಿಕೆ, ನಿಂದೆಯೂ, ಆಗುವದು
೪ ಯಾಕಂದರೆ, ಅವನ ಪ್ರಧಾನರು ಜೋವಾನಿನಲ್ಲಿ ಇದ್ದಾರೆ;
ಅವನ ರಾಯಭಾರಿಗಳು ಹನೇಸಿಗೆ ಸೇರಿದ್ದಾರೆ.
೫ ತಮಗೆ ಪ್ರಯೋಜನವಾಗದೆ,



ಸಹಾಯಕ್ಕೂ ಪ್ರಯೋಜನಕ್ಕೂ ಅಲ್ಲ;
ನಿಂದೆಗೂ ನಾಚಿಕೆಗೂ ಇರುವ ಜನಕ್ಕೆ,
ಎಲ್ಲರು ನಾಚಿಕೆ ಪಡುತ್ತಾರೆ.

೬ ದಕ್ಷಿಣದ ಮೃಗಗಳ ಭಾರವು.

ಇಕ್ಕಟ್ಟಾದ ತ್ರಸೆಯುಳ್ಳ ದೇಶಕ್ಕೆ,
ಸಿಂಹಿಯೂ ಸಿಂಹವೂ,
ನಾಗರವೂ, ಹಾರುವ ಅಗ್ನಿ ಸರ್ಪವೂ, ಬರುವಲ್ಲಿಗೆ,
ಅವರು ಕತ್ತೆಮರಿಗಳ ಹೆಗಲಿನ ಮೇಲೆ ತಮ್ಮ ಬದುಕನ್ನೂ,
ಒಂಟೆಗಳ ಕುಬ್ಜಗಳ ಮೇಲೆ ತಮ್ಮ ದ್ರವ್ಯಗಳನ್ನೂ,
ತಮಗೆ ಪ್ರಯೋಜನವಲ್ಲದ ಜನಕ್ಕೆ ತಕ್ಕೊಂಡು ಹೋಗುತ್ತಾರೆ.
೭ ಆದರೆ ಐಗುಪ್ತದ ಸಹಾಯವು, ಮಾಯವಾಗಿಯೂ, ವ್ಯರ್ಥವಾಗಿಯೂ, ಇರುವದು;
ಆದದರಿಂದ ಅದಕ್ಕೆ ಸುಮ್ಮನೆ ಕೂತ್ರುವ ಗರ್ವಿ ಎಂದನ್ನುತ್ತೇನೆ.

೮ ಈಗ ಹೋಗಿ, ಇದನ್ನು ಅವರ ಮುಂದೆ, ಹಲಿಗೆಯಲ್ಲಿ ಬರಿ;
ಪುಸ್ತಕದಲ್ಲಿ ಇದನ್ನು ರಚಿಸು;
ಇದು ಮುಂದಿನ ದಿವಸಗಳಿಗೆ, ನಿತ್ಯ ಕಾಲಕ್ಕೆ, ಸಾಕ್ಷಿಯಾಗಿರಲಿ;
೯ ಏನಂದರೆ—ಇವರು ತಿರುಗಿ ಬೀಳುವ ಜನರೇ,
ಸುಳ್ಳಾಡುವ ಮಕ್ಕಳೇ,
ಕರ್ತನ ನ್ಯಾಯಪ್ರಮಾಣವನ್ನು ಕೇಳಲೊಲ್ಲದ ಮಕ್ಕಳೇ.
೧೦ ಅವರು ನೋಡುವವರಿಗೆ—ನೋಡ ಬೇಡಿರೆಂದೂ,
ದರ್ಶಿಗಳಿಗೆ—ನಮಗೆ ಯಥಾರ್ಥವಾದ ದರ್ಶನಗಳನ್ನು ಹೇಳಬೇಡಿರಿ;
ಇಂಪಾದವುಗಳನ್ನು ನಮಗೆ ಹೇಳಿರಿ,
ಕಪಟವಾದವುಗಳನ್ನು ದರ್ಶಿಸಿರಿ.
೧೧ ಮಾರ್ಗಕ್ಕೆ ವಾಕೆಯಾಗಿರಿ; ಹಾದಿಯನ್ನು ಬಿಟ್ಟು ಜಾರಿರಿ;
ಇಸ್ರಯೇಲಿನ ಪರಿಶುದ್ಧನನ್ನು ನಮ್ಮ ಮುಂದಿರಿಸುವದನ್ನು ಬಿಡಿರಿ, ಎಂದು ಅನ್ನುತ್ತಾರೆ.

೧೨ ಆದದರಿಂದ ಇಸ್ರಯೇಲಿನ ಪರಿಶುದ್ಧನು ಹೇಳುವದೇನಂದರೆ—
ನೀವು ಈ ಮಾತನ್ನು ಅಲಕ್ಷ್ಯ ಮಾಡಿ,
ಬಲಾತ್ಕಾರದಲ್ಲಿಯೂ ವಕ್ರತ್ವದಲ್ಲಿಯೂ ನಂಬಿ ಕೊಂಡು,
ಇವುಗಳನ್ನೇ ಊರಿ ಕೊಂಡದರಿಂದ,
೧೩ ಆದದರಿಂದ ನಿಮಗೆ ಈ ಅಕ್ರಮವು,
ಎತ್ತರವಾದ ಗೋಡೆಯಲ್ಲಿ ಉಬ್ಬಿ ಕೊಂಡು ಬರುವ,
ಬೀಳಲಿಕ್ಕಿರುವ ಕೀಳಿನ ಹಾಗಿರುವದು;
ಅದಕ್ಕೆ ಕ್ಷಣ ಮಾತ್ರದಲ್ಲಿ ಬೀಳೋಣ ಬರುವದು.
೧೪ ಕುಂಬಾರರ ಪಾತ್ರೆಯು ಬಡದು,
ಕನಿಕರವಿಲ್ಲದೆ ತುಂಡು ತುಂಡಾಗಿ ಮಾಡಲ್ಪಡುವ ಪ್ರಕಾರ,
ಒಡೆಯಲ್ಪಡುವರು;
ಅದರ ತುಂಡುಗಳಲ್ಲಿ ಒಲೆಯಿಂದ ಬೆಂಕಿಯನ್ನು ತರುವದಕ್ಕಾದರೂ,
ಭಾವಿಯಿಂದ ನೀರನ್ನು ತೆಗೆಯುವದಕ್ಕಾದರೂ,
ಬೋಕಿ ಸಿಕ್ಕುವದಿಲ್ಲ.
೧೫ ಯಾಕಂದರೆ, ಇಸ್ರಯೇಲಿನ ಪರಿಶುದ್ಧನಾದ ಕರ್ತನಾಗಿರುವ ಯೆಹೋವನು—
ತಿರಿಗಿ ಕೊಳ್ಳುವದರಲ್ಲಿಯೂ, ವಿಶ್ರಾಂತಿಯಲ್ಲಿಯೂ ನಿಮಗೆ ರಕ್ಷಣೆಯಾಗುವದು;
ಶಾಂತಿಯಲ್ಲಿಯೂ ನಂಬಿಕೆಯಲ್ಲಿಯೂ ನಿಮ್ಮ ಬಲವಿರುವದು, ಎಂದು ಹೇಳಿದನು;
ಆದರೆ ನಿಮಗೆ ಮನಸ್ಸಿದ್ದಿಲ್ಲ.
೧೬ ನೀವು—ಹಾಗಲ್ಲ, ಕುದುರೆಗಳ ಮೇರೆ ಓಡಿ ಹೋಗುತ್ತೇವೆ, ಅಂದಿರಿ;
ಆದದರಿಂದ ಓಡಿ ಹೋಗುವಿರಿ;
ಶೀಘ್ರವಾದವುಗಳ ಮೇಲೆ ಸವಾರಿ ಮಾಡುತ್ತೇವೆ, ಅಂದಿರಿ;
ಆದದರಿಂದ ನಿಮ್ಮನ್ನು ಹಿಂದಟ್ಟುವವರು ಶೀಘ್ರವಾಗಿರುವರು.
೧೭ ಒಬ್ಬನು ಹೆದರಿಸಿದ್ದಕ್ಕೆ ಒಂದು ಸಾವಿರ ಮಂದಿ ಓಡಿ ಹೋಗುವರು;
ಐವರು ಹೆದರಿಸಿದ್ದಕ್ಕೆ ಓಡಿ ಹೋಗುವಿರಿ;
ಕಡೆಗೆ ಬೆಟ್ಟದ ಮೇಲಿರುವ ಕಂಭದ ಹಾಗೆಯೂ,
ಗುಡ್ಡದ ಮೇಲಿರುವ ಧ್ವಜದ ಹಾಗೆಯೂ, ಬಿಡಲ್ಪಡುವಿರಿ.

೧೮ ಆದರೂ, ಕರ್ತನು ನಿಮಗೆ ದಯೆ ತೋರಿಸುವದಕ್ಕೆ ಕಾದು ಕೊಳ್ಳುವನು;
ನಿಮ್ಮ ಮೇಲೆ ಅಂತಃಕರಣೆ ಪಡುವದಕ್ಕೆ ಏಳುವನು;
ಯಾಕಂದರೆ, ಕರ್ತನು ನ್ಯಾಯದ ದೇವರಾಗಿದ್ದಾನೆ;
ಅವನಿಗೋಸ್ಕರ ಕಾದು ಕೊಳ್ಳುವವರೆಲ್ಲರು ಭಾಗ್ಯವಂತರು.
೧೯ ಯಾಕಂದರೆ, ಚಿಯೋನಿನ ಜನರು ಯೆರೂಸಲೇಮಿನಲ್ಲಿ ವಾಸವಾಗಿರುವರು,
ಇನ್ನು ಅಳದೆ ಇರುವಿ;
ನೀನು ಕೂಗುವ ಶಬ್ದಕ್ಕೆ ನಿನಗೆ ನಿಶ್ಚಯವಾಗಿ ದಯೆ ತೋರಿಸುವನು;
ಕೇಳಿದಾಗಲೇ ನಿನಗೆ ಉತ್ತರ ಕೊಡುವನು.
೨೦ ಕರ್ತನು ನಿಮಗೆ ಇಕ್ಕಟ್ಟಿನ ಕೊಟ್ಟಿಯನ್ನೂ, ಬಾಧೆಯ ನೀರನ್ನೂ ಕೊಟ್ಟರೂ,
ಇನ್ನು ನಿನ್ನ ಬೋಧಕರು ತಮ್ಮನ್ನು ಮುಚ್ಚಿ ಕೊಳ್ಳುವದಿಲ್ಲ;
ನಿನ್ನ ಕಣ್ಣುಗಳು ನಿನ್ನ ಬೋಧಕರನ್ನು ನೋಡುತ್ತಿರುವವು.
೨೧ ಮತ್ತು, ನೀವು ಎಕಕ್ಕಾದರೂ ಬಲಕ್ಕಾದರೂ ತಿರುಗುವಾಗ,
ನಿನ್ನ ಕಿವಿಗಳು—ಇದೇ ದಾರಿ, ಇದರಲ್ಲಿ ನಡಿಯಿರಿ,
ಎಂಬ ಮಾತನ್ನು ನಿನ್ನ ಹಿಂದೆ ಕೇಳುವವು.
೨೨ ಆಗ ಬೆಳ್ಳಿಯಿಂದ ಹೊದಗಿಸಲ್ಪಟ್ಟ ನಿಮ್ಮ ವಿಗ್ರಹಗಳನ್ನೂ,
ಚಿನ್ನದಿಂದ ಎರಕ ಹೊಯ್ಯಲ್ಪಟ್ಟ ನಿಮ್ಮ ವಿಗ್ರಹಗಳನ್ನೂ,
ಅಪವಿತ್ರವಾಗಿ ಎಣಿಸುವಿರಿ;
ಅವುಗಳನ್ನು ಮುಟ್ಟಿನ ವಸ್ತ್ರದಂತೆ ಬಿಸಾಡುವಿ;
ಅದಕ್ಕೆ—ಹೋಗು! ಅನ್ನುವಿ.
೨೩ ಆಗಲವನು ನೀನು ಭೂಮಿಯಲ್ಲಿ ಬಿತ್ತುವ ನಿನ್ನ ಬೀಜಕ್ಕೆ ಮಳೆಯನ್ನು ಕೊಡುವನು;
ಭೂಮಿಯ ಹುಟ್ಟುವಳಿಯಾದ ಧಾನ್ಯವು,
ಪುಷ್ಟಿಯೂ ಪರಿಪೂರ್ಣತೆಯೂ ಉಳ್ಳದ್ದಾಗಿರುವದು;
ಆ ದಿವಸದಲ್ಲಿ ನಿನ್ನ ದನಗಳು ವಿಸ್ತಾರವಾದ ಸ್ಥಳದಲ್ಲಿ ಮೇಯುವವು.

೨೪ ಮತ್ತು, ಹೊಲದ ಕೆಲಸ ಮಾಡುವ ಎತ್ತುಗಳೂ ಕತ್ತೆಮರಿಗಳೂ,
ಉಪ್ಪು ಹಾಕಿದಂಥ, ಮೊರದಿಂದಲೂ ಜಲ್ಲಡೆಯಿಂದಲೂ ತೂರಲ್ಪಟ್ಟಿಂಥ,
ಆಹಾರವನ್ನು ತಿನ್ನುವವು.

೨೫ ಮತ್ತು, ಒಂದೊಂದು ಉನ್ನತವಾದ ಬೆಟ್ಟದ ಮೇಲೆಯೂ,
ಒಂದೊಂದು ಎತ್ತರವಾದ ಗುಡ್ಡದ ಮೇಲೆಯೂ,
ದೊಡ್ಡ ಕೊಲೆಯ ದಿವಸದಲ್ಲಿ, ಗೋಪುರಗಳು ಬೀಳುವಾಗ,
ನೀರುಳ್ಳ ಕಾಲಿವೆಗಳು ಇರುವವು.

೨೬ ಮತ್ತು, ಕರ್ತನು ತನ್ನ ಜನರ ಬಿರುಕನ್ನು ಕಟ್ಟಿ,
ಅವರ ದೆಬ್ಬೆಯ ಘಾಯವನ್ನು ಸ್ವಸ್ಥ ಮಾಡುವ ದಿವಸದಲ್ಲಿ,
ಚಂದ್ರನ ಬೆಳಕು, ಸೂರ್ಯನ ಬೆಳಕಿನ ಹಾಗೆಯೂ,
ಸೂರ್ಯನ ಬೆಳಕು, ಏಳು ದಿವಸಗಳ ಬೆಳಕಿನ ಹಾಗೆ ಏಳ್ಪಟ್ಟು, ಇರುವದು.

೨೭ ಇಗೋ ಕರ್ತನ ಹೆಸರು ದೂರದಿಂದ ಬರುತ್ತದೆ;
ಅವನ ಸಿಟ್ಟು ಉರಿಯುತ್ತದೆ; ಅದು ಕಠಿಣವಾಗಿ ಏಳುತ್ತದೆ;
ಅವನ ತುಟಿಗಳು ಕೌದ್ರದಿಂದ ತುಂಬಿಯವೆ;
ಅವನ ನಾಲಿಗೆ ದಹಿಸುವ ಅಗ್ನಿಯ ಹಾಗಿದೆ.

೨೮ ಅವನ ಶ್ವಾಸವು ಪ್ರಳಯವಾಗುವಂಥ,
ಕುತ್ತಿಗೆ ಮುಟ್ಟುವಂಥ, ಹಳ್ಳದ ಹಾಗೆ,
ಜನಾಂಗಗಳನ್ನು ಮಾಯದ ಜಲ್ಲಡೆಯಲ್ಲಿ ಜಾಲಿಸುವ ನಿಮತ್ತವಾಗಿದೆ;
ಜನಗಳ ದವಡೆಗಳಲ್ಲಿ ತಪ್ಪಿ ಹೋಗ ಮಾಡುವ ಕಡಿವಾಣವಿರುವದು.

೨೯ ಹಬ್ಬವನ್ನು ಆಚರಿಸುವ ರಾತ್ರಿಯಲ್ಲಿ ಆದ ಹಾಗೆ, ನಿಮಗೆ ಹಾಡು ಇರುವದು;
ಕರ್ತನ ಪರ್ವತಕ್ಕೆ, ಇಸ್ರಯೇಲಿನ ಬಂಡೆಯ ಬಳಿಗೆ, ಬರುವದಕ್ಕೆ,
ಕೊಳಲಿನ ಸಂಗಡ ಹೋಗುವವನ ಪ್ರಕಾರ,
ಹೃದಯದ ಸಂತೋಷವಿರುವದು.

೩೦ ಮತ್ತು, ಕರ್ತನು ತನ್ನ ಶಬ್ದದ ಮಹತ್ತನ್ನು ಕೇಳ್ಪಮಾಡಿ,
ಕೋಪದ ಕೌದ್ರದಿಂದಲೂ, ದಹಿಸುವ ಅಗ್ನಿಯ ಜ್ವಾಲೆಯಿಂದಲೂ,
ಪ್ರಳಯದಿಂದಲೂ, ಬಿರುಘಾಳಿಯಿಂದಲೂ, ಕಲ್ಲು ಮಳೆಯಿಂದಲೂ,
ತನ್ನ ಕೈ ಇಳಿಸುವದನ್ನು ತೋರಿಸುವನು.

೩೧ ಯಾಕಂದರೆ, ಕೋಲಿನಿಂದ ಹೊಡೆದ ಅಶ್ಶೂರು,
ಕರ್ತನ ಶಬ್ದದಿಂದ ಮುರಿದು ಹೋಗುವದು.

೩೨ ಮತ್ತು, ಕರ್ತನು ಅದರ ಮೇಲೆ ತರುವಂಥ,
ನೇಮಿಸಿದ ದಂಡವು ಹಾದು ಹೋಗುವಲ್ಲೆಲ್ಲಾ;
ಅದು ದಫ್ಫುಡಿ ಕಿನ್ನರಿಗಳ ಸಂಗಡ ಇರುವದು;
ಅವನು ಗದ್ದಲವುಳ್ಳ ಯುದ್ಧಗಳಲ್ಲಿ ಅದರ ಸಂಗಡ ಯುದ್ಧ ಮಾಡುವನು.

೩೩ ಯಾಕಂದರೆ, ಪೂರ್ವದಿಂದ ತೋಫೆತು ಸಿದ್ಧವಾಗಿದೆ;
ಅದು ಆಳವಾಗಿಯೂ, ಅಗಲವಾಗಿಯೂ, ಅರಸನಿಗೆ ಸಿದ್ಧವಾಗಿದೆ;
ಅದರ ಗುಂಡವು ಬೆಂಕಿಯೂ, ಬಹಳ ಕಟ್ಟಿಗೆಯೂ, ಉಳ್ಳದ್ದು;
ಕರ್ತನ ಶ್ವಾಸವು, ಗಂಧಕದ ಪ್ರವಾಹದಂತೆ, ಅದನ್ನು ಹೊತ್ತಿಸುತ್ತದೆ.

## ೩೧. ಸಂಧಿ.

೧ ಸಹಾಯಕ್ಕೋಸ್ಕರ ಐಗುಪ್ತಕ್ಕೆ ಇಳಿದು ಹೋಗುವವರಿಗೆ ಅಯ್ಯೋ!
ಅವರು ಕುದುರೆಗಳ ಮೇಲೆ ಆತುಕೊಳ್ಳುತ್ತಾರೆ;
ರಥಗಳಲ್ಲಿ, ಅವು ಬಹಳವೆಂದೂ,
ರಾಹುತರಲ್ಲಿ, ಅವರು ಬಹಳ ಬಲಿಷ್ಠರೆಂದೂ, ನಂಬಿಕೊಳ್ಳುತ್ತಾರೆ;
ಆದರೆ ಇಸ್ರಯೇಲಿನ ಪರಿಶುದ್ಧನ ಮೇಲೆ ದೃಷ್ಟಿ ಇಡುವದಿಲ್ಲ;
ಕರ್ತನನ್ನು ಹುಡುಕುವದಿಲ್ಲ.

೨ ಆದರೆ ಅವನು ಸಹ ಜ್ಞಾನಿಯು, ಮತ್ತು ಕೇಡನ್ನು ತರುವನು;
ತನ್ನ ವಾಕ್ಯಗಳನ್ನು ಹಿಂತೆಗೆಯುವದಿಲ್ಲ;
ದುಷ್ಟರ ಮನೆಗೆ ವಿರೋಧವಾಗಿಯೂ,
ಪಾತಕ ಮಾಡುವವರ ಸಹಾಯಕ್ಕೆ ವಿರೋಧವಾಗಿಯೂ, ಏಳುವನು.

೩ ಮತ್ತು, ಐಗುಪ್ತ್ಯರು ದೇವರಲ್ಲ, ಮನುಷ್ಯರೇ;
ಅವರ ಕುದುರೆಗಳು ಅತ್ತವಲ್ಲ, ಮಾಂಸವೇ.
ಹೀಗಿರುವದರಿಂದ, ಕರ್ತನು ತನ್ನ ಕೈ ಚಾಚುವಾಗ,
ಸಹಾಯ ಮಾಡಿದವನು ಎಡವುವನು;
ಸಹಾಯ ಹೊಂದಿದವನು, ಬೀಳುವನು;
ಎಲ್ಲರೂ ಕೂಡ ನಾಶನವಾಗುವರು.

೪ ಯಾಕಂದರೆ, ಕರ್ತನು ಹೀಗೆ ನನಗೆ ಹೇಳಿದನು—
ಸಿಂಹವೂ, ಎಳೇ ಸಿಂಹವೂ, ತನ್ನ ಕೊಳ್ಳೆಯ ಮೇಲೆ ಗರ್ಜಿಸುವಾಗ,
ಅದಕ್ಕೆ ವಿರೋಧವಾಗಿ ಕುರುಬರ ಕೂಟವು ಕರೆಯಲ್ಪಟ್ಟರೆ,
ಹ್ಯಾಗೆ ಅವರ ಶಬ್ದಕ್ಕೆ ಭಯ ಪಡದೆ,
ಅವರ ಗದ್ದಲಕ್ಕೆ ಕುಂದಿ ಹೋಗದೆ, ಇರುವದೋ,
ಹಾಗೆಯೇ ಸೈನ್ಯಗಳ ಕರ್ತನು, ಚಿಯೋನ್ ಪರ್ವತಕ್ಕೋಸ್ಕರವೂ, ಅದರ ಗುಡ್ಡಕ್ಕೋಸ್ಕರವೂ,
ಯುದ್ಧ ಮಾಡುವದಕ್ಕೆ ಇಳಿದು ಬರುವನು.

೫ ಹಾರುವ ಪಕ್ಷಿಗಳಂತೆ,
ಸೈನ್ಯಗಳ ಕರ್ತನು ಯೆರೂಸಲೇಮನ್ನು ಕಾಪಾಡುವನು;
ಕಾಪಾಡಿ, ತಪ್ಪಿಸುವನು;
ತಪ್ಪಿಸಿ, ರಕ್ಷಿಸುವನು.

೬ ಇಸ್ರಯೇಲನ ಮಕ್ಕಳೇ!
ನೀವು ಯಾವನಿಗೆ ಅಗಾಧ ದ್ರೋಹ ಮಾಡಿದ್ದೀರೋ,
ಅವನ ಬಳಿಗೆ ತಿರುಗಿ ಕೊಳ್ಳಿರಿ.

೭ ಯಾಕಂದರೆ, ನಿಮ್ಮ ಕೈಗಳು ಪಾಪವಾಗಿ ಮಾಡಿದ,
ಬೆಳ್ಳಿಯ ಸುಳ್ಳು ದೇವರುಗಳನ್ನೂ, ಚಿನ್ನದ ಸುಳ್ಳು ದೇವರುಗಳನ್ನೂ,
ಆ ದಿವಸದಲ್ಲಿ ಎಲ್ಲರು ಬಿಸಾಡುವರು.

೮ ಆಗ ಅಶ್ಶೂರು ಪುರುಷನ ಕತ್ತಿಯಲ್ಲದ ಕತ್ತಿಯಿಂದ ಬೀಳುವದು;
ಮನುಷ್ಯನ ಕತ್ತಿಯಲ್ಲದ ಕತ್ತಿಯು ಅದನ್ನು ತಿಂದು ಬಿಡುವದು;
ಅವನು ಕತ್ತಿಯ ಮುಂದಿನಿಂದ ಓಡಿ ಹೋಗುವನು;
ಅವನ ಯೌವನಸ್ಥರು ಕಪ್ಪ ಕೊಡುವರು.

೯ ಅವನು ಅಂಜಿಕೆಯಿಂದ ತನ್ನ ತ್ರಾಣಸ್ಥಾನಕ್ಕೆ ದಾಟಿ ಹೋಗುವನು;
ಅವನ ಪ್ರಧಾನರು ದಿಗುಲು ಪಟ್ಟು, ಧ್ವಜವನ್ನು ಬಿಡುವಕೆಂದು,
ಚಿಯೋನಿನಲ್ಲಿ ಬೆಂಕಿಯೂ,
ಯೆರೂಸಲೇಮಿನಲ್ಲಿ ಒಲೆಯೂ,
ಉಂಟಾದ ಕರ್ತನು ಹೇಳುತ್ತಾನೆ.

## ೩೨. ಸಂಧಿ.

೧ ಇಗೋ, ಒಬ್ಬ ಅರಸನು ನೀತಿಯ ಪ್ರಕಾರ ಆಳುವನು,
ಪ್ರಧಾನರು ನ್ಯಾಯದ ಪ್ರಕಾರ ಧೊರೆತನ ಮಾಡುವರು;

೨ ಆಗ ಮನುಷ್ಯನು ಘಾಳಿಗೋಸ್ಕರ ಅಡಗಿ ಕೊಳ್ಳುವಂಥ,
ಬಿರು ಘಾಳಿಗೋಸ್ಕರ ಮರೆ ಮಾಡಿ ಕೊಳ್ಳುವಂಥ ಸ್ಥಾನದ ಹಾಗೆಯೂ,
ಒಣಗಿದ ಸ್ಥಳದಲ್ಲಿರುವ ನೀರಿನ ಕಾಲಿವೆಗಳ ಹಾಗೆಯೂ,
ಆಯಾಸವುಳ್ಳ ದೇಶದಲ್ಲಿರುವ ದೊಡ್ಡ ಬಂಡೆಯ ನೆರಳಿನ ಹಾಗೆಯೂ, ಇರುವನು.

೩ ಆಗ ನೋಡುವವರ ಕಣ್ಣುಗಳು ಮುಸುಕಿಲ್ಲದೆ ಇರುವವು;
ಕೇಳುವವರ ಕಿವಿಗಳು ಎಚ್ಚರವಾಗಿರುವವು.

೪ ತ್ವರೆ ಪಡುವವರ ಹೃದಯವು ತಿಳುವಿಕೆಯನ್ನು ಗ್ರಹಿಸುವದು;
ತೊದಲು ಮಾತಾಡುವವರ ನಾಲಿಗೆ ನೆಟ್ಟಗೆ ಮಾತಾಡುವದಕ್ಕೆ ಸಿದ್ಧವಾಗುವದು.

೫ ಇನ್ನು ಮೇಲೆ, ನೀಚನಿಗೆ ಉಪಕಾರಿ ಎಂದು ಕರಿಯುವದಿಲ್ಲ;
ಕಪಟಸ್ಥನಿಗೆ ಧರ್ಮಿಷ್ಠನೆಂದು ಅನ್ನುವದಿಲ್ಲ.

೬ ಯಾಕಂದರೆ, ನೀಚನು ನೀಚತನವನ್ನು ಮಾತಾಡುವನು;
ಅವನ ಹೃದಯವು,
ಭ್ರಷ್ಟತ್ವವನ್ನು ಮಾಡುವ ಹಾಗೆಯೂ,
ಕರ್ತನಿಗೆ ವಿರೋಧವಾಗಿ ಅಬದ್ಧವನ್ನು ಮಾತಾಡುವ ಹಾಗೆಯೂ,
ಹಸಿವೆಯುಳ್ಳವನ ಪ್ರಾಣವನ್ನು ಉಪವಾಸವಾಗಿ ಬಿಡುವ ಹಾಗೆಯೂ,
ನೀರಡಿಕೆಯುಳ್ಳವನ ಪಾನವನ್ನು ಇಲ್ಲದಂತೆ ಮಾಡುವ ಹಾಗೆಯೂ,
ಪಾತಕವನ್ನು ಮಾಡುವದು.

೭ ಮತ್ತು, ಕಪಟಸ್ಥನಾದರೆ—ಅವನ ಆಯುಧಗಳು ಕೆಟ್ಟವುಗಳೇ;
ದರಿದ್ರನು ನ್ಯಾಯವಾದದ್ದನ್ನು ಮಾತಾಡಿದರೂ,
ಅವನು ಬಡವರನ್ನು ಮೋಸದ ಮಾತುಗಳಿಂದ ಕೆಡಿಸಿ ಬಿಡುವದಕ್ಕೆ,
ದೋಷಗಳನ್ನು ಯೋಚಿಸುತ್ತಾನೆ.

೮ ಆದರೆ ಧರ್ಮಿಷ್ಠನು ಧರ್ಮವಾದವುಗಳನ್ನು ಯೋಚಿಸುತ್ತಾನೆ;
ಅವನು ಧರ್ಮವಾದವುಗಳಿಂದ ನೆಲೆಯಾಗಿರುವನು.

೯ ಸೌಖ್ಯದಲ್ಲಿರುವ ಹೆಂಗಸರೇ! ಎದ್ದು ನನ್ನ ಶಬ್ದವನ್ನು ಕೇಳ್ಳಿರಿ.
ನಿಶ್ಚಿಂತೆಯಾಗಿರುವ ಹೆಣ್ಣು ಮಕ್ಕಳೇ! ನನ್ನ ಮಾತಿಗೆ ಕಿವಿ ಕೊಡಿರಿ.

೧೦ ವರುಷದ ಮೇಲೆ ಹೆಚ್ಚಾದ ದಿವಸಗಳು ಕಳವಳ ಪಡುವಿರಿ, ನಿಶ್ಚಿಂತೆಯುಳ್ಳವಳೇ!
ಯಾಕಂದರೆ, ದ್ರಾಕ್ಷೆ ಕೊಯ್ಯುವ ಕಾಲ ಇಲ್ಲದೆ ಹೋಗುವದು.
ಹಣ್ಣು ಕೂಡಿಸುವ ಕಾಲ ಬಾರದು.

೧೧ ಸೌಖ್ಯದಲ್ಲಿರುವವಳೇ! ನಡುಗಿರಿ.
ನಿಶ್ಚಿಂತೆಯುಳ್ಳವಳೇ! ಕಳವಳ ಪಡಿರಿ.
ವಸ್ತ್ರ ತೆಗೆದು, ಬರೀ ಮೈಯಾಗಿರ್ರಿ;
ನಡುವಿಗೆ ಗೋಣಿ ಕಟ್ಟಿ ಕೊಳ್ಳಿರಿ.

೧೨ ರಮ್ಯವಾದ ಹೊಲಗಳ ನಿಮಿತ್ತವೂ,
ಫಲವುಳ್ಳ ದ್ರಾಕ್ಷೇ ಗಿಡದ ನಿಮಿತ್ತವೂ,
ಎದೆ ಬಡುಕೊಳ್ಳುವರು.

೧೩ ನನ್ನ ಜನರ ಭೂಮಿಯಲ್ಲಿ ಮುಳ್ಳೂ ಪತ್ತೂರಿಯೂ ಬೊಳಿಯುವದು.
ಹೌದು, ಉಲ್ಲಾಸವುಳ್ಳ ಪಟ್ಟಣದ ಎಲ್ಲಾ ಸಂತೋಷವುಳ್ಳ ಮನೆಗಳ ಮೇಲೆಯೇ.

೧೪ ಯಾಕಂದರೆ, ಅರಮನೆ ವಿಸರ್ಜಿಸಲ್ಪಡುವದು;
ಸಂದಣಿಯುಳ್ಳ ಪಟ್ಟಣವು ಬಿಡಲ್ಪಡುವದು.
ದುರ್ಗಗಳೂ, ಬುರುಜುಗಳೂ, ನಿತ್ಯವಾಗಿ ಗವಿಗಳಾಗಿಯೂ,
ಕಾಡು ಕತ್ತೆಗಳಿಗೆ ಸಂತೋಷವಾಗಿಯೂ,
ಮಂದೆಗಳಿಗೆ ಮೇಯುವ ಸ್ಥಳವಾಗಿಯೂ, ಇರುವವು.

೧೫ ಉನ್ನತದಿಂದ ಆತ್ಮವು ನಮ್ಮ ಮೇಲೆ ಹೊಯ್ಯಲ್ಪಡುವ ಪರ್ಯಂತರಕ್ಕೂ;
ಆಗ ಅರಣ್ಯವು ಪೈರಿನ ಹೊಲವಾಗುವದು;
ಪೈರಿನ ಹೊಲವು ಅರಣ್ಯವಾಗಿ ಎಣಿಸಲ್ಪಡುವದು.

೧೬ ಆಗ ಅರಣ್ಯದಲ್ಲಿ ನ್ಯಾಯವು ವಾಸಿಸುವದು;
ಪೈರಿನ ಹೊಲದಲ್ಲಿ ನೀತಿಯು ನೆಲೆಯಾಗುವದು.

೧೭ ಮತ್ತು, ನೀತಿಯ ಕ್ರಿಯೆಯು, ಸಮಾಧಾನವು,
ನೀತಿಯ ಫಲವು, ನಿತ್ಯವಾದ ಶಾಂತಿಯೂ, ಭರವಸವೂ, ಆಗಿರುವದು.

೧೮ ಆಗ ನನ್ನ ಜನರು ಸಮಾಧಾನದ ನಿವಾಸಗಳಲ್ಲಿಯೂ,
ಭದ್ರವಾದ ಸ್ಥಾನಗಳಲ್ಲಿಯೂ,
ಉಪಕಮನವಾದ ಆಶ್ರಮಗಳಲ್ಲಿಯೂ, ವಾಸಿಸುವರು.

೧೯ ಆದರೆ, ಆಡವಿ ಬೀಳುವಾಗಲು ಕಲ್ಲುಳೆಯಾಗುವದು;
ಮತ್ತು, ಪಟ್ಟಣವು ತಗ್ಗಾದ ಸ್ಥಳಕ್ಕೆ ತಗ್ಗಿಸಲ್ಪಡುವದು.

೨೦ ಎಲ್ಲಾ ನೀರುಗಳ ಬಳಿಯಲ್ಲಿ ಬೀಜ ಹಾಕಿ,
ಎತ್ತಿನ ಕತ್ತೆಯ ಕಾಲುಗಳನ್ನು ಕಳುಹಿಸುವವರಾದ ನೀವು,
ಭಾಗ್ಯವಂತರು.

## ೩೩. ಸಂಧಿ.

೧ ನೀನೇ ಕೊಳ್ಳೆ ಹಿಡಿಯಲ್ಪಡದೆ, ಕೊಳ್ಳೆ ಹಿಡಿಯುವವನೇ!
ನೀನೇ ವಂಚಿಸಲ್ಪಡದೆ, ವಂಚನೆ ಮಾಡುವವನೇ! ನಿನಗೆ ಅಯ್ಯೋ!
ನೀನು ಕೊಳ್ಳೆ ಹಿಡಿಯುವದನ್ನು ಮುಗಿಸಿದಾಗಲೇ ಕೊಳ್ಳೆ ಹಿಡಿಯಲ್ಪಡುವಿ;
ವಂಚನೆ ಮಾಡುವದನ್ನು ತೀರಿಸಿದಾಗಲೇ ನಿನಗೆ ವಂಚನೆ ಮಾಡುವರು.

೨ ಕರ್ತನೇ, ನಮಗೆ ದಯೆ ತೋರಿಸು;
ನಿನಗೋಸ್ಕರ ಕಾದು ಕೊಂಡಿದ್ದೇವೆ;
ದಿನ ದಿನದ ಹೊತ್ತಾಕೆ ಅವರ ತೋಳಾಗು;
ಇಕ್ಕಟ್ಟಿನ ಕಾಲದಲ್ಲಿ ನಮ್ಮ ರಕ್ಷಣೆಯಾಗಿರು.
೩ ಗದ್ದಲದ ಶಬ್ದಕ್ಕೆ ಜನಗಳು ಓಡಿ ಹೋಗುತ್ತವೆ;
ನೀನು ಏಳುವಾಗ ಜನಾಂಗಗಳು ಚದರಿ ಹೋಗುತ್ತವೆ.
೪ ನಿನ್ನ ಕೊಳ್ಳೆ, ಕಂಬಳಿ ಹುಳವು ಕೂಡಿಸುವ ಹಾಗೆ,
ಕೂಡಿಸಲ್ಪಡುವದು;
ಮಿಡಿತೆಗಳು ಓಡ್ಯಾಡುವ ಪ್ರಕಾರ,
ಅದರ ಮೇಲೆ ಓಡ್ಯಾಡುವರು.
೫ ಕರ್ತನು ಉನ್ನತವಾದವನು;
ಯಾಕಂದರೆ, ಅವನು ಊರ್ಧ್ವದಲ್ಲಿ ವಾಸ ಮಾಡುತ್ತಾನೆ.
ಚಿಯೋನನ್ನು ನ್ಯಾಯದಿಂದಲೂ ನೀತಿಯಿಂದಲೂ ತುಂಬಿಸುತ್ತಾನೆ.
೬ ಮತ್ತು, ಅವನು ನಿನ್ನ ಕಾಲದ ನಂಬಿಕೆಯಾಗಿಯೂ,
ರಕ್ಷಣೆ ಜ್ಞಾನ ತಿಳುವಿಕೆಗಳ ನಿಕ್ಷೇಪವಾಗಿಯೂ, ಇರುವನು;
ಕರ್ತನ ಭಯವೇ ಅವನ ಬೊಕ್ಕಸವು.

೭ ಇಗೋ ಅವರ ಪರಾಕ್ರಮಶಾಲಿಗಳು ಹೊರಗೆ ಕೂಗುತ್ತಾರೆ;
ಸಮಾಧಾನದ ದೂತರು ಘಟ್ಟಿಯಾಗಿ ಅಳುತ್ತಾರೆ.
೮ ರಾಜಮಾರ್ಗಗಳು ಹಾಳಾದವು;
ಹಾದಿಯಲ್ಲಿ ಹೋಗುವವರು ನಿಂತು ಹೋದರು;
ಅವನು ಒಡಂಬಡಿಕೆಯನ್ನು ಮೀರಿದ್ದಾನೆ;
ಪಟ್ಟಣಗಳನ್ನು ಉದಾಸೀನ ಮಾಡಿ, ಮನುಷ್ಯರನ್ನು ಲಕ್ಷ್ಯವಿಡದೆ ಇದ್ದಾನೆ.
೯ ದೇಶವು ದುಃಖ ಪಡುತ್ತದೆ, ಬಾಡಿ ಹೋಗುತ್ತದೆ;
ಲೆಬನೋನು ನಾಚಿಕೆ ಹೊಂದುತ್ತದೆ, ಬೂಗುತ್ತದೆ;
ಶಾರೋನು ಅರಣ್ಯ ಹಾಗಾಗುತ್ತದೆ;
ಬಾಷಾನೂ ಕಾರ್ಮೆಲೂ ಎಲೆ ಉದುರುತ್ತವೆ.

೧೦ ಕರ್ತನು ಹೇಳುವದೇನಂದರೆ—
ಈಗ ಏಳುವೆನು;
ಈಗ ಉನ್ನತನಾಗುವೆನು;
ಈಗ ನನ್ನನ್ನು ಎತ್ತಿ ಕೊಳ್ಳುವೆನು.
೧೧ ನೀವು ಹೊಟ್ಟೆನಿಂದ ಬಸುರಾಗಿ ಕೂಳೆಯನ್ನು ಹೆರುವಿರಿ;
ನಿಮ್ಮ ಆತ್ಮವೇ ಬೆಂಕಿಯಂತೆ ನಿಮ್ಮನ್ನು ತಿಂದು ಬಿಡುವದು;
೧೨ ಮತ್ತು, ಜನಾಂಗಗಳು, ಸುಟ್ಟ ಸುಣ್ಣದ ಹಾಗೆಯೂ,
ಬೆಂಕಿಯಲ್ಲಿ ಸುಡುವ ಕೊಯಿದ ಮುಳ್ಳುಗಳ ಹಾಗೆಯೂ,
ಆಗುವವು.
೧೩ ದೂರದಲ್ಲಿರುವವರೇ! ನಾನು ಮಾಡಿದ್ದನ್ನು ಕೇಳಿರಿ.
ಹತ್ತರದಲ್ಲಿರುವವರೇ! ನನ್ನ ಪರಾಕ್ರಮವನ್ನು ತಿಳಿಯಿರಿ;
೧೪ ಚಿಯೋನಿನಲ್ಲಿ ಪಾಪಿಷ್ಠರು ಹೆದರುತ್ತಾರೆ;
ಭಕ್ತಿಹೀನರನ್ನು ನಡುಗುವಿಕೆ ಹಿಡಿಯಿತು;
ನಮ್ಮಲ್ಲಿ ಯಾರು ದಹಿಸುವ ಅಗ್ನಿಯ ಸಂಗಡ ವಾಸಿಸುವರು!
ನಮ್ಮಲ್ಲಿ ಯಾರು ನಿತ್ಯವಾದ ಸುಡುವಿಕೆಗಳ ಸಂಗಡ ವಾಸಿಸುವರು!

೧೫ ನೀತಿಯಾಗಿ ನಡೆಯುವವನು;
ಯಥಾರ್ಥವನ್ನು ಮಾತಾಡುವವನು;
ಬಲಾತ್ಕಾರದಿಂದ ಆಗುವ ಲಾಭವನ್ನು ತಿರಸ್ಕರಿಸುವವನು;
ಲಂಚವನ್ನು ಮುಟ್ಟುವದಿಲ್ಲವೆಂದು ತನ್ನ ಕೈ ಅಲ್ಲಾಡಿಸುವವನು;
ರಕ್ತಾಪರಾಧದ ಮಾತನ್ನು ಕೇಳುವದಿಲ್ಲವೆಂದು ತನ್ನ ಕಿವಿ ಬಿಗಿಸುವವನು;
ಕೆಟ್ಟದ್ದನ್ನು ನೋಡುವದಿಲ್ಲವೆಂದು ತನ್ನ ಕಣ್ಣುಗಳನ್ನು ಮುಚ್ಚುವವನು;
೧೬ ಅವನೇ ಊರ್ಧ್ವದಲ್ಲಿ ವಾಸಿಸುವನು;
ಬಂಡೆಗಳ ಕೋಟೆಗಳು ಅವನ ಆಶ್ರಯವಾಗಿರುವವು;
ಅವನ ಕೊಟ್ಟಿ ಅವನಿಗೆ ಕೊಡಲ್ಪಡುವದು,
ಅವನ ನೀರು ತಪ್ಪುವದಿಲ್ಲ.
೧೭ ನಿನ್ನ ಕಣ್ಣುಗಳು ಅರಸನನ್ನು, ಅವನ ಸೌಂದರ್ಯದಲ್ಲಿ,
ದೃಷ್ಟಿಸುವವು;
ದೂರವಾಗಿರುವ ದೇಶವನ್ನು ನೋಡುವವು.
೧೮ ನಿನ್ನ ಹೃದಯವು ಘೋರಭಯವನ್ನು ಧ್ಯಾನಿಸುವದು;
ಬರೆಯುವವನು ಎಲ್ಲಿ? ತೂಗಿ ನೋಡುವವನು ಎಲ್ಲಿ?
ಬುರುಜುಗಳ ಲೆಖ್ಖ ಮಾಡುವವನು ಎಲ್ಲಿ?
೧೯ ಆ ಭಯಂಕರವಾದ ಜನರನ್ನೂ,
ನೀನು ಕೇಳ್ಳ ಕೂಡದ ಹಾಗೆ ಕಠಿಣವಾದ ಭಾಷೆಯೂ,
ತಿಳಿಯ ಕೂಡದ ಹಾಗೆ ಅಪರೂಪವಾದ ಮಾತೂ,
ಆಡಿದ ಜನರನ್ನೂ, ನೋಡದೆ ಇರುವಿರಿ.

೨೦ ನಮ್ಮ ಹಬ್ಬಗಳ ಪಟ್ಟಣವಾದ ಚಿಯೋನನ್ನು ದೃಷ್ಟಿಸು;
ನಿನ್ನ ಕಣ್ಣುಗಳು ಯೆರೂಸಲೇಮನ್ನು ಸಮಾಧಾನವುಳ್ಳ ನಿವಾಸವಾಗಿಯೂ,
ಇಳಿಸಲ್ಪಡದ ಗುಡಾರವಾಗಿಯೂ ನೋಡುವವು;
ಅದರ ಗೂಟಗಳು ಎಂದಿಗೂ ಕಿತ್ತಲ್ಪಡದೆ,
ಅದರ ಹಗ್ಗಗಳಲ್ಲಿ ಒಂದಾದರೂ ಹರಿದು ಹೋಗುವದಿಲ್ಲ.
೨೧ ಅದಕ್ಕೆ ಅಲ್ಲಿ ನಮಗೆ,
ಎರಡು ಕಡೆಯಲ್ಲಿ ವಿಸ್ತಾರವಾದ ನದಿಗಳ ಪ್ರವಾಹಗಳಿಗೆ
ಬದಲಾಗಿ,



ಕ್ರೇಷ್ಠವಾದ ಯೆಹೋವ ಇರುವನು,
ಅಲ್ಲಿ ಹುಟ್ಟುಗಳುಳ್ಳ ಹಡಗವು ಹೋಗುವದಿಲ್ಲ;
ಗಂಭೀರವಾದ ನಾವೆಯು ಹಾದು ಹೋಗುವದಿಲ್ಲ.
೨೨ ಯಾಕಂದರೆ, ಯೆಹೋವ ನಮ್ಮ ನ್ಯಾಯಾಧಿಪತಿಯಾಗಿದ್ದಾನೆ;
ಯೆಹೋವ ನಮಗೆ ಆಜ್ಞೆ ಕೊಡುವವನು;
ಯೆಹೋವ ನಮ್ಮ ಅರಸನು;
ಅವನೇ ನಮ್ಮನ್ನು ರಕ್ಷಿಸುವನು.

೨೩ ನಿನ್ನ ಹಗ್ಗಗಳು ಬಿಚ್ಚಿಯಾದವು;
ತಮ್ಮ ಪಕಸ್ತಂಭವನ್ನು ಬಿಗಿಸಲಾರರು;
ಪಟವನ್ನು ಏರಿಸ ಕೂಡದು;
ಆಗ ದೊಡ್ಡ ಕೊಳ್ಳೆಯ ಸುಲಿಗೆ ವಿಭಾಗವಾಗುವದು;
ಕುಂಟರು ಸೂರೆಯನ್ನು ತಕ್ಕೊಳ್ಳುವರು.

೨೪ ನಿವಾಸಿಯು, ನನಗೆ ರೋಗವಾಯಿತೆಂದು ಹೇಳುವದಿಲ್ಲ;
ಅದರಲ್ಲಿ ವಾಸವಾಗಿರುವ ಜನರು ಅಕ್ರಮದ ಪರಿಹಾರ ಹೊಂದಿದವರೇ.

## ೩೪. ಸಂಧಿ.

೧ ಜನಾಂಗಗಳೇ! ಕೇಳುವದಕ್ಕೆ ಹತ್ತರ ಬನ್ನಿ.
ಜನ ಸಮೂಹಗಳೇ! ಆಲೈಸಿರಿ.
ಭೂಮಿಯೂ, ಅದರ ಪರಿಪೂರ್ಣತೆಯೂ,
ಭೂಲೋಕವೂ, ಅದರ ಎಲ್ಲಾ ಹುಟ್ಟುವಳಿಯೂ, ಕೇಳಲಿ!
೨ ಯಾಕಂದರೆ, ಕರ್ತನಿಗೆ ಎಲ್ಲಾ ಜನಾಂಗಗಳ ಮೇಲೆ ಸಿಟ್ಟೂ,
ಅವುಗಳ ಎಲ್ಲಾ ಸೈನ್ಯಗಳ ಮೇಲೆ ಕೌದ್ರವೂ ಉಂಟು;
ಅವನು ಅವುಗಳಿಗೆ ಶಾಪ ಕೊಟ್ಟು ಕೊಲೆಗೆ ಒಪ್ಪಿಸಿದ್ದಾನೆ.
೩ ಅವರಲ್ಲಿ ಕೊಂದು ಹಾಕಲ್ಪಟ್ಟವರು ಬಿಸಾಕಲ್ಪಡುವರು;
ಅವರ ಹೆಣಗಳ ನಾತವು ಏರಿ ಬರುವದು;
ಅವರ ರಕ್ತದಿಂದ ಪರ್ವತಗಳು ಕರಗಿ ಹೋಗುವವು.
೪ ಆಕಾಶದ ಸೈನ್ಯವೆಲ್ಲಾ ಗತಿಸಿ ಹೋಗುವದು;
ಆಕಾಶವು ಸುರಳಿಯಂತೆ ಸುತ್ತಲ್ಪಡುವದು;
ದ್ರಾಕ್ಷೇ ಗಿಡದ ಎಲೆ ಬಾಡುವ ಹಾಗೆಯೂ,
ಅಂಜೂರದಲ್ಲಿ ಬಾಡುವಂಥಾದರ ಹಾಗೆಯೂ,
ಅವುಗಳ ಸೈನ್ಯವೆಲ್ಲಾ ಬಾಡಿ ಹೋಗುವದು.
೫ ಯಾಕಂದರೆ, ಆಕಾಶದಲ್ಲಿ ನನ್ನ ಕತ್ತಿಯು ಮತ್ತಾಗುವದು;
ಇಗೋ ಎದೋಮಿನ ಮೇಲೆಯೂ, ನಾನು ಶಪಿಸಿದ ಜನರ ಮೇಲೆಯೂ,
ಅದು ನ್ಯಾಯಕ್ಕೆ ಇಳಿದು ಬರುವದು.
೬ ಕರ್ತನ ಕತ್ತಿಯು ರಕ್ತದಿಂದ ತುಂಬಿಯದೆ;
ಅದು ಕೊಬ್ಬಿನಿಂದಲೂ, ಕುರಿಮರಿಗಳ ಹೋತುಗಳ ರಕ್ತದಿಂದಲೂ,
ಟಿಗರುಗಳ ಗುಂಡಿಗೆ ಕೊಬ್ಬಿನಿಂದಲೂ, ಪುಷ್ಟಿಯಾಯಿತು;
ಯಾಕಂದರೆ, ಕರ್ತನಿಗೆ ಬೊಚ್ರದಲ್ಲಿ ಬಲಿಯೂ,
ಎದೋಮಿನ ದೇಶದಲ್ಲಿ ದೊಡ್ಡ ಕೊಲೆಯೂ, ಉಂಟು.
೭ ಆಗ ಕಾಡು ಕೋಣಗಳು ಅವುಗಳ ಸಂಗಡಲೂ,
ಹೋರಿಗಳು ಬಲವಾದವುಗಳ ಸಂಗಡಲೂ ಬೀಳುವವು;
ಅವರ ಭೂಮಿಯೂ ರಕ್ತದಿಂದ ಮತ್ತಾಗುವದು;
ಅವರ ಧೂಳು ಕೊಬ್ಬಿನಿಂದ ಪುಷ್ಟಿಯಾಗುವದು.
೮ ಯಾಕಂದರೆ, ಮುಯ್ಯಿಗೆ ಮುಯ್ಯಿ ತೀರಿಸುವ ದಿವಸವೂ,
ಚಿಯೋನಿನ ವ್ಯಾಪಾರದಲ್ಲಿ ಪ್ರತಿಫಲ ಕೊಡುವ ವಿರುದ್ಧವೂ
ಕರ್ತನಿಗುಂಟು.
೯ ಆಗ ಅದರ ಹಳ್ಳಗಳು ರಾಳವೂ,
ಅದರ ಧೂಳು ಗಂಧಕವೂ, ಆಗುವವು;
ಅದರ ಭೂಮಿ, ಉರಿಯುವ ರಾಳವಾಗುವದು.
೧೦ ಅದು ರಾತ್ರಿ ಹಗಲು ಆರದೆ ಇರುವದು;
ನಿತ್ಯವಾಗಿ ಅದರ ಹೊಗೆ ಏರುವದು;
ತಲತಲಾಂತರಕ್ಕೆ ಅದು ಹಾಳಾಗಿರುವದು;
ಸದಾಕಾಲದಲ್ಲಿ ಯಾರು ಅದರಲ್ಲಿ ಹಾದು ಹೊಗದಿರುವರು.
೧೧ ಆದರೆ ಹಾಲಕ್ಕಿಯೂ, ಮುಳ್ಳು ಹಂದಿಯೂ, ಅದನ್ನು ವಶ ಮಾಡಿ ಕೊಳ್ಳುವವು;
ಕೊಕ್ಕರೆಯೂ, ಕಾಗೆಯೂ, ಅದರಲ್ಲಿ ವಾಸವಾಗುವವು.
ಅದರ ಮೇಲೆ ಹಾಳದ ನೂಲೂ,
ಬರಿದಾದರ ಘಟ್ಟಿ ತೂಕವೂ ಹಿಡಿಯುವನು.
೧೨ ಅದರ ಶ್ರೇಷ್ಠರಾದರೆ—
ರಾಜ್ಯಕ್ಕೆ ಕರೆಯಲ್ಪಡ ತಕ್ಕವರು ಅಲ್ಲಿ ಯಾರು ಇಲ್ಲ;
ಅದರ ಪ್ರಧಾನರೆಲ್ಲರು ಇಲ್ಲದೆ ಹೋದರು.
೧೩ ಅದರ ಅರಮನೆಗಳಲ್ಲಿ ಮುಳ್ಳುಗಳು ಬೆಳೆಯುವವು;
ತುರುಚೆಯೂ ದತ್ತೂರಿಯೂ ಅದರ ಕೋಟೆಗಳಲ್ಲಿ ಇರುವವು,
ಅದು ನರಿಗಳ ನಿವಾಸವೂ, ಉಷ್ಟ್ರಪಕ್ಷಿಗಳ ಸ್ಥಾನವೂ, ಆಗುವದು.
೧೪ ಕಾಡು ಬೆಕ್ಕುಗಳು ನರಿಗಳನ್ನು ಎದುರ್ಕೊಳ್ಳುವವು,
ದೆವ್ವಕ್ಕೆ ದೆವ್ವ ಕರೆಯುವದು.
ಅಲ್ಲಿ ರಾತ್ರಿಯ ಭೂತ ವಿಶ್ರಮಿಸಿ ಕೊಂಡು,
ಉಪಶಮನ ಸ್ಥಳವನ್ನು ಕಂಡು ಕೊಳ್ಳುವದು.
೧೫ ಅಲ್ಲಿ ಬಾಣಸರ್ಪ ಹುತ್ತ ಮಾಡಿ ಕೊಂಡು,
ಮೊಟ್ಟೆ ಇಕ್ಕಿ, ಮರಿ ಮಾಡಿ,
ಅವುಗಳನ್ನು ತನ್ನ ನೆರಳಿನಲ್ಲಿ ಕೂಡಿಸುವದು;
ಅಲ್ಲೇ ಹದ್ದುಗಳು,
ತಮ್ಮ ತಮ್ಮ ಜತೆಯ ಸಂಗಡ ಕೂಡಿ ಕೊಳ್ಳುವವು.
೧೬ ಕರ್ತನ ಪುಸ್ತಕದಲ್ಲಿ ಹುಡಿಕಿ ಓದಿರಿ;
ಇವುಗಳಲ್ಲಿ ಒಂದಾದರೂ ತಪ್ಪದು,
ಒಂದಕ್ಕಾದರೂ ಅದರ ಜತೆ ಸಿಕ್ಕದೆ ಇರುವದಿಲ್ಲ,
ಯಾಕಂದರೆ, ನನ್ನ ಬಾಯಿಯೇ ಅದನ್ನು ಆಜ್ಞಾಪಿಸಿತು,
ಅವನ ಆತ್ಮವೇ ಅವುಗಳನ್ನು ಕೂಡಿಸಿತು.
೧೭ ಅವನೇ ಅವುಗಳಿಗೋಸ್ಕರ ಚೀಟು ಹಾಕಿದ್ದಾನೆ;
ಅವನ ಕೈ ಅದನ್ನು ಅವುಗಳಿಗೆ ಸೂತ್ರದಿಂದ ಪಾಲಿಟ್ಟಿದ್ದಾನೆ;
ನಿತ್ಯವಾಗಿ ಅದನ್ನು ವಶ ಮಾಡಿ ಕೊಳ್ಳುವವು;
ತಲ ತಲಾಂತರಕ್ಕೆ ಅದರಲ್ಲಿ ವಾಸವಾಗುವವು.

## ೩೫. ಸಂಧಿ.

೧ ಅರಣ್ಯವೂ, ಬಣಗಿದ ನೆಲವೂ, ಸಂತೋಷಿಸುವವು;
ಕಾಡು ಭೂಮಿಯು ಉಲ್ಲಾಸ ಪಡುವದು;
ಗುಲಾಬಿ ಹೂವಿನ ಹಾಗೆ ಅರಳುವದು.
೨ ಬಹಳವಾಗಿ ಅರಳುವದು;
ಉಲ್ಲಾಸದಿಂದಲೂ ಹರ್ಷದಿಂದಲೂ ಉಲ್ಲಾಸ ಪಡುವದು.
ಲೆಬನೋನಿನ ಮಹಿಮೆಯೂ,
ಕಾರ್ಮೆಲಿನ ಶಾಕೋನಿನ ಸೌಂದರ್ಯವೂ,
ಅದಕ್ಕೆ ಕೊಡಲ್ಪಡುವದು;
ಅವರು ಕರ್ತನ ಮಹಿಮೆಯನ್ನೂ,
ನಮ್ಮ ದೇವರ ಸೌಂದರ್ಯವನ್ನೂ, ನೋಡುವರು.
೩ ಬಲಹೀನವಾದ ಕೈಗಳನ್ನು ಬಲಪಡಿಸಿರಿ;
ನಿತ್ರಾಣವಾದ ಮೊಣಕಾಲುಗಳನ್ನು ದೃಢ ಪಡಿಸಿರಿ.
೪ ಅಂಜುವ ಹೃದಯವುಳ್ಳವರಿಗೆ—ಬಲಗೊಳ್ಳಿರಿ, ಭಯ ಪಡ ಬೇಡಿರಿ;
ಇಗೋ ನಿಮ್ಮ ದೇವರು ಮುಯ್ಯಿಗೆ ಮುಯ್ಯಿ ಕೊಡುವದಕ್ಕೆ ಬರುತ್ತಾನೆ;
ದೇವರು ಕೊಡುವ ಪ್ರತಿ ಫಲ ಬರುತ್ತದೆ;
ಅವನೇ ಬಂದು, ನಿಮ್ಮನ್ನು ರಕ್ಷಿಸುವನು, ಎಂದು ಹೇಳಿರಿ.
೫ ಆಗ ಕುರುಡರ ಕಣ್ಣುಗಳು ತೆರೆಯಲ್ಪಡುವವು;
ಕಿವುಡರ ಕಿವಿಗಳು ಬಿಚ್ಚಲ್ಪಡುವವು.
೬ ಆಗ ಕುಂಟನು ಜಿಂಕೆಯಂತೆ ಹಾರುವನು;
ಮೂಕನ ನಾಲಿಗೆ ಹರ್ಷಿಸುವದು;
ಯಾಕಂದರೆ ಅರಣ್ಯದಲ್ಲಿ ನೀರೂ,
ಕಾಡಿನಲ್ಲಿ ಹಳ್ಳಗಳೂ, ಹೀಳಿ ಬರುವವು.
೭ ಆಗ ಬಿಸಲುಕುದುರೆ ಕೆರೆಯಾಗುವದು;
ಬಣಗಿದ ಭೂಮಿ ನೀರಿನ ಬುಗ್ಗೆಗಳಾಗುವದು;
ನರಿಗಳು ಮಲಗಿ ಕೊಂಡ ನಿವಾಸದಲ್ಲಿ
ತುಂಗೆಗೂ ಆಪಿಗೂ ತಕ್ಕ ಸ್ಥಳವಾಗುವದು.
೮ ಅಲ್ಲಿ ರಾಜಮಾರ್ಗವೂ ದಾರಿಯೂ ಇರುವದು,
ಅದಕ್ಕೆ ಪರಿಶುದ್ಧವಾದ ದಾರಿ ಎಂದು ಹೆಸರಿರುವದು;
ಅದರಲ್ಲಿ ಅಪವಿತ್ರನು ಹೋಗುವದಿಲ್ಲ;
ಆದರೆ ಅವರಿಗೋಸ್ಕರ ಇರುವದು;
ದಾರಿಯಲ್ಲಿ ಹೋಗುವವರು ದಡ್ಡರಾಗಿದ್ದರೂ ತಪ್ಪುವದಿಲ್ಲ.
೯ ಅಲ್ಲಿ ಸಿಂಹವಿರದು,
ಮೃಗಗಳಲ್ಲಿ ಬಲಾತ್ಕಾರವುಳ್ಳದ್ದು ಅದರಲ್ಲಿ ಏರದು;
ಅದರಲ್ಲಿ ಸಿಕ್ಕದು;
ರಕ್ಷಿಸಲ್ಪಟ್ಟವರು ಅದರಲ್ಲಿ ನಡಿಯುವರು.
೧೦ ಮತ್ತು, ಕರ್ತನಿಂದ ವಿಮೋಚಿಸಲ್ಪಟ್ಟವರು ತಿರುಗಿ ಕೊಂಡು,
ತಮ್ಮ ತಲೆಗಳ ಮೇಲೆ ಹರ್ಷವೂ ನಿತ್ಯವಾದ ಸಂತೋಷವೂ ಉಂಟಾಗಿ,
ಚಿಯೋನಿಗೆ ಬರುವರು;
ಆನಂದವೂ ಸಂತೋಷವೂ ಅವರಿಗೆ ದೊರಕುವವು;
ಚಿಂತೆಯೂ ನಿಟ್ಟುಸುರೂ ಓಡಿ ಹೋಗುವವು.

## ೩೬. ಸಂಧಿ.

೧ ಅರಸನಾದ ಹಿಸ್ಕೀಯನ ಹದಿನಾಲ್ಕನೇ ವರುಷದಲ್ಲಿ ಅದಕ್ಕೇನಂದರೆ—ಅಶ್ಶೂರಿನ ಅರಸನಾದ ಸನ್ಹೆರೀಬನು, ಯೆಹೂದದ ಕೋಟೆಯುಳ್ಳ ಪಟ್ಟಣಗಳಿಗೆಲ್ಲಾ ವಿರೋಧವಾಗಿ ಏರಿ ಬಂದು, ಅವುಗಳನ್ನು ಹಿಡಿದನು.
೨ ಆಗ ಅಶ್ಶೂರಿನ ಅರಸನು, ರಬ್ಷೇಕನನ್ನು, ದೊಡ್ಡ ಸೈನ್ಯದ ಸಂಗಡ, ಲಾಕೀಷಿನಿಂದ ಯೆರೂಸಲೇಮಿಗೆ, ಅರಸನಾದ ಹಿಸ್ಕೀಯನ ಬಳಿಗೆ, ಕಳುಹಿಸಿದನು; ಅವನು ಮೇಲಿನ ಕೆರೆಯ ಕಾಲಿಕೆಯ ಸಮೀಪದಲ್ಲಿ, ಅಗಸರ ಹೊಲದ ರಾಜಮಾರ್ಗದಲ್ಲಿ, ನಿಂತು ಕೊಂಡನು. ೩ ಆಗ ಹಿಲ್ಕೀಯನ ಮಗನಾದ ಮನೆಯ ಮುಖ್ಯಸ್ಥನಾದ ಎಲ್ಯಾಕೀಮನೂ, ಬರೆಯುವವನಾದ ಶೆಬ್ನನೂ, ಆಸಾಫನ ಮಗನಾದ ರಾಯಸದವನಾದ ಯೋವಾಹನೂ, ಅವನ ಬಳಿಗೆ ಹೊರಟರು.
೪ ರಬ್ಷೇಕನು ಅವರಿಗೆ ಹೇಳಿದ್ದೇನಂದರೆ—ಹಿಸ್ಕೀಯನಿಗೆ ಹೀಗೆ ಹೇಳಿರಿ—ಅಶ್ಶೂರಿನ ಅರಸನಾದ ಮಹಾರಾಜನು ಹೇಳುವದೇನಂದರೆ—ನೀನು ನಂಬಿ ಕೊಳ್ಳುವ ಈ ನಂಬಿಕೆ ಏನು! ೫ ಯುದ್ಧಕ್ಕಾಗಿ ನನಗೆ ಆಲೋಚನೆಯೂ ಪರಾಕ್ರಮವೂ ಉಂಟೆಂದು ನೀನು ಹೇಳುವದು, ಬರೀ ಬಾಯಿ ಮಾತು. ನೀನು ಯಾರ ಮೇಲೆ ನಂಬಿಕೆ ಇಟ್ಟು ಕೊಂಡು, ನನಗೆ ವಿರೋಧವಾಗಿ ತಿರುಗಿ ಬಿದ್ದಿದ್ದೀ!
೬ ಇಗೋ, ಈ ಮುರಿದ ಬೆತ್ತದ ಕೋಲಾದ ಐಗುಪ್ತದಲ್ಲಿ ನಂಬಿಕೆ ಇಟ್ಟು ಕೊಳ್ಳುತ್ತೀ; ಅದರ ಮೇಲೆ ಒಬ್ಬನು ಊರಿ ಕೊಂಡರೆ, ಅವನ ಕೈಯಲ್ಲಿ ಶೇರಿ ಅವನನ್ನು ಶಿವಿಯುವದು; ಅರಸನಾದ ಫರೋನನು, ತನ್ನಲ್ಲಿ ನಂಬಿಕೆ ಇಟ್ಟು ಕೊಳ್ಳುವವರೆಲ್ಲರಿಗೆ, ಹೀಗೆ ಇದ್ದಾನೆ. ೭ ಆದರೆ—ನಮ್ಮ ದೇವರಾದ ಯೆಹೋವನಲ್ಲಿ ನಂಬಿಕೆ ಇಡುತ್ತೇವೆಂದು ನೀನು ನನಗೆ ಹೇಳಿದರೆ, ಹಿಸ್ಕೀಯನು ಯಾವನ ಮೇಡುಗಳನ್ನೂ ಬಲಿಪೀಠಗಳನ್ನೂ ತೆಗೆದು ಹಾಕಿ, ಯೆಹೂದ್ಯರಿಗೂ ಯೆರೂಸಲೇಮಿಗೂ—ಈ ಬಲಿಪೀಠದ ಮುಂದೆ ನೀವು ಆರಾಧನೆ ಮಾಡಬೇಕೆಂದು ಹೇಳಿದ್ದಾನೋ, ಅವನೇ ಅಲ್ಲವೋ! ೮ ಹಾಗಾದರೆ, ಈಗ ನನ್ನ ಯಜಮಾನನಾದ ಅಶ್ಶೂರಿನ ಅರಸನಿಗೆ ಹೊಣೆಗಾರರನ್ನು ಕೊಡು; ಆಗ, ನೀನು ಅವುಗಳ ಮೇಲೆ ಸವಾರಿ ಮಾಡುವದಕ್ಕೆ ಜನರನ್ನು ಕೊಡುವದಕ್ಕಾದರೆ, ನಿನಗೆ ಎರಡು ಸಾವಿರ ಕುದುರೆಗಳನ್ನು ಕೊಡುವೆನು. ೯ ಇದಾಗದಿದ್ದರೆ, ನನ್ನ ಯಜಮಾನನ ಸೇವಕರಲ್ಲಿ ಚಿಕ್ಕವನಾದ ಒಬ್ಬ ಸೈನ್ಯಾಧಿಪತಿಯ ಮುಖವನ್ನು ಹ್ಯಾಗೆ ತಿರುಗಿಸಿ ಬಿಡುವಿ! ಹೀಗಿರಲಾಗಿ, ಕುದುರೆಗಳಿಗೋಸ್ಕರವೂ ರಾಹುತರಿಗೋಸ್ಕರವೂ ಐಗುಪ್ತದಲ್ಲಿ ನಂಬಿ ಕೊಳ್ಳುತ್ತೀ. ೧೦ ಆದರೆ ಈಗ ಯೆಹೋವನಿಲ್ಲದೆ ಈ ದೇಶಕ್ಕೆ ವಿರೋಧವಾಗಿ, ಅದನ್ನು ಹಾಳು ಮಾಡುವದಕ್ಕೆ, ಏರಿ ಬಂದಿದ್ದೇನೋ! ಈ ದೇಶಕ್ಕೆ ವಿರೋಧವಾಗಿ ಏರಿ ಬಂದು, ಅದನ್ನು ಹಾಳು ಮಾಡೆಂದು, ಯೆಹೋವನೇ ನನಗೆ ಹೇಳಿದ್ದಾನೆ.
೧೧ ಆಗ ಎಲ್ಯಾಕೀಮನೂ, ಶೆಬ್ನನೂ, ಯೋವಾಹನೂ, ರಬ್ಷೇಕನಿಗೆ ಹೇಳಿದ್ದೇನಂದರೆ—ನಿನ್ನ ಸೇವಕರ ಸಂಗಡ ಅರಾಮಿನ ಮಾತನಾಡಬೇಡ, ಅದು ನಮಗೆ ಬರುತ್ತದೆ, ಗೋಡೆಯ ಮೇಲಿರುವ ಜನರು ಕೇಳಲಾಗಿ, ಯೆಹೂದರ ಮಾತನ್ನು ನಮ್ಮ ಸಂಗಡ ಆಡ ಬೇಡ. ೧೨ ಆದರೆ ರಬ್ಷೇಕನು ಹೇಳಿದ್ದೇನಂದರೆ—ನಿನ್ನ ಯಜಮಾನನ ಸಂಗಡಲೂ, ನಿನ್ನ ಸಂಗಡಲೂ, ಈ ಮಾತುಗಳನ್ನಾಡುವದಕ್ಕೆ ನನ್ನ ಯಜಮಾನನು ನನ್ನನ್ನು ಕಳುಹಿಸಿದನೋ! ತಮ್ಮ ಸ್ವಂತ ಮಲವನ್ನು ತಿಂದು, ತಮ್ಮ ಮೂತ್ರವನ್ನು ನಿಮ್ಮ ಸಂಗಡ ಕುಡಿಯುವ ಬಗ್ಯೆ, ಗೋಡೆಯ ಮೇಲೆ ಕೂತುಕೊಳ್ಳುವ ಮನುಷ್ಯರ ಸಂಗಡ, ಮಾತಾಡ, ಅವನು ನನ್ನನ್ನು ಕಳುಹಿಸಿಲಿಲ್ಲವೋ!
೧೩ ಆಗ ರಬ್ಷೇಕನು ನಿಂತು ಕೊಂಡು, ಯೆಹೂದದ ಮಾತಿನಲ್ಲಿ, ಭುಟ್ಟಿಯಾದ ಶಬ್ದದಿಂದ, ಕೂಗಿ ಹೇಳಿದ್ದೇನಂದರೆ—ಅಶ್ಶೂರಿನ ಅರಸನಾದ ಮಹಾರಾಜನ ವಾಕ್ಯಗಳನ್ನು ಕೇಳಿರಿ. ೧೪ ಅರಸನು ಹೇಳುವದೇನಂದರೆ—ಹಿಸ್ಕೀಯನು ನಿಮಗೆ ಮೋಸ ಮಾಡದಿರಲಿ; ಯಾಕಂದರೆ, ಅವನು ನಿಮ್ಮನ್ನು ರಕ್ಷಿಸಲಾರನು. ೧೫ ಮತ್ತು, ಯೆಹೋವನು ನಿಚ್ಚಯವಾಗಿ ನಮ್ಮನ್ನು ತಪ್ಪಿಸುವನು; ಈ ಪಟ್ಟಣವು ಅಶ್ಶೂರಿನ ಅರಸನಿಗೆ ಕೊಡಲ್ಪಡದೆಂದು, ಹಿಸ್ಕೀಯನು ನಿಮಗೆ ಯೆಹೋವನ ಮೇಲೆ ನಂಬಿಕೆಯನ್ನು ಹುಟ್ಟಿಸದಿರಲಿ. ೧೬ ಹಿಸ್ಕೀಯನ ಮಾತು ಕೇಳ ಬೇಡಿರಿ; ಯಾಕಂದರೆ, ಅಶ್ಶೂರಿನ ಅರಸನು ಹೇಳುವದೇನಂದರೆ—ನನ್ನ ಸಂಗಡ ಒಡಂಬಡಿಕೆಯನ್ನು ಮಾಡಿ ಕೊಳ್ಳಿರಿ; ನನ್ನ ಬಳಿಗೆ ಹೊರಗೆ ಬನ್ನಿ; ಆಗ ನಿಮ್ಮ ನಿಮ್ಮ ದ್ರಾಕ್ಷೆಗಿಡಗಳ, ನಿಮ್ಮ ನಿಮ್ಮ ಅಂಜೂರ ಮರಗಳ, ಫಲವನ್ನುಂಡು, ನಿಮ್ಮ ನಿಮ್ಮ ಕಂಟೆಗಳ ನೀರನ್ನು ಕುಡಿಯುವಿರಿ. ೧೭ ಕಡೆಗೆ ನಾನು ಬಂದು, ನಿಮ್ಮ ದೇಶದ ಹಾಗಿರುವ ದೇಶಕ್ಕೆ, ಗೋಧಿ ದ್ರಾಕ್ಷೆರಸ ಉಳ್ಳ ದೇಶಕ್ಕೆ, ರೊಟ್ಟಿಯೂ ದ್ರಾಕ್ಷೆ ತೋಟಗಳೂ ಇರುವ ದೇಶಕ್ಕೆ, ನಿಮ್ಮನ್ನು ಕರಕೊಂಡು ಹೋಗುವೆನು. ಯೆಹೋವ ನಮ್ಮನ್ನು ತಪ್ಪಿಸುವನೆಂದು ಹೇಳಿ, ಹಿಸ್ಕೀಯನು ನಿಮ್ಮನ್ನು ನಂಬಿಸದಿರಲಿ; ಜನಾಂಗಗಳ ದೇವರುಗಳು ತಮ್ಮ ದೇಶಗಳನ್ನು ಅಶ್ಶೂರಿನ ಅರಸನ ಕೈಗೆ ತಪ್ಪಿಸಿದರೋ! ೧೮ ಹಾಮಾತಿನ ಅರ್ಫಾದಿನ ದೇವರುಗಳು ಎಲ್ಲಿ! ಸೆಫರ್ವಾಯಿಮಿನ ದೇವರುಗಳು ಎಲ್ಲಿ! ಅವರು ಸಮಾರ್ಯವನ್ನಾದರೂ ನನ್ನ ಕೈಗೆ ತಪ್ಪಿಸಿದರೋ! ಈ ದೇಶಗಳ ಎಲ್ಲಾ ದೇವರುಗಳಲ್ಲಿ ಯಾರು ತಮ್ಮ ದೇಶವನ್ನು ನನ್ನ ಕೈಗೆ ತಪ್ಪಿಸಿದರು! ಹಾಗಾದರೆ ಯೊಹೋವನು ಯೆರೂಸಲೇಮನ್ನು ನನ್ನ ಕೈಗೆ ತಪ್ಪಿಸ್ಯಾನೋ!
೧೯ ಅವರು ಸುಮ್ಮನಿದ್ದು, ಅವನಿಗೆ ಒಂದು ಮಾತನ್ನಾದರೂ ಉತ್ತರ ಕೊಡಲಿಲ್ಲ; ಯಾಕಂದರೆ, ಅವನಿಗೆ ಉತ್ತರ ಕೊಡ ಬೇಡಿರೆಂದು, ಅರಸನ ಅಪ್ಪಣೆ ಇತ್ತು.
೨೦ ಆಗ ಹಿಲ್ಕೀಯನ ಮಗನಾದ ಮನೆಯ ಮುಖ್ಯಸ್ಥನಾದ ಎಲ್ಯಾಕೀಮನೂ, ಬರೆಯುವವನಾದ ಶೆಬ್ನನೂ, ಆಸಾಫನ ಮಗನಾದ ರಾಯಸದವನಾದ ಯೋವಾಹನೂ, ತಮ್ಮ ವಸ್ತ್ರಗಳನ್ನು ಹರಕೊಂಡು, ಹಿಸ್ಕೀಯನ ಬಳಿಗೆ ಬಂದು, ರಬ್ಷೇಕನ ಮಾತುಗಳನ್ನು ಅವನಿಗೆ ತಿಳಿಸಿದರು.

## ೩೭. ಸಂಧಿ.

೧ ಅರಸನಾದ ಹಿಸ್ಕೀಯನು ಕೇಳಿದಾಗ, ತನ್ನ ವಸ್ತ್ರಗಳನ್ನು ಹರ ಕೊಂಡು, ಗೋಣಿಯಿಂದ ತನ್ನನ್ನು ಮುಚ್ಚಿ ಕೊಂಡು, ಕರ್ತನ ಮನೆಗೆ ಹೋದನು. ೨ ಮತ್ತು, ಮನೆಯ ಮುಖ್ಯಸ್ಥನಾದ ಎಲ್ಯಾಕೀಮನನ್ನೂ, ಬರೆಯುವವನಾದ ಶೆಬ್ನನನ್ನೂ, ಯಾಜಕರ ಹಿರಿಯರನ್ನೂ, ಗೋಣಿ ಮುಚ್ಚಿ ಕೊಂಡವರಾಗಿ, ಆಮೋಸನ ಮಗನಾದ ಪ್ರವಾದಿಯಾದ ಯೆಶಾಯನ ಬಳಿಗೆ ಕಳುಹಿಸಿದನು. ೩ ಇವರು ಅವನಿಗೆ ಹೇಳಿದ್ದೇನಂದರೆ—ಹಿಸ್ಕೀಯನು ಹೀಗೆ ಹೇಳುತ್ತಾನೆ—ಇದು ಇಕ್ಕಟ್ಟಿನ, ಗದರಿಕೆಯ, ನಿಂದೆಯ, ದಿವಸವು; ಯಾಕಂದರೆ, ಮಕ್ಕಳು ಹುಟ್ಟುವದಕ್ಕೆ ಸಮೀಪ ಬಂದರು; ಆದರೆ ಹೆರುವದಕ್ಕೆ ತ್ರಾಣವಿಲ್ಲ. ೪ ರಬ್ಷೇಕನು ತನ್ನ ಯಜಮಾನನಾದ ಅಶ್ಶೂರಿನ ಅರಸನ ಅಪ್ಪಣೆಯಿಂದ, ಜೀವವುಳ್ಳ ದೇವರನ್ನು ದೂಷಿಸಿ ಹೇಳಿದ ಮಾತುಗಳನ್ನು, ನಿನ್ನ ದೇವರಾದ ಕರ್ತನು ಕೇಳಿ ಇದ್ದಾನು; ನಿನ್ನ ದೇವರಾದ ಕರ್ತನು ಕೇಳಿದ ಮಾತುಗಳ ನಿಮಿತ್ತ ಗದರಿಸ್ಯಾನು; ಹೀಗಿರುವದರಿಂದ ನಿಂತ ಉಳಿದಿಗೋಸ್ಕರ ನೀನು ಪ್ರಾರ್ಥನೆ ಮಾಡ ಬೇಕು. ೫ ಅರಸನಾದ ಹಿಸ್ಕೀಯನ ಸೇವಕರು ಈ ಪ್ರಕಾರ ಯೆಶಾಯನ ಬಳಿಗೆ ಬಂದಾಗ, ಯೆಶಾಯನು ಅವರಿಗೆ ಹೇಳಿದ್ದೇನಂದರೆ—ನೀವು ನಿಮ್ಮ ಯಜಮಾನನಿಗೆ ಹೀಗೆ ಹೇಳ ಬೇಕು—ಯೆಹೋವನು ಹೇಳುವದೇನಂದರೆ; ನೀನು ಕೇಳಿದಂಥ, ಅಶ್ಶೂರಿನ ಅರಸನ ಸೇವಕರು ನನ್ನನ್ನು ದೂಷಿಸಿದಂಥ, ಮಾತುಗಳ ವಿಷಯ ಭಯ ಪಡ ಬೇಡ. ೬ ಇಗೋ ನಾನು ಅವನ ಮೇಲೆ ಒಂದು ಘೂಳಿಯನ್ನು ಬಿಡುವೆನು; ಅವನು ಒಂದು ಸುದ್ದಿಯನ್ನು ಕೇಳಿ, ತನ್ನ ದೇಶಕ್ಕೆ ತಿರುಗುವನು; ಆಗ ನಾನು ಅವನನ್ನು, ಅವನ ದೇಶದಲ್ಲಿ, ಕತ್ತಿಯಿಂದ ಬೀಳ ಮಾಡುವೆನು.
೭ ರಬ್ಷೇಕನು ಹಿಂತಿರಿಗಿದಾಗ, ಅಶ್ಶೂರಿನ ಅರಸನನ್ನು, ಲಿಬ್ನಕ್ಕೆ ವಿರೋಧವಾಗಿ ಯುದ್ಧ ಮಾಡುವ ವೇಳೆಯಲ್ಲಿ, ಕಲಹನು; ಯಾಕಂದರೆ, ಅವನು ಲಾಕೀಷನ್ನು ಬಿಟ್ಟು ಹೊರಟನೆಂದು ಅವನು ಕೇಳಿ ಇದ್ದನು. ೮ ಆಗಲವನು ಕೂಷಿನ ಅರಸನಾದ ತಿರ್ಹಾಕನ ವಿಷಯವಾಗಿ—ಇಗೋ, ಅವನು ನಿನ್ನ ಸಂಗಡ ಯುದ್ಧ ಮಾಡುವದಕ್ಕೆ ಹೊರಡುತ್ತಾನೆಂದು ಕೇಳಿ, ಕೇಳಿದಾಗಲೇ, ಹಿಸ್ಕೀಯನ ಬಳಿಗೆ ದೂತರನ್ನು ಕಳುಹಿಸಿದನು, ಹ್ಯಾಗಂದರೆ—ನೀವು ಯೆಹೂದದ ಅರಸನಾದ ಹಿಸ್ಕೀಯನಿಗೆ ಹೀಗೆ ಹೇಳ ಬೇಕು—೯ ನೀನು ನಂಬಿ ಕೊಂಡ ದೇವರು—ಯೆರೂಸಲೇಮು ಅಶ್ಶೂರಿನ ಅರಸನ ಕೈಗೆ ಒಪ್ಪಿಸಲ್ಪಡುವದಿಲ್ಲವೆಂದು ಹೇಳಿ, ನಿನಗೆ ಮೋಸ ಮಾಡ ಬೇಡ. ೧೦ ಇಗೋ, ಅಶ್ಶೂರಿನ ಅರಸರು ಎಲ್ಲಾ ದೇಶಗಳಿಗೂ ಮಾಡಿದ್ದನ್ನು, ಅವುಗಳನ್ನು ಶುದ್ಧವಾಗಿ ನಿರ್ಮೂಲ ಮಾಡಿದ್ದನ್ನು, ಕೇಳಿದ್ದೀ, ಹಾಗಾದರೆ, ನೀನು ತಪ್ಪಿಸಿ ಕೊಳ್ಳುವಿಯೋ! ಗೋಜಾನ್, ಹಾರಾನ್, ರೆಜೆಫ್, ತೆಲಾಸರನಲ್ಲಿದ್ದ ಏದೆನ್ ಮಕ್ಕಳು, ಈ ಮೊದಲಾದಂಥ, ನನ್ನ ಪಿತೃಗಳು ನಾಶನ ಮಾಡಿದಂಥ, ಜನಾಂಗಗಳ ದೇವರುಗಳು ಅವರನ್ನು ತಪ್ಪಿಸಿದರೋ! ೧೩ ಹಾಮಾತಿನ ಅರಸನೂ, ಅರ್ಫಾದಿನ ಅರಸನೂ, ಸೆಫರ್ವಾಯಿಮ್ ಪಟ್ಟಣದ, ಹೇನದ, ಇವ್ವದ, ಅರಸನೂ ಎಲ್ಲಿ!
೧೪ ಹಿಸ್ಕೀಯನು ಈ ಕಾಗದವನ್ನು ದೂತರ ಕೈಯಿಂದ ತಕ್ಕೊಂಡು, ಓದಿದನು; ಆಗ ಹಿಸ್ಕೀಯನು ಕರ್ತನ ಮನೆಗೆ ಏರಿ ಹೋಗಿ, ಅದನ್ನು ಕರ್ತನ ಮುಂದೆ ಹಾಸಿದನು. ೧೫ ಮತ್ತು, ಹಿಸ್ಕೀಯನು ಕರ್ತನಿಗೆ ಪ್ರಾರ್ಥನೆ ಮಾಡಿದನು, ಹ್ಯಾಗಂದರೆ—ಇಸ್ರಾಯೇಲಿನ ದೇವರಾದ ಸೈನ್ಯಗಳ ಯೆಹೋವನೇ; ಕೆರೂಬುಗಳ

ನಡುವೆ ವಾಸಿಸುವವನೇ! ನೀನೇ, ನೀನೊಬ್ಬನೇ, ಭೂಮಿಯ ಎಲ್ಲಾ
ರಾಜ್ಯಗಳಿಗೆ ದೇವರಾಗಿದ್ದೀ, ನೀನೇ ಆಕಾಶವನೂ ಭೂಮಿಯ
೧೭ ನೂ ಉಂಟು ಮಾಡಿದ್ದೀ. ಕರ್ತನೇ! ನಿನ್ನ ಕಿವಿಯನ್ನು ಬೊ
ಗ್ಗಿಸಿ, ಕೇಳು; ಕರ್ತನೇ! ನಿನ್ನ ಕಣ್ಣುಗಳನ್ನು ತೆಗೆದು, ನೋಡು;
ಸನ್ಹೇರೀಬನು ಜೀವವುಳ್ಳ ದೇವರನ್ನು ದೂಷಿಸಿ ಕಳುಹಿಸಿದ
೧೮ ಮಾತುಗಳನ್ನೆಲ್ಲಾ ಕೇಳು. ನಿಶ್ಚಯವಾಗಿ ಕರ್ತನೇ! ಅಶ್ಶೂರಿ
ನ ಅರಸರು ಎಲ್ಲಾ ರಾಜ್ಯಗಳನ್ನೂ ಅವುಗಳ ದೇಶಗಳನ್ನೂ
೧೯ ಹಾಳು ಮಾಡಿದ್ದಾರೆ. ಅವರ ದೇವರುಗಳನ್ನು ಸಹ ಬೆಂಕಿಯಲ್ಲಿ
ಹಾಕಿದ್ದಾರೆ; ಯಾಕಂದರೆ, ಅವರು ದೇವರುಗಳಲ್ಲ; ಮರವೂ, ಕ
ಲ್ಲೂ, ಮನುಷ್ಯರ ಕೈ ಕೆಲಸಗಳೇ; ಆದದರಿಂದ ಅವುಗಳನ್ನು ಕೆ
೨೦ ಡಿಸಿ ಬಿಟ್ಟರು. ಹಾಗಾದರೆ, ಈಗ ನಮ್ಮ ದೇವರಾದ ಕರ್ತನೇ!
ನೀನೊಬ್ಬನೇ ಕರ್ತನೆಂದು ಭೂಮಿಯ ಎಲ್ಲಾ ರಾಜ್ಯಗಳಿಗೆ ತಿಳಿ
ಯುವ ಹಾಗೆ, ಅವನ ಕೈಯೊಳಗಿಂದ ನಮ್ಮನ್ನು ರಕ್ಷಿಸು.

೨೧ ಆಗ ಆಮೋಸನ ಮಗನಾದ ಯೆಶಾಯನು, ಹಿಸ್ಕೀಯನಿಗೆ
ಹೇಳಿ ಕಳುಹಿಸಿದ್ದೇನಂದರೆ—ಇಸ್ರಯೇಲಿನ ದೇವರಾದ ಯೆಹೋ
ವನು ಹೀಗೆ ಹೇಳುತ್ತಾನೆ—ನೀನು ಅಶ್ಶೂರಿನ ಅರಸನಾದ ಸನ್ಹೇರೀ
ಬನಿಗೆ ವಿಕೋಥವಾಗಿ ನನಗೆ ಪ್ರಾರ್ಥನೆ ಮಾಡಿದಿಯಲ್ಲ! ಕರ್ತ
ನು ಅವನ ವಿಷಯ ಹೇಳಿದ ಮಾತು ಇದೇ—

೨೨ ಚಿಯೋನಿನ ಮಗಳಾದ ಕನ್ಯಾಸ್ತ್ರೀ ನಿನ್ನನ್ನು ಉದಾಸೀನ
ಮಾಡಿ,
ನಿನಗೆ ಹಾಸ್ಯ ಮಾಡುತ್ತಾಳೆ;
ಯೆರೂಸಲೇಮಿನ ಮಗಳು ನಿನ್ನ ಹಿಂದೆ ತಲೆಯಲ್ಲಾಡಿಸುತ್ತಾಳೆ.
೨೩ ಯಾರನ್ನು ನಿಂದಿಸಿ ದೂಷಿಸಿದ್ದೀ?
ಯಾರಿಗೆ ವಿಕೋಥವಾಗಿ ಶಬ್ದವನ್ನೆತ್ತಿ, ನಿನ್ನ ಕಣ್ಣುಗಳನ್ನು ಮೇ
ಲಕ್ಕೆಟ್ಟಿಸಿದ್ದೀ?
ಇಸ್ರಯೇಲಿನ ಪರಿಶುದ್ಧನಿಗೆ ವಿಕೋಥವಾಗಿಯೇ.
೨೪ ನಿನ್ನ ಸೇವಕರ ಕೈಯಿಂದ ಕರ್ತನನ್ನು ನಿಂದಿಸಿ—
ನನ್ನ ರಥಗಳ ಬಾಹುಳ್ಯದಿಂದ ಪರ್ವತಗಳ ಉದ್ದಸ್ಥಳಗಳಿಗೂ,
ಲೆಬನೋನಿನ ಪಾರ್ಶ್ವಗಳಿಗೂ ಏರಿ ಹೋಗಿ,
ಅದರ ಉನ್ನತವಾದ ದೇವದಾರುಗಳನ್ನೂ,
ಅದರ ಶ್ರೇಷ್ಠವಾದ ಬೇಕೊಷ್ ಮರಗಳನ್ನೂ, ಕಡಿದು ಬಿಟ್ಟು,
ಅದರ ಅಂಚಿನ ಉನ್ನತವಾದ ಸ್ಥಳದಲ್ಲಿಯೂ,
ಅದರ ರಮ್ಯವಾದ ಅಡವಿಯಲ್ಲಿಯೂ, ಕೇರುವೆನು.
೨೫ ನಾನೇ ಅಗೆದು, ನೀರು ಕುಡಿದಿದ್ದೇನೆ;
ನನ್ನ ಅಂಗಾಲಿನಿಂದ ಐಗುಪ್ತದ ಎಲ್ಲಾ ಪ್ರವಾಹಗಳನ್ನು ಬಣಗ
ಮಾಡಿದ್ದೇನೆ.
ಎಂದು ಹೇಳಿದಿಯಲ್ಲ!

೨೬ ನಾನು ಅದನ್ನು ಮಾಡಿದೆನೆಂದು ನೀನು ದೂರಕಾಲದಿಂದಲೂ,
ನಾನು ಅದನ್ನು ನಿರ್ಣಯಿಸಿದೆನೆಂದು ನೀನು ಪೂರ್ವದ ದಿವಸಗ
ಳಿಂದಲೂ, ಕೇಳಿಲಿಲ್ಲವೋ!
ಈಗ ಅದನ್ನು ಬರಮಾಡಿದ್ದೇನೆ.
ಏನಂದರೆ—ನೀನು ಕೋಟೆಯುಳ್ಳ ಪಟ್ಟಣಗಳನ್ನು ಹಾಳಾದ ದಿಬ್ಬೆ
ಗಳಾಗಿ ನಾಶಮಾಡುವದೇ.

೨೭ ಆದದರಿಂದ ಅವುಗಳ ನಿವಾಸಿಗಳು ಬಲಹೀನರಾಗಿ,
ಹೆದರಿ, ಗಲಿಬಿಲಿಯಾದರು.
ಅವರು ಹೊಲದ ಹುಲ್ಲಿನ ಹಾಗೆಯೂ,
ಹಸುರು ಸೊಪ್ಪಿನ ಹಾಗೆಯೂ,
ಮಾಳಿಗೆಗಳ ಮೇಲಿರುವ ಹುಲ್ಲಿನ ಹಾಗೆಯೂ,
ಬೆಳೆಯುವದಕ್ಕಿಂತ ಮುಂಚೆ ಬಾಡುವ ಪೈರಿನ ಹಾಗೆಯೂ, ಇ
ದ್ದರು.
೨೮ ಆದರೆ, ನಿನ್ನ ನಿವಾಸವನ್ನೂ, ನಿನ್ನ ಹೋಗೋಣವನ್ನೂ, ನಿನ್ನ
ಬಕೋಣವನ್ನೂ ನಾನು ಬಲ್ಲೆನು,
ನನಗೆ ವಿಕೋಥವಾಗಿ ನೀನು ಮಾಡುವ ಕಾವ್ರವನ್ನು ಸಹ.
೨೯ ನನಗೆ ವಿಕೋಥವಾಗಿ ನೀನು ಮಾಡುವ ಕಾವ್ರವೂ, ನಿನ್ನ ಅಹಂ
ಕಾರವೂ,
ನನ್ನ ಕಿವಿಗಳಲ್ಲಿ ಏರಿ ಬಂದದರಿಂದ,
ನಾನು ನನ್ನ ಕೊಂಡಿಯನ್ನು ನಿನ್ನ ಮೂಗಿನಲ್ಲಿಯೂ,
ನನ್ನ ಕಡಿವಾಣವನ್ನು ನಿನ್ನ ಬಾಯಲ್ಲಿಯೂ ಇಟ್ಟು,
ನೀನು ಬಂದ ಮಾರ್ಗದಿಂದ ನಿನ್ನನ್ನು ತಿರುಗಿಸುವೆನು.
೩೦ ಮತ್ತು, ನಿನಗೆ ಗುರುತು ಇದೇ—ಈ ವರುಷದಲ್ಲಿ ತನ್ನಷ್ಟ
ಕ್ಕೆ ತಾನೇ ಬೆಳೆದದ್ದನ್ನೂ, ಎರಡನೇ ವರುಷದಲ್ಲಿ ಅದರಿಂದ ಮೊ
ಳಿತದ್ದನ್ನೂ, ಶಿನ್ನುವಿರಿ; ಮೂರನೇ ವರುಷದಲ್ಲಿ, ಬೀಜ ಹಾಕಿ
ಕೊಯ್ಯುವಿರಿ; ದ್ರಾಕ್ಷೆ ತೋಟಗಳನ್ನು ನೆಟ್ಟು, ಅವುಗಳ ಫಲವ
ನ್ನು ಉಣ್ಣುವಿರಿ. ಮತ್ತು, ಯೆಹೂದನ ಮನೆಯಲ್ಲಿ, ಉಳಿದು,
೩೧ ತಪ್ಪಿಸಿ ಕೊಂಡವರು, ಕಿರಿಗೆ ಕೆಳಗೆ ಬೇರೂರಿ, ಮೇಲಕ್ಕೆ ಫಲಭರಿ
ಸುವರು. ಯಾಕಂದರೆ, ಯೆರೂಸಲೇಮಿನಿಂದ ಉಳಿಯವೂ, ಚಿ
೩೨ ಯೋನ್ ಪರ್ವತದಿಂದ ತಪ್ಪಿಸಿಕೊಂಡವರೂ, ಹೊರಡುವರು; ಸೈ
ನ್ಯಗಳ ಕರ್ತನ ಆಸಕ್ತಿ ಇದನ್ನು ಮಾಡುವದು. ಆದದರಿಂದ,
ಕರ್ತನು ಅಶ್ಶೂರಿನ ಅರಸನ ವಿಷಯ ಹೇಳುವದೇನಂದರೆ—

೩೩ ಅವನು ಈ ಪಟ್ಟಣದಲ್ಲಿ ಬಾರನು;
ಅದರಲ್ಲಿ ಬಾಣವನ್ನು ಎಸೆಯನು;
ಡಾಲಿನ ಸಂಗಡ ಅದರ ಮುಂದೆ ನಿಲ್ಲನು;
ಅದಕ್ಕೆ ವಿಕೋಥವಾಗಿ ಪೋಹರ್ಜೆಯನ್ನು ಕಟ್ಟನು.
೩೪ ಅವನು ಬಂದ ಮಾರ್ಗದಿಂದಲೇ ಹೋಗುವನು;
ಆದರೆ ಪಟ್ಟಣದಲ್ಲಿ ಬಾರನೆಂದು ಕರ್ತನು ಹೇಳುತ್ತಾನೆ.
೩೫ ಯಾಕಂದರೆ, ನಾನು, ನನ್ನ ನಿಮಿತ್ತವೂ,
ನನ್ನ ಸೇವಕನಾದ ದಾವೀದನ ನಿಮಿತ್ತವೂ,
ಈ ಪಟ್ಟಣವನ್ನು ಕಾಪಾಡಿ, ರಕ್ಷಿಸುವೆನು.

೩೬ ಆಗ ಕರ್ತನ ದೂತನು ಹೊರಟು, ಅಶ್ಶೂರಿನ ದಂಡಿನಲ್ಲಿ ಎಂ
ಭತ್ತೈದು ಸಾವಿರ ಮಂದಿಯನ್ನು ಹೊಡೆದನು; ಜನರು ಬೊ
ತ್ತಾತೆ ಏಳುವಾಗ, ಅಗೋ ಅವಕೆಲ್ಲರು ಸತ್ತ ಹೆಣಗಳಾಗಿದ್ದರು.
೩೭ ಆಗ ಅಶ್ಶೂರಿನ ಅರಸನಾದ ಸನ್ಹೇರೀಬನು ಹೊರಟು, ಹೋಗಿ, ಶಿ
ರುಗಿಕೊಂಡು, ನಿನೆವೆಯಲ್ಲಿ ವಾಸವಾಗಿದ್ದನು. ತರುವಾಯ ಅದ
ದ್ದೇನಂದರೆ, ಅವನು ತನ್ನ ದೇವರಾದ ನಿಸ್ರೋಕನ ಮನೆಯಲ್ಲಿ
ನಮಸ್ಕರಿಸುವಾಗ, ಅವನ ಮಕ್ಕಳಾದ ಅದ್ರಮೇಲೆಕನೂ, ಸರೇ
ಚರನೂ, ಅವನನ್ನು ಕತ್ತಿಯಿಂದ ಹೊಡೆದು, ಅರಾರಾಟ ದೇಶಕ್ಕೆ
ಓಡಿ ಹೋದರು; ಮತ್ತು ಅವನ ಮಗನಾದ ಎಸರ್ಹದ್ದೋನನು
ಅವನಿಗೆ ಬದಲಾಗಿ ಅರಸನಾದನು.



## ೩೮. ಸಂಧಿ.

೧ ಆ ದಿವಸಗಳಲ್ಲಿ, ಹಿಸ್ಕೀಯನು, ಸಾಯುವ ಹಾಗೆ ಕೋಗದ
ಲ್ಲಿ ಬಿದ್ದನು; ಆಗ, ಆಮೋಸನ ಮಗನಾದ ಪ್ರವಾದಿಯಾದ ಯೆ
ಶಾಯನು, ಅವನ ಬಳಿಗೆ ಬಂದು—ಕರ್ತನು ಹೀಗೆ ಹೇಳುತ್ತಾನೆ—
ನಿನ್ನ ಮನೆಯ ವಿಷಯ ಅಪ್ಪಣೆ ಮಾಡು; ಯಾಕಂದರೆ, ನೀನು
೬ ಬದುಕದೆ ಸಾಯುವಿ, ಎಂದು ಹೇಳಿದನು. ಆಗ, ಹಿಸ್ಕೀಯನು
ತನ್ನ ಮುಖವನ್ನು ಗೋಡೆಯ ಕಡೆಗೆ ತಿರುಗಿಸಿ, ಕರ್ತನಿಗೆ
೩ ಪ್ರಾರ್ಥನೆ ಮಾಡಿ, ಹೇಳಿದ್ದೇನಂದರೆ—ಅಯ್ಯೋ! ಕರ್ತನೇ,
ನಾನು ನಿನ್ನ ಮುಂದೆ ಸತ್ಯವಾಗಿ, ಯಥಾರ್ಥ ಹೃದಯದಿಂದ,
ನಡಕೊಂಡು, ನಿನ್ನ ದೃಷ್ಟಿಯಲ್ಲಿ ಒಳ್ಳೇದನ್ನು ಮಾಡಿದ್ದೇನೆಂ
ದು, ಜ್ಞಾಪಕ ಮಾಡಿಕೋ, ಅಂದನು; ಮತ್ತು, ಹಿಸ್ಕೀಯನು ಬ
ಹಳ್ಳವಾಗಿ ಅತ್ತನು.
೪ ಆಗ, ಯೆಶಾಯನಿಗೆ ಕರ್ತನ ವಾಕ್ಯ ಉಂಟಾಯಿತು,
೫ ಹ್ಯಾಗಂದರೆ—ನೀನು ಹೋಗಿ, ಹಿಸ್ಕೀಯನಿಗೆ ಹೇಳ ತಕ್ಕದ್ದೇನಂ
ದರೆ—ನಿನ್ನ ತಂದೆಯಾದ ದಾವೀದನ ದೇವರಾದ ಕರ್ತನು ಹೀ
ಗೆ ಹೇಳುತ್ತಾನೆ—ನಿನ್ನ ಪ್ರಾರ್ಥನೆಯನ್ನು ಕೇಳಿದ್ದೇನೆ; ನಿನ್ನ ಕ
ಣ್ಣೀರು ನೋಡಿದ್ದೇನೆ; ಇಗೋ ನಿನ್ನ ವರುಷಗಳಿಗೆ ಹದಿನೈದು
೬ ವರುಷ ಕೂಡಿಸುತ್ತೇನೆ. ಮತ್ತು, ಅಶ್ಶೂರಿನ ಅರಸನ ಕೈಗೆ
ನಿನ್ನನ್ನೂ, ಈ ಪಟ್ಟಣವನ್ನೂ, ತಪ್ಪಿಸುತ್ತೇನೆ; ಮತ್ತು, ಈ ಪಟ್ಟ
೭ ಣವನ್ನು ಕಾಪಾಡುತ್ತೇನೆ. ಮತ್ತು, ಕರ್ತನು, ತಾನು ಹೇಳಿದ ಈ
ಮಾತನ್ನು ನಡಿಸುವನೆಂಬುವದಕ್ಕೆ ಇದೇ ನಿನಗೆ, ಕರ್ತನ ಕಡೆ
೮ ಯಿಂದ, ಗುರುತಾಗಿರುವದು. ಇಗೋ, ಆಹಜನ ಛಾಯಸ್ತಂಭ
ದಲ್ಲಿ, ಪಂಕ್ತಿಗಳಿಂದ ಇಳಿದು ಹೋದ ನೆರಳನ್ನು ಹತ್ತು ಪಂಕ್ತಿಗ
ಳದ್ದು ಹಿಂತಿರುಗಿಸುವೆನು; ಆಗ, ಸೂರ್ಯನು ಪಂಕ್ತಿಗಳಲ್ಲಿ ಇಳಿ
ದ ಹತ್ತು ಪಂಕ್ತಿಗಳನ್ನು ತಿರಿಗಿ ಏರಿದನು.

೯ ಯೆಹೂದದ ಅರಸನಾದ ಹಿಸ್ಕೀಯನು ಕೋಗದಲ್ಲಿ ಬಿದ್ದು,
ಕೋಗದಿಂದ ವಾಸಿಯಾದ ಮೇಲೆ ಬರೆದದ್ದು—

೧೦ ನನ್ನ ದಿವಸಗಳ ಮಧ್ಯದಲ್ಲಿ ಪಾತಾಳದ ಬಾಗಲುಗಳಲ್ಲಿ
ಪ್ರವೇಶಿಸುತ್ತೇನೆ,
ನನ್ನ ವರುಷಗಳಲ್ಲಿ ಮಿಕ್ಕಾದದ್ದು ನನಗೆ ತಪ್ಪಿ ಹೋಯಿತು,
ಎಂದು ಹೇಳಿ ಕೊಂಡೆನು;
೧೧ ಕರ್ತನನ್ನು, ಕರ್ತನನ್ನು ಜೀವಿತರ ದೇಶದಲ್ಲಿ, ನೋಡೆನೆಂದೂ,
ಲೋಕ ನಿವಾಸಿಗಳ ಸಂಗಡ, ಮನುಷ್ಯರನ್ನು, ಇನ್ನು ದೃಷ್ಟಿಸೆ
ನೆಂದೂ,
ಹೇಳಿ ಕೊಂಡೆನು.
೧೨ ನನ್ನ ಪ್ರಾಯವು ಹೋಯಿತು;
ಕುರುಬನ ಗುಡಾರದ ಹಾಗೆ ನನಗೆ ದೂರವಾಯಿತು;
ನೇಯುವವನಂತೆ ನನ್ನ ಜೀವವನ್ನು ಕೊಯಿದು ಬಿಡುತ್ತೇನೆ;
ಅವನು ನನ್ನನ್ನು ಕೆಚ್ಚಿನಂತೆ ಕೊಯಿದು ಬಿಡುತ್ತಾನೆ;
ಬೆಳಗಿನಿಂದ ರಾತ್ರಿಯ ವರಿಗೂ ನನ್ನನ್ನು ಮುಗಿಸಿ ಬಿಡುತ್ತೀ.
೧೩ ಹೊತ್ತಾಕೆಯ ಮಟ್ಟಿಗೂ ಸಮಧಾನಿಸಿ ಕೊಂಡೆನು;
ಆದರೆ, ಸಿಂಹದ ಹಾಗೆ ನನ್ನ ಎಲುವುಗಳನ್ನೆಲ್ಲಾ ಮುರಿದು ಬಿಡು
ತ್ತಾನೆ.
ಬೆಳಗಿನಿಂದ ರಾತ್ರಿಯ ವರಿಗೂ ನನ್ನನ್ನು ಮುಗಿಸಿ ಬಿಡುತ್ತೀ.
೧೪ ಬಾನಕ್ಕಿಯಂತೆಯೂ, ಕೊಕ್ಕರೆಯಂತೆಯೂ, ಕೀಚು ಕೀಚ
ನ್ನುತ್ತೇನೆ;
ಪಾರಿವಾಳದ ಹಾಗೆ ಮೂಲುಗುತ್ತೇನೆ;
ನನ್ನ ಕಣ್ಣುಗಳು ಮೇಲಕ್ಕೆ ನೋಡುವದರಿಂದ ಕ್ಷೀಣವಾದವು;
ಕರ್ತನೇ, ನನಗೆ ಸಂಕಟವಾಯಿತು, ನನ್ನನ್ನು ಉದ್ಧಾರ ಮಾಡು'
೧೫ ನಾನು ಏನು ಹೇಳಲಿ!
ಅವನು ನನಗೆ ಮಾತು ಹೇಳಿ, ಅವನೇ ಅದನ್ನು ಮಾಡಿದ್ದಾನೆ,
ನನ್ನ ಹೃದಯದ ಚಿಂತೆಯ ನಿಮಿತ್ತ, ನನ್ನ ವರುಷಗಳೆಲ್ಲಾ,
ದೀನನಾಗಿ ನಡೆ ಕೊಳ್ಳುವೆನು;
೧೬ ಕರ್ತನೇ, ಇವುಗಳಿಂದ ಮನುಷ್ಯರು ಬದುಕುತ್ತಾರೆ;
ಇವೆಲ್ಲವುಗಳಿಂದಲೇ ನನ್ನ ಆತ್ಮದ ಜೀವ ಉಂಟು;
ನೀನು ನನಗೆ ಸ್ವಸ್ಥಮಾಡಿ, ಬದುಕಿಸಿದ್ದೀ.
೧೭ ಇಗೋ ಕ್ಷೇಮಕ್ಕಾಗಿ ನನಗೆ ಉಪದ್ರವಾಯಿತು;
ಆದರೆ ನೀನು ನನ್ನ ಪ್ರಾಣಕ್ಕೆ ಪ್ರೀತಿ ತೋರಿಸಿ,
ಅದನ್ನು ನಾಶನದ ಕೂಣಿಯೊಳಗಿಂದ ಎತ್ತಿದ್ದೀ;
ಯಾಕಂದರೆ, ನನ್ನ ಪಾಪಗಳನ್ನೆಲ್ಲಾ ನಿನ್ನ ಬೆನ್ನಿನ ಹಿಂದಕ್ಕೆ
ಹಾಕಿದ್ದೀ.
೧೮ ಯಾಕಂದರೆ, ಪಾತಾಳವು ನಿನ್ನನ್ನು ಸ್ತುತಿಸದು;
ಮರಣವು ನಿನಗೆ ಸ್ತೋತ್ರ ಮಾಡದು;
ಕೂಣಿಯಲ್ಲಿ ಇಳಿಯುವವರು ನಿನ್ನ ಸತ್ಯಕ್ಕೆ ಕಾದು ಕೊಳ್ಳರು.
೧೯ ಜೀವವುಳ್ಳವನು, ಜೀವವುಳ್ಳವನು, ಅವನೇ, ನಾನು ಈ ಹೊತ್ತು
ಮಾಡುವ ಪ್ರಕಾರ, ನಿನ್ನನ್ನು ಸ್ತುತಿಸುವನು;
ತಂದೆಯು ಮಕ್ಕಳಿಗೆ ನಿನ್ನ ಸತ್ಯವನ್ನು ತಿಳಿಸುವನು.
೨೦ ಕರ್ತನು ನನ್ನನ್ನು ರಕ್ಷಿಸುವವನಾದನು;
ಆದದರಿಂದ ನಾವು ಜೀವದಿಂದಿರುವ ದಿವಸಗಳೆಲ್ಲಾ,
ಕರ್ತನ ಮನೆಯಲ್ಲಿ ನನ್ನ ತಂತಿ ವಾದ್ಯಗಳನ್ನು ಬಾರಿಸುವೆವು.

೨೧ ಮತ್ತು, ಯೆಶಾಯನು—ಅಂಜೂರಗಳ ಅಡೆಯನ್ನು ತಂದು,
ಆ ಹುಣ್ಣಿನ ಮೇಲೆ ಹಚ್ಚು; ಆಗ ಬದುಕುವನೆಂದು ಹೇಳಿ ಇದ್ದನು.
೨೨ ಇದಲ್ಲದೆ, ಹಿಸ್ಕೀಯನು—ನಾನು ಕರ್ತನ ಮನೆಗೆ ಏರಿ ಹೋಗು
ವೆನೆಂಬುವದಕ್ಕೆ ಗುರುತೇನಂದು ಅಂದಿದ್ದನು.

## ೩೯. ಸಂಧಿ.

೧ ಆ ಕಾಲದಲ್ಲಿ ಬಲದಾನನ ಮಗನಾದ ಬಾಬೆಲಿನ ಅರಸನಾದ
ಮೆರೋದಕ ಬಲದಾನನು, ಹಿಸ್ಕೀಯನು ಕೋಗದಲ್ಲಿ ಬಿದ್ದು
ಸ್ವಸ್ಥವಾದನೆಂದು ಕೇಳಿ, ಅವನಿಗೆ ಕಾಗದವನ್ನೂ ಬಹುಮಾನವ
೨ ನ್ನೂ ಕಳುಹಿಸಿದನು; ಹಿಸ್ಕೀಯನು ಅದಕ್ಕೆ ಸಂತೋಷ ಪಟ್ಟು,
ಅವರಿಗೆ ತನ್ನ ಭಂಡಾರದ ಮನೆಯನ್ನೂ, ಬೆಳ್ಳಿಯನ್ನೂ, ಚಿನ್ನ
ವನ್ನೂ, ಪರಿಮಳ ದ್ರವ್ಯಗಳನ್ನೂ, ಒಳ್ಳೇ ಎಣ್ಣೆಯನ್ನೂ, ಅ
ವನ ಆಯುಧಶಾಲೆಯನ್ನೆಲ್ಲವೂ, ಅವನ ಬೊಕ್ಕಸಗಳಲ್ಲಿ ಸಿ
ಕ್ಕಿದ್ದೆಲ್ಲವೂ ತೋರಿಸಿದನು; ಹಿಸ್ಕೀಯನು ಅವರಿಗೆ ತೋರಿಸದೆ
ಇದ್ದದ್ದು ಅವನ ಮನೆಯಲ್ಲಿಯೂ, ಸಮಸ್ತ ರಾಜ್ಯದಲ್ಲಿಯೂ,
ಒಂದು ಇಲ್ಲ.
೩ ಆಗ ಪ್ರವಾದಿಯಾದ ಯೆಶಾಯನು ಅರಸನಾದ ಹಿಸ್ಕೀಯನ
ಬಳಿಗೆ ಬಂದು, ಅವನಿಗೆ—ಈ ಜನರು ಏನು ಹೇಳಿದರು! ಮತ್ತು,

ಎಲ್ಲಿಂದ ನಿನ್ನ ಬಳಿಗೆ ಬಂದರು? ಅಂದನು; ಹಿಸ್ಕಿಯೆನು—ದೂರ
೪ ದೇಶದಿಂದ, ಬಾಬೆಲಿಂದ, ನನ್ನ ಬಳಿಗೆ ಬಂದರು, ಅಂದನು. ಆಗ
ಲವನು, ನಿನ್ನ ಮನೆಯಲ್ಲಿ ಏನು ನೋಡಿದರು? ಅಂದನು. ಹಿ
ಸ್ಕಿಯೆನು ನನ್ನ ಮನೆಯಲ್ಲಿ ಇದ್ದದ್ದನ್ನೆಲ್ಲಾ ನೋಡಿದರು; ನಾ
ನು ಅವರಿಗೆ ತೋರಿಸದೆ ಇದ್ದದ್ದು, ನನ್ನ ಪೊಕ್ಕಸಗಳಲ್ಲಿ ಒಂದು
ಇಲ್ಲ, ಅಂದನು.

೫ ಆಗ ಯೆಶಾಯನು ಹಿಸ್ಕಿಯೆನಿಗೆ ಹೇಳಿದ್ದೇನಂದರೆ—ಸೈ
೬ ನ್ಯಗಳ ಕರ್ತನ ವಾಕ್ಯವನ್ನು ಕೇಳು. ಇಗೋ ದಿನಗಳು ಬರುವ
ವು; ಆಗ ನಿನ್ನ ಮನೆಯಲ್ಲಿರುವಂಥದ್ದೆಲ್ಲವೂ, ನಿನ್ನ ಪಿತೃಗಳು
ಈ ವರಿಗೂ ಇಟ್ಟು ಕೊಂಡದ್ದೂ, ಬಾಬೆಲಿಗೆ ವೈಯಲ್ಪಡುವ
೭ ದು; ಒಂದೂ ಮಿಗುವದಿಲ್ಲವೆಂದು ಕರ್ತನು ಹೇಳುತ್ತಾನೆ. ಮತ್ತು,
ನಿನ್ನಿಂದ ಹುಟ್ಟುವಂಥ, ನೀನು ಹಡೆಯುವಂಥ, ನಿನ್ನ ಮಕ್ಕ
ಳಲ್ಲಿ ಕೆಲವರನ್ನು ತಕ್ಕೊಂಡು ಹೋಗುವರು; ಅವರು ಬಾಬೆಲಿ
ನ ಅರಸನ ಮನೆಯಲ್ಲಿ ಪೊಜ್ಜೆಯರಾಗುವರು.

೮ ಆಗ ಹಿಸ್ಕಿಯೆನು ಯೆಶಾಯನಿಗೆ—ನೀನು ಹೇಳಿದ ಕರ್ತನ
ವಾಕ್ಯವು ಒಳ್ಳೇದೇ, ಅಂದನು. ಮತ್ತು, ನನ್ನ ದಿವಸಗಳಲ್ಲಿ ಮಾ
ತ್ರ, ಸಮಾಧಾನವೂ, ಸತ್ಯವೂ, ಇರುವದು, ಅಂದನು.

## ೪೦. ಸಂಧಿ.

೧ ನನ್ನ ಜನರನ್ನು ಆದರಿಸಿರಿ, ಆದರಿಸಿರಿ,
ಎಂದು ನಿಮ್ಮ ದೇವರು ಹೇಳುತ್ತಾನೆ.
೨ ಯೆರೂಸಲೇಮಿನ ಸಂಗಡ ಸಮಾಧಾನವಾಗಿ ಮಾತಾಡಿರಿ;
ಅದರ ಹೋರಾಟವು ತೀರಿತೆಂದೂ,
ಅದರ ಅಕ್ರಮವು ಪರಿಹರಿಸಿ ಆಯಿತೆಂದೂ,
ಅದರ ಎಲ್ಲಾ ಪಾಪಗಳ ನಿಮಿತ್ತ, ಅದಕ್ಕೆ ಎರಡಪಟ್ಟು,
ಕರ್ತನ ಕೈಯಿಂದ ಸಿಕ್ಕಿತೆಂದೂ, ಅದಕ್ಕೆ ಕೂಗಿ ಹೇಳಿರಿ.

೩ ಅರಣ್ಯದಲ್ಲಿ ಕೂಗುವವನ ಶಬ್ದವದೆ, ಏನಂದರೆ—
ಕರ್ತನಿಗೆ ಮಾರ್ಗವನ್ನು ಸಿದ್ಧ ಮಾಡಿರಿ,
ಅಡವಿಯಲ್ಲಿ ನಮ್ಮ ದೇವರಿಗೆ ರಾಜಮಾರ್ಗವನ್ನು ನೆಟ್ಟಗೆ
ಮಾಡಿರಿ.
೪ ತಗ್ಗುಗಳೆಲ್ಲಾ ಎತ್ತಲ್ಪಡುವವು;
ಬೆಟ್ಟಗಳು, ಗುಡ್ಡಗಳು, ಎಲ್ಲವೂ, ತಗ್ಗಿಸಲ್ಪಡುವವು;
ಸೊಟ್ಟಗಾದದ್ದು ನೆಟ್ಟಗೆಯೂ,
ಕೊರಕಲಾದ ಸ್ಥಳಗಳು ಸಮವು, ಆಗುವವು.
೫ ಮತ್ತು, ಕರ್ತನ ಮಹಿಮೆ ಪ್ರಕಟವಾಗುವದು;
ಮಾಂಸದವರೆಲ್ಲರು ಕೂಡ ಅದನ್ನು ನೋಡುವರು;
ಯಾಕಂದರೆ, ಕರ್ತನ ಬಾಯಿ ಮಾತಾಡಿ ಅದೆ.

೬ ಶಬ್ದವು, ಕೂಗು! ಅಂದಿತು.
ನಾನೇನು ಕೂಗಲಿ! ಅಂದೆನು.
ಮಾಂಸವೆಲ್ಲಾ ಹುಲ್ಲೇ,
ಅದರ ಸೌಂದರ್ಯವೆಲ್ಲಾ ಹೊಲದ ಹೂವಿನಂತೆಯೇ.
೭ ಕರ್ತನ ಶ್ವಾಸವು ಅದರ ಮೇಲೆ ಊದಲಾಗಿ,
ಹುಲ್ಲು ಒಣಗುವದು; ಹೂವು ಬಾಡುವದು;
ಹೌದು, ಜನರು ಹುಲ್ಲೇ.
೮ ಹುಲ್ಲು ಒಣಗುವದು; ಹೂವು ಬಾಡುವದು;
ಆದರೆ ನಮ್ಮ ದೇವರ ವಾಕ್ಯವು, ನಿತ್ಯವಾಗಿ ನಿಲ್ಲುವದು.

೯ ಚಿಯೋನಿಗೆ ಸುವಾರ್ತೆ ತಿಳಿಸುವವನೇ!
ಎತ್ತರವಾದ ಬೆಟ್ಟವನ್ನು ಏರು;
ಯೆರೂಸಲೇಮಿಗೆ ಸುವಾರ್ತೆ ತಿಳಿಸುವವನೇ!
ಬಲವಾಗಿ ನಿನ್ನ ಶಬ್ದವನ್ನು ಎತ್ತು,
ಭಯ ಪಡದೆ ಎತ್ತು;
ಯೆಹೂದದ ಪಟ್ಟಣಗಳಿಗೆ—ಇಗೋ ನಿಮ್ಮ ದೇವರು! ಎಂದು
ಹೇಳು.
೧೦ ಇಗೋ, ಕರ್ತನಾದ ಯೆಹೋವನು ಬಲದಿಂದ ಬರುತ್ತಾನೆ;
ಅವನ ಕೈ ತನಗೋಸ್ಕರ ಆಳುವದು,
ಇಗೋ, ಅವನ ಬಹುಮಾನವು ಅವನ ಸಂಗಡಲೂ,
ಅವನ ಪ್ರತಿಫಲವು ಅವನ ಮುಂದೆಯೂ, ಅದೆ.
೧೧ ಕುರುಬನಂತೆ ತನ್ನ ಮಂದೆಯನ್ನು ಮೇಯಿಸುವನು;
ಕುರಿಮರಿಗಳನ್ನು ತನ್ನ ಕೈಗಳಿಂದ ಕೂಡಿಸಿ ಕೊಂಡು,
ತನ್ನ ಎದೆಯಲ್ಲಿ ಹೊತ್ತು ಕೊಳ್ಳುವನು;
ಈದವುಗಳನ್ನು ಮೆಲ್ಲಗೆ ನಡಿಸುವನು.

೧೨ ನೀರುಗಳನ್ನು ತನ್ನ ಅಂಗೈಯಲ್ಲಿ ಅಳೆದವನೂ,
ಆಕಾಶಗಳನ್ನು ಗೇಣಿನಿಂದ ಪ್ರಮಾಣ ಸೋಡಿದವನೂ,
ಭೂಮಿಯ ಧೂಳನ್ನು ಬಳ್ಳದಿಂದ ಎಣಿಸಿದವನೂ,
ಬೆಟ್ಟಗಳನ್ನು ತ್ರಾಸಿನಲ್ಲಿಯೂ,
ಗುಡ್ಡಗಳನ್ನು ತಕ್ಕಡಿಯಲ್ಲಿಯೂ,
ತೂಕ ಮಾಡಿದವನೂ ಯಾರು?
೧೩ ಕರ್ತನ ಆತ್ಮವನ್ನು ಶೋಧಿಸಿದವನೂ,
ಅವನ ಆಲೋಚನೆ ಕರ್ತನಾಗಿದ್ದು,
ಅವನಿಗೆ ಕಲಿಸಿದವನೂ, ಯಾರು!
೧೪ ಅವನಿಗೆ ಉಪದೇಶ ಕೊಟ್ಟು, ನ್ಯಾಯದ ಮಾರ್ಗವನ್ನು ಕಲಿಸಿ,
ತಿಳುವಿಕೆಯನ್ನು ಬೋಧಿಸಿ, ವಿವೇಕದ ಮಾರ್ಗವನ್ನು ತಿಳಿಸ
ತಕ್ಕವನಾದ,
ಯಾರ ಸಂಗಡ ಅವನು ಆಲೋಚನೆ ಮಾಡಿ ಕೊಂಡಿದ್ದಾನೆ!
೧೫ ಇಗೋ ಜನಾಂಗಗಳು ಗಡಿಗೆಯಿಂದ ಬೀಳುವ ಬೊಟ್ಟಿನಂತೆ
ಇದ್ದಾರೆ;
ತ್ರಾಸಿನಲ್ಲಿರುವ ಧೂಳಿನಂತೆ ಎಣಿಸಲ್ಪಡುತ್ತಾರೆ;
ಇಗೋ, ದ್ವೀಪಗಳನ್ನು ಶ್ರಾಣದಂತೆ ಎತ್ತುತ್ತಾನೆ.
೧೬ ಲೆಬನೋನು ಸುಡುವದಕ್ಕೆ ಸಾಲದು;
ಅದರ ಮೃಗಗಳು ಬಲಿಗೆ ಸಾಲವು.
೧೭ ಜನಾಂಗಗಳೆಲ್ಲಾ ಅವನ ಮುಂದೆ ಏನಿಲ್ಲದಂತೆ ಅವೆ;
ಅವನಿಂದ ಶೂನ್ಯವಾಗಿಯೂ ವ್ಯರ್ಥವಾಗಿಯೂ ಎಣಿಸಲ್ಪ
ಡುತ್ತವೆ.
೧೮ ಹಾಗಾದರೆ, ದೇವರನ್ನು ಯಾರಿಗೆ ಹೋಲಿಸುವಿರಿ!
ಯಾವ ಹೋಲಿಕೆಯನ್ನು ಅವನಿಗೆ ಸಮಾನ ಮಾಡುವಿರಿ!



೧೯ ಕಂಚುಗಾರನು ವಿಗ್ರಹವನ್ನು ಎರಕ ಹೊಯ್ಯುತ್ತಾನೆ;
ಅಕ್ಕಸಾಲಿಗನು ಅದನ್ನು ಚಿನ್ನದಿಂದ ಹೊದಗಿಸುತ್ತಾನೆ;
ಬೆಳ್ಳಿಯ ಸರಪಣಿಗಳನ್ನು ಮಾಡುತ್ತಾನೆ.
೨೦ ಕಾಣಿಕೆಯ ವಿಷಯದಲ್ಲಿ ಬಡವನು,
ಉಳಿತು ಹೋಗದ ಮರವನ್ನು ಆರಿಸಿ ತೆಗೆದು ಕೊಳ್ಳುವನು;
ಚಲಿಸದ ವಿಗ್ರಹವನ್ನು ನಿಲ್ಲಿಸುವದಕ್ಕೆ,
ತನಗೆ ಬುದ್ಧಿಯುಳ್ಳ ಬಡಿಗೆಯವನನ್ನು ಹುಡುಕುವನು.

೨೧ ನಿಮಗೆ ತಿಳಿಯಲಿಲ್ಲವೋ!
ನೀವು ಕೇಳಲಿಲ್ಲವೋ!
ಆದಿಯಿಂದ ನಿಮಗೆ ತಿಳಿಸಲ್ಪಡಲಿಲ್ಲವೋ!
ನೀವು ಭೂಮಿಯ ಅಸ್ತಿವಾರಗಳಿಂದ ಗ್ರಹಿಸಲಿಲ್ಲವೋ!
೨೨ ಭೂಮಂಡಲದ ಮೇಲೆ ಕೂತ್ರುವವನು ಇದ್ದಾನೆ;
ಅದರ ನಿವಾಸಿಗಳು ಮಿಡತೆಗಳ ಹಾಗೆ ಇದ್ದಾರೆ;
ಅವನು ಆಕಾಶವನ್ನು ತೆರೆಯಂತೆ ಹಾಸಿ,
ನಿವಾಸಕ್ಕಾಗಿರುವ ಗುಡಾರದ ಹಾಗೆ ವಿಸ್ತರಿಸುತ್ತಾನೆ.
೨೩ ಅವನು ಪ್ರಭುಗಳನ್ನು ಇಲ್ಲದ ಹಾಗೆ ಮಾಡುತ್ತಾನೆ.
ಭೂಮಿಯ ನ್ಯಾಯಾಧಿಪತಿಗಳನ್ನು ವ್ಯರ್ಥ ಮಾಡುತ್ತಾನೆ.
೨೪ ನಿಶ್ಚಯವಾಗಿ ಅವರು ನೆಡಲ್ಪಡುವದಿಲ್ಲ, ಬಿತ್ತಲ್ಪಡುವದಿಲ್ಲ,
ಅವರ ಬುಡ ಭೂಮಿಯಲ್ಲಿ ಬೇರೂರುವದಿಲ್ಲ,
ಮತ್ತು ಅವನು ಅವರ ಮೇಲೆ ಉಸುರು ಬಿಡುವನು, ಆಗಲು
ಒಣಗುವರು.
ಮತ್ತು ಬಿರುಗಾಳಿಯು ಹೊಟ್ಟಿನಂತೆ ಅವರನ್ನು ಬಡು ಕೊಂ
ಡು ಹೋಗುವದು.
೨೫ ಹಾಗಾದರೆ, ನನ್ನನ್ನು ಯಾರಿಗೆ ಹೋಲಿಸುವಿ!
ಯಾರಿಗೆ ಸರಿ ಮಾಡುವಿ!
ಎಂದು ಪರಿಶುದ್ಧನು ಹೇಳುತ್ತಾನೆ.
೨೬ ನಿಮ್ಮ ಕಣ್ಣುಗಳನ್ನು ಮೇಲಕ್ಕೆ ಎತ್ತಿ ನೋಡಿರಿ!
ಅವುಗಳನ್ನು ಸೃಷ್ಟಿಸಿದವನ್ಯಾರು!
ಅವುಗಳ ಸೈನ್ಯವನ್ನೆಲ್ಲಾ ಲೆಖ್ಖದಿಂದ ಹೊರಗೆ ತರುತ್ತಾನೆ;
ಅವುಗಳನ್ನೆಲ್ಲಾ ಹೆಸರಿನಿಂದ ಕರೆಯುತ್ತಾನೆ.
ಅವನು ಬಹು ಕರ್ತನಾಗಿರುವದರಿಂದಲೂ,
ಪರಾಕ್ರಮವುಳ್ಳ ಬಲಶಾಲಿಯಾಗಿರುವದರಿಂದಲೂ,
ಒಂದೂ ತಪ್ಪದು.

೨೭ ನನ್ನ ಮಾರ್ಗವು ಕರ್ತನಿಗೆ ಅಡಗಿಯದೆ ಎಂದೂ,
ನನ್ನ ನ್ಯಾಯವು ನನ್ನ ದೇವರನ್ನು ದಾಟಿ ಹೋಯಿತೆಂದೂ,
ಯಾಕೋಬೇ! ಯಾಕೆ ಹೇಳುತ್ತೀ!
ಇಸ್ರಯೇಲೇ! ಯಾಕೆ ಮಾತಾಡುತ್ತೀ!
೨೮ ನಿನಗೆ ತಿಳಿಯಲಿಲ್ಲವೋ!
ನೀನು ಕೇಳಲಿಲ್ಲವೋ!
ಭೂಮಿಯ ಅಂತ್ಯಗಳನ್ನು ಸೃಷ್ಟಿಸಿದ ಕರ್ತನು ನಿತ್ಯವಾದ
ದೇವರು;
ಅವನು ಆಯಾಸ ಪಡುವದಿಲ್ಲ; ದಣಿಯುವದಿಲ್ಲ,
ಅವನ ವಿವೇಕವನ್ನು ಶೋಧಿಸುವದಕ್ಕಾಗದು.
೨೯ ಅವನು ಆಯಾಸ ಪಟ್ಟವನಿಗೆ ಬಲವನ್ನು ಕೊಡುತ್ತಾನೆ;
ಶಕ್ತಿಯಿಲ್ಲದವನಿಗೆ ತ್ರಾಣವನ್ನು ಹೆಚ್ಚಿಸುತ್ತಾನೆ.
೩೦ ಯೌವನಸ್ಥರು ಆಯಾಸವಾಗಿ ದಣಿಯುವರು;
ಪ್ರಾಯಸ್ಥರು ಶುದ್ಧವಾಗಿ ಎಡವುವರು.
೩೧ ಆದರೆ ಕರ್ತನನ್ನು ಕಾದು ಕೊಳ್ಳುವವರು,
ಹೊಸ ಬಲವನ್ನು ತಂದು ಕೊಳ್ಳುವರು;
ಹದ್ದುಗಳಂತೆ ಕೆಕ್ಕೆಗಳಿಂದ ಏರುವರು;
ದಣಿಯದೆ ಓಡುವರು,
ಆಯಾಸ ಪಡದೆ ನಡೆಯುವರು.

## ೪೧. ಸಂಧಿ.

೧ ದ್ವೀಪಗಳೇ! ನನ್ನ ಮುಂದೆ ಸುಮ್ಮನಿರಿ;
ಜನ ಸಮೂಹಗಳು ಹೊಸ ಬಲವನ್ನು ತಂದು ಕೊಳ್ಳಲಿ;
ಸಮೀಪಕ್ಕೆ ಬಂದು, ಆ ಮೇಲೆ ಮಾತಾಡಲಿ;
ನ್ಯಾಯಕ್ಕೋಸ್ಕರ ಕೂಡ ಸಮೀಪಿಸೋಣ.

೨ ಯಾರು ಮೂಡಣದಿಂದ ನೀತಿವಂತನನ್ನು ಎಬ್ಬಿಸಿ,
ಅವನನ್ನು ತನ್ನ ಪಾದಕ್ಕೆ ಕರೆದು,
ಜನಾಂಗಗಳನ್ನು ಅವನ ಮುಂದೆ ಕೊಟ್ಟು ಬಿಟ್ಟು,
ಅರಸರನ್ನು ಅವನ ವಶಕ್ಕೆ ಒಪ್ಪಿಸಿದ್ದಾನೆ!
ಅವನ ಕತ್ತಿಗೆ ಧೂಳಿಯ ಹಾಗೆಯೂ,
ಅವನ ಬಿಲ್ಲಿಗೆ ಹಾರಿ ಹೋಗುವ ಪೊಟ್ಟಿನ ಹಾಗೆಯೂ,
ಅವರನ್ನು ಕೊಟ್ಟು ಬಿಟ್ಟನು.
೩ ಅವರನ್ನು ಹಿಂದಟ್ಟಿದನು;
ತನ್ನ ಕಾಲುಗಳಿಂದ ಬಾರದೆ ಇದ್ದ ದಾರಿಯಲ್ಲಿ,
ಸಮಾಧಾನದಿಂದ ಹಾದು ಹೋದನು;
೪ ಅದನ್ನು ನಡಿಸಿ ಮಾಡಿದವನ್ಯಾರು!
ಆದಿಯಿಂದ ಸಂತತಿಗಳನ್ನು ಕರೆಯುವವನೇ;
ಕರ್ತನಾದ ನಾನು ಮೊದಲನೇಯವನು;
ಕಡೆಯವರ ಸಂಗಡ ನಾನೇ.

೫ ದ್ವೀಪಗಳು ನೋಡಿ ಭಯ ಪಟ್ಟವು;
ಭೂಮಿಯ ಅಂತ್ಯಗಳು ನಡುಗಿದವು;
ಸಮೀಪಿಸಿ, ಬಂದವು.
೬ ಒಬ್ಬರಿಗೊಬ್ಬರು ಸಹಾಯ ಮಾಡಿ ಕೊಂಡರು;
ಒಬ್ಬರಿಗೊಬ್ಬರು—ಧೈರ್ಯವಾಗಿರು! ಅಂದರು.
೭ ಕಂಚುಗಾರನು ಅಕ್ಕಸಾಲಿಗನನ್ನೂ,
ಸುತ್ತಿಗೆಯಿಂದ ನೆಟ್ಟಗೆ ಮಾಡುವವನು ಅಡಿಗಲ್ಲಿನ ಮೇಲೆ ಹೊಡೆ
ಯುವವನನ್ನೂ,
ಧೈರ್ಯ ಪಡಿಸಿದರು;
ಬೆಸೆದದ್ದು ಚನ್ನಾಗಿದೆ ಎಂಥೇಳಿ,
ಅದು ಕದಲದ ಹಾಗೆ ಮೊಳೆಗಳಿಂದ ಬಿಗಿ ಮಾಡಿದರು.

೮ ಆದರೆ, ನನ್ನ ಸೇವಕನಾಗಿರುವ ಇಸ್ರಯೇಲೇ!
ನಾನು ಆರಿಸ ಕೊಂಡ ಯಾಕೋಬೇ!
ನನ್ನ ಸ್ನೇಹಿತನಾದ ಅಬ್ರಹಾಮನ ಸಂತತಿಯೇ!

೯ ನಿನ್ನನ್ನು ನಾನು ಭೂಮಿಯ ಅಂತ್ಯಗಳಿಂದ ಹಿಡಿ ಕೊಂಡು,
ಅದರ ಕಡೇ ಮೇರೆಗಳಿಂದ ಕರೆದು—
ನೀನು ನನ್ನ ಸೇವಕನು;
ನಿನ್ನನ್ನು ಆದು ಕೊಂಡಿದ್ದೇನೆ,
ತಳ್ಳಿ ಬಿಡುವದಿಲ್ಲವೆಂದು ಹೇಳಿದೆನಲ್ಲ!
೧೦ ನೀನು ಭಯ ಪಡ ಬೇಡ,
ಯಾಕಂದರೆ, ನಾನು ನಿನ್ನ ಸಂಗಡ ಇದ್ದೇನೆ;
ಘಾಬರಿ ಪಡ ಬೇಡ,
ಯಾಕಂದರೆ, ನಾನು ನಿನ್ನ ದೇವರಾಗಿದ್ದೇನೆ;
ನಿನ್ನನ್ನು ಬಲ ಪಡಿಸುತ್ತೇನೆ;
ಹೌದು ನಿನಗೆ ಸಹಾಯ ಮಾಡುತ್ತೇನೆ;
ಹೌದು ನನ್ನ ನೀತಿಯ ಬಲಗೈಯಿಂದ
ನಿನ್ನನ್ನು ಹಿಡಿಯುತ್ತೇನೆ.
೧೧ ಇಗೋ, ನಿನಗೆ ವಿರೋಧವಾಗಿ ಉರಿಗೊಂಡವರೆಲ್ಲರು,
ನಾಚಿಕೆ ಪಟ್ಟು ನಿಂದಿತರಾಗುವರು;
ನಿನ್ನ ಸಂಗಡ ವ್ಯಾಜ್ಯ ಮಾಡುವವರು,
ಇಲ್ಲದೆ ಹೋಗಿ ನಾಶನವಾಗುವರು.
೧೨ ನಿನ್ನ ಸಂಗಡ ಜಗಳವಾಡಿದವರನ್ನು,
ಹುಡುಕಿ, ಕಾಣದಿರುವಿ;
ನಿನ್ನ ಸಂಗಡ ಯುದ್ಧ ಮಾಡಿದವರು,
ಇಲ್ಲದೆ ಹೋಗಿ, ನಾಶನವಾಗುವರು.
೧೩ ಯಾಕಂದರೆ, ನಿನ್ನ ಬಲಗೈಯನ್ನು ಹಿಡಿದು—
ಭಯ ಪಡ ಬೇಡ,
ನಾನು ನಿನಗೆ ಸಹಾಯ ಮಾಡುತ್ತೇನೆಂದು
ನಿನಗೆ ಹೇಳುವವನು,
ನಿನ್ನ ದೇವರಾಗಿರುವ ಯೆಹೋವನಾದ ನಾನೇ.
೧೪ ಹುಳುವಾದ ಯಾಕೋಬೇ! ಇಸ್ರಯೇಲಿನ ಮನುಷ್ಯರೇ!
ಭಯ ಪಡ ಬೇಡ.
ನಾನು ನಿನಗೆ ಸಹಾಯ ಮಾಡುತ್ತೇನೆಂದು
ಕರ್ತನು ಹೇಳುತ್ತಾನೆ;
ನಿನ್ನ ರಕ್ಷಕನು, ಇಸ್ರಯೇಲಿನ ಪರಿಶುದ್ಧನೇ.
೧೫ ಇಗೋ, ನಿನ್ನನ್ನು ಹದವಾದ, ಹೊಸ, ಬಹಳ ಮೊನೆಯುಳ್ಳ,
ಕಣದಯಂತ್ರವಾಗ ಮಾಡುವೆನು.
ನೀನು ಬೆಟ್ಟಗಳನ್ನು ತುಳಿದು, ಪುಡಿ ಪುಡಿ ಮಾಡಿ,
ಗುಡ್ಡಗಳನ್ನು ಹೊಟ್ಟಿನಂತೆ ಮಾಡುವಿ.
೧೬ ನೀನು ಅವುಗಳನ್ನು ಮೊರದಿಂದ ತೂರುವಿ,
ಘಾಳಿ ಅವುಗಳನ್ನು ಎತ್ತಿ ಕೊಳ್ಳುವದು,
ಬಿರುಘಾಳಿ ಅವುಗಳನ್ನು—ಚೆದರ ಬಡಿಯುವದು.
ಆದರೆ ನೀನು ಕರ್ತನಲ್ಲಿ ಉಲ್ಲಾಸ ಪಟ್ಟು,
ಇಸ್ರಯೇಲಿನ ಪರಿಶುದ್ಧನಲ್ಲಿ ಹೊಗಳಿ ಕೊಳ್ಳುವಿ.

೧೭ ಬಹವರೂ ದರಿದ್ರರೂ, ನೀರನ್ನು ಹುಡಿಕಿ ಕಾಣದೆ,
ಬಾಯಾರಿಕೆಯಿಂದ ನಾಲಿಗೆ ಬಣಗಿದವರಾಗಲು,
ಕರ್ತನಾದ ನಾನೇ ಅವರನ್ನು ಆಲೈಸುವೆನು,
ಇಸ್ರಯೇಲಿನ ದೇವರಾಗಿರುವ ನಾನು ಅವರನ್ನು ಕೈ ಬಿಡೆನು.
೧೮ ಕಾಡು ಗುಡ್ಡಗಳ ಮೇಲೆ ನದಿಗಳನ್ನೂ,
ತಗ್ಗುಗಳ ನಡುವೆ ಬುಗ್ಗೆಗಳನ್ನೂ
ಹೊರಗೆ ಬರ ಮಾಡುವೆನು;
ಅರಣ್ಯವನ್ನು ನೀರಿನ ಕೆರೆಯಾಗಿಯೂ,
ಬಣಗಿದ ಭೂಮಿಯನ್ನು ನೀರಿನ ಜರೆಗಳಾಗಿಯೂ
ಮಾಡುವೆನು.
೧೯ ಅರಣ್ಯದಲ್ಲಿ, ದೇವದಾರು, ಜಾಲಿ ಮರಗಳನ್ನೂ,
ಗಂಧ, ಇಪ್ಪೆ ಗಿಡಗಳನ್ನೂ, ಇಡುವೆನು;
ಅಡವಿಯಲ್ಲಿ, ಸುರಗಿ, ದಿಂಡುಗ, ಹೊನ್ನೆ ಮರಗಳನ್ನೂ,
ಕೂಡ ಇರಿಸುವೆನು.
೨೦ ಕರ್ತನ ಕೈ ಇದನ್ನು ಮಾಡಿತೆಂದೂ,
ಇಸ್ರಯೇಲಿನ ಪರಿಶುದ್ಧನು ಅದನ್ನು ಉಂಟು ಮಾಡಿದನೆಂದೂ,
ಅವರು ಕೂಡ ನೋಡಿ, ತಿಳಿದು,
ಮನಸ್ಸಿಗೆ ತಂದು, ಗ್ರಹಿಸುವದಕ್ಕೋಸ್ಕರವೇ.

೨೧ ನಿಮ್ಮ ವ್ಯಾಜ್ಯವನ್ನು ತನ್ನಿರಿ, ಎಂದು ಕರ್ತನು ಹೇಳುತ್ತಾನೆ.
ನಿಮ್ಮ ಬಲವಾದ ತರ್ಕಗಳನ್ನು ತೋರಿಸಿರಿ,
ಎಂದು ಯಾಕೋಬನ ಅರಸನು ಹೇಳುತ್ತಾನೆ.
೨೨ ಅವುಗಳನ್ನು ತೋರಿಸಲಿ,
ಸಂಭವಿಸಲಾಗುವದನ್ನು ನಮಗೆ ತಿಳಿಸಲಿ,
ಹಿಂದಿನದು ಏನೆಂದು ನಮಗೆ ತಿಳಿಸಲಿ;
ಆಗ ನಾವು ಮನಸ್ಸಿಗೆ ತಂದು,
ಅದರ ಅಂತ್ಯವನ್ನು ನೋಡೋಣ;
ಅಥವ ಮುಂದಿನದನ್ನು ನಮಗೆ ಕೇಳಿಗೊಡಿರಿ.
೨೩ ಮುಂದೆ ಬರುವವುಗಳನ್ನು ತಿಳಿಸಿರಿ;
ಆಗ, ನೀವು ದೇವರುಗಳೆಂದು, ನಮಗೆ ತಿಳಿಯುವದು;
ಹೌದು, ಒಳ್ಳೆದನಾಗಲಿ, ಕೆಟ್ಟದನಾಗಲಿ, ಮಾಡಿರಿ;
ಆಗ, ನಾವು ಕೂಡ ಘಾಬರಿ ಪಟ್ಟು, ಭಯಗೊಳ್ಳುವೆವು.
೨೪ ಇಗೋ, ನೀವು ಏನು ಇಲ್ಲ;
ನಿಮ್ಮ ಕ್ರಿಯೆಯು ಮಾಯ;
ನಿಮಗೆ ಮೆಚ್ಚುವವನು ಅಸಹ್ಯನೇ.

೨೫ ಉತ್ತರದ ಕಡೆಯಿಂದ ಒಬ್ಬನನ್ನು ಎಬ್ಬಿಸಿದ್ದೇನೆ;
ಅವನು ಬರುತ್ತಾನೆ.
ಸೂರ್ಯೋದಯದ ಕಡೆಯಿಂದ,
ಅವನು ನನ್ನ ಹೆಸರನ್ನು ಸ್ಮರಿಸುವನು.
ಅವನು ಜೇಡಿನಂತೆಯೂ,
ಕುಂಬಾರನು ಮಣ್ಣು ತುಳಿಯುವಂತೆಯೂ,
ಅಧಿಕಾರಸ್ತರ ಮೇಲೆ ಬರುವನು.
೨೬ ನಾವು ತಿಳಿಯುವ ಹಾಗೆ, ಆದಿಯಿಂದಲೂ,
ನಾವು ಸರಿ ಅನ್ನುವ ಹಾಗೆ, ಪೂರ್ವದಿಂದಲೂ,
ತಿಳಿಸಿದವನ್ಯಾರು?
ಒಬ್ಬನಾದರೂ ತಿಳಿಸಲಿಲ್ಲ; ಒಬ್ಬನಾದರೂ ಕೇಳಿಗೊಡಲಿಲ್ಲ;
ಒಬ್ಬನಾದರೂ ನಿಮ್ಮ ಮಾತುಗಳನ್ನು ಕೇಳಿಲಿಲ್ಲ.
೨೭ ನಾನೇ ಮೊದಲು ಚಿಯೋನಿಗೆ—
ಇಗೋ, ಅವರನ್ನು ನೋಡು, ಅಂದೆನು;
ಮತ್ತು ಯೆರೂಸಲೇಮಿಗೆ ಸುವಾರ್ತಿಕನನ್ನು ಕೊಟ್ಟೆನು.
೨೮ ನಾನು ನೋಡಿದೆನು, ಆದರೆ ಒಬ್ಬನೂ ಇಲ್ಲ;



ಅವರಲ್ಲಿಯೇ ನೋಡಿದೆನು,
ಆದರೆ ನಾನು ಅವರನ್ನು ಕೇಳುವ ಹಾಗೆಯೂ,
ಅವರು ಉತ್ತರ ಕೊಡುವ ಹಾಗೆಯೂ,
ಆಲೋಚನೆ ಕರ್ತನು ಇಲ್ಲ.
೨೯ ಇಗೋ, ಅವರೆಲ್ಲಾ ವ್ಯರ್ಥವೇ,
ಅವರ ಕ್ರಿಯೆಗಳು ಮಾಯವೇ,
ಅವರ ವಿಗ್ರಹಗಳು ಘಾಳಿಯೇ, ಶೂನ್ಯವೇ.

## ೪೨. ಸಂಧಿ.

೧ ಇಗೋ! ನಾನು ಉದ್ಧಾರ ಮಾಡುವ ನನ್ನ ಸೇವಕನು;
ನನ್ನ ಪ್ರಾಣ ಮೆಚ್ಚುವ ನಾನು ಆದು ಕೊಂಡವನು;
ನನ್ನ ಆತ್ಮವನ್ನು ಅವನ ಮೇಲೆ ಇಟ್ಟಿದ್ದೇನೆ,
ಜನಾಂಗಳಿಗೆ ನ್ಯಾಯವನ್ನು ಹೊರ ತರುವನು.
೨ ಅವನು ಕೂಗುವದಿಲ್ಲ, ಶಬ್ದವನ್ನೆತ್ತುವದಿಲ್ಲ,
ಅವನು ಬೀದಿಯಲ್ಲಿ ಕೇಳಿಗೊಡುವದಿಲ್ಲ.
೩ ನಲಿಗಿದ ದಂಟನ್ನು ಮುರಿಯುವದಿಲ್ಲ;
ಸ್ವಲ್ಪ ಉರಿಯುವ ಬತ್ತಿಯನ್ನು ಆರಿಸುವದಿಲ್ಲ;
ಸತ್ಯದಿಂದ ನ್ಯಾಯವನ್ನು ಹೊರ ತರುತ್ತಾನೆ.
೪ ಅವನು ಭೂಮಿಯಲ್ಲಿ ನ್ಯಾಯವನ್ನು ಸ್ಥಾಪಿಸುವ ಪರ್ಯಂತರ,
ದಣಿಯುವದಿಲ್ಲ, ಮನಗುಂದುವದಿಲ್ಲ;
ಅವನ ನ್ಯಾಯಪ್ರಮಾಣಕ್ಕೆ ದ್ವೀಪಗಳು ಕಾದು ಕೊಳ್ಳುವವು.
೫ ದೇವರಾದ ಯೆಹೋವನು,
ಆಕಾಶವನ್ನು ನಿರ್ಮಿಸಿ ಹಾಸಿದವನು,
ಭೂಮಿಯನ್ನೂ ಅದರಿಂದ ಹುಟ್ಟುವದನ್ನೂ ವಿಸ್ತರಿಸಿದವನು,
ಅದರ ಮೇಲಿರುವ ಜನಕ್ಕೆ ಶ್ವಾಸವನ್ನೂ,
ಅದರಲ್ಲಿ ಸಂಚರಿಸುವವರಿಗೆ ಆತ್ಮವನ್ನೂ ಕೊಡುವವನು,
ಹೇಳುವದೇನಂದರೆ—
೬ ಕುರುಡ ಕಣ್ಣುಗಳನ್ನು ತೆರೆಯುವ ಬಗ್ಗೆ,
ಬಂಧಕದವನನ್ನು ಕೆರೆಯೊಳಗಿಂದಲೂ,
ಕತ್ತಲೆಯಲ್ಲಿ ವಾಸಿಸುವವರನ್ನು ಕಾವಲಿ ಮನೆಯೊಳಗಿಂದಲೂ,
ಹೊರಗೆ ತರುವ ಬಗ್ಗೆ,
೭ ಯೆಹೋವನಾದ ನಾನೇ ನೀತಿಯಿಂದ ನಿನ್ನನ್ನು ಕರೆದು,
ನಿನ್ನ ಕೈಯನ್ನು ಹಿಡಿದು, ನಿನ್ನನ್ನು ಪರಾಮರಿಸಿ,
ನಿನ್ನನ್ನು ಜನಗಳಿಗೆ ಜಟಂಬಡಿಕೆಯಾಗಿಯೂ,
ಜನಾಂಗಗಳಿಗೆ ಬೆಳಕಾಗಿಯೂ, ಇಡುತ್ತೇನೆ.
೮ ನಾನೇ ಯೆಹೋವ, ಇದೇ ನನ್ನ ಹೆಸರು.
ನನ್ನ ಘನವನ್ನು ಮತ್ತೊಬ್ಬನಿಗೂ,
ನನ್ನ ಸ್ತೋತ್ರವನ್ನು ವಿಗ್ರಹಗಳಿಗೂ, ಕೊಡುವದಿಲ್ಲ.
೯ ಹಿಂದಿನವುಗಳು ಇಗೋ ಉಂಟಾದವು.
ಮತ್ತು ಹೊಸವುಗಳನ್ನು ನಾನು ತಿಳಿಸುತ್ತೇನೆ.
ಅವು ಹುಟ್ಟುವದಕ್ಕಿಂತ ಮುಂಚೆ ನಿಮಗೆ ಕೇಳಿಗೊಡುತ್ತೇನೆ.

೧೦ ಸಮುದ್ರಕ್ಕೆ ಇಳಿದು ಹೋಗುವವರೇ!
ಅದರ ಸಂಪೂರ್ಣತೆಯೇ!
ದ್ವೀಪಗಳೇ! ಅವುಗಳಲ್ಲಿ ವಾಸವಾಗಿರುವವರೇ!
ಯೆಹೋವನಿಗೆ ಹೊಸ ಹಾಡನ್ನು ಹಾಡಿರಿ;
ಭೂಮಿಯ ಅಂತ್ಯದಿಂದ ಅವನಿಗೆ ಸ್ತೋತ್ರವಾಗಲಿ.
೧೧ ಅರಣ್ಯವೂ, ಅದರ ಪಟ್ಟಣಗಳೂ,
ಕೇದರು ವಾಸಿಸುವ ಗ್ರಾಮಗಳೂ, ಶಬ್ದವನ್ನೆತ್ತಲಿ;
ಬಂಡೆಯ ನಿವಾಸಿಗಳೂ ಹರ್ಷಿಸಲಿ,
ಪರ್ವತಗಳ ಕೊನೆಯಿಂದ ಆನಂದ ಧ್ವನಿ ಮಾಡಲಿ.
೧೨ ಯೆಹೋವನಿಗೆ ಘನವನ್ನು ಕೊಡಲಿ;
ಅವನ ಸ್ತೋತ್ರವನ್ನು ದ್ವೀಪಗಳಲ್ಲಿ ತಿಳಿಸಲಿ.

೧೩ ಕರ್ತನು ಪರಾಕ್ರಮಶಾಲಿಯ ಹಾಗೆ ಹೊರಡುವನು,
ಯುದ್ಧ ಮಾಡುವ ಮನುಷ್ಯನ ಹಾಗೆ
ಆಸಕ್ತಿಯನ್ನು ಎಬ್ಬಿಸುವನು;
ಧ್ವನಿ ಮಾಡುವನು, ಹೌದು, ಆರ್ಭಟಿಸುವನು;
ತನ್ನ ಶತ್ರುಗಳಿಗೆ ವಿರೋಧವಾಗಿ ಪರಾಕ್ರಮ ತೋರಿಸುವನು.
೧೪ ಬಹು ಕಾಲದಿಂದ ಸುಮ್ಮನಿದ್ದೆನು;
ಮೌನವಾಗಿದ್ದೆನು, ಮಾತು ಹಿಡಿದೆನು;
ಈಗ ಹೆರುವವಳಂತೆ ಕೂಗುವೆನು;
ಒಂದೇ ಸಾರಿ ನಾಶ ಮಾಡಿ, ತಿಂದು ಬಿಡುವೆನು,
ಬೆಟ್ಟಗಳನ್ನೂ ಗುಡ್ಡಗಳನ್ನೂ ಹಾಳು ಮಾಡುವೆನು;
ಅವುಗಳ ಹುಲ್ಲನ್ನೆಲ್ಲಾ ಬಣಗ ಮಾಡುವೆನು;
ನದಿಗಳನ್ನು ವಾಸಿಸ ತಕ್ಕ ಭೂಮಿಗಳಾಗ ಮಾಡುವೆನು,
ಕೆರೆಗಳನ್ನು ಬಣಗಿಸುವೆನು.
೧೬ ಮತ್ತು ಕುರುಡರನ್ನು,
ಅವರು ಅರಿಯದ ಮಾರ್ಗದಲ್ಲಿ ಹೋಗ ಮಾಡುವೆನು;
ಅವರು ತಿಳಿಯದ ಹಾದಿಗಳಲ್ಲಿ ಅವರನ್ನು ನಡಿಸುವೆನು;
ಕತ್ತಲೆಯನ್ನು ಅವರ ಮುಂದೆ ಬೆಳಕಾಗಿಯೂ,
ಸೊಟ್ಟಾದವುಗಳನ್ನು ನೆಟ್ಟಗಾಗಿಯೂ, ಮಾಡುವೆನು.
ಇವುಗಳನ್ನು ಅವರಿಗೋಸ್ಕರ ಮಾಡಿ,
ಅವರನ್ನು ಕೈ ಬಿಡುವದಿಲ್ಲ.
೧೭ ವಿಗ್ರಹಗಳಲ್ಲಿ ನಂಬಿಕೆ ಇಡುವರೂ,
ಎರಕ ಹೊಯಿದ ಪ್ರತಿಮೆಗಳಿಗೆ—
ನೀವು ನಮ್ಮ ದೇವರುಗಳೆಂದು ಹೇಳುವವರೂ,
ಹಿಂದೆ ಬಿದ್ದು ನಾಚಿಕೆ ಪಡುವರು.

೧೮ ಕಿವುಡರೇ, ಕೇಳಿರಿ! ಕುರುಡರೇ, ದೃಷ್ಟಿಸಿ ನೋಡಿರಿ!
೧೯ ನನ್ನ ಸೇವಕನಲ್ಲದೆ ಕುರುಡನು ಯಾರು?
ನಾನು ಕಳುಹಿಸುವ ದೂತನಂತೆ ಕಿವುಡನು ಯಾರು?
ಸಂಪೂರ್ಣನಂತೆ ಕುರುಡನು ಯಾರು?
ಕರ್ತನ ಸೇವಕನಂತೆ ಕುರುಡನು ಯಾರು?
೨೦ ಬಹಳ ನೋಡಲಾಗಿ ನೀನು ಲಕ್ಷ್ಯವಿಡುವದಿಲ್ಲ,
ಕಿವಿಗಳನ್ನು ತೆರಿಯಲಾಗಿ ಅವನು ಕೇಳುವದಿಲ್ಲ.
೨೧ ಕರ್ತನು ಅವನ ನೀತಿಗೋಸ್ಕರ ಸಂತೋಷ ಪಡುತ್ತಾನೆ;
ನ್ಯಾಯಪ್ರಮಾಣವನ್ನು ಹೆಚ್ಚಿಸಿ ಮಹಿಮೆ ಪಡಿಸುವನು.

೨೨ ಆದರೆ, ಇದು ಸೂಕೆಯೂ, ಕೊಳ್ಳೆಯೂ, ಆದ ಜನವು;
ಅವರೆಲ್ಲರು ಕೂಪಗಳಲ್ಲಿ ಸಿಕ್ಕಿ ಕೊಂಡವರು;
ಕೆಡಮನೆಗಳಲ್ಲಿ ಅಡಗಿ ಕೊಂಡಿದ್ದಾರೆ;

ಸೂಕೆಯಾದರು, ತಪ್ಪಿಸುವವನು ಇಲ್ಲ;
ಕೊಳ್ಳೆಯಾದರು, ಹಿಂದಕ್ಕೆ ಕೊಟ್ಟು ಬಿಡೆಂದು
ಹೇಳುವವನು ಇಲ್ಲ.
೨೩ ನಿಮ್ಮಲ್ಲಿ ಯಾರು ಇದಕ್ಕೆ ಕಿವಿ ಕೊಡುವನು!
ಯಾರು ಲಕ್ಷ್ಯವಿಟ್ಟು, ಇನ್ನು ಮೇಲೆ ಕೇಳುವನು!
೨೪ ಯಾಕೋಬನು ಸೂಕೆಯಾಗುವ ಹಾಗೆಯೂ,
ಇಸ್ರಯೇಲನು ಕೊಳ್ಳೆ ಹಿಡಿಯುವವರ ಕೈಗೂ,
ಒಪ್ಪಿಸಿದವನ್ಯಾರು! ಕರ್ತನಲ್ಲವೋ!
ಯಾವನಿಗೆ ವಿರೋಧವಾಗಿ ಪಾಪ ಮಾಡಿದರೋ,
ಯಾವನ ಮಾರ್ಗದಲ್ಲಿ ನಡಿಯಲೊಲ್ಲದೆ,
ಯಾವನ ನ್ಯಾಯಪ್ರಮಾಣವನ್ನು ಕೇಳದೆ ಹೋದರೋ,
ಅವನೇ ಅಲ್ಲವೋ!
೨೫ ಆದದರಿಂದ ಅವನ ಮೇಲೆ ತನ್ನ ಕೋಪದ ಉರಿಯನ್ನೂ,
ಯುದ್ಧದ ಕಾಠಿಣ್ಯವನ್ನೂ, ಹೊಯಿದಿದ್ದಾನೆ.
ಅದು ಅವನ ಸುತ್ತಲು ಹತ್ತಿ ಅದೆ,
ಆದರೆ ಅವನಿಗೆ ತಿಳಿಯಲಿಲ್ಲ;
ಅವನನ್ನು ಸುಟ್ಟು ಬಿಡುತ್ತದೆ,
ಆದರೆ ಅವನು ಮನಸ್ಸಿಗೆ ತಂದು ಕೊಳ್ಳುವದಿಲ್ಲ.

## ೪೩. ಸಂಧಿ.

೧ ಆದರೆ ಈಗ ಯಾಕೋಬೇ! ನಿನ್ನನ್ನು ಸೃಷ್ಟಿಸಿದವನೂ,
ಇಸ್ರಯೇಲೇ! ನಿನ್ನನ್ನು ರೂಪಿಸಿದವನೂ,
ಅಂಜಿರುವ ಕರ್ತನು, ಹೇಳುವದೇನಂದರೆ—
ನೀನು ಭಯ ಪಡ ಬೇಡ,
ಯಾಕಂದರೆ, ನಿನ್ನನ್ನು ವಿಮೋಚಿಸಿದ್ದೇನೆ;
ಹೆಸರಿನಿಂದ ನಿನ್ನನ್ನು ಕರೆದಿದ್ದೇನೆ; ನೀನು ನನ್ನವನೇ.
೨ ನೀನು ನೀರುಗಳನ್ನು ದಾಟಿ ಹೋಗುವಾಗ,
ನಾನೇ ನಿನ್ನ ಸಂಗಡ ಇದ್ದೇನೆ;
ನದಿಗಳನ್ನು ದಾಟುವಾಗ, ಅವು ನಿನ್ನನ್ನು ಮುಣುಗಿಸುವದಿಲ್ಲ;
ಬೆಂಕಿಯಲ್ಲಿ ನಡೆಯುವಾಗ, ನಿನ್ನನ್ನು ಸುಡುವದಿಲ್ಲ;
ಜ್ವಾಲೆ ನಿನ್ನನ್ನು ದಹಿಸುವದಿಲ್ಲ.
೩ ಯಾಕಂದರೆ, ಯೆಹೋವನಾದ ನಾನು ನಿನ್ನ ದೇವರಾಗಿದ್ದೇನೆ,
ಇಸ್ರಯೇಲಿನ ಪರಿಶುದ್ಧನು, ನಿನ್ನನ್ನು ರಕ್ಷಿಸುವನು,
ನಿನ್ನ ಪ್ರಾಯಶ್ಚಿತ್ತಕ್ಕೆ ಐಗುಪ್ತವನ್ನೂ,
ನಿನಗೆ ಬದಲಾಗಿ ಕೂಷನ್ನೂ, ಸೇಬವನ್ನೂ, ಕೊಟ್ಟಿದ್ದೇನೆ.
೪ ನೀನು ನನ್ನ ಕಣ್ಣುಗಳಲ್ಲಿ ಪ್ರಿಯನಾಗಿದ್ದದರಿಂದ,
ನೀನು ಘನವುಳ್ಳವನಾದಿ;
ನಾನು ನಿನ್ನನ್ನು ಪ್ರೀತಿ ಮಾಡುವದರಿಂದ,
ನಿನಗೆ ಬದಲಾಗಿ ಮನುಷ್ಯರನ್ನೂ,
ನಿನ್ನ ಪ್ರಾಣಕ್ಕೆ ಬದಲಾಗಿ ಜನ ಸಮೂಹಗಳನ್ನೂ, ಕೊಡುವೆನು.
೫ ಭಯ ಪಡ ಬೇಡ, ಯಾಕಂದರೆ, ನಾನೇ ನಿನ್ನ ಸಂಗಡ ಇದ್ದೇನೆ;
ಪೂರ್ವ ದಿಕ್ಕಿನಿಂದ ನಿನ್ನ ಸಂತತಿಯನ್ನು ತರುವೆನು;
ಪಶ್ಚಿಮದಿಂದ ನಿನ್ನನ್ನು ಕೂಡಿಸುವೆನು.
೬ ಉತ್ತರಕ್ಕೆ—ಕೊಟ್ಟು ಬಿಡು!
ದಕ್ಷಿಣಕ್ಕೆ—ಹಿಡಿಯದಿರು!
ದೂರದಿಂದ ನನ್ನ ಕುಮಾರರನ್ನೂ,
ಭೂಮಿಯ ಅಂತ್ಯದಿಂದ ನನ್ನ ಕುಮಾರ್ತೆಗಳನ್ನೂ,
ತೆಗೆದು ಕೊಂಡು ಬಾ, ಅನ್ನುವೆನು.
೭ ನನ್ನ ಹೆಸರಿನಿಂದ ಕರೆಯಲ್ಪಟ್ಟವರನ್ನೇ;
ಯಾಕಂದರೆ, ಅವರನ್ನು ನನ್ನ ಘನಕ್ಕಾಗಿ ಸೃಷ್ಟಿಸಿದ್ದೇನೆ,
ರೂಪಿಸಿದ್ದೇನೆ, ಹೌದು, ಮಾಡಿದ್ದೇನೆ.

೮ ಕಣ್ಣುಗಳುಂಟಾಗಿ ಕುರುಡರಾದ,
ಕಿವಿಗಳುಂಟಾಗಿ ಕಿವುಡರಾದ ಜನರನ್ನು ಹೊರಗೆ ಬರ ಮಾಡು;
೯ ಜನಾಂಗಗಳೆಲ್ಲಾ ಕೂಡಿ ಕೊಳ್ಳಲಿ;
ಜನಸಮೂಹಗಳು ಕೀರಿ ಬರಲಿ;
ಅವರಲ್ಲಿ ಯಾರು ಇದನ್ನು ತಿಳಿಸುವನು!
ಹಿಂದಿನವುಗಳನ್ನು ನಮಗೆ ಕೇಳಿಗೊಡುವವನ್ಯಾರು!
ಕೇಳುವವರು—ಸತ್ಯ! ಎಂದನ್ನುವ ಹಾಗೆ,
ಅವರು ತಮ್ಮ ಸಾಕ್ಷಿಯವರನ್ನು ನಿಲ್ಲಿಸಿ,
ತಮ್ಮ ನೀತಿಯನ್ನು ಸ್ಥಾಪಿಸಲಿ.
೧೦ ನೀವು ನನ್ನ ಸಾಕ್ಷಿಯವರಾಗಿದ್ದೀರಿ,
ಮತ್ತು ನಾನು ಆದು ಕೊಂಡ ನನ್ನ ಸೇವಕನು;
ನಾನೇ ಅವನೆಂದು ನೀವು ತಿಳಿದು,
ನನ್ನನ್ನು ಗ್ರಹಿಸಿ ನಂಬುವದಕ್ಕಾಗಿಯೇ;
ನನಗೆ ಮುಂಚೆ ದೇವರು ರೂಪಿಸಲ್ಪಟಲಿಲ್ಲ;
ನನ್ನ ತರುವಾಯ ಒಬ್ಬನೂ ಇರಲಿಕ್ಕಿಲ್ಲ.
೧೧ ನಾನೇ, ನಾನೇ, ಯೆಹೋವನಾಗಿದ್ದೇನೆ;
ನಾನಲ್ಲದೆ ರಕ್ಷಿಸುವವನು ಇಲ್ಲ.
೧೨ ನಿಮ್ಮಲ್ಲಿ ಅನ್ಯ ದೇವರು ಇಲ್ಲದಿರುವಾಗಲೇ,
ನಾನೇ ತಿಳಿಸಿದ್ದೇನೆ; ರಕ್ಷಿಸಿದ್ದೇನೆ, ಕೇಳ ಕೊಟ್ಟಿದ್ದೇನೆ;
ನಾನೇ ದೇವರೆಂದು,
ನೀವೇ ನನ್ನ ಸಾಕ್ಷಿಯವರಂತ ಕರ್ತನು ಹೇಳುತ್ತಾನೆ.
೧೩ ಅಂದಿನಿಂದಲೇ ನಾನಿದ್ದೇನೆ,
ನನ್ನ ಕೈಯೊಳಗಿಂದ ತಪ್ಪಿಸುವವನು ಯಾರು ಇಲ್ಲ;
ನಾನು ಕಾರ್ಯ ನಡಿಸುತ್ತೇನೆ, ಅಡ್ಡಿ ಮಾಡುವವನ್ಯಾರು!

೧೪ ನಿಮ್ಮ ರಕ್ಷಕನಾದ ಇಸ್ರಯೇಲಿನ ಪರಿಶುದ್ಧನಾದ
ಕರ್ತನು, ಹೇಳುವದೇನಂದರೆ—
ನಿಮ್ಮ ನಿಮಿತ್ತ ಬಾಬೆಲಿಗೆ ಕಳುಹಿಸಿ,
ರಾಜ್ಯಭಾರ ಮಾಡಿದವರೆಲ್ಲರನ್ನೂ,
ಹಡಗಗಳಲ್ಲಿ ಆರ್ಭಟಿಸುವ ಕಸ್ದೀಯರನ್ನೂ,
ತಗ್ಗಿಸಿದೆನು.
೧೫ ಯೆಹೋವನಾದ ನಾನೇ; ನಿಮ್ಮ ಪರಿಶುದ್ಧನು,
ಇಸ್ರಯೇಲಿನ ಸೃಷ್ಟಿ ಕರ್ತನು,
ನಿಮ್ಮ ಅರಸನು, ಅಗಿದ್ದೇನೆ.
೧೬ ಯೆಹೋವನು ಹೇಳುವದೇನಂದರೆ—
ಸಮುದ್ರದಲ್ಲಿ ಮಾರ್ಗವನ್ನೂ,
ಬಲವುಳ್ಳ ನೀರುಗಳಲ್ಲಿ ಹಾದಿಯನ್ನೂ, ಮಾಡಿದವನೇ;
೧೭ ರಥಗಳನ್ನೂ ಕುದುರೆಗಳನ್ನೂ,
ದಂಡನ್ನೂ ಪರಾಕ್ರಮವುಳ್ಳವರನ್ನೂ, ಹೊರಗೆ ತಂದವನೇ;



ಅವರು ತಿರಿಗಿ ಏಳದೆ ಏಕವಾಗಿ ಬಿದ್ದರು,
ಅಲ್ಲಾಡಾದರು, ಬತ್ತಿಯ ಹಾಗೆ ಆರಿ ಹೋದರು, ಅಲ್ಲವೋ!
೧೮ ಮುಂಚಿನವುಗಳನ್ನು ಜ್ಞಾಪಕ ಮಾಡ ಬೇಡಿರಿ,
ಪೂರ್ವದವುಗಳನ್ನು ಯೋಚಿಸ ಬೇಡಿರಿ.
೧೯ ಇಗೋ, ಹೊಸದನ್ನು ಮಾಡುತ್ತೇನೆ;
ಈಗಲೇ ಹುಟ್ಟುವದು,
ಅದನ್ನು ನೀವು ಗ್ರಹಿಸುವದಿಲ್ಲವೋ!
ನಿಶ್ಚಯವಾಗಿ ಅರಣ್ಯದಲ್ಲಿ ಮಾರ್ಗವನ್ನೂ,
ಕಾಡಿನಲ್ಲಿ ನದಿಗಳನ್ನೂ, ಉಂಟು ಮಾಡುವೆನು.
೨೦ ಬೈಲಿನ ಮೃಗಗಳೂ, ನರಿಗಳೂ,
ಉಷ್ಟ್ರಪಕ್ಷಿಗಳೂ, ನನ್ನನ್ನು ಘನ ಪಡಿಸುವವು,
ಯಾಕಂದರೆ, ನನ್ನ ಜನರಿಗೂ, ನಾನು ಆದು ಕೊಂಡವರಿಗೂ,
ಕುಡಿಯ ಕೊಡುವ ಹಾಗೆ,
ಅರಣ್ಯದಲ್ಲಿ ನೀರನ್ನೂ,
ಕಾಡಿನಲ್ಲಿ ನದಿಗಳನ್ನೂ, ಇರಿಸುವೆನು.
೨೧ ಈ ಜನರನ್ನು ನನಗೋಸ್ಕರ ರೂಪಿಸಿದ್ದೇನೆ,
ನನ್ನ ಸ್ತೋತ್ರವನ್ನು ಸಾರುವರು.

೨೨ ಆದರೆ ಯಾಕೋಬೇ! ನೀನು ನನ್ನನ್ನು ಸ್ತುತಿಸಲಿಲ್ಲ,
ಇಸ್ರಯೇಲೇ! ನನ್ನ ವಿಷಯ ಆಯಾಸ ಪಟ್ಟಿದ್ದೀ,
೨೩ ನಿನ್ನ ಹೋಮದ ಕುರಿಮರಿಗಳನ್ನು ನನಗೆ ತರಲಿಲ್ಲ.
ನಿನ್ನ ಬಲಿಗಳಿಂದ ನನ್ನನ್ನು ಸನ್ಮಾನಿಸಲಿಲ್ಲ;
ನಾನು ಅರ್ಪಣೆಗಳಿಂದ ನಿನಗೆ ಕಷ್ಟ ಕೊಡಲಿಲ್ಲ;
ಧೂಪದಿಂದ ನಿನ್ನನ್ನು ಆಯಾಸ ಪಡಿಸಲಿಲ್ಲ.
೨೪ ನೀನು ಹಣದಿಂದ ನನಗೋಸ್ಕರ ಗಂಧಕಾಷ್ಠವನ್ನು ತಕ್ಕೊಳ್ಳಲಿಲ್ಲ;
ನಿನ್ನ ಬಲಿಗಳ ಕೊಬ್ಬಿನಿಂದ ನನ್ನನ್ನು ತೃಪ್ತಿ ಪಡಿಸಲಿಲ್ಲ;
ನಿನ್ನ ಪಾಪಗಳಿಂದ ಮಾತ್ರ ನನಗೆ ಕಷ್ಟ ಕೊಟ್ಟಿದ್ದೀ,
ನಿನ್ನ ಅಕ್ರಮಗಳಿಂದ ನನ್ನನ್ನು ಆಯಾಸ ಪಡಿಸಿದ್ದೀ.
೨೫ ನಾನೇ, ನಾನೇ, ನನ್ನ ನಿಮಿತ್ತ,
ನಿನ್ನ ದ್ರೋಹಗಳನ್ನು ಅಳಿಸಿ ಬಿಡುವವನಾಗಿದ್ದೇನೆ,
ಮತ್ತು ನಿನ್ನ ಪಾಪಗಳನ್ನು ಜ್ಞಾಪಕ ಮಾಡುವದಿಲ್ಲ.
೨೬ ನನ್ನನ್ನು ಜ್ಞಾಪಕ ಪಡಿಸು;
ನಾವು ಕೂಡ ನ್ಯಾಯ ತೀರಿಸೋಣ,
ನೀನು ನೀತಿವಂತನಾಗುವ ಹಾಗೆ ನೀನೇ ತಿಳಿಯ ಮಾಡು.
೨೭ ನಿನ್ನ ಆದಿ ತಂದೆ ಪಾಪ ಮಾಡಿದ್ದಾನೆ,
ನಿನ್ನ ನ್ಯಾಯ ಶಾಸ್ತ್ರಿಗಳು ನನಗೆ ವಿರೋಧವಾಗಿ ದ್ರೋಹ ಮಾಡಿದ್ದಾರೆ.
೨೮ ಆದದರಿಂದ ನಾನು ಪರಿಶುದ್ಧ ಸ್ಥಾನದ ಪ್ರಧಾನರನ್ನು ಅಪವಿತ್ರ ಮಾಡಿ,
ಯಾಕೋಬನ್ನು ಶಾಪಕ್ಕೂ,
ಇಸ್ರಯೇಲನ್ನು ದೂಷಣೆಗಳಿಗೂ, ಕೊಟ್ಟು ಬಿಟ್ಟಿದ್ದೇನೆ.

## ೪೪. ಸಂಧಿ.

೧ ಆದರೆ ಈಗ ನನ್ನ ಸೇವಕನಾದ ಯಾಕೋಬೇ!
ನಾನು ಆದು ಕೊಂಡ ಇಸ್ರಯೇಲೇ! ಕೇಳು.
೨ ನಿನ್ನನ್ನು ಉಂಟು ಮಾಡಿದವನು,
ನಿನ್ನನ್ನು ರೂಪಿಸಿ, ನಿನಗೆ ಸಹಾಯ ಮಾಡುವವನಾದ ಕರ್ತನು,
ಹೀಗೆ ಹೇಳುತ್ತಾನೆ—
ನನ್ನ ಸೇವಕನಾದ ಯಾಕೋಬೇ!
ನಾನು ಆದು ಕೊಂಡ ಯೆಶೂರುನೇ!
ಭಯ ಪಡ ಬೇಡ.
೩ ಯಾಕಂದರೆ, ನಾನು ನೀರಡಿಕೆಯುಳ್ಳ ಭೂಮಿಯ ಮೇಲೆ ನೀರನ್ನೂ,
ಒಣಗಿದ ನೆಲದ ಮೇಲೆ ಹಳ್ಳಗಳನ್ನೂ, ಹೊಯ್ಯುತ್ತೇನೆ;
ನನ್ನ ಆತ್ಮವನ್ನು ನಿನ್ನ ಸಂತಾನದ ಮೇಲೆಯೂ,
ನನ್ನ ಆಶೀರ್ವಾದವನ್ನು ನಿನ್ನಿಂದ ಹುಟ್ಟುವಂಥಾದರ ಮೇಲೆಯೂ ಹೊಯ್ಯುವೆನು.
೪ ಅಗಲವರು ಹುಲ್ಲಿನ ನಡುವೆ ಆದ ಹಾಗೆಯೂ,
ನೀರಿನ ಹೊಳೆಗಳ ಹತ್ತರ ನೀರವಂಜಿ ಮರಗಳ ಹಾಗೆಯೂ,
ಚಿಗುರುವರು.
೫ ಒಬ್ಬನು, ನಾನು ಕರ್ತನವನೆಂದು ಅನ್ನುವನು;
ಇನ್ನೊಬ್ಬನು, ಯಾಕೋಬನ ಹೆಸರನ್ನು ತೆಗೆದು ಕೊಳ್ಳುವನು;
ಮತ್ತೊಬ್ಬನು, ತನ್ನ ಕೈಯಿಂದ ಕರ್ತನಿಗೆ ರುಜು ಹಾಕಿ ಕೊಳ್ಳುವನು;
ಇಸ್ರಯೇಲಿನ ನಾಮವನ್ನು ಕುರಿತು ಘನವಾಗಿ ಮಾತಾಡುವನು.

೬ ಇಸ್ರಯೇಲಿನ ಅರಸನಾದ ಯೆಹೋವನು,
ಅವನ ವಿಮೋಚಕನಾದ ಸೈನ್ಯಗಳ ಯೆಹೋವನು,
ಹೇಳುವದೇನಂದರೆ—
ನಾನೇ ಮೊದಲನೆಯವನು; ನಾನೇ ಕಡೆಯವನು;
ನಾನಲ್ಲದೆ ದೇವರು ಇಲ್ಲ.
೭ ನಾನು ಪೂರ್ವದ ಜನರನ್ನು ಇಟ್ಟಿಂದಿನಿಂದ,
ನನ್ನ ಹಾಗೆ ಕರೆದು, ಅದನ್ನು ತಿಳಿಸಿ,
ನನಗೆ ಸಿದ್ಧ ಮಾಡಿದವನು ಯಾರು!
ಮುಂದಿನವುಗಳನ್ನೂ, ಬರ ಬೇಕಾದದ್ದನ್ನೂ ಅವರು ಅವರಿಗೆ ತಿಳಿಸಲಿ.
೮ ಹೆದರ ಬೇಡ, ಅಂಜ ಬೇಡ;
ನಾನು ಆಗಿನಿಂದಲೇ ನಿಮಗೆ ಅದನ್ನು ಕೇಳಿ ಕೊಟ್ಟು, ತಿಳಿಸಲಿಲ್ಲವೋ!
ನೀವೇ ನನ್ನ ಸಾಕ್ಷಿಯವರಾಗಿದ್ದೀರಿ,
ನಾನಲ್ಲದೆ ದೇವರುಂಟೇ!
ನಿಶ್ಚಯವಾಗಿ ಇನ್ನೊಂದು ಬಂಡೆ ಇಲ್ಲ;
ಇನ್ನೊಂದು ನಾನರಿಯೇ.

೯ ವಿಗ್ರಹವನ್ನು ರೂಪಿಸುವವರೆಲ್ಲರು ವ್ಯರ್ಥವೇ;
ಅವರು ಮೆಚ್ಚಿದವುಗಳು ನಿಷ್ಪ್ರಯೋಜನವೇ;
ಅವರು ನಾಚಿಕೆ ಪಡುವ ಹಾಗೆ, ಅವು ತಾವೇ ಸಾಕ್ಷಿಗಳಾಗಿವೆ;
ಅವು ನೋಡುವದಾದರೂ ತಿಳಿಯುವದಾದರೂ ಇಲ್ಲ.
೧೦ ದೇವರನ್ನು ರೂಪಿಸಿದವನ್ಯಾರು!
ಪ್ರಯೋಜನವಿಲ್ಲದ ವಿಗ್ರಹವನ್ನು ಎರಕ ಹೊಯಿದವನ್ಯಾರು!

೧೧ ಇಗೋ, ಅವನ ಸಂಗಡಿಗರೆಲ್ಲಾ ನಾಚಿಕೆ ಪಡುವರು;
ಕೆಲಸದವರು ತಾವೇ ಮನುಷ್ಯ ಜಾತಿಯವರೇ;
ಅವರೆಲ್ಲಾ ಕೂಡಿ ಕೊಳ್ಳಲಿ, ನಿಂತು ಕೊಳ್ಳಲಿ;
ಅವರು ಹೆದರಿ, ಕೂಡ ನಾಚಿಕೆ ಪಡುವರು.
೧೨ ಕಬ್ಬಿಣ ಕೆಲಸದವನು ಕೊಡ್ಲಿಯನ್ನು ಸಿದ್ಧ ಮಾಡುತ್ತಾನೆ;
ಇದ್ದಿಲಿಯಲ್ಲಿ ಕೆಲಸ ಮಾಡುತ್ತಾನೆ;
ಸುತ್ತಿಗೆಗಳಿಂದ ಅದನ್ನು ರೂಪಿಸುತ್ತಾನೆ;
ತನ್ನ ಬಲವಾದ ತೋಳಿನಿಂದ ಅದನ್ನು ಉಂಟು ಮಾಡುತ್ತಾನೆ;
ಅವನು ಹಸಿದು ಬಲಹೀನನಾಗುತ್ತಾನೆ;
ನೀರು ಕುಡಿಯದೆ ದಣಿಯುತ್ತಾನೆ.
೧೩ ಮರ ಕೆಲಸದವನು ನೂಲು ಹಿಡಿಯುತ್ತಾನೆ;
ಚೇರಣದಿಂದ ಅದನ್ನು ಗೀಚುತ್ತಾನೆ;
ಉಳಿಗಳಿಂದ ಸರಿ ಮಾಡುತ್ತಾನೆ;
ಕೈವಾರದಿಂದ ಗುರುತು ಹಾಕುತ್ತಾನೆ;
ಅವನು ಅದನ್ನು ಪುರುಷನ ರೂಪದ ಹಾಗೆ,
ಮನುಷ್ಯನ ಸಾಂದರ್ಯದ ಪ್ರಕಾರ,
ಮನೆಯಲ್ಲಿ ವಾಸಿಸ ತಕ್ಕ ಹಾಗೆ, ಮಾಡುತ್ತಾನೆ.
೧೪ ಅವನು ತನಗೋಸ್ಕರ ದೇವದಾರುಗಳನ್ನು ಕಡಿಯುತ್ತಾನೆ;
ಸುರಗಿ ಮರವನ್ನೂ, ವೃಕ್ಷರಾಜವನ್ನೂ, ತಕ್ಕೊಳ್ಳುತ್ತಾನೆ;
ಅಡವಿಯ ಮರಗಳಲ್ಲಿ ತನಗೆ ಬಲವಾದದ್ದನ್ನು ತೆಗೆಯುತ್ತಾನೆ,
ಅಕೋಕ ಮರವನ್ನು ನೆಡುತ್ತಾನೆ, ಮಳೆ ಅದನ್ನು ಬೆಳೆಸುತ್ತದೆ.
೧೫ ಆಗಲದು ಮನುಷ್ಯನಿಗೋಸ್ಕರ ಸಾವೆಯಾಗುವದು,
ಅದರಿಂದ ತಕ್ಕೊಂಡು ಚಳಿ ಕಾಸಿ ಕೊಳ್ಳುವನು.
ಹೌದು, ಬೆಂಕಿ ಹಚ್ಚಿ, ಕೊಟ್ಟಿ ಸುಡುವನು;
ಹೌದು, ದೇವರನ್ನು ಉಂಟು ಮಾಡಿ, ಅದಕ್ಕೆ ನಮಸ್ಕರಿಸುವನು;
ಅದನ್ನು ವಿಗ್ರಹವನ್ನು ಮಾಡಿ, ಅದಕ್ಕೆ ಅಡ್ಡ ಬೀಳುವನು.
೧೬ ಒಂದು ಪಾಲು ಬೆಂಕಿಯಲ್ಲಿ ಸುಡುವನು;
ಇನ್ನೊಂದು ಪಾಲಿನಿಂದ ಮಾಂಸವನ್ನು ಉಣ್ಣುವನು;
ಹುರಿಯುವದನ್ನು ಹುರಿದು, ತೃಪ್ತಿಯಾಗುವನು;
ಹೌದು, ಚಳಿ ಕಾಸಿ ಕೊಂಡು,
ಆಹ! ಬೆಚ್ಚಗಾಯಿತು, ಬೆಂಕಿಯನ್ನು ಕಂಡಿದ್ದೇನೆಂದು ಅನ್ನುವನು.
೧೭ ಮತ್ತು, ಅದರಲ್ಲಿ ಮಿಕ್ಕದ್ದನ್ನು ದೇವರಾಗಿಯೂ,
ತನ್ನ ವಿಗ್ರಹವಾಗಿಯೂ ಮಾಡಿ,
ಅದಕ್ಕೆ ಅಡ್ಡಬಿದ್ದು, ನಮಸ್ಕರಿಸಿ, ಪ್ರಾರ್ಥನೆ ಮಾಡಿ,
ನನ್ನನ್ನು ರಕ್ಷಿಸು, ಯಾಕಂದರೆ, ನೀನೇ ನನ್ನ ದೇವರು,
ಎಂದು ಹೇಳುವನು.
೧೮ ಅವರಿಗೆ ತಿಳಿಯುವದಿಲ್ಲ, ಅವರು ಗ್ರಹಿಸುವದಿಲ್ಲ;
ಯಾಕಂದರೆ, ಅವರ ಕಣ್ಣುಗಳು ನೋಡ ಕೂಡದ ಹಾಗೆ,
ಅವರ ಹೃದಯಗಳು ಗ್ರಹಿಸ ಕೂಡದ ಹಾಗೆ,
ಮುಚ್ಚಲ್ಪಟ್ಟಿವೆ.
೧೯ ಒಬ್ಬನಾದರೂ ಹೃದಯದಲ್ಲಿ ಯೋಚಿಸುವದಿಲ್ಲ;
ಅದರಲ್ಲಿ ಒಂದು ಪಾಲು ಬೆಂಕಿಯಲ್ಲಿ ಸುಟ್ಟೆನು;
ಹೌದು, ಅದರ ಇದ್ದಿಲಿಗಳ ಮೇಲೆ ಕೊಟ್ಟಿಯನ್ನು ಸುಟ್ಟೆನು;
ಮಾಂಸವನ್ನು ಹುರಿದು ಉಂಡೆನು;
ಮತ್ತು ಅದರಲ್ಲಿ ಮಿಕ್ಕದ್ದನ್ನು ಅಸಹ್ಯಕರವಾದದ್ದನ್ನು ಮಾಡಬಹುದೋ!
ಮರದ ಪೊದ್ದಿಗೆ ಅಡ್ಡ ಬೀಳ ಬಹುದೋ!
ಎಂದು ಹೇಳುವ ಹಾಗೆ ಒಬ್ಬರಿಗೂ ಬುದ್ಧಿಯು ಇಲ್ಲ, ವಿವೇಕವು ಇಲ್ಲ.
೨೦ ಬೂದಿಯನ್ನು ತಿನ್ನುತ್ತಾನೆ;
ಮೋಸವಾದ ಹೃದಯವು ಅವನನ್ನು ವಾಕೆಯಾಗ ಮಾಡಿತು;
ಆದರಿಂದ ಅವನು ತನ್ನ ಪ್ರಾಣವನ್ನು ತಪ್ಪಿಸಿ ಕೊಳ್ಳಲಾರದು ಇಲ್ಲ;
ನನ್ನ ಬಲಗೈಯಲ್ಲಿ ಸುಳ್ಳು ಇದೆ ಅಲ್ಲವೋ! ಎಂದನ್ನುವದು ಇಲ್ಲ.

೨೧ ಇವುಗಳನ್ನು ಜ್ಞಾಪಕ ಮಾಡು ಯಾಕೋಬೇ!
ಇಸ್ರಯೇಲೇ! ಯಾಕಂದರೆ ನೀನು ನನ್ನ ಸೇವಕನು;
ನಿನ್ನನ್ನು ರೂಪಿಸಿದ್ದೇನೆ, ನೀನು ನನ್ನ ಸೇವಕನಾಗಿದ್ದೀ;
ಇಸ್ರಯೇಲೇ! ನೀನು ನನ್ನಿಂದ ಮರೆಯಲ್ಪಡುವದಿಲ್ಲ.
೨೨ ನಿನ್ನ ದ್ರೋಹಗಳನ್ನು ಮೇಘದಂತೆಯೂ,
ನಿನ್ನ ಪಾಪಗಳನ್ನು ಮೋಡದಂತೆಯೂ, ಅಳಿಸಿ ಬಿಟ್ಟಿದ್ದೇನೆ;
ನನ್ನ ಬಳಿಗೆ ಶಿರುಗು, ಯಾಕಂದರೆ ನಿನ್ನನ್ನು ವಿಮೋಚಿಸಿದ್ದೇನೆ.
೨೩ ಆಕಾಶಗಳೇ! ಹರ್ಷಿಸಿರಿ; ಯಾಕಂದರೆ, ಕರ್ತನು ಅದನ್ನು ಮಾಡಿದ್ದಾನೆ;
ಭೂಮಿಯ ಅಗಾಧಗಳೇ! ಉಲ್ಲಾಸ ಪಡಿರಿ;
ಪರ್ವತಗಳೇ! ಅಡವಿಯೇ! ಅದರಲ್ಲಿರುವ ಎಲ್ಲಾ ಮರಗಳೇ!
ಉತ್ಸಾಹ ಧ್ವನಿ ಎತ್ತಿರಿ;
ಯಾಕಂದರೆ, ಕರ್ತನು ಯಾಕೋಬನ್ನು ವಿಮೋಚಿಸಿದ್ದಾನೆ;
ಇಸ್ರಯೇಲಿನಲ್ಲಿ ತನ್ನನ್ನು ಮಹಿಮೆ ಪಡಿಸಿದ್ದಾನೆ.
೨೪ ನಿನ್ನ ವಿಮೋಚಕನಾದ ಯೆಹೋವನು,
ಗರ್ಭದಿಂದ ನಿನ್ನನ್ನು ರೂಪಿಸಿದವನು, ಹೇಳುವದೇನಂದರೆ—
ನಾನೇ ಕರ್ತನು;
ಎಲ್ಲವನ್ನು ಮಾಡುವವನು;
ಒಬ್ಬನೇ ಆಕಾಶವನ್ನು ಹಾಸಿದವನೂ;
ಭೂಮಿಯನ್ನು ನನ್ನಿಂದ ನಾನೇ ವಿಸ್ತರಿಸಿದವನೂ;
೨೫ ಸುಳ್ಳುಗಾರರ ಗುರುತುಗಳನ್ನು ನಿರರ್ಥಕ ಮಾಡುವವನೂ;
ಕಕುಣಜ್ಞರನ್ನು ಹುಚ್ಚರೆಂದು ತೋರಿಸುವವನೂ;
ಜ್ಞಾನಿಗಳನ್ನು ಹಿಂದಿರುಗಿಸುವವನೂ;
ಅವರ ತಿಳುವಿಕೆಯನ್ನು ಬುದ್ಧಿಹೀನನಾಗ ಮಾಡುವವನೂ;
೨೬ ತನ್ನ ಸೇವಕನ ವಾಕ್ಯವನ್ನು ಸ್ಥಾಪಿಸುವವನೂ;
ತನ್ನ ದೂತರ ಆಲೋಚನೆಯನ್ನು ಪೂರೈಸುವವನೂ;
ಯೆರೂಸಲೇಮಿಗೆ—ನಿವಾಸವಾಗುವಿ;
ಯೆಹೂದದ ಪಟ್ಟಣಗಳಿಗೆ—ಕಟ್ಟಲ್ಪಡುವಿರಿ;
ಮತ್ತು ಅದರ ಹಾಳು ಸ್ಥಳಗಳನ್ನು ನೆಟ್ಟಗೆ ಮಾಡುತ್ತೇನೆಂದು ಅನ್ನುವವನೂ;
೨೭ ಅಗಾಧಕ್ಕೆ—ಒಣಗಿ ಹೋಗು,
ಮತ್ತು, ನಿನ್ನ ನದಿಗಳನ್ನು ಬತ್ತ ಮಾಡುತ್ತೇನೆಂದು ಅನ್ನುವವನೂ;



೨೮ ಕೋರೆಷನಿಗೆ—ನನ್ನ ಕುರುಬನು;
ಅವನು ನಾನು ಮೆಚ್ಚಿದ್ದನ್ನೆಲ್ಲಾ ಪೂರೈಸುವನೆಂದೂ;
ಯೆರೂಸಲೇಮಿಗೆ—ಕಟ್ಟಲ್ಪಡುವಿ;
ದೇವಾಲಯಕ್ಕೆ—ನಿನ್ನ ಅಸ್ತಿವಾರ ಹಾಕಲ್ಪಡುವದು, ಎಂದೂ,
ಅನ್ನುವವನೂ, ನಾನೇ.

## ೪೫. ಸಂಧಿ.

೧ ಕರ್ತನು, ತನ್ನ ಅಭಿಷಿಕ್ತನಾದ ಕೋರೆಷನಿಗೆ,
ಯಾವನ ಕೈಯನ್ನು ಹಿಡಿದು,
ಯಾವನ ಮುಂದೆ ಜನಾಂಗಗಳನ್ನು ಕೆಡವಿ ಬಿಟ್ಟು,
ಅರಸುಗಳ ನಡುವುಗಳನ್ನು ಬಿಚ್ಚಿ,
ಯಾವನ ಮುಂದೆ ಎರಡು ಕದಗಳುಳ್ಳ ಬಾಗಲುಗಳನ್ನು ತೆಕೆಯುತ್ತೇನೋ,
ಯಾವನ ಮುಂದೆ ದ್ವಾರಗಳು ಮುಚ್ಚಲ್ಪಡದೋ,
ಅವನಿಗೆ ಹೇಳುವದೇನಂದರೆ—
೨ ನಾನು ನಿನ್ನ ಮುಂದೆ ನಡೆದು,
ಉಬ್ಬಿದ ಸ್ಥಳಗಳನ್ನು ಸಮ ಮಾಡುತ್ತೇನೆ;
ಹಿತ್ತಾಳೆಯ ಬಾಗಲುಗಳನ್ನು ಮುರಿದು ಬಿಡುತ್ತೇನೆ;
ಕಬ್ಬಿಣದ ಅಗುಳಿಗಳನ್ನು ಕಡಿದು ಬಿಡುತ್ತೇನೆ.
೩ ನಿನ್ನನ್ನು ಹೆಸರಿನಿಂದ ಕರೆಯುವ ಯೆಹೋವನಾದ ನಾನೇ,
ಇಸ್ರಯೇಲಿನ ದೇವರಾಗಿದ್ದೇನೆಂದು,
ನೀನು ತಿಳುಕೊಳ್ಳುವ ಹಾಗೆ,
ನಿನಗೆ ಅಂಧಕಾರದ ಭಂಡಾರಗಳನ್ನೂ,
ಅಡಗಿದ ಸ್ಥಳಗಳ ನಿಕ್ಷೇಪಗಳನ್ನೂ ಕೊಡುತ್ತೇನೆ.
೪ ನನ್ನ ಸೇವಕನಾದ ಯಾಕೋಬಿಗೋಸ್ಕರವೂ,
ನಾನು ಆದು ಕೊಂಡ ಇಸ್ರಯೇಲಿಗೋಸ್ಕರವೂ,
ನಿನ್ನನ್ನು ಹೆಸರಿನಿಂದ ಕರೆದೆನು;
ನಿನ್ನನ್ನು ಕುರಿತು ಘನವಾಗಿ ಮಾತಾಡಿದೆನು;
ಆದರೆ ನೀನು ನನ್ನನ್ನು ತಿಳಿಯಲಿಲ್ಲ.
೫ ನಾನೇ ಯೆಹೋವ, ಮತ್ತೊಬ್ಬನಿಲ್ಲ;
ನಾನಲ್ಲದೆ ದೇವರಿಲ್ಲ;
ನಿನ್ನ ನಡುವನ್ನು ಕಟ್ಟಿದೆನು,
ಆದರೆ ನೀನು ನನ್ನನ್ನು ತಿಳಿಯಲಿಲ್ಲ.
೬ ಹೀಗೆ ಸೂರ್ಯೋದಯದಲ್ಲಿಯೂ, ಅಸ್ತಮಾನದಲ್ಲಿಯೂ,
ಮನುಷ್ಯರು ತಿಳುಕೊಳ್ಳ ತಕ್ಕದ್ದೇನಂದರೆ—
ನಾನಲ್ಲದೆ ಇನ್ನಾರು ಇಲ್ಲ;
ನಾನೇ ಯೆಹೋವ, ಮತ್ತೊಬ್ಬನು ಇಲ್ಲ.
೭ ಬೆಳಕನ್ನು ರೂಪಿಸುವವನೂ, ಕತ್ತಲೆಯನ್ನು ನಿರ್ಮಿಸುವವನೂ,
ಸಮಾಧಾನವನ್ನು ಮಾಡುವವನೂ, ಕೆಟ್ಟದ್ದನ್ನು ನಿರ್ಮಿಸುವವನೂ,
ಯೆಹೋವನಾದ ನಾನೇ ಇವುಗಳನ್ನೆಲ್ಲಾ ಮಾಡುತ್ತೇನೆ.
೮ ಆಕಾಶಗಳೇ! ಮೇಲಿನಿಂದ ಹನಿ ಬೀಳಿಸಿರಿ,
ಮೇಘಗಳು ನೀತಿಯನ್ನು ಸುರಿಯಲಿ;
ಭೂಮಿಯು ತೆರೆದು ಕೊಳ್ಳಲಿ;
ರಕ್ಷಣೆಯನ್ನು ಹುಟ್ಟಿಸಲಿ, ನೀತಿಯನ್ನು ಕೂಡ ಕೊಳ್ಳಿಸಲಿ;
ಯೆಹೋವನಾದ ನಾನೇ ಅದನ್ನು ನಿರ್ಮಿಸಿದ್ದೇನೆ.
೯ ತನ್ನನ್ನು ರೂಪಿಸಿದವನ ಸಂಗಡ ತರ್ಕ ಮಾಡುವವನಿಗೆ ಅಯ್ಯೋ!
ಬೋಕಿಯು ಭೂಮಿಯ ಬೋಕಿಗಳ ಸಂಗಡ ತರ್ಕಿಸಲಿ;
ಮಣ್ಣು ಕುಂಬಾರನಿಗೆ—ನೀನು ಏನು ಮಾಡುತ್ತೀ? ಎಂದೂ,
ನಿನ್ನ ಕೆಲಸವು—ಅವನಿಗೆ ಕೈಗಳಿಲ್ಲವೆಂದೂ, ಹೇಳುವದುಂಟೇ!
೧೦ ತಂದೆಗೆ ಏನು ಹುಟ್ಟಿಸುತ್ತೀ? ಎಂದೂ,
ಹೆಂಗಸಿಗೆ ಏನು ಹೆರುತ್ತೀ! ಎಂದೂ,
ಹೇಳುವವನಿಗೆ ಅಯ್ಯೋ!
೧೧ ಇಸ್ರಯೇಲಿನ ಪರಿಶುದ್ಧನೂ, ಅದನ್ನು ರೂಪಿಸಿದವನೂ,
ಆಗುವ ಕರ್ತನು ಹೇಳುವದೇನಂದರೆ—
ಮುಂದಿನವುಗಳ ವಿಷಯ ನನ್ನನ್ನು ಕೇಳುತ್ತೀರಾ!
ನನ್ನ ಮಕ್ಕಳ ವಿಷಯವೂ ನನ್ನ ಕೈ ಕೆಲಸದ ವಿಷಯವೂ,
ನನಗೆ ಅಪ್ಪಣೆ ಕೊಡುತ್ತೀರಾ!
೧೨ ನಾನೇ ಭೂಮಿಯನ್ನು ಉಂಟು ಮಾಡಿದೆನು,
ಅದರ ಮೇಲೆ ಮನುಷ್ಯನನ್ನು ನಿರ್ಮಿಸಿದೆನು.
ನಾನೇ, ನನ್ನ ಕೈಗಳೇ, ಆಕಾಶವನ್ನು ಹಾಸಿದವು,
ಅದರ ಸೈನ್ಯಕ್ಕೆಲ್ಲಾ ಅಪ್ಪಣೆ ಕೊಟ್ಟೆನು.
೧೩ ನಾನೇ ಅವನನ್ನು ನೀತಿಯಲ್ಲಿ ಎಬ್ಬಿಸಿದ್ದೇನೆ,
ಅವನ ಮಾರ್ಗಗಳನ್ನೆಲ್ಲಾ ನೆಟ್ಟಗೆ ಮಾಡುತ್ತೇನೆ.
ಅವನು ನನ್ನ ಪಟ್ಟಣವನ್ನು ಕಟ್ಟುವನು,
ನನ್ನ ಕೆಕೆಯವರನ್ನು ಕಳುಹಿಸಿ ಬಿಡುವನು;
ಕ್ರಯಕ್ಕಲ್ಲ, ಬಹುಮಾನಕ್ಕಲ್ಲ,
ಎಂದು ಸೈನ್ಯಗಳ ಕರ್ತನು ಹೇಳುತ್ತಾನೆ.
೧೪ ಕರ್ತನು ಹೇಳುವದೇನಂದರೆ—
ಐಗುಪ್ತದ ಸಂಪತ್ತೂ, ಕೂಷಿನ ವ್ಯಾಪಾರವೂ,
ಉದ್ದವಾದ ಜನರಾದ ಸೆಬಾಯರೂ,
ನಿನ್ನ ಬಳಿಗೆ ದಾಟಿ ಬಂದು, ನಿನ್ನದಾಗುವದು;
ನಿನ್ನ ಹಿಂದೆ ನಡೆಯುವರು;
ಸಂಕೋಲೆಗಳಲ್ಲಿ ದಾಟಿ ಬರುವರು;
ನಿನ್ನ ಮುಂದೆ ಅಡ್ಡ ಬಿದ್ದು, ನಿನ್ನ ಕಡೆಗೆ ಪ್ರಾರ್ಥಿಸುವರು;
ನಿನ್ನಲ್ಲಿಯೇ ದೇವರು ಇದ್ದಾನೆ, ಮತ್ತೊಬ್ಬನಿಲ್ಲ,
ಬೇರೆ ದೇವರು ಇಲ್ಲವೆಂದು ಹೇಳುವರು.
೧೫ ನಿಶ್ಚಯವಾಗಿ ನೀನು ಅಡಗಿ ಕೊಳ್ಳುವ ದೇವರಾಗಿದ್ದೀ,
ಇಸ್ರಯೇಲಿನ ದೇವರೇ! ರಕ್ಷಿಸುವಂಥವನೇ!
೧೬ ಅವರೆಲ್ಲರು ನಾಚಿಕೆ ಪಟ್ಟು, ನಿಂದಿತರಾಗುವರು;
ಬೊಂಬೆಗಳನ್ನು ಕಲ್ಪಿಸುವವರು,
ಕೂಡ ಲಜ್ಜೆಯಾಗಿ ಹೋಗುವರು.
೧೭ ಆದರೆ ಇಸ್ರಯೇಲು ಕರ್ತನಿಂದ ರಕ್ಷಿಸಲ್ಪಡುವರು.
ನಿತ್ಯವಾದ ರಕ್ಷಣೆಯಿಂದಲೇ;

ನಿರಂತರವಾದ ಯುಗಗಳ ವರಿಗೂ,
ನೀವು ನಾಚಿಕೆಯೂ, ನಿಂದೆಯೂ, ಹೊಂದುವದಿಲ್ಲ.
೧೯ ಯಾಕಂದರೆ, ಆಕಾಶಗಳನ್ನು ನಿರ್ಮಿಸಿದ ಯೆಹೋವ,
ಹೀಗೆ ಹೇಳುತ್ತಾನೆ—
ಅವನೇ ದೇವರು;
ಭೂಮಿಯನ್ನು ರೂಪಿಸಿದವನೂ, ಅದನ್ನು ಉಂಟು ಮಾಡಿದ
ವನೂ,
ಅದನ್ನು ಸ್ಥಾಪಿಸಿದವನೂ, ಅವನೇ.
ಅದನ್ನು ವ್ಯರ್ಥವಾಗಿ ನಿರ್ಮಿಸಲಿಲ್ಲ;
ನಿವಾಸಕ್ಕಾಗಿ ಅದನ್ನು ರೂಪಿಸಿದನು;
ನಾನೇ ಯೆಹೋವ; ಮತ್ತೊಬ್ಬನು ಇಲ್ಲ.
೨೯ ನಾನು ಅಂತರಂಗದಲ್ಲಿ,
ಭೂಮಿಯ ಕತ್ತಲಾದ ಸ್ಥಳದಲ್ಲಿ, ಮಾತಾಡಲಿಲ್ಲ;
ವ್ಯರ್ಥವಾಗಿ ನನ್ನನ್ನು ಹುಡಿಕಿರೆಂದು,
ಯಾಕೋಬನ ಸಂತಾನಕ್ಕೆ ಹೇಳಲಿಲ್ಲ;
ಕರ್ತನಾದ ನಾನು ನೀತಿಯನ್ನು ಮಾತಾಡಿ,
ಯಥಾರ್ಥವಾದವುಗಳನ್ನು ತಿಳಿಸುತ್ತೇನೆ.
೩೦ ಕೂಡಿ ಕೊಂಡು ಬನ್ನಿ,
ಜನಾಂಗಗಳಲ್ಲಿ ತಪ್ಪಿಸಿ ಕೊಂಡವರೇ! ಕೂಡ ಸಮೀಪಕ್ಕೆ ಬನ್ನಿ.
ತಮ್ಮ ಮರದ ವಿಗ್ರಹವನ್ನು ಹೊತ್ತು ಕೊಳ್ಳುವವರು,
ರಕ್ಷಿಸಲಾರದ ದೇವರಿಗೆ ಪ್ರಾರ್ಥಿಸುವವರು,
ತಿಳಿವಿಕೆ ಇಲ್ಲದವರಾಗಿದ್ದಾರೆ.
೩೧ ತಿಳಿಸಿರಿ; ಸಮೀಪಕ್ಕೆ ಬನ್ನಿ;
ಹೌದು, ಕೂಡ ಆಲೋಚನೆ ಮಾಡಿ ಕೊಳ್ಳಲಿ;
ಯಾರು ಇದನ್ನು ಪೂರ್ವದಿಂದ ಕೇಳ ಕೊಟ್ಟನು!
ಆಗಿನಿಂದ ತಿಳಿಸಿದವನ್ಯಾರು!
ಯೆಹೋವನಾದ ನಾನೇ ಅಲ್ಲವೋ!
ನಾನಲ್ಲದೆ ಮತ್ತೊಬ್ಬ ದೇವರು ಇಲ್ಲ;
ನೀತಿಯುಳ್ಳ ದೇವರು, ಮತ್ತು ರಕ್ಷಿಸುವಂಥವನು,
ನನ್ನ ಹೊರ್ತು ಒಬ್ಬನು ಇಲ್ಲ.
೨೨ ಭೂಮಿಯ ಎಲ್ಲಾ ಅಂತ್ಯಗಳೇ!
ನನ್ನ ಕಡೆಗೆ ತಿರುಗಿ ಕೊಂಡು ರಕ್ಷಿಸಲ್ಪಡಿರಿ;
ಯಾಕಂದರೆ, ನಾನೇ ದೇವರು, ಮತ್ತೊಬ್ಬನು ಇಲ್ಲ.
೨೩ ನನ್ನ ಮೇಲೆ ಆಣೆ ಇಟ್ಟು ಕೊಂಡಿದ್ದೇನೆ;
ನೀತಿಯುಳ್ಳ ವಾಕ್ಯವು ನನ್ನ ಬಾಯಿಂದ ಹೊರಟಿದೆ,
ಅದು ಹಿಂತಿರುಗದು; ಏನಂದರೆ—
ನನಗೆ ಮೊಣ ಕಾಲುಗಳೆಲ್ಲಾ ಬೊಗ್ಗುವವು;
ನಾಲಿಗೆಗಳೆಲ್ಲಾ ಆಣೆ ಇಟ್ಟು ಕೊಳ್ಳುವವು.
೨೪ ಕರ್ತನಲ್ಲಿ ಮಾತ್ರ ನನಗೆ ನೀತಿಯೂ ಬಲವೂ ಉಂಟೆಂದು,
ಒಬ್ಬೊಬ್ಬನು ಹೇಳಿ ಕೊಳ್ಳುವನು;
ಅವನ ಬಳಿಗೆ ಬರುವರು;
ಅವನಿಗೆ ವಿರೋಧವಾಗಿ ಉರಿಗೊಂಡವರೆಲ್ಲರು,
ನಾಚಿಕೆ ಪಡುವರು.
೨೫ ಕರ್ತನಲ್ಲಿ ಇಸ್ರಯೇಲಿನ ಸಂತಾನವೆಲ್ಲಾ
ನೀತಿಯನ್ನು ಹೊಂದಿ ಹೆಚ್ಚಳ ಪಡುವರು.

## ೪೬. ಸಂಧಿ.

೧ ಬೇಲನು ಬೊಗ್ಗಿ ಕೊಳ್ಳುತ್ತಾನೆ, ನಿಬೋವನು ಕುಂಗಿ ಹೋ
ಗುತ್ತಾನೆ;
ಅವರ ಬೊಂಬೆಗಳು ಮೃಗಗಳ ಮೇಲೆಯೂ, ಪಶುಗಳ ಮೀಲೆ
ಯೂ, ಅವೆ;
ನೀವು ಹೊತ್ತುಕೊಂಡವುಗಳು ಹೊರೆಗಳಾದವು;
ಅಯಾಸವುಳ್ಳ ಮೃಗಗಳಿಗೆ ಭಾರವಾದವು.
೨ ಅವು ಕೂಡ ಕುಂಗಿ ಬೊಗ್ಗಿ ಕೊಂಡವು;
ಭಾರವನ್ನು ತಪ್ಪಿಸಲಾರದೆ ಹೋದರು;
ಅವರು ತಾವೇ ಕೆರೆಗೆ ಹೋದರು.

೩ ಯಾಕೋಬನ ಮನೆಯೇ!
ಇಸ್ರಯೇಲಿನ ಮನೆಯ ಎಲ್ಲಾ ಉಳುಮೇ!
ಹೊಟ್ಟೆಯಿಂದ ಹೊರಲ್ಪಟ್ಟವರೇ!
ಗರ್ಭದಿಂದ ಎತ್ತಲ್ಪಟ್ಟವರೇ!
ನನಗೆ ಕಿವಿ ಕೊಡಿರಿ.
೪ ಮುದಿಪ್ರಾಯದ ಪರ್ಯಂತರ ನಾನು ಇದ್ದೇನೆ;
ನರೆ ಕೂದಲು ಬರುವ ಪರ್ಯಂತರ ನಾನು ನಿಮ್ಮನ್ನು ಉದ್ಧಾ
ರ ಮಾಡುತ್ತೇನೆ;
ನಾನೇ ನಿಮ್ಮನ್ನು ಉಂಟು ಮಾಡಿದ್ದೇನೆ, ಮತ್ತು ಹೊರುತ್ತೇನೆ;
ನಾನು ಉದ್ಧಾರ ಮಾಡುತ್ತೇನೆ, ತಪ್ಪಿಸುತ್ತೇನೆ.

೫ ಯಾರಿಗೆ ನನ್ನನ್ನು ಸಮಾನ ಮಾಡಿ, ಹೋಲಿಸುತ್ತೀರಿ!
ನಾವು ಸಮಾನವಾಗುವ ಹಾಗೆ ಯಾರಿಗೆ ನನ್ನನ್ನು ಸರಿ ಮಾ
ಡುತ್ತೀರಿ!
೬ ಚೀಲದಿಂದ ಚಿನ್ನವನ್ನು ಸುರಿಯುತ್ತಾರೆ;
ತ್ರಾಸಿನಲ್ಲಿ ಬೆಳ್ಳಿಯನ್ನು ತೂಕ ಮಾಡುತ್ತಾರೆ;
ಅಕ್ಕಸಾಲಿಗನಿಗೆ ಕೂಲಿ ಕೊಡುತ್ತಾರೆ;
ಅವನು ಅದನ್ನು ದೇವರಾಗ ಮಾಡುತ್ತಾನೆ;
ಅವರು ಅಡ್ಡ ಬೀಳುತ್ತಾರೆ; ಹೌದು, ಅದನ್ನು ನಮಸ್ಕರಿಸು
ತ್ತಾರೆ.
೭ ಅದನ್ನು ಹೆಗಲಿನ ಮೇಲೆ ಎತ್ತುತ್ತಾರೆ, ಹೊರುತ್ತಾರೆ;
ಅದರ ಸ್ಥಳದಲ್ಲಿ ಅದನ್ನು ಇಟ್ಟು ಬಿಡುತ್ತಾರೆ;
ಅಗ ನಿಲ್ಲುತ್ತದೆ, ತನ್ನ ಸ್ಥಳವನ್ನು ಬಿಡುವದಿಲ್ಲ;
ನಿಶ್ಚಯವಾಗಿ ಒಬ್ಬನು ಅದಕ್ಕೆ ಮೊರೆ ಇಡುತ್ತಾನೆ;
ಅದರೆ ಅದು ಉತ್ತರ ಕೊಡುವದಿಲ್ಲ;

೮ ಇದನ್ನು ಜ್ಞಾಪಕ ಮಾಡಿ, ನಿಮ್ಮನ್ನು ಮನುಷ್ಯರೆಂದು ತೋ
ರಿಸಿರಿ,
ದ್ರೋಹಿಗಳೇ! ಮನಸ್ಸಿಗೆ ತಂದು ಕೊಳ್ಳಿರಿ.
೯ ಪೂರ್ವದಿಂದಿದ್ದ ಹಿಂದಿನವುಗಳನ್ನು ಜ್ಞಾಪಕ ಮಾಡಿರಿ;
ಯಾಕಂದರೆ, ನಾನೇ ದೇವರು, ಮತ್ತೊಬ್ಬನು ಇಲ್ಲ;
ನಾನೇ ದೇವರು; ನನ್ನ ಹಾಗೆ ಯಾರು ಇಲ್ಲ.
೧೦ ಆದಿ ಮೊದಲುಗೊಂಡು ಅಂತ್ಯವನ್ನೂ,
ಪೂರ್ವದಿಂದಲೇ ಇನ್ನು ಉಂಟಾಗದವುಗಳನ್ನೂ ತಿಳಿಸುವವನು;



ನನ್ನ ಆಲೋಚನೆ ನಿಲ್ಲುವದೆಂದೂ,
ನಾನು ಮೆಚ್ಚಿದ್ದನ್ನೆಲ್ಲಾ ಮಾಡುತ್ತೇನೆಂದೂ, ಹೇಳುವವನು;
೧೧ ಮೂರಣದಿಂದ ಪಕ್ಷಿಯನ್ನೂ,
ದೂರ ದೇಶದಿಂದ ನಾನು ಆಲೋಚಿಸಿದ ಮನುಷ್ಯನನ್ನೂ, ಕರೆ
ಯುವವನು;
ಹೌದು, ಅದನ್ನು ಹೇಳಿದ್ದೇನೆ, ನಿಶ್ಚಯವಾಗಿ ಜರ ಮಾಡುವೆನು;
ನಿರ್ಣಯಿಸಿದ್ದೇನೆ; ನಿಶ್ಚಯವಾಗಿ ಅದನ್ನು ಮಾಡುವೆನು.
೧೨ ಹೃದಯದಲ್ಲಿ ಕಠಿಣರೇ! ನೀತಿಗೆ ದೂರವಾದವರೇ! ನನಗೆ ಕಿವಿ
ಕೊಡಿರಿ.
೧೩ ನನ್ನ ನೀತಿಯನ್ನು ಸಮೀಪ ತರುತ್ತೇನೆ;
ಅದು ದೂರವಾಗಿರುವದಿಲ್ಲ; ನನ್ನ ರಕ್ಷಣೆ ತಡೆ ಮಾಡುವದಿಲ್ಲ;
ನನ್ನ ಮಹಿಮೆಯಾಗಿರುವ ಇಸ್ರಯೇಲಿಗೋಸ್ಕರ,
ನಾನು ಚಿಯೋನಿನಲ್ಲಿ ರಕ್ಷಣೆಯನ್ನು ಕೊಡುತ್ತೇನೆ.

## ೪೭. ಸಂಧಿ.

೧ ಬಾಬೆಲಿನ ಮಗಳಾದ ಕನ್ಯಾಸ್ತ್ರೀಯೇ! ಇಳಿದು, ಧೂಳಿನಲ್ಲಿ
ಕೂತುಕೋ;
ಕಸ್ದೀಯರ ಮಗಳೇ! ಸಿಂಹಾಸನವಿಲ್ಲದೆ ನೆಲದಲ್ಲಿ ಕೂತುಕೋ;
ಯಾಕಂದರೆ, ಇನ್ನು ಮೇಲೆ ನೀನು ಮೃದುವಾದವಳೂ, ಕೋ
ಮಲವಾದವಳೂ, ಎಂದು ಕರೆಯಲ್ಪಡುವದಿಲ್ಲ.
೨ ಬೀಸುವ ಕಲ್ಲನ್ನು ತಕ್ಕೊಂಡು, ಹಿಟ್ಟನ್ನು ಬೀಸು,
ಮುಸುಕನ್ನು ತೆಗೆ, ಕೀಲೆಯನ್ನು ಎತ್ತು,
ಕಾಲನ್ನು ಬರಿದು ಮಾಡು, ನದಿಗಳನ್ನು ದಾಟು.
೩ ನಿನ್ನ ಮಾನ ಬೈಲಾಗುವದು,
ನಿನ್ನ ನಾಚಿಕೆ ಕಾಣ ಬರುವದು;
ನಾನು ಯಾವನನ್ನಾದರೂ ಕನಿಕರಿಸದೆ,
ಮುಯ್ಯಿಗೆ ಮುಯ್ಯಿ ಕೊಡುವೆನು.

೪ ನಮ್ಮ ವಿಮೋಚಕನು ಯಾರಂದರೆ,
ಅವನ ಹೆಸರು ಸೈನ್ಯಗಳ ಯೆಹೋವ,
ಇಸ್ರಯೇಲಿನ ಪರಿಶುದ್ಧನೇ.

೫ ಕಸ್ದೀಯರ ಮಗಳೇ! ಮೌನವಾಗಿ ಕೂತುಕೋ;
ಕತ್ತಲೆಯಲ್ಲಿ ಕೇರು.
ಯಾಕಂದರೆ, ಇನ್ನು ಮೇಲೆ ನೀನು ರಾಜ್ಯಗಳ ಧೊರೆಸಾನಿ
ಎಂದು ಕರೆಯಲ್ಪಡುವದಿಲ್ಲ.
೬ ನನ್ನ ಜನರ ಮೇಲೆ ಪಿಟ್ಟು ಮಾಡಿದೆನು.
ನನ್ನ ಸ್ವಾಸ್ತ್ಯವನ್ನು ಅಪವಿತ್ರ ಮಾಡಿ,
ನಿನ್ನ ಕೈಯಲ್ಲಿ ಅವರನ್ನು ಒಪ್ಪಿಸಿ ಬಿಟ್ಟೆನು.
ನೀನು ಅವರಿಗೆ ಕರುಣೆ ತೋರಿಸಲಿಲ್ಲ;
ಮುದುಕರ ಮೇಲೆಯೂ ನಿನ್ನ ನೊಗವನ್ನು ಅತಿ ಭಾರವಾಗಿ
ಇರಿಸಿದಿ.
೭ ನಾನು ಎಂದೆಂದಿಗೂ ಧೊರೆಸಾನಿಯಾಗಿರುವೆನೆಂದು ಹೇಳಿದಿ;
ಆದರಿಂದ ನೀನು ಇವುಗಳನ್ನು ಹೃದಯದಲ್ಲಿ ಇಟ್ಟು ಕೊ
ಳ್ಳಲಿಲ್ಲ;
ಅದರ ಅಂತ್ಯವನ್ನು ನೆನಸಲಿಲ್ಲ.
೮ ಹೀಗಿರುವದರಿಂದ, ಈಗ ಸೊಗಸಿನವಳೇ!
ಭರವಸವಾಗಿರುವವಳೇ!
ನಾನು ಇದ್ದೇನೆ; ನಾನಲ್ಲದೆ ಮತ್ಯಾರು ಇಲ್ಲ;
ನಾನು ವಿಧವೆಯಾಗಿ ವಾಸಿಸುವದಿಲ್ಲ,
ಮಕ್ಕಳಿಲ್ಲದ ದುಃಖವನ್ನು ತಿಳಿಯುವದಿಲ್ಲ,
ಎಂದನ್ನುವವಳೇ! ಇದನ್ನು ಕೇಳು.
೯ ಮಕ್ಕಳಿಲ್ಲದ ದುಃಖವೂ, ವಿಧವೆಯ ಸ್ಥಿತಿಯೂ,
ಇವೆರಡು ಕ್ಷಣಮಾತ್ರದಲ್ಲಿ, ಒಂದೇ ದಿವಸದಲ್ಲಿ ನಿನ್ನ ಮೇಲೆ
ಬರುವವು;
ನಿನ್ನ ಮಂತ್ರಗಳು ಬಹಳವಾಗಿರುವದರಿಂದಲೂ,
ನಿನ್ನ ಮಾಟಗಳು ಬಹು ಹೆಚ್ಚಾಗಿರುವದರಿಂದಲೂ,
ಅವು ಸಂಪೂರ್ಣವಾಗಿ ನಿನ್ನ ಮೇಲೆ ಬರುವವು.
೧೦ ನೀನು ನಿನ್ನ ಕೆಟ್ಟತನದಲ್ಲಿ ನಂಬಿಕೆ ಇಟ್ಟು—
ನನ್ನನ್ನು ಯಾರು ನೋಡುವದಿಲ್ಲವೆಂದು ಹೇಳಿದಿ;
ನಿನ್ನ ಜ್ಞಾನವೂ, ನಿನ್ನ ಶಿಳುವಿಕೆಯೂ ಇವೇ,
ನಿನ್ನನ್ನು ಮೋಸಗೊಳಿಸಿ ಅವೆ;
ನಾನು ಇದ್ದೇನೆ, ನಾನಲ್ಲದೆ ಮತ್ಯಾರು ಇಲ್ಲ, ಎಂದಂದು ಕೊಂಡಿ.
೧೧ ಆದದರಿಂದ ನಿನ್ನ ಮೇಲೆ ಕೇಡು ಬರುವದು,
ಅದರ ಉದಯ ನಿನಗೆ ತಿಳಿಯದು;
ನಿನ್ನ ಮೇಲೆ ನಷ್ಟ ಬೀಳುವದು,
ಪ್ರಾಯಶ್ಚಿತ್ತದಿಂದ ಅದನ್ನು ಪರಿಹರಿಸುವದಕ್ಕೆ ನಿನ್ನಿಂದಲಾಗದು,
ನಿನಗೆ ತಿಳಿಯದ ನಾಶನವು ಫಕ್ಕನೆ ನಿನ್ನ ಮೇಲೆ ಬರುವದು.
೧೨ ನಿನ್ನ ಮಾಟಗಳ ಸಂಗಡ,
ನಿನ್ನ ಯೌವನದಾರಭ್ಯ ನೀನು ಬೇಸತ್ತ,
ನಿನ್ನ ಬಹಳ ಮಂತ್ರಗಳ ಸಂಗಡ, ನಿಂತುಕೋ.
ಒಂದು ವೇಳೆ ನಿನಗೆ ಪ್ರಯೋಜನವಾದಾವು;
ಒಂದು ವೇಳೆ ನೀನು ಎದುರಾಗಿ ನಿಲ್ಲ ಬಹುದು.
೧೩ ನಿನ್ನ ಬಹಳ ಆಲೋಚನೆಗಳಿಂದ ಆಯಾಸವಾಗಿದ್ದೀ;
ಆಕಾಶವನ್ನು ಗೊತ್ತು ಮಾಡುವವರೂ, ನಕ್ಷತ್ರಗಳನ್ನು ನೋ
ಡುವವರೂ,
ಅಮವಾಸಿಗಳನ್ನು ತಿಳಿಸುವವರೂ, ಈಗ ನಿಂತು ಕೊಂಡು,
ನಿನ್ನ ಮೇಲೆ ಬರುವಂಥಾದ್ದರಿಂದ ನಿನ್ನನ್ನು ರಕ್ಷಿಸಲಿ.
೧೪ ಇಗೋ ಅವರು ಹೊಟ್ಟೆನ ಹಾಗಾಗುವರು;
ಬೆಂಕಿ ಅವರನ್ನು ಸುಟ್ಟು ಬಿಡುವದು;
ಜ್ವಾಲೆಯ ಬಲಕ್ಕೆ ತಮ್ಮ ಪ್ರಾಣವನ್ನು ತಪ್ಪಿಸುವದಿಲ್ಲ;
ಚಳಿ ಕಾಸಿ ಕೊಳ್ಳುವದಕ್ಕೆ ಇದ್ದಲು ಇರುವದಿಲ್ಲ;
ಹತ್ತರ ಕೂತು ಕೊಳ್ಳುವದಕ್ಕೆ ಬೆಂಕಿ ಇರುವದಿಲ್ಲ.
೧೫ ಯೌವನ ಪ್ರಾಯದಿಂದ ನೀನು ಬೇಸತ್ತ
ನಿನ್ನ ವರ್ತಕರು, ನಿನಗೆ ಹೀಗಾಗುವರು;
ತಮ್ಮ ತಮ್ಮ ಸ್ಥಳಗಳಿಗೆ ತಿರುಗಾಡುವರು;
ನಿನ್ನನ್ನು ರಕ್ಷಿಸುವವನು ಯಾರು ಇಲ್ಲ.

## ೪೮. ಸಂಧಿ.

೧ ಇದನ್ನು ಕೇಳಿರಿ, ಯಾಕೋಬನ ಮನೆಯವರೇ!
ಇಸ್ರಯೇಲನ ಹೆಸರಿನಿಂದ ಕರೆಯಲ್ಪಟ್ಟವರೇ!
ಯೆಹೂದನ ನೀರುಗಳಿಂದ ಹೊರಟವರೇ!
ಯೆಹೋವನ ಹೆಸರಿನ ಮೇಲೆ ಆಣೆ ಇಟ್ಟು ಕೊಳ್ಳುವವರೇ!

ಇಸ್ರಯೇಲಿನ ದೇವರನ್ನು ಜ್ಞಾಪಕ ಮಾಡುವವರೇ!
ಆದರೆ ಸತ್ಯದಿಂದಲೂ ನೀತಿಯಿಂದಲೂ ಅಲ್ಲ;
೨ ಯಾಕಂದರೆ, ಪರಿಶುದ್ಧ ಪಟ್ಟಣದಿಂದ ಹೆಸರುಗೊಳ್ಳುತ್ತಾರೆ;
ಇಸ್ರಯೇಲಿನ ದೇವರ ಮೇಲೆ ಆತು ಕೊಳ್ಳುತ್ತಾರೆ;
ಅವನ ಹೆಸರು ಸೈನ್ಯಗಳ ಯೆಹೋವನೇ.
3 ಹಿಂದಿನವುಗಳನ್ನು ಆಗಿನಿಂದೇ ತಿಳಿಸಿದೆನು;
ನನ್ನ ಬಾಯಿಂದ ಹೊರಟವು, ನಾನು ಅವುಗಳನ್ನು ಕೇಳಿ ಕೊಟ್ಟೆನು;
ಫಕ್ಕನೆ ಅವುಗಳನ್ನು ನಡಿಸಿದೆನು; ಆಗ ಬಂದವು.
೪ ನೀನು ಕಠಿಣನೆಂದೂ, ನಿನ್ನ ಕುತ್ತಿಗೆ ಕಬ್ಬಿಣದ ನರವೆಂದೂ,
ನಿನ್ನ ಹಣೆ ಹಿತ್ತಾಳೆ ಎಂದೂ, ನಾನು ತಿಳಿದೆನು.
೫ ಆದದರಿಂದ ಆಗಿನಿಂದಲೇ ಅವುಗಳನ್ನು ನಿನಗೆ ತಿಳಿಸಿದೆನು;
ನನ್ನ ಪೊಂಬೆ ಅವುಗಳನ್ನು ನಡಿಸಿತೆಂದೂ,
ನನ್ನ ವಿಗ್ರಹವೂ, ನನ್ನ ಎರಕ ಹೊಯಿದ ಪ್ರತಿಮೆಯೂ,
ಅವುಗಳನ್ನು ಆಜ್ಞಾಪಿಸಿದವೆಂದು, ನೀನು ಹೇಳದ ಹಾಗೆ,
ಅವು ಉಂಟಾಗುವದಕ್ಕಿಂತ ಮುಂಚೆ ನಿನಗೆ ಕೇಳಿ ಕೊಟ್ಟೆನು.
೬ ಕೇಳಿದ್ದೀ, ಎಲ್ಲವನ್ನು ದೃಷ್ಟಿಸು;
ಮತ್ತು ನೀವು ತಿಳಿಸದೆ ಇದ್ದೀರೋ!
ಈಗಿನಿಂದ ಹೊಸವುಗಳನ್ನೂ, ನೀನು ತಿಳಿಯದ ಮರೆಯಾದವುಗಳನ್ನೂ,
ನಿನಗೆ ಕೇಳಿ ಕೊಡುತ್ತೇನೆ.
೭ ಈಗಲೇ ನಿರ್ಮಿಸಲ್ಪಟ್ಟವು, ಆಗಿನಿಂದಲ್ಲ;
ಇಗೋ, ಅವು ನನಗೆ ತಿಳಿದಿದ್ದವೆಂದು ನೀನು ಹೇಳಿದ ಹಾಗೆ,
ಈ ದಿನಕ್ಕೆ ಮುಂಚೆ ಅವುಗಳನ್ನು ಕುರಿತು ನೀನು ಕೇಳಲಿಲ್ಲ.
೮ ನೀನು ಕೇಳಲೇ ಇಲ್ಲ; ನಿನಗೆ ತಿಳಿಯಲೇ ಇಲ್ಲ;
ಆಗಿನಿಂದ ನೀನು ನಿನ್ನ ಕಿವಿಯನ್ನು ತೆಗೆಯಲೇ ಇಲ್ಲ;
ಯಾಕಂದರೆ, ನೀನು ವಂಚಿಸಲೇ ವಂಚಿಸುತ್ತೀ ಎಂದೂ,
ಗರ್ಭವು ಮೊದಲುಗೊಂಡು ನಿನ್ನ ಹೆಸರು ದ್ರೋಹಿ ಎಂದೂ,
ನನಗೆ ತಿಳಿಯಿತು.

೯ ನನ್ನ ಹೆಸರಿಗೋಸ್ಕರ ನನ್ನ ಕೋಪವನ್ನು ತಡೆ ಮಾಡಿದ್ದೇನೆ;
ನಿನ್ನನ್ನು ನಿರ್ಮೂಲ ಮಾಡದ ಹಾಗೆ, ನನ್ನ ಸ್ತೋತ್ರಕ್ಕೋಸ್ಕರ,
ನಿನ್ನ ವಿಷಯ ಅದನ್ನು ಬಿಗಿ ಹಿಡಿದಿದ್ದೇನೆ.
೧೦ ಇಗೋ ನಿನ್ನನ್ನು ಪುಟಕ್ಕೆ ಹಾಕಿದ್ದೇನೆ; ಆದರೆ ಬೆಳ್ಳಿಯ ಹಾಗಲ್ಲ;
ಕಷ್ಟದ ಬಲೆಯಲ್ಲಿ ನಿನ್ನನ್ನು ಆದು ಕೊಂಡಿದ್ದೇನೆ.
೧೧ ನನಗೋಸ್ಕರವೇ ನನಗೋಸ್ಕರವೇ ಇದನ್ನು ಮಾಡಿದ್ದೇನೆ,
ಯಾಕಂದರೆ, ನನ್ನ ಹೆಸರು ಹ್ಯಾಗೆ ಅಪವಿತ್ರವಾಗುವದು!
ನನ್ನ ಮಹಿಮೆಯನ್ನು ನಾನು ಮತ್ತೊಬ್ಬನಿಗೆ ಕೊಡುವದಿಲ್ಲ.

೧೨ ಯಾಕೋಬೇ! ನಾನು ಕರೆದ ಇಸ್ರಯೇಲೇ!
ನನಗೆ ಕಿವಿ ಕೊಡು,
ನಾನು ಅವನೇ, ನಾನು ಮೊದಲನೆಯವನು, ನಾನು ಸಹ ಕಡೆಯವನು.
೧೩ ಹೌದು, ನನ್ನ ಕೈ ಭೂಮಿಯ ಅಸ್ತಿವಾರವನ್ನು ಹಾಕಿತು;
ನನ್ನ ಬಲಕೈ ಆಕಾಶವನ್ನು ಹಾಸಿತು,
ನಾನು ಅವುಗಳಿಗೆ ಕರೆಯಲು ಅವು ಕೂಡ ನಿಂತು ಕೊಂಡವು.
೧೪ ನೀವೆಲ್ಲರು ಕೂಡಿ ಕೊಂಡು ಕೇಳಿರಿ;
ಅವರಲ್ಲಿ ಯಾರು ಇವುಗಳನ್ನು ತಿಳಿಸಿದ್ದಾನೆ!
ಕರ್ತನು ಅವನನ್ನು ಪ್ರೀತಿ ಮಾಡಿದ್ದಾನೆ.
ಬಾಬೆಲಿನಲ್ಲಿ ತನ್ನ ಇಷ್ಟವನ್ನು ಮಾಡುವನು;
ತನ್ನ ತೋಳು ಕಸ್ದೀಯರ ಮೇಲೆ ಇರುವದು.
೧೫ ನಾನೇ ನಾನೇ ಮಾತಾಡಿದ್ದೇನೆ; ಹೌದು, ಅವನನ್ನು ಕರೆದಿದ್ದೇನೆ;
ಅವನನ್ನು ತರಿಸಿದ್ದೇನೆ; ಅವನ ಮಾರ್ಗ ಅನುಕೂಲವಾಗುವದು.

೧೬ ನನ್ನ ಹತ್ತರ ಬನ್ನಿ, ಇದನ್ನು ಕೇಳಿರಿ;
ನಾನು ಆದಿಯಿಂದ ಮರೆಯಾಗಿ ಮಾತಾಡಲಿಲ್ಲ;
ಅದು ಇರುವಂದಿನಿಂದ ನಾನು ಅಲ್ಲಿ ಇದ್ದೇನೆ;
ಮತ್ತು ಈಗ ಕರ್ತನಾದ ಯೆಹೋವನು,
ನನ್ನನ್ನೂ, ತನ್ನ ಆತ್ಮವನ್ನೂ ಕಳುಹಿಸಿದ್ದಾನೆ.
೧೭ ಇಸ್ರಯೇಲಿನ ಪರಿಶುದ್ಧನೂ, ನಿನ್ನ ವಿಮೋಚಕನೂ ಆಗಿರುವ ಯೆಹೋವನು ಹೇಳುವದೇನಂದರೆ—
ಯೆಹೋವನಾದ ನಾನೇ ನಿನ್ನ ದೇವರು;
ಉಪಯೋಗಕ್ಕಾಗಿ ನಿನ್ನನ್ನು ಬೋಧಿಸುವವನು;
ನೀನು ನಡಿಯ ತಕ್ಕ ಮಾರ್ಗದಲ್ಲಿ ನಿನ್ನನ್ನು ನಡಿಸುವವನು.
೧೮ ಅಯ್ಯೋ, ನೀನು ನನ್ನ ಆಜ್ಞೆಗಳಿಗೆ ಕಿವಿಗೊಟ್ಟಿದ್ದರೆ ಚನ್ನಾಗಿತ್ತು;
ಆಗ ನಿನ್ನ ಸಮಾಧಾನವು ನದಿಯ ಹಾಗೆಯೂ,
ನಿನ್ನ ನೀತಿಯು ಸಮುದ್ರದ ತೆರೆಗಳ ಹಾಗೆಯೂ, ಇರುತ್ತಿದ್ದವು.
೧೯ ನಿನ್ನ ಸಂತಾನವು ಅದರ ಮರಳಿನ ಹಾಗೆಯೂ,
ನಿನ್ನ ಹೊಟ್ಟೆಯ ಉತ್ಪತ್ತಿಯು ಅದರ ಹೊಟ್ಟೆಯ ಉತ್ಪತ್ತಿಯ ಹಾಗೆಯೂ, ಇರುತಿತ್ತು.
ಅದು ಕಡಿದು ಹಾಕಲ್ಪಡದೆ, ಅದರ ಹೆಸರು ನನ್ನ ಸಮುಖದಿಂದ ನಾಶವಾಗದೆ, ಇರುತಿತ್ತು.

೨೦ ಬಾಬೆಲಿನಿಂದ ಹೊರಡಿರಿ, ಕಸ್ದೀಯರಿಂದ ಓಡಿ ಹೋಗಿರಿ,
ಹರ್ಷ ಧ್ವನಿಯಿಂದ ಇದನ್ನು ತಿಳಿಸಿ, ಕೇಳಿ ಕೊಡಿರಿ,
ಭೂಮಿಯ ಅಂತ್ಯದ ಪರ್ಯಂತರ ಅದನ್ನು ಹೊರಡ ಮಾಡಿರಿ;
ಯೆಹೋವನು ತನ್ನ ಸೇವಕನಾದ ಯಾಕೋಬನನ್ನು ವಿಮೋಚಿಸಿದ್ದಾನೆಂದು ಹೇಳಿರಿ.
೨೧ ಅವನು ಅವರನ್ನು ಅರಣ್ಯಾಗಳಲ್ಲಿ ನಡಿಸುವಾಗ,
ಅವರಿಗೆ ನೀರಡಿಕೆಯಾಗಲಿಲ್ಲ;
ಬಂಡೆಯೊಳಗಿಂದ ಅವರಿಗೋಸ್ಕರ ನೀರನ್ನು ಸುರಿಸಿದನು;
ಹೌದು, ಬಂಡೆಯನ್ನು ಶೀಳಿದನು; ಆಗ ನೀರು ಹರಿಯಿತು.
೨೨ ದುಷ್ಟರಿಗೆ ಸಮಾಧಾನವು ಇಲ್ಲವೆಂದು ಕರ್ತನು ಹೇಳುತ್ತಾನೆ.

## ೪೯. ಸಂಧಿ.

೧ ದ್ವೀಪಗಳೇ! ನನ್ನನ್ನು ಕೇಳಿರಿ;
ದೂರವಾಗಿರುವ ಜನ ಸಮೂಹಗಳೇ! ಕಿವಿ ಕೊಡಿರಿ;
ಕರ್ತನು ನನ್ನನ್ನು ಗರ್ಭದಿಂದ ಕರೆದಿದ್ದಾನೆ;
ನನ್ನ ತಾಯಿಯ ಕರುಳುಗಳಿಂದ ನನ್ನ ಹೆಸರನ್ನು ಉಚ್ಚರಿಸಿದ್ದಾನೆ.



೨ ನನ್ನ ಬಾಯಿಯನ್ನು ಹದವಾದ ಕತ್ತಿಯ ಹಾಗೆ ಮಾಡಿದ್ದಾನೆ;
ತನ್ನ ಕೈಯ ನೆರಳಿನಲ್ಲಿ ನನ್ನನ್ನು ಅಡಗಿಸಿದ್ದಾನೆ;
ನನ್ನನ್ನು ತೀಕ್ಷ್ಣವಾದ ಬಾಣವಾಗ ಮಾಡಿದ್ದಾನೆ.
ತನ್ನ ಬತ್ತಳಿಕೆಯಲ್ಲಿ ನನ್ನನ್ನು ಮರೆ ಮಾಡಿದ್ದಾನೆ.
3 ಮತ್ತು ನೀನು ನನ್ನ ಸೇವಕನು;
ಇಸ್ರಯೇಲೇ! ನಿನ್ನಲ್ಲಿ ಮಹಿಮೆ ಹೊಂದುವೆನು,
ಎಂದು ನನಗೆ ಹೇಳಿದನು.
೪ ಆದರೆ, ನಾನು ಸುಮ್ಮನೆ ಬೇಸತ್ತೆನೆಂದೂ,
ನನ್ನ ಶಕ್ತಿಯನ್ನು ವ್ಯರ್ಥವಾಗಿಯೂ, ನಿಷ್ಪ್ರಯೋಜನವಾಗಿಯೂ, ಕಳೆ ಕೊಂಡೆನೆಂದೂ, ಹೇಳಿದೆನು;
ಆದಾಗ್ಯೂ ನನ್ನ ನ್ಯಾಯವು ಕರ್ತನ ಬಳಿಯಲ್ಲಿಯೂ,
ನನ್ನ ಪ್ರತಿ ಫಲವು ನನ್ನ ದೇವರ ಬಳಿಯಲ್ಲಿಯೂ, ಉಂಟು.
೫ ಆದರೆ ಈಗ, ಕರ್ತನೂ,
ತನ್ನ ಕಡೆಗೆ ಯಾಕೋಬನ್ನು ತಿರುಗಿಸುವ ಹಾಗೆ,
ನನ್ನನ್ನು ಗರ್ಭದಾರಭ್ಯ ತನಗೆ ಸೇವಕನಾಗಿ ರೂಪಿಸಿದವನೂ, ಹೇಳುವದೇನಂದರೆ—
ಇಸ್ರಯೇಲು ಅವನ ಕಡೆಗೆ ಕೂಡಿಸಲ್ಪಡದಿದ್ದರೂ,
ನಾನು ಕರ್ತನ ದೃಷ್ಟಿಯಲ್ಲಿ ಘನವುಳ್ಳವನಾಗಿರುವೆನು;
ಮತ್ತು ನನ್ನ ದೇವರೇ ನನ್ನ ಬಲವಾಗಿರುವನು.
೬ ಇದಲ್ಲದೆ, ಅವನು ಹೇಳುವದೇನಂದರೆ—
ಯಾಕೋಬನ ಕುಲಗಳನ್ನು ಎಬ್ಬಿಸುವದಕ್ಕೂ,
ಇಸ್ರಯೇಲಿನಲ್ಲಿ ಕಾಪಾಡಲ್ಪಟ್ಟವರನ್ನು ತಿರುಗಿಸುವದಕ್ಕೂ,
ನೀನು ನನಗೆ ಸೇವಕನಾಗಿರುವದು, ಅಲ್ಪ ಕಾರ್ಯವಾಗಿದೆ;
ನೀನು ಭೂಮಿಯ ಅಂತ್ಯದ ವರಗೂ, ನನ್ನ ರಕ್ಷಣೆಯಾಗಿರುವ ಹಾಗೆ,
ನಿನ್ನನ್ನು ಜನಾಂಗಗಳಿಗೆ ಬೆಳಕಾಗಿ ಕೊಟ್ಟಿದ್ದೇನೆ.
೭ ಇಸ್ರಯೇಲಿನ ವಿಮೋಚಕನೂ, ಅವನ ಪರಿಶುದ್ಧನೂ, ಆಗಿರುವ ಕರ್ತನು,
ಮನುಷ್ಯರು ತಿರಸ್ಕರಿಸಿದವನಿಗೆ, ಜನಾಂಗವು ಅಸಂಹಿಸಿದವನಿಗೆ,
ಅಧಿಕಾರಿಗಳ ಸೇವಕನಿಗೆ, ಹೇಳುವದೇನಂದರೆ—
ಅರಸರು ನೋಡಿ ಏಳುವರು;
ಪ್ರಧಾನರು ಸಹ ನಮಸ್ಕರಿಸುವರು;
ನಂಬಿಗಸ್ಥನಾದಂಥ,
ನಿನ್ನನ್ನು ಆದು ಕೊಂಡ ಇಸ್ರಯೇಲಿನ ಪರಿಶುದ್ಧನಾದಂಥ,
ಕರ್ತನ ನಿಮಿತ್ತವೇ.
೮ ಕರ್ತನು ಹೇಳುವದೇನಂದರೆ—
ಮೆಚ್ಚಿಗೆಯ ಕಾಲದಲ್ಲಿ ನಿನಗೆ ಉತ್ತರ ಕೊಟ್ಟಿದ್ದೇನೆ;
ರಕ್ಷಣೆಯ ದಿವಸದಲ್ಲಿ ನಿನಗೆ ಸಹಾಯ ಮಾಡಿದ್ದೇನೆ;
ನೀನು ಭೂಮಿಯನ್ನು ಎಬ್ಬಿಸುವದಕ್ಕೂ,
ಹಾಳಾದ ಸ್ವಾಸ್ತ್ಯಗಳನ್ನು ಸ್ವತಂತ್ರಿಸ ಮಾಡುವದಕ್ಕೂ,
೯ ಬಂಧಿಸಲ್ಪಟ್ಟವರಿಗೆ—ಹೊರಗೆ ಹೋಗಿರಿ;
ಕತ್ತಲೆಯಲ್ಲಿರುವವರಿಗೆ—ನಿಮ್ಮನ್ನು ತೋರಿಸಿರಿ, ಎಂದು ಅನ್ನುವದಕ್ಕೂ,
ನಿನ್ನನ್ನು ಕಾಪಾಡಿ; ನಿನ್ನನ್ನು ಜನರಿಗೆ ಒಡಂಬಡಿಕೆಯಾಗಿ ಕೊಟ್ಟಿದ್ದೇನೆ.
ಅವರು ದಾರಿಗಳಲ್ಲಿ ಮೇಯುವರು;
ಎಲ್ಲಾ ಮೇಡುಗಳ ಮೇಲೆ ಅವರ ಮೇಯುವ ಸ್ಥಳವಿರುವದು.
೧೦ ಅವರು ಹಸಿಯುವದಿಲ್ಲ, ನೀರಡಿಕೆ ಪಡುವದಿಲ್ಲ;
ಕಾವೂ ಬಿಸಲೂ ಅವರನ್ನು ಹೊಡಿಯುವದಿಲ್ಲ;
ಯಾಕಂದರೆ ಅವರನ್ನು ಕರುಣಿಸುವವನು ಅವರನ್ನು ನಡಿಸಿ,
ನೀರಿನ ಬುಗ್ಗೆಗಳ ಬಳಿಗೆ ಅವರನ್ನು ಕರ ಕೊಂಡು ಹೋಗುವನು.
೧೧ ಮತ್ತು ನನ್ನ ಪೆಟ್ಟಗಳನ್ನೆಲ್ಲಾ ಹಾದಿಯಾಗ ಮಾಡುವೆನು;
ನನ್ನ ರಾಜ ಮಾರ್ಗಗಳು ಎತ್ತರವಾಗುವವು.
೧೨ ಇಗೋ ಇವರು ದೂರದಿಂದಲೂ,
ಇಗೋ ಇವರು ಉತ್ತರದಿಂದಲೂ, ಪಶ್ಚಿಮದಿರಿದಲೂ,
ಇವರು ಸೀನಿಮ್ ದೇಶದಿಂದಲೂ ಸಹ ಬರುವರು.

೧೩ ಆಕಾಶಗಳೇ! ಹರ್ಷಿಸಿರಿ; ಭೂಮಿಯೇ! ಉಲ್ಲಾಸ ಪಡು;
ಪರ್ವತಗಳೇ! ಹರ್ಷ ಧ್ವನಿ ಎತ್ತಿರಿ;
ಯಾಕಂದರೆ ಕರ್ತನು ತನ್ನ ಜನರನ್ನು ಆದರಿಸುತ್ತಾನೆ;
ಕ್ರಮೆ ಪಟ್ಟಿ ತನ್ನವರನ್ನು ಕರುಣಿಸುತ್ತಾನೆ.
೧೪ ಆದರೆ ಚಿಯೋನು—ಯೆಹೋವ ನನ್ನನ್ನು ಕೈ ಬಿಟ್ಟಿದ್ದಾನೆಂದೂ,
ನನ್ನ ಕರ್ತನು ನನ್ನನ್ನು ಮರೆತಿದ್ದಾನೆಂದೂ, ಹೇಳಿತು.
೧೫ ಸ್ತ್ರೀ ತನ್ನ ಮೊಲೆ ಕೂಸನ್ನು ಮರೆಯುವಳೇ!
ತನ್ನ ಗರ್ಭದ ಮಗನನ್ನು ಕರುಣಿಸಳೇ!
ಹೌದು ಇವರು ಮರೆತಾರು;
ಆದರೆ ನಾನು ನಿನ್ನನ್ನು ಮರೆಯುವದಿಲ್ಲ.
೧೬ ಇಗೋ ನನ್ನ ಕೈಗಳಲ್ಲಿ ನಿನ್ನನ್ನು ಬರೆದಿದ್ದೇನೆ;
ನಿನ್ನ ಗೋಡೆಗಳು ಯಾವಾಗಲು ನನ್ನ ಮುಂದೆ ಅವೆ.
೧೭ ನಿನ್ನ ಮಕ್ಕಳು ತ್ವರೆ ಪಡುವರು;
ನಿನ್ನನ್ನು ಕೆಡಿಸಿದವರೂ, ಹಾಳು ಮಾಡಿದವರೂ,
ನಿನ್ನನ್ನು ಬಿಟ್ಟು ಹೋಗುವರು.
೧೮ ನಿನ್ನ ಕಣ್ಣುಗಳನ್ನೆತ್ತಿ ಸುತ್ತಲು ನೋಡು;
ಅವರೆಲ್ಲರು ಕೂಡಿ ಕೊಂಡು ನಿನ್ನ ಬಳಿಗೆ ಬರುತ್ತಾರೆ;
ಅವರೆಲ್ಲರನ್ನು ಆಭರಣಗಳಂತೆ ಧರಿಸಿ ಕೊಳ್ಳುವಿ,
ಮದಲಗಿತ್ತಿಯಂತೆ ಅವರನ್ನು ಕಟ್ಟಿ ಕೊಳ್ಳುವಿ,
ಎಂದು ನನ್ನ ಜೀವದ ಮೇಲೆ ಆಣೆ ಇಟ್ಟು, ಕರ್ತನಾದ ನಾನು ಹೇಳುತ್ತೇನೆ.
೧೯ ಯಾಕಂದರೆ, ನಿನ್ನ ಹಾಳಾದ ಸ್ಥಳಗಳೂ, ನಿನ್ನ ಏಕಾಂತ ಸ್ಥಳಗಳೂ, ಕೆಡವಲ್ಪಟ್ಟ ನಿನ್ನ ದೇಶವೂ,
ಈಗ ನಿವಾಸಿಗಳಿಗೆ ಇಕ್ಕಟ್ಟಾಗುವವು;
ನಿನ್ನನ್ನು ನುಂಗಿದವರು ದೂರವಾಗುವರು.
೨೦ ನೀನು ಕಳೆಕೊಂಡ ಮಕ್ಕಳು—
ಸ್ಥಳವು ನನಗೆ ಇಕ್ಕಟ್ಟಾಯಿತು;
ನಾನು ವಾಸವಾಗುವ ಹಾಗೆ ನನಗೆ ಸ್ಥಳ ಕೊಡು,
ಎಂದು ನಿನ್ನ ಕಿವಿಗಳಲ್ಲಿ ಹೇಳುವರು.
೨೧ ಆಗ ನೀನು ನಿನ್ನ ಹೃದಯದಲ್ಲಿ ಅಂದು ಕೊಳ್ಳುವದೇನಂದರೆ—
ಇವರನ್ನು ನನಗೆ ಯಾರು ಪಡೆದರು!
ನಾನು ಮಕ್ಕಳಿಲ್ಲದೆ, ಏಕಾಂತವಾಗಿ, ಕೆಡೆಯಲ್ಲಿದ್ದು, ಹೊರಗೆ ಹಾಕಲ್ಪಟ್ಟವಳಾಗಿ, ಇದ್ದೆನು;

ಇವರನ್ನು ಯಾರು ಬೆಳೆಸಿದರು?
ಇಗೋ ನಾನು ಒಂಟಿಯಾಗಿ ಬಿಡಲ್ಪಟ್ಟಿದ್ದೆನು;
ಇವರು ಎಲ್ಲಿ ಇದ್ದರು?
೨೨ ಕರ್ತನಾದ ಯೆಹೋವನು ಹೇಳುವದೇನಂದರೆ—
ಇಗೋ ನಾನು ಜನಾಂಗಗಳಿಗೆ ನನ್ನ ಕೈಯನ್ನು ಎತ್ತುತ್ತೇನೆ;
ಜನ ಸಮೂಹಗಳಿಗೆ ನನ್ನ ಧ್ವಜವನ್ನು ಎಬ್ಬಿಸುತ್ತೇನೆ;
ಆಗಲವರು ನಿನ್ನ ಕುಮಾರರನ್ನು ಕಂಕುಳಲ್ಲಿ ತಕ್ಕೊಂಡು ಬರುವರು;
ನಿನ್ನ ಕುಮಾರ್ತೆಗಳು ಹೆಗಲಿನ ಮೇಲೆ ಹೊರಲ್ಪಡುವರು.
೨೩ ಅರಸರು ನಿನ್ನನ್ನು ಸಾಕುವವರೂ,
ಅವರ ರಾಣಿಗಳು ನಿನ್ನ ದಾದಿಗಳೂ ಆಗುವರು;
ನೆಲಕ್ಕೆ ಮುಖ ಬೊಗ್ಗಿಸಿ ನಿನಗೆ ನಮಸ್ಕರಿಸುವರು;
ನಿನ್ನ ಪಾದಗಳ ಧೂಳನ್ನು ನೆಕ್ಕುವರು;
ಆಗ ನಾನೇ ಕರ್ತನೆಂದೂ,
ನನಗೆ ಕಾದು ಕೊಳ್ಳುವರು ನಾಚಿಕೆ ಪಡುವದಿಲ್ಲವೆಂದೂ, ನಿನಗೆ ತಿಳಿಯುವದು.
೨೪ ಶೂರನ ಕೈಯೊಳಗಿಂದ ಕೊಳ್ಳೆಯನ್ನು ತೆಗೆಯುವದುಂಟೇ?
ಇಲ್ಲವೇ ನ್ಯಾಯವಾಗಿ ಕೆಡೆಯಾದವರನ್ನು ಬಿಡಿಸುವದುಂಟೇ!
೨೫ ಆದರೂ ಕರ್ತನು ಹೀಗೆ ಹೇಳಿದ್ದಾನೆ—
ಶೂರನ ಕೆಡೆಯವರು ತೆಗೆಯಲ್ಪಡುವರು;
ಭಯಂಕರರ ಕೊಳ್ಳೆಯು ಬಿಡಿಸಲ್ಪಡುವದು;
ಯಾಕಂದರೆ, ನಿನ್ನೊಂದಿಗೆ ವ್ಯಾಜ್ಯವಾಡುವವನ ಸಂಗಡ ನಾನು ವ್ಯಾಜ್ಯವಾಡುವೆನು;
ಮತ್ತು ನಿನ್ನ ಮಕ್ಕಳನ್ನು ನಾನು ರಕ್ಷಿಸುವೆನು.
೨೬ ಮತ್ತು ನಿನ್ನನ್ನು ಕುಗ್ಗಿಸಿದವರಿಗೆ ತಮ್ಮ ಮಾಂಸವನ್ನು ಉಣ್ಣಿಕೊಡುವೆನು;
ಹೊಸ ದ್ರಾಕ್ಷೇ ರಸದಂತೆ ತಮ್ಮ ರಕ್ತವನ್ನು ಕುಡಿದು ಮತ್ತರಾಗುವರು;
ಆಗ ಕರ್ತನಾದ ನಾನೇ ನಿನ್ನ ರಕ್ಷಕನೂ, ನಿನ್ನ ವಿಮೋಚಕನೂ,
ಯಾಕೋಬನ ಶೂರನೂ, ಆಗಿದ್ದೇನೆಂದು,
ಮಾಂಸಕ್ಕೆಲ್ಲಾ ತಿಳಿಯ ಬರುವದು.

## ೫೦. ಸಂಧಿ.

೧ ಕರ್ತನು ಹೇಳುವದೇನಂದರೆ—
ನಾನು ನಿಮ್ಮ ತಾಯಿಯನ್ನು ಕಳುಹಿಸಿ ಬಿಟ್ಟೆನೆಂಬ ತ್ಯಾಗ ಪತ್ರವು ಎಲ್ಲಿ?
ಇಲ್ಲವೇ ನಾನು ನನ್ನ ಸಾಲಗಾರರಲ್ಲಿ ಯಾರಿಗೆ ನಿಮ್ಮನ್ನು ಮಾರಿ ಬಿಟ್ಟೆನು?
ಇಗೋ ನಿಮ್ಮ ಅಕ್ರಮಗಳ ನಿಮಿತ್ತ ಮಾರಲ್ಪಟ್ಟಿರಿ;
ನಿಮ್ಮ ದ್ರೋಹಗಳ ನಿಮಿತ್ತ ನಿಮ್ಮ ತಾಯಿ ಕಳುಹಿಸಲ್ಪಟ್ಟಿಳು.
೨ ನಾನು ಬಂದಾಗ ಯಾಕೆ ಒಬ್ಬರು ಇರಲಿಲ್ಲ?
ನಾನು ಕರೆದಾಗ ಯಾಕೆ ಯಾರು ಉತ್ತರ ಕೊಡಲಿಲ್ಲ?
ವಿಮೋಚಿಸದ ಹಾಗೆ ನನ್ನ ಕೈ ಚಿಕ್ಕದ್ದಾಯಿತೋ?
ಇಲ್ಲವೇ ಬಿಡಿಸುವದಕ್ಕೆ ನನ್ನಲ್ಲಿ ತ್ರಾಣೆ ಇಲ್ಲವೋ?
ಇಗೋ ನನ್ನ ಗದರಿಕೆಯಿಂದ ಸಮುದ್ರವನ್ನು ಒಣಗಿಸುತ್ತೇನೆ;
ನದಿಗಳನ್ನು ಅರಣ್ಯವಾಗ ಮಾಡುತ್ತೇನೆ;
ಅವುಗಳ ಮೀನುಗಳು ನೀರಿಲ್ಲದೆ ನಾರುತ್ತವೆ;
ನೀರದಿಸಿ ಸಾಯುತ್ತವೆ.
೩ ಆಕಾಶಕ್ಕೆ ಮೋಡವನ್ನು ಹೊದ್ದಿಸುತ್ತೇನೆ;
ಗೋಣಿಯನ್ನು ಅದರ ವಸ್ತ್ರವಾಗ ಮಾಡುತ್ತೇನೆ.

೪ ಬೇಸರ ಪಟ್ಟವನನ್ನು ಮಾತಿನಿಂದ ಆದರಿಸುವದು ನನಗೆ ತಿಳಿಯುವ ಹಾಗೆ,
ಕರ್ತನಾದ ಯೆಹೋವನು, ನನಗೆ ವಿದ್ವಾಂಸರ ನಾಲಿಗೆಯನ್ನು ಕೊಟ್ಟಿದ್ದಾನೆ;
ಅವನು ಹೊತ್ತಾರೆ ಹೊತ್ತಾರೆ ನನ್ನನ್ನು ಎಚ್ಚರಿಸುತ್ತಾನೆ;
ವಿದ್ವಾಂಸರಂತೆ ಕೇಳುವ ಹಾಗೆ ಅವನು ನನ್ನ ಕಿವಿಯನ್ನು ಎಚ್ಚರಿಸುತ್ತಾನೆ.
೫ ಕರ್ತನಾದ ಯೆಹೋವನು ನನ್ನ ಕಿವಿಯನ್ನು ತೆರೆದಿದ್ದಾನೆ;
ನಾನು ತಿರುಗಿ ಬೀಳಲಿಲ್ಲ, ಹಿಂಜರಿಯಲಿಲ್ಲ.
೬ ನನ್ನ ಬೆನ್ನನ್ನು ಹೊಡಿಯುವವರಿಗೂ,
ನನ್ನ ಕೆನ್ನೆಗಳನ್ನು ಕೂದಲು ಕೀಳುವವರಿಗೂ, ಕೊಟ್ಟೆನು;
ನನ್ನ ಮುಖವನ್ನು ನಿಂದೆಗೂ, ಉಗುಳಿಗೂ, ಅಡಗಿಸಲಿಲ್ಲ.
೭ ಆದರೆ ಕರ್ತನಾದ ಯೆಹೋವನು ನನಗೆ ಸಹಾಯ ಮಾಡುತ್ತಾನೆ;
ಆದದರಿಂದ ನಾನು ಲಜ್ಜೆ ಪಡುವದಿಲ್ಲ;
ಆದದರಿಂದ ನನ್ನ ಮುಖವನ್ನು ಬೆಣಚಿಕಲ್ಲಿನಂತೆ ಮಾಡಿದ್ದೇನೆ;
ಯಾಕಂದರೆ ನಾಚಿಕೆ ಪಡೆನೆಂದು ಬಲ್ಲೆನು.
೮ ನನಗೆ ನೀತಿ ನಿರ್ಣಯಿಸುವವನು ಸಮೀಪವಾಗಿದ್ದಾನೆ;
ನನ್ನ ಸಂಗಡ ವ್ಯಾಜ್ಯವಾಡುವವನ್ಯಾರು!
ನಾವು ಕೂಡ ನಿಂತು ಕೊಳ್ಳೋಣ;
ನನ್ನ ಎದುರಾಳಿ ಯಾರು! ನನ್ನ ಬಳಿಗೆ ಬರಲಿ.
೯ ಇಗೋ ಕರ್ತನಾದ ಯೆಹೋವನು ನನಗೆ ಸಹಾಯ ಮಾಡುತ್ತಾನೆ;
ನನ್ನ ಮೇಲೆ ಅಪರಾಧ ಹೊರಿಸುವವನು ಯಾರು!
ಇಗೋ ಅವರೆಲ್ಲರು ವಸ್ತ್ರದಂತೆ ಜೀರ್ಣವಾಗುವರು,
ನುಸಿ ಅವರನ್ನು ತಿಂದು ಬಿಡುವದು.

೧೦ ನಿಮ್ಮೊಳಗೆ ಕರ್ತನಿಗೆ ಭಯ ಪಟ್ಟು,
ಅವನ ಸೇವಕನ ಶಬ್ದವನ್ನು ಕೇಳಿ,
ಬೆಳಕಿಲ್ಲದೆ, ಕತ್ತಲೆಯಲ್ಲಿ ನಡಿಯುವವನು ಯಾರು!
ಅವನು ಕರ್ತನ ಹೆಸರಿನಲ್ಲಿ ನಂಬಿಕೆ ಇಟ್ಟು,
ತನ್ನ ದೇವರ ಮೇಲೆ ಆತು ಕೊಳ್ಳಲಿ.
೧೧ ಇಗೋ ಬೆಂಕಿಯನ್ನು ಹಚ್ಚಿ,
ಕಿಡಿಗಳನ್ನು ಕಟ್ಟಿ ಕೊಳ್ಳುವವರೆಲ್ಲರೇ!
ನಿಮ್ಮ ಬೆಂಕಿಯ ಬೆಳಕಿನಲ್ಲಿಯೂ,
ನೀವು ಹೊತ್ತಿಸಿದ ಕಿಡಿಗಳಲ್ಲಿಯೂ ನಡಿಯಿರಿ;
ನನ್ನ ಕೈಯಿಂದ ನಿಮಗಾಗುವದು ಇದೇ—
ದುಃಖದಲ್ಲಿ ಮಲಗುವಿರಿ.



## ೫೧. ಸಂಧಿ.

೧ ನೀತಿಯನ್ನು ಹಿಂದಟ್ಟುವವರೇ!
ಕರ್ತನನ್ನು ಹುಡುಕುವವರೇ!
ನನಗೆ ಕಿವಿ ಕೊಡಿರಿ.
ನೀವು ಕೆತ್ತಲ್ಪಟ್ಟ ಬಂಡೆಯನ್ನೂ,
ನೀವು ಅಗೆಯಲ್ಪಟ್ಟ ಹಳ್ಳದ ಕೂಣೆಯನ್ನೂ, ನೋಡಿರಿ.
೨ ನಿಮ್ಮ ತಂದೆಯಾದ ಅಬ್ರಹಾಮನನ್ನೂ,
ನಿಮ್ಮನ್ನು ಹೆತ್ತ ಸಾರಳನ್ನೂ ನೋಡಿರಿ.
ಯಾಕಂದರೆ, ನಾನು ಅವನೊಬ್ಬನನ್ನೇ ಕರೆದು, ಆಶೀರ್ವದಿಸಿ, ಹೆಚ್ಚಿಸಿದೆನು.
೩ ಯಾಕಂದರೆ, ಕರ್ತನು ಚಿಯೋನನ್ನು ಆದರಿಸಿ,
ಅದರ ಹಾಳು ಸ್ಥಳಗಳನ್ನೆಲ್ಲಾ ಆದರಿಸಿ,
ಅದರ ಅರಣ್ಯವನ್ನು ಏದೆನಿನ ಹಾಗೆಯೂ,
ಅದರ ಕಾಡನ್ನು ಕರ್ತನ ತೋಟದ ಹಾಗೆಯೂ, ಮಾಡುವನು.
ಆನಂದವೂ, ಸಂತೋಷವೂ, ಸ್ತುತಿಯೂ, ಹಾಡುವ ಶಬ್ದವೂ, ಅದರಲ್ಲಿ ಸಿಕ್ಕುವವು.

೪ ನನ್ನ ಜನತೇ! ನನಗೆ ಲಕ್ಷ್ಯವಿರಿರಿ;
ನನ್ನ ಜನ ಸಮೂಹವೇ! ನನಗೆ ಕಿವಿ ಕೊಡು;
ಯಾಕಂದರೆ, ನ್ಯಾಯಪ್ರಮಾಣವು ನನ್ನಿಂದ ಹೊರಡುವದು;
ನನ್ನ ನ್ಯಾಯವನ್ನು ಜನಗಳ ಬೆಳಕಾಗಿ ಸ್ಥಾಪಿಸುವೆನು.
೫ ನನ್ನ ನೀತಿಯು ಸಮೀಪವೇ;
ನನ್ನ ರಕ್ಷಣೆಯು ಹೊರಟಿತು;
ನನ್ನ ತೋಳುಗಳು ಜನಗಳಿಗೆ ನ್ಯಾಯ ತೀರಿಸುವವು;
ನನಗೋಸ್ಕರ ದ್ವೀಪಗಳು ಕಾದು ಕೊಳ್ಳುವವು;
ನನ್ನ ತೋಳಿಗೋಸ್ಕರ ನಿರೀಕ್ಷಿಸುವರು.
೬ ಆಕಾಶಕ್ಕೆ ನಿಮ್ಮ ಕಣ್ಣುಗಳನ್ನು ಎತ್ತಿರಿ,
ಮತ್ತು ಕೆಳಗಿರುವ ಭೂಮಿಯನ್ನು ದೃಷ್ಟಿಸಿರಿ;
ಯಾಕಂದರೆ, ಆಕಾಶವು ಹೊಗೆಯ ಹಾಗೆ ಕಾಣದೆ ಹೋಗುವದು;
ಭೂಮಿಯು ವಸ್ತ್ರದಂತೆ ಜೀರ್ಣವಾಗುವದು;
ಅದರ ನಿವಾಸಿಗಳು ಹಾಗೆಯೇ ಸಾಯುವರು.
ಆದರೆ ನನ್ನ ರಕ್ಷಣೆ ನಿತ್ಯವಾಗಿರುವದು;
ನನ್ನ ನೀತಿಯು ಭಂಗವಾಗದು.

೭ ನೀತಿ ಬಲ್ಲವರೇ!
ಹೃದಯದಲ್ಲಿ ನನ್ನ ನ್ಯಾಯಪ್ರಮಾಣ ಉಂಟಾದ ಜನತೇ!
ನನಗೆ ಕಿವಿ ಕೊಡಿರಿ;
ಮನುಷ್ಯರ ನಿಂದೆಗೆ ಭಯ ಪಡ ಬೇಡಿರಿ;
ಅವರ ದೂಷಣೆಗಳಿಗೆ ದಿಗುಲು ಪಡ ಬೇಡಿರಿ.
೮ ಯಾಕಂದರೆ, ವಸ್ತ್ರದಂತೆ ನುಸಿಯು ಅವರನ್ನು ತಿನ್ನುವದು;
ಉಣ್ಣೆಯಂತೆ ಹುಳವು ಅವರನ್ನು ತಿನ್ನುವದು;
ಆದರೆ ನನ್ನ ನೀತಿ ನಿತ್ಯವಾಗಿಯೂ,
ನನ್ನ ರಕ್ಷಣೆಯು ತಲ ತಲಾಂತರಗಳಿಗೂ, ಇರುವದು.

೯ ಎಚ್ಚರವಾಗು, ಎಚ್ಚರವಾಗು,
ಬಲವನ್ನು ಧರಿಸಿಕೋ, ಕರ್ತನ ತೋಳೇ!
ಹಿಂದಿನ ದಿವಸಗಳಲ್ಲಿಯೂ, ಪೂರ್ವದ ತಲಾಂತರಗಳಲ್ಲಿಯೂ, ಆದಹಾಗೆ, ಎಚ್ಚರವಾಗು.
ರಹಬನ್ನು ಕಡಿದು ಬಿಟ್ಟದ್ದೂ,
ಗರ ಸರ್ಪನ್ನು ಘಾಯ ಮಾಡಿದ್ದೂ, ನೀನಲ್ಲವೋ!
೧೦ ಸಮುದ್ರವನ್ನೂ, ದೊಡ್ಡ ಅಗಾಧದ ನೀರನ್ನೂ, ಒಣಗಿಸಿದಂಥಾದ್ದೂ,
ಸಮುದ್ರದ ಆಳಗಳನ್ನೂ,
ರಕ್ಷಿಸಲ್ಪಟ್ಟವರು ದಾಟುವ ಹಾಗೆ,
ಮಾರ್ಗ ಮಾಡಿದಂಥಾದ್ದೂ, ನೀನಲ್ಲವೋ!
೧೧ ಹೀಗೆ ಕರ್ತನಿಂದ ವಿಮೋಚಿಸಲ್ಪಟ್ಟವರು ತಿರುಗಿ ಕೊಂಡು,
ಹರ್ಷವಾಗಿ ಚಿಯೋನಿಗೆ ಬರುವರು;
ಅವರ ತಲೆಗಳ ಮೇಲೆ ನಿತ್ಯವಾದ ಸಂತೋಷವಿರುವದು;
ಆನಂದವೂ, ಸಂತೋಷವೂ, ಅವರಿಗೆ ದೊರಕುವವು;
ಚಿಂತೆಯೂ, ನಿಟ್ಟುಸುರೂ, ಓಡಿ ಹೋಗುವವು.
೧೨ ನಾನೇ, ನಾನೇ, ನಿಮ್ಮನ್ನು ಆದರಿಸುವವನಾಗಿದ್ದೇನೆ;
ಹಾಗಾದರೆ, ಸಾಯುವ ಮನುಷ್ಯನಿಗೂ,
ಹುಲ್ಲಿನಂತೆ ಎಣಿಸಲ್ಪಡುವ ನರ ಪುತ್ರರಿಗೂ,
ಭಯ ಪಡುವ ನೀನ್ಯಾರು!
೧೩ ನಿನ್ನನ್ನು ಉಂಟು ಮಾಡಿದವನಾದ ಕರ್ತನನ್ನೂ,
ಆಕಾಶವನ್ನು ಹಾಸಿದವನನ್ನೂ,
ಭೂಮಿಯ ಅಸ್ತಿವಾರ ಹಾಕಿದವನನ್ನೂ,
ನೀನು ಮರೆತು,
ಇಕ್ಕಟ್ಟು ಪಡಿಸುವವನ ಉಗ್ರತ್ವಕ್ಕೆ,
ಅವನು ನಾಶಮಾಡುವದಕ್ಕೆ ಸಿದ್ಧವಾಗಿದ್ದಾನೆಂದು ಹೇಳಿ,
ನಿತ್ಯವಾಗಿ ಹಗಲೆಲ್ಲಾ ಅಂಜಿದ್ದೀಯಲ್ಲ?
ಆದರೆ ಇಕ್ಕಟ್ಟು ಪಡಿಸುವವನ ಉಗ್ರವು ಎಲ್ಲಿ!
೧೪ ಬೊಗ್ಗಿದ ತೆಕೆಯವನು ತ್ವರೆಯಾಗಿ ಬಿಡಿಸಲ್ಪಡುವನು;
ಅವನು ಕೂಣೆಯಲ್ಲಿ ಸಾಯುವದಿಲ್ಲ;
ಅವನ ಆಹಾರವು ಕಡಿಮೆಯಾಗುವದಿಲ್ಲ.
೧೫ ಯಾಕಂದರೆ, ಯೆಹೋವನಾದ ನಾನು ನಿನ್ನ ದೇವರಾಗಿದ್ದೇನೆ;
ಸಮುದ್ರದ ತೆರೆಗಳು ಘೂರ್ಜಿಸುವಾಗ ಅದನ್ನು ಗದರಿಸುವವನೇ;
ಸೈನ್ಯಗಳ ಕರ್ತನು ಅವನ ಹೆಸರಾಗಿದೆ.
೧೬ ನನ್ನ ವಾಕ್ಯಗಳನ್ನು ನಿನ್ನ ಬಾಯಿಯಲ್ಲಿ ಇಟ್ಟಿದ್ದೇನೆ;
ಆಕಾಶಗಳನ್ನು ನಿಲುವದಕ್ಕೂ, ಭೂಮಿಯ ಅಸ್ತಿವಾರವನ್ನು ಹಾಕುವದಕ್ಕೂ,
ಚಿಯೋನಿಗೆ—ನೀನು ನನ್ನ ಜನವೆಂದು ಹೇಳುವದಕ್ಕೂ,
ನನ್ನ ಕೈಯ್ಯ ನೆರಳಿನಿಂದ ನಿನ್ನನ್ನು ಮುಚ್ಚಿದ್ದೇನೆ.

೧೭ ಎಚ್ಚರವಾಗು, ಎಚ್ಚರವಾಗು, ಏಳು, ಯೆರೂಸಲೇಮೇ!
ಕರ್ತನ ಕೈಯಿಂದ ಅವನ ಉಗ್ರದ ಪಾತ್ರೆಯನ್ನು ಕುಡಿದವಳೇ!
ತತ್ತರಿಸ ಮಾಡುವ ಪಾತ್ರೆಯ ಮಡ್ಡಿಯನ್ನು ಕುಡಿದು ಹೀರಿ ಬಿಟ್ಟವಳೇ!
೧೮ ಅವಳು ಹೆತ್ತ ಎಲ್ಲಾ ಕುಮಾರರಲ್ಲಿ ಅವಳನ್ನು ನಡಿಸುವದಕ್ಕೆ ಒಬ್ಬನು ಇಲ್ಲ;

ಅವಳು ಬೆಳಸಿದ ಎಲ್ಲಾ ಕುಮಾರರಲ್ಲಿ ಅವಳ ಕೈ ಹಿಡಿಯುವದ
ಕ್ಕೆ ಒಬ್ಬನು ಇಲ್ಲ;
೧೯ ಇವೆರಡು ನಿನಗೆ ಸಂಭವಿಸವೆ—
ನಿನಗೋಸ್ಕರ ಯಾರು ಚಿಂತೆ ಪಡುವರು?
ನಾಶನವೂ ಸಂಹಾರವೂ, ಬರವೂ ಕತ್ತಿಯೂ;
ನಾನು ಯಾರಿಂದ ನಿನ್ನನ್ನು ಆದರಿಸಲಿ?
೨೦ ನಿನ್ನ ಕುಮಾರರು ಮೂರ್ಛೆ ಹೋಗುತ್ತಾರೆ;
ಬಲೆಯಲ್ಲಿ ಸಿಕ್ಕಿದ ಜಿಂಕೆಯಂತೆ,
ಎಲ್ಲಾ ಬೀದಿಗಳ ಮೂಲೆಗಳಲ್ಲಿ ಬಿದ್ದಿದ್ದಾರೆ;
ಕರ್ತನ ಉಗ್ರದಿಂದಲೂ,
ನಿನ್ನ ದೇವರ ಗದರಿಕೆಯಿಂದಲೂ, ತುಂಬಿದ್ದಾರೆ.
೨೧ ಆದದರಿಂದ ದೀನಳೇ!
ಅಮಲಾದವಳೇ!—ಅದರೆ ದ್ರಾಕ್ಷೆ ರಸದಿಂದಲ್ಲ—
೨೨ ಇದನ್ನು ಕೇಳು;
ನಿನ್ನ ಕರ್ತನಾದ ಯೆಹೋವನೂ,
ತನ್ನ ಜನರ ವ್ಯಾಜ್ಯವನ್ನಾಡುವ ನಿನ್ನ ದೇವರೂ, ಹೇಳುವದೇ
ನಂದರೆ—
ಇಗೋ ನಿನ್ನ ಕೈಯೊಳಗಿಂದ ತತ್ತರಿಸ ಮಾಡುವ ಪಾತ್ರೆ
ಯನ್ನೂ,
ನನ್ನ ಉಗ್ರದ ಪಾತ್ರೆಯ ಮಡ್ಡಿಯನ್ನೂ, ತೆಗೆದು ಹಾಕುತ್ತೇ
ನೆ;
ಇನ್ನು ಮೇಲೆ ನೀನು ಅದನ್ನು ಕುಡಿಯುವದಿಲ್ಲ.
೨೩ ಅದರೆ, ನಾವು ಹಾದು ಹೋಗುವ ಹಾಗೆ ಬೊಗ್ಗಿಕೋ ಎಂದು
ನಿನ್ನ ಪ್ರಾಣಕ್ಕೆ ಹೇಳಿ,
ನಿನ್ನನ್ನು ಉಬದ್ರ ಪಡಿಸಿದವರ ಕೈಯಲ್ಲಿ ಅದನ್ನು ಇಡುತ್ತೇನೆ;
ಹಾದು ಹೋಗುವವರಿಗೆ ನೀನು ನಿನ್ನ ಬೆನ್ನನ್ನು ನೆಲದಂತೆಯೂ,
ಬೀದಿಯಂತೆಯೂ, ಇಟ್ಟಿಯಲ್ಲವೋ?

## ೫೨. ಸಂಧಿ.

೧ ಎಚ್ಚರವಾಗು, ಎಚ್ಚರವಾಗು,
ನಿನ್ನ ಬಲವನ್ನು ಧರಿಸಿಕೋ, ಚಿಯೋನೇ!
ನಿನ್ನ ಸಾಂದರ್ಯವಾದ ವಸ್ತ್ರಗಳನ್ನು ಧರಿಸಿಕೋ,
ಯೆರೂಸಲೇಮೇ! ಪರಿಶುದ್ಧ ಪಟ್ಟಣವೇ!
ಯಾಕಂದರೆ, ಇನ್ನು ಮೇಲೆ ಪರಿಛೇದನೆ ಇಲ್ಲದವನೂ,
ಅಪವಿತ್ರನೂ, ನಿನ್ನಲ್ಲಿ ಬರುವದಿಲ್ಲ.
೨ ಧೂಳನ್ನು ಝಾಡಿಸಿ ಬಿಡು;
ಎದ್ದು, ಕೂತುಕೋ, ಯೆರೂಸಲೇಮೇ!
ನಿನ್ನ ಕುತ್ತಿಗೆಯ ಬಂಧಗಳನ್ನು ಬಿಚ್ಚಿಕೋ,
ಚಿಯೋನಿನ ಮಗಳಾದ ಸೆರೆಯವಳೇ!
3 ಯಾಕಂದರೆ, ಕರ್ತನು ಹೀಗೆ ಹೇಳುತ್ತಾನೆ—
ಸುಮ್ಮನೆ ನಿಮ್ಮನ್ನು ಮಾರ ಬಿಟ್ಟಿರಿ;
ಹಣವಿಲ್ಲದೆ ವಿಮೋಚಿಸಲ್ಪಡುವಿರಿ.
೪ ಯಾಕಂದರೆ, ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—
ನನ್ನ ಜನರು ಪೂರ್ವದಲ್ಲಿ ಐಗುಪ್ತಕ್ಕೆ,
ಅಲ್ಲಿ ಪರವಾಸ ಮಾಡುವದಕ್ಕೆ ಇಳಿದು ಹೋದರು;
ಮತ್ತು ಅಶ್ಶೂರಿನವರು ಅವರಿಗೆ ಕಾರಣವಿಲ್ಲದೆ ಬಲಾತ್ಕಾರ
ಮಾಡಿದರು.
೫ ಹಾಗಾದರೆ, ಈಗ ಕರ್ತನು ಅನ್ನುವದೇನಂದರೆ—
ನನಗೆ ಇಲ್ಲಿ ಏನನೆ?
ನನ್ನ ಜನರು ಸುಮ್ಮನೆ ಕೈಯೆಲ್ಪಟ್ಟಿದ್ದಾರಲ್ಲ?
ಅವರನ್ನಾಳುವವರು ಹುಯಿಲಿಡುತ್ತಾರೆಂದು
ಕರ್ತನು ಅನ್ನುತ್ತಾನೆ.
ಯಾವಾಗಲೂ ಹಗಲೆಲ್ಲಾ ನನ್ನ ಹೆಸರು ನಿಂದಿಸಲ್ಪಟ್ಟಿತೆ.
೬ ಆದದರಿಂದ ನನ್ನ ಜನರು ನನ್ನ ಹೆಸರನ್ನು ತಿಳಿಯುವರು;
ಆದದರಿಂದ ಆ ದಿವಸದಲ್ಲಿ ಮಾತಾಡುವವನು ನಾನೇ, ಎಂದು
ತಿಳಿಯುವರು; ಇಗೋ ನಾನೇ.

೭ ಸುವಾರ್ತೆಯನ್ನು ಸಾರಿ, ಸಮಾಧಾನವನ್ನು ಕೇಳ್ಳ ಕೊಟ್ಟು,
ಒಳ್ಳೆದನ್ನು ಸಾರಿ, ರಕ್ಷಣೆಯನ್ನು ಕೇಳ್ಳ ಕೊಟ್ಟು,
ಚಿಯೋನಿಗೆ—ನಿನ್ನ ದೇವರು ಘೊರೆತನ ಮಾಡುತ್ತಾನೆಂದು,
ಹೇಳುವವನ ಪಾದಗಳು, ಬೆಟ್ಟಗಳ ಮೇಲೆ ಎಷ್ಟೋ ಅಂದಾಗಿವೆ!
೮ ನಿನ್ನ ಕೋವರದವರು ಶಬ್ದವನ್ನೆತ್ತುವರು;
ಶಬ್ದದಿಂದ ಏಕವಾಗಿ ಹರ್ಷಿಸುವರು;
ಯಾಕಂದರೆ, ಕರ್ತನು ಚಿಯೋನನ್ನು ತಿರಿಗಿ ತರುವಾಗ,
ಅವರು ಕಣ್ಣಿಗೆ ಕಣ್ಣು ನೋಡುವರು.
೯ ಯೆರೂಸಲೇಮಿನ ಹಾಳು ಸ್ಥಳಗಳೇ!
ಆನಂದ ಧ್ವನಿ ಎತ್ತಿರಿ;
ಏಕವಾಗಿ ಹರ್ಷಿಸಿರಿ;
ಯಾಕಂದರೆ, ಕರ್ತನು ತನ್ನ ಜನರನ್ನು ಆದರಿಸಿದ್ದಾನೆ;
ಯೆರೂಸಲೇಮನ್ನು ವಿಮೋಚಿಸಿದ್ದಾನೆ.
೧೦ ಕರ್ತನು ತನ್ನ ಪರಿಶುದ್ಧವಾದ ತೋಳನ್ನು,
ಎಲ್ಲಾ ಜನಾಂಗಗಳ ಕಣ್ಣುಗಳ ಮುಂದೆ ಬರಿದು ಮಾಡಿದ್ದಾನೆ;
ಭೂಮಿಯ ಅಂತ್ಯಗಳೆಲ್ಲಾ,
ನಮ್ಮ ದೇವರ ರಕ್ಷಣೆಯನ್ನು ನೋಡುವವು.

೧೧ ಹೊರಡಿರಿ, ಹೊರಡಿರಿ, ಅಲ್ಲಿಂದ ಹೋಗಿ ಬಿಡಿರಿ;
ಅಪವಿತ್ರವಾದದ್ದನ್ನು ಮುಟ್ಟ ಬೇಡಿರಿ;
ಅದರ ಮಧ್ಯದಿಂದ ಹೋಗಿ ಬಿಡಿರಿ;
ಕರ್ತನ ಸಾಮಗ್ರಿಯನ್ನು ಹೊರುವವರೇ! ಶುದ್ಧವಾಗಿರ್ರಿ.
೧೨ ಯಾಕಂದರೆ ನೀವು ತ್ವರೆಯಾಗಿ ಹೊರಡುವದಿಲ್ಲ,
ಓಡಿ ಹೋಗುವವರಾಗಿ ಹೋಗುವದಿಲ್ಲ;
ಯಾಕಂದರೆ ಕರ್ತನು ನಿಮ್ಮ ಮುಂದೆ ನಡಿಯುವನು;
ಇಸ್ರಯೇಲಿನ ದೇವರು ನಿಮ್ಮ ಹಿಂಭಾಗವನ್ನು ಭದ್ರ ಮಾಡು
ವನು.

೧೩ ಇಗೋ ನನ್ನ ಸೇವಕನು ವಿವೇಕಿಯಾಗಿ ನಡಿಯುವನು,
ಅವನು ಎತ್ತಲ್ಪಟ್ಟು, ಹೆಚ್ಚಿಸಲ್ಪಟ್ಟು, ಮಹಾ ಉನ್ನತನಾಗು
ವನು.
೧೪ ಅವನ ಮುಖವು ಮನುಷ್ಯರಿಗಿಂತಲೂ,
ಅವನ ಆಕಾರವು ನರಪುತ್ರರಿಗಿಂತಲೂ, ಕುರೂಪವಾದದರಿಂದ,
ಅನೇಕರು ಅವನಿಗೆ ಹ್ಯಾಗೆ ಆಶ್ಚರ್ಯ ಪಟ್ಟರೋ,



೧೫ ಹಾಗೆಯೇ ಅವನು ಬಹಳ ಜನಾಂಗಗಳನ್ನು ಚಿಮಿಕಿಸುವನು;
ಅರಸರು ಅವನ ನಿಮಿತ್ತ ತಮ್ಮ ಬಾಯಿಗಳನ್ನು ಮುಚ್ಚಿ ಕೊ
ಳ್ಳುವರು;
ಯಾಕಂದರೆ, ಅವರಿಗೆ ತಿಳಿಸಲ್ಪಟ್ಟದ್ದನ್ನು ನೋಡುವರು;
ಅವರು ಕೇಳದೆ ಇದ್ದದ್ದನ್ನು ಗ್ರಹಿಸುವರು.

## ೫೩. ಸಂಧಿ.

೧ ನಮ್ಮ ಸುದ್ದಿಯನ್ನು ಯಾರು ನಂಬಿದ್ದಾರೆ?
ಕರ್ತನ ತೋಳು ಯಾರಿಗೆ ಪ್ರಕಟವಾಯಿತು?
೨ ಅವನು ಕುಡಿಯಂತೆಯೂ,
ಒಣಗಿದ ಭೂಮಿಯಿಂದ ಹುಟ್ಟುವ ಬೇರಿನಂತೆಯೂ,
ಅವನ ಮುಂದೆ ಬೆಳೆಯುವನು.
ನಾವು ನೋಡ ತಕ್ಕ ಆಕಾರವೂ ಪ್ರಭೆಯೂ ಅವನಲ್ಲಿ ಇಲ್ಲ;
ನಾವು ಅವನನ್ನು ಅಪೇಕ್ಷಿಸುವ ಹಾಗೆ ಅವನಲ್ಲಿ ರೂಪವು ಇಲ್ಲ.
3 ಅವನು ಮನುಷ್ಯರಿಂದ ತಿರಸ್ಕರಿಸಲ್ಪಟ್ಟವನೂ, ತಳ್ಳಲ್ಪಟ್ಟವ
ನೂ,
ವ್ಯಸನಗಳುಳ್ಳ ಮನುಷ್ಯನೂ, ಕಷ್ಟ ತಿಳಿದವನೂ;
ಆದದರಿಂದ ತಮ್ಮ ಮುಖಗಳನ್ನು ಅವನಿಗೆ ಮರೆ ಮಾಡಿದರು;
ತಿರಸ್ಕರಿಸಲ್ಪಟ್ಟವನಾಗಿದ್ದನು; ಮತ್ತು ನಾವು ಅವನಲ್ಲಿ ಲಕ್ಷ್ಯ
ವಿಡಲಿಲ್ಲ.
೪ ನಿಶ್ಚಯವಾಗಿ ಅವನು ನಮ್ಮ ಕಷ್ಟಗಳನ್ನು ಹೊತ್ತು ಕೊಂ
ಡನು;
ನಮ್ಮ ವ್ಯಸನಗಳನ್ನು ತಾಳಿ ಕೊಂಡನು;
ಆದರೆ ನಾವು ಅವನನ್ನು ಬಾಧಿಸಲ್ಪಟ್ಟವನೆಂದೂ,
ದೇವರಿಂದ ಹೊಡಿಯಲ್ಪಟ್ಟವನೆಂದೂ,
ಕುಂದಿಸಲ್ಪಟ್ಟವನೆಂದೂ, ಎಣಿಸಿದೆವು.
೫ ಆದರೆ ಅವನು ನಮ್ಮ ದ್ರೋಹಗಳ ನಿಮಿತ್ತ ಘಾಯವಾದನು;
ನಮ್ಮ ಅಕ್ರಮಗಳ ನಿಮಿತ್ತ ಜಜ್ಜಲ್ಪಟ್ಟನು;
ನಮ್ಮ ಸಮಾಧಾನಕ್ಕೆ ಕಾರಣವಾದ ಶಿಕ್ಷೆ ಅವನ ಮೇಲೆ ಇತ್ತು;
ಮತ್ತು ಅವನ ಬಾಸುಂಡೆಗಳಿಂದ ನಮಗೆ ಸ್ವಸ್ಥವಾಯಿತು.
೬ ನಾವೆಲ್ಲರು ಕುರಿಗಳ ಹಾಗೆ ತಪ್ಪಿ ಹೋಗಿದ್ದೇವೆ;
ನಮ್ಮ ನಮ್ಮ ಸ್ವಂತ ಮಾರ್ಗಕ್ಕೆ ತಿರುಗಿ ಕೊಂಡಿದ್ದೇವೆ;
ಮತ್ತು ಕರ್ತನು ನಮ್ಮೆಲ್ಲರ ಅಕ್ರಮವನ್ನು ಅವನ ಮೇಲೆ ಬೀಳ
ಮಾಡಿದ್ದಾನೆ.
೭ ಪೀಡಿಸಲ್ಪಟ್ಟನು; ಕುಂದಿ ಹೋದನು;
ಆದರೆ ತನ್ನ ಬಾಯಿಯನ್ನು ತೆರೆಯಲಿಲ್ಲ;
ಕೊಲೆಗೆ ತರಲ್ಪಡುವ ಕುರಿ ಮರಿಯ ಹಾಗೆಯೂ,
ಉಣ್ಣೆ ಕತ್ತರಿಸುವವನ ಮುಂದೆ ಮೌನವಾಗಿರುವ ಕುರಿಯ
ಹಾಗೆಯೂ,
ಅವನು ತನ್ನ ಬಾಯಿಯನ್ನು ತೆರೆಯಲಿಲ್ಲ.
೮ ಬಂಧಕದಿಂದಲೂ ನ್ಯಾಯ ತೀರ್ಪಿಕೆಯಿಂದಲೂ ತೆಗೆಯಲ್ಪಟ್ಟನು;
ಅವನ ಸಂತತಿಯನ್ನು ಯಾರು ವಿವರಿಸುವರು?
ಯಾಕಂದರೆ ಜೀವಿತರ ದೇಶದಿಂದ ಕಡಿಯಲ್ಪಟ್ಟನು;
ನನ್ನ ಜನರ ದ್ರೋಹಕ್ಕಾಗಿ ಅವನಿಗೆ ಬಾಧೆಯಾಯಿತು.
೯ ಮತ್ತು ಅವನ ಸಮಾಧಿ ದುಷ್ಟರ ಸಂಗಡ ನೇಮಿಸಲ್ಪಟ್ಟಿತು;
ಆದರೆ ಅವನ ಮರಣದಲ್ಲಿ ಐಶ್ವರ್ಯವಂತನ ಸಂಗಡ ಇದ್ದನು;
ಯಾಕಂದರೆ ಅವನು ಬಲಾತ್ಕಾರ ಮಾಡಲಿಲ್ಲ,
ಅವನ ಬಾಯಿಯಲ್ಲಿ ಮೋಸವಿರಲಿಲ್ಲ.
೧೦ ಆದಾಗ್ಯೂ ಕರ್ತನು ಅವನನ್ನು ಜಜ್ಜ ಸಂತೋಷ ಪಟ್ಟನು;
ಅವನನ್ನು ದುಃಖ ಪಡಿಸಿದನು.

ಅವನ ಪ್ರಾಣವನ್ನು ಅಪರಾಧ ಬಲಿಯಾಗಿ ಇಟ್ಟ ಮೇಲೆ,
ಅವನು ಸಂತಾನವನ್ನು ನೋಡುವನು;
ತನ್ನ ದಿವಸಗಳನ್ನು ಉದ್ದ ಮಾಡುವನು;
ಮತ್ತು ಕರ್ತನಿಗೆ ಸಂತೋಷವಾದದ್ದು ಅವನ ಕೈಯಲ್ಲಿ ಸಫಲ
ವಾಗುವದು.
೧೧ ಅವನು ತನ್ನ ಪ್ರಾಣ ಕಷ್ಟದ ಫಲವನ್ನು ನೋಡಿ ತೃಪ್ತಿಯಾ
ಗುವನು;
ತನ್ನ ತಿಳುವಿಕೆಯಿಂದ ನೀತಿವಂತನಾದ ನನ್ನ ಸೇವಕನು ಅನೇಕ
ರಿಗೆ ನೀತಿಯನ್ನುಂಟು ಮಾಡುವನು;
ಯಾಕಂದರೆ, ಅವರ ಅಕ್ರಮಗಳನ್ನು ಅವನೇ ತಾಳಿ ಕೊಳ್ಳು
ವನು.
೧೨ ಆದದರಿಂದ ದೊಡ್ಡವರಲ್ಲಿ ಅವನಿಗೆ ಪಾಲು ಕೊಡುವೆನು;
ಬಲಿಷ್ಠರ ಸಂಗಡ ಕೊಳ್ಳೆಯನ್ನು ಪಾಲಿಡುವನು;
ಯಾಕಂದರೆ, ತನ್ನ ಪ್ರಾಣವನ್ನು ಮರಣದ ಪರ್ಯಂತರಕ್ಕೂ
ಹೊಯಿದು ಬಿಟ್ಟು,
ದ್ರೋಹಿಗಳ ಸಂಗಡ ಎಣಿಸಲ್ಪಟ್ಟನು;
ಮತ್ತು ಅವನು ಅನೇಕರ ಪಾಪಗಳನ್ನು ಹೊತ್ತು ಕೊಂಡು,
ದ್ರೋಹಿಗಳಿಗೋಸ್ಕರ ವಿಜ್ಞಾಪನೆ ಮಾಡಿದನು.

## ೫೪. ಸಂಧಿ.

೧ ಹೆರದ ಬಂಜೆಯೇ! ಹರ್ಷಿಸು;
ಪ್ರಸವ ವೇದನೆ ಪಡದವಳೇ! ಹರ್ಷ ಧ್ವನಿ ಎತ್ತಿ ಆರ್ಭಟಿಸು;
ಯಾಕಂದರೆ ಗಂಡನುಂಟಾದವಳ ಮಕ್ಕಳಿಗಿಂತ,
ಹಾಳಾದವಳ ಮಕ್ಕಳು ಹೆಚ್ಚು, ಎಂದು ಕರ್ತನು ಹೇಳುತ್ತಾನೆ.
೨ ನಿನ್ನ ಗುಡಾರದ ಸ್ಥಳವನ್ನು ವಿಸ್ತಾರ ಮಾಡು;
ನಿನ್ನ ನಿವಾಸಗಳ ತೆರೆಗಳನ್ನು ಅಗಲ ಮಾಡು;
ಹಿಂತೆಗೆಯ ಬೇಡ;
ನಿನ್ನ ಹಗ್ಗಗಳನ್ನು ಉದ್ದ ಮಾಡು;
ನಿನ್ನ ಗೂಟಗಳನ್ನು ಬಿಗಿ ಮಾಡು.
3 ಯಾಕಂದರೆ, ಬಲಗಡೆಗೂ ಎಡಗಡೆಗೂ ಅಭಿವೃದ್ಧಿಯಾಗುವಿ,
ನಿನ್ನ ಸಂತಾನವು ಜನಾಂಗಗಳನ್ನು ಸ್ವತಂತ್ರಿಸಿ ಕೊಳ್ಳುವದು;
ಹಾಳಾದ ಪಟ್ಟಣಗಳನ್ನು ನಿವಾಸವಾಗ ಮಾಡುವರು.
೪ ಭಯ ಪಡ ಬೇಡ; ಯಾಕಂದರೆ, ನಿನಗೆ ನಾಚಿಕೆಯಾಗುವದಿಲ್ಲ;
ಲಜ್ಜೆ ಪಡ ಬೇಡ; ಯಾಕಂದರೆ, ನಿನಗೆ ನಿಂದೆಯಾಗುವದಿಲ್ಲ;
ಯಾಕಂದರೆ, ನಿನ್ನ ಯೌವನದ ನಾಚಿಕೆಯನ್ನು ಮರೆತು
ಬಿಡುವಿ;
ನಿನ್ನ ವೆಧವೆತನದ ತಿರಸ್ಕಾರವನ್ನು ಜ್ಞಾಪಕ ಮಾಡದೆ ಇರುವಿ.
೫ ಯಾಕಂದರೆ, ನಿನ್ನ ಗಂಡನು ನಿನ್ನನ್ನು ಉಂಟು ಮಾಡಿದ
ವನೇ,

ಸೈನ್ಯಗಳ ಕರ್ತನು ಅವನ ಹೆಸರಾಗಿದೆ;
ನಿನ್ನ ವಿಮೋಚಕನು, ಇಸ್ರಯೇಲಿನ ಪರಿಶುದ್ಧನೇ;
ಸಮಸ್ತ ಭೂಮಿಯ ದೇವರೆಂದು ಕರೆಯಲ್ಪಡುವನು.
೬ ಯಾಕಂದರೆ, ಬಿಡಲ್ಪಟ್ಟ, ಆತ್ಮದಲ್ಲಿ ವ್ಯಥೆ ಪಡುವ, ಹೆಂಗಸಿನ ಹಾಗೆ,
ಕರ್ತನು ನಿನ್ನನ್ನು ಕರೆದಿದ್ದಾನೆ,
ತಳ್ಳಲ್ಪಟ್ಟ ಯೌವನದ ಹೆಂಡತಿಯ ಹಾಗೆಯೇ,
ಎಂದು ನಿನ್ನ ದೇವರು ಹೇಳುತ್ತಾನೆ.
೭ ಕ್ಷಣಮಾತ್ರ ನಿನ್ನನ್ನು ಬಿಟ್ಟು ಬಿಟ್ಟಿನು,
ಆದರೆ ಕೊಡ್ಡ ಅಂತಃಕರುಣೆಗಳಿಂದ ನಿನ್ನನ್ನು ಕೂಡಿಸುವೆನು.
೮ ಕೌದ್ರವು ಏರಿ ಬರುವಾಗ ನನ್ನ ಮುಖವನ್ನು ಒಂದು ಕ್ಷಣ ನಿನಗೆ ಮರೆ ಮಾಡಿದೆನು;
ಆದರೆ ನಿತ್ಯವಾದ ಕೃಪೆಯಿಂದ ನಿನ್ನ ಮೇಲೆ ಅಂತಃಕರುಣೆ ಪಡುತ್ತೇನೆಂದು,
ನಿನ್ನ ವಿಮೋಚಕನಾದ ಕರ್ತನು ಹೇಳುತ್ತಾನೆ.
೯ ಯಾಕಂದರೆ, ಇದು ನನಗೆ ನೋಹನ ನೀರುಗಳ ಹಾಗೆದೆ;
ನೋಹನ ನೀರುಗಳು ಇನ್ನು ಭೂಮಿಯ ಮೇಲೆ ಹರಿಯುವದಿಲ್ಲವೆಂದು,
ಆಣೆ ಇಟ್ಟು ಕೊಂಡೆನಲ್ಲ!
ಹಾಗೆಯೇ ನಿನ್ನ ಮೇಲೆ ಕೌದ್ರವಿಡುವದಿಲ್ಲವೆಂದೂ,
ನಿನ್ನನ್ನು ಗದರಿಸುವದಿಲ್ಲವೆಂದೂ,
ಆಣೆ ಇಟ್ಟು ಕೊಂಡಿದ್ದೇನೆ.
೧೦ ಯಾಕಂದರೆ, ಬೆಟ್ಟಗಳು ತೊಲಗುವವು;
ಗುಡ್ಡಗಳು ಕದಲುವವು;
ಆದರೆ ನನ್ನ ಕೃಪೆ ನಿನ್ನಿಂದ ತೊಲಗುವದಿಲ್ಲ;
ನನ್ನ ಸಮಾಧಾನದ ಒಡಂಬಡಿಕೆ ಕದಲುವದಿಲ್ಲವೆಂದು,
ನಿನ್ನ ಮೇಲೆ ಅಂತಃಕರುಣೆ ಪಡುವ ಕರ್ತನು ಹೇಳುತ್ತಾನೆ.

೧೧ ದೀನಳೇ! ಬಿರುಗಾಳಿಯಿಂದ ಬಡಿಯಲ್ಪಟ್ಟು, ಆದರಣೆ ಹೊಂದದವಳೇ!
ಇಗೋ, ನಾನು ನಿನ್ನ ಕಲ್ಲುಗಳನ್ನು ಕಾಡಿಗೆಯಿಂದ ಇರಿಸುತ್ತೇನೆ;
ನೀಲಗಳಿಂದ ನಿನ್ನ ಅಸ್ತಿವಾರವನ್ನು ಹಾಕುತ್ತೇನೆ.
೧೨ ನಿನ್ನ ಶಿಖರಗಳನ್ನು ಅಕ್ಕೀಕಗಳಿಂದಲೂ,
ನಿನ್ನ ಬಾಗಲುಗಳನ್ನು ಥಳಥಳಿಸುವ ರತ್ನಗಳಿಂದಲೂ,
ನಿನ್ನ ಮೇರೆಗಳನ್ನೆಲ್ಲಾ ಅಮೂಲ್ಯವಾದ ಕಲ್ಲುಗಳಿಂದಲೂ,
ಉಂಟು ಮಾಡುತ್ತೇನೆ.
೧೩ ಮತ್ತು ನಿನ್ನ ಮಕ್ಕಳೆಲ್ಲಾ ಕರ್ತನಿಂದ ಬೋಧಿಸಲ್ಪಡುವರು;
ನಿನ್ನ ಮಕ್ಕಳಿಗೆ ಸಮಾಧಾನವು ಬಹಳವಾಗಿರುವದು.
೧೪ ನೀತಿಯಲ್ಲಿ ಸ್ಥಾಪಿಸಲ್ಪಡುವಿ,
ಬಲಾತ್ಕಾರಕ್ಕೆ ದೂರವಾಗಿರುವಿ;
ಯಾಕಂದರೆ, ಭಯ ಪಡದೆ ಇರುವಿ;
ಹೆದರಿಕೆಗೆ ದೂರವಾಗಿರುವಿ;
ಯಾಕಂದರೆ ಅದು ನಿನ್ನ ಸಮೀಪಕ್ಕೆ ಬಾರದು.
೧೫ ಇಗೋ, ಕೂಡೇ ಕೂಡಿ ಕೊಳ್ಳುವರು, ಆದರೆ ನನ್ನಿಂದಲ್ಲ;
ನಿನಗೆ ವಿರೋಧವಾಗಿ ಕೂಡುವವನ್ಯಾರೋ, ಅವನು ನಿನಗೆ ಬಿಳ ಬೀಳುವನು.
೧೬ ಇಗೋ ನಾನು ಬೆಂಕಿಯಲ್ಲಿ ಇದಲನ್ನು ಊದುವಂಥ,
ತನ್ನ ಕೆಲಸಕ್ಕೆ ಆಯುಧವನ್ನು ಹೊರಗೆ ತರುವಂಥ,
ಕಮ್ಮಾರನನ್ನು ನಿರ್ಮಿಸಿದ್ದೇನೆ;
ಕೆಡಿಸುವದಕ್ಕೆ ನಾಶ ಮಾಡುವವನನ್ನು ಸಹ ನಾನು ನಿರ್ಮಿಸಿದ್ದೇನೆ.
೧೭ ನಿನಗೆ ವಿರೋಧವಾಗಿ ರೂಪಿಸಲ್ಪಟ್ಟ ಆಯುಧಗಳೆಲ್ಲಾ ಸಫಲವಾಗುವದಿಲ್ಲ;
ನಿನ್ನ ಸಂಗಡ ನ್ಯಾಯಕ್ಕೆ ನಿಂತು ಕೊಳ್ಳುವ ನಾಲಿಗೆಗಳನ್ನೆಲ್ಲಾ ದುಷ್ಟವೆಂದು ತೀರಿಸುವಿ.
ಇದೇ ಕರ್ತನ ಸೇವಕರ ಬಾಧ್ಯತೆಯು,
ಮತ್ತು ಅವರ ನೀತಿಯು ನನ್ನಿಂದಲೇ, ಎಂದು ಕರ್ತನು ಹೇಳುತ್ತಾನೆ.

## ೫೫. ಸಂಧಿ.

೧ ಎಲೋ ನೀರಡಿಕೆಯುಳ್ಳವರೆಲ್ಲರೇ! ನೀರಿನ ಬಳಿಗೆ ಬನ್ನಿ;
ಹಣವಿಲ್ಲದವನು ಸಹ ಬಂದು, ಕೊಂಡು ಕೊಂಡು ಉಣ್ಣಿರಿ;
ಹೌದು ಬನ್ನಿ, ಹಣವಿಲ್ಲದೆ, ಕ್ರಯವಿಲ್ಲದೆ,
ದ್ರಾಕ್ಷೆ ರಸವನ್ನೂ ಹಾಲನ್ನೂ ಕೊಂಡು ಕೊಳ್ಳಿರಿ.
೨ ಕೊಟ್ಟಿಯಲ್ಲದ್ದಕ್ಕೆ ಹಣವನ್ನೂ,
ತೃಪ್ತಿ ಪಡಿಸದ್ದಕ್ಕೆ ನಿಮ್ಮ ಕಷ್ಟವನ್ನೂ ಯಾಕೆ ಕೊಡುತ್ತೀರಿ!
ಜಾಗ್ರತೆಯಾಗಿ ನನ್ನನ್ನು ಕೇಳಿ, ಒಳ್ಳೇದನ್ನು ಉಣ್ಣಿರಿ;
ಆಗ ನಿಮ್ಮ ಪ್ರಾಣವು ಕೊಬ್ಬಿನಲ್ಲಿ ಆನಂದ ಪಡುವದು.
೩ ನಿಮ್ಮ ಕಿವಿಗಳನ್ನು ಬೊಗ್ಗಿಸಿ ನನ್ನ ಬಳಿಗೆ ಬನ್ನಿ,
ಕೇಳಿರಿ, ಆಗ ನಿಮ್ಮ ಪ್ರಾಣವು ಬದುಕುವದು;
ಮತ್ತು ನಿಮ್ಮ ಸಂಗಡ ನಿತ್ಯವಾದ ಒಡಂಬಡಿಕೆಯನ್ನು ಮಾಡುವೆನು,
ದಾವೀದನ ನಿಶ್ಚಯವಾದ ಕೃಪೆಗಳನ್ನೇ.
೪ ಇಗೋ, ಅವನನ್ನು ಜನಗಳಿಗೆ ಸಾಕ್ಷಿಯವನಾಗಿಯೂ,
ಜನಗಳಿಗೆ ನಾಯಕನಾಗಿಯೂ, ಆಜ್ಞೆ ಕೊಡುವವನಾಗಿಯೂ,
ಇಟ್ಟಿದ್ದೇನೆ.
೫ ಇಗೋ, ನೀನು ತಿಳಿಯದ ಜನಾಂಗವನ್ನು ಕರೆಯುವಿ,
ಮತ್ತು ನಿನ್ನನ್ನು ತಿಳಿಯದ ಜನಾಂಗಗಳು ನಿನ್ನ ಬಳಿಗೆ ಓಡಿ ಬರುವವು;
ನಿನ್ನ ದೇವರಾದ ಕರ್ತನ ನಿಮಿತ್ತವೂ, ಇಸ್ರಯೇಲಿನ ಪರಿಶುದ್ಧನ ನಿಮಿತ್ತವೂ,
ಯಾಕಂದರೆ, ನಿನ್ನನ್ನು ಮಹಿಮೆ ಪಡಿಸಿದ್ದಾನೆ.

೬ ಅವನು ಶಿಕ್ಕುವ ಕಾಲದಲ್ಲಿ ಕರ್ತನನ್ನು ಹುಡುಕಿರಿ;
ಅವನು ಸಮೀಪವಾಗಿರುವಾಗಲೇ ಅವನನ್ನು ಕರೆಯಿರಿ.
೭ ದುಷ್ಟನು ತನ್ನ ಮಾರ್ಗವನ್ನೂ,
ಅಕ್ರಮಗಾರನು ತನ್ನ ಆಲೋಚನೆಗಳನ್ನೂ ಬಿಟ್ಟುಬಿಟ್ಟು,
ಕರ್ತನ ಬಳಿಗೆ ತಿರುಗಲಿ,
ಆಗಲವನು ಅವನನ್ನು ಕರುಣಿಸುವನು;
ನಮ್ಮ ದೇವರ ಬಳಿಗೆ ತಿರುಗಲಿ,
ಯಾಕಂದರೆ, ಅವನು ಬಹಳವಾಗಿ ಮನ್ನಿಸುವನು.



೮ ಯಾಕಂದರೆ, ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ,
ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ,
ಎಂದು ಕರ್ತನು ಹೇಳುತ್ತಾನೆ.
೯ ಯಾಕಂದರೆ, ಆಕಾಶವು ಭೂಮಿಯ ಮೇಲೆ ಎತ್ತರ ಉನ್ನತವೋ,
ನನ್ನ ಮಾರ್ಗಗಳು ನಿಮ್ಮ ಮಾರ್ಗಗಳ ಮೇಲೆಯೂ,
ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳ ಮೇಲೆಯೂ,
ಅತ್ಯುನ್ನತವಾಗಿವೆ.
೧೦ ಯಾಕಂದರೆ, ಮಳೆಯೂ ಹಿಮವೂ ಆಕಾಶದಿಂದ ಇಳಿದು ಬಂದು,
ಅಲ್ಲಿ ತಿರಿಗಿ ಹೋಗದೆ, ಭೂಮಿಯನ್ನು ತೋಯಿಸಿ,
ಚಿಗುರುವನಿಗೆ ಬೀಜವನ್ನೂ, ಉಣ್ಣುವವನಿಗೆ ಕೊಟ್ಟಿಯನ್ನೂ, ಕೊಡುವ ಹಾಗೆ,
ಫಲವನ್ನು ಹುಟ್ಟಿಸಿ, ಜಿಗುರ ಮಾಡುವದು, ಹ್ಯಾಗೋ,
೧೧ ಹಾಗೆಯೇ ನನ್ನ ಬಾಯಿಂದ ಹೊರಡುವ ನನ್ನ ವಾಕ್ಯವಿರುವದು;
ಅದು ಸುಮ್ಮನೆ ನನ್ನ ಬಳಿಗೆ ತಿರುಗಿ ಕೊಳ್ಳದೆ,
ನಾನು ಯಾವದರಲ್ಲಿ ಮೆಚ್ಚುತ್ತೇನೋ ಅದನ್ನು ಮಾಡುವದು;
ನಾನು ಯಾವದರ ನಿಮಿತ್ತ ಅದನ್ನು ಕಳುಹಿಸಿದೆನೋ, ಅದರಲ್ಲಿ ಸಫಲವಾಗುವದು.
೧೨ ಯಾಕಂದರೆ, ಸಂತೋಷದಿಂದ ಹೊರಡುವಿರಿ,
ಸಮಾಧಾನದಿಂದ ನಡಿಸಲ್ಪಡುವಿರಿ;
ಬೆಟ್ಟಗಳೂ ಗುಡ್ಡಗಳೂ ನಿಮ್ಮ ಮುಂದೆ ಹರ್ಷಧ್ವನಿ ಎತ್ತುವವು,
ಹೊಲದ ಮರಗಳೆಲ್ಲಾ ಕೈ ತಟ್ಟುವವು.
೧೩ ಮುಳ್ಳಿನ ಗಿಡಕ್ಕೆ ಬದಲಾಗಿ ಸುರಗಿ ಮರವು ಬೆಳೆಯುವದು,
ತುಂಬೆಗೆ ಬದಲಾಗಿ ಗಂಧದ ಗಿಡವು ಬೆಳೆಯುವದು;
ಅದು ಕರ್ತನಿಗೆ ಹೆಸರಾಗಿಯೂ,
ಕಡಿಯಲ್ಪಡದ ನಿತ್ಯವಾದ ಗುರುತಾಗಿಯೂ, ಇರುವದು.

## ೫೬. ಸಂಧಿ.

೧ ಕರ್ತನು ಹೇಳುವದೇನಂದರೆ—
ನ್ಯಾಯವನ್ನು ಕೈಕೊಳ್ಳಿರಿ, ನೀತಿಯನ್ನು ಮಾಡಿರಿ;
ಯಾಕಂದರೆ, ನನ್ನ ರಕ್ಷಣೆ ಬರುವದಕ್ಕೂ,
ನನ್ನ ನೀತಿ ಪ್ರಕಟವಾಗುವದಕ್ಕೂ, ಸಮೀಪವಾಗಿದೆ.
೨ ಇದನ್ನು ಮಾಡುವ ಮನುಷ್ಯನೂ,
ಇದನ್ನು ಹಿಡುಕೊಳ್ಳುವ ನರ ಪುತ್ರನೂ ಭಾಗ್ಯವಂತನು—
ಯಾರಂದರೆ, ಸಬ್ಬತ್ ದಿವಸವನ್ನು ಅಪವಿತ್ರ ಮಾಡದೆ ಕೈಕೊಳ್ಳುವವನೂ,
ಯಾವ ಕೇಡನ್ನು ಮಾಡದ ಹಾಗೆ ತನ್ನ ಕೈಯನ್ನು ಕಾಪಾಡುವವನೂ.
೩ ಇದಲ್ಲದೆ ಕರ್ತನನ್ನು ಅಂಟಿ ಕೊಳ್ಳುವ ಅನ್ಯನ ಮಗನು—
ಕರ್ತನು ನನ್ನನ್ನು ತನ್ನ ಜನಕ್ಕೆ ಬೇರೆಯೇ ಬೇರೆ ಮಾಡಿದ್ದಾನೆಂದೂ,
ಪೊಜ್ಜೆಯು—ಇಗೋ ನಾನು ಒಣಗಿದ ಗಿಡವೆಂದೂ, ಹೇಳದಿರಲಿ.
೪ ಯಾಕಂದರೆ, ಕರ್ತನು ಪೊಜ್ಜೆಯರಿಗೆ ಹೇಳುವದೇನಂದರೆ—
ನನ್ನ ಸಬ್ಬತ್ ದಿವಸಗಳನ್ನು ಕೈಕೊಂಡು,
ನಾನು ಮೆಚ್ಚುವಂಥಾದ್ದನ್ನು ಆದು ಕೊಂಡು,
ನನ್ನ ಒಡಂಬಡಿಕೆಯನ್ನು ಹಿಡುಕೊಳ್ಳುವವರ್ಯಾರೋ,
೫ ಅವರಿಗೆ ನಾನು ನನ್ನ ಮನೆಯಲ್ಲಿಯೂ, ನನ್ನ ಗೋಡೆಗಳ ಒಳಗೂ,
ಕುಮಾರ ಕುಮಾರ್ತೆಗಳಿಗಿಂತ ಉತ್ತಮವಾದ ಸ್ಥಳವನ್ನೂ ಹೆಸರನ್ನೂ ಕೊಡುತ್ತೇನೆ;
ನಿರ್ಮೂಲವಾಗದಂಥ ನಿತ್ಯ ಹೆಸರನ್ನು ಅಂಥಾವನಿಗೆ ಕೊಡುತ್ತೇನೆ.
೬ ಮತ್ತು ಕರ್ತನನ್ನು ಸೇವಿಸುವದಕ್ಕೂ, ಅವನ ಹೆಸರನ್ನು ಪ್ರೀತಿ ಮಾಡುವದಕ್ಕೂ,
ಅವನಿಗೆ ದಾಸರಾಗಿರುವದಕ್ಕೂ, ಕರ್ತನನ್ನು ಅಂಟಿ ಕೊಳ್ಳುವ ಅನ್ಯರ ಮಕ್ಕಳು,
ಸಬ್ಬತ್ ದಿವಸವನ್ನು ಅಪವಿತ್ರ ಮಾಡದೆ ಕೈಕೊಳ್ಳುವಕೆಲ್ಲರೂ,
ನನ್ನ ಒಡಂಬಡಿಕೆಯನ್ನು ಹಿಡುಕೊಳ್ಳುವವರೂ—
೭ ಅವರನ್ನು ನನ್ನ ಪರಿಶುದ್ಧ ಪರ್ವತಕ್ಕೆ ತರುತ್ತೇನೆ.
ನನ್ನ ಪ್ರಾರ್ಥನೆಯ ಮನೆಯಲ್ಲಿ ಅವರಿಗೆ ಸಂತೋಷವನ್ನುಂಟು ಮಾಡುತ್ತೇನೆ;
ಅವರ ಹೋಮಗಳೂ ಬಲಿಗಳೂ ನನ್ನ ಬಲಿಪೀಠದ ಮೇಲೆ ಅಂಗೀಕಾರವಾಗುವವು;
ಯಾಕಂದರೆ, ನನ್ನ ಮನೆಯು ಸಮಸ್ತ ಜನಗಳಿಗೆ ಪ್ರಾರ್ಥನೆಯ ಮನೆಯೆಂದು ಕರೆಯಲ್ಪಡುವದು.
೮ ಇಸ್ರಯೇಲಿನ ತಳ್ಳಲ್ಪಟ್ಟವರನ್ನು ಕೂಡಿಸುವಂಥ
ಕರ್ತನಾದ ಯೆಹೋವನು ಅನ್ನುವದೇನಂದರೆ—
ಕೂಡಿಸಲ್ಪಟ್ಟ ಅವನವರು ಅಲ್ಲದೆ, ಬೇರೊಬ್ಬರನ್ನು ಅವನ ಕಡೆಗೆ ಕೂಡಿಸುತ್ತೇನೆ.

೯ ಹೊಲದ ಎಲ್ಲಾ ಮೃಗಗಳೇ!
ಅಡವಿಯಲ್ಲಿರುವ ಎಲ್ಲಾ ಮೃಗಗಳೇ! ತಿನ್ನುವದಕ್ಕೆ ಬನ್ನಿ.
೧೦ ಅವನ ಕೋವರದವರು ಕುರುಡರಾಗಿದ್ದಾರೆ, ಅವರೆಲ್ಲರಿಗೆ ತಿಳುವಿಕೆ ಇಲ್ಲ;
ಅವರೆಲ್ಲರು ಮೂಕ ನಾಯಿಗಳು, ಬೊಗಳಲಾರರು;
ಕನಸು ನೋಡುತ್ತಾರೆ, ಮಲಗಿ ಕೊಳ್ಳುತ್ತಾರೆ;
ತೂಕಡಿಸುವದನ್ನು ಇಷ್ಟಪಡುತ್ತಾರೆ.
೧೧ ಹೌದು, ಅತ್ಯಾಶೆಯುಳ್ಳ ನಾಯಿಗಳಾಗಿದ್ದಾರೆ, ಸಾಕನ್ನಲಾರರು;
ಕುರುಬರು ತಾವೇ ಗ್ರಹಿಕೆಯನ್ನು ಅರಿಯರು;
ಅವರೆಲ್ಲರು ತಮ್ಮ ತಮ್ಮ ಮಾರ್ಗಕ್ಕೂ,
ಸ್ವಂತ ಲಾಭ ಶಿಕ್ಕುವ ಕಡೆಗೂ, ತಿರುಗಿ ಕೊಳ್ಳುತ್ತಾರೆ.
೧೨ ಬನ್ನಿ ದ್ರಾಕ್ಷೆ ರಸವನ್ನು ತರುತ್ತೇನೆ;
ಸಾರಾಯಿಂದ ತೃಪ್ತಿ ಪಡೋಣ;
ನಾಳೆ ಈ ಹೊತ್ತಿನ ಹಾಗೆಯೂ,
ಶಾನೆ ಹೆಚ್ಚಾಗಿಯೂ ಇರುವದೆಂದು ಅನ್ನುತ್ತಾರೆ.

## ೫೭. ಸಂಧಿ.

೧ ನೀತಿವಂತನು ನಾಶವಾಗುತ್ತಾನೆ;
ಆದರೆ ಯಾರೂ ಅದನ್ನು ಮನಸ್ಸಿಗೆ ತರುವದಿಲ್ಲ;
ಸತ್ಯವಂತರು ತಕ್ಕೊಂಡು ಹೋಗಲ್ಪಡುತ್ತಾರೆ,

ಆದರೆ ನೀತಿವಂತನು ಕೇಡಿನಿಂದ ತಕ್ಕೊಂಡು ಹೋಗಲ್ಪಡುತ್ತಾನೆಂದು ಯಾರೂ ಯೋಚಿಸುವದಿಲ್ಲ.
೨ ತನ್ನ ನೆಟ್ಟಿತನದಲ್ಲಿ ನಡೆದು ಕೊಳ್ಳುವವನು, ಸಮಾಧಾನದಲ್ಲಿ ಪ್ರವೇಶಿಸುತ್ತಾನೆ; ಅವರು ತಮ್ಮ ತಮ್ಮ ಮಂಚಗಳ ಮೇಲೆ ವಿಶ್ರಾಂತಿ ಹೊಂದುತ್ತಾರೆ.

೩ ಆದರೆ ನೀವು, ಓ ಮಂತ್ರಗಾರ್ತಿಯ ಕುಮಾರರೇ! ಜಾರನ ಸೂಳೆಯ ಸಂತಾನವೇ! ಇಲ್ಲಿಗೆ ಸಮೀಪಿಸಿರಿ.
೪ ಯಾರ ವಿಷಯ ಕುಚೋದ್ಯ ಮಾಡುತ್ತೀರಿ! ಯಾರ ವಿಷಯ ಬಾಯಿ ಬಿಟ್ಟು, ನಾಲಿಗೆ ಉದ್ದ ಮಾಡುತ್ತೀರಿ? ನೀವು ದ್ರೋಹದ ಮಕ್ಕಳೂ, ಮೋಸದ ಸಂತಾನವೂ, ಅಲ್ಲವೋ!
೫ ಹಸುರಾದ ಎಲ್ಲಾ ಮರಗಳ ಕೆಳಗೆ, ವಿಗ್ರಹಗಳಿಂದ ಮದವೆಬ್ಬಿಸಿ ಕೊಳ್ಳುತ್ತೀರಲ್ಲ! ಹಳ್ಳಗಳಲ್ಲಿ, ಬಂಡೆಗಳ ಬಿರುಕುಗಳಲ್ಲಿ, ಮಕ್ಕಳನ್ನು ಕೊಂದು ಹಾಕುತ್ತೀರಲ್ಲ!
೬ ಹಳ್ಳದ ನುಣ್ಣಲ್ಲುಗಳು ನಿನ್ನ ಪಾಲಾಗಿವೆ, ಅವೇ ಅವೇ ನಿನ್ನ ಭಾಗವು; ಹೌದು, ಅವಕ್ಕೆ ಪಾನದರ್ಪಣೆಯನ್ನು ಹೊಯಿದಿದ್ದೀ, ಕಾಣಿಕೆಯನ್ನು ಕೊಟ್ಟಿದ್ದೀ; ಇವುಗಳ ನಿಮಿತ್ತ ನಾನು ಕೋಪ ತೀರಿಸುವದಿಲ್ಲವೋ!
೭ ಎತ್ತರವಾದ ಉನ್ನತ ಪರ್ವತದ ಮೇಲೆ ನಿನ್ನ ಮಂಚವನ್ನು ಇಟ್ಟಿದ್ದೀ; ಹೌದು, ಬಲಿ ಅರ್ಪಿಸುವದಕ್ಕೆ ಅಲ್ಲಿಗೆ ಏರಿದ್ದೀ.
೮ ಮತ್ತು ಬಾಗಲಿನ ದ್ವಾರಬಂಧದ ಹಿಂದೆ, ನಿನ್ನ ಜ್ಞಾಪಕವನ್ನು ಇಟ್ಟಿದ್ದೀ; ಯಾಕಂದರೆ, ನನ್ನನ್ನು ಬಿಟ್ಟು, ಬೇರೊಬ್ಬನಿಗೆ ನಿನ್ನನ್ನು ತೋರ ಮಾಡಿ ಕೊಂಡಿದ್ದೀ; ಏರಿ ಹೋಗಿದ್ದೀ, ನಿನ್ನ ಮಂಚವನ್ನು ಅಗಲ ಮಾಡಿದ್ದೀ; ಅವರ ಸಂಗಡ ಒಡಂಬಟ್ಟಿದ್ದೀ; ಅವರ ಮಂಚವನ್ನು ಕಂಡಲ್ಲಿ ಪ್ರೀತಿ ಮಾಡಿದ್ದೀ.
೯ ಎಣ್ಣೆ ಹಚ್ಚಿ ಕೊಂಡು ಅರಸನ ಬಳಿಗೆ ಬಂದಿದ್ದೀ; ನಿನ್ನ ಶೈಲಗಳನ್ನು ಹೆಚ್ಚಿಸಿದ್ದೀ; ದೂರಕ್ಕೆ ನಿನ್ನ ದೂತರನ್ನು ಕಳುಹಿಸಿದ್ದೀ; ಪಾತಾಳದ ಪರ್ಯಂತರ ನಿನ್ನನ್ನು ತಗ್ಗಿಸಿ ಕೊಂಡಿದ್ದೀ.
೧೦ ನಿನ್ನ ಮಾರ್ಗದ ಬಾಹುಳ್ಯದಿಂದ ದಣಿದಿದ್ದೀ; ಆದಾಗ್ಯೂ ವ್ಯರ್ಥವಾಗಿದೆ ಎಂದು ನೀನು ಹೇಳುವದಿಲ್ಲ; ನಿನ್ನ ಕೈಯಲ್ಲಿರುವ ಜೀವವನ್ನು ಕಂಡು ಕೊಂಡಿದ್ದೀ, ಆದದರಿಂದ ನೀನು ಚಿಂತೆ ಪಡುವದಿಲ್ಲ.
೧೧ ಆದರೆ ನೀನು ಸುಳ್ಳು ಹೇಳಿ, ನನ್ನನ್ನು ಜ್ಞಾಪಕ ಮಾಡದೆ, ಅದನ್ನು ಮನಸ್ಸಿಗೆ ತಾರದೆ ಇದ್ದಾಗ, ಯಾರಿಗೆ ಅಂಜಿ ಕೊಂಡು ಭಯ ಪಟ್ಟಿ? ನಾನು ಪೂರ್ವದಿಂದ ಸುಮ್ಮನೆ ಇದ್ದೆನಲ್ಲವೋ! ಆದರೆ ನೀನು ನನಗೆ ಭಯ ಪಡಲಿಲ್ಲ.
೧೨ ನಾನೇ ನಿನ್ನ ನೀತಿಯನ್ನೂ ನಿನ್ನ ಕ್ರಿಯೆಗಳನ್ನೂ ತಿಳಿಯ ಮಾಡುವೆನು; ಅವು ನಿನಗೆ ಪ್ರಯೋಜನವಾಗುವದಿಲ್ಲ.
೧೩ ನೀನು ಕೂಗುವಾಗ, ನಿನ್ನ ವಿಗ್ರಹ ಸಮೂಹಗಳು ನಿನ್ನನ್ನು ತಪ್ಪಿಸಲಿ. ನಿಶ್ಚಯವಾಗಿ ಅವೆಲ್ಲವುಗಳನ್ನು ಘಾಳಿ ಎತ್ತಿ ಕೊಳ್ಳುವದು, ಉಸುರು ಮಾತ್ರ ಅವುಗಳನ್ನು ತಕ್ಕೊಂಡು ಹೋಗುವದು.

ಆದರೆ ನನ್ನಲ್ಲಿ ನಂಬಿಕೆ ಇಡುವವನು, ದೇಶವನ್ನು ವಶ ಮಾಡಿ ಕೊಂಡು, ನನ್ನ ಪರಿಶುದ್ಧ ಪರ್ವತವನ್ನು ಸ್ವತಂತ್ರಿಸಿ ಕೊಳ್ಳುವನು.
೧೪ ಮತ್ತು ಅವನು—ಕಟ್ಟಿ ಹಾಕಿರಿ, ಕಟ್ಟಿ ಹಾಕಿರಿ; ಮಾರ್ಗವನ್ನು ಸಿದ್ಧ ಮಾಡಿರಿ; ನನ್ನ ಜನರ ಮಾರ್ಗದಿಂದ ಎಡತಡೆಯನ್ನು ಎತ್ತಿ ಬಿಡಿರಿ ಎಂದು ಹೇಳುವನು.
೧೫ ಯಾಕಂದರೆ, ಉನ್ನತನೂ, ಎತ್ತರವಾದವನೂ, ನಿತ್ಯವಾಗಿ ವಾಸಿಸುವವನೂ, ಪರಿಶುದ್ಧನೆಂದು ಹೆಸರುಳ್ಳವನೂ, ಹೀಗೆ ಹೇಳುತ್ತಾನೆ—
ನಾನು ಉನ್ನತವಾದ ಪರಿಶುದ್ಧ ಸ್ಥಳದಲ್ಲಿ ವಾಸಿಸುತ್ತೇನೆ. ಜಜ್ಜಲ್ಪಟ್ಟವನ ಸಂಗಡಲೂ, ಅತ್ಮದಲ್ಲಿ ನಲಿಗಿದವನ ಸಂಗಡಲೂ ಸಹ. ನಲಿಗಿದವರ ಅತ್ಮವನ್ನೂ, ಜಜ್ಜಲ್ಪಟ್ಟವರ ಹೃದಯವನ್ನೂ, ಜೀವಿಸ ಮಾಡುವದಕ್ಕೋಸ್ಕರವೇ.
೧೬ ಯಾಕಂದರೆ, ನಾನು ಎಂದೆಂದಿಗೂ ವ್ಯಾಜ್ಯವಾಡುವದಿಲ್ಲ; ಸದಾಕಾಲಕ್ಕೆ ಕ್ರೂದ್ರ ಮಾಡುವದಿಲ್ಲ; ಯಾಕಂದರೆ, ನನ್ನ ಮುಂದೆ ಅತ್ಮವು ಕ್ಷೀಣಿಸುವದು; ನಾನು ಉಂಟು ಮಾಡಿದ ಪ್ರಾಣಗಳೇ.
೧೭ ಅವನ ದುರ್ಲಾಭದ ಅಕ್ರಮಕ್ಕೆ, ಕ್ರೂದ್ರವಾಗಿ ಅವನನ್ನು ಹೊಡೆದೆನು; ನನ್ನನ್ನು ಅಡಗಿಸಿ, ಕ್ರೂದ್ರವಾದೆನು. ಆದರೆ ಅವನು ತನ್ನ ಹೃದಯದ ಮಾರ್ಗದಲ್ಲಿ ತಿರುಗಿ ಕೊಂಡು ಹೋದನು.
೧೮ ಅವನ ಮಾರ್ಗಗಳನ್ನು ನೋಡಿದ್ದೇನೆ; ಅವನನ್ನು ಗುಣ ಮಾಡುವೆನು; ಅವನನ್ನು ನಡಿಸುವೆನು; ಅವನಿಗೂ ಅವನ ದುಃಖದವರಿಗೂ, ಆದರಣೆಗಳನ್ನು ಸಲ್ಲಿಸುವೆನು;
೧೯ ನಾನು ತುಟಿಗಳ ಫಲವಾದ ಸಮಾಧಾನವನ್ನೇ ಸಮಾಧಾನವನ್ನೇ, ದೂರವಾದವನಿಗೂ, ಸಮೀಪವಾದವನಿಗೂ, ನಿರ್ಮಿಸುತ್ತೇನೆಂದು, ಕರ್ತನು ಹೇಳುತ್ತಾನೆ. ಮತ್ತು ಅವನನ್ನು ಗುಣ ಮಾಡುವೆನು.
೨೦ ಆದರೆ ದುಷ್ಟರು, ಸುಮ್ಮನೆ ಇರಲಾರದಂಥ, ಅದರ ನೀರುಗಳು ಮೈಲಿಗೆಯನ್ನೂ ಕೆಸರನ್ನೂ ಹೊರಗೆ ಹಾಕುವಂಥ, ಹಲ್ಲಕಲ್ಲೋಲವಾಗಿರುವ ಸಮುದ್ರದ ಹಾಗಿದ್ದಾರೆ;
೨೧ ದುಷ್ಟರಿಗೆ ಸಮಾಧಾನವಿಲ್ಲವೆಂದು, ನನ್ನ ದೇವರು ಹೇಳುತ್ತಾನೆ.



## ೫೮. ಸಂಧಿ.

೧ ಘುಟ್ಟಿಯಾಗಿ ಕೂಗು, ಹಿಂಜೆಗಿಯ ಬೇಡ; ತುತೂರಿಯಂತೆ ನಿನ್ನ ಶಬ್ದವನ್ನೆತ್ತು; ನನ್ನ ಜನರಿಗೆ ಅವರ ದ್ರೋಹವನ್ನೂ, ಯಾಕೋಬನ ಮನೆಯವರಿಗೆ ಅವರ ಪಾಪಗಳನ್ನೂ, ತಿಳಿಯ ಮಾಡು.
೨ ಆದರೂ ದಿನ ದಿನಕ್ಕೆ ನನ್ನನ್ನು ಹುಡುಕುತ್ತಾರೆ; ನನ್ನ ಮಾರ್ಗಗಳ ತಿಳುವಿಕೆಯಲ್ಲಿ ಸಂತೋಷ ಪಡುತ್ತಾರೆ; ತನ್ನ ದೇವರ ನ್ಯಾಯವನ್ನು ಬಿಡದೆ, ನೀತಿಯನ್ನು ಮಾಡುವ ಜನಾಂಗದ ಹಾಗೆಯೇ; ನೀತಿಯುಳ್ಳ ನ್ಯಾಯಗಳನ್ನು ನನ್ನಿಂದ ಕೇಳುತ್ತಾರೆ; ದೇವರನ್ನು ಸಮೀಪಿಸುವದರಲ್ಲಿ ಸಂತೋಷ ಪಡುತ್ತಾರೆ.
೩ ನಾವು ಉಪವಾಸ ಮಾಡಲಾಗಿ, ನೀನು ಯಾಕೆ ನೋಡುವದಿಲ್ಲ? ನಮ್ಮ ಪ್ರಾಣವನ್ನು ಕುಂದಿಸಲಾಗಿ, ಯಾಕೆ ತಿಳುಕೊಳ್ಳುವದಿಲ್ಲ! ಅನ್ನುತ್ತಾರೆ. ಇಗೋ, ನೀವು ಉಪವಾಸ ಮಾಡುವ ದಿವಸದಲ್ಲಿ, ನಿಮ್ಮ ಇಷ್ಟವನ್ನು ತೀರಿಸುತ್ತೀರಿ; ಮತ್ತು ನಿಮ್ಮ ಕಷ್ಟಗಳನ್ನೆಲ್ಲಾ ಘುಟ್ಟಿಯಾಗಿ ನಡಿಸುತ್ತೀರಿ.
೪ ಇಗೋ ವ್ಯಾಜ್ಯಕ್ಕೂ, ಜಗಳಕ್ಕೂ, ದುಷ್ಟ ಮುಷ್ಟಿಯಿಂದ ಹೊಡೆಯುವದಕ್ಕೂ, ಉಪವಾಸ ಮಾಡುತ್ತೀರಿ; ಈ ಹೊತ್ತಿನಷ್ಟಾದ, ನಿಮ್ಮ ಶಬ್ದವನ್ನು ಮೇಲಕ್ಕೆ ಕೇಳಿಸುವ ಹಾಗೆ, ಉಪವಾಸ ಮಾಡ ಬೇಡಿರಿ.
೫ ನಾನು ಆದು ಕೊಳ್ಳುವ ಉಪವಾಸವು ಇದೋ! ಮನುಷ್ಯನು ತನ್ನ ಪ್ರಾಣವನ್ನು ಕುಂದಿಸುವ ದಿನವೋ! ತುಂಗೆಯಂತೆ ತನ್ನ ತಲೆಯನ್ನು ಬೊಗ್ಗಿಸಿ ಕೊಂಡು, ಗೋಣಿಯನ್ನೂ ಬೂದಿಯನ್ನೂ ಹಾಸಿ ಕೂತು ಕೊಳ್ಳುವದೋ? ಇದಕ್ಕೆ ಉಪವಾಸವೂ, ಕರ್ತನು ಮೆಚ್ಚುವ ದಿನವೂ, ಎಂದನ್ನುತ್ತೀಯೋ!
೬ ನಾನು ಆದು ಕೊಳ್ಳುವ ಉಪವಾಸವು ಇದೇ ಅಲ್ಲವೋ— ದುಷ್ಟತ್ವದ ಕಟ್ಟುಗಳನ್ನು ಸಡ್ಲಿಸುವದೂ, ನೊಗದ ಗಂಟುಗಳನ್ನು ಬಿಚ್ಚುವದೂ, ತಿಪ್ಪಲು ಪಟ್ಟವರನ್ನು ಬಿಡಿಸಲ್ಪಟ್ಟವರಾಗಿ ಕಳುಹಿಸಿ ಬಿಡುವದೂ, ನೊಗಗಳನ್ನೆಲ್ಲಾ ಮುರಿದು ಹಾಕುವದೂ.
೭ ಇದೇ ಅಲ್ಲವೋ!— ಹಸಿದವನಿಗೆ ನಿನ್ನ ಕೊಟ್ಟಿ ಮುರಿಯುವದೂ, ಹಿಂಸೆ ಪಡುವ ಬಡವರನ್ನು ನಿನ್ನ ಮನೆಗೆ ಕರಕೊಂಡು ಬರುವದೂ, ನೀನು ಬೆತ್ತಲೆಯಾದವನನ್ನು ನೋಡುವಾಗ ಅವನಿಗೆ ಹೊದ್ದಿಸುವದೂ, ಸ್ವಂತ ಮಾಂಸಕ್ಕೆ ನಿನ್ನನ್ನು ಮರೆ ಮಾಡದೆ ಇರುವದೂ.
೮ ಆಗ ನಿನ್ನ ಬೆಳಕು ಅರುಣೋದಯದ ಹಾಗೆ ಪ್ರತ್ಯಕ್ಷವಾಗುವದು; ನಿನ್ನ ಸೌಖ್ಯವು ಬೇಗ ಚಿಗುರುವದು; ನಿನ್ನ ನೀತಿ ನಿನ್ನ ಮುಂದೆ ನಡಿಯುವದು; ಕರ್ತನ ಮಹಿಮೆ ನಿನ್ನ ಹಿಂಭಾಗವನ್ನು ಭದ್ರ ಮಾಡುವದು.
೯ ಆಗ ನೀನು ಕರೆಯುವಿ; ಮತ್ತು ಕರ್ತನು ಉತ್ತರ ಕೊಡುವನು. ಕೂಗುವಿ; ಅವನು—ಇಗೋ ಇದ್ದೇನೆಂದು ಹೇಳುವನು. ನೀನು ನೊಗವನ್ನೂ, ಬೆರಳು ಚಾಚುವದನ್ನೂ, ವ್ಯರ್ಥವಾದ ಸಂಭಾಷಣೆಯನ್ನೂ ನಿನ್ನ ಮಧ್ಯದಿಂದ ತೆಗೆದು ಹಾಕಿದರೆ,
೧೦ ಮತ್ತು ಹಸಿದವನ ಕಡೆಗೆ ನಿನ್ನ ಮನಸ್ಸನ್ನು ಹೋಗಲಿಸಿದರೆ, ಮತ್ತು ಕುಂದಿ ಹೋದವನ ಪ್ರಾಣವನ್ನು ತೃಪ್ತಿ ಪಡಿಸಿದರೆ, ಆಗ ನಿನ್ನ ಬೆಳಕು ಕತ್ತಲೆಯಲ್ಲಿ ಉದಯಿಸುವದು, ನಿನ್ನ ಅಂಧಕಾರವು ಮಧ್ಯಾಹ್ನದ ಹಾಗೆ ಆಗುವದು.
೧೧ ಇದಲ್ಲದೆ, ಕರ್ತನು ನಿತ್ಯವಾಗಿ ನಿನ್ನನ್ನು ನಡಿಸಿ, ಮಳೆ ಇಲ್ಲದ ಕಾಲದಲ್ಲಿ ನಿನ್ನ ಪ್ರಾಣಕ್ಕೆ ತೃಪ್ತಿ ಕೊಟ್ಟು, ನಿನ್ನ ಎಲುವುಗಳನ್ನು ಬಲ ಪಡಿಸುವನು. ಆಗ ನೀನು ಚನ್ನಾಗಿ ನೀರು ಹಾಕಿದ ತೋಟದ ಹಾಗೆಯೂ, ಅದರ ನೀರು ಮೋಸ ಮಾಡದ ಜಲ ಬುಗ್ಗೆಯ ಹಾಗೆಯೂ, ಇರುವಿ.
೧೨ ಮತ್ತು, ನಿನ್ನವರು ಪೂರ್ವದ ಹಾಳು ಸ್ಥಳಗಳನ್ನು ಕಟ್ಟುವರು, ತಲತಲಾಂತರಕ್ಕಿದ್ದ ಅಸ್ತಿವಾರಗಳನ್ನು ಎಬ್ಬಿಸುವಿ; ಕೀಳನ್ನು ನೆಟ್ಟಿಗೆ ಮಾಡುವವನೆಂದೂ, ನಿವಾಸಿಗಳಿಗಾಗಿ ಹಾದಿಗಳನ್ನು ತಿರಿಗಿ ಉಂಟು ಮಾಡುವವನೆಂದೂ, ನಿನಗೆ ಹೆಸರಾಗುವದು.

೧೩ ನೀನು ಸಬ್ಬತಿನಲ್ಲಿ ನಿನ್ನ ಕಾಲನ್ನು ಹಿಂದೆಳೆದು, ನನ್ನ ಪರಿಶುದ್ಧ ದಿವಸದಲ್ಲಿ ನಿನ್ನ ಇಷ್ಟವನ್ನು ಮಾಡದೆ ಹೋದರೆ, ಸಬ್ಬತನ್ನು ಆನಂದಕರವಾದದ್ದೆಂದೂ, ಕರ್ತನ ಪರಿಶುದ್ಧ ದಿವಸವನ್ನು ಘನವುಳ್ಳದ್ದೆಂದೂ, ಕರೆದರೆ, ಸ್ವಂತ ಕೆಲಸಗಳನ್ನು ಮಾಡದೆ, ಸ್ವಂತ ಇಷ್ಟವನ್ನು ಕಂಡು ಕೊಳ್ಳದೆ, ಸ್ವಂತ ಮಾತುಗಳನ್ನು ಆಡದೆ, ಅದನ್ನು ಘನ ಪಡಿಸಿದರೆ,
೧೪ ಆಗ ಕರ್ತನಲ್ಲಿ ಆನಂದಗೊಳ್ಳುವಿ; ಭೂಮಿಯ ಎತ್ತರವಾದ ಸ್ಥಳಗಳ ಮೇಲೆ ನಿನ್ನನ್ನು ಸವಾರಿ ಮಾಡಿಸುವೆನು; ನಿನ್ನ ತಂದೆಯಾದ ಯಾಕೋಬನ ಬಾಧ್ಯತೆಯನ್ನು ನಿನಗೆ ಉಣ್ಣ ಕೊಡುವೆನು. ಯಾಕಂದರೆ ಕರ್ತನ ಬಾಯಿ ಮಾತಾಡಿ ಅದೆ.

## ೫೯. ಸಂಧಿ.

೧ ಇಗೋ, ಕರ್ತನ ಕೈ ರಕ್ಷಿಸಲಾರದ ಹಾಗೆ ಚಿಕ್ಕದ್ದಾಗಲಿಲ್ಲ, ಅವನ ಕಿವಿ ಕೇಳಲಾರದ ಹಾಗೆ ಮಂದವಾಗಲಿಲ್ಲ.
೨ ನಿಮ್ಮ ಅಕ್ರಮಗಳೇ,

ನಿಮ್ಮನ್ನೂ ನಿಮ್ಮ ದೇವರನ್ನೂ ಅಗಲಿಸಿ ಅವೆ;
ನಿಮ್ಮ ಪಾಪಗಳ್ಳೇ, ಅವನು ಕೇಳದ ಹಾಗೆ,
ತನ್ನ ಮುಖವನ್ನು ನಿಮಗೆ ಮರೆ ಮಾಡಿಸಿ ಅವೆ.
೩ ಯಾಕಂದರೆ, ನಿಮ್ಮ ಕೈಗಳು ರಕ್ತದಿಂದಲೂ,
ನಿಮ್ಮ ಬೆರಳುಗಳು ಅಕ್ರಮದಿಂದಲೂ, ಮೈಲಿಗೆಯಾಗಿವೆ;
ನಿಮ್ಮ ತುಟಿಗಳು ಸುಳ್ಳನ್ನು ಮಾತಾಡುತ್ತವೆ;
ನಿಮ್ಮ ನಾಲಿಗೆ ಅನ್ಯಾಯವನ್ನು ನುಡಿಯುತ್ತದೆ.
೪ ನೀತಿಗೋಸ್ಕರ ಕರೆಯುವವನು ಯಾವನು ಇಲ್ಲ;
ಸತ್ಯಕ್ಕೋಸ್ಕರ ನ್ಯಾಯ ವಿಚಾರಿಸುವವನು ಯಾವನು ಇಲ್ಲ,
ಮಾಯದಲ್ಲಿ ನಂಬಿಕೆ ಇಡುತ್ತಾರೆ, ವ್ಯರ್ಥತ್ವವನ್ನೂ ಮಾತಾಡುತ್ತಾರೆ,
ಕಾಟವನ್ನು ಗರ್ಭ ಧರಿಸಿ ಕೊಳ್ಳುತ್ತಾರೆ, ಪಾತಕವನ್ನು ಹೆರುತ್ತಾರೆ.
೫ ಹಾವಿನ ಮೊಟ್ಟೆಗಳನ್ನು ಹೊದಗುತ್ತಾರೆ,
ಜೇಡ ಹುಳದ ನೂಲನ್ನು ನೇಯುತ್ತಾರೆ;
ಅವರ ಮೊಟ್ಟೆಗಳನ್ನು ತಿನ್ನುವವನು ಸಾಯುವನು;
ಒಡೆಯುವಂಥಾದದರಿಂದ ನಾಗರ ಹೊರಡುವದು.
೬ ಅವರ ನೂಲು ವಸ್ತ್ರಕ್ಕಾಗದು;
ತಮ್ಮ ಕೆಲಸಗಳಿಂದ ತಮ್ಮನ್ನು ಹೊದ್ದು ಕೊಳ್ಳರು;
ಅವರ ಕೆಲಸಗಳು ಪಾತಕದ ಕೆಲಸಗಳೇ;
ಅವರ ಕೈಗಳಲ್ಲಿ ಬಲಾತ್ಕಾರದ ಕ್ರಿಯೆಯು ಅದೆ.
೭ ಅವರ ಕಾಲುಗಳು ಕೇಡಿಗೆ ಓಡುತ್ತವೆ;
ಅಪರಾಧವಿಲ್ಲದ ರಕ್ತವನ್ನು ಚೆಲ್ಲುವದಕ್ಕೆ ತ್ವರೆ ಪಡುತ್ತವೆ.
ಅವರ ಆಲೋಚನೆಗಳು ಪಾತಕದ ಆಲೋಚನೆಗಳೇ;
ಸೂಕೆಯೂ, ಮುರಿಯೋಣವೂ, ಅವರ ಮಾರ್ಗಗಳಲ್ಲಿ ಅವೆ.
೮ ಸಮಾಧಾನದ ಮಾರ್ಗವನ್ನರಿಯರು;
ಅವರ ದಾರಿಗಳಲ್ಲಿ ನ್ಯಾಯವಿಲ್ಲ;
ತಮ್ಮ ಹಾದಿಗಳನ್ನು ಡೊಂಕು ಮಾಡಿ ಕೊಂಡಿದ್ದಾರೆ;
ಅವುಗಳಲ್ಲಿ ನಡಿಯುವವರೆಲ್ಲರು ಸಮಾಧಾನವನ್ನರಿಯರು.

೯ ಆದದರಿಂದ ನ್ಯಾಯವು ನಮಗೆ ದೂರವಾಯಿತು;
ನೀತಿಯು ನಮ್ಮನ್ನು ಕೇರದು;
ಬೆಳಕಿಗೋಸ್ಕರ ಕಾದು ಕೊಳ್ಳುತ್ತೇವೆ, ಆದರೆ ಇಗೋ ಕತ್ತಲೆ;
ಪ್ರಕಾಶಕ್ಕೋಸ್ಕರವೂ, ಆದರೆ ಅಂಧಕಾರದಲ್ಲಿ ನಡದು ಕೊಳ್ಳುತ್ತೇವೆ.
೧೦ ಕುರುಡರ ಹಾಗೆ ಗೋಡೆಯನ್ನು ತಡವ್ಯಾಡುತ್ತೇವೆ;
ಕಣ್ಣಿಲ್ಲದವರ ಹಾಗೆ ತಡವ್ಯಾಡುತ್ತೇವೆ;
ಮಧ್ಯಾಹ್ನದಲ್ಲಿ ಸಂಜೆಯಲ್ಲಿ ಆದ ಹಾಗೆ ಎಡವುತ್ತೇವೆ,
ಸತ್ತವರ ಹಾಗೆ ಪೊಬ್ಬಾದ ಸ್ಥಳಗಳಲ್ಲಿ ಇದ್ದೇವೆ.
೧೧ ನಾವೆಲ್ಲರು ಕರಡಿಗಳ ಹಾಗೆ ಗರ್ಜಿಸುತ್ತೇವೆ;
ಪಾರಿವಾಳಗಳ ಹಾಗೆ ಮೂಲುಗೇ ಮೂಲುಗುತ್ತೇವೆ;
ನ್ಯಾಯಕ್ಕಾಗಿ ಕಾದು ಕೊಳ್ಳುತ್ತೇವೆ, ಆದರೆ ಅದು ಇಲ್ಲ;
ರಕ್ಷಣೆಗಾಗಿಯೂ, ಆದರೆ ಅದು ನಮಗೆ ದೂರವಾಗಿದೆ.

೧೨ ಯಾಕಂದರೆ, ನಮ್ಮ ದ್ರೋಹಗಳು ನಿನ್ನ ಮುಂದೆ ಬಹಳವಾಗಿವೆ;
ನಮ್ಮ ಪಾಪಗಳು ನಮಗೆ ವಿರೋಧವಾಗಿ ಸಾಕ್ಷಿ ಕೊಡುತ್ತವೆ;
ಯಾಕಂದರೆ ನಮ್ಮ ದ್ರೋಹಗಳು ನಮ್ಮ ಸಂಗಡ ಅವೆ;
ನಮ್ಮ ಅಕ್ರಮಗಳಾದರೆ, ಅವುಗಳನ್ನು ಬಲ್ಲೆವು.
೧೩ ದ್ರೋಹ ಮಾಡಿದ್ದೇವೆ, ಕರ್ತನಿಗೆ ಸುಳ್ಳಾಡಿದ್ದೇವೆ;
ನಮ್ಮ ದೇವರ ಕಡೆಯಿಂದ ಹಿಂದಿರುಗಿದ್ದೇವೆ;
ಬಲಾತ್ಕಾರದ ತಿರುಗಿಬೀಳ್ವಿಕೆಯ ಕಾರ್ಯಗಳನ್ನು ಮಾತಾಡಿದ್ದೇವೆ;
ಸುಳ್ಳು ಮಾತುಗಳಿಂದ ಬಸುರಾಗಿ,
ಅವುಗಳನ್ನು ಹೃದಯದಿಂದ ನುಡಿದಿದ್ದೇವೆ.
೧೪ ನ್ಯಾಯವು ಸಹ ಹಿಂದಕ್ಕೆ ತಿರುಗಿಸಲ್ಪಟ್ಟಿತೆ;
ನೀತಿಯು ದೂರದಲ್ಲಿ ನಿಲ್ಲುತ್ತದೆ;
ಯಾಕಂದರೆ, ಸತ್ಯವು ಬೀದಿಯಲ್ಲಿ ಎಡವುತ್ತದೆ;
ಯಥಾರ್ಥವು ಪ್ರವೇಶಿಸ ಕೂಡದು.
೧೫ ಹೌದು, ಸತ್ಯವು ಕಳಕೊಂಡು ಹೋಯಿತು;
ಕೆಟ್ಟದ್ದನ್ನು ಬಿಟ್ಟು ಬಿಡುವವನು ಸುಲಿಗೆಯಾಗುತ್ತಾನೆ;
ಕರ್ತನು ನೋಡಿ, ನ್ಯಾಯವಿಲ್ಲದೆ ಇರುವದು,
ಅವನ ದೃಷ್ಟಿಯಲ್ಲಿ ಕೆಟ್ಟದ್ದಾಗಿತ್ತು.

೧೬ ಮತ್ತು ಮನುಷ್ಯನು ಇಲ್ಲವೆಂದು ನೋಡಿದನು;
ನಡುವೆ ಬರುವವನು ಇಲ್ಲವೆಂದು ಆಶ್ಚರ್ಯ ಪಟ್ಟನು;
ಆಗ ಸ್ವಂತ ತೋಳ್ಳಿ ತನಗೋಸ್ಕರ ರಕ್ಷಣೆ ಉಂಟು ಮಾಡಿತು;
ಸ್ವಂತ ನೀತಿಯು, ಅದೇ ಅವನನ್ನು ಉದ್ಧಾರ ಮಾಡಿತು.
೧೭ ಅವನು ನೀತಿಯನ್ನು ಕವಚದ ಹಾಗೆ ಧರಿಸಿ ಕೊಂಡು,
ರಕ್ಷಣೆಯ ಶಿರಸ್ತ್ರಾಣವನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡನು;
ಪ್ರತಿದಂಡನೆಯ ವಸ್ತ್ರಗಳನ್ನು ಹೊದ್ದಿಕೆಯಾಗಿ ಹೊದ್ದುಕೊಂಡು,
ಆಸಕ್ತಿಯನ್ನು ಮೇಲಂಗಿಯಾಗಿ ತೊಟ್ಟು ಕೊಂಡನು.
೧೮ ಅವರ ಕ್ರಿಯೆಗಳ ಪ್ರಕಾರವೇ ಸರಿಯಾಗಿ ಸಲ್ಲಿಸುವನು;
ತನ್ನ ವೈರಿಗಳಿಗೆ ಉರಿಯನ್ನು,
ತನ್ನ ಶತ್ರುಗಳಿಗೆ ಪ್ರತಿಫಲವನ್ನು,
ದ್ವೀಪಗಳಿಗೆ ಪ್ರತಿಫಲವನ್ನು ಸಲ್ಲಿಸುವನು.
೧೯ ಆಗ ಪಶ್ಚಿಮ ಕಡೆಯವರು ಕರ್ತನ ಹೆಸರಿಗೂ,
ಸೂರ್ಯೋದಯದ ಕಡೆಯವರು ಅವನ ಘನಕ್ಕೂ ಭಯಪಡುವರು.
ವೈರಿಯು ನದಿಯಂತೆ ಬರುವಾಗ,
ಕರ್ತನ ಆತ್ಮವು ಅವನಿಗೆ ವಿರೋಧವಾಗಿ ಧ್ವಜವನ್ನೆತ್ತುವದು.
೨೦ ಮತ್ತು ವಿಮೋಚಕನು ಚಿಯೋನಿಗೂ,
ಯಾಕೋಬನಲ್ಲಿ ದ್ರೋಹದಿಂದ ತಿರುಗುವವರಿಗೂ,
ಬರುವನೆಂದು ಕರ್ತನು ಅನ್ನುತ್ತಾನೆ.
೨೧ ಕರ್ತನು ಹೇಳುವದೇನಂದರೆ—
ನಾನಾದರೆ, ಅವರ ಸಂಗಡ ಮಾಡುವ ಒಡಂಬಡಿಕೆ ಇದೇ—
ನಿನ್ನ ಮೇಲಿರುವ ನನ್ನ ಆತ್ಮವೂ,
ನಾನು ನಿನ್ನ ಬಾಯಿಯಲ್ಲಿ ಇಟ್ಟಿರುವ ನನ್ನ ವಾಕ್ಯಗಳೂ,
ಇಂದಿನಿಂದ ಸದಾಕಾಲಕ್ಕೆ,
ನಿನ್ನ ಬಾಯಿಂದಲೂ ನಿನ್ನ ಸಂತಾನದ ಬಾಯಿಂದಲೂ,
ನಿನ್ನ ಸಂತಾನದ ಸಂತಾನದ ಬಾಯಿಂದಲೂ,
ತೊಲಗುವದಿಲ್ಲವೆಂದು, ಕರ್ತನು ಹೇಳುತ್ತಾನೆ.



## ೬೦. ಸಂಧಿ.

೧ ಏಳು, ಪ್ರಕಾಶಿಸು; ಯಾಕಂದರೆ, ನಿನ್ನ ಬೆಳಕು ಬಂತು;
ಕರ್ತನ ಮಹಿಮೆಯು ನಿನ್ನ ಮೇಲೆ ಉದಯವಾಯಿತು.
೨ ಯಾಕಂದರೆ, ಇಗೋ ಕತ್ತಲೆ ಭೂಮಿಯನ್ನೂ,
ಗಾಢಾಂಧಕಾರವು ಜನಗಳನ್ನೂ, ಮುಚ್ಚುವದು;
ಆದರೆ ನಿನ್ನ ಮೇಲೆ ಕರ್ತನು ಉದಯಿಸುವನು;
ಅವನ ಮಹಿಮೆಯು ನಿನ್ನ ಮೇಲೆ ಕಾಣ ಬರುವದು.

೩ ಮತ್ತು ಜನಾಂಗಗಳು ನಿನ್ನ ಪ್ರಕಾಶಕ್ಕೂ,
ಅರಸರು ನಿನ್ನ ಉದಯದ ಕಾಂತಿಗೂ, ಬರುವರು.
೪ ಸುತ್ತಲು ನಿನ್ನ ಕಣ್ಣುಗಳನ್ನೆತ್ತಿ ನೋಡು!
ಅವರೆಲ್ಲರೂ ಕೂಡಿ ಕೊಂಡು ನಿನ್ನ ಬಳಿಗೆ ಬರುತ್ತಾರೆ;
ನಿನ್ನ ಕುಮಾರರು ದೂರದಿಂದ ಬರುವರು;
ನಿನ್ನ ಕುಮಾರ್ತೆಗಳು ನಿನ್ನ ಪಕ್ಕೆಯಲ್ಲಿ ಹೊರಲ್ಪಡುವರು.
೫ ಆಗ ನೋಡಿ ಕಳೆ ಮುಖವುಳ್ಳವಳಾಗುವಿ;
ನಿನ್ನ ಹೃದಯವು ಹೆದರಿ, ವಿಸ್ತಾರವಾಗುವದು;
ಯಾಕಂದರೆ ಸಮುದ್ರದ ಬಾಹುಳ್ಯವು ನಿನ್ನ ಕಡೆಗೆ ತಿರುಗಿ ಕೊಳ್ಳುವದು;
ಜನಾಂಗಗಳ ಆಸ್ತಿಯು ನಿನ್ನ ಬಳಿಗೆ ಬರುವದು.

೬ ಬಂಟಿಗಳ ಸಮೂಹವು ನಿನ್ನನ್ನು ಮುಚ್ಚುವದು;
ಮಿದ್ಯಾನಿನ, ಏಫದ, ಕಾಲಾಡಿ ಒಂಟಿಗಳೂ,
ಅವೆಲ್ಲಾ ಶೇಬದಿಂದಲೂ ಬರುವವು;
ಭಂಗಾರವನ್ನೂ ಧೂಪವನ್ನೂ ತರುವವು;
ಕರ್ತನ ಸ್ತೋತ್ರಗಳನ್ನು ಸಾರುವವು.
೭ ಕೇದರಿನ ಮಂದೆಗಳೆಲ್ಲಾ ನಿನಗೆ ಕೂಡಿಸಲ್ಪಡುವವು;
ನೆಬಾಯೋತಿನ ಹೋತುಗಳು ನಿನ್ನನ್ನು ಸೇವಿಸುವವು;
ನನ್ನ ಬಲಿಪೀಠದ ಮೇಲೆ ಮೆಚ್ಚಿಕೆಯಿಂದ ಏರುವವು.
ನನ್ನ ಶೃಂಗಾರದ ಮನೆಯನ್ನು ಶೃಂಗರಿಸುವೆನು.
೮ ಮೇಘದಂತೆಯೂ,
ತಮ್ಮ ಗೂಡುಗಳಿಗೆ ಹೋಗುವ ಪಾರಿವಾಳಗಳಂತೆಯೂ,
ಹಾಳುವ ಇವರ್ಯಾರು!
೯ ನಿಶ್ಚಯವಾಗಿ ದ್ವೀಪಗಳು, ತಾರ್ಷಿಷಿನ ಹಡಗಗಳು ಮೊದಲಾಗಿ,
ನನಗೋಸ್ಕರ ಕಾದು ಕೊಳ್ಳುವವು;
ದೂರದಿಂದ ನಿನ್ನ ಮಕ್ಕಳನ್ನೂ, ತಮ್ಮ ಬೆಳ್ಳಿ ಭಂಗಾರ ಸಹಿತವಾಗಿ,
ನಿನ್ನ ದೇವರಾದ ಯೆಹೋವನ ಹೆಸರಿನ ಬಳಿಗೂ,
ನಿನ್ನನ್ನು ಶೃಂಗರಿಸಿ ಇರುವ ಇಸ್ರಯೇಲಿನ ಪರಿಶುದ್ಧನ ಬಳಿಗೂ, ತರುವದಕ್ಕೋಸ್ಕರವೇ.

೧೦ ಇದಲ್ಲದೆ ಅನ್ಯರ ಮಕ್ಕಳು ನಿನ್ನ ಗೋಡೆಗಳನ್ನು ಕಟ್ಟುವರು;
ಅವರ ಅರಸರು ಸಹ ನಿನಗೆ ಸೇವೆ ಮಾಡುವರು;
ಯಾಕಂದರೆ ನನ್ನ ಕೌದ್ರದಲ್ಲಿ ನಿನ್ನನ್ನು ಹೊಡೆದೆನು;
ಆದರೆ ನನ್ನ ಕಟಾಕ್ಷದಲ್ಲಿ ನಿನ್ನನ್ನು ಕರುಣಿಸುವೆನು.
೧೧ ಮತ್ತು ನಿನ್ನ ಬಾಗಲುಗಳು ಯಾವಾಗಲೂ ತೆಕೆದಿರುವವು;
ಹಗಲು ರಾತ್ರಿ ಅವು ಮುಚ್ಚಲ್ಪಡುವದಿಲ್ಲ;
ಜನಾಂಗಗಳ ಆಸ್ತಿ ನಿನ್ನ ಬಳಿಗೆ ತರಲ್ಪಟ್ಟು,
ಅವರ ಅರಸರು ಸಹ ನಡಿಸಲ್ಪಡುವದಕ್ಕೋಸ್ಕರವೇ.
೧೨ ಯಾಕಂದರೆ ನಿನ್ನನ್ನು ಸೇವಿಸದ ಜನಾಂಗವೂ ರಾಜ್ಯವೂ ನಾಶವಾಗುವದು;
ಹೌದು ಆ ಜನಾಂಗಗಳು ಹಾಳೇ ಹಾಳಾಗುವವು.

೧೩ ಲೆಬನೋನಿನ ಮಹಿಮೆಯು,
ಸುರಗಿ, ದಿಂಡುಗ, ಹೊನ್ನೆ ಮರಗಳು ಕೂಡ,
ನನ್ನ ಪರಿಶುದ್ಧ ಸ್ಥಳವನ್ನು ಶೃಂಗರಿಸುವದಕ್ಕೆ ನಿನ್ನ ಬಳಿಗೆ ಬರುವದು;
ನನ್ನ ಪಾದಗಳ ಸ್ಥಳಕ್ಕೆ ಮಹಿಮೆಯನ್ನುಂಟು ಮಾಡುವೆನು.
೧೪ ಆಗ ನಿನ್ನನ್ನು ಕುಗ್ಗಿಸಿದವರ ಮಕ್ಕಳು,
ಬೊಗ್ಗಿಕೊಂಡು ನಿನ್ನ ಬಳಿಗೆ ಬರುವರು;
ನಿನ್ನನ್ನು ಅಸಂಹಿಸಿದವರೆಲ್ಲರು,
ನಿನ್ನ ಅಂಗಾಲುಗಳಿಗೆ ಸರಿಯಾಗಿ ಅಡ್ಡ ಬಿದ್ದು,
ನಿನ್ನನ್ನು ಕರ್ತನ ಪಟ್ಟಣವೆಂದೂ,
ಇಸ್ರಯೇಲಿನ ಪರಿಶುದ್ಧನ ಚಿಯೋನೆಂದೂ, ಕರೆಯುವರು.
೧೫ ಹಾದು ಹೋಗುವವರಿಲ್ಲದೆ,
ನೀನು ಬಿಡಲ್ಪಟ್ಟವಳೂ ಹಗೆ ಮಾಡಲ್ಪಟ್ಟವಳೂ ಆಗಿದ್ದಕ್ಕೆ ಬದಲಾಗಿ,
ನಿನ್ನನ್ನು ನಿತ್ಯವಾದ ಘನತೆಯೂ,
ತಲತಲಾಂತರಗಳ ಉಲ್ಲಾಸವೂ, ಆಗ ಮಾಡುತ್ತೇನೆ.
೧೬ ಜನಾಂಗಗಳ ಹಾಲನ್ನು ಹೀರಿ ಕೊಳ್ಳುವಿ,
ಅರಸರ ಮೊಲೆಯನ್ನು ಸಹ ಹೀರಿ ಕೊಳ್ಳುವಿ;
ಯೆಹೋವನಾದ ನಾನೇ ನಿನ್ನ ರಕ್ಷಕನೂ,
ನಿನ್ನ ವಿಮೋಚಕನೂ, ಯಾಕೋಬನ ಪರಾಕ್ರಮಿಯೂ, ಎಂದು ತಿಳುಕೊಳ್ಳುವಿ.

೧೭ ಹಿತ್ತಾಳೆಗೆ ಬದಲಾಗಿ ಭಂಗಾರವನ್ನು ತರುವೆನು;
ಕಬ್ಬಿಣಕ್ಕೆ ಬದಲಾಗಿ ಬೆಳ್ಳಿಯನ್ನೂ,
ಮರಕ್ಕೆ ಬದಲಾಗಿ ಹಿತ್ತಾಳೆಯನ್ನೂ,
ಕಲ್ಲುಗಳಿಗೆ ಬದಲಾಗಿ ಕಬ್ಬಿಣವನ್ನೂ, ತರುವೆನು.
ಮತ್ತು ನಿನ್ನ ವಿಚಾರಕರನ್ನು ಸಮಾಧಾನವುಳ್ಳವರಾಗಿಯೂ,
ನಿನ್ನ ಅಧಿಕಾರಸ್ತರನ್ನು ನೀತಿಯುಳ್ಳವರಾಗಿಯೂ, ಮಾಡುವೆನು.
೧೮ ನಿನ್ನ ದೇಶದಲ್ಲಿ ಬಲಾತ್ಕಾರವೂ,
ನಿನ್ನ ಮೇರೆಗಳಲ್ಲಿ ಸೂಕೆಯೂ, ಮುರಿಯೋಣವೂ, ಇನ್ನು ಮೇಲೆ ಕೇಳಲ್ಪಡುವದಿಲ್ಲ;
ನಿನ್ನ ಗೋಡೆಗಳಿಗೆ ರಕ್ಷಣೆ ಎಂದೂ,
ನಿನ್ನ ಬಾಗಲುಗಳಿಗೆ ಸ್ತೋತ್ರವೆಂದೂ, ಹೆಸರಿಡುವಿ.

೧೯ ಇನ್ನು ಮೇಲೆ ಸೂರ್ಯನು ನಿನಗೆ ಹಗಲಿನಲ್ಲಿ ಬೆಳಕಾಗಿರುವದಿಲ್ಲ,
ಚಂದ್ರನು ಪ್ರಕಾಶಕ್ಕಾಗಿ ನಿನಗೆ ಬೆಳಕು ಕೊಡುವದಿಲ್ಲ;

ನಿಮ್ಮನ್ನೂ ನಿಮ್ಮ ದೇವರನ್ನೂ ಅಗಲಿಸಿ ಅವೆ;
ನಿಮ್ಮ ಪಾಪಗಳೇ, ಅವನು ಕೇಳದ ಹಾಗೆ,
ತನ್ನ ಮುಖವನ್ನು ನಿಮಗೆ ಮರೆ ಮಾಡಿಸಿ ಅವೆ.
೩ ಯಾಕಂದರೆ, ನಿಮ್ಮ ಕೈಗಳು ರಕ್ತದಿಂದಲೂ,
ನಿಮ್ಮ ಬೆರಳುಗಳು ಅಕ್ರಮದಿಂದಲೂ, ಮೈಲಿಗೆಯಾಗಿವೆ;
ನಿಮ್ಮ ತುಟಿಗಳು ಸುಳ್ಳನ್ನು ಮಾತಾಡುತ್ತವೆ;
ನಿಮ್ಮ ನಾಲಿಗೆ ಅನ್ಯಾಯವನ್ನು ನುಡಿಯುತ್ತವೆ.
೪ ನೀತಿಗೋಸ್ಕರ ಕರೆಯುವವನು ಯಾವನು ಇಲ್ಲ;
ಸತ್ಯಕ್ಕೋಸ್ಕರ ನ್ಯಾಯ ವಿಚಾರಿಸುವವನು ಯಾವನು ಇಲ್ಲ,
ಮಾಯದಲ್ಲಿ ನಂಬಿಕೆ ಇಡುತ್ತಾರೆ, ವ್ಯರ್ಥತ್ವವನ್ನು ಮಾತಾಡುತ್ತಾರೆ,
ಕಾಟವನ್ನು ಗರ್ಭ ಧರಿಸಿ ಕೊಳ್ಳುತ್ತಾರೆ, ಪಾತಕವನ್ನು ಹೆರುತ್ತಾರೆ.
೫ ಹಾವಿನ ಮೊಟ್ಟೆಗಳನ್ನು ಹೊದಗುತ್ತಾರೆ,
ಜೇಡ ಹುಳದ ನೂಲನ್ನು ನೇಯುತ್ತಾರೆ;
ಅವರ ಮೊಟ್ಟೆಗಳನ್ನು ತಿನ್ನುವವನು ಸಾಯುವನು;
ಒಡೆಯುವಂಥಾದದರಿಂದ ನಾಗರ ಹೊರಡುವದು.
೬ ಅವರ ನೂಲು ವಸ್ತ್ರಕ್ಕಾಗದು;
ತಮ್ಮ ಕೆಲಸಗಳಿಂದ ತಮ್ಮನ್ನು ಹೊದ್ದು ಕೊಳ್ಳರು;
ಅವರ ಕೆಲಸಗಳು ಪಾತಕದ ಕೆಲಸಗಳೇ;
ಅವರ ಕೈಗಳಲ್ಲಿ ಬಲಾತ್ಕಾರದ ಕ್ರಿಯೆಯು ಅವೆ.
೭ ಅವರ ಕಾಲುಗಳು ಕೇಡಿಗೆ ಓಡುತ್ತವೆ;
ಅಪರಾಧವಿಲ್ಲದ ರಕ್ತವನ್ನು ಚೆಲ್ಲುವದಕ್ಕೆ ತ್ವರೆ ಪಡುತ್ತವೆ.
ಅವರ ಆಲೋಚನೆಗಳು ಪಾತಕದ ಆಲೋಚನೆಗಳೇ;
ಸೂರೆಯೂ, ಮುರಿಯೋಣವೂ, ಅವರ ಮಾರ್ಗಗಳಲ್ಲಿ ಅವೆ.
೮ ಸಮಾಧಾನದ ಮಾರ್ಗವನ್ನರಿಯರು;
ಅವರ ದಾರಿಗಳಲ್ಲಿ ನ್ಯಾಯವಿಲ್ಲ;
ತಮ್ಮ ಹಾದಿಗಳನ್ನು ಡೊಂಕು ಮಾಡಿ ಕೊಂಡಿದ್ದಾರೆ;
ಅವುಗಳಲ್ಲಿ ನಡಿಯುವವರೆಲ್ಲರು ಸಮಾಧಾನವನ್ನರಿಯರು.

೯ ಆದದರಿಂದ ನ್ಯಾಯವು ನಮಗೆ ದೂರವಾಯಿತು;
ನೀತಿಯು ನಮ್ಮನ್ನು ಸೇರದು;
ಬೆಳಕಿಗೋಸ್ಕರ ಕಾದು ಕೊಳ್ಳುತ್ತೇವೆ, ಆದರೆ ಇಗೋ ಕತ್ತಲೆ;
ಪ್ರಕಾಶಕ್ಕೋಸ್ಕರವೂ, ಆದರೆ ಅಂಧಕಾರದಲ್ಲಿ ನಡದು ಕೊಳ್ಳುತ್ತೇವೆ.
೧೦ ಕುರುಡರ ಹಾಗೆ ಗೋಡೆಯನ್ನು ತಡವ್ಯಾಡುತ್ತೇವೆ;
ಕಣ್ಣಿಲ್ಲದವರ ಹಾಗೆ ತಡವ್ಯಾಡುತ್ತೇವೆ;
ಮಧ್ಯಾಹ್ನದಲ್ಲಿ ಸಂಜೆಯಲ್ಲಿ ಆದ ಹಾಗೆ ಎಡವುತ್ತೇವೆ,
ಸತ್ತವರ ಹಾಗೆ ಮೊಬ್ಬಾದ ಸ್ಥಳಗಳಲ್ಲಿ ಇದ್ದೇವೆ.
೧೧ ನಾವೆಲ್ಲರು ಕರಡಿಗಳ ಹಾಗೆ ಗರ್ಜಿಸುತ್ತೇವೆ;
ಪಾರಿವಾಳಗಳ ಹಾಗೆ ಮೂಲುಗೇ ಮೂಲುಗುತ್ತೇವೆ;
ನ್ಯಾಯಕ್ಕಾಗಿ ಕಾದು ಕೊಳ್ಳುತ್ತೇವೆ, ಆದರೆ ಅದು ಇಲ್ಲ;
ರಕ್ಷಣೆಗಾಗಿಯೂ, ಆದರೆ ಅದು ನಮಗೆ ದೂರವಾಗಿದೆ.

೧೨ ಯಾಕಂದರೆ, ನಮ್ಮ ದ್ರೋಹಗಳು ನಿನ್ನ ಮುಂದೆ ಬಹಳವಾಗಿವೆ;
ನಮ್ಮ ಪಾಪಗಳು ನಮಗೆ ವಿರೋಧವಾಗಿ ಸಾಕ್ಷಿ ಕೊಡುತ್ತವೆ;
ಯಾಕಂದರೆ ನಮ್ಮ ದ್ರೋಹಗಳು ನಮ್ಮ ಸಂಗಡ ಅವೆ;
ನಮ್ಮ ಅಕ್ರಮಗಳಾದರೆ, ಅವುಗಳನ್ನು ಬಲ್ಲೆವು.
೧೩ ದ್ರೋಹ ಮಾಡಿದ್ದೇವೆ, ಕರ್ತನಿಗೆ ಸುಳ್ಳಾಡಿದ್ದೇವೆ;
ನಮ್ಮ ದೇವರ ಕಡೆಯಿಂದ ಹಿಂದಿರುಗಿದ್ದೇವೆ;
ಬಲಾತ್ಕಾರದ ತಿರುಗಿಬೀಳ್ವಿಕೆಯ ಕಾರ್ಯಗಳನ್ನು ಮಾತಾಡಿದ್ದೇವೆ;
ಸುಳ್ಳು ಮಾತುಗಳಿಂದ ಬಸುರಾಗಿ,
ಅವುಗಳನ್ನು ಹೃದಯದಿಂದ ನುಡಿದಿದ್ದೇವೆ.
೧೪ ನ್ಯಾಯವು ಸಹ ಹಿಂದಕ್ಕೆ ತಿರುಗಿಸಲ್ಪಟ್ಟಿದೆ;
ನೀತಿಯು ದೂರದಲ್ಲಿ ನಿಲ್ಲುತ್ತದೆ;
ಯಾಕಂದರೆ, ಸತ್ಯವು ಬೀದಿಯಲ್ಲಿ ಎಡವುತ್ತದೆ;
ಯಥಾರ್ಥವು ಪ್ರವೇಶಿಸ ಕೂಡದು.
೧೫ ಹೌದು, ಸತ್ಯವು ಕಳಕೊಂಡು ಹೋಯಿತು;
ಕೆಟ್ಟದ್ದನ್ನು ಬಿಟ್ಟು ಬಿಡುವವನು ಸುಲಿಗೆಯಾಗುತ್ತಾನೆ;
ಕರ್ತನು ನೋಡಿ, ನ್ಯಾಯವಿಲ್ಲದೆ ಇರುವದು,
ಅವನ ದೃಷ್ಟಿಯಲ್ಲಿ ಕೆಟ್ಟದ್ದಾಗಿತ್ತು.

೧೬ ಮತ್ತು ಮನುಷ್ಯನು ಇಲ್ಲವೆಂದು ನೋಡಿದನು;
ನಡುವೆ ಬರುವವನು ಇಲ್ಲವೆಂದು ಆಶ್ಚರ್ಯ ಪಟ್ಟನು;
ಆಗ ಸ್ವಂತ ತೋಳು ತನಗೋಸ್ಕರ ರಕ್ಷಣೆ ಉಂಟು ಮಾಡಿತು;
ಸ್ವಂತ ನೀತಿಯು, ಅದೇ ಅವನನ್ನು ಉದ್ಧಾರ ಮಾಡಿತು.
೧೭ ಅವನು ನೀತಿಯನ್ನು ಕವಚದ ಹಾಗೆ ಧರಿಸಿ ಕೊಂಡು,
ರಕ್ಷಣೆಯ ಶಿರಸ್ತ್ರಾಣವನ್ನು ತನ್ನ ತಲೆಯ ಮೇಲೆ ಇಟ್ಟು ಕೊಂಡನು;
ಪ್ರತಿದಂಡನೆಯ ವಸ್ತ್ರಗಳನ್ನು ಹೊದ್ದಿಕೆಯಾಗಿ ಹೊದ್ದು ಕೊಂಡು,
ಆಸಕ್ತಿಯನ್ನು ಮೇಲಂಗಿಯಾಗಿ ತೊಟ್ಟು ಕೊಂಡನು.
೧೮ ಅವರ ಕ್ರಿಯೆಗಳ ಪ್ರಕಾರವೇ ಸರಿಯಾಗಿ ಸಲ್ಲಿಸುವನು;
ತನ್ನ ವೈರಿಗಳಿಗೆ ಉರಿಯನ್ನು,
ತನ್ನ ಶತ್ರುಗಳಿಗೆ ಪ್ರತಿಫಲವನ್ನು,
ದ್ವೀಪಗಳಿಗೆ ಪ್ರತಿಫಲವನ್ನು ಸಲ್ಲಿಸುವನು.
೧೯ ಆಗ ಪಶ್ಚಿಮ ಕಡೆಯವರು ಕರ್ತನ ಹೆಸರಿಗೂ,
ಸೂರ್ಯೋದಯದ ಕಡೆಯವರು ಅವನ ಘನಕ್ಕೂ ಭಯ ಪಡುವರು.
ವೈರಿಯು ನದಿಯಂತೆ ಬರುವಾಗ,
ಕರ್ತನ ಆತ್ಮವು ಅವನಿಗೆ ವಿರೋಧವಾಗಿ ಧ್ವಜವನ್ನೆತ್ತುವದು.
೨೦ ಮತ್ತು ವಿಮೋಚಕನು ಚಿಯೋನಿಗೂ,
ಯಾಕೋಬನಲ್ಲಿ ದ್ರೋಹದಿಂದ ತಿರುಗುವವರಿಗೂ,
ಬರುವನೆಂದು ಕರ್ತನು ಅನ್ನುತ್ತಾನೆ.
೨೧ ಕರ್ತನು ಹೇಳುವದೇನಂದರೆ—
ನಾನಾದರೆ, ಅವರ ಸಂಗಡ ಮಾಡುವ ಒಡಂಬಡಿಕೆ ಇದೇ—
ನಿನ್ನ ಮೇಲಿರುವ ನನ್ನ ಆತ್ಮವೂ,
ನಾನು ನಿನ್ನ ಬಾಯಿಯಲ್ಲಿ ಇಟ್ಟಿರುವ ನನ್ನ ವಾಕ್ಯಗಳೂ,
ಇಂದಿನಿಂದ ಸದಾಕಾಲಕ್ಕೆ,
ನಿನ್ನ ಬಾಯಿಂದಲೂ ನಿನ್ನ ಸಂತಾನದ ಬಾಯಿಂದಲೂ,
ನಿನ್ನ ಸಂತಾನದ ಸಂತಾನದ ಬಾಯಿಂದಲೂ,
ತೊಲಗುವದಿಲ್ಲವೆಂದು, ಕರ್ತನು ಹೇಳುತ್ತಾನೆ.



## ೬೦. ಸಂಧಿ.

೧ ಏಳು, ಪ್ರಕಾಶಿಸು; ಯಾಕಂದರೆ, ನಿನ್ನ ಬೆಳಕು ಬಂತು;
ಕರ್ತನ ಮಹಿಮೆಯು ನಿನ್ನ ಮೇಲೆ ಉದಯವಾಯಿತು.
೨ ಯಾಕಂದರೆ, ಇಗೋ ಕತ್ತಲೆ ಭೂಮಿಯನ್ನೂ,
ಗಾಢಾಂಧಕಾರವು ಜನಗಳನ್ನೂ, ಮುಚ್ಚುವದು;
ಆದರೆ ನಿನ್ನ ಮೇಲೆ ಕರ್ತನು ಉದಯಿಸುವನು;
ಅವನ ಮಹಿಮೆಯು ನಿನ್ನ ಮೇಲೆ ಕಾಣ ಬರುವದು.

೩ ಮತ್ತು ಜನಾಂಗಗಳು ನಿನ್ನ ಪ್ರಕಾಶಕ್ಕೂ,
ಅರಸರು ನಿನ್ನ ಉದಯದ ಕಾಂತಿಗೂ, ಬರುವರು.
೪ ಸುತ್ತಲು ನಿನ್ನ ಕಣ್ಣುಗಳನೆತ್ತಿ ನೋಡು!
ಅವರೆಲ್ಲರೂ ಕೂಡಿ ಕೊಂಡು ನಿನ್ನ ಬಳಿಗೆ ಬರುತ್ತಾರೆ;
ನಿನ್ನ ಕುಮಾರರು ದೂರದಿಂದ ಬರುವರು;
ನಿನ್ನ ಕುಮಾರ್ತೆಗಳು ನಿನ್ನ ಪಕ್ಕದಲ್ಲಿ ಹೊರಲ್ಪಡುವರು.
೫ ಆಗ ನೋಡಿ ಕಳೆ ಮುಖವುಳ್ಳವಳಾಗುವಿ;
ನಿನ್ನ ಹೃದಯವು ಹೆದರಿ, ವಿಸ್ತಾರವಾಗುವದು;
ಯಾಕಂದರೆ ಸಮುದ್ರದ ಬಾಹುಳ್ಯವು ನಿನ್ನ ಕಡೆಗೆ ತಿರುಗಿ ಕೊಳ್ಳುವದು;
ಜನಾಂಗಗಳ ಆಸ್ತಿಯು ನಿನ್ನ ಬಳಿಗೆ ಬರುವದು.

೬ ಒಂಟೆಗಳ ಸಮೂಹವು ನಿನ್ನನ್ನು ಮುಚ್ಚುವದು;
ಮಿದ್ಯಾನಿನ, ಏಫದ, ಕಾಲಾಡಿ ಒಂಟೆಗಳೂ,
ಅಬೆಲ್ಲಾ ಶೇಬದಿಂದಲೂ ಬರುವವು;
ಧಂಗಾರವನ್ನೂ ಧೂಪವನ್ನೂ ತರುವವು;
ಕರ್ತನ ಸ್ತೋತ್ರಗಳನ್ನು ಸಾರುವವು.
೭ ಕೇದರಿನ ಮಂದೆಗಳೆಲ್ಲಾ ನಿನಗೆ ಕೂಡಿಸಲ್ಪಡುವವು;
ನೆಬಾಯೋತಿನ ಹೋತುಗಳು ನಿನ್ನನ್ನು ಸೇವಿಸುವವು;
ನನ್ನ ಬಲಿಪೀಠದ ಮೇಲೆ ಮೆಚ್ಚಿಕೆಯಿಂದ ಏರುವವು.
ನನ್ನ ಶೃಂಗಾರದ ಮನೆಯನ್ನು ಶೃಂಗರಿಸುವೆನು.
೮ ಮೇಘದಂತೆಯೂ,
ತಮ್ಮ ಗೂಡುಗಳಿಗೆ ಹೋಗುವ ಪಾರಿವಾಳಗಳಂತೆಯೂ,
ಹಾಳುವ ಇವರ್ಯಾರು!
೯ ನಿಶ್ಚಯವಾಗಿ ದ್ವೀಪಗಳು, ತಾರ್ಷಿಷಿನ ಹಡಗಗಳು ಮೊದಲಾಗಿ,
ನನಗೋಸ್ಕರ ಕಾದು ಕೊಳ್ಳುವವು;
ದೂರದಿಂದ ನಿನ್ನ ಮಕ್ಕಳನ್ನು, ತಮ್ಮ ಬೆಳ್ಳಿ ಭಂಗಾರ ಸಹಿತವಾಗಿ,
ನಿನ್ನ ದೇವರಾದ ಯೆಹೋವನ ಹೆಸರಿನ ಬಳಿಗೂ,
ನಿನ್ನನ್ನು ಶೃಂಗರಿಸಿ ಇರುವ ಇಸ್ರಯೇಲಿನ ಪರಿಶುದ್ಧನ ಬಳಿಗೂ, ತರುವದಕ್ಕೋಸ್ಕರವೇ.
೧೦ ಇದಲ್ಲದೆ ಅನ್ಯರ ಮಕ್ಕಳು ನಿನ್ನ ಗೋಡೆಗಳನ್ನು ಕಟ್ಟುವರು;
ಅವರ ಅರಸರು ಸಹ ನಿನಗೆ ಸೇವೆ ಮಾಡುವರು;
ಯಾಕಂದರೆ ನನ್ನ ಕೋಪದಲ್ಲಿ ನಿನ್ನನ್ನು ಹೊಡೆದೆನು;
ಆದರೆ ನನ್ನ ಕರುಣೆಯಲ್ಲಿ ನಿನ್ನನ್ನು ಕರುಣಿಸುವೆನು.
೧೧ ಮತ್ತು ನಿನ್ನ ಬಾಗಲುಗಳು ಯಾವಾಗಲೂ ತೆಕೆದಿರುವವು;
ಹಗಲು ರಾತ್ರಿ ಅವು ಮುಚ್ಚಲ್ಪಟ್ಟಿರುವದಿಲ್ಲ;
ಜನಾಂಗಗಳ ಆಸ್ತಿ ನಿನ್ನ ಬಳಿಗೆ ತರಲ್ಪಟ್ಟು,
ಅವರ ಅರಸರು ಸಹ ನಡಿಸಲ್ಪಡುವದಕ್ಕೋಸ್ಕರವೇ.
೧೨ ಯಾಕಂದರೆ ನಿನ್ನನ್ನು ಸೇವಿಸದ ಜನಾಂಗವೂ ರಾಜ್ಯವೂ ನಾಶವಾಗುವದು;
ಹೌದು ಆ ಜನಾಂಗಗಳು ಹಾಳೇ ಹಾಳಾಗುವವು.

೧೩ ಲೆಬನೋನಿನ ಮಹಿಮೆಯು,
ಸುರಗಿ, ದಿಂಡುಗ, ಹೊನ್ನೆ ಮರಗಳು ಕೂಡ,
ನನ್ನ ಪರಿಶುದ್ಧ ಸ್ಥಳವನ್ನು ಶೃಂಗರಿಸುವದಕ್ಕೆ ನಿನ್ನ ಬಳಿಗೆ ಬರುವದು;
ನನ್ನ ಪಾದಗಳ ಸ್ಥಳಕ್ಕೆ ಮಹಿಮೆಯನ್ನುಂಟು ಮಾಡುವೆನು.
೧೪ ಆಗ ನಿನ್ನನ್ನು ಕುಗ್ಗಿಸಿದವರ ಮಕ್ಕಳು,
ಬೊಗ್ಗಿಕೊಂಡು ನಿನ್ನ ಬಳಿಗೆ ಬರುವರು;
ನಿನ್ನನ್ನು ಅಸಂಹಿಸಿದವರೆಲ್ಲರು,
ನಿನ್ನ ಅಂಗಾಲುಗಳಿಗೆ ಸರಿಯಾಗಿ ಅಡ್ಡ ಬಿದ್ದು,
ನಿನ್ನನ್ನು ಕರ್ತನ ಪಟ್ಟಣವೆಂದೂ,
ಇಸ್ರಯೇಲಿನ ಪರಿಶುದ್ಧನ ಚಿಯೋನೆಂದೂ, ಕರೆಯುವರು.
೧೫ ಹಾದು ಹೋಗುವವರಿಲ್ಲದೆ,
ನೀನು ಬಿಡಲ್ಪಟ್ಟವಳೂ ಹಗೆ ಮಾಡಲ್ಪಟ್ಟವಳೂ ಆಗಿದ್ದಕ್ಕೆ ಬದಲಾಗಿ,
ನಿನ್ನನ್ನು ನಿತ್ಯವಾದ ಘನತೆಯೂ,
ತಲತಲಾಂತರಗಳ ಉಲ್ಲಾಸವೂ, ಆಗ ಮಾಡುತ್ತೇನೆ.
೧೬ ಜನಾಂಗಗಳ ಹಾಲನ್ನು ಹೀರಿ ಕೊಳ್ಳುವಿ,
ಅರಸರ ಮೊಲೆಯನ್ನು ಸಹ ಹೀರಿ ಕೊಳ್ಳುವಿ;
ಯೆಹೋವನಾದ ನಾನೇ ನಿನ್ನ ರಕ್ಷಕನೂ,
ನಿನ್ನ ವಿಮೋಚಕನೂ, ಯಾಕೋಬನ ಪರಾಕ್ರಮಿಯೂ, ಎಂದು ತಿಳುಕೊಳ್ಳುವಿ.

೧೭ ಹಿತ್ತಾಳೆಗೆ ಬದಲಾಗಿ ಭಂಗಾರವನ್ನು ತರುವೆನು;
ಕಬ್ಬಿಣಕ್ಕೆ ಬದಲಾಗಿ ಬೆಳ್ಳಿಯನ್ನೂ,
ಮರಕ್ಕೆ ಬದಲಾಗಿ ಹಿತ್ತಾಳೆಯನ್ನೂ,
ಕಲ್ಲುಗಳಿಗೆ ಬದಲಾಗಿ ಕಬ್ಬಿಣವನ್ನೂ, ತರುವೆನು.
ಮತ್ತು ನಿನ್ನ ವಿಚಾರಕರನ್ನು ಸಮಾಧಾನವುಳ್ಳವರಾಗಿಯೂ,
ನಿನ್ನ ಅಧಿಕಾರಸ್ತರನ್ನು ನೀತಿಯುಳ್ಳವರಾಗಿಯೂ, ಮಾಡುವೆನು.
೧೮ ನಿನ್ನ ದೇಶದಲ್ಲಿ ಬಲಾತ್ಕಾರವೂ,
ನಿನ್ನ ಮೇರೆಗಳಲ್ಲಿ ಸೂರೆಯೂ, ಮುರಿಯೋಣವೂ, ಇನ್ನು ಮೇಲೆ ಕೇಳಲ್ಪಡುವದಿಲ್ಲ;
ನಿನ್ನ ಗೋಡೆಗಳಿಗೆ ರಕ್ಷಣೆ ಎಂದೂ,
ನಿನ್ನ ಬಾಗಲುಗಳಿಗೆ ಸ್ತೋತ್ರವೆಂದೂ, ಹೆಸರಿಡುವಿ.
೧೯ ಇನ್ನು ಮೇಲೆ ಸೂರ್ಯನು ನಿನಗೆ ಹಗಲಿನಲ್ಲಿ ಬೆಳಕಾಗಿರುವದಿಲ್ಲ,
ಚಂದ್ರನು ಪ್ರಕಾಶಕ್ಕಾಗಿ ನಿನಗೆ ಬೆಳಕು ಕೊಡುವದಿಲ್ಲ;

ಯಾಕಂದರೆ ಕರ್ತನು ನಿನಗೆ ನಿತ್ಯವಾದ ಬೆಳಕಾಗಿರುವನು,
ನಿನ್ನ ದೇವರು ನಿನ್ನ ಶೃಂಗಾರವಾಗಿರುವನು.
೨೦ ಇನ್ನು ಮೇಲೆ ನಿನ್ನ ಸೂರ್ಯನು ಅಸ್ತಮಿಸುವದಿಲ್ಲ,
ನಿನ್ನ ಚಂದ್ರನು ಕಾಣದೆ ಹೋಗುವದಿಲ್ಲ;
ಯಾಕಂದರೆ ಕರ್ತನು ನಿನಗೆ ನಿತ್ಯವಾದ ಬೆಳಕಾಗಿರುವನು,
ನಿನ್ನ ದುಃಖದ ದಿನಗಳು ಮುಗಿದು ಹೋಗಿರುವವು.
೨೧ ಮತ್ತು ನಿನ್ನ ಜನರೆಲ್ಲರು ನೀತಿವಂತರಾಗಿರುವರು,
ದೇಶವನ್ನು ಸದಾಕಾಲಕ್ಕೆ ಸ್ವತಂತ್ರಿಸಿ ಕೊಳ್ಳುವರು;
ನನ್ನ ಮಹಿಮೆಗೋಸ್ಕರ ನಾನು ನೆಟ್ಟ ಕೊಂಬೆಯೇ,
ನನ್ನ ಕೈಗಳ ಕೆಲಸವೇ.
೨೨ ಚಿಕ್ಕವನು ಸಾವಿರವಾಗುವನು,
ಸ್ವಲ್ಪವನು ಬಲವುಳ್ಳ ಜನಾಂಗವಾಗುವನು;
ಯೆಹೋವನಾದ ನಾನೇ ಅದರ ಸಮಯದಲ್ಲಿ ಅದನ್ನು ತ್ವರೆ ಪಡಿಸುವೆನು.

## ೬೧. ಸಂಧಿ.

೧ ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ;
ಯಾಕಂದರೆ ದೀನರಿಗೆ ಸುವಾರ್ತೆ ಸಾರುವದಕ್ಕೆ,
ಕರ್ತನು ನನ್ನನ್ನು ಅಭಿಷೇಕಿಸಿದ್ದಾನೆ;
ಮುರಿದ ಹೃದಯವುಳ್ಳವರನ್ನು ಕಟ್ಟುವದಕ್ಕೂ,
ಕೆಲೆಯವರಿಗೆ ಬಿಡುಗಡೆಯನ್ನೂ,
ಬಂಧಿಸಲ್ಪಟ್ಟವರಿಗೆ ಕಾವಲಿಮನೆ ತೆರೆಯುವದನ್ನೂ, ಪ್ರಸಿದ್ಧ ಮಾಡುವದಕ್ಕೂ,
೨ ಕರ್ತನ ಮೆಚ್ಚಿಕೆಯ ವರುಷವನ್ನೂ,
ನಮ್ಮ ದೇವರು ಮುಯ್ಯಿಗೆ ಮುಯ್ಯಿ ಕೊಡುವ ದಿವಸವನ್ನೂ, ಪ್ರಸಿದ್ಧ ಮಾಡುವದಕ್ಕೂ,
ದುಃಖವುಳ್ಳವರೆಲ್ಲರನ್ನು ಆದರಿಸುವದಕ್ಕೂ,
೩ ಚಿಯೋನಿನಲ್ಲಿ ದುಃಖಿಸುವವರಿಗೆ ಸಂತೋಷ ತರುವದಕ್ಕೂ,
ಬೂದಿಗೆ ಬದಲಾಗಿ ಶೃಂಗಾರವನ್ನೂ,
ದುಃಖಕ್ಕೆ ಬದಲಾಗಿ ಆನಂದ ತೈಲವನ್ನೂ,
ಕುಂದಿದ ಆತ್ಮಕ್ಕೆ ಬದಲಾಗಿ ಸ್ತೋತ್ರದ ವಸ್ತ್ರವನ್ನೂ, ಕೊಡುವದಕ್ಕೂ,
ನನ್ನನ್ನು ಕಳುಹಿಸಿದ್ದಾನೆ.
ಆಗಲವರಿಗೆ ನೀತಿ ವೃಕ್ಷಗಳೂ,
ಕರ್ತನು, ತಾನು ಮಹಿಮೆ ಹೊಂದುವದಕ್ಕೋಸ್ಕರ,
ನೆಟ್ಟ ಗಿಡಗಳೂ, ಎಂಬ ಹೆಸರಾಗುವದು.

೪ ಆಗಲವರು ಪೂರ್ವದ ಹಾಳು ಸ್ಥಳಗಳನ್ನು ಕಟ್ಟಿ,
ಮುಂಚೆ ಕೆಡವಲ್ಪಟ್ಟವುಗಳನ್ನು ಎಬ್ಬಿಸುವರು;
ಹಾಳು ಪಟ್ಟಣಗಳನ್ನೂ,
ತಲತಲಾಂತರಗಳಿಂದ ಕೆಡವಲ್ಪಟ್ಟವುಗಳನ್ನೂ, ನೂತನ ಪಡಿಸುವರು.
೫ ಇದಲ್ಲದೆ ಅನ್ಯರು ನಿಂತು, ನಿಮ್ಮ ಮಂದೆಗಳನ್ನು ಮೇಯಿಸುವರು;
ಪರರ ಮಕ್ಕಳು ನಿಮಗೆ ನೇಗಲು ಹೂಡುವವರೂ,
ದ್ರಾಕ್ಷೆತೋಟ ಕಾಯುವವರೂ, ಆಗಿರುವರು.
೬ ಆದರೆ ನೀವು, ಕರ್ತನ ಯಾಜಕರೆಂದು ಕರೆಯಲ್ಪಡುವಿರಿ;
ನಮ್ಮ ದೇವರ ಸೇವಕರೆಂದು ನಿಮಗೆ ಹೆಸರಾಗುವದು;
ಜನಾಂಗಗಳ ಆಸ್ತಿಯನ್ನು ಉಣ್ಣುವಿರಿ;
ಅವರ ಮಹಿಮೆಯಲ್ಲಿ ಹೆಚ್ಚಳ ಪಡುವಿರಿ.
೭ ನಿಮ್ಮ ನಾಚಿಕೆಗೆ ಬದಲಾಗಿ ಎರಡಕ್ಕಾಗುವದು,
ಅವಮಾನಕ್ಕೆ ಬದಲಾಗಿ ತಮ್ಮ ಪಾಲಿನಲ್ಲಿ ಹರ್ಷಿಸುವರು;
ಯಾಕಂದರೆ ತಮ್ಮ ದೇಶದಲ್ಲಿ ಎರಡನ್ನು ಸ್ವತಂತ್ರಿಸಿ ಕೊಳ್ಳುವರು,
ನಿತ್ಯವಾದ ಸಂತೋಷವು ಅವರಿಗೆ ಆಗುವದು.

೮ ಯಾಕಂದರೆ ಕರ್ತನಾದ ನಾನು ನ್ಯಾಯವನ್ನು ಪ್ರೀತಿ ಮಾಡುತ್ತೇನೆ,
ಸುಲಿಗೆಯಿಂದಾದ ಹೋಮವನ್ನು ಹಗೆ ಮಾಡುತ್ತೇನೆ.
ಅವರ ಕೆಲಸವನ್ನು ಸತ್ಯದಲ್ಲಿ ನಡಿಸುತ್ತೇನೆ;
ಅವರ ಸಂಗಡ ನಿತ್ಯವಾದ ಒಡಂಬಡಿಕೆಯನ್ನು ಮಾಡುತ್ತೇನೆ.
೯ ಆಗಲವರ ಸಂತಾನವು ಜನಾಂಗಗಳಲ್ಲಿಯೂ,
ಅವರಿಂದಾದ ಉತ್ಪತ್ತಿಯೂ ಜನಗಳ ಮಧ್ಯದಲ್ಲಿಯೂ, ತಿಳಿಯಲ್ಪಡುವದು;
ಅವರನ್ನು ನೋಡುವವರೆಲ್ಲರು,
ಅವರೇ ಕರ್ತನು ಆಶೀರ್ವದಿಸಿದ ಸಂತಾನವೆಂದು, ಅರಿಕೆ ಮಾಡುವರು.

೧೦ ಕರ್ತನಲ್ಲಿ ಬಹಳವಾಗಿ ಸಂತೋಷಿಸುವೆನು;
ನನ್ನ ಪ್ರಾಣವು ನನ್ನ ದೇವರಲ್ಲಿ ಉಲ್ಲಾಸ ಪಡುವದು;
ಯಾಕಂದರೆ ಮದಲಿಂಗನು ಸೌಂದರ್ಯವಾಗಿ ತನ್ನನ್ನು ಶೃಂಗರಿಸುವ ಹಾಗೆಯೂ,
ಮದಲಗಿತ್ತಿಯೂ ಆಭರಣಗಳಿಂದ ತನ್ನನ್ನು ಅಲಂಕರಿಸುವ ಹಾಗೆಯೂ,
ಅವನು ರಕ್ಷಣೆಯ ವಸ್ತ್ರಗಳನ್ನು ನನಗೆ ತೊಡಿಸಿದ್ದಾನೆ,
ನೀತಿಯ ನಿಲುವಂಗಿಯನ್ನು ನನಗೆ ಧರಿಸ ಮಾಡಿದ್ದಾನೆ.
೧೧ ಯಾಕಂದರೆ ಭೂಮಿಯು ತನ್ನ ಮೊಳಿಕೆಯನ್ನು ಹ್ಯಾಗೆ ಹೊರಡಿಸುವದೋ,
ತೋಟವು ತನ್ನಲ್ಲಿ ಬಿತ್ತಿದ್ದನ್ನು ಹ್ಯಾಗೆ ಮೊಳಿಸುವದೋ,
ಹಾಗೆಯೇ ಕರ್ತನಾದ ಯೆಹೋವನು, ನೀತಿಯನ್ನೂ ಸ್ತೋತ್ರವನ್ನೂ,
ಎಲ್ಲಾ ಜನಾಂಗಗಳ ಮುಂದೆ ಮೊಳಿಸುವನು.

## ೬೨. ಸಂಧಿ.

೧ ಚಿಯೋನಿಗೋಸ್ಕರ ನಾನು ಮೌನವಾಗಿರುವದಿಲ್ಲ;
ಯೆರೂಸಲೇಮಿಗೋಸ್ಕರ, ಅದರ ನೀತಿ ಪ್ರಕಾಶದಂತೆಯೂ,
ಅದರ ರಕ್ಷಣೆಯು ಉರಿಯುವ ದೀಪಗೆಯಂತೆಯೂ, ಹೊರಡುವ ಪರ್ಯಂತರಕ್ಕೂ,
ನಾನು ಸುಮ್ಮನೆ ಇರುವದಿಲ್ಲ.
೨ ಆಗ ಜನಾಂಗಗಳು ನಿನ್ನ ನೀತಿಯನ್ನೂ,
ಅರಸರೆಲ್ಲರು ನಿನ್ನ ಮಹಿಮೆಯನ್ನೂ, ನೋಡುವರು;



ಮತ್ತು ಕರ್ತನ ಬಾಯಿ ಉಚ್ಚರಿಸುವ ಹೊಸ ಹೆಸರಿನಿಂದ ಕರೆಯಲ್ಪಡುವಿ.
೩ ಮತ್ತು ಕರ್ತನ ಕೈಯಲ್ಲಿ ಶೃಂಗಾರದ ಕಿರೀಟವಾಗಿಯೂ,
ನಿನ್ನ ದೇವರ ಅಂಗೈಯಲ್ಲಿ ರಾಜತ್ವದ ಮುಡಿಯಾಗಿಯೂ, ಇರುವಿ.
೪ ಇನ್ನು ಮೇಲೆ ನಿನಗೆ ಬಿಡಲ್ಪಟ್ಟವಳೆಂದು ಹೇಳಲ್ಪಡುವದಿಲ್ಲ,
ನಿನ್ನ ದೇಶಕ್ಕೆ ಹಾಳಾದದ್ದೆಂದು ಹೇಳಲ್ಪಡುವದಿಲ್ಲ;
ಯಾಕಂದರೆ ನೀನು ಮೆಚ್ಚಿದವಳೆಂದೂ,
ನಿನ್ನ ದೇಶವು ಮದುವೆಯಾದದ್ದೆಂದೂ, ಕರೆಯಲ್ಪಡುವದು;
ಯಾಕಂದರೆ ಕರ್ತನು ನಿನ್ನಲ್ಲಿ ಮೆಚ್ಚುವನು;
ನಿನ್ನ ದೇಶಕ್ಕೆ ಮದುವೆಯಾಗುವದು.
೫ ಯಾಕಂದರೆ ಯೌವನಸ್ಥನು ಕನ್ಯಾ ಸ್ತ್ರೀಯನ್ನು ಮದುವೆ ಮಾಡಿ ಕೊಳ್ಳುವ ಪ್ರಕಾರ,
ನಿನ್ನ ಕುಮಾರರು ನಿನ್ನನ್ನು ಮದುವೆ ಮಾಡಿ ಕೊಳ್ಳುವರು;
ಮದಲಿಂಗನು ಮದಲಗಿತ್ತಿಯ ಮೇಲೆ ಆನಂದ ಪಡುವ ಪ್ರಕಾರ,
ನಿನ್ನ ದೇವರು ನಿನ್ನ ಮೇಲೆ ಆನಂದ ಪಡುವನು.

೬ ಯೆರೂಸಲೇಮೇ! ನಿನ್ನ ಗೋಡೆಗಳ ಮೇಲೆ ಕೋವರದವರನ್ನು ಇಟ್ಟಿದ್ದೇನೆ;
ಅವರು ದಿನವೆಲ್ಲಾ ರಾತ್ರಿಯೆಲ್ಲಾ ಯಾವಾಗಲು ಮೌನವಾಗಿರುವದಿಲ್ಲ.
ಕರ್ತನಿಗೆ ಜ್ಞಾಪಕ ಪಡಿಸುವವರೇ! ಸುಮ್ಮನಿರ ಬೇಡಿರಿ.
೭ ಮತ್ತು ಅವನು ಯೆರೂಸಲೇಮನ್ನು ಸ್ಥಾಪಿಸಿ,
ಭೂಮಿಯಲ್ಲಿ ಸ್ತೋತ್ರವಾಗಿರಿಸುವ ಪರ್ಯಂತರ,
ಅವನನ್ನು ಸುಮ್ಮನಿರಲಿಸ ಬೇಡಿರಿ.
೮ ಕರ್ತನು ತನ್ನ ಬಲಗೈಯ ಮೇಲೆಯೂ,
ತನ್ನ ತ್ರಾಣವುಳ್ಳ ತೋಳಿನ ಮೇಲೆಯೂ,
ಆಣೆ ಇಟ್ಟು ಕೊಂಡದ್ದೇನಂದರೆ—
ನಿಶ್ಚಯವಾಗಿ ನಾನು ಇನ್ನು ಮೇಲೆ ನಿನ್ನ ಗೋಧಿಯನ್ನು ನಿನ್ನ ಶತ್ರುಗಳಿಗೆ ಉಣ್ಣಾ ಕೊಡುವದಿಲ್ಲ,
ನೀನು ಕಷ್ಟ ಮಾಡಿದ ನಿನ್ನ ದ್ರಾಕ್ಷೆ ರಸವನ್ನು ಅನ್ಯರ ಮಕ್ಕಳು ಕುಡಿಯುವದಿಲ್ಲ;
೯ ಆದರೆ ಅದನ್ನು ಕೂಡಿಸಿದವರು ಅದನ್ನು ಉಂಡು, ಕರ್ತನನ್ನು ಸ್ತುತಿಸುವರು;
ಅದನ್ನು ಕೇರಿಸಿದವರು, ನನ್ನ ಪರಿಶುದ್ಧ ಅಂಗಳಗಳಲ್ಲಿ, ಅದನ್ನು ಕುಡಿಯುವರು.

೧೦ ಬಾಗಲುಗಳನ್ನು ದಾಟಿರಿ, ದಾಟಿರಿ;
ಜನಕ್ಕೆ ದಾರಿ ಸಿದ್ಧ ಮಾಡಿರಿ;
ರಾಜ ಮಾರ್ಗವನ್ನು ಎತ್ತರಿಸಿರಿ, ಎತ್ತರಿಸಿರಿ;
ಕಲ್ಲುಗಳನ್ನು ಆದು ಹಾಕಿ ಬಿಡಿರಿ;
ಜನಗಳಿಗೋಸ್ಕರ ಧ್ವಜವನ್ನು ಎತ್ತಿರಿ.
೧೧ ಇಗೋ, ಕರ್ತನು ಭೂಮಿಯ ಅಂತ್ಯದ ಪರ್ಯಂತರ ಕೇಳ ಮಾಡಿದ್ದಾನೆ—
ಚಿಯೋನಿನ ಮಗಳಿಗೆ—ಇಗೋ ನಿನ್ನ ರಕ್ಷಕನು ಬರುತ್ತಾನೆ;
ಅವನ ಬಹುಮಾನವು ಅವನ ಸಂಗಡಲೂ,
ಅವನ ಪ್ರತಿಫಲವು ಅವನ ಮುಂದೆಯೂ, ಅದೆ, ಎಂದು ಹೇಳಿರಿ.
೧೨ ಆಗಲವರು—ಪರಿಶುದ್ಧ ಜನರೂ,
ಕರ್ತನು ವಿಮೋಚಿಸಿದವರೂ, ಎಂದು ಕರೆಯಲ್ಪಡುವರು;
ಮತ್ತು ನೀನು—ಹುಡುಕಲ್ಪಟ್ಟವಳೂ,
ಬಿಡಲ್ಪಡದ ಪಟ್ಟಣವೂ, ಎಂದು ಕರೆಯಲ್ಪಡುವಿ.

## ೬೩. ಸಂಧಿ.

೧ ಎದೋಮಿನಿಂದಲೂ,
ರಕ್ತಾಂಬರ ಧರಿಸಿಕೊಂಡು ಬೊಚ್ರದಿಂದಲೂ,
ಬರುವ ಇವನ್ಯಾರು!
ಪ್ರಭೆಯುಳ್ಳ ವಸ್ತ್ರಗಳನ್ನು ತೊಟ್ಟುಕೊಂಡವನಾಗಿ,
ತನ್ನ ಮಹಾ ಪರಾಕ್ರಮದಲ್ಲಿ,
ಸಂಚಾರ ಮಾಡುವ ಇವನ್ಯಾರು!
ನೀತಿಯಾಗಿ ಮಾತಾಡುವವನೂ,
ರಕ್ಷಿಸ ಬಲಿಷ್ಠನೂ, ನಾನೇ.
೨ ನಿನ್ನ ವಸ್ತ್ರಗಳು ಯಾಕೆ ಕೆಂಪಾದವು!
ನಿನ್ನ ಬಟ್ಟೆಗಳು ಯಾಕೆ ದ್ರಾಕ್ಷೆದೋಣಿಯನ್ನು ತುಳಿಯುವವನ ಹಾಗಿವೆ!
೩ ದ್ರಾಕ್ಷೆತೊಟ್ಟಿಯನ್ನು ನಾನೊಬ್ಬನೇ ತುಳಿದಿದ್ದೇನೆ,
ಜನಗಳಲ್ಲಿ ಒಬ್ಬನಾದರೂ ನನ್ನ ಸಂಗಡ ಇರಲಿಲ್ಲ;
ನನ್ನ ಕೋಪದಲ್ಲಿ ಅವರನ್ನು ತುಳಿದಿದ್ದೇನೆ,
ನನ್ನ ಉರಿಯಲ್ಲಿ ಅವರನ್ನು ಜಜ್ಜಿ ಬಿಟ್ಟಿದ್ದೇನೆ.
ಆದದರಿಂದ ಅವರ ರಕ್ತವು ನನ್ನ ಬಟ್ಟೆಗಳ ಮೇಲೆ ಚಿಮುಕಿಸಲ್ಪಟ್ಟಿತೆ,
ನನ್ನ ವಸ್ತ್ರಗಳೆಲ್ಲಾ ಮೈಲಿಗೆಯಾದವು.
೪ ಯಾಕಂದರೆ ಮುಯ್ಯಿಗೆ ಮುಯ್ಯಿ ತೀರಿಸುವ ದಿವಸವು ನನ್ನ ಹೃದಯದಲ್ಲಿ ಇತ್ತು;
ನಾನು ವಿಮೋಚಿಸಿದವರ ವರುಷವು ಬಂತು.
೫ ನೋಡಿದೆನು, ಆದರೆ ಸಹಾಯಕನು ಇಲ್ಲ;
ಉದ್ಧಾರ ಮಾಡುವವನು ಇಲ್ಲದದರಿಂದ ಆಶ್ಚರ್ಯ ಪಟ್ಟೆನು;
ಆಗ ಸ್ವಂತ ತೋಳು ನನಗೆ ರಕ್ಷಣೆಯನ್ನುಂಟು ಮಾಡಿತು;
ಸ್ವಂತ ಉರಿಯು ಅದೇ ನನಗೆ ಉದ್ಧಾರ ಕೊಟ್ಟಿತು.
೬ ನನ್ನ ಕೋಪದಲ್ಲಿ ಜನಗಳನ್ನು ತುಳಿದು ಬಿಟ್ಟೆನು;
ನನ್ನ ಉರಿಯಲ್ಲಿ ಅವರನ್ನು ನಜ್ಜುಗುಜ್ಜು ಮಾಡಿದೆನು;
ಅವರ ರಕ್ತವನ್ನು ಭೂಮಿಗೆ ಇಳಿಯ ಮಾಡಿದೆನು.

೭ ಕರ್ತನು ನಮಗೆ ಮಾಡಿದ್ದೆಲ್ಲದರ ಪ್ರಕಾರ,
ಕರ್ತನ ಕೃಪೆಗಳನ್ನೂ, ಕರ್ತನ ಸ್ತೋತ್ರಗಳನ್ನೂ, ಜ್ಞಾಪಕ ಪಡಿಸುವೆನು;
ಅವನು ತನ್ನ ಅಂತ್ಯಕರುಣೆಗಳ ಪ್ರಕಾರವೂ,
ತನ್ನ ದೊಡ್ಡ ಕೃಪೆಗಳ ಪ್ರಕಾರವೂ,
ಇಸ್ರಯೇಲಿನ ಮನೆಯವರಿಗೆ ದೊಡ್ಡ ಉಪಕಾರ ಮಾಡಿದನಲ್ಲ!
೮ ಯಾಕಂದರೆ ಅವನು—ನಿಶ್ಚಯವಾಗಿ ಇವರು ನನ್ನ ಜನರೇ,
ಸುಳ್ಳಾಡದ ಮಕ್ಕಳೇ, ಎಂದು ಹೇಳಿದನು;
ಆದದರಿಂದ ಅವರಿಗೆ ರಕ್ಷಕನಾದನು.

೯ ಅವರಿಗೆ ಆದ ಎಲ್ಲಾ ಇಕ್ಕಟ್ಟಿನಲ್ಲಿ ಅವನಿಗೆ ಇಕ್ಕಟ್ಟಾಯಿತು;
ಅವನ ಸಮುಖದ ದೂತನು ಅವರನ್ನು ರಕ್ಷಿಸಿದನು;
ತನ್ನ ಪ್ರೀತಿಯಲ್ಲಿಯೂ, ತನ್ನ ಕನಿಕರದಲ್ಲಿಯೂ, ಅವನೇ ಅವರನ್ನು ವಿಮೋಚಿಸಿದನು;
ಪೂರ್ವದ ದಿವಸಗಳೆಲ್ಲಾ ಅವರನ್ನು ಎತ್ತಿಕೊಂಡು ಹೊತ್ತುಕೊಂಡನು.
೧೦ ಆದರೆ ಅವರು ತಿರುಗಿ ಬಿದ್ದು, ಅವನ ಪರಿಶುದ್ಧಾತ್ಮನನ್ನು ದುಃಖ ಪಡಿಸಿದರು;
ಆದದರಿಂದ ಅವನು ಬೇಕೆಯಾಗಿ, ಅವರಿಗೆ ಶತ್ರುವಾದನು;
ಅವನೇ ಅವರಿಗೆ ವಿರೋಧವಾಗಿ ಯುದ್ಧ ಮಾಡಿದನು.

೧೧ ಆಗಲವನು ಪೂರ್ವದ ದಿವಸಗಳನ್ನೂ,
ಮೋಶೆಯನ್ನೂ ತನ್ನ ಜನರನ್ನೂ, ಜ್ಞಾಪಕ ಮಾಡಿ ಕೊಂಡನು;
ಅವರನ್ನು ತನ್ನ ಮಂದೆಯ ಕುರುಬನ ಸಂಗಡ ಸಮುದ್ರದೊಳಗಿಂದ ಏರ ಮಾಡಿದವನು ಎಲ್ಲಿ?
ಅವರ ಮಧ್ಯದಲ್ಲಿ ತನ್ನ ಪರಿಶುದ್ಧಾತ್ಮನನ್ನು ಇಟ್ಟವನೂ,
೧೨ ಮೋಶೆಯ ಬಲಗೈಯ ಮುಖಾಂತರ, ತನ್ನ ಮಹಿಮೆಯುಳ್ಳ ತೋಳಿನಿಂದ, ಅವರನ್ನು ನಡಿಸಿದವನೂ,
ತನಗೆ ನಿತ್ಯವಾದ ಹೆಸರನ್ನುಂಟು ಮಾಡುವ ಹಾಗೆ,
ಅವರ ಮುಂದೆ ನೀರುಗಳನ್ನು ಛೇದಿಸಿದವನೂ,
೧೩ ಅಡವಿಯಲ್ಲಿ ಕುದುರೆಯಪ್ಪಂದ, ಅಗಾಧಗಳಲ್ಲಿ ಅವರನ್ನು ಎಡವದ ಹಾಗೆ ನಡಿಸಿದವನೂ, ಎಲ್ಲಿ?
೧೪ ಪಶುವು ತಗ್ಗಿಗೆ ಇಳಿಯುವ ಪ್ರಕಾರ,
ಕರ್ತನ ಆತ್ಮವು ಅವರಿಗೆ ವಿಶ್ರಾಂತಿ ಕೊಟ್ಟಿತು;
ಈ ಪ್ರಕಾರ ನೀನು, ನಿನಗೆ ಮಹಿಮೆಯುಳ್ಳ ಹೆಸರನ್ನು ಉಂಟುಮಾಡುವ ಹಾಗೆ,
ನಿನ್ನ ಜನರನ್ನು ನಡಿಸಿದಿ.

೧೫ ಆಕಾಶದಿಂದ, ನಿನ್ನ ಪರಿಶುದ್ಧ ಶೃಂಗಾರವಾದ ನಿವಾಸದಿಂದ,
ದೃಷ್ಟಿಸಿ ನೊಡು;
ನಿನ್ನ ಆಸಕ್ತಿಯೂ, ನಿನ್ನ ಪರಾಕ್ರಮವೂ,
ನಿನ್ನ ಕರುಳುಗಳ ಘೋಷವೂ, ನನ್ನ ವಿಷಯವಾದ ನಿನ್ನ ಕರುಣೆಗಳೂ, ಎಲ್ಲಿ?
ಬಿಗಿ ಹಿಡುಕೊಂಡಿದ್ದೀಯೋ!
೧೬ ಅಬ್ರಹಾಮನು ನಮ್ಮನ್ನು ತಿಳಿಯದಿದ್ದರೂ,
ಇಸ್ರಯೇಲನು ನಮ್ಮನ್ನು ಅರಿಕೆ ಮಾಡದಿದ್ದರೂ,
ನಿಶ್ಚಯವಾಗಿ ನೀನೇ ನಮ್ಮ ತಂದೆಯಾಗಿದ್ದೀ;
ಕರ್ತನಾದ ನೀನೇ ನಮ್ಮ ತಂದೆಯು, ನಮ್ಮ ವಿಮೋಚಕನೂ;
ನಿನ್ನ ಹೆಸರು ಅನಾದಿಯಿಂದ ಇದೆ.
೧೭ ಕರ್ತನೇ, ಯಾತಕ್ಕೆ ನಮ್ಮನ್ನು ನಿನ್ನ ಮಾರ್ಗಗಳಿಗೆ ತಪ್ಪಿ ಹೋಗಗೊಡಿಸಿದ್ದೀ?
ಯಾತಕ್ಕೆ ನಮ್ಮ ಹೃದಯವನ್ನು ನಿನ್ನ ಭಯಕ್ಕೆ ಕಠಿಣ ಮಾಡಿದ್ದೀ?
ನಿನ್ನ ಸೇವಕರಿಗೋಸ್ಕರವೂ, ನಿನ್ನ ಬಾಧ್ಯತೆಯ ಕುಲಗಳಿಗೋಸ್ಕರವೂ, ತಿರುಗು.
೧೮ ಸ್ವಲ್ಪ ಕಾಲ ಮಾತ್ರ ನಿನ್ನ ಪರಿಶುದ್ಧ ಜನರು ಸ್ವತಂತ್ರಿಸಿ ಕೊಂಡರು;
ನಿನ್ನ ಶತ್ರುಗಳು ನಿನ್ನ ಪರಿಶುದ್ಧ ಸ್ಥಳವನ್ನು ತುಳಿದು ಬಿಟ್ಟಿದ್ದಾರೆ.
೧೯ ಪೂರ್ವದಿಂದ ನಿನ್ನವರಾಗಿದ್ದೇವೆ;
ಅವರ ಮೇಲೆ ನೀನು ಥೊರೆತನ ಮಾಡಲಿಲ್ಲ;
ಅವರು ನಿನ್ನ ಹೆಸರಿನಿಂದ ಕರೆಯಲ್ಪಡಲಿಲ್ಲ.

## ೬೪. ಸಂಧಿ.

೧ ಅಯ್ಯ ಆಕಾಶಗಳನ್ನು ಹರಿದು ಬಿಟ್ಟು, ಇಳಿದು ಬಾ!
ಬೆಟ್ಟಗಳು ನಿನ್ನ ಸಮುಖಕ್ಕೆ ಕರಗಿ ಹೋಗಲಿ!
ಜನಾಂಗಗಳು ನಿನ್ನ ಸಮುಖಕ್ಕೆ ನಡುಗುವ ಹಾಗೆ,
೨ ಬೆಂಕಿ ಕಟ್ಟಿಗೆಯನ್ನು ಹೊತ್ತಿಸುವಂತೆಯೂ,
ಬೆಂಕಿ ನೀರನ್ನು ಉಕ್ಕಿಸುವಂತೆಯೂ,
ನಿನ್ನ ಹೆಸರನ್ನು ನಿನ್ನ ವೈರಿಗಳಿಗೆ ತಿಳಿಯ ಮಾಡು!
೩ ನಾವು ಎದುರು ನೋಡದೆ ಇದ್ದ ಭಯಂಕರಗಳನ್ನು ನೀನು ಮಾಡಿದಾಗ ಇಳಿದು ಬಂದಿ;
ಬೆಟ್ಟಗಳು ನಿನ್ನ ಸಮುಖಕ್ಕೆ ಕರಗಿ ಹೋದವು.
೪ ದೇವರೇ, ನಿನಗೋಸ್ಕರ ಕಾದು ಕೊಳ್ಳುವವರಿಗೆ ನೀನು ಮಾಡುವದನ್ನು,
ಪೂರ್ವದಿಂದ ನೀನೇ ಹೊರ್ತಾಗಿ,
ಯಾರೂ ಕೇಳಲಿಲ್ಲ, ಯಾರ ಕಿವಿಯಲ್ಲಿ ಬೀಳಲಿಲ್ಲ,
ಯಾರ ಕಣ್ಣು ನೋಡಲಿಲ್ಲ.
೫ ಸಂತೋಷ ಪಟ್ಟು ನೀತಿ ಮಾಡುವವನನ್ನೂ,
ನಿನ್ನ ಮಾರ್ಗಗಳಲ್ಲಿ ನಿನ್ನನ್ನು ಜ್ಞಾಪಕ ಮಾಡುವವನನ್ನೂ, ಎದುರು ಗೊಳ್ಳುತ್ತಿ;
ಇಗೋ ನೀನು ರೌದ್ರ ಮಾಡುತ್ತಿ, ಯಾಕಂದರೆ ಪಾಪ ಮಾಡಿದ್ದೇವೆ;
ಅವುಗಳಲ್ಲಿ ನಿತ್ಯತ್ವ ಉಂಟು, ಆದದರಿಂದ ನಾವು ರಕ್ಷಿಸಲ್ಪಡುವೆವು.
೬ ನಾವೆಲ್ಲರು ಅಶುದ್ಧವಾದದ್ದರ ಹಾಗೆ ಇದ್ದೇವೆ;
ನಮ್ಮ ನೀತಿಗಳೆಲ್ಲಾ ಮೈಲಿಗೆ ವಸ್ತ್ರದ ಹಾಗಿವೆ;
ನಾವೆಲ್ಲರು ಎಲೆಯ ಹಾಗೆ ಬಾಡುತ್ತೇವೆ;
ನಮ್ಮ ಅಕ್ರಮಗಳು ಭೂಳಿಯಂತೆ ನಮ್ಮನ್ನು ಎತ್ತಿಕೊಂಡು ಹೋಗಿವೆ.
೭ ನಿನ್ನ ಹೆಸರನ್ನು ಕರೆಯುವವನೂ,
ನಿನ್ನನ್ನು ಹಿಡು ಕೊಳ್ಳುವದಕ್ಕೆ ತನ್ನನ್ನು ಎಬ್ಬಿಸಿ ಕೊಳ್ಳುವವನೂ, ಯಾರೂ ಇಲ್ಲ;
ಯಾಕಂದರೆ ನಿನ್ನ ಮುಖವನ್ನು ನಮಗೆ ಮರೆ ಮಾಡಿದ್ದೀ;
ನಮ್ಮ ಅಕ್ರಮಗಳ ಮುಖಾಂತರ ನಮ್ಮನ್ನು ಕರಗಿಸಿ ಬಿಟ್ಟಿದ್ದೀ.
೮ ಆದರೆ ಈಗ ಕರ್ತನೇ, ನಮ್ಮ ತಂದೆಯು ನೀನೇ;
ನಾವು ಮಣ್ಣು; ನೀನು ನಮ್ಮನ್ನು ರೂಪಿಸುವವನು;
ನಾವೆಲ್ಲರೂ ನಿನ್ನ ಕೈ ಕೆಲಸವೇ.
೯ ಕರ್ತನೇ, ಅತ್ಯಧಿಕವಾಗಿ ರೌದ್ರ ಮಾಡ ಬೇಡ;
ಎಂದೆಂದಿಗೂ ಅಕ್ರಮವನ್ನು ಜ್ಞಾಪಕ ಮಾಡ ಬೇಡ;
ಇಗೋ, ಬೇಡುತ್ತೇವೆ,
ದೃಷ್ಟಿ ಇಡು; ನಾವೆಲ್ಲರು ನಿನ್ನ ಜನರೇ.



೧೦ ನಿನ್ನ ಪರಿಶುದ್ಧ ಪಟ್ಟಣಗಳು ಅಡವಿಯಾದವು;
ಚಿಯೋನು ಅಡವಿಯಾಯಿತು;
ಯೆರೂಸಲೇಮು ಹಾಳೇ.
೧೧ ನಮ್ಮ ತಂದೆಗಳು ನಿನ್ನನ್ನು ಕೊಂಡಾಡಿದ,
ನಮ್ಮ ಪರಿಶುದ್ಧ ಶೃಂಗಾರವಾದ ಮನೆ,
ಬೆಂಕಿಯಿಂದ ಸುಟ್ಟು ಹೋಯಿತು;
ನಮ್ಮ ರಮ್ಯವಾದವುಗಳೆಲ್ಲಾ ನಾಶವಾದವು.
೧೨ ಇವು ಹೀಗಿರಲಾಗಿ, ಕರ್ತನೇ, ನಿನ್ನನ್ನು ಬಿಗಿ ಹಿಡುಕೊಳ್ಳುತ್ತೀಯೋ!
ಮೌನವಾಗಿದ್ದು ನಮ್ಮನ್ನು ಅತ್ಯಧಿಕವಾಗಿ ತಗ್ಗಿಸುವಿಯೋ!

## ೬೫. ಸಂಧಿ.

೧ ಕೇಳದವರಿಂದ ವಿಚಾರಿಸಲ್ಪಟ್ಟಿದ್ದೇನೆ,
ನನ್ನನ್ನು ಹುಡುಕದವರಿಂದ ಕಂಡು ಕೊಳ್ಳಲ್ಪಟ್ಟಿದ್ದೇನೆ;
ನನ್ನ ಹೆಸರಿನಿಂದ ಕರೆಯಲ್ಪಡದ ಜನಾಂಗಕ್ಕೆ,
ಇಗೋ, ಇದ್ದೇನೆ, ಇಗೋ ಇದ್ದೇನೆ, ಎಂದು ಹೇಳಿದೆನು.
೨ ಬಗ್ಗೇದಲ್ಲದ ಮಾರ್ಗದಲ್ಲಿ,
ತಮ್ಮ ಆಲೋಚನೆಗಳ ಪ್ರಕಾರ ನಡಕೊಳ್ಳುವ ತಿರುಗಿ ಬೀಳುವ ಜನರಿಗೆ,
ಹಗಲೆಲ್ಲಾ ನನ್ನ ಕೈಗಳನ್ನು ಚಾಚಿದ್ದೇನೆ.
೩ ಇವರು ಯಾವಾಗಲು ನನ್ನ ಮುಖದ ಮುಂದೆ ನನಗೆ ಕರಕರೆ ಎಬ್ಬಿಸುವ ಜನರು;
ತೋಟಗಳಲ್ಲಿ ಬಲಿ ಅರ್ಪಿಸಿ,
ಇಟ್ಟಿಗೆಗಳ ಮೇಲೆ ಧೂಪ ಸುಡುವವರು;
೪ ಸಮಾಧಿಗಳಲ್ಲಿ ಕೂತು, ಗವಿಗಳಲ್ಲಿ ತಂಗುವವರು;
ಹಂದಿ ಮಾಂಸವನ್ನು ಉಂಡು,
ತಮ್ಮ ಪಾತ್ರೆಗಳಲ್ಲಿ ಅಸಹ್ಯವಾದವುಗಳ ಸಾರುಳ್ಳವರು;
೫ ನಿನ್ನಷ್ಟಕ್ಕೆ ನೀನೇ ಇರು, ನನ್ನ ಬಳಿಗೆ ಬರ ಬೇಡ,
ಯಾಕಂದರೆ ನಿನಗಿಂತ ಪರಿಶುದ್ಧನಾಗಿದ್ದೇನೆಂದು ಹೇಳುವವರು;
ಇವರು ನನ್ನ ಮೂಗಿನಲ್ಲಿ ಹೊಗೆಯಾಗಿಯೂ,
ಹಗಲೆಲ್ಲಾ ಉರಿಯುವ ಬೆಂಕಿಯಾಗಿಯೂ, ಇದ್ದಾರೆ.
೬ ಇಗೋ, ನನ್ನ ಮುಂದೆ ಬರೆಯಲ್ಪಟ್ಟಿದೆ;
ನಾನು ಸುಮ್ಮನಿರದೆ, ಪ್ರತಿಫಲ ಕೊಡುತ್ತೇನೆ;
ಹೌದು, ಅವರ ಉಡಿಯಲ್ಲಿ ಪ್ರತಿಫಲ ಕೊಡುತ್ತೇನೆ.
೭ ನಿಮ್ಮ ಅಕ್ರಮಗಳಿಗೂ, ನಿಮ್ಮ ತಂದೆಗಳ ಅಕ್ರಮಗಳಿಗೂ ಕೂಡ,
ಪ್ರತಿಫಲ ಕೊಡುತ್ತೇನೆಂದು, ಕರ್ತನು ಹೇಳುತ್ತಾನೆ;
ಅವರು ಬೆಟ್ಟಗಳ ಮೇಲೆ ಧೂಪ ಸುಟ್ಟು,
ಗುಡ್ಡಗಳ ಮೇಲೆ ನನ್ನನ್ನು ನಿಂದಿಸಿದರಲ್ಲ!
ಹೀಗಿರುವದರಿಂದ ಅವರ ಪೂರ್ವದ ಕೆಲಸಗಳನ್ನು ಅವರ ಉಡಿಯಲ್ಲಿ ಅಳೆದು ಬಿಡುವೆನು.
೮ ಕರ್ತನು ಹೇಳುವದೇನಂದರೆ—
ದ್ರಾಕ್ಷೆ ಗೊನೆಯಲ್ಲಿ ರಸ ಸಿಕ್ಕುವದರಿಂದ, ಅದನ್ನು ಕೆಡಿಸ ಬೇಡ,
ಅದರಲ್ಲಿ ಆಶೀರ್ವಾದ ಉಂಟೆಂದು ಹೇಳುವದು ಹ್ಯಾಗೋ,
ಹಾಗೆಯೇ ನನ್ನ ಸೇವಕರಿಗೋಸ್ಕರ,
ಅವರನ್ನೆಲ್ಲಾ ಕೆಡಿಸಿ ಬಿಡದ ಹಾಗೆ, ಮಾಡುವೆನು.
೯ ಮತ್ತು ಯಾಕೋಬನೊಳಗಿಂದ ಬೀಜವನ್ನೂ,
ಯೆಹೂದದೊಳಗಿಂದ ನನ್ನ ಪರ್ವತಗಳನ್ನು ಸ್ವತಂತ್ರಿಸಿ ಕೊಳ್ಳುವವನನ್ನೂ, ಹೊರಗೆ ಬರ ಮಾಡುವೆನು;
ನಾನು ಆದು ಕೊಂಡವರು ಅದನ್ನು ಸ್ವತಂತ್ರಿಸಿ ಕೊಳ್ಳುವರು;
ನನ್ನ ಸೇವಕರು ಅದರಲ್ಲಿ ವಾಸವಾಗುವರು.
೧೦ ಮತ್ತು ನನ್ನನ್ನು ಹುಡುಕುವ ನನ್ನ ಜನರಿಗೋಸ್ಕರ,
ಶಾರೋನು ಮಂದೆಗಳ ಹಟ್ಟಿಯಾಗಿಯೂ,
ಅಕೋರಿನ ತಗ್ಗು, ದನಗಳು ಮಲಗುವ ಸ್ಥಳವಾಗಿಯೂ, ಇರುವದು.
೧೧ ಆದರೆ ನೀವು, ಓ ಕರ್ತನನ್ನು ಬಿಟ್ಟವರೇ!
ನನ್ನ ಪರಿಶುದ್ಧ ಪರ್ವತವನ್ನು ಮರೆತವರೇ!
ಗಾದನಿಗೆ ಮೇಜನ್ನು ಸಿದ್ಧ ಮಾಡಿ, ಮೇನಿಗೆ ಪಾನದರ್ಪಣೆಯನ್ನು ತುಂಬಿಸುವವರೇ!
೧೨ ನಿಮ್ಮನ್ನು ಕತ್ತಿಗೆ ನೇಮಿಸುವೆನು;
ನೀವೆಲ್ಲರು ಕೊಲೆಗೆ ಬೊಗ್ಗಿಕೊಳ್ಳುವಿರಿ;
ಯಾಕಂದರೆ, ನಾನು ಕರೆಯಲು, ನೀವು ಉತ್ತರ ಕೊಡಲಿಲ್ಲ;
ನಾನು ಮಾತಾಡಲು, ನೀವು ಕೇಳಲಿಲ್ಲ;
ನನ್ನ ದೃಷ್ಟಿಯಲ್ಲಿ ಕೆಟ್ಟದ್ದನ್ನು ಮಾಡಿದಿರಿ;
ನಾನು ಮೆಚ್ಚದ್ದನ್ನು ಆದು ಕೊಂಡಿರಿ.
೧೩ ಹೀಗಿರುವದರಿಂದ ಕರ್ತನಾದ ಯೆಹೋವನು ಹೇಳುವದೇನಂದರೆ—
ಇಗೋ, ನನ್ನ ಸೇವಕರು ಉಣ್ಣುವರು,
ಆದರೆ ನೀವು ಹಸಿದಿರುವಿರಿ;
ಇಗೋ, ನನ್ನ ಸೇವಕರು ಕುಡಿಯುವರು,
ಆದರೆ ನೀವು ಬಾಯಾರುವಿರಿ;
ಇಗೋ, ನನ್ನ ಸೇವಕರು ಸಂತೋಷ ಪಡುವರು,
ಆದರೆ ನೀವು ನಾಚಿಕೆ ಪಡುವಿರಿ;
೧೪ ಇಗೋ, ನನ್ನ ಸೇವಕರು ಹೃದಯದ ಆನಂದದಿಂದ ಹರ್ಷಿಸುವರು,
ಆದರೆ ನೀವು ಹೃದಯದ ವ್ಯಸನದಿಂದ ಕೂಗಿ, ಮುರಿದ ಆತ್ಮದಿಂದ ಹುಯಿಲಿಡುವಿರಿ.
೧೫ ಮತ್ತು ನಿಮ್ಮ ಹೆಸರನ್ನು ನಾನು ಆದುಕೊಂಡವರಿಗೆ ಶಾಪವಾಗಿ ಉಳಿಸುವಿರಿ;
ಯಾಕಂದರೆ ಕರ್ತನಾದ ಯೆಹೋವನು ನಿನ್ನನ್ನು ಕೊಂದು ಹಾಕಿ,
ತನ್ನ ಸೇವಕರಿಗೆ ಬೇರೆ ಹೆಸರನ್ನು ಇಡುವನು.
೧೬ ಆಗ ದೇಶದಲ್ಲಿ ಆಶೀರ್ವದಿಸಿಕೊಳ್ಳುವವನು,
ನಂಬಿಕೆಯಾದ ದೇವರಿಂದ ಆಶೀರ್ವದಿಸಿ ಕೊಳ್ಳುವನು;
ಮತ್ತು ದೇಶದಲ್ಲಿ ಆಣೆ ಇಟ್ಟುಕೊಳ್ಳುವವನು,
ನಂಬಿಕೆಯಾದ ದೇವರ ಆಣೆ ಇಟ್ಟುಕೊಳ್ಳುವನು;
ಯಾಕಂದರೆ ಮುಂಚಿನ ಇಕ್ಕಟ್ಟುಗಳು ಮರತು ಹೋಗಿ,
ನನ್ನ ಕಣ್ಣುಗಳಿಗೆ ಅಡಗಿ ಇರುವವು.

೧೭ ಯಾಕಂದರೆ ಇಗೋ ನಾನು ಹೊಸ ಆಕಾಶವನ್ನೂ ಹೊಸ
ಭೂಮಿಯನ್ನೂ ಸೃಷ್ಟಿಸುತ್ತೇನೆ,
ಮುಂಚಿನವುಗಳು ಜ್ಞಾಪಕ ಮಾಡಲ್ಪಡುವದಿಲ್ಲ, ಮನಸ್ಸಿಗೆ ಬರು
ವದಿಲ್ಲ.
೧೮ ಆದರೆ ನಾನು ಸೃಷ್ಟಿಸುವದರ ವಿಷಯ ಸಂತೋಷಿಸಿ ಎಂದೆಂದಿ
ಗೂ ಉಲ್ಲಾಸ ಪಡಿರಿ;
ಯಾಕಂದರೆ ಇಗೋ ನಾನು ಯೆರೂಸಲೇಮನ್ನು ಉಲ್ಲಾಸ
ಪಡ ತಕ್ಕದ್ದಾಗಿಯೂ,
ಅದರ ಜನರನ್ನು ಸಂತೋಷ ಪಡ ತಕ್ಕವರಾಗಿಯೂ, ಸೃಷ್ಟಿ
ಸುತ್ತೇನೆ.
೧೯ ಮತ್ತು ಯೆರೂಸಲೇಮಿನಲ್ಲಿ ಉಲ್ಲಾಸಿಸಿ, ನನ್ನ ಜನರಲ್ಲಿ ಸಂ
ತೋಷ ಪಡುವೆನು;
ಅದರಲ್ಲಿ ಅಳುವ ಶಬ್ದವೂ, ಕೂಗುವ ಶಬ್ದವೂ, ಇನ್ನು ಕೇಳಲ್ಪ
ಡುವದಿಲ್ಲ.
೨೦ ಅಲ್ಲಿ ಕೆಲವು ದಿವಸಗಳ ಕೂಸೂ,
ತನ್ನ ದಿವಸಗಳನ್ನು ತುಂಬಿಸದೆ ಇರುವ ಮುದುಕನೂ, ಇನ್ನು
ಇರುವದಿಲ್ಲ;
ಯಾಕಂದರೆ ಯೌವನಸ್ಥನು ನೂರು ವರುಷದವನಾಗಿ ಸಾಯು
ವನು,
ಆದರೆ ಪಾಪಿಷ್ಠನು ನೂರು ವರುಷದವನಾಗಿ ಶಾಪ ಹೊಂದು
ವನು.
೨೧ ಇಲ್ಲದೆ ಅವರು ಮನೆಗಳನ್ನು ಕಟ್ಟಿ, ವಾಸ ಮಾಡುವರು;
ದ್ರಾಕ್ಷೆ ತೋಟಗಳನ್ನು ನೆಟ್ಟು, ಅವುಗಳ ಫಲವನ್ನು ಉಣ್ಣುವರು.
೨೨ ಒಬ್ಬನು ಕಟ್ಟಿ ಇನ್ನೊಬ್ಬನು ವಾಸ ಮಾಡುವದಿಲ್ಲ,
ಒಬ್ಬನು ನೆಟ್ಟು ಇನ್ನೊಬ್ಬನು ಉಣ್ಣುವದಿಲ್ಲ;
ಯಾಕಂದರೆ ಮರದ ದಿನಗಳ ಹಾಗೆ ನನ್ನ ಜನರ ದಿನಗಳು ಇ
ರುವವು;
ನಾನು ಆರಿಸಿ ಕೊಂಡವರು ತಮ್ಮ ಕೈ ಕೆಲಸವನ್ನು ಅನುಭವಿಸು
ವರು.
೨೩ ಅವರು ವ್ಯರ್ಥ ಕಷ್ಟ ಮಾಡುವದಿಲ್ಲ,
ಭಯಭ್ರಾಂತಿಗಾಗಿ ಹೆರುವದಿಲ್ಲ;
ಯಾಕಂದರೆ ಅವರು ಕರ್ತನು ಆಶೀರ್ವದಿಸಿದವರ ಬೀಜವೇ;
ಅವರ ಸಂಗಡ ಅವರ ಉತ್ಪತ್ತಿಯು ಸಹ.
೨೪ ಮತ್ತು ಆಗುವದೇನಂದರೆ—
ಅವರು ಕರೆಯುವದಕ್ಕಿಂತ ಮುಂಚೆ ನಾನು ಉತ್ತರ ಕೊಡುವೆನು,
ಅವರು ಇನ್ನು ಮಾತಾಡುತ್ತಿರುವಾಗಲೇ ನಾನು ಕೇಳುವೆನು.
೨೫ ತೋಳವೂ ಕುರಿ ಮರಿಯೂ ಒಂದಾಗಿ ಮೇಯುವವು;
ಸಿಂಹವು ಎತ್ತಿನ ಹಾಗೆ ಹುಲ್ಲು ತಿನ್ನುವದು.
ಹಾವಾದರೆ ಅದರ ಆಹಾರವು ಮಣ್ಣೇ.
ನನ್ನ ಪರಿಶುದ್ಧ ಪರ್ವತದಲ್ಲೆಲ್ಲಾ ಕೇಡು ಮಾಡುವದಿಲ್ಲ, ನಾಶ
ಮಾಡುವದಿಲ್ಲ, ಎಂದು ಕರ್ತನು ಹೇಳುತ್ತಾನೆ.

## ೬೬. ಸಂಧಿ.

೧ ಕರ್ತನು ಹೇಳುವದೇನಂದರೆ—
ಆಕಾಶವು ನನ್ನ ಸಿಂಹಾಸನವು;
ಭೂಮಿಯು ನನ್ನ ಪಾದ ಪೀಠವು;
ನೀವು ನನಗೋಸ್ಕರ ಕಟ್ಟುವ ಮನೆ ಎಲ್ಲಿ?
ನನ್ನ ವಿಶ್ರಾಂತಿಯ ಸ್ಥಳವು ಎಲ್ಲಿ?
೨ ಇವುಗಳನ್ನೆಲ್ಲಾ ನನ್ನ ಕೈ ಉಂಟು ಮಾಡಿತು;
ಇವುಗಳೆಲ್ಲಾ ಇದ್ದವೆಂದು ಕರ್ತನು ಅನ್ನುತ್ತಾನೆ.
ಆದರೆ ಇವನ ಮೇಲೆ ದೃಷ್ಟಿ ಇಡುವೆನು—ಯಾರಂದರೆ,
ದೀನನೂ, ನಲಗಿದ ಆತ್ಮವುಳ್ಳವನೂ,
ನನ್ನ ವಾಕ್ಯಕ್ಕೆ ಹೆದರುವವನೂ ಯಾವನೋ, ಅವನ ಮೇಲೆ
ಯೇ.

೩ ಎತ್ತನ್ನು ಕೊಂದು ಹಾಕುವವನು,
ಮನುಷ್ಯನನ್ನು ಹತ್ಯ ಮಾಡುವವನ ಹಾಗಿದ್ದಾನೆ;
ಕುರಿಮರಿಯನ್ನು ಬಲಿಯಾಗಿ ಕೊಡುವವನು,
ನಾಯಿಯ ಕುತ್ತಿಗೆಯನ್ನು ಕಡಿಯುವವನ ಹಾಗಿದ್ದಾನೆ;
ಕಾಣಿಕೆಯನ್ನು ಅರ್ಪಿಸುವವನು,
ಹಂದಿ ರಕ್ತವನ್ನು ಅರ್ಪಿಸುವವನ ಹಾಗಿದ್ದಾನೆ;
ಜ್ಞಾಪಕಾರ್ಥವಾಗಿ ಧೂಪವನ್ನು ತರುವವನು,
ವಿಗ್ರಹವನ್ನು ಆಶೀರ್ವದಿಸುವವನ ಹಾಗಿದ್ದಾನೆ;
ಹೌದು, ಅವರು ಸ್ವಂತ ಮಾರ್ಗಗಳನ್ನು ಆರಿಸಿ ಕೊಂಡಿದ್ದಾರೆ;
ಅವರ ಪ್ರಾಣವು ಅವರ ಅಸಹ್ಯಗಳಲ್ಲಿ ಮೆಚ್ಚಿ ಕೊಂಡಿದೆ.
೪ ನಾನು ಸಹ ಅವರ ಪೀಡೆಗಳನ್ನು ಆರಿಸಿ ಕೊಂಡು,
ಅವರ ಭಯಗಳನ್ನು ಅವರ ಮೇಲೆ ಬರ ಮಾಡುವೆನು;
ಯಾಕಂದರೆ ನಾನು ಕರೆಯಲು ಯಾರೂ ಉತ್ತರ ಕೊಡಲಿಲ್ಲ,
ನಾನು ಮಾತಾಡಲೂ ಅವರು ಕೇಳಲಿಲ್ಲ,
ಆದರೆ ನನ್ನ ದೃಷ್ಟಿಯಲ್ಲಿ ಕೆಟ್ಟದ್ದನ್ನು ಮಾಡಿದರು,
ನಾನು ಮೆಚ್ಚದ್ದನ್ನು ಆರಿಸಿ ಕೊಂಡರು.

೫ ಕರ್ತನ ವಾಕ್ಯವನ್ನು ಕೇಳಿರಿ, ಅವನ ವಾಕ್ಯಕ್ಕೆ ಹೆದರುವ
ವರೇ!
ನಿಮ್ಮ ಸಹೋದರರು, ನಿಮ್ಮ ಹಗೆಯವರು,
ನನ್ನ ಹೆಸರಿಗೋಸ್ಕರ ನಿಮ್ಮನ್ನು ದೂರಗೆ ಹಾಕುವವರು,—
ಕರ್ತನು ಮಹಿಮೆ ಹೊಂದಲೆಂದು ಹೇಳಿದ್ದಾರೆ;
ಆದರೆ ನಿಮ್ಮ ಸಂತೋಷಕ್ಕಾಗಿ ಕಾಣಿಸುವನು;
ಮತ್ತು ಅವರು ನಾಚಿಕೆ ಪಡುವರು.

೬ ಪಟ್ಟಣದೊಳಗಿಂದ ಗದ್ದಲದ ಶಬ್ದವು!
ದೇವಾಲಯದೊಳಗಿಂದ ಶಬ್ದವು!
ತನ್ನ ಶತ್ರುಗಳಿಗೆ ಮುಯ್ಯಿಗೆ ಮುಯ್ಯಿ ತೀರಿಸುವ ಕರ್ತನ
ಶಬ್ದವೇ.
೭ ಅವಳಿಗೆ ನೋವು ಆಗುವದಕ್ಕಿಂತ ಮುಂಚೆ ಹೆತ್ತಳು,
ಅವಳಿಗೆ ವೇದನೆ ಬರುವದಕ್ಕಿಂತ ಮುಂಚೆ ಗಂಡು ಕೂಸು ಪಡ
ದಳು.
೮ ಇಂಥಾದ್ದನ್ನು ಯಾರು ಕೇಳಿದ್ದಾರೆ?
ಇಂಥವುಗಳನ್ನು ಯಾರು ನೋಡಿದ್ದಾರೆ?
ಭೂಮಿ ಒಂದೇ ದಿವಸದಲ್ಲಿ ಹೆತ್ತೀತೇ?



ಅಥವ ಜನಾಂಗವು ಒಮ್ಮಿಂದೊಮ್ಮೆ ಹುಟ್ಟೀತೇ!
ಹೌದು, ಚಿಯೋನು ನೋವು ಪಟ್ಟಾಗಲೇ ತನ್ನ ಮಕ್ಕಳನ್ನು
ಹೆತ್ತಳು.
೯ ನಾನು ಪ್ರಸವಕ್ಕೆ ತಂದ ಮೇಲೆ ಹೆರ ಮಾಡೆನೇ!
ಎಂದು ಕರ್ತನು ಹೇಳುತ್ತಾನೆ;
ಇಲ್ಲವೆ ಹೆರ ಮಾಡಿದವನಾದ ನಾನು ಮುಚ್ಚುವೆನೇ!
ಎಂದು ನಿನ್ನ ದೇವರು ಹೇಳುತ್ತಾನೆ.
೧೦ ಯೆರೂಸಲೇಮಿನ ಸಂಗಡ ಸಂತೋಷಿಸಿರಿ,
ಅವಳನ್ನು ಪ್ರೀತಿ ಮಾಡುವವರೆಲ್ಲರೇ!
ಅವಳಿಗೋಸ್ಕರ ಉಲ್ಲಾಸ ಪಡಿರಿ,
ಅವಳಿಗೋಸ್ಕರ ದುಃಖಿಸಿದವರೆಲ್ಲರೇ!
೧೧ ಅವಳ ಆದರಣೆಗಳ ಪೊಲೆ ಹೀರಿಕೊಂಡು, ತೃಪ್ತಿಯಾಗುವ
ಹಾಗೆಯೂ,
ಅವಳ ಮಹಿಮೆಯ ಥಾರೆಯನ್ನು ಕುಡಿದು, ಆನಂದಗೊಳ್ಳುವ
ಹಾಗೆಯೂ,
ಅವಳ ಸಂಗಡ ಬಹಳವಾಗಿ ಸಂಭ್ರಮ ಪಡಿರಿ.

೧೨ ಯಾಕಂದರೆ ಕರ್ತನು ಹೀಗೆ ಹೇಳುತ್ತಾನೆ—
ಇಗೋ, ನಾನು ನದಿಯಂತೆ ಸಮಾಧಾನವನ್ನೂ,
ಹರಿಯುವ ಹಳ್ಳದಂತೆ ಜನಾಂಗಗಳ ಮಹಿಮೆಯನ್ನೂ,
ಅವಳ ಕಡೆಗೆ ಬರ ಮಾಡುವೆನು;
ಆಗ ನೀವು ಅವುಗಳನ್ನು ಹೀರಿಕೊಂಡು, ಪಕ್ಕೆಯಲ್ಲಿ ಹೊರ
ಲ್ಪಡುವಿರಿ,
ಮೊಣಕಾಲುಗಳ ಮೇಲೆ ಆಡಿಸಲ್ಪಡುವಿರಿ.
೧೩ ಒಬ್ಬನನ್ನು ಅವನ ತಾಯಿ ಆದರಿಸುವ ಪ್ರಕಾರವೇ,
ನಾನು ನಿಮ್ಮನ್ನು ಆದರಿಸುವೆನು;
ಹೌದು, ಯೆರೂಸಲೇಮಿನ ನಿಮಿತ್ತವೇ ಆದರಣೆ ಪಡುವಿರಿ.
೧೪ ನೀವು ಅದನ್ನು ನೋಡುವಾಗ ನಿಮ್ಮ ಹೃದಯ ಸಂತೋಷಿ
ಸುವದು,
ನಿಮ್ಮ ಎಲುವುಗಳು ಹಸುರು ಪಲ್ಯದ ಹಾಗೆ ಚಿಗುರುವವು;
ಮತ್ತು ಕರ್ತನ ಕೈ ಅವನ ಸೇವಕರಲ್ಲಿಯೂ,
ಅವನ ಕೋಪವು ಅವನ ಶತ್ರುಗಳಲ್ಲಿಯೂ, ತಿಳಿಯ ಬರುವದು.

೧೫ ಯಾಕಂದರೆ, ಇಗೋ ಕರ್ತನು ಬೆಂಕಿಯಿಂದ ಬರುವನು.
ಅವನ ರಥಗಳು ಬಿರುಗಾಳಿಯ ಹಾಗೆ ಇರುವವು;
ಉಗ್ರದಿಂದ ತನ್ನ ಕೋಪವನ್ನೂ,
ಅಗ್ನಿ ಜ್ವಾಲೆಗಳಿಂದ ತನ್ನ ಗದರಿಕೆಯನ್ನೂ ಸಲ್ಲಿಸುವದಕ್ಕಾ
ಗಿಯೇ.
೧೬ ಯಾಕಂದರೆ ಬೆಂಕಿಯಿಂದಲೂ, ತನ್ನ ಕತ್ತಿಯಿಂದಲೂ,
ಕರ್ತನು ಮಾಂಸಕ್ಕೆಲ್ಲಾ ನ್ಯಾಯ ತೀರಿಸುವನು;
ಕರ್ತನಿಂದ ಕೊಲ್ಲಲ್ಪಟ್ಟವರು ಅನೇಕರಾಗಿರುವರು.
೧೭ ತೋಟಗಳಲ್ಲಿ ಒಬ್ಬರ ಹಿಂದೊಬ್ಬರು, ಮಧ್ಯದಲ್ಲಿ,
ತಮ್ಮನ್ನು ಪರಿಶುದ್ಧ ಮಾಡಿಕೊಂಡು, ಪವಿತ್ರ ಮಾಡಿ ಕೊ
ಳ್ಳುವವರೂ,
ಹಂದಿ ಮಾಂಸವನ್ನೂ, ಅಸಹ್ಯವಾದದ್ದನ್ನೂ, ಇಲಿಯನ್ನೂ,
ತಿನ್ನುವವರೂ,
ಕೂಡ ಮಡಿದು ಹೋಗುವರೆಂದು, ಕರ್ತನು ಹೇಳುತ್ತಾನೆ.
೧೮ ಯಾಕಂದರೆ ನಾನು ಅವರ ಕ್ರಿಯೆಗಳನ್ನೂ ಅವರ ಆಲೋಚ
ನೆಗಳನ್ನೂ ಬಲ್ಲೆನು.

ಎಲ್ಲಾ ಜನಾಂಗಗಳನ್ನೂ ಭಾಷೆಗಳನ್ನೂ ಕೂಡಿಸೋಣ
ಆಗುವದು,
ಆಗಲವರು ಬಂದು ನನ್ನ ಮಹಿಮೆಯನ್ನು ನೋಡುವರು.
೧೯ ಮತ್ತು ಅವರಲ್ಲಿ ಗುರುತನ್ನಿಟ್ಟು,
ಅವರಲ್ಲಿ ತಪ್ಪಿಸಿ ಕೊಂಡವರನ್ನು ಜನಾಂಗಗಳಿಗೂ,
ತಾರ್ಷಿಷಿಗೂ, ಫೂಲಿಗೂ, ಲೂದಿಗೂ, ಬಿಲ್ಲು ಬೊಗ್ಗಿಸುವ
ಇವರಿಗೂ,
ತೂಬಲಿಗೂ, ಯಾವಾನಿಗೂ,
ನನ್ನ ಸಮಾಚಾರವನ್ನು ಕೇಳದೆ,
ನನ್ನ ಮಹಿಮೆಯನ್ನು ನೋಡದೆ,
ಇರುವ ದೂರ ದ್ವೀಪಗಳಿಗೂ, ಕಳುಹಿಸುವೆನು;
ಅವರು ಜನಾಂಗಗಳಲ್ಲಿ ನನ್ನ ಮಹಿಮೆಯನ್ನು ತಿಳಿಸುವರು.
೨೦ ಅವರು ನಿಮ್ಮ ಸಹೋದರರನ್ನು,
ಕುದುರೆಗಳ ಮೇಲೆಯೂ, ರಥಗಳಲ್ಲಿಯೂ, ಪಾಲ್ಕಿಗಳ
ಲ್ಲಿಯೂ,
ಹಾಸರ ಕತ್ತೆಗಳ ಮೇಲೆಯೂ, ಕಾಲಾಡಿ ಒಂಟೆಗಳ ಮೇಲೆಯೂ,
ಸಮಸ್ತ ಜನಾಂಗಗಳೊಳಗಿಂದ ಕರ್ತನಿಗೆ ಕಾಣಿಕೆಯಾಗಿ,
ಇಸ್ರಯೇಲನ ಮಕ್ಕಳು ಕಾಣಿಕೆಯನ್ನು ಶುದ್ಧ ಪಾತ್ರೆಯಲ್ಲಿ
ಕರ್ತನ ಮನೆಗೆ ತರುವ ಪ್ರಕಾರ,
ನನ್ನ ಪರಿಶುದ್ಧ ಪರ್ವತವಾದ ಯೆರೂಸಲೇಮಿಗೆ ತರುವರೆಂದು,
ಕರ್ತನು ಹೇಳುತ್ತಾನೆ.
೨೧ ಮತ್ತು ಅವರಲ್ಲಿಂದಲೂ, ಯಾಜಕರಿಗಾಗಿಯೂ ಲೇವ್ಯರಿಗಾ
ಗಿಯೂ,
ತಕ್ಕೊಳ್ಳುವೆನೆಂದು ಕರ್ತನು ಹೇಳುತ್ತಾನೆ.
೨೨ ಯಾಕಂದರೆ ನಾನು ಉಂಟು ಮಾಡುವ ಹೊಸ ಆಕಾಶವೂ
ಹೊಸ ಭೂಮಿಯೂ,
ನನ್ನ ಮುಂದೆ ನೆಲೆಯಾಗಿರುವ ಪ್ರಕಾರವೇ,
ನಿಮ್ಮ ಬೀಜವೂ, ನಿಮ್ಮ ಹೆಸರೂ, ನೆಲೆಯಾಗಿರುವದೆಂದು,
ಕರ್ತನು ಅನ್ನುತ್ತಾನೆ.
೨೩ ಇದಲ್ಲದೆ ಅಮವಾಸೆ ಅಮವಾಸೆಗೂ, ಸಬ್ಬತು ಸಬ್ಬತಿಗೂ,
ಮಾಂಸವೆಲ್ಲಾ ನನ್ನ ಮುಂದೆ ಅಡ್ಡ ಬೀಳುವದಕ್ಕೆ ಬರುವದೆಂದು,
ಕರ್ತನು ಹೇಳುತ್ತಾನೆ.
೨೪ ಮತ್ತು ಅವರು ಹೊರಟು,
ನನಗೆ ವಿರೋಧವಾಗಿ ದ್ರೋಹ ಮಾಡಿದ ಮನುಷ್ಯರ ಹೆಣಗಳ
ನ್ನು ನೋಡುವರು;
ಯಾಕಂದರೆ ಅವರ ಹುಳ ಸಾಯುವದಿಲ್ಲ;
ಅವರ ಬೆಂಕಿ ಆರುವದಿಲ್ಲ;
ಅವರು ಮಾಂಸಕ್ಕೆಲ್ಲಾ ಹೇಸಿಕೆಯಾಗುವರು.

# THE BOOK OF THE PROPHET JEREMIAH.

ಪ್ರವಾದಿಯಾದ ಯೆರೆಮಿಾಯನ ಪುಸ್ತಕವು.

## ೧. ಸಂಧಿ.

೧ ಬೆನ್ಯಮಿನನ ದೇಶದ ಅನತೋಥಿನಲ್ಲಿದ್ದ ಯಾಜಕರಲ್ಲಿ
ಒಬ್ಬನಾದ ಹಿಲ್ಕೀಯನ ಮಗನಾಗಿರುವ ಯೆರೆಮಿಾಯನ ವಾ
೨ ಕ್ಯಗಳು. ಯೆಹೂದದ ಅರಸನಾದ ಆಮೋನನ ಮಗನಾದ
ಯೊಸೀಯನ ದಿನಗಳಲ್ಲಿ, ಅವನ ಥೊರೆತನದ ಹದಿಮೂರನೇ
ವರುಷದಲ್ಲಿ, ಇವನಿಗೆ ಕರ್ತನ ವಾಕ್ಯವು ಉಂಟಾಯಿತು.
೩ ಮತ್ತು ಯೆಹೂದದ ಅರಸನಾದ ಯೊಸೀಯನ ಮಗನಾಗಿರುವ
ಯೆಹೋಯಕೀಮನ ದಿನಗಳಲ್ಲಿಯೂ, ಯೆಹೂದದ ಅರಸನಾ
ದ ಯೊಸೀಯನ ಮಗನಾಗಿರುವ ಚೆದ್ಕೀಯನ ಹನ್ನೊಂದನೇ
ವರುಷದ ಅಂತ್ಯದ ಪರ್ಯಂತರಕ್ಕೂ, ಐದನೇ ತಿಂಗಳಲ್ಲಿ
ಯೆರೂಸಲೇಮು ಸೆರೆಯಾಗಿ ವೈಯಲ್ಪಡುವ ಪರ್ಯಂತರಕ್ಕೂ,
ಉಂಟಾಯಿತು.

೪ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ—
೫ ನಾನು ನಿನ್ನನ್ನು ಹೊಟ್ಟೆಯಲ್ಲಿ ನಿರ್ಮಿಸುವದಕ್ಕಿಂತ ಮುಂಚೆ
ನಿನ್ನನ್ನು ಶಿಳಿದೆನು;
ನೀನು ಗರ್ಭದಿಂದ ಹೊರಗೆ ಬರುವದಕ್ಕಿಂತ ಮುಂಚೆ ನಿನ್ನನ್ನು
ಪರಿಶುದ್ಧ ಮಾಡಿದೆನು;
ನಿನ್ನನ್ನು ಜನಾಂಗಗಳಿಗೆ ಪ್ರವಾದಿಯಾಗಿ ನೇಮಿಸಿದೆನು.

೬ ಆದರೆ ನಾನು—ಅಯ್ಯೋ! ಕರ್ತನಾದ ಯೆಹೋವನೇ,
ಇಗೋ, ಮಾತಾಡುವದಕ್ಕೆ ನನಗೆ ಬರುವದಿಲ್ಲ; ನಾನು ಚಿಕ್ಕವ
ನು, ಅಂದೆನು.
೭ ಆಗ ಕರ್ತನು ನನಗೆ ಹೇಳಿದ್ದೇನಂದರೆ—
ನಾನು ಚಿಕ್ಕವನೆಂದು ಹೇಳ ಬೇಡ;
ಯಾಕಂದರೆ, ನಾನು ನಿನ್ನನ್ನು ಕಳುಹಿಸುವವರೆಲ್ಲರ ಬಳಿಗೆ
ಹೋಗ ಬೇಕು;
ಮತ್ತು ನಾನು ನಿನಗೆ ಆಜ್ಞಾಪಿಸುವದನ್ನೆಲ್ಲಾ ಮಾತಾಡ ಬೇಕು.
೮ ಅವರ ಮುಖಗಳಿಗೆ ಭಯ ಪಡ ಬೇಡ;
ಯಾಕಂದರೆ ನಿನ್ನನ್ನು ತಪ್ಪಿಸುವದಕ್ಕೆ ನಾನೇ ನಿನ್ನ ಸಂಗಡ
ಇದ್ದೇನೆಂದು, ಕರ್ತನು ಅಂದನು.

೯ ಆಗ ಕರ್ತನು ಕೈ ಚಾಚಿ ನನ್ನ ಬಾಯಿಯನ್ನು ಮುಟ್ಟಿದನು;
ಮತ್ತು ಕರ್ತನು ನನಗೆ—ಇಗೋ, ನನ್ನ ವಾಕ್ಯಗಳನ್ನು ನಿನ್ನ
ಬಾಯಿಯಲ್ಲಿ ಇಟ್ಟಿದ್ದೇನೆ.
೧೦ ನೋಡು, ಈ ಹೊತ್ತು ನಿನ್ನನ್ನು,
ಕೀಳುವದಕ್ಕೂ, ಒಡದು ಬಿಡುವದಕ್ಕೂ,
ನಾಶನ ಮಾಡುವದಕ್ಕೂ, ಕೆಡವಿ ಹಾಕುವದಕ್ಕೂ,
ಕಟ್ಟುವದಕ್ಕೂ, ನೆಡುವದಕ್ಕೂ,
ಜನಾಂಗಗಳ ಮೇಲೆಯೂ, ರಾಜ್ಯಗಳ ಮೇಲೆಯೂ,
ಇರಿಸಿದ್ದೇನೆ, ಅಂದನು.

೧೧ ಮತ್ತು ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ
ಯೆರೆಮಿಾಯನೇ, ಏನು ನೋಡುತ್ತಿ!
ನಾನು—ಬಾದಾಮಿಯ ಕೋಲನ್ನು ನೋಡುತ್ತೇನೆ, ಅಂದೆನು.
೧೨ ಆಗ ಕರ್ತನು ನನಗೆ—ಚನ್ನಾಗಿ ನೋಡಿದ್ದೀ;
ಯಾಕಂದರೆ, ನನ್ನ ವಾಕ್ಯದ ವಿಷಯ,
ಅದನ್ನು ನಡಿಸುವದಕ್ಕೆ, ಎಚ್ಚರವಾಗಿರುವೆನು, ಅಂದನು.

೧೩ ಎರಡನೇಸಾರಿ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿ
ದ್ದೇನಂದರೆ—
ಏನು ನೋಡುತ್ತೀ!
ನಾನು—ಬೇಯುವ ಗುಡಾಣವನ್ನು ನೋಡುತ್ತೇನೆ;
ಅದರ ಬಾಯಿ ಉತ್ತರದ ಕಡೆಯಿಂದ ಇದೆ, ಅಂದೆನು.
೧೪ ಆಗ ಕರ್ತನು ನನಗೆ ಹೇಳಿದ್ದೇನಂದರೆ—
ಉತ್ತರ ಕಡೆಯಿಂದ,
ದೇಶದ ನಿವಾಸಿಗಳೆಲ್ಲರ ಮೇಲೆ, ಕೇಡು ಹೊರಟು ಬರುವದು.
೧೫ ಯಾಕಂದರೆ, ಇಗೋ, ನಾನು
ಉತ್ತರದಲ್ಲಿರುವ ರಾಜ್ಯಗಳ ಗೋತ್ರಗಳನ್ನೆಲ್ಲಾ ಕರೆಯುತ್ತೇ
ನೆಂದು,
ಕರ್ತನು ಅನ್ನುತ್ತಾನೆ;
ಅವರು ಬಂದು,
ತಮ್ಮ ತಮ್ಮ ಸಿಂಹಾಸನಗಳನ್ನು,
ಯೆರೂಸಲೇಮಿನ ಬಾಗಲುಗಳ ಪ್ರವೇಶದಲ್ಲಿಯೂ,
ಅದರ ಸುತ್ತಲಾಗಿರುವ ಗೋಡೆಗಳಿಗೆ ಎದುರಾಗಿಯೂ,
ಯೆಹೂದದ ಎಲ್ಲಾ ಪಟ್ಟಣಗಳಿಗೆ ಎದುರಾಗಿಯೂ, ಇರಿಸುವರು.
೧೬ ಮತ್ತು ಅವರ ಎಲ್ಲಾ ಕೆಟ್ಟತನದ ನಿಮಿತ್ತ,
ಅವರಿಗೆ ವಿರೋಧವಾಗಿ ನನ್ನ ನ್ಯಾಯ ತೀರ್ಪುಗಳನ್ನು ಹೇಳು
ವೆನು;
ಯಾಕಂದರೆ, ನನ್ನನ್ನು ಬಿಟ್ಟು,
ಬೇರೆ ದೇವರುಗಳಿಗೆ ಧೂಪವರ್ಪಿಸಿ,
ಸ್ವಂತ ಕೈ ಕೆಲಸಗಳಿಗೆ ಅಡ್ಡ ಬಿದ್ದಿದ್ದಾರೆ.
೧೭ ಆದದರಿಂದ ನೀನು ನಿನ್ನ ನಡುವನ್ನು ಕಟ್ಟಿ, ನಿಂತುಕೊಳ್ಳು,
ನಾನು ನಿನಗೆ ಆಜ್ಞಾಪಿಸುವದನ್ನೆಲ್ಲಾ ಅವರ ಸಂಗಡ ಮಾತಾಡು;
ನಾನು ನಿನ್ನನ್ನು ಅವರ ಮುಂದೆ ದಿಗಿಲು ಪಡಿಸದ ಹಾಗೆ,
ನೀನು ಅವರ ಮುಖಗಳಿಗೆ ದಿಗಿಲು ಪಡ ಬೇಡ.
೧೮ ಯಾಕಂದರೆ, ಇಗೋ,
ಸಮಸ್ತ ದೇಶಕ್ಕೆ ವಿರೋಧವಾಗಿ,
ಯೆಹೂದದ ಅರಸರಿಗೆ ವಿರೋಧವಾಗಿಯೂ,
ಅದರ ಪ್ರಧಾನಿಗಳಿಗೆ ವಿರೋಧವಾಗಿಯೂ,
ಅದರ ಯಾಜಕರಿಗೆ ವಿರೋಧವಾಗಿಯೂ,
ದೇಶದ ಜನರಿಗೆ ವಿರೋಧವಾಗಿಯೂ,



ನಾನೇ ಈ ಹೊತ್ತು ನಿನ್ನನ್ನು ಕೋಟೆಯುಳ್ಳ ಪಟ್ಟಣವಾಗಿಯೂ,
ಕಬ್ಬಿಣದ ಸ್ತಂಭವಾಗಿಯೂ,
ಹಿತ್ತಾಳೆಯ ಗೋಡೆಯಾಗಿಯೂ, ಮಾಡಿದ್ದೇನೆ.
೧೯ ಅವರು ನಿನಗೆ ವಿರೋಧವಾಗಿ ಯುದ್ಧ ಮಾಡುವರು;
ಆದರೆ ನಿನ್ನನ್ನು ಗೆಲ್ಲುವದಿಲ್ಲ;
ಯಾಕಂದರೆ, ನಿನ್ನನ್ನು ತಪ್ಪಿಸುವದಕ್ಕೆ,
ನಾನೇ ನಿನ್ನ ಸಂಗಡ ಇದ್ದೇನೆಂದು, ಕರ್ತನು ಅನ್ನುತ್ತಾನೆ.

## ೨. ಸಂಧಿ.

೧ ಮತ್ತು ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂ
ದರೆ—
೨ ನೀನು ಹೋಗಿ ಯೆರೂಸಲೇಮಿನ ಕಿವಿಗಳಲ್ಲಿ ಕೂಗಿ ಹೇಳ ಬೇ
ಕಾದದ್ದೇನಂದರೆ—
ಕರ್ತನು ಹೀಗೆ ಹೇಳುತ್ತಾನೆ—
ನಾನು ನಿನ್ನ ವಿಷಯ,
ನಿನ್ನ ಯೌವನದ ಪ್ರೀತಿಯನ್ನೂ,
ನಿನ್ನ ನಿಶ್ಚಿತಾರ್ಥದ ಸ್ನೇಹವನ್ನೂ,
ನೀನು ಅರಣ್ಯದಲ್ಲಿ, ಬಿತ್ತಲ್ಪಡದ ದೇಶದಲ್ಲಿ,
ನನ್ನನ್ನು ಹಿಂಬಾಲಿಸಿದ್ದನ್ನು, ಜ್ಞಾಪಕ ಮಾಡಿ ಕೊಳ್ಳುತ್ತೇನೆ.
೩ ಇಸ್ರಯೇಲು ಕರ್ತನಿಗೆ ಪರಿಶುದ್ಧವೂ,
ಅವನ ಹುಟ್ಟುವಳಿಯ ಪ್ರಥಮ ಫಲವೂ, ಆಗಿತ್ತು;
ಅದನ್ನು ತಿಂದು ಬಿಟ್ಟವರೆಲ್ಲರು ಅಪರಾಧಿಗಳಾದರು,
ಅವರಿಗೆ ಕೇಡು ಬಂತೆಂದು, ಕರ್ತನು ಅನ್ನುತ್ತಾನೆ.
೪ ಯಾಕೋಬನ ಮನೆಯೇ! ಇಸ್ರಯೇಲನ ಮನೆಯ ಎಲ್ಲಾ
ಗೋತ್ರಗಳೇ!
ಕರ್ತನ ವಾಕ್ಯವನ್ನು ಕೇಳಿರಿ.
೫ ಕರ್ತನು ಹೇಳುವದೇನಂದರೆ—
ನಿಮ್ಮ ತಂದೆಗಳು,
ನನಗೆ ದೂರವಾಗಿ, ಮಾಯವನ್ನು ಹಿಂದಟ್ಟಿ, ಮಾಯವಾಗುವ
ಹಾಗೆ,
ನನ್ನಲ್ಲಿ ಏನು ಅನ್ಯಾಯ ಕಂಡಿದ್ದಾರೆ!
೬ ನಮ್ಮನ್ನು ಐಗುಪ್ತ ದೇಶದೊಳಗಿಂದ ಮೇಲೆ ಬರ ಮಾಡಿ,
ನಮ್ಮನ್ನು ಅರಣ್ಯದಲ್ಲಿ, ಕಾಡೂ ಕಾಣಿಗಳೂ ಉಳ್ಳ ದೇಶದಲ್ಲಿ,
ಬಣಗಿದಂಥ ಮರಣದ ನೆರಳಾದಂಥ ದೇಶದಲ್ಲಿ,
ಒಬ್ಬರು ಹಾದು ಹೋಗದೆ, ಯಾರು ವಾಸ ಮಾಡದೆ ಇರುವಲ್ಲಿ,
ನಡಿಸಿದ ಕರ್ತನು ಎಲ್ಲಿ! ಎಂದು ಅವರು ಹೇಳ ಕೊಳ್ಳಲಿಲ್ಲ.
೭ ಮತ್ತು ನಿಮ್ಮನ್ನು ತೋಟಗಳುಳ್ಳ ದೇಶಕ್ಕೆ,
ಅದರ ಫಲವನ್ನೂ ಮೇಲನ್ನೂ ಉಣ್ಣುವ ಹಾಗೆ,
ಕರ ಕೊಂಡು ಬಂದೆನು.
ಆದರೆ ನೀವು ಬಂದು, ನನ್ನ ದೇಶವನ್ನು ಅಶುದ್ಧ ಮಾಡಿ,
ನನ್ನ ಸ್ವಾಸ್ತ್ಯವನ್ನು ಅಸಹ್ಯ ಮಾಡಿದಿರಿ.
೮ ಯಾಜಕರು ಕರ್ತನು ಎಲ್ಲಿ! ಎಂದು ಹೇಳಲಿಲ್ಲ;
ನ್ಯಾಯಪ್ರಮಾಣವನ್ನು ಬಳಸುವವರು ನನ್ನನ್ನು ತಿಳಿಯಲಿಲ್ಲ;
ಕುರುಬರು ನನಗೆ ವಿರೋಧವಾಗಿ ದ್ರೋಹ ಮಾಡಿದರು;
ಪ್ರವಾದಿಗಳು ಬಾಳನಿಂದ ಪ್ರವಾದಿಸಿದರು;
ಪ್ರಯೋಜನವಿಲ್ಲದವುಗಳನ್ನು ಹಿಂದಟ್ಟಿದರು.
೯ ಆದದರಿಂದ ಇನ್ನು ನಿಮ್ಮ ಸಂಗಡ ವ್ಯಾಜ್ಯವಾಡುವೆನೆಂದು.
ಕರ್ತನು ಅನ್ನುತ್ತಾನೆ;
ಇದಲ್ಲದೆ ನಿಮ್ಮ ಮಕ್ಕಳ ಮಕ್ಕಳ ಸಂಗಡ ವ್ಯಾಜ್ಯವಾಡುವೆನು,
೧೦ ಯಾಕಂದರೆ, ಕಿತ್ತಿಯರ ದ್ವೀಪಗಳಿಗೆ ದಾಟಿ ಹೋಗಿ, ನೋ
ಡಿರಿ;
ಕೇದರಿಗೆ ಕಳುಹಿಸಿ, ಚನ್ನಾಗಿ ತಿಳಿಯ ಕೊಳ್ಳಿರಿ;
ಇದರಪ್ಪಂದ ಉಂಟೋ! ನೋಡಿರಿ.
೧೧ ಜನಾಂಗವು ತನ್ನ ದೇವರುಗಳನ್ನು,
ಅವರು ದೇವರುಗಳಲ್ಲದೆ ಇದ್ದಾಗ್ಯೂ, ಬದಲು ಮಾಡಿದ್ದುಂ
ಟೋ!
ಆದರೆ ನನ್ನ ಜನರು ತಮ್ಮ ಮಹಿಮೆಯನ್ನು,
ಪ್ರಯೋಜನವಿಲ್ಲದ್ದಕ್ಕೆ ಬದಲು ಮಾಡಿದ್ದಾರೆ.
೧೨ ಆಕಾಶಗಳೇ! ಇದಕ್ಕೆ ಆಶ್ಚರ್ಯ ಹೊಂದಿರಿ,
ಭಯಭ್ರಾಂತಿ ಗೊಳ್ಳಿರಿ, ಮಹಾ ಭ್ರಮೆ ಪಡಿರಿ,
ಎಂದು ಕರ್ತನು ಅನ್ನುತ್ತಾನೆ.
೧೩ ಯಾಕಂದರೆ ನನ್ನ ಜನರು ಎರಡು ಕೆಟ್ಟಪುಗಳನ್ನು ಮಾಡಿ
ದ್ದಾರೆ;
ಜೀವವುಳ್ಳ ನೀರಿನ ಬುಗ್ಗೆಯಾಗಿರುವ ನನ್ನನ್ನು ಬಿಟ್ಟು,
ತಮಗೆ ತೊಟ್ಟಿಗಳನ್ನೂ,
ನೀರು ಹಿಡಿಯಲಾರದ ಒಡಕು ತೊಟ್ಟಿಗಳನ್ನೂ, ಕೆತ್ತಿದ್ದಾರೆ.

೧೪ ಇಸ್ರಯೇಲನು ದಾಸನೋ! ಮನೆಯಲ್ಲಿ ಹುಟ್ಟಿದವನೋ!
ಅವನು ಯಾಕೆ ಸುಲಿಗೆಯಾದನು!
೧೫ ಎಳೇ ಸಿಂಹಗಳು ಅವನಿಗೆ ವಿರೋಧವಾಗಿ ಘರ್ಜಿಸಿ,
ಶಬ್ದವನ್ನೆತ್ತುತ್ತವೆ;
ಅವನ ದೇಶವನ್ನು ಹಾಳು ಮಾಡುತ್ತವೆ;
ಅವನ ಪಟ್ಟಣಗಳು ನಿವಾಸವಿಲ್ಲದೆ ಸುಟ್ಟು ಹೋಗಿವೆ.
೧೬ ನೋಫಿನ ತಪ್ಪೆಯ ಮಕ್ಕಳು ಸಹ,
ನಿನ್ನ ನಡುನೆತ್ತಿಯನ್ನು ಮೆಯಿದು ಬಿಟ್ಟಿದ್ದಾರೆ.
೧೭ ನೀನು ನಿನ್ನ ದೇವರಾದ ಕರ್ತನನ್ನು,
ಅವನು ನಿನ್ನನ್ನು ದಾರಿಯಲ್ಲಿ ನಡಿಸುತ್ತಿರುವಾಗ, ಬಿಟ್ಟದರಿಂದಲೇ,
ಇದನ್ನು ನಿನಗೆ ನೀನೇ ಮಾಡಿ ಕೊಂಡಿಯಲ್ಲವೋ!
೧೮ ಮತ್ತು, ಈಗ ಸಿಹೋರಿನ ನೀರು ಕುಡಿಯುವದಕ್ಕಾಗಿ,
ಐಗುಪ್ತದ ದಾರಿಯಲ್ಲಿ ನಿನಗೇನು!
ಇಲ್ಲವೆ ನದಿಯ ನೀರು ಕುಡಿಯುವದಕ್ಕಾಗಿ,
ಅಶ್ಶೂರಿನ ದಾರಿಯಲ್ಲಿ ನಿನಗೇನು!
೧೯ ನಿನ್ನ ಕೆಟ್ಟತನವೇ ನಿನ್ನನ್ನು ಶಿಕ್ಷಿಸುವದು;
ನಿನ್ನ ಹಿಂಶಿರುಗುವಿಕೆಗಳೇ ನಿನ್ನನ್ನು ಗದರಿಸುವವು;
ಹೀಗಿರುವದರಿಂದ ನೀನು ನಿನ್ನ ದೇವರಾದ ಕರ್ತನನ್ನು
ಬಿಟ್ಟದ್ದೂ,
ನನ್ನ ಭಯವು ನಿನ್ನಲ್ಲಿ ಇಲ್ಲದಿರುವದೂ,
ಕೆಟ್ಟದ್ದೂ, ಕಹಿಯಾದದ್ದೂ, ಎಂದು ತಿಳಿಯ ಕೊಂಡು, ನೋ
ಡೆಂದು,
ಸೈನ್ಯಗಳ ಕರ್ತನಾದ ಯೆಹೋವ ಅನ್ನುತ್ತಾನೆ.

೨೦ ಯಾಕಂದರೆ ಪೂರ್ವದಲ್ಲಿ ನಿನ್ನ ನೊಗವನ್ನು ಮುರಿದು,

ನಿನ್ನ ಬಂಧಗಳನ್ನು ಹರಿದು ಬಿಟ್ಟೆನು;
ಮತ್ತು ನಾನು ಮಿಾರುವದಿಲ್ಲವೆಂದು ನೀನು ಹೇಳಿದಿ;
ಆದರೆ ಒಂದೊಂದು ಎತ್ತರವಾದ ಗುಡ್ಡದ ಮೇಲೆಯೂ,
ಒಂದೊಂದು ಹಸುರಾದ ಮರದ ಕೆಳಗೆಯೂ,
ನೀನು ಸೂಳೆಯಾಗಿ ಅಡ್ಡಾಡುತ್ತೀ.

೨೧ ಆದರೂ ನಾನು ನಿನ್ನನ್ನು ಉತ್ತಮ ದ್ರಾಕ್ಷೆ ಬಳ್ಳಿಯಾಗಿಯೂ,
ಪೂರ್ಣವಾಗಿ ನಿಜ ಬೀಜವಾಗಿಯೂ, ನೆಟ್ಟಿದ್ದೆನು;
ಹಾಗಾದರೆ, ಹ್ಯಾಗೆ ನನಗೆ ಅನ್ಯ ದ್ರಾಕ್ಷೆ ಬಳ್ಳಿಯ ಕೆಟ್ಟು
ಹೋದ ಕೊಂಬೆಗಳಾಗಿ ಬದಲಾದಿ!

೨೨ ಯಾಕಂದರೆ ನೀನು ಚಾಳಿನಿಂದ ತೊಳೆ ಕೊಂಡರೂ,
ಬಹಳ ಸಬ್ಬು ಹಾಕಿ ಕೊಂಡರೂ,
ನಿನ್ನ ಅಕ್ರಮವು ನನ್ನ ಮುಂದೆ ಮಲಿನವಾಗಿದೆ,
ಎಂದು ಕರ್ತನಾದ ಯೆಹೋವ ಅನ್ನುತ್ತಾನೆ.

೨೩ ನಾನು ಅಶುದ್ಧನಲ್ಲ, ಬಾಳಿಗನ್ನು ಹಿಂಬಾಲಿಸಿಲ್ಲವೆಂದು,
ನೀನು ಹೇಳುವದು ಹ್ಯಾಗೆ?
ತಗ್ಗಿನಲ್ಲಿ ನಿನ್ನ ಮಾರ್ಗವನ್ನು ನೋಡು;
ನೀನು ಮಾಡಿದ್ದನ್ನು ತಿಳುಕೋ;
ನೀನು ತೀವ್ರವಾಗಿ ಸಂಚಾರ ಮಾಡುವ ಹೆಣ್ಣು ಒಂಟೆಯೇ;

೨೪ ಅರಣ್ಯದ ಅಭ್ಯಾಸವುಳ್ಳ ಕಾಡು ಕತ್ತೆಯೇ;
ಅವಳ ಅತ್ಯಾಶೆಯಲ್ಲಿ ಖುಳಿಯನ್ನು ಹೀರಿ ಕೊಳ್ಳುತ್ತಾಳೆ;
ಅವಳ ಮದವನ್ನು ಯಾರು ತಡೆಯುವರು?
ಅವಳನ್ನು ಹುಡುಕುವವಕೆಲ್ಲರು ಅಯಾಸ ಪಡುವದಿಲ್ಲ;
ಅವಳ ತಿಂಗಳಲ್ಲಿ ಅವಳನ್ನು ಕಾಣುವರು.

೨೫ ನಿನ್ನ ಕಾಲು ಬರೀ ಕಾಲಾಗದ ಹಾಗೆಯೂ,
ನಿನ್ನ ಗಂಟ್ಲು ನೀರಡಿಕೆ ಪಡದ ಹಾಗೆಯೂ, ಹಿಂತೆಗೆ;
ಆದರೆ ನೀನು—ವ್ಯರ್ಥವಾಗಿದೆ;
ಇಲ್ಲ, ನಾನು ಅನ್ಯರನ್ನು ಪ್ರೀತಿ ಮಾಡಿದ್ದೇನೆ,
ಅವರನ್ನು ಹಿಂದಟ್ಟುವೆನೆಂದು, ಹೇಳಿದಿ.

೨೬ ಕಳ್ಳನು ಸಿಕ್ಕಿದ ಮೇಲೆ ನಾಚಿಕೆ ಪಡುವ ಪ್ರಕಾರ,
ಇಸ್ರಯೇಲನ ಮನೆಗೆ ನಾಚಿಕೆ ಆಯಿತು;
ಅವರಿಗೂ, ಅವರ ಅರಸರಿಗೂ, ಅವರ ಪ್ರಧಾನರಿಗೂ,
ಅವರ ಯಾಜಕರಿಗೂ, ಅವರ ಪ್ರವಾದಿಗಳಿಗೂ, ಆಯಿತು.

೨೭ ಅವರು ಮರಕ್ಕೆ—ನೀನು ನನ್ನ ತಂದೆ ಎಂದೂ,
ಕಲ್ಲಿಗೆ—ನೀನು ನನ್ನನ್ನು ಹೆತ್ತಿ ಎಂದೂ, ಹೇಳುತ್ತಾರಲ್ಲ?
ನನಗೆ ಮುಖವನ್ನಲ್ಲ, ಬೆನ್ನನ್ನು ತಿರುಗಿಸಿದ್ದಾರೆ;
ಆದರೂ ಅವರ ಕಷ್ಟ ಕಾಲದಲ್ಲಿ—
ಎದ್ದು, ನಮ್ಮನ್ನು ರಕ್ಷಿಸೆಂದು, ಹೇಳುವರು.

೨೮ ಆದರೆ ನೀನು ನಿನಗೋಸ್ಕರ ಮಾಡಿ ಕೊಂಡ ದೇವರುಗಳು
ಎಲ್ಲಿ?
ನಿನ್ನ ಕಷ್ಟ ಕಾಲದಲ್ಲಿ ನಿನ್ನನ್ನು ರಕ್ಷಿಸ ತಮ್ಮ ಕೈಲಾದರೆ ಅವಕೇ
ಏಳಲಿ,
ಯಾಕಂದರೆ ನಿನ್ನ ಪಟ್ಟಣಗಳ ಲೆಖ್ಖದ ಹಾಗೆ,
ನಿನ್ನ ದೇವರುಗಳು ಇದ್ದಾರೆ, ಓ ಯೆಹೂದವೇ!

೨೯ ಯಾತಕ್ಕೋಸ್ಕರ ನನ್ನ ಸಂಗಡ ವ್ಯಾಜ್ಯವಾಡುತ್ತೀರಿ!
ನೀವೆಲ್ಲರು ನನಗೆ ವಿರೋಧವಾಗಿ ದ್ರೋಹ ಮಾಡಿದ್ದೀರಿ,
ಎಂದು ಕರ್ತನು ಅನ್ನುತ್ತಾನೆ.

೩೦ ನಾನು ನಿಮ್ಮ ಮಕ್ಕಳನ್ನು ಹೊಡೆದದ್ದು ವ್ಯರ್ಥವಾಯಿತು,
ಅವರು ಶಿಕ್ಷೆಯನ್ನು ತಕ್ಕೊಳ್ಳಲಿಲ್ಲ;
ನಿಮ್ಮ ಸ್ವಂತ ಕತ್ತಿಯು, ನಾಶ ಮಾಡುವ ಸಿಂಹದಂತೆ,
ನಿಮ್ಮ ಪ್ರವಾದಿಗಳನ್ನು ತಿಂದು ಬಿಟ್ಟಿದೆ.

೩೧ ಓ ಸಂತತಿಯೇ! ನೀವು ಕರ್ತನ ವಾಕ್ಯವನ್ನು ನೋಡಿರಿ;
ನಾನು ಇಸ್ರಯೇಲಿಗೆ ಅರಣ್ಯವಾದೆನೋ! ಕತ್ತಲೆಯ ದೇಶವಾ
ದೆನೋ!
ಯಾತಕ್ಕೆ ನನ್ನ ಜನರು—ಸ್ವಾಧೀನವಾಗಿದ್ದೇವೆ,
ಇನ್ನು ಮೇಲೆ ನಿನ್ನ ಬಳಿಗೆ ಬರುವದಿಲ್ಲವೆಂದು ಹೇಳುತ್ತಾರೆ?

೩೨ ಕನ್ಯಾಸ್ತ್ರೀ ತನ್ನ ಆಭರಣಗಳನ್ನೂ,
ಮದಲಗಿತ್ತಿ ತನ್ನ ಒಡ್ಯಾಣಗಳನ್ನೂ, ಮರೆತು ಬಿಡುವಳೋ!
ಆದರೆ ನನ್ನ ಜನರು ಲೆಖ್ಖವಿಲ್ಲದ ದಿನಗಳು ನನ್ನನ್ನು ಮರೆತು
ಬಿಟ್ಟಿದ್ದಾರೆ.

33 ಯಾತಕೆ, ಪ್ರೀತಿಯನ್ನು ಹುಡುಕುವ ಬಗ್ಯೆ, ನಿನ್ನ ಮಾರ್ಗವನ್ನು
ಪಳುವು ಮಾಡಿ ಕೊಳ್ಳುತ್ತೀ!
ನಿಶ್ಚಯವಾಗಿ ಕೆಟ್ಟ ಹೆಂಗಸರಿಗೂ ನಿನ್ನ ಮಾರ್ಗವನ್ನು ಕಲಿ
ಸಿದ್ದೀ.

೩೪ ಇದಲ್ಲದೆ ನಿನ್ನ ಶರಸುಗಳಲ್ಲಿ,
ಅಪರಾಧವಿಲ್ಲದ ಬಡ ಪ್ರಾಣಿಗಳ ರಕ್ತವು ಸಿಕ್ಕಿ ಅದೆ;
ಅಂತರಂಗದ ಶೋಧನೆಯಿಂದಲ್ಲ,
ಇವಕೆಲ್ಲರ ಮೇಲೆಯೇ ಅದನ್ನು ಕಂಡಿದ್ದೇನೆ.

೩೫ ಆದರೆ ನೀನು—ನಾನು ನಿರಪರಾಧಿಯಾಗಿರುವ ಕಾರಣ,
ನಿಶ್ಚಯವಾಗಿ ಅವನ ಕೋಪವು ನನ್ನನ್ನು ಬಿಟ್ಟು ತಿರುಗುವ
ದೆಂದು ಹೇಳುತ್ತೀ;
ನಾನು ಪಾಪ ಮಾಡಲಿಲ್ಲವೆಂದು ನೀನು ಹೇಳುವದರಿಂದ,
ಇಗೋ ನಿನಗೆ ನ್ಯಾಯ ತೀರಿಸುವೆನು.

೩೬ ನಿನ್ನ ಮಾರ್ಗವನ್ನು ಬೇಕೆ ಮಾಡಿ ಕೊಳ್ಳುವ ಬಗ್ಯೆ, ಅಷ್ಟಾಗಿ
ಯಾತಕ್ಕೆ ತಿರುಗಾಡುತ್ತೀ!
ನೀನು ಅಶ್ಶೂರಿನ ನಿಮಿತ್ತ ನಾಚಿಕೆ ಪಟ್ಟಿ ಹಾಗೆ,
ಐಗುಪ್ತದ ನಿಮಿತ್ತವೂ ನಾಚಿಕೆ ಪಡುವಿ.

೩೭ ಅಲ್ಲಿಂದ ಸಹ, ನಿನ್ನ ಕೈಗಳನ್ನು ತಲೆಯ ಮೇಲೆ ಇಟ್ಟು ಕೊಂಡು
ಹೊರಟು ಹೋಗುವಿ;
ಯಾಕಂದರೆ ಕರ್ತನು ನಿನ್ನ ನಂಬಿಕೆಗಳನ್ನು ಅಸಹ್ಯ ಮಾಡಿ
ದ್ದಾನೆ;
ಆದರಿಂದ ಅವುಗಳಲ್ಲಿ ನಿನಗೆ ಸಫಲವಾಗುವದಿಲ್ಲ.

## 3. ಸಂಧಿ

೧ ಮತ್ತು ಕರ್ತನು ಅನ್ನುತ್ತಾನೆ—
ಒಬ್ಬನು ತನ್ನ ಹೆಂಡತಿಯನ್ನು ಕಳುಹಿಸಿ ಬಿಟ್ಟಿರೆ,
ಅವಳು ಅವನನ್ನು ಬಿಟ್ಟು ಹೋಗಿ ಬೇರೆ ಗಂಡನಿಗಾದರೆ,
ಅವನು ಇನ್ನು ಅವಳ ಹತ್ತರ ತಿರುಗುವನೋ?
ಆ ದೇಶವು ಬಹಳವಾಗಿ ಅಪವಿತ್ರವಾಗುವದಿಲ್ಲವೋ!
ಆದರೆ ನೀನು ಅನೇಕ ಮಿಂದರ ಸಂಗಡ ಸೂಳೆತನ ಮಾಡಿದ್ದೀ,
ಆದಾಗ್ಯೂ ನನ್ನ ಬಳಿಗೆ ತಿರುಗಿಕೋ, ಎಂದು ಕರ್ತನು ಅನ್ನು
ತ್ತಾನೆ.



೨ ನಿನ್ನ ಕಣ್ಣುಗಳನ್ನು ಉನ್ನತ ಸ್ಥಳಗಳ ಮೇಲೆ ಎತ್ತು;
ಎಲ್ಲಿ ನಿನ್ನ ಸಂಗಡ ಮಲಗಿಲ್ಲವೋ, ನೋಡು.
ಅರಣ್ಯದಲ್ಲಿ ಅರಬಿಯ ಹಾಗೆ,
ದಾರಿಗಳಲ್ಲಿ ಅವರಿಗೋಸ್ಕರ ಕೂತು ಕೊಂಡಿದ್ದೀ;
ಹೀಗೆ ನಿನ್ನ ಸೂಳೆತನಗಳಿಂದಲೂ, ನಿನ್ನ ಕೆಟ್ಟತನಗಳಿಂದಲೂ,
ದೇಶವನ್ನು ಅಪವಿತ್ರ ಮಾಡಿದ್ದೀ.

3 ಆದರಿಂದ ಮಳೆಗಳು ಬಿಗಿ ಹಿಡಿಯಲ್ಪಟ್ಟವು,
ಹಿಂಗಾರಿ ಆಗಲಿಲ್ಲ;
ಸೂಳೆಯ ಹಣೆ ನಿನಗಿತ್ತು;
ನಾಚಲೊಲ್ಲದೆ ಇದ್ದಿ.

೪ ಈಗಿನಿಂದಲೇ ನನಗೆ—ನನ್ನ ತಂದೆಯೇ!
ನನ್ನ ಯೌವನದ ಆಪ್ತನು ನೀನೇ,
ಎಂದು ನೀನು ಕರೆಯುವದಿಲ್ಲವೋ!

೫ ಅವನು ಎಂದೆಂದಿಗೂ ಕೋಪ ಇಟ್ಟು ಕೊಳ್ಳುವನೋ!
ಸದಾಕಾಲಕ್ಕೆ ಅದನ್ನು ಮರಗುವನೋ?
ಇಗೋ ನಿನ್ನ ಕೈಲಾಗುವದ್ದು ಕೆಟ್ಟವುಗಳನ್ನು ಮಾತಾಡಿ ನಡಿ
ಸಿದ್ದೀ.

೬ ಮತ್ತು ಕರ್ತನು, ಅರಸನಾದ ಯೊಸೀಯನ ದಿವಸಗಳಲ್ಲಿ,
ನನಗೆ ಹೇಳಿದ್ದೇನಂದರೆ—ಹಿಂತಿರುಗಿದ ಇಸ್ರಯೇಲು ಮಾಡಿದ್ದನ್ನು
ನೋಡಿದಿಯೋ! ಅವಳು ಒಂದೊಂದು ಉದ್ದವಾದ ಬೆಟ್ಟದ ಮೇ
ಲೆಯೂ, ಒಂದೊಂದು ಹಸುರಾದ ಮರದ ಕೆಳಗೆಯೂ ಹೋಗಿ,
೭ ಅಲ್ಲಿ ಸೂಳೆತನ ಮಾಡಿದ್ದಾಳೆ. ಅವಳು ಇವುಗಳನ್ನೆಲ್ಲಾ ಮಾಡಿ
ದ ಮೇಲೆ, ನಾನು—ನನ್ನ ಬಳಿಗೆ ತಿರುಗು, ಅಂದೆನು; ಆದರೆ ಅವ
ಳು ತಿರುಗಲಿಲ್ಲ; ಮತ್ತು ಅವಳ ವಂಚನೆಯುಳ್ಳ ಸಹೋದರಿ
೮ ಯಾದ ಯೆಹೂದವು ಅದನ್ನು ನೋಡಿದಳು. ಆಗ ನಾನು
ನೋಡಿದ್ದೇನಂದರೆ—ಹಿಂತಿರುಗಿದ ಇಸ್ರಯೇಲು ವ್ಯಭಿಚಾರ ಮಾ
ಡಿದ ಎಲ್ಲಾ ಕಾರಣಗಳ ನಿಮಿತ್ತ, ನಾನು ಅವಳನ್ನು ಕಳುಹಿಸಿ
ಬಿಟ್ಟು ತ್ಯಾಗ ಪತ್ರವನ್ನು ಕೊಟ್ಟಿದ್ದಾಗ್ಯೂ, ಅವಳ ವಂಚನೆ
ಯುಳ್ಳ ಸಹೋದರಿಯಾದ ಯೆಹೂದವು ಭಯ ಪಡದೆ, ತಾನು
೯ ಕೂಡ ಹೋಗಿ ಸೂಳೆತನವನ್ನು ಮಾಡಿದಳು. ಮತ್ತು ಆದದ್ದೇ
ನಂದರೆ, ಅವಳ ಸೂಳೆತನದ ಸುದ್ದಿಯಿಂದ ಅವಳು ದೇಶವನ್ನು
ಅಪವಿತ್ರ ಮಾಡಿ, ಕಲ್ಲುಗಳ ಸಂಗಡಲೂ ಮರಗಳ ಸಂಗಡಲೂ
೧೦ ವ್ಯಭಿಚಾರ ಮಾಡಿದಳು. ಇದೆಲ್ಲಾ ಆದಾಗ್ಯೂ, ಅವಳ ವಂಚ
ನೆಯುಳ್ಳ ಸಹೋದರಿಯಾದ ಯೆಹೂದವು ಪೂರ್ಣ ಹೃದ
ಯದಿಂದಲ್ಲ, ಕಪಟದಿಂದಲೇ ನನ್ನ ಬಳಿಗೆ ತಿರುಗಿ ಕೊಂಡಿದ್ದಾ
ಳೆಂದು, ಅನ್ನುತ್ತಾನೆ.

೧೧ ಮತ್ತು ಕರ್ತನು ನನಗೆ ಹೇಳಿದ್ದೇನಂದರೆ—ಹಿಂತಿರುಗಿದ ಇಸ್ರ
ಯೇಲು, ವಂಚನೆಯುಳ್ಳ ಯೆಹೂದಕ್ಕಿಂತ, ತನ್ನನ್ನು ನೀತಿ
೧೨ ಯುಳ್ಳವಳಾಗಿ ಕಾಣಿಸಿ ಕೊಂಡಿದ್ದಾಳೆ. ನೀನು ಹೋಗಿ, ಉತ್ತ
ರದಿಕ್ಕಿಗೆ, ಈ ಮಾತುಗಳನ್ನು ಸಾರು; ಯಾವವಂದರೆ—
ಹಿಂತಿರುಗಿದ ಇಸ್ರಯೇಲೇ! ತಿರುಗಿಕೋ, ಎಂದು, ಕರ್ತನು ಅ
ನ್ನುತ್ತಾನೆ;
ನಾನು ನನ್ನ ಕೋಪವನ್ನು ನಿಮ್ಮ ಮೇಲೆ ಬೀಳ ಮಾಡುವದಿಲ್ಲ;
ಯಾಕಂದರೆ ನಾನು ದಯಾಪರನೆಂದು ಕರ್ತನು ಅನ್ನುತ್ತಾನೆ;
ಎಂದೆಂದಿಗೂ ಕೋಪವಿಟ್ಟುಕೊಳ್ಳುವದಿಲ್ಲ.

೧೩ ನಿನ್ನ ದೇವರಾದ ಕರ್ತನಿಗೆ ವಿರೋಧವಾಗಿ ದ್ರೋಹ ಮಾಡಿ,
ಒಂದೊಂದು ಹಸುರು ಮರದ ಕೆಳಗೆ,
ನಿನ್ನ ಮಾರ್ಗಗಳನ್ನು ಅನ್ಯರಿಗೆ ಚದರಿಸಿ,
ನನ್ನ ಶಬ್ದಕ್ಕೆ ಕಿವಿಗೊಡಲಿಲ್ಲವೆಂಬುವ
ನಿನ್ನ ಅಕ್ರಮವನ್ನು ಮಾತ್ರ ಅರಿಕೆ ಮಾಡೆಂದು
ಕರ್ತನು ಅನ್ನುತ್ತಾನೆ.

೧೪ ಹಿಂತಿರುಗಿದ ಮಕ್ಕಳೇ! ತಿರುಗಿ ಕೊಳ್ಳಿರೆಂದು, ಕರ್ತನು ಅನ್ನು
ತ್ತಾನೆ;
ಯಾಕಂದರೆ ನಾನೇ ನಿಮ್ಮ ಯಜಮಾನನಾಗಿದ್ದೇನೆ;
ಮತ್ತು ನಿಮ್ಮನ್ನು, ಪಟ್ಟಣದೊಳಗಿಂದ ಒಬ್ಬನನ್ನು, ಗೋತ್ರದೊ
ಳಗಿಂದ ಇಬ್ಬರನ್ನು, ತೆಗೆದು ಕೊಂಡು,
ಚಿಯೋನಿಗೆ ಕರ ಕೊಂಡು ಬರುವೆನು.

೧೫ ಮತ್ತು ನನ್ನ ಹೃದಯಕ್ಕೆ ಸರಿಯಾದ ಕುರುಬರನ್ನು ನಿಮಗೆ
ಕೊಡುವೆನು;
ಅವರು ತಿಳುವಳಿಕೆಯಿಂದಲೂ, ಬುದ್ಧಿಯಿಂದಲೂ, ನಿಮ್ಮನ್ನು
ಮೇಯಿಸುವರು.

೧೬ ಮತ್ತು ಆಗುವದೇನಂದರೆ,
ನೀವು ದೇಶದಲ್ಲಿ ಅಭಿವೃದ್ಧಿಯಾಗಿ, ಫಲವುಳ್ಳವರಾದ ಮೇಲೆ,
ಆ ದಿವಸಗಳಲ್ಲಿ,
ಕರ್ತನ ಒಡಂಬಡಿಕೆಯ ಪೆಟ್ಟಿಗೆ ಎಂದು ಇನ್ನೂ ಹೇಳದಿರು
ವರು;
ಅದು ಮನಸ್ಸಿಗೆ ಬರುವದಿಲ್ಲ,
ಅದು ಜ್ಞಾಪಕ ಮಾಡಲ್ಪಡುವದಿಲ್ಲ;
ವಿಚಾರಿಸಲ್ಪಡುವದಿಲ್ಲ;
ಇನ್ನು ಮೇಲೆ ಮಾಡಲ್ಪಡುವದಿಲ್ಲವೆಂದು, ಕರ್ತನು ಅನ್ನುತ್ತಾನೆ.

೧೭ ಆ ಕಾಲದಲ್ಲಿ ಯೆರೂಸಲೇಮು ಕರ್ತನ ಸಿಂಹಾಸನವೆಂದು ಕರೆ
ಯಲ್ಪಡುವದು;
ಜನಾಂಗಗಳೆಲ್ಲಾ ಅದರ ಬಳಿಗೆ,
ಕರ್ತನ ಹೆಸರಿನ ಬಳಿಗೆ, ಯೆರೂಸಲೇಮಿಗೆ, ಕೂಡಿಸಲ್ಪಡುವವು;
ಇನ್ನು ಮೇಲೆ ತಮ್ಮ ಕೆಟ್ಟ ಹೃದಯಗಳ ಕಾಠಿಣ್ಯದ ಪ್ರಕಾರ
ನಡ ಕೊಳ್ಳರು.

೧೮ ಆ ದಿನಗಳಲ್ಲಿ,
ಯೆಹೂದದ ಮನೆಯು ಇಸ್ರಯೇಲಿನ ಮನೆಯ ಸಂಗಡ ಹೋ
ಗುವದು;
ಅವರು ಏಕವಾಗಿ ಉತ್ತರ ದೇಶದಿಂದ,
ನಾನು ನಿಮ್ಮ ತಂದೆಗಳಿಗೆ ಸ್ವಾಸ್ತ್ಯವಾಗಿ ಕೊಟ್ಟ ದೇಶಕ್ಕೆ
ಬರುವರು.

೧೯ ಆದರೆ ನಿನ್ನನ್ನು ಮಕ್ಕಳೊಳಗೆ ಇಟ್ಟು,
ಮನೋಹರವಾದ ದೇಶವನ್ನೂ,
ಜನಾಂಗಗಳ ಸೈನ್ಯಗಳ ರಮ್ಯವಾದ ಸ್ವಾಸ್ತ್ಯವನ್ನೂ,
ನಿನಗೆ ಕೊಡುವದು ಹ್ಯಾಗೆಂದು,
ನಾನು ಅಂದು ಕೊಂಡೆನು;
ಆಗ ನೀನು ನನ್ನ ತಂದೆಯೇ! ಎಂದು ನನ್ನನ್ನು ಕರೆದು,
ನನ್ನನ್ನು ಬಿಟ್ಟು ತಿರುಗುವದಿಲ್ಲವೆಂದು, ಅಂದು ಕೊಂಡೆನು.

೨೦ ನಿಶ್ಚಯವಾಗಿ ಹೆಂಡತಿ ತನ್ನ ಗಂಡನನ್ನು ವಂಚನೆಯಾಗಿ ಬಿಡುವ ಪ್ರಕಾರ,
ನನಗೆ ವಂಚನೆ ಮಾಡಿದ್ದೀ ಓ ಇಸ್ರಯೇಲಿನ ಮನೆಯವರೇ!
ಎಂದು ಕರ್ತನು ಅನ್ನುತ್ತಾನೆ.

೨೧ ಉನ್ನತ ಸ್ಥಳಗಳ ಮೇಲೆ ಶಬ್ದವು ಕೇಳಲ್ಪಟ್ಟಿತು—
ಇಸ್ರಯೇಲನ ಮಕ್ಕಳ ಅಳುವಿಕೆ ಬೇಡುವಿಕೆಗಳೇ;
ಯಾಕಂದರೆ ತಮ್ಮ ಮಾರ್ಗವನ್ನು ಡೊಂಕು ಮಾಡಿ,
ತಮ್ಮ ದೇವರಾದ ಕರ್ತನನ್ನು ಮರೆತು ಬಿಟ್ಟಿದ್ದರು.
೨೨ ಹಿಂತಿರುಗಿದ ಮಕ್ಕಳೇ! ತಿರುಗಿ ಕೊಳ್ಳಿರಿ;
ನಿಮ್ಮ ಹಿಂತಿರುಗುವಿಕೆಗಳನ್ನು ಸ್ವಸ್ಥ ಮಾಡುವೆನು.
ಇಗೋ ನಿನ್ನ ಬಳಿಗೆ ಬರುತ್ತೇವೆ;
ಯಾಕಂದರೆ, ನೀನೇ ಓ ಯೆಹೋವ! ನಮ್ಮ ದೇವರಾಗಿದ್ದೀ.
೨೩ ನಿಶ್ಚಯವಾಗಿ ಗುಡ್ಡಗಳಿಂದಲೂ, ಬೆಟ್ಟಗಳ ಸಮೂಹದಿಂದಲೂ,
ರಕ್ಷಣೆ ವ್ಯರ್ಥವಾಗಿದೆ;
ನಿಶ್ಚಯವಾಗಿ ಇಸ್ರಯೇಲಿನ ರಕ್ಷಣೆ,
ನಮ್ಮ ಕರ್ತನಾದ ದೇವರಲ್ಲಿಯೇ.
೨೪ ನಾಚಿಕೆಯಾದದ್ದು, ನಮ್ಮ ಯೌವನದಾರಭ್ಯ, ನಮ್ಮ ತಂದೆಗಳ ಕಷ್ಟವನ್ನೂ,
ಅವರ ಕುರಿಗಳನ್ನೂ, ಅವರ ದನಗಳನ್ನೂ,
ಅವರ ಕುಮಾರರನ್ನೂ, ಅವರ ಕುಮಾರ್ತೆಗಳನ್ನೂ, ತಿಂದು ಬಿಟ್ಟಿದೆ.
೨೫ ನಮ್ಮ ನಾಚಿಕೆಯಲ್ಲಿ ಮಲಗಿ ಕೊಳ್ಳುತ್ತೇವೆ;
ನಮ್ಮ ನಿಂದೆ ನಮ್ಮನ್ನು ಮುಚ್ಚಿ ಕೊಳ್ಳುತ್ತದೆ;
ಯಾಕಂದರೆ, ನಾವೂ, ನಮ್ಮ ತಂದೆಗಳೂ,
ನಮ್ಮ ಯೌವನದಾರಭ್ಯ, ಇಂದಿನ ವರಿಗೂ,
ನಮ್ಮ ದೇವರಾದ ಕರ್ತನಿಗೆ ವಿರೋಧವಾಗಿ ಪಾಪ ಮಾಡಿ,
ನಮ್ಮ ದೇವರಾದ ಕರ್ತನ ಶಬ್ದಕ್ಕೆ ಕಿವಿಗೊಡಲಿಲ್ಲ.

## ೪. ಸಂಧಿ.

೧ ಇಸ್ರಯೇಲೇ! ನೀನು ತಿರುಗಿ ಕೊಂಡರೆ, ನನ್ನ ಬಳಿಗೆ ತಿರುಗಿಕೋ,
ಎಂದು ಕರ್ತನು ಅನ್ನುತ್ತಾನೆ;
ನೀನು ನಿನ್ನ ಅಸಹ್ಯಗಳನ್ನು ನನ್ನ ಮುಂದಿನಿಂದ ತೊಲಗಿಸಿದರೆ,
ಓಡಿ ಹೋಗದೆ ಇರುವಿ.
೨ ಮತ್ತು ನೀನು ಸತ್ಯದಿಂದಲೂ, ನ್ಯಾಯದಿಂದಲೂ, ನೀತಿಯಿಂದಲೂ,
ಕರ್ತನ ಜೀವದಾಣೆ ಎಂದು ಪ್ರಮಾಣ ಮಾಡುವಿ;
ಆಗ ಜನಾಂಗಗಳು ಅವನಲ್ಲಿ ಆಶೀರ್ವದಿಸಿ ಕೊಳ್ಳುವವು;
ಅವನಲ್ಲಿ ಹೊಗಳಿ ಕೊಳ್ಳುವವು.

೩ ಯಾಕಂದರೆ ಕರ್ತನು,
ಯೆಹೂದದ ಮನುಷ್ಯರಿಗೂ, ಯೆರೂಸಲೇಮಿಗೂ, ಹೀಗೆ ಹೇಳುತ್ತಾನೆ—
ನಿಮ್ಮ ಬಂಜರು ಭೂಮಿಯನ್ನು ಉತ್ತು ಬಿಡಿರಿ;
ಮುಳ್ಳುಗಳಲ್ಲಿ ಬೀಜ ಬಿತ್ತ ಬೇಡಿರಿ.
೪ ಕರ್ತನಿಗೋಸ್ಕರ ಪರಿಛೇದನೆ ಮಾಡಿ ಕೊಳ್ಳಿರಿ,
ನಿಮ್ಮ ಹೃದಯಗಳ ಮುಂದೊಗಲನ್ನು ತೆಗೆದು ಹಾಕಿರಿ,
ಯೆಹೂದದ ಮನುಷ್ಯರೇ! ಯೆರೂಸಲೇಮಿನ ನಿವಾಸಿಗಳೇ!
ಇಲ್ಲದಿದ್ದರೆ ನನ್ನ ಉಗ್ರವು ಬೆಂಕಿಯ ಹಾಗೆ ಹೊರಟು,
ನಿಮ್ಮ ಕ್ರಿಯೆಗಳ ಕೆಟ್ಟತನದ ನಿಮಿತ್ತ,
ಯಾರು ಆರಿಸ ಕೂಡದ ಹಾಗೆ ಉರಿಯುವದು.

೫ ಯೆಹೂದದಲ್ಲಿ ತಿಳಿಸಿರಿ; ಯೆರೂಸಲೇಮಿನಲ್ಲಿ ಕೇಳಿಸಿರಿ;
ದೇಶದಲ್ಲಿ ತುತೂರಿ ಊದಿರೆಂದು ಹೇಳಿರಿ; ಘಟ್ಟಿಯಾಗಿ ಕೂಗಿರಿ,
ಕೂಡಿ ಕೊಂಡು, ಕೋಟೆಯುಳ್ಳ ಪಟ್ಟಣಗಳಲ್ಲಿ ಪ್ರವೇಶಿಸೋಣ,
ಎಂದು ಹೇಳಿರಿ.
೬ ಚಿಯೋನಿನಲ್ಲಿ ಧ್ವಜವನ್ನೆತ್ತಿರಿ;
ಅಶ್ರಯಕ್ಕೆ ಓಡಿ ಹೋಗಿರಿ;
ನಿಲ್ಲ ಬೇಡಿರಿ; ಯಾಕಂದರೆ ನಾನು ಉತ್ತರದಿಂದ ಕೇಡನ್ನೂ,
ದೊಡ್ಡ ಮುರಿಯೋಣವನ್ನೂ, ತರುತ್ತೇನೆ.
೭ ಸಿಂಹವು ತನ್ನ ಅಡವಿಯೊಳಗಿಂದ ಏರಿ ಬರುತ್ತದೆ;
ಜನಾಂಗಗಳನ್ನು ನಾಶ ಮಾಡುವವನು ಹೊರಟಿದ್ದಾನೆ;
ನಿನ್ನ ದೇಶವನ್ನು ಹಾಳು ಮಾಡುವದಕ್ಕೆ ತನ್ನ ಸ್ಥಳವನ್ನು ಬಿಟ್ಟಿದ್ದಾನೆ;
ನಿನ್ನ ಪಟ್ಟಣಗಳು ನಿವಾಸಿ ಇಲ್ಲದೆ ಕಾಡಾಗುವವು.
೮ ಇದಕ್ಕಾಗಿ ಗೋಣಿಯನ್ನು ಕಟ್ಟಿ ಕೊಳ್ಳಿರಿ;
ಎದೆ ಬಡು ಕೊಳ್ಳಿರಿ; ಹುಯಿಲಿಡಿರಿ;
ಯಾಕಂದರೆ ಕರ್ತನ ಕೋಪದ ಉರಿಯು ನಮ್ಮ ಕಡೆಯಿಂದ ತಿರುಗಲಿಲ್ಲ.
೯ ಆ ದಿವಸದಲ್ಲಿ ಆಗುವದೇನಂದರೆ—
ಅರಸನ ಹೃದಯವೂ, ಪ್ರಧಾನರ ಹೃದಯಗಳು, ಕುಂದಿ ಹೋಗುವವು;
ಯಾಜಕರು ಆಶ್ಚರ್ಯ ಪಡುವರು;
ಪ್ರವಾದಿಗಳು ಭ್ರಮೆ ಗೊಳ್ಳುವರು;
ಎಂದು ಕರ್ತನು ಅನ್ನುತ್ತಾನೆ.

೧೦ ಆಗ ನಾನು ಹೇಳಿದ್ದೇನಂದರೆ—
ಅಯ್ಯೋ! ಕರ್ತನಾದ ಯೆಹೋವನೇ;
ನಿಶ್ಚಯವಾಗಿ ನೀನು ಈ ಜನರಿಗೂ ಯೆರೂಸಲೇಮಿಗೂ—
ನಿಮಗೆ ಸಮಾಧಾನವಾಗುವದೆಂದು, ಹೇಳಿ,
ಬಹಳ ಮೋಸ ಮಾಡಿದ್ದೀ;
ಕತ್ತಿಯು ಪ್ರಾಣದ ಮಟ್ಟಿಗೂ ತಾಕುತ್ತದಲ್ಲವೋ!

೧೧ ಆ ಸಮಯದಲ್ಲಿ,
ಈ ಜನರಿಗೂ ಯೆರೂಸಲೇಮಿಗೂ ಹೇಳಲ್ಪಡುವದೇನಂದರೆ—
ಬಣ ಘಾಳಿಯು ಅರಣ್ಯದ ಉನ್ನತ ಸ್ಥಳಗಳಿಂದ,
ನನ್ನ ಜನರ ಕುಮಾರ್ತೆಯ ಮಾರ್ಗವಾಗಿ ಬರುತ್ತದೆ;
ಅದು ತೂರುವದಕ್ಕೂ ಕುಡ್ಡ ಮಾಡುವದಕ್ಕೂ ಆಗ ತಕ್ಕದ್ದಲ್ಲ.
೧೨ ಅದಕ್ಕಿಂತ ತುಂಬ ಘಾಳಿ ನನಗಾಗಿ ಬರುವದು;
ಈಗಲೇ ನಾನು ಅವರಿಗೆ ವಿರೋಧವಾಗಿ ನ್ಯಾಯ ತೀರ್ಪುಗಳನ್ನು ಹೇಳುವೆನು.
೧೩ ಇಗೋ ಮೇಘಗಳ ಹಾಗೆ ಏರಿ ಬರುವನು,
ಅವನ ರಥಗಳು ಬಿರುಘಾಳಿಯ ಹಾಗೆ ಇರುವವು,
ಅವನ ಕುದುರೆಗಳು ಹದ್ದುಗಳಿಗಿಂತ ತೀವ್ರವಾಗಿವೆ;
ನಮಗೆ ಅಯ್ಯೋ! ಯಾಕಂದರೆ ಸೂರೆಯಾಗಿದೆವು.
೧೪ ಓ ಯೆರೂಸಲೇಮೇ! ನೀನು ರಕ್ಷಿಸಲ್ಪಡುವ ಹಾಗೆ,
ನಿನ್ನ ಹೃದಯವನ್ನು ಕೆಟ್ಟತನದೊಳಗಿಂದ ತೊಳೆ;
ನಿನ್ನ ವ್ಯರ್ಥ ಆಲೋಚನೆಗಳು ಎಷ್ಟು ಮಟ್ಟಿಗೂ ನಿನ್ನಲ್ಲಿ ತಂಗುವವು?
೧೫ ಯಾಕಂದರೆ, ಒಂದು ಶಬ್ದವು ದಾನಿನಿಂದ ತಿಳಿಯ ಮಾಡುತ್ತದೆ,
ಎಫ್ರಾಯಿಮಿನ ಬೆಟ್ಟದಿಂದ ಆಪತ್ತನ್ನು ಕೇಳಿ ಕೊಡುತ್ತದೆ.
೧೬ ಜನಾಂಗಗಳಿಗೆ ತಿಳಿಸಿರಿ,
ಇಗೋ ಯೆರೂಸಲೇಮಿಗೆ ವಿರೋಧವಾಗಿ ಕೇಳಿ ಕೊಡಿರಿ;
ಏನಂದರೆ, ಮುತ್ತಿಗೆ ಹಾಕುವವರು ದೂರ ದೇಶದಿಂದ ಬರುತ್ತಾರೆ,
ಯೆಹೂದದ ಪಟ್ಟಣಗಳಿಗೆ ವಿರೋಧವಾಗಿ ತಮ್ಮ ಶಬ್ದವನ್ನೆತ್ತುತ್ತಾರೆ.
೧೭ ಹೊಲ ಕಾಯುವವರಂತೆ,
ಸುತ್ತಲಾಗಿ ಅವಳಿಗೆ ವಿರೋಧವಾಗಿದ್ದಾರೆ;
ಯಾಕಂದರೆ ನನಗೆ ವಿರೋಧವಾಗಿ ತಿರುಗಿ ಬಿದ್ದಿದ್ದಾಳೆಂದು,
ಕರ್ತನು ಅನ್ನುತ್ತಾನೆ.
೧೮ ನಿನ್ನ ಮಾರ್ಗವೂ, ನಿನ್ನ ಕ್ರಿಯೆಗಳೂ,
ಇವುಗಳನ್ನು ನಿನಗೆ ಉಂಟು ಮಾಡಿದವು;
ಇದು ನಿನ್ನ ಕೆಟ್ಟತನವೇ;
ಅದು ಕಹಿಯಾದದ್ದಲ್ಲವೋ!
ನಿನ್ನ ಹೃದಯಕ್ಕೆ ತಾಕುತ್ತದ್ದಲ್ಲವೋ!

೧೯ ನನ್ನ ಕರುಳುಗಳು! ನನ್ನ ಕರುಳುಗಳು!
ನನ್ನ ಹೃದಯದ ಪಾರ್ಶ್ವಗಳಲ್ಲಿ ನೋವು ಪಡುತ್ತೇನೆ;
ನನ್ನ ಹೃದಯವು ನನ್ನಲ್ಲಿ ಘೋಷಿಸುತ್ತದೆ, ಮೌನವಾಗಿರಲಾರೆನು;
ಯಾಕಂದರೆ, ನನ್ನ ಪ್ರಾಣವೇ! ತುತೂರಿಯ ಶಬ್ದವನ್ನೂ,
ಯುದ್ಧದ ಅರ್ಭಟವನ್ನೂ, ಕೇಳಿದ್ದೀ.
೨೦ ಮುರಿಯೋಣದ ಮೇಲೆ ಮುರಿಯೋಣವು ಕೂಗಲ್ಪಟ್ಟಿದೆ;
ದೇಶವೆಲ್ಲಾ ಸೂರೆಯಾಯಿತು;
ಪಕ್ಕನೆ ನನ್ನ ಗುಡಾರಗಳೂ,
ಕ್ಷಣ ಮಾತ್ರದಲ್ಲಿ ನನ್ನ ತೆರೆಗಳೂ, ಸೂರೆಯಾದವು.
೨೧ ಎಷ್ಟು ಮಟ್ಟಿಗೂ ಧ್ವಜವನ್ನು ನೋಡುವೆನು?
ತುತೂರಿಯ ಶಬ್ದವನ್ನು ಕೇಳುವೆನು?
೨೨ ನಿಶ್ಚಯವಾಗಿ ನನ್ನ ಜನರು ಮೂಢರಾಗಿದ್ದಾರೆ,
ನನ್ನನ್ನು ಅರಿಯರು;
ಹೆಡ್ಡ ಮಕ್ಕಳಾಗಿದ್ದಾರೆ,
ಗ್ರಹಿಕೆಯುಳ್ಳವರಲ್ಲ;
ಕೆಟ್ಟದ್ದನ್ನು ಮಾಡುವದಕ್ಕೆ ಜ್ಞಾನಿಗಳಾಗಿದ್ದಾರೆ,
ಆದರೆ ಒಳ್ಳೇದನ್ನು ಮಾಡುವದಕ್ಕೆ ಅರಿಯರು.

೨೩ ದೇಶವನ್ನು ನೋಡಿದೆನು,
ಇಗೋ ಹಾಳಾಗಿಯೂ ಬರಿದಾಗಿಯೂ ಇತ್ತು;
ಆಕಾಶವನ್ನು ನೋಡಿ, ಮತ್ತು ಅದಕ್ಕೆ ಬೆಳಕಿಲ್ಲ.
೨೪ ಬೆಟ್ಟಗಳನ್ನು ನೋಡಿದೆನು,
ಇಗೋ ನಡುಗಿದವು;
ಮತ್ತು ಗುಡ್ಡಗಳೆಲ್ಲಾ ಬಹಳವಾಗಿ ಅದರಿದವು.
೨೫ ನೋಡಿದೆನು, ಇಗೋ, ಮನುಷ್ಯನು ಇಲ್ಲ;
ಮತ್ತು ಆಕಾಶದ ಪಕ್ಷಿಗಳೆಲ್ಲಾ ಹಾರಿ ಹೋಗಿದ್ದವು.
೨೬ ನೋಡಿದೆನು, ಇಗೋ, ಫಲವುಳ್ಳ ಸ್ಥಳವು ಅರಣ್ಯವಾಯಿತು;
ಮತ್ತು ಅದರ ಪಟ್ಟಣಗಳೆಲ್ಲಾ,
ಕರ್ತನ ಮುಂದೆಯೂ, ಆವನ ಕೋಪದ ಉರಿಯ ಮುಂದೆಯೂ, ಕೆಡವಲ್ಪಟ್ಟವು.
೨೭ ಯಾಕಂದರೆ, ಕರ್ತನು ಹೀಗೆ ಹೇಳಿದ್ದಾನೆ—
ದೇಶವೆಲ್ಲಾ ಹಾಳಾಗುವದು;
ಆದಾಗ್ಯೂ ನಾನು ಅದನ್ನು ಮುಗಿಸಿ ಬಿಡುವದಿಲ್ಲ.

೨೮ ಇದರ ನಿಮಿತ್ತ ಭೂಮಿಯು ದುಃಖಿಸುವದು;
ಮೇಲಿರುವ ಆಕಾಶವು ಕಪ್ಪಾಗುವದು;
ಯಾಕಂದರೆ, ನಾನು ಅದನ್ನು ಹೇಳಿದ್ದೇನೆ; ನಿಶ್ಚಯಿಸಿದ್ದೇನೆ;
ಮಾನಸಾಂತರವಾಗುವದಿಲ್ಲ; ಅದನ್ನು ಬಿಟ್ಟು ತಿರುಗುವದಿಲ್ಲ.
೨೯ ರಾಹುತರ ಬಿಲ್ಲಿನವರ ಶಬ್ದದ ನಿಮಿತ್ತ,
ಪಟ್ಟಣಗಳೆಲ್ಲಾ ಓಡಿ ಹೋಗುವವು;
ಅಡವಿಗಳನ್ನು ಹೊಕ್ಕು, ಬಂಡೆಗಳನ್ನು ಹತ್ತುವರು;
ಪಟ್ಟಣಗಳೆಲ್ಲಾ ಬಿಡಲ್ಪಡುವವು,
ಅವುಗಳಲ್ಲಿ ಒಬ್ಬನಾದರೂ ವಾಸ ಮಾಡನು.
೩೦ ಆಗ ನೀನು ಓ ಸೂರೆ ಪಟ್ಟವಳೇ! ಏನು ಮಾಡುವಿ?
ನೀನು ಲಾಕಿ ಬಣ್ಣವನ್ನು ತೊಟ್ಟು ಕೊಂಡರೂ,
ಚಿನ್ನದ ಆಭರಣಗಳಿಂದ ನಿನ್ನನ್ನು ಅಲಂಕರಿಸಿದರೂ,
ಕಾಡಿಗೆಯಿಂದ ನಿನ್ನ ಕಣ್ಣುಗಳನ್ನು ಹರಿದು ಬಿಟ್ಟರೂ,
ವ್ಯರ್ಥವಾಗಿ ನಿನ್ನನ್ನು ಸೌಂದರ್ಯ ಮಾಡಿ ಕೊಳ್ಳುವಿ;
ನಿನ್ನ ಮಿಂಡರು ನಿನ್ನನ್ನು ಅಸಹಿಸುವರು;
ನಿನ್ನ ಪ್ರಾಣವನ್ನು ಹುಡುಕುವರು.
೩೧ ಯಾಕಂದರೆ ಪ್ರಸವ ವೇದನೆ ಪಡುವವಳ ಶಬ್ದಕ್ಕೂ,
ಚೊಚ್ಚಲನನ್ನು ಹೆರುವವಳ ಸಂಕಟಕ್ಕೂ, ಸಮಾನವಾಗಿರುವ
ಚಿಯೋನಿನ ಮಗಳ ಶಬ್ದವನ್ನು ಕೇಳಿದ್ದೇನೆ;
ಉಬ್ಬಸ ಪಡುತ್ತಾಳೆ, ಕೈಗಳನ್ನು ಚಾಚಿ—
ನನಗೇಗ ಅಯ್ಯೋ!
ಕೊಲೆಗಾರರ ನಿಮಿತ್ತ ನನ್ನ ಪ್ರಾಣವು ಬೇಸರಗೊಳ್ಳುತ್ತದೆ,
ಎಂದನ್ನುತ್ತಾಳೆ.

## ೫. ಸಂಧಿ.

೧ ಯೆರೂಸಲೇಮಿನ ಬೀದಿಗಳಲ್ಲಿ ಅಡ್ಡಾಡಿ,
ನಿಮಗೆ ಒಬ್ಬನು ಶಿಕ್ಕುವನೋ,
ನ್ಯಾಯವನ್ನು ಮಾಡುವವನೂ, ಸತ್ಯವನ್ನು ಹುಡುಕುವವನೂ,
ಇದ್ದಾನೋ,
ಅವಳ ಚೌಕಗಳಲ್ಲಿ ನೋಡಿ, ತಿಳಿದು, ಹುಡಿಕಿರಿ;
ಶಿಕ್ಕಿದರೆ, ಅವಳಿಗೆ ಮನ್ನಿಸುವೆನು.
೨ ಅವರು ಕರ್ತನು ಜೀವಿಸುತ್ತಾನೆಂದು ಹೇಳಿದರೂ,
ಅಬದ್ಧವಾಗಿಯೇ ಆಣೆ ಇಡುತ್ತಾರೆ.
3 ಓ ಯೆಹೋವಾ! ನಿನ್ನ ಕಣ್ಣುಗಳು ಸತ್ಯದ ಮೇಲೆ ಅಲ್ಲವೋ!
ಅವರನ್ನು ಹೊಡೆದಿ, ಆದರೆ ಅವರಿಗೆ ನೋವಾಗಲಿಲ್ಲ;
ಅವರನ್ನು ಸಂಹರಿಸಿದಿ,
ಆದರೆ ಶಿಕ್ಷೆ ಹೊಂದಲೊಲ್ಲದೆ ಇದ್ದರು;
ತಮ್ಮ ಮುಖಗಳನ್ನು ಬಂಡೆಗಿಂತ ಕಠಿಣ ಮಾಡಿ ಕೊಂಡಿದ್ದಾರೆ;
ತಿರುಗಲೊಲ್ಲದೆ ಹೋಗಿದ್ದಾರೆ.
೪ ಆದದರಿಂದ ನಾನು ಅಂದದ್ದೇನಂದರೆ,
ನಿಶ್ಚಯವಾಗಿ ಇವರು ಬಡವರು, ಬುದ್ಧಿಹೀನರು;
ಯಾಕಂದರೆ, ಕರ್ತನ ಮಾರ್ಗವನ್ನು,
ತಮ್ಮ ದೇವರ ನ್ಯಾಯವನ್ನು ಅರಿಯರು.
೫ ನಾನು ಹೊಡ್ಡವರ ಬಳಿಗೆ ಹೋಗಿ,
ಅವರ ಸಂಗಡ ಮಾತಾಡುವೆನು;
ಯಾಕಂದರೆ, ಅವರು ಕರ್ತನ ಮಾರ್ಗವನ್ನೂ,
ತಮ್ಮ ದೇವರ ನ್ಯಾಯವನ್ನು, ತಿಳಿದಿದ್ದಾರೆ;
ಆದರೆ ಇವರು ಕೂಡ ನೊಗವನ್ನು ಮುರಿದು,
ಬಂಧಗಳನ್ನು ಹರಿದು ಬಿಟ್ಟಿದ್ದಾರೆ.
೬ ಹೀಗಿರುವದರಿಂದ ಅಡವಿಯ ಸಿಂಹವು ಅವರನ್ನು ಕೊಲ್ಲುವದು;
ಸಂಜೆಯ ತೋಳವು ಅವರನ್ನು ಸೂಳೆ ಮಾಡುವದು;
ಚಿರತೆ ಅವರ ಪಟ್ಟಣಗಳ ಮೇಲೆ ಎಚ್ಚರವಾಗುವದು;
ಅಲ್ಲಿಂದ ಹೊರಗೆ ಬರುವವರೆಲ್ಲರೂ ಶೀಳ್ಪಡುವರು;
ಯಾಕಂದರೆ, ಅವರ ದ್ರೋಹಗಳು ಬಹಳವಾಗಿವೆ;
ಅವರ ಹಿಂತಿರುಗುವಿಕೆಗಳು ಪ್ರಬಲವಾಗಿವೆ.

೭ ಇದಕ್ಕಾಗಿ ನಾನು ನಿನಗೆ ಹ್ಯಾಗೆ ಮನ್ನಿಸಲಿ!
ನಿನ್ನ ಮಕ್ಕಳು ನನ್ನನ್ನು ಬಿಟ್ಟು,
ದೇವರಲ್ಲದವುಗಳ ಮೇಲೆ ಆಣೆ ಇಟ್ಟು ಕೊಂಡಿದ್ದಾರೆ;
ನಾನು ಅವರನ್ನು ತೃಪ್ತಿ ಪಡಿಸಿದ ಮೇಲೆ,
ಅವರು ವ್ಯಭಿಚಾರ ಮಾಡಿ,
ಗೂಳೆಯ ಮನೆಯಲ್ಲಿ ಗುಂಪಾಗಿ ಕೂಡಿ ಕೊಂಡರು.
೮ ಬೆಳಿಗ್ಗೆ ಕೊಬ್ಬಿದ ಕುದುರೆಗಳ ಹಾಗಿದ್ದಾರೆ;
ತಮ್ಮ ತಮ್ಮ ನೆರೆಯವರ ಹೆಂಡರಿಗೋಸ್ಕರ ಹೂಂಕರಿಸುತ್ತಾರೆ.
೯ ಇವುಗಳ ನಿಮಿತ್ತ ನಾನು ವಿಚಾರಿಸುವದಿಲ್ಲವೋ!
ಇಂಥಾ ಜನಾಂಗಕ್ಕೆ ನನ್ನ ಪ್ರಾಣವು ಮುಯ್ಯಿಗೆ ಮುಯ್ಯಿ
ತೀರಿಸುವದಿಲ್ಲವೋ!
ಎಂದು ಕರ್ತನು ಅನ್ನುತ್ತಾನೆ.

೧೦ ಅವಳ ಗೋಡೆಗಳನ್ನು ಏರಿರಿ, ಕೆಡಿಸಿರಿ;
ಆದರೆ ಮುಗಿಸಿ ಬಿಡ ಬೇಡಿರಿ.
ಅವಳ ಶಿಖರಗಳನ್ನು ತೆಗೆದು ಬಿಡಿರಿ;
ಯಾಕಂದರೆ ಅವು ಕರ್ತನವುಗಳಲ್ಲ.
೧೧ ನಿಶ್ಚಯವಾಗಿ ಇಸ್ರಯೇಲನ ಮನೆಯವರೂ, ಯೆಹೂದನ ಮನೆ
ಯವರೂ,
ನನಗೆ ಬಹಳ ವಂಚನೆ ಮಾಡಿದ್ದಾರೆಂದು,
ಕರ್ತನು ಅನ್ನುತ್ತಾನೆ.
೧೨ ಕರ್ತನು ಸುಳ್ಳಂದಿದ್ದಾರೆ,
ಅವನಿಲ್ಲ. ನಮ್ಮ ಮೇಲೆ ಕೇಡು ಬಾರದು;
ಕತ್ತಿಯನ್ನಾಗಲಿ ಬರವನ್ನಾಗಲಿ ನಾವು ನೋಡುವದಿಲ್ಲ
ವೆಂದು, ಹೇಳಿದ್ದಾರೆ.
೧೩ ಮತ್ತು ಪ್ರವಾದಿಗಳು ಘುಳಿಯಾಗುವರು;
ವಾಕ್ಯವು ಅವರಲ್ಲಿ ಇಲ್ಲ;
ತಮಗೆ ಹೀಗಾಗುವದೆಂದು, ಹೇಳಿದ್ದಾರೆ.

೧೪ ಆದದರಿಂದ ಸೈನ್ಯಗಳ ದೇವರಾದ ಕರ್ತನು ಹೀಗೆ ಹೇಳು
ತ್ತಾನೆ—
ನೀವು ಈ ಮಾತನ್ನಾಡುವದರಿಂದ,
ನಾನು ನಿನ್ನ ಬಾಯಿಯಲ್ಲಿರುವ ನನ್ನ ಮಾತುಗಳನ್ನು ಬೆಂಕಿ
ಯಾಗಿಯೂ,
ಈ ಜನರನ್ನು ಕಟ್ಟಿಗೆಯಾಗಿಯೂ, ಮಾಡುವೆನು;
ಅದು ಅವರನ್ನು ತಿಂದು ಬಿಡುವದು.
೧೫ ಇಗೋ, ಇಸ್ರಯೇಲನ ಮನೆಯೇ!
ನಾನು ದೂರದಿಂದ ನಿಮ್ಮ ಮೇಲೆ ಒಂದು ಜನಾಂಗವನ್ನು ತರಿ
ಸುತ್ತೇನೆಂದು,
ಕರ್ತನು ಅನ್ನುತ್ತಾನೆ.
ಅದು ಬಲವಾದ ಜನಾಂಗವು,
ಪೂರ್ವದ ಜನಾಂಗವು,
ಆ ಜನಾಂಗದ ಭಾಷೆಯನ್ನು ನೀವರಿಯೆ,
ಅವರು ಹೇಳುವಂಥಾದ್ದು ನಿನಗೆ ತಿಳಿಯದು.
೧೬ ಅವರ ಬತ್ತಳಿಕೆ ತೆರದ ಸಮಾಧಿಯ ಹಾಗಿದೆ;
ಅವಕೆಲ್ಲರೂ ಪರಾಕ್ರಮಶಾಲಿಗಳೇ.
೧೭ ನಿನ್ನ ಕುಮಾರರು ನಿನ್ನ ಕುಮಾರ್ತೆಯರು ತಿನ್ನ ತಕ್ಕ
ನಿನ್ನ ಬೈರನ್ನೂ, ನಿನ್ನ ಕೊಟ್ಟಿಯನ್ನು ತಿನ್ನುವರು,
ನಿನ್ನ ಕುರಿಗಳನ್ನೂ ನಿನ್ನ ದನಗಳನ್ನು ತಿನ್ನುವರು,
ನಿನ್ನ ದ್ರಾಕ್ಷೆ ಗಿಡಗಳನ್ನು ನಿನ್ನ ಅಂಜೂರ ಗಿಡಗಳನ್ನು ತಿನ್ನು
ವರು,
ನೀನು ನಂಬಿಕೊಂಡಿದ್ದ ಕೋಟೆಯುಳ್ಳ ಪಟ್ಟಣಗಳನ್ನು
ಕತ್ತಿಯಿಂದ ಬಡವಾಗ ಮಾಡುವರು.
೧೮ ಆದಾಗ್ಯೂ ಆ ದಿವಸಗಳಲ್ಲಿಯು, ನಾನು ನಿಮ್ಮನ್ನು ಮುಗಿಸಿ
ಬಿಡುವದಿಲ್ಲವೆಂದು,
ಕರ್ತನು ಅನ್ನುತ್ತಾನೆ.
೧೯ ಮತ್ತು ಆಗುವದೇನಂದರೆ—
ನಮ್ಮ ದೇವರಾದ ಕರ್ತನು ನಮಗೆ ಯಾತಕ್ಕೆ ಇವುಗಳನ್ನ೿ಲ್ಲಿ
ಮಾಡುತ್ತಾನೆಂದು ನೀವು ಹೇಳುವಾಗ,



ನೀನು ಅವರಿಗೆ ಹೀಗೆ ಹೇಳ ಬೇಕು—
ನೀವು ನನ್ನನ್ನು ಬಿಟ್ಟು,
ನಿಮ್ಮ ದೇಶದಲ್ಲಿ ಬೇರೆ ದೇವರುಗಳನ್ನು ಸೇವಿಸಿದ ಹಾಗೆ,
ನಿಮ್ಮದಲ್ಲದ ದೇಶದಲ್ಲಿ ಅನ್ಯರನ್ನು ಸೇವಿಸುವಿರಿ.

೨೦ ಯಾಕೋಬನ ಮನೆಯಲ್ಲಿ ಇದನ್ನು ತಿಳಿಸಿರಿ,
ಯೆಹೂದದಲ್ಲಿ ಕೇಳಿ ಕೊಡಿರಿ, ಏನಂದರೆ—
೨೧ ಮೂಢ ಬುದ್ಧಿಹೀನ ಜನರೇ!
ಕಣ್ಣುಗಳುಂಟಾಗಿ ನೋಡದವರೇ!
ಕಿವಿಗಳುಂಟಾಗಿ ಕೇಳದವರೇ! ಇದನ್ನು ಕೇಳಿರಿ.
೨೨ ನೀವು ನನಗೆ ಭಯ ಪಡುವದಿಲ್ಲವೋ!
ನನ್ನ ಸಮುಖಕ್ಕೆ ಹೆದರುವದಿಲ್ಲವೋ!
ಎಂದು ಕರ್ತನು ಅನ್ನುತ್ತಾನೆ;
ನಾನು ಮರಳನ್ನು ನಿತ್ಯ ಸೇವವಾಗಿ ಸಮುದ್ರಕ್ಕೆ,
ಅದು ದಾಟ ಕೂಡದ ಹಾಗೆ, ಮೇರೆಯಾಗಿಟ್ಟಿದ್ದೇನೆ;
ಅದರ ತೆರೆಗಳು ಎತ್ತಿಕೊಂಡರೂ, ಮೇಲೇಳ್ಳಲಾರವು;
ಘೂಳಿಸಿದರೂ, ಅದನ್ನು ದಾಟಲಾರವು.
೨೩ ಆದರೆ ಈ ಜನರಿಗೆ ತಿರಿಗಿ ಬೀಳುವಂಥ,
ಹಿಂಜರಿಯುವಂಥ, ಹೃದಯ ಉಂಟು;
ತಿರುಗಿ ಬಿದ್ದು, ಹೋಗಿ ಬಿಟ್ಟಿದ್ದಾರೆ.
೨೪ ಮತ್ತು ತಮ್ಮ ಹೃದಯದಲ್ಲಿ—
ಮುಂಗಾಲೆ ಹಿಂಗಾಲೆ ಮಳೆಯನ್ನು ಅದರ ಕಾಲದಲ್ಲಿ ನಮಗೆ
ಕೊಡುವಂಥ,
ಸುಗ್ಗಿಗೆ ನೇಮಕವಾದ ವಾರಗಳನ್ನು ನಮಗೆ ಕಾಪಾಡುವಂಥ,
ನಮ್ಮ ದೇವರಾದ ಕರ್ತನಿಗೆ ಭಯ ಪಡೋಣ,
ಎಂದು ಅಂದು ಕೊಳ್ಳುವದಿಲ್ಲ.
೨೫ ನಿಮ್ಮ ಅಕ್ರಮಗಳು ಇವುಗಳನ್ನು ತಪ್ಪಿಸಿ ಅವೆ;
ನಿಮ್ಮ ಪಾಪಗಳು ಒಳ್ಳೆಯವುಗಳನ್ನು ನಿಲ್ಲಿಂದ ಹಿಂದೆಗೆದವೆ.
೨೬ ಯಾಕಂದರೆ ನನ್ನ ಜನರಲ್ಲಿ ದುಷ್ಟರು ಶಿಕ್ಕಿದ್ದಾರೆ;
ಉರ್ಲು ಇಡುವವನ ಹಾಗೆ ಹೊಂಚುತ್ತಾರೆ;
ಬೋನು ಹಾಕಿ ಮನುಷ್ಯರನ್ನು ಹಿಡಿಯುತ್ತಾರೆ.
೨೭ ಪಂಜರವು ಪಕ್ಷಿಗಳಿಂದ ತುಂಬಾಗಿರುವ ಪ್ರಕಾರ,
ಅವರ ಮನೆಗಳು ಮೋಸದಿಂದ ತುಂಬಾಗಿವೆ;
ಆದದರಿಂದ ಹೊಡ್ಡವರು ಐಶ್ವರ್ಯವಂತರೂ ಆಗಿದ್ದಾರೆ.
೨೮ ಕೊಬ್ಬಿದ್ದಾರೆ, ಪ್ರಕಾಶಿಸುತ್ತಾರೆ;
ಹೌದು, ಕೆಟ್ಟ ಕಾರ್ಯಗಳನ್ನು ಮೀರಿ ಹೋಗುತ್ತಾರೆ;
ವ್ಯಾಜ್ಯವನ್ನು, ದಿಕ್ಕಿಲ್ಲದವನ ವ್ಯಾಜ್ಯವನ್ನು, ವಿಚಾರಿಸರು;
ಆದಾಗ್ಯೂ ಸಫಲವಾಗುತ್ತಾರೆ;
ಬಡವರ ನ್ಯಾಯವನ್ನು ತೀರಿಸರು.
೨೯ ಇವುಗಳ ನಿಮಿತ್ತ ನಾನು ವಿಚಾರಿಸುವದಿಲ್ಲವೋ!
ಇಂಥಾ ಜನಾಂಗಕ್ಕೆ ನನ್ನ ಪ್ರಾಣವು ಮುಯ್ಯಿಗೆ ಮುಯ್ಯಿ
ತೀರಿಸುವದಿಲ್ಲವೋ!
ಎಂದು ಕರ್ತನು ಅನ್ನುತ್ತಾನೆ.
೩೦ ಆಶ್ಚರ್ಯವಾದ ಭಯಂಕರವಾದ ಕಾರ್ಯವು ದೇಶದಲ್ಲಿ
ನಡೆಯುತ್ತದೆ, ಏನಂದರೆ—
೩೧ ಪ್ರವಾದಿಗಳು ಮೋಸವಾಗಿ ಪ್ರವಾದಿಸುತ್ತಾರೆ,
ಯಾಜಕರು ಅವರ ಕೈಕೆಳಗೆ ಘೊರೆತನ ಮಾಡುತ್ತಾರೆ;
ಮತ್ತು ನನ್ನ ಜನರು ಅದನ್ನು ಪ್ರೀತಿ ಮಾಡುತ್ತಾರೆ;
ಆದರೆ ಅದರ ಅಂತ್ಯದಲ್ಲಿ ಏನು ಮಾಡುವಿರಿ!

## ೬. ಸಂಧಿ.

೧ ಬೆನ್ಯಮಿನನ ಮಕ್ಕಳೇ!
ಯೆರೂಸಲೇಮಿನೊಳಗಿಂದ ಆಶ್ರಯಕ್ಕೆ ಓಡಿ ಹೋಗಿರಿ.
ತಿಕೋವದಲ್ಲಿ ತುತೂರಿ ಊದಿರಿ;
ಬೇಥಹಕ್ಕೆರೆಮಿನಲ್ಲಿ ಗುರುತಿನ ಬೆಂಕಿ ಹಚ್ಚಿರಿ;
ಯಾಕಂದರೆ, ಕೇಡೂ, ದೊಡ್ಡ ಮುರಿಯೋಣವೂ,
ಉತ್ತರದ ಕಡೆಯಿಂದ ತೋರುತ್ತವೆ.
೨ ಚಿಯೋನಿನ ಮಗಳನ್ನು,
ಸೌಂದರ್ಯವಾದ ಕೋಮಲವಾದವಳನ್ನು, ಕಡಿದು ಬಿಡುತ್ತೇನೆ.
3 ಅವಳ ಬಳಿಗೆ ಕುರುಬರು ತಮ್ಮ ಮಂದೆಗಳ ಸಂಗಡ ಬರುವರು;
ಅವಳ ಸುತ್ತಲು ತಮ್ಮ ಗುಡಾರಗಳನ್ನು ಹಾಕುವರು;
ತಮ್ಮ ತಮ್ಮ ಸ್ಥಳಗಳಲ್ಲಿ ಮೇಯಿಸುವರು.
೪ ಅವಳಿಗೆ ವಿರೋಧವಾಗಿ ಯುದ್ಧವನ್ನು ಸಿದ್ಧ ಮಾಡಿರಿ;
ಏಳಿರಿ, ಮಧ್ಯಾನ್ಹದಲ್ಲಿ ಏರಿ ಹೋಗೋಣ;
ನಮಗೆ ಅಯ್ಯೋ! ಹೊತ್ತು ಮುಣುಗುತ್ತದೆ;
ಸಂಜೆಯ ನೆರಳುಗಳು ಉದ್ದವಾಗುತ್ತವೆ.
೫ ಏಳಿರಿ, ರಾತ್ರಿಯಲ್ಲಿ ಏರಿ ಹೋಗಿ,
ಅವಳ ಅರಮನೆಗಳನ್ನು ನಾಶ ಮಾಡೋಣ;

೬ ಯಾಕಂದರೆ, ಸೈನ್ಯಗಳ ಕರ್ತನು ಹೀಗೆ ಹೇಳುತ್ತಾನೆ—
ಮರಗಳನ್ನು ಕಡಿಯಿರಿ;
ಯೆರೂಸಲೇಮಿಗೆ ವಿರೋಧವಾಗಿ ಮೋಹರ್ಚೆಯನ್ನು ಕಟ್ಟಿರಿ;
ವಿಚಾರಿಸಲ್ಪಡ ತಕ್ಕ ಪಟ್ಟಣವು ಇದೇ;
ಅವಳಲ್ಲಿ ತುಂಬ ಶಿಸ್ಪಲು ಅದೆ.
೭ ಬುಗ್ಗೆ ತನ್ನ ನೀರನ್ನು ಹರಿಯ ಮಾಡುವಪ್ಪಂದ,
ಅವಳು ತನ್ನ ಕೆಟ್ಟತನವನ್ನು ಹರಿಯ ಮಾಡುತ್ತಾಳೆ;
ಬಲಾತ್ಕಾರವೂ, ಸುಲಿಗೆಯೂ, ಅವಳಲ್ಲಿ ಕೇಳಿ ಬರುತ್ತವೆ.
ದುಃಖವೂ, ಘಾಯವೂ, ಯಾವಾಗಲೂ ನನ್ನ ಮುಂದೆ ಅವೆ.

೮ ಓ ಯೆರೂಸಲೇಮೇ!
ನನ್ನ ಪ್ರಾಣವು ನಿನ್ನ ಕಡೆಯಿಂದ ಎಳಿಯಲ್ಪಡದ ಹಾಗೆ,
ನಾನು ನಿನ್ನನ್ನು ಹಾಳಾಗಿಯೂ, ನಿವಾಸಿಗಳಿಲ್ಲದ ದೇಶವಾಗಿ
ಯೂ, ಮಾಡದ ಹಾಗೆ,
ಶಿಕ್ಷೆಯನ್ನು ತಕ್ಕೋ.
೯ ಸೈನ್ಯಗಳ ಕರ್ತನು ಹೇಳುವದೇನಂದರೆ—
ಇಸ್ರಯೇಲಿನ ಉಳಿವನ್ನು ದ್ರಾಕ್ಷೆ ಗಿಡದ ಹಾಗೆ ಶುದ್ಧವಾಗಿ
ಹಕ್ಕಲಾಯುವರು,
ದ್ರಾಕ್ಷೆ ಕೂಡಿಸುವವನ ಹಾಗೆ ನಿನ್ನ ಕೈಯನ್ನು ಪುಟ್ಟಿಗಳ
ಕಡೆಗೆ ತಿರುಗಿಸು.

೧೦ ನಾನು ಯಾರ ಸಂಗಡ ಮಾತಾಡಲಿ!
ಅವರು ಕೇಳುವ ಹಾಗೆ ಯಾರನ್ನು ಎಚ್ಚರ ಪಡಿಸಲಿ!
ಇಗೋ, ಅವರು ಅಲ್ಪೈಸಲಾರದ ಹಾಗೆ,
ಅವರ ಕಿವಿ ಪರಿಛೇದನೆಯಿಲ್ಲದ್ದು;
ಇಗೋ, ಕರ್ತನ ವಾಕ್ಯವು ಅವರಿಗೆ ನಿಂದೆಯಾಗಿದೆ,
ಅದರಲ್ಲಿ ಅವರಿಗೆ ಸಂತೋಷವಿಲ್ಲ.
೧೧ ಆದದರಿಂದ ಕರ್ತನ ಉರಿಯಿಂದ ತುಂಬಿದ್ದೇನೆ,
ಅದನ್ನು ಹಿಡಿಯುವದು ನನಗೆ ಸಾಕಾಯಿತು;
ಅದನ್ನು ಹೊರಗಿರುವ ಮಕ್ಕಳ ಮೇಲೆಯೂ,
ಯಾವನಸ್ಥರ ಕೂಟದ ಮೇಲೆಯೂ ಸಹಿತವಾಗಿ, ಸುರಿಸುವೆನು;
ಯಾಕಂದರೆ, ನಿಶ್ಚಯವಾಗಿ ಗಂಡನು ಹೆಂಡತಿಯ ಸಂಗಡಲೂ,
ಮುದುಕನು ದಿನ ತುಂಬಿದವನ ಸಂಗಡಲೂ, ಹಿಡಿಯಲ್ಪಡುವರು.
೧೨ ಮತ್ತು ಅವರ ಮನೆಗಳೂ,
ಹೊಲಗಳೂ ಹೆಂಡರೂ ಸಹಿತವಾಗಿ,
ಬೇರೊಬ್ಬರಿಗೆ ಆಗುವವು;
ಯಾಕಂದರೆ, ದೇಶದ ನಿವಾಸಿಗಳ ಮೇಲೆ ನನ್ನ ಕೈ ಚಾಚುವೆ
ನೆಂದು,
ಕರ್ತನು ಅನ್ನುತ್ತಾನೆ.
೧೩ ಯಾಕಂದರೆ, ಅವರಲ್ಲಿ ಚಿಕ್ಕವನು ಮೊದಲುಗೊಂಡು ದೊಡ್ಡವ
ನ ಪರ್ಯಂತರ,
ಅವಕ್ಕೆಲ್ಲರೂ ಲಾಭ ಅಪಹರಿಸುವವರಾಗಿದ್ದಾರೆ;
ಪ್ರವಾದಿ ಮೊದಲುಗೊಂಡು ಯಾಜಕನ ಪರ್ಯಂತರ,
ಅವಕ್ಕೆಲ್ಲರೂ ಮೋಸ ಮಾಡುತ್ತಾರೆ.
೧೪ ಸಮಾಧಾನವಿಲ್ಲದಿರಲು,
ಸಮಾಧಾನ ಸಮಾಧಾನ ಎಂಥೇಳಿ,
ನನ್ನ ಜನರ ಮಗಳ ಘಾಯವನ್ನು ಸುಲಭವಾಗಿ ಸ್ವಸ್ಥ ಮಾಡಿ
ದ್ದಾರೆ.
೧೫ ಅಸಹ್ಯವನ್ನು ಮಾಡಿದ ಮೇಲೆ ನಾಚಿಕೆ ಪಟ್ಟಿರೋ!
ಇಲ್ಲ, ಸ್ವಲ್ಪವಾದರೂ ನಾಚಿಕೆ ಪಡಲಿಲ್ಲ;
ಲಜ್ಜೆಯನ್ನು ಅರಿಯರು;
ಆದದರಿಂದ ಬೀಳುವವರೊಳಗೆ ಬೀಳುವರು;
ನಾನು ಅವರನ್ನು ವಿಚಾರಿಸುವ ಕಾಲದಲ್ಲಿ ಎಡವುವರು,
ಎಂದು ಕರ್ತನು ಹೇಳುತ್ತಾನೆ.

೧೬ ಕರ್ತನು ಹೇಳುವದೇನಂದರೆ—
ಮಾರ್ಗಗಳಲ್ಲಿ ನಿಂತುಕೊಂಡು ನೋಡಿರಿ;
ಪೂರ್ವದ ಹಾದಿಗಳನ್ನು ಕೇಳಿಕೊಳ್ಳಿರಿ;
ಒಳ್ಳೇ ಮಾರ್ಗ ಎಲ್ಲಿಯೋ ಅದರಲ್ಲಿ ನಡಿಯಿರಿ;
ಆಗ ನಿಮ್ಮ ಪ್ರಾಣಗಳಿಗೆ ಉಪಶಮನ ಶಿಕ್ಕುವದು,
ಆದರೆ ಅವರು—ನಾವು ನಡಿಯುವದಿಲ್ಲ, ಅಂದರು.
೧೭ ಇದಲ್ಲದೆ, ನಿಮ್ಮ ಮೇಲೆ ಕೋವರದವರನ್ನು ಇರಿಸಿದೆನು;
ತುತೂರಿಯ ಶಬ್ದವನ್ನು ಆಲೈಸಿರಿ, ಅಂದೆನು;
ಆದರೆ ಅವರು—ನಾವು ಆಲೈಸುವದಿಲ್ಲ, ಅಂದರು.

೧೮ ಆದದರಿಂದ ಜನಾಂಗಗಳೇ! ಕೇಳಿರಿ;
ಜನ ಸಮೂಹವೇ! ಅವರಲ್ಲಿ ಇರುವಂಥಾದ್ದನ್ನು ತಿಳಿಂಕೊಳ್ಳಿರಿ.

೧೯ ಭೂಮಿಯೇ! ಕೇಳು;
ಇಗೋ, ನಾನು ಈ ಜನರ ಮೇಲೆ, ಕೇಡನ್ನು ಬರ ಮಾಡು
ತ್ತೇನೆ—
ತಮ್ಮ ಕಲ್ಪನೆಗಳ ಫಲವನ್ನೇ—
ಯಾಕಂದರೆ, ನನ್ನ ವಾಕ್ಯಗಳನ್ನು ಆಲೈಸದೆ ಹೋದರು,
ನನ್ನ ನ್ಯಾಯಪ್ರಮಾಣವನ್ನು ಅಲಕ್ಷ್ಯ ಮಾಡಿದರು.
೨೦ ಕೇಬದಿಂದ ಸಾಂಬ್ರಾಣಿಯೂ,
ದೂರ ದೇಶದಿಂದ ಒಳ್ಳೇ ಹಾಲ್ಜಿನ್ನಿಯೂ,
ನನಗೆ ಬರುವದು ಯಾತಕ್ಕೆ!
ನಿಮ್ಮ ಹೋಮಗಳು ಮೆಚ್ಚಿಗೆಯಾಗಲಿಲ್ಲ;
ನಿಮ್ಮ ಬಲಿಗಳು ನನಗೆ ರುಚಿ ಇಲ್ಲ.
೨೧ ಆದದರಿಂದ ಕರ್ತನು ಹೇಳುವದೇನಂದರೆ—
ಇಗೋ, ನಾನು ಈ ಜನರ ಮುಂದೆ ಎಡತಡೆಗಳನ್ನು ಇಡುತ್ತೇನೆ;
ತಂದೆಗಳೂ ಮಕ್ಕಳೂ ಕೂಡ ಅವುಗಳಿಂದ ಎಡವುವರು;
ನೆರೆಯವನೂ ಅವನ ಸ್ನೇಹಿತನೂ ನಾಶವಾಗುವರು.

೨೨ ಕರ್ತನು ಹೇಳುವದೇನಂದರೆ—
ಇಗೋ ಒಂದು ಜನವು ಉತ್ತರ ದೇಶದಿಂದ ಬರುತ್ತದೆ;
ದೊಡ್ಡ ಜನಾಂಗವು ಭೂಮಿಯ ಮೇರೆಗಳಿಂದ ಎದ್ದು ಬರುತ್ತದೆ.
೨೩ ಬಿಲ್ಲನ್ನೂ ಭಲ್ಲೆಯನ್ನೂ ಹಿಡಿಯುತ್ತಾರೆ;
ಕ್ರೂರಸ್ಥರಾಗಿದ್ದಾರೆ, ಕನಿಕರ ತೋರಿಸುವದಿಲ್ಲ;
ಅವರ ಶಬ್ದವು ಸಮುದ್ರದ ಹಾಗೆ ಘೂಂಘಿಸುತ್ತದೆ;
ಕುದುರೆಗಳ ಮೇಲೆ ಸವಾರಿ ಮಾಡುತ್ತಾರೆ;
ಯುದ್ಧ ಮಾಡುವದಕ್ಕೆ ಪುರುಷರಾಗಿ ಸಿದ್ಧ ಮಾಡಿ ಕೊಂಡಿ
ದ್ದಾರೆ;
ನಿನಗೆ ವಿರೋಧವಾಗಿಯೇ, ಓ ಚಿಯೋನಿನ ಮಗಳೇ!

೨೪ ಅವರ ಸುದ್ದಿಯನ್ನು ಕೇಳಿದ್ದೇವೆ,
ನಮ್ಮ ಕೈಗಳು ಜೋಲಾಡುತ್ತವೆ;
ಸಂಕಟವು, ಬೆರುವವಳಂತಿರುವ ನೋವೂ,
ನಮ್ಮನ್ನು ಹಿಡಿಯಿತು.
೨೫ ಹೊಲಕ್ಕೆ ಹೊರಡ ಬೇಡ;
ದಾರಿಯಲ್ಲಿ ನಡಿಯ ಬೇಡ;
ಯಾಕಂದರೆ ಶತ್ರುವಿನ ಕತ್ತಿಯೂ, ಅಂಜಿಕೆಯೂ, ಸುತ್ತಲು
ಅವೆ.
೨೬ ಓ ನನ್ನ ಜನರ ಮಗಳೇ! ಗೋಣಿಯನ್ನು ಕಟ್ಟಿಕೋ,
ಬೂದಿಯಲ್ಲಿ ಹೊರಳಾಡು;
ಒಬ್ಬನೇ ಮಗನಿಗೋಸ್ಕರ ಮಾಡುವ ದುಃಖದ ಪ್ರಕಾರ,
ಬಹು ಕಠಿಣವಾದ ಗೋಳಾಟವನ್ನು ಮಾಡು;
ಯಾಕಂದರೆ, ಸೂರೆ ಮಾಡುವವನು ಫಕ್ಕನೆ ನಮ್ಮ ಮೇಲೆ
ಬರುವನು.

೨೭ ನಿನ್ನನ್ನು ನನ್ನ ಜನರಲ್ಲಿ,
ನೀನು ಅವರ ಮಾರ್ಗಗಳನ್ನು ತಿಳಿದು ಶೋಧಿಸುವ ಹಾಗೆ,
ಕೋಧಿಸುವವನಾಗಿಯೂ, ಕೋಟೆಯಾಗಿಯೂ, ಇಟ್ಟಿದ್ದೇನೆ.
೨೮ ಅವಕ್ಕೆಲ್ಲರು ಮಹಾ ದೊಡ್ಡ ಶಿಕುಗಿಬೀಳುವವರೇ;
ಚಾಡಿಕಾರರಾಗಿ ನಡಿಯುತ್ತಾರೆ;



ಹಿತ್ತಾಳೆಯೂ, ಕಬ್ಬಿಣವೂ ಆಗಿದ್ದಾರೆ;
ಅವರೆಲ್ಲರೂ ಕೆಡಿಸುವವರೇ.
೨೯ ತಿದಿ ಉಬ್ಬುತ್ತದೆ,
ಅವರ ಬೆಂಕಿಯೊಳಗಿಂದ ಸೀಸ ಬರುತ್ತದೆ;
ಪುಟಕ್ಕೆ ಹಾಕುವವನು ವ್ಯರ್ಥವಾಗಿ ಹಾಕುತ್ತಾನೆ;
ಕೆಟ್ಟವರು ಪ್ರತ್ಯೇಕವಾಗಲಿಲ್ಲ.
೩೦ ತಳ್ಳಲ್ಪಟ್ಟ ಬೆಳ್ಳಿ ಎಂದು ಅವರಿಗೆ ಹೆಸರಾಗುವದು;
ಯಾಕಂದರೆ ಕರ್ತನು ಅವರನ್ನು ತಳ್ಳಿದ್ದಾನೆ.

## ೭. ಸಂಧಿ.

೧ ಯೆರೆಮಿಾಯನಿಗೆ ಕರ್ತನಿಂದ ಉಂಟಾದ ವಾಕ್ಯವು ಏನಂ
ದರೆ—
೨ ಕರ್ತನ ಮನೆಯ ಬಾಗಲಲ್ಲಿ ನಿಂತು ಕೊಂಡು, ಈ ವಾಕ್ಯವನ್ನು
ಅಲ್ಲಿ ಸಾರು, ಏನಂದರೆ—
ಯೆಹೂದದವರೆಲ್ಲರೇ!
ಕರ್ತನನ್ನು ಆರಾಧಿಸುವದಕ್ಕೆ ಈ ಬಾಗಲುಗಳಲ್ಲಿ ಸೇರುವವರೇ!
ಕರ್ತನ ವಾಕ್ಯವನ್ನು ಕೇಳಿರಿ.
೩ ಇಸ್ರಯೇಲಿನ ದೇವರಾಗಿರುವ ಸೈನ್ಯಗಳ ಕರ್ತನು ಹೇಳುವದೇ
ನಂದರೆ—
ನಿಮ್ಮ ಮಾರ್ಗಗಳನ್ನೂ, ನಿಮ್ಮ ಕ್ರಿಯೆಗಳನ್ನೂ, ನೆಟ್ಟಗೆ ಮಾ
ಡಿರಿ;
ಆಗ ನಿಮ್ಮನ್ನು ಈ ಸ್ಥಳದಲ್ಲಿ ವಾಸಿಸ ಮಾಡುವೆನು.
೪ ಕರ್ತನ ದೇವಾಲಯ, ಕರ್ತನ ದೇವಾಲಯ,
ಕರ್ತನ ದೇವಾಲಯ, ಇವುಗಳೇ ಎಂಥೇಳಿ,
ಮೋಸದ ಮಾತುಗಳಲ್ಲಿ ನಂಬಿಕೆ ಇಡ ಬೇಡಿರಿ.

೫ ಯಾಕಂದರೆ, ನೀವು ನಿಮ್ಮ ಮಾರ್ಗಗಳನ್ನೂ ನಿಮ್ಮ ಕ್ರಿಯೆ
ಗಳನ್ನೂ ಪೂರ್ಣವಾಗಿ ನೆಟ್ಟಗೆ ಮಾಡಿದರೆ,
ಮನುಷ್ಯನಿಗೂ ಅವನ ನೆರೆಯವನಿಗೂ ಪೂರ್ಣವಾಗಿ ನ್ಯಾ
ಯ ನಡಿಸಿದರೆ,
೬ ಪರದೇಶಿಯನ್ನೂ ದಿಕ್ಕಿಲ್ಲದವನನ್ನೂ ವಿಧವೆಯನ್ನೂ ಶಿಪ್ಪ
ಲು ಪಡಿಸದಿದ್ದರೆ,
ಈ ಸ್ಥಳದಲ್ಲಿ ಅಪರಾಧವಿಲ್ಲದ ರಕ್ತವನ್ನು ಚೆಲ್ಲದಿದ್ದರೆ,
ನಿಮ್ಮ ನಷ್ಟಕ್ಕಾಗಿ ಬೇರೆ ದೇವರುಗಳನ್ನು ಹಿಂಬಾಲಿಸದಿದ್ದರೆ,
೭ ಆಗ ನಿಮ್ಮನ್ನು ಈ ಸ್ಥಳದಲ್ಲಿ—
ನಾನು ನಿಮ್ಮ ತಂದೆಗಳಿಗೆ ಕೊಟ್ಟ ದೇಶದಲ್ಲಿ—
ಎಂದೆಂದಿಗೂ ವಾಸಿಸ ಮಾಡುವೆನು.

೮ ಇಗೋ ನೀವು ಪ್ರಯೋಜನವಿಲ್ಲದ
ಮೋಸದ ಮಾತುಗಳಲ್ಲಿ ನಂಬಿಕೆ ಇಡುತ್ತೀರಿ.
೯ ಏನು! ಕಳ್ಳತನ, ಹತ್ಯ, ಹಾದರತನಗಳನ್ನು ನಡಿಸಿ,
ಸುಳ್ಳು ಪ್ರಮಾಣವನ್ನು ಮಾಡಿ,
ಬಾಳನಿಗೆ ಧೂಪವನ್ನು ಅರ್ಪಿಸಿ,
ನಿಮಗೆ ತಿಳಿಯದ ಬೇರೆ ದೇವರುಗಳನ್ನು ಹಿಂಬಾಲಿಸಿ,

೧೦ ಆಮೇಲೆ ಬಂದು,
ನನ್ನ ಹೆಸರು ಹೊಂದಿರುವ ಈ ಮನೆಯಲ್ಲಿ ನನ್ನ ಮುಂದೆ ನಿಂ
ತು ಕೊಂಡು—
ನಾವು ಈ ಅಸಹ್ಯಗಳನ್ನೆಲ್ಲಾ ಮಾಡುವ ಹಾಗೆ,
ಬಿಪ್ಪಿಸಲ್ಪಟ್ಟಿದ್ದೇವೆಂದು, ಹೇಳುವಿರೋ!
೧೧ ನನ್ನ ಹೆಸರು ಹೊಂದಿರುವ ಈ ಮನೆಯು,
ನಿಮ್ಮ ಕಣ್ಣುಗಳಲ್ಲಿ ಜೋರರ ಗವಿಯಾಯಿತೋ!
ಹೌದು, ಇಗೋ ನಾನೇ ಅದನ್ನು ನೋಡಿದ್ದೇನೆಂದು,
ಕರ್ತನು ಅನ್ನುತ್ತಾನೆ.

೧೨ ಆದರೆ ಎಲೋ ಶಿಲೋವಿನಲ್ಲಿದ್ದ ನನ್ನ ಸ್ಥಳಕ್ಕೆ,
ನಾನು ಆದಿಯಲ್ಲಿ ನನ್ನ ಹೆಸರನ್ನು ಇಟ್ಟಲ್ಲಿಗೆ ಹೋಗಿರಿ;
ಅದಕ್ಕೆ ನಾನು, ನನ್ನ ಜನರಾದ ಇಸ್ರಯೇಲಿನ ಕೆಟ್ಟತನದ
ನಿಮಿತ್ತ,
ಏನು ಮಾಡಿದೆನೆಂದು, ನೋಡಿರಿ.
೧೩ ಮತ್ತು ಈಗ ಕರ್ತನು ಅನ್ನುವದೇನಂದರೆ—
ನೀವು ಈ ಕೆಲಸಗಳನ್ನೆಲ್ಲಾ ಮಾಡಿದದರಿಂದಲೂ,
ನಾನು ಬೆಳಿಗ್ಯೆ ಎದ್ದು ನಿಮ್ಮ ಸಂಗಡ ಮಾತಾಡಿದರೂ,
ನೀವು ಕೇಳದೆ ಹೋದದರಿಂದಲೂ,
ನಾನು ನಿಮಗೆ ಕರೆದರೂ,
ನೀವು ಉತ್ತರ ಕೊಡದೆ ಹೋದದರಿಂದಲೂ,
೧೪ ಆದಕಾರಣ ನನ್ನ ಹೆಸರು ಹೊಂದಿರುವಂಥ,
ನೀವು ನಂಬಿಕೊಂಡಿರುವಂಥ ಈ ಮನೆಗೂ,
ನಾನು ನಿಮಗೂ ನಿಮ್ಮ ತಂದೆಗಳಿಗೂ ಕೊಟ್ಟ ಸ್ಥಳಕ್ಕೂ,
ಶಿಲೋವಿಗೆ ಮಾಡಿದ ಹಾಗೆ ಮಾಡುವೆನು.
೧೫ ಮತ್ತು ನಿಮ್ಮ ಸಹೋದರರೆಲ್ಲರನ್ನೂ,
ಎಫ್ರಾಯಿಾಮಿನ ಎಲ್ಲಾ ಸಂತಾನವನ್ನೂ, ಹೊರಗೆ ಹಾಕಿದ
ಹಾಗೆ,
ನಿಮ್ಮನ್ನು ನನ್ನ ಸಮುಖದಿಂದ ಹೊರಗೆ ಹಾಕುವೆನು.

೧೬ ಆದದರಿಂದ ನೀನು ಈ ಜನರಿಗೋಸ್ಕರ ಪ್ರಾರ್ಥನೆ ಮಾಡ
ಬೇಡ;
ಅವರಿಗೋಸ್ಕರ ಪೊರೆಯನ್ನೂ ಪ್ರಾರ್ಥನೆಯನ್ನೂ ಎತ್ತ
ಬೇಡ;
ನನಗೆ ವಿಜ್ಞಾಪನೆ ಮಾಡ ಬೇಡ;
ಯಾಕಂದರೆ, ನಾನು ನಿನ್ನನ್ನು ಕೇಳುವದಿಲ್ಲ.
೧೭ ಯೆಹೂದದ ಪಟ್ಟಣಗಳಲ್ಲಿಯೂ, ಯೆರೂಸಲೇಮಿನ ಬೀದಿಗ
ಳಲ್ಲಿಯೂ,
ಅವರು ಮಾಡುವದನ್ನು ನೀನು ನೋಡುವದಿಲ್ಲವೋ!
ಆಕಾಶದ ರಾಣಿಗೆ ದೋಶೆಗಳನ್ನು ಮಾಡುವದಕ್ಕೂ,
ಬೇರೆ ದೇವರುಗಳಿಗೆ ಪಾನದರ್ಪಣೆಯನ್ನು ಹೊಯ್ಯುವ
ದಕ್ಕೂ,
೧೮ ಮಕ್ಕಳು ಕಟ್ಟಿಗೆ ಕೂಡಿಸುತ್ತಾರೆ,
ತಂದೆಗಳು ಬೆಂಕಿ ಹಚ್ಚುತ್ತಾರೆ,
ಹೆಂಗಸರು ಹಿಟ್ಟು ನಾದುತ್ತಾರೆ;
ನನಗೆ ಕೋಪವೆಬ್ಬಿಸುವದಕ್ಕಾಗಿಯೇ.
೧೯ ಕರ್ತನು ಅನ್ನುತ್ತಾನೆ—

ನನಗೆ ಕೋಪವೆಬ್ಬಿಸುತ್ತಾರೋ!
ಸ್ವಂತ ಮುಖಗಳ ನಾಚಿಕೆ ಪಡುವ ಹಾಗೆ,
ತಮಗೆ ತಾವೇ ಎಬ್ಬಿಸುತ್ತಾರಲ್ಲವೋ!

೨೦ ಆದದರಿಂದ ಕರ್ತನಾದ ಯೆಹೋವನು ಹೇಳುವದೇನಂದರೆ—
ಇಗೋ ಈ ಸ್ಥಳದ ಮೇಲೆ,
ಮನುಷ್ಯರ ಮೇಲೆಯೂ, ಮೃಗಗಳ ಮೇಲೆಯೂ,
ಹೊಲದ ಮರಗಳ ಮೇಲೆಯೂ, ಭೂಮಿಯ ಫಲದ ಮೇಲೆಯೂ,
ನನ್ನ ಕೋಪವೂ, ನನ್ನ ಉಗ್ರವೂ, ಹೊಯ್ಯಲ್ಪಡುವದು,
ಅದು ಉರಿಯುವದು, ಆರಿ ಹೋಗುವದಿಲ್ಲ.

೨೧ ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೇಳುವದೇನಂದರೆ—
ನಿಮ್ಮ ಹೋಮಗಳನ್ನು ನಿಮ್ಮ ಬಲಿಗಳ ಸಂಗಡ ಕೂಡಿಸಿ,
ಮಾಂಸವನ್ನು ಉಣ್ಣಿರಿ;
೨೨ ಯಾಕಂದರೆ, ನಾನು ನಿಮ್ಮ ತಂದೆಗಳನ್ನು ಐಗುಪ್ತ ದೇಶದೊಳಗಿಂದ ಹೊರಗೆ ಬರ ಮಾಡಿದ ದಿವಸದಲ್ಲಿ,
ಹೋಮಗಳ ಬಲಿಗಳ ವಿಷಯ ಅವರ ಸಂಗಡ ಮಾತಾಡಲಿಲ್ಲ,
ಅವರಿಗೆ ಆಜ್ಞಾಪಿಸಲಿಲ್ಲ.
೨೩ ಆದರೆ ಇದನ್ನು ಅವರಿಗೆ ಆಜ್ಞಾಪಿಸಿದೆನು, ಏನಂದರೆ—
ನನ್ನ ಶಬ್ದಕ್ಕೆ ಕಿವಿ ಕೊಡಿರಿ,
ಆಗ ನಿಮ್ಮ ದೇವರಾಗಿರುವೆನು;
ಮತ್ತು, ನೀವು ನನಗೆ ಜನರಾಗಿರುವಿರಿ;
ನಿಮಗೆ ಒಳ್ಳೇದಾಗುವ ಹಾಗೆ ನಾನು ನಿಮಗೆ ಆಜ್ಞಾಪಿಸಿದ
ಎಲ್ಲಾ ಮಾರ್ಗಗಳಲ್ಲಿ ನಡಿಯಿರಿ.
೨೪ ಆದರೆ ಅವರು ಕೇಳಲಿಲ್ಲ, ಕಿವಿ ಬೊಗ್ಗಲಿಲ್ಲ;
ತಮ್ಮ ದುಷ್ಟ ಹೃದಯದ ಆಲೋಚನೆಯಲ್ಲಿಯೂ, ಕಾಠಿಣ್ಯದಲ್ಲಿಯೂ, ನಡೆ ಕೊಂಡು,
ಮುಂದಕ್ಕೆ ಅಲ್ಲ, ಹಿಂದಕ್ಕೆ ಹೋದರು.
೨೫ ನಿಮ್ಮ ತಂದೆಗಳು ಐಗುಪ್ತ ದೇಶವನ್ನು ಬಿಟ್ಟು ಹೋದಂದಿನಿಂದ
ಇಂದಿನ ವರಿಗೂ,
ನಾನು ನನ್ನ ಸಕಲ ದಾಸರಾಗಿರುವ ಪ್ರವಾದಿಗಳನ್ನು,
ದಿನ ದಿನಕ್ಕೆ ಬೆಳಿಗ್ಯೆ ಎದ್ದು, ನಿಮ್ಮ ಬಳಿಗೆ ಕಳುಹಿಸಿದೆನು.
೨೬ ಆದರೆ ಅವರು ನನ್ನನ್ನು ಕೇಳದೆ, ಕಿವಿ ಬೊಗ್ಗದೆ,
ತಮ್ಮ ಕುತ್ತಿಗೆ ಕಠಿಣ ಮಾಡಿ ಕೊಂಡು,
ತಮ್ಮ ತಂದೆಗಳಿಗಿಂತ ಕೆಟ್ಟದ್ದನ್ನು ಮಾಡಿದರು.

೨೭ ಆದದರಿಂದ ನೀನು ಈ ಮಾತುಗಳನ್ನೆಲ್ಲಾ ಅವರಿಗೆ ಹೇಳಬೇಕು,
ಆದರೆ ಅವರು ನಿನ್ನನ್ನು ಕೇಳುವದಿಲ್ಲ;
ಅವರಿಗೆ ಕೂಗ ಬೇಕು,
ಆದರೆ ಅವರು ನಿನಗೆ ಉತ್ತರ ಕೊಡುವದಿಲ್ಲ.
೨೮ ಹಾಗಾದರೆ ನೀನು ಅವರಿಗೆ ಹೇಳ ಬೇಕಾದದ್ದೇನಂದರೆ—
ಇದು, ನನ್ನ ದೇವರಾದ ಕರ್ತನ ಮಾತನ್ನು ಕೇಳದಂಥ,
ಶಿಕ್ಷೆಯನ್ನು ತಕ್ಕೊಳ್ಳದಂಥ, ಜನಾಂಗವಾಗಿದೆ;
ಸತ್ಯವು ನಾಶವಾಯಿತು, ಅವರ ಬಾಯಿಯೊಳಗಿಂದ ಕಡಿದು ಹಾಕಲ್ಪಟ್ಟಿದೆ.
೨೯ ನಿನ್ನ ಕೂದಲನ್ನು ಕತ್ತರಿಸಿ ಬಿಸಾಟು ಬಿಡು;
ಉನ್ನತ ಸ್ಥಳಗಳ ಮೇಲೆ ಗೋಳಾಟವನ್ನು ಎತ್ತು;
ಯಾಕಂದರೆ, ಕರ್ತನು ತನ್ನ ಉಗ್ರದ ಸಂತತಿಯನ್ನು ಬೇಸಂದು, ತಳ್ಳಿ ಬಿಟ್ಟಿದ್ದಾನೆ;
೩೦ ಯಾಕಂದರೆ, ಯೆಹೂದನ ಮಕ್ಕಳು ನನ್ನ ದೃಷ್ಟಿಯಲ್ಲಿ ಕೆಟ್ಟದನ್ನು ಮಾಡಿದ್ದಾರೆಂದು ಕರ್ತನು ಅನ್ನುತ್ತಾನೆ;
ನನ್ನ ಹೆಸರು ಹೊಂದಿರುವ ಮನೆಯಲ್ಲಿ,
ಅದನ್ನು ಅಪವಿತ್ರ ಮಾಡುವದಕ್ಕೆ, ತಮ್ಮ ಅಸಹ್ಯಗಳನ್ನು ಇಟ್ಟಿದ್ದಾರೆ.
೩೧ ಮತ್ತು ಹಿನ್ನೋಮನ ಮಗನ ತಗ್ಗಿನಲ್ಲಿರುವ ತೋಫೆತಿನ ಉನ್ನತ ಸ್ಥಳಗಳನ್ನು,
ತಮ್ಮ ಕುಮಾರ ಕುಮಾರ್ತೆಯರನ್ನು ಬೆಂಕಿಯಲ್ಲಿ ಸುಡುವದಕ್ಕೆ, ಕಟ್ಟಿದ್ದಾರೆ;
ಇದನ್ನು ನಾನು ಆಜ್ಞಾಪಿಸಲಿಲ್ಲ, ಅದು ನನ್ನ ಮನಸ್ಸಿನಲ್ಲಿ ಬರಲಿಲ್ಲ.
೩೨ ಆದದರಿಂದ ಕರ್ತನು ಅನ್ನುವದೇನಂದರೆ—
ಇಗೋ! ದಿನಗಳು ಬರುವವು;
ಆಗಲದು ಇನ್ನು ತೋಫೆತೆಂದೂ, ಹಿನ್ನೋಮನ ಮಗನ ತಗ್ಗು ಎಂದೂ, ಕರೆಯಲ್ಪಡುವದಿಲ್ಲ;
ಕೊಲೆಯ ತಗ್ಗು ಎಂದು, ಅದಕ್ಕೆ ಹೆಸರಾಗುವದು.
ಯಾಕಂದರೆ, ಸ್ಥಳವಿಲ್ಲದ ಮಟ್ಟಿಗೂ, ತೋಫೆತಿನಲ್ಲಿ ಹೂಳಿಡುವರು.
೩೩ ಮತ್ತು ಈ ಜನರ ಹೆಣಗಳು,
ಆಕಾಶದ ಪಕ್ಷಿಗಳಿಗೂ, ಭೂಮಿಯ ಮೃಗಗಳಿಗೂ, ಆಹಾರವಾಗುವವು;
ಯಾರೂ ಅವುಗಳನ್ನು ಬೆದರಿಸುವದಿಲ್ಲ.
೩೪ ಆಗ ನಾನು ಯೆಹೂದದ ಪಟ್ಟಣಗಳಲ್ಲಿಯೂ, ಯೆರೂಸಲೇಮಿನ ಬೀದಿಗಳಲ್ಲಿಯೂ,
ಉಲ್ಲಾಸದ ಶಬ್ದವನ್ನೂ, ಸಂತೋಷದ ಶಬ್ದವನ್ನೂ,
ಮದಲಿಂಗನ ಶಬ್ದವನ್ನೂ, ಮದಲಗಿತ್ತಿಯ ಶಬ್ದವನ್ನೂ, ನಿಲ್ಲಿಸುವೆನು.
ಯಾಕಂದರೆ, ದೇಶವು ಹಾಳಾಗುವದು.

## ೮. ಸಂಧಿ.

೧ ಕರ್ತನು ಅನ್ನುವದೇನಂದರೆ—
ಆ ಕಾಲದಲ್ಲಿ ಅವರು ಯೆಹೂದದ ಅರಸರ ಎಲುವುಗಳನ್ನೂ,
ಅದರ ಪ್ರಧಾನರ ಎಲುವುಗಳನ್ನೂ,
ಯಾಜಕರ ಎಲುವುಗಳನ್ನೂ,
ಪ್ರವಾದಿಗಳ ಎಲುವುಗಳನ್ನೂ,
ಯೆರೂಸಲೇಮಿನ ನಿವಾಸಿಗಳ ಎಲುವುಗಳನ್ನೂ,
ಅವರ ಸಮಾಧಿಗಳೊಳಗಿಂದ ಹೊರಗೆ ತರುವರು.
೨ ಅವರು ಪ್ರೀತಿ ಮಾಡಿದಂಥ, ಸೇವಿಸಿದಂಥ,
ಹಿಂಬಾಲಿಸಿದಂಥ, ಹುಡುಕಿದಂಥ,



ಅರಾಧಿಸಿದಂಥ,
ಸೂರ್ಯನ ಮುಂದೆಯೂ, ಚಂದ್ರನ ಮುಂದೆಯೂ,
ಸಮಸ್ತ ಆಕಾಶ ಸೈನ್ಯದ ಮುಂದೆಯೂ,
ಅವುಗಳನ್ನು ಚೆಲ್ಲುವರು;
ಅವು ಕೂಡಿಸಲ್ಪಡವು, ಹೂಳಿಡಲ್ಪಡವು,
ಅವು ಭೂಮಿಯ ಮೇಲೆ ಗೊಬ್ಬರವಾಗುವವು.
೩ ಮತ್ತು ಈ ಕೆಟ್ಟ ಗೋತ್ರದಲ್ಲಿ ಉಳಿದ ಉಳಿಯಿಗೆಲ್ಲಾ,
ನಾನು ಉಳಿದವರನ್ನು ಬೆದರಿಸಿದ ಎಲ್ಲಾ ಸ್ಥಳಗಳಲ್ಲಿ,
ಜೀವಕ್ಕಿಂತ ಮರಣವು ಆಯ್ಕೆಪಡುವದೆಂದು
ಸೈನ್ಯಗಳ ಕರ್ತನು ಅನ್ನುತ್ತಾನೆ.

೪ ಮತ್ತು ಅವರಿಗೆ ಹೇಳ ಬೇಕಾದದ್ದೇನಂದರೆ—
ಕರ್ತನು ಹೀಗೆ ಹೇಳುತ್ತಾನೆ—
ಅವರು ಏಳದೆ ಬೀಳುವರೋ!
ತಿರುಗದೆ ತಿರುಗಿ ಕೊಳ್ಳುವರೋ!
೫ ಯಾಕೆ ಈ ಯೆರೂಸಲೇಮಿನ ಜನರು ನಿತ್ಯವಾದ ಹಿಂತಿರುಗುವಿಕೆಯಿಂದ ಹಿಂತಿರುಗುತ್ತಾರೆ!
ಮೋಸವನ್ನು ಬಿಗಿಯಾಗಿ ಹಿಡಿಯುತ್ತಾರೆ; ತಿರುಗಲೊಲ್ಲರು.
೬ ಕಿವಿ ಕೊಟ್ಟು ಕೇಳಿದೆನು,
ಅವರು ನೆಟ್ಟಗೆ ಮಾತಾಡಲಿಲ್ಲ,
ಯಾವನಾದರೂ ಏನು ಮಾಡಿದ್ದೇನೆಂದು ಹೇಳಿ,
ತನ್ನ ಕೆಟ್ಟತನದ ನಿಮಿತ್ತ ಪಶ್ಚಾತ್ತಾಪ ಪಡಲಿಲ್ಲ;
ಕುದುರೆ ಯುದ್ಧಕ್ಕೆ ಓಡುವ ಪ್ರಕಾರ,
ಅವರೆಲ್ಲರು ತಮ್ಮ ದಾರಿಗಳಿಗೆ ತಿರುಗಿದ್ದಾರೆ.
೭ ಆಕಾಶದಲ್ಲಿ ಕೊರಕಂಚೆಯಾದರೂ
ತನ್ನ ಗೊತ್ತುಕಾಲಗಳನ್ನು ತಿಳಿಯುತ್ತಾಳೆ;
ಪಾರಿವಾಳವೂ, ಬಾನಕ್ಕಿಯೂ, ಕೊಕ್ಕರೆಯೂ,
ತಾವು ಬರ ತಕ್ಕ ಹೊತ್ತನ್ನು ಕೈ ಕೊಳ್ಳುತ್ತವೆ;
ಆದರೆ ನನ್ನ ಜನರು ಕರ್ತನ ನ್ಯಾಯವನ್ನು ಅರಿಯರು.

೮ ನಾವು ಜ್ಞಾನಿಗಳು, ಕರ್ತನ ನ್ಯಾಯ ಪ್ರಮಾಣವು ನಮ್ಮ ಸಂಗಡ ಅದೆ,
ಎಂದು ನೀವು ಹೇಳುವದು ಹ್ಯಾಗೆ!
ಇಗೋ, ನಿಶ್ಚಯವಾಗಿ ಅದನ್ನು ವ್ಯರ್ಥವಾಗಿ ಮಾಡಿದನು,
ಬರೆಯುವವರ ಕಂಠವು ವ್ಯರ್ಥವಾಗಿದೆ.
೯ ಜ್ಞಾನಿಗಳು ನಾಚಿಕೆ ಹೊಂದಿದ್ದಾರೆ,
ದಿಗಿಲು ಪಟ್ಟು ಶಿಕ್ಕಿ ಕೊಂಡಿದ್ದಾರೆ;
ಇಗೋ, ಕರ್ತನ ವಾಕ್ಯ ಬೇಸಂದಿದ್ದಾರೆ;
ಹಾಗಾದರೆ ಅವರಿಗೆ ಏನು ಜ್ಞಾನವಿದೆ!
೧೦ ಆದದರಿಂದ ಅವರ ಹೆಂಡತನ್ನು ಬೇರೊಬ್ಬರಿಗೂ,
ಅವರ ಹೊಲಗಳನ್ನು ಸ್ವತಂತ್ರಿನ ತಕ್ಕವರಿಗೂ, ಕೊಡುವೆನು;
ಯಾಕಂದರೆ, ಚಿಕ್ಕವನು ಮೊದಲುಗೊಂಡು ದೊಡ್ಡವನ ಪರ್ಯಂತರ,
ಅವರೆಲ್ಲರು ಲಾಭವನ್ನು ಅಪೇಕ್ಷಿಸುತ್ತಾರೆ;
ಪ್ರವಾದಿ ಮೊದಲುಗೊಂಡು ಯಾಜಕನ ಪರ್ಯಂತರ,
ಅವರೆಲ್ಲರು ಮೋಸ ಮಾಡುತ್ತಾರೆ.
೧೧ ಯಾಕಂದರೆ, ನನ್ನ ಜನರ ಮಗಳ ಘಾಯವನ್ನು ಸುಲಭವಾಗಿ ಸ್ವಸ್ಥ ಮಾಡಿ,
ಸಮಾಧಾನವಿಲ್ಲದಿರುವಾಗ,
ಸಮಾಧಾನ, ಸಮಾಧಾನ, ಎಂದನ್ನುತ್ತಾರೆ.
೧೨ ಅಸಹ್ಯವನ್ನು ಮಾಡಿದ ಮೇಲೆ ನಾಚಿಕೆ ಪಟ್ಟರೋ!
ಇಲ್ಲ, ಸ್ವಲ್ಪವಾದರು ನಾಚಿಕೆ ಪಡಲಿಲ್ಲ;
ಲಜ್ಜೆಯನ್ನು ಅರಿಯರು.
ಆದದರಿಂದ ಬೀಳುವವರೊಳಗೆ ಬೀಳುವರು;
ಅವರು ವಿಚಾರಿಸಲ್ಪಡುವ ಕಾಲದಲ್ಲಿ ಎಡವುವರು,
ಎಂದು ಕರ್ತನು ಹೇಳುತ್ತಾನೆ.
೧೩ ಅವರನ್ನು ಶುದ್ಧವಾಗಿ ಸಂಹರಿಸುವೆನೆಂದು ಕರ್ತನು ಅನ್ನುತ್ತಾನೆ;
ದ್ರಾಕ್ಷೆ ಗಿಡದಲ್ಲಿ ದ್ರಾಕ್ಷೆ ಹಣ್ಣುಗಳು ಇರುವದಿಲ್ಲ;
ಅಂಜೂರ ಮರದಲ್ಲಿ ಅಂಜೂರ ಹಣ್ಣುಗಳು ಇರುವದಿಲ್ಲ;
ಎಲೆಯೇ ಬಾಡುವದು.
ನಾನು ಅವರಿಗೆ ಕೊಟ್ಟದ್ದು ಅವರನ್ನು ಬಿಟ್ಟು ಹೋಗುವದು.
೧೪ ನಾವು ಯಾಕೆ ಸುಮ್ಮನೆ ಕೂತು ಕೊಳ್ಳುತ್ತೇವೆ!
ಕೂಡಿ ಕೊಳ್ಳಿರಿ! ಕೋಟೆಯುಳ್ಳ ಪಟ್ಟಣಗಳಲ್ಲಿ ಪ್ರವೇಶಿಸೋಣ!
ಅಲ್ಲಿ ಮೌನವಾಗಿರೋಣ!
ಯಾಕಂದರೆ, ನಾವು ನಮ್ಮ ಕರ್ತನಿಗೆ ವಿರೋಧವಾಗಿ ಪಾಪ ಮಾಡಿದ ಕಾರಣ,
ನಮ್ಮ ದೇವರಾದ ಕರ್ತನು ನಮ್ಮನ್ನು ಮೌನವಾಗ ಮಾಡಿ,
ನಮಗೆ ವಿಷದ ನೀರನ್ನು ಕುಡಿಯ ಕೊಟ್ಟಿದ್ದಾನೆ.
೧೫ ಸಮಾಧಾನಕ್ಕೆ ಕಾದು ಕೊಂಡೆವು, ಆದರೆ ಒಳ್ಳೇದೇನು ಬರಲಿಲ್ಲ;
ಗುಣ ಕಾಲಕ್ಕೆ ಕಾದಿದೆವು, ಆದರೆ ಇಗೋ, ಕಷ್ಟ!
೧೬ ಅವನ ಕುದುರೆಗಳ ಶ್ವಾಸವು ದಾನಿನಿಂದ ಕೇಳಿಸಿತು,
ಅವನ ಬಲವಾದವುಗಳ ಹೂಂಕಾರದಿಂದ ದೇಶವೆಲ್ಲಾ ನಡುಗುತ್ತದೆ;
ಯಾಕಂದರೆ, ಬಂದರು;
ಮತ್ತು ದೇಶವನ್ನೂ, ಅದರ ಪರಿಪೂರ್ಣತೆಯನ್ನೂ,
ಪಟ್ಟಣವನ್ನೂ, ಅದರ ನಿವಾಸಿಗಳನ್ನೂ, ತಿಂದು ಬಿಟ್ಟಿದ್ದಾರೆ.
೧೭ ಯಾಕಂದರೆ, ಇಗೋ, ನಾನು ನಿಮ್ಮಲ್ಲಿ ಸರ್ಪಗಳನ್ನು,
ಮಂತ್ರಿಸ ಕೂಡದ ನಾಗರಗಳನ್ನೂ, ಕಳುಹಿಸುತ್ತೇನೆ;
ನಿಮ್ಮನ್ನು ಕಚ್ಚುವವೆಂದು ಕರ್ತನು ಅನ್ನುತ್ತಾನೆ.

೧೮ ಚಿಂತೆಯ ನಿಮಿತ್ತ ನನ್ನನ್ನು ಸಮಾಧಾನಿಸಿ ಕೊಳ್ಳಲು,
ನನ್ನ ಹೃದಯವು ನನ್ನಲ್ಲಿ ಕುಂದಿ ಹೋಗುತ್ತದೆ.
೧೯ ಇಗೋ, ದೂರ ದೇಶದಿಂದ,
ನನ್ನ ಜನರ ಮಗಳು ಕೂಗುವ ಶಬ್ದವು! ಏನಂದರೆ—
ಕರ್ತನು ಚಿಯೋನಿನಲ್ಲಿ ಇಲ್ಲವೋ!
ಅವಳ ಅರಸನು ಅವಳಲ್ಲಿ ಇಲ್ಲವೋ!

ಅವರು ತಮ್ಮ ವಿಗ್ರಹಗಳಿಂದಲೂ, ಅನ್ಯರ ಮಾಯಗಳಿಂದಲೂ,
ನನಗೆ ಕರಕರೆ ಎಬ್ಬಿಸಿದ್ದು ಯಾಕೆ!
೨೦ ಸುಗ್ಗಿ ಹೋಯಿತು, ಬೇಸಿಗೆ ಕಾಲ ತೀರಿತು;
ಆದರೆ ನಾವು ರಕ್ಷಿಸಲ್ಪಡಲಿಲ್ಲ.

೨೧ ನನ್ನ ಜನರ ಮಗಳ ಘಾಯದಿಂದ ನನಗೆ ಘಾಯವಾ
ಯಿತು;
ಕಪ್ಪಾದೆನು; ಗಾಬರಿ ನನ್ನನ್ನು ಹಿಡಿಯಿತು.
೨೨ ಗಿಲ್ಯಾದಿನಲ್ಲಿ ತೈಲವಿಲ್ಲವೋ!
ಅಲ್ಲಿ ವೈದ್ಯನಿಲ್ಲವೋ!
ಹಾಗಾದರೆ ನನ್ನ ಜನರ ಮಗಳಿಗೆ ಯಾಕೆ ಸ್ವಸ್ಥವಾಗಲಿಲ್ಲ!

## ೯. ಸಂಧಿ.

೧ ಅಯ್ಯ, ನನ್ನ ತಲೆ ನೀರಾಗಿಯೂ,
ನನ್ನ ಕಣ್ಣುಗಳು ಕಣ್ಣೀರಿನ ಬುಗ್ಗೆಯಾಗಿಯೂ, ಇದ್ದರೆ,
ಬಳ್ಳೇದು!
ಆಗ ನನ್ನ ಜನರ ಮಗಳ ಹತವಾದವರ ನಿಮಿತ್ತ,
ರಾತ್ರಿ ಹಗಲು ಅಳುವೆನು.
೨ ಅಯ್ಯ, ಅರಣ್ಯದಲ್ಲಿ ನನಗೆ ಪ್ರಯಾಣಸ್ಥರ ಛತ್ರವು ಇದ್ದರೆ,
ಬಳ್ಳೇದು!
ಆಗ ನನ್ನ ಜನರನ್ನು ಬಿಟ್ಟು,
ಅವರಿಗೆ ದೂರವಾಗಿ ಹೋಗುವೆನು.
ಯಾಕಂದರೆ, ಅವರೆಲ್ಲರು ವ್ಯಭಿಚಾರಿಗಳೇ,
ವಂಚಕರ ಕೂಟವೇ.
೩ ತಮ್ಮ ನಾಲಿಗೆಗಳನ್ನು ಬಿಲ್ಲಿನಂತೆ ಮೋಸದಿಂದ ಬೊಗ್ಗಿಸು
ತ್ತಾರೆ,
ಅದರೆ ದೇಶದಲ್ಲಿ ಸತ್ಯಕ್ಕಾಗಿ ಬಲಿಷ್ಠರಾಗುವದಿಲ್ಲ;
ಯಾಕಂದರೆ, ಕೇಡಿನಿಂದ ಕೇಡಿಗೆ ಹೋಗುತ್ತಾರೆ;
ನನ್ನನ್ನು ಅರಿಯದೆ ಇದ್ದಾರೆಂದು, ಕರ್ತನು ಅನ್ನುತ್ತಾನೆ.
೪ ನಿಮ್ಮ ನಿಮ್ಮ ನೆರೆಯವರಿಗೆ ಎಚ್ಚರಿಕೆಯಾಗಿರಿ,
ಯಾವ ಸಹೋದರನಲ್ಲಾದರೂ ನಂಬಿಕೆ ಇಡ ಬೇಡಿರಿ;
ಯಾಕಂದರೆ, ಸಹೋದರರೆಲ್ಲರೂ ಹ್ಯಾಗಾದರೂ ಹಿಮ್ಮಡಿಯ
ನ್ನು ಬೊಡಿಯುವರು,
ನೆರೆಯವರೆಲ್ಲರು ಚಾಡಿಯಿಂದ ತಿರುಗಾಡುವರು,
೫ ತಮ್ಮ ತಮ್ಮ ನೆರೆಯವರಿಗೆ ವಂಚನೆ ಮಾಡಿ,
ಸತ್ಯವನ್ನು ಮಾತಾಡರು;
ಅಬದ್ಧವಾಡುವದಕ್ಕೆ ತಮ್ಮ ನಾಲಿಗೆಗೆ ಬೋಧಿಸಿದ್ದಾರೆ,
ಅಕ್ರಮ ಮಾಡಿ, ಆಯಾಸ ಪಡುತ್ತಾರೆ.
೬ ನಿನ್ನ ನಿವಾಸವು ಕಪಟದ ಮಧ್ಯದಲ್ಲಿ ಅದೆ;
ಕಪಟದಿಂದಲೇ ನನ್ನನ್ನು ತಿಳಿಯಲೊಲ್ಲರೆಂದು ಕರ್ತನು ಅನ್ನು
ತ್ತಾನೆ.
೭ ಆದದರಿಂದ ಸೈನ್ಯಗಳ ಕರ್ತನು ಹೇಳುವದೇನಂದರೆ—
ಇಗೋ, ನಾನು ಅವರನ್ನು ಕರಗಿಸಿ ಶೋಧಿಸುತ್ತೇನೆ;
ಯಾಕಂದರೆ, ನನ್ನ ಜನರ ಮಗಳಿಗೋಸ್ಕರ ನಾನು ಹ್ಯಾಗೆ
ಮಾಡಲಿ!
೮ ಅವರ ನಾಲಿಗೆ ಕೊಲ್ಲುವ ಬಾಣವಾಗಿದೆ,
ಕಪಟವನ್ನಾಡುತ್ತದೆ,
ಬಾಯಿಂದ ನೆರೆಯವರ ಸಂಗಡ ಸಮಾಧಾನ ಮಾತಾಡಿ,
ಅಂತರಂಗದಲ್ಲಿ ಅವರಿಗೆ ಹೊಂಚಿ ಕೊಳ್ಳುತ್ತಾರೆ.
೯ ಕರ್ತನು ಅನ್ನುತ್ತಾನೆ—ಇವುಗಳ ನಿಮಿತ್ತ ನಾನು ಅವರನ್ನು
ವಿಚಾರಿಸುವದಿಲ್ಲವೋ?
ಇಂಥಾ ಜನಾಂಗಕ್ಕೆ ನನ್ನ ಪ್ರಾಣವು ಮುಯ್ಯಿಗೆ ಮುಯ್ಯಿ
ತೀರಿಸುವದಿಲ್ಲವೋ?

೧೦ ಬೆಟ್ಟಗಳಿಗೋಸ್ಕರ ನಾನು ಅಳುವಿಕೆಯನ್ನೂ ದುಃಖವನ್ನೂ,
ಅರಣ್ಯದ ಮೇಯಿನ ಸ್ಥಳಗಳಿಗೋಸ್ಕರವೂ ಗೋಳಾಟವನ್ನೂ,
ಎತ್ತುವೆನು;
ಯಾಕಂದರೆ, ದಾಟುವವನಿಲ್ಲದ ಹಾಗೆ ಹಾಳಾಗಿವೆ.
ದನಗಳ ಕಬ್ದವು ಕೇಳಲ್ಪಡುವದಿಲ್ಲ;
ಆಕಾಶದ ಪಕ್ಷಿಗಳೂ ಮೃಗಗಳೂ ಸಹ ಓಡಿ ಹೋಗಿವೆ.
೧೧ ಇದಲ್ಲದೆ ಯೆರೂಸಲೇಮನ್ನು ದಿಬ್ಬೆಗಳಾಗಿಯೂ, ನರಿಗಳ
ಸ್ಥಾನವಾಗಿಯೂ, ಮಾಡುತ್ತೇನೆ;
ಯೆಹೂದದ ಪಟ್ಟಣಗಳನ್ನು ನಿವಾಸಿ ಇಲ್ಲದೆ ಪಾಳು ಮಾಡುತ್ತೇನೆ.

೧೨ ಇದನ್ನು ಗ್ರಹಿಸುವ ಜ್ಞಾನಿಯಾದ ಮನುಷ್ಯನು ಯಾರು!
ಇದನ್ನು ತಿಳಿಸುವ ಹಾಗೆ,
ಕರ್ತನ ಬಾಯಿ ಯಾರ ಸಂಗಡ ಮಾತಾಡಿತು!
ದೇಶವು ಯಾತರ ನಿಮಿತ್ತ ನಾಶವಾಗಿ,
ದಾಟುವವನಿಲ್ಲದೆ ಅರಣ್ಯದ ಹಾಗೆ ಹಾಳಾಯಿತು!
೧೩ ಕರ್ತನು ಹೇಳುವದೇನಂದರೆ—
ನಾನು ಅವರ ಮುಂದೆ ಇಟ್ಟ ನನ್ನ ನ್ಯಾಯ ಪ್ರಮಾಣವನ್ನು
ಅವರು ಬಿಟ್ಟು,
ನನ್ನ ಶಬ್ದಕ್ಕೆ ಕಿವಿಗೊಡದೆ, ಅದರಲ್ಲಿ ನಡಿಯದೆ,
೧೪ ತಮ್ಮ ಹೃದಯದ ಕಾಠಿಣ್ಯದ ಪ್ರಕಾರವಾಗಿಯೂ,
ತಮ್ಮ ತಂದೆಗಳು ಅವರಿಗೆ ಬೋಧಿಸಿದ ಬಾಳುಗಳ ಹಿಂದೆಯೂ,
ನಡದದರಿಂದಲೇ.
೧೫ ಈ ಕಾರಣದಿಂದ ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು
ಹೇಳುವದೇನಂದರೆ—
ಇಗೋ, ನಾನು ಅವರಿಗೆ—ಹೌದು ಈ ಜನರಿಗೆ—ಮಾಚಿಪತ್ರೆ
ಯನ್ನು ಉಣ್ಣಾ ಕೊಡುತ್ತೇನೆ.
ಮತ್ತು ವಿಷದ ನೀರನ್ನು ಅವರಿಗೆ ಕುಡಿಯ ಕೊಡುತ್ತೇನೆ.
೧೬ ಅವರಿಗೂ, ಅವರ ತಂದೆಗಳಿಗೂ, ತಿಳಿಯದ ಜನಾಂಗಗಳಲ್ಲಿ ಅ
ವರನ್ನು ಚದರಿಸುತ್ತೇನೆ;
ಮತ್ತು ಅವರನ್ನು ಮುಗಿಸಿ ಬಿಡುವ ಪರ್ಯಂತರ,
ಕತ್ತಿಯನ್ನು ಅವರ ಹಿಂದೆ ಕಳುಹಿಸುತ್ತೇನೆ.

೧೭ ಸೈನ್ಯಗಳ ಕರ್ತನು ಹೇಳುವದೇನಂದರೆ—ಆಲೋಚನೆ ಮಾ
ಡಿರಿ;
ದುಃಖಿಸುವ ಸ್ತ್ರೀಯರನ್ನು ಕರಿಯಿರಿ, ಅವರು ಬರಲಿ;
ಜಾಣೆಯರನ್ನು ಕಳೇ ಕಳುಹಿಸಿರಿ. ಅವರು ಬರಲಿ.



೧೮ ಅವರು ತ್ವರೆ ಪಟ್ಟು, ನಮಗೋಸ್ಕರ ಗೋಳಾಟವನ್ನು ಎತ್ತಲಿ;
ನಮ್ಮ ಕಣ್ಣುಗಳು ಕಣ್ಣೀರು ಸುರಿಸಲಿ;
ನಮ್ಮ ಕೆಪ್ಪೆಗಳು ನೀರು ಎರೆಯಲಿ.
೧೯ ಯಾಕಂದರೆ—ನಾವು ಹ್ಯಾಗೆ ಸೂರೆಯಾದೆವು!
ನಾವು ದೇಶವನ್ನು ಬಿಟ್ಟದರಿಂದಲೂ,
ನಮ್ಮ ನಿವಾಸಗಳು ನಮ್ಮನ್ನು ಹೊರಗೆ ಹಾಕಿದರಿಂದಲೂ,
ಬಹಳವಾಗಿ ನಾಚಿಕೆ ಪಡುತ್ತೇವೆ, ಎಂಬ ಗೋಳಾಟದ ಶಬ್ದವು
ಚಿಯೋನಿನಿಂದ ಕೇಳ ಬಂತು.
೨೦ ಓ ಸ್ತ್ರಿಯರೇ! ಕರ್ತನ ವಾಕ್ಯವನ್ನು ಕೇಳಿರಿ,
ನಿಮ್ಮ ಕಿವಿ ಅವನ ಬಾಯಿಯ ವಾಕ್ಯವನ್ನು ತಕ್ಕೊಳ್ಳಲಿ;
ನಿಮ್ಮ ಕುಮಾರ್ತೆಗಳಿಗೆ ಗೋಳಾಟವನ್ನೂ,
ನಿಮ್ಮ ನಿಮ್ಮ ನೆರೆಯವರಿಗೆ ದುಃಖಾಲಾಪವನ್ನೂ, ಕಲಿಸಿರಿ.
೨೧ ಯಾಕಂದರೆ, ಮರಣವು ನಮ್ಮ ಕಿಟಕಿಗಳೊಳಗೆ ಏರಿ ಬಂತು,
ನಮ್ಮ ಅರಮನೆಗಳಲ್ಲಿ ಕೇರಿತು;
ಬೀದಿಗಳಲ್ಲಿ ಮಕ್ಕಳನ್ನೂ, ಚೌಕಗಳಲ್ಲಿ ಯೌವ್ವನಸ್ಥರನ್ನೂ,
ಕಡಿದು ಹಾಕುತ್ತದೆ.
೨೨ ಕರ್ತನು ಹೀಗೆ ಅನ್ನುತ್ತಾನೆ—ಮಾತಾಡು, ಏನಂದರೆ,
ಹೌದು, ಮನುಷ್ಯರ ಹೆಣಗಳು ಗೊಬ್ಬರದಂತೆ ಹೊಲದಲ್ಲಿ
ಬೀಳುವವು;
ಧಾನ್ಯ ಕೊಯ್ಯುವವನು ಉಳಿಸಿದ ಕೈ ಹಿಡಿಯಂತೆ ಕೂಡಿಸು
ವವನಿಲ್ಲದೆ ಬೀಳುವವು.

೨೩ ಕರ್ತನು ಹೇಳುವದೇನಂದರೆ—
ಜ್ಞಾನಿಯು ತನ್ನ ಜ್ಞಾನದಲ್ಲಿ ಹೆಚ್ಚಳ ಪಡದಿರಲಿ;
ಮತ್ತು ಬಲಿಷ್ಠನು ತನ್ನ ಬಲದಲ್ಲಿ ಹೆಚ್ಚಳ ಪಡದಿರಲಿ;
ಐಶ್ವರ್ಯವಂತನು ತನ್ನ ಐಶ್ವರ್ಯದಲ್ಲಿ ಹೆಚ್ಚಳ ಪಡದಿರಲಿ.
೨೪ ಆದರೆ ಹೆಚ್ಚಳ ಪಡುವವನು ಇದರಲ್ಲಿ ಹೆಚ್ಚಳ ಪಡಲಿ, ಯಾವದ
ರಲ್ಲಂದರೆ,
ಕರ್ತನಾದ ನಾನು, ಭೂಮಿಯಲ್ಲಿ ಕೃಪೆಯನ್ನೂ ನ್ಯಾಯವ
ನ್ನೂ ನೀತಿಯನ್ನೂ ನಡಿಸುವವನಾಗಿದ್ದೇನೆಂದು,
ನನ್ನನ್ನು ಗ್ರಹಿಸಿ ತಿಳಿಕೊಳ್ಳುವದರಲ್ಲಿಯೇ;
ಯಾಕಂದರೆ, ಇವುಗಳಲ್ಲಿ ಸಂತೋಷ ಪಡುತ್ತೇನೆಂದು ಕರ್ತನು
ಅನ್ನುತ್ತಾನೆ.

೨೫ ಕರ್ತನು ಅನ್ನುವದೇನಂದರೆ—
ನಾನು ಪರಿಛೇದನೆಯಿಲ್ಲದವರ ಸಂಗಡ, ಪರಿಛೇದನೆಯುಳ್ಳವರೆ
ಲ್ಲರನ್ನೂ,
ವಿಚಾರಿಸುವ ದಿವಸಗಳು ಬರುತ್ತವೆ.
೨೬ ಐಗುಪ್ತವನ್ನೂ, ಯೆಹೂದವನ್ನೂ, ಏದೋಮನ್ನೂ,
ಅಮ್ಮೋನನ ಮಕ್ಕಳನ್ನೂ, ಮೋವಾಬನ್ನೂ,
ಅರಣ್ಯಾ ನಿವಾಸಿಗಳಾಗಿರುವ ಗಡ್ಡದ ಮೂಲೆ ಕ್ಷೌರ ಮಾಡಿಸು
ವವರನ್ನೂ, ವಿಚಾರಿಸುತ್ತೇನೆ;
ಯಾಕಂದರೆ, ಜನಾಂಗಗಳವರು ಪರಿಛೇದನೆಯಿಲ್ಲದವರೇ;
ಮತ್ತು ಇಸ್ರಯೇಲಿನ ಮನೆಯವರೆಲ್ಲರು ಹೃದಯದಲ್ಲಿ ಪರಿಛೇ
ದನೆಯಿಲ್ಲದವರಾಗಿದ್ದಾರೆ.

## ೧೦. ಸಂಧಿ.

೧ ಇಸ್ರಯೇಲಿನ ಮನೆಯವರೇ! ಕರ್ತನು ನಿಮಗೆ ಹೇಳುವ
ವಾಕ್ಯವನ್ನು ಕೇಳಿರಿ;
೨ ಕರ್ತನು ಹೇಳುವದೇನಂದರೆ—
ಜನಾಂಗಗಳ ಮಾರ್ಗವನ್ನು ಕಲಿತುಕೊಳ್ಳ ಬೇಡಿರಿ,
ಆಕಾಶದ ಗುರುತುಗಳಿಗೆ ಹೆದರ ಬೇಡಿರಿ;
ಯಾಕಂದರೆ, ಜನಾಂಗಗಳು ಅವುಗಳಿಗೆ ಹೆದರುತ್ತಾರೆ.
೩ ಯಾಕಂದರೆ, ಜನಾಂಗಗಳ ನೇಮಕಗಳು ಮಾಯವಾಗಿವೆ;
ಹ್ಯಾಗಂದರೆ, ಅಡವಿಯಲ್ಲಿ ಮರವನ್ನು ಕೊಯ್ಯುತ್ತಾರೆ;
ಕೊಡ್ಲಿಯಿಂದ ಬಡಿಗೆಯವನ ಕೈ ಕೆಲಸವೇ.
೪ ಬೆಳ್ಳಿಯಿಂದಲೂ, ಭಂಗಾರದಿಂದಲೂ, ಅದನ್ನು ಅಲಂಕರಿಸು
ತ್ತಾರೆ;
ಮೊಳೆಗಳಿಂದಲೂ ಸುತ್ತಿಗೆಗಳಿಂದಲೂ ಚಲಿಸದ ಹಾಗೆ ಅದನ್ನು
ಬಿಗಿಸುತ್ತಾರೆ.
೫ ತರಣಿ ಕೆಲಸದ ಸ್ತಂಭದಂತೆ ಇರುತ್ತವೆ,
ಆದರೆ ಮಾತಾಡುವದಿಲ್ಲ;
ಅವು ಹೊರಲ್ಪಡ ಬೇಕು,
ಯಾಕಂದರೆ ಸಂಚಾರ ಮಾಡಲಾರವು.
ಅವುಗಳಿಗೆ ಭಯ ಪಡ ಬೇಡ,
ಯಾಕಂದರೆ ಕೆಟ್ಟದನ್ನು ಮಾಡಲಾರವು,
ಒಳ್ಳೇದು ಸಹ ಅವುಗಳಿಂದ ಆಗದು.

೬ ಯೆಹೋವನೇ! ನಿನ್ನ ಹಾಗೆ ಯಾರು ಇಲ್ಲ;
ನೀನು ದೊಡ್ಡವನು; ನಿನ್ನ ಹೆಸರು ಪರಾಕ್ರಮದಲ್ಲಿ ದೊಡ್ಡದು.
೭ ಜನಾಂಗಗಳ ಅರಸನೇ! ನಿನಗೆ ಭಯ ಪಡದವನ್ಯಾರು!
ಯಾಕಂದರೆ, ನಿನಗೆ ಅದು ತಕ್ಕದು;
ಯಾಕಂದರೆ, ಜನಾಂಗಗಳ ಎಲ್ಲಾ ಜ್ಞಾನಿಗಳಲ್ಲಿಯೂ,
ಅವುಗಳ ಎಲ್ಲಾ ರಾಜ್ಯಗಳಲ್ಲಿಯೂ, ನಿನ್ನ ಹಾಗೆ ಯಾರು
ಇಲ್ಲ.
೮ ಆದರೆ ಅವರು ಏಕವಾಗಿ ಕೆಡ್ಡರೂ, ಮೂರ್ಖರೂ, ಆಗಿದ್ದಾರೆ;
ಮರವು ಮಾಯೆಗಳ ಬೋಧನೆ ಮಾಡುವಂಥಾದ್ದೇ.
೯ ಬೆಳ್ಳಿಯ ತಗಡನ್ನು ತಾರ್ಷಿಷಿನಿಂದಲೂ,
ಭಂಗಾರವನ್ನು ಉಫಾಜಿನಿಂದಲೂ, ತರುತ್ತಾರೆ;
ಅದು ಕಂಚಾಳನಿಂದಲೂ ಎರಕ ಹೊಯ್ಯುವವನ ಕೈಯಿಂದ
ಲೂ ಉಂಟಾದ ಕೆಲಸವು;
ನೀಲಿಯೂ ರಕ್ತ ವರ್ಣವೂ ಅವುಗಳ ವಸ್ತ್ರವಾಗಿದೆ;
ಅವುಗಳೆಲ್ಲಾ ಬುದ್ಧಿವಂತರ ಕೆಲಸವೇ.
೧೦ ಆದರೆ ಯೆಹೋವ ನಿಜವಾದ ದೇವರಾಗಿದ್ದಾನೆ,
ಜೀವವುಳ್ಳ ದೇವರೂ ನಿತ್ಯವಾದ ಅರಸನೂ ಅವನೇ;
ಅವನ ಕೋಪದಿಂದ ಭೂಮಿ ನಡುಗುವದು;
ಅವನ ಉಗ್ರವನ್ನು ಜನಾಂಗಗಳು ತಾಳಲಾರವು.

೧೧ ನೀವು ಅವರಿಗೆ ಹೇಳ ತಕ್ಕದ್ದೇನಂದರೆ—
ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡದ ದೇವರು
ಗಳು,
ಭೂಮಿಯ ಮೇಲಿನಿಂದಲೂ, ಈ ಆಕಾಶದ ಕೆಳಗಿನಿಂದಲೂ,
ನಾಶವಾಗುವವು.

೧೨ ಅವನು ಭೂಮಿಯನ್ನು ತನ್ನ ಶಕ್ತಿಯಿಂದ ಉಂಟು ಮಾಡಿದನು,
ಭೂಲೋಕವನ್ನು ತನ್ನ ಜ್ಞಾನದಿಂದ ಸ್ಥಾಪಿಸಿದನು,
ಆಕಾಶವನ್ನು ತನ್ನ ವಿವೇಕದಿಂದ ಹಾಸಿದನು.

೧೩ ಅವನು ಶಬ್ದ ಕೊಡುವಾಗಲೇ ಆಕಾಶದಲ್ಲಿ ನೀರಿನ ಘೋಷ ಉಂಟು;
ಅವನು ಭೂಮಿಯ ಅಂತ್ಯದಿಂದ ಹಬೆಯನ್ನು ಏಳ್ಗ ಮಾಡುತ್ತಾನೆ;
ಮಳೆಯ ಸಂಗಡ ಮಿಂಚನ್ನು ಉಂಟು ಮಾಡುತ್ತಾನೆ;
ತನ್ನ ಭಂಡಾರಗಳೊಳಗಿಂದ ಘಾಳಿಯನ್ನು ಹೊರಗೆ ತರುತ್ತಾನೆ.

೧೪ ಮನುಷ್ಯರೆಲ್ಲರು ಇದನ್ನು ತಿಳಿಯದ ಹಾಗೆ ಹೆಡ್ಡರಾಗಿದ್ದಾರೆ;
ಎರಕ ಹೊಯ್ಯುವವರೆಲ್ಲಾ ವಿಗ್ರಹಕ್ಕೋಸ್ಕರ ನಾಚಿಕೆ ಪಡುತ್ತಾರೆ;
ಯಾಕಂದರೆ, ಅವರು ಎರಕ ಹೊಯಿದದ್ದು ಮೋಸವೇ,
ಅವುಗಳಲ್ಲಿ ಉಸುರು ಇಲ್ಲ.

೧೫ ಅವು ಮಾಯವೇ, ತಪ್ಪಿನ ಕೆಲಸವೇ;
ಅವು ವಿಚಾರಿಸಲ್ಪಡುವ ಕಾಲದಲ್ಲಿ ನಾಶವಾಗುವವು.

೧೬ ಯಾಕೋಬನ ಭಾಗವು ಇವುಗಳ ಹಾಗಲ್ಲ;
ಅವನು ಸಮಸ್ತವನ್ನು ರೂಪಿಸಿದವನೇ;
ಇಸ್ರಯೇಲು ಅವನ ಸ್ವಾಸ್ತ್ಯದ ಕೋಲು;
ಸೈನ್ಯಗಳ ಯೆಹೋವ, ಅವನ ಹೆಸರಾಗಿದೆ.

೧೭ ಕೋಟೆಯಲ್ಲಿ ವಾಸವಾಗಿರುವವಳೇ!
ದೇಶದೊಳಗಿಂದ ನಿನ್ನ ಸರುಕುಗಳನ್ನು ಕೂಡಿಸು.

೧೮ ಯಾಕಂದರೆ, ಕರ್ತನು ಹೀಗೆ ಹೇಳುತ್ತಾನೆ—
ಇಗೋ, ನಾನು ಈ ಒಂದೇ ಸಾರಿ ದೇಶದ ನಿವಾಸಿಗಳನ್ನು ಕವಣೆಯಿಂದ ಎಸೆದು ಬಿಡುತ್ತೇನೆ;
ಅವರಿಗೆ ತಗಲುವ ಹಾಗೆ ಅವರನ್ನು ಇಕ್ಕಟ್ಟು ಪಡಿಸುತ್ತೇನೆ.

೧೯ ನನ್ನ ಘಾಯದ ನಿಮಿತ್ತ ನನಗೆ ಅಯ್ಯೋ!
ನನ್ನ ಬೆಬ್ಬೆ ಕಠಿಣವಾಗಿದೆ;
ಆದರೆ ನಾನು—ನಿಶ್ಚಯವಾಗಿ ಇದು ಆಪತ್ತಾಗಿದೆ;
ಹ್ಯಾಗಾದರೂ ತಾಳುತ್ತೇನೆ, ಅಂದೆನು.

೨೦ ನನ್ನ ಗುಡಾರವು ಸೂರೆಯಾಯಿತು;
ನನ್ನ ಹಗ್ಗಗಳೆಲ್ಲಾ ಹರಿದವೆ;
ನನ್ನ ಮಕ್ಕಳು ನನ್ನನ್ನು ಬಿಟ್ಟು ಹೋಗಿ, ಇಲ್ಲದೆ ಇದ್ದಾರೆ;
ಇನ್ನು ಮೇಲೆ ನನ್ನ ಗುಡಾರವನ್ನು ಹಾಕುವದಕ್ಕೂ,
ನನ್ನ ಪರದೆಗಳನ್ನು ನಿಲ್ಲಿಸುವದಕ್ಕೂ, ಒಬ್ಬನೂ ಇಲ್ಲ.

೨೧ ಯಾಕಂದರೆ, ಕುರುಬರು ಹೆಡ್ಡರಾದರು;
ಅವರು ಕರ್ತನನ್ನು ಹುಡುಕಲಿಲ್ಲ;
ಆದದರಿಂದ ಅವರು ಸಫಲವಾಗುವದಿಲ್ಲ;
ಅವರ ಮಂದೆಗಳೆಲ್ಲಾ ಚದರಿಸಲ್ಪಡುವವು.

೨೨ ಇಗೋ! ಯೆಹೂದ ಪಟ್ಟಣಗಳನ್ನು ಹಾಳು ಮಾಡುವದಕ್ಕೂ,
ನರಿಗಳ ನಿವಾಸವಾಗ ಮಾಡುವದಕ್ಕೂ,
ಸುದ್ದಿಯ ಶಬ್ದವೂ, ಮಹಾ ಘೋಷವೂ, ಉತ್ತರದಿಂದ ಬರುತ್ತದೆ.

೨೩ ಕರ್ತನೇ! ಮನುಷ್ಯನ ಮಾರ್ಗವು ತನ್ನದಲ್ಲವೆಂದೂ,
ತನ್ನ ಹೆಜ್ಜೆ ನೆಟ್ಟಗೆ ಮಾಡುವದು ನಡೆಯುವ ಮನುಷ್ಯನದಲ್ಲವೆಂದೂ, ಬಲ್ಲೆನು.

೨೪ ಕರ್ತನೇ! ನನ್ನನ್ನು ಶಿಕ್ಷಿಸು, ಆದರೆ ಮಿತಿಯಿಂದಲೇ;
ನನ್ನನ್ನು ಅಲ್ಪ ಮಾಡದ ಹಾಗೆ, ನಿನ್ನ ಕೋಪದಿಂದ ಬೇಡ;

೨೫ ನಿನ್ನನ್ನು ತಿಳಿಯದ ಜನಾಂಗಗಳ ಮೇಲೆಯೂ,
ನಿನ್ನ ಹೆಸರನ್ನು ಕರೆಯದ ಗೋತ್ರಗಳ ಮೇಲೆಯೂ,
ನಿನ್ನ ಉರಿಯನ್ನು ಹೊಯಿದು ಬಿಡು;
ಯಾಕಂದರೆ, ಅವರು ಯಾಕೋಬನನ್ನು ತಿಂದು ಬಿಟ್ಟಿದ್ದಾರೆ;
ಅವನನ್ನು ತಿಂದು ಬಿಟ್ಟು, ಮುಗಿಸಿ ಬಿಟ್ಟು,
ಅವನ ನಿವಾಸವನ್ನು ಹಾಳು ಮಾಡಿದ್ದಾರೆ.

## ೧೧. ಸಂಧಿ.

೧ ಯೆರೆಮಿಾಯನಿಗೆ ಕರ್ತನಿಂದ ಉಂಟಾದ ವಾಕ್ಯವೇನಂದರೆ—
ಈ ಒಡಂಬಡಿಕೆಯ ಮಾತುಗಳನ್ನು ಕೇಳಿರಿ;

೨ ಯೆಹೂದದ ಮನುಷ್ಯರ ಸಂಗಡಲೂ,
ಯೆರೂಸಲೇಮಿನ ನಿವಾಸಿಗಳ ಸಂಗಡಲೂ, ಮಾತಾಡಿ,
ಅವರಿಗೆ ಹೇಳ್ಳ ಬೇಕಾದದ್ದೇನಂದರೆ—

3 ಇಸ್ರಯೇಲಿನ ದೇವರಾದ ಕರ್ತನು ಹೀಗೆ ಹೇಳುತ್ತಾನೆ—
ಈ ಒಡಂಬಡಿಕೆಯ ಮಾತುಗಳಿಗೆ ಕಿವಿ ಕೊಡದ ಮನುಷ್ಯನಿಗೆ ಶಾಪ!

೪ ಅವುಗಳನ್ನು ನಿಮ್ಮ ತಂದೆಗಳಿಗೆ,
ಅವರನ್ನು ಐಗುಪ್ತ ದೇಶದೊಳಗಿಂದಲೂ,
ಕಬ್ಬಿಣದ ಒಲೆಯೊಳಗಿಂದಲೂ,
ಹೊರಗೆ ಬರ ಮಾಡಿದ ದಿವಸದಲ್ಲಿ,
ಆಜ್ಞಾಪಿಸಿದೆನಲ್ಲ! ಹ್ಯಾಗಂದರೆ,
ಈ ದಿನ ಇರುವ ಹಾಗೆ,
ಹಾಲು ಜೇನು ಹರಿಯುವ ದೇಶವನ್ನು ಅವರಿಗೆ ಕೊಡುವದಕ್ಕೆ,

೫ ನಿಮ್ಮ ತಂದೆಗಳಿಗೆ ಆಣೆ ಇಟ್ಟು ಪ್ರಮಾಣವನ್ನು ಸ್ಥಾಪಿಸುವದಕ್ಕಾಗಿ,
ನಾನು ನಿಮಗೆ ಆಜ್ಞಾಪಿಸುವದೆಲ್ಲಾದರ ಪ್ರಕಾರ
ನನ್ನ ಶಬ್ದಕ್ಕೆ ಕಿವಿ ಗೊಟ್ಟು ಅವುಗಳನ್ನು ಮಾಡಿರಿ;
ಆಗ ನೀವು ನನಗೆ ಜನಾಂಗವಾಗುವಿರಿ;
ನಾನು ನಿಮಗೆ ದೇವರಾಗುವೆನು, ಅಂದೆನು.
ಆಗ ನಾನು ಉತ್ತರ ಕೊಟ್ಟು—
ಆಮೆನ್ ಕರ್ತನೇ, ಅಂದೆನು.

೬ ಆಗ ಕರ್ತನು ನನಗೆ ಹೇಳಿದ್ದೇನಂದರೆ—
ಈ ಮಾತುಗಳನ್ನೆಲ್ಲಾ ಯೆಹೂದದ ಪಟ್ಟಣಗಳಲ್ಲಿಯೂ,
ಯೆರೂಸಲೇಮಿನ ಬೀದಿಗಳಲ್ಲಿಯೂ, ಸಾರಿ ಹೇಳು,
ಹ್ಯಾಗಂದರೆ—ಈ ಒಡಂಬಡಿಕೆಯ ಮಾತುಗಳನ್ನು ಕೇಳಿ, ಅವುಗಳನ್ನು ಮಾಡಿರಿ.

೭ ಯಾಕಂದರೆ, ನಾನು ನಿಮ್ಮ ತಂದೆಗಳಿಗೆ,
ನನ್ನ ಮಾತನ್ನು ಕೇಳಿರೆಂದು,
ಬಹಳವಾಗಿ ಸಾಕ್ಷಿ ಕೊಟ್ಟೆನು;



ಅವರನ್ನು ಐಗುಪ್ತ ದೇಶದೊಳಗಿಂದ
ಮೇಲೆ ಬರ ಮಾಡಿದ ದಿವಸ ಮೊದಲ್ಗೊಂಡು, ಇಂದಿನ ವರೆಗೂ,
ಬೆಳಿಗ್ಗೆ ಎದ್ದು, ಸಾಕ್ಷಿ ಕೊಟ್ಟೆನು.

೮ ಆದರೆ ಅವರು ಕೇಳಲಿಲ್ಲ, ಕಿವಿ ಕೊಡಲಿಲ್ಲ;
ತಮ್ಮ ತಮ್ಮ ಕೆಟ್ಟ ಹೃದಯಗಳ ಕಾಠಿಣ್ಯದಲ್ಲಿ ನಡೆ ಕೊಂಡರು;
ಆದದರಿಂದ ಅವರು ಮಾಡ ಬೇಕೆಂದು ನಾನು ಆಜ್ಞಾಪಿಸಿದಂಥ,
ಅವರು ಮಾಡದಂಥ, ಈ ಒಡಂಬಡಿಕೆಯ ಮಾತುಗಳನ್ನೆಲ್ಲಾ
ಅವರ ಮೇಲೆ ಬರ ಮಾಡುವೆನು.

೯ ಇದಲ್ಲದೆ ಕರ್ತನು ನನಗೆ ಹೇಳಿದ್ದೇನಂದರೆ—
ಯೆಹೂದದ ಮನುಷ್ಯರಲ್ಲಿಯೂ,
ಯೆರೂಸಲೇಮಿನ ನಿವಾಸಿಗಳಲ್ಲಿಯೂ,
ಒಳಸಂಚು ಸಿಕ್ಕಿತು.

೧೦ ನನ್ನ ಮಾತುಗಳನ್ನು ಕೇಳಲೊಲ್ಲದ ತಮ್ಮ ತಂದೆಗಳ ಅಕ್ರಮಗಳಿಗೆ ತಿರುಗಿಕೊಂಡಿದ್ದಾರೆ;
ಬೇರೆ ದೇವರುಗಳನ್ನು ಸೇವಿಸುವದಕ್ಕೆ ಅವುಗಳ ಹಿಂದೆ ಹೋಗಿದ್ದಾರೆ;
ಇಸ್ರಯೇಲಿನ ಮನೆಯವರೂ, ಯೆಹೂದನ ಮನೆಯವರೂ,
ನಾನು ಅವರ ತಂದೆಗಳ ಸಂಗಡ ಮಾಡಿದ ಒಡಂಬಡಿಕೆಯನ್ನು ವಿಫಾರಿದ್ದಾರೆ.

೧೧ ಆದದರಿಂದ ಕರ್ತನು ಹೇಳುವದೇನಂದರೆ—
ಇಗೋ, ಅವರು ತಪ್ಪಿಸಿಕೊಳ್ಳ ಕೂಡದ ಕೇಡನ್ನು
ಅವರ ಮೇಲೆ ತರುವೆನು;
ಅವರು ನನಗೆ ಕೂಗಿದರೂ,
ನಾನು ಅವರನ್ನು ಕೇಳುವದಿಲ್ಲ.

೧೨ ಆಗ ಯೆಹೂದದ ಪಟ್ಟಣಗಳೂ,
ಯೆರೂಸಲೇಮಿನ ನಿವಾಸಿಗಳೂ, ಹೋಗಿ,
ತಾವು ಧೂಪವನ್ನರ್ಪಿಸುವ ದೇವರುಗಳಿಗೆ ಕೂಗುವರು;
ಆದರೆ ಇವು ಅವರ ಕೇಡಿನ ಕಾಲದಲ್ಲಿ
ಅವರನ್ನು ರಕ್ಷಿಸುವದೇ ಇಲ್ಲ.

೧೩ ಯಾಕಂದರೆ, ಯೆಹೂದವೇ! ನಿನ್ನ ಪಟ್ಟಣಗಳಷ್ಟು ನಿನ್ನ ದೇವರುಗಳು ಇದ್ದವು;
ಯೆರೂಸಲೇಮಿಗೆ ಎಷ್ಟು ಬೀದಿಗಳೋ,
ಅಷ್ಟು ಬಲಿಪೀಠಗಳನ್ನು ನಾಚಿಕೆಗೆ,
ಅಷ್ಟು ಬಲಿಪೀಠಗಳನ್ನು ಬಾಳನ ಪೂಜೆಗೆ, ಇಟ್ಟಿರಿ.

೧೪ ಆದದರಿಂದ ನೀನು ಈ ಜನರಿಗೋಸ್ಕರ ಪ್ರಾರ್ಥನೆ ಮಾಡ ಬೇಡ;
ಅವರಿಗೋಸ್ಕರ ಮೊರೆಯನ್ನೂ, ಪ್ರಾರ್ಥನೆಯನ್ನೂ ಎತ್ತ ಬೇಡ;
ಯಾಕಂದರೆ, ಅವರು, ತಮ್ಮ ಕೇಡಿನ ನಿಮಿತ್ತ
ನನ್ನನ್ನು ಕರೆಯಲು, ನಾನು ಕೇಳೆನು.

೧೫ ನನ್ನ ಪ್ರಿಯಳಿಗೆ ನನ್ನ ಮನೆಯಲ್ಲಿ ಏನು ಕೆಲಸ!
ಅವಳು ಬಹಳ ಮಂದಿಯ ಸಂಗಡ ಕುಯುಕ್ತಿಯನ್ನು ನಡಿಸಿದ್ದಾಳೆ;
ಪರಿಶುದ್ಧ ಮಾಂಸವು ನಿನ್ನನ್ನು ಬಿಟ್ಟು ಹೋಯಿತು;
ನೀನು ಕೆಟ್ಟತನ ಮಾಡುವಾಗ ಉಲ್ಲಾಸ ಪಡುತ್ತೀ.

೧೬ ಸೊಂಪಾದ ಒಲೇವಾದ, ಒಳ್ಳೇ ಹಣ್ಣುಳ್ಳ, ಹಸುರಾದ, ಇಪ್ಪೆಗಿಡವೆಂದು,
ಕರ್ತನು ನಿನಗೆ ಹೆಸರಿಟ್ಟನು;
ದೊಡ್ಡ ಗದ್ದಲದಿಂದ ಅದರ ಮೇಲೆ ಬೆಂಕಿ ಹತ್ತಿಸಿದ್ದಾನೆ,
ಅದರ ಕೊಂಬೆಗಳು ಕೆಟ್ಟು ಹೋಗಿವೆ.

೧೭ ಯಾಕಂದರೆ, ಇಸ್ರಯೇಲಿನ ಮನೆಯವರೂ,
ಯೆಹೂದನ ಮನೆಯವರೂ,
ನನಗೆ ಕರ್ಕಶ ಎಬ್ಬಿಸುವ ಹಾಗೆ, ಬಾಳನಿಗೆ ಧೂಪವರ್ಪಿಸಿ,
ತಮಗೆ ವಿರೋಧವಾಗಿ ಮಾಡಿಕೊಂಡ ಕೇಡಿನ ನಿಮಿತ್ತ,
ನಿನ್ನನ್ನು ನೆಟ್ಟ ಸೈನ್ಯಗಳ ಕರ್ತನು
ನಿನ್ನ ಮೇಲೆ ಕೇಡನ್ನು ಮಾತಾಡಿದ್ದಾನೆ.

೧೮ ಕರ್ತನು ನನಗೆ ತಿಳಿಸಿದನು, ನಾನು ತಿಳುಕೊಂಡೆನು;
ಆಗ ಅವರ ಕ್ರಿಯೆಗಳನ್ನು ನನಗೆ ತೋರಿಸಿದಿ.

೧೯ ಆದರೆ ನಾನು ಕೊಲ್ಲಲ್ಪಡುವದಕ್ಕೆ ತಕ್ಕೊಂಡು ಹೋಗಲ್ಪಡುವ ಸಾಧು ಕುರಿಯ ಹಾಗೆ ಇದ್ದೆನು;
ನನಗೆ ವಿರೋಧವಾಗಿ ಕಲ್ಪನೆಗಳನ್ನು ಕಲ್ಪಿಸುತ್ತಾರೆಂದೂ,
ಮರವನ್ನೂ ಅದರ ಫಲವನ್ನೂ ಕೆಡಿಸಿ,
ಅವನ ಹೆಸರು ಇನ್ನು ಜ್ಞಾಪಕ ಮಾಡಲ್ಪಡದ ಹಾಗೆ,
ಜೀವಿತರ ದೇಶದೊಳಗಿಂದ ಅವನನ್ನು ಕಡಿದು ಬಿಡೋಣ,
ಎಂದು ಅಂದುಕೊಳ್ಳುತ್ತಾರೆಂದೂ, ನನಗೆ ತಿಳಿಯಲಿಲ್ಲ.

೨೦ ಆದರೆ ನೀತಿಯಾಗಿ ನ್ಯಾಯ ತೀರಿಸುವಂಥ,
ಅಂತರಿಂದ್ರಿಯಗಳನ್ನೂ, ಹೃದಯವನ್ನೂ, ಶೋಧಿಸುವಂಥ,
ಸೈನ್ಯಗಳ ಕರ್ತನೇ!
ನೀನು ಅವರಿಗೆ ತೀರಿಸುವ ಪ್ರತಿ ದಂಡನೆಯನ್ನು ನಾನು ನೋಡಲಿ;
ಯಾಕಂದರೆ, ನಿನಗೆ ನನ್ನ ವ್ಯಾಜ್ಯವನ್ನು ಪ್ರಕಟಿ ಮಾಡಿದ್ದೇನೆ.

೨೧ ಆದದರಿಂದ, ನಿನ್ನ ಪ್ರಾಣವನ್ನು ಹುಡುಕುವ ಅನತೋಥಿನ ಮನುಷ್ಯರಿಗೆ,
ನೀನು ನಮ್ಮ ಕೈಯಿಂದ ಸಾಯದ ಹಾಗೆ
ಕರ್ತನ ಹೆಸರಿನಲ್ಲಿ ಪ್ರವಾದನೆ ಹೇಳ ಬೇಡವೆಂದು ಅನ್ನುವವರಿಗೆ,
ಕರ್ತನು ಹೇಳುವದೇನಂದರೆ—

೨೨ ಇದುಕಾರಣ ಸೈನ್ಯಗಳ ಕರ್ತನು ಹೇಳುವದೇನಂದರೆ—
ಇಗೋ, ನಾನು ಅವರನ್ನು ವಿಚಾರಿಸುತ್ತೇನೆ;
ಯೌವ್ವನಸ್ಥರು ಕತ್ತಿಯಿಂದ ಸಾಯುವರು;
ಅವರ ಕುಮಾರ ಕುಮಾರ್ತೆಯರು ಹಸಿವೆಯಿಂದ ಸಾಯುವರು.

೨೩ ಮತ್ತು ಅವರಲ್ಲಿ ಉಳಿವು ಇರುವದಿಲ್ಲ;
ಯಾಕಂದರೆ, ನಾನು ಅನತೋಥಿನ ಮನುಷ್ಯರ ಮೇಲೆ ಕೇಡನ್ನು,
ಅವರ ವಿಚಾರಣೆಯ ವರುಷವನ್ನೇ, ತರಿಸುತ್ತೇನೆ.

## ೧೨. ಸಂಧಿ.

೧ ಕರ್ತನೇ, ನಾನು ನಿನ್ನ ಸಂಗಡ ವಾದಿಸುವಾಗ ನೀನು ನೀತಿವಂತನೇ;

ಆದಾಗ್ಯೂ ನಾನು ನಿನ್ನ ಸಂಗಡ ನ್ಯಾಯವಾದವುಗಳನ್ನು ಕುರಿತು ಮಾತಾಡಲಿ;
ದುಷ್ಟರ ಮಾರ್ಗವು ಸಫಲವಾಗುವದು ಯಾಕೆ!
ಮಹಾ ವಂಚನೆ ಮಾಡುವವರೆಲ್ಲರು ಸುಖವಾಗಿರುವದು ಯಾಕೆ!
೨ ನೀನು ಅವರನ್ನು ನೆಟ್ಟಿದ್ದೀ, ಹೌದು, ಬೇರೂರಿದ್ದಾರೆ;
ಬೆಳೆಯುತ್ತಾರೆ, ಹೌದು ಫಲ ಫಲಿಸುತ್ತಾರೆ;
ನೀನು ಅವರ ಬಾಯಿಯಲ್ಲಿ ಸಮೀಪವಾಗಿದ್ದೀ,
ಆದರೆ ಅವರ ಅಂತರಿಂದ್ರಿಯಗಳಿಗೆ ದೂರವೇ
೩ ಆದರೆ ನೀನು, ಕರ್ತನೇ, ನನ್ನನ್ನು ತಿಳಿದಿದ್ದೀ;
ನನ್ನನ್ನು ನೋಡಿ, ನನ್ನ ಹೃದಯವು ನಿನ್ನ ಕಡೆಗೆ ಹ್ಯಾಗೋ, ಎಂದು ಕೋಧಿಸಿದ್ದೀ;
ಕೊಲೆಗೆ ಕುರಿಗಳಪ್ಪಂದ ಅವರನ್ನು ಎಳೆದು ಬಿಡು,
ಸಂಹಾರದ ದಿನಕ್ಕೆ ಅವರನ್ನು ಪ್ರತ್ಯೇಕಿಸು;
ದೇಶವು, ಅದರ ನಿವಾಸಿಗಳ ಕೆಟ್ಟತನಕ್ಕಾಗಿ ದುಃಖಿಸುವದೂ,
೪ ಎಲ್ಲಾ ಹೊಲಗಳ ಹುಲ್ಲು ಒಣಗುವದೂ, ಎಮ್ಮು ಮಟ್ಟಿಗೂ!
ಮೃಗಗಳೂ, ಪಕ್ಷಿಗಳೂ, ನಾಶವಾಗುತ್ತವೆ;
ಒಬ್ಬರೂ ನಮ್ಮ ಅಂತ್ಯವನ್ನು ನೋಡುವದಿಲ್ಲವೆಂದು ಅವರು ಅಂದದರಿಂದಲೇ.

೫ ಕಾಲಾಳುಗಳ ಸಂಗಡ ಓಡುವಾಗ, ನಿನಗೆ ಆಯಾಸವಾದರೆ,
ಕುದುರೆಗಳ ಸಂಗಡ ಹ್ಯಾಗೆ ಹೋರಾಡುವಿ!
ಸಮಾಧಾನದ ದೇಶದಲ್ಲಿ ನೀನು ಭದ್ರವಾಗಿದ್ದರೆ,
ಯೋರ್ದನಿನ ಗರ್ವದಲ್ಲಿ ಏನು ಮಾಡುವಿ!
೬ ಯಾಕಂದರೆ, ನಿನ್ನ ಸಹೋದರರೂ, ನಿನ್ನ ತಂದೆಯ ಮನೆಯವರೂ, ಇವರೇ ನಿನಗೆ ವಂಚನೆ ಮಾಡಿದ್ದಾರೆ;
ಇವರೇ ನಿನ್ನ ಹಿಂದೆ ಛುಟ್ಟಿಯಾಗಿ ಕೂಗುತ್ತಾರೆ;
ಅವರು ನಿನಗೆ ಒಳ್ಳೇ ಮಾತುಗಳನ್ನು ಹೇಳಿದರೂ ಅವರನ್ನು ನಂಬ ಬೇಡ.

೭ ನನ್ನ ಮನೆಯನ್ನು ಬಿಟ್ಟಿದ್ದೇನೆ;
ನನ್ನ ಸ್ವಾಸ್ತ್ಯವನ್ನು ವಿಸರ್ಜಿಸಿದ್ದೇನೆ;
ನನ್ನ ಪ್ರಾಣಕ್ಕೆ ಪ್ರಿಯವಾದವಳನ್ನು ಅವಳ ಶತ್ರುಗಳ ಕೈಯಲ್ಲಿ ಒಪ್ಪಿಸಿದ್ದೇನೆ.
೮ ನನ್ನ ಸ್ವಾಸ್ತ್ಯವು ನನಗೆ ಅಡವಿಯಲ್ಲಿರುವ ಸಿಂಹದ ಹಾಗಾಯಿತು,
ಅದು ನನಗೆ ವಿರೋಧವಾಗಿ ತನ್ನ ಶಬ್ದವನ್ನೆತ್ತುತ್ತದೆ;
ಆದದರಿಂದ ಅದನ್ನು ಹಗೆ ಮಾಡುತ್ತೇನೆ.
೯ ನನ್ನ ಸ್ವಾಸ್ತ್ಯವು ನನಗೆ ಚಿತ್ರ ವರ್ಣದ ರಣಹದ್ದಾಯಿತು;
ಸುತ್ತಲಾಗಿ ರಣಹದ್ದುಗಳು ಅದಕ್ಕೆ ವಿರೋಧವಾಗಿವೆ;
ಬನ್ನಿ! ಹೊಲದ ಮೃಗಗಳನ್ನೆಲ್ಲಾ ಕೂಡಿಸಿರಿ!
ತಿನ್ನುವದಕ್ಕೆ ಅವುಗಳನ್ನು ತನ್ನಿ!
೧೦ ಅನೇಕ ಕುರುಬರು ನನ್ನ ದ್ರಾಕ್ಷೆ ತೋಟವನ್ನು ಕೆಡಿಸಿದ್ದಾರೆ;
ನನ್ನ ಭಾಗವನ್ನು ತುಳಿದು ಬಿಟ್ಟಿದ್ದಾರೆ;
ನಾನು ಮೆಚ್ಚಿದ ಭಾಗವನ್ನು ಹಾಳಾದ ಅರಣ್ಯವಾಗ ಮಾಡಿದ್ದಾರೆ.
೧೧ ಅದನ್ನು ಹಾಳು ಮಾಡಿದ್ದಾರೆ;
ಅದು ಹಾಳಾಗಿಯೇ ನನ್ನ ಕಡೆಗೆ ದುಃಖಿಸುತ್ತದೆ;
ದೇಶವೆಲ್ಲಾ ಹಾಳಾಯಿತು,
ಆದಾಗ್ಯೂ ಒಬ್ಬನಾದರೂ ಅದನ್ನು ಮನಸ್ಸಿಗೆ ತರುವದಿಲ್ಲ.
೧೨ ಅರಣ್ಯದಲ್ಲಿರುವ ಎಲ್ಲಾ ಮೇಡುಗಳ ಮೇಲೆ ಕೆಡಿಸುವವರು ಬಂದಿದ್ದಾರೆ;
ಯಾಕಂದರೆ, ಕರ್ತನ ಕತ್ತಿಯು ದೇಶದ ಒಂದು ಕಡೆಯಿಂದ,
ದೇಶದ ಇನ್ನೊಂದು ಕಡೆಯ ವರೆಗೂ, ತಿಂದು ಬಿಡುತ್ತದೆ;
ಮಾಂಸಕ್ಕೆಲ್ಲಾ ಸಮಾಧಾನವಿಲ್ಲ.
೧೩ ಗೋಧಿಯನ್ನು ಬಿತ್ತಿದ್ದಾರೆ, ಆದರೆ ಮುಳ್ಳುಗಳನ್ನು ಕೊಯ್ಯುವರು;
ಕಷ್ಟ ಪಟ್ಟಿದ್ದಾರೆ, ಆದರೆ ಪ್ರಯೋಜನವಾಗುವದಿಲ್ಲ;
ಕರ್ತನ ಕೋಪದ ಉರಿಯಿಂದ ನಿಮ್ಮ ಹುಟ್ಟುವಳಿಯ ನಿಮಿತ್ತ ನಾಚಿಕೆ ಪಡುವಿರಿ.

೧೪ ನನ್ನ ಕೆಟ್ಟ ನೆರೆಯವರೆಲ್ಲರಿಗೆ,
ನನ್ನ ಜನರಾದ ಇಸ್ರಯೇಲ್ಯರಿಗೆ ಸ್ವತಂತ್ರಿಸುವದಕ್ಕೆ ನಾನು ಕೊಟ್ಟ ಸ್ವಾಸ್ತ್ಯವನ್ನು ಮುಟ್ಟುವವರಿಗೆ,
ಕರ್ತನು ಹೇಳುವದೇನಂದರೆ—
ಇಗೋ, ನಾನು ಅವರನ್ನು ಅವರ ಭೂಮಿಯೊಳಗಿಂದ ಕಿತ್ತು ಹಾಕುವೆನು;
ಯೆಹೂದನ ಮನೆಯವರನ್ನು ಅವರೊಳಗಿಂದ ಕಿತ್ತು ಹಾಕುವೆನು.
೧೫ ಮತ್ತು ನಾನು ಅವರನ್ನು ಕಿತ್ತು ಹಾಕಿದ ಮೇಲೆ ಆಗುವದೇನಂದರೆ,
ಶಿರುಗಿಕೊಂಡು ಅವರನ್ನು ಕರುಣಿಸುವೆನು;
ತಮ್ಮ ತಮ್ಮ ಸ್ವಾಸ್ತ್ಯಕ್ಕೂ, ತಮ್ಮ ತಮ್ಮ ದೇಶಕ್ಕೂ, ತಿರಿಗಿ ಬರ ಮಾಡುವೆನು.
೧೬ ಮತ್ತು ಆಗುವದೇನಂದರೆ—
ಬಾಳನ ಆಣೆ ಇಟ್ಟುಕೊಳ್ಳುವದಕ್ಕೆ ಅವರು ನನ್ನ ಜನಕ್ಕೆ ಬೋಧಿಸಿದ ಪ್ರಕಾರ,
ಅವರು ಕರ್ತನ ಜೀವದಾಣೆ ಎಂದು ಹೇಳಿ, ನನ್ನ ಹೆಸರಿನ ಆಣೆ ಇಟ್ಟುಕೊಳ್ಳುವದಕ್ಕೆ,
ನನ್ನ ಜನರ ಮಾರ್ಗಗಳನ್ನು, ಜಾಗ್ರತೆಯಾಗಿ ಕಲಿತುಕೊಂಡರೆ,
ಆಗಲವರು ನನ್ನ ಜನರ ಮಧ್ಯದಲ್ಲಿ ಕಟ್ಟಲ್ಪಡುವರು.
೧೭ ಆದರೆ ಅವರು ಕೇಳದೆ ಹೋದರೆ, ಆ ಜನಾಂಗವನ್ನು ಕೀಳುವೆನು;
ಕಿತ್ತು, ನಾಶನ ಮಾಡುವೆನು, ಎಂದು ಕರ್ತನು ಅನ್ನುತ್ತಾನೆ.

## ೧೩. ಸಂಧಿ.

೧ ಕರ್ತನು ನನಗೆ ಹೇಳಿದ್ದೇನಂದರೆ—ನೀನು ಹೋಗಿ, ನಾರಿನ ದಟ್ಟಿಯನ್ನು ಸಂಪಾದಿಸಿಕೊಂಡು, ನಿನ್ನ ನಡುವಿಗೆ ಕಟ್ಟು; ಆದರೆ
೨ ಅದನ್ನು ನೀರಿನಲ್ಲಿ ಹಾಕ ಬೇಡ. ಆಗ ಕರ್ತನ ಮಾತಿನ ಪ್ರಕಾರ, ನಾನು ಆ ದಟ್ಟಿಯನ್ನು ಸಂಪಾದಿಸಿ, ನನ್ನ ನಡುವಿಗೆ ಕಟ್ಟಿ ಕೊಡೆನು.
೩ ಆಗ ಕರ್ತನ ವಾಕ್ಯವು ನನಗೆ ಎರಡನೇ ಸಾರಿ ಉಂಟಾಯಿತು,
೪ ಹ್ಯಾಗಂದರೆ—ನೀನು ಸಂಪಾದಿಸಿ ಕೊಂಡ ನಿನ್ನ ನಡುವಿನಲ್ಲಿರುವ ದಟ್ಟಿಯನ್ನು ತಕ್ಕೊಂಡು, ಎದ್ದು, ಫ್ರಾತಿಗೆ ಹೋಗಿ, ಅದನ್ನು
೫ ಅಲ್ಲಿ ಬಂಡೆಯ ಬಿರುಕಿನಲ್ಲಿ ಅಡಗಿಸು. ಹಾಗೆಯೇ ನಾನು ಹೋ



ಗಿ, ಕರ್ತನು ನನಗೆ ಆಜ್ಞಾಪಿಸಿದ ಪ್ರಕಾರ, ಅದನ್ನು ಫ್ರಾತಿನ ಬಳಿಯಲ್ಲಿ ಅಡಗಿಸಿದೆನು.
೬ ಬಹಳ ದಿವಸಗಳಾದ ಮೇಲೆ ಕರ್ತನು ನನಗೆ—ನೀನು ಎದ್ದು, ಫ್ರಾತಿಗೆ ಹೋಗಿ, ಅಲ್ಲಿ ಅಡಗಿಸ ಬೇಕೆಂದು, ನಾನು ಆಜ್ಞಾಪಿಸಿದ ದಟ್ಟಿಯನ್ನು ಅಲ್ಲಿಂದ ತಕ್ಕೊಳ್ಳೀ, ಅಂದನು.
೭ ಆಗ ನಾನು ಫ್ರಾತಿಗೆ ಹೋಗಿ, ಅಗದು, ಆ ದಟ್ಟಿಯನ್ನು ನಾನು ಅಡಗಿಸಿದ್ದಲ್ಲಿಂದ ತೆಗೆದೆನು; ಇಗೋ, ಆ ದಟ್ಟಿಯು ಯಾವ ಕೆಲಸಕ್ಕಾದರೂ ಬಾರದೆ, ಕೆಟ್ಟು ಹೋಗಿತ್ತು.
೮ ಆಗ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ—
೯ ಕರ್ತನು ಹೀಗೆ ಹೇಳುತ್ತಾನೆ—
ಈ ಪ್ರಕಾರ ನಾನು ಯೆಹೂದದ ಗರ್ವವನ್ನೂ, ಯೆರೂಸಲೇಮಿನ ದೊಡ್ಡ ಗರ್ವವನ್ನೂ, ಕೆಡಿಸುವೆನು.
೧೦ ನನ್ನ ವಾಕ್ಯಗಳನ್ನು ಕೇಳಲೊಲ್ಲದೆ,
ತಮ್ಮ ಹೃದಯದ ಕಾಠಿಣ್ಯದಲ್ಲಿ ನಡೆ ಕೊಂಡು,
ಬೇರೆ ದೇವರುಗಳನ್ನು,
ಅವುಗಳನ್ನು ಸೇವಿಸುವದಕ್ಕೂ, ಅವುಗಳನ್ನು ಆರಾಧಿಸುವದಕ್ಕೂ,
ಹಿಂಬಾಲಿಸುವ ಈ ಕೆಟ್ಟ ಜನರು
ಯಾವ ಕೆಲಸಕ್ಕಾದರೂ ಬಾರದ ಈ ದಟ್ಟಿಯ ಹಾಗಿರುವರು.
೧೧ ಯಾಕಂದರೆ ಯಾವ ಪ್ರಕಾರ ದಟ್ಟಿಯು ಮನುಷ್ಯನ ನಡುವಿಗೆ ಹತ್ತಿಕೊಳ್ಳುವದೋ
ಅದೇ ಪ್ರಕಾರ ನಾನು ಇಸ್ರಯೇಲನ ಮನೆಯನ್ನೆಲ್ಲಾ,
ಯೆಹೂದನ ಮನೆಯನ್ನೆಲ್ಲಾ,
ಅವರು ನನಗೆ ಜನರೂ,
ಹೆಸರೂ, ಸ್ತೋತ್ರವೂ, ಮಹಿಮೆಯೂ, ಆಗುವ ಹಾಗೆ,
ನನಗೆ ಹತ್ತಿಕೊಳ್ಳ ಮಾಡಿದೆನು;
ಆದರೆ ಅವರು ಕೇಳಲಿಲ್ಲ.
೧೨ ಆದದರಿಂದ ನೀನು ಅವರಿಗೆ ಈ ಮಾತನ್ನು ಹೇಳ ಬೇಕು—
ಇಸ್ರಯೇಲಿನ ದೇವರಾದ ಕರ್ತನು ಹೇಳುವದೇನಂದರೆ—
ಬುದ್ದಲಿಗಳೆಲ್ಲಾ ದ್ರಾಕ್ಷೆರಸದಿಂದ ತುಂಬಿರುವವು;
ಆಗಲವರು ನಿನಗೆ—
ಬುದ್ದಲಿಗಳೆಲ್ಲಾ ದ್ರಾಕ್ಷೆರಸದಿಂದ ತುಂಬಿರುವವೆಂದು ನಮಗೆ ಚೆನ್ನಾಗಿ ತಿಳಿಯಿತಲ್ಲವೋ!
ಎಂದು ನಿನಗೆ ಹೇಳುವರು.
೧೩ ಆಗ ನೀನು ಅವರಿಗೆ ಹೇಳ ಬೇಕಾದದ್ದೇನಂದರೆ—
ಕರ್ತನು ಹೀಗೆ ಹೇಳುತ್ತಾನೆ—
ಇಗೋ, ನಾನು ಈ ದೇಶದ ನಿವಾಸಿಗಳನ್ನೆಲ್ಲಾ,
ದಾವೀದನ ಸಿಂಹಾಸನದಲ್ಲಿ ಕೂತ್ರುವ ಅರಸುಗಳನ್ನೂ,
ಯಾಜಕರನ್ನೂ, ಪ್ರವಾದಿಗಳನ್ನೂ,
ಯೆರೂಸಲೇಮಿನ ನಿವಾಸಿಗಳೆಲ್ಲರನ್ನೂ,
ಅಮಲಿನಿಂದ ತುಂಬಿಸ ವೆನು.
೧೪ ಮತ್ತು ಅವರನ್ನು,
ತಂದೆಗಳನ್ನೂ, ಮಕ್ಕಳನ್ನೂ ಕೂಡ,
ಒಬ್ಬನ ಮೇಲೊಬ್ಬರನ್ನು ಅಪ್ಪಳಿಸುವೆನೆಂದು,
ನಾನು ಅವರನ್ನು ಕೆಡಿಸದೆ ಇರುವ ಹಾಗೆ
ಕನಿಕರಿಸುವದಿಲ್ಲ, ಕರುಣಿಸುವದಿಲ್ಲ,
ಅಂತೀಕರುಣೆ ಪಡುವದಿಲ್ಲವೆಂದು, ಕರ್ತನು ಅನ್ನುತ್ತಾನೆ.
೧೫ ಕೇಳಿರಿ, ಕಿವಿ ಕೊಡಿರಿ, ಗರ್ವ ಪಡ ಬೇಡಿರಿ;
ಯಾಕಂದರೆ, ಕರ್ತನು ಮಾತಾಡುತ್ತಾನೆ.
೧೬ ಅವನು ಕತ್ತಲೆಯನ್ನು ತರುವದಕ್ಕಿಂತ ಮುಂಚೆಯೂ,
ನಿಮ್ಮ ಕಾಲುಗಳು ಅಂಧಕಾರದ ಪರ್ವತಗಳ ಮೇಲೆ ಎಡವುವದಕ್ಕಿಂತ ಮುಂಚೆಯೂ,
ನೀವು ಬೆಳಕಿಗೆ ಕಾದುಕೊಳ್ಳುತ್ತಿರುವಾಗ,
ಅವನು ಅದನ್ನು ಮರಣದ ನೆರಳಾಗ ಮಾಡಿ,
ಕಾರ್ಗತ್ತಲಿಗೆ ಬದಲಾಯಿಸುವದಕ್ಕಿಂತ ಮುಂಚೆಯೂ,
ನಿಮ್ಮ ದೇವರಾದ ಕರ್ತನಿಗೆ ಮಹಿಮೆಯನ್ನು ಕೊಡಿರಿ.
೧೭ ಆದರೆ ನೀವು ಅದನ್ನು ಕೇಳದೆ ಹೋದರೆ,
ನನ್ನ ಪ್ರಾಣವು ನಿಮ್ಮ ಗರ್ವದ ನಿಮಿತ್ತ,
ಅಂತರಂಗ ಸ್ಥಳಗಳಲ್ಲಿ ಅಳುವದು;
ನನ್ನ ಕಣ್ಣು ಬಹಳವಾಗಿ ದುಃಖಿಸುವದು;
ಕಣ್ಣೀರು ಬಹಳವಾಗಿ ಸುರಿಸುವದು;
ಯಾಕಂದರೆ, ಕರ್ತನ ಮಂದೆ ಕೆಡೆಯಾಗಿ ಸೈಯಲ್ಪಟ್ಟಿದೆ.
೧೮ ಅರಸನಿಗೂ ಥೊಳೆಸಾನಿಗೂ ನೀನು ಹೇಳ ಕಕ್ಕದ್ದೇನಂದರೆ—
ತಗ್ಗಿಸಿಕೊಂಡು ಕೂತುಕೊಳ್ಳಿರಿ;
ಯಾಕಂದರೆ, ನಿಮ್ಮ ತಲೆಗಳ ಮೇಲಿನಿಂದ ನಿಮ್ಮ ತೃಂಗಾರದ ಕಿರೀಟವು ಇಳಿಯುವದು.
೧೯ ದಕ್ಷಿಣ ಪಟ್ಟಣಗಳು ತೆಕೆಯುವವನಿಲ್ಲದೆ ಮುಚ್ಚಲ್ಪಡುವವು;
ಯೆಹೂದವೆಲ್ಲವೂ ಕೆಡೆಯಾಗಿ ಸೈಯಲ್ಪಡುವದು;
ಖಿಪ್ಪು ಕೆಡೆಯಾಗಿ ಸೈಯಲ್ಪಡುವದು.
೨೦ ನಿಮ್ಮ ಕಣ್ಣುಗಳನ್ನು ಎತ್ತಿ,
ಉತ್ತರದಿಂದ ಬರುವವರನ್ನು ನೋಡಿರಿ;
ನಿನಗೆ ಕೊಡಲ್ಪಟ್ಟ ಹಿಂಡೂ,
ನಿನ್ನ ತೃಂಗಾರದ ಮಂದೆಯೂ, ಎಲ್ಲಿ?
೨೧ ಅವನು ನಿನ್ನನ್ನು ವಿಚಾರಿಸುವಾಗ ಏನು ಹೇಳುವಿ!
ನಿನ್ನ ಮೇಲೆ ಮುಖ್ಯ ಪ್ರಭುಗಳಾಗುವದಕ್ಕೆ,
ನೀನೇ ಅವರಿಗೆ ಕಲಿಸಿದಿಯಲ್ಲ!
ಹೆರುವ ಸ್ತ್ರಿಯ ಪ್ರಕಾರ ನಿನ್ನನ್ನು ಬೇನೆಗಳು ಹಿಡಿಯುವವಲ್ಲವೋ!
೨೨ ಇವು ನನಗೆ ಯಾಕೆ ಸಂಭವಿಸಿದವೆಂದು,
ನೀನು ನಿನ್ನ ಹೃದಯದಲ್ಲಿ ಅಂದುಕೊಂಡರೆ,
ನಿನ್ನ ಅಕ್ರಮದ ಬಾಹುಳ್ಯದ ನಿಮಿತ್ತ,
ನಿನ್ನ ಬಟ್ಟೆಗಳು ಎತ್ತಲ್ಪಟ್ಟವೆ;
ನಿನ್ನ ಹಿಮ್ಮಡಿಗಳಿಗೆ ಬಲಾತ್ಕಾರವಾಯಿತು.
೨೩ ಕೂಷ್ಯನು ತನ್ನ ಚರ್ಮವನ್ನೂ,
ಚಿರತೆಯು ತನ್ನ ಮಚ್ಚೆಗಳನ್ನೂ
ಮಾರ್ಪಡಿಸುವದಕ್ಕಾಗುವದೋ!
ಹೀಗಾದರೆ, ಕೆಟ್ಟತನದ ಅಭ್ಯಾಸವುಳ್ಳವರಾದ ನೀವು ಸಹ,
ಒಳ್ಳೇದನ್ನು ಮಾಡುವದಕ್ಕಾಗೀತು.

೨೪ ಆದದರಿಂದ ಅಡವಿಯ ಘೂಳಿಯಿಂದ
ಹಾರಿ ಹೋಗುವ ಕಡೆಯಂತೆ ಅವರನ್ನು ಚದರಿಸುವೆನು.
೨೫ ಇದೇ ನಿನ್ನ ಭಾಗವು,
ನನ್ನಿಂದ ನಿನಗೆ ಅಳತೆ ಪಾಲು,
ಎಂದು ಕರ್ತನು ಅನ್ನುತ್ತಾನೆ;
ಯಾಕಂದರೆ ನನ್ನನ್ನು ಮರತು ಬಿಟ್ಟು,
ಸುಳ್ಳಿನಲ್ಲಿ ನಂಬಿಕೆ ಇಟ್ಟಿದ್ದೀ.
೨೬ ಆದದರಿಂದ ನಾನು ನಿನ್ನ ಬಟ್ಟೆಗಳನ್ನೂ,
ನಿನ್ನ ನಾಚಿಕೆ ಕಾಣುವ ಹಾಗೆ,
ನಿನ್ನ ಮುಖದ ಮೇಲೆ ಎತ್ತುವೆನು.
೨೭ ನಿನ್ನ ವ್ಯಭಿಚಾರಗಳನ್ನೂ,
ನಿನ್ನ ಹೂಂಕಾರಗಳನ್ನೂ, ನಿನ್ನ ಸೂಳೆತನದ ದೋಷವನ್ನೂ,
ಹೊಲಗಳಲ್ಲಿರುವ ಗುಡ್ಡಗಳ ಮೇಲೆ ಆಗುವ ನಿನ್ನ ಅಸಂಖ್ಯಗಳನ್ನೂ ನೋಡಿದ್ದೇನೆ;
ಓ ಯೆರೂಸಲೇಮೇ! ನಿನಗೆ ಅಯ್ಯೋ!
ನೀನು ಶುದ್ಧವಾಗುವದಿಲ್ಲವೋ!
ಇನ್ನು ಎಷ್ಟು ಕಾಲದ ಮೇಲೆ ಆಧೀಶ!

## ೧೪. ಸಂಧಿ.

೧ ಬರವನ್ನು ಕುರಿತು ಯೆರೆಮಿಾಯನಿಗೆ ಉಂಟಾದ ಕರ್ತನ ವಾಕ್ಯವು.
೨ ಯೆಹೂದವು ದುಃಖ ಪಡುತ್ತದೆ;
ಅದರ ಬಾಗಲುಗಳು ಕುಂದಿ ಹೋಗುತ್ತವೆ,
ನೆಲದ ವರಿಗೆ ಕಪ್ಪಾಗಿವೆ;
ಯೆರೂಸಲೇಮಿನ ಕೂಗು ಏರಿ ಬಂತು.
3 ಅವರ ಶ್ರೇಷ್ಠರು ತಮ್ಮ ಚಿಕ್ಕವರನ್ನು ನೀರಿಗೆ ಕಳುಹಿಸುತ್ತಾರೆ;
ಇವರು ಭಾವಿಗಳಿಗೆ ಬರುತ್ತಾರೆ;
ಆದರೆ ನೀರು ಸಿಕ್ಕಲಿಲ್ಲ;
ಬರೀ ಪಾತ್ರೆಗಳುಳ್ಳವರಾಗಿ ತಿರುಗಿಕೊಳ್ಳುತ್ತಾರೆ;
ನಾಚಿಕೆ ಪಡುತ್ತಾರೆ; ನಿಂದಿತರಾಗುತ್ತಾರೆ;
ತಮ್ಮ ತಲೆಗಳನ್ನು ಮುಚ್ಚಿ ಕೊಳ್ಳುತ್ತಾರೆ.
೪ ಯಾಕಂದರೆ ದೇಶದಲ್ಲಿ ಮಳೆ ಇಲ್ಲದ ಕಾರಣ,
ಭೂಮಿಯು ಸೀಳಿಕೊಂಡಿತೆ;
ಒಕ್ಕಲಿಗರು ನಾಚಿಕೆ ಪಟ್ಟು,
ತಮ್ಮ ತಲೆಗಳನ್ನು ಮುಚ್ಚಿ ಕೊಳ್ಳುತ್ತಾರೆ.
೫ ಜಿಂಕೆಯು ಸಹ ಹೊಲದಲ್ಲಿ ಈವು,
ಅದನ್ನು ಬಿಟ್ಟು ಬಿಡುತ್ತದೆ;
ಯಾಕಂದರೆ ಹುಲ್ಲಿಲ್ಲ.
೬ ಮತ್ತು ಕಾಡು ಕತ್ತೆಗಳು ಮೇಡುಗಳ ಮೇಲೆ ನಿಂತು,
ನರಿಗಳ ಹಾಗೆ ಘೂಳಿಯನ್ನು ಹೀರಿ ಕೊಳ್ಳುತ್ತವೆ;
ಹುಲ್ಲು ಇಲ್ಲದ ಕಾರಣ ಅವುಗಳ ಕಣ್ಣುಗಳು ಕ್ಷೀಣವಾಗುತ್ತವೆ.
೭ ಕರ್ತನೇ ನಮ್ಮ ಅಕ್ರಮಗಳು ನಮಗೆ ವಿರೋಧವಾಗಿ ಸಾಕ್ಷಿ ಕೊಟ್ಟರೂ,
ನೀನೇ ನಿನ್ನ ಹೆಸರುಗೋಸ್ಕರ ನಡಿಸು;
ಯಾಕಂದರೆ ನಮ್ಮ ಹಿಂತಿರುಗುವಿಕೆಗಳು ಅನೇಕವಾಗಿವೆ;
ನಿನಗೆ ವಿರೋಧವಾಗಿ ಪಾಪ ಮಾಡಿದ್ದೇವೆ.
೮ ಇಸ್ರಯೇಲಿನ ನಿರೀಕ್ಷಣೆಯೇ!
ಇಕ್ಕಟ್ಟಿನ ಕಾಲದಲ್ಲಿ ಅವನನ್ನು ರಕ್ಷಿಸುವವನೇ!
ನೀನು ಯಾಕೆ ದೇಶದಲ್ಲಿ ಅನ್ಯನ ಹಾಗೆಯೂ,
ರಾತ್ರಿ ಕಳೆಯುವದಕ್ಕೆ ಇಳ್ಳು ಕೊಳ್ಳುವ ಪ್ರಯಾಣಸ್ಥನ ಹಾಗಯೂ,
ಇರ ಬೇಕು!
೯ ನೀನು ಯಾಕೆ ಘಾಬರಿ ಪಡುವ ಮನುಷ್ಯನ ಹಾಗೆಯೂ,
ರಕ್ಷಿಸಲಾರದ ಪರಾಕ್ರಮಶಾಲಿಯ ಹಾಗೆಯೂ,
ಇರ ಬೇಕು!
ಆದರೆ ನೀನು, ಓ ಕರ್ತನೇ! ನಮ್ಮ ಮಧ್ಯದಲ್ಲಿ ಇದ್ದೀ;
ಮತ್ತು ನಿನ್ನ ಹೆಸರಿನಿಂದ ಕರೆಯಲ್ಪಟ್ಟಿದ್ದೇವೆ;
ನಮ್ಮನ್ನು ಕೈ ಬಿಡ ಬೇಡ.
೧೦ ಕರ್ತನು ಈ ಜನಕ್ಕೆ ಹೇಳುವದೇನಂದರೆ—
ಹೀಗೆ ತಿರುಗಾಡುವದಕ್ಕೆ ಪ್ರೀತಿ ಮಾಡಿದ್ದಾರೆ;
ತಮ್ಮ ಕಾಲುಗಳನ್ನು ಹಿಂದೆಗಯಲಿಲ್ಲ;
ಆದದರಿಂದ ಕರ್ತನು ಅವರಲ್ಲಿ ಇಷ್ಟ ಪಡುವದಿಲ್ಲ;
ಈಗಲೇ ಅವರ ಅಕ್ರಮವನ್ನು ಜ್ಞಾಪಕ ಮಾಡಿಕೊಳ್ಳುವನು;
ಅವರ ಪಾಪಗಳನ್ನು ವಿಚಾರಿಸುವನು.
೧೧ ಆಗ ಕರ್ತನು ನನಗೆ ಹೇಳಿದ್ದೇನಂದರೆ—
ಈ ಜನರಿಗೋಸ್ಕರ ಒಳ್ಳೇದಕ್ಕಾಗಿ ಪ್ರಾರ್ಥನೆ ಮಾಡ ಬೇಡ;
೧೨ ಅವರು ಉಪವಾಸ ಮಾಡಿದಾಗ್ಯೂ,
ನಾನು ಅವರ ಪೊರೆಯನ್ನು ಕೇಳುವದಿಲ್ಲ;
ಅವರು ಹೋಮಗಳನ್ನೂ ಕಾಣಿಕೆಗಳನ್ನೂ ಅರ್ಪಿಸಿದಾಗ್ಯೂ,
ನಾನು ಅವರಲ್ಲಿ ಇಷ್ಟ ಪಡುವದಿಲ್ಲ;
ಆದರೆ ಕತ್ತಿಯಿಂದಲೂ, ಬರದಿಂದಲೂ, ಜಾಡ್ಯದಿಂದಲೂ,
ಅವರನ್ನು ಮುಗಿಸಿ ಬಿಡುತ್ತೇನೆ.
೧೩ ಆಗ ನಾನು—ಅಯ್ಯೋ ಕರ್ತನಾದ ಯೆಹೋವನೇ!
ಇಗೋ ಪ್ರವಾದಿಗಳು ಅವರಿಗೆ—
ನೀವು ಕತ್ತಿಯನ್ನು ನೋಡುವದಿಲ್ಲ,
ನಿಮಗೆ ಬರ ಆಗುವದಿಲ್ಲ,
ಯಾಕಂದರೆ, ನಾನು ನಿಮಗೆ ಈ ಸ್ಥಳದಲ್ಲಿ,
ಸ್ಥಿರ ಸಮಾಧಾನ ಕೊಡುತ್ತೇನೆಂದು ಹೇಳುತ್ತಾರೆ, ಅಂದೆನು.
೧೪ ಆಗ ಕರ್ತನು ನನಗೆ ಹೇಳಿದ್ದೇನಂದರೆ—
ಪ್ರವಾದಿಗಳು ನನ್ನ ಹೆಸರಿನಲ್ಲಿ ಸುಳ್ಳನ್ನು ಪ್ರವಾದಿಸುತ್ತಾರೆ;
ನಾನು ಅವರನ್ನು ಕಳುಹಿಸಲಿಲ್ಲ;
ಅವರಿಗೆ ಆಜ್ಞೆ ಕೊಡಲಿಲ್ಲ; ಅವರ ಸಂಗಡ ಮಾತಾಡಲಿಲ್ಲ;
ಸುಳ್ಳಿನ ದರುಶನವನ್ನೂ ಶಕುನವನ್ನೂ ಶೂನ್ಯವನ್ನೂ ತಮ್ಮ ಹೃದಯದ ಕಪಟವನ್ನೂ,
ನಿಮಗೆ ಪ್ರವಾದಿಸುತ್ತಾರೆ.
೧೫ ಆದದರಿಂದ ಕರ್ತನು, ತಾನು ಕಳುಹಿಸದೆ,
ತನ್ನ ಹೆಸರಿನಲ್ಲಿ ಪ್ರವಾದಿಸುವಂಥ,
ಈ ದೇಶದಲ್ಲಿ, ಕತ್ತಿಯೂ, ಬರವೂ, ಇರುವದಿಲ್ಲವೆಂದು ಹೇಳುವಂಥ,



ಪ್ರವಾದಿಗಳನ್ನು ಕುರಿತು ಹೇಳುವದೇನಂದರೆ—
ಕತ್ತಿಯಿಂದಲೂ, ಬರದಿಂದಲೂ, ಆ ಪ್ರವಾದಿಗಳು ತಾವೇ ಮುಗಿದು ಹೋಗುವರು.
೧೬ ಮತ್ತು ಅವರು ಪ್ರವಾದಿಸುವ ಜನರು,
ಬರದ ಕತ್ತಿಯ ನಿಮಿತ್ತ,
ಯೆರೂಸಲೇಮಿನ ಬೀದಿಗಳಲ್ಲಿ ಬಿಸಾಡಲ್ಪಡುವರು,
ಅವರನ್ನೂ, ಅವರ ಹೆಂಡರನ್ನೂ,
ಅವರ ಕುಮಾರರನ್ನೂ ಅವರ ಕುಮಾರ್ತೆಗಳನ್ನೂ,
ಯಾರು ಹೂಳಿಡುವದಿಲ್ಲ;
ಯಾಕಂದರೆ, ನಾನು ಅವರ ಕೆಟ್ಟತನವನ್ನು
ಅವರ ಮೇಲೆ ಹೊಯಿದು ಬಿಡುವೆನು.
೧೭ ಆದದರಿಂದ ನೀನು ಈ ಮಾತನ್ನು ಅವರಿಗೆ ಹೇಳ ಬೇಕು—
ನನ್ನ ಕಣ್ಣುಗಳು ರಾತ್ರಿ ಹಗಲು ಬಿಡದೆ ಕಣ್ಣೀರು ಸುರಿಸಲಿ;
ಯಾಕಂದರೆ, ನನ್ನ ಜನರ ಮಗಳಾದ ಕನ್ಯಾಸ್ತ್ರಿಯು
ದೊಡ್ಡ ಮುರಿಯುವಿಕೆಯಿಂದ ಮುರಿಯಲ್ಪಟ್ಟಳು;
ಮಹಾಕಷ್ಟವಾದ ಪೆಬ್ಬೆಯಿಂದಲೇ.
೧೮ ನಾನು ಹೊಲಕ್ಕೆ ಹೋದರೆ,
ಇಗೋ, ಕತ್ತಿಯಿಂದ ಕೊಲ್ಲಲ್ಪಟ್ಟವರು;
ಪಟ್ಟಣದಲ್ಲಿ ಪ್ರವೇಶಿಸಿದರೆ,
ಇಗೋ, ಬರದಿಂದ ಕೋಗದಲ್ಲಿ ಬಿದ್ದವರು;
ಹೌದು, ಪ್ರವಾದಿಯೂ, ಯಾಜಕನೂ,
ತಮಗೆ ತಿಳಿಯದ ದೇಶಕ್ಕೆ ಸಂಚಾರ ಮಾಡುವರು.
೧೯ ನೀನು ಯೆಹೂದವನ್ನು ಪೂರ್ಣವಾಗಿ ತಳ್ಳಿದ್ದೀಯೋ!
ನಿನ್ನ ಪ್ರಾಣವು ಚಿಯೋನನ್ನು ಅಸಂಹಿಸುತ್ತದೋ!
ಯಾಕೆ ಗುಣವಾಗುವದು ಇಲ್ಲದೆ ನಮ್ಮನ್ನು ಹೊಡೆದಿದ್ದೀ!
ಸಮಾಧಾನವನ್ನು ನಿರೀಕ್ಷಿಸಿದೆವು,
ಆದರೆ ಒಳ್ಳೇದೇನು ಇಲ್ಲ;
ಗುಣವಾಗುವ ಕಾಲವನ್ನು ಸಹ,
ಆದರೆ ಇಗೋ ಸಂಕಟ!
೨೦ ಓ ಯೆಹೋವಾ! ನಮ್ಮ ದುರ್ವೃತ್ತವನ್ನೂ,
ನಮ್ಮ ತಂದೆಗಳ ಅಕ್ರಮವನ್ನೂ, ಅರಿಕೆ ಮಾಡುತ್ತೇವೆ;
ಯಾಕಂದರೆ, ನಿನಗೆ ವಿರೋಧವಾಗಿ ಪಾಪ ಮಾಡಿದ್ದೇವೆ.
೨೧ ನಿನ್ನ ಹೆಸರಿಗೋಸ್ಕರ ನಮ್ಮನ್ನು ಅಸಂಹಿಸಿ ಬಿಡ ಬೇಡ;
ನಿನ್ನ ಮಹಿಮೆಯ ಸಿಂಹಾಸನವನ್ನು ಅವಮಾನ ಮಾಡ ಬೇಡ;
ಜ್ಞಾಪಕ ಮಾಡು;
ನಮ್ಮ ಸಂಗಡ ನೀನು ಮಾಡಿದ ಒಡಂಬಡಿಕೆಯನ್ನು ಮೀರ ಬೇಡ.
೨೨ ಜನಾಂಗಗಳ ಮಾಯಗಳಲ್ಲಿ ಮಳೆ ಕೊಡುವವುಗಳು ಉಂಟೋ!
ಅಥವ ಆಕಾಶವು ಜಡಿ ಮಳೆಯನ್ನು ಕೊಡುವದಕ್ಕಾಗುವದೋ!
ನಮ್ಮ ದೇವರಾಗಿರುವ ಯೆಹೋವನೇ, ನೀನೇ ಅಲ್ಲವೋ!
ಆದದರಿಂದ ನಿನ್ನನ್ನು ನಿರೀಕ್ಷಿಸುವೆವು;
ಯಾಕಂದರೆ ನೀನೇ ಇವುಗಳನ್ನೆಲ್ಲಾ ಮಾಡುತ್ತೀ.

## ೧೫. ಸಂಧಿ.

೧ ಆಗ ಕರ್ತನು ನನಗೆ ಹೇಳಿದ್ದೇನಂದರೆ—
ಮೋಶೆಯೂ ಸಮುವೇಲನೂ ನನ್ನ ಮುಂದೆ ನಿಂತರೂ,
ನನ್ನ ಮನಸ್ಸು ಈ ಜನರ ಮೇಲೆ ಇರುವದಿಲ್ಲ.
ಅವರನ್ನು ನನ್ನ ಸನ್ನಿಧಿಯಿಂದ ಕಳುಹಿಸಿ ಬಿಡು;
ಅವರು ಹೋಗಲಿ.
೨ ಮತ್ತು ಅವರು ನಿನಗೆ—
ನಾವು ಎಲ್ಲಿ ಹೋಗಲಿ! ಎಂದು ಹೇಳಿದರೆ,
ನೀನು ಅವರಿಗೆ ಹೇಳ ಬೇಕಾದದ್ದೇನಂದರೆ—
ಕರ್ತನು ಹೀಗೆ ಹೇಳುತ್ತಾನೆ—
ಮರಣಕ್ಕೆ ಇರುವವರು ಮರಣಕ್ಕೆ;
ಕತ್ತಿಗೆ ಇರುವವರು ಕತ್ತಿಗೆ;
ಬರಕ್ಕೆ ಇರುವವರು ಬರಕ್ಕೆ;
ಕೆರೆಗೆ ಇರುವವರು ಕೆರೆಗೆ.
3 ಕರ್ತನು ಅನ್ನುತ್ತಾನೆ—
ನಾನು ಅವರಿಗೆ ವಿರೋಧವಾಗಿ ನಾಲ್ಕು ತರಗಳನ್ನು—
ಕೊಲ್ಲುವದಕ್ಕೆ ಕತ್ತಿಯನ್ನೂ,
ಹರಿಯುವದಕ್ಕೆ ನಾಯಿಗಳನ್ನೂ,
ತಿನ್ನುವದಕ್ಕೂ, ನಾಶನ ಮಾಡುವದಕ್ಕೂ
ಆಕಾಶದ ಪಕ್ಷಿಗಳನ್ನೂ, ಭೂಮಿಯ ಮೃಗಗಳನ್ನೂ,
ನೇಮಿಸುತ್ತೇನೆ.
೪ ಮತ್ತು ಅವರನ್ನು,
ಹಿಸ್ಕೀಯನ ಮಗನಾದ ಯೆಹೂದದ ಅರಸನಾದ ಮನಸ್ಸೆಯ ನಿಮಿತ್ತವೂ,
ಇವನು ಯೆರೂಸಲೇಮಿನಲ್ಲಿ ಮಾಡಿದ್ದರ ನಿಮಿತ್ತವೂ,
ಭೂಮಿಯ ಎಲ್ಲಾ ರಾಜ್ಯಗಳಿಗೆ ಚದರಿ ಹೋಗ ಮಾಡುವೆನು.
೫ ಯಾಕಂದರೆ ಯೆರೂಸಲೇಮೇ!
ನಿನ್ನ ಮೇಲೆ ಯಾರು ಕನಿಕರ ಪಡುವರು!
ನಿನಗೋಸ್ಕರ ಯಾರು ದುಃಖಿಸುವರು!
ನಿನ್ನ ಕ್ಷೇಮವನ್ನು ಕುರಿತು ಕೇಳುವದಕ್ಕೆ
ಯಾರು ವಾರೆ ಹೋಗುವರು!
೬ ನೀನು ನನ್ನನ್ನು ಬಿಟ್ಟು ಬಿಟ್ಟಿದ್ದೀ ಎಂದು ಕರ್ತನು ಅನ್ನುತ್ತಾನೆ;
ನೀನು ಹಿಂದಕ್ಕೆ ಸರದಿದ್ದೀ
ಆದದರಿಂದ ನನ್ನ ಕೈ ನಿನಗೆ ವಿರೋಧವಾಗಿ ಚಾಚಿ,
ನಿನ್ನನ್ನು ನಾಶ ಮಾಡುವೆನು;
ಪಶ್ಚಾತ್ತಾಪ ಪಡುವದರಲ್ಲಿ ದಣಿದಿದ್ದೇನೆ.
೭ ಅವರನ್ನು ಪೊರದಿಂದ,
ದೇಶದ ಬಾಗಲುಗಳಲ್ಲಿ ತೂರಿದ್ದೇನೆ;
ನನ್ನ ಜನರನ್ನು ಮಕ್ಕಳಿಲ್ಲದವರಾಗ ಮಾಡಿದ್ದೇನೆ;
ನಾಶ ಮಾಡಿದ್ದೇನೆ;
ಅವರು ತಮ್ಮ ಮಾರ್ಗಗಳನ್ನು ಬಿಟ್ಟು ತಿರುಗದ್ದರಿಂದಲೇ.
೮ ಅವರ ವಿಧವೆಗಳು ಸಮುದ್ರದ ಮರಳಿಗಿಂತ ನನಗೆ ಹೆಚ್ಚಾದರು;
ನಾನು ಅವರ ಒಳ್ಳಗೆ,
ತಾಯಿಯ ಮೋಲೆಯೂ, ಪ್ರಾಯದವನ ಮೇಲೆಯೂ,

ಮಧ್ಯಾಹ್ನದಲ್ಲಿ ನಾಕನ ಮಾಡುವವನನ್ನು ತರಸಿದ್ದೇನೆ;
ಇದ್ದಕ್ಕಿದ್ದ ಹಾಗೆ ಅವಳ ಮೇಲೆ,
ಹೆದರಿಕೆಯನ್ನೂ, ಘೂಬರಿಯನ್ನೂ, ಬೀಳ್ಳ ಮಾಡಿದ್ದೇನೆ.
೯ ಏಳು ಮಂದಿಯನ್ನು ಹೆತ್ತವಳು ಕುಂದುತ್ತಾಳೆ;
ತನ್ನ ಪ್ರಾಣವನ್ನು ಬಿಡುತ್ತಾಳೆ;
ಹಗಲಿರುವಾಗಲೇ ಅವಳ ಸೂರ್ಯನು ಅಸ್ತಮಿಸುತ್ತಾನೆ;
ನಾಚಿಕೆ ಪಡುತ್ತಾಳೆ; ಘೂಬರಿಯಾಗುತ್ತಾಳೆ;
ಇದಲ್ಲದೆ ಅವರ ಉಳಿವನ್ನು
ಅವರ ಶತ್ರುಗಳ ಮುಂದೆ ಕತ್ತಿಗೆ ಕೊಡುವೆನೆಂದು,
ಕರ್ತನು ಅನ್ನುತ್ತಾನೆ.

೧೦ ನನ್ನ ತಾಯಿಯೇ! ನನಗೆ ಅಯ್ಯೋ!
ನೀನು ನನ್ನನ್ನು ದೇಶಕ್ಕೆಲ್ಲಾ ವ್ಯಾಜ್ಯಗಾರನಾಗಿಯೂ,
ತರ್ಕದವನಾಗಿಯೂ ಹೆತ್ತಿದ್ದಿಯಲ್ಲ!
ನಾನು ಸಾಲ ಕೊಡಲಿಲ್ಲ, ತಕ್ಕೊಳ್ಳಲಿಲ್ಲ;
ಆದಾಗ್ಯೂ ಅವಕೆಲ್ಲರು ನನ್ನನ್ನು ಶಪಿಸುತ್ತಾರೆ.
೧೧ ಕರ್ತನು ಹೇಳುವದೇನಂದರೆ—
ನಾನು ನಿನ್ನನ್ನು ಒಳ್ಳೇದಕ್ಕಾಗಿ ಬಿಡಿಸಲಿಲ್ಲವೇ!
ಕೇಡಿನ ಕಾಲದಲ್ಲಿಯೂ, ಇಕ್ಕಟ್ಟಿನ ಕಾಲದಲ್ಲಿಯೂ,
ಶತ್ರುವನ್ನು ನಿನಗೋಸ್ಕರ ಬೇಡಿಕೊಳ್ಳ ಮಾಡಲಿಲ್ಲವೇ!
೧೨ ಕಬ್ಬಿಣವನ್ನೂ, ಉತ್ತರದ ಕಬ್ಬಿಣವನ್ನೂ,
ಹಿತ್ತಾಳೆಯನ್ನೂ, ಮುರಿಯುವದಕ್ಕಾಗುವದೋ!
ನಿನ್ನ ಆಸ್ತಿಯನ್ನೂ, ನಿನ್ನ ಬೊಕ್ಕಸಗಳನ್ನೂ,
೧೩ ನಿನ್ನ ಎಲ್ಲಾ ಪ್ರಾಂತ್ಯಗಳಲ್ಲಿ ನಿನ್ನ ಎಲ್ಲಾ ಪಾಪಗಳ ನಿಮಿತ್ತ,
ಕ್ರಯವಿಲ್ಲದೆ, ಕೊಳ್ಳೆಯಾಗಿ ಕೊಟ್ಟು ಬಿಡುವೆನು.
೧೪ ಮತ್ತು ನಿನ್ನನ್ನು, ನಿನಗೆ ತಿಳಿಯದ ದೇಶದಲ್ಲಿ,
ನಿನ್ನ ಶತ್ರುಗಳಿಗೆ ಸೇವಿಸ ಮಾಡುವೆನು;
ಯಾಕಂದರೆ, ನನ್ನ ಕೋಪದಲ್ಲಿ ಬೆಂಕಿ ಹತ್ತಿ ಅದೆ;
ಅದು ನಿಮಗೆ ವಿರೋಧವಾಗಿ ಉರಿಯುವದು.

೧೫ ಓ ಕರ್ತನೇ! ನೀನೇ ಬಲ್ಲಿ—
ನನ್ನನ್ನು ಜ್ಞಾಪಕ ಮಾಡಿ, ವಿಚಾರಿಸಿ,
ನನ್ನನ್ನು ಹಿಂದಟ್ಟುವವರಿಗೆ ನನಗೋಸ್ಕರ ಮುಯ್ಯಿಗೆ ಮುಯ್ಯಿ
ತೀರಿಸು;
ನಿನ್ನ ದೀರ್ಘಶಾಂತಿಯಲ್ಲಿ ನನ್ನನ್ನು ತೆಗೆದು ಬಿಡ ಬೇಡ;
ನಿನ್ನ ನಿಮಿತ್ತ ನಿಂದೆ ಪಡುತ್ತೇನೆಂದು ತಿಳಿಕೋ,
ನಿನ್ನ ವಾಕ್ಯಗಳು ಸಿಕ್ಕಿದವು,
೧೬ ಮತ್ತು ಅವುಗಳನ್ನು ತಿಂದೆನು,
ನಿನ್ನ ವಾಕ್ಯವು ನನ್ನ ಹೃದಯಕ್ಕೆ ಉಲ್ಲಾಸವೂ, ಸಂತೋಷ
ವೂ, ಆಗಿತ್ತು;
ಯಾಕಂದರೆ, ಓ ಸೈನ್ಯಗಳ ದೇವರಾದ ಯೆಹೋವನೇ!
ನಿನ್ನ ಹೆಸರಿನಿಂದ ಕರೆಯಲ್ಪಟ್ಟಿದ್ದೇನೆ.
೧೭ ನಾನು ಹಾಸ್ಯಗಾರರ ಕೂಟದಲ್ಲಿ ಕೂತುಕೊಂಡು, ಉಲ್ಲಾಸ
ಪಡಲಿಲ್ಲ,
ನಿನ್ನ ಕೈಯ್ಯ ನಿಮಿತ್ತ ಒಂಟಿಯಾಗಿ ಕೂತುಕೊಂಡಿದ್ದೇನೆ;
ಯಾಕಂದರೆ ನನ್ನನ್ನು ಉಗ್ರದಿಂದ ತುಂಬಿಸಿದ್ದೀ.
೧೮ ಯಾತಕ್ಕೆ ನನ್ನ ವ್ಯಸನವು ನಿತ್ಯವಾಗಿಯೂ,
ನನ್ನ ಘಾಯವು ವಾಸಿಯಾಗಲೊಲ್ಲದೆ, ಸ್ವಸ್ಥವಾಗದ್ದಾಗಿಯೂ
ಇದೆ!
ನೀನು ನನಗೆ ಶುದ್ಧವಾಗಿ ಮೋಸವಾದ ಹಳ್ಳದಂತೆಯೂ,
ಸ್ಥಿರವಿಲ್ಲದ ನೀರಿನಂತೆಯೂ, ಆಗಿದ್ದೀ.

೧೯ ಆದದರಿಂದ ಕರ್ತನು ಹೇಳುವದೇನಂದರೆ—
ನೀನು ತಿರಿಗಿಕೊಂಡರೆ,
ನಾನು ನಿನ್ನನ್ನು ತಿರಿಗಿ ತರುವೆನು; ನನ್ನ ಮುಂದೆ ನಿಲ್ಲುವಿ;
ಮತ್ತು ನೀನು ಅಮೂಲ್ಯವಾದದ್ದನ್ನು ನೀಚವಾದದಕ್ಕೊಳ್ಳಗಿಂದ
ಹೊರಗೆ ತಂದರೆ,
ನನ್ನ ಬಾಯಿಯ ಹಾಗಿರುವಿ;
ಅವರು ನಿನ್ನ ಕಡೆಗೆ ತಿರುಗಲಿ,
ಆದರೆ ನೀನು ಅವರ ಕಡೆಗೆ ತಿರುಗ ಬೇಡ.
೨೦ ಇದಲ್ಲದೆ ನಾನು ನಿನ್ನನ್ನು ಈ ಜನಕ್ಕೆ
ಬಲವಾದ ಹಿತ್ತಾಳೆಯ ಗೋಡೆಯಾಗ ಮಾಡುತ್ತೇನೆ;
ನಿನಗೆ ವಿರೋಧವಾಗಿ ಯುದ್ಧ ಮಾಡುವರು;
ಆದರೆ ನಿನ್ನನ್ನು ಜಯಿಸಲಾರರು;
ಯಾಕಂದರೆ ನಾನೇ ನಿನ್ನನ್ನು ರಕ್ಷಿಸುವದಕ್ಕೂ, ನಿನ್ನನ್ನು ತ
ಪ್ಪಿಸುವದಕ್ಕೂ,
ನಿನ್ನ ಸಂಗಡ ಇದ್ದೇನೆಂದು ಕರ್ತನು ಅನ್ನುತ್ತಾನೆ.
೨೧ ಮತ್ತು ಕೆಟ್ಟವರ ಕೈಯೊಳ್ಳಗಿಂದ ನಿನ್ನನ್ನು ತಪ್ಪಿಸುತ್ತೇನೆ;
ಬಲಿಷ್ಠರ ಅಂಗೈಯೊಳ್ಳಗಿಂದ ನಿನ್ನನ್ನು ವಿಮೋಚಿಸುತ್ತೇನೆ.

## ೧೬. ಸಂಧಿ.

೧ ಮತ್ತು ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ—
೨ ಈ ಸ್ಥಳದಲ್ಲಿ ನೀನು ಹೆಂಡತಿಯನ್ನು ತಕ್ಕೊಳ್ಳ ಬೇಡ;
ನಿನಗೆ ಕುಮಾರ ಕುಮಾರ್ತೆಗಳು ಇರ ಬೇಡ.
3 ಯಾಕಂದರೆ, ಈ ಸ್ಥಳದಲ್ಲಿ ಹುಟ್ಟಿರುವ ಕುಮಾರ ಕುಮಾರ್ತೆ
ಗಳನ್ನು ಕುರಿತು,
ಮತ್ತು ಅವರನ್ನು ಹೆತ್ತ ತಾಯಿಗಳನ್ನೂ, ಈ ದೇಶದಲ್ಲಿ ಅವ
ರನ್ನು ಪಡೆದ ತಂದೆಗಳನ್ನೂ ಕುರಿತು,
ಕರ್ತನು ಹೀಗೆ ಹೇಳುತ್ತಾನೆ—
೪ ಅವರು ಬಹು ಕಠಿಣವಾದ ಮರಣಗಳಿಂದ ಸಾಯುವರು;
ಅವರಿಗೋಸ್ಕರ ಗೋಳ್ಳಾಟ ಆಗುವದಿಲ್ಲ;
ಅವರು ಹೂಳಿಡಲ್ಪಡುವದಿಲ್ಲ;
ಭೂಮಿಯ ಮೇಲೆ ಗೊಬ್ಬರವಾಗುವರು;
ಕತ್ತಿಯಿಂದಲೂ, ಬರದಿಂದಲೂ, ಸಂಹಾರವಾಗುವರು;
ಅವರ ಹೆಣಗಳು ಆಕಾಶದ ಪಕ್ಷಿಗಳಿಗೂ, ಭೂಮಿಯ ಮೃಗಗ
ಳಿಗೂ, ಆಹಾರವಾಗುವವು.
೫ ಯಾಕಂದರೆ, ಕರ್ತನು ಹೀಗೆ ಹೇಳುತ್ತಾನೆ—
ನೀವು ಅಗುವ ಮನೆಯಲ್ಲಿ ಪ್ರವೇಶಿಸ ಬೇಡ,
ಅವರ ಸಂಗಡ ಗೋಳ್ಳಾಡುವದಕ್ಕೂ ದುಃಖ ಪಡುವದಕ್ಕೂ
ಹೋಗ ಬೇಡ;



ಯಾಕಂದರೆ, ನಾನು ನನ್ನ ಸಮಾಧಾನವನ್ನೂ,
ಕೃಪೆಯನ್ನೂ, ಕರುಣೆಯನ್ನೂ,
ಈ ಜನರಿಂದ ತೆಗೆದು ಹಾಕಿದ್ದೇನೆಂದು,
ಕರ್ತನು ಅನ್ನುತ್ತಾನೆ.
೬ ದೊಡ್ಡವರೂ ಚಿಕ್ಕವರೂ ಈ ದೇಶದಲ್ಲಿ ಸಾಯುವರು;
ಅವರು ಹೂಣಿಡಲ್ಪಡುವದಿಲ್ಲ;
ಅವರಿಗೋಸ್ಕರ ಯಾರು ಗೋಳ್ಳಾಡುವದಿಲ್ಲ;
ಅವರಿಗೋಸ್ಕರ ತಮ್ಮನ್ನು ಕೊಯ್ಯುವದಿಲ್ಲ; ಬೋಳ್ಳಿಸಿ ಕೊ
ಳ್ಳವದಿಲ್ಲ;
೭ ಸತ್ತವರ ವಿಷಯ, ಅವರನ್ನು ಆದರಿಸುವ ಬಗ್ಗೆ,
ಅವರಿಗೆ ದುಃಖದ ಕೊಟ್ಟಿಯನ್ನು ಮುರಿದು ಕೊಡುವದಿಲ್ಲ;
ತಂದೆ ತಾಯಿಗಳ ವಿಷಯವಾದರೂ
ಅವರಿಗೆ ಆದರಣೆಯ ಪಾತ್ರೆಯನ್ನು ಕುಡಿಯ ಕೊಡುವದಿಲ್ಲ.
೮ ಅವರ ಸಂಗಡ ಕೂತುಕೊಂಡು ಉಣ್ಣುವದಕ್ಕೂ ಕುಡಿ
ಯುವದಕ್ಕೂ,
ಔತಣದ ಮನೆಯಲ್ಲಿ ಪ್ರವೇಶಿಸ ಬೇಡ.
೯ ಯಾಕಂದರೆ, ಇಸ್ರಯೇಲಿನ ದೇವರಾಗಿರುವ ಸೈನ್ಯಗಳ ಯೆ
ಹೋವನು ಹೀಗೆ ಹೇಳುತ್ತಾನೆ—
ಇಗೋ, ನಾನು ನಿಮ್ಮ ಕಣ್ಣುಗಳ ಮುಂದೆಯೂ, ನಿಮ್ಮ ದಿನ
ಗಳಲ್ಲಿಯೂ,
ಉಲ್ಲಾಸದ ಶಬ್ದವನ್ನೂ, ಸಂತೋಷದ ಶಬ್ದವನ್ನೂ,
ಮದಲಿಂಗನ ಶಬ್ದವನ್ನೂ, ಮದಲಗಿತ್ತಿಯ ಶಬ್ದವನ್ನೂ,
ಈ ಸ್ಥಳದೊಳ್ಳಗಿಂದ ನಿಲ್ಲಿಸಿ ಬಿಡುತ್ತೇನೆ.
೧೦ ಇದಲ್ಲದೆ ನೀನು ಈ ಜನರಿಗೆ ಈ ಮಾತುಗಳನ್ನೆಲ್ಲಾ ತಿಳಿಸಿದ
ಮೇಲೆ, ಅವರು ನಿನಗೆ—ಯಾಕೆ ಕರ್ತನು ನಮ್ಮ ಮೇಲೆ ಈ
ದೊಡ್ಡ ಕೇಡನ್ನು ಮಾತಾಡಿದ್ದಾನೆ? ನಮ್ಮ ಅಕ್ರಮ ಏನು! ನಾವು
ನಮ್ಮ ದೇವರಾದ ಯೆಹೋವನಿಗೆ ವಿರೋಧವಾಗಿ ಮಾಡಿರುವ
ಪಾಪವೇನು! ಎಂದು ಹೇಳಿದರೆ—ನೀನು ಅವರಿಗೆ ಹೇಳ ಬೇಕಾದ
ದ್ದೇನಂದರೆ—
೧೧ ನಿಮ್ಮ ತಂದೆಗಳು ನನ್ನನ್ನು ಬಿಟ್ಟು ಬಿಟ್ಟದರಿಂದಲೇ,
ಕರ್ತನು ಅನ್ನುತ್ತಾನೆ.
ಅವರು ಬೇರೆ ದೇವರುಗಳನ್ನು ಹಿಂಬಾಲಿಸಿ,
ಅವುಗಳನ್ನು ಸೇವಿಸಿ, ಅವುಗಳನ್ನು ಆರಾಧಿಸಿ,
ನನ್ನನ್ನು ಬಿಟ್ಟು ಬಿಟ್ಟು, ನನ್ನ ನ್ಯಾಯ ಪ್ರಮಾಣವನ್ನು ಕೈ
ಕೊಳ್ಳಲಿಲ್ಲ.
೧೨ ಮತ್ತು ನೀವು ನಿಮ್ಮ ತಂದೆಗಳಿಗಿಂತ ಕೆಟ್ಟ ಕೆಲಸ ಮಾಡಿ,
ಇಗೋ ನನ್ನನ್ನು ಕೇಳದ ಹಾಗೆ,
ನಿಮ್ಮ ನಿಮ್ಮ ಕೆಟ್ಟ ಹೃದಯದ ಕಾಠಿಣ್ಯದ ಪ್ರಕಾರ
ನಡೆದುಕೊಂಡಿದ್ದೀರಿ.
೧೩ ಆದದರಿಂದ ನಾನು ನಿಮ್ಮನ್ನು ಈ ದೇಶದೊಳ್ಳಗಿಂದ ಬಿಸಾಟು,
ನಿಮಗೂ, ನಿಮ್ಮ ತಂದೆಗಳಿಗೂ, ತಿಳಿಯದ ದೇಶಕ್ಕೆ ಹಾಕುವೆನು;
ಅಲ್ಲಿ ನೀವು ರಾತ್ರಿ ಹಗಲು ಬೇರೆ ದೇವರುಗಳಿಗೆ ಸೇವೆ ಮಾಡು
ವಿರಿ,
ಮತ್ತು ನಾನು ನಿಮಗೆ ಕನಿಕರ ತೋರಿಸುವದಿಲ್ಲ.
೧೪ ಆದಾಗ್ಯೂ ಕರ್ತನು ಅನ್ನುವದೇನಂದರೆ—
ಇಗೋ ದಿವಗಳು ಬರುವವು;
ಆಗ—ಇಸ್ರಯೇಲನ ಮಕ್ಕಳನ್ನು ಐಗುತ್ತ ದೇಶದೊಳ್ಳಗಿಂದ
ಮೇಲೆ ಬರ ಮಾಡಿದ ಕರ್ತನು ಜೀವಿಸುತ್ತಾನೆಂದು ಇನ್ನು ಹೇ
ಳ್ಳವೆ,
೧೫ ಇಸ್ರಯೇಲನ ಮಕ್ಕಳನ್ನು ಉತ್ತರ ದೇಶದೊಳ್ಳಗಿಂದಲೂ,
ಅವನು ಅವರನ್ನು ತಳ್ಳಿ ಬಿಟ್ಟಿದ್ದ ಸಮಸ್ತ ದೇಶಗಳೊಳ್ಳಗಿಂ
ದಲೂ,
ತಿರಿಗಿ ಬರ ಮಾಡಿದ ಕರ್ತನು ಜೀವಿಸುತ್ತಾನೆಂದು ಹೇಳು
ವರು;
ಯಾಕಂದರೆ, ನಾನು ಅವರ ತಂದೆಗಳ್ಳಗೆ ಕೊಟ್ಟಂಥ ತಮ್ಮ ದೇ
ಶಕ್ಕೆ ಅವರನ್ನು ತಿರಿಗಿ ಬರ ಮಾಡುವೆನು.
೧೬ ಇಗೋ, ನಾನು ಅನೇಕ ಮೀನುಗಾರರನ್ನು ಕಳುಹಿಸುತ್ತೇನೆಂ
ದು ಕರ್ತನು ಅನ್ನುತ್ತಾನೆ;
ಇವರು ಅವರನ್ನು ಹಿಡಿಯುವರು;
ಆ ಮೇಲೆ ಅನೇಕ ಬೇಟೆಗಾರರನ್ನು ಕಳುಹಿಸುವೆನು;
ಇವರು ಎಲ್ಲಾ ಬೆಟ್ಟಗಳ ಮೇಲೆಯೂ,
ಎಲ್ಲಾ ಗುಡ್ಡಗಳ ಮೇಲೆಯೂ,
ಎಲ್ಲಾ ಬಂಡೆಗಳ ಬಿರುಕುಗಳಲ್ಲಿಯೂ,
ಅವರನ್ನು ಬೇಟೆಯಾಡುವರು.
೧೭ ಯಾಕಂದರೆ, ನನ್ನ ಕಣ್ಣುಗಳು ಅವರ ಎಲ್ಲಾ ಮಾರ್ಗಗಳ
ಮೇಲೆ ಅವೆ;
ಅವು ನನ್ನ ಮುಖಕ್ಕೆ ಮರೆಯಾದವುಗಳಲ್ಲ;
ಅವರ ಅಕ್ರಮವು ನನ್ನ ಕಣ್ಣುಗಳಿಗೆ ಅಡಗಿರಲಿಲ್ಲ.
೧೮ ಆದರೆ ಮೊದಲು ನಾನು ಅವರ ಅಕ್ರಮಕ್ಕೂ, ಅವರ ಪಾಪಕ್ಕೂ,
ಎರಡುಪ್ಪು ಪ್ರತಿಫಲ ಕೊಡುತ್ತೇನೆ;
ಅವರು ನನ್ನ ದೇಶವನ್ನು
ತಮ್ಮ ಹೇಸಿಗೆಗಳ ಹೊಗಳ್ಳಿಂದ ಅಪವಿತ್ರ ಮಾಡಿ,
ನನ್ನ ಸ್ವಾಸ್ತ್ಯವನ್ನು ತಮ್ಮ ಅಸಹ್ಯಗಳ್ಳಿಂದ ತುಂಬಿಸಿದ್ದರಿಂ
ದಲೇ.

೧೯ ಓ ಯೆಹೋವನೇ!
ನನ್ನ ಬಲವೇ! ನನ್ನ ಕೋಟೆಯೇ!
ಇಕ್ಕಟ್ಟಿನ ದಿವಸದಲ್ಲಿ ನನ್ನ ಆಶ್ರಯವೇ!
ಭೂಮಿಯ ಅಂತ್ಯಗಳ್ಳಿಂದ ಜನಾಂಗಗಳು ನಿನ್ನ ಬಳ್ಳಿಗೆ ಬಂದು—
ನಿಶ್ಚಯವಾಗಿ ನಮ್ಮ ತಂದೆಗಳು ಸುಳ್ಳನ್ನು ಬಾಧ್ಯವಾಗಿ ಹೊಂ
ದಿದ್ದಾರೆ;
ಅದು ಮಾಯವೇ;
ಅದರಲ್ಲಿ ಏನೂ ಪ್ರಯೋಜನವಿಲ್ಲ;
೨೦ ಮನುಷ್ಯನು ದೇವರಲ್ಲದ ದೇವರುಗಳನ್ನು,
ತನಗೆ ಮಾಡುವದುಂಟೇ! ಎಂದನ್ನುವರು.
೨೧ ಆದದರಿಂದ ಇಗೋ ನಾನು ಈಸಾರಿ ಅವರಿಗೆ ತಿಳಿಸುವೆನು;
ನನ್ನ ಕೈಯನ್ನೂ ನನ್ನ ಪರಾಕ್ರಮವನ್ನೂ ಅವರಿಗೆ ತಿಳಿಸು
ವೆನು,
ನನ್ನ ಹೆಸರು ಎಹೋವನೇ ಎಂದು ತಿಳಿಕೊಳ್ಳುವರು.

## ೧೭. ಸಂಧಿ.

೧ ಯೆಹೂದದ ಪಾಪವು ಕಬ್ಬಿಣದ ಕಂಠದಿಂದಲೂ,
ವಜ್ರದ ಮೊನೆಯಿಂದಲೂ, ಬರೆಯಲ್ಪಟ್ಟಿತೆ;
ಅದು ಅವರ ಹೃದಯದ ಹಲಿಗೆಯ ಮೇಲೆಯೂ,
ಅವರ ಬಲಿಪೀಠಗಳ ಕೊಂಬುಗಳ ಮೇಲೆಯೂ, ಕೆತ್ತಲ್ಪಟ್ಟಿತೆ.
೨ ಅವರ ಮಕ್ಕಳು ಅವರ ಬಲಿಪೀಠಗಳನೂ,
ಹಸುರಾದ ಗಿಡಗಳಲ್ಲಿಯೂ, ಎತ್ತರವಾದ ಗುಡ್ಡಗಳ ಮೇಲೆಯೂ,
ಇರುವ ಅವರ ತೋಪುಗಳನೂ ಜ್ಞಾಪಕ ಮಾಡಿಕೊಳ್ಳುತ್ತಾರಲ್ಲ!
೩ ಹೊಲದಲ್ಲಿರುವ ನನ್ನ ಪರ್ವತವೇ!
ನಿನ್ನ ಬದುಕನೂ, ನಿನ್ನ ಎಲ್ಲಾ ಬೊಕ್ಕಸಗಳನೂ,
ನಿನ್ನ ಎಲ್ಲಾ ಚ್ರಾಂತ್ಯಗಳಲ್ಲಿ ಪಾಪಕ್ಕಾಗಿರುವ ನಿನ್ನ ಉನ್ನತ ಸ್ಥಳಗಳನೂ,
ಕೊಳ್ಳೆಗೆ ಒಪ್ಪಿಸುವೆನು.
೪ ಆಗ ನಿನ್ನದ್ದಕ್ಕೆ ನೀನೇ
ನಾನು ನಿನಗೆ ಕೊಟ್ಟ ಸ್ವಾಸ್ತ್ಯವನ್ನು ಬಿಟ್ಟು ಬಿಡುವಿ;
ಮತ್ತು ನಿನಗೆ ತಿಳಿಯದ ದೇಶದಲ್ಲಿ
ನಿನ್ನನ್ನು ನಿನ್ನ ಶತ್ರುಗಳನ್ನು ಸೇವಿಸ ಮಾಡುವೆನು;
ಯಾಕಂದರೆ, ನೀವು ನನ್ನ ಕೋಪದಿಂದ ಹತ್ತಿಸಿದ ಬೆಂಕಿ ನಿತ್ಯವಾಗಿ ಉರಿಯುವದು.

೫ ಕರ್ತನು ಹೇಳುವದೇನಂದರೆ—
ಮನುಷ್ಯನಲ್ಲಿ ನಂಬಿಕೆ ಇಟ್ಟು,
ಮಾಂಸವನ್ನು ತನ್ನ ತೋಳಾಗ ಮಾಡಿಕೊಂಡು,
ಕರ್ತನ ಕಡೆಯಿಂದ ತನ್ನ ಹೃದಯವು ತೊಲಗುವ ಪುರುಷನಿಗೆ ಶಾಪ!
೬ ಅವನು ಅಡವಿಯಲ್ಲಿರುವ ಒಣಗಿದ ಗಿಡದ ಹಾಗಿರುವನು;
ಒಳ್ಳೇದು ಬರುವಾಗ ನೋಡದೆ ಇರುವನು;
ನಿವಾಸಿಗಳಿಲ್ಲದ ಉಪ್ಪಿನ ದೇಶವಾದ ಅರಣ್ಯದಲ್ಲಿ,
ನೀರಿಲ್ಲದ ಸ್ಥಳಗಳಲ್ಲಿ, ವಾಸವಾಗಿರುವನು.
೭ ಕರ್ತನಲ್ಲಿ ನಂಬಿಕೆ ಇಡುವಂಥ,
ಕರ್ತನನ್ನು ತನ್ನ ನಂಬಿಕೆಯಾಗಿ ಮಾಡಿಕೊಳ್ಳುವಂಥ
ಪುರುಷನಿಗೆ ಆಶೀರ್ವಾದ!
೮ ಅವನು ನೀರಿನ ಬಳಿಯಲ್ಲಿ ನೆಡಲ್ಪಟ್ಟ,
ಪ್ರವಾಹದ ಬಳಿಯಲ್ಲಿ ತನ್ನ ಬೇರುಗಳನ್ನು ಹಬ್ಬಿಸುವ ಮರದ ಹಾಗಿರುವನು;
ಬಿಸಲು ಬರುವಾಗ ನೋಡದೆ ಇರುವದು;
ಅದರ ಎಲೆ ಹಸುರಾಗಿರುವದು;
ಮಳೆ ಇಲ್ಲದ ವರುಷದಲ್ಲಿ ಅದಕ್ಕೆ ಚಿಂತೆ ಇರುವದಿಲ್ಲ;
ಫಲ ಫಲಿಸುವದನ್ನು ಬಿಡುವದಿಲ್ಲ.

೯ ಹೃದಯವು ಎಲ್ಲಾದಕ್ಕಿಂತ ಕಪಟವುಳ್ಳದ್ದೂ,
ಮಹಾ ಕೆಟ್ಟದ್ದೂ,
ಅದನ್ನು ತಿಳಿಯುವವನ್ಯಾರು?
೧೦ ಕರ್ತನಾದ ನಾನೇ ಹೃದಯವನ್ನು ಪರೀಕ್ಷಿಸುತ್ತೇನೆ;
ಅಂತರಿಂದ್ರಿಯಗಳನ್ನು ಶೋಧಿಸುತ್ತೇನೆ;
ಒಬ್ಬೊಬ್ಬನಿಗೆ ತನ್ನ ಮಾರ್ಗಗಳ ಪ್ರಕಾರವೂ,
ತನ್ನ ಕ್ರಿಯೆಗಳ ಫಲದ ಪ್ರಕಾರವೂ,
ಕೊಡುವದಕ್ಕಾಗಿಯೇ.

೧೧ ಕೌಜು ಮೊಟ್ಟೆಗಳ ಮೇಲೆ ಕೂತುಕೊಂಡು ಹೊದಗುವಪ್ಪಂದ
ನ್ಯಾಯವಿಲ್ಲದೆ ಐಶ್ವರ್ಯವನ್ನು ಸಂಪಾದಿಸುವವನು ಹಾಗೆಯೇ ಇದ್ದಾನೆ;
ತನ್ನ ದಿವಸಗಳ ಮಧ್ಯದಲ್ಲಿ ಅದನ್ನು ಬಿಡುವನು;
ತನ್ನ ಅಂತ್ಯದಲ್ಲಿ ಹುಚ್ಚನಾಗಿರುವನು.

೧೨ ನಮ್ಮ ಪರಿಶುದ್ಧ ಸ್ಥಳವು ಆದಿಯಿಂದ ಉನ್ನತವಾದ ಮಹಿಮೆಯ ಸಿಂಹಾಸನವು.
ಇಸ್ರಯೇಲಿನ ನಿರೀಕ್ಷಣೆಯಾದ ಯೆಹೋವನೇ!
೧೩ ನಿನ್ನನ್ನು ಬಿಡುವವರೆಲ್ಲರು ನಾಚಿಕೆ ಪಡುವರು.
ನನ್ನಿಂದ ತೊಲಗುವವರು
ಜೀವವುಳ್ಳ ನೀರಿನ ಬುಗ್ಗೆಯಾದ ಕರ್ತನನ್ನು ಬಿಟ್ಟದರಿಂದ,
ಭೂಮಿಯಲ್ಲಿ ಬರೆಯಲ್ಪಡುವರು.

೧೪ ಕರ್ತನೇ, ನನ್ನನ್ನು ಸ್ವಸ್ಥ ಮಾಡು, ಆಗ ಸ್ವಸ್ಥವಾಗುವೆನು;
ನನ್ನನ್ನು ರಕ್ಷಿಸು, ಆಗ ರಕ್ಷಿಸಲ್ಪಡುವೆನು;
ಯಾಕಂದರೆ, ನೀನೇ ನನ್ನ ಸ್ತೋತ್ರವು.
೧೫ ಇಗೋ, ಅವರು ನನಗೆ—ಕರ್ತನ ವಾಕ್ಯವು ಎಲ್ಲಿ!
ಅದು ಬರಲಿ, ಎಂದನ್ನುತ್ತಾರೆ.
೧೬ ಆದರೆ ನಾನು ನಿನ್ನನ್ನು ಹಿಂಬಾಲಿಸುವ ಕುರುಬನಾಗದ ಹಾಗೆ ಹಿಂಜರಿಯಲಿಲ್ಲ;
ದುರ್ದಿನವನ್ನು ಅಪೇಕ್ಷಿಸಲಿಲ್ಲ, ನೀನು ಬಲ್ಲಿ;
ನನ್ನ ತುಟಿಗಳಿಂದ ಹೊರಟದ್ದು ನಿನ್ನ ಸನ್ನಿಧಿಯ ಮುಂದೆ ಇತ್ತು.
೧೭ ನೀನು ನನಗೆ ಹೆದರಿಕೆಯಾಗ ಬೇಡ;
ಕೆಟ್ಟ ದಿನದಲ್ಲಿ ನೀನೇ ನನ್ನ ಆಶ್ರಯವು.
೧೮ ನನ್ನನ್ನು ಹಿಂದಟ್ಟುವವರು ನಾಚಿಕೆ ಪಡಲಿ;
ಆದರೆ ನಾನು ನಾಚಿಕೆ ಪಡದೆ ಇರಲಿ;
ಅವರು ದಿಗುಲು ಪಡಲಿ;
ಆದರೆ ನಾನು ದಿಗಲು ಪಡದೆ ಇರಲಿ.
ಕೆಟ್ಟ ದಿನವನ್ನು ಅವರ ಮೇಲೆ ಶರಸು;
ಎರಡಬ್ಬಾದ ಮುರಿಯೋಣದಿಂದ ಅವರನ್ನು ಮುರಿಸು.

೧೯ ಕರ್ತನು ನನಗೆ ಹೇಳಿದ್ದೇನಂದರೆ—ಹೋಗಿ, ಜನರ ಮಕ್ಕಳ ಬಾಗಲಲ್ಲಿ, ಯೆಹೂದದ ಅರಸರು ಪ್ರವೇಶಿಸುವಲ್ಲಿ, ಹೊರಡುವಲ್ಲಿ, ಯೆರೂಸಲೇಮಿನ ಎಲ್ಲಾ ಬಾಗಲುಗಳಲ್ಲಿ, ನಿಂತು ಕೊಂಡು,
೨೦ ಅವರಿಗೆ ಹೀಗೆ ಹೇಳು, ಏನಂದರೆ—ಯೆಹೂದದ ಅರಸರೇ! ಸಮಸ್ತ ಯೆಹೂದವೇ! ಈ ಬಾಗಲುಗಳಲ್ಲಿ ಪ್ರವೇಶಿಸುವ ಯೆರೂಸಲೇಮಿನ ನಿವಾಸಿಗಳೆಲ್ಲರೇ! ಕರ್ತನ ವಾಕ್ಯವನ್ನು ಕೇಳಿರಿ. ಕರ್ತ
೨೧ ನು ಹೇಳುವದೇನಂದರೆ- ನಿಮಗೆ ನೀವೇ ಎಚ್ಚರಿಕೆಯಾಗಿರಿ;



ಸಬ್ಬತಿನ ದಿವಸದಲ್ಲಿ ಹೊರೆಯನ್ನು ಹೊತ್ತುಕೊಂಡು, ಯೆರೂಸಲೇಮಿನ ಬಾಗಲುಗಳೊಳಗೆ ತಕ್ಕೊಂಡು ಬರ ಬೇಡಿರಿ. ಮತ್ತು ಸಬ್ಬತಿನ ದಿವಸದಲ್ಲಿ, ಹೊರೆಯನ್ನು ನಿಮ್ಮ ಮನೆಗಳೊಳಗಿಂದ ತಕ್ಕೊಂಡು ಹೋಗ ಬೇಡಿರಿ; ಯಾವ ಕೆಲಸವನ್ನೂ ಮಾಡ ಬೇಡಿರಿ; ಸಬ್ಬತಿನ ದಿವಸವನ್ನು ಪರಿಶುದ್ಧ ಮಾಡಬೇಕು; ನಾನು ನಿಮ್ಮ ತಂದೆಗಳಿಗೆ ಆಜ್ಞಾಪಿಸಿದ ಪ್ರಕಾರವೇ. ಆದರೆ ಅವ
೨೩ ರು ಕೇಳಲಿಲ್ಲ; ಕಿವಿ ಬೊಗ್ಗಿಸಲಿಲ್ಲ; ಕೇಳದ ಹಾಗೆಯೂ, ಉಪದೇಶ ಹೊಂದದ ಹಾಗೆಯೂ, ತಮ್ಮ ಕುತ್ತಿಗೆ ಕಠಿಣ ಮಾಡಿಕೊಂಡರು.
೨೪ ಮತ್ತು ಆಗುವದೇನಂದರೆ, ನೀವು ನನ್ನನ್ನು ಜಾಗ್ರತೆಯಾಗಿ ಕೇಳಿ, ಸಬ್ಬತಿನ ದಿವಸದಲ್ಲಿ, ಈ ಪಟ್ಟಣದ ಬಾಗಲುಗಳಲ್ಲಿ ಹೊರೆಯನ್ನು ತಕ್ಕೊಂಡ ಬಾರದೆ, ಸಬ್ಬತಿನ ದಿವಸವನ್ನು, ಅದರಲ್ಲಿ ಯಾವದೊಂದು ಕೆಲಸ ಮಾಡದೆ, ಪರಿಶುದ್ಧ ಮಾಡಿದರೆ,
೨೫ ಆಗ ದಾವೀದನ ಸಿಂಹಾಸನದ ಮೇಲೆ ಕೂತ್ತುವ ಅರಸರೂ, ಪ್ರಧಾನರೂ, ರಥಗಳಲ್ಲಿಯೂ, ಕುದುರೆಗಳ ಮೇಲೆಯೂ, ಸವಾರಿ ಮಾಡಿಕೊಂಡು, ಯೆಹೂದದ ಮನುಷ್ಯರಾಗಿಯೂ, ಯೆರೂಸಲೇಮಿನ ನಿವಾಸಿಗಳಾಗಿಯೂ, ಇರುವ ತಾವೂ, ತಮ್ಮ ಪ್ರಧಾನರೂ, ಈ ಪಟ್ಟದ ಬಾಗಲುಗಳಲ್ಲಿ ಪ್ರವೇಶಿಸುವರು; ಮತ್ತು ಈ
೨೬ ಪಟ್ಟಣವು ಎಂದೆಂದಿಗೂ ನಿಲ್ಲುವದು. ಮತ್ತು ಯೆಹೂದದ ಪಟ್ಟಣಗಳಿಂದಲೂ, ಯೆರೂಸಲೇಮಿನ ಸುತ್ತಲಿಂದಲೂ, ಬೆನ್ಯಮಿನನ ದೇಶದಿಂದಲೂ, ಶೈಲಾ ಶೀಮೆಯಿಂದಲೂ, ಬೆಟ್ಟಗಳಿಂದಲೂ, ದಕ್ಷಿಣದಿಂದಲೂ, ಹೋಮಗಳನ್ನೂ, ಬಲಿಗಳನ್ನೂ, ಕಾಣಿಕೆಗಳನ್ನೂ, ಧೂಪಗಳನ್ನೂ ತರುವರು; ಸ್ತೋತ್ರದರ್ಪಣೆಗಳನ್ನು ಕರ್ತನ ಮನೆಗೆ ತರುವವರು ಸಹಿತವಾಗಿ ಬರುವರು.
೨೭ ಆದರೆ ನೀವು—ಸಬ್ಬತಿನ ದಿವಸವನ್ನು ಪರಿಶುದ್ಧ ಮಾಡುವ ಹಾಗೆಯೂ, ಸಬ್ಬತಿನ ದಿವಸದಲ್ಲಿ ಹೊರೆಯನ್ನು ಹೊತ್ತುಕೊಂಡು, ಯೆರೂಸಲೇಮಿನ ಬಾಗಲುಗಳಲ್ಲಿ ಕೇರದ ಹಾಗೆಯೂ, ನನ್ನನ್ನು ಕೇಳದೆ ಹೋದರೆ, ಆಗ ಅದರ ಬಾಗಲುಗಳಲ್ಲಿ ಬೆಂಕಿಯನ್ನು ಹಚ್ಚುತ್ತೇನೆ; ಅದು ಆರಿ ಹೋಗದೆ, ಯೆರೂಸಲೇಮಿನ ಅರಮನೆಗಳನ್ನು ದಹಿಸಿ ಬಿಡುವದು.

## ೧೮. ಸಂಧಿ.

೧ ಕರ್ತನಿಂದ ಯೆರೆಮಿಾಯನಿಗೆ ಉಂಟಾದ ವಾಕ್ಯವೇನಂದರೆ—
೨ ಎದ್ದು ಕುಂಬಾರನ ಮನೆಗೆ ಇಳಿದು ಹೋಗು; ಅಲ್ಲಿ ನಿನಗೆ ನನ್ನ ವಾಕ್ಯಗಳನ್ನು ಕೇಳ ಕೊಡುವೆನು.
೩ ಆಗ ನಾನು ಕುಂಬಾರನ ಮನೆಗೆ ಇಳಿದು ಹೋದೆನು; ಇ
೪ ಗೋ ಅವನು ಚಕ್ರದ ಮೇಲೆ ಕೆಲಸ ಮಾಡುತ್ತಿದ್ದನು. ಮತ್ತು ಅವನು ಮಣ್ಣಿನಿಂದ ಮಾಡಿದ ಪಾತ್ರೆ ಕುಂಬಾರನ ಕೈಯಲ್ಲಿ ಕೆಟ್ಟು ಹೋಯಿತು; ಆಗ ಕುಂಬಾರನಿಗೆ ಒಳ್ಳೇದೆಂದು ತೋರುವ ಪ್ರಕಾರ ಅದನ್ನು ಮತ್ತೊಂದು ಪಾತ್ರೆಯಾಗ ಮಾಡಿದನು.
೫ ಆಗ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ—
೬ ಇಸ್ರಯೇಲನ ಮನೆಯವರೇ!
ನಾನು ಈ ಕುಂಬಾರನ ಹಾಗೆ ನಿಮಗೆ ಮಾಡಲಾರೆನೇ!
ಎಂದು ಕರ್ತನು ಅನ್ನುತ್ತಾನೆ.
ಇಗೋ, ಕುಂಬಾರನ ಕೈಯಲ್ಲಿ ಮಣ್ಣು ಹ್ಯಾಗೋ
ಹಾಗೆಯೇ ನನ್ನ ಕೈಯಲ್ಲಿ ನೀವು ಇದ್ದೀರಿ,
ಓ ಇಸ್ರಯೇಲನ ಮನೆಯವರೇ!
೭ ಯಾವ ಕ್ಷಣದಲ್ಲಿ ನಾನು ಒಂದು ಜನಾಂಗದ ವಿಷಯವಾಗಿಯೂ, ಒಂದು ರಾಜ್ಯದ ವಿಷಯವಾಗಿಯೂ,
ಅದನ್ನು ಕೀಳುವದಕ್ಕೂ, ಕೆಡುವುವದಕ್ಕೂ, ನಾಶ ಮಾಡುವದಕ್ಕೂ, ಮಾತಾಡುತ್ತೇನೋ,
೮ ಆ ಜನಾಂಗವು ನಾನು ಅದಕ್ಕೆ ವಿರೋಧವಾಗಿ ಮಾತಾಡಿದ ಕಾರಣವಾದ ತನ್ನ ಕೆಟ್ಟತನವನ್ನು ಬಿಟ್ಟು ತಿರಿಗಿದರೆ,
ನಾನು ಅದಕ್ಕೆ ಮಾಡ ಬೇಕೆಂದು ಯೋಚಿಸಿದ ಕೆಟ್ಟದ್ದನ್ನು ಕುರಿತು ಪಶ್ಚಾತ್ತಾಪ ಪಡುವೆನು.
೯ ಇದಲ್ಲದೆ ಯಾವ ಕ್ಷಣದಲ್ಲಿ ನಾನು ಒಂದು ಜನಾಂಗದ ವಿಷಯವಾಗಿಯೂ, ಒಂದು ರಾಜ್ಯದ ವಿಷಯವಾಗಿಯೂ,
ಅದನ್ನು ಕಟ್ಟುವದಕ್ಕೂ, ನೆಡುವದಕ್ಕೂ, ಮಾತಾಡುತ್ತೇನೋ,
೧೦ ಅದು ನನ್ನ ಮಾತನ್ನು ಕೇಳದೆ, ನನ್ನ ದೃಷ್ಟಿಯಲ್ಲಿ ಕೆಟ್ಟದನ್ನು ಮಾಡಿದರೆ,
ಆಗ ನಾನು ಅದಕ್ಕೆ ಉಪಕಾರ ಮಾಡುತ್ತೇನೆಂದು ಹೇಳಿದ ಒಳ್ಳೇದನ್ನು ಕುರಿತು ಪಶ್ಚಾತ್ತಾಪ ಪಡುವೆನು.

೧೧ ಹೀಗಿರುವದರಿಂದ ಈಗ ಯೆಹೂದದ ಮನುಷ್ಯರಿಗೂ, ಯೆರೂಸಲೇಮಿನ ನಿವಾಸಿಗಳಿಗೂ,
ನೀನು ಹೇಳ ಬೇಕಾದದ್ದೇನಂದರೆ—
ಕರ್ತನು ಹೀಗೆ ಹೇಳುತ್ತಾನೆ—
ಇಗೋ, ನಾನು ನಿಮಗೆ ವಿರೋಧವಾಗಿ ಕೆಟ್ಟದನ್ನು ಕಲ್ಪಿಸುತ್ತಾ ಇದ್ದೇನೆ;
ನಿಮಗೆ ವಿರೋಧವಾಗಿ ಆಲೋಚನೆಯನ್ನು ಆಲೋಚಿಸುತ್ತಾ ಇದ್ದೇನೆ;
ನಿಮ್ಮ ನಿಮ್ಮ ಕೆಟ್ಟ ಮಾರ್ಗಗಳನ್ನು ಬಿಟ್ಟು ತಿರಿಗಿರಿ;
ನಿಮ್ಮ ಮಾರ್ಗಗಳನ್ನೂ ನಿಮ್ಮ ಕ್ರಿಯೆಗಳನ್ನೂ ಒಳ್ಳೇವಾಗ ಮಾಡಿರಿ.
೧೨ ಆದರೆ ಅವರು—ವ್ಯರ್ಥವಾಯಿತು;
ಯಾಕಂದರೆ, ಸ್ವಂತ ಆಲೋಚನೆಗಳ ಪ್ರಕಾರ ನಡೆದುಕೊಳ್ಳುವೆವು;
ನಮ್ಮ ನಮ್ಮ ಕೆಟ್ಟ ಹೃದಯಗಳ ಕಾಠಿಣ್ಯದ ಪ್ರಕಾರ ಮಾಡುವೆವು, ಅಂದರು.
೧೩ ಆದದರಿಂದ ಕರ್ತನು ಹೇಳುವದೇನಂದರೆ—
ಜನಾಂಗಗಳಲ್ಲಿ ವಿಚಾರಿಸಿರಿ; ಇಂಥವುಗಳನ್ನು ಯಾರು ಕೇಳಿದ್ದಾರೆ!
ಇಸ್ರಯೇಲನ ಕನ್ಯಾಸ್ತ್ರೀ ಮಹಾ ಭಯಂಕರವಾದದ್ದನ್ನು ಮಾಡಿದ್ದಾಳೆ.
೧೪ ಒಬ್ಬನು ಬಂಡೆಗೋಸ್ಕರ ಲೆಬನೋನಿನ ಹಿಮವು ತೋಯಿಸುವ ಹೊಲವನ್ನು ಬಿಡುವನೋ!
ಇಲ್ಲವೇ ಅನ್ಯ ನೀರಿಗೋಸ್ಕರ ತಂಪಾದ ಪ್ರವಾಹಗಳು ತಳ್ಳಲ್ಪಡುವವೋ!

೧೫ ಆದರೆ ನನ್ನ ಜನರು ನನ್ನನ್ನು ಮರೆತು ಬಿಟ್ಟಿದ್ದಾರೆ;
ವ್ಯರ್ಥವಾದದ್ದಕ್ಕೆ ಧೂಪವರ್ಪಿಸುತ್ತಾರೆ;
ಪೂರ್ವದ ಹಾದಿಗಳಾಗಿರುವ ಅವರ ಮಾರ್ಗಗಳಲ್ಲಿ ಅವರನ್ನು ಎಡವ ಮಾಡಿ,
ರಾಜಮಾರ್ಗವಲ್ಲದ ಕೀಳು ದಾರಿಗಳಲ್ಲಿ ಅವರನ್ನು ನಡಿಯ ಮಾಡುತ್ತಾರೆ.
೧೬ ಹೀಗೆ ತಮ್ಮ ದೇಶವನ್ನು ಹಾಳಾಗಿಯೂ, ನಿತ್ಯವಾದ ನಿಂದೆಯಾಗಿಯೂ, ಮಾಡಿದ್ದಾರೆ;
ಅದನ್ನು ಹಾದು ಹೋಗುವವರೆಲ್ಲರು ವಿಸ್ಮಿತರಾಗಿ ತಲೆ ಅಲ್ಲಾಡಿಸುವರು.
೧೭ ಮೂಡಣ ಘೂಳಿಯಿಂದಾದ ಹಾಗೆ ಅವರನ್ನು ಶತ್ರುವಿನ ಮುಂದೆ ಚದರಿಸುವೆನು;
ಅವರ ಆಪತ್ತಿನ ದಿವಸದಲ್ಲಿ ಅವರಿಗೆ ಮುಖವನ್ನಲ್ಲ, ಬೆನ್ನನ್ನು ತೋರಿಸುವೆನು.

೧೮ ಆಗಲವರು—ಬನ್ನಿ! ಯೆರೆಮಿಾಯನಿಗೆ ವಿರೋಧವಾಗಿ ಕಲ್ಪನೆಗಳನ್ನು ಕಲ್ಪಿಸುವ;
ಯಾಕಂದರೆ, ಯಾಜಕನಿಂದ ನ್ಯಾಯಪ್ರಮಾಣವೂ, ಜ್ಞಾನಿಯಿಂದ ಆಲೋಚನೆಯೂ,
ಪ್ರವಾದಿಯಿಂದ ವಾಕ್ಯವೂ, ನಾಶವಾಗುವದಿಲ್ಲ.
ಬನ್ನಿ! ನಾಲಿಗೆಯಿಂದ ಅವನನ್ನು ಹೊಡಿಯುವ;
ಅವನ ಮಾತುಗಳಲ್ಲಿ ಬಂದನ್ನಾದರು ಲಕ್ಷ್ಯವಿಡದೆ ಇರುವ, ಎಂದು ಹೇಳಿದರು.

೧೯ ಓ ಕರ್ತನೇ! ನನ್ನನ್ನು ಆಲೈಸು; ನನ್ನ ಸಂಗಡ ವ್ಯಾಜ್ಯವಾಡುವವರ ಶಬ್ದವನ್ನು ಕೇಳು.
೨೦ ಒಳ್ಳೇದಕ್ಕೆ ಬದಲಾಗಿ ಕೆಟ್ಟದನ್ನು ಸಲ್ಲಿಸ ಬಹುದೇ?
ಯಾಕಂದರೆ, ನನ್ನ ಪ್ರಾಣಕ್ಕೆ ಕಾಣಿಯನ್ನು ಅಗಿದಿದ್ದಾರೆ;
ಅವರಿಗೋಸ್ಕರ ಒಳ್ಳೇದನ್ನು ಮಾತಾಡುವದಕ್ಕೂ, ನಿನ್ನ ಉಗ್ರವನ್ನು ಅವರಿಂದ ತಿರುಗಿಸುವದಕ್ಕೂ,
ನಾನು ನಿನ್ನ ಮುಂದೆ ನಿಂತೆನೆಂದು ಜ್ಞಾಪಕ ಮಾಡಿಕೋ.
೨೧ ಆದದರಿಂದ ಅವರ ಮಕ್ಕಳನ್ನು ಬರಕ್ಕೆ ಕೊಡು;
ಕತ್ತಿಯ ಬಲಕ್ಕೂ ಅವರನ್ನು ಒಪ್ಪಿಸು;
ಅವರ ಹೆಂಡರು ಮಕ್ಕಳಿಲ್ಲದೆ ವಿಧವೆಯರಾಗಲಿ;
ಅವರ ಗಂಡಸರು ಕೊಲ್ಲಲ್ಪಟ್ಟು ಸಾಯಲಿ;
ಅವರ ಯೌವನಸ್ಥರು ಯುದ್ಧದಲ್ಲಿ ಕತ್ತಿಯಿಂದ ಹೊಡಿಯಲ್ಪಡಲಿ.
೨೨ ನೀನು ಅಕಸ್ಮಾತಾಗಿ ಅವರ ಮೇಲೆ ಸಮೂಹವನ್ನು ತರಿಸುವಾಗ,
ಕೂಗು ಅವರ ಮನೆಗಳೊಳಗಿಂದ ಕೇಳ ಬರಲಿ;
ಯಾಕಂದರೆ, ನನ್ನನ್ನು ಹಿಡಿಯುವದಕ್ಕೆ ಕಾಣಿ ಅಗಿದಿದ್ದಾರೆ;
ನನ್ನ ಕಾಲುಗಳಿಗೆ ಉರ್ಲುಗಳನ್ನು ಒಡ್ಡಿದ್ದಾರೆ.
೨೩ ಆದಾಗ್ಯೂ ಕರ್ತನೇ! ಅವರು ನನಗೆ ವಿರೋಧವಾಗಿ ಮಾಡಿದ ಮರಣಕರವಾದ ಆಲೋಚನೆಯನ್ನೆಲ್ಲಾ ನೀನು ಬಲ್ಲಿ;
ಅವರ ಅಕ್ರಮವನ್ನು ಮನ್ನಿಸ ಬೇಡ;
ಅವರ ಪಾಪವನ್ನು ನಿನ್ನ ಸನ್ನಿಧಿಯೊಳಗಿಂದ ಅಳಿಸಿ ಬಿಡ ಬೇಡ;
ಅವರು ನಿನ್ನ ಮುಂದೆ ಕೆಡವಲ್ಪಡಲಿ;
ನಿನ್ನ ಕೋಪದ ಕಾಲದಲ್ಲಿ ಅವರಿಗೆ ಹಾಗೆ ಮಾಡು.

## ೧೯. ಸಂಧಿ.

೧ ಕರ್ತನು ಹೇಳುವದೇನಂದರೆ—ಹೋಗಿ, ಕುಂಬಾರನ ಮಣ್ಣಿನ ಕೂಜಿಯನ್ನು ಸಂಪಾದಿಸಿ, ಜನರ ಹಿರಿಯರೊಳಗಿಂದಲೂ ಯಾಜಕರ ಹಿರಿಯರೊಳಗಿಂದಲೂ ಕೆಲವರನ್ನು ಕರಕೊಂಡು,
೨ ಮೂಡಣ ಬಾಗಲಿನ ಹೊರಗಿರುವ ಹಿನ್ನೊಮನ ಮಗನ ತಗ್ಗಿಗೆ ಹೋಗಿ, ನಾನು ನಿನಗೆ ಹೇಳುವ ಮಾತುಗಳನ್ನು ಅಲ್ಲಿ ಸಾರಿ
೩ ಹೇಳು. ಹ್ಯಾಗಂದರೆ—ಯೆಹೂದದ ಅರಸರೇ, ಯೆರೂಸಲೇಮಿನ ನಿವಾಸಿಗಳೇ, ಕರ್ತನ ವಾಕ್ಯವನ್ನು ಕೇಳಿರಿ! ಇಸ್ರಯೇಲಿನ ದೇವರಾಗಿರುವ ಸೈನ್ಯಗಳ ಯೆಹೋವನು ಹೇಳುವದೇನಂದರೆ—ಇಗೋ, ನಾನು ಈ ಸ್ಥಳದ ಮೇಲೆ ಕೇಡನ್ನು ಬರ ಮಾಡುತ್ತೇ
೪ ನೆ; ಅದನ್ನು ಕೇಳುವವರೆಲ್ಲರ ಕಿವಿಗಳು ಕಿರಗುಟ್ಟುವವು. ಯಾಕಂದರೆ ಅವರು ನನ್ನನ್ನು ಬಿಟ್ಟು, ಈ ಸ್ಥಳವನ್ನು ಪರಸ್ಥಳ ಮಾಡಿ, ಅವರೂ ಅವರ ತಂದೆಗಳೂ ಯೆಹೂದದ ಅರಸರೂ ಅರಿಯದ ಬೇರೆ ದೇವರುಗಳಿಗೆ ಅಲ್ಲಿ ಧೂಪವರ್ಪಿಸಿ, ಈ ಸ್ಥಳವನ್ನು
೫ ಅಪರಾಧವಿಲ್ಲದವರ ರಕ್ತದಿಂದ ತುಂಬಿಸಿ, ತಮ್ಮ ಮಕ್ಕಳನ್ನು ಬಾಳನಿಗೆ ಹೋಮಮಗಳಾಗಿ ಬೆಂಕಿಯಲ್ಲಿ ಸುಡುವದಕ್ಕೆ ಬಾಳನ ಮೇಡುಗಳನ್ನು ಕಟ್ಟಿದ್ದಾರೆ. ಇಂಥಾದ್ದನ್ನು ನಾನು ಆಜ್ಞಾಪಿಸ
೬ ಲಿಲ್ಲ, ನಾನು ಹೇಳಲಿಲ್ಲ, ನನ್ನ ಮನಸ್ಸಿಗೆ ಬರಲಿಲ್ಲ. ಹೀಗಿರುವದರಿಂದ ಕರ್ತನು ಅನ್ನುವದೇನಂದರೆ—ಇಗೋ ದಿನಗಳು ಬರುವವು; ಆಗ ಈ ಸ್ಥಳಕ್ಕೆ ಇನ್ನು ತೋಫೆತೆಂದು, ಹಿನ್ನೊಮನ ಮಗನ ತಗ್ಗೆಂದು ಅಲ್ಲ, ಕೊಲೆಯ ತಗ್ಗೆಂದು ಕರೆಯಲ್ಪಡುವದು.
೭ ಯಾಕಂದರೆ ನಾನು ಈ ಸ್ಥಳದಲ್ಲಿ ಯೆಹೂದದ ಯೆರೂಸಲೇಮಿನ ಆಲೋಚನೆಯನ್ನು ವ್ಯರ್ಥ ಮಾಡುವೆನು; ಅವರ ಶತ್ರುಗಳ ಮುಂದೆಯೂ, ಅವರ ಪ್ರಾಣವನ್ನು ಹುಡುಕುವವರ ಕೈಯಿಂದಲೂ, ಅವರನ್ನು ಕತ್ತಿಯಿಂದ ಬೀಳ ಮಾಡುವೆನು; ಮತ್ತು ಅವರ ಹೆಣಗಳನ್ನು ಆಕಾಶದ ಪಕ್ಷಿಗಳಿಗೂ, ಭೂಮಿಯ ಮೃಗಗಳಿಗೂ,
೮ ಆಹಾರವಾಗಿ ಕೊಡುವೆನು. ಮತ್ತು ಈ ಪಟ್ಟಣವನ್ನು ಹಾಳಾಗಿಯೂ, ಸಿಳ್ಳಿಡುವಿಕೆಯಾಗಿಯೂ, ಮಾಡುವೆನು; ಅದನ್ನು ಹಾದು ಹೋಗುವವರೆಲ್ಲರು ಅದರ ಎಲ್ಲಾ ಬಾಧೆಗಳ ನಿಮಿತ್ತ ವಿಸ್ಮಯಪೊಂದಿ, ಸಿಳ್ಳಿಡುವರು. ಮತ್ತು ಅವರು ತಮ್ಮ ಕುಮಾರರ
೯ ಮಾಂಸವನ್ನೂ, ತಮ್ಮ ಕುಮಾರ್ತೆಗಳ ಮಾಂಸವನ್ನೂ, ಉಣ್ಣಾ ಮಾಡುವೆನು; ಮುತ್ತಿಗೆಯಲ್ಲಿಯೂ, ಅವರ ಶತ್ರುಗಳೂ ಅವರ ಪ್ರಾಣವನ್ನು ಹುಡುಕುವವರೂ ಅವರಿಗೆ ಮಾಡುವ ಇಕ್ಕಟ್ಟಿನಲ್ಲಿಯೂ, ಅವರು ತಮ್ಮ ತಮ್ಮ ನೆರೆಯವರ ಮಾಂಸವನ್ನು ಉಣ್ಣುವರು.

೧೦ ಆಗ ನೀನು ನಿನ್ನ ಸಂಗಡ ಬಂದ ಮನುಷ್ಯರ ಮುಂದೆ ಆ ಕೂಜಿಯನ್ನು ಒಡೆದು, ಅವರಿಗೆ ಹೇಳ ಬೇಕಾದದ್ದೇನಂದರೆ—
೧೧ ಸೈನ್ಯಗಳ ಕರ್ತನು ಹೀಗೆ ಹೇಳುತ್ತಾನೆ—ಯಾವ ಪ್ರಕಾರ ಒಬ್ಬನು ಕುಂಬಾರನ ಪಾತ್ರೆಯನ್ನು ಅದು ತಿರಿಗಿ ನೆಟ್ಟಗಾಗ ಕೂಡದ ಹಾಗೆ, ಬಡೆಯುತ್ತಾನೋ, ಅದೇ ಪ್ರಕಾರ ನಾನು ಈ ಜನವನ್ನೂ, ಈ ಪಟ್ಟಣವನ್ನೂ, ಬಡೆದು ಬಿಡುವೆನು; ಆಗ ಹೂಣಿಡುವ



೧೨ ದಕ್ಕೆ ಸ್ಥಳವಿಲ್ಲದ ಮಟ್ಟಿಗೂ ತೋಫೆತಿನಲ್ಲಿ ಹೂಣಿಡುವರು. ಹೀಗೆ ಈ ಸ್ಥಳಕ್ಕೂ ಅದರ ನಿವಾಸಿಗಳಿಗೂ ಮಾಡುವೆನೆಂದು ಕರ್ತನು ಅನ್ನುತ್ತಾನೆ; ಈ ಪಟ್ಟಣವನ್ನು ತೋಫೆತಿನ ಹಾಗೆಯೇ ಮಾ
೧೩ ಡುವೆನು. ಯಾವ ಮನೆಗಳ ಮಾಳಿಗೆಗಳ ಮೇಲೆ ಆಕಾಶದ ಸೈನ್ಯಕ್ಕೆಲ್ಲಾ ಧೂಪವರ್ಪಿಸಿ ಬೇರೆ ದೇವರುಗಳಿಗೆ ಹೊಯಿಕೆಗಳನ್ನು ಹೊಯಿದಿದ್ದಾರೋ, ಆ ಎಲ್ಲಾ ಮನೆಗಳ ನಿಮಿತ್ತ ಯೆರೂಸಲೇಮಿನ ಮನೆಗಳೂ ಯೆಹೂದದ ಅರಸರ ಮನೆಗಳೂ ತೋಫೆತಿನ ಸ್ಥಳದ ಹಾಗೆ ಅಶುದ್ಧವಾಗುವವು.

೧೪ ಆಗ ಯೆರೆಮಿಾಯನು ಕರ್ತನು ಅವನನ್ನು ಪ್ರವಾದಿಸುವದಕ್ಕೆ ಕಳುಹಿಸಿದ ತೋಫೆತನ್ನು ಬಿಟ್ಟು ಬಂದು, ಕರ್ತನ ಮನೆಯ ಅಂಗಳದಲ್ಲಿ ನಿಂತುಕೊಂಡು, ಜನರಿಗೆಲ್ಲಾ ಹೇಳಿದ್ದೇನಂದರೆ—
೧೫ ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೀಗೆ ಹೇಳುತ್ತಾನೆ—ಇಗೋ ನಾನು ಈ ಪಟ್ಟಿದ ಮೇಲೆಯೂ, ಅದರ ಎಲ್ಲಾ ಊರುಗಳ ಮೇಲೆಯೂ, ನಾನು ಅದಕ್ಕೆ ವಿರೋಧವಾಗಿ ಹೇಳಿದ ಕೇಡನ್ನೆಲ್ಲಾ ತರಿಸುತ್ತೇನೆ; ಯಾಕಂದರೆ ಅವರು ನನ್ನ ಮಾತುಗಳನ್ನು ಕೇಳದ ಹಾಗೆ ತಮ್ಮ ಕುತ್ತಿಗೆಯನ್ನು ಕಠಿಣ ಮಾಡಿಕೊಂಡಿದ್ದಾರೆ.

## ೨೦. ಸಂಧಿ.

೧ ಯೆರೆಮಿಾಯನು ಈ ಮಾತುಗಳನ್ನು ಪ್ರವಾದಿಸಲಾಗಿ ಕರ್ತನ ಮನೆಯಲ್ಲಿ ಮುಖ್ಯ ಅಧಿಕಾರಿಯಾಗಿದ್ದ ಯಾಜಕನಾದ ಇ
೨ ಮ್ಮೇರನ ಮಗನಾದ ಪಷ್ಹೂರನು ಕೇಳಿದನು. ಆಗ ಪಷ್ಹೂರನು ಪ್ರವಾದಿಯಾದ ಯೆರೆಮಿಾಯನನ್ನು ಹೊಡೆದು, ಅವನನ್ನು ಕರ್ತನ ಮನೆಯ ಬಳಿಯಲ್ಲಿದ್ದ ಬೆನ್ಯಮಿನನ ಮೇಲ್ಬಾಗಲಲ್ಲಿದ್ದ ಕೋಳದಲ್ಲಿ ಹಾಕಿಸಿದನು.
೩ ಮಾರಣೆ ದಿವಸದಲ್ಲಿ ಆದದ್ದೇನಂದರೆ, ಪಷ್ಹೂರನು ಯೆರೆಮಿಾಯನನ್ನು ಕೋಳದಿಂದ ಬಿಡಿಸಿದನು. ಆಗ ಯೆರೆಮಿಾಯನು ಅವನಿಗೆ—ಕರ್ತನು ನಿನಗೆ ಇನ್ನು ಪಷ್ಹೂರನೆಂದಲ್ಲ, ಮಾಗೊರ್
೪ ಮಿಸ್ಸಬೀಬನೆಂದು, ಕರೆಯುತ್ತಾನೆಂದು ಹೇಳಿದನು. ಯಾಕಂದರೆ ಕರ್ತನು ಹೀಗೆ ಹೇಳುತ್ತಾನೆ—ಇಗೋ ನಾನು ನಿನ್ನನ್ನು ನಿನಗೂ ನಿನ್ನ ಸ್ನೇಹಿತರೆಲ್ಲರಿಗೂ ಅಂಜಿಕೆಯಾಗ ಮಾಡುತ್ತೇನೆ; ಅವರು ತಮ್ಮ ಶತ್ರುಗಳ ಕತ್ತಿಯಿಂದ ಬೀಳುವರು; ನಿನ್ನ ಕಣ್ಣುಗಳು ಅದನ್ನು ನೋಡುವವು; ಮತ್ತು ಯೆಹೂದವನ್ನೆಲ್ಲಾ ಬಾಬೆಲಿನ ಅರಸನ ಕೈಗೆ ಒಪ್ಪಿಸುವೆನು; ಅವನು ಅವರನ್ನು ಬಾಬೆಲಿಗೆ
೫ ಸೆದು, ಕತ್ತಿಯಿಂದ ಕೊಲ್ಲುವನು. ಇದಲ್ಲದೆ ಈ ಪಟ್ಟದ ಸಂಪತ್ತನ್ನೆಲ್ಲಾ, ಅದರ ಕಷ್ಟಾರ್ಜಿತವನ್ನೆಲ್ಲಾ, ಅದರಲ್ಲಿ ಬೆಲೆಯುಳ್ಳದ್ದನ್ನೆಲ್ಲಾ, ಯೆಹೂದದ ಅರಸರ ಭಂಡಾರಗಳನ್ನೆಲ್ಲಾ, ಒಪ್ಪಿಸುವೆನು. ಅವರ ಶತ್ರುಗಳ ಕೈಗೆ ಒಪ್ಪಿಸುವೆನು; ಅವರು ಅವುಗಳನ್ನು ಸುಲುಕೊಂಡು, ತಕ್ಕೊಂಡು, ಬಾಬೆಲಿಗೆ ಸೈಯುವರು. ಮತ್ತು, ಪ
೬ ಷ್ಹೂರನೇ, ನೀನೂ ನಿನ್ನ ಮನೆಯ ನಿವಾಸಿಗಳೆಲ್ಲರೂ ಸೆರೆಗೆ ಹೋಗುವಿರಿ; ಬಾಬೆಲಿಗೆ ಹೋಗಿ ಅಲ್ಲೇ ಸಾಯುವಿ; ಅಲ್ಲೇ ಹೂಣಿಡಲ್ಪಡುವಿ; ನೀನೂ, ನಿನ್ನಿಂದ ಸುಳ್ಳು ಪ್ರವಾದನೆ ಕೇಳಿದ ನಿನ್ನ ಸ್ನೇಹಿತರೆಲ್ಲರೂ, ಹಾಗೆಯೇ.

೭ ಓ ಕರ್ತನೇ! ನೀನು ನನ್ನನ್ನು ಸಮ್ಮತಿ ಪಡಿಸಿದಿ; ನಾನು ಸಮ್ಮತಿ ಪಟ್ಟೆನು;
ನೀನು ನನಗಿಂತ ಬಲಿಷ್ಠನಾಗಿದ್ದು, ಜಯಿಸಿದಿ;
ನಾನು ಹಗಲೆಲ್ಲಾ ನಗೆಗೆ ಗುರಿಯಾಗಿದ್ದೇನೆ;
ಎಲ್ಲರು ನನ್ನನ್ನು ಹಾಸ್ಯ ಮಾಡುತ್ತಾರೆ.
೮ ಯಾಕಂದರೆ ನಾನು ಮಾತಾಡುವಲ್ಲು ಸಾರಿ ಕೂಗುತ್ತೇನೆ;
ಬಲಾತ್ಕಾರವೂ ಕೊಳ್ಳೆಯೂ ಎಂದು ಕರೆಯುತ್ತೇನೆ;
ಯಾಕಂದರೆ ಕರ್ತನ ವಾಕ್ಯವು
ನನಗೆ ಹಗಲೆಲ್ಲಾ ನಾಚಿಕೆಯೂ ಗೇಲಿಡುವಿಕೆಯೂ ಆಯಿತು.
೯ ಆಗ ನಾನು—ಅವನನ್ನು ಕುರಿತು ಏನು ಹೇಳುವದಿಲ್ಲ,
ಅವನ ಹೆಸರಿನಲ್ಲಿ ಇನ್ನು ಮಾತಾಡುವದಿಲ್ಲ,
ಎಂದಂದುಕೊಂಡೆನು;
ಆದರೆ ಅದು ನನ್ನ ಎಲುಬುಗಳಲ್ಲಿ ಮುಚ್ಚಲ್ಪಟ್ಟಿರುವ ಸುಡುವ ಬೆಂಕಿಯ ಹಾಗೆ ನನ್ನ ಹೃದಯದಲ್ಲಿ ಇತ್ತು;
ಬಿಗಿ ಹಿಡಿಯುವದರಲ್ಲಿ ದಣಿದೆನು, ನಿನ್ನಿಂದಲೂಗದೆ ಹೋಯಿತು.
೧೦ ಯಾಕಂದರೆ ಅನೇಕರ ಚಾಡಿಯನ್ನು ಕೇಳಿದೆನು; ಸುತ್ತಲು ಭಯವದೆ;
ತಿಳಿಸಿರಿ! ಆಗಲದನ್ನು ತಿಳಿಸುತ್ತೇವೆ, ಅನ್ನುತ್ತಾರೆ;
ನನ್ನ ಸಂಗಡ ಸಮಾಧಾನವಾಗಿರುವವರೆಲ್ಲರು
ನಾನು ಕುಂಟುವದನ್ನು ನೋಡಿಕೊಳ್ಳುತ್ತಾರೆ;
ಒಂದು ವೇಳೆ ಅವನು ಮೋಸಗೊಂಡಾನು;
ಆಗ ನಾವು ಅವನನ್ನು ಗೆದ್ದು,
ಅವನಲ್ಲಿ ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವೆವು, ಅನ್ನುತ್ತಾರೆ.
೧೧ ಆದರೆ ಯೆಹೋವನು ಭಯಂಕರವಾದ ಪರಾಕ್ರಮಶಾಲಿಯ ಹಾಗೆ ನನ್ನ ಸಂಗಡ ಇದ್ದಾನೆ;
ಆದದರಿಂದ ನನ್ನನ್ನು ಹಿಂದಟ್ಟುವವರು ಎಡವುವರು, ಗೆಲ್ಲುವದಿಲ್ಲ;
ಅನುಕೂಲವಾಗದ್ದರಿಂದ ಬಹಳವಾಗಿ ನಾಚಿಕೆ ಪಡುವರು;
ಅವರ ಅವಮಾನ ನಿತ್ಯವಾಗಿರುವದು, ಮರತು ಹೋಗಲ್ಪಡುವದಿಲ್ಲ.
೧೨ ಓ ಸೈನ್ಯಗಳ ಯೆಹೋವನೇ!
ನೀತಿವಂತರನ್ನು ತೋಧಿಸುವವನೇ!
ಅಂತರಿಂದ್ರಿಯಗಳನ್ನೂ ಹೃದಯವನ್ನೂ ನೋಡುವವನೇ!
ನೀನು ಅವರಿಂದ ತಕ್ಕೊಳ್ಳುವ ಪ್ರತಿದಂಡನೆಯನ್ನು ನಾನು ನೋಡತಿ;
ಯಾಕಂದರೆ ನಿನಗೆ ನನ್ನ ವ್ಯಾಜ್ಯವನ್ನು ತಿಳಿಯ ಮಾಡಿದ್ದೇನೆ.

೧೩ ಕರ್ತನಿಗೆ ಹಾಡಿರಿ; ಕರ್ತನನ್ನು ಸ್ತುತಿಸಿರಿ;
ಯಾಕಂದರೆ ಅವನು ಬಡವನ ಪ್ರಾಣವನ್ನು ಕೆಟ್ಟವರ ಕೈಯೊಳಗಿಂದ ತಪ್ಪಿಸಿದ್ದಾನೆ.

೧೪ ನಾನು ಹುಟ್ಟಿದ ದಿವಸವು ಶಪಿಸಲ್ಪಡಲಿ!
ನನ್ನ ತಾಯಿ ನನ್ನನ್ನು ಹೆತ್ತ ದಿವಸವು ಆಶೀರ್ವದಿಸಲ್ಪಡದಿರಲಿ!
೧೫ ನನ್ನ ತಂದೆಗೆ—ನಿನಗೆ ಗಂಡು ಕೂಸು ಹುಟ್ಟಿದೆ ಎಂಬುವ ಸಮಾಚಾರವನ್ನು ಹೇಳಿ,
ಬಹಳ ಸಂತೋಷ ಉಂಟು ಮಾಡಿದವನು ಶಪಿಸಲ್ಪಡಲಿ!
೧೬ ಹೌದು, ಆ ಮನುಷ್ಯನು, ಕರ್ತನು ಪಶ್ಚಾತ್ತಾಪ ಪಡದೆ, ಕೆಡವಿ ಬಿಟ್ಟ ಪಟ್ಟಣಗಳ ಹಾಗಿರಲಿ!

ಅವನು ಬೆಳಗ್ಗೆ ಕೂಗನೂಾ, ಮಧ್ಯಾನ್ನದಲ್ಲಿ ಆರ್ಭಟಿಸುವನೂಾ, ಕೇಳ್ಳಿ!

೧೭ ಅವನು ನನ್ನನ್ನು, ಗರ್ಭ ಬಿಟ್ಟಾಗಲೇ, ಕೊಲ್ಲದೆ ಹೋದದರಿಂದಲೇ. ಅಥವ, ನನ್ನ ತಾಯಿ ನನಗೆ ಸಮಾಧಿಯಾಗಿದ್ದು, ಅವಳ ಗರ್ಭವು ನಿತ್ಯವಾಗಿ ಬಸುರಾಗಿದ್ದರೆ ಬಗ್ಗೇದಾಗಿತ್ತು.

೧೮ ನಾನು ಕಷ್ಟವನೂಾ ಚಿಂತೆಯನೂಾ ನೋಡುವದಕ್ಕೂ, ನನ್ನ ದಿವಸಗಳು ನಾಚಿಕೆಯಲ್ಲಿ ಕಳೆದು ಹೋಗುವದಕ್ಕೂ, ಗರ್ಭದಿಂದ ಹೊರಗೆ ಬಂದದ್ದು ಯಾಕೆ!

## ೨೧. ಸಂಧಿ.

೧ ಯೆಕೆಮಿಾಯನಿಗೆ ಕರ್ತನಿಂದ ಉಂಟಾದ ವಾಕ್ಯವು; ಯಾವಾಗಂದರೆ, ಅರಸನಾದ ಚಿದ್ಕಿಯೆನು ಮಲ್ಕಿಯನ ಮಗನಾದ ಪಷ್ಹೂರನನೂಾ, ಮಾಸೇಯನ ಮಗನಾದ ಯಾಜಕನಾದ ಚೆಪನೀಯನನೂಾ, ಅವನ ಬಳಿಗೆ ಕಳುಹಿಸಿ—ಎಲೋ ನಮಗೋಸ್ಕರ ಕರ್ತನನ್ನು ವಿಚಾರಿಸು; ಯಾಕಂದರೆ ಬಾಬೆಲಿನ ಅರಸನಾದ ನೆಬುಕದ್ನೆಜ್ಜರನು ನಮಗೆ ವಿರೋಧವಾಗಿ ಯುದ್ಧ ಮಾಡುತ್ತಾನೆ; ಒಂದು ವೇಳೆ ಅವನು ನಮ್ಮನ್ನು ಬಿಟ್ಟು ಏರಿ ಹೋಗುವ ಹಾಗೆ ಕರ್ತನು ತನ್ನ ಎಲ್ಲಾ ಅದ್ಭುತಗಳ ಪ್ರಕಾರ ನಮಗೆ ಮಾಡ್ಯಾನೆಂದು ಹೇಳಿಸಿದಾಗಲೇ.

೩ ಆಗ ಯೆಕೆಮಿಾಯನು ಅವರಿಗೆ ಹೇಳಿದ್ದೇನಂದರೆ—ಚಿದ್ಕಿಯೆನಿಗೆ ಹೀಗೆ ಹೇಳಿರಿ—ಇಸ್ರಯೇಲಿನ ದೇವರಾದ ಯೆಹೋವನು ಹೇಳುವದೇನಂದರೆ—ಇಗೋ ಗೋಡೆಯ ಹೊರಗೆ ನಿಮಗೆ ಮುತ್ತಿಗೆ ಹಾಕುವ ಬಾಬೆಲಿನ ಅರಸನಿಗೂ ಕಸ್ದೀಯರಿಗೂ ವಿರೋಧವಾಗಿ ನೀವು ಯುದ್ಧ ಮಾಡುವ ನಿಮ್ಮ ಕೈಗಳಲ್ಲಿರುವ ಯುದ್ಧದ ಆಯುಧಗಳನೂಾ ನಾನು ತಿರುಗಿಸಿ ಬಿಟ್ಟು, ಅವರನ್ನು ಈ ಪಟ್ಟಣದ ಮಧ್ಯದಲ್ಲಿ ಕೂಡಿ ಬರ ಮಾಡುತ್ತೇನೆ. ಮತ್ತು ನಾನೇ, ಚಾಚಿದ ಕೈಯಿಂದಲೂ, ಬಲವಾದ ತೋಳಿನಿಂದಲೂ, ಕೋಪದಿಂದಲೂ, ಉಗ್ರದಿಂದಲೂ, ಮಹಾ ಕೌದ್ರದಿಂದಲೂ, ನಿಮಗೆ ವಿರೋಧವಾಗಿ ಯುದ್ಧ ಮಾಡುವೆನು. ಮತ್ತು ಈ ಪಟ್ಟಣದ ನಿವಾಸಿಗಳನ್ನು ಹೊಡೆಯುವೆನು; ಮನುಷ್ಯರನೂಾ ಮೃಗಗಳನೂಾ ಸಹಿತವಾಗಿಯೇ; ಅವರು ದೊಡ್ಡ ಜಾಡ್ಯದಿಂದ ಸಾಯುವರು. ಇದಲ್ಲದೆ ಕರ್ತನು ಅನ್ನುವದೇನಂದರೆ—ಆ ಮೇಲೆ ನಾನು ಯೆಹೂದದ ಅರಸನಾದ ಚಿದ್ಕಿಯೆನನೂಾ, ಅವನ ಸೇವಕರನೂಾ, ಜನರನೂಾ, ಈ ಪಟ್ಟಣದಲ್ಲಿ ಜಾಡ್ಯದಿಂದಲೂ ಕತ್ತಿಯಿಂದಲೂ ಬರದಿಂದಲೂ ಉಳಿದವರನೂಾ, ಬಾಬೆಲಿನ ಅರಸನಾದ ನೆಬುಕದ್ನೆಜ್ಜರನ ಕೈಗೂ, ಅವರ ಶತ್ರುಗಳ ಕೈಗೂ, ಅವರ ಪ್ರಾಣವನ್ನು ಹುಡುಕುವವರ ಕೈಗೂ, ಒಪ್ಪಿಸುವೆನು; ಅವನು ಅವರನ್ನು ಕತ್ತಿಯ ಬಾಯಿಯಿಂದ ಹೊಡೆಯುವನು. ಅವರ ಮೇಲೆ ಕರುಣೆ ಇಡುವದಿಲ್ಲ, ಕನಿಕರಿಸುವದಿಲ್ಲ, ಅಂತ್ಯಕರುಣೆ ಪಡುವದಿಲ್ಲ.

೫ ಮತ್ತು ಈ ಜನಕ್ಕೆ ನೀನು ಹೇಳ ಬೇಕಾದದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ಇಗೋ ನಾನು ಜೀವದ ಮಾರ್ಗವನೂಾ, ಮರಣದ ಮಾರ್ಗವನೂಾ, ನಿಮ್ಮ ಮುಂದೆ ಇಡುತ್ತೇನೆ. ಈ ಪಟ್ಟಣದಲ್ಲಿ ನಿಲ್ಲುವವನು ಕತ್ತಿಯಿಂದಲೂ ಬರದಿಂದಲೂ ಜಾಡ್ಯದಿಂದಲೂ ಸಾಯುವನು; ಆದರೆ ಹೊರಗೆ ಹೋಗಿ, ನಿಮಗೆ ಮುತ್ತಿಗೆ ಹಾಕುವ ಕಸ್ದೀಯರ ಕಡೆಗೆ ಶರಣುವವನು, ಬದುಕುವನು;

೧೦ ಅವನ ಪ್ರಾಣವು ಅವನಿಗೆ ಕೊಳ್ಳೆಯಾಗಿರುವದು. ಯಾಕಂದರೆ ನಾನು ಒಳ್ಳೇದಕ್ಕಲ್ಲ, ಕೆಟ್ಟದ್ದಕ್ಕೆ ಈ ಪಟ್ಟಣಕ್ಕೆ ವಿರೋಧವಾಗಿ ನನ್ನ ಮುಖವನ್ನಿಟ್ಟಿದ್ದೇನೆಂದು ಕರ್ತನು ಅನ್ನುತ್ತಾನೆ; ಅದು ಬಾಬೆಲಿನ ಅರಸನ ಕೈಯಲ್ಲಿ ಒಪ್ಪಿಸಲ್ಪಡುವದು; ಅವನು ಅದನ್ನು ಬೆಂಕಿಯಿಂದ ಸುಟ್ಟು ಬಿಡುವನು.

೧೧ ಮತ್ತು ಯೆಹೂದದ ಅರಸನ ಮನೆಯವರಿಗೆ ಹೀಗೆ ಹೇಳು—
೧೨ ಕರ್ತನ ವಾಕ್ಯವನ್ನು ಕೇಳಿರಿ. ದಾವೀದನ ಮನೆಯವರೇ! ಕರ್ತನು ಹೇಳುವದೇನಂದರೆ—ಬೆಳಗ್ಗೆ ನ್ಯಾಯ ತೀರಿಸಿರಿ; ಸುಲಿಗೆಯಾದವನನ್ನು ಬಲಾತ್ಕಾರಿಯ ಕೈಯೊಳಗಿಂದ ತಪ್ಪಿಸಿರಿ; ಇಲ್ಲದಿದ್ದರೆ ನನ್ನ ಕೋಪ ಬೆಂಕಿಯ ಹಾಗೆ ಹೊರಟು, ನಿಮ್ಮ ಕ್ರಿಯೆಗಳ ಕೆಟ್ಟತನದ ನಿಮಿತ್ತ, ಯಾರೂ ಆರಿಸ ಕೂಡದ ಹಾಗೆ ಉರಿಯುವದು. ತಗ್ಗಿನಲ್ಲಿಯೂ ಬೈಲಿನ ಬಂಡೆಯಲ್ಲಿಯೂ ವಾಸ ಮಾಡುವವಳೇ! ನಮ್ಮ ಮೇಲೆ ಯಾರು ಇಳಿದು ಬರುವರೆಂದು, ನಮ್ಮ ನಿವಾಸಗಳಲ್ಲಿ ಯಾರು ಸೇರುವರೆಂದು, ಅನ್ನುವವಳೇ! ಇಗೋ ನಾನು ನಿನಗೆ ವಿರೋಧವಾಗಿದ್ದೇನೆಂದು ಕರ್ತನು ಅನ್ನುತ್ತಾನೆ.
೧೪ ನಿಮ್ಮ ಕ್ರಿಯೆಗಳ ಫಲದ ಪ್ರಕಾರ ನಿಮ್ಮನ್ನು ವಿಚಾರಿಸುತ್ತೇನೆಂದು ಕರ್ತನು ಅನ್ನುತ್ತಾನೆ; ಅದರ ಅಡವಿಗೆ ಬೆಂಕಿ ಹಚ್ಚುತ್ತೇನೆ; ಅದರ ಸುತ್ತಲಾಗಿರುವದನ್ನೆಲ್ಲಾ ತಿಂದು ಬಿಡುವದು.

## ೨೨. ಸಂಧಿ.

೧ ಕರ್ತನು ಹೇಳುವದೇನಂದರೆ—ಯೆಹೂದದ ಅರಸನ ಮನೆಗೆ
೨ ಇಳಿದು ಹೋಗಿ, ಅಲ್ಲಿ ಈ ವಾಕ್ಯವನ್ನು ಹೇಳು. ಹ್ಯಾಗಂದರೆ—ದಾವೀದನ ಸಿಂಹಾಸನದ ಮೇಲೆ ಕೂತುಕೊಳ್ಳುವ ಯೆಹೂದದ ಅರಸನೇ! ನೀನೂ, ನಿನ್ನ ಸೇವಕರೂ, ಈ ಬಾಗಲುಗಳಿಂದ ಪ್ರವೇಶಿಸುವ ನಿನ್ನ ಜನರೂ ಸಹಿತವಾಗಿ, ಕರ್ತನ ವಾಕ್ಯವನ್ನು ಕೇಳ್ಳಿ.
ಕರ್ತನು ಹೇಳುವದೇನಂದರೆ—

3 ನ್ಯಾಯವನೂಾ ನೀತಿಯನೂಾ ನಡಿಸಿರಿ;
ಸುಲಿಗೆಯಾದವನನ್ನು ಬಲಾತ್ಕಾರಿಯ ಕೈಯೊಳಗಿಂದ ತಪ್ಪಿಸಿರಿ;
ಪರದೇಶಸ್ಥನಿಗೂ, ದಿಕ್ಕಿಲ್ಲದವನಿಗೂ, ವಿಧವೆಗೂ,
ಉಪದ್ರವನ್ನಾದರೂ ಬಲಾತ್ಕಾರವನ್ನಾದರೂ ಮಾಡ ಬೇಡಿರಿ;
ಮತ್ತು ಈ ಸ್ಥಳದಲ್ಲಿ ಅಪರಾಧವಿಲ್ಲದ ರಕ್ತವನ್ನು ಚೆಲ್ಲ ಬೇಡಿರಿ.
೪ ಯಾಕಂದರೆ ನೀವು ನಿಶ್ಚಯವಾಗಿ ಈ ಕಾರ್ಯವನ್ನು ಮಾಡಿದರೆ,
ಆಗ ದಾವೀದನ ಸಿಂಹಾಸನದ ಮೇಲೆ ಕೂತುಕೊಳ್ಳುವಂಥ,
ರಥಗಳಲ್ಲಿಯೂ, ಕುದುರೆಗಳ ಮೇಲೆಯೂ, ಸವಾರಿ ಮಾಡುವಂಥ ಅರಸರು,
ತಾವೂ, ತಮ್ಮ ಸೇವಕರೂ, ತಮ್ಮ ಜನರೂ ಸಹಿತವಾಗಿ,
ಈ ಮನೆಯ ಬಾಗಲುಗಳಿಂದ ಪ್ರವೇಶಿಸುವರು.
೫ ಆದರೆ ನೀವು ಈ ವಾಕ್ಯಗಳನ್ನು ಕೇಳದೆ ಹೋದರೆ,
ಈ ಮನೆ ಹಾಳಾಗುವದೆಂದು
ನನ್ನ ಮೇಲೆ ಆಣೆ ಇಡುತ್ತೇನೆಂದು ಕರ್ತನು ಅನ್ನುತ್ತಾನೆ.
೬ ಯಾಕಂದರೆ ಕರ್ತನು ಯೆಹೂದದ ಅರಸನ ಮನೆಯ ವಿಷಯ ಹೀಗೆ ಹೇಳುತ್ತಾನೆ—



ನೀನು ನನಗೆ ಗಿಲ್ಯಾದೂ ಲೆಬನೋನಿನ ತಲೆಯೂ ಆಗಿದ್ದೀ;
ಆದರೂ ನಿನ್ನನ್ನು ಅರಣ್ಯವಾಗಿಯೂ,
ನಿವಾಸಿಗಳಿಲ್ಲದ ಪಟ್ಟಣಗಳಾಗಿಯೂ, ಮಾಡುವೆನಲ್ಲವೋ!
೭ ಮತ್ತು ನಿನಗೆ ವಿರೋಧವಾಗಿ
ತಮ್ಮ ತಮ್ಮ ಆಯುಧಗಳನ್ನು ಹಿಡುಕೊಳ್ಳುವ ನಾಶ ಮಾಡುವವರನ್ನು ಸಿದ್ಧ ಮಾಡುತ್ತೇನೆ;
ಅವರು ನಿನ್ನ ಶ್ರೇಷ್ಠ ದೇವದಾರುಗಳನ್ನು ಕಡಿದು,
ಬೆಂಕಿಯಲ್ಲಿ ಹಾಕುವರು.
೮ ಮತ್ತು ಅನೇಕ ಜನಾಂಗಗಳು ಈ ಪಟ್ಟಣವನ್ನು ಹಾದು ಹೋಗಿ,
ಕರ್ತನು ಈ ದೊಡ್ಡ ಪಟ್ಟಣಕ್ಕೆ ಯಾಕೆ ಈ ಪ್ರಕಾರ ಮಾಡಿದ್ದಾನೆಂದು ಒಬ್ಬರಿಗೊಬ್ಬರು ಹೇಳಿಕೊಳ್ಳುವರು.
೯ ಆಗ—ಅವರು ತಮ್ಮ ದೇವರಾದ ಕರ್ತನ ಒಡಂಬಡಿಕೆಯನ್ನು ಬಿಟ್ಟು,
ಬೇರೆ ದೇವರುಗಳಿಗೆ ನಮಸ್ಕರಿಸಿ, ಸೇವಿಸಿದದರಿಂದಲೇ,
ಎಂದು ಹೇಳುವರು.

೧೦ ಸತ್ತವನನ್ನು ಕುರಿತು ಅಳ ಬೇಡಿರಿ;
ಅವನನ್ನು ಕುರಿತು ಗೋಳಾಡ ಬೇಡಿರಿ;
ಹೋಗಿ ಬಿಡುವವನನ್ನು ಕುರಿತು ಬಹಳವಾಗಿ ಅಳ್ಳಿರಿ.
ಯಾಕಂದರೆ ಇವನು ತಿರಿಗಿ ಬರುವದಿಲ್ಲ,
ತಾನು ಹುಟ್ಟಿದ ದೇಶವನ್ನು ಇನ್ನು ನೋಡುವದಿಲ್ಲ.
೧೧ ಯಾಕಂದರೆ ಯೆಹೂದದ ಅರಸನಾದ ಯೊಸೀಯನ ಮಗನಾದಂಥ,
ತನ್ನ ತಂದೆಯಾದ ಯೊಸೀಯನಿಗೆ ಬದಲಾಗಿ ಆಳ್ಳಿದಂಥ,
ಈ ಸ್ಥಳವನ್ನು ಬಿಟ್ಟು ಹೋದಂಥ,
ಶಲ್ಲೂಮನನ್ನು ಕುರಿತು ಕರ್ತನು ಹೇಳುವದೇನಂದರೆ—
ಅವನು ಇನ್ನು ಇಲ್ಲಿಗೆ ತಿರಿಗಿ ಬರುವದಿಲ್ಲ.
೧೨ ಅವರು ಅವನನ್ನು ಕೆಡೆಯಾಗಿ ಬೈದ ಸ್ಥಳದಲ್ಲಿಯೇ ಸಾಯುವನು;
ಈ ದೇಶವನ್ನು ಇನ್ನು ನೋಡುವದಿಲ್ಲ.

೧೩ ಅನೀತಿಯಿಂದ ತನ್ನ ಮನೆಯನ್ನು,
ಅನ್ಯಾಯದಿಂದ ತನ್ನ ಕೋಣೆಗಳನ್ನು ಕಟ್ಟುವವನಿಗೂ,
ಕೂಲಿ ಕೊಡದೆ ತನ್ನ ನೆರೆಯವನ ಕೈಯಿಂದ ಸುಮ್ಮನೆ ಕೆಲಸ ತಕ್ಕೊಳ್ಳುವವನಿಗೂ,
ದೊಡ್ಡ ಮನೆಯನೂಾ,
೧೪ ಝಾಲ್ಲಿ ಸಂಚರಿಸುವ ಕೊಣಡಿಗಳನೂಾ,
ಕಟ್ಟಿಕೊಳ್ಳುವೆನೆಂದು ಹೇಳಿ,
ಕಿಟಕಿಗಳನ್ನು ಕೊರೆದು,
ದೇವದಾರನ ಹಲಿಗೆಗಳನ್ನು ಹಾಕಿ,
ಇಂಗಿಲೀಕ ಬಣ್ಣವನ್ನು ಹಚ್ಚುವವನಿಗೂ, ಅಯ್ಯೋ!
೧೫ ನೀನು ದೇವದಾರನ ಕೆಲಸದಿಂದ ನಿನ್ನನ್ನು ಮುಚ್ಚಿ ಕೊಳ್ಳುವದರಿಂದ ದೊಕೆತನ ಮಾಡುವಿಯೋ!
ನಿನ್ನ ತಂದೆ ಉಂಡು, ಕುಡಿದು, ನ್ಯಾಯವನೂಾ, ನೀತಿಯನೂಾ ಮಾಡಲಿಲ್ಲವೋ!
ಆಗಲವನಿಗೆ ಬಗ್ಗೇದಾಯಿತು.

೧೬ ಬಡವನ ದರಿದ್ರನ ನ್ಯಾಯವನ್ನು ತೀರಿಸಿದನು,
ಆಗ ಬಗ್ಗೇದಾಯಿತು;
ನನ್ನನ್ನು ಶಿಳ್ಳಿಯೋಣ ಇದೇ ಅಲ್ಲವೋ!
ಎಂದು ಕರ್ತನು ಅನ್ನುತ್ತಾನೆ.
೧೭ ಆದರೆ ನಿನ್ನ ಕಣ್ಣುಗಳೂ, ನಿನ್ನ ಹೃದಯವೂ,
ನಿನ್ನ ದುರಾಶೆದ ಮೇಲೆಯೂ,
ಅಪರಾಧವಿಲ್ಲದವನ ರಕ್ತ ಚೆಲ್ಲುವದರ ಮೇಲೆಯೂ,
ಬಲಾತ್ಕಾರವನ್ನೂ ತಿಪ್ಪಲನ್ನೂ ಮಾಡುವದರ ಮೇಲೆಯೂ ಹೊರ್ತು,
ಮತ್ಯಾವದರ ಮೇಲೆಯಾಗಲಿ ಇರುವದಿಲ್ಲ.
೧೮ ಆದದರಿಂದ ಯೊಸೀಯನ ಮಗನಾದ
ಯೆಹೂದದ ಅರಸನಾದ ಯೆಹೋಯಕೀಮನನ್ನು ಕುರಿತು
ಕರ್ತನು ಹೇಳುವದೇನಂದರೆ—
ಅವರು ಅವನನ್ನು ಕುರಿತು ಗೋಳಾಡಿ,
ಅಯ್ಯೋ ನನ್ನ ಸಹೋದರನೇ! ಅಯ್ಯೋ ಸಹೋದರಿಯೇ!
ಎಂದು ಅನ್ನುವದಿಲ್ಲ;
ಅಯ್ಯೋ ಧೊರೆಯೇ! ಅಯ್ಯೋ ಅವನ ಮಹಿಮೆಯೇ!
ಎಂದು ಅವನನ್ನು ಕುರಿತು ಗೋಳಾಡುವದಿಲ್ಲ.
೧೯ ಕತ್ತೆಯನ್ನು ಹೂಣಿಡುವ ಪ್ರಕಾರ ಅವನನ್ನು ಹೂಣಿಡುವರು;
ಅವನನ್ನು ಎಳ್ಳಕೊಂಡು ಹೋಗಿ,
ಯೆರೂಸಲೇಮಿನ ಬಾಗಲುಗಳ ಆಚೆಗೆ ಬಿಸಾಡುವರು.

೨೦ ಲೆಬನೋನನ್ನು ಏರಿ ಕೂಗು!
ಬಾಶಾನಿನಲ್ಲಿ ನಿನ್ನ ಶಬ್ದವನ್ನೆತ್ತು!
ಅಬರಿಮಿನಿಂದ ಕೂಗು!
ಯಾಕಂದರೆ, ನಿನ್ನ ಮಿಂಡಕೆಲ್ಲರು ಮುರಿಯಲ್ಪಟ್ಟಿದ್ದಾರೆ
೨೧ ನಿನ್ನ ಕ್ಷೇಮದಲ್ಲಿ ನಿನ್ನ ಸಂಗಡ ಮಾತಾಡಿದೆನು,
ಆದರೆ ನಾನು ಕೇಳುವದಿಲ್ಲ, ಅಂದಿ;
ಇದೇ ನಿನ್ನ ಯೌವನದಾರಭ್ಯ ನಿನ್ನ ಮಾರ್ಗವು;
ಏನಂದರೆ—ನನ್ನ ಶಬ್ದಕ್ಕೆ ಕಿವಿಗೊಡದೆ ಇರುವದೇ.
೨೨ ನಿನ್ನ ಕುರುಬರನ್ನೆಲ್ಲಾ ಝಾಳ್ಳಿ ತಿಂದು ಬಿಡುವದು;
ನಿನ್ನ ಮಿಂಡರು ಕೆಡೆಗೆ ಹೋಗುವರು;
ನಿಶ್ಚಯವಾಗಿ ಆಗ ನಿನ್ನ ಎಲ್ಲಾ ಕೆಟ್ಟತನದ ನಿಮಿತ್ತ,
ನಿನಗೆ ನಾಚಿಕೆಯೂ ಅವಮಾನವೂ ಆಗುವದು.
೨೩ ಲೆಬನೋನಿನಲ್ಲಿ ವಾಸ ಮಾಡುವವಳೇ!
ದೇವದಾರುಗಳಲ್ಲಿ ಗೂಡು ಮಾಡಿಕೊಂಡವಳೇ!
ನಿನ್ನ ಮೇಲೆ ಬೇನೆಗಳೂ, ಹೆರುವವಳಂತಿರುವ ವೇದನೆಯೂ ಬರುವಾಗ,
ಎಷ್ಟೋ ಚೆಲುವಾಗಿರುವಿ!

೨೪ ಕರ್ತನು ಅನ್ನುವದೇನಂದರೆ—
ನನ್ನ ಜೀವದಾಣೆ, ಯೆಹೋಯಕೀಮನ ಮಗನಾದ
ಯೆಹೂದದ ಅರಸನಾದ ಕೊನೀಯನು
ನನ್ನ ಬಲಗೈಯ್ಯ ಮುದ್ರೆಯುಂಗರವಾಗಿದ್ದರೂ
ನಿನ್ನನ್ನು ಅಲ್ಲಿಂದ ಕಿತ್ತು ಹಾಕಿ,
೨೫ ನಿನ್ನ ಪ್ರಾಣವನ್ನು ಹುಡುಕುವವರ ಕೈಯಲ್ಲಿಯೂ,
ನೀನು ಹೆದರಿಕೊಂಡವರ ಕೈಯಲ್ಲಿಯೂ,

ಬಾಬೆಲಿನ ಅರಸನಾದ ನೆಬುಕದ್ನೆಚ್ಚರನ ಕೈಯಲ್ಲಿಯೂ,
ಕಸ್ದೀಯರ ಕೈಯಲ್ಲಿಯೂ, ಒಪ್ಪಿಸಿ ಬಿಟ್ಟು,
೨೬ ನಿನ್ನನೂ, ನಿನ್ನ ಹೆತ್ತ ತಾಯಿಯನೂ,
ನೀವು ಹುಟ್ಟಿದಿರುವ ಬೇರೆ ದೇಶದಲ್ಲಿಯೂ, ಹಾಕಿ ಬಿಡುವೆನು;
ಅಲ್ಲೇ ಸಾಯುವಿರಿ.
೨೭ ಆದರೆ ಅವರು ತಿರಿಗಿ ಬರುವದಕ್ಕೆ ಮನಸ್ಸು ಮಾಡುವ ದೇಶಕ್ಕೆ
ತಿರಿಗಿ ಬಾರರು.
೨೮ ಕೊನೀಯನೆಂಬ ಈ ಮನುಷ್ಯನು
ಉದಾಸೀನವಾದ ಬಡೆದು ಹೋದ ವಿಗ್ರಹವೋ!
ಮೆಚ್ಚಿಕೆ ಇಲ್ಲದ ಪಾತ್ರೆಯೋ!
ಯಾಕೆ ಅವನೂ ಅವನ ಸಂತಾನವೂ ಬಿಸಾಡಲ್ಪಟ್ಟು,
ತಮಗೆ ತಿಳಿಯದ ದೇಶಕ್ಕೆ ಹಾಕಲ್ಪಟ್ಟರು!
೨೯ ಓ ಭೂಮಿಯೇ! ಭೂಮಿಯೇ! ಭೂಮಿಯೇ!
ಕರ್ತನ ವಾಕ್ಯವನ್ನು ಕೇಳು.
೩೦ ಕರ್ತನು ಹೇಳುವದೇನಂದರೆ—
ಈ ಮನುಷ್ಯನನ್ನು ಮಕ್ಕಳಿಲ್ಲದವನೆಂದೂ,
ತನ್ನ ದಿನಗಳಲ್ಲಿ ಬಾಳುವ ಪುರುಷನಲ್ಲವೆಂದೂ, ಬರಿಯಿರಿ;
ಯಾಕಂದರೆ ಅವನ ಸಂತಾನದಲ್ಲಿ ಒಬ್ಬನಾದರೂ
ದಾವೀದನ ಸಿಂಹಾಸನದಲ್ಲಿ ಕೂತುಕೊಂಡು,
ಯೆಹೂದದಲ್ಲಿ ಆಳುವ ಹಾಗೆ ಬಾಳುವದಿಲ್ಲ.

## ೨೩. ಸಂಧಿ.

೧ ನನ್ನ ಮೇವಿನ ಕುರಿಗಳನ್ನು ಕೆಡಿಸಿ,
ಚದರಿಸುವ ಕುರುಬರಿಗೆ ಅಯ್ಯೋ!
ಎಂದು ಕರ್ತನು ಅನ್ನುತ್ತಾನೆ.
೨ ಆದದರಿಂದ ಇಸ್ರಯೇಲಿನ ದೇವರಾದ ಕರ್ತನು,
ನನ್ನ ಜನರನ್ನು ಮೇಯಿಸುವ ಕುರುಬರಿಗೆ ವಿರೋಧವಾಗಿ ಹೇ
ಳುವದೇನಂದರೆ—
ನೀವು ನನ್ನ ಮಂದೆಯನ್ನು ಚದರಿಸಿ,
ಓಡಿಸಿ ಬಿಟ್ಟು, ಪರಾಮರಿಸದೆ ಇದ್ದಿರಿ;
ಇಗೋ ನಾನು ನಿಮ್ಮ ಕ್ರಿಯೆಗಳ ಕೆಟ್ಟತನವನ್ನು
ನಿಮ್ಮಲ್ಲಿ ವಿಚಾರಿಸುತ್ತೇನೆಂದು
ಕರ್ತನು ಅನ್ನುತ್ತಾನೆ.
೩ ಆದರೆ ನಾನು ನನ್ನ ಮಂದೆಯ ಉಳುವನ್ನು,
ನಾನು ಅವರನ್ನು ಓಡಿಸಿ ಬಿಟ್ಟ ಎಲ್ಲಾ ದೇಶಗಳಿಂದ ಕೂಡಿಸಿ,
ಅವರನ್ನು ತಮ್ಮ ಹಟ್ಟಿಗಳಿಗೆ ತಿರಿಗಿ ತರುವೆನು;
ಅವರು ಅಭಿವೃದ್ಧಿಯಾಗಿ ಹೆಚ್ಚುವರು.
೪ ಮತ್ತು ಅವರನ್ನು ಮೇಯಿಸ ತಕ್ಕ ಕುರುಬರನ್ನು
ಅವರ ಮೇಲೆ ಇಡುತ್ತೇನೆ;
ಅವರು ಇನ್ನು ಭಯಪಡುವದಿಲ್ಲ, ಅಂಜುವದಿಲ್ಲ,
ಕಾಣದೆ ಹೋಗುವದಿಲ್ಲ,
ಎಂದು ಕರ್ತನು ಅನ್ನುತ್ತಾನೆ.
೫ ಇಗೋ ದಿನಗಳು ಬರುವವೆಂದು ಕರ್ತನು ಅನ್ನುತ್ತಾನೆ;
ಆಗ ನಾನು ದಾವೀದನಿಗೆ
ನೀತಿಯುಳ್ಳ ಚಿಗುರನ್ನು ಎಬ್ಬಿಸುತ್ತೇನೆ;
ಅರಸನು ರಾಜ್ಯವಾಳಿ ಬಾಳುವನು;
ಭೂಮಿಯಲ್ಲಿ ನ್ಯಾಯವನ್ನೂ ನೀತಿಯನ್ನೂ ನಡಿಸುವನು.
೬ ಅವನ ದಿನಗಳಲ್ಲಿ ಯೆಹೂದವು ರಕ್ಷಿಸಲ್ಪಡುವದು;
ಇಸ್ರಯೇಲು ಭದ್ರವಾಗಿ ವಾಸಿಸುವದು;
ಅವನು ಕರೆಯಲ್ಪಡುವ ಹೆಸರು ಯಾವದಂದರೆ—
ಯೆಹೋವ ನಮ್ಮ ನೀತಿಯೇ.
೭ ಆದದರಿಂದ ಇಗೋ ದಿನಗಳು ಬರುತ್ತವೆಂದು
ಕರ್ತನು ಅನ್ನುತ್ತಾನೆ;
ಆಗ ಇಸ್ರಯೇಲನ ಮಕ್ಕಳನ್ನು,
ಐಗುತ್ತ ದೇಶದೊಳಗಿಂದ ಮೇಲೆ ಬರ ಮಾಡಿದ ಕರ್ತನು,
ಜೀವಿಸುತ್ತಾನೆಂದು ಹೇಳುವದಿಲ್ಲ;
೮ ಆದರೆ ಇಸ್ರಯೇಲನ ಮನೆಯವರ ಸಂತಾನವನ್ನು,
ಉತ್ತರ ದೇಶದಿಂದಲೂ, ನಾನು ಅವರನ್ನು ಓಡಿಸಿ ಬಿಟ್ಟಿದ್ದ ಎಲ್ಲಾ
ದೇಶಗಳಿಂದಲೂ, ಏರ ಮಾಡಿ,
ತಂದ ಕರ್ತನು ಜೀವಿಸುತ್ತಾನೆಂದು ಹೇಳುವರು;
ಅವರು ತಮ್ಮ ದೇಶದಲ್ಲಿ ವಾಸ ಮಾಡುವರು.
೯ ಪ್ರವಾದಿಗಳ ನಿಮಿತ್ತ ನನ್ನ ಹೃದಯವು ನನ್ನಲ್ಲಿ ಮುರಿದಿದೆ;
ನನ್ನ ಎಲುವುಗಳೆಲ್ಲಾ ಕದಲುತ್ತವೆ;
ಕರ್ತನ ನಿಮಿತ್ತವೂ, ಅವನ ಪರಿಶುದ್ಧ ವಾಕ್ಯಗಳ ನಿಮಿತ್ತವೂ,
ಮತ್ತವಾದ ಮನುಷ್ಯನ ಹಾಗೆಯೂ,
ದ್ರಾಕ್ಷೆರಸಕ್ಕೆ ಒಳಗಾದ ಪುರುಷನ ಹಾಗೆಯೂ, ಇದ್ದೇನೆ.
೧೦ ಯಾಕಂದರೆ, ದೇಶವು ವ್ಯಭಿಚಾರಿಗಳಿಂದ ತುಂಬಿದೆ;
ಯಾಕಂದರೆ, ಶಾಪದಿಂದ ದುಃಖಿಸುತ್ತದೆ;
ಅರಣ್ಯದ ಮೇವುಗಳು ಒಣಗಿ ಹೋಗಿದೆ;
ಅವರ ಓಟವು ಕೆಟ್ಟದ್ದಾಗಿದೆ;
ಅವರ ಶಕ್ತಿಯು ಸರಿ ಇಲ್ಲ.
೧೧ ಯಾಕಂದರೆ, ಪ್ರವಾದಿಯೂ ಯಾಜಕನೂ ಕೂಡ ಭ್ರಷ್ಟರೇ;
ನನ್ನ ಮನೆಯಲ್ಲಿ ಸಹಾ ಅವರ ಕೆಟ್ಟತನವನ್ನು ಕಂಡಿದ್ದೇನೆಂದು
ಕರ್ತನು ಅನ್ನುತ್ತಾನೆ.
೧೨ ಆದದರಿಂದ ಅವರ ಮಾರ್ಗವು
ಕತ್ತಲೆಯಲ್ಲಿರುವ ಜಾರುವ ಸ್ಥಳಗಳ ಹಾಗೆ ಅವರಿಗಿರುವದು;
ಅವರು ತಳ್ಳಲ್ಪಟ್ಟು ಅದರಲ್ಲಿ ಬೀಳುವರು;
ಯಾಕಂದರೆ, ಕೇಡನ್ನು, ಅವರ ವಿಚಾರಣೆಯ ವರುಷವನ್ನೇ,
ಅವರ ಮೇಲೆ ತರುಸುವೆನೆಂದು ಕರ್ತನು ಅನ್ನುತ್ತಾನೆ.
೧೩ ಮತ್ತು ಸಮಾರ್ಯದ ಪ್ರವಾದಿಗಳಲ್ಲಿ ಬುದ್ಧಿಹೀನತೆಯನ್ನು
ನೋಡಿದ್ದೇನೆ;
ಅವರು ಬಾಳನಿಂದ ಪ್ರವಾದನೆಯನ್ನು ಹೇಳಿ,
ನನ್ನ ಜನರಾದ ಇಸ್ರಯೇಲನ್ನು ತಪ್ಪ ಮಾಡಿದ್ದಾರೆ.
೧೪ ಮತ್ತು ಯೆರೂಸಲೇಮಿನ ಪ್ರವಾದಿಗಳಲ್ಲಿ ಭಯಂಕರವಾದದ್ದನ್ನು
ನೋಡಿದ್ದೇನೆ;
ಅವರು ವ್ಯಭಿಚಾರ ಮಾಡಿ, ಪೋಸದಲ್ಲಿ ನಡಕೊಂಡು,
ದುಷ್ಟರ ಕೈಗಳನ್ನು, ಅವರು ತಮ್ಮ ದುಷ್ಟತ್ವವನ್ನು ಬಿಟ್ಟು ತಿ
ರುಗದ ಹಾಗೆ, ಬಲಪಡಿಸುತ್ತಾರೆ;
ಅವರೆಲ್ಲರೂ ನನಗೆ ಸೊದೋಮಿನ ಹಾಗೆಯೂ,
ಅದರ ನಿವಾಸಿಗಳು ಗಮೋರದ ಹಾಗೆಯೂ, ಇದ್ದಾರೆ.
೧೫ ಆದದರಿಂದ ಸೈನ್ಯಗಳ ಕರ್ತನು ಪ್ರವಾದಿಗಳ ವಿಷಯ ಹೇಳುವ
ದೇನಂದರೆ—



ಇಗೋ ನಾನು ಅವರಿಗೆ ಮಾಚಿಪತ್ರೆಯನ್ನು ತಿನ್ನ ಕೊಡು
ತ್ತೇನೆ;
ವಿಷದ ನೀರನ್ನು ಕುಡಿಯ ಕೊಡುತ್ತೇನೆ;
ಯಾಕಂದರೆ ಯೆರೂಸಲೇಮಿನ ಪ್ರವಾದಿಗಳ ಕಡೆಯಿಂದ
ಭ್ರಷ್ಟತ್ವವು ದೇಶಕ್ಕೆಲ್ಲಾ ಹೊರಟಿದೆ.

೧೬ ಸೈನ್ಯಗಳ ಕರ್ತನು ಹೇಳುವದೇನಂದರೆ—
ನಿಮಗೆ ಪ್ರವಾದಿಸುವ ಪ್ರವಾದಿಗಳ ವಾಕ್ಯಕ್ಕೆ ಕಿವಿ ಕೊಡ ಬೇಡಿರಿ;
ಅವರು ನಿಮಗೆ ಮೋಸ ಮಾಡುತ್ತಾರೆ;
ಕರ್ತನ ಬಾಯಿಂದಲ್ಲ,
ಸ್ವಂತ ಹೃದಯದಿಂದ ದರ್ಶನವನ್ನು ಹೇಳುತ್ತಾರೆ.
೧೭ ಅವರು ನನ್ನನ್ನು ಅಸಂಹಿಸುವವರಿಗೆ—
ನಿಮಗೆ ಸಮಾಧಾನವಾಗುವದೆಂದು
ಕರ್ತನು ಹೇಳುತ್ತಾನೆಂದು ಯಾವಾಗಲೂ ಹೇಳುತ್ತಾರೆ;
ಮತ್ತು ತಮ್ಮ ಹೃದಯದ ಕಾಠಿಣ್ಯದಲ್ಲಿ ನಡಕೊಳ್ಳುವವ
ರೆಲ್ಲರಿಗೆ—
ನಿಮ್ಮ ಮೇಲೆ ಕೇಡು ಬರುವದಿಲ್ಲ, ಅನ್ನುತ್ತಾರೆ.
೧೮ ಆದರೆ ಯಾರು ಕರ್ತನ ರಹಸ್ಯದಲ್ಲಿ ನಿಂತು,
ಅವನ ವಾಕ್ಯವನ್ನು ನೋಡಿ ಕೇಳಿದ್ದಾರೆ?
ಯಾರು ಅವನ ವಾಕ್ಯದಲ್ಲಿ ಲಕ್ಷ್ಯವಿಟ್ಟು, ಕೇಳಿದ್ದಾರೆ?
೧೯ ಇಗೋ ಕರ್ತನ ಬಿರುಗಾಳಿ ಉಗ್ರವಾಗಿ ಹೊರಟಿದೆ;
ಅಘೋರವಾದ ಬಿರುಗಾಳಿಯು;
ದುಷ್ಟರ ತಲೆಯ ಮೇಲೆ ಕಷ್ಟವಾಗಿ ಬೀಳುವದು.
೨೦ ಕರ್ತನ ಕೋಪವು,
ಅವನು ತನ್ನ ಹೃದಯದ ಆಲೋಚನೆಗಳನ್ನು ನಡಿಸಿ, ತೀರಿ
ಸಿರುವ ಮಟ್ಟಿಗೂ, ತಿರುಗುವದಿಲ್ಲ;
ಅಂತ್ಯ ದಿವಸಗಳಲ್ಲಿ ಅದನ್ನು ಚನ್ನಾಗಿ ಯೋಚನೆ ಮಾ
ಡುವಿರಿ.
೨೧ ನಾನು ಆ ಪ್ರವಾದಿಗಳನ್ನು ಕಳುಹಿಸಲಿಲ್ಲ;
ಆದಾಗ್ಯೂ ಓಡಿದರು;
ನಾನು ಅವರ ಸಂಗಡ ಮಾತಾಡಲಿಲ್ಲ;
ಆದಾಗ್ಯೂ ಪ್ರವಾದಿಸಿದರು.
೨೨ ಆದರೆ ಅವರು ನನ್ನ ರಹಸ್ಯದಲ್ಲಿ ನಿಂತಿದ್ದರೆ,
ಆಗ ನನ್ನ ಜನರಿಗೆ ನನ್ನ ವಾಕ್ಯಗಳನ್ನು ಕೇಳ ಕೊಟ್ಟು,
ಅವರನ್ನು ತಮ್ಮ ಕೆಟ್ಟ ಮಾರ್ಗದಿಂದಲೂ, ತಮ್ಮ ಕ್ರಿಯೆಗಳ
ಕೆಟ್ಟತನದಿಂದಲೂ, ತಿರುಗಿಸುವರು.

೨೩ ಕರ್ತನು ಅನ್ನುತ್ತಾನೆ—
ನಾನು ಸಮೀಪದಲ್ಲಿ ದೇವರಾಗಿದ್ದು,
ದೂರದಲ್ಲಿಯೂ ದೇವರಲ್ಲವೋ!
೨೪ ನಾನು ಅವನನ್ನು ನೋಡದ ಹಾಗೆ
ಒಬ್ಬನು ಮರೆಯಾದ ಸ್ಥಳಗಳಲ್ಲಿ ತನ್ನನ್ನು ಅಡಗಿಸಿ ಕೊಳ್ಳ
ಬಹುದೋ!
ಎಂದು ಕರ್ತನು ಅನುತ್ತಾನೆ;
ನಾನು ಆಕಾಶವನ್ನೂ ಭೂಮಿಯನ್ನೂ ತುಂಬುತ್ತೇನೆ ಅಲ್ಲವೋ!
ಎಂದು ಕರ್ತನು ಅನ್ನುತ್ತಾನೆ.
೨೫ ನನ್ನ ಹೆಸರಿನಲ್ಲಿ ಸುಳ್ಳನ್ನು ಪ್ರವಾದಿಸುವ ಪ್ರವಾದಿಗಳು ಹೇಳು
ವದನ್ನು ಕೇಳಿದ್ದೇನೆ;
ಕನಸು ಕಂಡಿದ್ದೇನೆ, ಕನಸು ಕಂಡಿದ್ದೇನೆ, ಅನ್ನುತ್ತಾರೆ.
೨೬ ಸುಳ್ಳು ಪ್ರವಾದಿಸುವ ಪ್ರವಾದಿಗಳ ಹೃದಯದಲ್ಲಿ ಇದು ಎಷ್ಟು
ಮಟ್ಟಿಗೂ ಇರುವದು!
ಅವರು ತಮ್ಮ ಹೃದಯದ ಕಪಟವನ್ನು ಪ್ರವಾದಿಸುವವರೇ.
೨೭ ಅವರ ತಂದೆಗಳು ಬಾಳನಿಂದ ನನ್ನ ಹೆಸರನ್ನು ಹ್ಯಾಗೆ ಮರೆತ
ರೋ,
ಹಾಗೆಯೇ ಇವರು, ತಮ್ಮ ತಮ್ಮ ನೆರೆಯವರಿಗೆ ತಿಳಿಸುವ ಕನ
ಸುಗಳಿಂದ,
ನನ್ನ ಜನರು ನನ್ನ ಹೆಸರನ್ನು ಮರೆತು ಬಿಡ ಮಾಡುವದಕ್ಕೆ
ಯೋಚಿಸುತ್ತಾರೆ.
೨೮ ಕನಸು ಉಂಟಾದ ಪ್ರವಾದಿ ಕನಸನ್ನು ತಿಳಿಸಲಿ;
ನನ್ನ ವಾಕ್ಯ ಉಂಟಾದವನು ನನ್ನ ವಾಕ್ಯವನ್ನು ಸತ್ಯವಾಗಿ
ಹೇಳಲಿ;
ಗೋಧಿಗೂ ಹೊಟ್ಟಿಗೂ ಸಮ್ಮಂಧವೇನೆಂದು!
ಕರ್ತನು ಅನ್ನುತ್ತಾನೆ.
೨೯ ನನ್ನ ವಾಕ್ಯವು ಬೆಂಕಿಯ ಹಾಗಲ್ಲವೋ!
ಎಂದು ಕರ್ತನು ಅನ್ನುತ್ತಾನೆ.
ಅದು ಬಂಡೆಯನ್ನು ಒಡೆಯುವ ಸುತ್ತಿಗೆಯ ಹಾಗಲ್ಲವೋ!
೩೦ ಆದದರಿಂದ ಇಗೋ, ಒಬ್ಬರಿಂದ ಒಬ್ಬರು ನನ್ನ ವಾಕ್ಯಗಳನ್ನು
ಕದ್ದುಕೊಳ್ಳುವ
ಪ್ರವಾದಿಗಳಿಗೆ ವಿರೋಧವಾಗಿದ್ದೇನೆಂದು
ಕರ್ತನು ಅನ್ನುತ್ತಾನೆ.
೩೧ ಇಗೋ, ತಮ್ಮ ನಾಲಿಗೆಗಳನ್ನು ಆಡಿಸಿ, ಅನ್ನುತ್ತಾನೆಂದು
ಅನ್ನುವ ಪ್ರವಾದಿಗಳಿಗೆ ವಿರೋಧವಾಗಿದ್ದೇನೆಂದು
ಕರ್ತನು ಅನ್ನುತ್ತಾನೆ.
೩೨ ಇಗೋ, ಸುಳ್ಳಿನ ಕನಸುಗಳನ್ನು ಪ್ರವಾದಿಸಿ,
ತಮ್ಮ ಸುಳ್ಳುಗಳಿಂದಲೂ, ತಮ್ಮ ಹೆಚ್ಚಳಿಂದಲೂ,
ನನ್ನ ಜನರನ್ನು ತಪ್ಪ ಮಾಡುವವರಿಗೆ ವಿರೋಧವಾಗಿದ್ದೇನೆ;
ನಾನು ಅವರನ್ನು ಕಳುಹಿಸಲಿಲ್ಲ, ಅವರಿಗೆ ಅಪ್ಪಣೆ ಕೊಡಲಿಲ್ಲ;
ಆದದರಿಂದ ಅವರು ಹ್ಯಾಗೂ ಈ ಜನರಿಗೆ ಪ್ರಯೋಜನವಾಗಿ
ರುವದಿಲ್ಲವೆಂದು
ಕರ್ತನು ಅನ್ನುತ್ತಾನೆ.

೩೩ ಇದಲ್ಲದೆ ಈ ಜನರಾಗಲಿ, ಪ್ರವಾದಿಯಾಗಲಿ, ಯಾಜಕ
ನಾಗಲಿ,
ಕರ್ತನ ಭಾರವೇನೆಂದು! ನಿನ್ನನ್ನು ಕೇಳುವಾಗ
ನೀನು ಅವರಿಗೆ—ಏನು ಭಾರ!
ನಾನು ನಿಮ್ಮನ್ನು ತಳ್ಳಿ ಬಿಟ್ಟಿದ್ದೇನೆಂದು
ಕರ್ತನು ಅನ್ನುತ್ತಾನೆಂದು ಹೇಳ ಬೇಕು.
೩೪ ಮತ್ತು ಕರ್ತನ ಭಾರವೆಂದನ್ನುವ
ಪ್ರವಾದಿಯಾಗಲಿ, ಯಾಜಕನಾಗಲಿ, ಜನರಾಗಲಿ,
ಅವರ ವಿಷಯವೇನಂದರೆ—
ನಾನು ಅಂಥಾ ಮನುಷ್ಯನನ್ನೂ ಅವನ ಮನೆಯನ್ನೂ ವಿಚಾ
ರಿಸುವೆನು.

೩೫ ನೀವು ನಿಮ್ಮ ನಿಮ್ಮ ನೆಕೆಯವರಿಗೂ, ನಿಮ್ಮ ನಿಮ್ಮ ಸಹೋದರರಿಗೂ,
ಹೇಳ ತಕ್ಕದ್ದೇನಂದರೆ—
ಕರ್ತನು ಏನು ಉತ್ತರ ಕೊಟ್ಟಿದ್ದಾನೆ!
ಕರ್ತನು ಏನು ಹೇಳಿದ್ದಾನೆ!
೩೬ ಆದರೆ ಕರ್ತನ ಭಾರವನ್ನು ಇನ್ನು ನುಡಿಯ ಬಾರದು;
ಯಾಕಂದರೆ ಒಬ್ಬೊಬ್ಬನಿಗೆ ತನ್ನ ವಾಕ್ಯವೇ ಭಾರವಾಗುವದು;
ಯಾಕಂದರೆ ನೀವು ಜೀವವುಳ್ಳ ದೇವರ ವಾಕ್ಯಗಳನ್ನೂ,
ಸೈನ್ಯಗಳ ಯೆಹೋವನಾದ ನಿಮ್ಮ ದೇವರ ವಾಕ್ಯಗಳನ್ನೋ,
ತಿರುಗಿಸಿ ಬಿಟ್ಟಿದ್ದೀರಿ.
೩೭ ನೀನು ಪ್ರವಾದಿಗೆ ಹೇಳ ತಕ್ಕದ್ದೇನಂದರೆ—
ಕರ್ತನು ನಿನಗೆ ಏನು ಉತ್ತರ ಕೊಟ್ಟಿದ್ದಾನೆ!
ಕರ್ತನು ಏನು ಹೇಳಿದ್ದಾನೆ!
೩೮ ಆದರೆ ನೀವು—ಕರ್ತನ ಭಾರವೆಂದು ಹೇಳಿದರೆ,
ನಿಶ್ಚಯವಾಗಿ ಕರ್ತನು ಹೀಗೆ ಹೇಳುತ್ತಾನೆ—
ಕರ್ತನ ಭಾರವೆಂದು ನೀವು ಹೇಳ ಬೇಡೆಂಬದಾಗಿ
ನಾನು ನಿಮಗೆ ಹೇಳಿ ಕಳುಹಿಸಿದ ಮೇಲೆ
ಕರ್ತನ ಭಾರವೆಂಬ ಈ ಮಾತನ್ನು ನೀವು ಹೇಳುವದರಿಂದ,
೩೯ ಇದುಕಾರಣ, ನಾನು, ಇಗೋ ನಾನೇ, ನಿಮ್ಮನ್ನು ಬಿಟ್ಟೀ ಬಿಡುತ್ತೇನೆ;
ಮತ್ತು ನಿಮ್ಮನ್ನೂ,
ನಾನು ನಿಮಗೂ ನಿಮ್ಮ ತಂದೆಗಳಿಗೂ ಕೊಟ್ಟ ಪಟ್ಣವನ್ನೂ,
ನನ್ನ ಸನ್ನಿಧಿಯಿಂದ ಬಿಸಾಡುತ್ತೇನೆ.
೪೦ ಮತ್ತು ಮರೆತು ಹೋಗಲ್ಪಡದ ನಿತ್ಯವಾದ ನಿಂದೆಯನ್ನೂ,
ನಿತ್ಯವಾದ ಅವಮಾನವನ್ನೂ, ನಿಮ್ಮ ಮೇಲೆ ತರಿಸುತ್ತೇನೆ.

## ೨೪. ಸಂಧಿ.

೧ ಕರ್ತನು ನನಗೆ ತೋರಿಸಲಾಗಿ, ಅಗೋ, ಬಾಬೆಲಿನ ಅರಸನಾದ ನೆಬುಕದ್ನೆಚ್ಚರನು, ಯೆಹೂದದ ಅರಸನಾದ ಯೆಹೋಯಕೀಮನ ಮಗನಾದ ಯೆಕೊನ್ಯನನ್ನೂ, ಯೆಹೂದದ ಪ್ರಧಾನರನ್ನೂ, ಬಡಿಗೆಯವರನ್ನೂ, ಕಮ್ಮಾರರನ್ನೂ, ಯೆರೂಸಲೇಮಿನಿಂದ ಕೆರೆಗೆ ಪೈದು, ಬಾಬೆಲಿಗೆ ತಕ್ಕೊಂಡು ಹೋದ ಮೇಲೆ, ಎರಡು ಪುಟ್ಟಿ ಅಂಜೂರದ ಹಣ್ಣುಗಳುಕರ್ತನ ದೇವಾಲಯದ
೨ ಮುಂದೆ ಇರಿಸಲ್ಪಟ್ಟಿವು. ಒಂದು ಪುಟ್ಟಿಯಲ್ಲಿ ಬಹಳ ಬಲ್ಲೇ ಹಣ್ಣುಗಳು, ಮೊದಲು ಮಾಗುವ ಹಣ್ಣುಗಳ ಹಾಗೆ ಇರುವವುಗಳೂ, ಮತ್ತೊಂದು ಪುಟ್ಟಿಯಲ್ಲಿ ಬಹಳ ಕೆಟ್ಟ ಹಣ್ಣುಗಳು, ತಿ
೩ ನ್ನ ಕೂಡದ ಹಾಗೆ ಅಷ್ಟು ಕೆಟ್ಟವುಗಳೂ, ಇದ್ದವು. ಆಗ ಕರ್ತನು ನನಗೆ—ಯೆರೆಮಿಯಾನೇ, ನೀನು ನೋಡುತ್ತೀ! ಅಂದನು; ಅಂಜೂರದ ಹಣ್ಣುಗಳನ್ನು, ಅಂದೆನು; ಬಲ್ಲೇ ಹಣ್ಣುಗಳು ಬಹಳ ಬಲ್ಲೇವು; ಕೆಟ್ಟ ಹಣ್ಣುಗಳು ಬಹಳ ಕೆಟ್ಟವು, ತಿನ್ನ ಕೂಡದ ಹಾಗೆ ಅಷ್ಟು ಕೆಟ್ಟವಾಗಿವೆ, ಅಂದೆನು.

೪ ಆಗ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ—
೫ ಇಸ್ರಯೇಲಿನ ದೇವರಾದ ಕರ್ತನು ಹೇಳುವದೇನಂದರೆ—
ಈ ಒಳ್ಳೇ ಅಂಜೂರದ ಹಣ್ಣುಗಳ ಹಾಗೆ
ನಾನು ಈ ಸ್ಥಳದಿಂದ ಕಸ್ದೀಯರ ದೇಶಕ್ಕೆ
೬ ಒಳ್ಳೇದಕ್ಕಾಗಿ ಕಳುಹಿಸಿದ ಯೆಹೂದದ ಸೆಕೆಯವರನ್ನು ಪರಾಮರಿಸುವೆನು.
ನನ್ನ ಕಣ್ಣುಗಳನ್ನು ಅವರ ಮೇಲೆ ಒಳ್ಳೇದಕ್ಕಾಗಿ ಇರುವೆನು;
ಈ ದೇಶಕ್ಕೆ ಅವರನ್ನು ತಿರಿಗಿ ಬರ ಮಾಡುವೆನು;
ಕೆಡವಿ ಹಾಕದೆ ಅವರನ್ನು ಕಟ್ಟುವೆನು,
ಕೀಳದೆ ಅವರನ್ನು ನೆಡುವೆನು.
೭ ಮತ್ತು ನಾನೇ ಕರ್ತನೆಂದು
ನನ್ನನ್ನು ತಿಳಿಯ ಕೊಳ್ಳುವದಕ್ಕೆ ಅವರಿಗೆ ಹೃದಯವನ್ನು ಕೊಡುವೆನು;
ಅವರು ನನಗೆ ಜನರಾಗಿರುವರು;
ನಾನು ಅವರಿಗೆ ದೇವರಾಗಿರುವೆನು;
ಯಾಕಂದರೆ ತಮ್ಮ ಪೂರ್ಣ ಹೃದಯದಿಂದ ನನ್ನ ಬಳಿಗೆ ತಿರುಗಿ ಕೊಳ್ಳುವರು.

೮ ಮತ್ತು ತಿನ್ನ ಕೂಡದ ಹಾಗೆ ಅಷ್ಟು ಕೆಟ್ಟವುಗಳಾಗಿರುವ ಆ ಕೆಟ್ಟ ಅಂಜೂರದ ಹಣ್ಣುಗಳ ಹಾಗೆ,
ನಿಶ್ಚಯವಾಗಿ ನಾನು ಯೆಹೂದದ ಅರಸನಾಗಿ ಚಿದ್ಕೀಯನನ್ನೂ,
ಅವನ ಪ್ರಧಾನರನ್ನೂ,
ಈ ದೇಶದಲ್ಲಿ ಉಳಿಯುವ ಯೆರೂಸಲೇಮಿನ ಉಳಿವನ್ನೂ,
ಐಗುಪ್ತ ದೇಶದಲ್ಲಿ ವಾಸಿಸುವವರನ್ನೂ,
ಒಪ್ಪಿಸುತ್ತೇನೆಂದು ಕರ್ತನು ಹೇಳುತ್ತಾನೆ.
೯ ನಾನು ಅವರನ್ನು ಓಡಿಸಿ ಬಿಡುವ ಎಲ್ಲಾ ಸ್ಥಳಗಳಲ್ಲಿ,
ನಿಂದೆಗೂ, ಗಾದೆಗೂ, ಹಾಸ್ಯಕ್ಕೂ, ಶಾಪಕ್ಕೂ, ಗುರಿ ಮಾಡಿ,
ಅವರನ್ನು ಭೂಮಿಯ ಸಮಸ್ತ ರಾಜ್ಯಗಳಲ್ಲಿ,
ತಿರುಗಾಟಕ್ಕೂ, ಕೇಡಿಗೂ ಒಪ್ಪಿಸುವೆನು.
೧೦ ಮತ್ತು ನಾನು ಅವರಿಗೂ, ಅವರ ತಂದೆಗಳಿಗೂ, ಕೊಟ್ಟ ದೇಶದೊಳಗಿಂದ,
ಅವರು ಮುಗಿದು ಹೋಗುವ ಪರ್ಯಂತರ,
ಕತ್ತಿಯನ್ನೂ, ಬರವನ್ನೂ, ಜಾಡ್ಯವನ್ನೂ,
ಅವರಲ್ಲಿ ಕಳುಹಿಸುವೆನು.

## ೨೫. ಸಂಧಿ.

೧ ಬಾಬೆಲಿನ ಅರಸನಾದ ನೆಬುಕದ್ನೆಚ್ಚರನ ಮೊದಲನೇ ವರುಷವಾಗಿದ್ದ, ಯೆಹೂದದ ಅರಸನಾದ ಯೊಸೀಯನ ಮಗನಾದ ಯೆಹೋಯಕೀಮನ ನಾಲ್ಕನೇ ವರುಷದಲ್ಲಿ, ಯೆಹೂದದ ಸಮಸ್ತ ಜನರ ವಿಷಯ ಯೆರೆಮಿಯಾನಿಗೆ ಉಂಟಾದ ವಾಕ್ಯವೂ, ಪ್ರವಾ
೨ ದಿಯಾದ ಯೆರೆಮಿಯಾನು ಯೆಹೂದದ ಸಮಸ್ತ ಜನರಿಗೂ, ಯೆರೂಸಲೇಮಿನ ಎಲ್ಲಾ ನಿವಾಸಿಗಳಿಗೂ, ಹೇಳಿದ್ದೂ, ಏನಂದರೆ—
೩ ಯೆಹೂದದ ಅರಸನಾದ ಅಮ್ಮೋನನ ಮಗನಾದ ಯೊಸೀಯನ ಹದಿಮೂರನೇ ವರುಷ ಮೊದಲ್ಗೊಂಡು, ಇಂದಿನ ಪರ್ಯಂತರ, ಈ ಇಪ್ಪತ್ತು ಮೂರು ವರುಷ, ಕರ್ತನ ವಾಕ್ಯವು ನನಗೆ ಉಂಟಾಗಿ, ನಾನು ಅದನ್ನು ನಿಮಗೆ ಹೇಳ್ಳಿದ್ದೇನೆ, ಬೆಳ್ಳಗ್ಯೆ ಎದ್ದು ಹೇಳ್ಳಿದ್ದೇನೆ; ಆದರೆ ನೀವು ಕೇಳ್ಳಲಿಲ್ಲ. ಇದಲ್ಲದೆ ಕರ್ತನು



ತನ್ನ ಸೇವಕರಾದ ಪ್ರವಾದಿಗಳನ್ನೆಲ್ಲಾ ನಿಮ್ಮಗೆ ಕಳುಹಿಸಿದ್ದಾನೆ; ಬೆಳ್ಳಗ್ಯೆ ಎದ್ದು ಕಳುಹಿಸಿದ್ದಾನೆ; ಆದರೆ ನೀವು ಕೇಳ್ಳಲಿಲ್ಲ; ಕೇಳುವದಕ್ಕೆ ನಿಮ್ಮ ಕಿವಿ ಬೊಗ್ಗಿಸಲಿಲ್ಲ. ಅವರು ಹೇಳ್ಳಿದ್ದೇನಂದರೆ— ನಿ
೫ ಮ್ಮ ನಿಮ್ಮ ಕೆಟ್ಟ ಮಾರ್ಗವನ್ನೂ, ನಿಮ್ಮ ಕೆಟ್ಟ ಕ್ರಿಯೆಗಳ ಕೆಟ್ಟತನವನ್ನೂ, ಬಿಟ್ಟು ತಿರುಗಿರಿ; ಆಗ ಕರ್ತನು ನಿಮಗೂ, ನಿಮ್ಮ ತಂದೆಗಳಿಗೂ, ಕೊಟ್ಟ ದೇಶದಲ್ಲಿ ಎಂದೆಂದಿಗೂ ವಾಸಿಸುವಿರಿ.
೬ ಮತ್ತು ಬೇರೆ ದೇವರುಗಳನ್ನು, ಅವರನ್ನು ಸೇವಿಸುವದಕ್ಕೂ ಆರಾಧಿಸುವದಕ್ಕೂ, ಹಿಂಬಾಲಿಸ ಬೇಡಿರಿ; ನಿಮ್ಮ ಕೈ ಕ್ರಿಯೆಗಳಿಂದ ನನಗೆ ಕರ್ಕರೆ ಎಬ್ಬಿಸ ಬೇಡಿರಿ; ಆಗ ನಿಮಗೆ ಕೇಡು ಮಾಡೆ
೭ ನು. ಆದರೆ ನೀವು, ನಿಮಗೆ ಕೇಡು ಬರುವ ಹಾಗೆ, ನಿಮ್ಮ ಕೈ ಕ್ರಿಯೆಗಳಿಂದ ನನಗೆ ಕರ್ಕರೆ ಎಬ್ಬಿಸಿ, ನನ್ನನ್ನು ಕೇಳ್ಳಲಿಲ್ಲವೆಂದು ಕರ್ತನು ಅನ್ನುತ್ತಾನೆ.
೮ ಆದದರಿಂದ ಸೈನ್ಯಗಳ ಕರ್ತನು ಹೇಳುವದೇನಂದರೆ—ನೀವು
೯ ನನ್ನ ಮಾತುಗಳನ್ನು ಕೇಳದ ಕಾರಣ, ಇಗೋ, ಕರ್ತನು ಅನ್ನುವದೇನಂದರೆ—ನಾನು ಕಳುಹಿಸಿ, ಉತ್ತರ ದಿಕ್ಕಿನ ಗೋತ್ರಗಳ್ಳೆಲ್ಲವನ್ನೂ, ನನ್ನ ಸೇವಕನಾದ ಬಾಬೆಲಿನ ಅರಸನಾದ ನೆಬುಕದ್ನೆಚ್ಚರನನ್ನೂ, ತಕ್ಕೊಂಡು, ಈ ದೇಶಕ್ಕೆ ವಿರೋಧವಾಗಿಯೂ, ಅದರ ನಿವಾಸಿಗಳಿಗೆ ವಿರೋಧವಾಗಿಯೂ, ಸುತ್ತಲಿರುವ ಈ ಎಲ್ಲಾ ಜನಾಂಗಗಳಿಗೆ ವಿರೋಧವಾಗಿಯೂ, ತರಿಸಿ, ಅವರನ್ನು ಶುದ್ಧವಾಗಿ ನಿರ್ಮೂಲ ಮಾಡಿ, ಅವರನ್ನು ವಿಸ್ಮಯಕ್ಕೂ, ಸಿಳ್ಳಿಡುವಿಕೆಗೂ, ಗುರಿಯಾಗಿಯೂ, ನಿತ್ಯ ಹಾಳಾಗಿಯೂ,
೧೦ ಇಡುತ್ತೇನೆ. ಇದಲ್ಲದೆ ಉಲ್ಲಾಸದ ಶಬ್ದವನ್ನೂ, ಸಂತೋಷದ ಶಬ್ದವನ್ನೂ, ಮದಲಿಂಗನ ಶಬ್ದವನ್ನೂ, ಮದಲಗತ್ತಿಯ ಶಬ್ದವನ್ನೂ, ಬೀಸುವ ಕಲ್ಲಿನ ಶಬ್ದನವನ್ನೂ, ದೀಪದ ಬೆಳ್ಳಕನ್ನೂ, ಅ
೧೧ ವರೊಳಗಿಂದ ತೆಗೆದು ಹಾಕುತ್ತೇನೆ. ಈ ದೇಶವೆಲ್ಲಾ ಹಾಳೂ, ವಿಸ್ಮಯಕ್ಕೆ ಗುರಿಯೂ, ಆಗುವದು; ಮತ್ತು ಈ ಜನಾಂಗಗಳು ಬಾಬೆಲಿನ ಅರಸನನ್ನು ಎಪ್ಪತ್ತು ವರುಷ ಸೇವಿಸುವರು.
೧೨ ಮತ್ತು ಆಗುವದೇನಂದರೆ—ಎಪ್ಪತ್ತು ವರುಷ ತುಂಬಿದ ಮೇಲೆ ನಾನು ಬಾಬೆಲಿನ ಅರಸನನ್ನೂ, ಆ ಜನಾಂಗವನ್ನೂ, ಕಸ್ದೀಯರ ದೇಶವನ್ನೂ, ಅವರ ಅಕ್ರಮಕ್ಕಾಗಿ ವಿಚಾರಿಸುವೆನೆಂದು, ಕರ್ತ
೧೩ ನು ಅನ್ನುತ್ತಾನೆ; ಅದನ್ನು ನಿತ್ಯವಾಗಿ ಹಾಳು ಮಾಡುವೆನು. ನಿಶ್ಚಯವಾಗಿ ಆ ದೇಶದ ಮೇಲೆ, ನಾನು ಅದಕ್ಕೆ ವಿರೋಧವಾಗಿ ಹೇಳ್ಳಿದ ಎಲ್ಲಾ ವಾಕ್ಯಗಳ್ಳನ್ನೂ, ಯೆರೆಮಿಯನು ಜನಾಂಗಗಳಿಗೆ
೧೪ ವಿರೋಧವಾಗಿ ಪ್ರವಾದಿಸಿ, ಈ ಪುಸ್ತಕದಲ್ಲಿ ಬರೆದಿರುವ ಎಲ್ಲವನ್ನೂ, ಬರ ಮಾಡುವೆನು. ಯಾಕಂದರೆ ಅನೇಕ ಜನಾಂಗಗಳೂ ದೊಡ್ಡ ಅರಸರೂ ಅವರಿಂದಲೂ ಸೇವೆ ಮಾಡಿಸಿಕೊಳ್ಳುವರು; ಅವರ ಕ್ರಿಯೆಗಳ ಪ್ರಕಾರವೂ, ಅವರ ಕೈ ಕೆಲಸದ ಪ್ರಕಾರವೂ, ಅವರಿಗೆ ಪ್ರತಿಫಲ ಕೊಡುವೆನು.
೧೫ ಯಾಕಂದರೆ ಇಸ್ರಯೇಲನ ದೇವರಾದ ಕರ್ತನು ನನಗೆ ಹೀಗೆ ಹೇಳುತ್ತಾನೆ—ಈ ರೌದ್ರದ ದ್ರಾಕ್ಷೆರಸದ ಪಾತ್ರೆಯನ್ನು ನನ್ನ ಕೈಯಿಂದ ತಕ್ಕೊಂಡು, ನಾನು ನಿನ್ನನ್ನು ಕಳುಹಿಸುವ
೧೬ ಎಲ್ಲಾ ಜನಾಂಗಗಳಿಗೆ ಅದನ್ನು ಕುಡಿಯ ಕೊಡು. ಆಗಲವರು ಕುಡಿದು, ನಾನು ಅವರ ಮಧ್ಯದಲ್ಲಿ ಕಳುಹಿಸುವ ಕತ್ತಿಯ ನಿಮಿತ್ತ, ಕದಲಿ, ಚೈತ್ಯಗಾರರಾಗುವರು.
೧೭ ಆಗ ನಾನು ಪಾತ್ರೆಯನ್ನು ಕರ್ತನ ಕೈಯಿಂದ ತಕ್ಕೊಂಡು, ಕರ್ತನು ನನ್ನನ್ನು ಕಳುಹಿಸಿದ ಎಲ್ಲಾ ಜನಾಂಗಗಳಿಗೆ ಕುಡಿಸಿದೆ
೧೮ ನು. ಯೆರೂಸಲೇಮಿಗೂ, ಯೆಹೂದದ ಪಟ್ಣಗಳಿಗೂ, ಅದರ ಅರಸುಗಳಿಗೂ, ಪ್ರಭುಗಳಿಗೂ, ಅವರನ್ನು ಇಂದಿನ ಪ್ರಕಾರ ಹಾಳು ಮಾಡಿ, ವಿಸ್ಮಯಕ್ಕೂ ಸಿಳ್ಳಿಡುವಿಕೆಗೂ ಶಾಪಕ್ಕೂ ಗುರಿ ಮಾಡುವ ಹಾಗೆ, ಕುಡಿಸಿದೆನು. ಐಗುಪ್ತದ ಅರಸನಾದ ಫರೋನನಿಗೂ, ಅವನ ಸೇವಕರಿಗೂ, ಅವನ ಪ್ರಭುಗಳಿಗೂ, ಅವ
೧೯ ನ ಎಲ್ಲಾ ಜನರಿಗೂ, ಮಿಶ್ರವಾದ ಜನರೆಲ್ಲರಿಗೂ, ಊಜ್ ದೇಶದ ಅರಸರೆಲ್ಲರಿಗೂ, ಫಿಲಿಷ್ಟ್ಯ ದೇಶದ ಅರಸರೆಲ್ಲರಿಗೂ, ಅಷ್ಕಲೋನಿಗೂ, ಗಾಜಕ್ಕೂ, ಎಕ್ರೋನಿಗೂ, ಅಶ್ದೋದಿನ ಉಳಿ
೨೦ ವಿಗೂ, ಎದೋಮಿಗೂ, ಮೊವಾಬಿಗೂ, ಅಮ್ಮೋನನ ಮಕ್ಕಳಿ
೨೧ ಗೂ, ತೂರಿನ ಅರಸರೆಲ್ಲರಿಗೂ, ಚಿದೋನಿನ ಅರಸರೆಲ್ಲರಿಗೂ, ಸಮುದ್ರದ ಆಚೆಯಲ್ಲಿರುವ ದ್ವೀಪದ ಅರಸರಿಗೂ, ದೇದನಿಗೂ,
೨೩ ತೇಮಕ್ಕೂ, ಬೂಜಿಗೂ, ಗಡ್ಡದ ಮೂಲೆ ಕ್ಷೌರ ಮಾಡಿಸುವವರೆಲ್ಲರಿಗೂ, ಅರಾಬ್ಯದ ಅರಸರೆಲ್ಲರಿಗೂ, ಅರಣ್ಯದಲ್ಲಿ ವಾಸಿಸುವ ಮಿಶ್ರವಾದ ಜನರ ಅರಸರೆಲ್ಲರಿಗೂ, ಜಿಮ್ರಿಯ ಅರಸರೆಲ್ಲರಿ
೨೪ ಗೂ, ಏಲಾಮಿನ ಅರಸರೆಲ್ಲರಿಗೂ, ಮೇದ್ಯದ ಅರಸರೆಲ್ಲರಿಗೂ, ಹತ್ತರದಲ್ಲಿಯೂ ದೂರದಲ್ಲಿಯೂ ಒಬ್ಬರ ಬಳಿಯಲ್ಲಿ ಒಬ್ಬರಿರುವ ಉತ್ತರ ದಿಕ್ಕಿನ ಅರಸರೆಲ್ಲರಿಗೂ, ಭೂಮಿಯ ಮೇಲಾಭಾಗದಲ್ಲಿರುವಂಥ ಲೋಕದ ಎಲ್ಲಾ ರಾಜ್ಯಗಳಿಗೂ, ಕುಡಿಸಿದೆನು; ಮತ್ತು ಶೇಶಾಕಿನ ಅರಸನು ಅವರ ತರುವಾಯ ಕುಡಿಯುವನು.
೨೭ ಆದದರಿಂದ ನೀನು ಅವರಿಗೆ ಹೇಳ ಬೇಕಾದದ್ದೇನಂದರೆ—ಇಸ್ರಯೇಲಿನ ದೇವರಾದ ಕರ್ತನು ಹೀಗೆ ಹೇಳುತ್ತಾನೆ—ಕುಡಿಯಿರಿ, ಮತ್ತರಾಗಿರಿ, ಕಾರಿರಿ, ಬೀಳ್ಳಿರಿ, ತಿರಿಗಿ ಏಳ್ಳದಿರ್ರಿ; ನಾನು ನಿಮ್ಮ
೨೮ ಮಧ್ಯದಲ್ಲಿ ಕಳುಹಿಸುವ ಕತ್ತಿಯ ನಿಮಿತ್ತವೇ. ಮತ್ತು ಆಗುವದೇನಂದರೆ—ಅವರು ಪಾತ್ರೆಯನ್ನು ನಿನ್ನ ಕೈಯಿಂದ ತಕ್ಕೊಂಡು, ಕುಡಿಯಲೊಲ್ಲದೆ ಹೋದರೆ, ನೀನು ಅವರಿಗೆ ಹೇಳ ಬೇಕಾದದ್ದೇನಂದರೆ—ಸೈನ್ಯಗಳ ಕರ್ತನು ಹೀಗೆ ಹೇಳುತ್ತಾನೆ—ನೀವು
೨೯ ಕುಡಿಯಲೇ ಕುಡಿಯ ಬೇಕು. ಯಾಕಂದರೆ ಇಗೋ, ನನ್ನ ಹೆಸರಿನಿಂದ ಕರೆಯಲ್ಪಟ್ಟಿರುವ ಪಟ್ಣದ ಮೇಲೆ ನಾನು ಕೇಡನ್ನು ತರಿಸುವದಕ್ಕೆ ಆರಂಭ ಮಾಡುತ್ತೇನೆ; ಹಾಗಾದರೆ ನೀವು ಶುದ್ಧವಾಗಿ ತಪ್ಪಿಸಿಕೊಂಡೀರೋ! ತಪ್ಪಿಸಿಕೊಳ್ಳುವದಿಲ್ಲ; ಯಾಕಂದರೆ ನಾನು ಭೂನಿವಾಸಿಗಳ್ಳೆಲ್ಲರ ಮೇಲೆ ಕತ್ತಿಯನ್ನು ಕರೆಯುತ್ತೇನೆಂದು ಸೈನ್ಯಗಳ ಕರ್ತನು ಅನ್ನುತ್ತಾನೆ.
೩೦ ಆದದರಿಂದ ನೀನು ಅವರಿಗೆ ವಿರೋಧವಾಗಿ ಈ ವಾಕ್ಯಗಳ್ಳನ್ನೆಲ್ಲಾ ಪ್ರವಾದಿಸಿ, ಅವರಿಗೆ ಹೇಳ ತಕ್ಕದ್ದೇನಂದರೆ—
ಕರ್ತನು ಉನ್ನತದಿಂದ ಘರ್ಜಿಸಿ,
ತನ್ನ ಪರಿಶುದ್ಧ ನಿವಾಸದೊಳಗಿಂದ ತನ್ನ ಶಬ್ದವನ್ನು ಕೊಡುವನು;
ತನ್ನ ನಿವಾಸದ ಮೇಲೆ ಘಟ್ಟಿಯಾಗಿ ಘರ್ಜಿಸಿ,
ದ್ರಾಕ್ಷೆ ತುಳಿಯುವವರ ಹಾಗೆ
ಲೋಕಟವನ್ನು ಭೂನಿವಾಸಿಗಳ್ಳೆಲ್ಲರಿಗೆ ವಿರೋಧವಾಗಿ ಎತ್ತುವನು.
೩೧ ಭೂಮಿಯ ಅಂತ್ಯಗಳ ಪರ್ಯಂತರ ಘೋಷವು ಬರುವದು;
ಯಾಕಂದರೆ ಕರ್ತನಿಗೆ ಜನಾಂಗಗಳ ಸಂಗತಿ ವ್ಯಾಜ್ಯವದೆ;
ಅವನು ಎಲ್ಲಾ ಮಾಂಸದ ಸಂಗತಿ ವ್ಯವಹಾರ ನಡಿಸುವನು;
ದುಷ್ಟರನ್ನು ಕತ್ತಿಗೆ ಒಪ್ಪಿಸುವನೆಂದು
ಕರ್ತನು ಅನ್ನುತ್ತಾನೆ.

೩೦ ಸೈನ್ಯಗಳ ಕರ್ತನು ಹೇಳುವದೇನಂದರೆ—
ಇಗೋ, ಜನಾಂಗದಿಂದ ಜನಾಂಗಕ್ಕೆ ಕೇಡು ಹೊರಡುವದು;
ಭೂಮಿಯ ಮೇಲೆಗಳಿಂದ ಮಹಾ ಬಿರುಗಾಳಿ ಎಬ್ಬಿಸಲ್ಪಡುವದು.
೩೩ ಮತ್ತು ಆ ದಿವಸದಲ್ಲಿ ಭೂಮಿಯ ಈ ಮೇಲೆಯಿಂದ ಭೂಮಿಯ ಆ ಮೇಲೆಯ ಪರ್ಯಂತರ,
ಕರ್ತನಿಂದ ಕೊಂದು ಹಾಕಲ್ಪಟ್ಟವರು ಇರುವರು;
ಅವರಿಗೋಸ್ಕರ ಗೋಳಾಡುವದಿಲ್ಲ;
ಅವರನ್ನು ಕೂಡಿಸುವದಿಲ್ಲ, ಅವರನ್ನು ಹೂಣಿಡುವದಿಲ್ಲ;
ಭೂಮಿಯ ಮೇಲೆ ಗೊಬ್ಬರವಾಗುವರು.
೩೪ ಓ ಕುರುಬರೇ! ಹುಯಿಲಿಟ್ಟು ಕೂಗಿರಿ;
ಮಂದೆಯಲ್ಲಿ ಶ್ರೇಷ್ಠರೇ! ಧೂಳಿಯಲ್ಲಿ ಹೊರಲಾಡಿರಿ;
ಯಾಕಂದರೆ ನಿಮ್ಮನ್ನು ಕೊಲ್ಲುವದಕ್ಕೂ ಚೆದರಿಸುವದಕ್ಕೂ ದಿನಗಳು ತುಂಬಿ ಅವೆ;
ಆಗ ನೀವು ರಮ್ಯವಾದ ಪಾತ್ರೆಯ ಹಾಗೆ ಬೀಳುವಿರಿ.
೩೫ ಆಗ ಕುರುಬರಿಗೆ ಓಡಿ ಹೋಗುವದಕ್ಕೂ
ಮಂದೆಯ ಶ್ರೇಷ್ಠರಿಗೆ ತಪ್ಪಿಸಿ ಕೊಳ್ಳುವದಕ್ಕೂ
ಮಾರ್ಗವಿಲ್ಲದೆ ಹೋಗುವದು.
೩೬ ಕುರುಬರ ಕೂಗಿನ ಶಬ್ದವೂ,
ಮಂದೆಯ ಶ್ರೇಷ್ಠರ ಹುಯಿಲಿಡುವಿಕೆಯೂ, ಉಂಟು;
೩೭ ಯಾಕಂದರೆ ಕರ್ತನು ಅವರ ಮೇಯಿನ ಸ್ಥಳವನ್ನು ಹಾಳು ಮಾಡಿದ್ದಾನೆ.
ಹೌದು, ಸಮಾಧಾನವುಳ್ಳ ನಿವಾಸಿಗಳು,
ಕರ್ತನ ಕೋಪದ ಉರಿಯಿಂದ ಕೆಡಿಸಿ ಹಾಕಲ್ಪಟ್ಟವು.
೩೮ ಅವನು ಸಿಂಹದಂತೆ ತನ್ನ ಮರೆಯನ್ನು ಬಿಟ್ಟಿದ್ದಾನೆ;
ನಿಶ್ಚಯವಾಗಿ ಉಪದ್ರ ಪಡಿಸುವವನ ಉರಿಯ ನಿಮಿತ್ತವೂ,
ಅವನ ಕೋಪದ ಉರಿಯ ನಿಮಿತ್ತವೂ,
ಅವರ ದೇಶವು ಹಾಳಾಯಿತು.

## ೨೬. ಸಂಧಿ

೧ ಯೆಹೂದದ ಅರಸನಾದ ಯೊಷೀಯನ ಮಗನಾದ ಯೆಹೋಯಕೀಮನ ಥೊಕೆತನದ ಆರಂಭದಲ್ಲಿ ಈ ವಾಕ್ಯವು ಕರ್ತ
೨ ನಿಂದ ಉಂಟಾಯಿತು, ಏನಂದರೆ—ಕರ್ತನು ಹೀಗೆ ಹೇಳುತ್ತಾನೆ—ಕರ್ತನ ಮನೆಯ ಅಂಗಳದಲ್ಲಿ ನಿಂತುಕೊಂಡು, ಕರ್ತನ ಮನೆಯಲ್ಲಿ ಆರಾಧಿಸುವದಕ್ಕೆ ಬರುವ ಯೆಹೂದದ ಪಟ್ಟಣದವರೆಲ್ಲರಿಗೆ, ಅವರಿಗೆ ಹೇಳ ಬೇಕೆಂದು ನಾನು ನಿನಗೆ ಆಜ್ಞಾಪಿಸಿದ ವಾಕ್ಯಗಳನ್ನೆಲ್ಲಾ ಹೇಳು; ಒಂದು ಮಾತಾದರೂ ಕಡಿಮೆ ಮಾಡ
೩ ಬೇಡ. ಒಂದುವೇಳೆ ಅವರು ಕೇಳಿ, ನಾನು ಅವರ ಕ್ರಿಯೆಗಳ ಕೆಟ್ಟತನದ ನಿಮಿತ್ತ, ಅವರಿಗೆ ಮಾಡುವದಕ್ಕೆ ಆಲೋಚಿಸಿದ ಕೇಡಿನ ವಿಷಯ ಪಶ್ಚಾತ್ತಾಪ ಪಡುವ ಹಾಗೆ, ತಮ್ಮ ತಮ್ಮ ಕೆಟ್ಟ ಮಾರ್ಗವನ್ನು ಬಿಟ್ಟು ತಿರುಗಿ ಕೊಡಾರು. ಮತ್ತು ನೀನು ಅವರಿಗೆ
೪ ಹೇಳ ಬೇಕಾದದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ನೀವು ನನಗೆ ಕಿವಿ ಕೊಡದೆ, ನಾನು ನಿಮ್ಮ ಮುಂದೆ ಇಟ್ಟ ನನ್ನ ನ್ಯಾ
೫ ಯಪ್ರಮಾಣದಲ್ಲಿ ನಡಕೊಳ್ಳದೆ, ನಾನು ಬೆಳಿಗ್ಯೆ ಎದ್ದು ನಿಮಗೆ ಕಳುಹಿಸಿದಂಥ, ನೀವು ಕೇಳದಂಥ, ನನ್ನ ಸೇವಕರಾದ ಪ್ರವಾದಿ
೬ ಗಳ ವಾಕ್ಯಗಳನ್ನು ಕೇಳದೆ ಹೋದರೆ, ಆಗ ನಾನು ಈ ಮನೆಯನ್ನು ಶಿಲೋವಿನ ಹಾಗೆ ಮಾಡುತ್ತೇನೆ; ಮತ್ತು ಈ ಪಟ್ಟಣವನ್ನು ಭೂಮಿಯ ಎಲ್ಲಾ ಜನಾಂಗಗಳಿಗೆ ಶಾಪದ ಗುರಿಯಾಗ ಮಾಡುತ್ತೇನೆ.
೭ ಯೆರೆಮಿಾಯನು ಈ ವಾಕ್ಯಗಳನ್ನು ಕರ್ತನ ಮನೆಯಲ್ಲಿ ಹೇಳುತ್ತಿರಲಾಗಿ, ಯಾಜಕರೂ ಪ್ರವಾದಿಗಳೂ ಜನಕೆಲ್ಲರೂ ಕೇ
೮ ಳುತ್ತಿದ್ದರು. ಮತ್ತು ಅದನ್ನೇನಂದರೆ, ಯೆರೆಮಿಾಯನು ತಾನು ಜನಕೆಲ್ಲರಿಗೆ ಹೇಳ ಬೇಕೆಂದು ಕರ್ತನು ಆಜ್ಞಾಪಿಸಿದ್ದನ್ನೆಲ್ಲಾ ಹೇಳಿ ತೀರಿಸಿದ ಮೇಲೆ, ಯಾಜಕರೂ ಪ್ರವಾದಿಗಳೂ ಜನಕೆಲ್ಲರೂ ಅವನನ್ನು ಹಿಡಿದು, ನೀನು ಸಾಯಲೇ ಸಾಯ ಬೇಕು, ಅಂ
೯ ದರು. ಈ ಮನೆಯು ಶಿಲೋವಿನ ಹಾಗೆ ಆಗುವದೆಂದೂ, ಈ ಪಟ್ಟಣವು ನಿವಾಸಿ ಇಲ್ಲದೆ ಹಾಳಾಗುವದೆಂದೂ, ಕರ್ತನ ಹೆಸರಿನಲ್ಲಿ ಯಾಕೆ ಪ್ರವಾದಿಸಿದಿ! ಆಗ ಜನಕೆಲ್ಲರು ಕರ್ತನ ಮನೆಯಲ್ಲಿ ಯೆರೆಮಿಾಯನಿಗೆ ವಿರೋಧವಾಗಿ ಕೂಡಿಕೊಂಡರು.
೧೦ ಯೆಹೂದದ ಪ್ರಧಾನರು ಈ ಸಂಗತಿಗಳನ್ನು ಕೇಳಿದಾಗ, ಅರಸನ ಮನೆಯಿಂದ ಕರ್ತನ ಮನೆಗೆ ಏರಿ ಬಂದು, ಕರ್ತನ ಮನೆ
೧೧ ಯ ಹೊಸ ಬಾಗಿಲಿನ ಪ್ರವೇಶದಲ್ಲಿ ಕೂತುಕೊಂಡರು. ಆಗ ಯಾಜಕರೂ ಪ್ರವಾದಿಗಳೂ, ಪ್ರಧಾನರಿಗೂ ಜನಕೆಲ್ಲರಿಗೂ ಹೇಳಿದ್ದೇನಂದರೆ—ಈ ಮನುಷ್ಯನ ಮೇಲೆ ಮರಣದ ನಿರ್ಣಯ ಆಗ ತಕ್ಕದ್ದು; ಯಾಕಂದರೆ ನಿಮ್ಮ ಕಿವಿಗಳಿಂದಲೇ ನೀವು ಕೇಳಿದ ಪ್ರಕಾರ ಅವನು ಈ ಪಟ್ಟಣಕ್ಕೆ ವಿರೋಧವಾಗಿ ಪ್ರವಾದಿಸಿದ್ದಾನೆ.
೧೨ ಆಗ ಯೆರೆಮಿಾಯನು ಪ್ರಧಾನರೆಲ್ಲರಿಗೂ, ಜನಕೆಲ್ಲರಿಗೂ, ಹೇಳಿದ್ದೇನಂದರೆ—ನೀವು ಕೇಳಿದ ವಾಕ್ಯಗಳನ್ನೆಲ್ಲಾ ಈ ಮನೆಗೆ ವಿರೋಧವಾಗಿಯೂ, ಈ ಪಟ್ಟಣಕ್ಕೆ ವಿರೋಧವಾಗಿಯೂ ಪ್ರವಾ
೧೩ ದಿಸುವದಕ್ಕೆ, ಕರ್ತನು ನನ್ನನ್ನು ಕಳುಹಿಸಿದ್ದಾನೆ. ಹೀಗಿರುವದರಿಂದ ನಿಮ್ಮ ಮಾರ್ಗಗಳನ್ನೂ ನಿಮ್ಮ ಕ್ರಿಯೆಗಳನ್ನೂ ನೆಟ್ಟಗೆ ಮಾಡಿರಿ; ನಿಮ್ಮ ದೇವರಾದ ಕರ್ತನ ಶಬ್ದಕ್ಕೆ ಕಿವಿಕೊಡಿರಿ; ಆಗ ಕರ್ತನು ನಿಮಗೆ ವಿರೋಧವಾಗಿ ಮಾತಾಡಿದ ಕೇಡಿನ ವಿಷಯ
೧೪ ಪಶ್ಚಾತ್ತಾಪ ಪಡುವನು. ನನ್ನ ವಿಷಯವೋ; ಇಗೋ, ನಿಮ್ಮ ಕೈಯಲ್ಲಿ ಇದ್ದೇನೆ; ನಿಮಗೆ ಒಳ್ಳೇದಾಗಿಯೂ, ಸರಿಯಾಗಿಯೂ,
೧೫ ತೋರುವ ಪ್ರಕಾರ, ನನಗೆ ಮಾಡಿರಿ. ಆದರೂ ನೀವು ನನ್ನನ್ನು ಕೊಂದು ಹಾಕಿದರೆ, ನಿಮ್ಮ ಮೇಲೆಯೂ, ಈ ಪಟ್ಟಣದ ಮೇಲೆಯೂ, ಅದರ ನಿವಾಸಿಗಳ ಮೇಲೆಯೂ, ಅಪರಾಧಿಲ್ಲದ ರಕ್ತವನ್ನು ಬರ ಮಾಡುತ್ತೀರೆಂದು, ನಿಶ್ಚಯವಾಗಿ ತಿಳುಕೊಳ್ಳಿರಿ. ಯಾಕಂದರೆ ಈ ವಾಕ್ಯಗಳನ್ನೆಲ್ಲಾ ನಿಮ್ಮ ಕಿವಿಗಳಲ್ಲಿ ಹೇಳುವ ಹಾಗೆ, ಸತ್ಯವಾಗಿ ಕರ್ತನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ.
೧೬ ಆಗ ಪ್ರಧಾನರೂ ಜನಕೆಲ್ಲರೂ, ಯಾಜಕರಿಗೂ ಪ್ರವಾದಿಗಳಿಗೂ—ಈ ಮನುಷ್ಯನು ಮರಣದ ನಿರ್ಣಯಕ್ಕೆ ತಕ್ಕವನಲ್ಲ; ಯಾಕಂದರೆ ನಮ್ಮ ದೇವರಾದ ಕರ್ತನ ಹೆಸರಿನಲ್ಲಿ ನಮ್ಮ ಸಂಗಡ ಮಾತಾಡಿದ್ದಾನೆ, ಅಂದರು. ಮತ್ತು ದೇಶದ ಹಿರಿಯರಲ್ಲಿ ಕೆಲ
೧೭ ವರು ಎದ್ದು, ಜನರ ಕೂಟಕ್ಕೆಲ್ಲಾ ಹೇಳಿದ್ದೇನಂದರೆ—ಮೊರೆಷೆತಿನವನಾದ ಮಿಖಾಯನು ಯೆಹೂದದ ಅರಸನಾದ ಹಿಸ್ಕೀಯನ



೧೮ ದಿನಗಳಲ್ಲಿ ಪ್ರವಾದಿಸಿ, ಯೆಹೂದದ ಜನರಿಗೆಲ್ಲಾ ಹೇಳಿದ್ದೇನಂದರೆ—ಸೈನ್ಯಗಳ ಕರ್ತನು ಹೀಗೆ ಹೇಳುತ್ತಾನೆ—
ಚಿಯೋನು ಹೊಲದ ಹಾಗೆ ಉಳಲ್ಪಡುವದು;
ಯೆರೂಸಲೇಮು ದಿಬ್ಬಗಳಾಗುವದು;
ಮಂದಿರದ ಬೆಟ್ಟವು ಅಡವಿಯ ಉನ್ನತ ಸ್ಥಳವಾಗುವದು.
೧೯ ಅವನನ್ನು ಯೆಹೂದದ ಅರಸನಾದ ಹಿಸ್ಕೀಯನೂ, ಸಮಸ್ತ ಯೆಹೂದವೂ, ಕೊಂದೇ ಕೊಂದು ಹಾಕಿದರೋ! ಅವನು ಕರ್ತನಿಗೆ ಭಯಪಟ್ಟು, ಕರ್ತನ ಸಮುಖದಲ್ಲಿ ಮೊರೆಯಿಟ್ಟನಲ್ಲವೋ! ಆ ಮೇಲೆ ಕರ್ತನು ಅವರಿಗೆ ವಿರೋಧವಾಗಿ ಮಾತಾಡಿದ ಕೇಡಿನ ವಿಷಯ ಪಶ್ಚಾತ್ತಾಪ ಪಡಲಿಲ್ಲವೋ! ಆದರೆ ನಾವು ದೊಡ್ಡ ಕೇಡನ್ನು ನಮ್ಮ ಪ್ರಾಣಗಳ ಮೇಲೆ ತರಿಸಲಾಧೀತು.
೨೦ ಇದಲ್ಲದೆ ಕಿರಿಯತ್ಯಾರಿಮಿನವನಾದ ಶೆಮಾಯನ ಮಗನಾದ ಉರೀಯನೆಂಬವನು ಸಹ, ಕರ್ತನ ಹೆಸರಿನಲ್ಲಿ ಪ್ರವಾದಿಸುತ್ತಿರಲಾಗಿ, ಯೆರೆಮಿಾಯನ ಎಲ್ಲಾ ವಾಕ್ಯಗಳ ಪ್ರಕಾರ, ಈ ಪಟ್ಟಣಕ್ಕೂ
೨೧ ಈ ದೇಶಕ್ಕೂ ವಿರೋಧವಾಗಿ ಪ್ರವಾದಿಸಿದನು. ಆಗ ಅರಸನಾದ ಯೆಹೋಯಕೀಮನೂ, ಅವನ ಪರಾಕ್ರಮಶಾಲಿಗಳೆಲ್ಲರೂ, ಪ್ರಧಾನರೆಲ್ಲರೂ, ಅವನ ವಾಕ್ಯಗಳನ್ನು ಕೇಳಿದಾಗ, ಅರಸನು ಅವನನ್ನು ಕೊಂದು ಹಾಕುವದಕ್ಕೆ ಹುಡುಕಿದನು; ಆದರೆ ಉರೀಯನು ಅದನ್ನು ಕೇಳಿ, ಭಯಪಟ್ಟು, ಓಡಿ ಹೋಗಿ, ಐಗುಪ್ತಕ್ಕೆ
೨೨ ಬಂದನು. ಆದರೆ ಅರಸನಾದ ಯೆಹೋಯಕೀಮನು ಐಗುಪ್ತಕ್ಕೆ ಜನರನ್ನು, ಅಂದರೆ, ಅಕ್ಬೋರನ ಮಗನಾದ ಎಲ್ನಾಥನನನ್ನೂ, ಅವನ ಸಂಗಡ ಮತ್ತೊಬ್ಬರನ್ನೂ, ಐಗುಪ್ತಕ್ಕೆ ಕಳುಹಿಸಿದನು.
೨೩ ಅವರು ಉರೀಯನನ್ನು ಐಗುಪ್ತದಿಂದ ತಕ್ಕೊಂಡು, ಅರಸನಾದ ಯೆಹೋಯಕೀಮನ ಬಳಿಗೆ ತಂದರು; ಇವನು ಅವನನ್ನು ಕತ್ತಿಯಿಂದ ಹೊಡೆದು, ಅವನ ಹೆಣವನ್ನು ಸಾಧಾರಣವಾದ ಜನರ
೨೪ ಸಮಾಧಿಗಳಲ್ಲಿ ಹಾಕಿಸಿದನು. ಆದರೆ ಅವರು ಯೆರೆಮಿಾಯನನ್ನು ಜನರ ಕೈಗೆ ಒಪ್ಪಿಸಿ, ಕೊಂದು ಹಾಕಿಸದ ಹಾಗೆ, ಶಾಫಾನನ ಮಗನಾದ ಅಹೀಕಮನ ಕೈ ಅವನ ಸಂಗಡ ಇತ್ತು.

## ೨೭. ಸಂಧಿ.

೧ ಯೆಹೂದದ ಅರಸನಾದ ಯೊಷೀಯನ ಮಗನಾದ ಯೆಹೋಯಕೀಮನ ಥೊಕೆತನದ ಆರಂಭದಲ್ಲಿ ಈ ವಾಕ್ಯವು ಕರ್ತ
೨ ನಿಂದ ಯೆರೆಮಿಾಯನಿಗೆ ಉಂಟಾಯಿತು, ಯಾವದಂದರೆ—
ಕರ್ತನು ನನಗೆ ಹೇಳಿದ್ದೇನಂದರೆ—ಬಂಧಗಳನ್ನೂ ನೊಗಗಳನ್ನೂ ಮಾಡಿಸಿಕೊಂಡು ನಿನ್ನ ಕುತ್ತಿಗೆಯ ಮೇಲೆ ಇಡು.
೩ ಮತ್ತು ಅವುಗಳನ್ನು ಎದೋಮಿನ ಅರಸನಿಗೂ, ಮೋವಾಬಿನ ಅರಸನಿಗೂ, ಅಮ್ಮೋನಿನ ಮಕ್ಕಳ ಅರಸನಿಗೂ, ತೂರಿನ ಅರಸನಿಗೂ, ಚಿದೋನಿನ ಅರಸನಿಗೂ, ಯೆಹೂದದ ಅರಸನಾದ
೪ ಚಿದ್ಕೀಯನ ಬಳಿಗೆ ಬರುವ ರಾಯಭಾರಿಗಳ ಕೈಯಿಂದ ಕಳುಹಿಸು. ಮತ್ತು ಅವರು ತಮ್ಮ ಯಜಮಾನರಿಗೆ ಹೇಳುವದಕ್ಕೆ
೫ ನೀನು ಅಪ್ಪಣೆ ಕೊಡ ತಕ್ಕದ್ದೇನಂದರೆ—ಇಸ್ರಾಯೇಲಿನ ದೇವರಾದ ಸೈನ್ಯಗಳ ಕರ್ತನು ಹೇಳುವದೇನಂದರೆ, ನೀವು ನಿಮ್ಮ ಯಜಮಾನರಿಗೆ ಹೀಗೆ ಹೇಳ ಬೇಕು—ನಾನೇ ಭೂಮಿಯನ್ನೂ, ಭೂಮಿಯ ಮೇಲಿರುವ ಮನುಷ್ಯರನ್ನೂ, ಮೃಗಗಳನ್ನೂ, ನನ್ನ ಮಹಾ ಬಲದಿಂದಲೂ, ನನ್ನ ಚಾಚಿದ ಕೈಯಿಂದಲೂ, ಉಂಟು ಮಾಡಿ, ನನ್ನ ಕಣ್ಣುಗಳಲ್ಲಿ ಯಾರಿಗೆ ಸರಿಯಾಗಿ
೬ ತೋಚಿತೋ, ಅವರಿಗೆ ಅದನ್ನು ಕೊಟ್ಟಿದ್ದೇನೆ. ಹಾಗಾದರೆ ಈಗ ನಾನು ಈ ದೇಶಗಳನ್ನೆಲ್ಲಾ ಬಾಬೆಲಿನ ಅರಸನಾದ ನನ್ನ ಸೇವಕನಾದ ನೆಬುಕದ್ನೆಚ್ಚರನ ಕೈಯಲ್ಲಿ ಕೊಟ್ಟಿದ್ದೇನೆ; ಕೊಲದ ಮೃಗಗಳನ್ನು ಸಹಾ, ಅವನಿಗೆ ಸೇವೆ ಮಾಡುವ ಹಾಗೆ,
೭ ಅವನಿಗೆ ಕೊಟ್ಟಿದ್ದೇನೆ. ಮತ್ತು ಜನಾಂಗಗಳೆಲ್ಲಾ ಅವನಿಗೂ, ಅವನ ಮಗನಿಗೂ, ಅವನ ಮಗನ ಮಗನಿಗೂ, ಅವನ ದೇಶಕ್ಕೆ ಸಹ ಸಮಯ ಬರುವ ಪರ್ಯಂತರ, ಸೇವಿಸುವವು. ಆ ಮೇಲೆ ಬಹಳ ಜನಾಂಗಗಳೂ, ದೊಡ್ಡ ಅರಸರೂ, ಅವನಿಂದ ಸೇವೆ
೮ ಮಾಡಿಸಿಕೊಳ್ಳುವರು. ಮತ್ತು ಆಗುವದೇನಂದರೆ, ಬಾಬೆಲಿನ ಅರಸನಾದ ಆ ನೆಬುಕದ್ನೆಚ್ಚರನಿಗೆ ಸೇವೆ ಮಾಡದೆ, ಬಾಬೆಲಿನ ಅರಸನ ನೊಗಕ್ಕೆ ತನ್ನ ಕುತ್ತಿಗೆಯನ್ನು ಕೊಡದೆ, ಇರುವ ಜನಾಂಗವೂ, ರಾಜ್ಯವೂ, ಯಾವದೋ, ಆ ಜನಾಂಗವನ್ನು ನಾನು ಕತ್ತಿಯಿಂದಲೂ, ಬರದಿಂದಲೂ, ಜಾಡ್ಯದಿಂದಲೂ, ಇವನ ಕೈಯಿಂದ ಅದನ್ನು ಮುಗಿಸಿ ಬಿಡುವ ಪರ್ಯಂತರ, ವಿಚಾರಿಸುವೆನೆಂದು, ಕರ್ತನು ಅನ್ನುತ್ತಾನೆ.
೯ ಆದದರಿಂದ ನೀವು ಬಾಬೆಲಿನ ಅರಸನನ್ನು ಸೇವಿಸ ಬೇಡಿಕೆಂದು ನಿಮಗೆ ಹೇಳುವ ನಿಮ್ಮ ಪ್ರವಾದಿಗಳಾಗೂ, ನಿಮ್ಮ ದೈವಜ್ಞರಿಗೂ, ನಿಮ್ಮ ಸ್ವಪ್ನಗಾರರಿಗೂ, ನಿಮ್ಮ ಮೇಘಮಂತ್ರದವರಿ
೧೦ ಗೂ, ನಿಮ್ಮ ಶೂನ್ಯಗಾರರಿಗೂ, ಕಿವಿ ಕೊಡ ಬೇಡಿರಿ. ಯಾಕಂದರೆ ನಿಮ್ಮನ್ನು ನಿಮ್ಮ ದೇಶದಿಂದ ದೂರ ಮಾಡುವ ಹಾಗೆಯೂ, ನಾನು ನಿಮ್ಮನ್ನು ಓಡಿಸಿ ಬಿಟ್ಟ ಮೇಲೆ ನೀವು ನಾಶವಾಗುವ ಹಾ
೧೧ ಗೆಯೂ, ಅವರು ನಿಮಗೆ ಸುಳ್ಳನ್ನು ಪ್ರವಾದಿಸುತ್ತಾರೆ. ಆದರೆ ಬಾಬೆಲಿನ ಅರಸನ ನೊಗದಲ್ಲಿ ತನ್ನ ಕುತ್ತಿಗೆಯನ್ನು ಕೇರಿಸಿ, ಅವನಿಗೆ ಸೇವೆ ಮಾಡುವ ಜನಾಂಗವು ಯಾವದೋ, ಅದನ್ನು ಸ್ವಂತ ದೇಶದಲ್ಲಿ ನಿಲ್ಲಗೊಡಿಸುತ್ತೇನೆಂದು ಕರ್ತನು ಅನ್ನುತ್ತಾನೆ; ಅದನ್ನು ಬೇಸಾಯ ಮಾಡಿ, ಅದರಲ್ಲಿ ವಾಸ ಮಾಡುವದು.
೧೨ ಆಗ ನಾನು ಯೆಹೂದದ ಅರಸನಾದ ಚಿದ್ಕಿಯನ ಸಂಗಡ ಈ ವಾಕ್ಯಗಳ ಪ್ರಕಾರ ಮಾತಾಡಿದೆನು; ಹ್ಯಾಗಂದರೆ—ನಿಮ್ಮ ಕುತ್ತಿಗೆಗಳನ್ನು ಬಾಬೆಲಿನ ಅರಸನ ನೊಗದಲ್ಲಿ ಕೇರಿಸಿ, ಅವನಿ
೧೩ ಗೂ ಅವನ ಜನರಿಗೂ ಸೇವೆ ಮಾಡಿ, ಬದುಕಿರಿ. ಬಾಬೆಲಿನ ಅರಸನಿಗೆ ಸೇವೆ ಮಾಡದ ಜನಾಂಗಕ್ಕೆ ವಿರೋಧವಾಗಿ ಕರ್ತನು ಮಾತಾಡಿದ ಪ್ರಕಾರ, ನೀನೂ, ನಿನ್ನ ಜನರೂ, ಯಾಕೆ ಕತ್ತಿಯಿಂದಲೂ, ಬರದಿಂದಲೂ, ಜಾಡ್ಯದಿಂದಲೂ, ಸಾಯುವಿರಿ!
೧೪ ಅದದರಿಂದ ಬಾಬೆಲಿನ ಅರಸನಿಗೆ ನೀವು ಸೇವೆ ಮಾಡ ಬೇಡಿಕೆಂದು ನಿಮಗೆ ಹೇಳುವ ಪ್ರವಾದಿಗಳ ವಾಕ್ಯಗಳಿಗೆ ಕಿವಿ ಕೊಡ ಬೇಡಿರಿ; ಯಾಕಂದರೆ ಅವರು ನಿಮಗೆ ಸುಳ್ಳನ್ನು ಪ್ರವಾದಿಸುತ್ತಾರೆ.
೧೫ ಯಾಕಂದರೆ ನಾನು ಅವರನ್ನು ಕಳುಹಿಸಲಿಲ್ಲವೆಂದು ಕರ್ತನು ಅನ್ನುತ್ತಾನೆ; ಆದರೆ ಅವರು, ನಾನು ನಿಮ್ಮನ್ನು ಓಡಿಸಿ ಬಿಡುವ ಹಾಗೆಯೂ, ನೀವೂ, ನಿಮಗೆ ಪ್ರವಾದಿಸುವ ಪ್ರವಾದಿಗಳೂ, ನಾಶವಾಗುವ ಹಾಗೆಯೂ, ನನ್ನ ಹೆಸರಿನಲ್ಲಿ ನಿಮಗೆ ಸುಳ್ಳಾಗಿ ಪ್ರವಾದಿಸುತ್ತಾರೆ.
೧೬ ಮತ್ತು ನಾನು ಯಾಜಕರ ಸಂಗಡಲೂ, ಈ ಜನಕೆಲ್ಲರ ಸಂ

ಗಳೂ, ಮಾತಾಡಿದೆನು; ಏನಂದರೆ—ಕರ್ತನು ಹೀಗೆ ಹೇಳು
ತ್ತಾನೆ—ಇಗೋ ಕರ್ತನ ಮನೆಯ ಪಾತ್ರೆಗಳು ಈಗ ಬೇಗ
ಬಾಬೆಲಿನಿಂದ ಹೊರೆ ತರಲ್ಪಡುವವೆಂದು, ನಿಮಗೆ ಪ್ರವಾದಿಸುವ ನಿ
ಮ್ಮ ಪ್ರವಾದಿಗಳ ಮಾತುಗಳಿಗೆ ಕಿವಿ ಕೊಡ ಬೇಡಿರಿ; ಯಾಕಂ
೧೭ ದರೆ ಅವರು ನಿಮಗೆ ಸುಳ್ಳನ್ನು ಪ್ರವಾದಿಸುತ್ತಾರೆ. ಅವರಿಗೆ
ಕಿವಿ ಕೊಡ ಬೇಡಿರಿ; ಬಾಬೆಲಿನ ಅರಸನಿಗೆ ಸೇವೆ ಮಾಡಿ ಬದು
೧೮ ಕಿರಿ; ಈ ಪಟ್ಟಣವು ಯಾಕೆ ಹಾಳಾಗ ಬೇಕು! ಅದರೆ ಅವರು ಪ್ರ
ವಾದಿಗಳಾಗಿದ್ದರೆ, ದೇವರ ವಾಕ್ಯವು ಅವರ ಸಂಗಡ ಇದ್ದರೆ, ಕ
ರ್ತನ ಮನೆಯಲ್ಲಿಯೂ, ಯೆಹೂದದ ಅರಸನ ಮನೆಯಲ್ಲಿ
ಯೂ, ಯೇರೂಸಲೇಮಿನಲ್ಲಿಯೂ, ಮಿಕ್ಕಾದ ಪಾತ್ರೆಗಳು
ಬಾಬೆಲಿಗೆ ಹೋಗದ ಹಾಗೆ, ಅವರು ಸೈನ್ಯಗಳ ಕರ್ತನಿಗೆ ವಿ
೧೯ ಜ್ಞಾಪನೆ ಮಾಡಲಿ. ಯಾಕಂದರೆ ಬಾಬೆಲಿನ ಅರಸನಾದ ನೆಬುಕ
ದ್ನೇಚ್ಚರನು, ಯೆಹೂದದ ಅರಸನಾದ ಯೆಹೋಯಕೀಮನ ಮ
ಗನಾದ ಯೆಕೊನ್ಯನನೂ, ಯೆಹೂದದ ಯೆರೂಸಲೇಮಿನ ಶ್ರೇ
ಷ್ಠರೆಲ್ಲರನೂ, ಯೆರೂಸಲೇಮಿನಿಂದ ಬಾಬೆಲಿಗೆ ಕೆಳಯಾಗಿ ಪೈ
೨೦ ದ ವೇಳೆಯಲ್ಲಿ, ತಕ್ಕೊಂಡು ಹೋಗದಂಥ ಸ್ತಂಭಗಳನ್ನು ಕುರಿ
ತು, ಸಮುದ್ರವನ್ನು ಕುರಿತು, ಗಡ್ಡಿಗೆಗಳನ್ನು ಕುರಿತು, ಈ ಪಟ್ಟ
ದಲ್ಲಿ ಮಿಕ್ಕಾದ ಬೇರೆ ಸಾಮಾನುಗಳನ್ನು ಕುರಿತು, ಸೈನ್ಯಗಳ
೨೧ ಕರ್ತನು ಹೇಳುವದೇನಂದರೆ—ಕರ್ತನ ಮನೆಯಲ್ಲಿಯೂ, ಯೆ
ಹೂದದ ಯೆರೂಸಲೇಮಿನ ಅರಸನ ಮನೆಯಲ್ಲಿಯೂ, ಮಿಕ್ಕಾ
ಗಿರುವ ಸಾಮಾನುಗಳ ವಿಷಯ, ನಿಶ್ಚಯವಾಗಿ ಇಸ್ರಯೇಲಿನ
೨೨ ದೇವರಾದ ಸೈನ್ಯಗಳ ಕರ್ತನು ಹೇಳುವದೇನಂದರೆ—ಅವು ಬಾ
ಬೆಲಿಗೆ ತರಲ್ಪಡುವವು; ಮತ್ತು ನಾನು ಅವುಗಳನ್ನು ವಿಚಾರಿಸುವ
ದಿನದ ಪರ್ಯಂತರ ಅಲ್ಲೇ ಇರುವವು, ಎಂದು ಕರ್ತನು ಅನ್ನು
ತ್ತಾನೆ; ಆಗ ನಾನು ಅವುಗಳನ್ನು ಏರ ಮಾಡಿ, ಈ ಸ್ಥಳಕ್ಕೆ
ತಿರಿಗಿ ತರುವೆನು.

## ೨೮. ಸಂಧಿ.

೧ ಮತ್ತು ಆದದ್ದೇನಂದರೆ—ಅದೇ ವರುಷದಲ್ಲಿ, ಯೆಹೂದದ
ಅರಸನಾದ ಚಿದ್ಕೀಯನ ಝೊಳೆತನದ ಆರಂಭದಲ್ಲಿ, ನಾಲ್ಕನೇ
ವರುಷದ ಐದನೇ ತಿಂಗಳಲ್ಲಿ, ಗಿಬೆಯೋನಿನವನಾದ, ಅಜ್ಜೂರನ
ಮಗನಾದ ಹನನೀಯನೆಂಬ ಪ್ರವಾದಿಯು ಕರ್ತನ ಮನೆಯಲ್ಲಿ,
ಯಾಜಕರ ಮುಂದೆಯೂ, ಜನಕೆಲ್ಲರ ಮುಂದೆಯೂ, ನನಗೆ
೨ ಹೇಳಿದ್ದೇನಂದರೆ—ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು
ಹೀಗೆ ಹೇಳುತ್ತಾನೆ—ನಾನು ಬಾಬೆಲಿನ ಅರಸನ ನೊಗವನ್ನು
3 ಮುರಿದಿದ್ದೇನೆ. ಎರಡು ವರುಷಕ್ಕೋಸ್ಕರ ನಾನು ಬಾಬೆಲಿನ
ಅರಸನಾದ ನೆಬುಕದ್ನೇಚ್ಚರನು ಈ ಸ್ಥಳದಿಂದ ತಕ್ಕೊಂಡು ಬಾಬೆ
ಲಿಗೆ ಪೈದ ಕರ್ತನ ಮನೆಯ ಪಾತ್ರೆಗಳನ್ನೆಲ್ಲಾ ತಿರಿಗಿ ತರುವೆ
೪ ನು. ಮತ್ತು ಯೆಹೂದದ ಅರಸನಾದ ಯೆಹೋಯಕೀಮನ
ಮಗನಾದ ಯೆಕೊನ್ಯನನೂ, ಬಾಬೆಲಿಗೆ ಹೋದ ಯೆಹೂದದ
ಕೆಳೆಯವರೆಲ್ಲರನೂ, ನಾನು ತಿರಿಗಿ ಈ ಸ್ಥಳಕ್ಕೆ ಬರ ಮಾಡುವೆ
ನೆಂದು ಕರ್ತನು ಅನ್ನುತ್ತಾನೆ; ಯಾಕಂದರೆ ಬಾಬೆಲಿನ ಅರಸನ
೫ ನೊಗವನ್ನು ಮುರಿಯುವೆನು. ಆಗ ಪ್ರವಾದಿಯಾದ ಯೆರೆಮಿ
ಯನು, ಯಾಜಕರ ಮುಂದೆಯೂ, ಕರ್ತನ ಮನೆಯಲ್ಲಿ ನಿಂತಿ
ರುವ ಜನಕೆಲ್ಲರ ಮುಂದೆಯೂ, ಪ್ರವಾದಿಯಾದ ಹನನೀಯನಿಗೆ
೬ ಹೇಳಿದ್ದೇನಂದರೆ—ಪ್ರವಾದಿಯಾದ ಯೆರೆಮಿಯಾನೇ ಹೇಳಿದ್ದೇ
ನಂದರೆ—ಆಮೆನ್! ಕರ್ತನು ಹೀಗೆ ಮಾಡಲಿ! ನೀನು ಪ್ರವಾದಿಸಿದ
ನಿನ್ನ ವಾಕ್ಯಗಳನ್ನು ಕರ್ತನು ಸ್ಥಾಪಿಸಿ, ಕರ್ತನ ಮನೆಯ ಪಾ
ತ್ರೆಗಳನ್ನೂ ಕೆಳೆಯವರೆಲ್ಲರನ್ನೂ ಬಾಬೆಲಿನಿಂದ ತಿರಿಗಿ ಈ ಸ್ಥ
ಳಕ್ಕೆ ಬರ ಮಾಡಲಿ! ಆದರೂ ನಾನು ನಿನ್ನ ಕಿವಿಗಳಲ್ಲಿಯೂ,
೭ ಜನಕೆಲ್ಲರ ಕಿವಿಗಳಲ್ಲಿಯೂ, ಹೇಳುವ ಈ ವಾಕ್ಯವನ್ನು ಕೇಳು.
೮ ನನಗೆ ಮುಂಹೆಯೂ, ನಿನಗೆ ಮುಂಹೆಯೂ, ಪೂರ್ವದಲ್ಲಿದ್ದ
ಪ್ರವಾದಿಗಳು, ಅನೇಕ ದೇಶಗಳಿಗೂ, ದೊಡ್ಡ ರಾಜ್ಯಗಳಿಗೂ,
ವಿಕೋಥವಾಗಿ ಯುದ್ಧವನ್ನೂ, ಕೇಡನ್ನೂ, ಜಾಡ್ಯವನ್ನೂ ಕುರಿ
೯ ತು ಪ್ರವಾದಿಸಿದರು. ಸಮಾಧಾನವನ್ನು ಕುರಿತು ಪ್ರವಾದಿಸುವ
ಪ್ರವಾದಿಯಾದರೆ, ಆ ಪ್ರವಾದಿಯ ವಾಕ್ಯವು ಉಂಟಾಗುವಾಗ,
ಅವನು ದೇವರಿಂದ ನಿಜವಾಗಿ ಕಳುಹಿಸಲ್ಪಟ್ಟ ಪ್ರವಾದಿ ಎಂದು, ತಿ
ಳಿಯ ಬರುವನು.

೧೦ ಆಗ ಪ್ರವಾದಿಯಾದ ಹನನೀಯನು ಪ್ರವಾದಿಯಾದ ಯೆ
ರೆಮಿಯನ ಕುತ್ತಿಗೆಯಿಂದ ನೊಗವನ್ನು ತೆಗೆದು, ಅದನ್ನು ಮು
೧೧ ರಿದು ಬಿಟ್ಟನು. ಮತ್ತು ಹನನೀಯನು ಜನಕೆಲ್ಲರ ಮುಂದೆ ಹೇಳಿ
ದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ಇದೇ ಪ್ರಕಾರ ನಾ
ನು ಬಾಬೆಲಿನ ಅರಸನಾದ ನೆಬುಕದ್ನೇಚ್ಚರನ ನೊಗವನ್ನು ಎರಡು
ವರುಷಕ್ಕೋಸ್ಕರಗಾಗಿ ಎಲ್ಲಾ ಜನಾಂಗಗಳ ಕುತ್ತಿಗೆಯ ಮೇಲಿನಿಂ
ದ ಮುರಿದು ಹಾಕುವೆನು. ಆಗ ಪ್ರವಾದಿಯಾದ ಯೆರೆಮಿಯ
ನು ಹೋಗಿ ಬಿಟ್ಟನು.

೧೨ ಆಗ ಪ್ರವಾದಿಯಾದ ಹನನೀಯನು ಆ ನೊಗವನ್ನು ಪ್ರವಾ
ದಿಯಾದ ಯೆರೆಮಿಯನ ಕುತ್ತಿಗೆಯ ಮೇಲಿನಿಂದ ಮುರಿದು
ಹಾಕಿದ ಮೇಲೆ, ಕರ್ತನ ವಾಕ್ಯವು ಯೆರೆಮಿಯನಿಗೆ ಉಂಟಾ
೧೩ ಗಿ ಹೇಳಿದ್ದೇನಂದರೆ—ಹೋಗಿ, ಹನನೀಯನಿಗೆ ಹೀಗೆ ಹೇಳು—ನೀ
ನು ಮರದ ನೊಗಗಳನ್ನು ಮುರಿದಿದ್ದೀ; ಆದರೆ ಅವಕ್ಕೆ ಬದಲಾಗಿ
ಕಬ್ಬಿಣದ ನೊಗಗಳನ್ನು ಉಂಟು ಮಾಡುವಿ, ಎಂದು ಕರ್ತನು
೧೪ ಹೇಳುತ್ತಾನೆ. ಯಾಕಂದರೆ ಇಸ್ರಯೇಲಿನ ದೇವರಾದ ಸೈನ್ಯಗ
ಳ ಕರ್ತನು ಹೀಗೆ ಹೇಳುತ್ತಾನೆ—ನಾನು ಈ ಎಲ್ಲಾ ಜನಾಂಗ
ಳ ಕುತ್ತಿಗೆಗಳ ಮೇಲೆ, ಅವರು ಬಾಬೆಲಿನ ಅರಸನಾದ ನೆಬುಕ
ದ್ನೇಚ್ಚರನಿಗೆ ಸೇವೆ ಮಾಡುವ ಹಾಗೆ, ಕಬ್ಬಿಣದ ನೊಗವನ್ನು
ಇಟ್ಟಿದ್ದೇನೆ; ಅವರು ಅವನಿಗೆ ಸೇವೆ ಮಾಡುವರು; ಹೊಲದ ಮೃ
೧೫ ಗಗಳನ್ನು ಸಹ ಅವನಿಗೆ ಕೊಟ್ಟಿದ್ದೇನೆ. ಮತ್ತು ಪ್ರವಾದಿಯಾ
ದ ಯೆರೆಮಿಯನು ಪ್ರವಾದಿಯಾದ ಹನನೀಯನಿಗೆ ಹೇಳಿದ್ದೇ
ನಂದರೆ—ಹನನೀಯನೇ! ಕೇಳು; ಕರ್ತನು ನಿನ್ನನ್ನು ಕಳುಹಿಸಲಿ
ಲ್ಲ; ಆದರೆ ನೀನು ಈ ಜನರನ್ನು ಸುಳ್ಳಿನಲ್ಲಿ ನಂಬಿಕೆ ಇಡ ಮಾ
೧೬ ಡುತ್ತೀ. ಆದದರಿಂದ ಕರ್ತನು ಹೇಳುವದೇನಂದರೆ—ಇಗೋ ನಾ
ನು ನಿನ್ನನ್ನು ಭೂಮಿಯ ಮೇಲಿನಿಂದ ಹಾಕಿ ಬಿಡುತ್ತೇನೆ; ಈ
ವರುಷ ನೀನು ಸಾಯುವಿ; ಯಾಕಂದರೆ ನೀನು ಕರ್ತನಿಗೆ ವಿ
೧೭ ಕೋಥವಾಗಿ ದ್ರೋಹ ಮಾತಾಡಿದ್ದೀ. ಹಾಗೆಯೇ ಹನನೀಯ
ನು ಅದೇ ವರುಷದಲ್ಲಿ ಏಳನೇ ತಿಂಗಳಲ್ಲಿ ಸತ್ತನು.

## ೨೯. ಸಂಧಿ.

೧ ಅರಸನಾದ ಯೆಕೊನ್ಯನೂ, ರಾಣಿಯೂ, ಪೊಜ್ಜೆಯ
ರೂ, ಯೆಹೂದದ ಯೆರೂಸಲೇಮಿನ ಪ್ರಧಾನರೂ, ಬಡಿಗೆಯನ



ರೂ, ಕಮ್ಮಾರರೂ, ಯೆರೂಸಲೇಮನ್ನು ಬಿಟ್ಟು ಹೋದ ಮೇ
೨ ಲೆ, ಪ್ರವಾದಿಯಾದ ಯೆರೆಮಿಯಾನು, ಕೆಳಯಲ್ಲಿರುವ ಹಿರಿಯರ
ಉಳುಮಿಗೂ, ಯಾಜಕರಿಗೂ, ಪ್ರವಾದಿಗಳಿಗೂ, ನೆಬುಕದ್ನೇಚ್ಚ
ರನು ಯೆರೂಸಲೇಮಿನಿಂದ ಬಾಬೆಲಿಗೆ ಪೈದ ಜನಕೆಲ್ಲರಿಗೂ, ಯೆ
3 ಹೂದದ ಅರಸನಾದ ಚಿದ್ಕೀಯನು ಬಾಬೆಲಿನ ಅರಸನಾದ ನೆಬು
ಕದ್ನೇಚ್ಚರನ ಬಳಿಗೆ ಕಳುಹಿಸಿದ ಶಾಫಾನನ ಮಗನಾದ ಎಲಾಸ
ನ ಕೈಯಿಂದಲೂ, ಹಿಲ್ಕೀಯನ ಮಗನಾದ ಗೆಮರ್ಯನ ಕೈ
ಯಿಂದಲೂ, ಕಳುಹಿಸಿದ ಪತ್ರಿಕೆಯ ಮಾತುಗಳು ಯಾವವಂ
ದರೆ—

೪ ಇಸ್ರಯೇಲಿನ ದೇವರಾದ, ಸೈನ್ಯಗಳ ಕರ್ತನಾದವನು, ಯೆ
ರೂಸಲೇಮಿನಿಂದ ಬಾಬೆಲಿಗೆ ನಾನು ಪೈಯ್ಯಗೊಡಿಸಿದ ಕೆಳಯವ
೫ ಕೆಲ್ಲರಿಗೆ ಹೇಳುವದೇನುದರೆ—ಮನೆಗಳನ್ನು ಕಟ್ಟಿ ವಾಸ ಮಾಡಿರಿ;
ತೋಟಗಳನ್ನು ನೆಟ್ಟು ಅವುಗಳ ಫಲವನ್ನು ತಿನ್ನಿರಿ; ಹೆಂಡರನ್ನು
೬ ತಕ್ಕೊಂಡು ಕುಮಾರ ಕುಮಾರ್ತೆಗಳನ್ನು ಪಡಿಯಿರಿ; ಮತ್ತು
ನಿಮ್ಮ ಕುಮಾರರಿಗೆ ಹೆಂಡರನ್ನು ತಕ್ಕೊಳ್ಳಿರಿ; ನಿಮ್ಮ ಕುಮಾ
ರ್ತೆಗಳನ್ನು ಗಂಡಂದರಿಗೆ ಕೊಡಿರಿ. ಅವರು ಕುಮಾರ ಕುಮಾ
೭ ರ್ತೆಗಳನ್ನು ಹೆರಲಿ; ಕಡಿಮೆಯಾಗದೆ ಅಲ್ಲಿ ಹೆಚ್ಚಿರಿ. ಮತ್ತು
ನಾನು ನಿಮ್ಮನ್ನು ಕೆಳಯಾಗಿ ಪೈಯ್ಯಗೊಡಿಸಿದ ಪಟ್ಟಣದ ಸಮಾ
ಧಾನವನ್ನು ಹುಡಿಕಿರಿ; ಅದಕ್ಕೋಸ್ಕರ ಕರ್ತನಿಗೆ ಪ್ರಾರ್ಥನೆ
ಮಾಡಿರಿ; ಯಾಕಂದರೆ ಅದರ ಸಮಾಧಾನದಿಂದ ನಿಮಗೆ ಸಮಾ
ಧಾನವಾಗುವದು.

೮ ಯಾಕಂದರೆ ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು
ಹೀಗೆ ಹೇಳುತ್ತಾನೆ—ನಿಮ್ಮ ಮಧ್ಯದಲ್ಲಿರುವ ನಿಮ್ಮ ಪ್ರವಾದಿಗ
ಳೂ, ನಿಮ್ಮ ಶೈನ್ಯಜ್ಞರೂ, ನಿಮಗೆ ಮೋಸ ಮಾಡದಿರಲಿ; ಮತ್ತು
ನೀವು ನೋಡಿಸುವ ನಿಮ್ಮ ಕನಸುಗಳಿಗೆ ಕಿವಿಗೊಡ ಬೇಡಿರಿ.
೯ ಯಾಕಂದರೆ ಅವರು ನಿಮಗೆ ನನ್ನ ಹೆಸರಿನಲ್ಲಿ ಸುಳ್ಳಾಗಿ ಪ್ರ
ವಾದಿಸುತ್ತಾರೆ; ನಾನು ಅವರನ್ನು ಕಳುಹಿಸಲಿಲ್ಲವೆಂದು ಕರ್ತ
೧೦ ನು ಅನ್ನುತ್ತಾನೆ. ಯಾಕಂದರೆ ಕರ್ತನು ಹೀಗೆ ಹೇಳುತ್ತಾನೆ—
ಬಾಬೆಲಿನಲ್ಲಿ ಎಪ್ಪತ್ತು ವರುಷ ತುಂಬಿದ ಮೇಲೆ ನಿಮ್ಮನ್ನು ಪರಾ
ಮರಿಸುವೆನು; ಮತ್ತು ನನ್ನ ಒಳ್ಳೇ ವಾಕ್ಯವನ್ನು ನಿಮ್ಮ ವಿಷಯ
ದಲ್ಲಿ ಸ್ಥಾಪಿಸಿ, ನಿಮ್ಮನ್ನು ತಿರಿಗಿ ಈ ಸ್ಥಳಕ್ಕೆ ಬರ ಮಾಡುವೆನು.
೧೧ ಯಾಕಂದರೆ ನಾನು ನಿಮ್ಮನ್ನು ಕುರಿತು ಮಾಡುವ ಆಲೋಚ
ನೆಗಳನ್ನು ಬಲ್ಲೆನೆಂದು, ಕರ್ತನು ಅನ್ನುತ್ತಾನೆ; ಅವು ಕೇಡಿಗಲ್ಲ,
ಸಮಾಧಾನಕ್ಕೆರುವ ಆಲೋಚನೆಗಳು; ನಿಮಗೆ ನಿರೀಕ್ಷಿಸಿದ ಗತಿ
೧೨ ಯನ್ನು ಕೊಡುವದೇ. ಆಗ ನನ್ನನ್ನು ಕರೆಯುವಿರಿ; ಹೋಗಿ,
೧೩ ನನಗೆ ಪ್ರಾರ್ಥನೆ ಮಾಡುವಿರಿ; ಮತ್ತು ನಿಮಗೆ ಕಿವಿ ಕೊಡುವೆನು.
ನನ್ನನ್ನು ಹುಡುಕುವಿರಿ; ಮತ್ತು ಪೂರ್ಣ ಹೃದಯದಿಂದ ನನ್ನ
ನ್ನು ಹುಡುಕುವಾಗ ನನ್ನನ್ನು ಕಂಡು ಕೊಳ್ಳುವಿರಿ. ನಿಮಗೆ ಕಂ
೧೪ ಡು ಕೊಳ್ಳಲ್ಪಡುವೆನೆಂದು ಕರ್ತನು ಅನ್ನುತ್ತಾನೆ; ಮತ್ತು ನಿಮ್ಮ
ಕೆಳಯನ್ನು ತಿರುಗಿಸಿ, ನಾನು ನಿಮ್ಮನ್ನು ಓಡಿಸಿ ಬಿಟ್ಟ ಎಲ್ಲಾ
ಜನಾಂಗಗಳಿಂದಲೂ, ಎಲ್ಲಾ ಸ್ಥಳಗಳಿಂದಲೂ, ನಿಮ್ಮನ್ನು ಕೂಡಿ
ಸುವೆನೆಂದು, ಕರ್ತನು ಅನ್ನುತ್ತಾನೆ; ಮತ್ತು ನಾನು ಎಲ್ಲಿಂದ
ನಿಮ್ಮನ್ನು ಕೆಳಯಾಗಿ ಪೈಯ್ಯಗೊಡಿಸಿದೆನೋ, ಆ ಸ್ಥಳಕ್ಕೆ
ನಿಮ್ಮನ್ನು ತಿರಿಗಿ ಬರ ಮಾಡುವೆನು.

೧೫ ಆದರೆ ಕರ್ತನು ನಮಗೆ ಬಾಬೆಲಿನಲ್ಲಿ ಪ್ರವಾದಿಗಳನ್ನು ಎಬ್ಬಿ
ಸಿದ್ದಾನೆಂದು ನೀವು ಹೇಳಿದ ವಿಷಯದಲ್ಲಿ, ದಾವೀದನ ಸಿಂಹಾಸ
ನದಲ್ಲಿ ಕೂಡುವ ಅರಸನನ್ನು ಕುರಿತು, ನಿಮ್ಮ ಸಂಗಡ ಕೆಳಗೆ
ಹೊರಡದೆ, ಈ ಪಟ್ಟಣದಲ್ಲಿ ವಾಸವಾಗಿರುವ ನಿಮ್ಮ ಸಹೋದರರಾ
ದ ಜನಕೆಲ್ಲರನ್ನು ಕುರಿತು, ಕರ್ತನು ಹೀಗೆ ಹೇಳುತ್ತಾನೆ—
೧೭ ಸೈನ್ಯಗಳ ಕರ್ತನು ಹೇಳುವದೇನಂದರೆ—ಇಗೋ ನಾನು ಅವ
ರಲ್ಲಿ ಕತ್ತಿಯನ್ನೂ, ಬರವನ್ನೂ, ಜಾಡ್ಯವನ್ನೂ, ಕಳುಹಿಸಿ, ಅ
ವರನ್ನು, ಕೆಟ್ಟವಾಗಿರುವದರಿಂದ ತಿನ್ನ ಕೂಡದ ಅಸಹ್ಯವಾದ ಅಂ
೧೮ ಜಾರಗಳ ಹಾಗೆ ಮಾಡುವೆನು. ಮತ್ತು ಕತ್ತಿಯಿಂದಲೂ, ಬರ
ದಿಂದಲೂ, ಜಾಡ್ಯದಿಂದಲೂ, ಅವರನ್ನು ಹಿಂದಟ್ಟಿ, ನಾನು ಅವ
ರನ್ನು ಓಡಿಸಿ ಬಿಟ್ಟ ಎಲ್ಲಾ ಜನಾಂಗಗಳಲ್ಲಿ, ಶಾಪಕ್ಕೂ, ವಿಸ್ಮ
ಯಕ್ಕೂ, ಸಿಳ್ಳಿಡುವಿಕೆಗೂ, ನಿಂದೆಗೂ, ಗುರಿಯಾಗುವ ಹಾಗೆ
೧೯ ತಿರುಗಾಟಕ್ಕೆ ಒಪ್ಪಿಸಿ ಬಿಡುವೆನು. ಅವರು ನನ್ನ ವಾಕ್ಯಗಳನ್ನು
ಕೇಳದದರಿಂದಲೇ ಎಂದು ಕರ್ತನು ಅನ್ನುತ್ತಾನೆ; ನಾನು ಅವರಿಗೆ
ನನ್ನ ಸೇವಕರಾದ ಪ್ರವಾದಿಗಳನ್ನು, ಬೆಳಗ್ಗೆ ಎದ್ದು, ಕಳುಹಿಸಿ
ದೆನು; ಆದರೆ ನೀವು ಕೇಳಲಿಲ್ಲವೆಂದು ಕರ್ತನು ಅನ್ನುತ್ತಾನೆ.

೨೦ ಆದದರಿಂದ ನಾನು ಯೆರೂಸಲೇಮಿನಿಂದ ಬಾಬೆಲಿಗೆ ಕಳುಹಿ
೨೧ ಸಿದ ಕೆಳಯವಕೆಲ್ಲರೇ! ಕರ್ತನ ವಾಕ್ಯವನ್ನು ಕೇಳಿರಿ—ನನ್ನ ಹೆ
ಸರಿನಲ್ಲಿ ನಿಮಗೆ ಸುಳ್ಳನ್ನು ಪ್ರವಾದಿಸುವ ಕೊಲಾಯನ ಮಗ
ನಾದ ಅಹಾಬನ ವಿಷಯವೂ, ಮಾಸೇಯನ ಮಗನಾದ ಚಿದ್ಕೀ
ಯನ ವಿಷಯವೂ, ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತ
ನು ಹೇಳುವದೇನಂದರೆ—ಇಗೋ ನಾನು ಅವರನ್ನು ಬಾಬೆಲಿನ
ಅರಸನಾದ ನೆಬುಕದ್ನೇಚ್ಚರನ ಕೈಯಲ್ಲಿ ಒಪ್ಪಿಸುತ್ತೇನೆ; ಅವನು
ಅವರನ್ನು ನಿಮ್ಮ ಕಣ್ಣುಗಳ ಮುಂದೆ ಕೊಂದು ಹಾಕುವನು.
೨೨ ಮತ್ತು ಬಾಬೆಲಿನಲ್ಲಿರುವ ಯೆಹೂದದ ಕೆಳಯವಕೆಲ್ಲರು ಅವರಿಂ
ದ ಶಾಪವನ್ನು ತಕ್ಕೊಂಡು—ಬಾಬೆಲಿನ ಅರಸನು ಬೆಂಕಿಯಲ್ಲಿ
ಸುಟ್ಟು ಬಿಟ್ಟ ಚಿದ್ಕೀಯನಪ್ಪಂದವೂ, ಅಹಾಬನಪ್ಪಂದವೂ, ಕ
೨೩ ರ್ತನು ನಿನ್ನನ್ನು ಮಾಡಲಿ, ಎಂದು ಹೇಳುವರು. ಯಾಕಂದರೆ
ಅವರು ತಮ್ಮ ಕೆಳಯವರ ಹೆಂಡರ ಸಂಗಡ ವ್ಯಭಿಚಾರ ಮಾಡಿ,
ನನ್ನ ಹೆಸರಿನಲ್ಲಿ ಸುಳ್ಳಾಗಿ, ನಾನು ಅವರಿಗೆ ಆಜ್ಞಾಪಿಸದೆ ಇದ್ದ
ಮಾತುಗಳನ್ನಾಡಿ, ಇಸ್ರಯೇಲಿನಲ್ಲಿ ನೀಚತನವನ್ನು ನಡಿಸಿದರು;
ನಾನೇ ಅದನ್ನು ಬಲ್ಲದು ಸಾಕ್ಷಿಯಾಗಿದ್ದೇನೆಂದು ಕರ್ತನು ಅ
ನ್ನುತ್ತಾನೆ.

೨೪ ಮತ್ತು ನೆಹೆಲಾಮ್ಯನಾದ ಶೆಮಾಯನಿಗೆ ನೀನು ಹೇಳಿ ಬೇ
ಕಾದದ್ದೇನಂದರೆ—ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು
೨೫ ಹೀಗೆ ಹೇಳುತ್ತಾನೆ—ನೀನು ನಿನ್ನ ಹೆಸರಿನಲ್ಲಿ, ಯೆರೂಸಲೇಮಿನ
ವರೆಲ್ಲರಿಗೂ, ಮಾಸೇಯನ ಮಗನಾದ ಯಾಜಕನಾದ ಚೆಫನೀ
ಯನಿಗೂ, ಯಾಜಕರೆಲ್ಲರಿಗೂ, ಪತ್ರಿಕೆಗಳನ್ನು ಕಳುಹಿಸಿದಿಯ
೨೬ ಲ್ಲ! ಹ್ಯಾಗಂದರೆ—ಪೈತ್ಯಗಾರನಾದಂಥ, ತನ್ನನ್ನು ಪ್ರವಾದಿಯಾ
ಗಿ ಮಾಡಿಕೊಳ್ಳುವಂಥ, ಪ್ರತಿ ಮನುಷ್ಯನಿಗೆ, ಕರ್ತನ ಮನೆಯ
ಲ್ಲಿ ವಿಚಾರಕರು ಇರುವ ಹಾಗೆಯೂ, ನೀನು ಅಂಥವರನ್ನು
ಕೋಳದಲ್ಲಿಯೂ, ಬಂಧಕದಲ್ಲಿಯೂ ಇಡುವ ಹಾಗೆಯೂ,
ಕರ್ತನು ಯಾಜಕನಾದ ಯೆಹೋಯದನಿಗೆ ಬದಲಾಗಿ ನಿನ್ನನ್ನು
೨೭ ಯಾಜಕನಾಗಿ ಇಟ್ಟಿದ್ದಾನೆ. ಹೀಗಿರಲಾಗಿ, ನಿಮಗೆ ತನ್ನನ್ನು
ಪ್ರವಾದಿಯಾಗಿ ಮಾಡಿ ಕೊಳ್ಳುವ ಅನತೋಥಿವನಾದ ಯೆರೆ
೨೮ ಮಿಯನನ್ನು ನೀನು ಯಾಕೆ ಗದರಿಸಲಿಲ್ಲ! ಯಾಕಂದರೆ ಅವ

ನು—ಕೆಲೆಯು ಬಹಳ ಹೊತ್ತಾಗುವದು; ಮನೆಗಳನ್ನು ಕಟ್ಟಿ ವಾ
ಸ ಮಾಡಿರಿ, ತೋಟಗಳನ್ನು ನೆಟ್ಟು, ಅವುಗಳ ಫಲವನ್ನು ತಿನ್ನಿ
೫ ರಿ, ಎಂದು ನಮಗೆ ಬಾಪೆಲಿಗೆ ಹೇಳಿ ಕಳುಹಿಸಿದ್ದಾನೆ. ಆಗ ಯಾ
ಜಕನಾದ ಚಿಪನೀಯನು ಈ ಪತ್ರಿಕೆಯನ್ನು ಪ್ರವಾದಿಯಾದ
ಯೆಕೆಮಿಾಯನ ಕಿವಿಗಳಲ್ಲಿ ಓದಿ ಹೇಳಿದನು.

೩೦ ಆಗ ಕರ್ತನ ವಾಕ್ಯವು ಯೆರೆಮಿಾಯನಿಗೆ ಉಂಟಾಗಿ ಹೇಳಿ
೩೧ ದ್ದೇನಂದರೆ—ನೀನು ಕೆಲೆಯವರೆಲ್ಲರಿಗೆ ಹೇಳಿ ಕಳುಹಿಸ ಬೇಕಾದ
ದ್ದೇನಂದರೆ—ಕರ್ತನು ನೆಹೆಲಾಮ್ಯನಾದ ಶೆಮಾಯನ ವಿಷಯ
ಹೀಗೆ ಹೇಳುತ್ತಾನೆ—ಶೆಮಾಯನು, ನಾನು ಅವನನ್ನು ಕಳುಹಿಸ
ದೆ ಇರುವಾಗ, ನಿಮಗೆ ಪ್ರವಾದಿಸಿ, ನಿಮ್ಮನ್ನು ಸುಳ್ಳಿನಲ್ಲಿ ನಂಬಿಕೆ
೩೨ ಇಡ ಮಾಡಿದ ಕಾರಣ, ಆದದರಿಂದ ಕರ್ತನು ಹೀಗೆ ಹೇಳುತ್ತಾ
ನೆ—ಇಗೋ, ನಾನು ನೆಹೆಲಾಮ್ಯನಾದ ಶೆಮಾಯನನ್ನೂ, ಅವನ
ಸಂತಾನವನ್ನೂ ವಿಚಾರಿಸುತ್ತೇನೆ; ಈ ಜನರೊಳಗೆ ವಾಸಿಸುವದ
ಕ್ಕೆ ಅವನಿಗೆ ಒಬ್ಬನು ಇರುವದಿಲ್ಲ; ಮತ್ತು ನಾನು ನನ್ನ ಜನರಿಗೆ
ಮಾಡುವ ಒಳ್ಳೇದನ್ನು ಅವನು ನೋಡುವದಿಲ್ಲವೆಂದು ಕರ್ತನು
ಅನ್ನುತ್ತಾನೆ; ಯಾಕಂದರೆ ಅವನು ಕರ್ತನಿಗೆ ವಿರೋಧವಾಗಿ
ದ್ರೋಹವನ್ನು ಮಾತಾಡಿದ್ದಾನೆ.

## ೩೦. ಸಂಧಿ.

೧ ಯೆಕೆಮಿಾಯನಿಗೆ ಕರ್ತನಿಂದ ಉಂಟಾದ ವಾಕ್ಯವೇನಂದರೆ—
ಇಸ್ರಯೇಲಿನ ದೇವರಾದ ಕರ್ತನು ಹೀಗೆ ಹೇಳುತ್ತಾನೆ—ನಾನು
೨ ನಿನಗೆ ಹೇಳಿದ ವಾಕ್ಯಗಳನ್ನೆಲ್ಲಾ ಒಂದು ಪುಸ್ತಕದಲ್ಲಿ ಬರಿ.
೩ ಯಾಕಂದರೆ ಇಗೋ ದಿನಗಳು ಬರುವವೆಂದು ಕರ್ತನು ಅನ್ನು
ತ್ತಾನೆ; ಆಗ ನಾನು ನನ್ನ ಜನರಾದ ಇಸ್ರಯೇಲಿನ ಯೆಹೂದದ
ಶೆಕೆಯನ್ನು ತಿರುಗಿಸುತ್ತೇನೆ; ಆಗ ನಾನು ಅವರ ತಂದೆಗಳಿಗೆ
ಕೊಟ್ಟ ದೇಶಕ್ಕೆ ಅವರನ್ನು ತಿರಿಗಿ ಬರ ಮಾಡುತ್ತೇನೆ; ಅದನ್ನು
ಸ್ವತಂತ್ರಿಸಿಕೊಳ್ಳುವರು.

೪ ಕರ್ತನು ಇಸ್ರಯೇಲನ್ನು ಕುರಿತೂ, ಯೆಹೂದವನ್ನು ಕುರಿ
೫ ತೂ, ಹೇಳಿದ ವಾಕ್ಯಗಳು ಇವೇ—
ನಿಶ್ಚಯವಾಗಿ ಕರ್ತನು ಹೇಳುವದೇನಂದರೆ—
ನಡುಗುವಿಕೆಯ ಶಬ್ದವನ್ನು ಕೇಳಿದ್ದೇವೆ;
ಭಯವದೆ, ಸಮಾಧಾನವಿಲ್ಲ.
೬ ಈಗ ವಿಚಾರಿಸಿ ನೋಡಿರಿ;
ಗಂಡನು ಹೆರುವದುಂಟೇ!
ನಾನು ಯಾತಕ್ಕೆ ಪುರುಷರೆಲ್ಲರನ್ನು ಹೆರುವ ಸ್ತ್ರೀಯ ಹಾಗೆ
ನಡುವಿನ ಮೇಲಕ್ಕೆ ಕೈ ಇಟ್ಟವರಾಗಿ ನೋಡುತ್ತೇನೆ;
ಯಾಕೆ ಮುಖಗಳೆಲ್ಲಾ ಕಳೆ ಗುಂದಿದವು!
೭ ಅಯ್ಯೋ! ಆ ದಿವಸವು ದೊಡ್ಡದೇ;
ಅದಕ್ಕೆ ಸಮಾನವಾದದ್ದು ಇಲ್ಲ;
ಅದು ಯಾಕೋಬನಿಗೆ ಇಕ್ಕಟ್ಟಿನ ಕಾಲವೇ;
ಆದಾಗ್ಯೂ ಅದರಿಂದ ರಕ್ಷಿಸಲ್ಪಡುವನು.

೮ ಆ ದಿವಸದಲ್ಲಿ ಆಗುವದೇನಂದರೆ—
ನಾನು ಅವನ ನೊಗವನ್ನು ನಿನ್ನ ಕುತ್ತಿಗೆಯ ಮೇಲಿನಿಂದ ಮುರಿ
ದು ಹಾಕುವೆನು;
ನಿನ್ನ ಬಂಧಗಳನ್ನು ಹರಿದು ಬಿಡುವೆನು;
ಅನ್ಯರು ಇನ್ನು ಅವನಿಂದ ಸೇವೆ ಮಾಡಿಸಿಕೊಳ್ಳುವದಿಲ್ಲವೆಂದು,
ಕರ್ತನು ಅನ್ನುತ್ತಾನೆ.
೯ ಆದರೆ ಅವರು ತಮ್ಮ ದೇವರಾದ ಕರ್ತನಿಗೂ,
ನಾನು ಅವರಿಗೋಸ್ಕರ ಎಬ್ಬಿಸುವ ಅವರ ಅರಸನಾದ ದಾವೀದ
ನಿಗೂ, ಸೇವೆ ಮಾಡುವರು.
೧೦ ಆದದರಿಂದ ನನ್ನ ಸೇವಕನಾದ ಯಾಕೋಬನೇ! ಭಯಪಡ
ಬೇಡ,
ಎಂದು ಕರ್ತನು ಅನ್ನುತ್ತಾನೆ;
ಇಸ್ರಯೇಲೇ! ಹೆದರ ಬೇಡ;
ಯಾಕಂದರೆ, ಇಗೋ, ನಾನು ನಿನ್ನನ್ನು ದೂರದಿಂದಲೂ,
ನಿನ್ನ ಸಂತಾನವನ್ನು ಕೆರೆ ವೈದ ದೇಶದಿಂದಲೂ, ರಕ್ಷಿಸುತ್ತೇನೆ;
ಯಾಕೋಬನು ತಿರಿಗಿ ಬಂದು, ವಿಶ್ರಾಂತಿಯಾಗುವನು;
ಹೆದರಿಸುವವನಿಲ್ಲದೆ ಸೌಖ್ಯವಾಗಿರುವನು.
೧೧ ಯಾಕಂದರೆ ನಿನ್ನನ್ನು ರಕ್ಷಿಸುವದಕ್ಕೆ ನಾನು ನಿನ್ನ ಸಂಗಡ ಇ
ದ್ದೇನೆಂದು ಕರ್ತನು ಅನ್ನುತ್ತಾನೆ;
ನಿನ್ನನ್ನು ಎಲ್ಲಿ ಚೆದರಿಸಿದೆನೋ,
ಆ ಎಲ್ಲಾ ಜನಾಂಗಗಳನ್ನು ನಾನು ಮುಗಿಸಿ ಬಿಟ್ಟಾಗ್ಯೂ,
ನಿನ್ನನ್ನು ಮುಗಿಸಿ ಬಿಡುವದಿಲ್ಲ;
ನ್ಯಾಯದಿಂದ ನಿನ್ನನ್ನು ಶಿಕ್ಷಿಸುತ್ತೇನೆ;
ಅಪರಾಧ ಮಾತ್ರ ಹೊರಿಸದೆ ಬಿಡುವದಿಲ್ಲ.

೧೨ ಯಾಕಂದರೆ ಕರ್ತನು ಹೀಗೆ ಹೇಳುತ್ತಾನೆ—
ನಿನ್ನ ಘಾಯವು ಗುಣವಾಗದಂಥಾದ್ದು;
ನಿನ್ನ ಬೆಪ್ಪೆ ಅಘೋರವಾದದ್ದು.
೧೩ ಅದನ್ನು ಕಟ್ಟುವ ಹಾಗೆ ನಿನ್ನನ್ನು ಯಾರೂ ವಿಚಾರಿಸುವ
ದಿಲ್ಲ;
ವಾಸಿ ಮಾಡುವ ಔಷಧಗಳು ನಿನಗೆ ಇಲ್ಲ.
೧೪ ನಿನ್ನನ್ನು ಪ್ರೀತಿ ಮಾಡುವವರೆಲ್ಲರು
ನಿನ್ನನ್ನು ಮರೆತು ಬಿಟ್ಟಿದ್ದಾರೆ, ನಿನ್ನನ್ನು ಹುಡುಕುವದಿಲ್ಲ;
ಯಾಕಂದರೆ ಶತ್ರುವಿನ ಬೆಪ್ಪೆಯಿಂದಲೂ,
ಕ್ರೂರನ ಶಿಕ್ಷೆಯಿಂದಲೂ, ನಿನ್ನನ್ನು ಹೊಡೆದಿದ್ದೇನೆ;
ನಿನ್ನ ಅಕ್ರಮವು ಬಹಳವೂ, ನಿನ್ನ ಪಾಪಗಳು ಪ್ರಬಲವೂ, ಆಗಿ
ರುವದರಿಂದಲೇ.
೧೫ ನಿನ್ನ ಘಾಯದ ನಿಮಿತ್ತ ಯಾಕೆ ಕೂಗುತ್ತೀ!
ನಿನ್ನ ನೋವು ಗುಣವಾಗದಂಥಾದ್ದೇ;
ನಿನ್ನ ಅಕ್ರಮ ಬಹಳವಾಗಿರುವದರಿಂದಲೂ,
ನಿನ್ನ ಪಾಪಗಳು ಪ್ರಬಲವಾಗಿರುವದರಿಂದಲೂ,
ಇವುಗಳನ್ನು ನಿನಗೆ ಮಾಡಿದ್ದೇನೆ.

೧೬ ಆದರೂ ನಿನ್ನನ್ನು ತಿಂದು ಬಿಡುವವರೆಲ್ಲರು
ತಿಂದು ಬಿಡಲ್ಪಡುವರು;
ನಿನಗೆ ಇಕ್ಕಟ್ಟು ಮಾಡುವವರೆಲ್ಲರು
ಏಕವಾಗಿ ಶೆರೆಗೆ ಹೋಗುವರು;
ನಿನ್ನನ್ನು ಕೊಳ್ಳೆ ಮಾಡುವವರು ಕೊಳ್ಳೆಯಾಗುವರು;
ನಿನ್ನನ್ನು ಸುಲು ಕೊಳ್ಳುವವರೆಲ್ಲರನ್ನು ಸುಲಿಗೆಗೆ ಒಪ್ಪಿಸುವೆನು.
೧೭ ಯಾಕಂದರೆ ಚಿಯೋನೆ ಶಳ್ಳಿ ಬಿಡಲ್ಪಟ್ಟದ್ದು,



ಅದನ್ನು ವಿಚಾರಿಸುವವರು ಯಾರೂ ಇಲ್ಲವೆಂದು,
ಅವರು ನಿನ್ನ ವಿಷಯ ಹೇಳುವದರಿಂದ,
ನಿನಗೆ ಕ್ಷೇಮವನ್ನುಂಟು ಮಾಡುವೆನು;
ನಿನ್ನ ಬೆಪ್ಪೆಗಳನ್ನು ಸ್ವಸ್ಥ ಮಾಡುವೆನೆಂದು,
ಕರ್ತನು ಅನ್ನುತ್ತಾನೆ.
೧೮ ಕರ್ತನು ಹೇಳುವದೇನಂದರೆ—
ಇಗೋ ನಾನು ಯಾಕೋಬನ ಗುಡಾರಗಳ ಶೆರೆಯನ್ನು ತಿರುಗಿ
ಸುತ್ತೇನೆ;
ಅವನ ನಿವಾಸಗಳನ್ನು ಕರುಣಿಸುತ್ತೇನೆ;
ಪಟ್ಟಣವು ಅದರ ದಿನ್ನೆಯ ಮೇಲೆ ಕಟ್ಟಲ್ಪಡುವದು;
ಅರಮನೆಯು ತಕ್ಕ ಸ್ಥಳದಲ್ಲಿ ನಿಲ್ಲುವದು.
೧೯ ಮತ್ತು ಅವುಗಳೊಳಗಿಂದ ಸ್ತೋತ್ರವೂ, ಸಂತೋಷಪಡು
ವವರ ಶಬ್ದವೂ, ಹೊರಡುವದು;
ಅವರು ಕಡಿಮೆಯಾಗದ ಹಾಗೆ ಅವರನ್ನು ಹೆಚ್ಚು ಮಾಡು
ವೆನು;
ಅವರು ಅಬ್ಬವಾಗದ ಹಾಗೆ ಅವರಿಗೆ ಘನವನ್ನು ಕೊಡುವೆನು,
೨೦ ಅವರ ಮಕ್ಕಳು ಸಹ ಪೂರ್ವದ ಹಾಗೆ ಇರುವರು;
ಅವರ ಸಭೆಯು ನನ್ನ ಮುಂದೆ ಸ್ಥಾಪಿಸಲ್ಪಡುವದು;
ಮತ್ತು ಅವರನ್ನು ಅಣಗಿಸುವವರೆಲ್ಲರನ್ನು ವಿಚಾರಿಸುವೆನು.
೨೧ ಮತ್ತು ಅವರ ಶ್ರೇಷ್ಠನು ಅವರೊಳಗಿಂದ ಇರುವನು;
ಅವರನ್ನಾಳುವವನು ಅವರ ಮಧ್ಯದಲ್ಲಿಂದ ಹೊರಡುವನು;
ನಾನು ಅವನನ್ನು ಹತ್ತಿರ ಬರ ಮಾಡುವೆನು;
ಅವನು ನನಗೆ ಸಮೀಪಿಸುವನು;
ಆದರೆ ನನಗೆ ಸಮೀಪಿಸುವದಕ್ಕೆ ತನ್ನ ಹೃದಯ ನಿಶ್ಚಯ
ಮಾಡಿಕೊಂಡ ಇವನ್ಯಾರೆಂದು!
ಕರ್ತನು ಅನ್ನುತ್ತಾನೆ.
೨೨ ಮತ್ತು ನೀವು ನನಗೆ ಜನರಾಗಿರುವಿರಿ;
ನಾನು ನಿಮಗೆ ದೇವರಾಗಿರುವೆನು.

೨೩ ಇಗೋ ಕರ್ತನ ಬಿರುಗುಳಿ ಕೌದ್ರವಾಗಿ ಹೊರಡುತ್ತದೆ,
ಬರುಕೊಂಡು ಹೋಗುವ ಬಿರುಗುಳಿಯೇ;
ದುಷ್ಟರ ತಲೆಯ ಮೇಲೆ ಬೀಳುವದು.
೨೪ ಕರ್ತನ ಕೋಪದ ಉರಿಯು,
ಅವನು ಅದನ್ನು ಮಾಡಿರುವ ಪರ್ಯಂತರಕ್ಕೂ,
ತನ್ನ ಹೃದಯದ ಆಲೋಚನೆಗಳನ್ನು ನಡಿಸಿರುವ ಪರ್ಯಂ
ತರಕ್ಕೂ,
ತಿರುಗುವದಿಲ್ಲ;
ಅಂತ್ಯ ದಿವಸಗಳಲ್ಲಿ ಅದನ್ನು ಯೋಚಿಸುವಿರಿ.

## ೩೧. ಸಂಧಿ.

೧ ಆ ಕಾಲದಲ್ಲಿ,
ನಾನು ಇಸ್ರಯೇಲಿನ ಸಮಸ್ತ ಗೋತ್ರಗಳಿಗೆ ದೇವರಾಗಿರು
ವೆನು;
ಅವರು ನನಗೆ ಜನರಾಗಿರುವರು,
ಎಂದು ಕರ್ತನು ಅನ್ನುತ್ತಾನೆ.
೨ ಕರ್ತನು ಹೇಳುವದೇನಂದರೆ—
ನಾನು ಅವರಿಗೆ ವಿಶ್ರಾಂತಿ ಕೊಡುವದಕ್ಕೆ ಹೋಗಲಾಗಿ,
ಇಸ್ರಯೇಲಿಗೆ, ಕತ್ತಿ ತಪ್ಪಿಸಿಕೊಂಡ ಜನಕ್ಕೆ,
ಅರಣ್ಯದಲ್ಲಿ ದಯೆ ದೊರಕಿತು.
೩ ಪೂರ್ವದಿಂದ ಕರ್ತನು ನನಗೆ ಕಾಣಿಸಿಕೊಂಡನು;
ಹೌದು, ನಿತ್ಯವಾದ ಪ್ರೀತಿಯಿಂದ ನಿನ್ನನ್ನು ಪ್ರೀತಿ ಮಾಡಿದ್ದೇನೆ;
ಆದದರಿಂದ ಕೃಪೆಯಿಂದ ನಿನ್ನನ್ನು ಎಳೆದಿದ್ದೇನೆ.
೪ ಇಸ್ರಯೇಲಿನ ಕನ್ಯಾಸ್ತ್ರೀಯೇ!
ನೀನು ಕಟ್ಟಲ್ಪಟ್ಟಿರುವ ಹಾಗೆ ತಿರಿಗಿ ನಿನ್ನನ್ನು ಕಟ್ಟುವೆನು;
ನಿನ್ನ ದಮ್ಮಿಡಿಗಳಿಂದ ತಿರಿಗಿ ನಿನ್ನನ್ನು ಅಲಂಕರಿಸಿಕೊಂಡು,
ಸಂತೋಷಪಡುವವರ ನಾಟ್ಯದಲ್ಲಿ ಹೊರಡುವಿ.
೫ ಸಮಾರ್ಯದ ಪರ್ವತಗಳಲ್ಲಿ ತಿರಿಗಿ ದ್ರಾಕ್ಷೆಗಿಡಗಳನ್ನು ನೆಡುವಿ;
ನೆಡುವವರು ನೆಟ್ಟು ಫಲ ಅನುಭವಿಸುವರು.
೬ ಯಾಕಂದರೆ ಒಂದು ದಿನವದೆ;
ಆಗ ಎಫ್ರಾಯಿಾಮನ ಪರ್ವತದಲ್ಲಿ ಕಾಯುವವರು—
ಏಳಿರಿ, ಚಿಯೋನಿಗೆ,
ನಮ್ಮ ದೇವರಾದ ಕರ್ತನ ಬಳಿಗೆ,
ಏರಿ ಹೋಗೋಣ, ಎಂದು ಕೂಗುವರು.
೭ ಯಾಕಂದರೆ ಕರ್ತನು ಹೀಗೆ ಹೇಳುತ್ತಾನೆ—
ಯಾಕೋಬನ ವಿಷಯ ಸಂತೋಷದಿಂದ ಹರ್ಷಿಸಿರಿ;
ಮುಖ್ಯವಾದ ಜನಾಂಗಗಳೊಳಗೆ ಆರ್ಭಟಿಸಿರಿ;
ಸಾರಿರಿ; ಸ್ತುತಿಸಿರಿ;
ಕರ್ತನೇ, ನಿನ್ನ ಜನರನ್ನೂ,
ಇಸ್ರಯೇಲಿನ ಉಳಿವನ್ನೂ ರಕ್ಷಿಸು,
ಎಂದು ಹೇಳಿರಿ.
೮ ಇಗೋ ನಾನು ಅವರನ್ನು ಉತ್ತರ ದೇಶದಿಂದ ತರಿಸಿ,
ಭೂಮಿಯ ಮೇರೆಗಳಿಂದ ಅವರನ್ನು ಕೂಡಿಸುತ್ತೇನೆ;
ಅವರಲ್ಲಿ ಕುರುಡರೂ, ಕುಂಟರೂ,
ಬಸುರಾದವಳೂ, ಹೆರುವವಳೂ ಸಹಿತವಾಗಿ, ಇರುವರು;
ದೊಡ್ಡ ಕೂಟವು ಇಲ್ಲಿಗೆ ತಿರಿಗಿ ಬರುವದು.
೯ ಅಳುತ್ತಾ ಬರುವರು;
ಬಿನ್ನಹಗಳ ಸಂಗಡ ಅವರನ್ನು ನಡಿಸುವೆನು;
ಅವರು ಎಡವದ ನೆಟ್ಟಗಾದ ದಾರಿಯಲ್ಲಿ,
ನೀರಿನ ಹಳ್ಳಗಳ ಬಳಿಯಲ್ಲಿ,
ಅವರನ್ನು ನಡಿಯ ಮಾಡುವೆನು;
ಯಾಕಂದರೆ ನಾನು ಇಸ್ರಯೇಲಿಗೆ ತಂದೆಯಾಗಿದ್ದೇನೆ;
ಎಫ್ರಾಯಿಾಮನು ನನ್ನ ಚೊಚ್ಚಲನೇ.

೧೦ ಜನಾಂಗಗಳೇ! ಕರ್ತನ ವಾಕ್ಯವನ್ನು ಕೇಳಿರಿ;
ದೂರದಲ್ಲಿರುವ ದ್ವೀಪಗಳಲ್ಲಿ ಅದನ್ನು ತಿಳಿಸಿ, ಹೀಗೆ ಹೇ
ಳಿರಿ—
ಇಸ್ರಯೇಲನನ್ನು ಚದರಿಸಿದವನು ಅವನನ್ನು ಕೂಡಿಸುವನು;
ಕುರುಬನು ತನ್ನ ಮಂದೆಯನ್ನು ಕಾಯುವ ಹಾಗೆ ಅವನನ್ನು
ಕಾಯುವನು.

೧೧ ಯಾಕಂದರೆ ಕರ್ತನು ಯಾಕೋಬನನ್ನು ವಿಮೋಚಿಸಿದ್ದಾನೆ;
ಅವನಿಗಿಂತ ಬಲಿಷ್ಠನಾದವನ ಕೈಯೊಳಗಿಂದ ಅವನನ್ನು ಬಿಡಿ
ಸಿದ್ದಾನೆ.
೧೨ ಆದದರಿಂದ ಅವರು ಬಂದು,
ಚಿಯೋನಿನ ಉನ್ನತದಲ್ಲಿ ಹರ್ಷಿಸಿ,
ಕರ್ತನ ಒಳ್ಳೇತನದ ಬಳಿಗೆ,
ಗೋಧಿಯ ನಿಮಿತ್ತವೂ, ದ್ರಾಕ್ಷೇರಸದ ನಿಮಿತ್ತವೂ,
ಎಣ್ಣೆಯ ನಿಮಿತ್ತವೂ, ಮಂದೆ ದನಗಳ ಮರಿಗಳ ನಿಮಿತ್ತವೂ,
ಹರಿದು ಬರುವರು;
ಅವರ ಪ್ರಾಣವು ಜಲನ್ನಾಗಿ ನೀರು ಹಾಕಿದ ತೋಟದ ಹಾಗೆ
ಇರುವದು;
ಅವರು ಇನ್ನು ಮೇಲೆ ಬೆಂಡಾಗುವದಿಲ್ಲ.
೧೩ ಆಗ ಕನ್ಯಾಸ್ತ್ರೀಯೂ ಪ್ರಾಯದವರೂ ಮುದುಕರೂ ಸಹಿ
ತವಾಗಿ,
ನಾಟ್ಯದಲ್ಲಿ ಸಂತೋಷಪಡುವರು;
ಯಾಕಂದರೆ ಅವರ ದುಃಖವನ್ನು ಆನಂದಕ್ಕೆ ಬದಲಾಯಿ
ಸುವೆನು;
ಅವರನ್ನು ಆದರಿಸಿ, ಅವರ ಚಿಂತೆಯನ್ನು ಬಿಡಿಸಿ,
ಅವರಿಗೆ ಸಂತೋಷವನ್ನು ಉಂಟು ಮಾಡುವೆನು.
೧೪ ಇದಲ್ಲದೆ ಯಾಜಕರ ಪ್ರಾಣವನ್ನು ಕೊಬ್ಬಿನಿಂದ ತುಂಬಿಸುವೆನು;
ಮತ್ತು ನನ್ನ ಜನರು ನನ್ನ ಒಳ್ಳೇತನದಿಂದ ತೃಪ್ತಿ ಪಡುವರೆಂದು,
ಕರ್ತನು ಅನ್ನುತ್ತಾನೆ.

೧೫ ಕರ್ತನು ಹೇಳುವದೇನಂದರೆ—
ರಾಮದಲ್ಲಿ ಶಬ್ದವು ಕೇಳಲ್ಪಟ್ಟಿತು;
ಗೋಳಾಟವೂ, ಅಘೋರವಾದ ಅಳುವಿಕೆಯೂ;
ರಾಹೆಲಳು ತನ್ನ ಮಕ್ಕಳಿಗೋಸ್ಕರ,
ಆದರಣೆ ಹೊಂದಲೊಲ್ಲದೆ, ಅಳುತ್ತಾಳೆ;
ಯಾಕಂದರೆ ಅವರು ಇಲ್ಲ.
೧೬ ಕರ್ತನು ಹೇಳುವದೇನಂದರೆ—
ನಿನ್ನ ಶಬ್ದವನ್ನು, ಅಳದ ಹಾಗೆ,
ನಿನ್ನ ಕಣ್ಣುಗಳನ್ನು, ಕಣ್ಣೀರು ಇಡದ ಹಾಗೆ, ಬಿಗಿ ಹಿಡಿ;
ಯಾಕಂದರೆ ನಿನ್ನ ಕೆಲಸಕ್ಕೆ ಪ್ರತಿಫಲ ಉಂಟೆಂದು,
ಕರ್ತನು ಅನ್ನುತ್ತಾನೆ;
ಅವರು ಶತ್ರುವಿನ ದೇಶದಿಂದ ತಿರಿಗಿ ಬರುವರು.
೧೭ ಮತ್ತು ನಿನ್ನ ಅಂತ್ಯದಲ್ಲಿ ನಿರೀಕ್ಷಣೆ ಉಂಟೆಂದು,
ಕರ್ತನು ಅನ್ನುತ್ತಾನೆ;
ಯಾಕಂದರೆ ನಿನ್ನ ಮಕ್ಕಳು ತಮ್ಮ ಮೇರೆಗೆ ತಿರಿಗಿ ಬರುವರು.

೧೮ ಎಫ್ರಾಯಿಾಮನು ಅಂಗಲಾಚುವದನ್ನು ಕೇಳ್ದೇ ಕೇಳಿದೆನು;
ಹ್ಯಾಗಂದರೆ—ನೀನು ನನ್ನನ್ನು ಶಿಕ್ಷೆಸಿದಿ;
ತಿದ್ದು ಪಾಟಾಗದ ಎತ್ತಿಗೆ ಆದ ಹಾಗೆ ನನಗೆ ಶಿಕ್ಷೆ ಆಯಿತು;
ನನ್ನನ್ನು ತಿರುಗಿಸು, ಆಗ ತಿರುಗಿಕೊಳ್ಳುವೆನು;
ಯಾಕಂದರೆ ನೀಲೀ, ಓ ಯೆಹೋವಾ! ನನ್ನ ದೇವರಾಗಿದ್ದೀ.
೧೯ ನಿಶ್ಚಯವಾಗಿ ನಾನು ತಿರುಗಿ ಕೊಂಡ ಮೇಲೆ ಪಶ್ಚಾತ್ತಾಪ
ಪಟ್ಟೆನು;
ಮತ್ತು ಉಪದೇಶ ಹೊಂದಿದ ಮೇಲೆ ತೊಡೆಯ ಮೇರೆ ಬಡ
ಕೊಂಡೆನು;
ನಾಚಿಕೆಪಟ್ಟೆನು, ಹೌದು, ಅವಮಾನ ಹೊಂದಿದೆನು;
ಯಾಕಂದರೆ, ನನ್ನ ಯೌವನದ ನಿಂದೆಯನ್ನು ತಾಳಿಕೊಂ
ಡೆನು.
೨೦ ಎಫ್ರಾಯಿಾಮನು ನನಗೆ ಪ್ರಿಯ ಕುಮಾರನೋ!
ಅವನು ಆನಂದವುಳ್ಳ ಮಗುವೋ!
ನಿಶ್ಚಯವಾಗಿ ನಾನು ಅವನಿಗೆ ವಿರೋಧವಾಗಿ ಮಾತಾಡಿ
ದಂದಿನಿಂದ,
ಅವನನ್ನು ಇನ್ನು ಬಹಳವಾಗಿ ಜ್ಞಾಪಕ ಮಾಡುತ್ತೇನೆ;
ಆದದರಿಂದ ನನ್ನ ಕರುಳುಗಳು ಅವನಿಗೋಸ್ಕರ ಅರಚುತ್ತವೆ;
ನಿಶ್ಚಯವಾಗಿ ಅವನನ್ನು ಕನಿಕರಿಸುವೆನೆಂದು,
ಕರ್ತನು ಅನ್ನುತ್ತಾನೆ.

೨೧ ನಿನಗೋಸ್ಕರ ದಾರಿಗುರುತುಗಳನ್ನು ನಿಲ್ಲಿಸು;
ನಿನಗೋಸ್ಕರ ಕಂಭಗಳನ್ನು ಇರಿಸು;
ರಾಜ ಮಾರ್ಗದ ಕಡೆಗೆ, ನೀನು ಹೋದ ದಾರಿಯ ಕಡೆಗೆ,
ನಿನ್ನ ಹೃದಯವನ್ನು ಇಟ್ಟುಕೋ;
ಇಸ್ರಯೇಲಿನ ಕನ್ಯಾಸ್ತ್ರೀಯೇ! ತಿರುಗು;
ಈ ನಿನ್ನ ಪಟ್ಟಣಗಳಿಗೆ ತಿರುಗು.
೨೨ ಎಷ್ಟು ಮಟ್ಟಿಗೂ ಅಡ್ಡಾಡುವಿ, ಹಿಂಜರಿದ ಮಗಳೇ!
ಯಾಕಂದರೆ ಕರ್ತನು ಭೂಮಿಯಲ್ಲಿ ಹೊಸದನ್ನು ಸೃಷ್ಟಿ
ಸುತ್ತಾನೆ;
ಹೆಂಗಸು ಗಂಡಸನನ್ನು ಸುತ್ತಿಕೊಳ್ಳುವಳು.

೨೩ ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೇಳುವ
ದೇನಂದರೆ—
ಯೆಹೂದದ ದೇಶದಲ್ಲಿಯೂ, ಅವರ ಪಟ್ಟಣಗಳಲ್ಲಿಯೂ,
ನಾನು ಅವರ ಸೆರೆಯನ್ನು ತಿರುಗಿಸುವಾಗ,
ಇನ್ನು ಈ ಮಾತನ್ನು ಹೇಳುವರು—
ನೀತಿಯ ನಿವಾಸವೇ! ಪರಿಶುದ್ಧ ಪರ್ವತವೇ!
ಕರ್ತನು ನಿನ್ನನ್ನು ಆಶೀರ್ವದಿಸಲಿ.
೨೪ ಮತ್ತು ಯೆಹೂದದಲ್ಲಿಯೂ, ಅದರ ಎಲ್ಲಾ ಪಟ್ಟಣಗಳಲ್ಲಿಯೂ
ಸಹ,
ಬೇಸಾಯ ಮಾಡುವವರೂ, ಮಂದೆಯ ಸಂಗಡ ಹೊರಡು
ವವರೂ, ವಾಸವಾಗುವರು.
೨೫ ಯಾಕಂದರೆ ದಣಿದ ಪ್ರಾಣವನ್ನು ತೃಪ್ತಿ ಪಡಿಸಿದ್ದೇನೆ;
ಕುಂದಿದ ಪ್ರಾಣಗಳನ್ನೆಲ್ಲಾ ತುಂಬಿಸಿದ್ದೇನೆ.
೨೬ ಅದ್ದರಲ್ಲಿ ಎಚ್ಚತ್ತು ನೋಡಿದೆನು;
ಮತ್ತು ನನ್ನ ನಿದ್ದೆ ನನಗೆ ಸೊಂಪಾಗಿತ್ತು.

೨೭ ಇಗೋ ದಿನಗಳು ಬರುವವೆಂದು ಕರ್ತನು ಅನ್ನುತ್ತಾನೆ;
ಆಗ ನಾನು ಇಸ್ರಯೇಲಿನ ಮನೆಯನ್ನೂ, ಯೆಹೂದನ ಮನೆ
ಯನ್ನೂ,
ಮನುಷ್ಯನ ಬೀಜದಿಂದಲೂ, ಮೃಗದ ಬೀಜದಿಂದಲೂ, ಬಿತ್ತು
ವೆನು.



೨೮ ಮತ್ತು ನಾನು, ಕೀಳುವದಕ್ಕೂ, ಮುರಿಯುವದಕ್ಕೂ,
ಕೆಡವುವದಕ್ಕೂ, ನಾಶನ ಮಾಡುವದಕ್ಕೂ, ಕಷ್ಟಿಸುವದಕ್ಕೂ,
ಅವರ ವಿಷಯ ಹ್ಯಾಗೆ ಎಚ್ಚರವಾಗಿದ್ದೆನೋ,
ಹಾಗೆಯೇ ಕಟ್ಟುವದಕ್ಕೂ, ನೆಡುವದಕ್ಕೂ,
ಅವರ ವಿಷಯ ಎಚ್ಚರವಾಗಿರುವೆನೆಂದು, ಕರ್ತನು ಅನ್ನುತ್ತಾನೆ.
೨೯ ಆ ದಿನಗಳಲ್ಲಿ—ತಂದೆಗಳು ಹುಳಿ ದ್ರಾಕ್ಷೆಯನ್ನು ತಿಂದದರಿಂದ,
ಮಕ್ಕಳ ಹಲ್ಲುಗಳು ಚಳಿತು ಹೋದವೆಂದು,
ಇನ್ನು ಹೇಳಲ್ಪಡುವದಿಲ್ಲ;
೩೦ ಆದರೆ ಒಬ್ಬೊಬ್ಬನು ಸ್ವಂತ ಅಕ್ರಮಕ್ಕಾಗಿ ಸಾಯುವನು;
ಹುಳಿ ದ್ರಾಕ್ಷೆಯನ್ನು ತಿಂದ ಮನುಷ್ಯನು ಯಾವನೋ,
ಅವನ ಹಲ್ಲುಗಳು ಚಳಿತು ಹೋಗುವವು.

೩೧ ಇಗೋ ದಿನಗಳು ಬರುವವೆಂದು ಕರ್ತನು ಅನ್ನುತ್ತಾನೆ;
ಆಗ ನಾನು ಇಸ್ರಯೇಲನ ಮನೆಯವರ ಸಂಗಡಲೂ, ಯೆಹೂದ
ನ ಮನೆಯವರ ಸಂಗಡಲೂ,
ಹೊಸ ಒಡಂಬಡಿಕೆಯನ್ನು ಮಾಡುವೆನು.
೩೨ ನಾನು ಅವರ ತಂದೆಗಳ ಸಂಗಡ,
ಅವರನ್ನು ಐಗುಪ್ತ ದೇಶದಿಂದ ಹೊರತರುವದಕ್ಕೆ,
ಅವರ ಕೈ ಹಿಡಿದ ದಿವಸದಲ್ಲಿ,
ಮಾಡಿದ ಒಡಂಬಡಿಕೆಯ ಹಾಗಲ್ಲ;
ಆ ನನ್ನ ಒಡಂಬಡಿಕೆಯನ್ನು ಅವರು,
ನಾನು ಅವರ ಯಜಮಾನನಾಗಿದ್ದಾಗ್ಯೂ,
ಮೀರಿದರೆಂದು, ಕರ್ತನು ಅನ್ನುತ್ತಾನೆ.
೩೩ ಆದರೆ ನಾನು ಇಸ್ರಯೇಲನ ಮನೆಯವರ ಸಂಗಡ ಮಾಡುವ
ಒಡಂಬಡಿಕೆ ಇದೇ—
ಆ ದಿವಸಗಳಾದ ಮೇಲೆ ನಾನು ನನ್ನ ನ್ಯಾಯಪ್ರಮಾಣವನ್ನು
ಅವರೊಳಗೆ ಇಟ್ಟು,
ಅವರ ಹೃದಯದಲ್ಲಿ ಅದನ್ನು ಬರಿಯುವೆನೆಂದು,
ಕರ್ತನು ಅನ್ನುತ್ತಾನೆ;
ಮತ್ತು ನಾನು ಅವರಿಗೆ ದೇವರಾಗಿರುವೆನು,
ಅವರು ನನಗೆ ಜನರಾಗಿರುವರು.
೩೪ ಮತ್ತು ನೆಕೆಯವನಿಗೆ ನೆಕೆಯವನೂ, ಸಹೋದರನಿಗೆ ಸಹೋದ
ರನೂ—
ಕರ್ತನನ್ನು ತಿಳಿಯಿರಿ; ಎಂದು, ಇನ್ನು ಬೋಧಿಸುವದಿಲ್ಲ;
ಯಾಕಂದರೆ ಅವಕ್ಕೆಲ್ಲರೂ,
ಚಿಕ್ಕವನು ಮೊದಲುಗೊಂಡು ದೊಡ್ಡವನ ಪರ್ಯಂತರಕ್ಕೂ,
ನನ್ನನ್ನು ತಿಳಿಯುವರೆಂದು, ಕರ್ತನು ಅನ್ನುತ್ತಾನೆ;
ಯಾಕಂದರೆ ಅವರ ಅಕ್ರಮವನ್ನು ಮನ್ನಿಸುವೆನು;
ಅವರ ಪಾಪಗಳನ್ನು ಇನ್ನು ಜ್ಞಾಪಕ ಮಾಡುವದಿಲ್ಲ.

೩೫ ಕರ್ತನಾದವನು,
ಸೂರ್ಯನನ್ನು ಹಗಲಿಗೆ ಬೆಳಕಾಗಿಯೂ,
ಚಂದ್ರ ನಕ್ಷತ್ರಗಳ ನೇಮಗಳನ್ನು ರಾತ್ರಿಗೆ ಬೆಳಕಾಗಿಯೂ, ಕೊ
ಡುವವನೂ,
ಅದರ ಕೆರೆಗಳು ಘೋಷಿಸುವಾಗ ಸಮುದ್ರವನ್ನು ಶಾಂತಿಪಡಿ
ಸುವವನೂ,
ಸೈನ್ಯಗಳ ಯೆಹೋವನೆಂದು ಹೆಸರುಳ್ಳವನೂ, ಹೇಳುವದೇ
ನಂದರೆ—
೩೬ ಈ ನೇಮಗಳು ನನ್ನ ಸನ್ನಿಧಿಯಿಂದ ಯಾವಾಗ ಇಲ್ಲದೆ ಹೋ
ಗುವವೋ,
ಆಗ ಇಸ್ರಯೇಲಿನ ಸಂತಾನವು ಸಹ,
ಸದಾಕಾಲ ನನ್ನ ಮುಂದೆ ಜನಾಂಗವಾಗಿರದ ಹಾಗೆ,
ನಿಂತು ಹೋಗುವದೆಂದು, ಕರ್ತನು ಅನ್ನುತ್ತಾನೆ.
೩೭ ಕರ್ತನು ಹೇಳುವದೇನಂದರೆ—
ಮೇಲಿರುವ ಆಕಾಶವನ್ನು ಅಳಿಯುವದಕ್ಕಾದರೆ,
ಕೆಳಗಿರುವ ಭೂಮಿಯ ಅಸ್ತಿವಾರಗಳನ್ನು ಶೋಧಿಸುವದ
ಕ್ಕಾದರೆ,
ನಾನು ಸಹ ಇಸ್ರಯೇಲನ ಸಂತಾನವನ್ನಿಲ್ಲಾ,
ಅವರು ಮಾಡಿದ್ದೆಲ್ಲಾದರ ನಿಮಿತ್ತ, ತಳ್ಳಿ ಬಿಡುವೆನೆಂದು,
ಕರ್ತನು ಅನ್ನುತ್ತಾನೆ.
೩೮ ಇಗೋ ದಿನಗಳು ಬರುವವೆಂದು, ಕರ್ತನು ಅನ್ನುತ್ತಾನೆ;
ಆಗ ಹನನೇಲನ ಬುರುಜು ಮೊದಲುಗೊಂಡು ಮೂಲೆಯ ಬಾಗ
ಲಿನ ಪರ್ಯಂತರಕ್ಕೂ,
ಪಟ್ಟಣವು ಕರ್ತನಿಗೆ ಕಟ್ಟಲ್ಪಡುವದು.
೩೯ ಮತ್ತು ಸೂತ್ರವು ಇನ್ನು ಅದಕ್ಕೆ ಎದುರಾಗಿ
ಗಾರೇಬಿನ ಗುಡ್ಡದ ಮೇಲೆ ಹೊರಟು,
ಗೋಯಾತಿನ ಪರ್ಯಂತರಕ್ಕು ಸುತ್ತಿ ಕೊಳ್ಳುವದು.
೪೦ ಮತ್ತು ಹೆಣಗಳ ತಗ್ಗೆಲ್ಲವೂ,
ಬೂದಿಯೂ, ಹೊಲಗಳೆಲ್ಲವೂ,
ಕಿದ್ರೋನ್ ಹಳ್ಳದ ಪರ್ಯಂತರಕ್ಕೂ,
ಪೂರ್ವದಿಕ್ಕಿನಲ್ಲಿರುವ ಕುದುರೆ ಬಾಗಲಿನ ಪರ್ಯಂತರಕ್ಕೂ,
ಕರ್ತನಿಗೆ ಪರಿಶುದ್ಧವಾಗುವವು;
ಅದು ಇನ್ನು ಎಂದೆಂದಿಗೂ ಕೀಳ್ಪಲ್ಪಡುವದಿಲ್ಲ,
ಕೆಡವಲ್ಪಡುವದಿಲ್ಲ.

## ೩೨. ಸಂಧಿ.

೧ ನೆಬುಕದ್ನೆಜ್ಜರನ ಹದಿನೆಂಟನೇ ವರುಷವಾಗಿದ್ದ, ಚಿದ್ಕೀಯ
ನ ಹತ್ತನೇ ವರುಷದಲ್ಲಿ, ಯೆರೆಮಿಾಯನಿಗೆ ಕರ್ತನಿಂದ ಉಂಟಾ
೨ ದ ವಾಕ್ಯವು. ಆಗ ಬಾಬೆಲಿನ ಅರಸನ ಸೈನ್ಯವು ಯೆರೂಸಲೇ
ಮಿಗೆ ಮುತ್ತಿಗೆ ಹಾಕುತ್ತಿತ್ತು; ಮತ್ತು ಪ್ರವಾದಿಯಾದ ಯೆರೆಮಿಾ
ಯನು ಯೆಹೂದದ ಅರಸನ ಮನೆಯಲ್ಲಿರುವ ಕಾವಲಿಮನೆಯ
೩ ಅಂಗಳದಲ್ಲಿ ಮಚ್ಚಲ್ಪಟ್ಟನು. ಯಾಕಂದರೆ ಯೆಹೂದದ ಅರಸ
ನಾದ ಚಿದ್ಕೀಯನು ನೀನು ಬಂದು—ಕರ್ತನು ಹೇಳುವದೇನಂ
ದರೆ—ನಾನು ಈ ಪಟ್ಟಣವನ್ನು ಬಾಬೆಲಿನ ಅರಸನ ಕೈಯಲ್ಲಿ ಕೊ
೪ ಡುತ್ತೇನೆ; ಅವನು ಅದನ್ನು ಹಿಡಿಯುವನು; ಮತ್ತು ಯೆಹೂದದ
ಅರಸನಾದ ಚಿದ್ಕೀಯನು ಕಸ್ದೀಯರ ಕೈಗೆ ತಪ್ಪಿಸಿಕೊಳ್ಳದೆ,
ಬಾಬೆಲಿನ ಅರಸನ ಕೈಯಲ್ಲಿ ನಿಶ್ಚಯವಾಗಿ ಒಪ್ಪಿಸಲ್ಪಡುವನು,
ಬಾಯಿ ಬಾಯಿಯಾಗಿ ಅವನ ಸಂಗಡ ಮಾತಾಡುವನು, ಕಣ್ಣು
೫ ಕಣ್ಣಾಗಿ ಅವನನ್ನು ನೋಡುವನು; ಅವನು ಚಿದ್ಕೀಯನನ್ನು
ಬಾಬೆಲಿಗೆ ಬೈಯ್ಯುವನು, ನಾನು ಅವನನ್ನು ದರ್ಶಿಸುವ ಪ
ರ್ಯಂತರ ಅಲ್ಲೇ ಇರುವನೆಂಬದಾಗಿ ಕರ್ತನು ಅನ್ನುತ್ತಾನೆಂದು,

ಮತ್ತು ನೀವು ಕಸ್ದೀಯರ ಸಂಗಡ ಯುದ್ಧ ಮಾಡಿದಾಗ್ಯೂ ನಿ
ಮಗೆ ಸಫಲವಾಗುವದಿಲ್ಲವೆಂದು, ಯಾಕೆ ಪ್ರವಾದಿಸುತ್ತಿ? ಎಂದು
ಹೇಳಿ, ಅವನನ್ನು ಮುಚ್ಚಿ ಬಿಟ್ಟಿದ್ದನು.

೬ ಆಗ ಯೆರೆಮಿಾಯನು ಹೇಳಿದ್ದೇನಂದರೆ—ಕರ್ತನ ವಾಕ್ಯವು
೭ ನನಗೆ ಬಂತು, ಹ್ಯಾಗಂದರೆ—ಇಗೋ ನಿನ್ನ ಚಿಕ್ಕಪ್ಪನಾದ ಶ
ಲ್ಲೂಮನ ಮಗನಾದ ಹನಮೇಲನು ನಿನ್ನ ಬಳಿಗೆ ಬಂದು—ಅನ
ತೋಥಿನಲ್ಲಿರುವ ನನ್ನ ಹೊಲವನ್ನು ನಿನಗೋಸ್ಕರ ಕೊಂಡು
ಕೋ, ಯಾಕಂದರೆ ಅದನ್ನು ಕೊಂಡುಕೊಳ್ಳುವ ಹಾಗೆ ವಿಮೋ
ಚಿಸುವ ಅಧಿಕಾರ ನಿನಗುಂಟು, ಎಂದು ಹೇಳುವನು. ಹಾಗೆ ನನ್ನ
೮ ಚಿಕ್ಕಪ್ಪನ ಮಗನಾದ ಹನಮೇಲನು ಕರ್ತನ ವಾಕ್ಯದ ಪ್ರಕಾರ
ನನ್ನ ಬಳಿಗೆ ಕಾವಲಿಮನೆಯ ಅಂಗಳಕ್ಕೆ ಬಂದು—ಬೆನ್ಯಮಿನಾನ
ನ ದೇಶದಲ್ಲಿರುವ, ಅನತೋಥಿನಲ್ಲಿರುವ ನನ್ನ ಹೊಲವನ್ನು
ನಿನಗೋಸ್ಕರ ಕೊಂಡುಕೋ, ಅಪ್ಪಾ; ಯಾಕಂದರೆ ಬಾಧ್ಯದ
ಅಧಿಕಾರವು ನಿನ್ನದೂ, ವಿಮೋಚನೆಯೂ ನಿನ್ನದು; ಅದನ್ನು ನಿ
ನಗೋಸ್ಕರ ಕೊಂಡುಕೋ, ಎಂದು ಹೇಳಿದನು. ಆಗಲದು ಕರ್ತ
೯ ನ ವಾಕ್ಯವೆಂದು ತಿಳಿಕೊಂಡೆನು. ಹಾಗೆ ನಾನು ನನ್ನ ಚಿಕ್ಕಪ್ಪ
ನ ಮಗನಾದ ಹನಮೇಲನಿಂದ ಅನತೋಥಿನಲ್ಲಿದ್ದ ಹೊಲವನ್ನು
ಕೊಂಡುಕೊಂಡು, ಅವನಿಗೆ ಹದಿನೇಳು ಬೆಳ್ಳಿ ಬೇಕೆಲುಗಳನ್ನು
೧೦ ತೂಕ ಮಾಡಿ ಕ್ರಯ ಕೊಟ್ಟೆನು. ನಾನು ಪತ್ರವನ್ನು ಬರೆದು, ಅದ
ಕ್ಕೆ ಮುದ್ರೆ ಹಾಕಿ, ಸಾಕ್ಷಿಗಳನ್ನಿಟ್ಟು, ಬೆಳ್ಳಿಯನ್ನು ತ್ರಾಸಿನಲ್ಲಿ ತೂ
೧೧ ಕ ಮಾಡಿದೆನು. ಆಗ ನಾನು ಆಜ್ಞೆ, ನೇಮಗಳ ಪ್ರಕಾರ ಮುದ್ರೆ
ಹಾಕಿದ ಕ್ರಯ ಪತ್ರವನ್ನು, ತೆರೆದಿರುವದನ್ನು ಸಹ, ತಕ್ಕೊಂ
೧೨ ಡೆನು. ಮತ್ತು ಆ ಕ್ರಯ ಪತ್ರವನ್ನು ನನ್ನ ಚಿಕ್ಕಪ್ಪನ ಮಗನಾ
ದ ಹನಮೇಲನ ಮುಂದೆಯೂ, ಕ್ರಯ ಪತ್ರದಲ್ಲಿ ರುಜು ಹಾಕಿದ
ಸಾಕ್ಷಿಗಳ ಮುಂದೆಯೂ, ಕಾವಲಿ ಮನೆಯ ಅಂಗಳದಲ್ಲಿ ಕೂತು
ಕೊಂಡಿದ್ದ ಯೆಹೂದ್ಯರೆಲ್ಲರ ಮುಂದೆಯೂ, ಮಾಸೇಯನ ಮಗ
೧೩ ನಾದ ನೇರೀಯನ ಮಗನಾದ ಬಾರೂಕನಿಗೆ ಕೊಟ್ಟೆನು. ಮತ್ತು
೧೪ ಅವರ ಮುಂದೆ ನಾನ ಬಾರೂಕನಿಗೆ ಅಪ್ಪಣೆ ಕೊಟ್ಟೆದ್ದೇನಂದರೆ—
ಇಸ್ರಯೇಲನ ದೇವರಾದ ಸೈನ್ಯಗಳ ಕರ್ತನು ಹೀಗೆ ಹೇಳುತ್ತಾ
ನೆ—ಈ ಪತ್ರಗಳನ್ನು, ಮುದ್ರೆ ಹಾಕಿದ ಈ ಕ್ರಯ ಪತ್ರವನ್ನೂ,
ತೆರೆದಿರುವ ಈ ಪತ್ರವನ್ನೂ ತೆಗೆದು, ಅವು ಬಹಳ ದಿವಸವಿರು
೧೫ ವ ಹಾಗೆ ಒಂದು ಮಣ್ಣಿನ ಪಾತ್ರೆಯಲ್ಲಿ ಇಡು. ಯಾಕಂದರೆ ಇ
ಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು—ಈ ದೇಶದಲ್ಲಿ ಶಿರಿ
ಗಿ ಮನೆಗಳೂ, ಹೊಲಗಳೂ, ದ್ರಾಕ್ಷೆತೋಟಗಳೂ, ಕೊಂಡು
ಕೊಳ್ಳಲ್ಪಡುವವೆಂದು, ಹೇಳುತ್ತಾನೆ.

೧೬ ನಾನು ಆ ಕ್ರಯ ಪತ್ರವನ್ನು ನೇರೀಯನ ಮಗನಾದ ಬಾರೂಕ
ನಿಗೆ ಕೊಟ್ಟ ಮೇಲೆ ಕರ್ತನಿಗೆ ಪ್ರಾರ್ಥನೆ ಮಾಡಿದೆನು, ಹ್ಯಾಗಂ
೧೭ ದರೆ—ಅಯ್ಯ! ಕರ್ತನಾದ ಯೆಹೋವನೇ! ಇಗೋ ನೀನು ನಿನ್ನ ಮ
ಹಾ ಬಲದಿಂದಲೂ, ನಿನ್ನ ಚಾಚಿದ ಕೈಯಿಂದಲೂ, ಆಕಾಶವ
ನ್ನೂ ಭೂಮಿಯನ್ನೂ, ಉಂಟು ಮಾಡಿದ್ದೀ; ನಿನ್ನಿಂದಲಾಗದ
೧೮ ಕಾರ್ಯ ಒಂದು ಇಲ್ಲ; ನೀನು ಸಾವಿರಗಳಿಗೆ ಕೃಪೆ ತೋರಿಸಿ, ತಂ
ದೆಗಳ ಅಕ್ರಮವನ್ನೂ ಅವರ ತರುವಾಯವಿರುವ ಅವರ ಮಕ್ಕಳ
ಎದೆಯಲ್ಲಿ ಸಲ್ಲಿಸುವವನಾಗಿದ್ದೀ; ದೊಡ್ಡದೇವರು, ಪರಾಕ್ರಮವುಳ್ಳ
ವನೂ; ಅವನ ಹೆಸರು ಸೈನ್ಯಗಳ ಯೆಹೋವನೇ; ಆಲೋಚನೆ
೧೯ ಯಲ್ಲಿ ದೊಡ್ಡವನು, ಕ್ರಿಯೆಯಲ್ಲಿ ಬಲಿಷ್ಠನು; ನಿನ್ನ ಕಣ್ಣುಗಳು
ಮನುಷ್ಯರ ಮಕ್ಕಳ ಎಲ್ಲಾ ಮಾರ್ಗಗಳ ಮೇಲೆ, ಒಬ್ಬೊಬ್ಬನಿಗೆ
ಅವನವನ ಮಾರ್ಗದ ಪ್ರಕಾರವಾಗಿಯೂ, ಅವನವನ ಕ್ರಿಯೆಗ
೨೦ ಳ ಫಲದ ಪ್ರಕಾರವಾಗಿಯೂ, ಕೊಡುವ ಹಾಗೆ ತೆಕದಿಯೆ. ನೀನು ಈ
ದಿನದ ವರಿಗೂ, ಐಗುಪ್ತ ದೇಶದಲ್ಲಿಯೂ, ಇಸ್ರಯೇಲಿನಲ್ಲಿಯೂ;
ಮನುಷ್ಯಕೊಳ್ಳಗೂ, ಗುರುತುಗಳನ್ನೂ ಲಕ್ಷಣಗಳನ್ನೂ ಇಟ್ಟಿ
ದ್ದೀ; ಇಂದಿನ ಪ್ರಕಾರ ನಿನಗೆ ಹೆಸರನ್ನು ಉಂಟು ಮಾಡಿ ಕೊಂ
೨೧ ಡಿದ್ದೀ; ಮತ್ತು ನಿನ್ನ ಜನರಾದ ಇಸ್ರಯೇಲನ್ನು ಗುರುತುಗಳಿಂ
ದಲೂ, ಲಕ್ಷಣಗಳಿಂದಲೂ, ಬಲವಾದ ಕೈಯಿಂದಲೂ, ಚಾಚಿದ
ತೋಳಿನಿಂದಲೂ, ಮಹಾ ಭಯದಿಂದಲೂ, ಐಗುಪ್ತ ದೇಶದೊಳ
೨೨ ಗಿಂದ ಹೊರಗೆ ತಂದಿ; ಮತ್ತು ಅವರ ತಂದೆಗಳಿಗೆ ಕೊಡುತ್ತೇನೆಂ
ದು ಪ್ರಮಾಣ ಮಾಡಿದ ಹಾಲೂ ಜೇನೂ ಹರಿಯುವ ದೇಶವಾದ
೨೩ ಈ ದೇಶವನ್ನು ಅವರಿಗೆ ಕೊಟ್ಟಿ; ಮತ್ತು ಅವರು ಅದರಲ್ಲಿ ಕೈರಿ,
ಅದನ್ನು ಸ್ವತಂತ್ರಿಸಿಕೊಂಡರು; ಆದರೆ ಅವರು ನಿನ್ನ ಶಬ್ದಕ್ಕೆ
ಕಿವಿ ಕೊಡಲಿಲ್ಲ; ನಿನ್ನ ನ್ಯಾಯಪ್ರಮಾಣದಲ್ಲಿ ನಡಕೊಳ್ಳಲಿಲ್ಲ;
ಮಾಡ ಬೇಕೆಂದು ನೀನು ಅವರಿಗೆ ಆಜ್ಞಾಪಿಸಿದ್ದನ್ನೆಲ್ಲಾ ಮಾಡಲಿಲ್ಲ
೨೪ ಆದದರಿಂದ ಈ ಕೇಡನ್ನೆಲ್ಲಾ ಅವರಿಗೆ ಸಂಭವಿಸ ಮಾಡಿದ್ದೀ. ಇ
ಗೋ ಮೊಹರ್ಚೆಗಳು ಪಟ್ಟಣದ ಬಳಿಗೆ, ಅದನ್ನು ಹಿಡಿಯುವ ಹಾ
ಗೆ, ಬಂದವೆ; ಪಟ್ಟಣವು, ಅದಕ್ಕೆ ವಿರೋಧವಾಗಿ ಯುದ್ಧ ಮಾಡುವ
ಕಸ್ದೀಯರ ಕೈಯಲ್ಲಿ, ಕತ್ತಿ, ಬರ, ಜಾಡ್ಯಗಳ ಮೂಲವಾಗಿ, ಒಪ್ಪಿ
ಸಲ್ಪಟ್ಟಿದೆ; ನೀನು ಹೇಳಿದ್ದು ಉಂಟಾಯಿತು; ಇಗೋ ನೀನು ಅದ
೨೫ ನ್ನು ನೋಡುತ್ತೀ. ಆದರೂ ಓ ಕರ್ತನಾದ ಯೆಹೋವನೇ ನೀನು
ನನಗೆ—ಹೊಲವನ್ನು ಹಣಕ್ಕೆ ಕೊಂಡುಕೋ; ಮತ್ತು ಸಾಕ್ಷಿಗ
ಳನ್ನು ಇಡು, ಎಂದು ಹೇಳಿದ್ದೀ; ಆದಾಗ್ಯೂ ಪಟ್ಟಣವು ಕಸ್ದೀಯರ
ಕೈಯಲ್ಲಿ ಒಪ್ಪಿಸಲ್ಪಟ್ಟಿದೆಯಲ್ಲ!

೨೬ ಆಗ ಕರ್ತನ ವಾಕ್ಯವು ಯೆರೆಮಿಾಯನಿಗೆ ಉಂಟಾಗಿ ಹೇಳಿ
ದ್ದೇನಂದರೆ—ಇಗೋ ಸಮಸ್ತ ಮಾಂಸದ ದೇವರಾದ ಯೆಹೋವ
೨೭ ನು ನಾನೇ; ನನ್ನಿಂದಲಾಗದ ಕಾರ್ಯ ಒಂದು ಉಂಟೋ? ಆದರ
೨೮ ರಿಂದ ಯೆಹೋವನು ಹೇಳುವದೇನಂದರೆ—ಇಗೋ ನಾನು ಈ
ಪಟ್ಟಣವನ್ನು ಕಸ್ದೀಯರ ಕೈಯಲ್ಲಿಯೂ, ಬಾಬೆಲಿನ ಅರಸನಾದ ನೆ
ಬುಕದ್ನೆಚ್ಚರನ ಕೈಯಲ್ಲಿಯೂ, ಕೊಡುತ್ತೇನೆ; ಅವನು ಅದನ್ನು
೨೯ ಹಿಡಿಯುವನು. ಮತ್ತು ಈ ಪಟ್ಟಣಕ್ಕೆ ವಿರೋಧವಾಗಿ ಯುದ್ಧ ಮಾ
ಡುವ ಕಸ್ದೀಯರು ಬಂದು, ಈ ಪಟ್ಟಣಕ್ಕೆ ಬೆಂಕಿ ಹಚ್ಚಿ, ಅದನ್ನೂ,
ಮತ್ತು ಯಾವ ಮನೆಗಳ ಮಾಳಿಗೆಗಳ ಮೇಲೆ ಬಾಳನಿಗೆ ಧೂಪ
ವರ್ಪಿಸಿ, ನನಗೆ ಕಸಿಕಸಿ ಎಬ್ಬಿಸುವ ಹಾಗೆ, ಬೇರೆ ದೇವರುಗಳಿಗೆ
ಹೊಯಿಕೆಗಳನ್ನು ಹೊಯಿದಿದ್ದಾರೋ ಅವುಗಳನ್ನೂ, ಸುಟ್ಟು
೩೦ ಬಿಡುವರು. ಯಾಕಂದರೆ ಇಸ್ರಯೇಲನ ಮಕ್ಕಳೂ, ಯೆಹೂದ
ನ ಮಕ್ಕಳೂ, ತಮ್ಮ ಯೌವನದಾರಭ್ಯ ನನ್ನ ದೃಷ್ಟಿಯಲ್ಲಿ
ಕೆಟ್ಟದನ್ನು ಮಾತ್ರ ಮಾಡಿದ್ದಾರೆ; ನಿಶ್ಚಯವಾಗಿ ಇಸ್ರಯೇಲನ
ಮಕ್ಕಳು ತಮ್ಮ ಕೈಕ್ರಿಯೆಗಳಿಂದ ನನಗೆ ಕಸಿಕಸಿಯನ್ನು ಮಾ
೩೧ ತ್ರ ಎಬ್ಬಿಸಿದ್ದಾರೆ, ಎಂದು ಕರ್ತನು ಅನ್ನುತ್ತಾನೆ. ಈ ಪಟ್ಟಣವು, ಅ
ದು ಕಟ್ಟಲ್ಪಟ್ಟ ದಿನವು ಮೊದಲುಗೊಂಡು ಈ ದಿನದ ವರಿಗೂ, ನ
೩೨ ನ್ನ ಕೋಪಕ್ಕೂ, ನನ್ನ ಉಗ್ರಕ್ಕೂ, ಗುರಿಯಾಗಿತ್ತು. ಇಸ್ರ
ಯೇಲನ ಮಕ್ಕಳೂ, ಯೆಹೂದನ ಮಕ್ಕಳೂ, ಅವರೂ, ಅವರ
ಅರಸರೂ, ಅವರ ಪ್ರಧಾನರೂ, ಅವರ ಯಾಜಕರೂ, ಅವರ
ಪ್ರವಾದಿಗಳೂ, ಯೆಹೂದದ ಜನರೂ, ಯೆರೂಸಲೇಮಿನ ನಿವಾಸಿ



ಗಳೂ ಸಹಿತವಾಗಿ, ನನಗೆ ಕಸಿಕಸಿ ಎಬ್ಬಿಸುವ ಹಾಗೆ ಮಾಡಿದ
ಎಲ್ಲಾ ಕೆಟ್ಟತನದ ನಿಮಿತ್ತ ನಾನು ಆ ಪಟ್ಟಣವನ್ನು ನನ್ನ ಸನ್ನಿಧಿ
೩೩ ಯಿಂದ ತೆಗೆದು ಹಾಕ ಬೇಕು. ಅವರು ನನಗೆ ಮುಖವನ್ನಲ್ಲ, ಪೆ
ನ್ನನ್ನು ತಿರುಗಿಸಿದ್ದಾರೆ; ಆದರೂ ನಾನು ಅವರಿಗೆ ಬೋಧಿಸಿದೆನು,
ಬೆಳ್ಳಗ್ಯೆ ಎದ್ದು, ಬೋಧಿಸಿದೆನು; ಆದಾಗ್ಯೂ ಉಪದೇಶ ಹೊಂದುವ
೩೪ ದಕ್ಕೆ ಅವರು ಕಿವಿ ಕೊಡಲಿಲ್ಲ. ಆದರೆ ನನ್ನ ಹೆಸರಿನಿಂದ ಕರೆಯ
ಲ್ಪಟ್ಟಿರುವ ಮನೆಯಲ್ಲಿ, ಅದನ್ನು ಅಪವಿತ್ರ ಮಾಡುವ ಹಾಗೆ, ತ
೩೫ ಮ್ಮ ಅಸಹ್ಯಗಳನ್ನು ಇಟ್ಟಿದ್ದಾರೆ. ಮತ್ತು ತಮ್ಮ ಕುಮಾರ ಕು
ಮಾರ್ತೆಗಳನ್ನು ಮೋಲೆಕನಿಗೆ ಬೆಂಕಿ ದಾಟಿಸುವ ಹಾಗೆ ಹಿನ್ನೊಳ
ಮನ ಮಗನ ಉನ್ನತ ಸ್ಥಳಗಳನ್ನು ಕಟ್ಟಿಸಿದ್ದಾರೆ; ಅದನ್ನು ನಾ
ನು ಅವರಿಗೆ ಆಜ್ಞಾಪಿಸಲಿಲ್ಲ; ಅಂಥಾ ಅಸಹ್ಯ ನಡಿಸಿ, ಯೆಹೂದ
ವನ್ನು ಪಾಪ ಮಾಡಿಸುವದು, ನನ್ನ ಮನಸ್ಸಿಗೆ ಬರಲಿಲ್ಲ.

೩೬ ಹೀಗಾದರೂ, ಈಗ ಅದು ಕತ್ತಿಯಿಂದಲೂ, ಬರದಿಂದಲೂ,
ಜಾಡ್ಯದಿಂದಲೂ, ಬಾಬೆಲಿನ ಅರಸನ ಕೈಯಲ್ಲಿ ಒಪ್ಪಿಸಲ್ಪಟ್ಟುವದೆಂ
ದು ನೀವು ಹೇಳುವ ಈ ಪಟ್ಟಣದ ವಿಷಯ, ಇಸ್ರಯೇಲಿನ ದೇವರಾ
೩೭ ದ ಕರ್ತನು ಹೇಳುವದೇನಂದರೆ—ಇಗೋ, ನಾನು, ನನ್ನ ಕೋಪ
ದಲ್ಲಿಯೂ, ನನ್ನ ಉಗ್ರದಲ್ಲಿಯೂ, ಮಹಾ ಕಾದ್ರದಲ್ಲಿಯೂ,
ಅವರನ್ನು ಓಡಿಸಿ ಬಿಟ್ಟ ಸಮಸ್ತ ದೇಶಗಳೊಳಗಿಂದ ಅವರನ್ನು
ಕೂಡಿಸಿ, ಈ ಸ್ಥಳಕ್ಕೆ ತಿರಿಗಿ ತಂದು, ಭದ್ರವಾಗಿ ವಾಸಿಸ ಮಾಡು
೩೮ ವೆನು. ಮತ್ತು ಅವರು ನನಗೆ ಜನರಾಗಿರುವರು; ನಾನು ಅವರಿಗೆ
೩೯ ದೇವರಾಗಿರುವೆನು. ಮತ್ತು ಅವರಿಗೂ, ಅವರ ತರುವಾಯ ಅವ
ರ ಮಕ್ಕಳಿಗೂ, ಬಗ್ಗೇದಕ್ಕಾಗಿ, ಅವರು ಯಾವಾಗಲೂ ನನಗೆ
ಭಯ ಪಡುವ ಹಾಗೆ, ಅವರಿಗೆ ಒಂದೇ ಹೃದಯವನ್ನೂ, ಒಂದೇ
೪೦ ಮಾರ್ಗವನ್ನೂ, ಕೊಡುವೆನು. ಮತ್ತು ಅವರಿಗೆ ಬಗ್ಗೇದನ್ನು
ಮಾಡುವ ಹಾಗೆ ನಾನು ತಿರುಗಿಸಿ ಬಿಡೆನೆಂಬುವ ಹೊಸ ಒಡಂಬಡಿ
ಕೆಯನ್ನು ಅವರ ಸಂಗಡ ಮಾಡುತ್ತೇನೆ; ಮತ್ತು ಅವರು ನನ್ನ
ನ್ನು ಬಿಡದ ಹಾಗೆ ನನ್ನ ಭಯವನ್ನು ಅವರ ಹೃದಯಗಳಲ್ಲಿ ಇ
೪೧ ಡುತ್ತೇನೆ. ಹೌದು, ಅವರಿಗೆ ಬಗ್ಗೇದನ್ನು ಮಾಡುವದಕ್ಕೆ ಅವರ
ಮೇಲೆ ಆನಂದ ಪಡುವೆನು; ನಿಜವಾಗಿ, ನನ್ನ ಪೂರ್ಣ ಹೃದಯ
ದಿಂದಲೂ, ನನ್ನ ಪೂರ್ಣ ಪ್ರಾಣದಿಂದಲೂ, ಅವರನ್ನು ಈ ದೇ
ಶದಲ್ಲಿ ನೆಡುತ್ತೇನೆ.

೪೨ ಯಾಕಂದರೆ ಕರ್ತನು ಹೀಗೆ ಹೇಳುತ್ತಾನೆ—ನಾನು ಹ್ಯಾಗೆ
ಈ ಜನರ ಮೇಲೆ ದೊಡ್ಡ ಕೇಡನ್ನು ಬರ ಮಾಡಿದೆನೋ, ಹಾಗೆ
ಯೇ ನಾನು ಅವರಿಗೆ ಹೇಳಿದ ಮೇಲನ್ನೆಲ್ಲಾ ಅವರ ಮೇಲೆ ಬರ
೪೩ ಮಾಡುವೆನು. ಮತ್ತು ಯಾವದರ ವಿಷಯ—ಅದು ಮನುಷ್ಯ
ರೂ ಪಶುಗಳೂ ಇಲ್ಲದೆ ಹಾಳಾಯಿತು, ಕಸ್ದೀಯರ ಕೈಯಲ್ಲಿ ಒ
ಪ್ಪಿಸಲ್ಪಟ್ಟಿದೆ, ಎಂದು ನೀವು ಹೇಳುತ್ತೀರೋ, ಆ ದೇಶದಲ್ಲಿ ಇನ್ನು
೪೪ ಹೊಲಗಳು ಕೊಂಡು ಕೊಳ್ಳಲ್ಪಡುವವು. ಬೆನ್ಯಮಿನನ ದೇಶದ
ಲ್ಲಿಯೂ, ಯೆರೂಸಲೇಮಿನ ಪ್ರದೇಶಗಳಲ್ಲಿಯೂ, ಯೆಹೂದದ
ಪಟ್ಟಣಗಳಲ್ಲಿಯೂ, ಬೆಟ್ಟದ ಪಟ್ಟಣಗಳಲ್ಲಿಯೂ, ತಗ್ಗಿನ ಪಟ್ಟಣಗಳ
ಲ್ಲಿಯೂ, ದಕ್ಷಿಣದ ಪಟ್ಟಣಗಳಲ್ಲಿಯೂ, ಹೊಲಗಳನ್ನು ಹಣಕ್ಕೆ
ಕೊಂಡು ಕೊಂಡು, ಪತ್ರಗಳನ್ನು ಬರೆದು, ಮುದ್ರೆ ಹಾಕಿ, ಸಾಕ್ಷಿ
ಗಳನ್ನು ಇಟ್ಟುಕೊಳ್ಳುವರು; ಯಾಕಂದರೆ ನಾನು ಅವರ ಕೆಳ
ಯನ್ನು ತಿರುಗಿಸುವೆನೆಂದು, ಕರ್ತನು ಅನ್ನುತ್ತಾನೆ.

## ೩೩. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ಯೆರೆಮಿಾಯನಿಗೆ, ಅವನು ಇ
ನ್ನು ಕಾವಲಿಮನೆಯ ಅಂಗಳದಲ್ಲಿ ಮುಚ್ಚಲ್ಪಟ್ಟಿರುವಾಗ, ಎರಡ
೨ ನೇ ಸಾರಿ ಉಂಟಾಯಿತು. ಹ್ಯಾಗಂದರೆ—
ಅದನ್ನು ಮಾಡುವ ಕರ್ತನೂ,
ಅದನ್ನು ಸ್ಥಾಪಿಸುವದಕ್ಕೆ ಅದನ್ನು ರೂಪಿಸುವ ಕರ್ತನೂ,
ಯೆಹೋವನೆಂಬ ಹೆಸರುಳ್ಳವನೂ, ಹೇಳುವದೇನಂದರೆ—
೩ ನನ್ನನ್ನು ಕರೆ; ಆಗ ನಿನಗೆ ಉತ್ತರ ಕೊಡುವೆನು;
ನಿನಗೆ ತಿಳಿಯದ ದೊಡ್ಡ ಮರೆಯಾದ ಕಾರ್ಯಗಳನ್ನು ನಿನಗೆ
ತಿಳಿಸುವೆನು.
೪ ಯಾಕಂದರೆ, ಮೋಹರ್ಚೆಗಳಿಂದಲೂ, ಕತ್ತಿಯಿಂದಲೂ,
ಕೆಡವಿ ಹಾಕಲ್ಪಟ್ಟ ಈ ಪಟ್ಟಣದ ಮನೆಗಳ ವಿಷಯವೂ,
ಯೆಹೂದದ ಅರಸನ ಮನೆಗಳ ವಿಷಯವೂ,
ಇಸ್ರಯೇಲಿನ ದೇವರಾದ ಕರ್ತನು ಹೀಗೆ ಹೇಳುತ್ತಾನೆ—
೫ ಅವರು ಕಸ್ದೀಯರ ಸಂಗಡ ಯುದ್ಧ ಮಾಡುವದಕ್ಕೂ,
ನಾನು ನನ್ನ ಕೋಪದಲ್ಲಿಯೂ, ನನ್ನ ಉರಿಯಲ್ಲಿಯೂ,
ಕೊಂದು ಹಾಕಿದ ಮನುಷ್ಯರ ಹೆಣಗಳಿಂದ
ಅವುಗಳನ್ನು ತುಂಬಿಸುವದಕ್ಕೂ, ಬರುತ್ತಾನೆ;
ಯಾಕಂದರೆ ನಾನು ಈ ಪಟ್ಟಣಕ್ಕೆ ವಿರೋಧವಾಗಿ,
ಅವರ ಸಮಸ್ತ ಕೆಟ್ಟತನದ ನಿಮಿತ್ತ,
ನನ್ನ ಮುಖವನ್ನು ಮರೆ ಮಾಡಿದ್ದೇನೆ.
೬ ಇಗೋ, ನಾನು ಅದಕ್ಕೆ ಹೇಮವನ್ನೂ ಗುಣವನ್ನೂ ಹುಟ್ಟಿಸಿ,
ಅವರನ್ನು ಗುಣ ಮಾಡಿ,
ಸಮಾಧಾನದ ಸತ್ಯದ ಬಾಹುಳ್ಯವನ್ನು
ಅವರಿಗೆ ಪ್ರಕಟಿ ಮಾಡುವೆನು.
೭ ಮತ್ತು ಯೆಹೂದದ ಕೆಡೆಯನ್ನೂ,
ಇಸ್ರಯೇಲಿನ ಕೆಡೆಯನ್ನೂ ತಿರುಗಿಸಿ,
ಅವರನ್ನು ಮುಂಚಿನ ಹಾಗೆ ಕಟ್ಟುವೆನು.
೮ ಮತ್ತು ಅವರು ಯಾವದರಿಂದ ನನಗೆ ವಿರೋಧವಾಗಿ ಪಾಪ
ಮಾಡಿದರೋ,
ಆ ಅಕ್ರಮದಿಂದೆಲ್ಲಾ ಅವರನ್ನು ಶುದ್ಧ ಮಾಡುವೆನು;
ಅವರು ಯಾವುಗಳಿಂದ ನನಗೆ ವಿರೋಧವಾಗಿ ಪಾಪ ಮಾಡಿ,
ನನ್ನ ವಿಷಯ ದ್ರೋಹಿಗಳಾಗಿದ್ದರೋ,
ಆ ಅಕ್ರಮಗಳನ್ನೆಲ್ಲಾ ಮನ್ನಿಸುವೆನು.
೯ ಮತ್ತು ಅದು ನನಗೆ ಆನಂದದ ಹೆಸರೂ,
ನಾನು ಅವರಿಗೆ ಮಾಡುವ ಬಗ್ಗೇದನ್ನೆಲ್ಲಾ ಕೇಳುವ
ಭೂಮಿಯಲ್ಲಿರುವ ಎಲ್ಲಾ ಜನಾಂಗಗಳ ಮುಂದೆ,
ಸ್ತೋತ್ರವೂ, ಮಹಿಮೆಯೂ, ಆಗುವದು;
ಮತ್ತು ನಾನು ಅದಕ್ಕೆ ಉಂಟು ಮಾಡುವ
ಎಲ್ಲಾ ಮೇಲನ್ನೂ ಎಲ್ಲಾ ಸಾಖ್ಯವನ್ನೂ ಕುರಿತು,
ಹೆದರಿ, ನಡುಗುವರು.
೧೦ ಕರ್ತನು ಹೇಳುವದೇನಂದರೆ—
ಮನುಷ್ಯರೂ ಪಶುಗಳೂ ಇಲ್ಲದೆ,
ಹಾಳಾಯಿತೆಂದು, ನೀವು ಹೇಳುವ ಈ ಸ್ಥಳದಲ್ಲಿಯೂ,
ಮನುಷ್ಯರೂ, ನಿವಾಸಿಗಳೂ ಪಶುಗಳೂ, ಇಲ್ಲದೆ

ನಾನಾನವಾದ ಯೆಹೂದದ ಪಟ್ಟಣಗಳಲ್ಲಿಯೂ,
ಯೆರೂಸಲೇಮಿನ ಬೀದಿಗಳಲ್ಲಿಯೂ,
೧೧ ಇನ್ನು ಮೇಲೆ ಆನಂದದ ಶಬ್ದವೂ, ಸಂತೋಷದ ಶಬ್ದವೂ,
ಮದಲಿಂಗನ ಶಬ್ದವೂ, ಮದಲಗಿತ್ತಿಯ ಶಬ್ದವೂ—
ಸೈನ್ಯಗಳ ಕರ್ತನನ್ನು ಕೊಂಡಾಡಿರಿ;
ಯಾಕಂದರೆ, ಕರ್ತನು ಒಳ್ಳೇಯವನೇ;
ಯಾಕಂದರೆ, ಅವನ ಕೃಪೆ ನಿರಂತರವೇ—ಎಂದು ಹೇಳಿ,
ಸ್ತೋತ್ರದ ಕಾಣಿಕೆಯನ್ನು ಕರ್ತನ ಮನೆಗೆ ತರುವವರ ಶಬ್ದವೂ,
ಕೇಳಲ್ಪಡುವದು;
ಯಾಕಂದರೆ ನಾನು ಮುಂಚಿನ ಹಾಗೆ ದೇಶದ ಕೆಡೆಯನ್ನು ತಿರುಗಿಸುತ್ತೇನೆಂದು,
ಕರ್ತನು ಹೇಳುತ್ತಾನೆ.
೧೨ ಸೈನ್ಯಗಳ ಕರ್ತನು ಹೇಳುವದೇನಂದರೆ—
ಮನುಷ್ಯರೂ, ಪಶುಗಳೂ ಇಲ್ಲದೆ, ಹಾಳಾದ ಈ ಸ್ಥಳದಲ್ಲಿಯೂ,
ಅದರ ಎಲ್ಲಾ ಪಟ್ಟಣಗಳಲ್ಲಿಯೂ,
ಇನ್ನು ಮೇಲೆ ತಮ್ಮ ಮಂದೆಗಳನ್ನು ಮಲಗಿಸುವ
ಕುರುಬರ ನಿವಾಸಗಳೂ ಇರುವವು.
೧೩ ಬೆಟ್ಟದ ಪಟ್ಟಣಗಳಲ್ಲಿಯೂ, ತಗ್ಗಿನ ಪಟ್ಟಣಗಳಲ್ಲಿಯೂ,
ದಕ್ಷಿಣದ ಪಟ್ಟಣಗಳಲ್ಲಿಯೂ, ಬೆನ್ಯಮಿನಾನ ದೇಶದಲ್ಲಿಯೂ,
ಯೆರೂಸಲೇಮಿನ ಪ್ರದೇಶಗಳಲ್ಲಿಯೂ, ಯೆಹೂದದ ಪಟ್ಟಣಗಳಲ್ಲಿಯೂ,
ಇನ್ನು ಮೇಲೆ ಕುರಿಗಳು,
ಎಣಿಸುವವನ ಕೈಕೆಳಗೆ ಹಾದು ಹೋಗುವವೆಂದು,
ಕರ್ತನು ಹೇಳುತ್ತಾನೆ.

೧೪ ಇಗೋ, ದಿನಗಳು ಬರುವವೆಂದು, ಕರ್ತನು ಅನ್ನುತ್ತಾನೆ;
ಆಗ ನಾನು ಇಸ್ರಯೇಲನ ಮನೆಯವರ ಸಂಗಡಲೂ,
ಯೆಹೂದನ ಮನೆಯವರ ಸಂಗಡಲೂ,
ಆಡಿದ ಒಳ್ಳೇ ಮಾತನ್ನು ಸ್ಥಾಪಿಸುವೆನು.
೧೫ ಆ ದಿನಗಳಲ್ಲಿಯೂ, ಆ ಕಾಲದಲ್ಲಿಯೂ,
ನಾನು ದಾವೀದನಿಗೆ ನೀತಿಯುಳ್ಳ ಚಿಗುರನ್ನು ಚಿಗುರ ಮಾಡುವೆನು;
ಅವನು ದೇಶದಲ್ಲಿ ನ್ಯಾಯವನ್ನೂ ನೀತಿಯನ್ನೂ ನಡಿಸುವನು.
೧೬ ಆ ದಿನಗಳಲ್ಲಿ ಯೆಹೂದವು ರಕ್ಷಿಸಲ್ಪಡುವದು;
ಯೆರೂಸಲೇಮು ಭದ್ರವಾಗಿ ವಾಸಿಸುವದು;
ಅವನು ಕರೆಯಲ್ಪಡುವ ಹೆಸರು ಇದೇ—
ಯೆಹೋವ ನಮ್ಮ ನೀತಿಯೇ.
೧೭ ಯಾಕಂದರೆ ಕರ್ತನು ಹೀಗೆ ಹೇಳುತ್ತಾನೆ—
ದಾವೀದನಿಗೆ ಇಸ್ರಯೇಲನ ಮನೆಯ ಸಿಂಹಾಸನದಲ್ಲಿ ಕೂತುಕೊಳ್ಳುವ ಮನುಷ್ಯನು
ಇಲ್ಲದೆ ಹೋಗುವದಿಲ್ಲ.
೧೮ ಮತ್ತು ಯಾಜಕರಿಗೂ, ಲೇವ್ಯರಿಗೂ,
ನನ್ನ ಮುಂದೆ ದಿನದಿನಕ್ಕೆ ಹೋಮಗಳನ್ನು ಅರ್ಪಿಸಿ,
ಕಾಣಿಕೆಗಳನ್ನು ಸುಟ್ಟು, ಬಲಿಗಳನ್ನು ಇಡುವ ಮನುಷ್ಯನು
ಇಲ್ಲದೆ ಹೋಗುವದಿಲ್ಲ.
೧೯ ಇದಲ್ಲದೆ ಕರ್ತನ ವಾಕ್ಯವು ಯೆರೆಮಿಾಯನಿಗೆ ಉಂಟಾಗಿ,
ಹೇಳಿದ್ದೇನಂದರೆ—
ಕರ್ತನು ಹೀಗೆ ಹೇಳುತ್ತಾನೆ—
೨೦ ಹಗಲು ರಾತ್ರಿ ತಮ್ಮ ಕಾಲದಲ್ಲಿ ಆಗದ ಹಾಗೆ,
ಹಗಲಿನ ಸಂಗಡ ನನ್ನ ಒಡಂಬಡಿಕೆಯನ್ನೂ,
ರಾತ್ರಿಯ ಸಂಗಡ ನನ್ನ ಒಡಂಬಡಿಕೆಯನ್ನೂ,
ಮೀರುವದಕ್ಕೆ ನಿಮ್ಮಿಂದಾದರೆ,
೨೧ ಆಗ ನಾನು ನನ್ನ ಸೇವಕನಾದ ದಾವೀದನ ಸಂಗಡ ಮಾಡಿದ
ಒಡಂಬಡಿಕೆಯನ್ನೂ,
ಅವನ ಸಿಂಹಾಸನದಲ್ಲಿ ಆಳುವ ಮಗನು ಅವನಿಗಿಲ್ಲದ ಹಾಗೆ,
ಮತ್ತು ನನ್ನ ಸೇವಕರಾಗಿರುವ ಯಾಜಕರಾದ ಲೇವ್ಯರ ಸಂಗಡ ಮಾಡಿದ ಒಡಂಬಡಿಕೆಯನ್ನೂ,
ಮೀರುವದಕ್ಕೆ ಅದೀತು.
೨೨ ಆಕಾಶದ ಸೈನ್ಯವನ್ನು ಹ್ಯಾಗೆ ಎಣಿಸ ಕೂಡದೋ,
ಸಮುದ್ರದ ಮರಳನ್ನು ಹ್ಯಾಗೆ ಅಳಿಯ ಕೂಡದೋ,
ಹಾಗೆಯೇ ನಾನು ನನ್ನ ಸೇವಕನಾದ ದಾವೀದನ ಸಂತಾನವನ್ನೂ,
ನನಗೆ ಸೇವೆ ಮಾಡುವ ಲೇವ್ಯರನ್ನೂ, ಹೆಚ್ಚಿಸುವೆನು.

೨೩ ಇದಲ್ಲದೆ ಕರ್ತನ ವಾಕ್ಯವು ಯೆರೆಮಿಾಯನಿಗೆ ಉಂಟಾಗಿ,
ಹೇಳಿದ್ದೇನಂದರೆ—
೨೪ ಈ ಜನರು ಮಾತಾಡುವದನ್ನು ನೀನು ನೋಡಲಿಲ್ಲವೋ!
ಕರ್ತನು ಆದುಕೊಂಡ ಎರಡು ಗೋತ್ರಗಳನ್ನು ಬೇಡಂದಿದ್ದಾನೆಂದು ಹೇಳಿ,
ನನ್ನ ಜನರನ್ನು, ಇನ್ನು ಅವರ ಮುಂದೆ ಜನಾಂಗವಲ್ಲದ ಹಾಗೆ,
ಅಸಂಹಿಸಿದ್ದಾರೆ.
೨೫ ಕರ್ತನು ಹೇಳುವದೇನಂದರೆ—
ನನ್ನ ಒಡಂಬಡಿಕೆ ಹಗಲು ರಾತ್ರಿಯ ಸಂಗಡ ಇಲ್ಲದಿದ್ದರೆ,
೨೬ ಭೂಮ್ಯಾಕಾಶಗಳ ನೇಮಗಳನ್ನು ನಾನು ಸ್ಥಾಪಿಸದಿದ್ದರೆ—
ಆಗ ಯಾಕೋಬನ ಸಂತಾನವನ್ನೂ,
ನನ್ನ ಸೇವಕನಾದ ದಾವೀದನನ್ನೂ ಸಹ, ಬೇಡಂದು ಬಿಟ್ಟು,
ಅವನ ಸಂತಾನದಿಂದ,
ಅಬ್ರಹಾಮನ ಇಸಾಕನ ಯಾಕೋಬನ ಸಂತಾನದ ಮೇಲೆ ಆಳುವವರನ್ನು,
ತಕ್ಕೊಳ್ಳದೆ ಇದ್ದೇನು;
ಆದರೆ ನಾನು ಅವರ ಕೆಡೆಯನ್ನು ತಿರುಗಿಸಿ, ಅವರನ್ನು ಕರುಣಿಸುವೆನು.

## ೩೪. ಸಂಧಿ.

೧ ಬಾಬೆಲಿನ ಅರಸನಾದ ನೆಬುಕದ್ನೆಚ್ಚರನೂ, ಅವನ ಸೈನ್ಯವೆಲ್ಲವೂ, ಅವನ ಕೈ ಕೆಳಗಿರುವ ಎಲ್ಲಾ ಭೂರಾಜ್ಯಗಳೂ, ಎಲ್ಲಾ ಜನಾಂಗಗಳೂ, ಯೆರೂಸಲೇಮಿಗೂ, ಅದರ ಎಲ್ಲಾ ಪಟ್ಟಣಗಳಿಗೂ ವಿರೋಧವಾಗಿ, ಯುದ್ಧ ಮಾಡುವಾಗ, ಕರ್ತನಿಂದ ಯೆರೆಮಿಾಯನಿಗೆ ಉಂಟಾದ ವಾಕ್ಯವೇನಂದರೆ—
೨ ಇಸ್ರಯೇಲಿನ ದೇವರಾದ ಕರ್ತನು ಹೀಗೆ ಹೇಳುತ್ತಾನೆ—ನೀನು ಹೋಗಿ, ಯೆಹೂದದ ಅರಸನಾದ ಚಿದ್ಕೀಯನ ಸಂಗಡ ಮಾತಾಡಿ, ಅವನಿಗೆ ಹೇಳ ತಕ್ಕದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ಇಗೋ, ನಾನು ಈ ಪಟ್ಟಣವನ್ನು ಬಾಬೆಲಿನ ಅರಸನ ಕೈಯಲ್ಲಿ ಒಪ್ಪಿಸುತ್ತೇನೆ; ಅವನು ಅದನ್ನು ಬೆಂಕಿಯಿಂದ ಸುಡುವನು.
೩ ಮತ್ತು ನೀನು ಅವನ ಕೈಯೊಳಗಿಂದ ತಪ್ಪಿಸಿಕೊಳ್ಳುವದಿಲ್ಲ; ನಿಶ್ಚಯವಾಗಿ ಹಿಡಿಯಲ್ಪಟ್ಟು, ಅವನ ಕೈಯಲ್ಲಿ ಒಪ್ಪಿಸಲ್ಪಡುವಿ; ಮತ್ತು ನಿನ್ನ ಕಣ್ಣುಗಳು ಬಾಬೆಲಿನ ಅರಸನ ಕಣ್ಣುಗಳನ್ನು ನೋಡುವವು. ಮತ್ತು ಅವನ ಬಾಯಿ ನಿನ್ನ ಬಾಯಿಯ ಸಂಗಡ ಮಾತಾಡುವದು; ಮತ್ತು ಬಾಬೆಲಿಗೆ ಹೋಗುವಿ. ಆದಾಗ್ಯೂ ಯೆಹೂದದ ಅರಸನಾದ ಚಿದ್ಕೀಯನೇ, ಕರ್ತನ ವಾಕ್ಯವನ್ನು ಕೇಳು. ಕರ್ತನು ನಿನ್ನನ್ನು ಕುರಿತು ಹೇಳುವದೇನಂದರೆ—ನೀನು
೪ ಕತ್ತಿಯಿಂದ ಸಾಯುವದಿಲ್ಲ. ಸಮಾಧಾನದಲ್ಲಿ ಸಾಯುವಿ; ಮತ್ತು ಹಿಂದೆ ಇದ್ದ ಪೂರ್ವದ ಅರಸರಾದ ನಿನ್ನ ತಂದೆಗಳಿಗೋಸ್ಕರ ಸುಗಂಧಗಳನ್ನು ಸುಟ್ಟಿ ಪ್ರಕಾರ, ನಿನಗೋಸ್ಕರ ಸುಡುವರು; ಅಯ್ಯೋ, ಸ್ವಾಮಿ! ಎಂಥೇಳಿ, ನಿನಗೋಸ್ಕರ ಗೋಳಾಡುವರು; ಯಾಕಂದರೆ ನಾನೇ ವಾಕ್ಯವನ್ನು ಹೇಳಿದ್ದೇನೆಂದು, ಕರ್ತನು ಅನ್ನುತ್ತಾನೆ.
೫ ಆಗ ಪ್ರವಾದಿಯಾದ ಯೆರೆಮಿಾಯನು ಈ ವಾಕ್ಯಗಳನ್ನೆಲ್ಲಾ ಯೆರೂಸಲೇಮಿನಲ್ಲಿ ಯೆಹೂದದ ಅರಸನಾದ ಚಿದ್ಕೀಯನಿಗೆ ಹೇಳಿದನು. ಬಾಬೆಲಿನ ಅರಸನ ಸೈನ್ಯವು, ಯೆರೂಸಲೇಮಿಗೂ, ಯೆಹೂದದಲ್ಲಿ ಮಿಕ್ಕ ಸಮಸ್ತ ಪಟ್ಟಣಗಳಿಗೂ, ಅಂದರೆ, ಲಾಕಿಷಿಗೂ ಅಜೇಕಕ್ಕೂ ವಿರೋಧವಾಗಿ, ಯುದ್ಧ ಮಾಡಿದಾಗ ಶೇ. ಯಾಕಂದರೆ ಯೆಹೂದದ ಪಟ್ಟಣಗಳಲ್ಲಿ ಈ ಕೋಟೆಯುಳ್ಳ ಪಟ್ಟಣಗಳು ನಿಂತಿದ್ದವು.
೬ ಅರಸನಾದ ಚಿದ್ಕೀಯನು ಯೆರೂಸಲೇಮಿನಲ್ಲಿದ್ದ ಎಲ್ಲಾ ಜನರ ಸಂಗಡ ಒಡಂಬಡಿಕೆ ಮಾಡಿ, ಒಬ್ಬೊಬ್ಬನು ತನ್ನ ತನ್ನ ದಾಸನನ್ನೂ, ಒಬ್ಬೊಬ್ಬನು ತನ್ನ ತನ್ನ ದಾಸಿಯನ್ನೂ, ಅವರು ಇಬ್ರೀಯನಾಗಲಿ ಇಬ್ರೀಯಳಾಗಲಿ ಇದ್ದರೆ, ಸ್ವತಂತ್ರರಾಗಿ ಕಳುಹಿಸ ಬೇಕೆಂದು, ಒಬ್ಬನಾದರೂ ಅವರಿಂದ, ಅಂದರೆ, ತನ್ನ ಸಹೋದರನಾದ ಯೆಹೂದ್ಯನಿಂದ, ಸೇವೆ ತಕ್ಕೊಳ್ಳ ಬೇಡವೆಂದು,
೭ ಅವರಿಗೆ ಬಿಡುಗಡೆಯನ್ನು ಸಾರಿದ ಮೇಲೆ, ಯೆರೆಮಿಾಯನಿಗೆ ಕರ್ತನಿಂದ ಉಂಟಾದ ವಾಕ್ಯವು. ಆಗ ಒಡಂಬಡಿಕೆಯಲ್ಲಿ ಕೇರಿದ ಪ್ರಧಾನರೆಲ್ಲರೂ, ಜನರೆಲ್ಲರೂ, ಒಬ್ಬೊಬ್ಬನು ತನ್ನ ತನ್ನ ದಾಸನನ್ನೂ, ತನ್ನ ತನ್ನ ದಾಸಿಯನ್ನೂ, ಬಿಡುಗಡೆಯಾಗಿ ಕಳುಹಿಸ ಬೇಕೆಂದು, ಅವರಿಂದ ಸೇವೆ ತಕ್ಕೊಳ್ಳ ಬೇಡವೆಂದು, ಕೇಳಿದ
೮ ಮೇಲೆ, ವಿಧೇಯರಾಗಿದ್ದು, ಕಳುಹಿಸಿ ಬಿಟ್ಟರು. ಆದರೆ ತರುವಾಯ ತಿರುಗಿ ಕೊಂಡು, ತಾವು ಬಿಡುಗಡೆಯಾಗಿ ಕಳುಹಿಸಿ ಬಿಟ್ಟಿದ್ದ ದಾಸರನ್ನು, ದಾಸಿಯರನ್ನು, ತಿರಿಗಿ ಬರ ಮಾಡಿ, ಅವರನ್ನು ದಾಸರಾಗಿಯೂ ದಾಸಿಯರಾಗಿಯೂ ವಶ ಮಾಡಿ ಕೊಂಡರು.
೯ ಆದರಿಂದ ಕರ್ತನ ವಾಕ್ಯವು ಯೆರೆಮಿಾಯನಿಗೆ ಕರ್ತನಿಂದ ಉಂ
೧೦ ಟಾಗಿ, ಹೇಳಿದ್ದೇನಂದರೆ—ಇಸ್ರಯೇಲಿನ ದೇವರಾದ ಕರ್ತನು ಹೀಗೆ ಹೇಳುತ್ತಾನೆ—ನಾನು ನಿಮ್ಮ ತಂದೆಗಳನ್ನು ಐಗುಪ್ತ ದೇಶದೊಳಗಿಂದ, ದಾಸರ ಮನೆಯೊಳಗಿಂದ, ಹೊರಗೆ ತಂದ ದಿವಸದಲ್ಲಿ,
೧೧ ಅವರ ಸಂಗಡ ಒಡಂಬಡಿಕೆ ಮಾಡಿ, ಏಳು ವರುಷಗಳ ಕಡೆಯಲ್ಲಿ, ಒಬ್ಬೊಬ್ಬನು, ತನಗೆ ಮಾರಲ್ಪಟ್ಟಿದ್ದ ತನ್ನ ಸಹೋದರನಾದ ಇಬ್ರೀಯನನ್ನು ಕಳುಹಿಸ ಬೇಕೆಂದು, ಅವನು ನಿನಗೆ ಆರು ವರುಷ ಸೇವೆ ಮಾಡಿದ ಮೇಲೆ ನಿನ್ನ ಕಡೆಯಿಂದ ಅವನನ್ನು ಬಿಡುಗಡೆಯಾಗಿ ಕಳುಹಿಸ ಬೇಕೆಂದು, ಹೇಳಿದೆನು; ಆದರೆ ನಿಮ್ಮ ತಂದೆಗಳು ನನ್ನನ್ನು ಕೇಳಲಿಲ್ಲ; ತಮ್ಮ ಕಿವಿ ಒಗ್ಗಿಸಲಿಲ್ಲ.
೧೨ ಆದರೆ ಈಗ ನೀವು ತಿರುಗಿ ಕೊಂಡು, ನನ್ನ ದೃಷ್ಟಿಯಲ್ಲಿ ಸರಿಯಾದದ್ದನ್ನು ಮಾಡಿ, ಒಬ್ಬೊಬ್ಬನು ತನ್ನ ತನ್ನ ನೆರೆಯವನಿಗೆ ಬಿಡುಗಡೆಯನ್ನು ಸಾರಿದಿರಿ; ಮತ್ತು ನನ್ನ ಹೆಸರಿನಿಂದ ಕರೆಯಲ್ಪಟ್ಟಿರುವ ಮನೆಯಲ್ಲಿ ನನ್ನ ಮುಂದೆ ಒಡಂಬಡಿಕೆಯನ್ನು ಮಾಡಿದಿರಿ.
೧೩ ಆದರೆ ತಿರುಗಿ ಕೊಂಡು, ನನ್ನ ಹೆಸರನ್ನು ಅಪವಿತ್ರ ಮಾಡಿ, ನೀವು ಅವರ ಮನಸ್ಸು ಬಂದ ಹಾಗೆ, ಬಿಡುಗಡೆಯಾಗಿ ಕಳುಹಿಸಿ ಇದ್ದ ನಿಮ್ಮ ನಿಮ್ಮ ದಾಸರನ್ನು, ದಾಸಿಯರನ್ನು, ಒಬ್ಬೊಬ್ಬನು ತಿರಿಗಿ ಬರ ಮಾಡಿ, ನಿಮಗೆ ದಾಸ ದಾಸಿಯರಾಗುವ ಹಾಗೆ ವಶ ಮಾಡಿಕೊಂಡಿದ್ದೀರಿ.
೧೪ ಆದದರಿಂದ ಕರ್ತನು ಹೀಗೆ ಹೇಳುತ್ತಾನೆ—ನೀವು ನಿಮ್ಮ ನಿಮ್ಮ ಸಹೋದರರಿಗೂ, ನಿಮ್ಮ ನಿಮ್ಮ ನೆರೆಯವರಿಗೂ, ಬಿಡುಗಡೆಯನ್ನು ಸಾರುವದರಲ್ಲಿ ನನಗೆ ಕಿವಿ ಕೊಡಲಿಲ್ಲ; ಇಗೋ, ನಾನು ನಿಮಗೆ ಬಿಡುಗಡೆಯನ್ನು ಸಾರುತ್ತೇನೆ—ಕತ್ತಿ, ಬರ, ಜಾಡ್ಯ, ಇವುಗಳಿಗಾಗಿಯೇ. ಮತ್ತು ನಿಮ್ಮನ್ನು ಭೂಮಿಯ ಎಲ್ಲಾ ರಾಜ್ಯಗಳಲ್ಲಿ ತಿರುಗಾಟಕ್ಕೆ ಒಪ್ಪಿಸುವೆನು. ಮತ್ತು ನನ್ನ ಒಡಂಬಡಿಕೆಯನ್ನು
೧೫ ಮೀರಿದ ಮನುಷ್ಯರನ್ನೂ, ಕಳವನ್ನು ಎರಡು ಭಾಗ ಮಾಡಿ, ಅದರ ತುಂಡುಗಳ ನಡುವೆ ದಾಟಿ ಹೋಗಿ, ನನ್ನ ಮುಂದೆ ಮಾಡಿದ ಒಡಂಬಡಿಕೆಯ ವಾಕ್ಯಗಳನ್ನು ಸ್ಥಾಪಿಸದೆ ಇರುವವರನ್ನೂ,
೧೬ ಯೆಹೂದದ ಪ್ರಧಾನರನ್ನೂ, ಯೆರೂಸಲೇಮಿನ ಪ್ರಧಾನರನ್ನೂ, ಪೊಜ್ಜೆಯರನ್ನೂ, ಯಾಜಕರನ್ನೂ, ಕಳವಿನ ತುಂಡುಗಳ ನ
೧೭ ಡುವೆ ದಾಟಿ ಹೋದ ದೇಶದ ಜನರೆಲ್ಲರನ್ನೂ, ಹೌದು, ಅವರನ್ನು, ಅವರ ಶತ್ರುಗಳ ಕೈಯಲ್ಲಿಯೂ, ಅವರ ಪ್ರಾಣವನ್ನು ಹುಡುಕುವವರ ಕೈಯಲ್ಲಿಯೂ, ಒಪ್ಪಿಸುವೆನು; ಅವರ ಹೆಣಗಳು ಆಕಾಶದ ಪಕ್ಷಿಗಳಿಗೂ, ಭೂಮಿಯ ಮೃಗಗಳಿಗೂ, ಆಹಾ
೧೮ ರವಾಗುವವು. ಮತ್ತು ಯೆಹೂದದ ಅರಸನಾದ ಚಿದ್ಕೀಯನನ್ನೂ ಅವನ ಪ್ರಧಾನರನ್ನೂ ಅವರ ಶತ್ರುಗಳ ಕೈಯಲ್ಲಿಯೂ, ಅವರ ಪ್ರಾಣವನ್ನು ಹುಡುಕುವವರ ಕೈಯಲ್ಲಿಯೂ, ನಿಮ್ಮನ್ನು ಬಿಟ್ಟು ಏರಿ ಹೋಗಿರುವ ಬಾಬೆಲಿನ ಅರಸನ ಸೈನ್ಯದ ಕೈ
೧೯ ಯಲ್ಲಿಯೂ, ಒಪ್ಪಿಸುವೆನು. ಕರ್ತನು ಅನ್ನುತ್ತಾನೆ—ಇಗೋ, ನಾನು ಆಜ್ಞಾಪಿಸಿ, ಅವರನ್ನು ಈ ಪಟ್ಟಣದ ಬಳಿಗೆ ತಿರಿಗಿ ಬರ ಮಾಡುವೆನು; ಅವರು ಅದಕ್ಕೆ ವಿರೋಧವಾಗಿ ಯುದ್ಧ ಮಾಡಿ, ಅದನ್ನು ಹಿಡಿದು, ಬೆಂಕಿಯಿಂದ ಸುಡುವರು; ಮತ್ತು ಯೆಹೂದದ ಪಟ್ಟಣಗಳನ್ನು ನಿವಾಸಿ ಇಲ್ಲದೆ ಹಾಳಾಗ ಮಾಡುವೆನು.

## ೩೫. ಸಂಧಿ.

೧ ಯೆಹೂದದ ಅರಸನಾದ ಯೊಷೀಯನ ಮಗನಾದ ಯೆಹೋಯಕೀಮನ ದಿವಸಗಳಲ್ಲಿ, ಕರ್ತನಿಂದ ಯೆರೆಮಿಾಯನಿಗೆ
೨ ಉಂಟಾದ ವಾಕ್ಯವೇನಂದರೆ—ರೆಕಾಬ್ಯರ ಮನೆಗೆ ಹೋಗಿ, ಅವರ ಸಂಗಡ ಮಾತಾಡಿ, ಅವರನ್ನು ಕರ್ತನ ಮನೆಗೆ, ಕೊಠಡಿಗಳಲ್ಲಿ ಒಂದಕ್ಕೆ, ಕರೆ ಕೊಂಡು ಹೋಗಿ, ಅವರಿಗೆ ದ್ರಾಕ್ಷೇರಸ
3 ಕುಡಿಯ ಕೊಡು. ಆಗ ನಾನು ಹಬಜೀನ್ಯನ ಮಗನಾದ, ಯೆರೆಮಿಾಯನ ಮಗನಾದ, ಯಜನೀಯನನ್ನೂ, ಅವನ ಸಹೋದರರನ್ನೂ, ಅವನ ಕುಮಾರರೆಲ್ಲರನ್ನೂ, ರೆಕಾಬ್ಯರ ಸಮಸ್ತ ಮ

೪ ನೆಯವರನ್ನೂ, ಕರಕೊಂಡು, ಕರ್ತನ ಮನೆಗೆ, ದ್ವಾರಪಾಲ
ಕನಾದ ಶಲ್ಲೂಮನ ಮಗನಾದ, ಮಾಸೇಯನ ಕೊಠಡಿಯ
ಮೇಲಿರುವ ಪ್ರಧಾನರ ಕೊಠಡಿಯ ಬಳಿಯಲ್ಲಿರುವ ದೇವರ ಮ
ನುಷ್ಯನಾದ ಇಸ್ದಲ್ಯನ ಮಗನಾದ, ಹಾನಾನ ಕುಮಾರರ ಕೊ
೫ ಠಡಿಗೆ ತಂದು, ಕೆಬಾಬ್ಯರ ಮನೆಯ ಕುಮಾರರ ಮುಂದೆ ದ್ರಾ
ಕ್ಷೇರಸ ತುಂಬಿದ ಕೂಡೆಗಳನ್ನೂ, ಪಂಚಪಾತ್ರೆಗಳನ್ನೂ, ಇ
೬ ಟ್ಟು, ಅವರಿಗೆ—ದ್ರಾಕ್ಷೇರಸ ಕುಡಿಯಿರಿ, ಅಂದೆನು. ಆದರೆ ಅವ
ರು ಹೇಳಿದ್ದೇನಂದರೆ—ನಾವು ದ್ರಾಕ್ಷೇರಸ ಕುಡಿಯುವದಿಲ್ಲ; ಯಾ
ಕಂದರೆ ನಮ್ಮ ತಂದೆಯಾದ ಕೆಬಾಬನ ಮಗನಾದ ಯೋನದಾ
ಬನು ನಮಗೆ ಈ ಆಜ್ಞೆ ಕೊಟ್ಟನು, ಏನಂದರೆ—ನೀವಾದರೂ, ನಿ
ಮ್ಮ ಮಕ್ಕಳಾದರೂ, ಎಂದೆಂದಿಗೂ ದ್ರಾಕ್ಷೇರಸವನ್ನು ಕುಡಿಯ
೮ ಬೇಡಿರಿ; ಮತ್ತು ಮನೆಗಳನ್ನು ಕಟ್ಟಬೇಡಿರಿ; ಬೀಜವನ್ನು ಬಿತ್ತ
ಬೇಡಿರಿ; ದ್ರಾಕ್ಷೇ ತೋಟಗಳನ್ನು ನೆಡಬೇಡಿರಿ; ಅಂಥಾದ್ದು ನಿಮ
ಗಿರ ಬಾರದು; ಆದರೆ ನೀವು ಪರವಾಸವಾಗಿರುವ ದೇಶದಲ್ಲಿ ನಿಮ್ಮ
ದಿನಗಳು ಬಹಳವಾಗಿರುವ ಹಾಗೆ ನಿಮ್ಮ ದಿವಸಗಳೆಲ್ಲಾ ಗುಡಾರ
೯ ಗಳಲ್ಲಿ ವಾಸ ಮಾಡಬೇಕು. ಈ ಪ್ರಕಾರ ನಾವು ನಮ್ಮ ತಂದೆ
ಯಾದ ಕೆಬಾಬನ ಮಗನಾದ ಯೋನದಾಬನ ಮಾತನ್ನು, ಅ
ವನು ನಮಗೆ ಆಜ್ಞಾಪಿಸಿದ್ದೆಲ್ಲಾದರಲ್ಲಿ, ನಾವೂ, ನಮ್ಮ ಹೆಂಡರೂ,
ನಮ್ಮ ಕುಮಾರರೂ, ನಮ್ಮ ಕುಮಾರ್ತೆಯರೂ, ನಮ್ಮ ದಿವಸಗ
೧೦ ಳೆಲ್ಲಾ ದ್ರಾಕ್ಷೇರಸ ಕುಡಿಯದ ಹಾಗೆಯೂ, ವಾಸ ಮಾಡುವದ
ಕ್ಕೆ ಮನೆಗಳನ್ನು ಕಟ್ಟದ ಹಾಗೆಯೂ, ಕೇಳಿದ್ದೇವೆ; ಮತ್ತು ನಮ
ಗೆ ದ್ರಾಕ್ಷೆ ತೋಟಗಳೂ, ಹೊಲಗಳೂ, ಬೀಜವೂ, ಇಲ್ಲ. ಗುಡಾ
೧೧ ರಗಳಲ್ಲಿ ವಾಸ ಮಾಡುತ್ತೇವೆ; ನಮ್ಮ ತಂದೆಯಾದಯೋನದಾಬ
ನು ನಮಗೆ ಆಜ್ಞಾಪಿಸಿದ್ದೆಲ್ಲಾದರ ಪ್ರಕಾರ ಕೇಳಿ, ಮಾಡಿದ್ದೇವೆ.
ಆದರೆ ಬಾಬೆಲಿನ ಅರಸನಾದ ನೆಬುಕದ್ನೆಚ್ಚರನು ದೇಶದಲ್ಲಿ ಏರಿ
ಬಂದಾಗ, ನಾವು—ಬನ್ನಿ, ಕಸ್ದೀಯರ ದಂಡಿಗೂ, ಅರಾಮಿನ ದಂ
ಡಿಗೂ ಎಡೆಯಾಗಿ, ಯೆರೂಸಲೇಮಿಗೆ ಹೋಗೋಣ, ಅಂದೆವು.
ಹೀಗೆ ಯೆರೂಸಲೇಮಿನಲ್ಲಿ ವಾಸ ಮಾಡುತ್ತೇವೆ.

೧೨ ಆಗ ಕರ್ತನ ವಾಕ್ಯವು ಯೆರೆಮಿಾಯನಿಗೆಉಂಟಾಗಿ, ಹೇಳಿ
ದ್ದೇನಂದರೆ—ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೀಗೆ
೧೩ ಹೇಳುತ್ತಾನೆ—ನೀನು ಹೋಗಿ, ಯೆಹೂದದ ಮನುಷ್ಯರಿಗೂ,
ಯೆರೂಸಲೇಮಿನ ನಿವಾಸಿಗಳಿಗೂ, ಹೇಳ ತಕ್ಕದೇನಂದರೆ—ನೀ
ವು ನನ್ನ ವಾಕ್ಯಗಳನ್ನು ಕೇಳುವ ಹಾಗೆ ಶಿಕ್ಷೆ ತಕ್ಕೊಳ್ಳುವದಿಲ್ಲ
೧೪ ವೋ? ಎಂದು ಕರ್ತನು ಅನ್ನುತ್ತಾನೆ. ಕೆಬಾಬನ ಮಗನಾದ
ಯೋನದಾಬನು ತನ್ನ ಮಕ್ಕಳಿಗೆ, ಅವರು ದ್ರಾಕ್ಷೇರಸ ಕುಡಿಯ
ದ ಹಾಗೆ, ಆಜ್ಞಾಪಿಸಿದ ಮಾತುಗಳು ನಡಿಸಲ್ಪಟ್ಟಿವೆ; ಅವರು ಇಂ
ದಿನ ವರಿಗೂ ಅದನ್ನು ಕುಡಿಯದೆ, ತಮ್ಮತಂದೆಯ ಆಜ್ಞೆಯನ್ನು
೧೫ ಕೇಳಿದ್ದಾರೆ; ಆದರೆ ನಾನು, ಬೆಳಿಗ್ಯೆ ಎದ್ದು, ನಿಮ್ಮ ಸಂಗಡ ಮಾ
ತಾಡಿದಾಗ್ಯೂ, ನೀವು ನನಗೆ ಕಿವಿ ಕೊಡಲಿಲ್ಲ. ನನ್ನ ಸಕಲ ಸೇವಕ
ರಾದ ಪ್ರವಾದಿಗಳನ್ನು ಸಹ, ಬೆಳಿಗ್ಯೆ ಎದ್ದು, ನಿಮ್ಮ ಬಳಿಗೆ ಕಳು
ಹಿಸಿ—ಒಬ್ಬೊಬ್ಬನು ತನ್ನ ತನ್ನ ಕೆಟ್ಟ ಮಾರ್ಗವನ್ನು ಬಿಟ್ಟು
ತಿರುಗಿ, ನಿಮ್ಮ ಕ್ರಿಯೆಗಳನ್ನು ಸರಿ ಮಾಡಿ, ಬೇಕೆ ದೇವರುಗಳನ್ನು
ಸೇವಿಸುವ ಹಾಗೆ ಅವುಗಳನ್ನು ಹಿಂಬಾಲಿಸದೆ ಇರಿ; ಆಗ ನಾನು ನಿ
ಮಗೂ, ನಿಮ್ಮ ತಂದೆಗಳಿಗೂ, ಕೊಟ್ಟ ದೇಶದಲ್ಲಿ ವಾಸವಾಗಿರುವಿ
ರಿ, ಎಂದು ನಿಮಗೆ ಹೇಳಿಸಿದರೂ, ನೀವು ಕಿವಿ ಬೊಗ್ಗಿಸಲಿಲ್ಲ; ನನ್ನ
೧೬ ನ್ನು ಕೇಳಲಿಲ್ಲ. ಆದದರಿಂದ ಕೆಬಾಬನ ಮಗನಾದ ಯೋನದಾಬ
ನ ಕುಮಾರರು ತಮ್ಮ ತಂದೆ ತಮಗೆ ಆಜ್ಞಾಪಿಸಿದ ಆಜ್ಞೆಯನ್ನು
ನಡಿಸಿದದರಿಂದಲೂ, ಆದರೆ ಈ ಜನರು ನನ್ನನ್ನು ಕೇಳದೆ ಹೋದ
೧೭ ದರಿಂದಲೂ, ಇದುಕಾರಣ, ಇಸ್ರಯೇಲಿನ ದೇವರಾದ ಸೈನ್ಯಗಳ
ದೇವರಾದ ಕರ್ತನು ಹೇಳುವದೇನಂದರೆ—ಇಗೋ, ನಾನು ಯೆ
ಹೂದದ ಮೇಲೆಯೂ, ಯೆರೂಸಲೇಮಿನ ನಿವಾಸಿಗಳೆಲ್ಲರ ಮೇ
ಲೆಯೂ, ಅವರ ವಿಷಯವಾಗಿ ಹೇಳಿದ ಕೇಡನೆಲ್ಲಾ ಬರ ಮಾ
ಡುತ್ತೇನೆ; ಯಾಕಂದರೆ ನಾನು ಅವರ ಸಂಗಡ ಮಾತಾಡುವಾಗ,
ಅವರು ಕೇಳಲಿಲ್ಲ; ಅವರನ್ನು ಕರೆಯುವಾಗ, ಉತ್ತರ ಕೊಡಲಿಲ್ಲ.
೧೮ ಮತ್ತು ಕೆಬಾಬ್ಯರ ಮನೆಯವರಿಗೆ ಯೆರೆಮಿಾಯನು ಹೇಳಿ
ದ್ದೇನಂದರೆ—ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೀ
ಗೆ ಹೇಳುತ್ತಾನೆ—ನೀವು ನಿಮ್ಮ ತಂದೆಯಾದ ಯೋನದಾಬನ
ಆಜ್ಞೆಯನ್ನು ಕೇಳಿ, ಅವನ ಆಜ್ಞೆಗಳನೆಲ್ಲಾ ಕೈಕೊಂಡು, ಅವನು
೧೯ ನಿಮಗೆ ಆಜ್ಞಾಪಿಸಿದ್ದೆಲ್ಲಾದರ ಪ್ರಕಾರ ಮಾಡಿದದರಿಂದ, ಇದುಕಾರ
ಣ ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೀಗೆ ಹೇಳು
ತ್ತಾನೆ—ಕೆಬಾಬನ ಮಗನಾದ ಯೋನದಾಬನಿಗೆ ನನ್ನ ಮುಂದೆ
ನಿಲ್ಲ ತಕ್ಕ ಮನುಷ್ಯನು ಎಂದಿಗೂ ಇಲ್ಲದೆ ಹೋಗುವದಿಲ್ಲ.

## ೩೬. ಸಂಧಿ.

೧ ಯೆಹೂದದ ಅರಸನಾದ ಯೊಸೀಯನ ಮಗನಾದ ಯೆಹೋ
ಯಕೀಮನ ನಾಲ್ಕನೇ ವರುಷದಲ್ಲಿ ಆದದ್ದೇನಂದರೆ—ಯೆರೆಮಿಾ
ಯನಿಗೆ ಕರ್ತನಿಂದ ಈ ವಾಕ್ಯವುಂಟಾಯಿತು, ಯಾವದಂದ
೨ ಕೆ—ಪುಸ್ತಕದ ಸುರಳಿಯನ್ನು ತಕ್ಕೊಂಡು, ನಾನು ಇಸ್ರಯೇ
ಲಿಗೆ ವಿರೋಧವಾಗಿಯೂ, ಯೆಹೂದಕ್ಕೆ ವಿರೋಧವಾಗಿಯೂ,
ಎಲ್ಲಾ ಜನಾಂಗಗಳಿಗೆ ವಿರೋಧವಾಗಿಯೂ, ನಿನ್ನ ಸಂಗಡ ಮಾ
ತಾಡಿದಂದಿನಿಂದ, ಯೊಸೀಯನ ದಿವಸಗಳು ಮೊದಲುಗೊಂಡು
ಈ ದಿವಸದ ಪರ್ಯಂತರಕ್ಕೂ ನಿನಗೆ ಹೇಳಿದ ವಾಕ್ಯಗಳನ್ನೆಲ್ಲಾ
೩ ಅದರಲ್ಲಿ ಬರಿ. ಒಂದು ವೇಳೆ ಯೆಹೂದದ ಮನೆಯವರು, ನಾ
ನು ಅವರಿಗೆ ಮಾಡುವದಕ್ಕೆ ನೆನಸುವ ಕೇಡನೆಲ್ಲಾ ಕೇಳಿ, ನಾ
ನು ಅವರ ಅಕ್ರಮವನ್ನೂ ಅವರ ಪಾಪವನ್ನೂ ಮನ್ನಿಸುವ ಹಾ
ಗೆ, ತಮ್ಮ ತಮ್ಮ ಕೆಟ್ಟ ಮಾರ್ಗಗಳನ್ನು ಬಿಟ್ಟು, ತಿರುಗಿ ಕೊಂ
ಡಾರು.

೪ ಆಗ ಯೆರೆಮಿಾಯನು ನೆರೀಯನ ಮಗನಾದ ಬಾರೂಕನ
ನ್ನು ಕರೆದನು; ಮತ್ತು ಬಾರೂಕನು ಯೆರೆಮಿಾಯನ ಬಾಯಿ
ಯಿಂದ, ಕರ್ತನು ಅವನಿಗೆ ಹೇಳಿ ಇದ್ದ ಮಾತುಗಳೆಲ್ಲಾ ಕೇ
೫ ಳಿ, ಪುಸ್ತಕದ ಸುರಳಿಯಲ್ಲಿ ಬರೆದನು. ಆ ಮೇಲೆ ಯೆರೆಮಿಾಯ
ನು ಬಾರೂಕನಿಗೆ ಆಜ್ಞಾಪಿಸಿದ್ದೇನಂದರೆ—ನಾನು ಮುಚ್ಚಲ್ಪಟ್ಟಿದ್ದೇ
೬ ನೆ; ಕರ್ತನ ಮನೆಗೆ ಹೋಗಲಾರೆನು. ಆದದರಿಂದ ನೀನು ಹೋ
ಗಿ, ನನ್ನ ಬಾಯಿಯಿಂದಕೇಳಿ, ನೀನು ಬರೆದ ಸುರಳಿಯಲ್ಲಿ, ಕ
ರ್ತನ ಮನೆಯೊಳಗೆ, ಉಪವಾಸದ ದಿವಸದಲ್ಲಿ, ಕರ್ತನ ವಾಕ್ಯ
ಗಳನ್ನು ಜನರ ಕಿವಿಗಳಲ್ಲಿ ಓದಿ, ಹೇಳು. ಮತ್ತು ತಮ್ಮ ಪಟ್ಟಣಗಳಿಂ
ದ ಬರುವ ಯೆಹೂದದವರೆಲ್ಲರ ಕಿವಿಗಳಲ್ಲಿಯೂ ಅವುಗಳನ್ನು
೭ ಓದಿ, ಹೇಳ ಬೇಕು. ಒಂದುವೇಳೆ ಅವರ ವಿಜ್ಞಾಪನೆ ಕರ್ತನ ಮುಂ
ದೆ ಬಂದೀತು; ಅವರು ತಮ್ಮ ತಮ್ಮ ಕೆಟ್ಟ ಮಾರ್ಗಗಳನ್ನು ಬಿ
ಟ್ಟು, ತಿರುಗಿ ಕೊಂಡಾರು; ಯಾಕಂದರೆ ಕರ್ತನು ಈ ಜನರಿಗೆ ವಿ



ಕೋಧವಾಗಿ ಉಚ್ಚರಿಸಿ ಇರುವ ಕೋಪವೂ ಉರಿಯೂ ದೊಡ್ಡ
ದಾಗಿದೆ. ಆಗ ನೆರೀಯನ ಮಗನಾದ ಬಾರೂಕನು ಪ್ರವಾದಿಯಾ
ದ ಯೆರೆಮಿಾಯನು ತನಗೆ ಆಜ್ಞಾಪಿಸಿದ್ದನೆಲ್ಲಾ ಮಾಡಿ, ಕರ್ತನ
ವಾಕ್ಯಗಳನ್ನು ಪುಸ್ತಕದಿಂದ ಕರ್ತನ ಮನೆಯಲ್ಲಿ ಓದಿದನು.

೮ ಮತ್ತು ಯೆಹೂದದ ಅರಸನಾದ ಯೊಸೀಯನ ಮಗನಾದ
ಯೆಹೋಯಕೀಮನ ಐದನೇ ವರುಷದ ಒಂಭತ್ತನೇ ತಿಂಗಳಲ್ಲಿ,
ಅವರು ಯೆರೂಸಲೇಮಿನಲ್ಲಿರುವ ಎಲ್ಲಾ ಜನರಿಗೂ, ಯೆಹೂದ
ದ ಪಟ್ಟಣಗಳಿಂದ ಯೆರೂಸಲೇಮಿಗೆ ಬಂದ ಜನರೆಲ್ಲರಿಗೂ, ಕರ್ತನ
೯ ಸನ್ನಿಧಿಯಲ್ಲಿ ಉಪವಾಸವನ್ನು ಸಾರಿದರು. ಆಗ ಬಾರೂಕನು
ಪುಸ್ತಕದಿಂದ, ಯೆರೆಮಿಾಯನ ವಾಕ್ಯಗಳನ್ನು ಕರ್ತನ ಮನೆಯ
ಲ್ಲಿ ಕಾಯಸದವನಾದ ಶಾಫಾನನ ಮಗನಾಗಿರುವ ಗೆಮರೀಯ
ನ ಕೊಠಡಿಯಲ್ಲಿ, ಮೇಲಿನ ಅಂಗಳದಲ್ಲಿ, ಕರ್ತನ ಮನೆಯ
ಹೊಸ ಬಾಗಿಲಿನ ಪ್ರವೇಶದಲ್ಲಿ, ಎಲ್ಲಾ ಜನರ ಕಿವಿಗಳಲ್ಲಿ, ಓದಿ ಹೇ
೧೦ ಳಿದನು. ಶಾಫಾನನ ಮಗನಾದ ಗೆಮರೀಯನ ಮಗನಾದ ಮಿ
ಖಾಯನು ಕರ್ತನ ವಾಕ್ಯಗಳನ್ನೆಲ್ಲಾ ಆ ಪುಸ್ತಕದ ಮೇರೆಗೆ ಕೇ
೧೧ ಳಿದ ತರುವಾಯ, ಅವನು ಅರಸನ ಮನೆಗೆ, ರಾಯಸದವನ ಕೊ
ಠಡಿಗೆ, ಇಳಿದು ಹೋದನು; ಮತ್ತು ಅಗೋ ಅಲ್ಲಿ ಪ್ರಧಾನರೆಲ್ಲ
ರು ಕೂತುಕೊಂಡಿದ್ದರು; ಯಾರಂದರೆ—ರಾಯಸದವನಾದ ಎ
ಲೀಷಮನೂ, ಶೆಮಾಯನ ಮಗನಾದ ದೆಲಾಯನೂ, ಅಕ್ಬೋ
ರನ ಮಗನಾದ ಎಲ್ನಾಥನನೂ, ಶಾಫಾನನ ಮಗನಾದ ಗೆಮರೀ
ಯನೂ, ಹನನೀಯನ ಮಗನಾದ ಚಿದ್ಕೀಯನೂ, ಈ ಮೊದ
೧೩ ಲಾದ ಪ್ರಧಾನರೆಲ್ಲರೂ. ಆಗ ಮಿಖಾಯನು ಅವರಿಗೆ ಬಾರೂಕ
ನು ಆ ಪುಸ್ತಕವನ್ನು ಜನರಿಗೆ ಓದಿ ಹೇಳಿದಾಗ ತಾನು ಕೇಳಿದ
೧೪ ವಾಕ್ಯಗಳನ್ನೆಲ್ಲಾ ತಿಳಿಸಿದನು. ಆದದರಿಂದ ಪ್ರಧಾನರೆಲ್ಲರೂ,
ಕೂಷಿಯ ಮಗನಾದ ಶೆಲೆಮಿಾಯನ ಮಗನಾದ, ನೆತನೀಯನ
ಮಗನಾದ, ಯೆಹೂದಿಯನ್ನು, ಬಾರೂಕನ ಬಳಿಗೆ ಕಳುಹಿಸಿ—
ನೀನು ಜನರ ಕಿವಿಗಳಲ್ಲಿ ಓದಿ ಹೇಳಿದ ಸುರಳಿಯನ್ನು ನಿನ್ನ ಕೈ
ಯಲ್ಲಿ ತೆಗೆದು ಕೊಂಡು ಬಾ, ಎಂಥೇಳಿದರು; ಹಾಗೆಯೇ ನೆರೀಯ
೧೫ ನ ಮಗನಾದ ಬಾರೂಕನು ಸುರಳಿಯನ್ನು ತನ್ನ ಕೈಯಲ್ಲಿ ತೆಗೆ
ದು ಕೊಂಡು ಅವರ ಬಳಿಗೆ ಬಂದನು. ಆಗಲವರು ಅವನಿಗೆ—ಈ
ಗ ಕೂತುಕೊಂಡು ನಮ್ಮ ಕಿವಿಗಳಲ್ಲಿ ಓದಿ ಹೇಳು, ಅಂದರು; ಆಗ
೧೬ ಬಾರೂಕನು ಅವರ ಕಿವಿಗಳಲ್ಲಿ ಓದಿ ಹೇಳಿದನು. ಆಗಲಾದದ್ದೇ
ನಂದರೆ—ಅವರು ಆವಾಕ್ಯಗಳನ್ನೆಲ್ಲಾ ಕೇಳಿದ ಮೇಲೆ, ತಮ್ಮ ತಮ್ಮ
ಲ್ಲಿ ಹೆದರಿಕೊಂಡು—ನಾವು ನಿಶ್ಚಯವಾಗಿ ಈ ವಾಕ್ಯಗಳನ್ನೆಲ್ಲಾ ಅ
೧೭ ರಸನಿಗೆ ತಿಳಿಸುತ್ತೇವೆಂದು ಬಾರೂಕನಿಗೆ ಹೇಳಿದರು. ಮತ್ತು ಅ
ವರು ಬಾರೂಕನನ್ನು ಕೇಳಿದ್ದೇನಂದರೆ—ನೀನು ಅವನ ಬಾಯಿ
ಯಿಂದ ಈವಾಕ್ಯಗಳನ್ನೆಲ್ಲಾ ಹ್ಯಾಗೆ ಬರದಿ, ನಮಗೆ ತಿಳಿಸು, ಅಂ
೧೮ ದರು. ಆಗ ಬಾರೂಕನು ಅವರಿಗೆ—ಅವನು ಬಾಯಿಯಿಂದ ಈ
ವಾಕ್ಯಗಳನ್ನೆಲ್ಲಾ ನನಗೆ ಹೇಳಿ ಕೊಟ್ಟನು; ನಾನು ಅವುಗಳನ್ನು
ಮಸಿಯಿಂದ ಪುಸ್ತಕದಲ್ಲಿ ಬರೆದೆನು, ಅಂದನು. ಆಗ ಪ್ರಧಾನರು
ಬಾರೂಕನಿಗೆ—ನೀನೂ ಯೆರೆಮಿಾಯನೂ ಹೋಗಿ, ಅಡಗಿ ಕೊ
ಳ್ಳಿರಿ; ನೀವು ಎಲ್ಲಿಯೋ ಯಾರಿಗೂ ತಿಳಿಯಬೇಡ ಬೇಡಿರಿ, ಅಂ
೧೯ ದರು.

ಆ ಮೇಲೆ ಅವರು ಅರಸನ ಬಳಿಗೆ ಅಂಗಳಕ್ಕೆ ಹೋದರು; ಆ
ದರೆ ಆ ಸುರಳಿಯನ್ನು ರಾಯಸದವನಾದ ಎಲೀಷಮನ ಕೊ
ಠಡಿಯಲ್ಲಿ ಇಟ್ಟು ಬಿಟ್ಟರು; ಮತ್ತು ಅರಸನ ಕಿವಿಗಳಲ್ಲಿ ಆ ವಾ
೨೦ ಕ್ಯಗಳನ್ನೆಲ್ಲಾ ಹೇಳಿದರು. ಆಗ ಅರಸನು ಯೆಹೂದಿಯನ್ನು, ಆ
ಸುರಳಿಯನ್ನು ತಕ್ಕೊಂಡು ಬರುವಹಾಗೆ, ಕಳುಹಿಸಿದನು; ಅವ
ನು ಅದನ್ನು ರಾಯಸದವನಾದ ಎಲೀಷಮನ ಕೊಠಡಿಯೊಳ
ಗಿಂದ ತೆಗೆದನು; ಮತ್ತು ಯೆಹೂದಿಯು ಅದನ್ನು ಅರಸನ ಕಿವಿಗ
ಳಲ್ಲಿಯೂ, ಅರಸನ ಬಳಿಯಲ್ಲಿ ನಿಂತ ಎಲ್ಲಾ ಪ್ರಧಾನರ ಕಿವಿಗ
೨೧ ಳಲ್ಲಿಯೂ, ಓದಿ ಹೇಳಿದನು. ಆಗ ಒಂಭತ್ತನೇ ತಿಂಗಳಲ್ಲಿ, ಅರಸ
ನು ಚಳಿಕಾಲದ ಮನೆಯಲ್ಲಿ ಕೂತುಕೊಂಡಿದ್ದನು; ಅವನ ಮುಂದೆ
೨೩ ಅಗ್ಗಿಷ್ಟಿಕೆಯಲ್ಲಿ ಬೆಂಕಿ ಉರಿಯುತ್ತಿತ್ತು. ಆಗಲಾದದ್ದೇನಂದರೆ—
ಯೆಹೂದಿಯು ಮೂರು ನಾಲ್ಕು ಸಾಲುಗಳನ್ನು ಓದಿದ ಮೇಲೆ
ಅದನ್ನು ಚೂರಿಯಿಂದ ಕೊಯಿದು ಅಗ್ಗಿಷ್ಟಿಕೆಯಲ್ಲಿದ್ದ ಬೆಂಕಿ
ಯೊಳಗೆ, ಸುರಳಿಯೆಲ್ಲಾ ಅಗ್ಗಿಷ್ಟಿಕೆಯ ಬೆಂಕಿಯಲ್ಲಿ ಮುಗಿದು
೨೪ ಹೋಗುವ ಪರ್ಯಂತರಕ್ಕೂ, ಹಾಕಿ ಬಿಟ್ಟನು. ಆದಾಗ್ಯೂ ಈ
ವಾಕ್ಯಗಳನ್ನೆಲ್ಲಾ ಕೇಳಿದ ಅರಸನಾದರೂ, ಅವನ ಸೇವಕರಲ್ಲಿ
ಒಬ್ಬನಾದರೂ, ಹೆದರಲಿಲ್ಲ, ತಮ್ಮ ವಸ್ತ್ರಗಳನ್ನು ಹರಕೊಳ್ಳ
೨೫ ಲಿಲ್ಲ. ಹೀಗಾದರೂ ಎಲ್ನಾಥನನೂ, ದೆಲಾಯನೂ, ಗೆಮರೀಯ
ನೂ, ಆಸುರಳಿಯು ಸುಡಲ್ಪಡದ ಹಾಗೆ ಅರಸನಿಗೆ ಬಿನ್ನಹ ಮಾ
ಡಿದರು; ಆದರೆ ಅವನು ಅವರಿಗೆ ಕಿವಿಗೊಡಲಿಲ್ಲ. ಆದರೆ ಅರಸನು
ಹಮ್ಮೆಲೆಕನ ಮಗನಾದ ಯೆರಹ್ಮೇಲನಿಗೂ, ಅಜ್ರಿಯೇಲನ ಮ
ಗನಾದ ಶೆರಾಯನಿಗೂ, ಅಬ್ದೇಲನ ಮಗನಾದ ಶೆಲೆಮೀಯನಿಗೂ,
ರಾಯಸದವನಾದ ಬಾರೂಕನನ್ನೂ, ಪ್ರವಾದಿಯಾದ ಯೆರೆಮಿಾ
ಯನನ್ನೂ, ಹಿಡಿಯ ಬೇಕೆಂದು, ಆಜ್ಞಾಪಿಸಿದನು; ಆದರೆ ಕರ್ತ
ನು ಅವರನ್ನು ಅಡಗಿಸಿದನು.

೨೭ ಆಗ ಅರಸನು ಆ ಸುರಳಿಯನ್ನೂ, ಬಾರೂಕನು ಯೆರೆಮಿಾ
ಯನ ಬಾಯಿಯಿಂದ ಬರೆದಿದ್ದ ವಾಕ್ಯಗಳನ್ನೂ ಸುಟ್ಟಮೇಲೆ,
ಕರ್ತನ ವಾಕ್ಯವು ಯೆರೆಮಿಾಯನಿಗೆ ಉಂಟಾಗಿ ಹೇಳಿದ್ದೇನಂದ
೨೮ ಕೆ—ನೀನು ಮತ್ತೊಂದು ಸುರಳಿಯನ್ನು ತಕ್ಕೊಂಡು, ಯೆಹೂ
ದದ ಅರಸನಾದ ಯೆಹೋಯಕೀಮನು ಸುಟ್ಟ ಮೊದಲನೇ ಸು
೨೯ ರಳಿಯಲ್ಲಿದ್ದ ಮುಂಚಿನ ವಾಕ್ಯಗಳನ್ನೆಲ್ಲಾ ಅದರಲ್ಲಿ ಬರೆ. ಮ
ತ್ತು ಯೆಹೂದದ ಅರಸನಾದ ಯೆಹೋಯಕೀಮನಿಗೆ ನೀನು ಹೇ
ಳ ತಕ್ಕದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ಬಾಬೆಲಿನ ಅ
ರಸನು ನಿಶ್ಚಯವಾಗಿ ಬಂದು, ಈ ದೇಶವನ್ನು ನಾಶಮಾಡಿ, ಮ
ನುಷ್ಯರನ್ನೂ ಮೃಗಗಳನ್ನೂ ಅದರೊಳಗಿಂದ ನಿಂತು ಹೋಗ
ಮಾಡುವನೆಂದು, ಇದರಲ್ಲಿ ಯಾಕೆ ಬರದಿದ್ದಿ? ಎಂದು ಹೇಳಿ, ನೀ
೩೦ ನು ಈ ಸುರಳಿಯನ್ನು ಸುಟ್ಟಿದ್ದೀ. ಆದದರಿಂದ ಯೆಹೂದದ ಅ
ರಸನಾದ ಯೆಹೋಯಕೀಮನನ್ನು ಕುರಿತು ಕರ್ತನು ಹೇಳುವ
ದೇನಂದರೆ—ದಾವೀದನ ಸಿಂಹಾಸನದಲ್ಲಿ ಕೂತ್ತುವವನು ಅವನಿಗೆ
ಇರುವದಿಲ್ಲ; ಮತ್ತು ಅವನ ಹೇಣ ಹಗಲಿನಲ್ಲಿ ಬಿಸಲಿಗೂ, ರಾ
ತ್ರಿಯಲ್ಲಿ ಹಿಮಕ್ಕೂ, ಬಿಸಾಡಲ್ಪಡುವದು. ಮತ್ತು ಅವನನ್ನೂ
ಅವನ ಸಂತಾನವನ್ನೂ, ಅವನ ಸೇವಕರನ್ನೂ, ಅವರ ಅಕ್ರಮ
ಕ್ಕಾಗಿ ವಿಚಾರಿಸುವೆನು; ಮತ್ತು ಅವರ ಮೇಲೆಯೂ, ಯೆರೂಸ
ಲೇಮಿನ ನಿವಾಸಿಗಳ ಮೇಲೆಯೂ, ಯೆಹೂದದ ಮನುಷ್ಯರ ಮೇ
ಲೆಯೂ, ನಾನು ಅವರಿಗೆ ವಿರೋಧವಾಗಿ ಮಾತಾಡಿದಂಥ, ಅ
ವರು ಕಿವಿಕೊಡದಂಥ, ಕೇಡನೆಲ್ಲಾ ಬರ ಮಾಡುವೆನು.

೩೨ ಆಗ ಯೆರೆಮಿಾಯನು ಮತ್ತೊಂದು ಸುರಳಿಯನ್ನು ತಕ್ಕೊಂ

ಡು, ನೇರೀಯನ ಮಗನಾದ, ರಾಯಸದವನಾದ ಬಾರೂಕನಿಗೆ
ಕೊಟ್ಟನು; ಇವನು ಯೆಹೂದದ ಅರಸನಾದ ಯೆಹೋಯಕೀ
ಮನು ಬೆಂಕಿಯಲ್ಲಿ ಸುಟ್ಟ ಪುಸ್ತಕದ ವಾಕ್ಯಗಳನ್ನೆಲ್ಲಾ ಯೆರೆಮಿಾ
ಯನ ಬಾಯಿಯಿಂದ ಅದರಲ್ಲಿ ಬರೆದನು; ಇದಲ್ಲದೆ ಅವುಗಳ ಹಾ
ಗಿರುವ ಅನೇಕ ವಾಕ್ಯಗಳು ಅವುಗಳ ಸಂಗಡ ಕೂಡಿಸಲ್ಪಟ್ಟವು.

## ೩೭. ಸಂಧಿ.

೧ ಮತ್ತು ಬಾಬೆಲಿನ ಅರಸನಾದ ನೆಬುಕದ್ನೆಜ್ಜರನು ಯೆಹೂದ
ದೇಶದಲ್ಲಿ ಅರಸನಾಗಿ ಇಟ್ಟ ಯೆಹೋಯಕೀಮನ ಮಗನಾದ
ಕೊನ್ಯನಿಗೆ ಬದಲಾಗಿ, ಯೊಸೀಯನ ಮಗನಾದ ಚಿದ್ಕೀಯನು
೨ ಅರಸನಾಗಿ ಆಳಿದನು. ಆದರೆ ಅವನೂ, ಅವನ ಸೇವಕರೂ, ದೇ
ಶದ ಜನರೂ, ಕರ್ತನು ಪ್ರವಾದಿಯಾದ ಯೆರೆಮಿಾಯನಿಂದ ಹೇ
೩ ಳಿದ ವಾಕ್ಯಗಳಿಗೆ ಕಿವಿಕೊಡಲಿಲ್ಲ. ಮತ್ತು ಅರಸನಾದ ಚಿದ್ಕೀ
ಯನು ಕಿಲಿಕ್ಯಮನ ಮಗನಾದ ಯೆಹೂಕಲನನ್ನೂ, ಯಾಜ
ಕನಾದ ಮಾಸೇಯನ ಮಗನಾದ ಚೆಫನೀಯನನ್ನೂ ಪ್ರವಾದಿ
ಯಾದ ಯೆರೆಮಿಾಯನ ಬಳಿಗೆ ಕಳುಹಿಸಿ—ನಮ್ಮ ದೇವರಾದ ಕ
ರ್ತನಿಗೆ ನಮಗೋಸ್ಕರ ಪ್ರಾರ್ಥನೆ ಮಾಡೆಂದು ಹೇಳಿಸಿದನು
೪ ಆಗ ಯೆರೆಮಿಾಯನು ಜನರೊಳಗೆ ಬರುತ್ತಾ ಹೋಗುತ್ತಾ ಇದ್ದ
ನು; ಯಾಕಂದರೆ ಅವರು ಅವನನ್ನು ಕೆರೆಮನೆಯಲ್ಲಿ ಇಡಲಿಲ್ಲ.
೫ ಮತ್ತು ಫರೋನನ ಸೈನ್ಯವು ಐಗುಪ್ತದಿಂದ ಹೊರಟಿತ್ತು; ಯೆ
ರೂಸಲೇಮಿಗೆ ಮುತ್ತಿಗೆ ಹಾಕುತ್ತಿದ್ದ ಕಸ್ದೀಯರು ಅದರ ಸುದ್ದಿ
ಯನ್ನು ಕೇಳಿ ಯೆರೂಸಲೇಮನ್ನು ಬಿಟ್ಟು ಏರಿ ಹೋದರು.
೬ ಆಗ ಕರ್ತನ ವಾಕ್ಯವು ಪ್ರವಾದಿಯಾದ ಯೆರೆಮಿಾಯನಿಗೆ
ಉಂಟಾಗಿ ಹೇಳಿದ್ದೇನಂದರೆ—ಇಸ್ರಯೇಲಿನ ದೇವರಾದ ಕರ್ತನು
೭ ಹೀಗೆ ಹೇಳುತ್ತಾನೆ—ನನ್ನ ಬಳಿಯಲ್ಲಿ ವಿಚಾರಿಸುವದಕ್ಕೆ ನಿಮ್ಮ
ನ್ನು ಕಳುಹಿಸಿದ ಯೆಹೂದದ ಅರಸನಿಗೆ ನೀವು ಹೇಳಿ ಬೇಕಾದ
ದ್ದೇನಂದರೆ—ಇಗೋ ನಿಮ್ಮ ಸಹಾಯಕ್ಕೆ ಹೊರಟ ಫರೋನನ
ಸೈನ್ಯವು, ಅದರ ಸ್ವದೇಶವಾದ ಐಗುಪ್ತಕ್ಕೆ ತಿರುಗುವದು. ಮ
೮ ತ್ತು ಕಸ್ದೀಯರು ತಿರುಗಿ ಕೊಂಡು, ಈ ಪಟ್ಟಣಕ್ಕೆ ವಿರೋಧವಾಗಿ
ಯುದ್ಧ ಮಾಡಿ, ಅದನ್ನು ಹಿಡಿದು, ಬೆಂಕಿಯಿಂದ ಸುಡುವರು.
೯ ಕರ್ತನು ಹೇಳುವದೇನಂದರೆ—ಕಸ್ದೀಯರು ಖಂಡಿತವಾಗಿ ನಮ್ಮನ್ನು
ಬಿಟ್ಟು ಹೋಗುವರೆಂದು ನಿಮಗೆ ನೀವೇ ಮೋಸಗೊಳಿಸ ಬೇಡಿ
೧೦ ರಿ; ಯಾಕಂದರೆ ಅವರು ಹೊಗಿ ಬಿಡುವದಿಲ್ಲ. ಹೌದು, ನಿಮ್ಮ
ಸರಿಗೆ ಯುದ್ಧ ಮಾಡುವ ಕಸ್ದೀಯರ ದಂಡನ್ನೆಲ್ಲಾ ನೀವು ಹೊ
ಡೆದಿದ್ದರೂ, ಘಾಯ ತಗಲಿದ ಮನುಷ್ಯರು ಮಾತ್ರ ಅವರೊಳ
ಗೆ ಉಳಿದಿದ್ದರೂ, ಅವರೇ ತಮ್ಮ ತಮ್ಮ ಗುಡಾರಗಳಲ್ಲಿ ಎದ್ದು,
ಈ ಪಟ್ಟಣವನ್ನು ಬೆಂಕಿಯಿಂದ ಸುಡುವರು.
೧೧ ಮತ್ತು ಆದದ್ದೇನಂದರೆ—ಕಸ್ದೀಯರ ದಂಡು, ಫರೋನನ ದಂ
ಡಿನ ನಿಮಿತ್ತ, ಯೆರೂಸಲೇಮನ್ನು ಬಿಟ್ಟು ಏರಿ ಹೋದ ಮೇಲೆ,
೧೨ ಯೆರೆಮಿಾಯನು ಬೆನ್ಯಮಿನನ ದೇಶಕ್ಕೆ ಹೋಗುವದಕ್ಕೂ,
ಜನರ ಮಧ್ಯದಲ್ಲಿ ಅಲ್ಲಿಂದ ತನ್ನ ಪಾಲನ್ನು ತಕ್ಕೊಳ್ಳುವದ
೧೩ ಕ್ಕೂ, ಯೆರೂಸಲೇಮಿನಿಂದ ಹೊರಟನು. ಆಗಲವನು ಬೆನ್ಯಮಿ
ನನ ಬಾಗಲಲ್ಲಿ ಇರುವಾಗ, ಅಲ್ಲಿ ಅನನೀಯನ ಮಗನಾದ, ಶೆಲೆ
ಮಿಾಯನ ಮಗನಾದ, ಇರೀಯೆಂಬ ಪಹರೆಯ ವಿಚಾರಕನು ಇ
ದ್ದನು; ಇವನು ಪ್ರವಾದಿಯಾದ ಯೆರೆಮಿಾಯನನ್ನು—ನೀನು ಕ
೧೪ ಸ್ದೀಯರ ಕಡೆಗೆ ಬೀಳುತ್ತಿ, ಎಂದು ಹೇಳಿ, ಹಿಡಿದನು. ಆದರೆ
ಯೆರೆಮಿಾಯನು ಹೇಳಿದ್ದೇನಂದರೆ—ಸುಳ್ಳು! ನಾನು ಕಸ್ದೀಯರ
ಕಡೆಗೆ ಬೀಳುವವನಲ್ಲ; ಆದರೆ ಇರೀಯನು ಅವನಿಗೆ ಕಿವಿಗೊಡದೆ,
೧೫ ಯೆರೆಮಿಾಯನನ್ನು ಹಿಡಿದು, ಪ್ರಧಾನರ ಬಳಿಗೆ ತಂದನು. ಆ
ಗ ಪ್ರಧಾನರು ಯೆರೆಮಿಾಯನ ಮೇಲೆ ಕೌದ್ರ ಮಾಡಿ, ಅವನ
ನ್ನು ಹೊಡೆದು, ರಾಯಸದವನಾದ ಯೋನಥಾನನ ಮನೆಯಲ್ಲಿ,
ಬಂಧಕದಲ್ಲಿ, ಇಟ್ಟರು; ಯಾಕಂದರೆ ಅದನ್ನು ಕೆರೆಮನೆಯಾಗ
ಮಾಡಿ ಇದ್ದರು.
೧೬ ಯೆರೆಮಿಾಯನು ಕೂಣೆಯಲ್ಲಿಯೂ ಅಕಿಗಳಲ್ಲಿಯೂ ಪ್ರವೇ
ಶಿಸಿದ ಮೇಲೆಯೂ, ಯೆರೆಮಿಾಯನು ಬಹಳ ದಿವಸ ಅಲ್ಲಿ ಇದ್ದ
೧೭ ಮೇಲೆಯೂ, ಆಗ ಅರಸನಾದ ಚಿದ್ಕೀಯನು ಕಳುಹಿಸಿ, ಅವನ
ನ್ನು ತೆಗೆಸಿದನು; ಮತ್ತು ಅರಸನು ತನ್ನ ಮನೆಯಲ್ಲಿ ಅಂತರಂ
ಗವಾಗಿ ಅವನನ್ನು ಕೇಳಿ—ಕರ್ತನಿಂದ ಮಾತು ಉಂಟೋ! ಎಂ
ದು ಹೇಳಿದನು, ಉಂಟೆಂದು ಯೆರೆಮಿಾಯನು ಹೇಳಿ, ಮತ್ತು ನೀ
೧೮ ನು ಬಾಬೆಲಿನ ಅರಸನ ಕೈಯಲ್ಲಿ ಒಪ್ಪಿಸಲ್ಪಡುವಿ, ಅಂದನು. ಆಗ
ಯೆರೆಮಿಾಯನು ಅರಸನಾದ ಚಿದ್ಕೀಯನಿಗೆ ಹೇಳಿದ್ದೇನಂದರೆ—
ನೀವು ನನ್ನನ್ನು ಕೆರೆಮನೆಯಲ್ಲಿ ಹಾಕುವ ಹಾಗೆ, ನಾನು ನಿನಗೂ,
ನಿನ್ನ ಸೇವಕರಿಗೂ, ಈ ಜನರಿಗೂ ವಿರೋಧವಾಗಿ, ಏನು ಪಾ
೧೯ ಪ ಮಾಡಿದ್ದೇನೆ! ಇದಲ್ಲದೆ—ಬಾಬೆಲಿನ ಅರಸನು ನಿಮ್ಮ ಮೇಲೆ
ಯೂ, ಈ ದೇಶದ ಮೇಲೆಯೂ, ಬರುವದಿಲ್ಲವೆಂದು ನಿಮಗೆ ಪ್ರ
೨೦ ವಾದಿಸಿದ ನಿಮ್ಮ ಪ್ರವಾದಿಗಳು ಎಲ್ಲಿ! ಆದದರಿಂದ ಈಗ ಕಿವಿಗೊ
ಡು, ನನ್ನ ಕರ್ತನಾದ ಅರಸೇ! ನನ್ನ ವಿಜ್ಞಾಪನೆ ನಿನ್ನ ಮುಂದೆ
ಬರಲಿ; ರಾಯಸದವನಾದ ಯೋನಥಾನನ ಮನೆಗೆ, ನಾನು
೨೧ ಅಲ್ಲಿ ಸಾಯದ ಹಾಗೆ, ನನ್ನನ್ನು ತಿರಿಗಿ ಕಳುಹಿಸ ಬೇಡ. ಆಗ
ಅರಸನಾದ ಚಿದ್ಕೀಯನು, ಯೆರೆಮಿಾಯನನ್ನು ಕಾವಲಿಮನೆ
ಯ ಅಂಗಳದಲ್ಲಿ ಇರಿಸ ಬೇಕೆಂದೂ, ಪಟ್ಟಣದಲ್ಲಿರುವ ಕೊಟ್ಟಿಯೆ
ಲ್ಲಾ ಮುಗಿದು ಹೋಗುವ ಪರ್ಯಂತರ, ಅವನಿಗೆ ಕೊಟ್ಟಿಗಾರ
ರ ಬೀದಿಯಿಂದ ದಿನಕ್ಕೆ ಬಂದು ಕೊಟ್ಟಿ ಕೊಡ ಬೇಕೆಂದೂ, ಆ
ಜ್ಞಾಪಿಸಿದನು; ಹಾಗೆಯೇ ಯೆರೆಮಿಾಯನು ಕಾವಲಿಮನೆಯ ಅಂ
ಗಳದಲ್ಲಿ ನಿಂತನು.

## ೩೮. ಸಂಧಿ.

೧ ಮತ್ತು ಮತ್ಥಾನನ ಮಗನಾದ ಶೆಫತೀಯನೂ, ಪಶ್ಹೂರನ
ಮಗನಾದ ಗೆದಲೀಯನೂ, ಶೆಲೆಮಿಾಯನ ಮಗನಾದ ಯೂಕಾ
ಲನೂ, ಮಲ್ಕೀಯನ ಮಗನಾದ ಪಶ್ಹೂರನೂ, ಯೆರೆಮಿಾಯ
ನು ಜನರೆಲ್ಲರಿಗೆ ಹೇಳಿದ ಮಾತುಗಳನ್ನು ಕೇಳಿದರು; ಅವು ಯಾ
೨ ವವಂದರೆ—ಕರ್ತನು ಹೇಳುತ್ತಾನೆ—ಈ ಪಟ್ಟಣದಲ್ಲಿ ನಿಲ್ಲುವವನು ಕ
ತ್ತಿಯಿಂದಲೂ, ಬರದಿಂದಲೂ, ಜಾಡ್ಯದಿಂದಲೂ, ಸಾಯುವನು;
ಆದರೆ ಕಸ್ದೀಯರ ಬಳಿಗೆ ಹೊರಗೆ ಹೋಗುವವನು ಬದುಕುವ
ನು; ಹೌದು, ಅವನ ಪ್ರಾಣವು ಅವನಿಗೆ ಕೊಳ್ಳೆಯಾಗಿರುವದು;
೩ ಅವನು ಬದುಕುವನು. ಕರ್ತನು ಹೇಳುವದೇನಂದರೆ—ಈ ಪಟ್ಟ
ಣವು ನಿಶ್ಚಯವಾಗಿ ಬಾಬೆಲ್ ಅರಸನ ಸೈನ್ಯದ ಕೈಯಲ್ಲಿ ಒಪ್ಪಿಸ
೪ ಲ್ಪಡುವದು; ಅದು ಅದನ್ನು ಹಿಡಿಯುವದು. ಆದದರಿಂದ ಆ ಪ್ರ
ಧಾನರು ಅರಸನಿಗೆ—ಈ ಮನುಷ್ಯನನ್ನು ಕೊಂದು ಹಾಕ ಬೇ
ಕು; ಯಾಕಂದರೆ ಅವನು, ಇಂಥಾ ಮಾತುಗಳನ್ನು ಅವರ ಸಂ



ಗಡ ಆಡಿ, ಈ ಪಟ್ಟಣದಲ್ಲಿ ಉಳಿದ ಎಲ್ಲಾ ಯುದ್ಧಸ್ಥರ ಕೈಗಳನ್ನೂ,
ಎಲ್ಲಾ ಜನರ ಕೈಗಳನ್ನೂ, ಬಲಹೀನ ಮಾಡುತ್ತಾನೆ; ಯಾಕಂದ
ರೆ, ಈ ಮನುಷ್ಯನು ಈ ಜನರ ಸಮಾಧಾನವನ್ನಲ್ಲ, ಅವರ ಕೇ
೫ ಡನ್ನು ಹುಡುಕುತ್ತಾನೆಂದು ಹೇಳಿದನು. ಆಗ ಅರಸನಾದ ಚಿದ್ಕೀ
ಯನು ಇಗೋ ಅವನು ನಿಮ್ಮ ಕೈಯಲ್ಲಿ ಇದ್ದಾನೆ; ಯಾಕಂದ
ರೆ ನಿಮಗೆ ವಿರೋಧವಾಗಿ ಅರಸನು ಏನು ಮಾಡ ಕೂಡದು, ಅಂ
೬ ದನು. ಆಗಲವರು ಯೆರೆಮಿಾಯನನ್ನು ತಕ್ಕೊಂಡು ಕಾವಲಿ ಮ
ನೆಯ ಅಂಗಳದಲ್ಲಿದ್ದ ಹಮ್ಮೆಲೆಕನ ಮಗನಾದ ಮಲ್ಕೀಯನ ಕೂ
ಣೆಯಲ್ಲಿ ಹಾಕಿದರು; ಅವರು ಯೆರೆಮಿಾಯನನ್ನು ಹಗ್ಗಗಳಿಂದ
ಇಳಿಸಿದರು; ಆಕೂಣೆಯಲ್ಲಿ ನೀರು ಇರಲಿಲ್ಲ; ಕೆಸರು ಮಾತ್ರ ಇ
ತ್ತು; ಮತ್ತು ಯೆರೆಮಿಾಯನು ಕೆಸರಿನಲ್ಲಿ ಮುಣುಗಿದನು.
೭ ಆಗ ಅರಸನ ಮನೆಯಲ್ಲಿರುವ ಪೊಜ್ಜೆಯವನಾದ ಕೂಷ್ಯ
ನಾದ ಏಬೆದ್ಮೇಲೆಕನು, ಅವರು ಯೆರೆಮಿಾಯನನ್ನು ಕೂಣೆಯ
ಲ್ಲಿ ಹಾಕಿದರೆಂದು ಕೇಳಿದಾಗ, ಅರಸನು ಬೆನ್ಯಮಿನನ ಬಾಗಲ
೮ ಲ್ಲಿ ಕೂತಿರಲಾಗಿ, ಏಬೆದ್ಮೇಲೆಕನು ಅರಸನ ಮನೆಯನ್ನು ಬಿಟ್ಟು
ಹೊರಟು, ಅರಸನ ಸಂಗಡ ಮಾತಾಡಿ, ಹೇಳಿದ್ದೇನಂದರೆ—ನನ್ನ
೯ ಕರ್ತನಾದ ಅರಸನೇ, ಈ ಮನುಷ್ಯರು ಕೂಣೆಯಲ್ಲಿ ಹಾಕಿದ
ಪ್ರವಾದಿಯಾದ ಯೆರೆಮಿಾಯನಿಗೆ ಮಾಡಿದ್ದೆಲ್ಲಾ ಅನ್ಯಾಯವಾ
ಗಿ ಮಾಡಿದ್ದಾರೆ; ಅವನು ಇರುವಲ್ಲಿ ಹಸಿವೆಯಿಂದ ಸಾಯುತ್ತಾ
೧೦ ನೆ; ಯಾಕಂದರೆ ಪಟ್ಟಣದಲ್ಲಿ ಇನ್ನು ರೊಟ್ಟಿ ಇಲ್ಲ. ಆಗ ಅರಸ
ನು ಕೂಷ್ಯನಾದ ಏಬೆದ್ಮೇಲೆಕನಿಗೆ—ನೀನು ಇಲ್ಲಿಂದ ಮೂವತ್ತು
ಮನುಷ್ಯರನ್ನು ಕರೆಕೊಂಡು ಹೋಗಿ, ಪ್ರವಾದಿಯಾದ ಯೆರೆ
ಮಿಾಯನನ್ನು, ಅವನು ಸಾಯುವದಕ್ಕಿಂತ ಮುಂಚೆ, ಕೂಣೆಯೊ
೧೧ ಳಗಿಂದ ಎತ್ತೆಂದು ಆಜ್ಞಾಪಿಸಿದನು. ಆಗ ಏಬೆದ್ಮೇಲೆಕನು ಆ ಮ
ನುಷ್ಯರನ್ನು ಕರೆಕೊಂಡು ಭಂಡಾರದ ಕೆಳಗಿರುವ ಅರಮನೆಗೆ
ಹೋಗಿ, ಅಲ್ಲಿಂದ ಹರಿದು ಹೋದ, ಹಳೇ ಬಟ್ಟೆಗಳನ್ನೂ, ಸವೆ
ದು ಹೋದ ಹಳೇ ವಸ್ತ್ರಗಳನ್ನು ತಕ್ಕೊಂಡು, ಅವುಗಳನ್ನು ಹ
ಗ್ಗಗಳಿಂದ ಯೆರೆಮಿಾಯನ ಬಳಿಗೆ ಕೂಣೆಯೊಳಗೆ ಇಳಿಸಿದನು.
೧೨ ಮತ್ತು ಕೂಷ್ಯನಾದ ಏಬೆದ್ಮೇಲೆಕನು ಯೆರೆಮಿಾಯನಿಗೆ—
ಈ ಹರಿದು ಸವೆದು ಹೋದ ಹಳೇ ಬಟ್ಟೆಗಳನ್ನು ಹಗ್ಗಗಳ ಕೆ
ಳಗೆ ನಿನ್ನ ಕೊಂಕಳುಗಳಲ್ಲಿ ಇಡು, ಅಂದನು; ಯೆರೆಮಿಾಯನು
೧೩ ಹಾಗೆ ಮಾಡಿದನು. ಆಗ ಹಗ್ಗಗಳಿಂದ ಯೆರೆಮಿಾಯನನ್ನು ಎಳೆ
ದು, ಅವನನ್ನು ಕೂಣೆಯೊಳಗಿಂದ ಎತ್ತಿದರು; ಆ ಮೇಲೆ ಯೆರೆ
ಮಿಾಯನು ಕಾವಲಿಮನೆಯ ಅಂಗಳದಲ್ಲಿ ನಿಂತನು.
೧೪ ಆಗ ಅರಸನಾದ ಚಿದ್ಕೀಯನು ಕಳುಹಿಸಿ ಪ್ರವಾದಿಯಾದ
ಯೆರೆಮಿಾಯನನ್ನು ತನ್ನ ಬಳಿಗೆ, ಕರ್ತನ ಮನೆಯಲ್ಲಿರುವ
ಮೂರನೇ ಪ್ರವೇಶಕ್ಕೆ ಕರೆ ಕೊಂಡು ಹೋದನು. ಆಗ ಅರಸನು
ಯೆರೆಮಿಾಯನಿಗೆ—ನಾನು ನಿನ್ನಿಂದ ಒಂದು ಕೇಳುತ್ತೇನೆ, ನನಗೆ
೧೫ ಯಾವದನ್ನಾದರೂ ಬಚ್ಚಿಡ ಬೇಡ, ಅಂದನು. ಆಗ ಯೆರೆಮಿಾ
ಯನು ಚಿದ್ಕೀಯನಿಗೆ—ನಾನು ನಿನಗೆ ತಿಳಿಸಿದರೆ, ನೀನು ನನ್ನ
ನ್ನು ನಿಶ್ಚಯವಾಗಿ ಕೊಂದು ಹಾಕುವದಿಲ್ಲವೋ! ನಾನು ನಿನಗೆ
ಆಲೋಚನೆ ಹೇಳಿದರೆ ನೀನು ನನ್ನನ್ನು ಕೇಳುವದಿಲ್ಲ, ಅಂದನು.
೧೬ ಆಗ ಅರಸನಾದ ಚಿದ್ಕೀಯನು, ಯೆರೆಮಿಾಯನಿಗೆ ಅಂತರಂಗ
ದಲ್ಲಿ ಪ್ರಯಾಣ ಮಾಡಿ—ನಮಗೆ ಈ ಪ್ರಾಣವನ್ನುಂಟುಮಾ
ಡಿದ ಕರ್ತನ ಜೀವಸಾಕ್ಷಿ, ನಾನು ನಿನ್ನನ್ನು ಕೊಂದು ಹಾಕುವ
ದಿಲ್ಲ; ನಿನ್ನ ಪ್ರಾಣವನ್ನು ಹುಡುಕುವ ಈ ಮನುಷ್ಯರ ಕೈಯ
ಲ್ಲಿ ಒಪ್ಪಿಸುವದಿಲ್ಲ, ಅಂದನು.
೧೭ ಆಗ ಯೆರೆಮಿಾಯನು ಚಿದ್ಕೀಯನಿಗೆ ಹೇಳಿದ್ದೇನಂದರೆ,—ಇ
ಸ್ರಯೇಲಿನ ದೇವರಾಗಿರುವ ಸೈನ್ಯಗಳ ದೇವರಾದ ಕರ್ತನು ಹೀ
ಗೆ ಹೇಳುತ್ತಾನೆ—ನೀನು ನಿಶ್ಚಯವಾಗಿ ಬಾಬೆಲಿನ ಅರಸನ ಪ್ರಧಾ
ನರ ಬಳಿಗೆ ಹೊರಗೆ ಹೋದರೆ, ನಿನ್ನ ಪ್ರಾಣವು ಬದುಕುವದು,
ಈ ಪಟ್ಟಣವು ಬೆಂಕಿಯಿಂದ ಸುಡಲ್ಪಡುವದಿಲ್ಲ; ಮತ್ತು ನೀನೂ
೧೮ ನಿನ್ನ ಮನೆಯವರೂ ಬದುಕುವಿರಿ. ಆದರೆ ನೀನು ಬಾಬೆಲಿನ ಅರ
ಸನ ಪ್ರಧಾನರ ಬಳಿಗೆ ಹೊರಗೆ ಹೋಗದಿದ್ದರೆ, ಈ ಪಟ್ಟಣವು ಕ
ಸ್ದೀಯರ ಕೈಯಲ್ಲಿ ಒಪ್ಪಿಸಲ್ಪಡುವದು; ಅವರು ಅದನ್ನು ಬೆಂಕಿ
ಯಿಂದ ಸುಡುವರು; ಮತ್ತು ನೀನು ಅವರ ಕೈಗೆ ತಪ್ಪಿಸಿಕೊಳ್ಳುವ
೧೯ ದಿಲ್ಲ. ಆಗ ಅರಸನಾದ ಚಿದ್ಕೀಯನು ಯೆರೆಮಿಾಯನಿಗೆ—ನಾ
ನು ಕಸ್ದೀಯರಿಗೆ ಒಳಪಟ್ಟ ಯೆಹೂದ್ಯರ ವಿಷಯ ಅಂಜುತ್ತೇನೆ;
ಒಂದುವೇಳೆ ಅವರು ನನ್ನನ್ನು ಅವರ ಕೈಯಲ್ಲಿ ಒಪ್ಪಿಸುವರು,
೨೦ ಆಗಲವರು ನನ್ನನ್ನು ಅಪಹಾಸ್ಯ ಮಾಡುವರು, ಅಂದನು. ಆದರೆ
ಯೆರೆಮಿಾಯನು ಹೇಳಿದ್ದೇನಂದರೆ—ನಿನ್ನನ್ನು ಒಪ್ಪಿಸುವದಿಲ್ಲ,
ನಾನು ನಿನಗೆ ಹೇಳುವ ಕರ್ತನ ವಾಕ್ಯವನ್ನು ಮಾತ್ರ ಕೇಳು; ಆ
೨೧ ಗ ನಿನಗೆ ಬಳ್ಳೇದಾಗುವದು; ನಿನ್ನ ಪ್ರಾಣ ಬದುಕುವದು. ಆದ
ರೆ ನೀನು ಹೊರಗೆ ಹೋಗ ಮನಸ್ಸಿಲ್ಲದ ಪಕ್ಷದಲ್ಲಿ, ಕರ್ತನು ನನ
೨೨ ಗೆ ತೋರಿಸಿದ ಮಾತು ಇದೇ—ಇಗೋ ಯೆಹೂದದ ಅರಸನ
ಮನೆಯಲ್ಲಿ ಉಳಿದ ಹೆಂಗಸರೆಲ್ಲರು, ಬಾಬೆಲಿನ ಅರಸನ ಪ್ರಧಾನ
ರ ಬಳಿಗೆ ಹೊರಗೆ ತರಲ್ಪಟ್ಟು, ಹೇಳುವದೇನಂದರೆ—ನಿನ್ನ ಸ್ನೇ
ಹಿತರು ನಿನ್ನನ್ನು ಪ್ರೇರೇಪಿಸಿ ನಿನ್ನನ್ನು ಗೆದ್ದಿದ್ದಾರೆ; ನಿನ್ನ ಕಾ
ಲುಗಳು ಕೆಸರಿನಲ್ಲಿ ಮುಣಿಗಲೆ; ಆದರೆ ಅವರು ಹಿಂಜರಿದಿದ್ದಾರೆ.
೨೩ ಹಾಗೆ ನಿನ್ನ ಹೆಂಡತಿಯರೆಲ್ಲರನ್ನೂ ನಿನ್ನ ಮಕ್ಕಳನ್ನೂ ಕಸ್ದೀಯರ
ಬಳಿಗೆ ಹೊರಗೆ ತರುವರು; ಮತ್ತು ನೀನು ಅವರ ಕೈಗೆ ತಪ್ಪಿಸಿಕೊ
ಳ್ಳುವದಿಲ್ಲ; ಬಾಬೆಲಿನ ಅರಸನ ಕೈಯಿಂದ ಹಿಡಿಯಲ್ಪಡುವಿ; ಮ
ತ್ತು ಈ ಪಟ್ಟಣವನ್ನು ನೀನೇ ಬೆಂಕಿಯಿಂದ ಸುಡಿಸುವಿ.
೨೪ ಆಗ ಚಿದ್ಕೀಯನು ಯೆರೆಮಿಾಯನಿಗೆ ಹೇಳಿದ್ದೇನಂದರೆ—
ನೀನು ಸಾಯದ ಹಾಗೆ ಈ ಮಾತುಗಳನ್ನು ಯಾರಿಗೂ ತಿಳಿಸ
೨೫ ಬಾರದು. ಆದರೆ ಪ್ರಧಾನರು, ನಾನು ನಿನ್ನ ಸಂಗಡ ಮಾತಾಡಿ
ದ್ದೇನೆಂದು ಕೇಳಿ, ನಿನ್ನ ಬಳಿಗೆ ಬಂದು—ನೀನು ಅರಸನಿಗೆ ಹೇಳಿ
ದ್ದನ್ನು ನಮಗೆ ಮರೆ ಮಾಡದೆ ತಿಳಿಸು; ನಾವು ನಿನ್ನನ್ನು ಕೊಂ
ದು ಹಾಕುವದಿಲ್ಲ; ಅರಸನು ನಿನ್ನ ಸಂಗಡ ಮಾತಾಡಿದ್ದನ್ನು ಸ
೨೬ ಹ ತಿಳಿಸು ಎಂದು ಹೇಳಿದರೆ—ನೀನು ಅವರಿಗೆ—ನನ್ನನ್ನು ತಿರಿಗಿ
ಯೊನಥಾನನ ಮನೆಗೆ, ನಾನು ಅಲ್ಲಿ ಸಾಯುವ ಹಾಗೆ, ತಕ್ಕೊಂ
ಡು ಹೋಗಲೀಸ ಬೇಡವೆಂದು, ಅರಸನ ಮುಂದೆ ಬಿನ್ನಹ ಮಾಡಿದೆ
೨೭ ನೆಂದು ಹೇಳು. ಆಗ ಪ್ರಧಾನರೆಲ್ಲರೂ ಯೆರೆಮಿಾಯನ ಬಳಿಗೆ
ಬಂದು, ಅವನನ್ನು ಕೇಳಿದರು. ಅವನು ಅರಸನು ಆಜ್ಞಾಪಿಸಿದ ಈ
ಮಾತುಗಳನ್ನೆಲ್ಲಾ ಅವರಿಗೆ ತಿಳಿಸಿದನು; ಆಗಲವರು ಸುಮ್ಮನಿದ್ದು,
ಅವನನ್ನು ಬಿಟ್ಟರು, ಯಾಕಂದರೆ ಅಕಾರ್ಯದ ಸುದ್ದಿ ಈಚೆಗೆ
೨೮ ಬರಲಿಲ್ಲ. ಈ ಪ್ರಕಾರ ಯೆರೂಸಲೇಮು ಹಿಡಿಯಲ್ಪಡುವ ದಿವಸ
ದ ಪರ್ಯಂತರ ಯೆರೆಮಿಾಯನು ಕಾವಲಿಮನೆಯ ಅಂಗಳದ
ಲ್ಲಿ ವಾಸವಾಗಿದ್ದನು; ಯೆರೂಸಲೇಮು ಹಿಡಿಯಲ್ಪಡುವಾಗ ಅಲ್ಲೇ
ಇದ್ದನು.

## ೩೯. ಸಂಧಿ.

೧ ಯೆಹೂದದ ಅರಸನಾದ ಚೆದ್ಕಿಯೆನ ಒಂಭತ್ತನೇ ವರುಷದ
ಹತ್ತನೇ ತಿಂಗಳಲ್ಲಿ, ಬಾಬೆಲಿನ ಅರಸನಾದ ನೆಬುಕದ್ನೇಚರನೂ,
ಅವನ ಸೈನ್ಯವೆಲ್ಲವೂ, ಯೆರೂಸಲೇಮಿಗೆ ವಿರೋಧವಾಗಿ ಬಂದು,
೨ ಅದನ್ನು ಮುತ್ತಿಗೆ ಹಾಕಿದರು. ಚೆದ್ಕಿಯೆನ ಹನ್ನೊಂದನೇ ವರು
ದದಲ್ಲಿ, ನಾಲ್ಕನೇ ತಿಂಗಳಿನ ಒಂಭತ್ತನೇ ದಿವಸದಲ್ಲಿ, ಪಟ್ಟಣವು
೩ ಒಡೆಯಲ್ಪಟ್ಟಿತು. ಆಗ ಬಾಬೆಲಿನ ಅರಸನ ಪ್ರಧಾನರೆಲ್ಲರೂ, ನೆ
ರ್ಗಲ್ ಶರೇಚರನೂ, ಸಮ್ಗಾರ್ ನಿಬೋವನೂ, ಬೊಜ್ಜೆಯರ ಮು
ಖ್ಯಸ್ತನಾದ ಸಾರ್ಸೆಕೀಮನೂ, ಪಂಡಿತರ ಮುಖ್ಯಸ್ತನಾದ ನ
ರ್ಗಲ್ ಶರೇಚರನೂ, ಮೊದಲಾದ ಬಾಬೆಲಿನ ಅರಸನ ಪ್ರಧಾನರೆಲ್ಲ
ರೂ, ಬಂದು, ನಡು ಬಾಗಲಲ್ಲಿ ಕೂತು ಕೊಂಡರು.

೪ ಆಗಲಾದದ್ದೇನಂದರೆ—ಯೆಹೂದದ ಅರಸನಾದ ಚೆದ್ಕಿಯೆ
ನೂ ಯುದ್ಧಸ್ತರೆಲ್ಲರೂ ಅವರನ್ನು ನೋಡಿದಾಗ ಓಡಿ ಹೋಗಿ,
ರಾತ್ರಿಯಲ್ಲಿ ಪಟ್ಟಣವನ್ನು ಅರಸನ ತೋಟದ ಮಾರ್ಗದಿಂದ ಬಿಟ್ಟು,
ಎರಡು ಗೋಡೆಗಳ ನಡುವೆಯಲ್ಲಿರುವ ಬಾಗಲಿಂದ ಹೊರಟರು;
೫ ಅವನು ಬೈಲುಸೀಮೆಯ ಮಾರ್ಗವಾಗಿ ಹೊರಟನು. ಆದರೆ ಕ
ಸ್ದೀಯರ ದಂಡು ಅವರನ್ನು ಹಿಂದಟ್ಟಿ ಚೆದ್ಕಿಯೆನನ್ನು ಯೆರಿಕೋ
ವಿನ ಬೈಲಿನಲ್ಲಿ ಕಲಕರು; ಅವರು ಅವನನ್ನು ಹಿಡಿದು, ಬಾಬೆಲಿನ ಅ
ರಸನಾದ ನೆಬುಕದ್ನೇಚರನ ಬಳಿಗೆ ಹಾಮಾತ್ ದೇಶದಲ್ಲಿರುವ ರಿ
ಬ್ಲಕ್ಕೆ ತಕ್ಕೊಂಡು ಹೊದರು. ಅಲ್ಲಿ ಅವನು ಅವನಿಗೆ ನ್ಯಾಯತೀ
೬ ರಿಸಿದನು. ಬಾಬೆಲಿನ ಅರಸನು ಚೆದ್ಕಿಯೆನ ಮಕ್ಕಳನ್ನು ರಿಬ್ಲದ
ಲ್ಲಿ ಅವನ ಕಣ್ಣುಗಳ ಮುಂದೆ ಕೊಂದು ಹಾಕಿದನು; ಮತ್ತು ಯೆ
ಹೂದದ ಘನವುಳ್ಳವರೆಲ್ಲರನ್ನು ಬಾಬೆಲಿನ ಅರಸನು ಕೊಂದು ಹಾ
೭ ಕಿದನು. ಇದಲ್ಲದೆ ಚೆದ್ಕಿಯೆನ ಕಣ್ಣುಗಳನ್ನು ಅವನು ಕಿತ್ತು
ಹಾಕಿ, ಅವನಿಗೆ ಎರಡು ಹಿತ್ತಾಳೆಯ ಸಂಕೋಲೆಗಳನ್ನು ಕಟ್ಟಿಸಿ,
೮ ಬಾಬೆಲಿಗೆ ತಕ್ಕೊಂಡು ಹೊದನು. ಇದಲ್ಲದೆ ಅರಸನ ಮನೆಯ
ನೂ ಜನರ ಮನೆಗಳನ್ನೂ ಕಸ್ದೀಯರು ಬೆಂಕಿಯಿಂದ ಸುಟ್ಟ
೯ ರು; ಮತ್ತು ಯೆರೂಸಲೇಮಿನ ಗೋಡೆಗಳನ್ನು ಕೆಡಿವಿ ಬಿಟ್ಟರು.
ಮತ್ತು ಪಟ್ಟಣದೊಳಗೆ ಉಳಿದ ಜನರಲ್ಲಿ ಮಿಕ್ಕವರನ್ನೂ, ಅವನ ಕ
ಡೆಗೆ ಬಳಿ ಬಿದ್ದವರನ್ನೂ, ಉಳಿದ ಜನರಲ್ಲಿ ಮಿಕ್ಕವರನ್ನೂ, ಕಾವ
ಲಿಯವರ ಅಧಿಪತಿಯಾದ ನೆಬುಜರದಾನನು ಬಾಬೆಲಿಗೆ ತಕ್ಕೊಂ
೧೦ ಡು ಹೋದನು. ಆದರೆ ಜನರೊಳಗೆ ಏನಿಲ್ಲದವರಾದ ಬಡವರಲ್ಲಿ
ಕೆಲವರನ್ನು ಕಾವಲಿಯವರ ಅಧಿಪತಿಯಾದ ನೆಬುಜರದಾನನು
ಯೆಹೂದ ದೇಶದಲ್ಲಿ ಬಿಟ್ಟು, ಅವರಿಗೆ ಆ ದಿನದಲ್ಲಿ ದ್ರಾಕ್ಷೆತೋ
ಟಗಳನ್ನೂ, ಹೊಲಗಳನ್ನೂ, ಕೊಟ್ಟನು.

೧೧ ಇದಲ್ಲದೆ ಯೆರೆಮಿಾಯನ ವಿಷಯ ಬಾಬೆಲಿನ ಅರಸನಾದ
ನೆಬುಕದ್ನೇಚರನು ಕಾವಲಿಯವರ ಅಧಿಪತಿಯಾದ ನೆಬುಜರದಾ
ನನಿಗೆ ಆಜ್ಞಾಪಿಸಿದ್ದೇನಂದರೆ—ಅವನನ್ನು ತಕೋ; ಅವನ ಮೇಲೆ
೧೨ ಕಣ್ಣಿಡು, ಅವನಿಗೆ ಕೆಟ್ಟದ್ದೇನಾದರೂ ಮಾಡ ಬೇಡ; ಆದರೆ ಅ
ವನು ನಿನಗೆ ಹ್ಯಾಗೆ ಹೇಳುವನೋ ಹಾಗೆಯೇ ಅವನಿಗೆ ಮಾಡು.
೧೩ ಆಗ ಕಾವಲಿಯವರ ಅಧಿಪತಿಯಾದ ನೆಬುಜರದಾನನೂ, ಶೊ
ಜ್ಜೆಯರ ಮುಖ್ಯಸ್ತನಾದ ನೆಬುಷಸ್ಬಾನನೂ, ಪಂಡಿತರ ಮುಖ್ಯ
ಸ್ತನಾದ ನೆರ್ಗಲ್ ಶರೇಚರನೂ, ಬಾಬೆಲಿನ ಅರಸನ ಪ್ರಧಾನರೆಲ್ಲ
೧೪ ರೂ, ಕಳುಹಿಸಿದರು. ಅವರು ಕಳುಹಿಸಿ, ಯೆರೆಮಿಾಯನನ್ನು
ಕಾವಲಿ ಮನೆಯ ಅಂಗಳದಿಂದ ತೆಗೆಸಿ, ಶಾಪಾನನ ಮಗನಾದ
ಅಹೀಕಮನ ಮಗನಾದ ಗೆದಲೀಯನಿಗೆ ಒಪ್ಪಿಸಿ, ಮನೆಗೆ ಕರೆಕೊಂ
ಡು ಹೋಗ ಬೇಕೆಂದು ಅಪ್ಪಣೆ ಕೊಟ್ಟರು. ಹಾಗೆ ಅವನು ಜ
೧೫ನರ ಮಧ್ಯದಲ್ಲಿ ವಾಸವಾಗಿದ್ದನು.

ಮತ್ತು ಯೆರೆಮಿಾಯನು ಕಾವಲಿಮನೆಯ ಅಂಗಳದಲ್ಲಿ
೧೬ ಮುಚ್ಚಲ್ಪಟ್ಟಿರುವಾಗ, ಕರ್ತನ ವಾಕ್ಯವು ಅವನಿಗೆ ಉಂಟಾಗಿ,
ಹೇಳಿದ್ದೇನಂದರೆ—ನೀನು ಹೋಗಿ ಕೂಷ್ಯನಾದ ಏಬೆದ್ಮೆಲೆಕನ
ಸಂಗಡ ಮಾತಾಡಿ ಹೇಳ ತಕ್ಕದ್ದೇನಂದರೆ—
ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೀಗೆ ಹೇಳು
ತ್ತಾನೆ—
ಇಗೋ ನಾನು ಒಳ್ಳೇದಕ್ಕಾಗಿ ಅಲ್ಲ, ಕೆಟ್ಟದ್ದಕ್ಕಾಗಿ
ನನ್ನ ಮಾತುಗಳನ್ನು ಈ ಪಟ್ಟದ ಮೇಲೆ ಬರ ಮಾಡುತ್ತೇನೆ;
ಅವು ಆ ದಿವಸದಲ್ಲಿ ನಿನ್ನ ಮುಂದೆಯೇ ಉಂಟಾಗುವವು.
೧೭ ಆದರೆ ಆ ದಿವಸದಲ್ಲಿ ನಿನ್ನನ್ನು ತಪ್ಪಿಸಿ ಬಿಡುವೆನೆಂದು ಕರ್ತನು
ಅನ್ನುತ್ತಾನೆ;
ನೀನು ಹೆದರಿಕೊಳ್ಳುವ ಮನುಷ್ಯರ ಕೈಯಲ್ಲಿ ಒಪ್ಪಿಸಲ್ಪಡು
ವದಿಲ್ಲ.
೧೮ ಯಾಕಂದರೆ ನಾನು ನಿಶ್ಚಯವಾಗಿ ನಿನ್ನನ್ನು ತಪ್ಪಿಸುವೆನು;
ನೀನು ಕತ್ತಿಯಿಂದ ಬೀಳುವದಿಲ್ಲ;
ನೀನು ನನ್ನಲ್ಲಿ ನಂಬಿಕೆ ಇಟ್ಟದರಿಂದ
ನಿನ್ನ ಪ್ರಾಣವು ನಿನಗೆ ಕೊಳ್ಳೆಯಾಗಿರುವದೆಂದು,
ಕರ್ತನು ಅನ್ನುತ್ತಾನೆ.

## ೪೦. ಸಂಧಿ.

೧ ಕಾವಲಿಯವರ ಅಧಿಪತಿಯಾದ ನೆಬುಜರದಾನನು ಯೆರೆಮಿ
ಯನನ್ನು ಸಂಕೋಲೆಗಳಿಂದ ಕಟ್ಟಿಸಿ, ಬಾಬೆಲಿಗೆ ವೈಯುವ ಯೆ
ರೂಸಲೇಮಿನ ಯೆಹೂದದ ಕೆರೆಯವರೆಲ್ಲರ ಮಧ್ಯದಲ್ಲಿ ತಕ್ಕೊಂ
ಡು ಹೋಗಿ, ರಾಮದಿಂದ ಬಿಟ್ಟು ಕಳುಹಿಸಿದ ಮೇಲೆ, ಯೆರೆಮಿಾ
ಯನಿಗೆ ಕರ್ತನಿಂದ ಉಂಟಾದ ವಾಕ್ಯವು.

೨ ಕಾವಲಿಯವರ ಅಧಿಪತಿಯು ಯೆರೆಮಿಾಯನನ್ನು ತಕ್ಕೊಂ
ಡು ಅವನಿಗೆ ಹೇಳಿದ್ದೇನಂದರೆ— ನಿನ್ನ ದೇವರಾದ ಕರ್ತನು ಈ
ಕೇಡನ್ನು ಈ ಸ್ಥಳದ ವಿಷಯ ಹೇಳಿದ್ದಾನೆ. ಹೇಳಿದ ಪ್ರಕಾರವೇ
೩ ಕರ್ತನು ಅದನ್ನು ತರಿಸಿ ಮಾತಾಡಿದ್ದಾನೆ; ನೀವು ಕರ್ತನಿಗೆ ವಿರೋ
ಧವಾಗಿ ಪಾಪ ಮಾಡಿ, ಅವನ ಶಬ್ದವನ್ನು ಕೇಳದೆ ಹೋದದರಿಂ
ದಲೇ ಈ ಕಾರ್ಯವು ನಿಮಗೆ ಸಂಭವಿಸಿದೆ. ಈಗ ಇಗೋ,ನಿನ್ನ
೪ ಕೈಗಳ ಮೇಲಿರುವ ಸಂಕೋಲೆಗಳನ್ನು ಈಹೊತ್ತು ಬಿಚ್ಚುತ್ತೇನೆ
ನನ್ನ ಸಂಗಡ ಬಾಬೆಲಿಗೆ ಬರುವದಕ್ಕೆ ನಿನಗೆ ಒಳ್ಳೇದೆಂದು ತೋ
ಚಿದರೆ, ಬಾ, ನಾನು ನಿನ್ನ ಮೇಲೆ ಕಣ್ಣಿಡುವೆನು; ಆದರೆ ನನ್ನ ಸಂ
ಗಡ ಬಾಬೆಲಿಗೆ ಬರುವದಕ್ಕೆ ನಿನಗೆ ಕೆಟ್ಟದ್ದೆಂದು ತೋಚಿದರೆ, ಅ
ದನ್ನು ಬಿಡು. ಇಗೋ ದೇಶವೆಲ್ಲಾ ನಿನ್ನ ಮುಂದೆ ಅದೆ; ಎಲ್ಲಿ
ಹೋಗುವದಕ್ಕೆ ನಿನಗೆ ಒಳ್ಳೇದೆಂದೂ ಸರಿಯೆಂದೂ ಕಾಣುತ್ತ
೫ ದೋ, ಅಲ್ಲಿಗೆ ಹೋಗು. ಯೆರೆಮಿಾಯನು ಇನ್ನೂ ತಿರುಗವೆ
ಇರುವಾಗ ನೆಬುಜರದಾನನು ಹೇಳ್ದಿದ್ದೇನಂದರೆ—ಬಾಬೆಲಿನ ಅರಸ
ನು ಯೆಹೂದದ ಪಟ್ಟಣಗಳ ಮೇಲೆ ಅಧಿಕಾರಿಯಾಗಿ ಇಟ್ಟ ಶಾಪಾ
ನನ ಮಗನಾದ, ಅಹೀಕಮನ ಮಗನಾದ, ಗದಲೀಯನ ಬಳಿಗೆ



ತಿರುಗಿಕೋ; ಅವನ ಸಂಗಡ ಜನರೊಳಗೆ ವಾಸ ಮಾಡು; ಇಲ್ಲವೇ
ಎಲ್ಲಿ ಹೋಗುವದಕ್ಕೆ ನಿನಗೆ ಸರಿಯಾಗಿ ಕಾಣುತ್ತದೋ ಅಲ್ಲಿಗೆ
ಹೋಗು; ಆಗ ಕಾವಲಿಯವರ ಅಧಿಪತಿಯು ಅವನಿಗೆ ಆಹಾರವ
೬ನ್ನೂ ಬಹುಮಾನವನ್ನೂ ಕೊಟ್ಟು, ಕಳುಹಿಸಿ ಬಿಟ್ಟನು. ಮತ್ತು
ಯೆರೆಮಿಾಯನು ಅಹೀಕಮನ ಮಗನಾದ ಗೆದಲೀಯನ ಬಳಿಗೆ
ಮಿಚ್ಪಕ್ಕೆ ಹೋಗಿ, ದೇಶದಲ್ಲಿ ಉಳಿದ ಜನರ ಸಂಗಡ ಅವನ ಬ
ಳಿಯಲ್ಲಿ ವಾಸ ಮಾಡಿದನು.

೭ ಆಗ ಶೀಮೆಯಲ್ಲಿರುವ ಸೈನ್ಯಾಧಿಪತಿಗಳೆಲ್ಲಾ, ಅವರೂ ತಮ್ಮ
ಮನುಷ್ಯರೂ, ಬಾಬೆಲಿನ ಅರಸನು ಅಹೀಕಮನ ಮಗನಾದ ಗೆದ
ಲೀಯನನ್ನು ದೇಶದ ಮೇಲೆ ನೇಮಿಸಿ ಇದ್ದನೆಂದು ಬಾಬೆಲಿಗೆ ವೈ
ಯ್ಯಲ್ಪಡದೆ ಇದ್ದ ಗಂಡಸರನ್ನೂ ಹೆಂಗಸರನ್ನೂ ಮಕ್ಕಳನ್ನೂ
೮ ದೇಶದ ಬಡವರನ್ನೂ ಅವನಿಗೆ ಒಪ್ಪಿಸಿ ಇದ್ದನೆಂದು ಕೇಳಿದಾಗ, ನೆತ
ನೀಯನ ಮಗನಾದ ಇಷ್ಮಾಯೇಲನೂ ಕರೀಯನ ಕುಮಾರ
ರಾದ ಯೋಹಾನನೂ ಯೋನತಾನನೂ ತನುಮೇತನ ಮಗನಾ
ದ ಸೆರಾಯನೂ ನೆತೊಫಾತ್ಯನಾದ ಎಫಾಯನ ಕುಮಾರ
ರೂ ಮಾಕಥ್ಯನ ಮಗನಾದ ಯೆಜನೀಯನೂ ಇವರು, ತಮ್ಮ
ಮನುಷ್ಯರ ಸಹಿತವಾಗಿ, ಗೆದಲೀಯನ ಬಳಿಗೆ ಮಿಚ್ಪಕ್ಕೆ ಬಂದ
೯ ರು. ಆಗ ಶಾಪಾನನ ಮಗನಾದ ಅಹೀಕಮನ ಮಗನಾದ ಗೆದ
ಲೀಯನು, ಅವರಿಗೂ ಅವರ ಮನುಷ್ಯರಿಗೂ ಪ್ರಮಾಣ ಮಾಡಿ
ಹೇಳಿದ್ದೇನಂದರೆ—ಕಸ್ದೀಯರಿಗೆ ಸೇವೆ ಮಾಡುವದಕ್ಕೆ ಭಯ ಪ
ಡ ಬೇಡಿರಿ; ದೇಶದಲ್ಲಿ ವಾಸವಾಗಿದ್ದು ಬಾಬೆಲಿನ ಅರಸನಿಗೆ ಸೇವೆ
೧೦ ಮಾಡಿರಿ; ಆಗ ನಿಮಗೆ ಒಳ್ಳೇದಾಗುವದು. ನಾನಾದರೆ, ಇಗೋ
ನಾನು ನಮ್ಮ ಬಳಿಗೆ ಬರುವ ಕಸ್ದೀಯರ ಹತ್ತಿರ ಕಾದು ಕೊಳ್ಳು
ವದಕ್ಕೆ ಮಿಚ್ಪದಲ್ಲಿ ವಾಸ ಮಾಡುವೆನು; ಆದರೆ ನೀವು ದ್ರಾಕ್ಷೆ ರ
ಸವನ್ನೂ ಹಣ್ಣುಗಳನ್ನೂ ಎಣ್ಣೆಯನ್ನೂ ಕೂಡಿಸಿ, ನಿಮ್ಮ ಪಾ
ತ್ರೆಗಳಲ್ಲಿ ಇಟ್ಟು, ನೀವು ಹಿಡಿದಿರುವ ನಿಮ್ಮ ಪಟ್ಟಣಗಳಲ್ಲಿ ವಾಸವಾ
೧೧ ಗಿರಿ. ಹಾಗೆಯೇ ಮೋವಾಬಿನಲ್ಲಿಯೂ ಅಮ್ಮೋನನ ಮಕ್ಕಳಲ್ಲಿ
ಯೂ ಏದೋಮಿನಲ್ಲಿಯೂ ಸಕಲ ದೇಶಗಳಲ್ಲಿಯೂ ಇದ್ದ ಯೆ
ಹೂದ್ಯರೆಲ್ಲರು ಬಾಬೆಲಿನ ಅರಸನು ಯೆಹೂದದಕ್ಕೆ ಉಳಿವನ್ನು
ಬಿಟ್ಟಿದ್ದನೆಂದೂ ಶಾಪಾನನ ಮಗನಾದ ಅಹೀಕಮನ ಮಗನಾದ
೧೨ ಗೆದಲೀಯನನ್ನು ಅವರ ಮೇಲೆ ಇಟ್ಟಿದ್ದನೆಂದು ಕೇಳಿದಾಗ, ಯೆ
ಹೂದ್ಯರೆಲ್ಲರು, ಅವರು ಓಡಿಸಲ್ಪಟ್ಟ ಎಲ್ಲಾ ಸ್ಥಳಗಳಿಂದ ತಿರುಗಿ
ಕೊಂಡು, ಯೆಹೂದ ದೇಶಕ್ಕೆ ಗೆದಲೀಯನ ಬಳಿಗೆ, ಮಿಚ್ಪಕ್ಕೆ
ಬಂದು, ಬಹು ಅಧಿಕವಾಗಿ ದ್ರಾಕ್ಷೆರಸವನ್ನೂ ಹಣ್ಣುಗಳನ್ನೂ
ಕೂಡಿಸಿದರು.

೧೩ ಇದಲ್ಲದೆ ಕರೀಯನ ಮಗನಾದ ಯೋಹಾನನೂ ಶೀಮೆಯ
ಲ್ಲಿದ್ದ ಎಲ್ಲಾ ಸೈನ್ಯಾಧಿಪತಿಗಳೂ, ಗೆದಲೀಯನ ಬಳಿಗೆ ಮಿಚ್ಪಕ್ಕೆ
೧೪ ಬಂದು, ಅವನಿಗೆ ಹೇಳ್ದಿದ್ದೇನಂದರೆ—ಅಮ್ಮೋನನ ಮಕ್ಕಳ ಅರಸ
ನಾದ ಬಾಲೀಸನು ನಿನ್ನನ್ನು ಕೊಂದು ಹಾಕುವದಕ್ಕೆ ನೆತನೀಯ
ನ ಮಗನಾದ ಇಷ್ಮಾಯೇಲನನ್ನು ಕಳುಹಿಸಿದ್ದಾನೆಂದು ನಿನಗೆ ತಿಳಿ
ದಿದೆಯೋ! ಆದರೆ ಅಹೀಕಮನ ಮಗನಾದ ಗೆದಲೀಯನು ಅ
೧೫ವರನ್ನು ನಂಬಿಲ್ಲ. ಆಗ ಕರೀಯನ ಮಗನಾದ ಯೋಹಾನನು
ಮಿಚ್ಪದಲ್ಲಿ ಅಂತರಂಗವಾಗಿ ಗೆದಲೀಯನ ಸಂಗಡ ಮಾತಾಡಿ
ಹೇಳ್ದಿದ್ದೇನಂದರೆ—ಈಗ ನನ್ನನ್ನು ಹೋಗಗೊಡಿಸು, ನಾನು ನೆ
ತನೀಯನ ಮಗನಾದ ಇಷ್ಮಾಯೇಲನನ್ನು ಯಾರಿಗೂ ತಿಳಿಯ
ದ ಹಾಗೆ ಕೊಂದು ಹಾಕುತ್ತೇನೆ; ಅವನು ಯಾಕೆ ನಿನ್ನನ್ನು
ಕೊಂದು ಹಾಕತಿ! ಯಾಕೆ ನಿನ್ನ ಬಳಿಗೆ ಕೂಡಿಕೊಂಡಿರುವ
ಯೆಹೂದ್ಯರೆಲ್ಲರು ಚೆದರಿ ಹೋಗುವರು! ಯೆಹೂದದ ಉಳಿ
೧೬ವು ಯಾಕೆ ನಾಶನವಾಗುವದು! ಆದರೆ ಅಹೀಕಮನ ಮಗನಾ
ದ ಗೆದಲೀಯನು ಕರೀಯನ ಮಗನಾದ ಯೋಹಾನನಿಗೆ—ಈ ಕೆ
ಲಸ ಮಾಡ ಬೇಡ, ಯಾಕಂದರೆ ನೀನು ಇಷ್ಮಾಯೇಲನ ವಿಷಯ
ಸುಳ್ಳಾಗಿ ಮಾತಾಡುತ್ತೀ, ಅಂದನು.

## ೪೧. ಸಂಧಿ.

೧ ಏಳನೇ ತಿಂಗಳಲ್ಲಿ ಆದದ್ದೇನಂದರೆ—ಅರಸನ ಸಂತಾನದವ
ನೂ ಅರಸನ ದೊಡ್ಡವರಲ್ಲಿ ಒಬ್ಬನೂ, ಆದಂಥ, ಎಲೀಷಮನ
ಮಗನಾದ, ನೆತನೀಯನ ಮಗನಾದ, ಇಷ್ಮಾಯೇಲನೂ, ಅವನ
ಸಂಗಡ ಹತ್ತು ಮನುಷ್ಯರೂ, ಅಹೀಕಮನ ಮಗನಾದ ಗೆದಲೀ
ಯನ ಬಳಿಗೆ ಮಿಚ್ಪಕ್ಕೆ ಬಂದರು; ಅವರು ಅಲ್ಲಿ ಮಿಚ್ಪದಲ್ಲಿ ಕೂ
೨ ಡ ಊಟ ಮಾಡಿದರು. ಆಗ ನೆತನೀಯನ ಮಗನಾದ ಇಷ್ಮಾ
ಯೇಲನು, ತನ್ನ ಸಂಗಡ ಇದ್ದ ಹತ್ತು ಮನುಷ್ಯರು ಸಹಿತವಾಗಿ
ಎದ್ದು, ಬಾಬೆಲಿನ ಅರಸನು ದೇಶದ ಮೇಲೆ ನೇಮಿಸಿ ಇದ್ದ ಶಾಪಾನ
ನ ಮಗನಾದ ಅಹೀಕಮನ ಮಗನಾದ ಗೆದಲೀಯನನ್ನು ಕತ್ತಿ
೩ಯಿಂದ ಹೊಡೆದು ಕೊಂದು ಹಾಕಿದರು. ಇದಲ್ಲದೆ ಗೆದಲೀಯನ
ಸಂಗಡ ಮಿಚ್ಪದಲ್ಲಿದ್ದ ಯೆಹೂದ್ಯರೆಲ್ಲರನ್ನೂ, ಅಲ್ಲಿ ಶಿಕ್ಕಿದ ಕ
ಸ್ದೀಯರೆಲ್ಲರನ್ನೂ, ಯುದ್ಧಸ್ಥರನ್ನೂ, ಇಷ್ಮಾಯೇಲನು ಕೊಂ
೪ ದು ಹಾಕಿದನು. ಮತ್ತು ಆದದ್ದೇನಂದರೆ—ಅವನು ಗೆದಲೀಯನ
ನ್ನು ಕೊಂದು ಹಾಕಿದ ಎರಡನೇ ದಿವಸದಲ್ಲಿ, ಅದು ಯಾರಿಗೂ
ತಿಳಿಯದೆ ವೇಳೆಯಲ್ಲಿ, ಶಿಬಿರಿನಿಂದಲೂ, ಶಿಲೋವಿನಿಂದಲೂ, ಸ
೫ಮಾರ್ಯದಿಂದಲೂ, ಎಂಭತ್ತು ಮನುಷ್ಯರು ಗಡ್ಡವನ್ನು ಕ್ಷೌ
ರ ಮಾಡಿದವರಾಗಿಯೂ, ವಸ್ತ್ರಗಳನ್ನು ಹರಕೊಂಡವರಾಗಿ
ಯೂ, ತಮ್ಮನ್ನು ಕೊಯಿದು ಕೊಂಡವರಾಗಿಯೂ ಕರ್ತನ
ಮನೆಗೆ ತರುವದಕ್ಕೋಸ್ಕರ, ಕಾಣಿಕೆಯನ್ನೂ, ಧೂಪವನ್ನೂ,
೬ ಕೈಯಲ್ಲಿ ತಕ್ಕೊಂಡು ಬಂದರು. ಆಗ ನೆತನೀಯನ ಮಗನಾದ
ಇಷ್ಮಾಯೇಲನು ಮಿಚ್ಪದಿಂದ ಹೊರಟು, ಅಳುತ್ತಲೆ ಅವರ ಎದು
ರಿಗೆ ಹೋದನು; ಮತ್ತು ಆದದ್ದೇನಂದರೆ—ಅವರನ್ನು ಎದುರ್ಗೊಂ
ಡ ಮೇಲೆ, ಅವರಿಗೆ—ಅಹೀಕಮನ ಮಗನಾದ ಗೆದಲೀಯನ ಬಳಿ
೭ ಗೆ ಬನ್ನಿ, ಅಂದನು. ಆಗಲಾದದ್ದೇನಂದರೆ—ಅವರು ಪಟ್ಟಣದ ಮ
ಧ್ಯಕ್ಕೆ ಬಂದಾಗ, ನೆತನೀಯನ ಮಗನಾದ ಇಷ್ಮಾಯೇಲನೂ, ತ
ನ್ನ ಸಂಗಡ ಇದ್ದ ಮನುಷ್ಯರೂ, ಅವರನ್ನು ಕೊಂದು, ಕಂಟಿ
೮ ಯೊಳಗೆ ಹಾಕಿ ಬಿಟ್ಟನು. ಆದರೆ—ನಮ್ಮನ್ನು ಕೊಂದು ಹಾಕ ಬೇ
ಡ; ಯಾಕಂದರೆ, ನಮಗೆ ಹೊಲದಲ್ಲಿ, ಗೋಧಿ, ಜವೆಗೋಧಿ,
ಎಣ್ಣೆ, ಜೇನು, ಇರುವ ಹಗೇವುಗಳುಂಟೆಂದು ಹೇಳಿದ ಹತ್ತು ಮ
ನುಷ್ಯರು ಅವರಲ್ಲಿ ಶಿಕ್ಕಿದರು; ಆದದರಿಂದ ಅವನು ಹಿಂತೆಗೆದು,
೯ ಅವರನ್ನು ತಮ್ಮ ಸಹೋದರರಲ್ಲಿ ಕೊಂದು ಹಾಕಲಿಲ್ಲ. ಇಷ್ಮಾ
ಯೇಲನು ಗೆದಲೀಯನ ನಿಮಿತ್ತ ಕೊಂದು ಹಾಕಿದ ಮನುಷ್ಯರೆ
ಲ್ಲರ ಹೆಣಗಳನ್ನು ಹಾಕಿದ ಕುಂಟೆ ಯಾವದಂದರೆ—ಅರಸನಾದ
ಆಸನು ಇಸ್ರಯೇಲಿನ ಅರಸನಾದ ಬಾಷನ ಭಯದಿಂದ ಮಾಡಿ
ದ್ದೇ; ಇದನ್ನು ನೆತನೀಯನ ಮಗನಾದ ಇಷ್ಮಾಯೇಲನು ಕೊಂದು
೧೦ ಹಾಕಿದವರಿಂದ ತುಂಬಿಸಿದನು. ಮತ್ತು ಇಷ್ಮಾಯೇಲನು ಮಿಚ್ಪದ

ಲ್ಲಿದ್ದ ಜದರ ಉಳುವನ್ನೆಲ್ಲಾ, ಅರಸನ ಕುಮಾರ್ತೆಗಳ್ಳನೂಾ, ಕಾ
ವಲಿಯವರ ಅಧಿಪತಿಯಾದ ನೆಬುಜರದಾನನು ಅಹೀಕಮನ ಮ
ಗನಾದ ಗೆದಲೀಯನಿಗೆ ಒಪ್ಪಿಸಿ ಕೊಟ್ಟಿ ಉಳಿದ ಜನಕೆಲ್ಲರನೂಾ,
ಕೆಳೆಯಾಗಿ ಮೈದನು; ನೆತನೀಯನ ಮಗನಾದ ಇಷ್ಮಾಯೇಲನು
ಅವನನ್ನು ಕೆಳೆಯಾಗಿ ಮೈದು, ಅಮ್ಮೋನನ ಮಕ್ಕಳ ಬಳಿಗೆ ದಾ
ಟಿ ಹೋಗುವದಕ್ಕೆ ಹೊರಟನು.

೧೧ ಆದರೆ ಕರೀಯನ ಮಗನಾದ ಯೋಹಾನನೂ, ಅವನ ಸಂಗ
ತ ಇದ್ದ ಸೈನ್ಯಾಧಿಪತಿಗಳೆಲ್ಲರೂ, ನೆತನೀಯನ ಮಗನಾದ ಇ
ಷ್ಮಾಯೇಲನು ಮಾಡಿ ಇದ್ದ ಕೇಡನ್ನೆಲ್ಲಾ ಕೇಳಿದ ಮೇಲೆ, ಆ ಮ
ನುಷ್ಯರನ್ನೆಲ್ಲಾ ಕರ ಕೊಂಡು, ನೆತನೀಯನ ಮಗನಾದ ಇಷ್ಮಾ
ಯೇಲನ ಸಂಗತ ಯುದ್ಧ ಮಾಡುವದಕ್ಕೆ ಹೋಗಿ, ಗಿಬೆಯೋನಿ
೧೩ ನಲ್ಲಿರುವ ದೊಡ್ಡ ನೀರುಗಳ ಬಳಿಯಲ್ಲಿ ಅವನನ್ನು ಕಂಡರು. ಆ
ಗಲಾದದ್ದೇನಂದರೆ—ಇಷ್ಮಾಯೇಲನ ಸಂಗತ ಇದ್ದ ಜನರೆಲ್ಲರು,
ಕರೀಯನ ಮಗನಾದ ಯೋಹಾನನನೂಾ, ಅವನ ಸಂಗತ ಇದ್ದ
ಸೈನ್ಯಾಧಿಪತಿಗಳೆಲ್ಲರನೂಾ, ನೋಡಿದಾಗ ಸಂತೋಷ ಪಟ್ಟರು.
೧೪ ಮತ್ತು ಇಷ್ಮಾಯೇಲನು ಮಿಚ್ಪದಿಂದ ಕೆಳೆಯಾಗಿ ಮೈದ ಜನಕೆಲ್ಲರು
ಸುತ್ತಿ ಕೊಂಡು, ತಿರುಗಿ ಕೊಂಡು, ಕರೀಯನ ಮಗನಾದ ಯೋ
೧೫ ಹಾನನ ಬಳಿಗೆ ಬಂದರು. ಆದರೆ ನೆತನೀಯನ ಮಗನಾದ ಇಷ್ಮಾ
ಯೇಲನು, ಎಂಟು ಮನುಷ್ಯರ ಸಂಗತ ಯೋಹಾನನಿಗೆ ತಪ್ಪಿಸಿ
ಕೊಂಡು, ಅಮ್ಮೋನನ ಮಕ್ಕಳ ಬಳಿಗೆ ಹೋದನು.

೧೬ ಆಗ ಕರೀಯನ ಮಗನಾದ ಯೋಹಾನನೂ, ತನ್ನ ಸಂಗತ
ಇದ್ದ ಸೈನ್ಯಾಧಿಪತಿಗಳೆಲ್ಲರೂ, ತಾನು ನೆತನೀಯನ ಮಗನಾದ
ಇಷ್ಮಾಯೇಲನ ಕೈಯೊಳಗಿಂದ, ಅವನು ಅಹೀಕಮನ ಮಗನಾ
ದ ಗೆದಲೀಯನನ್ನು ಕೊಂದು ಹಾಕಿದ ತರುವಾಯ, ತಪ್ಪಿಸಿ ಬಿ
ಟ್ಟಿದ್ದ ಉಳಿದ ಜನಕೆಲ್ಲರನ್ನು, ಅಂದರೆ, ಗಿಬೆಯೋನಿನಿಂದ ತಾನು
ತಿರಿಗಿ ತಂದಿದ್ದ ಬಲಿಷ್ಠರಾದ ಯುದ್ಧದ ಗಂಡಸರನೂಾ, ಹೆಂಗಸರ
ನೂಾ, ಮಕ್ಕಳ್ಳನೂಾ, ಪೊಜ್ಜೆಯರನೂಾ, ಮಿಚ್ಪದಿಂದ ಕರ
೧೭ ಕೊಂಡು, ಹೊರಟು, ಐಗುಪ್ತಕ್ಕೆ ಹೋಗುವದಕ್ಕೆ ಬೇತ್ಲೆಹೇಮಿ
ನ ಬಳಿಯಲ್ಲಿರುವ ಕಿಮಾಮನ ಛತ್ರದಲ್ಲಿ ಕಸ್ದೀಯರ ನಿಮಿತ್ತ ವಾ
೧೮ ಸ ಮಾಡಿದರು. ಯಾಕಂದರೆ, ಅವರಿಗ ಭಯ ಪಟ್ಟರು; ಬಾಬೆ
ಲಿನ ಅರಸನು ದೇಶದ ಮೇಲೆ ನೇಮಿಸಿ ಇದ್ದ ಅಹೀಕಮನ ಮಗ
ನಾದ ಗೆದಲೀಯನನ್ನು ನೆತನೀಯನ ಮಗನಾದ ಇಷ್ಮಾಯೇಲನು
ಕೊಂದು ಹಾಕಿದದರಿಂದಲೇ.

## ೪೨. ಸಂಧಿ.

೧ ಆಗ ಸೈನ್ಯಾಧಿಪತಿಗಳೆಲ್ಲರೂ, ಕರೀಯನ ಮಗನಾದ ಯೋ
ಹಾನನೂ, ಹೋಷಾಯನ ಮಗನಾದ ಎಜನೀಯನೂ, ಕಿರಿಯ
ರು ಮೊದಲುಗೊಂಡು ಹಿರಿಯರ ಪರಿಯಂತರ ಜನಕೆಲ್ಲರೂ, ಹ
೨ ತ್ತರ ಬಂದು, ಪ್ರವಾದಿಯಾದ ಯೆರೆಮಿಾಯನಿಗೆ ಹೇಳಿದ್ದೇನಂದ
ರೆ—ನಮ್ಮ ವಿಜ್ಞಾಪನೆ ನಿನ್ನ ಮುಂದೆ ಬರಲಿ; ನಿನ್ನ ಕಣ್ಣುಗಳು
ನಮ್ಮನ್ನು ನೋಡುವ ಪ್ರಕಾರ ನಾವು ಅನೇಕರೊಳಗಿಂದ ಕೆಲವ
ರೇ ಉಳಿದಿದ್ದೇವಲ್ಲ! ನಮಗೋಸ್ಕರವೂ, ಅಂದರೆ, ಈ ಸಮಸ್ತ
೩ ಉಳುವಿಗೋಸ್ಕರವೂ, ನಾವು ನಡಿಯ ತಕ್ಕ ಮಾರ್ಗವನ್ನೂ,
ನಾವು ಮಾಡ ತಕ್ಕ ಕಾರ್ಯವನೂಾ, ನಿನ್ನ ದೇವರಾದ ಕರ್ತ
ನು ನಮಗೆ ತಿಳಿಸುವ ಹಾಗೆ, ನಿನ್ನ ದೇವರಾದ ಕರ್ತನಿಗೆ ಪ್ರಾರ್ಥ
೪ ನೆ ಮಾಡು. ಆಗ ಪ್ರವಾದಿಯಾದ ಯೆರೆಮಿಾಯನು ಅವರಿಗೆ—
ನಾನು ಕೇಳಿದ್ದೇನೆ; ಇಗೋ, ನಿಮ್ಮ ಮಾತುಗಳ ಪ್ರಕಾರ ನಿಮ್ಮ
ದೇವರಾದ ಕರ್ತನಿಗೆ ಪ್ರಾರ್ಥನೆ ಮಾಡುತ್ತೇನೆ; ಮತ್ತು ಆಗುವ
ದೇನಂದರೆ—ಕರ್ತನು ನಿಮಗೆ ಯಾವ ಉತ್ತರವನ್ನು ಕೊಡುವ
ನೋ. ಅದನ್ನು ನಿಮಗೆ ತಿಳಿಸುವೆನು; ಒಂದು ಮಾತನ್ನಾದರೂ
೫ ನಿಮ್ಮಿಂದ ಹಿಂತೆಗಿಯುವದಿಲ್ಲವೆಂದು ಹೇಳಿದನು. ಆಗಲವರು ಯೆ
ರೆಮಿಾಯನಿಗೆ ಹೇಳಿದ್ದೇನಂದರೆ—ನಿನ್ನ ದೇವರಾದ ಕರ್ತನು ನಿನ್ನ
ನ್ನು ಯಾವವುಗಳ ವಿಷಯ ನಮ್ಮ ಬಳಿಗೆ ಕಳುಹಿಸುತ್ತಾನೋ,
ಆ ಎಲ್ಲಾ ಮಾತುಗಳ ಪ್ರಕಾರ ನಾವು ಮಾಡದೆ ಹೋದರೆ, ಕ
ರ್ತನು ನಮಗೆ ಸತ್ಯವಾದ ನಂಬಿಕೆಯುಳ್ಳ ಸಾಕ್ಷಿಯಾಗಿರಲಿ.
೬ ನಾವು ನಮ್ಮ ದೇವರಾದ ಕರ್ತನ ಶಬ್ದವನ್ನು ಕೇಳ್ವಾಗ ನಮ
ಗೆ ಬಳ್ಳೇದಾಗುವ ಹಾಗೆ, ನಾವು ಯಾವನ ಬಳಿಗೆ ನಿನ್ನನ್ನು ಕ
ಳುಹಿಸುತ್ತೇವೋ, ಆ ನಮ್ಮ ದೇವರಾದ ಕರ್ತನ ಶಬ್ದವನ್ನೂ,
ಅದು ಒಳ್ಳೇದಾಗಲಿ ಸರಿಯೇ, ಕೆಟ್ಟದ್ದಾಗಲಿ ಸರಿಯೇ, ಕೇ
ಳುವೆವು.

೭ ಮತ್ತು ಆದದ್ದೇನಂದರೆ—ಹತ್ತು ದಿವಸಗಳಾದ ಮೇಲೆ ಕರ್ತನ
೮ ವಾಕ್ಯವು ಯೆರೆಮಿಾಯನಿಗೆ ಬಂತು ಆಗಲವನು ಕರೀಯನ ಮ
ಗನಾದ ಯೋಹಾನನನೂಾ, ಅವನ ಸಂಗತ ಇದ್ದ ಸೈನ್ಯಾಧಿಪತಿಗ
ಳೆಲ್ಲರನೂಾ, ಕಿರಿಯರು ಮೊದಲುಗೊಂಡು ಹಿರಿಯರ ಪರ್ಯಂ
೯ ತರ ಜನಕೆಲ್ಲರನೂಾ, ಕರೆದು, ಅವರಿಗೆ ಹೇಳಿದ್ದೇನಂದರೆ—ಯಾ
ವನ ಮುಂದೆ ನಿಮ್ಮ ವಿಜ್ಞಾಪನೆಯನ್ನು ತರುವದಕ್ಕೆ ನನ್ನನ್ನು
ಕಳುಹಿಸಿದಿರೋ, ಆ ಇಸ್ರಯೇಲಿನ ದೇವರಾದ ಕರ್ತನು ಹೀಗೆ
೧೦ ಹೇಳುತ್ತಾನೆ—ನೀವು ಇನ್ನು ಈ ದೇಶದಲ್ಲಿ ವಾಸ ಮಾಡಿದರೆ,
ಆಗ ನಾನು ನಿಮ್ಮನ್ನು ಕೆಡವದೆ ಕಟ್ಟುವೆನು; ಕಿತ್ತು ಹಾಕದೆ ನೆ
ಡುವೆನು. ಯಾಕಂದರೆ ನಾನು ನಿಮಗೆ ಮಾಡಿರುವ ಕೇಡಿನ ವಿಷ
೧೧ ಯ ಪಶ್ಚಾತ್ತಾಪ ಪಡುತ್ತೇನೆ. ನೀವು ಭಯ ಪಡುವ ಬಾಬೆಲಿನ
ಅರಸನಿಗೆ ಭಯ ಪಡ ಬೇಡಿರಿ; ಅವನಿಗೆ ಭಯ ಪಡ ಬೇಡಿರೆಂದು
ಕರ್ತನು ಅನ್ನುತ್ತಾನೆ; ಯಾಕಂದರೆ ನಿಮ್ಮನ್ನು ರಕ್ಷಿಸುವದಕ್ಕೂ
ಅವನ ಕೈಗೆ ನಿಮ್ಮನ್ನು ತಪ್ಪಿಸುವದಕ್ಕೂ, ನಾನು ನಿಮ್ಮ ಸಂಗತ
೧೨ ಇದ್ದೇನೆ. ಇದಲ್ಲದೆ ನಾನು ನಿಮಗೆ ಕರುಣೆಗಳನ್ನು ತೋರಿಸು
ವೆನು; ಆಗಲವನು ನಿಮ್ಮನ್ನು ಕರುಣಿಸಿ, ನಿಮ್ಮನ್ನು ತಿರಿಗಿ ನಿಮ್ಮ
೧೩ ದೇಶಕ್ಕೆ ಬರ ಮಾಡುವನು. ಆದರೆ ನೀವು ನಿಮ್ಮ ದೇವರಾದ ಕ
ರ್ತನ ಶಬ್ದವನ್ನು ಕೇಳದೆ—ನಾವು ಈ ದೇಶದಲ್ಲಿ ವಾಸ ಮಾ
೧೪ ಡುವದಿಲ್ಲವೆಂದು ಹೇಳಿದರೆ; ಮತ್ತು ನೀವು—ಇಲ್ಲ, ನಾವು ಐಗು
ಪ್ತ ದೇಶಕ್ಕೆ ಹೋಗುತ್ತೇವೆ; ಅಲ್ಲಿ ನಾವು ಯುದ್ಧವನ್ನು ನೋಡು
ವದಿಲ್ಲ, ತುತೂರಿಯ ಶಬ್ದವನ್ನು ಕೇಳುವದಿಲ್ಲ, ಕೊಟ್ಟಿಯ
ವಿಷಯ ಬರವಾಗುವದಿಲ್ಲ, ಅಲ್ಲಿ ವಾಸ ಮಾಡುವೆವೆಂದು ಹೇಳಿದ
೧೫ ರೆ—ಹಾಗಾದರೆ ಈಗ, ಯೆಹೂದದ ಉಳುವೇ, ಕರ್ತನ ವಾಕ್ಯವ
ನ್ನು ಕೇಳಿರಿ; ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೀ
ಗೆ ಹೇಳುತ್ತಾನೆ—ನೀವು ನಿಶ್ಚಯವಾಗಿ ನಿಮ್ಮ ಮುಖಗಳನ್ನು ಐ
ಗುಪ್ತಕ್ಕೆ ಹೋಗುವ ಹಾಗೆ ಇಟ್ಟರೆ, ಮತ್ತು ನೀವು ಅಲ್ಲಿ ತಂಗು
ವದಕ್ಕೆ ಹೋದರೆ—ಅಗಲಾಗುವದೇನಂದರೆ—ನೀವು ಭಯ ಪಡು
೧೬ ವ ಕತ್ತಿಯು ಅಲ್ಲಿ, ಐಗುಪ್ತ ದೇಶದಲ್ಲಿ, ನಿಮ್ಮನ್ನು ಹಿಡಿಯುವ
ದು; ಮತ್ತು ನೀವು ಹೆದರುಕೊಳ್ಳುವ ಬರವು ಅಲ್ಲಿಗೆ, ಐಗುಪ್ತ ದೇಶ
೧೭ ಕ್ಕೆ, ನಿಮ್ಮನ್ನು ಹಿಂದಟ್ಟುವದು; ಅಲ್ಲೇ ಸಾಯುವಿರಿ. ಹೌದು,



ಐಗುಪ್ತಕ್ಕೆ ಹೋಗಿ ಅಲ್ಲಿ ತಂಗುವ ಹಾಗೆ ತಮ್ಮ ಮುಖಗಳನ್ನಿ
ಡುವ ಮನುಷ್ಯರಿಗೆಲ್ಲಾ ಹೀಗಾಗುವದು; ಅವರು ಕತ್ತಿಯಿಂದ
ಲೂ, ಬರದಿಂದಲೂ, ಜಾಡ್ಯದಿಂದಲೂ, ಸಾಯುವರು; ನಾನು ಅ
ವರ ಮೇಲೆ ಬರ ಮಾಡುವ ಕೇಡಿಗೆ ತಪ್ಪಿಸಿಕೊಂಡು ಉಳಿಯು
೧೮ ವವನು ಒಬ್ಬನೂ ಅವರೊಳಗೆ ಇರುವದಿಲ್ಲ. ಯಾಕಂದರೆ ಇ
ಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೀಗೆ ಹೇಳುತ್ತಾ
ನೆ—ನನ್ನ ಕೋಪವೂ, ನನ್ನ ಉರಿಯೂ, ಹ್ಯಾಗೆ ಯೆರೂಸಲೇ
ಮಿನ ನಿವಾಸಿಗಳ ಮೇಲೆ ಹೊಯ್ಯಲ್ಪಟ್ಟಿತೋ, ಹಾಗೆಯೇ ನನ್ನ
೪ ಉರಿಯು ನಿಮ್ಮ ಮೇಲೆ, ನೀವು ಐಗುಪ್ತಕ್ಕೆ ಹೋದರೆ, ಹೊ
ಯ್ಯಲ್ಪಡುವದು; ನೀವು ಶಾಪವೂ, ಬಿಸ್ಮಯವೂ, ದೂಷಣೆ
ಯೂ, ನಿಂದೆಯೂ, ಆಗುವಿರಿ; ಮತ್ತು ಈ ಸ್ಥಳವನ್ನು ನೀವು
೧೯ ತಿರಿಗಿ ನೋಡುವದಿಲ್ಲ. ಯೆಹೂದದ ಉಳುವೇ, ಕರ್ತನು ನಿಮ್ಮ
ವಿಷಯ ಹೇಳಿದ್ದೇನಂದರೆ—ಐಗುಪ್ತಕ್ಕೆ ಹೋಗ ಬೇಡಿರಿ; ನಾನು
ಈ ಹೊತ್ತು ನಿಮಗೆ ಸಾಕ್ಷಿ ಕೊಟ್ಟಿದ್ದೇನೆಂದು ಜನಾಗಿ ತಿಳು
ಕೊಳ್ಳಿರಿ. ನಿಶ್ಚಯವಾಗಿ ಸ್ವಂತ ಪ್ರಾಣಗಳಿಗೆ ವಿರೋಧವಾಗಿ
೨೦ ಮೋಸ ಮಾಡಿದ್ದೀರಿ; ಯಾಕಂದರೆ—ನಮಗೋಸ್ಕರ ನಮ್ಮ ದೇ
ವರಾದ ಕರ್ತನಿಗೆ ಪ್ರಾರ್ಥನೆ ಮಾಡೆಂದೂ, ನಮ್ಮ ದೇವರಾದ
ಕರ್ತನು ಏನೇನು ಹೇಳುವನೋ, ಅದನ್ನು ನಮಗೆ ತಿಳಿಸು, ಆಗ
ನಾವು ಮಾಡುವೆವೆಂದೂ ಹೇಳಿ, ನನ್ನನ್ನು ನಿಮ್ಮ ದೇವರಾದ ಕ
೨೧ ರ್ತನ ಬಳಿಗೆ ಕಳುಹಿಸಿದಿರಿ. ಮತ್ತು ನಾನು ಈ ಹೊತ್ತು ಅದನ್ನು
ನಿಮಗೆ ತಿಳಿಸಿದ್ದೇನೆ; ಆದರೆ ನೀವು ನಿಮ್ಮ ದೇವರಾದ ಕರ್ತನ ಶ
ಬ್ದವನ್ನಾದರೂ, ಅವನು ಯಾವದರ ವಿಷಯ ನನ್ನನ್ನು ನಿಮ್ಮ
ಬಳಿಗೆ ಕಳುಹಿಸಿದ್ದಾನೋ ಅದರಲ್ಲಿ ಯಾವದನ್ನಾದರೂ, ಕೇಳಿಲಿ
೨೨ ಲ್ಲ. ಹೀಗಿರುವದರಿಂದ ನೀವು ತಂಗುವದಕ್ಕೆ ಹೋಗ ಮನಸ್ಸು
ಮಾಡುವ ಸ್ಥಳದಲ್ಲಿ, ಕತ್ತಿಯಿಂದಲೂ, ಬರದಿಂದಲೂ, ಜಾಡ್ಯದಿಂ
ದಲೂ, ಸಾಯುವಿರೆಂದು ಈಗ ನಿಶ್ಚಯವಾಗಿ ತಿಳುಕೊಳ್ಳಿರಿ.

## ೪೩. ಸಂಧಿ.

೧ ಮತ್ತು ಆದದ್ದೇನಂದರೆ—ಯೆರೆಮಿಾಯನು ಜನಕೆಲ್ಲರಿಗೆ ಅವ
ರ ದೇವರಾದ ಕರ್ತನ ಮಾತುಗಳನ್ನೆಲ್ಲಾ, ಅವರ ದೇವರಾದ ಕ
ರ್ತನು ಯಾವವುಗಳ ವಿಷಯ ಅವನನ್ನು ಅವರ ಬಳಿಗೆ ಕಳು
ಸಿ ಇದ್ದನೋ ಆಮಾತುಗಳನ್ನೆಲ್ಲಾ ಹೇಳಿ ಆದ ಮೇಲೆ, ಹೋ
೨ ಷಾಯನ ಮಗನಾದ ಅಜರ್ಯನೂ, ಕರೀಯನ ಮಗನಾದ
ಯೋಹಾನನೂ, ಗರ್ವಿಷ್ಠ ಮನುಷ್ಯರೆಲ್ಲರೂ, ಮಾತಾಡಿ, ಯೆ
ರೆಮಿಾಯನಿಗೆ ಹೇಳಿದ್ದೇನಂದರೆ—ನೀನು ಸುಳ್ಳು ಹೇಳುತ್ತೀ; ಅ
ಲ್ಲಿ ತಂಗುವದಕ್ಕೆ ಐಗುಪ್ತಕ್ಕೆ ಹೋಗ ಬೇಡಿರೆಂದು ಹೇಳುವದಕ್ಕೆ
೩ ನಮ್ಮ ದೇವರಾದ ಕರ್ತನು ನಿನ್ನನ್ನು ಕಳುಹಿಸಲಿಲ್ಲ. ಆದರೆ ಅ
ವರು ನಮ್ಮನ್ನು ಕೊಂದು ಹಾಕುವ ಹಾಗೆಯೂ, ನಮ್ಮನ್ನು ಬಾ
ಬೆಲಿಗೆ ಕೆಕಪೈಯ್ಯುವ ಹಾಗೆಯೂ, ನಮ್ಮನ್ನು ಕಸ್ದೀಯರ ಕೈ
ಯಲ್ಲಿ ಒಪ್ಪಿಸ ಬೇಕೆಂದು, ನೇರೀಯನ ಮಗನಾದ ಬಾರೂಕನು
೪ ನಿನ್ನನ್ನು ನಮಗೆ ವಿರೋಧವಾಗಿ ಪ್ರೇರೇಪಿಸಿದ್ದಾನೆ. ಈಪ್ರಕಾರ
ಕರೀಯನ ಮಗನಾದ ಯೋಹಾನನೂ, ಸೈನ್ಯಾಧಿಪತಿಗಳೆಲ್ಲರೂ,
ಜನಕೆಲ್ಲರೂ, ಯೆಹೂದ ದೇಶದಲ್ಲಿ ನಿಲ್ಲುವ ಹಾಗೆ ಕರ್ತನ ಶಬ
೫ ಕ್ಕೆ ಕಿವಿಗೊಡಲಿಲ್ಲ. ಆದರೆ ಕರೀಯನ ಮಗನಾದ ಯೋಹಾನ
ನೂ, ಸೈನ್ಯಾಧಿಪತಿಗಳೆಲ್ಲರೂ, ತಾವು ಓಡಿಸಲ್ಪಟ್ಟಿದ್ದ ಎಲ್ಲಾ ಜ
ನಾಂಗಗಳಿಂದ ಯೆಹೂದ ದೇಶದಲ್ಲಿ ವಾಸ ಮಾಡುವದಕ್ಕೆ ತಿರಿಗಿ
೬ ಬಂದ ಯೆಹೂದದ ಉಳುವನ್ನೂ, ಅಂದರೆ, ಗಂಡಸರನೂಾ, ಹೆಂ
ಗಸರನೂಾ, ಮಕ್ಕಳ್ಳನೂಾ, ಅರಸನ ಕುಮಾರ್ತೆಗಳ್ಳನೂಾ, ಕಾ
ವಲಿಯವರ ಅಧಿಪತಿಯಾದ ನೆಬುಜರದಾನನು ಶಾಪಾನನ ಮಗ
ನಾದ ಅಹೀಕಮನ ಮಗನಾದ ಗೆದಲೀಯನ ಸಂಗತ ಬಿಟ್ಟಿದ್ದ
ಪ್ರಾಣಿಗಳೆಲ್ಲರನೂಾ, ಪ್ರವಾದಿಯಾದ ಯೆರೆಮಿಾಯನನೂಾ,
ನೇರೀಯನ ಮಗನಾದ ಬಾರೂಕನನೂಾ, ತೆಗೆದು ಕೊಂಡು, ಐ
೭ ಗುಪ್ತ ದೇಶಕ್ಕೆ ಹೋದರು; ಯಾಕಂದರೆ ಅವರು ಕರ್ತನ ಶಬ್ದ
ಕ್ಕೆ ಕಿವಿಗೊಡಲಿಲ್ಲ; ಹೀಗೆ ಅವರು ತಾಪನೇಸಿಗೆ ಬಂದರು.

೮ ಆಗ ತಾಪನೇಸಿನಲ್ಲಿ ಕರ್ತನ ವಾಕ್ಯವು ಯೆರೆಮಿಾಯನಿಗೆ
೯ ಉಂಟಾಯಿತು, ಹ್ಯಾಗಂದರೆ—ನಿನ್ನ ಕೈಯಲ್ಲಿ ದೊಡ್ಡ ಕಲ್ಲುಗ
ಳನ್ನು ತಕ್ಕೊಂಡು, ತಾಪನೇಸಿನಲ್ಲಿರುವ, ಫರೋನನ ಮನೆಯ
ಪ್ರವೇಶದಲ್ಲಿರುವ, ಇಟ್ಟಿಗೇಭಟ್ಟಿಯ ಮಣ್ಣಿನಲ್ಲಿ, ಯೆಹೂದದ
ಮನುಷ್ಯರ ಕಣ್ಣುಗಳ ಮುಂದೆ, ಬಚ್ಚಿಟ್ಟು, ಅವರಿಗೆ ಹೇಳ ತಕ್ಕ
೧೦ ದ್ದೇನಂದರೆ—ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು
ಹೀಗೆ ಹೇಳುತ್ತಾನೆ—ಇಗೋ ನಾನು ಕಳುಹಿಸಿ, ನನ್ನ ಸೇವಕ
ನಾದ ಬಾಬೆಲಿನ ಅರಸನಾದ ನೆಬುಕದ್ನೇಚರನನ್ನು ತಕ್ಕೊಂಡು,
ನಾನು ಬಚ್ಚಿಟ್ಟಿರುವ ಈ ಕಲ್ಲುಗಳ ಮೇರೆ ಅವನ ಸಿಂಹಾಸನ
ವನ್ನು ಇಡುವೆನು; ಅವನು ತನ್ನ ಮೇಲ್ಕಟ್ಟನ್ನು ಅವುಗಳ ಮೀ
೧೧ ರೆ ಹಾಸುವನು. ಅವನು ಬಂದು ಐಗುಪ್ತ ದೇಶವನ್ನು ಹೊಡೆದು,
ಮರಣಕ್ಕೆ ಇರುವವರನ್ನು ಮರಣಕ್ಕೂ, ಸೆರೆಗೆ ಇರುವವರನ್ನು
ಸೆರೆಗೂ, ಕತ್ತಿಗೆ ಇರುವವರನ್ನು ಕತ್ತಿಗೂ, ಒಪ್ಪಿಸುವನು. ಇದ
೧೨ ಲ್ಲದೆ ನಾನು ಐಗುಪ್ತದ ದೇವರುಗಳ ಮಂದಿರಗಳಲ್ಲಿ ಬೆಂಕಿ ಹ
ಚ್ಚುವೆನು; ಅವನು ಅವರನ್ನು ಸುಟ್ಟು ಬಿಟ್ಟು, ಕೆಳೆಯಾಗಿ ಮೈ
ಯ್ಯುವನು; ಕುರುಬನು ತನ್ನ ವಸ್ತ್ರವನ್ನು ಹೊದ್ದುಕೊಳ್ಳುವ
ಪ್ರಂದ ಐಗುಪ್ತ ದೇಶವನ್ನು ಹೊದ್ದು ಕೊಂಡು ಸಮಾಧಾನವಾಗಿ
೧೩ ಅಲ್ಲಿಂದ ಹೊರಡುವನು. ಇದಲ್ಲದೆ ಐಗುಪ್ತ ದೇಶದಲ್ಲಿರುವ ಬೇ
ತ್ಷೆಮೇಷಿನ ಸ್ತಂಭಗಳನ್ನು ಮುರಿದು ಹಾಕಿ, ಐಗುಪ್ತದ ದೇವರು
ಗಳ ಮಂದಿರಗಳನ್ನು ಬೆಂಕಿಯಿಂದ ಸುಡುವನು.

## ೪೪. ಸಂಧಿ.

೧ ಐಗುಪ್ತದಲ್ಲಿ, ಮಿಗ್ದೊಲಿನಲ್ಲಿಯೂ, ತಾಪನೇಸಿನಲ್ಲಿಯೂ,
ನೋಫಿನಲ್ಲಿಯೂ, ಪತ್ರೋಸಿನ ದೇಶದಲ್ಲಿಯೂ, ವಾಸ ಮಾಡಿ
ದ ಯೆಹೂದ್ಯರೆಲ್ಲರ ವಿಷಯ ಯೆರೆಮಿಾಯನಿಗೆ ಉಂಟಾದ ವಾ
೨ ಕ್ಯವು, ಏನಂದರೆ—ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು
ಹೀಗೆ ಹೇಳುತ್ತಾನೆ—ನಾನು ಯೆರೂಸಲೇಮಿನ ಮೇಲೆಯೂ,
ಯೆಹೂದದ ಎಲ್ಲಾ ಪಟ್ಟಣಗಳ ಮೇಲೆಯೂ, ಬರ ಮಾಡಿದ ಎಲ್ಲಾ
೩ ಕೇಡನ್ನು ನೀವು ನೋಡಿದ್ದೀರಿ. ಅವರು ನನಗೆ ಕರಕರೆಯನ್ನು
ಎಬ್ಬಿಸುವ ಹಾಗೆ, ತಾವೂ, ತಮ್ಮ ತಂದೆಗಳೂ, ಅರಿಯದ ಬೇರೆ
ದೇವರುಗಳನ್ನು ಸೇವಿಸಿ, ಧೂಪ ಸುಟ್ಟು, ಮಾಡಿದ ಕೆಟ್ಟತನದ
ನಿಮಿತ್ತ, ಇಗೋ, ಅವು ಈ ಹೊತ್ತು ಹಾಳಾಗಿವೆ; ಅವುಗಳಲ್ಲಿ
೪ ವಾಸ ಮಾಡುವವನು, ಯಾರೂ ಇಲ್ಲ. ಅದಾಗ್ಯೂ ನಾನು ನಿ
ಮ್ಮ ಬಳಿಗೆ ನನ್ನ ಸೇವಕರಾದ ಪ್ರವಾದಿಗಳೆಲ್ಲರನ್ನು, ಬೆಳ್ಳಿಸ್ಯೆ
ಎದ್ದು, ಕಳುಹಿಸಿ—ನಾನು ಹಗೆ ಮಾಡುವ ಈ ಅಸಹ್ಯವಾದ ಕಾ
೫ ರ್ಯವನ್ನು ಮಾಡಲೇ ಬೇಡಿರೆಂದು ಹೇಳಿದೆನು. ಆದರೆ ಅವರು

ತಮ್ಮ ಕೆಟ್ಟತನದಿಂದ ತಿರುಗದೆ, ಬೇರೆ ದೇವರುಗಳಿಗೆ ಧೂಪ
ಸುಡುವದನ್ನು ಬಿಡದೆ, ಕೇಳಲಿಲ್ಲ; ತಮ್ಮ ಕಿವಿಗಳನ್ನು ಹೊಗ್ಗಿಸ
೭ ಲಿಲ್ಲ. ಆದದರಿಂದ ನನ್ನ ಉರಿಯೂ, ನನ್ನ ಕೋಪವೂ, ಹೊ
ಯ್ಯಲ್ಪಟ್ಟು, ಯೆಹೂದದ ಪಟ್ಟಣಗಳಲ್ಲಿಯೂ, ಯೆರೂಸಲೇಮಿನ
ಬೀದಿಗಳಲ್ಲಿಯೂ, ಹೊತ್ತಿತ್ತು; ಅವು ಈ ಹೊತ್ತಿನಂತೆ ಹಾಳೂ
ಬೀರೂ ಆದವು.

೮ ಆದದರಿಂದ ಈಗ ಇಸ್ರಯೇಲಿನ ದೇವರೂ, ಸೈನ್ಯಗಳ ದೇವ
ರೂ, ಆಗುವ ಯೆಹೋವ, ಹೀಗೆ ಹೇಳುತ್ತಾನೆ—ಯಾಕೆ ನಿಮ
ಗೆ ಉಳಿವನ್ನು ಮಿಗಿಸದ ಹಾಗೆ, ನೀವು ಗಂಡಸರನೂ, ಹೆಂಗಸ
ರನೂ, ಮಗುವನೂ, ಪೊಲೆಕೂಸನೂ, ಯೆಹೂದದೊಳಗಿಂ
ದ ಕಡಿದು ಬಿಟ್ಟು, ನಿಮ್ಮ ಪ್ರಾಣಗಳಿಗೆ ದೊಡ್ಡ ಕೇಡನ್ನು ಮಾ
೯ ಡಿಕೊಳ್ಳತ್ತೀರಿ! ಯಾಕೆ ನಿಮ್ಮನ್ನು ನೀವೇ ಕಡಿದು ಬಿಡುವ
ಹಾಗೆಯೂ, ನೀವು ಭೂಮಿಯ ಎಲ್ಲಾ ಜನಾಂಗಗಳಲ್ಲಿ ಶಾಪವೂ,
ನಿಂದೆಯೂ, ಆಗುವ ಹಾಗೆಯೂ, ನೀವು ತಂಗುವದಕ್ಕೆ ಹೋಗಿ
ರುವ ಐಗುತ್ತ ದೇಶದಲ್ಲಿ, ಬೇರೆ ದೇವರುಗಳಿಗೆ ಧೂಪ ಸುಟ್ಟು,
೧೦ ನನಗೆ ಕರಕರೆ ಎಬ್ಬಿಸುತ್ತೀರಿ! ಯೆಹೂದದ ದೇಶದಲ್ಲಿಯೂ,
ಯೆರೂಸಲೇಮಿನ ಬೀದಿಗಳಲ್ಲಿಯೂ, ಅವರು ಮಾಡಿದಂಥ, ನಿ
ಮ್ಮ ತಂದೆಗಳ ಕೆಟ್ಟತನಗಳನ್ನೂ, ಯೆಹೂದದ ಅರಸರ ಕೆಟ್ಟ
ತನಗಳನ್ನೂ, ಅವರ ಹೆಂಡರ ಕೆಟ್ಟತನಗಳನ್ನೂ, ನಿಮ್ಮ ಸ್ವಂತ
ಕೆಟ್ಟತನಗಳನ್ನೂ, ನಿಮ್ಮ ಹೆಂಡರ ಕೆಟ್ಟತನಗಳನ್ನೂ, ಮರತು
ಬಿಟ್ಟಿದ್ದೀರೋ! ಈ ದಿನದ ವರಿಗೂ ಅವರು ತಗ್ಗಿಸಿಕೊಳ್ಳಲಿಲ್ಲ,
೧೧ ಭಯ ಪಡಲಿಲ್ಲ; ನಾನು ನಿಮ್ಮ ಮುಂದೆಯೂ, ನಿಮ್ಮ ತಂದೆಗಳ
ಮುಂದೆಯೂ, ಇಟ್ಟ ನನ್ನ ನ್ಯಾಯಪ್ರಮಾಣದಲ್ಲಿಯೂ, ನನ್ನ
೧೧ ನೇಮಗಳಲ್ಲಿಯೂ, ನಡೆಯಲಿಲ್ಲ. ಆದದರಿಂದ ಇಸ್ರಯೇಲಿನ
ದೇವರಾಗಿರುವ ಸೈನ್ಯಗಳ ಕರ್ತನು ಹೀಗೆ ಹೇಳುತ್ತಾನೆ—ಇ
ಗೋ ನಾನು, ಯೆಹೂದವನ್ನೆಲ್ಲಾ ಕಡಿದು ಬಿಡುವದಕ್ಕೆ, ನನ್ನ
ಮುಖವನ್ನು ಕೇಡಿಗಾಗಿ ನಿಮಗೆ ವಿರೋಧವಾಗಿ ಇಡುತ್ತೇನೆ.
೧೨ ಹೌದು, ಐಗುತ್ತ ದೇಶಕ್ಕೆ ಹೋಗಿ, ಅಲ್ಲಿ ತಂಗ ಬೇಕೆಂದು ತ
ಮ್ಮ ಮುಖಗಳನ್ನು ಇಟ್ಟಿರುವ ಯೆಹೂದದ ಉಳಿವನ್ನೂ, ತ
ಕ್ಕೊಳ್ಳತ್ತೇನೆ; ಮತ್ತು ಅವಕೆಲ್ಲರು ಕಡಿದು ಬಿಡಲ್ಪಡುವರು;
ಐಗುತ್ತ ದೇಶದಲ್ಲಿ ಬೀಳುವರು; ಕತ್ತಿಯಿಂದಲೂ, ಬರದಿಂದಲೂ,
ಕಡಿದು ಬಿಡಲ್ಪಡುವರು; ಚಿಕ್ಕವನು ಮೊದಲುಗೊಂಡು, ದೊಡ್ಡವ
ನ ಪರ್ಯಂತರಕ್ಕೂ, ಕತ್ತಿಯಿಂದಲೂ, ಬರದಿಂದಲೂ, ಸಾಯು
ವರು; ಶಾಪವೂ, ವಿಸ್ಮಯವೂ, ದೂಷಣೆಯೂ, ನಿಂದೆಯೂ,
೧೩ ಆಗುವರು. ಹೌದು, ನಾನು ಯೆರೂಸಲೇಮನ್ನು ದಂಡಿಸಿದ
ಹಾಗೆ ಐಗುತ್ತ ದೇಶದಲ್ಲಿ ವಾಸ ಮಾಡುವವರನ್ನು, ಕತ್ತಿಯಿಂದ
೧೪ ಲೂ, ಬರದಿಂದಲೂ, ಜಾಡ್ಯದಿಂದಲೂ, ದಂಡಿಸುವೆನು. ಐಗುತ್ತ
ದೇಶಕ್ಕೆ, ಅಲ್ಲಿ ತಂಗುವದಕ್ಕೆ ಹೋಗಿರುವ ಯೆಹೂದದ ಉಳಿ
ವಿನಲ್ಲಿ, ತಾವು ತಿರುಗಿ ಕೊಂಡು, ಯೆಹೂದದಲ್ಲಿ ವಾಸ ಮಾಡ
ಬೇಕೆಂದು ಮನಸ್ಸು ಮಾಡಿರುವವರಲ್ಲಿ, ಒಬ್ಬನಾದರೂ ಯೆಹೂ
ದ ದೇಶಕ್ಕೆ ತಿರುಗಿ ಕೊಳ್ಳುವದಕ್ಕೆ, ತಪ್ಪಿಸಿಕೊಳ್ಳುವದಿಲ್ಲ, ನಿಲ್ಲ
ವದಿಲ್ಲ; ಓಡಿ ಹೋಗುವವರು ಅಲ್ಲದೆ ಇನ್ಯಾರು ಅಲ್ಲಿಗೆ ತಿರುಗಿ
ಕೊಳ್ಳುವದಿಲ್ಲ.

೧೫ ಆಗ ತಮ್ಮ ಹೆಂಡರು ಬೇರೆ ದೇವರುಗಳಿಗೆ ಧೂಪ ಸುಟ್ಟಿದ್ದ
ದೆಂದು ತಿಳಿದ ಗಂಡಸರೆಲ್ಲರು, ದೊಡ್ಡ ಗುಂಪಾಗಿ ಹತ್ತಿರ ನಿಂತಿದ್ದ
ಹೆಂಗಸರೆಲ್ಲರೂ, ಐಗುತ್ತ ದೇಶದಲ್ಲಿ ಪತ್ರೋಸಿವಲ್ಲಿ ವಾಸ ಮಾ
ಡಿದ ಜನರೆಲ್ಲರೂ, ಯೆರೆಮಿಾಯನಿಗೆ ಉತ್ತರ ಕೊಟ್ಟು ಹೇಳಿ
೧೬ ದ್ದೇನಂದರೆ—ನೀನು ಕರ್ತನ ಹೆಸರಿನಲ್ಲಿ ನಮ್ಮ ಸಂಗಡ ಮಾತಾ
ಡಿದ ಮಾತಿನ ವಿಷಯದಲ್ಲಿ ನಾವು ನಿನ್ನನ್ನು ಕೇಳುವದಿಲ್ಲ. ಆ
ದರೆ ಸ್ವಂತ ಬಾಯಿಯಿಂದ ಹೊರಡುವ ಕಾರ್ಯಗಳನ್ನೆಲ್ಲಾ
ಮಾಡೇ ಮಾಡುತ್ತೇವೆ; ಆಕಾಶದ ರಾಣಿಗೆ ಧೂಪ ಸುಡುತ್ತೇವೆ,
ಪಾನದರ್ಪಣಿಗಳನ್ನು ಅವಳಿಗೆ ಹೊಯ್ಯುತ್ತೇವೆ; ನಾವೂ, ನ
ಮ್ಮ ತಂದೆಗಳೂ, ನಮ್ಮ ಅರಸರೂ, ನಮ್ಮ ಪ್ರಧಾನರೂ, ಯೆ
ಹೂದದ ಪಟ್ಟಣಗಳಲ್ಲಿಯೂ, ಯೆರೂಸಲೇಮಿನ ಬೀದಿಗಳಲ್ಲಿಯೂ
ಮಾಡಿದ ಪ್ರಕಾರವೇ. ಯಾಕಂದರೆ, ಆಗ ಕೊಟ್ಟಿಯಿಂದ ತೃ
೧೭ ಪ್ತಿ ಪಟ್ಟಿವು, ಚನ್ನಾಗಿದ್ದೆವು, ಕೇಡು ನೋಡಲಿಲ್ಲ. ಆದರೆ ನಾವು
ಆಕಾಶದ ರಾಣಿಗೆ ಧೂಪ ಸುಡುವದನ್ನೂ ಪಾನದರ್ಪಣಿಗಳನ್ನು
ಅವಳಿಗೆ ಹೊಯ್ಯುವದನ್ನೂ, ಬಿಟ್ಟಂದಿನಿಂದ ನಮಗೆ ಎಲ್ಲಾ ಸಾ
ಲದೆ ಹೋಯಿತು; ಕತ್ತಿಯಿಂದಲೂ, ಬರದಿಂದಲೂ, ನಿರ್ಮೂಲ
೧೮ ವಾದೆವು. ಇದಲ್ಲದೆ ನಾವು ಆಕಾಶದ ರಾಣಿಗೆ ಧೂಪ ಸುಟ್ಟು,
ಅವಳಿಗೆ ಪಾನದರ್ಪಣಿಗಳನ್ನು ಹೊಯಿದಾಗ ನಮ್ಮ ಗಂಡಂದಿ
ರು ಇಲ್ಲದೆ ಅವಳ ಸೇವೆಗೋಸ್ಕರ ದೋಸೆಗಳನ್ನು ಮಾಡಿ, ಅ
ವಳಿಗೆ ಪಾನದರ್ಪಣಿಗಳನ್ನು ಹೊಯಿದೆವೋ!

೧೦ ಆಗ ಯೆರೆಮಿಾಯನು ಜನರೆಲ್ಲರಿಗೆ, ಗಂಡಸರಿ
ಗೂ, ಹೆಂಗಸರಿಗೂ, ತನಗೆ ಉತ್ತರವನ್ನು ಕೊಟ್ಟಿದ್ದ ಜನರೆಲ್ಲರಿಗೂ, ಹೇಳಿದ್ದೇ
೧೧ ನಂದರೆ—ನೀವೂ, ನಿಮ್ಮ ತಂದೆಗಳೂ, ನಿಮ್ಮ ಅರಸರೂ, ನಿಮ್ಮ
ಪ್ರಧಾನರೂ, ದೇಶದ ಜನರೂ, ಯೆಹೂದದ ಪಟ್ಟಣಗಳಲ್ಲಿಯೂ,
ಯೆರೂಸಲೇಮಿನ ಬೀದಿಗಳಲ್ಲಿಯೂ, ಸುಟ್ಟು ಧೂಪವನ್ನೇ ಕರ್ತ
ನು ಜ್ಞಾಪಕ ಮಾಡಿ ಕೊಂಡದ್ದು ಅಲ್ಲವೋ! ಅವನ ಮನಸ್ಸಿಗೆ
೧೨ ಬಂದದ್ದು ಅದೇ ಅಲ್ಲವೋ! ಆದಕಾರಣ ನಿಮ್ಮ ಕ್ರಿಯೆಗಳ ಕೆ
ಟ್ಟತನವನ್ನೂ, ನೀವು ಮಾಡಿದ ಅಸಹ್ಯಗಳನ್ನೂ, ಕರ್ತನು
ಇನ್ನು ತಾಳಲಾರದದರಿಂದ ನಿಮ್ಮ ದೇಶವು, ಈದಿನ ಇರುವ ಪ್ರಕಾ
ರ, ನಿವಾಸಿ ಇಲ್ಲದೆ, ಹಾಳಾಗಿಯೂ, ವಿಸ್ಮಯವಾಗಿಯೂ, ಶಾಪ
೧೩ ವಾಗಿಯೂ, ಇದೆ. ನೀವು ಧೂಪ ಸುಟ್ಟು, ಕರ್ತನಿಗೆ ವಿರೋಧ
ವಾಗಿ ಪಾಪ ಮಾಡಿ, ಕರ್ತನ ಶಬ್ದವನ್ನು ಕೇಳದೆ, ಅವನ ನ್ಯಾ
ಯಪ್ರಮಾಣದಲ್ಯಾದರೂ, ಅವನ ನೇಮಗಳಲ್ಯಾದರೂ, ಅವನ
ಸಾಕ್ಷಿಗಳಲ್ಯಾದರೂ, ನಡಿಯದೆ ಹೋದದರಿಂದಲೇ, ಈ ಕೇಡು
೧೪ ಈದಿನ ಇರುವ ಪ್ರಕಾರ ನಿಮಗೆ ಸಂಭವಿಸಿದೆ. ಇದಲ್ಲದೆ ಯೆರೆ
ಮಿಾಯನು ಎಲ್ಲಾ ಜನರಿಗೂ, ಎಲ್ಲಾ ಹೆಂಗಸರಿಗೂ, ಹೇಳಿದ್ದೇ
ನಂದರೆ—ಐಗುತ್ತ ದೇಶದಲ್ಲಿರುವ ಯೆಹೂದದವರೆಲ್ಲರೇ, ಕರ್ತನ
೧೫ ವಾಕ್ಯವನ್ನು ಕೇಳಿರಿ. ಇಸ್ರಯೇಲಿನ ದೇವರಾದ ಸೈನ್ಯಗಳ ಕ
ರ್ತನು ಹೀಗೆ ಹೇಳುತ್ತಾನೆ—ನೀವೂ, ನಿಮ್ಮ ಹೆಂಡರೂ—ಆಕಾಶ
ದ ರಾಣಿಗೆ ಧೂಪ ಸುಡುತ್ತೇವೆಂದೂ, ಅವಳಿಗೆ ಪಾನದರ್ಪಣಿಗ
ಳನ್ನೂ ಹೊಯ್ಯುತ್ತೇವೆಂದೂ, ನಾವು ಮಾಡಿರುವ ಹರಿಕೆಗಳ
ನ್ನು ನಡಿಸೇ ನಡಿಸುವೆವೆಂದು, ನಿಮ್ಮ ಬಾಯಿಗಳಿಂದ ಹೇಳಿ, ನಿ
ಮ್ಮ ಕೈಗಳಿಂದ ಸಹ ಈಡೇರಿಸಿದ್ದೀರಿ; ನಿಮ್ಮ ಹರಿಕೆಗಳನ್ನು
ಸ್ಥಾಪಿಸೇ ಸ್ಥಾಪಿಸುವಿರಿ, ನಿಮ್ಮ ಹರಿಕೆಗಳನ್ನು ನಡಿಸೇ ನಡಿಸು
೧೬ ವಿರಿ. ಹಾಗಾದರೆ, ಐಗುತ್ತ ದೇಶದಲ್ಲಿ ವಾಸವಾಗಿರುವ ಯೆಹೂ
ದದವರೆಲ್ಲರೇ, ಕರ್ತನ ವಾಕ್ಯವನ್ನು ಕೇಳಿರಿ—ಕರ್ತನು ಹೇಳು
ವದೇನಂದರೆ— ಕರ್ತನಾದ ಯೆಹೋವ ಜೀವಿಸುತ್ತಾನೆಂಬದಾಗಿ,



ನನ್ನ ಹೆಸರು ಇನ್ನು ಮೇಲೆ ಸಮಸ್ತ ಐಗುತ್ತ ದೇಶದಲ್ಲಿ, ಯೆ
ಹೂದದ ಮನುಷ್ಯರಲ್ಲಿ, ಒಬ್ಬನ ಬಾಯಿಯಿಂದಲಾದರೂ ಹೇ
ಳಲ್ಪಡುವದಿಲ್ಲವೆಂದು, ನನ್ನ ದೊಡ್ಡ ಹೆಸರಿನಲ್ಲಿ ಆಣೆ ಇಟ್ಟು
೨೭ ಕೊಂಡಿದ್ದೇನೆ. ಇಗೋ ನಾನು ಒಳ್ಳೇದಕ್ಕಾಗಿ ಅಲ್ಲ, ಕೆಟ್ಟದ್ದ
ಕ್ಕಾಗಿ ಅವರ ಮೇಲೆ ಎಚ್ಚರವಾಗಿರುವೆನು; ಮತ್ತು ಐಗುತ್ತ ದೇ
ಶದಲ್ಲಿರುವ ಯೆಹೂದದ ಮನುಷ್ಯರೆಲ್ಲರೂ, ಅವರು ಮುಗಿದು
ಹೋಗುವ ಪರ್ಯಂತರ, ಕತ್ತಿಯಿಂದಲೂ, ಬರದಿಂದಲೂ, ನಾ
೨೮ ಶವಾಗುವರು. ಆದರೆ ಕತ್ತಿಗೆ ತಪ್ಪಿಸಿ ಕೊಂಡ ಕೊಂಚ ಮಂದಿ
ಐಗುತ್ತ ದೇಶದೊಳಗಿಂದ ಯೆಹೂದ ದೇಶಕ್ಕೆ ತಿರಿಗಿ ಹೋಗು
ವರು; ಆಗ ಐಗುತ್ತ ದೇಶಕ್ಕೆ ಅಲ್ಲಿ ತಂಗುವದಕ್ಕೆ ಬಂದಿರುವ
ಯೆಹೂದದ ಉಳಿವಿಗೆಲ್ಲಾ, ಯಾರ ಮಾತು ನಿಲ್ಲುವದೋ,
೨೯ ನನ್ನವೋ ಅವರವೋ ಎಂದು ತಿಳುಕೊಳ್ಳುವರು. ಮತ್ತು ನ
ನ್ನ ಮಾತುಗಳು ನಿಮಗೆ ವಿರೋಧವಾಗಿ ಕೇಡಿಗಾಗಿ ನಿಶ್ಚಯವಾ
ಗಿ ನಿಲ್ಲುವವೆಂದು ನೀವು ತಿಳಿಯುವ ಹಾಗೆ, ನಾನು ಈ ಸ್ಥಳದಲ್ಲಿ
ನಿಮ್ಮನ್ನು ದಂಡಿಸುವೆನೆಂಬುವದಕ್ಕೆ ಇದೇ ನಿಮಗೆ ಗುರುತೆಂದು
೩೦ ಕರ್ತನು ಅನ್ನುತ್ತಾನೆ. ಕರ್ತನು ಹೇಳುವದೇನಂದರೆ—ಇಗೋ
ನಾನು ಯೆಹೂದದ ಅರಸನಾದ ಚಿದ್ಕಿಯನನ್ನು ಅವನ ಶತ್ರು
ವಾದಂಥ, ಅವನ ಪ್ರಾಣವನ್ನು ಹುಡುಕಿದಂಥ, ಬಾಬೆಲಿನ ಅರಸ
ನಾದ ನೆಬುಕದ್ನೆಜ್ಜರನ ಕೈಯಲ್ಲಿ ಹ್ಯಾಗೆ ಒಪ್ಪಿಸಿದೆನೋ, ಹಾ
ಗೆಯೇ ಐಗುತ್ತದ ಅರಸನಾದ ಫರೋಹೊಪ್ರನನ್ನು ಅವನ ಶ
ತ್ರುಗಳ, ಅವನ ಪ್ರಾಣವನ್ನು ಹುಡುಕುವವರ, ಕೈಯಲ್ಲಿಯೂ
ಒಪ್ಪಿಸುತ್ತೇನೆ.

## ೪೫. ಸಂಧಿ.

೧ ಯೆಹೂದದ ಅರಸನಾದ ಯೊಸೀಯನ ಮಗನಾದ ಯೆ
ಹೋಯಕೀಮನ ನಾಲ್ಕನೇ ವರುಷದಲ್ಲಿ, ನೇರೀಯನ ಮಗನಾದ
ಬಾರೂಕನು ಈ ಮಾತುಗಳನ್ನು ಯೆರೆಮಿಾಯನ ಬಾಯಿಯಿಂ
ದ ಪುಸ್ತಕದಲ್ಲಿ ಬರೆದ ಮೇಲೆ, ಯೆರೆಮಿಾಯನು ಅವನಿಗೆ ಹೇಳಿ
೨ ದ ವಾಕ್ಯವೇನಂದರೆ—ಬಾರೂಕನೇ, ಇಸ್ರಯೇಲಿನ ದೇವರಾದ ಕ
೩ ರ್ತನು ನಿನ್ನನ್ನು ಕುರಿತು ಹೀಗೆ ಹೇಳುತ್ತಾನೆ—ಈಗ ನನಗ
ಯ್ಯೋ! ಯಾಕಂದರೆ, ಕರ್ತನು ನನ್ನ ನೋವಿಗೆ ಚೆಂತೆಯನ್ನು
ಕೂಡಿಸಿದ್ದಾನೆ; ನಿಟ್ಟುಸುರು ಇಡುವದರಿಂದ ದಣಿದಿದ್ದೇನೆ; ವಿಶ್ರಾಂ
೪ ತಿಯನ್ನು ಕಾಣೆನೆಂದು ಹೇಳಿದಿಯಲ್ಲ! ನೀನು ಅವನಿಗೆ ಹೇಳ ತ
ಕ್ಕದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ಇಗೋ ನಾನು
೫ ಕಟ್ಟಿದ್ದನ್ನು ಕೆಡವಿ ಬಿಡುತ್ತೇನೆ; ನಾನು ನೆಟ್ಟಿದ್ದನ್ನು, ಕಿತ್ತು ಹಾಕು
ತ್ತೇನೆ; ಹೌದು ಈ ಸಮಸ್ತ ದೇಶವನ್ನೇ. ಹಾಗಾದರೆ, ನೀನು
ನಿನಗೋಸ್ಕರ ದೊಡ್ಡವುಗಳನ್ನು ಹುಡುಕುತ್ತೀಯೋ! ಹುಡುಕ
ಬೇಡ; ಯಾಕಂದರೆ, ಇಗೋ ನಾನು ಎಲ್ಲಾ ಮಾಂಸದ ಮೇಲೆ
ಕೇಡನ್ನು ತರುತ್ತೇನೆಂದು ಕರ್ತನು ಅನ್ನುತ್ತಾನೆ; ಆದರೂ ನೀ
ನು ಹೋಗುವ ಎಲ್ಲಾ ಸ್ಥಳಗಳಲ್ಲಿ ನಿನ್ನ ಪ್ರಾಣವನ್ನು ನಿನಗೆ
ಕೊಳ್ಳೆಯಾಗಿ ಕೊಡುತ್ತೇನೆ.

## ೪೬. ಸಂಧಿ.

೧ ಜನಾಂಗಗಳಿಗೆ ವಿರೋಧವಾಗಿಯೂ, ಐಗುತ್ತಕ್ಕೆ ವಿರೋಧ
ವಾಗಿಯೂ, ಪ್ರಾತ್ ನದಿಯ ಬಳಿಯಲ್ಲಿ ಕರ್ಕೆಮಿಷಿನಲ್ಲಿ ಇದ್ದಂ
೨ ಥ ಬಾಬೆಲಿನ ಅರಸನಾದ ನೆಬುಕದ್ನೆಜ್ಜರನು ಯೆಹೂದದ ಅ
ಸನಾದ ಯೊಸೀಯನ ಮಗನಾದ ಯೆಹೋಯಕೀಮನ ನಾಲ್ಕ
ನೇ ವರುಷದಲ್ಲಿ ಹೊಡೆದಂಥ ಐಗುತ್ತದ ಅರಸನಾದ ಫರೋಹನಿ
ಕೋವಿನ ದಂಡಿಗೆ ವಿರೋಧವಾಗಿಯೂ, ಪ್ರವಾದಿಯಾದ ಯೆರೆ
ಮಿಾಯನಿಗೆ ಉಂಟಾದ ಕರ್ತನ ವಾಕ್ಯವು.
೩ ಗುರಾಣಿಯನ್ನೂ ಹೇಳ್ಯವನ್ನೂ ಸಿದ್ಧ ಮಾಡಿರಿ;
ಯುದ್ಧಕ್ಕೆ ಸಮೀಪಿಸಿರಿ;
೪ ಕುದುರೆಗಳನ್ನು ಕಟ್ಟಿರಿ;
ರಾಹುತರೇ, ಎದ್ದು, ಶಿರಸ್ತ್ರಾಣಗಳನ್ನಿಟ್ಟು ನಿಂತು ಕೊಳ್ಳಿರಿ;
೫ ಈಟಿಗಳನ್ನು ಮೆರುಗು ಮಾಡಿರಿ, ಕವಚಗಳನ್ನು ತೊಟ್ಟುಕೊಳ್ಳಿರಿ
ಅವರು ದಿಗಿಲುಪಟ್ಟು, ಹಿಂತಿರುಗಿದ್ದನ್ನು ನಾನು ಕಂಡದ್ದೇನು!
ಹೌದು, ಅವರ ಪರಾಕ್ರಮಶಾಲಿಗಳು ಬಡಿಯಲ್ಪಟ್ಟಿದ್ದಾರೆ;
ಹಿಂದೆ ನೋಡದೆ ಓಡೇ ಓಡಿ ಹೋಗುತ್ತಾರೆ;
ಸುತ್ತಲು ಅಂಜಿಕೆ ಇದೆ ಎಂದು ಕರ್ತನು ಅನ್ನುತ್ತಾನೆ.
೬ ಶೀಘ್ರನು ಓಡಿ ಹೋಗದಿರಲಿ;
ಪರಾಕ್ರಮಶಾಲಿಯು ತಪ್ಪಿಸಿಕೊಳ್ಳದಿರಲಿ;
ಉತ್ತರದಲ್ಲಿ, ಪ್ರಾತ್ ನದಿಯ ತೀರದಲ್ಲಿ,
ಅವರು ಎಡವುವರು, ಬೀಳುವರು.
೭ ನದಿಯ ಹಾಗೆ ಏರುವವನೂ,
ಹೊಳೆಗಳ ಹಾಗೆ ಕದಲುವ ನೀರುಗಳುಳ್ಳವನೂ, ಯಾರು!
೮ ಐಗುತ್ತವು ನದಿಯ ಹಾಗೆ ಏರುತ್ತವೆ;
ಅವರ ನೀರುಗಳು ಹೊಳೆಗಳ ಹಾಗೆ ಕದಲುತ್ತವೆ;
ನಾನು ಏರುತ್ತೇನೆ, ಭೂಮಿಯನ್ನು ಮುಚ್ಚುತ್ತೇನೆ,
ಪಟ್ಟಣವನ್ನೂ ಅದರ ನಿವಾಸಿಗಳನ್ನೂ ನಾಶನ ಮಾಡುತ್ತೇನೆ,
ಎಂದು ಹೇಳುತ್ತಾನೆ.
೯ ಕುದುರೆಗಳೇ ಏರಿ ಬನ್ನಿ, ರಥಗಳೇ ಓಡ್ಯಾಡಿರಿ,
ಪರಾಕ್ರಮಶಾಲಿಗಳು ಹೊರಗೆ ಬರಲಿ;
ಗುರಾಣಿಯನ್ನು ಹಿಡಿಯುವ ಕೂಷ್ಯರೂ, ಫೂತ್ಯರೂ,
ಬಿಲ್ಲನ್ನು ಹಿಡಿದು ಬೊಗ್ಗಿಸುವ ಲೂದ್ಯರೂ, ಹೊರಗೆ ಬರಲಿ.
೧೦ ಯಾಕಂದರೆ, ಇದು ಸೈನ್ಯಗಳ ಕರ್ತನಾದ ಯೆಹೋವನ ದಿವ
ಸವು;
ಅವನು ತನ್ನ ಶತ್ರುಗಳಿಗೆ ಮುಯ್ಯಿಗೆಮುಯ್ಯಿ ತೀರಿಸುವ ದಿವ
ಸವು;
ಕತ್ತಿಯು ಸಂಹರಿಸಿ ಅವರ ರಕ್ತದಿಂದ ತೃಪ್ತಿಯಾಗಿ ಮತ್ತವಾ
ಗುವದು;
ಯಾಕಂದರೆ, ಉತ್ತರ ದೇಶದಲ್ಲಿ, ಪ್ರಾತ್ ನದಿಯ ಬಳಿಯಲ್ಲಿ,
ಸೈನ್ಯಗಳ ಕರ್ತನಾದ ಯೆಹೋವನಿಗೆ ಬಲಿ ಆಗುತ್ತದೆ.
೧೧ ಐಗುತ್ತದ ಮಗಳಾದ ಕನ್ಯಾಸ್ತ್ರೀಯೇ,
ಗಿಲ್ಯಾದಿಗೆ ಏರಿ ಹೋಗಿ ತೈಲವನ್ನು ತಕ್ಕೊಳ್ಳೇ!
ನೀನು ಬಹಳ ಮದ್ದು ತಕ್ಕೊಳ್ಳುವದು ವ್ಯರ್ಥವಾಗಿದೆ;
ನಿನಗೆ ವಾಸಿಯಾಗುವದಿಲ್ಲ.
೧೨ ಜನಾಂಗಗಳು ನಿನ್ನ ಮಾನಭಂಗವನ್ನು ಕುರಿತು ಕೇಳಿ ಅವೆ;
ನಿನ್ನ ಕೂಗು ಭೂಮಿಯನ್ನು ತುಂಬಿಸಿ ಇದೆ;
ಯಾಕಂದರೆ, ಪರಾಕ್ರಮಶಾಲಿಯು ಪರಾಕ್ರಮಶಾಲಿಯ ಮೇಲೆ
ಎಡವಿದ್ದಾನೆ;
ಏಕವಾಗಿ ಬಿದ್ದು ಹೋಗಿದ್ದಾರೆ.

೧೩ ಬಾಬೆಲಿನ ಅರಸನಾದ ನೆಬುಕದ್ನೆಜ್ಜರನು ಬಂದು ಐಗುಪ್ತ
ದೇಶವನ್ನು ಹೊಡಿಯುವನೆಂಬದರ ವಿಷಯ ಕರ್ತನು ಪ್ರವಾದಿ
ಯಾದ ಯೆರೆಮಿಾಯನಿಗೆ ಹೇಳಿದ ವಾಕ್ಯವು.
೧೪ ಐಗುಪ್ತದಲ್ಲಿ ತಿಳಿಸಿರಿ! ಮಿಗ್ದೊಲಿನಲ್ಲಿ ಕೇಳ್ಳ ಮಾಡಿರಿ!
ನೋಫಿನಲ್ಲಿಯೂ, ತಾಪನೆಸಿನಲ್ಲಿಯೂ, ಕೇಳ್ಳ ಮಾಡಿರಿ!
ನಿಂತುಕೋ; ಸಿದ್ಧ ಮಾಡಿಕೋ;
ಯಾಕಂದರೆ, ಕತ್ತಿಯು ನಿನ್ನ ಸುತ್ತಲಾಗಿ ನುಂಗುವುದೆಂದು
ಹೇಳ್ಳಿರಿ.
೧೫ ನಿನ್ನ ಬಲಿಷ್ಠರು ಯಾಕೆ ಬೊತಕೊಂಡು ಕೋಗಲ್ಪಟ್ಟಿದ್ದಾರೆ?
ಕರ್ತನು ಅವರನ್ನು ಓಡಿಸಿದ್ದದರಿಂದ ಅವರು ನಿಲ್ಲಲಿಲ್ಲ.
೧೬ ಅನೇಕರನ್ನು ಎಡವ ಮಾಡಿದನು,
ಒಬ್ಬರಮೇಲೊಬ್ಬರು ಬಿದ್ದರು;
ಪಿಳ್ಳೆ, ಉದ್ರ ಪಡಿಸುವ ಕತ್ತಿಯನ್ನು ಬಿಟ್ಟು,
ಸ್ವಂತ ಜನರ ಬಳ್ಳಗೂ, ನಾವು ಹುಟ್ಟಿದ ದೇಶದ ಬಳ್ಳಗೂ,
ತಿರಿಗಿ ಹೋಗೋಣವೆಂದು ಹೇಳ್ಳಿದರು.
೧೭ ಐಗುಪ್ತದ ಅರಸನಾದ ಫರೋಹನನು ನಾಶವಾದನು;
ಸಮಯವನ್ನು ತಪ್ಪಿಸಿದ್ದಾನೆಂದು ಅಲ್ಲಿ ಕೂಗುತ್ತಾರೆ.
೧೮ ಸೈನ್ಯಗಳ ಯೆಹೋವನೆಂದು ಹೆಸರುಳ್ಳ ಅರಸನು
ಅನ್ನುವದೇನಂದರೆ—ನನ್ನ ಜೀವದಾಣೆ,
ಬೆಟ್ಟಗಳಲ್ಲಿ ತಾಬೊರನಂತೆಯೂ,
ಸಮುದ್ರದ ಬಳ್ಳಯಲ್ಲಿ ಕಾರ್ಮೆಲಿನಂತೆಯೂ, ಬರುವನು.
೧೯ ಐಗುಪ್ತದ ಮಗಳಾದ ನಿವಾಸಿಯೇ,
ಕೆಕೆಯ ಸಾಮಾನುಗಳನ್ನು ಮಾಡಿಕೋ;
ಯಾಕಂದರೆ ನೋಪು ಹಾಳಾಗುವದು;
ನಿವಾಸಿ ಇಲ್ಲದೆ ಬೀಡಾಗುವದು.
೨೦ ಐಗುಪ್ತವು ಶೆಲುವಾದ ಕಡಸಾಗಿದೆ;
ಆದರೆ ಉತ್ತರದಿಂದ ನಾಶನವು ಬಂದೇ ಬರುತ್ತದೆ.
೨೧ ಮತ್ತು ಅದರೊಳಗಿರುವ ಅದರ ಸಂಬಳದವರು
ಕೊಟ್ಟಿದ ಕರುಗಳ ಹಾಗಿದ್ದಾರೆ;
ಅವರು ಸಹ ತಿರುಗಿಕೊಂಡು ಏಕವಾಗಿ ಓಡಿ ಹೋಗುತ್ತಾರೆ;
ಅವರು ನಿಲ್ಲಲಿಲ್ಲ;
ಯಾಕಂದರೆ ಅವರ ಆಪತ್ತಿನ ದಿವಸವೂ,
ಅವರ ವಿಚಾರಣೆಯ ಕಾಲವೂ, ಅವರ ಮೇಲೆ ಬಂತು.
೨೨ ಅದರ ಶಬ್ದವು ಸರ್ಪದಂತೆ ಹೊರಡುವದು;
ಯಾಕಂದರೆ ಅವರು ದಂಡಿನ ಸಂಗಡ ಸಂಚರಿಸಿ,
ಕಟ್ಟಿಗೆ ಕಡಿಯುವವರ ಹಾಗೆ
ಕೊಡ್ಲಿಗಳ ಸಂಗಡ ಅದರ ಮೇಲೆ ಬರುವರು.
೨೩ ಅದರ ಅಡವಿಯನ್ನು, ಅದು ಶೋಧಿಸ ಕೂಡದ್ದಾಗಿದ್ದರೂ,
ಕಡಿದು ಹಾಕುವರೆಂದು ಕರ್ತನು ಅನ್ನುತ್ತಾನೆ;
ಯಾಕಂದರೆ, ಅವರು ಬಿಡಿತೆಗಳಿಗಿಂತ ಹೆಚ್ಚಾಗಿ,
ಲೆಖ್ಖವಿಲ್ಲದೆ ಇದ್ದಾರೆ.
೨೪ ಐಗುಪ್ತದ ಮಗಳು ನಾಚಿಕೆ ಪಡುವಳು,
ಉತ್ತರದ ಜನರ ಕೈಯಲ್ಲಿ ಒಪ್ಪಿಸಲ್ಪಡುವಳು.
೨೫ ಇಸ್ರಯೇಲಿನ ದೇವರಾದ ಸೈನ್ಯಗಳ ಯೆಹೋವ ಕರ್ತನು
ಹೇಳುವದೇನಂದರೆ—
ಇಗೋ ನಾನು ನೋಪಿನ ಅಮ್ಮೋನನನ್ನೂ,
ಫರೋಹನನನ್ನೂ, ಐಗುಪ್ತವನ್ನೂ,
ಅದರ ದೇವರುಗಳನ್ನೂ, ಅದರ ಅರಸರನ್ನೂ,
ಹೌದು, ಫರೋಹನನ್ನೂ, ಅವನಲ್ಲಿ ನಂಬಿಕೆ ಇಡುವವರನ್ನೂ,
ದಂಡಿಸುತ್ತೇನೆ;
೨೬ ಮತ್ತು ಅವರ ಪ್ರಾಣವನ್ನು ಹುಡುಕುವವರ ಕೈಯಲ್ಲಿಯೂ,
ಬಾಬೆಲಿನ ಅರಸನಾದ ನೆಬುಕದ್ನೆಜ್ಜರನ ಕೈಯಲ್ಲಿಯೂ,
ಅವನ ಸೇವಕರ ಕೈಯಲ್ಲಿಯೂ,
ಅವರನ್ನು ಒಪ್ಪಿಸುತ್ತೇನೆ.
ಅದರ ತರುವಾಯ ಅದು ಪೂರ್ವದ ದಿವಸಗಳಂತೆ, ನಿವಾಸವಾ
ಗುವದೆಂದು,
ಕರ್ತನು ಅನ್ನುತ್ತಾನೆ.

೨೭ ಆದರೆ ನೀನು, ಓ ನನ್ನ ಸೇವಕನಾದ ಯಾಕೋಬನೇ! ಭ
ಯ ಪಡ ಬೇಡ;
ಇಸ್ರಯೇಲೇ! ಹೆದರ ಬೇಡ;
ಯಾಕಂದರೆ, ಇಗೋ ನಾನು ನಿನ್ನನ್ನು ದೂರದಿಂದಲೂ,
ನಿನ್ನ ಸಂತಾನವನ್ನು ಅವರು ಕೆಕೆಯಾಗಿ ಹೋದ ದೇಶದಿಂದ
ಲೂ, ರಕ್ಷಿಸುವೆನು;
ಯಾಕೋಬನು ತಿರಿಗಿ ಬಂದು,
ವಿಶ್ರಾಂತಿಯಾಗಿಯೂ, ಸುಖವಾಗಿಯೂ ಇರುವನು;
ಅವನನ್ನು ದಿಗುಲು ಪಡಿಸುವದಕ್ಕೆ ಯಾರು ಇರುವದಿಲ್ಲ.
೨೮ ನನ್ನ ಸೇವಕನಾದ ಯಾಕೋಬನೇ!
ನೀನು ಭಯ ಪಡ ಬೇಡವೆಂದು ಕರ್ತನು ಅನ್ನುತ್ತಾನೆ;
ಯಾಕಂದರೆ, ನಾನೇ ನಿನ್ನ ಸಂಗಡ ಇದ್ದೇನೆ;
ನಾನು ನಿನ್ನನ್ನು ಎಲ್ಲಿ ಓಡಿಸಿದೆನೋ,
ಆ ಜನಾಂಗಗಳನ್ನೆಲ್ಲಾ ಮುಗಿಸಿ ಬಿಡುತ್ತೇನೆ;
ಆದರೆ ನಿನ್ನನ್ನು ಮುಗಿಸಿ ಬಿಡುವದಿಲ್ಲ;
ನ್ಯಾಯದಿಂದಲೇ ನಿನ್ನನ್ನು ಶಿಕ್ಷಿಸುತ್ತೇನೆ;
ಅಪರಾಧ ಮಾತ್ರ ಹೊರಿಸದೆ ಬಿಡುವದಿಲ್ಲ.

## ೪೭. ಸಂಧಿ.

೧ ಫರೋಹನು ಗಾಜವನ್ನು ಹೊಡಿಯುವದಕ್ಕಿಂತ ಮುಂಚೆ, ಫಿ
ಲಿಷ್ಟ್ಯರಿಗೆ ವಿರೋಧವಾಗಿ ಪ್ರವಾದಿಯಾದ ಯೆರೆಮಿಾಯನಿಗೆ
೨ ಉಂಟಾದ ಕರ್ತನ ವಾಕ್ಯವು. ಕರ್ತನು ಹೇಳುವದೇನಂದರೆ—
ಇಗೋ, ನೀರುಗಳು ಉತ್ತರದಿಂದ ಏರಿ ಬರುತ್ತವೆ,
ಅವು ಹೊರಳ್ಳುವ ಹಳ್ಳವಾಗುವವು;
ದೇಶದ ಮೇಲೆಯೂ, ಅದರ ಪರಿಪೂರ್ಣತೆಯ ಮೇಲೆಯೂ,
ಪಟ್ಟಣದ ಮೇಲೆಯೂ, ಅದರ ನಿವಾಸಿಗಳ ಮೇಲೆಯೂ, ಹೊರ
ಳ್ಳುವವು;
ಆಗ ಮನುಷ್ಯರು ಕೂಗುವರು,
ದೇಶದ ನಿವಾಸಿಗಳೆಲ್ಲರು ಹುಯಿಲಿಡುವರು.
೩ ಅವನ ಬಲವಾದ ಕುದುರೆಗಳ ಗೊರಸೆಗಳ ಶಬ್ದಿಯುವಿಕೆಯ ಶಬ್ದ
ದಿಂದಲೂ,



ಅವನ ರಥಗಳ ಘೂಳ್ಳದಿಂದಲೂ,
ಅವನ ಚಕ್ರಗಳ ಧ್ವನಿಯಿಂದಲೂ,
ತಂದೆಗಳು, ಕೈ ಬಲಹೀನತ್ವದಿಂದ,
ಮಕ್ಕಳ ಕಡೆಗೆ ತಿರುಗಿ ಕೊಳ್ಳರು.
೪ ಯಾಕಂದರೆ, ದಿವಸ ಬಂತು;
ಫಿಲಿಷ್ಟ್ಯರೆಲ್ಲರನ್ನು ಸೂರೆ ಮಾಡುವಂಥ,
ತೂರಿನಿಂದಲೂ, ಚಿದೋನಿನಿಂದಲೂ, ಉಳಿದ ಪ್ರತಿ ಸಹಾಯಕ
ನನ್ನು ಕಡಿದು ಬಿಡುವಂಥ, ದಿವಸವೇ.
ಯಾಕಂದರೆ, ಕರ್ತನು ಫಿಲಿಷ್ಟ್ಯರನ್ನೂ,
ಕಫ್ತೋರಿನ ದ್ವೀಪದ ಉಳಿದವನ್ನೂ, ಸೂರೆ ಮಾಡುವನು.
೫ ಗಾಜದ ಮೇಲೆ ಬೋಳ್ಳಿತನ ಬಂತು;
ಅಷ್ಕಲೋನೂ ಅವರ ತಗ್ಗಿನ ಉಳ್ಳವೂ, ಹಾಳಾಯಿತು;
ಎಷ್ಟು ಮಟ್ಟಿಗೂ ನಿನಗೆ ಘಾಯ ಮಾಡಿ ಕೊಳ್ಳುವಿ!
೬ ಅಯ್ಯೋ! ಕರ್ತನ ಕತ್ತಿಯೇ!
ಎಷ್ಟು ಮಟ್ಟಿಗೂ ವಿಶ್ರಮಿಸ ಕೊಳ್ಳದಿರುವಿ!
ನಿನ್ನ ಬರೆಯಲ್ಲಿ ಹೊಕ್ಕೊಳ್ಳು;
ವಿಶ್ರಮಿಸಿ ಕೊಂಡು, ಸುಮ್ಮನಿರು.
೭ ಅದು ಹ್ಯಾಗೆ ವಿಶ್ರಮಿಸಿ ಕೊಳ್ಳಲಿ!
ಅಷ್ಕಲೋನಿಗೆ ವಿರೋಧವಾಗಿಯೂ,
ಸಮುದ್ರ ತೀರಕ್ಕೆ ವಿರೋಧವಾಗಿಯೂ,
ಕರ್ತನು ಅದಕ್ಕೆ ಆಜ್ಞೆ ಕೊಟ್ಟಿದ್ದಾನಲ್ಲ!
ಅಲ್ಲಿ ಅದನ್ನು ನೇಮಿಸಿದ್ದಾನೆ.

## ೪೮. ಸಂಧಿ.

೧ ಮೋವಾಬಿಗೆ ವಿರೋಧವಾಗಿ,
ಇಸ್ರಯೇಲಿನ ದೇವರಾದ ಯೆಹೋವ ಹೀಗೆ ಹೇಳುತ್ತಾನೆ—
ನೀಬೋವಿಗೆ ಅಯ್ಯೋ! ಯಾಕಂದರೆ, ಸೂರೆಯಾಯಿತು;
ಕಿರ್ಯಾತಾಯಿಮ್ ನಾಚಿಕೆ ಹೊಂದಿ, ಹಿಡಿಯಲ್ಪಟ್ಟಿತು;
ಮಿಸ್ಗಾಬು ನಾಚಿಕೆ ಹೊಂದಿ ಹೆದರಿಕೊಡಿತು.
೨ ಮೋವಾಬಿನ ಸ್ತೋತ್ರ ಇನ್ನು ಇಲ್ಲ;
ಹೆಷ್ಬೋನಿನಲ್ಲಿ ಅದಕ್ಕೆ ವಿರೋಧವಾಗಿ ಕೇಡನ್ನು ಆಲೋಚಿ
ಸಿದ್ದಾರೆ;
ಬನ್ನಿ, ಜನಾಂಗವಲ್ಲದ ಹಾಗೆ ಅದನ್ನು ಕಡಿದು ಬಿಡೋಣ,
ಮದ್ಮೆನೇ, ನೀನು ಸಹಾ ಮೌನವಾಗುವಿ;
ಕತ್ತಿಯು ನಿನ್ನ ಹಿಂದೆ ಹೋಗುವದು.
೩ ಹೊರನಾಯಿಮಿನಿಂದ ಕೂಗುವ ಶಬ್ದವು!
ಸೂರೆಯು, ದೊಡ್ಡ ಮುರಿಯೋಣವು!
೪ ಮೋವಾಬು ಮುರಿಯಲ್ಪಟ್ಟಿತು;
ಅದರ ಚಿಕ್ಕವರು ಕೂಗನ್ನು ಕೇಳ್ಳ ಮಾಡಿದರು.
೫ ಹೌದು, ಲೂಹಿತನ ಘಟ್ಟವನ್ನು ಅಳ್ಳಲೇ ಅತ್ತು ಏರುವರು;
ಹೌದು, ಹೊರನಾಯಿಮಿನ ಇಳಿಯೋಣದಲ್ಲಿ
ಶತ್ರುಗಳು, ಮುರಿಯುವದರ ಶಬ್ದವನ್ನು ಕೇಳ್ಳಿದಾರೆ.
೬ ಓಡಿ ಹೋಗಿರಿ, ನಿಮ್ಮ ಪ್ರಾಣಗಳನ್ನು ತಪ್ಪಿಸಿ ಕೊಳ್ಳಿರಿ;
ಅರ್ಣ್ಯದಲ್ಲಿರುವ ಒಣ ಗಿಡದ ಹಾಗಿರ್ರಿ.
೭ ನಿಶ್ಚಯವಾಗಿ, ನಿನ್ನ ಕ್ರಿಯೆಗಳಲ್ಲಿಯೂ, ನಿನ್ನ ದ್ರವ್ಯಗಳಲ್ಲಿ
ಯೂ, ನಂಬಿಕೆ ಇಟ್ಟದರಿಂದ,
ನೀನು ಸಹ ಹಿಡಿಯಲ್ಪಡುವಿ;
ಮತ್ತು ಕೀಮೋಷನು,
ಅವನ ಯಾಜಕರು, ಅವನ ಪ್ರಧಾನರು ಸಹಿತವಾಗಿ, ಕೆಕೆಗೆ ಹೋ
ಗುವನು.
೮ ಮತ್ತು ಒಂದೊಂದು ಪಟ್ಟಣದ ಮೇಲೆ ಸೂರೆ ಕೊಳ್ಳುವವನು ಬರುವನು;
ಒಂದುಪಟ್ಟಣವಾದರು ತಪ್ಪಿಹೊಗುವದಿಲ್ಲ;
ತಗ್ಗು ಸಹ ನಾಶವಾಗುವದು;
ಮತ್ತು ಬೈಲು ಹಾಳಾಗುವದು,
ಕರ್ತನು ಹಾಗೆ ಹೇಳಿದ್ದಾನಲ್ಲ!
೯ ಹಾರಿ ಹೋಗುವ ಹಾಗೆ ಮೋವಾಬಿಗೆ ಕೆಕ್ಕೆಗಳನ್ನು ಕೊಡಿರಿ;
ಯಾಕಂದರೆ, ಅದರ ಪಟ್ಟಣಗಳು ಹಾಳಾಗುವವು;
ಅವುಗಳಲ್ಲಿ ನಿವಾಸಿ ಇರುವದಿಲ್ಲ.
೧೦ ಕರ್ತನ ಕೆಲಸವನ್ನು ಮೋಸವಾಗಿ ನಡಿಸುವವನಿಗೆ ಶಾಪ;
ಮತ್ತು ರಕ್ತದಿಂದ ತನ್ನ ಕತ್ತಿಯನ್ನು ಹಿಂತೆಗಿಯುವವನಿಗೆ ಶಾಪ
೧೧ ಮೋವಾಬು ತನ್ನ ಚಿಕ್ಕಂದಿನಿಂದ ಸುಖವಾಗಿತ್ತು;
ಅದು ತನ್ನ ರಾಡಿಯ ಮೇಲೆ ಸುಮ್ಮನೆ ಇತ್ತು;
ಒಂದು ಪಾತ್ರೆಯೊಳಗಿಂದ ಮತ್ತೊಂದು ಪಾತ್ರೆಗೆ ಹೊಯ್ಯಲ್ಪ
ಡಲಿಲ್ಲ;
ಕೆಕೆಗೆ ಹೋಗಲಿಲ್ಲ;
ಆದದರಿಂದ ಅದರ ರುಚಿ ಅದರಲ್ಲಿ ಉಂಟು;
ಅದರ ವಾಸನೆ ಬೇರೆ ಆಗಲಿಲ್ಲ.
೧೨ ಆದದರಿಂದ ಇಗೋ ದಿನಗಳು ಬರುವವೆಂದು, ಕರ್ತನು ಅನ್ನು
ತ್ತಾನೆ;
ಆಗ ನಾನು ಅದರ ಬಳ್ಳಗೆ ಬೊಗ್ಗಿಸುವವರನ್ನು ಕಳುಹಿಸುವೆನು;
ಅವರು ಅದನ್ನು ಬೊಗ್ಗಿಸಿ,
ಅದರ ಪಾತ್ರೆಗಳನ್ನು ಬರಿದು ಮಾಡಿ,
ತಮ್ಮ ಬುದ್ದಿಲಿಗಳನ್ನು ಒಡಿಯುವರು.
೧೩ ಆಗ ಇಸ್ರಯೇಲಿನ ಮನೆಯವರು,
ತಾವು ನಂಬಿಕೊಂಡಿದ್ದ ಬೆತೇಲಿನ ವಿಷಯ ಹ್ಯಾಗೆ ನಾಚಿಕೆ ಪ
ಟ್ಟರೋ,
ಹಾಗೆಯೇ ಮೋವಾಬು ಕೀಮೋಷಿನ ವಿಷಯ ನಾಚಿಕೆ
ಪಡುವದು.

೧೪ ನಾವು ಪರಾಕ್ರಮಶಾಲಿಗಳು, ಯುದ್ಧಕ್ಕೆ ಬಲಿಷ್ಠರೂ,
೧೫ ಎಂದು ನೀವು ಹೇಳುವದು ಹ್ಯಾಗೆ?
ಮೋವಾಬು ಸೂರೆಯಾಯಿತು,
ಅದರ ಪಟ್ಟಣಗಳು ಏರಿ ಹೋದವು,
ಅದರ ಶ್ರೇಷ್ಠ ಯೌವನಸ್ಥರು ಕೊಲೆಗೆ ಇಳಿದು ಹೋದರು,
ಎಂದು ಸೈನ್ಯಗಳ ಯೆಹೋವನೆಂಬ ಅರಸನು ಅನ್ನುತ್ತಾನೆ.
೧೬ ಮೋವಾಬಿನ ಆಪತ್ತು ಬರುವದಕ್ಕೆ ಸಮೀಪವಾಯಿತು,
ಅದರ ಕೇಡು ಬಹು ತ್ವರೆ ಪಡುತ್ತದೆ.
೧೭ ಅದರ ಸುತ್ತಲಿರುವವರೆಲ್ಲರೇ, ಅದಕ್ಕೆ ಗೋಳಾಡಿರಿ;
ಅದರ ಹೆಸರನ್ನು ಬಲ್ಲವರೆಲ್ಲರೇ—
ಬಲವಾದ ಕೋಲೂ, ಸೌಂದರ್ಯವಾದ ಬೆತ್ತವೂ, ಹ್ಯಾಗೆ
ಮುರಿದು ಹೋಯಿತು!
ಎಂದು ಹೇಳ್ಳಿರಿ.

೧೯ ದೀಬೋನಿನ ನಿವಾಸಿಯಾದ ಮಗಳೇ,
ಮಹಿಮೆಯಿಂದ ಇಳಿ; ದಾಹವಾಗಿ ಕೂತುಕೋ;
ಯಾಕಂದರೆ, ಮೋವಾಬನ್ನು ಸೂರೆ ಮಾಡುವವನು
ನಿನಗೆ ವಿರೋಧವಾಗಿ ಏರುವನು,
ನಿನ್ನ ಕೋಟೆಗಳನ್ನು ಕೆಡಿಸಿ ಬಿಡುವನು.
೨೦ ಅರೋಯೇರಿನ ನಿವಾಸಿಯೇ, ದಾರಿಯ ಬಳಿಯಲ್ಲಿ ನಿಂತು, ದೃಷ್ಟಿಸು;
ಓಡಿ ಹೋಗುವವನನ್ನೂ ತಪ್ಪಿಸಿ ಕೊಳ್ಳುವವನನ್ನೂ ಕೇಳು,
ಏನಾಯಿತೆಂದು ಹೇಳು.
೨೦ ಮೋವಾಬು ನಾಚಿಕೆ ಪಡುತ್ತದೆ, ಯಾಕಂದರೆ, ಮುರಿದು ಹೋಯಿತು;
ಹುಯಿಲಿಡಿರಿ; ಕೂಗಿರಿ;
ಮೋವಾಬು ಸೂರೆಯಾಯಿತೆಂದು ಅರ್ನೋನಿನಲ್ಲಿ ತಿಳಿಸಿರಿ.
೨೦ ಇದಲ್ಲದೆ ಬೈಲು ಸೀಮೆಯ ಮೇಲೆ ನ್ಯಾಯ ತೀರ್ಪಿಕೆ ಬಂತು;
ಹೋಲೋನಿನ ಮೇಲೆಯೂ, ಯಾಚದ ಮೇಲೆಯೂ, ಮೆಫಾಥಿನ ಮೇಲೆಯೂ,
೨೨ ದೀಬೋನಿನ ಮೇಲೆಯೂ, ನೀಬೋನಿನ ಮೇಲೆಯೂ, ಬೇತ್ದಿಬ್ಲಥಾಯಿಮಿನ ಮೇಲೆಯೂ,
೨೩ ಕಿರ್ಯಾಥಾಯಿಮಿನ ಮೇಲೆಯೂ, ಬೇತ್ಗಾಮುಲಿನ ಮೇಲೆಯೂ,
ಬೇತ್ಮೆಯೋನಿನ ಮೇಲೆಯೂ, ಕೆರ್ಯೋಥಿನ ಮೇಲೆಯೂ,
೨೪ ಬೊಚ್ರದ ಮೇಲೆಯೂ,
ಸಮೀಪದಲ್ಲಾಗಲಿ ದೂರದಲ್ಲಾಗಲಿ ಇರುವ
೨೫ ಮೋವಾಬಿನ ಸಮಸ್ತ ಪಟ್ಟಣಗಳ ಮೇಲೆಯೂ, ಬಂತು.
ಮೋವಾಬಿನ ಕೊಂಬು ಕೊಯಿದು ಹಾಕಲ್ಪಟ್ಟಿತೆ;
ಅದರ ತೋಳು ಮುರಿಯಲ್ಪಟ್ಟಿತೆ,
ಎಂದು ಕರ್ತನು ಅನ್ನುತ್ತಾನೆ.
೨೬ ಅದಕ್ಕೆ ಅಮಲೇರಿಸಿರಿ;
ಯಾಕಂದರೆ, ಕರ್ತನಿಗೆ ವಿರೋಧವಾಗಿ ತನ್ನನ್ನು ದೊಡ್ಡದು ಮಾಡಿ ಕೊಂಡಿತೆ;
ಮೋವಾಬು, ತಾನೇ, ಕಾರಿದ್ದರಲ್ಲಿ ಹೊರಳಾಡುವದು;
ಹೌದು, ಅದೇ ಹಾಸ್ಯಕ್ಕಾಗಿರುವದು.
೨೭ ಯಾಕಂದರೆ, ನಿನ್ನೊಳಗೆ ಇಸ್ರಯೇಲೂ ಹಾಸ್ಯಕ್ಕಾಗಿರಲಿಲ್ಲವೋ!
ಅದು ಕಳ್ಳರೊಳಗೆ ಸಿಕ್ಕಿತೇನೋ!
ಯಾಕಂದರೆ, ನೀನು ಅದರ ವಿಷಯ ಯಾವಾಗ ಮಾತಾಡಿಯೋ ತಲೆ ಅಲ್ಲಾಡಿಸಿದಿಯಲ್ಲ!
೨೮ ಮೋವಾಬಿನಲ್ಲಿ ವಾಸವಾಗಿರುವವರೇ,
ಪಟ್ಟಣಗಳನ್ನು ಬಿಟ್ಟು, ಬಂಡೆಯಲ್ಲಿ ವಾಸವಾಗಿರಿ;
ಕುಣಿ ಬಾಯಿಯ ಪಕ್ಕಗಳಲ್ಲಿ ಗೂಡು ಕಟ್ಟುವ ಪಾರಿವಾಳದ ಹಾಗಿರಿ.
೨೯ ಮೋವಾಬಿನ ಅಹಂಕಾರವನ್ನು ಕುರಿತು,
ಅದರ ಮಹಾ ಗರ್ವವನ್ನು ಕುರಿತು,
ಅದರ ಠಂಭವನ್ನೂ, ಅಹಂಕಾರವನ್ನೂ,
ಬಡಾಯಿಯನ್ನೂ, ಉನ್ನತ ಮನಸ್ಸನ್ನೂ ಕುರಿತು ಕೇಳಿದ್ದೇವೆ.
೩೦ ನಾನು ಅದರ ಉಗ್ರವನ್ನು ಬಲ್ಲೆನೆಂದು ಕರ್ತನು ಅನ್ನುತ್ತಾನೆ;
ಆದರೆ ಆಗುವದಿಲ್ಲ;
ಅವನ ಅಬದ್ಧಗಳು ಸರಿ ಬೀಳುವದಿಲ್ಲ.
೩೧ ಆದದರಿಂದ ನಾನು ಮೋವಾಬಿನ ನಿಮಿತ್ತ ಹುಯಿಲಿಡುವೆನು,
ಸಮಸ್ತ ಮೋವಾಬಿನ ನಿಮಿತ್ತ ಕೂಗುವೆನು;
ಕಿರ್ಹೇರೆಸಿನ ಮನುಷ್ಯರ ನಿಮಿತ್ತ ನನ್ನ ಮನಸ್ಸು ದುಃಖಿಸುವದು.
೩೨ ಸಿಬ್ಮದ ದ್ರಾಕ್ಷೆ ಗಿಡವೇ!
ಯಾಜೇರಿನ ಅಳುವಿಕೆಯಿಂದ ನಿನ್ನ ನಿಮಿತ್ತ ಅಳುವೆನು;
ನಿನ್ನ ಬಳ್ಳಿಗಳು ಸಮುದ್ರವನ್ನು ದಾಟಿದವು;
ಯಾಜೇರಿನ ಸಮುದ್ರಕ್ಕೆ ಮುಟ್ಟಿದವು;
ನಿನ್ನ ಹಣ್ಣುಗಳ ಮೇಲೆಯೂ, ನಿನ್ನ ದ್ರಾಕ್ಷೇ ಸುಗ್ಗಿಯ ಮೇಲೆಯೂ,
ಸೂರೆ ಮಾಡುವವನು ಬಿದ್ದಿದ್ದಾನೆ.
೩೩ ಮತ್ತು ಫಲವುಳ್ಳ ಹೊಲದಿಂದಲೂ, ಮೋವಾಬಿನ ದೇಶದಿಂದಲೂ,
ಸಂತೋಷವೂ ಉಲ್ಲಾಸವೂ ತೆಗೆಯಲ್ಪಟ್ಟಿತೆ;
ಯಾಕಂದರೆ, ದ್ರಾಕ್ಷೆಯಾಲೆಗಳೊಳಗಿಂದ ದ್ರಾಕ್ಷೇರಸವನ್ನು ನಿಲ್ಲಿಸಿದ್ದೇನೆ;
ಆರ್ಭಟದ ಸಂಗಡ ಅವರು ತುಳಿಯುವದಿಲ್ಲ;
ಆರ್ಭಟವೇ ಆರ್ಭಟವಲ್ಲ.
೩೪ ಹೆಷ್ಬೋನಿನ ಕೂಗಿನ ನಿಮಿತ್ತ,
ಎಲೆಯಾಲೆಯ ಪರ್ಯಂತರಕ್ಕೂ, ಯಹಾಜಿನ ಪರ್ಯಂತರಕ್ಕೂ,
ಚೋವಾರು ಮೊದಲೊಂಡು ಹೊರನಾಯಿಮಿನ ಪರ್ಯಂತರಕ್ಕೂ,
ಎಗ್ಲಾತ್ ಶೆಲೀಸಿಯದ ಪರ್ಯಂತರಕ್ಕೂ,
ತಮ್ಮ ಶಬ್ದವನ್ನೆತ್ತಿದರು;
ಯಾಕಂದರೆ ನಿಮ್ರಿಮಿನ ನೀರುಗಳು ಸಹ ಹಾಳಾದವು.
೩೫ ಇದಲ್ಲದೆ ಮೇಡುಗಳಲ್ಲಿ ಅರ್ಪಿಸುವವನನ್ನೂ,
ತನ್ನ ದೇವರುಗಳಿಗೆ ಧೂಪ ಸುಡುವವನನ್ನೂ,
ಮೋವಾಬಿನಲ್ಲಿ ನಿಲ್ಲಿಸಿ ಬಿಡುವೆನೆಂದು ಕರ್ತನು ಅನ್ನುತ್ತಾನೆ.
೩೬ ಆದದರಿಂದ ನನ್ನ ಹೃದಯವು ಮೋವಾಬಿಗೋಸ್ಕರ ಕೊಳಲುಗಳ ಹಾಗೆ ಮೂಲುಗುವದು,
ನನ್ನ ಹೃದಯವು ಕಿರ್ಹೇರೆಸಿನ ಮನುಷ್ಯರಿಗೋಸ್ಕರ ಕೊಳಲುಗಳ ಹಾಗೆ ಮೂಲುಗುವದು;
ಯಾಕಂದರೆ, ಅವನು ಮಾಡಿ ಕೊಂಡ ದ್ರವ್ಯ ನಾಶವಾಯಿತು.
೩೭ ಹೌದು ಎಲ್ಲಾ ತಲೆಗಳು ಬೋಳಾಗುವವು;
ಎಲ್ಲಾ ಗಡ್ಡಗಳು ಕ್ಷೌರವಾಗುವವು;
ಎಲ್ಲಾ ಕೈಗಳ ಮೇಲೆ ಘುಾಯಗಳೂ,
ಸೊಂಟಗಳ ಮೇಲೆ ಗೋಣಿತಟ್ಟು, ಇರುವವು.
೩೮ ಮೋವಾಬಿನ ಎಲ್ಲಾ ಮಾಳಿಗೆಗಳ ಮೇಲೆಯೂ,
ಅದರ ಎಲ್ಲಾ ಬೀದಿಗಳಲ್ಲಿಯೂ ಗೋಳಾಟವೇ;
ಯಾಕಂದರೆ, ಮೆಚ್ಚದ ಪಾತ್ರೆಯ ಹಾಗೆ,
ಮೋವಾಬನ್ನು ಒಡೆದು ಬಿಟ್ಟಿದ್ದೇನೆಂದು,
ಕರ್ತನು ಅನ್ನುತ್ತಾನೆ.



೩೯ ಅದು ಹ್ಯಾಗೆ ಮುರಿದು ಹೋಯಿತು!
ಮೋವಾಬು ಹ್ಯಾಗೆ ನಾಚಿಕೆ ಪಟ್ಟು ಬೆನ್ನು ತಿರುಗಿಸಿತು!
ಎಂದು ಹುಯಿಲಿಡುವರು;
ಹೌದು, ಮೋವಾಬು ಅದರ ಸುತ್ತಲಿರುವವರೆಲ್ಲರಿಗೆ,
ಹಾಸ್ಯಕ್ಕೂ, ಹೆದರಿಕೆಗೂ, ಆಗುವದು.
೪೦ ಯಾಕಂದರೆ, ಕರ್ತನು ಹೀಗೆ ಹೇಳುತ್ತಾನೆ—
ಇಗೋ, ಅವನು ಹದ್ದಿನ ಹಾಗೆ ಹಾರಿ,
ಮೋವಾಬಿನ ಮೇಲೆ ತನ್ನ ರೆಕ್ಕೆಗಳನ್ನು ಚಾಚುವನು.
೪೧ ಕಿಕಿಯೋಥು ವಶವಾಯಿತು;
ಕೋಟೆಗಳು ಹಿಡಿಯಲ್ಪಟ್ಟವು;
ಆ ದಿವಸದಲ್ಲಿ, ಮೋವಾಬಿನ ಪರಾಕ್ರಮಶಾಲಿಗಳ ಹೃದಯಗಳು ಹೆರುವ ಸ್ತ್ರೀಯ ಹೃದಯದಂತೆ ಇರುವವು.
೪೨ ಯಾಕಂದರೆ, ಮೋವಾಬು,
ಅದು ಕರ್ತನಿಗೆ ವಿರೋಧವಾಗಿ ತನ್ನನ್ನು ದೊಡ್ಡದು ಮಾಡಿ ಕೊಂಡದರಿಂದ,
ಜನಾಂಗವಲ್ಲದ ಹಾಗೆ ನಾಶವಾಗುವದು.
೪೩ ಮೋವಾಬಿನ ನಿವಾಸಿಯೇ!
ಹೆದರಿಕೆಯೂ, ಕುಣಿಯೂ, ಬೋನೂ, ನಿನ್ನ ಮೇಲೆ ಇರುವವೆಂದು,
ಕರ್ತನು ಅನ್ನುತ್ತಾನೆ.
೪೪ ಹೆದರಿಕೆಗೆ ಓಡಿ ಹೋಗುವವನು, ಕುಣಿಯಲ್ಲಿ ಬೀಳುವನು;
ಕುಣಿಯೊಳಗಿಂದ ಏರಿ ಬರುವವನು, ಬೋನಿನಲ್ಲಿ ಹಿಡಿಯಲ್ಪಡುವನು;
ಯಾಕಂದರೆ, ನಾನು ಅದರ ಮೇಲೆ, ಮೋವಾಬಿನ ಮೇಲೆಯೇ,
ಅವರ ವಿಚಾರಣೆಯ ವರುಷವನ್ನು ತರುವೆನೆಂದು,
ಕರ್ತನು ಅನ್ನುತ್ತಾನೆ.
೪೫ ಓಡಿ ಹೋದವರು ಹೆಷ್ಬೋನಿನ ನೆರಳಿನಲ್ಲಿ,
ಅದರ ಶಕ್ತಿಯ ನಿಮಿತ್ತ ನಿಂತು ಕೊಂಡರು;
ಆದರೆ ಹೆಷ್ಬೋನಿನೊಳಗಿಂದ ಬೆಂಕಿಯೂ,
ಸೀಹೋನಿನ ಮಧ್ಯದಿಂದ ಜ್ವಾಲೆಯೂ, ಹೊರಟು,
ಮೋವಾಬಿನ ಮೂಲೆಯನ್ನೂ,
ಗದ್ದಲಿನ ಮಕ್ಕಳ ನಸುನೆತ್ತಿಯನ್ನೂ, ದಹಿಸಿ ಬಿಡುವದು.
೪೬ ಮೋವಾಬ್ಯೇ, ನಿನಗೆ ಅಯ್ಯೋ!
ಕೆಮೋಷಿನ ಜನರು ನಾಶವಾದರು;
ಯಾಕಂದರೆ, ನಿನ್ನ ಕುಮಾರರು ಸೆರೆಯಾಗಿಯೂ,
ನಿನ್ನ ಕುಮಾರ್ತೆಗಳು ಸೆರೆಯಾಗಿಯೂ, ಹಿಡಿಯಲ್ಪಟ್ಟರು.
೪೭ ಆದಾಗ್ಯೂ, ನಾನು ಕಡೇ ದಿವಸಗಳಲ್ಲಿ,
ಮೋವಾಬಿನ ಸೆರೆಯನ್ನು ತಿರುಗಿಸುತ್ತೇನೆಂದು,
ಕರ್ತನು ಅನ್ನುತ್ತಾನೆ;
ಈವರೆಗೂ, ಮೋವಾಬಿನ ನ್ಯಾಯ ತೀರ್ಪಿಕೆಯೂ.

## ೪೯. ಸಂಧಿ.

೧ ಅಮ್ಮೋನನ ಮಕ್ಕಳ ವಿಷಯ ಕರ್ತನು ಹೇಳುವದೇನಂದರೆ—
ಇಸ್ರಯೇಲಿಗೆ ಕುಮಾರರಿಲ್ಲವೋ?
ಅವನಿಗೆ ಬಾಧ್ಯಸ್ತನಿಲ್ಲವೋ?
ಅವರ ಅರಸನು ಗಾದನ್ನು ಬಾಧ್ಯವಾಗಿ ತಕ್ಕೊಳ್ಳುವದು ಯಾಕೆ!
ಅವನ ಜನರು ಅದರ ಪಟ್ಟಣಗಳಲ್ಲಿ ವಾಸ ಮಾಡುವದು ಯಾಕೆ!
೨ ಆದದರಿಂದ ಇಗೋ ದಿನಗಳು ಬರುವವೆಂದು,
ಕರ್ತನು ಅನ್ನುತ್ತಾನೆ;
ಆಗ ನಾನು, ಅಮ್ಮೋನನ ಮಕ್ಕಳ ರಬ್ಬದಲ್ಲಿ,
ಯುದ್ಧದ ಆರ್ಭಟವನ್ನು ಕೇಳ ಮಾಡುವೆನು;
ಅದು ಹಾಳು ದಿಬ್ಬೆಯಾಗುವದು;
ಅದರ ಕುಮಾರ್ತೆಗಳು ಸಹ ಬೆಂಕಿಯಿಂದ ಸುಡಲ್ಪಡುವರು;
ಆಗ ಇಸ್ರಯೇಲು ತನ್ನ ಬಾಧ್ಯಸ್ತರ ಬಾಧ್ಯವನ್ನು ಹೊಂದುವದೆಂದು,
ಕರ್ತನು ಹೇಳುತ್ತಾನೆ.
೩ ಹೆಷ್ಬೋನೇ! ಹುಯಿಲಿಡು, ಯಾಕಂದರೆ, ಆಯಿ ಹಾಳಾಯಿತು;
ರಬ್ಬದ ಕುಮಾರ್ತೆಗಳೇ, ಕೂಗಿರಿ;
ಗೋಣಿ ತಟ್ಟನ್ನು ಕಟ್ಟಿ ಕೊಳ್ಳಿರಿ;
ದುಃಖಿಸಿ, ಬೇಲಿಗಳ ಬಳಿಯಲ್ಲಿ ಓಡ್ಯಾಡಿರಿ;
ಯಾಕಂದರೆ, ಅವರ ಅರಸನು,
ಅವನ ಯಾಜಕರೂ, ಅವನ ಪ್ರಧಾನರೂ, ಸಹಿತವಾಗಿ,
ಸೆರೆಗೆ ಹೋಗಿದ್ದಾನೆ.
೪ ಹಿಂತಿರುಗುವ ಮಗಳೇ!
ನನ್ನ ಬಳಿಗೆ ಬರುವವರ್ಯಾರೆಂದು ಹೇಳಿ,
ನಿನ್ನ ಬೊಕ್ಕಸಗಳಲ್ಲಿ ನಂಬಿಕೆ ಇಟ್ಟವಳೇ!
ತಗ್ಗುಗಳ ವಿಷಯ ಯಾಕೆ ಹೆಚ್ಚಳ ಪಡುತ್ತೀ?
ನಿನ್ನ ತಗ್ಗು ಹರಿದು ಹೋಗುತ್ತದಲ್ಲ!
೫ ಇಗೋ ನಾನು, ನಿನ್ನ ಸುತ್ತಲಿರುವವರೆಲ್ಲರಿಂದ,
ನಿನ್ನ ಮೇಲೆ ಭಯವನ್ನು ಬರ ಮಾಡುವೆನೆಂದು,
ಸೈನ್ಯಗಳ ಕರ್ತನಾದ ಯೆಹೋವ ಅನ್ನುತ್ತಾನೆ.
ಆಗ ನಿಮ್ಮಲ್ಲಿ ಒಬ್ಬೊಬ್ಬನು ಮುಂದಕ್ಕೆ ಓಡಿಸಲ್ಪಡುವನು;
ಅಡ್ಡಾಡುವವನನ್ನು ಕೂಡಿಸುವವನು ಒಬ್ಬನೂ ಇರುವದಿಲ್ಲ.
೬ ಆದರೆ ತರುವಾಯ ಅಮ್ಮೋನನ ಮಕ್ಕಳ ಸೆರೆಯನ್ನು
ತಿರುಗಿಸುವೆನೆಂದು ಕರ್ತನು ಅನ್ನುತ್ತಾನೆ.

೭ ಎದೋಮಿನ ವಿಷಯ ಸೈನ್ಯಗಳ ಕರ್ತನು ಹೇಳುವದೇನಂದರೆ—
ತೇಮಾನಿನಲ್ಲಿ ಇನ್ನು ಜ್ಞಾನವಿಲ್ಲವೋ!
ಆಲೋಚನೆಯು ವಿವೇಕಿಗಳನ್ನು ಬಿಟ್ಟು ಹೋಯಿತೋ!
ಅವರ ಜ್ಞಾನವು ತೀರಿ ಹೋಯಿತೋ!
೮ ದೇದಾನಿನ ನಿವಾಸಿಗಳೇ! ಓಡಿ ಹೋಗಿರಿ; ತಿರುಗಿ ಕೊಳ್ಳಿರಿ;
ಆಳವಾದ ಸ್ಥಳದಲ್ಲಿ ವಾಸ ಮಾಡಿರಿ;
ಯಾಕಂದರೆ, ಏಸಾವಿನ ಆಪತ್ತನ್ನು,
ನಾನು ಅವನನ್ನು ವಿಚಾರಿಸುವ ಕಾಲವನ್ನೂ,
ಅವನ ಮೇಲೆ ಬರ ಮಾಡುತ್ತೇನೆ.
೯ ದ್ರಾಕ್ಷೆ ಕೂಡಿಸುವವರು ನಿನ್ನ ಬಳಿಗೆ ಬಂದಿದ್ದರೆ,
ಹಕ್ಕಲನ್ನಾದರೂ ಉಳಿಸರೇ!
ರಾತ್ರಿಯಲ್ಲಿ ಕಳ್ಳರು ಬಂದಿದ್ದರೆ,
ತಮಗೆ ಸಾಕಾದಷ್ಟು ಕೆಡಿಸುವರಲ್ಲವೇ!

೧೦ ಆದರೆ ನಾನು, ಏಸಾವನನ್ನು ಬರೀದು ಮಾಡಿದ್ದೇನೆ;
ಅದರ ರಹಸ್ಯ ಸ್ಥಳಗಳನ್ನು ತೆರೆದಿದ್ದೇನೆ;
ಅವನು ಅಡಗಿ ಕೊಳ್ಳಲಾರನು;
ಅವನ ಸಂತಾನವು ಹಾಳಾಯಿತು;
ಅವನ ಸಹೋದರರೂ, ಅವನ ನೆರೆಯವರೂ,
ಅವನೂ ಸಹ, ಇಲ್ಲ.
೧೧ ನಿನ್ನ ದಿಕ್ಕಿಲ್ಲದ ಮಕ್ಕಳನ್ನು ಬಿಡು; ನಾನೇ ರಕ್ಷಿಸುವೆನು;
ನಿನ್ನ ವೆಧವೆಯರು ನನ್ನಲ್ಲಿ ನಂಬಿಕೆ ಇಡಲಿ.
೧೨ ಯಾಕಂದರೆ, ಕರ್ತನು ಹೀಗೆ ಹೇಳುತ್ತಾನೆ—
ಇಗೋ ಪಾತ್ರೆಯಲ್ಲಿ ಕುಡಿಯುವದಕ್ಕೆ ಯಾರಿಗೆ ನ್ಯಾಯ
ತೀರ್ವಿಕೆ ಆಗಲಿಲ್ಲವೋ,
ಅವರು ಸಹ ಕುಡಿದಿದ್ದಾರೆ;
ಹಾಗಾದರೆ, ನೀನು ಶುದ್ಧವಾಗಿ ಅಪರಾಧವಿಲ್ಲದೆ ಇರುವಿಯೋ!
ಅಪರಾಧವಿಲ್ಲದೆ ಇರುವದಿಲ್ಲ,
ನಿಶ್ಚಯವಾಗಿ ಕುಡಿಯುವಿ.
೧೩ ಯಾಕಂದರೆ—ಬೊಚ್ರವು ಹಾಳೂ,
ನಿಂದೆಯೂ, ಅಡವಿಯೂ, ಶಾಪವೂ, ಆಗುವದೆಂದೂ,
ಅದರ ಪಟ್ಟಣಗಳೆಲ್ಲಾ ಎಂದೆಂದಿಗೂ ಅಡವಿ ಸ್ಥಳಗಳಾಗುವವೆಂದೂ,
ನನ್ನ ಮೇಲೆ ಪ್ರಮಾಣ ಮಾಡಿ ಕೊಂಡಿದ್ದೇನೆಂದು,
ಕರ್ತನು ಅನ್ನುತ್ತಾನೆ.
೧೪ ಕರ್ತನಿಂದ ನಾನು ಸುದ್ದಿಯನ್ನು ಕೇಳಿದ್ದೇನೆ,
ಜನಾಂಗಗಳೊಳಗೆ ರಾಯಭಾರಿ ಕಳುಹಿಸಲ್ಪಟ್ಟಿದ್ದಾನೆ;
ಕೂಡಿ ಕೊಂಡು, ಅದಕ್ಕೆ ವಿರೋಧವಾಗಿ, ಬನ್ನಿ
ಯುದ್ಧಕ್ಕಾಗಿ ಏಳಿರಿ.
೧೫ ಯಾಕಂದರೆ, ಇಗೋ ನಿನ್ನನ್ನು ಜನಾಂಗಗಳಲ್ಲಿ ಸಣ್ಣದಾಗಿ
ಯೂ,
ಮನುಷ್ಯರಲ್ಲಿ ತಿರಸ್ಕರಿಸಲ್ಪಟ್ಟದ್ದಾಗಿಯೂ, ಮಾಡುವೆನು.
೧೬ ಬಂಡೆಯ ಶೀಳುಗಳಲ್ಲಿ ವಾಸ ಮಾಡುವವನೇ,
ಗುಡ್ಡದ ಕೊನೆಯನ್ನು ಹಿಡಿಯುವವನೇ!
ನಿನ್ನ ಭಯಂಕರವೂ,
ನಿನ್ನ ಹೃದಯದ ಗರ್ವವೂ,
ನಿನ್ನನ್ನು ಮೋಸಗೊಳಿಸಿದವು;
ನೀನು ಹದ್ದಿನಂತೆ ನಿನ್ನ ಗೂಡನ್ನು ಎತ್ತರ ಮಾಡಿದರೂ,
ಅಲ್ಲಿಂದ ನಿನ್ನನ್ನು ಇಳಿಸುತ್ತೇನೆಂದು,
ಕರ್ತನು ಅನ್ನುತ್ತಾನೆ.
೧೭ ಎದೋಮು ಸಹಾ ಹಾಳಾಗುವದು;
ಅದರ ಬಳಿಯಲ್ಲಿ ಹಾದು ಹೋಗುವವರೆಲ್ಲರು,
ಅದರ ಎಲ್ಲಾ ಬಾಧೆಗಳ ವಿಷಯ ವಿಸ್ಮಯ ಪಟ್ಟು ಸಿಳ್ಳಿಡು
ವರು.
೧೮ ಸೊದೋಮು, ಗಮೋರವೂ,
ಅವುಗಳ ಸಮೀಪದಲ್ಲಿದ್ದ ಪಟ್ಟಣಗಳೂ, ಕೆಡವಲ್ಪಟ್ಟಾಗ ಆದ
ಹಾಗೆ,
ಅಲ್ಲಿ ಯಾವ ಮನುಷ್ಯನಾದರೂ ವಾಸ ಮಾಡುವದಿಲ್ಲ,
ಅದರಲ್ಲಿ ಯಾವ ನರಪುತ್ರನಾದರೂ ತಂಗುವದಿಲ್ಲವೆಂದು,
ಕರ್ತನು ಅನ್ನುತ್ತಾನೆ.
೧೯ ಇಗೋ ಅವನು ಸಿಂಹದ ಹಾಗೆ, ಯೊರ್ದನಿನ ಉಬ್ಬುವಿಕೆ
ಯಿಂದ,
ಬಲವಾದ ನಿವಾಸಕ್ಕೆ ವಿರೋಧವಾಗಿ ಏರಿ ಬರುವನು;
ಆದರೆ ನಾನು ಅವನನ್ನು ಕ್ಷಣ ಮಾತ್ರದಲ್ಲಿ ಅದಕ್ಕೆ ದೂರವಾ
ಗಿ ಓಡಿ ಹೋಗ ಮಾಡುವೆನು.
ಮತ್ತು ನಾನು ಅದರ ಮೇಲೆ ನೇಮಿಸ ತಕ್ಕ ಆಯ್ಕೆಪಟ್ಟವನು
ಯಾರು?
ಯಾಕಂದರೆ, ನನ್ನ ಹಾಗೆ ಯಾರು?
ಮತ್ತು ನನಗೆ ಕಾಲವನ್ನು ನೇಮಿಸುವವನ್ಯಾರು?
ಮತ್ತು ನನ್ನ ಮುಂದೆ ನಿಲ್ಲತಕ್ಕ ಕುರುಬನು ಯಾರು!

೨೦ ಆದದರಿಂದ ಕರ್ತನು ಎದೋಮಿಗೆ ವಿರೋಧವಾಗಿ ಮಾಡಿದ
ಆಲೋಚನೆಯನ್ನೂ,
ತೇಮಾನಿನ ನಿವಾಸಿಗಳಿಗೆ ವಿರೋಧವಾಗಿ ಅವನು ಮಾಡಿದ
ಯೋಚನೆಗಳನ್ನು ಕೇಳಿರಿ.
ನಿಶ್ಚಯವಾಗಿ ಮಂದೆಯಲ್ಲಿ ಚಿಕ್ಕವುಗಳು ಅವರನ್ನು ಎಳೆಯು
ವವು,
ನಿಶ್ಚಯವಾಗಿ ಅವರ ನಿವಾಸವನ್ನು ಅವರ ಸಂಗಡ ಹಾಳು ಮಾ
ಡುವನು.
೨೧ ಅವರು ಬೀಳುವ ಶಬ್ದದಿಂದ ಭೂಮಿ ಕದಲುವದು,
ಅವರ ಕೂಗಿನ ಶಬ್ದ ಕೆಂಪು ಸಮುದ್ರದಲ್ಲಿ ಕೇಳಿ ಬರುವದು.
೨೨ ಇಗೋ ಅವನು ಹದ್ದಿನಂತೆ ಏರಿ ಹಾರುವನು;
ಬೊಚ್ರದ ಮೇಲೆ ತನ್ನ ರೆಕ್ಕೆಗಳನ್ನು ಚಾಚುವನು;
ಎದೋಮಿನ ಪರಾಕ್ರಮಶಾಲಿಗಳ ಹೃದಯವು,
ಆದಿವಸದಲ್ಲಿ ಪ್ರಸವ ವೇದನೆಯುಳ್ಳ ಸ್ತ್ರೀಯ ಹೃದಯದ
ಹಾಗೆ ಇರುವದು.
೨೩ ದಮಸ್ಕದ ವಿಷಯ,
ಹಾಮಾತೂ ಅರ್ಪಾದೂ ನಾಚಿಕೆ ಪಡುತ್ತವೆ;
ಯಾಕಂದರೆ ಕೆಟ್ಟ ಸುದ್ದಿಯನ್ನು ಕೇಳಿ, ಅಳ್ಳೈಸ್ಯ ಪಟ್ಟಿವೆ.
ಸಮುದ್ರದಂತೆ ಕಳವಳ ಉಂಟು, ಅದು ಸುಮ್ಮನಿರಲಾರದು.
೨೪ ದಮಸ್ಕವು ನಿತ್ರಾಣವಾಯಿತು;
ಓಡಿ ಹೋಗುವದಕ್ಕೆ ತಿರುಗಿ ಕೊಳ್ಳುತ್ತದೆ;
ಭಯವು ಅದನ್ನು ಹಿಡು ಕೊಂಡಿದೆ.
ಹೆರುವ ಸ್ತ್ರೀಯ ಹಾಗೆ ಸಂಕಟವೂ ವೇದನೆಗಳೂ ಅದನ್ನು ಹಿ
ಡಿದವೆ.
೨೫ ಸ್ತೋತ್ರ ಹೊಂದಿದ ಪಟ್ಟಣವೂ, ನನ್ನ ಸಂತೋಷದ ಪಟ್ಟಣವೂ,
ಹ್ಯಾಗೆ ಬಿಡಲ್ಪಟ್ಟಿದೆ ಅಲ್ಲವೋ!
೨೬ ಆದದರಿಂದ ಅದರ ಯೌವನಸ್ಥರು ಅದರ ಚೌಕಗಳಲ್ಲಿ ಬೀ
ಳುವರು;
ಯುದ್ಧಸ್ಥರೆಲ್ಲರೂ ಆ ದಿವಸದಲ್ಲಿ ನಾಶವಾಗುವರು;
ಎಂದು ಸೈನ್ಯಗಳ ಕರ್ತನು ಅನ್ನುತ್ತಾನೆ.
೨೭ ಯಾಕಂದರೆ ನಾನು ದಮಸ್ಕದ ಗೋಡೆಯಲ್ಲಿ ಬೆಂಕಿಯನ್ನು
ಹಚ್ಚುತ್ತೇನೆ;
ಅದು ಬೆನ್ಹದಾದನ ಅರಮನೆಗಳನ್ನು ತಿಂದು ಬಿಡುವದು.



೨೮ ಬಾಬೆಲಿನ ಅರಸನಾದ ನೆಬುಕದ್ನೆಚ್ಚರನು ಹೊಡಿಯಲಾಗಿರು
ವ ಕೇದರಿನ ವಿಷಯವೂ, ಹಚೋರಿನ ರಾಜ್ಯಗಳ ವಿಷಯವೂ,
ಕರ್ತನು ಹೇಳುವದೇನಂದರೆ—
ಏಳಿರಿ! ಕೇದರಿನ ಬಳಿಗೆ ಏರಿ ಹೋಗಿರಿ!
ಪೂರ್ವ ದಿಕ್ಕಿನ ಮಕ್ಕಳನ್ನು ಸುಲು ಕೊಳ್ಳಿರಿ.
೨೯ ಅವರ ಗುಡಾರಗಳನ್ನೂ ಅವರ ಮಂದೆಗಳನ್ನೂ ತಕ್ಕೊಳ್ಳುವರು;
ಅವರ ತೆರೆಗಳನ್ನೂ, ಅವರ ಎಲ್ಲಾ ಸಾಮಾನುಗಳನ್ನೂ,
ಅವರ ಒಂಟೆಗಳನ್ನೂ, ವಶ ಮಾಡಿ ಕೊಳ್ಳುವರು;
ಸುತ್ತಲು ಭಯವೆಂದು ಅವರಿಗೆ ಕೂಗುವರು.
ಹಚೋರಿನ ನಿವಾಸಿಗಳೇ,
೩೦ ಓಡಿ ಹೋಗಿರಿ, ದೂರಕ್ಕೆ ಹೋಗಿ ಬಿಡಿರಿ,
ಆಳವಾದ ಸ್ಥಳದಲ್ಲಿ ವಾಸವಾಗಿರಿ,
ಎಂದು ಕರ್ತನು ಅನ್ನುತ್ತಾನೆ.
ಯಾಕಂದರೆ, ಬಾಬೆಲಿನ ಅರಸನಾದ ನೆಬುಕದ್ನೆಚ್ಚರನು,
ನಿಮಗೆ ವಿರೋಧವಾಗಿ ಆಲೋಚನೆಯನ್ನು ಮಾಡಿದ್ದಾನೆ;
ನಿಮಗೆ ವಿರೋಧವಾಗಿ ಯೋಚನೆ ಮಾಡಿದ್ದಾನೆ.
೩೧ ಏಳಿರಿ, ಭದ್ರವಾಗಿ ವಾಸಿಸುವ ಸುಖವುಳ್ಳ ಜನಾಂಗದ ಬಳಿಗೆ
ಹೋಗಿರಿ,
ಎಂದು ಕರ್ತನು ಅನ್ನುತ್ತಾನೆ;
ಅದಕ್ಕೆ ಬಾಗಲುಗಳು ಇಲ್ಲ; ಅಗುಳಿಗಳು ಇಲ್ಲ;
ಏಕಾಂತವಾಗಿ ವಾಸ ಮಾಡುತ್ತದೆ.
೩೨ ಅವರ ಒಂಟೆಗಳು ಕೊಳ್ಳೆಯಾಗುವವು;
ಅವರ ದನಗಳ ಸಮೂಹವು ಸುಲಿಗೆಯಾಗುವದು;
ಮತ್ತು ಗುಡ್ಡದ ಮೂಲೆ ಕ್ಷೌರ ಮಾಡಿಸುವವರನ್ನು
ಎಲ್ಲಾ ದಿಕ್ಕುಗಳಿಗೂ ಚೆದರಿಸುತ್ತೇನೆ;
ಸರ್ವ ಕಡೆಯಿಂದ ಅವರ ಆಪತ್ತನ್ನು ತರಿಸುತ್ತೇನೆಂದು,
ಕರ್ತನು ಅನ್ನುತ್ತಾನೆ.
೩೩ ಮತ್ತು ಹಚೋರು ನರಿಗಳ ನಿವಾಸವೂ,
ಎಂದೆಂದಿಗೂ ಹಾಳಾದ ಸ್ಥಳವೂ ಆಗುವದು;
ಅಲ್ಲಿ ಯಾವನಾದರೂ ವಾಸ ಮಾಡುವದಿಲ್ಲ;
ಯಾವ ನರಪುತ್ರನಾದರೂ ಅಲ್ಲಿ ತಂಗುವದಿಲ್ಲ.
೩೪ ಯೆಹೂದದ ಅರಸನಾದ ಚಿದ್ಕೀಯನ ಆಳಿಕೆಯ ಆರಂಭ
ದಲ್ಲಿ, ಪ್ರವಾದಿಯಾದ ಯೆರೆಮಿಾಯನಿಗೆ ಕರ್ತನಿಂದ, ಏಲಾಮಿ
ಗೆ ವಿರೋಧವಾಗಿ, ಉಂಟಾದ ವಾಕ್ಯವು, ಏನಂದರೆ—
೩೫ ಸೈನ್ಯಗಳ ಕರ್ತನು ಹೀಗೆ ಹೇಳುತ್ತಾನೆ—
ಇಗೋ ನಾನು ಏಲಾಮಿನ ಬಿಲ್ಲನ್ನೂ,
ಅವರ ಪರಾಕ್ರಮತನದ ಶ್ರೇಷ್ಠತ್ವವನ್ನೂ ಮುರಿಯುತ್ತೇನೆ.
೩೬ ಮತ್ತು ಆಕಾಶದ ನಾಲ್ಕು ದಿಕ್ಕುಗಳಿಂದ,
ಏಲಾಮಿನ ಮೇಲೆ ನಾಲ್ಕು ಘುಳಿಗಳನ್ನು ತಂದು,
ಅವರನ್ನು ಆ ಎಲ್ಲಾ ದಿಕ್ಕುಗಳ ಕಡೆಗೆ ಚದರಿಸುವೆನು;
ಏಲಾಮಿನಿಂದ ಓಡಿಸಲ್ಪಟ್ಟವರು ಹೋರದ ಜನಾಂಗವು ಇರುವದಿಲ್ಲ.
೩೭ ಯಾಕಂದರೆ, ಏಲಾಮನ್ನು, ಅವರ ಶತ್ರುಗಳ ಮುಂದೆಯೂ,
ಅವರ ಪ್ರಾಣವನ್ನು ಹುಡುಕುವವರ ಮುಂದೆಯೂ,
ಹೆದರ ಮಾಡುವೆನು;
ಮತ್ತು ಅವರ ಮೇಲೆ ಕೇಡನ್ನೂ,
ನನ್ನ ಕೋಪದ ಉಗ್ರವನ್ನೂ, ಬರ ಮಾಡುವೆನೆಂದು,
ಕರ್ತನು ಅನ್ನುತ್ತಾನೆ;
ಮತ್ತು ಅವರನ್ನು ಮುಗಿಸಿ ಬಿಡುವ ಪರ್ಯಂತರ,
ಕತ್ತಿಯನ್ನು ಅವರ ಹಿಂದೆ ಕಳುಹಿಸುವೆನು.
೩೮ ಇದಲ್ಲದೆ ಏಲಾಮಿನಲ್ಲಿ ನನ್ನ ಸಿಂಹಾಸನವನ್ನಿಟ್ಟು,
ಅದರೊಳಗಿಂದ ಅರಸನನ್ನೂ ಪ್ರಧಾನರನ್ನೂ ನಾಶ ಮಾಡು
ವೆನೆಂದು,
ಕರ್ತನು ಅನ್ನುತ್ತಾನೆ.
೩೯ ಆದಾಗ್ಯೂ, ಅಂತ್ಯ ದಿವಸಗಳಲ್ಲಿ ಆಗುವದೇನಂದರೆ—
ನಾನು ಏಲಾಮಿನ ಸೆರೆಯನ್ನು ತಿರುಗಿಸುವೆನೆಂದು,
ಕರ್ತನು ಅನ್ನುತ್ತಾನೆ.

## ೪೦. ಸಂಧಿ.

೧ ಬಾಬೆಲಿಗೆ ವಿರೋಧವಾಗಿಯೂ, ಕಸ್ದೀಯರ ದೇಶಕ್ಕೆ ವಿರೋಧ
ವಾಗಿಯೂ, ಕರ್ತನು ಪ್ರವಾದಿಯಾದ ಯೆರೆಮಿಾಯನ ಕೈಯಿಂ
ದ ಹೇಳಿಸಿದ ವಾಕ್ಯವು.
೨ ಜನಾಂಗಗಳಲ್ಲಿ ತಿಳಿಸಿರಿ,
ಸಾರಿರಿ, ಧ್ವಜವನ್ನೆತ್ತಿರಿ,
ಸಾರಿರಿ, ಮರೆ ಮಾಡ ಬೇಡಿರಿ,
ಬಾಬೆಲು ಹಿಡಿಯಲ್ಪಟ್ಟಿದೆ,
ಬೇಲನಿಗೆ ನಾಚಿಕೆಯಾಯಿತು,
ಮೆರೋದಕನು ಮುರಿದು ಹೋದನು;
ಅದರ ವಿಗ್ರಹಗಳಿಗೆ ನಾಚಿಕೆಯಾಯಿತು;
ಅದರ ಬೊಂಬೆಗಳು ಮುರಿದು ಹೋದವೆಂದು, ಹೇಳಿರಿ.
೩ ಯಾಕಂದರೆ, ಉತ್ತರದಿಂದ ಅದಕ್ಕೆ ವಿರೋಧವಾಗಿ ಜನಾಂಗ
ವು ಏರಿ ಬರುತ್ತದೆ;
ಅದು ಅದರ ದೇಶವನ್ನು ಹಾಳು ಮಾಡಿ ಬಿಡುವದು;
ಅದರಲ್ಲಿ ನಿವಾಸಿ ಇರುವದಿಲ್ಲ;
ಮನುಷ್ಯರೂ, ಮೃಗಗಳೂ ಸಹಿತವಾಗಿ, ಓಡಿ ಹೋಗಿದ್ದಾರೆ.
೪ ಆ ದಿವಸಗಳಲ್ಲಿಯೂ, ಆ ಕಾಲದಲ್ಲಿಯೂ,
ಇಸ್ರಯೇಲಿನ ಮಕ್ಕಳೂ, ಅವರೂ, ಯೆಹೂದನ ಮಕ್ಕಳೂ
ಸಹಿತವಾಗಿ,
ಬರುವರೆಂದು ಕರ್ತನು ಅನ್ನುತ್ತಾನೆ.
ಅವರು ಅಳುತ್ತಾ ಹೋಗಿ,
ತಮ್ಮ ದೇವರಾದ ಕರ್ತನನ್ನು ಹುಡುಕುವರು.
೫ ಚಿಯೋನಿನ ಕಡೆಗೆ ಮುಖವನ್ನಿಟ್ಟು,
ಅದರ ಮಾರ್ಗವನ್ನು ವಿಚಾರಿಸುವರು;
ಬನ್ನಿ, ಮರೆತು ಹೋಗದ, ನಿತ್ಯವಾದ ಜತಬಂಡಿಕೆಯಿಂದ,
ಕರ್ತನಿಗೆ ಅಂಟಿ ಕೊಳ್ಳೋಣ, ಅನ್ನುವರು.
೬ ನನ್ನ ಜನರು ಕಳ್ಳ ಕೊಂಡು ಹೋದ ಕುರಿಗಳಾಗಿದ್ದರು;
ಅವರ ಕುರುಬರು ಅವರನ್ನು ತಪ್ಪಿ ಹೋಗ ಮಾಡಿದರು;
ಅವರನ್ನು ಬೆಟ್ಟಗಳ ಮೇಲೆ ಅಡ್ಡಾದಿಸಿದರು;
ಅವರು ಬೆಟ್ಟದಿಂದ ಗುಡ್ಡಕ್ಕೆ ಹೋದರು;
ಮಲಗುವ ಸ್ಥಳವನ್ನು ಮರೆತು ಬಿಟ್ಟರು.

೭ ಅವರನ್ನು ಕಂಡವರೆಲ್ಲರು ಅವರನ್ನು ತಿಂದು ಬಿಟ್ಟರು,
ಅವರ ಎದುರಾಳಿಗಳು—ನಮ್ಮಲ್ಲಿ ಅಪರಾಧವಿಲ್ಲ;
ಯಾಕಂದರೆ, ನೀತಿಯ ನಿವಾಸವಾದ ಯೆಹೋವನಿಗೆ,
ಅವರ ತಂದೆಗಳ ನಿರೀಕ್ಷಣೆಯಾದ ಯೆಹೋವನಿಗೆ ವಿರೋಧ
ವಾಗಿ,
ಪಾಪ ಮಾಡಿದ್ದಾರೆಂದು, ಅಂದರು.
೮ ಬಾಬೆಲಿನೊಳಗಿಂದ ಓಡಿ ಹೋಗಿರಿ;
ಕಸ್ದೀಯರ ದೇಶದಿಂದ ಹೊರಡಿರಿ,
ಮಂದೆಯ ಮುಂದಿನ ಹೋತುಗಳ ಹಾಗೆ ಇರ್ರಿ.
೯ ಯಾಕಂದರೆ, ಇಗೋ ನಾನು,
ಉತ್ತರ ದೇಶದಿಂದ ದೊಡ್ಡ ಜನಾಂಗಗಳ ಕೂಟವನ್ನು ಎಬ್ಬಿಸಿ,
ಬಾಬೆಲಿಗೆ ವಿರೋಧವಾಗಿ ಏಳ್ಳ ಮಾಡುತ್ತೇನೆ;
ಅವರು ಅದಕ್ಕೆ ವಿರೋಧವಾಗಿ ಯುದ್ಧ ಸಿದ್ಧ ಮಾಡುವರು;
ಅಲ್ಲಿಂದ ಅದು ಹಿಡಿಯಲ್ಪಡುವದು;
ಅವರ ಬಾಣಗಳು ಘುಟ್ಟಿಗನಾದ ಪರಾಕ್ರಮಶಾಲಿಯವುಗಳ ಹಾಗೆ,
ಸುಮ್ಮನೆ ತಿರುಗುವದಿಲ್ಲ.
೧೦ ಮತ್ತು ಕಸ್ದೀಯರ ದೇಶವು ಸುಲಿಗೆಯಾಗುವದು;
ಅದನ್ನು ಸುಲುಕೊಳ್ಳುವವರೆಲ್ಲರಿಗೆ ತೃಪ್ತಿಯಾಗುವದೆಂದು,
ಕರ್ತನು ಅನ್ನುತ್ತಾನೆ.
೧೧ ನನ್ನ ಬಾಧ್ಯವನ್ನು ಕೊಳ್ಳೆ ಇಟ್ಟವರೇ,
ನೀವು ಸಂತೋಷಿಸಿದ್ದರಿಂದಲೂ,
ನೀವು ಉಲ್ಲಾಸಿಸಿದ್ದರಿಂದಲೂ,
ಕೊಬ್ಬಿದ ಕಡಸಿನ ಹಾಗೆ ಗರ್ವ ಪಟ್ಟಿದ್ದರಿಂದಲೂ,
ಕುದುರೆಗಳ ಹಾಗೆ ಹೂಂಕರಿಸಿದದರಿಂದಲೂ,
೧೨ ನಿಮ್ಮ ತಾಯಿ ಬಹಳವಾಗಿ ನಾಚಿಕೆ ಪಡುವಳು;
ನಿಮ್ಮನ್ನು ಹೆತ್ತವಳು ಲಜ್ಜೆ ಹೊಂದುವಳು;
ಇಗೋ ಜನಾಂಗಗಳಲ್ಲಿ ಅಂತ್ಯವಾದದ್ದು,
ಕಾಡು, ಒಣ ಭೂಮಿಯೂ, ಅರಣ್ಯವೂ, ಆಗುವದು.
೧೩ ಕರ್ತನ ಕೋಪದ್ರದನಿಮಿತ್ತ, ಅದರಲ್ಲಿ ಯಾರು ವಾಸ ಮಾಡುವದಿಲ್ಲ;
ಶುದ್ಧವಾಗಿ ಹಾಳಾಗುವದು;
ಬಾಬೆಲನ್ನು ಹಾದು ಹೋಗುವವರೆಲ್ಲರು,
ಅದರ ಎಲ್ಲಾ ಬಾಥೆಗಳ ವಿಷಯ,
ವಿಸ್ಮಯ ಪಟ್ಟು, ಸಿಳ್ಳಿಡುವರು.

೧೪ ಬಾಬೆಲಿಗೆ ವಿರೋಧವಾಗಿ ಸುತ್ತಲೂ ಯುದ್ಧ ಸಿದ್ಧ ಮಾಡಿರಿ,
ಬಿಲ್ಲನ್ನು ಬೊಗ್ಗಿಸುವವರೆಲ್ಲರೇ!
ಅದಕ್ಕೆ ಎಸೆಯಿರಿ; ಬಾಣಗಳನ್ನು ಕಡಿಮೆ ಮಾಡ ಬೇಡಿರಿ;
ಯಾಕಂದರೆ, ಯೆಹೋವನಿಗೆ ವಿರೋಧವಾಗಿ ಪಾಪ ಮಾಡಿ ಇದೆ.
೧೫ ಸುತ್ತಲೂ ಅದಕ್ಕೆ ವಿರೋಧವಾಗಿ ಆರ್ಭಟಿಸಿರಿ;
ಒಳ್ಳ ಪಟ್ಟಿತು; ಅದರ ಅಸ್ತಿವಾರಗಳು ಬಿದ್ದು ಹೋದವು;
ಅದರ ಗೋಪೆಗಳು ಕೆಡವಲ್ಪಟ್ಟವು;
ಯಾಕಂದರೆ, ಅದು ಕರ್ತನ ಪ್ರತಿದಂಡನೆಯೇ;
ಅದರಿಂದ ಪ್ರತಿದಂಡನೆ ತಕ್ಕೊಳ್ಳಿರಿ;
ಅದು ಮಾಡಿದ ಹಾಗೆಯೇ ಅದಕ್ಕೆ ಮಾಡಿರಿ.
೧೬ ಬಿತ್ತುವವನನ್ನೂ, ಸುಗ್ಗಿ ಕಾಲದಲ್ಲಿ ಕುಡುಗೋಲು ಹಿಡಿಯು
ವವನನ್ನೂ,
ಬಾಬೆಲಿನೊಳಗಿಂದ ಕಡಿದು ಬಿಡಿರಿ;
ಕಪ್ಪು ಪಡಿಸುವ ಕತ್ತಿಯ ಭಯದಿಂದ,
ಅವರು ತಮ್ಮ ತಮ್ಮ ಜನರ ಬಳಿಗೆ ತಿರುಗಿ ಕೊಳ್ಳಲಿ;
ತಮ್ಮ ತಮ್ಮ ದೇಶಗಳಿಗೆ ಓಡಿ ಹೋಗಲಿ.
೧೭ ಇಸ್ರಯೇಲನು ಚದರಿ ಹೋದ ಕುರಿಯಾಗಿದ್ದನು;
ಸಿಂಹಗಳು ಅವನನ್ನು ಓಡಿಸಿ ಬಿಟ್ಟವು;
ಮೊದಲು ಅಶ್ಶೂರಿನ ಅರಸನು ಅವನನ್ನು ತಿಂದು ಬಿಟ್ಟನು.
ಕಡೆಯಲ್ಲಿ ಬಾಬೆಲಿನ ಅರಸನಾದ ಈ ನೆಬುಕದ್ನೇಚರನು
ಅವನ ಎಲುವುಗಳನ್ನು ಕಡಿದಿದ್ದಾನೆ.
೧೮ ಆದದರಿಂದ ಇಸ್ರಯೇಲಿನ ದೇವರಾದ ಸೈನ್ಯಗಳ ಕರ್ತನು ಹೇ
ಳುವದೇನಂದರೆ—
ಇಗೋ ನಾನು ಅಶ್ಶೂರಿನ ಅರಸನನ್ನು ವಿಚಾರಿಸಿದ ಹಾಗೆ,
ಬಾಬೆಲಿನ ಅರಸನನ್ನೂ, ಅವನ ದೇಶವನ್ನೂ, ವಿಚಾರಿಸುತ್ತೇನೆ.
೧೯ ಮತ್ತು ಇಸ್ರಯೇಲನನ್ನು ಅವನ ನಿವಾಸಕ್ಕೆ ತಿರಿಗಿ ಬರ ಮಾ
ಡುತ್ತೇನೆ;
ಅವನು ಕಾರ್ಮೆಲಿನಲ್ಲಿಯೂ ಬಾಶಾನಿನಲ್ಲಿಯೂ ಮೇಯುವನು;
ಅವನ ಪ್ರಾಣವು ಎಫ್ರಾಯಿಮ್ ಬೆಟ್ಟದಲ್ಲಿಯೂ, ಗಿಲ್ಯಾದಿನಲ್ಲಿ
ಯೂ, ತೃಪ್ತಿ ಹೊಂದುವದು.
೨೦ ಕರ್ತನು ಅನ್ನುತ್ತಾನೆ—
ಆ ದಿವಸಗಳಲ್ಲಿಯೂ, ಆ ಕಾಲದಲ್ಲಿಯೂ,
ಇಸ್ರಯೇಲಿನ ಅಕ್ರಮವನ್ನು ಹುಡುಕಿದರೂ, ಅದು ಇರದು;
ಯೆಹೂದದ ಪಾಪಗಳನ್ನು ಹುಡುಕಿದರೂ, ಅವು ಕಿಕ್ಕುವದಿಲ್ಲ.
ಯಾಕಂದರೆ, ನಾನು ಉಳಿಸುವವರಿಗೆ ಮನ್ನಿಸುತ್ತೇನೆ.

೨೧ ಮೆರಥಾಯಿಮನ ದೇಶಕ್ಕೆ ವಿರೋಧವಾಗಿ, ಅದಕ್ಕೆ
ವಿರೋಧವಾಗಿಯೂ,
ಪಿಕೋದಿನ ನಿವಾಸಿಗಳಿಗೆ ವಿರೋಧವಾಗಿಯೂ, ಏರಿ ಹೋಗು;
ಅವರನ್ನು ಹಿಂದಟ್ಟಿ, ಕೆಡಿಸಿ ಬಿಟ್ಟು, ನಿರ್ಮೂಲ ಮಾಡು,
ಎಂದು ಕರ್ತನು ಅನ್ನುತ್ತಾನೆ.
೨೨ ನಾನು ನಿನಗೆ ಆಜ್ಞಾಪಿಸಿದ್ದೆಲ್ಲಾದರ ಪ್ರಕಾರ ಮಾಡು;
ಯುದ್ಧದ ಶಬ್ದವೂ,
ದೊಡ್ಡ ಮುರಿಯೋಣವೂ, ದೇಶದಲ್ಲಿ ಉಂಟು.
೨೩ ಸರ್ವ ಭೂಮಿಯ ಸುತ್ತಿಗೆ ಹ್ಯಾಗೆ ತುಂಡಾಗಿ ಮುರಿಯಲ್ಪ
ಟ್ಟಿತು!
ಬಾಬೆಲು ಹ್ಯಾಗೆ ಜನಾಂಗಗಳೊಳಗೆ ಹಾಳಾಯಿತು!
೨೪ ನಾನು ನಿನಗೆ ಬೋನನ್ನು ಇಟ್ಟೆನು;
ಹೌದು, ಬಾಬೆಲೇ! ನೀನು ಹಿಡಿಯಲ್ಪಟ್ಟಿದ್ದೀ;
ಆದರೆ ನಿನಗೆ ತಿಳಿಯದಿತ್ತು;
ಸಿಕ್ಕಿದ್ದೀ; ಹೌದು, ವಶ ಮಾಡಲ್ಪಟ್ಟಿದ್ದೀ;
ನೀನು ಕರ್ತನಿಗೆ ವಿರೋಧವಾಗಿ ಜಗಳವಾಡಿದದರಿಂದಲೇ.
೨೫ ಕರ್ತನು ತನ್ನ ಭಂಡಾರವನ್ನು ತೆರೆದು,
ತನ್ನ ಕೋಪದ ಆಯುಧಗಳನ್ನು ಹೊರಗೆ ತಂದಿದ್ದಾನೆ;
ಯಾಕಂದರೆ, ಕಸ್ದೀಯರ ದೇಶದಲ್ಲಿ,
ಸೈನ್ಯಗಳ ಕರ್ತನಾದ ಯೆಹೋವನಿಗೆ ಕೆಲಸ ಉಂಟು.
೨೬ ಕಟ್ಟಿ ಕಡೆಯಿಂದ ಅದಕ್ಕೆ ವಿರೋಧವಾಗಿ ಬನ್ನಿ;



ಅದರ ಭಂಡಾರಗಳನ್ನು ತೆರೆಯಿರಿ;
ಅದನ್ನು ದಿಬ್ಬೆಗಳಾಗಿ ತುಳಿಯಿರಿ;
ಶುದ್ಧವಾಗಿ ನಾಶನ ಮಾಡಿರಿ;
ಅದಕ್ಕೆ ಒಂದು ಉಳಿಸ ಬೇಡಿರಿ.
೨೭ ಅದರ ಹೋರಿಗಳನ್ನೆಲ್ಲಾ ಕೊಂದು ಹಾಕಿರಿ;
ಅವು ಕೊಲೆಗೆ ಇಳಿಯಲಿ;
ಅವರಿಗೆ ಅಯ್ಯೋ! ಯಾಕಂದರೆ, ಅವರ ದಿನವೂ,
ಅವರ ವಿಚಾರಣೆಯ ಕಾಲವು, ಬಂತು.

೨೮ ಬಾಬೆಲಿನ ದೇಶದಿಂದ ತಪ್ಪಿಸಿ ಕೊಂಡು,
ಓಡಿ ಹೋಗುವವರ ಶಬ್ದವು!
ಅವರು ಚಿಯೋನಿನಲ್ಲಿ ನಮ್ಮ ದೇವರಾದ ಕರ್ತನ ಪ್ರತಿದಂಡ
ನೆಯನ್ನು,
ಅವನ ದೇವಾಲಯದ ಪ್ರತಿದಂಡನೆಯನ್ನು ತಿಳಿಸುತ್ತಾರೆ.
೨೯ ಬಾಬೆಲಿಗೆ ವಿರೋಧವಾಗಿ ಬಿಲ್ಲಿನವರನ್ನು ಕರೆಯಿರಿ;
ಬಿಲ್ಲು ಬೊಗ್ಗಿಸುವವರೆಲ್ಲರೇ, ಅದಕ್ಕೆ ವಿರೋಧವಾಗಿ ಸುತ್ತಲು
ದಂಡು ಕಟ್ಟಿರಿ;
ಅದು ತಪ್ಪಿಸಿ ಕೊಳ್ಳಲೀಸ ಬೇಡಿರಿ;
ಅದರ ಕ್ರಿಯೆಯ ಪ್ರಕಾರ ಅದಕ್ಕೆ ಪ್ರತಿಫಲ ಕೊಡಿರಿ;
ಅದು ಮಾಡಿದ್ದೆಲ್ಲಾದರ ಹಾಗೆ ಅದಕ್ಕೆ ಮಾಡಿರಿ;
ಯಾಕಂದರೆ, ಯೆಹೋವನಿಗೆ ವಿರೋಧವಾಗಿಯೂ,
ಇಸ್ರಯೇಲಿನ ಪರಿಶುದ್ಧನಿಗೆ ವಿರೋಧವಾಗಿಯೂ,
ಅಹಂಕಾರ ತೋರಿಸಿತು.
೩೦ ಆದದರಿಂದ ಅದರ ಯೌವ್ವನಸ್ಥರು ಬೀದಿಗಳಲ್ಲಿ ಬೀಳುವರು;
ಅದರ ಯುದ್ಧಸ್ಥರೆಲ್ಲರು ಆ ದಿವಸದಲ್ಲಿ ನಾಶವಾಗುವರೆಂದು,
ಕರ್ತನು ಅನ್ನುತ್ತಾನೆ.
೩೧ ಅಹಂಕಾರಿಯೇ! ಇಗೋ ನಾನು ನಿನಗೆ ವಿರೋಧವಾಗಿದ್ದೇನೆಂದು,
ಸೈನ್ಯಗಳ ಕರ್ತನಾದ ಯೆಹೋವನು ಅನ್ನುತ್ತಾನೆ;
ಯಾಕಂದರೆ, ನಿನ್ನ ದಿವಸವೂ, ನಿನ್ನ ವಿಚಾರಣೆಯ ಕಾಲ
ವೂ, ಬಂತು.
೩೨ ಆಗ ಅಹಂಕಾರಿಯು ಎಡವಿ ಬೀಳುವದು;
ಅದನ್ನು ಎಬ್ಬಿಸುವದಕ್ಕೆ ಯಾರೂ ಇರುವದಿಲ್ಲ;
ಅದರ ಪಟ್ಟಣಗಳಲ್ಲಿ ನಾನು ಬೆಂಕಿ ಹಚ್ಚುವೆನು,
ಅದು ಅವರ ಸುತ್ತಲಿರುವದನ್ನೆಲ್ಲಾ ತಿಂದು ಬಿಡುವದು.

೩೩ ಸೈನ್ಯಗಳ ಕರ್ತನು ಹೇಳುವದೇನಂದರೆ—
ಇಸ್ರಯೇಲಿನ ಮಕ್ಕಳೂ, ಯೆಹೂದನ ಮಕ್ಕಳೂ, ಕೂಡ
ಅಣಗಿಸಲ್ಪಟ್ಟರು;
ಅವರನ್ನು ಕೆಡೆಗೆ ಮೈದವರೆಲ್ಲರು ಅವರನ್ನು ಬಲವಾಗಿ ಹಿಡಿದು,
ಕಳುಹಿಸಿ ಬಿಡಲೊಲ್ಲದೆ ಇದ್ದರು.
೩೪ ಅವರ ವಿಮೋಚಕನು ಬಲಿಷ್ಠನೇ,
ಸೈನ್ಯಗಳ ಯೆಹೋವನು, ಅವನ ಹೆಸರು;
ಅವನು ಭೂಮಿಗೆ ಶಾಂತಿಯನ್ನು ಕೊಡುವ ಹಾಗೆಯೂ,
ಬಾಬೆಲಿನ ನಿವಾಸಿಗಳಿಗೆ ನಡುಗುವಿಕೆಯನ್ನು ಕೊಡುವ ಹಾಗೆಯೂ,
ಅವರ ವ್ಯಾಜ್ಯವನ್ನು ಪೂರ್ಣವಾಗಿ ತೀರಿಸುವನು.
೩೫ ಕಸ್ದೀಯರಿಗೆ ವಿರೋಧವಾಗಿಯೂ,
ಬಾಬೆಲಿನ ನಿವಾಸಿಗಳಿಗೆ ವಿರೋಧವಾಗಿಯೂ,
ಅದರ ಪ್ರಧಾನರಿಗೆ ವಿರೋಧವಾಗಿಯೂ,
ಅದರ ಜ್ಞಾನಿಗಳಿಗೆ ವಿರೋಧವಾಗಿಯೂ,
ಕತ್ತಿ ಉಂಟೆಂದು ಕರ್ತನು ಅನ್ನುತ್ತಾನೆ.
೩೬ ಸುಳ್ಳುಗಾರರಿಗೆ ವಿರೋಧವಾಗಿ ಕತ್ತಿ ಉಂಟು;
ಅವರು ಮೂರ್ಖರಾಗುವರು;
ಅದರ ಪರಾಕ್ರಮಶಾಲಿಗಳಿಗೆ ವಿರೋಧವಾಗಿ ಕತ್ತಿ ಉಂಟು;
ಅವರು ಭಯ ಭ್ರಾಂತಿ ಪಡುವರು.
೩೭ ಅದರ ಕುದುರೆಗಳಿಗೆ ವಿರೋಧವಾಗಿಯೂ,
ಅದರ ರಥಗಳಿಗೆ ವಿರೋಧವಾಗಿಯೂ,
ಅದಕ್ಕೊಳಗಿರುವ ಎಲ್ಲಾ ಸಂಕರ ಜನರಿಗೆ ವಿರೋಧವಾಗಿಯೂ,
ಕತ್ತಿ ಉಂಟು.
ಅವರು ಹೆಂಗಸರ ಹಾಗಾಗುವರು;
ಅದರ ಬೊಕ್ಕಸಗಳಿಗೆ ವಿರೋಧವಾಗಿ ಕತ್ತಿ ಉಂಟು;
ಅವು ಕೊಳ್ಳೆಯಾಗುವವು.
೩೮ ಅದರ ನೀರುಗಳಿಗೆ ವಿರೋಧವಾಗಿ ಒಣಗೋಣ ಉಂಟು,
ಅವು ಬತ್ತಿ ಹೋಗುವವು;
ಯಾಕಂದರೆ ಅದು ವಿಗ್ರಹಗಳ ದೇಶವೇ,
ಅವರು ಬೊಂಬೆಗಳಿಂದ ಹುಚ್ಚರಾದರು.
೩೯ ಆದದರಿಂದ ಅರಣ್ಯದ ಮೃಗಗಳು, ನರಿಗಳು ಕೂಡ, ಅಲ್ಲಿ
ವಾಸ ಮಾಡುವವು,
ಉಷ್ಟ್ರ ಪಕ್ಷಿಗಳು ಸಹ ಅದರಲ್ಲಿ ವಾಸ ಮಾಡುವವು;
ಅದು ಇನ್ನು ಮೇಲೆ ಎಂದೆಂದಿಗೂ ನಿವಾಸವಾಗುವದಿಲ್ಲ;
ತಲತಲಾಂತರಗಳ ಮಟ್ಟಿಗೂ ಯಾರೂ ಅದರಲ್ಲಿ ತಂಗು
ವದಿಲ್ಲ.
೪೦ ದೇವರು ಸೊದೋಮನ್ನೂ ಗಮೋರವನ್ನೂ
ಅವುಗಳ ಸಮೀಪದಲ್ಲಿದ್ದ ಪಟ್ಟಣಗಳನ್ನೂ
ಕೆಡವಿ ಹಾಕಿದಾಗ ಆದ ಹಾಗೆ,
ಅಲ್ಲಿ ಯಾವ ಮನುಷ್ಯನಾದರೂ ವಾಸ ಮಾಡುವದಿಲ್ಲ;
ಅದರಲ್ಲಿ ಯಾವ ನರ ಪುತ್ರನಾದರೂ, ತಂಗುವದಿಲ್ಲವೆಂದು,
ಕರ್ತನು ಅನ್ನುತ್ತಾನೆ.
೪೧ ಇಗೋ ಒಂದು ಜನ ಉತ್ತರದಿಂದ ಬರುತ್ತಾಕೆ,
ಅದು ದೊಡ್ಡ ಜನಾಂಗವು;
ಭೂಮಿಯ ಮೇರೆಗಳಿಂದ ಅನೇಕ ಅರಸರು ಎಬ್ಬಿಸಲ್ಪಡುವರು.
೪೨ ಅವರು ಬಿಲ್ಲನ್ನೂ ಭಲ್ಲೆಯನ್ನೂ ಹಿಡಿಯುವರು;
ಅವರು ಕ್ರೂರರು; ಅಂತ್ಯಕರುಣೆ ತೋರಿಸುವದಿಲ್ಲ;
ಅವರ ಶಬ್ದವು ಸಮುದ್ರದ ಹಾಗೆ ಘೋಷಿಸುವದು;
ಬಾಬೆಲಿನ ಮಗಳೇ, ನಿನಗೆ ವಿರೋಧವಾಗಿ,
ಯುದ್ಧಕ್ಕೆ ಸಿದ್ಧವಾಗಿರುವ ಪುರುಷರ ಹಾಗೆ,
ಕುದುರೆಗಳನ್ನು ಹತ್ತಿ ಕೊಂಡು ಬರುವರು.
೪೩ ಬಾಬೆಲಿನ ಅರಸನು ಅವರ ಸುದ್ದಿಯನ್ನು ಕೇಳಿದ್ದಾನೆ,
ಅವನ ಕೈಗಳು ನಿತ್ರಾಣವಾದವು;
ಸಂಕಟವೂ, ಹೆರುವ ಸ್ತ್ರೀಯ ಹಾಗೆ ನೋವೂ ಅವನನ್ನು ಹಿ
ಡಿದವು.

೪೪ ಇಗೋ ಅವನು ಸಿಂಹದ ಹಾಗೆ ಯೊರ್ದನಿನ ಉಬ್ಬುಪಕಿಯಿಂದ,
ಬಲವಾದ ನಿವಾಸಕ್ಕೆ ವಿರೋಧವಾಗಿ ಏರಿ ಬರುವನು;
ಆದರೆ ನಾನು ಅವನನ್ನು ಕ್ಷಣಮಾತ್ರದಲ್ಲಿ ಅದಕ್ಕೆ ದೂರವಾಗಿ
ಓಡಿ ಹೋಗ ಮಾಡುವೆನು,
ಮತ್ತು ನಾನು ಅವರ ಮೇಲೆ ನೇಮಿಸ ತಕ್ಕ ಆಯಸ್ಸಟ್ಟವನು
ಯಾರು?
ಯಾಕಂದರೆ, ನನ್ನ ಹಾಗೆ ಯಾರು?
ಮತ್ತು ನನಗೆ ಕಾಲವನ್ನು ನೇಮಿಸುವವನ್ಯಾರು?
ಮತ್ತು ನನ್ನ ಮುಂದೆ ನಿಲ್ಲ ತಕ್ಕ ಕುರುಬನು ಯಾರು?
೪೫ ಆದದರಿಂದ ಕರ್ತನು ಬಾಬೆಲಿಗೆ ವಿರೋಧವಾಗಿ ಮಾಡಿದ ಆ
ಲೋಚನೆಯನ್ನೂ,
ಅವನು ಕಸ್ದೀಯರ ದೇಶಕ್ಕೆ ವಿರೋಧವಾಗಿ ಮಾಡಿದ ಯೋಚ
ನೆಗಳನ್ನೂ ಕೇಳಿರಿ;
ನಿಶ್ಚಯವಾಗಿ ಮಂದೆಯಲ್ಲಿ ಚಿಕ್ಕವುಗಳು ಅವರನ್ನು ಎಳಿಯು
ವವು;
ನಿಶ್ಚಯವಾಗಿ ಅವರ ನಿವಾಸವು ಅವರ ಸಂಗಡ ಹಾಳು ಮಾ
ಡುವನು.
೪೬ ಬಾಬೆಲು ಹಿಡಿಯಲ್ಪಟ್ಟಿತೆಂಬ ಶಬ್ದದಿಂದ ಭೂಮಿಯು ಕದಲು
ತ್ತದೆ;
ಅದರ ಕೂಗು ಜನಾಂಗಗಳೊಳಗೆ ಕೇಳ ಬಂತು.

## ೫೧. ಸಂಧಿ.

೧ ಕರ್ತನು ಹೇಳುವದೇನಂದರೆ—
ಇಗೋ ನಾನು ಬಾಬೆಲಿಗೆ ವಿರೋಧವಾಗಿಯೂ,
ನನಗೆದುರಾಗಿ ಎದ್ದಿರುವವರ ಮಧ್ಯದಲ್ಲಿ ವಾಸಿಸುವವರಿಗೆ ವಿರೋ
ಧವಾಗಿಯೂ,
ನಾಶ ಮಾಡುವ ಘೂಳಿಯನ್ನು ಎಬ್ಬಿಸುತ್ತೇನೆ.
೨ ಮತ್ತು ಬಾಬೆಲಿಗೆ ತೂರುವವರನ್ನು ಕಳುಹಿಸುವೆನು;
ಅವರು ಅದನ್ನು ತೂರಿ,
ಅದರ ದೇಶವನ್ನು ಬರಿದು ಮಾಡುವರು
ಯಾಕಂದರೆ, ದುರ್ದಿನದಲ್ಲಿ ಸುತ್ತಲಾಗಿ ಅದಕ್ಕೆ ವಿರೋಧವಾ
ಗಿರುವರು.
೩ ಬಿಲ್ಲು ಬೊಗ್ಗಿಸುವವನಿಗೆ ವಿರೋಧವಾಗಿಯೂ,
ಕವಚದಲ್ಲಿ ತನ್ನನ್ನು ಹೆಚ್ಚಿಸಿ ಕೊಳ್ಳುವವನಿಗೆ ವಿರೋಧವಾಗಿ
ಯೂ,
ಬಿಲ್ಲಿನವನು ತನ್ನ ಬಿಲ್ಲನ್ನು ಬೊಗ್ಗಸಲಿ;
ಅದರ ಯೌವ್ವನಸ್ಥರನ್ನು ಕನಿಕರಿಸ ಬೇಡಿರಿ;
ಅದರ ಸೈನ್ಯವನ್ನೆಲ್ಲಾ ಶುದ್ಧವಾಗಿ ನಿರ್ಮೂಲ ಮಾಡಿರಿ.
೪ ಈ ಪ್ರಕಾರ ಕಸ್ದೀಯರ ದೇಶದಲ್ಲಿ ಕೊಂದು ಹಾಕಲ್ಪಟ್ಟವರೂ,
ಅದರ ಬೀದಿಗಳಲ್ಲಿ ತಿವಿಯಲ್ಪಟ್ಟವರೂ, ಬೀಳುವರು.
೫ ಯಾಕಂದರೆ ಅವರ ದೇಶವು,
ಇಸ್ರಯೇಲಿನ ಪರಿಶುದ್ಧನಿಗೆ ವಿರೋಧವಾದ ಪಾಪದಿಂದ ತುಂ
ಬಾಗಿದ್ದಾಗ್ಯೂ,
ಇಸ್ರಯೇಲರೂ ಯೆಹೂದವಾದರೂ,
ತನ್ನ ದೇವರಾದ ಸೈನ್ಯಗಳ ಯೆಹೋವನಿಂದ ಬಿಡಲ್ಪಟ್ಟಿದ್ದಲ್ಲ.
೬ ಬಾಬೆಲಿನೊಳಗಿಂದ ಓಡಿ ಹೋಗಿರಿ,
ಒಬ್ಬೊಬ್ಬನು ತನ್ನ ತನ್ನ ಪ್ರಾಣವನ್ನು ತಪ್ಪಿಸಿ ಕೊಳ್ಳಲಿ;
ಅದರ ಅಕ್ರಮದಲ್ಲಿ ನಾಶವಾಗ ಬೇಡಿರಿ;
ಯಾಕಂದರೆ ಇದು ಯೆಹೋವನ ಪ್ರತಿದಂಡನೆಯ ಕಾಲವು;
ಅವನೇ ಅದಕ್ಕೆ ಮುಯ್ಯಿಗೆ ಮುಯ್ಯಿ ಕೊಡುತ್ತಾನೆ.
೭ ಬಾಬೆಲು ಕರ್ತನ ಕೈಯಲ್ಲಿ ಭೂಮಿಗೆಲ್ಲಾ ಅಮತ್ತೇರಿಸಿದ
ಚಿನ್ನದ ಪಾತ್ರೆಯಾಗಿತ್ತು;
ಜನಾಂಗಗಳು ಅದರ ದ್ರಾಕ್ಷೆರಸವನ್ನು ಕುಡಿದವು;
ಆದದರಿಂದ ಜನಾಂಗಗಳಿಗೆ ಹುಚ್ಚು ಹಿಡಿಯಿತು.
೮ ಇದ್ದಕ್ಕಿದ್ದ ಹಾಗೆ ಬಾಬೆಲು ಬಿದ್ದು ಮುರಿಯಲ್ಪಟ್ಟಿದೆ;
ಅದರ ವಿಷಯ ಹುಯಿಲಿಡಿರಿ;
ಅದರ ನೋವಿಗೆ ತೈಲ ತಕ್ಕೊಳ್ಳಿರಿ;
ಒಂದು ವೇಳೆ ವಾಸಿಯಾಧೀತು.
೯ ನಾವು ಬಾಬೆಲನ್ನುವಾಸಿ ಮಾತಲಿಕ್ಕೆದ್ದೆವು.
ಆದರೆ ಅದು ವಾಸಿ ಆಗುವದಕ್ಕಿಲ್ಲ;
ಅದನ್ನು ಬಿಡು,
ನಮ್ಮ ನಮ್ಮ ದೇಶಗಳಿಗೆ ಹೋಗೋಣ;
ಯಾಕಂದರೆ ಅದರ ನ್ಯಾಯತೀರ್ಪಿಕೆಯು ಆಕಾಶಕ್ಕೆ ಮುಟ್ಟಿ
ತ್ತದೆ;
ಮೇಘಗಳ ಪರ್ಯಂತರ ಏಳುತ್ತದೆ.
೧೦ ಕರ್ತನು ನಮ್ಮ ನೀತಿಯನ್ನು ಹೊರಗೆ ತಂದಿದ್ದಾನೆ;
ಬನ್ನಿ, ನಮ್ಮ ದೇವರಾದ ಕರ್ತನ ಕ್ರಿಯೆಯನ್ನು,
ಚಿಯೋನಿನಲ್ಲಿ ಸಾರಿ ಹೇಳೋಣ.
೧೧ ಬಾಣಗಳನ್ನು ಮೆರುಗು ಮಾಡಿರಿ, ಡಾಲುಗಳನ್ನು ತುಂಬಿಸಿರಿ;
ಕರ್ತನು ಮೇದ್ಯರ ಅರಸರ ಆತ್ಮವನ್ನು ಎಬ್ಬಿಸಿದ್ದಾನೆ;
ಯಾಕಂದರೆ ಅವನ ಆಲೋಚನೆ ಬಾಬೆಲಿಗೆ ವಿರೋಧವಾಗಿ,
ಅದನ್ನು ನಾಶ ಮಾಡುವದಕ್ಕೆ, ಉಂಟು;
ಯಾಕಂದರೆ ಇದು ಕರ್ತನ ಪ್ರತಿದಂಡನೆಯು,
ಅವನ ದೇವಾಲಯದ ಪ್ರತಿದಂಡನೆಯೇ.
೧೨ ಬಾಬೆಲಿನ ಗೋಡೆಯ ಮೇಲೆ ಧ್ವಜವನ್ನೆತ್ತಿರಿ,
ಪಹರೆ ಬಲಪಡಿಸಿರಿ,
ಕೋವರದವರನ್ನು ನಿಲ್ಲಿಸಿರಿ;
ಹೊಂಚಿಕೊಳ್ಳುವವರನ್ನು ಸಿದ್ಧ ಮಾಡಿರಿ;
ಯಾಕಂದರೆ ಕರ್ತನು ಬಾಬೆಲಿನ ನಿವಾಸಿಗಳಿಗೆ ವಿರೋಧವಾಗಿ
ತಾನು ಹೇಳಿದ್ದನ್ನು
ಯೋಚಿಸಿದ್ದಲ್ಲದೆ ಮಾಡಿದ್ದಾನೆ.

೧೩ ಅನೇಕ ನೀರುಗಳ ಬಳಿಯಲ್ಲಿ ವಾಸವಾಗಿರುವವಳೇ!
ಬಹಳ ದ್ರವ್ಯಗಳುಳ್ಳವಳೇ!
ನಿನ್ನ ಅಂತ್ಯವೂ, ನಿನ್ನ ದುರಾಶೆಯ ಅಳತೆಯೂ, ಬಂತು.
೧೪ ಸೈನ್ಯಗಳ ಯೆಹೋವ,
ನಿಶ್ಚಯವಾಗಿ ನಾನು ಹುಳುಗಳಿಂದಾದ ಹಾಗೆ,
ಮನುಷ್ಯರಿಂದ ನಿನ್ನನ್ನು ತುಂಬಿಸುತ್ತೇನೆಂದು,
ಅವರು ನಿನಗೆ ವಿರೋಧವಾಗಿ ಆರ್ಭಟವನ್ನು ಎತ್ತುವರೆಂದು,
ತನ್ನ ಜೀವದ ಮೇಲೆ ಆಣೆ ಇಟ್ಟು ಕೊಂಡಿದ್ದಾನೆ.



೧೫ ಅವನು ತನ್ನ ಶಕ್ತಿಯಿಂದ ಭೂಮಿಯನ್ನು ಉಂಟು ಮಾಡಿ,
ತನ್ನ ಜ್ಞಾನದಿಂದ ಭೂಲೋಕವನ್ನು ಸ್ಥಾಪಿಸಿ,
ತನ್ನ ವಿವೇಕದಿಂದ ಆಕಾಶವನ್ನು ವಿಸ್ತರಿಸಿದ್ದಾನೆ.
೧೬ ಅವನು ತನ್ನ ಶಬ್ದವನ್ನು ಕೊಡಲಾಗಿ,
ಆಕಾಶದಲ್ಲಿ ನೀರಿನ ಘೋಷವದೆ;
ಅವನು ಭೂಮಿಯ ಅಂತ್ಯದಿಂದ
ಹಬೆಯನ್ನು ಏರ ಮಾಡುತ್ತಾನೆ;
ಮಳೆಯ ಸಂಗಡ ಮಿಂಚುಗಳನ್ನು ಮಾಡಿ,
ತನ್ನ ಭಂಡಾರಗಳೊಳಗಿಂದ ಘಾಳಿಯನ್ನು ಹೊರಗೆ ತರು
ತ್ತಾನೆ.
೧೭ ಮನುಷ್ಯಕೆಲ್ಲರು ತಿಳಿಯದ ಹಾಗೆ ಹೆದ್ದರಾಗಿದ್ದಾರೆ;
ಎರಕ ಹೊಯ್ಯುವವರೆಲ್ಲರು ವಿಗ್ರಹದಿಂದ ನಾಚಿಕೆ ಪಡುತ್ತಾರೆ;
ಯಾಕಂದರೆ, ಅವರ ಎರಕದ ಬೊಂಬೆಗಳು ಸುಳ್ಳೇ;
ಅವುಗಳಲ್ಲಿ ಉಸಿರು ಇಲ್ಲ.
೧೮ ಅವು ಮಾಯವೇ, ಪೋಸದ ಕೆಲಸವೇ;
ಅವುಗಳ ವಿಚಾರಣೆಯ ಕಾಲದಲ್ಲಿ ನಾಶವಾಗುವವು.
೧೯ ಯಾಕೋಬನ ಭಾಗವು ಇವುಗಳ ಹಾಗಲ್ಲ;
ಯಾಕಂದರೆ ಅವನು ಎಲ್ಲವನ್ನು ರೂಪಿಸಿದವನೇ,
ಅವನ ಬಾಧ್ಯದ ಕೋಲು ಇಸ್ರಯೇಲೇ;
ಅವನ ಹೆಸರು, ಸೈನ್ಯಗಳ ಯೆಹೋವನೇ.

೨೦ ನೀನು ನನ್ನ ಸುತ್ತಿಗೆಯೇ, ನನ್ನ ಯುದ್ಧದ ಆಯುಧಗಳೇ,
ನಿನ್ನಿಂದ ಜನಾಂಗಗಳನ್ನು ಒಡೆದು ಬಿಡುತ್ತೇನೆ,
ನಿನ್ನಿಂದ ರಾಜ್ಯಗಳನ್ನು ನಾಶನ ಮಾಡುತ್ತೇನೆ.
೨೧ ನಿನ್ನಿಂದ ಕುದುರೆಯನ್ನೂ ಅದರ ಮೇಲೆ ಹತ್ತಿದವನನ್ನೂ ಒಡೆ
ದು ಬಿಡುತ್ತೇನೆ,
ನಿನ್ನಿಂದ ರಥವನ್ನೂ ಅದರಲ್ಲಿ ಸವಾರಿ ಮಾಡುವವನನ್ನೂ ಒಡೆ
ದು ಬಿಡುತ್ತೇನೆ.
೨೨ ನಿನ್ನಿಂದ ಗಂಡಸರನ್ನೂ ಹೆಂಗಸರನ್ನೂ ಒಡೆದು ಬಿಡುತ್ತೇನೆ,
ನಿನ್ನಿಂದ ಹಿರಿಯರನ್ನೂ ಕಿರಿಯರನ್ನೂ ಒಡೆದು ಬಿಡುತ್ತೇನೆ,
ನಿನ್ನಿಂದ ಯೌವ್ವನಸ್ಥನನ್ನೂ ಕನ್ನಿಕೆಯನ್ನೂ ಒಡೆದು ಬಿಡು
ತ್ತೇನೆ.
೨೩ ನಿನ್ನಿಂದ ಕುರುಬನನ್ನೂ ಅವನ ಮಂದೆಯನ್ನೂ ಒಡೆದು ಬಿಡು
ತ್ತೇನೆ,
ನಿನ್ನಿಂದ ಒಕ್ಕಲಿಗನನ್ನೂ ಅವನ ಗಳೇದ ಎತ್ತುಗಳನ್ನೂ ಒಡೆ
ದು ಬಿಡುತ್ತೇನೆ,
ನಿನ್ನಿಂದ ಅಧಿಪತಿಗಳನ್ನೂ ಅಧಿಕಾರಿಗಳನ್ನೂ ಒಡೆದು ಬಿಡು
ತ್ತೇನೆ.
೨೪ ಬಾಬೆಲಿಗೂ, ಕಸ್ದೀಯದ ನಿವಾಸಿಗಳೆಲ್ಲರಿಗೂ,
ಅವರು ಚಿಯೋನಿನಲ್ಲಿ, ನಿಮ್ಮ ಸನ್ನಿಧಿಯಲ್ಲಿ, ಮಾಡಿದ ಕೇಡ
ನ್ನೆಲ್ಲಾ ಸಲ್ಲಿಸುವೆನೆಂದು,
ಕರ್ತನು ಅನ್ನುತ್ತಾನೆ.
೨೫ ನಾಶಮಾಡುವ ಬೆಟ್ಟವೇ!
ಭೂಮಿಯನ್ನೆಲ್ಲಾ ನಾಶ ಮಾಡುವಂಥಾದ್ದೇ!
ಇಗೋ ನಾನು ನಿನಗೆ ವಿರೋಧವಾಗಿದ್ದೇನೆಂದು,
ಕರ್ತನು ಅನ್ನುತ್ತಾನೆ;
ನಿನ್ನ ಮೇಲೆ ನನ್ನ ಕೈಯನ್ನು ಚಾಚಿ,
ಬಂಡೆಗಳ ಮೇಲಿನಿಂದ ನಿನ್ನನ್ನು ಹೊರಳಿಸಿ,
ನಿನ್ನನ್ನು ಸುಟ್ಟ ಬೆಟ್ಟವಾಗ ಮಾಡುತ್ತೇನೆ.
೨೬ ಒಬ್ಬರೂ ನಿನ್ನಿಂದ ಮೂಲೆಯ ಕಲ್ಲನ್ನಾಗಲಿ,
ಅಸ್ತಿವಾರದ ಕಲ್ಲನ್ನಾಗಲಿ, ತೆಗೆಯರು;
ನೀನು ಎಂದೆಂದಿಗೂ ಹಾಳಾಗುವಿ ಎಂದು
ಕರ್ತನು ಅನ್ನುತ್ತಾನೆ.

೨೭ ದೇಶದಲ್ಲಿ ಧ್ವಜವನ್ನೆತ್ತಿರಿ;
ಜನಾಂಗಗಳಲ್ಲಿ ತುತೂರಿಯನ್ನೂದಿರಿ;
ಅದಕ್ಕೆ ವಿರೋಧವಾಗಿ ಜನಾಂಗಗಳನ್ನು ಸಿದ್ಧ ಮಾಡಿರಿ;
ಅರರಾಟ್ ಮಿನ್ನಿ ಅಷ್ಕೆನಾಸ್ ರಾಜ್ಯಗಳನ್ನು
ಅದಕ್ಕೆ ವಿರೋಧವಾಗಿ ಕರೆಯಿರಿ;
ಅದಕ್ಕೆ ವಿರೋಧವಾಗಿ ಸೈನ್ಯಾಧಿಪತಿಯನ್ನು ನೇಮಿಸಿರಿ;
ಕಂಬಳಿ ಹುಳಗಳಷ್ಟಂದ ಕುದುರೆಗಳನ್ನು ಏರ ಮಾಡಿರಿ.
೨೮ ಅದಕ್ಕೆ ವಿರೋಧವಾಗಿ ಜನಾಂಗಗಳನ್ನೂ,
ಮೇದ್ಯರ ಅರಸರನ್ನೂ,
ಅದರ ಅಧಿಪತಿಗಳನ್ನೂ, ಅಧಿಕಾರಿಗಳೆಲ್ಲರನ್ನೂ,
ಅವನ ರಾಜ್ಯದ ದೇಶವನ್ನೆಲ್ಲಾ ಸಿದ್ಧ ಮಾಡಿರಿ.
೨೯ ಆಗ ದೇಶವು ಕದಲಿ ವೇದನೆ ಪಡುವದು;
ಯಾಕಂದರೆ ಬಾಬೆಲಿನ ದೇಶವನ್ನು ನಿವಾಸಿ ಇಲ್ಲದೆ ಹಾಳು ಮಾ
ಡುವ ಬಗ್ಯೆ,
ಬಾಬೆಲಿಗೆ ವಿರೋಧವಾದ ಕರ್ತನ ಆಲೋಚನೆಗಳು ನಿಲ್ಲುವವು.
೩೦ ಬಾಬೆಲಿನ ಪರಾಕ್ರಮಶಾಲಿಗಳು ಯುದ್ಧ ಮಾಡುವದನ್ನು ಬಿಟ್ಟಿ
ದ್ದಾರೆ;
ಅವರ ಭದ್ರಸ್ಥಾನಗಳಲ್ಲಿ ನಿಲ್ಲುತ್ತಾರೆ;
ಅವರ ಪರಾಕ್ರಮತನ ತಪ್ಪಿತು;
ಹೆಂಗಸರಾದರು;
ಅದರ ನಿವಾಸಗಳನ್ನು ಸುಟ್ಟಿದ್ದಾರೆ,
ಅದರ ಅಗುಳಿಗಳು ಮುರಿಯಲ್ಪಟ್ಟಿವೆ.
೩೧ ಪಟ್ಟಣವು ಒಂದು ಕಡೆಯಲ್ಲಿ ಹಿಡಿಯಲ್ಪಟ್ಟಿದೆ ಎಂದೂ,
ನೀರು ದಾಟುವ ಸ್ಥಳಗಳು ವಶವಾದವೆಂದೂ,
ಬಿದುರುಗಳು ಬೆಂಕಿಯಿಂದ ಸುಡಲ್ಪಟ್ಟವೆ ಎಂದೂ,
ಯುದ್ಧಸ್ಥರು ಘಾಬರಿ ಪಟ್ಟಿರೆಂದೂ,
೩೨ ಬಾಬೆಲಿನ ಅರಸನಿಗೆ ತಿಳಿಸುವದಕ್ಕೆ,
ಓಡುವವನು ಓಡುವವನನ್ನೂ,
ತಿಳಿಸುವವನು ತಿಳಿಸುವವನನ್ನೂ,
ಎದುರ್ಗೊಳ್ಳುವದಕ್ಕೆ ಓಡುವರು.

೩೩ ಯಾಕಂದರೆ ಇಸ್ರಯೇಲಿನ ದೇವರಾದ ಸೈನ್ಯಗಳ ಯೆ
ಹೋವ ಹೀಗೆ ಹೇಳುತ್ತಾನೆ—
ತುಳಿಯುವ ವೇಳೆಯಲ್ಲಿ ಕಣವು ಹ್ಯಾಗೋ,
ಹಾಗೆಯೇ ಬಾಬೆಲಿನ ಮಗಳು ಇದ್ದಾಳೆ;
ಇನ್ನು ಸ್ವಲ್ಪ ಹೊತ್ತಾದ ಮೇಲೆ ಅದಕ್ಕೆ ಸುಗ್ಗಿ ಕಾಲ ಬರುವದು.

೩೪ ಬಾಬೆಲಿನ ಅರಸನಾದ ನೆಬುಕದ್ನೆಜ್ಜರನು ನನ್ನನ್ನು ತಿಂದು
ಬಿಟ್ಟಿದ್ದಾನೆ;
ನನ್ನನ್ನು ಜಜ್ಜಿದ್ದಾನೆ;
ನನ್ನನ್ನು ಬರೀ ಪಾತ್ರೆಯಾಗ ಮಾಡಿದ್ದಾನೆ;
ಗಡ ಸರ್ಪದ ಹಾಗೆ ನನ್ನನ್ನು ನುಂಗಿ ಬಿಟ್ಟಿದ್ದಾನೆ;
ನನ್ನ ರಮ್ಯವಾದವುಗಳಿಂದ ತನ್ನ ಹೊಟ್ಟೆ ತುಂಬಿಸಿದ್ದಾನೆ;
ನನ್ನನ್ನು ತಳ್ಳಿಬಿಟ್ಟಿದ್ದಾನೆ.
೩೫ ನನಗೂ ನನ್ನ ಮಾಂಸಕ್ಕೂ ಮಾಡಿರುವ ಬಲಾತ್ಕಾರವು,
ಬಾಬೆಲಿನ ಮೇಲೆ ಇರಲಿ ಎಂದು;
ಚಿಯೋನಿನ ನಿವಾಸಿ ಹೇಳುವನು;
ಕಸ್ದೀಯರ ನಿವಾಸಿಗಳ ಮೇಲೆ ನನ್ನ ರಕ್ತವು ಇರಲಿ,
ಎಂದು ಯೆರೂಸಲೇಮು ಹೇಳುವದು.
೩೬ ಆದದರಿಂದ ಕರ್ತನು ಹೇಳುವದೇನಂದರೆ—
ಇಗೋ ನಾನು ನಿನ್ನ ವ್ಯಾಜ್ಯವಾಡುತ್ತೇನೆ;
ನಿನಗೋಸ್ಕರ ಪ್ರತಿದಂಡನೆ ಮಾಡುತ್ತೇನೆ;
ಅದರ ಸಮುದ್ರವನ್ನು ಬಣಗಿಸುತ್ತೇನೆ;
ಅದರ ಬುಗ್ಗೆಯನ್ನು ಬತ್ತಿ ಹೋಗ ಮಾಡುತ್ತೇನೆ;
೩೭ ಮತ್ತು ಬಾಬೆಲು ದಿಬ್ಬೆಗಳಾಗುವದು;
ನಿವಾಸಿ ಇಲ್ಲದೆ,
ನರಿಗಳ ವಾಸಸ್ಥಳವೂ,
ಹಾಳೂ ಸಿಳ್ಳಿಡುವಿಕೆಯೂ, ಆಗುವದು.
೩೮ ಅವರು ಸಿಂಹಗಳ ಹಾಗೆ ಕೂಡ ಗರ್ಜಿಸುವರು,
ಸಿಂಹಗಳ ಮರಿಗಳ ಹಾಗೆ ಶಬ್ದ ಕೊಡುವರು.
೩೯ ಅವರ ಉರಿಯಲ್ಲಿ, ನಾನು ಅವರ ಔತಣವನ್ನು ಸಿದ್ಧ ಮಾಡು
ವೆನು;
ಅವರು ಉಲ್ಲಾಸಿಸಿ,
ನಿತ್ಯವಾದ ನಿದ್ರೆಯನ್ನು ಮಾಡಿ, ಎಚ್ಚರವಾಗದ ಹಾಗೆ,
ಅವರಿಗೆ ಅವಮೇರಿಸುವೆನೆಂದು,
ಕರ್ತನು ಅನ್ನುತ್ತಾನೆ.
೪೦ ಕುರಿಮರಿಗಳ ಹಾಗೆ,
ಟಗರುಗಳ ಹೋತುಗಳ ಹಾಗೆ,
ಅವರನ್ನು ಕೊಲೆಗೆ ಇಳಿಸುವೆನು.
೪೧ ಶೇಶಾಕ ಹ್ಯಾಗೆ ಹಿಡಿಯಲ್ಪಟ್ಟಿದೆ!
ಸಮಸ್ತ ಭೂಮಿಯ ಸ್ತೋತ್ರವು ಹ್ಯಾಗೆ ವಶ ಮಾಡಲ್ಪಟ್ಟಿದೆ!
ಬಾಬೆಲು ಜನಾಂಗಗಳೊಳಗೆ ಹ್ಯಾಗೆ ವಿಸ್ಮಯಕ್ಕಾಯಿತು!
೪೨ ಬಾಬೆಲಿನ ಮೇಲೆ ಸಮುದ್ರವು ಏರಿ ಬಂತು;
ಅದರ ತೆರೆಗಳ ಸಮೂಹದಿಂದ ಮುಚ್ಚಲ್ಪಟ್ಟಿದೆ.
೪೩ ಅದರ ಪಟ್ಣಗಳು ಹಾಳಾದವು;
ಅವು ಬಣ ನೆಲವೂ, ಅಡವಿಯೂ,
ಯಾರೂ ವಾಸ ಮಾತಡೆ,
ಮನುಷ್ಯನ ಮಗನು ಹಾದು ಹೋಗದೆ ಇರುವ ದೇಶವೂ ಆ
ಗಿವೆ.
೪೪ ಯಾಕಂದರೆ ನಾನು ಬಾಬೆಲಿನಲ್ಲಿರುವ ಬೇಲನನ್ನು ವಿಚಾರಿಸಿ,
ಅವನು ನುಂಗಿದ್ದನ್ನು ಅವನ ಬಾಯೊಳಗಿಂದ ಹೊರಗೆ ತರಿಸುವೆ
ನು;
ಮತ್ತು ಇನ್ನು ಮೇಲೆ ಜನಾಂಗಗಳು ಅವನ ಬಳಿಗೆ ಹರಿದು ಬ
ರುವದಿಲ್ಲ;
ಹೌದು, ಬಾಬೆಲಿನ ಗೋಡೆ ಬೀಳುವದು.

೪೫ ನನ್ನ ಜನರೇ, ಅದರೊಳಗಿಂದ ಹೊರಡಿರಿ;
ಒಬ್ಬೊಬ್ಬನು ತನ್ನ ತನ್ನ ಪ್ರಾಣವನ್ನು
ಕರ್ತನ ಕೋಪದ ಉರಿಗೆ ತಪ್ಪಿಸಿರಿ.
೪೬ ಮತ್ತು ನಿಮ್ಮ ಹೃದಯವು ಕುಂದದ ಹಾಗೆ,
ದೇಶದಲ್ಲಿ ಕೇಳಲ್ಪಡುವ ಸುದ್ದಿಗೆ ನೀವು ಭಯ ಪಡದ ಹಾಗೆ,
ಒಂದು ವರುಷದಲ್ಲಿ ಒಂದು ಸುದ್ದಿಯೂ,
ಇನ್ನೊಂದು ವರುಷದಲ್ಲಿ ಇನ್ನೊಂದು ಸುದ್ದಿಯೂ, ಬರುವದು;
ದೇಶದಲ್ಲಿ ಬಲಾತ್ಕಾರವಿರುವದು,
ಆಳುವವನು ಆಳುವವನಿಗೆ ವಿರೋಧವಾಗಿರುವನು.
೪೭ ಆದದರಿಂದ ಇಗೋ ದಿನಗಳು ಬರುವವು;
ಆಗ ನಾನು ಬಾಬೆಲಿನ ವಿಗ್ರಹಗಳನ್ನು ವಿಚಾರಿಸುವೆನು;
ಅದರ ದೇಶವೆಲ್ಲಾ ನಾಚಿಕೆ ಪಡುವದು;
ಅದರ ಕೊಲ್ಲಲ್ಪಟ್ಟವರು ಅದರ ಮಧ್ಯದಲ್ಲಿ ಬೀಳುವರು.
೪೮ ಆಗ ಆಕಾಶವೂ, ಭೂಮಿಯೂ, ಅವುಗಳಲ್ಲಿರುವ ಸಮಸ್ತವೂ,
ಬಾಬೆಲಿನ ವಿಷಯ ಹರ್ಷಿಸುವವು;
ಯಾಕಂದರೆ ಸೂರೆ ಮಾಡುವವರು ಉತ್ತರದಿಂದ ಅದಕ್ಕೆ ವಿರೋ
ಧವಾಗಿ ಬರುವರೆಂದು,
ಕರ್ತನು ಅನ್ನುತ್ತಾನೆ.
೪೯ ಬಾಬೆಲು ಇಸ್ರಯೇಲಿನ ಕೊಲ್ಲಲ್ಪಟ್ಟವರನ್ನು ಬೀಳಿಸಿದ ಹಾಗೆ,
ಬಾಬೆಲಿನಲ್ಲಿ ಸಮಸ್ತ ದೇಶದ ಕೊಲ್ಲಲ್ಪಟ್ಟವರು ಬೀಳುವರು.
೫೦ ಕತ್ತಿಗೆ ತಪ್ಪಿಸಿ ಕೊಂಡವರೇ,
ನಡಿಯಿರಿ, ನಿಲ್ಲ ಬೇಡಿರಿ;
ದೂರದಲ್ಲಿ ಕರ್ತನನ್ನು ಜ್ಞಾಪಕ ಪಾಡಿ ಕೊಳ್ಳಿರಿ,
ಯೆರೂಸಲೇಮು ನಿಮ್ಮ ಮನಸ್ಸಿಗೆ ಬರಲಿ.
೫೧ ನಾಚಿಕೆ ಪಡುತ್ತೇವೆ, ಯಾಕಂದರೆ ನಿಂದೆಯನ್ನು ಕೇಳಿತ್ತೇವೆ;
ಅವಮಾನ ನಿಮ್ಮ ಮುಖಗಳನ್ನು ಮುಚ್ಚಿದೆ;
ಯಾಕಂದರೆ ಅನ್ಯರು ಕರ್ತನ ಮನೆಯ ಪರಿಶುದ್ಧ ಸ್ಥಳಗಳಲ್ಲಿ
ಬಂದಿದ್ದಾರೆ.
೫೨ ಆದದರಿಂದ ಇಗೋ ದಿನಗಳು ಬರುವವೆಂದು,
ಕರ್ತನು ಅನ್ನುತ್ತಾನೆ;
ಆಗ ನಾನು ಅದರ ವಿಗ್ರಹಗಳನ್ನು ವಿಚಾರಿಸುತ್ತೇನೆ;
ಅದರ ದೇಶದಲ್ಲೆಲ್ಲಾ ಘಾಯ ಪಟ್ಟವರು ಮೂಲುಗುವರು.
೫೩ ಬಾಬೆಲು ಆಕಾಶಕ್ಕೆ ಏರಿದರೂ,
ಅದರ ಬಲದ ಉನ್ನತ ಸ್ಥಾನವನ್ನು ಭದ್ರ ಮಾಡಿದರೂ,
ಸೂರೆ ಮಾಡುವವರು ನನ್ನಿಂದ ಅದಕ್ಕೆ ವಿರೋಧವಾಗಿ ಬರುವ
ರೆಂದು,
ಕರ್ತನು ಅನ್ನುತ್ತಾನೆ.
೫೪ ಬಾಬೆಲಿನಿಂದ ಕೂಗುವ ಶಬ್ದವು!
ಕಸ್ದೀಯರ ದೇಶದಿಂದ ಮಹಾ ಮುರಿಯೋಣವೂ,
೫೫ ಯಾಕಂದರೆ ಕರ್ತನು ಬಾಬೆಲನ್ನು ಸೂರೆ ಮಾಡಿದ್ದಾನೆ;
ಅದರೊಳಗಿಂದ ಮಹಾ ಶಬ್ದವನ್ನು, ತೆಗೆದು ಹಾಕಿದ್ದಾನೆ;



ಅದರ ತೆರೆಗಳು ಬಹಳ ನೀರುಗಳ ಹಾಗೆ ಘೂಂಕಿಸಿದವು;
ಅವುಗಳ ಶಬ್ದದ ಧ್ವನಿ ಹೊರಟಿತು.
೫೬ ಯಾಕಂದರೆ ಸೂರೆ ಮಾಡುವವನು ಅದರ ಮೇಲೆ,
ಬಾಬೆಲಿನ ಮೇಲೆಯೇ,
ಬಂದಿದ್ದಾನೆ;
ಅದರ ಪರಾಕ್ರಮಶಾಲಿಗಳು ಹಿಡಿಯಲ್ಪಟ್ಟಿದ್ದಾರೆ;
ಅದರ ಬಿಲ್ಲುಗಳು ಮುರಿಯಲ್ಪಟ್ಟವೆ;
ಯಾಕಂದರೆ ಪ್ರತಿದಂಡನೆಗಳ ದೇವರಾದ ಯೆಹೋವನು
ನಿಶ್ಚಯವಾಗಿ ಮುಯ್ಯಿಗೆ ಮುಯ್ಯಿ ತೀರಿಸುವನು.
೫೭ ಇದಲ್ಲದೆ ನಾನು ಅದರ ಪ್ರಧಾನಿಗಳನ್ನೂ, ಅದರ ಜ್ಞಾನಿಗಳನ್ನೂ,
ಅದರ ಅಧಿಪತಿಗಳನ್ನೂ ಅದರ ಅಧಿಕಾರಿಗಳನ್ನೂ, ಅದರ ಪರಾ
ಕ್ರಮಶಾಲಿಗಳನ್ನೂ,
ಮತ್ತರಾಗ ಮಾಡುತ್ತೇನೆ;
ಅವರು ನಿತ್ಯ ನಿದ್ರೆ ಪಾಡುವರು,
ಎಚ್ಚರವಾಗುವದಿಲ್ಲವೆಂದು
ಸೈನ್ಯಗಳ ಯೆಹೋವನೆಂಬ ಹೆಸರುಳ್ಳ ಅರಸನು ಅನ್ನುತ್ತಾನೆ.
೫೮ ಸೈನ್ಯಗಳ ಯೆಹೋವ ಹೇಳುವದೇನಂದರೆ—
ಬಾಬೆಲಿನ ಅಗಲವಾದ ಗೋಡೆಗಳು ಕುದ್ದವಾಗಿ ಕೆಡವಲ್ಪಡುವವು;
ಅದರ ಎತ್ತರವಾದ ಬಾಗಲುಗಳು ಬೆಂಕಿಯಿಂದ ಸುಡಲ್ಪಡುವವು;
ಜನರು ವ್ಯರ್ಥಕ್ಕಾಗಿಯೂ,
ಪ್ರಜೆಗಳು ಬೆಂಕಿಗಾಗಿಯೂ ಕಷ್ಟ ಪಟ್ಟು, ಆಯಾಸ ಪಡುವರು.
೫೯ ಪ್ರವಾದಿಯಾದ ಯೆರೆಮಿಾಯನು, ಮಾಸೇಯನ ಮಗನಾ
ದ ನೇರಿಯನ ಮಗನಾದ ಸೆರಾಯನಿಗೆ, ಅವನು ಯೆಹೂದದ
ಅರಸನಾದ ಚಿದ್ಕೀಯನ ಸಂಗಡ, ಇವನ ಆಳಿಕೆಯ ನಾಲ್ಕನೇ
ವರುಷದಲ್ಲಿ, ಬಾಬೆಲಿಗೆ ಹೋದಾಗ ಆಜ್ಞಾಪಿಸಿದ ವಾಕ್ಯವು. ಆ
೬೦ ಸೆರಾಯನು ಶಾಂತವಾದ ಪ್ರಧಾನಿಯಾಗಿದ್ದನು. ಹೀಗೆ ಯೆರೆ
ಮಿಾಯನು ಬಾಬೆಲಿನ ಮೇಲೆ ಬರುವ ಕೇಡನ್ನೆಲ್ಲಾ, ಬಾಬೆಲಿಗೆ
ವಿರೋಧವಾಗಿ ಬರೆದಿರುವ ಈ ವಾಕ್ಯಗಳನ್ನೆಲ್ಲಾ, ಒಂದು ಪುಸ್ತ
೬೧ ಕದಲ್ಲಿ ಬರೆದನು. ಮತ್ತು ಯೆರೆಮಿಾಯನು ಸೆರಾಯನಿಗೆ ಹೇ
೬೨ ಳಿದ್ದೇನಂದರೆ—ನೀನು ಬಾಬೆಲಿಗೆ ಬಂದು, ಈ ವಾಕ್ಯಗಳನ್ನೆಲ್ಲಾ
ನೋಡಿ ಓದುತ್ತಿರುವಾಗ, ಹೇಳ ತಕ್ಕದ್ದೇನಂದರೆ—ಓ ಯೆಹೋವ!
ಈ ಸ್ಥಳಕ್ಕೆ ವಿರೋಧವಾಗಿ, ಅದರಲ್ಲಿ ಮನುಷ್ಯರಾಗಲಿ ಮೃಗ
ಗಳಾಗಲಿ ನಿವಾಸಿಗಳು ಇರದ ಹಾಗೆಯೂ, ಅದು ನಿತ್ಯವಾಗಿ
ಹಾಳಾಗುವ ಹಾಗೆಯೂ, ಅದನ್ನು ಕಡಿದು ಬಿಡುತ್ತೇನೆಂದು ನೀನೇ
೬೩ ಮಾತಾಡಿದ್ದೀ. ಮತ್ತು ನೀನು ಈ ಪುಸ್ತಕವನ್ನು ಓದಿ ಅದ ಮೇ
ಲೆ, ಅದಕ್ಕೆ ಕಲ್ಲು ಕಟ್ಟಿ, ಅದನ್ನು ಫ್ರಾತಿನ ಮಧ್ಯದಲ್ಲಿ ಬಿಸಾ
ಟು, ಹೀಗೆ ಹೇಳು—ಈಪ್ರಕಾರ ಬಾಬೆಲು ಮುಣಿಗಿ ಹೋಗು
೬೪ ವದು, ಮತ್ತು ನಾನು ಅದರ ಮೇಲೆ ಶರುವ ಕೇಡಿನೊಳಗಿಂದ
ಏಳದು. ಮತ್ತು ಅವರು ಆಯಾಸ ಪಡುವರು.

ಇಲ್ಲಿತನಕ ಯೆರೆಮಿಾಯನ ವಾಕ್ಯಗಳು.

## ೫೨. ಸಂಧಿ.

೧ ಚಿದ್ಕೀಯನು ಆಳುವದಕ್ಕೆ ಆರಂಭಿಸಿದಾಗ ಇಪ್ಪತ್ತೊಂದು ವ
ರುಷದವನಾಗಿದ್ದನು; ಅವನು ಹನ್ನೊಂದು ವರುಷ ಯೆರೂಸಲೇ
ಮಿನಲ್ಲಿ ಆಳಿದನು; ಅವನ ತಾಯಿಯ ಹೆಸರು ಲಿಬ್ನಿವನಾದ ಯೆ
ರೆಮಿಾಯನ ಮಗಳಾದ ಹಮೂತಾಲ್. ಅವನು ಯೆಹೋಯಕೀ
೨ ಮನು ಮಾಡಿದ್ದೆಲ್ಲಾದರ ಪ್ರಕಾರ ಕರ್ತನ ದೃಷ್ಟಿಯಲ್ಲಿ ಕೆಟ್ಟದ್ದ
೩ ನ್ನು ಮಾಡಿದನು. ಯಾಕಂದರೆ ಕರ್ತನು ಯೆಹೂದದ ಮೇಲೆ
ಯೂ, ಯೆರೂಸಲೇಮಿನ ಮೇಲೆಯೂ, ಅವರನ್ನು ತನ್ನ ಸನ್ನಿ
ಧಿಯಿಂದ ತಳ್ಳಿ ಬಿಡುವ ಪರ್ಯಂತರ, ಮಾಡಿದ ಕೋಪದಿಂದ,
ಚಿದ್ಕೀಯನು ಬಾಬೆಲಿನ ಅರಸನಿಗೆ ವಿರೋಧವಾಗಿ ತಿರುಗಿ ಬಿದ್ದನು.
೪ ಮತ್ತು ಆದದ್ದೇನಂದರೆ—ಅವನು ಆಳಿದ ಒಂಭತ್ತನೇ ವರುಷ
ದಲ್ಲಿ, ಹತ್ತನೇ ತಿಂಗಳಿನ ಹತ್ತನೇ ದಿವಸದಲ್ಲಿ, ಬಾಬೆಲಿನ ಅರಸನಾ
ದ ನೆಬುಕದ್ನೆಜ್ಜರನು ತಾನು ತನ್ನ ಸಮಸ್ತ ಸೈನ್ಯದ ಸಂಗಡ
ಯೆರೂಸಲೇಮಿಗೆ ವಿರೋಧವಾಗಿ ಬಂದು, ಅದಕ್ಕೆ ವಿರೋಧವಾಗಿ
೫ ದಂಡಿಳಿದು, ಕೋಟೆಗಳನ್ನು ಸುತ್ತಲು ಕಟ್ಟಿದರು. ಈಪ್ರಕಾರ ಅ
ರಸನಾದ ಚಿದ್ಕೀಯನ ಹನ್ನೊಂದನೇ ವರುಷದ ಪರ್ಯಂತರ
ಪಟ್ಣಕ್ಕೆ ಮುತ್ತಿಗೆ ಆಯಿತು.
೬ ನಾಲ್ಕನೇ ತಿಂಗಳಲ್ಲಿ, ತಿಂಗಳಿನ ಒಂಭತ್ತನೇ ದಿವಸದಲ್ಲಿ, ದೇಶ
ಸ್ಥರಿಗೋಸ್ಕರ ಕೊಟ್ಟಿ ಇಲ್ಲದೆ, ಪಟ್ಣದಲ್ಲಿ ಬರವು ಕಠಿಣವಾಗಿತ್ತು.
೭ ಆಗ ಪಟ್ಣವು ಪೀಳ್ಳಲ್ಪಟ್ಟಿತು; ಮತ್ತು ಯುದ್ಧಸ್ಥರೆಲ್ಲರು ಓಡಿ ಹೋಗಿ
ಅರಸನ ತೋಟದ ಬಳಿಯಲ್ಲಿದ್ದ ಎರಡು ಗೋಡೆಗಳ ಮಧ್ಯವಾದ
ಬಾಗಲಿನ ಮಾರ್ಗವಾಗಿ ರಾತ್ರಿಯಲ್ಲಿ ಪಟ್ಣವನ್ನು ಬಿಟ್ಟು ಹೊರ
ಟು, ಬೈಲು ಪೀಮೆಯ ಮಾರ್ಗವಾಗಿ ಹೋದರು. ಆದರೆ ಕಸ್ದೀ
ಯರು ಪಟ್ಣದ ಸುತ್ತಲು ಇದ್ದರು. ಆಗ ಕಸ್ದೀಯರ ದಂಡು ಅರಸನ
೮ ನ್ನು ಹಿಂದಟ್ಟಿ ಚಿದ್ಕೀಯನನ್ನು ಯೆರಿಕೋವಿನ ಬೈಲಿನಲ್ಲಿ ಕಲತ
ರು; ಮತ್ತು ಅವನ ದಂಡೆಲ್ಲಾ ಅವನನ್ನು ಬಿಟ್ಟು ಚದರಿ ಹೋಯಿ
೯ ತು. ಆಗಲವರು ಅರಸನನ್ನು ಹಿಡಿದು, ಬಾಬೆಲಿನ ಅರಸನ ಬಳಿಗೆ
ಹಾಮಾತ್ ದೇಶದಲ್ಲಿರುವ ರಿಬ್ಲಕ್ಕೆ ತಕ್ಕೊಂಡು ಹೋದರು, ಅಲ್ಲಿ ಅ
೧೦ ವನು ಅವನ ವಿಷಯ ನ್ಯಾಯತೀರ್ಪು ಹೇಳಿದನು. ಮತ್ತು ಬಾ
ಬೆಲಿನ ಅರಸನು ಚಿದ್ಕೀಯನ ಮಕ್ಕಳನ್ನು ಅವನ ಕಣ್ಣುಗಳ
ಮುಂದೆ ಕೊಂದು ಹಾಕಿಸಿದನು; ಯೆಹೂದದ ಪ್ರಧಾನರೆಲ್ಲರನ್ನು
೧೧ ಸಹ ರಿಬ್ಲದಲ್ಲಿ ಕೊಂದು ಹಾಕಿಸಿದನು. ಇದಲ್ಲದೆ ಬಾಬೆಲಿನ ಅರಸ
ನು ಚಿದ್ಕೀಯನ ಕಣ್ಣುಗಳನ್ನು ಕಿತ್ತು ಹಾಕಿಸಿ, ಅವನನ್ನು ಹಿತ್ತಾ
ಳೆಯ ಸಂಕೋಲೆಗಳಿಂದ ಕಟ್ಟಿಸಿ, ಬಾಬೆಲಿಗೆ ವೈದು, ಅವನು ಸಾ
ಯುವ ದಿವಸದ ಪರ್ಯಂತರ ಕಾವಲಿ ಮನೆಯಲ್ಲಿ ಇಟ್ಟನು.
೧೨ ಮತ್ತು ಬಾಬೆಲಿನ ಅರಸನಾದ ನೆಬುಕದ್ನೆಜ್ಜರನ ಹತ್ತೊಂಭ
ತ್ತನೇ ವರುಷದ, ಐದನೇ ತಿಂಗಳಿನ, ಹತ್ತನೇ ದಿವಸದಲ್ಲಿ ಬಾಬೆ
ಲಿನ ಅರಸನ ಮುಂದೆ ನಿಂತ ಕಾವಲಿಯವರ ಅಧಿಪತಿಯಾದ
೧೩ ನೆಬುಜರದಾನನು ಯೆರೂಸಲೇಮಿಗೆ ಬಂದು, ಕರ್ತನ ಮನೆಯ
ನ್ನೂ ಅರಸನ ಮನೆಯನ್ನೂ ಯೆರೂಸಲೇಮಿನ ಎಲ್ಲಾ ಮನೆಗಳ
ನ್ನೂ ಸೊಡ್ಡವರ ಎಲ್ಲಾ ಮನೆಗಳನ್ನೂ ಬೆಂಕಿಯಿಂದ ಸುಟ್ಟು
೧೪ ಬಿಟ್ಟನು. ಮತ್ತು ಸುತ್ತಲಿರುವ ಯೆರೂಸಲೇಮಿನ ಗೋಡೆಗಳನ್ನೆ
ಲ್ಲಾ ಕಾವಲಿಯವರ ಅಧಿಪತಿಯ ಸಂಗಡ ಇದ್ದ ಕಸ್ದೀಯರ ದಂ
೧೫ ಡೆಲ್ಲಾ ಕೆಡವಿ ಹಾಕಿತು. ಮತ್ತು ಕಾವಲಿಯವರ ಅಧಿಪತಿಯಾದ
ನೆಬುಜರದಾನನು ಜನರಲ್ಲಿ ಬಡವರಾದ ಕೆಲವರನ್ನೂ ಪಟ್ಣದಲ್ಲಿ
ಉಳಿದ ಮಿಕ್ಕಾದ ಜನರನ್ನೂ ಬಾಬೆಲಿನ ಅರಸನ ಕಡೆಗೆ ಬಿದ್ದವ
ರನ್ನೂ ಸಮೂಹದಲ್ಲಿ ಮಿಕ್ಕಾದವರನ್ನೂ ತೆಕೆಯಾಗಿ ವೈದನು.
೧೬ ಆದರೆ ಕಾವಲಿಯವರ ಅಧಿಪತಿಯಾದ ನೆಬುಜರದಾನನು ದೇಶದ

ಬಹವರಲ್ಲಿ ಕೆಲವರನ್ನು ದ್ರಾಕ್ಷೆ ತೋಟ ಕಾಯುವವರಾಗಿಯೂ,
೧೭ ಬೇಸಾಯ ಮಾಡುವವರಾಗಿಯೂ, ಬಿಟ್ಟನು. ಇದಲ್ಲದೆ ಕರ್ತನ
ಮನೆಯಲ್ಲಿದ್ದ ಹಿತ್ತಾಳೆಯ ಸ್ತಂಭಗಳನ್ನೂ, ಗದ್ದಿಗೆಗಳನ್ನೂ,
ಕರ್ತನ ಮನೆಯಲ್ಲಿದ್ದ ಹಿತ್ತಾಳೆಯ ಸಮುದ್ರವನ್ನೂ ಕಸ್ದೀಯ
ರು ಒಡದು, ಅವುಗಳ ಹಿತ್ತಾಳೆಯನ್ನೆಲ್ಲಾ ಬಾಬೆಲಿಗೆ ತಕ್ಕೊಂಡು
೧೮ ಹೋದರು. ಮತ್ತು ಗುಡಾಣಗಳನ್ನೂ, ಸಲಿಕೆಗಳನ್ನೂ, ಕತ್ತರಿ
ಗಳನ್ನೂ, ತಂಬಿಗೆಗಳನ್ನೂ, ಸಾಟುಗಳನ್ನೂ, ಸೇವೆಗೆ ಸಮ್ತುಂ
ಧವಾದ ಎಲ್ಲಾ ಹಿತ್ತಾಳೆಯ ಸಾಮಾನುಗಳನ್ನೂ, ತಕ್ಕೊಂಡರು.
೧೯ ಇದಲ್ಲದೆ ತಬಕುಗಳನ್ನೂ ಅಗ್ನಿಪಾತ್ರೆಗಳನ್ನೂ ತಂಬಿಗೆಗಳ
ನ್ನೂ ಗುಡಾಣಗಳನ್ನೂದೀಪಸ್ತಂಭಗಳನ್ನೂ ಸಾಟುಗಳನ್ನೂ
ಬಟ್ಟಲುಗಳನ್ನೂ ಭಂಗಾರದ್ದಾದರೆ, ಅದರ ಭಂಗಾರವನ್ನೂ, ಬೆಳ್ಳಿ
ಯದ್ದಾದರೆ, ಅದರ ಬೆಳ್ಳಿಯನ್ನೂ ಕಾವಲಿಯವರ ಅಧಿಪತಿ
೨೦ ತಕ್ಕೊಂಡನು. ಅರಸನಾದ ಸೊಲೊಮೋನನು ಕರ್ತನ ಮನೆಯ
ಲ್ಲಿ ಮಾಡಿಸಿದ ಎರಡು ಸ್ತಂಭಗಳನ್ನೂ, ಒಂದು ಸಮುದ್ರವನ್ನೂ,
ಗದ್ದಿಗೆಗಳ ಕೆಳಗಿದ್ದ ಹನ್ನೆರಡು ಹಿತ್ತಾಳೆಯ ಎತ್ತುಗಳನ್ನೂ ತ
ಕ್ಕೊಂಡನು; ಈ ಎಲ್ಲಾ ಸಾಮಾನುಗಳ ಹಿತ್ತಾಳೆಗೆ ತೂಕವಿಲ್ಲ.
೨೧ ಸ್ತಂಭಗಳ ವಿಷಯ, ಒಂದು ಸ್ತಂಭದ ಉದ್ದವು ಹದಿನೆಂಟು ಮೊ
ಳವಾಗಿತ್ತು, ಹನ್ನೆರಡು ಮೊಳದ ಸರಿಗೆ ಅದನ್ನು ಸುತ್ತಿಕೊಂಡಿತು;
೨೨ ಅದರ ಮಂದ ನಾಲ್ಕು ಬೆರಳು; ಅದು ಟೊಳ್ಳಾಗಿತ್ತು. ಅದರ
ಮೇಲೆ ಹಿತ್ತಾಳೆಯ ಕಲಸ ಇತ್ತು; ಒಂದು ಕಲಸದ ಎತ್ತರವು ಐದು
ಮೊಳವಾಗಿತ್ತು; ಮತ್ತು ಕಲಸಗಳ ಮೇಲೆ ಸುತ್ತಲಾಗಿ ಜಾಲರು
ಕೆಲಸವೂ ದಾಳಿಂಬರಗಳೂ ಇದ್ದವು, ಎಲ್ಲಾ ಹಿತ್ತಾಳೆಯೇ; ಎರ
೨೩ ಡನೇ ಸ್ತಂಭವೂ ದಾಳಿಂಬರಗಳೂ ಅದರಂತೆಯೇ. ಒಂದು ಕಡೆ
ಗೆ ತೊಂಭತ್ತಾರು ದಾಳಿಂಬರಗಳೂ ಇದ್ದವು; ಜಾಲರು ಕೆಲಸದ
೨೪ ಮೇಲೆ ಸುತ್ತಲಾಗಿದ್ದ ದಾಳಿಂಬರಗಳೆಲ್ಲಾ ನೂರು. ಮತ್ತು ಕಾವ
ಲಿಯವರ ಅಧಿಪತಿಯು ಪ್ರಧಾನ ಯಾಜಕನಾದ ಸೆರಾಯನ
ನ್ನೂ, ಎರಡನೇ ಯಾಜಕನಾದ ಜೆಪನೀಯನನ್ನೂ ಮೂವರು
೨೫ ದ್ವಾರಪಾಲಕರನ್ನೂ ತಕ್ಕೊಂಡನು. ಮತ್ತು ಯುದ್ಧಸ್ತರ ಮೇ
ಲೆ ನೇಮಿಸಲ್ಪಟ್ಟಿದ್ದ ಒಬ್ಬ ಪೊಜ್ಜೆಯವನನ್ನೂ, ಅರಸನ ಸನ್ನಿ
ಧಾನದಲ್ಲಿ ನಿಂತವರೊಳಗೆ ಪಟ್ಟಣದಲ್ಲಿ ಸಿಕ್ಕಿದ ಏಳು ಮನುಷ್ಯರ
ನ್ನೂ, ದೇಶಸ್ಥರನ್ನು ದಂಡಿಸುವರ ಕೆಲಸದಲ್ಲಿ ಸೇರಿಸಿದ ಸೈನ್ಯಾ
ಧಿಪತಿಯ ಗುಮಾಸ್ತನನ್ನೂ, ಪಟ್ಟಿದ ಮಧ್ಯದಲ್ಲಿ ಸಿಕ್ಕಿದ ದೇ
ಶಸ್ಥರಲ್ಲಿ ಅರವತ್ತು ಮನುಷ್ಯರನ್ನೂ, ಪಟ್ಟಿಯೊಳಗಿಂದ ತಕ್ಕೊಂ
೨೬ ಡನು. ಇವರನ್ನು ಕಾವಲಿಯವರ ಅಧಿಪತಿಯಾದ ನೆಬುಜರದಾ
ನನು ತಕ್ಕೊಂಡು, ಬಾಬೆಲಿನ ಅರಸನ ಬಳಿಗೆ ರಿಬ್ಲಾಕ್ಕೆ ಕೈದನು.
೨೭ ಆಗ ಬಾಬೆಲಿನ ಅರಸನು ಅವರನ್ನು ಹೊಡಿಸಿ, ಹಾಮಾತ್ ದೇ
ಶದ ರಿಬ್ಲದಲ್ಲಿ ಕೊಂದು ಹಾಕಿಸಿದನು. ಈಪ್ರಕಾರ ಯೆಹೂದನು
ತನ್ನ ದೇಶದಿಂದ ಕೆಕೆಯಾಗಿ ವೈಯ್ಯಲ್ಪಟ್ಟನು.

೨೮ ನೆಬುಕದ್ನೆಚ್ಚರನು ಕೆಕೆಯಾಗಿ ವೈದ ಜನರು ಇವರೇ—ಏಳನೇವ
ರುಷದಲ್ಲಿ, ಸೂರುರುಸಾವಿರದ ಇಪ್ಪತ್ತುಮೂರು ಯೆಹೂದ್ಯರು. ನೆ
೨೯ ಬುಕದ್ನೆಚ್ಚರನ ಹದಿನೆಂಟನೇ ವರುಷದಲ್ಲಿ, ಅವನು ಯೆರೂಸಲೇಮಿ
ನಿಂದ ಎಂಟುನೂರು ಮೂವತ್ತೆರಡು ಜನರನ್ನು ವೈದನು. ನೆಬುಕದ್ನೆ
೩೦ ಚರನ ಇಪ್ಪತ್ತು ಮೂರನೇ ವರುಷದಲ್ಲಿ, ಕಾವಲಿಯವರ ಅಧಿಪತಿ
ಯಾದ ನೆಬುಜರದಾನನು ಏಳುನೂರು ನಾಲ್ವತ್ತೈದು ಮಂದಿ ಯೆ
ಹೂದ್ಯರನ್ನು ವೈದನು. ಜನಕೆಲ್ಲರು ನಾಲ್ಕುಸಾವಿರದ ಆರುನೂರು.

೩೧ ಮತ್ತು ಯೆಹೂದದ ಅರಸನಾದ ಯೆಹೋಯಕೀನನ ಕೆಕೆ
ಯ ಮೂವತ್ತೇಳನೇ ವರುಷದಲ್ಲಿ, ಹನ್ನೆರಡನೇತಿಂಗಳಿನ ಇಪ್ಪ
ತ್ತೈದನೇ ದಿವಸದಲ್ಲಿ, ಆದದ್ದೇನಂದರೆ—ಬಾಬೆಲಿನ ಅರಸನಾದ
ಏವಿಲ್ಮೆರೋದಕನು ತನ್ನ ಆಳಿಕೆಯ ಮೊದಲನೇವರುಷದಲ್ಲಿ,
ಯೆಹೂದದ ಅರಸನಾದ ಯೆಹೋಯಕೀನನ ತಲೆಯನ್ನು ಎತ್ತಿ,
ಅವನನ್ನು ಕೆಕೆಮನೆಯೊಳಗಿಂದ ಹೊರಗೆ ತರಿಸಿ, ಅವನ ಸಂಗತ
೩೨ ಒಳ್ಳೇಯವುಗಳನ್ನು ಮಾತಾಡಿ, ಅವನ ಸಿಂಹಾಸನವನ್ನು ತನ್ನ
ಸಂಗತ ಬಾಬೆಲಿನಲ್ಲಿದ್ದ ಅರಸರ ಸಿಂಹಾಸನಗಳ ಮೇಲೆ ಇರಿಸಿ,
೩೩ ಅವನ ಕೆಕೆಮನೆಯ ವಸ್ತ್ರಗಳನ್ನು ಬದಲಾಯಿಸಿದನು. ಆಗಲವ
ನು ಬದುಕಿದ ದಿನಗಳೆಲ್ಲಾ ಯಾವಾಗಲು ಅವನ ಮುಂದೆ ಊಟ
೩೪ ಮಾಡುತ್ತಿದ್ದನು. ಅವನ ಆಹಾರದ ವಿಷಯವೇನಂದರೆ—ಅವನು
ಬದುಕಿದ ದಿನಗಳೆಲ್ಲಾ, ಅವನು ಸಾಯುವ ದಿನದ ಪರ್ಯಂತರ,
ಅವನಿಗೆ ದಿನದಿನಕ್ಕೆ ಶಕ್ಕ ಆಹಾರವು ಯಾವಾಗಲು ಬಾಬೆಲಿನ
ಅರಸನ ಕಡೆಯಿಂದ ಕೊಡಲ್ಪಡುತ್ತಿತ್ತು.

---

# THE LAMENTATIONS OF JEREMIAH.

## ಯೆರಿಮಿಯನ ಗೋಳಾಟಗಳು.

### ೧. ಸಂಧಿ.

೧ ಅಯ್ಯೋ! ಜನ ಭರಿತವಾಗಿದ್ದ ಪಟ್ಟಣವು ಹ್ಯಾಗೆ ಒಂಟಿಯಾ
ಗಿ ಕೂತ್ರುತ್ತದೆ!
ಜನಾಂಗಗಳಲ್ಲಿ ದೊಡ್ಡದು ವಿಧವೆಯ ಹಾಗಾಯಿತು!
ಸೀಮೆಗಳಲ್ಲಿ ಪ್ರಧಾನವಾದದ್ದು ಕಪ್ಪ ಕೊಡುವಂಥಾದ್ದಾಯಿತು!
೨ ರಾತ್ರಿಯಲ್ಲಿ ಬಹಳವಾಗಿ ಅಳುತ್ತದೆ; ಅದರ ಕಣ್ಣೀರು ಅದರ
ಕೆನ್ನೆಗಳ ಮೇಲೆ ಅದೆ;
ಅದರ ಪ್ರೀಯರೆಲ್ಲರಲ್ಲಿ ಅದನ್ನು ಆದರಿಸುವವನು ಒಬ್ಬನೂ ಇಲ್ಲ;
ಅದರ ಸ್ನೇಹಿತರೆಲ್ಲರು ಅದಕ್ಕೆ ವಂಚನೆ ಮಾಡಿ, ಅದಕ್ಕೆ ಶತ್ರು
ಗಳಾದರು.
೩ ಯೆಹೂದವು ಶಿಕ್ಷೆಯಿಂದಲೂ ಬಹಳವಾದ ದಾಸತ್ವದಿಂದಲೂ
ಕೆಕೆಯಾಗಿ ಹೋಯಿತು;
ಜನಾಂಗಗಳೊಳಗೆ ವಾಸ ಮಾಡಿ ವಿಶ್ರಾಂತಿಯನ್ನು ಕಾಣದು;
ಅದನ್ನು ಹಿಂದಟ್ಟುವವರೆಲ್ಲರು
ಇಕ್ಕಟ್ಟುಗಳ ಮಧ್ಯದಲ್ಲಿ ಅದನ್ನು ಹಿಡಿದಿದ್ದಾರೆ.
೪ ಚಿಯೋನಿನ ಮಾರ್ಗಗಳು, ಹಬ್ಬುಗಳಿಗೆ ಯಾರು ಬಾರದ ಕಾ
ರಣ, ದುಖಿಸುತ್ತವೆ;
ಅದರ ದ್ವಾರಗಳೆಲ್ಲಾ ಏಕಾಂತವಾಗಿವೆ; ಅದರ ಯಾಜಕರು ನಿ
ಟ್ಟುಸುರಿಡುತ್ತಾರೆ;
ಅದರ ಕನ್ನಿಕೆಗಳು ಚಿಂತೆಯಲ್ಲಿ ಇದ್ದಾರೆ, ಅದಕ್ಕೆ ಕಹಿಯಾ
ಯಿತು.
೫ ಅದರ ವೈರಿಗಳು ತಲೆಯಾದರು; ಅದರ ಶತ್ರುಗಳು ಬಾಳುತ್ತಾರೆ;
ಯಾಕಂದರೆ ಕರ್ತನು ಅದರ ಅಕ್ರಮಗಳ ಬಾಹುಳ್ಯದ ನಿಮಿತ್ತ
ಅದಕ್ಕೆ ದುಖ್ಖವನ್ನುಂಟು ಮಾಡಿದ್ದಾನೆ;
ಅದರ ಸುಕ್ಕುಳು ಶತ್ರುವಿನ ಮುಂದೆ ಕೆಕೆಗೆ ಹೋಗಿದ್ದಾರೆ.
೬ ಇದಲ್ಲದೆ ಚಿಯೋನಿನ ಮಗಳನ್ನು ಅವಳ ಸೌಂದರ್ಯವೆಲ್ಲಾ
ಬಿಟ್ಟು ಹೋಯಿತು;
ಅವಳ ಪ್ರಧಾನರು ಮೇವು ಕಾಣದ ಜಿಂಕೆಗಳ ಹಾಗಾದರು;
ಅವರು ಹಿಂದಟ್ಟುವವನ ಮುಂದೆ ತ್ರಾಣವಿಲ್ಲದೆ ಹೋಗಿದ್ದಾರೆ.
೭ ಯೆರೂಸಲೇಮು ಅದರ ಕಷ್ಟದ ಹಿಂಸೆಯ ದಿವಸಗಳಲ್ಲಿ,
ಪೂರ್ವದಿನಗಳಲ್ಲಿ ತನಗಿದ್ದ ಎಲ್ಲಾ ರಮ್ಯವಾದವುಗಳನ್ನು ಜ್ಞಾಪ
ಕ ಮಾಡಿ ಕೊಳ್ಳುತ್ತದೆ;
ಅಷ್ಟುಕೊಳ್ಳಗೆ ಅದರ ಜನರು ವೈರಿಯ ಕೈಯಲ್ಲಿ ಬಿದ್ದರು; ಅದ
ಕ್ಕೆ ಸಹಾಯಕನು ಯಾರು ಇಲ್ಲ;
ವೈರಿಗಳು ಅದನ್ನು ನೋಡಿ ಅದರ ಸಬ್ಬತುಗಳ ವಿಷಯ
ನಕ್ಕರು.
೮ ಯೆರೂಸಲೇಮು ಬಹಳವಾಗಿ ಪಾಪ ಮಾಡಿ ಅದೆ; ಆದದರಿಂದ
ಅದಕ್ಕೆ ತಿರುಗಾಟವಾಯಿತು;
ಅದನ್ನು ಸನ್ಮಾನಿಸಿದವರೆಲ್ಲರು, ಅದರ ನಾಚಿಕೆಯನ್ನು ನೋ
ಡುವದರಿಂದ, ಅದನ್ನು ಅಸಡ್ಡೆ ಮಾಡುತ್ತಾರೆ;
ಹೌದು, ನಿಟ್ಟುಸುರಿಟ್ಟು ಹಿಂದಕ್ಕೆ ತಿರುಗುತ್ತದೆ.
೯ ಅದರ ಅಶುದ್ಧತ್ವವು ಅದರ ಕರಗುಗಳಲ್ಲಿ ಇದೆ;
ಅದು ತನ್ನ ಅಂತ್ಯವನ್ನು ಜ್ಞಾಪಕ ಮಾಡಿ ಕೊಳ್ಳಲಿಲ್ಲ;
ಆದದರಿಂದ ಆಶ್ಚರ್ಯವಾಗಿ ಇಳಿದು ಹೋಯಿತು; ಅದನ್ನು
ಆದರಿಸುವವನೊಬ್ಬನೂ ಇಲ್ಲ;
ಕರ್ತನೇ, ನನ್ನ ಕಷ್ಟವನ್ನು ನೋಡು; ಯಾಕಂದರೆ ಶತ್ರು
ಹೆಚ್ಚಳ ಪಡುತ್ತಾನೆ.
೧೦ ವೈರಿಯು ಅದರ ಎಲ್ಲಾ ರಮ್ಯವಾದವುಗಳ ಮೇಲೆ ತನ್ನ ಕೈ ಚಾ
ಚಿದ್ದಾನೆ;
ಹೌದು, ನಿನ್ನ ಸಭೆಯಲ್ಲಿ ಕೇರ ಬಾರದೆಂದು ನೀನು ಆಜ್ಞಾಪಿಸಿದ
ಜನಾಂಗಗಳು,
ತನ್ನ ಪರಿಶುದ್ಧ ಸ್ಥಳದಲ್ಲಿ ಕೇರಿದ್ದಾರೆಂದು ಅದು ನೋಡಿ ಅದೆ.
೧೧ ಅದರ ಜನರೆಲ್ಲರು ನಿಟ್ಟುಸುರಿಡುತ್ತಾರೆ; ರೊಟ್ಟಿ ಹುಡುಕುತ್ತಾರೆ;
ಅವರು ತಮ್ಮ ರಮ್ಯವಾದವುಗಳನ್ನು ಪ್ರಾಣ ತಪ್ಪಿಸಿ ಕೊಳ್ಳ
ಬೇಕಾಗಿ ಆಹಾರಕ್ಕೋಸ್ಕರ ಕೊಟ್ಟಿದ್ದಾರೆ;
ಕರ್ತನೇ! ನೋಡು; ಮನಸ್ಸಿಡು; ಯಾಕಂದರೆ ಭ್ರಷ್ಟನಾದೆನು.
೧೨ ದಾರಿಯಲ್ಲಿ ಹಾದು ಹೋಗುವವರೆಲ್ಲರೇ! ಇದು ನಿಮಗೆ ಏನಿಲ್ಲ
ವೋ!
ನನಗೆ ಮಾಡಿದಂಥ, ಕರ್ತನು ನನಗೆ ತನ್ನ ಕೋಪದ ಉರಿಯ
ದಿವಸದಲ್ಲಿ ದುಖ್ಖವನ್ನುಂಟು ಮಾಡಿದಂಥ,
ವ್ಯಸನದ ಹಾಗೆ ವ್ಯಸನ ಉಂಟೇ! ಎಂದು ಕಣ್ಣಿಟ್ಟು ನೋಡಿರಿ.
೧೩ ಉನ್ನತದಿಂದ ಅವನು ನನ್ನ ಎಲುವುಗಳಿಗೆ ಬೆಂಕಿ ಕಳುಹಿಸಿದ್ದಾ
ನೆ; ಅದು ಅವುಗಳನ್ನು ವಶ ಮಾಡಿ ಕೊಂಡಿದೆ;
ನನ್ನ ಕಾಲುಗಳಿಗೆ ಬಲೆಯನ್ನು ಬಿಡ್ಡಿದ್ದಾನೆ; ನನ್ನನ್ನು ತಿರುಗಿಸಿ
ಬಿಟ್ಟಿದ್ದಾನೆ;
ನನ್ನನ್ನು ದಿನವೆಲ್ಲಾ ಹಾಳಾಗಿಯೂ ನಿತ್ರಾಣವಾಗಿಯೂ ಮಾ
ಡಿದ್ದಾನೆ.
೧೪ ನನ್ನ ದ್ರೋಹಗಳ ನೊಗವು ಅವನ ಕೈಯಿಂದ ಕಟ್ಟಲ್ಪಟ್ಟಿದೆ;
ಅವು ಹೆಣೆಯಲ್ಪಟ್ಟಿವೆ;
ನನ್ನ ಕುತ್ತಿಗೆಯ ಮೇಲೆ ಏರುತ್ತವೆ; ಅವನು ನನ್ನ ಬಲವನ್ನು
ಕುಂದಿ ಹೋಗ ಮಾಡಿದ್ದಾನೆ;
ನಾನು ತಪ್ಪಿಸಿ ಕೊಂಡು ಏಳ್ಳ ಕೂಡದಂಥವರ ಕೈಗಳಲ್ಲಿ ಕರ್ತ
ನು ನನ್ನನ್ನು ಒಪ್ಪಿಸಿದ್ದಾನೆ,
೧೫ ಕರ್ತನು ನನ್ನ ಮಧ್ಯದಲ್ಲಿ ನನ್ನ ಪರಾಕ್ರಮ ಶಾಲಿಗಳನ್ನೆಲ್ಲಾ
ತುಳಿದು ಬಿಟ್ಟಿದ್ದಾನೆ;
ನನ್ನ ಯೌವನಸ್ಥರನ್ನು ಜಜ್ಜುವದಕ್ಕೆ ನನಗೆ ವಿರೋಧವಾಗಿ
ಸಭೆ ಕರೆದಿದ್ದಾನೆ;
ಕರ್ತನು ಯೆಹೂದದ ಮಗಳಾದ ಕನ್ನಿಕೆಯನ್ನು ದ್ರಾಕ್ಷೆ ಆಲೆ
ಯಲ್ಲಿ ತುಳಿದಿದ್ದಾನೆ.
೧೬ ಇವುಗಳ ನಿಮಿತ್ತ ನಾನು ಅಳುತ್ತೇನೆ; ನನ್ನ ಕಣ್ಣು, ನನ್ನ ಕಣ್ಣು,
ನೀರು ಸುರಿಸುತ್ತದೆ;
ಯಾಕಂದರೆ ನನ್ನನ್ನು ಆದರಿಸಿಸುವವನೂ, ತಿರಿಗಿ ಪ್ರಾಣ
ಕೊಡುವವನೂ, ನನಗೆ ದೂರವಾಗಿದ್ದಾನೆ;
ಶತ್ರು ಪ್ರಬಲವಾದದರಿಂದ ನನ್ನ ಮಕ್ಕಳು ಹಾಳಾದರು.
೧೭ ಚಿಯೋನು ತನ್ನ ಕೈಗಳನ್ನು ಚಾಚುತ್ತದೆ; ಅದನ್ನು ಆದರಿಸು
ವವನೊಬ್ಬನೂ ಇಲ್ಲ;
ಕರ್ತನು ಯಾಕೋಬನ ವಿಷಯ ಅವನ ವೈರಿಗಳು ಅವನ ಸು
ತ್ತಲಿರ ಬೇಕೆಂದು ಆಜ್ಞಾಪಿಸಿದ್ದಾನೆ;
ಯೆರೂಸಲೇಮು ಅವರ ಮಧ್ಯದಲ್ಲಿ ಮುಟ್ಟಾದ ಸ್ತ್ರೀಯ್ಯ ಹಾ
ಗಾಯಿತು,
೧೮ ಯೆಹೋವ ನೀತಿವಂತನೇ; ಯಾಕಂದರೆ, ನಾನು ಅವನ ಆಜ್ಞೆಗೆ
ವಿರೋಧವಾಗಿ ದ್ರೋಹ ಮಾಡಿದ್ದೇನೆ;
ಜನರೆಲ್ಲರೇ! ಕೇಳಿರಿ, ನನ್ನ ವ್ಯಸನವನ್ನು ನೋಡಿರಿ;
ನನ್ನ ಕನ್ನಿಕೆಗಳೂ ನನ್ನ ಯೌವನಸ್ಥರೂ ಕೆಕೆಗೆ ಹೋಗಿ
ದ್ದಾರೆ.
೧೯ ನನ್ನ ಪ್ರಿಯರನ್ನು ಕರೆದೆನು, ಆದರೆ ನನಗೆ ಮೋಸ ಮಾಡಿ
ದರು;
ನನ್ನ ಯಾಜಕರೂ, ನನ್ನ ಹಿರಿಯರೂ, ತಮ್ಮ ಪ್ರಾಣ ತಪ್ಪಿಸಿ
ಕೊಳ್ಳುವದಕ್ಕೆ ರೊಟ್ಟಿಯನ್ನು ಹುಡುಕುತ್ತಾ,
ಪಟ್ಟಣದಲ್ಲಿ ತೀರಿ ಹೋದರು.
೨೦ ಓ ಕರ್ತನೇ! ನೋಡು; ಯಾಕಂದರೆ, ನನಗೆ ಸಂಕಟವಾಯಿತು;
ನನ್ನ ಕರುಳುಗಳು ಕಳವಳ ಪಡುತ್ತವೆ;
ನನ್ನ ಹೃದಯವು ನನ್ನೊಳಗೆ ತಿರಿಗಿ ಕೊಂಡಿದೆ; ಯಾಕಂದರೆ,
ಬಹಳ ದ್ರೋಹ ಮಾಡಿದ್ದೇನೆ;
ಹೊರಗೆ ಕತ್ತಿಯು ಮಕ್ಕಳಿಲ್ಲವಾಗ ಮಾಡುತ್ತದೆ, ಮನೆಯಲ್ಲಿ
ಮರಣವೇ.
೨೧ ನಾನು ನಿಟ್ಟುಸುರಿಡುತ್ತೇನೆಂದು ನನ್ನನ್ನು ಆದರಿಸುವದಕ್ಕೆ ಒಬ್ಬ
ನು ಇಲ್ಲವೆಂದು, ಕೇಳಿದ್ದಾರೆ;
ನನ್ನ ಶತ್ರುಗಳೆಲ್ಲರು ನನ್ನ ಆಪತ್ತನ್ನು ಕುರಿತು ಕೇಳಿದ್ದಾರೆ;
ನೀನು ಅದನ್ನು ಮಾಡಿದದರಿಂದ ಸಂತೋಷ ಪಡುತ್ತಾರೆ;
ನೀನು ಸಾರಿದ ದಿವಸವನ್ನು ತರುವಿ; ಆಗಲವರು ನನ್ನ ಹಾಗೆಯೇ
ಇರುವರು.

೨೨ ಅವರ ಕೆಟ್ಟತನವೆಲ್ಲಾ ನಿನ್ನ ಮುಂದೆ ಬರಲಿ;
ನೀನು ನನಗೆ ನನ್ನ ಎಲ್ಲಾ ದ್ರೋಹಗಳ ನಿಮಿತ್ತ ಮಾಡಿದ ಪ್ರಕಾರ ಅವರಿಗೆ ಮಾಡು;
ಯಾಕಂದರೆ, ನನ್ನ ನಿಟ್ಟುಸುರುಗಳು ಬಹಳವಾಗಿವೆ, ನನ್ನ ಹೃದಯವು ಕುಂಗಿ ಹೋಗಿದೆ.

## ೨. ಸಂಧಿ.

೧ ಅಯ್ಯೋ! ಕರ್ತನು ಹ್ಯಾಗೆ ಚಿಯೋನಿನ ಮಗಳನ್ನು ತನ್ನ ಕೋಪದಲ್ಲಿ ಮೇಘದಿಂದ ಮುಚ್ಚಿದ್ದಾನೆ!
ಹ್ಯಾಗೆ ಇಸ್ರಯೇಲಿನ ಸೌಂದರ್ಯವನ್ನು ಆಕಾಶದಿಂದ ಭೂಮಿಗೆ ಹಾಕಿ ಬಿಟ್ಟಿದ್ದಾನೆ!
ಹ್ಯಾಗೆ ತನ್ನ ಕೋಪದ ದಿವಸದಲ್ಲಿ ತನ್ನ ಪಾದಪೀಠವನ್ನು ಜ್ಞಾಪಕ ಮಾಡದೆ ಹೋಗಿದ್ದಾನೆ!
೨ ಕರ್ತನು ಯಾಕೋಬನ ನಿವಾಸಿಗಳನ್ನೆಲ್ಲಾ ಕನಿಕರಿಸದೆ ನುಂಗಿದ್ದಾನೆ;
ಯೆಹೂದದ ಮಗಳಿನ ಭದ್ರಸ್ಥಾನಗಳನ್ನು ತನ್ನ ಉಗ್ರದ ದಿವಸದಲ್ಲಿ ಕೆಡವಿ ಬಿಟ್ಟಿದ್ದಾನೆ;
ನೆಲಗತ ಮಾಡಿದ್ದಾನೆ; ರಾಜ್ಯವನ್ನೂ ಅದರ ಪ್ರಧಾನರನ್ನೂ ಅಪವಿತ್ರ ಮಾಡಿದ್ದಾನೆ.
3 ಅವನು ತನ್ನ ಕೋಪದ ಉರಿಯಲ್ಲಿ ಇಸ್ರಯೇಲಿನ ಕೊಂಬನ್ನೆಲ್ಲಾ ಕೊಯಿದು ಬಿಟ್ಟಿದ್ದಾನೆ;
ಶತ್ರುವಿನ ಮುಂದೆ ತನ್ನ ಬಲಕೈಯನ್ನು ಹಿಂತೆಗೆದಿದ್ದಾನೆ;
ಸುತ್ತಲು ದಹಿಸುವ ಪ್ರಜ್ವಲಿಸುವ ಬೆಂಕಿಯ ಹಾಗೆ ಯಾಕೋಬನಿಗೆ ವಿರೋಧವಾಗಿ ಉರಿದಿದ್ದಾನೆ.
೪ ಶತ್ರುವಿನ ಹಾಗೆ ತನ್ನ ಬಿಲ್ಲನ್ನು ಬೊಗ್ಗಿಸಿದ್ದಾನೆ; ವೈರಿಯ ಹಾಗೆ ತನ್ನ ಬಲಗೈಯನ್ನು ಸ್ಥಿರ ಪಡಿಸಿ, ಕಣ್ಣಿಗೆ ರಮ್ಯವಾದವುಗಳನ್ನೆಲ್ಲಾ ಕೊಂದು ಹಾಕಿದ್ದಾನೆ;
ಚಿಯೋನ್ ಮಗಳಿನ ಗುಡಾರಗಳಲ್ಲಿ ಬೆಂಕಿಯಂತೆ ತನ್ನ ಕೋಪವನ್ನು ಹೊಯಿದಿದ್ದಾನೆ.
ಕರ್ತನು ಶತ್ರುವಿನ ಹಾಗಾದನು; ಇಸ್ರಯೇಲನ್ನು ನುಂಗಿ ಬಿಟ್ಟಿದ್ದಾನೆ;
೫ ಅದರ ಅರಮನೆಗಳನ್ನೆಲ್ಲಾ ನುಂಗಿ ಬಿಟ್ಟಿದ್ದಾನೆ; ಅದರ ಭದ್ರಸ್ಥಾನಗಳನ್ನು ನಾಶ ಮಾಡಿದ್ದಾನೆ;
ಯೆಹೂದದ ಮಗಳ್ಳಿ ದುಃಖವನ್ನೂ ವ್ಯಸನವನ್ನೂ ಹೆಚ್ಚಿಸಿದ್ದಾನೆ.
೬ ತನ್ನ ಬೇಲಿಯನ್ನು, ತೋಟದ್ದರ ಹಾಗೆ, ಬಲಾತ್ಕಾರವಾಗಿ ತೆಗೆದು ಹಾಕಿದ್ದಾನೆ;
ತನ್ನ ಸಭಾಸ್ಥಾನವನ್ನು ನಾಶ ಮಾಡಿದ್ದಾನೆ;
ಕರ್ತನು ಚಿಯೋನಿನಲ್ಲಿ ಹಬ್ಬವನ್ನೂ ಸಬ್ಬತನ್ನೂ ಮರೆತು ಬಿಡಲ್ಪಡ ಮಾಡಿದ್ದಾನೆ;
ತನ್ನ ಕೋಪದ ಉಗ್ರದಲ್ಲಿ ಅರಸನನ್ನೂ ಯಾಜಕನನ್ನೂ ಅಸಡ್ಡೆ ಮಾಡಿದ್ದಾನೆ.
೭ ಕರ್ತನು ತನ್ನ ಬಲಿಪೀಠವನ್ನು ತಳ್ಳಿ ಬಿಟ್ಟಿದ್ದಾನೆ, ತನ್ನ ಪರಿಶುದ್ಧಸ್ಥಳವನ್ನು ಅಸಹ್ಯ ಮಾಡಿದ್ದಾನೆ;
ಅದರ ಅರಮನೆಗಳ ಗೋಪೆಗಳನ್ನು ಶತ್ರುವಿನ ಕೈಯಲ್ಲಿ ಒಪ್ಪಿಸಿ ಕೊಟ್ಟಿದ್ದಾನೆ.
ಅವರು ಕರ್ತನ ಮನೆಯಲ್ಲಿ, ಹಬ್ಬದ ದಿವಸದಲ್ಲಿ ಆದ ಹಾಗೆ, ಕಬ್ಬ ಮಾಡಿದ್ದಾರೆ.
೮ ಕರ್ತನು ಚಿಯೋನ್ ಮಗಳಿನ ಗೋಡೆಯನ್ನು ನಾಶ ಮಾಡುವದಕ್ಕೆ ಯೋಚಿಸಿದ್ದಾನೆ;
ನೂಲು ಹಿಡಿದು, ಕೆಡಿಸಿ ಬಿಡುವದರಿಂದ ತನ್ನ ಕೈ ಹಿಂತೆಗಿಯಲಿಲ್ಲ;
ಅಲಂಗವನ್ನೂ ಗೋಡೆಯನ್ನೂ ದುಃಖಿಸ ಮಾಡಿದ್ದಾನೆ; ಅವು ಕೂಡ ಚಿಂತೆ ಪಡುತ್ತವೆ.
೯ ಅದರ ಬಾಗಲುಗಳು ನೆಲದೊಳಗೆ ಇಳಿದವೆ, ಅದರ ಅಗುಳಿಗಳನ್ನು ಕೆಡಿಸಿ ಒಡೆದು ಬಿಟ್ಟಿದ್ದಾನೆ;
ಅದರ ಅರಸನೂ ಅದರ ಪ್ರಧಾನರೂ ಜನಾಂಗಗಳಲ್ಲಿ ಇದ್ದಾರೆ;
ನ್ಯಾಯಪ್ರಮಾಣವು ಇಲ್ಲ; ಅದರ ಪ್ರವಾದಿಗಳು ಸಹ ಕರ್ತನಿಂದ ದರ್ಶನವನ್ನು ಕಂಡು ಕೊಳ್ಳವದಿಲ್ಲ.
೧೦ ಚಿಯೋನ್ ಮಗಳ ಹಿರಿಯರು ನೆಲದ ಮೇಲೆ ಕೂತು ಕೊಂಡು ಸುಮ್ಮನೆ ಇದ್ದಾರೆ;
ತಲೆಗೆ ಧೂಳು ಹಾಕಿ ಕೊಳ್ಳುತ್ತಾರೆ; ಗೋಣಿಕಟ್ಟಿಕೊಳ್ಳುತ್ತಾರೆ;
ಯೆರೂಸಲೇಮಿನ ಕನ್ಯಿಕೆಗಳು ತಮ್ಮ ತಲೆಗಳನ್ನು ನೆಲಕ್ಕೆ ಬೊಗ್ಗಿಸುತ್ತಾರೆ.
೧೧ ನನ್ನ ಕಣ್ಣುಗಳು ಕಣ್ಣೀರಿನಿಂದ ಕುಂದಿ ಹೋಗುತ್ತವೆ; ನನ್ನ ಕರುಳುಗಳು ಕಳವಳ ಪಡುತ್ತವೆ;
ನನ್ನ ಜನರ ಮಗಳ ಮುರಿಯೋಣದ ನಿಮಿತ್ತ ನನ್ನ ಪಿತ್ತಕೀಲ ನೆಲದ ಮೇಲೆ ಹೊಯ್ಯಲಟ್ಟಿದೆ;
ಯಾಕಂದರೆ ಮಕ್ಕಳೂ ಮೊಲೆ ಕೂಸುಗಳೂ ಪಟ್ಟಣದ ಬೀದಿಗಳಲ್ಲಿ ಮೂರ್ಛೆಯಾಗುತ್ತವೆ.
೧೨ ಅವರು ಘಾಯ ಪಟ್ಟವರ ಹಾಗೆ ಪಟ್ಟಣದ ಬೀದಿಗಳಲ್ಲಿ ಮೂರ್ಛೆಯಾಗಲಾಗಿ,
ತಮ್ಮ ತಾಯಿಗಳ ಎದೆಯಲ್ಲಿ ಪ್ರಾಣ ಹೊಯ್ಯುತ್ತಿರಲಾಗಿ—
ಗೋಧಿಯೂ ದ್ರಾಕ್ಷಿರಸವೂ ಎಲ್ಲಿ? ಎಂದು, ತಮ್ಮ ತಾಯಿಗಳಿಗೆ ಹೇಳುತ್ತಾರೆ.
೧೩ ಓ ಯೆರೂಸಲೇಮಿನ ಕುಮಾರ್ತೆಯೇ! ನಾನೇನು ನಿನಗೆ ಸಾಕ್ಷಿಯಾಗಿಡಲಿ? ಏನು ನಿನಗೆ ಸಮಾನ ಮಾಡಲಿ?
ಚಿಯೋನಿನ ಮಗಳಾದ ಕನ್ಯಿಕೆಯೇ! ನಿನ್ನನ್ನು ಅರಿಸುವ ಹಾಗೆ ನಾನೇನು ನಿನಗೆ ಸರಿ ಮಾಡಲಿ?
ಯಾಕಂದರೆ, ನಿನ್ನ ಮುರಿಯೋಣವು ಸಮುದ್ರದ ಹಾಗೆ ದೊಡ್ಡದಾಗಿದೆ; ನಿನ್ನನ್ನು ಗುಣಪಡಿಸುವವರ್ಯಾರು?
೧೪ ನಿನ್ನ ಪ್ರವಾದಿಗಳು ನಿನಗೋಸ್ಕರ ಮಾಯೆಯನ್ನೂ ವ್ಯರ್ಥವಾದದ್ದನ್ನೂ ನೋಡಿದ್ದಾರೆ;
ಅವರು ನಿನ್ನ ಕೆಡೆಯನ್ನು ತಿರುಗಿಸುವ ಹಾಗೆ, ನಿನ್ನ ಅಕ್ರಮವನ್ನು ಪ್ರಕಟಿ ಮಾಡಲಿಲ್ಲ.
ನಿನಗೋಸ್ಕರ ಸುಳ್ಳಾದ ಭಾರಗಳನ್ನೂ, ತಳ್ಳಿ ಬಿಡುವ ಕಾರಣಗಳನ್ನೂ, ನೋಡಿದ್ದಾರೆ.
೧೫ ದಾರಿಯಲ್ಲಿ ಹೋಗುವವರೆಲ್ಲರು ನಿನ್ನ ವಿಷಯ ತಮ್ಮ ಕೈಗಳನ್ನು ಚಪ್ಪಳಿಡುತ್ತಾರೆ.
ಯೆರೂಸಲೇಮಿನ ಕುಮಾರ್ತೆಯ ವಿಷಯ ಸಿಳ್ಳಿಟ್ಟು ತಲೆಯಲ್ಲಾಡಿಸುತ್ತಾರೆ;



ಸೌಂದರ್ಯದ ಪೂರ್ತಿ ಎಂದು, ಸರ್ವ ಭೂಮಿಯ ಸಂತೋಷವೆಂದು, ಹೇಳಲ್ಪಟ್ಟ ಪಟ್ಟಣವು ಇದೋ! ಅನ್ನುತ್ತಾರೆ.
೧೬ ನಿನ್ನ ಶತ್ರುಗಳೆಲ್ಲರು ನಿನಗೆ ವಿರೋಧವಾಗಿ ತಮ್ಮ ಬಾಯಿ ತೆರೆದಿದ್ದಾರೆ;
ಸಿಳ್ಳಿಟ್ಟು, ಹಲ್ಲು ಕಡಿಯುತ್ತಾರೆ; ಅದನ್ನು ನುಂಗಿ ಬಿಟ್ಟಿದ್ದೇವೆಂದೂ,
ಹೌದು, ನಾವು ನಿರೀಕ್ಷಿಸಿದ ದಿವಸವು ಇದೇ; ಅದನ್ನು ಕಂಡು ಕೊಂಡಿದ್ದೇವೆ, ನೋಡಿದ್ದೇವೆ, ಎಂದೂ, ಅನ್ನುತ್ತಾರೆ.
೧೭ ಕರ್ತನು ತಾನು ಯೋಚಿಸಿದ್ದನ್ನು ಮಾಡಿದ್ದಾನೆ;
ತಾನು ಪೂರ್ವ ದಿವಸಗಳಲ್ಲಿ ಆಜ್ಞಾಪಿಸಿದ ಮಾತನ್ನು ಪೂರೈಸಿದ್ದಾನೆ;
ಕನಿಕರಿಸದೆ ಕೆಡವಿ ಹಾಕಿದ್ದಾನೆ;
ನಿನ್ನ ಶತ್ರುವನ್ನು ನಿನ್ನ ಮೇಲೆ ಸಂತೋಷಿಸ ಮಾಡಿದ್ದಾನೆ;
ನಿನ್ನ ವೈರಿಗಳ ಕೊಂಬನ್ನು ಎತ್ತಿದ್ದಾನೆ.
೧೮ ಅವರ ಹೃದಯವು ಕರ್ತನ ಕಡೆಗೆ ಕೂಗಿತು;
ಚಿಯೋನ್ ಮಗಳ ಗೋಡೆಯೇ! ಹಗಲು ರಾತ್ರಿ ಹೊಳೆಯಂತೆ ಕಣ್ಣೀರು ಸುರಿಸು;
ನಿನಗೆ ವಿಶ್ರಾಂತಿ ಕೊಡ ಬೇಡ, ನಿನ್ನ ಕಣ್ಣುಗೊಂಬೆ ಸುಮ್ಮನಿರಲೇಸ ಬೇಡ.
೧೯ ಏಳು! ರಾತ್ರಿಯಲ್ಲಿ ಝಾಮುಗಳ ಆರಂಭದಲ್ಲಿ ಕೂಗು,
ನೀರಿನಂತೆ ನಿನ್ನ ಹೃದಯವನ್ನು ಕರ್ತನ ಸಮುಖದಲ್ಲಿ ಹೊಯಿದು ಬಿಡು;
ಎಲ್ಲಾ ಬೀದಿಗಳ ಕೊನೆಗಳಲ್ಲಿ ಹಸಿವೆಯಿಂದ ಮೂರ್ಛೆಯಾಗುವ,
ನಿನ್ನ ಕೂಸುಗಳ ಪ್ರಾಣಕ್ಕೋಸ್ಕರ ಅವನ ಕಡೆಗೆ ಕೈಗಳನ್ನು ಎತ್ತು.
೨೦ ಓ ಕರ್ತನೇ! ನೋಡು; ಯಾರಿಗೆ ಹೀಗೆ ಮಾಡಿದ್ದೀ ಎಂದು ಮನಸ್ಸಿಡು;
ಹೆಂಗಸರು ತಮ್ಮ ಫಲವಾದ ಗೇಣುದ್ದ ಕೂಸುಗಳನ್ನು ತಿನ್ನಬೇಕೊ?
ಯಾಜಕನೂ ಪ್ರವಾದಿಯೂ ಕರ್ತನ ಪರಿಶುದ್ಧಸ್ಥಳದಲ್ಲಿ ಕೊಲ್ಲಲ್ಪಡ ಬೇಕೋ?
೨೧ ಹುಡುಗರೂ ಮುದುಕರೂ ಬೀದಿಗಳಲ್ಲಿ ನೆಲದ ಮೇಲೆ ಮಲಗುತ್ತಾರೆ;
ನನ್ನ ಕನ್ಯಿಕೆಗಳೂ ನನ್ನ ಯೌವ್ವನಸ್ಥರೂ, ಕತ್ತಿಯಿಂದ ಬಿದ್ದಿದ್ದಾರೆ;
ನಿನ್ನ ಕೋಪದ ದಿವಸದಲ್ಲಿ ಕೊಂದು ಹಾಕಿದ್ದೀ; ಹೊಡೆದಿದ್ದೀ; ಕನಿಕರಿಸಲಿಲ್ಲ.
೨೨ ಹಬ್ಬದ ದಿವಸದಲ್ಲಿ ಆದ ಹಾಗೆ ಸುತ್ತಲಾಗಿ ನನ್ನ ಭಯಗಳನ್ನು ಕರೆದಿದ್ದೀ;
ಕರ್ತನ ಕೋಪದ ದಿವಸದಲ್ಲಿ ತಪ್ಪಿಸಿ ಕೊಂಡವನೂ ಉಳಿದವನೂ ಒಬ್ಬನೂ ಇಲ್ಲ;
ನಾನು ಸಾಕಿ ಬೆಳೆಸಿದವರನ್ನು ನನ್ನ ಶತ್ರು ನಿರ್ಮೂಲ ಮಾಡಿದ್ದಾನೆ.

## 3. ಸಂಧಿ.

೧ ಅವನ ಉಗ್ರದ ಕೋಲಿನಿಂದ ಕಷ್ಟವನ್ನು ನೋಡಿದ ಮನುಷ್ಯನು, ನಾನೇ.
೨ ಅವನು ನನ್ನನ್ನು ನಡಿಸಿ, ಬೆಳಕಿಗಲ್ಲ, ಕತ್ತಲೆಗೆ ಹೋಗ ಮಾಡಿದ್ದಾನೆ.
3 ಹೌದು, ನನಗೆ ವಿರೋಧವಾಗಿ ತಿರುಗಿದ್ದಾನೆ; ದಿನವೆಲ್ಲಾ ತನ್ನ ಕೈಯನ್ನು ತಿರುಗಿಸುತ್ತಾನೆ.
೪ ನನ್ನ ಮಾಂಸವನ್ನೂ ನನ್ನ ಚರ್ಮವನ್ನೂ ಹಳೇವಾಗ ಮಾಡಿ, ನನ ಎಲುವುಗಳನ್ನು ಮುರಿದಿದ್ದಾನೆ.
೫ ನನಗೆ ವಿರೋಧವಾಗಿ ಕಟ್ಟಿ, ನನ್ನನ್ನು ವಿಷದಿಂದಲೂ ಸಂಕಟದಿಂದಲೂ ಸುತ್ತಿ ಕೊಂಡಿದ್ದಾನೆ.
೬ ಪೂರ್ವದಿಂದ ಸತ್ತವರ ಹಾಗೆ ನನ್ನನ್ನು ಕತ್ತಲಾದ ಸ್ಥಳಗಳಲ್ಲಿ ಇರಿಸಿದ್ದಾನೆ.
೭ ನಾನು ಹೊರಗೆ ಬಾರದ ಹಾಗೆ ನನ್ನ ಸುತ್ತಲು ಬೇಲಿ ಕಟ್ಟಿದ್ದಾನೆ; ನನ್ನ ಸಂಕೋಲೆಯನ್ನು ಭಾರ ಮಾಡಿದ್ದಾನೆ.
೮ ಹೌದು, ನಾನು ಕರೆದು ಕೂಗಿದರೂ, ಅವನು ನನ್ನ ಪ್ರಾರ್ಥನೆಯನ್ನು ಹೊರಗೆ ಮುಚ್ಚಿ ಹಾಕುತ್ತಾನೆ.
೯ ಕೆತ್ತಿದ ಕಲ್ಲುಗಳಿಂದ ನನ್ನ ಮಾರ್ಗಗಳಿಗೆ ಬೇಲಿ ಇಟ್ಟು, ನನ್ನ ಹಾದಿಗಳನ್ನು ಡೊಂಕು ಮಾಡಿದ್ದಾನೆ.
೧೦ ಹೊಂಚಿ ಕೊಳ್ಳುವ ಕರಡಿಯ ಹಾಗೆ, ರಹಸ್ಯಸ್ಥಳಗಳಲ್ಲಿರುವ ಸಿಂಹದ ಹಾಗೆ, ನನಗೆ ಇದ್ದಾನೆ.
೧೧ ನನ್ನ ಮಾರ್ಗಗಳನ್ನು ತಪ್ಪಿಸಿ, ನನ್ನನ್ನು ತುಂಡಾಗಿ ಹರಿದು, ನನ್ನನ್ನು ಹಾಳು ಮಾಡಿದ್ದಾನೆ.
೧೨ ಬಿಲ್ಲನ್ನು ಬೊಗ್ಗಿಸಿ ನನ್ನನ್ನು ಬಾಣಕ್ಕೆ ಗುರಿಯಾಗಿ ಇಟ್ಟಿದ್ದಾನೆ.
೧3 ತನ್ನ ಬತ್ತಳಿಕೆಯ ಬಾಣಗಳನ್ನು ನನ್ನ ಗುಂಡಿಗೆಗಳಲ್ಲಿ ಕೀಲ ಮಾಡಿದ್ದಾನೆ.
೧೪ ನನ್ನ ಜನರಿಗೆಲ್ಲಾ ಹಾಸ್ಯವೂ, ದಿನವೆಲ್ಲಾ ಅವರಿಗೆ ರಾಗವೂ ಆದೆನು.
೧೫ ನನ್ನನ್ನು ಕಹಿಯಾದವುಗಳಿಂದ ತುಂಬಿಸಿ, ಮಾಚಿಪತ್ರೆಯಿಂದ ನನಗೆ ಅಮಲೇರಿಸಿದ್ದಾನೆ.
೧೬ ಹರಳುಗಳಿಂದ ನನ್ನ ಹಲ್ಲುಗಳನ್ನು ಮುರಿದು ನನ್ನನ್ನು ಬೂದಿಯಲ್ಲಿ ಹೊರಳಿಸಿದ್ದಾನೆ.
೧3 ನನ್ನ ಪ್ರಾಣವನ್ನು ಸಮಾಧಾನಕ್ಕೆ ದೂರ ಮಾಡಿದ್ದೀ, ನಾನು ಸೌಖ್ಯವನ್ನು ಮರೆತು ಬಿಟ್ಟೆನು.
೧೮ ಮತ್ತು, ನನ್ನ ನಂಬಿಕೆಯೂ, ನನ್ನ ನಿರೀಕ್ಷಣೆಯೂ, ಕರ್ತನಿಂದ ನಾಶವಾದವೆಂದು ಹೇಳಿದೆನು.
೧೯ ನನ್ನ ಕಷ್ಟವನ್ನೂ ನನ್ನ ಹಿಂಸೆಯನ್ನೂ ಮಾಚಿಪತ್ರೆಯನ್ನೂ ವಿಷವನ್ನೂ ಜ್ಞಾಪಕ ಮಾಡು.
೨೦ ಹೌದು, ಚನ್ನಾಗಿ ಜ್ಞಾಪಕ ಮಾಡು; ಯಾಕಂದರೆ, ನನ್ನ ಪ್ರಾಣವು ನನ್ನಲ್ಲಿ ಕುಗ್ಗಿ ಇದೆ.
೨೧ ಇದನ್ನು ಮನಸ್ಸಿಗೆ ತರುತ್ತೇನೆ; ಆದದರಿಂದ ನಂಬಿಕೆ ಉಂಟು
೨೨ ನಾವು ಕಳೆದು ಹೋಗದೆ ಇರುವದು, ಕರ್ತನ ಕನಿಕರಗಳೇ: ಯಾಕಂದರೆ ಅವನ ಕರುಣೆಗಳು ಮುಗಿದು ಹೋಗುವದಿಲ್ಲ.
೨3 ಅವು ಒಂದೊಂದು ಹೊತ್ತಾರೆಯಲ್ಲಿ ಹೊಸವಾಗಿವೆ, ನಿನ್ನ ಸತ್ಯವು ದೊಡ್ಡದು.

೨೪ ಯೆಹೋವನೇ ನನ್ನ ಭಾಗವೆಂದು ನನ್ನ ಪ್ರಾಣವು ಹೇಳುತ್ತ
ದೆ; ಆದದರಿಂದ ಅವನಲ್ಲಿ ನಿರೀಕ್ಷಿಸುತ್ತೇನೆ.
೨೫ ಕರ್ತನು, ತನ್ನನ್ನು ಕಾದುಕೊಳ್ಳುವವರಿಗೂ, ತನ್ನನ್ನು ಹುಡು
ಕುವ ಪ್ರಾಣಕ್ಕೂ, ಒಳ್ಳೇಯವನಾಗಿದ್ದಾನೆ.
೨೬ ಕರ್ತನ ರಕ್ಷಣೆಗಾಗಿ ನಿರೀಕ್ಷಿಸಿ, ಮೌನವಾಗಿರುವದು ಒಳ್ಳೇದು.
೨೭ ತನ್ನ ಯೌವನಸ್ವದಲ್ಲಿ ನೊಗ ಹೊರುವದು ಮನುಷ್ಯನಿಗೆ
ಒಳ್ಳೇದು.
೨೮ ಅವನೇ ಅದನ್ನು ಅವನ ಮೇಲೆ ಹೊರಿಸಿದ್ದರಿಂದ ಏಕಾಂತವಾಗಿ
ಕೂತು ಕೊಂಡು ಮೌನವಾಗುತ್ತಾನೆ.
೨೯ ನಿರೀಕ್ಷಣೆ ಇದ್ದೀತೇನೋ ಎಂದು ಧೂಳಿಯಲ್ಲಿ ತನ್ನ ಬಾಯಿ ಇ
ಡುತ್ತಾನೆ.
೩೦ ತನ್ನನ್ನು ಹೊಡೆಯುವವನಿಗೆ ಕೆನ್ನೆ ಕೊಡುತ್ತಾನೆ; ನಿಂದೆಯಿಂ
ದ ತುಂಬಿದ್ದಾನೆ.
೩೧ ಯಾಕಂದರೆ ಕರ್ತನು ಎಂದೆಂದಿಗೂ ತಳ್ಳಿ ಬಿಡುವದಿಲ್ಲ.
೩೨ ಅವನು ದುಃಖ ಪಡಿಸಿದರೂ ತನ್ನ ಕೃಪೆಗಳ ಬಾಹುಳ್ಯದ ಪ್ರಕಾರ
ಕನಿಕರಿಸುವನು.
೩೩ ಯಾಕಂದರೆ ಅವನು ಬೇಕಾಗಿ ಮನುಷ್ಯರ ಮಕ್ಕಳಿಗೆ ಕಷ್ಟ
ವನ್ನೂ ದುಃಖವನ್ನೂ ಉಂಟು ಮಾಡುವದಿಲ್ಲ.
೩೪ ಭೂಮಿಯ ಕೆಳಿಯವರನ್ನೆಲ್ಲಾ ಕಾಲುಗಳ ಕೆಳಗೆ ತುಳಿಯುವದ
ನ್ನೂ,
೩೫ ಮಹೋನ್ನತನ ಸನ್ನಿಧಿಯಲ್ಲಿ ಮನುಷ್ಯನ ನ್ಯಾಯವನ್ನು ತಿ
ರುಗಿಸುವದನ್ನೂ,
೩೬ ಮನುಷ್ಯನನ್ನು ಅವನ ವ್ಯಾಜ್ಯದಲ್ಲಿ ಕೆಡಿಸುವದನ್ನೂ ಕರ್ತನು
ಮೆಚ್ಚನು.
೩೭ ಕರ್ತನು ಆಜ್ಞಾಪಿಸದಿರುವಾಗ, ಸಂಭವಿಸುವ ಹಾಗೆ ಅಪ್ಪಣೆ
ಕೊಡುವವನ್ಯಾರು?
೩೮ ಕೆಟ್ಟದೂ ಒಳ್ಳೇದೂ ಮಹೋನ್ನತನ ಬಾಯಿಯಿಂದ ಹೊರ
ಡುತ್ತವಲ್ಲವೋ?
೩೯ ಬದುಕುವ ಮನುಷ್ಯನೂ ತನ್ನ ಪಾಪಗಳಿಗೋಸ್ಕರ ದಂಡನೆ
ಹೊಂದುವ ಪುರುಷನೂ ಗುಣ ಗುಟ್ಟುವದು ಯಾತಕ್ಕೆ?
೪೦ ನಮ್ಮ ಮಾರ್ಗಗಳನ್ನು ವಿಚಾರಿಸಿ, ಶೋಧಿಸಿ, ಕರ್ತನ ಕಡೆಗೆ
ತಿರುಗಿ ಕೊಳ್ಳೋಣ.
೪೧ ನಮ್ಮ ಹೃದಯಗಳನ್ನು ನಮ್ಮ ಕೈಗಳ ಸಂಗಡ ಪರಲೋಕದಲ್ಲಿ
ರುವ ದೇವರ ಕಡೆಗೆ ಎತ್ತಿಕೊಳ್ಳೋಣ.
೪೨ ನಾವು ದ್ರೋಹ ಮಾಡಿದ್ದೇವೆ; ತಿರುಗಿ ಬಿದ್ದಿದ್ದೇವೆ; ನೀನು ಮನ್ನಿ
ಸಲಿಲ್ಲ.
೪೩ ಕೋಪದಲ್ಲಿ ನಮ್ಮನ್ನು ಮುಚ್ಚಿ, ಹಿಂದಟ್ಟಿದ್ದೀ; ಕನಿಕರಿಸದೆ ಕೊಂ
ದು ಹಾಕಿದ್ದೀ.
೪೪ ನಮ್ಮ ಪ್ರಾರ್ಥನೆ ದಾಟಿ ಹೋಗದ ಹಾಗೆ ನಿನ್ನನ್ನು ಮೇಘದಿಂದ
ಮುಚ್ಚಿ ಕೊಂಡಿದ್ದೀ.
೪೫ ಜನಗಳ ಮಧ್ಯದಲ್ಲಿ ನಮ್ಮನ್ನು ಕಲ್ಮಷವಾಗಿಯೂ ಕಸವಾಗಿ
ಯೂ ಮಾಡಿದ್ದೀ.
೪೬ ನಮ್ಮ ಶತ್ರುಗಳೆಲ್ಲರು ನಮಗೆ ವಿರೋಧವಾಗಿ ತಮ್ಮ ಬಾಯಿ ತೆಗೆ
ಯುತ್ತಾರೆ.
೪೭ ಭಯವೂ ಬೋನೂ ಸಂಹಾರವೂ ನಾಶನವೂ ನಮ್ಮ ಮೇಲೆ ಬಿ
ದ್ದವೆ.
೪೮ ನನ್ನ ಜನರ ಮಗಳ ನಾಶನದ ನಿಮಿತ್ತ ನನ್ನ ಕಣ್ಣಿನಿಂದ ನೀರಿನ
ಹೊಳೆಗಳು ಹರಿಯುತ್ತವೆ.
೪೯ ಕರ್ತನು ದೃಷ್ಟಿ ಇಟ್ಟು ಆಕಾಶದಿಂದ ನೋಡುವ ಮಟ್ಟಿಗೂ,
೫೦ ನನ್ನ ಕಣ್ಣು ಬಿಡದೆ, ವಿಶ್ರಮಿಸಿಕೊಳ್ಳದೆ, ಸುರಿಸುತ್ತದೆ.
೫೧ ನನ್ನ ಪಟ್ಟಣದ ಕುಮಾರ್ತಿಗಳೆಲ್ಲರ ನಿಮಿತ್ತ ನನ್ನ ಕಣ್ಣು ನನ್ನ
ಪ್ರಾಣವನ್ನು ನೋಯಿಸುತ್ತದೆ.
೫೨ ನನ್ನ ಶತ್ರುಗಳು ಕಾರಣವಿಲ್ಲದೆ ಪಕ್ಷಿಯ ಹಾಗೆ ಬಹಳವಾಗಿ
ಬೇಟೆಯಾಡಿದರು.
೫೩ ನನ್ನ ಪ್ರಾಣವನ್ನು ಕುಣಿಯಲ್ಲಿ ಕಡಿದು ಬಿಟ್ಟು, ನನ್ನ ಮೇಲೆ
ಕಲ್ಲು ಹಾಕಿದ್ದಾರೆ.
೫೪ ನನ್ನ ತಲೆಯ ಮೇಲೆ ನೀರುಗಳು ಹರಿದವು; ನಾನು ಕೆಟ್ಟೆನೆಂದು
ಹೇಳಿದೆನು.
೫೫ ಕರ್ತನೇ, ಅಳಿವಾದ ಕುಣಿಯೊಳಗಿಂದ ನಿನ್ನ ಹೆಸರನ್ನು ಕರೆದೆ
ನು.
೫೬ ನನ್ನ ಶಬ್ದವನ್ನು ಕೇಳಿದಿ; ನನ್ನ ಶ್ವಾಸಕ್ಕೂ ನನ್ನ ಕೂಗಿಗೂ
ನಿನ್ನ ಕಿವಿಯನ್ನು ಮುಚ್ಚ ಬೇಡ.
೫೭ ನಾನು ನಿನ್ನನ್ನು ಕರೆದ ದಿವಸದಲ್ಲಿ ಸಮೀಪವಾದಿ; ಭಯ ಪಡ
ಬೇಡವಂದಿ.
೫೮ ಕರ್ತನೇ, ನನ್ನ ಪ್ರಾಣದ ವ್ಯಾಜ್ಯಗಳನ್ನಾಧಿದ್ದೀ; ನನ್ನ ಜೀವ
ವನ್ನು ವಿಮೋಚಿಸಿದ್ದೀ.
೫೯ ಕರ್ತನೇ, ನನಗಾದ ಅನ್ಯಾಯವನ್ನು ನೋಡಿದ್ದೀ, ನನಗೆ ನ್ಯಾ
ಯ ತೀರಿಸು.
೬೦ ನೀನು ಅವರ ಮುಯ್ಯಿಗೆ ಮುಯ್ಯಿಯ್ಯನ್ನೆಲ್ಲಾ, ನನಗೆ ವಿರೋ
ಧವಾದ ಅವರ ಆಲೋಚನೆಗಳನ್ನೆಲ್ಲಾ, ನೋಡಿದ್ದೀ.
೬೧ ಕರ್ತನೇ, ಅವರ ನಿಂದೆಯನ್ನೂ, ನನಗೆ ವಿರೋಧವಾದ ಅವರ
ಆಲೋಚನೆಗಳನ್ನೂ,
೬೨ ನನಗೆ ವಿರೋಧವಾಗಿ ಏಳುವವರ ಮಾತುಗಳನ್ನೂ, ದಿನವೆಲ್ಲಾ
ವಿರೋಧವಾದ ಅವರ ಆಲೋಚನೆಗಳನ್ನೂ, ಕೇಳಿದ್ದೀ.
೬೩ ಅವರ ಕೂಡ್ರೋಣವನ್ನೂ ಏಳ್ಳೋಣವನ್ನೂ ದೃಷ್ಟಿಸು; ಅ
ವರಿಗೆ ರಾಗವು ನಾನೇ.
೬೪ ಕರ್ತನೇ, ಅವರ ಕೈ ಕ್ರಿಯೆಗಳ ಪ್ರಕಾರ ಅವರಿಗೆ ಪ್ರತಿಫಲ
ಕೊಡು.
೬೫ ಹೃದಯದ ಕಾಠಿಣ್ಯವನ್ನೂ ನಿನ್ನ ಶಾಪವನ್ನೂ ಅವರಿಗೆ ಕೊ
ಡು.
೬೬ ಅವರನ್ನು ಕೋಪದಿಂದ ಹಿಂದಟ್ಟಿ, ಕರ್ತನ ಆಕಾಶದ ಕೆಳಗಿನಿಂ
ದ ನಾಶನ ಮಾಡು.

## ೪. ಸಂಧಿ.

೧ ಅಯ್ಯೋ! ಭಂಗಾರವು ಹ್ಯಾಗೆ ಮಬ್ಬಾಯಿತು! ಒಳ್ಳೇ ಅಪ
ರಂಜಿ ಹ್ಯಾಗೆ ಮಾರ್ಪಟ್ಟಿತು!
ಪರಿಶುದ್ಧಸ್ಥಳದ ಕಲ್ಲುಗಳು ಬಂದೊಂದು ಬೀದಿಯ ಕೊನೆಯ
ಲ್ಲಿ ಚೆಲ್ಲಿ ಅವೆ.
೨ ಶುದ್ಧ ಭಂಗಾರಕ್ಕೆ ಸಮಾನವಾದ ಚಿಯೋನಿನ ಅಮೂಲ್ಯ ಕು
ಮಾರರು,



ಹ್ಯಾಗೆ ಮಣ್ಣಿನ ಪಾತ್ರೆಗಳಂತೆಯೂ, ಕುಂಬಾರರ ಕೈ ಕೆಲಸ
ದಂತೆಯೂ, ಎಣಿಸಲ್ಪಟ್ಟಿದ್ದಾರೆ!
೩ ತಿಮಿಂಗಿಲಗಳಾದರೂ ಕೆಚ್ಚಲು ಸಡ್ಲಿಸಿ ತಮ್ಮ ಮರಿಗಳಿಗೆ ಪೊಲೆ
ಕೊಡುತ್ತವೆ;
ಆದರೆ ನನ್ನ ಜನರ ಮಗಳು, ಅರಣ್ಯದಲ್ಲಿ ಉಬ್ಬ್ರಸಕ್ಷಿಗಳ ಹಾಗೆ
ಕ್ರೂರವಾದಳು.
೪ ಪೊಲೆಕೂಸಿನ ನಾಲಿಗೆ ದಾಹದಿಂದ ಅಂಗಳಕ್ಕೆ ಹತ್ತುತ್ತದೆ.
ಕೂಸುಗಳು ಕೊಟ್ಟು ಬೇಡುತ್ತವೆ; ಆದರೆ ಯಾರೂ ಅವರಿಗೆ
ಮುರಿದು ಕೊಡುವದಿಲ್ಲ.
ರುಚಿಯಾದವುಗಳನ್ನು ಭೋಜಿಸಿದವರು ಬೀದಿಗಳಲ್ಲಿ ಹಾಳಾಗು
ತ್ತಾರೆ;
೫ ರಕ್ತಾಂಬರಗಳಲ್ಲಿ ಬೆಳೆಸಲ್ಪಟ್ಟವರು ತಿಪ್ಪೆಗಳನ್ನು ಅಪ್ಪಿಕೊಳ್ಳು
ತ್ತಾರೆ.
೬ ನನ್ನ ಜನರ ಮಗಳ ಅಕ್ರಮದ ದಂಡನೆ ಸೊದೋಮಿನ ಪಾಪದ
ದಂಡನೆಗಿಂತ ದೊಡ್ಡದು;
ಅದು ಕ್ಷಣಮಾತ್ರದಲ್ಲಿ ಕೆಡವಿ ಹಾಕಲ್ಪಟ್ಟಿತು;
ಅದರ ಮೇಲೆ ಯಾರೂ ಕೈ ಇಡಲಿಲ್ಲ.
೭ ಅದರ ನಜರೀಯರು ಹಿಮಕ್ಕಿಂತ ಶುದ್ಧವಾಗಿದ್ದರು, ಹಾಲಿಗಿಂತ
ಬಿಳುಪಾಗಿದ್ದರು;
ಮೈಯಲ್ಲಿ ಹವಳಕ್ಕಿಂತ ಕೆಂಪಾಗಿದ್ದರು, ಅವರ ಆಕಾರವು ನೀ
ಲಕಲ್ಲಿನ ಹಾಗಿತ್ತು.
೮ ಈಗ ಅವರ ಮುಖವು ಮೋಡಕ್ಕಿಂತ ಕಪ್ಪಾಗಿದೆ; ಬೀದಿಗಳಲ್ಲಿ
ಅವರ ಗುರುತು ತಿಳಿಯಲಿಲ್ಲ;
ಅವರ ಚರ್ಮ ಅವರ ಎಲುವುಗಳಿಗೆ ಹತ್ತುತ್ತದೆ, ಅದು ಒಣಗಿ
ಕಟ್ಟಿಗೆಯ ಹಾಗಾಯಿತು.
೯ ಕತ್ತಿಯಿಂದ ಕೊಲ್ಲಲ್ಪಟ್ಟವರು ಹಸಿವೆಯಿಂದ ಕೊಲ್ಲಲ್ಪಟ್ಟವರಿಗಿಂ
ತ ವಾಸಿ,
ಯಾಕಂದರೆ ಇವರು ಹೊಲದ ಫಲಗಳು ಇಲ್ಲದೆ ತಿವಿಯಲ್ಪಟ್ಟು
ಸವೆದು ಹೋಗುತ್ತಾರೆ.
೧೦ ಕನಿಕರವುಳ್ಳ ಹೆಂಗಸರ ಕೈಗಳು ಸ್ವಂತ ಮಕ್ಕಳನ್ನು ಬೇಯಿ
ಸಿದವು;
ಇವರು ನನ್ನ ಜನರ ಮಗಳ ನಾಶನದಲ್ಲಿ ಅವರಿಗೆ ಆಹಾರವಾದರು.
೧೧ ಕರ್ತನು ನನ್ನ ಉಗ್ರವನ್ನು ತೀರಿಸಿದ್ದಾನೆ. ತನ್ನ ಕೋಪದ ಉರಿ
ಯನ್ನು ಹೊಯಿದಿದ್ದಾನೆ;
ಚಿಯೋನಿನಲ್ಲಿ, ಅದರ ಅಸ್ತಿವಾರಗಳನ್ನು ತಿಂದು ಬಿಟ್ಟಂಥ ಬೆಂ
ಕಿಯನ್ನು ಹಚ್ಚಿದ್ದಾನೆ.
೧೨ ವೈರಿಯೂ ಶತ್ರುವೂ ಯೆರೂಸಲೇಮಿನ ಬಾಗಲುಗಳಲ್ಲಿ ಕೇರು
ವರೆಂದು,
ಭೂಮಿಯ ಅರಸರೂ ಭೂಲೋಕದ ನಿವಾಸಿಗಳೆಲ್ಲರೂ, ನಂಬು
ತ್ತಿದ್ದಿಲ್ಲ.
೧೩ ಅದರ ಪ್ರವಾದಿಗಳ ಪಾಪಗಳಿಂದಲೂ ಅದರ ಯಾಜಕರ ಅಕ್ರ
ಮಗಳಿಂದಲೂ ಹೀಗಾಯಿತು;
ಇವರು ನೀತಿವಂತರ ರಕ್ತವನ್ನು ಅದರ ಮಧ್ಯದಲ್ಲಿ ಚೆಲ್ಲಿದರಲ್ಲ!
೧೪ ಬೀದಿಗಳಲ್ಲಿ ಕುರುಡರಾಗಿ ತಿರುಗಾಡಿದರು;
ರಕ್ತದಿಂದ ತಮ್ಮನ್ನು ಅಪವಿತ್ರ ಮಾಡಿ ಕೊಂಡರು;
ಆದದರಿಂದ ಮನುಷ್ಯರು ಅವರ ವಸ್ತ್ರಗಳನ್ನು ಮುಟ್ಟಲಾರರು.
೧೫ ಸರಿಯಿರಿ, ಅಶುದ್ಧರೇ! ಸರಿಯಿರಿ, ಸರಿಯಿರಿ, ಮುಟ್ಟ ಬೇಡಿರಿ!
ಎಂದು ಅವರಿಗೆ ಕೂಗಿದರು;
ಅವರು ಓಡಿ ಹೋಗಿ ತಿರುಗಾಡಲಾಗಿ,
ಜನಾಂಗಗಳೊಳಗೆ—ಅವರು ಇನ್ನು ಮೇಲೆ ವಾಸ ಮಾಡುವದಿ
ಲ್ಲವೆಂದು ಹೇಳಿದರು.
೧೬ ಕರ್ತನ ಮುಖ ಅವರನ್ನು ಭೇದ ಮಾಡಿತು; ಅವನು ಇನ್ನು
ಮೇಲೆ ಅವರನ್ನು ದರ್ಶಿಸುವದಿಲ್ಲ;
ಅವರು ಯಾಜಕರ ಮುಖಗಳನ್ನು ಲಕ್ಷ್ಯ ಮಾಡಲಿಲ್ಲ, ಹಿರಿಯ
ರಿಗೆ ದಯೆ ತೋರಿಸಲಿಲ್ಲ.
೧೭ ನಾವೋ, ನಮ್ಮ ಕಣ್ಣುಗಳು ನಮ್ಮ ವ್ಯರ್ಥವಾದ ಸಹಾಯಕ್ಕಾ
ಗಿ ನೋಡಿ ಕುಂದಿ ಹೋದವು;
ರಕ್ಷಿಸಲಾರದ ಜನಾಂಗಕ್ಕೋಸ್ಕರ ನಮ್ಮ ಕೋವರಗಳಲ್ಲಿ ಕಾ
ದು ಕೊಂಡೆವು.
೧೮ ನಾವು ನಮ್ಮ ಬೀದಿಗಳಲ್ಲಿ ಹೋಗ ಕೂಡದ ಹಾಗೆ ನಮ್ಮ ಹೆಜ್ಜೆ
ಗಳನ್ನು ಬೇಟೆಯಾಡುತ್ತಾರೆ;
ನಮ್ಮ ಅಂತ್ಯವು ಸಮೀಪವಾಯಿತು, ನಮ್ಮ ದಿನಗಳು ತುಂಬಿ
ಅವೆ; ಹೌದು ನಮ್ಮ ಅಂತ್ಯವು ಬಂತು.
೧೯ ನಮ್ಮನ್ನು ಹಿಂದಟ್ಟುವವರು ಆಕಾಶದ ಹದ್ದುಗಳಿಗಿಂತ ಶೀಘ್ರವಾ
ಗಿದ್ದಾರೆ;
ಬೆಟ್ಟಗಳ ಮೇಲೆ ನಮ್ಮನ್ನು ಹತ್ತಿ ಕೊಂಡರು; ಅರಣ್ಯದಲ್ಲಿ ನಮ
ಗೆ ಹೊಂಚಿ ಕೊಂಡರು.
೨೦ ನಮ್ಮ ಮೂಗಿನ ಶ್ವಾಸವಾದ ಕರ್ತನ ಅಭಿಷಿಕ್ತನು,
ಯಾರ ವಿಷಯ—ಅವನ ನೆರಳಿನ ಕೆಳಗೆ ನಾವು ಜನಾಂಗಗಳೊ
ಳಗೆ ಜೀವಿಸುವೆವೆಂದು ಹೇಳಿ ಕೊಂಡೆವೋ,
ಅವನು, ಅವರ ಕುಣಿಗಳಲ್ಲಿ ಕೆಕ್ಕಿದನು.
೨೧ ಏದೋಮಿನ ಮಗಳೇ! ಊಜಿನ ದೇಶದಲ್ಲಿ ವಾಸವಾಗಿರುವವಳೇ!
ಉಲ್ಲಾಸಿಸಿ, ಸಂತೋಷ ಪಡು.
ನಿನ್ನ ಬಳಿಗೂ ಪಾತ್ರೆಯು ದಾಟಿ ಬರುವದು; ನೀನು ಮತ್ತಳಾ
ಗಿ ನಿನ್ನನ್ನು ಬೆತ್ತಲೆ ಮಾಡಿ ಕೊಳ್ಳುವಿ.
೨೨ ಚಿಯೋನಿನ ಮಗಳೇ! ನಿನ್ನ ಅಕ್ರಮದ ಶಿಕ್ಷೆ ತೀರಿತು;
ಅವನು ಇನ್ನು ಮೇಲೆ ನಿನ್ನನ್ನು ಕೆಡಿಗೆ ವೈಯ್ಯುವದಿಲ್ಲ;
ಏದೋಮಿನ ಮಗಳೇ! ನಿನ್ನ ಅಕ್ರಮವನ್ನು ವಿಚಾರಿಸುವನು;
ನಿನ್ನ ಪಾಪಗಳಿಗಾಗಿ ನಿನ್ನನ್ನು ಕೆಡೆಯಾಗಿ ಹೋಗ ಮಾಡು
ವನು.

## ೫. ಸಂಧಿ.

೧ ಕರ್ತನೇ, ನಮ್ಮ ಮೇಲೆ ಬಂದದ್ದನ್ನು ಜ್ಞಾಪಕ ಮಾಡು;
ನಮ್ಮ ನಿಂದೆಯನ್ನು ದೃಷ್ಟಿಸಿ ನೋಡು.
೨ ನಮ್ಮ ಸ್ವಾಸ್ತ್ಯವು ಪರರಿಗೂ, ನಮ್ಮ ಮನೆಗಳು ಅನ್ಯರಿಗೂ,
ವಶವಾದವು.
೩ ದಿಕ್ಕಿಲ್ಲದವಕಾಗಿದ್ದೇವೆ, ನಮಗೆ ತಂದೆ ಇಲ್ಲ;
ನಮ್ಮ ತಾಯಿಗಳು ವೆಧವೆಗಳಾಗಿದ್ದಾರೆ.

೪ ನಮ್ಮ ನೀರನ್ನು ಹಣ ಕೊಟ್ಟು ಕುಡಿಯುತ್ತೇವೆ;
ನಮ್ಮ ಸಾವೆ ಕ್ರಯಕ್ಕೆ ಬರುತ್ತವೆ.
೫ ನಮ್ಮ ಕುತ್ತಿಗೆಗಳು ಹಿಂಸೆಗೊಳಗಾದವು;
ವಿಶ್ರಾಂತಿಯಾಗವೆ ಕಷ್ಟ ಪಡುತ್ತೇವೆ.
೬ ನಮಗೆ ಕೊಟ್ಟಿ ನಾಕಾಗುವ ಹಾಗೆ,
ಐಗುತ್ಯರಿಗೂ ಅಶ್ಶೂರರಿಗೂ ಕೈ ಕೊಟ್ಟಿದ್ದೇವೆ.
೭ ನಮ್ಮ ತಂದೆಗಳು ಪಾಪ ಮಾಡಿ ಇಲ್ಲದೆ ಹೋದರು;
ಮತ್ತು ನಾವು ಅವರ ಅಕ್ರಮಗಳನ್ನು ಹೊರುತ್ತೇವೆ.
೮ ದಾಸರು ನಮ್ಮ ಮೇಲೆ ಧೊರೆತನ ಮಾಡುತ್ತಾರೆ;
ಅವರ ಕೈಯೊಳಗಿಂದ ತಪ್ಪಿಸುವವನಿಲ್ಲ.
೯ ಅಡವಿಯ ಕತ್ತಿಯ ನಿಮಿತ್ತ ಪ್ರಾಣಸಂಕಟ ಪಟ್ಟು ನಮ್ಮ ಕೊಟ್ಟಿ ತರಿಸುತ್ತೇವೆ.
೧೦ ಹಸಿವೆಯ ಕಿಚ್ಚಿನಿಂದ ನಮ್ಮ ಚರ್ಮ ಬಲೆಯ ಹಾಗೆ ಕಪ್ಪಾಯಿತು.
೧೧ ಚಿಯೋನಿನಲ್ಲಿ ಸ್ತ್ರೀಯರನ್ನೂ ಯೆಹೂದದ ಪಟ್ಣಗಳಲ್ಲಿ ಕನ್ನಿಕೆಗಳನ್ನು ಕೆಡಿಸಿದರು.
೧೨ ಪ್ರಧಾನರು ಅವರ ಕೈಯಿಂದ ಗಲ್ಲಿಗೆ ಹಾಕಲ್ಪಟ್ಟರು;
ಹಿರಿಯರ ಮುಖಗಳಿಗೆ ಮಾನ ತೋರಿಸಲಿಲ್ಲ;
೧೩ ಯೌವ್ವನಸ್ಥರನ್ನು ಬೀಸುವದಕ್ಕೆ ತಕ್ಕೊಂಡರು, ಹುಡುಗರು ಕಟ್ಟಿಗೆ ಹೊತ್ತು ಬಿದ್ದರು.
೧೪ ಮುದುಕರು ಬಾಗಲಲ್ಲಿ ಕೂಡುವದನ್ನೂ,
ಯೌವ್ವನಸ್ಥರು ಬಾಸಿಸುವದನ್ನೂ, ಬಿಟ್ಟಿದ್ದಾರೆ.
೧೫ ನಮ್ಮ ಹೃದಯದ ಸಂತೋಷವು ನಿಂತು ಹೋಯಿತು;
ನಮ್ಮ ನಾಟ್ಯವು ದುಃಖಕ್ಕೆ ಬದಲಾಯಿತು.
೧೬ ಕಿರೀಟವು ನಮ್ಮ ತಲೆಯಿಂದ ಬಿದ್ದು ಹೋಯಿತು;
ನಮಗೆ ಅಯ್ಯೋ! ಯಾಕಂದರೆ ಪಾಪ ಮಾಡಿದ್ದೇವೆ.
೧೭ ಇದರ ನಿಮಿತ್ತ ನಮ್ಮ ಹೃದಯವು ಕುಂಗಿತು;
ಇವುಗಳ ನಿಮಿತ್ತ ನಮ್ಮ ಕಣ್ಣುಗಳು ಮಬ್ಬಾದವು.
೧೮ ಹಾಳಾಗಿರುವ ಚಿಯೋನ್ ಪರ್ವತದ ನಿಮಿತ್ತವೇ;
ನರಿಗಳು ಅದರ ಮೇಲೆ ತಿರುಗಾಡುತ್ತವೆ.
೧೯ ಓ ಯೆಹೋವಾ! ನೀನು ನಿತ್ಯವಾಗಿ ನಿಲ್ಲುತ್ತೀ;
ನಿನ್ನ ಸಿಂಹಾಸನವು ತಲತಲಾಂತರಕ್ಕೂ ಇದೆ.
೨೦ ಯಾಕೆ ಎಂದೆಂದಿಗೂ ನಮ್ಮನ್ನು ಮರೆಯುತ್ತೀ!
ಬಹಳ ದಿವಸಗಳ ಮಟ್ಟಿಗೂ ನಮ್ಮನ್ನು ಕೈ ಬಿಡುವದು ಯಾಕೆ!
೨೧ ಕರ್ತನೇ, ನಿನ್ನ ಕಡೆಗೆ ನಮ್ಮನ್ನು ತಿರುಗಿಸು; ಆಗ ತಿರುಗಿಸಲ್ಪಡುವೆವು;
ಪೂರ್ವದಲ್ಲಿ ಆದ ಹಾಗೆ ನಮ್ಮ ದಿನಗಳನ್ನು ನೂತನ ಮಾಡು.
೨೨ ಯಾಕಂದರೆ, ನಮ್ಮನ್ನು ಪೂರ್ಣವಾಗಿ ತಳ್ಳಿ ಬಿಟ್ಟಿದ್ದೀ.
ನಮ್ಮ ಮೇಲೆ ಬಹಳ ಕಿಟ್ಟು ಮಾಡಿದ್ದೀ.

---

# THE BOOK OF THE PROPHET EZEKIEL.

## ಪ್ರವಾದಿಯಾದ ಎಜೇಕಿಯೇಲನ ಪುಸ್ತಕವು.

### ೧. ಸಂಧಿ.

೧ ಮೂವತ್ತನೇ ವರುಷದಲ್ಲಿ, ನಾಲ್ಕನೇ ತಿಂಗಳಿನ ಐದನೇ ದಿವಸದಲ್ಲಿ, ನಾನು ಕೆರೆಯವರ ಮಧ್ಯದಲ್ಲಿ ಕೀಬಾರ್ ನದಿಯ ಬಳಿಯಲ್ಲಿ ಇರುವಾಗ, ಆದದ್ದೇನಂದರೆ—ಆಕಾಶವು ತೆರೆಯಲ್ಪಟ್ಟಿತು;
೨ ಮತ್ತು ನಾನು ದೇವರ ದರ್ಶನಗಳನ್ನು ನೋಡಿದೆನು. ತಿಂಗಳಿನ ಐದನೇ ದಿವಸದಲ್ಲಿ, ಅರಸನಾದ ಯೆಹೋಯಕೀನನ ಕೆರೆ
3 ಯ ಐದನೇ ವರುಷದಲ್ಲಿ, ಕರ್ತನ ವಾಕ್ಯವು ಕಸ್ದೀಯರ ದೇಶದಲ್ಲಿ, ಕೀಬಾರ್ ನದಿಯ ಬಳಿಯಲ್ಲಿ, ಬೂಜಿಯ ಮಗನಾದ, ಯಾಜಕನಾದ ಎಜೇಕಿಯೇಲನಿಗೆ ಬಂದೇ ಬಂತು; ಅಲ್ಲಿ ಕರ್ತನ ಕೈ ಅವನ ಮೇಲೆ ಇತ್ತು.
೪ ನಾನು ನೋಡಲಾಗಿ, ಅಗೋ ಉತ್ತರದಿಂದ ಬಿರುಗಾಳಿ ಬಂತು; ದೊಡ್ಡ ಮೇಘವೂ, ಪಸ ಮಾಡಿಕೊಳ್ಳುವ ಬೆಂಕಿಯೂ, ಅದಕ್ಕೆ ಸುತ್ತಲಾಗಿ ಪ್ರಕಾಶವೂ, ಇತ್ತು; ಅದರೊಳಗಿಂದ, ಬೆಂಕಿಯ ಮಧ್ಯದೊಳಗಿಂದ, ಥಳ್ ಥಳಿಸುವ ಭಂಗಾರದ ಕಾಂತಿಯ
೫ ಹಾಗಿತ್ತು. ಮತ್ತು ಅದರ ಮಧ್ಯದೊಳಗಿಂದ ನಾಲ್ಕು ಜೀವಿಗಳ ರೂಪವು ಹೊರಟಿತು; ಅವುಗಳ ಆಕಾರವೇನಂದರೆ—ಅವುಗಳಿಗೆ
೬ ಮನುಷ್ಯನ ರೂಪವಿತ್ತು. ಅವುಗಳಲ್ಲಿ ಬಂದೊಂದಕ್ಕೆ ನಾಲ್ಕು ನಾಲ್ಕು ಮುಖಗಳೂ, ನಾಲ್ಕು ನಾಲ್ಕು ರೆಕ್ಕೆಗಳೂ, ಇದ್ದವು. ಅ
೭ ವುಗಳ ಕಾಲುಗಳು ನೆಟ್ಟಗಾದ ಕಾಲುಗಳು; ಅವುಗಳ ಅಂಗಾಲುಗಳು ಕರುವಿನ ಅಂಗಾಲಿನ ಹಾಗೆ; ಅವು ಪೊಳಗು ಮಾಡಿರುವ
೮ ಹಿತ್ತಾಳೆಯ ಹಾಗೆ ಥಳ್ ಥಳಿಸುತ್ತಿದ್ದವು. ಅವುಗಳ ರೆಕ್ಕೆಗಳ ಕೆಳಗೆ, ಅವುಗಳ ನಾಲ್ಕು ಪಕ್ಕೆಗಳಲ್ಲಿ, ಮನುಷ್ಯನ ಕೈಗಳು ಅವುಗಳಿಗಿದ್ದವು; ಆ ನಾಲ್ಕಕ್ಕೆ ತಮ್ಮ ಮುಖಗಳೂ, ತಮ್ಮ ರೆಕ್ಕೆಗ
೯ ಳೂ, ಇದ್ದವು. ಅವುಗಳ ರೆಕ್ಕೆಗಳು ಒಂದಕ್ಕೊಂದು ಜೋಡಿಸಲ್ಪಟ್ಟವು; ಅವು ಹೋಗುತ್ತಿರುವಾಗ ತಿರುಗಿಕೊಳ್ಳಲಿಲ್ಲ; ಒಂದೊಂ
೧೦ ದು ಮುಂದಕ್ಕೆ ನೆಟ್ಟಗೆ ಹೋಯಿತು. ಅವುಗಳ ಮುಖದ ರೂಪವೇನಂದರೆ—ಆ ನಾಲ್ಕಕ್ಕೆ, ಬಲಕಡೆಯಲ್ಲಿ, ಮನುಷ್ಯನ ಮುಖವೂ, ಸಿಂಹದ ಮುಖವೂ, ಇತ್ತು. ಎಡಕಡೆಯಲ್ಲಿ, ಆ ನಾಲ್ಕಕ್ಕೆ ಹೋರಿಯ ಮುಖವು ಇತ್ತು; ಆ ನಾಲ್ಕಕ್ಕೆ ಹದ್ದಿನ ಮುಖವು
೧೧ ಸಹ ಇತ್ತು. ಅವುಗಳ ಮುಖಗಳು ಹೀಗೆ; ಮತ್ತು ಅವುಗಳ ರೆಕ್ಕೆಗಳೂ ಮೇಲಕ್ಕೆ ಚಾಚಲ್ಪಟ್ಟವು; ಒಂದೊಂದಕ್ಕೆ ಎರಡೆರಡು ರೆಕ್ಕೆಗಳು ಜೋಡಿಸಲ್ಪಟ್ಟವು; ಮತ್ತು ಎರಡು ತಮ್ಮ ಶರೀರಗಳನ್ನು ಮುಚ್ಚಿದವು. ಮತ್ತು ಅವುಗಳೆಲ್ಲಾ ಮುಂದಕ್ಕೆ ನೆಟ್ಟಗೆ
೧೨ ಹೋದವು; ಆತ್ಮವು ಎಲ್ಲಿ ಹೋಗುವದಕ್ಕಿತ್ತೋ, ಅಲ್ಲಿಗೆ ಹೋದವು; ಅವು ಹೋಗುವಾಗ ತಿರುಗಿ ಕೊಳ್ಳಲಿಲ್ಲ.
೧೩ ಆ ಜೀವಿಗಳ ರೂಪವೇನಂದರೆ—ಅವುಗಳ ಆಕಾರವು ಉರಿಯುವ ಬೆಂಕಿಯ ಕೆಂಡಗಳ ಹಾಗೆಯೂ, ದೀಪಗಳ ಆಕಾರದ ಹಾಗೆಯೂ, ಇತ್ತು; ಅದು ಜೀವಿಗಳ ಮಧ್ಯದಲ್ಲಿ ತಿರುಗಾಡುತ್ತಿತ್ತು; ಆ ಬೆಂಕಿಯು ಪ್ರಕಾಶವುಳ್ಳದ್ದಾಗಿತ್ತು; ಮತ್ತು ಬೆಂಕಿಯೊಳಗಿಂ
೧೪ ದ ಮಿಂಚು ಹೊರಟಿತು. ಆ ಜೀವಿಗಳು ಮಿಂಚಿನ ಆಕಾರದಂತೆ ಓಡುತ್ತಾ ತಿರುಗುತ್ತಾ ಇದ್ದವು.
೧೫ ಮತ್ತು ನಾನು ಆ ಜೀವಿಗಳನ್ನು ನೋಡಲಾಗಿ, ಅಗೋ, ಜೀವಿಗಳ ಬಳಿಯಲ್ಲಿ ನಾಲ್ಕು ಮುಖಗಳುಳ್ಳ ಒಂದು ಚಕ್ರ ಇತ್ತು.
೧೬ ಚಕ್ರಗಳ ಆಕಾರವೂ ಅವುಗಳ ಕೆಲಸವೂ ತಾರ್ಷಿಷ್ ಕಲ್ಲಿನ ಕಾಂ



ತಿಯ ಹಾಗಿತ್ತು. ಆ ನಾಲ್ಕಕ್ಕೆ ಒಂದೇ ರೂಪ; ಅವುಗಳ ಆಕಾರವೂ ಅವುಗಳ ಕೆಲಸವೂ ಚಕ್ರದೊಳಗೆ ಚಕ್ರವು ಇದ್ದ ಹಾಗಿತ್ತು.
೧೭ ಅವು ಹೋದಾಗ ತಮ್ಮ ನಾಲ್ಕು ಪಕ್ಕೆಗಳ ಮೇಲೆ ಹೋದವು;
೧೮ ಹೋಗುವಾಗ ತಿರುಗಲಿಲ್ಲ; ಅವುಗಳ ಕಟ್ಟುಗಳ ವಿಷಯವೋ ಇವುಗಳ ಎತ್ತರವು ಭಯಂಕರವಾಗಿತ್ತು; ಅವುಗಳ ಕಟ್ಟುಗಳು ಆ ನಾಲ್ಕರ ಸುತ್ತಲಾಗಿ ಕಣ್ಣುಗಳಿಂದ ತುಂಬಾಗಿದ್ದವು. ಆ ಜೀವಿ
೧೯ ಗಳು ಹೋಗುವಾಗ ಚಕ್ರಗಳು ಅವುಗಳ ಬಳಿಯಲ್ಲಿ ಹೋದವು; ಜೀವಿಗಳು ಭೂಮಿಯ ಮೇಲಿನಿಂದ ಎತ್ತಲ್ಪಟ್ಟಾಗ ಚಕ್ರಗಳು
೨೦ ಎತ್ತಲ್ಪಟ್ಟವು. ಆತ್ಮವು ಎಲ್ಲಿಗೆ ಹೋಗುವದಕ್ಕಿತ್ತೋ ಅಲ್ಲಿಗೆ—ಆತ್ಮವು ಹೋಗುವದಕ್ಕಿದ್ದ ಕಡೆಗೆ—ಅವು ಹೋದವು; ಚಕ್ರಗಳು ಸಹಾ ಅವುಗಳ ಸಂಗಡ ಎತ್ತಲ್ಪಟ್ಟವು; ಯಾಕಂದರೆ ಜೀವಿಗಳ ಆತ್ಮವು ಚಕ್ರಗಳಲ್ಲಿ ಇತ್ತು. ಅವು ಹೋಗುವಾಗ ಇವು ಹೋದ
೨೧ ವು; ಅವು ನಿಲ್ಲುವಾಗ ಇವು ನಿಂತವು; ಮತ್ತು ಅವು ಭೂಮಿಯ ಮೇಲಿನಿಂದ ಎತ್ತಲ್ಪಟ್ಟಾಗ ಚಕ್ರಗಳು ಅವುಗಳ ಸಂಗಡ ಎತ್ತಲ್ಪಟ್ಟವು. ಯಾಕಂದರೆ ಜೀವಿಗಳ ಆತ್ಮವು ಚಕ್ರಗಳಲ್ಲಿ ಇತ್ತು.
೨೨ ಇದಲ್ಲದೆ ಜೀವಿಯ ತಲೆಗಳ ಮೇಲೆ ಆಕಾಶವಿಶಾಲದ ರೂಪವು ಗಂಭೀರವಾದಂಥ ವಜ್ರದ ಕಾಂತಿಯ ಹಾಗಿತ್ತು; ಅವುಗಳ ತಲೆಗಳ
೨೩ ಮೇಲೆ ಹಾಸಲ್ಪಟ್ಟಿತು. ಮತ್ತು ಆಕಾಶವಿಶಾಲದ ಕೆಳಗೆ ಅವುಗಳ ರೆಕ್ಕೆಗಳು ನೆಟ್ಟಗೆ, ಒಂದಕ್ಕೊಂದು ಸರಿಯಾಗಿದ್ದವು; ಬಂದೊಂದಕ್ಕೆ ತಮ್ಮ ಶರೀರಗಳನ್ನು ಮುಚ್ಚಿ ಕೊಂಡಂಥ ಈಚೆಯಲ್ಲಿ ಎರಡೂ, ಆಚೆಯಲ್ಲಿ ಎರಡೂ, ಇದ್ದವು. ಮತ್ತು ಅವು ಹೋದಾ
೨೪ ಗ ನಾನು ಅವುಗಳ ರೆಕ್ಕೆಗಳ ಶಬ್ದವನ್ನು ಕೇಳಿದೆನು; ಬಹಳ ನೀರುಗಳ ಶಬ್ದದ ಹಾಗೆಯೂ, ಸರ್ವಶಕ್ತನ ಶಬ್ದದ ಹಾಗೆಯೂ, ಸಂದಣಿಯ ಶಬ್ದದ ಹಾಗೆಯೂ, ಸೈನ್ಯದ ಶಬ್ದದ ಹಾಗೆಯೂ, ಇತ್ತು; ಅವು ನಿಂತಾಗ ತಮ್ಮ ರೆಕ್ಕೆಗಳನ್ನು ಇಳಿಸಿದವು. ಮತ್ತು
೨೫ ಅವು ನಿಂತು ತಮ್ಮ ರೆಕ್ಕೆಗಳನ್ನು ಇಳಿಸಿದ ಮೇಲೆ, ಅವುಗಳ ತಲೆಗಳ ಮೇಲಿರುವ ಆಕಾಶವಿಶಾಲದೊಳಗಿಂದ ಶಬ್ದವಾಯಿತು.
೨೬ ಮತ್ತು ಅವುಗಳ ತಲೆಗಳ ಮೇಲಿರುವ ಆಕಾಶವಿಶಾಲದ ಮೇಲೆ, ನೀಲ ಕಲ್ಲಿನ ಆಕಾರವುಳ್ಳ ಸಿಂಹಾಸನದ ರೂಪವಿತ್ತು; ಮತ್ತು ಸಿಂಹಾಸನದ ರೂಪದ ಮೇಲೆ ಮನುಷ್ಯನ ಆಕಾರವುಳ್ಳ ಒಂದು
೨೭ ರೂಪವಿತ್ತು. ಮತ್ತು ನಾನು ಥಳ್ ಥಳಿಸುವ ಭಂಗಾರದ ಕಾಂತಿಯ ಹಾಗಿರುವದನ್ನೂ, ಒಳಗಿನಿಂದ ಸುತ್ತಲಾಗಿ ಬೆಂಕಿಯ ರೂಪದ ಹಾಗಿರುವದನ್ನೂ ಕಂಡೆನು; ಅವನ ನಡುವಿನ ಆಕಾರದ ಮೇಲ್ಗಡೆಗೂ ಅವನ ನಡುವಿನ ಆಕಾರದ ಕೆಳಗಡೆಗೂ, ಬೆಂಕಿಯ ಆಕಾರದ ಹಾಗಿರುವದನ್ನು ಕಂಡೆನು; ಅದಕ್ಕೆ ಸುತ್ತಲು ಪ್ರಕಾಶವಿತ್ತು.
೨೮ ಮಳೆಯ ದಿವಸದಲ್ಲಿ ಮೇಘದಲ್ಲಿರುವ ಬಿಲ್ಲಿನ ಆಕಾರ ಹ್ಯಾಗೋ ಹಾಗೆಯೇ ಆ ಸುತ್ತಲಿನ ಪ್ರಕಾಶದ ಆಕಾರವು ಇತ್ತು; ಇದು ಯೆಹೋವನ ಮಹಿಮೆಯ ರೂಪದ ಆಕಾರವು; ನಾನು ಅದನ್ನು ನೋಡಿದಾಗ ಮೋರೆ ಕೆಳಗಾಗಿ ಬಿದ್ದು, ಮಾತಾಡುವ ಒಬ್ಬನ ಶಬ್ದವನ್ನು ಕೇಳಿದೆನು.

### ೨. ಸಂಧಿ.

೧ ಅವನು ನನಗೆ—ಮನುಷ್ಯನ ಮಗನೇ, ಕಾಲೂರಿ ನಿಂತುಕೋ;
೨ ಆಗ ನಿನ್ನ ಸಂಗಡ ಮಾತಾಡುವೆನು, ಅಂದನು. ಅವನು ನನ್ನ ಸಂಗಡ ಮಾತಾಡುವಾಗ, ಆತ್ಮವು ನನ್ನಲ್ಲಿ ಸೇರಿ ನನ್ನನ್ನು ಕಾ
3 ಲೂರಿ ನಿಲ್ಲುವ ಹಾಗೆ ಮಾಡಿತು; ಆಗ ನಾನು ನನ್ನ ಸಂಗಡ ಮಾತಾಡುವವನನ್ನು ಕೇಳಿದೆನು. ಅವನು ನನಗೆ ಹೇಳಿದ್ದೇನಂದರೆ—ಮನುಷ್ಯನ ಮಗನೇ, ನಾನು ನಿನ್ನನ್ನು ಇಸ್ರಯೇಲನ ಮಕ್ಕಳ ಬಳಿಗೆ, ನನಗೆ ವಿರೋಧವಾಗಿ ತಿರುಗಿ ಬಿದ್ದಿರುವ ತಿರುಗಿ ಬೀಳುವಂಥ ಜನಾಂಗದ ಬಳಿಗೆ, ಕಳುಹಿಸುತ್ತೇನೆ; ಅವರೂ ಅವರ ತಂದೆಗಳೂ ಇಂದಿನ ವರೆಗೂ ನನಗೆ ವಿರೋಧವಾಗಿ ದ್ರೋಹ ಮಾ
೪ ಡಿದ್ದಾರೆ. ಅವರು ಕಠಿಣ ಮುಖವುಳ್ಳ, ಘಟ್ಟಿಯಾದ ಹೃದಯವುಳ್ಳ, ಮಕ್ಕಳು; ನಾನು ನಿನ್ನನ್ನು ಅವರ ಬಳಿಗೆ ಕಳುಹಿಸುತ್ತೇನೆ; ಮತ್ತು ನೀನು ಅವರಿಗೆ—ಕರ್ತನಾದ ಯೆಹೋವನು ಹೀಗೆ
೫ ಹೇಳುತ್ತಾನೆಂದು ಹೇಳ ಬೇಕು. ಮತ್ತು ಅವರು, ತಿರುಗಿ ಬೀಳುವ ಮನೆಯವರಾಗಿರುವದರಿಂದ, ಕೇಳಿದರೂ ಕೇಳದಿದ್ದರೂ ತಪ್ಪೊಗೆಗೆ ಪ್ರವಾದಿ ಇದ್ದನೆಂದು ತಿಳುಕೊಳ್ಳಲಿ. ಇದಲ್ಲದೆ, ಮನುಷ್ಯನ ಮಗನೇ, ನೀನು ಅವರಿಗೆ ಭಯ ಪಡ ಬೇಡ; ಅವರ ಮಾತುಗಳಿಗೂ ಭಯ ಪಡ ಬೇಡ; ಮುಳ್ಳುಗಳೂ ದಟ್ಟಾರಿಗಳು ನಿನ್ನ ಸಂಗಡ ಇದ್ದರೂ, ಚೇಳುಗಳಲ್ಲಿ ನೀನು ವಾಸಿಸಿದರೂ, ಅವರ ಮಾತುಗಳಿಗೆ ಭಯ ಪಡ ಬೇಡ; ಅವರ ಮುಖಗಳಿಗೆ ಹೆದ
6 ರ ಬೇಡ; ಅವರು ತಿರುಗಿ ಬೀಳುವ ಮನೆಯವರೇ ನಿಶ್ಚಯ. ಅವರು ಕೇಳಿದರೂ ಕೇಳದಿದ್ದರೂ ನೀನು ನನ್ನ ಮಾತುಗಳನ್ನು ಅವರಿಗೆ ಹೇಳ ಬೇಕು; ಯಾಕಂದರೆ ಅವರು ತಿರುಗಿ ಬೀಳುವ
೭ ಮನೆಯವರೇ. ನೀನಾದರೆ, ಮನುಷ್ಯನ ಮಗನೇ, ನಾನು ನಿನಗೆ ಹೇಳುವದನ್ನು ಕೇಳು—ಆ ತಿರುಗಿ ಬೀಳುವ ಮನೆಯವರ ಹಾಗೆ ನೀನು ತಿರುಗಿ ಬೀಳುವವನಾಗ ಬೇಡ. ನಿನ್ನ ಬಾಯಿಯನ್ನು
೮ ತೆರೆದು ನಾನು ನಿನಗೆ ಕೊಡುವದನ್ನು ತಿನ್ನು. ಆಗ ನಾನು ನೋಡಲಾಗಿ, ಇಗೋ, ಒಂದು ಕೈ ನನ್ನ ಬಳಿಗೆ ಚಾಚಲ್ಪಟ್ಟಿತು; ಮತ್ತು ಇಗೋ, ಪುಸ್ತಕದ ಸುರಳಿ ಅದರಲ್ಲಿ ಇತ್ತು.
೯ ಮತ್ತು ಅವನು ಅದನ್ನು ನನ್ನ ಮುಂದೆ ಹಾಸಿದನು; ಅದರ ಬಳಿಗೆಯೂ ಹೊರಗೆಯೂ ಬರಹವು ಇತ್ತು. ಅದರಲ್ಲಿ ಬರೆಯಲ್ಪಟ್ಟಿದ್ದೇನಂದರೆ—ಗೋಳಾಟ ಚಿಂತೆ ಅಯ್ಯೋ ಎಂಬವುಗಳೇ.

### 3. ಸಂಧಿ.

೧ ಇದಲ್ಲದೆ ಅವನು ನನಗೆ—ಮನುಷ್ಯನ ಮಗನೇ, ನಿನಗೆ ಸಿಕ್ಕಿದ್ದನ್ನು ತಿನ್ನು. ಈ ಸುರಳಿಯನ್ನು ತಿಂದು, ಹೋಗಿ, ಇಸ್ರಯೇ
೨ ಲನ ಮನೆಯವರ ಸಂಗಡ ಮಾತಾಡು, ಅಂದನು. ಆಗ ನಾನು ನನ್ನ ಬಾಯಿ ತೆರೆದೆನು; ಮತ್ತು ಅವನು ನನಗೆ ಆ ಸುರಳಿಯ
3 ನ್ನು ತಿನ್ನಿಸಿದನು. ಅವನು—ಮನುಷ್ಯನ ಮಗನೇ, ನಿನ್ನ ಹೊಟ್ಟೆಯನ್ನು ತಿನ್ನ ಮಾಡು; ನಾನು ನಿನಗೆ ಕೊಡುವ ಈ ಸುರಳಿಯಿಂದ ನಿನ್ನ ಕರುಳುಗಳನ್ನು ತುಂಬಿಸು, ಅಂದನು. ಆಗ ನಾನು ಅದನ್ನು ತಿಂದೆನು; ಮತ್ತು ಅದು ನನ್ನ ಬಾಯಿಯಲ್ಲಿ ಜೇನಿನ ಹಾಗೆ ಸಿಹಿಯಾಗಿತ್ತು. ಇದಲ್ಲದೆ ಅವನು ನನಗೆ ಹೇಳಿದ್ದೇನಂದರೆ—
೪ ಮನುಷ್ಯನ ಮಗನೇ, ನೀನು ಇಸ್ರಯೇಲನ ಮನೆಯವರ ಬಳಿಗೆ ಹೋಗಿ, ನನ್ನ ಮಾತುಗಳಿಂದ ಅವರ ಸಂಗಡ ಮಾತಾಡು.
೫ ಯಾಕಂದರೆ ನೀನು ಮರೆಯಾದ ತುಟಿಯುಳ್ಳ, ಕಠಿಣ ಭಾಷೆಯನ್ನಾಡುವ ಜನರ ಬಳಿಗೆ ಅಲ್ಲ; ಇಸ್ರಯೇಲನ ಮನೆಯವರ
6 ಬಳಿಗೆಯೇ ಕಳುಹಿಸಲ್ಪಟ್ಟಿದ್ದೀ. ನೀನು ಅವರ ಮಾತು ತಿಳಿಯಲಾರದಂಥ, ಮರೆಯಾದ ತುಟಿಯುಳ್ಳ, ಕಠಿಣ ಭಾಷೆಯನ್ನಾ

ರುವ ಅನೇಕ ಜನಾಂಗಗಳ ಬಳಿಗೆ ಕಳುಹಿಸಲ್ಪಟ್ಟಿವನಲ್ಲ; ನಿಶ್ಚಯ
ವಾಗಿ ನಾನು ಅವರ ಬಳಿಗೆ ನಿನ್ನನ್ನು ಕಳುಹಿಸಿ ಇದ್ದರೆ, ಅವರು
೬ ನಿನಗೆ ಕಿವಿಕೊಡುತ್ತಿದ್ದರು. ಆದರೆ ಇಸ್ರಯೇಲನ ಮನೆಯವರು ನಿ
ನಗೆ ಕಿವಿ ಕೊಡುವದಕ್ಕೆ ಮನಸ್ಸುಳ್ಳವರಲ್ಲ; ಯಾಕಂದರೆ ನನಗೆ
ಕಿವಿ ಕೊಡುವದಕ್ಕೆ ಅವರಿಗೆ ಮನಸ್ಸಿಲ್ಲ; ಯಾಕಂದರೆ ಇಸ್ರಯೇ
ಲನ ಮನೆಯವರೆಲ್ಲರು ಕಠಿಣವಾದ ಹಣೆಯುಳ್ಳವರು, ಘಟ್ಟಿ
೭ ಯಾದ ಹೃದಯವುಳ್ಳವರು. ಇಗೋ ನಾನು ನಿನ್ನ ಮುಖವ
ನ್ನು ಅವರ ಮುಖಗಳಿಗೆ ಎದುರಾಗಿ ಕಠಿಣ ಮಾಡಿದ್ದೇನೆ; ನಿನ್ನ
ಹಣೆಯನ್ನು ಅವರ ಹಣೆಗಳಿಗೆ ಎದುರಾಗಿ ಕಠಿಣ ಮಾಡಿದ್ದೇ
೮ ನೆ. ಚಕ್ಕಮುಕ್ಕಿ ಕಲ್ಲಿಗಿಂತ ಘಟ್ಟಿಯಾಗಿ ವಜ್ರದಂತೆ ನಿನ್ನ ಹ
ಣೆಯನ್ನು ಮಾಡಿದ್ದೇನೆ; ಅವರು ತಿರುಗಿ ಬೀಳುವ ಮನೆಯವರಾ
ದರೂ, ನೀನು ಅವರಿಗೆ ಭಯ ಪಡ ಬೇಡ, ಅವರ ಮುಖಗಳಿಗೆ
೧೦ ಕೆದರ ಬೇಡ. ಇದಲ್ಲದೆ, ಅವನು ನನಗೆ ಹೇಳ್ದದ್ದೇನಂದರೆ—ಮನು
ಷ್ಯನ ಮಗನೇ, ನಾನು ನಿನ್ನ ಸಂಗಡ ಆಡುವ ನನ್ನ ಮಾತುಗ
ಳನ್ನೆಲ್ಲಾ ನಿನ್ನ ಹೃದಯದಲ್ಲಿ ತಕ್ಕೊಂಡು, ನಿನ್ನ ಕಿವಿಗಳಿಂದ
೧೧ ಕೇಳು. ಈಗ ನದಿ; ಕೆಬೆಯವರ ಬಳಿಗೆ, ನಿನ್ನ ಜನರ ಮಕ್ಕಳ
ಬಳಿಗೆ, ಹೋಗಿ, ಅವರ ಸಂಗಡ ಮಾತಾಡಿ, ಅವರು ಕೇಳ್ದಿದರೂ
ಕೇಳ್ದದಿದ್ದರೂ, ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆಂ
೧೨ ದು, ಅವರಿಗೆ ಹೇಳು. ಆಗ ಆತ್ಮವು ನನ್ನನ್ನು ಎತ್ತಿತು; ಮತ್ತು
ನಾನು ನನ್ನ ಹಿಂದೆ—ಯೆಹೋವನ ಮಹಿಮೆ ತನ್ನ ಸ್ಥಳದೊಳ
ಗಿಂದ ಹರಸಲ್ಪಡತಕ್ಕೆಂಬುವ ಮಹಾ ಘೋಷದ ಶಬ್ದವನ್ನು ಕೇಳಿದೆ
೧೩ ನು. ಇದಲ್ಲದೆ ಬಂದಕ್ಕೊಂಡು ಮುಟ್ಟಿದ ಆ ಜೀವಿಗಳ ರೆಕ್ಕೆಗಳ
ಶಬ್ದವನ್ನೂ ಅವುಗಳ ಬಳಿಯಲ್ಲಿದ್ದ ಚಕ್ರಗಳ ಶಬ್ದವನ್ನೂ ಮಹಾ
೧೪ ಗೋಷದ ಶಬ್ದವನ್ನು, ಕೇಳಿದೆನು. ಹಾಗೆ ಆತ್ಮವು ನನ್ನನ್ನು ಎ
ತ್ತಿ, ತಕ್ಕೊಂಡು ಹೋಯಿತು; ಮತ್ತು ನಾನು, ಕಹಿಯಲ್ಲಿಯೂ
ನನ್ನ ಆತ್ಮದ ಉರಿಯಲ್ಲಿಯೂ, ಹೋದೆನು, ಮತ್ತು ಯೆಹೋ
೧೫ ವನ ಕೈ ನನ್ನ ಮೇಲೆ ಬಲವಾಗಿತ್ತು. ಆಗ ನಾನು ತೆಲಬೀಬಿನಲ್ಲಿ
ರುವ ಕೆಬೆಯವರ ಬಳಿಗೆ, ಕೀಬಾರ್ ನದಿಯ ಹತ್ತಿರ ವಾಸಿಸಿದವರ
ಬಳಿಗೆ, ಬಂದೆನು; ಅವರು ವಾಸಿಸಿದ್ದಲ್ಲಿ ನಾನು ಅವರೊಳಗೆ ಏಳು
ದಿವಸ ಬಿಸ್ಮಿತನಾಗಿ ಕೂತು ಕೊಂಡೆನು.

೧೬ ಏಳು ದಿವಸಗಳ ಮೇಲೆ ಆದದ್ದೇನಂದರೆ—ಯೆಹೋವನ ವಾ
೧೭ ಕ್ಯವು ನನಗೆ ಉಂಟಾಗಿ ಹೇಳ್ದದ್ದೇನಂದರೆ—ಮನುಷ್ಯನ ಮಗ
ನೇ, ನಾನು ನಿನ್ನನ್ನು ಇಸ್ರಯೇಲನ ಮನೆಯವರಿಗೆ ಕೊಪಕದ
ವನಾಗ ಮಾಡಿದ್ದೇನೆ; ಆದಕಾರಣ ನೀನು ನನ್ನ ಬಾಯಿಯಿಂದ
೧೮ ವಾಕ್ಯವನ್ನು ಕೇಳಿ, ನನ್ನಿಂದ ಅವರನ್ನು ಎಚ್ಚರಿಸು. ನಾನು ದು
ಷ್ಟನಿಗೆ—ನೀನು ಸತ್ತೇ ಸಾಯುವಿ ಎಂದು, ಹೇಳುವಾಗ, ನೀನು
ಅವನನ್ನು ಎಚ್ಚರಿಸದೆ, ಅವನನ್ನು ಬದುಕಿಸುವ ಹಾಗೆ, ದುಷ್ಟನ
ನ್ನು ಅವನ ದುಷ್ಟ ಮಾರ್ಗದ ವಿಷಯ ಎಚ್ಚರಿಸ ಮಾತಾಡದೆ
ಹೋದರೆ, ಆ ದುಷ್ಟನು ತನ್ನ ಅಕ್ರಮದಲ್ಲಿ ಸಾಯುವನು; ಆದ
೧೯ ರೆ ಅವನ ರಕ್ತವನ್ನು ನಿನ್ನ ಕೈಯಿಂದ ವಿಚಾರಿಸುವೆನು. ಆದರೆ
ನೀನು ದುಷ್ಟನನ್ನು ಎಚ್ಚರಿಸಿದ ಮೇಲೆ, ಅವನು ತನ್ನ ದುಷ್ಟತ್ವ
ವನ್ನೂ, ತನ್ನ ದುಷ್ಟ ಮಾರ್ಗವನ್ನೂ, ಬಿಟ್ಟು, ಶಿರುಗದೆ ಹೋ
ರೆ, ಅವನು ತನ್ನ ಅಕ್ರಮದಲ್ಲಿ ಸಾಯುವನು; ಆದರೆ ನೀನು
೨೦ ನಿನ್ನ ಪ್ರಾಣವನ್ನು ತಪ್ಪಿಸಿದ್ದೀ. ಮತ್ತು, ನೀತಿವಂತನು ತನ್ನ ನೀತಿ
ಯನ್ನು ಬಿಟ್ಟು ಅನ್ಯಾಯ ಮಾಡಲು, ನಾನು ಎಡತಡೆಯನ್ನು
ಅವನ ಮುಂದೆ ಇಡುವಾಗ, ಅವನು ಸಾಯುವನು; ನೀನು ಅವನ
ನ್ನು ಎಚ್ಚರಿಸದೆ ಇದ್ದದರಿಂದ ಅವನು ತನ್ನ ಪಾಪದಲ್ಲಿ ಸಾಯು
ವನು; ಅವನು ಮಾಡಿರುವ ಅವನ ನೀತಿಗಳು ಜ್ಞಾಪಕ ಮಾಕಲ್ಪ
ಡುವದಿಲ್ಲ; ಆದರೆ ಅವನ ರಕ್ತವನ್ನು ನಿನ್ನ ಕೈಯಿಂದ ವಿಚಾರಿಸು
೨೧ವೆನು. ಆದರೆ ನೀತಿವಂತನು ಪಾಪ ಮಾಡದ ಹಾಗೆ, ನೀನು ನೀ
ತಿವಂತನನ್ನು ಎಚ್ಚರಿಸುವಾಗ, ಅವನು ಪಾಪ ಮಾಡದೆ ಹೋದ
ರೆ, ಅವನು ಎಚ್ಚರಿಕೆಯಾದದರಿಂದ ನಿಶ್ಚಯವಾಗಿ ಬದುಕುವನು;
ಮತ್ತು ನೀನು ನಿನ್ನ ಪ್ರಾಣವನ್ನು ತಪ್ಪಿಸಿದ್ದೀ.

೨೨ ಆಗ ಯೆಹೋವನ ಕೈ ಅಲ್ಲಿ ನನ್ನ ಮೇಲೆ ಇತ್ತು; ಅವನು
ನನಗೆ ಹೇಳ್ದದ್ದೇನಂದರೆ—ಏಳು, ತಗ್ಗಿಗೆ ಹೊರಡು; ಅಲ್ಲಿ ನಿನ್ನ
ಸಂಗಡ ಮಾತಾಡುವೆನು. ಆಗ ನಾನು ಎದ್ದು, ತಗ್ಗಿಗೆ ಹೊರಟಿ
೨೩ ನು; ಅಲ್ಲಿ ಇಗೋ ಯೆಹೋವನ ಮಹಿಮೆ, ಕೀಬಾರ್ ನದಿಯ ಹ
ತ್ತಿರ ನಾನು ನೋಡಿದ ಮಹಿಮೆಯ ಪ್ರಕಾರವೇ, ನಿಂತಿತು; ಆಗ
೨೪ ನಾನು ಮೋರೆ ಕೆಳಗಾಗಿ ಬಿದ್ದೆನು. ಆಗ ಆತ್ಮವು ನನ್ನಲ್ಲಿ ಬಂ
ದು, ನನ್ನನ್ನು ಕಾಲೂರಿ ನಿಲ್ಲ ಮಾಡಿ, ನನ್ನ ಸಂಗಡ ಮಾತಾಡಿ,
ನನಗೆ ಹೇಳ್ದದ್ದೇನಂದರೆ—ಹೋಗಿ, ನಿನ್ನ ಮನೆಯೊಳಗೆ ನಿನ್ನನ್ನು
೨೫ ಮುಚ್ಚಿಕೋ. ನೀನಾದರೆ, ಮನುಷ್ಯನ ಮಗನೇ, ಇಗೋ ಅವ
ರು ಬಂಧಗಳನ್ನು ನಿನ್ನ ಮೇಲೆ ಇಟ್ಟು, ಅವುಗಳಿಂದ ನಿನ್ನನ್ನು
೨೬ ಕಟ್ಟುವರು; ನೀನು ಅವರ ಮಧ್ಯದಲ್ಲಿ ಹೊರಡದೆ ಇರುವಿ. ಇದ
ಲ್ಲದೆ ನಿನ್ನ ನಾಲಿಗೆಯನ್ನು ನಿನ್ನ ಅಂಗಳಕ್ಕೆ ಹತ್ತ ಮಾಡುವೆನು;
ನೀನು ಮೂಕನಾಗಿ ಅವರಿಗೆ ಗದರಿಸುವವನಾಗದಿರುವಿ; ಯಾಕಂ
೨೭ ದರೆ ಅವರು ತಿರುಗಿ ಬೀಳುವ ಮನೆಯವರೇ. ಆದರೆ ನಾನು ನಿನ್ನ
ಸಂಗಡ ಮಾತಾಡುವಾಗ, ನಿನ್ನ ಬಾಯಿಯನ್ನು ತೆರೆಯುವೆನು;
ಆಗ ನೀನು ಅವರಿಗೆ ಹೇಳ್ದ ತಕ್ಕದ್ದೇನಂದರೆ—ಕರ್ತನಾದ ಯೆ
ಹೋವನು ಹೀಗೆ ಹೇಳುತ್ತಾನೆ—ಕೇಳುವವನು ಕೇಳಲಿ, ಕೇಳದ
ವನು ಕೇಳ್ದದಿರಲಿ; ಯಾಕಂದರೆ ಅವರು ತಿರುಗಿ ಬೀಳುವ ಮನೆ
ಯವರೇ.

## ೪. ಸಂಧಿ.

೧ ಇದಲ್ಲದೆ ನೀನು, ಮನುಷ್ಯನ ಮಗನೇ, ಒಂದು ಹೆಂಚನ್ನು
ತಕ್ಕೊಂಡು, ನಿನ್ನ ಮುಂದೆ ಇಟ್ಟು, ಅದರ ಮೇಲೆ ಪಟ್ಟಣವನ್ನು,
೨ ಯೆರೂಸಲೇಮನ್ನೇ, ಬರೆ. ಮತ್ತು ಅದಕ್ಕೆ ಮುತ್ತಿಗೆ ಹಾಕಿ,
ಅದಕ್ಕೆ ವಿರೋಧವಾಗಿ ಕೋಟೆಯನ್ನು ಕಟ್ಟಿ, ಅದಕ್ಕೆ ವಿರೋ
ಧವಾಗಿ ಪೊಹರ್ಜೆಯನ್ನು ಎಬ್ಬಿಸಿ, ಅದಕ್ಕೆ ವಿರೋಧವಾಗಿ
ದಂಡುಗಳನ್ನು ಇರಿಸಿ, ಅದಕ್ಕೆ ವಿರೋಧವಾಗಿ ಸುತ್ತಲು ಬಡೆಯು
೩ ವ ಆಯುಧಗಳನ್ನು ಇಡು. ಮತ್ತು ನೀನು ಕಬ್ಬಿಣದ ತಟ್ಟೆಯ
ನ್ನು ತಕ್ಕೊಂಡು, ಅದನ್ನು ಕಬ್ಬಿಣದ ಗೋಡೆ ಎಂಥೇಳಿ, ನಿನ
ಗೂ ಪಟ್ಟಣಕ್ಕೂ ನಡುವೆಯಾಗಿ ಇರಿಸು; ಆ ಮೇಲೆ ಅದಕ್ಕೆ ಎದು
ರಾಗಿ ನಿನ್ನ ಮುಖವನ್ನಿಡು; ಆಗಲದು ಮುತ್ತಿಗೆಯಲ್ಲಿ ಇರುವದು;
ನೀನು ಅದಕ್ಕೆ ಮುತ್ತಿಗೆ ಹಾಕ ಬೇಕು; ಇದು ಇಸ್ರಯೇಲನ
ಮನೆಯವರಿಗೆ ಗುರುತಾಗಿದೆ.

೪ ಇದಲ್ಲದೆ ನೀನು ನಿನ್ನ ಎಡಪಾರ್ಶ್ವದಲ್ಲಿ ಮಲಗಿ, ಇಸ್ರಯೇ
ಲನ ಮನೆಯವರ ಅಕ್ರಮವನ್ನು ಅದರ ಮೇಲೆ ಇಡ ಬೇಕು; ನೀ
ನು ಅದರ ಮೇಲೆ ಮಲಗುವ ದಿವಸಗಳ ಲೆಖ್ಖದ ಪ್ರಕಾರ ಅವರ
೫ ಅಕ್ರಮವನ್ನು ಹೊರ ಬೇಕು. ಯಾಕಂದರೆ, ನಾನು ದಿವಸಗಳ



ಲೆಖ್ಖದ ಪ್ರಕಾರ ಅವರ ಅಕ್ರಮದ ವರುಷಗಳನ್ನು ನಿನಗೆ ನೇಮಿ
ಸಿದ್ದೇನೆ—ಮುನೂಫಾ ತೊಂಭತ್ತು ದಿವಸಗಳೇ. ಹೀಗೆ ನೀನು
೬ ಇಸ್ರಯೇಲನ ಮನೆಯವರ ಅಕ್ರಮವನ್ನು ಹೊರ ಬೇಕು. ಮತ್ತು
ನೀನು ಇವುಗಳನ್ನು ತೀರಿಸಿದ ಮೇಲೆ ನಿನ್ನ ಬಲಪಾರ್ಶ್ವದಲ್ಲಿ
ಇನ್ನೊಂದು ಸಾರಿ ಮಲಗಿ, ಯೆಹೂದನ ಮನೆಯವರ ಅಕ್ರಮವ
ನ್ನು ನಾಲ್ವತ್ತು ದಿವಸ ಹೊರ ಬೇಕು; ಬಂದೊಂದು ವರುಷಕ್ಕೆ
೭ ಬಂದೊಂದು ದಿನದ ಪ್ರಕಾರ ನಿನಗೆ ನೇಮಿಸಿದ್ದೇನೆ. ಇದಲ್ಲದೆ ಯೆ
ರೂಸಲೇಮಿನ ಮುತ್ತಿಗೆಯ ಕಡೆಗೆ ನಿನ್ನ ಮುಖವನ್ನಿಡ ಬೇಕು;
ಮತ್ತು ನಿನ್ನ ತೋಳು ಬರಿದು ಮಾಡಿಕೊಂಡು, ಅದಕ್ಕೆ ವಿರೋ
೮ ಧವಾಗಿ ಪ್ರವಾದಿಸ ಬೇಕು. ಮತ್ತು ಇಗೋ, ನೀನು ನಿನ್ನ ಮುತ್ತಿ
ಗೆಯ ದಿವಸಗಳನ್ನು ತೀರಿಸುವ ಪರ್ಯಂತರ, ನೀನು ಬಂದು
ಪಾರ್ಶ್ವದಿಂದ ಮತ್ತೊಂದಕ್ಕೆ ಶಿರುಗದಿರ ನಾನು ಬಂಧಗಳನ್ನು
ನಿನ್ನ ಮೇಲೆ ಇಡುತ್ತೇನೆ.

೯ ಇದಲ್ಲದೆ ನೀನು ಗೋಧಿ, ಜವೆಗೋಧಿ ಅವರೆ, ಹುಲಗುರಿ,
ನವಣೆ, ಸಜ್ಜೆಗಳನ್ನು ತಕ್ಕೊಂಡು, ಅವುಗಳನ್ನು ಒಂದು ಮಡಿಕೆ
ಯಲ್ಲಿ ಇಟ್ಟು, ನೀನು ನಿನ್ನ ಪಾರ್ಶ್ವದಲ್ಲಿ ಮಲಗುವ ದಿವಸಗ
ಳ ಲೆಖ್ಖದ ಪ್ರಕಾರ ನಿನಗೆ ಕೊಟ್ಟಿಯನ್ನು ಮಾಡಿಕೊಳ್ಳ ಬೇ
ಕು ಮುನೂಫಾ ತೊಂಭತ್ತು ದಿವಸಗಳು ಆದದಂದ ತಿನ್ನ ಬೇಕು. ನೀ
೧೦ ನು ತಿನ್ನುವ ಆಹಾರ ತೂಕದ ಪ್ರಕಾರ ದಿನಕ್ಕೆ ಇಪ್ಪತ್ತು ಶೆಕೆಲು
ಗಳಾಗಿರ ಬೇಕು; ಕಾಲಕಾಲಕ್ಕೆ ಅದನ್ನು ತಿನ್ನ ಬೇಕು. ಮತ್ತು
೧೧ ನೀನು ನೀರನ್ನು ಸಣ ಅಳತೆಯ ಪ್ರಕಾರ ಕುಡಿಯ ಬೇಕು, ಹಿ
೧೨ ನಿನ ಅರನೇ ಪಾಲನ್ನು ಕಾಲಕಾಲಕ್ಕೆ ಕುಡಿಯ ಬೇಕು. ಇದಲ್ಲದೆ
ಆಹಾರವನ್ನು ಜವೆಗೋಧಿಯ ಹೊಳ್ಳುಗಳಂತೆ ತಿನ್ನ ಬೇಕು;
ಅದನ್ನು ಮನುಷ್ಯನಿಗಿಂತಾಗಿ ಬರುವ ಮಲದಿಂದ ಅವರ ಕಣ್ಣು
೧೩ ಗಳ ಮುಂದೆ ಅರಿಸಿ ಮಾಡ ಬೇಕು. ಮತ್ತು ಕರ್ತನು ಹೇಳ್ದದ್ದೇ
ನಂದರೆ—ಹೀಗೆಯೇ ಇಸ್ರಯೇಲನ ಮಕ್ಕಳು ಕೆಟ್ಟು ಅಶುದ್ಧಾ
ರ ಕೊಟ್ಟಿಯನ್ನು ನಾನು ಅವರನ್ನು ಓಡಿಸಿ ಬರುವ ಜಾಗದ
ಗೆಳೆಗೆ ತಿನ್ನುವರು.

೧೪ ಆಗ ನಾನು—ಅಯ್ಯೋ, ಕರ್ತನಾದ ಯೆಹೋವನೇ! ಇ
ಗೋ, ನನ್ನ ಪ್ರಾಣವು ಅಶುದ್ಧವಾಗಿಲ್ಲ; ಚಿಕ್ಕಂದಿನಿಂದ ಈವ
ರೆಗೂ ಕಿಟ್ಟುಕ್ಕಿ ಸತ್ತದ್ದನ್ನೂ ಮೃಗಗಳಿಂದ ಸೀಳಲ್ಪಟ್ಟದ್ದನ್ನೂ
ನಾನು ತಿನ್ನಲಿಲ್ಲ; ಅಸಹ್ಯ ಮಾಂಸವಾದರೂ ನನ್ನ ಬಾಯಿಯ
೧೫ ಳಿ ಸೇರಲಿಲ್ಲ. ಅಂದನು ಮತ್ತೆ—ಇಗೋ, ಮನುಷ್ಯ
ನ ಮಲಕ್ಕೆ ಬದಲಾಗಿ ಕಾಸಿದ ಗೋಮಯವನ್ನು ನಿನಗೆ ಕೊಟ್ಟಿದ್ದೇ
ನೆ; ಅದರಿಂದ ನಿನ್ನ ಕೊಟ್ಟಿಯನ್ನು ಮಾಡ ಬರುವು, ಅಂದನು.
೧೬ ಇದಲ್ಲದೆ ಅವನು ನನಗೆ ಹೇಳ್ದದ್ದೇನಂದರೆ—ಮನುಷ್ಯನ ಮಗನೇ,
ಇಗೋ ನಾನು ಯೆರೂಸಲೇಮಲ್ಲಿ ಅನ್ನಾಧಾರವನ್ನು ಮುರಿ
ಯುವೆನು, ಅವರು ತೂಕದ ಪ್ರಕಾರ ಜಾಗ್ರತೆಯಿಂದ ಕೊಟ್ಟಿ
ಯನ್ನು ತಿನ್ನುವರು; ಮತ್ತು ನೀರನ್ನು ಅಳತೆಯ ಪ್ರಕಾರ ಬಿಸ್ಮಿ
೧೭ ತರಾಗಿ ಕುಡಿಯುವರು. ಯಾಕಂದರೆ, ಅವರು ಕೊಟ್ಟಿಯೂ
ನೀರೂ ಇಲ್ಲದೆ, ಒಬ್ಬರ ಸಂಗಡೊಬ್ಬರು ಬಿಸ್ಮಿತರಾಗಿ, ತಮ್ಮ
ಅಕ್ರಮದಲ್ಲಿ ಕುಂದಿ ಹೋಗುವದಕ್ಕಾಗಿಯೇ.

## ೫. ಸಂಧಿ.

೧ ಇದಲ್ಲದೆ ನೀನು, ಮನುಷ್ಯನ ಮಗನೇ, ಹರಿದಾದ ಕತ್ತಿಯ
ನ್ನು, ಕ್ಷೌರಕನ ಕತ್ತಿಯನ್ನು, ತಕ್ಕೊಂಡು; ಮತ್ತು ಅದನ್ನು ನಿನ್ನ
ತಲೆಯ ಮೇಲೆಯೂ, ನಿನ್ನ ಗಡ್ಡದ ಮೇಲೆಯೂ, ಹಾದು ಹೋ
ಗ ಮಾಡು; ಆ ಮೇಲೆ ತೂಕ ಮಾಡುವದಕ್ಕೆ ತ್ರಾಸನ್ನು ತಕ್ಕೊಂ
೨ ಡು, ಕೂದಲನ್ನು ವಿಭಾಗಿಸು. ಮೂರನೇ ಪಾಲನ್ನು ಪಟ್ಟಣದ ಮ
ಧ್ಯದಲ್ಲಿ ಮುತ್ತಿಗೆಯ ದಿವಸಗಳು ತುಂಬಿದ ಮೇಲೆ, ಬೆಂಕಿಯಿಂ
ದ ಸುಡ ಬೇಕು; ಮೂರನೇ ಪಾಲನ್ನು ತಕ್ಕೊಂಡು ಕತ್ತಿಯಿಂದ
ಸುತ್ತಲಾಗಿ ಬಡಿಯ ಬೇಕು; ಮೂರನೇ ಪಾಲನ್ನು ಗಾಳಿಗೆ ಚೆ
ಲ್ಲ ಬೇಕು; ಮತ್ತು ನಾನು ಅವುಗಳ ಹಿಂದೆ ಕತ್ತಿಯನ್ನು ಬೀಸು
೩ವೆನು. ಮತ್ತು ನೀನು ಅವುಗಳಲ್ಲಿಂದ ಲೆಖ್ಖದಲ್ಲಿ ಕೆಲವನ್ನು
೪ ತೆಗೆದು, ನಿನ್ನ ಕಸಗುಗಳಲ್ಲಿ ಕಟ್ಟು. ಮತ್ತು ತಿರಿ. ಅವುಗಳೊ
ಳಗಿಂದ ತೆಗೆದು, ಬೆಂಕಿಯ ಮಧ್ಯದಲ್ಲಿ ಹಾಕಿ, ಅವುಗಳನ್ನು ಬೆಂ
ಕಿಯಲ್ಲಿ ಸುಡು; ಇದರಿಂದ ಬೆಂಕಿ ಸಮಸ್ತ ಇಸ್ರಯೇಲನ ಮನೆಯ
ವರ ಬಳಿಗೆ ಹೊರಡುವದು.

೫ ಕರ್ತನಾದ ಯೆಹೋವನು ಹೇಳುವದೇನಂದರೆ—ಇದೇ ಯೆ
ರೂಸಲೇಮು. ನಾನು ಅದನ್ನು, ಅದರ ಸುತ್ತಲಿರುವ ಜನಾಂ
೬ ಗ ಕೇಂದ್ರಗಳ ಮಧ್ಯದಲ್ಲಿ ಇಟ್ಟಿದ್ದೇನೆ. ಆದರೆ ಅದು ಜನಾಂಗಗ
ಳಿಗಿಂತ ಹೆಚ್ಚಾಗಿ ನನ್ನ ನ್ಯಾಯಗಳನ್ನೂ, ಸುತ್ತಲಿರುವ ಕೇಂದ್ರ
ಗಳಿಗಿಂತ ಹೆಚ್ಚಾಗಿ ನನ್ನ ನಿಯಮಗಳನ್ನೂ ದುಷ್ಟತ್ವಕ್ಕೆ ತಿರುಗಿಸಿ
ಬಿಟ್ಟಿತು; ಯಾಕಂದರೆ ನನ್ನ ನ್ಯಾಯಗಳನ್ನು ಕೈಕೊಳ್ಳದೆ, ನನ್ನ
೭ ನಿಯಮಗಳ್ಳಿ, ಅವರು ಮಾಡಲಿಲ್ಲ. ಆದರಿಂದ ಕರ್ತನಾದ ಯೆ
ಹೋವನು ಹೀಗೆ ಹೇಳುತ್ತಾನೆ—ನೀವು ನಿಮ್ಮ ಸುತ್ತಲಿರುವ ಜ
ನಾಂಗಗಳಂತೆ ಅಧಿಕಾರದಲ್ಲಿ ನನ್ನ ನಿಯಮಗಳ್ಳಿ ನಡ
ದೆ ಕೊಳ್ಳದೆಯೂ ನನ್ನ ನ್ಯಾಯಗಳನ್ನು ಕೈಕೊಳ್ಳದೆಯೂ ನಿಮ್ಮ ಸುತ್ತಲಿರುವ ಜನಾಂಗಗ
ಳ ಪ್ರಕಾರ ಮಾಡದೆಯೂ ಇದ್ದ ಕಾರಣ ಯೆಹೋವನು
ಹೀಗೆ ಹೇಳುತ್ತಾನೆ—ಇಗೋ ನಾನು, ನಾನೇ, ನಿಮ್ಮ ವಿರೋ
ಧವಾಗಿ ಇದ್ದೇನೆ; ಜನಾಂಗಗಳ ಕಣ್ಣುಗಳ ಮುಂದೆ ನಿಮ್ಮ ಮಧ್ಯದಲ್ಲಿ
ನ್ಯಾಯತೀರಿಸುವೆನು. ಮತ್ತು ನಿಮ್ಮ ಮಧ್ಯದಲ್ಲಿ ನಾನು ಮಾಡದ
ಹಾಗೆ ಮತ್ತೆ ಮಾಡದೆ ಅಂಥದ್ದೂ ನಿಮ್ಮ ಅಸಹ್ಯಗಳ ನಿಮಿತ್ತ
೮ ಅಂಥದ್ದೂ ಮತ್ತೆ ನಿಮ್ಮಲ್ಲಿ ಮಾಡುವೆನು. ಆದರೆ ನೀವು ನಿಮ್ಮ
ಮಧ್ಯದಲ್ಲಿ ಕುಲಗಳು ಮಕ್ಕಳಿದು ಕೆಟ್ಟವರು, ಮತ್ತು ಮತ್ತ
ರು ಕುಲಗಳನ್ನು ಕೆಟ್ಟವರು. ಹೀಗೆ ನಿಮ್ಮ ನ್ಯಾಯಗಳಲ್ಲಿ
ಕಠಿಣವನ್ನು ವರುಷಗಳು, ಮತ್ತು ನಿಮ್ಮ ಅಸಹ್ಯಗಳನ್ನು ನಿಮ್ಮ ಮ
ಧ್ಯದಲ್ಲಿ ಇರುವುದು. ಆದರಿಂದ ನಿಮ್ಮಲ್ಲಿ ಮೊದಲೇ
೧೦ ಅಂಥದರಿಲ್ಲವೋ, ನನ್ನ ಕಣ್ಣಾಗಿ, ನಿಮ್ಮಲ್ಲಿ ನಾನು ಮಾಡ
ದ ಹಾಗೆ ಮತ್ತೆ ಮಾಡದೆ ಅಂಥದ್ದೂ ನಿಮ್ಮ ಎಲ್ಲಾ ಕೆಟ್ಟಗುಣ
ಗಳ ನಿಮ್ಮ ಎಲ್ಲಾ ಅಸಹ್ಯಗಳಿಂದಲೂ, ಅಂತಿಕ್ಕ ಕೂಡಿದ ಕಾರಣ
ನಾನು ನಿಮ್ಮನ್ನು ಕಡಿದು ಬಾಡುವೆನು. ನನ್ನ ಕಣ್ಣು ಕರು
ಣಿಸುವದಿಲ್ಲ; ನಾನು ಕರುಣ್ಣ ತೋರಿಸುವದಿಲ್ಲ; ನಿಮ್ಮಲ್ಲಿ ಮೂ
ರನೇ ಪಾಲು ಜ್ವರದಿಂದ ಸಾಯುವರು, ಬರದಿಂದ ನಿಮ್ಮ ಮಧ್ಯ
ದಲ್ಲಿ ಕೀಳು ಹೋಗುವರು; ಮೂರನೇ ಪಾಲು ನಿಮ್ಮ ಸುತ್ತಲಿನ
ಕತ್ತಿಯಿಂದ ಬೀಳುವರು; ಮೂರನೇ ಪಾಲನ್ನು ಎಲ್ಲಾ ದಿಕ್ಕುಗಳ
೧೧ ಗೆ ಚದರಿಸಿ, ಅವರ ಹಿಂದೆ ಕತ್ತಿಯನ್ನು ಬೀಸುವೆನು. ಈ ಪ್ರಕಾ
ರ ನನ್ನ ಕೋಪ ತೀರುವದು; ನನ್ನ ಉರಿಯನ್ನು ಅವರ ಮೇಲೆ
ಮುಕ್ತಾಯ ಮಾಡಿ ಸಮಾಧಾನ ಪಡಿಸುವೆನು. ನಾನು ಅವ
ರ ಮೇಲೆ ಮುಗಿಸಿದ ಮೇಲೆ, ನಾನು ಯೆಹೋವನೆಂದು ಅವ

ಯನ್ನು ಅವರಲ್ಲಿ ತೀರಿಸಿದ ಮೇಲೆ, ಕರ್ತನಾದ ನಾನು ನನ್ನ ಆ
೧೪ ಸತ್ತಿಯಲ್ಲಿ ಮಾತಾಡಿದ್ದೇನೆಂದು ಅವರಿಗೆ ತಿಳಿಯುವದು. ಇದಲ್ಲ
ದೆ ನಾನು, ಹಾದು ಹೋಗುವವರೆಲ್ಲರ ಕಣ್ಣುಗಳ ಮುಂದೆ, ನಿನ್ನ
ಸುತ್ತಲಿರುವ ಎಲ್ಲಾ ಜನಾಂಗಗಳೊಳಗೆ, ನಿನ್ನನ್ನು ಹಾಳಾಗಿ
೧೫ ಯೂ ನಿಂದೆಯಾಗಿಯೂ ಮಾಡುತ್ತೇನೆ. ಈ ಪ್ರಕಾರ ನಾನು
ಕೋಪದಿಂದಲೂ ಉಗ್ರದಿಂದಲೂ ಉಗ್ರದ ಗದರಿಕೆಯಿಂದಲೂ
ನಿನ್ನಲ್ಲಿ ನ್ಯಾಯ ತೀರ್ಪಿಕೆಗಳನ್ನು ನಡಿಸುವಾಗ, ನಿನ್ನ ಸುತ್ತಲಿ
ರುವ ಜನಾಂಗಗಳಿಗೆ ನಿಂದೆಯೂ ದೂಷಣೆಯೂ ಶಿಕ್ಷೆಯೂ
ವಿಸ್ಮಯವೂ ಆಗುವದು; ಯೆಹೋವನಾದ ನಾನೇ ಅದನ್ನು ಹೇ
೧೬ ಳಿದ್ದೇನೆ. ನಾನು ನಾಶನಕ್ಕಾಗಿರುವ ಬರದ ಕೆಟ್ಟ ಬಾಣಗಳನ್ನು
ಅವರಲ್ಲಿ ಕಳುಹಿಸುವಾಗ, ನಿಮ್ಮನ್ನು ನಾಶ ಮಾಡುವದಕ್ಕೆ ಅವು
ಗಳನ್ನು ಕಳುಹಿಸುವೆನು; ಹೌದು, ನಿಮ್ಮ ಮೇಲೆ ಬರವನ್ನು ಹೆ
೧೭ ಚ್ಚಿಸಿ, ನಿಮ್ಮ ಅನ್ನಾಧಾರವನ್ನು ಮುರಿಯುತ್ತೇನೆ. ಹೀಗೆ ಬರ
ವನ್ನೂ ಕೆಟ್ಟ ಮೃಗಗಳನ್ನೂ ನಿಮ್ಮ ಮೇಲೆ ಕಳುಹಿಸುತ್ತೇನೆ;
ಅವು ನಿಮ್ಮನ್ನು ದಿಕ್ಕಿಲ್ಲದವರಾಗ ಮಾಡುವವು; ಜಾಡ್ಯವೂ ರಕ್ತ
ವೂ ನಿನ್ನಲ್ಲಿ ಹಾದು ಹೋಗುವವು; ಮತ್ತು ನಿನ್ನ ಮೇಲೆ ಕತ್ತಿ
ಯನ್ನು ತರುತ್ತೇನೆ. ಯೆಹೋವನಾದ ನಾನೇ ಅದನ್ನು ಹೇ
ಳಿದ್ದೇನೆ.

## ೬. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದ
೨ ರೆ—ಮನುಷ್ಯನ ಮಗನೇ, ನಿನ್ನ ಮುಖವನ್ನು ಇಸ್ರಯೇಲಿನ
ಬೆಟ್ಟಗಳಿಗೆ ಎದುರಾಗಿ ಇಟ್ಟು, ಅವುಗಳ ವಿಷಯ ಪ್ರವಾದಿಸು.
3 ಹ್ಯಾಗಂದರೆ—ಇಸ್ರಯೇಲಿನ ಬೆಟ್ಟಗಳೇ! ಕರ್ತನಾದ ಯೆಹೋ
ವನ ವಾಕ್ಯವನ್ನು ಕೇಳಿರಿ; ಕರ್ತನಾದ ಯೆಹೋವನು ಬೆಟ್ಟಗಳಿ
ಗೂ ಗುಡ್ಡಗಳಿಗೂ ಹಳ್ಳಗಳಿಗೂ ತಗ್ಗುಗಳಿಗೂ ಹೀಗೆ ಹೇಳು
ತ್ತಾನೆ—ಇಗೋ, ನಾನು, ನಾನೇ, ನಿಮ್ಮ ಮೇಲೆ ಕತ್ತಿಯನ್ನು
ತರಿಸಿ, ನಿಮ್ಮ ಮೇಡುಗಳನ್ನು ನಾಶ ಮಾಡುತ್ತೇನೆ. ಮತ್ತು
೪ ನಿಮ್ಮ ಬಲಿಪೀಠಗಳು ಹಾಳಾಗುವವು, ನಿಮ್ಮ ಸೂರ್ಯಸ್ತಂಭಗ
ಳು ಮುರಿಯಲ್ಪಡುವವು; ನಿಮ್ಮ ಹತವಾದವರನ್ನು ನಿಮ್ಮ ಮರದ
ದೇವರುಗಳ ಮುಂದೆ ಬೀಳ ಮಾಡುವೆನು. ಮತ್ತು ಇಸ್ರಯೇಲ
೫ ನ ಮಕ್ಕಳ ಹೆಣಗಳನ್ನು ಅವರ ಮರದ ದೇವರುಗಳ ಮುಂದೆ
ಹಾಕುವೆನು; ನಿಮ್ಮ ಬಲಿಪೀಠಗಳ ಸುತ್ತಲು ನಿಮ್ಮ ಎಲುವುಗಳನ್ನು
೬ ಚೆಲ್ಲುವೆನು. ನಿಮ್ಮ ಎಲ್ಲಾ ವಾಸಸ್ಥಳಗಳಲ್ಲಿ ಪಟ್ಟಣಗಳು ಹಾಳು
ಮಾಡಲ್ಪಡುವವು; ಮೇಡುಗಳು ಬೀಡಾಗುವವು; ಹೀಗೆ ನಿಮ್ಮ ಬ
ಲಿಪೀಠಗಳು ಹಾಳಾಗಿಯೂ, ಬೀಡಾಗಿಯೂ, ಮಾಡಲ್ಪಡುವವು;
ನಿಮ್ಮ ಮರದ ದೇವರುಗಳು ಮುರಿಯಲ್ಪಟ್ಟು ನಿಂತು ಹೋಗುವ
ವು; ನಿಮ್ಮ ಸೂರ್ಯಸ್ತಂಭಗಳು ಕಡಿದು ಹಾಕಲ್ಪಟ್ಟು, ನಿಮ್ಮ
೭ ಕ್ರಿಯೆಗಳು ಅಳಿಸಲ್ಪಡುವವು. ಮತ್ತು ಹತವಾದವರು ನಿಮ್ಮ ಮಧ್ಯ
ದಲ್ಲಿ ಬೀಳುವರು; ನಾನೇ ಯೆಹೋವನೆಂದು ನಿಮಗೆ ತಿಳಿಯುವ
೮ ದು. ಆದಾಗ್ಯೂ ನೀವು ದೇಶಗಳಲ್ಲಿ ಚದರಿ ಹೋಗುವಾಗ, ಜ
ನಾಂಗಗಳೊಳಗೆ ಕತ್ತಿಗೆ ತಪ್ಪಿಸಿ ಕೊಳ್ಳುವವರು ನಿಮಗಿರುವ
೯ ಹಾಗೆ, ಕೆಲವರನ್ನು ಉಳಿಸುತ್ತೇನೆ. ಮತ್ತು ನಿಮ್ಮಲ್ಲಿ ತಪ್ಪಿಸಿ
ಕೊಂಡವರು, ತಾವು ವೈಯ್ಯಲ್ಪಡುವ ಜನಾಂಗಗಳಲ್ಲಿ ನನ್ನನ್ನು
ಜ್ಞಾಪಕ ಮಾಡಿ ಕೊಳ್ಳುವರು; ಯಾಕಂದರೆ ನನ್ನನ್ನು ಬಿಟ್ಟು
ಬಿಡುವ ಅವರ ಜಾರ ಹೃದಯದಿಂದಲೂ ಅವರ ಮರದ ದೇವರು
ಗಳ ಹಿಂದೆ ಜಾರತ್ವ ಮಾಡುವ ಅವರ ಕಣ್ಣುಗಳಿಂದಲೂ ನಾನು
ಮುರಿದು ಹೋದೆನು; ಮತ್ತು ಅವರು ತಮ್ಮ ಎಲ್ಲಾ ಅಸಹ್ಯಗಳ
ಲ್ಲಿ ಮಾಡಿರುವ ಕೇಡುಗಳ ನಿಮಿತ್ತ ತಮ್ಮನ್ನು ತಾವೇ ಹೇಸಿಕೊ
೧೦ ಳ್ಳುವರು. ಮತ್ತು ನಾನೇ ಯೆಹೋವನೆಂದೂ, ನಾನು ಈ ಕೇ
ಡನ್ನು ಅವರಿಗೆ ಮಾಡುತ್ತೇನೆಂದು ಸುಮ್ಮನೆ ಹೇಳಿಲ್ಲವೆಂದೂ
ತಿಳಿಕೊಳ್ಳುವರು.

೧೧ ಕರ್ತನಾದ ಯೆಹೋವನು ಹೇಳುವದೇನಂದರೆ—ನಿನ್ನ ಕೈ
ಯಿಂದ ಬಡಿದು, ನಿನ್ನ ಕಾಲಿನಿಂದ ಘಟ್ಟಿಸಿ, ಹೇಳ ಬೇಕಾದದ್ದೇ
ನಂದರೆ—ಅಯ್ಯೋ, ಇಸ್ರಯೇಲನ ಮನೆಯವರ ಎಲ್ಲಾ ಕೆಟ್ಟ ಅ
ಸಹ್ಯಗಳೇ! ಯಾಕಂದರೆ, ಅವರು ಕತ್ತಿಯಿಂದಲೂ, ಬರದಿಂದ
೧೨ ಲೂ, ಜಾಡ್ಯದಿಂದಲೂ, ಬೀಳುವರು. ದೂರದಲ್ಲಿರುವವನು ಜಾಡ್ಯ
ದಿಂದ ಸಾಯುವನು; ಸಮೀಪದಲ್ಲಿರುವವನು ಕತ್ತಿಯಿಂದ ಬೀಳು
ವನು; ಉಳಿದವನೂ ಮುತ್ತಿಗೆಯಲ್ಲಿರುವವನೂ ಬರದಿಂದ ಸಾ
ಯುವನು; ಹೀಗೆ ನನ್ನ ಉಗ್ರವನ್ನು ಅವರಲ್ಲಿ ತೀರಿಸಿ ಬಿಡುವೆನು.
೧೩ ಆಗಲವರ ಮರದ ದೇವರುಗಳ ಮಧ್ಯದಲ್ಲಿ ಅವರ ಬಲಿಪೀಠಗ
ಳ ಸುತ್ತಲಾಗಿ, ಎತ್ತರವಾದ ಒಂದೊಂದು ಗುಡ್ಡದ ಮೇಲೆಯೂ,
ಸಮಸ್ತ ಬೆಟ್ಟಗಳ ತುದಿಗಳಲ್ಲಿಯೂ, ಹಸುರಾದ ಒಂದೊಂ
ದು ಮರದ ಕೆಳಗೂ ಗಾತ್ರವಾದ ಎಲ್ಲಾ ವೃಕ್ಷರಾಜಗಳ ಕೆಳಗೂ, ಅ
ವರು ತಮ್ಮ ಮರದ ದೇವರುಗಳಿಗೆಲ್ಲಾ ಸುವಾಸನೆ ಅರ್ಪಿಸಿದ್ದಲ್ಲಿ
ಯೂ, ಅವರ ಹತವಾದವರು ಇರುವಾಗ, ನಾನೇ ಯೆಹೋವನೆಂ
೧೪ ದು ತಿಳಿಕೊಳ್ಳುವಿರಿ. ಹೀಗೆ ನಾನು ನನ್ನ ಕೈಯನ್ನು ಅವರ
ಮೇಲೆ ಚಾಚಿ, ದೇಶವನ್ನು ಹಾಳು ಮಾಡುವೆನು; ಹೌದು ಅವರ
ಎಲ್ಲಾ ನಿವಾಸಸ್ಥಳಗಳಲ್ಲಿ ಅದನ್ನು ದಿಬ್ಲಾತಿನ ಅರಣ್ಯಕಿಂತ ಹಾ
ಳು ಮಾಡುವೆನು: ಆಗ ನಾನೇ ಯೆಹೋವನೆಂದು ತಿಳಿಕೊಳ್ಳು
ವರು.

## ೭. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂ
೨ ದರೆ—ಮತ್ತು, ಮನುಷ್ಯನ ಮಗನೇ, ಕರ್ತನಾದ ಯೆಹೋವನು
ಇಸ್ರಯೇಲ್ ದೇಶಕ್ಕೆ ಹೀಗೆ ಹೇಳುತ್ತಾನೆ—ಅಂತ್ಯವು ಬಂತು;
3 ದೇಶದ ನಾಲ್ಕು ಮೂಲೆಗಳಿಗೆ ಅಂತ್ಯವೇ. ಈಗ ನಿನ್ನ ಮೇಲೆ
ಅಂತ್ಯವು ಬಂತು; ಮತ್ತು ನನ್ನ ಕೋಪವನ್ನು ನಿನ್ನ ಮೇಲೆ ಕ
ಳುಹಿಸುತ್ತೇನೆ; ನಿನ್ನ ಮಾರ್ಗಗಳ ಪ್ರಕಾರ ನಿನಗೆ ನ್ಯಾಯ ತೀ
ರಿಸುತ್ತೇನೆ; ನಿನ್ನ ಎಲ್ಲಾ ಅಸಹ್ಯಗಳನ್ನು ನಿನ್ನ ಮೇಲೆ ಇಡುತ್ತೇ
೪ ನೆ. ನನ್ನ ಕಣ್ಣು ನಿನ್ನನ್ನು ಕನಿಕರಿಸುವದಿಲ್ಲ; ನಾನು ಕಟಾಕ್ಷ
ತೋರಿಸುವದಿಲ್ಲ; ಆದರೆ ನಿನ್ನ ಮಾರ್ಗಗಳನ್ನು ನಿನ್ನ ಮೇಲೆ
ಇಡುತ್ತೇನೆ; ನಿನ್ನ ಅಸಹ್ಯಗಳು ನಿನ್ನ ಮಧ್ಯದಲ್ಲಿ ಇರುವವು;
೫ ನಾನೇ ಯೆಹೋವನೆಂದು ನಿನಗೆ ತಿಳಿಯುವದು. ಕರ್ತನಾದ
ಯೆಹೋವನು ಹೇಳುವದೇನಂದರೆ—ಕೇಡು, ಒಂದೇ ಕೇಡು, ಇ
೬ ಗೋ ಬಂತು. ಅಂತ್ಯವು ಬಂತು; ಬಂತು ಅಂತ್ಯವು; ನಿನಗೋಸ್ಕರ
೭ ಎಚ್ಚರವಾಗಿದೆ, ಇಗೋ ಬಂತು. ದೇಶದಲ್ಲಿ ವಾಸಿಸುವವನೇ, ಬಂ
ತು, ನಿನಗೆ ಬಂತು; ಕಾಲವು ಬಂತು, ಗದ್ದಲದ ದಿವಸವು ಸಮೀಪಿಸಿ
೮ ತು; ಬೆಟ್ಟಗಳ ಅರ್ಘಟವಲ್ಲ. ಈಗ ಸ್ವಲ್ಪ ಹೊತ್ತಿನಲ್ಲಿ, ನಿನ್ನ
ಮೇಲೆ ನನ್ನ ಉಗ್ರವನ್ನು ಹೊಯ್ಯುವೆನು, ನನ್ನ ಕೋಪವನ್ನು



ನಿನ್ನಲ್ಲಿ ತೀರಿಸಿ ಬಿಡುವೆನು; ನಿನ್ನ ಮಾರ್ಗಗಳ ಪ್ರಕಾರ ನಿನಗೆ
ನ್ಯಾಯ ತೀರಿಸುವೆನು; ನಿನ್ನ ಎಲ್ಲಾ ಅಸಹ್ಯಗಳನ್ನು ನಿನ್ನ ಮೇ
೯ ಲೆ ಇಡುವೆನು. ನನ್ನ ಕಣ್ಣು ಕನಿಕರಿಸುವದಿಲ್ಲ, ನಾನು ಕಟಾಕ್ಷ
ತೋರಿಸುವದಿಲ್ಲ; ನಿನ್ನ ಮಾರ್ಗಗಳಿಗೂ ನಿನ್ನ ಮಧ್ಯದಲ್ಲಿರುವ
ನಿನ್ನ ಅಸಹ್ಯಗಳಿಗೂ ತಕ್ಕದ್ದನ್ನು ನಿನ್ನ ಮೇಲೆ ಇಡುವೆನು;
ಆಗ ಯೆಹೋವನಾದ ನಾನೇ ಹೊಡೆಯುತ್ತೇನೆಂದು ನಿಮಗೆ ತಿ
೧೦ ಳಿಯುವದು. ಇಗೋ ದಿವಸವು, ಇಗೋ ಬಂತು; ಮಂತು
೧೧ ಹೊರಟಿತು; ಕೋಲು ಚಿಗುರಿತು; ಅಹಂಕಾರವು ಅರಳಿತು. ಬಲಾ
ತ್ಕಾರವು ದುಷ್ಟತ್ವದ ಕೋಲಾಗಿ ಎದ್ದಿತು; ಅವರಲ್ಲಿಯೂ, ಅವ
ರ ಸಂದಣಿಯಲ್ಲಿಯೂ, ಅವರ ಸಂಪತ್ತಿನಲ್ಲಿಯೂ, ಏನು ಉಳಿ
ಯದು; ಅವರಿಗೋಸ್ಕರ ಗೋಳಾಟವು ಸಹ ಇರುವದಿಲ್ಲ.
೧೨ ಕಾಲವು ಬಂತು, ದಿನವು ಸಮೀಪವಾಯಿತು; ಕೊಳ್ಳುವವನು ಸಂ
ತೋಷಿಸದಿರಲಿ; ಮಾರುವವನು ದುಃಖಿಸದಿರಲಿ; ಯಾಕಂದರೆ
೧೩ ಅದರ ಎಲ್ಲಾ ಸಂದಣಿಯ ಮೇಲೆ ಕೌದ್ರವವೆ. ಯಾಕಂದರೆ ಮಾ
ರಿದವನು, ಇನ್ನೂ ಜೀವದಿಂದಿದ್ದರೂ, ಮಾರಿದ್ದರ ಬಳಿಗೆ ತಿರುಗುವ
ದಿಲ್ಲ; ಯಾಕಂದರೆ ದರ್ಶನವು ತಿರುಗದ ಸಮಸ್ತ ಸಂದಣಿಯ
ವಿಷಯವಾಗಿದೆ; ಒಬ್ಬರೂ ತಮ್ಮ ಜೀವದ ಅಕ್ರಮದಲ್ಲಿ ಬಲಗೊ
೧೪ ಳ್ಳುವದಿಲ್ಲ. ತುತೂರಿಯನ್ನೂದಿ ಎಲ್ಲಾ ಸಿದ್ಧ ಮಾಡಿದ್ದಾರೆ; ಆದ
ರೆ ಯಾರೂ ಯುದ್ಧಕ್ಕೆ ಹೋಗುವದಿಲ್ಲ; ಯಾಕಂದರೆ ಅದರ
೧೫ ಎಲ್ಲಾ ಸಂದಣಿಯ ಮೇಲೆ ನನ್ನ ಕೌದ್ರವವೆ. ಹೊರಗೆ ಕತ್ತಿಯೂ,
ಒಳಗೆ ಜಾಡ್ಯವೂ, ಬರವೂ ಉಂಟು; ಹೊಲದಲ್ಲಿ ಇರುವವನು ಕ
ತ್ತಿಯಿಂದ ಸಾಯುವನು; ಊರಿನಲ್ಲಿ ಇರುವವನನ್ನು ಬರವೂ ಜಾ
೧೬ ಡ್ಯವೂ ತಿಂದುಬಿಡುವವು. ಆದರೆ ಅವರಲ್ಲಿ ತಪ್ಪಿಸಿಕೊಳ್ಳುವವರು
ತಪ್ಪಿಸಿಕೊಳ್ಳುವರು; ಅವರೆಲ್ಲರು ತಮ್ಮ ತಮ್ಮ ಅಕ್ರಮದ ನಿಮಿ
ತ್ತ ಗೋಳಾಡಿ, ತಗ್ಗುಗಳ ಪಾರಿವಾಳಗಳ ಹಾಗೆ ಪೆಟ್ಟಗಳ ಮೇಲೆ
೧೭ ಇರುವರು. ಕೈಗಳೆಲ್ಲಾ ಜೋಲಾಡುವವು; ಮೊಣಕಾಲುಗಳೆಲ್ಲಾ
೧೮ ನೀರಿನಂತೆ ನಿತ್ರಾಣ ವಾಗುವವು. ಅವರು ಗೋಣಿ ತಟ್ಟುಗಳ
ನ್ನು ಕಟ್ಟುವರು, ದಿಗುಲು ಅವರನ್ನು ಮುಚ್ಚುವದು; ಎಲ್ಲಾ ಮು
ಖಗಳ ಮೇಲೆ ನಾಚಿಕೆಯೂ, ಅವರ ಎಲ್ಲಾ ತಲೆಗಳ ಮೇಲೆ ಬೋ
೧೯ ಳತನವೂ ಇರುವವು. ಅವರು ತಮ್ಮ ಬೆಳ್ಳಿಯನ್ನು ಬೀದಿಗಳ
ಲ್ಲಿ ಬಿಸಾಡುವರು; ಅವರ ಭಂಗಾರವು ತೊಳಿಗಿಸಲ್ಪಡುವದು; ಅ
ವರ ಬೆಳ್ಳಿಯೂ ಭಂಗಾರವೂ ಕರ್ತನ ಉರಿಯ ದಿವಸದಲ್ಲಿ
ಅವರನ್ನು ತಪ್ಪಿಸಲಾರದು; ಅವರ ಪ್ರಾಣಗಳನ್ನು ತೃಪ್ತಿಪಡಿ
ಸುವದಿಲ್ಲ; ಅವರ ಕರುಳುಗಳನ್ನು ತುಂಬಿಸುವದಿಲ್ಲ; ಯಾಕಂದ
೨೦ ರೆ, ಅದು ಅವರ ಅಕ್ರಮದ ಎಡತಡೆಯೇ. ಅವನ ಶೃಂಗಾರದ
ಸೌಂದರ್ಯವಾದರೆ, ಅದನ್ನು ಘನಕ್ಕಾಗಿ ಇಟ್ಟನು; ಆದರೆ ಅವರು
ತಮ್ಮ ಅಸಹ್ಯಗಳ ವಿಗ್ರಹಗಳನ್ನೂ ತಮ್ಮ ಹೇಸಿಗೆಗಳನ್ನೂ ಅ
ದರಲ್ಲಿ ಮಾಡಿದರು; ಆದದರಿಂದ ಅದನ್ನು ಅವರಿಗೆ ಹೊಲೆಯಾ
೨೧ ಗ ಮಾಡಿದ್ದೇನೆ. ನಾನು ಅದನ್ನು ಪರರ ಕೈಗೆ ಕೊಳ್ಳೆಯಾಗಿ
ಯೂ, ಭೂಮಿಯ ದುಷ್ಟರಿಗೆ ಸೂರೆಯಾಗಿಯೂ ಒಪ್ಪಿಸುವೆನು;
ಅವರು ಅದನ್ನು ಅಪವಿತ್ರ ಮಾಡುವರು. ಇದಲ್ಲದೆ ಅವರ ಕಡೆ
೨೨ ಯಿಂದ ತನ್ನ ಮುಖವನ್ನು ತಿರುಗಿಸುವೆನು; ಅವರು ನನ್ನ ರಹ
ಸ್ಯಸ್ಥಳವನ್ನು ಅಪವಿತ್ರ ಮಾಡುವರು; ಹೌದು, ಕಳ್ಳರು ಅದರ
ಲ್ಲಿ ಕೇರಿ, ಅದನ್ನು ಅಪವಿತ್ರ ಮಾಡುವರು.

೨3 ಸರಪಣಿಯನ್ನು ಮಾಡು; ಯಾಕಂದರೆ ದೇಶವು ರಕ್ತಾಪರಾ
ಧದಿಂದ ತುಂಬಿದೆ; ಪಟ್ಟಣವು ಬಲಾತ್ಕಾರದಿಂದ ತುಂಬಿದೆ. ಆದದರಿಂ
೨೪ ದ ನಾನು ಜನಾಂಗಗಳಲ್ಲಿ ಕೆಟ್ಟವರನ್ನು ತರುತ್ತೇನೆ, ಅವರು
ಅವರ ಮನೆಗಳನ್ನು ವಶ ಮಾಡಿಕೊಳ್ಳುವರು; ನಾನು ಬಲಿಷ್ಠರ
ಅಟ್ಟಹಾಸವನ್ನು ನಿಲ್ಲಿಸುತ್ತೇನೆ; ಅವರ ಪರಿಶುದ್ಧ ಸ್ಥಳಗಳು ಅ
೨೫ ಪವಿತ್ರವಾಗುವವು. ನಾಶನವು ಬರುತ್ತದೆ; ಅವರು ಸಮಾಧಾನ
ವನ್ನು ಹುಡುಕುವರು, ಆದರೆ ಅದು ಇರದು. ಆಪತ್ತಿನ ಮೇಲೆ
೨೬ ಆಪತ್ತು ಬರುವದು; ಸುದ್ದಿಯ ಮೇಲೆ ಸುದ್ದಿ ಇರುವದು; ಆಗ
ಪ್ರವಾದಿಯಿಂದ ದರ್ಶನವನ್ನು ಹುಡುಕುವರು; ಆದರೆ ನ್ಯಾಯ
ಪ್ರಮಾಣವು ಯಾಜಕರನ್ನೂ, ಆಲೋಚನೆಯು ಹಿರಿಯರ
೨೭ ನ್ನೂ ಬಿಟ್ಟು ನಾಶವಾಗುವದು. ಅರಸನು ದುಃಖಿಸುವನು; ಪ್ರಭು
ವು ವಿಸ್ಮಯವನ್ನು ಧರಿಸಿಕೊಳ್ಳುವನು; ಮತ್ತು ದೇಶಸ್ಥರ ಕೈಗ
ಳು ಗಾಬರಿಯಾಗುವವು; ಅವರ ಮಾರ್ಗದ ಪ್ರಕಾರ ಅವರಿಗೆ
ಮಾಡುವೆನು; ಅವರ ನ್ಯಾಯಗಳ ಪ್ರಕಾರ ಅವರಿಗೆ ನ್ಯಾಯ
ತೀರಿಸುವೆನು; ಆಗ ನಾನೇ ಯೆಹೋವನೆಂದು ಅವರಿಗೆ ತಿಳಿಯು
ವದು.

## ೮. ಸಂಧಿ.

೧ ಮತ್ತು ಆರನೇ ವರುಷದಲ್ಲಿ ಆರನೇ ತಿಂಗಳಿನ ಐದನೇ ದಿವ
ಸದಲ್ಲಿ ಆದದ್ದೇನಂದರೆ—ನಾನು ನನ್ನ ಮನೆಯಲ್ಲಿ ಕೂತುಕೊಂ
ಡಿರುವಾಗ್ಯೆ, ಯೆಹೂದದ ಹಿರಿಯರು ನನ್ನ ಮುಂದೆ ಕೂತುಕೊಂ
ಡಿರುವಾಗ್ಯೆ, ಅಲ್ಲಿ ಕರ್ತನಾದ ಯೆಹೋವನ ಕೈ ನನ್ನ ಮೇಲೆ
೨ ಬಿತ್ತು. ಆಗ ನಾನು ನೋಡಲಾಗಿ, ಇಗೋ ಮನುಷ್ಯನ ಆಕಾ
ರದ ಹಾಗೆ ಒಂದು ರೂಪವು; ಅವನ ನಡುವಿನ ಆಕಾರವು ಮೊದಲು
ಗೊಂಡು ಕೆಳಗಡೆಗೆ ಬೆಂಕಿ; ಮತ್ತು ಅವನ ನಡುವು ಮೊದಲು
ಗೊಂಡು ಮೇಲ್ಗಡೆಗೆ ಮೆರುಗು ಮಾಡಿರುವ ಹಿತ್ತಾಳೆಯ ಆಕಾರ
3 ದ ಹಾಗೆ ತೇಜಸ್ಸಿನ ತೋರಿಕೆ. ಮತ್ತು ಅವನು ಕೈಯ ಹೋಲಿ
ಕೆಯನ್ನು ಚಾಚಿ, ನನ್ನ ತಲೆಯ ಕೂದಲಿನಿಂದ ನನ್ನನ್ನು ಹಿಡಿದ
ನು; ಆಗ ಆತ್ಮವು ನನ್ನನ್ನು ಭೂಮಿಗೂ ಆಕಾಶಕ್ಕೂ ಮಧ್ಯದಲ್ಲಿ
ಎತ್ತಿ, ನನ್ನನ್ನು ದೇವರ ದರ್ಶನಗಳಲ್ಲಿ ಯೆರೂಸಲೇಮಿಗೆ, ಉತ್ತ
ರ ಕಡೆಗೆ ಎದುರಾಗಿರುವ ಬಳಿ ಬಾಗಿಲಿನ ಕದಕ್ಕೆ, ಕೋಪವೆಬ್ಬಿ
ಸುವ ಕೋಪದ ವಿಗ್ರಹವು ಇದ್ದಲ್ಲಿಗೆ, ತಕ್ಕೊಂಡು ಹೋಯಿ
೪ ತು. ಮತ್ತು ಇಗೋ ಇಸ್ರಯೇಲಿನ ದೇವರ ಮಹಿಮೆ, ನಾನು
ತಗ್ಗಿನಲ್ಲಿ ನೋಡಿದ ಆಕಾರದ ಪ್ರಕಾರ, ಅಲ್ಲಿ ಇತ್ತು. ಆಗಲವ
೫ ನು ನನಗೆ—ಮನುಷ್ಯನ ಮಗನೇ, ಈಗ ಉತ್ತರದ ಕಡೆಗೆ ನಿನ್ನ
ಕಣ್ಣುಗಳನ್ನು ಎತ್ತು, ಅಂದನು; ಆಗ ನಾನು ಉತ್ತರದ ಕಡೆಗೆ ನ
ನ್ನ ಕಣ್ಣುಗಳನ್ನು ಎತ್ತಿದೆನು; ಮತ್ತು ಇಗೋ ಉತ್ತರದಲ್ಲಿ, ಬ
ಲಿಪೀಠದ ಬಾಗಲಲ್ಲಿ, ಈ ಕೋಪದ ವಿಗ್ರಹವು ಪ್ರವೇಶದಲ್ಲಿ ಇತ್ತು.
೬ ಇದಲ್ಲದೆ ಅವನು ನನಗೆ ಹೇಳಿದ್ದೇನಂದರೆ—ಮನುಷ್ಯನ ಮಗ
ನೇ, ಅವರು ಮಾಡುವದನ್ನು ನೋಡುತ್ತೀಯೋ! ನಾನು ನನ್ನ
ಪರಿಶುದ್ಧ ಸ್ಥಳವನ್ನು ಬಿಟ್ಟು ದೂರ ಹೋಗುವ ಹಾಗೆ ಇಸ್ರಯೇ
ಲನ ಮನೆಯವರು ಇಲ್ಲಿ ನಡಿಸುವ ದೊಡ್ಡ ಅಸಹ್ಯಗಳನ್ನು ನೋ
ಡುತ್ತೀಯೋ! ಆದರೆ, ತಿರುಗಿಕೋ, ಇನ್ನು ದೊಡ್ಡ ಅಸಹ್ಯಗಳ
೭ ನ್ನು ನೋಡುವಿ. ಆಗಲವನು ನನ್ನನ್ನು ಅಂಗಳದ ಬಾಗಲಿಗೆ ತಂ
ದನು; ಮತ್ತು ನಾನು ನೋಡುವಾಗ, ಇಗೋ, ಗೋಡೆಯಲ್ಲಿ
೮ ತೂತು. ಆಗಲವನು ನನಗೆ ಹೇಳಿದ್ದೇನಂದರೆ—ಮನುಷ್ಯನ ಮಗ

ನೇ, ಈಗ ಗೋಡೆಯಲ್ಲಿ ಕೊರೆ; ಮತ್ತು ನಾನು ಗೋಡೆಯಲ್ಲಿ
೯ ಕೊರೆದ ಮೇಲೆ ಇಗೋ ಒಂದು ಬಾಗಲು. ಆಗಲವನು ನನಗೆ—
ಒಳಗೆ ಹೋಗಿ, ಅವರು ಇಲ್ಲಿ ಮಾಡುವ ಕೆಟ್ಟ ಅಸಹ್ಯಗಳನ್ನು
೧೦ ನೋಡು, ಅಂದನು. ಹಾಗೆಯೇ ನಾನು ಒಳಗೆ ಹೋಗಿ ನೋಡಿ
ದೆನು; ಇಗೋ, ಕ್ರಿಮಿಗಳ ಅಸಹ್ಯಮೃಗಗಳ ಹೊಲಿಕೆಗಳೆ
ಲ್ಲಾ, ಇಸ್ರಯೇಲನ ಮನೆಯವರ ಮರದ ದೇವರುಗಳೆಲ್ಲಾ, ಗೋ
೧೧ ಡೆಯ ಮೇಲೆ ಸುತ್ತಲಾಗಿ ಬರೆಯಲ್ಪಟ್ಟವು. ಇದಲ್ಲದೆ ಇಸ್ರಯೇ
ಲನ ಮನೆಯವರ ಹಿರಿಯರಲ್ಲಿ ಎಪ್ಪತ್ತು ಮನುಷ್ಯರೂ, ಅವರ
ಮಧ್ಯದಲ್ಲಿ ಶಾಫಾನನ ಮಗನಾದ ಯಾಜನೀಯನೂ, ಅವರ
ಮಧ್ಯದಲ್ಲಿ ನಿಂತು ಕೊಂಡಿದ್ದರು; ಒಬ್ಬೊಬ್ಬನ ಕೈಯಲ್ಲಿ ಅವ
ನವನ ಧೂಪಾರ್ತಿ ಇತ್ತು; ಮತ್ತು ಧೂಪದ ದೊಡ್ಡ ಮೇಘವು
೧೨ ಏರುತ್ತಿತ್ತು. ಆಗಲವನು ನನಗೆ ಹೇಳಿದ್ದೇನಂದರೆ—ಮನುಷ್ಯನ
ಮಗನೇ, ಇಸ್ರಯೇಲನ ಮನೆಯವರ ಹಿರಿಯರು ಕತ್ತಲೆಯಲ್ಲಿ,
ಒಬ್ಬೊಬ್ಬನು ತನ್ನ ತನ್ನ ಚಿತ್ರಕೊಠಡಿಗಳಲ್ಲಿ ಮಾಡುವದನ್ನು
ನೋಡಿದಿಯೋ? ಯಾಕಂದರೆ—ಕರ್ತನು ನಮ್ಮನ್ನು ನೋಡು
ವದಿಲ್ಲಾ; ಕರ್ತನು ಭೂಮಿಯನ್ನು ಬಿಟ್ಟಿದ್ದಾನೆ, ಎಂದನ್ನುತ್ತಾರೆ.
೧೩ ಇದಲ್ಲದೆ ಅವನು ನನಗೆ ಹೇಳಿದ್ದೇನಂದರೆ—ಮತ್ತೂ ತಿರುಗಿಕೋ;
ಅವರು ಮಾಡುವ ಇನ್ನು ದೊಡ್ಡ ಅಸಹ್ಯಗಳನ್ನು ನೋಡುವಿ.
೧೪ ಆಗಲವನು ನನ್ನನ್ನು ಕರ್ತನ ಮನೆಯ ಉತ್ತರದ ಕಡೆಗೆ ಎದು
ರಾಗಿದ್ದ ಬಾಗಿಲಿನ ಬಳಿಗೆ ತಂದನು; ಇಗೋ, ಅಲ್ಲಿ ತಾಮೂಜಿ
ಗೋಸ್ಕರ ಅಳುವ ಹೆಂಗಸರು ಕೂತು ಕೊಳ್ಳುತ್ತಿದ್ದರು. ಆಗ
೧೫ ಲವನು ನನಗೆ—ಮನುಷ್ಯನ ಮಗನೇ, ನೋಡಿದಿಯೋ? ಮತ್ತೂ
ತಿರುಗಿಕೋ; ಇವುಗಳಿಗಂತ ಇನ್ನು ದೊಡ್ಡ ಅಸಹ್ಯಗಳನ್ನು
೧೬ ನೋಡುವಿ, ಎಂದು ನನಗೆ ಹೇಳಿದನು. ಆಗಲವನು ನನ್ನನ್ನು ಕರ್ತ
ನ ಮನೆಯ ಒಳಗಿನ ಅಂಗಳದಲ್ಲಿ ಬರ ಮಾಡಿದನು; ಇಗೋ,
ಕರ್ತನ ಮಂದಿರದ ಬಾಗಲಲ್ಲಿ, ಪಡಸಾಲೆಗೂ ಬಲಿಪೀಠಕ್ಕೂ
ಮಧ್ಯದಲ್ಲಿ ಕೆಚ್ಚು ಕಡಿಮೆ ಇಪ್ಪತ್ತೈದು ಮನುಷ್ಯರು, ಕರ್ತನ
ಮಂದಿರಕ್ಕೆ ಬೆನ್ನು ಕೊಟ್ಟು, ಪೂರ್ವದ ಕಡೆಗೆ ತಮ್ಮ ಮುಖಗ
ಳನ್ನಿಟ್ಟು, ಪೂರ್ವದಿಕ್ಕಿನ ಕಡೆಗೆ, ಸೂರ್ಯನಿಗೆ ನಮಸ್ಕರಿಸು
೧೭ ತ್ತಿದ್ದರು. ಆಗಲವನು ನನಗೆ—ಮನುಷ್ಯನ ಮಗನೇ, ನೋಡಿದಿ
ಯೋ! ಅವರು ಇಲ್ಲಿ ಮಾಡುವ ಅಸಹ್ಯಗಳನ್ನು ಮಾಡುವದು
ಯೆಹೂದನ ಮನೆಯವರಿಗೆ ಅಲ್ಪವೋ! ಯಾಕಂದರೆ, ಅವರು
ದೇಶವನ್ನು ಬಲಾತ್ಕಾರದಿಂದ ತುಂಬಿಸಿ, ತಿರುಗಿಕೊಂಡು ನನಗೆ ಕ
ರ್ಕಶತೆಯನ್ನು ಎಬ್ಬಿಸಿ, ಇಗೋ, ಕೊಂಬೆಯನ್ನು ಮೂಗಿಗೆ ಇ
೧೮ ಡುತ್ತಾರೆ. ಆದದರಿಂದ ನಾನು ಸಹ ಉಗ್ರದಿಂದಲೇ ನಡಿಸುವೆ
ನು; ನನ್ನ ಕಣ್ಣು ಕನಿಕರಿಸುವದಿಲ್ಲ, ನಾನು ಕಟಾಕ್ಷ ತೋರಿಸು
ವದಿಲ್ಲ; ಅವರು ನನ್ನ ಕಿವಿಗಳಲ್ಲಿ ಮಹಾ ಶಬ್ದದಿಂದ ಕೂಗಿದರೂ
ನಾನು ಅವರನ್ನು ಕೇಳುವದಿಲ್ಲ.

## ೯. ಸಂಧಿ.

೧ ಇದಲ್ಲದೆ ಅವನು ಮಹಾ ಶಬ್ದದಿಂದ ನನ್ನ ಕಿವಿಗಳಲ್ಲಿ ಕೂಗಿ
ಹೇಳಿದ್ದೇನಂದರೆ—ಪಟ್ಟಣದ ವಿಚಾರಣೆ ಹೊಂದಿದವರನ್ನು, ತಮ್ಮ
ತಮ್ಮ ಕೈಗಳಲ್ಲಿ ನಾಶ ಮಾಡುವ ಆಯುಧಗಳನ್ನು ಹಿಡು
೨ ಕೊಂಡು, ಸಮೀಪಕ್ಕೆ ಬರ ಮಾಡಿರಿ. ಆಗ ಇಗೋ ಉತ್ತರದ ಕಡೆ
ಯಲ್ಲಿರುವ ಮೇಲ್ಬಾಗಿಲಿನ ದಾರಿಯಿಂದ ಆರು ಮನುಷ್ಯರುಬಂ
ದರು; ಒಬ್ಬೊಬ್ಬನ ಕೈಯಲ್ಲಿ ಕೊಲ್ಲುವ ಆಯುಧವು ಇತ್ತು; ಮ
ತ್ತು ಅವರಲ್ಲಿ ಒಬ್ಬನು ನಾರುಮಡಿಯನ್ನು ಧರಿಸಿಕೊಂಡು, ತ
ನ್ನ ಪಕ್ಕೆಯಲ್ಲಿ ಬರೆಯುವವನ ದೌತಿ ಇಟ್ಟು ಕೊಂಡಿದ್ದನು. ಅ
ವರು ಒಳಗೆ ಹೋಗಿ ಹಿತ್ತಾಳೆಯ ಬಲಿಪೀಠದ ಹತ್ತಿರ ನಿಂತರು.
೩ ಮತ್ತು ಇಸ್ರಯೇಲನ ದೇವರ ಮಹಿಮೆ, ಅದು ಯಾವದರ ಮೇಲಿ
ತ್ತೋ ಆ ಕೆರೂಬರ ಮೇಲ್ಗಡೆಯನ್ನು ಬಿಟ್ಟು ಮನೆಯ ಹೊಸ್ತ
ಲಿಗೆ ಏರಿ ಹೋಗಿತ್ತು. ಮತ್ತು ತನ್ನ ಪಕ್ಕೆಯಲ್ಲಿ ದೌತಿ ಇಟ್ಟು
ಕೊಂಡು, ನಾರುಮಡಿಯನ್ನು ಧರಿಸಿ ಕೊಂಡಿದ್ದ ಆ ಮನುಷ್ಯನ
೪ ಕಡೆಗೆ ಕೂಗಿದನು. ಕರ್ತನು ಅವನಿಗೆ ಹೇಳಿದ್ದೇನಂದರೆ—ಪಟ್ಟಣದ
ಮಧ್ಯವನ್ನೂ ಯೆರೂಸಲೇಮಿನ ಮಧ್ಯವನ್ನೂ, ಹಾದು ಹೋ
ಗಿ, ಅದರ ಮಧ್ಯದಲ್ಲಿ ನಡಿಯುವ ಎಲ್ಲಾ ಅಸಹ್ಯಗಳ ನಿಮಿತ್ತ
ನಿಟ್ಟುಸುರಿಟುವಂಥ ಅಳುವಂಥ ಜನರೆಲ್ಲರ ಹಣೆಗಳ ಮೇಲೆ ಗು
ರುತಿಸು.
೫ ಆ ಮತ್ತೊಬ್ಬರಿಗೆ, ನಾನು ಕೇಳುವ ಹಾಗೆ, ಅವನು ಹೇಳಿದ್ದೇ
ನಂದರೆ—ನೀವು ಅವನ ಹಿಂದೆ ಪಟ್ಟಣವನ್ನು ಹಾದು, ಹೊಡಿಯಿರಿ;
ನಿಮ್ಮ ಕಣ್ಣು ಕನಿಕರಿಸದಿರಲಿ; ಕಟಾಕ್ಷ ತೋರಿಸ ಬೇಡಿರಿ. ಮು
ದುಕರನ್ನೂ ಯೌವ್ವನಸ್ಥರನ್ನೂ, ಕನ್ನಿಕೆಗಳನ್ನೂ ಎಳೇ ಮಕ್ಕ
ಳನ್ನೂ ಹೆಂಗಸರನ್ನೂ ಕುದ್ಧವಾಗಿ ಕೊಂದು ಹಾಕಿರಿ; ಆದರೆ
ಗುರುತು ಯಾವನ ಮೇಲೆ ಉಂಟೋ ಅವನ ಹತ್ತಿರ ಬರ ಬೇಡಿ
ರಿ; ಮತ್ತು ನನ್ನ ಪರಿಶುದ್ಧಸ್ಥಳದಿಂದಲೇ ಪ್ರಾರಂಭಿಸಿರಿ. ಆಗಲವ
೭ ನು ಮನೆಯ ಮುಂದೆ ಇದ್ದ ಮುದುಕರಿಂದ ಪ್ರಾರಂಭಿಸಿದರು. ಮ
ತ್ತು ಅವನು ಅವರಿಗೆ—ಮನೆಯನ್ನು ಅಶುದ್ಧ ಮಾಡಿರಿ; ಅಂಗಳ
ಗಳನ್ನು ಹತವಾದವರಿಂದ ತುಂಬಿಸಿರಿ; ಹೊರಡಿರಿ; ಎಂದು ಹೇಳಿ
೮ ದನು. ಆಗಲವರು ಹೊರಟು, ಪಟ್ಟಣದಲ್ಲಿ ಹೊಡೆದರು. ಮತ್ತು
ಅದದ್ದೇನಂದರೆ—ಅವರು ಹೊಡೆಯುತ್ತಿರಲಾಗಿ ನಾನು ಬಿಡಲ್ಪಟ್ಟಿ
ನು; ಆಗ ಮೋರೆ ಕೆಳಗಾಗಿ ಬಿದ್ದು ಕೂಗಿ—ಅಯ್ಯೋ! ಕರ್ತನಾ
ದ ಯೆಹೋವನೇ, ನೀನು ಯೆರೂಸಲೇಮಿನ ಮೇಲೆ ನಿನ್ನ ಉಗ್ರ
ವನ್ನು ಹೊಯ್ಯುವದರಲ್ಲಿ ಇಸ್ರಯೇಲಿನ ಉಳುವನ್ನೆಲ್ಲಾ ನಾಶ
೯ ಮಾಡುವಿಯೋ! ಅಂದೆನು. ಆಗಲವನು ನನಗೆ ಹೇಳಿದ್ದೇನಂದರೆ—
ಇಸ್ರಯೇಲನ ಯೆಹೂದನ ಮನೆಯವರ ಅಕ್ರಮವು ಬಹಳ ಬಹ
ಳ ದೊಡ್ಡದಾಗಿದೆ; ದೇಶವು ರಕ್ತದಿಂದ ತುಂಬಿದೆ; ಪಟ್ಟಣವು ವಕ್ರ
ತ್ವದಿಂದ ತುಂಬಿದೆ; ಯಾಕಂದರೆ, ಕರ್ತನು ಭೂಮಿಯನ್ನು ಬಿ
ಟ್ಟಿದ್ದಾನೆ, ಕರ್ತನು ನೋಡುವದಿಲ್ಲ, ಎಂದನ್ನುತ್ತಾರೆ. ಆದದರಿಂ
೧೦ ದ ನನ್ನ ಕಣ್ಣು ಸಹ ಕನಿಕರಿಸುವದಿಲ್ಲ, ನಾನು ಕಟಾಕ್ಷ ತೋರಿ
ಸುವದಿಲ್ಲ; ಆದರೆ ಅವರ ಮಾರ್ಗವನ್ನು ಅವರ ತಲೆಯ ಮೇಲೆ
ಸಲ್ಲಿಸುತ್ತೇನೆ.
೧೧ ಮತ್ತು ಇಗೋ ನಾರುಮಡಿಯನ್ನು ಧರಿಸಿಕೊಂಡಂಥ, ತ
ನ್ನ ಪಕ್ಕೆಯಲ್ಲಿ ದೌತಿ ಇಟ್ಟು ಕೊಂಡಂಥ, ಆ ಮನುಷ್ಯನು
ವರ್ತಮಾನವನ್ನು ತಂದು, ನೀನು ಆಜ್ಞಾಪಿಸಿದ ಹಾಗೆ ಮಾಡಿ
ದ್ದೇನೆ, ಅಂದನು.

## ೧೦. ಸಂಧಿ.

೧ ಆಗ ನಾನು ನೋಡಲಾಗಿ, ಇಗೋ, ಕೆರೂಬರ ತಲೆಯ ಮೇ
ಲಿದ್ದ ಆಕಾಶಖಾಲದಲ್ಲಿ, ಅವರ ಮೇಲೆ ನೀಲ ಕಲ್ಲಿನಂತೆ, ಸಿಂಹಾ
ಸನ ರೂಪದ ಆಕಾರದಂತೆ ತೋರಿತು. ಮತ್ತು ಅವನು ನಾರು



ಮಡಿಯನ್ನು ಧರಿಸಿ ಕೊಂಡ ಮನುಷ್ಯನಿಗೆ ಹೇಳಿದ್ದೇನಂದರೆ—
ಚಕ್ರಗಳ ಮಧ್ಯದಲ್ಲಿ, ಕೆರೂಬರ ಕೆಳಗೆ, ಒಳಗೆ ಹೋಗಿ, ಕೆರೂ
ಬರ ಮಧ್ಯದಲ್ಲಿಂದ ನಿನ್ನ ಕೈಯನ್ನು ಉರಿ ಕೆಂಡಗಳಿಂದ ತುಂ
ಬಿಸಿ, ಅವುಗಳನ್ನು ಪಟ್ಟಣದ ಮೇಲೆ ಚೆಲ್ಲು; ಆಗಲವನು ನನಗೆ ಕಾ
೩ ಣುವ ಹಾಗೆ ಒಳಗೆ ಹೋದನು. ಆ ಮನುಷ್ಯನು ಒಳಗೆ ಹೋ
ಗುವಾಗ, ಕೆರೂಬರು ಮನೆಯ ಬಲಗಡೆಯಲ್ಲಿ ನಿಂತಿದ್ದರು; ಮ
ತ್ತು ಮೇಘವು ಒಳಗಿನ ಅಂಗಳವನ್ನು ತುಂಬಿಸಿತು.
೪ ಆಗ ಕರ್ತನ ಮಹಿಮೆಯು ಕೆರೂಬನ ಮೇಲ್ಮಡೆಯನ್ನು ಬಿ
ಟ್ಟು ಎತ್ತಲ್ಪಟ್ಟು, ಮನೆಯ ಹೊಸ್ತಲಲ್ಲಿ ನಿಂತಿತು; ಮತ್ತು ಮನೆ
ಯು ಮೇಘದಿಂದ ತುಂಬಿತು; ಅಂಗಳವು ಕರ್ತನ ಮಹಿಮೆಯ
೫ ಕಾಂತಿಯಿಂದ ತುಂಬಿತು. ಮತ್ತು ಕೆರೂಬರ ರೆಕ್ಕೆಗಳ ಶಬ್ದವು,
ಮಾತಾಡುವ ಸರ್ವಶಕ್ತನಾದ ದೇವರ ಶಬ್ದದ ಹಾಗೆ, ಹೊರಗಿನ
೬ ಅಂಗಳದ ಪರ್ಯಂತರ ಕೇಳ ಬಂತು. ಮತ್ತು ಆದದ್ದೇನಂದರೆ—ಅ
ವನು ನಾರುಮಡಿಯನ್ನು ಧರಿಸಿ ಕೊಂಡ ಮನುಷ್ಯನಿಗೆ—ಚಕ್ರಗ
ಳ ಮಧ್ಯದಲ್ಲಿಂದ, ಕೆರೂಬನ ಮಧ್ಯದಲ್ಲಿಂದ, ಬೆಂಕಿಯನ್ನು ತ
ಕೋ, ಎಂದು ಆಜ್ಞಾಪಿಸಿದಾಗ, ಇವನು ಒಳಗೆ ಹೋಗಿ, ಚಕ್ರಗ
೭ ಳ ಬಳಿಯಲ್ಲಿ ನಿಂತನು; ಆಗ ಒಬ್ಬ ಕೆರೂಬನು, ಕೆರೂಬರ ಮ
ಧ್ಯದಲ್ಲಿಂದ ತನ್ನ ಕೈಯನ್ನು ಕೆರೂಬರ ಮಧ್ಯದಲ್ಲಿರುವ ಬೆಂ
ಕಿಯ ಬಳಿಗೆ ಚಾಚಿ, ತಕ್ಕೊಂಡು, ನಾರುಮಡಿಯನ್ನು ಧರಿಸಿ
ಕೊಂಡಿದ್ದವನ ಕೈಗಳಲ್ಲಿ ಇಟ್ಟನು; ಇವನು ಅದನ್ನು ತಕ್ಕೊಂ
೮ ಡು ಹೊರಗೆ ಹೋದನು. ಮತ್ತು ಕೆರೂಬರಲ್ಲಿ, ಅವರ ರೆಕ್ಕೆಗ
೯ ಳ ಕೆಳಗೆ ಮನುಷ್ಯನ ಕೈಗೆ ಸಮಾನವಾದದ್ದು ಕಾಣ ಬಂತು. ಆ
ಗ ನಾನು ನೋಡಲಾಗಿ, ಇಗೋ, ಒಬ್ಬೊಬ್ಬ ಕೆರೂಬನ ಬಳಿ
ಯಲ್ಲಿ ಒಂದೊಂದು ಚಕ್ರ; ಈ ಪ್ರಕಾರ ಕೆರೂಬರ ಬಳಿಯಲ್ಲಿ
ನಾಲ್ಕು ಚಕ್ರಗಳಿದ್ದವು; ಆಚಕ್ರಗಳ ಆಕಾರ ತಾರ್ಷಿಷ್ ಕಲ್ಲಿನ
೧೦ ಕಾಂತಿಯ ಹಾಗಿತ್ತು. ಅವುಗಳ ಆಕಾರದ ವಿಷಯೆ, ಆ ನಾಲ್ಕ
ಕ್ಕೆ ಒಂದೇ ರೂಪವಿತ್ತು; ಚಕ್ರದಲ್ಲಿ ಚಕ್ರವು ಇದ್ದ ಹಾಗಿದ್ದವು.
೧೧ ಅವು ಹೋಗುತ್ತಿರುವಾಗ, ಅವುಗಳ ನಾಲ್ಕು ಕಡೆಗಳ ಮೇಲೆ ಹೋ
ಗುತ್ತಿದ್ದವು; ಹೋಗುವಾಗ ತಿರುಗಿ ಕೊಳ್ಳಲಿಲ್ಲ; ಆದರೆ ತಲೆ
ಯಾವ ಸ್ಥಳಕ್ಕೆ ನೋಡಿಕೊಂಡಿತ್ತೋ ಅಲ್ಲಿಗೆ ಅದರ ಹಿಂದೆ
ಹೋದವು; ಹೋಗುವಾಗ ತಿರುಗಿ ಕೊಳ್ಳಲಿಲ್ಲ. ಮತ್ತು ಅವರ
೧೨ ಮೈಯೆಲ್ಲಾ, ಅವರ ಬೆನ್ನುಗಳೂ ಅವರ ಕೈಗಳೂ ಅವರ ರೆಕ್ಕೆ
ಗಳೂ ಚಕ್ರಗಳೂ ಸಹ ಅನಾಲ್ವರಿಗೆ ಇದ್ದ ಚಕ್ರಗಳೂ, ಸುತ್ತ
೧೩ ಲಾಗಿ ಕಣ್ಣುಗಳಿಂದ ತುಂಬಾಗಿದ್ದವು. ಚಕ್ರಗಳ ವಿಷಯವೋ,
ಅವುಗಳಿಗೆ, ನಾನು ಕೇಳುವ ಹಾಗೆ, ಓ ಚಕ್ರವೇ! ಎಂದು ಕರೆಯ
೧೪ ಲ್ಪಟ್ಟಿತು. ಒಬ್ಬೊಬ್ಬನಿಗೆ ನಾಲ್ಕು ಮುಖಗಳಿದ್ದವು, ಮೊದಲನೇ
ಮುಖ, ಕೆರೂಬನ ಮುಖ; ಎರಡನೇ ಮುಖ, ಮನುಷ್ಯನ ಮು
ಖ; ಮೂರನೇದು, ಸಿಂಹದ ಮುಖ; ನಾಲ್ಕನೇದು, ಹದ್ದಿನ ಮುಖ;
೧೫ ಆಗ ಕೆರೂಬರು ಎತ್ತಲ್ಪಟ್ಟರು; ನಾನು ಕೀಬಾರ್ ನದಿಯ ಬಳಿ
೧೬ ಯಲ್ಲಿ ನೋಡಿದ ಜೀವಿಯು ಇದೇ. ಕೆರೂಬರು ಹೋದಾಗ,
ಚಕ್ರಗಳು ಅವರ ಸಂಗಡ ಹೋದವು; ಕೆರೂಬರು ಭೂಮಿಯ
ನ್ನು ಬಿಟ್ಟು ಏರುವ ಹಾಗೆ ತಮ್ಮ ರೆಕ್ಕೆಗಳನ್ನು ಚಾಚಿದಾಗ,
೧೭ ಆ ಚಕ್ರಗಳು ಸಹ ಅವರನ್ನು ಬಿಟ್ಟು ತಿರುಗಿ ಕೊಳ್ಳಲಿಲ್ಲ. ಅವ
ರು ನಿಂತಾಗ ಇವು ನಿಂತವು; ಅವರು ಎತ್ತಲ್ಪಟ್ಟಾಗ ಇವು ಸಂಗಡ
ಎತ್ತಲ್ಪಟ್ಟವು; ಯಾಕಂದರೆ ಅವುಗಳಲ್ಲಿ ಜೀವಿಯ ಆತ್ಮವು ಇತ್ತು.
೧೮ ಆಗ ಕರ್ತನ ಮಹಿಮೆ ಮನೆಯ ಹೊಸ್ತಲನ್ನು ಬಿಟ್ಟು ಕೆ
೧೯ ರೂಬರ ಮೇಲೆ ನಿಂತಿತು. ಮತ್ತು ಕೆರೂಬರು ತಮ್ಮ ರೆಕ್ಕೆಗಳ
ನ್ನು ಎತ್ತಿ ಕೊಂಡು, ನಾನು ನೋಡುವಾಗ ಭೂಮಿಯನ್ನು ಬಿ
ಟ್ಟು ಏರಿ ಹೋದರು; ಅವರು ಹೊರಟಾಗ ಚಕ್ರಗಳು ಅವರ
ಸಂಗಡ ಇದ್ದವು; ಅವರು ಕರ್ತನ ಮನೆಯ ಮೂರ್ವಣ ಬಾಗಲಿ
ನ ಕದದಲ್ಲಿ ನಿಂತರು; ಮತ್ತು ಇಸ್ರಯೇಲಿನ ದೇವರ ಮಹಿಮೆ
೨೦ ಮೇಲ್ಗಡೆಯಲ್ಲಿ ಅವರ ಮೇಲೆ ಇತ್ತು. ಕೀಬಾರ್ ನದಿಯ ಬಳಿ
ಯಲ್ಲಿ ಇಸ್ರಯೇಲನ ದೇವರ ಕೆಳಗೆ ನಾನು ನೋಡಿದ ಜೀವಿಯು
೨೧ ಇದೇ; ಅವರು ಕೆರೂಬರೆಂದು ತಿಳು ಕೊಂಡೆನು. ಒಬ್ಬೊಬ್ಬನಿ
ಗೆ ನಾಲ್ಕು ಮುಖಗಳೂ ಒಬ್ಬೊಬ್ಬನಿಗೆ ನಾಲ್ಕು ರೆಕ್ಕೆಗಳೂ
ಇದ್ದವು; ಅವರ ರೆಕ್ಕೆಗಳ ಕೆಳಗೆ ಮನುಷ್ಯರ ಕೈಗಳ ರೂಪ
೨೦ ವಿತ್ತು; ಮತ್ತು ಅವರ ಮುಖಗಳ ರೂಪವು, ನಾನು ಕೀಬಾರ್ ನದಿ
ಯ ಬಳಿಯಲ್ಲಿ ನೋಡಿದ ಮುಖಗಳೇ. ಅವರ ಆಕಾರವೂ ಅವ
ರೂ ಹಾಗೆಯೇ; ಒಬ್ಬೊಬ್ಬನು ಮುಂದಕ್ಕೆ ನೆಟ್ಟಗೆ ಹೋಗುತ್ತಿ
ದ್ದನು.

## ೧೧. ಸಂಧಿ.

೧ ಇದಲ್ಲದೆ ಆತ್ಮವು ನನ್ನನ್ನು ಎತ್ತಿ, ಕರ್ತನ ಮನೆಯ ಪೂರ್ವ
ಬಾಗಲಿಗೆ, ಮೂರ್ವಣ ಕಡೆಗೆ ಅಭಿಮುಖವಾದದ್ದಕ್ಕೆ, ತಕ್ಕೊಂಡು
ಹೋಯಿತು. ಆಗ ಇಗೋ ಬಾಗಲಿನ ಕದದಲ್ಲಿ ಇಪ್ಪತ್ತೈದು
ಮನುಷ್ಯರು; ಅವರೊಳಗೆ ನಾನು, ಜನರ ಪ್ರಧಾನರಾದ ಅಜೂ
ರನ ಮಗನಾದ ಯಾಜನೀಯನನ್ನೂ, ಬೆನಾಯನ ಮಗನಾದ
೨ ಪೆಲಟೀಯನನ್ನೂ, ನೋಡಿದೆನು. ಆಗಲವನು ನನಗೆ ಹೇಳಿದ್ದೇ
ನಂದರೆ—ಮನುಷ್ಯನ ಮಗನೇ, ಈ ಪಟ್ಟಣದಲ್ಲಿ ಚಾತಕವನ್ನು ಕ
ಲ್ಪಿಸಿ, ಕೆಟ್ಟ ಆಲೋಚನೆಯನ್ನು ಆಲೋಚಿಸುವ ಮನುಷ್ಯರು
3 ಇವರೇ. ಅದು ಸಮೀಪವಲ್ಲ; ಮನೆಗಳನ್ನು ಕಟ್ಟುವ; ಈ ಪಟ್ಟಣ
ವು ಗುಡಾಣವೂ ನಾವು ಮಾಂಸವೂ ಎಂದನ್ನುತ್ತಾರೆ. ಆದದ
೪ ರಿಂದ ಅವರಿಗೆ ವಿರೋಧವಾಗಿ ಪ್ರವಾದಿಸು, ಮನುಷ್ಯನ ಮಗನೇ,
೫ ಪ್ರವಾದಿಸು. ಆಗ ಕರ್ತನ ಆತ್ಮವು ನನ್ನ ಮೇಲೆ ಬಿದ್ದು, ನನಗೆ
ಹೇಳಿದ್ದು—ಮಾತಾಡು, ಕರ್ತನು ಹೇಳುವದೇನಂದರೆ—ಇಸ್ರ
ಯೇಲನ ಮನೆಯವರೇ, ನೀವು ಹೀಗೆ ಹೇಳಿದ್ದೀರಿ; ಯಾಕಂದರೆ,
೬ ನಿಮ್ಮ ಆತ್ಮದಲ್ಲಿ ಹುಟ್ಟುವವುಗಳನ್ನೆಲ್ಲಾ ನಾನು ಬಲ್ಲೆನು. ನೀವು
ಈ ಪಟ್ಟಣದಲ್ಲಿ ನಿಮ್ಮ ಹತವಾದವರನ್ನು ಬಹಳ ಮಾಡಿದ್ದೀರಿ; ಅದ
ರ ಬೀದಿಗಳನ್ನು ಹತವಾದವರಿಂದ ತುಂಬಿಸಿದ್ದೀರಿ. ಆದದರಿಂದ
೭ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನೀವು ಅದರ
ಮಧ್ಯದಲ್ಲಿ ಇಟ್ಟಿರುವ ಹತವಾದವರು ಅವರೇ ಮಾಂಸವಾಗಿದ್ದಾ
ಕೆ; ಮತ್ತು ಪಟ್ಟಣವು ಗುಡಾಣವಾಗಿದೆ; ಆದರೆ ನಾನು ನಿಮ್ಮನ್ನು
೮ ಅದರೊಳಗಿಂದ ಹೊರಗೆ ಬರ ಮಾಡುವೆನು. ಕತ್ತಿಗೆ ಭಯಪಟ್ಟಿ
ರಿ, ಮತ್ತು ಕತ್ತಿಯನ್ನು ನಿಮ್ಮ ಮೇಲೆ ತರಿಸುತ್ತೇನೆಂದು ಕರ್ತ
೯ ನಾದ ಯೆಹೋವನು ಅನ್ನುತ್ತಾನೆ. ನಾನು ನಿಮ್ಮನ್ನು ಅದರೊ
ಳಗಿಂದ ಹೊರಗೆ ತಂದು, ನಿಮ್ಮನ್ನು ಅನ್ಯರ ಕೈಗಳಲ್ಲಿ ಒಪ್ಪಿಸಿ,
೧೦ ನಿಮ್ಮಲ್ಲಿ ನ್ಯಾಯತೀರ್ಪಿಕೆಗಳನ್ನು ನಡಿಸುವೆನು. ಕತ್ತಿಯಿಂದ
ಬೀಳುವಿರಿ; ಇಸ್ರಯೇಲಿನ ಮೇರೆಯಲ್ಲಿ ನಿಮಗೆ ನ್ಯಾಯ ತೀರಿಸು
೧೧ ವೆನು; ಆಗ ನಾನೇ ಯೆಹೋವನೆಂದು ನಿಮಗೆ ತಿಳಿಯುವದು.
ಈ ಪಟ್ಟಣವು ನಿಮಗೆ ಗುಡಾಣವಾಗುವದಿಲ್ಲ, ಮತ್ತು ನೀವು ಅದರ

ಮಧ್ಯದಲ್ಲಿ ಮಾಂಸವಾಗುವದಿಲ್ಲ; ಅದರೆ ಇಸ್ರಯೇಲಿನ ಮೇರೆ
೧೨ ಯಲ್ಲಿ ನಿಮಗೆ ನ್ಯಾಯತೀರಿಸುವೆನು. ಮತ್ತು ನಾನೇ ಯೆಹೋ
ವನೆಂದು ತಿಳು ಕೊಳ್ಳುವಿರಿ; ಯಾಕಂದರೆ, ನೀವು ನನ್ನ ನೇಮ
ಗಳಲ್ಲಿ ನಡಿಯಲಿಲ್ಲ; ನನ್ನ ನ್ಯಾಯಗಳನ್ನು ನೀವು ಮಾಡಲಿಲ್ಲ;
ಅದರೆ ನಿಮ್ಮ ಸುತ್ತಲಿರುವ ಜನಾಂಗಗಳ ನ್ಯಾಯಗಳ ಪ್ರಕಾರ
ಮಾಡಿದ್ದೀರಿ.

೧೩ ಮತ್ತು ನಾನು ಪ್ರವಾದಿಸುತ್ತಿರಲಾಗಿ ಆದದ್ದೇನಂದರೆ—ಬೆನಾ
ಯನ ಮಗನಾದ ಬೆಲಟೇಯನು ಸತ್ತನು, ಆಗ ನಾನು ಮೋರೆ
ಕೆಳಗಾಗಿ ಬಿದ್ದು, ಮಹಾ ಶಬ್ದದಿಂದ ಕೂಗಿ—ಅಯ್ಯೋ! ಕರ್ತ
ನಾದ ಯೆಹೋವನೇ, ನೀನು ಇಸ್ರಯೇಲನ ಉಳುವನ್ನು ಪೂರ್ಣ
೧೪ ವಾಗಿ ಮುಗಿಸಿ ಬಿಡುತ್ತೀಯೋ! ಎಂದು ಹೇಳಿದೆನು. ಆಗ ಕರ್ತ
೧೫ ನ ವಾಕ್ಯವು ನನಗೆ ಉಂಟಾಗಿ ಹೇಳ್ದದ್ದೇನಂದರೆ—ಮನುಷ್ಯನ ಮ
ಗನೇ, ನಿನ್ನ ಸಹೋದರರಿಗೆ, ಹೌದು, ನಿನ್ನ ಸಹೋದರರಿಗೆ,
ನಿನ್ನ ಬಂಧು ಜನಕ್ಕೆ, ಸಮಸ್ತ ಇಸ್ರಯೇಲನ ಮನೆಯವರಿಗೆ, ಇ
ವಕ್ಕಿಲ್ಲರಿಗೆ, ಯೆರೂಸಲೇಮಿನ ನಿವಾಸಿಗಳು—ಕರ್ತನಿಂದ ದೂರ
ಹೋಗಿರಿ, ಈ ದೇಶವು ನಮಗೆ ಸ್ವಾಸ್ತ್ಯವಾಗಿ ಕೊಡಲ್ಪಟ್ಟಿದೆ ಎಂ
೧೬ ದು ಹೇಳ್ದಿದ್ದಾರೆ. ಆದದರಿಂದ ನೀನು ಹೇಳ್ ತಕ್ಕದ್ದು—ಕರ್ತನಾ
ದ ಯೆಹೋವನು ಹೀಗೆ ಹೇಳುತ್ತಾನೆ—ನಾನು ಅವರನ್ನು ಜನಾಂ
ಗಗಳಲ್ಲಿ ದೂರ ಹಾಕಿದಾಗ್ಯೂ, ದೇಶಗಳಲ್ಲಿ ಚದರಿಸಿದಾಗ್ಯೂ,
ಅವನು ಹೋಗುವ ದೇಶಗಳಲ್ಲಿ ನಾನು ಅವರಿಗೆ ಸ್ವಲ್ಪಕಾಲಕ್ಕೆ
೧೭ ಪರಿಶುದ್ಧಸ್ಥಳವಾಗುವೆನು. ಆದದರಿಂದ ನೀನು ಹೇಳ್ ತಕ್ಕದ್ದು—
ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನಿಶ್ಚಯವಾಗಿ
ನಾನು ನಿಮ್ಮನ್ನು ಜನಾಂಗಗಳೊಳಗಿಂದ ಒತ್ತಿ ಕೊಂಡು, ನೀವು
ಚದರಿ ಹೋದ ದೇಶಗಳೊಳಗಿಂದ ಕೂಡಿಸುತ್ತೇನೆ; ಮತ್ತು ಇ
೧೮ ಸ್ರಯೇಲ್ ದೇಶವನ್ನು ನಿಮಗೆ ಕೊಡುತ್ತೇನೆ. ಅವರು ಅಲ್ಲಿಗೆ
ಬಂದು, ಅದರ ಎಲ್ಲಾ ಹೇಸಿಗೆಗಳನ್ನೂ, ಅದರ ಎಲ್ಲಾ ಅಸಹ್ಯಗ
೧೯ ಳನ್ನೂ, ಅದರೊಳಗಿಂದ ತೆಗೆದು ಹಾಕುವರು. ಇದಲ್ಲದೆ ನಾನು
ಅವರಿಗೆ ಒಂದೇ ಹೃದಯವನ್ನು ಕೊಡುವೆನು; ಮತ್ತು ಹೊಸ
ಆತ್ಮವನ್ನು ನಿಮ್ಮಲ್ಲಿ ಇಡುವೆನು; ಕಲ್ಲಿನ ಹೃದಯವನ್ನು ಅವರ
ಮಾಂಸದೊಳಗಿಂದ ತೆಗೆದು ಹಾಕಿ, ಮಾಂಸದ ಹೃದಯವನ್ನು
೨೦ ಅವರಿಗೆ ಕೊಡುವೆನು. ಯಾಕಂದರೆ—ಅವರು ನನ್ನ ನೇಮಗಳ
ಲ್ಲಿ ನಡಕೊಂಡು, ನನ್ನ ನ್ಯಾಯಗಳನ್ನು ಕೈಕೊಂಡು, ಮಾಡು
ವದಕ್ಕಾಗಿಯೇ; ಆಗಲವರು ನನ್ನ ಜನರಾಗಿರುವರು; ಮತ್ತು ನಾ
೨೧ ನು ಅವರ ದೇವರಾಗಿರುವೆನು. ಆದರೆ ಯಾರ ಹೃದಯವು
ಅವರ ಹೇಸಿಗೆಗಳ ಅವರ ಅಸಹ್ಯಗಳ ಹೃದಯದ ಒಳಗೆ
ಹೋಗುತ್ತದೋ, ನಾನು ಅವರ ಮಾರ್ಗವನ್ನು ಅವರ ತಲೆಗಳ
ಮೇಲೆ ಸಲ್ಲಿಸುತ್ತೇನೆಂದು ಕರ್ತನಾದ ಯೆಹೋವನು ಅನ್ನು
ತ್ತಾನೆ.

೨೨ ಆಗ ಕೆರೂಬರು ತಮ್ಮ ರೆಕ್ಕೆಗಳನ್ನು ಎತ್ತಿದರು, ಅವರ ಸಂ
ಗಡ ಚಕ್ರಗಳು ಸಹ; ಮತ್ತು ಇಸ್ರಯೇಲಿನ ದೇವರ ಮಹಿಮೆ
೨೩ ಅವರ ಮೇಲೆ ಮೇಲ್ಕಡೆಯಲ್ಲಿ ಇತ್ತು. ಮತ್ತು ಕರ್ತನ ಮಹಿ
ಮೆ ಪಟ್ಟಣದೊಳಗಿಂದ ಮೇಲಕ್ಕೇರಿ, ಪಟ್ಟಣದ ಮೂಡಲಲ್ಲಿರುವ ಪರ್ವ
೨೪ತದಲ್ಲಿ ನಿಂತಿತು. ತರುವಾಯ ಆತ್ಮವು ನನ್ನನ್ನು ಎತ್ತಿ, ದೇವರ
ಆತ್ಮದಿಂದಾದ ದರ್ಶನದಿಂದ ಕಸ್ದೀಯರ ದೇಶಕ್ಕೆ ಕೆಕೆಯವರ
ಬಳಿಗೆ ತಕ್ಕೊಂಡು ಹೋಯಿತು; ಆಗ ನಾನು ನೋಡಿದ ದರ್ಶ
೨೫ನ ನನ್ನನ್ನು ಬಿಟ್ಟು ಏರಿತು. ಆಗ ಕರ್ತನು ನನಗೆ ತೋರಿಸಿ
ದ ಕಾರ್ಯಗಳನ್ನೆಲ್ಲಾ ಕೆಕೆಯವರಿಗೆ ಹೇಳ್ದೆನು.

## ೧೨. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳ್ದದ್ದೇನಂದ
೨ ರೆ—ಮನುಷ್ಯನ ಮಗನೇ, ನೀನು ತಿರುಗಿ ಬೀಳುವ ಮನೆಯವರ
ಮಧ್ಯದಲ್ಲಿ ವಾಸ ಮಾಡುತ್ತೀ. ಅವರಿಗೆ ನೋಡುವದಕ್ಕೆ ಕಣ್ಣು
ಗಳುಂಟು; ಆದರೆ ನೋಡರು; ಕೇಳುವದಕ್ಕೆ ಕಿವಿಗಳುಂಟು; ಆದ
ರೆ ಕೇಳ್ದರು; ಯಾಕಂದರೆ ಅವರು ತಿರುಗಿ ಬೀಳುವ ಮನೆಯವರೇ.
3 ಆದದರಿಂದ, ಮನುಷ್ಯನ ಮಗನೇ, ನೀನು ತೊಲಗುವದಕ್ಕೆ
ಸಾಮಾನುಗಳನ್ನು ಸಿದ್ಧ ಮಾಡಿ, ಹಗಲಿನಲ್ಲಿ ಅವರ ಕಣ್ಣುಗಳ
ಮುಂದೆ ತೊಲಗಿ ಹೋಗು; ಹೌದು, ಅವರ ಕಣ್ಣುಗಳ ಮುಂ
ದೆ ನಿನ್ನ ಸ್ಥಳವನ್ನು ಬಿಟ್ಟು ಬೇರೊಂದು ಸ್ಥಳಕ್ಕೆ ತೊಲಗಿ ಹೋ
ಗ ಬೇಕು; ಅವರು ತಿರುಗಿ ಬೀಳುವ ಮನೆಯವರಾದಾಗ್ಯೂ ಒಂ
೪ ದು ವೇಳೆ ಭಯ ಪಟ್ಟಾರು. ನಿನ್ನ ಸಾಮಾನುಗಳನ್ನು ತೊಲಗು
ವದಕ್ಕಾಗಿರುವ ಸಾಮಾನುಗಳಂತೆ ಹಗಲಿನಲ್ಲಿ ಅವರ ಕಣ್ಣುಗಳ
ಮುಂದೆ ಹೊರಗೆ ತರ ಬೇಕು; ಮತ್ತು ಸಂಜೆಯಲ್ಲಿ ಕೆಕೆಗೆ ಹೊರ
೫ ಡುವವರ ಹಾಗೆ ನೀನು ಅವರ ಕಣ್ಣುಗಳ ಮುಂದೆ ಹೊರಡ ಬೇಕು.
ಅವರ ಕಣ್ಣುಗಳ ಮುಂದೆ ಗೋಡೆಯನ್ನು ಕೊರೆದು, ಅದರಿಂದ
೬ ದೊರಟು ಹೋಗು. ಅವರ ಕಣ್ಣುಗಳ ಮುಂದೆ ಸಾಮಾನುಗಳ
ನ್ನು ಹೆಗಲಿನ ಮೇಲೆ ಹೊತ್ತುಕೊಂಡು ಸಾಯಂಕಾಲದಲ್ಲಿ ಹೊ
ರಡಬೇಕು; ನೆಲವನ್ನು ನೋಡದ ಹಾಗೆ ನಿನ್ನ ಮುಖವನ್ನು ಮು
ಚ್ಚಿಕೊಳ್ಳ ಬೇಕು. ಯಾಕಂದರೆ ನಾನು ನಿನ್ನನ್ನು ಇಸ್ರಯೇ
೭ ಲನ ಮನೆಯಲ್ಲಿರುವವರಿಗೆ ಗುರುತಾಗಿ ಇಟ್ಟಿದ್ದೇನೆ. ನಾನು ಆಜ್ಞೆ
ಹೊಂದಿದ ಹಾಗೆಯೇ ಮಾಡಿದೆನು; ನನ್ನ ಸಾಮಾನುಗಳನ್ನು
ಕೆಕೆಯ ಸಾಮಾನುಗಳಂತೆ ಹಗಲಿನಲ್ಲಿ ಹೊರಗೆ ತಂದೆನು; ಮ
ತ್ತು ಸಂಜೆಯಲ್ಲಿ ಕೈಯಿಂದ ಗೋಡೆಯಲ್ಲಿ ಕೊರೆಕೆನು; ಸಾ
ಯಂಕಾಲದಲ್ಲಿ ಅದನ್ನು ಹೊರಗೆ ತಂದು; ಅವರ ಕಣ್ಣುಗಳ ಮುಂ
ದೆ ಜೆಗಲಿನ ಮೇಲೆ ಹೊತ್ತುಕೊಂಡೆನು.

೮ ಹೊತ್ತಾರೆಯಲ್ಲಿ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳ್
೯ ದ್ದೇನಂದರೆ—ಮನುಷ್ಯನ ಮಗನೇ, ಇಸ್ರಯೇಲನ ಮನೆಯವ
ರು, ಆ ತಿರುಗಿ ಬೀಳುವ ಮನೆಯವರೇ, ನೀನು ಏನು ಮಾಡುತ್ತೀ
ಎಂದು ನಿನಗೆ ಹೇಳುತ್ತಾರಲ್ಲ? ನೀನು ಅವರಿಗೆ ಹೇಳ್ ಬೇಕಾದದ್ದೇ
೧೦ ನಂದರೆ—ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ಈ
ಭಾರವು ಯೆರೂಸಲೇಮಿನಲ್ಲಿರುವ ಪ್ರಭುವನ್ನೂ ಅವರ ಮಧ್ಯ
೧೧ ದಲ್ಲಿರುವ ಸಮಸ್ತ ಇಸ್ರಯೇಲನ ಮನೆಯವರನ್ನೂ ಕುರಿತಾಗಿದೆ.
ಹೀಗೆ ಹೇಳು—ನಾನು ನಿಮಗೆ ಗುರುತಾಗಿದ್ದೇನೆ; ನಾನು ಮಾಡಿ
ದ ಹಾಗೆ ಅವರಿಗೆ ಮಾಡಲ್ಪಡುವದು; ಅವರು ತೊಲಗಿ ಕೆಕೆಗೆ ಹೋ
೧೨ ಗುವರು. ಮತ್ತು ಅವರ ಮಧ್ಯದಲ್ಲಿರುವ ಪ್ರಭುವು ಸಾಯಂಕಾ
ಲದಲ್ಲಿ ತನ್ನ ಹೆಗಲಿನ ಮೇಲೆ ಹೊತ್ತು ಕೊಂಡು ಹೊರಡುವನು;
ಗೋಡೆಯಲ್ಲಿ, ಅದರಿಂದ ಹೊರಡುವ ಹಾಗೆ, ಕೊರೆಯುವರು;
ತಾನು ತನ್ನ ಕಣ್ಣುಗಳಿಂದ ನೆಲವನ್ನು ನೋಡದ ಹಾಗೆ ಮುಖ
ವನ್ನು ಮುಚ್ಚಿ ಕೊಳ್ಳುವನು. ಮತ್ತು ನನ್ನ ಬಲೆಯನ್ನು ಅವ
೧೩ ನ ಮೇಲೆ ಹಾಸುವೆನು, ಅವನು ನನ್ನ ಉರ್ಕಿನಲ್ಲಿ ಸಿಕ್ಕಿ ಕೊಳ್ಳು
ವನು; ಮತ್ತು ಅವನನ್ನು ಬಾಬೆಲಿಗೆ, ಕಸ್ದೀಯರ ದೇಶಕ್ಕೆ, ತ



ಕ್ಕೊಂಡು ಹೋಗುವೆನು; ಆದರೆ ಅವನು ಅದನ್ನು ನೋಡದೆ ಅ
೧೪ ಲ್ಲಿ ಸಾಯುವನು. ಮತ್ತು ಅವನ ಸುತ್ತಲಾಗಿ ಅವನಿಗೆ ಸಹಾಯ
ಮಾಡುವವರೆಲ್ಲರನ್ನೂ, ಅವನ ಎಲ್ಲಾ ಸೈನ್ಯಗಳನ್ನೂ, ಎಲ್ಲಾ
ದಿಕ್ಕುಗಳಿಗೆ ಚದರಿಸಿ, ಅವರ ಹಿಂದೆ ಕತ್ತಿಯನ್ನು ಹಿರಿಯು
೧೫ವೆನು. ಮತ್ತು ನಾನು ಅವರನ್ನು ಜನಾಂಗಗಳಲ್ಲಿ ಚದರಿಸಿ, ದೇಶ
ಗಳಲ್ಲಿ ಹೆಲ್ಲುವಾಗ, ನಾನೇ ಯೆಹೋವನೆಂದು ತಿಳು ಕೊಳ್ಳು
೧೬ವರು. ಆದರೆ ಅವರು ಎಲ್ಲಿ ಬರುತ್ತಾರೋ, ಆ ಎಲ್ಲಾ ಜನಾಂ
ಗಗಳೊಳಗೆ ತಮ್ಮ ಅಸಹ್ಯಗಳನ್ನೆಲ್ಲಾ ತಿಳಿಸುವ ಹಾಗೆ, ಅ
ವರಲ್ಲಿ ಕೆಲಬರನ್ನು ಕತ್ತಿಯಿಂದಲೂ ಬರದಿಂದಲೂ ಜಾಡ್ಯದಿಂ
ದಲೂ ಉಳಿಸುವೆನು; ನಾನೇ ಯೆಹೋವನೆಂದು ತಿಳುಕೊಳ್ಳುವರು.

೧೭ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳ್ದದ್ದೇನಂ
೧೮ ದರೆ—ಮನುಷ್ಯನ ಮಗನೇ, ನಿನ್ನ ರೊಟ್ಟಿಯನ್ನು ನಡುಗುವಿಕೆ
ಯಿಂದ ತಿನ್ನು, ಮತ್ತು ನಿನ್ನ ನೀರನ್ನು ಹೆದರಿಕೆಯಿಂದಲೂ ಎ
೧೯ ಚ್ಚರಿಕೆಯಿಂದಲೂ ಕುಡಿ, ಮತ್ತು ದೇಶದ ನಿವಾಸಿಗಳಿಗೆ ಹೀಗೆ
ಹೇಳು—ಯೆರೂಸಲೇಮಿನ ನಿವಾಸಿಗಳಿಗೂ ಇಸ್ರಯೇಲನ ದೇಶ
ಕ್ಕೂ ಕರ್ತನಾದ ಯೆಹೋವನು ಹೇಳುವದೇನಂದರೆ—ಅವರು
ತಮ್ಮ ರೊಟ್ಟಿಯನ್ನು ಎಚ್ಚರಿಕೆಯಿಂದಲೇ ತಿನ್ನುವರು; ಮತ್ತು
ತಮ್ಮ ನೀರನ್ನು ವಿಸ್ಮಯದಿಂದಲೇ ಕುಡಿಯುವರು; ಯಾಕಂದ
ರೆ ಅದರಲ್ಲಿ ವಾಸವಾಗಿರುವವರೆಲ್ಲರ ಬಲಾತ್ಕಾರದಿಂದ ಅವರ ದೇ
ಶವು ಅದರ ಪರಿಪೂರ್ಣತೆಯನ್ನೆಲ್ಲಾ ಬಿಟ್ಟು ಹಾಳಾಗುವದಕ್ಕಾ
೨೦ ಗಿಯೇ. ಹೌದು, ನಿವಾಸಿಗಳುಳ್ಳ ಪಟ್ಟಣಗಳು ಬೀಡಾಗುವವು; ದೇ
ಶವು ಹಾಳಾಗುವದು; ಆಗ ನಾನೇ ಯೆಹೋವನೆಂದು ನಿಮಗೆ ತಿ
ಳಿಯುವದು.

೨೧ ಇದಲ್ಲದೆ ಕರ್ತನ ವಾಕ್ಯವು ನನಗುಂಟಾಗಿ ಹೇಳ್ದದ್ದೇನಂದ
೨೨ ರೆ—ಮನುಷ್ಯನ ಮಗನೇ, ದಿನಗಳು ಬಹಳವಾಗುತ್ತವೆ; ಪ್ರತಿ
ದರ್ಶನವು ತಪ್ಪುತ್ತದೆ ಎಂದು ಇಸ್ರಯೇಲ್ ದೇಶದಲ್ಲಿ ನಿಮಗಿರುವ
೨೩ ಆ ಗಾದೆ ಏನು? ಆದದರಿಂದ ಅವರಿಗೆ ಹೀಗೆ ಹೇಳು—ಕರ್ತನಾದ
ಯೆಹೋವನು ಹೇಳುವದೇನಂದರೆ—ನಾನು ಈ ಗಾದೆಯನ್ನು ನಿ
ಲ್ಲಿಸುತ್ತೇನೆ, ಅದನ್ನು ಇನ್ನು ಮೇಲೆ ಇಸ್ರಯೇಲಿನಲ್ಲಿ ಗಾದೆಯಾ
ಗಿ ಅವರು ಹೇಳುವದಿಲ್ಲ; ದಿನಗಳೂ ಪ್ರತಿ ದರ್ಶನದ ಅಭಿಪ್ರಾ
೨೪ಯವೂ ಸವಿಾಪವಾಗಿವೆ ಎಂದು ಅವರಿಗೆ ಹೇಳು. ಯಾಕಂದರೆ
ಇಸ್ರಯೇಲನ ಮನೆಯವರೊಳಗೆ ಇನ್ನು ಮೇಲೆ ವ್ಯರ್ಥ ದರ್ಶ
೨೫ನವೂ ಪುಸಲಾಯಿಸುವ ಶಕುನವೂ ಇರುವದಿಲ್ಲ. ಯಾಕಂದರೆ
ನಾನೇ ಯೆಹೋವ; ನಾನು ಮಾತಾಡುತ್ತೇನೆ; ಮತ್ತು ನಾನು ಆ
ಡುವ ಮಾತು ಉಂಟಾಗುವದು; ಅದು ಇನ್ನು ದೂರವಾಗುವದಿಲ್ಲ;
ಯಾಕಂದರೆ ಓ ತಿರುಗಿ ಬೀಳುವ ಮನೆಯವರೇ! ನಿಮ್ಮ ದಿವಸಗ
೨೬ಳಲ್ಲಿಯೇ ಮಾತನ್ನಾಡಿ, ನಡಿಸುವೆನೆಂದು ಕರ್ತನಾದ ಯೆಹೋವ
೨೭ ಅನ್ನುತ್ತಾನೆ. ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇ
ಳ್ದದ್ದೇನಂದರೆ—ಮನುಷ್ಯನ ಮಗನೇ, ಇಗೋ, ಇಸ್ರಯೇಲನ ಮ
ನೆಯವರು—ಅವನು ನೋಡುವ ದರ್ಶನವು ಬಹಳ ದಿವಸದ್ದು;
೨೮ ದೂರ ಕಾಲವನ್ನು ಕುರಿತು ಪ್ರವಾದಿಸುತ್ತಾನೆಂದು ಹೇಳುತ್ತಾರೆ.
ಆದದರಿಂದ ಹೀಗೆ ಹೇಳು—ಕರ್ತನಾದ ಯೆಹೋವನು ಹೇಳುವ
ದೇನಂದರೆ—ನನ್ನ ಮಾತುಗಳಲ್ಲಿ ಒಂದಾದರೂ ಇನ್ನು ಮೇಲೆ
ದೂರವಾಗುವದಿಲ್ಲ, ನಾನು ಆಡಿದ ಮಾತು ನಡಿಸಲ್ಪಡುವದೆಂದು
ಕರ್ತನಾದ ಯೆಹೋವ ಅನ್ನುತ್ತಾನೆ.

## ೧೩. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳ್ದದ್ದೇನಂದ
೨ ರೆ—ಮನುಷ್ಯನ ಮಗನೇ, ಪ್ರವಾದಿಸುವಂಥ, ಇಸ್ರಯೇಲನ ಮ
ನೆಯವರ ಪ್ರವಾದಿಗಳಿಗೆ ವಿರೋಧವಾಗಿ ಪ್ರವಾದಿಸಿ, ಸ್ವಂತ ಹೃ
ದಯಗಳೊಳಗಿಂದ ಪ್ರವಾದಿಸುವವರಿಗೆ ಹೀಗೆ ಹೇಳು—ಕರ್ತನ
3 ವಾಕ್ಯವನ್ನು ಕೇಳಿರಿ! ಕರ್ತನಾದ ಯೆಹೋವನು ಹೀಗೆ ಹೇಳು
ತ್ತಾನೆ—ಸ್ವಂತ ಆತ್ಮದ ಪ್ರಕಾರ ನಡಿದು, ಏನು ನೋಡದೆ ಇರುವ
೪ ಮೂರ್ಖ ಪ್ರವಾದಿಗಳಿಗೆ ಅಯ್ಯೋ! ಓ ಇಸ್ರಯೇಲೇ! ನಿನ್ನ ಪ್ರವಾ
೫ ದಿಗಳು ಹಾಳಾದ ಸ್ಥಳಗಳಲ್ಲಿರುವ ನರಿಗಳ ಹಾಗೆ ಇದ್ದಾರೆ. ನೀವು
ಶೀಳುಗಳಿಗೆ ಏರಿ ಹೋಗಲಿಲ್ಲ; ಕರ್ತನ ದಿವಸದಲ್ಲಿ ಯುದ್ಧದ
ಲ್ಲಿ ನಿಲ್ಲುವ ಹಾಗೆ ಇಸ್ರಯೇಲನ ಮನೆಯವರಿಗೆ ಬೇಲಿ ಕಟ್ಟಲಿಲ್ಲ.
೬ ಅವರು ಮಾಯವನ್ನೂ ಸುಳ್ಳಾದ ಶಕುನವನ್ನೂ ನೋಡಿದ್ದಾರೆ;
ಕರ್ತನು ಅನ್ನುತ್ತಾನೆಂದು ಹೇಳುತ್ತಾರೆ, ಆದರೆ ಕರ್ತನು ಅವರ
ನ್ನು ಕಳುಹಿಸಲಿಲ್ಲ; ಆದರೂ ಮಾತು ಸ್ಥಿರವಾಗುವದೆಂದು ಕಾದು
ಕೊಳ್ಳ ಮಾಡುತ್ತಾರೆ. ಮಾಯವಾದ ದರ್ಶನವನ್ನು ನೋಡಿ
೭ ದ್ದೀರಲ್ಲ? ಸುಳ್ಳಾದ ಶಕುನವನ್ನು ಹೇಳ್ದಿದ್ದೀರಲ್ಲ! ನಾನು ಮಾತಾ
ಡದೆ ಇದ್ದರೂ ಕರ್ತನು ಅನ್ನುತ್ತಾನೆಂದು ಹೇಳ್ದಿದ್ದೀರಲ್ಲ! ಆದದ
೮ ರಿಂದ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನೀವು
ಮಾಯವನ್ನು ಮಾತಾಡಿದ್ದರಿಂದಲೂ ಸುಳ್ಳುಗಳನ್ನು ದರ್ಶಿಸಿ
ದ್ದರಿಂದಲೂ ಇಗೋ ನಾನು ನಿಮಗೆ ವಿರೋಧವಾಗಿದ್ದೇನೆಂದು ಕ
೯ ರ್ತನಾದ ಯೆಹೋವ ಅನ್ನುತ್ತಾನೆ. ಮತ್ತು ಮಾಯವನ್ನು ದ
ರ್ಶಿಸಿ, ಸುಳ್ಳುಗಳನ್ನು ಶಕುನ ಹೇಳುವ ಪ್ರವಾದಿಗಳ ಮೇಲೆ ನನ್ನ
ಕೈ ಇರುವದು; ಅವರು ನನ್ನ ಜನರ ಸಭೆಯಲ್ಲಿ ಇರರು; ಇಸ್ರಯೇ
ಲನ ಮನೆಯವರ ಪಟ್ಟಿಯಲ್ಲಿ ಬರೆಯಲ್ಪಡರು; ಇಸ್ರಯೇಲ್ ದೇ
ಶದಲ್ಲಿ ಪ್ರವೇಶಿಸರು; ನಾನೇ ಕರ್ತನಾದ ಯೆಹೋವನೆಂದು ತಿಳು
ಕೊಳ್ಳುವಿರಿ.

೧೦ ಸಮಾಧಾನವಿಲ್ಲದಿರುವಾಗ ಅವರು ಸಮಾಧಾನವೆಂಥೇಳ್
ದ್ದರಿಂದಲೂ, ಒಬ್ಬನು ಗೋಡೆಯನ್ನು ಕಟ್ಟಿ, ಮತ್ತು ಇಗೋ
೧೧ ಮತ್ತೊಬ್ಬನು ಅದಕ್ಕೆ ಸುಣ್ಣ ಹಚ್ಚಿದ್ದರಿಂದಲೂ, ಸುಣ್ಣ ಹಚ್ಚು
ವವರಿಗೆ—ಅದು ಬೀಳುವದೆಂದು ಹೇಳು; ಪ್ರಳಯದ ಮಳೆ
ಬರುವದು; ಮತ್ತು ಕಲ್ಮಳೆಯ ಕಲ್ಲುಗಳೇ! ನೀವು ಬೀಳುವಿರಿ;
೧೨ ಬಿರುಗುಳ್ಳಿಯು ಅದನ್ನು ಶೀಳಿ ಬಿಡುವದು. ಇಗೋ ಗೋಡೆ
ಬಿದ್ದ ಮೇಲೆ—ನೀವು ಹಚ್ಚಿದ ಸುಣ್ಣ ಎಲ್ಲಿ? ಎಂದು ನಿಮಗೆ ಹೇ
೧೩ಳುವರಲ್ಲ? ಆದದರಿಂದ ಕರ್ತನಾದ ಯೆಹೋವನು ಹೀಗೆ ಹೇಳು
ತ್ತಾನೆ—ನಾನು ನನ್ನ ಉರಿಯಲ್ಲಿ ಅದನ್ನು ಬಿರುಗುಳ್ಳಿಯಿಂದ
ಶೀಳಿ ಬಿಡುವೆನು; ಮತ್ತು ಅದನ್ನು ಮುಗಿಸುವ ಹಾಗೆ ನನ್ನ ಕೊ
ಪದಿಂದ ಪ್ರಳಯದ ಮಳೆಯೂ, ನನ್ನ ಉರಿಯಿಂದ ಕಲ್ಮಳೆಯ
೧೪ ಕಲ್ಲುಗಳೂ ಇರುವವು. ಹೀಗೆ ನೀವು ಸುಣ್ಣ ಹಚ್ಚಿದ ಗೋಡೆ
ಯನ್ನು ನಾನು ಜಡೆದು ಬಿಟ್ಟು, ನೆಲಗತ ಮಾಡುವೆನು; ಅದರ
ಅಸ್ತಿವಾರವು ಕಾಣ ಬರುವದಿಲ್ಲ; ಅದು ಬೀಳುವದು; ಮತ್ತು ನೀ
ವು ಅದರ ಮಧ್ಯದಲ್ಲಿ ಮುಗಿಸಲ್ಪಡುವಿರಿ; ನಾನೇ ಯೆಹೋವನೆಂ
೧೫ದು ತಿಳು ಕೊಳ್ಳುವಿರಿ. ಹೀಗೆ ನಾನು ಗೋಡೆಯಲ್ಲಿಯೂ ಅದ
ಕ್ಕೆ ಸುಣ್ಣ ಹಚ್ಚಿದವರಲ್ಲಿಯೂ ನನ್ನ ಉರಿಯನ್ನು ತೀರಿಸಿ

ಬಿಟ್ಟು—ಗೋಡೆಯಾದರೂ, ಅದಕ್ಕೆ ಸುಣ್ಣ ಹಚ್ಚಿದವರಾದರೂ
೧೬ ಇನ್ನು ಇಲ್ಲವೆಂದೂ, ಯೆರೂಸಲೇಮಿನ ವಿಷಯ ಪ್ರವಾದಿಸಿ
ಸಮಾಧಾನವಿಲ್ಲದಿರುವಾಗ ಅದಕ್ಕೆ ಸಮಾಧಾನದ ದರ್ಶನವ
ನ್ನು ದರ್ಶಿಸಿದ ಇಸ್ರಯೇಲಿನ ಪ್ರವಾದಿಗಳೂ ಇನ್ನು ಇಲ್ಲವೆಂ
ದೂ, ನಿಮಗೆ ಹೇಳುವೆನೆಂಬದಾಗಿ ಕರ್ತನಾದ ಯೆಹೋವ ಅ
ನ್ನುತ್ತಾನೆ.

೧೭ ಇದಲ್ಲದೆ, ಮನುಷ್ಯನ ಮಗನೇ, ತಮ್ಮ ಹೃದಯದೊಳಗಿಂ
ದ ಪ್ರವಾದಿಸುವ ನಿನ್ನ ಜನರ ಕುಮಾರ್ತೆಗಳಿಗೆ ವಿರೋಧವಾ
ಗಿ ನಿನ್ನ ಮುಖವನ್ನಿಟ್ಟು, ಅವರಿಗೆ ವಿರೋಧವಾಗಿ ಪ್ರವಾದಿಸಿ,
೧೮ ಹೀಗೆ ಹೇಳು—ಕರ್ತನಾದ ಯೆಹೋವನು ಹೇಳುವದೇನಂದರೆ—
ಪ್ರಾಣಗಳನ್ನು ಬೇಟೆಯಾಡುವ ಬಗ್ಯೆ, ಎಲ್ಲಾ ಮೊಣಕೈಗಳಿ
ಗೆ ದಿಂಡುಗಳನ್ನು ಹೊಲಿದು, ಎಲ್ಲಾ ನೀಳದ ತಲೆಗಳಿಗೆ ವಸ್ತ್ರಗ
ಳನ್ನು ಮಾಡುವ ಕುಮಾರ್ತೆಗಳಿಗೆ ಅಯ್ಯೋ! ನನ್ನ ಜನರ
ಪ್ರಾಣಗಳನ್ನು ಬೇಟೆಯಾಡುವಿರೋ! ಮತ್ತು ನಿಮ್ಮ ಬಳಿಗೆ
೧೯ ಬರುವ ಪ್ರಾಣಗಳನ್ನು ಬದುಕಿಸುವಿರೋ! ಸುಳ್ಳಿಗೆ ಕಿವಿ ಕೊ
ಡುವ ನನ್ನ ಜನರಿಗೆ ಸುಳ್ಳು ಹೇಳಿ, ಸಾಯ ಬಾರದ ಪ್ರಾಣಗ
ಳನ್ನು ಸಾಯ ಮಾಡುವದಕ್ಕೂ, ಬದುಕ ಬಾರದ ಪ್ರಾಣಗಳ
ನ್ನು ಬದುಕಿಸುವದಕ್ಕೂ, ಕೈ ಹಿಡಿ ಜವೆಗೋಧಿಗೂ ತುಂಡು ಕೊ
ಟ್ಟಿಗೂ ನನ್ನನ್ನು ನನ್ನ ಜನರೊಳಗೆ ಅಪವಿತ್ರ ಮಾಡುವಿರೋ!
೨೦ ಆದದರಿಂದ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—
ಇಗೋ ನೀವು ಪ್ರಾಣಗಳನ್ನು—ಅವುಗಳನ್ನು ಹಾರಿಸುವದಕ್ಕಾ
ಗಿ—ಬೇಟೆಯಾಡುವ ನಿಮ್ಮ ದಿಂಡುಗಳಿಗೆ ವಿರೋಧವಾಗಿದ್ದೇನೆ;
ಮತ್ತು ಅವುಗಳನ್ನು ನಿಮ್ಮ ತೋಳುಗಳಿಂದ ಹರಿದು ಬಿಟ್ಟು, ಪ್ರಾ
ಣಗಳನ್ನು—ನೀವು ಹಾರಿಸುವದಕ್ಕಾಗಿ ಬೇಟೆಯಾಡುವ ಪ್ರಾಣ
೨೧ ಗಳನ್ನು—ಬಿಡಿಸುತ್ತೇನೆ. ನಿಮ್ಮ ವಸ್ತ್ರಗಳನ್ನು ಸಹ ಹರಿದು ಬಿ
ಟ್ಟು, ನನ್ನ ಜನರನ್ನು ನಿಮ್ಮ ಕೈಯೊಳಗಿಂದ ತಪ್ಪಿಸುತ್ತೇನೆ,
ಅವರು ಇನ್ನು ಮೇಲೆ ನಿಮ್ಮಿಂದ ಬೇಟೆಯಾಗುವದಕ್ಕೆ ನಿಮ್ಮ
ಕೈಯಲ್ಲಿ ಇರುವದಿಲ್ಲ; ನಾನೇ ಯೆಹೋವನೆಂದು ತಿಳಿಯ ಕೊಳ್ಳು
೨೨ ವಿರಿ. ನಾನು ಯಾವನಿಗೆ ದುಃಖ ಮಾಡಲಿಲ್ಲವೋ ಆ ನೀತಿವಂತ
ನ ಹೃದಯಕ್ಕೆ ನೀವು ಸುಳ್ಳಾಡಿ ದುಃಖ ಮಾಡಿದ್ದರಿಂದಲೂ, ದು
ಷ್ಟನನ್ನು—ಅವನು ಬದುಕಿಸಲ್ಪಡುವದಕ್ಕೆ ತನ್ನ ಕೆಟ್ಟ ಮಾರ್ಗ
ವನ್ನು ಬಿಡದ ಹಾಗೆ—ಅವನ ಕೈಗಳನ್ನು ಬಲ ಪಡಿಸಿದ್ದರಿಂದಲೂ,
೨೩ ಇದರ ನಿಮಿತ್ತ ನೀವು ಇನ್ನು ಮೇಲೆ ಮಾಯವನ್ನು ದರ್ಶಿಸದೆ,
ಶಕುನವನ್ನು ನೋಡದೆ, ಇರುವಿರಿ; ಯಾಕಂದರೆ, ನಾನು ನನ್ನ
ಜನರನ್ನು ನಿಮ್ಮ ಕೈಯೊಳಗಿಂದ ತಪ್ಪಿಸುವೆನು; ನಾನೇ ಯೆ
ಹೋವನೆಂದು ತಿಳಿಯ ಕೊಳ್ಳುವಿರಿ.

## ೧೫. ಸಂಧಿ.

೧ ಇದಲ್ಲದೆ ಇಸ್ರಯೇಲಿನ ಹಿರಿಯರಲ್ಲಿ ಕೆಲವು ಮಂದಿ ನನ್ನ ಬ
೨ ಳಿಗೆ ಬಂದು ನನ್ನ ಮುಂದೆ ಕೂತು ಕೊಂಡರು. ಆಗ ಕರ್ತನ
೩ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ—ಮನುಷ್ಯನ ಮ
ಗನೇ, ಈ ಮನುಷ್ಯರು ತಮ್ಮ ವಿಗ್ರಹಗಳನ್ನು ತಮ್ಮ ಹೃದಯ
ಗಳಲ್ಲಿ ಸ್ಥಾಪಿಸಿ, ತಮ್ಮ ಅಕ್ರಮದ ಎಡೆತಡೆಯನು ತಮ್ಮ ಮು
ಖದ ಮುಂದೆ ಇಟ್ಟು ಕೊಂಡಿದ್ದಾರೆ; ನಾನು ಅವರಿಂದ ಸ್ವಲ್ಪವಾ
ದರೂ ವಿಚಾರಿಸಲ್ಪಡ ತಕ್ಕದ್ದೋ? ಆದದರಿಂದ ನೀನು ಅವರ ಸಂ
೪ ಗಡ ಮಾತಾಡಿ ಅವರಿಗೆ ಹೇಳು ಬೇಕಾದದ್ದೇನಂದರೆ—ಕರ್ತನಾ
ದ ಯೆಹೋವನು ಹೀಗೆ ಹೇಳುತ್ತಾನೆ—ತನ್ನ ಹೃದಯದಲ್ಲಿ ತ
ನ್ನ ವಿಗ್ರಹಗಳನ್ನು ಸ್ಥಾಪಿಸಿ, ತನ್ನ ಅಕ್ರಮದ ಎಡೆತಡೆಯನ್ನು
ತನ್ನ ಮುಖದ ಮುಂದೆ ಇಟ್ಟು ಕೊಂಡು, ಪ್ರವಾದಿಯ ಬಳಿಗೆ ಬ
ರುವ ಮನುಷ್ಯನು ಯಾವನೋ ಹಾಗೆ ಬರುವವನಿಗೆ ಕರ್ತನಾ
ದ ನಾನು ಅವನ ವಿಗ್ರಹಗಳ ಸಮೂಹಕ್ಕೆ ತಕ್ಕ ಹಾಗೆ ಉತ್ತರ
೫ ಕೊಡುತ್ತೇನೆ. ಹೀಗೆ ನಾನು ಇಸ್ರಯೇಲಿನ ಮನೆಯವರನ್ನು ಅ
ವರ ಸ್ವಂತ ಹೃದಯದಲ್ಲಿ ಹಿಡಿಯುತ್ತೇನೆ; ಯಾಕಂದರೆ, ಅವ
ಕೆಲ್ಲರು ತಮ್ಮ ವಿಗ್ರಹಗಳ ಮುಖಾಂತ್ರ ನನಗೆ ಅನ್ಯರಾದರು. ಆ
ದದರಿಂದ ನೀನು ಇಸ್ರಯೇಲಿನ ಮನೆಯವರಿಗೆ ಹೇಳ ತಕ್ಕದ್ದೇ
ನಂದರೆ—ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ಮಾ
ನನಾಂತರ ಪಟ್ಟು ನಿಮ್ಮ ವಿಗ್ರಹಗಳನ್ನು ಬಿಟ್ಟು ತಿರುಗಿರಿ; ನಿಮ್ಮ
ಅಸಹ್ಯಗಳನೆಲ್ಲಾ ಬಿಟ್ಟು ನಿಮ್ಮ ಮುಖಗಳನ್ನು ತಿರುಗಿಸಿ ಕೊಳ್ಳಿ
೬ ರಿ. ಯಾಕಂದರೆ ನನಗೆ ತನ್ನನ್ನು ಅನ್ಯವಾಗ ಮಾಡಿ ಕೊಂಡು,
ತನ್ನ ಹೃದಯದಲ್ಲಿ ತನ್ನ ವಿಗ್ರಹಗಳನ್ನು ಸ್ಥಾಪಿಸಿ, ತನ್ನ ಅಕ್ರ
ಮದ ಎಡೆತಡೆಯನ್ನು ತನ್ನ ಮುಖದ ಮುಂದೆ ಇಟ್ಟು ಕೊಂಡು,
ಪ್ರವಾದಿಯ ಬಳಿಗೆ ನನ್ನ ವಿಷಯ ವಿಚಾರಿಸುವ ಬಗ್ಯೆ ಬರುವ
ಇಸ್ರಯೇಲನ ಮನೆಯವರಲ್ಲಿಯೂ ಇಸ್ರಯೇಲಿನಲ್ಲಿ ತಂಗುವ
ಅನ್ಯರಲ್ಲಿಯೂ ಪ್ರತಿ ಮನುಷ್ಯನಿಗೆ—ಕರ್ತನಾದ ನಾನು ನನ್ನಿಂ
ದಲೇ ಅವನಿಗೆ ಉತ್ತರ ಕೊಡುವೆನು. ನಾನು ಆ ಮನುಷ್ಯನಿಗೆ
೮ ವಿರೋಧವಾಗಿ ನನ್ನ ಮುಖವನ್ನಿಟ್ಟು, ಅವನನ್ನು ಗುರುತಾಗಿ
ಯೂ ಗಾವೆಯಾಗಿಯೂ ಮಾಡಿ, ಅವನನ್ನು ನನ್ನ ಜನರ ಮ
ಧ್ಯದೊಳಗಿಂದ ಕಡಿದು ಬಿಡುವೆನು; ನಾನೇ ಯೆಹೋವನೆಂದು
೯ ನೀವು ತಿಳಿಯ ಕೊಳ್ಳುವಿರಿ. ಮತ್ತು ಪ್ರವಾದಿಯು ಮೋಸ ಹೋಗಿ
ವಾಕ್ಯವನ್ನು ಹೇಳಿದರೆ, ಕರ್ತನಾದ ನಾನೇ ಆ ಪ್ರವಾದಿಯನ್ನು
ಮೋಸ ಹೋಗಲೀಸಿದ್ದೇನೆ; ಮತ್ತು ನಾನು ನನ್ನ ಕೈ ಅವನಿಗೆ
ವಿರೋಧವಾಗಿ ಚಾಚಿ, ನನ್ನ ಜನರಾದ ಇಸ್ರಯೇಲರ ಮಧ್ಯದೊ
೧೦ ಳಗಿಂದ ಅವನನ್ನು ನಾಶ ಮಾಡುವೆನು. ಅವರು ತಮ್ಮ ಅಕ್ರಮ
ದ ದಂಡನೆಯನ್ನು ಹೊರುವರು; ವಿಚಾರಿಸುವವನ ದಂಡನೆಯು
ಹ್ಯಾಗೋ ಹಾಗೆಯೇ ಪ್ರವಾದಿಯ ದಂಡನೆ ಇರುವದು. ಯಾ
೧೧ ಕಂದರೆ, ಇಸ್ರಯೇಲನ ಮನೆಯವರು ಇನ್ನು ಮೇಲೆ ನನ್ನನ್ನು
ಬಿಟ್ಟು ತಿರುಗದೆ, ತಮ್ಮ ಎಲ್ಲಾ ದ್ರೋಹಗಳಿಂದ ಅಶುದ್ಧವಾಗದೆ,
ಇರುವದಕ್ಕಾಗಿಯೇ. ಹೀಗೆ ಅವರು ನನಗೆ ಜನರಾಗಿರುವರು,
ನಾನು ಅವರಿಗೆ ದೇವರಾಗಿರುವೆನು, ಎಂದು ಕರ್ತನಾದ ಯೆಹೋ
ವ ಅನ್ನುತ್ತಾನೆ.

೧೨ ಕರ್ತನ ವಾಕ್ಯವು ನನಗೆ ತಿರಿಗಿ ಉಂಟಾಗಿ ಹೇಳಿದ್ದೇನಂದ
ರೆ—ಮನುಷ್ಯನ ಮಗನೇ, ದೇಶವು ದೊಡ್ಡ ಅಪರಾಧದಿಂದ ನನ
೧೩ ಗೆ ವಿರೋಧವಾಗಿ ಪಾಪ ಮಾಡಲಾಗಿ, ನಾನು ಅದರ ಮೇಲೆ ನ
ನ್ನ ಕೈ ಚಾಚಿ, ಅದರ ಅನ್ನಾಧಾರವನ್ನು ಮುರಿದು, ಬರವನ್ನು
ಅದರಲ್ಲಿ ಕಳುಹಿಸಿ, ಮನುಷ್ಯರನ್ನೂ ಮೃಗಗಳನ್ನೂ ಅದರೊ
೧೪ ಳಗಿಂದ ಕಡಿದು ಬಿಡುವಾಗ, ನೋಹನೂ ದಾನಿಯೇಲನೂ ಯೋ
ಬನೂ ಈ ಮೂರು ಮನುಷ್ಯರು ಅದರಲ್ಲಿ ಇದ್ದರೂ, ಅವರು
ತಮ್ಮ ನೀತಿಯಿಂದ ಸ್ವಂತ ಪ್ರಾಣಗಳನ್ನು ಮಾತ್ರ ತಪ್ಪಿಸುವ
೧೫ ದೆಂದು ಕರ್ತನಾದ ಯೆಹೋವ ಅನ್ನುತ್ತಾನೆ. ನಾನು ದುಷ್ಟ
ಮೃಗಗಳನ್ನು ದೇಶದಲ್ಲಿ ಹಾದು ಹೋಗ ಮಾಡಲಾಗಿ, ಅವು



ಅದನ್ನು ನಿವಾಸಿ ಇಲ್ಲದೆ ಹಾಳಾಗುವ ಹಾಗೆಯೂ ದುಷ್ಟ ಮೃಗ
ಗಳ ನಿಮಿತ್ತ ಯಾರೂ ದಾಟ ಕೂಡದ ಹಾಗೆಯೂ ಮಾಡಿದರೆ,
೧೬ ಈ ಮೂರು ಮನುಷ್ಯರು ಅದರಲ್ಲಿ ಇದ್ದರೂ ಅವರು ಕುಮಾರ
ರನ್ನಾದರೂ ಕುಮಾರ್ತೆಗಳನ್ನಾದರೂ ತಪ್ಪಿಸದೆ, ತಾವೇ ಮಾ
ತ್ರ ತಪ್ಪಿಸಿ ಕೊಳ್ಳುವರು; ಆದರೆ ದೇಶವು ಹಾಳಾಗುವದು, ನನ್ನ
ಜೀವದಾಣೆ ಎಂದು ಕರ್ತನಾದ ಯೆಹೋವ ಅನ್ನುತ್ತಾನೆ. ಇಲ್ಲ
೧೭ ದೆ, ನಾನು ಆ ದೇಶದ ಮೇಲೆ ಕತ್ತಿಯನ್ನು ತರಿಸಿ, ಕತ್ತಿಯೇ, ದೇ
ಶದಲ್ಲಿ ಹಾದು ಹೋಗು ಎಂದು ಹೇಳಿ, ಮನುಷ್ಯರನ್ನೂ ಮೃ
ಗಗಳನ್ನೂ ಅದರೊಳಗಿಂದ ಕಡಿದು ಬಿಟ್ಟರೆ, ಈ ಮೂರು ಮನು
ಷ್ಯರು ಅದರಲ್ಲಿ ಇದ್ದರೂ ಅವರು ಕುಮಾರರನ್ನಾದರೂ ಕು
ಮಾರ್ತೆಗಳನ್ನಾದರೂ ತಪ್ಪಿಸದೆ, ತಾವೇ ಮಾತ್ರ ತಪ್ಪಿಸಿ ಕೊ
ಳ್ಳುವರು, ನನ್ನ ಜೀವದಾಣೆ ಎಂದು ಕರ್ತನಾದ ಯೆಹೋವ ಅ
೧೮ ನ್ನುತ್ತಾನೆ. ಇಲ್ಲವೇ ನಾನು ಆ ದೇಶದ ಮೇಲೆ ಜಾಡ್ಯವನ್ನು ಕ
ಳುಹಿಸಿ, ರಕ್ತದಲ್ಲಿ ಅದರ ಮೇಲೆ ನನ್ನ ಉಗ್ರವನ್ನು ಹೊಯಿದು,
ಮನುಷ್ಯರನ್ನೂ ಮೃಗಗಳನ್ನೂ ಅದರೊಳಗಿಂದ ಕಡಿದು ಬಿ
೧೯ ಟ್ಟರೆ, ನೋಹನೂ ದಾನಿಯೇಲನೂ ಯೋಬನೂ ಅದರಲ್ಲಿ ಇ
ದ್ದರೂ ಅವರು ಮಗನನ್ನಾದರೂ ಮಗಳನ್ನಾದರೂ ತಪ್ಪಿಸದೆ,
ಸ್ವಂತ ಪ್ರಾಣಗಳನ್ನು ಮಾತ್ರ ತಮ್ಮ ನೀತಿಯಿಂದ ತಪ್ಪಿಸುವ
ರು, ನನ್ನ ಜೀವದಾಣೆ, ಎಂದು ಕರ್ತನಾದ ಯೆಹೋವ ಅನ್ನು
೨೦ ತ್ತಾನೆ. ಹಾಗಾದರೆ, ಕರ್ತನಾದ ಯೆಹೋವನು ಹೀಗೆ ಹೇಳುತ್ತಾ
ನೆ—ನಾನು ಕತ್ತಿ ಬರ ದುಷ್ಟಮೃಗ ಜಾಡ್ಯಗಳೆಂಬ ನನ್ನ ನಾಲ್ಕು
ಕಠಿಣವಾದ ನ್ಯಾಯತೀರ್ಪುಗಳನ್ನು ಯೆರೂಸಲೇಮಿನ ಮೇಲೆ
ಕಳುಹಿಸಿ, ಮನುಷ್ಯರನ್ನೂ ಮೃಗಗಳನ್ನೂ ಅದರೊಳಗಿಂದ
೨೧ ಕಡಿದು ಬಿಟ್ಟರೆ, ಇನ್ನೇನಾಗುವದು? ಆದಾಗ್ಯೂ ಇಗೋ, ಅದರ
ಲ್ಲಿ ಕುಮಾರ ಕುಮಾರ್ತೆಗಳಲ್ಲಿ ಉಳುವು ತಪ್ಪಿಸಿಕೊಂಡವರಾಗಿ
ಹೊರಗೆ ತರಲ್ಪಡುವರು; ಇಗೋ, ಅವರು ನಿಮ್ಮ ಬಳಿಗೆ ಹೊರ
ಗೆ ಬರುವರು; ನೀವು ಅವರ ಮಾರ್ಗಗಳನ್ನೂ ಅವರ ಕ್ರಿಯೆಗ
ಳನ್ನೂ ನೋಡುವಿರಿ, ಮತ್ತು ನಾನು ಯೆರೂಸಲೇಮಿನ ಮೇಲೆ
ತಂದ ಕೇಡಿನ ವಿಷಯ, ನಾನು ಅವರ ಮೇಲೆ ತಂದದ್ದೆಲ್ಲಾದರ
೨೩ ವಿಷಯ, ಆದರಣೆ ಹೊಂದುವಿರಿ. ನೀವು ಅವರ ಮಾರ್ಗಗಳ
ನ್ನೂ ಅವರ ಕ್ರಿಯೆಗಳನ್ನೂ ನೋಡುವಾಗ, ಅವರು ನಿಮ್ಮನ್ನು
ಆದರಿಸುವರು; ಮತ್ತು ನಾನು ಅದರೊಳಗೆ ಮಾಡಿದ್ದೆಲ್ಲಾ ಕಾರ
ಣವಿಲ್ಲದೆ ಮಾಡಲಿಲ್ಲವೆಂದು ತಿಳಿಯ ಕೊಳ್ಳುವಿರಿ, ಎಂದು ಕರ್ತ
ನಾದ ಯೆಹೋವ ಅನ್ನುತ್ತಾನೆ.

## ೧೫. ಸಂಧಿ.

೧ ಮತ್ತು ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದ
೨ ರೆ—ಮನುಷ್ಯನ ಮಗನೇ, ದ್ರಾಕ್ಷೇ ಗಿಡ ಬೇರೆ ಗಿಡಗಳಿಗಿಂತಲೂ
೩ ಅಡವಿಯ ಗಿಡಗಳಲ್ಲಿರುವ ಕೊಂಬೆಗಳಿಗಿಂತಲೂ ಹೆಚ್ಚೇನು! ಅದ
ರಿಂದ ಯಾವದೊಂದು ಕೆಲಸ ಮಾಡುವ ಬಗ್ಯೆ ಮರವನ್ನು ತ
ಕ್ಕೊಳ್ಳುವರೋ! ಇಲ್ಲವೇ ಅದರ ಮೇಲೆ ಯಾವದೊಂದು ಪಾ
೪ ತ್ರೆ ತೂಗ ಹಾಕುವ ಹಾಗೆ ಅದರಿಂದ ಗೂಟ ತಕ್ಕೊಳ್ಳುವ
ಕೋ! ಇಗೋ, ಸಾದೆಗಾಗಿ ಬೆಂಕಿಯಲ್ಲಿ ಹಾಕಲ್ಪಡುತ್ತದೆ; ಬೆಂ
ಕಿಯು ಅದರ ಎರಡು ಕೊನೆಗಳನ್ನು ತಿಂದು ಬಿಡುತ್ತದೆ, ಅದರ
೫ ನಡುವೆ ಸಹ ಸುಟ್ಟು ಹೋಗುತ್ತದೆ; ಅದು ಯಾವ ಕೆಲಸಕ್ಕೆ ಬಂ
ದೀತೇ! ಇಗೋ, ಅದು ಪೂರ್ಣವಾಗಿರುವಾಗ ಕೆಲಸಕ್ಕೆ ಬರಲಿಲ್ಲ;
ಹಾಗಾದರೆ ಬೆಂಕಿ ಅದನ್ನು ತಿಂದು ಬಿಟ್ಟ ಮೇಲೆ, ಅದು ಸುಟ್ಟು
೬ ಹೋದ ಮೇಲೆ, ಇನ್ನು ಹ್ಯಾಗೆ ಕೆಲಸಕ್ಕೆ ಬಂದೀತು! ಆದಕಾರಣ
ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ಅಡವಿಯ ಗಿಡಗ
ಳಲ್ಲಿ ನಾನು ಬೆಂಕಿಗೆ ಸಾದೆಗಾಗಿ ಕೊಟ್ಟ ದ್ರಾಕ್ಷೇಗಿಡ ಹ್ಯಾಗೋ
೭ ಹಾಗೆಯೇ ನಾನು ಯೆರೂಸಲೇಮಿನ ನಿವಾಸಿಗಳನ್ನು ಮಾಡಿದ್ದೇ
ನೆ. ಮತ್ತು ನನ್ನ ಮುಖವನ್ನು ಅವರಿಗೆ ವಿರೋಧವಾಗಿ ಇಡುತ್ತೇ
ನೆ; ಅವರು ಬಂದು ಬೆಂಕಿಯೊಳಗಿಂದ ಹೊರಡಲಾಗಿ ಇನ್ನೊಂದು
ಬೆಂಕಿ ಅವರನ್ನು ತಿಂದು ಬಿಡುವದು; ನಾನು ನನ್ನ ಮುಖವನ್ನು ಅವ
ರಿಗೆ ವಿರೋಧವಾಗಿ ಇಡುವಾಗ, ನಾನೇ ಯೆಹೋವನೆಂದು ತಿಳಿ
೮ ಕೊಳ್ಳುವಿರಿ. ಹೌದು, ಅವರು ಅಪರಾಧ ಮಾಡಿದದರಿಂದ ದೇಶವ
ನ್ನು ಹಾಳು ಹಾಡುವೆನೆಂದು ಕರ್ತನಾದ ಯೆಹೊವ ಅನ್ನುತ್ತಾನೆ.

## ೧೬. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂ
ದರೆ—ಮನುಷ್ಯನ ಮಗನೇ, ಯೆರೂಸಲೇಮಿಗೆ ಅದರ ಅಸಹ್ಯ
೨ ಗಳನ್ನು ತಿಳಿಸಿ, ನೀನು ಹೇಳ ತಕ್ಕದ್ದೇನಂದರೆ—ಕರ್ತನಾದ ಯೆ
೩ ಹೋವನು ಯೆರೂಸಲೇಮಿಗೆ ಹೀಗೆ ಹೇಳುತ್ತಾನೆ—ನಿನ್ನ ಉತ್ಪ
ತ್ತಿಯೂ ನಿನ್ನ ಜನ್ಮವೂ ಕಾನಾನ್ ದೇಶದ್ದೇ. ನಿನ್ನ ತಂದೆ ಅ
ಮೋರ್ಯನು; ನಿನ್ನ ತಾಯಿ ಹಿತ್ತಿಯಳೇ. ಮತ್ತು ನಿನ್ನ ಜನ್ಮ
೪ ದ ವಿಷಯ—ನೀನು ಹುಟ್ಟಿದ ದಿವಸದಲ್ಲಿ ನಿನ್ನ ಹೊಕ್ಕಳು ಕತ್ತರಿ
ಸಲ್ಪಡಲಿಲ್ಲ; ಶುದ್ಧವಾಗುವ ಹಾಗೆ ನೀರಿನಿಂದ ತೊಳೆಯಲ್ಪಡಲಿಲ್ಲ;
ನಿನಗೆ ಉಪ್ಪು ಹಾಕಲಿಲ್ಲ, ನಿನ್ನನ್ನು ಬಟ್ಟೆಯಲ್ಲಿ ಸುತ್ತಲಿಲ್ಲ.
೫ ಇವುಗಳಲ್ಲಿ ಒಂದನ್ನು ನಿನಗೆ ಮಾಡಿ, ನಿನ್ನನ್ನು ಕನಿಕರಿಸುವ
ಹಾಗೆ, ಯಾವ ಕಣ್ಣಾದರೂ ನಿನ್ನನ್ನು ಕರುಣಿಸಲಿಲ್ಲ; ಆದರೆ
ನೀನು ಹುಟ್ಟಿದ ದಿವಸಲ್ಲಿ, ನಿನಗೆ ಅಸಹ್ಯ ಪಟ್ಟು, ನಿನ್ನನ್ನು
೬ ಹೊಲದಲ್ಲಿ ಹಾಕಿ ಬಿಟ್ಟರು. ಮತ್ತು ನಾನು ನಿನ್ನ ಬಳಿಯಲ್ಲಿ
ಹಾದು ಹೋಗಿ, ನೀನು ನಿನ್ನ ರಕ್ತದಲ್ಲಿ ಹಾಕಿ ಬಿಡಲ್ಪಟ್ಟಿರುವದ
ನ್ನು ನೋಡಿದಾಗ, ನಿನ್ನ ರಕ್ತದಲ್ಲಿರುವ ನಿನಗೆ, ಬದುಕು, ಅಂದೆ
೭ ನು; ಹೌದು, ನಿನ್ನ ರಕ್ತದಲ್ಲಿರುವ ನಿನಗೆ, ಬದುಕು, ಅಂದೆನು.
ಹೊಲದ ಮೊಳಕೆಯ ಹಾಗೆ ನಿನ್ನನ್ನು ಬಹಳವಾಗಿ ಹೆಚ್ಚ ಮಾ
ಡಿದ್ದೇನೆ; ನೀನು ಬೆಳೆದು, ದೊಡ್ಡವಳಾಗಿ, ಅತಿ ಸೌಂದರ್ಯವು
ಳ್ಳವಳಾದಿ; ನಿನ್ನ ಮೊಲೆಗಳು ರೂಪ ಗೊಂಡವು; ನಿನ್ನ ಕೂದ
ಲು ಬೆಳೆಯಿತು, ಆದರೆ ಮುಂಚೆ ನೀನು ಬೆತ್ತಲೆಯಾಗಿಯೂ
೮ ಬರೀಯವಳಾಗಿಯೂ ಇದ್ದಿ. ಆಗ ನಾನು ನಿನ್ನ ಬಳಿಯಲ್ಲಿ ಹಾ
ದು ಹೋಗಿ, ನಿನ್ನನ್ನು ನೋಡಿದಾಗ, ಇಗೋ ನಿನ್ನ ಸಮಯ
ವು ಪ್ರೀತಿ ಮಾಡ ತಕ್ಕ ಸಮಯವಾಗಿತ್ತು; ಆಗ ನಾನು ನನ್ನ ತ
ರಗನ್ನು ನಿನ್ನ ಮೇಲೆ ಹಾಸಿ, ನಿನ್ನ ನಾಚಿಕೆಯನ್ನು ಮುಚ್ಚಿ,
ನಿನಗೆ ಪ್ರಮಾಣ ಮಾಡಿ, ನಿನ್ನ ಸಂಗಡ ಒಡಂಬಡಿಕೆಯಲ್ಲಿ ತೇ
ರಿದೆನೆಂದು ಕರ್ತನಾದ ಯೆಹೋವ ಅನ್ನುತ್ತಾನೆ; ಹೀಗೆ ನೀನು
೯ ನನ್ನವಳಾದಿ ಆಗ ನಿನ್ನನ್ನು ನೀರಿನಿಂದ ತೊಳೆದೆನು; ಹೌದು
ನಿನ್ನ ರಕ್ತವನ್ನು ಶುದ್ಧವಾಗಿ ನಿನ್ನಿಂದ ತೊಳೆದು ಬಿಟ್ಟು, ನಿನ್ನ
ನ್ನು ಎಸ್ಲೆಯಿಂದ ಅಭಿಷೇಕಿಸಿದೆನು; ಇದಲ್ಲದೆ, ಚಿತ್ರವಾಗಿ ಹೊ
೧೦ ಲಿದ ವಸ್ತ್ರಗಳನ್ನು ನಿನಗೆ ತೊಡಿಸಿದೆನು; ತಾಹಷ ತೊಗಲಿನ
ಜೋಡುಗಳನ್ನೂ ಕೊಟ್ಟೆನು; ನಾರುಮಡಿಯಿಂದ ನಿನ್ನನ್ನು ಸು

೧೧ ತ್ತಿದೆನು; ಕೇಶಿಮೆಯಿಂದ ನಿನ್ನನ್ನು ಹೊದ್ದಿಸಿದೆನು. ಆಭರಣಗ
ಳಿಂದ ಸಹ ನಿನ್ನನ್ನು ಅಲಂಕರಿಸಿ, ನಿನ್ನ ಕೈಗಳಿಗೆ ಕಡಗಗಳ
೧೨ ನ್ನೂ ನಿನ್ನ ಕೊರಳಿಗೆ ಕಂಠೀಸರವನ್ನೂ ಕೊಟ್ಟೆನು. ಮತ್ತು
ನಿನ್ನ ಮೂಗಿನಲ್ಲಿ ಮೂಗುತ್ತಿಯನ್ನೂ, ನಿನ್ನ ಕಿವಿಗಳಲ್ಲಿ ವಾಲೆಗ
೧೩ ಳನ್ನೂ, ನಿನ್ನ ತಲೆಯ ಮೇಲೆ ಶೃಂಗಾರದ ಕಿರೀಟವನ್ನು ಇಟ್ಟೆ
ನು. ಬೆಳ್ಳಿ ಭಂಗಾರದಿಂದ ಅಲಂಕರಿಸಲ್ಪಟ್ಟಿದ್ದಿ, ನಿನ್ನ ಉಡುವು ನಾ
ರುಮಡಿಯದೂ ಕೇಶಿಮೆಯದೂ ಚಿತ್ರವಾಗಿ ಹೊಲಿದದ್ದೂ ಆಗಿ
ತ್ತು; ಸಯವಾದ ಹಿಟ್ಟಿನನ್ನೂ ಜೇನನ್ನೂ ಎಣ್ಣೆಯನ್ನೂ ಉಣ್ಣು
೧೪ ತಿದ್ದಿ; ಅತ್ಯಧಿಕ ಸೌಂದರ್ಯವಾಗಿದ್ದು ಅರಸತನವಾಗುವ ತನಕ
ಬೆಳೆದಿ. ಇದಲ್ಲದೆ ನಿನ್ನ ಸೌಂದರ್ಯದಿಂದ ನಿನ್ನ ಕೀರ್ತಿ ಜ
ನಾಂಗಗಳಲ್ಲಿ ಹೊರಟಿತು; ಯಾಕಂದರೆ ನಾನು ನಿನ್ನ ಮೇಲೆ ಇ
ಟ್ಟಿ ನನ್ನ ಪ್ರಜೆಯಿಂದ ಅದು ಸಂಪೂರ್ಣವಾಗಿತ್ತೆಂದು ಕರ್ತನಾ
ದ ಯೆಹೋವ ಅನ್ನುತ್ತಾನೆ.

೧೫ ಆದರೆ ನೀನು ನಿನ್ನ ಸೌಂದರ್ಯದಲ್ಲಿ ನಂಬಿಕೆ ಇಟ್ಟು, ನಿನ್ನ
ಕೀರ್ತಿಯ ನಿಮಿತ್ತ ಸೂಳೆತನ ಮಾಡಿ, ನಿನ್ನ ಸೂಳೆತನವನ್ನು
ಹಾದು ಹೋಗುವವರಿಗೆಲ್ಲಾ ಹೊಯಿದು ಬಿಟ್ಟೆ; ಅವರವರಿಗೆ ಅದು
೧೬ ಆಗುತ್ತಿತ್ತು. ಇದಲ್ಲದೆ ನಿನ್ನ ವಸ್ತ್ರಗಳನ್ನು ತಕ್ಕೊಂಡು ಚಿತ್ರ
ವರ್ಣದ ಉನ್ನತ ಸ್ಥಾನಗಳನ್ನು ಮಾಡಿ ಕೊಂಡು, ಅವುಗಳಲ್ಲಿ
ಸೂಳೆತನ ಮಾಡಿದಿ; ಆಗದೆ ಇದ್ದಂಥಾ ಇನ್ನು ಇರದಂಥಾ ಕೆಲ
೧೭ ಸವೇ. ಇದಲ್ಲದೆ ನಾನು ನಿನಗೆ ಕೊಟ್ಟ ನನ್ನ ಭಂಗಾರದಿಂದಲೂ
ನನ್ನ ಬೆಳ್ಳಿಯಿಂದಲೂ ಉಂಟಾದ ನಿನ್ನ ಅಂದವಾದ ಆಭರಣಗ
ಳನ್ನು ತಕ್ಕೊಂಡು, ನಿನಗೆ ಗಂಡಸರ ರೂಪಗಳನ್ನು ಮಾಡಿ
೧೮ ಕೊಂಡು, ಅವರ ಸಂಗಡ ಸೂಳೆತನ ಮಾಡಿ, ಚಿತ್ರವಾಗಿ ಹೊ
ಲಿದ ನಿನ್ನ ವಸ್ತ್ರಗಳನ್ನು ತಕ್ಕೊಂಡು ಅವರಿಗೆ ಹೊದ್ದಿಸಿ, ನನ್ನ
ಎಣ್ಣೆಯನ್ನೂ ನನ್ನ ಧೂಪವನ್ನೂ ಅವರ ಮುಂದೆ ಇಟ್ಟು,
೧೯ ನಾನು ನಿನಗೆ ಕೊಟ್ಟ ನನ್ನ ಆಹಾರವನ್ನೂ ನಾನು ನಿನಗೆ ಉಣ್ಣಿ
ಸಿದ ಸಯವಾದ ಹಿಟ್ಟು ಎಣ್ಣೆ ಜೇನುಗಳನ್ನೂ ಸುವಾಸನೆಗಾಗಿ
ಅವರ ಮುಂದೆ ಇಟ್ಟೆ; ಹೀಗೆ ಆಯಿತೆಂದು ಕರ್ತನಾದ ಯೆಹೋ
೨೦ ವ ಅನ್ನುತ್ತಾನೆ. ಇದಲ್ಲದೆ ನೀನು ನನಗೆ ಹೆತ್ತ ನಿನ್ನ ಕುಮಾರ
ಕುಮಾರ್ತೆಗಳನ್ನು ತಕ್ಕೊಂಡು ಅವರಿಗೆ ಆಹಾರಕ್ಕಾಗಿ ಅರ್ಪ
೨೧ ಸಿದಿ; ನಿನ್ನ ಸೂಳೆತನದಲ್ಲಿ ಇದು ಸಣ್ಣ ಕೆಲಸವೋ? ನೀನು ನನ್ನ
ಮಕ್ಕಳನ್ನು ಕೊಂದು, ಅವರಿಗೋಸ್ಕರ ಬೆಂಕಿಯನ್ನು ದಾಟಿಸು
೨೨ ವ ಹಾಗೆ ಒಪ್ಪಿಸಿದಿಯಲ್ಲ? ಮತ್ತು ನಿನ್ನ ಎಲ್ಲಾ ಅಸಹ್ಯಗಳಲ್ಲಿ
ಯೂ ನಿನ್ನ ಸೂಳೆತನಗಳಲ್ಲಿಯೂ ನಿನ್ನ ಚಿಕ್ಕಪ್ರಾಯದ ದಿ
ವಸಗಳನ್ನೂ, ನೀನು ಬೆತ್ತಲೆಯಾಗಿಯೂ ಬರೀಯವಳಾಗಿ
ಯೂ ನಿನ್ನ ರಕ್ತದಲ್ಲಿ ಹಾಕಿ ಬಿಟ್ಟವಳಾಗಿಯೂ ಇದ್ದದ್ದನ್ನು
ನೀನು ಜ್ಞಾಪಕ ಮಾಡಿಲಿಲ್ಲ.

೨೩ ಇದಲ್ಲದೆ ನಿನ್ನ ಎಲ್ಲಾ ಕೆಟ್ಟತನದ ತರುವಾಯ ಆದದ್ದೇನಂ
ದರೆ—ನಿನಗೆ ಅಯ್ಯೋ! ಅಯ್ಯೋ! ಎಂದು ಕರ್ತನಾದ ಯೆ
೨೪ ಹೋವ ಅನ್ನುತ್ತಾನೆ—ನೀನು ಬಂದೊಂದು ಬೀದಿಯಲ್ಲಿ ನಿನಗೆ
ಎತ್ತರವಾದ ಸ್ಥಳವನ್ನು ಕಟ್ಟಿ, ಉನ್ನತ ಸ್ಥಾನವನ್ನು ಮಾಡಿ
೨೫ ಕೊಂಡಿದ್ದೀ. ಮತ್ತು ಒಂದೊಂದು ದಾರಿಯ ತಲೆಯಲ್ಲಿ ನಿನ್ನ
ಉನ್ನತ ಸ್ಥಾನವನ್ನು ಕಟ್ಟಿ, ನಿನ್ನ ಸೌಂದರ್ಯವನ್ನು ಅಸಹ್ಯ
ವಾಗ ಮಾಡಿಸಿ ಬಿಟ್ಟು, ಹಾದು ಹೋಗುವವರೆಲ್ಲರಿಗೆ ನಿನ್ನ ಕಾ
ಲುಗಳನ್ನು ತೆರೆದು, ನಿನ್ನ ಸೂಳೆತನಗಳನ್ನು ಹೆಚ್ಚು ಮಾಡಿದ್ದೀ.
೨೬ ಇದಲ್ಲದೆ ಮಾಂಸದಲ್ಲಿ ದೊಡ್ಡವರಾಗಿರುವ ನಿನ್ನ ನೆರೆಯವರಾದ
ಐಗುಪ್ತ್ಯರ ಸಂಗಡ ಸೂಳೆತನ ಮಾಡಿ, ನನಗೆ ಕರ್ಕಶ ಎಬ್ಬಿಸು
ವ ಹಾಗೆ ನಿನ್ನ ಸೂಳೆತನವನ್ನು ಹೆಚ್ಚು ಮಾಡಿದ್ದೀ. ಆದದರಿಂ
೨೭ ದ ಇಗೋ, ನಾನು ನನ್ನ ಕೈಯನ್ನು ನಿನ್ನ ಮೇಲೆ ಚಾಚಿ, ನಿ
ನ್ನ ಭತ್ಯವನ್ನು ಕಡಿಮೆ ಮಾಡಿ, ನಿನ್ನ ದುರ್ಮಾರ್ಗಕ್ಕೆ ನಾಚಿ
ಕೆ ಪಟ್ಟು, ನಿನ್ನ ಹಗೆಯವರಾದ ಪಿಲಿಷ್ಟ್ಯರ ಕುಮಾರ್ತೆಗಳ ಚಿ
೨೮ ತ್ತಕ್ಕೆ ನಿನ್ನನ್ನು ಒಪ್ಪಿಸಿ ಬಿಟಿದ್ದೇನೆ. ಇದಲ್ಲದೆ, ನೀನು ಅಕ್ಕೂರ
ರ ಮಕ್ಕಳ ಸಂಗಡ ತೃಪ್ತಿಯಾಗಸಾರದೆ ಸೂಳೆತನ ಮಾಡಿದ್ದೀ;
ಹೌದು, ಅವರ ಸಂಗಡ ಸೂಳೆತನ ಮಾಡಿದ್ದೀ; ಆದರೆ ತೃಪ್ತಿ
೨೯ ಯಾಗಲಿಲ್ಲ. ಇದಲ್ಲದೆ ನಿನ್ನ ಸೂಳೆತನವನ್ನು ಕನ್ದೀಯ ದೇಶ
ದ ಪರಿಯಂತರಕ್ಕು ಹೆಚ್ಚು ಮಾಡಿದ್ದೀ; ಆದರೆ ಅದರಿಂದ ತೃಪ್ತಿ
೩೦ ಯಾಗಲಿಲ್ಲ. ನಿನ್ನ ಹೃದಯವು ಎಷ್ಟೋ ಬಲಹೀನವಾದದ್ದೆಂ
ದು ಕರ್ತನಾದ ಯೆಹೋವ ಅನ್ನುತ್ತಾನೆ; ಯಾಕಂದರೆ ನೀನು
ಇವುಗಳನ್ನೆಲ್ಲಾ—ಸ್ವಯಿಚ್ಛೆಯಾಗಿ ನಡಿಯುವ ಜಾರ ಸ್ತ್ರೀಯ
೩೧ ಕೆಲಸವನ್ನೇ—ಮಾಡುತ್ತೀಯಲ್ಲ! ಒಂದೊಂದು ದಾರಿಯ ತಲೆಯ
ಲ್ಲಿ ನಿನ್ನ ಎತ್ತರ ಸ್ಥಳವನ್ನು ಕಟ್ಟುತ್ತೀಯಲ್ಲ! ಒಂದೊಂದು ಬೀ
ದಿಯಲ್ಲಿ ನಿನ್ನ ಉನ್ನತ ಸ್ಥಾನವನ್ನು ಮಾಡುತ್ತೀಯಲ್ಲ! ಮತ್ತು
ಕೂಲಿಯನ್ನು ಉದಾಸೀನ ಮಾಡಿದ್ದರಿಂದ, ನೀನು ಸೂಳೆಯ
೩೨ ಹಾಗಿರಕೆ, ಗಂಡನಿಗೆ ಬದುಲಾಗಿ ಅನ್ಯರನ್ನು ಅಂಗೀಕರಿಸುವ ವ್ಯ
೩೩ ಭಿಚಾರಿಯಾದ ಸ್ತ್ರೀಯ ಹಾಗಿದ್ದೀಯಲ್ಲ? ಅವರು ಸೂಳೆಯ
ರಿಗೆಲ್ಲಾ ಬಹುಮಾನ ಕೊಡುತ್ತಾರೆ; ಆದರೆ ನೀನು ನಿನ್ನ ಪ್ರಿಯ
ರಿಗೆಲ್ಲಾ ನಿನ್ನ ಬಹುಮಾನಗಳನ್ನು ಕೊಟ್ಟು, ಅವರು ಸುತ್ತಲಿಂ
ದ ನಿನ್ನ ಸೂಳೆತನಗಳಿಗೋಸ್ಕರ ನಿನ್ನ ಬಳಿಗೆ ಬರುವ ಹಾಗೆ ಅ
೩೪ ವರಿಗೆ ಲಂಚ ಕೊಡುತ್ತೀ. ಹೀಗಿರುವದರಿಂದ ಹೆಂಗಸರಿಗೆ ವಿರೋ
ಧವಾದದ್ದು ನಿನ್ನ ಸೂಳೆತನಗಳಲ್ಲಿ ನಿನಗೆ ಆಯಿತು; ಸೂಳೆತನ
ಮಾಡುವ ಹಾಗೆ ನಿನ್ನನ್ನು ಯಾರೂ ಹಿಂಬಾಲಿಸುವದಿಲ್ಲ; ಮ
ತ್ತು ನೀನು ಬಹುಮಾನ ಕೊಡುತ್ತೀ, ನಿನಗೆ ಯಾರೂ ಬಹುಮಾ
ನ ಕೊಡುವದಿಲ್ಲ; ಹೀಗೆ ವಿರೋಧವಾದದ್ದು ಆಯಿತು.

೩೫ ಆದದರಿಂದ ಸೂಳೆಯೇ, ಕರ್ತನ ವಾಕ್ಯವನ್ನು ಕೇಳು; ಕ
೩೬ ರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನಿನ್ನ ಹಣವು
ಹೊಯ್ಯಲ್ಪಟ್ಟ ಕಾರಣವೂ, ನಿನ್ನ ಪ್ರಿಯರ ಸಂಗಡ ನೀನು ಮಾ
ಡಿದ ಸೂಳೆತನದಿಂದಲೂ, ನಿನ್ನ ಎಲ್ಲಾ ಅಸಹ್ಯವಾದ ಮರದ ದೇ
ವರುಗಳಿಂದಲೂ, ನೀನು ಅವರಿಗೆ ಕೊಟ್ಟ ನಿನ್ನ ಮಕ್ಕಳ ರಕ್ತ
ದಿಂದಲೂ, ನಿನ್ನ ನಾಚಿಕೆ ಪ್ರಕಟವಾದ ಕಾರಣವೂ, ಇಗೋ
೩೭ ನೀನು ಲೀಲೆ ಆಡಿದ ನಿನ್ನ ಪ್ರಿಯರೆಲ್ಲರನ್ನೂ ಹೌದು, ನೀನು ಪ್ರೀ
ತಿ ಮಾಡಿದವರೆಲ್ಲರನ್ನೂ, ಹಗೆ ಮಾಡಿದವರೆಲ್ಲರನ್ನೂ ಸಹ ಕೂ
ಡಿಸುತ್ತೇನೆ; ನಾನು ಅವರನ್ನು ಸುತ್ತಲಾಗಿ ನಿನಗೆ ವಿರೋಧವಾ
ಗಿ ಕೂಡಿಸಿ, ಅವರಿಗೆ ನಿನ್ನ ನಾಚಿಕೆಯನ್ನು ಪ್ರಕಟಿ ಮಾಡುವೆ
೩೮ ನು; ಅವರು ನಿನ್ನ ನಾಚಿಕೆಯನ್ನೆಲ್ಲಾ ನೋಡುವರು. ಮತ್ತು ವ್ಯ
ಭಿಚಾರ ಮಾಡಿ ರಕ್ತವನ್ನು ಚೆಲ್ಲುವವರಿಗೆ ಆಗುವ ನ್ಯಾಯ ತೀ
ರ್ಪುಗಳಿಂದ ನಿನಗೆ ನ್ಯಾಯ ತೀರಿಸುವೆನು; ಮತ್ತು ಉಗ್ರದಲ್ಲಿ
೩೯ ಯೂ ರೋಗದಲ್ಲಿಯೂ ನಿನಗೆ ರಕ್ತವನ್ನು ಕೊಡುವೆನು. ಇದ
ಲ್ಲದೆ ನಿನ್ನನ್ನು ಅವರ ಕೈಯಲ್ಲಿ ಒಪ್ಪಿಸುವೆನು; ಅವರು ನಿನ್ನ ಎ
ತ್ತರ ಸ್ಥಳವನ್ನು ಕೆಡವಿ ಹಾಕಿ, ನಿನ್ನ ಉನ್ನತಸ್ಥಾನಗಳನ್ನು ಬಿಡೆ
ದು ಬಿಡುವರು; ಅವರು ನಿನ್ನ ವಸ್ತ್ರಗಳನ್ನು ತೆಗೆದು ಹಾಕಿ, ನಿನ್ನ



ಸೌಂದರ್ಯವಾದ ಆಭರಣಗಳನ್ನು ತಕ್ಕೊಂಡು, ನಿನ್ನನ್ನು ಬೆ
೪೦ ತ್ತಲೆಯಾಗಿಯೂ ಬರೀಯವಳಾಗಿಯೂ ಬಿಡುವರು. ಮತ್ತು ಅವ
ರು ನಿನಗೆ ವಿರೋಧವಾಗಿ ಕೂಟವನ್ನು ಕರ ಕೊಂಡು, ಕಲ್ಲುಗಳ
ನ್ನು ನಿನ್ನ ಮೇಲೆ ಎಸೆದು, ತಮ್ಮ ಕತ್ತಿಗಳಿಂದ ನಿನ್ನನ್ನು ತಿವಿಯು
೪೧ ವರು; ಮತ್ತು ಅವರು ನಿನ್ನ ಮನೆಗಳನ್ನು ಬೆಂಕಿಯಿಂದ ಸುಟ್ಟು,
ಬಹಳ ಸ್ತ್ರೀಯರ ಕಣ್ಣುಗಳ ಮುಂದೆ ನಿನಗೆ ನ್ಯಾಯ ತೀರಿಸು
ವರು; ನೀನು ಸೂಳೆತನ ಮಾಡುವದನ್ನು ನಿಲ್ಲಿಸುವೆನು; ಇನ್ನು
೪೨ ಮೇಲೆ ನೀನು ಕೂಲಿ ಸಹ ಕೊಡುವದಿಲ್ಲ. ಹೀಗೆ ನನ್ನ ಉಗ್ರವ
ನ್ನು ನಿನ್ನಲ್ಲಿ ವಿಶ್ರಮಿಸ ಮಾಡುತ್ತೇನೆ; ನನ್ನ ಕೋಪವು ನಿನ್ನ
ನ್ನು ಬಿಟ್ಟು ಹೋಗುವದು; ಆಗ ನಾನು ಸುಮ್ಮನಿದ್ದು ಇನ್ನು
ಮೇಲೆ ಕಕೆಕಕೆ ಪಡದೆ ಇರುವೆನು.

೪೩ ನೀನು ನಿನ್ನ ಯೌವ್ವನದ ದಿವಸಗಳನ್ನು ಜ್ಞಾಪಕ ಮಾಡಿ
ಕೊಳ್ಳದೆ, ಇವುಗಳಿಂದೆಲ್ಲಾ ನನಗೆ ಬೇಸರ ಎಬ್ಬಿಸಿದ್ದರಿಂದ, ಇ
ಗೋ ನಾನು ಸಹ ನಿನ್ನ ಮಾರ್ಗವನ್ನು ನಿನ್ನ ತಲೆಯ ಮೇಲೆ
ಸಲ್ಲಿಸುತ್ತೇನೆಂದು ಕರ್ತನಾದ ಯೆಹೋವ ಅನ್ನುತ್ತಾನೆ; ಮತ್ತು
ನಿನ್ನ ಎಲ್ಲಾ ಅಸಹ್ಯಗಳ ಸಹಿತವಾಗಿ ಈ ದುಷ್ಕರ್ಮವನ್ನು
೪೪ ಮಾಡದೆ ಇರುವಿ. ಇಗೋ ಗಾದೆ ಹೇಳುವವರೆಲ್ಲರು—ತಾಯಿ
ಹ್ಯಾಗೋ ಹಾಗೆಯೇ ಮಗಳು, ಎಂಬ ಗಾದೆಯನ್ನು ನಿನ್ನ ವಿ
೪೫ ಷಯ ಹೇಳುವರು; ತನ್ನ ಗಂಡನನ್ನೂ ತನ್ನ ಮಕ್ಕಳನ್ನೂ ಅ
ಸಹ್ಯಿಸಿದ ನಿನ್ನ ತಾಯಿಯ ಮಗಳು ನೀನೇ, ತಮ್ಮ ಗಂಡರ
ನ್ನೂ ತಮ್ಮ ಮಕ್ಕಳನ್ನೂ ಅಸಹ್ಯಿಸಿದ ನಿನ್ನ ಸಹೋದರಿಗಳ
ಸಹೋದರಿ ನೀನೇ; ನಿಮ್ಮ ತಾಯಿ ಹಿತ್ತಿಯಳು; ನಿಮ್ಮ ತಂದೆ
೪೬ ಅಮೋರ್ಯನು. ಮತ್ತು ನಿನ್ನ ಅಕ್ಕ ನಿನ್ನ ಎಡ ಕಡೆಯಲ್ಲಿ ವಾ
ಸವಾಗಿರುವ ತನ್ನ ಕುಮಾರ್ತೆಗಳ ಸಹಿತವಾದ ಸಮಾರ್ಯ
ವೇ, ನಿನ್ನ ತಂಗಿ ನಿನ್ನ ಬಲ ಕಡೆಯಲ್ಲಿ ವಾಸವಾಗಿರುವ ತನ್ನ
೪೭ ಕುಮಾರ್ತೆಗಳ ಸಹಿತವಾದ ಸೊದೋಮೇ. ಆದರೂ ನೀನು
ಅವರ ಮಾರ್ಗಗಳಲ್ಲಿ ನಡೆಯಲಿಲ್ಲ; ಅವರ ಅಸಹ್ಯಗಳ ಹಾಗೆ
ಮಾಡಲಿಲ್ಲ; ಅದು ಸಣ್ಣವೆಂಥೇಳಿ, ನಿನ್ನ ಎಲ್ಲಾ ಮಾರ್ಗಗಳಲ್ಲಿ
೪೮ ಅವರಿಗಿಂತ ಕೆಟ್ಟವಳಾದಿ. ಕರ್ತನಾದ ಯೆಹೋವ ಅನ್ನುತ್ತಾ
ನೆ—ನನ್ನ ಜೀವದಾಣೆ, ನಿನ್ನ ತಂಗಿಯಾದ ಸೊದೋಮು, ತಾ
ನಾದರೂ ತನ್ನ ಕುಮಾರ್ತೆಗಳಾದರೂ, ನೀನೂ ನಿನ್ನ ಕುಮಾ
೪೯ ರ್ತೆಗಳೂ ಮಾಡಿದ ಪ್ರಕಾರ ಮಾಡಲಿಲ್ಲ. ಇಗೋ, ನಿನ್ನ ತಂಗಿ
ಯಾದ ಸೊದೋಮಿನ ಅಕ್ರಮವು ಇದೇ—ಗರ್ವವೂ, ಕೊಟ್ಟಿ
ಯ ತೃಪ್ತಿಯೂ, ಅವಳಿಗೂ ಅವಳ ಕುಮಾರ್ತೆಗಳಿಗೂ ಆದ
ನಿರ್ಭಯವಾದ ಸೌಖ್ಯವೂ, ಮತ್ತು ಬಡವರ ದರಿದ್ರರ ಕೈಯ
೫೦ ನ್ನು ಅವಳು ಬಲ ಪಡಿಸಲಿಲ್ಲ. ಇದಲ್ಲದೆ ಅವರು ಅಹಂಕಾರಿಗಳಾ
ಗಿದ್ದು, ನನ್ನ ಮುಂದೆ ಅಸಹ್ಯವನ್ನು ಮಾಡಿದರು; ಆದದರಿಂದ
೫೧ ನಾನು ಕಂಡ ಪ್ರಕಾರ ಅವರನ್ನು ತೆಗೆದು ಬಿಟ್ಟೆನು. ಸಮಾರ್ಯ
ವು ಸಹ ನಿನ್ನ ಪಾಪಗಳ ಅರವಾಸಿಯನ್ನು ಮಾಡಲಿಲ್ಲ; ನೀನು
ನಿನ್ನ ಅಸಹ್ಯಗಳನ್ನು ಅವರಿಗಿಂತ ಹೆಚ್ಚು ಮಾಡಿ, ನೀನು ಮಾ
ಡಿದ ನಿನ್ನ ಎಲ್ಲಾ ಅಸಹ್ಯಗಳಿಂದ ನಿನ್ನ ಸಹೋದರಿಗಳನ್ನು ನೀ
೫೨ ತಿವಂತರೆಂದು ಸ್ಥಾಪಿಸಿದ್ದೀ. ಹಾಗಾದರೆ, ನಿನ್ನ ಸಹೋದರಿಗಳಿಗೆ
ನ್ಯಾಯ ತೀರಿಸಿದವಳಾದ ನೀನೇ, ನೀನು ಅವರಿಗಿಂತ ಅಸಹ್ಯವಾ
ಗಿ ಮಾಡಿದ ನಿನ್ನ ಪಾಪಗಳಿಗೆ ತಕ್ಕ ನಿನ್ನ ನಿಂದೆಯನ್ನು ಹೊ
ತ್ತುಕೋ; ಅವರು ನಿನಗಿಂತ ನೀತಿವಂತರು; ಹೌದು, ನೀನು ನಿ
ನ್ನ ಸಹೋದರಿಗಳನ್ನು ನೀತಿವಂತರೆಂದು ಸ್ಥಾಪಿಸಿದ್ದರಿಂದ ನೀನೇ
ನಾಚಿಕೆ ಪಟ್ಟು ನಿನ್ನ ನಿಂದೆಯನ್ನು ಹೊತ್ತುಕೋ.

೫೩ ನಾನು ಅವರ ಶೆರೆಯನ್ನು—ಕುಮಾರ್ತೆಗಳ ಸಹಿತವಾದ
ಸೊದೋಮಿನ ಶೆರೆಯನ್ನೂ, ತನ್ನ ಕುಮಾರ್ತೆಗಳ ಸಹಿತವಾ
ದ ಸಮಾರ್ಯದ ಶೆರೆಯನ್ನೂ—ತಿರುಗಿಸುವಾಗ, ಅದರ ಮಧ್ಯ
೫೪ ದಲ್ಲಿ ನಿನ್ನ ಶೆರೆಯವರ ಶೆರೆಯನ್ನು ತಿರುಗಿಸುವೆನು. ಯಾಕಂದ
ರೆ, ನೀನು ನಿನ್ನ ನಿಂದೆಯನ್ನು ಹೊತ್ತು ಕೊಂಡು, ಅವರನ್ನು
ಆದರಿಸುವಾಗ ನೀನು ಮಾಡಿದ್ದೆಲ್ಲಾದಕ್ಕೆ ನಾಚಿಕೆ ಪಡುವದಕ್ಕಾ
೫೫ ಗಿಯೇ. ನಿನ್ನ ಸಹೋದರಿಗಳು, ಅಂದರೆ, ಸೊದೋಮು ತನ್ನ
ಕುಮಾರ್ತೆಗಳ ಸಂಗಡ ತನ್ನ ಮುಂಚಿನ ಸ್ಥಿತಿಗೆ ತಿರುಗಿ ಕೊ
ಳ್ಳುವಾಗಲೂ, ಸಮಾರ್ಯವು ತನ್ನ ಕುಮಾರ್ತೆಗಳ ಸಂಗಡ
ತನ್ನ ಮುಂಚಿನ ಸ್ಥಿತಿಗೆ ತಿರುಗಿ ಕೊಳ್ಳುವಾಗಲೂ, ನೀನೂ ನಿ
ನ್ನ ಕುಮಾರ್ತೆಗಳೂ ನಿಮ್ಮ ಮುಂಚಿನ ಸ್ಥಿತಿಗೆ ತಿರುಗಿ ಕೊಳ್ಳು
೫೬ ವಿರಿ. ಯಾಕಂದರೆ ನಿನ್ನ ತಂಗಿಯಾದ ಸೊದೋಮು ನಿನ್ನ ಗ
೫೭ ರ್ವದ ದಿವಸದಲ್ಲಿ, ನಿನ್ನ ಬಾಯಿಯಿಂದ ಉಚ್ಚರಿಸಲ್ಪಡಲಿಲ್ಲ.
ಯಾವಾಗಂದರೆ, ಅರಾಮಿನ ಕುಮಾರ್ತೆಗಳಿಂದಲೂ ಅದರ ಸು
ತ್ತಲಿರುವಂಥ, ಸುತ್ತಲಾಗಿ ನಿನ್ನನ್ನು ಉದಾಸೀನ ಮಾಡಿದಂ
ಥ, ಎಲ್ಲ ಪಿಲಿಷ್ಟ್ಯ ಕುಮಾರ್ತೆಗಳಿಂದಲೂ ನಿನಗೆ ನಿಂದೆ ಬಂದ
ಕಾಲದಲ್ಲಾದ ಹಾಗೆ ನಿನ್ನ ಕೆಟ್ಟತನವು ಪ್ರಕಟವಾಗುವದಕ್ಕಿಂತ
ಮುಂಚೆಯೇ.

೫೮ ನಿನ್ನ ದುಷ್ಕರ್ಮವನ್ನೂ ನಿನ್ನ ಅಸಹ್ಯಗಳನ್ನೂ ನೀನು
೫೯ ಹೊತ್ತುಕೊಂಡಿದ್ದೀ ಎಂದು ಕರ್ತನು ಅನ್ನುತ್ತಾನೆ. ಯಾಕಂ
ದರೆ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನೀನು ಮಾ
ಡಿದ ಹಾಗೆಯೇ ನಿನಗೆ ಮಾಡುವೆನು; ನೀನು ಬಡಂಬಡಿಕೆಯನ್ನು
೬೦ ಮೀರಿ ಆಣೆಯನ್ನು ತಿರಸ್ಕರಿಸಿದಿಯಲ್ಲ! ಆದಾಗ್ಯೂ ನಿನ್ನ
ಯೌವನದ ದಿವಸಗಳಲ್ಲಿ ನಾನು ನಿನ್ನ ಸಂಗಡ ಮಾಡಿದ ನನ್ನ
ಬಡಂಬಡಿಕೆಯನ್ನು ಜ್ಞಾಪಕ ಮಾಡಿ ಕೊಂಡು, ನಿತ್ಯವಾದ ಬಡಂ
ಬಡಿಕೆಯನ್ನು ನಿನಗಾಗಿ ಸ್ಥಾಪಿಸುವೆನು. ಆಗ ನೀನು ನಿನ್ನ ಮಾ
೬೧ ರ್ಗಗಳನ್ನು ಜ್ಞಾಪಕ ಮಾಡಿ ಕೊಂಡು ನಿನ್ನ ಸಹೋದರಿಗಳಾದ
ನಿನ್ನ ಅಕ್ಕ ತಂಗಿಯರನ್ನು ಹೊಂದುವಾಗ ನಾಚಿಕೆಪಡುವಿ; ಅ
ವರನ್ನು ನಿನಗೆ ಕುಮಾರ್ತೆಗಳಂತೆ ಕೊಡುವೆನು; ಆದರೆ ನಿನ್ನ
೬೨ ಬಡಂಬಡಿಕೆಯಿಂದಲ್ಲ. ಮತ್ತು ನೀನು ಮಾಡಿದ್ದೆಲ್ಲಾದರ ವಿಷ
ಯ ನಾನು ನಿನ್ನ ಕಡೆ ಸಮದಾಯಿಸಲ್ಪಟ್ಟ ಮೇಲೆ ನೀನು ಜ್ಞಾ
ಪಕ ಮಾಡಿ ಕೊಂಡು, ನಾಚಿಕೆ ಪಟ್ಟು, ನಿನ್ನ ನಿಂದೆಯ ನಿಮಿತ್ತ
೬೩ ಇನ್ನು ನಿನ್ನ ಬಾಯಿ ತೆರೆಯದ ಹಾಗೆ, ನನ್ನ ಬಡಂಬಡಿಕೆ
ಯನ್ನು ನಿನ್ನ ಸಂಗಡ ಸ್ಥಾಪಿಸುವೆನು; ನಾನೇ ಯೆಹೋವನೆಂದು
ತಿಳುಕೊಳ್ಳುವಿರಿ, ಎಂದು ಕರ್ತನಾದ ಯೆಹೋವ ಅನ್ನು
ತ್ತಾನೆ.

## ೧೭. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂ
ದರೆ—ಮನುಷ್ಯನ ಮಗನೇ, ಇಸ್ರಯೇಲನ ಮನೆಯವರಿಗೆ ಒಗ
೨ ಟನ್ನು ಹೇಳು, ಗಾದೆಯನ್ನು ನುತಿ. ಹೇಳ ತಕ್ಕದ್ದೇನಂದರೆ—
ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ದೊಡ್ಡ ರೆಕ್ಕೆಗಳೂ
ಉದ್ದವಾದ ರೆಕ್ಕೆಗಳೂ ಉಳ್ಳಂಥ, ವಿಧವಿಧವಾದ ಬಣ್ಣಗಳುಳ್ಳ

೩ ಗರಿಗಳಿಂದ ತುಂಬಿದ್ದಂಥ ದೊಡ್ಡ ಹದ್ದು ಲೆಬನೋನಿಗೆ ಬಂದು,
೪ ದೇವದಾರುವಿನ ಮೇಲಿನ ಕೊಂಬೆಯನ್ನು ತಕ್ಕೊಂಡಿತು. ಅದರ
ಚಿಗುರುಗಳ ಕೊನೆಯನ್ನು ಕಿತ್ತು, ವ್ಯಾಪಾರದ ದೇಶಕ್ಕೆ ತ
೫ ಕ್ಕೊಂಡು ಹೋಗಿ, ವರ್ತಕರ ಪಟ್ಟಣದಲ್ಲಿ ಇಟ್ಟಿತು. ದೇಶದ ಬೀ
ಜವನ್ನು ಸಹ ತಕ್ಕೊಂಡು, ಫಲವುಳ್ಳ ಹೊಲದಲ್ಲಿ ಇರಿಸಿತು,
ಬಹಳ ನೀರುಗಳ ಬಳಿಯಲ್ಲಿ ಅದನ್ನು ಮಡಗಿ, ನೀರವಂಚಿ ಮರ
೬ ದಂತೆ ಅದನ್ನು ನೆಟ್ಟಿತು. ಮತ್ತು ಅದು ಮೊಳಿತು, ತಗ್ಗಾದ
ಎತ್ತರವುಳ್ಳ ಹಬ್ಬುವ ದ್ರಾಕ್ಷೇಗಿಡವಾಯಿತು, ಅದರ ಬಳ್ಳಿಗಳು
ಅದರ ಬಳಿಗೆ ತಿರುಗಿ ಕೊಂಡವು; ಅದರ ಬೇರುಗಳು ಅದರ ಕೆಳ
ಗೆ ಇದ್ದವು; ಅದು ದ್ರಾಕ್ಷೇಗಿಡವಾಯಿತು; ಕೊಂಬೆಗಳನ್ನು ಹುಟ್ಟಿ
ಸಿತು; ಬಳ್ಳಿಗಳನ್ನು ಕಳುಹಿಸಿತು.

೭ ಮತ್ತು ದೊಡ್ಡ ರೆಕ್ಕೆಗಳೂ ಬಹಳ ಗರಿಗಳೂ ಉಳ್ಳ ಇ
ನ್ನೊಂದು ದೊಡ್ಡ ಹದ್ದು ಇತ್ತು; ಆಗ ಇಗೋ ಈ ದ್ರಾಕ್ಷೇಗಿಡ
ತಾನು ನೆಟ್ಟಲ್ಪಟ್ಟ ಕಾಲಿವೆಗಳಿಂದ ಹದ್ದು ತನಗೆ ನೀರು ಕೊಡುವ
ಹಾಗೆ ತನ್ನ ಬೇರುಗಳನ್ನು ಅದರ ಬಳ್ಳಿಗೆ ಬೊಗ್ಗಿಸಿ, ತನ್ನ ಬಳ್ಳಿ
೮ ಗಳನ್ನು ಅದರ ಬಳ್ಳಿಗೆ ಕಳುಹಿಸಿತು. ಅದು ಕೊಂಬೆಗಳನ್ನು ಹು
ಟ್ಟಿಸಿ, ಫಲ ಫಲಿಸುವ ಹಾಗೆಯೂ, ಬಳ್ಳೇ ದ್ರಾಕ್ಷೇಗಿಡವಾಗುವ
ಹಾಗೆಯೂ, ಬಳ್ಳೇ ಹೊಲದಲ್ಲಿ ಬಹಳ ನೀರುಗಳ ಬಳಿಯಲ್ಲಿ
೯ ನೆಟ್ಟಲ್ಪಟ್ಟಿತು. ನೀನು ಹೇಳಿ ತಕ್ಕದ್ದೇನಂದರೆ—ಕರ್ತನಾದ ಯೆ
ಹೋವ ಹೀಗೆ ಹೇಳುತ್ತಾನೆ—ಅದು ಬಾಳುವದೋ! ಆ ಹದ್ದು ಅ
ದರ ಬೇರುಗಳನ್ನು ಕಿತ್ತು, ಅದರ ಹಣ್ಣುಗಳನ್ನು ತೆಗೆದು ಬಿಡ
ಲಾಗಿ, ಅದು ಒಣಗುವದಿಲ್ಲವೋ! ಅದರ ಮೊಳಿಕೆಯ ಎಲೆಗ
ಳೆಲ್ಲಾ ಒಣಗುವವು; ಅದನ್ನು ಬೇರೊಂದಿಗೆ ಕೀಳುವ ಹಾಗೆ ಬ
೧೦ ಹು ಬಲವೂ ಬಹಳ ಜನರೂ ಕೆಲಸವಿಲ್ಲ. ಹೌದು, ಅದು ನೆಟ್ಟ
ಟ್ಟಿರಲಾಗಿ ಬಾಳುವದೋ? ಅದಕ್ಕೆ ಮೂರಣ ಘಾಳಿ ತಗಲುವಾ
ಗ ಕುದ್ಧವಾಗಿ ಒಣಗುವದಿಲ್ಲವೋ! ಅದು ಮೊಳಿತ ಕಾಲಿವೆಗಳ
ಲ್ಲಿಯೇ ಒಣಗುವದು.

೧೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂ
ದರೆ—ತಿರುಗಿ ಬೀಳುವ ಮನೆಯವರಿಗೆ ನೀನು ಹೇಳ ಬೇಕಾದದ್ದೇ
೧೨ ನಂದರೆ—ಇದೇನೆಂದು ನಿಮಗೆ ತಿಳಿಯುವದಿಲ್ಲವೋ! ಅವರಿಗೆ ಹೀ
ಗೆ ಹೇಳು—ಇಗೋ ಬಾಬೆಲಿನ ಅರಸನು ಯೆರೂಸಲೇಮಿಗೆ ಬಂ
ದು, ಅದರ ಅರಸನನ್ನೂ, ಅದರ ಪ್ರಧಾನರನ್ನೂ ತಕ್ಕೊಂಡು,
ತನ್ನ ಬಳಿಗೆ ಬಾಬೆಲಿಗೆ ಪೈದಿದ್ದಾನೆ. ಮತ್ತು ಅರಸನ ಸಂತಾನ
೧೩ ದವನನ್ನು ತಕ್ಕೊಂಡು, ಅವನ ಸಂಗಡ ಒಡಂಬಡಿಕೆ ಮಾಡಿ, ಅ
೧೪ ವನನ್ನು ಪ್ರಮಾಣ ಮಾಡಿಸಿ, ರಾಜ್ಯವು ತಗ್ಗಾಗಿ ತನ್ನನ್ನು ಎ
ತ್ತಿ ಕೊಳ್ಳದ ಹಾಗೆಯೂ, ಅದು ಅವನ ಒಡಂಬಡಿಕೆಯನ್ನು ಕೈ
ಕೊಳ್ಳುವದರಿಂದ ನಿಲ್ಲುವ ಹಾಗೆಯೂ, ದೇಶದ ಬಲಿಷ್ಠರನ್ನು ತ
೧೫ ಕ್ಕೊಂಡು ಹೋಗಿದ್ದಾನೆ. ಆದರೆ ಇವನು ಅವನಿಗೆ ವಿರೋಧವಾಗಿ
ತಿರುಗಿ ಬಿದ್ದು, ತನ್ನ ರಾಯಭಾರಿಗಳನ್ನು ಐಗುಪ್ತಕ್ಕೆ ಕಳುಹಿಸಿ,
ತನಗೆ ಕುದುರೆಗಳನ್ನೂ ಬಹಳ ಜನರನ್ನೂ ಕೊಡ ಬೇಕೆಂದು ಹೇ
ಳಿಸಿದ್ದಾನೆ, ಅವನು ಬಾಳುವನೋ! ಇಂಥವುಗಳನ್ನು ಮಾಡುವ
ವನು ತಪ್ಪಿಸಿ ಕೊಡಾನೋ! ಒಡಂಬಡಿಕೆಯನ್ನು ಮೀರಿ ತಪ್ಪಿಸಿ
೧೬ ಕೊಡಾನೋ! ನಿಶ್ಚಯವಾಗಿ ಅವನಿಗೆ ಅರಸತನವನ್ನು ಕೊಟ್ಟ
ಅರಸನು—ಅಂದರೆ, ಯಾವನ ಪ್ರಮಾಣವನ್ನು ತಿರಸ್ಕರಿಸಿದ
ನೋ, ಯಾವನ ಒಡಂಬಡಿಕೆಯನ್ನು ಮೀರಿದನೋ, ಅವನು—
ಇರುವಲ್ಲಿ, ಬಾಬೆಲಿನ ಮಧ್ಯದಲ್ಲಿ, ಇವನು ಸಾಯುವನು, ನನ್ನ
೧೭ ಜೀವದಾಣೆ, ಎಂದು ಕರ್ತನಾದ ಯೆಹೋವ ಅನ್ನುತ್ತಾನೆ. ಫ
ರೋನನು ತನ್ನ ದೊಡ್ಡ ದಂಡಿನಿಂದಲೂ ದೊಡ್ಡ ಸಮೂಹದಿಂ
ದಲೂ ಬಹಳ ಜನರನ್ನು ಕಡಿದು ಬಿಡುವದಕ್ಕೆ ಮೊಹರ್ಜೆಗಳ
ನ್ನು ಹಾಕುವಾಗಲೂ ಕೋಟೆಗಳನ್ನು ಕಟ್ಟುವಾಗಲೂ ಅವನಿಗೆ
೧೮ ಯುದ್ಧದಲ್ಲಿ ಸಹಾಯ ಮಾಡುವದಿಲ್ಲ. ಯಾಕಂದರೆ ಅವನು
ಪ್ರಮಾಣವನ್ನು ತಿರಸ್ಕರಿಸಿ, ಇಗೋ ಕೈ ಕೊಟ್ಟಾಗ್ಯೂ ಒಡಂ
ಬಡಿಕೆಯನ್ನು ಮೀರಿ, ಇವುಗಳನ್ನೆಲ್ಲಾ ಮಾಡಿದದರಿಂದ ತಪ್ಪಿಸಿ
ಕೊಳ್ಳುವದಿಲ್ಲ. ಆದದರಿಂದ ಕರ್ತನಾದ ಯೆಹೋವನು ಹೀಗೆ
೧೯ ಹೇಳುತ್ತಾನೆ—ನಿಶ್ಚಯವಾಗಿ ಅವನು ತಿರಸ್ಕರಿಸಿದ ನನ್ನ ಪ್ರಮಾ
ಣವನ್ನೂ, ಅವನು ಮೀರಿದ ನನ್ನ ಒಡಂಬಡಿಕೆಯನ್ನು, ಅದನ್ನೇ
ಅವನ ತಲೆಯ ಮೇಲೆ ಸಲ್ಲಿಸುತ್ತೇನೆಂದು ನನ್ನ ಜೀವದಾಣೆ. ಮ
೨೦ ತ್ತು ನಾನು ಅವನ ಮೇಲೆ ನನ್ನ ಬಲೆಯನ್ನು ಹಾಸುತ್ತೇನೆ; ಅ
ವನು ನನ್ನ ಉರ್ಲಿನಲ್ಲಿ ಸಿಕ್ಕುವನು; ಆಗ ನಾನು ಅವನನ್ನು ಬಾ
ಬೆಲಿಗೆ ಪೈದು, ಅವನು ನನಗೆ ವಿರೋಧವಾಗಿ ಮಾಡಿರುವ ಅಪ
೨೧ ರಾಧದ ವಿಷಯ ಅಲ್ಲಿ ಅವನಿಗೆ ನ್ಯಾಯ ತೀರಿಸುವೆನು. ಮತ್ತು
ಅವನ ಓಡಿ ಹೋದವರೆಲ್ಲರು ಅವನ ಎಲ್ಲಾ ಕೂಟಗಳ ಸಂಗಡ
ಕತ್ತಿಯಿಂದ ಬೀಳುವರು; ಉಳಿದವರು ಎಲ್ಲಾ ದಿಕ್ಕುಗಳಿಗೆ ಚೆದರಿ
ಸಲ್ಪಡುವರು; ಆಗ ಕರ್ತನಾದ ನಾನೇ ಅದನ್ನು ಹೇಳಿದೆನೆಂದು
ನಿಮಗೆ ತಿಳಿಯುವದು.

೨೨ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ಇದಲ್ಲದೆ
ನಾನು ಉನ್ನತವಾದ ದೇವದಾರುವಿನ ಎತ್ತರವಾದ ಕೊಂಬೆಯನ್ನು
ತಕ್ಕೊಂಡು ಅದನ್ನು ಇಡುವೆನು; ಅದರ ಮೇಲಿನ ಕುಡಿಗಳಲ್ಲಿ
ಎಳೇದಾದ ಒಂದನ್ನು ಕತ್ತರಿಸಿ, ಎತ್ತರವಾದ ಉರ್ಧ್ವ ಪರ್ವತ
೨೩ ದ ಮೇಲೆ ನೆಡುವೆನು—ಇಸ್ರಯೇಲಿನ ಉನ್ನತವಾದ ಪರ್ವತದಲ್ಲಿ
ಅದನ್ನು ನೆಡುವೆನು; ಮತ್ತು ಅದು ಕೊಂಬೆಗಳನ್ನು ಹುಟ್ಟಿಸಿ,
ಫಲ ಫಲಿಸುವದು; ಅದು ಘನವುಳ್ಳ ದೇವದಾರು ಆಗುವದು; ಎ
ಲ್ಲಾ ರೆಕ್ಕೆಗಳುಳ್ಳ ಪಕ್ಷಿಗಳು ಅದರ ಕೆಳಗೆ ವಾಸ ಮಾಡುವವು,
೨೪ ಅದರ ಕೊಂಬೆಗಳ ನೆರಳಿನಲ್ಲಿ ವಾಸ ಮಾಡುವವು. ಆಗ ಕರ್ತ
ನಾದ ನಾನೇ ಎತ್ತರವಾದ ಮರವನ್ನು ಇಳಿಸಿದೆನು; ತಗ್ಗಿದ ಮರ
ವನ್ನು ಎತ್ತರ ಮಾಡಿದೆನು; ಹಸಿಮರವನ್ನು ಒಣಗಿಸಿದೆನು, ಒಣ
ಗಿದ ಮರವನ್ನು ಚಿಗುರು ಮಾಡಿದೆನು, ಎಂದು ಹೊಲದ ಮರ
ಗಳೆಲ್ಲಾ ತಿಳಿಯುವವು. ಯೆಹೋವನಾದ ನಾನೇ ಇದನ್ನು ಮಾ
ತಾಡಿ ನಡಿಸುವೆನು.

## ೧೯. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂ
೨ ದರೆ—ತಂಬೆಗಳು ಹುಳಿ ದ್ರಾಕ್ಷೆಗಳನ್ನು ತಿಂದದರಿಂದ ಮಕ್ಕಳ ಪ
ಲ್ಲುಗಳು ಜಳ್ಳತು ಹೋದವು, ಎಂಬ ಗಾದೆಯನ್ನು ಇಸ್ರಯೇ
ಲನ ದೇಶದ ವಿಷಯ ನೀವು ಹೇಳುವದೇನು? ಕರ್ತನಾದ ಯೆ
೩ ಹೋವನು ಅನ್ನುತ್ತಾನೆ—ನನ್ನ ಜೀವದಾಣೆ, ನೀವು ಈ ಗಾದೆ
೪ ಯನ್ನು ಇಸ್ರಯೇಲಿನಲ್ಲಿ ಇನ್ನು ಹೇಳುವದಿಲ್ಲ. ಇಗೋ ಎಲ್ಲಾ
ಪ್ರಾಣಗಳು ನನ್ನವೇ; ತಂಬೆಯ ಪ್ರಾಣವು ಹ್ಯಾಗೋ ಹಾಗೆ
ಯೇ ಮಗನ ಪ್ರಾಣವು ನನ್ನದೇ ಪಾಪ ಮಾಡುವ ಪ್ರಾಣವು
೫ ಅದೇ ಸಾಯುವದು. ಆದರೆ ಮನುಷ್ಯನು ನೀತಿವಂತನಾಗಿದ್ದು,



೬ ನೀತಿಯನ್ನೂ ನ್ಯಾಯವನ್ನೂ ಮಾಡಿ, ಬೆಟ್ಟಗಳ ಮೇಲೆ ಊಣ
ದೆ, ಇಸ್ರಯೇಲನ ಮನೆಯವರ ವಿಗ್ರಹಗಳ ಕಡೆಗೆ ತನ್ನ ಕಣ್ಣು
ಗಳನ್ನು ಎತ್ತದೆ, ತನ್ನ ನೆರೆಯವನ ಹೆಂಡತಿಯನ್ನು ಕೆಡಿಸದೆ,
೭ ಮುಟ್ಟಾಗಿರುವ ಸ್ತ್ರೀಗೆ ಸಮೀಪಿಸದೆ, ಯಾರನ್ನಾದರೂ ಉಪ
ದ್ರವ ಪಡಿಸದೆ, ಸಾಲಗಾರನಿಗೆ ಅಡವು ಹಿಂದೆ ಕೊಟ್ಟು, ಸುಲಿಗೆ
ಮಾಡದೆ, ಹಸಿದವನಿಗೆ ತನ್ನ ರೊಟ್ಟಿಯನ್ನು ಕೊಟ್ಟು, ಬೆತ್ತಲೆ
೮ ಯಾದವನಿಗೆ ವಸ್ತ್ರ ಹೊದ್ದಿಸಿ, ಬಡ್ಡಿಗೆ ಕೊಡದೆ, ಅದಾಯವ
ನ್ನು ತಕ್ಕೊಳ್ಳದೆ, ಅನ್ಯಾಯಕ್ಕೆ ತನ್ನ ಕೈಯನ್ನು ಹಿಂದೆಗೆದು,
೯ ಜಬ್ಬರಿಗೊಬ್ಬರು ಸತ್ಯದ ನ್ಯಾಯವನ್ನು ನಡಿಸಿ, ಸತ್ಯವನ್ನು
ಮಾಡುವದಕ್ಕೆ ನನ್ನ ನೇಮಗಳಲ್ಲಿ ನಡಿದು, ನನ್ನ ನ್ಯಾಯಗ
ಳನ್ನು ಕೈಕೊಂಡರೆ, ಅವನು ನೀತಿವಂತನು, ಅವನು ನಿಶ್ಚಯವಾ
೧೦ ಗಿ ಬದುಕುವನೆಂದು ಕರ್ತನಾದ ಯೆಹೋವ ಅನ್ನುತ್ತಾನೆ. ಆದ
ರೆ ಅವನು ಮಗನನ್ನು ಪಡೆಯುವಾಗ, ಇವನು ಮನೆ ಮುರಕ
ನಾಗಿ, ರಕ್ತ ಚೆಲ್ಲುವವನಾಗಿ, ಈ ಮೊದಲಾದ ಕೆಲಸಗಳನ್ನು ಮಾ
೧೧ ಡಿ, ಅವುಗಳನ್ನೆಲ್ಲಾ ಮಾಡದೆ, ಬೆಟ್ಟಗಳ ಮೇಲೆ ಊಂಡು, ತನ್ನ
೧೨ ನೆರೆಯವನ ಹೆಂಡತಿಯನ್ನು ಕೆಡಿಸಿ, ದರಿದ್ರರನ್ನೂ ಬಡವರನ್ನೂ
ಉಪದ್ರ ಪಡಿಸಿ, ಸುಲಿಗೆ ಮಾಡಿ, ಅಡವು ಹಿಂದೆ ಕೊಡದೆ, ವಿಗ್ರ
ಹಗಳ ಕಡೆಗೆ ತನ್ನ ಕಣ್ಣುಗಳನ್ನು ಎತ್ತಿ, ಅಸಹ್ಯವನ್ನು ಮಾ
೧೩ ಡಿ, ಬಡ್ಡಿಗೆ ಕೊಟ್ಟು, ಆದಾಯ ತಕ್ಕೊಂದರೆ, ಅವನು ಬದುಕ್ಯಾ
ನೋ! ಅವನು ಬದುಕುವದಿಲ್ಲ; ಅವನು ಈ ಅಸಹ್ಯಗಳನ್ನೆಲ್ಲಾ
ಮಾಡಿದ್ದಾನೆ; ಅವನು ಸಾಯಲೇ ಸಾಯುವನು; ಅವನ ರಕ್ತವು
೧೪ ಅವನ ಮೇಲೆಯೇ ಇರುವದು. ಮತ್ತು ಇಗೋ ಅವನು ಮಗನ
೧೫ ನ್ನು ಪಡೆದ ಮೇಲೆ, ಇವನು ತನ್ನ ತಂಬೆ ಮಾಡಿದ ಪಾಪಗಳನ್ನೆಲ್
ಲಾ ನೋಡಿ, ಆಲೋಚಿಸಿ, ಅವುಗಳಂತೆ ಮಾಡದೆ ಬೆಟ್ಟಗಳ
ಮೇಲೆ ಊಣ್ಣದೆ, ಇಸ್ರಯೇಲನ ಮನೆಯವರ ವಿಗ್ರಹಗಳ ಕಡೆಗೆ
ತನ್ನ ಕಣ್ಣುಗಳನ್ನೆತ್ತದೆ, ತನ್ನ ನೆರೆಯವನ ಹೆಂಡತಿಯನ್ನು
೧೬ ಕೆಡಿಸದೆ, ಯಾರನ್ನಾದರೂ ಉಪದ್ರ ಪಡಿಸದೆ, ಅಡವನ್ನು ಹಿಡಿ
ಯದೆ, ಸುಲಿಗೆ ಮಾಡದೆ, ಹಸಿದವನಿಗೆ ತನ್ನ ರೊಟ್ಟಿಯನ್ನು
೧೭ ಕೊಟ್ಟು, ಬೆತ್ತಲೆಯಾದವನಿಗೆ ವಸ್ತ್ರವನ್ನು ಹೊದ್ದಿಸಿ, ಬಡವನ
ಕಡೆಯಿಂದ ತನ್ನ ಕೈ ಹಿಂತಿರುಗಿಸಿ, ಬಡ್ಡಿಯನ್ನೂ ಆದಾಯವ
ನ್ನೂ ತಕ್ಕೊಳ್ಳದೆ, ನನ್ನ ನ್ಯಾಯಗಳನ್ನು ಮಾಡಿ, ನನ್ನ ನೇಮ
ಗಳಲ್ಲಿ ನಡಿದರೆ, ಇವನು ತನ್ನ ತಂಬೆಯ ಅಕ್ರಮಕ್ಕಾಗಿ ಸಾಯು
೧೮ ವದಿಲ್ಲ, ಬದುಕಲೇ ಬದುಕುವನು. ಅವನ ತಂಬೆಯಾದರೆ—ಅವ
ನು ಬಹಳ ಬಲಾತ್ಕಾರ ಮಾಡಿದ್ದರಿಂದಲೂ, ತನ್ನ ಸಹೋದರನ
ನ್ನು ಸುಲಿಗೆ ಮಾಡಿದ್ದರಿಂದಲೂ, ತನ್ನ ಜನರ ಮಧ್ಯದಲ್ಲಿ ಒಳ್ಳೇ
ದಲ್ಲದ್ದನ್ನು ಮಾಡಿದ್ದರಿಂದಲೂ, ಇಗೋ ಅವನು ತನ್ನ ಅಕ್ರಮ
ದಲ್ಲಿ ಸಾಯುವನು.

೧೯ ಆದರೆ ನೀವು—ಯಾತಕ್ಕೆ! ಮಗನು ತಂಬೆಯ ಅಕ್ರಮವನ್ನು
ಹೊರುತ್ತಾನಲ್ಲ! ಎಂದು ಹೇಳುತ್ತೀರಿ; ನಿಶ್ಚಯವಾಗಿ ಮಗನು
ನ್ಯಾಯವನ್ನೂ ನೀತಿಯನ್ನೂ ಮಾಡಿ, ನನ್ನ ನೇಮಗಳನ್ನೆಲ್ಲಾ
೨೦ ಕೈ ಕೊಂಡು ಮಾಡಿದರೆ, ಬದುಕಲೇ ಬದುಕುವನು. ಪಾಪಮಾಡು
ವ ಪ್ರಾಣವು ಅದೇ ಸಾಯುವದು; ಮಗನು ತಂಬೆಯ ಅಕ್ರ
ಮವನ್ನು ಹೊರುವದಿಲ್ಲ, ಮತ್ತು ತಂಬೆಯು ಮಗನ ಅಕ್ರಮವ
ನ್ನು ಹೊರುವದಿಲ್ಲ; ನೀತಿವಂತನ ನೀತಿ ಅವನ ಮೇಲೆಯೇ ಇ
ರುವದು; ಮತ್ತು ದುಷ್ಟನ ದುಷ್ಟತ್ವವು ಅವನ ಮೇಲೆಯೇ ಇ
೨೧ ರುವದು. ಆದರೆ ದುಷ್ಟನು ತಾನು ಮಾಡಿರುವ ಪಾಪಗಳನ್ನೆಲ್ಲಾ
ಬಿಟ್ಟು, ತಿರುಗಿಕೊಂಡು, ನನ್ನ ನೇಮಗಳನ್ನೆಲ್ಲಾ ಕೈಕೊಂಡು, ನ್ಯಾ
ಯವನ್ನೂ ನೀತಿಯನ್ನೂ ಮಾಡಿದರೆ, ಅವನು ಸಾಯದೆ, ಬ
೨೨ ದುಕಲೇ ಬದುಕುವನು. ಅವನು ಮಾಡಿದ ಅಪರಾಧಗಳೆಲ್ಲಾ ಅವ
ನಿಗೆ ವಿರೋಧವಾಗಿ ಜ್ಞಾಪಕ ಮಾಡಲ್ಪಡುವದಿಲ್ಲ; ಅವನು ಮಾಡಿ
ದ ನೀತಿಯಿಂದ ಬದುಕುವನು. ದುಷ್ಟನು ಸಾಯುವದರಲ್ಲಿ ನ
ನಗೆ ಸ್ವಲ್ಪವಾದರೂ ಸಂತೋಷ ಉಂಟೋ! ಎಂದು ಕರ್ತನಾದ
೨೩ ಯೆಹೋವ ಅನ್ನುತ್ತಾನೆ. ಅವನು ತನ್ನ ಮಾರ್ಗಗಳನ್ನು ಬಿಟ್ಟು
೨೪ ತಿರುಗುವದರಲ್ಲಿಯೇ ನನಗೆ ಸಂತೋಷವಲ್ಲವೋ! ಆದರೆ ನೀತಿ
ವಂತನು ತನ್ನ ನೀತಿಯನ್ನು ಬಿಟ್ಟು ಅನ್ಯಾಯ ಮಾಡಿ ದುಷ್ಟನು
ಮಾಡುವ ಎಲ್ಲಾ ಅಸಹ್ಯಗಳ ಪ್ರಕಾರ ಮಾಡಿದರೆ, ಬದುಕ್ಯಾನೇ!
ಅವನು ಮಾಡಿರುವ ನೀತಿಯೆಲ್ಲಾ ಜ್ಞಾಪಕ ಮಾಡಲ್ಪಡುವದಿಲ್ಲ;
ಅವನು ಮಾಡಿರುವ ಅಪರಾಧದಿಂದಲೂ, ಅವನು ಮಾಡಿರುವ ಪಾ
೨೫ ಪದಿಂದಲೂ, ಇವುಗಳಿಂದ ಸಾಯುವನು. ಆದರೆ ನೀವು ಕರ್ತನ
ಮಾರ್ಗವು ಸರಿಯಲ್ಲ, ಅನ್ನುತ್ತೀರಿ, ಇಸ್ರಯೇಲನ ಮನೆಯವರೇ,
ಕೇಳಿರಿ; ನನ್ನ ಮಾರ್ಗವು ಸರಿಯಲ್ಲವೋ! ನಿಮ್ಮ ಮಾರ್ಗಗಳು
೨೬ ಸರಿಯಲ್ಲವಲ್ಲ! ನೀತಿವಂತನು ತನ್ನ ನೀತಿಯನ್ನು ಬಿಟ್ಟು ತಿರುಗಿ
ಕೊಂಡು, ಅನ್ಯಾಯ ಮಾಡಿ, ಇವುಗಳಲ್ಲಿ ಸತ್ತರೆ, ಅವನು ಮಾ
ಡಿದ ಅನ್ಯಾಯದಿಂದ ಸಾಯುವನು. ಇದಲ್ಲದೆ, ದುಷ್ಟನು ತಾನು
ಮಾಡುವ ದುಷ್ಟತ್ವ ಬಿಟ್ಟು, ನ್ಯಾಯವನ್ನೂ ನೀತಿಯನ್ನೂ
೨೭ ಮಾಡಿದರೆ, ಅವನು ತನ್ನ ಪ್ರಾಣವನ್ನು ಬದುಕಿಸುವನು. ಅವ
ನು ಆಲೋಚಿಸಿ, ತಾನು ಮಾಡುವ ಎಲ್ಲಾ ದುಷ್ಟತ್ವಗಳನ್ನು
ಬಿಟ್ಟು, ತಿರುಗಿಕೊಳ್ಳುವದರಿಂದ, ಸಾಯದೆ ಬದುಕಲೇ ಬದುಕು
೨೮ ವನು. ಆದರೆ ಇಸ್ರಯೇಲನ ಮನೆಯವರು ಕರ್ತನ ಮಾರ್ಗ ಸ
ರಿಯಲ್ಲ ಅನ್ನುತ್ತಾರೆ, ಇಸ್ರಯೇಲನ ಮನೆಯವರೇ, ನನ್ನ ಮಾ
ರ್ಗಗಳು ಸರಿಯಲ್ಲವೋ! ನಿಮ್ಮ ಮಾರ್ಗಗಳು ಸರಿಯಲ್ಲವಲ್ಲ!
೩೦ ಆದದರಿಂದ ಇಸ್ರಯೇಲನ ಮನೆಯವರೇ, ನಿಮ್ಮ ನಿಮ್ಮ ಮಾರ್ಗ
ಗಳ ಪ್ರಕಾರ ನಿಮಗೆ ನ್ಯಾಯ ತೀರಿಸುವೆನೆಂದು ಕರ್ತನಾದ ಯೆ
ಹೋವ ಅನ್ನುತ್ತಾನೆ; ನಿಮ್ಮ ದುಷ್ಟತ್ವಗಳನ್ನೆಲ್ಲಾ ಬಿಟ್ಟು ತಿರು
ಗಿಕೊಳ್ಳಿರಿ; ಆಗ ಅಕ್ರಮವು ನಿಮಗೆ ಎಡೆತಡೆ ಯಾಗುವದಿಲ್ಲ.
೩೧ ನೀವು ಮಾಡಿರುವ ದುಷ್ಟತ್ವಗಳನ್ನೆಲ್ಲಾ ನಿಮ್ಮಿಂದ ಬಿಸಾಟು ಬಿಡಿ
ರಿ; ಮತ್ತು ನಿಮಗೆ ಹೊಸ ಹೃದಯವನ್ನೂ ಹೊಸ ಆತ್ಮವನ್ನೂ
ಮಾಡಿ ಕೊಳ್ಳಿರಿ; ಯಾಕಂದರೆ, ನೀವು ಸಾಯುವದು ಯಾತ
೩೨ ಕ್ಕೆ ಓ ಇಸ್ರಯೇಲನ ಮನೆಯವರೇ! ಯಾಕಂದರೆ ಸಾಯುವವ
ನ ಸಾವಿನಲ್ಲಿ ನನಗೆ ಸಂತೋಷವಿಲ್ಲವೆಂದು ಕರ್ತನಾದ ಯೆಹೋ
ವ ಅನ್ನುತ್ತಾನೆ; ಹೀಗಿರುವದರಿಂದ ತಿರುಗಿ ಕೊಂಡು ಬದುಕಿರಿ.

## ೧೯. ಸಂಧಿ.

೧ ಇದಲ್ಲದೆ ನೀನು ಇಸ್ರಯೇಲನ ಪ್ರಭುಗಳ ವಿಷಯ ಗೋಳಾ
೨ ಟವನ್ನು ಎತ್ತಿ, ಹೀಗೆ ಹೇಳು—ನಿನ್ನ ತಾಯಿ ಏನು! ಸಿಂಹಣಿ
ಯೇ, ಸಿಂಹಗಳ ಮಧ್ಯದಲ್ಲಿ ಮಲಗಿಕೊಂಡು, ಎಳೇ ಸಿಂಹಗಳ
೩ ಮಧ್ಯದಲ್ಲಿ ತನ್ನ ಮರಿಗಳನ್ನು ಸಾಕಿದಳು. ಮತ್ತು ತನ್ನ ಮರಿ
ಗಳಲ್ಲಿ ಒಂದನ್ನು ಬೆಳಿಸಿದಳು; ಅದು ಎಳೇ ಸಿಂಹವಾಯಿತು; ಕೊ
ಳ್ಳೆ ಹಿಡಿಯುವದನ್ನು ಕಲಿತು, ಮನುಷ್ಯರನ್ನು ತಿಂದು ಬಿಟ್ಟಿತು.
೪ ಜನಾಂಗಗಳವರು ಅದರ ಸುದ್ದಿಯನ್ನು ಕೇಳಿದರು; ಅವರ ಕುಣಿ

ಯಲ್ಲಿ ಸಿಕ್ಕಿತು; ಅದನ್ನು ಸಂಕೋಲೆಗಳಲ್ಲಿ ಐಗುಪ್ತ ದೇಶಕ್ಕೆ ತ
೫ ಕ್ಕೊಂಡು ಹೋದರು. ಆಗಲವಳು ಕಾದುಕೊಂಡು, ತನ್ನ ನಿರೀಕ್ಷೆ
ಕೆಟ್ಟು ಹೋಯಿತೆಂದು ನೋಡಿದ ಮೇಲೆ ತನ್ನ ಮರಿಗಳಲ್ಲಿ ಮ
ತ್ತೊಂದನ್ನು ತಕ್ಕೊಂಡು, ಅದನ್ನು ಎಳೇ ಸಿಂಹವಾಗ ಮಾಡಿದ
೬ ಳು. ಅದು ಸಿಂಹಗಳ ಮಧ್ಯದಲ್ಲಿ ತಿರುಗಾಡಿ, ಎಳೇ ಸಿಂಹವಾಗಿ
ಕೊಳ್ಳೆ ಹಿಡಿಯುವದನ್ನು ಕಲಿತು, ಮನುಷ್ಯರನ್ನು ತಿಂದು ಬಿ
೭ ಟ್ಟಿತು. ಅವರ ಅರಮನೆಗಳನ್ನು ಕೆಡಿಸಿ, ಅವರ ಪಟ್ಟಣಗಳನ್ನು ಹಾ
ಳು ಮಾಡಿತು; ಅದರ ಘರ್ಜನೆಯ ಶಬ್ದದಿಂದ ದೇಶವೂ ಅದರ
೮ ಪರಿಪೂರ್ಣತೆಯೂ ಬೀಡಾಯಿತು. ಆಗ ಜನಾಂಗಗಳು ಸುತ್ತ
ಲು ಕೀಮೆಗಳೊಳಗಿಂದ ಅದನ್ನು ಹೊಂಚಿ ನೋಡಿ, ಅದರ ಮೇ
೯ ಲೆ ಬಲೆಯನ್ನೊಡ್ಡಿದವು; ಅವರ ಕುಣಿಯಲ್ಲಿ ಸಿಕ್ಕಿತು. ಅದಕ್ಕೆ
ಸಂಕೋಲೆಗಳನ್ನು ಹಾಕಿ, ಕಾವಲಿಯಲ್ಲಿ ಇಟ್ಟು, ಬಾಬೆಲಿನ ಅರ
ಸನ ಬಳಿಗೆ ತಕ್ಕೊಂಡು ಹೋದರು; ಅದರ ಶಬ್ದವು ಇನ್ನು ಮೇ
ಲೆ ಇಸ್ರಯೇಲಿನ ಬೆಟ್ಟಗಳ ಮೇಲೆ ಕೇಳಲ್ಪಡದ ಹಾಗೆ ಅದನ್ನು
ದುರ್ಗಗಳಲ್ಲಿ ಇರಿಸಿದರು.

೧೦ ನಿನ್ನ ತಾಯಿ ನಿನ್ನ ಸಾಖ್ಯದಲ್ಲಿ ನೀರಿನ ಬಳಿಯಲ್ಲಿ ನೆಟ್ಟ
ದ್ರಾಕ್ಷೇಗಿಡದ ಹಾಗಿದ್ದಾಳೆ; ಬಹಳ ನೀರುಗಳಿಂದ ಫಲವುಳ್ಳದ್ದಾಗಿ
೧೧ ಯೂ, ತುಂಬ ಕುಡಿಗಳುಳ್ಳದ್ದಾಗಿಯೂ, ಇತ್ತು. ಆಳುವವರ
ಮುದ್ರೆಕೋಲುಗಳಿಗೆ ತಕ್ಕ ಬಲವುಳ್ಳ ಬಳ್ಳಿಗಳು ಅದಕ್ಕೆ ಇ
ದ್ದವು; ಅದರ ನೀಳವು ಗಾತ್ರವಾದ ಕೊಂಬೆಗಳ ಮಧ್ಯದಲ್ಲಿ ಎತ್ತಿ
ಕೊಂಡಿತ್ತು; ಹಾಗೆಯೇ ಅದು ತನ್ನ ಎತ್ತರದಲ್ಲಿ, ತನ್ನ ಚೆಗು
೧೨ ರುಗಳ ಬಾಹುಳ್ಯದರ ಸಂಗಡ ಕಾಣ ಬರುತ್ತಿತ್ತು. ಆದರೆ ಉಗ್ರದ
ಲ್ಲಿ ಕೀಳಲ್ಪಟ್ಟಿತು, ನೆಲಕ್ಕೆ ಹಾಕಲ್ಪಟ್ಟಿತು; ಮೂಡಣ ಘೂಳಿ ಅದ
ರ ಫಲವನ್ನು ಒಣಗಿಸಿತು; ಅದರ ಬಲವಾದ ಬಳ್ಳಿಗಳು ಮುರಿಯ
೧೩ ಲ್ಪಟ್ಟು, ಒಣಗಿದವು; ಬೆಂಕಿ ಅವುಗಳನ್ನು ಸುಟ್ಟು ಬಿಟ್ಟಿತು. ಈ
ಗ ಅದು ಅರಣ್ಯದಲ್ಲಿ, ಒಣಗಿದಂಥ, ನೀರಿಲ್ಲದಂಥ, ದೇಶದಲ್ಲಿ ನೆ
೧೪ ಡಲ್ಪಟ್ಟಿದೆ. ಮತ್ತು ಅದರ ಕೊಂಬೆಗಳ ಬಳ್ಳಿಗಳೊಳಗಿಂದ ಬೆಂಕಿ
ಯು ಹೊರಟು, ಅದರ ಫಲವನ್ನು ತಿಂದು ಬಿಟ್ಟಿತೆ; ಅದರಲ್ಲಿ ಆ
ಳುವದಕ್ಕೆ ಮುದ್ರೆಕೋಲಿಗಾಗಿ ತಕ್ಕ ಬಲವುಳ್ಳ ಬಳ್ಳಿಯು ಇಲ್ಲ;
ಇದು ಗೋಳಾಟೆವೇ; ಮತ್ತು ಗೋಳಾಟಕ್ಕಾಗಿಯೇ ಇರುವದು.

## ೨೦. ಸಂಧಿ

೧ ಮತ್ತು ಏಳನೇ ವರುಷದಲ್ಲಿ; ಐದನೇ ತಿಂಗಳಿನ ಹತ್ತನೇ ದಿ
ವಸದಲ್ಲಿ, ಆದದ್ದೇನಂದರೆ—ಇಸ್ರಯೇಲಿನ ಹಿರಿಯರಲ್ಲಿ ಕೆಲವ
ರು ಕರ್ತನ ಬಳಿಯಲ್ಲಿ ವಿಚಾರಿಸುವದಕ್ಕೆ ಬಂದು, ನನ್ನ ಮುಂ
೨ ದೆ ತೂತು ಕೊಂಡರು. ಆಗ ಕರ್ತನ ವಾಕ್ಯವು ನನಗೆ ಉಂಟಾಗಿ
ಹೇಳಿದ್ದೇನಂದರೆ—ಮನುಷ್ಯನ ಮಗನೇ, ನೀನು ಇಸ್ರಯೇಲಿನ
೩ ಹಿರಿಯರ ಸಂಗಡ ಮಾತಾಡಿ ಅವರಿಗೆ ಹೇಳಿ ತಕ್ಕದ್ದೇನಂದರೆ—
ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನನ್ನ ಬಳಿಯ
ಲ್ಲಿ ವಿಚಾರಿಸುವದಕ್ಕೆ ಬಂದಿರೋ? ನನ್ನ ಜೀವದಾಣೆ, ನಾನು ನಿ
ಮ್ಮಿಂದ ವಿಚಾರಿಸಲ್ಪಡುವದಿಲ್ಲವೆಂದು ಕರ್ತನಾದ ಯೆಹೋವ ಅ
೪ ನ್ನುತ್ತಾನೆ. ಅವರಿಗೆ ನ್ಯಾಯ ತೀರಿಸುವಿಯೋ? ಮನುಷ್ಯನ ಮ
ಗನೇ, ಅವರಿಗೆ ನ್ಯಾಯ ತೀರಿಸುವಿಯೋ? ಅವರ ತಂದೆಗಳ ಅಸ
೫ ಹ್ಯಗಳನ್ನು ಅವರಿಗೆ ತಿಳಿಸು, ಮತ್ತು ಅವರಿಗೆ ಹೇಳ ತಕ್ಕದ್ದೇ
ನಂದರೆ—ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನಾನು
ಇಸ್ರಯೇಲನ್ನು ಆದು ಕೊಂಡು, ಯಾಕೋಬನ ಮನೆಯ ಸಂ
ತಾನಕ್ಕೆ ನನ್ನ ಕೈ ಎತ್ತಿ, ಐಗುಪ್ತ ದೇಶದಲ್ಲಿ ಅವರಿಗೆ ನನ್ನನ್ನು
ತಿಳಿಯ ಮಾಡಿದ ದಿವಸದಲ್ಲಿ, ನಾನು ಅವರಿಗೆ ನನ್ನ ಕೈ ಎತ್ತಿ
ನಿಮ್ಮ ದೇವರಾದ ಯೆಹೋವ ನಾನೇ ಎಂದು ಅವರಿಗೆ ಹೇಳಿದಾ
೬ ಗ, ನಾನು ಅವರಿಗೆ ನನ್ನ ಕೈ ಎತ್ತಿ, ಅವರನ್ನು ಐಗುಪ್ತ ದೇಶದೊಳ
ಗಿಂದ ಹೊರಗೆ ತಂದು, ನಾನೇ ಅವರಿಗೋಸ್ಕರ ನೋಡಿ ಕೊಂ
ಡಂಥ, ಹಾಲೂ ಜೇನೂ ಹರಿಯುವಂಥ, ಎಲ್ಲಾ ದೇಶಗಳ ಮಹಿ
೭ ಮೆಯುಳ್ಳಂಥ, ದೇಶಕ್ಕೆ, ಪೈದ ದಿವಸದಲ್ಲಿ, ಆಗ ನಾನು ಅವರ
ಗೆ—ನಿಮ್ಮಲ್ಲಿ ಒಬ್ಬೊಬ್ಬನು ತನ್ನ ತನ್ನ ಕಣ್ಣುಗಳ ಹೇಸಿಗೆಗಳ
ನ್ನು ಬಿನಾಟು ಬಿಡಿರಿ, ಐಗುಪ್ತದ ವಿಗ್ರಹಗಳಿಂದ ನಿಮ್ಮನ್ನು ಅಶು
ದ್ಧ ಮಾಡ ಬೇಡಿರಿ; ನಿಮ್ಮ ದೇವರಾದ ಯೆಹೋವ ನಾನೇ ಎಂ
೮ ದು ನಿಮಗೆ ಹೇಳಿದೆನು. ಆದರೆ ಅವರು ನನಗೆ ವಿರೋಧವಾಗಿ ತಿ
ರುಗಿ ಬಿದ್ದು, ನನಗೆ ಕಿವಿ ಕೊಡಲೊಲ್ಲದೆ ಹೋದರು; ಅವರು ತ
ಮ್ಮ ತಮ್ಮ ಕಣ್ಣುಗಳ ಹೇಸಿಗೆಗಳನ್ನು ಬಿನಾಟು ಬಿಡಲಿಲ್ಲ; ಐ
ಗುಪ್ತದ ವಿಗ್ರಹಗಳನ್ನು ಬಿಟ್ಟು ಬಿಡಲಿಲ್ಲ; ಆಗ ನಾನು ಅವರ ಮೇ
ಲೆ ನನ್ನ ಉಗ್ರವನ್ನು ಹೊಯ್ಯುತ್ತೇನೆಂದು, ಐಗುಪ್ತ ದೇಶದಲ್ಲಿ
ಅವರ ಮೇಲೆ ನನ್ನ ಕೋಪವನ್ನು ತೀರಿಸುತ್ತೇನೆಂದೂ ಹೇಳಿದೆ
೯ ನು. ಆದರೆ ಅವರು ಯಾರ ಮಧ್ಯದಲ್ಲಿ ಇದ್ದರೋ, ನಾನು
ಯಾರ ದೃಷ್ಟಿಯ ಮುಂದೆ, ಅವರನ್ನು ಐಗುಪ್ತ ದೇಶದೊಳ
ಗಿಂದ ಹೊರಗೆ ಬರ ಮಾಡುವದರಿಂದ ನನ್ನನ್ನು ತಿಳಿಯ ಮಾ
ಡಿದೆನೋ, ಆಜನಾಂಗಗಳ ಕಣ್ಣುಗಳ ಮುಂದೆ ನನ್ನ ಹೆಸರು ಅ
೧೦ ಪವಿತ್ರವಾಗದ ಹಾಗೆ ನನ್ನ ಹೆಸರಿಗೋಸ್ಕರ ಕೆಲಸ ಮಾಡಿದೆನು.
ಆದದರಿಂದ ನಾನು ಐಗುಪ್ತ ದೇಶದೊಳಗಿಂದ ಅವರನ್ನು ಹೊ
೧೧ ರಗೆ ಬರ ಮಾಡಿ, ಅರಣ್ಯದೊಳಗೆ ಅವರನ್ನು ತಂದೆನು. ಮತ್ತು
ಯಾವವುಗಳನ್ನು ಮನುಷ್ಯನು ಮಾಡಿದರೆ, ಅವುಗಳಿಂದ ಬದು
ಕುವನೋ ಆ ನನ್ನ ನೇಮಗಳನ್ನು ಅವರಿಗೆ ಕೊಟ್ಟು, ನನ್ನ
೧೨ ನ್ಯಾಯಗಳನ್ನು ಅವರಿಗೆ ತಿಳಿಸಿದೆನು. ಇದಲ್ಲದೆ, ಅವರನ್ನು ಪ
ರಿಶುದ್ಧ ಪಾಡುವ ಕರ್ತನು ನಾನೇ ಎಂದು ಅವರು ತಿಳಿಯುವ
ಹಾಗೆ, ನನಗೂ ಅವರಿಗೂ ಗುರುತಾಗುವದಕ್ಕೆ ನನ್ನ ಸಬ್ಬತುಗ
೧೩ ಳನ್ನು ಅವರಿಗೆ ಕೊಟ್ಟಿನು. ಆದರೆ ಇಸ್ರಯೇಲನ ಮನೆಯವರು
ಅರಣ್ಯದಲ್ಲಿ ನನಗೆ ವಿರೋಧವಾಗಿ ತಿರುಗಿ ಬಿದ್ದರು; ಯಾವವು
ಗಳನ್ನು ಮನುಷ್ಯನು ಮಾಡಿದರೆ ಬದುಕುವನೋ ಆ ನನ್ನ ನೇ
ಮಗಳಲ್ಲಿ ನಡಿಯದೆ, ನನ್ನ ನ್ಯಾಯಗಳನ್ನು ಅಸಡ್ಡೆ ಮಾಡಿ,
ನನ್ನ ಸಬ್ಬತುಗಳನ್ನು ಸಹ ಬಪಳ್ಳವಾಗಿ ಅಪವಿತ್ರ ಮಾಡಿದರು;
ಆಗ ನಾನು ಅರಣ್ಯದಲ್ಲಿ ಅವರ ಮೇಲೆ ನನ್ನ ಉಗ್ರವನ್ನು ಹೊ
೧೪ ಯಿದು, ಅವರನ್ನು ಮುಗಿಸಿ ಬಿಡುತ್ತೇನೆಂದು ಹೇಳಿದೆನು. ಆದರೆ
ನಾನು ಅವರನ್ನು ಯಾರ ಕಣ್ಣುಗಳ ಮುಂದೆ ಹೊರಗೆ ಬರ
ಮಾಡಿದೆನೋ ಆ ಜನಾಂಗಗಳ ದೃಷ್ಟಿಯಲ್ಲಿ ನನ್ನ ಹೆಸರು ಅ
೧೪ಗ ಪವಿತ್ರವಾಗದ ಹಾಗೆ ನನ್ನ ಹೆಸರಿಗೋಸ್ಕರ ಕೆಲಸ ಮಾಡಿದೆನು.
ಆದರೂ, ಅವರ ಹೃದಯವು ಅವರ ವಿಗ್ರಹಗಳ ಹಿಂದೆ ಹೋ
ದ ಕಾರಣ, ಅವರು ನನ್ನ ನ್ಯಾಯಗಳನ್ನು ಅಸಡ್ಡೆ ಮಾಡಿ, ನನ್ನ
೧೫ ನೇಮಗಳಲ್ಲಿ ನಡಿಯದೆ, ನನ್ನ ಸಬ್ಬತುಗಳನ್ನು ಅಪವಿತ್ರ ಮಾ
ಡಿದ್ದರಿಂದ, ನಾನು ಅವರಿಗೆ ಕೊಟ್ಟಿದ್ದ, ಹಾಲು ಜೇನು ಹರಿಯು
ವಂಥ, ಎಲ್ಲಾ ದೇಶಗಳ ಮಹಿಮೆಯಾಗಿರುವಂಥ, ದೇಶದಲ್ಲಿ ಅವ
ರನ್ನು ಕೇರಿಸುವದಿಲ್ಲವೆಂದು ಅರಣ್ಯದಲ್ಲಿ ಅವರಿಗೆ ನನ್ನ ಕೈ ಎ



೧೫ ತ್ತಿದೆನು. ಆದಾಗ್ಯೂ ಅವರನ್ನು ನಾಶ ಮಾಡದ ಹಾಗೆ ನನ್ನ ಕಣ್ಣು
ಅವರನ್ನು ಕನಿಕರಿಸಿತು; ಅರಣ್ಯದಲ್ಲಿ ಅವರನ್ನು ಪೂರ್ಣವಾಗಿ
೧೭ ಮುಗಿಸಿ ಬಿಡಲಿಲ್ಲ. ಆದರೆ ನಾನು ಅರಣ್ಯದಲ್ಲಿ ಅವರ ಮಕ್ಕಳಿ
ಗೆ ಹೇಳ್ದೇನಂದರೆ—ನಿಮ್ಮ ತಂದೆಗಳ ನೇಮಗಳಲ್ಲಿ ನಡಿಯ ಬೇ
ಡಿರಿ, ಅವರ ನ್ಯಾಯಗಳನ್ನು ಕೈಕೊಳ್ಳ ಬೇಡಿರಿ; ಅವರ ವಿಗ್ರ
೧೮ ಹಗಳಿಂದ ನಿಮ್ಮನ್ನು ಅಪವಿತ್ರ ಮಾಡ ಬೇಡಿರಿ. ನಿಮ್ಮ ದೇವರಾ
ದ ಯೆಹೋವ ನಾನೇ; ನನ್ನ ನೇಮಗಳಲ್ಲಿ ನಡಿಯಿರಿ; ನನ್ನ
೧೯ ನ್ಯಾಯಗಳನ್ನು ಕೈಕೊಂಡು ಮಾಡಿರಿ. ಮತ್ತು ನನ್ನ ಸಬ್ಬತು
ಗಳನ್ನು ಪರಿಶುದ್ಧ ಮಾಡಿರಿ; ಅವು ನಿಮಗೂ ನನಗೂ, ನಾನೇ
ನಿಮ್ಮ ದೇವರಾದ ಯೆಹೋವನೆಂದು ನೀವು ತಿಳಿಯುವ ಹಾಗೆ,
೨೦ ಗುರುತಾಗಿರುವವು. ಆದಾಗ್ಯೂ ಮಕ್ಕಳು ನನಗೆ ವಿರೋಧವಾಗಿ
ತಿರುಗಿ ಬಿದ್ದರು; ಯಾವವುಗಳನ್ನು ಮನುಷ್ಯನು ಮಾಡಿದರೆ
ಬದುಕುವನೋ ಆ ನನ್ನ ನೇಮಗಳಲ್ಲಿ ನಡಿಯಲಿಲ್ಲ, ನನ್ನ ನ್ಯಾ
ಯಗಳನ್ನು ಕೈಕೊಂಡು ಮಾಡಲಿಲ್ಲ; ನನ್ನ ಸಬ್ಬತುಗಳನ್ನು ಅ
ಪವಿತ್ರ ಮಾಡಿದರು; ಆಗ ಅವರ ಮೇಲೆ ನನ್ನ ಉಗ್ರವನ್ನು ಹೊ
ಯಿದು ಬಿಡುತ್ತೇನೆಂದೂ, ನನ್ನ ಕೋಪವನ್ನು ಅರಣ್ಯದಲ್ಲಿ ಅ
೨೧ ವರ ಮೇಲೆ ತೀರಿಸಿ ಬಿಡುತ್ತೇನೆಂದೂ, ಹೇಳ್ದೆನು. ಆದಾಗ್ಯೂ
ನನ್ನ ಕೈ ಹಿಂತೆಗೆದು, ನಾನು ಅವರನ್ನು ಯಾರ ಕಣ್ಣುಗಳ
ಮುಂದೆ ಹೊರಗೆ ಬರ ಮಾಡಿದೆನೋ ಆ ಜನಾಂಗಗಳ ದೃಷ್ಟಿ
ಯಲ್ಲಿ ನನ್ನ ಹೆಸರು ಅಪವಿತ್ರವಾಗದ ಹಾಗೆ ನನ್ನ ಹೆಸರಿಗೋಸ್ಕರ
೨೨ ಕೆಲಸ ಮಾಡಿದೆನು. ಮತ್ತು ಅವರು ನನ್ನ ನ್ಯಾಯಗಳಲ್ಲಿ ನಡಿಯ
ದೆ, ನನ್ನ ನೇಮಗಳನ್ನು ಅಲಕ್ಷಿಸಿ, ನನ್ನ ಸಬ್ಬತುಗಳನ್ನು ಅಪವಿತ್ರ
ಮಾಡಿ, ತಮ್ಮ ತಂದೆಗಳ ವಿಗ್ರಹಗಳ ಕಡೆಗೆ ಕಣ್ಣಿಟ್ಟದ್ದರಿಂದ, ನಾ
ನು ಅವರನ್ನು ಜನಾಂಗಗಳಲ್ಲಿ ಚದರಿಸುತ್ತೇನೆಂದೂ ದೇಶಗಳಲ್ಲಿ
ಚಲ್ಲುತ್ತೇನೆಂದೂ ಅವರಿಗೆ ಅರಣ್ಯದಲ್ಲಿ ನನ್ನ ಕೈ ಎತ್ತಿದೆನು. ಆ
೨೪ ದದರಿಂದ ನಾನು ಅವರಿಗೆ ಒಳ್ಳೆಯವುಗಳಲ್ಲದ ನೇಮಗಳನ್ನೂ ಅ
೨೫ ವರು ಬದುಕ ಬಾರದ ನ್ಯಾಯಗಳನ್ನೂ ಕೊಟ್ಟು, ಅವರನ್ನು ತ
ಮ್ಮ ದಾನಗಳಲ್ಲಿಯೇ—ಅವರು ಗರ್ಭ ತೆಗೆಯುವಂಥದ್ದೆಲ್ಲಾ ಬೆಂ
ಕಿ ದಾಟಿಸುವದರಲ್ಲಿ—ಅಪವಿತ್ರ ಮಾಡಿದೆನು; ಅವರನ್ನು ನಾಶನ
೨೬ ಮಾಡಿ ನಾನೇ ಯೆಹೋವನೆಂದು ಅವರು ತಿಳಿಯುವದಕ್ಕಾಗಿಯೇ.

೨೭ ಆದದರಿಂದ, ಮನುಷ್ಯನ ಮಗನೇ, ನೀನು ಇಸ್ರಯೇಲನ ಮ
ನೆಯವರ ಸಂಗಡ ಮಾತಾಡಿ, ಅವರಿಗೆ ಹೇಳ ತಕ್ಕದ್ದೇನಂದರೆ—
ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇದರಲ್ಲಿಯೂ ನಿ
ಮ್ಮ ತಂದೆಗಳು ನನ್ನನ್ನು ದೂಷಿಸಿದರು; ನನಗೆ ವಿರೋಧವಾಗಿ
೨೮ ಬಹಳ ಅಪರಾಧ ಮಾಡಿದರಲ್ಲಿಯೇ. ಯಾಕಂದರೆ ನಾನು ಕೈ ಎ
ತ್ತಿ, ಅವರಿಗೆ ಕೊಟ್ಟ ದೇಶದಲ್ಲಿ ನಾನು ಅದರನ್ನು ಬರ ಮಾಡಿ
ದ ಮೇಲೆ, ಅವರು ಎತ್ತರವಾದ ಎಲ್ಲಾ ಗುಡ್ಡಗಳನ್ನೂ ಗಾತ್ರವಾ
ದ ಎಲ್ಲಾ ಮರಗಳನ್ನೂ ನೋಡಿ, ಅಲ್ಲಿ ತಮ್ಮ ಬಲಿಗಳನ್ನು ಅ
ರ್ಪಿಸಿ, ಅಲ್ಲಿ ಕಕಕಕೆ ಎಬ್ಬಿಸುವ ತಮ್ಮ ಕಾಣಿಕೆಗಳನ್ನು ಕೊ
ಟ್ಟು, ಅಲ್ಲಿ ತಮ್ಮ ಸುವಾಸನೆಗಳನ್ನು ಇಟ್ಟು, ಅಲ್ಲಿ ತಮ್ಮ ಪಾ
೨೯ ನದರ್ಪಣಿಗಳನ್ನು ಹೋಯಿದರು. ಆಗ ನಾನು ಅವರಿಗೆ—ನೀ
ವು ಹೋಗುವ ಈ ಮೇಡು ಏನೆಂದು ಹೇಳ್ದೆನು; ಅದಕ್ಕೆ ಇಂದಿ
೩೦ ನವರಿಗೂ ಮೇಡು ಎಂದು ಹೆಸರದೆ. ಆದದರಿಂದ ನೀನು ಇಸ್ರಯೇ
ಲನ ಮನೆಯವರಿಗೆ ಹೇಳ ತಕ್ಕದ್ದೇನಂದರೆ—ಕರ್ತನಾದ ಯೆಹೋ
ವ ಹೀಗೆ ಹೇಳುತ್ತಾನೆ—ನಿಮ್ಮ ತಂದೆಗಳ ರೀತಿಯಾಗಿ ನಿಮ್ಮನ್ನು
ಅಪವಿತ್ರ ಮಾಡಿಕೊಳ್ಳುತ್ತೀರೋ? ಅವರ ಅಸಹ್ಯಗಳ ಪ್ರಕಾರ
೩೧ ಸೂಳೆತನ ಮಾಡುತ್ತೀರೋ? ಯಾಕಂದರೆ ನಿಮ್ಮ ದಾನಗಳನ್ನು
ತರುವಾಗಲೂ, ನಿಮ್ಮ ಕುಮಾರರನ್ನು ಬೆಂಕಿ ದಾಟಿಸುವಾಗಲೂ,
ನೀವು ಇಂದಿನ ವರಗೂ, ನಿಮ್ಮ ವಿಗ್ರಹಗಳಿಂದಲ್ಲೆಲ್ಲಾ ನಿಮ್ಮನ್ನು ಅ
ಪವಿತ್ರ ಮಾಡಿಕೊಳ್ಳುತ್ತೀರಿ; ಹೀಗಾದರೆ, ನಾನು ನಿಮ್ಮಿಂದ ವಿಚಾ
ರಿಸಲ್ಪಟ್ಟೀತೇ? ನನ್ನ ಜೀವದಾಣೆ ನಾನು ನಿಮ್ಮಿಂದ ವಿಚಾರಿಸಲ್ಪಡು
೩೨ ವದಿಲ್ಲವೆಂದು ಕರ್ತನಾದ ಯೆಹೋವ ಅನ್ನುತ್ತಾನೆ. ಮತ್ತು, ನಾ
ವು ಜನಾಂಗಗಳ ಹಾಗೆಯೂ, ದೇಶಗಳಲ್ಲಿರುವ ಗೋತ್ರಗಳ ಹಾ
ಗೆಯೂ, ಇದ್ದು, ಮರಕ್ಕೂ ಕಲ್ಲಿಗೂ ಸೇವೆ ಮಾಡುತ್ತೇವೆಂದು
ಹೇಳ್ಳಿ, ನಿಮ್ಮ ಮನಸ್ಸಿನಲ್ಲಿ ಏರುವಂಥಾದ್ದು ಎಟ್ಟು ಮಾತ್ರ ಆಗದು.
೩೩ ಕರ್ತನಾದ ಯೆಹೋವನು ಅನ್ನುವದೇನಂದರೆ—ನನ್ನ ಜೀವದಾ
ಣೆ, ನಿಶ್ಚಯವಾಗಿ ಬಲವಾದ ಕೈಯಿಂದಲೂ ಚಾಚಿದ ತೋಳ್ಳಿನಿಂ
ದಲೂ, ಹೊಯಿದ ಉಗ್ರದಿಂದಲೂ, ನಿಮ್ಮ ಮೇಲೆ ಧೊರೆತನ ಮಾ
೩೪ ಡುವೆನು. ಮತ್ತು, ಬಲವಾದ ಕೈಯಿಂದಲೂ, ಚಾಚಿದ ತೋಳ್ಳಿನಿಂ
ದಲೂ, ಹೊಯಿದ ಉಗ್ರದಿಂದಲೂ, ನಿಮ್ಮನ್ನು ಜನಗಳೊಳಗಿಂದ
ಹೊರಗೆ ತಂದು, ನೀವು ಚದರಿ ಹೋಗಿರುವ ದೇಶಗಳೊಳಗಿಂದ
೩೫ ನಿಮ್ಮನ್ನು ಕೂಡಿಸಿ, ನಿಮ್ಮನ್ನು ಜನಗಳ ಅರಣ್ಯದಲ್ಲಿ ತಂದು, ಅ
ಲ್ಲಿ ಮುಖಾಮುಖಿಯಾಗಿ ನಿಮ್ಮ ಸಂಗಡ ವ್ಯಾಜ್ಯವಾಡುವೆನು.
೩೬ ನಾನು ನಿಮ್ಮ ತಂದೆಗಳ ಸಂಗಡ, ಐಗುಪ್ತ ದೇಶದ ಅರಣ್ಯದಲ್ಲಿ,
ವ್ಯಾಜ್ಯವಾಡಿದ ಪ್ರಕಾರವೇ, ನಿಮ್ಮ ಸಂಗಡ ವ್ಯಾಜ್ಯವಾಡುವೆನೆಂ
೩೭ ದು ಕರ್ತನಾದ ಯೆಹೋವ ಅನ್ನುತ್ತಾನೆ. ಮತ್ತು ನಿಮ್ಮನ್ನು
ಕೋಲಿನ ಕೆಳಗೆ ಹಾದು ಹೋಗ ಮಾಡಿ, ಒಡಂಬಡಿಕೆಯ ಬಂಧ
೩೮ ದಲ್ಲಿ ನಿಮ್ಮನ್ನು ಸೇರಿಸುತ್ತೇನೆ. ಇದಲ್ಲದೆ ತಿರುಗಿ ಬಿದ್ದವರನ್ನೂ
ನನಗೆ ವಿರೋಧವಾಗಿ ಅಪರಾಧ ಮಾಡಿದವರನ್ನೂ ನಿಮ್ಮೊಳಗಿಂ
ದ ಪ್ರತ್ಯೇಕಿಸುತ್ತೇನೆ; ಅವರು ತಂಗುವ ದೇಶದೊಳಗಿಂದ ಅವರ
ನ್ನು ಹೊರಗೆ ತರುತ್ತೇನೆ; ಆದರೆ ಅವರು ಇಸ್ರಯೇಲ್ ದೇಶದಲ್ಲಿ
ಬರುವದಿಲ್ಲ; ನಾನೇ ಯೆಹೋವನೆಂದು ತಿಳ್ಳು ಕೊಳ್ಳುವಿರಿ. ನಿ
೩೯ ಮ್ಮ ವಿಷಯವಾದರೆ, ಓ ಇಸ್ರಯೇಲನ ಮನೆಯವರೇ, ಕರ್ತ
ನಾದ ಯೆಹೋವ ಹೀಗೆ ಹೇಳುತ್ತಾನೆ—ನೀವು ನನಗೆ ಕಿವಿಗೊಡ
ದಿದ್ದರೆ, ಹೋಗಿ ನಿಮ್ಮ ನಿಮ್ಮ ವಿಗ್ರಹಗಳನ್ನು ಸೇವಿಸಿರಿ, ಇನ್ನು
ಮೇಲೆಯೂ ಸಹ; ಆದರೆ ನಿಮ್ಮ ದಾನಗಳಿಂದಲೂ ನಿಮ್ಮ ವಿಗ್ರ
ಹಗಳಿಂದಲೂ ನನ್ನ ಪರಿಶುದ್ಧ ಹೆಸರನ್ನು ಇನ್ನು ಅಪವಿತ್ರ ಮಾ
೪೦ ಡ ಬೇಡಿರಿ. ಯಾಕಂದರೆ ನನ್ನ ಪರಿಶುದ್ಧ ಪರ್ವತದಲ್ಲಿ, ಇಸ್ರ
ಯೇಲಿನ ಉನ್ನತ ಪರ್ವತದಲ್ಲಿ, ಅಲ್ಲಿಯೇ ಇಸ್ರಯೇಲನ ಮನೆ
ಯವರೆಲ್ಲರೂ ದೇಶದಲ್ಲಿರುವವರೆಲ್ಲರೂ ನನ್ನನ್ನು ಸೇವಿಸುವರು;
ಅಲ್ಲಿ ಅವರಿಗೆ ಮೆಚ್ಚುವೆನು; ಅಲ್ಲಿ ನಿಮ್ಮ ಎತ್ತುವ ಅರ್ಪಣೆಗಳ
ನ್ನೂ ನಿಮ್ಮ ಕಾಣಿಕೆಗಳ ಪ್ರಥಮ ಫಲಗಳನ್ನೂ ನಿಮ್ಮ ಪರಿಶು
೪೧ ದ್ಧವಾದವುಗಳನ್ನೆಲ್ಲಾ ಸಹ, ಅಂಗೀಕರಿಸುವೆನು. ನಾನು ನಿಮ್ಮ
ನ್ನು ಜನಗಳೊಳಗಿಂದ ಹೊರಗೆ ತಂದು, ನೀವು ಚದರಿರುವ ದೇ
ಶಗಳೊಳಗಿಂದ ಕೂಡಿಸುವಾಗ, ನಿಮ್ಮನ್ನು ನಿಮ್ಮ ಸುವಾಸನೆ
ಯ ಸಂಗಡ ಅಂಗೀಕರಿಸುವೆನು; ಮತ್ತು ಜನಾಂಗಗಳ ಕಣ್ಣುಗ
೪೨ ಳ ಮುಂದೆ ನಿಮ್ಮಲ್ಲಿ ಪರಿಶುದ್ಧವಾಗುವೆನು. ಆಗ ನಾನು ನಿಮ್ಮ
ನ್ನು ಇಸ್ರಯೇಲ್ ದೇಶದಲ್ಲಿ, ನಾನು ನನ್ನ ಕೈ ಎತ್ತಿ, ನಿಮ್ಮ ತಂ
ದೆಗಳಿಗೆ ಕೊಟ್ಟ ದೇಶದಲ್ಲಿ, ನಿಮ್ಮನ್ನು ತಕ್ಕೊಂಡು ಬರುವಾಗ,
೪೩ ನಾನೇ ಯೆಹೋವನೆಂದು ತಿಳ್ಳು ಕೊಳ್ಳುವಿರಿ. ಅಲ್ಲಿ ನೀವು ನಿಮ್ಮ

ಮಾರ್ಗಗಳನ್ನು, ನೀವು ಯಾವವುಗಳಿಂದ ಅಶುದ್ಧವಾದಿರೋ, ಆ ನಿಮ್ಮ ಕ್ರಿಯೆಗಳನ್ನೆಲ್ಲಾ ಜ್ಞಾಪಕ ಮಾಡಿ ಕೊಳ್ಳುವಿರಿ; ಮತ್ತು ನೀವು ಮಾಡಿದ ನಿಮ್ಮ ಎಲ್ಲಾ ಕೆಟ್ಟತನಗಳ ನಿಮಿತ್ತ ನಿಮ್ಮ
೪೪ ಸ್ವಂತ ದೃಷ್ಟಿಯಲ್ಲಿ ಅಸಹ್ಯರಾಗಿರುವಿರಿ. ಇದಲ್ಲದೆ, ಇಸ್ರಯೇಲ ಮನೆಯವರೇ, ನಿಮ್ಮ ದುರ್ಮಾರ್ಗಗಳ ಪ್ರಕಾರವಲ್ಲ; ನಿಮ್ಮ ದುಷ್ಕ್ರಿಯೆಗಳ ಪ್ರಕಾರವಲ್ಲ; ನನ್ನ ಹೆಸರಿಗೋಸ್ಕರವೇ ನಿಮಗೆ ನಡಿಸಿದಾಗ, ನಾನೇ ಯೆಹೋವನೆಂದು ತಿಳಿಯ ಕೊಳ್ಳುವಿರೆಂದು ಕರ್ತನಾದ ಯೆಹೋವ ಅನ್ನುತ್ತಾನೆ.

೪೫ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದ
೪೬ ರೆ—ಮನುಷ್ಯನ ಮಗನೇ, ದಕ್ಷಿಣ ಕಡೆಗೆ ಮುಖವನ್ನಿಟ್ಟು, ತೆಂಕಣ ಕಡೆಗೆ ಮಾತು ಬೀಳಿಸು; ದಕ್ಷಿಣ ಹೊಲದ ಅಡವಿಯ ವಿರು
೪೭ ಯ ಪ್ರವಾದಿಸು. ದಕ್ಷಿಣ ಅಡವಿಗೆ ಹೇಳ ತಕ್ಕದ್ದೇನಂದರೆ—ಕರ್ತನ ವಾಕ್ಯವನ್ನು ಕೇಳು; ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇಗೋ ನಾನು ನಿನ್ನಲ್ಲಿ ಬೆಂಕಿ ಹಚ್ಚುತ್ತೇನೆ; ಅದು ನಿನ್ನಲ್ಲಿರುವ ಎಲ್ಲಾ ಹಸಿ ಮರಗಳನ್ನೂ ಎಲ್ಲಾ ಒಣ ಮರಗಳನ್ನೂ ತಿಂದು ಬಿಡುವದು; ಉರಿಯುವ ಉರಿ ಆರಿ ಹೋಗುವದಿಲ್ಲ; ದಕ್ಷಿಣವು ಮೊದಲ್ಗೊಂಡು ಉತ್ತರದ ಪರ್ಯಂತರ ಎಲ್ಲಾ ಮುಖಗ
೪೮ ಳು ಅದರಲ್ಲಿ ಸುಟ್ಟು ಹೋಗುವವು. ಮತ್ತು ಕರ್ತನಾದ ನಾನೇ ಅದನ್ನು ಹಚ್ಚಿದೆನೆಂದು ಮಾಂಸದವರೆಲ್ಲರು ತಿಳಿಯ ಕೊಳ್ಳುವರು;
೪೯ ಅದು ಆರಿ ಹೋಗುವದಿಲ್ಲ. ಆಗ ನಾನು ಹೇಳಿದ್ದೇನಂದರೆ—ಅಯ್ಯೋ! ಕರ್ತನಾದ ಯೆಹೋವನೇ, ಅವನು ಗಾದೆಗಳನ್ನು ಹೇಳುತ್ತಾನಲ್ಲ! ಎಂದು ನನ್ನ ವಿಷಯ ಹೇಳುತ್ತಾರೆ.

## ೨೧. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂ
೨ ದರೆ—ಮನುಷ್ಯನ ಮಗನೇ, ನಿನ್ನ ಮುಖವನ್ನು ಯೆರೂಸಲೇಮಿನ ಕಡೆಗೆ ಇಡು; ಪರಿಶುದ್ಧಸ್ಥಳಗಳ ಕಡೆಗೆ ಮಾತು ಬೀಳಿಸಿ,
೩ ಇಸ್ರಯೇಲ್ ದೇಶಕ್ಕೆ ವಿರೋಧವಾಗಿ ಪ್ರವಾದಿಸು. ಇಸ್ರಯೇಲ್ ದೇಶಕ್ಕೆ ಹೇಳ ತಕ್ಕದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ಇಗೋ ನಾನು ನಿನಗೆ ವಿರೋಧವಾಗಿದ್ದೇನೆ, ನನ್ನ ಕತ್ತಿಯನ್ನು ಅದರ ಒಕೆಯಿಂದ ಹೊರಗೆ ಶೆಗೆದು, ನೀತಿವಂತನನ್ನೂ ದು
೪ ಷ್ಟನನ್ನೂ ನಿನ್ನೊಳಗಿಂದ ಕಡಿದು ಬಿಡುವೆನು. ನಾನು ನೀತಿವಂತನನ್ನೂ ದುಷ್ಟನನ್ನೂ ಕಡಿದು ಬಿಡುವ ಕಾರಣ ನನ್ನ ಕತ್ತಿಯು ದಕ್ಷಿಣವು ಮೊದಲುಗೊಂಡು ಉತ್ತರದ ಪರ್ಯಂತರಕ್ಕೂ ಮಾಂಸದವರೆಲ್ಲರಿಗೆ ವಿರೋಧವಾಗಿ ಒಕೆಯನ್ನು ಬಿಟ್ಟು ಹೊರಡುವ
೫ ದು. ಹೀಗೆ ಕರ್ತನಾದ ನಾನೇ ನನ್ನ ಕತ್ತಿಯನ್ನು ಒಕೆಯಿಂದ ಹೊರಗೆ ಶೆಗೆದಿದ್ದೇನೆಂದು ಮಾಂಸದವರೆಲ್ಲರಿಗೆ ತಿಳಿಯುವದು;
೬ ಅದು ಇನ್ನು ತಿರುಗಿ ಕೊಳ್ಳದು. ಆದದರಿಂದ ನೀನು, ಮನುಷ್ಯನ ಮಗನೇ, ನಡು ಮುರಿದು ನಿಟ್ಟುಸುರಿರು; ಕಹಿಯಾದ ಮನಸ್ಸಾ
೭ ಗಿ ಅವರ ಕಣ್ಣುಗಳ ಮುಂದೆ ನಿಟ್ಟುಸುರಿರು. ಮತ್ತು ಯಾತಕ್ಕೆ ನಿಟ್ಟುಸುರಿರುತ್ತಿ? ಎಂದು ಅವರು ನಿನಗೆ ಹೇಳುವಾಗ, ನೀನು ಹೇಳ ತಕ್ಕದ್ದೇನಂದರೆ—ಆ ಸುದ್ದಿಯ ನಿಮಿತ್ತವೇ, ಯಾಕಂದರೆ ಅದು ಬರುವದು; ಆಗ ಹೃದಯಗಳೆಲ್ಲಾ ಕರುಗುವವು; ಕೈಗಳೆಲ್ಲಾ ನಿತ್ರಾಣವಾಗುವವು, ಆತ್ಮಗಳೆಲ್ಲಾ ಕುಂದಿ ಹೋಗುವವು; ಪೊಣಕಾಲುಗಳೆಲ್ಲಾ ನೀರಿನ ಹಾಗಾಗುವವು, ಇಗೋ ಬರುತ್ತದೆ, ಉಂಟಾಗುತ್ತದೆ, ಎಂದು ಕರ್ತನಾದ ಯೆಹೋವ ಅನ್ನುತ್ತಾನೆ.

೮ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದ
೯ ರೆ—ಮನುಷ್ಯನ ಮಗನೇ, ನೀನು ಪ್ರವಾದಿಸಿ ಹೇಳ ತಕ್ಕದ್ದೇನಂದರೆ—ಕರ್ತನು ಹೀಗೆ ಹೇಳುತ್ತಾನೆ—ಕತ್ತಿಯು! ಕತ್ತಿ ಹದ
೧೦ ಮಾಡಲ್ಪಟ್ಟಿದೆ, ಮೆರುಗು ಮಾಡಲ್ಪಟ್ಟಿದೆ. ಕೊಲ್ಲಲೇ ಕೊಲ್ಲುವ ಹಾಗೆ ಅದು ಹದ ಮಾಡಲ್ಪಟ್ಟಿದೆ, ಥಳಥಳಿಸುವ ಹಾಗೆ ಮೆರುಗು ಮಾಡಲ್ಪಟ್ಟಿದೆ; ಹಾಗಾದರೆ, ನಾವು ಸಂತೋಷ ಪಡ ಬಹುದೋ! ನನ್ನ ಮಗನ ಬೆತ್ತವು ಮರಗಳನ್ನೆಲ್ಲಾ ತಿರಸ್ಕಾರ ಮಾಡುತ್ತದೆ.
೧೧ ಅದು ಕೈಯಲ್ಲಿ ಹಿಡಿಯಲ್ಪಡುವ ಹಾಗೆ ಮೆರುಗು ಮಾಡಲ್ಪಡುವದಕ್ಕೆ ಅದನ್ನು ಕೊಟ್ಟಿದ್ದಾನೆ, ಕೊಲ್ಲುವವನ ಕೈಯಲ್ಲಿ ಕೊಡು
೧೨ ವ ಹಾಗೆ ಆ ಕತ್ತಿಗೆ ಹದವೂ ಮೆರುಗೂ ಮಾಡಿ ಆಯಿತು. ಮನುಷ್ಯನ ಮಗನೇ, ಕೂಗಿ ಹುಯಿಲಿಡು; ಯಾಕಂದರೆ, ಅದು ನನ್ನ ಜನರ ಮೇಲೆ ಇರುವದು; ಇಸ್ರಯೇಲಿನ ಪ್ರಭುಗಳೆಲ್ಲರ ಮೇಲೆ ಇರುವದು; ಕತ್ತಿಯ ಮುಖಾಂತ್ರದಿಂದ ಅಂಜಿಕೆಗಳು ನನ್ನ ಜ
೧೩ ನರ ಮೇಲೆ ಇರುವವು; ಆದದರಿಂದ ತೊಡೆಯ ಮೇಲೆ ಬಡುಕೋ. ನಿಶ್ಚಯವಾಗಿ ಅದು ಪರಿಕ್ಷಿಸಲ್ಪಟ್ಟಿದ್ದೇ; ಮತ್ತು ಬೆತ್ತವು ಸಹ ತಿರಸ್ಕಾರ ಮಾಡಿದರೇನು? ಅದು ಇರದು, ಎಂದು ಕರ್ತನಾದ ಯೆಹೋವ ಅನ್ನುತ್ತಾನೆ. ಆದದರಿಂದ ನೀನು ಮನುಷ್ಯನ ಮಗನೇ,
೧೪ ಕೈಗೆ ಕೈತಟ್ಟಿ, ಪ್ರವಾದಿಸು; ಹತವಾದವರ ಕತ್ತಿಯಾದ ಆ ಕತ್ತಿಯು ಮೂರನ್ನು ಆಗಲಿ; ಅವರ ಕೊಠಡಿಗಳಲ್ಲಿ ಸೇರುವ ಹತವಾದವರ ದೊಡ್ಡ ಕತ್ತಿಯೇ. ಅವರ ಹೃದಯವು ಕುಂದುವ ಹಾ
೧೫ ಗೆಯೂ, ಅವರ ಎಲ್ಲಾ ಬಾಗಲುಗಳಲ್ಲಿ ಬೀಳೋಣವು ಹೆಚ್ಚಾಗುವ ಹಾಗೆಯೂ ಕತ್ತಿಯ ಮೊನೆ ಇಟ್ಟಿದ್ದೇನೆ; ಅಯ್ಯೋ! ಅದು ಥಳಥಳಿಸ ಮಾಡಿ ಆಯಿತು, ಕೊಲೆಗೆ ಹದ ಮಾಡಲ್ಪಟ್ಟಿದೆ.
೧೬ ಯಾವಕಡೆಗಾದರೂ ಹೋಗು, ನಿನ್ನ ಮುಖವು ಯಾವಕಡೆಗೆ ಇಟ್ಟಿದೆಯೋ ಬಲಕಡೆಗಾದರೂ ಎಡಕಡೆಗಾದರೂ ಹೋಗು.
೧೭ ನಾನು ಸಹ ಕೈಗೆ ಕೈ ಕಟ್ಟಿ, ನನ್ನ ಉಗ್ರವನ್ನು ವಿಶ್ರಮಿಸ ಮಾಡುವೆನು, ಕರ್ತನಾದ ನಾನೇ ಅದನ್ನು ಹೇಳಿದ್ದೇನೆ. ಇದಲ್ಲದೆ ಕ
೧೮ ರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ—ಮತ್ತು ನೀನು ಮನುಷ್ಯನ ಮಗನೇ, ಬಾಬೆಲಿನ ಅರಸನ ಕತ್ತಿಯು ಬರುವ ಹಾಗೆ ಎರಡು ಮಾರ್ಗಗಳನ್ನು ನೇಮಿಸಿಕೋ; ಅವೆರಡು ಬಂದೇ ದೇಶಕೊಳಗಿಂದ ಹೊರಡ ಬೇಕು; ಮತ್ತು ಗುರುತನ್ನು ಮಾಡಿಕೋ;
೧೯ ಪಟ್ಟಣದ ಮಾರ್ಗದ ತಲೆಯಲ್ಲಿ ಅದನ್ನು ಮಾಡಿಕೋ, ಅಮ್ಮೋನನ ಮಕ್ಕಳ ರಬ್ಬತಿಗೂ ಕೋಟೆಯುಳ್ಳ ಪಟ್ಟಣವಾದ ಯೆರೂಸಲೇಮಿನಲ್ಲಿರುವ ಯೆಹೂದಕ್ಕೂ ಕತ್ತಿ ಬರುವ ಹಾಗೆ ಮಾರ್ಗ
೨೦ ವನ್ನು ನೇಮಿಸಿಕೋ. ಯಾಕಂದರೆ ಬಾಬೆಲಿನ ಅರಸನು ಮಧ್ಯದಲ್ಲಿ, ಎರಡು ಮಾರ್ಗಗಳ ತಲೆಯಲ್ಲಿ, ಶಕುನಗಳನ್ನು ನೋಡುವದಕ್ಕೆ ನಿಂತನು; ಬಾಣಗಳನ್ನು ಅಲ್ಲಾಡಿಸಿದನು; ಮೂರ್ತಿಗಳ
೨೧ ಹತ್ತಿರ ವಿಚಾರಿಸಿದನು; ಪಿತ್ತ ಜೀಲವನ್ನು ನೋಡಿದನು. ಅವನ ಬಲಕೈಯಲ್ಲಿ ಯೆರೂಸಲೇಮಿಗಾದ ಶಕುನವು ಇತ್ತು; ಬಡಿಯುವ ಆಯುಧಗಳನ್ನಿಟ್ಟು, ಯುದ್ಧ ಕೂಗಿನಿಂದ ಬಾಯಿ ತೆರೆದು, ಆರ್ಭಟದಿಂದ ಶಬ್ದವನ್ನೆತ್ತಿ, ಬಾಗಲುಗಳಿಗೆ ಎದುರಾಗಿ ಬಡಿಯುವ ಆಯುಧಗಳನ್ನಿಟ್ಟು, ಪೊಹರ್ಜೆಯನ್ನು ಹಾಕಿ, ಕೋಟೆ
೨೨ ಯನ್ನು ಕಟ್ಟುವದಕ್ಕಾಗಿಯೇ. ಆದರೆ ಅದು ಅವರಿಗೆ ಸುಳ್ಳು ಶಕುನ ಹಾಗೆ ಕಾಣುವದು, ಮಾಡಿದ ಪ್ರಮಾಣಗಳು ಅವರ ಮೇ



ಲೆ ಉಂಟಲ್ಲ! ಆದರೆ ಅವರು ಹಿಡಿಯಲ್ಪಡುವ ಹಾಗೆ, ಅಕ್ರಮವ
೨೪ ನ್ನು ಜ್ಞಾಪಕ ಪಡಿಸುವನು. ಆದದರಿಂದ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನಿಮ್ಮ ದ್ರೋಹಗಳು ಪ್ರಕಟವಾಗಿ ನಿಮ್ಮ ಕ್ರಿಯೆಗಳೆಲ್ಲೆಲ್ಲಾ ನಿಮ್ಮ ಪಾಪಗಳು ಕಾಣುವ ಹಾಗೆ, ನೀವು ನಿಮ್ಮ ಅಕ್ರಮಗಳನ್ನು ಜ್ಞಾಪಕಕ್ಕೆ ತಂದದರಿಂದ, ನೀವು ಜ್ಞಾಪಕಕ್ಕೆ ಬಂದ ಕಾರಣ, ಕೈಯಿಂದ ಹಿಡಿಯಲ್ಪಡುವಿರಿ.

೨೫ ಮತ್ತು ನೀನೋ, ಭ್ರಷ್ಟ ದುಷ್ಟ ಇಸ್ರಯೇಲಿನ ಪ್ರಭುವೇ! ಅ
೨೬ ಕ್ರಮಕ್ಕೆ ಅಂತ್ಯ ಬರುವಾಗ ನಿನ್ನ ದಿವಸವು ಬಂತು. ಕರ್ತನಾದ ಯೆಹೋವ ಹೇಗೆ ಹೇಳುತ್ತಾನೆ—ಮುಂಡಾಸವನ್ನು ಎತ್ತಿರು, ಕಿರೀಟವನ್ನು ತೆಗೆದು ಹಾಕು; ಇದು ಹೀಗಿರುವದಿಲ್ಲ; ತಗ್ಗಾದವನನ್ನು ಎತ್ತರ ಮಾಡು, ಮತ್ತು ಎತ್ತರವಾದವನನ್ನು ತಗ್ಗಿಸು.
೨೭ ಅದನ್ನು ತಲ್ಲಿ ಬಿಡುವೆ, ತಲ್ಲಿ ಬಿಡುವೆ, ತಲ್ಲಿ ಬಿಡುವೆ; ಹೌದು, ನ್ಯಾಯ ಯಾರದೋ ಅವನು ಬರುವ ಪರ್ಯಂತರ ಇದು ಇರದು, ಅವನಿಗೆ ಅದನ್ನು ಕೊಡುವೆನು; ಮತ್ತು ನೀನು, ಮನುಷ್ಯನ ಮಗನೇ, ಪ್ರವಾದಿಸಿ ಹೇಳ ತಕ್ಕದ್ದೇನಂದರೆ—ಕರ್ತನಾದ ಯೆಹೋವನು ಅಮ್ಮೋನ್ಯರ ವಿಷಯವಾಗಿಯೂ, ಅವರ ನಿಂದೆಯ ವಿಷಯವಾಗಿಯೂ, ಹೀಗೆ ಹೇಳುತ್ತಾನೆ—ಹೌದು, ನೀನು ಹೀಗೆ ಹೇಳು—ಕತ್ತಿ! ಬರೀ ಕತ್ತಿಯೇ! ಥಳಥಳಿಸುವದರಿಂದ ಸಂಹಾ
೨೯ ರ ಮಾಡುವದಕ್ಕೆ ಕೊರೆಗೆ ಮೆರುಗು ಮಾಡಲ್ಪಟ್ಟಿದೆ; ನಿನಗಾಗಿ ಮೋಸವನ್ನು ಕಂಡಿದ್ದಾರೆ, ನಿನಗೆ ಸುಳ್ಳು ಶಕುನ ಹೇಳ್ದಾರೆ; ಹೀಗೆ ನಿನ್ನನ್ನು ಹತವಾದ ದುಷ್ಟರ ಕುತ್ತಿಗೆಗಳ ಮೇಲೆ ತಂದಿದ್ದಾರೆ;
೩೦ ಅವರ ದಿನವು ಬಂತು; ಅಕ್ರಮದ ಅಂತ್ಯಕಾಲವೇ. ಅದನ್ನು ಒರೆಗೆ ತಿರಿಗಿ ಶೇರಿಸುವೆನೋ! ನೀನು ನಿರ್ಮಿಸಲ್ಪಟ್ಟ ಸ್ಥಳದಲ್ಲಿ, ನೀನು ಹುಟ್ಟಿದ ದೇಶದಲ್ಲಿಯೇ, ನಿನಗೆ ನ್ಯಾಯ ತೀರಿಸುವೆನು. ಹೌದು, ನಿನ್ನ ಮೇಲೆ ನನ್ನ ಕೌದ್ರವನ್ನು ಹೋಯಿದು, ನನ್ನ ಉ
೩೧ ಗ್ರದ ಬೆಂಕಿಯಿಂದ ನಿನ್ನ ಮೇಲೆ ಊದಿ, ಕೆಡಿಸುವದರಲ್ಲಿ ಘಟ್ಟಿ
೩೨ ಗರಾದ ಕ್ರೂರ ಜನರ ಕೈಯಲ್ಲಿ ನಿನ್ನನ್ನು ಒಪ್ಪಿಸುವೆನು. ನೀನು ಬೆಂಕಿಗೆ ಸಾದೆಯಾಗುವಿ; ನಿನ್ನ ರಕ್ತವು ದೇಶದ ಮಧ್ಯದಲ್ಲಿ ಇರುವದು; ನೀನು ಇನ್ನು ಮೇಲೆ ಜ್ಞಾಪಕಕ್ಕೆ ಬರುವದಿಲ್ಲ; ಯಾಕಂದರೆ ಯೆಹೋವನಾದ ನಾನೇ ಅದನ್ನು ಹೇಳಿದ್ದೇನೆ.

## ೨೨. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದ
೨ ರೆ—ಮತ್ತು ನೀನು ಮನುಷ್ಯನ ಮಗನೇ, ನ್ಯಾಯ ತೀರಿಸುವಿಯೋ! ರಕ್ತಾಪರಾಧವುಳ್ಳ ಪಟ್ಟಣಕ್ಕೆ ನ್ಯಾಯ ತೀರಿಸುವಿಯೋ!
೩ ಹಾಗಾದರೆ, ಅದರ ಅಸಹ್ಯಗಳನ್ನೆಲ್ಲಾ ಅದಕ್ಕೆ ತಿಳಿಸು. ನೀನು ಹೇಳ ತಕ್ಕದ್ದೇನಂದರೆ—ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಪಟ್ಟಣವು, ಅದರ ಕಾಲ ಬರುವಹಾಗೆ, ತನ್ನ ಮಧ್ಯದಲ್ಲಿ
೪ ರಕ್ತವನ್ನು ಚೆಲ್ಲುತ್ತದೆ; ತನ್ನನ್ನು ಅಶುದ್ಧ ಮಾಡುವ ಹಾಗೆ ತನ್ನಲ್ಲಿ ವಿಗ್ರಹಗಳನ್ನು ಮಾಡಿಕೊಳ್ಳುತ್ತದೆ. ನೀನು ಚೆಲ್ಲಿದ ನಿನ್ನ ರಕ್ತದಿಂದ ನಿನಗೆ ಅಪರಾಧವಾಯಿತು; ನೀನು ಮಾಡಿದ ನಿನ್ನ ವಿಗ್ರಹಗಳಿಂದ ಅಶುದ್ಧವಾದಿ; ನಿನ್ನ ದಿನಗಳನ್ನು ಸಮೀಪ ಮಾಡಿದ್ದೀ; ನಿನ್ನ ವರುಷಗಳಿಗೆ ಮುಟ್ಟಿದ್ದೀ; ಆದದರಿಂದ ನಿನ್ನನ್ನು ಜನಾಂಗಗಳಿಗೆ ನಾಚಿಕೆಯಾಗಿಯೂ ಎಲ್ಲಾ ದೇಶಗಳಿಗೆ ನಿಂದೆಯಾಗಿ
೫ ಯೂ ಮಾಡಿದ್ದೇನೆ. ಅಶುದ್ಧ ಹೆಸರುಳ್ಳವಳೇ, ಬಹಳ ಕಳವಳವುಳ್ಳವಳೇ, ನಿನಗೆ ಹತ್ತರವೂ ದೂರವೂ ಇರುವವರು ನಿನ್ನ
೬ ನ್ನು ನಿಂದಿಸುವರು. ಇಗೋ, ಇಸ್ರಯೇಲಿನ ಪ್ರಭುಗಳು ತಮ್ಮ ತಮ್ಮ ಕೈಬಲಗಾವದ್ದು ರಕ್ತ ಚೆಲ್ಲುವ ಹಾಗೆ ನಿನ್ನಲ್ಲಿ ಇದ್ದರು.
೭ ನಿನ್ನಲ್ಲಿ ತಂದೆಯನ್ನೂ ತಾಯಿಯನ್ನೂ ಅಲಕ್ಷ್ಯ ಮಾಡಿದ್ದಾರೆ, ನಿನ್ನಲ್ಲಿ ಪರನಿಗೆ ಬಲಾತ್ಕಾರವಾಗಿ ನಡಿಸಿದರು, ನಿನ್ನಲ್ಲಿ ದಿಕ್ಕಿಲ್ಲದವನನ್ನೂ ವೆಧವೆಯನ್ನೂ ಪೀಡಿಸಿದರು.
೮ ನೀನು ನನ್ನ ಪರಿಶುದ್ಧವಾದವುಗಳನ್ನು ತಿರಸ್ಕರಿಸಿ, ನನ್ನ ಸಬ್ಬತುಗಳನ್ನು ಅಪವಿತ್ರ
೯ ಮಾಡಿದ್ದೀ. ನಿನ್ನಲ್ಲಿ ರಕ್ತ ಚೆಲ್ಲುವ ಹಾಗೆ ಚಾಡಿ ಹೇಳುವವರು ಇದ್ದಾರೆ; ನಿನ್ನಲ್ಲಿ ಬೆಟ್ಟಗಳ ಮೇಲೆ ಉಣ್ಣುತ್ತಾರೆ; ನಿನ್ನಲ್ಲಿ ದ್ರೋ
೧೦ ಹವನ್ನು ಮಾಡಿದ್ದಾರೆ. ನಿನ್ನಲ್ಲಿ ತಂದೆಯ ನಾಚಿಕೆಯನ್ನು ಬೈಲು ಮಾಡಿದ್ದಾರೆ; ಮುಟ್ಟಾಗಿ ಪ್ರತ್ಯೇಕವಾದವಳನ್ನು ತಗ್ಗಿಸಿದ್ದಾ
೧೧ ರೆ. ಮತ್ತು ಒಬ್ಬನು ತನ್ನ ನೆರೆಯವನ ಹೆಂಡತಿಯ ಸಂಗಡ ಅಸ್ಪೃಶ್ಯನನ್ನು ಮಾಡಿದ್ದಾನೆ. ಮತ್ತೊಬ್ಬನು ತನ್ನ ಸೊಸೆಯನ್ನು ದ್ರೋಹವಾಗಿ ಕೆಡಿಸಿದ್ದಾನೆ; ನಿನ್ನಲ್ಲಿ ಇನ್ನೊಬ್ಬನು ತನ್ನ ತಂದೆ
೧೨ ಯ ಮಗಳಾದ ತನ್ನ ಸಹೋದರಿಯನ್ನು ತಗ್ಗಿಸಿದ್ದಾನೆ. ನಿನ್ನಲ್ಲಿ ರಕ್ತ ಚೆಲ್ಲುವ ಹಾಗೆ ಲಂಚ ತಿಂದಿದ್ದಾರೆ; ಬಡ್ಡಿಯನ್ನೂ ಅದಾಯವನ್ನೂ ತಕ್ಕೊಂಡಿದ್ದೀ; ಬಲಾತ್ಕಾರದಿಂದ ನಿನ್ನ ನೆರೆಯವರಲ್ಲಿ ದುರ್ಲಾಭ ಮಾಡಿಕೊಂಡಿದ್ದೀ; ಮತ್ತು ನನ್ನನ್ನು ಮರೆತು ಬಿಟ್ಟಿದ್ದೀ, ಎಂದು ಕರ್ತನಾದ ಯೆಹೋವ ಅನ್ನುತ್ತಾನೆ.

೧೩ ಆದದರಿಂದ ಇಗೋ ನೀನು ಮಾಡಿದ ನಿನ್ನ ದುರ್ಲಾಭದ ನಿಮಿತ್ತವೂ, ನಿನ್ನಲ್ಲಿರುವ ನಿನ್ನ ರಕ್ತಾಪರಾಧದ ನಿಮಿತ್ತವೂ, ನಾ
೧೪ ನು ಕೈ ಬಡು ಕೊಂಡೆನು. ನಾನು ನಿನ್ನೊಳಗೆ ಕೆಲಸ ನಡಿಸುವ ದಿವಸಗಳಲ್ಲಿ, ನಿನ್ನ ಹೃದಯವು ನಿಲ್ಲುವದೋ! ನಿನ್ನ ಕೈಗಳು ಬಲವಾಗಿರುವವೋ! ಕರ್ತನಾದ ನಾನೇ ಅದನ್ನು ಹೇಳಿದ್ದೇನೆ,
೧೫ ಮತ್ತು ಮಾಡುತ್ತೇನೆ. ಹೌದು, ನಾನು ನಿನ್ನನ್ನು ಜನಾಂಗಗಳಲ್ಲಿ ಚೆದರಿಸಿ, ನಿನ್ನನ್ನು ದೇಶಗಳಲ್ಲಿ ಚೆಲ್ಲುವೆನು, ನಿನ್ನ ಅಶುದ್ಧತ್ವ
೧೬ ವನ್ನು ನಿನ್ನೊಳಗಿಂದ ತೆಗೆದು ಬಿಡುವೆನು. ಆಗ ನೀನು ಜನಾಂಗಗಳ ಮುಂದೆ ನಿನ್ನಲ್ಲಿ ಅಪವಿತ್ರವಾಗುವಿ; ನಾನೇ ಯೆಹೋವನೆಂದು
೧೭ ತಿಳಿಯ ಕೊಳ್ಳುವಿ. ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ
೧೮ ಹೇಳ್ದೇನಂದರೆ—ಮನುಷ್ಯನ ಮಗನೇ, ಇಸ್ರಯೇಲಿನ ಮನೆಯವರು ನನಗೆ ಕಿಟ್ಟದ ಹಾಗಾದರು, ಅವರೆಲ್ಲರು ಒಲೆಯ ಮಧ್ಯದಲ್ಲಿರುವ ಹಿತ್ತಾಳೆಯೂ ತಗರವೂ ಕಬ್ಬಿಣವೂ ಪೀಸವೂ; ಅವರು
೧೯ ಬೆಳ್ಳಿಯ ಕಿಟ್ಟವಾಗಿದ್ದಾರೆ. ಆದದರಿಂದ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನೀವೆಲ್ಲರೂ ಕಿಟ್ಟವಾಗಿರುವದರಿಂದ ಇಗೋ ನಾನು ನಿಮ್ಮನ್ನು ಯೆರೂಸಲೇಮಿನ ಮಧ್ಯಕ್ಕೆ ಕೂಡಿಸು
೨೦ ತ್ತೇನೆ. ಅವರು ಬೆಳ್ಳಿ ಹಿತ್ತಾಳೆ ಕಬ್ಬಿಣ ಪೀಸ ತಗರಗಳನ್ನು ಹ್ಯಾಗೆ ಒಲೆಯೊಳಗೆ ಕೂಡಿಸಿ ಅದಕ್ಕೆ ಬೆಂಕಿಯನ್ನೂದಿ ಕರಗಿಸುತ್ತಾರೋ ಹಾಗೆ ನಾನು ನನ್ನ ಕೋಪದಲ್ಲಿಯೂ ನನ್ನ ಉಗ್ರ
೨೧ ದಲ್ಲಿಯೂ ನಿಮ್ಮನ್ನು ಕೂಡಿಸಿ ಕರಗಿಸಿ ಬಿಡುವೆನು. ಹೌದು, ನಿಮ್ಮನ್ನು ಕೂಡಿಸಿ ನನ್ನ ಕೌದ್ರದ ಬೆಂಕಿಯಿಂದ ನಿಮ್ಮ ಮೇಲೆ
೨೨ ಊದುವೆನು; ಆಗ ಅದರೊಳಗೆ ನೀವು ಕರಗಿ ಹೋಗುವಿರಿ. ಬೆಳ್ಳಿಯು ಒಲೆಯ ಮಧ್ಯದಲ್ಲಿ ಹ್ಯಾಗೆ ಕರಗುತ್ತದೆಯೋ ಹಾಗೆಯೇ ನೀವು ಅದರ ಮಧ್ಯದಲ್ಲಿ ಕರಗುವಿರಿ, ಮತ್ತು ಕರ್ತನಾದ ನಾನೇ ನನ್ನ ಉಗ್ರವನ್ನು ನಿಮ್ಮ ಮೇಲೆ ಹೊಯಿದಿದ್ದೇನೆಂದು ತಿ

೨೩ ಳಿಯುವರಿ. ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿ
೨೪ ದ್ದೇನಂದರೆ—ಮನುಷ್ಯನ ಮಗನೇ, ಅದಕ್ಕೆ ಹೀಗ ಹೇಳು—ಶು
ದ್ಧರಾಗದಂಥ, ಕಾದ್ರದ ದಿವಸದಲ್ಲಿ ಮಳೆ ಸುರಿಯದಂಥ, ದೇಶ
೨೫ ವು ನೀನೇ. ಕೊಳ್ಳೆಯನ್ನು ಹರಕೊಳ್ಳುವ ಘರ್ಜಿಸುವ ಸಿಂಹ
ದ ಹಾಗೆ ಅದರ ಮಧ್ಯದಲ್ಲಿ ಅದರ ಪ್ರವಾದಿಗಳ ಒಳಸಂಚು
ಉಂಟು, ಪ್ರಾಣಗಳನ್ನು ತಿಂದು ಬಿಟ್ಟಿದ್ದಾರೆ, ದ್ರವ್ಯವನ್ನೂ
ಬೆಲೆಯುಳ್ಳದ್ದನ್ನೂ ತಕ್ಕೊಂಡಿದ್ದಾರೆ; ಅದರ ವಿಧವೆಗಳನ್ನು
೨೬ ಅದರ ಮಧ್ಯದಲ್ಲಿ ಹೆಚ್ಚಿಸಿದ್ದಾರೆ. ಅದರ ಯಾಜಕರು ನನ್ನ
ನ್ಯಾಯಪ್ರಮಾಣಕ್ಕೆ ಬಲಾತ್ಕಾರ ಮಾಡಿದ್ದಾರೆ; ನನ್ನ ಪರಿ
ಶುದ್ಧವಾದವುಗಳನ್ನು ಅಪವಿತ್ರ ಮಾಡಿದ್ದಾರೆ, ಪರಿಶುದ್ಧವಾದ
ದ್ದಕ್ಕೂ ಅಪವಿತ್ರವಾದದ್ದಕ್ಕೂ ಹೆಚ್ಚು ಕಡಿಮೆ ಮಾಡಲಿಲ್ಲ.
ಹೊಲೆಯಾದದ್ದಕ್ಕೂ ಶುದ್ಧವಾದದ್ದಕ್ಕೂ ವ್ಯತ್ಯಾಸ ತೋರಿಸ
ಲಿಲ್ಲ; ನನ್ನ ಸಬ್ಬತುಗಳಿಗೆ ತಮ್ಮ ಕಣ್ಣುಗಳನ್ನು ಮರೆ
೨೭ ಮಾಡಿದ್ದಾರೆ; ನಾನೇ ಅವರಲ್ಲಿ ಅಪವಿತ್ರವಾದೆನು. ಅದರಲ್ಲಿ
ರುವ ಅದರ ಪ್ರಧಾನರು ರಕ್ತ ಚಲ್ಲುವದರಲ್ಲಿಯೂ ಪ್ರಾಣಗಳ
ನ್ನು ನಾಶನ ಮಾಡುವದರಲ್ಲಿಯೂ ದುರ್ಲಾಭ ಸಂಪಾದಿಸುವ
೨೮ ದರಲ್ಲಿಯೂ ಕೊಳ್ಳೆಯನ್ನು ಹರಕೊಳ್ಳುವ ತೋಳಗಳ ಹಾಗೆ
ಇದ್ದಾರೆ. ಅದರ ಪ್ರವಾದಿಗಳು ಅವರಿಗೆ ಸುಣ್ಣ ಹಚ್ಚುತ್ತಾರೆ;
ಮೋಸವನ್ನು ದರ್ಶಿಸಿ, ಸುಳ್ಳು ಶಕುನ ಹೇಳುತ್ತಾರೆ; ಕರ್ತನು
ಮಾತಾಡದೆ ಇರಲಾಗಿ ಕರ್ತನಾದ ಯೆಹೋವ ಹೀಗೆ ಹೇಳು
೨೯ ತ್ತಾನೆಂದು ಹೇಳುತ್ತಾರೆ. ದೇಶದ ಜನರು ಬಲಾತ್ಕಾರ ಮಾಡಿದ್ದಾ
ರೆ, ಕೊಳ್ಳೆಯಿಡುವದನ್ನು ನಡಿಸಿದ್ದಾರೆ—ಬಡವನನ್ನೂ ದರಿದ್ರ
ನನ್ನೂ ಪೀಡಿಸಿದ್ದಾರೆ; ಹೌದು ಪರನಿಗೆ ನ್ಯಾಯವಿಲ್ಲದೆ ಬಲಾ
೩೦ ತ್ಕಾರ ಮಾಡಿದ್ದಾರೆ. ಬೇಲಿ ಕಟ್ಟುವ ಮನುಷ್ಯನನ್ನು, ದೇಶ
ಕ್ಕೋಸ್ಕರ ನಾನು ಅದನ್ನು ನಾಶ ಮಾಡದ ಹಾಗೆ ಹರಕಿನಲ್ಲಿ
೩೧ ನಿಲ್ಲುವವನನ್ನು, ಹುಡುಕಿದನು, ಆದರೆ ಶಿಕ್ಕಲಿಲ್ಲ. ಆದದರಿಂದ
ನನ್ನ ಕೌದ್ರವನ್ನು ಅವರ ಮೇಲೆ ಹೊಯಿದಿದ್ದೇನೆ, ನನ್ನ
ಶಿಟ್ಟಿನ ಬೆಂಕಿಯಿಂದ ಅವರನ್ನು ಸಂಹರಿಸಿದ್ದೇನೆ; ಅವರ ಮಾರ್ಗ
ವನ್ನು ಅವರ ತಲೆಗಳ ಮೇಲೆ ಸಲ್ಲಿಸಿದ್ದೇನೆಂದು ಕರ್ತನಾದ
ಯೆಹೋವ ಅನ್ನುತ್ತಾನೆ.

## ೨೩. ಸಂಧಿ.

೧ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದ
೨ ರೆ—ಮನುಷ್ಯನ ಮಗನೇ, ಒಬ್ಬಳೇ ತಾಯಿಯ ಕುಮಾರ್ತೆಗ
3 ಳಾದ ಇಬ್ಬರು ಸ್ತ್ರೀಯರು ಇದ್ದರು; ಅವರು ಐಗುಪ್ತದಲ್ಲಿ ಸೂಳೆ
ತನಗಳನ್ನು ಮಾಡಿದರು; ಅವರ ಯೌವ್ವನ ಕಾಲದಲ್ಲಿ ಸೂಳೆ
ತನಗಳನ್ನು ಮಾಡಿದರು; ಅಲ್ಲಿ ಅವರ ಪೊಲೆಗಳು ಅದುಮಲ್ಪ
೪ ಟ್ಟವು, ಅಲ್ಲಿ ಅವರ ಕನ್ಯತ್ವದ ಸ್ತನಗಳು ಒತ್ತಲ್ಪಟ್ಟವು. ಅವ
ರ ಹೆಸರುಗಳು ಇವೇ—ದೊಡ್ಡವಳಿದು ಅಹೋಲ, ಅವಳ ತಂಗಿ
ಯದು ಅಹೋಲಿಬ; ಅವರು ನನ್ನವರಾಗಿದ್ದು, ಕುಮಾರ ಕುಮಾ
ರ್ತೆಗಳನ್ನು ಹೆತ್ತರು. ಅವರ ಹೆಸರುಗಳು ಹೀಗೆ—ಅಹೋಲ
ಎಂಬವಳು ಸಮಾರ್ಯವು, ಅಹೋಲಿಬ ಎಂಬವಳು ಯೆರೂಸ
೫ ಲೇಮು. ಮತ್ತು ಅಹೋಲಳು ನನ್ನ ವಕವಾಗಿರುವಾಗ ಸೂಳೆತ
ನ ಮಾಡಿದಳು; ಅವಳು ರಕ್ತಾಂಬರ ಧರಿಸಿದಂಥ, ಸೈನ್ಯಾಧಿಪತಿ
೬ ಗಳೂ, ಅಧಿಕಾರಸ್ತರೂ, ಎಲ್ಲರು ಅಪೇಕ್ಷಿಸ ತಕ್ಕ ಯೌವನಸ್ಥ
ರೂ, ಕುದುರೆಗಳ ಮೇಲೆ ಸವಾರಿ ಮಾಡುವ ರಾಹುತರೂ, ಆ
ದಂಥ, ತನ್ನ ಪ್ರಿಯರನ್ನು, ಅಂದರೆ, ತನ್ನ ನೆರೆಯವರಾದ ಅ
೭ ಶ್ಯೂರ್ಯರನ್ನು ಮೋಹಿಸಿದಳು. ಹೌದು, ಅವರ ಸಂಗತ, ಅ
ಶ್ಯೂರಿನ ಕುಮಾರರಲ್ಲಿ ಉತ್ತಮರೆಲ್ಲರ ಸಂಗತ, ತಾನು ಮೋಹಿ
ಸಿದ ಎಲ್ಲರ ಸಂಗತ, ತನ್ನ ಸೂಳೆತನಗಳನ್ನು ನಡಿಸಿದಳು; ಅವರ
೮ ವಿಗ್ರಹಗಳಿಂದ ಅಪವಿತ್ರವಾದಳು. ಐಗುಪ್ತದಿಂದ ತಂದ ತನ್ನ ಸೂ
ಳೆತನಗಳನ್ನು ಅವಳು ಬಿಡಲಿಲ್ಲ; ಯಾಕಂದರೆ ಅವಳ ಯೌವ್ವ
ನತ್ವದಲ್ಲಿ ಅವಳ ಸಂಗತ ಮಲಗಿದರು, ಅವಳ ಕನ್ಯತ್ವದ ಸ್ತನಗಳ
ನ್ನು ಒತ್ತಿ, ತಮ್ಮ ಸೂಳೆತನಗಳನ್ನು ಅವಳ ಮೇಲೆ ಹೊಯಿದ
೯ ರು. ಆದದರಿಂದ ನಾನು ಅವಳನ್ನು, ಅವಳ ಪ್ರಿಯರ ಕೈಯಲ್ಲಿ, ಅ
೧೦ ವಳು ಮೋಹಿಸಿದ ಅಶ್ಯೂರ್ಯರ ಕೈಯಲ್ಲಿ, ಒಪ್ಪಿಸಿದ್ದೇನೆ. ಇವ
ರು ಅವಳ ನಾಚಿಕೆಯನ್ನು ಬೈಲು ಮಾಡಿದರು, ಅವಳ ಕುಮಾರ
ರನ್ನೂ ಅವಳ ಕುಮಾರ್ತೆಗಳನ್ನೂ ತಕ್ಕೊಂಡು, ಅವಳನ್ನು ಕತ್ತಿ
ಯಿಂದ ಕೊಂದು ಹಾಕಿದರು; ಮತ್ತು ಸ್ತ್ರೀಯರಲ್ಲಿ ಹೆಸರ್ಗೊಂಡ
ವಳಾದಳು; ಯಾಕಂದರೆ ಅವಳಲ್ಲಿ ನ್ಯಾಯಗಳನ್ನು ತೀರಿಸಿದರು.

೧೧ ಇದನ್ನೆಲ್ಲಾ ಅವಳ ಸಹೋದರಿಯಾದ ಅಹೋಲಿಬಳು ಕಂಡ
ರೂ, ತನ್ನ ಮೋಹದಲ್ಲಿ ಅವಳಿಗಿಂತಲೂ, ತನ್ನ ಸೂಳೆತನಗಳ
ಲ್ಲಿ ತನ್ನ ಸಹೋದರಿಯ ಸೂಳೆತನಗಳಿಗಿಂತಲೂ, ಕೆಟ್ಟವಳಾದ
೧೨ ಳು. ತನ್ನ ನೆರೆಯವರಾದ ಅಶ್ಯೂರಿನ ಕುಮಾರರನ್ನು, ಸೈನ್ಯಾ
ಧಿಪತಿಗಳೂ ಅಧಿಕಾರಸ್ತರೂ ಅದಂಥ, ಗಂಭೀರವಾಗಿ ಧರಿಸಲ್ಪ
ಟ್ಟು, ಕುದುರೆಗಳ ಮೇಲೆ ಸವಾರಿ ಮಾಡುವ ರಾಹುತರಾಗಿಯೂ,
ಎಲ್ಲರು ಅಪೇಕ್ಷಿಸ ತಕ್ಕ ಯೌವ್ವನಸ್ಥರಾಗಿಯೂ, ಇರುವಂಥ,
೧೩ ಅವರನ್ನು ಮೋಹಿಸಿದಳು. ಆಗ ಅಪವಿತ್ರವಾದಳೆಂದು ನೋಡಿ
೧೪ ದೆನು, ಅವರಿಬ್ಬರಿಗೆ ಒಂದೇ ಮಾರ್ಗ. ಹೌದು, ತನ್ನ ಸೂಳೆತ
ನಗಳನ್ನು ಹೆಚ್ಚಿಸಿದಳು; ಹ್ಯಾಗಂದರೆ, ಗೋಡೆಯ ಮೇಲೆ ಬರೆ
ಯಲ್ಪಟ್ಟ ಮನುಷ್ಯರನ್ನು, ಇಂಗಲೀಕದಿಂದ ಬರೆಯಲ್ಪಟ್ಟ ಕ
೧೫ ಸ್ದೀಯರ ರೂಪಗಳನ್ನು, ತಮ್ಮ ನಡುವುಗಳಲ್ಲಿ ದಟ್ಟಿಗಳನ್ನು ಕ
ಟ್ಟಿಕೊಂಡಂಥ, ತಮ್ಮ ತಲೆಗಳಲ್ಲಿ ಅಲಂಕಾರವಾದ ರುಮಾಲೆಗಳು
ಳ್ಳಂಥ, ಎಲ್ಲರು ನೋಟದಲ್ಲಿ, ಅವರ ಜನ್ಮ ದೇಶವಾದ ಕಸ್ದೀ
ಯಕ್ಕೆ ಕೇರಿದ ಬಾಬೆಲಿನ ಕುಮಾರರ ಹಾಗೆ ಯುದ್ಧಶಾಲಿಗಳಾ
೧೬ ದಂಥ, ಅವರನ್ನು ಅವಳು ನೋಡುವಾಗ, ಹೌದು, ಅವರನ್ನು
ತನ್ನ ಕಣ್ಣುಗಳಿಂದ ನೋಡುವಾಗಲೇ, ಅವರನ್ನು ಮೋಹಿಸಿ, ಕ
೧೭ ಸ್ದೀಯರ್ಕ್ಕೆ ಅವರ ಬಳಿಗೆ ದೂತರನ್ನು ಕಳುಹಿಸಿದಳು. ಆಗ ಬಾ
ಬೆಲಿನ ಕುಮಾರರು ಪ್ರೀತಿಯ ಹಾಸಿಗೆಯ ಮೇಲೆ ಅವಳ ಬಳಿಗೆ
ಬಂದು, ತಮ್ಮ ಸೂಳೆತನದಿಂದ ಅವಳನ್ನು ಅಪವಿತ್ರ ಮಾಡಿದರು;
ಮತ್ತು ಅವರಿಂದ ಅಪವಿತ್ರವಾದ ಮೇಲೆ ಅವಳ ಮನಸ್ಸು ಅವರ
೧೮ ಕಡೆಯಿಂದ ಅಗಲಿ ಹೋಯಿತು. ಹೀಗೆ ಅವಳ ಸೂಳೆತನಗಳ
ನ್ನು ಬೈಲು ಮಾಡಿದಳು, ಹೌದು, ಅವಳ ನಾಚಿಕೆಯನ್ನು ಬೈ
ಲು ಮಾಡಿದಳು; ಆಗ ನನ್ನ ಮನಸ್ಸು ಅವಳ ಸಹೋದರಿಯ
ಕಡೆಯಿಂದ ಅಗಲಿ ಹೋದ ಹಾಗೆಯೇ ನನ್ನ ಮನಸ್ಸು ಅವಳ
೧೯ ಕಡೆಯಿಂದ ಅಗಲಿ ಹೋಯಿತು. ಆದರೂ ಅವಳು ಐಗುಪ್ತ ದೇ
ಶದಲ್ಲಿ ಸೂಳೆತನ ಮಾಡಿದ ತನ್ನ ಯೌವ್ವನದ ದಿವಸಗಳನ್ನು
೨೦ ಜ್ಞಾಪಕ ಮಾಡಿಕೊಂಡು, ತನ್ನ ಸೊಳೆತನಗಳನ್ನು ಹೆಚ್ಚಿಸಿದಳು.
ಹ್ಯಾಗಂದರೆ, ಕತ್ತೆಗಳ ಮಾಂಸದಂತೆ ಮಾಂಸವುಳ್ಳವರಾಗಿ
ಯೂ, ಕುದುರೆಗಳ ವೀರ್ಯದಂತೆ ವೀರ್ಯವುಳ್ಳವರಾಗಿಯೂ,



೨೧ ಇರುವ ತನ್ನ ಮಿಂಡರನ್ನು ಮೋಹಿಸಿದಳು. ಹೀಗೆ, ಐಗುಪ್ತ್ಯರು,
ನಿನ್ನ ಯೌವ್ವನದ ಪೊಲೆಗಳಿಗಾಗಿ, ನಿನ್ನ ಸ್ತನಗಳನ್ನು ಒತ್ತಿ
ದರಿಂದಾದ ನಿನ್ನ ಯೌವ್ವನದ ದುಷ್ಕರ್ಮವನ್ನು ಮನಸ್ಸಿಗೆ ತ
ರಿಸಿದ್ದೀ.
೨೨ ಆದದರಿಂದ ಓ ಅಹೋಲಿಬಳೇ, ಕರ್ತನಾದ ಯೆಹೋವ
ಹೀಗೆ ಹೇಳುತ್ತಾನೆ—ಇಗೋ, ನಾನು ನಿನ್ನ ಪ್ರಿಯರನ್ನು, ಯಾ
ರಿಂದ ನಿನ್ನ ಮನಸ್ಸು ಅಗಲಿ ಹೋಯಿತೋ ಅವರನ್ನು ನಿನಗೆ
ವಿರೋಧವಾಗಿ ಎಬ್ಬಿಸುತ್ತೇನೆ, ಸಕಲ ಕಡೆಯಿಂದ ಅವರನ್ನು ನಿ
ನಗೆ ವಿರೋಧವಾಗಿ ತರಿಸುತ್ತೇನೆ; ಯಾರಂದರೆ, ಬಾಬೆಲಿನ ಕು
೨೩ ಮಾರರೂ, ಕಸ್ದೀಯರೆಲ್ಲರೂ, ಪಿಕೋದ್, ಕೋಯ, ಕೋಯ,
ಇವರ ಸಂಗತ ಅಶ್ಯೂರಿನ ಕುಮಾರರೆಲ್ಲರೂ ಇವರನ್ನೇ; ಅವ
ರೆಲ್ಲರು ಅಪೇಕ್ಷಿಸ ತಕ್ಕ ಯೌವ್ವನಸ್ಥರೂ ಸೈನ್ಯಾಧಿಪತಿಗಳೂ
ಅಧಿಕಾರಸ್ತರೂ ಯುದ್ಧ ಶಾಲಿಗಳೂ ಖ್ಯಾತಿ ಹೊಂದಿದವರೂ ಎ
೨೪ ಲ್ಲರು ಕುದುರೆಗಳ ಮೇಲೆ ಸವಾರಿ ಮಾಡುವವರೇ. ಅವರು ರಥಗ
ಳ ಸಂಗಡಲೂ, ಥಂಡಿಗಳ ಸಂಗಡಲೂ, ಜನಗಳ ಸಮೂಹದ ಸಂ
ಗಡಲೂ, ಬಲವುಳ್ಳವರಾಗಿ ನಿನಗೆ ವಿರೋಧವಾಗಿ ಬರುವರು; ಸು
ತ್ತಲು ಪೇಡ್ಯವನ್ನೂ ಗುರಾಣಿಯನ್ನೂ ಶಿರಸ್ತ್ರಾಣವನ್ನೂ ನಿನ
ಗೆ ವಿರೋಧವಾಗಿ ಇರಿಸುವರು; ಇದಲ್ಲದೆ ನಾನು ಅವರ ಮುಂದೆ
ನ್ಯಾಯವನ್ನು ಇಡುವೆನು, ಮತ್ತು ಅವರು ತಮ್ಮ ನ್ಯಾಯಗಳ
೨೫ ಪ್ರಕಾರ ನಿನಗೆ ನ್ಯಾಯ ತೀರಿಸುವರು. ಇದಲ್ಲದೆ ನನ್ನ ಕೋಪ
ವನ್ನು ನಿನಗೆ ವಿರೋಧವಾಗಿ ಇಡುವೆನು, ಮತ್ತು ಉಗ್ರದಲ್ಲಿ ನಿನ್ನ
ವಿಷಯ ನಡಿಯುವರು; ನಿನ್ನ ಮೂಗನ್ನೂ ನಿನ್ನ ಕಿವಿಗಳನ್ನೂ
ತೆಗೆದು ಹಾಕುವರು; ನಿನ್ನ ಉಳಿವು ಕತ್ತಿಯಿಂದ ಬೀಳುವದು;
ನಿನ್ನ ಕುಮಾರರನ್ನೂ ನಿನ್ನ ಕುಮಾರ್ತೆಗಳನ್ನೂ ತಕ್ಕೊಳ್ಳು
೨೬ ವರು; ನಿನ್ನ ಉಳಿವು ಬೆಂಕಿಯಿಂದ ತಿನ್ನಲ್ಪಡುವದು. ಇದಲ್ಲದೆ
ನಿನ್ನ ವಸ್ತ್ರಗಳನ್ನು ತೆಗೆದು ಬಿಟ್ಟು, ನಿನ್ನ ಸೌಂದರ್ಯವಾದ ಒಡಿ
ವೆಗಳನ್ನು ತಕ್ಕೊಳ್ಳುವರು.
೨೭ ಹೀಗೆ ನಿನ್ನ ದುಷ್ಕರ್ಮವನ್ನೂ, ಐಗುಪ್ತ ದೇಶದಿಂದಾದ
ನಿನ್ನ ಸೂಳೆತನವನ್ನೂ ನಿನ್ನೊಳಗಿಂದ ನಿಲ್ಲಿಸಿ ಬಿಡುವೆನು; ನೀನು
ಇನ್ನು ನಿನ್ನ ಕಣ್ಣುಗಳನ್ನು ಅವುಗಳಿಗೆ ಎತ್ತದೆ, ಐಗುಪ್ತವನ್ನು
೨೮ ಜ್ಞಾಪಕ ಮಾಡಿಕೊಳ್ಳದೆ ಇರುವಿ. ಯಾಕಂದರೆ, ಕರ್ತನಾದ
ಯೆಹೋವ ಹೀಗೆ ಹೇಳುತ್ತಾನೆ—ಇಗೋ, ನೀನು ಹಗೆ ಮಾಡು
ವವರ ಕೈಯಲ್ಲಿಯೂ, ಯಾರ ಕಡೆಯಿಂದ ನಿನ್ನ ಮನಸ್ಸು ಅ
ಗಲಿ ಹೋಯಿತೋ ಅವರ ಕೈಯಲ್ಲಿಯೂ, ನಿನ್ನನ್ನು ಒಪ್ಪಿಸು
೨೯ ತ್ತೇನೆ. ಅವರು ನಿನ್ನ ವಿಷಯ ಹಗೆಯಾಗಿ ನಡಿಯುವರು; ನಿನ್ನ
ಕಷ್ಟಾರ್ಜಿತವನ್ನು ತಕ್ಕೊಂಡು, ನಿನ್ನನ್ನು ಬೆತ್ತಲೆಯಾಗಿಯೂ,
ಬರೀಯವಳಾಗಿಯೂ, ಬಿಡುವರು; ಆಗ ನಿನ್ನ ಸೂಳೆತನಗಳೂ,
ನಿನ್ನ ದುಷ್ಕರ್ಮವೂ, ನಿನ್ನ ಜಾರತ್ವಗಳೂ, ಪ್ರಕಟವಾಗುವವು.
೩೦ ನೀನು ಜನಾಂಗಗಳ ಹಿಂದೆ ಸೂಳೆತನ ಮಾಡಿದ್ದರಿಂದಲೂ, ಅವ
ರ ವಿಗ್ರಹಗಳಿಂದ ನಿನ್ನನ್ನು ಅಪವಿತ್ರ ಮಾಡಿಕೊಂಡದರಿಂದ
೩೧ ಲೂ, ಇವುಗಳನ್ನು ನಿನಗೆ ಮಾಡುತ್ತೇನೆ. ನಿನ್ನ ಸಹೋದರಿಯ
ಮಾರ್ಗವಾಗಿ ನಡಿದಿದ್ದೀ; ಆದದರಿಂದ ಅವಳ ಪಾತ್ರೆಯನ್ನು
೩೨ ನಿನ್ನ ಕೈಯಲ್ಲಿ ಕೊಡುತ್ತೇನೆ. ಕರ್ತನಾದ ಯೆಹೋವ ಹೀಗೆ
ಹೇಳುತ್ತಾನೆ—ನಿನ್ನ ಸಹೋದರಿಯ ಆಳವಾದ ದೊಡ್ಡ ಪಾತ್ರೆಯ
ಲ್ಲಿ ಕುಡಿಯುವಿ; ಹಾಸ್ಯಕ್ಕೂ ನಿಂದೆಗೂ ಗುರಿಯಾಗುವಿ; ಅದ
೩೩ ರಲ್ಲಿ ಬಹಳ ಉಂಟು. ಲಾಹರಿಯಿಂದಲೂ ದುಃಖದಿಂದಲೂ ತುಂ
ಬಿರುವಿ; ವಿಸ್ತ್ರಯವೂ ನಾಶನವೂ ಉಳ್ಳ ಪಾತ್ರೆಯಾದ ನಿನ್ನ
೩೪ ಸಹೋದರಿಯಾದ ಸಮಾರ್ಯದ ಪಾತ್ರೆಯಿಂದೇ. ನೀನು
ಅದನ್ನು ಕುಡಿದು, ಹೀರಿ ಕೊಂಡು, ಅದರ ಬೋಳಿಕಗಳನ್ನು ಅ
ಗಿದು, ನಿನ್ನ ಮೊಲೆಗಳನ್ನು ಕಿತ್ತುಕೊಳ್ಳುವಿ; ಯಾಕಂದರೆ ನಾ
೩೫ ನೇ ಅದನ್ನು ಹೇಳಿದ್ದೇನೆಂದು, ಕರ್ತನಾದ ಯೆಹೋವ ಅನ್ನು
ತ್ತಾನೆ. ಆದದರಿಂದ ಕರ್ತನಾದ ಯೆಹೋವ ಹೀಗೆ ಹೇಳುತ್ತಾ
ನೆ—ನೀನು ನನ್ನನ್ನು ಮರೆತು ಬಿಟ್ಟು, ನನ್ನನ್ನೂ ನಿನ್ನ ಬೆನ್ನಿನ
ಹಿಂದಕ್ಕೆ ಹಾಕಿದ ಕಾರಣ, ನಿನ್ನ ದುಷ್ಕರ್ಮವನ್ನೂ ನಿನ್ನ
ಸೂಳೆತನಗಳನ್ನೂ ಹೊತ್ತುಕೋ.
೩೬ ಇದಲ್ಲದೆ ಕರ್ತನು ನನಗೆ ಹೇಳಿದ್ದೇನಂದರೆ—ಮನುಷ್ಯನ ಮ
ಗನೇ, ಅಹೋಲಳಿಗೂ ಅಹೋಲಿಬಳಿಗೂ ನ್ಯಾಯ ತೀರಿಸು
೩೭ ವಿಯೋ? ಅವರ ಅಸಹ್ಯಗಳನ್ನು ಅವರಿಗೆ ತಿಳಿಸು. ಹ್ಯಾಗಂದ
ರೆ, ವ್ಯಭಿಚಾರ ಮಾಡಿದ್ದಾರೆ, ರಕ್ತವು ಅವರ ಕೈಗಳಲ್ಲಿ ಇದೆ;
ಹೌದು,ಅವರ ವಿಗ್ರಹಗಳಿಂದ ವ್ಯಭಿಚಾರ ಮಾಡಿದಾರೆ; ಮತ್ತು
ನನಗೆ ಹೆತ್ತ ಅವರ ಮಕ್ಕಳನ್ನೂ, ಅವರು ಸುಟ್ಟು ಹೋಗುವ
೩೮ ಹಾಗೆ, ಬೆಂಕಿಯನ್ನು ದಾಟಿಸಿದ್ದಾರೆ. ಇದಲ್ಲದೆ, ಇದನ್ನು ನನಗೆ
ಮಾಡಿದ್ದಾರೆ, ಏನಂದರೆ—ನನ್ನ ಪರಿಶುದ್ಧ ಸ್ಥಳವನ್ನೂ ಆ ದಿನದ
ಲ್ಲಿ ಅಪವಿತ್ರ ಮಾಡಿ, ನನ್ನ ಸಬ್ಬತುಗಳನ್ನು ಕೆಡಿಸಿದ್ದಾರೆ. ಹ್ಯಾ
೩೯ ಗಂದರೆ, ತಮ್ಮ ಮಕ್ಕಳನ್ನು ತಮ್ಮ ವಿಗ್ರಹಗಳೋಸ್ಕರ ಕೊಂ
ದು ಹಾಕಿದ ಮೇಲೆ, ಅದೇ ದಿನದಲ್ಲಿ ನನ್ನ ಪರಿಶುದ್ಧ ಸ್ಥಳದಲ್ಲಿ,
ಅದನ್ನು ಕೆಡಿಸುವದಕ್ಕೆ, ಬಂದರು; ಇಗೋ ನನ್ನ ಮನೆಯ ಮ
೪೦ ಧ್ಯದಲ್ಲಿ ಹೀಗೆ ಮಾಡಿದ್ದಾರೆ. ಇದಲ್ಲದೆ ದೂತನನ್ನು ಕಳುಹಿಸಿ,
ದೂರದಿಂದ ಬರ ಬೇಕೆಂದು ಮನುಷ್ಯರನ್ನು ಕರೆ ಕಳುಹಿಸಿದ
ರು; ಮತ್ತು ಇಗೋ ಬಂದರು; ಆಗ ಅವರೋಸ್ಕರ ನಿನ್ನನ್ನು
ಸ್ನಾನ ಮಾಡಿಕೊಂಡು, ನಿನ್ನ ಕಣ್ಣುಗಳಿಗೆ ಕಾಡಿಗೆಯನ್ನು ಹ
ಚ್ಚಿ, ಆಭರಣಗಳಿಂದ ನಿನ್ನನ್ನು ಅಲಂಕರಿಸಿ ಕೊಂಡಿ. ಮತ್ತು
೪೧ ಮಹಿಮೆಯುಳ್ಳ ಮಂಚದ ಮೇಲೆ ಕೂತು ಕೊಂಡಿ; ಅದರ ಮುಂ
ದೆ ನನ್ನ ಧೂಪವೂ ನನ್ನ ಎಣ್ಣೆಯೂ, ಇರಿಸಲ್ಪಟ್ಟ ಮೇಜು ಸಿ
ದ್ಧ ಮಾಡಲ್ಪಟ್ಟಿತು. ಮತ್ತು ಅವಳ ಸಂಗತ ಸುಖವುಳ್ಳ ಸಮೂ
ಹದ ಶಬ್ದವು ಇತ್ತು; ಮತ್ತು ಸಾಧಾರಣ ಮನುಷ್ಯರ ಸಂಗತ ಅ
ರಣ್ಯದಿಂದ ಸಿಬಾಯರು ಕರ ತರಲ್ಪಟ್ಟರು; ಇವರು ತಮ್ಮ ಕೈಗಳ
ಮೇಲೆ ಕಡಗಗಳನ್ನೂ ತಮ್ಮ ತಲೆಗಳ ಮೇಲೆ ಶೃಂಗಾರವಾದ ಕಿ
೪೨ ರೀಟಗಳನ್ನೂ ಇಟ್ಟರು. ಆಗ ನಾನು ವ್ಯಭಿಚಾರಗಳಿಂದ ಸವಿದು
ಹೋದವಳ ವಿಷಯ—ಈಗ ಅವರು ಅವಳ ಸಂಗತ, ಅವಳು ಅ
೪೩ ವರ ಸಂಗತ ಸಹ, ಸೂಳೆತನಗಳನ್ನು ಮಾಡುವಳೋ? ಅಂದೆನು.
ಹೌದು, ಸೂಳೆಯಾದ ಸ್ತ್ರೀಯ ಬಳಿಗೆ ಹೋಗುವ ಪ್ರಕಾರ, ಅವಳ
ಬಳಿಗೆ ಹೋದರು; ಹಾಗೆಯೇ ದುಷ್ಕರ್ಮವುಳ್ಳ ಸ್ತ್ರೀಯರಾದ ಅ
ಹೋಲಳ ಬಳಿಗೂ, ಅಹೋಲಿಬಳ ಬಳಿಗೂ, ಹೋದರು. ಆದ
೪೪ ದರಿಂದ ನೀತಿಯುಳ್ಳ ಮನುಷ್ಯರು ಅವರಿಗೆ, ವ್ಯಭಿಚಾರಿಗಳ
ನ್ಯಾಯ ತೀರ್ವಿಕೆಯಿಂದಲೂ, ರಕ್ತ ಚೆಲ್ಲುವವರ ನ್ಯಾಯ ತೀ
ರ್ವಿಕೆಯಿಂದಲೂ, ನ್ಯಾಯ ತೀರಿಸುವರು; ಯಾಕಂದರೆ, ಅವರು
ವ್ಯಭಿಚಾರಿಗಳೇ, ಹೌದು, ಅವರ ಕೈಗಳಲ್ಲಿ ರಕ್ತ ಉಂಟು. ನಿ
೪೫ ಶ್ಚಯವಾಗಿ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನಾ
ನು ಅವರಿಗೆ ವಿರೋಧವಾಗಿ ಕೂಟವನ್ನು ತಂದು, ಅವರನ್ನು ತಿ

೪೫ ರುಗಾಟಿಕ್ಕೂ ಕೊಳ್ಳೆಗೂ ಒಪ್ಪಿಸುವೆನು. ಆ ಕೂಟವು ಅವರ
ನ್ನು ಕಲ್ಲೆಸದು, ತಮ್ಮ ಕತ್ತಿಗಳಿಂದ ಕೊಯಿದು, ಅವರ ಕು
ಮಾರರನ್ನೂ ಅವರ ಕುಮಾರ್ತೆಗಳನ್ನೂ ಕೊಂದು ಹಾಕಿ,
೪೮ ಅವರ ಮನೆಗಳನ್ನು ಬೆಂಕಿಯಿಂದ ಸುಟ್ಟು ಬಿಡುವರು. ಹೀಗೆ,
ಸ್ತ್ರೀಯರೆಲ್ಲರು ನಿಮ್ಮ ದುಷ್ಕರ್ಮದ ಪ್ರಕಾರ ಮಾಡದಿರ ಬೋ
ಧಿಸಲ್ಪಟ್ಟುವ ಹಾಗೆ, ದೇಶದೊಳಗಿಂದ ದುಷ್ಕರ್ಮವನ್ನು ನಿಲ್ಲಿಸು
೪೯ ವೆನು. ನಿಮ್ಮ ದುಷ್ಕರ್ಮದ ಫಲವನ್ನು ನಿಮ್ಮ ಮೇಲೆ ಹಾಕುವ
ರು; ಮತ್ತು ನಿಮ್ಮ ವಿಗ್ರಹಗಳ ಪಾಪಗಳನ್ನು ಹೊರುವಿರಿ; ಆಗ
ಕರ್ತನಾದ ಯೆಹೋವ ನಾನೇ ಎಂದು ತಿಳಿಕೊಳ್ಳುವಿರಿ.

## ೨೪. ಸಂಧಿ.

೧ ಇದಲ್ಲದೆ ಒಂಭತ್ತನೇ ವರುಷದಲ್ಲಿ, ಹತ್ತನೇ ತಿಂಗಳಿನ ಹತ್ತನೇ
ದಿವಸದಲ್ಲಿ, ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದ
೨ ಕೆ—ಮನುಷ್ಯನ ಮಗನೇ, ದಿವಸದ ಹೆಸರನ್ನು, ಈ ದಿವಸದ ಹೆಸ
ರನ್ನೇ, ಬರೆದುಕೋ; ಈ ದಿವಸದಲ್ಲಿಯೇ ಬಾಬೆಲಿನ ಅರಸನು ಯೆ
೩ ರೂಸಲೇಮಿಗೆ ಮುತ್ತಿಗೆ ಹಾಕುತ್ತಾನೆ. ಮತ್ತು ತಿರುಗಿ ಬೀಳುವ ಮ
ನೆಯವರಿಗೆ ಗಾದೆಯನ್ನು ನುಡಿದು, ಅವರಿಗೆ ಹೇಳ ತಕ್ಕದ್ದೇನಂದ
ಕೆ—ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಗುಡಾಣವ
ನ್ನು ಇಡು; ಅದನ್ನು ಇಟ್ಟು, ನೀರು ಸಹ ಅದರಲ್ಲಿ ಹಾಕು. ಎಲ್ಲಾ
೪ ಒಳ್ಳೇ ತುಂಡುಗಳನ್ನೂ, ತೊಡೆಯನ್ನೂ, ಹೆಗಲನ್ನೂ, ಈ ಪ್ರ
ಕಾರ ಅದರ ತುಂಡುಗಳನ್ನು ಕೂಡಿಸಿ, ಅದರಲ್ಲಿ ಇಡು; ಉತ್ತಮ
೫ ಎಲುವುಗಳಿಂದ ಅದನ್ನು ತುಂಬಿಸು. ಮಂದೆಯಲ್ಲಿ ಉತ್ತಮವಾದ
ದ್ದನ್ನು ತೆಗೆದು, ಎಲುವಿನ ರಾಶಿಯನ್ನು ಸಹಾ ಅದರ ಕೆಳಗೆ ಇಡು;
ಅದನ್ನು ಚನಾಗಿ ಉಕ್ಕಿಸು; ಅದರ ಎಲುವುಗಳು ಸಹ ಅದರಲ್ಲಿ
೬ ಬೇಯಲಿ. ಆದದರಿಂದ ಕರ್ತನಾದ ಯೆಹೋವ ಹೀಗೆ ಹೇಳು
ತ್ತಾನೆ—ರಕ್ತಾಪರಾಧವುಳ್ಳ ಪಟ್ಟಣಕ್ಕೆ ಅಯ್ಯೋ! ಯಾವದರ ಕಲ್ಮ
ಷವು ಹೊರಗೆ ಬಾರದೆ ಅದರಲ್ಲಿ ಉಂಟೋ ಆ ಗುಡಾಣಕ್ಕೆ ಅ
ಯ್ಯೋ! ಅದನ್ನು ತುಂಡು ತುಂಡಾಗಿ ಹೊರಗೆ ತೆಗೆ, ಚೀಟು ಅದ
೭ ರ ಮೇಲೆ ಬೀಳದಿರಲಿ. ಯಾಕಂದರೆ ಅದರ ರಕ್ತವು ಅದರ ಮಧ್ಯ
ದಲ್ಲಿ ಅದೆ; ಬಂಡೆಯ ತುದಿಯಲ್ಲಿ ಅದನ್ನು ಇಟ್ಟಿತು; ಧೂಳಿ ಮು
ಚ್ಚುವ ಹಾಗೆ ಅದನ್ನು ನೆಲದ ಮೇಲೆ ಚೆಲ್ಲಲಿಲ್ಲ. ಮುಯ್ಯಿಗೆ
೮ ಮುಯ್ಯಿ ತೀರಿಸುವದಕ್ಕೆ ಉಗ್ರವನ್ನು ಎಬ್ಬಿಸುವ ಹಾಗೆ
ನಾನು ಅದರ ರಕ್ತಾಪರಾಧವನ್ನು ಮುಚ್ಚ ಕೂಡದಂತೆ ಬಂಡೆಯ
೯ ತುದಿಯ ಮೇಲೆ ಇಟ್ಟಿದ್ದೇನೆ. ಆದದರಿಂದ ಕರ್ತನಾದ ಯೆಹೋ
ವ ಹೀಗೆ ಹೇಳುತ್ತಾನೆ—ರಕ್ತಾಪರಾದವುಳ್ಳ ಪಟ್ಟಣಕ್ಕೆ ಅಯ್ಯೋ!
೧೦ ನಾನೇ ಕಟ್ಟಿಗೆಯ ರಾಶಿಯನ್ನು ದೊಡ್ಡದಾಗಿ ಮಾಡುವೆನು. ಸಾ
ದೆ ಬಹಳ ಹಾಕು; ಬೆಂಕಿ ಹಚ್ಚು; ಮಾಂಸವನ್ನು ಸಿದ್ಧ ಮಾಡು;
೧೧ ಚನಾಗಿ ಸಂಬಾರವಿಡು; ಎಲುವುಗಳು ಸುಡಲಿ. ಆಗ ಅದನ್ನು
ಬರೀದಾಗಿ ಕೆಂಡಗಳ ಮೇಲೆ ಇಡು; ಅದರ ಹಿತ್ತಾಳೆ ಬಿಸಿಯಾಗ
ಲಿ; ಅದರ ಮೈಲಿಗೆ ಅದರಲ್ಲಿ ಕರಗಲಿ, ಅದರ ಕಲ್ಮಷವು ತೀರಿ
೧೨ ಹೋಗಲಿ. ಅದರ ಕಲ್ಮಷವು ದಣಿಸಿತು; ಬಹಳವಾಗಿರುವ ಅದರ
ಕಲ್ಮಷವು ಅದನ್ನು ಬಿಟ್ಟು ಹೋಗಲಿಲ್ಲ; ಅದರ ಕಲ್ಮಷವು ಬೆಂಕಿ
೧೩ ಯಲ್ಲಿ ಹೋಗಲಿ. ನಿನ್ನ ಅಶುದ್ಧತ್ವವು ದುಷ್ಕರ್ಮವುಳ್ಳದ್ದು;
ನಾನು ನಿನ್ನನ್ನು ಪರಿಶುದ್ಧ ಮಾಡಲಾಗಿ ನೀನು ಶುದ್ಧನಾಗದೆ ಕಾ
ರಣ ನಾನು ನನ್ನ ಉಗ್ರವನ್ನು ನಿನ್ನ ಮೇಲೆ ಬಿಡುವ ಪರಿಯಂತ
ರ ನೀನು ಇನ್ನು ಮೇಲೆ ನಿನ್ನ ಅಪವಿತ್ರತ್ವದಿಂದ ಶುದ್ಧನಾಗುವದಿ
೧೪ ಲ್ಲ. ಕರ್ತನಾದ ನಾನೇ ಅದನ್ನು ಹೇಳಿದ್ದೇನೆ; ಅದು ಉಂಟಾ
ಗುವದು; ನಾನು ಅದನ್ನು ಮಾಡುವೆನು; ನಾನು ಬಿಡುವದಿಲ್ಲ; ಕ
ಟಾಕ್ಷ ತೋರಿಸುವದಿಲ್ಲ; ಪಶ್ಚಾತ್ತಾಪ ಪಡುವದಿಲ್ಲ; ನಿನ್ನ ಮಾ
ರ್ಗಗಳ ಪ್ರಕಾರವೂ ನಿನ್ನ ಕ್ರಿಯೆಗಳ ಪ್ರಕಾರವೂ ನಿನಗೆ ನ್ಯಾ
ಯ ತೀರಿಸುವಕೆಂದು ಕರ್ತನಾದ ಯೆಹೋವ ಅನ್ನುತ್ತಾನೆ.

೧೫ ಇದಲ್ಲದೆ ಕರ್ತನ ವಾಕ್ಯವು ನನಗೆ ಉಂಟಾಗಿ ಹೇಳ್ದೇನಂ
೧೬ ದಕೆ—ಮನುಷ್ಯನ ಮಗನೇ, ಇಗೋ ನಾನು ನಿನ್ನ ಕಣ್ಣುಗಳ
ಗೆ ಅಪೇಕ್ಷೆಯಾದದ್ದನ್ನು ಹೊಡೆದು ನಿನ್ನಿಂದ ತೆಗೆಯುತ್ತೇನೆ;
ಆದರೆ ನೀನು ದುಃಖ ಪಡ ಬೇಡ; ಅಳ ಬೇಡ; ನಿನಗೆ ಕಣ್ಣೀರು
೧೭ ಬರದಿರಲಿ. ಮೌನವಾಗಿ ವ್ಯಸನ ಪಡು; ಸತ್ತವರಿಗೆ ಗೋಳಾಟ
ಮಾಡ ಬೇಡ; ನಿನ್ನ ರುಮಾಲೆಯನ್ನು ಕಟ್ಟು, ನಿನ್ನ ಕಾಲುಗಳ
ಗೆ ನಿನ್ನ ಜೋಡುಗಳನ್ನು ಮೆಟ್ಟು, ತುಟಿಯನ್ನು ಮುಚ್ಚಿ ಕೊ
೧೮ ಳ್ಳ ಬೇಡ, ಮನುಷ್ಯರ ಕೊಟ್ಟಿಯನ್ನು ತಿನ್ನ ಬೇಡ. ಹಾಗೆಯೇ
ನಾನು ಹೊತಾಕೆಯಲ್ಲಿ ಜನರ ಸಂಗಡ ಮಾತಾಡಿದೆನು, ಮತ್ತು
ಸಾಯಂಕಾಲದಲ್ಲಿ ನನ್ನ ಹೆಂಡತಿ ಸತ್ತು ಹೋದಳು; ಆಗ ಹೊತಾ
೧೯ ಕೆಯಲ್ಲಿ ನನಗೆ ಅಪ್ಪಣೆ ಅದ ಹಾಗೆ ಮಾಡಿದೆನು. ಆಗ ಜನರು
ನನಗೆ—ನೀನು ಮಾಡುವ ಈ ಕಾರ್ಯಗಳು ನಮಗೇನೆಂದು ನೀನು
೨೦ ನಮಗೆ ತಿಳಿಸುವದಿಲ್ಲವೋ! ಅಂದರು. ಆಗ ನಾನು ಅವರಿಗೆ ಹೇ
ಳ್ದೇನಂದರೆ—ಕರ್ತನ ವಾಕ್ಯವು ನನಗೆ ಉಂಟಾಯಿತು, ಹ್ಯಾಗಂ
೨೧ ದರೆ—ಇಸ್ರಯೇಲನ ಮನೆಯವರಿಗೆ ನೀನು ಹೇಳ ತಕ್ಕದ್ದು—ಕ
ರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇಗೋ ನಾನು ನನ್ನ
ಪರಿಶುದ್ಧ ಸ್ಥಳವನ್ನೂ ನಿಮ್ಮ ಬಲದ ಶ್ರೇಷ್ಠತ್ವನ್ನೂ ನಿಮ್ಮ ಕ
ಣ್ಣುಗಳಿಗೆ ಅಪೇಕ್ಷೆಯಾದದ್ದನ್ನೂ ನಿಮ್ಮ ಮನಸ್ಸು ಅಭಿಲಾಷಿ
ಸುವದನ್ನೂ ಅಪವಿತ್ರ ಮಾಡುವೆನು; ಮತ್ತು ನೀವು ಬಿಟ್ಟಿರುವ
ನಿಮ್ಮ ಕುಮಾರರೂ ನಿಮ್ಮ ಕುಮಾರ್ತೆಗಳೂ ಕತ್ತಿಯಿಂದ ಬೀ
೨೨ ಳುವರು. ಆಗ ನಾನು ಮಾಡಿದ ಹಾಗೆ ನೀವು ಮಾಡುವಿರಿ; ನಿ
ಮ್ಮ ತುಟಿಗಳನ್ನು ಮುಚ್ಚಿ ಕೊಳ್ಳದೆ, ಮನುಷ್ಯರ ಕೊಟ್ಟಿಯ
೨೩ ನ್ನು ತಿನ್ನದೆ, ಇರುವಿರಿ. ನಿಮ್ಮ ರುಮಾಲೆಗಳು ನಿಮ್ಮ ತಲೆಗಳ
ಮೇಲೆಯೂ, ನಿಮ್ಮ ಜೋಡುಗಳು ನಿಮ್ಮ ಪಾದಗಳ ಮೇಲೆ
ಯೂ ಇರುವವು: ನೀವು ಗೋಳಾಡದೆ, ಅಳದೆ, ನಿಮ್ಮ ಅಕ್ರಮ
ಗಳಿಂದ ಕುಂದಿ ಹೋಗಿ ಬಬ್ಬರ ಸಂಗಡ ಒಬ್ಬರು ಅಂಗಲಾಚುವಿ
೨೪ ರಿ. ಹೀಗೆ ಎಜೇಕಿಯೇಲನು ನಿಮಗೆ ಗುರುತಾಗಿರುವನು; ಅವ
ನು ಮಾಡಿದ್ದೆಲ್ಲಾದರ ಹಾಗೆ ನೀವು ಮಾಡುವಿರಿ; ಮತ್ತು ಅದು
ಉಂಟಾಗುವಾಗ ನಾನೇ ಕರ್ತನಾದ ಯೆಹೋವನೆಂದು ತಿಳಿಯು
೨೫ ವಿರಿ. ಇದಲ್ಲದೆ, ಮನುಷ್ಯನ ಮಗನೇ, ನಾನು ಅವರ ಕೋಟೆ
ಯನ್ನೂ, ಅವರ ಶೃಂಗಾರದ ಸಂತೋಷವನ್ನೂ, ಅವರ ಕ
ಣ್ಣುಗಳಿಗೆ ಅಪೇಕ್ಷೆಯಾದದ್ದನ್ನೂ ಅವರ ಮನಸ್ಸು ಅಭಿಸುವದ
ನ್ನೂ ಅವರ ಕುಮಾರರನ್ನೂ ಅವರ ಕುಮಾರ್ತೆಗಳನ್ನೂ ಅ
೨೬ ವರಿಂದ ತೆಗೆದು ಬಿಡುವ ದಿವಸದಲ್ಲಿ, ಆದಿವಸದಲ್ಲಿ ತಪ್ಪಿಸಿ ಕೊ
ಳ್ಳುವವನು ನಿನ್ನ ಕಿವಿಗಳಿಗೆ ಸುದ್ದಿಯನ್ನು ತರುವ ಹಾಗೆ ನಿನ್ನ
೨೭ ಬಳಿಗೆ ಬರುವನಲ್ಲವೋ! ಆ ದಿವಸದಲ್ಲಿ ತಪ್ಪಿಸಿ ಕೊಂಡವನ ಕಡೆ
ಗೆ ನಿನ್ನ ಬಾಯಿ ತೆರೆದಿರುವದು; ನೀನು ಇನ್ನು ಮೂಕನಾಗಿರ
ದೆ ಮಾತಾಡುವಿ; ಮತ್ತು ಅವರಿಗೆ ಗುರುತಾಗಿರುವಿ; ಅವರು ನಾ
ನೇ ಯೆಹೋವನೆಂದು ತಿಳಿಯುವರು.



## ೨೫. ಸಂಧಿ.

೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳ್ದೇ
೨ ನಂದರೆ—ಮನುಷ್ಯನ ಮಗನೇ, ನಿನ್ನ ಮುಖವನ್ನು ಅಮ್ಮೋನಿ
ನ ಕುಮಾರರ ಕಡೆಗೆ ಇಟ್ಟು, ಅವರಿಗೆ ವಿರೋಧವಾಗಿ ಪ್ರವಾದಿ
೩ ಸಿ, ಅಮ್ಮೋನಿನ ಕುಮಾರರಿಗೆ ಹೇಳ ತಕ್ಕದ್ದೇನಂದರೆ—ಕರ್ತ
ನಾದ ಯೆಹೋವನ ವಾಕ್ಯವನ್ನು ಕೇಳಿರಿ; ಕರ್ತನಾದ ಯೆಹೋ
ವ ಹೀಗೆ ಹೇಳುತ್ತಾನೆ—ನೀನು ನನ್ನ ಪರಿಶುದ್ಧ ಸ್ಥಳಕ್ಕೆ, ಅದು
ಅಪವಿತ್ರವಾದಾಗಲೂ, ಇಸ್ರಯೇಲನ ದೇಶಕ್ಕೆ, ಅದು ಹಾಳಾದಾಗ
ಲೂ, ಯೆಹೂದನ ಮನೆಯವರಿಗೆ, ಅವರು ಸೆರೆಗೆ ಹೋದಾಗ
೪ ಲೂ, ಆಹಾ ಅಂದದರಿಂದ, ಇದು ಕಾರಣ ಇಗೋ ನಾನು ನಿನ್ನ
ನ್ನು ಮೂಡಣ ಕುಮಾರರಿಗೆ ಸ್ವಾಸ್ತ್ಯವಾಗಿ ಕೊಡುತ್ತೇನೆ; ಅ
ವರು ತಮ್ಮ ಪಟಾರಗಳನ್ನು ನಿನ್ನಲ್ಲಿ ಇರಿಸುವರು, ತಮ್ಮ ನಿವಾ
ಸಗಳನ್ನು ನಿನ್ನಲ್ಲಿ ಇಡುವರು; ಅವರು ನಿನ್ನ ಫಲವನ್ನು ತಿನ್ನುವ
೫ ರು; ಅವರೇ ನಿನ್ನ ಹಾಲನ್ನು ಕುಡಿಯುವರು. ಮತ್ತು ರಬ್ಬವ
ನ್ನು ಒಂಟೆಗಳ ನಿವಾಸವಾಗಿಯೂ, ಅಮ್ಮೋನಿನ ಕುಮಾರರನ್ನು
ಮಂದೆಗಳು ಮಲಗುವ ಸ್ಥಳವಾಗಿಯೂ, ಮಾಡುವೆನು; ಆಗ, ನಾ
೬ ನೇ ಯೆಹೋವನೆಂದು ತಿಳಿಯುವಿರಿ. ಯಾಕಂದರೆ ಕರ್ತನಾದ
ಯೆಹೋವ ಹೀಗೆ ಹೇಳುತ್ತಾನೆ—ನೀನು ಕೈ ತಟ್ಟಿ, ಕಾಲಿನಿಂದ
ತುಳ್ದಿದು, ನಿನ್ನ ಎಲ್ಲಾ ಹಗೆಯಿಂದ ಇಸ್ರಯೇಲ್ ದೇಶದ ವಿಷಯ
೭ ಹೃದಯದಲ್ಲಿ ಸಂತೋಷಿಸಿದ್ದರಿಂದ, ಇದು ಕಾರಣ, ಇಗೋ,
ನಾನು ನನ್ನ ಕೈ ನಿನ್ನ ಮೇಲೆ ಚಾಚಿ, ನಿನ್ನನ್ನು ಜನಾಂಗಗಳಿಗೆ
ಕೊಳ್ಳೆಯಾಗಿ ಕೊಟ್ಟು, ಜನಗಳೊಳಗಿಂದ ನಿನ್ನನ್ನು ಕಡಿದು
ಬಿಟ್ಟು, ದೇಶಗಳೊಳಗಿಂದ ನಿನ್ನನ್ನು ನಾಶನ ಮಾಡುವೆನು; ನಿ
ನ್ನನ್ನು ಸಂಹಾರ ಮಾಡುವೆನು; ಆಗ ನಾನೇ ಯೆಹೋವನೆಂದು
ತಿಳಿಯುವಿ.

೮ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಮೊವಾಬೂ
ಸೇಯಿರೂ—ಇಗೋ ಯೆಹೂದನ ಮನೆಯು ಸಮಸ್ತ ಜನಾಂ
೯ ಗಗಳ ಹಾಗಿದೆ, ಎಂದು ಹೇಳುವದರಿಂದ, ಇದು ಕಾರಣ ಇಗೋ,
ನಾನು ಮೊವಾಬಿನ ಪಾರ್ಶ್ವವನ್ನು, ಪಟ್ಟಣಗಳ ಕಡೆಯಿಂದಲೂ,
ಅದರ ಪ್ರಾಂತ್ಯದಲ್ಲಿರುವಂಥ, ದೇಶದ ಶೃಂಗಾರವಾಗಿರುವಂಥ,
ಅದರ ಪಟ್ಟಣಗಳಾದ ಬೆಥ್‌ಯೆಶಿಮೋಥ್ ಬಾಲ್ಮೆಯೋನ್ ಕಿರ್ಯ
೧೦ ತಾಯಿಮ್, ಇವುಗಳ ಕಡೆಯಿಂದಲೂ, ಮೂಡಣಕುಮಾರರಿಗೆ ತೆ
ರೆಯುವೆನು; ಅಮ್ಮೋನಿನ ಕುಮಾರರು ಇನ್ನು ಮೇಲೆ ಜನಾಂಗಗ
ಳಲ್ಲಿ ಜ್ಞಾಪಕ ಮಾಡಲ್ಪಡದ ಹಾಗೆ ಅಮ್ಮೋನಿನ ಕುಮಾರರಿಗೆ ವಿ
೧೧ ರೋಧವಾಗಿ ಅದನ್ನು ಸ್ವಾಸ್ತ್ಯವಾಗಿ ಕೊಡುವೆನು. ಮತ್ತು ಮೊ
ವಾಬಿನಲ್ಲಿ ನ್ಯಾಯಗಳನ್ನು ತೀರಿಸುವೆನು; ಆಗ ನಾನೇ ಯೆಹೋ
ವನೆಂದು ತಿಳಿಯುವರು.

೧೨ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಎದೋಮು
ಯೆಹೂದನ ಮನೆಯವರಿಗೆ ಮುಯ್ಯಿಗೆ ಮುಯ್ಯಿ ತೀರಿಸಿ ನಡಿ
ಸಿದ್ದರಿಂದಲೂ, ಬಹಳ ಅಪರಾಧ ಮಾಡಿ ಅವರಲ್ಲಿ ಮುಯ್ಯಿಗೆ
೧೩ ಮುಯ್ಯಿ ತಕ್ಕೊಂಡದರಿಂದಲೂ, ಇದು ಕಾರಣ ಕರ್ತನಾದ ಯೆ
ಹೋವ ಹೀಗೆ ಹೇಳುತ್ತಾನೆ—ನಾನು ಸಹ ನನ್ನ ಕೈಯನ್ನು
ಎದೋಮಿನ ಮೇಲೆ ಚಾಚುತ್ತೇನೆ; ಅದರೊಳಗಿಂದ ಮನುಷ್ಯರ
ನ್ನೂ ಮೃಗಗಳನ್ನೂ ಕಡಿದು ಬಿಡುತ್ತೇನೆ; ತೇಮಾನು ಮೊದ
ಲು ಗೊಂಡು ಅದನ್ನು ಕಾಡು ಮಾಡುತ್ತೇನೆ; ದೆದಾನಿನವರು ಕ
೧೪ ತ್ತಿಯಿಂದ ಬೀಳುವರು. ನಾನು ನನ್ನ ಜನರಾದ ಇಸ್ರಯೇಲಿನ
ಮೂಲವಾಗಿ ನನ್ನ ಪ್ರತಿದಂಡನೆಯನ್ನು ಎದೋಮಿನ ಮೇಲೆ ಇ
ಡುವೆನು. ಅವರು ಎದೋಮಿನಲ್ಲಿ ನನ್ನ ಕೋಪದ ಪ್ರಕಾರವೂ
ನನ್ನ ಉರಿಯ ಪ್ರಕಾರವೂ ಮಾಡುವರು; ಹೀಗೆಯೇ ಅವರು ನ
ನ್ನ ಪ್ರತಿದಂಡನೆಯನ್ನು ತಿಳಿಯುವರೆಂದು, ಕರ್ತನಾದ ಯೆ
ಹೋವ ಅನ್ನುತ್ತಾನೆ.

೧೫ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಫಿಲಿಷ್ಟ್ಯರು
ಮುಯ್ಯಿಗೆ ಮುಯ್ಯಿ ನಡಿಸಿ, ಹಗೆಯುಳ್ಳ ಹೃದಯದಿಂದ ಮು
ಯ್ಯಿಗೆ ಮುಯ್ಯಿ ತಕ್ಕೊಂಡರು, ಪೂರ್ವದ ಕ್ರೋಧದಿಂದ ಕಡಿಸಿದ
೧೬ ಕಾರಣ, ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇಗೋ
ನಾನು ನನ್ನ ಕೈಯನ್ನು ಫಿಲಿಷ್ಟ್ಯರ ಮೇಲೆ ಚಾಚುತ್ತೇನೆ; ಕ್ರೇ
ತ್ಯರನ್ನು ಕಡಿದು ಬಿಡುತ್ತೇನೆ; ಸಮುದ್ರ ತೀರದಲ್ಲಿ ಉಳಿದವರನ್ನು
೧೭ ನಾಶನ ಮಾಡುತ್ತೇನೆ. ನಾನು ಕೊಡ್ಡ ಪ್ರತಿದಂಡನೆಗಳನ್ನು ಉ
ರಿಯುಳ್ಳ ಗದರಿಕೆಗಳ ಸಂಗಡ ಅವರಲ್ಲಿ ನಡಿಸುತ್ತೇನೆ; ನಾನು
ನನ್ನ ಪ್ರತಿದಂಡನೆಯನ್ನು ಅವರ ಮೇಲೆ ಇಡುವಾಗ ನಾನೇ ಯೆ
ಹೋವನೆಂದು ತಿಳಿಯುವರು.

## ೨೬. ಸಂಧಿ.

೧ ಇದಲ್ಲದೆ ಹನ್ನೊಂದನೇ ವರುಷದಲ್ಲಿ, ತಿಂಗಳಿನ ಮೊದಲನೇ
ದಿವಸದಲ್ಲಿ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳ್ದೇ
೨ ನಂದರೆ—ಮನುಷ್ಯನ ಮಗನೇ, ತೂರು ಯೆರೂಸಲೇಮಿನ ವಿಷ
ಯ—ಆಹಾ, ಜನರ ದ್ವಾರವಾಗಿದ್ದದ್ದು ಮುರಿದು ಹೋಯಿತು;
ನನ್ನ ಕಡೆಗೆ ತಿರಿಗಿ ಕೊಂಡಿದೆ; ಅದು ಹಾಳಾದದರಿಂದ ನಾನು ತುಂ
೩ ಬಾಗುವೆನೆಂದು ಹೇಳಿದ ಕಾರಣ, ಕರ್ತನಾದ ಯೆಹೋವ ಹೀ
ಗೆ ಹೇಳುತ್ತಾನೆ—ಇಗೋ ತೂರೇ, ನಿನಗೆ ವಿರೋಧವಾಗಿದ್ದೇನೆ;
ಮತ್ತು ಸಮುದ್ರವು ತನ್ನ ತೆರೆಗಳನ್ನು ಮೇಲೆ ಬರ ಮಾಡುವ ಹಾ
ಗೆ ನಾನು ನಿನಗೆ ವಿರೋಧವಾಗಿ ಅನೇಕ ಜನಾಂಗಗಳನ್ನು ಮೇ
೪ ಲೆ ಬರ ಮಾಡುವೆನು. ಅವರು ತೂರಿನ ಗೋಡೆಗಳನ್ನು ಕೆಡಿಸಿ
ಅದರ ಗೋಪುರಗಳನ್ನು ಬಡೆದು ಬಿಡುವರು; ನಾನು ಅದರ ಧೂ
ಳನ್ನು ಅದರಿಂದ ಬರಿಸಿ, ಅದನ್ನು ಬಂಡೆಯ ತುದಿಯಂತೆ ಮಾ
೫ ಡುವೆನು. ಅದು ಸಮುದ್ರದ ಮಧ್ಯದಲ್ಲಿ ಬಲೆಗಳನ್ನು ಹಾಕುವ
ಸ್ಥಳವಾಗಿರುವದು; ಯಾಕಂದರೆ ನಾನೇ ಅದನ್ನು ಹೇಳ್ದೇನೆಂದು
ಕರ್ತನಾದ ಯೆಹೋವ ಅನ್ನುತ್ತಾನೆ; ಅದು ಜನಾಂಗಗಳಿಗೆ
೬ ಕೊಳ್ಳೆಯಾಗಿರುವದು. ಇದಲ್ಲದೆ ಹೊಲದಲ್ಲಿರುವ ಅದರ ಕು
ಮಾರ್ತೆಗಳು ಕತ್ತಿಯಿಂದ ಕೊಲ್ಲಲ್ಪಡುವರು; ಆಗ ನಾನೇ ಯೆ
೭ ಹೋವನೆಂದು ತಿಳಿಯುವರು. ಯಾಕಂದರೆ ಕರ್ತನಾದ ಯೆ
ಹೋವ ಹೀಗೆ ಹೇಳುತ್ತಾನೆ—ಇಗೋ ನಾನು ಉತ್ತರದಿಂದ ಬಾ
ಬೆಲಿನ ಅರಸನಾದ ನೆಬುಕದ್ನೆಚ್ಚರನನ್ನು ರಾಜಾಧಿರಾಜನನ್ನು,
ಕುದುರೆಗಳ ಸಂಗಡಲೂ, ರಥಗಳ ಸಂಗಡಲೂ, ಸವಾರರ ಸಂಗ
ಡಲೂ, ಬಹು ಜನರ ಸಮೂಹದ ಸಂಗಡಲೂ ತೂರಿಗೆ ವಿರೋಧ
೮ ವಾಗಿ ತರುತ್ತೇನೆ. ಅವನು ಹೊಲದಲ್ಲಿರುವ ನಿನ್ನ ಕುಮಾರ್ತೆಗ
ಳನ್ನು ಕತ್ತಿಯಿಂದ ಕೊಲ್ಲುವನು; ನಿನಗೆ ವಿರೋಧವಾಗಿ ಕೋ
ಟೆಯನ್ನು ಇಡುವನು; ನಿನಗೆ ವಿರೋಧವಾಗಿ ಮೋಹರ್ಚೆಯನ್ನು
೯ ಹಾಕುವನು; ನಿನಗೆ ವಿರೋಧವಾಗಿ ಪೇಡ್ಯವನ್ನು ಎತ್ತುವನು. ಮ

ತ್ತು ತನ್ನ ಬಡೆಯುವ ಆಯುಧಗಳ ಹೊಡತವನ್ನು ನಿನ್ನ ಗೋ
ಡೆಗಳಿಗೆ ತಾಗಿಸುವನು; ನಿನ್ನ ಗೋಪುರಗಳನ್ನು ತನ್ನ ಕೊಡ್ಲಿ
೧೦ ಗಳಿಂದ ಒಡೆದು ಬಿಡುವನು. ಅವನ ಕುದುರೆಗಳ ಬಾಹುಳ್ಯದಿಂದ
ಅವುಗಳ ಧೂಳು ನಿನ್ನನ್ನು ಮುಚ್ಚುವದು. ಗೋಡೆ ಶಿಳ್ಳದ ಪ
ಟ್ಟಣವನ್ನು ಪ್ರವೇಶಿಸುವಂತೆ ಅವನು ನಿನ್ನ ಬಾಗಲುಗಳಲ್ಲಿ ಪ್ರವೇ
ಶಿಸುವಾಗ, ಸವಾರರ, ಚಕ್ರಗಳ, ರಥಗಳ ಶಬ್ದದಿಂದ ನಿನ್ನ ಗೋಡೆ
೧೧ ಗಳು ಕದಲುವವು. ಅವನು ತನ್ನ ಕುದುರೆಗಳ ಗೊರಕೆಗಳಿಂದ
ನಿನ್ನ ಬೀದಿಗಳನ್ನೆಲ್ಲಾ ತುಳಿಯುವನು; ನಿನ್ನ ಜನರನ್ನು ಕತ್ತಿಯಿಂ
ದ ಕೊಲ್ಲುವನು. ನಿನ್ನ ಬಲವಾದ ಸ್ಥಾನಗಳು ನೆಲಕ್ಕೆ ಇಳಿಯು
೧೨ ವವು. ಅವರು ನಿನ್ನ ಸಂಪತ್ತನ್ನು ಸುಲುಕೊಂಡು, ನಿನ್ನ ಸರಕನ್ನು
ಕೊಳ್ಳೆ ಮಾಡಿ, ನಿನ್ನ ಗೋಡೆಗಳನ್ನು ಒಡೆದು, ನಿನ್ನ ರಮ್ಯವಾದ
ಮನೆಗಳನ್ನು ಕೆಡವಿ, ನಿನ್ನ ಕಲ್ಲುಗಳನ್ನೂ ನಿನ್ನ ಮರಗಳನ್ನೂ
೧೩ ನಿನ್ನ ಧೂಳನ್ನೂ ನೀರಿನೊಳಗೆ ಹಾಕುವರು. ಆಗ ನಿನ್ನ ಹಾಡು
ಗಳ ಶಬ್ದವನ್ನು ನಿಲ್ಲಿಸುವೆನು; ನಿನ್ನ ಕಿನ್ನರಿಗಳ ಧ್ವನಿ ಇನ್ನು ಕೇ
೧೪ ಳಲ್ಪಡುವದಿಲ್ಲ. ನಿನ್ನನ್ನು ಬಂಡೆಯ ತುದಿಯಂತೆ ಮಾಡುವೆನು;
ಬಲೆ ಹಾಸುವ ಸ್ಥಳವಾಗುವಿ; ನೀನು ಇನ್ನು ಕಟ್ಟಲ್ಪಡುವದಿಲ್ಲ;
ಯಾಕಂದರೆ ಯೆಹೋವನಾದ ನಾನೇ ಅದನ್ನು ಹೇಳಿದ್ದೇನೆಂದು
ಕರ್ತನಾದ ಯೆಹೋವ ಅನ್ನುತ್ತಾನೆ.

೧೫ ಕರ್ತನಾದ ಯೆಹೋವನು ತೂರಿಗೆ ಹೀಗೆ ಹೇಳುತ್ತಾನೆ—ನಿ
ನ್ನ ಬೀಳುವಿಕೆಯ ಶಬ್ದದಿಂದದಲೂ, ಘಾಯ ಪಟ್ಟವರು ಅಂಗಲಾ
ಚುವಾಗಲೂ, ನಿನ್ನ ಮಧ್ಯದಲ್ಲಿ ಕೊಲೆಯಾಗುವಾಗಲೂ, ದ್ವೀ
೧೬ ಪಗಳು ನಡುಗುವದಿಲ್ಲವೋ! ಆಗ ಸಮುದ್ರದ ಪ್ರಭುಗಳೆಲ್ಲಾ ತ
ಮ್ಮ ಸಿಂಹಾಸನಗಳನ್ನು ಬಿಟ್ಟು ಇಳಿಯುವರು; ತಮ್ಮ ನಿಲುವಂ
ಗಿಗಳನ್ನು ತೆಗೆದು ಹಾಕುವರು; ಚಿತ್ರವಾಗಿ ಹೊಲಿದ ತಮ್ಮ ವ
ಸ್ತ್ರಗಳನ್ನು ಮತಗು ಬಿಡುವರು; ನಡುಗುವಿಕೆಯನ್ನು ಹೊದ್ದುಕೊ
ಳ್ಳುವರು; ನೆಲದ ಮೇಲೆ ಕೂತು ಕೊಳ್ಳುವರು; ಕ್ಷಣ ಕ್ಷಣಕ್ಕೆ
೧೭ ನಡುಗುವರು; ನಿನ್ನ ನಿಮಿತ್ಯ ವಿಸ್ಮಯ ಗೊಳ್ಳುವರು. ಮತ್ತು ನಿ
ನ್ನ ವಿಷಯ ಗೋಳಾಟವನ್ನು ಎತ್ತಿ, ನಿನಗೆ ಹೇಳುವದೇನಂದ
ಕೆ— ಸಮುದ್ರಗಳ ಬಳಿಯಲ್ಲಿ ವಾಸಿಸಿದವಳೇ! ಹೆಸರ್ಗೊಂಡ ಪ
ಟ್ಟಣವೇ! ತಾನೂ ತನ್ನ ನಿವಾಸಿಗಳೂ ಸಮುದ್ರದಲ್ಲಿ ಬಲವಾಗಿದ್ದ
ವಳೇ! ಅದರ ನಿವಾಸಿಗಳನ್ನು ಭಯ ಪಡಿಸಿದವಳೇ! ಅಯ್ಯೋ,
೧೮ ಹ್ಯಾಗೆ ನಾಶವಾದಿ. ಈಗ ನೀನು ಬೀಳುವ ದಿವಸದಲ್ಲಿ ದ್ವೀಪಗ
ಳು ನಡುಗುವವು; ಹೌದು, ನೀನು ಹೋಗಿ ಬಿಡುವದರಿಂದ ಸಮು
೧೯ ದ್ರದಲ್ಲಿರುವ ದ್ವೀಪಗಳು ಘಾಬರಿ ಪಡುವವು. ಯಾಕಂದರೆ ಕರ್ತ
ನಾದ ಯೆಹೋವ ಹೀಗೆ ಹೇಳುತ್ತಾನೆ—ನಾನು ನಿನ್ನನ್ನು ನಿವಾಸಿ
ಗಳಿಲ್ಲದ ಪಟ್ಟಗಳ ಹಾಗೆ ಹಾಳಾದ ಪಟ್ಟವಾಗ ಮಾಡುವಾಗ, ಬ
ಹಳ್ಳ ನೀರುಗಳು ನಿನ್ನನ್ನು ಮುಚ್ಚುವ ಹಾಗೆ ಅಗಾಧವನ್ನು ನಿನ್ನ
೨೦ ಮೇಲೆ ಏರ ಮಾಡುವಾಗ, ಕುಣಿಯೊಳಗೆ ಇಳಿಯುವವರ ಸಂ
ಗಡ ನಿನ್ನನ್ನು ಪೂರ್ವಿಕ ಜನರ ಬಳಿಗೆ ಇಳಿಸುವೆನು; ನೀನು ನಿ
ವಾಸಿಗಳಿಲ್ಲದೆ ಇರುವ ಹಾಗೆ, ನಿನ್ನನ್ನು ಭೂಮಿಯ ಕೆಳಗಿನ ಭಾ
ಗಗಳಲ್ಲಿ, ಪೂರ್ವದಾರಭ್ಯ ಹಾಳಾದವುಗಳಲ್ಲಿ, ಕುಣಿಗೆ ಇಳಿಯು
ವವರ ಸಂಗಡ, ವಾಸ ಮಾಡುವೆನು; ಆದರೆ ಜೀವಿತರ ದೇಶದಲ್ಲಿ
೨೧ ಮಹಿಮೆಯನ್ನು ಇಡುವೆನು. ನಿನ್ನನ್ನು ದಿಗುಲು ಪಡಿಸುವೆನು,
ನೀನು ಇರುವದಿಲ್ಲ; ನಿನ್ನನ್ನು ಹುಡಿಕಿದರೂ, ನೀನು ಇನ್ನೆಂದಿ
ಗೂ ಶಿಕ್ಕುವದಿಲ್ಲವೆಂದು ಕರ್ತನಾದ ಯೆಹೋವ ಅನ್ನುತ್ತಾನೆ.

## ೨೭. ಸಂಧಿ.

೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿ
೨ ದ್ದೇನಂದರೆ—ಈಗ, ಮನುಷ್ಯನ ಮಗನೇ, ತೂರಿನ ವಿಷಯ
೩ ಗೋಳಾಟವನ್ನೆತ್ತು. ನೀನು ತೂರಿಗೆ ಹೇಳಿ ತಕ್ಕದ್ದೇನಂದರೆ—
ಸಮುದ್ರ ಪ್ರವೇಶದಲ್ಲಿ ವಾಸಿಸುವವಳೇ! ಬಹು ದ್ವೀಪಗಳಿಗೆ ಜ
ನರ ವ್ಯಾಪಾರವನ್ನು ನಡಿಸುವವಳೇ! ಕರ್ತನಾದ ಯೆಹೋವಹೀ
ಗೆ ಹೇಳುತ್ತಾನೆ—ಓ ತೂರೇ! ನಾನು ಪೂರ್ಣ ಸೌಂದರ್ಯವುಳ್ಳ
೪ ವಳೆಂದು ನೀನು ಅಂದಿದ್ದೀ. ನಿನ್ನ ಮೇರೆಗಳು ಸಮುದ್ರದ ಮಧ್ಯ
ದಲ್ಲಿ ಅವೆ, ನಿನ್ನನ್ನು ಕಟ್ಟಿದವರು ನಿನ್ನ ಸೌಂದರ್ಯವನ್ನು ಸಂ
೫ ಪೂರ್ಣ ಮಾಡಿದ್ದಾರೆ. ಸೆನೀರಿನ ತುರಾಯಿ ಮರಗಳಿಂದ ನಿನ್ನ
ಹಲಿಗೆಗಳನ್ನೆಲ್ಲಾ ನಿನಗೆ ಕಟ್ಟಿದ್ದಾರೆ; ನಿನಗೆ ಪತಸ್ತ್ರಾಭಗಳನ್ನು
ಮಾಡುವದಕ್ಕೆ ಲೆಬನೋನಿನಿಂದ ದೇವದಾರುಗಳನ್ನು ತೆಗೆದಿದ್ದಾ
೬ ರೆ. ನಿನ್ನ ಹುಟ್ಟುಗಳನ್ನು ಬಾಶಾನಿನ ವೃಕ್ಷರಾಜಗಳಿಂದ ಮಾ
ಡಿದ್ದಾರೆ; ನಿನ್ನ ಮೇಲ್ಗಡೆಯನ್ನು ಕಿತ್ತಿಯರ ದ್ವೀಪಗಳಿಂದ ತಂ
೭ ದ ಜಂತ ಕೆತ್ತಿದ ದೇವದಾರುಗಳಿಂದ ಮಾಡಿದರು. ಐಗುಪ್ತದಿಂದ
ಬಂದಂಥ ಚಿತ್ರವಾಗಿ ಹೊಲಿದ ನಾರುಮಡಿಯನ್ನು ನಿನಗೆ ಪಶವಾ
ಗುವ ಹಾಗೆ ನೀನು ಹಾಸಿದ್ದೀ; ಎಲೀಷದ ದ್ವೀಪಗಳಿಂದ ತಂದ ನೀ
೮ ಲಿಯೂ ರಕ್ತವರ್ಣವೂ ನಿನಗೆ ಮುಚ್ಚಳವಾಯಿತು. ಚಿಕೋನಿ
ನ ಅರ್ವಾದಿನ ನಿವಾಸಿಗಳು ನಿನ್ನ ಹುಟ್ಟು ಹಾಕುವವರಾಗಿದ್ದರು;
ತೂರೇ, ನಿನ್ನಲ್ಲಿದ್ದ ನಿನ್ನ ಜ್ಞಾನಿಗಳು, ಅವರೇ ನಿನ್ನ ಹಡಪದವ
೯ ರಾಗಿದ್ದರು. ಗೇಬಾಲಿನ ಹಿರಿಯರೂ ಅದರ ಜ್ಞಾನಿಗಳೂ ನಿ
ನ್ನ ಬಿರುಕುಗಳನ್ನು ಮುಚ್ಚುವವರಾಗಿ ನಿನ್ನಲ್ಲಿ ಇದ್ದರು; ಸಮು
ದ್ರದ ಹಡಗಗಳೆಲ್ಲಾ ಅವುಗಳ ನಾವಿಕರ ಸಂಗಡ ನಿನ್ನ ವ್ಯಾಪಾ
೧೦ ರವನ್ನು ನಡಿಸುವ ಬಗ್ಯೆ ನಿನ್ನಲ್ಲಿ ಇದ್ದವು. ಪಾರ್ಷಿಯರೂ ಲೂ
ದ್ಯರೂ ಫೂತ್ಯರೂ ನಿನ್ನ ಯುದ್ಧಸ್ತರಾಗಿ ನಿನ್ನ ಸೈನ್ಯದಲ್ಲಿ ಇ
ದ್ದರು; ಗುರಾಣಿಯನ್ನೂ ಶಿರಸ್ತ್ರಾಣವನ್ನೂ ನಿನ್ನಲ್ಲಿ ತೂಗಿಸಿದ
೧೧ ರು; ಇವರು ನಿನಗೆ ಮಹತ್ವನ್ನು ಕೊಟ್ಟರು. ಅರ್ವಾದಿನ ಕು
ಮಾರರು ನಿನ್ನ ದಂಡಿನ ಸಂಗಡ ಸುತ್ತಲಾಗಿ ನಿನ್ನ ಗೋಡೆಗಳ
ಮೇಲೆ ಇದ್ದರು; ಗಮದೀಯರು ನಿನ್ನ ಬುರುಜುಗಳಲ್ಲಿ ಇದ್ದರು;
ತಮ್ಮ ಡಾಲುಗಳನ್ನು ಸುತ್ತಲಾಗಿ ನಿನ್ನ ಗೋಡೆಗಳ ಮೇಲೆ ತೂ
೧೨ ಗಿಸಿದರು; ಇವರು ನಿನ್ನ ಸೌಂದರ್ಯವನ್ನು ಪೂರೈಸಿದರು. ತಾ
ರ್ಷಿಷು ಎಲ್ಲಾ ಐಶ್ವರ್ಯದ ಬಾಹುಳ್ಯದಿಂದ ನಿನ್ನ ವ್ಯಾಪಾರಿ
ಯಾಗಿತ್ತು; ಬೆಳ್ಳಿ ಕಬ್ಬಿಣ ತಗರ ಸೀಸಗಳಿಂದ ನಿನ್ನ ಸಂತೆಗ
೧೩ ಳಲ್ಲಿ ಕೆಲಸ ನಡಿಸಿದರು. ಯಾವಾನ್ ತೂಬಲ್ ಮೇಷೆಕ್ ಇವ
ರು ನಿನ್ನ ವರ್ತಕರಾಗಿದ್ದರು; ಮನುಷ್ಯರ ಪ್ರಾಣಗಳಿಂದಲೂ
ಹಿತ್ತಾಳೆಯ ಪಾತ್ರೆಗಳಿಂದಲೂ ನಿನ್ನ ಬಾಜಾರಿನಲ್ಲಿ ವ್ಯಾಪಾರ
೧೪ ನಡಿಸಿದರು. ತೊಗಾರ್ಮದ ಮನೆಯವರು ಕುದುರೆಗಳಿಂದಲೂ
ಸವಾರರಿಂದಲೂ ಹಾಸರ ಕತ್ತೆಗಳಿಂದಲೂ ನಿನ್ನ ಸಂತೆಗಳಲ್ಲಿ ವ್ಯಾ
೧೫ ಪಾರ ನಡಿಸಿದರು. ದೇದಾನಿನ ಕುಮಾರರು ನಿನ್ನ ವರ್ತಕರಾಗಿ
ದ್ದರು; ಅನೇಕ ದ್ವೀಪಗಳು ನಿನ್ನ ಕೈಯ ಸರಕೇ; ಜಂತದ ಕೊಂ
ಬುಗಳನ್ನೂ ಕರೀಮರವನ್ನೂ ನಿನಗೆ ಕಾಣಿಕೆಯಾಗಿ ತರುತ್ತಿ
೧೬ ದ್ದವು. ಅರಾಮು ನಿನ್ನ ಕೆಲಸಗಳ ಬಾಹುಳ್ಯಕ್ಕೋಸ್ಕರ ನಿನ್ನ
ವ್ಯಾಪಾರಿಯಾಗಿತ್ತು; ಅವರು ಕೆಂಪುಕಲ್ಲಿನಿಂದಲೂ ರಕ್ತವರ್ಣ
ದಿಂದಲೂ ಚಿತ್ರವಾದ ಹೊಲಿಗೆಯಿಂದಲೂ ನಾರುಮಡಿಯಿಂದ



ಲೂ ಹವಳದಿಂದಲೂ ಅಕ್ಕೀಕಗಳಿಂದಲೂ ನಿನ್ನ ಸಂತೆಗಳಲ್ಲಿ
೧೭ ವ್ಯಾಪಾರ ನಡಿಸಿದರು. ಯೆಹೂದವೂ ಇಸ್ರಯೇಲ್ ದೇಶವೂ
ಇವು ನಿನ್ನ ವರ್ತಕರೇ; ವಿನೀಥಿನ ಗೋಧಿಯಿಂದಲೂ ಮಿಕಾಯಿ
ಯಿಂದಲೂ ಜೇನಿನಿಂದಲೂ ಎಣ್ಣೆಯಿಂದಲೂ ತೈಲದಿಂದಲೂ ನಿ
೧೮ ನ್ನ ಬಾಜಾರಿನಲ್ಲಿ ವ್ಯಾಪಾರ ನಡಿಸಿದರು. ದಮಸ್ಕವು ನಿನ್ನ ಕೆಲ
ಸಗಳ ಬಾಹುಳ್ಯದ ನಿಮಿತ್ತ, ಎಲ್ಲಾ ಐಶ್ವರ್ಯದ ಬಾಹುಳ್ಯದಿಂ
ದ ಹೆಲ್ಬೋನಿನ ದ್ರಾಕ್ಷೇ ರಸದಿಂದಲೂ ಬಿಳ್ಳೇ ಉಣ್ಣೆಯಿಂದಲೂ
೧೯ ನಿನ್ನ ವ್ಯಾಪಾರಿಯಾಗಿತ್ತು. ದಾನೂ ಯಾವಾನು ಹೋಗುತ್ತಾ
ಬರುತ್ತಾ ನಿನ್ನ ಸಂತೆಗಳಲ್ಲಿ ವ್ಯಾಪಾರ ನಡಿಸಿದರು; ಮೆರಗುವ
ಕಬ್ಬಿಣವೂ ದಾಲ್ಚಿನ್ನೆಯೂ ಬಜೆಯೂ ನಿನ್ನ ಬಾಜಾರಿನಲ್ಲಿ ಇದ್ದ
೨೦ ವು. ದೇದಾನು ಸವಾರಿಗೆ ತಕ್ಕ ವಿಚಿತ್ರವಾದ ಬಟ್ಟೆಗಳಲ್ಲಿ ನಿನ್ನ
೨೧ ವರ್ತಕನಾಗಿತ್ತು. ಅರಾಬ್ಯವೂ ಕೇದಾರಿನ ಪ್ರಭುಗಳೆಲ್ಲರೂ ನಿ
ನ್ನ ಕೈ ಕೆಲಸದ ವ್ಯಾಪಾರಗಳಾಗಿದ್ದರೂ; ಕುರಿಮರಿಗಳಿಂದಲೂ
ಟಗರುಗಳಿಂದಲೂ ಹೋತುಗಳಿಂದಲೂ ಇವುಗಳಿಂದ ನಿನ್ನ ವ್ಯಾ
೨೨ ಪಾರಗಳು ಅವರೇ. ಶೇಬದ ರಾಸ್ತದ ವರ್ತಕರು, ಇವರೇ ನಿ
ನ್ನ ವರ್ತಕರಾಗಿದ್ದರು; ಎಲ್ಲಾ ಶ್ರೇಷ್ಠವಾದ ಸುಗಂಧಗಳಿಂದಲೂ
ಎಲ್ಲಾ ಬೆಲೆಯುಳ್ಳ ಕಲ್ಲುಗಳಿಂದಲೂ ಚಿನ್ನದಿಂದಲೂ ನಿನ್ನ ಸಂ
೨೩ ತೆಗಳಲ್ಲಿ ವ್ಯಾಪಾರ ನಡಿಸಿದರು. ಹಾರಾನೂ, ಕನ್ನೆಯೂ, ಏ
ದೆನೂ, ಶೇಬದ ಅಶ್ಶೂರಿನ ಕೆಲ್ತಾದಿನ ವರ್ತಕರು ನಿನ್ನ ವರ್ತ
೨೪ ಕರಾಗಿದ್ದರು. ಇವರು ಬಳ್ಳೊಳ್ಳೇ ಸಾಮಾನುಗಳಿಂದಲೂ
ನೀಲಿಯ ಮೇಲಂಗಿಗಳಿಂದಲೂ ಚಿತ್ರವಾಗಿ ಹೊಲಿದ ಕೆಲಸದಿಂದ
ಲೂ ದೇವದಾರುವಿನಿಂದ ಮಾಡಿದಂಥ ಹಗ್ಗಗಳಿಂದ ಕಟ್ಟಿದಂಥ,
ಕೇಶಿಮೆ ತುಂಬಿಸಿದ ಪೆಟ್ಟಿಗೆಗಳಿಂದಲೂ ನಿನ್ನ ಪೇಟೆಯಲ್ಲಿ ನಿನ್ನ
೨೫ ವರ್ತಕರಾಗಿದ್ದರು. ತಾರ್ಷಿಷಿನ ಹಡಗಗಳು ನಿನ್ನ ವ್ಯಾಪಾರದಲ್ಲಿ
ನಿನ್ನ ಗೋಡೆಗಳಾಗಿದ್ದವು; ಹೀಗೆ ನೀನು ತುಂಬಿದಿ; ಸಮುದ್ರಗಳ
ಮಧ್ಯದಲ್ಲಿ ಬಹಳ ಘನವುಳ್ಳವಳಾದಿ.

೨೬ ನಿನ್ನ ಹುಟ್ಟು ಹಾಕುವವರು ನಿನ್ನನ್ನು ಬಹಳ ನೀರುಗಳೊ
ಳಗೆ ತಂದಿದ್ದಾರೆ; ಸಮುದ್ರಗಳ ಮಧ್ಯದಲ್ಲಿ ಮೂಡಣ ಘಾಳಿ
೨೭ ನಿನ್ನನ್ನು ಬಡಿಯಿತು. ನಿನ್ನ ಐಶ್ವರ್ಯವೂ, ನಿನ್ನ ಸಂತೆಗ
ಳೂ, ನಿನ್ನ ಸರಕೂ, ನಿನ್ನ ನಾವಿಕರೂ, ನಿನ್ನ ಹಡಗದ ಯಜ
ಮಾನರೂ, ನಿನ್ನ ಬಿರುಕುಗಳನ್ನು ಮುಚ್ಚುವವರೂ, ನಿನ್ನ ವ್ಯಾ
ಪಾರ ನಡಿಸುವವರೂ, ನಿನ್ನಲ್ಲಿರುವ ನಿನ್ನ ಯುದ್ಧಸ್ಥಕ್ಕೆಲ್ಲರೂ,
ನಿನ್ನ ಮಧ್ಯದಲ್ಲಿರುವ ನಿನ್ನ ಸಮೂಹದ ಸಂಗಡ, ನೀನು ಬೀಳುವ
೨೮ ದಿವಸದಲ್ಲಿ ಸಮುದ್ರದೊಳಗೆ ಬೀಳುವರು. ನಿನ್ನ ಹಡಗದ ಯ
೨೯ ಜಮಾನರ ಕೂಗಿನ ಶಬ್ದಕ್ಕೆ ಊರುಗಳು ನಡುಗುವವು. ಮತ್ತು
ಹುಟ್ಟು ಹಿಡಿಯವವರೆಲ್ಲರೂ ನಾವಿಕರೂ ಸಮುದ್ರದಲ್ಲಿರುವ ಹ
ಡಗದ ಯಜಮಾನರೂ ತಮ್ಮ ಹಡಗಗಳಿಂದ ಇಳಿದು, ಭೂಮಿ
೩೦ ಯಲ್ಲಿ ನಿಂತು ಕೊಂಡು, ನಿನ್ನ ವಿಷಯ ತಮ್ಮ ಶಬ್ದವನ್ನು ಕೇಳಿ
ಮಾಡಿ, ಘಟ್ಟಿಯಾಗಿ ಕೂಗಿ ತಮ್ಮ ತಲೆಗಳ ಮೇಲೆ ಧೂಳಿ
೩೧ ನ್ನು ಹಾಕಿ ಕೊಂಡು, ಬೂದಿಯಲ್ಲಿ ಹೊರಳಾಡಿ, ನಿನಗೋಸ್ಕರ
ಕುದ್ದವಾಗಿ ತಲೆ ಬೋಳಿಸಿ ಕೊಂಡು, ಗೋಣಿಗಳನ್ನು ಕಟ್ಟಿ
ಕೊಂಡು, ದುಃಖವುಳ್ಳ ಹೃದಯದಿಂದ, ಕಹಿಯಾದ ವ್ಯಸನದಿಂದ,
೩೨ ನಿನಗೋಸ್ಕರ ಅಳುವರು. ತಮ್ಮ ದುಃಖದಲ್ಲಿ ನಿನಗೋಸ್ಕರ
ಗೋಳಾಟವನ್ನು ಎತ್ತಿ, ನಿನ್ನ ವಿಷಯ ಗೋಳಾಡಿ ಹೇಳುವ
ದೇನಂದರೆ—ತೂರಿನಂತೆಯೂ ಸಮುದ್ರದೊಳಗೆ ಹಾಳಾದವಳಂತೆ
೩೩ ಯೂ ಯಾರು! ನಿನ್ನ ಸರುಕು ಸಮುದ್ರದೊಳಗಿಂದ ಹೊರಟಾ
ಗ ಅನೇಕ ಜನರಿಗೆ ತೃಪ್ತಿ ಮಾಡಿದಿ; ನಿನ್ನ ದ್ರವ್ಯದ ನಿನ್ನ ವ್ಯಾ
೩೪ ಪಾರದ ಬಾಹುಳ್ಯದಿಂದ ಭೂಮಿಯ ಅರಸರನ್ನು ಐಶ್ವರ್ಯವಂ
ತರಾಗ ಮಾಡಿದಿ. ನೀನು ಸಮುದ್ರಗಳಿಂದ ನೀರಿನ ಅಗಾಧದಲ್ಲಿ
ಬಡಿದಾಗ, ನಿನ್ನೊಳಗಿದ್ದ ನಿನ್ನ ವ್ಯಾಪಾರವೂ ನಿನ್ನ ಸಮೂಹ
೩೫ ಎಲ್ಲವೂ ಬಿದ್ದು ಹೋಯಿತು. ದ್ವೀಪ ನಿವಾಸಿಗಳೆಲ್ಲರೂ ನಿನ್ನ ವಿ
ಷಯ ವಿಸ್ಮಯಗೊಳ್ಳುತ್ತಾರೆ; ಅವುಗಳ ಅರಸರು ಕದಲೇಕದ
೩೬ ಲುತ್ತಾರೆ; ಮುಖದಲ್ಲಿ ನಡುಗುತ್ತಾರೆ. ಜನಗಳಲ್ಲಿರುವ ವರ್ತಕರು
ನಿನಗೆ ಸಿಳ್ಳಿಡುತ್ತಾರೆ, ನೀನು ಭಯಕ್ಕಾಗಿರುವಿ, ಎಂದೆಂದಿಗೂ ಇ
ಲ್ಲದೆ ಹೋದಿ.

## ೨೮. ಸಂಧಿ.

೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇ
೨ ನಂದರೆ—ಮನುಷ್ಯನ ಮಗನೇ, ತೂರಿನ ಪ್ರಭುಗಳಿಗೆ ಹೇಳ ತಕ್ಕ
ದ್ದೇನಂದರೆ—ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನಿ
ನ್ನ ಹೃದಯವು ಎತ್ತಲ್ಪಟ್ಟದ್ದರಿಂದಲೂ, ನಾನು ದೇವರೇ, ದೇ
ವರ ಸ್ಥಾನದಲ್ಲಿ ಸಮುದ್ರಗಳ ಮಧ್ಯದಲ್ಲಿ ಕೂತು ಕೊಳ್ಳುತ್ತೇ
ನೆಂದೂ ಹೇಳಿದ್ದರಿಂದಲೂ, ಆದಾಗ್ಯೂ ನೀನು ದೇವರಲ್ಲ ಮನು
ಷ್ಯನೇ; ಆದರೂ ನಿನ್ನ ಹೃದಯವನ್ನು ದೇವರ ಹೃದಯದಂ
೩ ತೆ ಮಾಡಿಕೊಂಡಿದ್ದೀ. ಇಗೋ, ನೀನು ದಾನಿಯೇಲನಿಗಿಂತ ಜ್ಞಾ
ನಿಯಾಗಿದ್ದೀ; ರಹಸ್ಯವಾದದ್ದು ಯಾವದಾದರೂ ನಿನಗೆ ಮರೆ
೪ ಯಾಗಿರುವದಿಲ್ಲ. ನಿನ್ನ ಜ್ಞಾನದಿಂದಲೂ, ನಿನ್ನ ವಿವೇಕದಿಂದಲೂ,
ನಿನಗೆ ದ್ರವ್ಯವನ್ನುಂಟು ಮಾಡಿದ್ದೀ; ಚಿನ್ನವನ್ನೂ ಬೆಳ್ಳಿಯ
೫ ನ್ನೂ ನಿನ್ನ ಭಂಡಾರಗಳಲ್ಲಿ ಇಟ್ಟು ಕೊಂಡಿದ್ದೀ; ನಿನ್ನ ಜ್ಞಾನದ
ಬಾಹುಳ್ಯದಿಂದಲೂ, ನಿನ್ನ ವ್ಯಾಪಾರದಿಂದಲೂ, ನಿನ್ನ ಸಂಪತ್ತ
ನ್ನು ಹೆಚ್ಚಿಸಿ ಕೊಂಡಿದ್ದೀ; ಮತ್ತು ನಿನ್ನ ಸಂಪತ್ತಿನಿಂದ ನಿನ್ನ ಹೃ
೬ ದಯವು ಎತ್ತಲ್ಪಟ್ಟಿದೆ. ಆದದರಿಂದ ಕರ್ತನಾದ ಯೆಹೋವ ಹೀ
ಗೆ ಹೇಳುತ್ತಾನೆ—ನೀನು ನಿನ್ನ ಹೃದಯವನ್ನು ದೇವರ ಹೃದ
೭ ಯದಂತೆ ಮಾಡಿ ಕೊಂಡದ್ದರಿಂದ, ಇದು ಕಾರಣ, ಇಗೋ,
ನಾನು ಅನ್ಯರನ್ನು, ಜನಾಂಗಗಳಲ್ಲಿ ಭಯಂಕರವಾದವರನ್ನು ನಿ
ನಗೆ ವಿರೋಧವಾಗಿ ತರುತ್ತೇನೆ; ಅವರು ನಿನ್ನ ಜ್ಞಾನದ ಸೌಂದ
ರ್ಯಕ್ಕೆ ವಿರೋಧವಾಗಿ ತಮ್ಮ ಕತ್ತಿಗಳನ್ನು ಹಿರಿಯುವರು; ನಿನ್ನ
೮ ಪ್ರಕಾಶವನ್ನು ಕೆಡಿಸುವರು. ನಿನ್ನನ್ನು ಕುಣಿಗೆ ಇಳಿಸುವರು,
ಸಮುದ್ರಗಳ ಮಧ್ಯದಲ್ಲಿ ಹತವಾದವರ ಮರಣದಿಂದ ಸಾಯುವಿ.
೯ ನಿನ್ನನ್ನು ಕೊಲ್ಲುವವನ ಮುಂದೆ—ನಾನು ದೇವರೆಂದು ಇನ್ನು
ಹೇಳುವಿಯೋ! ನಿನ್ನನ್ನು ಹೊಡಿಯುವವನ ಕೈಯಲ್ಲಿ ನೀನು
೧೦ ದೇವರಲ್ಲ ಮನುಷ್ಯನೇ. ಅನ್ಯರ ಕೈಯಿಂದ ನೀನು ಪರಿಛೇದ
ನೆ ಇಲ್ಲದವರ ಮರಣವನ್ನು ಹೊಂದಿ ಸಾಯುವಿ, ಯಾಕಂದರೆ
ನಾನೇ ಅದನ್ನು ಹೇಳಿದ್ದೇನೆಂದು ಕರ್ತನಾದ ಯೆಹೋವ ಅ
ನ್ನುತ್ತಾನೆ.

೧೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿ
೧೨ ದ್ದೇನಂದರೆ—ಮನುಷ್ಯನ ಮಗನೇ, ತೂರಿನ ಅರಸನ ವಿಷಯ
ಗೋಳಾಟವನ್ನು ಎತ್ತಿ, ಅವನಿಗೆ ಹೇಳ ತಕ್ಕದ್ದೇನಂದರೆ—ಕರ್ತ
ನಾದ ಯೆಹೋವ ಹೀಗೆ ಹೇಳುತ್ತಾನೆ—ನೀನೇ ಸಂಪೂರ್ಣವಾದ
ಮುದ್ರೆಯು; ಜ್ಞಾನ ತುಂಬಿದವನು; ಸೌಂದರ್ಯ ಪೂರ್ಣನು.

೧೩ ದೇವರ ತೋಟವಾದ ಏದೆನಿನಲ್ಲಿ ಇದ್ದಿ; ಬೆಲೆಯುಳ್ಳ ಕಲ್ಲುಗಳೆ
ಲ್ಲಾ, ಅಕ್ಕೀಕ, ತಲುಕಪಡಿಕ, ಸಲೀಮ, ಪುಷ್ಯರಾಗ, ಬೆರಿಲ್ಲ,
ವಜ್ರ, ನೀಲ, ಕೆಂಪು, ಪಚ್ಚೆ ಮತ್ತು ಭಂಗಾರ ಇವುಗಳು ನಿನ್ನನ್ನು
ಹೊದುಗುತ್ತಿದ್ದವು; ನಿನ್ನ ದಮ್ಮಡಿಗಳು ನಿನ್ನ ಕೊಳಲುಗಳು
ಇವುಗಳ ಕೆಲಸವು ನಿನ್ನಲ್ಲಿತ್ತು, ನೀನು ಸೃಷ್ಟಿಸಲ್ಪಟ್ಟ ದಿವಸದ
೧೪ ಲ್ಲಿಯೇ ಸಿದ್ಧ ಮಾಡಲ್ಪಟ್ಟಿವು. ನೀನೇ ಮುಚ್ಚುವಂಥ ಅಭಿಷೇಕಿ
ಸಲ್ಪಟ್ಟ ಕೆರೂಬನು; ದೇವರ ಪರಿಶುದ್ಧ ಪರ್ವತದಲ್ಲಿ ನಿನ್ನನ್ನು
ಇಟ್ಟಿನು, ಅಲ್ಲಿ ಇದ್ದಿ; ಬೆಂಕಿಯ ಕಲ್ಲುಗಳ ಮಧ್ಯದಲ್ಲಿ ನಡೆದು
೧೫ ಕೊಂಡಿ. ನೀನು ಸೃಷ್ಟಿಸಲ್ಪಟ್ಟ ದಿವಸವಾರಭ್ಯ ಅನ್ಯಾಯ
ನಿನ್ನಲ್ಲಿ ಶಿಕ್ಕುವ ಪರ್ಯಂತರ ನಿನ್ನ ಮಾರ್ಗಗಳಲ್ಲಿ ಸಂಪೂರ್ಣ
೧೬ ನಾಗಿದ್ದಿ. ನಿನ್ನ ಬಹಳ ವ್ಯಾಪಾರದಿಂದ ನಿನ್ನ ಮಧ್ಯವನ್ನು ಬಲಾ
ತ್ಕಾರದಿಂದ ತುಂಬಿಸಿದ್ದಾರೆ; ನೀನು ಪಾಪ ಮಾಡಿದ್ದಿಗೆ; ಆದದರಿಂದ
ನಿನ್ನನ್ನು ಭ್ರಷ್ಟನೆಂದು ದೇವರ ಪರ್ವತದೊಳಗಿಂದ ಬಿಸಾಡುವೆ
ನು; ಓ ಮುಚ್ಚುವ ಕೆರೂಬನೇ, ಬೆಂಕಿಯ ಕಲ್ಲುಗಳ ಮಧ್ಯದಿಂದ
೧೭ ನಿನ್ನನ್ನು ನಾಶ ಮಾಡುವೆನು. ನಿನ್ನ ಸೌಂದರ್ಯದ ನಿಮಿತ್ತ
ನಿನ್ನ ಹೃದಯವು ಎತ್ತಲ್ಪಟ್ಟಿತು; ನಿನ್ನ ಪ್ರಕಾಶದ ನಿಮಿತ್ತ ನಿನ್ನ
ಜ್ಞಾನವನ್ನು ಕೆಡಿಸಿ ಬಿಟ್ಟೆ; ನಾನು ನಿನ್ನನ್ನು ನೆಲಕ್ಕೆ ಹಾಕುವೆನು;
ಅರಸರ ಮುಂದೆ, ಅವರು ನಿನ್ನನ್ನು ನೋಡುವ ಹಾಗೆ, ನಿನ್ನನ್ನು
೧೮ ಇಡುತ್ತೇನೆ. ನಿನ್ನ ಅಕ್ರಮದ ಬಾಹುಳ್ಯದಿಂದಲೂ, ನಿನ್ನ ವ್ಯಾ
ಪಾರದ ಅನ್ಯಾಯದಿಂದಲೂ, ನಿನ್ನ ಪರಿಶುದ್ಧ ಸ್ಥಳಗಳನ್ನು ಅಪ
ವಿತ್ರ ಮಾಡಿದ್ದಿಗೆ; ಆದದರಿಂದ ನಾನು ನಿನ್ನೊಳಗಿಂದ ಬೆಂಕಿಯ
ನ್ನು ಹೊರಗೆ ಬರ ಮಾಡುವೆನು; ಅದು ನಿನ್ನನ್ನು ತಿಂದು ಬಿಡು
ವದು; ಮತ್ತು ನಾನು ನಿನ್ನನ್ನು ಭೂಮಿಯ ಮೇಲೆ, ನಿನ್ನನ್ನು
೧೯ ನೋಡುವವರೆಲ್ಲರ ಮುಂದೆ, ಬೂದಿಯಾಗ ಮಾಡುವೆನು. ಜನ
ಗಳಲ್ಲಿ ನಿನ್ನನ್ನು ತಿಳಿದವರೆಲ್ಲರೂ ನಿನ್ನ ವಿಷಯ ವಿಸ್ಮಯಗೊ
ಳ್ಳುವರು; ನೀನು ಭಯಕ್ಕಾಗಿರುವಿ, ಎಂದೆಂದಿಗೂ ಇಲ್ಲದೆ ಹೋ
ಗುವಿ.

೨೦ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿ
೨೧ ದ್ದೇನಂದರೆ—ಮನುಷ್ಯನ ಮಗನೇ, ನಿನ್ನ ಮುಖವನ್ನು ಚಿದೋ
ನಿಗೆ ವಿರೋಧವಾಗಿ ಇಟ್ಟು, ಅದಕ್ಕೆ ವಿರೋಧವಾಗಿ ಪ್ರವಾದಿಸು.
೨೨ ನೀನು ಹೇಳ ತಕ್ಕದ್ದೇನಂದರೆ—ಕರ್ತನಾದ ಯೆಹೋವ ಹೀ
ಗೆ ಹೇಳುತ್ತಾನೆ—ಇಗೋ, ಚಿದೋನೇ, ನಾನು ನಿನಗೆ ವಿರೋಧ
ವಾಗಿದ್ದೇನೆ; ನಿನ್ನ ಮಧ್ಯದಲ್ಲಿ ಘನವನ್ನು ಹೊಂದುವೆನು; ಆಗ
ನಾನು ಅದರಲ್ಲಿ ನ್ಯಾಯಗಳನ್ನು ತೀರಿಸುವಾಗ, ಅದರಲ್ಲಿ ಪರಿ
ಶುದ್ಧನಾಗುವಾಗ, ನಾನೇ ಯೆಹೋವನೆಂದು ತಿಳಿಯುವರು.
೨೩ ಹ್ಯಾಗಂದರೆ ಅದರಲ್ಲಿ ವ್ಯಾಧಿಯನ್ನೂ ಅದರ ಬೀದಿಗಳಲ್ಲಿ ರಕ್ತ
ವನ್ನು ಕಳುಹಿಸುವೆನು; ಸುತ್ತಲಾಗಿ ಅದಕ್ಕೆ ವಿರೋಧವಾಗಿರುವ
ಕತ್ತಿಯಿಂದ ಹತವಾದವರು ಅದರಲ್ಲಿ ಬೀಳುವರು; ಆಗ ನಾನೇ
೨೪ ಯೆಹೋವನೆಂದು ತಿಳಿಯುವರು. ಆಗ ಇಸ್ರಯೇಲನ ಮನೆಯವ
ರಿಗೆ, ಅವರ ಸುತ್ತಲಾಗಿದ್ದು ಅವರನ್ನು ಅಸಡ್ಡೆ ಮಾಡಿದವರೆಲ್ಲರ
ಲ್ಲಿ ಚುಚ್ಚುವ ನೆಗ್ಗಿಲೂ ನೋಯಿಸುವ ಮುಳ್ಳೂ, ಇನ್ನು ಇರುವ
೨೫ ದಿಲ್ಲ; ನಾನೇ ಕರ್ತನಾದ ಯೆಹೋವನೆಂದು ತಿಳಿಯುವರು. ಕ
ರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನಾನು ಇಸ್ರಯೇಲ
ನ ಮನೆಯವರನ್ನು ಅವರು ಚದರಿ ಹೋದ ಜನಗಳೊಳಗಿಂದ
ಕೂಡಿಸಿದ ಮೇಲೆಯೂ, ಜನಾಂಗಗಳ ಮುಂದೆ ಅವರಲ್ಲಿ ಪರಿಶು
ದ್ಧನಾದ ಮೇಲೆಯೂ, ನಾನು ನನ್ನ ಸೇವಕನಾದ ಯಾಕೋಬ
೨೬ ನಿಗೆ ಕೊಟ್ಟ ಅವರ ದೇಶದಲ್ಲಿ ವಾಸಿಸುವರು. ಅವರು ಭದ್ರವಾಗಿ
ಅದರಲ್ಲಿ ವಾಸಿಸುವರು; ಮನೆಗಳನ್ನು ಕಟ್ಟುವರು; ದ್ರಾಕ್ಷೇ ತೋ
ಟಗಳನ್ನು ನೆಡುವರು; ಹೌದು, ಸುತ್ತಲಾಗಿ ಅವರನ್ನು ಅಸಡ್ಡೆ
ಮಾಡಿದವರೆಲ್ಲರಿಗೆ ನಾನು ನ್ಯಾಯ ತೀರಿಸಿದ ಮೇಲೆ ಭದ್ರವಾಗಿ
ವಾಸಿಸುವರು; ಮತ್ತು ಯೆಹೋವನಾದ ನಾನೇ ಅವರ ದೇವರೆಂ
ದು ತಿಳಿಯುವರು.

## ೨೯. ಸಂಧಿ.

೧ ಹತ್ತನೇ ವರುಷದಲ್ಲಿ, ಹತ್ತನೇ ತಿಂಗಳಿನ ಹನ್ನೆರಡನೇ ದಿವಸ
ದಲ್ಲಿ, ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇನಂದರೆ—
೨ ಮನುಷ್ಯನ ಮಗನೇ, ನಿನ್ನ ಮುಖವನ್ನು ಐಗುಪ್ತದ ಅರಸನಾದ
ಫರೋನನಿಗೆ ವಿರೋಧವಾಗಿ ಇಟ್ಟು, ಅವನಿಗೂ ಸಮಸ್ತ ಐಗು
3 ಪ್ತಕ್ಕೂ ವಿರೋಧವಾಗಿ ಪ್ರವಾದಿಸು. ನೀನು ಮಾತಾಡಿ ಹೇಳ ತ
ಕ್ಕದ್ದೇನಂದರೆ—ಕರ್ತನಾದ ಯೆಹೋವ ಹೀಗೆ ಹೇಳುತಾನೆ
ಐಗುಪ್ತದ ಅರಸನಾದ ಫರೋನನೇ, ತನ್ನ ನದಿಗಳ ಮಧ್ಯದಲ್ಲಿ
ಮಲಗಿ ಕೊಂಡು—ನನ್ನ ನದಿ ನನ್ನದೇ, ನಾನೇ ಅದನ್ನು ನನಗೋ
ಸ್ಕರ ಮಾಡಿದ್ದೇನೆಂದು ಹೇಳುವ ದೊಡ್ಡ ಗತ ಸರ್ಪವೇ, ಇಗೋ
೪ ನಾನು ನಿನಗೆ ವಿರೋಧವಾದ್ದೇನೆ. ನಿನ್ನದವಡೆಗಳಲ್ಲಿ ಗಾಲಗಳನ್ನು
ಇಟ್ಟು, ನಿನ್ನ ನದಿಗಳ ಮೀನುಗಳನ್ನು ನಿನ್ನ ಶಿಪ್ಪೆಗಳಿಗೆ ಅಂಟಿ
ಕೊಳ್ಳ ಮಾಡಿ, ನಿನ್ನನ್ನು ನಿನ್ನ ನದಿಗಳೊಳಗಿಂದ ಮೇಲೆ ಬರ
ಮಾಡುವೆನು; ನಿನ್ನ ನದಿಗಳ ಮೀನುಗಳೆಲ್ಲಾ ನಿನ್ನ ಶಿಪ್ಪೆಗಳಿಗೆ
೫ ಅಂಟಿ ಕೊಳ್ಳುವವು. ಮತ್ತು ನಿನ್ನನ್ನೂ ನಿನ್ನ ನದಿಗಳ ಎಲ್ಲಾ
ಮೀನುಗಳನ್ನೂ ಅರಣ್ಯದಲ್ಲಿ ಹಾಕಿ ಬಿಡುವೆನು; ಹೊಲದ ಮೇಲೆ
ಬೀಳುವಿ; ನೀನು ಕೂಡಿಸಲ್ಪಡುವದಿಲ್ಲ, ಕೇರಿಸಲ್ಪಡುವದಿಲ್ಲ; ಭೂಮಿ
ಯ ಮೃಗಗಳಿಗೂ ಆಕಾಶದ ಪಕ್ಷಿಗಳಿಗೂ ನಿನ್ನನ್ನು ಆಹಾರ
೬ ವಾಗಿ ಕೊಟ್ಟಿದ್ದೇನೆ. ಆಗ ಐಗುಪ್ತದ ನಿವಾಸಿಗಳೆಲ್ಲಾ ನಾನೇ ಯೆ
ಹೋವನೆಂದು ತಿಳಿಯುವರು; ಯಾಕಂದರೆ ಅವರು ಇಸ್ರಯೇಲ
೭ ನ ಮನೆಯವರಿಗೆ ದಂಟೆನ ಕೋಲಾಗಿದ್ದರು. ಅವರು ನಿನ್ನನ್ನು
ನಿನ್ನ ಕೈಯಿಂದ ಹಿಡಿದಾಗ ನೀನು ಮುರಿದು ಹೋಗಿ, ಅವರ ಹೆ
ಗಲನ್ನೆಲ್ಲಾ ಶೀಳಿ ಬಿಟ್ಟೆ; ಅವರು ನಿನ್ನನ್ನು ಊರಿ ಕೊಂಡಾಗ
೮ ನೀನು ಒಡೆದು, ಅವರ ನಡುವುಗಳನ್ನೆಲ್ಲಾ ನಿಲ್ಲಿಸಿ ಬಿಟ್ಟಿ. ಆದದ
ರಿಂದ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇಗೋ,
ನಾನು ನಿನ್ನ ಮೇಲೆ ಕತ್ತಿಯನ್ನು ತರುತ್ತೇನೆ; ಮನುಷ್ಯರನ್ನೂ
೯ ಮೃಗಗಳನ್ನೂ ನಿನ್ನೊಳಗಿಂದ ಕಡಿದು ಬಿಡುತ್ತೇನೆ. ಮತ್ತು
ಐಗುಪ್ತ ದೇಶವು ಹಾಳು ಕಾಡೂ ಆಗುವದು; ಅವನು—ನದಿಯು
ನನ್ನದೇ, ನಾನೆ ಅದನ್ನು ಮಾಡಿ ಕೊಂಡೆನೆಂದು ಹೇಳಿದದರಿಂದ,
೧೦ ನಾನೇ ಯೆಹೋವನೆಂದು ತಿಳಿಯುವರು. ಆದದರಿಂದ ಇಗೋ
ನಾನು ನಿನಗೆ ವಿರೋಧವಾಗಿಯೂ, ನಿನ್ನ ನದಿಗಳಿಗೆ ವಿರೋಧ
ವಾಗಿಯೂ, ಇದ್ದೇನೆ; ಮತ್ತು ಐಗುಪ್ತ ದೇಶವನ್ನು ಸೆವೇನೆಯ
ಗೋಪುರವು ಮೊದಲೊಂಗು ಕೂಷಿನ ಪ್ರಾಂತ್ಯದ ಪರ್ಯಂತರ
ಪೂರ್ಣವಾಗಿ ಕಾಡಾಗಿಯೂ, ಹಾಳಾಗಿಯೂ, ಮಾಡುತ್ತೇ
೧೧ ನೆ. ಮನುಷ್ಯರ ಕಾಲು ಅದರಲ್ಲಿ ಹಾದು ಹೋಗುವದಿಲ್ಲ;
ಮೃಗಗಳ ಕಾಲು ಅದರಲ್ಲಿ ಹಾದು ಹೋಗುವದಿಲ್ಲ; ನಾಲ್ವತ್ತು
೧೨ ವರುಷಗಳ ಪರ್ಯಂತರ ಅದರಲ್ಲಿ ನಿವಾಸಿಗಳು ಇರುವದಿಲ್ಲ. ನಾ



ನು ಐಗುಪ್ತ ದೇಶವನ್ನು ಹಾಳಾದ ದೇಶಗಳ ಮಧ್ಯದಲ್ಲಿ ಹಾಳಾ
ಗ ಮಾಡುವೆನು; ಅದರ ಪಟ್ಟಣಗಳು ಕಾಡಾದ ಪಟ್ಟಣಗಳ ಮಧ್ಯದ
ಲ್ಲಿ ನಾಲ್ವತ್ತು ವರುಷಗಳು ಹಾಳಾಗಿರುವವು; ಮತ್ತು ನಾನು ಐ
ಗುಪ್ತ್ಯರನ್ನು ಜನಾಂಗಗಳಲ್ಲಿ ಚದರಿಸಿ ದೇಶಗಳಲ್ಲಿ ಹೆಲ್ಲುವೆನು.
೧೩ ಆದರೂ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನಾಲ್ವ
ತ್ತು ವರುಷಗಳ ಕಡೆಯಲ್ಲಿ ನಾನು ಐಗುಪ್ತ್ಯರನ್ನೂ, ಅವರು ಚೆ
೧೪ ದರಿ ಇರುವ ಜನಗಳೊಳಗಿಂದ ಕೂಡಿಸುವೆನು. ನಾನು ಐಗುಪ್ತ್ಯಾ
ರ ಶಕೆಯನ್ನು ತಿರುಗಿಸಿ ಅವರನ್ನು ಪತ್ರೋಸಿನ ದೇಶಕ್ಕೆ, ಅವ
ರ ಜನ್ಮ ದೇಶಕ್ಕೆ, ತಿರಿಗಿ ಬರ ಮಾಡುವೆನು; ಅಲ್ಲಿ ಅವರು ದೀನ
೧೫ ರಾಜ್ಯವಾಗಿರುವರು. ಅದು ರಾಜ್ಯಗಳಲ್ಲಿ ಅತಿ ದೀನವಾಗಿರುವ
ದು; ಇನ್ನು ಜನಾಂಗಗಳ ಮೇಲೆ ತನ್ನನ್ನು ಎತ್ತಿ ಕೊಳ್ಳುವದಿಲ್ಲ;
ಯಾಕಂದರೆ, ಅವರು ಇನ್ನು ಜನಾಂಗಗಳನ್ನು ಆಳದ ಹಾಗೆ ಅ
೧೬ ವರನ್ನು ಕಡಿಮೆ ಮಾಡುತ್ತೇನೆ. ಅದು ಇನ್ನು ಇಸ್ರಯೇಲನ
ಮನೆಯವರಿಗೆ ನಂಬಿಕೆಯಾಗಿಯೂ ಇವರು ಅವರ ಕಡೆಗೆ ತಿರು
ಗಿ ಕೊಳ್ಳುವದರಿಂದ ಅಕ್ರಮವನ್ನು ಜ್ಞಾಪಕಕ್ಕೆ ತರುವಂಥಾ
ದ್ದಾಗಿಯೂ ಇರುವದಿಲ್ಲ; ಆಗ, ನಾನೇ ಕರ್ತನಾದ ಯೆಹೋ
ವನೆಂದು ತಿಳಿಯುವರು.

೧೭ ಇದಲ್ಲದೆ ಇಪ್ಪತ್ತೇಳನೇ ವರುಷದಲ್ಲಿ, ಮೊದಲನೇ ತಿಂಗಳಿನ
ಮೊದಲನೇ ದಿವಸದಲ್ಲಿ ಆದದ್ದೇನಂದರೆ—ಯೆಹೋವನ ವಾಕ್ಯವು
೧೮ ನನಗೆ ಉಂಟಾಗಿ ಹೀಗೆ ಹೇಳಿತು; ಹ್ಯಾಗಂದರೆ—ಮನುಷ್ಯನ
ಮಗನೇ, ಬಾಬೆಲಿನ ಅರಸನಾದ ನೆಬುಕದ್ನೆಚ್ಚರನು ತನ್ನ ದಂಡ
ನ್ನು ತೂರಿಗೆ ವಿರೋಧವಾಗಿ ದೊಡ್ಡ ಶೇವೆ ಶೇವಸ ಮಾಡಿದನು;
ತಲೆಗಳೆಲ್ಲಾ ಬೋಳಾದವು; ಹೆಗಲುಗಳೆಲ್ಲಾ ಸುಲಿಯಲ್ಪಟ್ಟವು;
ಆದಾಗ್ಯೂ ಅವನಿಗಾದರೂ ಅವನ ದಂಡಿಗಾದರೂ ತೂರಿನಿಂದ,
ಅವನು ಅದಕ್ಕೆ ವಿರೋಧವಾಗಿ ಶೇವಸಿದ ಶೇವೆಗೋಸ್ಕರ ಕೂಲಿ
೧೯ ಬರಲಿಲ್ಲ. ಆದದರಿಂದ ಕರ್ತನಾದ ಯೆಹೋವ ಹೀಗೆ ಹೇಳುತ್ತಾ
ನೆ—ಇಗೋ ನಾನು ಬಾಬೆಲಿನ ಅರಸನಾದ ನೆಬುಕದ್ನೆಚ್ಚರನಿಗೆ
ಐಗುಪ್ತ ದೇಶವನ್ನು ಕೊಡುತ್ತೇನೆ; ಅವನು ಅದರ ಜನ ಸಮೂ
ಹವನ್ನೂ, ಅದರ ಕೊಳ್ಳೆಯನ್ನೂ, ಅದರ ಸುಲಿಗೆಯನ್ನು ತ
೨೦ ಕ್ಕೊಳ್ಳುವನು; ಇದೇ ಅವನ ದಂಡಿಗೆ ಕೂಲಿಯಾಗುವದು. ಅವನು
ಅದಕ್ಕೆ ವಿರೋಧವಾಗಿ ಮಾಡಿದ ಕಷ್ಟಕ್ಕೋಸ್ಕರ ಐಗುಪ್ತ ದೇಶವ
ನ್ನು ಅವನಿಗೆ ಕೊಟ್ಟಿದ್ದೇನೆ; ಯಾಕಂದರೆ ನನಗೋಸ್ಕರ ಅದ
ನ್ನು ಮಾಡಿದ್ದಾರೆಂದು ಕರ್ತನಾದ ಯೆಹೋವ ಅನ್ನುತ್ತಾನೆ.
೨೧ ಆ ದಿವಸದಲ್ಲಿ ನಾನು ಇಸ್ರಯೇಲನ ಮನೆಯವರ ಕೊಂಬನ್ನು;
ಚಿಗುರ ಮಾಡುವೆನು; ಮತ್ತು ಅವರಲ್ಲಿ ನಿನಗೆ ಬಾಯಿ ತೆರೆಯು
ವಿಕೆಯನ್ನು ಕೊಡುವೆನು; ಆಗ, ನಾನೇ ಯೆಹೋವನೆಂದು ತಿಳಿ
ಯುವರು.

## ೩೦. ಸಂಧಿ.

೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇ
೨ ನಂದರೆ—ಮನುಷ್ಯನ ಮಗನೇ, ನೀನು ಪ್ರವಾದಿಸಿ ಹೇಳ ತಕ್ಕ
ದ್ದೇನಂದರೆ—ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಅ
3 ಯ್ಯೋ, ದಿವಸವೇ! ಎಂದು ಹುಯಿಲಿಡಿರಿ. ಯಾಕಂದರೆ ದಿವಸ
ವು ಸಮೀಪವಾಯಿತು, ಯೆಹೋವನ ದಿವಸವು, ಮೋಡವಾದ ದಿ
ವಸವು, ಸಮೀಪವಾಯಿತು; ಅದು ಜನಾಂಗಗಳ ಕಾಲವಾಗಿರುವ
೪ ದು. ಆಗ ಕತ್ತಿಯು ಐಗುಪ್ತದ ಮೇಲೆ ಬರುವದು; ಐಗುಪ್ತದ
ಲ್ಲಿ ಹತವಾದವರು ಬೀಳುವಾಗ, ಕೂಷಿನಲ್ಲಿ ಮಹಾ ವೇದನೆ ಯಾ
ಗುವದು; ಆಗಲವರು ಅದರ ಜನ ಸಮೂಹವನ್ನು ತಕ್ಕೊಂಡು
ಹೋಗುವರು; ಅದರ ಅಸ್ತಿವಾರಗಳು ಕಿತ್ತು ಹಾಕಲ್ಪಟ್ಟುವವು.
೫ ಕೂಷೂ ಫೂತೂ ಲೂದೂ ಮಿಶ್ರವಾದ ಜನರೆಲ್ಲರೂ ಕೂಬೂ
ಒಡಂಬಡಿಕೆಯಲ್ಲಿರುವ ದೇಶದ ಮಕ್ಕಳೂ, ಅವರ ಸಂಗಡ ಕತ್ತಿ
೬ ಯಿಂದ ಬೀಳುವರು. ಯೆಹೋವ ಹೇಳುವದೇನಂದರೆ—ಐಗುಪ್ತ
ಕ್ಕೆ ಆಧಾರ ಕೊಡುವವರು ಸಹಾ ಬೀಳುವರು; ಮತ್ತು ಅದರ
ಶ್ರಾಣದ ಗರ್ವವು ತಗ್ಗುವದು; ಸೆವೇನೆಯ ಗೋಪುರವು ಮೊದ
ಲೊಗ್ಗಂಡು ಅದರಲ್ಲಿ ಕತ್ತಿಯಿಂದ ಬೀಳುವರೆಂದು ಕರ್ತನಾದ ಯೆ
೭ ಹೋವ ಅನ್ನುತ್ತಾನೆ ಆಗಲವರು ಕಾಡಾಗಿರುವ ದೇಶಗಳ ಮ
ಧ್ಯದಲ್ಲಿ ಕಾಡಾಗಿರುವರು; ಅದರ ಪಟ್ಟಣಗಳು ಹಾಳಾದ ಪಟ್ಟಣಗಳ
೮ ಮಧ್ಯದಲ್ಲಿ ಇರುವವು. ನಾನು ಐಗುಪ್ತದಲ್ಲಿ ಬೆಂಕಿ ಇಟ್ಟ ಮೇಲೆ,
ಅದಕ್ಕೆ ಸಹಾಯ ಮಾಡುವವರೆಲ್ಲರು ಮುರಿಯಲ್ಪಟ್ಟ ಮೇಲೆ,
೯ ನಾನೇ ಯೆಹೋವನೆಂದು ಅವರಿಗೆ ತಿಳಿಯುವದು. ಆ ದಿವಸದ
ಲ್ಲಿ ನನ್ನ ಕಡೆಯಿಂದ ದೂತರು ಹಡಗಗಳಲ್ಲಿ ಹೊರಟು, ಭದ್ರವಾ
ಗಿರುವ ಕೂಷನ್ನು ಹೆದರಿಸುವರು, ಮತ್ತು ಐಗುಪ್ತದ ದಿನದಲ್ಲಿ
ಆದ ಹಾಗೆ ಮಹಾ ಭಯವು ಅವರಲ್ಲಿ ಉಂಟಾಗುವದು; ಯಾ
೧೦ ಕಂದರೆ ಇಗೋ ಅದು ಬರುತ್ತದೆ. ಕರ್ತನಾದ ಯೆಹೋವ ಹೀ
ಗೆ ಹೇಳುತ್ತಾನೆ—ನಾನು ಐಗುಪ್ತದ ಜನ ಸಮೂಹವನ್ನು ಬಾ
ಬೆಲಿನ ಅರಸನಾದ ನೆಬುಕದ್ನೆಚ್ಚರನ ಕೈಯಿಂದ ತೀರಿಸಿ ಬಿಡು
೧೧ತ್ತೇನೆ. ಅವನು ಜನಾಂಗಗಳಲ್ಲಿ ಭಯಂಕರವಾದ ತನ್ನ ಜನರ
ಸಂಗಡ ದೇಶವನ್ನು ನಾಶ ಮಾಡುವದಕ್ಕೆ ತರಲ್ಪಡುವನು; ಅವ
ರು ಐಗುಪ್ತಕ್ಕೆ ವಿರೋಧವಾಗಿ ತಮ್ಮ ಕತ್ತಿಗಳನ್ನು ಹಿರಿದು, ದೇ
೧೨ ಶವನ್ನು ಹತವಾದವರಿಂದ ತುಂಬಿಸುವರು. ಇದಲ್ಲದೆ ನಾನು ನದಿಗ
ಳನ್ನು ಒಣಗ ಮಾಡಿ ದೇಶವನ್ನು ದುಷ್ಟರ ಕೈಯಲ್ಲಿ ಮಾರಿ,
ದೇಶವನ್ನೂ ಅದರ ಪರಿಪೂರ್ಣತೆಯನ್ನೂ ಅನ್ಯರ ಕೈಯಿಂದ
ಹಾಳು ಮಾಡುವೆನು; ಯೆಹೋವನಾದ ನಾನೇ ಇದನ್ನು ಹೇಳಿ
೧೩ ದ್ದೇನೆ. ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನಾನು
ವಿಗ್ರಹಗಳನ್ನು ಸಹ ನಾಶ ಮಾಡಿ, ಬೊಂಬೆಗಳನ್ನು ನೋಫಿನ
ಲ್ಲಿ ತೀರಿಸಿ ಬಿಡುವೆನು; ಐಗುಪ್ತ ದೇಶದ ಪ್ರಭು ಇನ್ನು ಇರುವದಿ
ಲ್ಲ; ಮತ್ತು ಐಗುಪ್ತ ದೇಶದಲ್ಲಿ ಭಯವನ್ನು ಉಂಟು ಮಾಡುತ್ತೇ
೧೪ ನೆ. ನಾನು ಪತ್ರೋಸನ್ನು ಹಾಳು ಮಾಡುವೆನು; ಜೋವಾನಿನಲ್ಲಿ
ಬೆಂಕಿ ಇಡುವೆನು, ನೋವದಲ್ಲಿ ನ್ಯಾಯೆಗಳನ್ನು ತೀರಿಸುವೆನು.
೧೫ ಮತ್ತು ಐಗುಪ್ತದ ಶ್ರಾಣಸ್ಥಾನವಾದ ಸೀನಿನ ಮೇಲೆ ನನ ಉಸ
ವನ್ನು ಹೊಯ್ಯುವೆನು; ನೋವದ ಜನ ಸಮೂಹವನ್ನು ಕಡಿದು
೧೬ ಬಿಡುವೆನು. ನಾನು ಐಗುಪ್ತದಲ್ಲಿ ಬೆಂಕಿ ಇಡುವೆನು; ಸೀನಕ್ಕೆ ಬ
ಹಳ್ಳ ಬೇನೆ ಯಾಗುವದು; ನೋವ ಶೀಳಲ್ಪಟುವದು; ನೋಫಿನಲ್ಲಿ
೧೭ ದಿನ ದಿನದ ಇಕ್ಕಟ್ಟು ಇರುವದು. ಆವೇನಿನ ಪಿಪೇಸೆತಿನ ಯೌ
ವ್ವನಸ್ಥರು ಕತ್ತಿಯಿಂದ ಬೀಳುವರು; ಈ ಪಟ್ಟಣಗಳು ತಕೆಗೆ ಹೋ
೧೮ ಗುವವು. ತಾಪನೇಸಿನಲ್ಲಿಯೂ ನಾನು ಅಲ್ಲಿ ಐಗುಪ್ತದ ನೊಗಗ
ಳನ್ನು ಮುರಿಯುವಾಗ, ಹಗಲು ಕತ್ತಲಾಗುವದು; ಅದರ ಶ್ರಾಣ
ದ ಗರ್ವವು ಅದರಲ್ಲಿ ತೀರಿ ಹೋಗುವದು; ಅದನ್ನು ಮೇಘವು
ಮುಚ್ಚುವದು; ಅದರ ಕುಮಾರ್ತೆಗಳು ತಕೆಗೆ ಹೋಗುವರು.
೧೯ ಹೀಗೆ ನಾನು ಐಗುಪ್ತದಲ್ಲಿ ನ್ಯಾಯೆಗಳನ್ನು ತೀರಿಸುವೆನು; ಆಗ
ನಾನೇ ಯೆಹೋವನೆಂದು ಅವರಿಗೆ ತಿಳಿಯುವದು.

೨೦ ಇದಲ್ಲದೆ ಹನ್ನೊಂದನೇ ವರುಷದಲ್ಲಿ ಮೊದಲನೇ ತಿಂಗಳಿನ ಏಳನೇ ದಿವಸದಲ್ಲಿ ಯೆಹೋವನ ವಾಕ್ಯವು ನನಗೆ ಉಂಟಾಗಿ ೨೧ ಹೇಳಿದ್ದೇನಂದರೆ—ಮನುಷ್ಯನ ಮಗನೇ, ಐಗುಪ್ತದ ಅರಸನಾದ ಫರೋನನ ತೋಳ್ಳನ್ನು ಮುರಿದಿದ್ದೇನೆ; ಇಗೋ, ಅದು ವಾಸಿಯಾಗುವ ಹಾಗೆ ಕಟ್ಟಲ್ಪಟ್ಟಿರುವದಿಲ್ಲ; ಅದು ಕತ್ತಿಯನ್ನು ಹಿಡಿಯುವ ಹಾಗೆ ಅದಕ್ಕೆ ಬಲ ಕೊಡುವದಕ್ಕೆ ಪಟ್ಟಿ ಬಿಗಿಸಲ್ಪಟ್ಟಿರುವದಿಲ್ಲ.

೨೨ ಆದದರಿಂದ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇಗೋ ನಾನು ಐಗುಪ್ತದ ಅರಸನಾದ ಫರೋನನಿಗೆ ವಿರೋಧವಾಗಿದ್ದೇನೆ; ಬಲವುಳ್ಳದ್ದೂ ಮುರಿದದ್ದೂ ಆಗಿರುವ ಅವನ ಕೈಗಳನ್ನು ಮುರಿಯುತ್ತೇನೆ; ಮತ್ತು ಕತ್ತಿಯನ್ನು ಅವನ ಕೈಯೊಳಗಿಂದ ೨೩ ಬೀಳ್ಳ ಮಾಡುತ್ತೇನೆ. ಮತ್ತು ಐಗುಪ್ತ್ಯರನ್ನು ಜನಾಂಗಳಗಲ್ಲಿ ಚದರಿಸಿ, ದೇಶಗಳಲ್ಲಿ ಅವರನ್ನು ಚೆಲ್ಲುತ್ತೇನೆ. ಮತ್ತು ಬಾಬೆಲಿನ ಅರಸನ ತೋಳ್ಳುಗಳಿಗೆ ಬಲ ಕೊಟ್ಟು, ನನ್ನ ಕತ್ತಿಯನ್ನು ಅವನ ಕೈಯಲ್ಲಿ ಕೊಡುವೆನು; ಮತ್ತು ಫರೋನನ ಕೈಗಳನ್ನು ಮುರಿಯುವೆನು; ಪ್ರಾಣ ಘಾಯ ಪಟ್ಟವನು ಅಂಗಲಾಚುವ ಪ್ರಕಾರ ೲ೪ ಇವನು ಅವನ ಮುಂದೆ ಅಂಗಲಾಚುವನು. ನಾನು ಬಾಬೆಲಿನ ತೋಳ್ಳುಗಳಿಗೆ ಬಲ ಕೊಡುವೆನು; ಆದರೆ ಫರೋನನ ತೋಳ್ಳುಗಳು ಬೀಳ್ಳವವು; ನಾನು ನನ್ನ ಕತ್ತಿಯನ್ನು ಬಾಬೆಲಿನ ಅರಸನ ಕೈಯಲ್ಲಿ ಕೊಡಲಾಗಿ ಇವನು ಅದನ್ನು ಐಗುಪ್ತ ದೇಶದ ಮೇಲೆ ಚಾಚುವಾಗ, ನಾನೇ ಯೆಹೋವನೆಂದು ಅವರಿಗೆ ತಿಳಿಯುವದು. ೲ೬ ಮತ್ತು ಐಗುಪ್ತ್ಯರನ್ನು ಜನಾಂಗಗಳಲ್ಲಿ ಚದರಿಸಿ ದೇಶಗಳಲ್ಲಿ ಚೆಲ್ಲುತ್ತೇನೆ; ಆಗ ನಾನೇ ಯೆಹೋವನೆಂದು ಅವರಿಗೆ ತಿಳಿಯುವದು.

## ೩೧. ಸಂಧಿ.

೧ ಹನ್ನೊಂದನೇ ವರುಷದಲ್ಲಿ ಮೂರನೇ ತಿಂಗಳಿನ ಮೊದಲನೇ ದಿವಸದಲ್ಲಿ ಆದದ್ದೇನಂದರೆ—ಯೆಹೋವನ ವಾಕ್ಯವು ನನಗೆ ಉಂ ೨ ಟಾಗಿ ಹೇಳಿದ್ದೇನಂದರೆ—ಮನುಷ್ಯನ ಮಗನೇ, ನೀನು ಐಗುಪ್ತದ ಅರಸನಾದ ಫರೋನನಿಗೂ ಅವನ ಜನಸಮೂಹಕ್ಕೂ ಹೇಳ ತಕ್ಕದ್ದೇನಂದರೆ—ನೀನು ನಿನ್ನ ದೊಡ್ಡಸ್ತಿಕೆಯಲ್ಲಿ ಯಾರಿಗೆ ೩ ಸಮಾನವಾಗಿದ್ದೀ? ಇಗೋ ಅಶ್ಶೂರ್ಯನು ಲೆಬನೋನಿನ ದೇವದಾರಾಗಿದ್ದನು; ಅವನ ಕೊಂಬೆಗಳು ಸೌಂದರ್ಯವಾದವುಗಳು; ತುಂಬ ನೆರಳು ಕೊಡುವಂಥಾವು; ಅವನ ನೀಳ ಎತ್ತರವಾದದ್ದು; ೪ ಅವನ ತಲೆ ಬತ್ತಿಕೊಂಡ ಕೊಂಬೆಗಳ ಮಧ್ಯದಲ್ಲಿತ್ತು. ನೀರುಗಳು ಅವನನ್ನು ಬೆಳೆಸಿದವು; ಅಗಾಧವು ತನ್ನ ನದಿಗಳನ್ನು ಅವನ ಬೆಳೆಯ ಸುತ್ತಲಾಗಿ ಹೋಗ ಮಾಡಿ, ತನ್ನ ಕಾಲಿವೆಗಳನ್ನು ಹೊಲದ ಮರಗಳೆಲ್ಲಾ ಕಳುಹಿಸಿ ಅವನನ್ನು ಎತ್ತರ ಮಾಡಿತು. ೫ ಆದದರಿಂದ ಅವನ ನೀಳವು ಹೊಲದ ಎಲ್ಲಾ ಮರಗಳಿಗಿಂತ ಎತ್ತರವಾಯಿತು; ಅವನು ಹಬ್ಬಿದದರಿಂದ ಬಹಳ ನೀರಿನ ದೆಸೆಯಿಂದ ಅವನ ಕೊಂಬೆಗಳು ಬಹಳವಾದವು; ಅವನ ರೆಂಬೆಗಳು ಉದ್ದವಾದವು. ೬ ಅವನ ಕೊಂಬೆಗಳಲ್ಲಿ ಆಕಾಶದ ಪಕ್ಷಿಗಳೆಲ್ಲಾ ತಮ್ಮ ಗೂಡುಗಳನ್ನು ಮಾಡಿದವು; ಅವನ ರೆಂಬೆಗಳ ಕೆಳಗೆ ಹೊಲದ ಮೃಗಗಳೆಲ್ಲಾ ಹಡವು; ಅವನ ನೆರಳಿನಲ್ಲಿ ದೊಡ್ಡ ಜನಾಂಗಳೆ ೭ ಲ್ಲಾ ವಾಸ ಮಾಡಿದವು. ಹೀಗೆ ಅವನು ತನ್ನ ದೊಡ್ಡಸ್ತಿಕೆಯಲ್ಲಿ, ತನ್ನ ಕೊಂಬೆಗಳ ಉದ್ದದಲ್ಲಿ, ಸೌಂದರ್ಯವಾಗಿದ್ದನು; ಯಾಕಂ ೮ ದರೆ ಅವನ ಬೇರು ದೊಡ್ಡ ನೀರುಗಳ ಬಳಿಯಲ್ಲಿ ಇತ್ತು. ದೇವರ ತೋಟದ ದೇವದಾರುಗಳು ಅವನನ್ನು ಮರೆ ಮಾಡಲಿಲ್ಲ; ತುರಾಯಿ ಮರಗಳು ಅವನ ಕೊಂಬೆಗಳಿಗೆ ಸಮವಾಗಲಿಲ್ಲ; ಆಲದ ಮರಗಳು ಅವನ ರೆಂಬೆಗಳ ಹಾಗಲ್ಲ; ದೇವರ ತೋಟದಲ್ಲಿರುವ ಮರಗಳಲ್ಲಿ ಒಂದಾದರು ಅವನಿಗೆ ಅವನ ಸೌಂದರ್ಯದಲ್ಲಿ ೯ ಸಮಾನವಲ್ಲ. ಅವನ ಕೊಂಬೆಗಳ ಬಾಹುಳ್ಯದಿಂದ ಅವನನ್ನು ಸೌಂದರ್ಯವಾಗ ಮಾಡಿದೆನು; ದೇವರ ತೋಟದಲ್ಲಿರುವ ಏದೆನಿನ ಮರಗಳೆಲ್ಲಾ ಅವನ ಮೇಲೆ ಹೊಟ್ಟೆಕಿಚ್ಚು ಪಟ್ಟವು. ೧೦ ಆದದರಿಂದ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನೀನು ನೀಳದಲ್ಲಿ ಎತ್ತರವಾದ ಕಾರಣ, ಅವನು ತನ್ನ ತಲೆಯನ್ನು ಬತ್ತಿಕೊಂಡಿರುವ ಕೊಂಬೆಗಳ ಕಡೆಗೆ ಚಾಚಿದ ಕಾರಣ, ಅವನ ೧೧ ಹೃದಯವು ತನ್ನ ಎತ್ತರದಲ್ಲಿ ಎತ್ತಲ್ಪಟ್ಟ ಕಾರಣ, ಆದದರಿಂದ ನಾನು ಅವನನ್ನು ಜನಾಂಗಗಳ ಶೂರನ ಕೈಯಲ್ಲಿ ಒಪ್ಪಿಸಿದ್ದೇನೆ; ಇವನು ನಡಿಸೇ ಅವನಿಗೆ ನಡಿಸುವನು; ಅವನ ದುಷ್ಟತ್ವದ ನಿಮಿ ೧೨ ತ್ತ ಅವನನ್ನು ಹೊರಡಿಸಿದ್ದೇನೆ. ಹೀಗಿರುವದರಿಂದ ಅನ್ಯರು, ಜನಾಂಗಗಳಲ್ಲಿ ಭಯಂಕರವಾದವರು, ಅವನನ್ನು ಕಡಿದು, ಬಿಟ್ಟು ಬಿಡುವರು. ಬೆಟ್ಟಗಳ ಮೇಲೆಯೂ ಎಲ್ಲಾ ತಗ್ಗುಗಳಲ್ಲಿಯೂ ಅವನ ಕೊಂಬೆಗಳು, ಬೀಳ್ಳುವವು; ದೇಶದ ಹಳ್ಳಗಳಲ್ಲೆಲ್ಲಾ ಅವನ ರೆಂಬೆಗಳು ಮುರಿದು ಹೋಗುವವು; ಭೂಮಿಯ ಜನಗಳೆಲ್ಲಾ ಅವನ ನೆರಳಿನಿಂದ ಇಳಿದು ಹೋಗಿ ಅವನನ್ನು ಬಿಡುವರು. ೧೩ ಬಿದ್ದಿರುವ ಅವನ ಬುಡದಲ್ಲಿ ಆಕಾಶದ ಪಕ್ಷಿಗಳೆಲ್ಲಾ ಕೂತು ಕೊಳ್ಳುವವು; ಅವನ ರೆಂಬೆಗಳ ಬಳಿಯಲ್ಲಿ ಹೊಲದ ಮೃಗಗಳೆಲ್ಲಾ ೧೪ ಇರುವವು. ಕಾರಣವೇನಂದರೆ—ನೀರಿನ ಮರಗಳಲ್ಲಿ ಯಾವದಾರೂ ತನ್ನ ಎತ್ತರದಲ್ಲಿ ಎತ್ತಿಕೊಳ್ಳದೆ, ತನ್ನ ತಲೆಯನ್ನು ಬತ್ತಿಕೊಂಡಿರುವ ಕೊಂಬೆಗಳ ಮಧ್ಯದಲ್ಲಿ ಚಾಚಕೆ, ನೀರು ಕುಡಿಯುವವುಗಳಲ್ಲಿ ಬಂದಾದರೂ ತನ್ನ ಎತ್ತರದಲ್ಲಿ ನಿಂತು ಕೊಳ್ಳದ ಹಾಗೆಯೇ. ಯಾಕಂದರೆ ಅವರೆಲ್ಲಾ ಮರಣಕ್ಕೆ, ಕೆಳಗಿನ ೲ೫ ಭೂಮಿಗೆ, ಮನುಷ್ಯರ ಮಕ್ಕಳೊಳಗೆ ಕೂಡಿಗೆ ಇಳಿಯುವವರ ಸಂಗಡ ಬಪ್ಪಿಸಲ್ಪಟ್ಟಿದ್ದಾರೆ. ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಅವನು ಪಾತಾಳಕ್ಕೆ ಇಳಿದ ದಿವಸದಲ್ಲಿ ನಾನು ಗೋಳಾಟವನ್ನು ಹುಟ್ಟಿಸುವೆನು; ಅವನಿಗೋಸ್ಕರ ಅಗಾಧವನ್ನು ಮುಚ್ಚುವೆನು; ಅದರ ಪ್ರವಾಹಗಳನ್ನು ಹಿಡಿಯುವೆನು; ಮಹಾ ಜಲಗಳು ನಿಲ್ಲಿಸಲ್ಪಡುವವು: ನಾನು ಲೆಬನೋನನ್ನು ಸಹ ಅವನಿಗೋಸ್ಕರ ಗೋಳಾಡ ಮಾಡುವೆನು; ಹೊಲದ ಮರ ೲ೬ ಗಳೆಲ್ಲಾ ಅವನಿಗೋಸ್ಕರ ಕುಗ್ಗಿ ಹೋಗುವವು. ಕೂಡಿಗೆ ಇಳಿಯುವವರ ಸಂಗಡ ನಾನು ಅವನನ್ನು ಪಾತಾಳಕ್ಕೆ ಇಳಿಸಿದಾಗ, ಅವನು ಬಿದ್ದ ಶಬ್ದಕ್ಕೆ ಜನಾಂಗಗಳನ್ನು ನಡುಗ ಮಾಡಿದೆನು; ಏದೆನಿನ ಮರಗಳೆಲ್ಲಾ, ಲೆಬನೋನಿನ ಶ್ರೇಷ್ಠವಾದವುಗಳೂ ಉತ್ತಮವಾದವುಗಳೂ ನೀರು ಕುಡಿಯುವವುಗಳೆಲ್ಲಾ, ಕೆಳಗಿನ ಭೂ ೲ೭ ಮಿಯಲ್ಲಿ ಆದರಣೆ ಹೊಂದುವವು. ಅವರು ಕೂಡ ಜನಾಂಗಗಳೊಳಗೆ ಅವನ ನೆರಳಿನಲ್ಲಿ ಕೂತು ಕೊಂಡ ಅವನ ಕೈಗಳು ಸಹ ಅವನ ಸಂಗಡ ಪಾತಾಳಕ್ಕೆ, ಕತ್ತಿಯಿಂದ ಹತವಾದವರ ೲ೮ ಬಳಿಗೆ, ಇಳಿದು ಹೋಗುವರು. ನೀನು ಹೀಗೆ ಮಹಿಮೆಯಿಂದಲೂ ದೊಡ್ಡಸ್ತಿಕೆಯಿಂದಲೂ ಏದೆನಿನ ಮರಗಳಲ್ಲಿ ಯಾವದಕ್ಕೆ ಸಮಾನವಾಗಿದ್ದೀ? ಆದಾಗ್ಯೂ ಏದೆನಿನ ಮರಗಳ ಸಂಗಡ



ಕೆಳಗಿನ ಭೂಮಿಗೆ ಇಳಿಸಲ್ಪಡುವಿ; ಪರಿಛೇದನೆ ಇಲ್ಲದವರ ಮಧ್ಯದಲ್ಲಿ ಕತ್ತಿಯಿಂದ ಹತವಾದವರ ಸಂಗಡ ಮಲಗುವಿ; ಇದೇ ಫರೋನನೂ ಅವನ ಎಲ್ಲಾ ಜನ ಸಮೂಹವೂ ಎಂದು ಕರ್ತನಾದ ಯೆಹೋವ ಅನ್ನುತ್ತಾನೆ.

## ೩೨. ಸಂಧಿ.

೧ ಹನ್ನೆರಡನೇ ವರುಷದಲ್ಲಿ, ಹನ್ನೆರಡನೇ ತಿಂಗಳಿನ ಮೊದಲನೇ ದಿವಸದಲ್ಲಿ, ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿ ೨ ದ್ದೇನಂದರೆ—ಮನುಷ್ಯನ ಮಗನೇ, ಐಗುಪ್ತದ ಅರಸನಾದ ಫರೋನನ ವಿಷಯ ಗೋಳಾಟವನ್ನು ಎತ್ತಿ, ಅವನಿಗೆ ನೀನು ಹೇಳ ತಕ್ಕದ್ದೇನಂದರೆ—ನೀನು ಜನಾಂಗಗಳಲ್ಲಿ ಸಿಂಹದ ಮರಿಗೆ ಸಮಾನವಾಗಿದ್ದೀ, ಸಮುದ್ರಗಳಲ್ಲಿರುವ ಗಸಗಸಪದ ಹಾಗಿದ್ದೀ, ನಿನ್ನ ನದಿಗಳಿಂದ ಹೊರಟು, ನಿನ್ನ ಕಾಲುಗಳಿಂದ ನೀರನ್ನು ಕಲು ೩ ಕ ಮಾಡಿ ಅದರ ನದಿಗಳನ್ನು ತುಳಿದಿ. ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇದು ಕಾರಣ ನಾನು ನನ್ನ ಬಲೆಯನ್ನು ಬಹು ಜನಗಳ ಕೂಟದ ಸಂಗಡ, ನಿನ್ನ ಮೇಲೆ ಹಾಸುವೆನು; ಅವರು ನಿನ್ನನ್ನು ನನ್ನ ಬಲೆಯಲ್ಲಿ ಮೇಲೆ ಎಳ್ಳಿಯುವರು. ೪ ಆಗ ನಾನು ನಿನ್ನನ್ನು ದೇಶದಲ್ಲಿ ಹಾಕಿ ಬಿಟ್ಟು, ಹೊಲದ ಮೇಲೆ ಬಿಸಾಡುವೆನು; ಮತ್ತು ಆಕಾಶದ ಪಕ್ಷಿಗಳೆನ್ನೆಲ್ಲಾ ನಿನ್ನ ಮೇಲೆ ಕೂತ್ರ ಮಾಡಿ, ಸಮಸ್ತ ಭೂಮಿಯ ಮೃಗಗಳನ್ನು ನಿನ್ನಿಂದ ೫ ತೃಪ್ತಿ ಪಡಿಸುವೆನು. ಮತ್ತು ನಿನ್ನ ಮಾಂಸವನ್ನು ಬೆಟ್ಟಗಳ ಮೇಲೆ ಹಾಕಿ, ನಿನ್ನ ರಾಶಿಯಿಂದ ತಗ್ಗುಗಳನ್ನು ತುಂಬಿಸುವೆನು. ೬ ಇದಲ್ಲದೆ ನೀನು ತೇಲಾಡಿದ ದೇಶವನ್ನು ಬೆಟ್ಟಗಳ ಮಟ್ಟಿಗೂ ನಿನ್ನ ರಕ್ತದಿಂದ ತ್ಯಾವ ಮಾಡುವೆನು; ಹಳ್ಳಗಳು ನಿನ್ನಿಂದ ೭ ತುಂಬುವವು. ಇದಲ್ಲದೆ ನಿನ್ನನ್ನು ಆರಿಸಿ ಬಿಡುವಾಗ, ಆಕಾಶವನ್ನು ಮುಚ್ಚುವೆನು, ಅದರ ನಕ್ಷತ್ರಗಳನ್ನು ಕತ್ತಲಾಗ ಮಾಡುವೆನು, ಸೂರ್ಯನನ್ನು ಮೇಘದಿಂದ ಮುಚ್ಚುವೆನು; ಚಂದ್ರನು ೮ ತನ್ನ ಬೆಳಕನ್ನು ಕೊಡದೆ ಇರುವನು. ಆಕಾಶದಲ್ಲಿ ಬೆಳಕು ಕೊಡುವವುಗಳನ್ನೆಲ್ಲಾ ನಿನ್ನ ನಿಮಿತ್ತ ಕಪ್ಪಾಗ ಮಾಡುವೆನು; ಕತ್ತಲೆಯನ್ನು ನಿನ್ನ ದೇಶದ ಮೇಲೆ ಇಡುತ್ತೇನೆಂದು ಕರ್ತನಾದ ೯ ಯೆಹೋವ ಅನ್ನುತ್ತಾನೆ. ಇದಲ್ಲದೆ ಜನಾಂಗಗಳೊಳಗೆ, ನೀನು ಅರಿಯದ ದೇಶಗಳೊಳಗೆ, ನಿನ್ನ ಮುರಿಯೋಣವನ್ನು ಪ್ರಸಿದ್ಧಿ ಮಾಡಿ ಅನೇಕ ಜನಗಳ ಹೃದಯದಲ್ಲಿ ಕರಕರೆ ಎಬ್ಬಿಸುವೆನು. ೧೦ ಹೌದು, ಅನೇಕ ಜನರನ್ನು ನಿನ್ನ ವಿಷಯ ವಿಸ್ಮಯಗೊಳ್ಳ ಮಾಡುವೆನು; ಅವರ ಅರಸರು, ನಾನು ಅವರ ಮುಂದೆ ನನ್ನ ಕತ್ತಿಯನ್ನು ಬೀಸುವಾಗ, ನಿನ್ನ ವಿಷಯ ಕಳವಳಗೊಳ್ಳುವರು ನೀನು ಬೀಳುವ ದಿವಸದಲ್ಲಿ, ಅವರು ಕ್ಷಣ ಕ್ಷಣಕ್ಕೆ ತಮ್ಮ ೧೧ ತಮ್ಮ ಪ್ರಾಣದ ವಿಷಯ ಹೆದರುವರು. ಯಾಕಂದರೆ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಬಾಬೆಲಿನ ಅರಸನ ಕತ್ತಿ ೧೨ ನಿನ್ನ ಮೇಲೆ ಬರುವದು. ಪರಾಕ್ರಮಶಾಲಿಗಳ ಕತ್ತಿಗಳಿಂದ ನಿನ್ನ ಜನ ಸಮೂಹವನ್ನು ಬೀಳ್ಳ ಮಾಡುವೆನು; ಅವರೆಲ್ಲರು ಜನಾಂಗಳಲ್ಲಿ ಭಯಂಕರಕೇ; ಅವರು ಐಗುಪ್ತದ ಮಹತ್ತನ್ನು ಕೆಡಿಸುವರು; ಮತ್ತು ಅದರ ಜನ ಸಮೂಹವೆಲ್ಲಾ ಹಾಳಾಗುವದು. ೧೩ ಇದಲ್ಲದೆ ನಾನು ಬಹಳ ನೀರುಗಳ ಬಳಿಯಲ್ಲಿದ್ದ ಅದರ ಮೃಗಗಳೆನ್ನೆಲ್ಲಾ ನಾಶ ಮಾಡುವೆನು; ಆ ನೀರುಗಳನ್ನು ಇನ್ನು ಮೇಲೆ ಮನುಷ್ಯನ ಕಾಲು ಕಲಕು ಮಾಡುವದಿಲ್ಲ; ಮೃಗಗಳ ಗೊರಸೆ ೧೪ ಕಲಕು ಮಾಡುವದಿಲ್ಲ. ಆಗ ನಾನು ಅದರ ನೀರುಗಳನ್ನು ಶುದ್ಧ ಮಾಡುವೆನು; ಅದರ ನದಿಗಳನ್ನು ಎಣ್ಣೆಯಂತೆ ಹರಿಯ ಮಾಡುವೆನು, ಎಂದು ಕರ್ತನಾದ ಯೆಹೋವ ಅನ್ನುತ್ತಾನೆ. ೲ೫ ನಾನು ಐಗುಪ್ತ ದೇಶವನ್ನು ಹಾಳು ಮಾಡುವಾಗ, ದೇಶವು ಅದರ ಪರಿಪೂರ್ಣತೆ ಇಲ್ಲದೆ ಹಾಳಾದಾಗ, ನಾನು ಅದರ ನಿವಾಸಿಗಳನ್ನೆಲ್ಲಾ ಹೊಡೆಯುವಾಗ, ನಾನೇ ಯೆಹೋವನೆಂದು ಅವರಿಗೆ ೲ೬ ತಿಳಿಯುವದು. ಇದು ಗೋಳಾಟವೇ, ಇದನ್ನು ಕುರಿತು ಗೋಳಾಡುವರು; ಜನಾಂಗಗಳ ಕುಮಾರ್ತೆಗಳು ಇದನ್ನು ಕುರಿತು ಗೋಳಾಡುವರು; ಐಗುಪ್ತದ ವಿಷಯವಾಗಿಯೂ ಅದರ ಎಲ್ಲಾ ಜನ ಸಮೂಹದ ವಿಷಯವಾಗಿಯೂ ಗೋಳಾಡುವರೆಂದು ಕರ್ತನಾದ ಯೆಹೋವ ಅನ್ನುತ್ತಾನೆ.

ೲ೭ ಇದಲ್ಲದೆ ಹನ್ನೆರಡನೇ ವರುಷದಲ್ಲಿ, ತಿಂಗಳಿನ ಹದಿನೈದನೇ ದಿವಸದಲ್ಲಿ, ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇ ೲ೮ ನಂದರೆ—ಮನುಷ್ಯನ ಮಗನೇ, ಐಗುಪ್ತದ ಜನ ಸಮೂಹದ ವಿಷಯ ಅಂಗಲಾಚು, ಅದನ್ನೂ, ಅದರ ಸಂಗಡ ಘನವುಳ್ಳ ಜನಾಂಗಗಳ ಕುಮಾರ್ತೆಗಳನ್ನೂ ಭೂಮಿಯ ಕೆಳಗಿನ ಭಾಗಗಳಿಗೆ, ೲ೯ ಕೂಡಿಯೊಳಗೆ ಇಳಿಯುವವರ ಸಂಗಡ ಇಳಿಸು. ಯಾರಿಗಿಂತ ನೀನು ಸೌಂದರ್ಯವುಳ್ಳವನು? ಇಳಿದು ಹೋಗು, ಪರಿಛೇದನೆ ೩೦ ಇಲ್ಲದವರ ಸಂಗಡ ಮಲಗು. ಕತ್ತಿಯಿಂದ ಹತವಾದವರ ಮಧ್ಯಲ್ಲಿ ಅವರು ಬೀಳ್ಳುವರು; ಕತ್ತಿಗೆ ಒಪ್ಪಿಸಲ್ಪಟ್ಟಿದೆ; ಅದನ್ನೂ ಅದರ ಎಲ್ಲಾ ಜನ ಸಮೂಹಗಳನ್ನೂ ಎಳ್ಳಿಯಿರಿ. ಶೂರರ ಶ್ರೇಷ್ಠರು ಅವನಿಗೆ ಸಹಾಯ ಮಾಡಿದವರ ಸಂಗಡ ಪಾತಾಳದೊಳಗಿಂದ ಅವನ ಸಂಗಡ ಮಾತಾಡುವರು; ಇಳಿದಿದ್ದಾರೆ; ಪರಿಛೇದನೆ ಇಲ್ಲದವರಾಗಿಯೂ, ಕತ್ತಿಯಿಂದ ಹತವಾದವರಾಗಿಯೂ, ಮಲಗಿದ್ದಾರೆ. ಅಲ್ಲಿ ಅಶ್ಶೂರೂ ಅದರ ಗುಂಪೆಲ್ಲವೂ ಉಂಟು; ಅದರ ಸುತ್ತಲು ಅದರ ಸಮಾಧಿಗಳವೆ; ಅವಕೆಲ್ಲರು ಹತವಾದವರೇ; ೩೩ ಕತ್ತಿಯಿಂದ ಬಿದ್ದವರೇ. ಅದರ ಸಮಾಧಿಗಳು ಕೂಡಿಯ ಪಾರ್ಶ್ವಗಳಲ್ಲಿ ಇಡಲ್ಪಟ್ಟವೆ, ಅದರ ಸಮಾಧಿಯ ಸುತ್ತಲು ಅದರ ಗುಂಪು ಇದೆ; ಜೀವಿತರ ದೇಶದಲ್ಲಿ ಭಯವನ್ನುಂಟು ಮಾಡಿದವರಾದ ಇವರೆಲ್ಲರು ಕತ್ತಿಯಿಂದ ಬಿದ್ದು ಹತವಾದವರೇ. ಅಲ್ಲಿ ಏಲಾಮೂ, ಅದರ ಸಮೂಹವೆಲ್ಲವೂ, ಅದರ ಸಮಾಧಿಯ ಸುತ್ತಲಾಗಿದೆ; ಅವರೆಲ್ಲರು ಕತ್ತಿಯಿಂದ ಬಿದ್ದು ಹತವಾದವರೇ; ಪರಿಛೇದನೆ ಯಿಲ್ಲದವರಾಗಿ ಭೂಮಿಯ ಕೆಳಗಿನ ಭಾಗಗಳಿಗೆ ಇಳಿದವರೇ; ಅವರು ಜೀವಿತರ ದೇಶದಲ್ಲಿ ತಮ್ಮ ಭಯವನ್ನುಂಟು ಮಾಡಿದಾಗ್ಯೂ ಕೂಡಿಗೆ ಇಳಿಯುವವರ ಸಂಗಡ ತಮ್ಮ ನಿಂದೆಯನ್ನು ೲ೩ ಹೊತ್ತು ಕೊಂಡಿದ್ದಾರೆ. ಅದಕ್ಕೂ ಅದರ ಎಲ್ಲಾ ಸಮೂಹಕ್ಕೂ ಹತವಾದವರ ಮಧ್ಯದಲ್ಲಿ ಮಂಚವನ್ನು ಇಟ್ಟಿದ್ದಾರೆ; ಅದರ ಸುತ್ತಲು ಅದರ ಸಮಾಧಿಗಳವೆ; ಅವಕೆಲ್ಲರು ಕತ್ತಿಯಿಂದ ಹತವಾದ ಪರಿಛೇದನೆ ಯಿಲ್ಲದವರೇ; ಅವರು ಜೀವಿತರ ದೇಶದಲ್ಲಿ ತಮ್ಮ ಭಯವನ್ನುಂಟು ಮಾಡಿದಾಗ್ಯೂ, ಕೂಡಿಗೆ ಇಳಿಯುವವರ ಸಂಗಡ ತಮ್ಮ ನಿಂದೆಯನ್ನು ಹೊತ್ತು ಕೊಂಡು, ಹತವಾದವರ ೲ೪ ಮಧ್ಯದಲ್ಲಿ ಇಡಲ್ಪಟ್ಟಿದ್ದಾರೆ. ಅಲ್ಲಿ ಮೆಷೆಕೂ ತೂಬಲೂ ಅದರ ಸಮೂಹವೆಲ್ಲವೂ ಅದರ ಸಮಾಧಿಗಳೂ ಅದರ ಸುತ್ತಲಾಗಿವೆ; ಇವಕೆಲ್ಲರೂ ಜೀವಿತರ ದೇಶದಲ್ಲಿ ತಮ್ಮ ಭಯವನ್ನುಂಟು

ಮಾಡಿದಾಗ್ಯೂ, ಕತ್ತಿಯಿಂದ ಹತವಾದವರಿಗೇದನೆಯಿಲ್ಲದವರೇ.
೨೭ ಪರಿಹೇದನೆ ಯಿಲ್ಲದವರಲ್ಲಿ ಬಿದ್ದಂಥ, ತನ್ನ ಯುದ್ಧದ ಆಯುಧ
ಗಳ ಸಂಗಡ ಪಾತಾಳಕ್ಕೆ ಇಳಿದಂಥ ಶೂರರ ಸಂಗಡ ಇವರು
ಮಲಗ ಬೇಡವೇ! ಅವರು ತಮ್ಮ ಕತ್ತಿಗಳನ್ನು ತಮ್ಮ ತಲೆಗಳ
ಕೆಳಗೆ ಇಟ್ಟಿದ್ದಾರೆ; ಅವರು ಜೀವಿತರ ದೇಶದಲ್ಲಿ ಶೂರರಿಗೆ ಭಯ
ವನ್ನುಂಟು ಮಾಡಿದಾಗ್ಯೂ ಅವರ ಅಕ್ರಮಗಳು ಅವರ ಎಲುಬು
೨೮ ಗಳ ಮೇಲೆ ಇರುವದು. ಹೌದು ನೀನು ಪರಿಹೇದನೆ ಯಿಲ್ಲದವರ
ಮಧ್ಯದಲ್ಲಿ ಮುರಿಯಲ್ಪಡುವಿ; ಕತ್ತಿಯಿಂದ ಹತವಾದವರ ಸಂಗಡ
೨೯ ಮಲಗುವಿ. ಅಲ್ಲಿ ಎದೋಮೂ ಅದರ ಅರಸರೂ ಅದರ ಪ್ರಭು
ಗಳೆಲ್ಲರೂ; ಅವರು ಶೂರರಾಗಿದ್ದಾಗ್ಯೂ ಕತ್ತಿಯಿಂದ ಹತವಾದ
ವರ ಸಂಗಡ ಇಡಲ್ಪಟ್ಟಿದ್ದಾರೆ; ಅವರು ಪರಿಹೇದನೆ ಯಿಲ್ಲದವರ
ಸಂಗಡಲೂ, ಕುಣಿಗೆಗೆ ಇಳಿಯುವವರ ಸಂಗಡಲೂ ಮಲಗುವರು.
೩೦ ಅಲ್ಲಿ ಉತ್ತರದ ರಾಜರೂ ಅವರೆಲ್ಲರು, ಮತ್ತು ಜೀದೋನಿಯರೆ
ಲ್ಲರು, ಇದ್ದಾರೆ; ಅವರು ಭಯವನ್ನುಂಟು ಮಾಡಿದಾಗ್ಯೂ
ತಮ್ಮ ಪರಾಕ್ರಮತನಕ್ಕೆ ನಾಚಿಕೆ ಪಟ್ಟು ಹತವಾದವರ ಸಂಗಡ
ಇಳಿದಿದ್ದಾರೆ; ಪರಿಹೇದನೆ ಯಿಲ್ಲದವರಾಗಿ ಕತ್ತಿಯಿಂದ ಹತವಾದ
ವರ ಸಂಗಡ ಮಲಗಿ, ಕುಣಿಗೆಗೆ ಇಳಿಯುವವರ ಸಂಗಡ ತಮ್ಮ
೩೧ ನಿಂದೆಯನ್ನು ಹೊತ್ತು ಕೊಳ್ಳುತ್ತಾರೆ. ಇವರನ್ನು ಫರೋನನು
ನೋಡಿ, ತನ್ನ ಸಮೂಹವೆಲ್ಲಾದರ ವಿಷಯ ಆದರಣೆ ಹೊಂದು
ವನು; ಫರೋನನೂ ಅವನ ಸೈನ್ಯವೆಲ್ಲವೂ, ಕತ್ತಿಯಿಂದ ಹತ
ವಾದವರೇ, ಎಂದು ಕರ್ತನಾದ ಯೆಹೋವ ಅನ್ನುತ್ತಾನೆ.
೩೨ ಯಾಕಂದರೆ ನಾನು ನನ್ನ ಭಯವನ್ನು ಜೀವಿತರ ದೇಶದಲ್ಲಿ
ಉಂಟು ಮಾಡಿದ್ದೇನೆ; ಹೌದು, ಆ ಫರೋನನು, ಅವನ ಎಲ್ಲಾ
ಸಮೂಹದ ಸಹಿತವಾಗಿ, ಕತ್ತಿಯಿಂದ ಹತವಾದವರ ಸಂಗಡ,
ಪರಿಹೇದನೆ ಯಿಲ್ಲದವರ ಮಧ್ಯದಲ್ಲಿ ಮಲಗಿಸಲ್ಪಡುವನೆಂದು
ಕರ್ತನಾದ ಯೆಹೋವ ಅನ್ನುತ್ತಾನೆ.

## ೩೩. ಸಂಧಿ.

೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳ್ದೇ
೨ ನಂದರೆ—ಮನುಷ್ಯನ ಮಗನೇ, ನೀನು ನಿನ್ನ ಜನರ ಮಕ್ಕಳ
ಸಂಗಡ ಮಾತಾಡಿ, ಅವರಿಗೆ ಹೇಳ ತಕ್ಕದ್ದೇನಂದರೆ—ನಾನು
ಒಂದು ದೇಶದ ಮೇಲೆ ಕತ್ತಿಯನ್ನು ಬರ ಮಾಡುವಾಗ ಆ ದೇಶ
ದ ಜನರು ತಮ್ಮ ಪ್ರಾಂತ್ಯದ ಒಬ್ಬ ಮನುಷ್ಯನನ್ನು ತಕ್ಕೊಂ
೩ ಡು ತಮಗೆ ಕೋವರದವನಾಗಿ ಇಟ್ಟರೆ, ಇವನು ಕತ್ತಿಯು ದೇಶ
ದ ಮೇಲೆ ಬರುವದನ್ನು ನೋಡಿ ತುತೂರಿಯನ್ನು ಊದಿ ಜನರ
೪ ನ್ನು ಎಚ್ಚರಿಸಿದರೆ, ತುತೂರಿಯ ಶಬ್ದವನ್ನು ಯಾವನು ಕೇಳಿ
ಎಚ್ಚರಿಕೆಯಾಗುವದಿಲ್ಲವೋ, ಕತ್ತಿ ಬಂದು ಅವನನ್ನು ತಕ್ಕೊಂ
ಡರೆ ಅವನ ರಕ್ತವು ಅವನ ತಲೆಯ ಮೇಲೆಯೇ ಇರುವದು.
೫ ಅವನು ತುತೂರಿಯ ಶಬ್ದವನ್ನು ಕೇಳಿ ಎಚ್ಚರಿಕೆಯಾಗಲಿಲ್ಲ,
ಆದರಿಂದ ಅವನ ರಕ್ತವು, ಅವನ ಮೇಲೆಯೇ ಇರುವದು;
ಆದರೆ ಎಚ್ಚರಿಕೆಯಾಗುವವನು ತನ್ನ ಪ್ರಾಣವನ್ನು ತಪ್ಪಿ
೬ ಸಿ ಕೊಳ್ಳುವನು. ಆದರೆ ಕೋವರದವನು ಕತ್ತಿಯು ಬರುವದ
ನ್ನು ನೋಡಿ ತುತೂರಿಯನ್ನು ಊದದೆ, ಜನರನ್ನು ಎಚ್ಚರಿಸದೆ
ಹೋದರೆ, ಕತ್ತಿಯು ಬಂದು, ಅವರಲ್ಲಿ ಯಾರನ್ನಾದರೂ ತ
ಕ್ಕೊಂಡರೆ ಇವನು ತನ್ನ ಅಕ್ರಮದಲ್ಲಿ ತೆಗೆಯಲ್ಪಡುತ್ತಾನೆ,
ಆದರೆ ಅವನ ರಕ್ತವನ್ನು ನಾನು ಕೋವರದವನ ಕೈಯಿಂದ
೭ ವಿಚಾರಿಸುವೆನು. ಹಾಗೆಯೇ ನೀನು ಓ ಮನುಷ್ಯನ ಮಗನೇ
ನಾನು ನಿನ್ನನ್ನು ಇಸ್ರಯೇಲನ ಮನೆಯವರಿಗೆ ಕೋವರದವನಾ
ಗಿ ಇಟ್ಟಿದ್ದೇನೆ; ಆದದರಿಂದ ನೀನು ನನ್ನ ಬಾಯಿಯಿಂದ ವಾಕ್ಯ
ವನ್ನು ಕೇಳಿ, ಅವರನ್ನು ನನ್ನ ಕಡೆಯಿಂದ ಎಚ್ಚರಿಸ ಬೇಕು.
೮ ನಾನು ದುಷ್ಟನಿಗೆ—ದುಷ್ಟನೇ ನೀನು ಸತ್ತೇ ಸಾಯುವಿ, ಎಂದು
ಹೇಳುವಾಗ ನೀನು ದುಷ್ಟನನ್ನು, ಅವನ ಮಾರ್ಗದ ವಿಷಯ
ಎಚ್ಚರಿಸುವ ಹಾಗೆ, ಮಾತಾಡದೆ ಹೋದರೆ, ಆ ದುಷ್ಟನು ತನ್ನ
ಅಕ್ರಮದಲ್ಲಿ ಸಾಯುವನು, ಆದರೆ ಅವನ ರಕ್ತವನ್ನು ನಿನ್ನ ಕೈ
೯ ಯಿಂದ ವಿಚಾರಿಸುವೆನು. ಆದರೆ ನೀನು ದುಷ್ಟನನ್ನು ಅವನ
ಮಾರ್ಗದ ವಿಷಯ ಅವನು ಅದನ್ನು ಬಿಟ್ಟು ತಿರುಗ ಬೇಕೆಂದು,
ಎಚ್ಚರಿಸಿದ ಮೇಲೆ, ಅವನು ತನ್ನ ಮಾರ್ಗವನ್ನು ಬಿಟ್ಟು ತಿರುಗ
ದೆ ಹೋದರೆ, ಅವನು ತನ್ನ ಅಕ್ರಮದಲ್ಲಿ ಸಾಯುವನು; ಆದರೆ
೧೦ ನೀನು ನಿನ್ನ ಪ್ರಾಣವನ್ನು ತಪ್ಪಿಸಿ ಕೊಂಡಿದ್ದೀ. ಆದಕಾರಣ,
ಮನುಷ್ಯನ ಮಗನೇ, ಇಸ್ರಯೇಲನ ಮನೆಯವರಿಗೆ ನೀನು ಹೇ
ಳ ತಕ್ಕದ್ದೇನಂದರೆ—ನಮ್ಮ ಅಪರಾಧಗಳೂ ನಮ್ಮ ಪಾಪಗಳೂ
ನಮ್ಮ ಮೇರೆ ಇದ್ದು ನಾವು ಅವುಗಳಲ್ಲಿ ಸವೆದು ಹೋದರೆ, ಹ್ಯಾ
೧೧ ಗೆ ಬದುಕೇವೆಂದು ಹೇಳುತ್ತೀರಲ್ಲ! ಅವರಿಗೆ ನೀನು ಹೇಳ ತಕ್ಕ
ದ್ದೇನಂದರೆ—ಕರ್ತನಾದ ಯೆಹೋವ ಅನ್ನುತ್ತಾನೆ—ನನ್ನ ಜೀ
ವದಾಣೆ, ನಾನು ದುಷ್ಟನ ಮರಣದಲ್ಲಿ ಸಂತೋಷ ಪಡುವದಿ
ಲ್ಲ; ದುಷ್ಟನು ತನ್ನ ಮಾರ್ಗವನ್ನು ಬಿಟ್ಟು ತಿರುಗಿ ಬದುಕುವದ
ರಲ್ಲಿಯೇ ನನಗೆ ಸಂತೋಷ ಉಂಟು; ನಿಮ್ಮ ನಿಮ್ಮ ಕೆಟ್ಟ ಮಾ
ರ್ಗಗಳನ್ನು ಬಿಟ್ಟು ತಿರುಗಿರಿ, ತಿರುಗಿರಿ, ಓ ಇಸ್ರಯೇಲನ ಮನೆ
೧೨ ಯವರೇ; ಯಾಕಂದರೆ, ನೀವು ಸಾಯುವದು ಯಾಕೆ! ಆದದ
ರಿಂದ, ಮನುಷ್ಯನ ಮಗನೇ, ನಿನ್ನ ಜನರ ಮಕ್ಕಳಿಗೆ ನೀನು ಹೇ
ಳ ತಕ್ಕದ್ದೇನಂದರೆ—ನೀತಿವಂತನ ನೀತಿ ಅವನನ್ನು ಅವನ ಅಪ
ರಾಧದ ದಿವಸದಲ್ಲಿ ತಪ್ಪಿಸುವದಿಲ್ಲ; ದುಷ್ಟನ ದುಷ್ಟತ್ವವಾದರೆ, ಅವ
ನು ತನ್ನ ದುಷ್ಟತ್ವವನ್ನು ಬಿಟ್ಟು ತಿರುಗುವ ದಿವಸದಲ್ಲಿ ಅದರಿಂದ
ಬೀಳುವದಿಲ್ಲ; ಮತ್ತು ನೀತಿವಂತನು ಪಾಪ ಮಾಡುವ ದಿವಸದ
೧೩ ಲ್ಲಿ ತನ್ನ ನೀತಿಯಿಂದ ಬದುಕಲಾರನು. ನಾನು ನೀತಿವಂತನಿಗೆ—
ನೀನು ಬದುಕೇ ಬದುಕುವಿ ಎಂದು ಹೇಳುವಾಗ, ಅವನು ತನ್ನ ನೀ
ತಿಯಲ್ಲಿ ನಂಬಿಕೆ ಇಟ್ಟು ಅನ್ಯಾಯವನ್ನು ಮಾಡಿದರೆ, ಅವನ
ನೀತಿಗಳೆಲ್ಲಾ ಜ್ಞಾಪಕಕ್ಕೆ ಬರುವದಿಲ್ಲ; ಅವನು ಮಾಡಿದ ಅನ್ಯಾ
೧೪ ಯದಿಂದಲೇ ಸಾಯುವನು. ಮತ್ತು ನಾನು ದುಷ್ಟನಿಗೆ ನೀನು ಸ
ತ್ತೇ ಸಾಯುವಿ ಎಂದು ಹೇಳುವಾಗ ಅವನು ತನ್ನ ಪಾಪವನ್ನು
ಬಿಟ್ಟು ತಿರುಗಿ ಕೊಂಡು, ನ್ಯಾಯವನ್ನೂ ನೀತಿಯನ್ನೂ ಮಾಡಿ
೧೫ ದರೆ, ದುಷ್ಟನು ಅಡವನ್ನು ಹಿಂದಕ್ಕೆ ಕೊಟ್ಟರೆ, ಸುಲಕೊಂಡದ್ದ
ನ್ನು ತಿರಿಗಿ ಕೊಟ್ಟರೆ, ಅನ್ಯಾಯವನ್ನು ಮಾಡದೆ, ಜೀವದ ನೇಮ
ಗಳಲ್ಲಿ ನಡದರೆ, ಅವನು ಸಾಯದೆ ಬದುಕೇ ಬದುಕುವನು. ಅವ
೧೬ ನು ಮಾಡಿರುವ ಪಾಪಗಳಲ್ಲಿ ಬಂದಾದರೂ ಅವನಿಗೆ ವಿರೋಧ
ವಾಗಿ ಜ್ಞಪ್ತಿಗೆ ತರಸಲ್ಪಡುವದಿಲ್ಲ; ಅವನು ನ್ಯಾಯವನ್ನೂ ನೀತಿ
೧೭ ಯನ್ನೂ ಮಾಡಿದ್ದಾನೆ; ಬದುಕೇ ಬದುಕುವನು. ಆದರೆ ನಿನ್ನ
ಜನರ ಮಕ್ಕಳು ಕರ್ತನ ಮಾರ್ಗವು ಸರಿಯಲ್ಲ ಅನ್ನುತ್ತಾರೆ; ಅ
ವರೋ, ಅವರ ಮಾರ್ಗವು ಸರಿಯಲ್ಲ. ನೀತಿಪಂತನು ತನ್ನ ನೀ
೧೮ ತಿಯನ್ನು ಬಿಟ್ಟು ತಿರುಗಿ ಕೊಂಡು ಅನ್ಯಾಯವನ್ನು ಮಾಡು



೧೯ ವಾಗ, ಅದರಿಂದೇ ಸಾಯುವನು. ಆದರೆ ದುಷ್ಟನು ತನ್ನ ದು
ಷ್ಟತ್ವವನ್ನು ಬಿಟ್ಟು ತಿರುಗಿ ಕೊಂಡು ನ್ಯಾಯವನ್ನೂ ನೀತಿಯ
೨೦ ನ್ನೂ ಮಾಡಿದರೆ, ಅದರಿಂದ ಬದುಕುವನು. ಆದರೂ ನೀವು—
ಕರ್ತನ ಮಾರ್ಗ ಸರಿಯಲ್ಲ, ಅನ್ನುತ್ತೀರಿ; ಓ ಇಸ್ರಯೇಲನ ಮ
ನೆಯವರೇ! ನಿಮ್ಮ ನಿಮ್ಮ ಮಾರ್ಗಗಳ ಪ್ರಕಾರ ನಿಮಗೆ ನ್ಯಾ
ಯ ತೀರಿಸುವೆನು.

೨೧ ಇದಲ್ಲದೆ ನಮ್ಮ ಕಲೆಯ ಹನ್ನೆರಡನೇ ವರುಷದಲ್ಲಿ, ಹತ್ತನೇ
ತಿಂಗಳಿನ ಐದನೇ ದಿವಸದಲ್ಲಿ, ಎರೂಸಲೇಮಿನೊಳಗಿಂದ ತಪ್ಪಿಸಿ
ಕೊಂಡವನೊಬ್ಬನು ನನ್ನ ಬಳಿಗೆ ಬಂದು, ಪಟ್ಟಣವು ಹೊಡಿಯಲ್ಪ
ಟ್ಟಿದೆ ಎಂದು ನನಗೆ ಹೇಳಿದನು. ಆಗ ತಪ್ಪಿಸಿ ಕೊಂಡವನು ಬರುವ
೨೨ ದಕ್ಕಿಂತ ಮುಂಚೆ, ಸಾಯಂಕಾಲದಲ್ಲಿ, ಯೆಹೋವನ ಕೈ ನನ್ನ
ಮೇಲೆ ಇತ್ತು; ಅವನು ಹೊತ್ತಾರೆ ನನ್ನ ಬಳಿಗೆ ಬರುವ ತನಕ ಅ
ವನು ನನ್ನ ಬಾಯಿಯನ್ನು ತೆಗೆದನು; ಹೌದು ನನ್ನ ಬಾಯಿ ತೆ
ರದಾಯಿತು; ನಾನು ಇನ್ನು ಮೂಕನಾಗಿರಲಿಲ್ಲ;

೨೩ ಆಗ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳ್ದೇನಂ
೨೪ ದರೆ—ಮನುಷ್ಯನ ಮಗನೇ, ಇಸ್ರಯೇಲನ ದೇಶದ ಆ ಹಾಳು
ಸ್ಥಳಗಳನ್ನು ನಿವಾಸಿಸುವವರು—ಅಬ್ರಹಾಮನು ಒಬ್ಬನಾಗಿದ್ದು ದೇ
ಶವನ್ನು ಸ್ವತಂತ್ರಿಸಿ ಕೊಂಡನು; ಆದರೆ ನಾವು ಅನೇಕರಾಗಿದ್ದೇ
ವೆ, ದೇಶವು ನಮಗೆ ಸ್ವಾಸ್ತ್ಯವಾಗಿ ಕೊಡಲ್ಪಟ್ಟಿದೆ ಎಂದು ಅನ್ನು
೨೫ ತ್ತಾರೆ. ಆದದರಿಂದ ನೀನು ಅವರಿಗೆ ಹೇಳ ತಕ್ಕದ್ದೇನಂದರೆ—
ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನೀವು ರಕ್ತದ ಸಂ
ಗಡ ತಿನ್ನುತ್ತೀರಲ್ಲ! ನಿಮ್ಮ ಕಣ್ಣುಗಳನ್ನು ನಿಮ್ಮ ವಿಗ್ರಹಗಳ ಕ
೨೬ ಡೆಗೆ ಎತ್ತಿ, ರಕ್ತವನ್ನು ಚೆಲ್ಲುತ್ತೀರಲ್ಲ! ಹೀಗಾದರೆ ನೀವು ದೇಶ
ವನ್ನು ಸ್ವತಂತ್ರಿಸಿ ಕೊಂಡೀರೋ! ನಿಮ್ಮ ಕತ್ತಿಯ ಮೇಲೆ ನಿಂತು
ಕೊಂಡು, ಅಸಹ್ಯವನ್ನು ನಡಿಸಿ, ನಿಮ್ಮ ನಿಮ್ಮ ನೆರೆಯವರ ಹೆಂ
ಡರನ್ನು ಕೆಡಿಸಿ ಬಿಡುತ್ತೀರಲ್ಲ! ಹೀಗಾದರೆ ನೀವು ದೇಶವನ್ನು ಸ್ವ
೨೭ ತಂತ್ರಿಸಿ ಕೊಂಡೀರೋ! ನೀನು ಅವರಿಗೆ ಹೇಳ ತಕ್ಕದ್ದೇನಂದರೆ—
ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನನ್ನ ಜೀವದಾಣೆ,
ಹಾಳು ಸ್ಥಳಗಳಲ್ಲಿ ಇರುವವರು ಕತ್ತಿಯಿಂದ ಬೀಳುವರು, ಹೊಲ
ದಲ್ಲಿ ಇರುವವರನ್ನು ಮೃಗಗಳಿಗೆ ಆಹಾರವಾಗಿ ಕೊಡುತ್ತೇನೆ;
ಕೋಟೆಗಳಲ್ಲಿಯೂ ಗವಿಗಳಲ್ಲಿಯೂ ಇರುವವರು ವ್ಯಾಧಿಯಿಂ
೨೮ ದ ಸಾಯುವರು. ಮತ್ತು ನಾನು ದೇಶವನ್ನು ಕೇವಲ ಕಾಡಾಗ
ಮಾಡುವೆನು; ಅದರ ಬಲದ ಮಹಿಮೆ ಶೀರಿ ಹೋಗುವದು, ಇಸ್ರ
ಯೇಲಿನ ಬೆಟ್ಟಗಳು ಹಾದು ಹೋಗುವವನಿಲ್ಲದೆ ಕಾಡೇ ಲಗು
೨೯ ವವು. ಆಗಲು, ಅವರು ಮಾಡಿದ ಎಲ್ಲಾ ಅಸಹ್ಯಗಳ ನಿಮಿತ್ತ,
ನಾನು ದೇಶವನ್ನು ಕೇವಲ ಕಾಡಾಗ ಮಾಡಿರುವಾಗ ನಾನೇ
೩೦ ಯೆಹೋವನೆಂದು ತಿಳ್ಕಿಯುವರು. ನೀನಾದರೆ ಮನುಷ್ಯನ ಮಗ
ನೇ, ನಿನ್ನ ಜನರ ಮಕ್ಕಳು ಗೋಡೆಗಳ ಬಳ್ಳಿಯಲ್ಲಿಯೂ, ಮನೆ
ಗಳ ಬಾಗಲುಗಳಲ್ಲಿಯೂ, ನಿನ್ನ ವಿಷಯ ಮಾತಾಡಿ ಕೊಂಡು
ಒಬ್ಬರಿಗೊಬ್ಬರು ತಮ್ಮ ತಮ್ಮಲ್ಲಿ—ಬನ್ನಿ, ಯೆಹೋವನಿಂದ ಹೊ
೩೧ ರಡುವ ಮಾತು ಏನೆಂದು ಕೇಳೋಣ, ಅನ್ನುತ್ತಾರೆ. ಹೌದು,
ಜನರು ಬರುವ ಹಾಗೆ, ಅವರು ನಿನ್ನ ಬಳಿಗೆ ಬಂದು, ನನ್ನ ಜನರ
ಹಾಗೆ ನಿನ್ನ ಮುಂದೆ ಕೂತು ಕೊಳ್ಳುತ್ತಾರೆ, ಮತ್ತು ನಿನ್ನ ಮಾ
ತುಗಳನ್ನು ಕೇಳುತ್ತಾರೆ, ಆದರೆ ಅವುಗಳನ್ನು ಮಾಡುವದಿಲ್ಲ;
ಯಾಕಂದರೆ ತಮ್ಮ ಬಾಯಿಗಳಿಂದ ಬಹು ಪ್ರೀತಿ ತೋರಿಸುತ್ತಾ
ರೆ; ಆದರೆ ಅವರ ಹೃದಯವು ಅವರ ಲೋಭತ್ವದ ಹಿಂದೆ ಹೋ
೩೨ ಗುತ್ತದೆ. ಮತ್ತು ಇಗೋ ನೀನು ಅವರಿಗೆ ಇಂಪಾದ ಶಬ್ದವು
ಳ್ಳಂಥ, ತಂತಿವಾದ್ಯದಲ್ಲಿ ಚನ್ನಾಗಿ ಬಾರಿಸುವಂಥ, ಒಬ್ಬನ ಮ
ನೋಹರವಾದ ರಾಗದ ಹಾಗಿರುತ್ತೀ; ಅವರು ನಿನ್ನ ಮಾತುಗಳ
ನ್ನು ಕೇಳುತ್ತಾರೆ, ಅದರೆ ಅವುಗಳನ್ನು ಮಾಡುವದಿಲ್ಲ. ಆದರೆ
೩೩ ಅದು ಬರುವಾಗ, ಇಗೋ ಬರುತ್ತದೆ, ಆಗ ಅವರ ಮಧ್ಯದಲ್ಲಿ
ಪ್ರವಾದಿ ಇದ್ದನೆಂದು ಅವರಿಗೆ ತಿಳಿಯುವದು.

## ೩೪. ಸಂಧಿ.

೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳ್
೨ ದ್ದೇನಂದರೆ—ಮನುಷ್ಯನ ಮಗನೇ, ಇಸ್ರಯೇಲಿನ ಕುರುಬರಿಗೆ
ವಿರೋಧವಾಗಿ ಪ್ರವಾದಿಸು; ನೀನು ಪ್ರವಾದಿಸಿ ಅವರಿಗೆ ಹೇಳ ತ
ಕ್ಕದ್ದೇನಂದರೆ—ಕರ್ತನಾದ ಯೆಹೋವನು ಕುರುಬರಿಗೆ ಹೀಗೆ
ಹೇಳುತ್ತಾನೆ—ತಮ್ಮನ್ನು ತಾವೇ ಮೇಯಿಸುವ ಇಸ್ರಯೇಲಿನ
ಕುರುಬರಿಗೆ ಅಯ್ಯೋ! ಕುರುಬರು ಮಂದೆಯನ್ನು ಮೇಯಿಸ
೩ ಬೇಕಲ್ಲವೋ! ನೀವು ಕೊಬ್ಬಿನನ್ನು ತಿನ್ನುತ್ತೀರಿ; ಉಣ್ಣೆಯನ್ನು
ತೊಟ್ಟುಕೊಳ್ಳುತ್ತೀರಿ. ಕೊಬ್ಬಿದರ್ದನ್ನು ಕೊಲ್ಲುತ್ತೀರಿ; ಅದರೆ
೪ ಮಂದೆಯನ್ನು ಮೇಯಿಸುವದಿಲ್ಲ. ಬಲಹೀನವಾದ್ದನ್ನು ನೀವು
ಸ್ಥಿರ ಪಡಿಸಲಿಲ್ಲ; ಕೋಗವಾದ್ದನ್ನು ನೀವು ಸ್ವಸ್ಥ ಮಾಡಲಿಲ್ಲ;
ಮುರಿದದ್ದನ್ನು ನೀವು ಕಟ್ಟಲಿಲ್ಲ; ಓಡಿಸಲ್ಪಟ್ಟದ್ದನ್ನು ನೀವು ಹಿಂ
ದಕ್ಕೆ ತರಲಿಲ್ಲ; ಕಳೆ ಕೊಂಡದ್ದನ್ನು ನೀವು ಹುಡಕಲಿಲ್ಲ; ಆದರೆ
೫ ಕಾಠಿಣ್ಯದಿಂದಲೂ ಬಲಾತ್ಕಾರದಿಂದಲೂ ಅವರ ಮೇಲೆ ಧೊರೆತ
ನ ಮಾಡಿದ್ದೀರಿ. ಕುರುಬನಿಲ್ಲದೆ ಚದರಿ ಹೋದವು, ಮತ್ತು ಚ
ದರಿ ಹೋದ ಮೇಲೆ ಹೊಲದ ಮೃಗಗಳಿಗೆಲ್ಲಾ ಆಹಾರವಾದವು.
೬ ನನ್ನ ಕುರಿಗಳು ಎಲ್ಲಾ ಬೆಟ್ಟಗಳ ಮೇಲೆಯೂ, ಎತ್ತರವಾದ ಎಲ್ಲಾ
ಗುಡ್ಡಗಳ ಮೇಲೆಯೂ, ಅಡ್ಡಾದಿದವು; ಹೌದು, ನನ್ನ ಕುರಿಗಳು
ಸಮಸ್ತ ಭೂಮಿಯ ಮೇಲೆ ಚದರಿ ಹೋದವು; ಹುಡುಕುವವನೂ
ವಿಚಾರಿಸುವವನೂ ಒಬ್ಬನೂ ಇಲ್ಲ.
೭ ಆದದರಿಂದ ಓ ಕುರುಬರೇ, ಯೆಹೋವನ ವಾಕ್ಯವನ್ನು ಕೇ
೮ ಳಿರಿ—ಕರ್ತನಾದ ಯೆಹೋವ ಅನ್ನುತ್ತಾನೆ—ನನ್ನ ಜೀವದಾಣೆ,
ನಿಶ್ಚಯವಾಗಿ ನನ್ನ ಮಂದೆಯು ಸುಲಿಗೆಯಾದದರಿಂದಲೂ, ನ
ನ್ನ ಮಂದೆಯು ಕುರುಬನಿಲ್ಲದೆ ಹೊಲದ ಮೃಗಗಳಿಗೆಲ್ಲಾ ಆಹಾ
ರವಾದದರಿಂದಲೂ, ನನ್ನ ಕುರುಬರು ಮಂದೆಯನ್ನು ಹುಡುಕದೆ
ಇದ್ದದರಿಂದಲೂ, ಕುರುಬರು ಮಂದೆಯನ್ನು ಮೇಯಿಸದೆ ತಮ್ಮ
೯ ನ್ನು ಮೇಯಿಸಿ ಕೊಂಡದರಿಂದಲೂ, ಇದು ಕಾರಣ ಓ ಕುರುಬ
೧೦ ರೇ, ಯೆಹೋವನ ವಾಕ್ಯವನ್ನು ಕೇಳಿರಿ—ಕರ್ತನಾದ ಯೆಹೋ
ವ ಹೀಗೆ ಹೇಳುತ್ತಾನೆ—ಇಗೋ ನಾನು ಕುರುಬರಿಗೆ ವಿರೋಧ
ವಾಗಿದ್ದೇನೆ; ನನ್ನ ಮಂದೆಯನ್ನು ಅವರ ಕೈಯಿಂದ ವಿಚಾರಿಸು
ತ್ತೇನೆ; ಮತ್ತು ಅವರು ಮಂದೆ ಮೇಯಿಸುವದನ್ನು ನಿಲ್ಲಿಸಿ ಬಿಡು
ತ್ತೇನೆ; ಕುರುಬರು ಇನ್ನು ಮೇಲೆ ತಮ್ಮನ್ನು ಮೇಯಿಸುವದಿಲ್ಲ,
ಯಾಕಂದರೆ, ನಾನು ನನ್ನ ಮಂದೆಯನ್ನು, ಅದು ಅವರಿಗೆ ಆ
೧೧ ಹಾರವಾಗದ ಹಾಗೆ, ಅವರ ಬಾಯಿಗೆ ತಪ್ಪಿಸುತ್ತೇನೆ. ಯಾಕಂ
ದರೆ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇಗೋ ನಾ
ನು, ಹೌದು, ನಾನೇ, ನನ್ನ ಕುರಿಗಳನ್ನು ವಿಚಾರಿಸಿ ಅವುಗಳ
೧೨ ನ್ನು ಹುಡುಕುತ್ತೇನೆ. ಕುರುಬನು ಚದರಿ ಇದ್ದ ತನ್ನ ಕುರಿಗಳ

ಮಧ್ಯದಲ್ಲಿ ಇರುವ ದಿವಸದಲ್ಲಿ ತನ್ನ ಮಂದೆಯನ್ನು ಹುಡುಕುವ
ಪ್ರಕಾರ ನಾನು ನನ್ನ ಕುರಿಗಳನ್ನು ಹುಡುಕಿ, ಅವು ಮೇಘಾಂಧಕಾ
ರದ ದಿವಸದಲ್ಲಿ ಚದರಿ ಹೋದ ಎಲ್ಲಾ ಸ್ಥಳಗಳಿಂದ ಅವುಗಳನ್ನು
೧೩ ತಪ್ಪಿಸುವೆನು. ಮತ್ತು ಜನಗಳೊಳಗಿಂದ ಅವುಗಳನ್ನು ಹೊರಗೆ
ತೆಗೆದು, ದೇಶಗಳೊಳಗಿಂದ ಅವುಗಳನ್ನು ಕೂಡಿಸಿ, ಅವುಗಳ
ನ್ನು ತಮ್ಮ ದೇಶಕ್ಕೆ ಬರ ಮಾಡಿ, ಇಸ್ರಯೇಲಿನ ಬೆಟ್ಟಗಳ ಮೇ
ಲೆ ಅವುಗಳನ್ನು ಹಳ್ಳಿಗಳ ಬಳಿಯಲ್ಲಿಯೂ, ನಿವಾಸಿಗಳಿಗೆಲ್ಲ ಎ
೧೪ ಲ್ಲಾ ಸ್ಥಳಗಳಲ್ಲಿಯೂ ಮೇಯಿಸುವೆನು. ಬಳ್ಳೇ ಮೇಖನಲ್ಲಿ ಅ
ವುಗಳನ್ನು ಮೇಯಿಸುವೆನು; ಇಸ್ರಯೇಲಿನ ಎತ್ತರವಾದ ಬೆಟ್ಟಗ
ಳಲ್ಲಿ ಅವುಗಳ ಹಟ್ಟಿ ಇರುವದು; ಅಲ್ಲಿ ಒಳ್ಳೇ ಹಟ್ಟಿಯಲ್ಲಿ ಅವು
ಮಲಗಿ ಕೊಂಡು, ಪುಷ್ಟಿಯುಳ್ಳ ಮೇವನ್ನು ಇಸ್ರಯೇಲಿನ ಬೆ
೧೫ ಟ್ಟಗಳ ಮೇಲೆ ಮೇಯುವವು. ನಾನೇ ನನ್ನ ಮಂದೆಯನ್ನು ಮೇ
ಯಿಸಿ, ನಾನೇ ಅವುಗಳನ್ನು ಮಲಗಿಸುವೆನೆಂದು ಕರ್ತನಾದ ಯೆ
೧೬ ಹೋವ ಅನ್ನುತ್ತಾನೆ. ಕಳೆ ಕೊಂಡದ್ದನ್ನು ನಾನು ಹುಡುಕುವೆನು;
ಓಡಿಸಲ್ಪಟ್ಟದ್ದನ್ನು ತಿರಿಗಿ ಬರ ಮಾಡುವೆನು; ಮುರಿದದ್ದನ್ನು ಕ
ಟ್ಟುವೆನು; ಬಲಹೀನವಾದದ್ದನ್ನು ಸ್ಥಿರ ಪಡಿಸುವೆನು; ಆದರೆ ಕೊ
ಬ್ಬಿದ್ದನ್ನೂ ಘಟ್ಟಿಯಾದದ್ದನ್ನೂ ಸಂಹರಿಸುವೆನು; ನ್ಯಾಯದಿಂ
೧೭ ದ ಅದನ್ನು ಮೇಯಿಸುವೆನು. ನನ್ನ ಕುರಿಗಳಾದ ನೀವಾದರೆ—
ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇಗೋ ನಾನು ಕು
ರಿಗಳಿಗೂ ಟಗರುಗಳಿಗೂ ಹೋತುಗಳಿಗೂ ನ್ಯಾಯ ತೀ
೧೮ ರಿಸುತ್ತೇನೆ. ಬಳ್ಳೇ ಮೇವನ್ನು ಮೇದದ್ದು ನಿಮಗೆ ಸಣ್ಣದೋ?
ನಿಮ್ಮ ಮೇವಿನ ಉಳಿಯವನ್ನು ನಿಮ್ಮ ಕಾಲುಗಳಿಂದ ತುಳಿಯ ಬೇ
ಕೋ? ಅಳಿವಾದ ನೀರನ್ನು ಕುಡಿದದ್ದು ಸಣ್ಣದೋ? ಖಚ್ಚಾದದ್ದ
೧೯ ನ್ನು ನಿಮ್ಮ ಕಾಲುಗಳಿಂದ ಕಲಕು ಮಾಡ ಬೇಕೋ? ನನ್ನ ಕುರಿ
ಗಳಾದರೆ, ನಿಮ್ಮ ಕಾಲುಗಳು ತುಳಿದದ್ದನ್ನು ಮೇಯುತ್ತವೆ; ನಿ
೨೦ ಮ್ಮ ಕಾಲುಗಳು ಕಲಕು ಮಾಡಿದ್ದನ್ನು ಕುಡಿಯುತ್ತವೆ. ಆದದ
ರಿಂದ ಕರ್ತನಾದ ಯೆಹೋವನು ಅವುಗಳಿಗೆ ಹೀಗೆ ಹೇಳುತ್ತಾ
ನೆ—ಇಗೋ ನಾನು, ಹೌದು ನಾನೇ, ಕೊಬ್ಬಿದ ಕುರಿಗಳಿಗೂ
೨೧ ಬಡ ಕುರಿಗಳಿಗೂ ನ್ಯಾಯ ತೀರಿಸುತ್ತೇನೆ. ನೀವು ಪಕ್ಕೆಯಿಂದ
ಲೂ ಹೆಗಲಿನಿಂದಲೂ ನೂಕಿ, ಬಲಹೀನವಾದವುಗಳನ್ನೆಲ್ಲಾ ಹೊರ
ಗೆ ಚದರಿಸುವ ಪರ್ಯಂತರ ನಿಮ್ಮ ಕೊಂಬುಗಳಿಂದ ಹಾಯಿದ
೨೨ ಕಾರಣ, ಇದರಿಂದ ನಾನೇ ನನ್ನ ಕುರಿಗಳನ್ನು ರಕ್ಷಿಸುವೆನು; ಅ
ವು ಇನ್ನು ಮೇಲೆ ಸುಲಿಗೆಯಾಗುವದಿಲ್ಲ; ನಾನು ಕುರಿ ಕುರಿಗಳಿ
೨೩ ಗೂ ನ್ಯಾಯ ತೀರಿಸುವೆನು. ಮತ್ತು ಅವುಗಳ ಮೇಲೆ ಒಬ್ಬ ಕು
ರುಬನನ್ನು ಇರಿಸುವೆನು, ಅವನೇ ಅವುಗಳನ್ನು ಮೇಯಿಸುವನು;
ನನ್ನ ಸೇವಕನಾದ ದಾವೀದನನ್ನೇ; ಅವನೇ ಅವುಗಳನ್ನು ಮೇ
೨೪ ಯಿಸುವನು; ಅವನೇ ಅವುಗಳಿಗೆ ಕುರುಬನಾಗುವನು. ಇದಲ್ಲದೆ
ಯೆಹೋವನಾದ ನಾನೇ ಅವುಗಳಿಗೆ ದೇವರಾಗಿರುವೆನು; ಮತ್ತು
ನನ್ನ ಸೇವಕನಾದ ದಾವೀದನು ಅವರಲ್ಲಿ ಪ್ರಭುವಾಗಿರುವನು;
೨೫ ಯೆಹೋವನಾದ ನಾನೇ ಅದನ್ನು ಹೇಳಿದ್ದೇನೆ. ಮತ್ತು ಅವರ
ಸಂಗಡ ಸಮಾಧಾನದ ಒಡಂಬಡಿಕೆಯನ್ನು ಮಾಡಿ, ಕೆಟ್ಟ ಮೃ
ಗಗಳನ್ನು ದೇಶದೊಳಗಿಂದ ತಿರಿಸಿ ಬಿಡುವೆನು; ಅವರು ಭದ್ರವಾ
೨೬ ಗಿ ಅರಣ್ಯದಲ್ಲಿ ವಾಸಿಸಿ, ಅಡವಿಗಳಲ್ಲಿ ಮಲಗುವರು. ಮತ್ತು ಅವ
ರನೂ ನನ್ನ ಗುಡ್ಡದ ಸುತ್ತಲಿರುವ ಸ್ಥಳಗಳನ್ನೂ ಆಶೀರ್ವಾದ
ವಾಗ ಮಾಡುವೆನು; ಮತ್ತು ಮಳೆಯನ್ನು ತಕ್ಕ ಕಾಲದಲ್ಲಿ ಇಳಿ
೨೭ ಯ ಮಾಡುವೆನು; ಆಶೀರ್ವಾದದ ಮಳೆಗಳಾಗುವವು. ಮತ್ತು
ಹೊಲದ ಮರವು ಅದರ ಫಲವನ್ನು ಕೊಡುವದು; ಭೂಮಿಯು
ಅದರ ಆದಾಯವನ್ನು ಕೊಡುವದು; ಅವರು ತಮ್ಮ ದೇಶದಲ್ಲಿ
ಭದ್ರವಾಗಿರುವರು, ನಾನೇ ಅವರ ನೊಗದ ಬಂಧಗಳನ್ನು ಹರಿದು,
ಅವರಿಂದ ಸೇವೆ ಮಾಡಿಸಿ ಕೊಂಡವರ ಕೈಯೊಳಗಿಂದ ಅವರ
ನ್ನು ತಪ್ಪಿಸಿದಾಗ, ನಾನೇ ಯೆಹೋವನೆಂದು ಅವರು ತಿಳಿಯುವ
೨೮ ರು. ಆಗಲವರು ಇನ್ನು ಮೇಲೆ ಜನಾಂಗಗಳಿಗೆ ಸುಲಿಗೆಯಾಗು
ವದಿಲ್ಲ; ಭೂಮಿಯ ಮೃಗಗಳು ಅವರನ್ನು ತಿಂದು ಬಿಡುವದಿಲ್ಲ;
೨೯ ಹೆದರಿಸುವವನಿಲ್ಲದೆ ಭದ್ರವಾಗಿ ವಾಸಿಸುವರು. ಇದಲ್ಲದೆ ಅವರಿಗೆ
ಹೆಸರುಳ್ಳ ಗಿಡವನ್ನು ಎಬ್ಬಿಸುವೆನು; ಅವರು ಇನ್ನು ಮೇಲೆ ದೇಶ
ದಲ್ಲಿ ಹಸಿವಿಯಿಂದ ಸಂಹಾರವಾಗದೆ, ಇನ್ನು ಮೇಲೆ ಜನಾಂಗ
೩೦ ಳ ನಿಂದೆಯನ್ನು ಹೊರದೆ, ಇರುವರು. ಆಗ ಅವರ ದೇವರಾಗಿ
ರುವ ಯೆಹೋವನಾದ ನಾನೇ ಅವರ ಸಂಗಡ ಇದ್ದೇನೆಂದೂ ಇ
ಸ್ರಯೇಲನ ಮನೆಯವರಾದ ಅವರೇ ನನ್ನ ಜನರಾಗಿದ್ದಾರೆಂದೂ
೩೧ ಅವರಿಗೆ ತಿಳಿಯುವದು. ಮತ್ತು ನನ್ನ ಕುರಿಗಳೂ ನನ್ನ ಮೇವಿ
ನ ಮಂದೆಯೂ ಆಗಿರುವ ನೀವು ಮನುಷ್ಯರೇ; ನಾನು ನಿಮ್ಮ
ದೇವರೇ, ಎಂದು ಕರ್ತನಾದ ಯೆಹೋವ ಅನ್ನುತ್ತಾನೆ.

## ೩೫. ಸಂಧಿ.

೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇ
೨ ನಂದರೆ— ಮನುಷ್ಯನ ಮಗನೇ, ನಿನ್ನ ಮುಖವನ್ನು ಸೇಯಿರ್ ಪ
ರ್ವತಕ್ಕೆ ವಿರೋಧವಾಗಿ ಇಟ್ಟು, ಅದಕ್ಕೆ ವಿರೋಧವಾಗಿ ಪ್ರವಾ
3 ದಿಸು. ನೀನು ಅದಕ್ಕೆ ಹೇಳ ತಕ್ಕದ್ದೇನಂದರೆ—ಕರ್ತನಾದ ಯೆ
ಹೋವ ಹೀಗೆ ಹೇಳುತ್ತಾನೆ—ಸೇಯಿರ್ ಪರ್ವತವೇ, ಇಗೋ,
ನಾನು ನಿನಗೆ ವಿರೋಧವಾಗಿದ್ದೇನೆ; ನನ್ನ ಕೈ ನಿನ್ನ ಮೇಲೆ ಚಾ
೪ ಚಿ, ನಿನ್ನನ್ನು ಪೂರ್ಣವಾಗಿ ಹಾಳು ಮಾಡುತ್ತೇನೆ. ನಿನ್ನ ಪಟ್ಟ
ಣಗಳನ್ನು ಕಾಡಾಗಿ ಮಾಡುವೆನು; ನೀನು ಹಾಳಾಗುವಿ; ನಾನೇ
೫ ಯೆಹೋವನೆಂದು ತಿಳಿಯುವಿ. ಯಾಕಂದರೆ, ನಿನ್ನಲ್ಲಿ ನಿತ್ಯವಾ
ದ ಹಗೆ ಇದೆ; ನೀನು ಇಸ್ರಯೇಲನ ಮಕ್ಕಳನ್ನು, ಅವರ ಆಪತ್ತಿ
ನ ಕಾಲದಲ್ಲಿಯೂ, ಅಕ್ರಮವು ಮುಗಿದಿರುವ ಕಾಲದಲ್ಲಿಯೂ,
೬ ಕತ್ತಿಯ ಪತಕ್ಕೆ ಒಪ್ಪಿಸಿದಿ. ಆದದರಿಂದ ಕರ್ತನಾದ ಯೆಹೋ
ವನು ಅನ್ನುತ್ತಾನೆ—ನನ್ನ ಜೀವದಾಣೆ, ನಾನು ನಿನ್ನನ್ನು ರಕ್ತ
ವಾಗ ಮಾಡುವೆನು; ರಕ್ತವು ನಿನ್ನನ್ನು ಹಿಂದಟ್ಟುವದು; ನೀನು
ರಕ್ತವನ್ನು ಹಗೆ ಮಾಡದೆ ಇದ್ದದರಿಂದ ರಕ್ತವೇ ನಿನ್ನನ್ನು ಹಿಂ
೭ ದಟ್ಟುವದು. ಹೀಗೆ ನಾನು ಸೆಯಿರ್ ಪರ್ವತವನ್ನು ಕೇವಲ ಕಾಡಾ
ಗ ಮಾಡುವೆನು; ಹಾದು ಹೋಗುವವನನ್ನೂ ತಿರುಗಿ ಕೊಳ್ಳುವ
೮ ವನನ್ನೂ ಅದರೊಳಗಿಂದ ಕಡಿದು ಬಿಡುವೆನು. ಮತ್ತು ಅದರ
ಬೆಟ್ಟಗಳನ್ನು ಹತವಾದವರಿಂದ ತುಂಬಿಸುವೆನು; ನಿನ್ನ ಗುಡ್ಡಗಳ
ಲ್ಲಿಯೂ, ನಿನ್ನ ಶಗ್ಗುಗಳಲ್ಲಿಯೂ, ನಿನ್ನ ಎಲ್ಲಾ ಹಳ್ಳಗಳಲ್ಲಿ
೯ ಯೂ, ಕತ್ತಿಯಿಂದ ಹತವಾದವರು ಬೀಳುವರು. ನಿನ್ನನ್ನು ನಿತ್ಯ
ವಾಗಿ ಹಾಳಾಗ ಮಾಡುವೆನು; ನಿನ್ನ ಪಟ್ಟಣಗಳು ನಿವಾಸಕ್ಕೆ
ಆಗುವದಿಲ್ಲ; ಆಗ ನಾನೇ ಯೆಹೋವನೆಂದು ನಿಮಗೆ ತಿಳಿಯುವ
೧೦ ದು. ಯೆಹೋವನು ಅವುಗಳಲ್ಲಿ ಇರಲಾಗಿ, ಈ ಎರಡು ಜನಾಂಗ
ಗಳೂ ಈ ಎರಡು ರಾಜ್ಯಗಳೂ ನನ್ನವಾಗುವವು, ನಾವು ಅವು



ಗಳನ್ನು ವಶ ಮಾಡಿ ಕೊಳ್ಳುತ್ತೇವೆಂದು ನೀನು ಹೇಳಿದದರಿಂದ,
೧೧ ಇದು ಕಾರಣ ಕರ್ತನಾದ ಯೆಹೋವ ಅನ್ನುತ್ತಾನೆ—ನನ್ನ ಜೀ
ವದಾಣೆ, ನಿನ್ನ ಕೋಪದ ಪ್ರಕಾರವೂ ನೀನು ಹಗೆಯಿಂದ ಅವರು
ಗೆ ವಿರೋಧವಾಗಿ ನಡಿಸಿದ ನಿನ್ನ ಹೊಟ್ಟೆ ಕಿಚ್ಚಿನ ಪ್ರಕಾರವೂ
ಮಾಡಿ, ನಿನಗೆ ನ್ಯಾಯ ತೀರಿಸಿದ ಮೇಲೆ ಅವರಲ್ಲಿ ತಿಳಿಯ ಬರು
೧೨ ವೆನು. ಆಗ ನಾನೇ ಯೆಹೋವನೆಂದೂ, ನೀನು ಇಸ್ರಯೇಲನ ಬೆ
ಟ್ಟಗಳ ವಿಷಯವಾಗಿ, ಅವು ಹಾಳಾಗಿವೆ, ನಮಗೆ ಆಹಾರವಾಗಿ ಕೊ
ಡಲ್ಪಟ್ಟಿವೆ, ಎಂದು ಹೇಳಿ, ಮಾತಾಡಿದ ನಿನ್ನ ಎಲ್ಲಾ ದೂಷಣೆಗ
೧೩ ಳನ್ನು ಕೇಳಿದ್ದೇನೆಂದೂ ತಿಳಿಯುವಿ. ಹೀಗೆ ನಿಮ್ಮ ಬಾಯಿಂದ
ದ ನನಗೆ ವಿರೋಧವಾಗಿ ಉಬ್ಬಿಕೊಂಡಿದ್ದೀರಿ; ನಿಮ್ಮ ಮಾತುಗಳ
೧೪ ನ್ನು ನನಗೆ ವಿರೋಧವಾಗಿ ಹೆಚ್ಚಿಸಿದ್ದೀರಿ; ನಾನೇ ಕೇಳಿದ್ದೇನೆ.
ಕರ್ತನಾದ ಯೆಹೋವನು ಹೇಳುವದೇನಂದರೆ—ಭೂಮಿಯೆಲ್ಲಾ
೧೫ ಸಂತೋಷ ಪಡುವಾಗ ನಿನ್ನನ್ನು ಹಾಳು ಮಾಡುವೆನು. ನೀನು
ಇಸ್ರಯೇಲನ ಮನೆಯವರ ಸ್ವಾಸ್ತ್ಯದ ವಿಷಯ, ಅದು ಹಾಳಾ
ಯಿತೆಂದು ಸಂತೋಷಿಸಿದ ಪ್ರಕಾರವೇ ನಿನಗೆ ಮಾಡುವೆನು; ಸೇ
ಯಿರ್ ಪರ್ವತವೇ, ಸಮಸ್ತ ಎದೋಮೇ, ಶುದ್ಧವಾಗಿ ಹಾಳಾಗುವಿ;
ನಾನೇ ಯೆಹೋವನೆಂದು, ಅವರು ತಿಳಿಯುವರು.

## ೩೬. ಸಂಧಿ.

೧ ಇದಲ್ಲದೆ ಮನುಷ್ಯನ ಮಗನೇ, ನೀನು ಇಸ್ರಯೇಲಿನ ಬೆಟ್ಟ
ಗಳ ವಿಷಯವಾಗಿ ಪ್ರವಾದಿಸಿ ಹೇಳ ತಕ್ಕದ್ದೇನಂದರೆ—ಇಸ್ರಯೇ
೨ ಲಿನ ಬೆಟ್ಟಗಳೇ, ಯೆಹೋವನ ವಾಕ್ಯವನ್ನು ಕೇಳಿರಿ. ಕರ್ತ
ನಾದ ಯೆಹೋವ ಹೀಗೆ ಹೇಳುತ್ತಾನೆ—ಶತ್ರುವು ನಿಮಗೆ ವಿರೋ
ಧವಾಗಿ, ಆಹಾ, ಪೂರ್ವದ ಮೇಡುಗಳು ನಮಗೆ ಸ್ವಾಸ್ತ್ಯವಾದವು,
ಎಂದು ಹೇಳುವದರಿಂದ, ಇದುಕಾರಣ ನೀನು ಪ್ರವಾದಿಸಿ ಹೇಳ ತ
3 ಕ್ಕದ್ದೇನಂದರೆ—ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಅ
ವರು ನಿಮ್ಮನ್ನು ಹಾಳು ಮಾಡಿ, ನೀವು ಜನಾಂಗಗಳ ಉಳಿಯಿಗೆ
ಸ್ವಾಸ್ತ್ಯವಾಗುವ ಹಾಗೆ, ನಿಮ್ಮನ್ನು ಸುತ್ತಲಾಗಿ ನುಂಗಿ ಬಿಟ್ಟದ
ರಿಂದಲೂ, ನೀವು ಮಾತಾಡುವವರ ಮಾತಿನಲ್ಲಿಯೂ ಜನರ ನಿಂ
೪ ದೆಯಲ್ಲಿಯೂ ಬಿದ್ದದರಿಂದಲೂ, ಇದುಕಾರಣ ಇಸ್ರಯೇಲಿನ ಬೆ
ಟ್ಟಗಳೇ, ಕರ್ತನಾದ ಯೆಹೋವನ ವಾಕ್ಯವನ್ನು ಕೇಳಿರಿ; ಕರ್ತ
ನಾದ ಯೆಹೋವನು, ಬೆಟ್ಟಗಳಿಗೂ ಗುಡ್ಡಗಳಿಗೂ ಹಳ್ಳಗಳಿ
ಗೂ ತಗ್ಗುಗಳಿಗೂ ಹಾಳಾದ ಬಣಗಿದ ಸ್ಥಳಗಳಿಗೂ ಸುತ್ತಲಾಗಿ
ರುವ ಜನಾಂಗಗಳ ಉಳಿಯಿಗೆ ಸುಲಿಗೆಯೂ ಹಾಸ್ಯವೂ ಆದ ನಿವಾ
೫ ಸಿಗಳಿಲ್ಲದ ಪಟ್ಟಣಗಳಿಗೂ ಹೇಳುವದೇನಂದರೆ—ಹೀಗಿರಲಾಗಿ ಕರ್ತ
ನಾದ ಯೆಹೋವನು ಹೇಳುವದೇನಂದರೆ—ನಿಶ್ಚಯವಾಗಿ ನನ್ನ
ಕೋಪದ ಪೆಂಕಿಯಿಂದ ನಾನು ಜನಾಂಗಗಳ ಉಳಿಯಿಗೂ ಎಲ್ಲಾ
ಎದೋಮಿಗೂ ವಿರೋಧವಾಗಿ ಮಾತಾಡಿದ್ದೇನೆ; ಅವರ ಸಂಪೂ
ರ್ಣ ಹೃದಯದ ಸಂತೋಷದಿಂದಲೂ, ಹಗೆಯಾದ ಮನಸ್ಸು
ಗಳಿಂದಲೂ, ನನ್ನ ದೇಶವನ್ನು, ಅದನ್ನು ಸುಲಿಗೆಯಾಗಿ ಹೊರ
೬ ಹಾಕುವ ಹಾಗೆ, ತಮಗೆ ಸ್ವಾಸ್ತ್ಯವಾಗಿ ಕೊಟ್ಟರಲ್ಲ? ಆದದ
ರಿಂದ ನೀನು ಇಸ್ರಯೇಲಿನ ದೇಶಕ್ಕೆ ವಿರೋಧವಾಗಿ ಪ್ರವಾದಿಸಿ,
ಬೆಟ್ಟಗಳಿಗೂ ಗುಡ್ಡಗಳಿಗೂ ಹಳ್ಳಗಳಿಗೂ ತಗ್ಗುಗಳಿಗೂ
ಹೇಳ ತಕ್ಕದ್ದೇನಂದರೆ—ಕರ್ತನಾದ ಯೆಹೋವ ಹೀಗೆ ಹೇಳು
ತ್ತಾನೆ—ಇಗೋ ನೀವು ಜನಾಂಗಗಳ ನಿಂದೆಯನ್ನು ಹೊ
೭ ತ್ತದರಿಂದ ನನ್ನ ಕೋಪದಿಂದಲೂ, ನನ್ನ ಕಾಪ್ರದಿಂದಲೂ
ಮಾತಾಡಿದ್ದೇನೆ. ಆದದರಿಂದ ಕರ್ತನಾದ ಯೆಹೋವ ಹೀಗೆ
ಹೇಳುತ್ತಾನೆ—ನಾನು ನನ್ನ ಕೈಯನ್ನು ಎತ್ತಿ ಕೊಂಡಿದ್ದೇನೆ—ನಿಶ್ಚ
ಯವಾಗಿ ನಿಮ್ಮ ಸುತ್ತಲಿರುವ ಜನಾಂಗಗಳು ಅವಕೇ ತಪ್ಪುನಿಂ
೮ ದೆಯನ್ನು ಹೊರುವರು. ಆದರೆ ಇಸ್ರಯೇಲಿನ ಬೆಟ್ಟಗಳೇ, ನೀ
ವು ನಿಮ್ಮ ಕೊಂಬೆಗಳನ್ನು ಹೊರಡಿಸಿ, ನನ್ನ ಜನರಾದ ಇಸ್ರಯೇ
ಲಿಗೆ ನಿಮ್ಮ ಫಲವನ್ನು ಕೊಡುವಿರಿ; ಯಾಕಂದರೆ ಅವರು ಬರುವ
೯ ದಕ್ಕೆ ಸಮೀಪವಾಯಿತು. ಯಾಕಂದರೆ ಇಗೋ ನಾನೇ ನಿಮಗಾಗಿ
ಇದ್ದೇನೆ; ನಿಮ್ಮ ಕಡೆಗೆ ತಿರುಗಿ ಕೊಳ್ಳುತ್ತೇನೆ; ನೀವು ಬೇಸಾಯ
೧೦ ಮಾಡಲ್ಪಡುವಿರಿ; ನಿಮ್ಮಲ್ಲಿ ಬೀಜ ಹಾಕುವರು; ಮತ್ತು ನಾನು ಮ
ನುಷ್ಯರನ್ನು, ಅಂದರೆ, ಇಸ್ರಯೇಲನ ಮನೆಯವರನ್ನೆಲ್ಲಾ,
ಹೌದು, ಅವರೆಲ್ಲರನ್ನೇ ನಿಮ್ಮ ಮೇಲೆ ಬಹಳ ಮಾಡುವೆನು. ಪ
ಟ್ಟಣಗಳು ನಿವಾಸಕ್ಕೆ ಆಗುವವು; ಕಾಡಾದ ಸ್ಥಳಗಳು ಕಟ್ಟಲ್ಪಡುವ
೧೧ ವು. ಮತ್ತು ನಾನು ನಿಮ್ಮ ಮೇಲೆ ಮನುಷ್ಯರನ್ನೂ ಮೃಗಗ
ಳನ್ನೂ ಬಹಳ ಮಾಡುವೆನು; ಅವರು ಹೆಚ್ಚಿ, ಫಲಫಲಿಸುವರು;
ನಾನು ನಿಮ್ಮನ್ನು ನಿಮ್ಮ ಮುಂಚಿನ ಸ್ಥಳಗಳಲ್ಲಿ ವಾಸಿಸ ಮಾ
ಡಿ, ನಿಮ್ಮ ಮೊದಲಿನ ಸ್ಥಿತಿಗಿಂತ ನಿಮಗೆ ಚನಾಗಿ ಮಾಡುವೆನು;
೧೨ ಆಗ ನಾನೇ ಯೆಹೋವನೆಂದು ತಿಳಿಯುವಿರಿ. ಹೌದು, ನಾನು
ನಿಮ್ಮ ಮೇಲೆ ಮನುಷ್ಯರನ್ನು, ಅಂದರೆ, ನನ್ನ ಜನರಾದ ಇಸ್ರ
ಯೇಲನ್ನು ನಡೆಯ ಮಾಡುವೆನು, ಅವರು ನಿನ್ನನ್ನು ಸ್ವತಂತ್ರಿ
ಸಿ ಕೊಳ್ಳುವರು; ನೀನು ಅವರಿಗೆ ಸ್ವಾಸ್ತ್ಯವಾಗಿರುವಿ; ನೀನು ಅ
೧೩ ವರನ್ನು ಇನ್ನು ಮೇಲೆ ಮಕ್ಕಳಿಲ್ಲದವರಾಗ ಮಾಡುವದಿಲ್ಲ. ಕ
ರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನೀನು ಮನುಷ್ಯರ
ನ್ನು ತಿನ್ನುವಂಥ ದೇಶವೂ, ನಿನ್ನ ಜನಗಳನ್ನು ಮಕ್ಕಳಿಲ್ಲದವರಾ
ಗ ಮಾಡುವಂಥಾದ್ದೂ, ಆಗಿದ್ದೀ ಎಂದೂ ಅವರು ನಿಮಗೆ ಹೇಳು
೧೪ ವದರಿಂದ, ಇದು ಕಾರಣ ನೀನು ಇನ್ನು ಮೇಲೆ ಮನುಷ್ಯರನ್ನು
ತಿನ್ನುವದಿಲ್ಲ, ನಿನ್ನ ಜನಗಳನ್ನು ಇನ್ನು ಮೇಲೆ ಮಕ್ಕಳಿಲ್ಲದವ
ರಾಗ ಮಾಡುವದಿಲ್ಲವೆಂದು ಕರ್ತನಾದ ಯೆಹೋವ ಅನ್ನುತ್ತಾನೆ.
೧೫ ಇದಲ್ಲದೆ ನಾನು ನಿನ್ನಲ್ಲಿ ಇನ್ನು ಜನಾಂಗಗಳ ನಿಂದೆಯನ್ನು ಕೇ
ಳ ಗೊಡಿಸುವದಿಲ್ಲ; ನೀನು ಇನ್ನು ಜನಗಳ ತಿರಸ್ಕಾರವನ್ನು
ಹೊರುವದಿಲ್ಲ; ನೀನು ನಿನ್ನ ಜನಗಳನ್ನು ಇನ್ನು ಬೀಳಿಸುವದಿಲ್ಲ
ವೆಂದು ಕರ್ತನಾದ ಯೆಹೋವ ಅನ್ನುತ್ತಾನೆ.
೧೬ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿ
೧೭ ದ್ದೇನಂದರೆ—ಮನುಷ್ಯನ ಮಗನೇ, ಇಸ್ರಯೇಲನ ಮನೆಯವರು
ತಮ್ಮ ದೇಶದಲ್ಲಿ ವಾಸ ಮಾಡಿದಾಗ, ಅವರು ಅದನ್ನು ತಮ್ಮ
ಮಾರ್ಗಗಳಿಂದಲೂ, ತಮ್ಮ ದುಷ್ಕ್ರಿಯೆಗಳಿಂದಲೂ, ಅಶುದ್ಧ
ಮಾಡುತ್ತಿದ್ದರು; ಅವರ ಮಾರ್ಗವು ನನ್ನ ಮುಂದೆ ಮುಟ್ಟುಗಿರು
ವವಳ ಅಶುದ್ಧತ್ವದ ಹಾಗಿತ್ತು. ಆದದರಿಂದ ನಾನು, ಅವರು
ದೇಶದಲ್ಲಿ ಚೆಲ್ಲಿದ ರಕ್ತದ ನಿಮಿತ್ತವೂ, ಅವರು ಅದನ್ನು ಅಶುದ್ಧ
ಮಾಡಿದ ಅವರ ವಿಗ್ರಹಗಳ ನಿಮಿತ್ತವೂ, ನನ್ನ ಉಗ್ರವನ್ನು ಅ
೧೯ ವರ ಮೇಲೆ ಹೊಯಿದೆನು. ನಾನು ಅವರನ್ನು ಜನಾಂಗಗಳಲ್ಲಿ
ಹೆದರಿಸಿದೆನು; ಅವರು ದೇಶಗಳಲ್ಲಿ ಚೆಲ್ಲಿ ಹೋದರು; ಅವರ
ಮಾರ್ಗಗಳ ಪ್ರಕಾರವೂ, ಅವರ ದುಷ್ಕ್ರಿಯೆಗಳ ಪ್ರಕಾರವೂ,
೨೦ ಅವರಿಗೆ ನ್ಯಾಯ ತೀರಿಸಿದೆನು. ಅವರು ಸೇರಿದ ಜನಾಂಗಗಳಲ್ಲಿ
ಸೇರಿದಾಗ—ಇವರೇ ಯೆಹೋವನ ಜನರು, ಅವನ ದೇಶದಿಂದ

ಹೊರಟಿರು, ಎಂದು ಅವರಿಗೆ ಹೇಳಿ, ನನ್ನ ಪರಿಶುದ್ಧ ಹೆಸರನ್ನು
೨೦ ಅಪವಿತ್ರ ಮಾಡಿದರು. ಅದರೆ ಇಸ್ರಯೇಲನ ಮನೆಯವರು ತಾ
ವು ಹೋದ ಜನಾಂಗಗಳಲ್ಲಿ ಅಪವಿತ್ರ ಮಾಡಿದ ನನ್ನ ಪರಿಶುದ್ಧ
೨೨ ಹೆಸರಿಗಾಗಿ ನಾನು ಕನಿಕರ ಮಾಡಿದೆನು. ಆದದರಿಂದ ನೀನು
ಇಸ್ರಯೇಲನ ಮನೆಯವರಿಗೆ ಹೇಳಿ ತಕ್ಕದ್ದೇನಂದರೆ—ಕರ್ತನಾ
ದ ಯೆಹೋವ ಹೀಗೆ ಹೇಳುತ್ತಾನೆ—ಇಸ್ರಯೇಲನ ಮನೆಯವರೇ,
ನಿಮಗೋಸ್ಕರವಲ್ಲ, ನೀವು ಹೋದ ಜನಾಂಗಗಳಲ್ಲಿ ಅಪವಿತ್ರ
ಮಾಡಿದ ನನ್ನ ಪರಿಶುದ್ಧ ಹೆಸರಿಗೋಸ್ಕರ ಇದನ್ನು ಮಾಡುತ್ತೇ
೨೩ ನೆ. ಮತ್ತು ಜನಾಂಗಗಳಲ್ಲಿ ಅಪವಿತ್ರವಾದಂಥ, ನೀವು ಅವರಲ್ಲಿ
ಅಪವಿತ್ರ ಮಾಡಿದಂಥ, ನನ್ನ ದೊಡ್ಡ ಹೆಸರನ್ನು ಪರಿಶುದ್ಧ ಮಾಡು
ವೆನು; ಆಗ, ನಾನು ಅವರ ಕಣ್ಣುಗಳ ಮುಂದೆ ನಿಮ್ಮಲ್ಲಿ ಪರಿಶುದ್ಧ
ನಾದ ಮೇಲೆ, ಜನಾಂಗಗಳು ನಾನೇ ಯೆಹೋವನೆಂದು ತಿಳಿಯು
೨೪ ವರು, ಎಂದು ಕರ್ತನಾದ ಯೆಹೋವ ಅನ್ನುತ್ತಾನೆ. ಹ್ಯಾಗಂದರೆ
ನಾನು ನಿಮ್ಮನ್ನು ಜನಾಂಗಗಳೊಳಗಿಂದ ತೆಗೆದು, ಎಲ್ಲಾ ದೇಶಗ
ಳೊಳಗಿಂದ ಕೂಡಿಸಿ, ನಿಮ್ಮನ್ನು ನಿಮ್ಮ ಸ್ವಂತ ದೇಶದಲ್ಲಿ ಬರ
೨೫ ಮಾಡುವೆನು. ಆಗ ನಾನು ನಿಮ್ಮ ಮೇಲೆ ಶುದ್ಧ ನೀರನ್ನು ಚಿಮು
ಕಿಸುವೆನು, ಮತ್ತು ನೀವು ಶುದ್ಧವಾಗುವಿರಿ. ನಿಮ್ಮ ಅಶುದ್ಧತ್ವಗ
ಳಿಂದೆಲ್ಲಾ, ನಿಮ್ಮ ವಿಗ್ರಹಗಳಿಂದೆಲ್ಲಾ ನಿಮ್ಮನ್ನು ಶುದ್ಧ ಮಾಡುವೆ
೨೬ ನು. ಮತ್ತು ನಿಮಗೆ ಹೊಸ ಹೃದಯವನ್ನು ಕೊಟ್ಟು, ಹೊಸ
ಆತ್ಮವನ್ನು ನಿಮ್ಮೊಳಗೆ ಇಡುವೆನು; ಕಲ್ಲಿನ ಹೃದಯವನ್ನು
ನಿಮ್ಮ ಮಾಂಸದೊಳಗಿಂದ ತೆಗೆದು, ಮಾಂಸದ ಹೃದಯವನ್ನು
೨೭ ನಿಮಗೆ ಕೊಡುವೆನು. ಇದಲ್ಲದೆ ನನ್ನ ಆತ್ಮವನ್ನು ನಿಮ್ಮೊಳಗೆ
ಇಟ್ಟು ನೀವು ನನ್ನ ನೇಮಗಳಲ್ಲಿ ನಡೆಯುವ ಹಾಗೆ ಮಾಡುವೆನು;
೨೮ ನೀವು ನನ್ನ ನ್ಯಾಯಗಳನ್ನು ಕೈಕೊಂಡು ಮಾಡುವಿರಿ. ಮತ್ತು
ನಾನು ನಿಮ್ಮ ತಂದೆಗಳಿಗೆ ಕೊಟ್ಟ ದೇಶದಲ್ಲಿ ವಾಸ ಮಾಡುವಿರಿ;
ನೀವು ನನಗೆ ಜನರಾಗಿರುವಿರಿ; ನಾನು ನಿಮಗೆ ದೇವರಾಗಿರುವೆನು.
೨೯ ನಾನು ನಿಮ್ಮ ಅಕುದ್ಧತ್ವಗಳಿಂದೆಲ್ಲಾ ನಿಮ್ಮನ್ನು ರಕ್ಷಿಸುವೆನು,
ಗೋಧಿಯನ್ನು ಕರೆದು ಅದನ್ನು ಹೆಚ್ಚಿಸುವೆನು; ಬರವನ್ನು ನಿ
೩೦ ಮ್ಮ ಮೇಲೆ ಇರುವದಿಲ್ಲ. ಜನಾಂಗಗಳಲ್ಲಿ ನಿಮಗೆ ಬರದ ನಿಂದೆ
ಇನ್ನು ಆಗದ ಹಾಗೆ ನಾನು ಮರಗಳ ಫಲವನ್ನೂ ಹೊಲದ ಅ
೩೧ ದಾಯವನ್ನೂ ಹೆಚ್ಚಿಸುವೆನು. ಆಗ ನೀವು ನಿಮ್ಮ ದುರ್ಮಾ
ರ್ಗಗಳನ್ನೂ ಒಳ್ಳೆಯವುಗಳಲ್ಲದ ನಿಮ್ಮ ದುಷ್ಕ್ರಿಯೆಗಳನ್ನೂ
ಜ್ಞಾಪಕ ಮಾಡಿ ಕೊಂಡು, ನಿಮ್ಮ ಅಕ್ರಮಗಳ ನಿಮಿತ್ತವೂ ನಿಮ್ಮ
ಹೇಸಿಗೆಗಳ ನಿಮಿತ್ತವೂ ನಿಮ್ಮನ್ನು ನೀವೇ ಅಸಹ್ಯಿಸಿ ಕೊಳ್ಳು
೩೨ ವಿರಿ. ನಿಮಗೋಸ್ಕರ ಅದನ್ನು ಮಾಡುವದಿಲ್ಲ, ನಿಮಗೆ ತಿಳಿದಿರ
ಲಿ ಎಂದು ಕರ್ತನಾದ ಯೆಹೋವ ಅನ್ನುತ್ತಾನೆ; ಇಸ್ರಯೇಲನ
ಮನೆಯವರೇ ನಿಮ್ಮ ಮಾರ್ಗಗಳ ನಿಮಿತ್ತ ನಾಚಿಕೆ ಪಟ್ಟು
೩೩ ಲಜ್ಜೆ ಹೊಂದಿರಿ. ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—
ನಾನು ನಿಮ್ಮ ಅಕ್ರಮಗಳಿಂದೆಲ್ಲಾ ನಿಮ್ಮನ್ನು ಶುದ್ಧ ಮಾಡುವ
೩೪ ದಿವಸದಲ್ಲಿ ಪಟ್ಟಣಗಳನ್ನು ನಿವಾಸಿಗಳಿಂದ ತುಂಬಿಸುವೆನು; ಕಾಡಾದ
ಸ್ಥಳಗಳು ಸಹ ಕಟ್ಟಲ್ಪಡುವವು; ಮತ್ತು ಹಾಳಾದ ದೇಶವು ಹಾದು
ಹೋಗುವವರೆಲ್ಲರ ಮುಂದೆ ಹಾಳಾಗಿದ್ದದರ ಬದಲಾಗಿ ಬೇಸಾಯ
೩೫ ಮಾಡಲ್ಪಡುವದು. ಆಗ—ಹಾಳಾಗಿದ್ದ ಈ ದೇಶವು ಏದೆನ್ ತೋ
ಟದ ಹಾಗಾಯಿತೆಂದು, ಹಾಳಾಗಿ ಬಿದ್ದು ಹೋಗಿ ಕಾಡಾದ ಪಟ್ಟ
ಣಗಳು ಕೋಟೆಯೂ ನಿವಾಸಿಗಳೂ ಉಳ್ಳವುಗಳಾಗಿವೆ ಎಂದು,
೩೬ ಹೇಳುವರು. ಆಗ ನಿಮ್ಮ ಸುತ್ತಲು ಉಳಿದ ಜನಾಂಗಗಳು ಯೆ
ಹೋವನಾದ ನಾನೇ ಬಿದ್ದು ಹೋದವುಗಳನ್ನು ಕಟ್ಟಿದೆನೆಂದೂ,
೩೭ ಹಾಳಾದದ್ದನ್ನೂ ಬೇಸಾಯ ಮಾಡಿದೆನೆಂದು ತಿಳಿಯುವವು. ಕ
ರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇನ್ನು ಇದರ ವಿಷ
ಯ ನಾನು ಇದನ್ನು ಅವರಿಗೆ ಮಾಡ ಬೇಕೆಂದು, ಇಸ್ರಯೇಲನ ಮ
ನೆಯವರಿಂದ ಬೇಡಲ್ಪಡುವೆನು; ನಾನು ಮನುಷ್ಯರನ್ನು ಅವರಲ್ಲಿ
೩೮ ಕುರಿಗಳಂತೆ ಹೆಚ್ಚಿಸುವೆನು. ಪರಿಶುದ್ಧ ಮಂದೆ ಹ್ಯಾಗೋ ಹಾಗೆ
ಯೇ ಆ ಕಾಡಾದ ಪಟ್ಟಣಗಳು ಮನುಷ್ಯರ ಮಂದೆಯಿಂದ ತುಂ
ಬಾಗುವವು; ಆಗ ನಾನೇ ಯೆಹೋವನೆಂದು ತಿಳಿಯುವರು.

## ೩೭. ಸಂಧಿ.

೧ ಯೆಹೋವನ ಕೈ ನನ್ನ ಮೇಲೆ ಇದ್ದು, ನನ್ನನ್ನು ಯೆಹೋ
ವನ ಆತ್ಮದಲ್ಲಿ ಹೊರಗೆ ತಂದು, ನನ್ನನ್ನು ತಗ್ಗಿನ ಮಧ್ಯದಲ್ಲಿ
೨ ಬಿಟ್ಟಿತು; ಅದು ಎಲುವುಗಳಿಂದ ತುಂಬಾಗಿತ್ತು. ಇವುಗಳ ಸುತ್ತ
ಲಾಗಿ ಅದು ನನ್ನನ್ನು ಹಾದು ಹೋಗ ಮಾಡಿತು; ಇಗೋ, ಅ
ವು ತಗ್ಗಿನ ಮುಖದ ಮೇಲೆ ಬಹಳವಾಗಿದ್ದವು; ಮತ್ತು ಇಗೋ,
೩ ಅವು ಬಹಳ ಬಣಗಿ ಇದ್ದವು. ಆಗಲವನು ನನಗೆ—ಮನುಷ್ಯನ
ಮಗನೇ, ಈ ಎಲುವುಗಳು ಜೀವಿಸಲಾಗುವವೋ? ಅಂದನು.
ಅದಕ್ಕೆ ನಾನು—ಕರ್ತನಾದ ಯೆಹೋವನೇ, ನೀನೇ ಬಲ್ಲಿ,
೪ ಅಂದೆನು. ಆಗಲವನು ನನಗೆ ಹೇಳಿದ್ದೇನಂದರೆ—ನೀನು ಈ
ಎಲುವುಗಳ ಮೇಲೆ ಪ್ರವಾದಿಸಿ ಅವುಗಳಿಗೆ ಹೀಗೆ ಹೇಳು—ಓ ಬ
ಣಗಿದ ಎಲುವುಗಳೇ! ಯೆಹೋವನ ವಾಕ್ಯವನ್ನು ಕೇಳಿರಿ.
೫ ಕರ್ತನಾದ ಯೆಹೋವನು ಈ ಎಲುವುಗಳಿಗೆ ಹೀಗೆ ಹೇಳುತ್ತಾ
ನೆ—ಇಗೋ ನಾನು ನಿಮ್ಮಲ್ಲಿ ಆತ್ಮವನ್ನು ಬರ ಮಾಡುತ್ತೇನೆ;
೬ ಆಗ ಜೀವಿಸುವಿರಿ. ಮತ್ತು ನಿಮ್ಮ ಮೇಲೆ ನರಗಳನ್ನು ಇಟ್ಟು,
ನಿಮ್ಮ ಮೇಲೆ ಮಾಂಸವನ್ನು ಬೆಳೆಸಿ, ನಿಮ್ಮ ಮೇಲೆ ಚರ್ಮವ
ನ್ನು ಮುಚ್ಚಿ, ನಿಮ್ಮಲ್ಲಿ ಆತ್ಮವನ್ನು ಇಡುವೆನು; ಆಗ ಜೀವಿಸುವಿ
೭ ರಿ, ಮತ್ತು ನಾನೇ ಯೆಹೋವನೆಂದು ತಿಳಿಯುವಿರಿ. ಹಾಗೆಯೇ
ನಾನು ಆಜ್ಞೆ ಹೊಂದಿದ ಪ್ರಕಾರ ಪ್ರವಾದಿಸಿದೆನು; ಮತ್ತು ನಾನು
ಪ್ರವಾದಿಸಲಾಗಿ ಶಬ್ದವಾಯಿತು; ಮತ್ತು ಇಗೋ ಕದಲುವಿಕೆ ಇ
ತ್ತು; ಆಗ ಆ ಎಲುವುಗಳು ಎಲುವಿನ ಸಂಗಡ ಎಲುವು ಕೂಡಿ
೮ ಕೊಂಡವು. ಮತ್ತು ನಾನು ನೋಡಲಾಗಿ ಇಗೋ ಅವುಗಳ
ಮೇಲೆ ನರಗಳು ಮಾಂಸವು ಸಹ ಬೆಳೆಯಿತು; ಮತ್ತು ಚರ್ಮ
ವು ಅವುಗಳ ಮೇಲೆ ಮುಚ್ಚಿ ಕೊಂಡಿತು; ಆದರೆ ಆತ್ಮವು ಅವುಗ
೯ ಳಲ್ಲಿ ಇರಲಿಲ್ಲ. ಆಗಲವನು ನನಗೆ ಹೇಳಿದ್ದೇನಂದರೆ—ಆತ್ಮಕ್ಕೆ
ಪ್ರವಾದಿಸು: ಮನುಷ್ಯನ ಮಗನೇ, ಪ್ರವಾದಿಸಿ ಆತ್ಮಕ್ಕೆ ನೀನು
ಹೇಳಿ ತಕ್ಕದ್ದು—ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—
ಆತ್ಮವೇ, ನಾಲ್ಕು ದಿಕ್ಕುಗಳಿಂದ ಬಂದು ಈ ಹತವಾದವರ ಮೇ
೧೦ ಲೆ ಅವರು ಜೀವಿಸುವ ಹಾಗೆ ಊದು. ಅವನು ನನಗೆ ಆಜ್ಞಾಪಿಸಿ
ದ ಹಾಗೆಯೇ ನಾನು ಪ್ರವಾದಿಸಿದೆನು; ಆಗ ಆತ್ಮವು ಅವುಗಳ
ಲ್ಲಿ ಬಂತು; ಮತ್ತು ಅವು ಜೀವಿಸಿ, ಬಹಳ ಬಹಳ ದೊಡ್ಡ ದಂ
೧೧ ಡಾಗಿ ಕಾಲೂರಿ ನಿಂತವು. ಆಗಲವನು ನನಗೆ ಹೇಳಿದ್ದೇನಂದ
ಕೆ—ಮನುಷ್ಯನ ಮಗನೇ, ಈ ಎಲುವುಗಳು ಸಮಸ್ತ ಇಸ್ರಯೇಲ
ನ ಮನೆಯವರೇ; ಇಗೋ ಅವರು—ನಮ್ಮ ಎಲುವುಗಳು ಬಣಗಿವೆ;
ನಮ್ಮ ನಿರೀಕ್ಷೆ ನಾಶವಾಯಿತು; ನಾವು ಶುದ್ಧವಾಗಿ ಕಡಿದು ಬಿದ
೧೨ ಲ್ಪಟ್ಟಿದ್ದೇವೆಂದು ಹೇಳುತ್ತಾರೆ. ಆದದರಿಂದ ನೀನು ಪ್ರವಾದಿಸಿ,



ಅವರಿಗೆ ಹೇಳಿ ತಕ್ಕದ್ದೇನಂದರೆ—ಕರ್ತನಾದ ಯೆಹೋವ ಹೀಗೆ
ಹೇಳುತ್ತಾನೆ—ಇಗೋ ನನ್ನ ಜನರೇ, ನಾನು ನಿಮ್ಮ ಸಮಾಧಿಗ
ಳನ್ನು ತೆಗೆದು, ನಿಮ್ಮನ್ನು ನಿಮ್ಮ ಸಮಾಧಿಗಳೊಳಗಿಂದ ಹೊ
ರಗೆ ಬರ ಮಾಡಿ, ನಿಮ್ಮನ್ನು ಇಸ್ರಯೇಲನ ದೇಶಕ್ಕೆ ಬರ ಮಾ
೧೩ ಡುವೆನು. ಆಗ ನನ್ನ ಜನರೇ, ನಾನು ನಿಮ್ಮ ಸಮಾಧಿಗಳನ್ನು
ತೆಗೆದು, ನಿಮ್ಮನ್ನು ನಿಮ್ಮ ಸಮಾಧಿಗಳಿಂದ ಹೊರಗೆ ಬರ ಮಾ
೧೪ ಡುವಾಗ, ನಾನೇ ಯೆಹೋವನೆಂದು ತಿಳಿಯ ಕೊಳ್ಳುವಿರಿ. ಹೌದು
ನನ್ನ ಆತ್ಮವನ್ನು ನಿಮ್ಮಲ್ಲಿ ಇಡುವೆನು; ಆಗ ನೀವು ಜೀವಿಸುವಿರಿ;
ಮತ್ತು ನಿಮ್ಮ ಸ್ವಂತ ದೇಶದಲ್ಲಿ ನಿಮ್ಮನ್ನು ಇರಿಸುವೆನು; ಆಗ
ಯೆಹೋವನಾದ ನಾನೇ ಅದನ್ನು ಹೇಳಿ ನಡಿಸಿದ್ದೇನೆಂದು ನಿಮ
ಗೆ ತಿಳಿಯುವದೆಂದು ಯೆಹೋವ ಅನ್ನುತ್ತಾನೆ.

೧೫ ಮತ್ತು ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇ
೧೬ ನಂದರೆ—ಇದಲ್ಲದೆ, ಮನುಷ್ಯನ ಮಗನೇ, ಒಂದು ಕೋಲನ್ನು
ತಕ್ಕೊಂಡು, ಅದರ ಮೇಲೆ—ಯೆಹೂದನದೂ, ಅವನ ಜತೆಗಾ
ರನಾದ ಇಸ್ರಯೇಲನ ಮಕ್ಕಳದೂ ಎಂದು ಬರೆ; ಆಗ ಮತ್ತೊಂ
ದು ಕೋಲು ತಕ್ಕೊಂಡು ಅದರ ಮೇಲೆ—ಯೋಸೆಫನದೆಂದೂ
ಎಫ್ರಾಯಿಮಿಗೂ, ಅವನ ಜತೆಗಾರರಾದ ಇಸ್ರಯೇಲಿನ ಮನೆ
೧೭ ಯವಕೆಲ್ಲರಿಗೂ ಇರುವ ಕೋಲು ಎಂದೂ, ಬರೆ. ಆಮೇಲೆ ಅ
ವುಗಳನ್ನು ಒಂದೇ ಕೋಲಾಗುವ ಹಾಗೆ ಒಂದಕ್ಕೊಂದು ಹೊಂ
೧೮ ದಿಸ ಬೇಕು; ಅವು ನಿನ್ನ ಕೈಯಲ್ಲಿ ಒಂದೇಯಾಗುವವು. ನಿನ್ನ
ಜನರ ಮಕ್ಕಳು ನಿನಗೆ—ಇವು ನಿನಗೇನೆಂದು ನಮಗೆ ತಿಳಿಸುವ
೧೯ ದಿಲ್ಲವೋ? ಎಂದು ಹೇಳುವಾಗ, ನೀನು ಅವರಿಗೆ ಹೇಳಿ ತಕ್ಕದ್ದೇ
ನಂದರೆ—ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಇಗೋ
ನಾನು ಎಫ್ರಾಯಿಮನ ಕೈಯಲ್ಲಿರುವ ಯೋಸೆಫನ ಕೋಲ
ನ್ನೂ ಅವನ ಜತೆಗಾರರಾದ ಇಸ್ರಯೇಲನ ಕುಲಗಳನ್ನೂ ತಕ್ಕೊಂ
ಡು, ಅವನ ಸಂಗಡ, ಯೆಹೂದನ ಕೋಲಿನ ಸಂಗಡವೇ ಇಟ್ಟು,
ಒಂದೇ ಕೋಲಾಗ ಮಾಡುವೆನು; ಅವು ನನ್ನ ಕೈಯಲ್ಲಿ ಬಂದಾ
೨೦ ಗುವವು. ನೀನು ಬರೆದ ಆ ಕೋಲುಗಳು ಅವರ ಕಣ್ಣುಗಳ
ಮುಂದೆ ನಿನ್ನ ಕೈಯಲ್ಲಿ ಇರಲಾಗಿ, ನೀನು ಅವರಿಗೆ ಹೇಳಿ ತಕ್ಕ
೨೧ ದ್ದೇನಂದರೆ—ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ; ಇ
ಗೋ ನಾನು ಇಸ್ರಯೇಲನ ಮಕ್ಕಳನ್ನು ಅವರು ಹೋದ ಜ
ನಾಂಗಗಳೊಳಗಿಂದ ತಕ್ಕೊಂಡು, ಸಕಲ ಕಡೆಯಿಂದ ಅವರನ್ನು
೨೨ ಕೂಡಿಸಿ, ಅವರ ಸ್ವಂತ ದೇಶಕ್ಕೆ ಬರ ಮಾಡುವೆನು. ಮತ್ತು
ಅವರನ್ನು ದೇಶದಲ್ಲಿ, ಇಸ್ರಯೇಲನ ಬೆಟ್ಟಗಳ ಮೇಲೆ, ಒಂದೇ
ಜನಾಂಗವಾಗ ಮಾಡುವೆನು; ಒಬ್ಬನೇ ಅರಸನು ಅವರೆಲ್ಲರಿಗೆ
ಅರಸನಾಗಿರುವನು; ಅವರು ಇನ್ನು ಎರಡು ಜನಾಂಗಗಳಾಗಿರು
ವದಿಲ್ಲ, ಇನ್ನು ಎರಡು ರಾಜ್ಯಗಳಾಗಿ ಭೇದಿಸಲ್ಪಡುವದಿಲ್ಲ.
೨೩ ಮತ್ತು ಅವರು ಇನ್ನು ತಮ್ಮ ವಿಗ್ರಹಗಳಿಂದಲೂ ತಮ್ಮ ಹೇಸಿಗೆ
ಗಳಿಂದಲೂ ತಮ್ಮ ಎಲ್ಲಾ ಅಪರಾಧಗಳಿಂದಲೂ ಅಶುದ್ಧವಾಗುವ
ದಿಲ್ಲ; ಆದರೆ ನಾನು ಅವರನ್ನು, ಅವರು ಪಾಪ ಮಾಡಿದ ಅವರ
ಎಲ್ಲಾ ನಿವಾಸಗಳೊಳಗಿಂದ ರಕ್ಷಿಸಿ, ಅವರನ್ನು, ಶುದ್ಧ ಮಾಡುವೆ
ನು; ಹೀಗೆ ಅವರು ನನಗೆ ಜನರಾಗಿರುವರು; ನಾನು ಅವರಿಗೆ
೨೪ ದೇವರಾಗಿರುವೆನು. ಮತ್ತು ನನ್ನ ಸೇವಕನಾದ ದಾವೀದನು ಅ
ವರ ಮೇಲೆ ಅರಸನಾಗಿರುವನು; ಅವರೆಲ್ಲರಿಗೆ ಒಬ್ಬನೇ ಕುರುಬ
ನಿರುವನು; ಮತ್ತು ಅವರು ನನ್ನ ನ್ಯಾಯಗಳಲ್ಲಿ ನಡೆದು, ನನ್ನ
೨೫ ನೇಮಗಳನ್ನು ಕೈಕೊಂಡು ಮಾಡುವರು. ಇದಲ್ಲದೆ ನಾನು ನ
ನ್ನ ಸೇವಕನಾದ ಯಾಕೋಬನಿಗೆ ಕೊಟ್ಟ ದೇಶದಲ್ಲಿ ನಿಮ್ಮ
ತಂದೆಗಳು ವಾಸ ಮಾಡಿದ್ದಲ್ಲಿ ವಾಸ ಮಾಡುವರು; ಅವರೂ, ಅ
ವರ ಮಕ್ಕಳೂ ಅವರ ಮಕ್ಕಳ ಮಕ್ಕಳೂ ಎಂದೆಂದಿಗೂ ಅದ
ರಲ್ಲಿ ವಾಸ ಮಾಡುವರು; ಮತ್ತು ನನ್ನ ಸೇವಕನಾದ ದಾವೀದ
೨೬ ನು ಎಂದೆಂದಿಗೂ ಅವರಿಗೆ ಪ್ರಭುವಾಗಿರುವನು. ಇದಲ್ಲದೆ ನಾನು
ಸಮಾಧಾನದ ಒಡಂಬಡಿಕೆಯನ್ನು ಅವರ ಸಂಗಡ ಮಾಡುವೆನು;
ಅದು ಅವರ ಸಂಗಡ ನಿತ್ಯ ಒಡಂಬಡಿಕೆಯಾಗಿರುವದು; ನಾನು
ಅವರನ್ನು ಇರಿಸಿ, ಹೆಚ್ಚಿಸುವೆನು; ಮತ್ತು ನನ್ನ ಪರಿಶುದ್ಧ ಸ್ಥಳ
೨೭ ವನ್ನು ಎಂದೆಂದಿಗೂ ಅದರ ಮಧ್ಯದಲ್ಲಿ ಇಡುವೆನು. ಮತ್ತು ನ
ನ್ನ ಗುಡಾರವು ಅವರ ಮೇಲೆ ಇರುವದು; ಹೌದು, ನಾನು ಅವ
೨೮ ರಿಗೆ ದೇವರಾಗಿರುವೆನು, ಅವರು ನನಗೆ ಜನರಾಗಿರುವರು. ಆಗ
ನನ್ನ ಪರಿಶುದ್ಧ ಸ್ಥಳವು ಎಂದೆಂದಿಗೂ ಅವರ ಮಧ್ಯದಲ್ಲಿ ಇರು
ವಾಗ, ಯೆಹೋವನಾದ ನಾನೇ ಇಸ್ರಯೇಲನ್ನು ಪರಿಶುದ್ಧ ಮಾ
ಡುತ್ತೇನೆಂದು ಜನಾಂಗಗಳು ತಿಳಿಯ ಕೊಳ್ಳುವವು.

## ೩೮. ಸಂಧಿ.

೧ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿ
೨ ದ್ದೇನಂದರೆ—ಮನುಷ್ಯನ ಮಗನೇ, ನಿನ್ನ ಮುಖವನ್ನು ಮಾ
ಗೋಗ ದೇಶದವನಾದಂಥ, ರೋಷ್ ಮೇಷ್ಕ್ ತೂಬಲ್ ಇವುಗಳ
ಪ್ರಭುವಾದಂಥ ಗೋಗನಿಗೆ ವಿರೋಧವಾಗಿ ಇಡು; ಅವನಿಗೆ ವಿ
3 ರೋಧವಾಗಿ ಪ್ರವಾದಿಸಿ, ನೀನು ಹೇಳಿ ತಕ್ಕದ್ದೇನಂದರೆ—ಕರ್ತ
ನಾದ ಯೆಹೋವ ಹೀಗೆ ಹೇಳುತ್ತಾನೆ—ಗೋಗನೇ, ರೋಷ್
ಮೇಷ್ಕ್ ತೂಬಲ್ ಇವುಗಳ ಪ್ರಭುವೇ, ಇಗೋ ನಿನಗೆ ವಿರೋ
೪ ಧವಾಗಿದ್ದೇನೆ. ನಾನು ನಿನ್ನನ್ನು ತಿರುಗಿಸಿ ಬಿಟ್ಟು, ನಿನ್ನ ದವಡೆ
ಗಳಲ್ಲಿ ಗಾಲಗಳನ್ನಿಟ್ಟು, ನಿನ್ನನ್ನೂ ನಿನ್ನ ಎಲ್ಲಾ ದಂಡನ್ನೂ,
ಕುದುರೆಗಳನ್ನೂ, ರಾಹುತರನ್ನೂ, ಸರ್ವಾಯುಧಗಳನ್ನು ತೊ
ಟ್ಟವರೆಲ್ಲರನ್ನೂ, ಪೇಟ್ಯವೂ ಗುರಾಣಿಯೂ ಉಳ್ಳ ಮಹಾ ಸ
ಮೂಹವನ್ನೂ, ಕತ್ತಿಗಳನ್ನು ಹಿಡಿಯುವ ಅವರೆಲ್ಲರನ್ನೂ,
೫ ಅವರ ಸಂಗಡ ಚಾರ್ಸಿಯರನ್ನೂ, ಕೂಷ್ಯರನ್ನೂ ಫೂತ್ಯರ
ನ್ನೂ, ಗುರಾಣಿಯೂ ಶಿರಸ್ತ್ರಾಣವೂ ಉಳ್ಳ ಅವರೆಲ್ಲರನ್ನೂ
೬ ಗೋಮೆರನನ್ನೂ ಅವನ ಎಲ್ಲಾ ಪಟ್ಟಾಳಗಳನ್ನೂ, ಉತ್ತರ ಚಾ
ರ್ಷ್ವದ ತೊಗಾರ್ಮನ ಮನೆಯವರನ್ನೂ, ಅವನ ಎಲ್ಲಾ ಪಟ್ಟಾ
ಳಗಳನ್ನೂ, ನಿನ್ನ ಸಂಗಡಿರುವ ಅನೇಕ ಜನಗಳನ್ನೂ ಹೊರ
೭ ಗೆ ತರುವೆನು. ನೀನು, ನಿನ್ನ ಸಂಗಡ ಕೂಡಿ ಬಂದಿರುವ ನಿನ್ನ
ಎಲ್ಲಾ ಕೂಟಗಳ ಸಂಗಡ ಸಿದ್ಧವಾಗು; ಸಿದ್ಧ ಮಾಡಿಕೋ; ನೀನು
ಅವರಿಗೆ ಕಾವಲಿಯಾಗಿರು. ಬಹಳ ದಿವಸಗಳು ಹೋದ ಮೇ
೮ ಲೆ ನೀನು ವಿಚಾರಿಸಲ್ಪಡುವಿ; ವರುಷಗಳ ಅಂತ್ಯದಲ್ಲಿ ನೀನು ಕತ್ತಿ
ಯಿಂದ ತಿರುಗಿಸಲ್ಪಟ್ಟಿಂಥ, ಅನೇಕ ಜನಗಳೊಳಗಿಂದ ಕೂಡಿಸ
ಲ್ಪಟ್ಟಿಂಥ, ದೇಶಕ್ಕೂ, ಯಾವಾಗಲೂ ಕಾಡಾಗಿದ್ದ ಇಸ್ರಯೇಲ
ನ ಬೆಟ್ಟಗಳ ಮೇಲೆಯೂ, ಜನಗಳೊಳಗಿಂದ ಹೊರಗೆ ತರಲ್ಪ
ಟ್ಟು ಎಲ್ಲರು ಭದ್ರವಾಗಿ ವಾಸಿಸುವವರ ಬಳಿಗೂ, ಬರುವಿ. ನೀನು
೯ ಏರುವಾಗ ಬಿರುಗಾಳಿಯಂತೆ ಬರುವಿ; ನೀನೂ ನಿನ್ನ ಎಲ್ಲಾ ಪಟ್ಟಾ
ಳಗಳೂ ನಿನ್ನ ಸಂಗಡ ಇರುವ ಅನೇಕ ಜನರು ಸಹಿತವಾಗಿ ಮೇಘು
೧೦ ದಂತೆ ಭೂಮಿಯನ್ನು ಮುಚ್ಚುವಿ. ಕರ್ತನಾದ ಯೆಹೋವ ಹೀ

ಗೆ ಹೇಳುತ್ತಾನೆ—ಅದಿನದಲ್ಲಿ ಆಗುವದೇನಂದರೆ—ನಿನ್ನ ಹೃದಯ
ಕ್ಕೆ ಅಲೋಚನೆಗಳು ಬರುವವು; ನೀನು ಕೆಟ್ಟ ಯೋಚನೆಯನ್ನು
೧೧ ಯೋಚಿಸಿ, ಹೇಳುವದೇನಂದರೆ—ನಾನು ಗ್ರಾಮಗಳ ದೇಶಕ್ಕೆ
ಏರಿ ಹೋಗುವೆನು, ಶಾಂತಿಯಿಂದ ಭದ್ರವಾಗಿ ವಾಸಿಸುವವರೆಲ್ಲರ
ಬಳಿಗೆ, ಗೋಡೆಗಳು ಇಲ್ಲದೆ, ಅಗುಳಿಗಳೂ ಬಾಗಲುಗಳೂ ಇಲ್ಲದೆ
ವಾಸ ಮಾಡುವವರ ಬಳಿಗೆ ಹೋಗಿ, ಸುಲಿಗೆಯನ್ನೂ ಕೊಳ್ಳೆ
೧೨ ಯನ್ನೂ ತಕ್ಕೊಳ್ಳುವೆನು; ಹೀಗೆ ನಿವಾಸಿಗಳಲ್ಲದ್ದ ಕಾಜಾಗಿದ್ದ ಸ್ಥ
ಳಗಳ ಮೇಲೆಯೂ, ಜನಾಂಗಗಳೊಳಗಿಂದ ಕೂಡಿಸಲ್ಪಟ್ಟಿಂಥ,
ದನಗಳೂ ಸಂಪತ್ತೂ ಉಳ್ಳಂಥ, ಭೂಮಿಯ ಎತ್ತರದಲ್ಲಿ ವಾಸ
೧೩ ಮಾಡುವಂಥ, ಜನರ ಮೇಲೆಯೂ, ಕೈ ಹಾಕುವಿ. ಕೇಬೂರ
ದೇದಾನು ತಾರ್ಷಿಷಿನ ವರ್ತಕರೂ ಅದರ ಎಲ್ಲಾ ಸಿಂಹದ ಮರಿ
ಗಳೂ ನಿನಗೆ ಹೇಳುವದೇನಂದರೆ—ನೀನು ಸುಲಿಗೆ ಮಾಡುವದಕ್ಕೆ
ಬಂದಿಯೋ? ಕೊಳ್ಳೆ ಮಾಡುವದಕ್ಕೆ ನಿನ್ನ ಕೂಟವನ್ನು ಕೂಡಿ
ಸಿದಿಯೋ? ಬೆಳ್ಳಿ ಭಂಗಾರವನ್ನು ಹೊತ್ತು ಕೊಂಡು ಹೋಗಿ,
ದನಗಳನ್ನೂ ಸಂಪತ್ತನ್ನೂ ತಕ್ಕೊಂಡು ಬಹಳ ಸುಲಿಗೆ ಮಾಡಿ
ಕೊಳ್ಳುವದಕ್ಕೋ?

೧೪ ಆದದರಿಂದ ಮನುಷ್ಯನ ಮಗನೇ, ನೀನು ಪ್ರವಾದಿಸಿ ಗೋಗ
ನಿಗೆ ಹೇಳ ತಕ್ಕದ್ದೇನಂದರೆ—ಕರ್ತನಾದ ಯೆಹೋವ ಹೀಗೆ
ಹೇಳುತ್ತಾನೆ—ಆ ದಿನದಲ್ಲಿ ನನ್ನ ಜನರಾದ ಇಸ್ರಯೇಲು ಭದ್ರ
ವಾಗಿ ವಾಸಿಸುವಾಗ ನಿನಗೆ ತಿಳಿಯದೋ? ಆಗ ನೀನು ನಿನ್ನ
೧೫ ಸ್ಥಳದೊಳಗಿಂದ, ಉತ್ತರ ಪಾರ್ಶ್ವದಿಂದ, ಬರುವಿ, ನೀನೂ ನಿನ್ನ
ಸಂಗಡ ಅನೇಕ ಜನರೂ, ಎಲ್ಲರು ಕುದುರೆಗಳನ್ನು ಹತ್ತಿದವರಾ
ಗಿ, ದೊಡ್ಡ ಸಮೂಹವಾಗಿ, ಮಹಾ ದಂಡಾಗಿ ಬರುವರು. ಆಗ
೧೬ ನೀನು ದೇಶವನ್ನು ಮುಚ್ಚುವ ಮೇಘದಂತೆ ನನ್ನ ಜನರಾದ ಇ
ಸ್ರಯೇಲಿಗೆ ವಿರೋಧವಾಗಿ ಏರಿ ಬರುವಿ; ಕಡೇದಿವಸಗಳಲ್ಲಿ ಅದಾ
ಗುವದು; ಗೋಗನೇ, ನಾನು ಅವರ ಕಣ್ಣುಗಳ ಮುಂದೆ ನಿನ್ನಲ್ಲಿ
ಪರಿಶುದ್ಧನಾಗುವಾಗ ಜನಾಂಗಗಳು ನನ್ನನ್ನು ತಿಳಿಯುವ ಹಾಗೆ
ನಿನ್ನನ್ನು ನನ್ನ ದೇಶಕ್ಕೆ ವಿರೋಧವಾಗಿ ಬರ ಮಾಡುವೆನು.
೧೭ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ನಾನು ಯಾವನ
ವಿಷಯವಾಗಿ ನನ್ನ ಸೇವಕರಾದ ಇಸ್ರಯೇಲಿನ ಪ್ರವಾದಿಗಳಿಂದ
ಪೂರ್ವ ದಿನಗಳಲ್ಲಿ ಹೇಳಿದೆನೋ, ಅವನು ನೀನೇ ಅಲ್ಲವೋ?
ನಿನ್ನನ್ನು ಅವರಿಗೆ ವಿರೋಧವಾಗಿ ಬರ ಮಾಡುತ್ತೇನೆಂದು ಆದಿನ
ಗಳಲ್ಲಿ ಅನೇಕ ವರುಷಗಳಿಗೆ ಮುಂಚೆ ಪ್ರವಾದಿಸಿದರಲ್ಲವೋ?

೧೮ ಆ ದಿವಸದಲ್ಲಿ ಗೋಗನು ಇಸ್ರಯೇಲನ ದೇಶಕ್ಕೆ ವಿರೋಧ
ವಾಗಿ ಬರುವಾಗ, ಆಗುವದೇನಂದರೆ—ನನ್ನ ಉಗ್ರವು ನನ್ನ ಮು
ಖಕ್ಕೆ ಏರಿ ಬರುವದೆಂದು ಕರ್ತನಾದ ಯೆಹೋವ ಅನ್ನುತ್ತಾನೆ.
೧೯ ಹೌದು, ನನ್ನ ಕೋಪದಲ್ಲಿಯೂ ನನ್ನ ಕಾಂದ್ರದ ಬೆಂಕಿಯಲ್ಲಿ
ಯೂ ನಾನು ಹೇಳುವದೇನಂದರೆ—ನಿಶ್ಚಯವಾಗಿ ಆ ದಿನದಲ್ಲಿ ಇ
೨೦ ಸ್ರಯೇಲನ ದೇಶದಲ್ಲಿ ಮಹಾ ಕದಲುವಿಕೆ ಉಂಟಾಗುವದು. ಆಗ
ಸಮುದ್ರದ ಮೀನುಗಳೂ ಆಕಾಶದ ಪಕ್ಷಿಗಳೂ ಹೊಲದ ಮೃಗಗ
ಳೂ ಭೂಮಿಯ ಮೇಲೆ ಹರಿದಾಡುವ ಎಲ್ಲಾ ಜಂತುಗಳೂ ಭೂ
ಮಿಯ ಮೇಲಿರುವ ಎಲ್ಲಾ ಮನುಷ್ಯರ ಸಂಗಡ ನನ್ನ ಸಮುಖಕ್ಕೆ
ಕದಲುವವು, ಬೆಟ್ಟಗಳು ಕೆಡವಲ್ಪಡುವವು; ಇಳಿಜಾರುಗಳು ಬೀ
೨೧ ಳುವವು, ಗೋಡೆಗಳೆಲ್ಲಾ ನೆಲಕ್ಕೆ ಬೀಳುವವು. ಇದಲ್ಲದೆ ನನ್ನ
ಬೆಟ್ಟಗಳೆಲ್ಲಾ ಅವನಿಗೆ ವಿರೋಧವಾಗಿ ಕತ್ತಿಯನ್ನು ಕರೆಯುವೆ
ನೆಂದು ಕರ್ತನಾದ ಯೆಹೋವ ಅನ್ನುತ್ತಾನೆ; ಒಬ್ಬೊಬ್ಬನ ಕತ್ತಿ
೨೨ ಯು ತನ್ನತನ್ನ ಸಹೋದರನ ಮೇಲೆ ಇರುವದು. ಇದಲ್ಲದೆ ವ್ಯಾ
ಧಿಯಿಂದಲೂ ರಕ್ತದಿಂದಲೂ ಅವನಿಗೆ ನ್ಯಾಯ ತೀರಿಸುವೆನು;
ಮತ್ತು ಪ್ರಳಯದ ಮಳೆಯನ್ನೂ ಕಲ್ಲುಳ್ಳೆಯನ್ನೂ ಬೆಂಕಿಯನ್ನೂ
ಗಂಧಕವನ್ನೂ ಅವನ ಮೇಲೆಯೂ, ಅವನ ಪಟ್ಟಾಳಗಳ ಮೇ
ಲೆಯೂ, ಅವನ ಸಂಗಡ ಇರುವ ಅನೇಕ ಜನಗಳ ಮೇಲೆಯೂ,
೨೩ ಸುರಿಸುವೆನು. ಹೀಗೆ ನನ್ನನ್ನು ದೊಡ್ಡವನಾಗಿಯೂ ಪರಿಶುದ್ಧ
ನಾಗಿಯೂ ಮಾಡಿ ಕೊಂಡು, ಅನೇಕ ಜನಾಂಗಗಳ ದೃಷ್ಟಿಯ
ಲ್ಲಿ ತಿಳಿಯಲ್ಪಡುವೆನು; ಆಗ ನಾನೇ ಯೆಹೋವನೆಂದು ತಿಳಿ
ಯುವರು.

## ೩೯. ಸಂಧಿ.

೧ ಇದಲ್ಲದೆ ಮನುಷ್ಯನ ಮಗನೇ, ನೀನು ಗೋಗನಿಗೆ ವಿರೋ
ಧವಾಗಿ ಪ್ರವಾದಿಸಿ ಹೇಳ ತಕ್ಕದ್ದೇನಂದರೆ—ರೋಷ್ ಮೇಷೆ
ಕ್ ತೂಬಲ್ ಇವುಗಳ ಪ್ರಭುವಾದ ಗೋಗನೇ, ಇಗೋ, ನಾನು ನಿನ
೨ ಗೆ ವಿರೋಧವಾಗಿದ್ದೇನೆ. ನಾನು ನಿನ್ನನ್ನು ತಿರುಗಿಸಿ ಬಿಟ್ಟು, ತಿರು
ಗಾಡಿಸಿ, ಉತ್ತರ ಪಾರ್ಶ್ವಗಳಿಂದ ನಿನ್ನನ್ನು ಏರ ಮಾಡಿ, ಇಸ್ರ
೩ ಯೇಲಿನ ಬೆಟ್ಟಗಳ ಮೇಲೆ ಬರ ಮಾಡುವೆನು. ಆಗ ನಿನ್ನ ಎಡ
ಕೈಯೊಳಗಿಂದ ನಿನ್ನ ಬಿಲ್ಲನ್ನು ಹೊಡೆದು ಹಾಕಿ, ನಿನ್ನ ಬಲ ಕೈ
೪ ಯೊಳಗಿಂದ ನಿನ್ನ ಬಾಣಗಳನ್ನು ಬೀಳ ಮಾಡುವೆನು. ಇಸ್ರ
ಯೇಲನ ಬೆಟ್ಟಗಳ ಮೇಲೆ, ನೀನು, ನಿನ್ನ ಎಲ್ಲಾ ಪಟ್ಟಾಳಗಳ ಸಂ
ಗಡಲೂ, ನಿನ್ನ ಬಳಿಯಲ್ಲಿರುವ ಜನಗಳ ಸಂಗಡಲೂ ಬೀಳುವಿ.
ಎಲ್ಲಾ ತರದ ಹರ ಕೊಳ್ಳುವ ಪಕ್ಷಿಗಳಿಗೂ, ಹೊಲದ ಮೃಗಗ
೫ ಳಿಗೂ ನಿನ್ನನ್ನು ಆಹಾರವಾಗಿ ಕೊಡುವೆನು. ಹೊಲದ ಮೇಲೆ
ನೀನು ಬೀಳುವಿ; ಯಾಕಂದರೆ ನಾನೇ ಅದನ್ನು ಹೇಳಿದ್ದೇನೆಂದು
೬ ಕರ್ತನಾದ ಯೆಹೋವ ಅನ್ನುತ್ತಾನೆ. ಇದಲ್ಲದೆ ನಾನು ಮಾ
ಗೋಗನ ಮೇಲೆಯೂ, ದ್ವೀಪಗಳಲ್ಲಿ ಭದ್ರವಾಗಿ ವಾಸಿಸುವವರ
ಮೇಲೆಯೂ, ಬೆಂಕಿಯನ್ನು ಕಳುಹಿಸುವೆನು, ಆಗ ನಾನೇ ಯೆ
೭ ಹೋವನೆಂದು ಅವರಿಗೆ ತಿಳಿಯುವದು. ಹೀಗೆ ನಾನು ನನ್ನ ಪ
ರಿಶುದ್ಧ ಹೆಸರನ್ನು ನನ್ನ ಜನರಾದ ಇಸ್ರಯೇಲಿನ ಮಧ್ಯದಲ್ಲಿ
ತಿಳಿಯ ಮಾಡುವೆನು; ನಾನು ಇನ್ನು ನನ್ನ ಪರಿಶುದ್ಧ ಹೆಸರನ್ನು
ಅಪವಿತ್ರವಾಗ ಗೊಡಿಸುವದಿಲ್ಲ; ಆಗ ಯೆಹೋವನಾದ ನಾನೇ ಇ
ಸ್ರಯೇಲಿನಲ್ಲಿ ಪರಿಶುದ್ಧನೆಂದು ಜನಾಂಗಗಳು ತಿಳಿಕೊಳ್ಳುವವು;
೮ ಇಗೋ ಬರುತ್ತವೆ; ಉಂಟಾಗುತ್ತವೆ, ಎಂದು ಕರ್ತನಾದ ಯೆ
ಹೋವ ಅನ್ನುತ್ತಾನೆ; ನಾನು ಹೇಳಿದ ದಿವಸವು ಇದೇ. ಆಗ
೯ ಇಸ್ರಯೇಲಿನ ಪಟ್ಟಣಗಳ ನಿವಾಸಿಗಳು ಹೊರಟು, ಆಯುಧಗಳಾದ
ಗುರಾಣಿಗಳನ್ನೂ ಬೇಟ್ಯಗಳನ್ನೂ ಬಿಲ್ಲುಗಳನ್ನೂ ಬಾಣಗಳ
ನ್ನೂ ಕೈ ದೊಣ್ಣೆಗಳನ್ನೂ ಭಲ್ಲೆಗಳನ್ನೂ ಬೆಂಕಿ ಹಚ್ಚಿ ಸುಡು
ವರು; ಏಳು ವರುಷ ಅವುಗಳಿಂದ ಬೆಂಕಿ ಹಚ್ಚುವರು. ಅವರು ಹೊ
೧೦ ಲದಿಂದ ಕಟ್ಟಿಗೆ ತಕ್ಕೊಳ್ಳುವದಿಲ್ಲ; ಅಡವಿಗಳಲ್ಲಿ ಕೊಯ್ಯುವದಿಲ್ಲ,
ಯಾಕಂದರೆ ಆಯುಧಗಳಿಂದ ಬೆಂಕಿ ಹಚ್ಚುವರು. ಹೌದು, ತ
ಮ್ಮನ್ನು ಸುಲುಕೊಂಡವರನ್ನು ಸುಲುಕೊಳ್ಳುವರು; ತಮ್ಮನ್ನು
ಕೊಳ್ಳೆ ಮಾಡಿದವರನ್ನು ಕೊಳ್ಳೆ ಮಾಡುವರು, ಎಂದು ಕರ್ತ
ನಾದ ಯೆಹೋವ ಅನ್ನುತ್ತಾನೆ.
೧೧ ಆದಿನದಲ್ಲಿ ಆಗುವದೇನಂದರೆ—ನಾನು ಗೋಗನಿಗೆ ಅಲ್ಲಿ ಇಸ್ರ



ಯೇಲಿನಲ್ಲಿ ಹೂಣಿಡುವ ಸ್ಥಳವನ್ನು ಕೊಡುತ್ತೇನೆ; ಯಾವದಂದ
ರೆ—ಸಮುದ್ರದ ಪೂರ್ವದಲ್ಲಿರುವ ಹಾದು ಹೋಗುವವರ ತಗ್ಗ
ನ್ನೇ; ಅದು ಹಾದು ಹೋಗುವವರನ್ನು ನಿಲ್ಲಿಸುವದು; ಅಲ್ಲಿ ಗೋ
ಗನನ್ನೂ ಅವನ ಎಲ್ಲಾ ಸಮೂಹವನ್ನೂ ಹೂಣಿಟ್ಟು, ಅದಕ್ಕೆ
೧೨ ಗೋಗನ ಸಮೂಹದ ತಗ್ಗು ಎಂಬುವ ಹೆಸರಿಡುವರು. ಇಸ್ರಯೇ
ಲನ ಮನೆಯವರು, ದೇಶವನ್ನು ಶುದ್ಧ ಮಾಡುವ ಹಾಗೆ, ಅವರನ್ನು
೧೩ ಏಳು ತಿಂಗಳಿನ ತನಕ ಹೂಣಿಡುವರು. ಹೌದು, ದೇಶಸ್ಥರೆಲ್ಲ
ರೂ ಹೂಣಿಡುವರು; ನಾನು ಮಹಿಮೆ ಹೊಂದುವ ದಿವಸದಲ್ಲಿ
ಅದು ಅವರಿಗೆ ಹೆಸರಿಗಾಗುವದು, ಎಂದು ಕರ್ತನಾದ ಯೆಹೋವ
೧೪ ಅನ್ನುತ್ತಾನೆ. ಇದಲ್ಲದೆ ದೇಶವನ್ನು ಶುದ್ಧ ಮಾಡುವ ಹಾಗೆ, ಅ
ದರ ಮೇಲೆ ಮಿಕ್ಕವರನ್ನು ಹಾದು ಹೋಗುವವರ ಸಹಾಯದಿಂ
ದ ಹೂಣಿಡುವದಕ್ಕೆ, ಯಾವಾಗ್ಯೂ ದೇಶವನ್ನು ಹಾದು ಹೋ
ಗುವ ಮನುಷ್ಯರನ್ನು ನೇಮಿಸುವರು; ಏಳು ತಿಂಗಳಾದ ಮೇಲೆ
೧೫ ಇವರು ಹುಡುಕುವರು. ಮತ್ತು ದೇಶದಲ್ಲಿ ಹಾದು ಹೋಗುವವ
ರು ಹೋಗಲಾಗಿ ಮನುಷ್ಯನ ಎಲುವನ್ನು ನೋಡುವಾಗ, ಅದರ
ಸಮೀಪದಲ್ಲಿ ಗುರುತು ಹಾಕುವರು; ಆ ಮೇಲೆ ಹೂಣಿಡುವವರು
೧೬ ಅದನ್ನು ಗೋಗನ ಸಮೂಹದ ತಗ್ಗಿನಲ್ಲಿ ಹೂಣಿಡುವರು. ಇದ
ಲ್ಲದೆ ಪಟ್ಟಣದ ಹೆಸರು ಸಮೂಹವೆಂಬದಾಗಿ ಇರುವದು; ಹೀಗೆ
೧೭ ದೇಶವನ್ನು ಶುದ್ಧ ಮಾಡುವರು. ಮತ್ತು, ಮನುಷ್ಯನ ಮಗನೇ,
ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಎಲ್ಲಾ ತರದ ಪಕ್ಷಿ
ಗಳಿಗೂ ಭೂಮಿಯ ಎಲ್ಲಾ ಮೃಗಗಳಿಗೂ ನೀನು ಹೇಳ ತಕ್ಕ
ದ್ದೇನಂದರೆ—ಕೂಡಿ ಕೊಂಡು ಬನ್ನಿ; ನಾನು ನಿಮಗಾಗಿ ಅರ್ಪಿ
ಸುವ ನನ್ನ ಬಲಿಗೋಸ್ಕರ ಸುತ್ತಲಿಂದ ಸೇರಿರಿ; ಅದು ಇಸ್ರಯೇ
ಲನ ಬೆಟ್ಟಗಳ ಮೇಲೆ ಆಗುವ ಮಹಾ ಬಲಿಯು; ಮಾಂಸವನ್ನು
೧೮ ತಿಂದು, ರಕ್ತವನ್ನು ಕುಡಿಯಿರಿ. ನೀವು ಶೂರರ ಮಾಂಸವನ್ನು
ತಿನ್ನುವಿರಿ; ಭೂಮಿಯ ಪ್ರಭುಗಳ ರಕ್ತವನ್ನು ಕುಡಿಯುವಿರಿ; ಟಗ
ರುಗಳೂ ಕುರಿಮರಿಗಳೂ ಹೋತುಗಳೂ ಹೋರಿಗಳೂ ಬಾ
ಶಾನಿನ ಕೊಬ್ಬಿದವುಗಳಾದ ಇವೆಲ್ಲವುಗಳ ರಕ್ತವೇ ನಿಮಗೆ ಶಿಕ್ಕು
೧೯ ವರು. ನಾನು ನಿಮಗೋಸ್ಕರ ಅರ್ಪಿಸಿದ ನನ್ನ ಬಲಿಯಲ್ಲಿ ನಿಮ
ಗೆ ತೃಪ್ತಿ ಆಗುವ ಮಟ್ಟಿಗೂ ಕೊಬ್ಬನ್ನು ತಿಂದು, ಅಮಲೇರುವ
೨೦ ಮಟ್ಟಿಗೂ ರಕ್ತವನ್ನು ಕುಡಿಯ ಬಹುದು. ಹೀಗೆ ನಿಮಗೆ ನನ್ನ
ಮೇಜಿನಲ್ಲಿ ಕುದುರೆಗಳಿಂದಲೂ ರಥಗಳಿಂದಲೂ ಶೂರರಿಂದಲೂ
ಎಲ್ಲಾ ಯುದ್ಧಸ್ಥರಿಂದಲೂ ತೃಪ್ತಿ ಪಡುವಿರೆಂದು ಕರ್ತನಾದ ಯೆ
೨೧ ಹೋವ ಅನ್ನುತ್ತಾನೆ. ಇದಲ್ಲದೆ ನಾನು ನನ್ನ ಮಹಿಮೆಯನ್ನು
ಜನಾಂಗಗಳಲ್ಲಿ ಇಡುವೆನು; ಜನಾಂಗಗಳೆಲ್ಲಾ ನಾನು ನಡಿಸಿದ ನ
೨೨ ನ್ನ ನ್ಯಾಯ ತೀರ್ಪಿಕೆಯನ್ನೂ, ನಾನು ಅವರ ಮೇಲೆ ಇಟ್ಟ ನ
ನ್ನ ಕೈಯನ್ನೂ, ನೋಡುವವು. ಹೀಗೆ ಇಸ್ರಯೇಲನ ಮನೆ
೨೩ ಯವರು, ಯೆಹೋವನಾದ ನಾನೇ ಅಂದಿನಿಂದ ಇನ್ನು ಮುಂದೆ
ಅವರ ದೇವರಾಗಿದ್ದೇನೆಂದು ತಿಳಿಯುವರು. ಮತ್ತು ಇಸ್ರಯೇಲ
ನ ಮನೆಯವರು ತಮ್ಮ ಅಕ್ರಮದ ನಿಮಿತ್ತ ಸೆಕೆರೆ ಹೊಂದಿದರೆಂದು
ಜನಾಂಗಗಳು ತಿಳಿಯುವವು; ಅವರು ನನಗೆ ವಿರೋಧವಾಗಿ ದ್ರೋ
ಹ ಮಾಡಿದದರಿಂದ ನಾನು ಅವರಿಗೆ ನನ್ನ ಮುಖವನ್ನು ಮರೆ
ಮಾಡಿ ಕೊಂಡು, ಅವರ ವೈರಿಗಳ ಕೈಗೆ ಅವರನ್ನು ಒಪ್ಪಿಸಿದೆ
೨೪ ನು; ಇದರಿಂದ ಅವರೆಲ್ಲರು ಕತ್ತಿಯಿಂದ ಬಿದ್ದರು. ಅವರ ಅಶು
ದ್ಧತ್ವದ ಪ್ರಕಾರವೂ, ಅವರ ಅಪರಾಧಗಳ ಪ್ರಕಾರವೂ, ಅವರಿಗೆ
೨೫ ನಡಿಸಿ ನನ್ನ ಮುಖವನ್ನು ಅವರಿಗೆ ಮರೆ ಮಾಡಿದೆನು. ಆದದರಿಂ
ದ ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಈಗ ನಾನು
ಯಾಕೋಬನ ಸೆರೆಯನ್ನು ತಿರುಗಿಸಿ, ಇಸ್ರಯೇಲನ ಮನೆಯ
ನ್ನೆಲ್ಲಾ ಕರುಣಿಸಿ, ನನ್ನ ಪರಿಶುದ್ಧ ಹೆಸರಿಗೋಸ್ಕರ ಕೋಪವು
೨೬ ಳ್ಳವನಾಗುವೆನು; ಅವರು ಹೆದರಿಸುವವನಿಲ್ಲದೆ ಭದ್ರವಾಗಿ ತಮ್ಮ
ದೇಶದಲ್ಲಿ ವಾಸ ಮಾಡಿದಾಗ ಉಂಟಾದ ತಮ್ಮ ನಾಚಿಕೆಯನ್ನೂ
ನನಗೆ ವಿರೋಧವಾಗಿ ಮಾಡಿದ ಅವರ ಎಲ್ಲಾ ಅಪರಾಧಗಳನ್ನೂ
೨೭ ಹೊತ್ತ ತರುವಾಯವೇ. ನಾನು ಅವರನ್ನು ಜನಗಳೊಳಗಿಂದ
ತಿರಿಗಿ ಬರ ಮಾಡಿ, ಅವರ ಶತ್ರುಗಳ ದೇಶಗಳೊಳಗಿಂದ ಅವರ
ನ್ನು ಕೂಡಿಸಿ, ಅನೇಕ ಜನಾಂಗಗಳ ಮುಂದೆ ಅವರಲ್ಲಿ ಪರಿಶು
೨೮ ದ್ಧವಾದ ಮೇಲೆ, ಆಗ ಯೆಹೋವನಾದ ನಾನೇ ಅವರ ದೇವರಾ
ಗಿದ್ದೇನೆಂದೂ, ಅವರನ್ನು ಜನಾಂಗಗಳೊಳಗೆ ಕೆಕೆಗೆ ಪೈದವನೂ,
ಅಲ್ಲಿ ಅವರಲ್ಲಿ ಒಬ್ಬನನ್ನಾದರೂ ಇನ್ನು ಬಿಡದೆ, ಅವರನ್ನು ತಮ್ಮ
೨೯ ದೇಶಕ್ಕೆ ಕೂಡಿಸಿದವನೂ, ನಾನೇ ಎಂದು ತಿಳಿಯುವರು. ಮತ್ತು
ನನ್ನ ಮುಖವನ್ನು ನಾನು ಇನ್ನು ಮೇಲೆ ಅವರಿಗೆ ಮರೆ ಮಾ
ಡುವದಿಲ್ಲ; ಯಾಕಂದರೆ ನನ್ನ ಆತ್ಮವನ್ನು ಇಸ್ರಯೇಲನ ಮನೆ
ಯವರ ಮೇಲೆ ಹೊಯಿದಿದ್ದೇನೆಂದು ಕರ್ತನಾದ ಯೆಹೋವ
ಅನ್ನುತ್ತಾನೆ.

## ೩೦. ಸಂಧಿ.

೧ ನಮ್ಮ ಸೆರೆಯ ಇಪ್ಪತ್ತೈದನೇ ವರುಷದಲ್ಲಿ, ವರುಷದ ಆರಂ
ಭದಲ್ಲಿ, ತಿಂಗಳಿನ ಹತ್ತನೇ ದಿವಸದಲ್ಲಿ, ಪಟ್ಟಣವು ಹೊಡೆಯಲ್ಪಟ್ಟ
ಮೇಲೆ ಹದಿನಾಲ್ಕನೇ ವರುಷದಲ್ಲಿ, ಅದೇ ದಿವಸದಲ್ಲಿ, ಯೆಹೋವನ
೨ ಕೈ ನನ್ನ ಮೇಲೆ ಇದ್ದು, ನನ್ನನ್ನು ಅಲ್ಲಿಗೆ ಬರ ಮಾಡಿತು. ದೇವರ
ದರ್ಶನಗಳಲ್ಲಿ ಅವನು ನನ್ನನ್ನು ಇಸ್ರಯೇಲ್ ದೇಶಕ್ಕೆ ಬರ ಮಾ
ಡಿ, ಬಹಳ ಎತ್ತರವಾದ ಬೆಟ್ಟದ ಮೇಲೆ ನನ್ನನ್ನು ಇಟ್ಟನು; ಅದ
ರ ಮೇಲೆ ದಕ್ಷಿಣ ಕಡೆಯಲ್ಲಿ ಪಟ್ಟಣವು ಕಟ್ಟಿರುವ ಪ್ರಕಾರ ಇತ್ತು.
3 ಅವನು ನನ್ನನ್ನು ಅಲ್ಲಿಗೆ ತಂದಾಗ, ಇಗೋ ಒಬ್ಬ ಮನುಷ್ಯ
ನು; ಅವನ ಆಕಾರವು ಹಿತ್ತಾಳೆಯ ಆಕಾರದ ಹಾಗಿತ್ತು; ಅವನ
ಕೈಯಲ್ಲಿ ನಾರಿನ ನೂಲೂ ಅಳೆಯುವ ಕೋಲು ಇದ್ದವು; ಅವ
೪ ನು ಬಾಗಲಲ್ಲಿ ನಿಂತನು. ಆ ಮನುಷ್ಯನು ನನಗೆ ಹೇಳಿದ್ದೇನಂ
ದರೆ—ಮನುಷ್ಯನ ಮಗನೇ, ನಿನ್ನ ಕಣ್ಣುಗಳಿಂದ ನೋಡಿ, ನಿನ್ನ
ಕಿವಿಗಳಿಂದ ಕೇಳಿ, ನಾನು ನಿನಗೆ ತೋರಿಸುವ ಎಲ್ಲವುಗಳಿಗೆ ನಿ
ನ್ನ ಹೃದಯವಿಡು; ಯಾಕಂದರೆ, ನಾನು ನಿನಗೆ ತೋರಿಸುವ
ಹಾಗೆ ನೀನು ಇಲ್ಲಿಗೆ ತರಲ್ಪಟ್ಟಿದ್ದೀ; ನೀನು ನೋಡುವವುಗಳನ್ನೆ
೫ ಲ್ಲಾ ಇಸ್ರಯೇಲನ ಮನೆಯವರಿಗೆ ತಿಳಿಸು. ಆಗ ಇಗೋ, ಮನೆ
ಯ ಹೊರಗೆ, ಸುತ್ತು ಮುತ್ತಲು ಗೋಡೆ ಇತ್ತು; ಮತ್ತು ಆ ಮ
ನುಷ್ಯನ ಕೈಯಲ್ಲಿ ಮೊಳದ ಮೇಲೆ ಕೈ ಅಗಲವಾದಂಥ ಆರು
ಮೊಳದ ಉದ್ದವಾದ ಅಳತೆ ಕೋಲು ಇತ್ತು; ಹಾಗೆ ಅವನು ಆ
ಕಟ್ಟುವಿಕೆಯ ಅಗಲವನ್ನು ಅಳೆದನು, ಒಂದೇ ಕೋಲಾಗಿತ್ತು;
೬ ಅದರ ಎತ್ತರ ಸಹ ಒಂದು ಕೋಲು. ಆಗಲವನು ಮೂಡಣಕ್ಕೆ
ಅಭಿಮುಖವಾದ ಬಾಗಲಿಗೆ ಹೋಗಿ, ಅದರ ಮೆಟ್ಟುಗಳನ್ನು ಏರಿ,
ಬಾಗಲಿನ ಹೊಸ್ತಲನ್ನು ಒಂದು ಕೋಲು ಅಗಲವೆಂದು ಅಳೆದನು;
ಮತ್ತು ಒಂದು ಕೋಲು ಅಗಲವಾದ ಇನ್ನೊಂದು ಹೊಸ್ತಲು ಇ
7 ತ್ತು. ಕೊಠಡಿಯು ಒಂದು ಕೋಲು ಉದ್ದವಾಗಿಯೂ, ಒಂದು

ಕೊಲು ಅಗಲವಾಗಿಯೂ, ಇತ್ತು; ಕೊಠಡಿಗಳ ನಡುವೆ ಐದು
ಮೊಳವೂ, ಒಳಗಿನ ಬಾಗಲಿನ ಪಡಸಾಲೆಯ ಬಳಿಯಲ್ಲಿರುವ ಬಾ
೮ ಗಲಿನ ಹೊಸ್ತಲು ಒಂದು ಕೊಲು ಇತ್ತು. ಇದಲ್ಲದೆ ಒಳಗಿನ
೯ ಬಾಗಲಿನ ಪಡಸಾಲೆಯನ್ನು ಒಂದು ಕೊಲೆಂದು ಅಳೆದನು. ಮ
ತ್ತು ಬಾಗಲಿನ ಪಡಸಾಲೆಯನ್ನು ಎಂಟು ಮೊಳವೆಂದೂ, ಅದರ
ಕಂಭಗಳನ್ನು ಎರಡು ಮೊಳವೆಂದೂ, ಅಳೆದನು; ಬಾಗಲಿನ ಪಡ
೧೦ ಸಾಲೆ ಒಳಗಡೆ ಇತ್ತು. ಮತ್ತು ಮೂಡಣ ಕಡೆಗಿರುವ ಬಾ
ಗಲಿನ ಕೊಠಡಿಗಳು ಇತ್ತ ಕಡೆಯಲ್ಲಿ ಮೂರು ಅತ್ತ ಕಡೆಯಲ್ಲಿ
ಮೂರು; ಆ ಮೂರಕ್ಕೆ ಒಂದೇ ಅಳತೆ, ಇತ್ತ ಕಡೆಯೂ ಅತ್ತ
೧೧ ಕಡೆಯೂ ಕಂಭಗಳಿಗೆ ಸಹ ಒಂದೇ ಅಳತೆ. ಮತ್ತು ಅವನು
ಬಾಗಲಿನ ಪ್ರವೇಶದ ಅಗಲವನ್ನು ಹತ್ತು ಮೊಳವೆಂದೂ, ಬಾಗ
೧೨ ಲಿನ ಉದ್ದವನ್ನು ಹದಿನಾರು ಮೊಳವೆಂದೂ ಅಳೆದನು. ಇದಲ್ಲ
ದೆ ಕೊಠಡಿಗಳ ಮುಂದಿರುವ ಸ್ಥಳವು ಇತ್ತ ಕಡೆಯೂ ಅತ್ತ ಕಡೆ
ಯೂ ಒಂದೊಂದು ಮೊಳವಾಗಿತ್ತು; ಕೊಠಡಿಗಳು ಇತ್ತ ಕಡೆ
೧೩ ಯೂ ಅತ್ತ ಕಡೆಯೂ ಲಾರು ಮೊಳವಾಗಿದ್ದವು. ಅಗಲವನು
ಬಾಗಲನ್ನು ಒಂದು ಕೊಠಡಿಯ ಮಾಳಿಗೆಯಿಂದ ಮತ್ತೊಂದು
ಕೊಠಡಿಯ ಮಾಳಿಗೆಗೆ ಅಳೆದನು, ದ್ವಾರದಿಂದ ದ್ವಾರಕ್ಕೆ ಇ
೧೪ ರುವ ಅಗಲವು ಇಪ್ಪತ್ತೈದು ಮೊಳವಾಗಿತ್ತು. ಇದಲ್ಲದೆ ಕಂಭ
ಗಳನ್ನು ಅರವತ್ತು ಮೊಳವೆಂದು ಮಾಡಿದನು; ಬಾಗಲಿನ ಸು
೧೫ ತ್ತು ಮತ್ತಲಿರುವ ಅಂಗಳದ ಕಂಭದ ಪರ್ಯಂತರವೇ. ಪ್ರವೇ
ಶದ ಬಾಗಲಿನ ಮುಂದೆಗಡೆಯಿಂದ ಒಳಗಿನ ಬಾಗಲಿನ ಅಂಗಳ
೧೬ ದ ಪರ್ಯಂತರ ಐವತ್ತು ಮೊಳವಾಗಿತ್ತು. ಮತ್ತು ಕೊಠಡಿಗಳ
ಳ್ಳಿಯೂ, ಬಾಗಲಿನ ಒಳಗಡೆಯಾಗಿರುವ ಅವುಗಳ ಕಂಭಗಳ
ಳ್ಳಿಯೂ ಸುತ್ತ ಮುತ್ತಲು ಇಕ್ಕಟ್ಟಾದ ಕಿಟಿಕಿಗಳು ಇದ್ದವು; ಪ
ಡಸಾಲೆಗಳಿಗೂ ಸಹ; ಬಳಗಡೆಯಲ್ಲಿ ಸುತ್ತ ಮುತ್ತಲು ಕಿಟಿಕಿ
ಗಳು ಇದ್ದವು; ಮತ್ತು ಕಂಭಗಳ ಮೇಲೆ ಖರ್ಜೂರದ ಗಿಡಗಳಿ
ದ್ದವು.

೧೭ ಅಗಲವನು ನನ್ನನ್ನು ಹೊರಗಿನ ಅಂಗಳಕ್ಕೆ ಕರೆ ಕೊಂಡು
ಹೋದನು; ಮತ್ತು ಇಗೋ ಕೊಠಡಿಗಳೂ, ಕಲ್ಲು ಹಾಸಿದ ನೆ
ಲವೂ, ಅಂಗಳದಲ್ಲಿ ಸುತ್ತ ಮುತ್ತಲು ಮಾಡಲ್ಪಟ್ಟಿದ್ದವು; ಕಲ್ಲು
೧೮ ಹಾಸಿದ ನೆಲದ ಹತ್ತರ ಮುವ್ವತ್ತು ಕೊಠಡಿಗಳಿದ್ದವು. ಬಾಗಲು
ಗಳ ಪಾರ್ಶ್ವದಲ್ಲಿಯೂ, ಬಾಗಲುಗಳ ಉದ್ದಕ್ಕೆ ಸರಿಯಾಗಿ
ಯೂ, ಇದ್ದ ಆ ಕಲ್ಲು ಹಾಸಿದ ನೆಲವು ಕೆಳಗಿನ ನೆಲವಾಗಿತ್ತು.
೧೯ ಅಗಲವನು ಕೆಳಗಿನ ಬಾಗಲಿನ ಮುಂದೆಗಡೆಯಿಂದ ಬಳಗಿನ ಅಂ
ಗಳದ ಹೊರಗಡೆಯ ಪರ್ಯಂತರ ಪೂರ್ವಕ್ಕೂ ಉತ್ತರಕ್ಕೂ
೨೦ ಇರುವ ಅಗಲವನ್ನು ನೂರು ಮೊಳವೆಂದು ಅಳೆದನು. ಇದಲ್ಲದೆ
ಉತ್ತರ ಕಡೆಗೆ ಅಭಿಮುಖವಾದ ಹೊರಗಿನ ಅಂಗಳದ ಬಾಗಲಿನ
೨೧ ಉದ್ದವನ್ನೂ ಅಗಲವನ್ನೂ ಅಳೆದನು. ಅದರ ಕೊಠಡಿಗಳು
ಇತ್ತಕಡೆಯೂ ಅತ್ತಕಡೆಯೂ ಮೂರು ಮೂರಾಗಿದ್ದವು; ಅದ
ರ ಕಂಭಗಳೂ ಅದರ ಪಡಸಾಲೆಗಳೂ ಮೊದಲಿನ ಬಾಗಲಿನ
ಅಳತೆಯ ಹಾಗಿದ್ದವು; ಅದರ ಉದ್ದವು ಐವತ್ತು ಮೊಳ; ಅಗಲ
೨೨ ವು ಇಪ್ಪತ್ತೈದು ಮೊಳ. ಅದರ ಕಿಟಿಕಿಗಳೂ ಅದರ ಪಡಸಾಲೆ
ಗಳೂ ಅದರ ಖರ್ಜೂರದ ಗಿಡಗಳೂ ಮೂಡಣ ಕಡೆಗೆ ಅಭಿ
ಮುಖವಾದ ಬಾಗಲಿನ ಅಳತೆಯ ಹಾಗಿದ್ದವು; ಏಳು ಮೆಟ್ಟುಗ
ಳಿಂದ ಅದಕ್ಕೆ ಏರಿದರು; ಅದರ ಪಡಸಾಲೆಗಳು ಅವುಗಳ ಮುಂ
೨೩ ದೆ ಇದ್ದವು. ಮತ್ತು ಒಳಗಿನ ಅಂಗಳದ ಬಾಗಲು ಉತ್ತರ ಪೂ
ರ್ವಕ್ಕಿರುವ ಬಾಗಲಿಗೆ ಎದುರಾಗಿತ್ತು; ಅವನು ಬಾಗಲು ಬಾಗಲಿ
ಗೆ ನೂರು ಮೊಳವೆಂದು ಅಳೆದನು.

೨೪ ಆ ಮೇಲೆ ಅವನು ನನ್ನನ್ನು ದಕ್ಷಿಣ ಕಡೆಗೆ ಕರೆದನು; ಮತ್ತು
ಇಗೋ ದಕ್ಷಿಣ ಕಡೆಯಲ್ಲಿ ಬಾಗಲು ಇತ್ತು; ಅವನು ಅದರ
ಕಂಭಗಳನ್ನೂ ಅದರ ಪಡಸಾಲೆಗಳನ್ನೂ ಈ ಅಳತೆಗಳ ಪ್ರಕಾ
೨೫ ರವೇ ಅಳೆದನು. ಅದರಲ್ಲಿಯೂ ಅದರ ಪಡಸಾಲೆಗಳಲ್ಲಿಯೂ
ಸುತ್ತ ಮುತ್ತಲು ಈ ಕಿಟಿಕಿಗಳ ಹಾಗೆ ಕಿಟಿಕಿಗಳು ಇದ್ದವು; ಐ
ದ್ದವು ಐವತ್ತು ಮೊಳ, ಅಗಲವು ಇಪ್ಪತ್ತೈದು ಮೊಳ. ಅಕ್ಕೆ ಏ
೨೬ ರುವ ಹಾಗೆ ಏಳು ಮೆಟ್ಟುಗಳಿದ್ದವು, ಅದರ ಪಡಸಾಲೆಗಳು ಅವು
ಗಳ ಮುಂದೆ ಇದ್ದವು; ಅದರ ಕಂಭಗಳ ಮೇಲೆ ಅದಕ್ಕೆ ಇತ್ತ
ಕಡೆಯೂ ಅತ್ತಕಡೆಯೂ ಒಂದೊಂದು ಖರ್ಜೂರದ ಗಿಡವಿತ್ತು.
೨೭ ಇದಲ್ಲದೆ ಒಳಗಿನ ಅಂಗಳದಲ್ಲಿ ದಕ್ಷಿಣ ಕಡೆಗೆ ಬಾಗಲಿತ್ತು; ಅವ
ನು ಒಂದು ಬಾಗಲಿನಿಂದ ಮತ್ತೊಂದು ಬಾಗಲಿಗೆ ದಕ್ಷಿಣವಾಗಿ
೨೮ ನೂರು ಮೊಳ ಅಳೆದನು. ಆ ಮೇಲೆ ಅವನು ನನ್ನನ್ನು ದಕ್ಷಿಣ
ಬಾಗಲಿನಿಂದ ಒಳಗಿನ ಅಂಗಳಕ್ಕೆ ಕರ ಕೊಂಡು ಹೋಗಿ, ದಕ್ಷಿ
ಣ ಬಾಗಲನ್ನು ಈ ಅಳತೆಗಳ ಪ್ರಕಾರವಾಗಿಯೂ, ಅದರ ಕೊ
ಠಡಿಗಳನ್ನೂ, ಅದರ ಕಂಭಗಳನ್ನೂ, ಅದರ ಪಡಸಾಲೆಗಳ
ನ್ನೂ ಈ ಅಳತೆಗಳ ಪ್ರಕಾರವಾಗಿಯೂ ಅಳೆದನು; ಅದರಲ್ಲಿ
ಯೂ ಸುತ್ತಲಿರುವ ಅದರ ಪಡಸಾಲೆಗಳಲ್ಲಿಯೂ ಕಿಟಿಕಿಗಳಿದ್ದ
ವು; ಅದರ ಉದ್ದವು ಐವತ್ತು ಮೊಳ, ಅಗಲವು ಇಪ್ಪತ್ತೈದು
೩೦ ಮೊಳ. ಇದಲ್ಲದೆ ಸುತ್ತಲಿರುವ ಪಡಸಾಲೆಗಳು ಇಪ್ಪತ್ತೈದು
ಮೊಳ ಉದ್ದವಾಗಿಯೂ, ಐದು ಮೊಳ ಅಗಲವಾಗಿಯೂ, ಇದ್ದ
೩೧ ವು. ಅದರ ಪಡಸಾಲೆಗಳು ಹೊರಗಿನ ಅಂಗಳದ ಕಡೆಗಿದ್ದವು;
ಅದರ ಕಂಭಗಳಲ್ಲಿ ಖರ್ಜೂರದ ಗಿಡಗಳಿದ್ದವು; ಅದಕ್ಕೆ ಏರುವ
ಹಾಗೆ ಎಂಟು ಮೆಟ್ಟುಗಳಿದ್ದವು.

೩೨ ಇದಲ್ಲದೆ ಅವನು ನನ್ನನ್ನು ಪೂರ್ವ ಕಡೆಗಿರುವ ಒಳಗಿನ ಅಂ
ಗಳಕ್ಕೆ ಕರೆಕೊಂಡು ಹೋಗಿ, ಬಾಗಲನ್ನು ಈ ಅಳತೆಗಳ ಪ್ರ
೩೩ ಕಾರವಾಗಿಯೂ, ಅದರ ಕೊಠಡಿಗಳನ್ನೂ ಕಂಭಗಳನ್ನೂ ಪಡ
ಸಾಲೆಗಳನ್ನೂ ಈ ಅಳತೆಗಳ ಪ್ರಕಾರವಾಗಿಯೂ, ಅಳೆದನು;
ಅದರಲ್ಲಿಯೂ ಸುತ್ತಲಿರುವ ಅದರ ಪಡಸಾಲೆಗಳಲ್ಲಿಯೂ ಕಿಟಿ
ಕಿಗಳಿದ್ದವು; ಅದರ ಉದ್ದವು ಐವತ್ತು ಮೊಳ, ಅಗಲವು ಇಪ್ಪತ್ತೈ
೩೪ ದು ಮೊಳ,. ಅದರ ಪಡಸಾಲೆಗಳು ಹೊರಗಿನ ಅಂಗಳದ ಕಡೆ
ಗಿದ್ದವು; ಅದರ ಕಂಭಗಳ ಮೇಲೆ ಇತ್ತಕಡೆಯೂ ಅತ್ತಕಡೆಯೂ
ಖರ್ಜೂರದ ಗಿಡಗಳಿದ್ದವು; ಅದಕ್ಕೆ ಏರುವ ಹಾಗೆ ಎಂಟು ಮೆ
೩೫ ಟ್ಟುಗಳಿದ್ದವು. ಇದಲ್ಲದೆ ಅವನು ನನ್ನನ್ನು ಉತ್ತರ ಬಾಗಲಿನ
೩೬ ಬಳಿಗೆ ಕರೆಕೊಂಡು ಹೋಗಿ ಅದನ್ನೂ, ಅದರ ಕೊಠಡಿಗಳನ್ನೂ
ಕಂಭಗಳನ್ನೂ ಪಡಸಾಲೆಗಳನ್ನೂ ಈ ಅಳತೆಗಳ ಪ್ರಕಾರವಾಗಿ
ಅಳೆದನು; ಅದಕ್ಕೆ ಸುತ್ತಲಾಗಿ ಕಿಟಿಕಿಗಳಿದ್ದವು; ಅದರ ಉದ್ದವು
೩೭ ಐವತ್ತು ಮೊಳ, ಅಗಲವು ಇಪ್ಪತ್ತೈದು ಮೊಳ. ಅದರ ಕಂಭಗ
ಳು ಹೊರಗಿನ ಅಂಗಳದ ಕಡೆಗಿದ್ದವು; ಅದರ ಕಂಭಗಳ ಮೇಲೆ
ಇತ್ತಕಡೆಯೂ ಅತ್ತಕಡೆಯೂ ಖರ್ಜೂರದ ಗಿಡಗಳಿದ್ದವು; ಅದ
ಕ್ಕೆ ಏರುವ ಹಾಗೆ ಎಂಟು ಮೆಟ್ಟುಗಳಿದ್ದವು.

೩೮ ಮತ್ತು ಕೊಠಡಿಗಳೂ ಅವುಗಳ ಪ್ರವೇಶಗಳೂ ಬಾಗಲುಗಳ
ಕಂಭಗಳ ಬಳಿಯಲ್ಲಿ, ದಹನ ಬಲಿಯನ್ನು ತೊಳೆಯುವಲ್ಲಿ, ಇದ್ದ



೩೯ ವು. ಮತ್ತು ಬಾಗಲಿನ ಪಡಸಾಲೆಯಲ್ಲಿ ದಹನ ಬಲಿಯನ್ನೂ,
ಪಾಪ ಬಲಿಯನ್ನೂ ಅಪರಾಧ ಬಲಿಯನ್ನೂ ಕೊಲ್ಲುವ ಹಾ
ಗೆ ಇತ್ತಕಡೆ ಎರಡು ಮೇಜುಗಳೂ ಅತ್ತಕಡೆ ಎರಡು ಮೇಜುಗ
೪೦ ಳೂ ಇದ್ದವು. ಮತ್ತು ಹೊರಗಡೆಯಲ್ಲಿ ಉತ್ತರ ಬಾಗಲಿನ ಪ್ರ
ವೇಶಕ್ಕೆ ಏರಿ ಹೋಗುವಲ್ಲಿ, ಎರಡು ಮೇಜುಗಳೂ, ಬಾಗಲಿನ ಪ
ಡಸಾಲೆಯಲ್ಲಿರುವ ಮತ್ತೊಂದು ಕಡೆಯಲ್ಲಿ ಎರಡು ಮೇಜುಗಳೂ,
೪೧ ಇದ್ದವು. ಬಾಗಲಿನ ಕಡೆಯಲ್ಲಿ ಇತ್ತಕಡೆ ನಾಲ್ಕು ಮೇಜುಗಳೂ,
ಅತ್ತಕಡೆ ನಾಲ್ಕು ಮೇಜುಗಳೂ, ಈ ಪ್ರಕಾರ ಎಂಟು ಮೇಜುಗ
ಳು ಇದ್ದವು; ಇವುಗಳ ಮೇಲೆ ಅವರು ಬಲಿಗಳನ್ನು ಕೊಲ್ಲುತ್ತಿದ್ದ
೪೨ ರು. ದಹನ ಬಲಿಗೋಸ್ಕರವಾದ ಆ ನಾಲ್ಕು ಮೇಜುಗಳು ಕತ್ತಿದ
ಕಲ್ಲುಗಳಿಂದ ಉಂಟಾಗಿದ್ದವು. ಅವುಗಳ ಉದ್ದವು ಒಂದುವರೆ ಮೊ
ಳ, ಅಗಲವು ಒಂದುವರೆ ಮೇಳ, ಎತ್ತರವು ಒಂದು ಮೊಳ: ಇವು
ಗಳ ಮೇಲೆ ಅವರು ದಹನ ಬಲಿಯನ್ನೂ ಅರ್ಪಣೆಯನ್ನು ಕೊ
೪೩ ಲ್ಲುವ ಸಾಮಾನುಗಳನ್ನು ಇಟ್ಟರು. ಮತ್ತು ಒಳಗೆ ಸುತ್ತಲಾಗಿ
ಕೈ ಅಗಲವಾದ ಕೊಂಡಿಗಳು ಜಡೆಯಲ್ಪಟ್ಟಿದ್ದವು; ಮೇಜುಗಳ
೪೪ ಮೇಲೆ ಅರ್ಪಣೆಯ ಮಾಂಸವಿತ್ತು. ಇದಲ್ಲದೆ ಒಳಗಿನ ಬಾಗ
ಲಿನ ಹೊರಗೆ ಒಳಗಿನ ಅಂಗಳದಲ್ಲಿ ಹಾಡುವವರ ಕೊಠಡಿಗಳಿದ್ದ
ವು; ಒಂದು ಉತ್ತರ ಬಾಗಲಿನ ಕಡೆಗೆ ದಕ್ಷಿಣಕ್ಕೆ ಅಭಿಮುಖವಾ
ದದ್ದು; ಮತ್ತೊಂದು ಪೂರ್ವ ಬಾಗಲಿನ ಕಡೆಗೆ ಉತ್ತರಕ್ಕೆ ಅಭಿ
೪೫ ಮುಖವಾದದ್ದು. ಅವನು ನನಗೆ ಹೇಳಿದ್ದೇನಂದರೆ—ದಕ್ಷಿಣಕ್ಕೆ
ಅಭಿಮುಖವಾಗಿರುವ ಈ ಕೊಠಡಿ ಮನೆಯ ಕಾಯಿದೆಯನ್ನು
೪೬ ಕಾಯುವ ಯಾಜಕರದು. ಮತ್ತು ಉತ್ತರಕ್ಕೆ ಅಭಿಮುಖವಾಗಿರು
ವ ಕೊಠಡಿ ಬಲಿಪೀಠದ ಕಾಯಿದೆಯನ್ನು ಕಾಯುವ ಯಾಜಕ
ರದು; ಲೇವಿಯ ಮಕ್ಕಳಿಗೊಳಗೆ ಯೆಹೋವನಿಗೆ ಸಮೀಪಿಸಿ ಅವ
೪೭ ನನ್ನು ಸೇವಿಸುವ ಜಾದೋಕನ ಮಕ್ಕಳು ಇವರೇ. ಹೀಗೆ ಅವ
ನು ಅಂಗಳವನ್ನು ಅಳೆದನು; ಅದರ ಉದ್ದವು ನೂರು ಮೊಳ,
ಅಗಲವು ನೂರು ಮೊಳ; ಅದು ಚಚ್ಚೌಕವಾಗಿತ್ತು; ಮನೆಯ
೪೮ ಮುಂದೆ ಬಲಿಪೀಠವಿತ್ತು. ಮತ್ತು ಅವನು ನನ್ನನ್ನು ಮನೆ
ಯ ಪಡಸಾಲೆಗೆ ಕರೆಕೊಂಡು ಹೋಗಿ ಪಡಸಾಲೆಯ ಕಂಭಗಳ
ನ್ನು ಅಳೆದನು; ಇತ್ತಕಡೆ ಐದು ಮೊಳ, ಅತ್ತಕಡೆ ಐದು ಮೊಳ,
ಬಾಗಲಿನ ಅಗಲವು ಇತ್ತಕಡೆ ಮೂರು ಮೊಳ ಅತ್ತಕಡೆ ಮೂರು
೪೯ ಮೊಳ. ಪಡಸಾಲೆಯ ಉದ್ದವು ಇಪ್ಪತ್ತು ಮೊಳ, ಅಗಲವು ಹ
ನ್ನೊಂದು ಮೊಳ, ಅದಕ್ಕೆ ಹತ್ತುವ ಮೆಟ್ಟುಗಳಿದ್ದವು; ಕೈಸಾ
ಲೆಯಲ್ಲಿ ಇತ್ತಕಡೆ ಬಂದು ಅತ್ತಕಡೆ ಒಂದು ಈ ಪ್ರಕಾರ ಎರಡು
ಸ್ತಂಭಗಳಿದ್ದವು.

## ೪೧. ಸಂಧಿ.

೧ ಆ ಮೇಲೆ ಅವನು ನನ್ನನ್ನು ದೇವಾಲಯಕ್ಕೆ ಕರೆಕೊಂಡು
ಹೋಗಿ, ಕೈಸಾಲೆಗಳನ್ನು ಒಂದು ಕಡೆಯಲ್ಲಿ ಆರು ಮೊಳದ
ಅಗಲವೆಂದೂ, ಇನ್ನೊಂದು ಕಡೆಯಲ್ಲಿ ಆರು ಮೊಳದ ಅಗಲವೆಂ
೨ ದೂ, ಅಳೆದನು; ಇದೇ ಗುಡಾರದ ಅಗಲವು. ಇದಲ್ಲದೆ ಬಾಗಲಿನ
ಅಗಲವು ಹತ್ತು ಮೊಳ; ಬಾಗಲಿನ ಪಾರ್ಶ್ವಗಳು ಒಂದು ಕಡೆ
ಯಲ್ಲಿ ಐದು ಮೊಳ, ಇನ್ನೊಂದು ಕಡೆಯಲ್ಲಿ ಐದು ಮೊಳ; ಮ
೩ ತ್ತು ಅವನು ಅದರ ಉದ್ದವನ್ನು ನಾಲ್ವತ್ತು ಮೊಳವೆಂದೂ ಅಗ
ಲವನ್ನು ಇಪ್ಪತ್ತು ಮೊಳವೆಂದೂ ಅಳೆದನು. ಆ ಮೇಲೆ ಅವನು
ಒಳಗೆ ಹೋಗಿ ಬಾಗಲಿನ ಕಂಭವನ್ನೂ ಎರಡು ಮೊಳವೆಂದೂ
ಬಾಗಲನ್ನು ಆರು ಮೊಳವೆಂದೂ ಬಾಗಲಿನ ಅಗಲವನ್ನು ಏ
೪ ಳು ಮೊಳವೆಂದೂ ಅಳೆದನು. ಹೀಗೆ ಅವನು ಅದರ ಉದ್ದವನ್ನು
ಇಪ್ಪತ್ತು ಮೊಳವೆಂದೂ, ಅಗಲವನ್ನು ಇಪ್ಪತ್ತು ಮೊಳವೆಂದೂ,
ದೇವಾಲಯಕ್ಕೆ ಎದುರಾಗಿ ಅಳೆದನು—ಇದೇ ಅತಿ ಪರಿಶುದ್ಧ ಸ್ಥಳ
೫ ವೆಂದು ನನಗೆ ಹೇಳಿದನು. ತರುವಾಯ ಮನೆಯ ಗೋಡೆಯನ್ನು
ಆರು ಮೊಳವೆಂದೂ ಮನೆಯ ಸುತ್ತಮುತ್ತಲು ಎಲ್ಲಾ ಕಡೆಯಲ್ಲಿ
ದ್ದ ಪಾರ್ಶ್ವ ಕೊಠಡಿಗಳ ಅಗಲವನ್ನು ನಾಲ್ಕು ಮೊಳವೆಂದೂ
೬ ಅಳೆದನು. ಆ ಪಾರ್ಶ್ವ ಕೊಠಡಿಗಳು ಮೂರು, ಒಂದರ ಮೇ
ಲೆ ಒಂದು, ಮುವ್ವತ್ತು ಮೂರು ವರಿಸೆಯಾಗಿದ್ದವು; ಅವು ಹಿಡಿ
ಯಲ್ಪಡುವ ಹಾಗೆ ಪಾರ್ಶ್ವ ಕೊಠಡಿಗಳಿಗೋಸ್ಕರವಾದ ಮನೆ
ಯನ್ನು ಹೊಂದಿದ ಗೋಡೆಯಲ್ಲಿ ಸುತ್ತಲಾಗಿ ಸೇರಿದವು, ಆದರೆ
೭ ಮನೆಯ ಗೋಡೆಯಲ್ಲಿ ಹಿಡಿಸಲ್ಪಡಲಿಲ್ಲ. ಮತ್ತು ಮೇಲ ಮೇಲಕ್ಕೆ
ಪಾರ್ಶ್ವ ಕೊಠಡಿಗಳ ಕಡೆಗೆ ಸುತ್ತಲಾಗಿ ಅಗಲವಾಯಿತು;
ಯಾಕಂದರೆ ಮೇಲ ಮೇಲಕ್ಕೆ ಮನೆಯನ್ನು ಸುತ್ತಿಕೊಳ್ಳುವಂ
ಥಾದ್ದು ಮನೆಯ ಸುತ್ತಲಾಗಿತ್ತು; ಆದದರಿಂದ ಮನೆಯ ಅಗಲವು
ಮೇಲ್ಗಡೆಯೆಗಾಗಿತ್ತು; ಹೀಗೆ ಕೆಳಗಿನದರಿಂದ ಮಧ್ಯ ಮಾರ್ಗವಾ
ಗಿ ಮೇಲಿನದಕ್ಕೆ ಏರುತ್ತಿತ್ತು.

೮ ಇದಲ್ಲದೆ ನಾನು ಸುತ್ತಲಾಗಿ ಮನೆಯ ಎತ್ತರವನ್ನು ನೋಡಿ
ದೆನು; ಪಾರ್ಶ್ವ ಕೊಠಡಿಗಳ ಅಸ್ತಿವಾರಗಳು ಪೂರ್ಣವಾದ ಒಂ
೯ ದು ಕೋಲು, ಅಂದರೆ ಆರು ದೊಡ್ಡ ಮೊಳಗಳು. ಹೊರಗಡೆಯ
ಲ್ಲಿ ಪಾರ್ಶ್ವ ಕೊಠಡಿಗಾಗಿರುವ ಗೋಡೆಯ ಅಗಲವು ಐದು ಮೊ
ಳ; ಮತ್ತು ಬಿಟ್ಟದ್ದು ಬಳಗಿರುವ ಪಾರ್ಶ್ವ ಕೊಠಡಿಗಳ ಸ್ಥಳವಾ
೧೦ ಗಿತ್ತು. ಇದಲ್ಲದೆ ಕೊಠಡಿಗಳ ನಡುವೆ ಮನೆಗೆ ಸುತ್ತಮುತ್ತಲು ಎ
೧೧ ಲ್ಲಾ ಕಡೆ ಇಪ್ಪತ್ತು ಮೊಳ ಅಗಲವಿತ್ತು. ಮತ್ತು ಪಾರ್ಶ್ವ ಕೊ
ಠಡಿಗಳ ಬಾಗಲುಗಳು ಬಿಡಲ್ಪಟ್ಟ ಸ್ಥಳದ ಕಡೆಗಿದ್ದವು; ಉತ್ತರ
ಕಡೆಗೆ ಒಂದು ಬಾಗಲೂ, ದಕ್ಷಿಣ ಕಡೆಗೆ ಒಂದು ಬಾಗಲೂ, ಇ
ತ್ತು; ಮತ್ತು ಬಿಡಲ್ಪಟ್ಟ ಸ್ಥಳದ ಅಗಲವು ಸುತ್ತಮುತ್ತಲು ಐದು
ಮೊಳವಾಗಿತ್ತು.

೧೨ ಇದಲ್ಲದೆ ಪ್ರತ್ಯೇಕಿಸಿದ ಸ್ಥಳಕ್ಕೆ ಎದುರಾಗಿ ಪಶ್ಚಿಮ ಕಡೆಗಿದ್ದ
ಕಟ್ಟುವಿಕೆ ಎಪ್ಪತ್ತು ಮೊಳ ಅಗಲವಾಗಿತ್ತು; ಕಟ್ಟುವಿಕೆಯ ಗೋ
ಡೆ ಸುತ್ತ ಮುತ್ತಲು ಐದು ಮೊಳ ಅಗಲವಾಗಿತ್ತು; ಅದರ ಉದ್ದ
೧೩ ವು ತೊಂಭತ್ತು ಮೊಳ. ಹೀಗೆ ಅವನು ಮನೆಯನ್ನು ನೂರು
ಮೊಳ ಉದ್ದವೆಂದೂ, ಪ್ರತ್ಯೇಕ ಸ್ಥಳವನ್ನೂ ಕಟ್ಟುವಿಕೆಯನ್ನೂ
ಗೋಡೆಗಳು ಸಹಿತವಾಗಿ ನೂರು ಮೊಳ ಉದ್ದವೆಂದೂ, ಅಳೆ
೧೪ ದನು. ಇದಲ್ಲದೆ ಮನೆಯ ಮುಂಭಾಗವೂ ಪೂರ್ವ ಕಡೆಗಿದ್ದ ಪ್ರ
ತ್ಯೇಕ ಸ್ಥಳವೂ ಇವುಗಳ ಅಗಲವು ನೂರು ಮೊಳವಾಗಿತ್ತು.
೧೫ ಇದಲ್ಲದೆ ಪ್ರತ್ಯೇಕ ಸ್ಥಳಕ್ಕೆ ಎದುರಾಗಿದ್ದಂಥ, ಅದರ ಹಿಂದೆ ಇ
ದ್ದಂಥ, ಕಟ್ಟುವಿಕೆಯನ್ನೂ ಅದರ ಮಂಟಪಗಳನ್ನೂ ಇತ್ತಕಡೆ
ಯೂ ಅತ್ತಕಡೆಯೂ ನೂರು ಮೊಳವೆಂದೂ ಅಳೆದನು; ಒಳಗಿ
೧೬ ನ ದೇವಾಲಯವನ್ನು ಅಂಗಳದ ಪಡಸಾಲೆಗಳನ್ನೂ, ಸಹಾ; ಮ
ತ್ತು ಬಾಗಲಿನ ನಿಲುವುಗಳನ್ನೂ ಇಕ್ಕಟ್ಟಾದ ಕಿಟಿಕಿಗಳನ್ನೂ
ಮೂರು ಅಂತಸ್ತಗಳಲ್ಲಿ ಸುತ್ತಲಿದ್ದಂಥ, ನಿಲುವುಗಳಿಗೆ ಎದುರಾ
ಗಿ ಸುತ್ತಲು ಮರದಿಂದ ಹೊದಗಿಸಲ್ಪಟ್ಟಿಂಥ ಮಂಟಪಗಳನ್ನೂ,
ನೆಲವು ಮೊದಲ್ಗೊಂಡು ಮುಚ್ಚಲ್ಪಟ್ಟಿದ್ದ ಕಿಟಿಕಿಗಳ ಪರ್ಯಂತ

೧೪ ರಕ್ಕೂ, ಬಾಗಲಿನ ಮೇಲಕ್ಕೂ ಒಳಗಿನ ಮನೆಯ ಪರ್ಯಂತ
ರಕ್ಕೂ ಹೊರಗೂ ಸುತ್ತಲಾಗಿದ್ದ ಗೋಡೆಯೆಲ್ಲವನ್ನೂ ಒಳಗೆ
೧೫ ಯೂ ಹೊರಗೆಯೂ ಅಳತೆಗಳಿಂದ ಅಳೆದನು. ಅದು ಕೆರೂ
ಬಗಳಿಂದಲೂ ಖರ್ಜೂರದ ಗಿಡಗಳಿಂದಲೂ ಮಾಡಲ್ಪಟ್ಟಿತ್ತು,
ಕೆರೂಬಕ್ಕೂ ಕೆರೂಬಕ್ಕೂ ಮಧ್ಯದಲ್ಲಿ ಖರ್ಜೂರದ ಗಿಡವಿತ್ತು;
ಒಂದೊಂದು ಕೆರೂಬಕ್ಕೆ ಎರಡೆರಡು ಮುಖಗಳಿದ್ದವು, ಆದದರಿಂದ
೧೯ ಇತ್ತ ಕಡೆ ಖರ್ಜೂರದ ಗಿಡದ ಎದುರಿಗೆ ಮನುಷ್ಯನ ಮುಖವೂ
ಅತ್ತ ಕಡೆ ಖರ್ಜೂರದ ಗಿಡದ ಎದುರಿಗೆ ಎಳೇ ಸಿಂಹದ ಮುಖವೂ
ಇತ್ತು; ಹೀಗೆ ಸಮಸ್ತ ಮನೆಯಲ್ಲಿ ಸುತ್ತ ಮುತ್ತಲು ಮಾಡಲ್ಪಟ್ಟಿ
೨೦ ತ್ತು. ನೆಲವು ಮೊದಲ್ಗೊಂಡು ಬಾಗಲಿನ ಮೇಲಿನ ಪರ್ಯಂತರ
ಕ್ಕೂ ದೇವಾಲಯದ ಗೋಡೆಯಲ್ಲಿಯೂ ಕೆರೂಬಗಳೂ ಖ
೨೧ ರ್ಜೂರದ ಗಿಡಗಳೂ ಮಾಡಲ್ಪಟ್ಟಿದ್ದವು. ದೇವಾಲಯದ ಕಂಭಗ
ಳು ಚಚ್ಚಾಕವಾಗಿದ್ದವು; ಪರಿಶುದ್ಧ ಸ್ಥಳವು ಸಹಾ; ಇದರ ಆಕಾ
ರವು ಅದರ ಆಕಾರವು ಸಮ.
೨೨ ಮರದ ಬಲಿಪೀಠವು ಮೂರು ಮೊಳ ಎತ್ತರವಾಗಿತ್ತು, ಅದ
ರ ಉದ್ದವು ಎರಡು ಮೊಳ; ಅದರ ಮೂಲೆಗಳೂ ಅದರ ಉದ್ದ
ವೂ ಅದರ ಪಾರ್ಶ್ವಗಳೂ ಮರದವುಗಳೇ; ಆಗಲವನು ನನಗೆ—
ಯೆಹೋವನ ಮುಂದೆ ಇರುವ ಮೇಜು ಇದೇ ಎಂದು ಹೇಳಿದನು.
೨೩ ಇದಲ್ಲದೆ ದೇವಾಲಯಕ್ಕೂ ಪರಿಶುದ್ಧ ಸ್ಥಳಕ್ಕೂ ಎರಡು ಬಾಗಲು
೨೪ ಗಳಿದ್ದವು. ಆ ಎರಡು ಬಾಗಲುಗಳಿಗೆ ಎರಡೆರಡು ಕದಗಳಿದ್ದವು
ಸುತ್ತಿ ಕೊಳ್ಳುವ ಕದಗಳು; ಬಂದು ಬಾಗಲಿಗೆ ಎರಡು ಕದಗ
೨೫ ಳು, ಇನ್ನೊಂದು ಬಾಗಲಿಗೆ ಎರಡು. ಮತ್ತು ಇವುಗಳ ಮೇಲೆ,
ಅಂದರೆ ದೇವಾಲಯದ ಬಾಗಲುಗಳ ಮೇಲೆ, ಕೆರೂಬಗಳೂ ಖ
ರ್ಜೂರದ ಗಿಡಗಳೂ, ಗೋಡೆಗಳ ಮೇಲೆ ಮಾಡಲ್ಪಟ್ಟ ಹಾಗೆ
ಯೇ ಮಾಡಲ್ಪಟ್ಟಿವು; ಮತ್ತು ಪಡಸಾಲೆಯ ಮುಂದೆ ಹೊರಗಡೆ
೨೬ ಯಲ್ಲಿ ದಪ್ಪದ ಹಲಿಗೆಗಳಿದ್ದವು. ಇದಲ್ಲದೆ ಇತ್ತ ಕಡೆಯೂ ಅ
ತ್ತ ಕಡೆಯೂ ಪಡಸಾಲೆಗಳ ಪಕ್ಕೆಗಳಿಗೂ ಮನೆಯ ಪಾರ್ಶ್ವ
ಕೊಠಡಿಗಳಿಗೂ ಇಕ್ಕಟ್ಟಾದ ಕಿಟಕಿಗಳೂ ಇದ್ದವು. ದಪ್ಪದ ಹ
ಲಿಗೆಗಳು ಸಹಾ.

## ೪೦. ಸಂಧಿ.

೧ ಆ ಮೇಲೆ ಅವನು ನನ್ನನ್ನು ಹೊರಗಿನ ಅಂಗಳಕ್ಕೆ ಉತ್ತರ
ಮಾರ್ಗವಾಗಿ ಕರೆ ಕೊಂಡು ಹೋಗಿ, ಪ್ರತ್ಯೇಕ ಸ್ಥಳಕ್ಕೆ ಎದು
ರಾಗಿಯೂ ಉತ್ತರ ಕಡೆಯಲ್ಲಿ ಕಟ್ಟುವಿಕೆಗೆ ಮುಂದಾಗಿಯೂ
೨ ಇದ್ದ ಕೊಠಡಿಗೆ ತಂದನು. ನೂರು ಮೊಳ ಉದ್ದಕ್ಕೆ ಎದುರಾಗಿ
3 ಉತ್ತರ ಬಾಗಲಿತ್ತು; ಅದರ ಅಗಲವು ಐವತ್ತು ಮೊಳ. ಒಳಗಿ
ನ ಅಂಗಳಕ್ಕಿದ್ದ ಇಪ್ಪತ್ತು ಮೊಳಕ್ಕೆ ಎದುರಾಗಿಯೂ ಹೊರಗಿ
ನ ಅಂಗಳಕ್ಕಿದ್ದ ಕಲ್ಲು ಹಾಸಿದ ನೆಲಕ್ಕೆ ಎದುರಾಗಿಯೂ ಮೂ
೪ ರು ಅಂತಸ್ತುಗಳಲ್ಲಿ ಮಂಟಪದ ಮೇಲೆ ಮಂಟಪವಿತ್ತು. ಮತ್ತು
ಕೊಠಡಿಗಳ ಮುಂದೆ ಒಳಗೆ ಹೋಗುವಂಥ, ಹತ್ತು ಮೊಳ ಅಗ
ಲವಾದಂಥ ಒಂದು ಮೊಳದ ಹಾದಿ ಇತ್ತು; ಅವುಗಳ ಬಾಗಲು
೫ ಗಳು ಉತ್ತರ ಕಡೆಗಿದ್ದವು. ಮೇಲಿನ ಕೊಠಡಿಗಳು ಕಟ್ಟುವಿಕೆಯಿಂ
ದ ಕೆಳಗಿನ ಭಾಗಕ್ಕಿಂತಲೂ ಮಧ್ಯ ಭಾಗಕ್ಕಿಂತಲೂ ಉದ್ದದಲ್ಲಿ
ಕಡಿಮೆಯಾಗಿದ್ದವು, ಯಾಕಂದರೆ ಮಂಟಪಗಳು ಅವುಗಳ ಸ್ಥಳ
೬ ವನ್ನು ತೆಗೆಯುತ್ತಿದ್ದವು. ಯಾಕಂದರೆ ಇವು ಮೂರು ಅಂತಸ್ತ
ಗಳಾಗಿದ್ದವು; ಆದರೆ ಅಂಗಳದ ಕಂಭಗಳ ಹಾಗೆ ಇವುಗಳಿಗೆ
ಕಂಭಗಳು ಇರಲಿಲ್ಲ; ಆದದರಿಂದ ಇವುಗಳಿಗೆ ನೆಲವಾಡಿಯ್ಯ ಕೆಳಗಿ
ನವುಗಳಿಗಿಂತಲೂ ಮಧ್ಯವಾದವುಗಳಿಗಿಂತಲೂ ಸ್ಥಳ ಕಡಮೆಯಾ
೭ ಗಿತ್ತು. ಇದಲ್ಲದೆ ಕೊಠಡಿಗಳಿಗೆ ಎದುರಾಗಿ ಹೊರಗಿದ್ದ ಗೋ
ಡೆಯು, ಕೊಠಡಿಗಳ ಮುಂದಾಗಿ ಹೊರಗಿನ ಅಂಗಳದ ಕಡೆಗೆ ಇ
ದ್ದದ್ದು, ಐವತ್ತು ಮೊಳ ಉದ್ದವಾಗಿತ್ತು. ಯಾಕಂದರೆ ಹೊರಗಿ
೮ ನ ಅಂಗಳದಲ್ಲಿದ್ದ ಕೊಠಡಿಗಳ ಉದ್ದವು ಐವತ್ತು ಮೊಳವಾಗಿತ್ತು;
ಮತ್ತು ಇಗೋ ದೇವಾಲಯದ ಮುಂದೆ ನೂರು ಮೊಳವಿತ್ತು.
ಇದಲ್ಲದೆ ಈ ಕೊಠಡಿಗಳ ಕೆಳಗೆ ಹೊರಗಿನ ಅಂಗಳದಿಂದ ಅವು
೯ ಗಳಲ್ಲಿ ಪ್ರವೇಶಿಸುವ ಹಾಗೆ ಪೂರ್ವ ದಿಕ್ಕಿಗೆ ಪ್ರವೇಶವಿತ್ತು. ಕೊ
ಠಡಿಗಳು ಪೂರ್ವ ಕಡೆಗೆ ಅಂಗಳದ ಗೋಡೆಯ ಅಗಲದಲ್ಲಿ, ಪ್ರ
೧೦ ತ್ಯೇಕ ಸ್ಥಳಕ್ಕೂ ಕಟ್ಟುವಿಕೆಗೂ ಎದುರಾಗಿದ್ದವು. ಮತ್ತು ಅವು
೧೧ ಗಳ ಮುಂದಿನ ಮಾರ್ಗವು ಉತ್ತರ ಕಡೆಯಲ್ಲಿದ್ದ ಕೊಠಡಿಗಳ ಆಕಾ
ರದ ಹಾಗೆಯೇ ಇತ್ತು; ಅವುಗಳ ಉದ್ದವು ಅಷ್ಟೇ, ಅಗಲವೂ ಅ
ಷ್ಟೇ; ಅವುಗಳ ಎಲ್ಲಾ ಹೊರಡೋಣಗಳೂ, ಅವುಗಳ ಪದ್ಧತಿಗಳ
೧೨ ಪ್ರಕಾರವಾಗಿಯೂ ಅವುಗಳ ಬಾಗಲುಗಳ ಪ್ರಕಾರವಾಗಿಯೂ ಇದ
ವು. ಮತ್ತು ದಕ್ಷಿಣ ಕಡೆಗಿದ್ದ ಕೊಠಡಿಗಳ ಬಾಗಲುಗಳ ಪ್ರಕಾರ,
ಅವುಗಳನ್ನು ಪ್ರವೇಶಿಸುವಲ್ಲಿಯೂ, ಪೂರ್ವ ಕಡೆಗೆ ಗೋಡೆಗೆ
ಸರಿಯಾದ ಮಾರ್ಗದಲ್ಲಿಯೂ ಮಾರ್ಗದ ತಲೆಯಲ್ಲಿ ಬಂದು
೧೩ ಬಾಗಲಿತ್ತು. ಆಗಲವನು ನನಗೆ ಹೇಳಿದ್ದೇನಂದರೆ—ಪ್ರತ್ಯೇಕ ಸ
ಳದ ಮುಂದಿರುವ ಉತ್ತರ ಕೊಠಡಿಗಳೂ ದಕ್ಷಿಣ ಕೊಠಡಿಗಳೂ
ಇವು ಪರಿಶುದ್ಧ ಕೊಠಡಿಗಳೇ; ಅಲ್ಲಿ ಯೆಹೋವನಿಗೆ ಸಮಿಪಿಸು
ವ ಯಾಜಕರು ಅತಿ ಪರಿಶುದ್ಧವಾದವುಗಳನ್ನು ಉಣ್ಣಬೇಕು;
ಅಲ್ಲಿ ಅವರು ಅತಿ ಪರಿಶುದ್ಧವಾದವುಗಳನ್ನು ಅಂದರೆ, ಕಾಣಿಕೆ
ಯನ್ನೂ ಪಾಪ ಬಲಿಯನ್ನೂ ಅಪರಾಧ ಬಲಿಯನ್ನೂ ಇಡಬೇ
೧೪ ಕು; ಯಾಕಂದರೆ ಆ ಸ್ಥಳವು ಪರಿಶುದ್ಧವೇ. ಯಾಜಕರು ಅವು
ಗಳಲ್ಲಿ ಪ್ರವೇಶಿಸುವಾಗ, ಅವರು ಪರಿಶುದ್ಧ ಸ್ಥಳವನ್ನು ಬಿಟ್ಟು
ಹೊರಗಿನ ಅಂಗಳಕ್ಕೆ ಹೊರಡಬೇಡ; ಅಲ್ಲೇ ಅವರು ತಾವು
ಧರಿಸಿ ಸೇವೆ ಮಾಡಿದ ವಸ್ತ್ರಗಳನ್ನು ಇಡಬೇಕು; ಯಾಕಂದ
ರೆ ಅವು ಪರಿಶುದ್ಧವೇ. ಅವರು ಬೇರೆ ವಸ್ತ್ರಗಳನ್ನು ಹಾಕಿ ಕೊಂ
ಡು ಜನರ ಸಮ್ಮುಖವಾದವುಗಳಿಗೆ ಸಮಿಪಿಸಬೇಕು.
೧೫ ಅವನು ಒಳಗಿನ ಮನೆಯ ಅಳತೆಗಳನ್ನು ತೀರಿಸಿದ ಮೇಲೆ,
ನನ್ನನ್ನು ಪೂರ್ವ ಕಡೆಗೆ ಅಭಿಮುಖವಾಗಿರುವ ಬಾಗಲಿನಿಂದ
೧೬ ಹೊರಗೆ ತಂದು, ಅದನ್ನು ಸುತ್ತಮುತ್ತಲು ಅಳೆದನು. ಅವನು
ಪೂರ್ವ ಕಡೆಯನ್ನು ಅಳೆಯುವ ಕೋಲಿನಿಂದ ಅಳೆದನು; ಅ
ದು ಸುತ್ತಲಾಗಿ ಅಳೆಯುವ ಕೋಲಿನ ಪ್ರಕಾರ ಐನೂರು ಕೊ
೧೭ ಲಾಗಿತ್ತು. ಉತ್ತರ ಕಡೆಯನ್ನು ಸಹಾ ಅಳೆದನು; ಅದು ಸುತ್ತ
ಲಾಗಿ ಅಳೆಯುವ ಕೋಲಿನ ಪ್ರಕಾರ ಐನೂರು ಕೋಲಾಗಿತ್ತು.
೧೮ ದಕ್ಷಿಣ ಕಡೆಯನ್ನೂ ಸಹ ಅಳೆಯುವ ಕೋಲಿನ ಪ್ರಕಾರ ಐ
ನೂರು ಕೋಲೆಂದು ಅಳೆದನು. ಪಶ್ಚಿಮ ಕಡೆಗೆ ತಿರುಗಿ ಕೊಂಡು
೧೯ ಅಳೆಯುವ ಕೋಲಿನ ಪ್ರಕಾರ ಐನೂರು ಕೋಲೆಂದು ಅಳೆದನು.
೨೦ ನಾಲ್ಕು ಕಡೆಗಳಲ್ಲಿ ಅದನ್ನು ಅಳೆದನು; ಪರಿಶುದ್ಧ ಸ್ಥಳಕ್ಕೂ ಅ
ಪವಿತ್ರವಾದದ್ದಕ್ಕೂ ಪ್ರತ್ಯೇಕ ಮಾಡುವ ಹಾಗೆ ಅದಕ್ಕೆ ಸುತ
ಲಾಗಿ ಐನೂರು ಕೋಲು ಉದ್ದವಾದಂಥ, ಐನೂರು ಕೋಲು
ಅಗಲವಾದಂಥ, ಗೋಡೆ ಇತ್ತು.



## ೪೩. ಸಂಧಿ.

೧ ಆ ಮೇಲೆ ಅವನು ನನ್ನನ್ನು ಬಾಗಲಿಗೆ, ಪೂರ್ವದಿಕ್ಕಿಗೆ ಅಭಿ
ಮುಖವಾದ ಬಾಗಲಿಗೆ ಕರೆ ಕೊಂಡು ಹೋದನು. ಮತ್ತು ಇ
೨ ಗೋ, ಇಸ್ರಯೇಲಿನ ದೇವರ ಮಹಿಮೆ ಪೂರ್ವದಿಕ್ಕಿನ ಮಾರ್ಗ
ವಾಗಿ ಬಂತು; ಅವನ ಶಬ್ದವು ಬಹಳ ನೀರುಗಳ ಶಬ್ದದಹಾಗಿತ್ತು;
3 ಮತ್ತು ಅವನ ಮಹಿಮೆಯಿಂದ ಭೂಮಿ ಪ್ರಕಾಶಿಸಿತು. ಆ ಆಕಾ
ರವು ನಾನು ನೋಡಿದ ದರ್ಶನದ ಆಕಾರದ ಹಾಗೆ, ನಾನು ಪಟ್ಟಣ
ವನ್ನು ನಾಶ ಮಾಡುವದಕ್ಕೆ ಬಂದಾಗ ನೋಡಿದ ದರ್ಶನದ ಹಾ
ಗಿತ್ತು; ಈ ದರ್ಶನಗಳು ನಾನು ಕೀಬಾರ್ ನದಿಯ ಬಳಿಯಲ್ಲಿ
೪ ನೋಡಿದ ದರ್ಶನದ ಹಾಗಿದ್ದವು; ಆಗ ನಾನು ಮೋರೆ ಕೆಳಗಾಗಿ
ಬಿದ್ದೆನು. ಆಗ ಯೆಹೋವನ ಮಹಿಮೆ ಪೂರ್ವದಿಕ್ಕಿಗೆ ಅಭಿಮು
ಖವಾದ ಬಾಗಲಿನ ಮಾರ್ಗವಾಗಿ ಮನೆಯಲ್ಲಿ ಪ್ರವೇಶಿಸಿತು. ಆ
೫ ಮೇಲೆ ಆತ್ಮನು ನನ್ನನ್ನು ಎತ್ತಿ, ಒಳಗಿನ ಅಂಗಳಕ್ಕೆ ವೈಯಿತು;
ಮತ್ತು ಇಗೋ, ಮನೆಯು ಯೆಹೋವನ ಮಹಿಮೆಯಿಂದ ತುಂ
ಬಿ ಇತ್ತು.
೬ ಇದಲ್ಲದೆ ನಾನು ಮನೆಯೊಳಗಿಂದ ನನ್ನ ಸಂಗಡ ಮಾತಾಡು
ವವೊಬ್ಬನನ್ನು ಕೇಳಿದೆನು; ಮತ್ತು ಆ ಮನುಷ್ಯನು ನನ್ನ ಬ
೭ ಳಿಯಲ್ಲಿ ನಿಂತನು. ಅವನು ನನಗೆ ಹೇಳಿದ್ದೇನಂದರೆ—ಮನುಷ್ಯ
ನ ಮನಸೇ, ನನ್ನ ಸಿಂಹಾಸನದ ಸ್ಥಳವನ್ನೂ ನನ್ನ ಅಂಗಾಲು
ಗಳ ಸ್ಥಳವನ್ನೂ ನಾನು ಇಸ್ರಯೇಲನ ಮಕ್ಕಳ ಮಧ್ಯದಲ್ಲಿ ನಿ
ತ್ಯವಾಗಿ ವಾಸವಾಗಿರುವ ಸ್ಥಳವನ್ನೂ ನನ್ನ ಪರಿಶುದ್ಧ ಹೆಸರ
ನ್ನೂ ಇಸ್ರಯೇಲನ ಮನೆಯವರು, ಅಂದರೆ, ಅವರಾದರೂ ಅ
ವರ ಅರಸರಾದರೂ ತಮ್ಮ ಸೂಳೆತನದಿಂದಲೂ ತಮ್ಮ ಮೇರು
ಗಳಲ್ಲಿರುವ ಅವರ ಅರಸರ ಹೆಣಗಳಿಂದಲೂ, ಇನ್ನು ಮೇಲೆ ಅ
೮ ಪವಿತ್ರ ಮಾಡುವದಿಲ್ಲ. ಅವರು ತಮ್ಮ ಹೊಸ್ತಲನ್ನು ನನ್ನ ಹೊ
ಸ್ತಲುಗಳ ಬಳಿಯಲ್ಲಿಯೂ ತಮ್ಮ ಕಂಭವನ್ನು ನನ್ನ ಕಂಭಗಳ
ಬಳಿಯಲ್ಲಿಯೂ ಇಟ್ಟು, ನನಗೂ ತಮಗೂ ಮಧ್ಯವಾಗಿ ಗೋ
ಡೆಯನ್ನು ಇರಿಸಿದ್ದರಿಂದಲೂ, ಅವರು ತಾವು ಮಾಡಿರುವ ಅಸಹ್ಯ
ಗಳಿಂದ ನನ್ನ ಪರಿಶುದ್ಧ ಹೆಸರನ್ನು ಅಪವಿತ್ರ ಮಾಡಿದ್ದಾಕೆ; ಆದ
ಕಾರಣ ನಾನು ನನ್ನ ಕೋಪದಲ್ಲಿ ಅವರನ್ನು ಮುಗಿಸಿ ಬಿಟ್ಟೆದ್ದೇ
೯ ನೆ. ಈಗ ಅವರು ತಮ್ಮ ಸೂಳೆತನವನ್ನೂ ತಮ್ಮ ಅರಸರ ಹೆಣ
ಗಳನ್ನೂ ನನಗೆ ದೂರ ಮಾತಲಿ, ಆಗ ನಾನು ನಿತ್ಯವಾಗಿ ಅವರ
೧೦ ಮಧ್ಯದಲ್ಲಿ ವಾಸ ಮಾಡುವೆನು. ನೀನು, ಮನುಷ್ಯನ ಮಗನೇ,
ಇಸ್ರಯೇಲನ ಮನೆಯವರಿಗೆ ಈ ಮನೆಯನ್ನು ತೋರಿಸು; ಅ
ವರು ತಮ್ಮ ಅಕ್ರಮಗಳ ನಿಮಿತ್ತ ನಾಚಿಕೆ ಪಡುವದಕ್ಕೋಸ್ಕರ
ವೇ, ಮತ್ತು ಅವರು ಮಾದ್ರಿಯನ್ನು ಅಳೆಯಲಿ. ಅವರು ತಾವು
ಮಾಡಿದ್ದೆಲ್ಲಾದರ ನಿಮಿತ್ತ ನಾಚಿಕೆ ಪಟ್ಟರೆ, ಮನೆಯ ರೂಪವ
ನ್ನೂ ಅದರ ಆಕಾರವನ್ನೂ ಅದರ ಹೊರಡೋಣಗಳನ್ನೂ ಅ
ದರ ಬಕೋಣಗಳನ್ನೂ ಅದರ ಎಲ್ಲಾ ರೂಪಗಳನ್ನೂ ಅದರ
ಎಲ್ಲಾ ನೇಮಗಳನ್ನೂ ಅದರ ಎಲ್ಲಾ ರೂಪಗಳನ್ನೂ ಅದರ ಎ
ಲ್ಲಾ ನ್ಯಾಯಪ್ರಮಾಣಗಳನ್ನೂ ಅವರಿಗೆ ತೋರಿಸು; ಅವರು ಅ
ದರ ಎಲ್ಲಾ ರೂಪವನ್ನೂ ಅದರ ಎಲ್ಲಾ ನೇಮಗಳನ್ನು ಕೈಕೊಂ
ಡು ಅವುಗಳನ್ನು ಮಾಡುವ ಹಾಗೆ ಅವರ ದೃಷ್ಟಿಯಲ್ಲಿ ಅದ
ನ್ನು ಬರೆ.
೧೨ ಮನೆಯ ನ್ಯಾಯಪ್ರಮಾಣವು ಇದೇ—ಬೆಟ್ಟದ ಕೊನೆಯಲ್ಲಿ
ಅದರ ಮೇರೆಯೆಲ್ಲಾ ಸುತ್ತ ಮುತ್ತಲು ಅತಿ ಪರಿಶುದ್ಧವೇ. ಇಗೋ,
೧೩ ಇದೇ ಮನೆಯ ನ್ಯಾಯಪ್ರಮಾಣವು. ಮತ್ತು ಬಲಿಪೀಠದ ಅಳ
ತೆಗಳು ಮೊಳದ ಪ್ರಕಾರ ಇದೇ—ಮೊಳ ಅಂದರೆ, ಮೊಳದ ಸಂ
ಗಡ ಕೈ ಅಗಲವು; ಅದರ ಅಡಿ ಒಂದು ಮೊಳ; ಅಗಲ ಒಂದು
ಮೊಳ; ಅದರ ಅಂಚಿನ ಕಡೆಯಲ್ಲಿರುವ ಮೇರೆ ಸುತ್ತಲಾಗಿ ಒಂದು
೧೪ ಗೇಣು; ಇದೇ ಬಲಿಪೀಠದ ಹಿಂಭಾಗ. ಮತ್ತು ನೆಲದಲ್ಲಿರುವ ಅಡಿ
ಮೊದಲುಗೊಂಡು ಕೆಳಗಿನ ಅಂಚಿನ ಪರ್ಯಂತರ ಎರಡು ಮೊಳ,
ಅಗಲ ಒಂದು ಮೊಳ; ಸಣ್ಣ ಅಂಚು ಮೊದಲ್ಗೊಂಡು ದೊಡ್ಡ ಅಂ
ಚಿನ ಪರ್ಯಂತರ ನಾಲ್ಕು ಮೊಳ, ಅಗಲ ಒಂದು ಮೊಳ. ಈ
೧೫ ಪ್ರಕಾರ ಬಲಿಪೀಠವು ನಾಲ್ಕು ಮೊಳವಾಗಿಯೂ, ಬಲಿಪೀಠದಿಂದ
ಮೇಲಕ್ಕೆ ನಾಲ್ಕು ಕೊಂಬುಗಳುಳ್ಳದ್ದಾಗಿಯೂ ಇರ ತಕ್ಕದ್ದು.
೧೬ ಮತ್ತು ಬಲಿಪೀಠವು ಹನ್ನೆರಡು ಮೊಳ ಉದ್ದವಾಗಿಯೂ, ಹನ್ನೆರಡು
ಮೊಳ ಅಗಲವಾಗಿಯೂ, ನಾಲ್ಕು ಕಡೆಗೆ ಚಚ್ಚಾಕವಾಗಿಯೂ,
೧೭ ಇರ ತಕ್ಕದ್ದು. ಅದರ ಅಂಚು ನಾಲ್ಕು ಕಡೆಗೆ ಹದಿ ನಾಲ್ಕು ಮೊ
ಳ ಉದ್ದವಾಗಿಯೂ, ಹದಿ ನಾಲ್ಕು ಮೊಳ ಅಗಲವಾಗಿಯೂ,
ಅದರ ಸುತ್ತಲಿರುವ ಮೇರೆ ಅರ್ಧ ಮೊಳವಾಗಿಯೂ, ಅದರ ಅ
ಡಿ ಸುತ್ತಲಾಗಿ ಒಂದು ಮೊಳವಾಗಿಯೂ, ಇರ ತಕ್ಕದ್ದು; ಅದರ
ಮೆಟ್ಟುಗಳು ಪೂರ್ವದಿಕ್ಕಿಗೆದುರಾಗಿ ಇರಬೇಕು.
೧೮ ಆಗಲವನು ನನಗೆ ಹೇಳಿದ್ದೇನಂದರೆ—ಮನುಷ್ಯನ ಮಗನೇ,
ಕರ್ತನಾದ ಯೆಹೋವ ಹೀಗೆ ಹೇಳುತ್ತಾನೆ—ಬಲಿಪೀಠವನ್ನು
ಮಾಡುವ ದಿವಸದಲ್ಲಿ, ಅದರ ಮೇಲೆ ಹೋಮಗಳನ್ನು ಅರ್ಪಿಸಿ,
ಅದರ ಮೇಲೆ ರಕ್ತವನ್ನು ಚೆಲ್ಲುವ ಹಾಗೆ, ಇವು ಅದರ ನೇಮಗ
೧೯ ಳು. ಕರ್ತನಾದ ಯೆಹೋವನು ಅನ್ನುವದೇನಂದರೆ—ನನಗೆ ಸೇ
ವೆ ಮಾಡುವದಕ್ಕೆ ನನ್ನ ಬಳಿಗೆ ಸಮಿಪಿಸುವ ಚಾದೋಕನ ಸಂ
ತಾನದವರಾದ ಯಾಜಕರಿಗೂ ಲೇವಿಯರಿಗೂ ಪಾಪ ಬಲಿಗಾಗಿ
೨೦ ಹೋರಿಯನ್ನು ಕೊಡಬೇಕು. ಅದರ ರಕ್ತವನ್ನು ನೀನು ತ
ಕ್ಕೊಂಡು ಅದರ ನಾಲ್ಕು ಕೊಂಬುಗಳಿಗೂ ಅಂಚಿನ ನಾಲ್ಕು
ಮೂಲೆಗಳಿಗೂ ಸುತ್ತಲಿರುವ ಮೇರೆಗೂ ಹಚ್ಚಿ, ಅದನ್ನು ಶುದ್ಧ
ಮಾಡಿ, ಪಾಪ ಮುಚ್ಚಬೇಕು. ಇದಲ್ಲದೆ ನೀನು ಪಾಪ ಬಲಿಯ
ಹೋರಿಯನ್ನು ತಕ್ಕೊಂಡು ಮನೆಯ ನೇಮಕವಾದ ಸ್ಥಳದಲ್ಲಿ ಪ
೨೧ ರಿಶುದ್ಧ ಸ್ಥಳದ ಹೊರಗೆ ಸುಡಬೇಕು. ಮತ್ತು ಎರಡನೇ ದಿವಸ
ದಲ್ಲಿ ಪೂರ್ಣಾಂಗವಾದ ಮೇಕೆಯ ಹೋತನ್ನು ಪಾಪ ಬಲಿಯಾ
ಗಿ ಅರ್ಪಿಸಬೇಕು; ಆಗಲವರು ಬಲಿಪೀಠವನ್ನು ಶುದ್ಧ ಮಾಡ
೨3 ಬೇಕು, ಹೋರಿಯಿಂದ ಶುದ್ಧ ಮಾಡಿದ ಪ್ರಕಾರವೇ. ಅದನ್ನು ಶು
ದ್ಧ ಮಾಡಿ ಅದ ಮೇಲೆ ಪೂರ್ಣಾಂಗವಾದ ಹೋರಿಯನ್ನೂ ಮಂ
ದೆಯೊಳಗಿಂದ ಪೂರ್ಣಾಂಗವಾದ ಟಗರನ್ನೂ, ಅರ್ಪಿಸಬೇಕು.
೨೪ ಯೆಹೋವನ ಮುಂದೆ ಅವುಗಳನ್ನು ಅರ್ಪಿಸಬೇಕು; ಯಾ
ಜಕರು ಅವುಗಳ ಮೇಲೆ ಉಪ್ಪು ಹಾಕಿ, ಅವುಗಳನ್ನು ಯೆಹೋವ
೨೫ ನಿಗೆ ಹೋಮವಾಗಿ ಅರ್ಪಿಸಬೇಕು. ಏಳು ದಿವಸಗಳ ತನಕ
ದಿನದಿನಕ್ಕೆ ನೀನು ಪಾಪ ಬಲಿಗಾಗಿ ಹೋತನ್ನು ಸಿದ್ಧ ಮಾಡ
ಬೇಕು; ಇದಲ್ಲದೆ ಪೂರ್ಣಾಂಗವಾದ ಹೋರಿಯನ್ನೂ ಮಂದೆ
೨೬ ಯೊಳಗಿಂದ ಟಗರನ್ನೂ ಸಿದ್ಧ ಮಾಡಬೇಕು. ಏಳು ದಿವಸಗ
ಳ ತನಕ ಅವರು ಬಲಿಪೀಠವನ್ನು ಶುಚಿಸಿ, ಅದನ್ನು ಶುದ್ಧ ಮಾ
೨೭ ಡಿ, ತಮ್ಮನ್ನು ಪ್ರತಿಷ್ಠೆ ಮಾಡಬೇಕು; ಮತ್ತು ಈ ದಿವಸಗಳು

೧ ತೀರಿದ ಮೇಲೆ ಎಂಟನೇ ದಿವಸದಲ್ಲಿಯೂ ಅದರ ತರುವಾಯವೂ ಯಾಜಕರು ಬಲಿಪೀಠದ ಮೇಲೆ ನಿಮ್ಮ ಹೋಮಗಳನ್ನೂ ನಿ
೨ ಮ್ಮ ಸಮಾಧಾನದ ಬಲಿಗಳನ್ನೂ ಕೊಡುವರು; ಆಗ ನಾನು ನಿ
ಮ್ಮನ್ನು ಅಂಗೀಕರಿಸುವೆನೆಂದು ಕರ್ತನಾದ ಯೆಹೋವ ಅನ್ನು
ತ್ತಾನೆ.

## ೪೪. ಸಂಧಿ.

೧ ಆಗಲವನು ನನ್ನನ್ನು ಪೂರ್ವ ದಿಕ್ಕಿಗೆ ಅಭಿಮುಖವಾದ ಹೊ
ರಗಿನ ಪರಿಶುದ್ಧ ಸ್ಥಳದ ಬಾಗಲಿನ ಮಾರ್ಗವಾಗಿ ತಿರಿಗಿ ಬರ
೨ ಮಾಡಿದನು; ಅದು ಮುಚ್ಚಲ್ಪಟ್ಟಿತು. ಆಗ ಯೇಹೋವ ನನಗೆ
ಹೇಳಿದ್ದೇನಂದರೆ—ಈ ಬಾಗಲು ಮುಚ್ಚಲ್ಪಡ ಬೇಕು; ಅದು ತೆ
ರೆಯಲ್ಪಡ ಬೇಡ; ಅದರಿಂದ ಒಬ್ಬರಾದರೂ ಪ್ರವೇಶಿಸ ಬೇಡ;
ಯಾಕಂದರೆ, ಇಸ್ರಯೇಲಿನ ದೇವರಾಗಿರುವ ಯೆಹೋವನು ಅ
ದರಿಂದ ಪ್ರವೇಶಿಸಿದ್ದಾನೆ; ಆದದರಿಂದ ಅದು ಮುಚ್ಚಲ್ಪಡ ಬೇಕು.
೩ ಅದು ಪ್ರಭುವಿನದೇ; ಪ್ರಭುವೇ ಅದರಲ್ಲಿ ಕೂತು ಕೊಂಡು ಯೆ
ಹೋವನ ಮುಂದೆ ರೊಟ್ಟಿ ಉಣ್ಣ ಬೇಕು; ಅವನು ಆ ಬಾಗಲಿ
ನ ಪಡಸಾಲೆಯ ಮಾರ್ಗವಾಗಿ ಪ್ರವೇಶಿಸಿ ಅದೇ ಮಾರ್ಗವಾಗಿ
ಹೊರಗೆ ಹೋಗ ಬೇಕು.

೪ ಆಗಲವನು ನನ್ನನ್ನು ಉತ್ತರ ಬಾಗಲಿನ ಮಾರ್ಗವಾಗಿ ಮ
ನೆಯ ಮುಂದೆ ಕರ ಕೊಂಡು ಹೋದನು; ನಾನು ನೋಡಲಾಗಿ
ಇಗೋ ಯೆಹೋವನ ಮಹಿಮೆ ಯೆಹೋವನ ಮನೆಯನ್ನು
೫ ತುಂಬಿಸಿತು; ಆಗ ನಾನು ಪೋಕೆ ಕೆಳಗಾಗಿ ಬಿದ್ದೆನು. ಆಗ ಯೆ
ಹೋವನು ನನಗೆ ಹೇಳಿದ್ದೇನಂದರೆ—ಮನುಷ್ಯನ ಮಗನೇ, ನಾ
ನು ಯೆಹೋವನ ಮನೆಯ ಎಲ್ಲಾ ನೇಮಗಳ ವಿಷಯವೂ, ಅದ
ರ ಎಲ್ಲಾ ನ್ಯಾಯಪ್ರಮಾಣಗಳ ವಿಷಯವೂ, ನಿನಗೆ ಹೇ
ಳುವದನ್ನೆಲ್ಲಾ ಮನಸ್ಸಿಟ್ಟು, ಕಣ್ಣುಗಳಿಂದ ನೋಡಿ, ಕಿವಿಗಳಿಂದ
ಕೇಳು; ಮತ್ತು ಮನೆಯ ಪ್ರವೇಶವನ್ನೂ ಪರಿಶುದ್ಧ ಸ್ಥಳದ
೬ ಎಲ್ಲಾ ಹೊರಹೋಣಗಳನ್ನೂ ಮನಸ್ಸಿಟ್ಟು ನೋಡು. ಇದಲ್ಲ
ದೆ ನೀನು ತಿರುಗಿ ಬೀಳುವವರಿಗೆ, ಇಸ್ರಯೇಲನ ಮನೆಯವರಿಗೆ,
ಹೇಳ ತಕ್ಕದ್ದೇನಂದರೆ—ಕರ್ತನಾದ ಯೆಹೋವನು ಹೀಗೆ ಹೇಳು
ತ್ತಾನೆ—ಇಸ್ರಯೇಲನ ಮನೆಯವರೇ, ನಿಮ್ಮ ಎಲ್ಲಾ ಅಸಹ್ಯಗಳು
೭ ನಿಮಗೆ ಸಾಕಾಗಿರಲಿ. ಯಾವಪಂದರೆ, ನೀವು ನನ್ನ ಕೊಟ್ಟಿಯ
ನ್ನೂ ಕೊಬ್ಬನ್ನೂ ರಕ್ತವನ್ನೂ ಅರ್ಪಿಸುವಾಗ, ನಿಮ್ಮ ಎಲ್ಲಾ ಅ
ಸಹ್ಯಗಳಿಗೋಸ್ಕರ ನನ್ನ ಬಡಂಬಡಿಕೆಯನ್ನು ವಿಾರುವಂಥ,
ಹೃದಯದಲ್ಲಿಯೂ ಮಾಂಸದಲ್ಲಿಯೂ ಪರಿಛೇದನೆಯಿಲ್ಲದಂಥ,
ಅನ್ಯರ ಮಕ್ಕಳನ್ನು ನನ್ನ ಪರಿಶುದ್ಧ ಸ್ಥಳದಲ್ಲಿ ಇರ ತಂದು ನನ್ನ
೮ ಮನೆಯನ್ನು ಅಪವಿತ್ರ ಮಾಡಿದ್ದೀರಲ್ಲ? ಮತ್ತು ನೀವು ನನ್ನ ಪರಿ
ಶುದ್ಧವಾದವುಗಳ ಕಾಯಿದೆಯನ್ನು ಕಾಯದೆ, ನನ್ನ ಕಾಯಿದೆ
ಕಾಯುವವರನ್ನು ನಿಮಗಾಗಿ ನನ್ನ ಪರಿಶುದ್ಧ ಸ್ಥಳದಲ್ಲಿ ಇರಿಸಿ
ದ್ದೀರಿ.

೯ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ಇಸ್ರಯೇ
ಲನ ಮಕ್ಕಳಲ್ಲಿರುವ ಅನ್ಯರೊಳಗೆ, ಹೃದಯದಲ್ಲಿಯೂ ಮಾಂ
ಸದಲ್ಲಿಯೂ ಪರಿಛೇದನೆಯಿಲ್ಲದ ಯಾವ ಅನ್ಯನ ಮಗನಾಗಲಿ ನ
೧೦ ನ್ನ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸ ಬಾರದು. ಮತ್ತು ಇಸ್ರಯೇಲರು
ನನ್ನನ್ನು ಬಿಟ್ಟು ಹೋಗಿ, ನನ್ನನ್ನು ಬಿಟ್ಟು ತಮ್ಮ ವಿಗ್ರಹಗಳನ್ನು
ಹಿಂಬಾಲಿಸಿದ ವೇಳೆಯಲ್ಲಿ, ನನಗೆ ದೂರ ಹೋದ ಲೇವಿಯರು,
೧೧ ಇವರು ಸಹ ತಮ್ಮ ಅಕ್ರಮವನ್ನು ಹೊರುವರು. ಆದರೂ ಅವ
ರು ನನ್ನ ಪರಿಶುದ್ಧ ಸ್ಥಳದಲ್ಲಿ ಸೇವಿಸುವವರಾಗಿರುವರು; ಮನೆ
ಬಾಗಲುಗಳ ವಿಚಾರವನ್ನು ಹೊಂದಿ ಮನೆಗೆ ಸೇವೆ ಮಾಡುವರು;
ಅವರು ಜನರಿಗೋಸ್ಕರ ಹೋಮವನ್ನೂ ಬಲಿಯನ್ನೂ ಕೊಂ
ದು, ಅವರಿಗೆ ಸೇವೆ ಮಾಡುವ ಹಾಗೆ ಅವರ ಮುಂದೆ ನಿಲ್ಲುವರು.
೧೨ ಅವರು ಅವರ ವಿಗ್ರಹಗಳ ಮುಂದೆ ಅವರಿಗೆ ಸೇವೆ ಮಾಡಿದದ
ರಿಂದಲೂ, ಇಸ್ರಯೇಲನ ಮನೆಯವರಿಗೆ ಅಕ್ರಮದ ಆಟಂಕವಾಗಿ
ದ್ದದರಿಂದಲೂ, ಇದು ಕಾರಣ ನಾನು ನನ್ನ ಕೈಯನ್ನು ಅವರಿಗೆ
ವಿರೋಧವಾಗಿ ಚಾಚಿದ್ದೇನೆ, ಅವರು ತಮ್ಮ ಅಕ್ರಮವನ್ನು ಹೊ
೧೩ ರುವರೆಂದು ಕರ್ತನಾದ ಯೆಹೋವ ಅನ್ನುತ್ತಾನೆ. ಮತ್ತು ಅವ
ರು ನನಗೆ ಯಾಜಕ ಕೆಲಸ ನಡಿಸುವದಕ್ಕೆ ನನ್ನನ್ನು ಸಮೀಪಿ
ಸದೆ, ಅತಿ ಪರಿಶುದ್ಧ ಸ್ಥಳದಲ್ಲಿ ನನ್ನ ಪರಿಶುದ್ಧವಾದವುಗಳಲ್ಲಿ ಒಂ
ದನ್ನಾದರೂ ಸಮೀಪಿಸದೆ, ತಮ್ಮ ನಾಚಿಕೆಯನ್ನೂ ತಾವು
೧೪ ಮಾಡಿದ ಅಸಹ್ಯಗಳನ್ನೂ ಹೊರುವರು. ಆದರೆ ನಾನು ಅವರ
ನ್ನು ಮನೆಯ ಎಲ್ಲಾ ಸೇವೆಗೋಸ್ಕರವೂ ಅದರಲ್ಲಿ ಮಾಡ ತಕ್ಕ
ಎಲ್ಲಾದಕ್ಕೋಸ್ಕರವೂ ಮನೆಯ ಕಾಯಿದೆ ಕಾಯುವವರಾಗ
ಮಾಡುವೆನು.

೧೫ ಆದರೆ ಇಸ್ರಯೇಲನ ಮಕ್ಕಳು ನನ್ನನ್ನು ಬಿಟ್ಟು ಹೋದಾ
ಗ, ನನ್ನ ಪರಿಶುದ್ಧ ಸ್ಥಳದ ಕಾಯಿದೆಯನ್ನು ಕಾದ ಚಾದೋಕ
ನ ಮಕ್ಕಳಾಗಿರುವ ಲೇವಿಯರಾದ ಯಾಜಕರೂ ಇವರು ನನಗೆ
ಸೇವೆ ಮಾಡುವ ಹಾಗೆ ನನ್ನ ಸಮೀಪಕ್ಕೆ ಬಂದು, ನನ್ನ ಮುಂ
ದೆ ನಿಂತು ನನಗೆ ಕೊಬ್ಬನ್ನೂ ರಕ್ತವನ್ನೂ ಅರ್ಪಿಸುವರೆಂದು
೧೬ ಕರ್ತನಾದ ಯೆಹೋವ ಅನ್ನುತ್ತಾನೆ. ಇವರು ನನ್ನ ಪರಿಶುದ್ಧ
ಸ್ಥಳದಲ್ಲಿ ಸೇರುವರು; ಇವರು ನನಗೆ ಸೇವೆ ಮಾಡುವದಕ್ಕೆ ನನ್ನ
೧೭ ಮೇಜಿನ ಬಳಿಗೆ ಸಮೀಪಿಸಿ, ನನ್ನ ಕಾಯಿದೆಯನ್ನು ಕಾಯುವರು.
ಮತ್ತು ಆಗ ತಕ್ಕದ್ದೇನಂದರೆ, ಅವರು ಬಳಿಗಿನ ಅಂಗಳದ ಬಾಗ
ಲುಗಳಲ್ಲಿ ಪ್ರವೇಶಿಸುವಾಗ ನಾರಿನ ವಸ್ತ್ರಗಳನ್ನು ಹಾಕಿ ಕೊಳ್ಳ
ಬೇಕು; ಅವರು ಬಳಿಗಿನ ಅಂಗಳದ ಬಾಗಲುಗಳಲ್ಲಿಯೂ ಒಳ
ಕಡೆಯಲ್ಲಿಯೂ, ಸೇವಿಸುವಾಗ ಉಣ್ಣೆ ಅವರ ಮೇಲೆ ಬರ ಬಾ
೧೮ ರದು. ಅವರ ತಲೆಗಳ ಮೇಲೆ ನಾರಿನ ರುಮಾಲೆಗಳೂ, ಅವರ
ಸೊಂಟಗಳ ಮೇಲೆ ನಾರಿನ ಇಜಾರುಗಳೂ ಇರ ಬೇಕು; ಅವರು
೧೯ ಬೆವರು ಹುಟ್ಟಿಸುವಂಥಾದ್ದನ್ನು ಕಟ್ಟಿಕೊಳ್ಳ ಬಾರದು. ಇದಲ್ಲ
ದೆ ಅವರು ಹೊರಗಿನ ಅಂಗಳಕ್ಕೆ, ಹೌದು, ಹೊರಗಿನ ಅಂಗಳ
ಕ್ಕೆ, ಜನರ ಬಳಿಗೆ, ಹೊರಗೆ ಹೋಗುವಾಗ, ತಾವು ಸೇವೆ ಮಾ
ಡಿದ ಅವರ ವಸ್ತ್ರಗಳನ್ನು ತೆಗೆದು, ಪರಿಶುದ್ಧ ಕೊಠಡಿಗಳಲ್ಲಿ ಇ
ಟ್ಟು, ಬೇರೆ ವಸ್ತ್ರಗಳನ್ನು ಹಾಕಿ ಕೊಳ್ಳ ಬೇಕು; ಅವರು ತ
೨೦ ಮ್ಮ ವಸ್ತ್ರಗಳಿಂದ ಜನರನ್ನು ಪರಿಶುದ್ಧ ಮಾಡ ಬಾರದು. ಇದಲ್ಲ
ದೆ ಅವರು ತಮ್ಮ ತಲೆಗಳನ್ನು ಬೋಳಿಸಿಕೊಳ್ಳದೆ, ಉದ್ದ ಕೂ
ದಲುಗಳನ್ನು ಬೆಳೆಸದೆ, ತಮ್ಮ ತಲೆ ಕೂದಲನ್ನು ಕತ್ತರಿಸ ಬೇ
೨೧ ಕಷ್ಟೇ. ಇದಲ್ಲದೆ ಯಾವ ಯಾಜಕನಾದರು ಒಳಗಿನ ಅಂಗಳದ
೨೨ ಲ್ಲಿ ಪ್ರವೇಶಿಸುವಾಗ, ದ್ರಾಕ್ಷಿ ರಸವನ್ನು ಕುಡಿಯ ಬಾರದು. ಇ
ದಲ್ಲದೆ ಅವರು ತಮಗೆ ಹೆಂಡರಿಗಾಗಿ ವೇಧವೆಯನ್ನೂ ತಳ್ಳಿ ಬಿ
ಡಲ್ಪಟ್ಟವಳನ್ನೂ ತಕ್ಕೊಳ್ಳ ಬಾರದು, ಇಸ್ರಯೇಲನ ಮನೆಯವ
ರ ಸಂತಾನದವರಾದ ಕನ್ಯಾ ಸ್ತ್ರೀಯರನ್ನು ತಕ್ಕೊಳ್ಳ ಬೇಕು;



ಇಲ್ಲವೇ ಯಾಜಕನ ವೆಧವೆಯಾದ ವೆಧವೆಯನ್ನು ತಕ್ಕೊಳ್ಳ
೨೩ ಬಹುದು. ಅವರು ನನ್ನ ಜನರಿಗೆ ಪರಿಶುದ್ಧವಾದದ್ದಕ್ಕೂ ಅಪವಿ
ತ್ರವಾದದ್ದಕ್ಕೂ ಹೆಚ್ಚು ಕಡಿಮೆಯನ್ನು ಬೋಧಿಸಿ, ಅವರಿಗೆ
೨೪ ಹೊಲೆಯಾದದ್ದನ್ನೂ ಶುದ್ಧವಾದದ್ದನ್ನೂ ತಿಳಿಸ ಬೇಕು. ಇದಲ್ಲ
ದೆ ವ್ಯಾಜ್ಯವಾಗಲಾಗಿ ಅವರು ನ್ಯಾಯಕ್ಕೆ ನಿಂತು, ನನ್ನ ನ್ಯಾ
ಯಗಳ ಪ್ರಕಾರ ಅದನ್ನು ತೀರಿಸ ಬೇಕು; ಮತ್ತು ಅವರು ನನ್ನ
ನ್ಯಾಯಪ್ರಮಾಣಗಳನ್ನೂ ನನ್ನ ನೇಮಗಳನ್ನೂ ನನ್ನ ಸಭೆ
ಗಳಲ್ಲೆಲ್ಲಾ ಕೈ ಕೊಳ್ಳ ಬೇಕು; ಮತ್ತು ನನ್ನ ಸಬ್ಬತುಗಳನ್ನು
೨೫ ಪರಿಶುದ್ಧ ಮಾಡ ಬೇಕು. ಇದಲ್ಲದೆ ಅವರು ಸತ್ತ ಮನುಷ್ಯನ
ಬಳಿಗೆ ಬಂದು ಅಶುದ್ಧರಾಗ ಬಾರದು; ಆದರೆ ತಂದೆಯೂ ತಾ
ಯಿಯೂ ಮಗನೂ ಮಗಳೂ ಸಹೋದರನೂ ಗಂಡನಿಲ್ಲದ ಸ
೨೬ ಹೋದರಿಯೂ ಇವರಿಗೋಸ್ಕರ ಅವರು ಅಶುದ್ಧರಾಗ ಬಹುದು.
ಬಳ್ಳನು ಶುದ್ಧ ಮಾಡಲ್ಪಟ್ಟ ಮೇಲೆ ಅವನಿಗೆ ಏಳು ದಿವಸಗಳ
ನ್ನು ಎಣಿಸ ಬೇಕು.

೨೭ ಅವನು ಪರಿಶುದ್ಧ ಸ್ಥಳದಲ್ಲಿ ಸೇವೆ ಮಾಡುವದಕ್ಕೋಸ್ಕರ, ಪ
ರಿಶುದ್ಧ ಸ್ಥಳಕ್ಕೆ, ಬಳಿಗಿನ ಅಂಗಳಕ್ಕೆ, ಬರುವ ದಿವಸದಲ್ಲಿ, ತನ್ನ
ಪಾಪ ಬಲಿಯನ್ನು ಅರ್ಪಿಸ ಬೇಕೆಂದು ಕರ್ತನಾದ ಯೆಹೋವ
೨೮ ಅನ್ನುತ್ತಾನೆ. ಅದು ಅವರಿಗೆ ಬಾಧ್ಯತೆಯಾಗಿರುವದು, ನಾನೇ
ಅವರ ಬಾಧ್ಯತೆ, ನೀವು ಇಸ್ರಯೇಲಿನಲ್ಲಿ ಅವರಿಗೆ ಸ್ವಸ್ಥ್ಯವನ್ನು
೨೯ ಕೊಡ ಬಾರದು; ನಾನೇ ಅವರ ಸ್ವಾಸ್ಥ್ಯವು. ಅರ್ಪಣೆಯನ್ನೂ
ಪಾಪ ಬಲಿಯನ್ನೂ ಅಪರಾಧ ಬಲಿಯನ್ನೂ ಅವರು ತಿನ್ನ ಬೇ
ಕು; ಮತ್ತು ಇಸ್ರಯೇಲಿನಲ್ಲಿ ಆಣೆಯಿಂದ ಬಪ್ಪಿಸಿದ್ದೆಲ್ಲಾ ಅವರಿ
೩೦ ಗೆ ಆಗ ಬೇಕು. ಇದಲ್ಲದೆ ಎಲ್ಲಾದರಲ್ಲಿ ಆಗುವಂಥ ಎಲ್ಲಾ ಪ್ರಥ
ಮ ಫಲಗಳ ಮೊದಲನೇದೂ ನಿಮ್ಮ ಎಲ್ಲಾ ಕಾಣಿಕೆಗಳಲ್ಲಿ ಕಾಣಿ
ಕೆಯಾಗಿರುವಂಥಾದ್ದೆಲ್ಲಾ ಯಾಜಕನದಾಗ ಬೇಕು; ಮತ್ತು, ಅ
ವನು ನಿನ್ನ ಮನೆಯ ಮೇಲೆ ಆಶೀರ್ವಾದವನ್ನು ಇಡುವ ಹಾಗೆ
೩೧ ಯಾಜಕನಿಗೆ ನಿಮ್ಮ ಹಿಟ್ಟಿನ ಮೊದಲನ್ನು ಕೊಡ ಬೇಕು. ತ
ನ್ನಷ್ಟಕ್ಕೆ ತಾನೇ ಸತ್ತದ್ದರಲ್ಲಿಯೂ ಶೀಳಲ್ಪಟ್ಟದ್ದರಲ್ಲಿಯೂ
ಯಾವದನ್ನಾದರೂ ಅದು ಪಕ್ಷಿಯಾಗಲಿ ಮೃಗವಾಗಲಿ ಯಾ
ಜಕರು ತಿನ್ನ ಬಾರದು.

## ೪೫. ಸಂಧಿ.

೧ ಇದಲ್ಲದೆ ನೀವು ದೇಶವನ್ನು ಚೀಟು ಹಾಕಿ, ಸ್ವಾಸ್ಥ್ಯಕ್ಕಾಗಿ
ವಿಭಾಗಿಸುವಾಗ ದೇಶದ ಒಂದು ಪರಿಶುದ್ಧ ಭಾಗವನ್ನು ಯೆಹೋ
ವನಿಗೆ ಕಾಣಿಕೆಯಾಗಿ ಕೊಡ ಬೇಕು; ಅದು ಇಪ್ಪತ್ತೈದು ಸಾವಿ
ರ ಮೊಳ ಉದ್ದವಾಗಿಯೂ ಹತ್ತು ಸಾವಿರ ಅಗಲವಾಗಿಯೂ ಇ
೨ ರಲಿ; ಇದು ಅದರ ಎಲ್ಲಾ ಮೇರೆಗಳಲ್ಲಿ ಸುತ್ತಲಾಗಿ ಪರಿಶುದ್ಧವೇ.
ಇದರಲ್ಲಿ ಸುತ್ತಲಾಗಿ ಚಚ್ಚೌಕವಾಗಿ ಐನೂರೈನೂರು ಪರಿಶುದ್ಧ
ಸ್ಥಳಕ್ಕೂ, ಸುತ್ತಲಾಗಿ ಐವತ್ತು ಮೊಳ ಅದರ ಪ್ರಾಂತಪುರಗಳಿ
೩ ಗೂ ಆಗ ಬೇಕು. ಮತ್ತು ಈ ಅಳತೆಯಲ್ಲಿ ನೀನು ಉದ್ದಕ್ಕೆ
ಇಪ್ಪತ್ತೈದು ಸಾವಿರ, ಅಗಲಕ್ಕೆ ಹತ್ತು ಸಾವಿರ, ಅಳೆಯ ಬೇ
೪ ಕು; ಇದರಲ್ಲಿ ಪರಿಶುದ್ಧ ಸ್ಥಳವೂ ಅತಿ ಪರಿಶುದ್ಧವಾದದ್ದೂ ಇರ
ಬೇಕು. ದೇಶದ ಪರಿಶುದ್ಧ ಭಾಗವು ಯೆಹೋವನಿಗೆ ಸೇವೆ ಮಾ
ಡ ಸಮೀಪಿಸುವಂಥ, ಪರಿಶುದ್ಧ ಸ್ಥಳದ ಸೇವಕರಾದಂಥ, ಯಾಜ
ಕರದಾಗಿರ ಬೇಕು; ಅದು ಅವರ ಮನೆಗಳಿಗೆ ಸ್ಥಳವಾಗಿಯೂ,
೫ ಪರಿಶುದ್ಧ ಸ್ಥಳಕ್ಕೆ ಪರಿಶುದ್ಧ ಸ್ಥಳವಾಗಿಯೂ, ಇರುವದು. ಮತ್ತು
ಇಪ್ಪತ್ತೈದು ಸಾವಿರ ಉದ್ದವೂ, ಹತ್ತು ಸಾವಿರ ಅಗಲವೂ, ಮನೆ
ಯಲ್ಲಿ ಸೇವೆ ಮಾಡುವ ಲೇವಿಯರಿಗೆ, ತಮಗೆ ಸ್ವಾಸ್ಥ್ಯವಾಗಿ ಇ
೬ ಪ್ಪತ್ತು ಕೊಠಡಿಗಳಿಗಾಗಿ, ಇರ ಬೇಕು. ಇದಲ್ಲದೆ ನೀವು ಪಟ್ಟಣದ
ಸ್ವಾಸ್ಥ್ಯವನ್ನು, ಕಾಣಿಕೆಯಾದ ಪರಿಶುದ್ಧ ಭಾಗಕ್ಕೆ ಎದುರಾಗಿ
ಐದು ಸಾವಿರ ಅಗಲವಾಗಿಯೂ, ಇಪ್ಪತ್ತೈದು ಸಾವಿರ ಉದ್ದವಾ
ಗಿಯೂ, ನೇಮಿಸ ಬೇಕು; ಇದು ಸಮಸ್ತ ಇಸ್ರಯೇಲನ ಮನೆಯ
೭ ವರಿಗೋಸ್ಕರ ಇರುವದು. ಮತ್ತು ಕಾಣಿಕೆಯಾದ ಪರಿಶುದ್ಧ
ಭಾಗಕ್ಕೂ ಪಟ್ಟಣದ ಸ್ವಾಸ್ಥ್ಯಕ್ಕೂ, ಇತ್ತಕಡೆಯಲ್ಲಿಯೂ ಅತ್ತ
ಕಡೆಯಲ್ಲಿಯೂ, ಕಾಣಿಕೆಯಾದ ಪರಿಶುದ್ಧ ಭಾಗದ ಮುಂದಾಗಿ
ಯೂ, ಪಟ್ಟಣದ ಸ್ವಾಸ್ಥ್ಯದ ಮುಂದಾಗಿಯೂ, ಅದರ ಪಶ್ಚಿಮಕ
ಡೆಯಲ್ಲಿ ಪಶ್ಚಿಮಕ್ಕೂ, ಅದರ ಪೂರ್ವ ಕಡೆಯಲ್ಲಿ ಪೂರ್ವಕ್ಕೂ,
ಪ್ರಭುವಿಗೆ ಪಾಲು ಇರ ಬೇಕು; ಅದರ ಉದ್ದವು ಭಾಗಗಳಲ್ಲಿ ಒಂ
ದಕ್ಕೆ ಎದುರಾಗಿ ಪಶ್ಚಿಮ ಮೇರೆ ಮೊದಲೊಂಗು ಪೂರ್ವ ಮೇ
೮ ರೆಯ ತನಕ ಇರ ಬೇಕು. ಆ ಭೂಮಿಯ ವಿಷಯ, ಅದು ಅ
ವನಿಗೆ ಇಸ್ರಯೇಲಿನಲ್ಲಿ ಸ್ವಾಸ್ಥ್ಯವಾಗಿರುವದು; ಆಗ ನನ್ನ ಪ್ರಭು
ಗಳು ನನ್ನ ಜನರನ್ನು ಇನ್ನು ಉಪದ್ರ ಪಡಿಸುವದಿಲ್ಲ; ಮಿಕ್ಕಾದ
ಭೂಮಿಯನ್ನು ಕುಲಗಳ ಅನುಸಾರವಾಗಿ ಇಸ್ರಯೇಲನ ಮನೆ
ಯವರಿಗೆ ಕೊಡುವರು.

೯ ಕರ್ತನಾದ ಯೆಹೋವನು ಹೇಳುವದೇನಂದರೆ—ಇಸ್ರಯೇ
ಲನ ಪ್ರಭುಗಳೇ, ನಿಮಗೆ ಸಾಕಾಗಿರಲಿ; ಬಲಾತ್ಕಾರವನ್ನೂ ತಿಪ್ಪ
ಲನ್ನೂ ತೊಲಗಿಸಿರಿ; ನ್ಯಾಯವನ್ನೂ ನೀತಿಯನ್ನೂ ಮಾಡಿರಿ;
ನನ್ನ ಜನರನ್ನು ಹೊರಡಿಸದೆ ಬಿಡಿರಿ, ಎಂದು ಕರ್ತನಾದ ಯೆ
೧೦ ಹೋವ ಅನ್ನುತ್ತಾನೆ. ನ್ಯಾಯವಾದ ತ್ರಾಸೂ ನ್ಯಾಯವಾದ ಎ
೧೧ ಫವೂ ನ್ಯಾಯವಾದ ಬಾಥೂ ನಿಮಗಿರ ಬೇಕು. ಬಾಥು ಹೋ
ಮೆರಿನ ಹತ್ತನೇ ಪಾಲನ್ನೂ, ಎಫವೂ ಹೋಮೆರಿನ ಹತ್ತನೇ ಪಾ
ಲನ್ನೂ, ಹಿಡಿಯುವ ಹಾಗೆ ಎಫಕ್ಕೂ ಬಾಥಿಗೂ ಒಂದೇ ಅಳತೆ
ಇರ ಬೇಕು; ಅವುಗಳ ಅಳತೆ ಹೋಮೆರಿನ ಪ್ರಕಾರ ಇರ ಬೇ
೧೨ ಕು. ಮತ್ತು ಶೆಕೇಲು ಇಪ್ಪತ್ತು ಗೇರಗಳಾಗಿರ ಬೇಕು; ನಿಮ್ಮ
ಮಣವು ಇಪ್ಪತ್ತು ಶೆಕೇಲು, ಇಪ್ಪತ್ತೈದು ಶೆಕೇಲೂ, ಹದಿನೈದು
೧೩ ಶೆಕೇಲೂ, ಆಗಿರ ಬೇಕು. ನೀವು ಅರ್ಪಿಸ ತಕ್ಕ ಕಾಣಿಕೆ ಏನಂ
ದರೆ—ಗೋಧಿಯ ಹೋಮೆರಿನಲ್ಲಿ ಎಫದ ಆರನೇ ಪಾಲು; ಮ
ತ್ತು ಜವೆ ಗೋಧಿಯ ಹೋಮೆರಿನಲ್ಲಿ ಎಫದ ಆರನೇ ಪಾಲು
೧೪ ಕೊಡ ಬೇಕು. ಎಣ್ಣೆ, ಅಂದರೆ, ಎಣ್ಣೆಯ ಬಾಥಿನ ನೇಮವೇ
ನಂದರೆ—ಹತ್ತು ಬಾಥುಗಳಲ್ಲಿ ಹೋಮೆರಾಗಿರುವ ಕೋರಿ
ನೊಳಗಿಂದ ನೀವು ಬಾಥಿನ ಹತ್ತನೇ ಪಾಲನ್ನು ಅರ್ಪಿಸ ಬೇಕು;
೧೫ ಯಾಕಂದರೆ ಹತ್ತು ಬಾಥುಗಳು ಒಂದೇ ಹೋಮೆರು. ಮತ್ತು
ಇಸ್ರಯೇಲಿನ ನೀರುಳ್ಳ ಮೇವುಗಳಿಂದ ಇನ್ನೂರರಕೊಳಗೆ ಒಂ
ದು ಕುರಿಮರಿಯು ಮಂದೆಯೊಳಗಿಂದ ಅರ್ಪಣೆಗಾಗಿಯೂ ಹೋ
ಮಕ್ಕಾಗಿಯೂ ಸಮಾಧಾನ ಬಲಿಗಳಿಗಾಗಿಯೂ, ಅವರಿಗೋಸ್ಕ
ರ ಪಾಪ ಮುಚ್ಚುವದಕ್ಕೆ ಕೊಡ ಬೇಕೆಂದು, ಕರ್ತನಾದ ಯೆ
೧೬ ಹೋವ ಅನ್ನುತ್ತಾನೆ. ದೇಶದ ಜನರೆಲ್ಲರು ಈ ಕಾಣಿಕೆಯನ್ನು
ಇಸ್ರಯೇಲಿನ ಪ್ರಭುವಿಗೋಸ್ಕರ ಕೊಡ ಬೇಕು.

೧೭ ಮತ್ತು ಹಬ್ಬಗಳಲ್ಲಿಯೂ, ಅಮಾವಾಸೆಗಳಲ್ಲಿಯೂ ಸಬ್ಬತು
ಗಳಲ್ಲಿಯೂ ಇಸ್ರಯೇಲನ ಮನೆಯವರ ಎಲ್ಲಾ ಸಭೆಗಳಲ್ಲಿಯೂ,

ಹೋಮಗಳನ್ನೂ ಅರ್ಪಣೆಗಳನ್ನೂ ಹೊಯಿಕೆಗಳನ್ನೂ ಕೊ
ಡುವದು ಪ್ರಭುವಿನ ಕೆಲಸವಾಗಿರುವದು; ಅವನೇ ಇಸ್ರಯೇಲನ
ಮನೆಯವರಿಗೋಸ್ಕರ ಪಾಪ ಮುಚ್ಚುವದಕ್ಕೆ ಪಾಪ ಬಲಿಯ
ನ್ನೂ ಅರ್ಪಣೆಯನ್ನೂ ಹೋಮವನ್ನೂ ಸಮಾಧಾನ ಬಲಿಗಳ
೧೮ ನ್ನೂ ಸಿದ್ಧ ಮಾಡ ಬೇಕು. ಕರ್ತನಾದ ಯೆಹೋವನು ಹೀಗೆ
ಹೇಳುತ್ತಾನೆ—ಮೊದಲನೇ ತಿಂಗಳಿನ ಮೊದಲನೇ ದಿವಸದಲ್ಲಿ
ನೀನು ಪೂರ್ಣಾಂಗವಾದ ಒಂದು ಹೋರಿಯನ್ನೂ ತಕ್ಕೊಂ
೧೯ ಡು, ಪರಿಶುದ್ಧ ಸ್ಥಳವನ್ನು ಶುದ್ಧ ಮಾಡ ಬೇಕು. ಇದಲ್ಲದೆ
ಯಾಜಕನು ಪಾಪ ಬಲಿಯ ರಕ್ತವನ್ನು ತಕ್ಕೊಂಡು, ಮನೆಯ
ಸ್ತಂಭಗಳಿಗೂ ಬಲಿಪೀಠದ ಅಂಚಿನ ನಾಲ್ಕು ಮೂಲೆಗಳಿಗೂ ಬ
೨೦ ಳಿಗಿನ ಅಂಗಳದ ಬಾಗಲಿನ ಸ್ತಂಭಗಳಿಗೂ ಹಚ್ಚ ಬೇಕು. ಮತ್ತು
ಈ ಪ್ರಕಾರ ನೀನು ತಿಂಗಳಿನ ಏಳನೇ ದಿವಸದಲ್ಲಿ ತಪ್ಪಿ ಹೋಗುವ
ವಕೆಲ್ಲರಿಗೋಸ್ಕರವೂ, ಬುದ್ಧಿಹೀನನಿಗೋಸ್ಕರವೂ, ಮಾಡ
ಬೇಕು; ಹೀಗೆ ನೀವು ಮನೆಗೋಸ್ಕರ ಪಾಪ ಮುಚ್ಚ ಬೇಕು.

೨೧ ಮೊದಲನೇ ತಿಂಗಳಿನ ಹದಿನಾಲ್ಕನೇ ದಿವಸದಲ್ಲಿ ನಿಮಗೆ ಏ
ಳು ದಿವಸಗಳ ಹಬ್ಬವಾಗಿರುವ ಪಸ್ಕ ಹಬ್ಬ ಇರ ಬೇಕು; ಅದ
೨೨ ರಲ್ಲಿ ಹುಳಿ ಇಲ್ಲದ ರೊಟ್ಟಿಯನ್ನು ತಿನ್ನ ಬೇಕು. ಮತ್ತು ಆ ದಿ
ವಸದಲ್ಲಿ ಪ್ರಭುವು ತನಗೋಸ್ಕರವೂ ಎಲ್ಲಾ ದೇಶದ ಜನರಿಗೋ
ಸ್ಕರವೂ ಪಾಪ ಬಲಿಗಾಗಿ ಹೋರಿಯನ್ನು ಸಿದ್ಧ ಮಾಡ ಬೇ
೨೩ ಕು. ಹಬ್ಬದ ಏಳು ದಿವಸಗಳಲ್ಲಿ, ಆ ಏಳು ದಿವಸಗಳಲ್ಲಿ ಪ್ರತಿ
ದಿನವು, ಅವನು ಯೆಹೋವನಿಗೆ ಹೋಮಕ್ಕಾಗಿ ಪೂರ್ಣಾಂಗ
ವಾದ ಏಳು ಹೋರಿಗಳನ್ನೂ ಏಳು ಟಗರುಗಳನ್ನೂ, ಮತ್ತು ಪ್ರ
ತಿ ದಿನವು ಪಾಪ ಬಲಿಗಾಗಿ ಮೇಕೆಯ ಮರಿಯನ್ನೂ, ಸಿದ್ಧ ಮಾ
೨೪ ಡ ಬೇಕು. ಇದಲ್ಲದೆ ಅವನು ಹೋರಿಗೆ ಒಂದು ಎಫ, ಟಗರಿಗೆ
ಒಂದು ಎಫ, ಈ ಪ್ರಕಾರದ ಅರ್ಪಣೆಯನ್ನೂ, ಎಫಕ್ಕೆ ಒಂದು
೨೫ ಹಿನ್ನು ಎಣ್ಣೆಯನ್ನೂ, ಸಿದ್ಧ ಮಾಡ ಬೇಕು. ಏಳನೇ ತಿಂಗಳಿನ
ಹದಿನೈದನೇ ದಿವಸದಲ್ಲಿ, ಏಳು ದಿವಸಗಳ ಹಬ್ಬದಲ್ಲಿ, ಅವನು
ಪಾಪ ಬಲಿಯ ವಿಷಯವಾಗಿಯೂ, ಹೋಮದ ವಿಷಯವಾಗಿ
ಯೂ, ಅರ್ಪಣೆಯ ವಿಷಯವಾಗಿಯೂ, ಎಣ್ಣೆಯ ವಿಷಯವಾ
ಗಿಯೂ, ಹೀಗೆಯೇ ಮಾಡ ಬೇಕು.

## ೪೬. ಸಂಧಿ.

೧ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ಒಳಗಿನ
ಅಂಗಳದ ಪೂರ್ವದಿಕ್ಕಿಗೆ ಎದುರಾಗಿರುವ ಬಾಗಲು ಕೆಲಸ ಮಾ
ಡುವ ಆರು ದಿವಸಗಳಲ್ಲಿ ಮುಚ್ಚಲ್ಪಡ ಬೇಕು; ಆದರೆ ಸಬ್ಬತು
ದಿವಸದಲ್ಲಿ ಅದು ತೆರೆಯಲ್ಪಡ ಬೇಕು; ಅಮಾವಾಸೆಯ ದಿವಸ
೨ ದಲ್ಲಿಯೂ ಅದು ತೆರೆಯಲ್ಪಡ ಬೇಕು. ಮತ್ತು ಪ್ರಭುವು ಆ
ಬಾಗಲಿನ ಪಡಸಾಲೆಯ ಮಾರ್ಗವಾಗಿ ಹೊರಗಿಂದ ಪ್ರವೇಶಿಸಿ,
ಬಾಗಲಿನ ಕಂಭದ ಬಳಿಯಲ್ಲಿ ನಿಲ್ಲ ಬೇಕು; ಆಗ ಯಾಜಕರು
ಅವನ ಹೋಮವನ್ನೂ ಅವನ ಸಮಾಧಾನ ಬಲಿಗಳನ್ನೂ ಸಿದ್ಧ
ಮಾಡ ಬೇಕು; ಮತ್ತು ಅವನು ಬಾಗಲಿನ ಹೊಸ್ತಲಲ್ಲಿ ಆರಾಧಿಸಿ
ಹೊರಗೆ ಹೋಗ ಬೇಕು; ಆದರೆ ಬಾಗಲು ಸಾಯಂಕಾಲದ
3 ಪರ್ಯಂತರ ಮುಚ್ಚಲ್ಪಡ ಬಾರದು. ಇದಲ್ಲದೆ ದೇಶದ ಜನ
ರು, ಸಬ್ಬತುಗಳಲ್ಲಿಯೂ ಅಮಾವಾಸೆಗಳಲ್ಲಿಯೂ ಈ ಬಾಗಲಿ
ನ ಕದದ ಹತ್ತರ ಯೆಹೋವನ ಮುಂದೆ ಆರಾಧಿಸ ಬೇಕು.
೪ ಮತ್ತು ಪ್ರಭುವು ಯೆಹೋವನಿಗೆ ಸಬ್ಬತು ದಿವಸದಲ್ಲಿ ಅರ್ಪ
ಸುವ ಹೋಮವು ಹೀಗಿರ ಬೇಕು—ಪೂರ್ಣಾಂಗವಾದ ಆರು
ಕುರಿಮರಿಗಳೂ, ಪೂರ್ಣಾಂಗವಾದ ಒಂದು ಟಗರೂ, ಇವೇ.
೫ ಮತ್ತು ಅರ್ಪಣೆ ಹ್ಯಾಗಂದರೆ—ಟಗರಿಗೆ ಒಂದು ಎಫವು; ಕುರಿ
ಮರಿಗಳಿಗೆ ತಕ್ಕ ಅರ್ಪಣೆ ಅವನ ಕೈಲಾಗುವಂಥಾದ್ದೂ; ಎಫ
೬ ಒಂದಕ್ಕೆ ಎಣ್ಣೆಯ ಒಂದು ಹಿನ್ನೇ. ಮತ್ತು ಅಮಾವಾಸೆಯ ದಿ
ವಸದಲ್ಲಿ, ಪೂರ್ಣಾಂಗವಾದ ಒಂದು ಹೋರಿಯೂ ಆರು ಕುರಿ
೭ ಮರಿಗಳೂ ಒಂದು ಟಗರೂ, ಇವು ಪೂರ್ಣಾಂಗವಾಗಿರ ಬೇಕು.
ಇದಲ್ಲದೆ ಅವನು ಹೋರಿಗೆ ಒಂದು ಎಫವನ್ನೂ ಟಗರಿಗೆ ಒಂದು
ಎಫವನ್ನೂ, ಮತ್ತು ಕುರಿ ಮರಿಗಳಿಗೆ ಅವನ ಕೈಲಾಗುವಂಥಾದ್ದ
ನ್ನೂ, ಎಫ ಒಂದಕ್ಕೆ ಎಣ್ಣೆಯ ಒಂದು ಹಿನ್ನವನ್ನೂ, ಅರ್ಪಣೆ
ಯಾಗಿ ಸಿದ್ಧ ಮಾಡ ಬೇಕು. ಮತ್ತು ಪ್ರಭುವು ಪ್ರವೇಶಿಸುವಾಗ,
೮ ಅವನು ಬಾಗಲಿನ ಪಡಸಾಲೆಯ ಮಾರ್ಗವಾಗಿ ಪ್ರವೇಶಿಸಿ ಅದೇ
ಮಾರ್ಗವಾಗಿ ಹೊರಗೆ ಹೋಗ ಬೇಕು. ಆದರೆ ದೇಶದ ಜನ
ರು ಹಬ್ಬಗಳಲ್ಲಿ ಯೆಹೋವನ ಮುಂದೆ ಬರುವಾಗ, ಉತ್ತರ ಬಾ
ಗಲಿಂದ ಪ್ರವೇಶಿಸಿ ಆರಾಧಿಸಿದವನು ದಕ್ಷಿಣ ಬಾಗಲಿನ ಮಾರ್ಗ
ವಾಗಿ ಹೊರಗೆ ಹೋಗ ಬೇಕು; ಮತ್ತು ದಕ್ಷಿಣ ಬಾಗಲಿನ ಮಾ
ರ್ಗವಾಗಿ ಪ್ರವೇಶಿಸಿದವನು ಉತ್ತರ ಬಾಗಲಿನ ಮಾರ್ಗವಾಗಿ
ಹೊರಗೆ ಹೋಗ ಬೇಕು; ಅವನು ಪ್ರವೇಶಿಸಿದ ಬಾಗಲಿನ ಮಾ
ರ್ಗವಾಗಿ ತಿರುಗಿ ಕೊಳ್ಳ ಬಾರದು; ಆದರೆ ಅದಕ್ಕೆ ಎದುರಾಗಿ
೧೦ ಹೊರಗೆ ಹೋಗ ಬೇಕು. ಮತ್ತು ಪ್ರಭುವು ಅವರ ಮಧ್ಯದಲ್ಲಿ
ಅವರು ಪ್ರವೇಶಿಸುವಾಗ ಪ್ರವೇಶಿಸ ಬೇಕು; ಅವರು ಹೊರಗೆ
ಹೋಗುವಾಗ ಹೊರಗೆ ಹೋಗ ಬೇಕು.

೧೧ ಮತ್ತು ಹಬ್ಬಗಳಲ್ಲಿಯೂ ಸಭೆಗಳಲ್ಲಿಯೂ ಅರ್ಪಣೆಯು,
ಹೋರಿಗೆ ಒಂದು ಎಫವೂ, ಟಗರಿಗೆ ಒಂದು ಎಫವೂ, ಕುರಿ ಮರಿ
ಗಳಿಗೆ ಅವನ ಕೈಲಾಗುವಂಥಾದ್ದೂ, ಎಫ ಒಂದಕ್ಕೆ ಎಣ್ಣೆಯ
೧೨ ಒಂದು ಹಿನ್ನೂ, ಹೀಗಿರ ಬೇಕು. ಇದಲ್ಲದೆ ಪ್ರಭುವು ಉಚಿತವಾ
ದ ಹೋಮವನ್ನಾಗಲಿ ಸಮಾಧಾನ ಬಲಿಯನ್ನಾಗಲಿ, ಉಚಿತ
ವಾಗಿ ಯೆಹೋವನಿಗೆ ಸಿದ್ಧ ಮಾಡುವಾಗ, ಅವರು ಪೂರ್ವ ದಿಕ್ಕಿ
ಗೆ ಎದುರಾಗಿರುವ ಬಾಗಲನ್ನು ಅವನಿಗೆ ತೆರೆಯ ಬೇಕು; ಆಗಲ
ವನು ತನ್ನ ಹೋಮವನ್ನೂ ತನ್ನ ಸಮಾಧಾನ ಬಲಿಗಳನ್ನೂ
ಸಬ್ಬತು ದಿವಸದಲ್ಲಿ ಮಾಡಿದ ಹಾಗೆ ಸಿದ್ಧ ಮಾಡಿ ಹೊರಗೆ
ಹೋಗ ಬೇಕು; ಅವನು ಹೊರಗೆ ಹೋದ ಮೇಲೆ ಬಾಗಲನ್ನು
೧೩ ಮುಚ್ಚ ಬೇಕು. ಇದಲ್ಲದೆ ನೀನು ದಿನ ದಿನಕ್ಕೆ ಯೆಹೋವನಿಗೆ
ಒಂದು ವರುಷದ ಪೂರ್ಣಾಂಗವಾದ ಕುರಿಮರಿಯ ಹೋಮವ
ನ್ನು ಸಿದ್ಧ ಮಾಡ ಬೇಕು; ಪ್ರತಿ ದಿನದ ಹೊತಾಕೆಯಲ್ಲಿ ಅದ
೧೪ ನ್ನು ಮಾಡ ಬೇಕು. ಮತ್ತು ಅದಕ್ಕೆ ಅರ್ಪಣೆಯಾಗಿ, ಪ್ರತಿ ದಿ
ನದ ಹೊತಾಕೆಯಲ್ಲಿ, ನೀನು ಎಫದ ಆರನೇ ಪಾಲನ್ನೂ ಗೋ
ಧಿ ಹಿಟ್ಟಿನಲ್ಲಿ ಕಲಿಸುವ ಹಾಗೆ ಎಣ್ಣೆಯ ಹಿನ್ನಿನಲ್ಲಿ ಮೂರನೇ
ಪಾಲನ್ನೂ ಸಿದ್ಧ ಮಾಡ ಬೇಕು; ಇದು ಯೆಹೋವನಿಗೆ ನಿತ್ಯ
೧೫ ನೇಮದ ಪ್ರಕಾರ ನಿರಂತರವಾದ ಅರ್ಪಣೆಯೇ. ಹೀಗೆ ಅವರು
ಕುರಿಮರಿಯನ್ನೂ ಅರ್ಪಣೆಯನ್ನೂ ಎಣ್ಣೆಯನ್ನೂ ಪ್ರತಿ ದಿ
ನದ ಹೊತಾಕೆಯಲ್ಲಿ ನಿರಂತರವಾದ ಹೋಮವಾಗಿ ಸಿದ್ಧ ಮಾ
ಡ ಬೇಕು.

೧೬ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ಪ್ರಭುವು



ತನ್ನ ಕುಮಾರರಲ್ಲಿ ಯಾವನಿಗಾದರೂ ದಾನವನ್ನು ಕೊಟ್ಟರೆ
ಅದರ ಸ್ವಾಸ್ಥ್ಯವು ಅವನ ಕುಮಾರರಿಗೆ ಆಗ ಬೇಕು; ಅದು ಜಾ
೧೭ ಗ್ಯವಾಗಿ ಅವರ ಸ್ವಾಸ್ಥ್ಯವೇ. ಆದರೆ ಅವನು ತನ್ನ ಸ್ವಾಸ್ಥ್ಯದೊ
ಳಗಿಂದ ಒಂದು ದಾನವನ್ನು ತನ್ನ ಸೇವಕರಲ್ಲಿ ಒಬ್ಬನಿಗೆ ಕೊಟ್ಟ
ರೆ, ಅದು ಬಿಡುಗಡೆಯ ವರುಷದ ಪರ್ಯಂತರ ಅವನದಾಗಿದ್ದು,
ಆ ಮೇಲೆ ತಿರಿಗಿ ಪ್ರಭುವಿಗೆ ತಿರುಗ ಬೇಕು; ಅವನ ಸ್ವಾಸ್ಥ್ಯವು
೧೮ ಅವನ ಕುಮಾರರಿಗೆ ತಮ್ಮಗಾಗಿ ಮಾತ್ರ ಆಗ ಬೇಕು. ಇದಲ್ಲ
ದೆ ಪ್ರಭುವು ಜನರ ಸ್ವಾಸ್ಥ್ಯದಲ್ಲಿ ಏನಾದರೂ ತೆಗೆದು, ಅವರ
ಬಾಧ್ಯತೆಯೊಳಗಿಂದ ಅವರನ್ನು ತಳ್ಳಬಾರದು; ನನ್ನ ಜನರು
ತಮ್ಮ ತಮ್ಮ ಬಾಧ್ಯತೆಯೊಳಗಿಂದ ಚದರಿಸಲ್ಪಡದ ಹಾಗೆ ಅವ
ನು ತನ್ನ ಸ್ವಂತ ಬಾಧ್ಯತೆಯಿಂದಲೇ ತನ್ನ ಕುಮಾರರಿಗೆ ಸ್ವಾ
ಸ್ಥ್ಯವನ್ನು ಕೊಡ ಬೇಕು.

೧೯ ಇದಲ್ಲದೆ ಅವನು ನನ್ನನ್ನು ಬಾಗಲಿನ ಪಕ್ಕದಲ್ಲಿದ್ದ ಪ್ರವೇಶದಿಂ
ದ ಉತ್ತರ ಕಡೆಗೆ ಅಭಿಮುಖವಾಗಿರುವಂಥ ಯಾಜಕರ ಪರಿಶು
ದ್ಧ ಕೊಠಡಿಗಳಿಗೆ ಕರೆ ಕೊಂಡು ಹೋದನು; ಅಲ್ಲಿ ಇಗೋ ಎ
೨೦ ರಡು ಕಡೆಗಳಲ್ಲಿ ಪಶ್ಚಿಮಕ್ಕೆ ಬಂದು ಸ್ಥಳವಿತ್ತು. ಆಗಲವನು ನ
ನಗೆ ಹೇಳಿದ್ದೇನಂದರೆ—ಯಾಜಕರು ಅಪರಾಧ ಬಲಿಯನ್ನು
ಪಾಪ ಬಲಿಯನ್ನು ಬೇಯಿಸಿ, ಅರ್ಪಣೆಯನ್ನು ಸುಡ ತಕ್ಕ
ಸ್ಥಳವು ಇದೇ; ಜನರನ್ನು ಪರಿಶುದ್ಧ ಮಾಡುವದಕ್ಕೆ ಅವರು
ಅವುಗಳನ್ನು ಹೊರಗಿನ ಅಂಗಳಕ್ಕೆ ತಕ್ಕೊಂಡು ಹೋಗದ ಹಾ
ಗೆಯೇ.

೨೧ ಆಗಲವನು ನನ್ನನ್ನು ಹೊರಗಿನ ಅಂಗಳಕ್ಕೆ ಕರೆ ಕೊಂಡು
ಹೋಗಿ, ಅಂಗಳದ ನಾಲ್ಕು ಮೂಲೆಗಳನ್ನು ಹಾದು ಹೋಗ
ಮಾಡಿದನು; ಮತ್ತು ಇಗೋ, ಅಂಗಳದ ಒಂದೊಂದು ಮೂಲೆ
೨೨ ಯಲ್ಲಿ ಒಂದೊಂದು ಅಂಗಳವಿತ್ತು. ಅಂಗಳದ ನಾಲ್ಕು ಮೂಲೆಗ
ಳಲ್ಲಿ ನಾಲ್ವತ್ತು ಮೊಳ ಉದ್ದವಾಗಿಯೂ ಮುವ್ವತ್ತು ಮೊಳ ಅಗ
ಲವಾಗಿಯೂ ಇರುವ ಚಿಕ್ಕ ಅಂಗಳಗಳಿದ್ದವು; ನಾಲ್ಕು ಮೂಲೆ
೨೩ ಗಳಿಗೆ ಒಂದೇ ಅಳತೆ. ಮತ್ತು ಅವುಗಳಲ್ಲಿ, ಅಂದರೆ, ಆ ನಾಲ್ಕು
ರಲ್ಲಿ, ಸುತ್ತಲು ಸಾಲು ಇತ್ತು; ಮತ್ತು ಆ ಸಾಲುಗಳ ಕೆಳಗೆ ಸು
೨೪ ತ್ತಲು ಬೇಯಿಸುವ ಸ್ಥಳಗಳು ಮಾಡಲ್ಪಟ್ಟಿದ್ದವು. ಆಗಲವನು ನ
ನಗೆ ಹೇಳಿದ್ದೇನಂದರೆ—ಮನೆಯ ಸೇವಕರು ಜನರ ಬಲಿಯನ್ನು
ಬೇಯಿಸ ತಕ್ಕಂಥ ಬೇಯಿಸುವ ಸ್ಥಳಗಳು ಇವೇ.

## ೪೭. ಸಂಧಿ.

೧ ತರುವಾಯ ಅವನು ನನ್ನನ್ನು ಮನೆಯ ಬಾಗಲಿಗೆ ಕರೆ ಕೊಂ
ಡು ಹೋದನು; ಆಗ ಇಗೋ ಮನೆಯ ಹೊಸ್ತಲಿನ ಕೆಳಗಿನಿಂದ
ಪೂರ್ವದ ಕಡೆಗೆ ನೀರುಗಳು ಹೊರಟವು; ಯಾಕಂದರೆ ಮನೆ
ಯ ಮುಂಭಾಗವು ಪೂರ್ವದ ಕಡೆಗಿತ್ತು; ಮತ್ತು ಆ ನೀರುಗಳು
ಮನೆಯ ಬಲಪಾರ್ಶ್ವದಿಂದ ಬಲಿಪೀಠದ ದಕ್ಷಿಣ ಕಡೆಯಿಂದ ಇಳಿ
೨ ದವು. ಆಗಲವನು ನನ್ನನ್ನು ಬಾಗಲಿನ ಮಾರ್ಗವಾಗಿ ಉತ್ತರ
ಕಡೆಗೆ ಹೊರಗೆ ಕರ ಕೊಂಡು ಹೋಗಿ, ನನ್ನನ್ನು ಹೊರಗಿನ
ಬಾಗಲಿನ ಪರ್ಯಂತರ ಹೊರಗಿನ ಮಾರ್ಗವನ್ನು, ಪೂರ್ವಕ್ಕೆ
ಅಭಿಮುಖವಾದ ಮಾರ್ಗವನ್ನು, ಸುತ್ತಿಕೊಳ್ಳ ಮಾಡಿದನು; ಅ
3 ಲ್ಲಿ ಇಗೋ ಬಲಕಡೆಯಿಂದ ನೀರುಗಳು ಹರಿಯುತ್ತಿದ್ದವು. ಕೈ
ಯಲ್ಲಿ ನೂಲು ಉಂಟಾದ ಆ ಮನುಷ್ಯನು ಪೂರ್ವಕಡೆಗೆ ಹೊರ
ಟು ಸಾವಿರ ಮೊಳ ಅಳೆದ ಮೇಲೆ ನನ್ನನ್ನು ನೀರುಗಳನ್ನು ದಾ
೪ ಟಿಸಿದನು; ಆಗ ನೀರುಗಳು ಗಿರಿಗೆಗಳ ತನಕ ಇದ್ದವು. ಇನ್ನು
ಸಾವಿರ ಅಳೆದ ಮೇಲೆ ನನ್ನನ್ನು ನೀರುಗಳನ್ನು ದಾಟಿಸಲಾಗಿ ನೀ
ರುಗಳು ಮೊಣಕಾಲಿನ ತನಕ ಇದ್ದವು; ಇನ್ನು ಸಾವಿರ ಅಳೆದು
ನನ್ನನ್ನು ದಾಟಿಸಲಾಗಿ ನೀರುಗಳು ಸೊಂಟಿನ ತನಕ ಇದ್ದವು.
೫ ಇನ್ನು ಸಾವಿರ ಅಳೆದ ಮೇಲೆ, ನಾನು ದಾಟ ಕೂಡದ ನದಿಯಾ
ದವು; ಯಾಕಂದರೆ ನೀರುಗಳು ಹೆಚ್ಚಿ, ಈಜ ತಕ್ಕದ್ದಾಗಿ, ದಾ
ಟ ಕೂಡದ ನದಿಯಾದವು.

೬ ಆಗಲವನು ನನಗೆ—ಮನುಷ್ಯನ ಮಗನೇ, ಕಂಡ್ಯಾ? ಎಂದು
ಹೇಳಿ, ನನ್ನನ್ನು ನಡಿಸಿ ನದಿಯ ತೀರಕ್ಕೆ ತಿರಿಗಿ ಬರ ಮಾಡಿದ
೭ ನು. ನಾನು ತಿರಿಗಿ ಬಂದಾಗ ಇಗೋ ನದಿಯ ತೀರದಲ್ಲಿ ಇತ್ತ ಕ
ಡೆಯೂ ಅತ್ತ ಕಡೆಯೂ ಬಹಳ ಬಹಳ ಮರಗಳಿದ್ದವು. ಆಗಲವನು
ನನಗೆ ಹೇಳಿದ್ದೇನಂದರೆ—ಈ ನೀರುಗಳು ಪೂರ್ವ ಶೀಮೆಗೆ ಹೊರ
ಟು ಜಿಣ ಭೂಮಿಗೆ ಇಳಿದು, ಸಮುದ್ರಕ್ಕೆ ಹೋಗುತ್ತವೆ; ಸಮುದ್ರ
೮ ಕ್ಕೆ ಹೋದ ಮೇಲೆ ಅದರ ನೀರುಗಳು ಸ್ವಸ್ಥವಾಗುವವು. ಇದಲ್ಲದೆ
ಆಗುವದೇನಂದರೆ—ಈ ದಿನ ಬರುವ ಎಲ್ಲಾ ಸ್ಥಳಗಳಲ್ಲಿ ಚರಿಸು
ವಂಥ ಸಮಸ್ತ ಜೀವಿಗಳು ಬದುಕುವವು. ಮತ್ತು ಬಹಳ ಬಹಳ
ಮೀನುಗಳಾಗುವವು; ಯಾಕಂದರೆ ಈ ನೀರುಗಳು ಅಲ್ಲಿಗೆ ಬರು
ವಾಗ ಅವು ಸ್ವಸ್ಥವಾಗುವವು; ಮತ್ತು ಈ ನದಿ ಎಲ್ಲಿಗೆ ಬರುತ್ತ
೯ ದೋ ಅಲ್ಲಿ ಎಲ್ಲಾ ಬದುಕುವದು. ಮತ್ತು ಆಗುವದೇನಂದರೆ—
ಎನ್ಗೇದಿ ಮೊದಲ್ಗೊಂಡು ಎನೆಗ್ಲಾಯಿಮಿನ ಪರ್ಯಂತರ ಮೀನು
ಗಾರರು ಅದರ ಬಳ್ಳಿಯಲ್ಲಿ ನಿಲ್ಲುವರು; ಅಲ್ಲಿ ಬಲೆ ಹಾಸುವ ಸ್ಥಳಗ
ಳಿರುವವು; ಅದರ ಮೀನುಗಳು ಮಹಾ ಸಮುದ್ರದ ಮೀನುಗಳ
೧೦ ಹಾಗೆ ಜಾತಿಯನುಸಾರವಾಗಿ ಬಹಳ ಬಹಳ ಇರುವವು. ಅದರೆ
ಅದರ ಕೆಸರಾದ ಸ್ಥಳಗಳೂ ಕೊಳೆಜೆಗಳೂ ಸ್ವಸ್ಥವಾಗುವದಿ
ಲ್ಲ, ಅವು ಉಪ್ಪಿಗೆ ಒಪ್ಪಿಸಲ್ಪಡುವವು. ಮತ್ತು ನದಿಯ ಬಳ್ಳಿಯ
ಲ್ಲಿ, ಅದರ ತೀರದಲ್ಲಿ, ಇತ್ತ ಕಡೆಯೂ ಅತ್ತ ಕಡೆಯೂ, ಆಹಾರ
ಕ್ಕಾಗುವ ಎಲ್ಲಾ ಮರಗಳು ಬೆಳೆಯುವವು; ಅವುಗಳ ಎಲೆಗಳು
ಬಾಡುವದಿಲ್ಲ; ಅವುಗಳ ಹಣ್ಣುಗಳು ಮುಗಿದು ಹೋಗುವದಿಲ್ಲ;
ಅವುಗಳ ತಿಂಗಳುಗಳ ಪ್ರಕಾರ ಹೊಸ ಹಣ್ಣುಗಳನ್ನು ಫಲಿಸುವ
ವು, ಯಾಕಂದರೆ ಅವುಗಳ ನೀರುಗಳು ಪರಿಶುದ್ಧ ಸ್ಥಳದಿಂದ
ಹೊರಟವು; ಮತ್ತು ಅವುಗಳ ಹಣ್ಣುಗಳು ಆಹಾರಕ್ಕೂ ಅವುಗ
ಳ ಎಲೆಗಳು ಔಷಧಕ್ಕೂ ಆಗುವವು.

೧೩ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—ನೀವು ಇ
ಸ್ರಯೇಲಿನ ಹನ್ನೆರಡು ಕುಲಗಳ ಪ್ರಕಾರ ದೇಶವನ್ನು ಬಾಧ್ಯ
ವಾಗಿ ಹೊಂದುವ ಬಗ್ಯೆ ಇದೇ ಮೇರೆಯು, ಹ್ಯಾಗಂದರೆ—ಯೋ
೧೪ ಸೆಫನಿಗೆ ಎರಡು ಪಾಲು. ನೀವು ಬಿಪ್ಪೊಬ್ಬರು ಸರಿಯಾಗಿ ಅ
ದನ್ನು ಬಾಧ್ಯವಾಗಿ ಹೊಂದ ಬೇಕು; ಯಾಕಂದರೆ ನಿಮ್ಮ ಪಿ
ತೃಗಳಿಗೆ ಅದನ್ನು ಕೊಡುವ ಹಾಗೆ ನನ್ನ ಕೈ ಎತ್ತಿದ್ದೇನೆ; ಆ
ದದರಿಂದ ಈ ದೇಶವು ನಿಮಗೆ ಬಾಧ್ಯವಾಗಿ ಬರುವದು. ಮತ್ತು
ಇದೇ ದೇಶದ ಮೇರೆಯು—ಉತ್ತರ ಕಡೆಗೆ ಮಹಾ ಸಮುದ್ರ ಮೊ
ದಲ್ಗೊಂಡು ಹೆತ್ಲೋನಿನ ಮಾರ್ಗವಾಗಿ, ಜೇದಾದಿಗೆ ಸೇರುವ ಪ
೧೬ ರ್ಯಂತರಕ್ಕೂ; ಹಾಮಾಥೂ, ಬೆರೋಥವೂ, ದಮಸ್ಕದ ಮೇ
ರೆಗೂ, ಹಾಮಾಥಿನ ಮೇರೆಗೂ, ಮಧ್ಯವಾಗಿರುವ ಸಿಬ್ರಾಯಿ
ಮೂ, ಹೌರಾನಿನ ಮೇರೆಯಲ್ಲಿರುವ ಹಚರಹತ್ತಿಕೋನೂ. ಮ

೧೭ ತ್ತು ಸಮುದ್ರದಿಂದಿರುವ ಮೇರೆ ಏನಂದರೆ—ಹಚಕೇನನೂ, ದ
ಮಸ್ಕದ ಮೇರೆಯೂ, ಉತ್ತರ ಕಡೆಗಿರುವ ಉತ್ತರವಾದದ್ದೂ,
೧೮ ಹಾಮಾಥಿನ ಮೇರೆಯೂ, ಇದೇ ಉತ್ತರ ಕಡೆ. ಮತ್ತು ಪೂ
ರ್ವ ಕಡೆ ಏನಂದರೆ—ಹೌರಾನಿನಿಂದಲೂ ದಮಸ್ಕದಿಂದಲೂ, ಗಿ
ಲ್ಯಾದಿನಿಂದಲೂ, ಯೊರ್ದನಿನ ಬಳಿಯಲ್ಲಿರುವ ಇಸ್ರಯೇಲ್ ದೇ
ಶದಿಂದಲೂ, ಮೇರೆಯಿಂದ ಪೂರ್ವದ ಸಮುದ್ರದ ಪರ್ಯಂತರ
೧೯ ನೀವು ಅಳೆಯ ಬೇಕು; ಇದೇ ಪೂರ್ವದ ಕಡೆ. ಮತ್ತು ದಕ್ಷಿ
ಣ ಕಡೆಗಿರುವ ದಕ್ಷಿಣ ಮೇರೆಯು, ತಾಮಾರು ಮೊದಲ್ಗೊಂಡು
ಕಾದೇಷಿನ ವಾಗ್ವಾದದ ನೀರುಗಳ ಪರ್ಯಂತರ, ನದಿ ಮೊ
ದಲು ಮಹಾ ಸಮುದ್ರದ ಪರ್ಯಂತರ, ಇರುವದು; ಇದೇ ದಕ್ಷಿಣ
೨೦ ವಾಗಿ ದಕ್ಷಿಣ ಕಡೆ. ಮತ್ತು ಪಶ್ಚಿಮ ಕಡೆಯು, ಮೇರೆ ಮೊದ
ಲ್ಗೊಂಡು ಹಮಾಥಿನ ಪ್ರವೇಶದ ವರಿಗೂ ಇರುವ ಮಹಾ ಸಮು
ದ್ರವು, ಇದೇ ಪಶ್ಚಿಮ ಕಡೆ.

೨೧ ಹೀಗೆ ನೀವು ಈ ದೇಶವನ್ನು ಇಸ್ರಯೇಲನ ಕುಲಗಳ ಪ್ರಕಾ
೨೨ ರ ಪಾಲು ಮಾಡಿ ಕೊಳ್ಳ ಬೇಕು. ಮತ್ತು ಆಗುವದೇನಂದರೆ—
ನೀವು ಅದನ್ನು ನಿಮಗೂ ನಿಮ್ಮ ಮಧ್ಯದಲ್ಲಿ ತಂಗುವಂಥ, ನಿಮ್ಮು
ಮಧ್ಯದಲ್ಲಿ ಮಕ್ಕಳನ್ನು ಪಡೆದಂಥ ಅನ್ಯರಿಗೂ ಚೀಟು ಹಾಕಿ,
ವಿಭಾಗಿಸ ಬೇಕು; ಇವರು ನಿಮಗೆ ಇಸ್ರಯೇಲನ ಮಕ್ಕಳೊಳಗೆ
ಹುಟ್ಟಿದವರ ಹಾಗೆ ಇರ ಬೇಕು; ಅವರಿಗೆ ಇಸ್ರಯೇಲನ ಕುಲಗ
೨೩ ಳೊಳಗೆ ನಿಮ್ಮ ಸಂಗಡ ಬಾಧ್ಯತೆಯೊಗ ಬೇಕು. ಮತ್ತು ಆಗು
ವದೇನಂದರೆ—ಅನ್ಯನು ಯಾವ ಕುಲದ ಸಂಗಡ ತಂಗುತ್ತಾನೋ
ಅದರಲ್ಲಿಯೇ ನೀವು ಅವನಿಗೆ ಬಾಧ್ಯತೆ ಕೊಡ ಬೇಕೆಂದು ಕರ್ತ
ನಾದ ಯೆಹೋವ ಅನ್ನುತ್ತಾನೆ.

## ೪೮. ಸಂಧಿ.

೧ ಈಗ ಇವು ಕುಲಗಳ ಹೆಸರುಗಳು. ಉತ್ತರ ಕೊನೆಯಿಂದ
ಹೆತ್ಲೋನಿನ ಮಾರ್ಗದ ಮೇರೆಗೂ, ಹಾಮಾಥಿಗೆ ಹೋಗುವ
ಮಾರ್ಗವಾಗಿ, ಹಚಕೇನನೂ, ಉತ್ತರ ಕಡೆಗಿರುವ ದಮಸ್ಕ
ದ ಮೇರೆಯೂ, ಹಾಮಾಥಿನ ಬಳಿಯಲ್ಲಿ ಇರುವಂಥಾದ್ದೂ, ಪೂ
೨ ರ್ವ ಪಶ್ಚಿಮ ಇದೇ ಅದರ ಕಡೆಗಳು. ದಾನನು ಒಂದು. ಮತ್ತು
ದಾನಿನ ಮೇರೆಯ ಬಳಿಯಲ್ಲಿ ಪೂರ್ವ ಕಡೆಯಿಂದ ಪಶ್ಚಿಮ ಕಡೆ
3 ಯ ಪರ್ಯಂತರ, ಅಶೇರನು ಒಂದು. ಮತ್ತು ಅಶೇರನ ಮೇರೆಯ
ಬಳಿಯಲ್ಲಿ ಪೂರ್ವ ಕಡೆಯಿಂದ ಪಶ್ಚಿಮ ಕಡೆಯ ಪರ್ಯಂತರ, ನೆ
೪ ಫ್ತಲಿ ಒಂದು. ಮತ್ತು ನೆಫ್ತಲಿಯ ಮೇರೆಯ ಬಳಿಯಲ್ಲಿ ಪೂರ್ವ
ಕಡೆಯಿಂದ ಪಶ್ಚಿಮ ಕಡೆಯ ಪರ್ಯಂತರ, ಮನಾಸ್ಸೆಯು ಒಂ
೫ ದು. ಮತ್ತು ಮನಾಸ್ಸೆಯ ಮೇರೆಯ ಬಳಿಯಲ್ಲಿ ಪೂರ್ವ ಕಡೆ
ಯಿಂದ ಪಶ್ಚಿಮ ಕಡೆಯ ಪರ್ಯಂತರ, ಎಫ್ರಾಯಿಮು ಒಂದು.
೬ ಮತ್ತು ಎಫ್ರಾಯಿಮಿನ ಮೇರೆಯ ಬಳಿಯಲ್ಲಿ ಪೂರ್ವದ ಕಡೆ
೭ ಯಿಂದ ಪಶ್ಚಿಮ ಕಡೆಯ ಪರ್ಯಂತರ, ರೂಬೆನನು ಒಂದು. ಮ
ತ್ತು ರೂಬೆನಿನ ಮೇರೆಯ ಬಳಿಯಲ್ಲಿ ಪೂರ್ವ ಕಡೆಯಿಂದ ಪಶ್ಚಿ
ಮ ಕಡೆಯ ಪರ್ಯಂತರ, ಯೆಹೂದನು ಒಂದು.

೮ ಮತ್ತು ಯೆಹೂದನ ಮೇರೆಯ ಬಳಿಯಲ್ಲಿ ಪೂರ್ವ ಕಡೆಯಿಂ
ದ ಪಶ್ಚಿಮ ಕಡೆಯ ಪರ್ಯಂತರ, ಇಪ್ಪತ್ತೈದು ಸಾವಿರ ಮೊಳ
ದ ಅಗಲವಾದಂಥ, ಆ ಬೇಕೆ ಚಾಲುಗಳಲ್ಲಿ ಒಂದರ ಹಾಗೆ ಉದ್ದ
ವಾದಂಥ, ನೀವು ಅರ್ಪಿಸ ತಕ್ಕ ಕಾಣಿಕೆ ಪೂರ್ವ ಕಡೆಯಿಂದ
ಪಶ್ಚಿಮ ಕಡೆಯ ಪರ್ಯಂತರ ಇರ ಬೇಕು; ಅದರ ಮಧ್ಯದಲ್ಲಿ
೯ ಪರಿಶುದ್ಧ ಸ್ಥಳವು ಇರ ಬೇಕು. ನೀವು ಯೆಹೋವನಿಗೆ ಅರ್ಪಿಸ
ತಕ್ಕ ಕಾಣಿಕೆ ಇಪ್ಪತ್ತೈದು ಸಾವಿರ ಉದ್ದವೂ, ಹತ್ತು ಸಾವಿರ ಅ
೧೦ ಗಲವೂ, ಆಗಿರ ಬೇಕು. ಮತ್ತು ಅವರಿಗೋಸ್ಕರ, ಅಂದರೆ, ಯಾ
ಜಕರಿಗೋಸ್ಕರ, ಪರಿಶುದ್ಧ ಕಾಣಿಕೆ ಇರ ಬೇಕು; ಅದು ಉತ್ತರ
ಕ್ಕೂ ಇಪ್ಪತ್ತೈದು ಸಾವಿರವು, ಪಶ್ಚಿಮಕ್ಕೆ ಹತ್ತು ಸಾವಿರ ಅಗಲ
ವು, ಪೂರ್ವಕ್ಕೆ ಹತ್ತು ಸಾವಿರ ಅಗಲವು, ದಕ್ಷಿಣಕ್ಕೆ ಇಪ್ಪತ್ತೈ
ದು ಸಾವಿರ ಉದ್ದವು, ಆಗಿರ ತಕ್ಕದ್ದು; ಅದರ ಮಧ್ಯದಲ್ಲಿ ಯೆ
೧೧ ಹೋವನ ಪರಿಶುದ್ಧ ಸ್ಥಳವು ಇರ ಬೇಕು. ಇದು, ನನ್ನ ಕಾಯಿ
ದೆಯನ್ನು ಕಾದಂಥ, ಇಸ್ರಯೇಲನ ಮಕ್ಕಳು ತಪ್ಪಿ ಹೋದಾಗ
ಲೇವಿಯರು ತಪ್ಪಿ ಹೋದ ಪ್ರಕಾರ ತಪ್ಪಿ ಹೋಗದೆ ಇದ್ದಂಥ,
ಚಾದೋಕನ ಕುಮಾರರಲ್ಲಿ ಪರಿಶುದ್ಧ ಮಾಡಲ್ಪಟ್ಟ ಯಾಜಕರ
೧೨ ದಾಗಿರ ಬೇಕು. ಮತ್ತು ಅರ್ಪಿಸಲ್ಪಟ್ಟ ಈ ದೇಶದ ಕಾಣಿಕೆ ಅ
ವರಿಗೆ ಅತಿ ಪರಿಶುದ್ಧವಾದದ್ದಾಗಿರ ಬೇಕು, ಲೇವಿಯರ ಮೇರೆಯ
ಬಳಿಯಲ್ಲಿಯೇ.

೧೩ ಮತ್ತು ಯಾಜಕರ ಮೇರೆಗೆ ಎದುರಾಗಿ ಲೇವಿಯರಿಗೆ ಇಪ್ಪ
ತ್ತೈದು ಸಾವಿರ ಉದ್ದವೂ, ಹತ್ತು ಸಾವಿರ ಅಗಲವೂ, ಆಗ ಬೇ
ಕು; ಉದ್ದವೆಲ್ಲಾ ಇಪ್ಪತ್ತೈದು ಸಾವಿರ; ಅಗಲವು ಹತ್ತು ಸಾವಿರ.
೧೪ ಅವರು ಅದರಲ್ಲಿ ಏನೂ ಮಾರ ಬಾರದು; ಏನೂ ಬದಲಾಯಿಸ
ಬಾರದು; ದೇಶದ ಪ್ರಥಮ ಫಲವನ್ನು ಯಾರಿಗಾದರೂ ಕೊಡ ಬಾ
ರದು; ಯಾಕಂದರೆ ಅದು ಯೆಹೋವನಿಗೆ ಪರಿಶುದ್ಧವೇ. ಮತ್ತು
೧೫ ಅಗಲದಲ್ಲಿ ಮಿಕ್ಕ ಐದು ಸಾವಿರವು, ಆ ಇಪ್ಪತ್ತೈದು ಸಾವಿರಕ್ಕೆ
ಎದುರಾದದ್ದು, ಪಟ್ಟಣಕ್ಕೆ ಸಾಧಾರಣವಾದ ಸ್ಥಳವು ನಿವಾಸಕ್ಕೋ
ಸ್ಕರವೂ, ಪ್ರಾಂತ ಪುರಗಳಿಗೋಸ್ಕರವೂ, ಸಾಧಾರಣ ಸ್ಥಳವಾಗಿ
೧೬ ರ ಬೇಕು; ಪಟ್ಟಣವು ಅದರ ಮಧ್ಯದಲ್ಲಿ ಇರ ಬೇಕು. ಮತ್ತು ಅದರ
ಅಳತೆಗಳು ಹೀಗಿರ ತಕ್ಕದು—ಉತ್ತರ ಕಡೆ ನಾಲ್ಕು ಸಾವಿರದ
ಐನೂರು; ದಕ್ಷಿಣ ಕಡೆ ನಾಲ್ಕು ಸಾವಿರದ ಐನೂರು; ಪೂರ್ವ
ಕಡೆ ನಾಲ್ಕು ಸಾವಿರದ ಐನೂರು; ಪಶ್ಚಿಮ ಕಡೆ ನಾಲ್ಕು ಸಾವಿರ
೧೭ ದ ಐನೂರು. ಮತ್ತು ಪಟ್ಟದ ಪ್ರಾಂತಪುರಗಳು ಹೀಗಿರ ಬೇ
ಕು—ಉತ್ತರದಲ್ಲಿ ಇನ್ನೂಘರ ಐವತ್ತು; ದಕ್ಷಿಣದಲ್ಲಿ ಇನ್ನೂಘರ ಐ
ವತ್ತು; ಪೂರ್ವದಲ್ಲಿ ಇನ್ನೂಘರ ಐವತ್ತು; ಪಶ್ಚಿಮದಲ್ಲಿ ಇನ್ನೂಘರ
ಐವತ್ತು.

೧೮ ಮತ್ತು ಕಾಣಿಕೆಯಾದ ಪರಿಶುದ್ಧ ಭಾಗಕ್ಕೆ ಎದುರಾಗಿರುವಂ
ಥ, ಉದ್ದದಲ್ಲಿ ಮಿಕ್ಕಾದದ್ದು, ಪೂರ್ವಕ್ಕೆ ಹತ್ತು ಸಾವಿರವಾಗಿ
ಯೂ, ಪಶ್ಚಿಮಕ್ಕೆ ಹತ್ತು ಸಾವಿರವಾಗಿಯೂ, ಇರ ಬೇಕು; ಅ
ದು ಕಾಣಿಕೆಯಾದ ಪರಿಶುದ್ಧ ಭಾಗಕ್ಕೆ ಎದುರಾಗಿರ ಬೇಕು; ಅ
ದರ ಆದಾಯವು ಪಟ್ಟಣದಲ್ಲಿ ಶೇವೆ ಮಾಡುವವರ ಆಹಾರಕ್ಕಾಗಿ
೧೯ ರ ಬೇಕು. ಮತ್ತು ಪಟ್ಟಣದಲ್ಲಿ ಶೇವೆ ಮಾಡುವವರು ಇಸ್ರಯೇ
ಲಿನ ಎಲ್ಲಾ ಕುಲಗಳೊಳಗಿಂದಲೇ ಅದರಲ್ಲಿ ಶೇವೆ ಮಾಡ ಬೇಕು.

೨೦ ಕಾಣಿಕೆಯೆಲ್ಲಾ ಇಪ್ಪತ್ತೈದು ಸಾವಿರ ಉದ್ದವಾಗಿಯೂ, ಇ
ಪ್ಪತ್ತೈದು ಸಾವಿರ ಅಗಲವಾಗಿಯೂ, ಇರ ಬೇಕು; ನೀವು ಪರಿ
ಶುದ್ಧ ಕಾಣಿಕೆಯನ್ನು ಚಚ್ಚೌಕವಾಗಿ ಪಟ್ಟಣದ ಸ್ವಾಸ್ತ್ಯದ ಸಂಗಡ
೨೧ ಅರ್ಪಿಸ ಬೇಕು. ಪರಿಶುದ್ಧ ಕಾಣಿಕೆಗೂ, ಪಟ್ಟಣದ ಸ್ವಾಸ್ತ್ಯಕ್ಕೂ
ಇತ್ತ ಕಡೆಯೂ ಅತ್ತ ಕಡೆಯೂ ಮಿಕ್ಕಾದದ್ದೂ, ಕಾಣಿಕೆಯ



ಇಪ್ಪತ್ತೈದು ಸಾವಿರಕ್ಕೆ ಎದುರಾಗಿ ಪೂರ್ವ ಮೇರೆಯಲ್ಲಿ ಇರು
ವಂಥಾದ್ದೂ, ಪಶ್ಚಿಮದಲ್ಲಿ ಇಪ್ಪತ್ತೈದು ಸಾವಿರಕ್ಕೆ ಎದುರಾಗಿ ಪ
ಶ್ಚಿಮ ಮೇರೆಯಲ್ಲಿ ಇರುವಂಥಾದ್ದೂ, ಪ್ರಭುವಿಗೋಸ್ಕರವಾದ ಚಾ
ಲುಗಳಿಗೆ ಎದುರಾದದ್ದೂ, ಪ್ರಭುವಿಗೆ ಆಗ ಬೇಕು; ಅದು ಪರಿಶು
ದ್ಧ ಕಾಣಿಕೆಯೇ; ಮನೆಯ ಪರಿಶುದ್ಧ ಸ್ಥಳವೂ ಅದರ ಮಧ್ಯದ
೨೨ ಲ್ಲಿ ಇರ ಬೇಕು. ಇದಲ್ಲದೆ ಲೇವಿಯರ ಸ್ವಾಸ್ತ್ಯವು ಮೊದಲ್ಗೊಂ
ಡು, ಮತ್ತು ಪಟ್ಟದ ಸ್ವಾಸ್ತ್ಯವು ಮೊದಲ್ಗೊಂಡು, ಪ್ರಭುವಿನದರ
ನಡುವೆಯಲ್ಲಿ ಇರುವಂಥಾದ್ದೂ, ಯೆಹೂದದ ಮೇರೆಗೂ ಬೆನ್ಯ
ಮಿನಿನ ಮೇರೆಗೂ ಮಧ್ಯದಲ್ಲಿ ಇರುವಂಥಾದ್ದೂ, ಪ್ರಭುವಿಗೆ ಆಗ
ಬೇಕು.

೨3 ಮಿಕ್ಕಾದ ಕುಲಗಳ ವಿಷಯವೇನಂದರೆ—ಪೂರ್ವ ಕಡೆಯಿಂದ
೨೪ ಪಶ್ಚಿಮ ಕಡೆಯ ಪರ್ಯಂತರ, ಬೆನ್ಯಮಿನನು ಒಂದು. ಮತ್ತು ಬೆ
ನ್ಯಮಿನನ ಮೇರೆಯ ಬಳಿಯಲ್ಲಿ ಪೂರ್ವ ಕಡೆಯಿಂದ ಪಶ್ಚಿಮ
೨೫ ಕಡೆಯ ಪರ್ಯಂತರ, ಸಿಮೆಯೋನನು ಒಂದು. ಮತ್ತು ಸಿಮೆ
ಯೋನನ ಮೇರೆಯ ಬಳಿಯಲ್ಲಿ ಪೂರ್ವ ಕಡೆಯಿಂದ ಪಶ್ಚಿಮ ಕ
೨೬ ಡೆಯ ಪರ್ಯಂತರ, ಇಸ್ಸಕಾರನು ಒಂದು. ಮತ್ತು ಇಸ್ಸಕಾರ
ನ ಮೇರೆಯ ಬಳಿಯಲ್ಲಿ ಪೂರ್ವ ಕಡೆಯಿಂದ ಪಶ್ಚಿಮ ಕಡೆಯ
೨೭ ಪರ್ಯಂತರ, ಜೆಬುಲೋನನು ಒಂದು. ಮತ್ತು ಜೆಬುಲೋನನ
ಮೇರೆಯ ಬಳಿಯಲ್ಲಿ ಪೂರ್ವ ಕಡೆಯಿಂದ ಪಶ್ಚಿಮ ಕಡೆಯ ಪ
೨೮ ರ್ಯಂತರ ಗಾಡನು ಒಂದು. ಮತ್ತು ಗಾಡನ ಮೇರೆಯ ಬಳಿಯ
ಲ್ಲಿ ದಕ್ಷಿಣ ಕಡೆಯಲ್ಲಿ ದಕ್ಷಿಣವಾಗಿ ಮೇರೆಯು ತಾಮಾರ್ ಮೊ
ದಲ್ಗೊಂಡು ಕಾದೇಷಿನ ವಾಗ್ವಾದದ ನೀರುಗಳ ಪರ್ಯಂತರವೂ,
ಮಹಾ ಸಮುದ್ರಕ್ಕೆ ಹೋಗುವ ನದಿಯ ಪರ್ಯಂತರವೂ, ಇರ
ಬೇಕು.

೨೯ ನೀವು ಇಸ್ರಯೇಲನ ಕುಲಗಳಿಗೆ ಬಾಧ್ಯತೆಗಾಗಿ ಚೀಟು ಹಾ
ಕಿ ವಿಭಾಗಿಸ ತಕ್ಕ ದೇಶವು ಇದೇ, ಅವರ ಪಾಲುಗಳು ಇವೇ,
ಎಂದು ಕರ್ತನಾದ ಯೆಹೋವ ಅನ್ನುತ್ತಾನೆ.

೩೦ ಮತ್ತು ಪಟ್ಟದ ಹೊರಡೋಣಗಳು ಇವೇ—ಉತ್ತರ ಕಡೆ
೩೧ ಯಲ್ಲಿ ನಾಲ್ಕು ಸಾವಿರದ ಐನೂರು ಅಳತೆಗಳು. ಮತ್ತು ಪಟ್ಟ
ದ ಬಾಗಲುಗಳು ಇಸ್ರಯೇಲನ ಕುಲಗಳ ಹೆಸರುಗಳ ಪ್ರಕಾವಾ
ಗಿರ ಬೇಕು; ಉತ್ತರಕ್ಕೆ ಮೂರು ಬಾಗಲುಳು; ರೂಬೇನನ ಬಾ
ಗಲು ಒಂದು, ಯೆಹೂದನ ಬಾಗಲು ಒಂದು, ಲೇವಿಯ ಬಾಗಲು
೩೨ ಒಂದು. ಮತ್ತು ಪೂರ್ವ ಕಡೆಯಲ್ಲಿ ನಾಲು ಸಾವಿರದ ಐನೂರು;
ಮತ್ತು ಮೂರು ಬಾಗಲುಗಳು; ಯೋಸೆಫನ ಬಾಗಲು ಒಂದು,
33 ಬೆನ್ಯಮಿನನ ಬಾಗಲು ಒಂದು, ದಾನನ ಬಾಗಲು ಒಂದು. ಮ
ತ್ತು ದಕ್ಷಿಣ ಕಡೆಯಲ್ಲಿ ನಾಲ್ಕು ಸಾವಿರದ ಐನೂರರ ಅಳತೆಗಳು;
ಮತ್ತು ಮೂರು ಬಾಗಲುಗಳು; ಸಿಮೆಯೋನನ ಬಾಗಲು ಒಂದು,
ಇಸ್ಸಕಾರನ ಬಾಗಲು ಒಂದು, ಜೆಬುಲೋನನ ಬಾಗಲು ಒಂದು.
೩೪ ಮತ್ತು ಪಶ್ಚಿಮ ಕಡೆಯಲ್ಲಿ ನಾಲ್ಕು ಸಾವಿರದ ಐನೂರು; ಅದರ
ಬಾಗಲುಗಳು ಮೂರು; ಗಾಡನ ಬಾಗಲು ಒಂದು, ಅಶೇರನ ಬಾ
ಗಲು ಒಂದು, ನೆಫ್ತಲಿಯ ಬಾಗಲು ಒಂದು.

೩೫ ಸುತ್ತಲಾಗಿ ಹದಿನೆಂಟು ಸಾವಿರದ ಅಳತೆಗಳು; ಮತ್ತು ಅಂದಿ
ನಿಂದ ಪಟ್ಟದ ಹೆಸರು, ಯೆಹೋವನು ಅಲ್ಲಿ ಇದ್ದಾನೆಂಬುವದಾ
ಗಿರುವದು.

---

# THE BOOK OF DANIEL.

## ದಾನಿಯೇಲನ ಪುಸ್ತಕವು.

### ೧. ಸಂಧಿ.

೧ ಯೆಹೂದದ ಅರಸನಾದ ಯೆಹೋಯಕೀಮನ ಆಳಿಕೆಯ
ಮೂರನೇ ವರುಷದಲ್ಲಿ, ಬಾಬೆಲಿನ ಅರಸನಾದ ನೆಬುಕದ್ನೇಚರ
ನು ಯೆರೂಸಲೇಮಿಗೆ ಬಂದು, ಅದಕ್ಕೆ ಮುತ್ತಿಗೆ ಹಾಕಿದನು.
೨ ಮತ್ತು ಕರ್ತನು ಯೆಹೂದದ ಅರಸನಾದ ಯಹೋಯಕೀಮನ
ನ್ನೂ, ದೇವಾಲಯದ ಪಾತ್ರೆಗಳಲ್ಲಿ ಕೆಲವನ್ನೂ, ಅವನ ಕೈಯ
ಲ್ಲಿ ಒಪ್ಪಿಸಿದನು. ಅವನು, ಅವುಗಳನ್ನು ಸೀನಾರ್ ದೇಶಕ್ಕೂ ತನ್ನ
ದೇವರ ಮಂದಿರಕ್ಕೂ ತಂದು, ಪಾತ್ರೆಗಳನ್ನು ತನ್ನ ದೇವರ
ಬೊಕ್ಕಸದ ಮನೆಯಲ್ಲಿ ಇರಿಸಿದನು.
3 ತರುವಾಯ ಅರಸನು ತನ್ನ ಪೊಜ್ಜೆಯರ ಯಜಮಾನನಾದ
ಅಶ್ಪೆನಾಜನ ಸಂಗಡ ಮಾತಾಡಿ—ಅವನು ಇಸ್ರಯೇಲನ ಮ
ಕ್ಕಳೊಳಗಿಂದಲೂ, ಅರಸನ ಸಂತಾನದೊಳಗಿಂದಲೂ, ಕುಲೀ
೪ ನರೊಳಗಿಂದಲೂ, ಕುಂದು ಇಲ್ಲದವರಾಗಿಯೂ, ಸುಂದರರಾಗಿ
ಗಿಯೂ, ಸಕಲ ಜ್ಞಾನದಲ್ಲಿ ಪ್ರವೀಣರಾಗಿಯೂ, ತಿಳುವಿಕೆಯಲ್ಲಿ
ಬುದ್ಧಿವಂತರಾಗಿಯೂ, ಕಲಿಕೆಯನ್ನು ಬಲ್ಲವರಾಗಿಯೂ, ಅರಸ
ನ ಮನೆಯಲ್ಲಿ ನಿಲ್ಲ ತಕ್ಕ ಸಾಮರ್ಥವುಳ್ಳವರಾಗಿಯೂ, ಇರು
ವ ಯೌವನಸ್ಥರನ್ನು ತಂದು, ಕಸ್ದೀಯರ ವಿದ್ಯವನ್ನೂ ಭಾಷೆ
೫ ಯನ್ನೂ ಅವರಿಗೆ ಬೋಧಿಸ ಬೇಕೆಂದು ಅಜ್ಞಾಪಿಸಿದನು. ಮ
ತ್ತು ಅರಸನು, ಅರಸನ ಭೋಜನದಲ್ಲಿಯೂ, ತಾನು ಕುಡಿಯು
ವ ದ್ರಾಕ್ಷೆ ರಸದಲ್ಲಿಯೂ ದಿನ ದಿನದ ಚಾಲನ್ನು ಅವರಿಗೆ ನೇಮಿ
ಸಿದನು; ಹೀಗೆ ಅವರು ಮೂರು ವರುಷಗಳ ಪರ್ಯಂತರ ಪೋ
ಷಿಸಲ್ಪಟ್ಟ ಮೇಲೆ ಅರಸನ ಮುಂದೆ ನಿಲ್ಲ ತಕ್ಕವರಾಗುವರು.

೬ ಇವರಲ್ಲಿ ಯೆಹೂದನ ಮಕ್ಕಳೊಳಗಿಂದ, ದಾನಿಯೇಲನೂ,
ಹನನೀಯನೂ, ಮಿಶಯೇಲನೂ, ಅಜರೀಯನೂ, ಎಂಬವರಿದ್ದರು.
೭ ಇವರಿಗೆ ಪೊಜ್ಜೆಯರ ಯಜಮಾನನು ಹೆಸರುಗಳನ್ನು ಇಟ್ಟನು,
ಹ್ಯಾಗಂದರೆ, ದಾನಿಯೇಲನನ್ನು ಬೆಲ್ತಿಶಾಸರನೆಂದೂ, ಹನನೀಯ
ನನ್ನು ಶದ್ರಾಕನೆಂದೂ, ಮಿಶಯೇಲನನ್ನು ಮೇಶಾಕನೆಂದೂ, ಅಜ
ರೀಯನನ್ನು ಅಬೆದ್ನಿಗೋವನೆಂದೂ, ಕರೆದನು. ಆದರೆ ದಾನಿಯೇ
ಲನು ತಾನು ಅರಸನ ಭೋಜನದ ಪಾಲಿನಿಂದಲಾದರೂ, ಅವನು
ಕುಡಿಯುವ ದ್ರಾಕ್ಷೆ ರಸದಿಂದಲಾದರೂ, ತನ್ನನ್ನು ಅಶುದ್ಧ ಮಾ
ಡುವದಿಲ್ಲವೆಂದು ತನ್ನ ಹೃದಯದಲ್ಲಿ ನಿಶ್ಚಯಿಸಿ ಕೊಂಡನು; ಆ
ದರದಿಂದ ತಾನು ಅಶುದ್ಧವಾಗದ ಹಾಗೆ ಪೊಜ್ಜೆಯರ ಯಜಮಾ
೯ನನ ಹತ್ತರ ಬೇಡಿ ಕೊಂಡನು. ಆಗ ದೇವರು ದಾನಿಯೇಲನನ್ನು
ಪೊಜ್ಜೆಯರ ಯಜಮಾನನ ದಯೆದಲ್ಲಿಯೂ ಕರುಣೆಯಲ್ಲಿಯೂ
೧೦ ಕೇರಿಸಿ ಇದ್ದನು. ಮತ್ತು ಪೊಜ್ಜೆಯರ ಯಜಮಾನನು ದಾನಿ
ಯೇಲನಿಗೆ ಹೇಳಿದ್ದೇನಂದರೆ—ನಿಮ್ಮ ಅನ್ನ ಪಾನಗಳನ್ನು ನೇಮಿ
ಸಿರುವ ನನ್ನ ಸ್ವಾಮಿಯಾದ ಅರಸನಿಗೆ ನಾನು ಭಯ ಪಡುತ್ತೇ
ನೆ; ಅವನು ಯಾಕೆ ನಿಮ್ಮ ಮುಖಗಳನ್ನು ನಿಮ್ಮ ಸ್ಥಿತಿಯ ಯೌ
ವನಸ್ಥರಿಗಿಂತ ಕಳೆಗುಂದಿದವುಗಳಾಗಿ ನೋಡ ಬೇಕು? ಈ ಪ್ರಕಾ
೧೧ ರ ಅರಸನ ಹತ್ತರ ನನ್ನ ತಲೆಗೆ ಮೋಸ ಬರ ಮಾಡುತ್ತೀರಿ. ಆಗ
ಪೊಜ್ಜೆಯರ ಯಜಮಾನನು ದಾನಿಯೇಲ್, ಹನನೀಯ, ಮಿಶ
ಯೇಲ್, ಅಜರೀಯ, ಇವರ ಮೇಲೆ ಇಟ್ಟಿದ್ದ ಉಗ್ರಾಣಿಕನಿಗೆ ದಾ
೧೨ ನಿಯೇಲನು ಹೇಳಿದ್ದೇನಂದರೆ—ನಿನ್ನ ಸೇವಕರನ್ನು ಹತ್ತು ದಿವಸ
ಗಳ ವರಿಗೂ ಪರಿಕ್ಷೆಸಿ ನೋಡಪ್ಪಾ; ಅವರು ನಮಗೆ ಉಣ್ಣುವದ
೧೩ ಕ್ಕೆ ಪಲ್ಯಗಳನ್ನೂ, ಕುಡಿಯುವದಕ್ಕೆ ನೀರನ್ನೂ, ಕೊಡಲಿ; ಆಗ
ನವ್ಯ ಮುಖಗಳೂ, ಅರಸನ ಭೋಜನದ ಪಾಲನ್ನು ಉಣ್ಣುವ
ಯೌವನಸ್ಥರ ಮುಖವೂ, ನಿನ್ನ ಮುಂದೆ ಕಾಣ ಬರಲಿ; ಮತ್ತು
೧೪ ನಿನಗೆ ಕಾಣುವ ಪ್ರಕಾರ ನಿನ್ನ ಸೇವಕರಿಗೆ ಮಾಡು. ಹಾಗೆಯೇ
ಅವನು ಈ ಕಾರ್ಯದ ವಿಷಯ ಅವರಿಗೆ ಕಿವಿ ಗೊಟ್ಟು, ಹತ್ತು
೧೫ ದಿವಸಗಳ ವರಿಗೂ ಅವರನ್ನು ಪರಿಕ್ಷೆಸಿದನು. ಮತ್ತು ಹತ್ತು ದಿ
ವಸಗಳ ಕಡೆಯಲ್ಲಿ, ಅರಸನ ಭೋಜನದ ಪಾಲನ್ನು ಉಣ್ಣುವ
ಯೌವನಸ್ಥರೆಲ್ಲರಿಗಿಂತ ಅವರ ಮುಖಗಳು ಚನ್ನಾಗಿಯೂ ಕೊ
೧೬ ಬ್ಬಿದ ಮಾಂಸವುಳ್ಳವುಗಳಾಗಿಯೂ, ಕಾಣಿಸಿದವು. ಆಗ ಉ
ಗ್ರಾಣಿಕನು ಅವರ ಭೋಜನದ ಪಾಲನ್ನೂ, ಅವರು ಕುಡಿಯ
ತಕ್ಕ ದ್ರಾಕ್ಷೆ ರಸವನ್ನೂ, ತೆಗೆದು ಹಾಕಿ, ಅವರಿಗೆ ಪಲ್ಯವನ್ನು
ಕೊಟ್ಟನು.

೧೭ ಈ ನಾಲ್ಕು ಯೌವನಸ್ಥರ ವಿಷಯವೋ, ದೇವರು ಅವರಿಗೆ,
ಎಲ್ಲಾ ವಿದ್ಯೆದಲ್ಲಿಯೂ, ಜ್ಞಾನದಲ್ಲಿಯೂ, ಶಿಳುವಿಕೆಯನ್ನೂ ವಿವೇ
ಕವನ್ನೂ ಕೊಟ್ಟನು; ಮತ್ತು ದಾನಿಯೇಲನು ಸಕಲ ದರ್ಶನಗ
೧೮ ಳಲ್ಲಿಯೂ, ಕನಸುಗಳಲ್ಲಿಯೂ, ಬುದ್ಧಿವಂತನಾಗಿದ್ದನು. ಆಗ
ಅರಸನು ಅವರನ್ನು ತರ ಬೇಕೆಂದು ಹೇಳಿ ಇದ್ದ ದಿವಸಗಳ
ಕಡೆಯಲ್ಲಿ ಪೊಜ್ಜೆಯರ ಯಜಮಾನನು ಅವರನ್ನು ನೆಬುಕದ್ನೇ
೧೯ ಚರನ ಮುಂದೆ ತಂದನು. ಮತ್ತು ಅರಸನು ಅವರ ಸಂಗಡ
ಮಾತಾಡಿದನು; ಮತ್ತು ಅವಕ್ಕೆಲ್ಲರಕ್ಕಿ ದಾನಿಯೇಲ್, ಹನನೀಯ,
ಮಿಶಯೇಲ್, ಅಜರೀಯ, ಇವರ ಹಾಗೆ ಬಬ್ಬನೂ ಶಿಕ್ಕಲಿಲ್ಲ; ಆ
೨೦ ದರದಿಂದ ಇವರೇ ಅರಸನ ಮುಂದೆ ನಿಂತರು. ಮತ್ತು ಅರಸನು
ಅವರ ಹತ್ತರ ವಿಚಾರಿಸಿದ ಸಮಸ್ತ ಜ್ಞಾನ ವಿವೇಕಗಳ ವಿಷಯ
ದಲ್ಲಿ ತನ್ನ ರಾಜ್ಯದಲ್ಲಿರುವ ಎಲ್ಲಾ ಮಂತ್ರಗಾರರಿಂದಲೂ
ಜೋಶಿಕ್ಯರಿಂದಲೂ ಇವರೇ ಹತ್ತಮ್ಮು ಉತ್ತಮರೆಂದು ಕಂಡ
೨೧ ನು. ಮತ್ತು ದಾನಿಯೇಲನು ಅರಸನಾದ ಕೋರೆಷನ ಪೊದಲನೇ
ವರುಷದ ಪರ್ಯಂತರ ಇದ್ದನು.

## ೨. ಸಂಧಿ.

೧ ಮತ್ತು ನೆಬುಕದ್ನೇಚರನ ಆಳಿಕೆಯ ಎರಡನೇ ವರುಷದಲ್ಲಿ,
ನೆಬುಕದ್ನೇಚರನು ಕನಸುಗಳನ್ನು ಕಂಡದರಿಂದ ಅವನ ಆತ್ಮನು
ಕಳವಳ ಗೊಂಡು, ಅವನ ನಿದ್ರೆಯು ಅವನನ್ನು ಬಿಟ್ಟು ಹೋಯಿ
೨ ತು. ಆಗ ಅರಸನಿಗೆ ತನ್ನ ಕನಸುಗಳನ್ನು ಶಿಳಿಸುವ ಹಾಗೆ,
ಅರಸನು ಮಂತ್ರಗಾರರನ್ನೂ ಜೋಶಿಕ್ಯರನ್ನೂ ಕೊನ್ಯಗಾರ
ರನ್ನೂ ಕಸ್ದೀಯರನ್ನೂ ಕರೆಯಲಾಜ್ಞಾಪಿಸಿದನು; ಮತ್ತು ಇವ
ರು ಬಂದು, ಅರಸನ ಮುಂದೆ ನಿಂತರು. ಆಗ ಅರಸನು ಅವರಿಗೆ
3 ಹೇಳಿದ್ದು—ನಾನು ಕನಸು ಕಂಡಿದ್ದೇನೆ; ಮತ್ತು ಆ ಕನಸನ್ನು ಶಿ
ಳಿಯುವದಕ್ಕೆ ನನ್ನ ಆತ್ಮನು ಕಳವಳ ಗೊಂಡಿತು. ಆಗ ಕಸ್ದೀ
೪ ಯರು ಅರಸನಿಗೆ ಅರಾಮಿನ ಭಾಷೆಯಲ್ಲಿ ಹೇಳಿದ್ದು—ಅರಸನೇ,
ನಿರಂತರ ಬಾಳು; ಕನಸನ್ನು ನಿನ್ನ ಸೇವಕರಿಗೆ ಹೇಳು; ಆಗ ನಾ
ವು ಅಭಿಪ್ರಾಯವನ್ನು ಶಿಳಿಸುವೆವು. ಅರಸನು ಕಸ್ದೀಯರಿಗೆ ಉ
೫ ತ್ತರವಾಗಿ ಹೇಳ್ದದ್ದು—ಆ ಕಾರ್ಯ ನನ್ನನ್ನು ಬಿಟ್ಟು ಹೋಯಿ
ತು; ನೀವು ಕನಸನ್ನೂ ಅದರ ಅಭಿಪ್ರಾಯವನ್ನೂ ನನಗೆ ಶಿಳಿಸ
ದಿದ್ದರೆ, ತುಂಡು ತುಂಡಾಗಿ ಕೊಯ್ಯಲ್ಪಡುವಿರಿ; ಮತ್ತು ನಿಮ್ಮ ಮನೆ
೬ ಗಳು ಶಿಪ್ಪೆಗಳಾಗಿ ಮಾಡಲ್ಪಡುವವು. ಆದರೆ ನೀವು ಕನಸನ್ನೂ
ಅದರ ಅಭಿಪ್ರಾಯವನ್ನೂ ಶಿಳಿಸಿದರೆ, ದಾನಗಳನ್ನೂ ಬಹುಮಾ
ನಗಳನ್ನೂ ಬಹಳ ಘನವನ್ನೂ ನನ್ನಿಂದ ಹೊಂದುವಿರಿ; ಹೀಗಿರ
ಲಾಗಿ ಕನಸನ್ನೂ ಅದರ ಅಭಿಪ್ರಾಯವನ್ನೂ ನನಗೆ ಶಿಳಿಸಿರಿ.
೭ ಅವರು ಶಿರಿಗಿ ಉತ್ತರವಾಗಿ—ಅರಸನು ತನ್ನ ಸೇವಕರಿಗೆ ಕ
ನಸನ್ನು ಹೇಳಲಿ, ಆಗ ಅದರ ಅಭಿಪ್ರಾಯವನ್ನು ನಾವು ಶಿಳಿಸು
ವೆವು, ಅಂದರು. ಅರಸನು ಪ್ರತ್ಯುತ್ತರವಾಗಿ ಹೇಳ್ದದ್ದು—ಕಾರ್ಯ
೮ ನನ್ನನ್ನು ಬಿಟ್ಟು ಹೋಯಿತೆಂದು ನೀವು ನೋಡಿದ್ದರಿಂದ ಕಾಲ
ಹರಣ ಮಾಡುತ್ತೀರೆಂದು ನಿಶ್ಚಯವಾಗಿ ಬಲ್ಲೆನು. ಆದರೆ ನೀವು
ಕನಸನ್ನು ನನಗೆ ಶಿಳಿಸದೆ ಹೋದರೆ, ನಿಮಗೆ ಬಂದೇ ನಿರ್ಣಯ
ಉಂಟು; ಯಾಕಂದರೆ ಕಾಲ ಬದಲಾಗುವ ಪರ್ಯಂತರ ಸುಳ್ಳಾ
ದ ಕೆಟ್ಟ ಮಾತುಗಳನ್ನು ನನ್ನ ಮುಂದೆ ಮಾತಾಡ ಸಿದ್ಧ ಮಾ
ಡಿ ಕೊಂಡಿದ್ದೀರಿ; ಹೀಗಿರಲಾಗಿ ಕನಸನ್ನು ನನಗೆ ಹೇಳಿರಿ; ಆಗ
ಅದರ ಅಭಿಪ್ರಾಯವನ್ನು ನನಗೆ ಶಿಳಿಸ ಬಲ್ಲೆಂದು, ಶಿಳಿ ಕೊ
೧೦ ಳ್ಳುವೆನು. ಕಸ್ದೀಯರು ಅರಸನ ಮುಂದೆ ಪ್ರತ್ಯುತ್ತರವಾಗಿ ಹೇಳಿ
ದ್ದೇನಂದರೆ—ಅರಸನ ಕಾರ್ಯವನ್ನು ಶಿಳಿಸ ಬಲ್ಲ ಮನುಷ್ಯನು
ಭೂಲೋಕದಲ್ಲಿ ಇಲ್ಲ; ಆದದರಿಂದ ಯಾವ ಅರಸನಾದರೂ ದೊ
ಕೆಯಾದರೂ ಯಜಮಾನನಾದರೂ, ಯಾವ ಮಂತ್ರಗಾರನಿಂ
ದಲೂ ಜೋಶಿಕ್ಯನಿಂದಲೂ ಕಸ್ದೀಯನಿಂದಲೂ ಇಂಥ ಕಾರ್ಯ
೧೧ ಗಳನ್ನು ಕೇಳ್ದಿಲ್ಲ. ಅರಸನು ಕೇಳುವ ಕಾರ್ಯವು ಅಪರೂಪ
ವಾದ್ದು; ಮತ್ತು ಮಾಂಸದವರ ಸಂಗಡ ವಾಸ ಮಾಡದ ದೇವ
ರುಗಳೇ ಹೊರ್ತು, ಇನ್ಯಾರು ಅದನ್ನು ಅರಸನ ಮುಂದೆ ಶಿಳಿಸ
ಲಾರರು.

೧೨ ಇದರಿಂದ ಅರಸನು ಕೋಪವೂ ಮಹಾ ರೌದ್ರವೂ ಉಳ್ಳವ



ನಾಗಿ, ಬಾಬೆಲಿನಲ್ಲಿರುವ ಸಕಲ ಜ್ಞಾನಿಗಳನ್ನು ನಾಶ ಮಾಡ ಬೇಕೆಂ
೧೩ ದು ಆಜ್ಞಾಪಿಸಿದನು. ಹಾಗೆಯೇ ಜ್ಞಾನಿಗಳನ್ನು ಕೊಲ್ಲ ಬೇಕೆಂದು
ನಿರ್ಣಯವು ಹೊರಟಿತು; ಮತ್ತು ದಾನಿಯೇಲನನ್ನೂ ಅವನ
೧೪ ಜತೆಗಾರರನ್ನೂ ಕೊಲ್ಲ ಹುಡುಕಿದರು. ಆಗ ಬಾಬೆಲಿನ ಜ್ಞಾನಿಗ
ಳನ್ನು ಕೊಲ್ಲ ಹೊರಟಿದ್ದ ಅರಸನ ಕಾವಲರ ಅಧಿಪತಿಯಾದ
ಅರ್ಯೋಕನಿಗೆ ದಾನಿಯೇಲನು ಯೋಚನೆಯಿಂದಲೂ ಬುದ್ಧಿ
೧೫ಯಿಂದಲೂ ಉತ್ತರ ಕೊಟ್ಟನು. ಅವನು ಅರಸನ ಅಧಿಪತಿಯಾ
ದ ಅರ್ಯೋಕನಿಗೆ ಪ್ರತ್ಯುತ್ತರವಾಗಿ ಹೇಳ್ದದ್ದೇನಂದರೆ—ಅರಸ
ನಿಂದ ನಿರ್ಣಯವು ಇಷ್ಟು ಅವಸರವಾದದ್ದೇನು? ಆಗ ಅರ್ಯೋ
೧೬ ಕನು ದಾನಿಯೇಲನಿಗೆ ಆ ಕಾರ್ಯವನ್ನು ಶಿಳಿಸಿದನು. ಆಗ ದಾ
ನಿಯೇಲನು ಒಳಗೆ ಹೋಗಿ, ತನಗೆ ಹೊತ್ತು ಕೊಡ ಬೇಕು;
ಆಗ ತಾನು ಅರಸನಿಗೆ ಅಭಿಪ್ರಾಯವನ್ನು ಶಿಳಿಸುವೆನೆಂದು ಅರ
ಸನನ್ನು ಕೇಳಿ ಕೊಂಡನು.

೧೭ ಆಗ ದಾನಿಯೇಲನು ತನ್ನ ಮನೆಗೆ ಹೋಗಿ, ತನ್ನ ಜತೆಗಾ
ರರಾದ ಹನನೀಯ, ಮಿಶಯೇಲ್, ಅಜರೀಯರಿಗೆ ಈ ಕಾರ್ಯವ
೧೮ ನ್ನು ಶಿಳಿಸಿ, ದಾನಿಯೇಲನೂ ಅವನ ಜತೆಗಾರರೂ ಬಾಬೆಲಿನಲ್ಲಿ
ರುವ ಬೇರೆ ಜ್ಞಾನಿಗಳ ಸಂಗಡ ನಾಶವಾಗದ ಹಾಗೆ ಅವರು ಈ
ಮರ್ಮದ ವಿಷಯ ಪರಲೋಕದ ದೇವರಿಂದ ಕರುಣೆಗಳನ್ನು ಬೇ
೧೯ ಡಿ ಕೊಳ್ಳ ಹೇಳ್ದನು. ಆಗ ಆ ಮರ್ಮವು ದಾನಿಯೇಲನಿಗೆ ರಾ
ತ್ರಿ ದರ್ಶನದಲ್ಲಿ ಪ್ರಕಟ ಮಾಡಲ್ಪಟ್ಟಿತು; ಆಗ ದಾನಿಯೇಲನು
೨೦ ಪರಲೋಕದ ದೇವರನ್ನು ಸ್ತುತಿಸಿದನು. ದಾನಿಯೇಲನು ಉತ್ತರ
ವಾಗಿ ಹೇಳ್ದದ್ದೇನಂದರೆ—ದೇವರ ಹೆಸರು ತಲತಲಾಂತರಗಳಿಗೆ
ಸ್ತುತಿಸಲ್ಪಡಲಿ; ಯಾಕಂದರೆ ಜ್ಞಾನವೂ ತ್ರಾಣವೂ ಅವನವೇ.
೨೧ ಅವನು ಕಾಲಗಳನ್ನೂ ಸಮಯಗಳನ್ನೂ ಬದಲು ಮಾಡುತ್ತಾ
ನೆ; ಅರಸರನ್ನು ತೆಗೆದು ಹಾಕಿ, ಅರಸರನ್ನು ಎತ್ತುತ್ತಾನೆ; ಜ್ಞಾ
ನಿಗಳಿಗೆ ಜ್ಞಾನವನ್ನೂ ಬುದ್ಧಿ ಶಿಳಿದವರಿಗೆ ಶಿಳುವಿಕೆಯನ್ನೂ
೨೨ ಕೊಡುತ್ತಾನೆ. ಅಗಾಧವಾದವುಗಳನ್ನೂ ರಹಸ್ಯವಾದವುಗಳನ್ನೂ
ಪ್ರಕಟ ಮಾಡುತ್ತಾನೆ; ಕತ್ತಲೆಯಲ್ಲಿ ಇರುವವುಗಳನ್ನು ಅರಿಶಿದ್ಧಾ
೨3 ನೆ; ಬೆಳಕು ಸಹ ಅವನ ಹತ್ತರ ವಾಸಿಸುತ್ತದೆ. ನಿನ್ನನ್ನು ಸ್ತು
ತಿಸುತ್ತೇನೆ, ಕೊಂಡಾಡುತ್ತೇನೆ, ಓ ನನ್ನ ಪಿತೃಗಳ ದೇವರೇ;
ಯಾಕಂದರೆ ನೀನು ನನಗೆ ಜ್ಞಾನವನೂಽ, ತ್ರಾಣವನೂಽ, ಕೊ
ಟ್ಟು, ನಾವು ನಿನ್ನಿಂದ ಬೇಡಿ ಕೊಂಡದದ್ದನ್ನು ಶಿಳಿಯ ಮಾಡಿ
ದ್ದೀ; ಹೌದು, ನೀನು ಈಗ ನಮಗೆ ಅರಸನ ಕಾರ್ಯವನ್ನು ಶಿ
ಳಿಯ ಮಾಡಿದ್ದೀ.

೨೪ ಹೀಗಿರಲಾಗಿ ದಾನಿಯೇಲನು, ಬಾಬೆಲಿನ ಜ್ಞಾನಿಗಳನ್ನು ನಾಶ
ಮಾಡ ಅರಸನ ಆಜ್ಞೆ ಹೊಂದಿದ್ದ ಅರ್ಯೋಕನ ಹತ್ತರ ಪ್ರವೇಶಿಸಿ,
ಅವನಿಗೆ ಹೇಳ್ದದ್ದೇನಂದರೆ—ನೀನು ಬಾಬೆಲಿನ ಜ್ಞಾನಿಗಳನ್ನು ನಾಶ
ಮಾಡ ಬೇಡ; ನನ್ನನ್ನು ಅರಸನ ಮುಂದೆ ಕರ ಕೊಂಡು ಹೋ
೨೫ಗು, ನಾನು ಅರಸನಿಗೆ ಅಭಿಪ್ರಾಯವನ್ನು ಶಿಳಿಸುತ್ತೇನೆ. ಆಗ
ಅರ್ಯೋಕನು ತ್ವರೆಯಾಗಿ ದಾನಿಯೇಲನನ್ನು ಅರಸನ ಮುಂ
ದೆ ಕರ ಕೊಂಡು ಹೋಗಿ, ಅವನಿಗೆ ಹೇಳ್ದದ್ದೇನಂದರೆ—ಯೆಹೂ
ದ್ಯದ ಸೆರೆಯವರಲ್ಲಿ ನನಗೆ ಒಬ್ಬ ಮನುಷ್ಯನು ಶಿಕ್ಕಿದ್ದಾನೆ, ಅವ
೨೬ ನು ಅರಸನಿಗೆ ಅಭಿಪ್ರಾಯವನ್ನು ಶಿಳಿಸುವನು. ಅರಸನು ಪ್ರತ್ಯು
ತ್ತರವಾಗಿ ಬೆಲ್ತಿಶಾಸರನೆಂಬ ದಾನಿಯೇಲನಿಗೆ ಹೇಳ್ದದ್ದು—ನಾನು
ಕಂಡ ಕನಸನ್ನೂ ಅದರ ಅಭಿಪ್ರಾಯವನ್ನೂ ನನಗೆ ಶಿಳಿಸ ನಿನ
೨೭ ಗೆ ಸಾಮರ್ಥ್ಯ ಉಂಟೋ? ದಾನಿಯೇಲನು ಅರಸನ ಸನ್ನಿಧಿಯ
ಲ್ಲಿ ಪ್ರತ್ಯುತ್ತರವಾಗಿ ಹೇಳ್ದದ್ದು—ಅರಸನು ಕೇಳುವ ಮರ್ಮವ
ನ್ನು ಜ್ಞಾನಿಗಳೂ ಜೋಶಿಕ್ಯರೂ ಮಂತ್ರಗಾರರೂ ಲಕ್ಷಣೇ
೨೮ ಕರೂ ಅರಸನಿಗೆ ಶಿಳಿಸಲಾರರು. ಆದರೆ ಮರ್ಮಗಳನ್ನು ಪ್ರಕಟ
ಮಾಡುವ ದೇವರು ಪರಲೋಕದಲ್ಲಿ ಇದ್ದಾನೆ; ಅವನು ದಿವಸ
ಗಳ ಅಂತ್ಯದಲ್ಲಿ ಸಂಭವಿಸ ಹೋಗುವವುಗಳನ್ನು ಅರಸನಾದ
ನೆಬುಕದ್ನೇಚರನಿಗೆ ಶಿಳಿಸುತ್ತಾನೆ. ನಿನ್ನ ಕನಸೂ, ನಿನ್ನ ಮಂಚ
೨೯ ದಲ್ಲಿ ಬಂದ ನಿನ್ನ ತಲೆಯ ದರ್ಶನಗಳೂ ಇವೇ. ನೀನೋ ಅರಸ
ನೇ, ನಿನ್ನ ಮಂಚದ ಮೇಶಿರುವಾಗ, ಇನ್ನು ಮೇಲೆ ಏನು ಸಂಭ
ವಿಸುವದೋ ಎಂಬುವ ಆಲೋಚನೆಗಳು ನಿನ್ನಲ್ಲಿ ಹುಟ್ಟಿದವು;
ಮತ್ತು ಮರ್ಮಗಳನ್ನು ಪ್ರಕಟ ಮಾಡುವವನು ಸಂಭವಿಸ ಹೋ
3೦ ಗುವವುಗಳನ್ನು ನಿನಗೆ ಶಿಳಿಯ ಮಾಡುತ್ತಾನೆ. ನಾನಾವಕೆ, ಜೀ
ವಿಸಿರುವವರೆಲ್ಲರಿಗಿಂತ ನನಗೆ ಹೆಚ್ಚಾದ ಜ್ಞಾನವು ಇರುವದರಿಂದ
ಲ್ಲ, ಅರಸನಿಗೆ ಅಭಿಪ್ರಾಯವು ಶಿಳಿಯ ಬರುವದಕ್ಕೋಸ್ಕರ
ವೂ, ನೀನು ನಿನ್ನ ಹೃದಯದ ಆಲೋಚನೆಗಳನ್ನು ಅರಿಯುವ
ದಕ್ಕೋಸ್ಕರವೂ, ಈ ಮರ್ಮವು ನನಗೆ ಪ್ರಕಟ ಮಾಡಲ್ಪ
ಟ್ಟಿದೆ.

3೧ ಅರಸನೇ, ನೀನು ನೋಡಲಾಗಿ, ಇಗೋ ದೊಡ್ಡ ವಿಗ್ರಹವು;
ಮಹಾ ಪ್ರಕಾಶವಾದ ಈ ದೊಡ್ಡ ವಿಗ್ರಹವು ನಿನ್ನ ಮುಂದೆ ನಿಂ
3೨ ತಿತು; ಅದರ ಆಕಾರವು ಭಯಂಕರವಾಗಿತ್ತು. ಈ ವಿಗ್ರಹದ ತಲೆ
ಯು, ಬಂಗ್ಲೇ ಭಂಗಾರದಿಂದಲೂ, ಅದರ ಎದೆಯೂ ಅದರ ತೋ
ಳುಗಳೂ ಬೆಳ್ಳಿಯಿಂದಲೂ, ಅದರ ಹೊಟ್ಟೆಯೂ ಅದರ ತೊ
33 ಡೆಗಳೂ ಹಿತ್ತಾಳೆಯಿಂದಲೂ, ಅದರ ಕಾಲುಗಳು ಕಬ್ಬಿಣದಿಂದ
ಲೂ, ಅದರ ಪಾದಗಳು ಅರ್ಧ ಕಬ್ಬಿಣದಿಂದಲೂ, ಅರ್ಧ ಮ
ಣ್ಣಿನಿಂದಲೂ, ಉಂಟಾಗಿದ್ದವು. ನೀನು ನೋಡುತ್ತಿರಲಾಗಿ, ಒಂ
3೪ ದು ಕಲ್ಲು, ಕೈಗಳ ಸಹಾಯವಿಲ್ಲದೆ ಕೆತ್ತಲ್ಪಟ್ಟು, ಕಬ್ಬಿಣವೂ ಮ
ಣ್ಣೂ ಆಗಿದ್ದ ಆ ವಿಗ್ರಹದ ಪಾದಗಳನ್ನು ಬಡಿದು, ಅವುಗಳನ್ನು
3೫ ಪುಡಿಪುಡಿ ಮಾಡಿತು. ಆಗ ಕಬ್ಬಿಣವೂ, ಮಣ್ಣೂ, ಹಿತ್ತಾಳೆ
ಯೂ, ಬೆಳ್ಳಿಯೂ, ಭಂಗಾರವೂ, ಕೂಡ ಪುಡಿಪುಡಿಯಾಗಿ,
ಬೇಸಿಗೆ ಕಾಲದ ಕಣಗಳ ಹೊಟ್ಟಿನ ಹಾಗಾದವು; ಮತ್ತು ಘೂಳಿ
ಯು, ಅವಕ್ಕೆ ಸ್ಥಳ ಶಿಕ್ಕದ ಹಾಗೆ, ಅವುಗಳನ್ನು ಬಡು ಕೊಂ
ಡು ಹೋಯಿತು; ಮತ್ತು ವಿಗ್ರಹವನ್ನು ಬಡಿದ ಕಲ್ಲು ದೊಡ್ಡ ಬೆ
ಟ್ಟವಾಗಿ, ಸಮಸ್ತ ಭೂಮಿಯನ್ನು ತುಂಬಿಸಿತು.

3೬ ಕನಸು ಇದೇ; ಮತ್ತು ಅದರ ಅಭಿಪ್ರಾಯವನ್ನು ನಾವು ಅರ
3೭ ಸನ ಮುಂದೆ ಹೇಳುತ್ತೇವೆ. ನೀನು, ಓ ಅರಸನೇ, ಅರಸರಿಗೆ ಅ
ರಸನಾಗಿರುತ್ತೀ; ಯಾಕಂದರೆ ಪರಲೋಕದ ದೇವರು ನಿನಗೆ ರಾ
ಜ್ಯವನ್ನೂ ತ್ರಾಣವನ್ನೂ ಪರಾಕ್ರಮವನ್ನೂ ಮಹಿಮೆಯನ್ನೂ
3೮ ಕೊಟ್ಟಿದ್ದಾನೆ. ಮತ್ತು ಮನುಷ್ಯರ ಮಕ್ಕಳೂ, ಭೂಮಿಯ
ಮೃಗಗಳೂ, ಆಕಾಶದ ಪಕ್ಷಿಗಳೂ, ನಿವಾಸಿಸುವಂಥಾದ್ದೆಲ್ಲಾ ಅ
ವನು ನಿನ್ನ ಕೈಯಲ್ಲಿ ಕೊಟ್ಟು, ಅವೆಲ್ಲವುಗಳಿಗೆ ನಿನ್ನನ್ನು ಪ್ರ
ಭುವಾಗ ಮಾಡಿದ್ದಾನೆ; ಈ ಭಂಗಾರದ ತಲೆಯು ನೀನೇ. ಮತ್ತು
3೯ ನಿನ್ನ ತರುವಾಯ ನಿನಗಿಂತ ಕಡಿಮೆಯಾದ ಇನ್ನೊಂದು ರಾಜ್ಯ
ಹುಟ್ಟುವದು; ಮತ್ತು ಮೂರನೇದು, ಇನ್ನೊಂದು ಹಿತ್ತಾಳೆಯ
ರಾಜ್ಯವು, ಇದು ಸಮಸ್ತ ಭೂಮಿಯ ಮೇಲೆ ಥೊರೆತನ ಮಾಡು
೪೦ ವದು. ಮತ್ತು ನಾಲ್ಕನೇ ರಾಜ್ಯವು ಕಬ್ಬಿಣದ ಹಾಗೆ ಬಲವಾಗಿರು

ವದು; ಯಾಕಂದರೆ ಕಬ್ಬಿಣವು ಸಮಸ್ತವನ್ನು ಪುಡಿಪುಡಿ ಮಾಡಿ,
ವಶ ಮಾಡುತ್ತದೆ; ಇವುಗಳನ್ನೆಲ್ಲಾ ಒಡದು ಬಿಡುವ ಕಬ್ಬಿಣದ
ಹಾಗೆ ಅದು ಪುಡಿಪುಡಿ ಮಾಡಿ ಜಜ್ಜೆಯುತ್ತಾ ಬರುವದು. ಮತ್ತು
೪೧ ನೀನು ಪಾದಗಳನ್ನೂ ಕಾಲ್ಬೆರಳುಗಳನ್ನೂ ಅರ್ಧ ಕುಂಬಾರನ
ಮಣ್ಣಿನಿಂದಲೂ, ಅರ್ಧ ಕಬ್ಬಿಣದಿಂದಲೂ, ಉಂಟಾದವುಗಳೆಂದು
ನೋಡಿದಿಯಲ್ಲಾ? ಹಾಗೆಯೇ ಆ ರಾಜ್ಯವು ವಿಭಾಗಿಸಿ ಇರುವದು;
ಆದರೆ ನೀನು ಜೇಡಿ ಮಣ್ಣಿನ ಸಂಗಡ ಕಲಿಸಿದ ಕಬ್ಬಿಣವನ್ನು
ನೋಡಿದ ಪ್ರಕಾರ ಕಬ್ಬಿಣದ ಬಲವು ಅದರಲ್ಲಿ ಇರುವದು. ಮತ್ತು
೪೨ ಪಾದಗಳ ಬೆರಳುಗಳು, ಅರ್ಧ ಕಬ್ಬಿಣದಿಂದಲೂ, ಅರ್ಧ ಮಣ್ಣಿ
ನಿಂದಲೂ, ಉಂಟಾದ ಪ್ರಕಾರ, ರಾಜ್ಯವು ಲರ್ಧ ಬಲವಾಗಿಯೂ,
೪೩ ಅರ್ಧ ಮುರಿದದ್ದಾಗಿಯೂ, ಇರುವದು. ಮತ್ತು ನೀನು, ಕಬ್ಬಿಣ
ವು ಜೇಡಿ ಮಣ್ಣಿನ ಸಂಗಡ ಕಲಿಸಿರುವದನ್ನು ನೋಡಿದ ಪ್ರಕಾರ,
ಅವರು ಮನುಷ್ಯರ ಬೀಜದಿಂದ ಕಲತು ಕೊಳ್ಳುವರು; ಆದರೆ
ಕಬ್ಬಿಣವು ಮಣ್ಣಿನ ಸಂಗಡ ಕೂಡಿಕೊಳ್ಳದ ಪ್ರಕಾರವೇ ಅವರು
೪೪ ಒಬ್ಬರ ಸಂಗಡಲೊಬ್ಬರು ಹತ್ತದೆ ಇರುವರು. ಮತ್ತು ಈ ಅರಸ
ರ ದಿವಸಗಳಲ್ಲಿ ಪರಲೋಕದ ದೇವರು ಎಂದಿಗೂ ನಾಶವಾಗದ
ರಾಜ್ಯವನ್ನು ಸ್ಥಾಪಿಸುವನು; ಇದರ ಆಳ್ವಿಕೆಯು ಬೇರೆ ಜನರಿಗೆ
ಬಿಡಲ್ಪಟ್ಟತೆ, ಇದು ಆ ರಾಜ್ಯಗಳನ್ನೆಲ್ಲಾ ಪುಡಿಪುಡಿ ಮಾಡಿ, ಮುಗಿ
೪೫ ಸಿ, ತಾನು ಎಂದೆಂದಿಗೂ ನಿಲ್ಲುವದು. ಆ ಕಲ್ಲು ಕೈಗಳ ಸಹಾ
ಯವಿಲ್ಲದೆ ಬೆಟ್ಟದೊಳಗಿಂದ ಕೆತ್ತಲ್ಪಟ್ಟು, ಕಬ್ಬಿಣವನ್ನೂ ಹಿತ್ತಾ
ಳೆಯನ್ನೂ ಮಣ್ಣನ್ನೂ ಬೆಳ್ಳಿಯನ್ನೂ ಬಂಗಾರವನ್ನೂ ಪುಡಿ
ಪುಡಿ ಮಾಡಿತೆಂದು ನೀನು ನೋಡಿದ್ದು ಇದೇ. ದೊಡ್ಡ ದೇವರು
ಇನ್ನು ಮೇಲೆ ಸಂಭವಿಸುವಂಥಾದ್ದನ್ನು ಅರಸನಿಗೆ ತಿಳಿಯ
ಮಾಡಿದ್ದಾನೆ; ಕನಸು ನಿಶ್ಚಯವೇ; ಅದರ ಅಭಿಪ್ರಾಯವು
ಸತ್ಯವೇ.

೪೬ ಆಗ ಅರಸನಾದ ನೆಬುಕದ್ನೆಚ್ಚರನು ಮೋರೆ ಕೆಳಗಾಗಿ ಬಿದ್ದು,
ದಾನಿಯೇಲನಿಗೆ ನಮಸ್ಕರಿಸಿ, ಅವನಿಗೆ ಕಾಣಿಕೆಯನ್ನೂ ಸುವಾ
೪೭ ಸನೆಗಳನ್ನೂ ಅರ್ಪಿಸ ಬೇಕೆಂದು ಆಜ್ಞಾಪಿಸಿದನು. ಅರಸನು ದಾ
ನಿಯೇಲನಿಗೆ ಉತ್ತರವಾಗಿ ಹೇಳಿದ್ದು—ನೀನು ಈ ಮರ್ಮವನ್ನು
ಪ್ರಕಟಿ ಮಾಡ ಸಮರ್ಥನಾದದರಿಂದ, ನಿಶ್ಚಯವಾಗಿ ನಿಮ್ಮ ದೇ
ವರು ದೇವರುಗಳ ದೇವರಾಗಿಯೂ, ಅರಸುಗಳ ಕರ್ತನಾಗಿಯೂ,
೪೮ ಮರ್ಮಗಳನ್ನು ಪ್ರಕಟಿ ಮಾಡುವವನಾಗಿಯೂ, ಇದ್ದಾನೆ. ಆಗ
ಅರಸನು ದಾನಿಯೇಲನನ್ನು ದೊಡ್ಡವನಾಗ ಮಾಡಿ, ಅವನಿಗೆ
ಅನೇಕ ದೊಡ್ಡ ಬಹುಮಾನಗಳನ್ನು ಕೊಟ್ಟು, ಸಮಸ್ತ ಬಾಬೆಲ್
ಸೀಮೆಗೆ ಅಧಿಕಾರಿಯಾಗಿಯೂ, ಬಾಬೆಲಿನ ಸಮಸ್ತ ಜ್ಞಾನಿಗಳಿಗೆ
೪೯ ಮುಖ್ಯಾಧಿಪತಿಯಾಗಿಯೂ, ನೇಮಿಸಿದನು. ಆಗ ದಾನಿಯೇಲ
ನು ಅರಸನನ್ನು ಬೇಡಿ ಕೊಂಡದರಿಂದ, ಅವನು ಶದ್ರಾಕನನ್ನೂ
ಮೇಶಾಕನನ್ನೂ ಅಬೆದ್ನಿಗೋವನನ್ನೂ ಬಾಬೆಲ್ ಸೀಮೆಯ ಕೆಲ
ಸಗಳ ಮೇಲೆ ಇಟ್ಟನು; ಆದರೆ ದಾನಿಯೇಲನು ಅರಸನ ಬಾಗಲ
ಲ್ಲಿ ಕೂತು ಕೊಂಡನು.

## ೩. ಸಂಧಿ.

೧ ಅರಸನಾದ ನೆಬುಕದ್ನೆಚ್ಚರನು ಅರವತ್ತು ಮೊಳ ಎತ್ತರವಾಗಿ
ಯೂ, ಆರು ಮೊಳ ಅಗಲವಾಗಿಯೂ, ಇರುವ ಒಂದು ಬಂಗಾ
ರದ ವಿಗ್ರಹವನ್ನು ಮಾಡಿಸಿ, ಬಾಬೆಲ್ ಸೀಮೆಯಲ್ಲಿರುವ ದೂರೆಂ
೨ ಬ ಬೈಲಿನಲ್ಲಿ ಇರಿಸಿದನು. ಆಗ ಅರಸನಾದ ನೆಬುಕದ್ನೆಚ್ಚರನು,
ಪ್ರಭುಗಳನ್ನೂ, ಸುಬೆದಾರರನ್ನೂ, ಅಧಿಕಾರಸ್ತರನ್ನೂ, ನ್ಯಾ
ಯಾಧಿಪತಿಗಳನ್ನೂ, ಬೊಕ್ಕಸದವರನ್ನೂ, ಮಂತ್ರಿಗಳನ್ನೂ,
ಪಂಡಿತರನ್ನೂ, ಎಲ್ಲಾ ಪಾಳ್ಯಗಾರರನ್ನೂ, ಅರಸನಾದ ನೆಬುಕ
ದ್ನೆಚ್ಚರನು ಇರಿಸಿ ಇದ್ದ ವಿಗ್ರಹದ ಪ್ರತಿಷ್ಟೆಗೆ ಕೂಡ ಕರೆಯ ಕ
೩ ಳುಹಿಸಿದನು. ಆಗ ಪ್ರಭುಗಳೂ, ಸುಬೆದಾರರೂ, ಅಧಿಕಾರಸ್ತ
ರೂ, ನ್ಯಾಯಾಧಿಪತಿಗಳೂ, ಬೊಕ್ಕಸದವರೂ, ಮಂತ್ರಿಗಳೂ,
ಪಂಡಿತರೂ, ಎಲ್ಲಾ ಪಾಳ್ಯಗಾರರೂ, ಅರಸನಾದ ನೆಬುಕದ್ನೆಚ್ಚ
ರನು ಇರಿಸಿ ಇದ್ದ ವಿಗ್ರಹದ ಪ್ರತಿಷ್ಟೆಗೆ ಕೂಡಿ ಬಂದರು. ಮತ್ತು
ನೆಬುಕದ್ನೆಚ್ಚರನು ಇರಿಸಿ ಇದ್ದ ವಿಗ್ರಹದ ಮುಂದೆ ನಿಂತರು.
೪ ಆಗ ಸಾರುವವನು ಘಟ್ಟಿಯಾಗಿ ಕೂಗಿದ್ದು—ಪ್ರಜೆಗಳೇ, ಜನಾಂ
ಗಗಳೇ, ಭಾಷೆಯವರೇ! ನಿಮಗೆ ಹೇಳುವದೇನಂದರೆ—ನೀವು,
೫ ಕೊಂಬು, ಪಿಳ್ಳಂಗೋವಿ, ತಂಬೂರಿ, ವೀಣೆ, ಕಿನ್ನರಿ, ನಾಗಸ್ವರ,
ಮೊದಲಾದ ವಾದ್ಯಗಳ ಶಬ್ದವನ್ನು ಕೇಳುವಾಗ, ಅಡ್ಡ ಬಿದ್ದು, ಅ
ರಸನಾದ ನೆಬುಕದ್ನೆಚ್ಚರನು ಇರಿಸಿರುವ ಬಂಗಾರದ ವಿಗ್ರಹವನ್ನು
ಆರಾಧಿಸ ಬೇಕು. ಮತ್ತು ಯಾರು ಅಡ್ಡ ಬೀಳದೆ, ಆರಾಧಿಸದೆ, ಇ
೬ ರುವನೋ ಅವನು ಅದೇ ಘಳಿಗೆಯಲ್ಲಿ ಉರಿಯುವ ಬೆಂಕಿ ಭಟ್ಟಿ
ಯ ಮಧ್ಯದಲ್ಲಿ ದೊಬ್ಬಲ್ಪಟ್ಟುವನು.

೭ ಆದದರಿಂದ ಆ ಸಮಯದಲ್ಲಿ, ಜನರೆಲ್ಲರು, ಕೊಂಬು, ಪಿಳ್ಳಂ
ಗೋವಿ, ತಂಬೂರಿ, ವೀಣೆ, ಕಿನ್ನರಿ, ಮೊದಲಾದ ವಾದ್ಯಗಳ ಶ
ಬ್ದವನ್ನು ಕೇಳುವಾಗ, ಎಲ್ಲಾ ಪ್ರಜೆಗಳೂ, ಜನಾಂಗಗಳೂ, ಭಾಷೆ
ಯವರೂ, ಅಡ್ಡ ಬಿದ್ದು, ಅರಸನಾದ ನೆಬುಕದ್ನೆಚ್ಚರನು ಇರಿಸಿ ಇ
೮ ದ್ದ ವಿಗ್ರಹವನ್ನು ಆರಾಧಿಸಿದರು. ಆದರೆ ಆ ಸಮಯದಲ್ಲಿ ಕಸ್ದೀಯ
ರಾದ ಜನರು ಸಮೀಪಕ್ಕೆ ಬಂದು, ಎಹೂದ್ಯರ ಮೇಲೆ ಶಪ್ಪು ಹೊ
೯ ಟಿಸಿದರು. ಅವರು ಮಾತಾಡಿ ಅರಸನಾದ ನೆಬುಕದ್ನೆಚ್ಚರನಿಗೆ
೧೦ ಹೇಳಿದ್ದು—ಅರಸನೇ, ನಿರಂತರ ಬಾಳು. ಓ ಅರಸೇ, ನೀನು ಒಂ
ದು ನಿರ್ಣಯ ಮಾಡಿದ್ದೀಯಲ್ಲ? ಏನಂದರೆ, ಪ್ರತಿ ಮನುಷ್ಯನು,
ಕೊಂಬು, ಪಿಳ್ಳಂಗೋವಿ, ತಂಬೂರಿ, ವೀಣೆ, ಕಿನ್ನರಿ, ನಾಗಸ್ವರ
ಮೊದಲಾದ ವಾದ್ಯಗಳ ಶಬ್ದವನ್ನು ಕೇಳಲು, ಅಡ್ಡ ಬಿದ್ದು, ಭಂಗಾ
ರದ ವಿಗ್ರಹವನ್ನು ಆರಾಧಿಸ ಬೇಕೆಂದೂ, ಅಡ್ಡ ಬೀಳದೆ, ಆರಾ
೧೧ ಧಿಸದೆ, ಇರುವವನು, ಉರಿಯುವ ಬೆಂಕಿ ಭಟ್ಟಿಯ ಮಧ್ಯದಲ್ಲಿ
೧೨ ದೊಬ್ಬಲ್ಪಡ ಬೇಕೆಂದೂ, ಆಜ್ಞೆ ಕೊಟ್ಟಿಯಲ್ಲ? ಈಗ ನೀನು ಬಾ
ಬೆಲ್ ಸೀಮೆಯ ಕೆಲಸಗಳ ಮೇಲೆ ಇಟ್ಟಿರುವ ಕೆಲ ಯೆಹೂದ್ಯರು
ಇದ್ದಾರೆ, ಅಂದರೆ, ಶದ್ರಾಕ್, ಮೇಶಾಕ್, ಅಬೆದ್ನಿಗೋ, ಇವ
ರೇ. ಓ ಅರಸೇ, ಈ ಮನುಷ್ಯರು ನಿನ್ನನ್ನು ಲಕ್ಷ್ಯ ಮಾಡಲಿ
ಲ್ಲ; ಅವರು ನಿನ್ನ ದೇವರುಗಳನ್ನು ಸೇವಿಸುವದಾದರೂ, ನೀನು
ಇರಿಸಿದ ಭಂಗಾರದ ವಿಗ್ರಹವನ್ನು ಆರಾಧಿಸುವದಾದರೂ, ಇಲ್ಲ.
೧೩ ಆಗ ನೆಬುಕದ್ನೆಚ್ಚರನು ಕೋಪವೂ ರೌದ್ರವೂ ಉಳ್ಳವನಾಗಿ,
ಶದ್ರಾಕನನ್ನೂ ಮೇಶಾಕನನ್ನೂ ಅಬೆದ್ನಿಗೋವನನ್ನೂ ಕರಿಸ
ಹೇಳಿದನು; ಹಾಗೆ ಈ ಮನುಷ್ಯರನ್ನು ಅರಸನ ಮುಂದೆ ತಂದ
೧೪ ರು. ನೆಬುಕದ್ನೆಚ್ಚರನು ಮಾತಾಡಿ ಅವರಿಗೆ ಹೇಳಿದ್ದೇನಂದರೆ—
ಶದ್ರಾಕನೇ, ಮೇಶಾಕನೇ, ಅಬೆದ್ನಿಗೋವನೇ, ನೀವು ಬೇಕೆಂದು
ನನ್ನ ದೇವರುಗಳನ್ನು ಸೇವಿಸದೆ, ನಾನು ಇರಿಸಿರುವ ಭಂಗಾರದ
೧೫ ವಿಗ್ರಹವನ್ನು ಆರಾಧಿಸದೆ, ಇದ್ದೀರೋ? ಈಗ ನೀವು ಸಿದ್ಧವಾಗಿ
ದ್ದು, ಕೊಂಬು, ಪಿಳ್ಳಂಗೋವಿ, ತಂಬೂರಿ, ವೀಣೆ, ಕಿನ್ನರಿ, ನಾ



ಗಸ್ವರ, ಮೊದಲಾದ ವಾದ್ಯಗಳ ಶಬ್ದವನ್ನು ಕೇಳುವ ಸಮಯ
ದಲ್ಲಿ ಅಡ್ಡ ಬಿದ್ದು, ನಾನು ಮಾಡಿಸಿರುವ ವಿಗ್ರಹವನ್ನು ಆರಾಧಿಸಿ
ದರೆ, ಸರಿ; ಆರಾಧಿಸದಿದ್ದರೆ, ಅದೇ ಘಳಿಗೆಯಲ್ಲಿ ಉರಿಯುವ
ಬೆಂಕಿ ಭಟ್ಟಿಯ ಮಧ್ಯದಲ್ಲಿ ದೊಬ್ಬಲ್ಪಡುವಿರಿ; ಮತ್ತು ನನ್ನ ಕೈ
೧೬ ಯೊಳಗಿಂದ ನಿಮ್ಮನ್ನು ತಪ್ಪಿಸುವ ದೇವರು ಯಾರು? ಶದ್ರಾಕ
ನೂ, ಮೇಶಾಕನೂ, ಅಬೆದ್ನಿಗೋವನೂ, ಅರಸನಿಗೆ ಪ್ರತ್ಯುತ್ತ
ರವಾಗಿ ಹೇಳಿದ್ದೇನಂದರೆ—ನೆಬುಕದ್ನೆಚ್ಚರನೇ, ಇದರ ವಿಷಯ
೧೭ ನಾವು ನಿನಗೆ ಉತ್ತರ ಕೊಡ ಕೆಲಸವಿಲ್ಲ. ನಿಶ್ಚಯವಾಗಿ ನಾವು
ಸೇವಿಸುವ ನಮ್ಮ ದೇವರು ನಮ್ಮನ್ನು ಉರಿಯುವ ಬೆಂಕಿಯ ಭ
ಟ್ಟಿಯೊಳಗಿಂದ ತಪ್ಪಿಸ ಸಮರ್ಥನಾಗಿದ್ದಾನೆ; ಮತ್ತು ಅರಸನೇ,
೧೮ ನಿನ್ನ ಕೈಯೊಳಗಿಂದ ನಮ್ಮನ್ನು ತಪ್ಪಿಸುವನು. ಆದರೆ ತಪ್ಪಿಸದಿ
ದ್ದರೂ, ನಾವು ನಿನ್ನ ದೇವರುಗಳನ್ನು ಸೇವಿಸುವದಿಲ್ಲವೆಂದೂ,
ನೀನು ಇರಿಸಿರುವ ಭಂಗಾರದ ವಿಗ್ರಹವನ್ನು ಆರಾಧಿಸುವದಿಲ್ಲವೆಂ
ದೂ, ನಿನಗೆ ತಿಳಿದಿರಲಿ, ಅರಸನೇ.

೧೯ ಆಗ ನೆಬುಕದ್ನೆಚ್ಚರನು ಉಗ್ರದಿಂದ ತುಂಬಿದವನಾಗಿ, ಅವನ
ಮುಖದ ರೂಪವು ಶದ್ರಾಕನಿಗೂ, ಮೇಶಾಕನಿಗೂ, ಅಬೆದ್ನಿ
ಗೋವನಿಗೂ, ವಿರೋಧವಾಗಿ ಬೇರೆ ಆಯಿತು, ಅವನು ಮಾತಾ
ಡಿ, ಆ ಭಟ್ಟಿಯನ್ನು ಸಾಧಾರಣವಾದ ಉರಿಗಿಂತ ಏಳ್ಪಟ್ಟು ಹೆ
೨೦ ಚ್ಚಾಗಿ ಉರಿಯ ಮಾಡ ಬೇಕೆಂದು, ಆಜ್ಞಾಪಿಸಿದನು. ಮತ್ತು
ತನ್ನ ಸೈನ್ಯದಲ್ಲಿರುವ ಅಧಿಕ ಬಲಿಷ್ಠರಾದವರು, ಶದ್ರಾಕನನ್ನೂ
ಮೇಶಾಕನನ್ನೂ ಅಬೆದ್ನಿಗೋವನನ್ನೂ ಕಟ್ಟಿ, ಉರಿಯುವ
೨೧ ಬೆಂಕಿಯ ಭಟ್ಟಿಯಲ್ಲಿ ಹಾಕ ಬೇಕೆಂದು, ಆಜ್ಞಾಪಿಸಿದನು. ಆಗ
ಈ ಮನುಷ್ಯರು, ತಮ್ಮ ಈಜಾರುಗಳೂ ಅಂಗಿಗಳೂ ಶಲ್ಯಗ
ಳೂ ಮೊದಲಾದ ವಸ್ತ್ರಗಳೂ ಉಳ್ಳವರಾಗಿ ಕಟ್ಟಲ್ಪಟ್ಟು, ಉ
೨೨ ರಿಯುವ ಬೆಂಕಿಯ ಭಟ್ಟಿಯಲ್ಲಿ ಹಾಕಲ್ಪಟ್ಟರು. ಅರಸನ ಅಪ್ಪ
ಣೆ ಅವಸರವಾಗಿಯೂ, ಭಟ್ಟಿಯು ಬಹಳ ಉರಿಯಾಗಿಯೂ,
ಇದ್ದದರಿಂದ, ಬೆಂಕಿಯ ಜ್ವಾಲೆಯು, ಶದ್ರಾಕ್, ಮೇಶಾಕ್, ಅಬೆ
ದ್ನಿಗೋವರನ್ನು ಮೇಲಕ್ಕೆ ಎತ್ತಿದ ಆ ಮನುಷ್ಯರನ್ನು ಸಂಹರಿ
೨೩ ಸಿತು. ಮತ್ತು ಶದ್ರಾಕ್, ಮೇಶಾಕ್, ಅಬೆದ್ನಿಗೋವೆಂಬ ಈ
ಮೂರು ಮನುಷ್ಯರು ಕಟ್ಟಲ್ಪಟ್ಟವರಾಗಿ ಉರಿಯುವ ಬೆಂಕಿ
ಭಟ್ಟಿಯ ಮಧ್ಯದಲ್ಲಿ ಬಿದ್ದರು.

೨೪ ಆಗ ಅರಸನಾದ ನೆಬುಕದ್ನೆಚ್ಚರನು ವಿಸ್ಮಯಗೊಂಡು, ತ್ವ
ರೆಯಾಗಿ ಎದ್ದು, ತನ್ನ ಮಂತ್ರಿಗಳ ಸಂಗಡ ಮಾತಾಡಿ, ಹೇಳಿದ್ದೇ
ನಂದರೆ—ನಾವು ಮೂರು ಮನುಷ್ಯರನ್ನು ಕಟ್ಟಲ್ಪಟ್ಟವರಾಗಿ
ಬೆಂಕಿಯ ಮಧ್ಯದಲ್ಲಿ ಹಾಕಿದೆವಲ್ಲ? ಅವರು ಅರಸನಿಗೆ ಪ್ರತ್ಯುತ್ತರ
೨೫ ವಾಗಿ—ಹೌದು, ಅರಸನೇ, ಅಂದರು. ಅವನು ಪ್ರತ್ಯುತ್ತರವಾ
ಗಿ ಹೇಳಿದ್ದು—ಇಗೋ ನಾನು ನಾಲ್ಕು ಮನುಷ್ಯರನ್ನು ಬಿಡುಗ
ಡೆಯವರಾಗಿ ಬೆಂಕಿಯ ಮಧ್ಯದಲ್ಲಿ ನಡಿಯುವದನ್ನು ನೋಡು
ತ್ತೇನೆ, ಮತ್ತು ಅವರಿಗೆ ನಷ್ಟವಿಲ್ಲ; ಇದಲ್ಲದೆ ನಾಲ್ಕನೇಯವನ
೨೬ ರೂಪವು ದೇವರ ಮಗನ ಹಾಗಿದೆ. ಆಗ ನೆಬುಕದ್ನೆಚ್ಚರನು
ಉರಿಯುವ ಬೆಂಕಿ ಭಟ್ಟಿಯ ಬಾಯಿಯ ಸಮೀಪಕ್ಕೆ ಬಂದು,
ಮಾತಾಡಿ, ಹೇಳಿದ್ದೇನಂದರೆ—ಓ ಶದ್ರಾಕ್, ಮೇಶಾಕ್, ಅಬೆದ್ನಿ
ಗೋವರೇ, ಮಹೋನ್ನತ ದೇವರ ಸೇವಕರೇ, ಹೊರಗೆ ಬನಿ.
ಆಗ ಶದ್ರಾಕನೂ, ಮೇಶಾಕನೂ, ಅಬೆದ್ನಿಗೋವನೂ, ಬೆಂಕಿಯೊ
೨೭ ಳಗಿಂದ ಹೊರಗೆ ಬಂದರು. ಆಗ ಪ್ರಭುಗಳೂ, ಸುಬೆದಾರರೂ,
ಅಧಿಪತಿಗಳೂ, ಅರಸನ ಮಂತ್ರಿಗಳೂ, ಕೂಡಿ ಕೊಂಡು—ಅವ
ರ ಶರೀರಗಳ ಮೇಲೆ ಬೆಂಕಿಗೆ ಬಲವಿಲ್ಲದಂಥ, ಅವರ ತಲೆ ಕೂದ
ಲುಗಳಲ್ಲಿ ಒಂದಾದರೂ ಸುಡದಂಥ, ಅವರ ಅಂಗಿಗಳು ಬೇರೆ ಆ
ಗದಂಥ, ಬೆಂಕಿಯ ವಾಸನೆ ಸಹ ಅವರ ಮೇಲೆ ದಾಟದಂಥ, ಆ
ಮನುಷ್ಯರನ್ನು ಕಂಡರು.

೨೮ ಆಗ ನೆಬುಕದ್ನೆಚ್ಚರನು ಮಾತಾಡಿ ಹೇಳಿದ್ದೇನಂದರೆ—ಶದ್ರಾ
ಕ್, ಮೇಶಾಕ್, ಅಬೆದ್ನಿಗೋವರ ದೇವರು ಸ್ತುತಿಸಲ್ಪಡಲಿ; ಅವ
ನು ತನ್ನ ದೂತನನ್ನು ಕಳುಹಿಸಿ, ತನ್ನಲ್ಲಿ ನಂಬಿಕೆ ಇಟ್ಟಂಥ,
ಅರಸನ ಆಜ್ಞೆಯನ್ನು ವಿಮಾರದಂಥ, ಸ್ವಂತ ದೇವರನ್ನೇ ಹೊ
ರ್ತು ಬೇರೆ ದೇವರನ್ನು ಸೇವಿಸದೆ ಆರಾಧಿಸದೆ ಇರುವ ಹಾಗೆ,
ತಮ್ಮ ಶರೀರಗಳನ್ನು ಒಪ್ಪಿಸಿದಂಥ, ತನ್ನ ಸೇವಕರನ್ನು ರಕ್ಷಿಸಿ
ದ್ದಾನೆ. ಆದದರಿಂದ ನಾನು ನಿರ್ಣಯ ಮಾಡುವದೇನಂದರೆ—
೨೯ ಸಕಲ ಪ್ರಜೆ ಜನಾಂಗ ಭಾಷೆಗಳಲ್ಲಿ ಯಾರು ಶದ್ರಾಕ್, ಮೇ
ಶಾಕ್, ಅಬೆದ್ನಿಗೋವರ ದೇವರಿಗೆ ವಿರೋಧವಾಗಿ ದೂಷಣೆ ಹೇ
ಳುವರೋ ಅವರು ತುಂಡು ತುಂಡಾಗಿ ಕೊಯ್ಯಲ್ಪಟ್ಟು, ಅವರ
ಮನೆಗಳು ಶಿಪ್ಪೆ ಮಾಡಲ್ಪಡ ಬೇಕು; ಯಾಕಂದರೆ ಈ ವಿಧವಾಗಿ
೩೦ ರಕ್ಷಿಸುವ ದೇವರು ಇನ್ನಾರು ಇಲ್ಲ. ಆಗ ಅರಸನು ಶದ್ರಾಕ್,
ಮೇಶಾಕ್, ಅಬೆದ್ನಿಗೋವರನ್ನು ಬಾಬೆಲ್ ಸೀಮೆಯಲ್ಲಿ ಹೆಚ್ಚಿ
ಸಿದನು.

## ೪. ಸಂಧಿ.

೧ ಅರಸನಾದ ನೆಬುಕದ್ನೆಚ್ಚರನು, ಭೂಲೋಕದೆಲ್ಲೆಲ್ಲಿಯೂ
ವಾಸ ಮಾಡುವ ಸಕಲ ಪ್ರಜೆಗಳಿಗೂ, ಜನಾಂಗಗಳಿಗೂ, ಭಾಷೆ
ಯವರಿಗೂ—ನಿಮಗೆ ಕ್ಷೇಮ ಹೆಚ್ಚಾಗಲಿ. ಉನ್ನತನಾದ ದೇವರು
೨ ನನ್ನ ವಿಷಯ ನಡಿಸಿರುವ ಗುರುತುಗಳನ್ನೂ ಅದ್ಭುತಗಳನ್ನೂ
೩ ತಿಳಿಸ ನನಗೆ ಒಳ್ಳೇದೆಂದು ಕಾಣಿಸಿತು. ಅವನ ಗುರುತುಗಳು
ಎಷ್ಟೋ ದೊಡ್ಡವುಗಳು! ಅವನ ಅದ್ಭುತಗಳು ಎಷ್ಟೋ ಶ್ರೇಷ್ಠ
ವಾದವುಗಳು! ಅವನ ರಾಜ್ಯವು, ನಿತ್ಯವಾದ ರಾಜ್ಯವು. ಅವನ ಅ
೪ ಧಿಕಾರವು ತಲತಲಾಂತರಗಳಿಗೂ ಅದೆ. ನೆಬುಕದ್ನೆಚ್ಚರನೆಂಬ
ನಾನು ನನ್ನ ಮನೆಯಲ್ಲಿ ಕ್ಷೇಮವಾಗಿಯೂ, ನನ್ನ ಅರಮನೆಯ
ಲ್ಲಿ ಸುಖವಾಗಿಯೂ, ಇರಲಾಗಿ, ನನ್ನನ್ನು ಭಯ ಪಡಿಸುವ ಒಂ
೫ ದು ಕನಸನ್ನು ಕಂಡೆನು. ನನ್ನ ಮಂಚದ ಮೇಲಾದ ಯೋಚ
ನೆಗಳೂ, ನನ್ನ ತಲೆಯ ದರ್ಶನಗಳೂ, ನನ್ನನ್ನು ಕಳವಳ ಪಡಿಸಿ
೬ ದವು. ಆದದರಿಂದ ಕನಸಿನ ಅಭಿಪ್ರಾಯವನ್ನು ನನಗೆ ತಿಳಿಸುವ
ಬಗ್ಯೆ, ಬಾಬೆಲಿನ ಸಕಲ ಜ್ಞಾನಿಗಳನ್ನು ನನ್ನ ಮುಂದೆ ತರ ಬೇ
೭ ಕೆಂದು ಆಜ್ಞಾಪಿಸಿದೆನು. ಆಗ ಮಂತ್ರಗಾರರೂ ಜೋಶಿಯ್ಯರೂ
ಕಸ್ದೀಯರೂ ಲಕ್ಷಣೀಕರೂ ಬಳಿಗೆ ಬಂದರು; ಮತ್ತು ನಾನು ಕ
ನಸನ್ನು ಅವರ ಮುಂದೆ ತಿಳಿಸಿದೆನು; ಆದರೆ ಅವರು ಅದರ ಅಭಿ
೮ ಪ್ರಾಯವನ್ನು ನನಗೆ ತಿಳಿಸಲಿಲ್ಲ. ಕಡೆಯಲ್ಲಿ ನನ್ನ ದೇವರ ಹೆ
ಸರಿನ ಹಾಗೆ ಬೆತ್ತಿಶಾಸರನೆಂಬ ಹೆಸರುಳ್ಳವನಾಗಿಯೂ, ಪರಿಶು
ದ್ಧ ದೇವರುಗಳ ಆತ್ಮವನ್ನು ಹೊಂದಿದವನಾಗಿಯೂ, ಇರುವ
ದಾನಿಯೇಲನು, ನನ್ನ ಮುಂದೆ ಬಳಿಗೆ ಬಂದನು; ಅವನಿಗೆ ನಾನು
೯ ಕನಸನ್ನು ತಿಳಿಸಿ ಹೇಳಿದ್ದೇನಂದರೆ—ಮಂತ್ರಗಾರರ ಯಜಮಾನ
ನಾದ ಬೆತ್ತಿಶಾಸರನೇ, ನಿನ್ನಲ್ಲಿ ಪರಿಶುದ್ಧ ದೇವರುಗಳ ಆತ್ಮ ಉಂ
ಟೆಂದೂ, ಯಾವ ಮರ್ಮವು ನಿನ್ನನ್ನು ಕಷ್ಟ ಪಡಿಸಲೆಂದೂ,
ನಾನು ಬಲ್ಲೆನು; ನಾನು ಕಂಡ ಕನಸಿನ ದರ್ಶನಗಳನ್ನೂ, ಅದರ

೧೦ ಅಭಿಪ್ರಾಯವನ್ನೂ ನನಗೆ ಹೇಳು. ನನ್ನ ಮಂಚದಲ್ಲಿ ಉಂಟಾ
ದ ನನ್ನ ತಲೆಯ ದರ್ಶನಗಳು ಹ್ಯಾಗಂದರೆ—ನಾನು ನೋಡಲಾ
ಗಿ, ಇಗೋ, ಭೂಮಧ್ಯದಲ್ಲಿ ಒಂದು ಮರವು; ಅದರ ಎತ್ತರವು
೧೧ ಬಹಳವಾಗಿತ್ತು. ಆ ಮರವು ಬೆಳೆದು, ಬಲವಾಯಿತು; ಅದರ ಎ
ತ್ತರವು ಆಕಾಶಕ್ಕೂ, ಅದರ ದೃಷ್ಟಿಯು ಭೂದಿಗಂತದ ವರಿಗೂ,
೧೨ ಮುಟ್ಟಿತು. ಅದರ ಎಲೆಗಳು ಚನ್ನಾಗಿದ್ದವು; ಅದರ ಫಲವು ಬ
ಹಳ್ಳವಾಗಿತ್ತು; ಅದರಲ್ಲಿ ಎಲ್ಲರಿಗೂ ಆಹಾರವಿತ್ತು; ಹೊಲದ ಮೃ
ಗಗಳಿಗೆ ಅದರ ಕೆಳಗೆ ನೆಳಲಿತ್ತು; ಆಕಾಶದ ಪಕ್ಷಿಗಳು ಅದರ
ಕೊಂಬೆಗಳಲ್ಲಿ ವಾಸಿಸಿದವು; ಸಕಲ ಮಾಂಸಕ್ಕೆ ಅದರಿಂದಲೇ ಆ
೧೩ ಹಾರ ಬರುತ್ತಿತ್ತು. ನನ್ನ ಮಂಚದ ಮೇಲೆ, ನನ್ನ ತಲೆಯ ದರ್ಶ
ನಗಳಲ್ಲಿ ನಾನು ನೋಡಲಾಗಿ, ಇಗೋ, ಪಾಲಕನು, ಪರಿಶುದ್ಧ
೧೪ ನೊಬ್ಬನು, ಪರಲೋಕದಿಂದ ಇಳಿದು ಬಂದನು. ಅವನು ಘಟ್ಟಿ
ಯಾಗಿ ಕೂಗಿ ಹೀಗೆ ಹೇಳಿದನು—ಮರವನ್ನು ಕಡಿದು, ಅದರ
ಕೊಂಬೆಗಳನ್ನು ಕತ್ತರಿಸಿ, ಅದರ ಎಲೆಗಳನ್ನು ಉದುರಿಸಿ, ಅದರ
ಫಲವನ್ನು ಚದರಿಸಿರಿ; ಮೃಗಗಳು ಅದರ ಕೆಳಗಿನಿಂದಲೂ, ಪಕ್ಷಿ
೧೫ ಗಳು ಅದರ ಕೊಂಬೆಗಳಿಂದಲೂ, ಹೋಗಿ ಬಿಡಲಿ. ಆದಾಗ್ಯೂ
ಅದರ ಬೇರಿನ ಮೋಟನ್ನು, ಕಬ್ಬಿಣ ಹಿತ್ತಾಳೆಗಳ ಕಟ್ಟು ಉಳ್ಳ
ದ್ದಾಗಿ, ಭೂಮಿಯಲ್ಲಿಯೂ, ಹೊಲದ ಎಳ್ಳೇ ಹುಲ್ಲಿನಲ್ಲಿಯೂ,
ಬಿಡಿರಿ; ಅದು ಆಕಾಶದ ಮಂಜಿನಿಂದ ತ್ಯಾವವಾಗಲಿ; ಅದರ ಪಾ
೧೬ ಲು ಮೃಗಗಳ ಸಂಗಡ ಹೊಲದ ಹುಲ್ಲಿನಲ್ಲಿ ಇರಲಿ. ಅವನ ಹೃ
ದಯವು ಮನುಷ್ಯನ ಹೃದಯವಲ್ಲದ ಹಾಗೆ ಬದಲಾಗಲಿ; ಮೃ
ಗದ ಹೃದಯವು ಅವನಿಗೆ ಕೊಡಲ್ಪಡಲಿ; ಮತ್ತು ಏಳು ಕಾಲಗ
೧೭ ಳು ಅವನನ್ನು ದಾಟಿ ಹೋಗಲಿ. ಈ ಕಾರ್ಯವು ಪಾಲಕರ ಕ
ಟ್ಟಳೆಯಿಂದಲೂ, ಸಂಗತಿಯು ಪರಿಶುದ್ಧರ ಮಾತಿನಿಂದಲೂ,
ಉಂಟು; ಮಹೋನ್ನತನು ಮನುಷ್ಯರ ರಾಜ್ಯದಲ್ಲಿ ಆಳುತ್ತಾನೆಂ
ದೂ, ತನ್ನ ಮನಸ್ಸಿಗೆ ಸರಿಯಾದವರಿಗೆ ಅದನ್ನು ಕೊಡುತ್ತಾ
ನೆಂದೂ, ಮನುಷ್ಯರಲ್ಲಿ ನೀಚಕಾದವರನ್ನು ಅದರ ಮೇಲೆ ನೇಮಿ
೧೮ ಸುತ್ತಾನೆಂದೂ, ಜೀವಿತರು ತಿಳಿಯುವದಕ್ಕಾಗಿಯೇ. ಈ ಕನಸ
ನ್ನು ಅರಸನಾದ ನೆಬುಕದ್ನೆಜ್ಜರನೆಂಬ ನಾನು ಕಂಡಿದ್ದೇನೆ, ಈಗ
ಬೆಲ್ತಿಶಾಸರನಾದ ನೀನು, ಅದರ ಅಭಿಪ್ರಾಯವನ್ನು ಹೇಳು;
ಯಾಕಂದರೆ, ನನ್ನ ರಾಜ್ಯದಲ್ಲಿರುವ ಸಕಲ ಜ್ಞಾನಿಗಳು ಅದರ
ಅಭಿಪ್ರಾಯವನ್ನು ನನಗೆ ಹೇಳಲಾರರು; ಆದರೆ ನಿನ್ನಲ್ಲಿ ಪರಿಶು
ದ್ಧ ದೇವರುಗಳ ಆತ್ಮವು ಇರುವದರಿಂದ ನೀನು ಹೇಳ ಬಲ್ಲಿ.

೧೯ ಆಗ ಬೆಲ್ತಿಶಾಸರನೆಂಬ ಹೆಸರುಳ್ಳ ದಾನಿಯೇಲನು ಬಂದು ಘ
ಳಿಗೆ ವಿಸ್ಮಿತನಾಗಿ, ತನ್ನ ಆಲೋಚನೆಗಳಲ್ಲಿ ಕಳವಳಗೊಂಡನು;
ಅರಸನು ಮಾತಾಡಿ ಹೇಳಿದ್ದು—ಬೆಲ್ತಿಶಾಸರನೇ, ಕನಸಿಗಾದರೂ,
ಅದರ ಅಭಿಪ್ರಾಯಕ್ಕಾದರೂ, ಕಳವಳ ಪಡ ಬೇಡ. ಬೆಲ್ತಿಶಾಸ
ರನು ಪ್ರತ್ಯುತ್ತರವಾಗಿ ಹೇಳಿದ್ದು—ಸ್ವಾಮಿ, ಆ ಕನಸು ನಿನ್ನ
ವೈರಿಗಳಿಗೂ, ಅದರ ಅಭಿಪ್ರಾಯವು ನಿನ್ನ ಶತ್ರುಗಳಿಗೂ, ಆಗ
೨೦ ಲಿ. ನೀನು ಕಂಡ ಮರವು, ಬೆಳೆದು ಬಲವಾದದ್ದೂ, ಅದರ ಎತ್ತ
ರವು ಆಕಾಶಕ್ಕೂ, ಅದರ ದೃಷ್ಟಿಯು ಭೂದಿಗಂತದ ವರಿಗೂ,
ಮುಟ್ಟಿದ್ದೂ, ಅದರ ಎಲೆಗಳು ಚನ್ನಾಗಿದ್ದದ್ದೂ, ಅದರ ಫಲವು
ಬಹಳವಾದದ್ದೂ, ಅದರಲ್ಲಿ ಎಲ್ಲರಿಗೂ ಆಹಾರವಿದ್ದದ್ದೂ, ಅದರ
೨೧ ಕೆಳಗೆ ಹೊಲದ ಮೃಗಗಳು ವಾಸ ಮಾಡಿದ್ದೂ, ಅದರ ಕೊಂ
ಬೆಗಳಲ್ಲಿ ಆಕಾಶದ ಪಕ್ಷಿಗಳು ನಿವಾಸ ಮಾಡಿದ್ದೂ, ಆ ಮರವು
೨೨ ಅರಸನಾದ ನೀನೇ. ನೀನು ಬೆಳೆದು ಬಲವಾಗಿದ್ದೀ; ಹೌದು, ನಿನ್ನ
ಮಹತ್ತು ಬೆಳೆದು, ಆಕಾಶಕ್ಕೂ, ನಿನ್ನ ಅಧಿಕಾರವು ಭೂಮಿಯ
೨೩ ಅಂತ್ಯದ ವರಿಗೂ, ಮುಟ್ಟಿತ್ತದೆ. ಮತ್ತು ಪಾಲಕನು, ಪರಿಶುದ್ಧ
ನೊಬ್ಬನು, ಪರಲೋಕದಿಂದ ಇಳಿದು ಬಂದು, ಮರವನ್ನು ಕಡಿ
ದು, ನಾಶ ಮಾಡಿರಿ, ಆದರೆ ಅದರ ಬೇರಿನ ಮೋಟನ್ನು ಕಬ್ಬಿಣ
ಹಿತ್ತಾಳೆಗಳ ಕಟ್ಟು ಉಳ್ಳದ್ದಾಗಿ, ಭೂಮಿಯಲ್ಲಿಯೂ, ಹೊಲದ
ಎಳ್ಳೇ ಹುಲ್ಲಿನಲ್ಲಿಯೂ, ಬಿಡಿರಿ; ಅದು ಆಕಾಶದ ಮಂಜಿನಿಂದ
ತ್ಯಾವವಾಗಲಿ; ಏಳು ಕಾಲಗಳು ಅದನ್ನು ದಾಟಿ ಹೋಗುವ ಪ
ರ್ಯಂತರ ಅದರ ಪಾಲು ಹೊಲದ ಮೃಗಗಳ ಸಂಗತ ಇರಲಿ,
ಎಂದು ಹೇಳಿದ್ದನ್ನು ಅರಸನು ನೋಡಿದ ವಿಷಯ, ಅರಸನೇ, ಅ
೨೪ ರ ಅಭಿಪ್ರಾಯವು ಇದೇ—ನನ್ನ ಸ್ವಾಮಿಯಾದ ಅರಸನ ಮೇಲೆ
೨೫ ಬಂದ ಮಹೋನ್ನತನ ನಿರ್ಣಯವು ಇದೇ—ಏನಂದರೆ, ಅವರು
ನಿನ್ನನ್ನು ಮನುಷ್ಯರೊಳಗಿಂದ ಹೊರಡಿಸುವರು; ನಿನ್ನ ನಿವಾಸ
ವು ಹೊಲದ ಮೃಗಗಳ ಸಂಗಡ ಇರುವದು; ನಿನಗೆ ಎತ್ತುಗಳ
ಹಾಗೆ ಹುಲ್ಲನ್ನು ಮೇಯ ಕೊಡುವರು; ಆಕಾಶದ ಮಂಜಿನಿಂದ
ನಿನ್ನನ್ನು ತ್ಯಾವ ಮಾಡುವರು; ಮತ್ತು ಮಹೋನ್ನತನು ಮನು
ಷ್ಯರ ರಾಜ್ಯದಲ್ಲಿ ಆಳುತ್ತಾನೆಂದೂ, ತನ್ನ ಮನಸ್ಸಿಗೆ ಸರಿಯಾ
ದವರಿಗೆ ಅದನ್ನು ಕೊಡುತ್ತಾನೆಂದೂ, ನೀನು ತಿಳಿಯುವ ವರಿಗೂ,
೨೬ ಏಳು ಕಾಲಗಳು ನಿನ್ನನ್ನು ದಾಟಿ ಹೋಗುವವು. ಮತ್ತು ಆ ಮ
ರದ ಬೇರಿನ ಮೋಟನ್ನು ಬಿಡ ಬೇಕೆಂದು ಅವರು ಹೇಳಿದ ವಿಷ
ಯವೇನಂದರೆ—ಪರಲೋಕವು ಆಳುತ್ತದೆಂದು ನೀನು ತಿಳಿದ ಮೇ
೨೭ ಲೆ, ನಿನ್ನ ರಾಜ್ಯವು ನಿನಗೆ ನಿಶ್ಚಯವಾಗಿರುವದು. ಆದದರಿಂದ,
ಅರಸನೇ, ನನ್ನ ಆಲೋಚನೆಗೆ ಸಮ್ಮತಿ ಪಟ್ಟು, ನಿನ್ನ ಪಾಪಗ
ಳನ್ನು ನೀತಿಯಿಂದಲೂ, ನಿನ್ನ ಅಕ್ರಮಗಳನ್ನು ಬಡವರಿಗೆ ದಯ
ತೋರಿಸುವದರಿಂದಲೂ, ಬಿಟ್ಟು ಬಿಡು; ಬಂದು ವೇಳೆ ಇದರಿಂದ
ನಿನ್ನ ಸೌಖ್ಯವು ಹೆಚ್ಚಾದೀತು.

೨೮ ಅರಸನಾದ ನೆಬುಕದ್ನೆಜ್ಜರನಿಗೆ ಇದೆಲ್ಲಾ ಸಂಭವಿಸಿತು. ಹ
೨೯ ನ್ನೆರಡು ತಿಂಗಳುಗಳಾದ ತರುವಾಯ, ಅವನು ಬಾಬೆಲಿನ ರಾಜ್ಯ
೩೦ ದ ಅರಮನೆಯ ಮೇಲೆ ತಿರುಗಾಡಿದನು. ಅರಸನು ಮಾತಾಡಿ
ಹೇಳಿದ್ದೇನಂದರೆ—ನಾನು ನನ್ನ ಪರಾಕ್ರಮದ ಬಲದಿಂದ, ನನ್ನ
ಮಹಿಮೆಯ ಕೀರ್ತಿಗಾಗಿಯೂ, ರಾಜ್ಯದ ಮನೆಗಾಗಿಯೂ, ಕ
೩೧ ಟ್ಟಿಸಿದ ದೊಡ್ಡ ಬಾಬೆಲು ಇದೇ ಅಲ್ಲವೋ? ಈ ಮಾತು ಅರಸ
ನ ಬಾಯಿಯಲ್ಲಿ ಇರುವಾಗಲೇ, ಪರಲೋಕದಿಂದ ಒಂದು ಶಬ್ದ
ಇಳಿದು ಬಂತು, ಹ್ಯಾಗಂದರೆ—ಅರಸನಾದ ನೆಬುಕದ್ನೆಜ್ಜರನೇ,
ನಿನಗೆ ಹೇಳಿ ಇದೆ, ಏನಂದರೆ—ರಾಜ್ಯವು ನಿನ್ನನ್ನು ಬಿಟ್ಟು ಹೋ
೩೨ ಯಿತು. ಮತ್ತು ಅವರು ನಿನ್ನನ್ನು ಮನುಷ್ಯರೊಳಗಿಂದ ಹೊ
ರಡಿಸುವರು; ನಿನ್ನ ನಿವಾಸವು ಹೊಲದ ಮೃಗಗಳ ಸಂಗಡ ಇ
ರುವದು; ನಿನಗೆ ಎತ್ತುಗಳ ಹಾಗೆ ಹುಲ್ಲನ್ನು ಮೇಯ ಕೊಡುವ
ರು; ಮತ್ತು, ಮಹೋನ್ನತನು ಮನುಷ್ಯರ ರಾಜ್ಯದಲ್ಲಿ ಆಳುತ್ತಾ
ನೆಂದೂ, ತನ್ನ ಮನಸ್ಸಿಗೆ ಸರಿಯಾದವರಿಗೆ ಅದನ್ನು ಕೊಡುತ್ತಾ
ನೆಂದೂ, ನೀನು ತಿಳಿಯುವ ವರಿಗೂ ಏಳು ಕಾಲಗಳು ನಿನ್ನನ್ನು
೩೩ ದಾಟಿ ಹೋಗುವವು. ಅದೇ ಘಳಿಗೆಯಲ್ಲಿ ಆ ಕಾರ್ಯವು ನೆ
ಬುಕದ್ನೆಜ್ಜರನಲ್ಲಿ ಈಡೇರಿತು; ಅವನು ಮನುಷ್ಯರೊಳಗಿಂದ
ಹೊರಡಿಸಲ್ಪಟ್ಟು, ಎತ್ತುಗಳಂತೆ ಹುಲ್ಲು ಮೇಯುತ್ತಿದ್ದನು; ಅವ
ನ ಶರೀರವು ಆಕಾಶದ ಮಂಜಿನಿಂದ ತ್ಯಾವವಾಯಿತು; ಕಡೆಗೆ ಅ



ವನ ಕೂದಲುಗಳು ಹದ್ದಿನ ಗರಿಗಳಂತೆಯೂ, ಅವನ ಉಗುರು
ಗಳು ಪಕ್ಷಿಗಳ ಉಗುರುಗಳಂತೆಯೂ, ಬೆಳೆದವು.

೩೪ ಆ ದಿವಸಗಳ ಕಡೆಯಲ್ಲಿ, ನೆಬುಕದ್ನೆಜ್ಜರನಾದ ನಾನು ನನ್ನ
ಕಣ್ಣುಗಳನ್ನು ಆಕಾಶಕ್ಕೆ ಎತ್ತಿದೆನು; ಮತ್ತು ನನ್ನ ಬುದ್ಧಿ ನನಗೆ
ತಿರಿಗಿ ಬಂತು; ಆಗ ನಾನು ಮಹೋನ್ನತನನ್ನು ಸ್ತುತಿಸಿ, ನಿರಂ
ತರವಾಗಿ ಜೀವಿಸುವವನನ್ನೂ, ಅಳಿಕೆ ನಿತ್ಯವಾದ ಅಳಿಕೆಯೂ,
ರಾಜ್ಯ ತತಕರಗಳ ಮಟ್ಟಿಗಿರುವ ರಾಜ್ಯವೂ ಉಳ್ಳವನನ್ನೂ,
೩೫ ಹೊಗಳಿ ಘನ ಪಡಿಸಿದೆನು. ಭೂನಿವಾಸಿಗಳೆಲ್ಲರು ಏನೂ ಇಲ್ಲದ
ಹಾಗೆ ಎಣಿಸಲ್ಪಟ್ಟಿದ್ದಾರೆ; ಅವನು ಪರಲೋಕದ ಸೈನ್ಯದಲ್ಲಿಯೂ,
ಭೂನಿವಾಸಿಗಳಲ್ಲಿಯೂ, ತನ್ನ ಚಿತ್ತದ ಪ್ರಕಾರವೇ ಮಾಡುತ್ತಾ
ನೆ; ಅವನ ಕೈಯನ್ನು ನಿಲ್ಲಿಸಲೂ, ನೀನೇನು ಮಾಡುತ್ತೀ ಎಂದು
೩೬ ಅವನಿಗೆ ಹೇಳಲೂ, ಯಾರಿಂದಲಾಗದು. ಆ ಸಮಯದಲ್ಲಿ ನನ್ನ
ಬುದ್ಧಿ ನನಗೆ ತಿರಿಗಿ ಬಂತು; ನನ್ನ ರಾಜ್ಯದ ಮಹಿಮೆಗಾಗಿ ನನ್ನ
ಘನವೂ ನನ್ನ ತೇಜಸ್ಸೂ ತಿರಿಗಿ ಬಂದವು; ನನ್ನ ಮಂತ್ರಿಗಳೂ,
ನನ್ನ ಪ್ರಭುಗಳೂ, ನನ್ನನ್ನು ಹುಡುಕಿದರು; ಮತ್ತು ನನ್ನ ರಾಜ್ಯ
ದಲ್ಲಿ ಸ್ಥಾಪಿಸಲ್ಪಟ್ಟು, ನನಗೆ ವಿಶೇಷವಾದ ಮಹತ್ತು ಕೂಡಿಸಲ್ಪ
೩೭ ಟ್ಟಿತು. ಈಗ ನೆಬುಕದ್ನೆಜ್ಜರನಾದ ನಾನು, ಪರಲೋಕದ ಅರ
ಸನನ್ನು ಸ್ತುತಿಸಿ, ಹೆಚ್ಚಿಸಿ, ಘನ ಪಡಿಸುತ್ತೇನೆ; ಅವನ ಕ್ರಿಯೆ
ಗಳೆಲ್ಲಾ ಸತ್ಯವೇ; ಅವನ ಮಾರ್ಗಗಳು ನ್ಯಾಯವೇ; ಗರ್ವದ
ಲ್ಲಿ ನಡಿಯುವವರನ್ನು ಅವನೇ ತಗ್ಗಿಸ ಬಲ್ಲನು.

## ೫. ಸಂಧಿ.

೧ ಅರಸನಾದ ಬೆಲ್ಶಾಸರನು ತನ್ನ ಪ್ರಭುಗಳಲ್ಲಿ ಸಾವಿರ ಮಂದಿ
ಗೆ ದೊಡ್ಡ ಔತನವನ್ನು ಮಾಡಿಸಿ, ಆ ಸಾವಿರ ಮಂದಿಯ ಮುಂ
೨ ದೆ ದ್ರಾಕ್ಷೇ ರಸವನ್ನು ಕುಡಿದನು. ಆ ದ್ರಾಕ್ಷೇ ರಸವನ್ನು ರುಚಿ
ನೋಡುತ್ತಿರುವಾಗ, ಬೆಲ್ಶಾಸರನು, ತನ್ನ ತಂದೆಯಾದ ನೆಬುಕದ್ನೆ
ಜ್ಜರನು ಯೆರೂಸಲೇಮಿನ ದೇವಾಲಯದೊಳಗಿಂದ ತೆಗೆದ ಬೆಳ್ಳಿ
ಭಂಗಾರಗಳ ಪಾತ್ರೆಗಳನ್ನು, ಅರಸನೂ, ಅವನ ಪ್ರಭುಗಳೂ,
ಅವನ ಹೆಂಡರೂ, ಅವನ ಉಪಪತ್ನಿಗಳೂ, ಅವುಗಳಲ್ಲಿ ಕುಡಿ
೩ ಯುವ ಹಾಗೆ, ತರಲಾಜ್ಞಾಪಿಸಿದನು; ಆಗಲವರು ಯೆರೂಸಲೇ
ಮಿನ ದೇವಾಲಯದ ಮಂದಿರದೊಳಗಿಂದ ತೆಗೆದ ಭಂಗಾರದ ಪಾ
ತ್ರೆಗಳನ್ನು ತಂದರು; ಮತ್ತು ಅರಸನೂ, ಅವನ ಪ್ರಭುಗಳೂ,
ಅವನ ಹೆಂಡರೂ, ಅವನ ಉಪಪತ್ನಿಗಳೂ, ಅವುಗಳಲ್ಲಿ ಕುಡಿ
೪ ದರು. ಅವರು ದ್ರಾಕ್ಷೇರಸವನ್ನು ಕುಡಿದು, ಭಂಗಾರ ಬೆಳ್ಳಿ
ಹಿತ್ತಾಳೆ ಕಬ್ಬಿಣ ಮರ ಕಲ್ಲುಗಳ ದೇವರುಗಳನ್ನು ಸ್ತುತಿಸಿ
ದರು.

೫ ಅದೇ ಘಳಿಗೆಯಲ್ಲಿ ಮನುಷ್ಯನ ಕೈ ಬೆರಳುಗಳು ಬಂದು,
ದೀಪಸ್ತಂಭಕ್ಕೆ ಎದುರಾಗಿ ಅರಮನೆಯ ಗೋಡೆಯ ಸುಣ್ಣದಲ್ಲಿ
ಬರೆದವು; ಮತ್ತು ಅರಸನು ಆ ಬರೆಯುವ ಕೈಯ ಭಾಗವನ್ನು
೬ ನೋಡಿದನು. ಆಗ ಅರಸನ ಮುಖವು ಕಳೆಗುಂದಿ, ಅವನ ಆ
ಲೋಚನೆಗಳು ಅವನಿಗೆ ಕಳವಳ ಪಡಿಸಿದವು; ಮತ್ತು ಅವನ ನ
ಡುವಿನ ಕೀಲುಗಳು ಸಡ್ಲವಾಗಿ, ಅವನ ಮೊಣಕಾಲುಗಳು ಒಂದ
೭ ಕ್ಕೊಂದು ಬಡುಕೊಂಡವು. ಜೋತಿಷ್ಯರನ್ನೂ ಕಸ್ದೀಯರ
ನ್ನೂ ಲಕ್ಷಣೇಕರನ್ನೂ ಕರಿಸ ಬೇಕೆಂದು ಅರಸನು ಘಟ್ಟಿಯಾ
ಗಿ ಕೂಗಿದನು; ಆಗ ಅರಸನು ಮಾತಾಡಿ ಬಾಬೆಲಿನ ಜ್ಞಾನಿಗಳಿ
ಗೆ ಹೇಳಿದ್ದೇನಂದರೆ—ಯಾರು ಈ ಬರಹವನ್ನು ಓದಿ, ಅದರ ಅ
ಭಿಪ್ರಾಯವನ್ನು ನನಗೆ ತಿಳಿಸುವರೋ ಅವನು ರಕ್ತಾಂಬರದಿಂದ
ಧರಿಸಲ್ಪಟ್ಟು, ಕೊರಳಿಗೆ ಚಿನ್ನದ ಕಂಠಿಯುಳ್ಳವನಾಗಿ, ರಾಜ್ಯ
೮ ದಲ್ಲಿ ಮೂರನೇ ಅಧಿಕಾರಿಯಾಗುವನು. ಆಗ ಅರಸನ ಜ್ಞಾನಿಗ
ಳೆಲ್ಲರು ಬಳಿಗೆ ಬಂದರು, ಆದರೆ ಆ ಬರಹವನ್ನು ಓದಲೂ, ಅದ
ರ ಅಭಿಪ್ರಾಯವನ್ನು ಅರಸನಿಗೆ ತಿಳಿಸಲೂ, ಅವರಿಂದಲಾಗದೆ
೯ ಹೋಯಿತು. ಆಗ ಅರಸನಾದ ಬೆಲ್ಶಾಸರನು ಬಹಳವಾಗಿ ಕಳ
ವಳ ಪಟ್ಟನು; ಅವನ ಮುಖವು ಕಳೆಗುಂದಿತು; ಅವನ ಪ್ರಭುಗ
ಳು ವಿಸ್ಮಿತರಾದರು.

೧೦ ಆಗ ಅರಸನ ಪ್ರಭುಗಳ ಮಾತುಗಳ ನಿಮಿತ್ತ ರಾಣಿಯು ಔ
ತನದ ಮನೆಯಲ್ಲಿ ಬಂದಳು; ರಾಣಿಯು ಮಾತಾಡಿ ಹೇಳಿದ್ದು—
ಅರಸನೇ, ನಿರಂತರ ಬಾಳು; ನಿನ್ನ ಆಲೋಚನೆಗಳು ನಿನಗೆ ಕಳ
ವಳ ಪಡಿಸದಿರಲಿ; ನಿನ್ನ ಮುಖ ಕಳೆ ಗುಂದದಿರಲಿ. ನಿನ್ನ ರಾಜ್ಯ
ದಲ್ಲಿ, ಪರಿಶುದ್ಧ ದೇವರುಗಳ ಆತ್ಮವುಳ್ಳ ಒಬ್ಬ ಮನುಷ್ಯನು ಇ
ದ್ದಾನೆ; ನಿನ್ನ ತಂದೆಯ ದಿವಸಗಳಲ್ಲಿ ಬೆಳಕೂ, ಬುದ್ಧಿಯೂ,
ದೇವರುಗಳ ಜ್ಞಾನದಂತೆ ಜ್ಞಾನವೂ, ಅವನಲ್ಲಿ ಶಿಕ್ಕಿತು; ಅವನನ್ನು
ನಿನ್ನ ತಂದೆಯಾದ ನೆಬುಕದ್ನೆಜ್ಜರನು, ಹೌದು, ಅರಸನಾದ
ನಿನ್ನ ತಂದೆಯು, ಮಂತ್ರಗಾರರಿಗೂ, ಜೋತಿಷ್ಯರಿಗೂ, ಕಸ್ದೀ
ಯರಿಗೂ, ಲಕ್ಷಣೇಕರಿಗೂ, ಮುಖ್ಯಸ್ಥನಾಗಿ ಇಟ್ಟನು. ಯಾ
೧೨ ಕಂದರೆ ಬೆಲ್ತಿಶಾಸರನೆಂಬ ಹೆಸರನ್ನು ಅರಸನಿಂದ ಹೊಂದಿದ ಆ
ದಾನಿಯೇಲನಲ್ಲಿ, ಕನಸುಗಳನ್ನು ವಿವರಿಸುವದಕ್ಕೂ, ಒಗಟುಗ
ಳನ್ನು ತಿಳಿಸುವದಕ್ಕೂ, ಗಂಟುಗಳನ್ನು ಬಿಚ್ಚುವದಕ್ಕೂ, ಉತ್ತ
ಮ ಆತ್ಮವೂ, ಜ್ಞಾನವೂ, ವಿವೇಕವೂ, ಶಿಕ್ಕಿದವು; ಈಗ ದಾನಿ
ಯೇಲನು ಕರೆಯಲ್ಪಡಲಿ; ಅವನು ಅಭಿಪ್ರಾಯವನ್ನು ತಿಳಿಸು
ವನು.

೧೩ ಆಗ ದಾನಿಯೇಲನು ಅರಸನ ಮುಂದೆ ತರಲ್ಪಟ್ಟನು; ಮತ್ತು
ಅರಸನು ದಾನಿಯೇಲನಿಗೆ ಹೇಳಿದ್ದೇನಂದರೆ—ಅರಸನಾದ ನನ್ನ
ತಂದೆಯು ಯೆಹೂದದಿಂದ ತಂದ ಯೆಹೂದ್ಯದ ಸೆರೆಯವರಲ್ಲಿ
೧೪ ಒಬ್ಬನಾದ ದಾನಿಯೇಲನು ನೀನೋ? ನಿನ್ನಲ್ಲಿ ದೇವರುಗಳ ಆತ್ಮ
ವುಂಟೆಂದೂ, ಬೆಳಕೂ, ಬುದ್ಧಿಯೂ, ಉತ್ತಮ ಜ್ಞಾನವೂ, ನಿನ್ನ
೧೫ ಲ್ಲಿ ಶಿಕ್ಕಿದೆ ಎಂದೂ, ನಿನ್ನನ್ನು ಕುರಿತು ಕೇಳಿದ್ದೇನೆ. ಈಗ ಈ
ಬರಹವನ್ನು ಓದುವದಕ್ಕೂ, ಅದರ ಅಭಿಪ್ರಾಯವನ್ನು ನನಗೆ
ತಿಳಿಸುವದಕ್ಕೂ, ಜೋತಿಷ್ಯರಾದ ಜ್ಞಾನಿಗಳು ನನ್ನ ಮುಂದೆ
ತರಲ್ಪಟ್ಟಿದ್ದಾರೆ; ಆದರೆ ಇದರ ಅಭಿಪ್ರಾಯವನ್ನು ತೋರಿಸಲಾ
೧೬ ರದೆ ಹೋದರು. ಮತ್ತು ನೀನು ಅಭಿಪ್ರಾಯಗಳನ್ನು ಹೇಳುವ
ದಕ್ಕೂ, ಗಂಟುಗಳನ್ನು ಬಿಚ್ಚುವದಕ್ಕೂ, ಸಮರ್ಥನೆಂದು ನಾನು
ನಿನ್ನನ್ನು ಕುರಿತು ಕೇಳಿದ್ದೇನೆ; ಹೀಗಾದರೆ ಆ ಬರಹವನ್ನು ಓದು
ವದಕ್ಕೂ, ಅದರ ಅಭಿಪ್ರಾಯವನ್ನು ನನಗೆ ತಿಳಿಸುವದಕ್ಕೂ,
ನಿನ್ನಿಂದಾದರೆ, ನೀನು ರಕ್ತಾಂಬರದಿಂದ ಧರಿಸಲ್ಪಟ್ಟು, ನಿನ್ನ ಕೊ
ರಳಿಗೆ ಚಿನ್ನದ ಕಂಠಿಯುಳ್ಳವನಾಗಿ, ರಾಜ್ಯದಲ್ಲಿ ಮೂರನೇ ಅಧಿ
ಕಾರಿಯಾಗುವಿ.

೧೭ ಆಗ ದಾನಿಯೇಲನು ಉತ್ತರವಾಗಿ ಅರಸನ ಮುಂದೆ ಹೇಳಿ
ದ್ದು—ನಿನ್ನ ದಾನಗಳು ನಿನಗಿರಲಿ; ನಿನ್ನ ಬಹುಮಾನಗಳನ್ನು ಮ
ತ್ತೊಬ್ಬನಿಗೆ ಕೊಡು, ಆದರೆ ನಾನು ಬರಹವನ್ನು ಅರಸನಿಗೆ ಓ
೧೮ ದಿ, ಅಭಿಪ್ರಾಯವನ್ನು ಅವನಿಗೆ ತಿಳಿಸುವೆನು. ಓ ಅರಸನೇ,

ಮಹೋನ್ನತನಾದ ದೇವರು ನಿನ್ನ ತಂದೆಯಾದ ನೆಬುಕದ್ನೆಚ್ಚರನಿಗೆ ರಾಜ್ಯವನ್ನೂ, ಮಹತ್ತನ್ನೂ, ಕೀರ್ತಿಯನ್ನೂ ಘನವ
೧೯ ನ್ನೂ ಕೊಟ್ಟನು. ಅವನು ಅವನಿಗೆ ಕೊಟ್ಟ ಮಹತ್ತಿನ ನಿಮಿತ್ತ ಸಕಲ ಪ್ರಜೆಗಳೂ ಜನಾಂಗಗಳೂ ಭಾಷೆಯವರೂ ಅವನ ಮುಂ
೩ ದೆ ನಡುಗಿ ಹೆದರಿದರು; ತನಗೆ ಮನಸ್ಸಿದ್ದವರನ್ನು ಕೊಂದು, ತನಗೆ ಮನಸ್ಸಿದ್ದವರನ್ನು ಬದುಕಿಸಿದನು; ತನಗೆ ಮನಸ್ಸಿದ್ದವರನ್ನು
೨೦ ಎತ್ತಿ, ತನಗೆ ಮನಸ್ಸಿದ್ದವರನ್ನು ತಗ್ಗಿಸಿದನು. ಆದರೆ ಅವನ ಹೃ
೪ ದಯವು ಎತ್ತಲ್ಪಟ್ಟಾಗಲೂ, ಅವನ ಮನಸ್ಸು ಗರ್ವದಲ್ಲಿ ಕಠಿಣವಾದಾಗಲೂ, ಅವನು ತನ್ನ ರಾಜ್ಯದ ಸಿಂಹಾಸನದಿಂದ ಇಳಿಯ
ಮಾಡಲ್ಪಟ್ಟು, ಅವನ ಘನವನ್ನು ಅವನಿಂದ ತೆಗೆದು ಹಾಕಿದರು.
೨೧ ಮತ್ತು ಅವನು ಮನುಷ್ಯರ ಮಕ್ಕಳೊಳಗಿಂದ ಹೊರಡಿಸಲ್ಪಟ್ಟನು; ಮಹೋನ್ನತನಾದ ದೇವರು ಮನುಷ್ಯರ ರಾಜ್ಯದಲ್ಲಿ ಆಳುತ್ತಾನೆಂದೂ, ತನಗೆ ಮನಸ್ಸಿದ್ದವರನ್ನು ಅದಕ್ಕೆ ನೇಮಿಸುತ್ತಾನೆಂದೂ, ಅವನು ತಿಳಿಯುವ ಮಟ್ಟಿಗೂ, ಅವನ ಹೃದಯವು ಮೃಗಗಳದರ ಹಾಗಾಯಿತು; ಅವನ ನಿವಾಸವು ಕಾಡು ಕತ್ತೆಗಳ ಸಂಗಡ ಇತ್ತು; ಅವನಿಗೆ ಎತ್ತುಗಳಂತೆ ಹುಲ್ಲು ಮೇಯ ಕೊಟ್ಟರು; ಅವನ ಶರೀರವು ಆಕಾಶದ ಮಂಜಿನಿಂದ ತ್ಯಾವವಾಯಿತು.
೨೨ ಮತ್ತು ಅವನ ಮಗನಾದ ನೀನು, ಓ ಬೆಲ್ಶಾಸರನೇ, ಇದನ್ನೆಲ್ಲಾ
೨೩ ತಿಳಿದರೂ ನಿನ್ನ ಹೃದಯವನ್ನು ತಗ್ಗಿಸದೆ, ಪರಲೋಕದ ಕರ್ತನಿಗೆ ವಿರೋಧವಾಗಿ ನಿನ್ನನ್ನು ಎತ್ತಿದ್ದೀ; ಅವನ ಮನೆಯ ಪಾತ್ರೆಗಳನ್ನು ನಿನ್ನ ಮುಂದೆ ತಂದಿದ್ದಾಕೆ; ಮತ್ತು ನೀನೂ, ನಿನ್ನ ಪ್ರಭುಗಳೂ, ನಿನ್ನ ಹೆಂಡರೂ, ನಿನ್ನ ಉಪಪತ್ನಿಗಳೂ, ಅವುಗಳಲ್ಲಿ ದ್ರಾಕ್ಷೆ ರಸವನ್ನು ಕುಡಿದಿದ್ದೀರಿ; ಹೌದು, ನೀನು ಬೆಳ್ಳಿ ಭಂಗಾರ ಹಿತ್ತಾಳೆ ಕಬ್ಬಿಣ ಮರ ಕಲ್ಲುಗಳಿಂದುಂಟಾದಂಥ, ನೋಡದೆ ಕೇಳದೆ ಅರಿಯದೆ ಇರುವಂಥ, ದೇವರುಗಳನ್ನು ಸ್ತುತಿಸಿ, ನಿನ್ನ ಶ್ವಾಸವು ಯಾರ ಕೈಯಲ್ಲಿ ಉಂಟೋ, ನಿನ್ನ ಮಾರ್ಗಗಳೆಲ್ಲಾ ಯಾರಿಗೆ ಉಂಟೋ, ಆ ದೇವರನ್ನು ನೀನು ಮಹಿಮೆ ಪಡಿಸಲಿ
೨೪ ಲ್ಲ. ಆಗ ಆ ಕೈಯ ಭಾಗವು ಅವನ ಕಡೆಯಿಂದ ಕಳುಹಿಸಲ್ಪಟ್ಟಿತು; ಮತ್ತು ಈ ಬರಹವು ಬರೆಯಲ್ಪಟ್ಟಿತು.
೨೫ ಬರೆಯಲ್ಪಟ್ಟ ಬರಹವು ಹೀಗಿತ್ತು—ಮೆನೇ ಮೆನೇ ತೇಕೆಲ್ ಉ
೨೬ ಫಾರ್ಸಿನ್. ಇದಕ್ಕೆ ಅಭಿಪ್ರಾಯವು ಏನಂದರೆ—ಮೆನೇ ಅಂದ
೨೭ ರೆ—ದೇವರು ನಿನ್ನ ರಾಜ್ಯವನ್ನು ಲೆಖ್ಖಿಸಿ ಮುಗಿಸಿದ್ದಾನೆ. ತೇಕೆಲ್ ಅಂದರೆ—ನೀನು ತ್ರಾಸಿನಲ್ಲಿ ತೂಗಲ್ಪಟ್ಟು ಕಡಿಮೆಯಾಗಿ ತೋ
೨೮ ರುತ್ತೀ. ಫೇರೆಸ್ ಅಂದರೆ—ನಿನ್ನ ರಾಜ್ಯವು ವಿಭಾಗವಾಗಿ, ಮೇದ್ಯರಿಗೂ ಪಾರ್ಶಿಯರಿಗೂ ಕೊಡಲ್ಪಟ್ಟಿದೆ.
೨೯ ಆಗ ಬೆಲ್ಶಾಸರನ ಅಪ್ಪಣೆಯಿಂದ, ದಾನಿಯೇಲನನ್ನು ಕೆಂಪು ಬರದಿಂದ ಧರಿಸಿ, ಅವನ ಕೊರಳಿಗೆ ಚಿನ್ನದ ಕಂಠಿಯನ್ನು ಹಾಕಿ, ಅವನು ರಾಜ್ಯದಲ್ಲಿ ಮೂರನೇ ಅಧಿಕಾರಿಯಾಗಿರ ಬೇಕೆಂದು
೩೦ ಸಾರಿದರು. ಅದೇ ರಾತ್ರಿಯಲ್ಲಿ ಕಸ್ದೀಯರ ಅರಸನಾದ ಬೆಲ್ಶಾಸ
೩೧ ರನು ಕೊಲ್ಲಲ್ಪಟ್ಟನು. ಮತ್ತು ಮೇದ್ಯನಾದ ದರೀಯನು ಅರವತ್ತೆರಡು ವರುಷದವನಾಗಿ ರಾಜ್ಯವನ್ನು ತೆಗೆದು ಕೊಂಡನು.

## ೬. ಸಂಧಿ.

೧, ೨ ರಾಜ್ಯವೆಲ್ಲಾದರ ಮೇಲೆ ಇರುವ ಹಾಗೆಯೂ, ಅರಸನಿಗೆ ನಷ್ಟವಾಗದ ಹಾಗೆ ಪ್ರಭುಗಳು ಅವರಿಗೆ ಲೆಖ್ಖ ಒಪ್ಪಿಸುವ ಹಾಗೆಯೂ, ರಾಜ್ಯದ ಮೇಲೆ ನೂರಾ ಇಪ್ಪತ್ತು ಪ್ರಭುಗಳನ್ನೂ, ಇವರ ಮೇ
೩ ಲೆ ಮೂವರು ಮುಖ್ಯಸ್ಥರನ್ನೂ, ಇರಿಸುವದು, ದರೀಯನಿಗೆ ಬಳ್ಳೇದಾಗಿ ತೋಚಿತು. ಇವರಲ್ಲಿ ದಾನಿಯೇಲನು ಮೊದಲನೆಯವನಾಗಿದ್ದನು. ಆಗ ಈ ದಾನಿಯೇಲನಲ್ಲಿ ಉತ್ತಮ ಆತ್ಮವು ಇರುವದರಿಂದ ಅವನು ಮುಖ್ಯಸ್ಥರಿಗಿಂತಲೂ ಪ್ರಭುಗಳಿಗಿಂತಲೂ ಶ್ರೇಷ್ಠನಾದನು; ಮತ್ತು ಅರಸನು ಅವನನ್ನು ಸಮಸ್ತ ರಾಜ್ಯದ ಮೇ
೪ ಲೆ ನೇಮಿಸ ಮನಸ್ಸಾಗಿದ್ದನು. ಆಗ ಮುಖ್ಯಸ್ಥರೂ ಪ್ರಭುಗಳೂ ರಾಜ್ಯದ ವಿಷಯೆ ದಾನಿಯೇಲನಿಗೆ ವಿರೋಧವಾಗಿ ನಿಮಿತ್ತವನ್ನು ಹುಡುಕಿದರು; ಆದರೆ ಅವನು ನಂಬಿಕೆಯುಳ್ಳವನಾಗಿದ್ದು, ಅವನಲ್ಲಿ ತಪ್ಪೂ ದೋಷವೂ ಇಲ್ಲದೆ ಇರುವದರಿಂದ, ಅವರಿಗೆ ನಿಮಿತ್ತವೂ ತಪ್ಪೂ ಹಿಕ್ಕಲಾರದೆ ಹೋಯಿತು. ಆಗ ಆ ಮನುಷ್ಯರು
೫ ಅಂದು ಕೊಂಡದ್ದೇನಂದರೆ—ಈ ದಾನಿಯೇಲನಿಗೆ ವಿರೋಧವಾಗಿ, ಅವನ ದೇವರ ನ್ಯಾಯಪ್ರಮಾಣದ ವಿಷಯವಾಗಿ ನಿಮಿತ್ತ ಹಿಕ್ಕುವದೇ ಹೊರ್ತು, ನಮಗೆ ಇನ್ನೇನು ಹಿಕ್ಕುವದಿಲ್ಲ.
೬ ಆಗ ಈ ಮುಖ್ಯಸ್ಥರೂ ಪ್ರಭುಗಳೂ ಅರಸನ ಬಳಿಗೆ ಕೂಡಿ ಬಂದು, ಅವನಿಗೆ ಹೀಗಂದರು—ಅರಸನಾದ ದರೀಯನೇ, ನಿರಂತ
೭ ರ ಬಾಳು. ರಾಜ್ಯದ ಮುಖ್ಯಸ್ಥರೆಲ್ಲರೂ, ಪ್ರಧಾನಿಗಳೂ, ಪ್ರಭುಗಳೂ, ಮಂತ್ರಿಗಳೂ, ಅಧಿಕಾರಿಗಳೂ, ಕೂಡ ಆಲೋಚಿಸಿದ್ದೇನಂದರೆ—ಯಾರಾದರೂ ಮೂವತ್ತು ದಿವಸಗಳ ವರಿಗೂ ಅರಸನಾದ ನಿನಗೆ ವಿನಾಯಿಸಿ, ಮತ್ತಾವ ದೇವರಿಗಾದರೂ ಮನುಷ್ಯರಿಗಾದರೂ ವಿಜ್ಞಾಪನೆ ಮಾಡಿದರೆ, ಅಂಥವನು ಸಿಂಹಗಳ ಗವಿಯಲ್ಲಿ ಹಾಕಲ್ಪಡುವನೆಂಬ ರಾಜಾಜ್ಞೆಯನ್ನು ಸ್ಥಾಪಿಸಿ, ಸ್ಥಿರ ಕಟ್ಟಲೆಯನ್ನು
೮ ಕೊಡ ತಕ್ಕದ್ದು. ಈಗ, ಅರಸನೇ, ಬದಲಾಗದಂಥ ಮೇದ್ಯ ಪಾರ್ಶಿಯರ ನ್ಯಾಯಪ್ರಮಾಣದ ಪ್ರಕಾರ, ಇದು ಬೇರೆ ಮಾಡಲ್ಪಡದ ಹಾಗೆ, ನಿರ್ಣಯವನ್ನು ಸ್ಥಾಪಿಸಿ, ಬರಹಕ್ಕೆ ರುಜು ಹಾಕು.
೯ ಹಾಗೆ ಅರಸನಾದ ದರೀಯನು ಬರಹಕ್ಕೂ ನಿರ್ಣಯಕ್ಕೂ ರುಜು ಹಾಕಿದನು.
೧೦ ಬರಹಕ್ಕೆ ರುಜು ಹಾಕಿದ್ದಾಯಿತೆಂದು ದಾನಿಯೇಲನು ತಿಳಿದಾಗ, ಅವನು ತನ್ನ ಮನೆಗೆ ಹೋದನು; ಮತ್ತು ಅವನ ಕೊಠಡಿಯಲ್ಲಿ ಅವನ ಕಿಟಕಿಗಳು ಯೆರೂಸಲೇಮಿಗೆ ಎದುರಾಗಿ ತೆರೆಯಲ್ಪಟ್ಟಿರಲಾಗಿ, ಅವನು ಮುಂಚೆ ಮಾಡಿದ ಪ್ರಕಾರವೇ ದಿನಕ್ಕೆ ಮೂರು ಸಾರಿ ಮೊಣಕಾಲೂರಿ ತನ್ನ ದೇವರ ಸನ್ನಿಧಿಯಲ್ಲಿ
೧೧ ಪ್ರಾರ್ಥನೆಯನ್ನೂ ಸ್ತೋತ್ರವನ್ನೂ ಮಾಡಿದನು. ಆಗ ಈ ಮನುಷ್ಯರು ಕೂಡಿ ಬಂದು, ದಾನಿಯೇಲನು ತನ್ನ ದೇವರ ಸನ್ನಿಧಿಯಲ್ಲಿ ಪ್ರಾರ್ಥನೆಯನ್ನೂ ವಿಜ್ಞಾಪನೆಯನ್ನೂ ಮಾಡುವದನ್ನು ಕಂಡರು. ಆಗಲವರು ಹತ್ತರ ಬಂದು, ಅರಸನ ಮುಂದೆ
೧೨ ರಾಜಾಜ್ಞೆಯ ವಿಷಯ ಮಾತಾಡಿದ್ದೇನಂದರೆ—ಮೂವತ್ತು ದಿವಸಗಳ ವರಿಗೂ, ಯಾರು ಅರಸನಾದ ನಿನಗೆ ವಿನಾಯಿಸಿ, ಮತ್ತಾವ ದೇವರಿಗಾದರೂ ಮನುಷ್ಯರಿಗಾದರೂ ವಿಜ್ಞಾಪನೆ ಮಾಡುವನೋ ಅವನು ಸಿಂಹಗಳ ಗವಿಯಲ್ಲಿ ಹಾಕಲ್ಪಡುವನೆಂಬುವ ನಿರ್ಣಯಕ್ಕೆ ನೀನು ರುಜು ಹಾಕಲಿಲ್ಲವೋ? ಅರಸನು ಪ್ರತ್ಯುತ್ತರವಾಗಿ—ಮೇದ್ಯ ಪಾರ್ಶಿಯರ ಬದಲಾಗದ ನ್ಯಾಯಪ್ರಮಾಣದ ಪ್ರಕಾ
೧೩ ರ ಅದು ನಿಜವೇ, ಅಂದನು. ಆಗಲವರು ಪ್ರತ್ಯುತ್ತರವಾಗಿ ಅರಸನ ಮುಂದೆ ಹೇಳಿದ್ದೇನಂದರೆ—ಯೆಹೂದದ ಶೆರೆಯ ಮಕ್ಕಳಲ್ಲಿ ಒಬ್ಬನಾದ ಆ ದಾನಿಯೇಲನು ಅರಸನಾದ ನಿನ್ನನ್ನಾದರೂ, ನೀ



ನು ರುಜು ಹಾಕಿದ ನಿರ್ಣಯವನ್ನಾದರೂ ಲಕ್ಷ್ಯ ಮಾಡದೆ, ದಿನಕ್ಕೆ ಮೂರು ಸಾರಿ ತನ್ನ ವಿಜ್ಞಾಪನೆ ಮಾಡುತ್ತಾನೆ, ಅಂದರು.
೧೪ ಅರಸನು ಈ ಮಾತುಗಳನ್ನು ಕೇಳಿದಾಗ, ತನ್ನಲ್ಲಿ ಬಹಳ ವ್ಯಸನ ಪಟ್ಟು, ಅವನನ್ನು ತಪ್ಪಿಸುವದಕ್ಕೆ ದಾನಿಯೇಲನ ಮೇಲೆ ಹೃದಯವಿಟ್ಟು, ಸೂರ್ಯನು ಮುಣುಗುವ ಪರ್ಯಂತರ ಅ
೧೫ ನನ್ನು ತಪ್ಪಿಸ ಪ್ರಯತ್ನ ಮಾಡುತ್ತಾ ಬಂದನು. ಆಗ ಆ ಮನುಷ್ಯರು ಅರಸನ ಬಳಿಗೆ ಕೂಡಿ ಬಂದು, ಅರಸನಿಗೆ ಹೇಳಿದ್ದೇನಂದರೆ—ಅರಸನು ಸ್ಥಿರ ಪಡಿಸಿರುವ ಯಾವ ನಿರ್ಣಯವಾದರೂ ಅಜ್ಞೆಯಾದರೂ ಬದಲು ಮಾಡ ಕೂಡದೆಂದು ಮೇದ್ಯ ಪಾರ್ಶಿಯರ ನ್ಯಾಯಪ್ರಮಾಣ ಉಂಟೆಂದು ಅರಸನೇ ನಿನಗೆ ತಿಳಿದಿರಲಿ.
೧೬ ಆಗ ಅರಸನು ಆಜ್ಞಾಪಿಸಲಾಗಿ ಅವರು ದಾನಿಯೇಲನನ್ನು ತಂದು, ಸಿಂಹಗಳ ಗವಿಯಲ್ಲಿ ಹಾಕಿದರು. ಆದರೆ ಅರಸನು ಮಾತಾಡಿ ದಾನಿಯೇಲನಿಗೆ—ನೀನು ಯಾವಾಗಲೂ ಸೇವಿಸುವ ನಿನ್ನ
೧೭ ದೇವರು ನಿನ್ನನ್ನು ರಕ್ಷಿಸುವನೆಂದು ಹೇಳಿದನು. ಮತ್ತು ಕಲ್ಲು ತರಲ್ಪಟ್ಟು, ಗವಿಯ ಬಾಯಿಗೆ ಹಾಕಲ್ಪಟ್ಟಿತು; ಇದಲ್ಲದೆ, ದಾನಿಯೇಲನ ವಿಷಯವಾದ ಆಲೋಚನೆಯ ಬೇರೆಯಾಗದ ಹಾಗೆ ಅರಸನು ತನ್ನ ಮುದ್ರೆಯನ್ನೂ ತನ್ನ ಪ್ರಭುಗಳ ಮುದ್ರೆಯ
೧೮ ನ್ನೂ ಅದಕ್ಕೆ ಹಾಕಿದನು. ಆಗ ಅರಸನು ತನ್ನ ಅರಮನೆಗೆ ಹೋಗಿ, ಉಪವಾಸದಿಂದಲೇ ರಾತ್ರಿಯನ್ನು ಕಳೆದನು; ಮತ್ತು ಗಾನ ವಾದ್ಯಗಳು ಅವನ ಮುಂದೆ ತರಲ್ಪಡಲಿಲ್ಲ, ಅವನ ನಿದ್ರೆಯೂ ಅವನನ್ನು ಬಿಟ್ಟು ಹೋಯಿತು.
೧೯ ಅರುಣೋದಯದಲ್ಲಿ ಅರಸನು ಎದ್ದು, ತ್ವರೆಯಾಗಿ ಸಿಂಹಗ
೨೦ ಳ ಗವಿಗೆ ಹೋದನು. ಮತ್ತು ಗವಿಯ ಹತ್ತರ ಬಂದಾಗ, ದುಃಖದ ಶಬ್ದದಿಂದ ದಾನಿಯೇಲನಿಗೆ ಕೂಗಿದನು; ಅರಸನು ಮಾತಾಡಿ ದಾನಿಯೇಲನಿಗೆ ಹೇಳಿದ್ದೇನಂದರೆ—ಜೀವವುಳ್ಳ ದೇವರ ಸೇವಕನಾದ ದಾನಿಯೇಲನೇ, ನೀನು ಯಾವಾಗಲೂ ಸೇವಿಸುವ ನಿನ್ನ ದೇವರು ನಿನ್ನನ್ನು ಸಿಂಹಗಳಿಗೆ ತಪ್ಪಿಸ ಸಮರ್ಥನಾಗಿದ್ದಾನೋ?
೨೧ ಆಗ ದಾನಿಯೇಲನು ಅರಸನಿಗೆ ಹೇಳಿದ್ದೇನಂದರೆ—ಅರಸನೇ,
೨೨ ನಿರಂತರ ಬಾಳು. ನನ್ನ ದೇವರು ತನ್ನ ದೂತನನ್ನು ಕಳುಹಿಸಿ, ನನಗೆ ನಷ್ಟ ಮಾಡದ ಹಾಗೆ ಸಿಂಹಗಳ ಬಾಯಿಗಳನ್ನು ಮುಚ್ಚಿದ್ದಾನೆ; ಯಾಕಂದರೆ ಅವನ ಮುಂದೆ ನಾನು ನಿರ್ಮಲನೆಂದು ಕಾಣಲ್ಪಟ್ಟಿದ್ದೇನೆ; ಮತ್ತು, ಅರಸನೇ, ನಿನ್ನ ಮುಂದೆಯೂ ನಾನು ಏನು
೨೩ ದ್ರೋಹ ಮಾಡಲಿಲ್ಲ. ಆಗ ಅರಸನು ಅವನಿಗೋಸ್ಕರ ಅತಿ ಸಂತೋಷ ಪಟ್ಟು, ದಾನಿಯೇಲನನ್ನು ಗವಿಯೊಳಗಿಂದ ಎತ್ತ ಬೇಕೆಂದು ಅಪ್ಪಣೆ ಕೊಟ್ಟನು; ಆಗಲವರು ದಾನಿಯೇಲನನ್ನು ಗವಿಯೊಳಗಿಂದ ಎತ್ತಿದರು; ಮತ್ತು ಅವನು ತನ್ನ ದೇವರಲ್ಲಿ ನಂಬಿಕೆ ಇಟ್ಟದರಿಂದ ಯಾವ ನಷ್ಟವಾದರೂ ಅವನಲ್ಲಿ ಕಾಣಲಿಲ್ಲ.
೨೪ ಆಗ ಅರಸನು ಆಜ್ಞಾಪಿಸಲಾಗಿ, ಅವನು ದಾನಿಯೇಲನ ಮೇಲೆ ತಪ್ಪು ಹೊರಿಸಿ ಇದ್ದ ಮನುಷ್ಯರನ್ನು ತಂದು, ಅವರನ್ನೂ ಅವರ ಮಕ್ಕಳನ್ನೂ ಅವರ ಹೆಂಡರನ್ನೂ ಸಿಂಹಗಳ ಗವಿಯಲ್ಲಿ ಹಾಕಿದರು; ಮತ್ತು ಅವರು ಗವಿಯ ನೆಲವನ್ನು ಮುಟ್ಟುವದಕ್ಕಿಂತ ಮುಂಚೆ ಸಿಂಹಗಳು ಹಾರಿ ಬಂದು, ಅವರ ಎಲುವುಗಳನ್ನೆಲ್ಲಾ ಮುರಿದು ಬಿಟ್ಟವು.
೨೫ ಆಗ ಅರಸನಾದ ದರೀಯನು ಭೂಲೋಕದಲ್ಲೆಲ್ಲಾ ವಾಸವಾಗಿರುವ ಸಕಲ ಪ್ರಜೆಗಳಿಗೂ ಜನಾಂಗಗಳಿಗೂ ಭಾಷೆಯವರಿಗೂ
೨೬ ಬರೆದದ್ದೇನಂದರೆ—ನಿಮಗೆ ಕ್ಷೇಮವು ಹೆಚ್ಚಾಗಲಿ. ನಾನು ನಿರ್ಣಯ ಮಾಡುವದೇನಂದರೆ—ನನ್ನ ರಾಜ್ಯದ ಪ್ರತಿ ಠೊಕೆತನದಲ್ಲಿ ಮನುಷ್ಯರು ದಾನಿಯೇಲನ ದೇವರ ಮುಂದೆ ನಡುಗಿ ಹೆದರ ಬೇಕು; ಯಾಕಂದರೆ, ಜೀವವುಳ್ಳ ದೇವರೂ, ಎಂದೆಂದಿಗೂ ಸ್ಥಿರವಾದವನೂ, ಅವನೇ; ಅವನ ರಾಜ್ಯವು ನಾಶವಾಗದೆ, ಅವನ ಅಳಿಕೆ
೨೭ ಯು ಅಂತ್ಯದ ಪರ್ಯಂತರಕ್ಕೂ, ಇರುವದು. ಅವನೇ ತಪ್ಪಿಸಿ ರಕ್ಷಿಸುತ್ತಾನೆ; ಅವನೇ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಗುರುತುಗಳನ್ನೂ ಅದ್ಭುತಗಳನ್ನೂ ನಡಿಸುತ್ತಾನೆ; ದಾನಿಯೇಲನನ್ನು ಸಿಂಹಗಳ ಕೈಯೊಳಗಿಂದ ತಪ್ಪಿಸಿದವನು ಅವನೇ.
೨೮ ಹೀಗೆ ಈ ದಾನಿಯೇಲನು ದರೀಯನ ಅಳಿಕೆಯಲ್ಲಿಯೂ, ಪಾರ್ಶಿಯನಾದ ಕೋರೆಷನ ಅಳಿಕೆಯಲ್ಲಿಯೂ, ಪ್ರಸಿದ್ಧಿಸಿದನು.

## ೭. ಸಂಧಿ.

೧ ಬಾಬೆಲಿನ ಅರಸನಾದ ಬೆಲ್ಶಾಸರನ ಮೊದಲನೇ ವರುಷದಲ್ಲಿ ದಾನಿಯೇಲನು ಕನಸನ್ನೂ ತನ್ನ ಮಂಚದ ಮೇಲೆ ತಲೆ ದರ್ಶನಗಳನ್ನೂ ಕಂಡನು; ಆಗಲವನು ಆ ಕನಸನ್ನು ಬರೆದು, ಕಾರ್ಯಗಳ ಬಟ್ಟಿಸ್ಥಳವನ್ನು ತಿಳಿಸಿದನು.
೨ ದಾನಿಯೇಲನು ಮಾತಾಡಿ ಹೇಳಿದ್ದೇನಂದರೆ—ನಾನು ರಾತ್ರಿಯಲ್ಲಿ ನನ್ನ ದರ್ಶನದಲ್ಲಿ ನೋಡಲಾಗಿ, ಇಗೋ ಆಕಾಶದ ಚತುರ್ದಿಕ್ಕಿನ ಘಾಳಿಗಳು ಮಹಾ ಸಮುದ್ರದ ಮೇಲೆ ಬಡಿಯು
೩ ತ್ತಿದ್ದವು. ಆಗ ಬೇರೆ ಬೇರೆ ರೂಪವುಳ್ಳ ನಾಲ್ಕು ದೊಡ್ಡ ಮೃ
೪ ಗಗಳು ಸಮುದ್ರದೊಳಗಿಂದ ಏರಿ ಬಂದವು. ಮೊದಲನೇದು ಸಿಂಹದ ಹಾಗಿದ್ದು, ಹದ್ದಿನ ರೆಕ್ಕೆಗಳುಳ್ಳದ್ದಾಗಿತ್ತು; ಅದರ ರೆಕ್ಕೆಗಳು ಕೀಳ್ಪಟ್ಟು, ಅದು ಭೂಮಿಯಿಂದ ಎತ್ತಲ್ಪಟ್ಟು, ಮನುಷ್ಯನಂತೆ ಕಾಲೂರಿ ನಿಲ್ಲಿಸಲ್ಪಟ್ಟು, ಮನುಷ್ಯನ ಹೃದಯವು ಅದಕ್ಕೆ
೫ ಕೊಡಲ್ಪಡುವ ಮಟ್ಟಿಗೂ ನಾನು ನೋಡಿದೆನು. ಇದಲ್ಲದೆ ಇಗೋ, ಇನ್ನೊಂದು ಮೃಗವು, ಎರಡನೇದು, ಕರಡಿಯ ಹಾಗಿರುವಂಥಾದ್ದು; ಇದು ಬಂದು ಪಕ್ಕದಲ್ಲಿ ತನ್ನನ್ನು ಎತ್ತಿ ಕೊಂಡಿತು; ಇದರ ಬಾಯಿಯಲ್ಲಿ, ಹಲ್ಲುಗಳ ಮಧ್ಯದಲ್ಲಿ, ಮೂರು ಪಕ್ಕೆಲುವುಗಳಿದ್ದವು; ಮತ್ತು ಅದಕ್ಕೆ ಹೀಗೆಂದರು—ಏಳು, ಬಹಳ ಮಾಂ
೬ ಸವನ್ನು ತಿನ್ನು. ಇದರ ತರುವಾಯ ನಾನು ನೋಡಲಾಗಿ, ಇಗೋ ಚಿರತೆಯ ಹಾಗಿರುವ ಇನ್ನೊಂದು; ಇದರ ಬೆನ್ನಿನ ಮೇಲೆ ಪಕ್ಷಿಯ ರೆಕ್ಕೆಗಳು ನಾಲ್ಕು ಇದ್ದವು; ಮೃಗಕ್ಕೆ ನಾಲ್ಕು ತಲೆಗಳು ಸಹ ಇದ್ದವು; ಮತ್ತು ಅಧಿಕಾರವು ಅದಕ್ಕೆ ಕೊಡಲ್ಪಟ್ಟಿ
೭ ತು. ಇದರ ತರುವಾಯ ರಾತ್ರಿಯ ದರ್ಶನಗಳಲ್ಲಿ ನಾನು ನೋಡಲಾಗಿ, ಇಗೋ, ನಾಲ್ಕನೇ ಮೃಗವು, ಭಯಂಕರವಾದದ್ದು, ಅಘೋರವಾದದ್ದೂ, ಬಹು ಬಲವುಳ್ಳದ್ದೂ; ಅದಕ್ಕೆ ದೊಡ್ಡ ಕಬ್ಬಿಣದ ಹಲ್ಲುಗಳು ಇದ್ದವು; ಅದು ತಿಂದು, ತುಂಡು ತುಂಡು ಮಾಡಿ, ಮಿಕ್ಕಾದದ್ದನ್ನು ತನ್ನ ಕಾಲುಗಳಿಂದ ತುಳಿದು ಬಿಟ್ಟಿತು; ಅದು ಮುಂಚಿನ ಎಲ್ಲಾ ಮೃಗಗಳಿಗಿಂತ ವ್ಯತ್ಯಾಸವಾದದ್ದು; ಹತ್ತು ಕೊಂಬುಗಳುಳ್ಳದ್ದಾಗಿತ್ತು. ಆ ಕೊಂಬುಗಳನ್ನು ನಾನು
೮ ಆಲೋಚಿಸಲಾಗಿ, ಇಗೋ ಬೇರೊಂದು ಚಿಕ್ಕ ಕೊಂಬು ಅವುಗಳೊಳಗೆ ಎದ್ದು ಬಂತು; ಇದರ ಮುಂದೆ ಮುಂಚಿನ ಕೊಂಬುಗಳಲ್ಲಿ ಮೂರು ಬೇರುಗಳೊಂದಿಗೆ ಕೀಳ್ಪಟ್ಟಿವು; ಮತ್ತು ಇಗೋ ಈ ಕೊಂಬಿನಲ್ಲಿ ಮನುಷ್ಯರ ಕಣ್ಣುಗಳ ಹಾಗೆ ಕಣ್ಣುಗಳೂ, ದೊಡ್ಡವುಗಳನ್ನು ಮಾತಾಡುವ ಬಾಯಿಯೂ, ಇದ್ದವು.

೯ ನಾನು ನೋಡುತ್ತಿರಲಾಗಿ, ಸಿಂಹಾಸನಗಳು ಇರಿಸಲ್ಪಟ್ಟು, ದಿನಗಳಲ್ಲಿ ಪೂರ್ವೀಕನು ಕೂತು ಕೊಂಡನು; ಅವನ ವಸ್ತ್ರವು ಹಿಮದಂತೆ ಬಿಳುಪಾಗಿಯೂ, ಅವನ ತಲೆ ಕೂದಲು ಶುದ್ಧ ಉಣ್ಣೆಯಂತೆಯೂ, ಅವನ ಸಿಂಹಾಸನವು ಅಗ್ನಿಜ್ವಾಲೆಯಂತೆಯೂ, ಅವನ ಚಕ್ರಗಳು ಉರಿಯುವ ಬೆಂಕಿಯಂತೆಯೂ, ಇ
೧೦ ದ್ದವು. ಅವನ ಸನ್ನಿಧಾನದಿಂದ ಅಗ್ನಿ ಪ್ರವಾಹವು ಹೊರಟು ಬಂತು; ಸಹಸ್ರ ಸಹಸ್ರಗಳು ಅವನಿಗೆ ಸೇವೆ ಮಾಡಿದವು; ಅಯುತಾಯುತಗಳು ಅವನ ಮುಂದೆ ನಿಂತವು; ನ್ಯಾಯ ಸಭೆ ಕೂತಿತ್ತು. ಪುಸ್ತಕಗಳು ತೆಕೆಯಲ್ಪಟ್ಟವು. ಆ ಕೊಂಬು ಮಾತಾಡಿದ ದೊಡ್ಡ ಮಾತುಗಳ ಶಬ್ದದ ನಿಮಿತ್ತ ನಾನು ನೋಡಲೂ, ನೋಡುತ್ತಿರಲಾಗಿಯೇ, ಮೃಗವು ಕೊಲ್ಲಲ್ಪಟ್ಟು, ಅದರ ಶರೀರ
೧೨ ವು ಸಂಹರಿಸಲ್ಪಟ್ಟು, ಬೆಂಕಿಯ ಉರಿಗೆ ಕೊಡಲ್ಪಟ್ಟಿತು. ಮಿಕ್ಕಾದ ಮೃಗಗಳ ವಿಷಯವೋ, ಅವುಗಳ ಅಧಿಕಾರವು ತೆಗೆದು ಹಾಕಲ್ಪಟ್ಟಿತು; ಆದರೂ ಅವುಗಳ ಜೀವಗಳು ಸಮಯಕ್ಕೂ ಕಾಲಕ್ಕೂ ದೀರ್ಘ ಮಾಡಲ್ಪಟ್ಟವು.

೧೩ ರಾತ್ರಿಯ ದರ್ಶನಗಳಲ್ಲಿ ನಾನು ನೊಡಲಾಗಿ, ಇಗೋ, ಮನುಷ್ಯನ ಮಗನ ಹಾಗಿರುವವನು ಆಕಾಶದ ಮೇಘಗಳ ಸಂಗಡ ಬಂದು, ದಿನಗಳಲ್ಲಿ ಪೂರ್ವೀಕನ ಬಳಿಗೆ ಸೇರಿ, ಅವನ ಮುಂದೆ
೧೪ ಸಮೀಪಕ್ಕೆ ತರಲ್ಪಟ್ಟನು. ಮತ್ತು, ಇವನನ್ನು ಸಕಲ ಪ್ರಜೆಗಳೂ ಜನಾಂಗಗಳೂ ಭಾಷೆಯವರೂ ಸೇವಿಸುವ ಹಾಗೆ, ಇವನಿಗೆ ಅಧಿಕಾರವೂ ಮಹತ್ವವೂ ರಾಜ್ಯವೂ ಕೊಡಲ್ಪಟ್ಟವು; ಇವನ ಅಧಿಕಾರವು ಎಂದಿಗೂ ಮುಗಿಯದ ನಿತ್ಯ ಅಧಿಕಾರವೇ, ಇವನ ರಾಜ್ಯವು ನಾಶವಾಗದಂಥಾದ್ದೇ.

೧೫ ದಾನಿಯೇಲನೆಂಬ ನಾನು ನನ್ನ ಶರೀರದೊಳಗಿರುವ ನನ್ನ ಆತ್ಮದಲ್ಲಿ ವ್ಯಸನ ಪಟ್ಟು, ನನ್ನ ತಲೆಯ ದರ್ಶನಗಳ ನಿಮಿತ್ತ
೧೬ ಕಳವಳಗೊಂಡೆನು. ನಾನು ಹತ್ತರ ನಿಂತವರಲ್ಲಿ ಒಬ್ಬನ ಬಳಿಗೆ ಬಂದು, ಇದೆಲ್ಲಾದರ ನಿಶ್ಚಯವನ್ನೂ ಕೇಳಿದೆನು; ಆಗಲವನು ಅದನ್ನು ನನಗೆ ಹೇಳಿ, ಈ ಕಾರ್ಯಗಳ ಅಭಿಪ್ರಾಯವನ್ನು ನ
೧೭ ನಗೆ ತಿಳಿಸಿದನು. ನಾಲ್ಕಾಗಿರುವ ಈ ದೊಡ್ಡ ಮೃಗಗಳು, ಭೂ
೧೮ ಮಿಯೊಳಗಿಂದ ಏಳುವ ನಾಲ್ಕು ಅರಸಗಳಾಗಿವೆ. ಆದರೆ ಮಹೋನ್ನತನ ಪರಿಶುದ್ಧರು ರಾಜ್ಯವನ್ನು ತಕ್ಕೊಂಡು, ಅದನ್ನು ಎಂದಿಗೂ, ಹೌದು ಎಂದೆಂದಿಗೂ, ಸ್ವತಂತ್ರಿಸಿ ಕೊಳ್ಳುವರು.

೧೯ ಆಗ, ಮಿಕ್ಕಾದವುಗಳಿಗಿಂತ ವ್ಯತ್ಯಾಸವಾಗಿಯೂ, ಅತಿ ಭಯಂಕರವಾಗಿಯೂ, ಕಬ್ಬಿಣದ ಹಲ್ಲುಗಳುಳ್ಳದ್ದಾಗಿಯೂ, ಹಿತ್ತಾಳೆಯ ಉಗುರುಗಳುಳ್ಳದ್ದಾಗಿಯೂ, ತಂಡು ತುಂಡು ಮಾಡಿ, ಮಿಕ್ಕದ್ದನ್ನು ಕಾಲುಗಳಿಂದ ತುಳಿದದ್ದಾಗಿಯೂ, ಇರುವ ಆ ನಾ
೨೦ ಲ್ಕನೇ ಮೃಗದ ವಿಷಯವಾಗಿಯೂ, ಅದರ ತಲೆಯಲ್ಲಿದ್ದ ಹತ್ತು ಕೊಂಬುಗಳ ವಿಷಯವಾಗಿಯೂ, ಮತ್ತು ಯಾವದರ ಮುಂದೆ ಮೂರು ಬಿದ್ದವೋ, ಆ ಎದ್ದು ಬಂದ ಬೇಕೊಂದರ ವಿಷಯವಾಗಿಯೂ, ಹೌದು, ಕಣ್ಣುಗಳುಳ್ಳಂಥ, ಬಹು ದೊಡ್ಡವುಗಳನ್ನು ಮಾತಾಡಿದ ಬಾಯಿಯುಳ್ಳಂಥ, ತನ್ನ ಜತೆಯವರಿಗಿಂತ ಬಲವಾದ ನೋಟವುಳ್ಳಂಥ, ಆ ಕೊಂಬಿನ ವಿಷಯವಾಗಿಯೇ ನಿಶ್ಚ
೨೧ ಯವನ್ನು ತಿಳಿಯ ಬೇಕೆಂದಿದ್ದೆನು. ನಾನು ನೋಡಲಾಗಿ, ಆ ಕೊಂಬು ಪರಿಶುದ್ಧರ ಸಂಗಡ ಯುದ್ಧ ಮಾಡಿತು; ಮತ್ತು ದಿನಗಳಲ್ಲಿ ಪೂರ್ವೀಕನು ಬಂದು, ಮಹೋನ್ನತನ ಪರಿಶುದ್ಧರಿಗೆ ನ್ಯಾಯ ತೀರ್ಪು ಕೊಡಲ್ಪಡುವ ಪರ್ಯಂತರಕ್ಕೂ, ಪರಿಶುದ್ಧರು ರಾಜ್ಯವನ್ನು ಸ್ವತಂತ್ರಿಸಿ ಕೊಳ್ಳುವ ಕಾಲವು ಬರುವ ಪರ್ಯಂತರ
೨೨ ಕ್ಕೂ, ಅವರ ಮೇಲೆ ಜಯವನ್ನು ಹೊಂದಿತು.

೨೩ ಅವನು ಹೇಳಿದ್ದೇನಂದರೆ—ನಾಲ್ಕನೇ ಮೃಗವು ಭೂಮಿಯ ಮೇಲಿರುವ ನಾಲ್ಕನೇ ರಾಜ್ಯವಾಗಿರುವದು; ಅದು ಎಲ್ಲಾ ರಾಜ್ಯಗಳಿಗಿಂತ ವ್ಯತ್ಯಾಸವಾಗಿಯೂ, ಭೂಮಿಯನ್ನೆಲ್ಲಾ ತಿಂದು, ತುಳಿದು ಬಿಟ್ಟು, ತುಂಡು ತುಂಡು ಮಾಡುವಂಥಾದ್ದಾಗಿಯೂ, ಇ
೨೪ ರುವದು. ಮತ್ತು ಈ ರಾಜ್ಯದೊಳಗಿಂದ ಹುಟ್ಟುವ ಹತ್ತು ಕೊಂಬುಗಳು, ಏಳ್ ತಕ್ಕ ಹತ್ತು ಅರಸಗಳಾಗಿವೆ; ಮತ್ತು ಅವುಗಳ ತರುವಾಯ ಇನ್ನೊಬ್ಬನು ಏಳುವನು; ಅವನು ಮೊದಲಿನವರಿಗಿಂತ ವ್ಯತ್ಯಾಸವಾಗಿದ್ದು, ಮೂರು ಅರಸರನ್ನು ಒಳ್ಳೆ ಪರಿ
೨೫ ಸುವನು. ಅವನು ಮಹೋನ್ನತನಿಗೆ ವಿರೋಧವಾಗಿ ಮಾತುಗಳನ್ನು ನುಡಿದು, ಮಹೋನ್ನತನ ಪರಿಶುದ್ಧರನ್ನು ಬಾಧಿಸಿ, ಕಾಲಗಳನ್ನೂ ನೇಮಗಳನ್ನೂ ಬದಲಾಯಿಸುವದಕ್ಕೆ ಯೋಚಿಸುವನು; ಮತ್ತು, ಕಾಲವೂ, ಕಾಲಗಳೂ, ಕಾಲ ವಿಭಾಗವೂ ಆಗುವ
೨೬ ಪರ್ಯಂತರ, ಅವರು ಅವನ ಕೈಯಲ್ಲಿ ಒಪ್ಪಿಸಲ್ಪಡುವರು. ಆದರೆ ನ್ಯಾಯ ಸಭೆಯು ಕೂತು, ಅವನ ಅಧಿಕಾರವನ್ನು ತೆಗೆದು ಹಾಕಿ, ಅಂತ್ಯದ ಪರ್ಯಂತರ ಅದನ್ನು ಸಂಹರಿಸಿ, ನಾಶನ ಮಾ
೨೭ ಡುವದು. ಮತ್ತು ರಾಜ್ಯವೂ, ದೊರೆತನವೂ, ಆಕಾಶವೆಲ್ಲಾದರ ಕೆಳಗಿರುವ ರಾಜ್ಯದ ಮಹತ್ತೂ, ಮಹೋನ್ನತನ ಪರಿಶುದ್ಧರಾದ ಜನರಿಗೆ ಕೊಡಲ್ಪಡುವದು; ಅವನ ರಾಜ್ಯವು ನಿತ್ಯವಾದ ರಾಜ್ಯವು, ಮತ್ತು ಸಕಲ ಥೊರೆತನಗಳು ಅವನಿಗೆ ಸೇವೆ ಮಾಡಿ, ವಿಧೇಯವಾಗಿರುವವು.

೨೮ ಇಷ್ಟರಲ್ಲಿ ಈ ಸಂಗತಿ ತೀರಿತು. ದಾನಿಯೇಲನೆಂಬ ನನ್ನ ವಿಷಯವೋ, ನನ್ನ ಆಲೋಚನೆಗಳು ನನ್ನನ್ನು ಬಹಳವಾಗಿ ಕಳವಳ ಪಡಿಸಿದವು; ನನ್ನ ಮುಖವು ನನ್ನಲ್ಲಿ ಕಳೆಗುಂದಿತು; ಆದರೆ ಈ ಕಾರ್ಯವನ್ನು ನನ್ನ ಹೃದಯದಲ್ಲಿ ಇಟ್ಟು ಕೊಂಡೆನು.

## ೮. ಸಂಧಿ.

೧ ಅರಸನಾದ ಬೆಲ್ಶಾಸರನ ಆಳ್ವಿಕೆಯ ಮೂರನೇ ವರುಷದಲ್ಲಿ ನನಗೆ, ಅಂದರೆ, ದಾನಿಯೇಲನೆಂಬ ನನಗೆ, ಮೊದಲು ನನಗೆ ಕಾಣಿಸಿದ್ದರ ತರುವಾಯ, ಬಂದು ದರ್ಶನವು ಕಾಣಿಸಿತು.

೨ ದರ್ಶನದಲ್ಲಿ ನೋಡಿದೆನು; ನಾನು ನೋಡಲಾಗಿ, ಅದನ್ನೇನಂದರೆ—ಏಲಾಮ್ ಶೀಮೆಯಲ್ಲಿರುವ ಶೂಷಾನಿನಲ್ಲಿ, ಅರಮನೆಯಲ್ಲಿ, ಇದ್ದೆನು; ದರ್ಶನದಲ್ಲಿ ನೋಡಲಾಗಿ, ಉಲಾಯಿ ನದಿಯ
3 ಹತ್ತರ ಇದ್ದೆನು. ಆಗ ನನ್ನ ಕಣ್ಣುಗಳನ್ನೆತ್ತಿ ನೋಡಿದಾಗ, ಇಗೋ, ನದಿಯ ಮುಂದೆ ಎರಡು ಕೊಂಬುಗಳುಳ್ಳ ಟಗರು ನಿಂತಿತು; ಆ ಕೊಂಬುಗಳು ಎತ್ತರವಾಗದ್ದವು; ಆದರೆ ಬಂದು ಇನ್ನೊಂದಕ್ಕಿಂತ ಎತ್ತರವಾಗಿತ್ತು; ಎತ್ತರವಾದದ್ದು ಕಡೆಯಲ್ಲಿ ಏ
೪ ರಿ ಬಂತು. ಆ ಟಗರು ಪಶ್ಚಿಮಕ್ಕೂ ಉತ್ತರಕ್ಕೂ ದಕ್ಷಿಣಕ್ಕೂ ಹಾಯುವದನ್ನು ನಾನು ನೋಡಿದೆನು; ಮೃಗಗಳಲ್ಲಿ ಯಾವದಾದರೂ ಅದರ ಮುಂದೆ ನಿಲ್ಲ ಕೂಡದೆ ಹೋಯಿತು; ಮತ್ತು ಅದರ ಕೈಯೊಳಗಿಂದ ತಪ್ಪಿಸುವವನು ಯಾರೂ ಇಲ್ಲ; ಅದು ತನ್ನ ಮನಸ್ಸು ಬಂದ ಹಾಗೆ ಮಾಡಿ ದೊಡ್ಡದಾಯಿತು.

೫ ನಾನು ಆಲೋಚಿಸಲಾಗಿ, ಇಗೋ, ಪಶ್ಚಿಮದಿಂದ ಬಂದು



ಹೋತು ಸಮಸ್ತ ಭೂಮುಖದ ಮೇಲೆ, ನೆಲವನ್ನು ಮುಟ್ಟದೆ, ಬಂತು; ಆ ಹೋತಿಗೆ ಕಣ್ಣುಗಳ ನಡುವೆ ಲಕ್ಷಣವಾದ ಕೊಂಬು
೬ ಇತ್ತು. ಅದು ನಾನು ನದಿಯ ಮುಂದೆ ನಿಂತಿರ ನೋಡಿದ ಎರಡು ಕೊಂಬುಗಳುಳ್ಳ ಟಗರಿನ ಸಮೀಪಕ್ಕೆ ಬಂದು, ತನ್ನ ಬಲದ ರೌ
೭ ದ್ರದಲ್ಲಿ ಅದಕ್ಕೆ ಓಡಿತು. ಅದು ಟಗರಿನ ಹತ್ತರ ಬರುವದನ್ನು ನೋಡಿದೆನು; ಮತ್ತು ಅದರ ಮೇಲೆ ಶಿಟ್ಟು ಮಾಡಿ, ಟಗರನ್ನು ಬಡಿದು, ಅದರ ಎರಡು ಕೊಂಬುಗಳನ್ನು ಮುರಿದು ಬಿಟ್ಟಿತು; ಅದರ ಮುಂದೆ ನಿಲ್ಲುವದಕ್ಕೆ ಟಗರಿಗೆ ಏನು ಬಲವಿಲ್ಲ, ಆದರೆ ಅದು ಅದನ್ನು ನೆಲಕ್ಕೆ ಹಾಕಿ ತುಳಿಯಿತು; ಟಗರನ್ನು ಅದರ ಕೈ
೮ ಯೊಳಗಿಂದ ತಪ್ಪಿಸುವವನು ಯಾರು ಇಲ್ಲ. ಆದದರಿಂದ ಆ ಹೋತು ಅಧಿಕವಾಗಿ ಬೆಳಿಯಿತು; ಮತ್ತು ಅದು ಬಲವಾದ ಮೇಲೆ ಅದರ ದೊಡ್ಡ ಕೊಂಬು ಮುರಿಯಲ್ಪಟ್ಟು, ಅದಕ್ಕೆ ಬದಲಾಗಿ ಆಕಾಶದ ಚತುರ್ದಿಕ್ಕುಗಳ ಕಡೆಗೆ ನಾಲ್ಕು ಲಕ್ಷಣವಾದ ಕೊಂಬುಗ
೯ ಳು ಎದ್ದು ಬಂದವು. ಮತ್ತು ಅವುಗಳಲ್ಲಿ ಒಂದರೊಳಗಿಂದ ಚಿಕ್ಕ ಕೊಂಬು ಹೊರಟು, ದಕ್ಷಿಣ ಕಡೆಗೂ, ಪೂರ್ವ ಕಡೆಗೂ
೧೦ ರಮ್ಯ ದೇಶದ ಕಡೆಗೂ, ಅಧಿಕವಾಗಿ ಬೆಳೆಯಿತು. ಅದು ಆಕಾಶದ ಸೈನ್ಯದ ಮಟ್ಟಿಗೂ ಬೆಳೆದು, ಆ ಸೈನ್ಯದಲ್ಲಿಯೂ ನಕ್ಷತ್ರಗಳಲ್ಲಿಯೂ ಕೆಲವನ್ನು ಭೂಮಿಗೆ ಬೀಳ್ಸಿ, ಅವುಗಳನ್ನು ತುಳಿದು
೧೧ ಬಿಟ್ಟಿತು. ಹೌದು, ಸೈನ್ಯದ ಅಧಿಪತಿಗೆ ವಿರೋಧವಾಗಿ ಅದು ತನ್ನನ್ನು ದೊಡ್ಡದು ಮಾಡಿ ಕೊಂಡಿತು; ಮತ್ತು ಅದರಿಂದ ನಿತ್ಯವಾದ ಬಲಿಯು ತೆಗೆದು ಹಾಕಲ್ಪಟ್ಟು, ಅವನ ಪರಿಶುದ್ಧ ಸ್ಥಳದ
೧೨ ಮಂದಿರವು ಕೆಡವಲ್ಪಟ್ಟಿತು. ನಿತ್ಯವಾದ ಬಲಿಯ ಸಂಗಡ, ಸೈನ್ಯವು ಸಹ, ಅಪರಾಧದ ನಿಮಿತ್ತ, ಅದಕ್ಕೆ ಕೊಡಲ್ಪಟ್ಟಿತು; ಅದು ಸತ್ಯವನ್ನು ನೆಲಕ್ಕೆ ಕೆಡವಿ, ನಡಿಸಿ, ಅನುಕೂಲ ಹೊಂದಿತು.

೧೩ ಆಗ ಒಬ್ಬ ಪರಿಶುದ್ಧನು ಮಾತಾಡುವದನ್ನು ಕೇಳಿದೆನು, ಮಾತಾಡಿದ ಆ ಫಲಾನಿಯವನಿಗೆ ಮತ್ತೊಬ್ಬ ಪರಿಶುದ್ಧನು ಹೇಳಿದ್ದೇನಂದರೆ—ನಿತ್ಯವಾದ ಬಲಿಯನ್ನು ಕುರಿತಂಥ, ಹಾಳು ಮಾಡುವ ಅಪರಾಧವನ್ನು ಕುರಿತಂಥ, ಪರಿಶುದ್ಧ ಸ್ಥಳವನ್ನೂ ಸೈನ್ಯವನ್ನೂ ಕಾಲುಗಳ ಕೆಳಗೆ ತುಳಿಯಲ್ಪಡುವದಕ್ಕೆ ಒಪ್ಪಿಸುವಂಥ, ಈ ದರ್ಶ
೧೪ ನವು ಎಷ್ಟು ವರಿಗೂ? ಅವನು ನನಗೆ—ಎರಡು ಸಾವಿರದ ಮುನ್ನೂರು ಸಂಜೆ ಹೊತಾರೆಗಳ ವರಿಗೂ; ಆ ಮೇಲೆ ಪರಿಶುದ್ಧ ಸ್ಥಳವು ಶುದ್ಧ ಮಾಡಲ್ಪಡುವದು, ಅಂದನು.

೧೫ ಆಗಲಾದದ್ದೇನಂದರೆ—ನಾನು, ಅಂದರೆ, ದಾನಿಯೇಲನೆಂಬ ನಾನು, ಈ ದರ್ಶನವನ್ನು ನೋಡಿ, ಅಭಿಪ್ರಾಯವನ್ನು ಹುಡುಕುವಾಗ, ಇಗೋ, ಮನುಷ್ಯನ ರೂಪದಂತೆ ನನ್ನ ಮುಂದೆ ನಿಂ
೧೬ ತಿತು. ಮತ್ತು ಉಲಾಯಿಯ ನದಿಯ ಮಧ್ಯದಲ್ಲಿ ಮನುಷ್ಯನ ಶಬ್ದವನ್ನು ಕೇಳಿದೆನು; ಅದು ಕೂಗಿ ಹೀಗೆ ಅಂದಿತು—ಗಬ್ರಿಯೇಲನೇ, ಇವನಿಗೆ ದರ್ಶನವನ್ನು ತಿಳಿಯ ಪಡಿಸು. ಆಗಲವನು
೧೭ ನಾನು ನಿಂತಲ್ಲಿಯ ಹತ್ತಿರಕ್ಕೆ ಬಂದನು; ಬಂದಾಗ, ನಾನು ಭಯಪಟ್ಟು, ಮೋರೆ ಕೆಳಗಾಗಿ ಬಿದ್ದೆನು; ಆದರೆ ಅವನು ನನಗೆ—ಮನುಷ್ಯನ ಮಗನೇ, ತಿಳಿಕೋ; ಯಾಕಂದರೆ ಅಂತ್ಯಕಾಲದಲ್ಲಿ ಈ ದರ್ಶನವು ಉಂಟಾಗುವದು, ಅಂದನು. ಅವನು ನನ್ನ ಸಂ
೧೮ ಗಡ ಮಾತಾಡುತ್ತಿರುವಾಗ, ನಾನು ಮೋರೆ ಕೆಳಗಾಗಿ ನೆಲದ ಮೇಲೆ ಗಾಢ ನಿದ್ದೆಯಲ್ಲಿ ಬಿದ್ದಿದ್ದೆನು; ಆದರೆ ಅವನು ನನ್ನನ್ನು ಮುಟ್ಟಿ, ನಿಲ್ಲ ಮಾಡಿ, ಹೀಗಂದನು—ಇಗೋ, ರೌದ್ರದ ಕಟ್ಟಕಡೆಯಲ್ಲಿ ಆಗುವದನ್ನು ನಿನಗೆ ತಿಳಿಸುತ್ತೇನೆ, ಯಾಕಂದರೆ ನೇಮಿಸಿರುವ ಕಾಲದಲ್ಲಿ ಕಡೆ ಉಂಟಾಗುವದು.

೧೦ ನೀನು ನೋಡಿದ ಎರಡು ಕೊಂಬುಗಳುಳ್ಳ ಟಗರು ಏನಂದರೆ,
೨೧ ಮೇದ್ಯದ ಪಾರ್ಷಿಯ ಅರಸರು. ಕೋಮಮುಳ್ಳ ಹೋತು,
೨೨ ಗ್ರೇಕದ ಅರಸನು; ಅವನ ಕಣ್ಣುಗಳ ನಡುವೆ ಇರುವ ದೊಡ್ಡ ಕೊಂಬು, ಮೊದಲನೇ ಅರಸನು. ಮತ್ತು ಅದು ಮುರಿಯಲ್ಪಟ್ಟು, ಅದಕ್ಕೆ ಬದಲಾಗಿ ನಾಲ್ಕು ಎದ್ದದ್ದೇನಂದರೆ—ಆ ಜನಾಂಗದೊಳಗಿಂದ ನಾಲ್ಕು ರಾಜ್ಯಗಳು ಏಳುವವು; ಆದರೆ ಅವನ ಬಲದಷ್ಟು ಇರುವದಿ
೨೩ ಲ್ಲ. ಇದಲ್ಲದೆ, ಅವರ ರಾಜ್ಯದ ಕಡೆಯಲ್ಲಿ, ಅಪರಾಧಿಗಳು ತುಂಬಿದಾಗ, ಕ್ರೂರ ಮುಖವುಳ್ಳವನೂ, ತಂತ್ರಬಲ್ಲವನೂ, ಆಗಿರುವ
೨೪ ಒಬ್ಬ ಅರಸನು ಏಳುವನು. ಅವನ ಶಕ್ತಿ ಬಲವಾಗಿರುವದು, ಆದರೆ ಸ್ವಂತ ಶಕ್ತಿಯಿಂದಲ್ಲ; ಅವನು ಆಶ್ಚರ್ಯವಾಗಿ ನಾಶನ ಮಾಡಿ, ಪ್ರವರ್ಧನೆಯಾಗಿ, ನಡಿಸಿ, ಬಲವಾದಂಥ, ಪರಿಶುದ್ಧವಾದಂಥ,
೨೫ ಜನರನ್ನು ನಾಶನ ಮಾಡುವನು. ಮತ್ತು ಅವನು ತನ್ನ ಯುಕ್ತಿಯಿಂದ ತಂತ್ರವನ್ನು ತನ್ನ ಕೈಯಲ್ಲಿ ಅನುಕೂಲವಾಗ ಮಾಡುವನು; ಮತ್ತು ಅವನು ಹೃದಯದಲ್ಲಿ ತನ್ನನ್ನು ಹೆಚ್ಚಿಸಿ ಕೊಂಡು, ಸುಖದಿಂದ ಅನೇಕರನ್ನು ನಾಶನ ಮಾಡುವನು; ಇದಲ್ಲದೆ ಪ್ರಭುಗಳ ಪ್ರಭುವಿಗೆ ವಿರೋಧವಾಗಿ ಏಳುವನು; ಆದರೆ ಕೈ ಇಲ್ಲದೆ
೨೬ ಮುರಿಯಲ್ಪಡುವನು. ಹೇಳಲ್ಪಟ್ಟ ಆ ಸಂಜೆ ಹೊತಾರೆಗಳ ದರ್ಶನವು ಸತ್ಯವೇ; ಆದದರಿಂದ ನೀನು ಆ ದರ್ಶನಕ್ಕೆ ಮುದ್ರೆ ಹಾಕು; ಯಾಕಂದರೆ ಅದು ಬಹಳ ದಿವಸಗಳಿಗೆ ಇರುವದು.

೨೭ ಆಗ ದಾನಿಯೇಲನಾದ ನಾನು ಮೂರ್ಛೆ ಬಿದ್ದು, ಕೆಲವು ದಿನ ಅಸ್ವಸ್ಥವಾಗಿದ್ದೆನು; ಆ ಮೇಲೆ ನಾನು ಎದ್ದು, ಅರಸನ ಕೆಲಸವನ್ನು ನಡಿಸಿದೆನು; ಮತ್ತು ಆ ದರ್ಶನದ ವಿಷಯ ಆಶ್ಚರ್ಯ ಪಟ್ಟೆನು; ಆದರೆ ಅದನ್ನು ತಿಳಿದವನು ಯಾರು ಇಲ್ಲ.

## ೯. ಸಂಧಿ.

೧ ಮೇದ್ಯರ ಸಂತಾನದವನಾದಂಥ, ಕಸ್ದೀಯರ ರಾಜ್ಯದ ಮೇಲೆ ಅರಸನಾದಂಥ, ಅಹಸ್ವೇರೋಷನ ಮಗನಾದ ದರೀಯನ ಮೊ
೨ ದಲನೇ ವರುಷದಲ್ಲಿ, ಇವನ ಆಳ್ವಿಕೆಯ ಮೊದಲನೇ ವರುಷದಲ್ಲಿ, ದಾನಿಯೇಲನಾದ ನಾನು ಯೆಹೋವನ ವಾಕ್ಯವು ಪ್ರವಾದಿಯಾದ ಯೆಶಯಾನಿಗೆ ಬಂದ ಹಾಗೆ, ತಾನು ಯೆರೂಸಲೇಮಿನ ಹಾಳು ಬೀಳುವಿಕೆಗಳಲ್ಲಿ ಎಪ್ಪತ್ತು ವರುಷಗಳನ್ನು ಸಂಪೂರ್ಣ ಮಾಡುವನಂದ ವರುಷಗಳ ಲೆಖ್ಖವನ್ನು ಪುಸ್ತಕಗಳಿಂದ ತಿಳಿಯ ಕೊಂಡೆ
3 ನು. ಆಗ ಉಪವಾಸ, ಗೋಣಿ, ಬೂದಿಗಳ ಸಹಿತವಾಗಿ, ಪ್ರಾರ್ಥನೆಯಿಂದಲೂ, ವಿಜ್ಞಾಪನೆಗಳಿಂದಲೂ, ಹುಡುಕುವದಕ್ಕೆ, ಕರ್ತನಾದ ದೇವರ ಕಡೆಗೆ ನನ್ನ ಮುಖವನ್ನಿಟ್ಟೆನು. ನಾನು ನನ್ನ ದೇವರಾದ ಯೆಹೋವನಿಗೆ, ಪ್ರಾರ್ಥಿಸಿ, ಅರಿಕೆ ಮಾಡಿ, ಹೇಳಿದ್ದೇನಂದರೆ—

೪ ಓ ಕರ್ತನೇ, ದೊಡ್ಡ ಭಯಂಕರವಾದ ದೇವನೇ, ತನ್ನನ್ನು ಪ್ರೀತಿ ಮಾಡಿ, ತನ್ನ ಆಜ್ಞೆಗಳನ್ನು ಕೈ ಕೊಳ್ಳುವವರಿಗೆ, ಒಡಂಬ
೫ ಡಿಕೆಯನ್ನೂ ಕೃಪೆಯನ್ನೂ ಕಾಪಾಡುವವನೇ; ನಾವು ಪಾಪ ಮಾಡಿದ್ದೇವೆ, ಅಕ್ರಮ ಮಾಡಿದ್ದೇವೆ, ಕೆಟ್ಟವರಾಗಿ ನಡಿದಿದ್ದೇವೆ, ತಿರುಗ ಬಿದ್ದಿದ್ದೇವೆ; ನಿನ್ನ ಕಟ್ಟಳೆಗಳನ್ನೂ ನಿನ್ನ ನ್ಯಾಯಗಳನ್ನೂ
೬ ಬಿಡುವದರಿಂದಲೇ. ಹೌದು, ನಿನ್ನ ಹೆಸರಿನಲ್ಲಿ ನಮ್ಮ ಅರಸರಿಗೂ,

ನಮ್ಮ ಪ್ರಭುಗಳಿಗೂ, ನಮ್ಮ ತಂದೆಗಳಿಗೂ, ದೇಶದ ಎಲ್ಲಾ ಜನ
ರಿಗೂ, ಮಾತಾಡಿದ ನಿನ್ನ ಸೇವಕರಾದ ಪ್ರವಾದಿಗಳಿಗೆ ನಾವು ಕಿ
೭ ವಿ ಕೊಡಲಿಲ್ಲ. ಓ ಕರ್ತನೇ, ನಿನಗೆ ನೀತಿ ಉಂಟು; ಆದರೆ ನಮ
ಗೆ, ಇಂದು ಇರುವ ಪ್ರಕಾರ, ಮುಖಗಳ ನಾಚಿಕೆಯೇ; ಯೆಹೂ
ದ್ಯದ ಮನುಷ್ಯರಿಗೂ, ಯೆರೂಸಲೇಮಿನ ನಿವಾಸಿಗಳಿಗೂ, ಸ
ಮಸ್ತ ಇಸ್ರಯೇಲರಿಗೂ, ಹತ್ತರವಾಗಿರುವವರಿಗೂ, ದೂರದಲ್ಲಿ
ರುವವರಿಗೂ, ಅವರು ನಿನಗೆ ವಿರೋಧವಾಗಿ ಮಾಡಿರುವ ಅಪರಾ
ಧದ ನಿಮಿತ್ತ, ನೀನು ಅವರನ್ನು ತಳ್ಳಿ ಬಿಟ್ಟಿರುವ ಎಲ್ಲಾ ದೇಶಗ
೮ ಳಲ್ಲಿ, ಉಂಟು. ಓ ಕರ್ತನೇ, ನಮಗೆ ಮುಖದ ನಾಚಿಕೆಯು,
ನಮ್ಮ ಅರಸರಿಗೂ, ನಮ್ಮ ಪ್ರಭುಗಳಿಗೂ, ನಮ್ಮ ತಂದೆಗಳಿಗೂ,
ಉಂಟು, ಯಾಕಂದರೆ ನಿನಗೆ ವಿರೋಧವಾಗಿ ಪಾಪ ಮಾಡಿದ್ದೇ
೯ ವೆ. ನಾವು ಅವನಿಗೆ ವಿರೋಧವಾಗಿ ತಿರುಗಿ ಬಿದ್ದಿದ್ದಾಗ್ಯೂ, ನ
ಮ್ಮ ದೇವರಾದ ಕರ್ತನಿಗೆ ಕೃಪೆಗಳೂ, ಕ್ಷಮೆಗಳೂ, ಉಂಟು.
೧೦ ನಾವು ನಮ್ಮ ದೇವರಾದ ಯೆಹೋವನ ಶಬ್ದಕ್ಕೆ ಕಿವಿ ಗೊಡದೆ,
ಅವನು ತನ್ನ ಸೇವಕರಾದ ಪ್ರವಾದಿಗಳ ಕೈಯಿಂದ ನಮ್ಮ ಮುಂ
೧೧ದೆ ಇಟ್ಟು ತನ್ನ ನ್ಯಾಯಪ್ರಮಾಣಗಳಲ್ಲಿ ನಡಿಯಲಿಲ್ಲ. ಹೌದು,
ಇಸ್ರಯೇಲೆಲ್ಲಾ, ನಿನ್ನ ಶಬ್ದವನ್ನು ಕೇಳದ ಹಾಗೆ ತೊಲಗುವದ
ರಿಂದ, ನಿನ್ನ ನ್ಯಾಯಪ್ರಮಾಣವನ್ನು ವಿಚಾರಿದ್ದಾರೆ; ಆದದರಿಂದ
ಶಾಪವೂ, ದೇವರ ಸೇವಕನಾದ ಮೋಶೆಯ ನ್ಯಾಯಪ್ರಮಾಣ
ದಲ್ಲಿ ಬರೆಯಲ್ಪಟ್ಟಿರುವ ಆಣೆಯೂ, ನಮ್ಮ ಮೇಲೆ ಹೊಯ್ಯಲ್ಪ
ಟ್ಟಿವೆ; ನಾವು ಅವನಿಗೆ ವಿರೋಧವಾಗಿ ಪಾಪ ಮಾಡಿದ್ದರಿಂದ
೧೨ ಲೇ. ಅವನು ನಮಗೂ ನಮಗೆ ನ್ಯಾಯ ತೀರಿಸಿದ ನಮ್ಮ ನ್ಯಾ
ಯಾಧಿಪತಿಗಳಿಗೂ ವಿರೋಧವಾಗಿ ತಾನು ಹೇಳಿದ ಮಾತುಗಳ
ನ್ನು ಸ್ಥಾಪಿಸಿ, ದೊಡ್ಡ ಕೇಡನ್ನು ನಮ್ಮ ಮೇಲೆ ಬರ ಮಾಡಿದ್ದಾ
ನೆ; ಯಾಕಂದರೆ, ಯೆರೂಸಲೇಮಿನಲ್ಲಿ ಆದ ಹಾಗೆ ಸಮಸ್ತ ಆಕಾ
೧೩ ಶದ ಕೆಳಗೆ ಎಲ್ಲಿಯೂ ಆಗಲಿಲ್ಲ. ಮೋಶೆಯ ನ್ಯಾಯಪ್ರಮಾಣ
ದಲ್ಲಿ ಬರೆಯಲ್ಪಟ್ಟ ಹಾಗೆಯೇ ಈ ಕೇಡೆಲ್ಲಾ ನಮ್ಮ ಮೇಲೆ ಬಂ
ತು; ಆದರೂ ನಾವು ನಮ್ಮ ಅಕ್ರಮಗಳನ್ನು ಬಿಟ್ಟು ತಿರುಗಿ ಕೊಂ
ಡು, ನಿನ್ನ ಸತ್ಯವನ್ನು ತಿಳಿಯ ಕೊಳ್ಳುವ ಹಾಗೆ, ನಮ್ಮ ದೇವರಾ
೧೪ದ ಯೆಹೋವನ ಮುಂದೆ ನಮ್ಮ ಪ್ರಾರ್ಥನೆ ಮಾಡಲಿಲ್ಲ. ಆದದ
ರಿಂದ ಯೆಹೋವನು ಕೇಡಿಗಾಗಿ ಎಚ್ಚತ್ತಿದ್ದು, ಅದನ್ನು ನಮ್ಮ
ಮೇಲೆ ತಂದಿದ್ದಾನೆ; ನಮ್ಮ ದೇವರಾದ ಯೆಹೋವನು ತಾನು
ಮಾಡುವ ಸಕಲ ಕ್ರಿಯೆಗಳಲ್ಲಿ ನೀತಿವಂತನೇ; ಯಾಕಂದರೆ, ನಾ
೧೫ವು ಅವನ ಶಬ್ದಕ್ಕೆ ಕಿವಿ ಕೊಡಲಿಲ್ಲ. ಆದರೆ ಈಗ ನಮ್ಮ ದೇವ
ರಾದ ಕರ್ತನೇ, ಐಗುಪ್ತ ದೇಶದೊಳಗಿಂದ ನಿನ್ನ ಜನರನ್ನು ಬ
ಲವಾದ ಕೈಯಿಂದ ಹೊರಗೆ ತಂದು, ಇಂದಿನ ಪ್ರಕಾರ ನಿನಗೆ ಹೆ
ಸರು ಮಾಡಿ ಕೊಂಡವನೇ, ನಾವು ಪಾಪ ಮಾಡಿದ್ದೇವೆ, ಕೆಟ್ಟವ
೧೬ರಾಗಿ ನಡಿದಿದ್ದೇವೆ. ಓ ಕರ್ತನೇ, ನಿನ್ನ ಎಲ್ಲಾ ನೀತಿಯ ಪ್ರಕಾ
ರ ಬೇಡುತ್ತೇನೆ, ನಿನ್ನ ಕೋಪವೂ, ನಿನ್ನ ಉಗ್ರವೂ, ನಿನ್ನ ಪ
ಟ್ಟಣವಾದ ಯೆರೂಸಲೇಮಿನಿಂದಲೂ, ನಿನ್ನ ಪರಿಶುದ್ಧ ಪರ್ವತದಿಂದ
ಲೂ, ತಿರುಗಿಸಲ್ಪಡಲಿ; ಯಾಕಂದರೆ ನಮ್ಮ ಪಾಪಗಳ ನಿಮಿತ್ತ
ವೂ, ನಮ್ಮ ಪಿತೃಗಳ ಅಕ್ರಮಗಳ ನಿಮಿತ್ತವೂ, ಯೆರೂಸಲೇ
ಮೂ ಮತ್ತು ನಿನ್ನ ಜನರೂ, ನಮ್ಮ ಸುತ್ತಲಿರುವವರಿಗೆಲ್ಲಾ ನಿಂ
೧೭ದೆಯಾದವು. ಆದದರಿಂದ, ಈಗ, ಓ ನಮ್ಮ ದೇವರೇ, ನಿನ್ನ ಸೇ
ವಕನ ಪ್ರಾರ್ಥನೆಯನ್ನೂ, ಅವನ ವಿಜ್ಞಾಪನೆಗಳನ್ನೂ ಕೇಳಿ,
ಹಾಳಾದ ನಿನ್ನ ಪರಿಶುದ್ಧ ಸ್ಥಳದ ಮೇಲೆ, ಕರ್ತನಿಗೋಸ್ಕರವೇ,
೧೮ ನಿನ್ನ ಮುಖವನ್ನು ಪ್ರಕಾಶಿಸ ಮಾಡು. ಓ ನನ್ನ ದೇವರೇ, ನಿ
ನ್ನ ಕಿವಿ ಬೊಗ್ಗಿಸಿ ಕೇಳು; ನಿನ್ನ ಕಣ್ಣುಗಳನ್ನು ತೆರೆದು, ನಮ್ಮ
ಹಾಳಾಗುವಿಕೆಗಳನ್ನೂ, ನಿನ್ನ ಹೆಸರು ಹೊಂದಿರುವ ಪಟ್ಟಣ
ನ್ನೂ, ನೋಡು; ಯಾಕಂದರೆ, ನಾವು ನಮ್ಮ ನೀತಿಗಳಿಗೋಸ್ಕರ
ವಲ್ಲ, ನಿನ್ನ ದೊಡ್ಡ ಕೃಪೆಗಳಿಗೋಸ್ಕರವೇ, ನಮ್ಮ ವಿಜ್ಞಾಪನೆಗ
೧೯ ಳನ್ನು ನಿನ್ನ ಮುಂದೆ ಅರ್ಪಿಸುತ್ತೇವೆ. ಓ ಕರ್ತನೇ, ಕೇಳು;
ಓ ಕರ್ತನೇ, ಮನ್ನಿಸು; ಓ ಕರ್ತನೇ, ಕೇಳಿ, ಮಾಡು; ನಿನಗೋ
ಸ್ಕರವೇ ತಡೆ ಮಾಡ ಬೇಡ, ನನ್ನ ದೇವರೇ; ಯಾಕಂದರೆ
ನಿನ್ನ ಪಟ್ಟಣವೂ, ನಿನ್ನ ಜನವೂ, ನಿನ್ನ ಹೆಸರಿನಿಂದ ಕರೆಯಲ್ಪ
ಟ್ಟಿವೆ.

೨೦ ಆಗ ನಾನು ಮಾತಾಡುತ್ತಾ, ಪ್ರಾರ್ಥಿಸುತ್ತಾ, ನನ್ನ ಪಾಪ
ವನ್ನೂ ನನ್ನ ಜನರಾದ ಇಸ್ರಯೇಲಿನ ಪಾಪವನ್ನೂ ಅರಿಕೆ ಮಾ
ಡುತ್ತಾ, ನನ್ನ ದೇವರ ಪರಿಶುದ್ಧ ಪರ್ವತಕ್ಕೋಸ್ಕರ ನನ್ನ ವಿಜ್ಞಾ
ಪನೆಯನ್ನು ನನ್ನ ದೇವರಾದ ಯೆಹೋವನ ಮುಂದೆ ಅರ್ಪಿಸು
೨೧ತ್ತಾ ಇರಲಾಗಿ, ಹೌದು, ಇನ್ನು ನಾನು ಪ್ರಾರ್ಥನೆಯಲ್ಲಿ ಮಾ
ತಾಡುತ್ತಿರುವಾಗ, ನಾನು ಮೊದಲು ದರ್ಶನದಲ್ಲಿ ನೋಡಿದ ಗಬ್ರಿ
ಯೇಲನೆಂಬ ಮನುಷ್ಯನೇ ತ್ವರೆಯಾಗಿ ಹಾರ ಮಾಡಲ್ಪಟ್ಟು
ಸುವಾರು ಸಾಯಂಕಾಲದ ಬಲಿಯ ಹೊತ್ತಿನಲ್ಲಿ ನನ್ನನ್ನು ಮು
೨೨ಟ್ಟಿದನು. ಅವನು ನನಗೆ ತಿಳಿಸಿ, ಮಾತಾಡಿ, ಹೇಳಿದ್ದೇನಂದರೆ—
ದಾನಿಯೇಲನೇ, ನಿನಗೆ ವಿವೇಕವನ್ನೂ ಬುದ್ಧಿಯನ್ನೂ ಕೊಡುವ
೨೩ದಕ್ಕೆ ನಾನು ಹೊರಟ್ಟಿದ್ದೇನೆ. ನಿನ್ನ ವಿಜ್ಞಾಪನೆಗಳ ಆರಂಭದಲ್ಲಿ
ಆಜ್ಞೆ ಹೊರಟಿತು; ಮತ್ತು ನಿನಗೆ ತಿಳಿಸುವದಕ್ಕೆ ನಾನು ಬಂದಿ
ದ್ದೇನೆ, ಯಾಕಂದರೆ, ನೀನು ಅತಿ ಪ್ರಿಯನಾಗಿದ್ದೀ; ಆದದರಿಂದ
ಕಾರ್ಯವನ್ನು ತಿಳಿಯ ಕೊಂಡು, ದರ್ಶನವನ್ನು ಆಲೋಚಿಸು.
೨೪ ಅಕ್ರಮವನ್ನು ಮುಗಿಸುವದಕ್ಕೂ, ಪಾಪಗಳನ್ನು ಮುಚ್ಚುವದ
ಕ್ಕೂ, ಅಪರಾಧಕ್ಕೆ ಪ್ರಾಯಶ್ಚಿತ್ತ ಮಾಡುವದಕ್ಕೂ, ನಿತ್ಯ ನೀತಿ
ಯನ್ನು ಬರ ಮಾಡುವದಕ್ಕೂ, ದರ್ಶನಕ್ಕೂ ಪ್ರವಾದಿಗೂ ಮು
ದ್ರೆ ಹಾಕುವದಕ್ಕೂ, ಅತಿ ಪರಿಶುದ್ಧನನ್ನು ಅಭಿಷೇಕ ಮಾಡುವ
ದಕ್ಕೂ, ನಿನ್ನ ಜನರ ಮೇಲೆಯೂ, ನಿನ್ನ ಪರಿಶುದ್ಧ ಪಟ್ಟಣ ಮೇ
೨೫ಲೆಯೂ, ಎಪ್ಪತ್ತು ವಾರಗಳು ನೇಮಿಸಲ್ಪಟ್ಟಿವೆ. ಆದದರಿಂದ ನೀ
ನು ತಿಳಿದು ಗ್ರಹಿಸ ತಕ್ಕದ್ದೇನಂದರೆ—ಯೆರೂಸಲೇಮನ್ನು ತಿರಿಗಿ
ಕಟ್ಟುವದಕ್ಕೆ ಅಪ್ಪಣೆ ಹೊರಡುವದು ಮೊದಲುಗೊಂಡು ಪ್ರಭುವಾ
ದ ಅಭಿಷಿಕ್ತನ ಪರಿರ್ಯಂತರಕ್ಕೂ, ಏಳು ವಾರಗಳೂ, ಅರವತ್ತೆ
೨೬ರಡು ವಾರಗಳೂ, ಇರುವವು; ಬೀದಿಯೂ ಅಲಂಗವೂ ಕಟ್ಟುಕಾಲ
ಗಳಲ್ಲಿ ತಿರಿಗಿ ಕಟ್ಟಲ್ಪಡುವವು. ಇದಲ್ಲದೆ ಅರವತ್ತೆರಡು ವಾರಗ
ಳು ಆದ ಮೇಲೆ ಅಭಿಷಿಕ್ತನು ಕಡಿಯಲ್ಪಡುವನು, ಆದರೆ ತನಗಲ್ಲ;
ಮತ್ತು ಬರುವ ಪ್ರಭುವಿನ ಜನರು ಪಟ್ಟಣವನ್ನೂ ಪರಿಶುದ್ಧ ಸ್ಥಳವ
ನ್ನೂ ನಾಶ ಮಾಡುವರು; ಅದರ ಅಂತ್ಯವು ಪ್ರಳಯದಿಂದಿರುವ
ದು; ಯುದ್ಧದ ಅಂತ್ಯದ ಮಟ್ಟಿಗೂ ಹಾಳು ಮಾಡುವಿಕೆಗಳು
೨೭ ನಿರ್ಣಯಿಸಲ್ಪಟ್ಟಿವೆ. ಅವನು ಬಂದು ವಾರಕ್ಕೆ ಬರುಬಡಿಕೆಯ
ನ್ನು ಅನೇಕರಿಗೆ ಸ್ಥಿರ ಪಡಿಸುವನು; ಮತ್ತು ವಾರದ ಮಧ್ಯದಲ್ಲಿ
ಬಲಿಯನ್ನೂ ಅರ್ಪಣೆಯನ್ನೂ ನಿಲ್ಲಿಸುವನು; ಹಾಳಾದದರ ಮೇ
ಲೆ ನಿರ್ಣಯಿಸಲ್ಪಟ್ಟ ಸಂಹಾರವು ಹೊಯ್ಯಲ್ಪಡುವ ಮಟ್ಟಿಗೂ
ಕುಂಬಿಗಳ ಮೇಲೆ ಹಾಳು ಮಾಡುವವನ ಅಸಹ್ಯಗಳು ಇರುವವು.



## ೧೦. ಸಂಧಿ.

೧ ಪಾರ್ಶಿ ಅರಸನಾದ ಕೋರೆಷನ ಮೂರನೇ ವರುಷದಲ್ಲಿ
ಬೆಲ್ತಿಶಾಸರನೆಂಬ ಹೆಸರುಳ್ಳ ದಾನಿಯೇಲನಿಗೆ ಒಂದು ಕಾರ್ಯ
ಪ್ರಕಟಿ ಮಾಡಲ್ಪಟ್ಟಿತು; ಆ ಕಾರ್ಯವು ನಿಜವೇ, ಹೋರಾಟವು
ಕೊಡ್ಡದ್ದೇ; ಅವನು ಆ ಕಾರ್ಯವನ್ನು ಗ್ರಹಿಸಿ, ದರ್ಶನದಲ್ಲಿ
೨ ಅವನಿಗೆ ಗ್ರಹಿಕೆಯಾಯಿತು. ಆ ದಿನಗಳಲ್ಲಿ ದಾನಿಯೇಲನೆಂಬ
ನಾನು ಮೂರು ಪೂರ್ಣ ವಾರಗಳ ಮಟ್ಟಿಗೂ ದುಃಖ ಪಡುತ್ತಿದ್ದೆ
೩ ನು. ಮೂರು ಪೂರ್ಣ ವಾರಗಳು ತೀರುವ ಪರ್ಯಂತರ ನಾ
ನು ರುಚಿಕರವಾದ ಕೊಟ್ಟಿಯನ್ನು ತಿನ್ನಲಿಲ್ಲ; ಮಾಂಸವಾದರೂ
ದ್ರಾಕ್ಷೆ ರಸವಾದರೂ ನನ್ನ ಬಾಯಿಯಲ್ಲಿ ಸೇರಲಿಲ್ಲ; ಮತ್ತು ನಾ
ನು ಅಭಿಷೇಕ ಮಾಡಿ ಕೊಳ್ಳಲಿಲ್ಲ.
೪ ಮೊದಲನೇ ತಿಂಗಳಿನ ಇಪ್ಪತ್ತು ನಾಲ್ಕನೇ ದಿವಸದಲ್ಲಿ ಹಿದ್ದೆ
ಕೆಲೆಂಬ ಮಹಾ ನದಿಯ ಬಳಿಯಲ್ಲಿ ನಾನು ಇರುವಾಗ, ನಾನು
೫ ನನ್ನ ಕಣ್ಣುಗಳನ್ನೆತ್ತಿ ನೋಡಿದೆನು; ಆಗ ಇಗೋ, ನಾರುಮ
ಡಿ ಧರಿಸಲ್ಪಟ್ಟ ಒಬ್ಬ ಮನುಷ್ಯನು; ಅವನ ನಡುವು ಲುಸಾಜಿನ
೬ ಅಪರಂಜಿಯಿಂದ ಕಟ್ಟಲ್ಪಟ್ಟಿತು. ಅವನ ಶರೀರವು ತಾರ್ಶಿಷ್
ಕಲ್ಲಿನ ಹಾಗೆಯೂ, ಅವನ ಮುಖವು ಮಿಂಚಿನ ತೋರಿಕೆಯ
ಹಾಗೆಯೂ, ಅವನ ಕಣ್ಣುಗಳು ಬೆಂಕಿಯ ದೀಪಗಳ ಹಾಗೆಯೂ,
ಅವನ ತೋಳುಗಳೂ ಕಾಲುಗಳೂ ಬೆಳಗಿದ ಹಿತ್ತಾಳೆಯ ಕಾಂ
ತಿಯ ಹಾಗೆಯೂ, ಅವನ ಮಾತುಗಳ ಶಬ್ದವು ಜನ ಸಮೂಹ
ದ ಶಬ್ದದ ಹಾಗೆಯೂ, ಇದ್ದವು.
೭ ದಾನಿಯೇಲನೆಂಬ ನಾನು ಒಬ್ಬನೇ ಆ ದರ್ಶನವನ್ನು ನೋಡಿ
ದೆನು; ನನ್ನ ಸಂಗಡ ಇದ್ದ ಮನುಷ್ಯರು ದರ್ಶನವನ್ನು ನೋಡ
ಲಿಲ್ಲ; ಆದರೆ ದೊಡ್ಡ ಹೆದರಿಕೆ ಅವರ ಮೇಲೆ ಬಿತ್ತು; ಆದದರಿಂದ
೮ ಅವರು ಓಡಿ ಹೋಗಿ ಅಡಗಿ ಕೊಂಡರು. ನಾನು ಒಬ್ಬನೇ ಉ
ಳಿದು ಈ ದೊಡ್ಡ ದರ್ಶನವನ್ನು ನೋಡಿದೆನು; ನನ್ನಲ್ಲಿ ತ್ರಾಣ
ವು ಉಳಿಯಲಿಲ್ಲ; ನನ್ನ ಸೌಂದರ್ಯವು ನನ್ನಲ್ಲಿ ಕೊಳೆಯುಯಿಕೆ
ಯ ಹಾಗಾಯಿತು; ನನಗೆ ತ್ರಾಣವು ಇಲ್ಲದೆ ಹೋಯಿತು.
೯ ಆದರೂ ಅವನ ಮಾತುಗಳ ಶಬ್ದವನ್ನು ಕೇಳಿದೆನು; ಮತ್ತು ಅವ
ನ ಮಾತುಗಳ ಶಬ್ದವನ್ನು ಕೇಳುವಾಗ, ನಾನು ಮೋರೆ ಕೆಳಗಾ
ಗಿ ಗಾಢ ನಿದ್ರೆಯಲ್ಲಿ ಇದ್ದೆನು, ನನ್ನ ಮೋರೆ ನೆಲದ ಕಡೆಯಾ
೧೦ಗಿತ್ತು. ಆಗ ಇಗೋ ಒಂದು ಕೈ ನನ್ನನ್ನು ಮುಟ್ಟಿ, ನನ್ನ
ಮೊಣಕಾಲುಗಳ ಮೇಲೆಯೂ, ನನ್ನ ಅಂಗೈಗಳ ಮೇಲೆಯೂ,
೧೧ ನಿಲ್ಲಿಸಿತು. ಆಗಲವನು ನನಗೆ ಹೇಳಿದ್ದೇನಂದರೆ—ಓ ದಾನಿಯೇಲ
ನೇ, ಅತಿ ಪ್ರಿಯನಾದ ಮನುಷ್ಯನೇ, ನಾನು ನಿನಗೆ ಹೇಳುವ
ಮಾತುಗಳನ್ನು ತಿಳಿಯ ಕೊಂಡು, ನೆಟ್ಟಗೆ ನಿಂತಿರು; ಯಾಕಂದರೆ,
ನಾನು ಈಗ ನಿನ್ನ ಬಳಿಗೆ ಕಳುಹಿಸಲ್ಪಟ್ಟಿದ್ದೇನೆ. ಅವನು ಈ
ಮಾತನ್ನು ನನಗೆ ಹೇಳಿದ ಮೇಲೆ, ನಾನು ನಡುಗುತ್ತಲೇ ನಿಂತೆ
೧೨ನು. ಆಗಲವನು ನನಗೆ ಹೇಳಿದ್ದೇನಂದರೆ—ದಾನಿಯೇಲನೇ, ನೀ
ನು ಭಯ ಪಡ ಬೇಡ; ಯಾಕಂದರೆ, ನೀನು ತಿಳಿಯಕೊಳ್ಳುವದ
ಕ್ಕೂ, ನಿನ್ನ ದೇವರ ಮುಂದೆ ನಿನ್ನನ್ನು ತಗ್ಗಿಸುವದಕ್ಕೂ, ಹೃ
ದಯವಿಟ್ಟ ಮೊದಲನೇ ದಿವಸದಿಂದಲೇ ನಿನ್ನ ಮಾತುಗಳು ಕೇ
ಳಲ್ಪಟ್ಟವು; ಮತ್ತು ನಿನ್ನ ಮಾತುಗಳ ನಿಮಿತ್ತ ನಾನು ಬಂದಿದ್ದೇ
೧೩ನೆ. ಆದರೆ ಪಾರ್ಶಿ ರಾಜ್ಯದ ಪ್ರಭುವು ಇಪ್ಪತ್ತೊಂದು ದಿವಸ
ನನಗೆ ಎದುರು ನಿಂತನು; ಆದರೆ ಇಗೋ ಮುಖ್ಯ ಪ್ರಭುಗಳಲ್ಲಿ
ಒಬ್ಬನಾದ ಮಿಕಯೇಲನು ನನ್ನ ಸಹಾಯಕ್ಕೆ ಬಂದನು; ಮತ್ತು
ನಾನು ಅಲ್ಲಿ ಪಾರ್ಶಿ ಅರಸರ ಬಳಿಯಲ್ಲಿ ಪ್ರಬಲವಾದೆನು. ಈಗ
ಅಂತ್ಯದಿನಗಳಲ್ಲಿ ನಿನ್ನ ಜನರಿಗೆ ಆಗ ಹೋಗುವದನ್ನು ನಿನಗೆ
ತಿಳಿಸ ಬಂದಿದ್ದೇನೆ; ಯಾಕಂದರೆ ದರ್ಶನವು ಇನ್ನೂ ಅನೇಕ ದಿ
ನಗಳಿಗೆ ಅದೆ.
೧೫ ಅವನು ಇಂಥಾ ಮಾತುಗಳನ್ನು ನನ್ನ ಸಂಗಡ ಆಡಿದಾಗ,
೧೬ ನಾನು ಮುಖವನ್ನು ನೆಲಕ್ಕೆ ಬೊಗ್ಗಿಸಿ, ಸುಮ್ಮನಿದ್ದೆನು. ಆಗ
ಇಗೋ ಮನುಷ್ಯನ ಕುಮಾರರ ಹೋಲ್ಮಿಕೆಯ ಹಾಗಿದ್ದ ಒಬ್ಬ
ನು ನನ್ನ ತುಟಿಗಳನ್ನು ಮುಟ್ಟಿದನು; ಆಗ ನಾನು ಬಾಯಿ ತೆಗೆ
ದು ಮಾತಾಡಿ, ನನ್ನ ಮುಂದೆ ನಿಂತವನಿಗೆ ಹೇಳ್ದೆನಂದರೆ—
ಓ ನನ್ನ ಕರ್ತನೇ, ದರ್ಶನದ ನಿಮಿತ್ತ ನನ್ನ ಸಂಕಟಗಳು
೧೭ ನನ್ನ ಮೇಲೆ ತಿರುಗಿ ಕೊಂಡವೆ; ನನಗೆ ತ್ರಾಣ ಉಳಿಯಲಿಲ್ಲ.
ಯಾಕಂದರೆ, ಈ ನನ್ನ ಕರ್ತನ ಸೇವಕನು ಈ ನನ್ನ ಕರ್ತ
ನ ಸಂಗಡ ಹ್ಯಾಗೆ ಮಾತಾಡ ಬಲ್ಲನು? ನನ್ನ ವಿಷಯವೋ, ಆ
ಗಿನಿಂದ ನನ್ನಲ್ಲಿ ತ್ರಾಣವು ನಿಲ್ಲಲಿಲ್ಲ; ಉಸುರು ಸಹ ನನ್ನಲ್ಲಿ
ಉಳಿಯಲಿಲ್ಲ.
೧೮ ಆಗ ತಿರಿಗಿ ಮನುಷ್ಯನ ಆಕಾರದ ಹಾಗೆ ಒಬ್ಬನು ನನ್ನನ್ನು
ಮುಟ್ಟಿ, ನನ್ನನ್ನು ಬಲ ಪಡಿಸಿ, ಹೇಳ್ದೆನಂದರೆ—ಅತಿ ಪ್ರಿಯನಾ
೧೯ದ ಮನುಷ್ಯನೇ, ಭಯ ಪಡ ಬೇಡ; ನಿನಗೆ ಸಮಾಧಾನವಾಗಲಿ;
ಬಲವಾಗಿರು, ಹೌದು, ಬಲವಾಗಿರು. ಅವನು ನನ್ನ ಸಂಗಡ ಮಾ
ತಾಡಿದ ಮೇಲೆ, ನಾನು ಬಲವನ್ನು ಹೊಂದಿ, ಹೇಳ್ದೆನಂದರೆ—
ನನ್ನ ಕರ್ತನು ಮಾತಾಡಲಿ, ಯಾಕಂದರೆ ನನ್ನನ್ನು ಬಲ ಪಡಿ
ಸಿದ್ದೀ.
೨೦ ಅಗಲವನು ಹೀಗೆ ಹೇಳಿದನು—ನಾನು ನಿನ್ನ ಹತ್ತರ ಬಂದ
ಕಾರಣವು ನಿನಗೆ ತಿಳಿಯಿತೋ? ಈಗ ನಾನು ಪಾರ್ಶಿ ಪ್ರಭುವಿನ
ಸಂಗಡ ಜಗಳಾಡ ತಿರಿಗಿ ಹೋಗುತ್ತೇನೆ; ನಾನು ಹೋದ ಮೇಲೆ,
೨೧ ಇಗೋ, ಗ್ರೇಕಿನ ಪ್ರಭುವು ಬರುವನು. ಆದರೆ ಸತ್ಯದ ಬರಹದ
ಲ್ಲಿ ಸೂಚಿಸಲ್ಪಟ್ಟಿದ್ದನ್ನು ನಿನಗೆ ತಿಳಿಸುತ್ತೇನೆ; ಮತ್ತು ನಿಮ್ಮ ಪ್ರ
ಭುವಾದ ಮಿಕಯೇಲನೇ ಹೊರ್ತು ಮತ್ತ್ಯಾರು ನನ್ನ ಸಂಗಡ
ಇವುಗಳಲ್ಲಿ ಬಲಗೊಳ್ಳುವದಿಲ್ಲ.

## ೧೧. ಸಂಧಿ.

೧ ನಾನು ಸಹ ಮೇದ್ಯನಾದ ದರೀಯನ ಮೊದಲನೇ ವರುಷದ
ಲ್ಲಿ ಅವನನ್ನು ಸ್ಥಿರ ಪಡಿಸುವದಕ್ಕೂ, ಬಲ ಪಡಿಸುವದಕ್ಕೂ,
ನಿಂತೆನು.
೨ ಈಗ ಸತ್ಯವನ್ನು ನಿನಗೆ ತಿಳಿಸುತ್ತೇನೆ; ಇಗೋ ಪಾರ್ಶಿಯ
ಲ್ಲಿ ಇನ್ನು ಮೂರು ಅರಸರು ಏಳುವರು; ನಾಲ್ಕನೇಯವನು ಅ
ವಕ್ಕಲ್ಲರಿಗಿಂತ ಬಹು ಐಶ್ವರ್ಯವಂತನಾಗಿರುವನು; ಅವನು ತನ್ನ
ಐಶ್ವರ್ಯದಿಂದಾಗುವ ತನ್ನ ಸಾಮರ್ಥ್ಯದಿಂದ ಗ್ರೇಕ ರಾಜ್ಯ
೩ ಕ್ಕೆ ವಿರೋಧವಾಗಿ ಎಲ್ಲರನ್ನು ಎಬ್ಬಿಸುವನು. ಆಗ ಬಲವುಳ್ಳ
ಒಬ್ಬ ಅರಸನು ಎದ್ದು, ಮಹಾ ಅಧಿಕಾರದಿಂದ ಆಳ್ವಿ, ತನ್ನ ಚಿ
೪ತ್ತದ ಪ್ರಕಾರ ಮಾಡುವನು. ಅವನು ಎದ್ದ ಮೇಲೆ ಅವನ ರಾಜ್ಯ
ವು ಮುರಿಯಲ್ಪಟ್ಟು, ಆಕಾಶದ ನಾಲ್ಕು ದಿಕ್ಕುಗಳ ಕಡೆಗೆ ವಿಭಾ
ಗಿಸಲ್ಪಡುವದು; ಅವನ ಸಂತತಿಗಲ್ಲ, ಅವನು ಆಳ್ವಿದ ಅಧಿಕಾರದ

ಹಾಗಲ್ಲ; ಯಾಕಂದರೆ, ಅವನ ರಾಜ್ಯವು ಕೀಳ್ಪಟ್ಟು, ಅವರಿಗ
ಲ್ಲ, ಮತ್ತೊಬ್ಬರಿಗೆ ಆಗುವದು.
೫ ದಕ್ಷಿಣದ ಅರಸನು ಬಲಿಷ್ಠನಾಗಿರುವನು; ಆದರೆ ಅವನ ಪ್ರ
ಭುಗಳಲ್ಲಿ ಒಬ್ಬನು ಇವನಿಗಿಂತ ಬಲಿಷ್ಠನಾಗಿದ್ದು, ಆಳ್ವಿಕವನು; ಅ
೬ ವನ ಆಳ್ವಿಕೆ ದೊಡ್ಡ ಆಳ್ವಿಕೆಯಾಗಿರುವದು. ವರುಷಗಳ ಅಂತ್ಯ
ದಲ್ಲಿ ಅವರು ಅನ್ಯೋನ್ಯ ಮಾಡಿ ಕೊಳ್ಳುವರು; ಹ್ಯಾಗಂದರೆ ದ
ಕ್ಷಿಣದ ಅರಸನ ಕುಮಾರ್ತೆ ಉತ್ತರದ ಅರಸನ ಬಳಿಗೆ ಬಂದು,
ಸಮಾಧಾನ ಮಾಡುವಳು; ಆದರೆ ಅವಳು ತೋಳಿನ ತ್ರಾಣವ
ನ್ನು ಸ್ಥಿರ ಹಿಡಿಯುವದಿಲ್ಲ; ಅವನಾದರೂ ಅವನ ತೋಳಾದರೂ
ನಿಲ್ಲುವದಿಲ್ಲ; ಅವಳೂ ಅವಳನ್ನು ತಂದವರೂ ಅವಳನ್ನು ಪಡೆದ
ವನೂ ಆ ಕಾಲಗಳಲ್ಲಿ ಅವಳನ್ನು ಬಲ ಪಡಿಸಿದವನೂ ಒಪ್ಪಿಸಲ್ಪ
೭ ಡುವರು. ಆದರೆ ಅವಳ ಬೇರುಗಳ ಚಿಗುರಿನಿಂದ ಒಬ್ಬನು ಅವನಿಗೆ
ಬದಲಾಗಿ ಎದ್ದು, ದಂಡಿನ ಸಂಗಡ ಬಂದು, ಉತ್ತರದ ಅರಸನ ಕೋ
ಟೆಯಲ್ಲಿ ಪ್ರವೇಶಿಸಿ, ಅವರಿಗೆ ವಿರೋಧವಾಗಿ ನಡಿಸಿ, ಪ್ರಬಲವಾಗು
೮ ವನು. ಮತ್ತು ಅವರ ದೇವರುಗಳನ್ನೂ ಅವರ ಪ್ರಭುಗಳನ್ನೂ
ಬೆಳ್ಳಿ ಭಂಗಾರಗಳ ಬೆಲೆಯುಳ್ಳ ಪಾತ್ರೆಗಳನ್ನೂ ಸಹಿತವಾಗಿ ಐ
ಗುತ್ತ ದೇಶಕ್ಕೆ ಕೊಳ್ಳೆಯಾಗಿ ವೈದು, ಉತ್ತರದ ಅರಸನಿಗಿಂತ
೯ ಹೆಚ್ಚಾದ ವರುಷಗಳು ನಿಲ್ಲುವನು. ಹೀಗೆ ದಕ್ಷಿಣದ ಅರಸನು ಅವ
ನ ರಾಜ್ಯದೊಳಗೆ ಬಂದು, ಸ್ವಂತ ದೇಶಕ್ಕೆ ತಿರುಗುವನು.

೧೦ ಆದರೆ ಅವನ ಕಮಾರರು ಎಬ್ಬಿಸಲ್ಪಟ್ಟು, ದೊಡ್ಡ ದಂಡುಗಳ
ಸಮೂಹವನ್ನು ಕೂಡಿಸುವರು; ಒಬ್ಬನು ನಿಶ್ಚಯವಾಗಿ ಬಂದು,
ಪ್ರಳಯದಂತೆ ಹಾದು ಹೋಗುವನು; ಅವನು ತಿರಿಗಿ ಎಬ್ಬಿಸಲ್ಪ
೧೧ ಡುವನು, ಅವನ ಕೋಟೆಯ ಪರ್ಯಂತರವೇ. ಮತ್ತು ದಕ್ಷಿಣ
ದ ಅರಸನು ಕೋಪಿಸಿ ಕೊಂಡು, ಹೊರಟು, ಅವನ ಸಂಗಡ, ಅಂ
ದರೆ, ಉತ್ತರದ ಅರಸನ ಸಂಗಡ, ಯುದ್ಧ ಮಾಡುವನು; ಅವನು
ಮಹಾ ಸಮೂಹವನ್ನು ನಿಲ್ಲಿಸುವನು; ಆದರೆ ಆ ಸಮೂಹವು ಅ
೧೨ ವನ ಕೈಯಲ್ಲಿ ಕೊಡಲ್ಪಡುವದು. ಆ ಸಮೂಹವನ್ನು ಅವನು ತೆಗೆ
ದು ಹಾಕಿದ ಮೇಲೆ ಅವನ ಹೃದಯವು ಹೆಚ್ಚಲ್ಪ ಪಡುವದು; ಹೌ
ದು, ಅವನು ಅಯುತಗಳನ್ನು ಬೀಳ್ಪ ಮಾಡುವನು; ಆದರೆ ಬಲ
೧೩ ಹೊಂದುವದಿಲ್ಲ. ಯಾಕಂದರೆ ಉತ್ತರದ ಅರಸನು ತಿರುಗಿ ಕೊಂ
ಡು, ಮುಂಚಿನದಕ್ಕಿಂತ ದೊಡ್ಡ ಸಮೂಹವನ್ನು ನಿಲ್ಲಿಸಿ, ಕೆಲವು
ವರುಷಗಳ ಮೇಲೆ ದೊಡ್ಡ ದಂಡಿನ ಸಂಗಡಲೂ, ಬಹು ಸಂಪತ್ತಿನ
೧೪ ಸಂಗಡಲೂ, ನಿಶ್ಚಯವಾಗಿ ಬರುವನು. ಆ ಕಾಲಗಳಲ್ಲಿ ದಕ್ಷಿಣದ
ಅರಸನಿಗೆ ವಿರೋಧವಾಗಿ ಅನೇಕರು ಏಳುವರು; ನಿನ್ನ ಜನರನ್ನು
ಸುಲು ಕೊಳ್ಳುವವರ ಮಕ್ಕಳು ದರ್ಶನವನ್ನು ಸ್ಥಾಪಿಸುವದಕ್ಕೆ
೧೫ ತಮ್ಮನ್ನು ಹೆಚ್ಚಿಸಿ ಕೊಳ್ಳುವರು; ಆದರೆ ಬೀಳುವರು. ಆಗ ಉ
ತ್ತರದ ಅರಸನು ಬಂದು, ಮೊರ್ಚೆ ಕಟ್ಟಿ, ಕೋಟೆಯುಳ್ಳ ಪ
ಟ್ಟಣಗಳನ್ನು ವಶ ಮಾಡಿ ಕೊಳ್ಳುವನು; ದಕ್ಷಿಣದ ತೋಳುಗಳಾ
ದರೂ, ಅವನು ಆದು ಕೊಂಡ ಜನರಾದರೂ, ನಿಲ್ಲರು; ನಿಲ್ಲುವದ
೧೬ ಕ್ಕೆ ಬಲವಿರುವದಿಲ್ಲ. ಆದರೆ ಅವನಿಗೆ ವಿರೋಧವಾಗಿ ಬರುವವನು
ಸ್ವಂತ ಚಿತ್ತದ ಪ್ರಕಾರ ಮಾಡುವನು; ಅವನ ಮುಂದೆ ಯಾರೂ
ನಿಲ್ಲರು; ಅವನು ಮಹಿಮೆಯುಳ್ಳ ದೇಶದಲ್ಲಿ ನಿಲ್ಲುವನು; ಅದು
೧೭ ಅವನ ಕೈಯಿಂದ ಮುಗಿಸಲ್ಪಡುವದು. ಅವನು ತನ್ನ ರಾಜ್ಯವೆ
ಲ್ಲಾದರ ಬಲದ ಸಂಗಡ ಪ್ರವೇಶಿಸ ತನ್ನ ಮುಖವನ್ನಿಡುವನು, ಅವ
ನ ಸಂಗಡ ನಿಟ್ಟನೆಯವರು ಸಹ; ಹೀಗೆ ಮಾಡುವನು; ಮತ್ತು
ಅವಳನ್ನು ಕೆಡಿಸುವದಕ್ಕೆ ಸ್ತ್ರೀಯರ ಕುಮಾರ್ತೆಯನ್ನು ಅವ
ನಿಗೆ ಕೊಡುವನು; ಆದರೆ ಅವಳು ಅವನ ಕಡೆ ನಿಲ್ಲದೆ ಅವನಿಗಾಗಿ
೧೮ ಇರಳು. ಇದರ ತರುವಾಯ ಅವನು ತನ್ನ ಮುಖವನ್ನು ದ್ವೀಪ
ಗಳಿಗೆ ತಿರುಗಿಸಿ, ಅನೇಕರನ್ನು ವಶ ಮಾಡಿ ಕೊಳ್ಳುವನು; ಆದ
ರೆ ಒಬ್ಬ ಅಧಿಪತಿಯು ತನಗಾಗಿ ಅವನ ನಿಂದೆಯನ್ನು ನಿಲ್ಲಿಸಿ ಬಿ
ಡುವನು; ತನಗೆ ನಿಂದೆ ಇಲ್ಲದೆ ಅದನ್ನು ಅವನ ಮೇಲೆ ತಿರುಗಿಸು
೧೯ ವನು. ಆಗಲವನು ಸ್ವದೇಶದ ಕೋಟೆಗೆ ತನ್ನ ಮುಖವನ್ನು ತಿ
ರುಗಿಸುವನು; ಆದರೆ ಅವನು ಎಡವಿ ಬಿದ್ದು ಕಾಣದೆ ಹೋಗು
ವನು.

೨೦ ಆಗ ಅವನಿಗೆ ಬದಲಾಗಿ, ರಾಜ್ಯದ ಮಹಿಮೆಯಿಂದ ಸುತ್ತಿಗೆ
ತೆಗೆದು ಕೊಳ್ಳುವವನನ್ನು ಹಾದು ಹೋಗ ಮಾಡುವನು ಏಳು
ವನು; ಆದರೆ ಕೆಲವು ದಿನಗಳೊಳಗೆ ಅವನು ಕೋಪವೂ ಯುದ್ಧ
೨೧ ವೂ ಇಲ್ಲದೆ ಸಂಹಾರವಾಗುವನು. ಆಗ ಅವನಿಗೆ ಬದಲಾಗಿ ನೀ
ಚನು ಏಳುವನು; ಇವನಿಗೆ ರಾಜ್ಯದ ಮಾನವನ್ನು ಕೊಡರು; ಆ
ದರೆ ಅವನು ಸಮಾಧಾನವಾಗಿ ಬಂದು, ರಾಜ್ಯವನ್ನು ಪುಸಲಾಯಿ
೨೨ ಕೆಗಳಿಂದ ಸಂಪಾದಿಸುವನು. ಇದಲ್ಲದೆ ಪ್ರಳಯದ ತೋಳುಗ
ಳಿಂದ ಅವನ ಮುಂದಿನಿಂದ ಮುಣಿಗಿಸಲ್ಪಟ್ಟು, ಮುರಿದು ಹೋಗು
೨೩ ವದು; ಹೌದು, ಒಡಂಬಡಿಕೆಯ ಪ್ರಭುವು ಸಹ. ಮತ್ತು ಅವನ
ಸಂಗಡ ಸಮಾಧಾನ ಮಾಡಿ ಕೊಂಡ ಮೇಲೆ ಕಪಟವಾಗಿ ನಡಿ
ಯುವನು; ಹ್ಯಾಗಂದರೆ, ಅವನು ಏರಿ ಬಂದು, ಸ್ವಲ್ಪ ಜನದಿಂದ
೨೪ ಪ್ರಬಲವಾಗುವನು. ಅವನು ಸಮಾಧಾನವಾಗಿ ಶೀಮೆಯ ಪುಷ್ಟಿ
ಸ್ಥಳಗಳಲ್ಲಿಯೂ ಪ್ರವೇಶಿಸಿ, ತನ್ನ ತಂದೆಗಳೂ ತನ್ನ ತಂದೆಗಳ
ತಂದೆಗಳೂ ಮಾಡದಂಥಾದ್ದನ್ನು ಮಾಡಿ, ಕೊಳ್ಳೆಯನ್ನೂ ಸೂ
ರೆಯನ್ನೂ ದ್ರವ್ಯವನ್ನೂ ಅವರಲ್ಲಿ ವಿಭಾಗಿಸಿ, ಕೋಟೆಗಳಿಗೂ
ವಿರೋಧವಾಗಿ ತನ್ನ ಯೋಚನೆಗಳನ್ನು ಯೋಚಿಸುವನು; ಕಾ
೨೫ ಲದ ಮಟ್ಟಿಗೂ ಹೀಗೆಯೇ. ಮತ್ತು ಅವನು ದಕ್ಷಿಣದ ಅರಸನಿ
ಗೆ ವಿರೋಧವಾಗಿ ದೊಡ್ಡ ದಂಡಿನ ಸಂಗಡ ತನ್ನ ಶಕ್ತಿಯನ್ನೂ
ತನ್ನ ಹೃದಯವನ್ನೂ ಎಬ್ಬಿಸುವನು; ಮತ್ತು ದಕ್ಷಿಣದ ಅರಸನು
ದೊಡ್ಡ, ಮಹಾ ಅಧಿಕ ಬಲವಾದ, ದಂಡಿನ ಸಂಗಡ ಯುದ್ಧಕ್ಕೆ ಸಿ
ದ್ಧ ಮಾಡಿ ಕೊಳ್ಳುವನು, ಆದರೆ ನಿಲ್ಲನು; ಯಾಕಂದರೆ ಅವನಿಗೆ
೨೬ ವಿರೋಧವಾಗಿ ಯೋಚನೆಗಳನ್ನು ಯೋಚಿಸುವರು. ಹೌದು,
ಅವನ ರಾಜ ಭೋಜನವನ್ನು ಉಣ್ಣುವವರೇ ಅವನನ್ನು ನಾಶ ಮಾ
ಡುವರು; ಅವನ ದಂಡು ಪ್ರಳಯವಾಗಿ ಬರುವದು; ಮತ್ತು ಅನೇಕ
೨೭ ರು ಹತವಾಗಿ ಬೀಳುವರು. ಮತ್ತು ಈ ಇಬ್ಬರು ಅರಸರ ಹೃ
ದಯಗಳು ಕೇಡಿನ ಮೇಲೆ ಇರುವವು; ಒಂದೇ ಮೇಜಿನ ಹತ್ತರ
ಕೂತು, ಸುಳ್ಳು ಹೇಳುವರು; ಆದರೆ ಅದು ಅನುಕೂಲವಾಗದು;
ಯಾಕಂದರೆ ಹ್ಯಾಗಾದರೂ ನೇಮಿಸಲ್ಪಟ್ಟ ಕಾಲದಲ್ಲಿ ಅಂತ್ಯವು
೨೮ ಇರುವದು. ಆಗಲವನು ಬಹಳ ದ್ರವ್ಯದ ಸಂಗಡ ಸ್ವಂತ ದೇಶ
ಕ್ಕೆ ತಿರುಗುವನು; ಮತ್ತು ಅವನ ಹೃದಯವು ಪರಿಶುದ್ಧ ಒಡಂಬಡಿ
ಕೆಗೆ ವಿರೋಧವಾಗಿರುವದು; ಹಾಗೆ ಮಾಡಿ, ಸ್ವಂತ ದೇಶಕ್ಕೆ ತಿ
೨೯ ರುಗುವನು. ನೇಮಿಸಲ್ಪಟ್ಟ ಕಾಲದಲ್ಲಿ ಅವನು ತಿರುಗಿ ಕೊಂಡು
ದಕ್ಷಿಣಕ್ಕೆ ಬರುವನು; ಆದರೆ ಮೊದಲನೇದರ ಹಾಗೆಯೂ, ಕಡೆ
೩೦ ಯದರ ಹಾಗೆಯೂ, ಇರದು. ಯಾಕಂದರೆ, ಕಿತ್ತಿಮನ ಹಡಗ
ಗಳು ಅವನಿಗೆ ವಿರೋಧವಾಗಿ ಬರುವವು; ಆದದರಿಂದ ಅವನು ಅ
ಧೈರ್ಯ ಪಟ್ಟು, ತಿರುಗಿ ಕೊಂಡು, ಪರಿಶುದ್ಧ ಒಡಂಬಡಿಕೆಗೆ ವಿ



ರೋಧವಾಗಿ ಕೋಪಿಸಿ, ಹೀಗೆ ಮಾಡುವನು; ತಿರುಗಿ ಕೊಂಡು ಪ
ರಿಶುದ್ಧ ಒಡಂಬಡಿಕೆಯನ್ನು ಬಿಟ್ಟವರ ಸಂಗಡ ಒಪ್ಪಾಗುವನು.
೩೧ ಮತ್ತು ಅವನ ಕಡೆಯಲ್ಲಿ ತೋಳುಗಳು ನಿಂತು, ಪರಿಶುದ್ಧವಾದ
ಬಲಸ್ಥಾನವನ್ನು ಅಪವಿತ್ರ ಮಾಡಿ, ನಿತ್ಯವಾದ ಬಲಿಯನ್ನು ತೆಗೆದು
೩೨ ಹಾಕಿ, ಹಾಳು ಮಾಡುವಂಥ ಅಸಹ್ಯವನ್ನು ಇರಿಸುವರು. ಮತ್ತು
ಒಡಂಬಡಿಕೆಗೆ ವಿರೋಧವಾಗಿ ಕೆಟ್ಟವರಾಗಿ ನಡಿಯುವವರನ್ನು ಪು
ಸಲಾಯಿಕೆಗಳಿಂದ ಕೆಡಿಸುವನು; ಆದರೆ ತಮ್ಮ ದೇವರನ್ನು ಅರಿ
೩೩ ಯುವ ಜನರು ದೃಢವಾಗಿದ್ದು ಮಾಡುವರು. ಇದಲ್ಲದೆ ಜನರಲ್ಲಿ ಬು
ದ್ಧಿವಂತರಾದವರು ಅನೇಕರಿಗೆ ಬೋಧಿಸುವರು; ಆದರೆ ಕತ್ತಿಯಿಂ
ದಲೂ, ಬೆಂಕಿಯಿಂದಲೂ, ಸೆರೆಯಿಂದಲೂ, ಕೊಳ್ಳೆಯಿಂದಲೂ,
೩೪ ಅನೇಕ ದಿನ ಬೀಳುವರು. ಮತ್ತು ಅವರು ಬೀಳುವಾಗ ಸ್ವಲ್ಪ ಸಹಾ
ಯದಿಂದ ಅವರಿಗೆ ಸಹಾಯವಾಗುವದು; ಆದರೆ ಅನೇಕರು ವಂಚನೆ
೩೫ ಯಾಗಿ ಅವರಿಗೆ ಹತ್ತಿ ಕೊಳ್ಳುವರು. ಇದಲ್ಲದೆ ಅವರನ್ನು ಶೋಧಿಸು
ವದಕ್ಕೂ, ಶುದ್ಧ ಮಾಡುವದಕ್ಕೂ, ಶುಭ್ರ ಮಾಡುವದಕ್ಕೂ, ಬು
ದ್ಧಿವಂತರಾದವರಲ್ಲಿ ಅನೇಕರು ಬೀಳುವರು; ಅಂತ್ಯಕಾಲದ ಕಡೆಯ
ಪರ್ಯಂತರವೇ; ಯಾಕಂದರೆ ನೇಮಿಸಲ್ಪಟ್ಟ ಕಾಲಕ್ಕೆ ಇರುವದು.
೩೬ ಮತ್ತು, ಅರಸನು ತನ್ನ ಚಿತ್ತದ ಪ್ರಕಾರ ಮಾಡುವನು; ತ
ನ್ನನ್ನು ಹೆಚ್ಚಿಸಿ ಕೊಂಡು, ಎಲ್ಲಾ ದೇವರುಗಳ ಮೇಲೆ ತನ್ನನ್ನು
ದೊಡ್ಡವನಾಗ ಮಾಡಿ, ದೇವರುಗಳ ದೇವರಿಗೆ ವಿರೋಧವಾಗಿ
ಆಶ್ಚರ್ಯವಾದವುಗಳನ್ನು ಮಾತಾಡಿ, ಕೋಪವು ತೀರುವ ಪ
ರ್ಯಂತರ ಪ್ರವರ್ಧನೆಯಾಗುವನು; ಯಾಕಂದರೆ ನಿಶ್ಚಯಿಸಲ್ಪ
೩೭ ಟ್ಟದ್ದು ಮಾಡಲ್ಪಡುವದು. ಇದಲ್ಲದೆ ಅವನು ತನ್ನ ಪಿತೃಗಳ
ದೇವರನ್ನು ಲಕ್ಷ್ಯ ಮಾಡದೆ, ಸ್ತ್ರೀಯರೇಚ್ಛೆಯನ್ನೂ ಯಾವ
ದೇವರನ್ನೂ ಲಕ್ಷ್ಯ ಮಾಡದೆ, ಇರುವನು; ಎಲ್ಲಾದರ ಮೇಲೆ ತ
೩೮ ನ್ನನ್ನು ಹೆಚ್ಚಿಸುವನು. ಆದರೆ ಅವನು ತನ್ನ ಸ್ಥಳದಲ್ಲಿ ಬಲಸ್ಥಾ
ನಗಳ ದೇವರನ್ನು ಘನ ಪಡಿಸುವನು; ಮತ್ತು ತನ್ನ ಪಿತೃಗಳು
ಅರಿಯದ ದೇವರನ್ನು ಭಂಗಾರದಿಂದಲೂ, ಬೆಳ್ಳಿಯಿಂದಲೂ,
ಅಮೂಲ್ಯ ಕಲ್ಲುಗಳಿಂದಲೂ, ರಮ್ಯವಾದವುಗಳಿಂದಲೂ, ಘನ ಪ
೩೯ ಡಿಸುವನು. ತಾನು ಅರಿಕೆ ಮಾಡುವಂಥ, ಮಹಿಮೆಯಿಂದ ಹೆಚ್ಚಿ
ಸುವಂಥ, ಅನ್ಯ ದೇವತ ಸಂಗಡ ಬಲವಾದ ಕೋಟೆಗಳಿಗೆ ಹೀಗೆ
ಮಾಡುವನು; ಮತ್ತು ಅವರನ್ನು ಅನೇಕರ ಮೇಲೆ ಅಳ್ಳ ಮಾಡಿ,
೪೦ ಕ್ರಯಕ್ಕೆ ಭೂಮಿಯನ್ನು ಪಾಲಿಸುವನು. ಮತ್ತು ಅಂತ್ಯ ಕಾಲ
ದಲ್ಲಿ ದಕ್ಷಿಣದ ಅರಸನು ಅವನನ್ನು ನೂಕುವನು; ಮತ್ತು ಉತ್ತ
ರದ ಅರಸನು ರಥಗಳ ಸಂಗಡಲೂ, ಸವಾರರ ಸಂಗಡಲೂ, ಅ
ನೇಕ ಹಡಗಗಳಿಂದಲೂ, ಬಿರುಗಾಳಿಯಂತೆ ಅವನಿಗೆ ವಿರೋಧ
೪೧ ವಾಗಿ ಬಂದು, ದೇಶಗಳಲ್ಲಿ ಪ್ರವೇಶಿಸಿ, ಪ್ರಳಯದಂತೆ ಹಾದು
ಹೋಗುವನು. ಇದಲ್ಲದೆ ಅವನು ಮಹಿಮೆಯುಳ್ಳ ದೇಶದಲ್ಲಿ
ಪ್ರವೇಶಿಸುವನು; ಅನೇಕವು ಕೆಡವಲ್ಪಡುವವು; ಆದರೆ ಇವು ಅವನ
ಕೈಯೊಳಗಿಂದ ತಪ್ಪಿಸಿ ಕೊಳ್ಳುವವು; ಯಾವವಂದರೆ—ಎದೋ
ಮೂ, ಮೊವಾಬೂ, ಅಮ್ಮೋನನ ಮಕ್ಕಳಲ್ಲಿ ಮುಖ್ಯಸ್ಥರೂ, ಇ
೪೨ ವರೇ. ಅವನು ದೇಶಗಳ ಮೇಲೆ ಸಹ ತನ್ನ ಕೈಯನ್ನು ಚಾಚು
೪೩ ವನು; ಮತ್ತು ಐಗುತ್ತ ದೇಶವು ತಪ್ಪದು. ಬೆಳ್ಳಿ ಭಂಗಾರಗಳ
ಬೊಕ್ಕಸಗಳ ಮೇಲೆಯೂ, ಐಗುಪ್ತದ ಅಮೂಲ್ಯಗಳೆಲ್ಲಾದರ
ಮೇಲೆಯೂ, ಅವನಿಗೆ ಅಧಿಕಾರವಿರುವದು; ಲೂಬ್ಯರೂ ಕೂಷ್ಯ
೪೪ ರೂ ಅವನ ಹೆಜ್ಜೆ ಹಿಡಿಯುವರು. ಆದರೆ ಮೂಡಣದಿಂದಲೂ
ಉತ್ತರದಿಂದಲೂ ಬರುವ ಸುದ್ದಿಗಳು ಅವನನ್ನು ಹೆದರಿಸುವವು;
ಆದದರಿಂದ ಅವನು ಮಹಾ ಉಗ್ರದಿಂದ, ಅನೇಕರನ್ನು ಸಂಹರಿಸು
೪೫ ವದಕ್ಕೂ ನಿರ್ಮೂಲ ಮಾಡುವದಕ್ಕೂ ಹೊರಡುವನು. ಮತ್ತು
ಅವನು ತನ್ನ ಅರಮನೆಯ ಗುಡಾರಗಳನ್ನು ಸಮುದ್ರಗಳ ನಡು
ವೆ ಮಹಿಮೆಯುಳ್ಳ ಪರಿಶುದ್ಧ ಪರ್ವತದಲ್ಲಿ ಹಾಕುವನು; ಆದರೂ
ಸಹಾಯಕನು ಯಾರು ಇಲ್ಲದೆ ತನ್ನ ಅಂತ್ಯಕ್ಕೆ ಬರುವನು.

## ೧೨. ಸಂಧಿ.

೧ ಮತ್ತು ಆ ಕಾಲದಲ್ಲಿ ನಿನ್ನ ಜನರ ಮಕ್ಕಳಿಗೋಸ್ಕರ ನಿಲ್ಲುವವ
ಮಹಾ ಪ್ರಭುವಾದ ಮಿಕಯೇಲನು ಏಳುವನು; ಆಗ ಜನಾಂಗವು ಇ
ದ್ದದ್ದು ಪೊವಲುಗೊಂಡು ಆ ಕಾಲದ ಪರ್ಯಂತರ ಇರದಂಥ ಪ್ರಮಿ
ಕಾಲವು ಇರುವದು; ಆ ಕಾಲದಲ್ಲಿ ನಿನ್ನ ಜನರು, ಅಂದರೆ, ಪುಸ್ತಕ
ದಲ್ಲಿ ಬರೆಯಲ್ಪಟ್ಟವರೆಂದು ಕಂಡು ಕೊಳ್ಳಲ್ಪಟ್ಟವರೆಲ್ಲರು, ತಪ್ಪಿಸ
೨ ಲ್ಪಡುವರು. ಮತ್ತು ಭೂಮಿಯ ಮಣ್ಣಿನೊಳಗೆ ನಿದ್ದೆ ಮಾಡುವವ
ರಲ್ಲಿ ಅನೇಕರು—ಇವರು ನಿತ್ಯ ಜೀವಕ್ಕೂ, ಅವರು ನಾಚಿಕೆಗೂ
೩ ನಿತ್ಯನಿಂದೆಗೂ—ಎಚ್ಚರವಾಗುವರು. ಮತ್ತು ಬುದ್ಧಿವಂತರಾದವರು
ಆಕಾಶದ ಕಾಂತಿಯ ಹಾಗೆಯೂ, ಅನೇಕರನ್ನು ನೀತಿಗೆ ತಿರುಗಿಸಿ
ದವರು ನಕ್ಷತ್ರಗಳ ಹಾಗೆಯೂ, ಎಂದೆಂದಿಗೂ ಪ್ರಕಾಶಿಸುವರು.
೪ ಆದರೆ ನೀನು, ಓ ದಾನಿಯೇಲನೇ, ಅಂತ್ಯ ಕಾಲದ ಪರ್ಯಂ
ತರಕ್ಕೂ ಈ ಮಾತುಗಳನ್ನು ಮುಚ್ಚಿ, ಪುಸ್ತಕಕ್ಕೆ ಮುದ್ರೆ ಹಾ
ಕು; ಅನೇಕರು ಓದ್ಯಾಡುವರು, ಮತ್ತು ತಿಳುವಿಕೆ ಹೆಚ್ಚಾಗುವದು.
೫ ಆಗ ದಾನಿಯೇಲನೆಂಬ ನಾನು ನೋಡಿದೆವು, ಮತ್ತು ಇಗೋ
ಬೇರೆ ಇಬ್ಬರು, ಒಬ್ಬನು ನದಿಯ ತೀರದ ಇತ್ತಲೂ, ಮತ್ತೊಬ್ಬ
೬ ನು ನದಿಯ ತೀರದ ಅತ್ತಲೂ, ನಿಂತರು. ಮತ್ತು, ನದಿಯ ನೀರು
ಗಳ ಮೇಲೆ ನಿಂತು, ನಾರುಮಡಿ ಧರಿಸಿದ, ಆ ಮನುಷ್ಯನಿಗೆ, ಒ
ಬ್ಬನು ಹೇಳಿದ್ದೇನಂದರೆ—ಈ ಆಶ್ಚರ್ಯಗಳ ಅಂತ್ಯವು ಎಷ್ಟು ವ
೭ ರಿಗೆ? ಆಗ ನದಿಯ ನೀರುಗಳ ಮೇಲಿದ್ದ, ನಾರುಮಡಿ ಧರಿಸಿದ,
ಆ ಮನುಷ್ಯನು, ತನ್ನ ಬಲ ಕೈಯನ್ನೂ ತನ್ನ ಎಡ ಕೈಯನ್ನೂ
ಆಕಾಶಕ್ಕೆ ಎತ್ತಿ, ಸದಾಕಾಲ ಜೀವಿಸುವವನ ಮೇಲೆ ಆಣೆ ಇಟ್ಟು,
ಅದು ಕಾಲಕ್ಕೂ, ಕಾಲಗಳಿಗೂ, ಕಾಲ ವಿಭಾಗಕ್ಕೂ, ಇರುವದೆಂ
ದೂ, ಮತ್ತು ಅವನು ಪರಿಶುದ್ಧ ಜನರ ಬಲವನ್ನು ಚದರಿಸಿ ತೀರಿಸಿ
ದ ಮೇಲೆ ಇವೆಲ್ಲಾ ಈಡೇರಿರುವವೆಂದೂ, ಅಂದದ್ದನ್ನು ಕೇಳಿದೆನು.
೮ ನಾನು ಕೇಳಿದೆನು, ಆದರೆ ತಿಳು ಕೊಳ್ಳಲಿಲ್ಲ; ಆಗ—ಓ ನ
೯ ನ್ನ ಕರ್ತನೇ, ಇವುಗಳ ಅಂತ್ಯವೇನೆಂದು, ಕೇಳಿದೆನು. ಅದಕ್ಕವ
ನು ಹೇಳಿದ್ದೇನಂದರೆ—ದಾನಿಯೇಲನೇ, ಹೋಗು; ಯಾಕಂದರೆ
ಈ ಮಾತುಗಳು ಅಂತ್ಯ ಕಾಲದ ಮಟ್ಟಿಗೂ ಮುಚ್ಚಲ್ಪಟ್ಟು,
೧೦ ಮುದ್ರೆ ಹಾಕಲ್ಪಟ್ಟು, ಅವೆ. ಅನೇಕರು ಶುದ್ಧ ಮಾಡಲ್ಪಟ್ಟು,
ಶುಭ್ರ ಮಾಡಲ್ಪಟ್ಟು, ಶೋಧಿಸಲ್ಪಟ್ಟು, ಇರುವರು; ಆದರೆ ಕೆಟ್ಟ
ವರು ಕೆಟ್ಟವರಾಗಿ ನಡೆಯುವರು; ಮತ್ತು ಕೆಟ್ಟವರೆಲ್ಲಾ ತಿಳು
೧೧ ಕೊಳ್ಳರು, ಆದರೆ ಬುದ್ಧಿವಂತರು ತಿಳು ಕೊಳ್ಳುವರು. ಮತ್ತು
ನಿತ್ಯವಾದ ಬಲಿಯು ತೆಗೆದು ಹಾಕಲ್ಪಟ್ಟು, ಹಾಳು ಮಾಡುವಂ
ಥ ಅಸಹ್ಯವು ಇರಿಸಲ್ಪಡುವ ಮಟ್ಟಿಗೂ, ಸಾವಿರದ ಇನ್ನೂರಾ
೧೨ ತೊಂಭತ್ತು ದಿನಗಳು ಇರುವವು. ತಾಳ್ಮೆ ಕೊಂಡು, ಸಾವಿರದ
ಮುನ್ನೂರ ಮುವ್ವತ್ತೈದು ದಿನಗಳಿಗೆ ಬರುವವನೇ, ಭಾಗ್ಯವಂ
೧೩ ತನು. ನೀನಾದರೆ, ಅಂತ್ಯದ ಮಟ್ಟಿಗೂ ಹೋಗು; ನೀನು ವಿಶ್ರ
ಮಿಸಿ ಕೊಂಡು, ದಿನಗಳ ಅಂತ್ಯದಲ್ಲಿ ನಿನ್ನ ಭಾಗದಲ್ಲಿ ನಿಲ್ಲುವಿ.

# HOSEA.

## ಹೊಶೇಯನು.

### ೧. ಸಂಧಿ.

೧ ಯೆಹೂದದ ಅರಸುಗಳಾದ ಉಜ್ಜೀಯನ, ಯೊತಾಮನ, ಆಹಜನ, ಹಿಜೆಕೀಯನ ದಿವಸಗಳಲ್ಲಿಯೂ, ಇಸ್ರಯೇಲಿನ ಅರಸನಾದ ಯೊವಾಷನ ಮಗನಾದ ಯೆರೊಬಾಮನ ದಿವಸಗಳಲ್ಲಿಯೂ, ಉಂಟಾದ ಯೆಹೋವನ ವಾಕ್ಯವು.

೨ ಹೊಶೇಯನಿಂದಾದ ಯೆಹೋವನ ವಾಕ್ಯದ ಪ್ರಾರಂಭವು. ಯೆಹೋವನು ಹೊಶೇಯನಿಗೆ ಹೇಳಿದ್ದೇನಂದರೆ—ಹೋಗಿ, ನಿನಗೆ ಸೂಳೆತನಗಳ ಹೆಂಡತಿಯನ್ನೂ, ಸೂಳೆತನಗಳ ಮಕ್ಕಳನ್ನೂ, ತೆಗೆದುಕೋ; ಯಾಕಂದರೆ, ದೇಶವು ಯೆಹೋವನನ್ನು ಬಿಟ್ಟು ದೊಡ್ಡ ಸೂಳೆತನವನ್ನು ಮಾಡಿ ಕೊಂಡಿದೆ.

3 ಆಗಲವನು ಹೋಗಿ, ದಿಬ್ಲಯಿಮನ ಮಗಳಾದ ಗೋಮೆರಳನ್ನು ತಕ್ಕೊಂಡನು; ಆವಳು ಬಸುರಾಗಿ ಅವನಿಗೆ ಮಗನನ್ನು

೪ ಹೆತ್ತಳು; ಆಗ ಯೆಹೋವನು ಅವನಿಗೆ ಹೇಳಿದ್ದೇನಂದರೆ—ಅವನಿಗೆ ಇಜ್ರೇಲನೆಂದು ಹೆಸರಿಡು; ಯಾಕಂದರೆ ಇನ್ನು ಸ್ವಲ್ಪದರಲ್ಲಿ ನಾನು ಇಜ್ರೇಲನ ರಕ್ತವನ್ನು ಯೆಹೂವಿನ ಮನೆಯ ಮೇಲೆ ವಿಚಾರಿಸಿ, ಇಸ್ರಯೇಲಿನ ಮನೆಯ ರಾಜ್ಯವನ್ನು ನಿಂತು ಹೋಗ

೫ ಮಾಡುವೆನು. ಮತ್ತು ಆ ದಿವಸದಲ್ಲಿ ಆಗುವದೇನಂದರೆ—ನಾನು ಇಸ್ರಯೇಲಿನ ಬಿಲ್ಲನ್ನು ಇಜ್ರೇಲಿನ ತಗ್ಗಿನಲ್ಲಿ ಮುರಿಯುವೆನು.

೬ ಮತ್ತು ಅವಳು ತಿರಿಗಿ ಬಸುರಾಗಿ, ಮಗಳನ್ನು ಹೆತ್ತಳು; ಆಗಲವನು ಅವನಿಗೆ ಹೇಳಿದ್ದೇನಂದರೆ—ಅವಳಿಗೆ ಲೋರುಹಾಮಳೆಂದು ಹೆಸರಿಡು; ಯಾಕಂದರೆ ನಾನು ಇನ್ನು ಇಸ್ರಯೇಲಿನ ಮನೆಯವರನ್ನು ಕರುಣಿಸದೆ, ಅವರನ್ನು ಶುದ್ಧವಾಗಿ ತೆಗೆದು ಬಿಡು

೭ ತ್ತೇನೆ. ಆದರೆ ನಾನು ಯೆಹೂದದ ಮನೆಯವರನ್ನು ಕರುಣಿಸಿ, ಅವರನ್ನು ಅವರ ದೇವರಾದ ಯೆಹೋವನಿಂದ ರಕ್ಷಿಸುವೆನು; ನಾನು ಬಿಲ್ಲಿನಿಂದಲಾದರೂ, ಕತ್ತಿಯಿಂದಲಾದರೂ, ಯುದ್ಧದಿಂದಲಾದರೂ, ಕುದುರೆಗಳಿಂದಲಾದರೂ, ಸವಾರರಿಂದಲಾದರೂ, ಅವರನ್ನು ರಕ್ಷಿಸುವದಿಲ್ಲ.

೮ ಅವಳು ಲೋರುಹಾಮಳನ್ನು ಮೊಲೆ ಬಿಡಿಸಿದ ಮೇಲೆ ಬಸುರಾಗಿ, ಮಗನನ್ನು ಹೆತ್ತಳು. ಆಗಲವನು ಹೇಳಿದ್ದೇನಂದರೆ—

೯ ಅವನಿಗೆ ಲೋವಮ್ಮಿ ಎಂದು ಹೆಸರಿಡು, ಯಾಕಂದರೆ ನೀವು ನನ್ನ ಜನರಲ್ಲ; ನಾನು ನಿಮ್ಮವನಾಗಿರುವದಿಲ್ಲ. ಆದರೂ ಇಸ್ರಯೇಲನ ಮಕ್ಕಳ ಲೆಖ್ಖವು ಅಳೆಯಲೂ ಲೆಖ್ಖಿಸಲೂ ಕೂಡದ ಸಮುದ್ರದ ಉಸುಬಿನ ಹಾಗೆ ಇರುವದು; ಮತ್ತು ಆಗುವದೇನಂದರೆ—ನನ್ನ ಜನರಲ್ಲವೆಂದು ಅವರಿಗೆ ಹೇಳಿದ ಸ್ಥಳದಲ್ಲಿ, ಜೀವವುಳ್ಳ

೧೦ ದೇವರ ಮಕ್ಕಳೆಂದು ಅವರಿಗೆ ಹೇಳಲ್ಪಡುವದು. ಆಗ ಯೆಹೂದನ ಮಕ್ಕಳೂ ಇಸ್ರಯೇಲಿನ ಮಕ್ಕಳೂ ಏಕವಾಗಿ ಕೂಡಿಕೊಂಡು, ತಮಗೆ ಒಂದು ತಲೆ ಇಟ್ಟು ಕೊಳ್ಳುವರು; ಮತ್ತು ದೇಶದೊಳಗಿಂದ ಏರಿ ಬರುವರು; ಯಾಕಂದರೆ ಇಜ್ರೇಲಿನ ದಿವಸ ದೊಡ್ಡದು.

### ೨. ಸಂಧಿ.

೧ ನಿಮ್ಮ ಸಹೋದರರಿಗೆ ಅಮ್ಮಿ ಎಂದೂ, ನಿಮ್ಮ ಸಹೋದರಿಗಳಿಗೆ ರುಹಾಮಳೆಂದೂ, ಅನ್ನಿರಿ.

೨ ನಿಮ್ಮ ತಾಯಿಯ ಸಂಗಡ ವಾದಿಸಿರಿ ವಾದಿಸಿರಿ; ಯಾಕಂದರೆ ಅವಳು ನನ್ನ ಹೆಂಡತಿಯಲ್ಲ; ನಾನು ಅವಳ ಗಂಡನಲ್ಲ. ಆದದರಿಂದ ಅವಳು ತನ್ನ ಮುಖದಿಂದ ತನ್ನ ಜಾರತ್ವಗಳನ್ನೂ, ತನ್ನ ಮೊಲೆಗಳ ಮಧ್ಯದಲ್ಲಿಂದ ತನ್ನ ವ್ಯಭಿಚಾರಗಳನ್ನೂ, ತೊಲಗಿಸಲಿ.

3 ಇಲ್ಲದಿದ್ದರೆ, ನಾನು ಅವಳನ್ನು ಬೆತ್ತಲೆಯಾಗ ಮಾಡಿ, ಅವಳು ಹುಟ್ಟಿದ ದಿವಸದಲ್ಲಾದ ಹಾಗೆ ನಿಲ್ಲಿಸಿ, ಅವಳನ್ನು ಅರಣ್ಯದಂತೆ ಮಾಡಿ, ಅವಳನ್ನು ಬೀಗಿದ ಭೂಮಿಯಂತೆ ಇಟ್ಟು, ಅವಳನ್ನು ದಾಹದಿಂದ ಕೊಲ್ಲುತ್ತೇನೆ.

೪ ಅವಳ ಮಕ್ಕಳನ್ನು ಸಹ ಕರುಣಿಸೆನು; ಯಾಕಂದರೆ ಅವರು ಸೂಳೆತನಗಳ ಮಕ್ಕಳೇ.

೫ ಯಾಕಂದರೆ ಅವರ ತಾಯಿ ಜಾರತ್ವ ಮಾಡಿದ್ದಾಳೆ; ಅವರನ್ನು ಹೆತ್ತವಳು ನಾಚಿಕೆಯಾಗಿ ನಡಿದಿದ್ದಾಳೆ; ಯಾಕಂದರೆ, ಅವಳು ನನ್ನ ಕೊಟ್ಟಿಯನ್ನೂ, ನನ್ನ ನೀರನ್ನೂ, ನನ್ನ ಉಣ್ಣೆಯನ್ನೂ, ನನ್ನ ಸಣಬನ್ನೂ, ನನ್ನ ಉಣ್ಣೆಯನ್ನೂ, ನನ್ನ ಪಾನವನ್ನೂ, ನನಗೆ ಕೊಡುವ ನನ್ನ ಮಿಂಡರ ಹಿಂದೆ ಹೋಗುತ್ತೇನೆಂದು ಅಂದಿದ್ದಾಳೆ.

೬ ಆದದರಿಂದ, ಇಗೋ, ನಾನು ನಿನ್ನ ಮಾರ್ಗಕ್ಕೆ ಮುಳ್ಳುಗಳಿಂದ ಬೇಲಿ ಹಾಕುವೆನು; ಮತ್ತು ಅವಳು ತನ್ನ ಹಾದಿಗಳನ್ನು ಕಂಡು ಕೊಳ್ಳದ ಹಾಗೆ ಗೋಡೆ ಕಟ್ಟುವೆನು.

೭ ಅವಳು ತನ್ನ ಮಿಂಡರನ್ನು ಹಿಂಬಾಲಿಸಿ, ಅವರನ್ನು ಹೇರಳು; ಅವರನ್ನು ಹುಡುಕಿ ಕಾಣಳು. ಆಗಲವಳು—ನಾನು ಹೋಗಿ, ನನ್ನ ಮೊದಲನೇ ಗಂಡನ ಬಳಿಗೆ ತಿರುಗಿ ಕೊಳ್ಳುವೆನು; ಯಾಕಂದರೆ ಈಗಿರುವದಕ್ಕಿಂತ ಆಗ ನನಗೆ ಚನ್ನಾಗಿತ್ತೆಂದು ಹೇಳುವಳು.

೮ ಯಾಕಂದರೆ, ಅವರು ಬಾಳನಿಗೆ ಸಿದ್ಧ ಮಾಡಿದ ಧಾನ್ಯವನ್ನೂ ದ್ರಾಕ್ಷೆ ರಸವನ್ನೂ ಎಣ್ಣೆಯನ್ನೂ ನಾನು ಕೊಟ್ಟು, ಅವಳಿಗೆ ಬೆಳ್ಳಿ ಭಂಗಾರವನ್ನು ನಾನೇ ಹೆಚ್ಚಿಸಿದೆನೆಂದು ಅವಳಿಗೆ ತಿಳಿಯಲಿಲ್ಲ.

೯ ಆದದರಿಂದ ನಾನು ತಿರುಗಿ ಕೊಂಡು, ನನ್ನ ಧಾನ್ಯವನ್ನು ಅದರ ಕಾಲದಲ್ಲಿಯೂ,



ನನ್ನ ದ್ರಾಕ್ಷೆ ರಸವನ್ನು ಅದರ ಸಮಯದಲ್ಲಿಯೂ, ತೆಗೆದು ಹಾಕಿ, ಅವಳ ಬೆತ್ತಲೆತನವನ್ನು ಮುಚ್ಚುವದಕ್ಕಿದ್ದ ನನ್ನ ಉಣ್ಣೆಯನ್ನೂ ನನ್ನ ಸಣಬನ್ನೂ ಎಳೆದು ಬಿಡುವೆನು.

೧೦ ಮತ್ತು ಈಗ ಅವಳ ಬಂಡುತನವನ್ನು ಅವಳ ಮಿಂಡರ ಕಣ್ಣುಗಳ ಮುಂದೆ ಪೈಲು ಪಡಿಸುವೆನು; ನನ್ನ ಕೈಯೊಳಗಿಂದ ಅವಳನ್ನು ಯಾರು ತಪ್ಪಿಸುವದಿಲ್ಲ.

೧೧ ಮತ್ತು ಅವಳ ಉಲ್ಲಾಸವನ್ನೆಲ್ಲಾ, ಅವಳ ಹಬ್ಬ, ಅವಳ ಅಮವಾಸೆ, ಅವಳ ಸಬ್ಬತು, ಅವಳ ಉತ್ಸವಗಳನ್ನೆಲ್ಲಾ, ನಿಲ್ಲಿಸುವೆನು.

೧೨ ಮತ್ತು ನನ್ನ ಮಿಂಡರು ನನಗೆ ಕೊಟ್ಟ ನನ್ನ ಕೂಲಿ ಇವುಗಳೇ ಎಂದು ಅವಳು ಹೇಳಿದ ಅವಳ ದ್ರಾಕ್ಷೆ ಬಳ್ಳಿಗಳನ್ನೂ, ಅವಳ ಅಂಜೂರದ ಗಿಡಗಳನ್ನೂ, ನಾನು ಹಾಳು ಮಾಡಿ, ಅವುಗಳನ್ನು ಕಾಡಾಗ ಮಾಡುವೆನು; ಅಡವಿಯ ಮೃಗಗಳು ಅವುಗಳನ್ನು ತಿನ್ನುವವು.

೧3 ಮತ್ತು ಬಾಳುಗಳ ದಿವಸಗಳನ್ನು ಅವಳ ಮೇರೆ ವಿಚಾರಿಸುವೆನು; ಅವಳು ಅವರಿಗೆ ಧೂಪ ಸುಟ್ಟು, ಅವಳ ಮೂಗುತಿಗಳಿಂದಲೂ, ಅವಳ ಆಭರಣಗಳಿಂದಲೂ, ತನ್ನನ್ನು ಅಲಂಕರಿಸಿ ಕೊಂಡು, ತನ್ನ ಮಿಂಡರ ಹಿಂದೆ ಹೋಗಿ, ನನ್ನನ್ನು ಮರೆತು ಬಿಟ್ಟಳಲ್ಲ? ಎಂದು ಯೆಹೋವನು ಅನ್ನುತ್ತಾನೆ.

೧೪ ಆದದರಿಂದ, ಇಗೋ, ನಾನು ಅವಳನ್ನು ತಲೆ ತಡವಿ, ಅವಳನ್ನು ಅರಣ್ಯಕ್ಕೆ ನಡಿಸಿ, ಅವಳ ಸಂಗಡ ಸಮಾಧಾನವಾಗಿ ಮಾತಾಡುವೆನು.

೧೫ ಮತ್ತು ಅಲ್ಲಿಂದ ಅವಳಿಗೆ, ಅವಳ ದ್ರಾಕ್ಷೆ ತೋಟಗಳನ್ನೂ, ನೀರೀಕ್ಷೆಯ ಬಾಗಲಿಗಾಗಿ ಆಖೋರಿನ ತಗ್ಗನ್ನೂ, ಕೊಡುವೆನು; ಅಲ್ಲಿ ಅವಳು, ಯೌವನದ ದಿವಸಗಳಲ್ಲಿಯೂ, ಐಗುಪ್ತ ದೇಶದಿಂದ ಏರಿ ಬಂದ ದಿವಸದಲ್ಲಿಯೂ, ಅದೆ ಹಾಗೆ ಹಾಡುವಳು.

೧೬ ಮತ್ತು ಯೆಹೋವನು ಅನ್ನುತ್ತಾನೆ—ಆ ದಿವಸದಲ್ಲಿ ಆಗುವದೇನಂದರೆ— ನೀನು ನನ್ನನ್ನು ಇನ್ನು ಮೇಲೆ ಬಾಳೀ ಎಂದು ಕರೆಯದೆ, ಈಶೀ ಎಂದು ಕರೆಯುವಿ.

೧೭ ಯಾಕಂದರೆ ಬಾಳುಗಳ ಹೆಸರುಗಳನ್ನು ಅವಳ ಬಾಯಿಯೊಳಗಿಂದ ತೆಗೆದು ಹಾಕುವೆನು; ಅವು ಇನ್ನು ತಮ್ಮ ಹೆಸರಿನಿಂದ ಜ್ಞಾಪಕ ಮಾಡಲ್ಪಡುವದಿಲ್ಲ.

೧೮ ಮತ್ತು ಆ ದಿವಸದಲ್ಲಿ ಅವರಿಗೋಸ್ಕರ ಅಡವಿಯ ಮೃಗಗಳ ಸಂಗಡಲೂ, ಆಕಾಶದ ಪಕ್ಷಿಗಳ ಸಂಗಡಲೂ, ಭೂಮಿಯ ಕ್ರಿಮಿಗಳ ಸಂಗಡಲೂ, ಒಪ್ಪಂದಿಕೆ ಮಾಡುವೆನು; ಮತ್ತು ಬಿಲ್ಲನ್ನೂ ಕತ್ತಿಯನ್ನೂ ಯುದ್ಧವನ್ನೂ ದೇಶದೊಳಗಿಂದ ಮುರಿದು ಹಾಕಿ, ಅವರನ್ನು ಭದ್ರವಾಗಿ ಮಲಗ ಮಾಡುವೆನು.

೧೯ ಮತ್ತು ನಿನ್ನನ್ನು ನನಗೆ ಸದಾ ಕಾಲಕ್ಕೆ ನಿಶ್ಚಿತಾರ್ಥ ಮಾಡಿ ಕೊಳ್ಳುವೆನು; ಹೌದು, ನೀತಿಯಿಂದಲೂ, ನ್ಯಾಯದಿಂದಲೂ, ಕೃಪೆಯಿಂದಲೂ, ಕರುಣದಿಂದಲೂ, ನಿನ್ನನ್ನು ನನಗೆ ನಿಶ್ಚಿತಾರ್ಥ ಮಾಡಿ ಕೊಳ್ಳುವೆನು.

೨೦ ನಂಬಿಕೆಯಿಂದಲೇ ನಿನ್ನನ್ನು ನನಗೆ ನಿಶ್ಚಿತಾರ್ಥ ಮಾಡಿ ಕೊಳ್ಳುವೆನು; ಆಗ ಯೆಹೋವನನ್ನು ತಿಳಿ ಕೊಳ್ಳುವಿ.

೨೧ ಮತ್ತು ಆ ದಿವಸದಲ್ಲಿ ಆಗುವದೇನಂದರೆ, ನಾನು ಕೇಳುವೆನೆಂದು ಯೆಹೋವನು ಅನ್ನುತ್ತಾನೆ, ಆಕಾಶಗಳನ್ನು ಕೇಳುವೆನು, ಮತ್ತು ಅವು ಭೂಮಿಯನ್ನು ಕೇಳುವವು.

೨೨ ಮತ್ತು ಭೂಮಿಯು ಧಾನ್ಯವನ್ನೂ, ದ್ರಾಕ್ಷೆ ರಸವನ್ನೂ, ಎಣ್ಣೆಯನ್ನೂ, ಕೇಳುವವು; ಮತ್ತು ಇವು ಇಜ್ರೇಲನನ್ನು ಕೇಳುವವು.

೨3 ಮತ್ತು ಅವಳನ್ನು ನನಗೆ ಭೂಮಿಯಲ್ಲಿ ಬಿತ್ತುವೆನು; ಮತ್ತು ಕರುಣೆ ಹೊಂದದವಳನ್ನು ಕರುಣಿಸುವೆನು; ನನ್ನ ಜನವಲ್ಲದ್ದಕ್ಕೆ ನೀನು ನನ್ನ ಜನವೆಂದು, ಹೇಳುವೆನು; ಅವರು ನನ್ನ ದೇವರೇ, ಎಂದು ಹೇಳುವರು.

### ೩. ಸಂಧಿ.

೧ ಮತ್ತು ಯೆಹೋವನು ನನಗೆ ಹೇಳಿದ್ದೇನಂದರೆ—ನೀನು ಇನ್ನು ಮೇಲೆ ಹೋಗಿ, ಅವಳು ವ್ಯಭಿಚಾರಿಯಾಗಿದ್ದರೂ, ಸ್ನೇಹಿತನಿಂದ ಪ್ರೀತಿ ಮಾಡಲ್ಪಟ್ಟ ಸ್ತ್ರೀಯನ್ನು ಪ್ರೀತಿ ಮಾಡು; ಬೇರೆ ದೇವರುಗಳಿಗೆ ತಿರುಗಿ ಕೊಳ್ಳುವಂಥ, ದ್ರಾಕ್ಷೆ ದೋಸೆಗಳನ್ನು ಪ್ರೀತಿ ಮಾಡುವಂಥ, ಇಸ್ರಯೇಲಿನ ಮಕ್ಕಳನ್ನು ಯೆಹೋವನು ಪ್ರೀತಿ

೨ ಮಾಡುವ ಪ್ರಕಾರವೇ. ಹಾಗೆಯೇ ನಾನು ಅವಳನ್ನು ನನಗೆ ಹದಿನೈದು ಬೆಳ್ಳಿ ಹಣಕ್ಕೂ, ಒಂದು ಪರೆ ಹೋಮೆರಿನ ಜವೆ ಗೋ

3 ಧಿಗೂ, ಕೊಂಡು ಕೊಂಡೆನು. ಮತ್ತು ಅವಳಿಗೆ ನಾನು ಹೇಳಿದ್ದೇನಂದರೆ—ಬಹಳ ದಿವಸಗಳು ನನಗಾಗಿ ಇರಬೇಕು; ಜಾರತ್ವ ಮಾಡಬೇಡ; ಬೇರೆ ಪುರುಷನವಳಾಗ ಬಾರದು; ಆಗ ನಾನು ನಿನಗಾಗಿ ಇರುವೆನು.

೪ ಯಾಕಂದರೆ ಇಸ್ರಯೇಲನ ಮಕ್ಕಳು ಬಹಳ ದಿವಸಗಳು ಅರಸನಿಲ್ಲದೆ, ಪ್ರಭುವಿಲ್ಲದೆ, ಬಲಿಯಿಲ್ಲದೆ, ಸ್ತಂಭವಿಲ್ಲದೆ, ಎಫೋದಿಲ್ಲದೆ, ವಿಗ್ರಹಗಳಿಲ್ಲದೆ, ನಿಲ್ಲುವರು.

೫ ಆ ಮೇಲೆ ಇಸ್ರಯೇಲನ ಮಕ್ಕಳು ತಿರುಗಿ ಕೊಂಡು, ತಮ್ಮ ದೇವರಾದ ಯೆಹೋವನನ್ನೂ, ತಮ್ಮ ಅರಸನಾದ ದಾವೀದನನ್ನೂ ಹುಡುಕಿ, ಅಂತ್ಯ ದಿವಸಗಳಲ್ಲಿ ಯೆಹೋವನ ಬಳಿಗೂ, ಅವನ ಬಳ್ಳೇತನದ ಬಳಿಗೂ, ನಡುಗಿ ಬರುವರು.

### ೪. ಸಂಧಿ.

೧ ಇಸ್ರಯೇಲನ ಮಕ್ಕಳೇ, ಯೆಹೋವನ ವಾಕ್ಯವನ್ನು ಕೇಳಿರಿ; ಯಾಕಂದರೆ ದೇಶದ ನಿವಾಸಿಗಳ ಸಂಗಡ ಯೆಹೋವನಿಗೆ ತರ್ಕ ಉಂಟು;

ಯಾಕಂದರೆ ದೇಶದಲ್ಲಿ ಸತ್ಯವೂ ಇಲ್ಲ,
ಕೃಪೆಯೂ ಇಲ್ಲ, ದೇವರ ತಿಳುವಿಕೆಯೂ ಇಲ್ಲ.
೨ ಆಣೆ ಇಡುವದೂ, ಸುಳ್ಳು ಹೇಳುವದೂ,
ಕೊಲ್ಲುವದೂ, ಕದಿಯುವದೂ,
ವ್ಯಭಿಚಾರ ಮಾಡುವದೂ, ಹರಿದು ಬಿಟ್ಟಿವೆ;
ರಕ್ತವು ರಕ್ತಕ್ಕೆ ಸೇರುತ್ತದೆ.
೩ ಆದದರಿಂದ ದೇಶವು ದುಃಖ ಪಡುವದು;
ಅದರಲ್ಲಿ ವಾಸಿಸುವವರೆಲ್ಲರು ನಿತ್ರಾಣವಾಗಿ ಹೋಗುವರು;
ಅಡವಿಯ ಮೃಗಗಳೂ, ಆಕಾಶದ ಪಕ್ಷಿಗಳೂ, ಸಹ;
ಸಮುದ್ರದ ಮೀನುಗಳು ಕೂಡ ತೆಗೆದು ಹಾಕಲ್ಪಡುವವು.
೪ ಆದರೂ ಯಾರಾದರು ವಾದಿಸಲೂ, ಇನ್ನೊಬ್ಬನನ್ನು ಗದರಿಸ
ಲೂ, ಬೇಡ.
ಯಾಕಂದರೆ ನಿನ್ನ ಜನರು ಯಾಜಕನ ಸಂಗಡ ವಾದಿಸುವವ
ರ ಹಾಗಿದ್ದಾರೆ.
೫ ಆದದರಿಂದ ಹಗಲಿನಲ್ಲಿ ಬೀಳುವಿ;
ಪ್ರವಾದಿಯು ಸಹ ನಿನ್ನ ಸಂಗಡ ರಾತ್ರಿಯಲ್ಲಿ ಬೀಳುವನು;
ಮತ್ತು ನಿನ್ನ ತಾಯಿಯನ್ನು ಸಂಹಾರ ಮಾಡುವೆನು.

೬ ನನ್ನ ಜನರು ತಿಳುವಿಕೆ ಇಲ್ಲದ್ದರಿಂದ ಸಂಹಾರವಾಗುತ್ತಾರೆ;
ನೀನು ತಿಳುವಿಕೆಯನ್ನು ಬೇಡಂದದರಿಂದ,
ನೀನು ನನಗೆ ಯಾಜಕನಾಗದ ಹಾಗೆ, ನಾನು ನಿನ್ನನ್ನು ಬೇ
ಡನ್ನುವೆನು;
ನೀನು ನಿನ್ನ ದೇವರ ನ್ಯಾಯಪ್ರಮಾಣವನ್ನು ಮರೆತು ಬಿಟ್ಟಿ
ದ್ದರಿಂದ
ನಾನು ಸಹ ನಿನ್ನ ಮಕ್ಕಳನ್ನು ಮರೆತು ಬಿಡುವೆನು.
೭ ಅವರು ಹೆಚ್ಚಿದ ಪ್ರಕಾರ,
ಹಾಗೆಯೇ ನನಗೆ ವಿರೋಧವಾಗಿ ಪಾಪ ಮಾಡಿದರು;
ಅವರ ಮಹಿಮೆಯನ್ನು ಲಜ್ಜೆಗೆ ಮಾರ್ಪಡಿಸುವೆನು.
೮ ಅವರು ನನ್ನ ಜನರ ಪಾಪ ಬಲಿಗಳನ್ನು ತಿಂದು,
ಅವರ ಅಕ್ರಮಗಳ ಮೇಲೆ ಮನಸ್ಸು ಇಡುತ್ತಾರೆ.
೯ ಆದದರಿಂದ, ಜನರು ಹ್ಯಾಗೋ ಹಾಗೆಯೇ ಯಾಜಕನು, ಹೀ
ಗಿರುವನು.
ಅವರ ಮೇಲೆ ಅವರ ಪಾರ್ಗಡಗಳನ್ನು ವಿಚಾರಿಸುವೆನು;
ಅವರ ಕ್ರಿಯೆಗಳಿಗೆ ಪ್ರತಿಫಲವನ್ನು ಅವರಿಗೆ ಕೊಡುವೆನು.
೧೦ ಅವರು ಉಂಡು ತೃಪ್ತಿಯಾಗುವದಿಲ್ಲ;
ಹಾದರ ಮಾಡಿ ವೃದ್ಧಿಯಾಗುವದಿಲ್ಲ;
ಯಾಕಂದರೆ ಯೆಹೋವನನ್ನು ಲಕ್ಷ್ಯ ಮಾಡುವದನ್ನು ಬಿಟ್ಟು
ಬಿಟ್ಟಿದ್ದಾರೆ.
೧೧ ಹಾದರವೂ, ದ್ರಾಕ್ಷಿ ರಸವೂ, ಮದ್ಯವೂ, ಹೃದಯವನ್ನು ಎಳ
ಕೊಳ್ಳುತ್ತವೆ.
೧೨ ನನ್ನ ಜನರು ಮರದ ಪೊದ್ದಿನ ಹತ್ತರ ವಿಚಾರಿಸುತ್ತಾರೆ,
ಅವರ ಕೋಲು ಅವರಿಗೆ ತಿಳಿಯ ಹೇಳುತ್ತದೆ;
ಯಾಕಂದರೆ ಹಾದರಗಳ ಆತ್ಮವು ಅವರನ್ನು ತಪ್ಪಿಸಿ ಬಿಟ್ಟಿದೆ.
ಅವರು ತಮ್ಮ ದೇವರ ಕೈ ಕೆಳಗಿರದೆ, ಹಾದರ ಮಾಡಿದ್ದಾರೆ.
೧೩ ಬೆಟ್ಟಗಳ ಕೊನೆಗಳ ಮೇಲೆ ಬಲಿಯರ್ಪಿಸುತ್ತಾರೆ,
ಗುಡ್ಡಗಳ ಮೇಲೆ ಧೂಪ ಸುಡುತ್ತಾರೆ;
ವೃಕ್ಷ ರಾಜಿ, ಹೊನ್ನೆ, ಹಲಸಿನ ಮರಗಳ ಕೆಳಗೆಯೂ,
ಅವುಗಳ ನೆರಳು ಚನ್ನಾಗಿರುವದರಿಂದ, ಹಾಗೆ ಮಾಡುತ್ತಾರೆ,
ಆದದರಿಂದ ನಿನ್ನು ಕುಮಾರ್ತೆಗಳು ಹಾದರ ಮಾಡುವರು,
ಮತ್ತು ನಿನ್ನು ಮದಲಗಿತ್ತಿಯರು ವ್ಯಭಿಚಾರ ಮಾಡುವರು.
೧೪ ನಿನ್ನು ಕುಮಾರ್ತೆಗಳು ಹಾದರ ಮಾಡುವಾಗಲೂ,
ನಿನ್ನು ಮದಲಗಿತ್ತಿಯರು ವ್ಯಭಿಚಾರ ಮಾಡುವಾಗಲೂ,
ನಾನು ವಿಚಾರಿಸುವದಿಲ್ಲ;
ಯಾಕಂದರೆ ಅವರೇ ಜಾರೆಯರ ಸಂಗಡ ವಾಕೆಯಾಗಿ ಹೋ
ಗುತ್ತಾರೆ;
ಸೂಳೆಯರ ಸಂಗಡ ಬಲಿ ಅರ್ಪಿಸುತ್ತಾರೆ;
ಆದದರಿಂದ ವಿವೇಕವಿಲ್ಲದ ಜನರು ಕೆಡವಲ್ಪಡುವರು.

೧೫ ಇಸ್ರಯೇಲೇ, ನೀನು ಜಾರತ್ವ ಮಾಡಿದರೂ,
ಯೆಹೂದವು ಅಪರಾಧಿಯಾಗದಿರಲಿ;
ಗಿಲ್ಗಾಲಿಗೆ ಹೋಗದೆ, ಬೆತಾವೆನಿಗೆ ಏರದೆ,
ಯೆಹೋವನ ಜೀವದಾಣೆ ಎಂದು ಪ್ರಮಾಣ ಮಾಡದೆ, ಇರ್ರಿ.
೧೬ ಯಾಕಂದರೆ ಹಿಂಜರಿಯುವ ಕಡಸಿನ ಹಾಗೆ ಇಸ್ರಯೇಲು ಹಿಂಜ
ರಿಯುತ್ತದೆ;
ಈಗ ಯೆಹೋವ ವಿಸ್ತಾರ ಸ್ಥಳದಲ್ಲಿರುವ ಕುರಿಮರಿಯ ಹಾಗೆ
ಅವರನ್ನು ಮೇಯಿಸುವನು.
೧೭ ಎಫ್ರಾಯಿಮನು ವಿಗ್ರಹಗಳಿಗೆ ಅಂಟಿ ಕೊಂಡಿದ್ದಾನೆ;
ಅವನನ್ನು ಬಿಟ್ಟು ಬಿಡು.
೧೮ ಅವರು ಕುಡಿಯುವದು ಮಿತಿ ಮೀರಿ ಅದೆ;
ಹಾದರ ಮಾಡೇ ಮಾಡುತ್ತಾರೆ;
ಅವರ ಕಾಯುವವರು ನೀಚತನವನ್ನು ಪ್ರೀತಿ ಮಾಡೇ ಮಾಡು
ತ್ತಾರೆ.
೧೯ ಘುಳ್ಳಿಯು ಅವರನ್ನು ತನ್ನ ರೆಕ್ಕೆಗಳಿಂದ ಹಿಡು ಕೊಂಡದೆ;
ಅವರು ತಮ್ಮ ಬಲಿಗಳಿಗಾಗಿ ನಾಚಿಕೆ ಪಡುವರು.

## ೫. ಸಂಧಿ.

೧ ಯಾಜಕರೇ, ಇದನ್ನು ಕೇಳಿರಿ;
ಇಸ್ರಯೇಲನ ಮನೆಯವರೇ, ಆಲೈಸಿರಿ;
ಅರಸನ ಮನೆಯವರೇ, ಕಿವಿಗೊಡಿರಿ;
ಯಾಕಂದರೆ ನ್ಯಾಯತೀರ್ಪಿಕೆ ನಿಮ್ಮ ವಿಷಯವಾಗಿದೆ;
ನೀವು ಮಿಚ್ಪದಲ್ಲಿ ಉರುಲು, ತಾಬೋರಿನ ಮೇಲೆ ಒಡ್ಡಿದ ಬಲೆ
ಯೂ, ಆಗಿದ್ದದರಿಂದಲೇ.
೨ ಹಿಂತಿರುಗಿದವರು ಕೊಲ್ಲುವದನ್ನು ಬಹಳ ಮಾಡುತ್ತಾರೆ,
ಆದರೆ ನಾನು ಅವೆಲ್ಲರಿಗೆ ಶಿಕ್ಷೆ ಕೊಡುತ್ತೇನೆ.
೩ ನಾನು ಎಫ್ರಾಯಿಮನನ್ನು ಬಲ್ಲೆನು;
ಮತ್ತು ಇಸ್ರಯೇಲು ನನಗೆ ಮರೆಯಾದದ್ದಲ್ಲ;
ಯಾಕಂದರೆ, ಎಫ್ರಾಯಿಮೇ, ನೀನೀಗಲೇ ಹಾದರ ಮಾಡುತ್ತೀ;
ಇಸ್ರಯೇಲು ಸಹ ಅಪವಿತ್ರವಾಯಿತು.
೪ ಅವರು ತಮ್ಮ ದೇವರ ಬಳಿಗೆ ತಿರುಗಿ ಕೊಳ್ಳುವ ಹಾಗೆ
ತಮ್ಮ ಕ್ರಿಯೆಗಳನ್ನು ಸರಿ ಮಾಡುವದಿಲ್ಲ;



ಯಾಕಂದರೆ ಹಾದರಗಳ ಆತ್ಮವು ಅವರಲ್ಲಿ ಉಂಟು,
ಅವರು ಯೆಹೋವನನ್ನು ತಿಳಿಯ ಕೊಳ್ಳಲಿಲ್ಲ.
೫ ಇಸ್ರಯೇಲನ ಗರ್ವವು ತನ್ನ ಮುಖದ ಮುಂದೆ ಸಾಕ್ಷಿ ಕೊಡು
ತ್ತದೆ;
ಆದದರಿಂದ ಇಸ್ರಯೇಲೂ ಎಫ್ರಾಯಿಮೂ ತಮ್ಮ ಅಕ್ರಮದಿಂ
ದ ಬೀಳುವರು;
ಯೆಹೂದವು ಸಹ ಅವರ ಸಂಗಡ ಬೀಳುವದು.
೬ ತಮ್ಮ ಕುರಿ ದನಗಳಿಂದ ಯೆಹೋವನನ್ನು ಹುಡುಕುವದಕ್ಕೆ
ಹೋಗುವರು;
ಆದರೆ ಕಂಡು ಕೊಳ್ಳರು, ಅವರನ್ನು ಬಿಟ್ಟು ಹೋಗಿದ್ದಾನೆ.
೭ ಯೆಹೋವನಿಗೆ ವಿರೋಧವಾಗಿ ವಂಚನೆಯಾಗಿ ನಡಿದಿದ್ದಾರೆ;
ಯಾಕಂದರೆ, ಅನ್ಯ ಮಕ್ಕಳನ್ನು ಪಡೆದಿದ್ದಾರೆ;
ಈಗ ತಿಂಗಳು ಅವರನ್ನೂ ಅವರ ಪಾಲುಗಳನ್ನೂ ತಿಂದು ಬಿ
ಡುವರು.

೮ ಗಿಬಿಯದಲ್ಲಿ ಕೊಂಬನ್ನೂ, ರಾಮದಲ್ಲಿ ತುತೂರಿಯನ್ನೂ,
ಊದಿರಿ,
ಬೆತಾವೆನಿನಲ್ಲಿ ಆರ್ಭಟಿಸಿರಿ;
ನಿನ್ನ ಹಿಂದೆ ಬೆನ್ಯಮಿನಾನೇ.
೯ ಎಫ್ರಾಯಿಮು ಶಿಕ್ಷೆಯ ದಿವಸದಲ್ಲಿ ಹಾಳಾಗುವದು;
ಇಸ್ರಯೇಲನ ಕುಲಗಳಲ್ಲಿ ನಿಜವಾದದ್ದನ್ನು ತಿಳಿಸಿದ್ದೇನೆ.
೧೦ ಯೆಹೂದದ ಪ್ರಭುಗಳು ಮೇರೆ ತಪ್ಪಿಸುವವರ ಹಾಗಿದ್ದರು.
ನನ್ನ ಶಿಟ್ಟನ್ನು ನೀರಿನಂತೆ ಅವರ ಮೇಲೆ ಹೊಯ್ಯುವೆನು.
೧೧ ಎಫ್ರಾಯಿಮು ಅಣಗಿ ಅದೆ;
ನ್ಯಾಯದಿಂದ ಜಜ್ಜಲ್ಪಟ್ಟಿದೆ;
ಯಾಕಂದರೆ ಒಪ್ಪಿ ಕೊಂಡಿತು;
ಕಟ್ಟಳೆಯ ಪ್ರಕಾರ ನಡಿಯಿತು.
೧೨ ಆದದರಿಂದ ನಾನು ಎಫ್ರಾಯಿಮಿಗೆ ಹುಳದ ಹಾಗೆಯೂ,
ಯೆಹೂದದ ಮನೆಯವರಿಗೆ ಕೊಳೆಯುವಿಕೆಯ ಹಾಗೆಯೂ,
ಇರುವೆನು.
೧೩ ಎಫ್ರಾಯಿಮು ತನ್ನ ರೋಗವನ್ನೂ,
ಯೆಹೂದವೂ ತನ್ನ ಘಾಯವನ್ನೂ ನೋಡಿದಾಗ,
ಎಫ್ರಾಯಿಮು ಅಶ್ಶೂರಿಗೆ ಹೋಗಿ,
ಅರಸನಾದ ಯಾರೇಬನ ಬಳಿಗೆ ಕಳುಹಿಸಿತು;
ಆದರೂ ನಿಮ್ಮನ್ನು ಸ್ವಸ್ಥ ಮಾಡಲೂ,
ನಿಮ್ಮ ಘಾಯವನ್ನು ಗುಣ ಪಡಿಸಲೂ,
ಅವನಿಂದ ಆಗದೆ ಹೋಯಿತು.
೧೪ ಯಾಕಂದರೆ ನಾನು ಎಫ್ರಾಯಿಮಿಗೆ ಸಿಂಹದ ಹಾಗೆಯೂ,
ಯೆಹೂದನ ಮನೆಯವರಿಗೆ ಎಳೆ ಸಿಂಹದ ಹಾಗೆಯೂ, ಇರು
ವೆನು;
ನಾನು, ಹೌದು ನಾನೇ, ಹರಿದು ಬಿಟ್ಟು ಹೋಗುತ್ತೇನೆ;
ಬಿಡಿಸುವವನಿಲ್ಲದೆ ಎತ್ತಿ ಕೊಂಡು ಹೋಗುತ್ತೇನೆ.
೧೫ ತಾವು ಅಪರಾಧಿಗಳೆಂದು ಅರಿಕೆ ಮಾಡಿ,
ನನ್ನ ಮುಖವನ್ನು ಹುಡುಕುವ ಪರ್ಯಂತರಕ್ಕೂ,
ನಾನು ಹೋಗಿ, ನನ್ನ ಸ್ಥಳಕ್ಕೆ ತಿರುಗಿ ಕೊಳ್ಳುವೆನು;
ಅವರಿಗೆ ಕಷ್ಟ ಬರುವಾಗ ನನ್ನನ್ನು ಬೇಗ ಹುಡುಕುವರು.

## ೬. ಸಂಧಿ.

೧ ಬನ್ನಿ, ಯೆಹೋವನ ಬಳಿಗೆ ತಿರುಗಿ ಕೊಳ್ಳುವ,
ಯಾಕಂದರೆ ಅವನು ಹರಿದಿದ್ದಾನೆ, ಮತ್ತು ನಮ್ಮನ್ನು ಸ್ವಸ್ಥ
ಮಾಡುವನು;
ಹೊಡೆದಿದ್ದಾನೆ, ಮತ್ತು ನಮ್ಮನ್ನು ಕಟ್ಟಿ ಬಿಡುವನು.
೨ ಎರಡು ದಿವಸಗಳಾದ ಮೇಲೆ ನಮ್ಮನ್ನು ಜೀವಿಸ ಮಾಡುವನು;
ಮೂರನೇ ದಿವಸದಲ್ಲಿ ನಮ್ಮನ್ನು ಎಬ್ಬಿಸುವನು;
ಆಗ ಅವನ ಮುಂದೆ ಬದುಕುವೆವು.
೩ ಆಗ ತಿಳಿಯ ಕೊಳ್ಳುವೆವು, ಯೆಹೋವನನ್ನು ತಿಳಿಯ ಕೊಳ್ಳುವದ
ಕ್ಕೆ ಹಿಂಬಾಲಿಸುವೆವು;
ಅರುಣೋದಯದ ಹಾಗೆ ಅವನ ಹೊರಡೋಣವು ಸಿದ್ಧವಾಗಿದೆ;
ಮಳೆಯ ಹಾಗೆ ನಮ್ಮ ಬಳಿಗೆ ಬರುವನು,
ಭೂಮಿಯನ್ನು ತ್ಯಾವ ಮಾಡುವ ಹಿಂಗಾರಿಯ ಹಾಗೆಯೇ.
೪ ಓ ಎಫ್ರಾಯಿಮೇ, ನಿನಗೆ ನಾನೇನು ಮಾಡಲಿ?
ಓ ಯೆಹೂದವೇ, ನಿನಗೆ ನಾನೇನು ಮಾಡಲಿ?
ಯಾಕಂದರೆ ನಿಮ್ಮ ಒಳ್ಳೇತನವು,
ಹೊತಾರೆಯ ಮೇಘದ ಹಾಗೆಯೂ,
ಮಂಜಾನೆಯ ಮಂಜಿನ ಹಾಗೆಯೂ, ಹೋಗಿ ಬಿಡುತ್ತದೆ.
೫ ಆದದರಿಂದ ಪ್ರವಾದಿಗಳ ಮುಖಾಂತರ ಅವರನ್ನು ಕಡಿದು
ಬಿಟ್ಟು,
ನನ್ನ ಬಾಯಿಯ ಮಾತುಗಳಿಂದ ಅವರನ್ನು ಕೊಂದು ಹಾಕಿ
ದ್ದೇನೆ;
ನಿನ್ನ ನ್ಯಾಯ ತೀರ್ಪುಗಳು ಬೆಳಕಿನ ಹಾಗೆ ಹೊರಟಿವು.
೬ ಯಾಕಂದರೆ ಬಲಿಯನ್ನಲ್ಲ, ಕೃಪೆಯನ್ನೇ,
ಹೋಮಗಳನ್ನಲ್ಲ, ದೇವರ ತಿಳುವಿಕೆಯನ್ನೇ, ಅಪೇಕ್ಷಿಸಿದೆನು.
೭ ಆದರೆ ಅವರು ಆದಮನ ಹಾಗೆ ಒಡಂಬಡಿಕೆಯನ್ನು ಮೀರಿದ್ದಾರೆ;
ಅಲ್ಲಿ ನನಗೆ ವಿರೋಧವಾಗಿ ವಂಚನೆಯಾಗಿ ನಡಿದಿದ್ದಾರೆ.
೮ ಗಿಲ್ಯಾದು ರಕ್ತದ ಹೆಜ್ಜೆ ಹತ್ತಿದ
ಪಾತಕ ಮಾಡುವವರ ಪಟ್ಟಣವೇ.
೯ ಕಳ್ಳರ ಗುಂಪು ಮನುಷ್ಯನಿಗೋಸ್ಕರ ಹೊಂಚಿ ಕೊಳ್ಳುವ
ಪ್ರಕಾರ,
ಯಾಜಕರ ಕೂಟವು ಅದೆ;
ಶೆಕೇಮಿನ ಮಾರ್ಗದಲ್ಲಿ ಹತ್ಯ ಮಾಡುತ್ತಾರೆ,
ಹೌದು, ದುಷ್ಕರ್ಮ ನಡಿಸುತ್ತಾರೆ.
೧೦ ಇಸ್ರಯೇಲನ ಮನೆಯಲ್ಲಿ ಭಯಂಕರವಾದದ್ದನ್ನು ನೋಡಿದ್ದೇನೆ;
ಅಲ್ಲಿ ಎಫ್ರಾಯಿಮನ ಹಾದರ ಉಂಟು,
ಇಸ್ರಯೇಲು ಅಪವಿತ್ರವಾಗಿದೆ.
೧೧ ಇದಲ್ಲದೆ ಯೆಹೂದವೇ, ನಿನಗೆ ಸುಗ್ಗಿ ನೇಮಿಸಲ್ಪಟ್ಟಿದೆ.

## ೭. ಸಂಧಿ.

೧ ನಾನು ನನ್ನ ಜನರ ಸೆರೆಯನ್ನು ತಿರುಗಿಸಿ,
ಇಸ್ರಯೇಲನ್ನು ಗುಣ ಮಾಡುವದಕ್ಕಿರುವಾಗ,

ಎಫ್ರಾಯಿಮನ ಅಕ್ರಮವೂ,
ಸಮಾರ್ಯದ ಕೆಟ್ಟತನಗಳೂ, ಪ್ರಕಟವಾದವು;
ಯಾಕಂದರೆ ಸುಳ್ಳು ನಡಿಸುತ್ತಾರೆ;
ಕಳ್ಳನು ಪ್ರವೇಶಿಸುತ್ತಾನೆ;
ಮತ್ತು ಕೊಳ್ಳೆಗಾರರ ಗುಂಪು ಹೊರಗೆ ಸುಲು ಕೊಳ್ಳುತ್ತದೆ.
೨ ನಾನು ಅವರ ಕೆಟ್ಟತನವನ್ನೆಲ್ಲಾ ಜ್ಞಾಪಕ ಮಾಡುತ್ತೇನೆಂದು,
ಅವರು ತಮ್ಮ ಹೃದಯದಲ್ಲಿ ನೆನಸಿ ಕೊಳ್ಳುವದಿಲ್ಲ;
ಈಗ ಅವರ ಕ್ರಿಯೆಗಳು ಅವರನ್ನು ಸುತ್ತಿ ಕೊಂಡವೆ;
ಅವು ನನ್ನ ಮುಖದ ಮುಂದೆ ಅವೆ.
೩ ಅವರು ತಮ್ಮ ಕೆಟ್ಟತನದಿಂದ ಅರಸನನೂ,
ತಮ್ಮ ಅಬದ್ಧಗಳಿಂದ ಪ್ರಧಾನರನೂ, ಸಂತೋಷ ಪಡಿಸುತ್ತಾರೆ.
೪ ಅವೆಲ್ಲರು ವ್ಯಭಿಚಾರಿಗಳು;
ಕೊಟ್ಟಿಗಾರನಿಂದ ಬಿಸಿ ಮಾಡಲ್ಪಟ್ಟ ಒಲೆಯ ಹಾಗಿದ್ದಾರೆ;
ಅವನು ಹಿಟ್ಟು ನಾದಿದ ಮೇಲೆ,
ಅದು ಹುಳಿಯಾಗುವ ಪರ್ಯಂತರ ಬಿಸಿ ಮಾಡುವದನ್ನು ಬಿಟ್ಟು ಬಿಡುತ್ತಾನೆ.
೫ ನಮ್ಮ ಅರಸನ ದಿವಸದಲ್ಲಿ,
ಪ್ರಧಾನರು ದ್ರಾಕ್ಷೆ ರಸದ ಉರಿಯಿಂದ ಅಸ್ವಸ್ಥವಾಗುತ್ತಾರೆ;
ಹಾಸ್ಯಗಾರರ ಸಂಗಡ ಕೈ ಚಾಚುತ್ತಾನೆ.
೬ ಯಾಕಂದರೆ, ಅವರು ಹೊಂಚುತ್ತಿರುವಾಗ,
ತಮ್ಮ ಹೃದಯವನ್ನು ಒಲೆಯ ಹಾಗೆ ಸಿದ್ಧ ಮಾಡಿದ್ದಾರೆ;
ಅವರ ಕೊಟ್ಟಿಗಾರನು ರಾತ್ರಿಯೆಲ್ಲಾ ನಿದ್ದೆ ಮಾಡುತ್ತಾನೆ;
ಬೆಳಿಗ್ಗೆ ಅದು ಪ್ರಜ್ವಲಿಸುವ ಬೆಂಕಿಯ ಹಾಗೆ ಉರಿಯುತ್ತದೆ.
೭ ಅವೆಲ್ಲರು ಒಲೆಯ ಹಾಗೆ ಬಿಸಿಯಾಗಿದ್ದಾರೆ;
ತಮ್ಮ ನ್ಯಾಯಾಧಿಪತಿಗಳನ್ನು ತಿಂದು ಬಿಡುತ್ತಾರೆ;
ಅವರ ಅರಸುಗಳೆಲ್ಲಾ ಬಿದ್ದಿದ್ದಾರೆ;
ಅವರಲ್ಲಿ ಒಬ್ಬನಾದರೂ ನನ್ನನ್ನು ಕರೆಯುವದಿಲ್ಲ.

೮ ಎಫ್ರಾಯಿಮೋ, ಅವನು ಜನಾಂಗಗಳಲ್ಲಿ ತನ್ನನ್ನು ಬೆರಸಿ ಕೊಂಡಿದ್ದಾನೆ;
ಎಫ್ರಾಯಿಮು ತಿರುಗಿಸಲ್ಪಡದ ದೋಸೆಯಾಗಿದ್ದಾನೆ.
೯ ಅನ್ಯರು ಅವನ ಬಲವನ್ನು ತಿಂದಿದ್ದಾರೆ,
ಆದರೆ ಅವನು ಅದನ್ನು ತಿಳಿಯದೆ ಇದ್ದಾನೆ;
ನರೆ ಕೂದಲುಗಳು ಸಹ ಅವನ ಮೇಲೆ ಅಲ್ಲಲ್ಲಿ ಅವೆ,
ಆದರೆ ಅವನು ಅದನ್ನು ತಿಳಿಯದೆ ಇದ್ದಾನೆ.
೧೦ ಇಸ್ರಯೇಲಿನ ಗರ್ವವು ತನ್ನ ಮುಖದ ಮುಂದೆ ಸಾಕ್ಷಿ ಕೊಡುತ್ತದೆ;
ಆದರೆ ಅವರು ತಮ್ಮ ದೇವರಾದ ಯೆಹೋವನ ಬಳಿಗೆ ತಿರುಗುವದಿಲ್ಲ,
ಅವನನ್ನು ಇದಕ್ಕೆಲ್ಲಾ ಹುಡುಕುವದಿಲ್ಲ;
೧೧ ಮತ್ತು ಎಫ್ರಾಯಿಮು ಹೃದಯವಿಲ್ಲದ ಬುದ್ಧಿಹೀನವಾದ ಪಾರಿವಾಳದ ಹಾಗಿದ್ದಾನೆ;
ಐಗುಪ್ತವನ್ನು ಕರೆಯುತ್ತಾರೆ; ಅಶ್ಶೂರಿಗೆ ಹೋಗುತ್ತಾರೆ.
೧೨ ಅವರು ಹೋಗುವಾಗ ಅವರ ಮೇಲೆ ನನ್ನ ಬಲೆಯನ್ನು ಹಾಸುವೆನು;
ಆಕಾಶದ ಪಕ್ಷಿಗಳ ಹಾಗೆ ಅವರನ್ನು ಇಳಿಸುವೆನು;
ಅವರ ಸಭೆಯು ಕೇಳಿರುವ ಪ್ರಕಾರ ಅವರನ್ನು ಶಿಕ್ಷಿಸುವೆನು.
೧೩ ಅವರಿಗೆ ಅಯ್ಯೋ! ಯಾಕಂದರೆ ನನ್ನ ಕಡೆಯಿಂದ ತಿರುಗಾಡಿದ್ದಾರೆ;
ಅವರಿಗೆ ನಾಶವಾಗಲಿ! ಯಾಕಂದರೆ ನನಗೆ ವಿರೋಧವಾಗಿ ದ್ರೋಹ ಮಾಡಿದ್ದಾರೆ;
ನಾನು ಅವರನ್ನು ವಿಮೋಚನೆ ಮಾಡಿದಾಗ್ಯೂ
ಅವರು ನನಗೆ ವಿರೋಧವಾಗಿ ಸುಳ್ಳುಗಳನ್ನು ಹೇಳಿದ್ದಾರೆ.
೧೪ ಅವರು ತಮ್ಮ ಹೃದಯದಿಂದ ನನ್ನನ್ನು ಮೊರೆ ಇಡದೆ,
ತಮ್ಮ ಹಾಸಿಗೆಗಳ ಮೇಲೆ ಅಂಗಲಾಚುತ್ತಾರೆ;
ಗೋಧಿ ದ್ರಾಕ್ಷೆ ರಸಗಳ ನಿಮಿತ್ತ ಕೂಡಿ ಬರುತ್ತಾರೆ;
ನನಗೆ ವಿರೋಧವಾಗಿ ತಿರುಗ ಬಿದ್ದಿದ್ದಾರೆ.
೧೫ ನಾನು ಅವರ ಕೈಗಳನ್ನು ಶಿಕ್ಷಿಸಿ, ಬಲ ಪಡಿಸಿದ್ದೇನೆ;
ಆದರೂ ನನಗೆ ವಿರೋಧವಾಗಿ ಕೆಟ್ಟದ್ದನ್ನು ಯೋಚಿಸುತ್ತಾರೆ.
೧೬ ತಿರುಗಿ ಕೊಳ್ಳುತ್ತಾರೆ; ಆದರೆ ಮಹೋನ್ನತನಿಗೆ ಅಲ್ಲ;
ಅವರು ಮೋಸ ಮಾಡುವ ಬಿಲ್ಲಿನ ಹಾಗಿದ್ದಾರೆ;
ಅವರ ಪ್ರಧಾನರು ತಮ್ಮ ನಾಲಿಗೆಯ ತುಂಟಾಟದ ನಿಮಿತ್ತ ಕತ್ತಿಯಿಂದ ಬೀಳುವರು;
ಇದೇ ಐಗುಪ್ತ ದೇಶದಲ್ಲಿ ಅವರಿಗೆ ನಿಂದೆಯಾಗಿರುವದು.

## ೮. ಸಂಧಿ.

೧ ಬಾಯಿಗೆ ತುತೂರಿಯನ್ನಿಡು;
ಪದ್ದಿನಂತೆ ಯೆಹೋವನ ಮನೆಗೆ ವಿರೋಧವಾಗಿ ಬರುವರು;
ಯಾಕಂದರೆ, ನನ್ನ ಒಡಂಬಡಿಕೆಯನ್ನು ಮೀರಿದ್ದಾರೆ;
ನನ್ನ ನ್ಯಾಯಪ್ರಮಾಣಕ್ಕೆ ವಿರೋಧವಾಗಿ ಅಪರಾಧ ಮಾಡಿದ್ದಾರೆ.
೨ ನನ್ನ ದೇವರೇ,
ಇಸ್ರಯೇಲಿಯರಾದ ನಾವು ನಿನ್ನನ್ನು ಶಿಳಿದಿದ್ದೇವೆಂದು
ನನಗೆ ಕೂಗುವರು.
೩ ಇಸ್ರಯೇಲು ಒಳ್ಳೇದನ್ನು ಅಸಹ್ಯಿಸಿ ಬಿಟ್ಟಿದೆ;
ಶತ್ರು ಅದನ್ನು ಹಿಂದಟ್ಟುವನು.
೪ ಅವರು ಅರಸರನ್ನು ನೇಮಿಸಿದ್ದಾರೆ, ಆದರೆ ನನ್ನಿಂದಲ್ಲ;
ಪ್ರಭುಗಳನ್ನು ಇರಿಸಿದ್ದಾರೆ, ಆದರೆ ನನಗೆ ತಿಳಿಯಲಿಲ್ಲ;
ತಮ್ಮ ಬೆಳ್ಳಿಯಿಂದಲೂ, ತಮ್ಮ ಭಂಗಾರದಿಂದಲೂ, ತಮಗೆ ವಿಗ್ರಹಗಳನ್ನು ಮಾಡಿ ಕೊಂಡಿದ್ದಾರೆ;
ಅವರು ಕಡಿದು ಬಿಡಲ್ಪಡುವದಕ್ಕಾಗಿಯೇ.
೫ ಸಮಾರ್ಯವೇ, ನಿನ್ನ ಕರುವು ಅಸಹ್ಯವಾಗಿದೆ;
ನನ್ನ ಕೋಪವು ಅವರ ಮೇಲೆ ಹೊತ್ತಿ ಅಗೆ;
ಅವರು ನಿರಪರಾಧಿಗಳಾಗದೆ ಇರುವದು ಎಷ್ಟು ವರಿಗೂ?
೬ ಯಾಕಂದರೆ ಅದು ಸಹ ಇಸ್ರಯೇಲಿನಿಂದಲೇ;
ಬಂಚಾಳನು ಅದನ್ನು ಮಾಡಿದನು;
ಅದು ದೇವರಲ್ಲ;
ನಿಶ್ಚಯವಾಗಿ ಸಮಾರ್ಯದ ಕರುವು ಪುಡಿ ಪುಡಿಯಾಗುವದು.
೭ ಯಾಕಂದರೆ ಘೂಳಿಯನ್ನು ಬಿತ್ತಿದ್ದಾರೆ;
ಮತ್ತು ಬಿರುಘೂಳಿಯನ್ನು ಕೊಯ್ಯುವರು;
ಅವರಿಗೆ ಕಡ್ಡಿ ಇಲ್ಲ;



ಪೊಳಿಕೆಯಿಂದ ಹಿಟ್ಟು ಆಗುವದಿಲ್ಲ;
ಬಂದು ವೇಳೆ ಆದರೂ, ಅನ್ಯರು ಅದನ್ನು ನುಂಗುವರು.
೮ ಇಸ್ರಯೇಲು ನುಂಗಲ್ಪಟ್ಟಿದೆ;
ಈಗ ಅವರು ಜನಾಂಗಗಳಲ್ಲಿ ಇದ್ದಾರೆ;
ಮೆಚ್ಚಿಗೆ ಇಲ್ಲದ ಪಾತ್ರೆಯ ಹಾಗೆಯೇ.
೯ ಯಾಕಂದರೆ ಅವರು ಮಂಟಿಯಾದ ಕಾಡು ಕತ್ತೆಯ ಹಾಗೆ
ಅಶ್ಶೂರಿಗೆ ಏರಿ ಹೋಗಿದ್ದಾರೆ;
ಎಫ್ರಾಯಿಮು ಮಿಂಡರಿಗೆ ಕೂಲಿ ಕೊಟ್ಟಿದೆ.
೧೦ ಆದರೆ ಅವರು ಜನಾಂಗಗಳಲ್ಲಿ ಕೂಲಿ ಕೊಟ್ಟಿದ್ದರೂ,
ಅವರನ್ನು ಈಗ ಕೂಡಿಸುವೆನು;
ಮತ್ತು ಸ್ವಲ್ಪವಾದರಲ್ಲಿ ಅವರು ಪ್ರಭುಗಳ ಅರಸನ ಭಾರದಿಂದ ಕಷ್ಟ ಪಡುವರು.
೧೧ ಎಫ್ರಾಯಿಮು ಪಾಪಕ್ಕಾಗಿ ಬಲಿಪೀಠಗಳನ್ನು ಬಹಳ ಮಾಡಿದ್ದರಿಂದ,
ಬಲಿಪೀಠಗಳು ಅದಕ್ಕೆ ಪಾಪಕ್ಕಾಗಿ ಇರುವವು.
೧೨ ನನ್ನ ನ್ಯಾಯಪ್ರಮಾಣದ ದೊಡ್ಡವುಗಳನ್ನು ಅವನಿಗೆ ಬರೆದಿದ್ದೇನೆ;
ಆದರೆ ಅವು ಅನ್ಯವಾದವುಗಳೆಂದು ಎಣಿಸಲ್ಪಟ್ಟವೆ.
೧೩ ನನ್ನ ಕಾಣಿಕೆಗಳಾದ ಬಲಿಗಳ ವಿಷಯವೋ,
ಮಾಂಸವನ್ನು ಬಲಿಯಾಗಿ ಕೊಟ್ಟು, ತಿನ್ನುತ್ತಾರೆ;
ಆದರೆ ಯೆಹೋವನು ಅವುಗಳಿಗೆ ಮೆಚ್ಚುವದಿಲ್ಲ;
ಈಗ ಅವರ ಅಕ್ರಮವನ್ನು ಜ್ಞಾಪಕ ಮಾಡಿ ಕೊಂಡು,
ಅವರ ಪಾಪಗಳನ್ನು ವಿಚಾರಿಸುವನು;
ಅವರು ಐಗುಪ್ತಕ್ಕೆ ತಿರುಗುವರು.
೧೪ ಇಸ್ರಯೇಲು ತನ್ನ ನಿರ್ಮಾಣಿಕನನ್ನು ಮರೆತು ಬಿಟ್ಟು, ಮಂದಿರಗಳನ್ನು ಕಟ್ಟುತ್ತದೆ;
ಯೆಹೂದವು ಸಹ ಕೊಟೆಯುಳ್ಳ ಪಟ್ಟಣಗಳನ್ನು ಹೆಚ್ಚು ಮಾಡುತ್ತದೆ.
ಆದರೆ ನಾನು ಅದರ ಪಟ್ಟಣಗಳಲ್ಲಿ ಬೆಂಕಿಯನ್ನು ಕಳುಹಿಸುವೆನು;
ಅದು ಅವುಗಳ ಅರಮನೆಗಳನ್ನು ಸುಟ್ಟು ಬಿಡುವದು.

## ೯. ಸಂಧಿ.

೧ ಇಸ್ರಯೇಲೇ, ಜನಗಳ ಉಲ್ಲಾಸದ ಪ್ರಕಾರ ಸಂತೋಷ ಪಡಬೇಡ;
ಯಾಕಂದರೆ ನಿನ್ನ ದೇವರನ್ನು ಬಿಟ್ಟು ವ್ಯಭಿಚಾರ ಮಾಡಿದ್ದೀ;
ಎಲ್ಲಾ ಧಾನ್ಯದ ಕಣಗಳಲ್ಲಿ ಅದರ ಕೂಲಿಯನ್ನು ಪ್ರೀತಿ ಮಾಡಿದ್ದೀ.
೨ ಕಣವೂ ದ್ರಾಕ್ಷೆ ತೊಟ್ಟಿಯೂ ಅವರನ್ನು ಪೋಷಿಸವು;
ದ್ರಾಕ್ಷೆ ರಸವು ಅದರಲ್ಲಿ ನಿಂತು ಹೋಗುವದು.
೩ ಅವರು ಯೆಹೋವನ ದೇಶದಲ್ಲಿ ವಾಸ ಮಾಡರು;
ಎಫ್ರಾಯಿಮು ಐಗುಪ್ತಕ್ಕೆ ತಿರುಗುವದು;
ಅಶ್ಶೂರಿನಲ್ಲಿ ಅಪವಿತ್ರವಾದದ್ದನ್ನು ತಿನ್ನುವದು.
೪ ಯೆಹೋವನಿಗೆ ದ್ರಾಕ್ಷೆ ರಸವನ್ನು ಹೊಯ್ಯರು;
ಅವನಿಗೆ ಮೆಚ್ಚಿಕೆಯಾಗಿರರು;
ಅವರ ಬಲಿಗಳು ಅವರಿಗೆ ದುಃಖಿಸುವವರ ಕೊಟ್ಟಿಯ ಹಾಗಿರುವವು;
ಅದನ್ನು ತಿನ್ನುವವರೆಲ್ಲರು ಅಪವಿತ್ರವಾಗುವರು;
ಯಾಕಂದರೆ ಅವರ ಪ್ರಾಣಕ್ಕಾಗಿರುವ ಅವರ ಕೊಟ್ಟಿಯು ಯೆಹೋವನ ಮನೆಯಲ್ಲಿ ಬರುವದಿಲ್ಲ.
೫ ಉತ್ಸವದ ದಿವಸದಲ್ಲಿಯೂ,
ಯೆಹೋವನ ಹಬ್ಬದ ದಿವಸದಲ್ಲಿಯೂ, ಏನು ಮಾಡುವಿ?
೬ ಯಾಕಂದರೆ ಇಗೋ, ಸೂರೆಯಿಂದ ಹೋಗಿ ಬಿಡುತ್ತಾರೆ;
ಐಗುಪ್ತವು ಅವರನ್ನು ಕೂಡಿಸುವದು;
ಮೋಫು ಅವರನ್ನು ಹೂಣುವದು;
ಅವರ ಅಪೇಕ್ಷಿಸಲ್ಪಟ್ಟ ಬೆಳ್ಳಿಯ ಬೊಕ್ಕಸಗಳೋ,
ದತ್ತೂರಿಗಳು ಅವುಗಳನ್ನು ಸ್ವತಂತ್ರಿಸಿ ಕೊಳ್ಳುವವು;
ಮುಳ್ಳುಗಳು ಅವರ ಗುಡಾರಗಳಲ್ಲಿ ಇರುವವು.
೭ ವಿಚಾರಣೆಯ ದಿವಸಗಳು ಬಂದವೆ;
ಮುಯ್ಯಿಗೆ ಮುಯ್ಯಿಯ ದಿವಸಗಳು ಬಂದವೆ;
ಇಸ್ರಯೇಲು ತಿಳಿಯ ಕೊಳ್ಳುವದು;
ಪ್ರವಾದಿಯು ಹುಚ್ಚನಾಗಿದ್ದಾನೆ;
ಆತ್ಮದ ಮನುಷ್ಯನು ಬೈತ್ಯಗಾರನಾಗಿದ್ದಾನೆ;
ನಿನ್ನ ಅಕ್ರಮದ ಬಾಹುಳ್ಯದಿಂದಲೇ;
ದೊಡ್ಡ ಹಗೆಯಿಂದಲೇ.
೮ ಎಫ್ರಾಯಿಮಿನ ದೃಷ್ಟಿ ನನ್ನ ದೇವರ ಕಡೆಯಾಗಿದೆ;
ಆದರೆ ಪ್ರವಾದಿಯು ತನ್ನ ಎಲ್ಲಾ ಪಾದಿಗಳಲ್ಲಿ ಬೇಟನ ಉರ್ಲು ಆಗಿದ್ದಾನೆ;
ಅವನ ದೇವರ ಮನೆಯಲ್ಲಿ ಹಗೆ ಹುಟ್ಟಿಸುವವನೇ.
೯ ಗಿಬಿಯದ ದಿವಸಗಳಲ್ಲಿ ಆದ ಹಾಗೆ ತಮ್ಮನ್ನು ಬಹಳವಾಗಿ ಕೆಡಿಸಿ ಕೊಂಡಿದ್ದಾರೆ;
ಅವರ ಅಕ್ರಮವನ್ನು ಜ್ಞಾಪಕ ಮಾಡಿ ಕೊಳ್ಳುವನು.
ಅವರ ಪಾಪಗಳನ್ನು ವಿಚಾರಿಸುವನು.

೧೦ ಅರಣ್ಯದಲ್ಲಿ ದ್ರಾಕ್ಷೆ ಫಲದ ಹಾಗೆ, ಇಸ್ರಯೇಲನ್ನು ಕಂಡು ಕೊಂಡೆನು;
ಅಂಜೂರದ ಗಿಡದಲ್ಲಿ ಮೊದಲನೇ ಹಣ್ಣುಗಳ ಹಾಗೆ ನಿಮ್ಮ ಪಿತೃಗಳನ್ನು ನೋಡಿದೆನು;
ಆದರೆ ಅವರು ಬಾಲ್ಪಿಯೋರನ ಹತ್ರ ಬಂದು,
ನಾಚಿಕೆಯಾದದ್ದಕ್ಕೆ ತಮ್ಮನ್ನು ಪ್ರತ್ಯೇಕಿಸಿ ಕೊಂಡರು;
ಮತ್ತು ಅವರು ಪ್ರೀತಿ ಮಾಡಿದ್ದದರ ಹಾಗೆ ಅಸಹ್ಯರಾದರು.
೧೧ ಎಫ್ರಾಯಿಮಾದರೆ, ಅದರ ಮಹಿಮೆ ಪಕ್ಷಿಯಂತೆ ಹಾರಿ ಹೋಗುವದು;
ಉತ್ಪತ್ತಿ ಇಲ್ಲ, ಗರ್ಭವು ಇಲ್ಲ, ಗರ್ಭ ಧರಿಸುವದೂ ಇಲ್ಲ.
೧೨ ಅವರು ತಮ್ಮ ಮಕ್ಕಳನ್ನು ಬೆಳಿಸಿದರೂ,
ಅವರನ್ನು ಮನುಷ್ಯರೊಳಗಿಂದ ತೆಗೆದು ಹಾಕುವೆನು.
ಹೌದು, ನಾನು ಅವರನ್ನು ಬಿಟ್ಟು ಹೋಗುವಾಗ, ಅವರಿಗೆ ಅಯ್ಯೋ!
೧೩ ಎಫ್ರಾಯಿಮು, ನಾನು ತೂರನ್ನು ಕಂಡ ಹಾಗೆ, ರಮ್ಯ ಸ್ಥಳದಲ್ಲಿ ನೆಡಲ್ಪಟ್ಟಿದೆ;
ಆದರೆ ಎಫ್ರಾಯಿಮು ಕೊಲ್ಲುವವನಿಗೆ ತನ್ನ ಮಕ್ಕಳನ್ನು ಹೊರಗೆ ತರುವದು.

೧೪ ಓ ಯೆಹೋವಾ, ಅವರಿಗೆ ಕೊಡು: ಏನು ಕೊಡುವಿ?
ಇಳಿಯುವ ಗರ್ಭವನ್ನೂ, ಒಣಗಿದ ಮೊಲೆಗಳನ್ನೂ,
ಕೊಡು.
೧೫ ಅವರ ಕೆಟ್ಟತನವೆಲ್ಲಾ ಗಿಲ್ಗಾಲಿನಲ್ಲಿ ಅದೆ;
ಅಲ್ಲಿ ಅವರನ್ನು ಹಗೆ ಮಾಡಿದೆನು;
ಅವರ ಕ್ರಿಯೆಗಳ ಕೆಟ್ಟತನದ ನಿಮಿತ್ತ,
ಅವರನ್ನು ನನ್ನ ಮನೆಯೊಳಗಿಂದ ಹೊರಡಿಸಿ,
ಅವರನ್ನು ಇನ್ನು ಪ್ರೀತಿ ಮಾಡುವದಿಲ್ಲ:
ಅವರ ಪ್ರಭುಗಳೆಲ್ಲಾ ತಿರುಗಿ ಬೀಳುವವರೇ.
೧೬ ಎಫ್ರಾಯಿಮು ಬಡಿಯಲ್ಪಟ್ಟಿದೆ;
ಅವರ ಬೇರು ಒಣಗಿ ಹೋಗಿದೆ;
ಅವರು ಫಲವನ್ನು ಕೊಡುವದಿಲ್ಲ;
ಅವರು ಹೆತ್ತರೂ ಅವರ ಗರ್ಭದ ಪ್ರಿಯಕರವಾದದ್ದನ್ನು ಸಾ
ಯ ಮಾಡುವೆನು.
೧೭ ನನ್ನ ದೇವರು ಅವರನ್ನು ತಳ್ಳಿ ಬಿಡುವನು;
ಯಾಕಂದರೆ ಅವರು ಅವನಿಗೆ ಕಿವಿ ಕೊಡಲಿಲ್ಲ;
ಅವರು ಜನಾಂಗಗಳಲ್ಲಿ ತಿರುಗಾಡುವವರಾಗಿರುವರು.

## ೧೦. ಸಂಧಿ.

೧ ಇಸ್ರಯೇಲು ಬರೀದಾದ ದ್ರಾಕ್ಷೆ ಬಳ್ಳಿಯಾಗಿದೆ;
ತನಗಾಗಿ ಫಲ ಫಲಿಸುತ್ತದೆ;
ತನ್ನ ಫಲದ ಜಾಹುಳ್ಯದ ಪ್ರಕಾರ
ಬಲಿಪೀಠಗಳನ್ನು ಹೆಚ್ಚಿಸಿದ್ದಾನೆ;
ತನ್ನ ದೇಶದ ಒಳ್ಳೇತನದ ಪ್ರಕಾರ
ಒಳ್ಳೆ ವಿಗ್ರಹಗಳನ್ನು ಮಾಡಿದ್ದಾರೆ.
೨ ಅವರ ಹೃದಯವು ಭೇದವಾಯಿತು;
ಈಗ ಅವರು ಅಪರಾಧಿಗಳೆಂದು ತೀರಿಸಲ್ಪಡುವರು;
ಅವನೇ ಅವರ ಬಲಿಪೀಠಗಳನ್ನು ಕೆಡವಿ,
ಅವರ ವಿಗ್ರಹಗಳನ್ನು ನಾಶ ಮಾಡುವನು.
೩ ಯಾಕಂದರೆ ಅವರು—ನಮಗೆ ಅರಸನಿಲ್ಲ;
ಯಾಕಂದರೆ ನಾವು ಯೆಹೋವನಿಗೆ ಭಯಪಡಲಿಲ್ಲ;
ಹಾಗಾದರೆ ಅರಸನು ನಮಗೆ ಏನು ಮಾಡುವನು?
ಎಂದು ಹೇಳುವರು.
೪ ಅವರು ಮಾತುಗಳನ್ನಾಡಿ,
ಸುಳ್ಳು ಪ್ರಮಾಣ ಮಾಡಿ, ಒಡಂಬಡಿಕೆಯನ್ನು ಮಾಡುತ್ತಾರೆ;
ಆದದರಿಂದ ನ್ಯಾಯ ತೀರ್ಪು ವಿಷದ ಕಳೆಯ ಹಾಗೆ
ಹೊಲದ ಸಾಲುಗಳಲ್ಲಿ ಮೊಳೆಯುತ್ತದೆ.
೫ ಬೆತಾವೆನಿನ ಕರುಗಳ ನಿಮಿತ್ತ ಸಮಾರ್ಯದ ನಿವಾಸಿಗಳು ಅಂ
ಜುವರು;
ಅದರ ಜನರು ಅದಕ್ಕೋಸ್ಕರ ಗೋಳಾಡುವರು,
ಅದರ ಪೂಜಾರಿಗಳು ಅದಕ್ಕೋಸ್ಕರ ಭ್ರಮೆ ಪಡುವರು;
ಯಾಕಂದರೆ ಅದರ ಮಹಿಮೆ ಅದರಿಂದ ಕಳೆದು ಹೋಯಿತು.
೬ ಅದು ಸಹ ಅರಸನಾದ ಯಾರೇಬನಿಗೆ ಕಾಣಿಕೆಯಾಗಿ
ಅಶ್ಶೂರಿಗೆ ಮೈಯ್ಯಲ್ಪಡುವದು;
ಎಫ್ರಾಯಿಮು ನಾಚಿಕೆಯನ್ನು ಹೊಂದುವದು;
ಇಸ್ರಯೇಲು ಸಹ ತನ್ನ ಆಲೋಚನೆಗೆ ಲಜ್ಜೆ ಪಡುವದು.
೭ ಸಮಾರ್ಯವೋ, ಅದರ ಅರಸನು
ನೀರಿನ ಮೇಲಿನ ನೊರೆಯ ಹಾಗೆ ಅಳಿದು ಹೋಗುವನು.
೮ ಇಸ್ರಯೇಲಿನ ಪಾಪವಾದ ಆವೇನಿನ ಮೇಡುಗಳು ಹಾಳಾಗುವವು;
ಮುಳ್ಳೂ ದತ್ತೂರಿಯೂ ಅವುಗಳ ಬಲಿಪೀಠಗಳ ಮೇಲೆ ಬೆಳೆ
ಯುವವು;
ಆಗಲವರು ಬೆಟ್ಟಗಳಿಗೆ—ನಮ್ಮನ್ನು ಮುಚ್ಚಿರೆಂದೂ,
ಗುಡ್ಡಗಳಿಗೆ—ನಮ್ಮ ಮೇಲೆ ಬೀಳಿರೆಂದೂ, ಹೇಳುವರು.
೯ ಓ ಇಸ್ರಯೇಲೇ, ಗಿಬಿಯದ ದಿವಸಗಳ ಮೊದಲಿಂದ ಪಾಪ
ಮಾಡಿದ್ದೀ;
ಅಲ್ಲೇ ನಿಲ್ಲುತ್ತಾರೆ;
ಅನ್ಯಾಯದ ಮಕ್ಕಳಿಗೆ ವಿರೋಧವಾದ ಯುದ್ಧವು,
ಗಿಬಿಯದಲಿ ಅವರನ್ನು ಮುಟ್ಟುವದಿಲ್ಲವೋ?
೧೦ ಅವರನ್ನು ಶಿಕ್ಷಿಸುವದಕ್ಕೆ ನನಗೆ ಅಪೇಕ್ಷೆ ಉಂಟು;
ಅವರು ತಮ್ಮ ಎರಡು ಅಕ್ರಮಗಳಿಗಾಗಿ ಕಟ್ಟಲ್ಪಡುವಾಗ,
ಜನಗಳು ಅವರಿಗೆ ವಿರೋಧವಾಗಿ ಕೂಡುವವು.
೧೧ ಎಫ್ರಾಯಿಮು ಸಾಧಿಸಲ್ಪಟ್ಟ ಕಡಸನಾಗಿದೆ;
ಕಣ ತುಳಿಯುವದನ್ನು ಪ್ರೀತಿ ಮಾಡುತ್ತದೆ;
ಆದರೆ ನಾನು ಅದರ ಸೌಂದರ್ಯವಾದ ಕುತ್ತಿಗೆಯ ಬಳಿಯ
ಲ್ಲಿ ದಾಟುವೆನು;
ಎಫ್ರಾಯಿಮಿನ ಮೇಲೆ ಸವಾರನನ್ನು ಇರಿಸುವೆನು;
ಯೆಹೂದನು ಉಳುವನು;
ಯಾಕೋಬನು ಹೆಂಟೆಗಳನ್ನು ಒಡೆಯುವನು.
೧೨ ನೀತಿಗಾಗಿ ನಿಮಗೆ ಬಿತ್ತಿರಿ;
ಕೃಪೆಯ ಪ್ರಕಾರ ಕೊಯ್ಯಿರಿ;
ನಿಮ್ಮ ಬರೀ ಭೂಮಿಯನ್ನು ಅಗಿದು ಬಿಡಿರಿ;
ಯಾಕಂದರೆ ಅವನು ಬಂದು ನಿಮ್ಮ ಮೇಲೆ ನೀತಿಯನ್ನು ಸುರಿ
ಸುವ ಪರಿಯಂತ್ರಕ್ಕೂ,
ಯೆಹೋವನನ್ನು ಹುಡುಕ ತಕ್ಕ ಸಮಯವಾಯಿತು.
೧೩ ನೀವು ದಬ್ಬಟ್ಟತ್ವವನ್ನು ಉತ್ತು, ಅಕ್ರಮವನ್ನು ಕೊಯಿದಿದ್ದೀರಿ,
ಸುಳ್ಳಿನ ಫಲವನ್ನು ತಿಂದಿದ್ದೀರಿ;
ಯಾಕಂದರೆ ನಿನ್ನ ಮಾರ್ಗದಲ್ಲಿಯೂ,
ನಿನ್ನ ಪರಾಕ್ರಮಿಗಳ ಜಾಹುಳ್ಯದಲ್ಲಿಯೂ,
ನಂಬಿಕೆ ಇಟ್ಟೆ.
೧೪ ಆದದರಿಂದ ನಿನ್ನ ಜನರಲ್ಲಿ ಗುಲ್ಲು ಹುಟ್ಟುವದು;
ನಿನ್ನ ಕೋಟೆಗಳೆಲ್ಲಾ ನಾಶ ಮಾಡಲ್ಪಡುವವು;
ಯುದ್ಧದ ದಿವಸದಲ್ಲಿ ಶಲ್ಮನನು ಬೇಥ್ ಅರ್ಬೇಲನ್ನು ನಾಶ
ಮಾಡಿದ ಪ್ರಕಾರವೇ;
ತಾಯಿ ಮಕ್ಕಳೊಂದಿಗೆ ಪುಡಿ ಪುಡಿ ಮಾಡಲ್ಪಟ್ಟಿರಲ್ಲ?
೧೫ ನಿಮ್ಮ ಬಹು ದುಷ್ಟತ್ವದ ನಿಮಿತ್ತ
ಬೆತೇಲು ನಿಮಗೆ ಹೀಗೆ ಮಾಡುವದು,
ಬೆಳಿಗ್ಯೆ ಇಸ್ರಯೇಲಿನ ಅರಸನು ಶುದ್ಧವಾಗಿ ಕಡಿಯಲ್ಪಡು
ವನು.



## ೧೧. ಸಂಧಿ.

೧ ಇಸ್ರಯೇಲನು ಹುಡುಗನಾಗಿದ್ದಾಗ ಅವನನ್ನು ಪ್ರೀತಿ
ಮಾಡಿ,
ನನ್ನ ಮಗನನ್ನು ಐಗುಪ್ತದೊಳಗಿಂದ ಕರೆದೆನು.
೨ ಅವರನ್ನು ಕರೆಯುವಾಗ ಅವರ ಸಮುಖದಿಂದ ಹೋದರು;
ಬಾಳ್ಳುಗಳಿಗೆ ಬಲಿ ಅರ್ಪಿಸಿ, ವಿಗ್ರಹಗಳಿಗೆ ಧೂಪ ಸುಟ್ಟರು.
೩ ಮತ್ತು ನಾನು ಅವರನ್ನು ತೋಳುಗಳಿಂದ ಹಿಡಿದು,
ಎಫ್ರಾಯಿಮಾನನ್ನು ನಡಿಸಿದೆನು;
ಆದರೆ ನಾನು ಅವರನ್ನು ಸ್ವಸ್ಥ ಮಾಡಿದೆನೆಂದು,
ಅವರಿಗೆ ತಿಳಿಯಲಿಲ್ಲ.
೪ ಮನುಷ್ಯನ ಬಂಧಗಳಿಂದಲೂ,
ಪ್ರೀತಿಯ ಹಗ್ಗಗಳಿಂದಲೂ,
ಅವರನ್ನು ಎಳೆದೆನು;
ಅವರ ದವಡೆಯ ಮೇಲಿನಿಂದ ನೊಗ ಎತ್ತುವವರ ಹಾಗೆ ನಾ
ನು ಅವರಿಗೆ ಇದ್ದೆನು;
ಅವರಿಗೆ ಕೈ ಚಾಚಿ, ಉಣ್ಣ ಕೊಟ್ಟೆನು.
೫ ಐಗುಪ್ತ ದೇಶಕ್ಕೆ ತಿರುಗನು;
ಅವನ ಅರಸು ಅಶ್ಶೂರ್ಯನೇ;
ಯಾಕಂದರೆ ತಿರುಗಲೊಲ್ಲದೆ ಇದ್ದರು.
೬ ಆದದರಿಂದ ಅವರ ಆಲೋಚನೆಗಳ ನಿಮಿತ್ತ,
ಕತ್ತಿ ಅವರ ಪಟ್ಟಣಗಳಲ್ಲಿ ಬೀಸಲ್ಪಟ್ಟು,
ಅವರ ಅಡ್ಡಗಂಡೆಗಳನ್ನು ಮುಗಿಸಿ, ತಿಂದು ಬಿಡುವದು.
೭ ನನ್ನ ಜನರು ನನ್ನ ಕಡೆಯಿಂದ ಹಿಂತಿರುಗ ಬೇಕೆಂದಿದಾರೆ;
ಅವರನ್ನು ಮಹೋನ್ನತನ ಬಳಿಗೆ ಕರೆಯುತ್ತಾರೆ;
ಆದರೆ ಒಬ್ಬನಾದರೂ ಅವನನ್ನು ಉನ್ನತ ಮಾಡುವದಿಲ್ಲ.
೮ ಎಫ್ರಾಯಿಮೇ ನಾನು ನಿನ್ನನ್ನು ಕೊಟ್ಟು ಬಿಡುವದು
ಹ್ಯಾಗೆ?
ಇಸ್ರಯೇಲೇ, ನಿನ್ನನ್ನು ಒಪ್ಪಿಸುವದು ಹ್ಯಾಗೆ?
ನಿನ್ನನ್ನು ಅದ್ಮದ ಹಾಗೆ ಮಾಡುವದು ಹ್ಯಾಗೆ?
ಜಿಬೋಯಿಮಿನ ಹಾಗೆ ನಿನ್ನನ್ನು ಇರಿಸುವದು ಹ್ಯಾಗೆ?
ನನ್ನ ಹೃದಯವು ನನ್ನಲ್ಲಿ ತಿರುಗಿ ಕೊಂಡಿದೆ;
ನನ್ನ ಕರುಣೆಗಳು ಏಕವಾಗಿ ಉಕ್ಕುತ್ತವೆ.
೯ ನನ್ನ ಕೋಪದ ಉರಿಯನ್ನು ನಾನು ತೀರಿಸುವದಿಲ್ಲ;
ಎಫ್ರಾಯಿಮಾನನ್ನು ನಾಶ ಮಾಡುವದಕ್ಕೆ ನಾನು ತಿರುಗಿ ಕೊ
ಳ್ಳುವದಿಲ್ಲ;
ಯಾಕಂದರೆ ನಾನು ಮನುಷ್ಯನಲ್ಲ, ದೇವಕೇ;
ನಿನ್ನ ಮಧ್ಯದಲ್ಲಿರುವ ಪರಿಶುದ್ಧನೇ,
ನಾನು ಪಟ್ಟಣದಲ್ಲಿ ಪ್ರವೇಶಿಸುವದಿಲ್ಲ.
೧೦ ಯೆಹೋವನ ಹಿಂದೆ ಹೋಗುವರು;
ಸಿಂಹದ ಹಾಗೆ ಗರ್ಜಿಸುವನು;
ಅವನು ಗರ್ಜಿಸಲು ಮಕ್ಕಳು ಭಯಭ್ರಮದಿಂದ ನಡುಗಿ ಬರು
ವರು.
೧೧ ಐಗುಪ್ತದಿಂದ ಪಕ್ಷಿಯಂತೆಯೂ,
ಅಶ್ಶೂರಿನ ದೇಶದಿಂದ ಪಾರಿವಾಳದಂತೆಯೂ,
ನಡುಗಿ ಬರುವರು;
ಆಗ ಅವರನ್ನು ಸ್ವಂತ ಮನೆಗಳಲ್ಲಿ ವಾಸಿಸ ಮಾಡುವೆನೆಂದು
ಯೆಹೋವನು ಅನ್ನುತ್ತಾನೆ.
೧೨ ಎಫ್ರಾಯಿಮು ಸುಳ್ಳಿನಿಂದಲೂ,
ಇಸ್ರಯೇಲನ ಮನೆಯವರು ಮೋಸದಿಂದಲೂ,
ನನ್ನನ್ನು ಸುತ್ತಿ ಕೊಂಡಿದ್ದಾರೆ;
ಆದರೆ ಯೆಹೂದನು ಇನ್ನು ದೇವರ ಸಂಗಡ ಆಳುತ್ತಾನೆ;
ಮತ್ತು ಪರಿಶುದ್ಧರ ಸಂಗಡ ನಂಬಿಕೆಯಾಗಿದ್ದಾನೆ.

## ೧೨. ಸಂಧಿ.

೧ ಎಫ್ರಾಯಿಮು ಘಾಳಿಯನ್ನು ತಿನ್ನುತ್ತದೆ;
ಮೂಡಣ ಘಾಳಿಯನ್ನು ಹಿಂದಟ್ಟುತ್ತದೆ;
ಪ್ರತಿ ದಿನವು ವಂಚನೆಯನ್ನೂ ನಾಶನವನ್ನೂ ಹೆಚ್ಚಿಸುತ್ತದೆ;
ಅಶ್ಶೂರ್ಯರ ಸಂಗಡ ಒಡಂಬಡಿಕೆ ಮಾಡುತ್ತಾರೆ;
ಮತ್ತು ಐಗುಪ್ತಕ್ಕೆ ಎಣ್ಣೆ ತಕ್ಕೊಂಡು ಹೋಗುತ್ತಾರೆ;
೨ ಯೆಹೂದದ ಸಂಗಡ ಸಹ ಯೆಹೋವನಿಗೆ ತರ್ಕ ಉಂಟು;
ಯಾಕೋಬನನ್ನು ಅವನ ಮಾರ್ಗಗಳ ಪ್ರಕಾರ ವಿಚಾರಿಸಿ,
ಅವನ ಕ್ರಿಯೆಗಳ ಪ್ರಕಾರ ಅವನಿಗೆ ಪ್ರತಿಫಲ ಕೊಡುವನು.
೩ ಗರ್ಭದಲ್ಲಿ ತನ್ನ ಸಹೋದರನ ಹಿಮಡಿಯನ್ನು ಹಿಡಿದನು;
ಮತ್ತು ತನ್ನ ಬಲದಿಂದ ದೇವರ ಸಂಗಡ ಹೋರಾಡಿದನು.
೪ ಹೌದು, ದೂತನ ಸಂಗಡ ಹೋರಾಡಿ, ಜಯಿಸಿದನು;
ಮತ್ತು ಅವನಿಗೆ ಬಿನ್ನಹ ಮಾಡಿದನು;
ಅವನು ಬೆತೇಲಿನಲ್ಲಿ ಅವನನ್ನು ಕಂಡು ಕೊಂಡು,
ಅಲ್ಲೇ ನಮ್ಮ ಸಂಗಡ ಮಾತಾಡಿದನು.
೫ ಯಾರಂದರೆ, ಸೈನ್ಯಗಳ ದೇವರಾದ ಯೆಹೋವನು;
ಅವನ ಜ್ಞಾಪಕಾರ್ಥವು ಯೆಹೋವನೇ.
೬ ಆದದರಿಂದ ನೀನು ನಿನ್ನ ದೇವರ ಕಡೆಗೆ ತಿರುಗಿಕೋ;
ಕೃಪೆಯನ್ನೂ ನ್ಯಾಯವನ್ನೂ ಕಾಪಾಡು;
ನಿನ್ನ ದೇವರನ್ನು ನಿತ್ಯವಾಗಿ ಎದುರು ನೋಡು.
೭ ಕಾನಾನೋ, ಅವನ ಕೈಯಲ್ಲಿ ಮೋಸದ ತ್ರಾಸು ಇದೆ;
ವಂಚಿಸಲಿಕ್ಕೆ ಪ್ರೀತಿ ಮಾಡುತ್ತಾನೆ.
೮ ಆದರೂ ಎಫ್ರಾಯಿಮು ಹೇಳುವದೇನಂದರೆ—
ಆಹಾ, ಐಶ್ವರ್ಯವಂತನಾದೆನು;
ನನಗೆ ಸಂಪತ್ತು ಕಿಕ್ಕಿತು;
ನನ್ನ ಕೆಲಸಗಳಲ್ಲೆಲ್ಲಾ ಪಾಪವಾದ ಅಕ್ರಮವನ್ನು ನನ್ನಲ್ಲಿ ಕಂಡು
ಕೊಳ್ಳರು.
೯ ಆದರೆ, ಐಗುಪ್ತ ದೇಶದಾರಭ್ಯ ನಿನ್ನ ದೇವರಾಗಿರುವ ಯೆ
ಹೋವನಾದ ನಾನು,
ಇನ್ನು ನಿನ್ನನ್ನು ಹಬ್ಬದ ದಿವಸಗಳ ಪ್ರಕಾರ ಗುಡಾರಗಳಲ್ಲಿ
ವಾಸಿಸ ಮಾಡುವೆನು.
೧೦ ಮತ್ತು ಪ್ರವಾದಿಗಳ ಮುಖಾಂತರ ಮಾತಾಡಿದ್ದೇನೆ;
ನಾನು ದರ್ಶನಗಳನ್ನು ಹೆಚ್ಚಿಸಿದ್ದೇನೆ;

ಇದಲ್ಲದೆ ಪ್ರವಾದಿಗಳ ಕೈಯಿಂದ ನಾಮ್ಯಗಳನ್ನು ಹೇಳಿಸಿದ್ದೇನೆ.
೧೧ ಗಿಲ್ಯಾದು ಪಾತಕವಾದದ್ದೋ?
ನಿಶ್ಚಯವಾಗಿ ಮಾಯವಾಗಿವೆ;
ಗಿಲ್ಗಾಲಿನಲ್ಲಿ ಎತ್ತುಗಳನ್ನು ಅರ್ಪಿಸುತ್ತಾರೆ;
ಅವರ ಬಲಿಪೀಠಗಳು ಹೊಲದ ಸಾಲುಗಳಲ್ಲಿರುವ ಕಲ್ಕುಕುಪ್ಪೆಗಳ ಹಾಗಿವೆ.

೧೨ ಯಾಕೋಬನು ಅರಾಮಿನ ಸೀಮೆಗೆ ಓಡಿ ಹೋದನು;
ಇಸ್ರಯೇಲನು ಹೆಂಡತಿಯ ನಿಮಿತ್ತ ಸೇವೆ ಮಾಡಿ,
ಹೆಂಡತಿಯ ನಿಮಿತ್ತ ಕುರಿಗಳನ್ನು ಕಾದನು.
೧೩ ಪ್ರವಾದಿಯಿಂದ ಯೆಹೋವನು ಇಸ್ರಯೇಲನ್ನು ಐಗುಪ್ತದೊಳಗಿಂದ ಬರ ಮಾಡಿದನು;
ಮತ್ತು ಪ್ರವಾದಿಯಿಂದ ಕಾಯಲ್ಪಟ್ಟನು.
೧೪ ಎಫ್ರಾಯೀಮು ಕಹಿಯಾದವುಗಳಿಂದ ಅವನನ್ನು ಕರೆಕರೆ ಪಡಿಸುತ್ತದೆ;
ಆದದರಿಂದ ಅವನ ಕರ್ತನು ಅವನ ರಕ್ತವನ್ನು ಅವನ ಮೇಲೆ ಬಿಡುವನು;
ಅವನ ನಿಂದೆಯನ್ನು ಅವನಿಗೆ ತಿರುಗಿಸುವನು.

## ೧೩. ಸಂಧಿ.

೧ ಎಫ್ರಾಯೀಮು ದಿಗುಲಾಗಿ ಮಾತಾಡಿದಾಗ, ಅದು ಇಸ್ರಯೇಲಿನಲ್ಲಿ ಉನ್ನತವಾಯಿತು;
ಆದರೆ ಬಾಳನ ವಿಷಯ ಅಪರಾಧಿಯಾದ ಮೇಲೆ ಸತ್ತು ಹೋಯಿತು.
೨ ಮತ್ತು ಈಗ ಪಾಪ ಮಾಡುವದನ್ನು ಹೆಚ್ಚಿಸುತ್ತಾರೆ;
ಸ್ವಂತ ಬುದ್ಧಿಯ ಪ್ರಕಾರ, ತಮ್ಮ ಬೆಳ್ಳಿಯಿಂದ,
ಎರಕದ ವಿಗ್ರಹಗಳನ್ನು ತಮಗೆ ಮಾಡಿ ಕೊಂಡಿದ್ದಾರೆ;
ಅವೆಲ್ಲಾ ಬಂಚಾಳನ ಕೆಲಸವೇ,
ಕರುಗಳಿಗೆ ಮುದ್ದಿಡಲೆಂದು,
ಬಲಿಯರ್ಪಿಸುವ ಮನುಷ್ಯರು ಅವುಗಳ ವಿಷಯ ಅನ್ನುತ್ತಾರೆ.
3 ಆದದರಿಂದ ಅವರು ಹೊತಾಕೆಯ ಮೇಘದ ಹಾಗೆಯೂ,
ಹೋಗಿ ಬಿಡುವ ಮುಂಜಾನೆಯ ಮಂಜಿನ ಹಾಗೆಯೂ,
ಕಣದೊಳಗಿಂದ ಬಡಿಯಲ್ಪಡುವ ಹೊಟ್ಟಿನ ಹಾಗೆಯೂ,
ಕಿಟಿಕಿಯೊಳಗಿಂದ ಹೋಗುವ ಹೊಗೆಯ ಹಾಗೆಯೂ, ಇರುವರು.
೪ ಆದರೆ ನಾನು ಐಗುಪ್ತ ದೇಶದಾರಭ್ಯ ನಿನ್ನ ದೇವರಾದ ಯೆಹೋವನಾಗಿದ್ದೇನೆ;
ನನ್ನನ್ನು ಹೊರ್ತು ನೀನು ಯಾವ ದೇವರನ್ನು ಶಿಳುಕೊಳ್ಳಲಿಲ್ಲ;
ಮತ್ತು ನಾನಲ್ಲದೆ ರಕ್ಷಕನು ಇರಲಿಲ್ಲ.
೫ ನಾನು ನಿನ್ನನ್ನು ಅರಣ್ಯದಲ್ಲಿ,
ಬಹು ಬಾಯಿಯಾರಿಕೆಯ ದೇಶದಲ್ಲಿ, ಅರಿತೆನು.
೬ ತಮ್ಮ ಮೇಯಿನ ಪ್ರಕಾರ ತೃಪ್ತಿಯಾದರು;
ತೃಪ್ತಿಯಾದಾಗ ಅವರ ಹೃದಯವು ಹೆಚ್ಚಿಸಲ್ಪಟ್ಟಿತು;
ಆದದರಿಂದ ನನ್ನನ್ನು ಮರೆತು ಬಿಟ್ಟರು.
೭ ಆದದರಿಂದ ನಾನು ಅವರಿಗೆ ಸಿಂಹದ ಹಾಗಾಗುವೆನು;
ಮಾರ್ಗದಲ್ಲಿ ಚಿರತೆಯ ಹಾಗೆ ಹೊಂಚಿ ಕೊಳ್ಳುವೆನು,
೮ ಮರಿ ಕಳೆದ ಕೊಂಡ ಕರಡಿಯಂತೆ ಅವರನ್ನು ಎದುರಿಸುವೆನು,
ಅವರ ಹೃದಯದ ಜೀವನನ್ನು ಹರಿದು ಬಿಡುವೆನು;
ಅಲ್ಲಿ ಸಿಂಹಣಿಯ ಹಾಗೆ ಅವರನ್ನು ತಿನ್ನುವೆನು;
ದುಷ್ಟ ಮೃಗವು ಅವರನ್ನು ಶೀಳುವದು.

೯ ಓ ಇಸ್ರಯೇಲೇ, ನಿನ್ನನ್ನು ನೀನೇ ಕೆಡಿಸಿ ಕೊಂಡಿದ್ದೀ;
ಆದರೆ ನನ್ನಲ್ಲಿ ನಿನಗೆ ಸಹಾಯ ಉಂಟು.
೧೦ ನಿನ್ನ ಅರಸನು ಎಲ್ಲಿ?
ನಿನ್ನ ಪಟ್ಟಣಗಳಲ್ಲೆಲ್ಲಾ ನಿನ್ನನ್ನು ರಕ್ಷಿಸುವವನು ಎಲ್ಲಿ?
ನಿನ್ನ ನ್ಯಾಯಾಧಿಪತಿಗಳು ಎಲ್ಲಿ?
ಅರಸನನ್ನೂ ಪ್ರಭುಗಳನ್ನೂ ನನಗೆ ಕೊಡೆಂದು ಹೇಳಿದಿಯಲ್ಲ?
೧೧ ನನ್ನ ಕೋಪದಲ್ಲಿ ನಿನಗೆ ಅರಸನನ್ನು ಕೊಟ್ಟೆನು,
ಮತ್ತು ನನ್ನ ರೌದ್ರದಲ್ಲಿ ಅವನನ್ನು ತೆಗೆದು ಹಾಕಿದೆನು.
೧೨ ಎಫ್ರಾಯೀಮನ ಅಕ್ರಮವು ಕಟ್ಟಲ್ಪಟ್ಟಿದೆ;
ಅವನ ಪಾಪವು ಇಡಲ್ಪಟ್ಟಿದೆ.
೧೩ ಹೆರುವವಳ ಸಂಕಟಗಳು ಅವನ ಮೇಲೆ ಬರುವವು;
ಅವನು ಬುದ್ಧಿಹೀನ ಮಗನಾಗಿದ್ದಾನೆ;
ಇಲ್ಲದಿದ್ದರೆ ಮಕ್ಕಳು ಹೊರಡುವಲ್ಲಿ ಅವನು ಬಹಳ ಹೊತ್ತು ನಿಲ್ಲುವದಿಲ್ಲ.
೧೪ ಪಾತಾಳದ ಕೈಯೊಳಗಿಂದ ಅವರನ್ನು ವಿಮೋಚಿಸುವೆನು;
ಮರಣದಿಂದ ಅವರನ್ನು ಬಿಡುಗಡೆ ಮಾಡುವೆನು;
ಮರಣವೇ, ನಿನಗೆ ಬಾಧೆಯಾಗಿರುವೆನು;
ಪಾತಾಳವೇ, ನಿನಗೆ ನಾಶವಾಗಿರುವೆನು;
ಪಶ್ಚಾತ್ತಾಪವು ನನ್ನ ಕಣ್ಣುಗಳಿಗೆ ಮರೆಯಾಗಿದೆ.
೧೫ ಅವನು ಸಹೋದರರ ಮಧ್ಯದಲ್ಲಿ ಫಲ ಭರಿತನಾಗಿದ್ದರೂ,
ಮೂಡಣ ಘಾಳಿ ಬರುವದು;
ಯೆಹೋವನ ಘಾಳಿ ಅರಣ್ಯದಿಂದ ಏರಿ ಬರುವದು;
ಆಗ ಅವನ ಬುಗ್ಗೆ ಬಣಗಿ, ಅವನ ಜಲೆ ಬತ್ತಿ ಹೋಗುವದು;
ಎಲ್ಲಾ ಅಮೂಲ್ಯ ಸಾಮಗ್ರಿಗಳ ನಿಕ್ಷೇಪವನ್ನು ಸುಲು ಕೊಳ್ಳುವನು.
೧೬ ಸಮಾರ್ಯವು ದಂಡಿಸಲ್ಪಡುವದು;
ಯಾಕಂದರೆ ತನ್ನ ದೇವರಿಗೆ ವಿರೋಧವಾಗಿ ತಿರುಗಿ ಬಿದ್ದದೆ;
ಕತ್ತಿಯಿಂದ ಬೀಳುವರು;
ಅವರ ಕೂಸುಗಳು ಬಡಿಯಲ್ಪಡುವವು;
ಅವರ ಗರ್ಭಿಣಿಗಳು ಶೀಳಲ್ಪಡುವರು.

## ೧೪. ಸಂಧಿ.

೧ ಓ ಇಸ್ರಯೇಲೇ, ನಿನ್ನ ದೇವರಾದ ಯೆಹೋವನಿಗೆ ತಿರುಗಿಕೋ;
ಯಾಕಂದರೆ ನಿನ್ನ ಅಕ್ರಮದಿಂದ ಬಿದ್ದಿದ್ದೀ.
೨ ಮಾತುಗಳನ್ನು ನಿಮ್ಮ ಸುಂಗಡ ತಕ್ಕೊಂಡು,



ಯೆಹೋವನಿಗೆ ತಿರುಗಿ ಕೊಂಡು,
ಅವನಿಗೆ ಹೀಗನ್ನಿರಿ—
ಎಲ್ಲಾ ಅಕ್ರಮವನ್ನು ತೆಗೆದು ಹಾಕಿ,
ನಮ್ಮನ್ನು ದಯವಾಗಿ ಅಂಗೀಕರಿಸು;
ಆಗ ನಮ್ಮ ತುಟಿಗಳ ಕರುಗಳನ್ನು ಅರ್ಪಿಸುವೆವು.
3 ಅಶ್ಶೂರು ನಮ್ಮನ್ನು ರಕ್ಷಿಸುವದಿಲ್ಲ;
ನಾವು ಕುದುರೆಗಳ ಮೇಲೆ ಸವಾರಿ ಮಾಡುವದಿಲ್ಲ;
ಮತ್ತು ಇನ್ನು ಮೇಲೆ ನಮ್ಮ ಕೈ ಕೆಲಸವಾದದ್ದಕ್ಕೆ—
ನಮ್ಮ ಸ್ವಾಮಿಗಳೇ, ಎಂದು
ನಾವು ಹೇಳುವದಿಲ್ಲ;
ಯಾಕಂದರೆ ನಿನ್ನಲ್ಲಿ ದಿಕ್ಕಿಲ್ಲದವನಿಗೆ ಕರುಣೆ ಉಂಟು.

೪ ಅವರ ಹಿಂಜರಿಯುವಿಕೆಯನ್ನು ಸ್ವಸ್ಥ ಮಾಡುವೆನು;
ಅವರನ್ನು ಉಚಿತವಾಗಿ ಪ್ರೀತಿ ಮಾಡುವೆನು;
ಯಾಕಂದರೆ, ನನ್ನ ಕೋಪವು ಅವನ ಕಡೆಯಿಂದ ತಿರುಗಿ ಕೊಂಡಿದೆ.
೫ ಇಸ್ರಯೇಲಿಗೆ ನಾನು ಮಂಜಿನ ಹಾಗೆ ಇರುವೆನು;
ಅವನು ನೈದಿಲೆಯ ಹಾಗೆ ಬೆಳೆಯುವನು;
ತನ್ನ ಬೇರುಗಳನ್ನು ಲೆಬನೋನಿನ ಹಾಗೆ ಊರುವನು.
೬ ಅವನ ಕೊಂಬೆಗಳು ಹಬ್ಬುವವು;
ಅವನ ಅಂದವು ಇಪ್ಪೆ ಮರದ ಹಾಗೆಯೂ,
ಅವನ ಪರಿಮಳವು ಲೆಬನೋನಿನ ಹಾಗೆಯೂ, ಇರುವದು.
೭ ಅವನ ನೆರಳಿನಲ್ಲಿ ವಾಸಿಸುವವರು ತಿರುಗುವರು;
ಧಾನ್ಯದ ಹಾಗೆ ಜೀವಿಸುವರು;
ದ್ರಾಕ್ಷೆ ಬಳ್ಳಿಯ ಹಾಗೆ ಬೆಳೆಯುವರು;
ಅವನ ಹೆಸರು ಲೆಬನೋನಿನ ದ್ರಾಕ್ಷೆರಸದ ಹಾಗೆ ಇರುವದು.
೮ ಎಫ್ರಾಯೀಮು ಅನ್ನುವದು—
ನನಗೆ ಇನ್ನು ಮೇಲೆ ವಿಗ್ರಹಗಳು ಯಾತಕ್ಕೆ?
ನಾನು ಉತ್ತರ ಕೊಟ್ಟು ಅವನನ್ನು ದೃಷ್ಟಿಸಿದ್ದೇನೆ;
ನಾನು ಹಸುರಾದ ತರಾಯಿ ಗಿಡದ ಹಾಗಿದ್ದೇನೆ;
ನಿನ್ನ ಫಲವು ನನ್ನಿಂದ ಸಿಕ್ಕಿದೆ.

೯ ಇವುಗಳನ್ನು ಗ್ರಹಿಸುವ ಹಾಗೆ ಬುದ್ಧಿವಂತನು ಯಾರು?
ಇವುಗಳನ್ನು ತಿಳುಕೊಳ್ಳುವ ಹಾಗೆ ವಿವೇಕಿ ಯಾರು?
ಯಾಕಂದರೆ ಯೆಹೋವನ ಮಾರ್ಗಗಳು ನೆಟ್ಟಗಾಗಿವೆ;
ನೀತಿವಂತರು ಅವುಗಳಲ್ಲಿ ನಡ ಕೊಳ್ಳುವರು;
ಆದರೆ ಅಕ್ರಮಕಾರರು ಅವುಗಳಲ್ಲಿ ಎಡವುವರು.

# JOEL.

## ಯೋವೇಲನು.

## ೧. ಸಂಧಿ.

೧ ಬೆತೂವೆಲನ ಮಗನಾದ ಯೋವೇಲನಿಗೆ ಉಂಟಾದ ಯೆಹೋವನ ವಾಕ್ಯವು.
೨ ಮುದುಕರೇ, ಇದನ್ನು ಕೇಳಿರಿ;
ದೇಶದ ನಿವಾಸಿಗಳೆಲ್ಲರೇ, ಕಿವಿಗೊಡಿರಿ;
ಇದು ನಿಮ್ಮ ದಿವಸಗಳಲ್ಲಾದರೂ,
ನಿಮ್ಮ ತಂದೆಗಳ ದಿವಸಗಳಲ್ಲಾದರೂ, ಉಂಟಾಯಿತೋ?
3 ಇದರ ವಿಷಯ ನಿಮ್ಮ ಮಕ್ಕಳಿಗೆ ತಿಳಿಸಿರಿ,
ಮತ್ತು ನಿಮ್ಮ ಮಕ್ಕಳು ತಮ್ಮ ಮಕ್ಕಳಿಗೂ,
ಅವರ ಮಕ್ಕಳು ಮತ್ತೊಂದು ತಲಾಂತರಕ್ಕೂ, ತಿಳಿಸಲಿ.
೪ ಹುಳುವು ಉಳಿಸಿದ್ದನ್ನು ಮಿಡತೆ ತಿಂದು ಬಿಟ್ಟಿದೆ;
ಮಿಡತೆ ಉಳಿಸಿದ್ದನ್ನು ಸಲಭವು ತಿಂದು ಬಿಟ್ಟಿದೆ;
ಸಲಭವು ಉಳಿಸಿದ್ದನ್ನು ಮಹಾ ಕೀಟವು ತಿಂದು ಬಿಟ್ಟಿದೆ.

೫ ಮತ್ತರೇ, ಎಚ್ಚತ್ತು ಅಳಿರಿ;
ದ್ರಾಕ್ಷೆರಸ ಕುಡಿಯುವವರೆಲ್ಲರೇ, ಹೊಸ ದ್ರಾಕ್ಷೆರಸದ ನಿಮಿತ್ತ ಹೂಯಿಶಿರಿರಿ;
ಯಾಕಂದರೆ, ನಿಮ್ಮ ಬಾಯಿಯೊಳಗಿಂದ ಕಡಿಯಲ್ಪಟ್ಟಿದೆ.
೬ ಯಾಕಂದರೆ, ನನ್ನ ದೇಶದ ಮೇಲೆ ಬಂದು ಜನಾಂಗವು ಏರಿ ಬಂತು;
ಬಲವಾದದ್ದು; ಲೆಖ್ಖವಿಲ್ಲದ್ದೂ;
ಅದರ ಹಲ್ಲುಗಳು ಸಿಂಹದ ಹಲ್ಲುಗಳು;
ಸಿಂಹಣಿಯ ದವಡೆಗಳು ಅದಕ್ಕೆ ಉಂಟು.
೭ ಅದು ನನ್ನ ದ್ರಾಕ್ಷೆ ಬಳ್ಳಿಯನ್ನು ಹಾಳು ಮಾಡಿ,
ನನ್ನ ಅಂಜೂರದ ಗಿಡವನ್ನು ಮುರಿದು ಹಾಕಿದೆ;
ಅದನ್ನು ಸುಲಿದೇ ಸುಲಿದು, ಬಿಸಾಟಿ ಬಿಟ್ಟಿದೆ;
ಅದರ ಕೊಂಬೆಗಳು ಬಿಳುಪಾದವು.
೮ ಯೌವನದ ಗಂಡನಿಗೋಸ್ಕರ ಗೋಣಿ ತಟ್ಟು ಧರಿಸಿದ ಕನ್ಯಾಸ್ತ್ರೀಯ ಹಾಗೆ ಅಳು.
೯ ನೈವೇದ್ಯವೂ ಪಾನದರ್ಪಣೆಯೂ,
ಯೆಹೋವನ ಮನೆಯೊಳಗಿಂದ ಕಡಿಯಲ್ಪಟ್ಟಿವೆ;
ಯೆಹೋವನ ಸೇವಕರಾದ ಯಾಜಕರು ಗೋಳಾಡುತ್ತಾರೆ.
೧೦ ಹೊಲವು ಹಾಳಾಗಿದೆ;
ಭೂಮಿಯು ಗೋಳಾಡುತ್ತದೆ,
ಯಾಕಂದರೆ ಧಾನ್ಯವು ಹಾಳಾಗಿದೆ;
ಹೊಸ ದ್ರಾಕ್ಷೆ ರಸವು ಬಣಗಿದೆ;
ಎಣ್ಣೆ ಬಾಡಿ ಹೋಗಿದೆ.

೧೧ ವಕ್ಕಲಿಗರೇ! ನಾಚಿಕೆ ಪಡಿರಿ;
ದ್ರಾಕ್ಷೆ ತೋಟದವರೇ! ಹೂಯಿಶಿರಿರಿ;
ಗೋಧಿ, ಜವೆ ಗೋಧಿಗಳ ನಿಮಿತ್ತವೇ;
ಯಾಕಂದರೆ ಹೊಲದ ಸೈರು ನಾಶವಾಯಿತು.
೧೨ ದ್ರಾಕ್ಷೆ ಬಳ್ಳಿ ಬಣಗಿ ಹೋಗಿದೆ;
ಇಪ್ಪೆ ಗಿಡ ಬಾಡಿ ಹೋಗಿದೆ;
ದಾಳಿಂಬರದ ಗಿಡವೂ ಖರ್ಜೂರದ ಗಿಡವೂ ಸಹ,

ಆಲೆಲ್ ಗಿಡವೂ ಹೊಲದ ಮರಗಳೆಲ್ಲವೂ ಒಣಗಿ ಹೋ
ಗಿವೆ;
ಯಾಕಂದರೆ ಸಂತೋಷವು ಮನುಷ್ಯರ ಮಕ್ಕಳನ್ನು ಬಿಟ್ಟು
ಒಣಗಿ ಹೋಗಿದೆ.

೧೩ ಯಾಜಕರೇ! ನಡು ಕಟ್ಟಿಕೊಂಡು ಗೋಳಾಡಿರಿ;
ಬಲಿಪೀಠದ ಸೇವಕರೇ! ಹೂಯಿಡಿರಿ;
ನನ್ನ ದೇವರ ಸೇವಕರೇ! ಬಂದು,
ಗೋಣಿತಟ್ಟಿನಲ್ಲಿ ರಾತ್ರಿ ಕಳೆಯಿರಿ;
ಯಾಕಂದರೆ, ನೈವೇದ್ಯವೂ, ಪಾನದರ್ಪಣೆಯೂ,
ನಿಮ್ಮ ದೇವರ ಮನೆಯಿಂದ ಹಿಂತೆಗೆಯಲ್ಪಟ್ಟಿವೆ.
೧೪ ಉಪವಾಸವನ್ನು ಪರಿಶುದ್ಧ ಮಾಡಿರಿ;
ಘನ ಸಂಘವನ್ನು ಕರೆಯಿರಿ;
ಹಿರಿಯರನ್ನೂ, ದೇಶದ ನಿವಾಸಿಗಳೆಲ್ಲರನ್ನೂ,
ನಿಮ್ಮ ದೇವರಾದ ಯೆಹೋವನ ಮನೆಯಲ್ಲಿ ಕೂಡಿಸಿ,
ಯೆಹೋವನಿಗೆ ಮೊರೆ ಇಡಿರಿ.

೧೫ ಅಯ್ಯೋ ದಿವಸವೇ!
ಯಾಕಂದರೆ ಯೆಹೋವನ ದಿವಸವು ಸಮೀಪವಾಗಿದೆ;
ಸರ್ವಶಕ್ತನ ಕಡೆಯಿಂದ ನಾಶದಂತೆ ಬರುತ್ತದೆ.
೧೬ ನಮ್ಮ ಕಣ್ಣುಗಳ ಮುಂದೆ ಆಹಾರವೂ,
ನಮ್ಮ ದೇವರ ಮನೆಯಿಂದ ಸಂತೋಷವೂ, ಉಲ್ಲಾಸವೂ,
ಕಡಿಯಲ್ಪಟ್ಟಿವೆ ಅಲ್ಲವೋ?
೧೭ ಬೀಜಗಳು ಅವರ ಹೆಂಟೆಗಳ ಕೆಳಗೆ ಕೆಟ್ಟು ಹೋಗಿವೆ;
ಉಗ್ರಾಣಗಳು ನಾಶವಾಗಿವೆ;
ಕಣಜಗಳು ಹಾಳಾಗಿವೆ; ಯಾಕಂದರೆ ಧಾನ್ಯವು ಒಣಗಿದೆ.
೧೮ ಪಶುಗಳು ಎದ್ದು ಮೂಲುಗುತ್ತವೆ;
ದನದ ಹಿಂಡುಗಳು ಘಾಬರಿ ಪಡುತ್ತವೆ,
ಯಾಕಂದರೆ ತಮಗೆ ಮೇವು ಇಲ್ಲ;
ಕುರಿ ಮಂದೆಗಳು ಸಹ ನಾಶವಾಗುತ್ತವೆ.
೧೯ ಓ ಯೆಹೋವ! ನಿನಗೆ ಮೊರೆ ಇಡುತ್ತೇನೆ;
ಯಾಕಂದರೆ ಬೆಂಕಿಯು ಅಡವಿಯ ಮೇವಿನ ಸ್ಥಳಗಳನ್ನು ದಹಿ
ಸಿ ಅದೆ;
ಜ್ವಾಲೆಯು ಅಡವಿಯ ಮರಗಳನ್ನೆಲ್ಲಾ ಸುಟ್ಟು ಬಿಟ್ಟಿದೆ.
೨೦ ಅಡವಿಯ ಮೃಗಗಳು ಸಹ ನಿನ್ನ ಕಡೆಗೆ ಹಂಬಲಿಸುತ್ತವೆ;
ಯಾಕಂದರೆ ಜಲದ ಪ್ರವಾಹಗಳು ಬತ್ತಿ ಹೋಗಿವೆ;
ಬೆಂಕಿಯು ಅಡವಿಯ ಮೇವಿನ ಸ್ಥಳಗಳನ್ನು ದಹಿಸಿ ಬಿಟ್ಟಿದೆ.

## ೨. ಸಂಧಿ.

೧ ಚಿಯೋನಿನಲ್ಲಿ ಕೊಂಬು ಊದಿರಿ;
ನನ್ನ ಪರಿಶುದ್ಧ ಪರ್ವತದಲ್ಲಿ ಆರ್ಭಟಿಸಿರಿ;
ದೇಶದ ನಿವಾಸಿಗಳೆಲ್ಲರು ನಡುಗಲಿ;
ಯಾಕಂದರೆ ಯೆಹೋವನ ದಿವಸವು ಬರುತ್ತದೆ; ಅದು ಸಮೀಪ
ವೇ.
೨ ಕತ್ತಲೆಯೂ ಮೊಬ್ಬೂ ಉಳ್ಳ ದಿವಸವು;
ಮೇಘವೂ ಮೋಡವೂ ಉಳ್ಳ ದಿವಸವು;
ಬೆಟ್ಟಗಳ ಮೇಲೆ ಹಾಸಿರುವ ಉದಯದ ಹಾಗೆಯೇ.
ದೊಡ್ಡ ಬಲವಾದ ಜನವು;
ಅವರ ಹಾಗೆ ಎಂದೂ ಇದ್ದದ್ದಿಲ್ಲ;
ಅವರ ತರುವಾಯ ತಲತಲಾಂತರಗಳ ವರುಷಗಳ ಪರ್ಯಂತರ
ಇನ್ನು ಇರುವದಿಲ್ಲ.
೩ ಅವರ ಮುಂದೆ ಬೆಂಕಿ ದಹಿಸುತ್ತದೆ;
ಅವರ ಹಿಂದೆ ಜ್ವಾಲೆ ಸುಡುತ್ತದೆ;
ಅವರ ಮುಂದೆ ದೇಶವು ಏದೆನ್ ತೋಟದ ಹಾಗಿದೆ;
ಅವರ ಹಿಂದೆ ಹಾಳಾದ ಕಾಡು;
ಹೌದು, ಅವರಿಗೆ ಒಂದು ತಪ್ಪುವದಿಲ್ಲ.
೪ ಅವರ ಆಕಾರವು ಕುದುರೆಗಳ ಆಕಾರದ ಹಾಗಿದೆ;
ಸವಾರರ ಹಾಗೆಯೇ ಓಡುತ್ತಾರೆ.
೫ ಪರ್ವತಾಗ್ರಗಳಲ್ಲಿ ರಥಗಳ ಶಬ್ದದಂತೆ ಹಾರುತ್ತಾರೆ;
ಕೂಳೆಯನ್ನು ದಹಿಸುವ ಬೆಂಕಿಯ ಜ್ವಾಲೆಯ ಶಬ್ದದ ಹಾಗೆ;
ಯುದ್ಧಕ್ಕೆ ಸಿದ್ಧವಾದ ಬಲವುಳ್ಳ ಜನದ ಹಾಗೆ.
೬ ಅವರ ಮುಂದೆ ಜನರು ಭ್ರಮೆಗೊಳ್ಳುತ್ತಾರೆ;
ಎಲ್ಲಾ ಮುಖಗಳು ಕಳೆಗುಂದುತ್ತವೆ.
೭ ಶೂರರ ಹಾಗೆ ಓಡುತ್ತಾರೆ;
ಯುದ್ಧ ಶಾಲಿಗಳ ಹಾಗೆ ಗೋಡೆ ಏರುತ್ತಾರೆ;
ಒಬ್ಬೊಬ್ಬನು ತನ್ನ ತನ್ನ ಮಾರ್ಗದಲ್ಲಿ ಹೋಗುತ್ತಾನೆ;
ತಮ್ಮ ಹಾದಿಗಳನ್ನು ಬದಲು ಮಾಡುವದಿಲ್ಲ.
೮ ಒಬ್ಬನು ಇನ್ನೊಬ್ಬನನ್ನು ನೂಕುವದಿಲ್ಲ;
ಒಬ್ಬೊಬ್ಬನು ತನ್ನ ತನ್ನ ದಾರಿಯಲ್ಲಿ ಹೋಗುತ್ತಾನೆ;
ಆಯುಧಗಳಲ್ಲಿ ಬಿದ್ದರೂ ಘಾಯವಾಗುವದಿಲ್ಲ.
೯ ಪಟ್ಟಣದಲ್ಲಿ ತಿರುಗಾಡುತ್ತಾರೆ;
ಗೋಡೆಯ ಮೇಲೆ ಓಡುತ್ತಾರೆ;
ಮನೆಗಳ ಮೇಲೆ ಹತ್ತುತ್ತಾರೆ;
ಕಳ್ಳನ ಹಾಗೆ ಕಿಟಕಿಗಳಿಂದ ಪ್ರವೇಶಿಸುತ್ತಾರೆ.
೧೦ ಅವರ ಮುಂದೆ ಭೂಮಿಯು ನಡುಗುತ್ತದೆ;
ಆಕಾಶಗಳು ಅದುರುತ್ತವೆ;
ಸೂರ್ಯ ಚಂದ್ರಗಳು ಕಪ್ಪಾಗುತ್ತವೆ;
ನಕ್ಷತ್ರಗಳು ತಮ್ಮ ಪ್ರಕಾಶವನ್ನು ಮರೆ ಮಾಡುತ್ತವೆ.
೧೧ ಮತ್ತು ಯೆಹೋವನು ತನ್ನ ಸೈನ್ಯದ ಮುಂದೆ ತನ್ನ ಶಬ್ದವ
ನ್ನು ಕೊಡುತ್ತಾನೆ;
ಯಾಕಂದರೆ ಅವನ ದಂಡು ಬಹು ದೊಡ್ಡದಾಗಿದೆ;
ಹೌದು, ಬಲವಾದದ್ದಾಗಿದ್ದು, ಅವನ ವಾಕ್ಯವನ್ನು ನಡಿಸುತ್ತದೆ;
ಯೆಹೋವನ ದಿವಸವು ದೊಡ್ಡದ್ದೂ,
ಮಹಾ ಭಯಂಕರವಾದದ್ದೂ;
ಅದನ್ನು ತಾಳಿ ಕೊಳ್ಳುವವನ್ಯಾರು?

೧೨ ಹೀಗಿರುವದರಿಂದ ಈಗ ಯೆಹೋವನು ಅನ್ನುವದೇನಂ
ದರೆ—
ಪೂರ್ಣ ಹೃದಯದಿಂದಲೂ, ಉಪವಾಸದಿಂದಲೂ,
ಅಳುವಿಕೆಯಿಂದಲೂ, ಗೋಳಾಟದಿಂದಲೂ,
ನನ್ನ ಕಡೆಗೆ ತಿರುಗಿ ಕೊಳ್ಳಿರಿ.



೧೩ ನಿಮ್ಮ ಬಟ್ಟೆಗಳನ್ನಲ್ಲಾ, ನಿಮ್ಮ ಹೃದಯವನ್ನು, ಹರಕೊಂಡು,
ನಿಮ್ಮ ದೇವರಾದ ಯೆಹೋವನ ಕಡೆಗೆ ತಿರುಗಿ ಕೊಳ್ಳಿರಿ;
ಯಾಕಂದರೆ ಅವನು ದಯವೂ, ಕರುಣೆಯೂ,
ದೀರ್ಘಶಾಂತಿಯೂ, ಮಹಾ ಕೃಪೆಯೂ, ಉಳ್ಳವನಾಗಿ,
ಕೇಡಿಗೆ ಪಶ್ಚಾತ್ತಾಪ ಪಡುತ್ತಾನೆ.
೧೪ ಅವನು ತಿರುಗಿ ಕೊಂಡು, ಪಶ್ಚಾತ್ತಾಪ ಪಟ್ಟು,
ತನ್ನ ಹಿಂದೆ ಆಶೀರ್ವಾದವನ್ನು—
ಅಂದರೆ, ನಿಮ್ಮ ದೇವರಾದ ಯೆಹೋವನಿಗಾಗಿ,
ನೈವೇದ್ಯವನ್ನೂ ಪಾನದರ್ಪಣೆಯನ್ನೂ—ಉಳಿಸುವನೇನೋ,
ಯಾರು ಬಲ್ಲರು?
೧೫ ಚಿಯೋನಿನಲ್ಲಿ ಕೊಂಬು ಊದಿರಿ;
ಉಪವಾಸವನ್ನು ಪರಿಶುದ್ಧ ಮಾಡಿರಿ; ಘನ ಸಂಘವನ್ನು ಕರೆ
ಯಿರಿ.
೧೬ ಜನರನ್ನು ಕೂಡಿಸಿರಿ, ಸಭೆಯನ್ನು ಪರಿಶುದ್ಧ ಮಾಡಿರಿ;
ಹಿರಿಯರನ್ನು ಜಮಾಯಿಸಿರಿ, ಮಕ್ಕಳನ್ನೂ ಮೊಲೆ ಕೂಸುಗ
ಳನ್ನೂ ಕೂಡಿಸಿರಿ;
ಮದಲಿಂಗನು ತನ್ನ ಕೊಠಡಿಯೊಳಗಿಂದಲೂ,
ಮದಲಗಿತ್ತಿ ತನ್ನ ಅರೆಯೊಳಗಿಂದಲೂ, ಹೊರಡಲಿ.
೧೭ ಯೆಹೋವನ ಸೇವಕರಾದ ಯಾಜಕರು
ಕೈಸಾರೆಗೂ ಬಲಿಪೀಠಕ್ಕೂ ನಡುವೆ ಅತ್ತು, ಹೀಗೆ ಹೇಳಲಿ—
ಓ ಯೆಹೋವ, ನಿನ್ನ ಜನರನ್ನು ಕನಿಕರಿಸು,
ಜನಾಂಗಗಳು ಅವರ ಮೇಲೆ ಆಳುವ ಹಾಗೆ
ನಿನ್ನ ಬಾಧ್ಯತೆಯನ್ನು ನಿಂದೆಗೆ ಒಪ್ಪಿಸ ಬೇಡ;
ಅವರ ದೇವರು ಎಲ್ಲಿ? ಎಂದು,
ಅವರು ಜನಗಳಲ್ಲಿ ಯಾಕೆ ಹೇಳ ಬೇಕು?

೧೮ ಆಗ ಯೆಹೋವನು ತನ್ನ ದೇಶಕ್ಕೋಸ್ಕರ ಆಸಕ್ತಿ ತೋ
ರಿಸಿ,
ತನ್ನ ಜನರನ್ನು ಕನಿಕರಿಸುವನು.
೧೯ ಹೌದು, ಯೆಹೋವನು ಉತ್ತರ ಕೊಟ್ಟು, ತನ್ನ ಜನರಿಗೆ ಹೇ
ಳುವದೇನಂದರೆ—
ಇಗೋ ನಾನು ನಿಮಗೆ ಧಾನ್ಯವನ್ನೂ,
ದ್ರಾಕ್ಷೆರಸವನ್ನೂ, ಎಣ್ಣೆಯನ್ನೂ,
ನಿಮಗೆ ಸಾಕಾಗುವದ್ದು ಕಳುಹಿಸಿ,
ನಿಮ್ಮನ್ನು ಇನ್ನು ಮೇಲೆ ಜನಾಂಗಗಳಲ್ಲಿ ನಿಂದಿತರಾಗಿ ಇಡುವದಿಲ್ಲ.
೨೦ ಆದರೆ ಉತ್ತರ ದಿಕ್ಕಿನವನನ್ನು ನಿಮಗೆ ದೂರ ಮಾಡಿ,
ಅವನನ್ನು ಒಣ ಭೂಮಿಗೂ ಅರಣ್ಯಕ್ಕೂ,
ಅವನ ಮುಂಭಾಗವನ್ನು ಪೂರ್ವದ ಸಮುದ್ರಕ್ಕೂ,
ಅವನ ಹಿಂಭಾಗವನ್ನು ಪಶ್ಚಿಮ ಸಮುದ್ರಕ್ಕೂ, ಓಡಿಸಿ ಬಿಡುವೆನು;
ಅವನ ದುರ್ವಾಸನೆಯು ಏರುವದು; ಅವನ ನಾತವು ಏರುವದು;
ಯಾಕಂದರೆ ದೊಡ್ಡವುಗಳನ್ನು ಮಾಡಿದ್ದಾನೆ.
೨೧ ದೇಶವೇ, ಭಯ ಪಡ ಬೇಡ, ಉಲ್ಲಾಸಿಸಿ, ಸಂತೋಷವಾಗಿರು;
ಯಾಕಂದರೆ ಯೆಹೋವನು ದೊಡ್ಡವುಗಳನ್ನು ಮಾಡುತ್ತಾನೆ.
೨೨ ಹೊಲದ ಮೃಗಗಳೇ, ಭಯ ಪಡ ಬೇಡಿರಿ;
ಯಾಕಂದರೆ ಅಡವಿಯ ಮೇವಿನ ಸ್ಥಳಗಳು ಮೊಳೆಯುತ್ತವೆ;
ಮರಗಳು ತಮ್ಮ ಫಲವನ್ನು ಧರಿಸಿ ಕೊಳ್ಳುತ್ತವೆ;
ಅಂಜೀರದ ಗಿಡವೂ ದ್ರಾಕ್ಷೆ ಬಳ್ಳಿಯೂ ತಮ್ಮ ಫಲವನ್ನು ಕೊ
ಡುತ್ತವೆ.
೨೩ ಚಿಯೋನಿನ ಮಕ್ಕಳೇ, ನಿಮ್ಮ ದೇವರಾದ ಯೆಹೋವನಲ್ಲಿ
ಉಲ್ಲಾಸಿಸಿ ಸಂತೋಷವಾಗಿರಿ;
ಯಾಕಂದರೆ ನಿಮಗೆ ಮುಂಗಾರಿಯನ್ನು ಸರಿಯಾಗಿ ಕೊಡು
ತ್ತಾನೆ;
ಹೌದು, ಮುಂಗಾರಿ ಹಿಂಗಾರಿ ಮಳೆಗಳನ್ನು
ಮುಂಚಿನ ಹಾಗೆ ನಿಮಗೆ ಸುರಿಸುತ್ತಾನೆ.
೨೪ ಕಣಗಳು ಧಾನ್ಯದಿಂದ ತುಂಬಾಗುವವು;
ತೊಟ್ಟಿಗಳು ಹೊಸ ದ್ರಾಕ್ಷೆರಸದಿಂದಲೂ, ಎಣ್ಣೆಯಿಂದಲೂ,
ತುಳುಕುವವು.
೨೫ ಮತ್ತು ನಾನು ನಿಮ್ಮಲ್ಲಿ ಕಳುಹಿಸಿದಂಥ,
ನನ್ನ ದೊಡ್ಡ ಸೈನ್ಯವಾದ ಹುಳುವೂ, ಮಿಡಿತೆಯೂ, ಕಲಭವೂ,
ಮಹಾ ಕೀಟಕವೂ,
ತಿಂದ ವರುಷಗಳಿಗೆ ನಿಮಗೆ ಬದಲಾಗಿ ಕೊಡುವೆನು.
೨೬ ಉಂಡೇ ಉಂಡು, ತೃಪ್ತಿ ಪಟ್ಟು,
ನಿಮ್ಮಲ್ಲಿ ಅದ್ಭುತವಾಗಿ ನಡಿಸಿದ ನಿಮ್ಮ ದೇವರಾದ ಯೆಹೋವ
ನ ಹೆಸರನ್ನು ಸ್ತುತಿಸುವಿರಿ;
ಹೌದು, ನನ್ನ ಜನರು ಎಂದೆಂದಿಗೂ ನಾಚಿಕೆ ಪಡರು.
೨೭ ನಾನು ಇಸ್ರಯೇಲಿನ ಮಧ್ಯದಲ್ಲಿ ಇದ್ದೇನೆಂದೂ,
ಮತ್ತೊಬ್ಬನಲ್ಲ, ನಾನೇ ನಿಮ್ಮ ದೇವರಾದ ಯೆಹೋವನಾಗಿ
ದ್ದೇನೆಂದೂ, ತಿಳಿದು ಕೊಳ್ಳುವಿರಿ;
ನನ್ನ ಜನರು ಎಂದೆಂದಿಗೂ ನಾಚಿಕೆ ಪಡರು.

೨೮ ಆ ಮೇಲೆ ಆಗುವದೇನಂದರೆ—
ಮಾಂಸವೆಲ್ಲಾದರ ಮೇಲೆ ನನ್ನ ಆತ್ಮನನ್ನು ಹೊಯ್ಯುವೆನು;
ಆಗ ನಿಮ್ಮ ಕುಮಾರರೂ ನಿಮ್ಮ ಕುಮಾರ್ತೆಗಳೂ ಪ್ರವಾದಿ
ಸುವರು;
ನಿಮ್ಮ ಮುದುಕರು ಕನಸುಗಳನ್ನು ಕಾಣುವರು;
ನಿಮ್ಮ ಯೌವ್ವನಸ್ಥರು ದರ್ಶನಗಳನ್ನು ನೋಡುವರು.
೨೯ ಮತ್ತು ದಾಸರ ಮೇಲೆಯೂ, ದಾಸಿಗಳ ಮೇಲೆಯೂ,
ಆ ದಿವಸಗಳಲ್ಲಿ ನನ್ನ ಆತ್ಮನನ್ನು ಹೊಯ್ಯುವೆನು.
೩೦ ಮತ್ತು ಆಕಾಶಗಳಲ್ಲಿಯೂ, ಭೂಮಿಯಲ್ಲಿಯೂ, ಲಕ್ಷಣಗ
ಳನ್ನೂ,
ರಕ್ತವನ್ನೂ ಬೆಂಕಿಯನ್ನೂ ಹೊಗೆ ಸ್ತಂಭಗಳನ್ನೂ ತೋರಿ
ಸುವೆನು.
೩೧ ಯೆಹೋವನ ದೊಡ್ಡ ಭಯಂಕರವಾದ ದಿವಸವು ಬರುವದಕ್ಕಿಂ
ತ ಮುಂಚೆ,
ಸೂರ್ಯನು ಕತ್ತಲೆಗೂ, ಚಂದ್ರನು ರಕ್ತಕ್ಕೂ, ಮಾರ್ಪಡುವವು.
೩೨ ಮತ್ತು ಆಗುವದೇನಂದರೆ—
ಯೆಹೋವನ ಹೆಸರನ್ನು ಕರೆಯುವವರೆಲ್ಲರು ತಪ್ಪಿಸಲ್ಪಡುವರು;
ಯಾಕಂದರೆ ಚಿಯೋನ್ ಪರ್ವತದಲ್ಲಿಯೂ, ಯೆರೂಸಲೇಮಿ
ನಲ್ಲಿಯೂ,
ಯೆಹೋವನು ಕರೆಯುವ ಉಳಿವಿನಲ್ಲಿಯೂ,
ಯೆಹೋವನು ಹೇಳಿದ ಪ್ರಕಾರ, ತಪ್ಪಿ ಹೋಗೋಣವಾಗುವದು.

## ೩. ಸಂಧಿ.

೧ ಯಾಕಂದರೆ, ಇಗೋ, ಆ ದಿವಸಗಳಲ್ಲಿಯೂ, ಆ ಕಾಲ
ದಲ್ಲಿಯೂ,
ನಾನು ಯೆಹೂದದ, ಯೆರೂಸಲೇಮಿನ, ಶೆರೆಯನ್ನು ತಿರುಗಿಸು
ವಾಗ,
೨ ನಾನು ಎಲ್ಲಾ ಜನಾಂಗಗಳನ್ನು ಕೂಡಿಸಿ,
ಯೆಹೋಷಾಫಾತನ ತಗ್ಗಿಗೆ ಅವರನ್ನು ಇಳಿಸಿ,
ನನ್ನ ಜನರೂ, ನನ್ನ ಬಾಧ್ಯತೆಯೂ, ಆಗಿರುವ ಇಸ್ರಯೇಲಿನ
ವಿಷಯ ಅವರ ಸಂಗಡ ವ್ಯಾಜ್ಯವಾಡುವೆನು;
ಅವರು ಅವರನ್ನು ಜನಾಂಗಗಳಲ್ಲಿ ಚದರಿಸಿ,
ನನ್ನ ದೇಶವನ್ನು ಪಾಲಿಟ್ಟು,
3 ನನ್ನ ಜನರಿಗೋಸ್ಕರ ಚೀಟು ಹಾಕಿ,
ಹುಡುಗನನ್ನು ಸೂಳೆಗಾಗಿ ಕೊಟ್ಟು,
ಹುಡುಗಿಯನ್ನು ದ್ರಾಕ್ಷೆರಸಕ್ಕಾಗಿ,
ಅವರು ಕುಡಿಯುವ ಹಾಗೆ, ಮಾರಿದ್ದಾರಲ್ಲ?
೪ ಮತ್ತು ತೂರೇ, ಚಿದೋನೇ, ಫಿಲಿಷ್ಟಿಯದ ಎಲ್ಲಾ ಪ್ರಾಂತ್ಯಗಳೇ,
ನೀವು ನನಗೆ ಏನು?
ನನಗೆ ಮುಯ್ಯಿಗೆ ಮುಯ್ಯಿ ಸಲ್ಲಿಸುವಿಕೋ?
ನೀವು ನನಗೆ ಸಲ್ಲಿಸಿದರೆ,
ಜಾಗ್ರತೆಯಾಗಿಯೂ, ತ್ವರೆಯಾಗಿಯೂ,
ಮುಯ್ಯಿಗೆ ಮುಯ್ಯಿ ನಿಮ್ಮ ತಲೆಯ ಮೇಲೆ ತರಿಸುವೆನು.
೫ ಯಾಕಂದರೆ ನೀವು ನನ್ನ ಬೆಳ್ಳಿಯನ್ನೂ ನನ್ನ ಭಂಗಾರವ
ನ್ನೂ ತೆಗೆದು ಕೊಂಡು,
ನನ್ನ ಬಲ್ಲೇ ರಮ್ಯವಾದವುಗಳನ್ನು ನಿಮ್ಮ ದೇವಸ್ಥಾನಗಳಿಗೆ
ತಕ್ಕೊಂಡು ಹೋಗಿದ್ದೀರಿ.
೬ ಯೆಹೂದದ ಮಕ್ಕಳನ್ನೂ, ಯೆರೂಸಲೇಮಿನ ಮಕ್ಕಳನ್ನೂ,
ಅವರನ್ನು ತಮ್ಮ ಪ್ರಾಂತ್ಯಗಳಿಂದ ದೂರ ಮಾಡುವ ಹಾಗೆ,
ಗ್ರೀಕರ ಕುಮಾರರಿಗೆ ಮಾರಿದ್ದೀರಿ.
೭ ಇಗೋ, ಎಲ್ಲಿ ಅವರನ್ನು ಮಾರಿದಿರೋ,
ಆ ಸ್ಥಳದಿಂದ ನಾನು ಅವರನ್ನು ಎಬ್ಬಿಸಿ,
ಮುಯ್ಯಿಗೆ ಮುಯ್ಯಿ ನಿಮ್ಮ ತಲೆಯ ಮೇಲೆ ತರಿಸುವೆನು.
೮ ಮತ್ತು ನಿಮ್ಮ ಕುಮಾರರನ್ನೂ ನಿಮ್ಮ ಕುಮಾರ್ತೆಗಳನ್ನೂ
ಯೆಹೂದದ ಮಕ್ಕಳ ಕೈಯಲ್ಲಿ ಮಾರುವೆನು;
ಇವರು ಅವರನ್ನು ದೂರ ಜನವಾದ ಸಬೀಯರಿಗೆ ಮಾರುವರು;
ಯಾಕಂದರೆ ಯೆಹೋವನು ಅದನ್ನು ಹೇಳಿದ್ದಾನೆ.

೯ ಜನಾಂಗಗಳಲ್ಲಿ ಇದನ್ನು ಸಾರಿರಿ;
ಯುದ್ಧವನ್ನು ಸಿದ್ಧ ಮಾಡಿರಿ, ಶೂರರನ್ನು ಎಬ್ಬಿಸಿರಿ;
ಯುದ್ಧಸ್ಥರೆಲ್ಲರು ಸಮೀಪಿಸಿ, ಏರಿ ಬರಲಿ;
೧೦ ನಿಮ್ಮ ನೇಗಿಲುಗಳ ಗುಳಗಳನ್ನು ಕತ್ತಿಗಳಾಗಿಯೂ,
ನಿಮ್ಮ ಕುಡುಗೋಲುಗಳನ್ನು ಈಟಿಗಳಾಗಿಯೂ, ಬಡಿಯಿರಿ;
ಬಲಹೀನನು—ನಾನು ಶೂರನೆಂದು ಹೇಳಲಿ.
೧೧ ತ್ವರೆಕೆ ಪಟ್ಟು, ಬನ್ನಿ;
ಸುತ್ತಲಿನ ಎಲ್ಲಾ ಜನಾಂಗಗಳೇ, ಕೂಡಿ ಕೊಳ್ಳಿರಿ;
ಯೆಹೋವನೇ, ನಿನ್ನ ಶೂರರನ್ನು ಅಲ್ಲಿ ಇಳಿಯ ಮಾಡು.
೧೨ ಜನಾಂಗಗಳು ಎಬ್ಬಿಸಲ್ಪಟ್ಟು ಯೆಹೋಷಾಫಾತನ ತಗ್ಗಿಗೆ ಏರಲಿ;
ಯಾಕಂದರೆ ಸುತ್ತಲಿನ ಎಲ್ಲಾ ಜನಾಂಗಗಳಿಗೆ ನ್ಯಾಯ ತೀರಿ
ಸುವದಕ್ಕೆ ಅಲ್ಲಿ ಕೂತು ಕೊಳ್ಳುವೆನು.
೧೩ ಕುಡುಗೋಲನ್ನು ಹಾಕಿರಿ, ಯಾಕಂದರೆ ಬೆಳೆ ಪಕ್ವವಾಯಿತು;
ಬಂದು ಇಳಿಯಿರಿ;
ಯಾಕಂದರೆ ದ್ರಾಕ್ಷೆಯ ಆಲೆ ತುಂಬಿ ಅದೆ;
ತೊಟ್ಟಿಗಳು ತುಳುಕುತ್ತವೆ;
ಯಾಕಂದರೆ ಅವರ ಕೆಟ್ಟತನವು ಬಹಳವಾಗಿದೆ.
೧೪ ಗುಂಪುಗಳು! ಗುಂಪುಗಳು!
ನಿರ್ಣಯದ ತಗ್ಗಿನಲ್ಲಿಯೇ;
ಯಾಕಂದರೆ ಯೆಹೋವನ ದಿವಸವು,
ನಿರ್ಣಯದ ತಗ್ಗಿನಲ್ಲಿ ಸಮೀಪವಾಗಿದೆ.
೧೫ ಸೂರ್ಯ ಚಂದ್ರಗಳು ಕಪ್ಪಾಗುವವು;
ನಕ್ಷತ್ರಗಳು ತಮ್ಮ ಪ್ರಕಾಶವನ್ನು ಮರೆ ಮಾಡುವವು.
೧೬ ಮತ್ತು ಯೆಹೋವನು ಚಿಯೋನಿನೊಳಗಿಂದ ಗರ್ಜಿಸಿ,
ಯೆರೂಸಲೇಮಿನೊಳಗಿಂದ ತನ್ನ ಶಬ್ದವನ್ನು ಕೊಡುವನು;
ಆದರೆ ಯೆಹೋವನು ತನ್ನ ಜನರಿಗೆ ಆಶ್ರಯವೂ,
ಇಸ್ರಯೇಲನ ಮಕ್ಕಳಿಗೆ ತ್ರಾಣ ಸ್ಥಾನವೂ, ಆಗಿರುವನು.
೧೭ ಹೀಗೆ, ನನ್ನ ಪರಿಶುದ್ಧ ಪರ್ವತವಾದ ಚಿಯೋನಿನಲ್ಲಿ ವಾಸಿ
ಸುವ
ನಿಮ್ಮ ದೇವರಾಗಿರುವ ಯೆಹೋವನು ನಾನೇ
ಎಂದು ತಿಳಿದು ಕೊಳ್ಳುವಿರಿ;
ಆಗ ಯೆರೂಸಲೇಮು ಪರಿಶುದ್ಧವಾಗಿರುವದು;
ಅನ್ಯರು ಇನ್ನು ಅದರಲ್ಲಿ ಹಾದು ಹೋಗರು.

೧೮ ಆ ದಿವಸದಲ್ಲಿ ಆಗುವದೇನಂದರೆ—
ಬೆಟ್ಟಗಳು ಹೊಸ ದ್ರಾಕ್ಷೆರಸವನ್ನು ಸುರಿಯುವವು;
ಗುಡ್ಡಗಳು ಹಾಲಿನಿಂದ ಹರಿಯುವವು;
ಮತ್ತು ಯೆಹೂದದ ಹಳ್ಳಗಳೆಲ್ಲಾ ನೀರಿನಿಂದ ಹರಿಯು
ವವು;
ಮತ್ತು ಯೆಹೋವನ ಮನೆಯೊಳಗಿಂದ ಬುಗ್ಗೆ ಹೊರಟು,
೧೯ ಶಿಟ್ಟೀಮಿನ ತಗ್ಗಿಗೆ ಜಲ ಕೊಡುವದು.
ಐಗುಪ್ತವು ಹಾಳಾಗುವದು;
ಏದೋಮು ಹಾಳಾದ ಅರಣ್ಯವಾಗುವದು;
ಅವರು ಯೆಹೂದನ ಮಕ್ಕಳಿಗೆ ಬಲಾತ್ಕಾರ ಮಾಡಿ,
ತಮ್ಮ ದೇಶದಲ್ಲಿ ಅಪರಾಧವಿಲ್ಲದ ರಕ್ತವನ್ನು ಚೆಲ್ಲಿದ್ದರಿಂ
ದಲೇ.
೨೦ ಆದರೆ ಯೆಹೂದವು ಎಂದೆಂದಿಗೂ,
ಯೆರೂಸಲೇಮು ಸಹಾ ತಲತಲಾಂತರಕ್ಕೂ, ನಿಲ್ಲುವದು.
೨೧ ಯಾಕಂದರೆ, ನಾನು ಕ್ಷಮಿಸದೆ ಇದ್ದ
ಅವರ ರಕ್ತಾಪರಾಧವನ್ನು ಕ್ಷಮಿಸುವೆನು,
ಯಾಕಂದರೆ, ಯೆಹೋವನು ಚಿಯೋನಿನಲ್ಲಿ ವಾಸವಾಗಿರುತ್ತಾನೆ.

# AMOS.

## ಆಮೋಸನು.

### ೧. ಸಂಧಿ.

೧ ತಿಕೋವದ ಕುರುಬರಲ್ಲಿ ಇದ್ದ ಆಮೋಸನು, ಯೆಹೂದದ
ಅರಸನಾದ ಉಜ್ಜೀಯನ ದಿವಸಗಳಲ್ಲಿಯೂ, ಇಸ್ರಯೇಲಿನ ಅ
ರಸನಾದ ಯೋವಾಷನ ಮಗನಾದ ಯೆರೊಬಾಮನ ದಿವಸಗಳ
ಲ್ಲಿಯೂ, ಭೂಕಂಪಕ್ಕೆ ಎರಡು ವರುಷಗಳ ಮುಂಚೆ, ಇಸ್ರಯೇ
ಲಿನ ವಿಷಯವಾಗಿ ನೋಡಿದ ವಾಕ್ಯಗಳು.

೨ ಅವನು ಹೇಳಿದ್ದೇನಂದರೆ—
ಯೆಹೋವನು ಚಿಯೋನಿನೊಳಗಿಂದ ಗರ್ಜಿಸಿ,
ಯೆರೂಸಲೇಮಿನೊಳಗಿಂದ ತನ್ನ ಶಬ್ದವನ್ನು ಕೊಡುತ್ತಾನೆ;
ಕುರುಬರ ಮೇವಿನ ಸ್ಥಳಗಳು ದುಃಖ ಪಡುತ್ತವೆ,
ಕಾರ್ಮೆಲಿನ ಕೊನೆ ಒಣಗಿ ಹೋಗುತ್ತದೆ.

3 ಯೆಹೋವನು ಹೇಗೆ ಹೇಳುತ್ತಾನೆ—
ದಮಸ್ಕದ ಮೂರು ಅಪರಾಧಗಳ ನಿಮಿತ್ತವೂ,
ಹೌದು, ನಾಲ್ಕರ ನಿಮಿತ್ತವೂ,
ನಾನು ಅದರ ಕಡೆಯಿಂದ ತಿರುಗಿಸಿ ಬಿಡೆನು.
ಯಾಕಂದರೆ ಅವರು ಗಿಲ್ಯಾದನ್ನು ಕಬ್ಬಿಣದ ಅಯುಧಗಳಿಂದ
ಬಡೆದರು.
೪ ಆದರೆ ನಾನು ಹಜಯೇಲನ ಮನೆಯಲ್ಲಿ ಬೆಂಕಿಯನ್ನು ಕಳು
ಹಿಸುವೆನು;
ಅದು ಬೆನ್ಹದಾದನ ಅರಮನೆಗಳನ್ನು ತಿಂದು ಬಿಡುವದು.
೫ ಮತ್ತು ದಮಸ್ಕದ ಅಡ್ಡದಂಡೆಯನ್ನು ಮುರಿಯುವೆನು;
ಆವೆನಿನ ತಗ್ಗಿನಿಂದ ನಿವಾಸಿಯನ್ನೂ,
ಏದೆನಿನ ಮನೆಯಿಂದ ಮುದ್ರೆ ಕೋಲು ಹಿಡಿಯುವವನನ್ನೂ
ಕಡಿದು ಬಿಡುವೆನು:
ಅರಾಮಿನ ಜನರು ಶೆರೆಯಾಗಿ ಕೀರಿಗೆ ಹೋಗುವರೆಂದು,
ಯೆಹೋವನು ಹೇಳುತ್ತಾನೆ.

೬ ಯೆಹೋವನು ಹೀಗೆ ಹೇಳುತ್ತಾನೆ—
ಗಾಜದ ಮೂರು ಅಪರಾಧಗಳ ನಿಮಿತ್ತವೂ,
ಹೌದು, ನಾಲ್ಕರ ನಿಮಿತ್ತವೂ,
ನಾನು ಅದರ ಕಡೆಯಿಂದ ತಿರುಗಿಸಿ ಬಿಡೆನು;
ಯಾಕಂದರೆ, ಅವರನ್ನು ಏದೋಮಿಗೆ ಒಪ್ಪಿಸುವದಕ್ಕೆ,
ಅವರನ್ನು ಪೂರ್ಣ ಶೆರೆಯಾಗಿ ವೈದರು.
೭ ಆದರೆ ನಾನು ಗಾಜದ ಗೋಡೆಯ ಮೇಲೆ ಬೆಂಕಿಯನ್ನು ಕ
ಳುಹಿಸುವೆನು;
ಅದು ಅವರ ಅರಮನೆಗಳನ್ನು ತಿಂದು ಬಿಡುವದು.
೮ ಮತ್ತು ಅಶ್ದೋದಿನಿಂದ ನಿವಾಸಿಯನ್ನೂ,
ಅಷ್ಕಲೋನಿನಿಂದ ಮುದ್ರೆ ಕೋಲು ಹಿಡಿಯುವವನನ್ನೂ ಕಡಿ
ದು ಬಿಟ್ಟು,
ಎಕ್ರೋನಿಗೆ ವಿರೋಧವಾಗಿ ನನ್ನ ಕೈಯನ್ನು ತಿರುಗಿಸು
ವೆನು;
ಆಗ ಫಿಲಿಷ್ಟಿಯದ ಉಳಿದವು ನಾಶವಾಗುವದೆಂದು,
ಕರ್ತನಾದ ಯೆಹೋವನು ಹೇಳುತ್ತಾನೆ.

೯ ಯೆಹೋವನು ಹೀಗೆ ಹೇಳುತ್ತಾನೆ—
ತೂರಿನ ಮೂರು ಅಪರಾಧಗಳ ನಿಮಿತ್ತವೂ,
ಹೌದು, ನಾಲ್ಕರ ನಿಮಿತ್ತವೂ,
ನಾನು ಅದರ ಕಡೆಯಿಂದ ತಿರುಗಿಸಿ ಬಿಡೆನು;
ಯಾಕಂದರೆ ಅವರು ಸಹೋದರರ ಒಡಂಬಡಿಕೆಯನ್ನು ಜ್ಞಾಪ
ಕ ಮಾಡದೆ,
ಪೂರ್ಣ ಶೆರೆಯನ್ನು ಏದೋಮಿಗೆ ಒಪ್ಪಿಸಿ ಬಿಟ್ಟರು.
೧೦ ಆದರೆ ನಾನು ತೂರಿನ ಗೋಡೆಯ ಮೇಲೆ ಬೆಂಕಿಯನ್ನು ಕಳು
ಹಿಸುವೆನು;
ಅದು ಅದರ ಅರಮನೆಗಳನ್ನು ತಿಂದು ಬಿಡುವದು.

೧೧ ಯೆಹೋವನು ಹೀಗೆ ಹೇಳುತ್ತಾನೆ—
ಏದೋಮಿನ ಮೂರು ಅಪರಾಧಗಳ ನಿಮಿತ್ತವೂ,
ಹೌದು, ನಾಲ್ಕರ ನಿಮಿತ್ತವೂ,
ನಾನು ಅದರ ಕಡೆಯಿಂದ ತಿರುಗಿಸಿ ಬಿಡೆನು;
ಯಾಕಂದರೆ ಅವನು ತನ್ನ ಸಹೋದರನನ್ನು ಕತ್ತಿಯಿಂದ ಹಿಂ
ದಟ್ಟಿ,
ತನ್ನ ಕನಿಕರವನ್ನು ಅಣಗಿಸಿ ಬಿಟ್ಟನು,
ಹೌದು, ಅವನ ಕೋಪವು ಯಾವಾಗಲೂ ಹರಕೊಂಡಿತು,
ಅವನ ಕೌದ್ರವನ್ನು ನಿತ್ಯವಾಗಿ ಇಟ್ಟು ಕೊಂಡನು.
೧೨ ಆದರೆ ನಾನು ತೇಮಾನಿನಲ್ಲಿ ಬೆಂಕಿಯನ್ನು ಕಳುಹಿ
ಸುವೆನು;
ಅದು ಬೊಚ್ರದ ಅರಮನೆಗಳನ್ನು ತಿಂದು ಬಿಡುವದು.

೧3 ಯೆಹೋವನು ಹೀಗೆ ಹೇಳುತ್ತಾನೆ—
ಅಮ್ಮೋನಿನ ಮಕ್ಕಳ ಮೂರು ಅಪರಾಧಗಳ ನಿಮಿತ್ತವೂ,
ಹೌದು, ನಾಲ್ಕರ ನಿಮಿತ್ತವೂ,
ನಾನು ಅದರ ಕಡೆಯಿಂದ ತಿರುಗಿಸಿ ಬಿಡೆನು;
ಯಾಕಂದರೆ, ತಮ್ಮ ಮೇರೆಯನ್ನು ವಿಸ್ತಾರ ಮಾಡು
ವದಕ್ಕೆ,
ಗಿಲ್ಯಾದಿನ ಗರ್ಭಿಣಿಗಳನ್ನು ಶೀಳಿದ್ದಾರೆ.
೧೪ ಆದರೆ ನಾನು ರಬ್ಬದ ಗೋಡೆಯಲ್ಲಿ ಬೆಂಕಿಯನ್ನು ಹಚ್ಚು
ವೆನು;
ಅದು ಯುದ್ಧದ ದಿವಸದಲ್ಲಿ ಆರ್ಭಟದ ಸಂಗಡಲೂ,
ಬಿರುಗಾಳಿಯ ದಿವಸದಲ್ಲಿ ಸುಳಿಗಾಳಿಯ ಸಂಗಡಲೂ,
ಅದರ ಅರಮನೆಗಳನ್ನು ತಿಂದು ಬಿಡುವದು.
೧೫ ಅವರ ಅರಸನು, ತಾನು ತನ್ನ ಪ್ರಭುಗಳು ಸಹಿತವಾಗಿ,
ಶೆರೆಗೆ ಹೋಗುವನೆಂದು,
ಯೆಹೋವನು ಹೇಳುತ್ತಾನೆ.

## ೨. ಸಂಧಿ.

೧ ಯೆಹೋವನು ಹೀಗೆ ಹೇಳುತ್ತಾನೆ—
ಮೊವಾಬಿನ ಮೂರು ಅಪರಾಧಗಳ ನಿಮಿತ್ತವೂ,
ಹೌದು, ನಾಲ್ಕರ ನಿಮಿತ್ತವೂ,
ನಾನು ಅದರ ಕಡೆಯಿಂದ ತಿರುಗಿಸಿ ಬಿಡೆನು;
ಯಾಕಂದರೆ, ಅವನು ಏದೋಮಿನ ಅರಸನ ಎಲುಬುಗಳನ್ನು
ಸುಟ್ಟು ಬೂದಿ ಮಾಡಿದ್ದಾನೆ.
೨ ಆದಕೆ ನಾನು ಮೊವಾಬಿನ ಮೇಲೆ ಬೆಂಕಿಯನ್ನು ಕಳುಹಿಸುವೆನು;
ಅದು ಕಿರ್ಯೋಥಿನ ಅರಮನೆಗಳನ್ನು ತಿಂದು ಬಿಡುವದು;
ಮೊವಾಬು ಗುಬಾರಿನ ಸಂಗಡಲೂ,
ಅರ್ಭಟದ ಸಂಗಡಲೂ, ತುತೂರಿಯ ಧ್ವನಿಯ ಸಂಗಡಲೂ,
ಸಾಯುವದು.
೩ ಇದಲ್ಲದೆ, ನ್ಯಾಯಾಧಿಪತಿಯನ್ನು ಅದರೊಳಗಿಂದ ಕಡಿದು
ಬಿಡುವೆನು;
ಮತ್ತು ಅವನ ಸಂಗಡ ಅದರ ಪ್ರಭುಗಳನ್ನೆಲ್ಲಾ ಕೊಲ್ಲುವೆ
ನೆಂದು,
ಯೆಹೋವನು ಹೇಳುತ್ತಾನೆ.

೪ ಯೆಹೋವನು ಹೀಗೆ ಹೇಳುತ್ತಾನೆ—
ಯೆಹೂದದ ಮೂರು ಅಪರಾಧಗಳ ನಿಮಿತ್ತವೂ,
ಹೌದು, ನಾಲ್ಕರ ನಿಮಿತ್ತವೂ,
ನಾನು ಅದರ ಕಡೆಯಿಂದ ತಿರುಗಿಸಿ ಬಿಡೆನು;
ಯಾಕಂದರೆ ಅವರು ಯೆಹೋವನ ನ್ಯಾಯಪ್ರಮಾಣವನ್ನು
ಅಸಡ್ಡೆ ಮಾಡಿ,
ಅವನ ನೇಮಕಗಳನ್ನು ಕೈಕೊಳ್ಳಲಿಲ್ಲ;
ಮತ್ತು ಅವರ ಪಿತೃಗಳು ಹಿಂಬಾಲಿಸಿದ ಅವರ ಸುಳ್ಳುಗಳು
ಅವರನ್ನು ತಪ್ಪು ಮಾಡಿ ಅವೆ.
೫ ಆದಕೆ ನಾನು ಯೆಹೂದದ ಮೇಲೆ ಬೆಂಕಿಯನ್ನು ಕಳುಹಿಸು
ವೆನು;
ಅದು ಯೆರೂಸಲೇಮಿನ ಅರಮನೆಗಳನ್ನು ತಿಂದು ಬಿಡುವದು.

೬ ಯೆಹೋವನು ಹೀಗೆ ಹೇಳುತ್ತಾನೆ—
ಇಸ್ರಯೇಲಿನ ಮೂರು ಅಪರಾಧಗಳ ನಿಮಿತವೂ,
ಹೌದು, ನಾಲ್ಕರ ನಿಮಿತ್ತವೂ,
ನಾನು ಅದರ ಕಡೆಯಿಂದ ತಿರುಗಿಸಿ ಬಿಡೆನು;
ಯಾಕಂದರೆ ಅವರು ನೀತಿವಂತರನ್ನು ಬೆಳ್ಳಿಗೂ,
ದರಿದ್ರನನ್ನು ಕೆರಗಳ ಜೋಡಿಗೂ ಮಾರಿದರು.
೭ ಅವರು ಬಡವರ ತಲೆಯ ಮೇಲಿರುವ ಭೂಮಿಯ ಧೂಳನ್ನು
ಆಶಿಸಿ,
ದೀನರ ಮಾರ್ಗವನ್ನು ತಪ್ಪಿಸುತ್ತಾರೆ;
ಮತ್ತು ನನ್ನ ಪರಿಶುದ್ಧ ಹೆಸರನ್ನು ಅಪವಿತ್ರ ಮಾಡುವದಕ್ಕೆ
ಮಗನೂ ತಂದೆಯೂ ಒಬ್ಬನೇ ಯೌವ್ವನಸ್ಥಳ ಬಳಿಗೆ ಹೋ
ಗುತ್ತಾರೆ.
೮ ಮತ್ತು ಅಡವು ಇಟ್ಟ ವಸ್ತ್ರಗಳ ಮೇ
ಲೆಲ್ಲಾ ಬಲಿಪೀಠಗಳ ಬಳಿಯಲ್ಲಿ ಮಲಗುತ್ತಾರೆ;
ಮತ್ತು ಜುಲ್ಮಾನೆ ಹಿಡಿದವರ ದ್ರಾಕ್ಷೆರಸವನ್ನು
ತಮ್ಮ ದೇವರುಗಳ ಮನೆಯಲ್ಲಿ ಕುಡಿಯುತ್ತಾರೆ.
೯ ಆದಾಗ್ಯೂ ನಾನು ಅಮೋರ್ಯನನ್ನು ಅವರ ಮುಂದೆ ನಾಶ
ಮಾಡಿದೆನು;
ಅವರ ಎತ್ತರವು ದೇವದಾರುಗಳ ಎತ್ತರದ ಹಾಗೆಯೂ,
ವೃಕ್ಷರಾಜಗಳಂತೆ ಬಲವಾಗಿಯೂ, ಇದ್ದನು;
ಆದರೂ ನಾನು ಮೇಲೆ ಅವನ ಫಲವನ್ನೂ,
ಕೆಳಗೆ ಅವನ ಬೇರುಗಳನ್ನೂ
ನಾಶ ಮಾಡಿದೆನು.
೧೦ ಇದಲ್ಲದೆ ನಾನೇ ನಿಮ್ಮನ್ನು ಐಗುಪ್ತ ದೇಶದೊಳಗಿಂದ ಏರ
ಮಾಡಿ,
ನೀವು ಅಮೋರ್ಯನ ದೇಶವನ್ನು ಸ್ವತಂತ್ರಿಸಿ ಕೊಳ್ಳುವ ಹಾಗೆ,
ನಿಮ್ಮನ್ನು ನಾಲ್ವತ್ತು ವರುಷ ಅರಣ್ಯದಲ್ಲಿ ನಡಿಸಿದೆನು.
೧೧ ಮತ್ತು ನಿಮ್ಮ ಕುಮಾರರಲ್ಲಿ ಪ್ರವಾದಿಗಳನ್ನೂ,
ನಿಮ್ಮ ಯವ್ವನಸ್ಥರಲ್ಲಿ ನಜರೀಯರನ್ನೂ, ಎಬ್ಬಿಸಿದೆನು;
ಇದು ಹೌದಲ್ಲವೋ? ಇಸ್ರಯೇಲಿನ ಮಕ್ಕಳೇ,
ಎಂದು ಯೆಹೋವನು ಅನ್ನುತ್ತಾನೆ.
೧೨ ಆದರೆ ನೀವು ನಜರೀಯರಿಗೆ ದ್ರಾಕ್ಷೆರಸವನ್ನು ಕುಡಿಯ ಕೊಟ್ಟಿರಿ;
ಮತ್ತು ಪ್ರವಾದಿಗಳಿಗೆ—ಪ್ರವಾದಿಸ ಬೇಡಿರೆಂದು, ಅಜ್ಞಾಪಿಸಿದಿರಿ.
೧೩ ಇಗೋ ಸೂಡು ತುಂಬಿದ ಭಂಡಿ ಒತ್ತುವ ಪ್ರಕಾರ
ನಾನು ನಿಮ್ಮನ್ನು ಕೆಳಗೆ ಒತ್ತುವೆನು.
೧೪ ಆಗ ತ್ವರೆಯಾಗಿರುವವನಿಗೆ ಆಶ್ರಯವು ಇಲ್ಲದೆ ಹೋಗುವದು;
ಬಲಿಷ್ಠನು ತನ್ನ ತ್ರಾಣವನ್ನು ಘಟ್ಟಿ ಮಾಡಿ ಕೊಳ್ಳನು.
೧೫ ಬಿಲ್ಲು ಹಿಡಿಯುವವನು ನಿಲ್ಲನು;
ಕಾಲಬೇಗನು ತಪ್ಪಿಸಿ ಕೊಳ್ಳನು;
ಕುದುರೆಯ ಮೇಲೆ ಸವಾರಿ ಮಾಡುವವನು ಸಹ ತನ್ನ ಪ್ರಾಣ
ವನ್ನು ತಪ್ಪಿಸಿ ಕೊಳ್ಳನು.
೧೬ ಶೂರರಲ್ಲಿ ಘಟ್ಟಿ ಹೃದಯವುಳ್ಳವನು
ಆ ದಿವಸದಲ್ಲಿ ಬತ್ತಲೆಯಾಗಿ ಓಡಿ ಹೋಗುವನೆಂದು,
ಯೆಹೋವನು ಅನ್ನುತ್ತಾನೆ.

## ೩. ಸಂಧಿ.

೧ ಇಸ್ರಯೇಲಿನ ಮಕ್ಕಳೇ, ಯೆಹೋವನು ನಿಮಗೆ ವಿರೋಧ
ವಾಗಿ ಹೇಳುವ ವಾಕ್ಯವನ್ನು ಕೇಳಿರಿ. ನಾನು ಐಗುಪ್ತ ದೇಶದೊ
ಳಗಿಂದ ಏರಿ ಬರ ಮಾಡಿದ ಸಮಸ್ತ ಕುಟುಂಬಕ್ಕೆ ವಿರೋಧವಾಗಿ
ಹೇಳ ತಕ್ಕದ್ದೇನಂದರೆ—

೨ ಭೂಮಿಯ ಎಲ್ಲಾ ಕುಟುಂಬಗಳಲ್ಲಿ
ನಿಮ್ಮನ್ನು ಮಾತ್ರವೇ ತಿಳಿದಿದ್ದೇನೆ;
ಆದದರಿಂದ ನಿಮ್ಮ ಅಕ್ರಮಗಳೆಲ್ಲಾ ನಿಮ್ಮ ಮೇಲೆ ವಿಚಾರಿಸುವೆನು;
೩ ಒಪ್ಪಿಗೆ ಇಲ್ಲದಿದ್ದರೆ,
ಇಬ್ಬರು ಕೂಡಾ ನಡಿಯುವರೋ?
೪ ಕೊಳ್ಳೆ ಇಲ್ಲದಿದ್ದರೆ,
ಸಿಂಹವು ಅಡವಿಯಲ್ಲಿ ಗರ್ಜಿಸುವದೋ?
ಏನಾದರೂ ಹಿಡಿಯದಿದ್ದರೆ,
ಎಳೆ ಸಿಂಹವು ಗವಿಯೊಳಗಿಂದ ಶಬ್ದ ಕೊಡುವದೋ?



೫ ಅದಕ್ಕೆ ಬೋನು ಇಲ್ಲದಿದ್ದರೆ,
ಪಕ್ಷಿಯು ಭೂಮಿಯ ಮೇಲೆ ಉರ್ಲಿನಲ್ಲಿ ಬೀಳುವದೋ?
ಏನಾದರೂ ಹಿಡಿಯದಿದ್ದರೆ,
ಬೋನು ಭೂಮಿಯ ಮೇಲಿನಿಂದ ಏರಿ ಬರುವದೋ?
೬ ಪಟ್ಟಣದಲ್ಲಿ ತುತೂರಿಯು ಊದಲ್ಪಡಲಾಗಿ
ಜನರು ಹೆದರುವದಿಲ್ಲವೋ?
ಪಟ್ಟಣದಲ್ಲಿ ಕೇಡು ಇರಲಾಗಿ,
ಯೆಹೋವನು ಅದನ್ನು ಮಾಡದೆ ಇರುವನೋ?
೭ ನಿಶ್ಚಯವಾಗಿ ತನ್ನ ಸೇವಕರಾದ ಪ್ರವಾದಿಗಳಿಗೆ
ತನ್ನ ಮರ್ಮವನ್ನು ಪ್ರಕಟಿ ಮಾಡದೆ,
ಕರ್ತನಾದ ಯೆಹೋವನು ಯಾವದನ್ನಾದರೂ ಮಾಡುವದಿಲ್ಲ.
೮ ಸಿಂಹವು ಗರ್ಜಿಸಿತು; ಭಯಪಡದವರ್ಯಾರು?
ಕರ್ತನಾದ ಯೆಹೋವನು ಮಾತಾಡಿದ್ದಾನೆ;
ಪ್ರವಾದಿಸದವರ್ಯಾರು?

೯ ಅಶ್ದೋದಿನ ಅರಮನೆಗಳಲ್ಲಿಯೂ,
ಐಗುಪ್ತ ದೇಶದ ಅರಮನೆಗಳಲ್ಲಿಯೂ,
ಹೀಗೆ ಸಾರಿ ಹೇಳಿರಿ—
ಸಮಾರ್ಯದ ಬೆಟ್ಟಗಳ ಮೇಲೆ ಕೂಡಿ ಕೊಂಡು,
ಅದರ ಮಧ್ಯದಲ್ಲಿರುವ ದೊಡ್ಡ ಗುಬಾರುಗಳನ್ನೂ,
ಅದರ ಮಧ್ಯದಲ್ಲಿರುವ ಬಲಾತ್ಕಾರಗಳನ್ನೂ, ನೋಡಿರಿ.
೧೦ ಯಾಕಂದರೆ, ಸರಿಯಾದದ್ದನ್ನು ಮಾಡುವದಕ್ಕೆ
ಅವರಿಗೆ ತಿಳಿಯುವದಿಲ್ಲವೆಂದು
ಯೆಹೋವನು ಅನ್ನುತ್ತಾನೆ;
ಅವರು ತಮ್ಮ ಅರಮನೆಗಳಲ್ಲಿ
ಬಲಾತ್ಕಾರವನ್ನೂ ಸೂರೆಯನ್ನೂ ನಿಕ್ಷೇಪವಾಗಿ ಇಡುತ್ತಾರೆ.
೧೧ ಆದದರಿಂದ ಕರ್ತನಾದ ಯೆಹೋವನು ಹೇಳುವದೇನಂದರೆ—
ದೇಶದ ಸುತ್ತಲಾಗಿಯೇ, ವೈರಿ ಇರುವನು;
ಅವನು ನಿನ್ನ ಬಲವನ್ನು ನಿನ್ನಿಂದ ಇಳಿಸುವನು;
ನಿನ್ನ ಅರಮನೆಗಳು ಕೊಳ್ಳೆಯಾಗುವವು.
೧೨ ಯೆಹೋವನು ಹೇಳುವದೇನಂದರೆ—
ಕುರುಬರು ಸಿಂಹದ ಬಾಯಿಯೊಳಗಿಂದ
ಎರಡು ಕಾಲುಗಳನ್ನಾಗಲಿ, ಕಿವಿಯ ತುಂಡನ್ನಾಗಲಿ,
ತಪ್ಪಿಸುವ ಹಾಗೆಯೇ,
ಸಮಾರ್ಯದಲ್ಲಿ ಮಂಚದ ಮೂಲೆಯಲ್ಲಿಯೂ,
ದಮಸ್ಕದ ವಸ್ತ್ರದಲ್ಲಿ ಹಾಸಿಗೆಯ ಮೇಲೆಯೂ,
ಕೂತು ಕೊಳ್ಳುವ ಇಸ್ರಯೇಲನ ಮಕ್ಕಳು ತಪ್ಪಿಸಲ್ಪಡುವರು.

೧೩ ಸೈನ್ಯಗಳ ದೇವರಾಗಿರುವ ಕರ್ತನಾದ ಯೆಹೋವನು
ಅನ್ನುವದೇನಂದರೆ—
ಕೇಳಿ, ಯಾಕೋಬನ ಮನೆಯಲ್ಲಿ ಸಾಕ್ಷಿ ಕೊಡಿರಿ.
೧೪ ಏನಂದರೆ—ನಾನು ಇಸ್ರಯೇಲಿನ ಅಪರಾಧಗಳನ್ನು
ಅದರ ಮೇಲೆ ವಿಚಾರಿಸುವ ದಿವಸದಲ್ಲಿ
ಬೇತೇಲಿನ ಬಲಿಪೀಠಗಳನ್ನು ವಿಚಾರಿಸುವೆನು;
ಬಲಿಪೀಠದ ಕೊಂಬುಗಳು ಕಡಿಯಲ್ಪಟ್ಟು, ನೆಲಕ್ಕೆ ಬೀಳುವವು.
೧೫ ಮತ್ತು ಹೇಳಿಕಾಲದ ಮನೆಯನ್ನು
ಬೇಸಿಗೆಕಾಲದ ಮನೆಯ ಸಂಗಡ ಬಡಿಯುವೆನು;
ಜಂತದ ಮನೆಗಳು ನಾಶವಾಗುವವು;
ದೊಡ್ಡ ಮನೆಗಳು ಮುಗಿದು ಹೋಗುವವೆಂದು,
ಯೆಹೋವನು ಅನ್ನುತ್ತಾನೆ.

## ೪. ಸಂಧಿ.

೧ ಸಮಾರ್ಯದ ಬೆಟ್ಟದಲ್ಲಿರುವ ಬಾಶಾನಿನ ಆಕಳುಗಳೇ!
ಬಡವರನ್ನು ಬಲಾತ್ಕಾರ ಮಾಡಿ,
ದರಿದ್ರರನ್ನು ತಿಪ್ಪಲು ಪಡಿಸುವವಕೇ!
ತಮ್ಮ ಯಜಮಾನರಿಗೆ—ನಾವು ಕುಡಿಯುವ ಹಾಗೆ ತನ್ನಿ,
ಎಂದನ್ನುವವರೇ!
ಈ ವಾಕ್ಯವನ್ನು ಕೇಳಿರಿ.
೨ ಕರ್ತನಾದ ಯೆಹೋವನು
ತನ್ನ ಪರಿಶುದ್ಧತ್ವದ ಮೇಲೆ ಆಣೆ ಇಟ್ಟು ಕೊಂಡಿದ್ದಾನೆ; ಏನಂ
ದರೆ—
ಇಗೋ ನಿಮ್ಮ ಮೇಲೆ ದಿವಸಗಳು ಬರುವವು;
ಆಗ ನಿಮ್ಮನ್ನು ಕೊಂಡಿಗಳಿಂದಲೂ,
ನಿಮ್ಮ ಸಂತಾನವನ್ನು ಮೀನಿನ ಗಾಲಗಳಿಂದಲೂ, ಸೈಯುವರು.
೩ ನೀವು ಬಿರುಕುಗಳಿಂದ
ಒಬ್ಬೊಬ್ಬಳು ತನಗೆದುರಾಗಿ ಹೊರಡುವಿರಿ;
ಅರಮನೆಯೊಳಗಿಂದ ನಿಮ್ಮನ್ನು ಬಿಸಾಡುವರು,
ಎಂದು ಯೆಹೋವನು ಅನ್ನುತ್ತಾನೆ.

೪ ಬೆತೇಲಿಗೆ ಬಂದು, ದ್ರೋಹ ಮಾಡಿರಿ;
ಗಿಲ್ಗಾಲಿನಲ್ಲಿ ದ್ರೋಹಗಳನ್ನು ಹೆಚ್ಚಿಸಿರಿ;
ಪ್ರತಿ ಹೊತ್ತಾರೆ ನಿಮ್ಮ ಬಲಿಗಳನ್ನೂ,
ಮೂರನೇ ವರುಷದಲ್ಲಿ ನಿಮ್ಮ ಹತ್ತನೇ ಪಾಲನ್ನೂ, ತನ್ನಿರಿ.
೫ ಮತ್ತು ಹುಳಿ ಹಿಟ್ಟಿನ ಸಂಗಡ ಸ್ತೋತ್ರದ ಬಲಿಯನ್ನು ಅರ್ಪಿ
ಸಿರಿ;
ಉಚಿತವಾದ ಕಾಣಿಕೆಗಳನ್ನು ಸಾರಿ ಕೇಳಿಸಿರಿ:
ಯಾಕಂದರೆ ಹೀಗೆ ನಿಮಗೆ ಇಷ್ಟವಾಗಿದೆ, ಇಸ್ರಯೇಲನ ಮ
ಕ್ಕಳೇ,
ಎಂದು ಯೆಹೋವನು ಅನ್ನುತ್ತಾನೆ.

೬ ಮತ್ತು ನಾನು ನಿಮಗೆ ನಿಮ್ಮ ಎಲ್ಲಾ ಪಟ್ಟಣಗಳಲ್ಲಿ,
ಹಲ್ಲುಗಳ ನಿರ್ಮಲತ್ವವನ್ನೂ,
ನಿಮ್ಮ ಎಲ್ಲಾ ಸ್ಥಳಗಳಲ್ಲಿ,
ಕೊಟ್ಟಿಯ ಕೊರತೆಯನ್ನೂ, ಕೊಟ್ಟಿದ್ದೇನೆ;
ಆದರೂ ನೀವು ನನ್ನ ಬಳಿಗೆ ತಿರುಗಿ ಕೊಳ್ಳಲಿಲ್ಲವೆಂದು
ಯೆಹೋವನು ಅನ್ನುತ್ತಾನೆ.
೭ ಮತ್ತು ಸುಗ್ಗಿಗೆ ಇನ್ನು ಮೂರು ತಿಂಗಳು ಇರುವಾಗ,
ಮಳೆಯನ್ನು ನಿಮ್ಮಿಂದ ಹಿಂತೆಗೆದಿದ್ದೇನೆ;
ಒಂದು ಪಟ್ಟಣದ ಮೇಲೆ ಮಳೆ ಸುರಿಸಿ,
ಇನ್ನೊಂದು ಪಟ್ಟಣದ ಮೇಲೆ ಮಳೆ ಸುರಿಸಲಿಲ್ಲ;
ಒಂದು ಭಾಗದ ಮೇಲೆ ಮಳೆ ಬಿತ್ತು,
ಮತ್ತು ಮಳೆ ಸುರಿಯದ ಭಾಗವು ಬಾಡಿ ಹೋಯಿತು.

೪ ಮತ್ತು ನೀರು ಕುಡಿಯುವದಕ್ಕೆ
ಎರಡು ಮೂರು ಪಟ್ಟಣದವರು
ಒಂದು ಪಟ್ಟಣಕ್ಕೆ ಅಲೆದು ಹೋದರು.
ಆದರೆ ತೃಪ್ತಿಯಾಗಲಿಲ್ಲ;
ಆದರೂ ನೀವು ನನ್ನ ಬಳಿಗೆ ತಿರುಗಿ ಕೊಳ್ಳಲಿಲ್ಲವೆಂದು
ಯೆಹೋವನು ಅನ್ನುತ್ತಾನೆ.
೯ ನಿಮ್ಮನ್ನು ಕಾದಿಗೆಯಿಂದಲೂ, ಬಿಸಿದ ಘೂಳಿಯಿಂದಲೂ,
ಹೊಡೆದಿದ್ದೇನೆ;
ನಿಮ್ಮ ತೋಟಗಳೂ, ನಿಮ್ಮ ದ್ರಾಕ್ಷೆ ತೋಟಗಳೂ,
ನಿಮ್ಮ ಅಂಜೂರದ ಗಿಡಗಳೂ, ನಿಮ್ಮ ಇಪ್ಪೇ ಗಿಡಗಳೂ, ಹೆಚ್ಚಾದಾಗ,
ಮಿಡಿತೆ ಅವುಗಳನ್ನು ತಿಂದು ಬಿಟ್ಟಿತು;
ಆದರೂ ನೀವು ನನ್ನ ಬಳಿಗೆ ತಿರುಗಿ ಕೊಳ್ಳಲಿಲ್ಲವೆಂದು
ಯೆಹೋವನು ಅನ್ನುತ್ತಾನೆ.
೧೦ ಐಗುಪ್ತದ ರೀತಿಯಾಗಿ ನಿಮ್ಮೊಳಗೆ ವ್ಯಾಧಿಯನ್ನು ಕಳಹಿಸಿದ್ದೇನೆ;
ನಿಮ್ಮ ಕುದುರೆಗಳ ಕೊಳ್ಳೆಯ ಸಂಗಡ
ನಿಮ್ಮ ಯವ್ವನಸ್ಥರನ್ನು ಕತ್ತಿಯಿಂದ ಕೊಂದು ಹಾಕಿದ್ದೇನೆ;
ನಿಮ್ಮ ದಂಡುಗಳ ನಾತವನ್ನು ನಿಮ್ಮ ಮೂಗುಗಳಲ್ಲಿ ಏರ
ಮಾಡಿದ್ದೇನೆ;
ಆದರೂ ನೀವು ನನ್ನ ಬಳಿಗೆ ತಿರುಗಿ ಕೊಳ್ಳಲಿಲ್ಲವೆಂದು,
ಯೆಹೋವನು ಅನ್ನುತ್ತಾನೆ.
೧೧ ದೇವರು ಸೊದೋಮನೂ ಗಮೋರವನೂ ಕೆಡವಿದ ಹಾಗೆ,
ನಿಮ್ಮಲ್ಲಿ ಕೆಲವರನ್ನು ಕೆಡವಿದ್ದೇನೆ;
ಹೌದು, ಉರಿಯೊಳಗಿಂದ ಕಿತ್ತು ಕೊಳ್ಳಲ್ಪಟ್ಟ ಕೊಳ್ಳಿಯ
ಹಾಗೆ, ಇದ್ದಿರಿ;
ಆದರೂ ನೀವು ನನ್ನ ಬಳಿಗೆ ತಿರುಗಿ ಕೊಳ್ಳಲಿಲ್ಲವೆಂದು,
ಯೆಹೋವನು ಅನ್ನುತ್ತಾನೆ.
೧೨ ಆದದರಿಂದ ಇಸ್ರಯೇಲೇ, ಹೀಗೆ ನಿನಗೆ ಮಾಡುವೆನು—
ಮತ್ತು ನಾನು ಹೀಗೆ ನಿನಗೆ ಮಾಡುವದರಿಂದ,
ಇಸ್ರಯೇಲೇ ನಿನ್ನ ದೇವರನ್ನು ಎದುರುಗೊಳ್ಳ ಸಿದ್ಧ ಮಾಡಿಕೋ.
೧೩ ಯಾಕಂದರೆ ಇಗೋ ಬೆಟ್ಟಗಳನ್ನು ರೂಪಿಸಿ,
ಘೂಳಿಯನ್ನು ನಿರ್ಮಿಸಿ,
ಮನುಷ್ಯನಿಗೆ ಅವನ ಯೋಚನೆ ಏನೆಂದು ತಿಳಿಸಿ,
ಉದಯವನ್ನು ಮೋಡವಾಗ ಮಾಡಿ,
ಭೂಮಿಯ ಎತ್ತರ ಸ್ಥಳಗಳಲ್ಲಿ ನಡೆಯುವವನು, ಅವನೇ;
ಅವನ ಹೆಸರು ಸೈನ್ಯಗಳ ದೇವರಾದ ಯೆಹೋವನೇ.

## ೫. ಸಂಧಿ.

೧ ಇಸ್ರಯೇಲನ ಮನೆಯವರೇ, ನಾನು ನಿಮ್ಮ ವಿಷಯ ಎತ್ತುವ ಗೋಳಾಟದ ಈ ವಾಕ್ಯವನ್ನು ಕೇಳಿರಿ.
೨ ಇಸ್ರಯೇಲಿನ ಕನ್ಯಾಸ್ತ್ರೀ ಬಿದ್ದಿದ್ದಾಳೆ;
ಇನ್ನು ಏಳುವದಿಲ್ಲ;
ತನ್ನ ದೇಶದ ಮೇಲೆ ಕೆಡವಲ್ಪಟ್ಟಿದ್ದಾಳೆ;
ಅವಳನ್ನು ಎಬ್ಬಿಸುವವನಿಲ್ಲ.
೩ ಯಾಕಂದರೆ ಕರ್ತನಾದ ಯೆಹೋವನು ಹೀಗೆ ಹೇಳುತ್ತಾನೆ—
ಸಾವಿರ ಮಂದಿಯಾಗಿ ಹೊರಟ ಪಟ್ಟಣವು,
ಇಸ್ರಯೇಲನ ಮನೆಗೆ ನೂರು ಮಂದಿಯನ್ನು ಉಳಿಸುವದು;
ನೂರು ಮಂದಿಯಾಗಿ ಹೊರಟದ್ದು,
ಹತ್ತು ಮಂದಿಯನ್ನು ಉಳಿಸುವದು.
೪ ಯಾಕಂದರೆ ಯೆಹೋವನು ಇಸ್ರಯೇಲನ ಮನೆಯವರಿಗೆ
ಹೀಗೆ ಹೇಳುತ್ತಾನೆ—
ನನ್ನನ್ನು ಹುಡುಕಿ ಬದುಕಿರಿ;
೫ ಬೆತೇಲನ್ನು ಹುಡುಕ ಹೇಡ;
ಗಿಲ್ಗಾಲಿಗೆ ಹೋಗ ಬೇಡ;
ಬೆರ್ಷೇಬಕ್ಕೆ ಹಾದು ಹೋಗ ಬೇಡ;
ಯಾಕಂದರೆ ಗಿಲ್ಗಾಲು ಸೆರೆ ಬಿದ್ದೇ ಬೀಳುವದು;
ಬೆತೇಲು ಏನಿಲ್ಲದೆ ಹೋಗುವದು.
೬ ಯೆಹೋವನನ್ನು ಹುಡುಕಿ, ಬದುಕಿರಿ;
ಇಲ್ಲದಿದ್ದರೆ, ಅವನು ಬೆಂಕಿಯಂತೆ
ಯೋಸೆಫನ ಮನೆಯಲ್ಲಿ ಪ್ರವೇಶಿಸುವನು;
ಅದು ತಿಂದು ಬಿಡುವದು; ಬೆತೇಲಿನಲ್ಲಿ ಅದನ್ನು ಆರಿಸುವವನಿಲ್ಲ.
೭ ನ್ಯಾಯವನ್ನು ಮಾಚೆಪತ್ರೆಗೆ ತಿರುಗಿಸುವವರೇ!
ನೀತಿಯನ್ನು ಭೂಮಿಗೆ ಕೆಡವುವವರೇ!
೮ ವೃಷಭರಾಶಿಯನ್ನೂ ಮೃಗ ಶಿರವನ್ನೂ ಉಂಟು ಮಾಡಿದವನನ್ನೂ,
ಮರಣದ ನೆರಳನ್ನು ಉದಯಕ್ಕೆ ಬದಲಾಯಿಸಿ,
ಹಗಲನ್ನು ರಾತ್ರಿಯಾಗುವ ಹಾಗೆ ಕತ್ತಲೆ ಮಾಡಿ,
ಸಮುದ್ರದ ನೀರುಗಳನ್ನು ಕರೆದು,
ಅವುಗಳನ್ನು ಭೂಮಿಯ ಮೇಲೆ ಹೊಯ್ಯುವವನನ್ನೂ,
ಯೆಹೋವನೆಂಬ ಹೆಸರುಳ್ಳವನನ್ನೇ,
ಹುಡುಕಿರಿ.
೯ ಕೋಟೆಯ ಮೇಲೆ ಸೂಕೆ ಬರುವ ಹಾಗೆ,
ಸೂಕೆಯನ್ನು ಬಲಿಷ್ಠರ ಮೇಲೆ ಥಕ್ಕನೆ ತರಿಸುವವನು, ಅವನೇ.
೧೦ ಬಾಗಲಲ್ಲಿ ಗದರಿಸುವವನನ್ನು ಹಗೆ ಮಾಡುತ್ತಾರೆ;
ಯಥಾರ್ಥವಾಗಿ ಮಾತಾಡುವವನನ್ನು ಅಸಹಿಸುತ್ತಾರೆ.
೧೧ ಆದಕಾರಣ, ನೀವು ಬಡವನನ್ನು ತುಳಿಯುವದರಿಂದಲೂ,
ಧಾನ್ಯದ ಹೊರೆಯನ್ನು ಅವನಿಂದ ತಕೊಳ್ಳುವದರಿಂದಲೂ,
ಕೆತ್ತಿದ ಕಲ್ಲಿನ ಮನೆಗಳನ್ನು ತಟ್ಟಿದಿರಲ್ಲ?
ಆದರೆ ಅವುಗಳಲ್ಲಿ ವಾಸ ಮಾಡದಿರುವಿರಿ;
ರಮ್ಯವಾದ ದ್ರಾಕ್ಷೆ ತೋಟಗಳನ್ನು ನೆಟ್ಟಿರಲ್ಲ?
ಆದರೆ ಅವುಗಳ ದ್ರಾಕ್ಷೆರಸವನ್ನು ಕುಡಿಯದಿರುವಿರಿ.
೧೨ ಯಾಕಂದರೆ ನಿಮ್ಮ ಅನೇಕ ಅಪರಾಧಗಳನ್ನೂ
ನಿಮ್ಮ ಬಲವಾದ ಪಾಪಗಳನ್ನೂ,
ನಾನು ಬಲ್ಲೆನು;
ನೀತಿವಂತರನ್ನು ಕಷ್ಟ ಪಡಿಸಿ,
ಲಂಚವನ್ನು ತಿಂದು, ಬಡವನನ್ನು ಬಾಗಲಲ್ಲಿ ತಿರುಗಿಸಿ ಬಿಡುತ್ತೀರಲ್ಲ?



೧೩ ಇದು ಕಾರಣ ಆ ಕಾಲದಲ್ಲಿ ಬುದ್ಧಿವಂತನು ಮೌನವಾಗಿರುವನು;
ಯಾಕಂದರೆ ಅದು ಕೆಟ್ಟ ಕಾಲವೇ.
೧೪ ನೀವು ಬದುಕುವ ಹಾಗೆಯೂ,
ನೀವು ಹೇಳುವ ಪ್ರಕಾರ, ಸೈನ್ಯಗಳ ದೇವರಾದ ಯೆಹೋವನು
ನಿಮ್ಮ ಸಂಗಡ ಇರುವ ಹಾಗೆಯೂ,
ಕೆಟ್ಟದ್ದನ್ನಲ್ಲ, ಒಳ್ಳೇದನ್ನು ಹುಡುಕಿರಿ.
೧೫ ಕೆಟ್ಟದ್ದನ್ನು ಹಗೆ ಮಾಡಿರಿ; ಒಳ್ಳೇದನ್ನು ಪ್ರೀತಿ ಮಾಡಿರಿ;
ಬಾಗಲಲ್ಲಿ ನ್ಯಾಯವನ್ನು ಸ್ಥಾಪಿಸಿರಿ;
ಒಂದು ವೇಳೆ ಸೈನ್ಯಗಳ ದೇವರಾದ ಯೆಹೋವನು
ಯೋಸೆಫನ ಉಳಿವನ್ನು ಕನಿಕರಿಸ್ಯಾನು.
೧೬ ಆದದರಿಂದ ಸೈನ್ಯಗಳ ದೇವರಾದ ಯೆಹೋವನೆಂಬ ಕರ್ತನು ಹೀಗೆ ಹೇಳುತ್ತಾನೆ—
ಎಲ್ಲಾ ಬೀದಿಗಳಲ್ಲಿ ಗೋಳಾಟವಿರುವದು;
ಎಲ್ಲಾ ದಾರಿಗಳಲ್ಲಿ ಅಯ್ಯೋಯ್ಯೋ! ಅನ್ನುವರು;
ಬಕ್ಕಲಿಗನನ್ನು ಅಂಗಲಾಚುವಿಕೆಗೂ,
ಹುಯಿಲಿಡ ತಿಳಿದವರನ್ನು ಗೋಳಾಟಕ್ಕೂ ಕರೆಯುವರು.
೧೭ ಎಲ್ಲಾ ದ್ರಾಕ್ಷೆ ತೋಟಗಳಲ್ಲಿ ಗೋಳಾಟವಿರುವದು;
ಯಾಕಂದರೆ ನಾನು ನಿನ್ನ ಮಧ್ಯದಲ್ಲಿ ಹಾದು ಹೋಗುವೆನೆಂದು,
ಯೆಹೋವನು ಹೇಳುತ್ತಾನೆ.
೧೮ ಯೆಹೋವನ ದಿವಸವನ್ನು ಅಪೇಕ್ಷಿಸುವವರಾದ ನಿಮಗೆ ಅಯ್ಯೋ!
ಯೆಹೋವನ ದಿವಸವು ನಿಮಗೆ ಯಾತಕ್ಕೆ?
ಅದು ಬೆಳಕಲ್ಲ, ಕತ್ತಲೆಯೇ.
೧೯ ಒಬ್ಬನು ಸಿಂಹದಿಂದ ಓಡಿ ಹೋಗಿ,
ಕರಡಿ ಅವನನ್ನು ಸಂಧಿಸಿದ ಹಾಗೆ;
ಇಲ್ಲವೇ ಅವನು ಮನೆಯಲ್ಲಿ ಹೋಗಿ,
ಗೋಡೆಗೆ ಕೈ ಊರುವಾಗ,
ಹಾವು ಕಚ್ಚಿದ ಹಾಗೆ.
೨೦ ಯೆಹೋವನ ದಿವಸವು ಬೆಳಕಲ್ಲ, ಕತ್ತಲೇ ಅಲ್ಲವೋ?
ಹೌದು, ಕಾರ್ಗತ್ತಲು, ಅದರಲ್ಲಿ ಪ್ರಕಾಶವೇನು ಇಲ್ಲ.
೨೧ ನಿಮ್ಮ ಹಬ್ಬಗಳನ್ನು ಹಗೆ ಮಾಡಿ ಅಸಹ್ಯಿಸುತ್ತೇನೆ;
ನಿಮ್ಮ ಘನಸಂಘಗಳನ್ನು ನಾನು ಮೆಚ್ಚುವದಿಲ್ಲ.
೨೨ ನೀವು ನನಗೆ ಹೋಮಗಳನ್ನು ಕಾಣಿಕೆಗಳನ್ನೂ ಅರ್ಪಿಸಿದರೂ,
ನಾನು ಅವುಗಳನ್ನು ಅಂಗೀಕರಿಸುವದಿಲ್ಲ;
ನಿಮ್ಮ ಕೊಬ್ಬಿದವುಗಳ ಸಮಾಧಾನದ ಬಲಿಗಳನ್ನು
ನಾನು ನೋಡುವದಿಲ್ಲ.
೨೩ ನಿಮ್ಮ ಹಾಡುಗಳ ಬೊಬ್ಬೆಯನ್ನು ನನ್ನಿಂದ ತೊಲಗಿಸು;
ನಿನ್ನ ವೀಣೆಗಳ ಗಾನವನ್ನು ನಾನು ಕೇಳುವದಿಲ್ಲ.
೨೪ ಆದರೆ ನ್ಯಾಯವು ನೀರಿನಂತೆಯೂ,
ನೀತಿಯು ಬಲವಾದ ಪ್ರವಾಹದಂತೆಯೂ, ಹರಿಯಲಿ.
೨೫ ಇಸ್ರಯೇಲನ ಮನೆಯವರೇ,
ಅರಣ್ಯದಲ್ಲಿ ನಾಲ್ವತ್ತು ವರುಷಗಳು
ನನಗೆ ಬಲಿಗಳನ್ನೂ ಕಾಣಿಕೆಗಳನ್ನೂ ಅರ್ಪಿಸಿದಿರೋ?
೨೬ ನೀವು ನಿಮಗೋಸ್ಕರ ಮಾಡಿ ಕೊಂಡ
ನಿಮ್ಮ ಪೊಲೋಕನ ಗುಡಾರವನ್ನೂ,
ನಿಮ್ಮ ಮೂರ್ತಿಗಳ ವಿಗ್ರಹವನ್ನೂ,
ನಿಮ್ಮ ಸ್ವಾಮಿಗಳ ನಕ್ಷತ್ರವನ್ನೂ,
ಹೊತ್ತು ಕೊಂಡಿರಲ್ಲ?
೨೭ ಹೀಗಿರುವದರಿಂದ ದಮಸ್ಕದ ಆಚೆಗೆ ನಿಮ್ಮನ್ನು ಸೆರೆಯಾಗಿ ವೈಯ್ಯುವೆನೆಂದು
ಸೈನ್ಯಗಳ ದೇವರೆಂದು ಹೆಸರುಳ್ಳ ಯೆಹೋವನು ಹೇಳುತ್ತಾನೆ.

## ೬. ಸಂಧಿ.

೧ ಚಿಯೋನಿನಲ್ಲಿ ನಿಶ್ಚಿಂತೆಯುಳ್ಳವರಿಗೂ,
ಸಮಾರ್ಯದ ಬೆಟ್ಟದಲ್ಲಿ ನಂಬಿಕೆ ಇಡುವವರಿಗೂ,
ಇಸ್ರಯೇಲನ ಮನೆಯವರು ಯಾರ ಬಳಿಗೆ ಬರುತ್ತಾರೋ,
ಶ್ರೇಷ್ಠ ಜನಾಂಗದಲ್ಲಿ ಹೆಸರು ಗೊಂಡವರಿಗೂ, ಅಯ್ಯೋ!
೨ ಕಲ್ನೆಗೆ ಹಾದು ಹೋಗಿ, ನೋಡಿರಿ;
ಅಲ್ಲಿಂದ ದೊಡ್ಡ ಹಮಾತಿಗೆ ಹೋಗಿರಿ;
ಆಗ ಫಿಲಿಷ್ಟಿಯರ ಗಾತಿಗೆ ಇಳಿದು ಹೋಗಿರಿ;
ಅವು ಈ ರಾಜ್ಯಗಳಿಗಿಂತ ಬಳ್ಳೆಯವುಗಳೋ?
ಅವುಗಳ ಪ್ರಾಂತ್ಯವು ನಿಮ್ಮ ಪ್ರಾಂತ್ಯಕ್ಕಿಂತ ದೊಡ್ಡದ್ದೋ?
೩ ನೀವು ಕೆಟ್ಟ ದಿವಸವನ್ನು ದೂರ ಮಾಡಿ ಕೊಂಡು,
ಬಲಾತ್ಕಾರದ ಪೀಠವನ್ನು ಸಮೀಪ ಮಾಡಿ ಕೊಳ್ಳುತ್ತೀರಲ್ಲ?
೪ ಜಂತದ ಮಂಚಗಳಲ್ಲಿ ಮಲಗಿ ಕೊಳ್ಳುತ್ತಾರೆ,
ತಮ್ಮ ಹಾಸಿಗೆಗಳ ಮೇಲೆ ಭೋಗ ಮಾಡುತ್ತಾರೆ;
ಮಂದೆಯೊಳಗಿಂದ ಕುರಿಮರಿಗಳನ್ನೂ,
ಹಟ್ಟಿಯ ಮಧ್ಯದೊಳಗಿಂದ ಕರುಗಳನ್ನೂ, ಉಣ್ಣುತ್ತಾರೆ;
೫ ವೀಣೆಯ ಶಬ್ದಕ್ಕೆ ಹಾಡುತ್ತಾರೆ;
ದಾವೀದನ ಹಾಗೆ ತಮಗೆ ಗಾನ ವಾದ್ಯಗಳನ್ನು ಕಲ್ಪಿಸಿ ಕೊಳ್ಳುತ್ತಾರೆ.
೬ ದ್ರಾಕ್ಷೆ ರಸದ ಪಾತ್ರೆಗಳಲ್ಲಿ ಕುಡಿಯುತ್ತಾರೆ;
ಶ್ರೇಷ್ಠವಾದ ಎಣ್ಣೆಗಳಿಂದ ತಮ್ಮನ್ನು ಅಭಿಷೇಕಿಸಿ ಕೊಳ್ಳುತ್ತಾರೆ;
ಆದರೆ ಯೋಸೆಫನ ನಷ್ಟಕ್ಕೆ ವ್ಯಸನ ಪಡುವದಿಲ್ಲ.
೭ ಆದದರಿಂದ ಈಗ ಸೆರೆಯವರ ಮೊದಲಿನವರ ಸಂಗಡ ಸೆರೆಗೆ ಹೋಗುವರು;
ಭೋಗ ಮಾಡುವವರ ಗುಜಾರು ಬಿಟ್ಟು ಹೋಗುವದು.
೮ ಸೈನ್ಯಗಳ ದೇವರಾದ ಯೆಹೋವನು ಅನ್ನುತ್ತಾನೆ—
ಕರ್ತನಾದ ಯೆಹೋವನು ತನ್ನ ಜೀವದ ಮೇಲೆ ಆಣೆ ಇಟ್ಟು ಕೊಂಡಿದ್ದಾನೆ, ಏನಂದರೆ—
ನಾನು ಯಾಕೋಬನ ಹೆಚ್ಚಳವನ್ನು ಅಸಂಹಿಸಿ,
ಅವನ ಅರಮನೆಗಳನ್ನು ಹಗೆ ಮಾಡುತ್ತೇನೆ;
ಆದಕಾರಣ ಪಟ್ಟಣವನ್ನೂ ಅದರಲ್ಲಿರುವ ಸಮಸ್ತವನ್ನೂ ಒಪ್ಪಿಸಿ ಬಿಡುತ್ತೇನೆ.
೯ ಮತ್ತು ಆಗುವದೇನಂದರೆ—

ಒಂದು ಮನೆಯಲ್ಲಿ ಹತ್ತು ಮನುಷ್ಯರು ಉಳಿದರೆ,
ಅವರು ಸಾಯುವರು.
೧೦ ಮತ್ತು ಒಬ್ಬನ ನೆಂಟನೂ, ಅವನನ್ನು ಸುಡುವವನೂ,
ಮನೆಯೊಳಗಿಂದ ಅವನ ಎಲುವುಗಳನ್ನು ತಕ್ಕೊಂಡು ಹೋಗು
ವದಕ್ಕೆ,
ಅವನನ್ನು ಎತ್ತಿ ಕೊಳ್ಳುವಾಗ,
ಮನೆಯ ಬಳಿಭಾಗದಲ್ಲಿ ಇರುವವನಿಗೆ—
ಇನ್ನು ಯಾರಾದರೂ ನಿನ್ನ ಬಳಿಯಲ್ಲಿ ಇದ್ದಾರೋ? ಎಂದು
ಹೇಳುವನು;
ಇವನು—ಯಾರಿಲ್ಲವಂದರೆ,
ಅವನು—ಸುಮ್ಮನಿರು,
ಯಾಕಂದರೆ ನಾವು ಯೆಹೋವನ ಹೆಸರನ್ನು ಜ್ಞಾಪಕ ಮಾ
ಡ ಬಾರದೆಂದು ಹೇಳುವನು.
೧೧ ಯಾಕಂದರೆ ಇಗೋ ಯೆಹೋವನು ಆಜ್ಞಾಪಿಸುತ್ತಾನೆ;
ಅವನು ದೊಡ್ಡ ಮನೆಯನ್ನು ಪೀಳುಗಳ್ಳಂದಲೂ,
ಚಿಕ್ಕ ಮನೆಯನ್ನು ಬಿರುಕುಗಳ್ಳಂದಲೂ,
ಬಡೆಯುವನು.

೧೨ ಕುದುರೆಗಳು ಬಂಡೆಯ ಮೇಲೆ ಓಡುವದುಂಟೇ?
ಎತ್ತುಗಳಿಂದ ಅಲ್ಲಿ ಉಳುವದುಂಟೇ?
ಯಾಕಂದರೆ ನೀವು ನ್ಯಾಯವನ್ನು ವಿಷಕ್ಕೂ,
ನೀತಿ ಫಲವನ್ನು ಮಾಚಿಪತ್ರಿಗೂ,
ಬದಲಾಯಿಸಿದ್ದೀರಿ.
೧೩ ಏನು ಇಲ್ಲದ್ದರಲ್ಲಿ ಸಂತೋಷ ಪಡುವವರೇ!
ಸ್ವಂತ ತ್ರಾಣದಿಂದ ನಮಗೆ ಕೊಂಬುಗಳನ್ನು ತಕೊಂಡಿದ್ದೇವೆಂ
ದು ಹೇಳುವವರೇ!
೧೪ ಇಗೋ, ಜನಾಂಗವನ್ನು ನಿಮಗೆ ವಿರೋಧವಾಗಿ ಎಬ್ಬಿಸುತ್ತೇನೆ;
ಇಸ್ರಯೇಲಿನ ಮನೆಯವರೇ!
ಅವರು ಹಮಾತಿನ ಪ್ರವೇಶದಿಂದ
ಅರಣ್ಯದ ನದಿಯ ಮಟ್ಟಿಗೂ
ನಿಮ್ಮನ್ನು ಅಣಗಿಸುವರೆಂದು
ಸೈನ್ಯಗಳ ದೇವರಾದ ಯೆಹೋವನು ಅನ್ನುತ್ತಾನೆ.

## ೩. ಸಂಧಿ.

೧ ಕರ್ತನಾದ ಯೆಹೋವನು ನನಗೆ ಹೀಗೆ ತೋರಿಸಿದನು; ಇ
ಗೋ, ಎರಡನೇ ಹುಲ್ಲು ಪೊಳೆಯುವದರ ಆರಂಭದಲ್ಲಿ ಮಿಡತೆಗ
ಳನ್ನು ನಿರ್ಮಿಸಿದನು; ಇಗೋ, ಆ ಎರಡನೇ ಹುಲ್ಲು ಅರಸನ
೨ ಕೊಯ್ಯುವಿಕೆಯಾದ ಮೇಲೆ ಉಂಟಾದದ್ದು. ಮತ್ತು ಆದದ್ದೇನಂ
ದರೆ, ಅವು ಭೂಮಿಯ ಹುಲ್ಲನ್ನು ತಿಂದು ಆದ ಮೇಲೆ, ನಾನು—
ಕರ್ತನಾದ ಯೆಹೋವನೇ, ಮನ್ನಿಸೆಂದು ಬೇಡುತ್ತೇನೆ;
ಯಾಕೋಬನು ಹ್ಯಾಗೆ ನಿಲ್ಲುವನು?
ಅವನು ಸಣ್ಣವನೇ, ಅಂದೆನು.
೩ ಇದನ್ನು ಕುರಿತು ಯೆಹೋವನು ಪಶ್ಚಾತ್ತಾಪ ಪಟ್ಟನು;
ಇದು ಇರದೆಂದು ಯೆಹೋವನು ಹೇಳಿದನು.

೪ ಕರ್ತನಾದ ಯೆಹೋವನು ನನಗೆ ಹೀಗೆ ತೋರಿಸಿದನು; ಇ
ಗೋ ಕರ್ತನಾದ ಯೆಹೋವನು ಬೆಂಕಿಯಿಂದ ತರ್ಕಿಸುವದಕ್ಕೆ
ಕರೆದನು; ಅದು ದೊಡ್ಡ ಅಗಾಧವನ್ನು ತಿಂದು, ವಿಭಾಗವನ್ನು ತಿಂ
೫ ದು ಬಿಟ್ಟಿತು. ಆಗ ನಾನು—
ಕರ್ತನಾದ ಯೆಹೋವನೇ, ಬಿಡೆಂದು ಬೇಡುತ್ತೇನೆ;
ಯಾಕೋಬನು ಹ್ಯಾಗೆ ನಿಲ್ಲುವನು?
ಅವನು ಸಣ್ಣವನೇ, ಅಂದೆನು.
೬ ಇದನ್ನು ಕುರಿತು ಯೆಹೋವನು ಪಶ್ಚಾತ್ತಾಪ ಪಟ್ಟನು;
ಇದು ಸಹ ಇರದೆಂದು ಕರ್ತನಾದ ಯೆಹೋವನು ಹೇಳಿ
ದನು.

೭ ನನಗೆ ಹೀಗೆ ತೋರಿಸಿದನು; ಇಗೋ, ಕರ್ತನು ನೆಟ್ಟಿಗಾದ
ಗೋಡೆಯ ಮೇಲೆ ನಿಂತನು; ಅವನ ಕೈಯಲ್ಲಿ ಸೀಸ ಸೂತ್ರವಿ
೮ ತ್ತು. ಆಗ ಯೆಹೋವನು—ಆಮೋಸನೇ, ಏನು ನೋಡುತ್ತೀ?
ಅಂದನು; ಸೀಸ ಸೂತ್ರವನ್ನು, ಅನ್ನಲು; ಕರ್ತನು ಹೇಳಿದ್ದೇನಂ
ದರೆ—
ಇಗೋ, ನಾನು ನನ್ನ ಜನರಾದ ಇಸ್ರಯೇಲಿನ ಮಧ್ಯದಲ್ಲಿ
ಸೀಸ ಸೂತ್ರವನ್ನು ಇಡುತ್ತೇನೆ;
ಇನ್ನು ಮೇಲೆ ಅವರನ್ನು ದಾಟಿ ಹೋಗುವದಿಲ್ಲ.
೯ ಇಸಾಕನ ಮೇಡುಗಳು ನಾಶವಾಗುವವು;
ಇಸ್ರಯೇಲಿನ ಪರಿಶುದ್ಧ ಸ್ಥಳಗಳು ಹಾಳಾಗುವವು;
ಯೆರೊಬಾಮನ ಮನೆಯವರಿಗೆ ವಿರೋಧವಾಗಿ ಕತ್ತಿಯಿಂದ
ಏಳುವೆನು.

೧೦ ಆಗ ಬೆತೇಲಿನ ಯಾಜಕನಾದ ಅಮಚೀಯನು ಇಸ್ರಯೇಲಿ
ನ ಅರಸನಾದ ಯೆರೊಬಾಮನಿಗೆ ಹೇಳಿ ಕಳುಹಿಸಿದ್ದೇನಂದರೆ—
ಆಮೋಸನು ಇಸ್ರಯೇಲಿನ ಮನೆಯವರ ಮಧ್ಯದಲ್ಲಿ ನಿನಗೆ ವಿ
ರೋಧವಾಗಿ ಒಳಸಂಚು ಮಾಡಿದ್ದಾನೆ; ದೇಶವು ಅವನ ಮಾತು
೧೧ ಗಳನ್ನೆಲ್ಲಾ ತಾಳಲಾರದು. ಯಾಕಂದರೆ—ಯೆರೊಬಾಮನು ಕ
ತ್ತಿಯಿಂದ ಸಾಯುವನೆಂದು, ಇಸ್ರಯೇಲು ನಿಶ್ಚಯವಾಗಿ ತಮ್ಮ
ದೇಶದೊಳಗಿಂದ ಸೆರೆಯಾಗಿ ವೈಯಲ್ಪಡುವರೆಂದು, ಆಮೋಸನು
೧೨ ಹೇಳುತ್ತಾನೆ. ಆಗ ಅಮಚೀಯನು ಆಮೋಸನಿಗೆ ಹೇಳಿದ್ದೇನಂ
ದರೆ—ಓ ದರ್ಶಿಯೇ, ಯೆಹೂದ ದೇಶಕ್ಕೆ ಓಡಿ ಹೋಗು; ಅಲ್ಲಿ
೧೩ ಕೊಟ್ಟಿ ತಿಂದು, ಅಲ್ಲಿ ಪ್ರವಾದಿಸು. ಆದರೆ ಬೆತೇಲಿನಲ್ಲಿ ಇನ್ನು
ಪ್ರವಾದಿಸ ಬೇಡ; ಯಾಕಂದರೆ ಅದು ಅರಸನ ಪರಿಶುದ್ಧ ಸ್ಥಾನ
೧೪ ವಾಗಿಯೂ, ರಾಜ್ಯದ ಅರಮನೆಯಾಗಿಯೂ, ಇದೆ. ಆಗ ಆ
ಮೋಸನು ಅಮಚೀಯನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದ
ರೆ—ನಾನು ಪ್ರವಾದಿಯಲ್ಲ; ಪ್ರವಾದಿಯ ಮಗನಲ್ಲ; ನಾನು ಕುರು
೧೫ ಬನು, ಹಿಪ್ಪಲಿ ಹಣ್ಣುಗಳನ್ನು ಕೊಯ್ಯುವವನು. ನಾನು ಹಿಂ
ಡನ್ನು ಹಿಂಬಾಲಿಸುವ ಪೇಳೆಯಲ್ಲಿ ಯೆಹೋವನು ನನ್ನನ್ನು ಶೆ
ಗೆದನು; ಯೆಹೋವನು ನನಗೆ ಹೇಳಿದ್ದೇನಂದರೆ—ನೀನು ಹೋ
೧೬ ಗಿ, ನನ್ನ ಜನರಾದ ಇಸ್ರಯೇಲಿಗೆ ಪ್ರವಾದಿಸು. ಹೀಗಿರುವದರಿಂ
ದ ಈಗ ಯೆಹೋವನ ವಾಕ್ಯವನ್ನು ಕೇಳು; ಇಸ್ರಯೇಲಿಗೆ ವಿ
ರೋಧವಾಗಿ ಪ್ರವಾದನೆ ಹೇಳ ಬೇಡವೆಂದೂ, ಇಸಾಕನ ಮನೆಗೆ
ವಿರೋಧವಾಗಿ ಮಾತು ಬೀಳಿಸ ಬೇಡವೆಂದೂ, ನೀನು ಹೇಳುತ್ತಿ
೧೭ ಯಲ್ಲ? ಆದದರಿಂದ ಯೆಹೋವನು ಹೇಳುವದೇನಂದರೆ—
ನಿನ್ನ ಹೆಂಡತಿ ಪಟ್ಟಣದಲ್ಲಿ ಸೂಳೆಯಾಗುವಳು;



ಮತ್ತು ನಿನ್ನ ಕುಮಾರರೂ ನಿನ್ನ ಕುಮಾರ್ತೆಗಳೂ ಕತ್ತಿಯಿಂ
ದ ಬೀಳುವರು;
ಮತ್ತು ನಿನ್ನ ದೇಶವು ನೂಲಿನಿಂದ ವಿಭಾಗಿಸಲ್ಪಡುವದು;
ಮತ್ತು ನೀನು ಅಪವಿತ್ರ ದೇಶದಲ್ಲಿ ಸಾಯುವಿ;
ಮತ್ತು ಇಸ್ರಯೇಲು ನಿಶ್ಚಯವಾಗಿ ತಮ್ಮ ದೇಶದೊಳಗಿಂದ
ಸೆರೆಯಾಗಿ ವೈಯಲ್ಪಡುವದು.

## ೪. ಸಂಧಿ.

೧ ಕರ್ತನಾದ ಯೆಹೋವನು ನನಗೆ ಹೀಗೆ ತೋರಿಸಿದನು; ಇ
೨ ಗೋ ಹಣ್ಣುಗಳಳ್ಳ ಪುಟ್ಟಿಯು. ಆಗಲವನು—ಆಮೋಸನೇ,
ಏನು ನೋಡುತ್ತೀ? ಅಂದಾಗ, ನಾನು—ಹಣ್ಣುಗಳಳ್ಳ ಪುಟ್ಟಿಯ
ನ್ನು, ಅಂದೆನು. ಆಗ ಯೆಹೋವನು ನನಗೆ ಹೇಳಿದ್ದು—
ನನ್ನ ಜನರಾದ ಇಸ್ರಯೇಲಿಗೆ ಅಂತ್ಯವು ಬಂತು;
ನಾನು ಇನ್ನು ಮೇಲೆ ಅವರನ್ನು ದಾಟಿ ಹೋಗುವದಿಲ್ಲ.
೩ ಆ ದಿನದಲ್ಲಿ ದೇವಾಲಯದ ಹಾಡುಗಳು
ಹುಯಿಲಿಡುವಿಕೆಗಳಾಗುವವೆಂದು
ಕರ್ತನಾದ ಯೆಹೋವನು ಅನ್ನುತ್ತಾನೆ;
ಎಲ್ಲಾ ಕಡೆಯಲ್ಲಿ ಹೆಣಗಳು ಬಹಳವಿರುವವು;
ಮೌನವಾಗಿ ಅವುಗಳನ್ನು ಬಿಸಾಟು ಬಿಡುವರು.
೪ ದರಿದ್ರರನ್ನು ನುಂಗುವವರೇ!
ದೇಶದ ಬಡವರನ್ನು ಮುಗಿಸಲಿಕ್ಕಿರುವವರೇ! ಇದನ್ನು ಕೇಳಿರಿ.
೫ ನಾವು ಧಾನ್ಯವನ್ನು ಮಾರುವ ಹಾಗೆ, ಅಮವಾಶಿಯೂ,
ಗೋಧಿಯನ್ನು ಇಡುವ ಹಾಗೆ ಸಬ್ಬತೂ,
ಯಾವಾಗ ತೀರುವದೆಂದೂ,
ಎಫವನ್ನು ಚಿಕ್ಕದಾಗಿಯೂ,
ಶೆಕೇಲನ್ನು ದೊಡ್ಡದಾಗಿಯೂ,
ಕಳ್ಳ ತ್ರಾಸುಗಳನ್ನು ಮೋಸಕ್ಕಾಗಿಯೂ,
ಮಾಡುವ ಎಂದೂ,
೬ ಬಡವರನ್ನು ಬೆಳ್ಳಿಗೂ,
ದರಿದ್ರರನ್ನು ಕೆರಗಳ ಜೋಡಿಗೂ, ಕೊಂಡು ಕೊಳ್ಳುವ,
ಮತ್ತು ಗೋಧಿಯ ಕಸವನ್ನು ಮಾರುವ,
ಎಂದೂ, ಹೇಳುತ್ತೀರಲ್ಲ?

೭ ಯೆಹೋವನು ಯಾಕೋಬನ ಹೆಚ್ಚಳದ ಮೇಲೆ ಆಣೆ ಇ
ಟ್ಟು ಕೊಂಡು ಹೇಳುವದೇನಂದರೆ—
ನಾನು ಎಂದೆಂದಿಗೂ ಅವರ ಕ್ರಿಯೆಗಳನ್ನೆಲ್ಲಾ ಮರೆತು ಬಿಡುವದಿಲ್ಲ.
೮ ಇದಕ್ಕಾಗಿ ದೇಶವು ನಡುಗದೋ?
ಅದರಲ್ಲಿ ವಾಸಿಸುವವರೆಲ್ಲರು ಗೋಳಾಡರೋ?
ಹೌದು, ಅದೆಲ್ಲಾ ನದಿಯ ಹಾಗೆ ಉಬ್ಬಿ,
ಐಗುಪ್ತದ ನದಿಯ ಹಾಗೆ ಬಡು ಕೊಂಡು ಇಳಿಯದೇ?
೯ ಕರ್ತನಾದ ಯೆಹೋವನು ಅನ್ನುತ್ತಾನೆ—
ಆ ದಿವಸದಲ್ಲಿ ಆಗುವದೇನಂದರೆ—
ನಾನು ಸೂರ್ಯನನ್ನು ಮಧ್ಯಾನ್ನದಲ್ಲಿ ಮುಣುಗ ಮಾಡುತ್ತೇನೆ,
ಹಗಲೊತ್ತಿನಲ್ಲಿ ಭೂಮಿಯನ್ನು ಕತ್ತಲಾಗ ಮಾಡುತ್ತೇನೆ;
೧೦ ಮತ್ತು ನಿಮ್ಮ ಹಬ್ಬಗಳನ್ನು ದುಃಖಕ್ಕೂ,
ನಿಮ್ಮ ಹಾಡುಗಳನ್ನೆಲ್ಲಾ ಗೋಳಾಟಕ್ಕೂ, ಬದಲಾಯಿಸುವೆನು;
ಎಲ್ಲಾ ನಡುವುಗಳಿಗೆ ಗೋಣಿಯನ್ನೂ,
ಎಲ್ಲಾ ತಲೆಗಳಿಗೂ ಬೋಳುತನವನ್ನೂ, ಬರ ಮಾಡುವೆನು;
ಅದು ಒಬ್ಬನೇ ಮಗನ ವಿಷಯವಾದ ದುಃಖದ ಹಾಗೆಯೂ,
ಅದರ ಅಂತ್ಯವು ಕಹಿಯಾದ ದಿನದ ಹಾಗೆಯೂ, ಮಾಡುವೆನು.

೧೧ ಕರ್ತನಾದ ಯೆಹೋವನು ಅನ್ನುತ್ತಾನೆ—
ಇಗೋ, ದಿನಗಳು ಬರುವವು;
ಆಗ ನಾನು ದೇಶದಲ್ಲಿ ಬರವನ್ನು ಕಳುಹಿಸುವೆನು;
ಕೊಟ್ಟೆಯ ಬರವನ್ನಲ್ಲ;
ನೀರಿಗೆ ದಾಹವನ್ನಲ್ಲ;
ಯೆಹೋವನ ವಾಕ್ಯಗಳನ್ನು ಕೇಳ ಬೇಕೆಂಬ ಬರವನ್ನೇ.
೧೨ ಆಗಲವರು ಸಮುದ್ರದಿಂದ ಸಮುದ್ರಕ್ಕೂ,
ಉತ್ತರದಿಂದ ಪೂರ್ವಕ್ಕೂ, ಅಲೆದು,
ಯೆಹೋವನ ವಾಕ್ಯವನ್ನು ಹುಡುಕುವದಕ್ಕೆ ಓಡ್ಯಾಡಿ,
ಅದನ್ನು ಕಾಣದೆ ಹೋಗುವರು.
೧೩ ಆ ದಿವಸದಲ್ಲಿ ಸೌಂದರ್ಯವಾದ ಕನ್ಯಾ ಸ್ತ್ರೀಯರು,
ಯೌವ್ವನಸ್ಥರು ಸಹ, ದಾಹದಿಂದ ಕುಗ್ಗಿ ಹೋಗುವರು.
೧೪ ಸಮಾರ್ಯದ ಅಪರಾಧದ ಮೇಲೆ ಆಣೆ ಇಟ್ಟು ಕೊಂಡು,
ಡಾನೇ, ನಿನ್ನ ದೇವರ ಜೀವದಾಣೆ ಎಂದೂ,
ಬೆರ್ಷೇಬದ ಮಾರ್ಗದ ಜೀವದಾಣೆ ಎಂದೂ, ಹೇಳುವವರು,
ಬಿದ್ದು, ಇನ್ನು ಮೇಲೆ ಏಳರು.

## ೯. ಸಂಧಿ.

೧ ಕರ್ತನು ಬಲಿಪೀಠದ ಮೇಲೆ ನಿಂತಿರುವದನ್ನು ಕಂಡೆನು;
ಅವನು ಹೇಳ್ದದ್ದೇನಂದರೆ—
ಹೊಸ್ತಲುಗಳು ಕದಲುವ ಹಾಗೆ ಸ್ತಂಭವನ್ನು ಬಡಿ;
ಅವಕೆಲ್ಲರ ತಲೆಯ ಮೇಲೆ ಅವರನ್ನು ಕಡಿದು ಬಿಡಿರಿ;
ಮತ್ತು ಅವರಲ್ಲಿ ಉಳಿದವರನ್ನು ಕೊಲ್ಲುವೆನು;
ಅವರಲ್ಲಿ ಓಡಿ ಹೋಗುವವನು ಓಡಿ ಹೋಗುವದಿಲ್ಲ;
ಅವರಲ್ಲಿ ತಪ್ಪಿಸಿ ಕೊಳ್ಳುವವನು ತಪ್ಪಿಸಿ ಕೊಳ್ಳುವದಿಲ್ಲ.
೨ ಅವರು ಪಾತಾಳಕ್ಕೆ ಅಗೆದರೂ,
ಅಲ್ಲಿಂದ ನನ್ನ ಕೈ ಅವರನ್ನು ತೆಗೆಯುವದು;
ಆಕಾಶಕ್ಕೆ ಹತ್ತಿ ಹೋದರೂ,
ಅಲ್ಲಿಂದ ಅವರನ್ನು ಇಳಿಸುವೆನು;
೩ ಮತ್ತು ಅವರು ಕಾರ್ಮೆಲಿನ ಕೊನೆಯಲ್ಲಿ ತಮ್ಮನ್ನು ಬಚ್ಚಿಟ್ಟು
ಕೊಂಡರೂ,
ನಾನು ಅವರನ್ನು ಹುಡಿಕಿ, ತಕ್ಕೊಳ್ಳುವೆನು;
ಅವರು ನನ್ನ ಕಣ್ಣುಗಳಿಗೆ ಮರೆಯಾಗಿ ಸಮುದ್ರದ ನೆಲದಲ್ಲಿ ಅ
ಡಗಿ ಕೊಂಡರೂ,
ಅಲ್ಲಿಂದ ನಾನು ಸರ್ಪಕ್ಕೆ ಅಪ್ಪಣೆ ಕೊಡುವೆನು; ಅದು ಅವರ
ನ್ನು ಕಚ್ಚುವದು;
೪ ಮತ್ತು ಅವರು ತಮ್ಮ ಶತ್ರುಗಳ ಮುಂದೆ ಸೆರೆಗೆ ಹೋ
ದರೂ,
ಅಲ್ಲಿಂದ ನಾನು ಕತ್ತಿಗೆ ಅಪ್ಪಣೆ ಕೊಡುವೆನು,
ಅದು ಅವರನ್ನು ಕೊಲ್ಲುವದು;

ಹೌದು, ಮೇಲಿಗಾಗಿ ಅಲ್ಲ,
ಕೇಡಿಗಾಗಿ ನನ್ನ ಕಣ್ಣುಗಳನ್ನು ಅವರ ಮೇಲೆ ಇರುವೆನು.

೫ ಸೈನ್ಯಗಳ ಕರ್ತನಾದ ಯೆಹೋವನು ಅವನೇ ಭೂಮಿಯನ್ನು ಮುಟ್ಟುತ್ತಾನೆ,
ಆಗಲದು ಕರಗುವದು;
ಅದರಲ್ಲಿ ವಾಸವಾಗಿರುವವರೆಲ್ಲರು ದುಃಖ ಪಡುವರು:
ಅದೆಲ್ಲಾ ನದಿಯ ಹಾಗೆ ಉಬ್ಬಿ,
ಐಗುಪ್ತದ ನದಿಯಿಂದಾದ ಹಾಗೆ ಮುಣುಗಿ ಹೋಗುವದು.
೬ ಆಕಾಶದಲ್ಲಿ ತನ್ನ ಮೇಲ್ಮಾಡಿಗೆಗಳನ್ನು ಕಟ್ಟಿ,
ಭೂಮಿಯ ಮೇಲೆ ತನ್ನ ಮಂಡಲವನ್ನು ಸ್ಥಾಪಿಸಿ,
ಸಮುದ್ರದ ನೀರುಗಳನ್ನು ಕರೆದು,
ಅವುಗಳನ್ನು ಭೂಮಿಯ ಮೇಲೆ ಹೊಯ್ಯುವವನು, ಅವನೇ;
ಅವನ ಹೆಸರು ಯೆಹೋವನೇ.

೭ ಇಸ್ರಯೇಲನ ಮಕ್ಕಳೇ,
ನೀವು ನನಗೆ ಕೂಷ್ಯರ ಮಕ್ಕಳ ಹಾಗಲ್ಲವೋ?
ಎಂದು ಯೆಹೋವನು ಅನ್ನುತ್ತಾನೆ.
ನಾನು ಇಸ್ರಯೇಲನ್ನು ಐಗುಪ್ತ ದೇಶದಿಂದಲೂ,
ಪಿಲಿಷ್ಟಿಯರನ್ನು ಕಫ್ತೋರಿನಿಂದಲೂ,
ಆರಾಮ್ಯರನ್ನು ಕೀರಿನಿಂದಲೂ,
ಏರಿ ಬರ ಮಾಡಿಲ್ಲವೋ?
೮ ಇಗೋ, ಕರ್ತನಾದ ಯೆಹೋವನ ಕಣ್ಣುಗಳು ಪಾಪವುಳ್ಳ ರಾಜ್ಯದ ಮೇಲೆ ಅವೆ;
ನಾನು ಅದನ್ನು ಭೂಮಿಯ ಮೇಲಿನಿಂದ ನಾಶನ ಮಾಡುವೆನು;
ಆದರೆ ಯಾಕೋಬನ ಮನೆಯವರನ್ನು ನಾನು ಶುದ್ಧವಾಗಿ ನಾಶನ ಮಾಡುವದಿಲ್ಲವೆಂದು,
ಯೆಹೋವನು ಅನ್ನುತ್ತಾನೆ.
೯ ಯಾಕಂದರೆ, ಇಗೋ, ನಾನು ಆಜ್ಞಾಪಿಸಿ,
ಇಸ್ರಯೇಲನ ಮನೆಯವರನ್ನು ಎಲ್ಲಾ ಜನಾಂಗಗಳಲ್ಲಿ,
ಧಾನ್ಯವನ್ನು ಮೊರದಲ್ಲಿ ಕೇರುವ ಪ್ರಕಾರ, ಕೇರುವೆನು;
ಆದರೂ ಒಂದು ಕಾಳಾದರೂ ನೆಲಕ್ಕೆ ಬೀಳದು.
೧೦ ಆದರೆ ನನ್ನ ಜನರ ಪಾಪಿಷ್ಠರೆಲ್ಲರು—
ಕೇಡು ನಮಗೆ ಮುಟ್ಟುವದಿಲ್ಲ, ನಮಗೆ ತಾಗುವದಿಲ್ಲ ಎಂದನ್ನುವವರು—
ಕತ್ತಿಯಿಂದ ಸಾಯುವರು.

೧೧ ಆ ದಿವಸದಲ್ಲಿ ನಾನು ದಾವೀದನ ಬಿದ್ದ ಗುಡಾರವನ್ನು ಎತ್ತಿ,
ಅದರ ಹರುಕುಗಳನ್ನು ಮುಚ್ಚುವೆನು;
ಅವನ ಹಾಳುಗಳನ್ನು ಎಬ್ಬಿಸಿ,
ಪೂರ್ವ ದಿವಸಗಳಲ್ಲಾದ ಹಾಗೆ ಕಟ್ಟುವೆನು.
೧೨ ಆಗಲವರು ಏದೋಮಿನ ಉಳಿವನ್ನೂ,
ನನ್ನ ಹೆಸರಿನಿಂದ ಕರೆಯಲ್ಪಡುವ ಎಲ್ಲಾ ಜನಾಂಗಗಳನ್ನೂ
ಸ್ವತಂತ್ರಿಸಿ ಕೊಳ್ಳುವಕೆಂದು,
ಇದನ್ನು ಮಾಡುವ ಯೆಹೋವನು ಅನ್ನುತ್ತಾನೆ.
೧೩ ಯೆಹೋವನು ಅನ್ನುವದೇನಂದರೆ—
ಇಗೋ ದಿನಗಳು ಬರುವವು;
ಆಗ ಉಳುವವನು ಕೊಯ್ಯುವವನನ್ನು,
ದ್ರಾಕ್ಷೆ ತುಳಿಯುವವನು, ಬೀಜ ಹಾಕುವವನನ್ನು, ಕಲತು ಕೊಳ್ಳುವನು;
ಆಗ ಬೆಟ್ಟಗಳು ಹೊಸ ದ್ರಾಕ್ಷೆರಸವನ್ನು ಸುರಿಯುವವು,
ಗುಡ್ಡಗಳೆಲ್ಲಾ ಕರಗುವವು.
೧೪ ನನ್ನ ಜನರಾದ ಇಸ್ರಯೇಲಿಯರ ಶೆರೆಯನ್ನು ತಿರುಗಿಸುವೆನು;
ಅವರು ಹಾಳಾದ ಪಟ್ಟಣಗಳನ್ನು ಕಟ್ಟಿ ವಾಸ ಮಾಡುವರು;
ದ್ರಾಕ್ಷೆ ತೋಟಗಳನ್ನು ನೆಟ್ಟು ಅವುಗಳ ರಸವನ್ನು ಕುಡಿಯುವರು;
ತೋಟಗಳನ್ನು ಮಾಡಿ, ಅವುಗಳ ಫಲವನ್ನು ತಿನ್ನುವರು.
೧೫ ಹೌದು, ಅವರನ್ನು ಅವರ ದೇಶದಲ್ಲಿ ನೆಡುವೆನು;
ನಾನು ಅವರಿಗೆ ಕೊಟ್ಟಿರುವ ದೇಶದೊಳಗಿಂದ
ಅವರು ಇನ್ನು ಮೇಲೆ ಕೀಳಲ್ಪಡಕೆಂದು,
ನಿನ್ನ ದೇವರಾದ ಯೆಹೋವನು ಹೇಳುತ್ತಾನೆ.

---

# OBADIAH.

## ಒಬದೀಯನು.

೧ ಒಬದೀಯನ ದರ್ಶನವು.
ಕರ್ತನಾದ ಯೆಹೋವನು ಏದೋಮನ್ನು ಕುರಿತು ಹೀಗೆ ಹೇಳುತ್ತಾನೆ—
ಯೆಹೋವನಿಂದ ಸುದ್ದಿಯನ್ನು ಕೇಳಿದ್ದೇವೆ;
ಜನಾಂಗಗಳಲ್ಲಿ ದೂತನು ಕಳುಹಿಸ್ಪಟ್ಟಿದ್ದಾನೆ;
ಏಳಿರಿ! ಅದಕ್ಕೆ ವಿರೋಧವಾದ ಯುದ್ಧಕ್ಕೆ ಏಳುವ!
೨ ಇಗೋ ನಿನ್ನನ್ನು ಜನಾಂಗಗಳಲ್ಲಿ ಸಣ್ಣವನಾಗಿ ಮಾಡಿದ್ದೇನೆ;
೩ ನೀನು ಬಹಳವಾಗಿ ತಿರಸ್ಕರಿಸಲ್ಪಟ್ಟಿದ್ದೀ.
ಬಂಡೆಯ ಬಿರುಕುಗಳಲ್ಲಿ ವಾಸ ಮಾಡುವವನೇ!
ನಿವಾಸವು ಎತ್ತರವಾಗಿರುವವನೇ!
ಯಾರು ನನ್ನನ್ನು ನೆಲಕ್ಕೆ ಇಳಿಸುವಕೆಂದು,
ತನ್ನ ಹೃದಯದಲ್ಲಿ ಅನ್ನುವವನೇ!
ನಿನ್ನ ಹೃದಯದ ಗರ್ವವು ನಿನ್ನನ್ನು ಮೋಸ ಗೊಳಿಸಿ ಅದೆ.
೪ ನೀನು ಹದ್ದಿನಂತೆ ಏರಿ ಕೊಂಡು ನಿನ್ನ ಗೂಡನ್ನು ನಕ್ಷತ್ರಗಳಲ್ಲಿ ಇಟ್ಟರೂ,
ಅಲ್ಲಿಂದ ನಿನ್ನನ್ನು ಇಳಿಸುವೆನೆಂದು,
ಯೆಹೋವನು ಅನ್ನುತ್ತಾನೆ.
೫ ಕಳ್ಳರು ನಿನ್ನ ಬಳಿಗೆ ಬಂದಿದ್ದರೆ,
ಸುಲು ಕೊಳ್ಳುವವರು ರಾತ್ರಿಯಲ್ಲಿ ಬಂದಿದ್ದರೆ—
ಎಷ್ಟೋ ಹಾಳಾದಿಯಲ್ಲ?—
ಅವರು ತಮಗೆ ಸಾಕಾಗುವಷ್ಟು ಕದ್ದು ಕೊಳ್ಳುವರಲ್ಲವೋ?



ದ್ರಾಕ್ಷೆ ಕೊಯ್ಯುವವರು ನಿನ್ನ ಬಳಿಗೆ ಬಂದಿದ್ದರೆ,
ಅವರು ದ್ರಾಕ್ಷೆ ಹಕ್ಕಲುಗಳನ್ನಾದರೂ ಬಿಡುವರಲ್ಲವೋ?
೬ ಏಸಾವು ಎಷ್ಟೋ ಶೋಧಿಸಲ್ಪಟ್ಟಿದ್ದಾನೆ!
ಅವನ ರಹಸ್ಯ ಸ್ಥಳಗಳು ಎಷ್ಟೋ ಹುಡುಕಲ್ಪಟ್ಟಿವೆ!
೭ ನಿನ್ನ ಸಂಗಡ ಒಡಂಬಟ್ಟ ಮನುಷ್ಯರೆಲ್ಲರು,
ನಿನ್ನನ್ನು ಮೇರೆಯ ಪರಿಯಂತರಕ್ಕೂ ಕಳುಹಿಸಿದ್ದಾರೆ;
ನಿನ್ನ ಸಂಗಡ ಸಮಾಧಾನವಾಗಿದ್ದ ಮನುಷ್ಯರು,
ನಿನ್ನನ್ನು ಮೋಸ ಮಾಡಿದ್ದಾರೆ;
ನಿನಗೆ ವಿರೋಧವಾಗಿ ಮೇಲೊಂಡಿದ್ದಾರೆ;
ನಿನ್ನ ಕೊಟ್ಟೆಯನ್ನು ಉಂಡವರು,
ನಿನ್ನ ಕೆಳಗೆ ಬೋನು ಇಟ್ಟಿದ್ದಾರೆ;
ಅವನಲ್ಲಿ ವಿವೇಕವೇನೂ ಇಲ್ಲ.

೮ ಯೆಹೋವನು ಅನ್ನುವವೇನಂದರೆ—
ನಾನು ಆ ದಿವಸದಲ್ಲಿ ಏದೋಮಿನೊಳಗಿಂದ ಜ್ಞಾನಿಗಳನ್ನೂ,
ಏಸಾವನ ಬೆಟ್ಟದೊಳಗಿಂದ ವಿವೇಕವನ್ನೂ, ನಾಶ ಮಾಡೆನೇ?
೯ ಸರ್ವರು ಸಂಹಾರದಿಂದ ಏಸಾವನ ಬೆಟ್ಟದೊಳಗಿಂದ ನಾಶವಾಗುವ ಹಾಗೆ,
ತೇಮಾನೇ, ನಿನ್ನ ಪರಾಕ್ರಮಶಾಲಿಗಳು ಭೂಬರಿ ಪಡುವರು.
೧೦ ನಿನ್ನ ತಮ್ಮನಾದ ಯಾಕೋಬನಿಗೆ ವಿರೋಧವಾದ ನಿನ್ನ ಬಲಾತ್ಕಾರದ ನಿಮಿತ್ತ,
ನಾಚಿಕೆ ನಿನ್ನನ್ನು ಮುಚ್ಚುವದು;
ನೀನು ಎಂದೆಂದಿಗೂ ಕಡಿದು ಹಾಕಲ್ಪಡುವಿ.
೧೧ ನೀನು ಎದುರು ನಿಂತ ದಿವಸದಲ್ಲಿ,
ಪರರು ಅವನ ಆಸ್ತಿಯನ್ನು ವೈದು,
ಅನ್ಯರು ಅವನ ಬಾಗಲುಗಳಲ್ಲಿ ಪ್ರವೇಶಿಸಿ,
ಯೆರೂಸಲೇಮಿನ ಮೇಲೆ ಚೀಟುಗಳನ್ನು ಹಾಕಿದ ದಿವಸದಲಿ,
ನೀನು ಸಹ ಅವರಲ್ಲಿ ಒಬ್ಬನ ಹಾಗಿದ್ದಿ.

೧೨ ಆದರೆ ನಿನ್ನ ಸಹೋದರನ ದಿವಸದಲ್ಲಿ,
ಅವನು ಅನ್ಯನಾದ ದಿವಸದಲ್ಲಿ,
ನೀನು ನೋಡ ಬಾರದಾಗಿತ್ತು;
ಯೆಹೂದನ ಮಕ್ಕಳ ಮೇಲೆ ಅವರ ನಾಶನದ ದಿವಸದಲ್ಲಿ,
ಸಂತೋಷಿಸ ಬಾರದಾಗಿತ್ತು;
ಕಷ್ಟದ ದಿವಸದಲ್ಲಿ,
ಅಹಂಕಾರವಾಗಿ ಮಾತಾಡ ಬಾರದಾಗಿತ್ತು;
೧೩ ನನ್ನ ಜನರ ಬಾಗಲಿನಲ್ಲಿ, ಅವರ ಆಪತ್ತಿನ ದಿವಸದಲ್ಲಿ,
ಪ್ರವೇಶಿಸ ಬಾರದಾಗಿತ್ತು;
ಹೌದು, ನೀನು, ಅವರ ಆಪತ್ತಿನ ದಿವಸದಲ್ಲಿ,
ಅವರ ಕೇಡನ್ನು ನೋಡ ಬಾರದಾಗಿತ್ತು;
ಅವರ ಆಪತ್ತಿನ ದಿವಸದಲ್ಲಿ,
ಅವರ ಆಸ್ತಿಯ ಮೇಲೆ ಕೈ ಹಾಕ ಬಾರದಾಗಿತ್ತು;
೧೪ ಅವನಲ್ಲಿ ಓಡಿ ಹೋದವರನ್ನು ಕಡಿದು ಬಿಡುವದಕ್ಕೆ,
ನೀನು ಕಲತ ದಾರಿಯಲ್ಲಿ ನಿಲ್ಲ ಬಾರದಾಗಿತ್ತು;
ಕಷ್ಟದ ದಿವಸದಲ್ಲಿ,
ಅವನಲ್ಲಿ ಉಳಿ ಕೊಂಡವರನ್ನು ಒಪ್ಪಿಸ ಬಾರದಾಗಿತ್ತು.

೧೫ ಯಾಕಂದರೆ ಯೆಹೋವನ ದಿವಸವು
ಎಲ್ಲಾ ಜನಾಂಗಗಳ ಮೇಲೆ ಸಮೀಪವಾಗಿದೆ;
ನೀನು ಮಾಡಿದ ಹಾಗೆಯೇ ನಿನಗೆ ಮಾಡಲ್ಪಡುವದು;
ನಿನ್ನ ಪ್ರತಿಫಲವು ನಿನ್ನ ತಲೆಯ ಮೇಲೆ ತಿರುಗುವದು.
೧೬ ಯಾಕಂದರೆ ನೀವು ನನ್ನ ಪರಿಶುದ್ಧ ಪರ್ವತದ ಮೇಲೆ ಕುಡಿದ ಹಾಗೆಯೇ,
ಜನಾಂಗಗಳೆಲ್ಲಾ ನಿತ್ಯವಾಗಿ ಕುಡಿಯುವವು;
ಹೌದು, ಕುಡಿದು ಗುಟುಕರಿಸುವವು;
ಇಲ್ಲದೆ ಇದ್ದವರ ಹಾಗೆಯೇ ಇರುವವು.

೧೭ ಆದರೆ ಚಿಯೋನ್ ಪರ್ವತದಲ್ಲಿ ರಕ್ಷಣೆ ಇರುವದು,
ಅದು ಪರಿಶುದ್ಧವಾಗಿರುವದು;
ಮತ್ತು ಯಾಕೋಬನ ಮನೆಯವರು ತಮ್ಮ ಸ್ವಾಸ್ತ್ಯಗಳನ್ನು ಸ್ವತಂತ್ರಿಸಿ ಕೊಳ್ಳುವರು.
೧೮ ಇದಲ್ಲದೆ ಯಾಕೋಬನ ಮನೆಯವರು ಬೆಂಕಿಯಾಗಿಯೂ,
ಯೋಸೆಫನ ಮನೆಯವರು ಜ್ವಾಲೆಯಾಗಿಯೂ, ಇರುವರು;
ಏಸಾವನ ಮನೆಯವರು ಕೂಳೆಯಾಗುವರು,
ಅವರು ಇವರನ್ನು ಹೊತ್ತಿಸಿ, ಇವರನ್ನು ತಿಂದು ಬಿಡುವರು;
ಏಸಾವನ ಮನೆಯವರಿಗೆ ಉಳಿವು ಇರುವದಿಲ್ಲ;
ಯಾಕಂದರೆ ಯೆಹೋವನು ಅದನ್ನು ಹೇಳಿ ಇದ್ದಾನೆ.
೧೯ ಮತ್ತು ದಕ್ಷಿಣದವರು ಏಸಾವನ ಬೆಟ್ಟವನ್ನೂ,
ಬೈಲಿನವರು ಪಿಲಿಷ್ಟಿಯರನ್ನೂ, ಸ್ವತಂತ್ರಿಸಿ ಕೊಳ್ಳುವರು;
ಎಫ್ರಾಯಿಮಿನ ಹೊಲಗಳನ್ನು, ಸಮಾರ್ಯದ ಹೊಲಗಳನ್ನು ಸಹ, ಸ್ವತಂತ್ರಿಸಿ ಕೊಳ್ಳುವರು;
ಮತ್ತು ಬೆನ್ಯಮೀನನು ಗಿಲ್ಯಾದನ್ನು ಸ್ವತಂತ್ರಿಸಿ ಕೊಳ್ಳುವನು.
೨೦ ಇದಲ್ಲದೆ, ಜಾರಿಪಾತಿನ ಪರ್ಯಂತರ ಕಾನಾನ್ಯರಲ್ಲಿರುವ ಇಸ್ರಯೇಲನ ಮಕ್ಕಳ ಈ ಸೈನ್ಯದ ಶೆರೆಯವರು,
ಸೆಫರಾದಿನಲ್ಲಿರುವ ಯೆರೊಸಲೇಮಿನ ಶೆರೆಯವರು,
ದಕ್ಷಿಣದ ಪಟ್ಟಣಗಳನ್ನು ಸ್ವತಂತ್ರಿಸಿ ಕೊಳ್ಳುವರು.
೨೧ ಇದಲ್ಲದೆ, ಚಿಯೋನ್ ಪರ್ವತದಲ್ಲಿ ರಕ್ಷಕರು,
ಏಸಾವಿನ ಬೆಟ್ಟಕ್ಕೆ ನ್ಯಾಯ ತೀರಿಸುವದಕ್ಕೆ, ಏಳುವರು;
ಮತ್ತು ರಾಜ್ಯವು ಯೆಹೋವನದಾಗಿರುವದು.

---

# JONAH.

## ಯೋನನು.

### ೧. ಸಂಧಿ.

೧ ಯೆಹೋವನ ವಾಕ್ಯವು ಅಮಿತ್ತಾಯನ ಮಗನಾದ ಯೋನ
೨ನಿಗೆ ಉಂಟಾಯಿತು, ಹ್ಯಾಗಂದರೆ—ಎದ್ದು, ಆ ದೊಡ್ಡ ಪಟ್ಟಣವಾ
ದ ನಿನೆವೆಗೆ ಹೋಗಿ, ಅದಕ್ಕೆ ವಿರೋಧವಾಗಿ ಸಾರು; ಯಾಕಂ
೩ ರೆ ಅವರ ಕೆಟ್ಟತನವು ನನ್ನ ಮುಂದೆ ಏರಿ ಬಂತು. ಆದರೆ ಯೋ
ನನು ಯೆಹೋವನ ಸಮುಖದಿಂದ ತಾರ್ಷಿಷಿಗೆ ಓಡಿ ಹೋಗುವ
ದಕ್ಕೆ ಎದ್ದು, ಯೊಪ್ಪಕ್ಕೆ ಇಳಿದು, ತಾರ್ಷಿಷಿಗೆ ಹೋಗುವ ಹಡಗ
ವನ್ನು ಕಂಡು, ಅದರ ಕೂಲಿ ಕೊಟ್ಟು, ಯೆಹೋವನ ಸಮುಖ
ತಪ್ಪಿಸ, ಅವರ ಸಂಗಡ ತಾರ್ಷಿಷಿಗೆ ಹೋಗುವದಕ್ಕೆ, ಅದನ್ನು
ಏರಿದನು.

೪ ಆದರೆ ಯೆಹೋವನು ದೊಡ್ಡ ಘಾಳಿಯನ್ನು ಸಮುದ್ರದ
ಮೇಲೆ ಕಳಹಿಸಿದನು; ಮತ್ತು ಸಮುದ್ರದಲ್ಲಿ ಮಹಾ ಬಿರುಘಾಳಿ
೫ ಉಂಟಾಗಿ, ಹಡಗವು ಒಡೆಯಲಿಕ್ಕಿತ್ತು. ಆಗ ಹಡಗದವರು ಭ
ಯ ಪಟ್ಟು, ಒಬ್ಬೊಬ್ಬನು ತನ್ನ ತನ್ನ ದೇವರಿಗೆ ಕೂಗಿ, ಹಡಗ
ವನ್ನು ಹಾರ ಮಾಡುವ ಹಾಗೆ ಅದರಲ್ಲಿದ್ದ ಸಾಮಾನುಗಳನ್ನು
ಸಮುದ್ರದಲ್ಲಿ ಹಾಕಿ ಬಿಟ್ಟರು; ಆದರೆ ಯೋನನು ಹಡಗದ ಒಳಗೆ
ಇಳಿದು ಹೋಗಿ, ಮಲಗಿ ಕೊಂಡು, ಗಾಢ ನಿದ್ರೆಯಲ್ಲಿದ್ದನು.

೬ ಆಗ ಹಡಗದ ಯಜಮಾನನು ಅವನ ಬಳಿಗೆ ಬಂದು, ಗಾಢ
ನಿದ್ರೆ ಮಾಡುವವನೇ! ನಿನಗೇನಾಯಿತು? ಎದ್ದು, ನಿನ್ನ ದೇವರ
ನ್ನು ಕೂಗು; ಬಂದು ಬೇಳೆ ನಾವು ನಾಶವಾಗದ ಹಾಗೆ, ದೇವರು
ನಮ್ಮನ್ನು ಜ್ಞಾಪಕ ಮಾಡ್ಯಾನು, ಅಂದನು.

೭ ಇದಲ್ಲದೆ ಅವರು ಒಬ್ಬರಿಗೊಬ್ಬರು—ಬನ್ನಿ, ಚೀಟುಗಳನ್ನು
ಹಾಕೋಣ, ಯಾವನ ನಿಮಿತ್ತ ಈ ಕೇಡು ನಮಗೆ ಬಂತೋ ತಿಳಿ
ಯೋಣ, ಎಂದು ಹೇಳಿ ಕೊಂಡರು. ಹಾಗೆಯೇ ಅವರು ಚೀ
೮ ಟುಗಳನ್ನು ಹಾಕಿದಾಗ, ಯೋನನ ಮೇಲೆ ಚೀಟು ಬಿತ್ತು. ಆಗ
ಅವರು ಅವನಿಗೆ ಹೇಳಿದ್ದು—ನಮಗೆ ತಿಳಿಸಪ್ಪಾ, ಯಾತಕ ನಿಮಿ
ತ್ತ ಈ ಕೇಡು ನಮಗೆ ಬಂತು? ನಿನ್ನ ಕೆಲಸವೇನು? ಎಲ್ಲಿಂದ ಬಂ
೯ ದಿ? ನಿನ್ನ ದೇಶ ಯಾವದು? ನೀನು ಯಾವ ಜನದವನು? ಅವ
ನವರಿಗೆ—ನಾನು ಇಬ್ರೀಯನು; ನಾನು ಸಮುದ್ರವನ್ನೂ ಬಣಗಿ
ರ ಭೂಮಿಯನ್ನೂ ಉಂಟು ಮಾಡಿದ ಪರಲೋಕದ ದೇವರಾದ
ಯೆಹೋವನಿಗೆ ಭಯ ಪಡುವವನಾಗಿದ್ದೇನೆಂದು ಹೇಳಿದನು.
೧೦ ಆಗ ಆ ಮನುಷ್ಯರು ಬಹಳ ಭಯ ಪಟ್ಟು, ಇದನ್ನು ಯಾಕೆ
ಮಾಡಿದ್ದಿ? ಎಂದು ಅವನಿಗೆ ಹೇಳಿದರು; ಯಾಕಂದರೆ ಯೆಹೋ
ವನ ಸಮುಖದಿಂದ ಓಡಿ ಹೋಗುತ್ತಾನೆಂದು ಆ ಮನುಷ್ಯರಿಗೆ
೧೧ ತಿಳಿದಿತ್ತು; ಅವನು ಅವರಿಗೆ ಹೇಳಿ ಇದ್ದನು. ಆಗಲವರು ಅವನಿ
ಗೆ—ಸಮುದ್ರವು ನಮಗೆ ಶಾಂತವಾಗುವ ಹಾಗೆ ನಿನಗೆ ಏನು ಮಾ
ಡ ಬೇಕು? ಅಂದರು; ಯಾಕಂದರೆ ಸಮುದ್ರವು ಹೆಚ್ಚಾಗಿ ಉಬ್ಬು
೧೨ ತ್ತಾ ಬರುತ್ತದೆ. ಅವನು ಅವರಿಗೆ—ನನ್ನನ್ನು ಎತ್ತಿ, ಸಮುದ್ರದ
ಲ್ಲಿ ಹಾಕಿರಿ, ಆಗ ಸಮುದ್ರವು ನಿಮಗೆ ಶಾಂತವಾಗುವವು; ಯಾ
ಕಂದರೆ ನನ್ನ ನಿಮಿತ್ತ ಈ ದೊಡ್ಡ ಬಿರುಘಾಳಿ ನಿಮ್ಮ ಮೇಲೆ ಬಂ
ತೆಂದು ಬಲ್ಲೆನು, ಅಂದನು.

೧೩ ಆದರೂ ಆ ಮನುಷ್ಯರು ಧಡಕ್ಕೆ ತಿರುಗಿ ಕೊಳ್ಳುವ ಹಾಗೆ
ಬಲವಾಗಿ ಹುಟ್ಟು ಹಾಕಿದರು; ಆದರೆ ಅವರಿಂದಲಾಗದೆ ಹೋಯಿ
ತು; ಯಾಕಂದರೆ ಸಮುದ್ರವು ಅವರಿಗೆ ಎದುರಾಗಿ ಹೆಚ್ಚೆಚ್ಚಾಗಿ
೧೪ ಉಬ್ಬುತ್ತಾ ಬಂತು. ಆದದರಿಂದ ಅವರು ಯೆಹೋವನಿಗೆ ಮೊರೆ
ಇಟ್ಟು ಹೇಳಿದ್ದೇನಂದರೆ—ಅಯ್ಯೋ! ಯೆಹೋವನೇ, ನಾವು ಈ
ಮನುಷ್ಯನ ಜೀವದ ನಿಮಿತ್ತ ನಾಶವಾಗದಿರಲಿ; ಮತ್ತು ಅಪರಾಧ
ವಿಲ್ಲದ ರಕ್ತವನ್ನು ನಮ್ಮ ಮೇಲೆ ಹೊರಿಸ ಬೇಡ; ಯಾಕಂದರೆ
ಯೆಹೋವನೇ! ನೀನು ನಿನ್ನ ಚಿತ್ತಕ್ಕೆ ಬಂದ ಹಾಗೆ ಮಾಡಿದ್ದಿ.
೧೫ ಆಗಲವರು ಯೋನನನ್ನು ಎತ್ತಿ ಸಮುದ್ರದಲ್ಲಿ ಹಾಕಿದರು; ಆಗ
೧೬ ಸಮುದ್ರವು ತನ್ನ ಉಗ್ರವನ್ನು ನಿಲ್ಲಿಸಿ ಬಿಟ್ಟಿತು. ಆಗ ಆ ಮನು
ಷ್ಯರು ಯೆಹೋವನಿಗೆ ಬಹಳವಾಗಿ ಭಯ ಪಟ್ಟು, ಯೆಹೋವ
ನಿಗೆ ಬಲಿ ಅರ್ಪಿಸಿ, ಹರಿಕೆಗಳನ್ನು ಮಾಡಿ ಕೊಂಡರು.

೧೭ ಆದರೆ ಯೆಹೋವನು ಯೋನನನ್ನು ನುಂಗುವ ಹಾಗೆ ದೊ
ಡ್ಡ ಮೀನನ್ನು ನೇಮಿಸಿ ಇದ್ದನು; ಮತ್ತು ಯೋನನು ಆ ಮೀನಿನ
ಹೊಟ್ಟೆಯಲ್ಲಿ ಮೂರು ದಿವಸವೂ, ಮೂರು ರಾತ್ರಿಯೂ,
ಇದ್ದನು.

### ೨. ಸಂಧಿ.

೧ ಆಗ ಯೋನನು ಮೀನಿನ ಹೊಟ್ಟೆಯೊಳಗಿಂದ ತನ್ನ ದೇವ
ರಾದ ಯೆಹೋವನಿಗೆ ಪ್ರಾರ್ಥನೆ ಮಾಡಿ,
೨ ಹೇಳಿದ್ದೇನಂದರೆ—
ನನಗೆ ಇಕ್ಕಟ್ಟು ಇರುವದರಿಂದ ಯೆಹೋವನಿಗೆ ಮೊರೆ ಇಟ್ಟೆನು;
ಅವನು ನನಗೆ ಉತ್ತರ ಕೊಟ್ಟನು;
ಪಾತಾಳದ ಹೊಟ್ಟೆಯೊಳಗಿಂದ ಕೂಗಿದೆನು,
ಆಗ ನನ್ನ ಶಬ್ದವನ್ನು ಕೇಳಿದಿ.
೩ ನನ್ನನ್ನು ಅಗಾಧದಲ್ಲಿಯೂ, ಸಮುದ್ರದ ಹೃದಯದಲ್ಲಿಯೂ,
ಹಾಕಿದಿ,
ಪ್ರವಾಹಗಳು ನನ್ನನ್ನು ಸುತ್ತಿ ಕೊಂಡವು;
ನಿನ್ನ ಅಲೆಗಳೂ ನಿನ್ನ ತೆರೆಗಳೂ ಎಲ್ಲಾ ನನ್ನ ಮೇಲೆ ದಾಟಿ
ಹೋದವು.
೪ ಆಗ ನಾನು ಹೇಳಿದ್ದು—
ನಿನ್ನ ಕಣ್ಣುಗಳ ಮುಂದಿನಿಂದ ಹೊರಗೆ ಹಾಕಲ್ಪಟ್ಟಿದ್ದೇನೆ,
ಆದಾಗ್ಯೂ ನಿನ್ನ ಪರಿಶುದ್ಧ ಮಂದಿರದ ಕಡೆಗೆ ಇನ್ನು ನೋ
ಡುವೆನು.
೫ ನೀರುಗಳು ಪ್ರಾಣದ ಮಟ್ಟಿಗೂ ನನ್ನನ್ನು ಸುತ್ತಿ ಕೊಂಡವು;
ಅಗಾಧವು ನನ್ನ ಸುತ್ತಲಿತ್ತು;
ಅಪುಗಳು ನನ್ನ ತಲೆಗೆ ಕಟ್ಟಲ್ಪಟ್ಟಿದ್ದವು.
೬ ಬೆಟ್ಟಗಳ ಅಡಿಗಳ ಪರ್ಯಂತರ ಇಳಿದು ಹೋದೆನು;
ಭೂಮಿಯ ಅಡ್ಡದಂಡೆಗಳು ನಿತ್ಯವಾಗಿ ನನ್ನ ಸುತ್ತಲಿದ್ದವು;
ಆದರೂ, ನನ್ನ ದೇವರಾದ ಯೆಹೋವನೇ,
ನೀನು ನನ್ನ ಪ್ರಾಣವನ್ನು ನಾಶನದೊಳಗಿಂದ ಎಬ್ಬಿಸಿದ್ದಿ.
೭ ನನ್ನ ಪ್ರಾಣವು ನನ್ನಲ್ಲಿ ಕುಂದಿ ಹೋದಾಗ,



ಯೆಹೋವನನ್ನು ಜ್ಞಾಪಕ ಮಾಡಿ ಕೊಂಡೆನು;
ಮತ್ತು ನನ್ನ ಪ್ರಾರ್ಥನೆಯು ನಿನ್ನ ಬಳಿಗೆ,
ನಿನ್ನ ಪರಿಶುದ್ಧ ಮಂದಿರದೊಳಗೆ, ಬಂತು.
೮ ಸುಳ್ಳಾದ ಮಾಯೆಗಳನ್ನು ದೃಷ್ಟಿಸುವವರು,
ಸ್ವಂತ ಕೃಪೆಯನ್ನು ಬಿಡುತ್ತಾರೆ.
೯ ಆದರೆ ನಾನು ಸ್ತೋತ್ರದ ಶಬ್ದದಿಂದ ನಿನಗೆ ಬಲಿ ಅರ್ಪಿಸು
ವೆನು;
ನಾನು ಹೇಳಿದ ಹರಿಕೆಯನ್ನು ತೀರಿಸುವೆನು;
ರಕ್ಷಣೆಯು ಯೆಹೋವನದೇ.

೧೦ ಆಗ ಯೆಹೋವನು ಆ ಮೀನಿಗೆ ಹೇಳಿದದರಿಂದ ಅದು ಯೋ
ನನನ್ನು ಒಣ ಭೂಮಿಯ ಮೇಲೆ ಕಾರಿ ಬಿಟ್ಟಿತು.

### ೩. ಸಂಧಿ.

೧ ಮತ್ತು ಯೆಹೋವನ ವಾಕ್ಯವು ಎರಡನೇ ಸಾರಿ ಯೋನನಿಗೆ
೨ ಉಂಟಾಯಿತು, ಹ್ಯಾಗಂದರೆ—ಎದ್ದು, ಆ ದೊಡ್ಡ ಪಟ್ಟಣವಾದ ನಿನಿ
ವೆಗೆ ಹೋಗಿ, ನಾನು ನಿನಗೆ ಹೇಳುವ ಸಾರುವಿಕೆಯನ್ನು ಅದ
೩ ಕ್ಕೆ ಸಾರಿ ಹೇಳು. ಹಾಗೆಯೇ ಯೋನನು ಎದ್ದು, ಯೆಹೋವನ
ವಾಕ್ಯದ ಪ್ರಕಾರ ನಿನಿವೆಗೆ ಹೋದನು; ಆ ನಿನಿವೆ ಮೂರು ದಿವ
೪ ಸದ ಪ್ರಯಾಣವಾದ, ಮಹಾ ದೊಡ್ಡ ಪಟ್ಟಣವಾಗಿತ್ತು. ಆಗ
ಯೋನನು ಒಂದು ದಿವಸದ ಪ್ರಯಾಣ ಪಟ್ಟಣದಲ್ಲಿ ಪ್ರವೇಶಿಸಲಾ
ರಂಭಿಸಿ—ಇನ್ನು ನಾಲ್ವತ್ತು ದಿವಸಗಳಾದ ಮೇಲೆ ನಿನಿವೆ ಕೆಡವ
ಲ್ಪಡುವದೆಂದು ಸಾರಿ ಹೇಳಿದನು.

೫ ನಿನಿವೆಯ ಮನುಷ್ಯರು ದೇವರನ್ನು ನಂಬಿ, ಉಪವಾಸವನ್ನು
ಸಾರಿ, ದೊಡ್ಡವನು ಪೊದಲ್ಗೊಂಡು ಚಿಕ್ಕವನ ಪರ್ಯಂತರ,
೬ ಗೋಣಿಯನ್ನು ಉಟ್ಟು ಕೊಂಡರು. ಆ ಮಾತು ನಿನಿವೆಯ ಅ
ರಸನಿಗೆ ಮುಟ್ಟಿದಾಗ, ಅವನು ತನ್ನ ಸಿಂಹಾಸನದಿಂದ ಎದ್ದು, ತ
ನ್ನ ನಿಲವಂಗಿಯನ್ನು ತೆಗೆದಿಟ್ಟು, ಗೋಣಿಯನ್ನು ಉಟ್ಟು ಕೊಂ
೭ ಡು, ಬೂದಿಯಲ್ಲಿ ಕೂತು ಕೊಂಡನು. ಮತ್ತು ಅವನು, ಅರಸ
ನಿಂದಲೂ, ತನ್ನ ಶ್ರೇಷ್ಠರಿಂದಲೂ, ಆದ ನಿರ್ಣಯವನ್ನು ನಿನಿವೆ
ಯಲ್ಲಿ ಸಾರಿ ಹೇಳಿಸಿದ್ದೇನಂದರೆ—ಮನುಷ್ಯರಾಗಲಿ, ಮೃಗಗ
ಳಾಗಲಿ, ದನಗಳಾಗಲಿ, ಕುರಿಗಳಾಗಲಿ, ಏನಾದರೂ ರುಚಿ ನೋ
ಡದಿರಲಿ; ಮೇಯದಿರಲಿ; ನೀರನ್ನು ಕುಡಿಯದಿರಲಿ, ಮನುಷ್ಯರೂ
ಮೃಗಗಳೂ ಗೋಣಿ ಹಾಕಿ ಕೊಂಡು ಬಲವಾಗಿ ದೇವರಿಗೆ ಮೊ
೮ ರೆ ಇಡಲಿ; ಹೌದು, ಅವರು ತಮ್ಮು ತಮ್ಮು ದುರ್ಮಾರ್ಗಗಳ
ನ್ನೂ, ತಮ್ಮು ತಮ್ಮು ಕೈಗಳಲ್ಲಿರುವ ಬಲಾತ್ಕಾರವನ್ನೂ, ಬಿಟ್ಟು
೯ ತಿರುಗಲಿ. ದೇವರು ತಿರುಗಿ ಕೊಂಡು, ಪಶ್ಚಾತ್ತಾಪ ಪಟ್ಟು, ನಾ
ವು ನಾಶವಾಗದ ಹಾಗೆ ತನ್ನ ಕೋಪದ ಉರಿಯನ್ನು ಬಿಟ್ಟಾ
೧೦ ನೇನೋ, ಯಾರು ಬಲ್ಲರು? ಆಗ ದೇವರು ಅವರ ಕ್ರಿಯೆಗಳ
ನ್ನೂ, ಅವರು ತಮ್ಮು ಕೆಟ್ಟ ಮಾರ್ಗವನ್ನು ಬಿಟ್ಟು ತಿರುಗಿದ
ರೆಂದೂ, ನೋಡಿದನು; ಮತ್ತು ದೇವರು ಅವರಿಗೆ ಮಾಡುತ್ತೇನೆಂ
ದು ಹೇಳಿದ ಕೇಡಿನ ವಿಷಯ ಪಶ್ಚಾತ್ತಾಪ ಪಟ್ಟು ಅದನ್ನು ಮಾ
ಡಲಿಲ್ಲ.

### ೪. ಸಂಧಿ.

೧ ಆದರೆ ಅದು ಯೋನನ ಮನಸ್ಸಿಗೆ ಎಳ್ಳು ಮಾತ್ರ ಸರಿಯಾ
೨ ದದ್ದಲ್ಲ, ಅವನಿಗೆ ಕೋಪ ಬಂತು. ಅವನು ಯೆಹೋವನಿಗೆ
ಪ್ರಾರ್ಥನೆ ಮಾಡಿ, ಹೇಳಿದ್ದೇನಂದರೆ—ಅಯ್ಯೋ, ಯೆಹೋವ
ನೇ, ನಾನು ನನ್ನ ದೇಶದಲ್ಲಿದ್ದಾಗ ಇದನ್ನೇ ನಾನು ಹೇಳಲಿಲ್ಲ
ವೋ? ಆದಕಾರಣ ನಾನು ತಾರ್ಷಿಷಿಗೆ ಓಡಿ ಹೋಗುವದಕ್ಕೆ
ಮುಂಕೊಂಡೆನು; ಯಾಕಂದರೆ ನೀನು ಕರುಣೆಯೂ, ಕನಿಕರ
ವೂ, ದೀರ್ಘಶಾಂತಿಯೂ, ಬಹಳ ಕೃಪೆಯೂ, ಉಳ್ಳ ದೇವರೆಂ
ದೂ, ಕೇಡಿನ ವಿಷಯ ಪಶ್ಚಾತ್ತಾಪ ಪಡುವವನೆಂದೂ, ನನಗೆ ತಿಳಿ
೩ ಯಿತು. ಆದದರಿಂದ, ಯೆಹೋವನೇ, ಈಗಲೇ ನನ್ನ ಪ್ರಾಣವ
ನ್ನು ನನ್ನಿಂದ ತೆಗೆ; ಯಾಕಂದರೆ ನಾನು ಬದುಕುವದಕ್ಕಿಂತ ಸಾ
೪ ಯುವದು ಒಳ್ಳೇದು. ಆಗ ಯೆಹೋವನು—ನೀನು ಕೋಪ
ಮಾಡುವದು ಒಳ್ಳೇದೋ? ಎಂದು ಹೇಳಿದನು.

೫ ಆಗ ಯೋನನು ಪಟ್ಟಣವನ್ನು ಬಿಟ್ಟು, ಪಟ್ಟಣದ ಮೂಡಣ ಕಡೆ
ಯಲ್ಲಿ ಕೂತು ಕೊಂಡು, ಗುಡಸಲನ್ನು ಮಾಡಿ ಕೊಂಡು, ಪಟ್ಟಣ
ದಲ್ಲಿ ಏನಾಗುವದೆಂದು ನೋಡುವದಕ್ಕೆ ಅದರ ನೆರಳಿನಲ್ಲಿ ಕೂತು
೬ ಕೊಂಡನು. ಮತ್ತು ದೇವರಾದ ಯೆಹೋವನು ಒಂದು ಔಲ್ಲ ಗಿಡ
ವನ್ನು ನೇಮಿಸಿ, ಅದು ಯೋನನ ಮೇಲೆ ಏರಿ ಬಂದು, ಅವನ
ತಲೆಯ ಮೇಲೆ ನೆರಳು ಕೊಟ್ಟು, ಅವನ ದುಃಖದಿಂದ ಅವನನ್ನು
ಬಿಡಿಸ ಮಾಡಿದನು; ಮತ್ತು ಯೋನನು ಆ ಔಲ್ಲ ಗಿಡವನ್ನು ಕು
ರಿತು ಬಹಳ ಸಂತೋಷ ಪಟ್ಟನು.

೭ ಆದರೆ ಮಾರಣೆ ದಿವಸದಲ್ಲಿ ಉದಯವಾದಾಗ, ದೇವರು ಒಂ
ದು ಹುಳುವನ್ನು ನೇಮಿಸಿದನು; ಅದು ಔಲ್ಲ ಗಿಡವನ್ನು, ಅದು ಬಣ
೮ ಗುವ ಹಾಗೆ, ಬಡಿಯಿತು. ಮತ್ತು ಆದದ್ದೇನಂದರೆ, ಸೂರ್ಯನು
ಹುಟ್ಟುವಾಗ ದೇವರು ಕೆಕೆಯುಳ್ಳ ಮೂಡಣ ಘಾಳಿಯನ್ನು ನೇ
ಮಿಸಿದನು; ಆಗ ಬಿಸಲು ಯೋನನ ತಲೆಯ ಮೇಲೆ ಬಡಿದದರಿಂದ,
ಅವನು ಮೈ ಮರೆತು, ತನ್ನಲ್ಲಿ ಮರಣವನ್ನು ಇಚ್ಛೈಸಿ, ನಾನು
೯ ಬದುಕುವದಕ್ಕಿಂತ ಸಾಯುವದು ಒಳ್ಳೇದು, ಅಂದನು. ಆಗ ದೇವ
ರು ಯೋನನಿಗೆ—ನೀನು ಔಲ್ಲ ಗಿಡವನ್ನು ಕುರಿತು ಕೋಪ ಮಾ
ಡುವದು ಒಳ್ಳೇದೋ? ಅಂದನು; ಅವನು—ನಾನು ಸಾಯುವ
೧೦ ತನಕ ಕೋಪ ಮಾಡುವದು ಒಳ್ಳೇದೇ, ಅಂದನು. ಆಗ ಯೆ
ಹೋವನು ಹೇಳಿದ್ದೇನಂದರೆ—ನೀನು ಕಷ್ಟ ಮಾಡದಂಥ, ಪ್ಯೇಸ
ದಂಥ, ಒಂದು ರಾತ್ರಿಯಲ್ಲಿ ಹುಟ್ಟಿ, ಒಂದು ರಾತ್ರಿಯಲ್ಲಿ ನಾಶನ
೧೧ ವಾದಂಥ, ಆ ಔಲ್ಲ ಗಿಡದ ಮೇಲೆ ಕನಿಕರ ಪಟ್ಟಿಯಲ್ಲ? ಹಾಗಾದ
ರೆ, ಎಡ ಬಲ ಕೈಗಳನ್ನು ತಿಳಿಯದವರಾದ, ಲಕ್ಷಾ ಇಪ್ಪತ್ತು ಸಾ
ವಿರಕ್ಕಿಂತ ಹೆಚ್ಚಾದ ಜನರು, ಬಹಳ ದನಗಳು ಸಹ, ಇರುವ ಆ
ದೊಡ್ಡ ಪಟ್ಟಣವಾದ ನಿನಿವೆಯನ್ನು ನಾನು ಕನಿಕರಿಸ ಬಾರದೇ?

# MICAH.

## ಮೀಕನು.

### ೧. ಸಂಧಿ.

೧ ಯೆಹೂದದ ಅರಸನಾದ ಯೋತಾಮನ, ಆಹಜನ, ಹಿಜಿಕೀ
ಯನ, ದಿವಸಗಳಲ್ಲಿ, ಮೊರೇಷೆತಿನವನಾದ ಮೀಕನಿಗೆ ಉಂಟಾದ
ಯೆಹೋವನ ವಾಕ್ಯವು. ಅವನು ಸಮಾರ್ಯದ ಯೆರೂಸಲೇ
ಮಿನ ವಿಷಯ ನೋಡಿದ್ದು.
೨ ಎಲ್ಲಾ ಜನಗಳೇ! ಕೇಳಿರಿ;
ಭೂಮಿಯೇ! ಅದರ ಪರಿಪೂರ್ಣತೆಯೇ! ಕಿವಿ ಗೊಡಿರಿ;
ಕರ್ತನಾದ ಯೆಹೋವನೂ,
ತನ್ನ ಪರಿಶುದ್ಧ ಮಂದಿರದೊಳಗಿಂದ ಕರ್ತನೂ,
ನಿಮ್ಮಲ್ಲಿ ಸಾಕ್ಷಿ ಕೊಡಲಿ.
3 ಯಾಕಂದರೆ, ಇಗೋ, ಯೆಹೋವನು ತನ್ನ ಸ್ಥಾನದಿಂದ
ಹೊರಡುತ್ತಾನೆ;
ಅವನು ಇಳಿದು, ಭೂಮಿಯ ಉನ್ನತವಾದ ಸ್ಥಳಗಳ ಮೇಲೆ ತು
ಳಿಯುವನು.
೪ ಬೆಂಕಿಯ ಮುಂದೆ ಮೇಣದ ಹಾಗೆಯೂ,
ಇಳಿಜಾರಿನ ಸ್ಥಳದಲ್ಲಿ ಸುರಿಯುವ ನೀರಿನ ಹಾಗೆಯೂ,
ಬೆಟ್ಟಗಳು ಅವನ ಕೆಳಗೆ ಕರಗುವವು;
ತಗ್ಗುಗಳು ಶೀಳುವವು.
೫ ಇದೆಲ್ಲಾ ಯಾಕೋಬನ ಅಪರಾಧದ ನಿಮಿತ್ತವೂ,
ಇಸ್ರಯೇಲನ ಮನೆಯ ಪಾಪಗಳ ನಿಮಿತ್ತವೂ, ಆಯಿತು;
ಯಾಕೋಬನ ಅಪರಾಧವೇನು? ಸಮಾರ್ಯವಲ್ಲವೋ?
ಯೆಹೂದದ ಮೇಡುಗಳೇನು? ಯೆರೂಸಲೇಮಲ್ಲವೋ?
೬ ಹೀಗಿರುವದರಿಂದ ನಾನು ಸಮಾರ್ಯವನ್ನು ಹೊಲದ ದಿಬ್ಬೆ
ಯಾಗಿಯೂ,
ದ್ರಾಕ್ಷೆ ಬಳ್ಳಿ ನೆಡುವ ಸ್ಥಳವಾಗಿಯೂ, ಮಾಡುವೆನು;
ಅದರ ಕಲ್ಲುಗಳನ್ನು ತಗ್ಗಿನಲ್ಲಿ ಸುರಿದು ಬಿಟ್ಟು,
ಅದರ ಅಸ್ತಿವಾರಗಳನ್ನು ಬರಿದಾಗಿ ಮಾಡುವೆನು.
೭ ಮತ್ತು ಅದರ ವಿಗ್ರಹಗಳೆಲ್ಲಾ ಒಡೆಯಲ್ಪಡುವವು.
ಅದಕ್ಕೆ ಆದ ದಾನಗಳೆಲ್ಲಾ ಬೆಂಕಿಯಿಂದ ಸುಡಲ್ಪಡುವವು;
ಅದರ ಬೊಂಬೆಗಳನ್ನೆಲ್ಲಾ ಹಾಳು ಮಾಡುವೆನು;
ಯಾಕಂದರೆ ಸೂಳೆಯ ದಾನದಿಂದ ಅವುಗಳನ್ನು ಕೂಡಿಸಿ
ಕೊಂಡಿತು,
ಸೂಳೆಯ ದಾನಕ್ಕೆ ಅವು ಶಿರುಗುವವು.

೮ ಆದದರಿಂದ ನಾನು ಗೋಳಾಡಿ ಹುಯಿಲಿಡುವೆನು;
ಬಳೇ ಮೈಯಾಗಿಯೂ, ಬೆತ್ತಲೆಯಾಗಿಯೂ, ಹೋಗು
ವೆನು;
ನರಿಗಳ ಹಾಗೆ ಗೋಳಾಡುವೆನು;
ಉಷ್ಟ್ರ ಪಕ್ಷಿಗಳ ಹಾಗೆ ದುಃಖ ಪಡುವೆನು.
೯ ಯಾಕಂದರೆ ಅದರ ಘಾಯವು ಗುಣವಾಗದಂಥಾದ್ದು,
ಯಾಕಂದರೆ, ಯೆಹೂದಕ್ಕೆ ಬಂತು;
ನನ್ನ ಜನರ ಬಾಗಲಿಗೂ, ಯೆರೂಸಲೇಮಿನ ಮಟ್ಟಿಗೂ, ಮು
ಟ್ಟಿದ್ದಾನೆ.
೧೦ ಗಾತಿನಲ್ಲಿ ಅದನ್ನು ಶಿಳಿಸ ಬೇಡ;
ಸ್ವಲ್ಪವಾದರೂ ಅಳ ಬೇಡ;
ಬೇತಾಪ್ರದಲ್ಲಿ ಧೂಳಿನಲ್ಲಿ ಹೊರಳಾಡು.
೧೧ ಸಪೀರಿನ ನಿವಾಸಿಯೇ! ನಾಚಿಕೆ ಮುಚ್ಚದೆ ಹಾದು ಹೋಗು;
ಜಾನಾನಿನ ನಿವಾಸಿ ಹೊರಡಲಿಲ್ಲ;
ಬೆತೇಜೆಲಿನ ಗೋಳಾಟವು ನಿಮ್ಮಿಂದ ಸ್ಥಾನವನ್ನು ತಕ್ಕೊಳ್ಳು
ವದು.
೧೨ ಯಾಕಂದರೆ ಮಾರೋತಿನ ನಿವಾಸಿ ಒಳ್ಳೇದಕ್ಕೆ ಕಾದು ಕೊ
ಳ್ಳುತ್ತಾನೆ;
ಆದರೆ ಕೇಡು ಯೆಹೋವನಿಂದ ಯೆರೂಸಲೇಮಿನ ಬಾಗಲಿಗೆ
ಇಳಿದದೆ.
೧೩ ಲಾಕೀಷಿನ ನಿವಾಸಿಯೇ! ವೇಗವುಳ್ಳ ಕುದುರೆಗೆ ರಥವನ್ನು
ಕಟ್ಟು,
ಇದೇ ಚಿಯೋನಿನ ಮಗಳ ಪಾಪದ ಆರಂಭವು;
ಯಾಕಂದರೆ ಇಸ್ರಯೇಲಿನ ಅಪರಾಧಗಳು ನಿನ್ನಲ್ಲಿ ಶಿಕ್ಕಿದವು.
೧೪ ಹೀಗಿರುವದರಿಂದ ಮೊರೇಷೆತ್ ಗಾತಿಗೆ ತ್ಯಾಗ ಪತ್ರವನ್ನು ಕೊ
ಡುವಿ;
ಅಕ್ಜೀಬಿನ ಮನೆಗಳು ಇಸ್ರಯೇಲಿನ ಅರಸರಿಗೆ ಸುಳ್ಳಾಗಿರುವವು.
೧೫ ಮೇಷೆದ ನಿವಾಸಿಯೇ! ಇನ್ನು ಸ್ವತಂತ್ರಿಸಿ ಕೊಳ್ಳುವವನನ್ನು
ನಿನಗೆ ತರುವೆನು;
ಇಸ್ರಯೇಲಿನ ಮಹಿಮೆಯಾದ ಅದುಲ್ಲಾಮಿನ ಮಟ್ಟಿಗೂ ಬರು
ವನು.
೧೬ ನಿನ್ನ ಮುದ್ದು ಮಕ್ಕಳಿಗೋಸ್ಕರ, ತಲೆ ಬೋಳಿಸಿ ಕೊಂಡು,
ಕ್ಷೌರ ಮಾಡಿಸಿಕೋ;
ಹದ್ದಿನಂತೆ ನಿನ್ನ ಬೋಳುತನವನ್ನು ಅಗಲ ಮಾಡಿಕೋ;
ಯಾಕಂದರೆ ಅವರು ನಿನ್ನನ್ನು ಬಿಟ್ಟು ಶೆರೆಯಾಗಿ ಹೋಗಿ
ದ್ದಾರೆ.

### ೨. ಸಂಧಿ.

೧ ಪಾತಕವನ್ನು ಯೋಚಿಸಿ,
ತಮ್ಮ ಮಂಚಗಳ ಮೇಲೆ ಕೆಟ್ಟದ್ದನ್ನು ಕಲ್ಪಿಸುವವರಿಗೆ ಅ
ಯ್ಯೋ!
ಹೊತ್ತಾರೆ ಬೆಳಕಾಗುವಾಗ ಅದನ್ನು ಮಾಡುತ್ತಾರೆ;
ಯಾಕಂದರೆ ಅದು ಅವರ ಕೈಲಾಗುತ್ತದೆ.
೨ ಅವರು ಹೊಲಗಳನ್ನು ಆಶಿಸಿ ಕನು ಕೊಳ್ಳುತ್ತಾರೆ;
ಮನೆಗಳನ್ನು ಸಹ, ಮತ್ತು ತೆಗೆದು ಕೊಳ್ಳುತ್ತಾರೆ;
ಮನುಷ್ಯನಿಗೂ ಅವನ ಮನೆಗೂ,
ಹೌದು, ಮನುಷ್ಯನಿಗೂ, ಅವನ ಸ್ವಾಸ್ತ್ಯಕ್ಕೂ,
ಬಲಾತ್ಕಾರ ಮಾಡುತ್ತಾರೆ.



3 ಆದದರಿಂದ ಯೆಹೋವನು ಹೇಳುವದೇನಂದರೆ—
ಇಗೋ ನಾನು ಈ ಕುಟುಂಬಕ್ಕೆ ವಿರೋಧವಾಗಿ ಕೆಟ್ಟದ್ದನ್ನು
ಯೋಚಿಸುತ್ತೇನೆ;
ಅದರಿಂದ ನೀವು ನಿಮ್ಮ ಕೊರಳುಗಳನ್ನು ಹಿಂತೆಗಿಯದೆ,
ಅಹಂಕಾರವಾಗಿ ನಡಿಯದೆ, ಇರುವಿ;
ಯಾಕಂದರೆ ಇದು ಕೆಟ್ಟ ಕಾಲವೇ.
೪ ಆ ದಿವಸದಲ್ಲಿ ನಿಮ್ಮ ವಿಷಯ ಸಾಮ್ಯವನ್ನೆತ್ತಿ,
ದುಃಖವುಳ್ಳ ಗೋಳಾಟವನ್ನು ಮಾಡಿ, ಹೇಳುವದೇನಂದರೆ—
ನಾವು ಶುದ್ಧವಾಗಿ ಹಾಳಾದೆವು;
ನನ್ನ ಜನರ ಪಾಲನ್ನು ಬದಲಾಯಿಸಿದ್ದಾನೆ;
ಅಯ್ಯೋ, ಅದನ್ನು ನನ್ನಿಂದ ಹಿಂತೆಗೆದಿದ್ದಾನೆ!
ಶಿರುಗಿ ಬಿದ್ದವನಿಗೆ ನಮ್ಮ ಹೊಲಗಳನ್ನು ಹಂಚಿ ಕೊಟ್ಟಿ
ದ್ದಾನೆ.
೫ ಆದದರಿಂದ ಯೆಹೋವನ ಸಭೆಯಲ್ಲಿ,
ಭಾಗಕ್ಕಾಗಿ ನೂಲು ಹಾಕುವನು ನಿನಗೆ ಒಬ್ಬನು ಇರುವದಿಲ್ಲ.

೬ ಪ್ರವಾದಿಸ ಬೇಡಿರೆಂದು ಪ್ರವಾದಿಸುವವರಿಗೆ ಅನ್ನುತ್ತಾರೆ;
ಇವುಗಳನ್ನು ಕುರಿತು ಪ್ರವಾದಿಸರು;
ಆದರೆ ನಿಂದೆಗಳು ಬಿಡುವದಿಲ್ಲ.
೭ ಯಾಕೋಬನ ಮನೆಯವರೆಂಬುವಂಥವರೇ!
ಯೆಹೋವನ ಆತ್ಮವು ಕಡಿಮೆಯಾಯಿತೋ?
ಇವು ಅವನ ಕ್ರಿಯೆಗಳೋ?
ನನ್ನ ಮಾತುಗಳು ಯಥಾರ್ಥವಾಗಿ ನಡಿಯುವವನಿಗೆ ಒಳ್ಳೇ
ಯವುಗಳಲ್ಲವೋ?
೮ ಆದರೆ ಪೂರ್ವದಿಂದ ನನ್ನ ಜನರು ವೈರಿಯ ಹಾಗೆ ಎದ್ದಿದ್ದಾರೆ;
ಯುದ್ಧದಿಂದ ಶಿರುಗಿ ಕೊಂಡು,
ನಂಬಿಕೆಯಾಗಿ ಹಾದು ಹೋಗುವವರ
ವಸ್ತ್ರದ ಸಂಗಡ ನಿಲುವಂಗಿಯನ್ನು ಕಿತ್ತು ಕೊಳ್ಳುತ್ತೀರಿ.
೯ ನನ್ನ ಜನರ ಸ್ತ್ರೀಯರನ್ನು ಅವರ ರಮ್ಯವಾದ ಮನೆಗಳೊಳ
ಗಿಂದ ಹೊರಡಿಸಿದ್ದೀರಿ;
ಅವರ ಮಕ್ಕಳಿಂದ ನನ್ನ ಮಹಿಮೆಯನ್ನು ಎಂದೆಂದಿಗೂ ತೆಗೆ
ದಿದ್ದೀರಿ.
೧೦ ಎದ್ದು, ಹೋಗಿರಿ; ಯಾಕಂದರೆ ಇದು ನಿಮ್ಮ ವಿಶ್ರಾಂತಿ ಅಲ್ಲಾ;
ಇದು ಅಶುದ್ಧವಾಗಿರುವದರಿಂದ,
ನಿಮ್ಮನ್ನು ಕಠಿಣವಾದ ನಾಶನದಿಂದ ನಾಶ ಮಾಡುವರು.
೧೧ ಒಬ್ಬನು ಅತ್ಮದಲ್ಲಿಯೂ, ವಂಚನೆಯಲ್ಲಿಯೂ, ನಡಿದು, ಸು
ಳ್ಳು ಹೇಳಿ—
ನಿನಗೆ ದ್ರಾಕ್ಷೆರಸವನ್ನೂ ಸಾರಾಯಿಯನ್ನೂ ಕುರಿತು ಪ್ರವಾ
ದಿಸುವೆನೆಂದು ಹೇಳಿದರೆ,
ಇವನೇ ಈ ಜನರಿಗೆ ಪ್ರವಾದಿಯಾಗಿರುವನು.

೧೨ ಯಾಕೋಬನೇ! ನಿನ್ನನ್ನೆಲ್ಲಾ ಕೂಡಿಸೇ ಕೂಡಿಸುವೆನು;
ಇಸ್ರಯೇಲನ ಉಳಿವನ್ನು ಒಟ್ಟೀ ಒಟ್ಟುವೆನು;
ಬೊಚ್ರದ ಕುರಿಗಳಂತೆಯೂ,
ತಮ್ಮ ಹಟ್ಟಿಯ ನಡುವೆ ಇರುವ ಮಂದೆಯಂತೆಯೂ,
ಅವರನ್ನು ಕೂಡಿಸುವನು;
ಬಹು ಮಂದಿಯಾಗಿರುವ ಕಾರಣ ಗುಲ್ಲು ಮಾಡುವರು.
೧೩ ಒಡೆಯುವವನು ಅವರ ಮುಂದೆ ಏರಿ ಬಂದಿದ್ದಾನೆ;
ಅವರು ಒಡೆದು, ಬಾಗಲನ್ನು ಹಾದು ಹೋಗಿ,
ಅದರಿಂದ ಹೊರಟಿದ್ದಾರೆ;
ಅವರ ಅರಸನು ಅವರ ಮುಂದೆ ಹಾದು ಹೋಗುತ್ತಾನೆ;
ಅವರ ತಲೆಯ ಮೇಲಿರುವ ಯೆಹೋವನೇ.

### ೩. ಸಂಧಿ.

೧ ಆಗ ನಾನು ಹೇಳಿದ್ದೇನಂದರೆ—
ಯಾಕೋಬನ ಮುಖ್ಯಸ್ಥರೇ!
ಇಸ್ರಯೇಲನ ಮನೆಯ ನ್ಯಾಯಾಧಿಪತಿಗಳೇ! ಈಗ ಕೇಳಿರಿ;
ನ್ಯಾಯವನ್ನು ಶಿಳಿಯುವದು ನಿಮ್ಮದಲ್ಲವೋ?
೨ ಒಳ್ಳೇದನ್ನು ಹಗೆ ಮಾಡಿ, ಕೆಟ್ಟದ್ದನ್ನು ಪ್ರೀತಿ ಮಾಡುವವರೇ!
ಅವರ ಮೇಲಿನಿಂದ ಅವರ ಚರ್ಮವನ್ನೂ,
ಅವರ ಎಲುವುಗಳ ಮೇಲಿನಿಂದ ಅವರ ಮಾಂಸವನ್ನೂ, ಕಿತ್ತು
ಕೊಳ್ಳುವವರೇ!
3 ನನ್ನ ಜನರ ಮಾಂಸವನ್ನು ತಿಂದು,
ಅವರ ಚರ್ಮವನ್ನು ಅವರ ಮೇಲಿನಿಂದ ಸುಲಿದು,
ಅವರ ಎಲುವುಗಳನ್ನು ಮುರಿದು,
ಗಡಿಗೆಗೆ ಆದ ಹಾಗೆಯೂ,
ಕೊಪ್ಪರಿಗೆಯಲ್ಲಿರುವ ಮಾಂಸದ ಹಾಗೆಯೂ,
ತುಂಡು ಮಾಡುತ್ತೀರಿ.
೪ ಆಗ ಯೆಹೋವನಿಗೆ ಮೊರೆಯಿಡುವರು;
ಆದರೆ ಅವನು ಅವರಿಗೆ ಉತ್ತರ ಕೊಡುವದಿಲ್ಲ;
ಅವರು ಕೆಟ್ಟ ಕ್ರಿಯೆಗಳನ್ನು ಮಾಡಿದ ಪ್ರಕಾರವೇ,
ಆ ಕಾಲದಲ್ಲಿ ಅವರಿಗೆ ತನ್ನ ಮುಖವನ್ನು ಮರೆ ಮಾಡುವನು.

೫ ನನ್ನ ಜನರನ್ನು ತಪ್ಪು ಮಾತುವ ವಿಷಯವೂ,
ಹಲ್ಲುಗಳಿಂದ ಕಚ್ಚಿ ಕೊಂಡು ಸಮಾಧಾನವೆಂದು ಕೂಗಿ,
ಅವರ ಬಾಯಿಯಲ್ಲಿ ಏನು ಹಾಕದವನಿಗೆ ವಿರೋಧವಾಗಿ
ಯುದ್ಧವನ್ನು ಸಿದ್ಧ ಮಾಡುವವರ ವಿಷಯವೂ,
ಯೆಹೋವನು ಹೇಳುವದೇನಂದರೆ—
೬ ಆದಕಾರಣ ದರ್ಶನವಿಲ್ಲದೆ, ನಿಮಗೆ ರಾತ್ರಿಯಾಗುವದು;
ಶಕುನವಿಲ್ಲದೆ ನಿಮಗೆ ಕತ್ತಲಾಗುವದು;
ಹೌದು, ಪ್ರವಾದಿಗಳ ಮೇಲೆ ಸೂರ್ಯ ಮುಣುಗುವದು,
ಅವರ ಮೇಲೆ ಹಗಲು ಕಪ್ಪಾಗುವದು.
೭ ಆಗ ದರ್ಶಿಗಳು ನಾಚಿಕೆ ಪಟ್ಟು,
ಶಕುನಗಾರರು ವಿಸ್ಮಯ ಗೊಳ್ಳುವರು;
ದೇವರಿಂದ ಉತ್ತರವಿಲ್ಲದ ಕಾರಣ,
ಎಲ್ಲರು ತಮ್ಮ ತುಟಿಗಳನ್ನು ಮುಚ್ಚಿ ಕೊಳ್ಳುವರು.
೮ ಆದರೆ ನಿಶ್ಚಯವಾಗಿ ನಾನು,
ಯಾಕೋಬನಿಗೆ ಅವನ ಅಪರಾಧವನ್ನೂ,
ಇಸ್ರಯೇಲಿಗೆ ಅವನ ಪಾಪವನ್ನೂ, ಶಿಳಿಸುವದಕ್ಕೆ,
ದೇವರ ಆತ್ಮದ ಮುಖಾಂತರ,

ಶಕ್ತಿಯಿಂದಲೂ, ನ್ಯಾಯದಿಂದಲೂ, ತ್ರಾಣದಿಂದಲೂ, ತುಂಬಿ
ದ್ದೇನೆ.

೯ ಯಾಕೋಬನ ಮನೆಯ ಮುಖ್ಯಸ್ಥರೇ!
ಇಸ್ರಯೇಲನ ಮನೆಯ ನ್ಯಾಯಾಧಿಪತಿಗಳೇ!
ನ್ಯಾಯವನ್ನು ಅಸಹ್ಯಿಸಿ, ಎಲ್ಲಾ ಯಥಾರ್ಥತ್ವವನ್ನು ಡೊಂ
ಕು ಮಾಡುವವರೇ!
೧೦ ಚಿಯೋನನ್ನು ರಕ್ತದಿಂದಲೂ, ಯೆರೂಸಲೇಮನ್ನು ಅಕ್ರಮ
ದಿಂದಲೂ, ಕಟ್ಟುವವರೇ!
ಈಗ ಇದನ್ನು ಕೇಳಿರಿ.
೧೧ ಅದರ ಮುಖ್ಯಸ್ಥರು ಲಂಚಕ್ಕೆ ನ್ಯಾಯ ತೀರಿಸುತಾರೆ;
ಅದರ ಯಾಜಕರು ಸಂಬಳಕ್ಕೆ ಬೋಧಿಸುತ್ತಾರೆ;
ಅದರ ಪ್ರವಾದಿಗಳು ಹಣಕ್ಕೆ ಶಕುನ ಹೇಳುತ್ತಾರೆ;
ಆದರೂ ಯೆಹೋವನ ಮೇಲೆ ಆತು ಕೊಂಡು—
ಯೆಹೋವನು ನಮ್ಮ ಮಧ್ಯದಲ್ಲಿ ಅಲ್ಲವೋ?
ನಮ್ಮ ಮೇಲೆ ಕೇಡು ಬರುವದಿಲ್ಲ, ಅನ್ನುತ್ತಾರೆ.
೧೨ ಆದಕಾರಣ ನಿಮ್ಮ ನಿಮಿತ್ತವೇ,
ಚಿಯೋನು ಹೊಲದ ಹಾಗೆ ಉಳ್ಳಲ್ಪಡುವದು;
ಯೆರೂಸಲೇಮು ದಿಬ್ಬೆಗಳಾಗುವದು,
ಮನೆಯ ಬೆಟ್ಟವು ಅಡವಿಯ ಮೇಡುಗಳ ಹಾಗಾಗುವದು.

## ೪. ಸಂಧಿ.

೧ ಆದರೆ ಅಂತ್ಯ ದಿವಸಗಳಲ್ಲಿ ಆಗುವದೇನಂದರೆ—
ಯೆಹೋವನ ಮನೆಯ ಬೆಟ್ಟವು,
ಬೆಟ್ಟಗಳ ತಲೆಯಲ್ಲಿ ನೆಲೆಯಾಗಿ,
ಗುಡ್ಡಗಳಿಗಿಂತ ಎತ್ತರವಾಗಿರುವದು;
ಮತ್ತು ಜನಗಳು ಅದರ ಬಳಿಗೆ ಹರಿದು ಬರುವರು.
೨ ಹೌದು, ಅನೇಕ ಜನಾಂಗಗಳು ಬಂದು, ಹೇಳುವದೇನಂದರೆ—
ಬನ್ನಿರಿ; ಯೆಹೋವನ ಬೆಟ್ಟಕ್ಕೆ,
ಯಾಕೋಬನ ದೇವರ ಮನೆಗೆ, ಏರಿ ಹೋಗುವ;
ಅವನು ತನ್ನ ಮಾರ್ಗಗಳನ್ನು ನಮಗೆ ಬೋಧಿಸುವನು;
ನಾವು ಅವನ ಹಾದಿಗಳಲ್ಲಿ ನಡಿಯುವೆವು;
ಯಾಕಂದರೆ ಚಿಯೋನಿನೊಳಗಿಂದ ನ್ಯಾಯಪ್ರಮಾಣವೂ,
ಯೆರೂಸಲೇಮಿನೊಳಗಿಂದ ದೇವರ ವಾಕ್ಯವೂ, ಹೊರಡುವದು.
೩ ಆಸಲವನು ಅನೇಕ ಜನಗಳ ಮಧ್ಯದಲ್ಲಿ ನ್ಯಾಯ ತೀರಿಸಿ,
ದೂರದಲ್ಲಿರುವ ಬಲವಾದ ಜನಾಂಗಗಳಿಗೆ ತೀರ್ಪು ಕೊಡುವನು;
ಅವರು ತಮ್ಮ ಕತ್ತಿಗಳನ್ನು ನೇಗಲಿನ ಗುಳಿಗಳಾಗಿಯೂ,
ತಮ್ಮ ಈಟಿಗಳನ್ನು ಕುಡುಗೋಲುಗಳಾಗಿಯೂ,
ಬಡಿಯುವರು;
ಜನಾಂಗವು ಜನಾಂಗದ ಮೇಲೆ ಕತ್ತಿಯನ್ನು ಎತ್ತದು;
ಯುದ್ಧವನ್ನು ಇನ್ನು ಮೇಲೆ ಕಲಿಯರು.
೪ ಆದರೆ ಒಬ್ಬೊಬ್ಬನು ತನ್ನ ತನ್ನ ದ್ರಾಕ್ಷೆ ಬಳ್ಳಿಯ ಕೆಳಗೆಯೂ,
ತನ್ನ ತನ್ನ ಅಂಜೂರದ ಗಿಡದ ಕೆಳಗೆಯೂ, ಕೂತು ಕೊಳ್ಳು
ವನು,
ಭಯ ಪಡಿಸುವವನು ಯಾರೂ ಇರುವದಿಲ್ಲ;
ಯಾಕಂದರೆ ಸೈನ್ಯಗಳ ಯೆಹೋವನ ಬಾಯಿ ಅದನ್ನು ಹೇಳಿ
ಅದೆ.
೫ ಯಾಕಂದರೆ ಎಲ್ಲಾ ಜನಗಳು ತಮ್ಮ ತಮ್ಮ ದೇವರಿನ ಹೆಸ
ರಿನಲ್ಲಿ ನಡೆಯುವವು;
ಆದರೆ ನಾವು ನಮ್ಮ ದೇವರಾದ ಯೆಹೋವನ ಹೆಸರಿನಲ್ಲಿ
ಎಂದೆಂದಿಗೂ ನಡೆಯುವೆವು.

೬ ಯೆಹೋವನು ಅನ್ನುತ್ತಾನೆ—
ಆ ದಿವಸದಲ್ಲಿ ನಾನು ಕುಂಟಾದದ್ದನ್ನು ಕೂಡಿಸಿ,
ತಳ್ಳಿ ಬಿಟ್ಟದ್ದನ್ನೂ,
ನಾನು ಕಷ್ಟ ಪಡಿಸಿದವರನ್ನೂ, ಬಟ್ಟುವೆನು.
೭ ಮತ್ತು ಕುಂಟಾದದ್ದನ್ನು ಉಳುವಾಗಿಯೂ,
ತಳ್ಳಿ ಬಿಟ್ಟದ್ದನ್ನು ಬಲವಾದ ಜನಾಂಗವಾಗಿಯೂ, ಮಾಡುವೆನು;
ಮತ್ತು ಯೆಹೋವನು ಇಂದಿನಿಂದ ಸದಾಕಾಲವು,
ಚಿಯೋನ್ ಪರ್ವತದಲ್ಲಿ ಅವರ ಮೇಲೆ ಆಳುವನು.
೮ ಇದಲ್ಲದೆ ನೀನು, ಓ ಮಂದೆಯ ಬುರುಜೇ!
ಚಿಯೋನಿನ ಕುಮಾರ್ತೆಯ ದುರ್ಗವೇ!
ನಿನಗೆ ಬರುವದು,
ಹೌದು, ಮೊದಲನೇ ದೊರೆತನವೂ,
ಯೆರೂಸಲೇಮಿನ ಕುಮಾರ್ತೆಗೆ ರಾಜ್ಯವೂ, ಬರುವದು.

೯ ಈಗ ಯಾಕೆ ಅರ್ಭಟಿಸಿಬ್ಬಿಸುತ್ತೀ?
ನಿನ್ನಲ್ಲಿ ಅರಸನಿಲ್ಲವೋ?
ನಿನ್ನ ಆಲೋಚನೆ ಕರ್ತನು ನಾಶವಾದನೋ?
ಯಾಕಂದರೆ ಹೆರುವವಳಂತೆ ನಿನಗೆ ವೇದನೆ ಬಂತು.
೧೦ ಹೆರುವವಳಂತೆ ವೇದನೆ ತಾಳಿ, ಪಡೆ,
ಓ ಚಿಯೋನಿನ ಕುಮಾರ್ತೆಯೇ!
ಯಾಕಂದರೆ ಈಗ ಪಟ್ಟಣದೊಳಗಿಂದ ಹೊರಟು,
ಹೊಲದಲ್ಲಿ ವಾಸ ಮಾಡಿ, ಬಾಬೆಲಿಗೆ ಹೋಗುವಿ;
ಅಲ್ಲಿ ನಿನಗೆ ಬಿಡುಗಡೆಯಾಗುವದು;
ಅಲ್ಲಿ ಯೆಹೋವನು ನಿನ್ನನ್ನು ನಿನ್ನ ಶತ್ರುಗಳ ಕೈಯೊಳಗಿಂ
ದ ವಿಮೋಚಿಸುವನು.
೧೧ ಆದರೆ ಈಗ ಅನೇಕ ಜನಾಂಗಗಳು ನಿನಗೆ ವಿರೋಧವಾಗಿ ಕೂ
ಡಿ ಕೊಂಡವೆ;
ಅವಳು ಕೆಡಿಸಲ್ಪಡಲಿ;
ಚಿಯೋನಿನ ಮೇಲೆ ನಮ್ಮ ಕಣ್ಣುಗಳು ದೃಷ್ಟಿಸಲಿ;
ಎಂದು ಹೇಳುತ್ತಾರೆ.
೧೨ ಆದರೆ ಯೆಹೋವನ ಯೋಚನೆಗಳು ಅವರಿಗೆ ತಿಳಿಯದು,
ಅವನ ಆಲೋಚನೆಯನ್ನು ಅವರು ಗ್ರಹಿಸಲಿಲ್ಲ;
ಯಾಕಂದರೆ ಕಣದಲ್ಲಿ ಸೂಡುಗಳ ಹಾಗೆ,
ಅವರನ್ನು ಕೂಡಿಸುವನು.
೧೩ ಚಿಯೋನಿನ ಕುಮಾರ್ತೆಯೇ! ಎದ್ದು ತುಳಿ;
ಯಾಕಂದರೆ ನಿನ್ನ ಕೊಂಬನ್ನು ಕಬ್ಬಿಣವಾಗಿಯೂ,
ನಿನ್ನ ಗೊರಸೆಗಳನ್ನು ತಾಂಬ್ರವಾಗಿಯೂ, ಮಾಡುವೆನು;
ನೀನು ಅನೇಕ ಜನಗಳನ್ನು ಪುಡಿ ಪುಡಿ ಮಾಡುವಿ;



ಮತ್ತು ಅವರ ಆದಾಯವನ್ನು ಯೆಹೋವನಿಗೂ,
ಅವರ ಸಂಪತ್ತನ್ನು ಸಮಸ್ತ ಭೂಮಿಯ ಕರ್ತನಿಗೂ,
ಪ್ರತಿಷ್ಠೆ ಮಾಡುವೆನು.

## ೫. ಸಂಧಿ.

೧ ಈಗ ಗುಂಪಿನ ಕುಮಾರ್ತೆಯೇ! ಗುಂಪುಗಳಾಗಿ ಕೂಡಿ
ಕೊಳ್ಳಿರಿ;
ನಮಗೆ ಮುತ್ತಿಗೆ ಹಾಕುತ್ತಾರೆ;
ಇಸ್ರಯೇಲಿನ ನ್ಯಾಯಾಧಿಪತಿಯನ್ನು
ಕೋಲಿನಿಂದ ಕೆನ್ನೆಯ ಮೇಲೆ ಬಡಿಯುತ್ತಾರೆ.
೨ ಆದರೆ ಎಫ್ರಾತದ ಬೇತ್ಲೆಹೇಮೇ,
ನೀನು ಯೆಹೂದದ ಸಾವಿರಗಳಲ್ಲಿ ಸಣ್ಣದಾಗಿದ್ದರೂ,
ಇಸ್ರಯೇಲಿನಲ್ಲಿ ದೊರೆತನ ಮಾಡ ತಕ್ಕವನು,
ನಿನ್ನಿಂದ ನನಗೆ ಹೊರಡುವನು;
ಅವನ ಹೊರಪೋಣಗಳು ಪೂರ್ವದಿಂದಲೂ,
ಅನಾದಿ ದಿವಸಗಳಿಂದಲೂ, ಅವೆ.
೩ ಆದದರಿಂದ ಹೆರುವವಳು ಹೆರುವ ಕಾಲದ ಪರ್ಯಂತರ,
ಅವರನ್ನು ಬಿಟ್ಟಿಸಿ ಬಿಡುವನು;
ಆಗ ಅವನ ಸಹೋದರರಲ್ಲಿ ಮಿಕ್ಕವರು,
ಇಸ್ರಯೇಲನ ಮಕ್ಕಳ ಬಳಿಗೆ ತಿರುಗುವರು.
೪ ಮತ್ತು ಅವನು ಯೆಹೋವನ ಬಲದಲ್ಲಿಯೂ,
ತನ್ನ ದೇವರಾದ ಯೆಹೋವನ ಹೆಸರಿನ ಘನತೆಯಲ್ಲಿಯೂ,
ನಿಂತು ಕೊಂಡು ಮೇಯಿಸುವನು;
ಮತ್ತು ನೆಲೆಯಾಗಿರುವರು,
ಯಾಕಂದರೆ ಈಗ ಅವನು ಭೂಮಿಯ ಅಂತ್ಯಗಳ ಮಟ್ಟಿಗೂ
ದೊಡ್ಡವನಾಗಿರುವನು.
೫ ಇದಲ್ಲದೆ ಇವನೇ ಸಮಾಧಾನವಾಗಿರುವನು;
ಅಶ್ಶೂರ್ಯನು ನಮ್ಮ ದೇಶದಲ್ಲಿ ಬಂದು,
ನಮ್ಮ ಅರಮನೆಗಳಲ್ಲಿ ತುಳಿಯುವಾಗ,
ನಾವು ಅವನಿಗೆ ವಿರೋಧವಾಗಿ ಏಳು ಕುರುಬರನ್ನೂ,
ಎಂಟು ಅಭಿಷೇಕಿಸಲ್ಪಟ್ಟ ಮನುಷ್ಯರನ್ನೂ,
ಎಬ್ಬಿಸುವೆವು.
೬ ಅವರು ಅಶ್ಶೂರಿನ ದೇಶವನ್ನು ಕತ್ತಿಯಿಂದಲೂ,
ನಿಮ್ರೋದನ ದೇಶವನ್ನು ಅದರ ಪ್ರವೇಶಗಳಲ್ಲಿಯೂ,
ಹಾಳು ಮಾಡುವರು;
ಅಶ್ಶೂರ್ಯನು ನಮ್ಮ ದೇಶದಲ್ಲಿ ಬಂದು,
ನಮ್ಮ ಪ್ರಾಂತ್ಯಗಳಲ್ಲಿ ತುಳಿಯುವಾಗ,
ನಮ್ಮನ್ನು ತಪ್ಪಿಸುವನು.
೭ ಇದಲ್ಲದೆ ಯಾಕೋಬನ ಉಳಿವು,
ಅನೇಕ ಜನಗಳ ಮಧ್ಯದಲ್ಲಿ,
ಯೆಹೋವನಿಂದ ಮಂಜಿನ ಹಾಗೆಯೂ,
ಹುಲ್ಲಿನ ಮೇಲೆ ಜಡಿ ಮಳೆಯ ಹಾಗೆಯೂ, ಇರುವದು;
ಅದು ಮನುಷ್ಯರಿಗೋಸ್ಕರ ತಡೆ ಮಾಡುವದಿಲ್ಲ;
ಮನುಷ್ಯನ ಮಕ್ಕಳಿಗೋಸ್ಕರ ಕಾದು ಕೊಳ್ಳುವದಿಲ್ಲ.
೮ ಮತ್ತು ಯಾಕೋಬನ ಉಳಿವು,
ಅನೇಕ ಜನಗಳ ಮಧ್ಯದಲ್ಲಿ,
ಜನಾಂಗಗಳೊಳಗೆ, ಅಡವಿಯ ಮೃಗಗಳಲ್ಲಿ ಸಿಂಹದಂತೆಯೂ,
ಕುರಿ ಮಂದೆಗಳಲ್ಲಿ ಎಳೇ ಸಿಂಹದಂತೆಯೂ, ಇರುವದು;
ಅದು ಹಾದು ಹೋದರೆ, ತುಳಿದು ಬಿಟ್ಟು, ಹರ ಕೂಳ್ಳತ್ತದೆ,
ತಪ್ಪಿಸುವವನು ಯಾರೂ ಇಲ್ಲ.
೯ ನಿನ್ನ ಕೈ ನಿನ್ನ ವೈರಿಗಳ್ಳೆಲ್ಲರ ಮೇಲೆ ಉನ್ನತವಾಗಿರುವದು;
ನಿನ್ನ ಶತ್ರುಗಳ್ಳೆಲ್ಲರು ಕಡಿದು ಬಿಡಲ್ಪಡುವರು.

೧೦ ಯೆಹೋವನು ಅನ್ನುತ್ತಾನೆ—
ಆ ದಿವಸದಲ್ಲಿ ಆಗುವದೇನಂದರೆ—
ನಾನು ನಿನ್ನ ಮಧ್ಯದೊಳಗಿಂದ ದಿನ್ನ ಕುದುರೆಗಳನ್ನು ಕಡಿ
ದು ಬಿಟ್ಟು,
ನಿನ್ನ ರಥಗಳನ್ನು ನಾಶ ಮಾಡುವೆನು.
೧೧ ಮತ್ತು ನಿನ್ನ ದೇಶದ ಪಟ್ಟಣಗಳನ್ನು ಕಡಿದು ಬಿಟ್ಟು,
ನಿನ್ನ ಕೋಟೆಗಳನ್ನೆಲ್ಲಾ ಕೆಡವಿ ಹಾಕುವೆನು.
೧೨ ಮತ್ತು ನಿನ್ನ ಕೈಯೊಳಗಿಂದ ಶೂನ್ಯಗಳನ್ನು ಕಡಿದು ಬಿಡು
ವೆನು;
ಮೇಘಮಂತ್ರದವರು ನಿನಗೆ ಇನ್ನು ಇರುವದಿಲ್ಲ.
೧೩ ನಿನ್ನ ವಿಗ್ರಹಗಳನ್ನೂ ನಿನ್ನ ಪ್ರತಿಮೆಗಳನ್ನೂ ಸಹ,
ನಿನ್ನ ಮಧ್ಯದೊಳಗಿಂದ ಕಡಿದು ಬಿಡುವೆನು;
ನೀನು ಇನ್ನು ಸ್ವಂತ ಕೈ ಕೆಲಸಗಳನ್ನು ಆರಾಧಿಸುವದಿಲ್ಲ.
೧೪ ಮತ್ತು ನಿನ್ನ ತೋಪುಗಳನ್ನು ನಿನ್ನ ಮಧ್ಯದೊಳಗಿಂದ ಕಿತ್ತು
ಹಾಕಿ,
ನಿನ್ನ ಪಟ್ಟಣಗಳನ್ನು ನಾಶ ಮಾಡುವೆನು.
೧೫ ಇದಲ್ಲದೆ ಕಿವಿ ಗೊತದೆ ಇದ್ದ ಜನಾಂಗಗಳಿಗೆ,
ಕೋಪದಿಂದಲೂ ಉಗ್ರದಿಂದಲೂ ಮುಯ್ಯಿಗೆ ಮುಯ್ಯಿ ಕೊ
ಡುವೆನು.

## ೬. ಸಂಧಿ.

೧ ಯೆಹೋವನು ಹೇಳುವದನ್ನು ಈಗ ಕೇಳಿರಿ—
ಏಳು! ಬೆಟ್ಟಗಳ ಮುಂದೆ ವ್ಯಾಜ್ಯವಾಡು;
ಗುಡ್ಡಗಳು ನಿನ್ನ ಶಬ್ದವನ್ನು ಕೇಳಲಿ.
೨ ಬೆಟ್ಟಗಳ್ಳೇ! ಭೂಮಿಯ ಅಸ್ತಿವಾರಗಳಾದ ಬಂಡೆಗಳ್ಳೇ!
ಯೆಹೋವನ ವ್ಯಾಜ್ಯವನ್ನು ಕೇಳಿರಿ;
ಯಾಕಂದರೆ ಯೆಹೋವನಿಗೆ ತನ್ನ ಜನರ ಸಂಗಡ ವ್ಯಾಜ್ಯ
ಉಂಟು,
ಇಸ್ರಯೇಲಿನ ಸಂಗಡ ತರ್ಕಿಸುತ್ತಾನೆ.
೩ ಓ ನನ್ನ ಜನರೇ! ನಿನಗೆ ಏನು ಮಾಡಿದ್ದೇನೆ?
ಯಾವದರಿಂದ ನಿನಗೆ ಬೇಸರ ಮಾಡಿದ್ದೇನೆ?
ನನಗೆ ವಿರೋಧವಾಗಿ ಸಾಕ್ಷಿ ಕೊಡು.
೪ ನಾನು ಐಗುಪ್ತ ದೇಶದೊಳಗಿಂದ ನಿನ್ನನ್ನು ಮೇಲೆ ಬರ ಮಾಡಿ,
ದಾಸರ ಮನೆಯೊಳಗಿಂದ ನಿನ್ನನ್ನು ವಿಮೋಚಿಸಿ,
ಮೋಶೆಯನ್ನೂ ಆರೋನನನ್ನೂ ಮಿರಿಯಾಮಳನ್ನೂ ನಿನ್ನ
ಮುಂದೆ ಕಳುಹಿಸಲಿಲ್ಲವೋ?
೫ ಓ ನನ್ನ ಜನರೇ!

ಮೊನಾಬಿನ ಅರಸನಾದ ಬಲಾಕನು ಯೋಚಿಸಿದ್ದನೂ,
ಬೆಯೋರನ ಮಗನಾದ ಬಿಳಾಮನು ಅವನಿಗೆ ಉತ್ತರವಾಗಿ
ಹೇಳಿದ್ದನೂ,
ಶಿಟ್ಟೀಮು ಮೊದಲು ಗೊಯ್ಯಾಲ್‌ವಿನ ಪರ್ಯಂತರಕ್ಕೂ
ಆದದ್ದನೂ,
ಈಗ ಜ್ಞಾಪಕ ಮಾಡಿ ಕೊಳ್ಳಿರಿ;
ಆಗ ಯೆಹೋವನ ನೀತಿಗಳನ್ನು ತಿಳಿದು ಕೊಳ್ಳುವಿರಿ.
೬ ನಾನು ಯಾತರ ಸಂಗಡ ಯೆಹೋವನ ಮುಂದೆ ಬರಲಿ?
ಯಾತರ ಸಂಗತ ಉನ್ನತವಾದ ದೇವರ ಮುಂದೆ ಅಡ್ಡ ಬೀಳಲಿ?
ದಹನ ಬಲಿಗಳ ಸಂಗಡಲೂ,
ಒಂದು ವರುಷದ ಕರುಗಳ ಸಂಗಡಲೂ,
ಅವನ ಮುಂದೆ ಬರಲೋ?
೭ ಯೆಹೋವನು ಸಾವಿರ ಟಗರುಗಳಿಗಾದರೂ,
ಎಣ್ಣೆಯ ಹತ್ತು ಸಾವಿರ ನದಿಗಳಿಗಾದರೂ, ಮೆಚ್ಚುವನೋ?
ನನ್ನ ದ್ರೋಹಕ್ಕಾಗಿ ನನ್ನ ಚೊಚ್ಚಲ ಮಗನನೂ,
ನನ್ನ ಅತ್ಯುದ ಪಾಪಕ್ಕಾಗಿ ನನ್ನ ಗರ್ಭದ ಫಲವನೂ, ಕೊಡಲೋ?
೮ ಓ ಮನುಷ್ಯನೇ! ಉತ್ತಮವಾದದ್ದನ್ನು ನಿನಗೆ ತಿಳಿಸಿದ್ದಾನೆ;
ಹೌದು, ನ್ಯಾಯವನ್ನು ಮಾಡುವದೂ, ಕೃಪೆಯನ್ನು ಪ್ರೀತಿ ಮಾಡುವದೂ,
ನಿನ್ನ ದೇವರ ಸಂಗಡ ವಿನಯವಾಗಿ ನಡಕೊಳ್ಳುವದೂ,
ಇದನ್ನೇ ದೊರ್ತು ಯೆಹೋವನು ಇನ್ನೇನು ನಿನ್ನಿಂದ ಕೇಳುತ್ತಾನೆ?

೯ ಯೆಹೋವನ ಶಬ್ದವು ಪಟ್ಟಣಕ್ಕೆ ಕೂಗುತ್ತದೆ,
ಮತ್ತು ಬುದ್ಧಿವಂತನು ನಿನ್ನ ಹೆಸರನ್ನು ನೋಡುವನು;
ಬೆತ್ತವನ್ನೂ, ಅದನ್ನು ನೇಮಿಸಿದವನನ್ನೂ, ಕೇಳಿರಿ.
೧೦ ದುಷ್ಟರ ಮನೆಯಲ್ಲಿ ದುಷ್ಟತ್ವದ ಬೊಕ್ಕಸಗಳೂ,
ಅಸಹ್ಯವಾದಂಥ ಕಡಿಮೆಯಾದ ಎಫವೂ, ಉಂಟೋ?
೧೧ ನಾನು ದುಷ್ಟತ್ವದ ತ್ರಾಸುಗಳಲ್ಲಿವರನೂ,
ಮೋಸವಾದ ಕಲ್ಲುಗಳ ಚೀಲವುಳ್ಳವರನೂ,
ನಿರ್ಮಲಕೆಂದೆಣಿಸುವೆನೋ?
೧೨ ಯಾಕಂದರೆ ಅದರ ಐಶ್ವರ್ಯವಂತರು ಬಲಾತ್ಕಾರದಿಂದ ತುಂಬಿದ್ದಾರೆ,
ಅದರ ನಿವಾಸಿಗಳು ಸುಳ್ಳುಗಳನ್ನು ಹೇಳುವವರಾಗಿದ್ದಾರೆ;
ಅವರ ನಾಲಿಗೆ ಅವರ ಬಾಯಿಯಲ್ಲಿ ಕಪಟವುಳ್ಳದ್ದೇ.
೧೩ ಆದದರಿಂದ ನಾನು ಸಹ ನಿನ್ನನ್ನು ಹೊಡೆದು,
ನಿನಗೆ ರೋಗ ಬರ ಮಾಡುವೆನು;
ನಿನ್ನ ಪಾಪಗಳ ನಿಮಿತ್ತ ನಿನ್ನನ್ನು ಹಾಳು ಮಾಡುವೆನು.
೧೪ ನೀನು ಉಂಡು, ತೃಪ್ತಿಯಾಗದೆ ಇರುವಿ;
ನಿನ್ನ ಹಸಿವೆ ನಿನ್ನೊಳಗೆ ಇರುವದು;
ನೀನು ಹಿಡಿದು, ತಪ್ಪಿಸದೆ ಇರುವಿ;
ನೀನು ತಪ್ಪಿಸುವಂಥಾದ್ದನ್ನು ನಾನು ಕತ್ತಿಗೆ ಒಪ್ಪಿಸುವೆನು.
೧೫ ನೀನು ಬೀಜ ಬಿತ್ತಿ, ಕೊಯ್ಯದೆ ಇರುವಿ;
ಇಪ್ಪೆಗಳನ್ನು ತುಳಿದು, ಎಣ್ಣೆ ಹಚ್ಚಿ ಕೊಳ್ಳದೆ ಇರುವಿ;
ದ್ರಾಕ್ಷಿ ರಸ ಮಾಡಿ, ಕುಡಿಯದೆ ಇರುವಿ.

೧೬ ಯಾಕಂದರೆ ಒಮ್ರಿಯ ನೇಮಗಳನ್ನೂ,
ಅಹಾಬನ ಮನೆಯ ಸಮಸ್ತ ಕ್ರಿಯೆಗಳನ್ನೂ ಕೈಕೊಳ್ಳುತ್ತೀರಿ;
ನಾನು ನಿನ್ನನ್ನು ಹಾಳಾಗಿಯೂ,
ಅದರ ನಿವಾಸಿಗಳನ್ನು ಸಿಳ್ಳಿಡುವೆಗಾಗಿಯೂ, ಮಾಡುವ ಹಾಗೆ,
ಅವರ ಆಲೋಚನೆಗಳಲ್ಲಿ ನಡೆ ಕೊಳ್ಳುತ್ತೀರಿ;
ಆದದರಿಂದ ನನ್ನ ಜನರ ನಿಂದೆಯನ್ನು ಹೊರುವಿರಿ.

## ೭ ಸಂಧಿ.

೧ ನನಗೆ ಅಯ್ಯೋ!
ಯಾಕಂದರೆ ನಾನು ಬೇಸಿಗೆ ಕಾಲದ ಹಣ್ಣುಗಳನ್ನು ಕೂಡಿಸುವವರ ಹಾಗೆಯೂ,
ದ್ರಾಕ್ಷೆ ಸುಗ್ಗಿಯಲ್ಲಿ ಹಕ್ಕಲು ಆರಿಸುವವರ ಹಾಗೆಯೂ, ಇದ್ದೇನೆ;
ತಿನ್ನುವದಕ್ಕೆ ಗೊನೆ ಇಲ್ಲ,
ನನ್ನ ಪ್ರಾಣವು ಮೊದಲು ಹಣ್ಣಾದ ಅಂಜೂರವನ್ನು ಅಪೇಕ್ಷಿಸುತ್ತದೆ.
೨ ಭಕ್ತನು ದೇಶದೊಳಗಿಂದ ನಾಶವಾಗಿದ್ದಾನೆ;
ಮನುಷ್ಯರಲ್ಲಿ ಯಥಾರ್ಥನು ಇಲ್ಲ;
ಅವರೆಲ್ಲರು ರಕ್ತಕ್ಕೆ ಹೊಂಚಿ ನೋಡುತ್ತಾರೆ;
ತಮ್ಮ ತಮ್ಮ ಸಹೋದರರನ್ನು ಬಲೆ ಹಾಕಿ ಬೇಟೆ ಆಡುತ್ತಾರೆ.
೩ ಕೆಟ್ಟದ್ದನ್ನು, ಎರಡು ಕೈಗಳಿಂದ ಚನ್ನಾಗಿ ಮಾಡುವ ಹಾಗೆ,
ಪ್ರಭುವು, ನ್ಯಾಯಾಧಿಪತಿಯು ಸಹ, ಬಹುಮಾನವನ್ನು ಕೇಳುತ್ತಾರೆ;
ಮತ್ತು ದೊಡ್ಡ ಮನುಷ್ಯನು ತನ್ನ ಪ್ರಾಣದ ಆಶೆಯನ್ನು ತಾನೇ ಹೇಳುತ್ತಾನೆ;
ಒಂದೇ ಕಟ್ಟಾಗಿದ್ದಾರೆ.
೪ ಅವರಲ್ಲಿ ಉತ್ತಮನು ದತ್ತೂರಿಯ ಹಾಗೆಯೂ,
ಬಹು ಯಥಾರ್ಥನು ಮುಳ್ಳಿನ ಬೇಲಿಯ ಹಾಗೆಯೂ, ಇದ್ದಾನೆ;
ನಿನ್ನ ಕೋಪರದವರ ದಿವಸವೂ,
ನಿನ್ನ ವಿಚಾರಣೆಯೂ, ಬರುತ್ತದೆ,
ಈಗಲೇ ಅವರಿಗೆ ಗಲಿಬಿಲಿಯಾಗುವದು.
೫ ಜತೆಯವನಲ್ಲಿ ನಂಬಿಕೆ ಇಡ ಬೇಡಿರಿ;
ಆಪ್ತ ಸ್ನೇಹಿತನಲ್ಲಿ ಭರವಸವಿಡ ಬೇಡಿರಿ;
ನಿನ್ನ ಎದೆಯಲ್ಲಿ ಮಲಗುವವಳಿಗೆ ನಿನ್ನ ಬಾಯಿಯ ಬಾಗಿಲುಗಳನ್ನು ಕಾಯಿ.
೬ ಯಾಕಂದರೆ ಮಗನು ತನ್ನ ತಂದೆಯನ್ನು ಅವಮಾನ ಮಾಡುತ್ತಾನೆ;
ಮಗಳು ತನ್ನ ತಾಯಿಗೂ,
ಸೊಸೆಯು ತನ್ನ ಅತ್ತೆಗೂ, ವಿರೋಧವಾಗಿ ಏಳುತ್ತಾರೆ;
ಒಬ್ಬನ ಶತ್ರುಗಳು ಸ್ವಂತ ಮನೆಯವರೇ.
೭ ಆದರೆ ನಾನು ಯೆಹೋವನಿಗೆ ಎದುರು ನೋಡುವೆನು;
ನನ್ನ ರಕ್ಷಣೆಯ ದೇವರಿಗೋಸ್ಕರ ಕಾದು ಕೊಳ್ಳುವೆನು;
ನನ್ನ ದೇವರು ನನ್ನನ್ನು ಕೇಳುವನು.

೮ ನನ್ನ ಶತ್ರುವೇ, ನನ್ನ ಮೇಲೆ ಸಂತೋಷ ಪಡ ಬೇಡ;



ನಾನು ಬಿದ್ದಿದ್ದರೂ, ತಿರಿಗಿ ಏಳುವೆನು;
ಕತ್ತಲೆಯಲ್ಲಿ ಕೂತು ಕೊಂಡರೂ, ನನಗೆ ಬೆಳಕು ಯೆಹೋವನೇ.
೯ ನಾನು ಯೆಹೋವನಿಗೆ ವಿರೋಧವಾಗಿ ಪಾಪ ಮಾಡಿದದರಿಂದ,
ಅವನು ನನ್ನ ವ್ಯಾಜ್ಯವಾಡಿ, ನನ್ನ ನ್ಯಾಯವನ್ನು ನಡಿಸುವತನಕ,
ಅವನ ಕೋಪವನ್ನು ತಾಳುವೆನು;
ಅವನು ನನ್ನನ್ನು ಬೆಳಕಿಗೆ ತರುವನು;
ಅವನ ನೀತಿಯನ್ನು ನೋಡುವೆನು.
೧೦ ನನ್ನ ಶತ್ರು ಸಹ ಅದನ್ನು ನೋಡುವಳು;
ಮತ್ತು ನಿನ್ನ ದೇವರಾದ ಯೆಹೋವನು ಎಲ್ಲಿ? ಎಂದು,
ನನಗೆ ಹೇಳಿದವಳನ್ನು ನಾಚಿಕೆ ಮುಚ್ಚುವದು;
ನನ್ನ ಕಣ್ಣುಗಳು ಅವಳನ್ನು ನೋಡುವವು;
ಈಗಲೇ ಬೀದಿಗಳಲ್ಲಿರುವ ಕೆಸರಿನಂತೆ ತುಳಿಯಲ್ಪಡುವಳು.

೧೧ ನಿನ್ನ ಗೋಡೆಗಳು ತಿರಿಗಿ ಕಟ್ಟಲ್ಪಡುವ ದಿವಸದಲ್ಲಿ,
ಆ ದಿವಸದಲ್ಲಿ, ನಿರ್ಣಯವು ದೂರವಾಗಿ ಹೋಗುವದು;
೧೨ ಆ ದಿವಸದಲ್ಲಿ ಅಶ್ಶೂರಿನಿಂದಲೂ,
ಕೋಟೆಯುಳ್ಳ ಪಟ್ಟಣಗಳಿಂದಲೂ,
ಕೋಟೆಯಿಂದ ನದಿಯ ಪರ್ಯಂತರಕ್ಕೂ,
ಸಮುದ್ರದಿಂದ ಸಮುದ್ರದ ಪರ್ಯಂತರಕ್ಕೂ,
ಬೆಟ್ಟದಿಂದ ಬೆಟ್ಟದ ಪರ್ಯಂತರಕ್ಕೂ,
ನಿನ್ನ ಬಳಿಗೆ ಬರುವರು.
೧೩ ಆದರೂ ದೇಶವು, ಅದರ ನಿವಾಸಿಗಳ ನಿಮಿತ್ತ,
ಅವರ ದುಷ್ಕ್ರಿಯೆಗಳ ಫಲದಿಂದ, ಹಾಳಾಗುವದು.

೧೪ ನಿನ್ನ ಜನರನ್ನೂ,
ಏಕಾಂತವಾಗಿ ಅಡವಿಯಲ್ಲಿ, ತಾರ್ಮೆಲಿನ ನಡುವೆ ವಾಸವಾಗಿರುವ
ನಿನ್ನ ಬಾಳ್ವೆಯ ಮಂದೆಯನ್ನೂ,
ನಿನ್ನ ಕೋಲಿನಿಂದ ಮೇಯಿಸು;
ಅವರು ಪೂರ್ವದ ದಿವಸಗಳಲ್ಲಿದ್ದ ಹಾಗೆ,
ಬಾಶಾನಿನಲ್ಲಿಯೂ, ಗಿಲ್ಯಾದಿನಲ್ಲಿಯೂ, ಮೇಯಲಿ.
೧೫ ನೀನು ಐಗುಪ್ತ ದೇಶದೊಳಗಿಂದ ಹೊರಡುವ ದಿವಸಗಳ ಹಾಗೆ,
ಅವನಿಗೆ ಆಶ್ಚರ್ಯಗಳನ್ನು ತೋರಿಸುವೆನು.
೧೬ ಜನಾಂಗಗಳು ನೋಡಿ,
ತಮ್ಮ ತ್ರಾಣಕ್ಕೆಲ್ಲಾ ನಾಚಿಕೆ ಪಡುವರು;
ತಮ್ಮ ಕೈಗಳನ್ನು ಬಾಯಿಯ ಮೇಲೆ ಇಡುವರು;
ಅವರ ಕಿವಿಗಳು ಕಿವುಡಾಗಿ ಹೋಗುವವು.
೧೭ ಸರ್ಪದಂತೆ ಧೂಳನ್ನು ನೆಕ್ಕುವರು;
ಭೂಮಿಯ ಕ್ರಿಮಿಗಳಂತೆ ತಾವು ಅಡಗಿ ಕೊಂಡ ಸ್ಥಳಗಳೊಳಗಿಂದ ನಡುಗಿ ಬರುವರು;
ನಮ್ಮ ದೇವರಾದ ಯೆಹೋವನಿಗೆ ಹೆದರುವರು;
ನಿನಗೆ ಭಯ ಪಡುವರು.

೧೮ ಅಕ್ರಮವನ್ನು ಮನ್ನಿಸುವಂಥ,
ತನ್ನ ಬಾಳ್ವೆಯ ಉಳಿವಿನ ದ್ರೋಹವನ್ನು ದಾಟಿ ಹೋಗುವಂಥ,
ನಿನ್ನ ಹಾಗೆ ದೇವರು ಯಾರು?
ಅವನು ತನ್ನ ಕೋಪವನ್ನು ಎಂದೆಂದಿಗೂ ಇಟ್ಟು ಕೊಳ್ಳುವದಿಲ್ಲ;
ಯಾಕಂದರೆ ಕೃಪೆಯಲ್ಲಿ ಸಂತೋಷ ಪಡುತ್ತಾನೆ.
೧೯ ಅವನು ತಿರಿಗಿ ಕೊಂಡು,
ನಮ್ಮನ್ನು ಕನಿಕರಿಸುವನು, ನಮ್ಮ ಅಕ್ರಮಗಳನ್ನು ತುಳಿದು ಬಿಡುವನು;
ಹೌದು, ಅವರ ಪಾಪಗಳನ್ನೆಲ್ಲಾ ಸಮುದ್ರದ ಅಗಾಧಗಳಲ್ಲಿ ಹಾಕುವಿ.
೨೦ ನೀನು ನಮ್ಮ ಪಿತೃಗಳಿಗೆ,
ಪೂರ್ವದ ದಿವಸಗಳಿಂದಲೂ, ಪ್ರಮಾಣ ಮಾಡಿದ ಸತ್ಯವನ್ನು,
ಯಾಕೋಬನಿಗೂ,
ಕೃಪೆಯನ್ನು ಅಬ್ರಹಾಮನಿಗೂ, ನಡಿಸುವಿ.

# NAHUM.

## ನಹೂಮನು.

## ೧. ಸಂಧಿ.

೧ ನಿನೆವೆಯ ಭಾರವು.
ಎಲ್ಕೋಷಿನವನಾದ ನಹೂಮನ ದರ್ಶನದ ಪುಸ್ತಕವು.
೨ ಯೆಹೋವನು ಕೋಪವುಳ್ಳಂಥ, ಮುಯ್ಯಿಗೆ ಮುಯ್ಯಿ ಕೊಡುವ ದೇವಕೇ;
ಯೆಹೋವನು ಮುಯ್ಯಿಗೆ ಮುಯ್ಯಿ ಕೊಡುವಂಥ ಉಗ್ರವುಳ್ಳವನೇ;
ಯೆಹೋವನು ತನ್ನ ವೈರಿಗಳಿಗೆ ಮುಯ್ಯಿಗೆ ಮುಯ್ಯಿ ತೀರಿಸಿ,
ತನ್ನ ಶತ್ರುಗಳಿಗೆ ಕೋಪವನ್ನು ಇಟ್ಟು ಕೊಳ್ಳುತ್ತಾನೆ.
೩ ಯೆಹೋವನು ಕೋಪದಲ್ಲಿ ತಾಮಸವುಳ್ಳವನೂ, ಶಕ್ತಿಯಲ್ಲಿ ದೊಡ್ಡವನೂ;
ದುರ್ಮಾರ್ಗರನ್ನು ಎಚ್ಚು ನಾತ್ರ ನಿರ್ಮಲರೆಂದು ತೀರಿಸನು;
ಯೆಹೋವನ ಮಾರ್ಗವು ಸುಳಿಗಾಳಿಯಲ್ಲಿಯೂ, ಬಿರುಗಾಳಿಯಲ್ಲಿಯೂ, ಉಂಟು;
ಮೇಘಗಳು ಅವನ ಕಾಲುಗಳ ಧೂಳೇ.
೪ ಅವನು ಸಮುದ್ರವನ್ನು ಗದರಿಸಿ ಅದನ್ನು ಒಣಗ ಮಾಡುತ್ತಾನೆ;
ನದಿಗಳನ್ನೆಲ್ಲಾ ಆರಿ ಹೋಗ ಮಾಡುತ್ತಾನೆ;
ಬಾಶಾನು ಬಾಡಿ ಹೋಗುತ್ತದೆ; ಕಾರ್ಮೆಲು ಸಹ;
ಮತ್ತು ಲೆಬನೋನಿನ ಹೂವು ಬಾಡಿ ಹೋಗುತ್ತದೆ.
೫ ಬೆಟ್ಟಗಳು ಅವನ ಮುಂದೆ ನಡುಗುತ್ತವೆ;
ಗುಡ್ಡಗಳು ಕರಗುತ್ತವೆ;

ಭೂಮಿಯೂ, ಜಿಗಿತ್ತೂ, ಅದರಲ್ಲಿ ವಾಸಿಸುವವರೆಲ್ಲರೂ,
ಅವನ ಮುಂದೆ ಕದಲುತ್ತವೆ.
೬ ಅವನ ರೌದ್ರದ ಎದುರಿಗೆ ಯಾರು ನಿಲ್ಲುವರು?
ಅವನ ಕೋಪ ಉರಿಯಲು ಯಾರು ನಿಂತು ಕೊಳ್ಳುವರು?
ಅವನ ಉಗ್ರವು ಬೆಂಕಿಯ ಹಾಗೆ ಸುರಿಸಲ್ಪಟ್ಟಿದೆ;
ಗುಡ್ಡಗಳು ಅವನಿಂದ ಕೆಡವಲ್ಪಟ್ಟಿವೆ.
೭ ಯೆಹೋವನು ಒಳ್ಳೇಯವನು,
ಇಕ್ಕಟ್ಟಿನ ದಿವಸದಲ್ಲಿ ಕೋಟೆಯಾಗಿದ್ದಾನೆ;
ತನ್ನಲ್ಲಿ ನಂಬಿಕೆ ಇಡುವವರನ್ನು ಬಲ್ಲನು.
೮ ಆದರೆ ಮೇಲೆ ಬಿರುವ ಪ್ರಳಯದಿಂದ ಅದರ ಸ್ಥಳವನ್ನು ಮುಗಿಸಿ ಬಿಡುವನು;
ಕತ್ತಲೆ ಅವನ ಶತ್ರುಗಳನ್ನು ಹಿಂದಟ್ಟುವದು.

೯ ಯೆಹೋವನಿಗೆ ವಿರೋಧವಾಗಿ ಏನು ಯೋಚಿಸುತ್ತೀರಿ?
ಅವನು ಮುಗಿಸಿ ಬಿಡುತ್ತಾನೆ;
ಇಕ್ಕಟ್ಟು ಎರಡನೇ ಸಾರಿ ಏಳದು.
೧೦ ಯಾಕಂದರೆ ಅವರು ಮುಳ್ಳುಗಳ ಹಾಗೆ ಹೊಂದಿಕೊಂಡಿದ್ದರೂ,
ತಮ್ಮ ದ್ರಾಕ್ಷೆರಸದಿಂದ ಮತ್ತರಾಗಿದ್ದರೂ,
ಪೂರ್ಣವಾಗಿ ಒಣಗಿದ ಕೂಳೆಯಂತೆ ಸುಡಲ್ಪಡುವರು.
೧೧ ಯೆಹೋವನಿಗೆ ವಿರೋಧವಾಗಿ ಕೇಡನ್ನು ಯೋಚಿಸುವವನು,
ದುಷ್ಟವಾದ ಆಲೋಚನೆ ಕರ್ತನು,
ನಿನ್ನೊಳಗಿಂದ ಹೊರಟಿದ್ದಾನೆ.
೧೨ ಯೆಹೋವನು ಹೇಳುವದೇನಂದರೆ—
ಅವರು ಸುಖವುಳ್ಳವರಾಗಿಯೂ, ಬಹು ಮಂದಿಯಾಗಿಯೂ, ಇದ್ದರೂ,
ಅವನು ಹಾದು ಹೋಗುವಾಗ ಹೀಗೆ ಕಡಿಯಲ್ಪಡುವರು;
ನಾನು ನಿನ್ನನ್ನು ಕಷ್ಟ ಪಡಿಸಿದಾಗ್ಯೂ
ಇನ್ನು ಮೇಲೆ ಕಷ್ಟ ಪಡಿಸೆನು.
೧೩ ಆದರೆ ನಾನು ಈಗ ನಿನ್ನ ಮೇಲಿನಿಂದ ಅವನ ನೊಗವನ್ನು ಮುರಿದು,
ನಿನ ಬಂಧಗಳನ್ನು ಹರಿದು ಬಿಡುವೆನು.
೧೪ ಮತ್ತು ನಿನ್ನ ವಿಷಯ ಯೆಹೋವನು ಆಜ್ಞಾಪಿಸುವದೇನಂದರೆ—
ನಿನ್ನ ಹೆಸರುಳ್ಳವರು, ಇನ್ನು ಬಿತ್ತಲ್ಪಡರು;
ನಿನ್ನ ದೇವರುಗಳ ಮನೆಯೊಳಗಿಂದ
ಕತ್ತಿದ ಬಿಗ್ರಹವನ್ನೂ, ಎರಕ ಹೊಯಿದದ್ದನ್ನೂ, ಕಡಿದು ಬಿಡುವೆನು;
ನೀನು ಕೆಲಸಕ್ಕೆ ಬಾರದದರಿಂದ ನಿನ್ನ ಸಮಾಧಿಯನ್ನು ಮಾಡುವೆನು.

೧೫ ಇಗೋ, ಬೆಟ್ಟಗಳ ಮೇಲೆ ಒಳ್ಳೇದನ್ನು ಸಾರಿ,
ಸಮಾಧಾನವನ್ನು ತಿಳಿಸುವವನ ಪಾದಗಳು!
ಯೆಹೂದವೇ, ನಿನ್ನ ಹಬ್ಬಗಳನ್ನು ನಡಿಸು,
ನಿನ್ನ ಹರಕೆಗಳನ್ನು ಸಲ್ಲಿಸು;
ಯಾಕಂದರೆ ಇನ್ನು ಮೇಲೆ ದುಷ್ಟನು ನಿನ್ನನ್ನು ಹಾದು ಹೋಗನು;
ಅವನು ಶುದ್ಧವಾಗಿ ಕಡಿದು ಬಿಡಲ್ಪಟ್ಟಿದ್ದಾನೆ.

## ೨. ಸಂಧಿ.

೧ ಒಡೆದು ಬಿಡುವವನು ನಿನ್ನ ಎದುರಿಗೆ ಏರಿ ಬಂದಿದ್ದಾನೆ;
ಕೋಟೆಯನ್ನು ಭದ್ರ ಮಾಡು;
ದಾರಿಯನ್ನು ಕಾಯಿ;
ನಡುವುಗಳನ್ನು ಕಟ್ಟಿಕೋ,
ನಿನ್ನ ಶಕ್ತಿಯನ್ನು ಬಲವಾಗಿ ಘಟ್ಟಿ ಮಾಡಿಕೋ.
೨ ಯಾಕಂದರೆ ಯೆಹೋವನು ಯಾಕೋಬನ ಹೆಚ್ಚಳವನ್ನು
ಇಸ್ರಯೇಲಿನ ಹೆಚ್ಚಳದ ಹಾಗೆಯೇ ತಿರುಗಿಸಿ ಬಿಟ್ಟಿದ್ದಾನೆ;
ಬರೀದು ಮಾಡುವವರು ಅವರನ್ನು ಬರೀದು ಮಾಡಿ,
ಅವರ ದ್ರಾಕ್ಷೆ ಬಳ್ಳಿಗಳನ್ನು ಕೆಡಿಸಿದ್ದಾರೆ.

೩ ಅವನ ಶೂರರ ಡಾಲು ಕೆಂಪಾಗಿದೆ;
ಯುದ್ಧಸ್ಥರು ಲಾಕಿ ಬಣ್ಣ ಧರಿಸಿದವರು;
ಅವನು ಸಿದ್ಧ ಮಾಡುವ ದಿವಸದಲ್ಲಿ,
ರಥಗಳು ಬೆಂಕಿಯಾದ ಕತ್ತಿಗಳುಳ್ಳವುಗಳಾಗಿ ಇರುವವು,
ಈಟಿಗಳು ಅಲುಗಿಸಲ್ಪಡುವವು.
೪ ರಥಗಳು ಬೀದಿಗಳಲ್ಲಿ ಧಡ ಧಡ ಓಡ್ಯಾಡುವವು,
ರಾಜ ಮಾರ್ಗಗಳಲ್ಲಿ ಒಂದಕ್ಕೊಂದು ತಗಲುವವು;
ದೀವಟಿಗೆಗಳ ಹಾಗೆ ತೋರುವವು,
ಮಿಂಚುಗಳ ಹಾಗೆ ಓಡುವವು.

೫ ಅವನು ತನ್ನ ಘಟ್ಟಿಗರನ್ನು ಎಣಿಸುವನು;
ಅವರು ತಮ್ಮ ನಡೆಯಲ್ಲಿ ಎಡವುವರು;
ಅದರ ಗೋಡೆಯ ಬಳಿಗೆ ತ್ವರೆಯಾಗಿ ಬರುವರು;
ಅಡ್ಡಕಟ್ಟಿ ಸಿದ್ಧ ಮಾಡಲ್ಪಟ್ಟಿದೆ.
೬ ನದಿಗಳ ಬಾಗಲುಗಳು ತೆಗೆಯಲ್ಪಡುವವು;
ಅರಮನೆ ಕರಗಿ ಹೋಗುವದು.
೭ ಸ್ಥಿರವಾಗಿದ್ದವಳು ಬೈಲು ಮಾಡಲ್ಪಡುವಳು,
ಮೇಲಕ್ಕೆ ಬೈಯ್ಯಲ್ಪಡುವಳು;
ಅವಳ ದಾಸಿಯರು ಪಾರಿವಾಳಗಳ ಶಬ್ದದಂತೆ ಮೂಲುಗಿ,
ಎದೆ ಬಡು ಕೊಳ್ಳುವರು.
೮ ನಿನೆವೆ ಹುಟ್ಟಿದಂದಿನಿಂದ ನೀರಿನ ಕೆರೆಯ ಹಾಗಿತ್ತು;
ಆದರೆ ಅವರು ಓಡಿ ಹೋಗುತ್ತಾರೆ;
ನಿಲ್ಲಿರಿ, ನಿಲ್ಲಿರಿ, ಅಂದರೂ, ಒಬ್ಬನು ಹಿಂದಕ್ಕೆ ನೋಡುವದಿಲ್ಲ.
೯ ಬೆಳ್ಳಿಯನ್ನು ಸುಲುಕೊಳ್ಳಿರಿ;
ಬಂಗಾರವನ್ನು ಸುಲುಕೊಳ್ಳಿರಿ;
ಸಂಪತ್ತಿಗೆ ಅಂತ್ಯವಿಲ್ಲ;
ವಿಚಿತ್ರವಾದ ಎಲ್ಲಾ ಸಾಮಾನುಗಳ ಮಹಿಮೆ ಎಷ್ಟೋ!
೧೦ ಬರಿದೂ, ಬೈಲೂ, ಹಾಳೂ, ಆಯಿತು!
ಹೃದಯ ಕರುಗುತ್ತದೆ; ಮೊಣಕಾಲುಗಳು ಕದಲುತ್ತವೆ.
ಎಲ್ಲಾ ನಡುವುಗಳಲ್ಲಿ ಸಂಕಟಿ ಉಂಟು;
ಎಲ್ಲಾ ಮುಖಗಳು ಕಳೆ ಗುಂದುತ್ತವೆ.

೧೧ ಸಿಂಹದ ಗವಿಯೂ,



ಎಳೇ ಸಿಂಹಗಳು ಮೇಯುವ ಸ್ಥಳವೂ, ಎಲ್ಲಿ?
ಅಲ್ಲಿ ಸಿಂಹವೂ, ಸಿಂಹಣಿಯೂ,
ಸಿಂಹದ ಮರಿಗಳೂ, ನಡೆದಾಡಿ, ಯಾರು ಹೆದರಿಸಲಿಲ್ಲವಲ್ಲ?
೧೨ ಸಿಂಹವು ತನ್ನ ಮರಿಗಳಿಗೆ ಸಾಕಾಗುವಷ್ಟು ಬೇಟೆ,
ತನ್ನ ಸಿಂಹಣಿಗಳಿಗೋಸ್ಕರ ಕೊರಳು ಹಿಸಕಿ,
ಕೊಳ್ಳೆಯಿಂದ ತನ್ನ ಗವಿಗಳನ್ನೂ,
ಸುಲಿಗೆಯಿಂದ ತನ್ನ ಗುಹೆಗಳನ್ನೂ ತುಂಬಿಸುತ್ತಿತ್ತು.

೧೩ ಸೈನ್ಯಗಳ ಯೆಹೋವನು ಅನ್ನುವದೇನಂದರೆ—
ಇಗೋ ನಿನಗೆ ವಿರೋಧವಾಗಿದ್ದೇನೆ;
ಅದರ ರಥಗಳನ್ನು ಹೊಗೆಯಾಗ ಸುಡುತ್ತೇನೆ;
ಕತ್ತಿಯು ನಿನ್ನ ಎಳೇ ಸಿಂಹಗಳನ್ನು ತಿನ್ನುವದು;
ನಿನ್ನ ಕೊಳ್ಳೆಯನ್ನು ಭೂಮಿಯ ಮೇಲಿನಿಂದ ಕಡಿದು ಬಿಡುತ್ತೇನೆ;
ನಿನ್ನ ದೂತರ ಶಬ್ದವು ಇನ್ನು ಕೇಳಲ್ಪಡುವದಿಲ್ಲ.

## ೩. ಸಂಧಿ.

೧ ರಕ್ತವುಳ್ಳ ಪಟ್ಟಣಕ್ಕೆ ಅಯ್ಯೋ!
ಅದೆಲ್ಲಾ ಸುಳ್ಳಿನಿಂದಲೂ, ಬಲಾತ್ಕಾರದಿಂದಲೂ ತುಂಬಿಯದೆ;
ಕೊಳ್ಳೆಯನ್ನು ಬಿಡುವದಿಲ್ಲ.
೨ ಚಬುಕಿನ ಶಬ್ದವೂ,
ಚಕ್ರಗಳ ಧಡ ಧಡನೆಯ ಶಬ್ದವೂ,
ಕುದುರೆಗಳ ಕುಣಿದಾಟವೂ,
ರಥಗಳ ಹಾರ್ಯಾಟವೂ, ಉಂಟು.
೩ ಸವಾರರು ಹತ್ತುತ್ತಾರೆ;
ಈಟಿಗಳು ಥಳ ಥಳಿಸುತ್ತವೆ;
ಕತ್ತಿಗಳು ಮಿಂಚುತ್ತವೆ;
ಹತವಾದವರು ಸಾವಿರ; ಹೆಣಗಳು ಬಹಳ;
ಶವಗಳಿಗೆ ಅಂತ್ಯವಿಲ್ಲ;
ಅವರ ಶವಗಳ ಮೇಲೆ ಎಡವುತ್ತಾರೆ.
೪ ಯಾಕಂದರೆ, ಸೂಂದರ್ಯವುಳ್ಳ ಕೂನ್ಯಗಾರ್ತಿಯಾದ
ಸೂಳೆಯ ಸೂಳೆತನಗಳ ಬಾಹುಳ್ಯದಿಂದರೇ;
ಅವಳು ತನ್ನ ಸೂಳೆತನಗಳಿಂದ ಜನಾಂಗಗಳನ್ನೂ,
ತನ್ನ ಕೂನ್ಯಗಳಿಂದ ಗೋತ್ರಗಳನ್ನು ಮಾರಿದಳಲ್ಲ?

೫ ಸೈನ್ಯಗಳ ಯೆಹೋವನು ಅನ್ನುತ್ತಾನೆ—
ಇಗೋ, ನಿನಗೆ ವಿರೋಧವಾಗಿದ್ದೇನೆ;
ನಿನ್ನ ಶರಗುಗಳನ್ನು ನಿನ್ನ ಮುಖದ ಮೇಲೆ ಎತ್ತಿ,
ಜನಾಂಗಗಳಿಗೆ ನಿನ್ನ ನಾಚಿಕೆಯನ್ನೂ,
ರಾಜ್ಯಗಳಿಗೆ ನಿನ್ನ ನಿಂದೆಯನ್ನೂ, ತೋರಿಸುತ್ತೇನೆ.
೬ ಅಸಹ್ಯವಾದವುಗಳನ್ನು ನಿನ್ನ ಮೇಲೆ ಹಾಕಿ,
ನಿನ್ನನ್ನು ನೀಚ ಮಾಡಿ, ನಿನ್ನನ್ನು ನೋಟಕ್ಕೆ ಇಡುತ್ತೇನೆ.
೭ ಆಗಲಾಗುವದೇನಂದರೆ,
ನಿನ್ನನ್ನು ನೋಡುವವರೆಲ್ಲರು ನಿನ್ನಿಂದ ಓಡಿ ಹೋಗಿ—
ನಿನೆವೆ ಹಾಳಾಯಿತು;
ಅದಕ್ಕೆ ಯಾರು ಚಿಂತೆ ಪಡುವರು?
ನಿನಗೆ ಆದರಿಸುವವರನ್ನು ನಾನು ಎಲ್ಲಿಂದ ಹುಡುಕಲಿ?
ಎಂದು ಹೇಳುವರು.

೮ ನದಿಗಳ ಬಳಿಯಲ್ಲಿ ನೆಲೆಯಾಗಿದ್ದ
ನೋವಮ್ಮೊನಿಗಿಂತ ನೀನು ಒಳ್ಳೇಯವಳೋ?
ಅದರ ಸುತ್ತಲು ನೀರಿತ್ತು;
ಅದರ ಬಲವು ಸಮುದ್ರವೇ;
ಸಮುದ್ರವು ಅದಕ್ಕೆ ಗೋಡೆಯಾಗಿತ್ತು.
೯ ಕೂಷೂ, ಐಗುಪ್ತ್ಯವೂ, ಅದರ ಬಲವಾಗಿದ್ದವು;
ಮತ್ತು ಲೆಖ್ಖವಿಲ್ಲದಾಗಿತ್ತು;
ಫೂತೂ ಲೂಬ್ಯರೂ ನಿನ್ನ ಸಹಾಯಕರಾಗಿದ್ದರು.
೧೦ ಆದರೆ ಅದು ಸೆರೆಯಾಗಿ ದೇಶಾಂತರಕ್ಕೆ ಹೋಯಿತು;
ಅದರ ಕೂಸುಗಳು ಸಹ ಎಲ್ಲಾ ಬೀದಿಗಳ ತಲೆಗಳಲ್ಲಿ ಜಜ್ಜಲ್ಪಟ್ಟವು;
ಅದರ ಘನವುಳ್ಳವರಿಗೋಸ್ಕರ ಚೀಟು ಹಾಕಿದರು;
ಅದರ ದೊಡ್ಡವರು ಸಂಕೋಲೆಗಳಿಂದ ಕಟ್ಟಲ್ಪಟ್ಟರು.

೧೧ ನೀನು ಸಹ ಅಮಲಾಗುವಿ;
ಅಡಗಿ ಕೊಳ್ಳುವಿ;
ನೀನು ಸಹ ಶತ್ರುವಿನ ನಿಮಿತ್ತ ತ್ರಾಣಸ್ಥಾನವನ್ನು ಹುಡುಕುವಿ.
೧೨ ನಿನ್ನ ಕೋಟೆಗಳೆಲ್ಲಾ ಮೊದಲನೇ ಹಣ್ಣುಗಳುಳ್ಳ ಅಂಜೂರದ ಗಿಡಗಳ ಹಾಗಿರುವವು;
ಅಲ್ಲಾಡಿಸಲ್ಪಟ್ಟರೆ ತಿನ್ನುವವನ ಬಾಯಿಯಲ್ಲಿಯೇ ಬೀಳುವವು.
೧೩ ಇಗೋ, ನಿನ್ನ ಮಧ್ಯದಲ್ಲಿರುವ ನಿನ್ನ ಜನರು ಹೆಂಗಸರ ಹಾಗಿದ್ದಾರೆ;
ನಿನ್ನ ದೇಶದ ಬಾಗಲುಗಳು ನಿನ್ನ ಶತ್ರುಗಳಿಗೆ ಅಗಲವಾಗಿ ತೆಗೆಯಲ್ಪಡುವವು;
ಬೆಂಕಿ ನಿನ್ನ ಅಡ್ಡದಂಡೆಗಳನ್ನು ತಿಂದು ಬಿಡುವದು.

೧೪ ಮುತ್ತಿಗೆಗೋಸ್ಕರ ನೀರನ್ನು ಹೇದು;
ನಿನ್ನ ಕೋಟೆಗಳನ್ನು ಭದ್ರ ಮಾಡು;
ಕೆಸರಿನಲ್ಲಿ ಹೇರು; ಮಣ್ಣನ್ನು ತುಳಿ;
ಭಟ್ಟಿಯನ್ನು ಬಲ ಪಡಿಸು.
೧೫ ಅಲ್ಲೇ ಬೆಂಕಿ ನಿನ್ನನ್ನು ತಿನ್ನುವದು,
ಕತ್ತಿಯು ನಿನ್ನನ್ನು ಕಡಿದು ಬಿಡುವದು;
ಕಲಭದಂತೆ ನಿನ್ನನ್ನು ತಿಂದು ಬಿಡುವದು;
ಕಲಭದಂತೆ ಬಹು ಮಂದಿಯಾಗು;
ಮಿಡತೆಯಂತೆ ಬಹು ಮಂದಿಯಾಗು.
೧೬ ನಿನ್ನ ವರ್ತಕರನ್ನು ಆಕಾಶದ ನಕ್ಷತ್ರಗಳಿಗಿಂತ ಹೆಚ್ಚೆ ಸಿದ್ಧೀ;
ಕಲಭವು ವ್ಯಾಪಿಸಿ ಕೊಂಡು ಹಾರಿ ಹೋಗುತ್ತದೆ.
೧೭ ನಿನ್ನ ಕಿರೀಟಧಾರಿಗಳು ಮಿಡತೆಗಳ ಹಾಗೆಯೂ,
ನಿನ್ನ ಅಧಿಪತಿಗಳು ತಂಪಾದ ದಿವಸದಲ್ಲಿ ಬೇಲಿಗಳೊಳಗೆ
ಇಳುಕೊಳ್ಳುವ ದೊಡ್ಡ ಮಿಡತೆಗಳ ಹಾಗೆಯೂ, ಇದ್ದಾರೆ;
ಸೂರ್ಯನು ಹುಟ್ಟುವಾಗ ಹಾರಿ ಹೋಗುತ್ತವೆ;
ಆಗ ಅವುಗಳ ಸ್ಥಳವು ತಿಳಿಯುವದಿಲ್ಲ, ಅವು ಎಲ್ಲಿ?

೧೯ ಅಕ್ಕೂರನ ಅರಸನೇ! ನಿನ್ನ ಕುರುಬರು ತೂಕಡಿಸುತ್ತಾರೆ,
ನಿನ್ನ ಶ್ರೇಷ್ಠರು ಬಿದ್ದಿದ್ದಾರೆ;
ನಿನ್ನ ಜನರು ಬೆಟ್ಟಗಳಲ್ಲಿ ಚದರಿ ಹೋಗಿದ್ದಾರೆ;
ಕೂಡಿಸುವವರು ಯಾರು ಇಲ್ಲ.
೧೯ ನಿನ್ನ ಮುರಿಯೋಣ ಕೊಂಚವಾದದ್ದಲ್ಲ;
ನಿನ್ನ ಘಾಯ ಕಠಿಣವಾದದ್ದು;
ನಿನ್ನ ಸುದ್ದಿಯನ್ನು ಕೇಳುವವರೆಲ್ಲರು
ನಿನಗೆ ಕೈಗಳನ್ನು ಚಪ್ಪಳಿಸುವರು;
ಯಾಕಂದರೆ ನಿನ್ನ ಕೆಟ್ಟತನವು
ನಿತ್ಯವಾಗಿ ಯಾರ ಮೇಲೆ ಹಾದು ಹೋಗದೆ ಇತ್ತು?

# HABAKKUK.

## ಹಬಕೂಕನು.

### ೧. ಸಂಧಿ.

೧ ಪ್ರವಾದಿಯಾದ ಹಬಕೂಕನು ನೋಡಿದ ಭಾರವು.
೨ ಓ ಯೆಹೋವ!
ನಾನು ಎಷ್ಟು ವರಿಗೂ ನಿನಗೆ ಮೊರೆ ಇಟ್ಟರೂ,
ನೀನು ಕೇಳುವದಿಲ್ಲ?
ಬಲಾತ್ಕಾರವೆಂದು ನಿನಗೆ ಕೂಗುತ್ತೇನೆ;
ಆದರೆ ನೀನು ರಕ್ಷಿಸುವದಿಲ್ಲ.
೩ ಯಾಕೆ ನನಗೆ ಪಾತಕವನ್ನು ತೋರಿಸಿ,
ಕಾಟವನ್ನು ನೋಡ ಮಾಡುತ್ತೀ?
ಸೂರೆಯೂ ಬಲಾತ್ಕಾರವೂ ನನ್ನ ಮುಂದೆ ಅವೆ;
ಜಗಳವನ್ನೂ ತರ್ಕವನ್ನೂ ಎಬ್ಬಿಸುವವರು ಇದ್ದಾರೆ.
೪ ಆದದರಿಂದ ನ್ಯಾಯಪ್ರಮಾಣವು ಸಡ್ಲವಾಗುತ್ತದೆ;
ನ್ಯಾಯವು ಎಂದಿಗೂ ಹೊರಡುವದಿಲ್ಲ;
ಯಾಕಂದರೆ ದುಷ್ಟರು ನೀತಿವಂತರನ್ನು ಸುತ್ತಿ ಕೊಂಡಿದ್ದಾರೆ;
ಆದದರಿಂದ ಡೊಂಕಾದ ನ್ಯಾಯವು ಹೊರಡುತ್ತದೆ.

೫ ಜನಾಂಗಗಳಲ್ಲಿ ನೋಡಿ, ದೃಷ್ಟಿಸಿ,
ಬಹಳವಾಗಿ ಆಶ್ಚರ್ಯ ಪಡಿರಿ;
ಯಾಕಂದರೆ, ಹೇಳಿಸಿದರೂ ನೀವು ನಂಬದಂಥ ಕ್ರಿಯೆಯನ್ನು
ನಿಮ್ಮ ದಿವಸಗಳಲ್ಲಿ ಮಾಡುತ್ತೇನೆ.
೬ ಯಾಕಂದರೆ, ಇಗೋ, ನಾನು ಕಸ್ದೀಯರನ್ನು ಎಬ್ಬಿಸುತ್ತೇನೆ;
ಅದು ಕಹಿಯಾದ ಶೀಘ್ರವಾದ ಜನಾಂಗವು;
ತಮಗಲ್ಲದ ನಿವಾಸಗಳನ್ನು ವಶ ಮಾಡಿ ಕೊಳ್ಳುವದಕ್ಕೆ,
ದೇಶದ ವಿಸ್ತಾರವನ್ನು ಹಾದು ಹೋಗುವರು.
೭ ಅವರು ಭಯಂಕರವಾದವರೂ, ಅಘೋರವಾದವರೂ;
ಅವರ ನ್ಯಾಯವೂ ಅವರ ಘನತೆಯೂ
ತಮ್ಮಿಂದಲೇ ಹೊರಡುತ್ತವೆ.
೮ ಅವರ ಕುದುರೆಗಳು ಚಿರತೆಗಳಿಗಿಂತ ವೇಗವಾಗಿಯೂ,
ಸಂಜೆಯ ತೋಳಗಳಿಗಿಂತ ಚುರುಕಾಗಿಯೂ, ಅವೆ;
ಅವರ ಸವಾರರು ವಿಸ್ತರಿಸಿ ಕೊಳ್ಳುವರು,
ಹೌದು, ಅವರ ಸವಾರರು ದೂರದಿಂದ ಬರುವರು;
ತಿನ್ನುವದಕ್ಕೆ ತ್ವರೆ ಪಡುವ ಹದ್ದಿನಂತೆ ಹಾರಿ ಬರುವರು.
೯ ಅವರೆಲ್ಲರು ಬಲಾತ್ಕಾರಕ್ಕೆ ಬರುವರು;
ಅವರ ಮುಖಗಳ ತೋರಿಕೆ ಮೂಡಣ ಘಾಳಿಯಂತೆಯೇ;
ಕೆರೆಯವರನ್ನು ಮರಳಿನ ಹಾಗೆ ಕೂಡಿಸುವರು.
೧೦ ಅವರು ಅರಸರಿಗೆ ಹಾಸ್ಯ ಮಾಡುವರು;
ಪ್ರಭುಗಳು ಅವರಿಗೆ ನಗಾಟವಾಗಿರುವರು;
ಕೋಟೆಗಳಿಗೆಲ್ಲಾ ನಗಾಡುವರು;
ಮಣ್ಣನ್ನು ಕುಪ್ಪೆ ಮಾಡಿ, ಅವುಗಳನ್ನು ಹಿಡಿಯುವರು.
೧೧ ಆಗ ಮನಸ್ಸನ್ನು ಬದಲು ಮಾಡಿ,
ಹಾದು ಹೋಗಿ, ಅಪರಾಧ ಮಾಡುವರು;
ಅವರ ದೇವರಿಂದಾಗುವ ಶಕ್ತಿ ಇದೋ? ಅನ್ನುವರು.

೧೨ ನನ್ನ ದೇವರಾದ ಯೆಹೋವನೇ! ನನ್ನ ಪರಿಶುದ್ಧನೇ!
ನೀನು ಅನಾದಿಯಿಂದ ಇರುತ್ತೀಯಲ್ಲವೋ?
ನಾವು ಸಾಯುವದಿಲ್ಲ,
ಯೆಹೋವನೇ! ನ್ಯಾಯ ತೀರ್ಪಿಗೆ ಅವರನ್ನು ನೇಮಿಸಿದ್ದೀ;
ಓ ಬಂಡೆಯೇ! ಶಿಕ್ಷೆಗೆ ಅವರನ್ನು ಸ್ಥಾಪಿಸಿದ್ದೀ.
೧೩ ನೀನು ಕೆಟ್ಟದ್ದನ್ನು ನೋಡ ಕೂಡದ ಹಾಗೆ
ಶುದ್ಧ ಕಣ್ಣುಗಳುಳ್ಳವನು;
ನೀನು ಅನ್ಯಾಯವನ್ನು ದೃಷ್ಟಿಸಲಾರಿ;
ವಂಚಿಸುವವರನ್ನು ಯಾಕೆ ದೃಷ್ಟಿಸುತ್ತೀ?
ದುಷ್ಟನು ತನಗಿಂತ ನೀತಿವಂತನನ್ನು
ನುಂಗಿ ಬಿಡುವ ವೇಳೆಯಲ್ಲಿ ಯಾಕೆ ಸುಮ್ಮನಿರುತ್ತೀ?
೧೪ ಮನುಷ್ಯರನ್ನು ಸಮುದ್ರದ ಮೀನುಗಳಂತೆಯೂ,
ಆಳುವವನಿಲ್ಲದ ಕ್ರಿಮಿಗಳಂತೆಯೂ, ಯಾಕೆ ಮಾಡುತ್ತೀ?
೧೫ ಅವರನ್ನೆಲ್ಲಾ ಗಾಲದಿಂದ ಎತ್ತಿ,
ತಮ್ಮ ಬಲೆಯಿಂದ ಅವರನ್ನು ಹಿಡಿದು,
ತಮ್ಮ ಜಾಲದಿಂದ ಅವರನ್ನು ಕೂಡಿಸುತ್ತಾರೆ;
ಆದದರಿಂದ ಸಂತೋಷಿಸಿ, ಉಲ್ಲಾಸ ಪಡುತ್ತಾರೆ.
೧೬ ಆದದರಿಂದ ತಮ್ಮ ಬಲೆಗೆ ಬಲಿ ಅರ್ಪಿಸಿ,
ತಮ್ಮ ಜಾಲಕ್ಕೆ ಧೂಪ ಸುಡುತ್ತಾರೆ;
ಯಾಕಂದರೆ ಇವುಗಳಿಂದ ಅವರ ಪಾಲು ಕೊಬ್ಬಾಗಿಯೂ,
ಅವರ ಆಹಾರ ಪುಷ್ಟಿಯುಳ್ಳದ್ದಾಗಿಯೂ, ಇದೆ.
೧೭ ಹೀಗಿರುವದರಿಂದ ಅವರು ತಮ್ಮ ಬಲೆಯನ್ನು ಬರಿದುಮಾಡಿ,
ನಿತ್ಯವಾಗಿ ಕನಿಕರಿಸದೆ, ಜನಾಂಗಗಳನ್ನು ಕೊಂದು ಹಾಕುವರೋ?

### ೨. ಸಂಧಿ.

೧ ನನ್ನ ಕೋವರದಲ್ಲಿ ನಿಂತು,
ಕೋಟೆಯ ಮೇಲೆ ನೆಲೆಯಾಗಿದ್ದು,
ಅವನು ನನಗೆ ಏನು ಹೇಳುವನೋ,



ನನ್ನ ತರ್ಕದ ವಿಷಯ ಏನು ಉತ್ತರ ಕೊಡ ಬೇಕೋ?
ನೋಡುವದಕ್ಕೆ ಕಾದು ಕೊಂಡಿರುವೆನು.

೨ ಆಗ ಯೆಹೋವನು ನನಗೆ ಉತ್ತರ ಕೊಟ್ಟು ಹೇಳಿದ್ದೇನಂದರೆ—
ದರ್ಶನವನ್ನು ಬರಿ;
ಅದನ್ನು ಓದುವವನು ಓಡುವ ಹಾಗೆ,
ಅದನ್ನು ಹಲಿಗೆಗಳ ಮೇಲೆ ಕೆತ್ತು.
೩ ಯಾಕಂದರೆ ದರ್ಶನವು ಇನ್ನು ನೇಮಕವಾದ ಕಾಲಕ್ಕೆ ಉಂಟು;
ಅದರೆ ಕಡೆಯಲ್ಲಿ, ಅದು ಸುಳ್ಳಾಗದೆ, ಮಾತಾಡುವದು;
ಅದು ತಡೆ ಮಾಡಿದರೂ ಅದಕ್ಕೆ ಕಾದು ಕೊಂಡಿರು;
ಯಾಕಂದರೆ ಅದು ತಡೆ ಮಾಡದೆ, ನಿಶ್ಚಯವಾಗಿ ಬರುವದು.
೪ ಇಗೋ, ಉಬ್ಬಿಕೊಂಡವನ ಆತ್ಮವು ತನ್ನಲ್ಲಿ ಯಥಾರ್ಥವಲ್ಲ;
ಆದರೆ ನೀತಿವಂತನು ತನ್ನ ವಿಶ್ವಾಸದಿಂದ ಬದುಕುವನು.
೫ ಹೌದು, ದ್ರಾಕ್ಷೆರಸ ವಂಚನೆ ಮಾಡುತ್ತದೆ;
ಅಹಂಕಾರದ ಮನುಷ್ಯನಾಗಿದ್ದಾನೆ;
ಸುಮ್ಮನೆ ಇರುವದಿಲ್ಲ;
ಪಾತಾಳದ ಹಾಗೆ ತನ್ನ ಆಶೆಯನ್ನು ದೊಡ್ಡದಾಗಿ ಮಾಡಿ
ಕೊಳ್ಳುತ್ತಾನೆ;
ಮರಣದ ಹಾಗಿದ್ದಾನೆ, ತೃಪ್ತಿಯಾಗುವದಿಲ್ಲ;
ಎಲ್ಲಾ ಜನಾಂಗಗಳನ್ನು ತನಗಾಗಿ ಕೂಡಿಸುತ್ತಾನೆ;
ಎಲ್ಲಾ ಜನಗಳನ್ನು ತನಗಾಗಿ ಒಟ್ಟುತ್ತಾನೆ.
೬ ಇವರೆಲ್ಲರು ಅವನ ಮೇಲೆ ಗಾದೆಯನ್ನೂ,
ಹಾಸ್ಯದ ಸಾಮ್ಯವನ್ನು ಎತ್ತುತ್ತೋ?
ತನಗಲ್ಲದ್ದನ್ನು ಹೆಚ್ಚಿಸುವವನಿಗೆ ಅಯ್ಯೋ!
ಎಷ್ಟು ವರಿಗೂ?
ತನ್ನ ಮೇಲೆ ಸಾಲದ ಹೊರೆ ಭಾರವಾಗಿಡುವವನಿಗೆ ಅಯ್ಯೋ!
ಎಂದು ಹೇಳ್ಳರೋ?
೭ ನಿನ್ನನ್ನು ಕಚ್ಚುವವರು ಕ್ಷಣ ಮಾತ್ರದಲ್ಲಿ ಏಳ್ಳರೋ?
ನಿನ್ನನ್ನು ಪೀಡಿಸುವವರು ಎಚ್ಚರವಾಗರೋ?
ಆಗ ನೀನು ಅವರಿಗೆ ಸುಲಿಗೆ ಯಾಗುವಿ.
೮ ನೀನು ಅನೇಕ ಜನಾಂಗಗಳನ್ನು ಸೂರೆ ಮಾಡಿದ್ದರಿಂದ
ಜನರಲ್ಲಿ ಉಳುವೆಲ್ಲಾ ನಿನ್ನನ್ನು ಸೂರೆ ಮಾಡುವದು;
ಮನುಷ್ಯರ ರಕ್ತವೂ,
ದೇಶ, ಪಟ್ಟಣ, ಅದರ ಎಲ್ಲಾ ನಿವಾಸಿಗಳ ಬಲಾತ್ಕಾರವೂ,
ಇವುಗಳ ನಿಮಿತ್ತವೇ.

೯ ತನ್ನ ಗೂಡನ್ನು ಉನ್ನತದಲ್ಲಿ ಇಡುವ ಹಾಗೆಯೂ,
ಕೇಡಿನ ಕೈಗೆ ತಪ್ಪಿಸಿ ಕೊಳ್ಳುವ ಹಾಗೆಯೂ,
ತನ್ನ ಮನೆಗೋಸ್ಕರ ದುರ್ಲಾಭವನ್ನು ಆಶಿಸುವವನಿಗೆ
ಅಯ್ಯೋ!
೧೦ ಅನೇಕ ಜನಗಳನ್ನು ಕಡಿದು ಬಿಡುವದರಿಂದ,
ನಿನ್ನ ಮನೆಗೆ ನಾಚಿಕೆಯನ್ನು ಯೋಚಿಸಿದ್ದೀ;
ಸ್ವಂತ ಪ್ರಾಣಕ್ಕೆ ವಿರೋಧವಾಗಿ ಪಾಪ ಮಾಡಿದ್ದೀ.
೧೧ ಯಾಕಂದರೆ ಗೋಡೆಯೊಳಗಿಂದ ಕಲ್ಲು ಕೂಸುತ್ತದೆ;
ಮತ್ತು ಮರದ ತೊಲೆ ಅದಕ್ಕೆ ಉತ್ತರ ಕೊಡುತ್ತದೆ.
೧೨ ಊರನ್ನು ರಕ್ತದಿಂದ ಕಟ್ಟಿ,
ಪಟ್ಟಣವನ್ನು ಅನ್ಯಾಯದಿಂದ ಸ್ಥಾಪಿಸುವವನಿಗೆ ಅಯ್ಯೋ!
೧೩ ಇಗೋ, ಇದು ಸೈನ್ಯಗಳ ಯೆಹೋವನಿಂದ ಅಲ್ಲವೋ?
ಏನಂದರೆ, ಜನರು ಶುದ್ಧ ಬೆಂಕಿಗೋಸ್ಕರ ಕಷ್ಟ ಮಾಡಿ,
ಜನಗಳು ಶುದ್ಧ ಮಾಯೆಗೋಸ್ಕರ ಆಯಾಸ ಪಡುವದೇ.
೧೪ ಯಾಕಂದರೆ ನೀರುಗಳು ಸಮುದ್ರವನ್ನು ಮುಚ್ಚುವ ಪ್ರಕಾರ,
ಭೂಮಿಯು ಯೆಹೋವನ ಮಹಿಮೆಯ ತಿಳುವಿಕೆಯಿಂದ ತುಂಬಿರುವದು.

೧೫ ತನ್ನ ನೆರೆಯವನಿಗೆ ಕುಡಿಯ ಕೊಟ್ಟು,
ನಿನ್ನ ಬುಟ್ಟಿಯನ್ನು ಹೊಯಿದು,
ಅವರ ನಾಚಿಕೆಯನ್ನು ನೋಡುವ ಹಾಗೆ,
ಅಮಲೇರಿಸುವವನಿಗೆ ಅಯ್ಯೋ!
೧೬ ಮಹಿಮೆಯಿಂದಲ್ಲ, ನಿಂದೆಯಿಂದ, ತುಂಬಿದ್ದೀ;
ನೀನು ಸಹ ಕುಡಿದು, ಮುಂದೊಗಲು ತೋರಿಸು;
ಯೆಹೋವನ ಬಲಗೈಯ ಪಾತ್ರೆ ನಿನ್ನ ಕಡೆಗೆ ತಿರುಗುವದು;
ನಿನ್ನ ಮಹಿಮೆಯ ಮೇಲೆ ತುಂಬ ಲಜ್ಜೆಯೇ ಇರುವದು.
೧೭ ಯಾಕಂದರೆ ಲೆಬನೋನಿನ ಬಲಾತ್ಕಾರವು ನಿನ್ನನ್ನು ಮುಚ್ಚುವದು;
ಮೃಗಗಳ ಸೂರೆ ನಿನ್ನನ್ನು ಹೆದರಿಸುವದು;
ಮನುಷ್ಯರ ರಕ್ತವೂ,
ದೇಶ, ಪಟ್ಟಣ, ಅದರ ಎಲ್ಲಾ ನಿವಾಸಿಗಳ ಬಲಾತ್ಕಾರವೂ,
ಇವುಗಳ ನಿಮಿತ್ತವೇ.

೧೮ ಅದನ್ನು ರೂಪಿಸಿದವನು ಕೆತ್ತಿದ ವಿಗ್ರಹದಿಂದ ಪ್ರಯೋಜನವೇನು?
ಸುಳ್ಳನ್ನು ಬೋಧಿಸುವಂಥ,
ಅದನ್ನು ರೂಪಿಸಿದವನು ಮೂಕ ಬೊಂಬೆಗಳನ್ನು ಮಾಡಿ,
ಅದರಲ್ಲಿ ನಂಬಿಕೆ ಇಡುವಂಥ,
ಎರಕದ ವಿಗ್ರಹದಿಂದ ಪ್ರಯೋಜನವೇನು?
೧೯ ಮರಕ್ಕೆ—ಎಚ್ಚರವಾಗು!
ಮೂಕವಾದ ಕಲ್ಲಿಗೆ—ಎದ್ದು, ಬೋಧಿಸಲಿ!
ಎಂದು ಹೇಳುವವನಿಗೆ ಅಯ್ಯೋ!
ಇಗೋ, ಅದು ಭಂಗಾರದಿಂದಲೂ, ಬೆಳ್ಳಿಯಿಂದಲೂ ಹೊದಗಿಸಲ್ಪಟ್ಟದೆ,
ಆದರೆ ಅದರಲ್ಲಿ ಉಸುರು ಎಷ್ಟು ಮಾತ್ರವು ಇಲ್ಲ.
೨೦ ಆದರೆ ಯೆಹೋವನು ತನ್ನ ಪರಿಶುದ್ಧ ಮಂದಿರದಲ್ಲಿ ಇದ್ದಾನೆ;
ಅವನ ಮುಂದೆ ಭೂಮಿಯೆಲ್ಲಾ ಮೌನವಾಗಿರಲಿ.

### ೩. ಸಂಧಿ.

೧ ಪ್ರವಾದಿಯಾದ ಹಬಕೂಕನ ಪ್ರಾರ್ಥನೆ. ಅತುರ ಗೀತವು.
೨ ಓ ಯೆಹೋವನೇ! ನಿನ್ನ ಸುದ್ದಿಯನ್ನು ಕೇಳಿ, ಭಯ ಪಟ್ಟಿದ್ದೇನೆ.
ಓ ಯೆಹೋವನೇ! ವರುಷಗಳ ಮಧ್ಯದಲ್ಲಿ ನಿನ್ನ ಕೆಲಸವನ್ನು
ಜೀವಿಸ ಮಾಡು.

ವರುಷಗಳ ಮಧ್ಯದಲ್ಲಿ ತಿಳಿಯ ಮಾಡು;
ಕೌದ್ರದಲ್ಲಿ ಕರುಣೆಯನ್ನು ಜ್ಞಾಪಕ ಮಾಡು.

೩ ದೇವರು ತೇಮಾನಿನಿಂದಲೂ,
ಪರಿಶುದ್ಧನು ಪಾರಾನ್ ಪರ್ವತದಿಂದಲೂ, ಬಂದನು; ಸೇಲಾ.
ಅವನ ಮಹಿಮೆ ಆಕಾಶವನ್ನು ಮುಚ್ಚಿತು;
ಅವನ ಸ್ತೋತ್ರ ಭೂಮಿಯನ್ನು ತುಂಬಿಸಿತು.
೪ ಅವನ ಪ್ರಕಾಶ ಬೆಳಕಿನ ಹಾಗಿತ್ತು;
ಅವನ ಕೈಯೊಳಗಿಂದ ಕಿರಣಗಳು ಬಂದವು;
ಅಲ್ಲಿ ಅವನ ಬಲವನ್ನು ಮರೆ ಮಾಡುವದು ಇತ್ತು.
೫ ಅವನ ಮುಂದೆ ಜಾಡ್ಯವು ನಡೆಯಿತು;
ಅವನ ಕಾಲುಗಳಿಂದ ಉರಿ ಕೆಂಡಗಳು ಹೊರಟಿವು.
೬ ಅವನು ನಿಂತು ಕೊಂಡು, ಭೂಮಿಯನ್ನು ನಡುಗಿಸಿದನು;
ಅವನು ನೋಡಿ, ಜನಾಂಗಗಳನ್ನು ಚದರಿಸಿದನು;
ಶಾಶ್ವತವಾದ ಪರ್ವತಗಳು ಪುಡಿ ಪುಡಿಯಾದವು;
ನಿತ್ಯವಾದ ಗುಡ್ಡಗಳು ಬೊಗ್ಗಿ ಕೊಂಡವು;
ಅವನ ಮಾರ್ಗಗಳು ನಿತ್ಯವಾದವುಗಳೇ.
೭ ಕೂಷಾನಿನ ಗುಡಾರಗಳನ್ನು ಕಷ್ಟದೊಳಗೆ ನೋಡಿದೆನು;
ಮಿದ್ಯಾನಿನ ದೇಶದ ತೆರೆಗಳು ನಡುಗಿದವು.
೮ ಯೆಹೋವನು ನದಿಗಳ ಮೇಲೆ ಉರಿಗೊಂಡನೋ?
ನದಿಗಳ ಮೇಲೆ ನಿನಗೆ ಕೋಪ ವಿತ್ತೋ?
ಸಮುದ್ರದ ಮೇಲೆ ನಿನಗೆ ಕೌದ್ರವಿತ್ತೋ?
ಇದಕ್ಕಾಗಿ ನಿನ್ನ ಕುದುರೆಗಳ ಮೇಲೆ ಸವಾರಿ ಮಾಡಿ,
ನಿನ್ನ ರಕ್ಷಣೆಯ ರಥಗಳಲ್ಲಿ, ಬಂದಿಯೋ?
೯ ನಿನ್ನ ಬಿಲ್ಲು ಬರಿದೇ ಬರಿದಾಯಿತು;
ನೀನು ಕುಲಗಳಿಗೆ ಆಣೆ ಇಟ್ಟ ವಾಕ್ಯದ ಪ್ರಕಾರ. ಸೇಲಾ.
ಭೂಮಿಯನ್ನು ನದಿಗಳಾಗ ಪೀಳಿದಿ.
೧೦ ಬೆಟ್ಟಗಳು ನಿನ್ನನ್ನು ನೋಡಿ ನಡುಗಿದವು;
ಜಲ ಪ್ರವಾಹವು ಹಾದು ಹೋಯಿತು;
ಅಗಾಧವು ತನ್ನ ಶಬ್ದವನ್ನು ಕೊಟ್ಟಿತು;
ತನ್ನ ಕೈಗಳನ್ನು ಮೇಲಕ್ಕೆ ಎತ್ತಿ ಕೊಂಡಿತು.
೧೧ ಸೂರ್ಯ ಚಂದ್ರಗಳು ತಮ್ಮ ನಿವಾಸದಲ್ಲಿ ನಿಂತವು,
ನಿನ್ನ ಬಾಣಗಳ ಬೆಳಕಿನಿಂದಲೂ,
ಹೋಗುತ್ತಿದ್ದ ನಿನ್ನ ಈಟಿಯ ಮಿಂಚುವ ಪ್ರಕಾಶದಿಂದಲೇ.
೧೨ ನೀನು ಪಿಟ್ಟಿನಿಂದ ದೇಶದ ಮೇಲೆ ನಡಿದು ಹೋಗಿ,
ಕೋಪದಿಂದ ಜನಾಂಗಗಳನ್ನು ತುಳಿದಿ.
೧೩ ನಿನ್ನ ಜನರ ರಕ್ಷಣೆಗೋಸ್ಕರವೂ,
ನಿನ್ನ ಅಭಿಷಿಕ್ತರ ರಕ್ಷಣೆಗೋಸ್ಕರವೂ, ಹೊರಟಿ;
ದುಷ್ಟರ ಮನೆಯ ತಲೆಯನ್ನು ಒಡೆದು ಬಿಟ್ಟಿ,
ಕುತ್ತಿಗೆಯ ಮಟ್ಟಿಗೂ ಅಸ್ತಿವಾರವನ್ನು ಬರಿದು ಮಾಡಿದಿ. ಸೇಲಾ.
೧೪ ಅವನ ಈಟಿಗಳಿಂದಲೇ ಅವನ ನಾಯಕರ ತಲೆಯನ್ನು ಶಿವಿದಿ,
ಅವರು ನನ್ನನ್ನು ಚದರಿಸುವದಕ್ಕೆ ಬಿರುಗುಳ್ಳಿಯಂತೆ ಬಂದರು;
ಬಡವರನ್ನು ಅಂತರಂಗದಲ್ಲಿ ತಿಂದು ಬಿಡುವದು,
ಅವರಿಗೆ ಸಂತೋಷವಾಗಿತ್ತು.
೧೫ ನೀನು ನಿನ್ನ ಕುದುರೆಗಳ ಸಂಗಡ ಸಮುದ್ರದಲ್ಲಿಯೂ,
ಮಹಾ ಜಲಗಳ ಸಮೂಹದಲ್ಲಿಯೂ, ನಡೆದು ಹೋದಿ.

೧೬ ನಾನು ಕೇಳಿದಾಗ ನನ್ನ ಹೊಟ್ಟೆ ನಡುಗಿತು;
ಆ ಶಬ್ದಕ್ಕೆ ನನ್ನ ತುಟಿಗಳು ಕದಲಿದವು;
ನನ್ನ ಎಲುವುಗಳಲ್ಲಿ ಕೊಳ್ಳಿಯುವಿಕೆ ಬಂತು;
ನನ್ನೊಳಗೆ ನಡುಗಿದೆನು;
ಆದರೂ ಇಕ್ಕಟ್ಟಿನ ದಿವಸದಲ್ಲಿಯೂ,
ನಮ್ಮನ್ನು ಇರಿಕಿಸುವ ಜನರು ಏರಿ ಬರುವಾಗಲೂ,
ನನಗೆ ವಿಶ್ರಾಂತಿಯಾಗುವದು.
೧೭ ಅಂಜೂರದ ಗಿಡವು ಮೊಳೆಯದಿದ್ದರೂ,
ದ್ರಾಕ್ಷೆ ಬಳ್ಳಿಗಳಲ್ಲಿ ಫಲವಿಲ್ಲದಿದ್ದರೂ,
ಇಪ್ಪೆಯ ಹುಟ್ಟುವಳಿ ನಿಂತು ಹೋದರೂ,
ಹೊಲಗಳು ಆಹಾರ ಕೊಡದಿದ್ದರೂ,
ಹಟ್ಟಿಯೊಳಗಿಂದ ಮಂದೆಗಳು ಕಡಿದು ಬಿಡಲ್ಪಟ್ಟಿದ್ದರೂ,
ಗೋದಲಿಗಳಲ್ಲಿ ದನವಿಲ್ಲದಿದ್ದರೂ,
೧೮ ನಾನು ಯೆಹೋವನಲ್ಲಿ ಆನಂದವಾಗಿರುವೆನು,
ನನ್ನ ರಕ್ಷಣೆಯ ದೇವರಲ್ಲಿ ಉಲ್ಲಾಸ ಪಡುವೆನು.
೧೯ ಕರ್ತನಾದ ಯೆಹೋವನು ನನ್ನ ಬಲವಾಗಿದ್ದಾನೆ;
ಅವನು ನನ್ನ ಕಾಲುಗಳನ್ನು
ಜಿಂಕೆಯ ಕಾಲುಗಳ ಹಾಗೆ ಮಾಡಿ,
ನನ್ನ ಉನ್ನತ ಸ್ಥಳಗಳಲ್ಲಿ ನನ್ನನ್ನು ನಡೆಯ ಮಾಡುವನು.
ಗಾಯಕಾಧಿಕಾರಿಗೆ, ನನ್ನ ತಂತಿ ವಾದ್ಯಗಳಲ್ಲಿ.

# ZEPHANIAH.

## ಜೆಫನೀಯನು.

### ೧. ಸಂಧಿ.

೧ ಯೆಹೂದದ ಅರಸನಾದ ಅಮ್ಮೋನನ ಮಗನಾದ ಯೊಸೀಯನ ದಿವಸಗಳಲ್ಲಿ, ಹಿಜ್ಕೀಯನ ಮಗನಾದ, ಅಮರೀಯನ ಮಗನಾದ, ಗೆದಲೀಯನ ಮಗನಾದ, ಕೂಷೀಯನ ಮಗನಾದ, ಜೆಫನೀಯನಿಗೆ ಉಂಟಾದ ಯೆಹೋವನ ವಾಕ್ಯವು.
೨ ಯೆಹೋವನು ಅನ್ನುತ್ತಾನೆ—
ನಾನು ದೇಶದೊಳಗಿಂದ ಎಲ್ಲವುಗಳನ್ನು ಶುದ್ಧವಾಗಿ ತೆಗೆದು ಹಾಕುತ್ತೇನೆ.
೩ ಮನುಷ್ಯರನ್ನೂ ಮೃಗಗಳನ್ನೂ ತೆಗೆದು ಹಾಕುವೆನು;
ಆಕಾಶದ ಪಕ್ಷಿಗಳನ್ನೂ, ಸಮುದ್ರದ ಮೀನುಗಳನ್ನೂ,
ದುಷ್ಟರ ಸಂಗಡ ಅಭ್ಯಂತರ ಮಾಡುವವುಗಳನ್ನೂ,
ತೆಗೆದು ಹಾಕುವೆನು;
ಮತ್ತು ಮನುಷ್ಯರನ್ನು ದೇಶದೊಳಗಿಂದ ಕಡಿದು ಬಿಡುವೆನು,
ಎಂದು ಯೆಹೋವನು ಅನ್ನುತ್ತಾನೆ.



೪ ಯೆಹೂದದ ಮೇಲೆಯೂ,
ಯೆರೂಸಲೇಮಿನ ಎಲ್ಲಾ ನಿವಾಸಿಗಳ ಮೇಲೆಯೂ, ಕೈ ಚಾಚಿ,
ಈ ಸ್ಥಳದಿಂದ ಬಾಳನ ಉಳುವನನ್ನೂ,
ಯಾಜಕರ ಸಂಗಡ ಪೂಜಾರಿಗಳ ಹೆಸರನ್ನೂ,
೫ ಮಾಳಿಗೆಗಳ ಮೇಲೆ ಆಕಾಶದ ಸೈನ್ಯವನ್ನು ಆರಾಧಿಸುವವರನ್ನೂ,
ಯೆಹೋವನ ಮೇಲೆಯೂ, ಮಲ್ಕಾಮಿನ ಮೇಲೆಯೂ, ಆಣೆ ಇಟ್ಟು ಕೊಳ್ಳುವವರನ್ನೂ,
೬ ಯೆಹೋವನ ಕಡೆಯಿಂದ ಹಿಂತಿರುಗಿದವರನ್ನೂ,
ಯೆಹೋವನನ್ನು ಹುಡುಕದೆ ವಿಚಾರಿಸದವರನ್ನೂ,
ಕಡಿದು ಬಿಡುವೆನು.

೭ ಕರ್ತನಾದ ಯೆಹೋವನ ಮುಂದೆ ಮೌನವಾಗಿರಿ;
ಯಾಕಂದರೆ ಯೆಹೋವನ ದಿವಸವು ಸಮೀಪವಾಗಿದೆ;
ಯೆಹೋವನು ಬಲಿಯನ್ನು ಸಿದ್ಧ ಮಾಡಿದ್ದಾನೆ;
ತಾನು ಕರೆದವರನ್ನು ಪ್ರತಿಷ್ಠೆ ಮಾಡಿದ್ದಾನೆ.
೮ ಯೆಹೋವನ ಬಲಿಯ ದಿವಸದಲ್ಲಿ ಆಗುವದೇನಂದರೆ—
ನಾನು ಪ್ರಭುಗಳನ್ನೂ, ಅರಸನ ಕುಮಾರರನ್ನೂ,
ಅನ್ಯರ ಉಡುಪನ್ನು ತೊಟ್ಟು ಕೊಳ್ಳುವವರೆಲ್ಲರನ್ನೂ, ದಂಡಿಸುವೆನು.
೯ ಆ ದಿವಸದಲ್ಲಿ, ಹೊಸ್ತಲನ್ನು ಹಾರಿ ದಾಟುವವರೆಲ್ಲರನ್ನೂ,
ತಮ್ಮ ಯಜಮಾನರ ಮನೆಗಳನ್ನು ಬಲಾತ್ಕಾರದಿಂದಲೂ,
ಮೋಸದಿಂದಲೂ ತುಂಬಿಸುವವರನ್ನೂ, ದಂಡಿಸುವೆನು.

೧೦ ಯೆಹೋವನು ಅನ್ನುತ್ತಾನೆ—
ಆ ದಿವಸದಲ್ಲಿ ಆಗುವದೇನಂದರೆ—
ಮೀನಿನ ಬಾಗಲಿನಿಂದ ಕೂಗಿನ ಶಬ್ದವೂ,
ಮತ್ತೊಂದರಿಂದ ಹುಯಿಲಿಡುವಿಕೆಯೂ,
ಗುಡ್ಡಗಳ ಕಡೆಯಿಂದ ದೊಡ್ಡ ಮುರಿಯೋಣವೂ, ಇರುವದು.
೧೧ ಮಕ್ತೇಷಿನ ನಿವಾಸಿಗಳೇ! ಹುಯಿಲಿಡಿರಿ,
ಯಾಕಂದರೆ ವರ್ತಕ ಜನರೆಲ್ಲಾ ಸಂಹಾರವಾದರು;
ಬೆಳ್ಳಿ ಹೊತ್ತವರೆಲ್ಲರು ಕಡಿದು ಬಿಡಲ್ಪಟ್ಟಿದ್ದಾರೆ.
೧೨ ಆ ಕಾಲದಲ್ಲಿ ಆಗುವದೇನಂದರೆ—
ನಾನು ಯೆರೂಸಲೇಮನ್ನು ದೀಪಗಳಿಂದ ಶೋಧಿಸುವೆನು;
ತಮ್ಮ ರಾಡಿಯ ಮೇಲೆ ಕಟ್ಟಿ ಕೊಂಡಿರುವ ಮನುಷ್ಯರನ್ನು ದಂಡಿಸುವೆನು;
ಯೆಹೋವ ಒಳ್ಳೇದನ್ನಾದರೂ ಕೆಟ್ಟದ್ದನ್ನಾದರೂ ಮಾಡುವದಿಲ್ಲವೆಂದು,
ತಮ್ಮ ಹೃದಯಗಳಲ್ಲಿ ಅನ್ನುವವರನ್ನೇ.
೧೩ ಆದದರಿಂದ ಅವರ ಸಂಪತ್ತು ಕೊಳ್ಳೆಯಾಗುವದು,
ಅವರ ಮನೆಗಳು ಹಾಳಾಗುವವು;
ಅವರು ಮನೆಗಳನ್ನು ಕಟ್ಟಿ, ವಾಸ ಮಾಡರು;
ದ್ರಾಕ್ಷೆ ತೋಟಗಳನ್ನು ನೆಟ್ಟು, ಅವುಗಳ ರಸವನ್ನು ಕುಡಿಯರು;
೧೪ ಯೆಹೋವನ ದೊಡ್ಡ ದಿವಸವು ಸಮೀಪವಾಗಿದೆ;
ಸಮೀಪವಾಗಿದೆ, ಬಹು ತ್ವರೆಗೆ ಬರುತ್ತದೆ;
ಯೆಹೋವನ ದಿವಸದ ಶಬ್ದವಾಯಿತು;
ಕೂರನು ಅಲ್ಲಿ ಅಘೋರವಾಗಿ ಕೀರಿಸುವನು.
೧೫ ಆ ದಿವಸವು ಕೌದ್ರದ ದಿವಸವು,
ಇಕ್ಕಟ್ಟು ಸಂಕಟಗಳ ದಿವಸವು.
ಹಾಳು ಪಾಳುಗಳ ದಿವಸವು,
ಕತ್ತಲೆ ಮೊಬ್ಬುಗಳ ದಿವಸವು,
ಮೇಘ ಮೋಡಗಳ ದಿವಸವು.
೧೬ ಕೋಟೆಯುಳ್ಳ ಪಟ್ಟಣಗಳಿಗೆ ವಿರೋಧವಾಗಿ,
ಉನ್ನತವಾದ ಗೋಪುರಗಳಿಗೆ ವಿರೋಧವಾಗಿಯೂ,
ಶತೂರಿ ಆರ್ಭಟಗಳ ದಿವಸವು.
೧೭ ಆಗ ನಾನು ಮನುಷ್ಯರ ಮೇಲೆ ಇಕ್ಕಟ್ಟು ತರಿಸುವೆನು,
ಅವರು ಕುರುಡರ ಹಾಗೆ ನಡೆಯುವರು,
ಯಾಕಂದರೆ ಯೆಹೋವನಿಗೆ ವಿರೋಧವಾಗಿ ಪಾಪ ಮಾಡಿದ್ದಾರೆ;
ಅವರ ರಕ್ತವು ಧೂಳಿನಂತೆಯೂ,
ಅವರ ಮಾಂಸವು ಗೊಬ್ಬರದಂತೆಯೂ,
ಸುರಿಯಲ್ಪಡುವದು.
೧೮ ಯೆಹೋವನ ಕೌದ್ರದ ದಿವಸದಲ್ಲಿ,
ಅವರ ಬೆಳ್ಳಿಯಾದರೂ, ಅವರ ಬಂಗಾರವಾದರೂ,
ಅವರನ್ನು ತಪ್ಪಿಸಲಾರವು;
ಅವನ ಕೋಪದ ಬೆಂಕಿಯಿಂದ ದೇಶವೆಲ್ಲಾ ಸುಡಲ್ಪಡುವದು;
ಯಾಕಂದರೆ ದೇಶದ ನಿವಾಸಿಗಳನ್ನೆಲ್ಲಾ
ಬೇಗ ಮುಗಿಸಿ ಬಿಡುವನು.

### ೨. ಸಂಧಿ.

೧ ಕೂಡಿ ಕೊಳ್ಳಿರಿ, ಹೌದು, ಕೂಡಿ ಕೊಳ್ಳಿರಿ,
ಅಪೇಕ್ಷಿಸಲ್ಪಡದ ಜನಾಂಗವೇ!
೨ ನಿರ್ಣಯವು ಪಡೆಯುವದಕ್ಕಿಂತ ಮುಂಚೆಯೂ,
ದಿವಸವು ಹೊಟ್ಟಿನಂತೆ ಹಾದು ಹೋಗುವದಕ್ಕಿಂತ ಮುಂಚೆಯೂ,
ಯೆಹೋವನ ಕೋಪದ ಉರಿ ನಿಮ್ಮ ಮೇಲೆ ಬರುವದಕ್ಕಿಂತ ಮುಂಚೆಯೂ,
ಯೆಹೋವನ ಕೋಪದ ದಿವಸವು ನಿಮ್ಮ ಮೇಲೆ ಬರುವದಕ್ಕಿಂತ ಮುಂಚೆಯೂ,
೩ ದೇಶದ ದೀನರೆಲ್ಲರೇ! ಆವನ ನ್ಯಾಯಗಳನ್ನು ಮಾಡುವವರೇ!
ಯೆಹೋವನನ್ನು ಹುಡುಕಿರಿ;
ನೀತಿಯನ್ನು ಹುಡುಕಿರಿ; ವಿನಯವನ್ನು ಹುಡುಕಿರಿ;
ಒಂದು ವೇಳೆ ಯೆಹೋವನ ಕೋಪದ ದಿವಸದಲ್ಲಿ ಅಡಗಿ ಕೊಂಡೀರಿ.

೪ ಯಾಕಂದರೆ, ಗಾಜವು ಕೈ ಬಿಡಲ್ಪಡುವದು,
ಅಷ್ಕಲೋನು ಹಾಳಾಗುವದು,
ಅಷ್ದೋದನ್ನು ಮಧ್ಯಾಹ್ನದಲ್ಲಿ ಹೊರಡಿಸುವರು;
ಎಕ್ರೋನು ಕೀಳಲ್ಪಡುವದು.
೫ ಸಮುದ್ರ ತೀರದ ನಿವಾಸಿಗಳಾದ ಕ್ರೇತ್ಯರ ಜನಾಂಗಕ್ಕೆ ಅಯ್ಯೋ!
ಯೆಹೋವನ ವಾಕ್ಯವು ನಿಮಗೆ ವಿರೋಧವಾಗಿದೆ;

ಓ ಕಾನಾನೇ! ಪಿಲಿಷ್ಟಿಯರ ದೇಶವೇ!
ನಿವಾಸಿ ಇಲ್ಲದ ಹಾಗೆ ನಿನ್ನನ್ನು ನಾಶ ಮಾಡುವೆನು.
೬ ಮತ್ತು ಸಮುದ್ರ ತೀರವು,
ಕುರುಬರ ಮೇಯಿಸುವ ಸ್ಥಳಗಳಾಗಿಯೂ,
ಕುಂಟೆಗಳಾಗಿಯೂ, ಕುರಿ ಹಟ್ಟಿಗಳಾಗಿಯೂ, ಇರುವದು.
೭ ಹೌದು, ತೀರವು ಯೆಹೂದದ ಮನೆಯವರ ಉಳಿವಿಗೆ ಆಗುವದು;
ಅದರ ಮೇಲೆ ಮೇಯಿಸುವರು;
ಅಸ್ಕಲೋನಿನ ಮನೆಗಳಲ್ಲಿ ಸಾಯಂಕಾಲದಲ್ಲಿ ಮಲಗಿ ಕೊಳ್ಳುವರು;
ಯಾಕಂದರೆ ಅವರ ದೇವರಾದ ಯೆಹೋವನು ಅವರನ್ನು ದರ್ಶಿಸಿ,
ಅವರ ಶೆರೆಯನ್ನು ತಿರುಗಿಸುವನು.

೮ ಮೋವಾಬಿನ ನಿಂದೆಯನ್ನೂ,
ಅಮ್ಮೋನಿನ ಮಕ್ಕಳ ಬೈಗಳನ್ನೂ,
ಅವರು ನನ್ನ ಜನರನ್ನು ನಿಂದಿಸಿ,
ಅವರ ಪ್ರಾಂತ್ಯಕ್ಕೆ ವಿರೋಧವಾಗಿ, ತಮ್ಮನ್ನು ಹೆಚ್ಚಿಸಿ ಕೊಂಡದ್ದನ್ನೂ, ಕೇಳಿದ್ದೇನೆ.
೯ ಆದದರಿಂದ ಇಸ್ರಯೇಲಿನ ದೇವರಾದ ಸೈನ್ಯಗಳ ಯೆಹೋವನು ಅನ್ನುವದೇನಂದರೆ—
ನನ್ನ ಜೀವದಾಣೆ, ನಿಶ್ಚಯವಾಗಿ ಮೋವಾಬು ಸೊದೋಮಿನ ಹಾಗಾಗುವದು;
ಅಮ್ಮೋನಿನ ಮಕ್ಕಳು ಗಮೋರದ ಹಾಗಾಗುವರು;
ತುರಚೆ ಗಿಡಗಳನ್ನು ಹುಟ್ಟಿಸುವಂಥ,
ಉಪ್ಪಿನ ಕೂಡೆಗಳುಳ್ಳಂಥ,
ನಿತ್ಯವಾಗಿ ಹಾಳಾಗುವಂಥ, ಸ್ಥಳವಾಗುವರು;
ನನ್ನ ಜನರಲ್ಲಿ ಉಳಿದವರು ಅವರನ್ನು ಸುಲು ಕೊಳ್ಳುವರು;
ನನ್ನ ಜನರಲ್ಲಿ ಮಿಕ್ಕಾದವರು ಅವರನ್ನು ಸ್ವತಂತ್ರಿಸಿ ಕೊಳ್ಳುವರು.
೧೦ ಅವರ ಗರ್ವಕ್ಕೋಸ್ಕರ ಇದೇ ಅವರಿಗೆ ಶಿಕ್ಷೆವದು;
ಅವರು ಸೈನ್ಯಗಳ ಯೆಹೋವನ ಜನರಿಗೆ ವಿರೋಧವಾಗಿ ನಿಂದೆ ಮಾಡಿ,
ತಮ್ಮನ್ನು ಹೆಚ್ಚಿಸಿ ಕೊಂಡದರಿಂದಲೇ.
೧೧ ಯೆಹೋವನು ಅವರಿಗೆ ಭಯಂಕರನಾಗಿರುವನು.
ಯಾಕಂದರೆ ಅವನು ಭೂಮಿಯ ಎಲ್ಲಾ ದೇವರುಗಳನ್ನು ಕ್ಷೀಣ ಮಾಡುವನು;
ಮತ್ತು ಜನಾಂಗಗಳ ದ್ವೀಪಗಳವರೆಲ್ಲರು,
ತಮ್ಮ ತಮ್ಮ ಸ್ಥಳಗಳಿಂದ, ಅವನನ್ನು ಅರಾಧಿಸುವರು.

೧೨ ಕೂಷ್ಯರೇ!
ನೀವು ಸಹ ನನ್ನ ಕತ್ತಿಯಿಂದ ಕೊಲ್ಲಲ್ಪಡುವಿರಿ.
೧೩ ಮತ್ತು ಅವನು ತನ್ನ ಕೈಯನ್ನು ಉತ್ತರದ ಮೇಲೆ ಚಾಚಿ,
ಅಶ್ಶೂರನ್ನು ನಾಶನ ಮಾಡಿ,
ನಿನೆವೆಯನ್ನು ಹಾಳಾಗಿಯೂ,
ಅರಣ್ಯದಂತೆ ಒಣಗಿದ್ದಾಗಿಯೂ, ಮಾಡುವನು.
೧೪ ಹೌದು, ಅದರ ಮಧ್ಯದಲ್ಲಿ ಮಂದೆಗಳೂ,
ಜನಾಂಗಗಳ ಮೃಗಗಳೆಲ್ಲವೂ, ಮಲಗುವವು;
ಹಾಲಕ್ಕಿಯೂ, ಮುಳ್ಳುಹಂದಿಯೂ,
ಅದರ ಕಲಶಗಳಲ್ಲಿ ಇಳಿದು ಕೊಳ್ಳುವವು;
ಕಿಟಿಕಿಗಳಲ್ಲಿ ಹಾಡುವ ಶಬ್ದವಿರುವದು;
ಹೊಸ್ತಲಗಳಲ್ಲಿ ಹಾಳು ಇರುವದು;
ಯಾಕಂದರೆ ದೇವದಾರಿನ ಕೆಲಸವನ್ನು ಬೈಲು ಮಾಡುವನು.
೧೫ ನಿಶ್ಚಿಂತೆಯಾಗಿ ವಾಸಿಸಿದಂಥ,
ನಾನೇ ಹೊರ್ತು ಮತ್ತೊಂದಿಲ್ಲವೆಂದು ಅಂದು ಕೊಂಡಂಥ,
ಉಲ್ಲಾಸದ ಪಟ್ಟಣವು ಇದೇ.
ಅದು ಎಷ್ಟೋ ಹಾಳಾಯಿತು!
ಮೃಗಗಳು ಮಲಗಿ ಕೊಳ್ಳುವ ಸ್ಥಳವಾಯಿತು!
ಅದನ್ನು ಹಾದು ಹೋಗುವವರೆಲ್ಲರು
ಸಿಳ್ಳಿಟ್ಟು ಕೈ ಅಲ್ಲಾಡಿಸುವರು.

## ೩. ಸಂಧಿ.

೧ ತಿರುಗಿಬೀಳುವ, ಮೈಲಿಗೆಯಾದ,
ಕ್ರಮೆ ಪಡಿಸುವ, ಪಟ್ಟಣಕ್ಕೆ, ಅಯ್ಯೋ!
೨ ಅದು ಶಬ್ದಕ್ಕೆ ಕಿವಿಗೊಡಲಿಲ್ಲ,
ಶಿಕ್ಷೆಯನ್ನು ತಕ್ಕೊಳ್ಳಲಿಲ್ಲ;
ಯೆಹೋವನಲ್ಲಿ ನಂಬಿಕೆ ಇಡಲಿಲ್ಲ;
ತನ್ನ ದೇವರ ಸಮೀಪಕ್ಕೆ ಬರಲಿಲ್ಲ.
೩ ಅದರ ಮಧ್ಯದಲ್ಲಿರುವ ಪ್ರಭುಗಳು
ಗರ್ಜಿಸುವ ಸಿಂಹಗಳಾಗಿದ್ದಾರೆ;
ಅದರ ನ್ಯಾಯಾಧಿಪತಿಗಳು ಸಂಜೆಯ ತೋಳಗಳಾಗಿದ್ದಾರೆ;
ಹೊತ್ತಾರೆಯಲ್ಲಿ ಕಡಿಯುವದಕ್ಕೆ ಎಲುವುಗಳಿಲ್ಲ.
೪ ಅದರ ಪ್ರವಾದಿಗಳು ಡಾಂಬಿಕರಾಗಿಯೂ, ವಂಚಕರಾಗಿಯೂ, ಇದ್ದಾರೆ;
ಅದರ ಯಾಜಕರು ಪರಿಶುದ್ಧ ಸ್ಥಳವನ್ನು ಅಪವಿತ್ರ ಮಾಡಿದ್ದಾರೆ;
ನ್ಯಾಯಪ್ರಮಾಣಕ್ಕೆ ಬಲಾತ್ಕಾರ ಮಾಡಿದ್ದಾರೆ.
೫ ನೀತಿಯುಳ್ಳ ಯೆಹೋವನು ಅದರ ಮಧ್ಯದಲ್ಲಿ ಇದ್ದಾನೆ,—
ಅವನು ಅನ್ಯಾಯ ಮಾಡುವದಿಲ್ಲ;
ಹೊತ್ತಾರೆ ಹೊತ್ತಾರೆ ತನ್ನ ನ್ಯಾಯವನ್ನು ಬೆಳಕಿಗೆ ತರುತ್ತಾನೆ;
ಅದು ತಪ್ಪುವದಿಲ್ಲ;
ಆದರೆ ಅನ್ಯಾಯವಂತನು ನಾಚಿಕೆಯನ್ನು ಅರಿಯನು.

೬ ನಾನು ಜನಾಂಗಗಳನ್ನು ಕಡಿದು ಬಿಟ್ಟಿದ್ದೇನೆ;
ಅವುಗಳ ಮೂಲೆ ಕಲ್ಲುಗಳು ಹಾಳಾಗಿವೆ;
ಅವರ ಬೀದಿಗಳನ್ನು, ಒಬ್ಬನು ಹಾದು ಹೋಗದ ಹಾಗೆ, ಕಾಡಾಗ ಮಾಡಿದ್ದೇನೆ;
ಅವರ ಪಟ್ಟಣಗಳು, ಮನುಷ್ಯನಿಲ್ಲದೆ, ನಿವಾಸಿಯಿಲ್ಲದೆ, ನಾಶವಾದವು.



೭ ನಾನು ಅಂದೆನು—
ನಿಶ್ಚಯವಾಗಿ ನನಗೆ ಭಯ ಪಟ್ಟು, ಶಿಕ್ಷೆಯನ್ನು ತಕ್ಕೊಳ್ಳುವಿ;
ಆಗ ಅವರ ನಿವಾಸವು,
ನಾನು ಅದರ ವಿಷಯ ಆಜ್ಞಾಪಿಸಿದಂತೆ,
ಕಡಿದು ಬಿಡಲ್ಪಡುವದಿಲ್ಲ;
ಆದರೆ ಅವರು ಬೆಳಿಗ್ಯೆ ಎದ್ದು,
ತಮ್ಮ ಕ್ರಿಯೆಗಳನ್ನೆಲ್ಲಾ ಕೆಡಿಸಿ ಬಿಟ್ಟರು.

೮ ಆದದರಿಂದ ಯೆಹೋವ ಅನ್ನುತ್ತಾನೆ—
ನಾನು ಕೊಳ್ಳೆಗೆ ಏರುವ ದಿವಸದ ವರಗೂ,
ನನಗೆ ಕಾದು ಕೊಳ್ಳಿರಿ;
ಯಾಕಂದರೆ, ಜನಾಂಗಗಳನ್ನು ಕೂಡಿಸುವದಕ್ಕೂ,
ರಾಜ್ಯಗಳನ್ನು ಒಟ್ಟುವದಕ್ಕೂ,
ಅವುಗಳ ಮೇಲೆ ನನ್ನ ಕೌದ್ರವನ್ನೂ,
ನನ್ನ ಕೋಪದ ಎಲ್ಲಾ ಉರಿಯನ್ನೂ, ಹೊಯ್ಯುವದಕ್ಕೂ,
ನಿಶ್ಚಯ ಮಾಡಿ ಕೊಂಡಿದ್ದೇನೆ;
ಯಾಕಂದರೆ, ನನ್ನ ಕೋಪದ ಬೆಂಕಿಯಿಂದ
ಭೂಮಿಯೆಲ್ಲಾ ದಹಿಸಲ್ಪಡುವದು.
೯ ಯಾಕಂದರೆ ಆಗ ನಾನು ಶುದ್ಧ ತುಟಿಯನ್ನು
ಜನಾಂಗಗಳಿಗೆ ತಿರಿಗಿ ಕೊಡುವೆನು;
ಅವರೆಲ್ಲರು ಯೆಹೋವನ ಹೆಸರನ್ನು ಮೊರೆ ಇಟ್ಟು,
ಏಕ ಮನಸ್ಸಿನಿಂದ ಅವನಿಗೆ ಸೇವೆ ಮಾಡುವರು.
೧೦ ಕೂಷಿನ ನದಿಗಳ ಆಚೆಯಿಂದ ನನ್ನ ಭಕ್ತರೂ,
ನನ್ನ ಚದರಿ ಹೋದವರ ಮಗಳೂ,
ನನ್ನ ಕಾಣಿಕೆಯನ್ನು ತರುವರು.

೧೧ ಆ ದಿವಸದಲ್ಲಿ, ನೀನು ನನಗೆ ವಿರೋಧವಾಗಿ ಪಾಪ ಮಾಡಿದ
ನಿನ್ನ ಎಲ್ಲಾ ಕ್ರಿಯೆಗಳ ನಿಮಿತ್ತ ನಾಚಿಕೆ ಪಡದೆ ಇರುವಿ;
ಯಾಕಂದರೆ ಆಗ ನಿನ್ನ ಹೆಚ್ಚಳದಲ್ಲಿ ಸಂಭ್ರಮ ಪಡುವವರನ್ನು,
ನಿನ್ನ ಮಧ್ಯದೊಳಗಿಂದ ತೆಗೆದು ಹಾಕುವೆನು;
ನೀನು ನನ್ನ ಪರಿಶುದ್ಧ ಪರ್ವತದಲ್ಲಿ
ಇನ್ನು ಮೇಲೆ ಗರ್ವ ಪಡುವದಿಲ್ಲ.
೧೨ ಇದಲ್ಲದೆ ನಿನ್ನ ಮಧ್ಯದಲ್ಲಿ
ಬಡ ದೀನವಾದ ಜನರನ್ನು ಉಳಿಸುವೆನು;
ಇವರು ಯೆಹೋವನ ಹೆಸರಿನಲ್ಲಿ ನಂಬಿಕೆ ಇಡುವರು.
೧೩ ಇಸ್ರಯೇಲಿನ ಉಳಿವು,
ಅನ್ಯಾಯ ಮಾಡುವದಿಲ್ಲ; ಸುಳ್ಳು ಹೇಳುವದಿಲ್ಲ;
ಅವರ ಬಾಯಿಯಲ್ಲಿ ಮೋಸದ ನಾಲಿಗೆ ಕಾಣುವದಿಲ್ಲ;
ಅವರು ಮೇಯಿದು ಮಲಗುವರು;
ಭಯ ಪಡಿಸುವವನು ಒಬ್ಬನು ಇರುವದಿಲ್ಲ.

೧೪ ಚಿಯೋನಿನ ಕುಮಾರ್ತೆಯೇ! ಹರ್ಷಿಸು,
ಇಸ್ರಯೇಲೇ! ಆರ್ಭಟಿಸು;
ಯೆರೂಸಲೇಮಿನ ಕುಮಾರ್ತೆಯೇ!
ಪೂರ್ಣ ಹೃದಯದಿಂದ ಸಂಭ್ರಮಿಸಿ ಉಲ್ಲಾಸ ಪಡು.
೧೫ ಯೆಹೋವನು ನಿನ್ನ ನ್ಯಾಯ ತೀರ್ಪಿಕೆಗಳನ್ನು ದೂರ ಮಾಡಿ,
ನಿನ್ನ ಶತ್ರುವನ್ನು ತೆಗೆದು ಹಾಕಿದ್ದಾನೆ;
ಇಸ್ರಯೇಲಿನ ಅರಸನಾದ ಯೆಹೋವನು
ನಿನ್ನ ಮಧ್ಯದಲ್ಲಿ ಇದ್ದಾನೆ;
ಇನ್ನು ಮೇಲೆ ನೀನು ಕೇಡನ್ನು ನೋಡುವದಿಲ್ಲ.

೧೬ ಆ ದಿವಸದಲ್ಲಿ ಯೆರೂಸಲೇಮಿಗೆ ಹೇಳಲ್ಪಡುವದೇನಂದರೆ—
ಭಯ ಪಡ ಬೇಡ;
ಚಿಯೋನೇ! ನಿನ್ನ ಕೈಗಳು ಬಲಹೀನವಾಗದಿರಲಿ.
೧೭ ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಇದ್ದಾನೆ;
ರಕ್ಷಿಸುವಂಥ ಶೂರನು;
ಸಂಭ್ರಮದಿಂದ ನಿನ್ನ ಮೇಲೆ ಸಂತೋಷಿಸುವನು;
ತನ್ನ ಪ್ರೀತಿಯಲ್ಲಿ ಸುಮ್ಮನಿರುವನು;
ಆನಂದ ಸ್ವರದಿಂದ ನಿನ್ನ ಮೇಲೆ ಉಲ್ಲಾಸಿಸುವನು.
೧೮ ಘನಸಂಭ್ರದ ವಿಷಯ ವ್ಯಸನ ಪಡುವವರನ್ನು ಕೂಡಿಸುತ್ತೇನೆ;
ಅವರು ನಿನ್ನವರೇ;
ಅವರ ಮೇಲೆ ನಿಂದೆ ಭಾರವಾಗಿದೆ.
೧೯ ಇಗೋ, ಆ ಕಾಲದಲ್ಲಿ ನಿನ್ನನ್ನು ಕ್ರಮೆ ಪಡಿಸುವವರನ್ನೆಲ್ಲಾ ತೀರಿಸಿ ಬಿಟ್ಟು,
ಕುಂಟಾದದ್ದನ್ನು ರಕ್ಷಿಸಿ, ಹೊರದಿಸಲ್ಪಟ್ಟವರನ್ನು ಕೂಡಿಸಿ,
ಅವರಿಗೆ ನಾಚಿಕೆಯಾದ ದೇಶಗಳಲ್ಲೆಲ್ಲಾ
ಅವರಿಗೆ ಸ್ತೋತ್ರವನ್ನೂ, ಹೆಸರನ್ನೂ, ಉಂಟು ಮಾಡುವೆನು.
೨೦ ಆ ಕಾಲದಲ್ಲಿ, ನಾನು ನಿಮ್ಮನ್ನು ಕೂಡಿಸುವ ಕಾಲದಲ್ಲಿ,
ನಿಮ್ಮನ್ನು ಕರ ಕೊಂಡು ಬರುವೆನು:
ಹೌದು, ನಾನು ನಿಮ್ಮ ಶೆರೆಯನ್ನು
ನಿಮ್ಮ ಕಣ್ಣುಗಳ ಮುಂದೆ ತಿರುಗಿಸುವಾಗ,
ಭೂಮಿಯ ಎಲ್ಲಾ ಜನರಲ್ಲಿ
ನಿಮಗೆ ಹೆಸರನ್ನೂ ಸ್ತೋತ್ರವನ್ನೂ ಉಂಟು ಮಾಡುವೆನು,
ಎಂದು ಯೆಹೋವನು ಹೇಳುತ್ತಾನೆ.

# HAGGAI.

## ಹಗ್ಗಾಯನು.

## ೧. ಸಂಧಿ.

೧ ಅರಸನಾದ ದರೀಯನ ಎರಡನೇ ವರುಷದಲ್ಲಿ, ಆರನೇ ತಿಂಗಳಲ್ಲಿ, ತಿಂಗಳಿನ ಮೊದಲನೇ ದಿವಸದಲ್ಲಿ, ಯೆಹೋವನ ವಾಕ್ಯವು ಪ್ರವಾದಿಯಾದ ಹಗ್ಗಾಯನ ಕೈಯಿಂದ, ಯೆಹೂದದ ಅಧಿಪತಿಯಾದ ಶಿಯಲ್ತಿಯೇಲನ ಮಗನಾದ ಜೆರುಬಾಬೆಲನಿಗೂ,
ಪ್ರಧಾನ ಯಾಜಕನಾದ ಯೆಹೋಚಡೇಕನ ಮಗನಾದ ಯೆಹೋಶುವನಿಗೂ, ಉಂಟಾಯಿತು. ಹ್ಯಾಗಂದರೆ—
೨ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ, ಹ್ಯಾಗಂದರೆ—

ಈ ಜನರು ಅನ್ನುತ್ತಾರೆ—
ಕಾಲವೂ, ಯೆಹೋವನ ಮನೆಯನ್ನು ಕಟ್ಟುವಕಾಲವೂ, ಬರಲಿಲ್ಲ.

೩ ಆಗ ಯೆಹೋವನ ವಾಕ್ಯವು ಪ್ರವಾದಿಯಾದ ಹಗ್ಗಾಯನ
ಕೈಯಿಂದ ಉಂಟಾಯಿತು, ಹ್ಯಾಗಂದರೆ—
೪ ಈ ಮನೆ ಹಾಳಾಗಿರಲಾಗಿ,
ನೀವು ನಿಮ್ಮ ಚಿತ್ರ ಹರಿಗೆಗಳುಳ್ಳ ಮನೆಗಳಲ್ಲಿ ವಾಸ ಮಾಡು
ವದಕ್ಕೆ,
ಇದು ನಿಮಗೆ ಕಾಲವೋ?

೫ ಹಾಗಾದರೆ ಈಗ ಸೈನ್ಯಗಳ ಯೆಹೋವನು ಹೇಗೆ ಹೇಳು
ತ್ತಾನೆ—
ನಿಮ್ಮ ಮಾರ್ಗಗಳನ್ನು ಯೋಚಿಸಿ ಕೊಳ್ಳಿರಿ.
೬ ಬಹಳವಾಗಿ ಬಿತ್ತಿದ್ದೀರಿ, ಆದರೆ ಕೊಂಚವಾಗಿ ತಂದಿದ್ದೀರಿ;
ಉಣ್ಣುತ್ತೀರಿ, ಆದರೆ ಸಾಕಾಗಲಿಲ್ಲ;
ಕುಡಿಯುತ್ತೀರಿ, ಆದರೆ ತೃಪ್ತಿ ಆಗಲಿಲ್ಲ;
ತೊಟ್ಟುಕೊಳ್ಳುತ್ತೀರಿ, ಆದರೆ ಬೆಚ್ಚಗೆ ಆಗಲಿಲ್ಲ;
ಮತ್ತು ಸಂಬಳ ಸಂಪಾದಿಸುವವನು,
ಅದನ್ನು ತೂತುಗಳುಳ್ಳ ಚೀಲದಲ್ಲಿ ಇಡುವದಕ್ಕೆ ಸಂಪಾದಿಸು
ತ್ತಾನೆ.

೭ ಸೈನ್ಯಗಳ ಯೆಹೋವನು ಹೇಳುವದೇನಂದರೆ—
ನಿಮ್ಮ ಮಾರ್ಗಗಳನ್ನು ಯೋಚಿಸಿ ಕೊಳ್ಳಿರಿ.
೮ ಬೆಟ್ಟಕ್ಕೆ ಏರಿ ಹೋಗಿ,
ಮರವನ್ನು ತಂದು, ಮನೆಯನ್ನು ಕಟ್ಟಿರಿ;
ಆಗ ನಾನು ಅದರಲ್ಲಿ ಮೆಚ್ಚಿ,
ಮಹಿಮೆಯನ್ನು ಹೊಂದುವೆನೆಂದು ಯೆಹೋವನು ಹೇಳುತ್ತಾನೆ.
೯ ಬಹಳ ಆಗ ಬೇಕೆಂದು ನೋಡಿ ಕೊಂಡಿರಿ,
ಆದರೆ, ಇಗೋ, ಕೊಂಚವು;
ಮತ್ತು ನೀವು ಇದನ್ನು ಮನೆಗೆ ತಂದಾಗ
ನಾನು ಅದರ ಮೇಲೆ ಊದಿ ಬಿಟ್ಟೆನು;
ಯಾತಕ್ಕೆ? ಎಂದು ಸೈನ್ಯಗಳ ಯೆಹೋವನು ಅನ್ನುತ್ತಾನೆ;
ನನ್ನ ಮನೆಯ ನಿಮಿತ್ತವೇ.
ಅದು ಹಾಳಾಗಿರಲು,
ನೀವು ನಿಮ್ಮ ನಿಮ್ಮ ಸ್ವಂತ ಮನೆಗಳಿಗೆ ಓಡುತ್ತೀರಲ್ಲ?
೧೦ ಆದದರಿಂದ, ನಿಮ್ಮ ನಿಮಿತ್ತವೇ,
ಆಕಾಶವು ಮಂಜನ್ನು ಹಿಂಧಿಡಿಯುತ್ತದೆ;
ಭೂಮಿಯು ತನ್ನ ಹುಟ್ಟುವಳ್ಳಿಯನ್ನು ಹಿಂಧಿಡಿಯುತ್ತದೆ.
೧೧ ಇದಲ್ಲದೆ ನಾನು, ಭೂಮಿಯ ಮೇಲೆಯೂ,
ಬೆಟ್ಟಗಳ ಮೇಲೆಯೂ,
ಧಾನ್ಯದ ಮೇಲೆಯೂ, ದ್ರಾಕ್ಷೆರಸದ ಮೇಲೆಯೂ,
ಎಣ್ಣೆಯ ಮೇಲೆಯೂ,
ಭೂಮಿ ಹುಟ್ಟಿಸುವಂಥಾದ್ದರ ಮೇಲೆಯೂ,
ಮನುಷ್ಯರ ಮೇಲೆಯೂ, ದನಗಳ ಮೇಲೆಯೂ,
ಕೈ ಕಟ್ಟುಗಳೆಲ್ಲಾದರ ಮೇಲೆಯೂ,
ಬರವನ್ನು ಕರೆದೆನು.

೧೨ ಆಗ ಶಿಯಲ್ತಿಯೇಲನ ಮಗನಾದ ಜೆರುಬಾಬೆಲನೂ, ಪ್ರಧಾ
ನ ಯಾಜಕನಾದ ಯೆಹೋಚದೇಕನ ಮಗನಾದ ಯೆಹೋಶು
ವನೂ, ಜನರಲ್ಲಿ ಉಳಿದವರೆಲ್ಲರೂ, ತಮ್ಮ ದೇವರಾದ ಯೆಹೋ
ವನ ಶಬ್ದವನ್ನೂ, ತಮ್ಮ ದೇವರಾದ ಯೆಹೋವನು ಕಳುಹಿಸಿದ
ಪ್ರವಾದಿಯಾದ ಹಗ್ಗಾಯನ ಮಾತುಗಳನ್ನೂ, ಕೇಳಿದರು.
ಮತ್ತು ಜನರು ಯೆಹೋವನಿಗೆ ಭಯ ಪಟ್ಟರು.

೧೩ ಆಗ ಯೆಹೋವನ ದೂತನಾದ ಹಗ್ಗಾಯನು, ಯೆಹೋವನ
ಮಾತನ್ನು ಜನರಿಗೆ ತಂದು ಹೇಳಿದ್ದೇನಂದರೆ—ನಾನು ನಿಮ್ಮ ಸಂ
ಗಡ ಇದ್ದೇನೆಂದು ಯೆಹೋವನು ಅನ್ನುತ್ತಾನೆ.

೧೪ ಮತ್ತು ಯೆಹೋವನು ಯೆಹೂದದ ಅಧಿಪತಿಯಾದ ಶಿಯ
ಲ್ತಿಯೇಲನ ಮಗನಾದ ಜೆರುಬಾಬೆಲನ ಆತ್ಮವನ್ನೂ, ಪ್ರಧಾನ
ಯಾಜಕನಾದ ಯೆಹೋಚದೇಕನ ಮಗನಾದ ಯೆಹೋಶುವನ
ಆತ್ಮವನ್ನೂ, ಜನರಲ್ಲಿ ಉಳಿದವರೆಲ್ಲರ ಆತ್ಮವನ್ನೂ, ಎಬ್ಬಿಸಿದ್ದ
ರಿಂದ, ಅವರು ಬಂದು, ಅರಸನಾದ ದರೀಯನ ಎರಡನೇ ವರುಷ
೧೫ ದ, ಆರನೇ ತಿಂಗಳಿನ, ಇಪ್ಪತ್ತು ನಾಲ್ಕನೇ ದಿವಸದಲ್ಲಿ, ತಮ್ಮ
ದೇವರಾದ ಸೈನ್ಯಗಳ ಯೆಹೋವನ ಮನೆಯಲ್ಲಿ ಕೆಲಸ ಮಾಡಿ
ದರು.

## ೨. ಸಂಧಿ.

೧ ಏಳನೇ ತಿಂಗಳಿನಲ್ಲಿ, ತಿಂಗಳಿನ ಇಪ್ಪತ್ತೊಂದನೇ ದಿವಸದಲ್ಲಿ,
ಯೆಹೋವನ ವಾಕ್ಯವು ಪ್ರವಾದಿಯಾದ ಹಗ್ಗಾಯನ ಕೈಯಿಂದ
೨ ಉಂಟಾಯಿತು, ಹ್ಯಾಗಂದರೆ—ಯೆಹೂದದ ಅಧಿಪತಿಯಾದ ಶಿ
ಯಲ್ತಿಯೇಲನ ಮಗನಾದ ಜೆರುಬಾಬೆಲನಿಗೂ, ಪ್ರಧಾನ ಯಾಜ
ಕನಾದ ಯೆಹೋಚದೇಕನ ಮಗನಾದ ಯೆಹೋಶುವನಿಗೂ,
ಜನರಲ್ಲಿ ಉಳಿದವರಿಗೂ, ನೀನು ಹೇಳಿ ತಕ್ಕದ್ದೇನಂದರೆ—
೩ ಈ ಮನೆಯನ್ನು ಅದರ ಪೊದಲನೇ ಮಹಿಮೆಯಲ್ಲಿ ನೋಡಿದ
ವರೊಳಗೆ
ಉಳಿದವನು ನಿಮ್ಮಲ್ಲಿ ಯಾರು?
ಈಗ ಅದನ್ನು ಹ್ಯಾಗೆ ನೋಡುತ್ತೀರಿ?
ಅದಕ್ಕೆ ಇದು ನಿಮ್ಮ ಕಣ್ಣುಗಳಿಗೆ ಏನಿಲ್ಲದ ಹಾಗೆ ತೋರುತ್ತ
ದಲ್ಲವೋ?
೪ ಆದರೂ ಈಗ, ಯೆಹೋವನು ಅನ್ನುತ್ತಾನೆ—
ಜೆರುಬಾಬೆಲನೇ! ಬಲವಾಗಿರು;
ಮತ್ತು, ಪ್ರಧಾನ ಯಾಜಕನಾದ,
ಯೆಹೋಚದೇಕನ ಮಗನಾದ ಯೆಹೋಶುವನೇ! ಬಲವಾಗಿರು,
ಮತ್ತು ದೇಶದ ಜನರೆಲ್ಲರೇ! ಬಲವಾಗಿರ್ರಿ;
ಎಂದು ಯೆಹೋವನು ಅನ್ನುತ್ತಾನೆ;
ಕೆಲಸ ಮಾಡಿರಿ;
ಯಾಕಂದರೆ ನಾನು ನಿಮ್ಮ ಸಂಗಡ ಇದ್ದೇನೆಂದು
ಸೈನ್ಯಗಳ ಯೆಹೋವನು ಅನ್ನುತ್ತಾನೆ.
೫ ನೀವು ಐಗುಪ್ತದೊಳಗಿಂದ ಹೊರಗೆ ಬಂದಾಗ,
ನಾನು ನಿಮ್ಮ ಸಂಗಡ ಒಡಂಬಡಿಕೆ ಮಾಡಿದ ವಾಕ್ಯದ ಪ್ರಕಾರ,
ನನ್ನ ಆತ್ಮವು ನಿನ್ನ ಮಧ್ಯದಲ್ಲಿ ನಿಲ್ಲುತ್ತದೆ;
ಭಯ ಪಡ ಬೇಡಿರಿ.



೬ ಯಾಕಂದರೆ ಸೈನ್ಯಗಳ ಯೆಹೋವ ಹೀಗೆ ಹೇಳುತ್ತಾನೆ—
ಇನ್ನು ಒಂದು ಸಾರಿ, ಕೊಂಚ ಕಾಲವಾದ ಮೇಲೆ,
ನಾನು ಆಕಾಶಗಳನ್ನೂ ಭೂಮಿಯನ್ನೂ
ಸಮುದ್ರವನ್ನೂ, ಒಣಗಿದ ನೆಲವನ್ನೂ, ಅದರಿಸುತ್ತೇನೆ.
೭ ಹೌದು, ಎಲ್ಲಾ ಜನಾಂಗಗಳನ್ನು ಅದರಿಸುತ್ತೇನೆ;
ಮತ್ತು ಎಲ್ಲಾ ಜನಾಂಗಗಳ ಅಪೇಕ್ಷೆ ಬರುವದು;
ಮತ್ತು ಈ ಮನೆಯನ್ನು ಮಹಿಮೆಯಿಂದ ತುಂಬಿಸುತ್ತೇನೆಂದು
ಸೈನ್ಯಗಳ ಯೆಹೋವನು ಹೇಳುತ್ತಾನೆ.
೮ ಬೆಳ್ಳಿ ನನ್ನದು, ಚಿನ್ನವು ನನ್ನದು,
ಎಂದು ಸೈನ್ಯಗಳ ಯೆಹೋವನು ಅನ್ನುತ್ತಾನೆ.
೯ ಈ ಕಡೇ ಮನೆಯ ಮಹಿಮೆ,
ಪೊದಲನೇದಕ್ಕಿಂತ ದೊಡ್ಡದಾಗಿರುವದು,
ಎಂದು ಸೈನ್ಯಗಳ ಯೆಹೋವನು ಹೇಳುತ್ತಾನೆ;
ಮತ್ತು ಈ ಸ್ಥಳದಲ್ಲಿ ಸಮಾಧಾನ ಕೊಡುವೆನೆಂದು,
ಸೈನ್ಯಗಳ ಯೆಹೋವನು ಅನ್ನುತ್ತಾನೆ.

೧೦ ದರೀಯನ ಎರಡನೇ ವರುಷದಲ್ಲಿ, ಒಂಭತ್ತನೇ ತಿಂಗಳಿನ, ಇ
ಪ್ಪತ್ತು ನಾಲ್ಕನೇದರಲ್ಲಿ, ಯೆಹೋವನ ವಾಕ್ಯವು ಪ್ರವಾದಿಯಾದ
೧೧ ಹಗ್ಗಾಯನ ಕೈಯಿಂದ ಉಂಟಾಯಿತು, ಹ್ಯಾಗಂದರೆ, ಸೈನ್ಯ
ಗಳ ಯೆಹೋವನು ಹೇಳುವದೇನಂದರೆ—ನ್ಯಾಯಪ್ರಮಾಣದ
೧೨ ವಿಷಯ ಯಾಜಕರನ್ನು ಕೇಳು, ಏನಂದರೆ—ಒಬ್ಬನು ತನ್ನ ವ
ಸ್ತ್ರದ ಶರಗಿನಲ್ಲಿ ಪರಿಶುದ್ಧ ಮಾಂಸವನ್ನು ಹೊತ್ತು, ತನ್ನ ಶರ
ಗಿನಿಂದ ಕೊಟ್ಟಿಯನ್ನಾದರೂ, ಪೇಯಿಸಿದ್ದನ್ನಾದರೂ, ದ್ರಾಕ್ಷಿರ
ಸವನ್ನಾದರೂ, ಎಣ್ಣೆಯನ್ನಾದರೂ, ಯಾವ ವಿಧದ ಆಹಾರವ
ನ್ನಾದರೂ, ಮುಟ್ಟಿದರೆ, ಅದು ಪರಿಶುದ್ಧವಾಗುವದೋ? ಯಾಜ
೧೩ ಕರು—ಇಲ್ಲವೆಂದು, ಉತ್ತರ ಕೊಟ್ಟರು. ಆಗ ಹಗ್ಗಾಯನು—ಆ
ದರೆ ಹೆಣದಿಂದ ಅಶುದ್ಧವಾದವನು ಇವುಗಳಲ್ಲಿ ಯಾವದನ್ನಾದ
ರೂ ಮುಟ್ಟಿದರೆ, ಅಶುದ್ಧವಾಗುವದೋ? ಅಂದನು. ಯಾಜಕ
೧೪ ರು ಉತ್ತರ ಕೊಟ್ಟು,—ಅಶುದ್ಧವಾಗುವದು, ಅಂದರು. ಆಗ ಹ
ಗ್ಗಾಯನು ಉತ್ತರ ಕೊಟ್ಟು ಹೇಳಿದ್ದೇನಂದರೆ—
ಈ ಜನರೂ, ಈ ಜನಾಂಗವೂ, ನನ್ನ ಮುಂದೆ ಹೀಗೆಯೇ,
ಎಂದು ಯೆಹೋವನು ಅನ್ನುತ್ತಾನೆ;
ಅವರ ಕೈ ಕೆಲಸಗಳೆಲ್ಲಾ ಹೀಗೆಯೇ;
ಮತ್ತು ಅವರು ಅರ್ಪಿಸುವಂಥಾದ್ದು ಅಶುದ್ಧವೇ.
೧೫ ಮತ್ತು ಈಗ ಜನ್ನಾಗಿ ಯೋಚಿಸಿ ಕೊಳ್ಳಿರಿ;
ಇಂದಿನಿಂದ ಇದಕ್ಕೆ ಮುಂಚೆ,
ಯೆಹೋವನ ಮಂದಿರದಲ್ಲಿ ಕಲ್ಲಿನ ಮೇಲೆ ಕಲ್ಲು ಇಡಲ್ಪಡುವ
ದಕ್ಕಿಂತ ಮುಂಚೆ,
೧೬ ಆ ದಿವಸಗಳು ಇದ್ದದ್ದು ಪೊದಲುಗೊಂಡು,
ಒಬ್ಬನು ಇಪ್ಪತ್ತಿನ ರಾಶಿಗೆ ಬಂದಾಗ,
ಹತ್ತು ಮಾತ್ರವಾಗಿತ್ತು;
ಒಬ್ಬನು ಐವತ್ತು ಪಾತ್ರೆಗಳನ್ನು ತುಂಬಿಸುವದಕ್ಕೆ ಆಲೆಗೆ ಬಂ
ದಾಗ,
ಇಪ್ಪತ್ತು ಮಾತ್ರವಿದ್ದವು.
೧೭ ನಾನು ನಿಮ್ಮನ್ನು ಕಾದಿಗೆಯಿಂದಲೂ,
ಬಿಸುದ ಘುಳ್ಳಿಯಿಂದಲೂ, ಕಲ್ಮಳೆಯಿಂದಲೂ,
ನಿಮ್ಮ ಕೈ ಕಟ್ಟುಗಳೆಲ್ಲೆಲ್ಲಾ ಹೊಡೆದೆನು;
ಆದರೂ ನೀವು ನನ್ನ ಕಡೆಗೆ ತಿರುಗಲಿಲ್ಲವೆಂದು,
ಯೆಹೋವನು ಅನ್ನುತ್ತಾನೆ.
೧೮ ಚನ್ನಾಗಿ ಯೋಚಿಸಿ ಕೊಳ್ಳಿರಿ;
ಇಂದಿನಿಂದ ಇದಕ್ಕೆ ಮುಂಚೆ,
ಒಂಭತ್ತನೇ ತಿಂಗಳಿನ ಇಪ್ಪತ್ತು ನಾಲ್ಕನೇ ದಿವಸದಲ್ಲಿ,
ಯೆಹೋವನ ಮಂದಿರದ ಅಸ್ತಿವಾರವು ಹಾಕಲ್ಪಟ್ಟದಿನಿಂದ
ಯೋಚಿಸಿ ಕೊಳ್ಳಿರಿ.
೧೯ ಬೀಜವು ಇನ್ನು ಕಣಜದಲ್ಲಿ ಉಂಟೋ?
ಮತ್ತು ದ್ರಾಕ್ಷೆ, ಅಂಜೂರ, ದಾಳಿಂಬರ, ಇಪ್ಪೆ ಗಿಡಗಳು,
ಇನ್ನು ಫಲಿಸಲಿಲ್ಲವಲ್ಲ?
ಈ ದಿವಸವು ಪೊದಲು ಗೊಂಡು, ನಿಮ್ಮನ್ನು ಆಶೀರ್ವದಿಸು
ವೆನು.

೨೦ ಮತ್ತು ಎರಡನೇ ಸಾರಿ ಯೆಹೋವನ ವಾಕ್ಯವು, ತಿಂಗಳಿನ
ಇಪ್ಪತ್ತು ನಾಲ್ಕನೇ ದಿವಸದಲ್ಲಿ, ಹಗ್ಗಾಯನಿಗೆ ಉಂಟಾಯಿತು,
೨೧ ಹ್ಯಾಗಂದರೆ—ಯೆಹೂದದ ಅಧಿಪತಿಯಾದ ಜೆರುಬಾಬೆಲನಿಗೆ ನೀ
ನು ಹೇಳಿ ತಕ್ಕದ್ದೇನಂದರೆ—
ನಾನು ಆಕಾಶಗಳನ್ನೂ ಭೂಮಿಯನ್ನೂ ಅದರಿಸುವೆನು.
೨೨ ಮತ್ತು ರಾಜ್ಯಗಳ ಸಿಂಹಾಸನವನ್ನು ಕೆಡವಿ ಹಾಕುವೆನು;
ಮತ್ತು ಜನಾಂಗಗಳ ರಾಜ್ಯಗಳ ಬಲವನ್ನು ನಾಶನ ಮಾಡು
ವೆನು.
ಮತ್ತು ರಥಗಳನ್ನೂ ಅವುಗಳಲ್ಲಿ ಸವಾರಿ ಮಾಡುವವರನ್ನೂ
ಕೆಡವಿ ಹಾಕುವೆನು;
ಮತ್ತು ಕುದುರೆಗಳೂ ಹತ್ತಿದವರೂ
ಒಬ್ಬರೊಬ್ಬರ ಕತ್ತಿಯಿಂದ ಬೀಳುವರು.
೨೩ ಸೈನ್ಯಗಳ ಯೆಹೋವನು ಅನ್ನುತ್ತಾನೆ—
ಆ ದಿವಸದಲ್ಲಿ,
ಶಿಯಲ್ತಿಯೇಲನ ಮಗನಾದ ನನ್ನ ಸೇವಕನಾದ ಜೆರುಬಾಬೆಲನೇ
ನಿನ್ನನ್ನು ತಕ್ಕೊಳ್ಳುವೆನೆಂದು
ಯೆಹೋವನು ಅನ್ನುತ್ತಾನೆ;
ಮತ್ತು ನಿನ್ನನ್ನು ಮುದ್ರೆಯ ಹಾಗೆ ಇಡುವೆನು;
ಯಾಕಂದರೆ ನಿನ್ನನ್ನು ಆರಿ ಕೊಂಡಿದ್ದೇನೆಂದು,
ಸೈನ್ಯಗಳ ಯೆಹೋವನು ಅನ್ನುತ್ತಾನೆ.

# ZECHARIAH.

## ಜೆಕರೀಯನು.

### ೧. ಸಂಧಿ.

೧ ದರೀಯನ ಎರಡನೇ ವರುಷದಲ್ಲಿ, ಎಂಟನೇ ತಿಂಗಳಿನಲ್ಲಿ, ಯೆ
ಹೋವನ ವಾಕ್ಯವು, ಇದ್ದೋನನ ಮಗನಾದ, ಬೆರೆಕೀಯನ ಮಗ
ನಾದ, ಪ್ರವಾದಿಯಾದ ಜೆಕರೀಯನಿಗೆ ಉಂಟಾಯಿತು, ಹ್ಯಾಗಂ
ದರೆ—

೨ ಯೆಹೋವನು ನಿಮ್ಮ ಪಿತೃಗಳ ಮೇಲೆ ಬಹಳ ಶಿಟ್ಟು ಮಾಡಿ
ದ್ದಾನೆ.

೩ ಆದದರಿಂದ ನೀನು ಅವರಿಗೆ ಹೇಳ ತಕ್ಕದ್ದೇನಂದರೆ—
ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ನನ್ನ ಬಳಿಗೆ ತಿರುಗಿ ಕೊಳ್ಳಿರಿ,
ಎಂದು ಸೈನ್ಯಗಳ ಯೆಹೋವನು ಅನ್ನುತ್ತಾನೆ;
ಆಗ ನಾನು ನಿಮ್ಮ ಬಳಿಗೆ ತಿರುಗಿ ಕೊಳ್ಳುವೆನೆಂದು,
ಸೈನ್ಯಗಳ ಯೆಹೋವನು ಹೇಳುತ್ತಾನೆ.

೪ ನಿಮ್ಮ ಪಿತೃಗಳ ಹಾಗಿರ ಬೇಡಿರಿ;
ಅವರಿಗೆ ಪೂರ್ವದ ಪ್ರವಾದಿಗಳು ಕೂಗಿ,
ನಿಮ್ಮ ಕೆಟ್ಟ ಮಾರ್ಗಗಳನ್ನೂ,
ನಿಮ್ಮ ಕೆಟ್ಟ ಕ್ರಿಯೆಗಳನ್ನೂ, ಬಿಟ್ಟು ತಿರುಗಿರಿ,
ಎಂದು ಸೈನ್ಯಗಳ ಯೆಹೋವನು ಅನ್ನುತ್ತಾನೆಂದು, ಹೇಳಿದರು;
ಆದರೆ ಅವರು ಕೇಳಲಿಲ್ಲ;
ನನ್ನಲ್ಲಿ ಲಕ್ಷ್ಯವಿಡಲಿಲ್ಲವೆಂದು ಯೆಹೋವನು ಅನ್ನುತ್ತಾನೆ.

೫ ನಿಮ್ಮ ಪಿತೃಗಳೋ ಅವರು ಎಲ್ಲಿ?
ಪ್ರವಾದಿಗಳು ಸಹ, ನಿತ್ಯವಾಗಿ ಬದುಕುತ್ತಾರೋ?

೬ ಆದರೆ ನಾನು ನನ್ನ ಸೇವಕರಾದ ಪ್ರವಾದಿಗಳಿಗೆ ಆಜ್ಞಾಪಿಸಿದ,
ನನ್ನ ವಾಕ್ಯಗಳೂ ನನ್ನ ನೇಮಗಳೂ,
ನಿಮ್ಮ ಪಿತೃಗಳಿಗೆ ಹೇರಲಿಲ್ಲವೋ?
ಆಗಲವರು ತಿರುಗಿ ಕೊಂಡು—
ಸೈನ್ಯಗಳ ಯೆಹೋವನು
ನಮಗೆ ಮಾಡುವದಕ್ಕೆ ಯೋಚಿಸಿದ ಹಾಗೆಯೇ,
ನಮ್ಮ ಮಾರ್ಗಗಳ ಪ್ರಕಾರವಾಗಿಯೂ,
ನಮ್ಮ ಕ್ರಿಯೆಗಳ ಪ್ರಕಾರವಾಗಿಯೂ,
ನಮಗೆ ಮಾಡಿದ್ದಾನೆಂದು ಹೇಳಿದರು.

೭ ದರೀಯನ ಎರಡನೇ ವರುಷದಲ್ಲಿ, ಹನೊಂದನೇ ತಿಂಗಳಾದ
ಶೇಬಾತೆಂಬ ತಿಂಗಳಿನ ಇಪ್ಪತ್ತು ನಾಲ್ಕನೇ ದಿವಸದಲ್ಲಿ, ಯೆಹೋ
ವನ ವಾಕ್ಯವು ಇದ್ದೋನನ ಮಗನಾದ, ಬೆರೆಕೀಯನ ಮಗನಾ
ದ, ಪ್ರವಾದಿಯಾದ ಜೆಕರೀಯನಿಗೆ ಉಂಟಾಯಿತು, ಹ್ಯಾಗಂದ
೮ ರೆ—ನಾನು ರಾತ್ರಿಯಲ್ಲಿ ನೋಡಿದಾಗ, ಇಗೋ, ಕೆಂಪು ಕುದುರೆ
ಯ ಮೇಲೆ ಸವಾರಿ ಮಾಡುವ ಒಬ್ಬ ಮನುಷ್ಯನು; ಅವನು ತ
ಗ್ಗಿನಲ್ಲಿದ್ದ ಗಂಧದ ಗಿಡಗಳ ನಡುವೆ ನಿಂತಿದ್ದನು; ಮತ್ತು ಅವನ ಹಿಂ
ದೆ ಕೆಂಪೂ, ಕಪಿಶವೂ, ಬಿಳುಪೂ, ಆದ ಕುದುರೆಗಳು ಇದ್ದವು.

೯ ಆಗ ನಾನು ಅಂದೆನು—ಸ್ವಾಮಿ, ಇವೇನು? ಆಗ ನನ್ನ ಸಂಗ
ತ ಮಾತಾಡಿದ ದೂತನು—ಇವೇನೆಂದು ನಿನಗೆ ತೋರಿಸುತ್ತೇನೆ,
೧೦ ಅಂದನು. ಆಗ, ಗಂಧದ ಗಿಡಗಳ ನಡುವೆ ನಿಂತ ಮನುಷ್ಯನು
ಉತ್ತರ ಕೊಟ್ಟು, ಹೇಳಿದ್ದೇನಂದರೆ—ಇವರು, ಭೂಮಿಯಲ್ಲಿ ನ
೧೧ ಡೆದಾಡುವದಕ್ಕೆ ಯೆಹೋವನು ಕಳುಹಿಸಿದವರು, ಅಂದನು. ಆಗ
ಅವರು, ಗಂಧದ ಗಿಡಗಳ ನಡುವೆ ನಿಂತ ಯೆಹೋವನ ದೂತನಿಗೆ
ಉತ್ತರ ಕೊಟ್ಟು ಹೇಳಿದ್ದೇನಂದರೆ—ಭೂಮಿಯಲ್ಲಿ ನಡೆದಾಡಿದ್ದೇ
ವೆ, ಮತ್ತು, ಇಗೋ, ಭೂಮಿಯೆಲ್ಲಾ ಸುವ್ಯವಸ್ಥಿತವಿದ್ದು, ಶಾಂತಿಯಾ
ಗಿದೆ.

೧೨ ಆಗ ಯೆಹೋವನ ದೂತನು ಉತ್ತರ ಕೊಟ್ಟು ಹೀಗಂದ
ನು—ಓ ಸೈನ್ಯಗಳ ಯೆಹೋವನೇ! ನೀನು ಯೆರೂಸಲೇಮನ್ನೂ
ಯೆಹೂದದ ಪಟ್ಟಣಗಳನ್ನೂ ಎಷ್ಟು ವರಿಗೂ ಕನಿಕರಿಸದೆ ಇರುವಿ?
ಅವುಗಳ ಮೇಲೆ ಈ ಎಪ್ಪತ್ತು ವರುಷಗಳು ಶಿಟ್ಟು ಮಾಡಿದ್ದೀಯ
೧೩ ಲ್ಲವೋ? ಅಂದನು. ಆಗ ಯೆಹೋವನು ನನ್ನ ಸಂಗತ ಮಾತಾ
ಡಿದ ದೂತನಿಗೆ, ಒಳ್ಳೇ ಮಾತುಗಳಿಂದಲೂ, ಆದರಣೆಯ ಮಾ
೧೪ ತುಗಳಿಂದಲೂ, ಉತ್ತರ ಕೊಟ್ಟನು. ಮತ್ತು ನನ್ನ ಸಂಗತ
ಮಾತಾಡಿದ ದೂತನು ನನಗೆ ಹೇಳಿದ್ದೇನಂದರೆ—ಕೂಗಿ ಹೇಳು,
ಏನಂದರೆ—
ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ನಾನು ಯೆರೂಸಲೇಮಿಗಾಗಿಯೂ, ಜೆಯೋನಿಗಾಗಿಯೂ,
ದೊಡ್ಡ ರೋಷದಿಂದ ರೋಷವಾಗಿದ್ದೇನೆ.
೧೫ ಮತ್ತು ನಿಶ್ಚಿಂತೆಯುಳ್ಳವರಾಗಿರುವ ಜನಾಂಗಗಳ ಮೇಲೆ,
ಬಹಳ ಕೋಪವಾಗಿದ್ದೇನೆ;
ಯಾಕಂದರೆ ನಾನು ಸ್ವಲ್ಪ ಕೋಪ ಮಾಡಿದಾಗ,
ಅವರು ಕೇಡಿಗೆ ಸಹಾಯ ಮಾಡಿದರು.
೧೬ ಆದದರಿಂದ ಯೆಹೋವನು ಹೀಗೆ ಹೇಳುತ್ತಾನೆ—
ನಾನು ಕನಿಕರಗಳ ಸಂಗತ ಯೆರೂಸಲೇಮಿನ ಕಡೆಗೆ ತಿರುಗಿ
ಕೊಂಡಿದ್ದೇನೆ;
ನನ್ನ ಮನೆ ಅದರಲ್ಲಿ ಕಟ್ಟಲ್ಪಡುವದೆಂದು,
ಸೈನ್ಯಗಳ ಯೆಹೋವನು ಅನ್ನುತ್ತಾನೆ;
ಮತ್ತು ಯೆರೂಸಲೇಮಿನ ಮೇರೆ ಅಳತೆಯ ನೂಲು ಹಿಡಿಯ
ಲ್ಪಡುವದು.
೧೭ ಇನ್ನು ಕೂಗಿ ಹೇಳು, ಏನಂದರೆ—
ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ನನ್ನ ಪಟ್ಟಣಗಳು ಇನ್ನು ಒಳ್ಳೇದರಿಂದ ಹರಿಯುವವು;
ಯಾಕಂದರೆ ಯೆಹೋವನು ಜಿಯೋನನ್ನು ಇನ್ನು ಆದರಿಸು
ವನು;
ಯೆರೂಸಲೇಮನ್ನು ಇನ್ನು ಆದು ಕೊಳ್ಳುವನು.

೧೮ ಆಗ ನಾನು ನನ್ನ ಕಣ್ಣುಗಳನ್ನು ಎತ್ತಿ ನೋಡಿದಾಗ, ಇ



೧೯ ಗೋ, ನಾಲ್ಕು ಕೊಂಬುಗಳು. ಆಗ ನನ್ನ ಸಂಗತ ಮಾತಾಡಿ
ದ ದೂತನಿಗೆ ನಾನು ಅಂದೆನು—ಇವೇನು? ಅವನು ನನಗೆ ಉತ್ತ
ರ ಕೊಟ್ಟು—ಇವು ಯೆಹೂದವನ್ನೂ ಇಸ್ರಾಯೇಲನ್ನೂ ಯೆರೂ
೨೦ ಸಲೇಮನ್ನೂ ಚದರಿಸಿದ ಕೊಂಬುಗಳು, ಅಂದನು. ಆಗ ಯೆ
೨೧ ಹೋವನು ನನಗೆ ನಾಲ್ಕು ಬಡಗಾರರನ್ನು ತೋರಿಸಿದನು. ಆಗ
ನಾನು ಅಂದೆನು—ಇವರು ಏನು ಮಾಡ ಬರುತ್ತಾರೆ? ಅದಕ್ಕವ
ನು ಮಾತಾಡಿ ಹೇಳಿದ್ದೇನಂದರೆ—ಇವರು, ಯಾವನಾದರೂ ತ
ಲೆಯನ್ನು ಎತ್ತದ ಹಾಗೆ, ಯೆಹೂದವನ್ನು ಚದರಿಸಿದ ಕೊಂಬು
ಗಳು; ಆದರೆ ಇವರು ಅವರನ್ನು ಹೆದರಿಸಿ, ಯೆಹೂದ ದೇಶದ
ಮೇಲೆ ಅದನ್ನು ಚದರಿಸುವದಕ್ಕೆ ಕೊಂಬನ್ನು ಎತ್ತಿದ ಜನಾಂಗ
ಗಳ ಕೊಂಬುಗಳನ್ನು ಕೆಳಗೆ ಹಾಕುವದಕ್ಕೆ ಬಂದಿದ್ದಾರೆ.

### ೨. ಸಂಧಿ.

೧ ತಿರಿಗಿ ನನ್ನ ಕಣ್ಣುಗಳನ್ನೆತ್ತಿ ನೋಡಿದಾಗ, ಇಗೋ, ತನ್ನ
೨ ಕೈಯಲ್ಲಿ ಅಳೆಯುವ ನೂಲು ಉಳ್ಳ ಒಬ್ಬ ಮನುಷ್ಯನು. ಆಗ
ನಾನು—ಎಲ್ಲಿ ಹೋಗುತ್ತೀ? ಅಂದೆನು; ಅದಕ್ಕವನು ನನಗೆ—
ಯೆರೂಸಲೇಮನ್ನು ಅಳತೆ ಮಾಡಿ, ಅದರ ಅಗಲವೆಷ್ಟು, ಅದರ
೩ ಉದ್ದವೆಷ್ಟು, ಎಂದು ನೋಡುವದಕ್ಕೆ, ಅಂದನು. ಮತ್ತು, ಇ
ಗೋ, ನನ್ನ ಸಂಗತ ಮಾತಾಡಿದ ದೂತನು ಹೊರಟನು; ಮ
ತ್ತು ಇನ್ನೊಬ್ಬ ದೂತನು ಅವನನ್ನು ಎದುರು ಗೊಳ್ಳುವದಕ್ಕೆ
೪ ಹೊರಟನು. ಇವನು ಅವನಿಗೆ ಹೀಗಂದನು—ಓಡಿ ಈ ಯೌವನ
ಸ್ಥನಿಗೆ ಹೀಗೆ ಹೇಳು, ಏನಂದರೆ—
ಯೆರೂಸಲೇಮು,
ಅದರಲ್ಲಿರುವ ಮನುಷ್ಯರ, ದನಗಳ, ಬಾಹುಳ್ಯದಿಂದ,
ಗೋಡೆ ಇಲ್ಲದ ಊರುಗಳಂತೆ, ನಿವಾಸವಾಗುವದು.
೫ ಯಾಕಂದರೆ, ನಾನು ಅದರ ಸುತ್ತಲು ಬೆಂಕಿಯ ಗೋಡೆಯಾ
ಗಿಯೂ,
ಅದರ ಮಧ್ಯದಲ್ಲಿ ಮಹಿಮೆಯಾಗಿಯೂ,
ಇರುವೆನೆಂದು ಯೆಹೋವನು ಅನ್ನುತ್ತಾನೆ.

೬ ಓಹೋ! ಉತ್ತರ ದೇಶದಿಂದ ಓಡಿ ಹೋಗಿರೆಂದು,
ಯೆಹೋವನು ಅನ್ನುತ್ತಾನೆ;
ಯಾಕಂದರೆ ಆಕಾಶದ ನಾಲ್ಕು ದಿಕ್ಕುಗಳಂತೆ,
ನಿಮ್ಮನ್ನು ಚದರಿಸಿದ್ದೇನೆಂದು,
ಯೆಹೋವನು ಅನ್ನುತ್ತಾನೆ.
೭ ಓ ಜಿಯೋನೇ!
ಬಾಬೆಲಿನ ಮಗಳ ಬಳಿಯಲ್ಲಿ ವಾಸವಾಗಿರುವವಳೇ! ತಪ್ಪಿಸಿಕೋ.
೮ ಯಾಕಂದರೆ, ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ನಿಮ್ಮನ್ನು ಸುಲು ಕೊಂಡ ಜನಾಂಗಗಳ ಬಳಿಗೆ,
ಮಹಿಮೆಯ ತರುವಾಯ ನನ್ನನ್ನು ಕಳುಹಿಸಿದ್ದಾನೆ;
ಯಾಕಂದರೆ ನಿಮ್ಮನ್ನು ಮುಟ್ಟುವವನು ಅವನ ಕಣ್ಣು ಗೊಂ
ಬೆಯನ್ನು ಮುಟ್ಟುತ್ತಾನೆ.
೯ ಯಾಕಂದರೆ, ಇಗೋ, ನಾನು ನನ್ನ ಕೈಯನ್ನು ಅವರ ಮೇಲೆ
ಅಲ್ಲಾಡಿಸುತ್ತೇನೆ;
ಆಗಲವರು ತಮ್ಮ ದಾಸರಿಗೆ ಕೊಳ್ಳೆಯಾಗುವರು;
ಮತ್ತು ಸೈನ್ಯಗಳ ಯೆಹೋವನು ನನ್ನನ್ನು ಕಳುಹಿಸಿದನೆಂದು,
ತಿಳಿಯುವಿರಿ.

೧೦ ಜಿಯೋನಿನ ಕುಮಾರ್ತೆಯೇ! ಹರ್ಷಿಸಿ, ಸಂಭ್ರಮ ಪಡು;
ಯಾಕಂದರೆ ಇಗೋ, ನಾನು ಬಂದು,
ನಿನ್ನ ಮಧ್ಯದಲ್ಲಿ ವಾಸವಾಗಿರುವೆನೆಂದು,
ಯೆಹೋವನು ಅನ್ನುತ್ತಾನೆ.
೧೧ ಇದಲ್ಲದೆ, ಆ ದಿವಸದಲ್ಲಿ,
ಅನೇಕ ಜನಾಂಗಗಳು ಯೆಹೋವನಿಗೆ ಅಂಟಿ ಕೊಂಡು,
ನನ್ನ ಜನವಾಗುವವು;
ಮತ್ತು ನಾನು ನಿನ್ನ ಮಧ್ಯದಲ್ಲಿ ವಾಸವಾಗುವೆನು;
ಮತ್ತು ಸೈನ್ಯಗಳ ಯೆಹೋವನು,
ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆಂದು, ತಿಳಿಯುವಿರಿ.
೧೨ ಇದಲ್ಲದೆ ಯೆಹೋವನು ತನ್ನ ಭಾಗವಾದ ಯೆಹೂದವನ್ನು,
ಪರಿಶುದ್ಧ ದೇಶದಲ್ಲಿ ಸ್ವತಂತ್ರಿಸಿ ಕೊಂಡು,
ಯೆರೂಸಲೇಮನ್ನು ಇನ್ನು ಆದು ಕೊಳ್ಳುವನು.
೧೩ ಮಾಂಸದವಕೆಲ್ಲರೇ! ಯೆಹೋವನ ಮುಂದೆ ಮೌನವಾಗಿರ್ರಿ;
ಯಾಕಂದರೆ ತನ್ನ ಪರಿಶುದ್ಧ ನಿವಾಸದೊಳಗಿಂದ ಎಚ್ಚತ್ತಿದ್ದಾನೆ.

### ೩. ಸಂಧಿ.

೧ ಇದಲ್ಲದೆ ಅವನು ನನಗೆ, ಯೆಹೋವನ ದೂತನ ಮುಂದೆ ನಿಂ
ತಿರುವ ಪ್ರಧಾನ ಯಾಜಕನಾದ ಯೆಹೋಶುವನನ್ನೂ, ಇವನ
ನ್ನು ಎದುರಿಸುವದಕ್ಕೆ ಅವನ ಬಲಪಾರ್ಶ್ವದಲ್ಲಿ ನಿಂತ ಸೈತಾನ
೨ ನನ್ನೂ, ತೋರಿಸಿದನು. ಆಗ ಯೆಹೋವನು ಸೈತಾನನಿಗೆ—
ಸೈತಾನನೇ! ಯೆಹೋವನು ನಿನ್ನನ್ನು ಗದರಿಸಲಿ;
ಹೌದು, ಯೆರೂಸಲೇಮನ್ನು ಆದು ಕೊಂಡ ಯೆಹೋವನು
ನಿನ್ನನ್ನು ಗದರಿಸಲಿ;
ಇವನು ಬೆಂಕಿಯೊಳಗಿಂದ ಕಿತ್ತು ಕೊಂಡ ಕೊಳ್ಳಿ ಅಲ್ಲವೋ?
ಅಂದನು.

೩ ಮತ್ತು ಯೆಹೋಶುವನು ಮೈಲಿಗೆಯಾದ ವಸ್ತ್ರಗಳನ್ನು ತೊ
೪ ಟ್ಟು ಕೊಂಡವನಾಗಿ ದೂತನ ಮುಂದೆ ನಿಂತನು. ಆಗಲವನು
ಉತ್ತರ ಕೊಟ್ಟು, ತನ್ನ ಮುಂದೆ ನಿಂತವರಿಗೆ—ಇವನ ಮೇಲಿನಿಂ
ದ ಮೈಲಿಗೆಯಾದ ವಸ್ತ್ರಗಳನ್ನು ತೆಗೆದು ಹಾಕಿರಿ, ಅಂದನು. ಮ
ತ್ತು ಅವನಿಗೆ—ಇಗೋ ನಿನ್ನ ಅಕ್ರಮವನ್ನು ನಿನ್ನನ್ನು ಬಿಟ್ಟು
ಹೋಗ ಮಾಡಿದ್ದೇನೆ; ಬದಲು ವಸ್ತ್ರಗಳನ್ನು ನಿನಗೆ ಧರಿಸುವೆನು,
೫ ಅಂದನು. ಆಗ ನಾನು—ಅವನ ತಲೆಯ ಮೇಲೆ ಶುದ್ಧ ಮುಂಡಾ
ಸವನ್ನು ಇಡಿರಿ, ಅಂದೆನು; ಆಗಲವರು ಅವನ ತಲೆಯ ಮೇಲೆ
ಶುದ್ಧ ಮುಂಡಾಸವನ್ನು ಇಟ್ಟು, ಅವನಿಗೆ ವಸ್ತ್ರಗಳನ್ನು ಧರಿಸಿ
೬ ದರು; ಮತ್ತು ಯೆಹೋವನ ದೂತನು ಅಲ್ಲಿ ನಿಲ್ಲುತ್ತಿದ್ದನು. ಆಗ
ಯೆಹೋವನ ದೂತನು ಯೆಹೋಶುವನಿಗೆ ಸಾಕ್ಷಿ ಕೊಟ್ಟದ್ದೇ
೭ ನಂದರೆ—ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ನೀನು ನನ್ನ ಮಾರ್ಗಗಳಲ್ಲಿ ನಡೆದು,
ನನ್ನ ಕಾಯಿದೆಯನ್ನು ಕೈ ಕೊಂಡರೆ,
ಆಗ ನೀನು ನನ್ನ ಮನೆಗೆ ನ್ಯಾಯ ತೀರಿಸಿ,

ನನ್ನ ಅಂಗಳಗಳನ್ನು ಕಾಯುವಿ;
ಮತ್ತು ಇಲ್ಲಿ ನಿಂತವರ ನಡುವೆ
ನಿನಗೆ ಸಂಚಾರವನ್ನು ಕೊಡುವೆನು.
೮ ಪ್ರಧಾನ ಯಾಜಕನಾದ ಯೆಹೋಶುವನೇ!
ನೀನೂ, ನಿನ್ನ ಮುಂದೆ ಕೂತು ಕೊಳ್ಳುವ ನಿನ್ನ ಸಂಗಡಿಗ
ರೂ, ಕೇಳಿರಿ;
ಯಾಕಂದರೆ ಅವರು ಗುರುತಿನ ಮನುಷ್ಯರಾಗಿದ್ದಾರೆ;
ಯಾಕಂದರೆ, ಇಗೋ, ನಾನು ನನ್ನ ಸೇವಕನಾದ ಚಿಗುರನ್ನು
ತರುತ್ತೇನೆ.
೯ ಯಾಕಂದರೆ, ಇಗೋ, ನಾನು ಯೆಹೋಶುವನ ಮುಂದೆ ಇಟ್ಟಿ
ರುವ ಕಲ್ಲು!
ಒಂದು ಕಲ್ಲಿನ ಮೇಲೆ ಏಳು ಕಣ್ಣುಗಳು ಇರುವವು;
ಇಗೋ, ನಾನು ಅದರ ಕೆತ್ತುವಿಕೆಯನ್ನು ಕೆತ್ತುವೆನು;
ಮತ್ತು ಈ ದೇಶದ ಅಕ್ರಮವನ್ನು
ಒಂದೇ ದಿವಸದಲ್ಲಿ ತೊಲಗಿಸುವೆನು;
೧೦ ಎಂದು ಸೈನ್ಯಗಳ ಯೆಹೋವನು ಅನ್ನುತ್ತಾನೆ.
ಆದಿವಸದಲ್ಲಿ,
ನೀವು ನಿಮ್ಮ ನಿಮ್ಮು ನೆರೆಯವರನ್ನು ದ್ರಾಕ್ಷೆ ಬಳ್ಳಿಯ ಕೆಳಗೂ,
ಅಂಜೂರದ ಕೆಳಗೂ ಕರೆಯುವಿರಿ,
ಎಂದು ಸೈನ್ಯಗಳ ಯೆಹೋವನು ಅನ್ನುತ್ತಾನೆ.

## ೪. ಸಂಧಿ.

೧ ಇದಲ್ಲದೆ ನನ್ನ ಸಂಗಡ ಮಾತಾಡಿದ ದೂತನು ತಿರಿಗಿ ಬಂದು,
೨ ಒಬ್ಬನನ್ನು ನಿದ್ರೆಯಿಂದ ಎಬ್ಬಿಸುವಂತೆ ನನ್ನನ್ನು ಎಬ್ಬಿಸಿದನು. ಆ
ಗಲವನು ನನಗೆ—ಏನು ನೋಡುತ್ತೀ? ಅಂದನು; ನಾನು ಹೇಳಿದ್ದು—
ನೋಡಿದ್ದೇನೆ; ಮತ್ತು ಇಗೋ, ದೀಪಸ್ತಂಭವು! ಎಲ್ಲಾ ಭಂಗಾರ
ದ್ದೇ; ಅದರ ತಲೆಯ ಮೇಲೆ ಬಟ್ಲು ಉಂಟು; ಮತ್ತು ಅದರ ಮೇ
ಲೆ ಅದರ ಏಳು ದೀಪಗಳುಂಟು. ಮತ್ತು ಅದರ ತಲೆಯ ಮೇಲಿ
೩ ರುವ ಏಳು ದೀಪಗಳಿಗೆ ಏಳು ಕೊಳವೆಗಳುಂಟು. ಮತ್ತು ಅದ
ರ ಬಳಿಯಲ್ಲಿ ಎರಡು ಇಪ್ಪೆ ಮರಗಳು, ಬಟ್ಲಿನ ಬಲಗಡೆಯಲ್ಲಿ
೪ ಒಂದೂ, ಬಟ್ಲಿನ ಎಡಗಡೆಯಲ್ಲಿ ಒಂದೂ, ಉಂಟು. ಆಗ ನಾ
ನು ಉತ್ತರ ಕೊಟ್ಟು, ನನ್ನ ಸಂಗಡ ಮಾತಾಡಿದ ದೂತನಿಗೆ—
೫ ಸ್ವಾಮಿ, ಇವೇನು? ಅಂದೆನು. ಆಗ ನನ್ನ ಸಂಗಡ ಮಾತಾಡಿ
ದ ದೂತನು ಉತ್ತರ ಕೊಟ್ಟು, ನನಗೆ—ಇವೇನೆಂದು ಅರಿಯಾ?
೬ ಅಂದನು. ನಾನು—ಇಲ್ಲ, ಸ್ವಾಮಿ, ಅಂದೆನು. ಆಗಲವನು ಉ
ತ್ತರ ಕೊಟ್ಟು ನನಗೆ ಹೇಳಿದ್ದೇನಂದರೆ—ಜೆರುಬಾಬೆಲನಿಗೆ ಯೆ
ಹೋವನ ವಾಕ್ಯವು ಇದೇ—
ಬಲದಿಂದಲ್ಲ, ಶಕ್ತಿಯಿಂದಲ್ಲ,
ನನ್ನ ಆತ್ಮದಿಂದಲೇ,
ಎಂದು ಸೈನ್ಯಗಳ ಯೆಹೋವನು ಹೇಳುತ್ತಾನೆ.
೭ ದೊಡ್ಡ ಬೆಟ್ಟವೇ! ನೀನ್ಯಾರು?
ಜೆರುಬಾಬೆಲನ ಮುಂದೆ ಬೈಲಾಗುವಿ;
ಮತ್ತು, ಅದಕ್ಕೆ ಕೃಪೆಯೇ! ಕೃಪೆಯೇ!
ಎಂದು ಆರ್ಭಟಗಳ ಸಂಗಡ,
ತಲೆ ಕಲ್ಲನ್ನು ಹೊರಗೆ ತರುವನು.
೮ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಯಿತು,
ಹ್ಯಾಗಂದರೆ—
೯ ಜೆರುಬಾಬೆಲನ ಕೈಗಳು ಈ ಮನೆಯ ಅಸ್ತಿವಾರವನ್ನು ಹಾಕಿವೆ,
ಮತ್ತು ಅವನ ಕೈಗಳು ಅದನ್ನು ತೀರಿಸುವವು;
ಮತ್ತು ಸೈನ್ಯಗಳ ಯೆಹೋವನು
ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆಂದು ತಿಳಿಯುವಿರಿ.
೧೦ ಯಾಕಂದರೆ ಸಣ್ಣ ಕಾರ್ಯಗಳ ದಿವಸವನ್ನು ತಿರಸ್ಕರಿಸಿದವ
ನ್ಯಾರು?
ಯಾಕಂದರೆ ಆ ಏಳು,
ಅಂದರೆ, ಭೂಮಿಯೆಲ್ಲೆಲ್ಲಾ ಹಿಡ್ಯಾಡುವ ಯೆಹೋವನ ಕಣ್ಣುಗಳು,
ಸೀಸ ಸೂತ್ರವನ್ನು ಜೆರುಬಾಬೆಲನ ಕೈಯಲ್ಲಿ ನೋಡುವಾಗ,
ಸಂತೋಷ ಪಡುತ್ತವೆ.

೧೧ ಆಗ ನಾನು ಉತ್ತರ ಕೊಟ್ಟು ಅವನಿಗೆ—ದೀಪಸ್ತಂಭದ ಬಲ
ಗಡೆಯಲ್ಲಿಯೂ, ಎಡಗಡೆಯಲ್ಲಿಯೂ, ಇರುವ ಈ ಎರಡು ಇಪ್ಪೆ
೧೨ ಮರಗಳು ಏನು? ಅಂದೆನು. ಮತ್ತು ನಾನು ಎರಡನೇ ಸಾರಿ ಉ
ತ್ತರ ಕೊಟ್ಟು ಅವನಿಗೆ—ಎರಡು ಚಿನ್ನದ ನಾಳಗಳಿಂದ ಚಿನ್ನದ
ಎಣ್ಣೆಯನ್ನು ತಮ್ಮೊಳಗಿಂದ ಸುರಿಯುವ ಈ ಎರಡು ಇಪ್ಪೆ
೧೩ ಕೊಂಬೆಗಳು ಏನು? ಅಂದೆನು. ಅವನು ನನಗೆ—ಇವು ಏನೆಂದು
೧೪ ಅರಿಯಾ? ಅಂದನು; ನಾನು—ಇಲ್ಲ ಸ್ವಾಮಿ, ಅಂದೆನು. ಆಗ
ಲವನು—ಸಮಸ್ತ ಭೂಮಿಯ ಕರ್ತನ ಬಳಿಯಲ್ಲಿ ನಿಲ್ಲುವ ಇಬ್ಬ
ರು ಅಭಿಷೇಕಿಸಲ್ಪಟ್ಟವರು ಇವರೇ, ಅಂದನು.

## ೫. ಸಂಧಿ.

೧ ಆಗ ನಾನು ತಿರುಗಿ ಕೊಂಡು, ನನ್ನ ಕಣ್ಣುಗಳನ್ನೆತ್ತಿ ನೋ
೨ ಡಲು, ಇಗೋ, ಹಾರುವ ಸುರಳಿ. ಆಗಲವನು ನನಗೆ—ಏನು
ನೋಡುತ್ತೀ? ಅಂದಾಗ, ನಾನು—ಹಾರುವ ಸುರಳಿಯನ್ನು ನೋ
ಡುತ್ತೇನೆ; ಅದರ ಉದ್ದವು ಇಪ್ಪತ್ತು ಮೊಳಗಳಾಗಿಯೂ, ಅದರ
೩ ಅಗಲವು ಹತ್ತು ಮೊಳಗಳಾಗಿಯೂ, ಇದೆ, ಅಂದೆನು. ಆಗಲವ
ನು ನನಗೆ ಹೇಳಿದ್ದೇನಂದರೆ—ದೇಶದ ಮೇಲೆಲ್ಲಾ ಹೊರಡುವ ಶಾಪ
ವು ಇದೇ; ಯಾಕಂದರೆ ಕಳ್ಳತನ ಮಾಡುವವರೆಲ್ಲರು ಈ ಕಡೆ
ಅದರ ಪ್ರಕಾರ ಶುದ್ಧವಾಗಿ ತೆಗೆದು ಹಾಕಲ್ಪಡುವರು; ಮತ್ತು ಆಣೆ
ಇಡುವವರೆಲ್ಲರು ಆ ಕಡೆ ಅದರ ಪ್ರಕಾರ ಶುದ್ಧವಾಗಿ ತೆಗೆದು ಹಾ
೪ ಕಲ್ಪಡುವರು. ನಾನು ಅದನ್ನು ಹೊರಗೆ ತರುತ್ತೇನೆಂದು ಸೈನ್ಯ
ಗಳ ಯೆಹೋವನು ಅನ್ನುತ್ತಾನೆ; ಅದು ಕಳ್ಳನ ಮನೆಯಲ್ಲಿ
ಯೂ, ನನ್ನ ಹೆಸರಿನಿಂದ ಆಣೆ ಇಡುವವನ ಮನೆಯಲ್ಲಿಯೂ,
ಪ್ರವೇಶಿಸಿ, ಅವನ ಮನೆಯ ಮಧ್ಯದಲ್ಲಿ ನಿಂತು, ಅದನ್ನೂ, ಅದ
ರ ಮರಗಳನ್ನೂ ಅದರ ಕಲ್ಲುಗಳನ್ನೂ ಮುಗಿಸಿ ಬಿಡುವದು.

೫ ಆಗ ನನ್ನ ಸಂಗಡ ಮಾತಾಡಿದ ದೂತನು ಹೊರಟು—ನಿನ್ನ
ಕಣ್ಣುಗಳನ್ನೆತ್ತಿ ಹೊರಡುವಂಥಾದ್ದು ಇದೇನೆಂದು ನೋಡಿರಂತೆ,
೬ ನನಗೆ ಹೇಳಿದನು. ನಾನು—ಇದೇನು? ಅಂದಾಗ, ಅವನು—ಇ
ದು ಹೊರಡುವಂಥ ಎಫವು, ಅಂದನು; ಮತ್ತು—ಇದೇ ಸಮಸ್ತ
೭ ದೇಶದಲ್ಲಿ ಅವರ ಆಕಾರ, ಅಂದನು. ಮತ್ತು, ಇಗೋ, ಸೀಸದ
ಮಣಿವು ಎತ್ತಲ್ಪಟ್ಟಿತು, ಮತ್ತು ಎಫದ ಮಧ್ಯದಲ್ಲಿ ಒಬ್ಬ ಸ್ತ್ರೀ
೮ ಕೂತು ಕೊಳ್ಳುತ್ತಿದ್ದಳು. ಆಗಲವನು—ಇದು ದುಷ್ಟತ್ವವು, ಎಂ
ತಂದು, ಅವಳನ್ನು ಎಫದ ಮಧ್ಯದಲ್ಲಿ ಹಾಕಿ, ಆ ಸೀಸದ ಭಾರ
ವನ್ನು ಅದರ ಬಾಯಿಯ ಮೇಲೆ ಇಟ್ಟನು.

೯ ಆಗ ನಾನು ನನ್ನ ಕಣ್ಣುಗಳನ್ನೆತ್ತಿ ನೋಡಿದಾಗ, ಇಗೋ, ಇ
ಬ್ಬರು ಸ್ತ್ರೀಯರು ಹೊರಟರು; ಮತ್ತು ಅವರ ರೆಕ್ಕೆಗಳಲ್ಲಿ ಘಾ
ಳಿ ಇತ್ತು; ಹೌದು, ಅವರ ರೆಕ್ಕೆಗಳು ಕೊಕ್ಕರೆಯ ರೆಕ್ಕೆಗಳ ಹಾ
ಗಿದ್ದವು; ಮತ್ತು ಅವರು ಎಫವನ್ನು ಆಕಾಶಕ್ಕೂ ಭೂಮಿಗೂ
೧೦ ಮಧ್ಯದಲ್ಲಿ ಎತ್ತಿದರು. ಆಗ ನಾನು ನನ್ನ ಸಂಗಡ ಮಾತಾಡಿದ
ದೂತನಿಗೆ—ಇವರು ಎಫವನ್ನು ಎಲ್ಲಿಗೆ ತಕ್ಕೊಂಡು ಹೋಗು
೧೧ ತ್ತಾರೆ? ಅಂದೆನು. ಅವನು ನನಗೆ—ಸೀನಾರ್ ದೇಶದಲ್ಲಿ ಅದಕ್ಕೆ
ಮನೆ ಕಟ್ಟುವದಕ್ಕೆ ತಕ್ಕೊಂಡು ಹೋಗುತ್ತಾರೆ; ಅಲ್ಲಿ ಅದು
ಸ್ಥಾಪಿಸಲ್ಪಟ್ಟು, ತನ್ನ ಸ್ಥಾನದಲ್ಲಿ ಇರಿಸಲ್ಪಡುವದು, ಅಂದನು.

## ೬. ಸಂಧಿ.

೧ ನಾನು ತಿರುಗಿ ಕೊಂಡು ನನ್ನ ಕಣ್ಣುಗಳನ್ನೆತ್ತಿ, ನೋಡಿದಾಗ,
ಇಗೋ ನಾಲ್ಕು ರಥಗಳು ಎರಡು ಬೆಟ್ಟಗಳ ನಡುವೆಯಿಂದ ಹೊ
ರಟು ಬಂದವು; ಆ ಬೆಟ್ಟಗಳು ಹಿತ್ತಾಳೆಯ ಬೆಟ್ಟಗಳಾಗಿದ್ದವು.
೨ ಮೊದಲನೇ ರಥಕ್ಕೆ ಕೆಂಪು ಕುದುರೆಗಳಿದ್ದವು; ಎರಡನೇ ರಥಕ್ಕೆ
೩ ಕಪ್ಪು ಕುದುರೆಗಳು; ಮೂರನೇ ರಥಕ್ಕೆ ಬಿಳಿ ಕುದುರೆಗಳು;
೪ ನಾಲ್ಕನೇ ರಥಕ್ಕೆ ಬಟ್ಟೆ ನೆರೆ ಕುದುರೆಗಳು. ಆಗ ನಾನು ಉತ್ತ
ರ ಕೊಟ್ಟು, ನನ್ನ ಸಂಗಡ ಮಾತಾಡಿದ ದೂತನಿಗೆ—ಇವೇನು?
೫ ಸ್ವಾಮಿ, ಅಂದೆನು. ದೂತನು ನನಗೆ ಉತ್ತರ ಕೊಟ್ಟು, ಹೇ
ಳಿದ್ದೇನಂದರೆ—ಇವು ಆಕಾಶಗಳ ನಾಲ್ಕು ಅತ್ಮಗಳು; ಇವು ಸಮ
ಸ್ತ ಭೂಮಿಯ ಕರ್ತನ ಮುಂದೆ ನಿಂತಲ್ಲಿಂದ ಹೊರಟು ಬಂದ
೬ ವೆ. ಆ ಕಪ್ಪು ಕುದುರೆಗಳುಳ್ಳದ್ದು ಉತ್ತರ ದೇಶಕ್ಕೆ ಹೊರಡು
ತ್ತವೆ; ಬಿಳಿಯವುಗಳು ಇವುಗಳ ಹಿಂದೆ ಹೊರಡುತ್ತವೆ; ಬಟ್ಟೆದ
೭ ವುಗಳು ದಕ್ಷಿಣ ದೇಶಕ್ಕೆ ಹೊರಡುತ್ತವೆ. ಮತ್ತು ನೆರೆಯವುಗ
ಳು ಹೊರಟು, ದೇಶದಲ್ಲಿ ಸಂಚಾರ ಮಾಡ ಹೋಗುವದಕ್ಕೆ
ನೋಡಿದವು; ಆಗಲವನು—ಹೋಗಿ, ದೇಶದಲ್ಲಿ ಸಂಚಾರ ಮಾಡಿ
ರಿ, ಅಂದನು; ಹಾಗೆ ಅವು ದೇಶದಲ್ಲಿ ಸಂಚಾರ ಮಾಡಿದವು.
೮ ಆಗಲವನು ನನಗೆ ಕೂಗಿ ಹೇಳಿದ್ದೇನಂದರೆ—ನೋಡು! ಉತ್ತರ
ದೇಶಕ್ಕೆ ಹೊರಟವುಗಳು, ಉತ್ತರ ದೇಶದಲ್ಲಿ ನನ್ನ ಅತ್ಮವನ್ನು
ಶಾಂತಿ ಪಡಿಸಿವೆ.

೯ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಯಿತು,
೧೦ ಹ್ಯಾಗಂದರೆ—ಆ ಶೆರೆಯವರಿಂದ, ಅಂದರೆ, ಬಾಬೆಲಿನಿಂದ ಬಂದಿ
ರುವ ಹೆಲ್ದಾಯನಿಂದಲೂ, ತೊಬೀಯನಿಂದಲೂ, ಯೆದಾಯನಿಂ
ದಲೂ, ತಕ್ಕೊಂಡು, ಅದೇ ದಿವಸದಲ್ಲಿ ನೀನು ಬಂದು, ಜೆಫನೀ
೧೧ ಯನ ಮಗನಾದ ಯೊಸೀಯನ ಮನೆಗೆ ಹೋಗಿ, ಬೆಳ್ಳಿ ಭಂ
ಗಾರವನ್ನು ತಕ್ಕೊಂಡು, ಕಿರೀಟಗಳನ್ನು ಮಾಡಿ, ಅವುಗಳನ್ನು
ಯೆಹೋಚದೇಕನ ಮಗನಾದ ಪ್ರಧಾನ ಯಾಜಕನಾದ ಯೆ
೧೨ ಹೋಶುವನ ತಲೆಯ ಮೇಲೆ ಇಟ್ಟು, ಅವನಿಗೆ ಹೇಳಿ ತಕ್ಕದ್ದೇ
ನಂದರೆ—ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ಇಗೋ, ಚಿಗುರೆಂದು ಹೆಸರುಳ್ಳ ಮನುಷ್ಯನು;
ಅವನು ತನ್ನ ಸ್ಥಳಗಳೊಳಗಿಂದ ಚಿಗುರುವನು;
ಅವನು ಯೆಹೋವನ ದೇವಾಲಯವನ್ನು ಕಟ್ಟುವನು.
೧೩ ಹೌದು, ಅವನು ಯೆಹೋವನ ದೇವಾಲಯವನ್ನು ಕಟ್ಟುವನು;
ಅವನು ಮಹಿಮೆಯನ್ನು ಧರಿಸುವನು;
ಮತ್ತು ಕೂತು ಕೊಂಡು, ತನ್ನ ಸಿಂಹಾಸನದಲ್ಲಿ ಆಳುವನು;
ತನ್ನ ಸಿಂಹಾಸನದಲ್ಲಿ ಯಾಜಕನಾಗಿರುವನು;
ಮತ್ತು ಸಮಾಧಾನದ ಆಲೋಚನೆ ಅವರಿಬ್ಬರೊಳಗೆ ಇರು
ವದು.

೧೪ ಮತ್ತು ಆ ಕಿರೀಟಗಳು ಹೇಲೆಮನಿಗೂ, ತೊಬೀಯನಿಗೂ,
ಯೆದಾಯನಿಗೂ, ಜೆಫನೀಯನ ಮಗನಾದ ಹೇನನಿಗೂ, ಯೆ
ಹೋವನ ದೇವಾಲಯದಲ್ಲಿ ಜ್ಞಾಪಕಾರ್ಥವಾಗಿ ಇರುವವು. ಮ
ತ್ತು ದೂರವಾದವರು ಬಂದು, ಯೆಹೋವನ ದೇವಾಲಯದಲ್ಲಿ ಕ
ಟ್ಟುವರು; ಮತ್ತು ಸೈನ್ಯಗಳ ಯೆಹೋವನು ನನ್ನನ್ನು ನಿಮ್ಮ
ಬಳಿಗೆ ಕಳುಹಿಸಿದ್ದಾನೆಂದು ತಿಳಿಯುವಿರಿ; ನೀವು ನಿಮ್ಮು ದೇವರಾ
ದ ಯೆಹೋವನ ಶಬ್ದಕ್ಕೆ ಜಾಗ್ರತೆಯಾಗಿ ಕಿವಿ ಗೊಟ್ಟರೆ ಇದಾ
ಗುವದು.

## ೭. ಸಂಧಿ.

೧ ಅರಸನಾದ ದರೀಯನ ನಾಲ್ಕನೇ ವರುಷದಲ್ಲಿ, ಅದದ್ದೇನಂ
ದರೆ—ಒಂಭತ್ತನೇ ತಿಂಗಳಾದ, ಕಿಸ್ಲೇವಿನ ನಾಲ್ಕನೇದಲ್ಲಿ, ಯೆ
೨ ಹೋವನ ವಾಕ್ಯವು ಜೆಕರೀಯನಿಗೆ ಉಂಟಾಯಿತು. ಯಾವಾ
ಗಂದರೆ, ಯೆಹೋವನ ಮುಖದ ಮುಂದೆ ಬೇಡಿ ಕೊಳ್ಳುವದಕ್ಕೂ,
೩ ಸೈನ್ಯಗಳ ಯೆಹೋವನ ಮನೆಯಲ್ಲಿದ್ದ ಯಾಜಕರ ಸಂಗಡ
ಲೂ, ಪ್ರವಾದಿಗಳ ಸಂಗಡಲೂ, ನಾನು ಮಾತಾಡಿ—ಇದ್ದ ವರು
ಷ ಮಾತಾದ ಪ್ರಕಾರ, ಐದನೇ ತಿಂಗಳಲ್ಲಿ ನನ್ನನ್ನು ಪ್ರತ್ಯೇಕಿಸಿ
ಕೊಂಡು, ಅಳಿಲೋ? ಎಂದು ಹೇಳುವದಕ್ಕೂ, ಅವರು ಶರೇಜ
ರನನ್ನೂ, ರೇಗೆಮ್ಮೆಲೆಕನನ್ನೂ ಅವರ ಮನುಷ್ಯರನ್ನೂ, ದೇ
ವರ ಮನೆಗೆ ಕಳುಹಿಸಿದಾಗಲೇ.

೪ ಆಗ ಸೈನ್ಯಗಳ ಯೆಹೋವನ ವಾಕ್ಯವು ನನಗೆ ಉಂಟಾಗಿ
೫ ಹೇಳಿದ್ದೇನಂದರೆ—ದೇಶದ ಜನಕ್ಕೆಲ್ಲರಿಗೂ, ಯಾಜಕರಿಗೂ, ಹೀ
ಗೆ ಹೇಳು—ನೀವು ಈ ಎಪ್ಪತ್ತು ವರುಷಗಳು, ಐದನೇ ಏಳನೇ
ತಿಂಗಳುಗಳಲ್ಲಿ ಉಪವಾಸ ಮಾಡಿ, ದುಃಖಿಸಿದ್ದಾಗ, ನನಗೆ ಸ್ವಲ್ಪ
೬ ವಾದರೂ ಉಪವಾಸ ಮಾಡಿದಿರೋ? ಮತ್ತು ನೀವು ಉಂಡು ಕು
೭ ಡಿದಾಗ, ನಿಮಗೆ ನೀವೇ ಉಂಡು ಕುಡಿದಿರಲ್ಲ? ಯೆರೂಸಲೇಮೂ,
ಅದರ ಸುತ್ತಿನ ಪಟ್ಟಣಗಳೂ, ನಿವಾಸಿಗಳುಳ್ಳವಾಗಿಯೂ, ಸುಖ
ವಾಗಿಯೂ, ದಕ್ಷಿಣವೂ ಬೈಲೂ ನಿವಾಸಿಗಳುಳ್ಳವುಗಳಾಗಿಯೂ,
ಇದ್ದಾಗ, ಯೆಹೋವನು ಪೂರ್ವದ ಪ್ರವಾದಿಗಳ ಕೈಯಿಂದ
ಕೂಗಿದ ಮಾತುಗಳು ಇವು ಅಲ್ಲವೋ?

೮ ಇದಲ್ಲದೆ ಯೆಹೋವನ ವಾಕ್ಯವು ಜೆಕರೀಯನಿಗೆ ಉಂಟಾ
ಗಿ ಹೇಳಿದ್ದೇನಂದರೆ—ಸೈನ್ಯಗಳ ಯೆಹೋವನು ಹೀಗೆ ಮಾ
೯ ತಾಡಿ ಹೇಳುತ್ತಾನೆ—
ನಿಜವಾದ ನ್ಯಾಯವನ್ನು ತೀರಿಸಿರಿ;
ಒಬ್ಬರಿಗೊಬ್ಬರು ಕೃಪೆಯನ್ನೂ ಕನಿಕರವನ್ನೂ ತೋರಿಸಿರಿ;
೧೦ ವೆಧವೆಗೂ, ದಿಕ್ಕಿಲ್ಲದವನಿಗೂ,
ಅನ್ಯನಿಗೂ ಬಡವನಿಗೂ ಬಲಾತ್ಕಾರ ಮಾಡ ಬೇಡಿರಿ;

ಯಾರು ತನ್ನ ಹೃದಯದಲ್ಲಿ ತನ್ನ ಸಹೋದರನ ಮೇಲೆ ಕೆಟ್ಟ
ದ್ದನ್ನು ಕಲ್ಪಿಸದೆ ಇರಲಿ.
೧೧ ಆದರೆ ಅವರು ಲಕ್ಷ್ಯ ಮಾಡಲೊಲ್ಲದೆ,
ಹಿಂಜರಿಯುವ ಹೆಗಲನ್ನು ಕೊಟ್ಟು,
ಕೇಳದ ಹಾಗೆ ತಮ್ಮ ಕಿವಿಗಳನ್ನು ಮಂದ ಮಾಡಿದರು.
೧೨ ಹೌದು, ಅವರು ನ್ಯಾಯಪ್ರಮಾಣವನ್ನೂ,
ಸೈನ್ಯಗಳ ಯೆಹೋವನು ತನ್ನ ಆತ್ಮದ ಮುಖಾಂತ್ರ,
ಪೂರ್ವದ ಪ್ರವಾದಿಗಳ ಕೈಯಿಂದ, ಕಳುಹಿಸಿದ ವಾಕ್ಯಗಳನ್ನೂ,
ಕೇಳದ ಹಾಗೆ,
ತಮ್ಮ ಹೃದಯಗಳನ್ನು ವಜ್ರದ ಕಲ್ಲಿನಂತೆ ಮಾಡಿದರು;
ಆದದರಿಂದ ಸೈನ್ಯಗಳ ಯೆಹೋವನಿಂದ ದೊಡ್ಡ ಸಿಟ್ಟು
ಆಯಿತು.
೧೩ ಆಗಲಾದದ್ದೇನಂದರೆ,
ಅವನು ಕೂಗಲು ಅವರು ಕೇಳದೆ ಇದ್ದ ಪ್ರಕಾರ,
ಅವರು ಕೂಗಲು ನಾನು ಕೇಳದೆ ಇದ್ದೆನೆಂದು,
ಸೈನ್ಯಗಳ ಯೆಹೋವನು ಹೇಳುತ್ತಾನೆ.
೧೪ ಇದಲ್ಲದೆ ಅವರು ಅರಿಯದ ಎಲ್ಲಾ ಜನಾಂಗಗಳೊಳಗೆ ಅವರನ್ನು
ಬೊಗು ಕೊಂಡೆನು;
ಅವರ ಹಿಂದೆ ದೇಶವು, ಹಾದು ಹೋಗುವವನೂ, ತಿರುಗಿಕೊಳ್ಳು
ವವನೂ ಇಲ್ಲದೆ, ಹಾಳಾಯಿತು;
ಯಾಕಂದರೆ ರಮ್ಯವಾದ ದೇಶವನ್ನು ಹಾಳಾಗ ಮಾಡಿದರು.

## ೮. ಸಂಧಿ.

೧ ಮತ್ತು ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇ
ನಂದರೆ—
೨ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ನಾನು ಚಿಯೋನಿನ ವಿಷಯ ದೊಡ್ಡ ಕೋಪದಿಂದ ಕೋಪವಾಗಿ
ದ್ದೆನು;
ಹೌದು, ದೊಡ್ಡ ಉಗ್ರದಿಂದ ಅದರ ವಿಷಯ ಕೋಪವಾಗಿದ್ದೆನು.
3 ಯೆಹೋವನು ಹೀಗೆ ಹೇಳುತ್ತಾನೆ—
ಚಿಯೋನಿನ ಬಳಿಗೆ ತಿರುಗಿ ಕೊಂಡಿದ್ದೇನೆ;
ಯೆರೂಸಲೇಮಿನ ಮಧ್ಯದಲ್ಲಿ ವಾಸಿಸುವೆನು;
ಯೆರೂಸಲೇಮು ಸತ್ಯದ ಪಟ್ಟಣವೆಂದೂ,
ಸೈನ್ಯಗಳ ಯೆಹೋವನ ಪರ್ವತವು ಪರಿಶುದ್ಧ ಪರ್ವತವೆಂದೂ,
ಕರೆಯಲ್ಪಡುವದು.
೪ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ಇನ್ನು ಯೆರೂಸಲೇಮಿನ ಬೀದಿಗಳಲ್ಲಿ ಮುದುಕರೂ ಮುದಿಕಿ
ಯರೂ ವಾಸವಾಗಿರುವರು;
ಕೇವಲ ವೃದ್ಧಾಪ್ಯದಿಂದ ಬಪ್ಪೊಬ್ಬನ ಕೈಯಲ್ಲಿ ಅವನವನ
ಕೋಲು ಇರುವದು.
೫ ಮತ್ತು ಪಟ್ಟದ ಬೀದಿಗಳು,
ಅದರ ಬೀದಿಗಳಲ್ಲಿ ಆಡುವ ಹುಡುಗ ಹುಡುಗಿಯರಿಂದ ತುಂಬಿರು
ವವು.
೬ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ಇದು ಈ ದಿವಸಗಳಲ್ಲಿ ಈ ಜನರ ಉಳಿವಿನ ಕಣ್ಣುಗಳಿಗೆ ಆಶ್ಚ
ರ್ಯವಾಗಿ ತೋರಿದರೂ,
ನನ್ನ ಕಣ್ಣುಗಳಿಗೆ ಸಹ ಆಶ್ಚರ್ಯವಾಗಿ ತೋರುವದೋ?
ಎಂದು ಸೈನ್ಯಗಳ ಯೆಹೋವನು ಅನ್ನುತ್ತಾನೆ.
೭ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ಇಗೋ ನಾನು ನನ್ನ ಜನರನ್ನು ಸೂರ್ಯ ಉದಯಿಸುವ ದೇ
ಶದಿಂದಲೂ, ಅಸ್ತಮಿಸುವ ದೇಶದಿಂದಲೂ, ರಕ್ಷಿಸುವೆನು.
೮ ಮತ್ತು ಅವರನ್ನು ತರುವೆನು;
ಅವರು ಯೆರೂಸಲೇಮಿನ ಮಧ್ಯದಲ್ಲಿ ವಾಸಿಸುವರು;
ಅವರು ನನ್ನ ಜನರಾಗಿರುವರು;
ನಾನು, ಸತ್ಯದಲ್ಲಿಯೂ, ನೀತಿಯಲ್ಲಿಯೂ, ಅವರ ದೇವರಾಗಿ
ರುವೆನು.

೯ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ದೇವಾಲಯವನ್ನು ಕಟ್ಟುವ ಹಾಗೆ,
ಸೈನ್ಯಗಳ ಯೆಹೋವನ ಮನೆಯ ಅಸ್ತಿವಾರ ಹಾಕಲ್ಪಟ್ಟ ದಿವಸ
ದಲ್ಲಿದ್ದ,
ಪ್ರವಾದಿಗಳ ಬಾಯಿಯಿಂದಾದ ಈ ವಾಕ್ಯಗಳನ್ನು ಈ ದಿವಸಗ
ಳಲ್ಲಿ ಕೇಳುವವರೇ!
ನಿಮ್ಮ ಕೈಗಳು ಬಲವಾಗಿರಲಿ.
೧೦ ಯಾಕಂದರೆ ಈ ದಿವಸಗಳಿಗೆ ಮುಂಚೆ
ಮನುಷ್ಯನಿಗೆ ಕೂಲಿ ಇರಲಿಲ್ಲ, ಪಶುಗಳಿಗೆ ಕೂಲಿ ಇರಲಿಲ್ಲ;
ಮತ್ತು ಹೋಗುವವನಿಗೂ ಬರುವವನಿಗೂ ಇಕ್ಕಟ್ಟಿನ ದೆಸೆಯಿಂದ
ಸಮಾಧಾನವಿರಲಿಲ್ಲ;
ಹೌದು, ನಾನು ಜನರೆಲ್ಲರನ್ನು ಒಬ್ಬರ ಮೇಲೊಬ್ಬರು ಇ
ಟ್ಟೆನು.
೧೧ ಆದರೆ ಈಗ ಈ ಜನರ ಉಳಿವಿಗೆ
ನಾನು ಪೂರ್ವದ ದಿವಸಗಳಲ್ಲಿದ್ದ ಹಾಗೆ, ಇರುವದಿಲ್ಲವೆಂದು,
ಸೈನ್ಯಗಳ ಯೆಹೋವನು ಅನ್ನುತ್ತಾನೆ.
೧೨ ಯಾಕಂದರೆ ಬೀಜವು ಬಾಳುವದು;
ದ್ರಾಕ್ಷೆ ಬಳ್ಳಿ ತನ್ನ ಫಲವನ್ನು ಕೊಡುವದು;
ಭೂಮಿಯು ತನ್ನ ಹುಟ್ಟುವಳಿಯನ್ನು ಕೊಡುವದು;
ಆಕಾಶಗಳು ತಮ್ಮ ಮಂಜನ್ನು ಕೊಡುವವು;
ಈ ಜನರ ಉಳಿವನ್ನು ಇವುಗಳನ್ನೆಲ್ಲಾ ಸ್ವತಂತ್ರಿಸಿ ಕೊಳ್ಳ
ಮಾಡುವೆನು.
೧೩ ಮತ್ತು ಆಗುವದೇನಂದರೆ,
ಓ ಯೆಹೂದನ ಮನೆಯವರೇ! ಇಸ್ರಯೇಲಿನ ಮನೆಯವರೇ!
ನೀವು ಜನಾಂಗಗಳಲ್ಲಿ ಶಾಪವಾಗಿದ್ದ ಪ್ರಕಾರ,
ನಾನು ನಿಮ್ಮನ್ನು ರಕ್ಷಿಸುವೆನು,
ಮತ್ತು ನೀವು ಆಶೀರ್ವಾದವಾಗಿರುವಿರಿ;
ಭಯ ಪಡ ಬೇಡಿರಿ, ನಿಮ್ಮ ಕೈಗಳು ಬಲವಾಗಿರಲಿ.
೧೪ ಯಾಕಂದರೆ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ನಿಮ್ಮ ಪಿತೃಗಳು ನನಗೆ ಸಿಟ್ಟು ಎಬ್ಬಿಸಿದಾಗ,
ನಾನು ನಿಮಗೆ ಕೇಡನ್ನು ಮಾಡ ಯೋಚಿಸಿ,
ನಾನು ಪಶ್ಚಾತ್ತಾಪ ಪಡದೆ ಇದ್ದ ಪ್ರಕಾರವೇ,
೧೫ ನಾನು ತಿರುಗಿ ಕೊಂಡು,
ಈ ದಿವಸಗಳಲ್ಲಿ ಯೆರೂಸಲೇಮಿಗೂ ಯೆಹೂದನ ಮನೆಯವ
ರಿಗೂ ಒಳ್ಳೇದನ್ನು ಮಾಡ ಯೋಚಿಸಿದ್ದೇನೆ.



ಭಯ ಪಡ ಬೇಡಿರಿ,
ಎಂದು ಸೈನ್ಯಗಳ ಯೆಹೋವನು ಹೇಳುತ್ತಾನೆ.
೧೬ ನೀವು ಮಾಡ ತಕ್ಕ ಕಾರ್ಯಗಳು ಇವೇ—
ಒಬ್ಬರ ಸಂಗಡಲೊಬ್ಬರು ಸತ್ಯವನ್ನು ಮಾತಾಡಿರಿ;
ನಿಜವಾದ, ಸಮಾಧಾನಕರವಾದ, ನ್ಯಾಯ ತೀರ್ಪಿಕೆಯನ್ನು
ನಿಮ್ಮ ಬಾಗಲುಗಳಲ್ಲಿ ತೀರಿಸಿರಿ.
೧೭ ಒಬ್ಬರ ಮೇಲೊಬ್ಬರು ನಿಮ್ಮ ಹೃದಯಗಳಲ್ಲಿ ಕೇಡನ್ನು
ಯೋಚಿಸದಿರ್ರಿ;
ಸುಳ್ಳು ಪ್ರಮಾಣವನ್ನು ಪ್ರೀತಿ ಮಾಡದಿರ್ರಿ;
ಯಾಕಂದರೆ ಇವುಗಳೆಲ್ಲಾ ನಾನು ಹಗೆ ಮಾಡುವಂಥವುಗಳೇ,
ಎಂದು ಯೆಹೋವನು ಅನ್ನುತ್ತಾನೆ.

೧೮ ಇದಲ್ಲದೆ ಯೆಹೋವನ ವಾಕ್ಯವು ನನಗೆ ಉಂಟಾಗಿ ಹೇಳಿದ್ದೇ
೧೯ ನಂದರೆ—ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—ನಾಲ್ಕ
ನೇ ತಿಂಗಳಿನ ಉಪವಾಸವು, ಐದನೇದರದು, ಏಳನೇದರದು, ಹತ್ತ
ನೇದರದು, ಯೆಹೂದನ ಮನೆಯವರಿಗೆ ಸಂತೋಷವೂ ಸಂಭ್ರ
ಮವೂ ಆನಂದವಾದ ಹಬ್ಬಗಳೂ ಆಗುವವು: ಆದರೆ ಸತ್ಯವ
ನ್ನೂ ಸಮಾಧಾನವನ್ನೂ ಪ್ರೀತಿ ಮಾಡಿರಿ.

೨೦ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—
ಜನಗಳೂ, ಅನೇಕ ಪಟ್ಟಣಗಳ ನಿವಾಸಿಗಳೂ, ಇನ್ನು ಬರುವರು;
೨೧ ಮತ್ತು ಒಂದರ ನಿವಾಸಿಗಳು ಮತ್ತೊಂದಕ್ಕೆ ಹೋಗಿ—
ನಾವು ಯೆಹೋವನ ಮುಂದೆ ಬೇಡಿ ಕೊಳ್ಳುವದಕ್ಕೂ,
ಸೈನ್ಯಗಳ ಯೆಹೋವನನ್ನು ಹುಡುಕುವದಕ್ಕೂ,
ಬೇಗ ಹೋಗೋಣ;
ನಾನು ಕೂಡ ಹೋಗುತ್ತೇನೆ,
ಎಂದು ಹೇಳುವರು.
೨೨ ಹೌದು, ಅನೇಕ ಜನಗಳೂ, ಬಲವಾದ ಜನಾಂಗಗಳೂ,
ಸೈನ್ಯಗಳ ಯೆಹೋವನನ್ನು ಯೆರೂಸಲೇಮಿನಲ್ಲಿ ಹುಡುಕು
ವದಕ್ಕೂ,
ಯೆಹೋವನ ಮುಂದೆ ಬೇಡಿ ಕೊಳ್ಳುವದಕ್ಕೂ, ಬರುವವು.

೨೩ ಸೈನ್ಯಗಳ ಯೆಹೋವನು ಹೀಗೆ ಹೇಳುತ್ತಾನೆ—ಆ ದಿವಸಗ
ಳಲ್ಲಿ, ಜನಾಂಗಗಳ ಸಮಸ್ತ ಭಾಷೆಯವರೊಳಗಿಂದ ಹತ್ತು ಮ
ನುಷ್ಯರು ಯೆಹೂದ್ಯನಾಗಿರುವವನ ಶರಗನ್ನು ಹಿಡಿದು—ನಿಮ್ಮ
ಸಂಗಡ ಹೋಗುತ್ತೇವೆ; ಯಾಕಂದರೆ ನಿಮ್ಮ ಸಂಗಡ ದೇವರು
ಇದ್ದಾನೆಂದು, ಕೇಳಿದ್ದೇವೆಂದು ಹೇಳುವರು.

## ೯. ಸಂಧಿ.

೧ ಹದ್ರಾಕಿನ ದೇಶದ ವಿಷಯವಾದ ಯೆಹೋವನ ವಾಕ್ಯದ
ಭಾರವು;
ಅದು ದಮಸ್ಕದಲ್ಲಿ ತಂಗುವದು;
ಯಾವಾಗಂದರೆ, ಮನುಷ್ಯನ ಕಣ್ಣೂ,
ಇಸ್ರಯೇಲಿನ ಎಲ್ಲಾ ಕುಲಗಳದೂ,
ಯೆಹೋವನ ಕಡೆಗೆ ಇರುವಾಗಲೇ.
೨ ಮತ್ತು ಹಾಮಾತು ಅದರ ಹತ್ತಿರವಾಗಿದೆ;
ಬಹಳ ಜ್ಞಾನವಿದ್ದರೂ ತೂರು ಚಿಯೋನು ಸಹ.
3 ತೂರು ತನಗಾಗಿ ಕೋಟೆಯನ್ನು ಕಟ್ಟಿ ಕೊಂಡು,
ಬೆಳ್ಳಿಯನ್ನು ದೂಳಿನಂತೆ,
ಚಿನ್ನವನ್ನು ಬೀದಿಗಳ ಕೆಸರಿನಂತೆ, ಕೂಡಿಸಿ ಕೊಂಡಿತು.
೪ ಇಗೋ, ಯೆಹೋವ ಅದನ್ನು ಹೊರಗೆ ಹಾಕುವನು;
ಸಮುದ್ರದಲ್ಲಿ ಅದರ ಬಲವನ್ನು ಹೊಡಿಯುವನು;
ಅದು ಬೆಂಕಿಯಿಂದ ದಹಿಸಲ್ಪಡುವದು.
೫ ಅಷ್ಕಲೋನು ನೋಡಿ ಭಯ ಪಡುವದು;
ಗಾಜವು ಸಹ, ಮತ್ತು ಬಹಳವಾಗಿ ವೇದನೆ ಪಡುವದು;
ಎಕ್ರೋನು ಸಹ, ಯಾಕಂದರೆ ಅದರ ನಂಬಿಕೆ ಅದನ್ನು ನಾ
ಚಿಕೆ ಪಡಿಸಿತು;
ಮತ್ತು ಗಾಜದೊಳಗಿಂದ ಅರಸನು ನಾಶವಾಗುವನು;
ಅಷ್ಕಲೋನು ನಿವಾಸಿಯಿಲ್ಲದೆ ಇರುವದು.
೬ ಅಷ್ಡೋದಿನಲ್ಲಿ ಅನ್ಯನು ವಾಸಿಸುವನು;
ಮತ್ತು ಪಿಲಿಷ್ಟಿಯರ ಗರ್ವವನ್ನು ಕಡಿದು ಬಿಡುವೆನು;
೭ ಅವನ ರಕ್ತವನ್ನು ಅವನ ಬಾಯಿಯೊಳಗಿಂದಲೂ,
ಅವನ ಅಸಹ್ಯಗಳನ್ನು ಅವನ ಹಲ್ಲುಗಳ ನಡುವೆಯಿಂದಲೂ,
ತೆಗೆದು ಹಾಕುವೆನು;
ಅವನು ಸಹ ನಮ್ಮ ದೇವರಿಗೆ ಉಳಿಯುವನು;
ಯೆಹೂದದಲ್ಲಿ ಪ್ರಭುವಿನ ಹಾಗೆ ಇರುವನು;
ಮತ್ತು ಎಕ್ರೋನು ಯೆಬೂಸ್ಯನ ಹಾಗೆ ಇರುವದು.
೮ ಇದಲ್ಲದೆ ಹೋಗುತ್ತಾ ಬರುತ್ತಾ ಇರುವವನ ನಿಮಿತ್ತವೂ,
ಸೈನ್ಯದ ನಿಮಿತ್ತವೂ,
ನನ್ನ ಮನೆಯ ಹತ್ತಿರ ದಂಡಿಳಿಯುತ್ತೇನೆ;
ಇನ್ನು ಮೇಲೆ ಉಪದ್ರ ಕೊಡುವವನು,
ಅವರ ಮೇಲೆ ಹಾದು ಹೋಗುವದಿಲ್ಲ;
ಯಾಕಂದರೆ ಈಗ ನನ್ನ ಕಣ್ಣುಗಳಿಂದ ನೋಡಿದ್ದೇನೆ.

೯ ಚಿಯೋನಿನ ಕುಮಾರ್ತೆಯೇ! ಬಹಳವಾಗಿ ಉಲ್ಲಾಸ ಪಡು;
ಯೆರೂಸಲೇಮಿನ ಕುಮಾರ್ತೆಯೇ! ಆರ್ಭಟಿಸು;
ಇಗೋ ನಿನ್ನ ಅರಸನು ನಿನ್ನ ಬಳಿಗೆ ಬರುತ್ತಾನೆ;
ಅವನು ನೀತಿವಂತನೂ, ರಕ್ಷಿಸುವವನೂ;
ದೀನನಾಗಿಯೂ,
ಕತ್ತೆಯ ಮೇಲೆಯೂ, ಹೌದು, ಕತ್ತೆಯ ಮರಿಯ ಮೇಲೆಯೂ,
ಹತ್ತಿದವನಾಗಿಯೂ, ಇದ್ದಾನೆ.
೧೦ ಇದಲ್ಲದೆ ಎಫ್ರಾಯಿಮಿನೊಳಗಿಂದ ರಥಗಳನ್ನೂ,
ಯೆರೂಸಲೇಮಿನೊಳಗಿಂದ ಕುದುರೆಗಳನ್ನೂ,
ಕಡಿದು ಬಿಡುವೆನು;
ಯುದ್ಧದ ಬಿಲ್ಲು ಸಹ ಕಡಿದು ಬಿಡಲ್ಪಡುವದು;
ಮತ್ತು ಅವನು ಜನಾಂಗಗಳಿಗೆ ಸಮಾಧಾನವನ್ನು ಹೇಳುವನು;
ಅವನ ದೊರೆತನವು ಸಮುದ್ರದಿಂದ ಸಮುದ್ರಕ್ಕೂ,
ನದಿಯಿಂದ ಭೂಮಿಯ ಅಂತ್ಯಗಳ ಮಟ್ಟಿಗೂ, ಇರುವದು.
೧೧ ಮತ್ತು ನಿನ್ನ ವಿಷಯವೋ—
ನಿನ್ನ ಒಡಂಬಡಿಕೆಯ ರಕ್ತದಿಂದ,
ನಿನ್ನ ಶೆಕೆಯವರನ್ನು ನೀರಿಲ್ಲದ ಕೂಪೆಯೊಳಗಿಂದ ಕಳುಹಿಸಿ
ಬಿಡುತ್ತೇನೆ.

೧೨ ದುರ್ಗಸ್ಥಾನಕ್ಕೆ ತಿರುಗಿರಿ, ನಿರೀಕ್ಷೆಯ ಕೆದೆಯವರೇ!
ಎರಡಮ್ಮು ಕೊಡುವೆನೆಂದು ಈ ಹೊತ್ತೇ ತಿಳಿಸುತ್ತೇನೆ.
೧೩ ಯಾಕಂದರೆ ಯೆಹೂದವನ್ನು ನನಗೆ ಬಿಲ್ಲಾಗಿ ಬೊಗ್ಗಿಸಿದ್ದೇನೆ,
ಎಫ್ರಾಯೀಮನ್ನು ಬಾಣವಾಗಿ ತುಂಬಿಸಿದ್ದೇನೆ;
ಮತ್ತು, ಚಿಯೋನೇ! ನಿನ್ನ ಕುಮಾರರನ್ನು,
ಗ್ರೀಕವೇ! ನಿನ್ನ ಕುಮಾರರಿಗೆ ವಿರೋಧವಾಗಿ ಎಬ್ಬಿಸಿದ್ದೇನೆ;
ಮತ್ತು ನಿನ್ನನ್ನು ಶೂರನ ಕತ್ತಿಯಂತೆ ಮಾಡಿದ್ದೇನೆ.
೧೪ ಇದಲ್ಲದೆ ಯೆಹೋವನು ಅವರಿಗಾಗಿ ಕಾಣಿಸಿ ಕೊಳ್ಳುವನು;
ಅವನ ಬಾಣಗಳು ಮಿಂಜಿನ ಹಾಗೆ ಹೊರಡುವವು;
ಹೌದು, ಕರ್ತನಾದ ಯೆಹೋವನು ತುತೂರಿಯನ್ನು ಊದಿ,
ದಕ್ಷಿಣದ ಸುಳಿಗಾಳಿಯಲ್ಲಿ ನಡಿದು ಹೋಗುವನು.
೧೫ ಸೈನ್ಯಗಳ ಯೆಹೋವನು ಅವರನ್ನು ಕಾಪಾಡುವನು;
ಅವರು ಉಂಡು, ಕವಣೆ ಕಲ್ಲುಗಳನ್ನು ತುಳಿದು ಬಿಡುವರು;
ಕುಡಿದು, ದ್ರಾಕ್ಷೆರಸದಿಂದಾದ ಹಾಗೆ ಗುಲ್ಲು ಮಾಡುವರು;
ಪಾತ್ರೆಯ ಹಾಗೆಯೂ, ಬಲಿಪೀಠದ ಮೂಲೆಗಳ ಹಾಗೆಯೂ,
ತುಂಬಿರುವರು.
೧೬ ಇದಲ್ಲದೆ ಅವರ ದೇವರಾದ ಯೆಹೋವನು,
ಆ ದಿವಸದಲ್ಲಿ ಅವರನ್ನು ತನ್ನ ಜನರ ಮಂದೆಯ ಹಾಗೆ ರಕ್ಷಿಸುವನು;
ಯಾಕಂದರೆ ಅವರು ಕೀರೀಟದ ಕಲ್ಲುಗಳಂತೆ,
ಅವನ ದೇಶದ ಮೇಲೆ ಧ್ವಜವಾಗಿ ಎತ್ತಲ್ಪಡುವರು.
೧೭ ಯಾಕಂದರೆ ಅವನ ಒಳ್ಳೇತನವು ಎಷ್ಟೋ!
ಅವನ ಸೌಂದರ್ಯವು ಎಷ್ಟೋ!
ಧಾನ್ಯವು ಯೌವ್ವನಸ್ಥರನ್ನೂ,
ದ್ರಾಕ್ಷೆರಸವು ಕನ್ಯಾ ಸ್ತ್ರೀಯರನ್ನೂ, ಬೆಳಿಯ ಮಾಡುವದು.

## ೧೦. ಸಂಧಿ.

೧ ಯೆಹೋವನಿಂದ ಹಿಂಗಾರೆಯ ಕಾಲದಲ್ಲಿ ಮಳೆಯನ್ನು ಕೇಳಿರಿ;
ಯೆಹೋವನು ಶಿಡಿಲುಗಳನ್ನು ಉಂಟು ಮಾಡಿ,
ಅವರಿಗೆ ಜಡಿಮಳೆಯನ್ನೂ,
ಒಬ್ಬೊಬ್ಬನಿಗೆ ಹೊಲದಲ್ಲಿ ಹುಲ್ಲನ್ನು ಕೊಡುವನು.
೨ ಯಾಕಂದರೆ ಬೊಂಬೆಗಳು ಮಾಯೆಯನ್ನು ಮಾತಾಡಿವೆ;
ಶಕುನಗಾರರು ಸುಳ್ಳನ್ನು ನೋಡಿದ್ದಾರೆ;
ಮೋಸವಾದ ಕನಸುಗಳನ್ನು ತಿಳಿಸಿದ್ದಾರೆ;
ವ್ಯರ್ಥವಾಗಿ ಆದರಿಸುತ್ತಾರೆ;
ಆದದರಿಂದ ಮಂದೆಯ ಹಾಗೆ ಅಲೆದಿದ್ದಾರೆ;
ಕುರುಬನಿಲ್ಲದ ಕಾರಣ ಕುಗ್ಗಿ ಹೋಗಿದ್ದಾರೆ.
3 ಕುರುಬರ ಮೇಲೆ ನನ್ನ ಕೋಪವು ಹೊತ್ತಿತು;
ಮೇಕೆಗಳನ್ನು ದಂಡಿಸಿದೆನು;
ಯಾಕಂದರೆ ಸೈನ್ಯಗಳ ಯೆಹೋವನು,
ತನ್ನ ಮಂದೆಯಾಗಿರುವ ಯೆಹೋವನ ಮನೆಯವರನ್ನು ದರ್ಶಿಸಿ,
ಅವರನ್ನು ಯುದ್ಧದಲ್ಲಿ ತನ್ನ ಗಂಭೀರವಾದ ಕುದುರೆಯ ಹಾಗೆ ಮಾಡಿದ್ದಾನೆ.
೪ ಅವನಿಂದ ಮೂಲೆ ಕಲ್ಲೂ,
ಅವನಿಂದ ಗೂಟವು,
ಅವನಿಂದ ಯುದ್ಧದ ಬಿಲ್ಲೂ,
ಅವನಿಂದ ಆಳುವವಕೆಲ್ಲರೂ ಕೂಡ, ಹೊರಡುತ್ತಾರೆ.
೫ ಅವರು ಯುದ್ಧದಲ್ಲಿ ಶತ್ರುವನ್ನು
ಬೀದಿಗಳ ಕೆಸರಿನಲ್ಲಿ ತುಳಿಯುವ ಶೂರರ ಹಾಗಿರುವರು;
ಯೆಹೋವನು ಅವರ ಸಂಗಡ ಇರುವದರಿಂದ ಯುದ್ಧ ಮಾಡುವರು;
ಕುದುರೆಗಳ ಮೇಲೆ ಸವಾರಿ ಮಾಡುವವರನ್ನು ನಾಚಿಕೆ ಪಡಿಸುವರು.
೬ ಇದಲ್ಲದೆ ನಾನು ಯೆಹೂದನ ಮನೆಯವರನ್ನು ಬಲ ಪಡಿಸುವೆನು,
ಯೋಸೇಫನ ಮನೆಯವರನ್ನು ರಕ್ಷಿಸುವೆನು;
ಅವರನ್ನು ಕನಿಕರಿಸುವದರಿಂದ ಅವರನ್ನು ನಿವಾಸಿಸ ಮಾಡುವೆನು;
ಮತ್ತು ನಾನು ಅವರನ್ನು ತಳ್ಳಿ ಬಿಡದೆ ಇದ್ದ ಹಾಗೆ ಇರುವರು;
ಯಾಕಂದರೆ ನಾನು ಅವರ ದೇವರಾದ ಯೆಹೋವನಾಗಿದ್ದು,
ಅವರಿಗೆ ಉತ್ತರ ಕೊಡುವೆನು.
೭ ಎಫ್ರಾಯೀಮಿನವರು ಶೂರನಂತೆ ಇರುವರು;
ಅವರ ಹೃದಯವು ದ್ರಾಕ್ಷೆರಸದಿಂದಾದ ಹಾಗೆ ಸಂತೋಷ ಪಡುವದು;
ಅವರ ಮಕ್ಕಳು ನೋಡಿ, ಸಂತೋಷಿಸುವರು;
ಅವರ ಹೃದಯವು ಯೆಹೋವನಲ್ಲಿ ಉಲ್ಲಾಸ ಪಡುವದು.
೮ ನಾನು ಅವರಿಗೆ ಶಿಳ್ಳಿಟ್ಟು ಅವರನ್ನು ಕೂಡಿಸುವೆನು;
ಯಾಕಂದರೆ ಅವರನ್ನು ವಿಮೋಚಿಸಿದ್ದೇನೆ;
ಮತ್ತು ಅವರು ಹೆಚ್ಚಿದ ಹಾಗೆ ಹೆಚ್ಚುವರು.
೯ ನಾನು ಅವರನ್ನು ಜನಾಂಗಗಳಲ್ಲಿ ಬಿತ್ತುವೆನು;
ದೂರ ದೇಶಗಳಲ್ಲಿ ನನ್ನನ್ನು ಜ್ಞಾಪಕ ಮಾಡುವರು;
ತಮ್ಮ ಮಕ್ಕಳ ಸಂಗಡ ಬದುಕಿ, ತಿರುಗಿ ಕೊಳ್ಳುವರು.
೧೦ ಐಗುಪ್ತ ದೇಶದೊಳಗಿಂದ ಅವರನ್ನು ತಿರಿಗಿ ತರುವೆನು;
ಅಶ್ಶೂರಿನೊಳಗಿಂದ ಅವರನ್ನು ಕೂಡಿಸುವೆನು;
ಗಿಲ್ಯಾದಿನ, ಲೆಬನೋನಿನ, ದೇಶಕ್ಕೆ, ಅವರನ್ನು ತರುವೆನು;
ಅವರಿಗೆ ಸ್ಥಳ ಸಾಲದೆ ಇರುವದು.
೧೧ ಮತ್ತು ಅವನು ಸಮುದ್ರವನ್ನು ಕಷ್ಟದಿಂದ ದಾಟುವನು;
ಸಮುದ್ರದಲ್ಲಿ ಶೆಕೆಗಳನ್ನು ಬಡಿಯುವನು;
ನದಿಯ ಅಗಾಧಗಳೆಲ್ಲಾ ಬಣಗುವವು,
ಅಶ್ಶೂರಿನ ಗರ್ವವು ತಗ್ಗಿಸಲ್ಪಡುವದು;
ಐಗುಪ್ತದ ಮುದ್ರೆಕೋಲು ಹೋಗಿ ಬಿಡುವದು.
೧೨ ಮತ್ತು ಯೆಹೋವನಲ್ಲಿ ಅವರನ್ನು ಬಲ ಪಡಿಸುವೆನು;
ಅವನ ಹೆಸರಿನಲ್ಲಿ ನಡೆಯುವರೆಂದು,
ಯೆಹೋವನು ಅನ್ನುತ್ತಾನೆ.

## ೧೧. ಸಂಧಿ.

೧ ಲೆಬನೋನೇ!
ಬೆಂಕಿ ನಿನ್ನ ದೇವದಾರುಗಳನ್ನು ಸುಡುವ ಹಾಗೆ,
ನಿನ್ನ ಬಾಗಲುಗಳನ್ನು ತೆರಿ.



೨ ಶೂರಾಯಿ ಗಿಡವೇ! ಹುಯಿಲಿಡು, ಯಾಕಂದರೆ ದೇವದಾರು ಬಿತ್ತು;
ಯಾಕಂದರೆ ಶ್ರೇಷ್ಟವಾದವುಗಳು ಹಾಳಾದವು;
ಬಾಶಾನಿನ ವೃಕ್ಷರಾಜಗಳೇ! ಹುಯಿಲಿಡಿರಿ,
ಯಾಕಂದರೆ ಕೋಟೆಯುಳ್ಳ ಅಡವಿ ಇಳಿದು ಹೋಯಿತು.
3 ಕುರುಬರು ಹುಯಿಲಿಡುವ ಶಬ್ದವುಂಟು;
ಯಾಕಂದರೆ ಅವರ ಮಹಿಮೆ ಕೆಡಿಸಲ್ಪಟ್ಟಿದೆ;
ಎಳೇ ಸಿಂಹಗಳು ಗರ್ಜಿಸುವ ಶಬ್ದವುಂಟು;
ಯಾಕಂದರೆ ಯೊರ್ದನಿನ ಗರ್ವ ಕೆಡಿಸಲ್ಪಟ್ಟಿದೆ.
೪ ನನ್ನ ದೇವರಾದ ಯೆಹೋವನು ಹೀಗೆ ಹೇಳುತ್ತಾನೆ—
ಕೊಲೆಯ ಕುರಿಗಳನ್ನು ಮೇಯಿಸು.
೫ ಅವುಗಳನ್ನು ಸಂಪಾದಿಸಿದವರು ಅವುಗಳನ್ನು ಕೊಂದು,
ತಮ್ಮನ್ನು ನಿರಪರಾಧಿಗಳೆಂದೆಣಿಸುತ್ತಾರೆ;
ಅವುಗಳನ್ನು ಮಾರುವವರು—
ನಾನು ಐಶ್ವರ್ಯವಂತನಾದೆನು, ಯೆಹೋವನಿಗೆ ಸ್ತೋತ್ರವೆಂದನ್ನುತ್ತಾರೆ;
ಮತ್ತು ಸ್ವಂತ ಕುರುಬರು ಅವುಗಳನ್ನು ಕನಿಕರಿಸುವದಿಲ್ಲ.
೬ ಯಾಕಂದರೆ ನಾನು ದೇಶದ ನಿವಾಸಿಗಳನ್ನು ಇನ್ನು ಕನಿಕರಿಸೆನೆಂದು ಯೆಹೋವನು ಅನ್ನುತ್ತಾನೆ;
ಆದರೆ ಇಗೋ ನಾನು ಒಬ್ಬೊಬ್ಬನನ್ನು ತನ್ನ ತನ್ನ ನೆಕೆಯವನ ಕೈಯಲ್ಲಿಯೂ,
ತನ್ನ ಅರಸನ ಕೈಯಲ್ಲಿಯೂ, ಒಪ್ಪಿಸುವೆನು;
ಅವರು ದೇಶವನ್ನು ಹೊಡಿಯುವರು,
ಮತ್ತು ಅವರ ಕೈಯೊಳಗಿಂದ ನಾನು ತಪ್ಪಿಸುವದಿಲ್ಲ.
೭ ಆಗ ಕೊಲೆಯ ಕುರಿಗಳನ್ನು, ಹೌದು, ಬಡವಾದ ಕುರಿಗಳನ್ನೇ, ಮೇಯಿಸಿದೆನು; ಮತ್ತು ನನಗೆ ಎರಡು ಕೋಲುಗಳನ್ನು ತಕ್ಕೊಂಡೆನು; ಒಂದಕ್ಕೆ ಕೃಪೆ ಎಂದೂ, ಮತ್ತೊಂದಕ್ಕೆ ಬಂಧಗಳೆಂದೂ, ಹೆಸರಿಟ್ಟೆನು; ಹೀಗೆ ಕುರಿಗಳನ್ನು ಮೇಯಿಸಿದೆನು.
೮ ಇದಲ್ಲದೆ ಒಂದೇ ತಿಂಗಳಲ್ಲಿ ಮೂರು ಕುರುಬರನ್ನು ತೆಗೆದು ಹಾಕಿದೆನು; ನನ್ನ ಆತ್ಮವು ಅವರನ್ನು ಅಸಹಿಸಿತು; ಅವರ ಆತ್ಮವು ಸಹ ನನ್ನನ್ನು ಹೇಸಿ ಕೊಂಡಿತು. ಆಗ ನಾನು ಹೇಳಿದ್ದೇನಂದರೆ—ನಾನು ನಿಮ್ಮನ್ನು ಮೇಯಿಸುವದಿಲ್ಲ; ಸಾಯುವಂಥಾದ್ದು ಸಾಯಲಿ; ಕೆಡುವಂಥಾದ್ದು ಕೆಡಲಿ; ಮಿಕ್ಕಾದವುಗಳು ಒಂದರ ಮಾಂಸ ಒಂದು ತಿನ್ನಲಿ.
೯ ಆಗ ಕೃಪೆ ಎಂಬ ನನ್ನ ಕೋಲನ್ನು ತಕ್ಕೊಂಡು ಅದನ್ನು ಮುರಿದು ಬಿಟ್ಟೆನು; ಹೀಗೆ ಜನರೆಲ್ಲರ ಸಂಗಡ ನಾನು ಮಾಡಿ ಇದ್ದ ನನ್ನ ಒಡಂಬಡಿಕೆಯನ್ನು ಇಲ್ಲವಾಗ ಮಾಡಿದೆನು. ಅದೇ ದಿವಸದಲ್ಲಿ ಇಲ್ಲವಾಯಿತು; ಆಗ ನನ್ನಲ್ಲಿ ಲಕ್ಷ್ಯವಿಟ್ಟ ಬಡ ಕುರಿಗಳು, ಅದು ಯೆಹೋವನ ವಾಕ್ಯವೆಂದು ತಿಳಿದು ಕೊಂಡರು.
೧೦ ಆಗ ನಾನು ಅವರಿಗೆ—ನಿಮ್ಮ ಕಣ್ಣುಗಳಲ್ಲಿ ಒಳ್ಳೇದಾಗಿ ತೋರಿದರೆ, ನನ್ನ ಸಂಬಳವನ್ನು ಕೊಡಿರಿ, ಇಲ್ಲದಿದ್ದರೆ, ಬಿಡಿರಿ, ಅಂದೆನು; ಆಗ ಅವರು ನನ್ನ ಸಂಬಳಕ್ಕಾಗಿ ಮುವ್ವತ್ತು ರೂಪಾಯಿಗಳನ್ನು ತೂಕ ಮಾಡಿದರು.
೧೧ ಆಗ ಯೆಹೋವನು ನನಗೆ—ಅದನ್ನು ಕುಂಬಾರನಿಗೆ ಹಾಕು; ನಾನು ಅವರಿಂದ ಬೆಲೆ ಮಾಡಲ್ಪಟ್ಟದ್ದು ಅತಿಶಯವಾದ ಬೆಲೆ ಅಲ್ಲವೋ? ಅಂದನು; ಆಗ ನಾನು ಆ ಮುವ್ವತ್ತು ರೂಪಾಯಿಗಳನ್ನು ತಕ್ಕೊಂಡು, ಯೆಹೋವನ ಮನೆಯಲ್ಲಿ ಕುಂಬಾರನಿಗೆ ಹಾಕಿದೆನು.
೧೪ ಆಗ ನನ್ನ ಎರಡನೇ ಕೋಲಾದ ಬಂಧಗಳನ್ನು ಮುರಿದು ಬಿಟ್ಟೆನು; ಹೀಗೆ ಯೆಹೂದಕ್ಕೂ ಇಸ್ರಯೇಲಿಗೂ ಇರುವ ಸಹೋದರತನವನ್ನು ಇಲ್ಲವಾಗ ಮಾಡಿದೆನು.
೧೫ ಇದಲ್ಲದೆ ಯೆಹೋವನು ನನಗೆ ಹೇಳಿದ್ದೇನಂದರೆ—ಇನ್ನು
೧೬ ಬುದ್ಧಿಹೀನವಾದ ಕುರುಬನ ಆಯುಧಗಳನ್ನು ತಕ್ಕೋ. ಯಾಕಂದರೆ, ಇಗೋ, ನಾನು ದೇಶದಲ್ಲಿ ಒಬ್ಬ ಕುರುಬನನ್ನು ಎಬ್ಬಿಸುವೆನು; ಅವನು ಕೆಟ್ಟು ಹೋಗುವವುಗಳನ್ನು ವಿಚಾರಿಸುವದಿಲ್ಲ; ಮರಿಯನ್ನು ಅವನು ಹುಡುಕುವದಿಲ್ಲ; ಮುರಿದದ್ದನ್ನು ಅವನು ಗುಣ ಮಾಡುವದಿಲ್ಲ; ನಿಂತಿರುವದನ್ನು ಅವನು ಪೋಷಿಸುವದಿಲ್ಲ; ಆದರೆ ಕೊಬ್ಬಿದವುಗಳ ಮಾಂಸವನ್ನು ತಿನ್ನುವನು; ಮತ್ತು
೧೭ ಅವುಗಳ ಗೊರಕೆಗಳನ್ನು ಮುರಿದು ಬಿಡುವನು. ಮಂದೆಯನ್ನು ಕೈ ಬಿಡುವಂಥ, ಕೆಲಸಕ್ಕೆ ಬಾರದ ಕುರುಬನಿಗೆ ಅಯ್ಯೋ! ಕತ್ತಿಯು ಅವನ ತೋಳಿನ ಮೇಲೆಯೂ, ಅವನ ಬಲಗಣ್ಣಿನ ಮೇಲೆಯೂ, ಇರುವದು; ಅವನ ತೋಳು ಶುದ್ಧವಾಗಿ ಬಣಗುವದು, ಅವನ ಬಲಗಣ್ಣು ಶುದ್ಧವಾಗಿ ಕತ್ತಲಾಗುವದು.

## ೧೨. ಸಂಧಿ.

೧ ಇಸ್ರಯೇಲಿನ ವಿಷಯವಾದ ಯೆಹೋವನ ವಾಕ್ಯದ ಭಾರವು.
ಆಕಾಶವನ್ನು ಹಾಸುವವನೂ,
ಭೂಮಿಯ ಅಸ್ತಿವಾರವನ್ನು ಹಾಕುವವನೂ,
ಮನುಷ್ಯನ ಆತ್ಮವನ್ನು ಅವನೊಳಗೆ ರೂಪಿಸುವವನೂ,
ಆದ ಯೆಹೋವನು ಅನ್ನುವದೇನಂದರೆ—
೨ ಇಗೋ ನಾನು ಯೆರೂಸಲೇಮನ್ನು
ಸುತ್ತಲಿರುವ ಎಲ್ಲಾ ಜನರಿಗೆ ಲಾಹರಿಪಾತ್ರೆಯಾಗ ಮಾಡುತ್ತೇನೆ;
ಯೆರೂಸಲೇಮಿಗೆ ಹಾಕುವ ಮುತ್ತಿಗೆಯಲ್ಲಿ ಯೆಹೂದಕ್ಕೂ ಸಹ ಇರುವದು.
3 ಮತ್ತು ಆ ದಿವಸದಲ್ಲಿ ಆಗುವದೇನಂದರೆ—
ನಾನು ಯೆರೂಸಲೇಮನ್ನು ಎಲ್ಲಾ ಜನರಿಗೆ ಭಾರವಾದ ತಲ್ಲಾಗ ಮಾಡುತ್ತೇನೆ;
ಅದನ್ನು ಎತ್ತುವವರೆಲ್ಲರು ಜಜ್ಜಲ್ಪಡುವರು;
ಆದರೆ ಅದಕ್ಕೆ ವಿರೋಧವಾಗಿ ಭೂಮಿಯ ಜನಾಂಗಗಳೆಲ್ಲಾ ಕೂಡಿ ಕೊಳ್ಳುವವು.
೪ ಯೆಹೋವನು ಅನ್ನುತ್ತಾನೆ—
ಆದಿವಸದಲ್ಲಿ, ನಾನು ಕುದುರೆಗಳನ್ನೆಲ್ಲಾ ಬೆದರಿಕೆಯಿಂದಲೂ,
ಹತ್ತಿದವರನ್ನೆಲ್ಲಾ ಹುಚ್ಚು ತನದಿಂದಲೂ, ಬಡೆಯುವೆನು;
ಯೆಹೂದನ ಮನೆಯ ಮೇಲೆ ನನ್ನ ಕಣ್ಣುಗಳನ್ನು ತೆರೆಯುವೆನು;
ಜನಗಳ ಕುದುರೆಗಳನ್ನೆಲ್ಲಾ ಕುರುಡುತನದಿಂದ ಬಡೆಯುವೆನು.

೫ ಆಗ ಯೆಹೂದದ ಥೊಕೆಗಳು ತಮ್ಮ ಹೃದಯದಲ್ಲಿ—
ಯೆರೂಸಲೇಮಿನ ನಿವಾಸಿಗಳು,
ಅವರ ದೇವರಾದ ಸೈನ್ಯಗಳ ಯೆಹೋವನಲ್ಲಿ,
ನನಗೆ ಬಲವಾಗಿದ್ದಾರೆಂದು, ಅಂದು ಕೊಳ್ಳುವರು.

೬ ಆ ದಿವಸದಲ್ಲಿ ನಾನು ಯೆಹೂದದ ಥೊಕೆಗಳನ್ನು
ಕಟ್ಟಿಗೆಯ ಮಧ್ಯದಲ್ಲಿರುವ ಬೆಂಕಿಯ ಬಲೆಯ ಹಾಗೆಯೂ,
ಸೂಡುಗಳಲ್ಲಿರುವ ಬೆಂಕಿಯ ಕೊಳ್ಳಿಯ ಹಾಗೆಯೂ, ಮಾಡುವೆನು.
ಅವರು ಬಲ ಕಡೆಯಲ್ಲಿಯೂ ಎಡಕಡೆಯಲ್ಲಿಯೂ,
ಸುತ್ತಲಿರುವ ಎಲ್ಲಾ ಜನಗಳನ್ನು ತಿಂದು ಬಿಡುವರು;
ಮತ್ತು ಯೆರೂಸಲೇಮು ತಿರಿಗಿ ತನ್ನ ಸ್ಥಳದಲ್ಲಿ,
ಯೆರೂಸಲೇಮಿನಲ್ಲಿಯೇ, ನಿವಾಸಿಸಲ್ಪಡುವದು.

೭ ಇದಲ್ಲದೆ, ದಾವೀದನ ಮನೆಯ ಸೌಂದರ್ಯವೂ,
ಯೆರೂಸಲೇಮಿನ ನಿವಾಸಿಗಳ ಸೌಂದರ್ಯವೂ,
ಯೆಹೂದದ ಮೇಲೆ ಹೆಚ್ಚಳ್ಳದ ಪಡದ ಹಾಗೆ,
ಯೆಹೋವನು ಮೊದಲು ಯೆಹೂದದ ಗುಡಾರಗಳನ್ನು ರಕ್ಷಿಸುವನು.

೮ ಆ ದಿವಸದಲ್ಲಿ ಯೆಹೋವನು ಯೆರೂಸಲೇಮಿನ ನಿವಾಸಿಗಳನ್ನು
ಕಾಪಾಡುವನು;
ಮತ್ತು ಆ ದಿವಸದಲ್ಲಿ ಅವರಲ್ಲಿ ಎಡವುವವನು ದಾವೀದನ ಹಾಗೆಯೂ,
ದಾವೀದನ ಮನೆಯವರು ದೇವರ ಹಾಗೆಯೂ,
ಅವರ ಮುಂದೆ ಯೆಹೋವನ ದೂತನ ಹಾಗೆಯೂ, ಇರುವರು.

೯ ಮತ್ತು ಆ ದಿವಸದಲ್ಲಿ ಆಗುವದೇನಂದರೆ—
ಯೆರೂಸಲೇಮಿಗೆ ವಿರೋಧವಾಗಿ ಬರುವ ಜನಾಂಗಗಳನ್ನೆಲ್ಲಾ
ನಾಶನ ಮಾಡುವದಕ್ಕೆ ಹುಡುಕುವೆನು.

೧೦ ಮತ್ತು ದಾವೀದನ ಮನೆಯವರ ಮೇಲೆಯೂ,
ಯೆರೂಸಲೇಮಿನ ನಿವಾಸಿಗಳ ಮೇಲೆಯೂ,
ಕೃಪೆಯ ಆತ್ಮವನ್ನೂ, ಬಿನ್ನಹಗಳ ಆತ್ಮವನ್ನೂ, ಹೊಯ್ಯುವೆನು;
ಅವರು ತಿವಿದ ನನ್ನ ಮೇಲೆ ಕಣ್ಣಿಡುವರು;
ಒಬ್ಬನೇ ಮಗನ ನಿಮಿತ್ತ ಗೋಳಾಡುವವನ ಹಾಗೆ,
ಅವನ ನಿಮಿತ್ತ ಗೋಳಾಡುವರು;
ಚೊಚ್ಚಲವನ ನಿಮಿತ್ತ ಕಹಿಯಾಗಿರುವವನ ಹಾಗೆ,
ಅವನ ನಿಮಿತ್ತ ಕಹಿಯಾಗಿರುವರು.

೧೧ ಆ ದಿವಸದಲ್ಲಿ, ಯೆರೂಸಲೇಮಿನಲ್ಲಿ ದೊಡ್ಡ ಗೋಳಾಟವಿರುವದು:
ಮೆಗಿದ್ದೋನಿನ ತಗ್ಗಿನಲ್ಲಾದ ಹದದ್ರಿಮ್ಮೋನಿನ ಗೋಳಾಟದ ಹಾಗೆಯೇ.

೧೨ ದೇಶವು, ಗೋತ್ರ ಗೋತ್ರಗಳ ಪ್ರಕಾರ ಪ್ರತ್ಯೇಕವಾಗಿ ಗೋಳಾಡುವದು;
ದಾವೀದನ ಮನೆಯ ಗೋತ್ರವು ಪ್ರತ್ಯೇಕ, ಅವರ ಹೆಂಡರು ಪ್ರತ್ಯೇಕ;
ನಾತಾನನ ಮನೆಯ ಗೋತ್ರವು ಪ್ರತ್ಯೇಕ, ಅವರ ಹೆಂಡರು ಪ್ರತ್ಯೇಕ;
೧೩ ಲೇವಿಯನ ಮನೆಯ ಗೋತ್ರವು ಪ್ರತ್ಯೇಕ, ಅವರ ಹೆಂಡರು ಪ್ರತ್ಯೇಕ;
ಶಿಮೇಯನ ಗೋತ್ರವು ಪ್ರತ್ಯೇಕ, ಅವರ ಹೆಂಡರು ಪ್ರತ್ಯೇಕ;
೧೪ ಉಳಿದ ಗೋತ್ರಗಳೆಲ್ಲಾ ಗೋತ್ರ ಗೋತ್ರಗಳ ಪ್ರಕಾರ ಪ್ರತ್ಯೇಕವಾಗಿಯೂ,
ಅವರ ಹೆಂಡರು ಪ್ರತ್ಯೇಕವಾಗಿಯೂ, ಗೋಳಾಡುವರು.

## ೧೩. ಸಂಧಿ.

೧ ಆ ದಿವಸದಲ್ಲಿ,
ದಾವೀದನ ಮನೆಯವರಿಗೂ, ಯೆರೂಸಲೇಮಿನ ನಿವಾಸಿಗಳಿಗೂ,
ಪಾಪದ ನಿಮಿತ್ತವೂ, ಅಶುದ್ಧತ್ವದ ನಿಮಿತ್ತವೂ,
ಬುಗ್ಗೆ ತೆಗೆಯಲ್ಪಡುವದು.

೨ ಸೈನ್ಯಗಳ ಯೆಹೋವನು ಅನ್ನುತ್ತಾನೆ—
ಆ ದಿವಸದಲ್ಲಿ ಆಗುವದೇನಂದರೆ—
ನಾನು ವಿಗ್ರಹಗಳ ಹೆಸರುಗಳನ್ನು ದೇಶದೊಳಗಿಂದ ಕಡಿದು ಬಿಡುವೆನು;
ಅವು ಇನ್ನು ಜ್ಞಾಪಕಕ್ಕೆ ಬರುವದಿಲ್ಲ;
ಮತ್ತು ಪ್ರವಾದಿಗಳನ್ನೂ ಅಶುದ್ಧ ಆತ್ಮವನ್ನೂ,
ದೇಶದೊಳಗಿಂದ ತೊಲಗಿ ಹೋಗ ಮಾಡುವೆನು.

೩ ಮತ್ತು ಆಗುವದೇನಂದರೆ—
ಯಾರಾದರೂ ಇನ್ನು ಪ್ರವಾದಿಸಿದರೆ,
ಅವನ ಹೆತ್ತವರಾದ ತಂದೆತಾಯಿಗಳು—
ನೀನು ಬದುಕ ಬಾರದು,
ಯಾಕಂದರೆ ಯೆಹೋವನ ಹೆಸರಿನಲ್ಲಿ ಸುಳ್ಳು ಹೇಳುತ್ತೀ, ಎಂದು ಹೇಳುವರು;
ಮತ್ತು ಅವನು ಪ್ರವಾದಿಸುವಾಗ,
ಅವನ ಹೆತ್ತವರಾದ ತಂದೆತಾಯಿಗಳು ಅವನನ್ನು ತಿವಿದು ಹಾಕುವರು.

೪ ಮತ್ತು ಆ ದಿವಸದಲ್ಲಿ ಆಗುವದೇನಂದರೆ—
ಪ್ರವಾದಿಗಳು ಪ್ರವಾದಿಸುವಾಗ,
ತಮ್ಮ ತಮ್ಮ ದರ್ಶನಗಳಿಗೆ ನಾಚಿಕೆ ಪಡುವರು;
ಮತ್ತು ವಂಚಿಸುವ ಹಾಗೆ ಕೂದಲಿನ ವಸ್ತ್ರವನ್ನು ಹಾಕಿಕೊಳ್ಳರು.

೫ ಆದರೆ ಅವನು—ನಾನು ಪ್ರವಾದಿಯಲ್ಲ;
ನಾನು ಭೂಮಿಯಲ್ಲಿ ವ್ಯವಸಾಯ ಮಾಡುವವನು;
ಯಾಕಂದರೆ ಒಬ್ಬನು ನನ್ನನ್ನು ಚಿಕ್ಕತನದಿಂದ ವಶ ಮಾಡಿಕೊಂಡನೆಂದು, ಹೇಳುವನು.

೬ ಆಗ ಒಬ್ಬನು ಅವನಿಗೆ—
ನಿನ್ನ ಕೈಗಳಲ್ಲಿರುವ ಈ ಘಾಯಗಳು ಏನು? ಎಂಥೇಳುವನು;
ಅದಕ್ಕವನು—
ನನ್ನ ಸ್ನೇಹಿತರ ಮನೆಯಲ್ಲಿ ನನಗುಂಟಾದ ಘಾಯಗಳೆಂದು, ಅನ್ನುವನು.

೭ ಕತ್ತಿಯೇ! ನನ್ನ ಕುರುಬನಿಗೆ ವಿರೋಧವಾಗಿ,



ನನ್ನ ಸಂಗಡಿಗನಾದ ಮನುಷ್ಯನಿಗೆ ವಿರೋಧವಾಗಿ ಎಚ್ಚರವಾಗು;
ಎಂದು ಸೈನ್ಯಗಳ ಯೆಹೋವನು ಅನ್ನುತ್ತಾನೆ;
ಕುರುಬನನ್ನು ಹೊಡಿ, ಆಗ ಕುರಿಗಳು ಚದರಿ ಹೋಗುವವು;
ಆದರೆ ಚಿಕ್ಕವುಗಳ ಮೇಲೆ ನನ್ನ ಕೈಯನ್ನು ತಿರುಗಿಸುವೆನು.

೮ ಯೆಹೋವನು ಅನ್ನುತ್ತಾನೆ—
ಇದಲ್ಲದೆ, ಸಮಸ್ತ ದೇಶದಲ್ಲಿ ಆಗುವದೇನಂದರೆ—
ಅದರಲ್ಲಿ ಎರಡು ಪಾಲು ಕಡಿದು ಬಿಡಲ್ಪಟ್ಟು ಸಾಯುವದು;
ಆದರೆ, ಮೂರನೇ ಪಾಲು ಅದರಲ್ಲಿ ಬಿಡಲ್ಪಡುವದು.

೯ ಮತ್ತು ಮೂರನೇ ಪಾಲನ್ನು ನಾನು ಬೆಂಕಿಯಲ್ಲಿ ಹಾಕಿ,
ಬೆಳ್ಳಿ ಶುದ್ಧ ಮಾಡಲ್ಪಡುವ ಪ್ರಕಾರ ಶುದ್ಧ ಮಾಡುವೆನು;
ಭಂಗಾರವು ಶೋಧಿಸಲ್ಪಡುವ ಪ್ರಕಾರ ಅವರನ್ನು ಶೋಧಿಸುವೆನು;
ಅವರು ನನ್ನ ಹೆಸರನ್ನು ಕರೆಯುವರು;
ಮತ್ತು ನಾನು ಅವರಿಗೆ ಉತ್ತರ ಕೊಡುವೆನು;
ಇದು ನನ್ನ ಜನವೆಂದು ಹೇಳುವೆನು;
ಅವರು ಯೆಹೋವ ನನ್ನ ದೇವರೆಂದು ಹೇಳುವರು.

## ೧೪. ಸಂಧಿ.

೧ ಇಗೋ ಯೆಹೋವನ ದಿವಸವು ಬರುತ್ತದೆ,
೨ ಆಗ ನಿನ್ನ ಕೊಳ್ಳೆಯು ನಿನ್ನ ಮಧ್ಯದಲ್ಲಿ ವಿಭಾಗಿಸಲ್ಪಡುವದು;
ಯಾಕಂದರೆ, ನಾನು ಜನಾಂಗಗಳನ್ನೆಲ್ಲಾ ಯೆರೂಸಲೇಮಿಗೆ
ವಿರೋಧವಾಗಿ ಯುದ್ಧಕ್ಕೆ ಕೂಡಿಸುವೆನು;
ಪಟ್ಟಣವು ಹಿಡಿಯಲ್ಪಡುವದು;
ಮನೆಗಳು ಸುಲು ಕೊಳ್ಳಲ್ಪಡುವವು,
ಹೆಂಗಸರು ಕೆಡಿಸಲ್ಪಡುವರು,
ಪಟ್ಟಣದ ಅರೆವಾಸಿ ಶೆರೆಗೆ ಹೋಗುವದು;
ಆದರೆ ಉಳಿದ ಜನಕ್ಕೆಲ್ಲರು
ಪಟ್ಟಣದೊಳಗಿಂದ ಕಡಿದು ಬಿಡಲ್ಪಡುವದಿಲ್ಲ.

೩ ಆಗ ಯೆಹೋವನು ಹೊರಟು,
ಆ ಜನಾಂಗಗಳ ಸಂಗಡ ಜಗಳ ಮಾಡುವನು;
ಅವನು ಯುದ್ಧದ ದಿವಸದಲ್ಲಿ ಜಗಳ ಮಾಡಿದ ಪ್ರಕಾರವೇ.

೪ ಮತ್ತು, ಆ ದಿವಸದಲ್ಲಿ, ಅವನ ಪಾದಗಳು,
ಯೆರೂಸಲೇಮಿನ ಮುಂದೆ ಪೂರ್ವ ದಿಕ್ಕಿನಲ್ಲಿರುವ ಇಪ್ಪೆ ಗುಡ್ಡದ ಮೇಲೆ ನಿಲ್ಲುವವು.
ಮತ್ತು ಇಪ್ಪೆ ಗುಡ್ಡವು,
ಅದರ ನಡುವೆಯಿಂದ ಪೂರ್ವಕ್ಕೂ ಪಶ್ಚಿಮಕ್ಕೂ ಬೀಳಿ,
ಬಹು ದೊಡ್ಡ ತಗ್ಗಾಗುವದು;
ಅರ್ಧ ಗುಡ್ಡವು ಉತ್ತರಕ್ಕೂ ಅರ್ಧ ದಕ್ಷಿಣಕ್ಕೂ ವಾಲೆಯಾಗುವದು.

೫ ಮತ್ತು ನೀವು ನನ್ನ ಬೆಟ್ಟಗಳ ತಗ್ಗಿಗೆ ಓಡಿ ಹೋಗುವಿರಿ;
ಯಾಕಂದರೆ ಬೆಟ್ಟಗಳ ತಗ್ಗು ಆಚಾಲಿನ ಪರ್ಯಂತರಕ್ಕೂ ಮುಟ್ಟುವದು.
ಹೌದು, ಯೆಹೂದದ ಅರಸನಾದ ಉಜೀಯನ ದಿವಸಗಳಲ್ಲಿ,
ನೀವು ಭೂಕಂಪಕ್ಕೆ ಓಡಿ ಹೋದ ಹಾಗೆ ಓಡಿ ಹೋಗುವಿರಿ;
ಮತ್ತು ನನ್ನ ದೇವರಾದ ಯೆಹೋವನು ಬರುವನು;
ನಿನ್ನ ಸಂಗಡ ಪರಿಶುದ್ಧರೆಲ್ಲರು ಸಹ.

೬ ಮತ್ತು ಆ ದಿವಸದಲ್ಲಿ ಆಗುವದೇನಂದರೆ—
ಬೆಳಕು ಇರದು,
ಬೆಲೆಯುಳ್ಳ ಮಂಡಲಗಳು ಕಾಣದೆ ಹೋಗುವವು.

೭ ಆದರೆ ಒಂದು ದಿವಸವಿರುವದು;
ಅದು ಯೆಹೋವನಿಗೆ ತಿಳಿದಿರುತ್ತದೆ;
ಹಗಲು ಅಲ್ಲ, ರಾತ್ರಿಯು ಅಲ್ಲ;
ಆದರೆ ಆಗುವದೇನಂದರೆ—
ಸಾಯಂಕಾಲದ ವೇಳೆಯಲ್ಲಿ ಬೆಳಕು ಇರುವದು.

೮ ಮತ್ತು ಆ ದಿವಸದಲ್ಲಿ ಆಗುವದೇನಂದರೆ—
ಯೆರೂಸಲೇಮಿನೊಳಗಿದ ಜೀವವುಳ್ಳ ನೀರುಗಳು ಹೊರಡುವವು;
ಅವುಗಳಲ್ಲಿ ಅರ್ಧ ಪೂರ್ವ ಸಮುದ್ರಕ್ಕೆ,
ಅವುಗಳಲ್ಲಿ ಅರ್ಧ ಪಶ್ಚಿಮ ಸಮುದ್ರಕ್ಕೆ, ಹೋಗುವದು;
ಅದು ಬೇಸಿಗೆ ಕಾಲದಲ್ಲಿಯೂ ಛಳಿಕಾಲದಲ್ಲಿಯೂ ಇರುವದು.

೯ ಮತ್ತು ಯೆಹೋವನು ಭೂಮಿಗೆಲ್ಲಾ ಅರಸನಾಗಿರುವನು;
ಆ ದಿವಸದಲ್ಲಿ ಯೆಹೋವನು ಒಬ್ಬನೇ ಇರುವನು;
ಆವನ ಹೆಸರು ಒಂದೇ.

೧೦ ದೇಶವೆಲ್ಲಾ,
ಗೇಬ ಮೊದಲೊಂಗು, ಯೆರೂಸಲೇಮಿನ ದಕ್ಷಿಣದಲ್ಲಿರುವ ರಿಮ್ಮೋನಿನ ಮಟ್ಟಿಗೂ,
ಬೈಲಿನ ಹಾಗೆ ಮಾರ್ಪಡುವದು;
ಅದು ಎತ್ತಲ್ಪಟ್ಟು, ತನ್ನ ಸ್ಥಳದಲ್ಲಿ,
ಬೆನ್ಯಮಿನಿನ ಬಾಗಲು ಮೊದಲೊಂಗು ಮೊದಲನೇ ಬಾಗಲಿನ ಸ್ಥಳದ ಮಟ್ಟಿಗೂ, ಮೂಲೆ ಬಾಗಲಿನ ಮಟ್ಟಿಗೂ,
ಹನನೇಲನ ಗೋಪುರ ಮೊದಲುಗೊಂಡು ಅರಸನ ದ್ರಾಕ್ಷೆ ಆಲೆಗಳ ಮಟ್ಟಿಗೂ,
ನಿವಾಸಿಸಲ್ಪಡುವದು.

೧೧ ಅದರಲ್ಲಿ ವಾಸವಾಗುವರು;
ಅದಕ್ಕೆ ಇನ್ನು ಮೇಲೆ ಶಾಪವಿರದು;
ಯೆರೂಸಲೇಮು ಭದ್ರವಾಗಿ ವಾಸಿಸುವದು.

೧೨ ಮತ್ತು ಯೆರೂಸಲೇಮಿಗೆ ವಿರೋಧವಾಗಿ ದಂಡು ಕಟ್ಟಿ ಕೊಂಡಿರುವ
ಎಲ್ಲಾ ಜನಗಳನ್ನು ಯೆಹೋವನು ಬಾಧಿಸುವ ಬಾಧೆಯು ಇದೇ—
ಅವರು ಕಾಲಿನ ಮೇಲೆ ನಿಲ್ಲುವಾಗಲೇ ಅವರ ಮಾಂಸವು ಕುಂದಿ ಹೋಗುವದು;
ಅವರ ಕಣ್ಣುಗಳು ತಮ್ಮ ಗುಣಿಗಳಲ್ಲಿ ಕುಂದಿ ಹೋಗುವವು;
ಅವರ ನಾಲಿಗೆ ಅವರ ಬಾಯಿಯಲ್ಲಿ ಕುಂದಿ ಹೋಗುವದು.

೧೩ ಮತ್ತು ಆ ದಿವಸದಲ್ಲಿ ಆಗುವದೇನಂದರೆ—
ಯೆಹೋವನಿಂದ ದೊಡ್ಡ ಗುಬಾರು ಅವರಲ್ಲಿ ಇರುವದು;
ಆಗ ಒಬ್ಬೊಬ್ಬನು ತನ್ನ ತನ್ನ ನೆರೆಯವನ ಕೈಯನ್ನು ಹಿಡಿಯುವನು,
ಮತ್ತು ಅವನ ಕೈ ತನ್ನ ನೆರೆಯವನ ಮೇಲೆ ಎತ್ತಲ್ಪಟ್ಟುವದು.

೧೪ ಯೆಹೂದವು ಸಹ ಯೆರೂಸಲೇಮಿನಲ್ಲಿ ಯುದ್ಧ ಮಾಡುವದು;
ಮತ್ತು ಸುತ್ತಲಿರುವ ಎಲ್ಲಾ ಜನಾಂಗಗಳ ಸಂಪತ್ತು,
ಚಿನ್ನ ಬೆಳ್ಳಿ ವಸ್ತ್ರಗಳು ಬಹು ಹೇರಳವಾಗಿ ಕೂಡಿಸಲ್ಪಡುವದು.
೧೫ ಮತ್ತು ಆ ದಂಡುಗಳಲ್ಲಿರುವ ಕುದುರೆ,
ಹಾಸುಕತ್ತೆ, ಒಂಟೆ, ಕತ್ತೆ, ಮೊದಲಾದ ಎಲ್ಲಾ ಪಶುಗಳ ಬಾಧೆ
ಈ ಬಾಧೆಯ ಹಾಗೆಯೇ ಇರುವದು.

೧೬ ಮತ್ತು ಆಗುವದೇನಂದರೆ—
ಯೆರೂಸಲೇಮಿಗೆ ವಿರೋಧವಾಗಿ ಬಂದ ಎಲ್ಲಾ ಜನಾಂಗಗಳಲ್ಲಿ ಉಳಿದವರೆಲ್ಲಾ
ವರುಷ ವರುಷಕ್ಕೆ ಸೈನ್ಯಗಳ ಯೆಹೋವನಾದ ಅರಸನನ್ನು ಆರಾಧಿಸುವದಕ್ಕೂ,
ಗುಡಾರಗಳ ಹಬ್ಬವನ್ನು ಆಚರಿಸುವದಕ್ಕೂ, ಏರಿ ಹೋಗುವರು.
೧೭ ಮತ್ತು ಆಗುವದೇನಂದರೆ—
ಭೂಮಿಯ ಗೋತ್ರಗಳಲ್ಲಿ,
ಸೈನ್ಯಗಳ ಯೆಹೋವನಾದ ಅರಸನನ್ನು ಆರಾಧಿಸುವದಕ್ಕೆ,
ಯೆರೂಸಲೇಮಿಗೆ ಏರಿ ಹೋಗದೆ ಇರುವವರ್ಯಾರೋ,
ಅವರ ಮೇಲೆ ಮಳೆ ಇಲ್ಲದೆ ಇರುವದು.
೧೮ ಮಳೆ ಇಲ್ಲದ ಐಗುಪ್ತದ ಗೋತ್ರದವರು ಏರಿ ಹೋಗದಿದ್ದಲಿ,
ಗುಡಾರಗಳ ಹಬ್ಬವನ್ನು ಆಚರಿಸುವದಕ್ಕೆ
ಏರದ ಜನಾಂಗಗಳನ್ನು
ಯೆಹೋವನು ಬಡೆಯುವ ಬಾಧೆ ಅವರ ಮೇಲೆ ಇರುವದು.
೧೯ ಇದೇ ಐಗುಪ್ತದ ದಂಡನೆಯೂ,
ಗುಡಾರಗಳ ಹಬ್ಬವನ್ನು ಆಚರಿಸುವದಕ್ಕೆ
ಏರದ ಎಲ್ಲಾ ಜನಾಂಗಗಳ ದಂಡನೆಯೂ, ಆಗಿರುವದು.
೨೦ ಆ ದಿವಸದಲ್ಲಿ ಕುದುರೆಗಳ ಗೆಜ್ಜೆಗಳ ಮೇಲೆ
ಯೆಹೋವನಿಗೆ ಪರಿಶುದ್ಧವು ಎಂದಿರುವದು;
ಮತ್ತು ಯೆಹೋವನ ಮನೆಯ ಗುಡಾಣಗಳು
ಬಲಿಪೀಠದ ಮುಂದಿನ ಚಾಪ್ರೆಗಳ ಹಾಗಿರುವವು.
೨೧ ಹೌದು, ಯೆರೂಸಲೇಮಿನಲ್ಲಿಯೂ, ಯೆಹೂದದಲ್ಲಿಯೂ, ಇರುವ ಗುಡಾಣಗಳೆಲ್ಲಾ
ಸೈನ್ಯಗಳ ಯೆಹೋವನಿಗೆ ಪರಿಶುದ್ಧವಾಗಿರುವವು;
ಅರ್ಪಿಸುವವರೆಲ್ಲರು ಬಂದು
ಅವುಗಳಲ್ಲಿ ತಕ್ಕೊಂಡು ಅವುಗಳಲ್ಲಿ ಬೇಯಿಸುವರು;
ಮತ್ತು ಆ ದಿವಸದಲ್ಲಿ ಕನಾನ್ಯನು
ಸೈನ್ಯಗಳ ಯೆಹೋವನ ಮನೆಯಲ್ಲಿ ಇನ್ನು ಇರನು.

---

# MALACHI.

## ಮಲಕೀಯನು.

### ೧. ಸಂಧಿ.

೧ ಇಸ್ರಯೇಲಿಗೆ ಮಲಕೀಯನ ಕೈಯಿಂದ ಉಂಟಾದ ಯೆಹೋವನ ವಾಕ್ಯದ ಭಾರವು.
೨ ನಿಮ್ಮನ್ನು ಪ್ರೀತಿ ಮಾಡಿದ್ದೇನೆಂದು, ಯೆಹೋವ ಹೇಳುತ್ತಾನೆ;
ಆದರೆ ನೀವು—ಯಾತರಲ್ಲಿ ನಮ್ಮನ್ನು ಪ್ರೀತಿ ಮಾಡಿದ್ದೀ?
ಎಂದು ಹೇಳುತ್ತೀರಿ.
ಯೆಹೋವ ಅನ್ನುತ್ತಾನೆ—
ಏಸಾವನು ಯಾಕೋಬನಿಗೆ ಅಣ್ಣನಲ್ಲವೋ?
ಆದರೂ ನಾನು ಯಾಕೋಬನನ್ನು ಪ್ರೀತಿ ಮಾಡಿದೆನು.
೩ ಆದರೆ ಏಸಾವನನ್ನು ಹಗೆ ಮಾಡಿದೆನು;
ಅವನ ಬೆಟ್ಟಗಳನ್ನು ಹಾಳು ಮಾಡಿ,
ಅವನ ಸ್ವಾಸ್ತ್ಯವನ್ನು ಅಡವಿಯ ನರಿಗಳಿಗೆ ಕೊಟ್ಟೆನು.
೪ ಏದೋಮು—ನಾವು ಬಡವಾದೆವು,
ಆದರೆ ತಿರುಗಿ ಕೊಂಡು, ಹಾಳಾದ ಸ್ಥಳಗಳನ್ನು ಕಟ್ಟುವೆವೆಂದು ಕ
ಹೇಳಿದರೂ,
ಸೈನ್ಯಗಳ ಯೆಹೋವನು ಹೇಳುವದೇನಂದರೆ—
ಅವರು ಕಟ್ಟಿ ಬಹುದು? ಆದರೆ ನಾನು ಕೆಡವಿ ಬಿಡುವೆನು;
ಮತ್ತು ಅವರಿಗೆ—
ದುಷ್ಟ ಪ್ರಾಂತ್ಯವೆಂದೂ,
ಯೆಹೋವ ಎಂದೆಂದಿಗೂ ಶಿಟ್ಟು ಮಾಡುವ ಜನವೆಂದೂ,
ಹೆಸರಿಡುವರು.
೫ ಮತ್ತು ನಿಮ್ಮ ಕಣ್ಣುಗಳು ನೋಡುವವು;
ಇಸ್ರಯೇಲಿನ ಪ್ರಾಂತ್ಯದಿಂದ ಯೆಹೋವನು ಹೆಚ್ಚಿ ಸಲ್ಪಡುವನೆಂದು, ಹೇಳುವಿರಿ.
೬ ಮಗನು ತಂದೆಯನ್ನೂ ದಾಸನು ಯಜಮಾನನನ್ನೂ ಸನ್ಮಾನಿಸುತ್ತಾನೆ;
ಹಾಗಾದರೆ, ನಾನು ತಂದೆಯಾಗಿದ್ದರೆ, ನನ್ನ ಮಾನವೆಲ್ಲಿ?
ಮತ್ತು ನಾನು ಯಜಮಾನನಾಗಿದ್ದರೆ ನನಗೆ ಪಡುವ ಭಯವು ಎಲ್ಲಿ?
ಎಂದು ನನ್ನ ಹೆಸರನ್ನು ಅಸಡ್ಡೆ ಮಾಡುವ
ಯಾಜಕರಾದ ನಿಮಗೆ ಸೈನ್ಯಗಳ ಯೆಹೋವನು ಹೇಳುತ್ತಾನೆ.
ಆದರೆ ನೀವು—
ನಿನ್ನ ಹೆಸರನ್ನು ಯಾತರಲ್ಲಿ ಅಸಡ್ಡೆ ಮಾಡಿದ್ದೇವೆಂದು ಹೇಳುತ್ತೀರಿ.
೭ ನನ್ನ ಬಲಿಪೀಠದ ಮೇಲೆ ಅಪವಿತ್ರವಾದ ಕೊಟ್ಟಿಯನ್ನು ತಂದು,
ಯಾತರಲ್ಲಿ ನಿನ್ನನ್ನು ಅಪವಿತ್ರ ಮಾಡಿದ್ದೇವೆಂದು ಹೇಳುತ್ತೀರಿ.
ಯೆಹೋವನ ಮೇಜು ಹೀನವಾದದ್ದೆಂದು ಹೇಳುವದರಿಂದಲೇ.
೮ ಇದಲ್ಲದೆ, ನೀವು ಕುರುಡಾದದ್ದನ್ನು ಬಲಿಗಾಗಿ ಅರ್ಪಿಸಿದರೆ,
ಅದು ಕೆಟ್ಟದ್ದಲ್ಲವೋ?
ಮತ್ತು ಕುಂಟಾದದ್ದನ್ನೂ ರೋಗವುಳ್ಳದ್ದನ್ನೂ ಅರ್ಪಿಸಿದರೆ,
ಅದು ಕೆಟ್ಟದ್ದಲ್ಲವೋ?
ಸೈನ್ಯಗಳ ಯೆಹೋವನು ಹೇಳುತ್ತಾನೆ—



ಅದನ್ನು ನಿನ್ನ ದೊರೆಗೆ ಅರ್ಪಿಸು,
ಅವನು ನಿನ್ನಲ್ಲಿ ಮೆಚ್ಚುವನೋ?
ಇಲ್ಲವೇ ನಿನಗೆ ಮುಖದಾಕ್ಷಿಣ್ಯ ತೋರಿಸುವನೋ?
೯ ಹಾಗಾದರೆ ಈಗ ದೇವರ ಮುಖದ ಮುಂದೆ,
ಅವನು ನಮ್ಮನ್ನು ಕನಿಕರಿಸುವ ಹಾಗೆ, ಬೇಡಿ ಕೊಳ್ಳಿರಿ.
ಸೈನ್ಯಗಳ ಯೆಹೋವನು ಹೇಳುತ್ತಾನೆ—
ಇದು ನಿಮ್ಮ ಕೈಯಿಂದಲೇ ಆಯಿತು,
ನಿಮಗೆ ಮುಖದಾಕ್ಷಿಣ್ಯ ತೋರಿಸುವನೋ?
೧೦ ಉಚಿತವಾಗಿ ಬಾಗಲುಗಳನ್ನಾದರೂ ಮುಚ್ಚುವವನೂ,
ನನ್ನ ಬಲಿಪೀಠದಲ್ಲಿ ಬೆಂಕಿ ಹಚ್ಚುವವನೂ, ನಿಮ್ಮಲ್ಲಿ ಯಾರು?
ಸೈನ್ಯಗಳ ಯೆಹೋವನು ಹೇಳುವದೇನಂದರೆ—
ನಿಮ್ಮಲ್ಲಿ ನನಗೆ ಇಷ್ಟವಿಲ್ಲ,
ಮತ್ತು ನಿಮ್ಮ ಕೈಯಿಂದ ನಾನು ಕಾಣಿಕೆ ತಕ್ಕೊಳ್ಳುವದಿಲ್ಲ;
೧೧ ಯಾಕಂದರೆ ಸೂರ್ಯೋದಯವು ಪೊದಲುಗೊಂಡು
ಅದರ ಅಸ್ತಮಾನದ ಪರ್ಯಂತರಕ್ಕೂ,
ನನ್ನ ಹೆಸರು ಜನಾಂಗಗಳಲ್ಲಿ ದೊಡ್ಡದಾಗಿರುವದು;
ಸಕಲ ಸ್ಥಳಗಳಲ್ಲಿ ನನ್ನ ಹೆಸರಿಗೆ ದೂಪವೂ,
ಶುದ್ಧಕಾಣಿಕೆಯೂ, ಅರ್ಪಿಸಲ್ಪಡುವದು;
ಯಾಕಂದರೆ ನನ್ನ ಹೆಸರು ಜನಾಂಗಗಳಲ್ಲಿ ದೊಡ್ಡದಾಗಿರುವದೆಂದು,
ಸೈನ್ಯಗಳ ಯೆಹೋವ ಹೇಳುತ್ತಾನೆ.
೧೨ ಆದರೆ ನೀವು ಯೆಹೋವನ ಮೇಜು ಅಶುದ್ಧವಾದದ್ದೆಂದೂ,
ಅದರ ಫಲವು, ಅವನ ಊಟವೇ, ಹೀನವಾದದ್ದೆಂದೂ, ಹೇಳಿ,
ಅದನ್ನು ಅಪವಿತ್ರ ಮಾಡಿದ್ದೀರಿ.
೧೩ ಇದಲ್ಲದೆ ನೀವು—
ಇಗೋ ಬೇಸರ! ಎಂದು ಹೇಳಿ,
ಅದರ ಮೇಲೆ ಊದಿ ಬಿಟ್ಟಿರಿ,
ಎಂದು ಸೈನ್ಯಗಳ ಯೆಹೋವ ಹೇಳುತ್ತಾನೆ;
ಮತ್ತು ಶೀಳಲ್ಪಟ್ಟದ್ದನ್ನೂ ಕುಂಟಾದದ್ದನ್ನೂ ರೋಗವುಳ್ಳದ್ದನ್ನೂ ತಂದಿರಿ;
ಹೀಗೆ ಕಾಣಿಕೆಯನ್ನು ತಂದಿರಿ;
ನಾನು ಇದನ್ನು ನಿಮ್ಮ ಕೈಯಿಂದ ತಕ್ಕೊಳ್ಳಬಹುದೋ?
ಎಂದು ಯೆಹೋವ ಹೇಳುತ್ತಾನೆ.
೧೪ ಆದರೆ ತನ್ನ ಮಂದೆಯಲ್ಲಿ ಗಂಡು ಉಂಟಾಗಿರಲೂ,
ಹರಿಕೆ ಮಾಡಿ, ಯೆಹೋವನಿಗೆ ಕೆಟ್ಟು ಹೋದದ್ದನ್ನು ಅರ್ಪಿಸುವ ಮೋಸಗಾರನಿಗೆ ಶಾಪ;
ಯಾಕಂದರೆ ನಾನು ದೊಡ್ಡ ಅರಸನು,
ನನ್ನ ಹೆಸರು ಜನಾಂಗಗಳಲ್ಲಿ ಭಯಂಕರವಾದದ್ದು,
ಎಂದು ಸೈನ್ಯಗಳ ಯೆಹೋವ ಹೇಳುತ್ತಾನೆ.

### ೨. ಸಂಧಿ.

೧ ಮತ್ತು ಈಗ, ಓ ಯಾಜಕರೇ!
ಈ ಆಜ್ಞೆ ನಿಮಗೆ ಅದೆ.
೨ ಸೈನ್ಯಗಳ ಯೆಹೋವನು ಹೇಳುವದೇನಂದರೆ—
ನೀವು ಕೇಳದೆ, ಹೃದಯಕ್ಕೆ ತಾರದೆ,
ನನ್ನ ಹೆಸರಿಗೆ ಮಹಿಮೆಯನ್ನು ಕೊಡದೆ ಹೋದರೆ,
ನಿಮ್ಮಲ್ಲಿ ಶಾಪವನ್ನು ಕಳುಹಿಸುವೆನು;
ನಿಮ್ಮ ಆಶೀರ್ವಾದಗಳನ್ನು ಶಪಿಸುವೆನು;
ಹೌದು, ಅವುಗಳನ್ನು ಶಪಿಸಿದ್ದಾಯಿತು;
ಯಾಕಂದರೆ ನೀವು ಅವುಗಳನ್ನು ಹೃದಯಕ್ಕೆ ತರುವದಿಲ್ಲ.
೩ ಇಗೋ ನಾನು ನಿಮ್ಮ ಬೀಜವನ್ನು ಕೆಡಿಸುತ್ತೇನೆ,
ನಿಮ್ಮ ಮುಖಗಳ ಮೇಲೆ ಗೊಬ್ಬರವನ್ನು ಚೆಲ್ಲುತ್ತೇನೆ;
ನಿಮ್ಮ ಹಬ್ಬಗಳ ಗೊಬ್ಬರವೇ;
ಮತ್ತು ನೀವು ಅದರ ಸಂಗಡ ತಕ್ಕೊಂಡು ಹೋಗಲ್ಪಡುವಿರಿ.
೪ ಮತ್ತು ಸೈನ್ಯಗಳ ಯೆಹೋವ ಹೇಳುವದೇನಂದರೆ—
ನನ್ನ ಒಡಂಬಡಿಕೆ ಲೇವಿಯ ಸಂಗಡ ಇರುವ ಹಾಗೆ
ಈ ಆಜ್ಞೆಯನ್ನು ನಿಮಗೆ ಕಳುಹಿಸಿದ್ದೇನೆಂದು ತಿಳುಕೊಳ್ಳುವಿರಿ.
೫ ನನ್ನ ಜೀವವೂ ಸಮಾಧಾನವೂ, ಉಳ್ಳ ಒಡಂಬಡಿಕೆ,
ಅವನ ಸಂಗಡ ಇತ್ತು;
ಅವುಗಳನ್ನು ಅವನಿಗೆ ಕೊಟ್ಟೆನು;
ಅವನು ನನಗೆ ಭಯ ಪಟ್ಟು,
ನನ್ನ ಹೆಸರಿಗೆ ಅಂಜಿ ಕೊಂಡದರಿಂದಲೇ.
೬ ಸತ್ಯದ ನ್ಯಾಯಪ್ರಮಾಣವು ಅವನ ಬಾಯಿಯಲ್ಲಿ ಇತ್ತು;
ಅಕ್ರಮವು ಅವನ ತುಟಿಗಳಲ್ಲಿ ಶಿಕ್ಕಲಿಲ್ಲ;
ಅವನು ಸಮಾಧಾನದಿಂದಲೂ ಯಥಾರ್ಥದಿಂದಲೂ ನನ್ನ ಸಂಗಡ ನಡ ಕೊಂಡು,
ಅನೇಕರನ್ನು ಅಕ್ರಮದಿಂದ ತಿರುಗಿಸಿದನು.
೭ ಯಾಕಂದರೆ ಯಾಜಕನ ತುಟಿಗಳು ತಿಳುವಿಕೆಯನ್ನು ಕಾಪಾಡ ತಕ್ಕದ್ದು,
ನ್ಯಾಯಪ್ರಮಾಣವನ್ನು ಅವನ ಬಾಯಿಯಲ್ಲಿ ಹುಡುಕುವರು;
ಯಾಕಂದರೆ ಅವನು ಸೈನ್ಯಗಳ ಯೆಹೋವನ ದೂತನೇ.
೮ ಆದರೆ ನೀವು ಮಾರ್ಗವನ್ನು ಬಿಟ್ಟು ಹೋಗಿದ್ದೀರಿ;
ಅನೇಕರನ್ನು ನ್ಯಾಯಪ್ರಮಾಣಕ್ಕೆ ಎಡವ ಮಾಡಿದ್ದೀರಿ;
ಲೇವಿಯ ಒಡಂಬಡಿಕೆಯನ್ನು ಕೆಡಿಸಿದ್ದೀರೆಂದು
ಸೈನ್ಯಗಳ ಯೆಹೋವ ಹೇಳುತ್ತಾನೆ.
೯ ಆದದರಿಂದ, ನಾನು ನಿಮ್ಮನ್ನು, ಜನರೆಲ್ಲರ ಮುಂದೆ,
ಅಸಡ್ಡೆ ಮಾಡಲ್ಪಟ್ಟವರಾಗಿಯೂ, ನೀಚರಾಗಿಯೂ, ಮಾಡಿದ್ದೇನೆ;
ನೀವು ನನ್ನ ಮಾರ್ಗಗಳನ್ನು ಕೈ ಕೊಳ್ಳದೆ,
ನ್ಯಾಯ ಪ್ರಮಾಣದ ವಿಷಯ ಮುಖದಾಕ್ಷಿಣ್ಯವಾಗಿದ್ದ ಪ್ರಕಾರವೇ.
೧೦ ನಮ್ಮೆಲ್ಲರಿಗೆ ಒಬ್ಬನೇ ತಂದೆಯಲ್ಲವೋ?
ನಮ್ಮನ್ನು ಒಬ್ಬನೇ ದೇವರು ಸೃಷ್ಟಿಸಿದನಲ್ಲವೋ?
ಯಾಕೆ ಒಬ್ಬರಿಗೊಬ್ಬರು ವಂಚನೆಯಾಗಿ ನಡೆದು,
ನಮ್ಮ ತಂದೆಗಳ ಒಡಂಬಡಿಕೆಯನ್ನು ಅಪವಿತ್ರ ಮಾಡುತ್ತೇವೆ.
೧೧ ಯೆಹೂದವು ವಂಚನೆಯಾಗಿ ನಡ ಕೊಂಡಿದೆ;
ಇಸ್ರಯೇಲಿನಲ್ಲಿಯೂ, ಯೆರೂಸಲೇಮಿನಲ್ಲಿಯೂ, ಅಸಹ್ಯವಾದದ್ದು ಮಾಡಿ ಆಯಿತು;
ಯಾಕಂದರೆ ಯೆಹೂದವು

ಯೆಹೋವನು ಪ್ರೀತಿ ಮಾಡಿದ ಪರಿಶುದ್ಧವಾದದ್ದನ್ನೂ ಅಪವಿತ್ರ ಮಾಡಿ,
ಅನ್ಯ ದೇವರ ಮಗಳನ್ನೂ ಮದಿವೆ ಮಾಡಿ ಕೊಂಡಿದೆ.
೧೨ ಇದನ್ನು ಮಾಡುವ ಮನುಷ್ಯನನ್ನೂ,
ಎಚ್ಚರಿಕೆಯಾಗಿರುವವನನ್ನೂ ಉತ್ತರ ಕೊಡುವವನನ್ನೂ,
ಸೈನ್ಯಗಳ ಯೆಹೋವನಿಗೆ ಕಾಣಿಕೆ ಅರ್ಪಿಸುವವನನ್ನೂ,
ಯೆಹೋವನು ಯಾಕೋಬನ ಗುಡಾರಗಳೊಳಗಿಂದ ಕಡಿದು ಬಿಡುವನು.
೧೩ ಮತ್ತು ಎರಡನೇ ಸಾರಿ ಇದನ್ನು ಮಾಡಿದ್ದೀರಿ,
ಯೆಹೋವನ ಬಲಿಪೀಠಗಳನ್ನು ಕಣ್ಣೀರುಗಳಿಂದಲೂ,
ಅಳುವಿಕೆಯಿಂದಲೂ, ಮೂಲುಗುವಿಕೆಯಿಂದಲೂ, ಮುಚ್ಚಿದ್ದೀರಿ;
ಆದದರಿಂದ ಅವನು ಕಾಣಿಕೆಯನ್ನು ಇನ್ನು ಲಕ್ಷ್ಯ ಮಾಡದೆ,
ಅದನ್ನು ನಿಮ್ಮ ಕೈಯಿಂದ ಮೆಚ್ಚಿಕೆಯಾಗಿ ತಕ್ಕೊಳ್ಳುವದಿಲ್ಲ.
೧೪ ಆದರೆ ನೀವು—
ಯಾತಕ್ಕೆ? ಅನ್ನುತ್ತೀರಿ;
ಯಾತಕ್ಕಂದರೆ ಯೆಹೋವನು ನಿನಗೂ,
ನೀನು ವಂಚನೆಯಾಗಿ ನಡೆದ ನಿನ್ನ ಯೌವ್ವನದ ಹೆಂಡತಿಗೂ, ಸಾಕ್ಷಿಯಾಗಿದ್ದನು;
ಆದರೂ ಅವಳು ನಿನ್ನ ಜತೆಯವಳೂ,
ನಿನ್ನ ಒಡಂಬಡಿಕೆಯ ಹೆಂಡತಿಯೂ, ಆಗಿದ್ದಾಳೆ.
೧೫ ಮತ್ತು, ಅವನಿಗೆ ಆತ್ಮದ ಉಳುವು ಇದ್ದರೂ,
ಅವನು ಒಬ್ಬಳನ್ನೇ ಮಾತಲಿಲ್ಲವೋ?
ಮತ್ತು ಒಬ್ಬಳನ್ನು ಯಾತಕ್ಕೆ?
ಅವನು ದೇವ ಭಕ್ತಿಯುಳ್ಳ ಸಂತಾನವನ್ನು ಹುಡುಕುವದಕ್ಕಾಗಿಯೇ;
ಆದದರಿಂದ ನಿಮ್ಮ ಆತ್ಮದಲ್ಲಿ ಎಚ್ಚರಿಕೆಯಾಗಿರ್ರಿ;
ಒಬ್ಬನಾದರೂ ತನ್ನ ಯೌವ್ವನದ ಹೆಂಡತಿಯ ವಿಷಯ ವಂಚನೆಯಾಗಿ ನಡೆಯದೆ ಇರಲಿ.
೧೬ ಯಾಕಂದರೆ ಇಸ್ರಯೇಲಿನ ದೇವರಾದ ಯೆಹೋವ ಹೇಳುತ್ತಾನೆ—
ನಾನು ತಳ್ಳಿ ಬಿಡುವದನ್ನೂ,
ಒಬ್ಬನು ತನ್ನ ವಸ್ತ್ರವನ್ನು ಬಲಾತ್ಕಾರದಿಂದ ಮುಚ್ಚುವದನ್ನೂ,
ಹಗೆ ಮಾಡುತ್ತೇನೆಂದು,
ಸೈನ್ಯಗಳ ಯೆಹೋವನು ಹೇಳುತ್ತಾನೆ;
ಹೇಗಿರುವದರಿಂದ ನೀವು ವಂಚನೆಯಾಗಿ ನಡೆಯದ ಹಾಗೆ,
ನಿಮ್ಮ ಆತ್ಮದಲ್ಲಿ ಎಚ್ಚರಿಕೆಯಾಗಿರ್ರಿ.
೧೭ ನಿಮ್ಮ ಮಾತುಗಳಿಂದ ಯೆಹೋವನಿಗೆ ಬೇಸರ ಮಾಡಿದ್ದೀರಿ;
ಆದರೂ—ನಾವು ಯಾತರಿಂದ ಅವನಿಗೆ ಬೇಸರ ಮಾಡಿದ್ದೇವೆಂದು,
ಅನ್ನುತ್ತೀರಿ;
ಕೆಟ್ಟದ್ದನ್ನು ಮಾಡುವವರೆಲ್ಲರು ಯೆಹೋವನ ದೃಷ್ಟಿಯಲ್ಲಿ ಒಳ್ಳೆಯವರು,
ಅವರಲ್ಲಿ ಮೆಚ್ಚುತ್ತಾನೆಂದೂ,
ನ್ಯಾಯದ ದೇವರು ಎಲ್ಲಿ? ಎಂದೂ,
ಹೇಳುವದರಿಂದಲೇ.

## ೩. ಸಂಧಿ.

೧ ಇಗೋ ನನ್ನ ದೂತನನ್ನು ಕಳುಹಿಸುತ್ತೇನೆ;
ಅವನು ನನ್ನ ಮುಂದೆ ಮಾರ್ಗವನ್ನು ಸಿದ್ಧ ಮಾಡುವನು;
ಮತ್ತು ನೀವು ಹುಡುಕುವ ಕರ್ತನು
ಫಕ್ಕನೆ ತನ್ನ ದೇವಾಲಯಕ್ಕೆ ಬರುವನು;
ನೀವು ಸಂತೋಷ ಪಡುವ ಒಡಂಬಡಿಕೆಯ ದೂತನೇ,
ಇಗೋ ಬರುತ್ತಾನೆಂದು,
ಸೈನ್ಯಗಳ ಯೆಹೋವ ಹೇಳುತ್ತಾನೆ.
೨ ಆದರೆ ಅವನ ಬರುವಿಕೆಯ ದಿವಸವನ್ನು ಯಾರು ಸಹಿಸುವರು?
ಅವನು ಪ್ರತ್ಯಕ್ಷವಾಗುವಾಗ ಯಾರು ನಿಲ್ಲುವರು?
ಯಾಕಂದರೆ ಅವನು ಅಕ್ಕಸಾಲಿಗನ ಬೆಂಕಿಯ ಹಾಗೆಯೂ,
ಅಗಸನ ಚೌಳಿನ ಹಾಗೆಯೂ, ಇದ್ದಾನೆ.
೩ ಅವನು ಬೆಳ್ಳಿಯನ್ನು ಕರಗಿಸಿ,
ಶುದ್ಧ ಮಾಡುವವನಾಗಿ, ಕೂತು ಕೊಳ್ಳುವನು;
ಲೇವಿಯ ಕುಮಾರರನ್ನು ಶುದ್ಧ ಮಾಡಿ,
ಭಂಗಾರದ ಹಾಗೆಯೂ, ಬೆಳ್ಳಿಯ ಹಾಗೆಯೂ,
ಅವರನ್ನು ಶೋಧಿಸುವನು;
ಅವರು ಯೆಹೋವನಿಗೆ ನೀತಿಯಲ್ಲಿ ಕಾಣಿಕೆಯನ್ನು ಅರ್ಪಿಸುವದಕ್ಕಾಗಿಯೇ.
೪ ಆಗ ಯೆಹೂದದ, ಯೆರೂಸಲೇಮಿನ, ಕಾಣಿಕೆಯು ಯೆಹೋವನಿಗೆ,
ಪೂರ್ವದ ದಿವಸಗಳಲ್ಲಿಯೂ, ಮುಂಚಿನ ವರುಷಗಳಲ್ಲಿಯೂ, ಆದ ಹಾಗೆ,
ಸಮರ್ಪಕವಾಗಿರುವದು.
೫ ಮತ್ತು ನ್ಯಾಯಕ್ಕೋಸ್ಕರ ನಿಮಗೆ ಸವಿವಾಪಿಸುತ್ತೇನೆ;
ಆಗ ಶೂನ್ಯಗಾರರಿಗೂ,
ವ್ಯಭಿಚಾರಿಗಳಿಗೂ,
ಸುಳ್ಳು ಪ್ರಮಾಣ ಮಾಡುವವರಿಗೂ,
ಸಂಬಳದಲ್ಲಿ ಕೂಲಿಯವನಿಗೂ, ವಿಧವೆಗೂ, ದಿಕ್ಕಿಲ್ಲದವನಿಗೂ, ಬಲಾತ್ಕಾರ ಮಾಡುವವರಿಗೂ,
ಅನ್ಯನ ನ್ಯಾಯವನ್ನು ತಿರುಗಿಸಿ ಬಿಡುವವರಿಗೂ,
ನನಗೆ ಭಯ ಪಡದವರಿಗೂ, ವಿರೋಧವಾಗಿ
ಶೀಘ್ರವಾದ ಸಾಕ್ಷಿಗಾರನಾಗಿರುವೆನೆಂದು,
ಸೈನ್ಯಗಳ ಯೆಹೋವ ಹೇಳುತ್ತಾನೆ.
೬ ಯಾಕಂದರೆ ನಾನು ಯೆಹೋವನೇ;
ನಾನು ಬೇರೆಯಾಗುವವನಲ್ಲ;
ಆದದರಿಂದ ನೀವು ಓ ಯಾಕೋಬನ ಕುಮಾರರೇ, ಮುಗಿದು ಹೋಗಲಿಲ್ಲ.
೭ ನಿಮ್ಮ ತಂದೆಗಳ ದಿವಸಗಳಿಂದಲೇ,
ನನ್ನ ನೇಮಕಗಳನ್ನು ಬಿಟ್ಟು ಹೋಗಿದ್ದೀರಿ,
ಅವುಗಳನ್ನು ಕೈ ಕೊಳ್ಳಲಿಲ್ಲ;



ನನ್ನ ಬಳಿಗೆ ತಿರುಗಿ ಕೊಳ್ಳಿರಿ;
ಆಗ ನಾನು ನಿಮ್ಮ ಬಳಿಗೆ ತಿರುಗಿ ಕೊಳ್ಳುವೆನೆಂದು,
ಸೈನ್ಯಗಳ ಯೆಹೋವ ಹೇಳುತ್ತಾನೆ;
ಆದರೆ ನೀವು—
ಯಾತರಿಂದ ತಿರುಗಿ ಕೊಳ್ಳೋಣ?
ಎಂದು ಹೇಳುತ್ತೀರಿ.
೮ ಮನುಷ್ಯನು ದೇವರಲ್ಲಿ ಕಳ್ಳತನ ಮಾಡುವನೋ?
ಆದರೆ, ನೀವು ನನ್ನಲ್ಲಿ ಕಳ್ಳತನ ಮಾಡಿದ್ದೀರಿ;
ಆದರೆ ನೀವು—
ಯಾತರಲ್ಲಿ ನಿನ್ನಲ್ಲಿ ಕಳ್ಳತನ ಮಾಡಿದ್ದೇವೆಂದು,
ಅನ್ನುತ್ತೀರಿ;
ಹತ್ತನೇ ಪಾಲುಗಳಲ್ಲಿಯೇ, ಅರ್ಪಣೆಗಳಲ್ಲಿಯೇ.
೯ ಶಾಪವೇ ಶಾಪ ನಿಮಗಾಯಿತು;
ಯಾಕಂದರೆ, ನೀವು, ಹೌದು ಈ ಸಮಸ್ತ ಜನಾಂಗವೇ,
ನನ್ನಲ್ಲಿ ಕಳ್ಳತನ ಮಾಡಿದ್ದೀರಿ.
೧೦ ನನ್ನ ಮನೆಯಲ್ಲಿ ಆಹಾರವಿರುವ ಹಾಗೆ,
ಹತ್ತನೇ ಪಾಲುಗಳನ್ನೆಲ್ಲಾ ಬೊಕ್ಕಸದ ಮನೆಯಲ್ಲಿ ತನ್ನಿರಿ;
ಇದರಿಂದ ನನ್ನನ್ನು ಪರಿಕ್ಷಿಸಿರಿ;
ನಾನು ನಿಮಗೆ ಆಕಾಶದ ಕಿಟಕಿಗಳನ್ನು ತೆರೆದು,
ಸಾಕಾಗುವದ್ದಕ್ಕಿಂತ ಹೆಚ್ಚುವ ಪರ್ಯಂತರ
ನಿಮಗೆ ಆಶೀರ್ವಾದವನ್ನು ಸುರಿಸೆನೇ?
ಎಂದು ಸೈನ್ಯಗಳ ಯೆಹೋವ ಹೇಳುತ್ತಾನೆ.
೧೧ ಇದಲ್ಲದೆ ನಿಮ್ಮ ನಿಮಿತ್ತ ತಿಂದು ಬಿಡುವವನ್ನು ಗದರಿಸುವೆನು;
ಅವನು ನಿಮ್ಮ ಭೂಮಿಯ ಫಲವನ್ನು ಕೆಡಿಸನು;
ನಿಮ್ಮ ದ್ರಾಕ್ಷೆ ಬಳ್ಳಿ,
ಹೊಲದಲ್ಲಿ ತನ್ನ ಫಲವನ್ನು ಉದರಿಸಿ ಬಿಡುವದಿಲ್ಲವೆಂದು,
ಸೈನ್ಯಗಳ ಯೆಹೋವ ಹೇಳುತ್ತಾನೆ.
೧೨ ಮತ್ತು ಜನಾಂಗಗಳೆಲ್ಲಾ ನಿಮ್ಮನ್ನು ಭಾಗ್ಯವಂತರೆಂದನ್ನುವವು;
ಯಾಕಂದರೆ ನೀವು ರಮ್ಯವಾದ ದೇಶವಾಗುವಿರೆಂದು
ಸೈನ್ಯಗಳ ಯೆಹೋವ ಹೇಳುತ್ತಾನೆ.
೧೩ ನಿಮ್ಮ ಮಾತುಗಳು ನನಗೆ ವಿರೋಧವಾಗಿ ಬಲವಾಗಿದ್ದವೆಂದು,
ಯೆಹೋವ ಹೇಳುತ್ತಾನೆ;
ಆದರೆ ನೀವು—
ನಿನಗೆ ವಿರೋಧವಾಗಿ ಏನು ಮಾತಾಡಿದ್ದೇವೆ?
ಅನ್ನುತ್ತೀರಿ.
೧೪ ದೇವರನ್ನು ಸೇವಿಸುವದು ವ್ಯರ್ಥವೆಂದೂ,
ನಾವು ಅವನ ಕಾಯಿದೆಯನ್ನು ಕೈಕೊಂಡು,
ಸೈನ್ಯಗಳ ಯೆಹೋವನ ಮುಂದೆ ದುಃಖವಾಗಿ ನಡೆದದರಿಂದ,
ಏನು ಪ್ರಯೋಜನವೆಂದೂ,
೧೫ ಈಗ ನಾವು ಗರ್ವಿಷ್ಠರನ್ನು ಭಾಗ್ಯವಂತರೆಂದನ್ನುತ್ತೇವೆ,
ಹೌದು ದುಷ್ಟತ್ವ ಮಾಡುವವರು ಅಭಿವೃದ್ಧಿಯಾಗುತ್ತಾರೆ,
ಹೌದು, ದೇವರನ್ನು ಶೋಧಿಸುವವರೇ ರಕ್ಷಿಸಲ್ಪಟ್ಟಿದ್ದಾರೆ,
ಎಂದೂ, ಹೇಳಿದ್ದೀರಿ.
೧೬ ಆಗ ಯೆಹೋವನಿಗೆ ಭಯ ಪಡುವವರು,
ಒಬ್ಬರ ಸಂಗಡಲೊಬ್ಬರು ಮಾತಾಡಿ ಕೊಂಡರು;
ಮತ್ತು ಯೆಹೋವನು ಕಿವಿಗೊಟ್ಟು, ಕೇಳಿದನು;
ಇದಲ್ಲದೆ ಯೆಹೋವನಿಗೆ ಭಯ ಪಡುವವರಿಗೋಸ್ಕರವೂ,
ಅವನ ಹೆಸರನ್ನು ನೆನಸುವವರಿಗೋಸ್ಕರವೂ,
ಅವನ ಮುಂದೆ ಜ್ಞಾಪಕ ಪುಸ್ತಕವು ಬರಿಯಲ್ಪಟ್ಟಿತು.
೧೭ ನಾನು ನನ್ನ ಒಡೆವೆಗಳನ್ನು ಸೇರಿಸಿ ಕೊಳ್ಳುವ ದಿವಸದಲ್ಲಿ,
ಅವರು ನನ್ನವರಾಗಿರುವರೆಂದೂ,
ಒಬ್ಬನು ತನಗೆ ಸೇವೆ ಮಾಡುವ ತನ್ನ ಮಗನನ್ನು ಕನಿಕರಿಸುವ ಪ್ರಕಾರ,
ಅವರನ್ನು ಕನಿಕರಿಸುವೆನೆಂದು,
ಸೈನ್ಯಗಳ ಯೆಹೋವ ಹೇಳುತ್ತಾನೆ.
೧೮ ಆಗ ನೀವು ತಿರುಗಿ ಕೊಂಡು,
ನೀತಿವಂತನಿಗೂ ದುಷ್ಟನಿಗೂ,
ದೇವರ ಸೇವೆ ಮಾಡುವವನಿಗೂ ಮಾಡದವನಿಗೂ,
ಇರುವ ಹೆಚ್ಚುಕಡಿಮೆಯನ್ನು ನೋಡುವಿರೆಂದು,
ಸೈನ್ಯಗಳ ಯೆಹೋವ ಹೇಳುತ್ತಾನೆ.

## ೪. ಸಂಧಿ.

೧ ಯಾಕಂದರೆ, ಇಗೋ ದಿನವು ಬರುತ್ತದೆ;
ಅದು ಒಲೆಯ ಹಾಗೆ ಉರಿಯುವದು;
ಆಗ ಗರ್ವಿಷ್ಠರೆಲ್ಲರೂ,
ಕೆಟ್ಟದ್ದನ್ನು ಮಾಡುವವರೆಲ್ಲರೂ, ಕೂಳೆಯಾಗಿರುವರು;
ಬರುವ ಆ ದಿನವು ಅವರನ್ನು ಸುಟ್ಟು ಬಿಡುವದು;
ಬೇರನ್ನಾದರೂ ಕೊಂಬೆಯನ್ನಾದರೂ ಅವರಿಗೆ ಬಿಡದು;
ಎಂದು ಸೈನ್ಯಗಳ ಯೆಹೋವ ಹೇಳುತ್ತಾನೆ.
೨ ಆದರೆ ನನ್ನ ಹೆಸರಿಗೆ ಭಯ ಪಡುವವರಾದ ನಿಮಗೆ,
ನೀತಿಯ ಸೂರ್ಯನು, ತನ್ನ ರೆಕ್ಕೆಗಳಲ್ಲಿ ಸ್ವಸ್ಥವುಳ್ಳವನಾಗಿ, ಉದಯಿಸುವನು;
ಮತ್ತು ನೀವು ಹೊರಟು, ಕೊಬ್ಬಿದ ಕರುಗಳ ಹಾಗೆ ಕುಣಿದಾಡುವಿರಿ.
೩ ಮತ್ತು ದುಷ್ಟರನ್ನು ತುಳಿದು ಬಿಡುವಿರಿ;
ಯಾಕಂದರೆ ನಾನು ಇದನ್ನು ಮಾಡುವ ದಿವಸದಲ್ಲಿ,
ಅವರು ನಿಮ್ಮ ಪಾದಗಳ ಕೆಳಗೆ ಬೂದಿಯಾಗಿರುವರೆಂದು,
ಸೈನ್ಯಗಳ ಯೆಹೋವ ಹೇಳುತ್ತಾನೆ.
೪ ನನ್ನ ಸೇವಕನಾದ ಮೋಶೆಯ ನ್ಯಾಯಪ್ರಮಾಣವನ್ನೂ,
ನಾನು ಅವನಿಗೆ ಹೋರೆಬಿನಲ್ಲಿ ಸಮಸ್ತ ಇಸ್ರಯೇಲಿಗೋಸ್ಕರ ಆಜ್ಞಾಪಿಸಿದ್ದನ್ನೂ,
ನೇಮಕಗಳನ್ನೂ ನ್ಯಾಯಗಳನ್ನೂ ಜ್ಞಾಪಕ ಮಾಡಿ ಕೊಳ್ಳಿರಿ;
೫ ಇಗೋ, ಯೆಹೋವನ ದೊಡ್ಡ ಭಯಂಕರವಾದ ದಿವಸವು ಬರುವದಕ್ಕಿಂತ ಮುಂಚೆ,
ನಿಮಗೆ ಪ್ರವಾದಿಯಾದ ಎಲೀಯನನ್ನು ಕಳುಹಿಸುತ್ತೇನೆ.
೬ ನಾನು ಬಂದು ಭೂಮಿಯನ್ನು ಶಾಪದಿಂದ ಬಡಿಯದ ಹಾಗೆ,
ಅವನು ತಂದೆಗಳ ಹೃದಯವನ್ನು ಮಕ್ಕಳ ಕಡೆಗೂ,
ಮಕ್ಕಳ ಹೃದಯವನ್ನು ತಮ್ಮ ತಂದೆಗಳ ಕಡೆಗೂ, ತಿರುಗಿಸುವನು.

# GOSPEL OF MATTHEW.

## ಮತ್ತಾಯನು ಬರೆದ ಸುವಾರ್ತೆ.

### ೧. ಸಂಧಿ.

೧ ಅಬ್ರಹಾಮನ ಮಗನಾದ ದಾವೀದನ ಮಗನಾದ ಯೇಸು
೨ ಕ್ರಿಸ್ತನ ವಂಶಾವಳಿಯು. ಅಬ್ರಹಾಮನು ಇಸಾಕನನ್ನು ಪಡೆದ
ನು. ಇಸಾಕನು ಯಾಕೋಬನನ್ನು ಪಡೆದನು. ಯಾಕೋಬನು
೩ ಯೂದನನ್ನೂ ಅವನ ಸಹೋದರರನ್ನೂ ಪಡೆದನು. ಯೂ
ದನು ತಾಮರಳಿಂದ ಫಾರೆಸನನ್ನೂ ಜರನನ್ನೂ ಪಡೆದನು.
ಫಾರೆಸನು ಎಸ್ರೋಮನನ್ನು ಪಡೆದನು. ಎಸ್ರೋಮನು ಅರಾ
೪ ಮನನ್ನು ಪಡೆದನು. ಅರಾಮನು ಅಮಿನದಾಬನನ್ನು ಪಡೆದನು.
ಅಮಿನದಾಬನು ನಹಸ್ಸೋನನನ್ನು ಪಡೆದನು. ನಹಸ್ಸೋನನು
೫ ಸಲ್ಮೋನನನ್ನು ಪಡೆದನು. ಸಲ್ಮೋನನು ರಹಾಬಳಿಂದ ಬೋ
ವಜನನ್ನು ಪಡೆದನು. ಬೋವಜನು ರೂತಳಿಂದ ಓಬೆದನನ್ನು
೬ ಪಡೆದನು. ಓಬೆದನು ಇಷಾಯನನ್ನು ಪಡೆದನು. ಇಷಾಯನು
ಅರಸನಾದ ದಾವೀದನನ್ನು ಪಡೆದನು. ಅರಸನಾದ ದಾವೀದನು
ಉರೀಯನ ಹೆಂಡತಿಯಿಂದ ಸೊಲೊಮೋನನನ್ನು ಪಡೆದನು.
೭ ಸೊಲೊಮೋನನು ರೆಹಬೊವಾಮನನ್ನು ಪಡೆದನು. ರೆಹಬೊ
ವಾಮನು ಅಬೀಯನನ್ನು ಪಡೆದನು. ಅಬೀಯನು ಆಸನನ್ನು
೮ ಪಡೆದನು. ಆಸನು ಯೋಸಫಾತನನ್ನು ಪಡೆದನು. ಯೋಸ
ಫಾತನು ಯೋರಾಮನನ್ನು ಪಡೆದನು. ಯೋರಾಮನು ಉಜ್ಜೀ
೯ಯನನ್ನು ಪಡೆದನು. ಉಜ್ಜೀಯನು ಯೊತಾಮನನ್ನು ಪಡೆದ
ನು. ಯೊತಾಮನು ಆಹಜನನ್ನು ಪಡೆದನು. ಆಹಜನು ಹಿಜ್ಜೆ
೧೦ ಕೀಯನನ್ನು ಪಡೆದನು. ಹಿಜ್ಜೆಕೀಯನು ಮನಾಸ್ಸೆಯನ್ನು ಪಡೆ
ದನು. ಮನಾಸ್ಸೆಯು ಆಮೋನನನ್ನು ಪಡೆದನು. ಆಮೋನನು
೧೧ ಯೊಷೀಯನನ್ನು ಪಡೆದನು. ಯೊಷೀಯನು ಬಾಬೆಲಿನ ಸೆರೆ
ಯ ಸಮಯದಲ್ಲಿ ಯೆಕೊನೀಯನನ್ನೂ ಅವನ ಸಹೋದರ
೧೨ ರನ್ನೂ ಪಡೆದನು. ಬಾಬೆಲಿನ ಸೆರೆಯ ತರುವಾಯ ಯೆಕೊನೀ
ಯನು ಸಲತಿಯೇಲನನ್ನು ಪಡೆದನು. ಸಲತಿಯೇಲನು ಜೆರುಬಾ
೧೩ ಬೆಲನನ್ನು ಪಡೆದನು. ಜೆರುಬಾಬೆಲನು ಅಬಿಹೂದನನ್ನು ಪಡೆದ
ನು. ಅಬಿಹೂದನು ಎಲ್ಯಕೀಮನನ್ನು ಪಡೆದನು. ಎಲ್ಯಕೀಮ
೧೪ ನು ಅಜೋರನನ್ನು ಪಡೆದನು. ಅಜೋರನು ಚದೋಕನನ್ನು
ಪಡೆದನು. ಚದೋಕನು ಅಖೀಮನನ್ನು ಪಡೆದನು. ಅಖೀಮನು
೧೫ ಎಲಿಹೂದನನ್ನು ಪಡೆದನು. ಎಲಿಹೂದನು ಎಲಿಯಾಜರನನ್ನು
ಪಡೆದನು. ಎಲಿಯಾಜರನು ಮತ್ತಾನನನ್ನು ಪಡೆದನು. ಮತ್ತಾ
೧೬ ನನು ಯಾಕೋಬನನ್ನು ಪಡೆದನು. ಯಾಕೋಬನು ಕ್ರಿಸ್ತ
ನೆಂಬ ಯೇಸುವನ್ನು ಹೆತ್ತ ಮರಿಯಳ ಗಂಡನಾದ ಯೋಸೆಫ
ನನ್ನು ಪಡೆದನು.
೧೭ ಹೀಗೆ ಅಬ್ರಹಾಮನಿಂದ ದಾವೀದನ ವರಿಗೂ ತಲಾಂತರಗಳೆ
ಲ್ಲಾ ಹದಿನಾಲ್ಕು ತಲಾಂತರಗಳು. ಮತ್ತು ದಾವೀದನಿಂದ ಬಾಬೆ
ಲಿನ ಸೆರೆಯ ವರಿಗೂ ಹದಿನಾಲ್ಕು ತಲಾಂತರಗಳು. ಮತ್ತು
ಬಾಬೆಲಿನ ಸೆರೆಯಿಂದ ಕ್ರಿಸ್ತನ ವರಿಗೂ ಹದಿನಾಲ್ಕು ತಲಾಂತ
ರಗಳು.

೧೮ ಆದರೆ ಯೇಸು ಕ್ರಿಸ್ತನ ಜನ್ಮವು ಹೀಗಾಯಿತು—ಅವನ
ತಾಯಿಯಾದ ಮರಿಯಳು ಯೋಸೆಫನಿಗೆ ನೇಮಕ ಮಾಡಲ್ಪ
ಟ್ಟಿರಲಾಗಿ, ಅವರು ಕೂಡುವದಕ್ಕಿಂತ ಮುಂಚೆ, ಅವಳು ಪರಿಶು
೧೯ ದ್ಧಾತ್ಮದಿಂದ ಗರ್ಭ ಧರಿಸಿದವಳಾಗಿ ಕಾಣಲ್ಪಟ್ಟಳು. ಆದರೆ
ಅವಳ ಗಂಡನಾದ ಯೋಸೆಫನು ನೀತಿವಂತನಾಗಿದ್ದು, ಅವಳನ್ನು
ಬಹಿರಂಗ ಮಾಡ ಮನಸ್ಸಿಲ್ಲದೆ, ಅಂತರಂಗವಾಗಿ ಅವಳನ್ನು ಬಿ
೨೦ ಟ್ಟು ಬಿಡ ಬೇಕೆಂದಿದ್ದನು. ಅವನು ಇವುಗಳನ್ನು ಆಲೋಚಿಸು
ತ್ತಿರುವಾಗ, ಇಗೋ, ಕರ್ತನ ದೂತನು ಸ್ವಪ್ನದಲ್ಲಿ ಅವನಿಗೆ ಪ್ರ
ತ್ಯಕ್ಷವಾಗಿ, ದಾವೀದನ ಮಗನಾದ ಯೋಸೆಫನೇ, ನಿನ್ನ ಹೆಂ
ಡತಿಯಾದ ಮರಿಯಳನ್ನು ಅಂಗೀಕರಿಸುವದಕ್ಕೆ ಭಯ ಪಡ
ಬೇಡ; ಯಾಕಂದರೆ ಅವಳಲ್ಲಿ ಉಂಟಾದದ್ದು ಪರಿಶುದ್ಧಾತ್ಮದಿಂ
೨೧ ದಾಗಿದೆ; ಅವಳು ಮಗನನ್ನು ಹೆರುವಳು; ನೀನು ಅವನ ಹೆಸರ
ನ್ನು ಯೇಸುವೆಂದು ಕರೆಯ ಬೇಕು; ಯಾಕಂದರೆ ಅವನು
ತನ್ನ ಜನರನ್ನು ಅವರ ಪಾಪಗಳೊಳಗಿಂದ ರಕ್ಷಿಸುವನು, ಅಂ
೨೨ ದನು. ಇಗೋ, ಕನ್ಯಾಸ್ತ್ರೀಯು ಗರ್ಭ ಧರಿಸಿ, ಮಗನನ್ನು
ಹೆರುವಳು; ಅವನಿಗೆ, ನಮ್ಮ ಸಂಗಡ ದೇವರು ಇದ್ದಾನೆಂಬ ಅ
೨೩ ರ್ಥವುಳ್ಳ ಇಮ್ಮಾನುವೇಲನೆಂಬದಾಗಿ ಹೆಸರಿಡುವರೆಂದು, ಕರ್ತ
ನು ಪ್ರವಾದಿಯ ಮುಖಾಂತರ ಹೇಳಿಸಿದ ಮಾತು ಈಡೇರುವ
೨೪ ಹಾಗೆ, ಇದೆಲ್ಲಾ ಸಂಭವಿಸಿತು. ಆಗ ಯೋಸೆಫನು ನಿದ್ದೆ ಳಿಲಿದೆ
ದ್ದು, ಕರ್ತನ ದೂತನು ತನಗೆ ಆಜ್ಞಾಪಿಸಿದ ಹಾಗೆಯೇ ಮಾಡಿ,
೨೫ ತನ್ನ ಹೆಂಡತಿಯನ್ನು ಅಂಗೀಕರಿಸಿ, ಅವಳು ತನ್ನ ಚೊಚ್ಚಲ ಮ
ಗನನ್ನು ಹೆರುವ ಪರ್ಯಂತರ ಅವಳನ್ನು ಅರಿಯಲಿಲ್ಲ. ಮತ್ತು
ಅವನಿಗೆ ಯೇಸುವೆಂಬ ಹೆಸರಿಟ್ಟನು.

### ೨. ಸಂಧಿ.

೧ ಯೇಸು ಅರಸನಾದ ಹೆರೋದನ ದಿನಗಳಲ್ಲಿ ಯೆಹೂದದ
ಬೇತ್ಲೆಹೇಮಿನಲ್ಲಿ ಹುಟ್ಟಿದಾಗ, ಇಗೋ, ಪಂಡಿತರು ಮೂಡಣ
೨ ದಿಂದ ಯೆರೂಸಲೇಮಿಗೆ ಬಂದು, ಯಹೂದ್ಯರಿಗೆ ಅರಸನಾಗಿ
ಹುಟ್ಟಿದವನು ಎಲ್ಲಿ? ಯಾಕಂದರೆ ಮೂಡಣದಲ್ಲಿ ಅವನ ನಕ್ಷ
ತ್ರವನ್ನು ನೋಡಿ, ಅವನಿಗೆ ನಮಸ್ಕರಿಸ ಬಂದೆವು, ಅಂದರು.
೩ ಇದನ್ನು ಕೇಳಿ, ಅರಸನಾದ ಹೆರೋದನೂ ಯೆರೂಸಲೇ
೪ ಮೆಲ್ಲಾ ಸಹಿತವಾಗಿ ಕಳವಳ ಪಟ್ಟು, ಎಲ್ಲಾ ಪ್ರಧಾನ ಯಾಜಕರ
ನ್ನೂ ಜನರ ಶಾಸ್ತ್ರಿಗಳನ್ನೂ ಕೂಡ ಕರಿಸಿ, ಕ್ರಿಸ್ತನು ಎಲ್ಲಿ ಹು
ಟ್ಟುವನೆಂದು, ಅವರ ಹತ್ತರ ವಿಚಾರಿಸಿದನು. ಅವರು ಅವನಿಗೆ,
೫ ಯೆಹೂದದ ಬೇತ್ಲೆಹೇಮಿನಲ್ಲಿಯೇ; ಯಾಕಂದರೆ—ಯೆಹೂ
ದ ದೇಶದ ಬೇತ್ಲೆಹೇಮೇ, ನೀನು ಯೆಹೂದದ ಅಧಿಪತಿಗಳಲ್ಲಿ
ಎಷ್ಟು ಮಾತ್ರ ಸಣ್ಣದಲ್ಲ; ಯಾಕಂದರೆ ನಿನ್ನಿಂದಲೇ ನನ್ನ
ಜನರಾದ ಇಸ್ರಯೇಲನ್ನು ಆಳುವ ಅಧಿಪತಿಯು ಹೊರಡುವನೆಂ
ದು, ಪ್ರವಾದಿಯ ಮುಖಾಂತರ ಬರೆದದೆ, ಅಂದರು.
೬ ಆಗ ಹೆರೋದನು ಅಂತರಂಗವಾಗಿ ಪಂಡಿತರನ್ನು ಕರಿಸಿ, ನಕ್ಷ
ತ್ರವು ಕಾಣಿಸಿದ ಕಾಲವನ್ನು ಅವರ ಹತ್ತರ ಜಾಗ್ರತೆಯಾಗಿ ವಿಚಾ

೪ ರಿಸಿ, ನೀವು ಹೋಗಿ, ಆ ಕೂಸನ್ನು ಕುರಿತು ಜಾಗ್ರತೆಯಾಗಿ
ಪರಿಶೋಧಿಸಿರಿ; ಕಂಡು ಕೊಂಡರೆ, ನಾನು ಸಹ ಬಂದು, ಅದಕ್ಕೆ
ನಮಸ್ಕರಿಸುವ ಹಾಗೆ ನನಗೆ ತಿಳಿಸಿರೆಂದು ಹೇಳಿ, ಅವರನ್ನು ಬೇ
೯ ತ್ಲೆಹೇಮಿಗೆ ಕಳುಹಿಸಿದನು. ಅವರು ಅರಸನ ಮಾತು ಕೇಳಿ,
ಹೊರಟರು. ಮತ್ತು, ಇಗೋ, ಅವರು ಮೂಡಣದಲ್ಲಿ ಕಂಡ ನಕ್ಷ
ತ್ರವು ಕೂಸು ಇದ್ದ ಸ್ಥಳದ ಮೇಲೆ ಬಂದು ನಿಲ್ಲುವ ತನಕ, ಅವರ
೧೦ ಮುಂದೆ ನಡೆಯಿತು. ಅವರು ನಕ್ಷತ್ರವನ್ನು ನೋಡಿ, ಅತಿ ಸಂ
೧೧ ತೋಷದಿಂದ ಸಂತೋಷ ಪಟ್ಟರು. ಮತ್ತು ಮನೆಯೊಳಗೆ
ಬಂದು, ಕೂಸನ್ನು ತಾಯಿಯಾದ ಮರಿಯಳ ಬಳಿಯಲ್ಲಿ ಕಂ
ಡು, ಅಡ್ಡ ಬಿದ್ದು, ಅದಕ್ಕೆ ನಮಸ್ಕರಿಸಿ, ತಮ್ಮ ಬೊಕ್ಕಸಗಳ
ನ್ನು ಬಿಚ್ಚಿ, ಅದಕ್ಕೆ ಜೆನ್ನವನನ್ನೂ ಧೂಪವನ್ನೂ ಬೋಳವ
೧೨ ನ್ನೂ ಕಾಣಿಕೆಗಳಾಗಿ ಅರ್ಪಿಸಿದರು. ಮತ್ತು, ಹೆರೋದನ ಬ
ಳಿಗೆ ತಿರಿಗಿ ಹೋಗ ಬಾರದೆಂದು, ಸ್ವಪ್ನದಲ್ಲಿ ದೈವೋತ್ತರ
ಹೊಂದಿ, ಬೇರೆ ಮಾರ್ಗವಾಗಿ ತಮ್ತು ದೇಶಕ್ಕೆ ಹೋದರು.

೧೩ ಅವರು ಹೋದ ಮೇಲೆ, ಇಗೋ, ಕರ್ತನ ದೂತನು ಸ್ವಪ್ನ
ದಲ್ಲಿ ಯೋಸೆಫನಿಗೆ ಪ್ರತ್ಯಕ್ಷವಾಗಿ, ನೀನು ಎದ್ದು, ಕೂಸನ್ನೂ
ಅದರ ತಾಯಿಯನ್ನೂ ತೆಗೆದು ಕೊಂಡು, ಐಗುಪ್ತಕ್ಕೆ ಓಡಿ
ಹೋಗಿ, ನಾನು ನಿನಗೆ ಹೇಳುವ ತನಕ ಅಲ್ಲಿ ಇರು; ಯಾಕಂದರೆ
ಹೆರೋದನು ಆದನ್ನು ನಾಶನ ಮಾಡುವದಕ್ಕೆ, ಕೂಸನ್ನು ಹು
೧೪ ಡುಕುವನು, ಅಂದನು. ಆಗ, ಐಗುಪ್ತದೊಳಗಿಂದ ನನ್ನ ಮಗ
ನನ್ನು ಕರೆವೆನೆಂದು, ಕರ್ತನು ಪ್ರವಾದಿಯ ಮುಖಾಂತರ ಹೇ
೧೫ ಳಿದ ಮಾತು ಈಡೇರುವ ಹಾಗೆ, ಅವನು ಎದ್ದು, ಕೂಸನ್ನೂ
ಅದರ ತಾಯಿಯನ್ನೂ ರಾತ್ರಿಯಲ್ಲಿ ತೆಗೆದು ಕೊಂಡು, ಐಗುಪ್ತ
ಕ್ಕೆ ಹೊರಟು, ಹೆರೋದನು ತೀರಿ ಹೋಗುವ ಪರ್ಯಂತರ
ಅಲ್ಲೇ ಇದ್ದನು.

೧೬ ಆಗ ಹೆರೋದನು, ತಾನು ಪಂಡಿತರಿಂದ ಮೋಸ ಹೋದ
ನೆಂದು ತಿಳಿದು, ಬಹಳವಾಗಿ ಕೋಪಗೊಂಡು, ಆಳುಗಳನ್ನು ಕಳು
ಹಿಸಿ, ತಾನು ಪಂಡಿತರಿಂದ ಜಾಗ್ರತೆಯಾಗಿ ಶೋಧಿಸಿದ ಕಾಲದ
ಪ್ರಕಾರ, ಬೇತ್ಲೆಹೇಮಿನಲ್ಲಿಯೂ ಅದರ ಸಮಸ್ತ ಪ್ರಾಂತ್ಯಗಳ
ಲ್ಲಿಯೂ ಎರಡು ವರುಷವೂ ಅದಕ್ಕೊಳಗಾಗಿಯೂ ಇದ್ದ ಎಲ್ಲಾ
೧೭ ಮಕ್ಕಳನ್ನು ಕೊಂದು ಹಾಕಿಸಿದನು. ಆಗ ಪ್ರವಾದಿಯಾದ ಯೆ
೧೮ ಕೆಮಿಯಾನು ಹೇಳಿದ ಮಾತು ಈಡೇರಿತು; ಏನಂದರೆ, ರಾಮ
ದಲ್ಲಿ ಶಬ್ದವು ಕೇಳಲ್ಪಟ್ಟಿತು, ಅಂಗಲಾಚುವಿಕೆಯೂ ಅಳುವಿಕೆ
ಯೂ ಬಹು ಗೋಳಾಟವೂ; ರಾಹೆಲಳು ತನ್ನ ಮಕ್ಕಳಿಗೋ
ಸ್ಕರ ಅಳುತ್ತಾ, ಅವರು ಇಲ್ಲದ್ದರಿಂದ ಆದರಣೆ ಹೊಂದಲೊ
ಲ್ಲದೆ ಇದ್ದಳು.

೧೯ ಆದರೆ ಹೆರೋದನು ತೀರಿ ಹೋದ ಮೇಲೆ, ಇಗೋ, ಐಗುಪ್ತ
ದಲ್ಲಿ ಕರ್ತನ ದೂತನು ಸ್ವಪ್ನದಲ್ಲಿ ಯೋಸೆಫನಿಗೆ ಪ್ರತ್ಯಕ್ಷ
೨೦ ವಾಗಿ, ನೀನು ಎದ್ದು, ಕೂಸನ್ನೂ ಅದರ ತಾಯಿಯನ್ನೂ ತೆಗೆ
ದು ಕೊಂಡು, ಇಸ್ರಯೇಲ್ ದೇಶಕ್ಕೆ ಹೋಗು. ಯಾಕಂದರೆ
ಕೂಸಿನ ಪ್ರಾಣವನ್ನು ಹುಡುಕಿದವರು ಸತ್ತು ಹೋದರು, ಅಂದ
೨೧ ನು. ಆಗಲವನು ಎದ್ದು, ಕೂಸನ್ನೂ ಅದರ ತಾಯಿಯನ್ನೂ
೨೨ ತೆಗೆದು ಕೊಂಡು, ಇಸ್ರಯೇಲ್ ದೇಶಕ್ಕೆ ಬಂದನು. ಆದರೆ ಅ
ರ್ಕೆಲಾವನು ಅವನ ತಂದೆಯಾದ ಹೆರೋದನಿಗೆ ಬದಲಾಗಿ
ಯೆಹೂದವನ್ನು ಆಳುತ್ತಾನೆಂದು ಕೇಳಿ, ಅಲ್ಲಿಗೆ ಹೋಗ ಭಯ
ಪಟ್ಟು, ಸ್ವಪ್ನದಲ್ಲಿ ದೈವೋತ್ತರ ಹೊಂದಿ, ಗಲಿಲಾಯದ ಮೇ
೨೩ ರೆಗಳಿಗೆ ಹೋದನು. ಮತ್ತು ಬಂದು, ಅವನು ನಜರಾಯನೆಂದು
ಕರೆಯಲ್ಪಡುವನೆಂಬದಾಗಿ, ಪ್ರವಾದಿಗಳ ಮುಖಾಂತರ ಹೇಳಿಸಿ
ದ ಮಾತು ಈಡೇರುವ ಹಾಗೆ, ನಜರೇತೆಂಬ ಪಟ್ಟಣದಲ್ಲಿ ವಾಸ ಮಾ
ಡಿದನು.

## 3. ಸಂಧಿ.

೧ ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು ಬಂದು, ಯೆಹೂ
೨ ದದ ಅರಣ್ಯದಲ್ಲಿ ಸಾರಿ ಹೇಳಿದ್ದೇನಂದರೆ, ಮಾನಸಾಂತರ
ಪಡಿರಿ, ಯಾಕಂದರೆ ಪರಲೋಕ ರಾಜ್ಯವು ಸಮೀಪವಾಯಿತು.
3 ಕರ್ತನ ಮಾರ್ಗವನ್ನು ಸಿದ್ಧ ಮಾಡಿ, ಅವನ ಹಾದಿಗಳನ್ನು
ನೆಟ್ಟಗೆ ಮಾಡಿರೆಂದು, ಅರಣ್ಯದಲ್ಲಿ ಕೂಗುವವನ ಶಬ್ದವದೆ ಎಂಬ
ದಾಗಿ, ಪ್ರವಾದಿಯಾದ ಯೆಶಾಯನಿಂದ ಹೇಳಲ್ಪಟ್ಟವನು ಇವ
೪ ನೇ. ಈ ಯೋಹಾನನಿಗೆ ಒಂಟೆ ಕೂದಲಿನ ವಸ್ತ್ರವೂ, ಅವನ
ನಡುವಿನ ಸುತ್ತು ತೊಗಲಿನ ನಡುಕಟ್ಟೂ ಇದ್ದವು. ಮಿಡಿತೆಗಳೂ
ಕಾಡ ಜೇನೂ ಅವನ ಆಹಾರವಾಗಿದ್ದವು.

೫ ಆಗ ಯೆರೂಸಲೇಮೂ ಸಮಸ್ತ ಯೆಹೂದವೂ ಯೊರ್ದ
ನಿನ ಸುತ್ತಲಿರುವ ಸಮಸ್ತ ದೇಶವೂ ಅವನಬಳಿಗೆ ಹೊರಟು ಹೋ
೬ ಗಿ, ತಮ್ತು ಪಾಪಗಳನ್ನು ಅರಿಕೆ ಮಾಡಿ, ಅವನಿಂದ ಯೊರ್ದ
೭ ನಿನಲ್ಲಿ ಸ್ನಾನ ಹೊಂದಿದರು. ಆದರೆ ಅವನು, ಫರಿಸಾಯರಲ್ಲಿ
ಯೂ ಸದ್ದುಕಾಯರಲ್ಲಿಯೂ ಅನೇಕರು ತನ್ನ ಸ್ನಾನಕ್ಕೆ ಬರು
ವದನ್ನು ನೋಡಿ, ಅವರಿಗೆ ಹೇಳಿದ್ದೇನಂದರೆ, ಸರ್ಪ ಜಾತಿಯ
ವರೇ, ಬರುವ ಕೋಪಕ್ಕೆ ತಪ್ಪಿಸಿ ಕೊಳ್ಳ ನಿಮಗೆ ತೋರಿಸಿದವ
೮ ನ್ಯಾರು! ಹಾಗಾದರೆ ಮಾನಸಾಂತರಕಕ್ಕೆ ತಕ್ಕ ಫಲಗಳನ್ನು ಕೊ
೯ ಡಿರಿ. ಮತ್ತು, ಅಬ್ರಹಾಮನು ನಮಗೆ ತಂದೆಯಾಗಿದ್ದಾನೆಂದು,
ನಿಮ್ಮೊಳಗೆ ಹೇಳಿ ಕೊಳ್ಳುವದಕ್ಕೆ ನೆನಸ ಬೇಡಿರಿ. ಯಾಕಂದರೆ,
ದೇವರು ಈ ಕಲ್ಲುಗಳಿಂದ ಅಬ್ರಹಾಮನಿಗೆ ಮಕ್ಕಳನ್ನು ಎಬ್ಬಿಸ
೧೦ ಬಲ್ಲನೆಂದು, ನಿಮಗೆ ಹೇಳುತ್ತೇನೆ. ಮತ್ತು ಈಗಲೇ ಮರಗಳ ಬೇ
ರಿಗೆ ಕೊಡಲಿ ಇಟ್ಟಿದೆ; ಆದದರಿಂದ ಒಳ್ಳೇ ಫಲ ಕೊಡದ ಮರಗ
೧೧ ಳೆಲ್ಲಾ ಕಡಿಯಲ್ಪಟ್ಟು, ಬೆಂಕಿಯಲ್ಲಿ ಹಾಕಲ್ಪಡುವವು. ನಾನು
ನೀರಿನಿಂದ ಮಾನಸಾಂತರಕ್ಕೋಸ್ಕರ ನಿಮಗೆ ಸ್ನಾನ ಕೊಡು
ತ್ತೇನೆ; ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಅವನ
ಕೆರಗಳನ್ನು ಹೊರ ನಾನು ಯೋಗ್ಯನಲ್ಲ; ಅವನು ಪರಿಶುದ್ಧಾ
ತ್ಮದಿಂದಲೂ ಬೆಂಕಿಯಿಂದಲೂ ನಿಮಗೆ ಸ್ನಾನ ಕೊಡುವನು.
೧೨ ಅವನ ಕೈಯಲ್ಲಿ ಅವನ ಪೊರವದೆ; ತನ್ನ ಕಣವನ್ನು ಶುಚಿ
ಮಾಡಿ, ತನ್ನ ಗೋಧಿಯನ್ನು ಕಣಜದಲ್ಲಿ ಕೂಡಿಸಿ ಇಟ್ಟು, ಹೊ
ಟ್ಟನ್ನು ಆರದ ಬೆಂಕಿಯಿಂದ ಸುಟ್ಟು ಬಿಡುವನು.

೧೩ ಆಗ ಯೇಸು ಗಲಿಲಾಯದಿಂದ ಯೊರ್ದನಿಗೆ, ಯೋ
ಹಾನನ ಬಳಿಗೆ, ಅವನಿಂದ ಸ್ನಾನ ಹೊಂದುವದಕ್ಕೆ, ಬಂದನು.
೧೪ ಆದರೆ ಯೋಹಾನನು, ನಿನ್ನಿಂದ ಸ್ನಾನ ಹೊಂದುವದು ನನಗೆ
ಅಗತ್ಯವಿರಲಾಗಿ, ನೀನು ನನ್ನ ಬಳಿಗೆ ಬರುತ್ತೀಯೋ! ಎಂ
೧೫ ದು ಹೇಳಿ, ಅವನನ್ನು ತಡೆದನು. ಆದರೆ ಯೇಸು ಅವನಿಗೆ ಪ್ರ
ತ್ಯುತ್ತರವಾಗಿ, ಈಗ ಬಿಡು; ಯಾಕಂದರೆ ಹೀಗೆ ಸಮಸ್ತ ನೀತಿ
ಯನ್ನು ಈಡೇರಿಸುವದು ನಮಗೆ ಯೋಗ್ಯವಾಗಿದೆ ಎಂದು ಹೇ
೧೬ ಳಿದಾಗ, ಅವನನ್ನು ಬಿಟ್ಟನು. ಮತ್ತು ಯೇಸು ಸ್ನಾನವನ್ನು
ಹೊಂದಿ, ಕೂಡಲೆ ನೀರಿನಿಂದ ಏರಿ ಬರಲು, ಇಗೋ, ಆಕಾಶಗಳು



ಅವನಿಗೆ ತೆರೆಯಲ್ಪಟ್ಟಿವು; ಮತ್ತು ದೇವರ ಆತ್ಮನು ಪಾರಿವಾಳದ
ಹಾಗೆ ಇಳಿದು, ಅವನ ಮೇಲೆ ಬರುವದನ್ನು ನೋಡಿದನು.
೧೭ ಮತ್ತು, ಇಗೋ, ಆಕಾಶದಿಂದ, ಇವನೇ ನನ್ನ ಪ್ರಿಯ ಮಗನು;
ಇವನಲ್ಲಿ ಆನಂದ ಪಡುತ್ತೇನೆ, ಎಂಬ ಶಬ್ದ ಉಂಟಾಯಿತು.

## ೪. ಸಂಧಿ.

೧ ಆಗ ಯೇಸು ಪಿಶಾಚನಿಂದ ಕೋಧಿಸಲ್ಪಡುವದಕ್ಕೋಸ್ಕರ
೨ ಆತ್ಮದಿಂದ ಅರಣ್ಯಕ್ಕೆ ವೈಯಲ್ಪಟ್ಟನು. ಮತ್ತು ರಾತ್ರಿ ಹಗಲು
ನಾಲ್ವತ್ತು ದಿವಸ ಉಪವಾಸವಾಗಿದ್ದ ತರುವಾಯ, ಹಸಿದನು.
3 ಆಗ ಶೋಧಕನು ಅವನ ಬಳಿಗೆ ಬಂದು, ನೀನು ದೇವರ ಮಗ
ನಾಗಿದ್ದರೆ, ಈ ಕಲ್ಲುಗಳು ಕೊಟ್ಟಿಗಳಾಗುವ ಹಾಗೆ ಹೇಳು, ಅಂ
೪ ದನು. ಅವನು ಪ್ರತ್ಯುತ್ತರವಾಗಿ, ಕೊಟ್ಟಿಯಿಂದ ಮಾತ್ರವಲ್ಲ,
ದೇವರ ಬಾಯಿಯೊಳಗಿಂದ ಹೊರಡುವ ಪ್ರತಿ ವಾಕ್ಯದಿಂದ
ಮನುಷ್ಯನು ಬದುಕುವನೆಂದು ಬರೆದಿದೆ, ಅಂದನು.

೫ ಆಗ ಪಿಶಾಚನು ಅವನನ್ನು ಪರಿಶುದ್ಧ ಪಟ್ಟಣಕ್ಕೆ ಕರ ಕೊಂಡು
ಹೋಗಿ, ದೇವಾಲಯದ ಶಿಖರದ ಮೇಲೆ ನಿಲ್ಲಿಸಿ, ಅವನಿಗೆ,
೬ ನೀನು ದೇವರ ಮಗನಾಗಿದ್ದರೆ, ಕೆಳಗೆ ಬೀಳು; ಯಾಕಂದರೆ ಅವ
ನು ತನ್ನ ದೂತರಿಗೆ ನಿನ್ನ ವಿಷಯವಾಗಿ ಆಜ್ಞಾಪಿಸುವನು; ನೀನು
ನಿನ್ನ ಪಾದವನ್ನು ಕಲ್ಲಿಗೆ ತಗಲಿದ ಹಾಗೆ ತಮ್ತು ಕೈಗಳಲ್ಲಿ ನಿ
೭ ನ್ನನ್ನು ಎತ್ತಿ ಕೊಳ್ಳುವರೆಂದು ಬರೆದಿದೆ, ಅಂದನು. ಯೇಸು ಅ
ವನಿಗೆ, ನಿನ್ನ ದೇವರಾದ ಕರ್ತನನ್ನು ಕೋಧಿಸ ಬೇಡವೆಂಬುವ
ದು ಸಹ ಬರೆದಿದೆ, ಅಂದನು.

೮ ಮತ್ತು ಪಿಶಾಚನು ಅವನನ್ನು ಬಹಳ ಎತ್ತರವಾದ ಬೆಟ್ಟಕ್ಕೆ
ಕರ ಕೊಂಡು ಹೋಗಿ, ಲೋಕದ ಸಮಸ್ತ ರಾಜ್ಯಗಳನ್ನೂ, ಅವು
೯ ಗಳ ಮಹಿಮೆಯನ್ನೂ ಅವನಿಗೆ ತೋರಿಸಿ, ನೀನು ಅಡ್ಡ ಬಿದ್ದು,
ನನಗೆ ನಮಸ್ಕರಿಸಿದರೆ, ಇವುಗಳನ್ನೆಲ್ಲಾ ನಿನಗೆ ಕೊಡುತ್ತೇನೆ,
೧೦ ಅಂದನು. ಆಗ ಯೇಸು ಅವನಿಗೆ, ಸೈತಾನನೇ, ಹೋಗು;
ಯಾಕಂದರೆ, ನಿನ್ನ ದೇವರಾದ ಕರ್ತನಿಗೆ ನಮಸ್ಕರಿಸಿ, ಅವ
೧೧ ನನ್ನು ಮಾತ್ರ ಆರಾಧಿಸ ಬೇಕೆಂದು ಬರೆದಿದೆ, ಅಂದನು. ಆಗ
ಪಿಶಾಚನು ಅವನನ್ನು ಬಿಟ್ಟನು. ಮತ್ತು, ಇಗೋ, ದೂತರು ಬಂ
ದು, ಅವನಿಗೆ ಸೇವೆ ಮಾಡಿದರು.

೧೨ ಆದರೆ ಯೇಸು, ಯೋಹಾನನು ಒಪ್ಪಿಸಲ್ಪಟ್ಟನೆಂದು ಕೇಳಿ,
೧೩ ಗಲಿಲಾಯಕ್ಕೆ ಹೊರಟು ಹೋದನು. ಮತ್ತು—ಯೊರ್ದ
ನಿನ ಆಚೆಯಿಂದ ಸಮುದ್ರಕ್ಕೆ ಹೋಗುವ ಮಾರ್ಗದಲ್ಲಿರುವ
೧೪ ಜೆಬುಲೋನ್ ದೇಶವೂ, ನೆಪ್ತಲೀಮ್ ದೇಶವೂ, ಜನಾಂಗಗಳ ಗ
ಲಿಲಾಯವೂ, ಕತ್ತಲೆಯಲ್ಲಿ ಕೂಡುವ ಜನರೂ, ದೊಡ್ಡ ಬೆಳಕ
ನ್ನು ನೋಡಿದರು; ಮರಣದ ದೇಶದಲ್ಲಿಯೂ ನೆರಳಲ್ಲಿಯೂ
೧೫ ಕೂಡುವವರಿಗೆ ಬೆಳಕು ಹುಟ್ಟಿತು ಎಂಬದಾಗಿ—ಪ್ರವಾದಿಯಾದ
ಯೆಶಾಯನ ಮುಖಾಂತರ ಹೇಳಲ್ಪಟ್ಟ ಮಾತು ಈಡೇರುವ
೧೬ ಹಾಗೆ, ಅವನು ನಜರೇತನ್ನು ಬಿಟ್ಟು, ಜೆಬುಲೋನ್ ನೆಪ್ತಲೀಮ್
ಮೇರೆಗಳಲ್ಲಿ ಸಮುದ್ರ ಸಮೀಪವಾದ ಕಪೆರ್ನಾಮಿಗೆ ಬಂದು,
ವಾಸ ಮಾಡಿದನು.

೧೭ ಅಂದಿನಿಂದ ಯೇಸು—ಮಾನಸಾಂತರ ಪಡಿರಿ; ಯಾಕಂದರೆ
ಪರಲೋಕ ರಾಜ್ಯವು ಸಮೀಪವಾಯಿತೆಂದು ಹೇಳಿ, ಸಾರಲಾರಂ
ಭಿಸಿದನು.

೧೮ ಮತ್ತು ಯೇಸು ಗಲಿಲಾಯ ಸಮುದ್ರದ ಬಳಿಯಲ್ಲಿ ಸಂಚ
ರಿಸುವಾಗ, ಇಬ್ಬರು ಸಹೋದರರಾದ ಪೇತ್ರನೆಂಬ ಸೀಮೋನ
ನೂ ಅವನ ಸಹೋದರನಾದ ಅಂದ್ರೆಯನೂ ಸಮುದ್ರದಲ್ಲಿ
ಬಲೆ ಹಾಕುವದನ್ನು ನೋಡಿದನು; ಯಾಕಂದರೆ ಮೀನು ಹಿಡಿ
೧೯ಯುವವರಾಗಿದ್ದರು. ಅವನು ಅವರಿಗೆ, ನನ್ನ ಹಿಂದೆ ಬನ್ನಿ, ನಿ
ಮ್ತನ್ನು ಮನುಷ್ಯರನ್ನು ಹಿಡಿಯುವವರಾಗ ಮಾಡುವೆನು ಅ
೨೦ನ್ನಲು; ಸಂಗತಲೇ ಅವರು ತಮ್ತು ಬಲೆಗಳನ್ನು ಬಿಟ್ಟು, ಅವನನ್ನು
೨೧ ಹಿಂಬಾಲಿಸಿದರು. ಅಲ್ಲಿಂದ ಮುಂದೆ ಹೋಗಿ, ಬೇರೆ ಇಬ್ಬರು
ಸಹೋದರರಾದ ಜೆಬೆದಾಯನ ಮಗನಾದ ಯಾಕೋಬನೂ
ಅವನ ಸಹೋದರನಾದ ಯೋಹಾನನೂ ಹಡಗದಲ್ಲಿ ತಮ್ತು
ತಂದೆಯಾದ ಜೆಬೆದಾಯನ ಸಂಗತ ತಮ್ತು ಬಲೆಗಳನ್ನು ನೆಟ್ಟಿಗೆ
೨೨ ಮಾಡುವದನ್ನು ಕಂಡು, ಅವರನ್ನು ಕರೆದನು. ಸಂಗತಲೇ ಅವ
ರು ಹಡಗವನ್ನೂ ತಮ್ತು ತಂದೆಯನ್ನೂ ಬಿಟ್ಟು, ಅವನನ್ನು ಹಿಂ
ಬಾಲಿಸಿದರು.

೨೩ ಮತ್ತು ಯೇಸು ಗಲಿಲಾಯವನ್ನೆಲ್ಲಾ ಸಂಚರಿಸಿ, ಅವರ ಸಭೆ
ಮನೆಗಳಲ್ಲಿ ಬೋಧಿಸುತ್ತಾ, ರಾಜ್ಯದ ಸುವಾರ್ತೆಯನ್ನು ಸಾರು
ತ್ತಾ, ಜನರೊಳಗಿರುವ ಎಲ್ಲಾ ಕೋಗಗಳನ್ನೂ ಎಲ್ಲಾ ಅಸಾಖ್ಯ
೨೪ ಗಳನ್ನೂ ಸ್ವಸ್ಥ ಮಾಡುತ್ತಾ ಬಂದನು. ಇದಲ್ಲದೆ ಅವನ ಸುದ್ದಿ
ಯು ಸಮಸ್ತ ಸುರ್ಯಕ್ಕೆ ಹೊರಟದರಿಂದ, ಅವರು ಬೇರೆ
ಬೇರೆ ಕೋಗಗಳೂ ಬೇನೆಗಳೂ ತಗಲಿದವರನ್ನೂ, ದೆವ್ವ ಹಿಡಿದ
ವರನ್ನೂ, ಚಂದ್ರ ಕೋಗಿಗಳನ್ನೂ, ಪಕ್ಷವಾಯುವಿನವರನ್ನೂ,
ಕ್ಷೇಮವಿಲ್ಲದವರೆಲ್ಲರನ್ನೂ, ಅವನ ಬಳಿಗೆ ತಂದರು; ಅವನು ಅವ
೨೫ರನ್ನು ಸ್ವಸ್ಥ ಮಾಡಿದನು. ಮತ್ತು ಗಲಿಲಾಯದಿಂದಲೂ, ದೆಕ
ಪೊಲಿಯಿಂದಲೂ, ಯೆರೂಸಲೇಮಿನಿಂದಲೂ, ಯೆಹೂದದಿಂ
ದಲೂ, ಯೊರ್ದನಿನ ಆಚೆಯಿಂದಲೂ, ಬಹು ಸಮೂಹಗ
ಳು ಅವನನ್ನು ಹಿಂಬಾಲಿಸಿದವು.

## ೫. ಸಂಧಿ.

೧ ಅವನು ಸಮೂಹಗಳನ್ನು ನೋಡಿ, ಬೆಟ್ಟಕ್ಕೆ ಏರಿ ಹೋದ
ನು. ಅವನು ಕೂತು ಕೊಂಡಾಗ, ಅವನ ಶಿಷ್ಯರು ಅವನ ಬಳಿಗೆ
೨ ಬಂದರು. ಆಗ ತನ್ನ ಬಾಯಿ ತೆರೆದು, ಅವರಿಗೆ ಬೋಧಿಸಿ ಹೇ
3 ಳಿದ್ದೇನಂದರೆ, ಆತ್ಮದಲ್ಲಿ ದೀನರು ಭಾಗ್ಯವಂತರು; ಯಾಕಂ
೪ ದರೆ ಪರಲೋಕ ರಾಜ್ಯವು ಅವರದಾಗಿದೆ. ದುಃಖ ಪಡುವವರು
ಭಾಗ್ಯವಂತರು; ಯಾಕಂದರೆ ಅವರು ಆದರಣೆ ಹೊಂದುವರು.
೫ ಶಾಂತರು ಭಾಗ್ಯವಂತರು; ಯಾಕಂದರೆ ಅವರು ಭೂಮಿಯ
೬ ನ್ನು ಬಾಧ್ಯವಾಗಿ ಹೊಂದುವರು. ನೀತಿಗೋಸ್ಕರ ಹಸಿದು ದಾಹ
ಪಡುವವರು ಭಾಗ್ಯವಂತರು; ಯಾಕಂದರೆ ಅವರು ತೃಪ್ತಿ ಹೊಂ
೭ ದುವರು. ಕರುಣೆಯುಳ್ಳವರು ಭಾಗ್ಯವಂತರು; ಯಾಕಂದರೆ
೮ ಅವರು ಕರುಣೆಸಲ್ಪಡುವರು. ಶುದ್ಧ ಹೃದಯವುಳ್ಳವರು ಭಾ
ಗ್ಯವಂತರು; ಯಾಕಂದರೆ ಅವರು ದೇವರನ್ನು ನೋಡುವರು.
೯ ಸಮಾಧಾನ ಮಾಡುವವರು ಭಾಗ್ಯವಂತರು; ಯಾಕಂದರೆ ಅವ
೧೦ ರು ದೇವರ ಮಕ್ಕಳೆಂದು ಕರೆಯಲ್ಪಡುವರು. ನೀತಿಗೋಸ್ಕರ
ಹಿಂಸೆ ಪಡುವವರು ಭಾಗ್ಯವಂತರು; ಯಾಕಂದರೆ ಪರಲೋಕ
೧೧ ರಾಜ್ಯವು ಅವರದಾಗಿದೆ. ನನ್ನ ನಿಮಿತ್ತ ನಿಮ್ತನ್ನು ನಿಂದಿಸಿ, ಹಿಂ
ಸಿಸಿ, ಸುಳ್ಳಾಗಿ ನಿಮಗೆ ವಿರೋಧವಾಗಿ ಎಲ್ಲಾ ಕೆಟ್ಟ ಮಾತುಗಳ
೧೨ ನ್ನು ಹೇಳಿದರೆ, ನೀವು ಭಾಗ್ಯವಂತರಾಗಿದ್ದೀರಿ. ಸಂತೋಷಿಸಿರಿ,

ಹರ್ಷಿಸಿರಿ; ಯಾಕಂದರೆ ಪರಲೋಕದಲ್ಲಿ ನಿಮ್ಮ ಪ್ರತಿಫಲ ಬಹಳ;
ಹಾಗೆಯೇ ನಿಮಗೆ ಮುಂಚೆ ಇದ್ದ ಪ್ರವಾದಿಗಳನ್ನು ಹಿಂಸಿಸಿದರು.
೧೩ ನೀವು ಭೂಮಿಗೆ ಉಪ್ಪಾಗಿದ್ದೀರಿ; ಆದರೆ, ಉಪ್ಪು ನಿಸ್ಸಾ
ರವಾದರೆ, ಯಾತರಿಂದ ಸಾರ ಕೊಂಡೀತು! ಹೊರಗೆ ಹಾಕ
ಲ್ಪಟ್ಟು, ಮನುಷ್ಯರಿಂದ ತುಳಿಯಲ್ಪಡುವದಕ್ಕೆ ಹೊರ್ತು,
೧೪ ಮತ್ಯಾವದಕ್ಕೂ ಆಗದು. ನೀವು ಲೋಕಕ್ಕೆ ಬೆಳಕಾಗಿದ್ದೀರಿ;
೧೫ ಬೆಟ್ಟದ ಮೇಲಿರುವ ಪಟ್ಟಣವು ಮರೆಯಾಗಿರಲಾರದು. ಮತ್ತು
ದೀಪ ಹಚ್ಚಿ, ಅದನ್ನು ಬಳ್ಳದ ಕೆಳಗೆ ಅಲ್ಲ, ದೀಪಸ್ತಂಭದ ಮೇ
ಲೆ ಇಡುತ್ತಾರೆ; ಆಗಲದು ಮನೆಯಲ್ಲಿರುವವರೆಲ್ಲರಿಗೆ ಬೆಳಕು
೧೬ ಕೊಡುವದು. ಅದೇ ಮೇರೆಗೆ ಅವರು ನಿಮ್ಮ ಸತ್ಕ್ರಿಯೆಗಳನ್ನು
ನೋಡಿ, ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಮಹಿಮೆ
ಪಡಿಸುವ ಹಾಗೆ, ಮನುಷ್ಯರ ಮುಂದೆ ನಿಮ್ಮ ಬೆಳಕು ಪ್ರಕಾಶಿಸಲಿ.
೧೭ ನ್ಯಾಯಪ್ರಮಾಣವನ್ನಾದರೂ, ಪ್ರವಾದಿಗಳನ್ನಾದರೂ, ತೆ
ಗೆದು ಹಾಕುವದಕ್ಕೆ ಬಂದೆನೆಂದು ನೆನಸ ಬೇಡಿರಿ; ತೆಗೆದು ಹಾಕು
೧೮ ವದಕ್ಕಲ್ಲ, ಈಡೇರಿಸುವದಕ್ಕೆ ಬಂದೆನು. ನಿಶ್ಚಯವಾಗಿ ನಿಮಗೆ
ಹೇಳುತ್ತೇನೆ, ಆಕಾಶವೂ ಭೂಮಿಯೂ ಗತಿಸಿ ಹೋಗುವ ಪ
ರ್ಯಂತರ, ನ್ಯಾಯಪ್ರಮಾಣದಲ್ಲಿಂದ ಒಂದು ಸೊನ್ನೆಯಾ
ದರೂ ಒಂದು ಗುಡುಸಾದರೂ, ಎಲ್ಲಾ ಆಗುವ ಮಟ್ಟಿಗೂ, ಗತಿಸಿ
೧೯ ಹೋಗದು. ಆದದರಿಂದ ಎಲ್ಲವುಗಳಲ್ಲಿ ಈ ಚಿಕ್ಕವಾದ ಆಜ್ಞೆಗಳ
ಲ್ಲಿ ಒಂದನ್ನು ತೆಗೆದು ಹಾಕಿ, ಮನುಷ್ಯರಿಗೆ ಆ ಪ್ರಕಾರ ಬೋಧಿಸು
ವವನ್ಯಾವನೋ, ಅವನು ಪರಲೋಕ ರಾಜ್ಯದಲ್ಲಿ ಎಲ್ಲರಲ್ಲಿ ಚಿಕ್ಕ
ವನೆಂದು ಕರೆಯಲ್ಪಡುವನು. ಆದರೆ ಕೈಕೊಂಡು, ಬೋಧಿಸು
ವವನ್ಯಾವನೋ, ಅವನು ಪರಲೋಕ ರಾಜ್ಯದಲ್ಲಿ ದೊಡ್ಡವನೆಂದು
೨೦ ಕರೆಯಲ್ಪಡುವನು. ಯಾಕಂದರೆ ನಿಮಗೆ ಹೇಳುತ್ತೇನೆ, ನಿಮ್ಮ
ನೀತಿಯು ಶಾಸ್ತ್ರಿಗಳ ಫರಿಸಾಯರ ನೀತಿಗಿಂತ ಅತ್ಯಧಿಕವಾಗಿದ್ದ
ರೇ ಹೊರ್ತು, ಪರಲೋಕ ರಾಜ್ಯದಲ್ಲಿ ಪ್ರವೇಶಿಸಲಾರಿರಿ.
೨೧ ಕೊಲ್ಲಬೇಡ; ಕೊಲ್ಲುವವನು ನ್ಯಾಯತೀರ್ಪಿಕೆಗೆ ಗುರಿಯಾ
೨೧ ಗಿರುವನಂತ, ಹಿರಿಯರಿಗೆ ಹೇಳಲ್ಪಟ್ಟಿತೆಂದು ಕೇಳಿದ್ದೀರಿ. ಆದರೆ
ನಾನು ನಿಮಗೆ ಹೇಳುತ್ತೇನೆ, ತಮ್ಮ ಸಹೋದರರ ಮೇಲೆ ಕಾರ
ಣವಿಲ್ಲದೆ ಕೋಪ ಮಾಡುವವರೆಲ್ಲರು ನ್ಯಾಯತೀರ್ಪಿಕೆಗೆ ಗುರಿ
ಯಾಗಿರುವರು. ಮತ್ತು ಯಾವನಾದರೂ ತನ್ನ ಸಹೋದರ
ನಿಗೆ ಶೂದಿ! ಅಂದರೆ, ಮಂತ್ರಿ ಸಭೆಗೆ ಗುರಿಯಾಗಿರುವನು.
ಮತ್ತು ಯಾವನಾದರೂ ಹುಚ್ಚ! ಅಂದರೆ, ಬೆಂಕಿಯ ನರಕ
೨೩ ಕ್ಕೆ ಗುರಿಯಾಗಿರುವನು. ಆದಕಾರಣ ನಿನ್ನ ಕಾಣಿಕೆಯನ್ನು
ಬಲಿಪೀಠಕ್ಕೆ ತರುವಾಗ, ನಿನ್ನ ಸಹೋದರನಿಗೆ ನಿನಗೆ ವಿರೋಧ
ವಾಗಿ ಏನಾದರೂ ಉಂಟೆಂದು ಅಲ್ಲಿ ಜ್ಞಾಪಕ ಮಾಡಿ ಕೊಂಡರೆ,
೨೪ ನಿನ್ನ ಕಾಣಿಕೆಯನ್ನು ಅಲ್ಲಿ, ಬಲಿಪೀಠದ ಮುಂದೆ, ಬಿಟ್ಟು, ಹೋ
ಗಿ, ಮೊದಲು ನಿನ್ನ ಸಹೋದರನ ಸಂಗಡ ಅನ್ಯೋನ್ಯವಾಗು,
೨೫ ಆ ಮೇಲೆ ಬಂದು, ನಿನ್ನ ಕಾಣಿಕೆಯನ್ನು ಅರ್ಪಿಸು. ನಿನ್ನ ವಿ
ರೋಧಿಯ ಸಂಗಡ, ಅವನ ಕೂಡ ಮಾರ್ಗದಲ್ಲಿರುವಾಗಲೇ;
ಸ್ನೇಹ ಮಾಡಿಕೊ; ಇಲ್ಲದಿದ್ದರೆ, ವಿರೋಧಿಯು ನಿನ್ನನ್ನು ನ್ಯಾ
ಯಾಧಿಪತಿಗೆ ಒಪ್ಪಿಸ್ಯಾನು, ನ್ಯಾಯಾಧಿಪತಿಯು ನಿನ್ನನ್ನು
ಊಳಿಗದವನಿಗೆ ಒಪ್ಪಿಸ್ಯಾನು, ಮತ್ತು ನೀನು ಕೆರೆಯಲ್ಲಿ ಹಾಕ
೨೬ ಲ್ಪಟ್ಟೀಯೆ. ನಿಶ್ಚಯವಾಗಿ ನಿನಗೆ ಹೇಳುತ್ತೇನೆ, ನೀನು ಕಡೇ
ಕಾಸು ಕೊಡುವ ಮಟ್ಟಿಗೂ, ಅಲ್ಲಿಂದ ಹೊರಗೆ ಬರುವದಿಲ್ಲ.

೨೭ ವ್ಯಭಿಚಾರ ಮಾಡ ಬೇಡಂತ, ಹಿರಿಯರಿಗೆ ಹೇಳಲ್ಪಟ್ಟಿತೆಂದು
೨೮ ಕೇಳಿದ್ದೀರಿ. ಆದರೆ ನಾನು ನಿಮಗೆ ಹೇಳುತ್ತೇನೆ, ಸ್ತ್ರೀಯ
ಮೇಲೆ, ಅವಳನ್ನು ಆಶಿಸುವದಕ್ಕೆ, ಕಣ್ಣಿಡುವ ಪ್ರತಿ ಮನುಷ್ಯನು
ಆಗಲೇ ತನ್ನ ಹೃದಯದಲ್ಲಿ ಅವಳ ಸಂಗಡ ವ್ಯಭಿಚಾರ ಮಾ
೨೯ ದಿದ್ದಾನೆ. ಇದಲ್ಲದೆ ನಿನ್ನ ಬಲಗಣ್ಣು ನಿನ್ನನ್ನು ಆಟಂಕಿಸಿದರೆ,
ಅದನ್ನು ಕಿತ್ತು, ನಿನ್ನ ಬಳಿಯಿಂದ ಬಿಸಾಡು. ಯಾಕಂದರೆ
ನಿನ್ನ ಅಂಗಗಳಲ್ಲಿ ಒಂದು ನಾಶವಾಗಿ ನಿನ್ನ ಶರೀರವೆಲ್ಲಾ ನರಕದಲ್ಲಿ
೩೦ ಹಾಕಲ್ಪಡದೆ ಇರುವದು ನಿನಗೆ ಪ್ರಯೋಜನವಾಗಿದೆ. ಮತ್ತು
ನಿನ್ನ ಬಲಗೈ ನಿನ್ನನ್ನು ಆಟಂಕಿಸಿದರೆ, ಅದನ್ನು ಕೊಯಿದು,
ನಿನ್ನ ಬಳಿಯಿಂದ ಬಿಸಾಡು. ಯಾಕಂದರೆ ನಿನ್ನ ಅಂಗಗಳಲ್ಲಿ
ಒಂದು ನಾಶವಾಗಿ ನಿನ್ನ ಶರೀರವೆಲ್ಲಾ ನರಕದಲ್ಲಿ ಹಾಕಲ್ಪಡದೆ
ಇರುವದು, ನಿನಗೆ ಪ್ರಯೋಜನವಾಗಿದೆ.
೩೧ ಇದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಬಿಡುವವನು ಅವಳಿಗೆ
ತ್ಯಾಗ ಪತ್ರವನ್ನು ಕೊಡಬೇಂದು ಹೇಳಲ್ಪಟ್ಟಿತು. ಆದರೆ ನಾ
೩೨ ನು ನಿಮಗೆ ಹೇಳುತ್ತೇನೆ, ಯಾವನಾದರೂ ಜಾರತ್ವದ ಕಾರಣ
ದಿಂದಲಲ್ಲದೆ ತನ್ನ ಹೆಂಡತಿಯನ್ನು ಬಿಟ್ಟಿಕೆ, ಅವಳನ್ನು ವ್ಯಭಿ
ಚಾರ ಮಾಡಿಸುತ್ತಾನೆ. ಮತ್ತು ಬಿಡಲ್ಪಟ್ಟವಳನ್ನು ಮದುವೆ ಮಾ
ಡಿ ಕೊಳ್ಳುವವನು ವ್ಯಭಿಚಾರ ಮಾಡುತ್ತಾನೆ.
೩೩ ಮತ್ತು ನೀನು ಆಣೆ ಮಾಡಬೇಡ, ಕರ್ತನಿಗೆ ನಿನ್ನ ಆಣೆಗಳನ್ನು
ಸಲ್ಲಿಸ ಬೇಕಂತ, ಹಿರಿಯರಿಗೆ ಹೇಳಲ್ಪಟ್ಟಿತೆಂದು ಕೇಳಿದ್ದೀರಿ.
೩೪ ಆದರೆ ನಾನು ನಿಮಗೆ ಹೇಳುತ್ತೇನೆ, ಹ್ಯಾಗಾದರೂ ಆಣೆ ಇಡ
ಬೇಡ; ಆಕಾಶದ ಮೇಲಾದರೂ ಬೇಡ; ಯಾಕಂದರೆ ಅದು ದೇ
೩೫ ವರ ಸಿಂಹಾಸನವಾಗಿದೆ. ಭೂಮಿಯ ಮೇಲಾದರೂ ಬೇಡ; ಯಾ
ಕಂದರೆ ಅದು ಅವನ ಪಾದಪೀಠವಾಗಿದೆ. ಯೆರೂಸಲೇಮಿನ
ಮೇಲಾದರೂ ಬೇಡ; ಯಾಕಂದರೆ ಅದು ದೊಡ್ಡ ಅರಸನ ಪಟ್ಟಣ
೩೬ ವಾಗಿದೆ. ನಿನ್ನ ತಲೆಯ ಮೇಲಾದರೂ ಆಣೆ ಇಡ ಬೇಡ; ಯಾ
ಕಂದರೆ ಅದರಲ್ಲಿ ಒಂದು ಕೂದಲಾದರೂ ಬಿಳುಪಾಗಲಿ ಕಪ್ಪಾ
೩೭ ಗಲಿ ಮಾಡಲಾರಿ. ಆದರೆ ನಿಮ್ಮ ಮಾತು—ಹೌದು, ಹೌದು,
ಅಲ್ಲ, ಅಲ್ಲ, ಅಂತಿರಲಿ. ಇವುಗಳಿಗೆ ಹೆಚ್ಚಾದದ್ದು ಕೆಟ್ಟತನದಿಂದ
ಉಂಟಾಗುವದು.
೩೮ ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಅಂತ ಹೇಳಲ್ಪಟ್ಟಿತೆಂದು, ಕೇ
೩೯ ಳಿದ್ದೀರಿ. ಆದರೆ ನಾನು ನಿಮಗೆ ಹೇಳುತ್ತೇನೆ, ಕೇಡನ್ನು ಎದು
ರಿಸ ಬಾರದು. ಆದರೆ ನಿನ್ನ ಬಲಕೆನ್ನೆಯ ಮೇಲೆ ನಿನ್ನನ್ನು
೪೦ ಕೊಡೆಯುವವನ ಕಡೆಗೆ ಮತ್ತೊಂದನ್ನು ಸಹ ತಿರುಗಿಸು. ಮತ್ತು
ನಿನ್ನ ಸಂಗಡ ವ್ಯಾಜ್ಯವಾಡಿ, ನಿನ್ನ ಅಂಗಿಯನ್ನು ತಕ್ಕೊಳ್ಳ
೪೧ ಬೇಕಾದವನಿಗೆ ಅಂಗವಸ್ತ್ರವನ್ನು ಸಹ ಬಿಡು. ಮತ್ತು ಒಂದು
ಹರದಾರಿಗೆ ನಿನ್ನನ್ನು ಬಲವಂತ ಮಾಡುವವನ ಸಂಗಡ ಎರಡು ಹ
೪೨ ರದಾರಿ ಹೋಗು. ನಿನ್ನನ್ನು ಬೇಡುವವನಿಗೆ ಕೊಡು. ಮತ್ತು ನಿ
ನ್ನಿಂದ ಎರವು ತಕ್ಕೊಳ್ಳ ಬೇಕಾದವನ ಕಡೆಯಿಂದ ತಿರುಗ ಬೇಡ.
೪೩ ನಿನ್ನ ನೆರೆಯವನನ್ನು ಪ್ರೀತಿ ಮಾಡಿ, ನಿನ್ನ ಶತ್ರುವನ್ನು ಹಗೆ
೪೪ ಮಾಡ ಬೇಕಂತ ಹೇಳಲ್ಪಟ್ಟಿತೆಂದು, ಕೇಳಿದ್ದೀರಿ. ಆದರೆ ನಾನು
ನಿಮಗೆ ಹೇಳುತ್ತೇನೆ, ನಿಮ್ಮ ಶತ್ರುಗಳನ್ನು ಪ್ರೀತಿ ಮಾಡಿರಿ; ನಿಮ್ಮ
ನ್ನು ಶಪಿಸುವವರನ್ನು ಆಶೀರ್ವದಿಸಿರಿ. ನಿಮ್ಮನ್ನು ಹಗೆ ಮಾಡು
ವವರಿಗೆ ಒಳ್ಳೇದನ್ನು ಮಾಡಿರಿ. ಮತ್ತು ನಿಮ್ಮನ್ನು ನಿಂದಿಸುವ
ವರಿಗೋಸ್ಕರವಾಗಿಯೂ, ಹಿಂಸಿಸುವವರಿಗೋಸ್ಕರವಾಗಿಯೂ,



೪೫ ಪ್ರಾರ್ಥನೆ ಮಾಡಿರಿ. ಹೀಗೆ ನೀವು ಪರಲೋಕದಲ್ಲಿರುವ ನಿಮ್ಮ
ತಂದೆಯ ಮಕ್ಕಳಾಗಿರುವಿರಿ. ಯಾಕಂದರೆ ಅವನು ಕೆಟ್ಟವರ
ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನನ್ನು
ಉದಯಿಸ ಮಾಡಿ, ನೀತಿವಂತರ ಮೇಲೆಯೂ ಅನೀತಿವಂತರ ಮೇ
೪೬ ಲೆಯೂ ಮಳೆ ಸುರಿಸುತ್ತಾನೆ. ನಿಮ್ಮನ್ನು ಪ್ರೀತಿ ಮಾಡುವವರ
ನ್ನು ನೀವು ಪ್ರೀತಿ ಮಾಡಿದರೆ, ನಿಮಗೆ ಪ್ರತಿಫಲವೇನು! ಸುಂಕ
೪۷ ದವರು ಸಹ ಹಾಗೆ ಮಾಡುತ್ತಾರಲ್ಲವೋ! ಮತ್ತು ನಿಮ್ಮ ಸಹೋ
ದರಕನ್ನು ಮಾತ್ರ ವಂದಿಸಿದರೆ, ನೀವು ಹೆಚ್ಚಾದದ್ದೇನು ಮಾಡು
೪۸ ತ್ತೀರಿ! ಸುಂಕದವರು ಸಹ ಹಾಗೆ ಮಾಡುತ್ತಾರಲ್ಲವೋ! ಆದದ
ರಿಂದ, ಪರಲೋಕದಲ್ಲಿರುವ ನಿಮ್ಮ ತಂದೆಯು ಸಂಪೂರ್ಣನಾ
ಗಿರುವ ಪ್ರಕಾರವೇ, ನೀವೂ ಸಂಪೂರ್ಣರಾಗಿರ್ರಿ.

## ೬. ಸಂಧಿ.

೧ ನಿಮ್ಮ ಧರ್ಮವನ್ನು ಮನುಷ್ಯರ ಮುಂದೆ, ಅವರು ಕಾಣು
ವದಕ್ಕಾಗಿ, ಮಾಡದ ಹಾಗೆ ಎಚ್ಚರಿಕೆಯಾಗಿರ್ರಿ; ಇಲ್ಲದಿದ್ದರೆ, ಪರ
ಲೋಕದಲ್ಲಿರುವ ನಿಮ್ಮ ತಂದೆಯ ಬಳಿಯಲ್ಲಿ ನಿಮಗೆ ಪ್ರತಿಫಲ
೨ ಬಿಲ್ಲ. ಆದಕಾರಣ ನೀನು ಧರ್ಮ ಮಾಡುವಾಗ, ಕಪಟಿಗಳು, ಮ
ನುಷ್ಯರಿಂದ ಮಹಿಮೆ ಪಡುವ ಹಾಗೆ, ಸಭೆಮನೆಗಳಲ್ಲಿಯೂ ಬೀ
ದಿಗಳಲ್ಲಿಯೂ ಮಾಡುವ ಪ್ರಕಾರ, ನಿನ್ನ ಮುಂದೆ ತುತೂರಿ ಊ
ದಿಸ ಬೇಡ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಅವರು ತಮ್ಮ
೩ ಪ್ರತಿಫಲವನ್ನು ಹೊಂದಿದ್ದಾರೆ. ಆದರೆ ನೀನು ಧರ್ಮ ಮಾಡು
ವಾಗ, ನಿನ್ನ ಧರ್ಮವು ಅಂತರಂಗವಾಗಿರುವ ಹಾಗೆ, ನಿನ್ನ ಬಲಗೈ
೪ ಮಾಡುವದು ನಿನ್ನ ಎಡಗೈಗೆ ತಿಳಿಯದಿರಲಿ. ಆಗ ಅಂತರಂಗ
ದಲ್ಲಿ ನೋಡುವ ನಿನ್ನ ತಂದೆಯು ತಾನೇ ಬಹಿರಂಗದಲ್ಲಿ ನಿನಗೆ
ಬದಲು ಕೊಡುವನು.
೫ ಮತ್ತು ನೀನು ಪ್ರಾರ್ಥಿಸುವಾಗ, ಕಪಟಿಗಳ ಹಾಗಿರ ಬೇಡ.
ಯಾಕಂದರೆ ಅವರು ಮನುಷ್ಯರಿಗೆ ಕಾಣಿಸುವ ಹಾಗೆ, ಸಭೆಮನೆಗ
ಳಲ್ಲಿಯೂ ಬೀದಿಗಳ ಮೂಲೆಗಳಲ್ಲಿಯೂ ನಿಂತು ಕೊಂಡು, ಪ್ರಾ
ರ್ಥಿಸುವವನ್ನು ಪ್ರೀತಿ ಮಾಡುತ್ತಾರೆ. ನಿಶ್ಚಯವಾಗಿ ನಿಮಗೆ ಹೇ
೬ ಳುತ್ತೇನೆ, ಅವರು ತಮ್ಮ ಪ್ರತಿಫಲವನ್ನು ಹೊಂದಿದ್ದಾರೆ. ಆದರೆ
ನೀನು ಪ್ರಾರ್ಥಿಸುವಾಗ, ನಿನ್ನ ಕೊಠಡಿಯೊಳಗೆ ಹೋಗಿ,
ನಿನ್ನ ಬಾಗಲನ್ನು ಮುಚ್ಚಿ, ಅಂತರಂಗದಲ್ಲಿರುವ ನಿನ್ನ ತಂದೆಗೆ
ಪ್ರಾರ್ಥನೆ ಮಾಡು. ಆಗ ಅಂತರಂಗದಲ್ಲಿ ನೋಡುವ ನಿನ್ನ
೭ ತಂದೆಯು ಬಹಿರಂಗದಲ್ಲಿ ನಿನಗೆ ಬದಲು ಕೊಡುವನು. ಆದರೆ
ಪ್ರಾರ್ಥನೆ ಮಾಡುವಾಗ, ಜನಾಂಗಗಳವರ ಹಾಗೆ ವ್ಯರ್ಥ ಮಾ
ತುಗಳನ್ನು ಆಡ ಬೇಡಿರಿ. ಯಾಕಂದರೆ ಅವರು ತಮ್ಮ ಬಹು ಮಾ
ತುಗಳಿಗೋಸ್ಕರ ಕೇಳಲ್ಪಡುವೆವೆಂದು ನೆನಸುತ್ತಾರೆ. ಆದದರಿಂ
೮ ದ ಅವರ ಹಾಗಿರ ಬೇಡಿರಿ. ಯಾಕಂದರೆ ನಿಮಗೆ ಯಾವದು ಅ
ಗತ್ಯವೋ, ನೀವು ಅವನನ್ನು ಬೇಡಿ ಕೊಳ್ಳುವದಕ್ಕಿಂತ ಮುಂಚೆ
ನಿಮ್ಮ ತಂದೆ ಬಲ್ಲನು.
೯ ಆದದರಿಂದ ನೀವು ಹೀಗೆ ಪ್ರಾರ್ಥಿಸಿರಿ—ಪರಲೋಕದಲ್ಲಿರು
೧೦ ವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವಾಗಲಿ. ನಿನ್ನ
ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ಆಗುವ ಪ್ರಕಾರ
೧೧ ಭೂಮಿಯ ಮೇಲೆಯೂ ಆಗಲಿ. ನಮ್ಮ ಅನುದಿನದ ಕೊಟ್ಟಿ
೧೨ ಯನ್ನು ಈ ಹೊತ್ತು ನಮಗೆ ಕೊಡು. ನಾವು ನಮ್ಮ ಸಾಲಗಾರ
೧೩ ರಿಗೆ ಬಿಡುವ ಪ್ರಕಾರ, ನಮ್ಮ ಸಾಲಗಳನ್ನು ನಮಗೆ ಬಿಡು. ನಮ್ಮ
ನ್ನು ಶೋಧನೆಯಲ್ಲಿ ಸೇರಿಸದೆ, ಕೇಡಿನಿಂದ ನಮ್ಮನ್ನು ತ
ಪ್ಪಿಸು. ಯಾಕಂದರೆ ರಾಜ್ಯವೂ ಬಲವೂ ಮಹಿಮೆಯೂ ಎಂ
೧೪ ದೆಂದಿಗೂ ನಿನ್ನವೇ. ಆಮೆನ್. ಯಾಕಂದರೆ ನೀವು ಮನುಷ್ಯ
ರಿಗೆ ಅವರ ತಪ್ಪುಗಳನ್ನು ಮನ್ನಿಸಿದರೆ, ನಿಮ್ಮ ಪರಲೋಕದ
೧೫ ತಂದೆಯು ನಿಮಗೂ ಮನ್ನಿಸುವನು. ಆದರೆ ನೀವು ಮನುಷ್ಯ
ರಿಗೆ ಅವರ ತಪ್ಪುಗಳನ್ನು ಮನ್ನಿಸದಿದ್ದರೆ, ನಿಮ್ಮ ತಂದೆಯು
ಸಹ ನಿಮ್ಮ ತಪ್ಪುಗಳನ್ನು ಮನ್ನಿಸನು.
೧೬ ಇದಲ್ಲದೆ ನೀವು ಉಪವಾಸ ಮಾಡುವಾಗ, ಕಪಟಿಗಳ ಹಾಗೆ
ಬಾಡಿದ ಮುಖವುಳ್ಳವರಾಗಿರ ಬೇಡಿರಿ. ಯಾಕಂದರೆ ಅವರು
ಉಪವಾಸ ಮಾಡುವವರೆಂದು ಮನುಷ್ಯರಿಗೆ ತೋರುವ ಹಾಗೆ,
ತಮ್ಮ ಮುಖಗಳನ್ನು ವಿಕಾರ ಮಾಡಿ ಕೊಳ್ಳುತ್ತಾರೆ. ನಿಶ್ಚಯವಾಗಿ
ನಿಮಗೆ ಹೇಳುತ್ತೇನೆ, ಅವರು ತಮ್ಮ ಪ್ರತಿಫಲವನ್ನು ಹೊಂದಿದ್ದಾರೆ.
೧೭ ಆದರೆ ನೀನು ಉಪವಾಸ ಮಾಡುವಾಗ, ಮನುಷ್ಯರಿಗಲ್ಲ, ಅಂತ
ರಂಗದಲ್ಲಿರುವ ನಿನ್ನ ತಂದೆಗೆ ಉಪವಾಸ ಮಾಡುವವನೆಂದು ಕಾಣಿ
ಸುವ ಹಾಗೆ, ನಿನ್ನ ತಲೆಗೆ ಎಣ್ಣೆ ಹಚ್ಚಿ, ನಿನ್ನ ಮುಖವನ್ನು ತೊ
ಳೆಕೋ. ಆಗ ಅಂತರಂಗದಲ್ಲಿ ನೋಡುವ ನಿನ್ನ ತಂದೆಯು ಬಹಿ
ರಂಗದಲ್ಲಿ ನಿನಗೆ ಬದಲು ಕೊಡುವನು.
೧೯ ಭೂಮಿಯ ಮೇಲೆ ನಿಮಗೆ ದ್ರವ್ಯಗಳನ್ನು ಇಟ್ಟು ಕೊಳ್ಳ
ಬೇಡಿರಿ; ಅಲ್ಲಿ ನುಸಿಯೂ ಕೆಲಬೂ ಕೆಡಿಸುತ್ತವೆ; ಅಲ್ಲಿ ಕಳ್ಳರು
೨೦ ಕನ್ನ ಕೊರೆದು ಕದಿಯುತ್ತಾರೆ. ಆದರೆ ಪರಲೋಕದಲ್ಲಿ ನಿಮಗೆ
ದ್ರವ್ಯಗಳನ್ನು ಇಟ್ಟು ಕೊಳ್ಳಿರಿ; ಅಲ್ಲಿ ನುಸಿಯಾದರೂ ಕೆಲಬಾ
ದರೂ ಕೆಡಿಸದು; ಅಲ್ಲಿ ಕಳ್ಳರು ಕನ್ನ ಕೊರೆದು ಕದಿಯರು.
೨೧ ಯಾಕಂದರೆ ನಿಮ್ಮ ದ್ರವ್ಯವು ಎಲ್ಲಿಯೋ, ಅಲ್ಲಿ ನಿಮ್ಮ ಹೃ
೨೨ ದಯವೂ ಇರುವದು. ಕಣ್ಣು ಶರೀರದ ಬೆಳಕಾಗಿದೆ; ಆದಕಾರ
ಣ ನಿನ್ನ ಕಣ್ಣು ನೆಟ್ಟಗಿದ್ದರೆ, ನಿನ್ನ ಶರೀರವೆಲ್ಲಾ ಬೆಳಕಾಗಿರುವ
೨೩ ದು. ಆದರೆ ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ, ನಿನ್ನ ಶರೀರವೆಲ್ಲಾ
ಕತ್ತಲಾಗಿರುವದು. ಆದಕಾರಣ ನಿನ್ನಲ್ಲಿರುವ ಬೆಳಕು ಕತ್ತಲಾಗಿದ್ದ
ಕೆ, ಆ ಕತ್ತಲು ಎಷ್ಟೋ ಇರುವದು!
೨೪ ಯಾವನಾದರೂ ಇಬ್ಬರು ಯಜಮಾನರಿಗೆ ದಾಸನಾಗಿರಲಾ
ರನು; ಹ್ಯಾಗಂದರೆ ಒಬ್ಬನನ್ನು ಹಗೆ ಮಾಡಿ, ಮತ್ತೊಬ್ಬನನ್ನು
ಪ್ರೀತಿ ಮಾಡುವನು. ಇಲ್ಲವೆ ಒಬ್ಬನನ್ನು ಹೊಂದಿ ಕೊಂಡು,
ಮತ್ತೊಬ್ಬನನ್ನು ಅಸಡ್ಡೆ ಮಾಡುವನು. ನೀವು ದೇವರಿಗೂ
೨೫ ಮಮ್ಮೋನಿಗೂ ದಾಸರಾಗಿರಲಾರಿರಿ. ಆದಕಾರಣ ನಿಮಗೆ ಹೇಳು
ತ್ತೇನೆ, ನಿಮ್ಮ ಪ್ರಾಣಕ್ಕೋಸ್ಕರ ಏನು ಉಣ್ಣುವ, ಏನು ಕುಡಿ
ಯುವ ಎಂದೂ, ನಿಮ್ಮ ಶರೀರಕ್ಕೋಸ್ಕರ ಏನು ಹೊದ್ದು ಕೊ
ಳ್ಳುವ ಎಂದೂ, ಚಿಂತೆ ಪಡ ಬೇಡಿರಿ. ಆಹಾರಕ್ಕಿಂತ ಪ್ರಾಣವು,
೨೬ ವಸ್ತ್ರಕ್ಕಿಂತ ಶರೀರವು, ದೊಡ್ಡದಲ್ಲವೋ! ಆಕಾಶದ ಪಕ್ಷಿಗಳನ್ನು
ನೋಡಿರಿ; ಅವು ಬಿತ್ತುವದಿಲ್ಲ, ಕೊಯ್ಯುವದಿಲ್ಲ, ಕಣಜಗಳಲ್ಲಿ
ಕೂಡಿಸಿಡುವದಿಲ್ಲ. ಆದಾಗ್ಯೂ ನಿಮ್ಮ ಪರಲೋಕದ ತಂದೆಯು
ಅವುಗಳನ್ನು ಸಾಕುತ್ತಾನೆ. ಅವುಗಳಿಗಂತ ನೀವು ಬಹಳ ವಿಶೇಷವ
೨೭ ಲ್ಲವೋ! ನಿಮ್ಮಲ್ಲಿ ಯಾವನು ಚಿಂತೆ ಪಡುವದರಿಂದ ತನ್ನ ನೀಳ
ವನ್ನು ಒಂದು ಮೊಳ ಹೆಚ್ಚಿಸಿ ಕೊಳ್ಳ ಬಲ್ಲನು! ಮತ್ತು ನೀವು ವ
ಸ್ತ್ರಕ್ಕೆ ಚಿಂತೆ ಪಡುವದೇನು! ಕಾಡಿನ ನೈದಿಲೆಗಳು ಬೆಳೆಯುವ
೨೮ ದನ್ನು ಯೋಚಿಸಿರಿ. ಅವು ಕಷ್ಟ ಪಡುವದಿಲ್ಲ, ನೇಯುವದಿಲ್ಲ;

ಅದಾಗ್ಯೂ ಸೊಲೊಮೋನನು ಸಹ ತನ್ನ ಸಮಸ್ತ ಮಹಿಮೆ
ಯಲ್ಲಿ ಇವುಗಳಲ್ಲಿ ಒಂದರ ಹಾಗೆ ಹೊದ್ದುಕೊಳ್ಳಲಿಲ್ಲವೆಂದು,
೩೦ ನಿಮಗೆ ಹೇಳುತ್ತೇನೆ. ಅಲ್ಪ ವಿಶ್ವಾಸಿಗಳೇ, ಈ ಹೊತ್ತು ಇದ್ದು,
ನಾಳೆ ಒಲೆಯಲ್ಲಿ ಹಾಕಲ್ಪಡುವ ಕಾಡಿನ ಹುಲ್ಲಿಗೆ ದೇವರು ಈ
ಮೇರೆಗೆ ಹೊದ್ದಿಸಿದರೆ, ನಿಮಗೆ ಬಹು ಹೆಚ್ಚಾಗಿ ಹೊದ್ದಿಸನೋ!
೩೧ ಹೀಗಿರುವದರಿಂದ, ಏನು ಉಣ್ಣುವ! ಇಲ್ಲವೆ, ಏನು ಕುಡಿಯು
ವ! ಇಲ್ಲವೆ, ಏನು ಹೊದ್ದುಕೊಳ್ಳುವ! ಎಂದು, ಚಿಂತೆ ಪಡ ಬೇಡಿರಿ.
೩೨ ಯಾಕಂದರೆ ಇವುಗಳನ್ನೆಲ್ಲಾ ಜನಾಂಗಗಳವರು ಹುಡುಕುತ್ತಾರೆ.
ಆದರೆ ಇವುಗಳೆಲ್ಲಾ ನಿಮಗೆ ಬೇಕೆಂದು, ನಿಮ್ಮ ಪರಲೋಕದ
೩೩ ತಂದೆಯು ಬಲ್ಲನು. ಹೀಗಿರುವದರಿಂದ ನೀವು ಮೊದಲು ದೇವರ
ರಾಜ್ಯವನ್ನೂ, ಅವನ ನೀತಿಯನ್ನೂ ಹುಡುಕಿರಿ. ಆಗ ಇವುಗ
೩೪ ಳೆಲ್ಲಾ ನಿಮಗೆ ಕೂಡ ಕೊಡಲ್ಪಡುವವು. ಆದದರಿಂದ ನಾಳೆಗೋ
ಸ್ಕರ ಚಿಂತೆ ಪಡ ಬೇಡಿರಿ; ಯಾಕಂದರೆ ನಾಳೆ ತನ್ನವುಗಳಿ
ಗೋಸ್ಕರ ಚಿಂತೆ ಪಡುವದು. ದಿವಸಕ್ಕೆ ಅದರ ಕಾಟವೇ ಸಾಕು.

## ೭. ಸಂಧಿ.

೧ ನಿಮಗೆ ನ್ಯಾಯತೀರ್ಪಿಕೆ ಆಗದ ಹಾಗೆ, ನ್ಯಾಯ ತೀರಿಸ
೨ ಬೇಡಿರಿ; ಯಾಕಂದರೆ ನೀವು ನ್ಯಾಯತೀರಿಸುವ ಪ್ರಕಾರವೇ ನಿ
ಮಗೆ ನ್ಯಾಯತೀರ್ಪಿಕೆ ಆಗುವದು. ಮತ್ತು ನೀವು ಅಳೆಯುವ
೩ ಅಳತೆಯಿಂದಲೇ ನಿಮಗೆ ಬದಲು ಅಳೆಯಲ್ಪಡುವದು. ಇದಲ್ಲ
ವೆ ನಿನ್ನ ಸಹೋದರನ ಕಣ್ಣಿನಲ್ಲಿರುವ ಕರವೆಯನ್ನು ನೋಡಿ,
ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ಇರುವದೇ
೪ ನು! ಇಲ್ಲವೆ ನಿನ್ನ ಸಹೋದರನಿಗೆ, ಬಿಡು, ನಿನ್ನ ಕಣ್ಣಿನೊಳ
ಗಿಂದ ಕರವೆಯನ್ನು ತೆಗೆಯುತ್ತೇನೆಂದು, ಹೇಳುವದು ಹ್ಯಾಗೆ!
೫ ಅಗೋ, ನಿನ್ನ ಕಣ್ಣಿನಲ್ಲಿ ತೊಲೆ ಅದೆಯಲ್ಲ! ಕಪಟಿಸ್ಥನೇ, ಮೊ
ದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದು ಹಾಕು;
ಆ ಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ಕರವೆಯನ್ನು
ತೆಗೆಯುವದಕ್ಕೆ ಚನ್ನಾಗಿ ಕಾಣುವಿ.
೬ ಪರಿಶುದ್ಧವಾದದ್ದನ್ನು ನಾಯಿಗಳಿಗೆ ಕೊಡ ಬೇಡಿರಿ; ನಿಮ್ಮ
ಮುತ್ತುಗಳನ್ನು ಹಂದಿಗಳ ಮುಂದೆ ಹಾಕ ಬೇಡಿರಿ. ತಮ್ಮ ಕಾಲು
ಗಳಿಂದ ಅವುಗಳನ್ನು ತುಳಿದು, ಶಿರುಗಿ ಕೊಂಡು, ನಿಮ್ಮನ್ನು ಹ
ರಿದು ಬಿಟ್ಟಾವು.
೭ ಬೇಡಿ ಕೊಳ್ಳಿರಿ, ಆಗ ನಿಮಗೆ ಕೊಡಲ್ಪಡುವದು; ಹುಡುಕಿರಿ,
ಆಗ ನಿಮಗೆ ಶಿಕ್ಕುವದು; ತಟ್ಟಿರಿ, ಆಗ ನಿಮಗೆ ತೆರೆಯಲ್ಪಡುವ
೮ ದು. ಯಾಕಂದರೆ ಬೇಡಿ ಕೊಳ್ಳುವ ಒಬ್ಬೊಬ್ಬನು ಹೊಂದು
ತ್ತಾನೆ; ಹುಡುಕುವವನಿಗೆ ಶಿಕ್ಕುತ್ತದೆ; ತಟ್ಟುವವನಿಗೆ ತೆರೆಯಲ್ಪ
೯ ಡುವದು. ಇಲ್ಲದೆ ನಿಮ್ಮಲ್ಲಿ ಯಾವ ಮನುಷ್ಯನು, ತನ್ನ ಮಗ
ನು ತನ್ನಿಂದ ಕೊಟ್ಟಿ ಬೇಡಿ ಕೊಂಡರೆ, ಅವನಿಗೆ ಕಲ್ಲನ್ನು ಕೊಡು
೧೦ ವನು! ಮತ್ತು ಮೀನನ್ನು ಬೇಡಿ ಕೊಂಡರೆ, ಅವನಿಗೆ ಹಾವನ್ನು
೧೧ ಕೊಡುವನು! ಆದದರಿಂದ ಕೆಟ್ಟವರಾದ ನೀವು ನಿಮ್ಮ ಮಕ್ಕ
ಳಿಗೆ ಒಳ್ಳೇ ದಾನಗಳನ್ನು ಕೊಡ ಶಿಳ್ಳದರೆ, ಎಷ್ಟೋ ಹೆಚ್ಚಾಗಿ ಪ
ರಲೋಕದಲ್ಲಿರುವ ನಿಮ್ಮ ತಂದೆಯೂ ತನ್ನನ್ನು ಬೇಡಿ ಕೊಳ್ಳುವ
ವರಿಗೆ ಒಳ್ಳೆಯವುಗಳನ್ನು ಕೊಡುವನು.
೧೨ ಹೀಗಿರುವದರಿಂದ ಮನುಷ್ಯರು ನಿಮಗೆ ಮಾಡ ಬೇಕೆಂದು
ನೀವು ಇಚ್ಛೈಸುವವುಗಳನ್ನೆಲ್ಲಾ ನೀವು ಸಹ ಅವರಿಗೆ ಹಾಗೆಯೇ
ಮಾಡಿರಿ; ಯಾಕಂದರೆ ನ್ಯಾಯಸ್ತ್ರಮಾಣವೂ ಪ್ರವಾದಿಗಳೂ
ಇದೇ.
೧೩ ಇಕ್ಕಟ್ಟಿನ ಬಾಗಲಿನಿಂದ ಪ್ರವೇಶಿಸಿರಿ; ಯಾಕಂದರೆ ನಾಶಕ್ಕೆ
ಹೋಗುವ ಬಾಗಲು ಅಗಲವು, ಮಾರ್ಗ ವಿಸ್ತಾರವು; ಅದಂದ
೧೪ ಪ್ರವೇಶಿಸುವವರು ಬಹು ಜನ. ಯಾಕಂದರೆ ಜೀವಕ್ಕೆ ಹೋಗುವ
ಬಾಗಲು ಇಕ್ಕಟ್ಟು, ಮಾರ್ಗ ಸಣ್ಣದು; ಅದನ್ನು ಕಂಡು ಕೊ
ಳ್ಳುವವರು ಕೊಂಚ ಜನ.
೧೫ ಸುಳ್ಳು ಪ್ರವಾದಿಗಳಿಗೆ ಎಚ್ಚರಿಕೆಯಾಗಿರ್ರಿ. ಅವರು ಕುರಿಯ
ದದಿಂದ ನಿಮ್ಮ ಬಳಿಗೆ ಬರುತ್ತಾರೆ; ಆದರೆ ಬಳಿಗೆ, ಹಿಡುಕೊಳ್ಳು
೧೬ ವ ತೋಳಗಳಾಗಿದ್ದಾರೆ. ಅವರ ಫಲಗಳಿಂದ ಅವರನ್ನು ತಿಳಿಯು
ವಿರಿ. ಮುಳ್ಳುಗಳಿಂದ ದ್ರಾಕ್ಷೇ ಹಣ್ಣುಗಳನ್ನೂ, ದತ್ತೂರಿಗಳಿಂದ
೧೭ ಅಂಜೂರಗಳನ್ನೂ, ಕೊಯ್ಯುವದುಂಟೇ! ಹಾಗೆಯೇ ಒಳ್ಳೇ
ಮರಗಳೆಲ್ಲಾ ಒಳ್ಳೇ ಫಲ ಫಲಿಸುವವು; ಆದರೆ ಕೆಟ್ಟ ಮರವು
೧೮ ಕೆಟ್ಟ ಫಲ ಫಲಿಸುವದು; ಒಳ್ಳೇ ಮರವು ಕೆಟ್ಟ ಫಲ ಫಲಿಸಲಾರ
೧೯ ದು; ಕೆಟ್ಟ ಮರವು ಒಳ್ಳೇ ಫಲ ಫಲಿಸಲಾರದು. ಒಳ್ಳೇ ಫಲ ಫಲಿ
೨೦ ಸದ ಮರಗಳೆಲ್ಲಾ ಕಡಿಯಲ್ಪಟ್ಟು, ಬೆಂಕಿಯಲ್ಲಿ ಹಾಕಲ್ಪಡುತ್ತವೆ.
ಹೀಗಿರುವದರಿಂದ ಅವರ ಫಲಗಳಿಂದ ಅವರನ್ನು ತಿಳಿಯುವಿರಿ.
೨೧ ಕರ್ತನೇ, ಕರ್ತನೇ, ಎಂದು ನನಗೆ ಹೇಳುವವಕೆಲ್ಲರು ಅಲ್ಲ,
ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತವನ್ನು ಮಾಡುವವನೇ
೨೨ ಪರಲೋಕರಾಜ್ಯದಲ್ಲಿ ಪ್ರವೇಶಿಸುವನು. ಬಹು ಮಂದಿ ಆ ದಿವಸ
ದಲ್ಲಿ, ಕರ್ತನೇ, ಕರ್ತನೇ, ನಿನ್ನ ಹೆಸರಿನಲ್ಲಿ ನಾವು ಪ್ರವಾದಿಸಲಿ
ಲ್ಲವೇ! ನಿನ್ನ ಹೆಸರಿನಲ್ಲಿ ದೆವ್ವಗಳನ್ನು ಹೊರಡಿಸಲಿಲ್ಲವೇ! ನಿನ್ನ
ಹೆಸರಿನಲ್ಲಿ ಅನೇಕ ಬಲವಾದ ಕ್ರಿಯೆಗಳನ್ನು ಮಾಡಲಿಲ್ಲವೇ! ಎಂ
೨೩ ದು ನನಗೆ ಹೇಳುವರು. ಆಗ ನಾನು, ನಿಮ್ಮನ್ನು ಎಂದಾದರೂ
ಅರಿಯಲಿಲ್ಲ; ಅನೀತಿ ಮಾಡುವವರೇ, ನನ್ನನ್ನು ಬಿಟ್ಟು ಹೋಗಿ
ಕೆಂದು, ಅವರಿಗೆ ಹೇಳುವೆನು.
೨೪ ಆದದರಿಂದ ಈ ನನ್ನ ವಾಕ್ಯಗಳನ್ನು ಕೇಳಿ ಮಾಡುವವನು
ಯಾವನೋ, ಅವನನ್ನು, ತನ್ನ ಮನೆಯನ್ನು ಬಂಡೆಯ ಮೇಲೆ
೨೫ ಕಟ್ಟಿದ ಬುದ್ಧಿಯುಳ್ಳ ಮನುಷ್ಯನಿಗೆ ಸಮಾನ ಮಾಡುವೆನು.
ಮಳೆ ಬಿತ್ತು; ಹೊಳೆಗಳು ಬಂದವು; ಘೂಳಿಗಳು ಬೀಸಿ, ಆ ಮ
ನೆಯನ್ನು ಬಡಿದವು; ಆದರೆ ಅದು ಬಂಡೆಯ ಮೇಲೆ ಇ
೨೬ ದ್ದದರಿಂದ, ಅದು ಬೀಳಲಿಲ್ಲ. ಮತ್ತು ಈ ನನ್ನ ವಾಕ್ಯಗಳನ್ನು
ಕೇಳಿ ಮಾಡದವನು ಯಾವನೋ, ಅವನು ಮರಳಿನ ಮೇಲೆ ತ
ನ್ನ ಮನೆಯನ್ನು ಕಟ್ಟಿದ ಹುಚ್ಚು ಮನುಷ್ಯನಿಗೆ ಸಮಾನ ಮಾ
೨೭ ಡಲ್ಪಡುವನು. ಮಳೆ ಬಿತ್ತು; ಹೊಳೆಗಳು ಬಂದವು; ಘೂಳಿಗ
ಳು ಬೀಸಿ, ಆ ಮನೆಯನ್ನು ಬಡಿದವು. ಆಗ ಅದು ಬಿತ್ತು; ಅ
ದರ ಬೀಳುವಿಕೆಯು ದೊಡ್ಡದಾಗಿತ್ತು.
೨೮ ಯೇಸು ಈ ವಾಕ್ಯಗಳನ್ನು ಮುಗಿಸಿದಾಗ ಆದದ್ದೇನಂದರೆ,
೨೯ ಸಮೂಹಗಳು ಅವನ ಬೋಧನೆಗೆ ಆಶ್ಚರ್ಯ ಪಟ್ಟವು. ಯಾ
ಕಂದರೆ ಅವನು ಶಾಸ್ತ್ರಿಗಳ ಹಾಗಲ್ಲ, ಅಧಿಕಾರ ಉಂಟಾದವನ
ಹಾಗೆಯೇ ಅವರಿಗೆ ಬೋಧಿಸುತ್ತಿದ್ದನು.

## ೮. ಸಂಧಿ.

೧ ಅವನು ಬೆಟ್ಟದಿಂದ ಇಳಿದಾಗ, ಬಹು ಸಮೂಹಗಳು ಅವ
೨ ನನ್ನು ಹಿಂಬಾಲಿಸಿದವು. ಮತ್ತು, ಇಗೋ, ಒಬ್ಬ ಕುಷ್ಠ ರೋಗಿ



ಯು ಬಂದು, ಅವನಿಗೆ ನಮಸ್ಕರಿಸಿ, ಕರ್ತನೇ, ನಿನಗೆ ಮನಸ್ಸಿ
೩ ದ್ದರೆ, ನನ್ನನ್ನು ಶುದ್ಧ ಮಾಡ ಬಲ್ಲಿ ಅಂದನು. ಆಗ ಯೇಸು
ತನ್ನ ಕೈ ಚಾಚಿ, ಅವನನ್ನು ಮುಟ್ಟಿ, ಮನಸ್ಸುಳ್ಳಂತು, ಶುದ್ಧ
ವಾಗು, ಅಂದನು. ಸಂಗತಿಯೇ ಅವನ ಕುಷ್ಠವು ಶುದ್ಧವಾಯಿತು.
೪ ಆಗ ಯೇಸು ಅವನಿಗೆ, ನೋಡಿಕೋ, ಯಾರಿಗೂ ಹೇಳ ಬೇ
ಡ; ಆದರೆ ಹೋಗಿ, ಯಾಜಕನಿಗೆ ನಿನ್ನನ್ನು ತೋರಿಸಿ ಕೊಂಡು,
ಕೋಕೆಯು ನೇಮಿಸಿದ ಕಾಣಿಕೆಯನ್ನು ಅವರಿಗೆ ಸಾಕ್ಷಿಗೋಸ್ಕ
ರ ಅರ್ಪಿಸೆಂದು, ಹೇಳಿದನು.
೫ ಮತ್ತು ಯೇಸು ಕಪೆರ್ನಾಮಿನಲ್ಲಿ ಪ್ರವೇಶಿಸುವಾಗ, ಒಬ್ಬ
ಶತಾಧಿಪತಿಯು ಅವನ ಬಳಿಗೆ ಬಂದು, ಅವನನ್ನು ಬೇಡಿ ಕೊಂಡು,
೬ ಕರ್ತನೇ, ನನ್ನ ಆಳು ಪಕ್ಷವಾಯುವಿನಿಂದ ಕಠಿಣ ವೇದನೆ ಪಡು
೭ ವವನಾಗಿ ಮನೆಯಲ್ಲಿ ಬಿದ್ದಿದ್ದಾನೆ, ಅಂದನು. ಆಗ ಯೇಸು ಅವ
ನಿಗೆ, ನಾನು ಬಂದು, ಅವನನ್ನು ಸ್ವಸ್ಥ ಮಾಡುವೆನು, ಅಂದನು.
೮ ಶತಾಧಿಪತಿಯು ಪ್ರತ್ಯುತ್ತರವಾಗಿ, ಕರ್ತನೇ, ನೀನು ನನ್ನ ಮಾ
ಳಿಗೆಯ ಕೆಳಗೆ ಬರುವದಕ್ಕೆ ನಾನು ಯೋಗ್ಯನಲ್ಲ; ಆದರೆ
ಮಾತು ಮಾತ್ರ ಹೇಳು; ಆಗ ನನ್ನ ಆಳು ಸ್ವಸ್ಥವಾಗುವನು.
೯ ಹ್ಯಾಗಂದರೆ ನಾನು ಸಹ ಅಧಿಕಾರದೊಳಗಿರುವ ಮನುಷ್ಯನಾಗಿ
ದ್ದೇನೆ; ನನ್ನ ಕೈಕೆಳಗೆ ರಾಣುವೆಯವರು ಇದ್ದಾರೆ; ಮತ್ತು ಇವ
ನಿಗೆ ಹೋಗಂದರೆ, ಹೋಗುತ್ತಾನೆ; ಬೇರೊಬ್ಬನಿಗೆ ಬಾ ಅಂದರೆ,
೧೦ ಬರುತ್ತಾನೆ; ನನ್ನ ದಾಸನಿಗೆ ಇದನ್ನು ಮಾಡಂದರೆ, ಮಾಡುತ್ತಾ
ನೆ, ಅಂದನು. ಯೇಸು ಇದನ್ನು ಕೇಳಿ, ಆಶ್ಚರ್ಯ ಪಟ್ಟು,
ಹಿಂಬಾಲಿಸುವವರಿಗೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಇಸ್ರ
ಯೇಲಿನಲ್ಲಿಯೂ ನಾನು ಇಷ್ಟು ದೊಡ್ಡ ವಿಶ್ವಾಸವನ್ನು ಕಾಣ
೧೧ ಲಿಲ್ಲ. ಮತ್ತು ನಿಮಗೆ ಹೇಳುತ್ತೇನೆ, ಮೂಡಣದಿಂದಲೂ ಪಡು
ವಲಿಂದಲೂ ಅನೇಕರು ಬಂದು, ಅಬ್ರಹಾಮ್ ಇಸಾಕ್ ಯಾ
೧೨ ಕೋಬರ ಸಂಗಡ ಪರಲೋಕ ರಾಜ್ಯದಲ್ಲಿ ಕೂತ್ತುವರು. ಆದರೆ
ರಾಜ್ಯದ ಮಕ್ಕಳು ಹೊರಗಿನ ಕತ್ತಲಲ್ಲಿ ಹಾಕಲ್ಪಡುವರು. ಅಲ್ಲಿ
ಅಳುವಿಕೆಯೂ ಹಲ್ಲುಕಡಿಯುವಿಕೆಯೂ ಇರುವವು, ಅಂದನು.
೧೩ ಮತ್ತು ಯೇಸು ಶತಾಧಿಪತಿಗೆ, ಹೋಗು, ನೀನು ವಿಶ್ವಾಸಿಸಿದ
ಹಾಗೆ ನಿನಗೆ ಆಗಲಿ, ಅಂದನು. ಅದೇ ಘಳಿಗೆಯಲ್ಲಿ ಅವನ
ಆಳು ಸ್ವಸ್ಥವಾದನು.
೧೪ ಮತ್ತು ಯೇಸು ಪೇತ್ರನ ಮನೆಗೆ ಬಂದು, ಅವನ ಅತ್ತೆ ಜ್ವರ
ದಿಂದ ಬಿದ್ದಿರುವದನ್ನು ನೋಡಿ, ಅವಳ ಕೈಯನ್ನು ಮುಟ್ಟಿದನು.
೧೫ ಆಗ ಜ್ವರವು ಅವಳನ್ನು ಬಿಟ್ಟು ಹೋಯಿತು. ಅವಳು ಎದ್ದು,
ಅವನಿಗೆ ಸೇವೆ ಮಾಡಿದಳು.
೧೬ ಸಂಜೆಯಾಗಲು, ದೆವ್ವ ಹಿಡಿದವರಾದ ಅನೇಕರನ್ನು ಅವನ
ಬಳಿಗೆ ತಂದರು. ಅವನು ಮಾತಿನಿಂದಲೇ ದೆವ್ವಗಳನ್ನು ಹೊರ
೧೭ ಡಿಸಿ, ಕ್ಷೇಮವಿಲ್ಲದವಕೆಲ್ಲರನ್ನು ಸ್ವಸ್ಥ ಮಾಡಿದನು. ಹೀಗೆ—
ಅವನು ನಮ್ಮ ಬಲಹೀನತ್ವಗಳನ್ನು ತೆಗೆದು ಕೊಂಡು, ನಮ್ಮ
ರೋಗಗಳನ್ನು ಹೊತ್ತುಕೊಂಡನೆಂದು, ಪ್ರವಾದಿಯಾದ ಯೆಶಾ
ಯನ ಮುಖಾಂತರ ಹೇಳಿಸಿದ ಮಾತು ಈಡೇರಿತು.
೧೮ ಆದರೆ ಯೇಸು ತನ್ನ ಸುತ್ತಲು ಬಹು ಸಮೂಹಗಳನ್ನು
೧೯ ನೋಡಿ, ಆಜ್ಞೆಗೆ ಹೋಗ ಅಪ್ಪಣೆ ಕೊಟ್ಟನು. ಮತ್ತು ಒಬ್ಬ
ಶಾಸ್ತ್ರಿಯು ಹತ್ತರ ಬಂದು, ಅವನಿಗೆ, ಬೋಧಕನೇ, ನೀನು ಎಲ್ಲಿ
೨೦ ಗೆ ಹೋದರೂ ನಿನ್ನನ್ನು ಹಿಂಬಾಲಿಸುವೆನು, ಅಂದನು. ಯೇಸು
ಅವನಿಗೆ, ನರಿಗಳಿಗೆ ಕೂಣಿಗಳೂ, ಆಕಾಶದ ಪಕ್ಷಿಗಳಿಗೆ ಗೂಡು
ಗಳೂ, ಉಂಟು. ಆದರೆ ಮನುಷ್ಯನ ಮಗನಿಗೆ ತಲೆ ಇಡ
೨೧ ಸ್ಥಳವಿಲ್ಲ, ಅಂದನು. ಮತ್ತು ಅವನ ಶಿಷ್ಯರಲ್ಲಿ ಬೇಕೊಬ್ಬನು,
ಕರ್ತನೇ, ನಾನು ಹೋಗಿ, ನನ್ನ ತಂದೆಯನ್ನು ಹೂಣಿಕುವದ
೨೨ ಕ್ಕೆ ಮೊದಲು ಅಪ್ಪಣೆ ಕೊಡು, ಅನ್ನಲಾಗಿ; ಯೇಸು ಅವನಿಗೆ,
ನನ್ನನ್ನು ಹಿಂಬಾಲಿಸು; ತಮ್ಮ ಸತ್ತವರನ್ನು ಹೂಣಿಕುವದಕ್ಕೆ
೨೩ ಸತ್ತವರನ್ನೇ ಬಿಡು, ಅಂದನು. ಮತ್ತು ಅವನು ಹಡಗವನ್ನು ಏರು
೨೪ ವಾಗ, ಅವನ ಶಿಷ್ಯರು ಅವನನ್ನು ಹಿಂಬಾಲಿಸಿದರು. ಮತ್ತು,
ಇಗೋ, ಸಮುದ್ರದಲ್ಲಿ ಮಹಾ ಕಂಪ ಉಂಟಾಗಿ, ಹಡಗವು ತೆರೆಗ
ಳಿಂದ ಮುಚ್ಚಲ್ಪಟ್ಟಿತು. ಆದರೆ ಅವನು ನಿದ್ದೆ ಮಾಡುತ್ತಿದ್ದನು.
೨೫ ಆಗ ಅವನ ಶಿಷ್ಯರು ಹತ್ತರ ಬಂದು, ಅವನನ್ನು ಎಬ್ಬಿಸಿ, ಕರ್ತ
೨೬ ನೇ, ನಮ್ಮನ್ನು ರಕ್ಷಿಸು, ನಾಶವಾಗುತ್ತೇವೆ ಅನ್ನಲಾಗಿ; ಅವನು
ಅವರಿಗೆ, ಅಲ್ಪ ವಿಶ್ವಾಸಿಗಳೇ, ಯಾಕೆ ಹೇಡಿಗಳಾಗಿದ್ದೀರಿ! ಎಂದು
ಹೇಳಿ, ಎದ್ದು, ಘೂಳಿಗಳನ್ನೂ ಸಮುದ್ರವನ್ನೂ ಗದರಿಸಿದನು;
೨೭ ಆಗ ಮಹಾ ಶಾಂತವಾಯಿತು. ಆದರೆ ಆ ಮನುಷ್ಯರು ಆಶ್ಚ
ರ್ಯ ಪಟ್ಟು, ಇವನು ಎಂಥವನು! ಯಾಕಂದರೆ ಘೂಳಿಗಳೂ
ಸಮುದ್ರವೂ ಅವನಿಗೆ ವಿಧೇಯವಾಗಿವೆ, ಅಂದರು.
೨೮ ಮತ್ತು ಅವನು ಆಚೆಗೆ ಗೆರ್ಗೆಸೇನರ ದೇಶಕ್ಕೆ ಬಂದಾಗ, ಆ
ಮಾರ್ಗವಾಗಿ ಯಾರೂ ಬರ ಕೂಡದ ಹಾಗೆ, ಬಹು ಘೋರ
ವಾದ ದೆವ್ವ ಹಿಡಿದವರಿಬ್ಬರು ಸಮಾಧಿಗಳೊಳಗಿಂದ ಹೊರಟು,
೨೯ ಅವನೆದುರಿಗೆ ಬಂದರು. ಮತ್ತು, ಇಗೋ, ದೇವರ ಮಗನಾದ
ಯೇಸುವೇ, ನಮಗೂ ನಿನಗೂ ಏನು! ಕಾಲಕ್ಕೆ ಮುಂಚೆ ನಮ್ಮ
೩೦ ನ್ನು ಬಾಧಿಸ ಇಲ್ಲಿಗೆ ಬಂದಿಯಾ! ಎಂದು ಕೂಗಿದರು. ಆದರೆ
ಅವರಿಗೆ ದೂರವಾಗಿ ಬಹಳ ಹಂದಿಗಳ ಮಂದೆ ಮೇಯುತ್ತಿತ್ತು.
೩೧ ಮತ್ತು ದೆವ್ವಗಳು, ನೀನು ನಮ್ಮನ್ನು ಹೊರಡಿಸಿದರೆ, ಹಂದಿಗಳ
ಮಂದೆಯೊಳಗೆ ಹೋಗ ನಮಗೆ ಅಪ್ಪಣೆ ಕೊಡೆಂದು ಬೇಡಿ
೩೨ ಕೊಂಡವು. ಅವನು ಅವುಗಳಿಗೆ, ಹೋಗಿರಿ ಅನ್ನಲು; ಅವು ಹೊ
ರಗೆ ಬಂದು, ಹಂದಿಗಳ ಮಂದೆಯೊಳಗೆ ಹೊಕ್ಕವು. ಆಗ,
ಇಗೋ, ಹಂದಿಗಳ ಮಂದೆಯೆಲ್ಲಾ ಇಳಿಜಾರಿನಿಂದ ಸಮುದ್ರಕ್ಕೆ
೩೩ ಓಡಿ, ನೀರುಗಳಲ್ಲಿ ಸತ್ತು ಹೋಯಿತು. ಆದರೆ ಮೇಯಿಸುವ
ವರು ಓಡಿ, ಪಟ್ಟಣಕ್ಕೆ ಬಂದು, ಎಲ್ಲವುಗಳನ್ನೂ, ದೆವ್ವ ಹಿಡಿದವರ
೩೪ ವೃತ್ತಾಂತವನ್ನೂ, ತಿಳಿಸಿದರು. ಆಗ, ಇಗೋ, ಪಟ್ಟಣವೆಲ್ಲಾ ಯೇ
ಸುವಿನೆದುರಿಗೆ ಹೊರಟು, ಅವನನ್ನು ಕಂಡು, ತಮ್ಮ ಪ್ರಾಂತ್ಯಗ
ಳನ್ನು ಬಿಟ್ಟು ಹೋಗ ಬೇಕೆಂದು, ಬೇಡಿ ಕೊಂಡರು.

## ೯. ಸಂಧಿ.

೧ ಆಗಲವನು ಹಡಗವನ್ನೇರಿ, ದಾಟಿ, ಸ್ವಪಟ್ಟಣಕ್ಕೆ ಬಂದನು.
೨ ಮತ್ತು, ಇಗೋ, ಮಂಚದ ಮೇಲೆ ಬಿದ್ದಿರುವ ಪಕ್ಷವಾಯುವಿನವ
ನನ್ನು ಅವನ ಬಳಿಗೆ ತಂದರು. ಯೇಸು ಅವರ ವಿಶ್ವಾಸವನ್ನು
ನೋಡಿ, ಪಕ್ಷವಾಯುವಿನವನಿಗೆ, ಮಗನೇ, ಧೈರ್ಯವಾಗಿರು;
೩ ನಿನ್ನ ಪಾಪಗಳು ನಿನಗೆ ಪರಿಹರಿಸಲ್ಪಟ್ಟಿವೆ, ಅಂದನು. ಆಗ, ಇ
ಗೋ, ಶಾಸ್ತ್ರಿಗಳಲ್ಲಿ ಕೆಲವರು, ಇವನು ದೂಷಿಸುತ್ತಾನೆಂದು ತ
೪ ಮ್ಮೊಳಗೆ ಅಂದು ಕೊಂಡರು. ಯೇಸು ಅವರ ಆಲೋಚನೆಗಳನ್ನು
ತಿಳಿದು, ಹೇಳಿದ್ದೇನಂದರೆ, ನೀವು ಯಾಕೆ ನಿಮ್ಮ ಹೃದಯಗ
೫ ಳಲ್ಲಿ ಕೆಟ್ಟವುಗಳನ್ನು ಆಲೋಚಿಸುತ್ತೀರಿ! ಯಾಕಂದರೆ ಯಾವ
ದು ಸುಲಭ! ನಿನ್ನ ಪಾಪಗಳು ಪರಿಹರಿಸಲ್ಪಟ್ಟಿವೆ ಅನ್ನುವ
೬ ದೋ! ಎದ್ದು, ನಡಿ, ಅನ್ನುವದೋ! ಆದರೆ ಭೂಮಿಯ ಮೇಲೆ

ಪಾಪಗಳನ್ನು ಪರಿಹರಿಸುವದಕ್ಕೆ ಮನುಷ್ಯನ ಮಗನಿಗೆ ಅಧಿಕಾ
ರ ಉಂಟೆಂದು, ನೀವು ತಿಳಿಯುವ ಹಾಗೆ, ಅವನು ಪಕ್ಷವಾಯು
ವಿನವನಿಗೆ, ಎದ್ದು, ನಿನ್ನ ಮಂಚವನ್ನು ಎತ್ತಿಕೊಂಡು, ನಿನ್ನ ಮ
೭ ನೆಗೆ ಹೋಗು, ಅಂದನು. ಅವನು ಎದ್ದು, ತನ್ನ ಮನೆಗೆ ಹೋದ
೮ ನು. ಆಗ ಸಮೂಹಗಳು ನೋಡಿ, ಆಶ್ಚರ್ಯ ಪಟ್ಟು, ಮನುಷ್ಯ
ರಿಗೆ ಇಂಥ ಅಧಿಕಾರ ಕೊಟ್ಟ ದೇವರನ್ನು ಮಹಿಮೆ ಪಡಿಸಿದರು
೯ ಮತ್ತು ಯೇಸು ಅಲ್ಲಿಂದ ಹಾದು ಹೋಗುವಾಗ, ಸುಂಕಕ್ಕೆ
ಕೂತುಕೊಂಡಿದ್ದ ಮತ್ತಾಯನೆಂಬ ಮನುಷ್ಯನನ್ನು ನೋಡಿ, ಅ
ವನಿಗೆ, ನನ್ನನ್ನು ಹಿಂಬಾಲಿಸು, ಅಂದನು. ಅವನು ಎದ್ದು, ಅವ
೧೦ ನನ್ನು ಹಿಂಬಾಲಿಸಿದನು. ಮತ್ತು ಆದದ್ದೇನಂದರೆ, ಅವನು ಮನೆ
ಯಲ್ಲಿ ಊಟಕ್ಕೆ ಕೂತಿರುವಾಗ, ಇಗೋ, ಬಹು ಮಂದಿ ಸುಂಕ
ದವರೂ ಪಾಪಿಗಳೂ ಬಂದು, ಯೇಸುವಿನ ಸಂಗಡಲೂ, ಅವನ
೧೧ ಶಿಷ್ಯರ ಸಂಗಡಲೂ ಕೂತು ಕ್ಕೊಂಡರು. ಫರಿಸಾಯರು ನೋಡಿ,
ಅವನ ಶಿಷ್ಯರಿಗೆ, ನಿಮ್ಮ ಪೋಧಕನು ಸುಂಕದವರ ಸಂಗಡಲೂ,
೧೨ ಪಾಪಿಗಳ ಸಂಗಡಲೂ, ಯಾಕೆ ಉಣ್ಣುತ್ತಾನೆ! ಅಂದರು. ಯೇ
ಸು ಕೇಳಿ, ಅವರಿಗೆ, ಆರೋಗ್ಯವಾಗಿರುವವರಿಗಲ್ಲ, ಕ್ಷೇಮವಿಲ್ಲ
೧೩ ದವರಿಗೆ ವೈದ್ಯನು ಬೇಕು. ಆದರೆ ಹೋಗಿ,—ಬಲಿಯನ್ನಲ್ಲ,
ಕರುಣೆಯನ್ನು ಇಚ್ಛೈಸುತ್ತೇನೆಂಬುವದು ಏನೆಂದು ಕಲಿತು ಕೊ
ಳ್ಳಿರಿ; ಯಾಕಂದರೆ ನೀತಿವಂತರನ್ನಲ್ಲ, ಪಾಪಿಗಳನ್ನು ಮಾನ
ಸಾಂತರಕ್ಕೆ ಕರೆಯ ಬಂದೆನು, ಅಂದನು.
೧೪ ಆಗ ಯೋಹಾನನ ಶಿಷ್ಯರು ಅವನ ಬಳಿಗೆ ಬಂದು, ನಾವೂ
ಫರಿಸಾಯರೂ ಬಹಳ ಸಾರಿ ಉಪವಾಸ ಮಾಡಲಾಗಿ, ನಿನ್ನ ಶಿಷ್ಯ
೧೫ ರು ಯಾಕೆ ಉಪವಾಸ ಮಾಡುವದಿಲ್ಲ! ಅಂದರು. ಯೇಸು ಅವ
ರಿಗೆ ಹೇಳಿದ್ದೇನಂದರೆ, ಮದಲಿಂಗನು ತಮ್ಮ ಸಂಗಡ ಇರುವ
ವರ್ಯಂತರ, ಮದುವೆಯವರು ದುಃಖ ಪಡಲಾಗುವದೋ! ಆ
ದರೆ ಮದಲಿಂಗನು ಅವರ ಬಳಿಯಿಂದ ತೆಗೆಯಲ್ಪಡುವ ದಿವಸ
೧೬ ಗಳು ಬರುವವು; ಆಗ ಉಪವಾಸ ಮಾಡುವರು. ಹಳೇ ವಸ್ತ್ರಕ್ಕೆ
ಹೊಸ ಬಟ್ಟೆಯ ತುಂಡು ಯಾರೂ ಹಚ್ಚುವದಿಲ್ಲ; ಯಾಕಂದ
ರೆ ಅದರ ತ್ಯಾಪೆಯು ವಸ್ತ್ರವನ್ನು ಹಿಂಜುವದರಿಂದ, ಹರಕು ಹೆ
೧೭ ಚ್ಚಾಗುವದು. ಮತ್ತು ಹೊಸ ದ್ರಾಕ್ಷೇ ರಸವನ್ನು ಹಳೇ ಬುದ್ದಲಿಗ
ಳಲ್ಲಿ ಹಾಕುವದಿಲ್ಲ; ಹಾಕಿದರೆ, ಬುದ್ದಲಿಗಳು ಒಡೆದು, ದ್ರಾಕ್ಷೇ
ರಸವು ಚೆಲ್ಲಿ, ಬುದ್ದಲಿಗಳು ಕೆಟ್ಟು ಹೋಗುವವು. ಆದರೆ ಹೊಸ
ದ್ರಾಕ್ಷೇ ರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕುತ್ತಾರೆ; ಆಗ ಎರ
ಡು ಭದ್ರವಾಗಿರುವವು.
೧೮ ಅವನು ಇವುಗಳನ್ನು ಅವರಿಗೆ ಹೇಳುತ್ತಿರಲಾಗಿ, ಇಗೋ, ಒಬ್ಬ
ಅಧಿಕಾರಿಯು ಬಂದು, ಅವನಿಗೆ ನಮಸ್ಕರಿಸಿ, ನನ್ನ ಮಗಳು ಈ
ಗಲೇ ತೀರಿ ಹೋಗಿದ್ದಾಳೆ; ಆದರೆ ನೀನು ಬಂದು, ಅವಳ ಮೇಲೆ
೧೯ ನಿನ್ನ ಕೈ ಇಡು; ಆಗ ಬದುಕುವಳು, ಅಂದನು. ಯೇಸು ಎದ್ದು,
ತನ್ನ ಶಿಷ್ಯರ ಸಂಗಡ ಅವನನ್ನು ಹಿಂಬಾಲಿಸಿದನು.
೨೦ ಮತ್ತು, ಇಗೋ, ಹನ್ನೆರಡು ವರುಷಗಳಿಂದ ರಕ್ತಕುಸುಮ
ಇದ್ದ ಸ್ತ್ರೀಯು ಹಿಂದುಗಡೆ ಬಂದು, ಅವನ ವಸ್ತ್ರದ ಶರಗನ್ನು
೨೧ ಮುಟ್ಟಿದಳು. ಯಾಕಂದರೆ, ಅವನ ವಸ್ತ್ರವನ್ನು ಮಾತ್ರ ಮು
ಟ್ಟಿದರೆ, ಸ್ವಸ್ಥವಾಗುವೆನೆಂದು, ತನ್ನಲ್ಲಿ ಅಂದು ಕೊಂಡಳು.
೨೨ ಆದರೆ ಯೇಸು ತಿರಿಗಿ ಕೊಂಡು, ಅವಳನ್ನು ನೋಡಿ, ಮಗಳೇ,
ಧೈರ್ಯವಾಗಿರು; ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅರೆ,
ಅಂದನು. ಅದೇ ಘಳಿಗೆಯಿಂದ ಆ ಸ್ತ್ರೀಯು ಸ್ವಸ್ಥವಾದಳು.
೨೩ ಮತ್ತು ಯೇಸು ಅಧಿಕಾರಿಯ ಮನೆಗೆ ಬಂದು, ಮೇಳಗಾರರ
೨೪ ನ್ನೂ ಗುಲ್ಲು ಮಾಡುವ ಸಮೂಹವನ್ನೂ ನೋಡಿ, ಅವರಿಗೆ, ಆಚೆ
ಹೋಗಿರಿ, ಹುಡುಗಿ ಸಾಯಲಿಲ್ಲ, ನಿದ್ದೆ ಮಾಡುತ್ತಾಳೆ, ಅಂದನು
೨೫ ಅವರು ಅವನನ್ನು ಹಾಸ್ಯ ಮಾಡಿದರು. ಆದರೆ ಸಮೂಹವು
ಹೊರಡಿಸಲ್ಪಟ್ಟ ಮೇಲೆ, ಅವನು ಒಳಗೆ ಬಂದು, ಅವಳ ಕೈಹಿಡಿ
೨೬ ದನು; ಆಗ ಹುಡುಗಿ ಎದ್ದಳು. ಈ ಸುದ್ದಿ ಆ ದೇಶದಲ್ಲೆಲ್ಲಾ
ಹಬ್ಬಿತು.
೨೭ ಮತ್ತು ಯೇಸು ಅಲ್ಲಿಂದ ಹೋಗುವಾಗ, ಇಬ್ಬರು ಕುರು
ಡರು ಅವನನ್ನು ಹಿಂಬಾಲಿಸಿ, ದಾವೀದನ ಮಗನೇ, ನಮ್ಮನ್ನು
೨೮ ಕರುಣಿಸು, ಎಂದು ಕೂಗಿದರು. ಅವನು ಮನೆಗೆ ಬರುವಾಗ,
ಕುರುಡರು ಅವನ ಬಳಿಗೆ ಬಂದರು. ಯೇಸು ಅವರಿಗೆ, ಇದನ್ನು
ಮಾಡಬಲ್ಲೆನೆಂದು, ನಂಬುತ್ತೀರೋ! ಅಂದನು. ಅವರು ಅ
ವನಿಗೆ, ಹೌದು, ಕರ್ತನೇ, ಅಂದರು. ಆಗಲವನು ಅವರ ಕಣ್ಣು
ಗಳನ್ನು ಮುಟ್ಟಿ, ನಿಮ್ಮ ವಿಶ್ವಾಸದ ಪ್ರಕಾರ ನಿಮಗೆ ಆಗಲಿ,
೩೦ ಅಂದನು; ಆಗಲವರ ಕಣ್ಣುಗಳು ತೆಗೆಯಲ್ಪಟ್ಟವು ಮತ್ತು
ಯೇಸು ಅವರಿಗೆ, ನೋಡಿ ಕೊಳ್ಳಿರಿ, ಯಾರೂ ತಿಳಿಯ ಬಾರ
೩೧ ದೆಂದು, ಖಂಡಿತವಾಗಿ ಆಜ್ಞಾಪಿಸಿದನು. ಆದರೆ ಅವರು ಹೊರಟು,
ಆ ದೇಶವೆಲ್ಲಾದರಲ್ಲಿ ಅವನ ಕೀರ್ತಿ ಪ್ರಬಲ ಮಾಡಿದರು.
೩೨ ಅವರು ಹೊರಡುತ್ತಿರುವಾಗ, ಇಗೋ, ದೆವ್ವ ಹಿಡಿದ ಒಬ್ಬ
೩೩ ಮೂಕ ಮನುಷ್ಯನನ್ನು ಅವನ ಬಳಿಗೆ ತಂದರು. ದೆವ್ವ ಹೊರ
ಡಿಸಲ್ಪಟ್ಟ ಮೇಲೆ, ಮೂಕನು ಮಾತಾಡಿದನು. ಆಗ ಸಮೂಹ
ಗಳು, ಇಸ್ರಯೇಲಿನಲ್ಲಿ ಎಂದಾದರೂ ಹೀಗೆ ಕಾಣಿಸಿಲ್ಲವೆಂದು,
೩೪ ಆಶ್ಚರ್ಯ ಪಟ್ಟವು. ಆದರೆ ಫರಿಸಾಯರು, ದೆವ್ವಗಳ ಅಧಿಪತಿ
ಯಿಂದ ದೆವ್ವಗಳನ್ನು ಹೊರಡಿಸುತ್ತಾನೆ, ಅಂದರು.
೩೫ ಇದಲ್ಲದೆ ಯೇಸು ಅವರ ಸಭೆಮನೆಗಳಲ್ಲಿ ಬೋಧಿಸುತ್ತಾ,
ರಾಜ್ಯದ ಸುವಾರ್ತೆಯನ್ನು ಸಾರುತ್ತಾ, ಜನರೊಳಗಿರುವ ಸಕಲ
ರೋಗಗಳನ್ನೂ ಸಕಲ ಅಸಾಖ್ಯಗಳನ್ನೂ ವಾಸಿ ಮಾಡುತ್ತಾ,
೩೬ ಎಲ್ಲಾ ಪಟ್ಟಣ ಗ್ರಾಮಗಳನ್ನು ಸಂಚರಿಸಿದನು. ಆದರೆ ಅವನು
ಸಮೂಹಗಳನ್ನು ನೋಡಿ, ಅವರು ಕುರುಬನಿಲ್ಲದ ಕುರಿಗಳ
ಹಾಗೆ ಬಳಲಿ, ಚದರಿರುವ ಕಾರಾದರಿಂದ, ಅವರಿಗೋಸ್ಕರ ಅಂತ್ಯ
೩೭ ಕರಣ ಪಟ್ಟನು. ಆಗ ತನ್ನ ಶಿಷ್ಯರಿಗೆ, ಬೆಳೆ ಬಹಳ; ಆದರೆ ಕೆಲ
೩೮ ಸದವರು ಸ್ವಲ್ಪ. ಆದದರಿಂದ, ತನ್ನ ಬೆಳೆಗೆ ಕೆಲಸದವರನ್ನು
ಕಳುಹಿಸ ಬೇಕೆಂದು, ಬೆಳೆ ಯಜಮಾನನನ್ನು ಬೇಡಿ ಕೊಳ್ಳಿರಿ,
ಅಂದನು.

## ೧೦. ಸಂಧಿ.

೧ ಮತ್ತು ಅವನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕರೆ
ದು, ಅಶುದ್ಧಾತ್ಮಗಳ ಮೇಲೆ, ಅವುಗಳನ್ನು ಹೊರಡಿಸುವದಕ್ಕೂ,
ಸಕಲ ರೋಗಗಳನ್ನೂ ಅಸಾಖ್ಯಗಳನ್ನೂ ವಾಸಿ ಮಾಡುವದ
ಕ್ಕೂ, ಅವರಿಗೆ ಅಧಿಕಾರ ಕೊಟ್ಟನು.
೨ ಹನ್ನೆರಡು ಅಪೊಸ್ತಲರ ಹೆಸರುಗಳು ಇವೇ—ಮೊದಲನೆಯ
ವನು ಬೇತ್ರನೆಂಬ ಸೀಮೋನನೂ, ಅವನ ಸಹೋದರನಾದ ಅಂ
ದ್ರೆಯನೂ, ಜೆಬೆದಾಯನ ಮಗನಾದ ಯಾಕೋಬನೂ, ಅವನ
೩ ಸಹೋದರನಾದ ಯೋಹಾನನೂ, ಫಿಲಿಪ್ಪನೂ, ಬಾರ್ತೊ



ಲೊಮಾಯನೂ, ತೋಮನೂ, ಸುಂಕದವನಾದ ಮತ್ತಾಯ
ನೂ, ಅಲ್ಫಾಯನ ಮಗನಾದ ಯಾಕೋಬನೂ, ತದ್ದಾಯ
೪ ನೆಂಬ ಲೆಬ್ಬಾಯನೂ, ಕನಾನ್ಯನಾದ ಸೀಮೋನನೂ, ಅವನನ್ನು
ಒಪ್ಪಿಸಿ ಕೊಟ್ಟಿ ಇಸ್ಕರಿಯೋತೆಂಬ ಯೂದನೂ.
೫ ಈ ಹನ್ನೆರಡು ಮಂದಿಯನ್ನು ಯೇಸು ಕಳುಹಿಸಿ, ಅವರಿಗೆ
ಆಜ್ಞಾಪಿಸಿದ್ದೇನಂದರೆ, ಜನಾಂಗಗಳ ಮಾರ್ಗದಲ್ಲಿ ಹೋಗ ಬೇ
೬ ಡಿರಿ; ಸಮಾರ್ಯರ ಪಟ್ಟಣದಲ್ಲಿ ಪ್ರವೇಶಿಸ ಬೇಡಿರಿ; ಅವರನ್ನು
ಬಿಟ್ಟು, ಇಸ್ರಯೇಲನ ಮನೆಯ ತಪ್ಪಿ ಹೋದ ಕುರಿಗಳ ಬಳಿಗೆ
೭ ಹೋಗಿರಿ. ಹೋಗುವಾಗ, ಪರಲೋಕ ರಾಜ್ಯವು ಸಮೀಪವಾಯಿ
೮ ತೆಂದು, ಸಾರಿರಿ; ಬಲಹೀನರನ್ನು ಸ್ವಸ್ಥ ಮಾಡಿರಿ; ಕುಷ್ಠ ಕೋಗಿ
ಗಳನ್ನು ಶುಚಿ ಮಾಡಿರಿ; ಸತ್ತವರನ್ನು ಎಬ್ಬಿಸಿರಿ; ದೆವ್ವಗಳನ್ನು
ಹೊರಡಿಸಿರಿ; ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ.
೯ ನಿಮ್ಮ ಉಡಿಗಳಲ್ಲಿ ಚಿನ್ನವನ್ನಾದರೂ, ಬೆಳ್ಳಿಯನ್ನಾದರೂ,
೧೦ ಹಿತ್ತಾಳೆಯನ್ನಾದರೂ, ಸಂಪಾದಿಸಿಟ್ಟು ಕೊಳ್ಳ ಬೇಡಿರಿ. ದಾರಿಗೆ
ಹಸಿಬೆಯಾದರೂ, ಎರಡು ಅಂಗಿಗಳಾದರೂ, ಕೆರಗಳಾದರೂ,
ಕೋಲಾದರೂ ಬೇಡ; ಯಾಕಂದರೆ ಕೆಲಸದವನು ತನ್ನ ಆಹಾ
ರಕ್ಕೆ ಯೋಗ್ಯನಾಗಿದ್ದಾನೆ.
೧೧ ಇದಲ್ಲದೆ ಯಾವ ಪಟ್ಟಣದಲ್ಯಾದರೂ, ಗ್ರಾಮದಲ್ಯಾದರೂ,
ಪ್ರವೇಶಿಸುತ್ತೀರೋ, ಅದರಲ್ಲಿ ಯೋಗ್ಯನು ಯಾರೆಂದು, ವಿಚಾ
೧೨ ರಿಸಿ, ಹೊರಡುವ ವರ್ಯಂತರ ಅಲ್ಲೇ ಇರ್ರಿ. ಇದಲ್ಲದೆ ಮನೆ
೧೩ ಯಲ್ಲಿ ಪ್ರವೇಶಿಸುವಾಗ, ಅದನ್ನು ವಂದಿಸಿರಿ; ಆ ಮನೆಯು ಯೋ
ಗ್ಯವಾಗಿದ್ದರೆ, ನಿಮ್ಮ ಸಮಾಧಾನವು ಅದರ ಮೇಲೆ ಬರಲಿ;
ಅಯೋಗ್ಯವಾಗಿದ್ದರೆ, ನಿಮ್ಮ ಸಮಾಧಾನವು ನಿಮಗೆ ಹಿಂದಿರು
೧೪ ಗಲಿ. ಮತ್ತು ನಿಮ್ಮನ್ನು ಸೇರಿಸಿ ಕೊಳ್ಳದೆ, ನಿಮ್ಮ ವಾಕ್ಯಗಳನ್ನು
ಕೇಳದೆ ಇರುವವನ್ಯಾವನೋ, ಆ ಮನೆಯನ್ನಾದರೂ ಪಟ್ಟಣ
ವನ್ನಾದರೂ ಬಿಟ್ಟು ಹೊರಡುವಾಗ, ನಿಮ್ಮ ಪಾದ ಧೂಳನ್ನು
೧೫ ಝಾಡಿಸಿರಿ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನ್ಯಾಯತೀರ್ಪಿ
ನ ದಿವಸದಲ್ಲಿ ಆ ಪಟ್ಟಣಕ್ಕಿಂತ ಸೊದೋಮ್ ಗಮೋರಗಳ
ದೇಶಕ್ಕೆ ತಾಳ್ಳ ತಕ್ಕದ್ದಾಗಿರುವದು.
೧೬ ಇಗೋ, ತೋಳ್ಳಗಳ ಮಧ್ಯದಲ್ಲಿರುವ ಕುರಿಗಳ ಹಾಗೆ ನಿಮ್ಮ
ನ್ನು ಕಳುಹಿಸುತ್ತೇನೆ; ಆದದರಿಂದ ಸರ್ಪಗಳ ಹಾಗೆ ಜಾಣರೂ,
೧೭ ಪಾರಿವಾಳ್ಳಗಳ ಹಾಗೆ ನಿರ್ದೋಷಿಗಳೂ, ಆಗಿರ್ರಿ. ಇದಲ್ಲದೆ ಮ
ನುಷ್ಯರ ವಿಷಯ ಎಚ್ಚರಿಕೆಯಾಗಿರ್ರಿ; ಯಾಕಂದರೆ ನಿಮ್ಮನ್ನು
ಮಂತ್ರಿಸಭೆಗಳಿಗೆ ಒಪ್ಪಿಸುವರು; ಮತ್ತು ತಮ್ಮ ಸಭೆಮನೆಗಳಲ್ಲಿ
೧೮ ನಿಮ್ಮನ್ನು ಹೊಡೆಯುವರು; ಮತ್ತು ನನ್ನ ನಿಮಿತ್ತವಾಗಿ ಅಧಿಪ
ತಿಗಳ ಮುಂದೆಯೂ, ಅರಸುಗಳ ಮುಂದೆಯೂ, ಅವರಿಗೂ
೧೯ ಜನಾಂಗಗಳಿಗೂ ಸಾಕ್ಷಿಯಾಗಿ, ತರಲ್ಪಡುವಿರಿ. ಆದರೆ ಅವರು
ನಿಮ್ಮನ್ನು ಒಪ್ಪಿಸುವಾಗ, ಹ್ಯಾಗೆ, ಇಲ್ಲವೆ ಏನು ಮಾತಾಡ ಬೇ
ಕೆಂದು, ಚಿಂತೆ ಪಡ ಬೇಡಿರಿ; ಯಾಕಂದರೆ ಮಾತಾಡ ಬೇಕಾ
೨೦ ದದ್ದು ಆ ಘಳಿಗೆಯಲ್ಲಿಯೇ ನಿಮಗೆ ಕೊಡಲ್ಪಡುವದು. ಯಾ
೨೧ ಕಂದರೆ ಮಾತಾಡುವವರು ನೀವಲ್ಲ, ನಿಮ್ಮೊಳಗೆ ಮಾತಾಡುವ ನಿ
ಮ್ಮ ತಂದೆಯ ಆತ್ಮವೇ. ಇದಲ್ಲದೆ ಸಹೋದರನು ಸಹೋದರ
ನನ್ನು, ತಂದೆಯು ಮಗನನ್ನು, ಮರಣಕ್ಕೆ ಒಪ್ಪಿಸುವರು;
ಮಕ್ಕಳು ಹೆತ್ತವರಿಗೆ ವಿರೋಧವಾಗಿ ಎದ್ದು, ಅವರನ್ನು ಕೊಲ್ಲಿ
೨೨ ಸುವರು; ಮತ್ತು ನನ್ನ ಹೆಸರಿನ ನಿಮಿತ್ತ ಎಲ್ಲರಿಂದ ಹಗೆ ಮಾಡ
ಲ್ಪಡುವಿರಿ. ಆದರೆ ಕಡೇ ವರಿಗೂ ತಾಳ್ಳುವವನ್ಯಾವನೋ ಅವನೇ
ರಕ್ಷಿಸಲ್ಪಡುವನು.
೨೩ ಆದರೆ ಒಂದು ಪಟ್ಟಣದಲ್ಲಿ ನಿಮ್ಮನ್ನು ಹಿಂಸಿಸುವಾಗ, ಬೇ
ಕೊಂದಕ್ಕೆ ಓಡಿ ಹೋಗಿರಿ. ಯಾಕಂದರೆ ನಿಶ್ಚಯವಾಗಿ ನಿಮಗೆ
ಹೇಳುತ್ತೇನೆ, ಮನುಷ್ಯನ ಮಗನು ಬರುವ ವರ್ಯಂತರ ಇಸ್ರ
೨೪ ಯೇಲಿನ ಪಟ್ಟಣಗಳ ಸಂಚಾರವನ್ನು ತೀರಿಸದೆ ಇರುವಿರಿ. ಶಿಷ್ಯನು
ಪೋಧಕನಿಗಿಂತ, ದಾಸನು ತನ್ನ ಯಜಮಾನನಿಗಿಂತ, ಹೊತ್ತ
೨೫ ವನಲ್ಲ. ಶಿಷ್ಯನಿಗೆ ಪೋಧಕನ ಹಾಗೆ ಇರುವದು, ದಾಸನಿಗೆ ತನ್ನ
ಯಜಮಾನನ ಹಾಗೆ ಇರುವದು, ಸಾಕು. ಅವರು ಮನೆಯ ಯ
ಜಮಾನನನ್ನು ಬೆಲ್ಜೆಬೂಲನೆಂದು ಕರೆದರೆ, ಎಷ್ಟೋ ಹೆಚ್ಚಾಗಿ
೨೬ ಅವನ ಮನೆಯವರನ್ನು! ಆದಕಾರಣ ಅವರಿಗೆ ಭಯ ಪಡ ಬೇ
ಡಿರಿ; ಯಾಕಂದರೆ ಪ್ರಕಟವಾಗದಿರದ ಮರೆಯಾದದ್ದು ಯಾವ
ದೂ ಇಲ್ಲ; ಮತ್ತು ತಿಳಿಯಲ್ಪಡದಿರದ ಅಂತರಂಗವಾದದ್ದೂ
೨೭ ಇಲ್ಲ. ನಾನು ಕತ್ತಲಲ್ಲಿ ನಿಮಗೆ ಹೇಳುವದನ್ನು ಬೆಳಕಿನಲ್ಲಿ ಹೇಳ್ಳಿ
ರಿ; ಕಿವಿಯಲ್ಲಿ ನೀವು ಕೇಳುವದನ್ನು ಮಾಳ್ಳಿಗೆಗಳ ಮೇಲೆ ಸಾರಿರಿ.
೨೮ ಮತ್ತು ಪ್ರಾಣವನ್ನು ಕೊಲ್ಲಲಾರದೆ, ಶರೀರವನ್ನು ಕೊಲ್ಲುವ
ವರಿಗೆ ಭಯ ಪಡುವದನ್ನು ಬಿಟ್ಟು, ಪ್ರಾಣವನ್ನೂ ಶರೀರವನ್ನೂ
೨೯ ನರಕದಲ್ಲಿ ನಾಶನ ಮಾಡ ಬಲ್ಲವನಿಗೆ ಭಯ ಪಡಿರಿ. ದುಡ್ಡಿಗೆ
ಎರಡು ಗುಬ್ಬಿಗಳನ್ನು ಮಾರುತ್ತಾರಲ್ಲ! ಆದಾಗ್ಯೂ ನಿಮ್ಮ ತಂದೆ
೩೦ ಇಲ್ಲದೆ ಅವುಗಳಲ್ಲಿ ಒಂದಾದರೂ ಭೂಮಿಗೆ ಬೀಳದು. ನೀವಾದರೆ,
೩೧ ನಿಮ್ಮ ತಲೆಯ ಕೂದಲುಗಳೆಲ್ಲಾ ಎಣಿಸಲ್ಪಟ್ಟಿವೆ. ಅದದರಿಂದ
ಭಯ ಪಡ ಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ವಿಶೇಷವಾಗಿ
೩೨ ದ್ದೀರಿ. ಹಾಗಾದರೆ ಮನುಷ್ಯರ ಮುಂದೆ ನನ್ನನ್ನು ಅರಿಕೆ ಮಾ
ಡುವವನ್ಯಾವನೋ, ಅವನನ್ನು ಪರಲೋಕದಲ್ಲಿರುವ ನನ್ನ ತಂ
೩೩ ದೆಯ ಮುಂದೆ ನಾನೂ ಅರಿಕೆ ಮಾಡುವೆನು; ಆದರೆ ಮನು
ಷ್ಯರ ಮುಂದೆ ನನ್ನನ್ನು ಬೊಂಕುವವನ್ಯಾವನೋ, ಅವನನ್ನು
ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನಾನೂ ಬೊಂ
ಕುವೆನು.
೩೪ ಭೂಮಿಯ ಮೇಲೆ ಸಮಾಧಾನವನ್ನು ಹಾಕ ಬಂದೆನೆಂದು,
ನೆನಸ ಬೇಡಿರಿ; ಸಮಾಧಾನವನ್ನಲ್ಲ, ಕತ್ತಿಯನ್ನು ಹಾಕ ಬಂ
೩೫ ದೆನು. ಹ್ಯಾಗಂದರೆ ಮನುಷ್ಯನನ್ನು ಅವನ ತಂದೆಗೂ, ಮಗ
ಳನ್ನು ಅವಳ ತಾಯಿಗೂ, ಸೊಸೆಯನ್ನು ಅವಳ ಅತ್ತೆಗೂ,
೩೬ ಅಗಲಿಸುವದಕ್ಕೆ ಬಂದೆನು; ಮತ್ತು ಮನುಷ್ಯನ ಮನೆಯವರೇ
೩೭ ಅವನ ಶತ್ರುಗಳಾಗುವರು. ತಂದೆಯನ್ನಾದರೂ, ತಾಯಿಯ
ನ್ನಾದರೂ, ನನಗಿಂತ ಹೆಚ್ಚಾಗಿ ಸ್ನೇಹಿಸುವವನು ನನಗೆ ಯೋ
ಗ್ಯನಲ್ಲ; ಮಗನನ್ನಾದರೂ, ಮಗಳನ್ನಾದರೂ, ನನಗಿಂತ ಹೆ
೩೮ ಚ್ಚಾಗಿ ಸ್ನೇಹಿಸುವವನು ನನಗೆ ಯೋಗ್ಯನಲ್ಲ; ಮತ್ತು ತನ್ನ
ಶಿಲುಬೆಯನ್ನು ತಕ್ಕೊಂಡು, ನನ್ನನ್ನು ಹಿಂಬಾಲಿಸದವನು ನನಗೆ
೩೯ ಯೋಗ್ಯನಲ್ಲ. ತನ್ನ ಪ್ರಾಣವನ್ನು ಕಂಡು ಕೊಳ್ಳುವವನು
ಅದನ್ನು ಕಳಕೊಳ್ಳುವನು; ಮತ್ತು ನನಗೋಸ್ಕರ ತನ್ನ ಪ್ರಾಣ
೪೦ ವನ್ನು ಕಳಕೊಳ್ಳುವವನು ಅದನ್ನು ಕಂಡು ಕೊಳ್ಳುವನು. ನಿಮ್ಮ
ನ್ನು ಅಂಗೀಕರಿಸುವವನು, ನನ್ನನ್ನು ಅಂಗೀಕರಿಸುತ್ತಾನೆ; ಮತ್ತು
ನನ್ನನ್ನು ಅಂಗೀಕರಿಸುವವನು ನನ್ನನ್ನು ಕಳುಹಿಸಿದವನನ್ನು
೪೧ ಅಂಗೀಕರಿಸುತ್ತಾನೆ. ಪ್ರವಾದಿಯ ಹೆಸರಿನಲ್ಲಿ ಪ್ರವಾದಿಯನ್ನು
ಅಂಗೀಕರಿಸುವವನು ಪ್ರವಾದಿಯ ಪ್ರತಿಫಲವನ್ನು ಹೊಂದುವನು.

ಮತ್ತು ನೀತಿವಂತನ ಹೆಸರಿನಲ್ಲಿ ನೀತಿವಂತನನ್ನು ಅಂಗೀಕರಿಸುವ
೪೦ ವನು ನೀತಿವಂತನ ಪ್ರತಿಫಲವನ್ನು ಹೊಂದುವನು; ಮತ್ತು ಶಿಷ್ಯನ
ಹೆಸರಿನಲ್ಲಿ ಬಂದು ಪಂಚಪಾತ್ರೆ ತಣ್ಣೀರಾದರೂ ಈ ಚಿಕ್ಕವರಲ್ಲಿ
ಒಬ್ಬನಿಗೆ ಕುಡಿಯ ಕೊಡುವವನ್ಯಾವನೋ—ನಿಶ್ಚಯವಾಗಿ ನಿಮಗೆ
ಹೇಳುತ್ತೇನೆ—ಅವನು ತನ್ನ ಪ್ರತಿಫಲವನ್ನು ಕಳಕೊಳ್ಳುವದಿಲ್ಲ.

## ೧೧. ಸಂಧಿ.

೧ ಮತ್ತು ಆದದ್ದೇನಂದರೆ, ಯೇಸು ತನ್ನ ಹನ್ನಿರಡು ಶಿಷ್ಯ
ರಿಗೆ ಅಪ್ಪಣೆ ಕೊಟ್ಟು ತೀರಿಸಿದ ಮೇಲೆ, ಅವರ ಪಟ್ಟಣಗಳಲ್ಲಿ ಬೋ
ಧಿಸುವದಕ್ಕೂ, ಸಾರುವದಕ್ಕೂ ಅಲ್ಲಿಂದ ಹೋದನು.
೨ ಆದರೆ ಯೋಹಾನನು ಶೆರೆಮನೆಯಲ್ಲಿ ಕ್ರಿಸ್ತನ ಕ್ರಿಯೆಗಳ
3 ನ್ನು ಕೇಳಿ, ತನ್ನ ಶಿಷ್ಯರಲ್ಲಿ ಇಬ್ಬರನ್ನು ಕಳುಹಿಸಿ, ಬರುವವ
ನು ನೀನೋ, ಬೇಕೊಬ್ಬನನ್ನು ಎದುರು ನೋಡೋಣೋ!
೪ ಎಂದು ಅವನಿಗೆ ಹೇಳಿದನು. ಯೇಸು ಪ್ರತ್ಯುತ್ತರವಾಗಿ ಅವರಿಗೆ
ಹೇಳಿದ್ದು, ಹೋಗಿ, ನೀವು ಕೇಳುವವುಗಳನ್ನೂ, ನೋಡುವವುಗ
೫ ಳನ್ನೂ, ಯೋಹಾನನಿಗೆ ತಿಳಿಸಿರಿ;—ಕುರುಡರು ದೃಷ್ಟಿ ಹೊಂ
ದುತ್ತಾರೆ, ಕುಂಟರು ನಡೆಯುತ್ತಾರೆ, ಕುಷ್ಠ ರೋಗಿಗಳು ಶುಚಿ
ಯಾಗುತ್ತಾರೆ, ಕಿವುಡರು ಕೇಳುತ್ತಾರೆ, ಸತ್ತವರು ಎಬ್ಬಿಸಲ್ಪಡು
೬ ತ್ತಾರೆ, ಬಡವರಿಗೆ ಸುವಾರ್ತೆ ಪ್ರಸಂಗಿಸಲ್ಪಡುತ್ತದೆ. ಮತ್ತು
ನನ್ನಲ್ಲಿ ಅಟಂಕ ಪಡದವನೇ ಭಾಗ್ಯವಂತನು.
೭ ಅವರು ಹೋಗುವಾಗ, ಯೇಸು, ಯೋಹಾನನ ವಿಷಯ
ವಾಗಿ ಸಮೂಹಗಳಿಗೆ ಹೇಳಲಾರಂಭಿಸಿದ್ದೇನಂದರೆ, ಏನು ನೋಡ
ಅರಣ್ಯಕ್ಕೆ ಹೊರಟಿರಿ! ಭೂಳಿಯಿಂದ ಅಲಾಡುವ ದಂಟ
೮ ನೋ! ಅದರೆ ಏನು ನೋಡ ಹೊರಟಿರಿ! ನಯವಾದ ವಸ್ತ್ರಗ
ಳನ್ನು ಧರಿಸಿ ಕೊಂಡ ಮನುಷ್ಯನನೋ! ಇಗೋ, ನಯವಾದ
ವಸ್ತ್ರಗಳನ್ನು ಹೊದ್ದು ಕೊಳ್ಳುವವರು ಅರಸರ ಮನೆಗಳಲ್ಲಿ
೯ ಇದ್ದಾರೆ. ಅದರೆ ಏನು ನೋಡ ಹೊರಟಿರಿ! ಪ್ರವಾದಿಯನೋ! ಹೌ
ದು, ನಿಮಗೆ ಹೇಳುತ್ತೇನೆ, ಪ್ರವಾದಿಗಿಂತ ಹೆಚ್ಚಾದವನನೇ.
೧೦ ಯಾಕಂದರೆ, ಇಗೋ, ನಿನ್ನ ಮಾರ್ಗವನ್ನು ನಿನ್ನ ಮುಂದೆ ಸಿದ್ಧ
ಮಾಡುವ ನನ್ನ ದೂತನನ್ನು ನಿನ್ನ ಮುಖದ ಮುಂದೆ ನಾನು
ಕಳುಹಿಸುತ್ತೇನೆಂದು, ಯಾವನನ್ನು ಕುರಿತು ಬರೆದಿದೆಯೋ, ಅವ
೧೧ ನೇ ಇವನು. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಸ್ತ್ರೀಯರಿಂದ
ಹುಟ್ಟಿದವರಲ್ಲಿ ಸ್ನಾಪಕನಾದ ಯೋಹಾನನಿಗಿಂತ ದೊಡ್ಡವನು
ಏಳಲಿಲ್ಲ; ಅದರೆ ಪರಲೋಕ ರಾಜ್ಯದಲ್ಲಿ ಚಿಕ್ಕವನು ಅವನಿಗಿಂ
ತ ದೊಡ್ಡವನಾಗಿದ್ದಾನೆ.
೧೨ ಇದಲ್ಲದೆ ಸ್ನಾಪಕನಾದ ಯೋಹಾನನ ದಿವಸಗಳಿಂದ ಈ
ವರಿಗೂ ಪರಲೋಕ ರಾಜ್ಯವು ಬಲಾತ್ಕಾರ ಪಡುತ್ತದೆ; ಬಲಾ
೧೩ ತ್ಕಾರಿಗಳು ಅದನ್ನು ಕಸುಕೊಳ್ಳುತ್ತಾರೆ. ಯಾಕಂದರೆ ಯೋ
ಹಾನನ ವರಿಗೂ ಪ್ರವಾದಿಗಳೆಲ್ಲರೂ ನ್ಯಾಯಪ್ರಮಾಣವೂ ಪ್ರ
೧೪ ವಾದಿಸಿದರು. ಮತ್ತು ನೀವು ಗ್ರಹಿಸ ಮನಸ್ಸಾಗಿದ್ದರೆ, ಬರುವ
೧೫ ದಕ್ಕಿರುವ ಎಲೀಯನು ಇವನೇ. ಕೇಳುವದಕ್ಕೆ ಕಿವಿಯುಳ್ಳ
ವನು ಕೇಳಲಿ. ಅದರೆ ಈ ಸಂತತಿಯನ್ನು ಯಾವದಕ್ಕೆ ಸಮಾ
ನ ಮಾಡಲಿ! ಅಂಗಡಿ ಬೀದಿಗಳಲ್ಲಿ ಕೂತುಕೊಂಡು, ತಮ್ಮ ಸ್ನೇ
೧೬ ಹಿತರಿಗೆ ಕೂಗಿ, ನಿಮಗೆ ಕೊಳಲೂದಿದೆವು, ನೀವು ಕುಣಿಯಲಿಲ್ಲ;
ನಿಮಗೆ ಶೋಕಾಡಿದೆವು, ನೀವು ಬಡುಕೊಳ್ಳಲಿಲ್ಲವೆಂದು ಹೇಳುವ
೧೭ ಮಕ್ಕಳಿಗೆ ಸಮಾನವಾಗಿದೆ. ಹ್ಯಾಗಂದರೆ ಯೋಹಾನನು ಉ
ಣ್ಣದೆ ಕುಡಿಯದೆ ಬಂದನು; ಅವನಿಗೆ ದೆವ್ವ ಉಂಟು, ಅನ್ನು
೧೮ ತ್ತಾರೆ; ಮನುಷ್ಯನ ಮಗನು ಉಣ್ಣುತ್ತಾ ಕುಡಿಯುತ್ತಾ ಬಂದ
ನು; ಇಗೋ, ಹೊಟ್ಟೆಬಾಕನೂ, ಮದ್ಯಪಾನಿಯೂ, ಸುಂಕದ
ವರಿಗೂ ಪಾಪಿಗಳಿಗೂ ಸ್ನೇಹಿತನೂ, ಆಗಿರುವ ಮನುಷ್ಯನು,
ಅನ್ನುತ್ತಾರೆ. ಅದರೆ ಜ್ಞಾನವು ತನ್ನ ಮಕ್ಕಳಿಂದ ನೀತಿ ನಿರ್ಣ
ಯ ಪಡುವದು.
೧೯ ಆಗಲವನು ತನ್ನ ಬಲವಾದ ಕ್ರಿಯೆಗಳು ಹೆಚ್ಚಾಗಿ ನಡೆದ
ಪಟ್ಟಣಗಳನ್ನು, ಅವು ಮಾನಸಾಂತರ ಪಡದ ಕಾರಣ, ಗದರಿಸಲಾ
೨೦ ರಂಭಿಸಿದನು—ಖೊರಜಿನೇ! ನಿನಗೆ ಅಯ್ಯೋ! ಬೆತ್ಸಾಯಿದ
ವೇ! ನಿನಗೆ ಅಯ್ಯೋ! ಯಾಕಂದರೆ ನಿಮ್ಮಲ್ಲಿ ನಡೆದ ಬಲವಾ
ದ ಕ್ರಿಯೆಗಳು ತೂರನಲ್ಲಿಯೂ, ಸಿದೋನಿನಲ್ಲಿಯೂ, ನಡೆದಿ
ದ್ದರೆ, ಅವರು ಪೂರ್ವದಲ್ಲಿ ಗೋಣಿತಟ್ಟಿನಲ್ಲಿಯೂ, ಬೂದಿಯ
೨೧ ಲ್ಲಿಯೂ, ಮಾನಸಾಂತರ ಪಟ್ಟಿರುವರು. ಇದಲ್ಲದೆ ನಿಮಗೆ ಹೇ
ಳುತ್ತೇನೆ, ನ್ಯಾಯತೀರ್ಪಿಕೆಯ ದಿವಸದಲ್ಲಿ ನಿಮಗಿಂತ ತೂ
೨೩ ರಿಗೂ, ಸಿದೋನಿಗೂ, ತಾಳ ತಕ್ಕದ್ದಾಗಿರುವದು. ಮತ್ತು ಲಕಾ
ದದ ಮಟ್ಟಿಗೂ ಎತ್ತಲ್ಪಟ್ಟ ಕಪೆರ್ನಾಮೇ! ನೀನು ಪಾತಾಳದ
ಮಟ್ಟಿಗೂ ಕೆಡವಲ್ಪಡುವಿ; ಯಾಕಂದರೆ ನಿನ್ನಲ್ಲಿ ನಡೆದ ಬಲ
ವಾದ ಕ್ರಿಯೆಗಳು ಸೊದೋಮಿನಲ್ಲಿ ನಡೆದಿದ್ದರೆ, ಅದು ಇಂದಿನ
೨೪ ವರಿಗೂ ಇರುವದು. ಇದಲ್ಲದೆ ನಿಮಗೆ ಹೇಳುತ್ತೇನೆ, ನ್ಯಾಯ
ತೀರ್ಪಿಕೆಯ ದಿವಸದಲ್ಲಿ ನಿಮಗಿಂತ ಸೊದೋಮ್ ದೇಶಕ್ಕೆ ತಾಳ
ತಕ್ಕದ್ದಾಗಿರುವದು.
೨೫ ಆದೇ ಸಮಯದಲ್ಲಿ ಯೇಸು ಪ್ರತ್ಯುತ್ತರವಾಗಿ ಹೇಳಿದ್ದೇ
ನಂದರೆ, ಪರಲೋಕ ಭೂಲೋಕಗಳ ಕರ್ತನಾದ ತಂದೆಯೇ,
ನೀನು ಇವುಗಳನ್ನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಮರೆ ಮಾ
ಡಿ, ಬಾಲಕರಿಗೆ ಪ್ರಕಟಿ ಮಾಡಿದದರಿಂದ, ನಿನಗೆ ಸ್ತೋತ್ರ ಮಾಡು
೨೬ ತ್ತೇನೆ; ಹೌದು, ತಂದೆಯೇ, ಯಾಕಂದರೆ ಹೀಗೆ ನಿನ್ನ ದೃ
೨೭ ಷ್ಟಿಯಲ್ಲಿ ಬಳ್ಳೇದಾಗಿತ್ತು. ಎಲ್ಲವುಗಳು ನನ್ನ ತಂದೆಯಿಂದ
ನನಗೆ ಒಪ್ಪಿಸಲ್ಪಟ್ಟಿವೆ; ಮತ್ತು ತಂದೆಯಲ್ಲದೆ ಯಾವನೂ ಮ
ಗನನ್ನು ಅರಿಯನು; ಮತ್ತು ಮಗನಲ್ಲದೆ, ಮಗನು ಯಾವನಿ
ಗೆ ಪ್ರಕಟಿ ಮಾಡುವದಕ್ಕೆ ಮನಸ್ಸಾಗಿದ್ದಾನೋ, ಅವನಲ್ಲದೆ,
ಯಾವನೂ ತಂದೆಯನ್ನು ಅರಿಯನು.
೨೮ ಕಷ್ಟ ಪಟ್ಟು, ಭಾರ ಹೊರುವವರೆಲ್ಲರೇ, ನನ್ನ ಬಳಿಗೆ ಬನಿರಿ!
೨೯ ನಾನು ನಿಮಗೆ ವಿಶ್ರಾಂತಿ ಕೊಡುವೆನು; ನನ್ನ ನೊಗವನ್ನು ನಿಮ್ಮ
೩೦ ಮೇಲೆ ತಕ್ಕೊಂಡು, ನನ್ನಿಂದ ಕಲಿತು ಕೊಳ್ಳಿರಿ; ಯಾಕಂದರೆ
ಸಾತ್ವಿಕನೂ, ದೀನ ಹೃದಯವುಳ್ಳವನೂ, ಆಗಿದ್ದೇನೆ; ಆಗ
ನಿಮ್ಮ ಪ್ರಾಣಗಳಿಗೆ ವಿಶ್ರಾಂತಿ ಹೊಂದುವಿರಿ; ಯಾಕಂದರೆ ನನ್ನ
ನೊಗವು ಮೃದುವೂ, ನನ್ನ ಹೊರೆಯು ಹಾರವೂ ಆಗಿದೆ.

## ೧೨. ಸಂಧಿ.

೧ ಆ ಕಾಲದಲ್ಲಿ ಯೇಸು ಸಬ್ಬತಿನಲ್ಲಿ ಪೈರಿನ ಹೊಲಗಳನ್ನು
ಹಾದು ಹೋಗುವಾಗ, ಅವನ ಶಿಷ್ಯರು ಹಸಿದು, ತೆನೆಗಳನ್ನು
೨ ಕಿತ್ತು, ತಿನ್ನಲಾರಂಭಿಸಿದರು. ಅದರೆ ಫರಿಸಾಯರು ನೋಡಿ,
ಅವನಿಗೆ, ಇಗೋ, ನಿನ್ನ ಶಿಷ್ಯರು ಸಬ್ಬತಿನಲ್ಲಿ ಮಾಡ ಬಾರದ್ದ
3 ನ್ನು ಮಾಡುತ್ತಾರೆ, ಅಂದರು. ಅವನು ಅವರಿಗೆ, ದಾವೀದನು—



ಅವನೂ ಅವನ ಸಂಗಡ ಇದ್ದವರೂ ಹಸಿದಾಗ, ಏನು ಮಾಡಿದ
೪ ನೆಂದು—ಅವನು ದೇವರ ಮನೆಯಲ್ಲಿ ಪ್ರವೇಶಿಸಿ, ಯಾಜಕರು
ಮಾತ್ರವೇ ಹೊರ್ತು, ಅವನೂ ಅವನ ಸಂಗಡ ಇದ್ದವರೂ ತಿನ್ನ
ಬಾರದ ಸಮುಖದ ರೊಟ್ಟಿಗಳನ್ನು ತಿಂದನೆಂದು, ನೀವು ಓದಲಿಲ್ಲ
೫ ವೋ! ಇಲ್ಲವೆ ಸಬ್ಬತುಗಳಲ್ಲಿ ಯಾಜಕರು ದೇವಾಲಯದಲ್ಲಿ
ಸಬ್ಬತನ್ನು ಭಂಗ ಪಡಿಸಿ, ಅಪರಾಧವಿಲ್ಲದೆ ಇದ್ದಾರೆಂದು, ನ್ಯಾ
೬ ಯಪ್ರಮಾಣದಲ್ಲಿ ಓದಲಿಲ್ಲವೋ! ಅದರೂ ನಿಮಗೆ ಹೇಳುತ್ತೇ
೭ ನೆ, ದೇವಾಲಯಕ್ಕಿಂತ ದೊಡ್ಡವನು ಇಲ್ಲಿ ಇದ್ದಾನೆ. ಅದರೆ, ನ
ನಗೆ ಬಲಿಯಲ್ಲ, ಕರುಣೆಯೇ ಬೇಕು, ಎಂಬ ಮಾತು ಏನೆಂದು
ನೀವು ತಿಳಿದಿದ್ದರೆ, ನಿರಪರಾಧಿಗಳಿಗೆ ಅಜ್ಞೆ ನಿರ್ಣಯಿಸಲೇ
೮ ಇಲ್ಲ. ಯಾಕಂದರೆ ಮನುಷ್ಯನ ಮಗನು ಸಬ್ಬತಿಗೆ ಸಹ
ಕರ್ತನಾಗಿದ್ದಾನೆ, ಅಂದನು.
೯ ಮತ್ತು ಅಲ್ಲಿಂದ ಹೊರಟು, ಅವರ ಸಭೆಮನೆಗೆ ಬಂದನು.
೧೦ ಮತ್ತು, ಇಗೋ, ಒಣಗಿದ ಕೈಯುಳ್ಳ ಮನುಷ್ಯನು ಇದ್ದನು.
ಅಗಲವನ ಮೇಲೆ ತಪ್ಪು ಹೊರಿಸುವ ಹಾಗೆ, ಸಬ್ಬತುಗಳಲ್ಲಿ ಸ್ವ
೧೧ ಸ್ಥ ಮಾಡ ಬಹುದೋ? ಎಂದು ಅವನನ್ನು ಕೇಳಿದರು. ಅವನು
ಅವರಿಗೆ, ನಿಮ್ಮೊಳಗೆ ಯಾವ ಮನುಷ್ಯನು ಒಂದೇ ಕುರಿ ಉಂಟಾ
ದವನಾಗಿ, ಅದು ಸಬ್ಬತಿನಲ್ಲಿ ಕುಣಿಯಲ್ಲಿ ಬಿದ್ದರೆ, ಅದನ್ನು
೧೨ ಹಿಡಿದು ಎತ್ತದೆ ಇರುವನು? ಹಾಗಾದರೆ ಕುರಿಗಿಂತ ಮನುಷ್ಯನು
ಎಷ್ಟೋ ಹೆಚ್ಚಾಗಿದ್ದಾನೆ! ಆದಕಾರಣ ಸಬ್ಬತಿನಲ್ಲಿ ಒಳ್ಳೇದ
೧೩ ನ್ನು ಮಾಡ ಬಹುದು, ಅಂದನು. ಆಗ ಆ ಮನುಷ್ಯನಿಗೆ, ನಿನ್ನ
ಕೈ ಚಾಚು ಅನ್ನಲು, ಚಾಚಿದನು; ಅದು ವಾಸಿಯಾಗಿ ಮ
೧೪ ತ್ತೊಂದರ ಹಾಗಾಯಿತು. ಅದರೆ ಫರಿಸಾಯರು ಹೊರಗೆಹೋ
ಗಿ, ಅವನನ್ನು ಸಂಹರಿಸ ಬೇಕೆಂದು, ಅವನಿಗೆ ವಿರೋಧವಾಗಿ ಆ
ಲೋಚನೆ ಮಾಡಿದರು.
೧೫ ಯೇಸು ಅದನ್ನು ತಿಳಿದು, ಅಲ್ಲಿಂದ ಹೊರಟನು. ಮತ್ತು
ಬಹು ಸಮೂಹಗಳು ಅವನನ್ನು ಹಿಂಬಾಲಿಸಿದವು. ಅವನು ಅವರೆ
೧೬ ಲ್ಲರನ್ನು ವಾಸಿ ಮಾಡಿ, ತನ್ನನ್ನು ಪ್ರಸಿದ್ಧಿ ಮಾಡದ ಹಾಗೆ, ಅವರಿ
೧೭ ಗೆ ಖಂಡಿತವಾಗಿ ಆಜ್ಞಾಪಿಸಿದನು. ಹೀಗೆ ಪ್ರವಾದಿಯಾದ ಯೆಶಾ
ಯನಿಂದ ಹೇಳಲ್ಪಟ್ಟಿದ್ದು ಈಡೇರಿತು; ಏನಂದರೆ, ಇಗೋ, ನಾ
ನು ಆದುಕೊಂಡಂಥ, ನನ್ನ ಪ್ರಿಯವಾದಂಥ, ನನ್ನ ಪ್ರಾಣವು
ಅನಂದ ಪಡುವಂಥ, ನನ್ನ ಸೇವಕನು! ಅವನ ಮೇಲೆ ನನ್ನ ಆ
ತ್ಮವನ್ನು ಇಡುವೆನು; ಅವನು ಜನಾಂಗಗಳಿಗೆ ನ್ಯಾಯವನ್ನು
೧೯ ತಿಳಿಸುವನು; ಅವನು ಜಗಳಾಡುವದಿಲ್ಲ; ಕೂಗುವದಿಲ್ಲ; ಯಾವ
ನೂ ಅವನ ಶಬ್ದವನ್ನು ಬೀದಿಗಳಲ್ಲಿ ಕೇಳುವದಿಲ್ಲ; ಅವನು ನ್ಯಾ
೨೦ ಯವನ್ನು ಜಯಕ್ಕೆ ಹೊರಡ ಮಾಡುವ ಪರ್ಯಂತರ ನಲಿ
ಗಿದ ದಂಟನ್ನು ಮುರಿಯುವದಿಲ್ಲ; ಹೊಗೆಯುವ ಬತ್ತಿಯನ್ನು
೨೧ ಆರಿಸುವದಿಲ್ಲ. ಮತ್ತು ಅವನ ಹೆಸರಿನಲ್ಲಿ ಜನಾಂಗಗಳು ನಂಬಿಕೆ
ಇಡುವರು.
೨೨ ಆಗ ದೆವ್ವ ಹಿಡಿದ ಕುರುಡ ಮೂಕನು ಅವನ ಬಳಿಗೆ ತರಲ್ಪ
ಟ್ಟನು. ಅವನು ಅವನನ್ನು ವಾಸಿ ಮಾಡಿದ್ದರಿಂದ, ಕುರುಡ ಮೂ
೨೩ ಕನು ಮಾತಾಡಿ, ನೋಡಿದನು. ಆಗ ಸಮೂಹಗಳೆಲ್ಲಾ ಭ್ರಮೆಗೊಂ
೨೪ ಡು, ಇವನು ದಾವೀದನ ಮಗನಲ್ಲವೇ! ಅಂದರು. ಅದರೆ ಫರಿ
ಸಾಯರು ಅದನ್ನು ಕೇಳಿ, ಇವನು ದೆವ್ವಗಳ ಅಧಿಕಾರಿಯಾದ
ಬೆಲ್ಜೆಬೂಲಿನಿಂದಲೇ ಹೊರ್ತು, ದೆವ್ವಗಳನ್ನು ಹೊರದಿಸುವದಿ
೨೫ ಲ್ಲಿ, ಅಂದರು. ಯೇಸು ಅವರ ಆಲೋಚನೆಗಳನ್ನು ತಿಳಿದು,
ಅವರಿಗೆ ಹೇಳಿದ್ದೇನಂದರೆ, ಯಾವ ರಾಜ್ಯವಾದರೂ ತನ್ನಲ್ಲಿ
ಭೇದವಾದರೆ, ಹಾಳಾಗುತ್ತದೆ; ಮತ್ತು ಯಾವ ಪಟ್ಟಣವಾದರೂ ಮ
೨೬ ನೆಯಾದರೂ ತನ್ನಲ್ಲಿ ಭೇದವಾದರೆ, ನಿಲ್ಲಲಾರದು. ಹೀಗೆಯಲಾಗಿ,
ಸೈತಾನನು ಸೈತಾನನನ್ನು ಹೊರದಿಸಿದರೆ, ತನ್ನಲ್ಲಿ ಭೇದವಾಗಿ
೨೭ ರುವನು. ಹಾಗಾದರೆ ಅವನ ರಾಜ್ಯವು ನಿಲ್ಲುವದು ಹ್ಯಾಗೆ! ಮತ್ತು
ನಾನು ಬೆಲ್ಜೆಬೂಲಿನಿಂದ ದೆವ್ವಗಳನ್ನು ಹೊರದಿಸಿದರೆ, ನಿಮ್ಮ
ಮಕ್ಕಳು ಯಾರಿಂದ ಹೊರದಿಸುತ್ತಾರೆ! ಅದದರಿಂದ ಅವರು
೨೮ ನಿಮಗೆ ನ್ಯಾಯ ತೀರಿಸುವವರಾಗಿರುವರು. ಅದರೆ ನಾನು ದೇ
ವರ ಆತ್ಮದಿಂದ ದೆವ್ವಗಳನ್ನು ಹೊರದಿಸಿದರೆ, ದೇವರ ರಾಜ್ಯ
೨೯ ವು ನಿಮ್ಮಲ್ಲಿ ಬಂತಲ್ಲ! ಇದಲ್ಲದೆ, ಒಬ್ಬನು ಮೊದಲು ಬಲಿಷ್ಠ
ನನ್ನು ಕಟ್ಟದಿದ್ದರೆ, ಬಲಿಷ್ಠನ ಮನೆಯನ್ನು ಹೊಕ್ಕು, ಅವನ
ಸಾಮಾನುಗಳನ್ನು ಸುಲು ಕೊಳ್ಳುವದು ಹ್ಯಾಗೆ! ಕಟ್ಟಿದ ಮೇಲೆ
೩೦ ಅವನ ಮನೆಯನ್ನು ಸುಲು ಕೊಳ್ಳುವನು. ನನ್ನ ಸಂಗಡ ಇರದ
ವನು ನನಗೆ ವಿರೋಧವಾಗಿದ್ದಾನೆ; ನನ್ನ ಸಂಗಡ ಕೂಡಿಸದವನು
ಚೆಲ್ಲುತ್ತಾನೆ.
೩೧ ಆದಕಾರಣ ನಿಮಗೆ ಹೇಳುತ್ತೇನೆ, ಸಮಸ್ತ ಪಾಪವೂ, ದೂ
ಷಣೆಯೂ, ಮನುಷ್ಯರಿಗೆ ಮನ್ನಿಸಲ್ಪಡುವವು; ಅದರೆ ಆತ್ಮ
ಕ್ಕೆ ವಿರೋಧವಾಗಿರುವ ದೂಷಣೆಯು ಮನುಷ್ಯರಿಗೆ ಮನ್ನಿಸ
೩೨ ಲ್ಪಡದು. ಮತ್ತು ಮನುಷ್ಯನ ಮಗನಿಗೆ ವಿರೋಧವಾಗಿ ಮಾತಾ
ಡುವವನ್ಯಾವನೋ, ಅವನಿಗೆ ಮನ್ನಿಸಲ್ಪಡುವದು; ಅದರೆ ಪರಿ
ಶುದ್ಧಾತ್ಮಕ್ಕೆ ವಿರೋಧವಾಗಿ ಮಾತಾಡುವವನ್ಯಾವನೋ, ಅವನಿಗೆ
ಇಹದಲ್ಯಾದರೂ, ಪರದಲ್ಯಾದರೂ, ಮನ್ನಿಸಲ್ಪಡದು.
೩೩ ಮರವನ್ನು ಒಳ್ಳೇದೆಂದೂ, ಅದರ ಫಲವನ್ನು ಒಳ್ಳೇದೆಂ
ದೂ, ಎಣಿಸಿರಿ; ಇಲ್ಲವೆ ಮರವನ್ನು ಕೆಟ್ಟದ್ದೆಂದೂ, ಅದರ ಫಲವ
ನ್ನು ಕೆಟ್ಟದ್ದೆಂದೂ, ಎಣಿಸಿರಿ; ಯಾಕಂದರೆ ಫಲದಿಂದಲೇ ಮರ
೩೪ ವು ತಿಳಿಯಲ್ಪಡುವದು. ಸರ್ಪ ಜಾತಿಯವರೇ, ನೀವು ಕೆಟ್ಟವ
ರಾಗಿದ್ದು, ಒಳ್ಳೇದನ್ನು ಹ್ಯಾಗೆ ಮಾತಾಡ ಬಲ್ಲಿರಿ! ಯಾಕಂದ
ರೆ ಹೃದಯದ ಸಂಪೂರ್ಣತೆಯಿಂದ ಬಾಯಿಯು ಮಾತಾ
ಡುತ್ತದೆ. ಒಳ್ಳೇ ಮನುಷ್ಯನು ತನ್ನ ಹೃದಯದ ಒಳ್ಳೇ ಬೊ
೩೫ ಕ್ಕಸದಿಂದ ಒಳ್ಳೇಯವುಗಳನ್ನು ಹೊರಗೆ ತರುತ್ತಾನೆ; ಕೆಟ್ಟ ಮ
ನುಷ್ಯನು ತನ್ನ ಕೆಟ್ಟ ಬೊಕ್ಕಸದಿಂದ ಕೆಟ್ಟವುಗಳನ್ನು ಹೊರ
೩೬ ಗೆ ತರುತ್ತಾನೆ. ಅದರೆ ನಿಮಗೆ ಹೇಳುತ್ತೇನೆ, ಮನುಷ್ಯರು ಆಡು
ವ ಸಕಲ ವ್ಯರ್ಥ ಮಾತುಗಳಿಗೋಸ್ಕರ ನ್ಯಾಯತೀರ್ಪಿಕೆಯ
೩೭ ದಿನದಲ್ಲಿ ಲೆಖ್ಖ ಒಪ್ಪಿಸುವರು. ಯಾಕಂದರೆ ನಿನ್ನ ಮಾತುಗ
ಳಿಂದ ನೀತಿ ನಿರ್ಣಯ ಪಡುವಿ; ಮತ್ತು ನಿನ್ನ ಮಾತುಗಳಿಂದ
ಅಜ್ಞೆ ನಿರ್ಣಯ ಪಡುವಿ.
೩೮ ಆಗ ಸಾಸ್ತ್ರಿಗಳಲ್ಲಿಯೂ ಫರಿಸಾಯರಲ್ಲಿಯೂ ಕೆಲವರು ಪ್ರ
ತ್ಯುತ್ತರವಾಗಿ, ಬೋಧಕನೇ, ನಿನ್ನಿಂದ ಒಂದು ಗುರುತು ನೋಡ
೩೯ ಬೇಕು, ಅಂದರು. ಅದರೆ ಅವನು ಪ್ರತ್ಯುತ್ತರವಾಗಿ ಅವರಿಗೆ ಹೇ
ಳಿದ್ದು, ಜಾರತ್ವವುಳ್ಳ ಕೆಟ್ಟ ಸಂತತಿಯು ಗುರುತನ್ನು ಹುಡುಕು
ತ್ತದೆ; ಅದರೆ ಪ್ರವಾದಿಯಾದ ಯೊನನ ಗುರುತೇ ಹೊರ್ತು,
೪೦ ಅದಕ್ಕೆ ಗುರುತು ಕೊಡಲ್ಪಡದು. ಹ್ಯಾಗಂದರೆ, ಯೊನನು
ರಾತ್ರಿ ಹಗಲು ಮೂರು ದಿವಸ ಮೀನಿನ ಹೊಟ್ಟೆಯಲ್ಲಿ ಇದ್ದ ಪ್ರ
ಕಾರವೇ, ಮನುಷ್ಯನ ಮಗನು ರಾತ್ರಿ ಹಗಲು ಮೂರು ದಿವಸ
೪೧ ಭೂಗರ್ಭದಲ್ಲಿ ಇರುವನು. ನಿನವೆಯ ಜನರು ನ್ಯಾಯತೀ

ರ್ಮಿಕೆಯಲ್ಲಿ ಈ ಸಂತತಿಯ ಸಂಗಡ ಎದ್ದು, ಅದಕ್ಕೆ ಆಜ್ಞೆ
ನಿರ್ಣಯಿಸುವರು; ಯಾಕಂದರೆ ಯೋನನು ಸಾರಿದದರಿಂದ
ಅವರು ಮಾನಸಾಂತರ ಪಟ್ಟರು; ಮತ್ತು, ಇಗೋ, ಇಲ್ಲಿ ಯೋ
೪೨ ನನಿಗಿಂತ ದೊಡ್ಡವನು ಇದ್ದಾನೆ. ತೆಂಕಣ ರಾಣಿಯು ನ್ಯಾಯ
ತೀರ್ಮಿಕೆಯಲ್ಲಿ ಈ ಸಂತತಿಯ ಸಂಗಡ ಎದ್ದು, ಅದಕ್ಕೆ ಆಜ್ಞೆ
ನಿರ್ಣಯಿಸುವಳು; ಯಾಕಂದರೆ ಅವಳು ಸೊಲೊಮೋನನ
ಜ್ಞಾನವನ್ನು ಕೇಳುವದಕ್ಕೆ ಭೂಮಿಯ ಅತ್ಯಂಗಳಿಂದ ಬಂದ
ಳು; ಮತ್ತು, ಇಗೋ, ಇಲ್ಲಿ ಸೊಲೊಮೋನನಿಗಿಂತ ದೊಡ್ಡವನು
ಇದ್ದಾನೆ.

೪೩ ಅಶುದ್ಧಾತ್ಮವು ಮನುಷ್ಯನಿಂದ ಹೊರಟಾಗ, ನೀರಿಲ್ಲದ ಸ್ಥಳ
ಗಳನ್ನು ಹಾದು ಹೋಗುತ್ತಾ, ವಿಶ್ರಾಂತಿ ಹುಡುಕುತ್ತದೆ; ಆದರೆ
೪೪ ಕಂಡು ಕೊಳ್ಳಲಿಲ್ಲ. ಆಗ, ನಾನು ಬಿಟ್ಟ ನನ್ನ ಮನೆಗೆ ತಿರಿಗಿ
ಹೋಗುವೆನೆಂದು, ಹೇಳುತ್ತದೆ; ಮತ್ತು ಬಂದು, ಅದು ಗುಡಿಸ
ಲ್ಪಟ್ಟು, ಅಲಂಕರಿಸಲ್ಪಟ್ಟು, ಬರೀದಾಗಿರುವದನ್ನು ನೋಡುತ್ತದೆ.
೪೫ ಆ ಮೇಲೆ ಹೋಗಿ, ತನಗಿಂತ ಕೆಟ್ಟವುಗಳಾದ ಬೇರೆ ಏಳು ಆತ್ಮ
ಗಳನ್ನು ಕರ ಕೊಂಡು ಬರುವದು; ಅವು ಪ್ರವೇಶಿಸಿ, ಅಲ್ಲಿ ವಾಸ
ಮಾಡುವವು; ಆಗ ಆ ಮನುಷ್ಯನ ಮೊದಲನೇ ಸ್ಥಿತಿಗಿಂತ ಅಂ
ತ್ಯವಾದ್ದು ಕೆಟ್ಟದ್ದಾಗಿದೆ. ಇದೇ ಮೇರಿಗೆ ಈ ಕೆಟ್ಟ ಸಂತತಿಗೆ
ಆಗುವದು.

೪೬ ಅವನು ಇನ್ನು ಸಮೂಹಗಳ ಸಂಗಡ ಮಾತಾಡುವಾಗ,
ಇಗೋ, ಅವನ ತಾಯಿಯೂ, ಸಹೋದರರೂ ಹೊರಗೆ ನಿಂ
೪೭ ತು ಕೊಂಡು, ಅವನ ಸಂಗಡ ಮಾತಾಡ ಹುಡಿಕಿದರು. ಆಗ
ಒಬ್ಬನು ಅವನಿಗೆ, ಇಗೋ, ನಿನ್ನ ತಾಯಿಯೂ ನಿನ್ನ ಸಹೋ
ದರರೂ ಹೊರಗೆ ನಿಂತು ಕೊಂಡು, ನಿನ್ನ ಸಂಗಡ ಮಾತಾಡ
೪೮ ಹುಡುಕುತ್ತಾರೆ, ಅಂದನು. ಆದರೆ ಅವನು ತನಗೆ ಹೇಳಿದವನಿಗೆ
ಪ್ರತ್ಯುತ್ತರವಾಗಿ, ನನ್ನ ತಾಯಿ ಯಾರು! ನನ್ನ ಸಹೋದರ
೪೯ ರು ಯಾರು! ಅಂದನು. ಮತ್ತು ತನ್ನ ಶಿಷ್ಯರ ಕಡೆಗೆ ತನ್ನ
ಕೈ ಚಾಚಿ, ಇಗೋ, ನನ್ನ ತಾಯಿಯೂ, ನನ್ನ ಸಹೋದರ
೫೦ ರೂ! ಯಾಕಂದರೆ ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತ
ವನ್ನು ಮಾಡುವವನ್ಯಾವನೋ, ಅವನೇ ನನ್ನ ಸಹೋದರನೂ
ಸಹೋದರಿಯೂ ತಾಯಿಯೂ ಆಗಿದ್ದಾನೆ, ಅಂದನು.

## ೧೩. ಸಂಧಿ.

೧ ಆ ದಿವಸದಲ್ಲಿ ಯೇಸು ಮನೆಯಿಂದ ಹೊರಟು, ಸಮುದ್ರ
೨ ದ ಹತ್ತರ ಕೂತು ಕೊಂಡನು. ಮತ್ತು ಬಹು ಸಮೂಹಗಳು
ಅವ ನಬಳಿಗೆ ಕೂಡಿ ಬಂದದರಿಂದ, ಅವನು ಹಡಗವನ್ನೇರಿ, ಕೂ
3 ತು ಕೊಂಡನು; ಸಮೂಹವೆಲ್ಲಾ ಘಡದಲ್ಲಿ ನಿಂತಿತು. ಆಗಲವನು
ಅವರಿಗೆ ಸಾಮ್ಯಗಳಿಂದ ಅನೇಕ ಮಾತುಗಳನ್ನಾಧಿ, ಹೇಳಿದ್ದೇ
೪ ನಂದರೆ, ಇಗೋ, ಬಿತ್ತುವವನು ಬಿತ್ತ ಹೊರಟನು. ಅವನು ಬಿ
ತ್ತುವಾಗ, ಕೆಲವು ಮಾರ್ಗದ ಹತ್ತರ ಬಿತ್ತು; ಪಕ್ಷಿಗಳು ಬಂದು,
೫ ಅದನ್ನು ಶಿಂದು ಬಿಟ್ಟವು. ಬೇರೆ ಕೆಲವು ಬಹಳ ಮಣ್ಣು ಇಲ್ಲದ
ಬಂಡೆ ಸ್ಥಳಗಳಲ್ಲಿ ಬಿತ್ತು; ಅದಕ್ಕೆ ಆಳವಾದ ಮಣ್ಣು ಇಲ್ಲದ ಕಾ
೬ ರಣ, ಸಂಗಡನೇ ಮೊಳಿಯಿತು; ಆದರೆ ಸೂರ್ಯನು ಮೂ
ಡಿದಾಗ, ಅದು ಬೆಂದು, ಅದಕ್ಕೆ ಬೇರು ಇಲ್ಲದದರಿಂದ, ಬಣಗಿ
8 ಹೋಯಿತು. ಬೇರೆ ಕೆಲವು ಮುಳ್ಳುಗಳ ಮೇಲೆ ಬಿತ್ತು; ಮುಳ್ಳು
೮ ಗಳು ಬೆಳೆದು, ಅದನ್ನು ಅಣಗಿಸಿದವು. ಬೇರೆ ಕೆಲವು ಒಳ್ಳೆ
ಭೂಮಿಯ ಮೇಲೆ ಬಿದ್ದು, ಒಂದು ನೂರರ್ಟು ಒಂದು ಅರವತ್ತ
೯ ದ್ದು, ಒಂದು ಮೂವತ್ತದ್ದು, ಫಲ ಕೊಟ್ಟಿತು. ಕೇಳುವದಕ್ಕೆ
ಕಿವಿಗಳುಳ್ಳವನು ಕೇಳಲಿ

೧೦ ಆಗ ಶಿಷ್ಯರು ಹತ್ತರ ಬಂದು, ಯಾಕೆ ಸಾಮ್ಯಗಳಿಂದ ಅವ
೧೧ ರ ಸಂಗಡ ಮಾತಾಡುತ್ತೀ! ಎಂದು ಅವನಿಗೆ ಹೇಳಿದರು. ಆದರೆ
ಅವನು ಅವರಿಗೆ ಪ್ರತ್ಯುತ್ತರವಾಗಿ ಹೇಳಿದ್ದು, ಯಾಕೆ ಅಂದರೆ,
ಪರಲೋಕ ರಾಜ್ಯದ ಮರ್ಮಗಳನ್ನು ತಿಳಿಯುವದು ನಿಮಗೆ
೧೨ ಕೊಡಲ್ಪಟ್ಟಿದೆ, ಅವರಿಗೆ ಕೊಡಲ್ಪಡಲಿಲ್ಲ; ಯಾಕಂದರೆ ಉಂ
ಟಾದವನು ಯಾವನೋ, ಅವನಿಗೆ ಕೊಡಲ್ಪಡುವದು, ಆಗ ಹೆ
ಚ್ಚಿರುವದು; ಆದರೆ ಇಲ್ಲದವನು ಯಾವನೋ, ಅವನಿಗಿರುವದು
೧೩ ಸಹ ಅವನಿಂದ ತೆಗೆಯಲ್ಪಡುವದು. ಇದಕ್ಕೋಸ್ಕರ ಅವರ
ಸಂಗಡ ಸಾಮ್ಯಗಳಿಂದ ಮಾತಾಡುತ್ತೇನೆ; ಯಾಕಂದರೆ ಅವರು
ನೋಡಿ, ನೋಡುವದಿಲ್ಲ; ಕೇಳಿ, ಕೇಳುವದಿಲ್ಲ, ಗ್ರಹಿಸುವದಿಲ್ಲ.
೧೪ ಮತ್ತು ಯೆಶಾಯನ ಪ್ರವಾದನೆಯು ಅವರಲ್ಲಿ ಈ ಮೇರಿ ಆಗೆ,
ಏನಂದರೆ, ಕಿವಿಯಿಂದ ಕೇಳಿ, ಗ್ರಹಿಸದೆ, ಇರುವಿರಿ; ಕಣ್ಣಿನಿಂದ
೧೫ ಕಂಡು, ನೋಡದೆ ಇರುವಿರಿ. ಯಾಕಂದರೆ ಅವರು ಕಣ್ಣುಗಳಿಂ
ದ ಕಾಣದೆ, ಕಿವಿಗಳಿಂದ ಕೇಳದೆ, ಹೃದಯದಿಂದ ಗ್ರಹಿಸದೆ,
ತಿರುಗಿ ಕೊಳ್ಳದೆ, ನಾನು ಅವರನ್ನು ಸ್ವಸ್ಥ ಮಾಡದೆ ಇರುವ
ಹಾಗೆ, ಈ ಜನರ ಹೃದಯವು ಕೊಬ್ಬಾಯಿತು; ಕಿವಿಗಳಿಂದ
ಮಂದವಾಗಿ ಕೇಳುತ್ತಾರೆ; ತಮ್ಮ ಕಣ್ಣುಗಳನ್ನು ಮುಚ್ಚಿ ಕೊಂಡಿ
೧೬ ದ್ದಾರೆ. ಆದರೆ ನಿಮ್ಮ ಕಣ್ಣುಗಳು ನೋಡುವದರಿಂದಲೂ, ನಿಮ್ಮ
೧೭ ಕಿವಿಗಳು ಕೇಳುವದರಿಂದಲೂ, ಅವು ಭಾಗ್ಯವುಳ್ಳವುಗಳು; ಯಾ
ಕಂದರೆ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಅನೇಕ ಪ್ರವಾದಿಗ
ಳೂ ನೀತಿವಂತರೂ, ನೀವು ನೋಡುವವುಗಳನ್ನು ನೋಡಲೂ,
ನೀವು ಕೇಳುವವುಗಳನ್ನು ಕೇಳಲೂ ಅಪೇಕ್ಷಿಸಿ, ನೋಡದೆ, ಕೇಳ
ದೆ, ಹೋದರು.

೧೮ ಆದದರಿಂದ ನೀವು ಬಿತ್ತುವವನ ಸಾಮ್ಯವನನ್ನು ಕೇಳಿರಿ;
೧೯ ರಾಜ್ಯದ ವಾಕ್ಯವನ್ನು ಕೇಳಿ, ಗ್ರಹಿಸದೆ ಇರುವ ಪ್ರತಿ ಮನು
ಷ್ಯನ ಹೃದಯದಲ್ಲಿ ಬಿತ್ತಿದ್ದನ್ನು ದುಷ್ಟನು ಬಂದು ಕಿತ್ತು
ಕೊಳ್ಳುತ್ತಾನೆ; ಮಾರ್ಗದ ಹತ್ತರ ಬಿತ್ತಲ್ಪಟ್ಟವನು ಇವನೇ.
೨೦ ಬಂಡೆ ಸ್ಥಳಗಳಲ್ಲಿ ಬಿತ್ತಲ್ಪಟ್ಟವನು ಯಾಕಂದರೆ, ವಾಕ್ಯವನ್ನು
ಕೇಳಿ, ಸಂಗತಿಯೇ ಸಂತೋಷದಿಂದ ಅದನ್ನು ಅಂಗೀಕರಿಸುವವ
೨೧ ನಾಗಿದ್ದಾನೆ; ಆದರೆ ತನ್ನಲ್ಲಿ ಬೇರು ಇಲ್ಲದವನಾಗಿ, ಸ್ವಲ್ಪ
ಕಾಲಕ್ಕೆ ಇರುತ್ತಾನೆ; ಆದರೆ ವಾಕ್ಯದ ನಿಮಿತ್ತ ಉಪದ್ರವಾದ
ರೂ ಹಿಂಸೆಯಾದರೂ ಉಂಟಾಗಲು, ಸಂಗತಿಯೇ ಎಟಿಂಕ ಪರು
೨೨ ತ್ತಾನೆ. ಮುಳ್ಳುಗಳಲ್ಲಿ ಬಿತ್ತಲ್ಪಟ್ಟವನು ಯಾರಂದರೆ, ವಾಕ್ಯ
ವನ್ನು ಕೇಳುವವನಾಗಿದ್ದಾನೆ; ಆದರೆ ಈ ಲೋಕದ ಚಿಂತೆಯೂ,
ಐಶ್ವರ್ಯದ ಮೋಸವೂ, ವಾಕ್ಯವನ್ನು ಅಣಗಿಸುವದರಿಂದ
೨೩ ನಿಷ್ಫಲವಾಗುತ್ತಾನೆ. ಒಳ್ಳೆ ಭೂಮಿಯಲ್ಲಿ ಬಿತ್ತಲ್ಪಟ್ಟವನು
ಯಾರಂದರೆ, ವಾಕ್ಯವನ್ನು ಕೇಳಿ, ಗ್ರಹಿಸುವವನಾಗಿದ್ದು, ಫಲ
ಫಲಿಸುತ್ತಾನೆ; ಒಂದು ನೂರು, ಒಂದು ಅರವತ್ತು, ಒಂದು ಮೂ
ವತ್ತು, ಕೊಡುತ್ತದೆ.

೨೪ ಮತ್ತೊಂದು ಸಾಮ್ಯವನ್ನು ಅವರ ಮುಂದೆ ಇಟ್ಟು, ಹೇಳಿ
ದ್ದೇನಂದರೆ, ಪರಲೋಕ ರಾಜ್ಯವು ತನ್ನ ಹೊಲದಲ್ಲಿ ಒಳ್ಳೆ
ಬೀಜ ಬಿತ್ತುವ ಮನುಷ್ಯನಿಗೆ ಸಮಾನವಾಗಿದೆ; ಆದರೆ ಮನು



ಷ್ಯರು ನಿದ್ದೆ ಮಾಡುವಾಗ, ಅವನ ಶತ್ರುವು ಬಂದು, ಗೋಧಿಯ
೨೬ ಮಧ್ಯದಲ್ಲಿ ಊದಕೆಯನ್ನು ಬಿತ್ತಿ ಹೋದನು. ಪೈರು ಬೆಳೆದು,
೨೭ ಫಲ ಫಲಿಸಿದಾಗ, ಊದಕೆಯು ಸಹ ಕಾಣಿಸಿತು; ಆಗ ಮನೆಯ
ಯಜಮಾನನ ದಾಸರು ಅವನ ಬಳಿಗೆ ಬಂದು, ಅಯ್ಯಾ, ನೀನು
ನಿನ್ನ ಹೊಲದಲ್ಲಿ ಒಳ್ಳೆ ಬೀಜ ಬಿತ್ತಲಿಲ್ಲವೋ! ಹಾಗಾದರೆ ಊದ
೨೮ ಕೆ ಎಲ್ಲಿಂದ ಬಂತು! ಅಂದರು. ಅವನು ಅವರಿಗೆ, ಶತ್ರುವಾದ
ಮನುಷ್ಯನು ಇದನ್ನು ಮಾಡಿದ್ದಾನೆ, ಅಂದನು. ದಾಸರು ಅವ
ನಿಗೆ, ಈಗ ನಾವು ಹೋಗಿ, ಅದನ್ನು ಕೂಡಿಸ ಬೇಕೋ! ಅನ್ನ
೨೯ ಲು; ಅವನು, ಬೇಡ; ಒಂದು ವೇಳೆ ಊದಕೆ ಕೂಡಿಸುವಾಗ, ಗೋ
೩೦ ಧಿಯನ್ನು ಅದರ ಸಂಗಡ ಕೀಳುವಿರಿ; ಕೊಯ್ಯುವ ಕಾಲದ
ಪರ್ಯಂತರ ಎರಡೂ ಕೂಡ ಬೆಳೆಯ ಬಿಡಿರಿ; ಕೊಯ್ಯುವ
ಕಾಲದಲ್ಲಿ ನಾನು ಕೊಯ್ಯುವವರಿಗೆ, ಮೊದಲು ಊದಕೆಯನ್ನು
ಕೂಡಿಸಿ, ಅದನ್ನು ಸುಡುವದಕ್ಕೆ ಕಟ್ಟುಗಳಾಗಿ ಕಟ್ಟಿರಿ; ಆದರೆ
ಗೋಧಿಯನ್ನು ನನ್ನ ಕಣಜದಲ್ಲಿ ಕೂಡಿಸಿಡಿರಿ ಎಂದು, ಹೇಳು
ವೆನು, ಅಂದನು.

೩೧ ಮತ್ತೊಂದು ಸಾಮ್ಯವನ್ನು ಅವರ ಮುಂದೆ ಇಟ್ಟು, ಹೇಳಿ
ದ್ದೇನಂದರೆ, ಪರಲೋಕ ರಾಜ್ಯವು ಸಾಸಿವೆ ಕಾಳಿಗೆ ಸಮಾನವಾ
ಗಿದೆ. ಒಬ್ಬ ಮನುಷ್ಯನು ಅದನ್ನು ತೆಗೆದು, ತನ್ನ ಹೊಲದಲ್ಲಿ
೩೨ ಬಿತ್ತಿದನು. ಅದು ಸಮಸ್ತ ಬೀಜಗಳಲ್ಲಿ ಸಣ್ಣವಾಗಿದ್ದರೂ, ಬೆಳೆ
ದ ಮೇಲೆ, ಪಲ್ಯದ ಗಿಡಗಳಲ್ಲಿ ದೊಡ್ಡದಾಗಿ, ಮರವಾಗುತ್ತದೆ;
ಆದದರಿಂದ ಆಕಾಶದ ಪಕ್ಷಿಗಳು ಬಂದು, ಅದರ ಕೊಂಬೆಗಳಲ್ಲಿ
ವಾಸ ಮಾಡುತ್ತವೆ.

೩೩ ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು; ಏನಂ
ದರೆ, ಪರಲೋಕ ರಾಜ್ಯವು ಹುಳಿ ಹಿಟ್ಟಿಗೆ ಸಮಾನವಾಗಿದೆ;
ಅದನ್ನು ಒಬ್ಬ ಸ್ತ್ರೀಯು ತಕ್ಕೊಂಡು, ಮೂರು ಸೇರು ಹಿಟ್ಟಿ
ನಲ್ಲಿ—ಎಲ್ಲಾ ಹುಳಿಯಾಗುವ ಪರ್ಯಂತರ—ಅಡಗಿಸಿ ಇ
ಟ್ಟಳು.

೩೪ ಇವುಗಳನ್ನೆಲ್ಲಾ ಯೇಸು ಸಾಮ್ಯಗಳಿಂದ ಸಮೂಹಗಳ
೩೫ ಸಂಗಡ ಮಾತಾಡಿದನು.—ಸಾಮ್ಯಗಳಿಂದ ನನ್ನ ಬಾಯಿ ತೆಕೆ
ಯುವೆನು; ಜಗದುತ್ಪತ್ತಿ ಮೊದಲ್ಗೊಂಡು ಅಡಗಿದ್ದವುಗಳನ್ನು
ಉಚ್ಚರಿಸುವೆನೆಂದು, ಪ್ರವಾದಿ ಹೇಳಿದ್ದು ಈಡೇರುವ ಹಾಗೆ, ಸಾ
ಮ್ಯವಿಲ್ಲದೆ ಅವರ ಸಂಗಡ ಮಾತಾಡಲಿಲ್ಲ.

೩೬ ಆ ಮೇಲೆ ಯೇಸು ಸಮೂಹಗಳಿಗೆ ಅಪ್ಪಣೆ ಕೊಟ್ಟು, ಮ
ನೆಗೆ ಬಂದನು. ಆಗ ಅವನ ಶಿಷ್ಯರು ಅವನ ಬಳಿಗೆ ಬಂದು, ಹೊ
ಲದ ಊದಕೆಯ ಸಾಮ್ಯವನ್ನು ನಮಗೆ ತಿಳಿಸು, ಅಂದರು.
೩೭ ಅವನು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದು, ಒಳ್ಳೆ ಬೀಜ ಬಿತ್ತು
೩೮ ವವನು ಮನುಷ್ಯನ ಮಗನು; ಹೊಲವು ಈ ಲೋಕವು; ಒಳ್ಳೆ
ಬೀಜವು ರಾಜ್ಯದ ಮಕ್ಕಳು; ಊದಕೆಯು ದುಷ್ಟನ ಮಕ್ಕಳು;
೩೯ ಅವುಗಳನ್ನು ಬಿತ್ತುವ ಶತ್ರುವು ಪಿಸಾಚನು; ಕೊಯ್ಯುವ ಕಾಲವು
೪೦ ಈ ಲೋಕದ ಅಂತ್ಯವು; ಕೊಯ್ಯುವವರು ದೂತರೂ. ಆದದ
ರಿಂದ ಊದಕೆಯು ಹ್ಯಾಗೆ ಕೂಡಿಸಲ್ಪಟ್ಟು, ಬೆಂಕಿಯಿಂದ ಸು
ಡಲ್ಪಡುವದೋ, ಹಾಗೆಯೇ ಈ ಲೋಕದ ಅಂತ್ಯದಲ್ಲಿ ಇರು
೪೧ ವದು; ಮನುಷ್ಯನ ಮಗನು ತನ್ನ ದೂತರನ್ನು ಕಳುಹಿಸುವನು.
ಅವರು ಅವನ ರಾಜ್ಯದೊಳಗಿಂದ ಎಲ್ಲಾ ಆಟಂಕಗಳನ್ನೂ ಅನೀತಿ
೪೨ ಮಾಡುವವರನ್ನೂ ಕೂಡಿಸಿ, ಅವರನ್ನು ಬೆಂಕಿಯ ಗುಂಡದಲ್ಲಿ
ಹಾಕುವರು. ಅಲ್ಲಿ ಅಳುವಿಕೆಯೂ, ಹಲ್ಲು ಕಡಿಯುವಿಕೆಯೂ,
೪೩ ಇರುವವು. ಆಗ ನೀತಿವಂತರು ಸೂರ್ಯನ ಹಾಗೆ ತಮ್ಮ ತಂದೆ
ಯ ರಾಜ್ಯದಲ್ಲಿ ಪ್ರಕಾಶಿಸುವರು. ಕೇಳುವದಕ್ಕೆ ಕಿವಿಗಳುಳ್ಳವ
ನು ಕೇಳಲಿ.

೪೪ ಮತ್ತು ಪರಲೋಕ ರಾಜ್ಯವು ಹೊಲದಲ್ಲಿ ಬಚ್ಚಿಟ್ಟ ದ್ರವ್ಯಕ್ಕೆ
ಸಮಾನವಾಗಿದೆ. ಅದನ್ನು ಒಬ್ಬ ಮನುಷ್ಯನು ಕಂಡು, ಅಡಗಿಸಿ,
ಅದರ ಸಂತೋಷದಿಂದ ಹೋಗಿ, ತನಗಿರುವದನ್ನೆಲ್ಲಾ ಮಾರಿ
ಬಿಟ್ಟು, ಆ ಹೊಲವನ್ನು ಕೊಂಡು ಕೊಳ್ಳುತ್ತಾನೆ.

೪೫ ಮತ್ತು ಪರಲೋಕ ರಾಜ್ಯವು ಒಳ್ಳೆ ಮುತ್ತುಗಳನ್ನು ಹುಡು
೪೬ ಕುವ ವರ್ತಕನಿಗೆ ಸಮಾನವಾಗಿದೆ. ಅವನು ಬಹು ಬೆಲೆಯುಳ್ಳ
ಒಂದು ಮುತ್ತನ್ನು ಕಂಡು, ಹೋಗಿ, ತನಗಿದ್ದದ್ದನ್ನೆಲ್ಲಾ ಮಾರಿ
ಬಿಟ್ಟು, ಅದನ್ನು ಕೊಂಡು ಕೊಂಡನು.

೪೭ ಮತ್ತು ಪರಲೋಕ ರಾಜ್ಯವು, ಸಮುದ್ರದಲ್ಲಿ ಹಾಕಲ್ಪಟ್ಟು
ಎಲ್ಲಾ ಜಾತಿಯವುಗಳನ್ನು ಕೂಡಿಸುವ ಬಲೆಗೆ ಸಮಾನವಾಗಿದೆ,
೪೮ ತುಂಬಿದ ಮೇಲೆ, ಅದನ್ನು ಧನಕ್ಕೆ ಎಳೆದು, ಕೂತು ಕೊಂಡು,
ಒಳ್ಳೆಯವುಗಳನ್ನು ಪುಟ್ಟಿಗಳಲ್ಲಿ ಕೂಡಿಸಿ, ಕೆಟ್ಟವುಗಳನ್ನು ಆಚೆ
೪೯ ಬಿಸಾಟರು. ಹಾಗೆಯೇ ಲೋಕದ ಅಂತ್ಯದಲ್ಲಿ ಇರುವದು.
ದೂತರು ಹೊರಟು ಬಂದು, ನೀತಿವಂತರ ಮಧ್ಯದಿಂದ ದುಷ್ಟ
೫೦ ರನ್ನು ಬೇರೆ ಮಾಡಿ, ಅವರನ್ನು ಬೆಂಕಿಯ ಗುಂಡದಲ್ಲಿ ಹಾಕು
ವರು. ಅಲ್ಲಿ ಅಳುವಿಕೆಯೂ, ಹಲ್ಲು ಕಡಿಯುವಿಕೆಯೂ, ಇರು
ವವು.

೫೧ ಯೇಸು ಅವರಿಗೆ, ಇವುಗಳನ್ನೆಲ್ಲಾ ತಿಳುಕೊಂಡಿರೋ! ಅನ್ನ
೫೨ ಲು; ಅವರು ಅವನಿಗೆ, ಹೌದು, ಕರ್ತನೇ, ಅಂದರು. ಆಗಲವನು
ಅವರಿಗೆ, ಇದಕ್ಕೋಸ್ಕರ ಪರಲೋಕ ರಾಜ್ಯಕ್ಕೆ ಉಪದೇಶಿಸ
ಲ್ಪಟ್ಟ ಪ್ರತಿ ಶಾಸ್ತ್ರಿಯು ತನ್ನ ಬೊಕ್ಕಸದೊಳಗಿಂದ ಹೊಸ
ವುಗಳನ್ನೂ, ಹಳೆಯವುಗಳನ್ನೂ, ಹೊರಗೆ ತರುವ ಮನೇ ಯ
ಜಮಾನನಿಗೆ ಸಮಾನವಾಗಿದ್ದಾನೆ, ಅಂದನು.

೫೩ ಆಗಲಾದದ್ದೇನಂದರೆ, ಯೇಸು ಈ ಸಾಮ್ಯಗಳನ್ನು ಮುಗಿ
೫೪ ಸಿದ ಮೇಲೆ, ಅಲ್ಲಿಂದ ಹೊರಟು ಹೋದನು. ತರುವಾಯ ತನ್ನ
ದೇಶಕ್ಕೆ ಬಂದು, ಅವರ ಸಭೆಮನೆಯಲ್ಲಿ ಅವರಿಗೆ ಬೋಧಿಸಿದ
ದರಿಂದ, ಅವರು ಆಶ್ಚರ್ಯ ಪಟ್ಟು, ಇವನಿಗೆ ಈ ಜ್ಞಾನವೂ,
೫೫ ಈ ಬಲವಾದ ಕ್ರಿಯೆಗಳೂ, ಎಲ್ಲಿಂದ ಆದವು? ಇವನು ಬಡಿಗೆ
ಯವನ ಮಗನಲ್ಲವೋ! ಇವನ ತಾಯಿ ಮರಿಯಳೆಂಬವಳಲ್ಲ
ವೋ! ಇವನ ಸಹೋದರರು ಯಾಕೋಬನೂ, ಯೋಸೆ
೫೬ ಯೂ, ಸೀಮೋನನೂ, ಯೂದನೂ ಎಂಬವರಲ್ಲವೋ! ಅವನ
ಸಹೋದರಿಗಳೆಲ್ಲರೂ ನಮ್ಮಲ್ಲಿ ಇದ್ದಾರಲ್ಲವೋ! ಹೀಗಿರಲಾಗಿ,
೫೭ ಇವೆಲ್ಲಾ ಇವನಿಗೆ ಎಲ್ಲಿಂದ ಆದವು! ಎಂದು ಹೇಳಿ, ಅವನಲ್ಲಿ
ಆಟಂಕ ಪಟ್ಟರು. ಆದರೆ ಯೇಸು ಅವರಿಗೆ, ಪ್ರವಾದಿಯು ತನ್ನ
ದೇಶದಲ್ಲಿಯೂ, ತನ್ನ ಮನೆಯಲ್ಲಿಯೂ ಹೊರತು, ಮಾನ
೫೮ ಹೀನನಲ್ಲವೆಂದು ಹೇಳಿ, ಅವರ ಅವಿಶ್ವಾಸದ ನಿಮಿತ್ತ ಅಲ್ಲಿ ಬಹ
ಳ ಬಲವಾದ ಕ್ರಿಯೆಗಳನ್ನು ಮಾಡಲಿಲ್ಲ.

## ೧೪. ಸಂಧಿ.

೧ ಆ ಕಾಲದಲ್ಲಿ ಚತುರ್ಥಿಪತಿಯಾದ ಹೆರೋದನು, ಯೇಸುವಿನ
೨ ಸುದ್ದಿಯನ್ನು ಕೇಳಿ, ತನ್ನ ಆಳುಗಳಿಗೆ, ಇವನು ಸ್ನಾನಿಕನಾದ

ಯೋಹಾನನು; ಅವನು ಸತ್ತವರೊಳಗಿಂದ ಎದ್ದಿದ್ದಾನೆ; ಆದ
ಕಾರಣ ಬಲವಾದ ಕ್ರಿಯೆಗಳು ಅವನಿಂದ ಆಗುತ್ತವೆ, ಅಂದನು.
3 ಯಾಕಂದರೆ ಹೆರೋದನು ತನ್ನ ಸಹೋದರನಾದ ಫಿಲಿಪ್ಪನ
ಹೆಂಡತಿಯಾದ ಹೆರೋದ್ಯಳ ನಿಮಿತ್ತ ಯೋಹಾನನನ್ನು ಹಿಡಿ
ಯ ದು, ಕಟ್ಟಿ, ಶೆರೆಯಲ್ಲಿ ಹಾಕಿಸಿ ಇದ್ದನು. ಯಾಕಂದರೆ ಯೋ
ಹಾನನು, ನೀನು ಅವಳನ್ನು ಇಟ್ಟು ಕೊಳ್ಳುವದು ನ್ಯಾಯವಲ್ಲ
ಅ೫ ವೆಂದು, ಅವನಿಗೆ ಹೇಳಿ ಇದ್ದನು. ಮತ್ತು ಅವನನ್ನು ಕೊಲ್ಲ ಬೇ
ಕೆಂದಿದ್ದು, ಸಮೂಹಕ್ಕೆ ಭಯ ಪಟ್ಟನು. ಯಾಕಂದರೆ ಅವರು
೬ ಅವನನ್ನು ಪ್ರವಾದಿ ಎಂದೆಣಿಸಿದರು. ಆದರೆ ಹೆರೋದನ ಜನ್ಮ
ದಿವಸವು ಬಂದಾಗ, ಹೆರೋದ್ಯಳ ಮಗಳು ಮಧ್ಯದಲ್ಲಿ ಕುಣಿ
೭ ದು, ಹೆರೋದನನ್ನು ಮೆಚ್ಚಿಸಿದಳು. ಆದದರಿಂದ, ಏನು ಬೇಡಿ
ದರೂ, ಕೊಡುತ್ತೇನೆಂದು, ಆಣೆ ಇಟ್ಟು, ಅವಳಿಗೆ ಮಾತು ಕೊ
೮ ಟ್ಟನು. ಆಗಲವಳು, ತನ್ನ ತಾಯಿಯಿಂದ ಪ್ರೇರೇಪಿಸಲ್ಪಟ್ಟು,
ತಬಕಿನಲ್ಲಿ ಸ್ನಾನಿಕನಾದ ಯೋಹಾನನ ತಲೆಯನ್ನು ಇಲ್ಲಿ
೯ ನನಗೆ ಕೊಡು, ಅಂದಳು. ಅರಸನು ದುಃಖ ಪಟ್ಟನು; ಆದರೆ
ಆಣೆಯ ನಿಮಿತ್ತವೂ, ಔತಣಕ್ಕೆ ಕೂತುಕೊಂಡವರ ನಿಮಿತ್ತ
೧೦ ವೂ, ಕೊಡಲಾಜ್ಞಾಪಿಸಿದನು. ಮತ್ತು ಕಳುಹಿಸಿ, ಯೋಹಾನನ
೧೧ ತಲೆಯನ್ನು ಶೆರೆಮನೆಯಲ್ಲಿ ಕಡಿದು ಹಾಕಿಸಿದನು. ಆಗಲವನ
ತಲೆಯು ತಬಕಿನಲ್ಲಿ ತರಲ್ಪಟ್ಟು, ಹುಡುಗಿಗೆ ಕೊಡಲ್ಪಟ್ಟಿತು.
೧೨ ಅವಳು ತನ್ನ ತಾಯಿಗೆ ತಂದು ಕೊಟ್ಟಳು. ಆ ಮೇಲೆ ಅವನ
ಶಿಷ್ಯರು ಬಂದು, ಹೆಣ ಎತ್ತಿ, ಅದನ್ನು ಹೂಣಿಟ್ಟು, ಬಂದು,
೧೩ ಯೇಸುವಿಗೆ ತಿಳಿಸಿದರು. ಯೇಸು ಅದನ್ನು ಕೇಳಿ, ಅಲ್ಲಿಂದ
ಹೊರಟು, ಹಡಗ ಮಾರ್ಗವಾಗಿ ಅರಣ್ಯಾಸ್ಥಳಕ್ಕೆ ಒಂಟಿಯಾಗಿ
ಹೋದನು. ಸಮೂಹಗಳು ಅದನ್ನು ಕೇಳಿ, ಪಟ್ಟಣಗಳಿಂದ ಕಾಲು
ನಡೆಯಾಗಿ ಅವನನ್ನು ಹಿಂಬಾಲಿಸಿದರು.

೧೪ ಮತ್ತು ಯೇಸು ಹೊರಟು ಬಂದು, ಬಹು ಸಮೂಹವನ್ನು
ನೋಡಿ, ಅವರ ಮೇಲೆ ಅಂತ್ಯಕರಣ ಪಟ್ಟು, ಅವರಲ್ಲಿ ಅಸ್ವಸ್ಥ
೧೫ ವಾದವರನ್ನು ಸ್ವಸ್ಥ ಮಾಡಿದನು. ಸಾಯಂಕಾಲವಾದಾಗ, ಅವ
ನ ಶಿಷ್ಯರು ಅವನ ಬಳಿಗೆ ಬಂದು, ಈ ಸ್ಥಳವು ಅರಣ್ಯವಾಗಿದೆ;
ಮತ್ತು ಹೊತ್ತು ಹೋಯಿತು; ಅವರು ಗ್ರಾಮಗಳಿಗೆ ಹೋಗಿ,
ತಮಗೆ ಆಹಾರವನ್ನು ಕೊಂಡು ಕೊಳ್ಳುವ ಹಾಗೆ, ಸಮೂಹಗಳ
೧೬ ನ್ನು ಕಳುಹಿಸಿ ಬಿಡು, ಅಂದರು. ಆದರೆ ಯೇಸು ಅವರಿಗೆ, ಅವ
ರು ಹೋಗ ಕೆಲಸವಿಲ್ಲ; ನೀವೇ ಅವರಿಗೆ ಉಣ್ಣಾ ಕೊಡಿರಿ, ಅನ್ನ
೧೭ ಲಾಗಿ; ಅವರು ಅವನಿಗೆ, ಐದು ರೊಟ್ಟಿಗಳೂ ಎರಡು ಮೀನುಗ
೧೮ ಳೂ ಹೊರ್ತು, ನಮಗೆ ಇಲ್ಲಿ ಏನೂ ಇಲ್ಲ, ಅಂದರು. ಅವನು,
೧೯ ಅವುಗಳನ್ನು ಇಲ್ಲಿ ನನಗೆ ತನ್ನಿರಿ, ಅಂದನು. ಆಗ ಸಮೂಹಗಳ
ನ್ನು ಹುಲ್ಲಿನ ಮೇಲೆ ಕೂತು ಕೊಳ್ಳ ಆಜ್ಞಾಪಿಸಿ, ಆ ಐದು ರೊ
ಟ್ಟಿಗಳನ್ನೂ, ಎರಡು ಮೀನುಗಳನ್ನೂ ತೆಗೆದು, ಆಕಾಶವನ್ನು
ದೃಷ್ಟಿಸಿ, ಸ್ತೋತ್ರ ಮಾಡಿ, ರೊಟ್ಟಿಗಳನ್ನು ಮುರಿದು, ಶಿಷ್ಯ
೨೦ ರಿಗೆ ಕೊಟ್ಟನು. ಶಿಷ್ಯರು ಸಮೂಹಗಳಿಗೆ ಬಡಿಸಿದರು. ಎಲ್ಲರು
ತಿಂದು, ತೃಪ್ತಿಯಾದರು. ಮತ್ತು ಮಿಕ್ಕ ತುಂಡುಗಳನ್ನು
೨೧ ಹನ್ನೆರಡು ಪುಟ್ಟಿ ತುಂಬ ಎತ್ತಿದರು. ಹೆಂಗಸರು ಮಕ್ಕಳು
ಹೊರ್ತಾಗಿ, ತಿಂದವರು ಹೆಚ್ಚು ಕಡಿಮೆ ಐದು ಸಾವಿರ ಗಂಡಸ
ರಾಗಿದ್ದರು.

೨೨ ಸಂಗಡಲೇ ಯೇಸು, ತಾನು ಸಮೂಹಗಳನ್ನು ಕಳುಹಿಸಿ ಬಿ
ಡುವಷ್ಟರೊಳಗೆ ತನ್ನ ಶಿಷ್ಯರಿಗೆ, ಹಡಗವನ್ನೇರಿ, ತನ್ನ ಮುಂದೆ
೨೩ ಆಚೆಗೆ ಹೋಗ ಬೇಕೆಂದು, ಬಲವಂತ ಮಾಡಿದನು. ಮತ್ತು ಸ
ಮೂಹಗಳನ್ನು ಕಳುಹಿಸಿ ಬಿಟ್ಟು, ಒಂಟಿಯಾಗಿ ಪ್ರಾರ್ಥನೆ
ಮಾಡುವದಕ್ಕೆ ಬೆಟ್ಟಕ್ಕೆ ಏರಿ ಹೋದನು.

೨೪ ಸಾಯಂಕಾಲವಾದಾಗ, ಅವನೊಬ್ಬನೇ ಅಲ್ಲಿ ಇದ್ದನು. ಆದ
ರೆ ಹಡಗವು ಆಗಲೇ ಸಮುದ್ರದ ಮಧ್ಯದಲ್ಲಿದ್ದು, ಘಾಳಿಯು
೨೫ ಎದುರಾಗಿದ್ದ ಕಾರಣ, ತೆರೆಗಳಿಂದ ಬಡಿಯಲ್ಪಡುತ್ತಿತ್ತು. ತರುವಾ
ಯ ರಾತ್ರಿಯ ನಾಲ್ಕನೇ ಝಾವಿನಲ್ಲಿ ಯೇಸು ಸಮುದ್ರದ
೨೬ ಮೇಲೆ ನಡೆದು, ಅವರ ಬಳಿಗೆ ಬಂದನು. ಅವನು ಸಮುದ್ರದ
ಮೇಲೆ ನಡೆಯುವದನ್ನು ಶಿಷ್ಯರು ನೋಡಿ, ಭೂತವೆಂದು ಕಳವ
೨೭ ಳಿ ಪಟ್ಟು, ಭಯದಿಂದ ಕೂಗಿದರು. ಸಂಗಡಲೇ ಯೇಸು, ಸೈ
ರ್ಯವಾಗಿರಿ, ನಾನೇ, ಭಯ ಪಡ ಬೇಡಿರೆಂದು, ಅವರ ಸಂಗಡ
೨೮ ಮಾತಾಡಿದನು. ಆಗ ಪೇತ್ರನು ಅವನಿಗೆ ಪ್ರತ್ಯುತ್ತರವಾಗಿ, ಕರ್ತ
ನೇ, ನೀನಾದರೆ, ನೀರಿನ ಮೇಲೆ ನಿನ್ನ ಬಳಿಗೆ ಬರ ನನಗೆ ಅಪ್ಪ
೨೯ ಣೆ ಕೊಡು, ಅಂದನು. ಅವನು, ಬಾ ಅನ್ನಲು; ಪೇತ್ರನು ಹಡಗ
ದಿಂದ ಇಳಿದು, ಯೇಸುವಿನ ಬಳಿಗೆ ಬರುವದಕ್ಕೆ ನೀರಿನ ಮೇಲೆ
೩೦ ನಡೆದನು. ಆದರೆ ಘಾಳಿ ಬಲವಾಗಿರುವದನ್ನು ನೋಡಿ, ಭಯ
ಪಟ್ಟನು. ಮತ್ತು ಮುಣುಗಲಾರಂಭಿಸಿ, ಕರ್ತನೇ, ನನ್ನನ್ನು ರಕ್ಷಿ
೩೧ ಸೆಂದು, ಕೂಗಿದನು. ಸಂಗಡಲೇ ಯೇಸು ಕೈ ಚಾಚಿ, ಅವನ
ನ್ನು ಹಿಡಿದು, ಅಲ್ಪ ವಿಶ್ವಾಸಿಯೇ, ಯಾಕೆ ಸಂದೇಹ ಪಟ್ಟಿ!
೩೨ ಎಂದು, ಅವನಿಗೆ ಹೇಳಿದನು. ತರುವಾಯ ಅವರು ಹಡಗವನ್ನೇ
೩೩ ರಿದಾಗ, ಘಾಳಿಯು ನಿಂತಿತು. ಆಗ ಹಡಗದಲ್ಲಿ ಇದ್ದವರು
ಬಂದು, ಅವನಿಗೆ ನಮಸ್ಕರಿಸಿ, ನೀನು ನಿಜವಾಗಿ ದೇವರ ಮಗ
ನಾಗಿದ್ದೀ, ಅಂದರು.

೩೪ ಅವರು ಆಚೆಗೆ ಹೋದ ಮೇಲೆ ಗೆನೆಜರೇತ್ ದೇಶಕ್ಕೆ ಬಂದ
೩೫ ರು. ಆ ಸ್ಥಳದವರು ಅವನೇ ಎಂದು ತಿಳಿದಾಗ, ಅದರ ಸುತ್ತಲಿ
ರುವ ಪ್ರದೇಶಗಳಲ್ಲಾ ಕಳುಹಿಸಿ, ಕ್ಷೇಮವಿಲ್ಲದವರೆಲ್ಲರನ್ನು ಅವನ ಬಳಿ
೩೬ ಗೆ ತರಿಸಿ, ಅವನ ವಸ್ತ್ರದ ಶೆರಗನ್ನು ಮಾತ್ರ ಮುಟ್ಟ ಬೇಕೆಂದು,
ಅವನನ್ನು ಬೇಡಿ ಕೊಂಡರು. ಮುಟ್ಟಿದವರೆಲ್ಲರು ಸ್ವಸ್ಥವಾದರು.

## ೧೫. ಸಂಧಿ.

೧ ಆಗ ಯೆರೂಸಲೇಮಿನವರಾದ ಶಾಸ್ತ್ರಿಗಳೂ, ಫರಿಸಾಯ
೨ ರೂ, ಯೇಸುವಿನ ಬಳಿಗೆ ಬಂದು, ನಿನ್ನ ಶಿಷ್ಯರು ಹಿರಿಯರ
ಸಂಪ್ರದಾಯವನ್ನು ಯಾಕೆ ಮೀರುತ್ತಾರೆ! ಹ್ಯಾಗಂದರೆ ಅವರು
ಕೊಟ್ಟಿ ತಿನ್ನುವಾಗ, ತಮ್ಮ ಕೈಗಳನ್ನು ತೊಳೆದು ಕೊಳ್ಳುವ
3 ದಿಲ್ಲ, ಅಂದರು. ಅದರೆ ಅವನು ಪ್ರತ್ಯುತ್ತರವಾಗಿ ಅವರಿಗೆ ಹೇಳಿ
ದ್ದು, ನೀವು ಸಹ ನಿಮ್ಮ ಸಂಪ್ರದಾಯದಿಂದ ದೇವರ ಕಟ್ಟಳೆ
೪ ಯನ್ನು ಯಾಕೆ ಮೀರುತ್ತೀರಿ! ಹ್ಯಾಗಂದರೆ ದೇವರು, ನಿನ
ತಂದೆ ತಾಯಿಗಳನ್ನು ಸನ್ಮಾನಿಸೆಂದೂ, ತಂದೆಯನ್ನಾದರೂ,
ತಾಯಿಯನ್ನಾದರೂ, ನಿಂದಿಸುವವನು ಸತ್ತೇ ಸಾಯಲೆಂದೂ,
೫ ಕಟ್ಟಳೆ ಮಾಡಿದನು. ಅದರೆ ನೀವು, ತಂದೆಗಾದರೂ ತಾಯಿಗಾ
ದರೂ, ನಿನಗೆ ನನ್ನಿಂದ ಬರ ತಕ್ಕ ಉಪಯೋಗವು ಕಾಣಿಕೆ
೬ ಯಾಯಿತೆಂದು ಹೇಳುವವನು ತನ್ನ ತಂದೆಯನ್ನಾದರೂ, ತಾ
ಯಿಯನ್ನಾದರೂ, ಸನ್ಮಾನಿಸುವದು ಬೇಡವೆಂದು ಹೇಳಿ, ನಿಮ್ಮ
ಸಂಪ್ರದಾಯದಿಂದ ದೇವರ ಕಟ್ಟಳೆಯನ್ನು ನಿರರ್ಥಕ ಮಾಡಿ



೭ ದ್ದೀರಿ. ಕಪಟಿಗಳೇ, ನಿಮ್ಮನ್ನು ಕುರಿತು ಯೆಶಾಯನು ಚನ್ನಾಗಿ
೮ ಪ್ರವಾದಿಸಿದ್ದಾನೆ; ಏನಂದರೆ, ಈ ಜನರು ಬಾಯಿಯಿಂದ ನನಗೆ
ಸಮೀಪಿಸಿ, ತುಟಿಗಳಿಂದ ನನ್ನನ್ನು ಸನ್ಮಾನಿಸುತ್ತಾರೆ; ಆದರೆ
೯ ಅವರ ಹೃದಯವು ನನಗೆ ದೂರವಾಗಿದೆ. ಮನುಷ್ಯರ ಕಲ್ಪನೆ
ಗಳಾದ ಬೋಧನೆಗಳನ್ನು ಬೋಧಿಸಿ, ವ್ಯರ್ಥವಾಗಿಯೇ ನನ್ನ
ನ್ನು ಭಜಿಸುತ್ತಾರೆ.

೧೦ ಮತ್ತು ಅವನು ಸಮೂಹವನ್ನು ಕರಿಸಿ, ಅವರಿಗೆ ಹೇಳಿದ್ದೇನಂ
೧೧ ದರೆ, ಕೇಳಿ, ಗ್ರಹಿಸಿರಿ ಬಾಯಿಯಲ್ಲಿ ಪ್ರವೇಶಿಸುವಂಥಾದ್ದು ಮ
ನುಷ್ಯನನ್ನು ಹೊಲೆ ಮಾಡುವದಿಲ್ಲ, ಆದರೆ ಬಾಯಿಯೊಳಗಿಂ
ದ ಹೊರಡುವಂಥಾದ್ದೇ ಮನುಷ್ಯನನ್ನು ಹೊಲೆ ಮಾಡುತ್ತದೆ.

೧೨ ಆಗಲವನ ಶಿಷ್ಯರು ಬಂದು, ಅವನಿಗೆ, ಫರಿಸಾಯರು ಈ
ಮಾತನ್ನು ಕೇಳಿ, ಆಟಂಕ ಪಟ್ಟರೆಂದು, ತಿಳಿದಿದ್ದೀಯಾ? ಅಂ
೧೩ ದರು. ಅವನು ಪ್ರತ್ಯುತ್ತರವಾಗಿ, ನನ್ನ ಪರಲೋಕದ ತಂದೆಯು
೧೪ ನೆಡದ ಗಿಡಗಳೆಲ್ಲಾ ಬೇರೊಂದಿಗೆ ಕೀಳಲ್ಪಡುವವು; ಅವರನ್ನು
ಬಿಡಿರಿ; ಕುರುಡರಿಗೆ ದಾರಿ ತೋರಿಸುವ ಕುರುಡರಾಗಿದ್ದಾರೆ. ಆದ
ರೆ ಕುರುಡನು ಕುರುಡನಿಗೆ ದಾರಿ ತೋರಿಸಿದರೆ, ಇಬ್ಬರೂ ಕುಣಿ
೧೫ ಯಲ್ಲಿ ಬೀಳುವರು, ಅಂದನು. ಆಗ ಪೇತ್ರನು ಪ್ರತ್ಯುತ್ತರವಾಗಿ
ಅವನಿಗೆ, ಈ ಸಾಮ್ಯವನ್ನು ನಮಗೆ ತಿಳಿಸು, ಅನ್ನಲು; ಯೇಸು
೧೬ ಹೇಳ್ದದ್ದು, ನೀವು ಸಹ ಈ ವರಿಗೂ ಇನ್ನೂ ಬುದ್ಧಿಯಿಲ್ಲದವ
೧೭ ರೋ! ಬಾಯಿಯೊಳಗೆ ಹೊಗುವಂಥಾದ್ದೆಲ್ಲಾ ಹೊಟ್ಟೆಯೊ
ಳಗೆ ಕೇರಿ, ಹೊರಗೆ ಬಹಿರ್ಭೂಮಿಗೆ ಹಾಕಲ್ಪಡುವದೆಂದು, ಇ
೧೮ ನ್ನೂ ತಿಳಿಯಲಿಲ್ಲವೋ? ಆದರೆ ಬಾಯಿಯೊಳಗಿಂದ ಹೊರ
ಡುವಂಥಾವು ಹೃದಯದೊಳಗಿಂದ ಬರುತ್ತವೆ; ಅವೇ ಮನು
೧೯ ಷ್ಯನನ್ನು ಹೊಲೆ ಮಾಡುತ್ತವೆ. ಯಾಕಂದರೆ ಹೃದಯದೊ
ಳಗಿಂದ ದುರಾಲೋಚನೆಗಳೂ, ಕೊಲೆಗಳೂ, ಜಾರತ್ವಗಳೂ,
ವ್ಯಭಿಚಾರಗಳೂ, ಕಳ್ಳತನಗಳೂ, ಅಪಸಾಕ್ಷಿಗಳೂ, ದೂಷಣೆ
೨೦ ಗಳೂ, ಹೊರಡುತ್ತವೆ. ಮನುಷ್ಯನನ್ನು ಹೊಲೆ ಮಾಡುವವುಗ
ಳು ಇವೇ. ಆದರೆ ತೊಳೆಯದ ಕೈಗಳಿಂದ ಊಟ ಮಾಡು
ವದು ಮನುಷ್ಯನನ್ನು ಹೊಲೆ ಮಾಡುವದಿಲ್ಲ.

೨೧ ಆ ಮೇಲೆ ಯೇಸು ಅಲ್ಲಿಂದ ಹೊರಟು, ತೂರ್ ಸೀದೋನ್
೨೨ ಮೇರೆಗಳಿಗೆ ಹೋದನು. ಆಗ, ಇಗೋ, ಕನಾನ್ಯಳಾದ ಒಬ್ಬ
ಸ್ತ್ರೀಯು ಆ ಪ್ರಾಂತ್ಯಗಳಿಂದ ಹೊರಟು, ಅವನಿಗೆ, ದಾವೀದನ
ಮಗನಾದ ಕರ್ತನೇ, ನನ್ನನ್ನು ಕರುಣಿಸು! ನನ್ನ ಮಗಳು
೨೩ ದೆವ್ವದಿಂದ ಬಹಳ ಉಪದ್ರ ಪಡುತ್ತಾಳೆಂದು ಕೂಗಿದಳು. ಆದರೆ
ಅವನು ಒಂದು ಮಾತಾದರೂ ಅವಳಿಗೆ ಉತ್ತರ ಕೊಡಲಿಲ್ಲ.
ಆಗಲವನ ಶಿಷ್ಯರು ಹತ್ತರ ಬಂದು, ನಮ್ಮ ಹಿಂದೆ ಕೂಗು
ತ್ತಾಳೆ; ಅವಳನ್ನು ಕಳುಹಿಸಿ ಬಿಡು ಎಂದು, ಅವನನ್ನು ಬೇಡಿ
೨೪ ಕೊಂಡರು. ಆದರೆ ಅವನು ಪ್ರತ್ಯುತ್ತರವಾಗಿ, ಇಸ್ರಯೇಲನ
ಮನೆಯ ತಪ್ಪಿ ಹೋದ ಕುರಿಗಳಿಗೆ ಹೊರ್ತು, ನಾನು ಕಳುಹಿಸ
೨೫ ಲ್ಪಟಲಿಲ್ಲ, ಅಂದನು. ಆಗಲವಳು ಬಂದು, ಕರ್ತನೇ, ನನಗೆ
ಸಹಾಯ ಮಾಡೆಂದು ಅವನಿಗೆ ನಮಸ್ಕಾರ ಮಾಡಿದಳು. ಅವ
ನು ಪ್ರತ್ಯುತ್ತರವಾಗಿ, ಮಕ್ಕಳ ಕೊಟ್ಟಿಯನ್ನು ತಕ್ಕೊಂಡು,
೨೬ ನಾಯಿಗಳಿಗೆ ಹಾಕುವದು ಒಳ್ಳೇದಲ್ಲ, ಅನ್ನಲು; ಅವಳು, ಹೌ
ದು, ಕರ್ತನೇ, ಆದರೂ ನಾಯಿಗಳು ತಮ್ಮ ಯಜಮಾನರ
ಮೇಜಿನಿಂದ ಬೀಳುವ ತುಂಡುಗಳನ್ನು ತಿನ್ನುತ್ತವೆ, ಅಂದಳು.
೨೭ ಆಗ ಯೇಸು ಪ್ರತ್ಯುತ್ತರವಾಗಿ ಅವಳಿಗೆ, ಓ ಸ್ತ್ರೀಯೇ, ನಿನ್ನ
ವಿಶ್ವಾಸವು ದೊಡ್ಡದು; ನೀನು ಇಚ್ಛೈಸುವ ಪ್ರಕಾರ ನಿನಗಾಗಲಿ,
ಅಂದನು. ಆ ಘಳಿಗೆಯಿಂದ ಅವಳ ಮಗಳು ಸ್ವಸ್ಥವಾದಳು.

೨೮ ಮತ್ತು ಯೇಸು ಅಲ್ಲಿಂದ ಹೊರಟು ಹೋಗಿ, ಗಲಿಲಾಯ
ಸಮುದ್ರದ ಬಳಿಗೆ ಬಂದು, ಬೆಟ್ಟವನ್ನೇರಿ, ಅಲ್ಲಿ ಕೂತು ಕೊಂ
೩೦ ಡನು. ಮತ್ತು ಬಹು ಸಮೂಹಗಳು ಕುಂಟರನ್ನೂ, ಕುರುಡರ
ನ್ನೂ, ಮೂಕರನ್ನೂ, ಊಣರನ್ನೂ, ಬೇರೆ ಅನೇಕರನ್ನೂ,
ಅವನ ಬಳಿಗೆ ತಕ್ಕೊಂಡು ಬಂದು, ಅವರನ್ನು ಯೇಸುವಿನ ಪಾ
ದಗಳ ಬಳಿಯಲ್ಲಿ ಇಟ್ಟರು. ಅವನು ಅವರನ್ನು ವಾಸಿ ಮಾಡಿ
೩೧ ದನು. ಆದದರಿಂದ ಸಮೂಹಗಳು, ಮೂಕರು ಮಾತಾಡುವದ
ನ್ನೂ, ಊಣರು ಸ್ವಸ್ಥವಾಗುವದನ್ನೂ, ಕುಂಟರು ನಡೆಯುವ
ದನ್ನೂ, ಕುರುಡರು ನೋಡುವದನ್ನೂ, ಕಂಡು, ಆಶ್ಚರ್ಯ
ಪಟ್ಟು, ಇಸ್ರಯೇಲಿನ ದೇವರನ್ನು ಮಹಿಮೆ ಪಡಿಸಿದರು.

೩೨ ಆಗ ಯೇಸು ತನ್ನ ಶಿಷ್ಯರನ್ನು ಕರೆದು, ಸಮೂಹದ ಮೇಲೆ
ಅಂತ್ಯಕರಣ ಪಡುತ್ತೇನೆ; ಯಾಕಂದರೆ ಅವರು ಈಗ ಮೂರು
ದಿವಸ ನನ್ನ ಹತ್ತರ ಇದ್ದಾರೆ; ತಿನ್ನುವದಕ್ಕೆ ಅವರಿಗೆ ಏನೂ
ಇಲ್ಲ; ಮಾರ್ಗದಲ್ಲಿ ಬಳಲಿ ಹೋದಾರೆಂದು, ಅವರನ್ನು ಉಪ
೩೩ ವಾಸವಾಗಿ ಕಳುಹಿಸಿ ಬಿಡ ನನಗೆ ಮನಸ್ಸಿಲ್ಲ, ಅಂದನು. ಅವನ
ಶಿಷ್ಯರು ಅವನಿಗೆ, ಇದ್ದು ದೊಡ್ಡ ಸಮೂಹವನ್ನು ತೃಪ್ತಿ
ಪಡಿಸುವದಕ್ಕೆ ಸಾಕಾಗುವಷ್ಟು ರೊಟ್ಟಿಗಳು ಅರಣ್ಯದಲ್ಲಿ ನಮ
೩೪ ಗೆ ಎಲ್ಲಿಂದ ಶಿಕ್ಕಾಯ್ತು, ಅನ್ನಲು; ಯೇಸು ಅವರಿಗೆ, ನಿಮ್ಮಲ್ಲಿ
ಎಷ್ಟು ರೊಟ್ಟಿಗಳುಂಟು! ಅಂದನು. ಅವರು ಏಳು, ಮತ್ತು ಕೆಲವು
೩೫ ಸಣ್ಣ ಮೀನುಗಳು, ಅಂದರು. ಆಗಲವನು ಸಮೂಹಗಳಿಗೆ, ನೆಲದ
೩೬ ಮೇಲೆ ಕೂತು ಕೊಳ್ಳ ಬೇಕೆಂದು ಆಜ್ಞಾಪಿಸಿ, ಏಳು ರೊಟ್ಟಿಗಳ
ನ್ನೂ ಮೀನುಗಳನ್ನೂ ತೆಗೆದು ಕೊಂಡು, ಸ್ತೋತ್ರ ಮಾಡಿ,
ಮುರಿದು, ತನ್ನ ಶಿಷ್ಯರಿಗೆ ಕೊಟ್ಟನು. ಶಿಷ್ಯರು ಸಮೂಹಕ್ಕೆ
೩೭ ಬಡಿಸಿದರು. ಆಗ ಎಲ್ಲರು ತಿಂದು, ತೃಪ್ತಿಯಾದರು. ಮಿಕ್ಕ
೩೮ ತುಂಡುಗಳನ್ನು ಏಳು ಪುಟ್ಟಿ ತುಂಬ ಎತ್ತಿದರು. ಹೆಂಗಸರೂ ಮ
ಕ್ಕಳೂ ಹೊರ್ತಾಗಿ, ತಿಂದವರು ನಾಲ್ಕು ಸಾವಿರ ಗಂಡಸರಾಗಿ
೩೯ ದ್ದರು. ಮತ್ತು ಸಮೂಹಗಳನ್ನು ಕಳುಹಿಸಿ ಬಿಟ್ಟು, ಹಡಗವನ್ನೇರಿ,
ಮಗ್ದಲ ಪ್ರಾಂತ್ಯಗಳಿಗೆ ಬಂದರು.

## ೧೬. ಸಂಧಿ.

೧ ಆಗ ಫರಿಸಾಯರೂ ಸದ್ದುಕಾಯರೂ ಹತ್ತರ ಬಂದು, ಆಕಾ
ಶದಿಂದ ತಮಗೆ ಗುರುತನ್ನು ತೋರಿಸಿ ಕೊಡ ಬೇಕೆಂದು ಕೇಳಿ,
೨ ಅವನನ್ನು ಕೋಧಿಸಿದರು. ಅವನು ಅವರಿಗೆ ಪ್ರತ್ಯುತ್ತರವಾಗಿ
ಹೇಳ್ದದ್ದು, ಸಂಜೆವೇಳೆಯಲ್ಲಿ ನೀವು, ಆಕಾಶವು ಕೆಂಪಾಗಿದೆ;
3 ನಿರ್ಮಲ ದಿವಸ ಬರುವದೆಂದು, ಹೇಳುತ್ತೀರಿ. ಮತ್ತು ಹೊತಾಕಿ,
ಆಕಾಶವು ಮೋಡವಾಗಿ ಕೆಂಪಾಗಿದೆ; ಈ ಹೊತ್ತು ಘಾಳಿ ಮಳೆ
ಎಂದು, ಹೇಳುತ್ತೀರಿ. ಕಪಟಿಗಳೇ, ಆಕಾಶದ ಮುಖದ ಲಕ್ಷಣ
ವನ್ನು ಬಲ್ಲಿರಿ. ಆದರೆ ಕಾಲಗಳ ಗುರುತುಗಳನ್ನು ತಿಳಿಯಲಾರಿ
೪ ರಾ! ಜಾರತ್ವವುಳ್ಳ ಕೆಟ್ಟ ಸಂತತಿಯು ಗುರುತನ್ನು ಹುಡುಕು
ತ್ತವೆ; ಆದರೆ ಪ್ರವಾದಿಯಾದ ಯೋನನ ಗುರುತೇ ಹೊರ್ತು,
ಅದಕ್ಕೆ ಬೇರೆ ಗುರುತು ಕೊಡಲ್ಪಡದು. ಮತ್ತು ಅವರನ್ನು
ಬಿಟ್ಟು ಹೋದನು.

೧೨ ಬಂದು, ಎಲ್ಲವುಗಳನ್ನು ಪುನಃಸ್ಥಾಪಿಸುವನು, ಹೌದು; ಆದರೆ
ನಿಮಗೆ ಹೇಳುತ್ತೇನೆ, ಎಲೀಯನು ಬಂದದ್ದಾಯಿತು; ಅವರು ಅ
ವನನ್ನು ಅರಿಯದೆ, ಮನಸ್ಸು ಬಂದ ಹಾಗೆ ಅವನಿಗೆ ಮಾಡಿದ
ರು. ಅದೇ ಪ್ರಕಾರ ಮನುಷ್ಯನ ಮಗನು ಅವರಿಂದ ಶ್ರಮೆ ಪಡು
೧೩ ವದಕ್ಕಿದ್ದಾನೆ, ಅಂದನು. ಆಗ ಶಿಷ್ಯರು, ಅವನು ಸ್ನಾನಿಕ
ನಾದ ಯೋಹಾನನನ್ನು ಕುರಿತು ತಮಗೆ ಹೇಳಿದನೆಂದು, ಗ್ರಹಿಸಿ
ದರು.

೧೪ ಮತ್ತು ಅವರು ಸಮೂಹದ ಬಳಿಗೆ ಬಂದಾಗ, ಒಬ್ಬ ಮನು
೧೫ ಷ್ಯನು ಅವನ ಹತ್ತರ ಬಂದು, ಅವನಿಗೆ ಮೊಣಕಾಲೂರಿ, ಕರ್ತ
ನೇ, ನನ್ನ ಮಗನನ್ನು ಕರುಣಿಸು; ಅವನು ಚಂದ್ರರೋಗವು
ಳ್ಳವನಾಗಿ, ಬಹಳ ಶ್ರಮೆ ಪಡುತ್ತಾನೆ; ಬಹಳ ಸಾರಿ ಬೆಂಕಿಯೊ
೧೬ ಳಗೆ, ಬಹಳ ಸಾರಿ ನೀರೊಳಗೆ, ಬೀಳುತ್ತಾನೆ; ಅವನನ್ನು ನಿನ್ನ
ಶಿಷ್ಯರ ಬಳಿಗೆ ತಂದೆನು; ಆದರೆ ಅವರು ಅವನನ್ನು ಸ್ವಸ್ಥ
೧೭ ಮಾಡಲಾರದೆ ಹೋದರು, ಅಂದನು. ಯೇಸು ಪ್ರತ್ಯುತ್ತರವಾಗಿ,
ಓ ವಿಶ್ವಾಸಹೀನವಾದ ಮೂರ್ಖ ಸಂತತಿಯೇ! ನಾನು ಎಷ್ಟು
ವರಿಗೂ ನಿಮ್ಮ ಸಂಗದ ಇರ ಬೇಕು! ಎಷ್ಟು ವರಿಗೂ ನಿಮ್ಮನ್ನು
ಸಹಿಸ ಬೇಕು? ಅವನನ್ನು ಇಲ್ಲಿ ನನ್ನ ಬಳಿಗೆ ತನ್ನಿರಿ, ಅಂದನು.
೧೮ ಮತ್ತು ಯೇಸು ಅದನ್ನು ಗದರಿಸಲು, ದೆವ್ವವು ಅವನಿಂದ
ಹೊರಟಿತು; ಹುಡುಗನು ಆ ಘಳಿಗೆಯಿಂದಲೇ ಸ್ವಸ್ಥವಾದನು.
೧೯ ಆಗ ಶಿಷ್ಯರು ಏಕಾಂತವಾಗಿ ಯೇಸುವಿನ ಬಳಿಗೆ ಬಂದು, ನಾವು
ಅದನ್ನು ಯಾಕೆ ಹೊರಡಿಸಲಾರದೆ ಹೋದೆವು? ಅನ್ನಲು;
೨೦ ಯೇಸು ಅವರಿಗೆ, ನಿಮ್ಮ ಅವಿಶ್ವಾಸದಿಂದಲೇ; ಯಾಕಂದರೆ
ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಸಾಸಿವೆ ಕಾಳಷ್ಟು ವಿಶ್ವಾಸ
ವು ನಿಮ್ಮಲ್ಲಿ ಇದ್ದರೆ, ನೀವು ಈ ಬೆಟ್ಟಕ್ಕೆ, ಇಲ್ಲಿಂದ ಅಲ್ಲಿಗೆ
ಹೋಗು, ಅಂದರೆ, ಹೋಗುವದು; ಮತ್ತು ನಿಮ್ಮಿಂದ ಆಗದ್ದು
೨೧ ಒಂದೂ ಇರದು. ಆದರೆ ಈ ಜಾತಿಯದು, ಪ್ರಾರ್ಥನೆ ಉಪ
ವಾಸಗಳಿಂದಲೇ ಹೊರ್ತು, ಹೊರಡುವದಿಲ್ಲ, ಅಂದನು.

೨೨ ಅವರು ಗಲಿಲಾಯದಲ್ಲಿ ಸಂಚರಿಸುತ್ತಿರುವಾಗ, ಯೇಸು ಅವ
ರಿಗೆ, ಮನುಷ್ಯನ ಮಗನು ಮನುಷ್ಯರ ಕೈಗಳಿಗೆ ಒಪ್ಪಿಸಲ್ಪ
೨೩ ಡುವದಕ್ಕಿದ್ದಾನೆ; ಅವನನ್ನು ಕೊಂದು ಹಾಕುವರು; ಮೂರನೇ
ದಿವಸದಲ್ಲಿ ಎಬ್ಬಿಸಲ್ಪಡುವನು, ಅಂದನು. ಅದಕ್ಕೆ ಬಹಳ ದುಃಖ
ಪಟ್ಟರು.

೨೪ ಅವರು ಕಪೆರ್ನಾಮಿಗೆ ಬಂದಾಗ, ಮಂಜೆಶೆರಿಗೆ ತಕ್ಕೊಳ್ಳು
ವವರು ಪೇತ್ರನ ಬಳಿಗೆ ಬಂದು, ನಿಮ್ಮ ಬೋಧಕನು ಮಂಜೆಶೆರಿಗೆ
೨೫ ತೆರುವದಿಲ್ಲವೋ! ಅಂದರು. ತೆರುತ್ತಾನೆ, ಅಂದನು. ಮತ್ತು ಮನೆ
ಯಲ್ಲಿ ಪ್ರವೇಶಿಸಿದಾಗ, ಯೇಸು ಮೊದಲು ಮಾತಾಡಿ, ಅವನಿಗೆ,
ಸೀಮೋನನೇ, ನಿನಗೆ ಹ್ಯಾಗೆ ಕಾಣುತ್ತದೆ? ಭೂಮಿಯ ಅರಸರು
ಯಾರಿಂದ ತೆರಿಗೆಯನ್ನೂ, ಕಪ್ಪವನ್ನೂ, ತಕ್ಕೊಳ್ಳುತ್ತಾರೆ?
೨೬ ತಮ್ಮ ಮಕ್ಕಳಿಂದಲೋ! ಪರರಿಂದಲೋ! ಅಂದನು. ಪೇತ್ರನು
ಅವನಿಗೆ, ಪರರಿಂದಲೇ ಅನ್ನಲು; ಯೇಸು ಅವನಿಗೆ, ಹಾಗಾದರೆ,
೨೭ ಮಕ್ಕಳು ಬಿಡುಗಡೆಯಾಗಿದ್ದಾರೆ; ಆದರೆ ನಾವು ಅವರನ್ನು ಅ
ಡಂಕ ಪಡಿಸದ ಹಾಗೆ, ಸಮುದ್ರಕ್ಕೆ ಹೋಗಿ, ಗಾಲ ಹಾಕಿ, ಮೊ
ದಲು ಮೀನೆ ಬರುವ ವಿಾನನ್ನು ಎತ್ತು; ಅದರ ಬಾಯಿ ತೆರೆ
ದಾಗ, ಐದು ಸ್ತಾತೆರನ್ನು ಕಾಣುವಿ; ಅದನ್ನು ತೆಗೆದು ಕೊಂ
ಡು, ನನಗೋಸ್ಕರವೂ ನಿನಗೋಸ್ಕರವೂ ಅವರಿಗೆ ಕೊಡು,
ಅಂದನು.

## ೧೮. ಸಂಧಿ.

೧ ಆ ವೇಳೆಯಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು, ಪರ
೨ ಲೋಕ ರಾಜ್ಯದಲ್ಲಿ ದೊಡ್ಡವನ್ಯಾರು! ಅನ್ನಲಾಗಿ, ಯೇಸು
3 ಬಂದು ಕೂಸನ್ನು ಕರೆದು, ಅವರ ಮಧ್ಯದಲ್ಲಿ ಇರಿಸಿ, ಹೇಳಿದ್ದೇ
ನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ತಿರುಗಿ ಕೊಂ
ಡು, ಕೂಸುಗಳ ಹಾಗೆ ಆದರೆ ಹೊರ್ತು, ಪರಲೋಕ ರಾಜ್ಯದ
೪ ಲ್ಲಿ ಪ್ರವೇಶಿಸಲಾರಿರಿ. ಆದದರಿಂದ ಈ ಕೂಸಿನ ಹಾಗೆ ತನ್ನನ್ನು
ತ್ಗ್ಗಸಿ ಕೊಳ್ಳುವವನ್ಯಾವನೋ, ಅವನು ಪರಲೋಕ ರಾಜ್ಯದಲ್ಲಿ
೫ ದೊಡ್ಡವನು. ಮತ್ತು ಇಂಥ ಕೂಸನ್ನು ನನ್ನ ಹೆಸರಿನಲ್ಲಿ ಅಂಗೀ
ಕರಿಸುವವನ್ಯಾವನೋ, ಅವನು ನನ್ನನ್ನು ಅಂಗೀಕರಿಸುತ್ತಾನೆ.
೬ ಆದರೆ ನನ್ನನ್ನು ವಿಶ್ವಾಸಿಸುವ ಈ ಚಿಕ್ಕವರಲ್ಲಿ ಒಬ್ಬನನ್ನು ಆ
ಟಂಕ ಪಡಿಸುವವನ್ಯಾವನೋ, ಅವನ ಕೊರಳಲ್ಲಿ ಬೀಸುವ ಕಲ್ಲು
ತೂಗ ಹಾಕಲ್ಪಟ್ಟು, ಸಮುದ್ರದ ಅಗಾಧದಲ್ಲಿ ಮುಣುಗಿಸಲ್ಪ
ಡುವದು ಅವನಿಗೆ ವಾಸಿ.

೭ ಆಟಂಕಗಳಿಗಾಗಿ ಲೋಕಕ್ಕೆ ಅಯ್ಯೋ! ಆಟಂಕಗಳು ಬರು
ವದು ಅಗತ್ಯ; ಆದಾಗ್ಯೂ ಯಾವನ ಮೂಲವಾಗಿ ಆಟಂಕವು
೮ ಬರುತ್ತದೋ, ಆ ಮನುಷ್ಯನಿಗೆ ಅಯ್ಯೋ! ಅದರೆ ನಿನ್ನ
ಕೈಯಾದರೂ ನಿನ್ನ ಕಾಲಾದರೂ ನಿನ್ನನ್ನು ಆಟಂಕಿಸಿದರೆ,
ಅವುಗಳನ್ನು ಕೊಯಿದು, ಬಿಸಾಟು ಬಿಡು; ಎರಡು ಕೈ ಎರಡು
ಕಾಲು ಉಳ್ಳವನಾಗಿ ನಿತ್ಯ ಬೆಂಕಿಯಲ್ಲಿ ಹಾಕಲ್ಪಡುವದಕ್ಕಿಂತ
ಕುಂಟನಾಗಿ, ಇಲ್ಲವೆ ಊನನಾಗಿ, ಜೀವದಲ್ಲಿ ಪ್ರವೇಶಿಸುವದು
೯ ನಿನಗೆ ಒಳ್ಳೇದು. ಮತ್ತು ನಿನ್ನ ಕಣ್ಣು ನಿನ್ನನ್ನು ಆಟಂಕಿಸಿದರೆ,
ಅದನ್ನು ಕಿತ್ತು, ಬಿಸಾಟು ಬಿಡು; ಎರಡು ಕಣ್ಣುಳ್ಳವನಾಗಿ ಬೆಂಕಿ
ಯ ನರಕದಲ್ಲಿ ಹಾಕಲ್ಪಡುವದಕ್ಕಿಂತ, ಒಂದೇ ಕಣ್ಣುಳ್ಳವನಾಗಿ
ಜೀವದಲ್ಲಿ ಪ್ರವೇಶಿಸುವದು ನಿನಗೆ ಒಳ್ಳೇದು.

೧೦ ಈ ಚಿಕ್ಕವರಲ್ಲಿ ಒಬ್ಬನನ್ನು ತಿರಸ್ಕರಿಸದ ಹಾಗೆ, ನೋಡಿ
ಕೊಳ್ಳಿರಿ. ಯಾಕಂದರೆ ಪರಲೋಕದಲ್ಲಿ ಅವರ ದೂತರು ಯಾ
ವಾಗಲೂ ಪರಲೋಕದಲ್ಲಿರುವ ನನ್ನ ತಂದೆಯ ಮುಖವನ್ನು
೧೧ ನೋಡುತ್ತಾರೆಂದು, ನಿಮಗೆ ಹೇಳುತ್ತೇನೆ; ಯಾಕಂದರೆ ಕೆಟ್ಟು
ಹೋದದ್ದನ್ನು ರಕ್ಷಿಸುವದಕ್ಕೆ ಮನುಷ್ಯನ ಮಗನು ಬಂದನು.
೧೨ ನಿಮಗೆ ಹ್ಯಾಗೆ ಕಾಣುತ್ತದೆ! ಒಬ್ಬ ಮನುಷ್ಯನಿಗೆ ನೂರು ಕುರಿಗ
ಳಿದ್ದು, ಅವುಗಳಲ್ಲಿ ಒಂದು ತಪ್ಪಿ ಹೋದರೆ, ತೊಂಭತ್ತೊಂಭ
ತ್ತನ್ನು ಬಿಟ್ಟು, ಬೆಟ್ಟಗಳಿಗೆ ಹೋಗಿ, ತಪ್ಪಿ ಹೋದದ್ದನ್ನು ಹುಡು
೧೩ ಕುವದಿಲ್ಲವೋ! ಅದನ್ನು ಕಂಡು ಕೊಂಡರೆ, ತಪ್ಪಿ ಹೋಗದ
ತೊಂಭತ್ತೊಂಭತ್ತಕ್ಕಿಂತ ಆ ಒಂದಕ್ಕೋಸ್ಕರ ಹೆಚ್ಚಾಗಿ ಸಂ
೧೪ ತೋಷ ಪಡುವನೆಂದು, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ. ಹಾಗೆ
ಯೇ ಈ ಚಿಕ್ಕವರಲ್ಲಿ ಒಬ್ಬನಾದರೂ ಕೆಟ್ಟು ಹೋಗ ಬೇಕೆಂಬು
ವದು, ಪರಲೋಕದಲ್ಲಿರುವ ನಿಮ್ಮ ತಂದೆಯ ಚಿತ್ತವಲ್ಲ.

೧೫ ಇದಲ್ಲದೆ ನಿನ್ನ ಸಹೋದರನು ನಿನಗೆ ವಿರೋಧವಾಗಿ ತಪ್ಪು
ಮಾಡಿದರೆ, ಹೋಗಿ, ನೀನೂ ಅವನೂ ಮಾತ್ರ ಕೂತ ಇದ್ದು,
ಅವನನ್ನು ಗದರಿಸು; ಅವನು ನಿನಗೆ ಕಿವಿ ಕೊಟ್ಟರೆ, ನಿನ್ನ ಸ
೧೬ ಹೋದರನನ್ನು ಸಂಪಾದಿಸಿ ಕೊಂಡಿರುವಿ. ಕಿವಿ ಕೊಡದೆ ಹೋ
ದರೆ, ಎರಡು ಮೂರು ಸಾಕ್ಷಿಗಳ ಬಾಯಿಯಿಂದ ಮಾತೆಲ್ಲಾ
ಸ್ಥಾಪನೆಯಾಗುವ ಹಾಗೆ, ಇನ್ನು ಒಬ್ಬನನ್ನು, ಇಲ್ಲವೆ ಇಬ್ಬರ





೧೪ ಅವನ ಶಿಷ್ಯರು ಆಚೆಗೆ ಹೋದಾಗ, ಕೊಟ್ಟಿಗಳನ್ನು ತರ
೬ ಮರತರು. ಆಗ ಯೇಸು ಅವರಿಗೆ, ಫರಿಸಾಯರ ಸದ್ದುಕಾಯ
ರ ಹುಳಿ ಹಿಟ್ಟಿಗೆ ನೋಡಿ ಕೊಂಡು, ಜಾಗ್ರತೆಯಾಗಿರ್ರಿ, ಅಂದನು.
೭ ಆಗಲವರು, ನಾವು ಕೊಟ್ಟಿಗಳನ್ನು ತಕ್ಕೊಂಡು ಬಾರದದರಿಂದ
೮ ಸೇ ಎಂದು, ತಮ್ಮೊಳಗೆ ಮಾತಾಡಿ ಕೊಂಡರು. ಆದರೆ ಯೇ
ಸು ಅದನ್ನು ತಿಳಿದು, ಅಲ್ಪ ವಿಶ್ವಾಸಿಗಳೇ, ನೀವು ಕೊಟ್ಟಿಗಳ
ನ್ನು ತಕ್ಕೊಂಡು ಬಾರದದರಿಂದ ನಿಮ್ಮಲ್ಲಿ ಮಾತಾಡಿ ಕೊಳ್ಳುವ
೯ ದೇನು! ಇನ್ನೂ ಗ್ರಹಿಸುವದಿಲ್ಲವೋ! ಐದು ಸಾವಿರ ಮಂದಿ
ಯ ಐದು ಕೊಟ್ಟಿಗಳನ್ನೂ, ನೀವು ಎತ್ತಿದ ಪುಟ್ಟಿಗಳು ಎಷ್ಟೆಂ
೧೦ ಬುವದನ್ನೂ; ಮತ್ತು ನಾಲ್ಕು ಸಾವಿರ ಮಂದಿಯ ಏಳು ಕೊಟ್ಟಿ
ಗಳನ್ನೂ, ನೀವು ಎತ್ತಿದ ಪುಟ್ಟಿಗಳು ಎಷ್ಟೆಂಬುವದನ್ನೂ, ಜ್ಞಾ
೧೧ ಪಕ ಮಾಡಿ ಕೊಳ್ಳುವದಿಲ್ಲವೋ! ಫರಿಸಾಯರ ಸದ್ದುಕಾಯರ
ಹುಳಿ ಹಿಟ್ಟಿಗೆ ಜಾಗ್ರತೆಯಾಗಿರ ಬೇಕಂದ್ದು, ನಾನು ಕೊಟ್ಟಿ
ಯನ್ನು ಕುರಿತು ನಿಮಗೆ ಹೇಳಿಲ್ಲವೆಂದು, ನೀವು ಗ್ರಹಿಸದೆ ಇರು
೧೨ ವದು ಹ್ಯಾಗೆ! ಅಂದನು. ಆಗ, ಕೊಟ್ಟಿಯ ಹುಳಿಗೆ ಅಲ್ಲ, ಫರಿ
ಸಾಯರ ಸದ್ದುಕಾಯರ ಬೋಧನೆಗೆ ಜಾಗ್ರತೆಯಾಗಿರ ಹೇಳಿದ
ನೆಂದು, ತಿಳಿಕೊಂಡರು.

೧೩ ಯೇಸು ಫಿಲಿಪ್ಪನ ಕೈಸಕೈಯದ ಮೇಕೆಗಳಿಗೆ ಬಂದ ಮೇ
ಲೆ, ಮನುಷ್ಯರು ಮನುಷ್ಯನ ಮಗನಾದ ನನ್ನನ್ನು ಯಾರೆಂ
೧೪ ದು ಹೇಳುತ್ತಾರೆಂದು, ತನ್ನ ಶಿಷ್ಯರನ್ನು ಕೇಳಿದನು. ಅದಕ್ಕ
ವರು, ಕೆಲವರು ಸ್ನಾನಿಕನಾದ ಯೋಹಾನನು, ಕೆಲವರು ಎಲೀ
ಯನು, ಇನ್ನು ಕೆಲವರು ಯೆರೆಮಿಾಯನು, ಇಲ್ಲವೆ ಪ್ರವಾದಿಗ
೧೫ ಳಲ್ಲಿ ಒಬ್ಬನೆಂದು, ಹೇಳುತ್ತಾರೆ, ಅಂದರು. ಅವನು ಅವರಿಗೆ, ಆದ
೧೬ ರೆ ನೀವು ನನ್ನನ್ನು ಯಾರೆಂದು ಹೇಳುತ್ತೀರಿ! ಅನ್ನಲಾಗಿ, ಸೀ
ಮೋನ್ ಪೇತ್ರನು ಪ್ರತ್ಯುತ್ತರವಾಗಿ, ನೀನು ಜೀವವುಳ್ಳ ದೇವರ
೧೭ ಮಗನಾದ ಕ್ರಿಸ್ತನು, ಅಂದನು. ಯೇಸು ಅವನಿಗೆ ಪ್ರತ್ಯುತ್ತರ
ವಾಗಿ ಹೇಳಿದ್ದು, ಯೋನನ ಮಗನಾದ ಸೀಮೋನನೇ, ನೀನು
ಭಾಗ್ಯವಂತನು; ಯಾಕಂದರೆ ರಕ್ತ ಮಾಂಸವಲ್ಲ, ಪರಲೋಕದ
ಲ್ಲಿರುವ ನನ್ನ ತಂದೆಯು ನಿನಗೆ ಇದನ್ನು ಪ್ರಕಟ ಮಾಡಿದ್ದಾನೆ.
೧೮ ಮತ್ತು ನಾನು ನಿನಗೆ ಹೇಳುತ್ತೇನೆ, ನೀನು ಪೇತ್ರನು; ಮತ್ತು ಈ
ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳದ
೧೯ ದ್ವಾರಗಳು ಅದನ್ನು ಜಯಿಸಲಾರವು. ಮತ್ತು ಪರಲೋಕ ರಾ
ಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು. ನೀನು ಭೂಮಿ
ಯ ಮೇಲೆ ಕಟ್ಟುವಂಥಾದ್ದು ಪರಲೋಕದಲ್ಲಿ ಕಟ್ಟಲ್ಪಟ್ಟಿರು
ವದು; ಮತ್ತು ನೀನು ಭೂಮಿಯ ಮೇಲೆ ಬಿಚ್ಚುವಂಥಾದ್ದು ಪರ
೨೦ ಲೋಕದಲ್ಲಿ ಬಿಚ್ಚಲ್ಪಟ್ಟಿರುವದು. ಆಗ, ತಾನು ಕ್ರಿಸ್ತನಾದ ಯೇ
ಸುವೆಂದು ಯಾರಿಗೂ ಹೇಳ ಬಾರದೆಂದು, ತನ್ನ ಶಿಷ್ಯರಿಗೆ ಆಜ್ಞಾ
ಪಿಸಿದನು.

೨೧ ಅಂದಿನಿಂದ ಯೇಸು, ತಾನು ಯೆರೂಸಲೇಮಿಗೆ ಹೋಗಿ,
ಹಿರಿಯರಿಂದಲೂ ಪ್ರಧಾನ ಯಾಜಕರಿಂದಲೂ ಶಾಸ್ತ್ರಿಗಳಿಂದ
ಲೂ ಬಹಳ ಶ್ರಮೆ ಪಟ್ಟು, ಕೊಲ್ಲಲ್ಪಟ್ಟು, ಮೂರನೇ ದಿವಸದ
ಲ್ಲಿ ಎಬ್ಬಿಸಲ್ಪಡ ಬೇಕೆಂದು, ತನ್ನ ಶಿಷ್ಯರಿಗೆ ತೋರಿಸಲಾರಂಭಿಸಿ
೨೨ ದನು. ಆಗ ಪೇತ್ರನು ಅವನನ್ನು ತಕ್ಕೊಂಡು, ಕರ್ತನೇ,
ನಿನ್ನನ್ನು ಕರುಣಿಸಿಕೋ; ಇದು ನಿನಗಾಗ ಬಾರದೆಂದು, ಅವನ
೨೩ ನ್ನು ಗದರಿಸಲಾರಂಭಿಸಿದನು. ಆದರೆ ಅವನು ತಿರುಗಿ ಕೊಂಡು,
ಪೇತ್ರನಿಗೆ, ಸೈತಾನನೇ, ನನ್ನ ಹಿಂದೆ ಹೋಗು, ನನಗೆ ಆಟಂಕ
ವಾಗುದ್ದೀ. ಯಾಕಂದರೆ ನೀನು ದೇವರವುಗಳನ್ನು ಅಲ್ಲ, ಮ
ನುಷ್ಯರವುಗಳನ್ನೇ ಚಿಂತಿಸುತ್ತೀ, ಅಂದನು.

೨೪ ಆಗ ಯೇಸು ತನ್ನ ಶಿಷ್ಯರಿಗೆ ಹೇಳಿದ್ದು, ಯಾವನಾದ
ರೂ ನನ್ನ ಹಿಂದೆ ಬರ ಬೇಕೆಂದಿದ್ದರೆ, ತನ್ನನ್ನು ಬೊಂಕಿ, ತನ್ನ
೨೫ ಶಿಲುಬೆಯನ್ನು ಎತ್ತಿ ಕೊಂಡು, ನನ್ನನ್ನು ಹಿಂಬಾಲಿಸಲಿ. ಯಾಕಂ
ದರೆ ತನ್ನ ಪ್ರಾಣ ರಕ್ಷಿಸ ಬೇಕಾದವನು ಅದನ್ನು ಕಳಕೊಳ್ಳು
ವನು. ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣ ಕಳಕೊಳ್ಳುವ
೨೬ ವನು, ಅದನ್ನು ಕಂಡು ಕೊಳ್ಳುವನು. ಹ್ಯಾಗಂದರೆ ಒಬ್ಬ ಮನು
ಷ್ಯನು ಲೋಕವನ್ನೆಲ್ಲಾ ಸಂಪಾದಿಸಿ ಕೊಂಡರೂ, ತನ್ನ ಪ್ರಾಣ
ದ ನಷ್ಟ ಪಟ್ಟರೆ, ಅವನಿಗೆ ಪ್ರಯೋಜನವೇನು! ಇಲ್ಲವೆ ತನ್ನ
೨೭ ಪ್ರಾಣಕ್ಕೆ ಬದಲಾಗಿ ಮನುಷ್ಯನು ಕೊಡ ತಕ್ಕದ್ದೇನು! ಯಾ
ಕಂದರೆ ಮನುಷ್ಯನ ಮಗನು ತನ್ನ ತಂದೆಯ ಮಹಿಮೆಯಲ್ಲಿ
ತನ್ನ ದೂತರ ಸಂಗದ ಬರುವದಕ್ಕಿದ್ದಾನೆ. ಆಗ ಒಬ್ಬೊಬ್ಬನಿಗೆ
೨೮ ಅವನವನ ಕ್ರಿಯೆಯ ಪ್ರಕಾರ ಬದಲು ಕೊಡುವನು. ನಿಶ್ಚಯ
ವಾಗಿ ನಿಮಗೆ ಹೇಳುತ್ತೇನೆ, ಇಲ್ಲಿ ನಿಂತವರಲ್ಲಿ ಕೆಲವರು, ಮನು
ಷ್ಯನ ಮಗನು ತನ್ನ ರಾಜ್ಯದಲ್ಲಿ ಬರುವದನ್ನು ನೋಡುವ
ಪರ್ಯಂತರ, ಮರಣವನ್ನು ರುಚಿ ನೋಡರು.

## ೧೭. ಸಂಧಿ.

೧ ಆರು ದಿವಸಗಳಾದ ಮೇಲೆ, ಯೇಸು ಪೇತ್ರನನ್ನೂ ಯಾ
ಕೋಬನನ್ನೂ ಅವನ ಸಹೋದರನಾದ ಯೋಹಾನನನ್ನೂ
ಕೂಡಿಕೊಂಡು, ಏಕಾಂತವಾಗಿ ಎತ್ತರವಾದ ಬೆಟ್ಟಕ್ಕೆ ಅವರನ್ನು
೨ ಕರಕೊಂಡು ಹೋಗಿ, ಅವರ ಮುಂದೆ ರೂಪಾಂತರವಾದನು;
ಅವನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು; ಅವನ ವ
3 ಸ್ತ್ರಗಳು ಬೆಳಕಿನ ಹಾಗೆ ಬಿಳುಪಾದವು; ಮತ್ತು, ಇಗೋ, ಮೋ
ಶೆಯೂ, ಎಲೀಯನೂ, ಅವನ ಸಂಗದ ಸಂಭಾಷಿಸುವವರಾಗಿ
೪ ಅವರಿಗೆಕಾಣಿಸಿದರು. ಆಗ ಪೇತ್ರನು ಪ್ರತ್ಯುತ್ತರವಾಗಿ ಯೇಸು
ವಿಗೆ, ಕರ್ತನೇ, ನಾವು ಇಲ್ಲಿ ಇರುವದು ಒಳ್ಳೇದು; ನಿನಗೆ ಮನ
ಸ್ಸಿದ್ದರೆ, ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವ; ನಿನಗೆ
ಒಂದು, ಮೋಶೆಗೆ ಒಂದು, ಎಲೀಯನಿಗೆ ಒಂದು, ಅಂದನು.
೫ ಅವನು ಇನ್ನು ಮಾತಾಡುತ್ತಿರುವಾಗ, ಇಗೋ, ಬೆಳಕುಳ್ಳ ಮೇಘು
ವು ಅವರ ಮೇಲೆ ನೆರಳು ಹಾಕಿತು; ಮತ್ತು, ಇಗೋ, ಆ ಮೇಘು
ದೊಳಗಿಂದ, ಇವನೇ ನನ್ನ ಪ್ರಿಯ ಮಗನು; ಇವನಲ್ಲಿ ಆನಂ
ದ ಪಡುತ್ತೇನೆ; ಇವನನ್ನು ಕೇಳಿರಿ, ಎಂಬ ಶಬ್ದ ಉಂಟಾಯಿತು.
೬ ಶಿಷ್ಯರು ಇದನ್ನು ಕೇಳಿ, ಮೋರೆ ಕೆಳಗಾಗಿ ಬಿದ್ದು, ಬಹಳ ಭಯ
೭ ಪಟ್ಟರು. ಆಗ ಯೇಸು ಹತ್ತರ ಬಂದು, ಅವರನ್ನು ಮುಟ್ಟಿ, ಏಳಿರಿ,
೮ ಭಯ ಪಡ ಬೇಡಿರಿ, ಅಂದನು. ಅವರು ತಮ್ಮ ಕಣ್ಣುಗಳೆತ್ತಿ,
ಯೇಸುವನ್ನು ಹೊರ್ತು ಮತ್ಯಾರನ್ನು ನೋಡಲಿಲ್ಲ.

೯ ಅವರು ಬೆಟ್ಟದಿಂದ ಇಳಿದು ಬರುವಾಗ, ಯೇಸು ಮನುಷ್ಯ
ನ ಮಗನು ಸತ್ತವರೊಳಗಿಂದ ಏಳುವ ಪರ್ಯಂತರ, ಈ ದರ್ಶ
ನವನ್ನು ಯಾರಿಗೂ ಹೇಳ ಬೇಡಿರೆಂದು ಅವರಿಗೆ ಆಜ್ಞಾಪಿಸಿದನು.
೧೦ ಆಗಲವನ ಶಿಷ್ಯರು, ಹಾಗಾದರೆ, ಎಲೀಯನು ಮೊದಲು ಬರ
ಬೇಕೆಂದು, ಶಾಸ್ತ್ರಿಗಳು ಹೇಳುವದೇನೆಂದು, ಅವನನ್ನು ಕೇಳಿ
೧೧ ದಾಗ, ಯೇಸು ಅವರಿಗೆ ಪ್ರತ್ಯುತ್ತರವಾಗಿ, ಎಲೀಯನು ಮೊದಲು

೧೭ ನುಳಿ ನಿನ್ನ ಸಂಗಡ ಕಡೆದುಕೋ. ಅವರಿಗೆ ಕಿವಿ ಕೊಡದೆ ಹೋದ
ರೆ, ಸಭೆಗೆ ಹೇಳು. ಅದರೆ ಸಭೆಗೆ ಕಿವಿ ಕೊಡದೆ ಹೋದರೆ, ಅವ
ನು ನಿನಗೆ ಜನಾಂಗದವನ ಹಾಗೆಯೂ, ಸುಂಕದವನ ಹಾಗೆ
ಯೂ, ಇರಲಿ.

೧೮ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ಭೂಮಿಯ ಮೇ
ಲೆ ಕಟ್ಟುವವುಗಳದ್ದು ಪರಲೋಕದಲ್ಲಿ ಕಟ್ಟಲ್ಪಟ್ಟಿರುವವು; ಭೂ
ಮಿಯ ಮೇಲೆ ಬಿಚ್ಚುವವುಗಳದ್ದು ಪರಲೋಕದಲ್ಲಿ ಬಿಚ್ಚಲ್ಪ
ಟ್ಟಿರುವವು. ಮತ್ತು ನಿಮಗೆ ಹೇಳುತ್ತೇನೆ, ನಿಮ್ಮೊಳಗೆ ಇಬ್ಬರು,
೧೯ ತಾವು ಬೇಡಿ ಕೊಳ್ಳುವ ಯಾವ ಕಾರ್ಯವನ್ನು ಕುರಿತಾದರೂ
ಭೂಮಿಯ ಮೇಲೆ ಸಮ್ಮತಿ ಪಟ್ಟರೆ, ಅದು ಪರಲೋಕದಲ್ಲಿರುವ
೨೦ ನನ್ನ ತಂದೆಯಿಂದ ಅವರಿಗೆ ಉಂಟಾಗುವದು; ಯಾಕಂದರೆ
ಇಬ್ಬರಾದರೂ, ಮೂವರಾದರೂ, ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ
ಇದ್ದಾರೋ, ಅಲ್ಲಿ ಅವರ ಮಧ್ಯದಲ್ಲಿ ಇದ್ದೇನೆ, ಅಂದನು.

೨೧ ಆಗ ಪೇತ್ರನು ಅವನ ಬಳಿಗೆ ಬಂದು, ನನ್ನ ಸಹೋದರನು
ನನಗೆ ವಿರೋಧವಾಗಿ ಎಷ್ಟು ಸಾರಿ ತಪ್ಪು ಮಾಡಿದರೆ, ಅವನಿಗೆ
ಮನ್ನಿಸ ಬೇಕು! ಏಳು ಸಾರಿ ಪರ್ಯಂತರವೋ? ಅಂದಾ
೨೨ ಗ, ಯೇಸು ಅವನಿಗೆ, ಏಳು ಸಾರಿ ಪರ್ಯಂತರವೆಂದು ನಿನಗೆ
ಹೇಳುವದಿಲ್ಲ; ಏಳೆಪ್ಪತ್ತು ಸಾರಿ ಪರ್ಯಂತರ, ಅಂದನು.
೨೩ ಆದದರಿಂದ ಪರಲೋಕ ರಾಜ್ಯವು, ತನ್ನ ದಾಸರಿಂದ ಲೆಖ್ಖ ತೆಗೆ
೨೪ ದು ಕೊಳ್ಳ ಬೇಕೆಂದಿದ್ದ ಅರಸನಿಗೆ ಸಮಾನವಾಗಿದೆ. ಅವನು
ಲೆಖ್ಖ ತೆಗೆದು ಕೊಳ್ಳಲಾರಂಭಿಸಿದಾಗ, ಹತ್ತು ಸಾವಿರ ತಲಾಂತಿನ
೨೫ ಸಾಲ ಮಾಡಿದವನೊಬ್ಬನು ಅವನ ಬಳಿಗೆ ತರಲ್ಪಟ್ಟನು. ಆದರೆ
ತೀರಿಸುವದಕ್ಕೆ ಅವನಿಗೆ ಇಲ್ಲದದರಿಂದ, ಅವನ ಯಜಮಾನನು
ಅವನನ್ನೂ ಅವನ ಹೆಂಡತಿಯನ್ನೂ ಮಕ್ಕಳನ್ನೂ ಅವನಿಗಿದ್ದ
ಎಲ್ಲವನ್ನೂ ಮಾರಿ ಬಿಟ್ಟು, ತೀರಿಸ ಬೇಕೆಂದು, ಅಪ್ಪಣೆ ಕೊಟ್ಟ
೨೬ ನು. ಹೀಗಿರಲಾಗಿ, ದಾಸನು ಅತ್ತ ಬಿದ್ದು, ಅವನಿಗೆ, ಕರ್ತನೇ,
ನನಗೋಸ್ಕರ ತಾಳಿಕೋ; ನಿನಗೆ ಎಲ್ಲಾ ಕೊಡುತ್ತೇನೆಂದು ನಮ
೨೭ ಸ್ಕರಿಸಲಾಗಿ, ಆ ದಾಸನ ಯಜಮಾನನು ಅಂತ್ಯಕರಣ ಪಟ್ಟು,
ಅವನನ್ನು ಬಿಡಿಸಿ, ಅವನಿಗೆ ಸಾಲ ಬಿಟ್ಟನು. ತರುವಾಯ ಆ ದಾಸ
ನು ಹೊರಗೆ ಬಂದು, ತನಗೆ ನೂರು ಹಣ ಕೊಡ ಬೇಕಾದ ಒಬ್ಬ
೨೮ ಜತೆ ದಾಸನನ್ನು ಕಂಡು, ನೀನು ಕೊಡ ಬೇಕಾದದ್ದನ್ನು ನನಗೆ
ಕೊಟ್ಟೆಂದು ಹೇಳಿ, ಹಿಡಿದು, ಕುತ್ತಿಗೆ ಹಿಸಿಕಿದನು. ಆಗಲವನ ಜತೆ
ದಾಸನು ಅವನ ಪಾದಕ್ಕೆ ಬಿದ್ದು, ನನಗೋಸ್ಕರ ತಾಳಿಕೋ;
ನಿನಗೆ ಎಲ್ಲಾ ಕೊಡುತ್ತೇನೆಂದು, ಅವನನ್ನು ಬೇಡಿ ಕೊಂಡನು.
೩೦ ಆದರೆ ಅವನು ಒಪ್ಪದೆ, ಹೋಗಿ, ಸಾಲ ತೀರಿಸುವ ಪರ್ಯಂತ
೩೧ ರ ಅವನನ್ನು ಕೆರೆಯಲ್ಲಿ ಹಾಕಿಸಿದನು. ಅವನ ಜತೆ ದಾಸರು ನಡೆ
ದವುಗಳನ್ನು ನೋಡಿ, ಬಹಳ ದುಃಖ ಪಟ್ಟು, ಬಂದು, ನಡೆದವು
೩೨ ಗಳನ್ನೆಲ್ಲಾ ತಮ್ಮ ಯಜಮಾನನಿಗೆ ತಿಳಿಸಿದರು. ಆಗಲವನ ಯ
ಜಮಾನನು ಅವನನ್ನು ಕರಿಸಿ, ಅವನಿಗೆ, ಕೆಟ್ಟ ದಾಸನೇ, ನೀನು
ನನ್ನನ್ನು ಬೇಡಿ ಕೊಂಡ ಕಾರಣ ಆ ಸಾಲವನ್ನೆಲ್ಲಾ ನಿನಗೆ ಬಿಟ್ಟೆ
೩೩ ನು; ನಾನು ನಿನ್ನನ್ನು ಕರುಣಿಸಿದ ಪ್ರಕಾರ ನೀನು ಸಹ ನಿನ್ನ
೩೪ ಜತೆ ದಾಸನನ್ನು ಕರುಣಿಸ ಬೇಕಾಗಿತ್ತಲ್ಲವೋ? ಅಂದನು. ಮತ್ತು
ಅವನ ಯಜಮಾನನು ಕೋಪ ಪಾತಿ, ತನಗೆ ಕೊಡ ಬೇಕಾದ
ದ್ದನ್ನೆಲ್ಲಾ ಕೊಡುವ ಪರ್ಯಂತರ, ಪೀಡಿಸುವವರಿಗೆ ಅವನನ್ನು
೩೫ ಒಪ್ಪಿಸಿದನು. ಈ ಪ್ರಕಾರ, ನಿಮ್ಮಲ್ಲಿ ಒಬ್ಬೊಬ್ಬನು ತನ್ನ ಸಹೋ
ದರನಿಗೆ ಅವನ ತಪ್ಪುಗಳನ್ನು ಮನಃಪೂರ್ವಕವಾಗಿ ಮನ್ನಿಸದಿ
ದ್ದರೆ, ಪರಲೋಕದಲ್ಲಿರುವ ನನ್ನ ತಂದೆಯು ನಿಮಗೆ ಹಾಗೆಯೇ
ಮಾಡುವನು, ಅಂದನು.

## ೧೯. ಸಂಧಿ.

೧ ಯೇಸು ಈ ವಾಕ್ಯಗಳನ್ನು ಮುಗಿಸಿದ ಮೇಲೆ ಅದದ್ದೇನಂದ
ರೆ, ಗಲಿಲಾಯವನ್ನು ಬಿಟ್ಟು, ಯೆಹೂದದ ಪ್ರಾಂತ್ಯಗಳಿಗೆ
೨ ಯೊರ್ದನಿನ ಆಚೆಗೆ ಹೋದನು. ಮತ್ತು ಬಹು ಸಮೂಹಗ
ಳು ಅವನನ್ನು ಹಿಂಬಾಲಿಸಿದವು. ಅಲ್ಲಿ ಅವರನ್ನು ಸ್ವಸ್ಥ ಮಾಡಿ
ದನು.

3 ಆಗ ಫರಿಸಾಯರು ಅವನ ಬಳಿಗೆ ಬಂದು, ಅವನನ್ನು ಶೋ
ಧಿಸಿ, ಒಬ್ಬ ಮನುಷ್ಯನು ತನ್ನ ಹೆಂಡತಿಯನ್ನು ಯಾವ ಕಾ
ರಣದಿಂದಲಾದರೂ ಬಿಟ್ಟು ಬಿಡ ಬಹುದೋ? ಎಂದು ಕೇಳಿದಾಗ;
೪ ಅವನು ಅವರಿಗೆ ಪ್ರತ್ಯುತ್ತರವಾಗಿ, ಆದಿಯಲ್ಲಿ ನಿರ್ಮಿಸಿದವನು
೫ ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು. ಇದಕ್ಕೋಸ್ಕರ
ಮನುಷ್ಯನು ತಂದೆ ತಾಯಿಗಳನ್ನು ಬಿಟ್ಟು, ತನ್ನ ಹೆಂಡತಿಯ
ನ್ನು ಕೂಡಿ ಕೊಳ್ಳುವನು; ಅವರಿಬ್ಬರು ಒಂದೇ ಮಾಂಸವಾಗಿರು
೬ ವರೆಂದು, ಹೇಳದನೆಂಬವಾಗಿ ನೀವು ಓದಲಿಲ್ಲವೋ? ಆದದರಿಂದ
ಇನ್ನು ಇಬ್ಬರಲ್ಲ, ಒಂದೇ ಮಾಂಸವಾಗಿದ್ದಾರೆ. ಹಾಗಾದರೆ ದೇವ
ರು ಕೂಡಿಸಿದ್ದನ್ನು ಮನುಷ್ಯನು ಅಗಲಿಸದೆ ಇರಲಿ, ಅಂದನು.

೭ ಅವರು ಅವನಿಗೆ, ಹೀಗಿದ್ದರೆ, ತ್ಯಾಗಪತ್ರವನ್ನು ಕೊಟ್ಟು, ಅವ
ಳನ್ನು ಬಿಟ್ಟು ಬಿಡೆಂದು, ಮೊಸೆಯು ಯಾಕೆ ಅಪ್ಪಣೆ ಕೊಟ್ಟ
೮ ನು! ಅನ್ನಲು; ಅವನು ಅವರಿಗೆ, ಮೊಸೆಯು ನಿಮ್ಮ ಹೃದಯ
ದ ಕಾಠಿಣ್ಯದ ನಿಮಿತ್ತ ನಿಮ್ಮ ಹೆಂಡತಿಯರನ್ನು ಬಿಟ್ಟು ಬಿಡ
ನಿಮಗೆ ಅಪ್ಪಣೆ ಕೊಟ್ಟನು; ಆದರೆ ಆದಿಯಿಂದ ಹಾಗೆ ಇರಲಿ
೯ ಲ್ಲ. ಮತ್ತು ನಿಮಗೆ ಹೇಳುತ್ತೇನೆ, ಯಾವನಾದರೂ ಜಾರತ್ವ
ಕಾರಣವಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು, ಬೇರೊಬ್ಬಳನ್ನು
ಮದುವೆ ಮಾಡಿ ಕೊಂಡರೆ, ವ್ಯಭಿಚಾರ ಮಾಡುತ್ತಾನೆ; ಮತ್ತು
ಬಿಡಲ್ಪಟ್ಟವಳನ್ನು ಮದುವೆ ಮಾಡಿ ಕೊಳ್ಳುವವನು ವ್ಯಭಿಚಾ
೧೦ ರ ಮಾಡುತ್ತಾನೆ, ಅಂದನು. ಅವನ ಶಿಷ್ಯರು ಅವನಿಗೆ, ಹೆಂಡತಿ
ಯ ವಿಷಯ ಮನುಷ್ಯನ ತಾತ್ಪರ್ಯವು ಹೀಗಿದ್ದರೆ, ಮದು
೧೧ ವೆ ಮಾಡಿ ಕೊಳ್ಳುವದು ಬಳ್ಳೀದಲ್ಲ, ಅನ್ನಲು; ಅವನು ಅವರಿಗೆ,
ಯಾರಿಗೆ ಕೊಡಲ್ಪಟ್ಟಿದೆಯೋ, ಅವರೇ ಹೊರ್ತು ಎಲ್ಲರು
೧೨ ಈ ಮಾತು ಗ್ರಹಿಸುವದಿಲ್ಲ. ಯಾಕಂದರೆ ತಾಯಿಯ ಗರ್ಭ
ದಿಂದಲೇ ಹುಟ್ಟಿದ ನಪುಂಸಕರು ಇದ್ದಾರೆ; ಮತ್ತು ಮನುಷ್ಯರು
ಮಾಡಿದ ನಪುಂಸಕರು ಇದ್ದಾರೆ; ಮತ್ತು ಪರಲೋಕ ರಾಜ್ಯ
ಕ್ಕೋಸ್ಕರ ತಮ್ಮನ್ನು ತಾವೇ ಮಾಡಿ ಕೊಂಡ ನಪುಂಸಕರು
ಇದ್ದಾರೆ. ಗ್ರಹಿಸ ಬಲ್ಲವನು ಗ್ರಹಿಸಲಿ, ಅಂದನು.

೧೩ ಆಗ, ಅವನು ಕೈಗಳನ್ನು ಅವುಗಳ ಮೇಲೆ ಇಟ್ಟು, ಪ್ರಾರ್ಥಿಸು
ವ ಹಾಗೆ, ಕೂಸುಗಳನ್ನು ಅವನ ಬಳಿಗೆ ತಂದರು. ಆದರೆ ಶಿಷ್ಯ
ರು ಅವರನ್ನು ಗದರಿಸಿದರು. ಆದರೆ ಯೇಸು, ಕೂಸುಗಳನ್ನು
೧೪ ಬಿಡಿರಿ, ನನ್ನ ಬಳಿಗೆ ಬರುವದಕ್ಕೆ ಅವುಗಳನ್ನು ಅಡ್ಡಿ ಮಾಡ ಬೇ
ಡಿರಿ; ಯಾಕಂದರೆ ಪರಲೋಕ ರಾಜ್ಯವು ಇಂಥವರದಾಗಿದೆ,
೧೫ ಎಂದು ಹೇಳಿ, ಅವುಗಳ ಮೇಲೆ ತನ್ನ ಕೈಗಳನ್ನಿಟ್ಟು, ಅಲ್ಲಿಂದ
ಹೊರಟನು.



೧೬ ಮತ್ತು, ಇಗೋ, ಒಬ್ಬನು ಹತ್ತರ ಬಂದು, ಅವನಿಗೆ, ಬಳ್ಳೆ
ಭೋಧಕನೇ, ನಾನು ನಿತ್ಯ ಜೀವವನ್ನು ಹೊಂದುವ ಹಾಗೆ,
೧೭ ಬಳ್ಳೇದೇನು ಮಾಡ ಬೇಕು! ಅಂದನು. ಅವನು ಅವನಿಗೆ, ನನ್ನ
ನ್ನು ಬಳ್ಳೆಯವನೆಂದು, ಹೇಳುವದೇನು! ದೇವರೊಬ್ಬನೇ ಹೊ
ರ್ತು ಬಳ್ಳೆಯವನು ಯಾವನೂ ಇಲ್ಲ. ಆದರೆ ಜೀವದಲ್ಲಿ
ಪ್ರವೇಶಿಸ ಬೇಕಾದರೆ, ಕಟ್ಟಳೆಗಳನ್ನು ಕೈಕೊಳ್ಳು, ಅಂದನು.
೧೮ ಅವನು ಅವನಿಗೆ, ಯಾವವುಗಳನ್ನು! ಅನ್ನಲು; ಯೇಸು, ಕೊ
ಲ್ಲ ಬೇಡ, ವ್ಯಭಿಚಾರ ಮಾಡ ಬೇಡ; ಕದಿಯ ಬೇಡ; ಅಪಸಾ
೧೯ ಕ್ಷಿ ಹೇಳ ಬೇಡ; ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು;
ನಿನ್ನ ಸಿರೆಯವನನ್ನು ನಿನ್ನ ಹಾಗೆಯೆ ಪ್ರೀತಿ ಮಾಡು, ಎಂಬ
೨೦ ವುಗಳನ್ನೇನೋ, ಅಂದನು. ಯೌವನಸ್ಥನು ಅವನಿಗೆ, ಇವುಗಳನ್ನಿ
ಲ್ಲಾ ನನ್ನ ಬಾಲ್ಯದಿಂದ ಕೈಕೊಂಡಿದ್ದೇನೆ; ನನಗೆ ಇನ್ನು ಏನು
೨೧ ಕಡಿಮೆ! ಅಂದಾಗ; ಯೇಸು ಅವನಿಗೆ, ನೀನು ಸಂಪೂರ್ಣನಾಗ
ಬೇಕಾದರೆ, ಹೋಗಿ, ನಿನಗಿರುವವುಗಳನ್ನು ಮಾರಿ ಬಿಟ್ಟು, ಬಡ
ವರಿಗೆ ಕೊಡು; ಆಗ ಪರಲೋಕದಲ್ಲಿ ನಿನಗೆ ದ್ರವ್ಯವಿರುವದು;
೨೨ ಮತ್ತು ಬಂದು, ನನ್ನನ್ನು ಹಿಂಬಾಲಿಸು, ಅಂದನು. ಯೌವನ
ಸ್ಥನು ಈ ಮಾತನ್ನು ಕೇಳಿದಾಗ, ದುಃಖ ಪಟ್ಟು, ಹೋದನು;
ಯಾಕಂದರೆ ಅವನಿಗೆ ಬಹಳ ಆಸ್ತಿ ಇತ್ತು.

೨೩ ಆಗ ಯೇಸು ತನ್ನ ಶಿಷ್ಯರಿಗೆ, ನಿಶ್ಚಯವಾಗಿ ನಿಮಗೆ ಹೇಳು
ತ್ತೇನೆ, ಐಶ್ವರ್ಯವಂತನು ಪರಲೋಕ ರಾಜ್ಯದಲ್ಲಿ ಪ್ರವೇಶಿಸು
೨೪ ವದು ಕಷ್ಟ; ಮತ್ತು ನಿಮಗೆ ಹೇಳುತ್ತೇನೆ, ಐಶ್ವರ್ಯವಂತನು
ದೇವರ ರಾಜ್ಯದಲ್ಲಿ ಪ್ರವೇಶಿಸುವದಕ್ಕಿಂತ ಒಂಟೆಯು ಸೂಜಿ
೨೫ ಯ ಬೆಜ್ಜದಲ್ಲಿ ತೂರುವದು ಸುಲಭ, ಅಂದನು. ಅವನ ಶಿಷ್ಯರು
ಇದನ್ನು ಕೇಳಿ, ಹೀಗಿದ್ದರೆ ಯಾವನು ರಕ್ಷಿಸಲ್ಪಡ ಬಹುದೆಂದು,
೨೬ ಬಹು ಭ್ರಮೆ ಗೊಂಡರು. ಯೇಸು ಅವರನ್ನು ನೋಡಿ, ಅವರಿಗೆ,
ಇದು ಮನುಷ್ಯರಿಗೆ ಅಸಾಧ್ಯವಾದದ್ದು; ಆದರೆ ದೇವರಿಗೆ ಎಲ್ಲಾ
ಸಾಧ್ಯವಾದದ್ದು, ಅಂದನು.

೨೭ ಆಗ ಪೇತ್ರನು ಪ್ರತ್ಯುತ್ತರವಾಗಿ ಅವನಿಗೆ, ಇಗೋ, ನಾವು
ಎಲ್ಲಾ ಬಿಟ್ಟು, ನಿನ್ನನ್ನು ಹಿಂಬಾಲಿಸಿದೆವು; ನಮಗೆ ಏನು ಆಗು
೨೮ ವದು! ಅನ್ನಲಾಗಿ, ಯೇಸು ಅವರಿಗೆ ಹೇಳಿದ್ದೇನಂದರೆ, ನಿಶ್ಚಯ
ವಾಗಿ ನಿಮಗೆ ಹೇಳುತ್ತೇನೆ, ನನ್ನನ್ನು ಹಿಂಬಾಲಿಸಿದವರಾದ ನೀವು
ಪುನರ್ಜನ್ಮದಲ್ಲಿ ಮನುಷ್ಯನ ಮಗನು ತನ್ನ ಮಹಿಮೆಯ ಸಿಂ
ಹಾಸನದಲ್ಲಿ ಕೂತು ಕೊಳ್ಳುವಾಗ, ನೀವು ಸಹ ಹನ್ನೆರಡು ಸಿಂಹಾ
ಸನಗಳ ಮೇಲೆ ಕೂತು ಕೊಂಡು, ಇಸ್ರಯೇಲಿನ ಹನ್ನೆರಡು
೨೯ ಕುಲಗಳಿಗೆ ನ್ಯಾಯತೀರಿಸುವಿರಿ. ಮತ್ತು ನನ್ನ ಹೆಸರಿನ ನಿಮಿತ್ತ
ಮನೆಗಳನ್ನಾದರೂ, ಸಹೋದರರನ್ನಾದರೂ, ಸಹೋದರಿಗಳ
ನ್ನಾದರೂ, ತಂದೆಯನ್ನಾದರೂ, ತಾಯಿಯನ್ನಾದರೂ, ಹೆಂ
ಡತಿಯನ್ನಾದರೂ, ಮಕ್ಕಳನ್ನಾದರೂ, ಹೊಲಗಳನ್ನಾದರೂ,
ಬಿಟ್ಟವನ್ನಾವನೋ, ಅವನು ನೂರಪ್ಪಟ್ಟು ಹೊಂದಿ, ನಿತ್ಯ ಜೀವ
ವನ್ನು ಸಹ ಬಾಧ್ಯವಾಗಿ ಹೊಂದುವನು.

೩೦ ಆದರೆ ಮೊದಲಿನವರಾದ ಅನೇಕರು ಕಡೆಯವರಾಗಿಯೂ,
ಕಡೆಯವರು ಮೊದಲಿನವರಾಗಿಯೂ, ಇರುವರು.

## ೨೦. ಸಂಧಿ.

೧ ಯಾಕಂದರೆ ಪರಲೋಕ ರಾಜ್ಯವು ತನ್ನ ದ್ರಾಕ್ಷೇ ತೋಟ
ಕ್ಕೆ ಕೂಲಿ ಆಳುಗಳನ್ನು ಕರೆಯುವದಕ್ಕೆ ಬೆಳಗ್ಗೆ ಹೊರಟ
೨ ಮನೇ ಯಜಮಾನನಿಗೆ ಸಮಾನವಾಗಿದೆ. ಆಳುಗಳ ಸಂಗಡ ದಿವ
ಸಕ್ಕೆ ಒಂದು ಹಣದ ಮೇರೆಗೆ ಒಡಂಬಟ್ಟು, ಅವರನ್ನು ತನ್ನ ದ್ರಾ
3 ಕ್ಷೇ ತೋಟಕ್ಕೆ ಕಳುಹಿಸಿದನು. ಮತ್ತು ಹೆಚ್ಚು ಕಡಿಮೆ ಮೂರ
ನೇ ತಾಸಿನಲ್ಲಿ ಹೊರಟು ಹೋಗಿ, ಅಂಗಡಿ ಬೀದಿಯಲ್ಲಿ ಸುಮ್ಮ
೪ ನೇ ನಿಂತಿರುವ ಮತ್ತೊಬ್ಬರನ್ನು ಕಂಡು, ಅವರಿಗೆ, ನೀವು ಸಹ
ದ್ರಾಕ್ಷೇ ತೋಟಕ್ಕೆ ಹೋಗಿರಿ; ನ್ಯಾಯವಾದದ್ದನ್ನು ನಿಮಗೆ
೫ ಕೊಡುವೆನು, ಅಂದನು. ಅವರೂ ಹೋದರು. ಮತ್ತು ಆಕನೇ
ಒಂಭತ್ತನೇ ತಾಸುಗಳಲ್ಲಿ ಹೊರಟು, ಅದೇ ಪ್ರಕಾರ ಮಾಡಿದನು.
೬ ಮತ್ತು ಹೆಚ್ಚು ಕಡಿಮೆ ಹನ್ನೊಂದನೇ ತಾಸಿನಲ್ಲಿ ಹೊರಟು ಹೋ
ಗಿ, ಸುಮ್ಮನೆ ನಿಂತಿರುವ ಮತ್ತೊಬ್ಬರನ್ನು ಕಂಡು, ಅವರಿಗೆ, ದಿನ
೭ ವೆಲ್ಲಾ ಇಲ್ಲಿ ಸುಮ್ಮನೆ ನಿಂತುಕೊಳ್ಳುವದೇನು! ಅಂದನು. ಅವರು
ಅವನಿಗೆ, ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ, ಅನ್ನಲು;
ಅವರಿಗೆ, ನೀವು ಸಹ ದ್ರಾಕ್ಷೇ ತೋಟಕ್ಕೆ ಹೋಗಿರಿ; ನ್ಯಾಯವಾ
ದದ್ದನ್ನು ಹೊಂದುವಿರಿ, ಅಂದನು.

೮ ಸಾಯಂಕಾಲವಾದಾಗ, ದ್ರಾಕ್ಷೇ ತೋಟದ ಯಜಮಾನನು
ತನ್ನ ಉಗ್ರಾಣೀತನಿಗೆ, ಆಳುಗಳನ್ನು ಕರೆದು, ಕಡೆಯವರಿಂದ
ಆರಂಭ ಮಾಡಿ, ಮೊದಲನೆಯವರ ಮಟ್ಟಿಗೂ ಅವರಿಗೆ ಕೂಲಿ
೯ ಕೊಡು, ಅಂದನು. ಆಗ ಹೆಚ್ಚು ಕಡಿಮೆ ಹನ್ನೊಂದನೇ ತಾಸಿನ
೧೦ ವರು ಬಂದು, ಒಂದೊಂದು ಹಣವನ್ನು ಹೊಂದಿದರು. ಮತ್ತು
ಮೊದಲನೆಯವರು ಬಂದು, ಹೆಚ್ಚಾಗಿ ಹೊಂದುವೆವೆಂದು, ನೆನಸಿ
ದರು. ಆದರೆ ಅವರು ಸಹ ಒಂದೊಂದು ಹಣವನ್ನು ಹೊಂದಿ
೧೧ ದರು. ಹೊಂದಿದಾಗ, ಕಡೆಯವರಾದ ಇವರು ಒಂದು ತಾಸು
ಕೆಲಸ ಮಾಡಿದ್ದಾರೆ; ಆದರೆ ದಿವಸದ ಭಾರವನ್ನೂ, ಬಿಸಿಲನ್ನೂ,
೧೨ ತಾಳಿದ ನಮಗೆ ಅವರನ್ನು ಸಮಾನ ಮಾಡಿದ್ದೀ ಎಂದು, ಮನೇ
೧೩ ಯಜಮಾನನ ಮೇಲೆ ಗುಣುಗುಟ್ಟಿದರು. ಅವನು ಪ್ರತ್ಯುತ್ತರ
ವಾಗಿ ಅವರಲ್ಲಿ ಒಬ್ಬನಿಗೆ, ಸ್ನೇಹಿತನೇ, ನಾನು ನಿನಗೆ ಅನ್ಯಾ
ಯ ಮಾಡಲಿಲ್ಲ; ನೀನು ಒಂದು ಹಣಕ್ಕೆ ನನ್ನ ಸಂಗಡ ಒಡಂ
೧೪ ಬಡಲಿಲ್ಲವೋ! ನಿನ್ನದನ್ನು ತಕ್ಕೊಂಡು ಹೋಗು; ನಿನಗೆ ಕೊಟ್ಟ
ಹಾಗೆ ಕಡೆಯವನಾದ ಇವನಿಗೆ ಕೊಡ ನನಗೆ ಮನಸ್ಸುಂಟು;
೧೫ ನನ್ನವುಗಳಿಂದ ನಾನು ಮನಸ್ಸು ಬಂದ ಹಾಗೆ ಮಾಡ ಬಾರದೋ!
ನಾನು ಬಳ್ಳೆಯವನಾದದರಿಂದ, ನಿನ್ನ ಕಣ್ಣು ಕೆಟ್ಟದ್ದಾಗಿದೆ
೧೬ ಯೋ! ಅಂದನು. ಈ ಪ್ರಕಾರ ಕಡೆಯವರು ಮೊದಲಿನವರಾಗಿ
ಯೂ, ಮೊದಲಿನವರು ಕಡೆಯವರಾಗಿಯೂ, ಇರುವರು;
ಯಾಕಂದರೆ ಕರೆಯಲ್ಪಟ್ಟವರು ಅನೇಕರು, ಆಯಲ್ಪಟ್ಟವರು
ಕೆಲವರೇ.

೧೭ ಆಗ ಯೇಸು ಯೆರೂಸಲೇಮಿಗೆ ಏರಿ ಹೋಗುವಾಗ, ಮಾ
ರ್ಗದಲ್ಲಿ ಹನ್ನೆರಡು ಶಿಷ್ಯರನ್ನು ಏಕಾಂತ ಸ್ಥಳಕ್ಕೆ ಕರಕೊಂಡು
೧೮ ಹೋಗಿ, ಅವರಿಗೆ, ಇಗೋ, ಯೆರೂಸಲೇಮಿಗೆ ಏರಿ ಹೋಗುತ್ತೇ
ವೆ; ಮತ್ತು ಮನುಷ್ಯನ ಮಗನು ಪ್ರಧಾನ ಯಾಜಕರಿಗೂ,
ಶಾಸ್ತ್ರಿಗಳಿಗೂ, ಒಪ್ಪಿಸಲ್ಪಡುವನು; ಅವರು ಅವನನ್ನು ಮರ
ಣಕ್ಕೆ ನಿರ್ಣಯಿಸಿ, ಹಾಸ್ಯ ಮಾಡುವದಕ್ಕೂ, ಹೊಡೆಯುವ
೧೯ ದಕ್ಕೂ, ಶಿಲುಬೆಗೆ ಹಾಕುವದಕ್ಕೂ, ಅವನನ್ನು ಜನಾಂಗಗಳಿಗೆ
ಒಪ್ಪಿಸುವರು; ಮತ್ತು ಮೂರನೇ ದಿವಸದಲ್ಲಿ ಏಳುವನು, ಅಂ
ದನು.

೨೬ ಆಗ ಜಬೆದಾಯನ ಮಕ್ಕಳ ತಾಯಿಯು ತನ್ನ ಮಕ್ಕಳ
ಸಂಗಡ ಬಂದು, ನಮಸ್ಕರಿಸಿ, ಅವನಿಗೆ ಬಿನ್ನಪ ಮಾಡಿದಳು.
೨೧ ಅದನು ಅವಳಿಗೆ, ಏನು ಬೇಕು! ಅನ್ನಲು ಅವಳು ಅವನಿಗೆ, ಈ
ನನ್ನ ಇಬ್ಬರು ಮಕ್ಕಳಲ್ಲಿ, ಒಬ್ಬನು ನಿನ್ನ ಬಲ ಪಾರ್ಶ್ವದಲ್ಲಿ,
ಒಬ್ಬನು ಎಡ ಪಾರ್ಶ್ವದಲ್ಲಿ, ನಿನ್ನ ರಾಜ್ಯದಲ್ಲಿ ಕೂತ್ತುವ ಹಾಗೆ
೨೨ ಅಪ್ಪಣೆ ಕೊಡು, ಅಂದಳು. ಆದರೆ ಯೇಸು ಪ್ರತ್ಯುತ್ತರವಾಗಿ,
ನೀವು ಬೇಡಿ ಕೊಳ್ಳುವದೇನೆಂದು, ನಿಮಗೆ ತಿಳಿಯದು; ನಾನು
ಕುಡಿಯ ಬೇಕಾಗಿರುವ ಪಾತ್ರೆಯಲ್ಲಿ ಕುಡಿಯುವದೂ, ನಾನು
ಹೊಂದುವ ಸ್ನಾನವನ್ನು ಹೊಂದುವದೂ, ನಿಮ್ಮಿಂದ ಆಗುವ
೨೩ ದೋ! ಅಂದಾಗ; ಅವನಿಗೆ, ಆಗುವದು ಅಂದರು. ಆಗಲವನ
ಅವರಿಗೆ ಹೇಳಿದ್ದು, ನನ್ನ ಪಾತ್ರೆಯಲ್ಲಿ ಕುಡಿಯುವಿರಿ; ಮತ್ತು
ನಾನು ಹೊಂದುವ ಸ್ನಾನವನ್ನು ಹೊಂದುವಿರಿ, ಸರಿ; ಆದರೆ
ನನ್ನ ಎಡ ಬಲ ಪಾರ್ಶ್ವಗಳಲ್ಲಿ ಕೂತ್ತುವದನ್ನು ನನ್ನ ತಂದೆ
ಯಿಂದ ಯಾರಿಗೆ ಸಿದ್ಧ ಮಾಡಲ್ಪಟ್ಟಿದೆಯೋ, ಅವರಿಗೆ ಹೊ
ರ್ತು, ಕೊಡುವದಕ್ಕೆ ನನಗೆ ಅಧಿಕಾರವಿಲ್ಲ.
೨೪ ಹತ್ತು ಮಂದಿ ಶಿಷ್ಯರು ಇದನ್ನು ಕೇಳಿ, ಆ ಇಬ್ಬರು ಸಹೋ
೨೫ ದರರ ಮೇಲೆ ಕೋಪಿಸಿ ಕೊಂಡರು. ಆದರೆ ಯೇಸು ಅವರನ್ನು
ಹತ್ತರ ಕರೆದು, ಜನಾಂಗಗಳ ಅಧಿಪತಿಗಳು ಅವರ ಮೇಲೆ ಘೊರೆ
ತನ ಮಾಡುತ್ತಾರೆ; ದೊಡ್ಡವರು ಅವರ ಮೇಲೆ ಅಧಿಕಾರ ನಡಿಸು
೨೬ ತ್ತಾರೆಂದು, ಬಲ್ಲಿರಿ. ಹೀಗೆ ನಿಮ್ಮಲ್ಲಿ ಇರ ಬಾರದು. ಆದರೆ
ನಿಮ್ಮಲ್ಲಿ ದೊಡ್ಡವನಾಗಿರ ಬೇಕೆಂಬವನು ನಿಮ್ಮ ಸೇವಕನಾಗಿರಲಿ.
೨೭ ನಿಮ್ಮಲ್ಲಿ ಮೊದಲಿನವನಾಗಿರ ಬೇಕೆಂಬವನು ನಿಮ್ಮ ದಾಸನಾಗಿ
೨೮ ರಲಿ. ಹಾಗೆಯೇ ಮನುಷ್ಯನ ಮಗನು ಸೇವಿಸಲ್ಪಡುವದಕ್ಕಲ್ಲ,
ಸೇವೆ ಮಾಡುವದಕ್ಕೂ, ತನ್ನ ಪ್ರಾಣವನ್ನು ಅನೇಕರಿಗೋಸ್ಕರ
ವಿಮೋಚನೆ ಬಲಿಯಾಗಿ ಕೊಡುವದಕ್ಕೂ, ಬಂದನು.
೨೯ ಮತ್ತು ಅವರು ಯೆರಿಕೋವಿನಿಂದ ಹೊರಟು ಹೋಗುವಾಗ,
೩೦ ಬಹು ಸಮೂಹವು ಅವನನ್ನು ಹಿಂಬಾಲಿಸಿತು. ಆಗ, ಇಗೋ,
ದಾರಿಯ ಬಳಿಯಲ್ಲಿ ಕೂತು ಕೊಂಡಿರುವ ಇಬ್ಬರು ಕುರುಡರು,
ಯೇಸು ಹಾದು ಹೋಗುತ್ತಾನೆಂದು ಕೇಳಿ, ದಾವೀದನ ಮಗನಾದ
೩೧ ಕರ್ತನೇ, ನಮ್ಮನ್ನು ಕರುಣಿಸು ಎಂದು, ಕೂಗಿದರು. ಸಮೂ
ಹವು, ಸುಮ್ಮನಿರಿ ಎಂದು ಅವರನ್ನು ಗದರಿಸಿದಾಗ, ಅವರು
ಇನ್ನು ಘಟ್ಟಿಯಾಗಿ, ದಾವೀದನ ಮಗನಾದ ಕರ್ತನೇ, ನಮ್ಮ
೩೨ ನ್ನು ಕರುಣಿಸು ಎಂದು, ಕೂಗಿದರು. ಆಗ ಯೇಸು ನಿಂತು,
ಅವರನ್ನು ಕರೆದು, ನಾನು ನಿಮಗೆ ಏನು ಮಾಡ ಬೇಕು! ಅಂದಾಗ,
೩೩ ಅವರು ಅವನಿಗೆ, ಕರ್ತನೇ, ನಮ್ಮ ಕಣ್ಣುಗಳು ತೆರೆಯುವ
೩೪ ಹಾಗೆ ಮಾಡ ಬೇಕು, ಅಂದರು. ಆಗ ಯೇಸು ಅಂತ್ಯಕರಣ
ಪಟ್ಟು, ಅವರ ಕಣ್ಣುಗಳನ್ನು ಮುಟ್ಟಿದನು. ಸಂಗಡಲೇ ಅವರ
ಕಣ್ಣುಗಳಿಗೆ ದೃಷ್ಟಿ ಉಂಟಾಗಿ, ಅವನನ್ನು ಹಿಂಬಾಲಿಸಿದರು.

## ೨೧. ಸಂಧಿ.

೧ ಅವರು ಯೆರೂಸಲೇಮಿಗೆ ಸಮೀಪಿಸಿ, ಬೇತ್ಫಗೆಗೆ, ಇಚ್ಛೇ
ಗುಡ್ಡಕ್ಕೆ, ಬಂದಾಗ, ಯೇಸು ಇಬ್ಬರು ಶಿಷ್ಯರನ್ನು ಕಳುಹಿಸಿ,
೨ ಅವರಿಗೆ ಹೇಳಿದ್ದೇನಂದರೆ, ನಿಮ್ಮೆದುರಾಗಿರುವ ಗ್ರಾಮಕ್ಕೆ ಹೋ
ಗಿರಿ; ಸಂಗಡಲೇ ಕಟ್ಟಿರುವ ಕತ್ತೆಯನ್ನೂ, ಅದರ ಸಂಗಡ ಮರಿ
೩ ಯನ್ನೂ, ಕಾಣುವಿರಿ; ಬಿಚ್ಚಿ, ನನಗೆ ತನ್ನಿರಿ; ಯಾವನಾದರೂ
ನಿಮಗೆ ಏನಾದರೂ ಹೇಳಿದರೆ, ಅವು ಕರ್ತನಿಗೆ ಬೇಕು, ಅನ್ನಿರಿ;
೪ ಸಂಗಡಲೇ ಅವುಗಳನ್ನು ಕಳುಹಿಸುವನು. ಪ್ರವಾದಿಯಿಂದ ಹೇಳ
೫ ಲ್ಪಟ್ಟದ್ದು ಈಡೇರುವ ಹಾಗೆ, ಇದೆಲ್ಲಾ ಉಂಟಾಯಿತು. ಅದೇ
ನಂದರೆ, ಇಗೋ, ನಿನ್ನ ಅರಸನು ಶಾಂತನಾಗಿಯೂ, ಕತ್ತೆ
ಯನ್ನೂ ಕತ್ತೆಯ ಮರಿಯನ್ನೂ ಏರಿದವನಾಗಿಯೂ, ನಿನ್ನ
ಬಳಿಗೆ ಬರುತ್ತಾನೆಂದು, ಚಿಯೋನಿನ ಮಗಳಿಗೆ ಹೇಳಿರಿ.
೬ ಆಗ ಶಿಷ್ಯರು ಹೋಗಿ, ಯೇಸು ಅವರಿಗೆ ಆಜ್ಞಾಪಿಸಿದ ಪ್ರಕಾ
೭ ರ ಮಾಡಿ, ಕತ್ತೆಯನ್ನೂ ಮರಿಯನ್ನೂ ತಂದು, ತಮ್ಮ ವಸ್ತ್ರ
ಗಳನ್ನು ಅವುಗಳ ಮೇಲೆ ಇಟ್ಟರು; ಅವನು ಅವುಗಳ ಮೇಲೆ
೮ ಕೂತು ಕೊಂಡನು. ಆಗ ಬಹು ಸಮೂಹವು ತಮ್ಮ ವಸ್ತ್ರಗ
ಳನ್ನು ದಾರಿಯಲ್ಲಿ ಹಾಸಿದರು. ಬೇರೊಬ್ಬರು ಮರಗಳಿಂದ
೯ ಕೊಂಬೆಗಳನ್ನು ಕೊಯಿದು, ದಾರಿಯಲ್ಲಿ ಹಾಕಿದರು. ಮುಂದೆ
ಯೂ ಹಿಂದೆಯೂ ಹೋಗುವ ಸಮೂಹಗಳು, ದಾವೀದನ ಮಗ
ನಿಗೆ ಹೊಸನ್ನ! ಕರ್ತನ ಹೆಸರಿನಲ್ಲಿ ಬರುವವನಿಗೆ ಸ್ತೋತ್ರವಾಗ
ಲಿ! ಅತ್ಯುನ್ನತಸ್ಥವುಗಳಲ್ಲಿ ಹೊಸನ್ನ! ಎಂದು, ಕೂಗಿದರು.
೧೦ ಮತ್ತು ಅವನು ಯೆರೂಸಲೇಮನ್ನು ಪ್ರವೇಶಿಸಿದಾಗ, ಇವ
೧೧ ನ್ಯಾಕೆಂದು ಹೇಳಿ, ಪಟ್ಟಣವೆಲ್ಲಾ ಕದಲಿತು. ಆಗ ಸಮೂಹ
ಗಳು, ಇವನು ಗಲಿಲಾಯದ ನಜರೇತಿನವನಾದ ಪ್ರವಾದಿಯಾದ
ಯೇಸು, ಅಂದರು.
೧೨ ಆಗ ಯೇಸು ದೇವರ ಮಂದಿರದಲ್ಲಿ ಪ್ರವೇಶಿಸಿ, ದೇವಾಲಯ
ದಲ್ಲಿ ಕ್ರಯ ವಿಕ್ರಯ ಮಾಡುವವರನ್ನೆಲ್ಲಾ ಹೊರಗೆ ಹಾಕಿ, ಚಿನಿ
ವಾರರ ಮೇಜಿಗಳನ್ನೂ ಪಾರಿವಾಳ ಮಾರುವವರ ಪೀಠಗಳನ್ನೂ
೧೩ ಕೆಡವಿ ಹಾಕಿ, ಅವರಿಗೆ, ನನ್ನ ಮನೆಯು ಪ್ರಾರ್ಥನೆಯ ಮನೆ
ಯೆಂತ ಕರೆಯಲ್ಪಡುವದೆಂದು, ಬರೆದಿದೆ; ಆದರೆ ನೀವು ಅದ
೧೪ ನ್ನು ಕಳ್ಳರ ಗವಿಯಾಗ ಮಾಡಿದ್ದೀರಿ, ಅಂದನು. ಮತ್ತು ಕುರು
ಡರೂ ಕುಂಟರೂ ದೇವಾಲಯದಲ್ಲಿ ಅವನ ಬಳಿಗೆ ಬರಲಾಗಿ, ಅವರ
೧೫ ನ್ನು ಸ್ವಸ್ಥ ಮಾಡಿದನು. ಆದರೆ ಪ್ರಧಾನ ಯಾಜಕರೂ, ಶಾಸ್ತ್ರಿ
ಗಳೂ, ಅವನು ನಡಿಸಿದ ಆಶ್ಚರ್ಯಗಳನ್ನೂ, ದಾವೀದನ ಮಗ
ನಿಗೆ ಹೊಸನ್ನ! ಎಂದು, ದೇವಾಲಯದಲ್ಲಿ ಕೂಗುವ ಮಕ್ಕ
೧೬ ಳನ್ನೂ, ನೋಡಿ, ಕೋಪಿಸಿ, ಇವರು ಹೇಳುವದನ್ನು ಕೇಳುತ್ತೀ
ಯೋ! ಎಂದು, ಅವನಿಗೆ ಹೇಳಿದರು. ಯೇಸು ಅವರಿಗೆ,
ಹೌದು; ಬಾಲಕರ ಮೊಲೆಕೂಸುಗಳ ಬಾಯಿಯೊಳಗಿಂದ
ಹೊಗಳಿಕೆಯನ್ನು ಸಿದ್ಧ ಮಾಡಿ ಕೊಂಡಿ, ಎಂಬುವದನ್ನು ನೀವು
೧೭ ಎಂದಾದರೂ ಓದಲಿಲ್ಲವೋ! ಎಂದು ಕೇಳಿ, ಅವರನ್ನು ಬಿಟ್ಟು,
ಪಟ್ಟಣದಿಂದ ಹೊರಟು, ಬೇತಾನ್ಯಕ್ಕೆ ಹೋಗಿ, ಅಲ್ಲಿ ಇರು
ಕೊಂಡನು.
೧೮ ಬೆಳಿಗ್ಗೆ ಪಟ್ಟಣಕ್ಕೆ ತಿರಿಗಿ ಬರುವಾಗ, ಹಸಿದಿದ್ದನು. ಆಗ ಮಾ
೧೯ ರ್ಗದಲ್ಲಿ ಒಂದು ಅಂಜೂರದ ಮರವನ್ನು ಕಂಡು, ಅದರ ಹತ್ತರ
ಬಂದು, ಅದರಲ್ಲಿ ಎಲೆಗಳೇ ಹೊರ್ತು ಮತ್ತೇನೂ ಕಾಣದೆ,
ಇನ್ನು ಮೇಲೆ ಎಂದೆಂದಿಗೂ ನಿನ್ನಲ್ಲಿ ಫಲವು ಆಗದಿರಲಿ ಎಂದು,
ಅದಕ್ಕೆ ಹೇಳಿದನು. ಸಂಗಡಲೇ ಆ ಅಂಜೂರದ ಮರವು ಬಣಗಿ
೨೦ ಹೋಯಿತು. ಶಿಷ್ಯರು ಅದನ್ನು ನೋಡಿ, ಆಶ್ಚರ್ಯ ಪಟ್ಟು,
ಈ ಅಂಜೂರದ ಮರವು ಎಷ್ಟು ಬೇಗ ಬಣಗಿ ಹೋಯಿತು!
೨೧ ಅಂದರು. ಯೇಸು ಅವರಿಗೆ ಪ್ರತ್ಯುತ್ತರವಾಗಿ, ನಿಶ್ಚಯವಾಗಿ
ನಿಮಗೆ ಹೇಳುತ್ತೇನೆ, ನೀವು ಸಂದೇಹ ಪಡದೆ, ವಿಶ್ವಾಸವುಳ್ಳವರಾ



ಗಿದ್ದರೆ, ಈ ಅಂಜೂರದ ಮರದಲ್ಲಿ ಆದದ್ದನ್ನು ಮಾಡುವದಲ್ಲ
ದೆ, ಎದ್ದು, ಸಮುದ್ರದಲ್ಲಿ ಬೀಳೆಂದು, ಈ ಪೆಟ್ಟಿಗೆಕ್ಕೆ ಹೇಳಿದರೂ,
೨೨ ಆಗುವದು. ಮತ್ತು ನೀವು ವಿಶ್ವಾಸದಿಂದ ಪ್ರಾರ್ಥನೆಯಲ್ಲಿ
ಬೇಡಿ ಕೊಳ್ಳುವದನ್ನೆಲ್ಲಾ ಹೊಂದುವಿರಿ, ಅಂದನು.
೨೩ ಮತ್ತು ಅವನು ದೇವಾಲಯಕ್ಕೆ ಬಂದು, ಬೋಧಿಸುವಾಗ,
ಪ್ರಧಾನ ಯಾಜಕರೂ ಜನರ ಹಿರಿಯರೂ ಅವನ ಬಳಿಗೆ ಬಂದು,
ಯಾವ ಅಧಿಕಾರದಿಂದ ಇವುಗಳನ್ನು ಮಾಡುತ್ತೀ! ಈ ಅಧಿಕಾರ
೨೪ ವನ್ನು ನಿನಗೆ ಕೊಟ್ಟವನ್ಯಾರು, ಅಂದರು. ಆದರೆ ಯೇಸು ಅವ
ರಿಗೆ ಪ್ರತ್ಯುತ್ತರವಾಗಿ, ನಾನು ಸಹ ಒಂದು ಮಾತು ನಿಮ್ಮನ್ನು
ಕೇಳುತ್ತೇನೆ; ಅದನ್ನು ನನಗೆ ಹೇಳಿದರೆ, ನಾನು ಸಹ ಯಾವ
ಅಧಿಕಾರದಿಂದ ಇವುಗಳನ್ನು ಮಾಡುತ್ತೇನೋ, ಅದನ್ನು ನಿಮಗೆ
೨೫ ಹೇಳುತ್ತೇನೆ. ಯೋಹಾನನ ಸ್ನಾನವು ಎಲ್ಲಿಂದ ಉಂಟಾಯಿತು!
ಪರಲೋಕದಿಂದಲೋ! ಮನುಷ್ಯರಿಂದಲೋ! ಅಂದನು. ಆ
ಗಲವರು, ನಾವು, ಪರಲೋಕದಿಂದ ಅಂದರೆ, ಹಾಗಾದರೆ ಯಾಕೆ
೨೬ ಅವನಲ್ಲಿ ವಿಶ್ವಾಸವಿಡಲಿಲ್ಲವೆಂದು, ನಮಗೆ ಹೇಳುವನು; ಮನುಷ್ಯ
ರಿಂದ ಅಂದರೆ, ಸಮೂಹಕ್ಕೆ ಭಯ ಪಡುತ್ತೇವೆ; ಯಾಕಂದರೆ,
ಎಲ್ಲರು ಯೋಹಾನನನ್ನು ಪ್ರವಾದಿ ಎಂದು ಎಣಿಸುತ್ತಾರೆಂಬದಾಗಿ,
೨೭ ತಮ್ಮೊಳಗೆ ಆಲೋಚಿಸಿ ಕೊಂಡು, ಯೇಸುವಿಗೆ ಪ್ರತ್ಯುತ್ತರ
ವಾಗಿ, ಅರಿಯೆವು, ಅಂದರು. ಅವನು ಅವರಿಗೆ, ನಾನು ಯಾವ
ಅಧಿಕಾರದಿಂದ ಇವುಗಳನ್ನು ಮಾಡುತ್ತೇನೋ, ಅದನ್ನು ನಿಮಗೆ
ಹೇಳುವದಿಲ್ಲ, ಅಂದನು.
೨೮ ಅದರೆ ನಿಮಗೆ ಹ್ಯಾಗೆ ತೋಚುತ್ತದೆ! ಒಬ್ಬ ಮನುಷ್ಯನಿಗೆ
ಇಬ್ಬರು ಮಕ್ಕಳಿದ್ದರು. ಅವರಲ್ಲಿ ಮೊದಲನೆಯವನ ಬಳಿಗೆ
ಬಂದು, ಮಗನೇ, ಹೋಗಿ, ಈ ಹೊತ್ತು ನನ್ನ ದ್ರಾಕ್ಷೇತೋಟ
೨೯ ದಲ್ಲಿ ಕೆಲಸ ಮಾಡು, ಅನ್ನಲು; ಅವನು, ಬಲ್ಲೆನೆಂದು ಉತ್ತರ
ಕೊಟ್ಟು, ತರುವಾಯ ಮಾನಸಾಂತರ ಪಟ್ಟು, ಹೋದನು.
೩೦ ಆ ಮೇಲೆ ಎರಡನೆಯವನ ಬಳಿಗೆ ಬಂದು, ಅದೇ ಪ್ರಕಾರ ಹೇಳಿ
ದನು. ಅವನು, ಹೋಗುತ್ತೇನೆಪ್ಪಾ ಎಂದು, ಉತ್ತರ ಕೊಟ್ಟು,
೩೧ ಹೋಗಲಿಲ್ಲ. ಈ ಇಬ್ಬರಲ್ಲಿ ಯಾವನು ತಂದೆಯ ಚಿತ್ತದ ಪ್ರ
ಕಾರ ಮಾಡಿದನು! ಅಂದನು. ಅವರು ಅವನಿಗೆ, ಮೊದಲನೆಯ
ವನೇ, ಅಂದಾಗ; ಯೇಸು ಅವರಿಗೆ, ನಿಶ್ಚಯವಾಗಿ ನಿಮಗೆ ಹೇ
ಳುತ್ತೇನೆ, ಸುಂಕದವರೂ ಸೂಳೆಯರೂ ನಿಮಗೆ ಮುಂಚೆ ದೇವರ
೩೨ ರಾಜ್ಯದಲ್ಲಿ ಸೇರುತ್ತಾರೆ. ಹ್ಯಾಗಂದರೆ ಯೋಹಾನನು ನೀತಿ
ಮಾರ್ಗವಾಗಿ ನಿಮ್ಮ ಬಳಿಗೆ ಬಂದನು; ನೀವು ಅವನಲ್ಲಿ ವಿಶ್ವಾ
ಸವಿಡಲಿಲ್ಲ; ಆದರೆ ಸುಂಕದವರೂ ಸೂಳೆಯರೂ ಅವನಲ್ಲಿ
ವಿಶ್ವಾಸವಿಟ್ಟರು. ಅದರೆ ನೀವು ನೋಡಿ, ತರುವಾಯ ಅವನಲ್ಲಿ
ವಿಶ್ವಾಸವಿರುವ ಹಾಗೆ, ಮಾನಸಾಂತರ ಪಡಲಿಲ್ಲ.
೩೩ ಮತ್ತೊಂದು ಸಾಮ್ಯವನ್ನು ಕೇಳಿರಿ; ಮನೆ ಯಜಮಾನ
ನಾದ ಒಬ್ಬ ಮನುಷ್ಯನಿದ್ದನು. ಅವನು ದ್ರಾಕ್ಷೇ ತೋಟವನ್ನು
ನೆಟ್ಟು, ಅದರ ಸುತ್ತಲು ಬೇಲಿ ಹಾಕಿ, ಅದಕ್ಕೊಳಗೆ ತೊಟ್ಟಿಯ
ನ್ನು ಅಗೆದು, ಗೋಪುರವನ್ನು ಕಟ್ಟಿ, ಅದನ್ನು ಒಕ್ಕಲಿಗರಿಗೆ
೩೪ ಒಪ್ಪಿಸಿ, ಬೇತಾಂತರಕ್ಕೆ ಹೋದನು. ಆದರೆ ಫಲಕಾಲ ಸಮೀಪಿಸಿ
ದಾಗ, ಅದರ ಫಲಗಳನ್ನು ತಕ್ಕೊಳ್ಳುವದಕ್ಕೆ ತನ್ನ ದಾಸರನ್ನು
೩೫ ಒಕ್ಕಲಿಗರ ಬಳಿಗೆ ಕಳುಹಿಸಿದನು. ಆಗ ಒಕ್ಕಲಿಗರು ಅವನ
ದಾಸರನ್ನು ಹಿಡಿದು, ಒಬ್ಬನನ್ನು ಹೊಡೆದು, ಒಬ್ಬನನ್ನು
೩೬ ಕೊಂದು, ಒಬ್ಬನನ್ನು ಕಲ್ಲೆಸೆದರು. ಆ ಮೇಲೆ ಮೊದಲಿನವರಿಗಿಂತ
ಹೆಚ್ಚಾದ ಬೇಕೆ ದಾಸರನ್ನು ಕಳುಹಿಸಿದನು; ಅವರಿಗೂ ಅದೇ
೩೭ ಪ್ರಕಾರ ಮಾಡಿದರು. ಕಡೆಯಲ್ಲಿ, ನನ್ನ ಮಗನನ್ನು ಲಕ್ಷ್ಯ
ಮಾಡುವೆಕೆಂದು, ತನ್ನ ಮಗನನ್ನು ಅವರ ಬಳಿಗೆ ಕಳುಹಿಸಿದನು.
೩೮ ಆದರೆ ಒಕ್ಕಲಿಗರು ಮಗನನ್ನು ನೋಡಿ, ಇವನು ಬಾಧ್ಯಸ್ಥನು;
ಇವನನ್ನು ಕೊಂದು, ಇವನ ಭಾಧ್ಯತೆಯನ್ನು ಹಿಡಿದು ಕೊಳ್ಳು
೩೯ ವ ಬನ್ನಿ ಎಂದು, ತಮ್ಮೊಳಗೆ ಹೇಳಿಕೊಂಡು, ಅವನನ್ನು ಹಿಡಿದು,
೪೦ ದ್ರಾಕ್ಷೇ ತೋಟದ ಹೊರಗೆ ಹಾಕಿ, ಕೊಂದು ಬಿಟ್ಟರು. ಅದರ
ರಿಂದ ದ್ರಾಕ್ಷೇ ತೋಟದ ಯಜಮಾನನು ಬರುವಾಗ, ಆ ಒಕ್ಕಲಿ
೪೧ ಗರಿಗೆ ಏನು ಮಾಡುವನು! ಅಂದನು. ಅವರು ಅವನಿಗೆ, ಆ ಕೆಟ್ಟ
ವರನ್ನು ಕ್ರೂರವಾಗಿ ನಾಶನ ಮಾಡಿ, ತಕ್ಕ ಕಾಲಗಳಲ್ಲಿ ಫಲಗಳ
ನ್ನು ತನಗೆ ಕೊಡುವ ಬೇರೆ ಒಕ್ಕಲಿಗರಿಗೆ ದ್ರಾಕ್ಷೇ ತೋಟವನ್ನು
೪೨ ಒಪ್ಪಿಸುವನು, ಅಂದರು. ಯೇಸು ಅವರಿಗೆ, ಮನೆ ಕಟ್ಟುವವರು
ತಳ್ಳಿದ ಕಲ್ಲೇ ಮೂಲೆಗೆ ತಲೆ ಕಲ್ಲಾಯಿತು; ಅದು ಕರ್ತನಿಂ
ದುಂಟಾಗಿ, ನಮ್ಮ ಕಣ್ಣುಗಳಿಗೆ ಆಶ್ಚರ್ಯವಾಗಿದೆ ಎಂದು, ಬರ
೪೩ ಹಗಳಲ್ಲಿ ನೀವು ಎಂದಾದರೂ ಓದಲಿಲ್ಲವೋ! ಆದದರಿಂದ ನಿಮಗೆ
ಹೇಳುತ್ತೇನೆ, ದೇವರ ರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು, ಅದರ
೪೪ ಫಲಗಳನ್ನು ಫಲಿಸುವ ಜನಾಂಗಕ್ಕೆ ಕೊಡಲ್ಪಡುವದು. ಮತ್ತು
ಈ ಕಲ್ಲಿನ ಮೇಲೆ ಬೀಳುವವನು ತುಂಡಾಗುವನು; ಆದರೆ ಅದು
ಯಾವನ ಮೇಲೆ ಬೀಳುವದೋ, ಅವನನ್ನು ಪುಡಿ ಪುಡಿ ಮಾಡು
ವದು, ಅಂದನು.
೪೫ ಪ್ರಧಾನ ಯಾಜಕರೂ ಫರಿಸಾಯರೂ ಅವನ ಸಾಮ್ಯಗಳ
ನ್ನು ಕೇಳಿ, ತಮ್ಮನ್ನು ಕುರಿತು ಮಾತಾಡುತ್ತಾನೆಂದು ತಿಳಿದು,
೪೬ ಅವನನ್ನು ಹಿಡಿಯುವದಕ್ಕೆ ಹುಡುಕಿದಾಗ, ಸಮೂಹಗಳಿಗೆ ಭ
ಯ ಪಟ್ಟರು. ಯಾಕಂದರೆ ಅವನನ್ನು ಪ್ರವಾದಿ ಎಂದೇಣಿಸಿದರು.

## ೨೨. ಸಂಧಿ.

೧ ಆಗ ಯೇಸು ಪ್ರತ್ಯುತ್ತರವಾಗಿ, ತಿರಿಗಿ ಅವರಿಗೆ ಸಾಮ್ಯಗ
ಳಿಂದ ಹೇಳಿದ್ದೇನಂದರೆ, ಪರಲೋಕ ರಾಜ್ಯವು ತನ್ನ ಮಗನಿಗೆ
೨ ಮದುವೆ ಮಾಡಿದ ಒಬ್ಬ ಅರಸನಿಗೆ ಸಮಾನವಾಗಿದೆ. ಅವನು
ಮದುವೆಗೆ ಹೇಳಿದವರನ್ನು ಕರೆಯುವದಕ್ಕೆ ತನ್ನ ದಾಸರನ್ನು
೩ ಕಳುಹಿಸಿದನು; ಆದರೆ ಬರಲೊಲ್ಲದೆ ಇದ್ದರು. ಮತ್ತು, ಇಗೋ,
ನನ್ನ ಔತನವನ್ನು ಸಿದ್ಧ ಮಾಡಿದ್ದೇನೆ; ನನ್ನ ಎತ್ತುಗಳೂ ಕೊ
ಬ್ಬಿದ ಪಶುಗಳೂ ಕೊಯಿದಾಗಿವೆ; ಎಲ್ಲಾ ಸಿದ್ಧವಾಗಿದೆ; ಮದು
ವೆಗೆ ಬನ್ನಿ ಎಂದು, ಕರೆಯಲ್ಪಟ್ಟವರಿಗೆ ಹೇಳಿಕೆಂದು, ಬೇರೆ
೪ ದಾಸರನ್ನು ಕಳುಹಿಸಿದನು. ಆದರೆ ಅವರು ಅಲಕ್ಷ್ಯ ಮಾಡಿ,
ಒಬ್ಬನು ತನ್ನ ಹೊಲಕ್ಕೆ, ಒಬ್ಬನು ತನ್ನ ವ್ಯಾಪಾರಕ್ಕೆ, ಹೋಗಿ
೫ ಬಿಟ್ಟರು. ಮಿಕ್ಕಾದವರು ಅವನ ದಾಸರನ್ನು ಹಿಡಿದು, ನಿಂದಿಸಿ,
೬ ಕೊಂದು ಹಾಕಿದರು. ಅರಸನು ಅದನ್ನು ಕೇಳಿ, ಕೋಪಿಸಿ ಕೊಂ
ಡು, ತನ್ನ ಸೈನ್ಯಗಳನ್ನು ಕಳುಹಿಸಿ, ಆ ಕೊಲೆಗಾರರನ್ನು ನಾ
ಶನ ಮಾಡಿ, ಅವರ ಪಟ್ಟಣಗಳನ್ನು ಸುಟ್ಟು ಬಿಟ್ಟನು. ಆಗ ತನ್ನ
ದಾಸರಿಗೆ, ಮದುವೆ ಸಿದ್ಧವಾಗಿದೆ; ಆದರೆ ಕರೆಯಲ್ಪಟ್ಟವರು
೮ ಯೋಗ್ಯರಲ್ಲ; ಆದದರಿಂದ ಮಾರ್ಗಗಳ ಸಂದುಗಳಿಗೆ ಹೋ
೯ ಗಿ, ಕಂಡವರನ್ನೆಲ್ಲಾ ಮದುವೆಗೆ ಕರೆಯಿರಿ, ಅಂದನು. ಮತ್ತು
ಆ ದಾಸರು ಮಾರ್ಗಗಳಿಗೆ ಹೋಗಿ, ಕೆಟ್ಟವರನ್ನೂ, ಒಳ್ಳೆಯ

ವರನ್ನೂ, ಕಂಠವರನ್ನೆಲ್ಲಾ ಕೂಡಿಸಿದರು; ಆಗ ಮದುವೆಯ
೧೦ ಮನೆಯು ಕೂತವರಿಂದ ತುಂಬಿತು. ಆದರೆ ಅರಸನು ಕೂತವ
ರನ್ನು ನೋಡುವದಕ್ಕೆ ಒಳಗೆ ಬಂದಾಗ, ಅಲ್ಲಿ ಮದುವೆ ವಸ್ತ್ರ
೧೨ ವನ್ನು ಹೊದ್ದು ಕೊಳ್ಳದ ಒಬ್ಬನನ್ನು ನೋಡಿ, ಅವನಿಗೆ ಸ್ನೇ
ಹಿತನೇ, ಮದುವೆ ವಸ್ತ್ರವಿಲ್ಲದೆ ಇಲ್ಲಿ ಹ್ಯಾಗೆ ಬಂದಿ! ಅನ್ನಲು;
೧೩ ಅವನು ಸುಮ್ಮನೆ ಇದ್ದನು. ಆಗ ಅರಸನು ಸೇವಕರಿಗೆ ಅವನ
ಕೈ ಕಾಲುಗಳನ್ನು ಕಟ್ಟಿ, ಅವನನ್ನು ಎತ್ತಿ ಕೊಂಡು, ಹೊರಗಿನ
ಕತ್ತಲೆಯಲ್ಲಿ ಹಾಕಿರಿ; ಅಲ್ಲಿ ಅಳುವಿಕೆಯೂ ಹಲ್ಲು ಕಡಿಯುವಿಕೆ
೧೪ ಯೂ ಇರುವವು. ಯಾಕಂದರೆ ಕರೆಯಲ್ಪಟ್ಟವರು ಅನೇಕ
ರು; ಆಯಲ್ಪಟ್ಟವರು ಕೆಲವರೇ, ಅಂದನು.

೧೫ ಆಗ ಫರಿಸಾಯರು ಹೊರಟು, ಮಾತಿನಲ್ಲಿ ಅವನನ್ನು ಹ್ಯಾಗೆ
೧೬ ಹಿಡಿಯ ಬಹುದೆಂದು, ಆಲೋಚಿಸಿ ಕೊಂಡು, ತಮ್ಮ ಶಿಷ್ಯರ
ನ್ನು ಹೆರೋದ್ಯರ ಸಂಗಡ ಅವನ ಬಳ್ಳಿಗೆ ಕಳುಹಿಸಿ, ಬೋಧಕ
ನೇ, ನೀನು ಸತ್ಯವಂತನಾಗಿ, ದೇವರ ಮಾರ್ಗವನ್ನು ಸತ್ಯ
ವಾಗಿ ಬೋಧಿಸಿ, ಯಾರನ್ನಾದರೂ ಲಕ್ಷಿಸದೆ, ಮನುಷ್ಯರ ಮು
೧೭ ಖದಾಕ್ಷಿಣ್ಯ ಮಾಡುವದಿಲ್ಲವೆಂದು, ಬಲ್ಲೆವು; ಆದಕಾರಣ ನಿನಗೆ
ಹ್ಯಾಗೆ ತೋಚುತ್ತದೆ! ಕೈಸರನಿಗೆ ಗುತ್ತಿಗೆ ಕೊಡ ಬಹುದೋ!
೧೮ ಬಾರದೋ! ನಮಗೆ ಹೇಳು, ಅಂದರು. ಆದರೆ ಯೇಸು ಅವರ
ಕೆಟ್ಟತನವನ್ನು ತಿಳಿದು, ಕಪಟಿಗಳೇ, ನೀವು ನನ್ನನ್ನು ಶೋಧಿ
೧೯ ಸುವದೇನು! ಗುತ್ತಿಗೆಯ ನಾಣ್ಯವನ್ನು ನನಗೆ ತೋರಿಸಿರಿ, ಅಂ
ದನು. ಅವರು ಒಂದು ಹಣವನ್ನು ಅವನ ಬಳ್ಳಿಗೆ ತಂದರು.
೨೦ ಅವನು ಅವರಿಗೆ, ಈ ರೂಪವೂ, ಮೇಲ್ಬರಹವೂ ಯಾರವು!
೨೧ ಎಂದು ಕೇಳಿದಾಗ, ಅವನಿಗೆ, ಕೈಸರನದು, ಅಂದರು. ಆಗಲ
ವರಿಗೆ, ಹಾಗಾದರೆ ಕೈಸರನದನ್ನು ಕೈಸರನಿಗೆ, ದೇವರದನ್ನು
೨೨ ದೇವರಿಗೆ ಕೊಡಿರಿ, ಅಂದನು. ಅವರು ಕೇಳಿ, ಆಶ್ಚರ್ಯಪಟ್ಟು,
ಅವನನ್ನು ಬಿಟ್ಟು ಹೋದರು.

೨೩ ಅದೇ ದಿವಸದಲ್ಲಿ ಪುನರುತ್ಥಾನವಿಲ್ಲವೆಂದು, ಹೇಳುವ ಸದ್ದು
ಕಾಯರು ಅವನ ಬಳ್ಳಿಗೆ ಬಂದು, ಅವನನ್ನು ಕೇಳಿದ್ದೇನಂದರೆ,
೨೪ ಬೋಧಕನೇ, ಒಬ್ಬನು ಮಕ್ಕಳಿಲ್ಲದೆ ಸತ್ತರೆ, ಅವನ ಸಹೋದ
ರನು ಅವನ ಹೆಂಡತಿಯನ್ನು ಮದುವೆ ಮಾಡಿ ಕೊಂಡು, ತನ್ನ
ಸಹೋದರನಿಗೆ ಮಕ್ಕಳನ್ನು ಹುಟ್ಟಿಸ ಬೇಕೆಂದು, ಮೋಶೆಯ
೨೫ ಹೇಳಿದನು. ಹೀಗಿರಲಾಗಿ ನಮ್ಮಲ್ಲಿ ಏಳು ಮಂದಿ ಸಹೋದ
ರರು ಇದ್ದರು; ಮೊದಲನೆಯವನು ಮದುವೆ ಮಾಡಿ ಕೊಂಡು,
ತೀರಿ ಹೋಗಿ, ತನಗೆ ಮಕ್ಕಳಿಲ್ಲದ ಕಾರಣ ತನ್ನ ಹೆಂಡತಿ
೨೬ ಯನ್ನು ತನ್ನ ಸಹೋದರನಿಗೆ ಬಿಟ್ಟನು. ಅದೇ ಮೇರೆಗೆ ಎರ
ಡನೆಯವನು, ಮೂರನೆಯವನು, ಏಳನೆಯವನ ಪರ್ಯಂತರ.
೨೭ ಎಲ್ಲರ ತರುವಾಯ ಹೆಂಡತಿಯೂ ಸತ್ತಳು. ಆದದರಿಂದ ಪುನ
೨೮ ರುತ್ಥಾನದಲ್ಲಿ ಆ ಏಳು ಮಂದಿಯಲ್ಲಿ ಯಾರಿಗೆ ಹೆಂಡತಿಯಾಗಿ
ರುವಳು! ಯಾಕಂದರೆ ಅವಳು ಎಲ್ಲರಿಗೆ ಹೆಂಡತಿಯಾಗಿದ್ದ
೨೯ ಳೆಂದು, ಕೇಳಿದರು. ಯೇಸು ಅವರಿಗೆ ಪ್ರತ್ಯುತ್ತರವಾಗಿ, ನೀವು
ಬರಹಗಳನ್ನೂ ದೇವರ ಬಲವನ್ನೂ ಅರಿಯದೆ ಪೋಸ ಹೋ
೩೦ ಗುತ್ತೀರಿ; ಹ್ಯಾಗಂದರೆ ಪುನರುತ್ಥಾನದಲ್ಲಿ ಮದುವೆ ಮಾಡಿ ಕೊ
ಳ್ಳದೆ, ಮದುವೆ ಮಾಡಿ ಕೊಡದೆ, ಪರಲೋಕದಲ್ಲಿ ದೇವರ ದೂ
೩೧ ತರ ಹಾಗೆಯೇ ಇರುವರು. ಆದರೆ ಸತ್ತವರ ಪುನರುತ್ಥಾನದ
೩೨ ವಿಷಯವಾಗಿ, ನಾನು ಅಬ್ರಹಾಮನ ದೇವರೂ, ಇಸಾಕನ ದೇವ
ರೂ, ಯಾಕೋಬನ ದೇವರೂ, ಆಗಿದ್ದೇನೆಂಬ ದೇವರ ಮಾತ
ನ್ನು ನೀವು ಓದಿಲ್ಲವೋ! ದೇವರು ಸತ್ತವರಿಗಲ್ಲ ಬದುಕುವವ
೩೩ ರಿಗೆ ದೇವರಾಗಿದ್ದಾನೆ, ಅಂದನು. ಸಮೂಹಗಳು ಕೇಳಿ, ಅವನ
ಬೋಧನೆಗೆ ಆಶ್ಚರ್ಯ ಪಟ್ಟರು.

೩೪ ಆದರೆ ಫರಿಸಾಯರು ಅವನು ಸದ್ದುಕಾಯರ ಬಾಯಿ ಮು
೩೫ ಚ್ಚಿದನೆಂದು ಕೇಳಿ, ಕೂಡಿ ಬಂದರು. ಮತ್ತು ಅವರಲ್ಲಿ ಒಬ್ಬ
೩೬ ನ್ಯಾಯಶಾಸ್ತ್ರಿಯು, ಬೋಧಕನೇ, ನ್ಯಾಯಪ್ರಮಾಣದಲ್ಲಿ
ದೊಡ್ಡ ಕಟ್ಟಳೆ ಯಾವದೆಂದು ಕೇಳಿ, ಅವನನ್ನು ಶೋಧಿಸಿದನು.
೩೭ ಯೇಸು ಅವನಿಗೆ, ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ
ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದಲೂ, ನಿನ್ನ
೩೮ ಪೂರ್ಣ ಬುದ್ಧಿಯಿಂದಲೂ, ಪ್ರೀತಿ ಮಾಡು. ಈ ಕಟ್ಟಳೆಯು
೩೯ ಮೊದಲನೇದೂ, ದೊಡ್ಡದೂ, ಆಗಿದೆ. ಮತ್ತು ಎರಡನೇದು
ಅದಕ್ಕೆ ಸಮಾನವಾಗಿದೆ; ಏನಂದರೆ, ನಿನ್ನ ನೆರೆಯವನನ್ನು
೪೦ ನಿನ್ನ ಹಾಗೆಯೇ ಪ್ರೀತಿ ಮಾಡು. ಈ ಎರಡು ಕಟ್ಟಳೆಗಳಲ್ಲಿ ನ್ಯಾ
ಯಪ್ರಮಾಣಕ್ಕೆಲ್ಲವೂ, ಪ್ರವಾದಿಗಳೂ, ಅಡಕವಾಗಿದೆ, ಅಂದನು.

೪೧ ಫರಿಸಾಯರೂ ಕೂಡಿ ಬಂದಿರುವಾಗ, ಕ್ರಿಸ್ತನನ್ನು ಕುರಿತು
೪೨ ನಿಮಗೆ ಹ್ಯಾಗೆ ತೋಚುತ್ತದೆ! ಯಾರ ಮಗನಾಗಿದ್ದಾನೆಂದು,
ಯೇಸು ಅವರನ್ನು ಕೇಳಿದನು. ಅವರು ಅವನಿಗೆ, ದಾವೀದನ
೪೩ ಮಗನು, ಅಂದರು. ಅವನು ಅವರಿಗೆ, ಹಾಗಾದರೆ, ಕರ್ತನು
ನನ್ನ ಕರ್ತನಿಗೆ, ನಾನು ನಿನ್ನ ಶತ್ರುಗಳನ್ನು ನಿನ್ನ ಪಾದ ಪೀಠ
೪೪ ವಾಗಿ ಇಡುವ ವರಿಗೂ ನನ್ನ ಬಲ ಪಾರ್ಶ್ವದಲ್ಲಿ ಕೂತ್ರು ಎಂದು
ದಾವೀದನು ಹೇಳಿ, ಆತ್ಮದಲ್ಲಿ ಅವನನ್ನು ಕರ್ತನೆಂದು ಕರೆ
೪೫ ಯುವದು ಹ್ಯಾಗೆ? ಹೀಗಿದ್ದರೆ ದಾವೀದನು ಅವನನ್ನು ಕರ್ತ
ನೆಂದು ಕರೆದರೆ, ಹ್ಯಾಗೆ ಅವನ ಮಗನಾಗಿದ್ದಾನೆ, ಅಂದನು.
೪೬ ಅದಕ್ಕೆ ಯಾರೂ ಅವನಿಗೆ ಏನೂ ಉತ್ತರ ಕೊಡಲಾರದೆ ಹೋ
ದರು. ಮತ್ತು ಅಂದಿನಿಂದ ಯಾರೂ ಅವನನ್ನು ಇನ್ನೇನು ಕೇ
ಳುವದಕ್ಕೆ ಧೈರ್ಯ ಪಡಲಿಲ್ಲ.

## ೨೩. ಸಂಧಿ.

೧ ಆಗ ಯೇಸು ಸಮೂಹಗಳಿಗೂ ತನ್ನ ಶಿಷ್ಯರಿಗೂ ಹೇಳಿ
೨ ದ್ದೇನಂದರೆ, ಮೋಶೆಯ ಪೀಠದ ಮೇಲೆ ಶಾಸ್ತ್ರಿಗಳೂ ಫರಿಸಾ
3 ಯರೂ ಕೂತು ಕೊಂಡಿದ್ದಾರೆ; ಆದದರಿಂದ ಅವರು ನಿಮಗೆ
ಕೈ ಕೊಳ್ಳ ಹೇಳುವದನ್ನೆಲ್ಲಾ ಕೈ ಕೊಂಡು ಮಾಡಿರಿ; ಆದರೆ
ಅವರ ಕ್ರಿಯೆಗಳ ಪ್ರಕಾರ ಮಾಡ ಬೇಡಿರಿ; ಯಾಕಂದರೆ ಹೇಳು
೪ ತ್ತಾರೆ, ಆದರೆ ಮಾಡುವದಿಲ್ಲ. ಹ್ಯಾಗಂದರೆ ಭಾರವಾದ, ಹೊ
ರುವದಕ್ಕೆ ಕಷ್ಟವಾದ, ಹೊರೆಗಳನ್ನು ಕಟ್ಟಿ, ಮನುಷ್ಯರ ಹೆಗ
ಲುಗಳ ಮೇಲೆ ಇಡುತ್ತಾರೆ; ಆದರೆ ತಮ್ಮ ಬೆರಳಿನಿಂದಾದರೂ
೫ ಅವುಗಳನ್ನು ಮುಟ್ಟಿಲಿಕ್ಕೆ ಅವರಿಗೆ ಮನಸ್ಸಿಲ್ಲ. ಮತ್ತು ಮನು
ಷ್ಯರಿಗೆ ಕಾಣಿಸುವ ಹಾಗೆ, ತಮ್ಮ ಕ್ರಿಯೆಗಳನ್ನೆಲ್ಲಾ ಮಾಡು
ತ್ತಾರೆ; ತಮ್ಮ ಜ್ಞಾಪಕ ಪಟ್ಟಿಗಳನ್ನು ಅಗಲವಾಗಿ ಮಾಡುತ್ತಾರೆ;
ತಮ್ಮ ವಸ್ತ್ರಗಳ ಕರಗುಸಗಳನ್ನು ದೊಡ್ಡವಾಗಿ ಮಾಡುತ್ತಾರೆ;
೬ ಮತ್ತು ಔತನಗಳಲ್ಲಿ ಮೊದಲನೇ ಪಂಕ್ತಿಯನ್ನೂ, ಸಭೆಮನೆಗ
೭ ಳಲ್ಲಿ ಮೊದಲನೇ ಪೀಠಗಳನ್ನೂ, ಅಂಗಡಿ ಬೀದಿಗಳಲ್ಲಿ ವಂದನೆಗ
ಳನ್ನೂ, ರಬ್ಬಿ, ರಬ್ಬಿ, ಎಂದು ಮನುಷ್ಯರಿಂದ ಕರೆಯಲ್ಪ
೮ ಡುವದನ್ನೂ, ಪ್ರೀತಿ ಮಾಡುತ್ತಾರೆ. ಆದರೆ ನೀವು, ರಬ್ಬಿ ಎಂದು



ಕರೆಯಲ್ಪಡ ಬೇಡಿರಿ; ಯಾಕಂದರೆ ಕ್ರಿಸ್ತನೊಬ್ಬನೇ ನಿಮಗೆ
೯ ಗುರುವಾಗಿದ್ದಾನೆ; ನೀವೆಲ್ಲರು ಸಹೋದರರಾಗಿದ್ದೀರಿ. ಮತ್ತು
ಭೂಮಿಯ ಮೇಲೆ ತಂದೆ ಎಂದು, ಯಾವನನ್ನಾದರೂ ಕರೆಯ
ಬೇಡಿರಿ; ಯಾಕಂದರೆ ಪರಲೋಕದಲ್ಲಿರುವವನು ಒಬ್ಬನೇ ನಿಮಗೆ
೧೦ ತಂದೆಯಾಗಿದ್ದಾನೆ. ಮತ್ತು ಗುರುಗಳೆಂದು ಕರೆಯಲ್ಪಡ ಬೇ
ಡಿರಿ; ಯಾಕಂದರೆ ಕ್ರಿಸ್ತನೊಬ್ಬನೇ ನಿಮಗೆ ಗುರುವಾಗಿದ್ದಾನೆ.
೧೧ ಆದರೆ ನಿಮ್ಮಲ್ಲಿ ದೊಡ್ಡವನು ನಿಮ್ಮ ಸೇವಕನಾಗಿರಲಿ; ಇದಲ್ಲದೆ
೧೨ ತನ್ನನ್ನು ಹೆಚ್ಚಿಸಿ ಕೊಳ್ಳುವವನು ತಗ್ಗಿಸಲ್ಪಡುವನು; ತನ್ನನ್ನು ತ
ಗ್ಗಿಸಿ ಕೊಳ್ಳುವವನು ಹೆಚ್ಚಿಸಲ್ಪಡುವನು.

೧೩ ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅ
ಯ್ಯೋ! ಯಾಕಂದರೆ ದೇವರ ರಾಜ್ಯವನ್ನು ಮನುಷ್ಯರ
ಮುಂದೆ ಮುಚ್ಚಿ ಬಿಡುತ್ತೀರಿ; ನೀವು ಪ್ರವೇಶಿಸುವದಿಲ್ಲ, ಮತ್ತು
೧೪ ಪ್ರವೇಶಿಸುವವರನ್ನು ಪ್ರವೇಶಿಸ ಗೊಡಿಸುವದಿಲ್ಲ. ಕಪಟಿಗಳಾದ
ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅಯ್ಯೋ! ಯಾಕಂ
ದರೆ ವಿಧವೆಗಳ ಮನೆಗಳನ್ನು ತಿಂದು ಬಿಡುತ್ತೀರಿ; ನೆವಕ್ಕೋ
ಸ್ಕರ ಉದ್ದವಾದ ಪ್ರಾರ್ಥನೆಗಳನ್ನು ಮಾಡುತ್ತೀರಿ; ಆದದ
೧೫ ರಿಂದ ಹೆಚ್ಚಾದ ಅಪ್ಪೆನಿರ್ಣಯವನ್ನು ಹೊಂದುವಿರಿ. ಕಪಟಿಗ
ಳಾದ ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅಯ್ಯೋ! ಯಾ
ಕಂದರೆ ಒಬ್ಬನನ್ನು ಮತದಲ್ಲಿ ಸೇರಿಸುವದಕ್ಕೆ ಸಮುದ್ರವ
ನ್ನೂ ಭೂಮಿಯನ್ನೂ ಸುತ್ತಿ ಕೊಳ್ಳುತ್ತೀರಿ; ಸೇರಿದ ಮೇಲೆ,
ಅವನನ್ನು ನಿಮಗಿಂತ ಎರಡುಪ್ಪಾಟಿ ನರಕದ ಮಗನಾಗ ಮಾಡು
ತ್ತೀರಿ.

೧೬ ದಾರಿ ತೋರಿಸುವ ಕುರುಡರೇ, ನಿಮಗೆ ಅಯ್ಯೋ! ಒಬ್ಬ
ನು ದೇವಾಲಯದ ಮೇಲೆ ಆಣೆ ಇಟ್ಟು ಕೊಂಡರೆ, ಅದೇನೂ
ಇಲ್ಲ; ಆದರೆ ದೇವಾಲಯದ ಚಿನ್ನದ ಮೇಲೆ ಆಣೆ ಇಟ್ಟು ಕೊಂ
೧೭ ಡರೆ, ಹಂಗನಲ್ಲಿದ್ದಾನೆಂದು ಹೇಳುತ್ತೀರಲ್ಲ! ಹುಚ್ಚರೇ, ಕುರು
ಡರೇ, ಯಾವದು ದೊಡ್ಡದು! ಚಿನ್ನವೋ! ಚಿನ್ನವನ್ನು ಪರಿ
೧೮ ಶುದ್ಧ ಮಾಡುವ ದೇವಾಲಯವೋ! ಮತ್ತು ಒಬ್ಬನು ಬಲಿಪೀ
ಠದ ಮೇಲೆ ಆಣೆ ಇಟ್ಟು ಕೊಂಡರೆ, ಅದೇನೂ ಇಲ್ಲ; ಆದರೆ
ಅದರಲ್ಲಿರುವ ಕಾಣಿಕೆಯ ಮೇಲೆ ಆಣೆ ಇಟ್ಟು ಕೊಂಡರೆ, ಹಂಗಿ
೧೯ ನಲ್ಲಿದ್ದಾನೆಂದು, ಹೇಳುತ್ತೀರಲ್ಲ! ಹುಚ್ಚರೇ, ಕುರುಡರೇ, ಯಾವ
ದು ದೊಡ್ಡದು! ಕಾಣಿಕೆಯೋ! ಕಾಣಿಕೆಯನ್ನು ಪರಿಶುದ್ಧ
೨೦ ಮಾಡುವ ಬಲಿಪೀಠವೋ! ಹಾಗಾದರೆ ಬಲಿಪೀಠದ ಮೇಲೆ ಆಣೆ
ಇಟ್ಟು ಕೊಳ್ಳುವವನು ಅದರ ಮೇಲೆಯೂ, ಅದರಲ್ಲಿರುವ ಎಲ್ಲ
೨೧ ವುಗಳ ಮೇಲೆಯೂ, ಆಣೆ ಇಟ್ಟು ಕೊಳ್ಳುತ್ತಾನೆ. ಮತ್ತು ದೇವಾ
ಲಯದ ಮೇಲೆ ಆಣೆ ಇಟ್ಟುಕೊಳ್ಳುವವನು ಅದರ ಮೇಲೆಯೂ,
ಅದರಲ್ಲಿ ವಾಸ ಮಾಡುವವನ ಮೇಲೆಯೂ, ಆಣೆ ಇಟ್ಟುಕೊ
೨೨ ಳ್ಳುತ್ತಾನೆ. ಮತ್ತು ಪರಲೋಕದ ಮೇಲೆ ಆಣೆ ಇಟ್ಟುಕೊಳ್ಳುವ
ವನು ದೇವರ ಸಿಂಹಾಸನದ ಮೇಲೆಯೂ, ಅದರಲ್ಲಿ ಕೂತು
ಕೊಂಡವನ ಮೇಲೆಯೂ, ಆಣೆ ಇಟ್ಟು ಕೊಳ್ಳುತ್ತಾನೆ.

೨೩ ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅ
ಯ್ಯೋ! ಯಾಕಂದರೆ ಮರಗುವತ್ರೆ ಸೋಪು ಜೀರಿಗೆಗಳ ಹತ್ತ
ರಲ್ಲಿ ಒಂದು ಕೊಟ್ಟು, ನ್ಯಾಯಪ್ರಮಾಣದ ಹೆಚ್ಚು ಭಾರವಾದ
ವುಗಳಾದ ನ್ಯಾಯವನ್ನೂ, ಕರುಣೆಯನ್ನೂ, ವಿಶ್ವಾಸವನ್ನೂ,
ಬಿಟ್ಟು ಬಿಟ್ಟಿದ್ದೀರಿ; ಇವುಗಳನ್ನು ಮಾಡಿ, ಅವುಗಳನ್ನು ಬಿಡದೆ,
೨೪ ಇರ ಬೇಕಾಗಿತ್ತು. ದಾರಿ ತೋರಿಸುವ ಕುರುಡರೇ, ಸೊಳ್ಳೆಗೋ
೨೫ ಸ್ಕರ ಬಡಿಕಟ್ಟಿ, ಒಂಟೆಯನ್ನು ನುಂಗಿ ಬಿಡುತ್ತೀರಲ್ಲ! ಕಪಟಿಗ
ಳಾದ ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅಯ್ಯೋ! ಯಾ
ಕಂದರೆ ಪಂಚಪಾತ್ರೆ ಬಟ್ಟಲುಗಳ ಹೊರಗಡೆಯನ್ನು ಶುಚಿ ಮಾ
ಡುತ್ತೀರಿ; ಆದರೆ ಅವು ಒಳಗೆ ಸುಲಿಗೆಯಿಂದಲೂ, ಅನ್ಯಾಯ
೨೬ ದಿಂದಲೂ, ತುಂಬಿಯವೆ. ಕುರುಡನಾದ ಫರಿಸಾಯನೇ, ಪಂಚ
ಪಾತ್ರೆ ಬಟ್ಟಲುಗಳ ಹೊರಗಡೆ ಶುಚಿಯಾಗುವ ಹಾಗೆ, ಮೊದಲು
ಅವುಗಳ ಒಳಗಡೆ ಶುಚಿ ಮಾಡು.

೨೭ ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನಿಮಗೆ ಅ
ಯ್ಯೋ! ಯಾಕಂದರೆ ಬೊಳಿದ ಸಮಾಧಿಗಳಿಗೆ ಸಮಾನವಾ
ಗಿದ್ದೀರಿ; ಹೊರಗೆ ಅವು ಚನ್ನಾಗಿ ಕಾಣಿಸುತ್ತವೆ; ಆದರೆ ಒಳಗೆ
ಸತ್ತವರ ಎಲುವುಗಳಿಂದಲೂ, ಸಮಸ್ತ ಅಶುದ್ಧತ್ವದಿಂದಲೂ,
೨೮ ತುಂಬಿ ಅವೆ. ಅದೇ ಪ್ರಕಾರ ನೀವು ಹೊರಗೆ ಮನುಷ್ಯರಿಗೆ ನೀತಿ
ವಂತರೆಂದು ಕಾಣಿಸಿದರೂ, ಒಳಗೆ ಕಪಟದಿಂದಲೂ ಅನೀತಿಯಿಂ
೨೯ ದಲೂ ತುಂಬಿದವರಾಗಿದ್ದೀರಿ. ಕಪಟಿಗಳಾದ ಶಾಸ್ತ್ರಿಗಳೇ, ಫರಿ
ಸಾಯರೇ, ನಿಮಗೆ ಅಯ್ಯೋ! ಯಾಕಂದರೆ ಪ್ರವಾದಿಗಳ
ಸಮಾಧಿಗಳನ್ನು ಕಟ್ಟಿ, ನೀತಿವಂತರ ಗೋರಿಗಳನ್ನು ಅಲಂಕರಿಸಿ,
೩೦ ನಾವು ನಮ್ಮ ಪಿತೃಗಳ ದಿನಗಳಲ್ಲಿ ಬದುಕಿದ್ದರೆ, ಅವರ ಸಂಗಡ
ಪ್ರವಾದಿಗಳ ರಕ್ತದಲ್ಲಿ ಪಾಲುಗಾರರಾಗಿರಲಿಲ್ಲ, ಅನ್ನುತ್ತೀರಿ.
೩೧ ಹಾಗಾದರೆ ಪ್ರವಾದಿಗಳನ್ನು ಕೊಂದವರ ಮಕ್ಕಳಾಗಿದ್ದೀರೆಂದು,
೩೨ ನಿಮಗೆ ನೀವೇ ಸಾಕ್ಷಿ ಕೊಡುತ್ತೀರಿ. ನೀವು ನಿಮ್ಮ ಪಿತೃಗಳ
೩೩ ಅಳತೆಯನ್ನು ತುಂಬಿಸಿರಿ. ಹಾವುಗಳೇ, ಸರ್ಪಜಾತಿಯವರೇ,
ನರಕದ ನ್ಯಾಯ ಶಿಕ್ಷೆಗೆ ಹ್ಯಾಗೆ ತಪ್ಪಿಸಿ ಕೊಳ್ಳುವಿರಿ!

೩೪ ಆದದರಿಂದ, ಇಗೋ, ನಾನು ಪ್ರವಾದಿಗಳನ್ನೂ ಜ್ಞಾನಿಗಳ
ನ್ನೂ ಶಾಸ್ತ್ರಿಗಳನ್ನೂ ನಿಮ್ಮ ಬಳ್ಳಿಗೆ ಕಳುಹಿಸುತ್ತೇನೆ; ಅವರಲ್ಲಿ
ಕೆಲವರನ್ನು ಕೊಂದು, ಶಿಲುಬೆಗೆ ಹಾಕುವಿರಿ; ಕೆಲವರನ್ನು ನಿಮ್ಮ
ಸಭೆಮನೆಗಳಲ್ಲಿ ಹೊಡೆದು, ಪಟ್ಟಣ ಪಟ್ಟಣಕ್ಕೂ ಹಿಂಸಿಸುವಿರಿ.
೩೫ ಹೀಗೆಯೇ ನೀತಿವಂತನಾದ ಹೇಬೆಲನ ರಕ್ತವು ಮೊದಲ್ಗೊಂಡು,
ದೇವಾಲಯಕ್ಕೂ ಬಲಿಪೀಠಕ್ಕೂ ಮಧ್ಯದಲ್ಲಿ ನೀವು ಕೊಂದು
ಹಾಕಿದ ಬರಕಿಯನ ಮಗನಾದ ಜಕರೀಯನ ರಕ್ತದ ಪರ್ಯಂ
ತರ, ಭೂಮಿಯಲ್ಲಿ ಚೆಲ್ಲಲ್ಪಟ್ಟ ನೀತಿಯುಳ್ಳ ರಕ್ತವೆಲ್ಲಾ ನಿಮ್ಮ
೩೬ ಮೇಲೆ ಬರುವದು. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಇವೆಲ್ಲಾ
ಈ ಸಂತತಿಯ ಮೇಲೆ ಬರುವವು.

೩೭ ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳನ್ನು ಕೊ
ಲ್ಲುವವಳೇ, ತನ್ನ ಬಳ್ಳಿಗೆ ಕಳುಹಿಸಲ್ಪಟ್ಟವರನ್ನು ಕಲ್ಲೆಸೆಯುವ
ವಳೇ, ಕೋಳಿಯು ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಹೊದಿಗ
ಸುವ ಪ್ರಕಾರ, ನಿನ್ನ ಮಕ್ಕಳನ್ನು ಹೊದಿಗಸ ಎಷ್ಟೋ ಸಾರಿ
೩೮ ಮನಸ್ಸಾಗಿದ್ದೆನು; ಆದರೆ ಒಲ್ಲದೆ ಹೋದಿರಿ; ಇಗೋ, ನಿಮ್ಮ
೩೯ ಮನೆಯು ನಿಮಗೆ ಹಾಳಾಗಿ ಬಿಡಲ್ಪಡುವದು; ಯಾಕಂದರೆ
ನಿಮಗೆ ಹೇಳುತ್ತೇನೆ, ಇಂದಿನಿಂದ, ಕರ್ತನ ಹೆಸರಿನಲ್ಲಿ ಬರುವವ
ನಿಗೆ ಸ್ತೋತ್ರವಾಗಲೆಂದು, ನೀವು ಹೇಳುವ ಪರ್ಯಂತರ ನನ್ನ
ನ್ನು ನೋಡದೆ ಇರುವಿರಿ.

## ೨೪. ಸಂಧಿ.

೧ ಆಗ ಯೇಸು ದೇವಾಲಯದಿಂದ ಹೊರಟು ಹೋದಾಗ,

ಅವನ ಶಿಷ್ಯರು ದೇವಾಲಯದ ಕಿಲ್ಪಗಳನ್ನು ಅವನಿಗೆ ತೋರಿಸು
೨ ವದಕ್ಕೆ ಹತ್ತರ ಬಂದರು. ಆದರೆ ಯೇಸು ಅವರಿಗೆ, ಇವುಗಳ
ನ್ನೆಲ್ಲಾ ನೋಡುತ್ತೀರಲ್ಲ! ನಿಶ್ಚಯವಾಗಿ ನಿಮಗೆ ಹೇಳುತ್ತೇನೆ,
ಕೆಡವಲ್ಪಡದೆ, ಕಲ್ಲಿನ ಮೇಲೆ ಕಲ್ಲು ಇಲ್ಲಿ ಬಿಳ್ಪಡುವದಿಲ್ಲ,
ಅಂದನು.

೩ ಅವನು ಇಪ್ಪೇಗುಡ್ಡದ ಮೇಲೆ ಕೂತಿರುವಾಗ, ಅವನ ಶಿಷ್ಯ
ರು ಏಕಾಂತವಾಗಿ ಅವನ ಬಳ್ಳಿಗೆ ಬಂದು, ಇವು ಯಾವಾಗ ಆಗು
ವವು! ಮತ್ತು ನಿನ್ನ ಬರುವಿಕೆಗೂ ಲೋಕದ ಅಂತ್ಯಕ್ಕೂ ಗುರು
೪ ತೇನು! ನಮಗೆ ಹೇಳು, ಅಂದರು. ಯೇಸು ಪ್ರತ್ಯುತ್ತರವಾಗಿ
ಅವರಿಗೆ ಹೇಳಿದ್ದೇನಂದರೆ, ಯಾವನಾದರೂ ನಿಮ್ಮನ್ನು ಮೋಸ
೫ ಗೊಳಿಸದ ಹಾಗೆ ನೋಡಿಕೊಳ್ಳಿರಿ. ಯಾಕಂದರೆ ಅನೇಕರು ನನ್ನ
ಹೆಸರಿನಲ್ಲಿ ಬಂದು, ನಾನೇ ಕ್ರಿಸ್ತನೆಂದು ಹೇಳಿ, ಅನೇಕರನ್ನು
೬ ಮೋಸಗೊಳಿಸುವರು. ಇದಲ್ಲದೆ ಯುದ್ಧಗಳನ್ನೂ ಯುದ್ಧಗಳ
ಸುದ್ದಿಗಳನ್ನೂ ಕೇಳುವಿರಿ; ಕಳವಳ ಪಡದ ಹಾಗೆ, ನೋಡಿಕೊ
ಳ್ಳಿರಿ; ಯಾಕಂದರೆ ಇವೆಲ್ಲಾ ಆಗ ಬೇಕು; ಆದರೂ ಅಂತ್ಯವು
ಇನ್ನು ಇಲ್ಲ.

೭ ಯಾಕಂದರೆ ಜನಾಂಗದ ಮೇಲೆ ಜನಾಂಗವೂ, ರಾಜ್ಯದ
ಮೇಲೆ ರಾಜ್ಯವೂ, ಏಳುವವು; ಮತ್ತು ಅಲ್ಲಲ್ಲಿ ಬರಗಳೂ, ವ್ಯಾ
೮ ಧಿಗಳೂ, ಭೂಕಂಪಗಳೂ, ಇರುವವು; ಇವೆಲ್ಲಾ ವೇದನೆಗಳ
೯ ಆರಂಭವು. ಆಗ ಉಪದ್ರವಕ್ಕೆ ನಿಮ್ಮನ್ನು ಒಪ್ಪಿಸಿ, ನಿಮ್ಮನ್ನು
ಕೊಂದು ಹಾಕುವರು; ಮತ್ತು ನನ್ನ ಹೆಸರಿನ ನಿಮಿತ್ತ ಎಲ್ಲಾ
೧೦ ಜನಾಂಗಗಳಿಂದ ಹಗೆ ಮಾಡಲ್ಪಡುವಿರಿ; ಆಗ ಅನೇಕರು ಅಟಂಕ
ಪಡುವರು; ಒಬ್ಬರನ್ನೊಬ್ಬರು ಒಪ್ಪಿಸಿ ಕೊಡುವರು; ಒಬ್ಬರ
೧೧ ನ್ನೊಬ್ಬರು ಹಗೆ ಮಾಡುವರು; ಮತ್ತು ಅನೇಕ ಸುಳ್ಳು ಪ್ರವಾ
೧೨ ದಿಗಳು ಎದ್ದು, ಅನೇಕರನ್ನು ಮೋಸಗೊಳಿಸುವರು; ಇದಲ್ಲದೆ
ಅನೀತಿಯು ಹೆಚ್ಚಾಗುವದರಿಂದ, 'ಅನೇಕರ ಪ್ರೀತಿಯು ತಣ್ಣಗಾ
೧೩ ಗುವದು; ಆದರೆ ಅಂತ್ಯದ ಪರ್ಯಂತರ ತಾಳ್ಮವವನ್ನಾವ
೧೪ ನೋ ಅವನೇ ರಕ್ಷಿಸಲ್ಪಡುವನು. ಮತ್ತು ಈ ರಾಜ್ಯ ಸುವಾರ್ತೆ
ಯು ಸಮಸ್ತ ಲೋಕದಲ್ಲಿ ಜನಾಂಗಗಳಿಗೆ ಸಾಕ್ಷಿಯಾಗಿ ಸಾರ
ಲ್ಪಡುವದು; ಆಗ ಅಂತ್ಯವು ಬರವದು.

೧೫ ಆದದರಿಂದ ನೀವು ಪ್ರವಾದಿಯಾದ ದಾನಿಯೇಲನ ಮುಖಾಂ
ತರ ಹೇಳಲ್ಪಟ್ಟ ಹಾಳು ಮಾಡುವ ಅಸಹ್ಯವು ಪರಿಶುದ್ಧ ಸ್ಥಳ
ದಲ್ಲಿ ನಿಂತಿರುವದನ್ನು ನೋಡುವಾಗ—ಓದುವವನು ಗ್ರಹಿಸಲಿ—
೧೬ ಆಗ ಯೆಹೂದದಲ್ಲಿ ಇರುವವರು ಬೆಟ್ಟಗಳಿಗೆ ಓಡಿ ಹೋಗಲಿ.
೧೭ ಪಾಳಿಗೆಯ ಮೇಲೆ ಇರುವವನು ಮನೆಯಿಂದ ಏನಾದರೂ ತ
೧೮ ಕ್ಕೊಂಡು ಹೋಗುವದಕ್ಕೆ ಇಳಿಯದಿರಲಿ; ಹೊಲದಲ್ಲಿ ಇರುವವ
ನು ತನ್ನ ವಸ್ತ್ರಗಳನ್ನು ತಕ್ಕೊಂಡು ಹೋಗುವದಕ್ಕೆ ಹಿಂದಿರುಗ
೧೯ ದಿರಲಿ. ಆದರೆ ಆ ದಿವಸಗಳಲ್ಲಿ ಗರ್ಭಿಣಿಯರಿಗೂ ಮೊಲೆ ಕೊ
೨೦ ಡುವವರಿಗೂ ಅಯ್ಯೋ! ಇದಲ್ಲದೆ ನಿಮ್ಮ ಪಲಾಯನವು ಹಿಮ
ಕಾಲದಲ್ಯಾದರೂ ಸಬ್ಬತಿನಲ್ಯಾದರೂ ಆಗದ ಹಾಗೆ ಪ್ರಾರ್ಥಿ
೨೧ ಸಿರಿ; ಯಾಕಂದರೆ ಆಗ ಮಹಾ ಉಪದ್ರವು ಇರುವದು. ಅಂಥಾ
ದ್ದು ಜಗದುತ್ಪತ್ತಿ ಮೊದಲ್ಗೊಂಡು ಈ ವರಗೂ ಆಗಲಿಲ್ಲ, ಇನ್ನು
೨೨ ಮೇಲೆಯೂ ಆಗುವದಿಲ್ಲ. ಮತ್ತು ಆ ದಿವಸಗಳು ಅಡಕ ಮಾಡಲ್ಪ
ಡದಿದ್ದರೆ, ಯಾವ ಮಾಂಸವಾದರೂ ರಕ್ಷಿಸಲ್ಪಡದು ಆದರೆ ಆ
ಯೆಲ್ಪಟ್ಟವರಿಗೋಸ್ಕರ, ಆ ದಿವಸಗಳು ಅಡಕ ಮಾಡಲ್ಪಡುವವು.

೨೩ ಆಗ ಯಾವನಾದರೂ ನಿಮಗೆ, ಇಗೋ, ಕ್ರಿಸ್ತನು ಇಲ್ಲಿ!
೨೪ ಅಗೋ, ಅಲ್ಲಿ! ಅಂದರೆ, ನಂಬ ಬೇಡಿರಿ. ಯಾಕಂದರೆ ಸುಳ್ಳು
ಕ್ರಿಸ್ತರೂ ಸುಳ್ಳು ಪ್ರವಾದಿಗಳೂ ಎದ್ದು, ಸಾಧ್ಯವಾದರೆ, ಆಯ
ಲ್ಪಟ್ಟವರನ್ನು ಸಹ ಮೋಸಗೊಳಿಸುವಷ್ಟು ದೊಡ್ಡ ಲಕ್ಷಣಗ
೨೫ ಳನ್ನೂ ಅದ್ಭುತಗಳನ್ನೂ ನಡಿಸುವರು. ಇಗೋ, ಮುಂಚೆ
೨೬ ನಿಮಗೆ ಹೇಳಿದ್ದೇನೆ. ಹೀಗಿರುವದರಿಂದ, ಇಗೋ, ಅರಣ್ಯದಲ್ಲಿ
ಇದ್ದಾನೆಂದು ನಿಮಗೆ ಹೇಳಿದರೆ, ಹೊರಡ ಬೇಡಿರಿ; ಇಗೋ,
೨೭ ಕೊಠಡಿಗಳಲ್ಲಿ ಇದ್ದಾನೆ ಅಂದರೆ, ನಂಬ ಬೇಡಿರಿ. ಯಾಕಂದರೆ
ಮಿಂಚು ಮೂಡಣದಿಂದ ಹೊರಟು, ಪಡವಲ ಪರ್ಯಂತರ
ಪ್ರಕಾಶಿಸುವದು ಹ್ಯಾಗೋ, ಹಾಗೆಯೇ ಮನುಷ್ಯನ ಮಗನ
೨೮ ಬರುವಿಕೆಯು ಇರುವದು. ಯಾಕಂದರೆ ಹೆಣವು ಎಲ್ಲಿಯೋ,
ಅಲ್ಲಿ ಹದ್ದುಗಳು ಕೂಡಿ ಬರುವವು.

೨೯ ಮತ್ತು ಆ ದಿವಸಗಳ ಉಪದ್ರವು ಆದ ಕೂಡ್ಲೆ, ಸೂರ್ಯ
ನು ಕತ್ತಲಾಗುವನು; ಚಂದ್ರನು ತನ್ನ ಪ್ರಕಾಶವನ್ನು ಕೊಡುವ
ದಿಲ್ಲ; ನಕ್ಷತ್ರಗಳು ಆಕಾಶದಿಂದ ಬಿದ್ದು ಹೋಗುವವು; ಆಕಾಶ
೩೦ ಗಳ ಬಲಗಳು ಚಲಿಸಲ್ಪಡುವವು; ಆಗ ಮನುಷ್ಯನ ಮಗನ
ಗುರುತು ಆಕಾಶದಲ್ಲಿ ಕಾಣಿಸುವದು. ಮತ್ತು ಭೂಮಿಯ ಕುಲ
ಗಳೆಲ್ಲಾ ಬಡು ಕೊಂಡು, ಮನುಷ್ಯನ ಮಗನು ಆಕಾಶದ ಮೇಘ
ಗಳ ಮೇಲೆ ಬಹು ಬಲ ಮಹಿಮೆಗಳಿಂದ ಬರುವದನ್ನು ನೋಡು
೩೧ ವರು. ಅವನು ತನ್ನ ದೂತರನ್ನು ತುತೂರಿಯ ದೊಡ್ಡ ಶಬ
ದಿಂದ ಕಳುಹಿಸುವನು. ಅವರು ಅವನು ಆದು ಕೊಂಡವರನ್ನು
ಆಕಾಶದ ಒಂದು ಕೊನೆಯಿಂದ ಮತ್ತೊಂದು ಕೊನೆಯ ಪ
ರ್ಯಂತರ, ನಾಲ್ಕು ದಿಕ್ಕುಗಳಿಂದ ಕೂಡಿಸುವರು.

೩೨ ಅಂಜೂರದ ಮರದಿಂದ ಸಾಮ್ಯವನ್ನು ಕಲಿತು ಕೊಳ್ಳಿರಿ;
ಅದರ ಕೊಂಬೆಯು ಇನ್ನು ಹಸೇದಾಗಿ ಎಲೆಗಳನ್ನು ಬಿಡುವಾಗ,
33 ಬೆಸಲುಕಾಲ ಸಮೀಪವಾಗಿದೆ ಎಂದು ತಿಳುಕೊಳ್ಳುತ್ತೀರಿ. ಅದೇ
ಪ್ರಕಾರ ನೀವು ಇವುಗಳೆಲ್ಲಾ ನೋಡುವಾಗ, ಸಮೀಪವಾಗಿದೆ;
೩೪ ಬಾಗಲಿನ ಮುಂದೆಯೂ ಅದೆ, ಎಂದು ತಿಳುಕೊಳ್ಳಿರಿ. ನಿಶ್ಚಯ
ವಾಗಿ ನಿಮಗೆ ಹೇಳುತ್ತೇನೆ, ಇವೆಲ್ಲಾ ಆಗುವ ಪರ್ಯಂತರ ಈ
೩೫ ಸಂತತಿಯು ಗತಿಸಿ ಹೋಗದು. ಆಕಾಶವೂ ಭೂಮಿಯೂ
ಗತಿಸಿ ಹೋಗುವವು; ಆದರೆ ನನ್ನ ವಾಕ್ಯಗಳು ಗತಿಸಿ ಹೋಗವು.
೩೬ ಇದಲ್ಲದೆ ಆ ದಿವಸವೂ ಆ ಘಳಿಗೆಯೂ ನನ್ನ ತಂದೆ ಒಬ್ಬನಿಗೆ
ಹೊರ್ತು ಮತ್ಯಾರಿಗೂ, ಪರಲೋಕದಲ್ಲಿರುವ ದೂತರಿಗೂ
೩೭ ಸಹ, ತಿಳಿಯದು. ಆದರೆ ನೋಹನ ದಿವಸಗಳು ಹ್ಯಾಗೋ, ಹಾ
೩೮ ಗೆಯೇ ಮನುಷ್ಯನ ಮಗನ ಬರುವಿಕೆಯು ಇರುವದು. ಹ್ಯಾಗಂ
ದರೆ ಪ್ರಳಯಕ್ಕೆ ಮುಂಚಿನ ದಿವಸಗಳಲ್ಲಿ ನೋಹನು ನಾವೆಯ
ಲ್ಲಿ ಪ್ರವೇಶಿಸುವ ದಿವಸದ ಪರ್ಯಂತರ, ಅವರು ಉಣ್ಣುತ್ತಾ,
೩೯ ಕುಡಿಯುತ್ತಾ, ಮದುವೆ ಮಾಡಿ ಕೊಳ್ಳುತ್ತಾ, ಮಾಡಿ ಕೊಡು
ತ್ತಾ, ಪ್ರಳಯವು ಬಂದು, ಎಲ್ಲರನ್ನು ಕೈಯುವ ಪರ್ಯಂ
ತರ, ಹ್ಯಾಗೆ ಅರಿಯದೆ ಇದ್ದರೋ, ಹಾಗೆಯೇ ಮನುಷ್ಯನ
೪೦ ಮಗನ ಬರುವಿಕೆಯು ಇರುವದು. ಆಗ ಇಬ್ಬರು ಹೊಲದಲ್ಲಿ
ಇರುವರು; ಒಬ್ಬನು ತಕ್ಕೊಳ್ಳಲ್ಪಡುವನು, ಒಬ್ಬನು ಬಿಡಲ್ಪಡು
೪೧ ವನು; ಇಬ್ಬರು ಬೀಸುವ ಕಲ್ಲಿನಲ್ಲಿ ಬೀಸುತ್ತಿರುವರು; ಒಬ್ಬಳು
ತಕ್ಕೊಳ್ಳಲ್ಪಡುವಳು, ಒಬ್ಬಳು ಬಿಡಲ್ಪಡುವಳು.



೪೨ ಆದದರಿಂದ ಎಚ್ಚರಿಕೆಯಾಗಿರ್ರಿ; ಯಾಕಂದರೆ ನಿಮ್ಮ
೪೩ ಕರ್ತನು ಬರುವ ಘಳಿಗೆ ಯಾವದೆಂದು, ಅರಿಯರಿ. ಆದರೆ
ಇದನ್ನು ತಿಳುಕೊಳ್ಳಿರಿ; ಏನಂದರೆ ಕಳ್ಳನು ಬರುವ ಝಾವು
ಮನೇ ಯಜಮಾನನಿಗೆ ತಿಳಿದಿದ್ದರೆ, ಅವನು ಎಚ್ಚರವಾಗಿ ತನ್ನ
೪೪ ಮನೆಯಲ್ಲಿ ಕನ್ನ ಕೊರೆಯ ಗೊಡಿಸದೆ ಇರುವನು. ಆದಕಾ
ರಣ ನೀವು ಸಿದ್ಧವಾಗಿರ್ರಿ; ಯಾಕಂದರೆ ನೀವು ನೆನಸದ ಘಳಿಗೆ
ಯಲ್ಲಿ ಮನುಷ್ಯನ ಮಗನು ಬರುತ್ತಾನೆ.

೪೫ ಹಾಗಾದರೆ ಕರ್ತನು, ತನ್ನ ಕುಟುಂಬದ ಮೇಲೆ, ಅವರಿಗೆ
ತಕ್ಕ ಕಾಲದಲ್ಲಿ ಆಹಾರವನ್ನು ಕೊಡುವದಕ್ಕೆ ಇಟ್ಟ ನಂಬಿಕೆ
೪೬ ಯೂ ವಿವೇಕವೂ ಉಳ್ಳ ದಾಸನು ಯಾವನು? ಯಾವನು
ಈ ಪ್ರಕಾರ ಮಾಡುವದನ್ನು ಅವನ ಕರ್ತನು ಬಂದು ಕಂಡು
೪೭ ಕೊಳ್ಳುವನೋ, ಆ ದಾಸನು ಭಾಗ್ಯವಂತನು. ನಿಶ್ಚಯವಾಗಿ
ನಿಮಗೆ ಹೇಳುತ್ತೇನೆ, ತನಗಿರುವ ಎಲ್ಲವುಗಳ ಮೇಲೆ ಅವನನ್ನು
೪೮ ಇರಿಸುವನು. ಆದರೆ ಆ ಕೆಟ್ಟ ದಾಸನು, ನನ್ನ ಕರ್ತನು ಬರುವ
ದಕ್ಕೆ ತಡ ಮಾಡುತ್ತಾನೆಂದು, ತನ್ನ ಹೃದಯದಲ್ಲಿ ಅಂದು
೪೯ ಕೊಂಡು, ಜತೆದಾಸರನ್ನು ಹೊಡೆಯಲೂ, ಮದ್ಯಪಾನಿಗಳ
೫೦ ಸಂಗಡ ಉಣ್ಣಲೂ ಕುಡಿಯಲೂ ಆರಂಭಿಸಿದರೆ, ಆ ದಾಸನ
ಕರ್ತನು ಅವನು ನೆನಸದ ದಿವಸದಲ್ಲಿಯೂ ತಿಳಿಯದ ಘಳಿಗೆ
೫೧ ಯಲ್ಲಿಯೂ ಬಂದು, ಅವನನ್ನು ಛೇದಿಸಿ ಬಿಟ್ಟು, ಅವನ ಭಾಗ
ವನ್ನು ಕಪಟಿಗಳ ಸಂಗಡ ನೇಮಿಸುವನು. ಅಲ್ಲಿ ಅಳುವಿಕೆಯೂ
ಹಲ್ಲು ಕಡಿಯುವಿಕೆಯೂ ಇರುವವು.

## ೨೫. ಸಂಧಿ.

೧ ಆಗ ಪರಲೋಕ ರಾಜ್ಯವು ತಮ್ಮ ದೀಪಗಳನ್ನು ತೆಗೆದು
ಕೊಂಡು, ಮದಲಿಂಗನನ್ನು ಎದುರುಗೊಳ್ಳ ಹೊರಟ ಹತ್ತು
೨ ಮಂದಿ ಕನ್ಯಾಸ್ತ್ರೀಯರಿಗೆ ಸಮಾನವಾಗಿದೆ. ಅವರಲ್ಲಿ ಐವರು
೩ ವಿವೇಕಿಗಳು, ಐವರು ಹುಚ್ಚರು. ಹುಚ್ಚರಾದವರು ತಮ್ಮ
ದೀಪಗಳನ್ನು ತೆಗೆದು ಕೊಂಡು, ಎಣ್ಣೆಯನ್ನು ತಮ್ಮ ಸಂಗಡ
೪ ತಕ್ಕೊಳ್ಳಲಿಲ್ಲ. ಆದರೆ ವಿವೇಕಿಗಳು ತಮ್ಮ ದೀಪಗಳ ಸಂಗಡ
೫ ತಮ್ಮ ಬುದ್ದಲಿಗಳಲ್ಲಿ ಎಣ್ಣೆ ತಕ್ಕೊಂಡರು. ಮದಲಿಂಗನು ತಡ
೬ ಮಾಡುವಾಗ, ಎಲ್ಲರೂ ತೂಕಡಿಸಿ ನಿದ್ದೆ ಮಾಡಿದರು. ಆದರೆ
ಮಧ್ಯರಾತ್ರಿಯಲ್ಲಿ, ಇಗೋ, ಮದಲಿಂಗನು ಬರುತ್ತಾನೆ; ಅವನೆ
ದುರಿಗೆ ಹೊರಟು ಹೋಗಿರಿ, ಎಂಬ ಕೂಗು ಉಂಟಾಯಿತು.
೭ ಆಗ ಆ ಕನ್ಯಾಸ್ತ್ರೀಯರೆಲ್ಲರು ಎದ್ದು, ತಮ್ಮ ದೀಪಗಳನ್ನು
ಸಿದ್ಧ ಮಾಡಿದರು. ಆದರೆ ಹುಚ್ಚರು ವಿವೇಕಿಗಳಿಗೆ, ನಮ್ಮ ದೀಪ
೮ ಗಳು ಆರಿ ಹೋಗುತ್ತವೆ; ನಿಮ್ಮ ಎಣ್ಣೆಯಲ್ಲಿ ನಮಗೆ ಕೊಡಿರಿ,
ಅನ್ನಲು; ವಿವೇಕಿಗಳು ಪ್ರತ್ಯುತ್ತರವಾಗಿ, ನಮಗೂ ನಿಮಗೂ
ಸಾಲದೆ ಹೋದೀತು; ನೀವು ಮಾರುವವರ ಬಳ್ಳಿಗೆ ಹೋಗಿ, ನಿಮ
೯ ಗೆ ಕೊಂಡು ಕೊಂಡರೆ ವಾಸಿ, ಅಂದರು. ಆದರೆ ಅವರು ಕೊಂಡು
ಕೊಳ್ಳುವದಕ್ಕೆ ಹೋಗುವಷ್ಟರಲ್ಲಿ ಮದಲಿಂಗನು ಬಂದನು;
ಸಿದ್ಧವಾದವರು ಅವನ ಸಂಗಡ ಮದುವೆಗೆ ಪ್ರವೇಶಿಸಿದರು; ಆಗ
೧೦ ಬಾಗಲು ಮುಚ್ಚಲ್ಪಟ್ಟಿತು. ತರುವಾಯ ಮಿಕ್ಕಾದ ಕನ್ಯಾಸ್ತ್ರೀ
ಯರು ಸಹ ಬಂದು, ಕರ್ತನೇ, ಕರ್ತನೇ, ನಮಗೆ ತೆರೆ,
೧೧ ಅಂದರು. ಆದರೆ ಅವನು ಪ್ರತ್ಯುತ್ತರವಾಗಿ, ನಿಶ್ಚಯವಾಗಿ ನಿಮಗೆ
ಹೇಳುತ್ತೇನೆ, ನಿಮ್ಮನ್ನು ಅರಿಯೆನು, ಅಂದನು. ಆದದರಿಂದ
ಎಚ್ಚರಿಕೆಯಾಗಿರ್ರಿ; ಯಾಕಂದರೆ ಮನುಷ್ಯನ ಮಗನು ಬರುವ
ದಿನವನ್ನಾಗಲಿ ಘಳಿಗೆಯನ್ನಾಗಲಿ ಅರಿಯರಿ.

೧೪ ಯಾಕಂದರೆ ದೇಶಾಂತರಕ್ಕೆ ಹೋಗುವ ಒಬ್ಬ ಮನುಷ್ಯ
ನು ತನ್ನ ದಾಸರನ್ನು ಕರೆದು, ಅವರಿಗೆ ತನ್ನ ಆಸ್ತಿಯನ್ನು
೧೫ ಒಪ್ಪಿಸಿದ ಹಾಗೆ. ಅವನು ಒಬ್ಬನಿಗೆ ಐದು ತಲಾಂತು, ಒಬ್ಬನಿಗೆ
ಎರಡೂ, ಒಬ್ಬನಿಗೆ ಒಂದೂ; ಒಬ್ಬೊಬ್ಬನಿಗೆ ಅವನವನ ಸಾಮ
ರ್ಥ್ಯದ ಪ್ರಕಾರ ಕೊಟ್ಟು, ಸಂಗತಿಲೇ ಹೊರಟನು. ಆಗ ಐದು ತ
ಲಾಂತು ಹೊಂದಿದವನು ಹೋಗಿ, ಅವುಗಳಿಂದ ವ್ಯಾಪಾರ ಮಾಡಿ,
೧೬ ಬೇರೆ ಐದು ತಲಾಂತು ಮಾಡಿ ಕೊಂಡನು. ಅದೇ ಪ್ರಕಾರ ಎರಡು
ಹೊಂದಿದವನು ಸಹ ಬೇರೆ ಎರಡು ಸಂಪಾದಿಸಿ ಕೊಂಡನು.
೧೭ ಆದರೆ ಒಂದು ಹೊಂದಿದವನು ಹೋಗಿ, ಭೂಮಿ ಅಗೆದು, ತನ್ನ
೧೮ ಯಜಮಾನನ ಹಣವನ್ನು ಬಚ್ಚಿಟ್ಟನು. ಬಹು ಕಾಲವಾದ ಮೇಲೆ,
ಆ ದಾಸರ ಯಜಮಾನನು ಬಂದು, ಅವರಿಂದ ಲೆಖ್ಖ ತೆಗೆದು
೧೯ ಕೊಳ್ಳುವಾಗ, ಐದು ತಲಾಂತು ಹೊಂದಿದವನು ಬಂದು, ಬೇರೆ
ಐದು ತಲಾಂತು ತಂದು, ಅಯ್ಯಾ, ಐದು ತಲಾಂತು ನನಗೆ
ಒಪ್ಪಿಸಿದಿಯಲ್ಲ! ಇಗೋ, ಅವುಗಳಿಂದ ಇನ್ನು ಐದು ತಲಾಂತು
೨೦ ಸಂಪಾದಿಸಿ ಕೊಂಡಿದ್ದೇನೆ, ಅಂದನು. ಆಗ ಅವನ ಯಜಮಾ
ನನು ಅವನಿಗೆ, ಚನ್ನಾಯಿತು, ನಂಬಿಕೆಯುಳ್ಳ ಒಳ್ಳೆ ದಾಸನೇ,
ಸ್ವಲ್ಪವಾದದರ ಮೇಲೆ ನಂಬಿಕೆಯುಳ್ಳವನಾಗಿದ್ದಿ, ಬಹಳವಾ
ದರ ಮೇಲೆ ನಿನ್ನನ್ನು ಇರಿಸುವೆನು; ನಿನ್ನ ಯಜಮಾನನ ಸಂ
೨೧ ತೋಷದಲ್ಲಿ ಪ್ರವೇಶಿಸು, ಅಂದನು. ಆ ಮೇಲೆ ಎರಡು ತಲಾಂ
ತು ಹೊಂದಿದವನು ಸಹ ಬಂದು, ಅಯ್ಯಾ, ನನಗೆ ಎರಡು
ತಲಾಂತು ಒಪ್ಪಿಸಿದಿಯಲ್ಲ! ಇಗೋ, ಅವುಗಳಿಂದ ಇನ್ನು ಎರಡು
೨೩ ತಲಾಂತು ಸಂಪಾದಿಸಿ ಕೊಂಡಿದ್ದೇನೆ, ಅಂದನು. ಅವನ ಯಜ
ಮಾನನು ಅವನಿಗೆ, ಚನ್ನಾಯಿತು, ನಂಬಿಕೆಯುಳ್ಳ ಒಳ್ಳೆ
ದಾಸನೇ, ಸ್ವಲ್ಪವಾದದರ ಮೇಲೆ ನಂಬಿಕೆಯುಳ್ಳವನಾಗಿದ್ದಿ,
ಬಹಳವಾದದರ ಮೇಲೆ ನಿನ್ನನ್ನು ಇರಿಸುವೆನು; ನಿನ್ನ ಯಜ
೨೪ ಮಾನನ ಸಂತೋಷದಲ್ಲಿ ಪ್ರವೇಶಿಸು, ಅಂದನು. ಆಗ ಒಂದು ತ
ಲಾಂತು ಹೊಂದಿದವನು ಸಹ ಬಂದು, ಅಯ್ಯಾ, ನೀನು ಬಿತ್ತದೆ
ಇರುವಲ್ಲಿ ಕೊಯ್ಯುವ, ಚೆಲ್ಲದೆ ಇರುವಲ್ಲಿ ಕೂಡಿಸುವ, ಕಠಿಣ
೨೫ ಮನುಷ್ಯನೆಂದು ತಿಳಿದು, ಭಯಪಟ್ಟು, ಹೋಗಿ, ನಿನ್ನ ತಲಾಂ
ತು ಭೂಮಿಯಲ್ಲಿ ಬಚ್ಚಿಟ್ಟೆನು; ಇಗೋ, ನಿನ್ನದು ನಿನಗುಂಟು,
೨೬ ಅಂದನು. ಅವನ ಯಜಮಾನನು ಪ್ರತ್ಯುತ್ತರವಾಗಿ ಅವನಿಗೆ,
ಮೈಗಳ್ಳನಾದ ಕೆಟ್ಟ ದಾಸನೇ, ನಾನು ಬಿತ್ತದೆ ಇರುವಲ್ಲಿ ಕೊ
ಯ್ಯುತ್ತೇನೆ, ಚೆಲ್ಲದೆ ಇರುವಲ್ಲಿ ಕೂಡಿಸುತ್ತೇನೆ, ಎಂದು ತಿಳು
೨೭ ಕೊಂಡಿ; ಹಾಗಾದರೆ ನನ್ನ ಹಣವನ್ನು ಚೀನಿವಾರರಿಗೆ ಕೊಡ ಬೇ
ಕಾಗಿತ್ತು; ಆಗ ನಾನು ಬರುವಾಗ, ನನ್ನದನ್ನು ಬಡ್ಡಿಯ ಸಂಗಡ
೨೮ ತಕ್ಕೊಳ್ಳುತ್ತಿದ್ದೆನು; ಹೀಗಿರುವದರಿಂದ ಅವನಿಂದ ಆ ತಲಾಂತು
೨೯ ತೆಗೆದು, ಹತ್ತು ತಲಾಂತು ಹೊಂದಿದವನಿಗೆ ಕೊಡಿರಿ; ಯಾಕಂ
ದರೆ ಉಂಟಾದ ಪ್ರತಿ ಮನುಷ್ಯನಿಗೆ ಕೊಡಲ್ಪಡುವದು, ಆಗ
ಅವನಿಗೆ ಹೆಚ್ಚಿರುವದು; ಆದರೆ ಇಲ್ಲದವನಿಂದ ಅವನಿಗೆ ಇದ್ದ
೩೦ ದ್ದು ಸಹ ತೆಗೆಯಲ್ಪಡುವದು. ಮತ್ತು ಈ ನಿರ್ಪ್ರಯೋಜನ
ವಾದ ದಾಸನನ್ನು ಹೊರಗಿನ ಕತ್ತಲೆಯೊಳಗೆ ದೊಬ್ಬಿರಿ. ಅಲ್ಲಿ
ಅಳುವಿಕೆಯೂ, ಹಲ್ಲು ಕಡಿಯುವಿಕೆಯೂ, ಇರುವವು.

೩೧ ಇದಲ್ಲದೆ ಮನುಷ್ಯನ ಮಗನು ತನ್ನ ಮಹಿಮೆಯಲ್ಲಿ ತನ್ನ

ಪರಿಶುದ್ಧ ದೂತಕೆಲ್ಲರ ಸಂಗಡ ಬರುವಾಗ, ತನ್ನ ಮಹಿಮೆಯ
೩೦ ಸಿಂಹಾಸನದ ಮೇಲೆ ಕೂಡುವನು. ಮತ್ತು ಅವನ ಮುಂದೆ
ಜನಾಂಗಗಳೆಲ್ಲಾ ಕೂಡಲ್ಪಡುವವು. ಮತ್ತು ಕುರುಬನು ಕುರಿಗ
ಳನ್ನೂ ಆಡುಗಳನ್ನೂ ಬೇರೆ ಬೇರೆ ಮಾಡುವ ಪ್ರಕಾರ, ಅವರ
೩೩ ನ್ನು ಬೇರೆ ಬೇರೆ ಮಾಡಿ, ಕುರಿಗಳನ್ನು ತನ್ನ ಬಲಪಾರ್ಶ್ವದ
ಲ್ಲಿಯೂ, ಆಡುಗಳನ್ನು ಎಡಪಾರ್ಶ್ವದಲ್ಲಿಯೂ, ನಿಲ್ಲಿಸುವನು.
೩೪ ಆಗ ಅರಸನು ತನ್ನ ಬಲಪಾರ್ಶ್ವದಲ್ಲಿ ಇರುವವರಿಗೆ, ನನ್ನ
ತಂದೆಯಿಂದ ಅಭಿವರ್ದಿಸಲ್ಪಟ್ಟವರೇ, ಬನ್ನಿರಿ; ಜಗದುತ್ಪತ್ತಿ
ಯಿಂದ ನಿಮಗೆ ಸಿದ್ಧ ಮಾಡಲ್ಪಟ್ಟ ರಾಜ್ಯವನ್ನು ಬಾಧ್ಯವಾಗಿ
೩೫ ಹೊಂದಿರಿ. ಯಾಕಂದರೆ ನಾನು ಹಸಿದಿರಲಾಗಿ, ನನಗೆ ಉಣ್ಣಾ
ಕೊಟ್ಟಿರಿ; ದಾಹ ಪಡಲಾಗಿ, ನನಗೆ ಕುಡಿಯ ಕೊಟ್ಟಿರಿ; ಪರದೇಶಿ
೩೬ ಯಾಗಿರಲಾಗಿ, ನನ್ನನ್ನು ಸೇರಿಸಿ ಕೊಂಡಿರಿ; ಬೆತ್ತಲೆಯಾಗಿರ
ಲಾಗಿ, ನನಗೆ ಉಡ ಕೊಟ್ಟಿರಿ; ಅಸ್ವಸ್ಥವಾಗಿರಲಾಗಿ, ನನ್ನನ್ನು
ಪರಾಮರಿಸಿದಿರಿ; ಕೆಳೆಯಲ್ಲಿ ಇರಲಾಗಿ, ನನ್ನ ಬಳಿಗೆ ಬಂದಿರಿ,
೩೭ ಎಂದು ಹೇಳುವನು. ಆಗ ನೀತಿವಂತರು ಅವನಿಗೆ ಪ್ರತ್ಯುತ್ತರವಾಗಿ,
ಕರ್ತನೇ, ಯಾವಾಗ ನಿನ್ನನ್ನು ಹಸಿದವನಾಗಿ ನೋಡಿ, ಸಾಕಿ
ದೆವು! ಇಲ್ಲವೆ, ನಿನ್ನನ್ನು ದಾಹ ಪಡುವವನಾಗಿ ನೋಡಿ, ಕುಡಿ
೩೮ ಯ ಕೊಟ್ಟೆವು! ಯಾವಾಗ ನಿನ್ನನ್ನು ಪರದೇಶಿಯಾಗಿ ನೋಡಿ,
ಸೇರಿಸಿ ಕೊಂಡೆವು! ಇಲ್ಲವೆ ನಿನ್ನನ್ನು ಬೆತ್ತಲೆಯಾಗಿ ನೋಡಿ,
೩೯ ಉಡ ಕೊಟ್ಟೆವು! ಯಾವಾಗ ನಿನ್ನನ್ನು ಅಸ್ವಸ್ಥವಾಗಿ, ಇಲ್ಲವೆ
ಕೆಳೆಯಲ್ಲಿರುವವನಾಗಿ ನೋಡಿ, ನಿನ್ನ ಬಳಿಗೆ ಬಂದೆವು! ಎಂದು
೪೦ ಹೇಳುವರು. ಅವರಿಗೆ ಅರಸನು ಪ್ರತ್ಯುತ್ತರವಾಗಿ, ನಿಶ್ಚಯವಾಗಿ
ನಿಮಗೆ ಹೇಳುತ್ತೇನೆ, ನೀವು ಈ ನನ್ನ ಸಹೋದರರಲ್ಲಿ ಎಲ್ಲರಿಗೂ
ಚಿಕ್ಕವನಾದ ಒಬ್ಬನಿಗೆ ಮಾಡಿದದರಿಂದ, ನನಗೆ ಮಾಡಿದಿರೆಂದು,
ಹೇಳುವನು.

೪೧ ಆಗ ಎಡಪಾರ್ಶ್ವದಲ್ಲಿ ಇರುವವರಿಗೆ, ಶಪಿಸಲ್ಪಟ್ಟವರೇ,
ನನ್ನನ್ನು ಬಿಟ್ಟು, ಪಿಶಾಚನಿಗೂ ಅವನ ದೂತರಿಗೂ ಸಿದ್ಧ ಮಾ
೪೨ ಡಲ್ಪಟ್ಟ ನಿತ್ಯ ಬೆಂಕಿಗೆ ಹೋಗಿರಿ. ಯಾಕಂದರೆ ನಾನು ಹಸಿದಿರ
ಲಾಗಿ, ನೀವು ನನಗೆ ಉಣ್ಣಾ ಕೊಡಲಿಲ್ಲ; ದಾಹ ಪಡಲಾಗಿ, ನನಗೆ
೪೩ ಕುಡಿಯ ಕೊಡಲಿಲ್ಲ; ಪರದೇಶಿಯಾಗಿರಲಾಗಿ, ನನ್ನನ್ನು ಸೇರಿಸಿ
ಕೊಳ್ಳಲಿಲ್ಲ; ಬೆತ್ತಲೆಯಾಗಿರಲಾಗಿ, ನನಗೆ ಉಡ ಕೊಡಲಿಲ್ಲ,
ಅಸ್ವಸ್ಥವಾಗಿಯೂ, ಕೆಳೆಯಲ್ಲಿಯೂ, ಇರಲಾಗಿ, ನನ್ನನ್ನು
೪೪ ಪರಾಮರಿಸಲಿಲ್ಲವೆಂದು, ಹೇಳುವನು. ಆಗಲವರು ಅವನಿಗೆ ಪ್ರತ್ಯು
ತ್ತರವಾಗಿ, ಕರ್ತನೇ, ಯಾವಾಗ ನಿನ್ನನ್ನು ಹಸಿದವನಾಗಿಯೂ,
ದಾಹಪಡುವವನಾಗಿಯೂ, ಪರದೇಶಿಯಾಗಿಯೂ, ಬೆತ್ತಲೆಯಾ
ಗಿಯೂ, ಅಸ್ವಸ್ಥನಾಗಿಯೂ, ಕೆಳೆಯಲ್ಲಿ ಇರುವವನಾಗಿಯೂ,
೪೫ ನೋಡಿ, ನಿನಗೆ ಸೇವೆ ಮಾಡಲಿಲ್ಲವೆಂದು ಹೇಳುವರು. ಆಗಲವರಿಗೆ
ಪ್ರತ್ಯುತ್ತರವಾಗಿ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ಇವ
ರಲ್ಲಿ ಎಲ್ಲರಿಗೂ ಚಿಕ್ಕವನಾದ ಒಬ್ಬನಿಗೆ ಮಾಡದದರಿಂದ, ನನ
೪೬ ಗೂ ಮಾಡಲಿಲ್ಲವೆಂದು ಹೇಳುವನು. ಆಗ ಇವರು ನಿತ್ಯ ದಂಡ
ನೆಗೂ, ನೀತಿವಂತರು ನಿತ್ಯ ಜೀವಕ್ಕೂ, ಹೋಗುವರು.

## ೨೬. ಸಂಧಿ.

೧ ಯೇಸು ಈ ಮಾತುಗಳನ್ನೆಲ್ಲಾ ಮುಗಿಸಿದ ಮೇಲೆ, ಆದದ್ದೇ
೨ ನಂದರೆ, ತನ್ನ ಶಿಷ್ಯರಿಗೆ, ಎರಡು ದಿವಸಗಳ ಮೇಲೆ ಪಸ್ಕವಾಗು
ವದೆಂದು ಬಲ್ಲಿರಿ; ಆಗ ಮನುಷ್ಯನ ಮಗನು ಶಿಲುಬೆಗೆ ಹಾಕಲ್ಪ
ಡುವದಕ್ಕೆ ಒಪ್ಪಿಸಲ್ಪಡುವನು, ಅಂದನು.

೩ ಆಗ ಪ್ರಧಾನ ಯಾಜಕರೂ ಶಾಸ್ತ್ರಿಗಳೂ ಜನರ ಹಿರಿಯ
ರೂ ಕಾಯಿಫನೆಂಬ ಪ್ರಧಾನಯಾಜಕನ ಮಠಕ್ಕೆ ಕೂಡಿ ಬಂದು,
೪ ಯೇಸುವನ್ನು ಕಪಟದಿಂದ ಹಿಡಿದು, ಕೊಲ್ಲುವ ಹಾಗೆ, ಆಲೋ
ಚನೆ ಮಾಡಿ ಕೊಂಡರು. ಆದರೆ ಜನರಲ್ಲಿ ಗುಲ್ಲು ಆಗದ ಹಾಗೆ,
ಹಬ್ಬದಲ್ಲಿ ಬೇಡ, ಅಂದರು.

೬ ಯೇಸು ಬೇತಾನ್ಯದಲ್ಲಿ ಕುಷ್ಠ ರೋಗಿಯಾದ ಸೀಮೋನನ
೭ ಮನೆಯಲ್ಲಿರುವಾಗ, ಒಬ್ಬ ಸ್ತ್ರೀಯು ಬಹು ಬೆಲೆಯುಳ್ಳ ಪರ
ಮಳ ತೈಲ ತುಂಬಿದ ಚಂದ್ರಕಾಂತ ಶಿಲಾಭರಣಿಯನ್ನು ತೆಗೆದು
ಕೊಂಡು, ಅವನ ಬಳಿಗೆ ಬಂದು, ಅವನು ಊಟಕ್ಕೆ ಕೂತಿರು
೮ ವಾಗ್ಯೆ ಅದನ್ನು ಅವನ ತಲೆಯ ಮೇಲೆ ಹೊಯಿದಳು. ಇದನ್ನು
ಅವನ ಶಿಷ್ಯರು ನೋಡಿ, ಕೋಪಿಸಿ ಕೊಂಡು, ಈ ನಷ್ಟವು
೯ ಯಾಕೆ! ಈ ತೈಲವನ್ನು ಬಹಳ ಹಣಕ್ಕೆ ಮಾರಿ ಬಿಟ್ಟು, ಬಡವ
೧೦ ರಿಗೆ ಕೊಡ ಬಹುದಾಗಿತ್ತು, ಅಂದರು. ಯೇಸು ಅದನ್ನು ಕೇಳಿದು,
ಅವರಿಗೆ, ಯಾಕೆ ಈ ಸ್ತ್ರೀಯನ್ನು ತೊಂದರೆ ಪಡಿಸುತ್ತೀರಿ!
೧೧ ಅವಳು ನನಗೆ ಒಳ್ಳೆಕ್ರಿಯೆಯನ್ನು ಮಾಡಿದ್ದಾಳೆ; ಯಾಕಂ
ದರೆ ಬಡವರು ಯಾವಾಗಲೂ ನಿಮ್ಮ ಸಂಗಡ ಇದ್ದಾರೆ; ಆದರೆ
೧೨ ನಾನು ಯಾವಾಗಲೂ ನಿಮ್ಮ ಸಂಗಡ ಇರುವದಿಲ್ಲ; ಯಾಕಂದರೆ
ಇವಳು ಈ ತೈಲವನ್ನು ನನ್ನ ಶರೀರದ ಮೇಲೆ ಹೊಯಿದು,
ನನ್ನನ್ನು ಹೂಣುವದಕ್ಕೋಸ್ಕರ ಅದನ್ನು ಮಾಡಿದ್ದಾಳೆ.
೧೩ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಈ ಸುವಾರ್ತೆಯು ಸಮಸ್ತ
ಲೋಕದೊಳಗೆ ಎಲ್ಲಿ ಪ್ರಸಂಗಿಸಲ್ಪಡುವದೋ, ಅಲ್ಲಿ ಇವಳು
ಮಾಡಿದ್ದು ಸಹ, ಇವಳ ನೆನಸಲ್ಪಡುವ ಹಾಗೆ, ಹೇಳಲ್ಪಡುವದು,
ಅಂದನು.

೧೪ ಆಗ ಹನ್ನೆರಡು ಮಂದಿಯಲ್ಲಿ ಒಬ್ಬನಾದ ಯೂದ ಇಸ್ಕರಿ
೧೫ ಯೋತೆಂಬವನು ಪ್ರಧಾನ ಯಾಜಕರ ಬಳಿಗೆ ಹೋಗಿ, ನಾನು ಅ
ವನನ್ನು ನಿಮಗೆ ಒಪ್ಪಿಸಿ ಕೊಡುತ್ತೇನೆ, ನನಗೆ ಏನು ಕೊಡುತ್ತೀರಿ!
ಅಂದನು. ಅವರು ಅವನ ಸಂಗಡ ಮೂವತ್ತು ರೂಪಾಯಿಗೆ
೧೬ ಒಡಂಬಟ್ಟರು. ಅಂದಿನಿಂದ ಅವನನ್ನು ಒಪ್ಪಿಸಿ ಕೊಡುವದಕ್ಕೆ
ಸಮಯವನ್ನು ಹುಡುಕಿದನು.

೧೭ ಆದರೆ ಹುಳಿ ಇಲ್ಲದ ರೊಟ್ಟಿಯ ಹಬ್ಬದ ಮೊದಲನೇ
ದಿವಸದಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು, ನಾವು ನಿನಗೆ
ಪಸ್ಕವನ್ನು ಉಣ್ಣುವದಕ್ಕೆ ಎಲ್ಲಿ ಸಿದ್ಧ ಮಾಡ ಬೇಕು! ಅಂದರು.
೧೮ ಅದಕ್ಕವನು, ಸಿಲಿ ಪಟ್ಟಣಕ್ಕೆ ಇಂಥವನ ಬಳಿಗೆ ಹೋಗಿ, ನನ್ನ
ಸಮಯವು ಸಮೀಪವಾಗಿದೆ, ನಿನ್ನ ಬಳಿಯಲ್ಲಿ ನನ್ನ ಶಿಷ್ಯರ
ಸಂಗಡ ಪಸ್ಕ ಮಾಡುತ್ತೇನೆಂದು, ಬೋಧಕನು ಹೇಳುತ್ತಾನೆಂಬ
೧೯ ದಾಗಿ, ಅವನಿಗೆ ಹೇಳಿರಿ, ಅಂದನು. ಯೇಸು ಅವರಿಗೆ ಆಜ್ಞಾಪಿಸಿ
ದ ಪ್ರಕಾರ ಶಿಷ್ಯರು ಮಾಡಿ, ಪಸ್ಕವನ್ನು ಸಿದ್ಧ ಮಾಡಿದರು.

೨೦ ಸಾಯಂಕಾಲವಾದಾಗ ಹನ್ನೆರಡು ಮಂದಿಯ ಸಂಗಡ ಊಟ
೨೧ ಕ್ಕೆ ಕೂತು ಕೊಂಡನು. ಅವರು ಊಟ ಮಾಡುವಾಗ, ಅವನು,
ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನಿಮ್ಮಲ್ಲಿ ಒಬ್ಬನು ನನ್ನನ್ನು
೨೨ ಒಪ್ಪಿಸಿ ಕೊಡುವನು, ಅಂದನು. ಆಗಲವರು ಬಹಳ ದುಃಖ ಪಟ್ಟು,
ಅವರಲ್ಲಿ ಒಬ್ಬೊಬ್ಬನು, ಕರ್ತನೇ, ನಾನೋ! ಎಂದು ಅವನಿಗೆ
೨೩ ಹೇಳಲಾರಂಭಿಸಿದರು. ಅವನು ಪ್ರತ್ಯುತ್ತರವಾಗಿ, ನನ್ನ ಸಂಗಡ



ಪಾತ್ರೆಯಲ್ಲಿ ಕೈ ಅದ್ದುವವನ್ನಾವನೋ, ಅವನೇ ನನ್ನನ್ನು
೨೪ ಒಪ್ಪಿಸಿ ಕೊಡುವನು. ಮನುಷ್ಯನ ಮಗನು, ಅವನ ವಿಷಯ
ವಾಗಿ ಬರೆದಿರುವ ಪ್ರಕಾರ, ಹೋಗುತ್ತಾನೆ; ಆದರೆ ಯಾವನಿಂದ
ಮನುಷ್ಯನ ಮಗನು ಒಪ್ಪಿಸಲ್ಪಡುತ್ತಾನೋ, ಆ ಮನುಷ್ಯನಿಗೆ
ಅಯ್ಯೋ! ಆ ಮನುಷ್ಯನು ಹುಟ್ಟದೆ ಇದ್ದರೆ, ಅವನಿಗೆ ಒಳ್ಳೇ
೨೫ ದಾಗಿತ್ತು, ಅಂದನು. ಆಗ ಅವನನ್ನು ಒಪ್ಪಿಸಿ ಕೊಟ್ಟ ಯೂದ
ನು, ರಬ್ಬಿಯೇ, ನಾನೋ! ಅನ್ನಲಾಗಿ; ಅವನಿಗೆ, ನೀನು ಹೇಳಿ
ದ್ದೇ ಸರಿ, ಅಂದನು.

೨೬ ಮತ್ತು ಅವರು ಊಟ ಮಾಡುವಾಗ, ಯೇಸು ರೊಟ್ಟಿಯ
ನ್ನು ತೆಗೆದು ಕೊಂಡು, ಸ್ತೋತ್ರ ಮಾಡಿ, ಮುರಿದು, ಶಿಷ್ಯರಿಗೆ
ಕೊಟ್ಟು, ತಕ್ಕೊಳ್ಳಿರಿ; ತಿನ್ನಿರಿ; ಇದು ನನ್ನ ಶರೀರವಾಗಿದೆ,
೨೭ ಅಂದನು. ಆ ಮೇಲೆ ಪಾತ್ರೆಯನ್ನು ತೆಗೆದು ಕೊಂಡು, ಸ್ತೋ
ತ್ರ ಮಾಡಿ, ಅವರಿಗೆ ಕೊಟ್ಟು, ಇದರಲ್ಲಿ ನೀವೆಲ್ಲರು ಕುಡಿಯಿರಿ;
೨೮ ಯಾಕಂದರೆ ಇದು ಅನೇಕರಿಗೋಸ್ಕರ ಪಾಪ ಪರಿಹಾರಕ್ಕಾಗಿ
ಹೊಯ್ಯಲ್ಪಡುವ ಹೊಸ ಒಡಂಬಡಿಕೆಯ ರಕ್ತವಾದ ನನ್ನ ರಕ್ತ
೨೯ ವಾಗಿದೆ. ಇದಲ್ಲದೆ ನಿಮಗೆ ಹೇಳುತ್ತೇನೆ, ಇಂದಿನಿಂದ, ನನ್ನ ತಂ
ದೆಯ ರಾಜ್ಯದಲ್ಲಿ ನಿಮ್ಮ ಸಂಗಡ ಅದನ್ನು ಹೊಸದಾಗಿ ಕುಡಿ
ಯುವ ಆ ದಿನದ ಮಟ್ಟಿಗೂ, ಈ ದ್ರಾಕ್ಷೇ ರಸವನ್ನು ಕುಡಿ
ಯೆನು, ಅಂದನು.

೩೦ ಮತ್ತು ಕೀರ್ತನೆ ಹಾಡಿ, ಇಪ್ಪೇ ಗುತ್ತಕ್ಕೆ ಹೊರಟು ಹೋ
೩೧ ದರು. ಆಗ ಯೇಸು, ನೀವೆಲ್ಲರು ಈ ರಾತ್ರಿ ನನ್ನಲ್ಲಿ ಅಟಂಕ
ಪಡುವಿರಿ; ಯಾಕಂದರೆ, ಕುರುಬನನ್ನು ಹೊಡೆಯುವೆನು; ಮಂ
೩೨ ದೆಯ ಕುರಿಗಳು ಚದರಿ ಹೋಗುವವು, ಎಂದು ಬರೆದಿದೆ. ಆದರೆ
ನಾನು ಎದ್ದ ಮೇಲೆ, ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುವೆ
೩೩ ನೆಂದು ಅವರಿಗೆ ಹೇಳಿದನು. ಪೇತ್ರನು ಅವನಿಗೆ ಪ್ರತ್ಯುತ್ತರವಾಗಿ,
ಎಲ್ಲರೂ ನಿನ್ನಲ್ಲಿ ಅಟಂಕ ಪಟ್ಟರೂ, ನಾನು ಎಂದೂ ಅಟಂಕ
ಪಡೆನು, ಅನ್ನಲು; ಯೇಸು ಅವನಿಗೆ, ನಿಶ್ಚಯವಾಗಿ, ನಿನಗೆ ಹೇ
೩೪ ಳುತ್ತೇನೆ, ಈ ರಾತ್ರಿಯಲ್ಲಿ, ಕೋಳಿ ಕೂಗುವದಕ್ಕಿಂತ ಮುಂಚೆ,
೩೫ ಮೂರು ಸಾರಿ ನನ್ನನ್ನು ಕುರಿತು ಬೊಂಕುವಿ, ಅಂದನು. ಅವನಿಗೆ
ಪೇತ್ರನು, ನಿನ್ನ ಸಂಗಡ ಸಾಯ ಬೇಕಾದರೂ, ನಿನ್ನನ್ನು
ಕುರಿತು ಬೊಂಕೆನು, ಅಂದನು. ಅದೇ ಪ್ರಕಾರ ಶಿಷ್ಯರೆಲ್ಲರೂ
ಹೇಳಿದರು.

೩೬ ಆಗ ಯೇಸು ಅವರ ಸಂಗಡ ಗೆತ್ಸೇಮನೆ ಎಂಬ ಸ್ಥಳಕ್ಕೆ
ಬಂದು, ಶಿಷ್ಯರಿಗೆ, ನಾನು ಅಲ್ಲಿ ಹೋಗಿ, ಪ್ರಾರ್ಥನೆ ಮಾಡಿ
ಬರುವ ಪರ್ಯಂತರ, ಇಲ್ಲಿ ಕೂತು ಕೊಳ್ಳಿರಿ, ಎಂದು ಹೇಳಿ,
೩೭ ಪೇತ್ರನನ್ನೂ ಜೆಬೆದಾಯನ ಇಬ್ಬರು ಮಕ್ಕಳನ್ನೂ ಕೂಡ
೩೮ ಕಕೆದು, ದುಃಖ ವ್ಯಸನ ಪಡಲಾರಂಭಿಸಿ, ನನ್ನ ಪ್ರಾಣವು ಮರ
ಣದ ಮಟ್ಟಿಗೂ ದುಃಖಾಕ್ರಾಂತವಾಗಿದೆ; ಇಲ್ಲಿ ಇದ್ದು, ನನ್ನ
೩೯ ಸಂಗಡ ಎಚ್ಚರವಾಗಿರ್ರಿ ಎಂದು, ಅವರಿಗೆ ಹೇಳಿ, ಸ್ವಲ್ಪ ದೂರ
ಹೋಗಿ, ಮೋರೆ ಕೆಳಗಾಗಿ ಬಿದ್ದು, ನನ್ನ ತಂದೆಯೇ, ಸಾಧ್ಯ
ವಾದರೆ, ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ; ಆದಾ
ಗ್ಯೂ ನನ್ನ ಚಿತ್ತದ ಪ್ರಕಾರವಲ್ಲ, ನಿನ್ನ ಚಿತ್ತದ ಪ್ರಕಾರವೇ ಆ
೪೦ ಗಲಿ, ಎಂದು ಪ್ರಾರ್ಥಿಸಿ, ಶಿಷ್ಯರ ಬಳಿಗೆ ಬಂದು, ಅವರು ನಿದ್ದೆ
ಮಾಡುವದನ್ನು ಕಂಡು, ಪೇತ್ರನಿಗೆ, ಹಾನೋ! ಬಂದು ಘಳಿಗೆ
ಯಾದರೂ ನನ್ನ ಸಂಗಡ ಎಚ್ಚರವಾಗಿರಲಾರಿರೋ! ಕೋಧನೆ
೪೧ ಯಲ್ಲಿ ಪ್ರವೇಶಿಸದ ಹಾಗೆ ಎಚ್ಚರವಾಗಿದ್ದು, ಪ್ರಾರ್ಥಿಸಿರಿ; ಆತ್ಮ
ವು ಸಿದ್ಧವಾಗಿದೆ, ಆದರೆ ಮಾಂಸವು ಬಲಹೀನವಾಗಿದೆ, ಅಂದನು.

೪೨ ತಿರಿಗಿ ಹೋಗಿ, ಎರಡನೇ ಸಾರಿ, ನನ್ನ ತಂದೆಯೇ, ನಾನು
ಅದನ್ನು ಕುಡಿದ ಹೊರ್ತು, ಈ ಪಾತ್ರೆಯು ನನ್ನನ್ನು ಬಿಟ್ಟು
೪೩ ಹೋಗ ಕೂಡದ್ದಾದರೆ, ನಿನ್ನ ಚಿತ್ತವು ಆಗಲಿ, ಎಂದು ಪ್ರಾರ್ಥಿ
ಸಿ, ಬಂದು, ಅವರು ತಿರಿಗಿ ನಿದ್ದೆ ಮಾಡುವದನ್ನು ಕಂಡನು;
೪೪ ಯಾಕಂದರೆ ಅವರ ಕಣ್ಣುಗಳು ಭಾರವಾಗಿದ್ದವು. ಆಗಲವರನ್ನು
ಬಿಟ್ಟು, ತಿರಿಗಿ ಹೋಗಿ, ಮೂರನೇ ಸಾರಿ ಅದೇ ಮಾತು ಹೇಳಿ,
೪೫ ಪ್ರಾರ್ಥಿಸಿದನು. ಆ ಮೇಲೆ ತನ್ನ ಶಿಷ್ಯರ ಬಳಿಗೆ ಬಂದು, ಅವ
ರಿಗೆ, ಇನ್ನೂ ನಿದ್ದೆ ಮಾಡಿ, ವಿಶ್ರಮಿಸಿ ಕೊಳ್ಳಿರಿ; ಇಗೋ, ಘಳಿಗೆ
ಸಮೀಪವಾಯಿತು! ಮನುಷ್ಯನ ಮಗನು ಪಾಪಿಗಳ ಕೈಗೆ
೪೬ ಒಪ್ಪಿಸಲ್ಪಡುತ್ತಾನೆ; ಏಳಿರಿ; ಹೋಗುವ; ಇಗೋ, ನನ್ನನ್ನು
ಒಪ್ಪಿಸಿ ಕೊಡುವವನು ಸಮೀಪವಾಗಿದ್ದಾನೆ, ಅಂದನು.

೪೭ ಅವನು ಇನ್ನು ಮಾತಾಡುತ್ತಿರುವಾಗ, ಇಗೋ, ಹನ್ನೆರಡು
ಮಂದಿಯಲ್ಲಿ ಒಬ್ಬನಾಗಿರುವ ಯೂದನೂ, ಅವನ ಸಂಗಡ ಕತ್ತಿ
ಗಳನ್ನೂ ದೊಣ್ಣೆಗಳನ್ನೂ, ಹಿಡಿದ ದೊಡ್ಡ ಸಮೂಹವೂ ಪ್ರ
ಧಾನ ಯಾಜಕರ ಕಡೆಯಿಂದಲೂ ಜನರ ಹಿರಿಯರ ಕಡೆಯಿಂದ
೪೮ ಲೂ ಬಂದರು. ಆದರೆ ಅವನನ್ನು ಒಪ್ಪಿಸಿ ಕೊಡುವವನು, ನಾನು
ಯಾವನನ್ನು ಮುದ್ದಿಡುತ್ತೇನೋ, ಅವನೇ; ಅವನನ್ನು ಹಿಡಿಯಿರಿ,
೪೯ ಎಂದು ಅವರಿಗೆ ಗುರುತನ್ನು ಹೇಳಿ ಕೊಟ್ಟಿದ್ದನು. ಸಂಗಡಲೇ
ಯೇಸುವಿನ ಬಳಿಗೆ ಬಂದು, ರಬ್ಬಿಯೇ, ಶುಭವಾಗಲಿ, ಎಂದು,
೫೦ ಅವನನ್ನು ಮುದ್ದಿಟ್ಟನು. ಆದರೆ ಯೇಸು ಅವನಿಗೆ, ಸ್ನೇಹಿತನೇ,
ಯಾಕೆ ಬಂದಿ! ಅನ್ನಲು; ಅವರು ಹತ್ತರ ಬಂದು, ಯೇಸುವಿನ
ಮೇಲೆ ಕೈ ಹಾಕಿ, ಅವನನ್ನು ಹಿಡಿದರು.

೫೧ ಆಗ, ಇಗೋ, ಯೇಸುವಿನ ಸಂಗಡ ಇದ್ದವರಲ್ಲಿ ಒಬ್ಬನು
ಕೈ ಚಾಚಿ, ತನ್ನ ಕತ್ತಿಯನ್ನು ಹಿರಿದು, ಪ್ರಧಾನ ಯಾಜಕನ
ದಾಸನನ್ನು ಹೊಡೆದು, ಅವನ ಕಿವಿಯನ್ನು ಕಡಿದು ಹಾಕಿದನು.
೫೨ ಆಗ ಯೇಸು ಅವನಿಗೆ, ನಿನ್ನ ಕತ್ತಿಯನ್ನು ಅದರ ಸ್ಥಳಕ್ಕೆ
ತಿರಿಗಿ ಹಾಕು, ಯಾಕಂದರೆ ಕತ್ತಿಯನ್ನು ಹಿಡಿದವಲೆಲ್ಲರು ಕತ್ತಿ
೫೩ ಯಿಂದ ನಾಶನವಾಗುವರು. ನನಗೆ ಹನ್ನೆರಡು ಗಣಗಳಿಗಿಂತ
ಹೆಚ್ಚಾದ ದೂತರನ್ನು ಕಳುಹಿಸುವ ಹಾಗೆ ಈಗಲೇ ನನ್ನ ತಂದೆ
೫೪ ಯನ್ನು ಬೇಡಿ ಕೊಳ್ಳಲಾರೆನೆಂದು ನೆನಸುತ್ತೀಯೋ! ಹಾಗಾ
ದರೆ, ಹೀಗೆ ಆಗ ಬೇಕೆಂಬ ಬರಹಗಳು ಹ್ಯಾಗೆ ಈಡೇರುವವು!
ಅಂದನು.

೫೫ ಅದೇ ಘಳಿಗೆಯಲ್ಲಿ ಯೇಸು ಸಮೂಹಗಳಿಗೆ, ಕಳ್ಳನಿಗೆ
ವಿರೋಧವಾಗಿ ಬಂದ ಹಾಗೆ, ಕತ್ತಿಗಳಿಂದಲೂ ದೊಣ್ಣೆಗಳಿಂದಲೂ
ನನ್ನನ್ನು ಹಿಡಿಯ ಹೊರಟು ಬಂದಿರೋ! ದಿನಾಲು ದೇವಾಲಯ
ದಲ್ಲಿ ಬೋಧಿಸುತ್ತಾ ನಿಮ್ಮಲ್ಲಿ ಕೂತು ಕೊಂಡಿದ್ದೆನು; ಆಗ ನನ್ನ
೫೬ ನ್ನು ಹಿಡಿಯಲಿಲ್ಲ; ಆದರೆ ಪ್ರವಾದಿಗಳ ಬರಹಗಳು ಈಡೇರುವ
ಹಾಗೆ, ಇದೆಲ್ಲಾ ಆಯಿತು, ಅಂದನು. ಆಗ ಶಿಷ್ಯರೆಲ್ಲರು ಅವ
ನನ್ನು ಬಿಟ್ಟು, ಓಡಿ ಹೋದರು.

೫೭ ಆದರೆ ಯೇಸುವನ್ನು ಹಿಡಿದವರು ಅವನನ್ನು ಪ್ರಧಾನ ಯಾ
ಜಕನಾದ ಕಾಯಿಫನ ಬಳಿಗೆ ತಕ್ಕೊಂಡು ಹೋದರು; ಅಲ್ಲಿ
೫೮ ಶಾಸ್ತ್ರಿಗಳೂ ಹಿರಿಯರೂ ಕೂಡಿ ಬಂದಿದ್ದರು. ಇದಲ್ಲದೆ ಪೇ
ತ್ರನು ದೂರದಿಂದ ಅವನನ್ನು ಪ್ರಧಾನ ಯಾಜಕನ ಮಠದ

ಪರ್ಯಂತರ ಹಿಂಬಾಲಿಸಿ, ಬಳಿಗೆ ಹೋಗಿ, ಅಂತ್ಯವನ್ನು ನೋ
ಡ ಬೇಕೆಂದು, ಉಳಿಗದವರ ಸಂಗಡ ಕೂತು ಕೊಂಡನು.

೫೯ ಆಗ ಪ್ರಧಾನ ಯಾಜಕರೂ ಹಿರಿಯರೂ ಮಂತ್ರಿಸಭೆಯವ
ಕೆಲ್ಲರೂ, ಯೇಸುವನ್ನು ಕೊಲ್ಲಿಸುವ ಹಾಗೆ, ಅವನಿಗೆ ವಿರೋಧ
೬೦ ವಾಗಿ ಅಪಸಾಕ್ಷಿಯನ್ನು ಹುಡುಕಿದರು; ಆದರೆ ಶಿಕ್ಕಲಿಲ್ಲ. ಬಹು
ಮಂದಿ ಅಪಸಾಕ್ಷಿಗಳು ಬಂದರೂ, ಶಿಕ್ಕಲಿಲ್ಲ. ಕಡೆಯಲ್ಲಿ ಇಬ್ಬರು
೬೧ ಅಪಸಾಕ್ಷಿಗಳು ಬಂದು, ನಾನು ದೇವರ ಮಂದಿರವನ್ನು ಕೆಡವಿ,
ಮೂರು ದಿವಸಗಳಲ್ಲಿ ಅದನ್ನು ಕಟ್ಟಿ ಬಲ್ಲೆನೆಂದು, ಇವನು ಹೇಳಿ
೬೨ ದನು, ಅನ್ನಲಾಗಿ; ಪ್ರಧಾನ ಯಾಜಕನು ಎದ್ದು, ಅವನಿಗೆ, ನೀನು
ಏನೂ ಪ್ರತ್ಯುತ್ತರ ಕೊಡುವದಿಲ್ಲವೋ? ಇವರು ನಿನ್ನ ಮೇಲೆ ಸಾಕ್ಷಿ
೬೩ ಹೇಳುವದು ಏನು? ಅಂದನು. ಆದರೆ ಯೇಸು ಸುಮ್ಮನಿದ್ದನು.
ಆಗ ಪ್ರಧಾನ ಯಾಜಕನು ಪ್ರತ್ಯುತ್ತರವಾಗಿ, ನೀನು ದೇವರ
ಮಗನಾದ ಕ್ರಿಸ್ತನಾಗಿದ್ದೀಯೋ? ನಮಗೆ ಹೇಳ ಬೇಕೆಂದು,
೬೪ ನಿನಗೆ ಜೀವವುಳ್ಳ ದೇವರ ಆಣೆ ಇಡುತ್ತೇನೆ, ಅನ್ನಲಾಗಿ; ಯೇ
ಸು ಅವನಿಗೆ, ನೀನು ಹೇಳಿದ್ದೇ ಸರಿ; ಆದಾಗ್ಯೂ ಇನ್ನು ಮೇಲೆ
ಮನುಷ್ಯನ ಮಗನು ಬಲದ ಬಲಪಾರ್ಶ್ವದಲ್ಲಿ ಕೂತಿರುವದ
ನ್ನೂ, ಆಕಾಶದ ಮೇಘಗಳ ಮೇಲೆ ಬರುವದನ್ನೂ, ನೋಡುವಿ
೬೫ ಕೆಂದು, ನಿಮಗೆ ಹೇಳುತ್ತೇನೆ, ಅಂದನು. ಆಗ ಪ್ರಧಾನಯಾಜಕನು
ತನ್ನ ವಸ್ತ್ರಗಳನ್ನು ಹರಕೊಂಡು, ಅವನು ದೂಷಿಸಿದ್ದಾನೆ;
ಸಾಕ್ಷಿಗಳು ಇನ್ಯಾತಕ್ಕೆ! ಇಗೋ, ಈಗಲೇ ಅವನ ದೂಷಣೆ
೬೬ ಯನ್ನೂ ಕೇಳಿದ್ದೀರಿ; ನಿಮಗೆ ಹ್ಯಾಗೆ ತೋಚುತ್ತದೆ! ಅನ್ನಲು;
ಅವರು ಪ್ರತ್ಯುತ್ತರವಾಗಿ, ಮರಣಕ್ಕೆ ಪಾತ್ರನಾಗಿದ್ದಾನೆಂದು,
೬೭ ಹೇಳಿದರು. ಆಗ ಅವನ ಮುಖದಲ್ಲಿ ಉಗುಳಿ, ಅವನನ್ನು ಗುದ್ದಿ
೬೮ ದರು; ಕೆಲವರು ಅವನನ್ನು ಹೊಡೆದು, ಕ್ರಿಸ್ತನೇ, ನಿನ್ನನ್ನು
ಹೊಡೆದವನ್ಯಾರೆಂದು, ನಮಗೆ ಪ್ರವಾದನೆ ಹೇಳು, ಅಂದರು.

೬೯ ಆದರೆ ಪೇತ್ರನು ಹೊರಗೆ ಅಂಗಳದಲ್ಲಿ ಕೂತು ಕೊಂಡಿದ್ದನು.
ಆಗ ಒಬ್ಬ ಸೇವಕಳು ಅವನ ಬಳಿಗೆ ಬಂದು, ನೀನು ಸಹ ಗಲಿಲಾ
೭೦ ಯನಾದ ಯೇಸುವಿನ ಸಂಗಡ ಇದ್ದವನು, ಅನ್ನಲು; ಅವನು
ಎಲ್ಲರ ಮುಂದೆ, ನೀನು ಹೇಳುವದನ್ನು ಅರಿಯೆನೆಂದು ಬೊಂಕಿ
೭೧ ದನು. ಅವನು ಹೊರಗೆ ಬಾಗಲಿಗೆ ಹೋಗುವಾಗ, ಮತ್ತೊಬ್ಬಳು
ಅವನನ್ನು ನೋಡಿ, ಅಲ್ಲಿರುವವರಿಗೆ, ಇವನು ಸಹ ನಜರೇತಿನವ
೭೨ ನಾದ ಯೇಸುವಿನ ಸಂಗಡ ಇದ್ದವನು, ಅಂದಳು. ಆಗಲವನು ಆ
ಮನುಷ್ಯನನ್ನು ಅರಿಯೆನೆಂದು, ಆಣೆ ಇಟ್ಟು, ತಿರಿಗಿ ಬೊಂಕಿ
೭೩ ದನು. ಸ್ವಲ್ಪ ಹೊತ್ತಾದ ಮೇಲೆ, ಅಲ್ಲಿ ನಿಂತಿದ್ದವರು ಪೇತ್ರನ
ಬಳಿಗೆ ಬಂದು, ನೀನು ಸಹ ಅವರಲ್ಲಿ ಒಬ್ಬನು, ನಿಶ್ಚಯ; ನಿನ್ನ
೭೪ ಮಾತು ನಿನ್ನನ್ನು ತೋರಿಸುತ್ತದೆ, ಅನ್ನಲಾಗಿ; ಅವನು, ಆ
ಮನುಷ್ಯನನ್ನು ಅರಿಯೆನೆಂದು, ಶಪಿಸಿಕೊಳ್ಳಲೂ, ಆಣೆ ಇಟ್ಟು
ಕೊಳ್ಳಲೂ, ಆರಂಭಿಸಿದನು. ಸಂಗಡಲೇ ಕೋಳಿ ಕೂಗಿತು.
೭೫ ಆಗ ಪೇತ್ರನು, ಕೋಳಿ ಕೂಗುವದಕ್ಕಿಂತ ಮುಂಚೆ ಮೂರು
ಸಾರಿ ನನ್ನನ್ನು ಕುರಿತು ಬೊಂಕುವಿ ಎಂದು, ಯೇಸು ತನಗೆ
ಹೇಳಿದ ಮಾತನ್ನು ಜ್ಞಾಪಕ ಮಾಡಿಕೊಂಡು, ಹೊರಗೆ ಹೋಗಿ,
ಬಹಳವಾಗಿ ಅತ್ತನು.

## ೨೭. ಸಂಧಿ.

೧ ಇದ್ದಲ್ಲಿಗೆ ಬೆಳಗಾದಾಗ, ಪ್ರಧಾನಯಾಜಕರೆಲ್ಲರೂ ಜನರ
ಹಿರಿಯರೂ ಯೇಸುವನ್ನು ಕೊಲ್ಲಿಸುವದಕ್ಕೆ ಅವನಿಗೆ ವಿರೋಧ
೨ ವಾಗಿ ಆಲೋಚನೆ ಮಾಡಿ, ಅವನನ್ನು ಕಟ್ಟಿಸಿ, ತಕ್ಕೊಂಡು
ಹೋಗಿ, ಅಧಿಪತಿಯಾದ ಪೊಂತ್ಯ ಪಿಲಾತನಿಗೆ ಅವನನ್ನು ಒಪ್ಪಿ
ಸಿದರು.

3 ಆಗ ಅವನನ್ನು ಒಪ್ಪಿಸಿ ಕೊಟ್ಟಿ ಯೂದನು, ಅವನು ಆಜ್ಞೆ
ನಿರ್ಣಯಿಸಲ್ಪಟ್ಟನೆಂದು ನೋಡಿ, ಪಶ್ಚಾತ್ತಾಪ ಪಟ್ಟು, ಪ್ರಧಾ
ನ ಯಾಜಕರಿಗೂ, ಹಿರಿಯರಿಗೂ, ಆ ಮೂವತ್ತು ರೂಪಾಯಿ
೪ ಗಳನ್ನು ತಿರಿಗಿ ತಂದು, ನಾನು ನಿರಪರಾಧವಾದ ರಕ್ತವನ್ನು ಒಪ್ಪಿ
ಸಿ ಕೊಟ್ಟು, ಪಾಪ ಮಾಡಿದೆನು, ಅಂದನು. ಆದರೆ ಅವರು,
೫ ನಮಗೇನು? ನೀನೇ ನೋಡಿಕೋ! ಅಂದರು. ಆಗಲಾ ರೂಪಾ
ಯಿಗಳನ್ನು ದೇವಾಲಯದೊಳಗೆ ಹಾಕಿ ಬಿಟ್ಟು, ಹೊರಟು
೬ ಹೋಗಿ, ಉರ್ಲು ಹಾಕಿ ಕೊಂಡನು. ಆಗ ಪ್ರಧಾನಯಾಜಕರು
ಆ ರೂಪಾಯಿಗಳನ್ನು ತೆಗೆದು, ರಕ್ತದ ಕ್ರಯವಾದದರಿಂದ,
೭ ಅವುಗಳನ್ನು ಬೊಕ್ಕಸದಲ್ಲಿ ಹಾಕ ಬಾರದೆಂದು ಹೇಳಿ, ಆಲೋ
ಚನೆ ಮಾಡಿ, ಅವುಗಳಿಂದ, ಪರದೇಶಿಗಳನ್ನು ಹೂಣುವದಕ್ಕೆ,
೮ ಕುಂಬಾರನ ಹೊಲವನ್ನು ಕೊಂಡು ಕೊಂಡರು. ಆದದರಿಂದ
ಇಂದಿನ ವರೆಗೂ ಆ ಹೊಲಕ್ಕೆ, ರಕ್ತದ ಹೊಲವೆಂಬ ಹೆಸರು
೯ ಉಂಟಾಯಿತು. ಆಗ ಪ್ರವಾದಿಯಾದ ಯೆರೆಮಿಯನಿಂದ ಹೇ
ಳಲ್ಪಟ್ಟದ್ದು ಈಡೇರಿತು; ಅದೇನಂದರೆ, ಇಸ್ರಯೇಲನ ಮಕ್ಕಳು
ಯಾವನನ್ನು ಕ್ರಯ ಮಾಡಿದರೋ, ಆ ಕ್ರಯ ಮಾಡಲ್ಪಟ್ಟ
ವನ ಕ್ರಯವಾದ ಮೂವತ್ತು ರೂಪಾಯಿ ತೆಗೆದು, ಕರ್ತನು
೧೦ ನನಗೆ ನೇಮಿಸಿದ ಪ್ರಕಾರ, ಕುಂಬಾರನ ಹೊಲಕ್ಕೆ ಕೊಟ್ಟರು.

೧೧ ಯೇಸು ಅಧಿಪತಿಯ ಮುಂದೆ ನಿಂತಿರುವಾಗ, ಅಧಿಪತಿಯು,
ನೀನು ಯೆಹೂದ್ಯರ ಅರಸನಾಗಿದ್ದೀಯೋ! ಎಂದು, ಅವನನ್ನು
ಕೇಳಲು; ಯೇಸು ಅವನಿಗೆ, ನೀನು ಹೇಳುವದು ಸರಿ, ಅಂದನು.
೧೨ ಮತ್ತು ಪ್ರಧಾನಯಾಜಕರೂ ಹಿರಿಯರೂ ಅವನ ಮೇಲೆ ದೂರು
೧3 ಹೇಳುವಾಗ, ಅವನು ಏನೂ ಉತ್ತರ ಕೊಡಲಿಲ್ಲ. ಆಗ ಪಿಲಾತನು
ಅವನಿಗೆ, ಇವರು ನಿನ್ನ ಮೇಲೆ ಎಷ್ಟು ದೂರು ಹೇಳುತ್ತಾರೆಂದು,
೧೪ ಕೇಳುವದಿಲ್ಲವೋ! ಅನ್ನಲು; ಅವನಿಗೆ ಒಂದು ಮಾತಿಗಾದರೂ
ಉತ್ತರ ಕೊಡದೆ ಇರುವದರಿಂದ, ಅಧಿಪತಿಯು ಅತ್ಯಾಶ್ಚರ್ಯ
ಪಟ್ಟನು.

೧೫ ಆದರೆ ಹಬ್ಬದ ಸಮಯದಲ್ಲಿ ಅಧಿಪತಿಯು, ಸಮೂಹಕ್ಕೆ
ಅವರು ಇಚ್ಛೈಸುವ ಒಬ್ಬ ಕೆಕೆಯವನನ್ನು ಬಿಡುವ ಮರ್ಯಾದೆ
೧೬ ಇತ್ತು. ಆ ಸಮಯದಲ್ಲಿ ಬರಬ್ಬನೆಂಬ ಒಬ್ಬ ಪ್ರಸಿದ್ಧನಾದ
೧೭ ಕೆಕೆಯವನು ಇದ್ದನು. ಆದದರಿಂದ ಅವರು ಕೂಡಿ ಬಂದಿರು
ವಾಗ, ಅವರಿಗೆ ಪಿಲಾತನು, ನಿಮಗೆ ಯಾವನನ್ನು ಬಿಡ ಬೇಕು!
ಬರಬ್ಬನನ್ನೋ! ಕ್ರಿಸ್ತನೆಂಬ ಯೇಸುವನ್ನೋ? ಅಂದನು.
೧೮ ಯಾಕಂದರೆ ಅವರು ಹೊಟ್ಟೇ ಕಿಚ್ಚಿನಿಂದ ಅವನನ್ನು ಒಪ್ಪಿಸಿದ್ದ
ದೆಂದು, ತಿಳಿದು ಕೊಂಡನು.

೧೯ ಇದಲ್ಲದೆ ಅವನು ಪೀಠದ ಮೇಲೆ ಕೂತಿರುವಾಗ, ಅವನ ಹೆಂ
ಡತಿಯು, ನಿನಗೆ ಆ ನೀತಿವಂತನ ಗೊಡವೆ ಬೇಡ; ಯಾಕಂದರೆ
ಈ ಹೊತ್ತು ಸ್ವಪ್ನದಲ್ಲಿ ಅವನ ವಿಷಯವಾಗಿ ಬಹಳ ಪ್ರಮೆ
ಪಟ್ಟೆನೆಂದು, ಅವನ ಬಳಿಗೆ ಹೇಳಿ ಕಳುಹಿಸಿದಳು.

೨೦ ಆದರೆ ಪ್ರಧಾನಯಾಜಕರೂ ಹಿರಿಯರೂ, ಬರಬ್ಬನನ್ನು
ಬೇಡಿಕೊಂಡು, ಯೇಸುವನ್ನು ನಾಶನ ಮಾಡ ಬೇಕೆಂದು,



೨೧ ಸಮೂಹದವರನ್ನು ಸಮ್ಮತಿ ಪಡಿಸಿದರು. ಆಗ ಅಧಿಪತಿಯು
ಪ್ರತ್ಯುತ್ತರವಾಗಿ ಅವರಿಗೆ, ಈ ಇಬ್ಬರಲ್ಲಿ ಯಾವನನ್ನು ನಿಮಗೆ
೨೨ ಬಿಡ ಬೇಕು! ಅನ್ನಲು; ಬರಬ್ಬನನ್ನು, ಅಂದರು. ಪಿಲಾತನು
ಅವರಿಗೆ, ಹಾಗಾದರೆ ಕ್ರಿಸ್ತನೆಂಬ ಯೇಸುವನ್ನು ಏನು ಮಾಡಲಿ!
ಎಂದು ಹೇಳಲು; ಅವರೆಲ್ಲರು ಅವನಿಗೆ, ಶಿಲುಬೆಗೆ ಹಾಕಲ್ಪಡಲಿ,
೨3 ಅಂದರು. ಅಧಿಪತಿಯು, ಯಾಕೆ! ಕೆಟ್ಟದ್ದೇನು ಮಾಡಿದ್ದಾನೆ!
ಅಂದನು. ಆದರೆ ಅವರು ಬಹು ಹೆಚ್ಚಾಗಿ, ಶಿಲುಬೆಗೆ ಹಾಕಲ್ಪ
೨೪ ಡಲಿ, ಎಂದು ಕೂಗಿದರು. ಆಗ ಪಿಲಾತನು ಗುಲ್ಲು ಹೆಚ್ಚಾಗುವದೇ
ಹೊರ್ತು ಪ್ರಯೋಜನವೇನೂ ಇಲ್ಲವೆಂದು ನೋಡಿ, ನೀರನ್ನು
ತೆಗೆದು ಕೊಂಡು, ಸಮೂಹದ ಮುಂದೆ ಕೈಗಳನ್ನು ತೊಳೆದು,
ಈ ನೀತಿವಂತನ ರಕ್ತಕ್ಕೆ ನಿರಪರಾಧಿಯಾಗಿದ್ದೇನೆ; ನೀವೇ ನೋ
೨೫ ಡಿ ಕೊಳ್ಳಿರಿ, ಅನ್ನಲಾಗಿ; ಜನರೆಲ್ಲಾ ಪ್ರತ್ಯುತ್ತರವಾಗಿ, ಅವನ
ರಕ್ತವು ನಮ್ಮ ಮೇಲೆಯೂ, ನಮ್ಮ ಮಕ್ಕಳ ಮೇಲೆಯೂ,
೨೬ ಬರಲಿ, ಅಂದರು. ಆಗ ಅವರಿಗೆ ಬರಬ್ಬನನ್ನು ಬಿಡಿಸಿದನು.
ಆದರೆ ಯೇಸುವನ್ನು ಬಾರುಗಳಿಂದ ಹೊಡಿಸಿ, ಶಿಲುಬೆಗೆ ಹಾಕ
ಲ್ಪಡುವದಕ್ಕೆ ಒಪ್ಪಿಸಿದನು.

೨೭ ಆಗ ಅಧಿಪತಿಯ ರಾಣುವೆಯವರು ಯೇಸುವನ್ನು ಕಾವಲ
ಮನೆಗೆ ತಕ್ಕೊಂಡು ಹೋಗಿ, ಕಾವಲಿಯವರನ್ನೆಲ್ಲಾ ಅವನ ಹತ್ತರ
೨೮ ಕೂಡಿಸಿ, ಅವನ ವಸ್ತ್ರಗಳನ್ನು ತೆಗೆದು ಬಿಟ್ಟು, ರಕ್ತಾಂಬರದ
ಒಳ್ಳಿಯನ್ನು ಅವನಿಗೆ ಹೊದ್ದಿಸಿ, ಮುಳ್ಳುಗಳಿಂದ ಕಿರೀಟವನ್ನು
೨೯ ಹೆಣೆದು, ಅವನ ತಲೆಯ ಮೇಲೆ ಇಟ್ಟು, ಅವನ ಬಲಗೈಗೆ ಬೆತ್ತ
ಕೊಟ್ಟು, ಅವನ ಮುಂದೆ ಮೊಣಕಾಲೂರಿ, ಯೆಹೂದ್ಯರ ಅರ
ಸನೇ, ಶುಭವಾಗಲಿ; ಎಂದು ಅವನನ್ನು ಹಾಸ್ಯ ಮಾಡಿದರು.
೩೦ ಮತ್ತು ಅವನ ಮೇಲೆ ಉಗುಳಿ, ಬೆತ್ತ ತಕ್ಕೊಂಡು, ಅವನ ತಲೆ
೩೧ ಯ ಮೇಲೆ ಹೊಡೆದರು. ಅವನಿಗೆ ಹಾಸ್ಯ ಮಾಡಿದ ಮೇಲೆ,
ಅವನಿಂದ ಒಳ್ಳಿಯನ್ನು ತೆಗೆದು, ಅವನ ವಸ್ತ್ರಗಳನ್ನು ಅವನಿಗೆ
ಹೊದಿಸಿ, ಅವನನ್ನು ಶಿಲುಬೆಗೆ ಹಾಕುವದಕ್ಕೆ ತಕ್ಕೊಂಡು ಹೋ
೩೨ ದರು. ಹೊರಗೆ ಹೋಗುವಾಗ, ಸೀಮೋನನೆಂಬ ಒಬ್ಬ ಕುರೇ
ನ್ಯನಾದ ಮನುಷ್ಯನನ್ನು ಕಂಡು, ಅವನ ಶಿಲುಬೆ ಹೊರುವ
ಹಾಗೆ, ಇವನನ್ನು ಬಲವಂತ ಮಾಡಿದರು.

33 ಮತ್ತು ಕಪಾಲಸ್ಥಳವೆಂದು, ಅರ್ಥವುಳ್ಳ ಗೊಲ್ಗೊಥ ಎಂಬ
೩೪ ಸ್ಥಳಕ್ಕೆ ಬಂದಾಗ, ಅವನಿಗೆ ಪಿತ್ತ ಕಲಿಸಿದ ಹುಳಿ ರಸವನ್ನು
ಕುಡಿಯ ಕೊಟ್ಟರು. ಅದನ್ನು ರುಚಿ ನೋಡಿ, ಕುಡಿಯಲೊಲ್ಲದೆ
ಇದ್ದನು.

೩೫ ಆಗ ಅವನನ್ನು ಶಿಲುಬೆಗೆ ಹಾಕಿ, ಅವನ ವಸ್ತ್ರಗಳನ್ನು, ಚೀ
ಟು ಹಾಕಿ ಪಾಲಿಟ್ಟರು. ಹೀಗೆಯೇ, ನನ್ನ ವಸ್ತ್ರಗಳನ್ನು ತಮ್ಮಲಿ
ಪಾಲಿಟ್ಟು, ನನ್ನ ಅಂಗಿಗೋಸ್ಕರ ಚೀಟು ಹಾಕಿದರೆಂದು, ಪ್ರವಾ
೩೬ ದಿ ಹೇಳಿದ ವಾಕ್ಯವು ಈಡೇರಿತು. ಮತ್ತು ಅಲ್ಲಿ ಕೂತು ಕೊಂಡು
೩೭ ಅವನನ್ನು ಕಾಯುತ್ತಿದ್ದರು. ಮತ್ತು, ಇವನು ಯೆಹೂದ್ಯರ
ಅರಸನಾದ ಯೇಸುವೆಂದು ಅವನ ದೂರನ್ನು ಬರಿಸಿ, ಅವನ ತಲೆ
೩೮ ಯ ಮೇಲ್ಗಡೆ ಹಚ್ಚಿದರು. ಆಗ ಇಬ್ಬರು ಕಳ್ಳರು, ಒಬ್ಬನು
ಬಲಗಡೆಯಲ್ಲಿ, ಒಬ್ಬನು ಎಡಗಡೆಯಲ್ಲಿ ಅವನ ಸಂಗಡ ಶಿಲುಬೆಗೆ
ಹಾಕಲ್ಪಟ್ಟರು.

೩೯ ಇದಲ್ಲದೆ ಹಾದು ಹೋಗುವವರು ತಮ್ಮ ತಲೆಗಳನ್ನು ಅಲ್ಲಾ
೪೦ ಡಿಸಿ ಕೊಂಡು, ದೇವಾಲಯವನ್ನು ಕೆಡವಿ, ಮೂರು ದಿವಸಗಳಲ್ಲಿ
ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ, ನೀನು ದೇವರ ಮಗನಾಗಿ
ದ್ದರೆ, ಶಿಲುಬೆಯಿಂದ ಇಳಿದು ಬಾ, ಎಂದು ಅವನನ್ನು ದೂಷಿಸಿ
೪೧ ದರು. ಅದೇ ಮೇರೆಗೆ ಪ್ರಧಾನ ಯಾಜಕರು ಶಾಸ್ತ್ರಿಗಳ ಹಿರಿಯರ
ಸಂಗಡ ಅವನಿಗೆ ಹಾಸ್ಯ ಮಾಡಿ, ಬೇಕೊಬ್ಬರನ್ನು ರಕ್ಷಿಸಿದನು,
೪೨ ತನ್ನನ್ನು ರಕ್ಷಿಸಿಕೊಳ್ಳಲಾರನು; ಅವನು ಇಸ್ರಯೇಲಿನ ಅರಸ
ನಾಗಿದ್ದರೆ, ಶಿಲುಬೆಯಿಂದ ಈಗ ಇಳಿದು ಬರಲಿ; ಆಗ ಅವನಲ್ಲಿ
೪3 ವಿಶ್ವಾಸವಿಡುತ್ತೇವೆ; ದೇವರನ್ನು ನಂಬಿದನು; ಅವನಿಗೆ ಬೇಕಾ
ದರೆ, ಈಗ ಇವನನ್ನು ಬಿಡಿಸಲಿ; ದೇವರ ಮಗನಾಗಿದ್ದೇನೆಂದು
೪೪ ಹೇಳಿದನಲ್ಲ! ಅಂದರು. ಅವನ ಸಂಗಡ ಶಿಲುಬೆಗೆ ಹಾಕಲ್ಪಟ್ಟ
ಕಳ್ಳರು ಸಹ ಅದೇ ಪ್ರಕಾರ ಅವನನ್ನು ನಿಂದಿಸಿದರು.

೪೫ ಮತ್ತು ಆರನೇ ತಾಸಿನಿಂದ ಒಂಭತ್ತನೇ ತಾಸಿನ ಪರ್ಯಂ
೪೬ ತರ ದೇಶವೆಲ್ಲಾದರ ಮೇಲೆ ಕತ್ತಲಾಯಿತು. ಹೆಚ್ಚು ಕಡಿಮೆ
ಒಂಭತ್ತನೇ ತಾಸಿನಲ್ಲಿ ಯೇಸು ಮಹಾ ಶಬ್ದದಿಂದ, ಎಲೀ, ಎಲೀ,
ಲಮ್ಮ ಸಬಕ್ತಾನಿ ಎಂದು, ಕೂಗಿದನು. ಅದೇನಂದರೆ, ನನ್ನ
ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈ ಬಿಟ್ಟಿದ್ದೀ!
೪೭ ಎಂಬುವದು. ಅಲ್ಲಿ ನಿಂತವರಲ್ಲಿ ಕೆಲವರು ಅದನ್ನು ಕೇಳಿ, ಇವನು
೪೮ ಎಲೀಯೆನನ್ನು ಕರೆಯುತ್ತಾನೆ, ಅಂದರು. ಸಂಗಡಲೇ ಅವರಲ್ಲಿ
ಒಬ್ಬನು ಓಡಿ ಹೋಗಿ, ಪಾಚಿಯನ್ನು ತೆಗೆದು ಕೊಂಡು, ಹುಳಿ
ರಸ ತುಂಬಿಸಿ, ಬೆತ್ತದಲ್ಲಿ ತಗಲಿಸಿ, ಅವನಿಗೆ ಕುಡಿಯ ಕೊಟ್ಟನು.
೪೯ ಮಿಕ್ಕಾದವರು, ಬಿಡು; ಎಲೀಯೆನು ಬಂದು, ಅವನನ್ನು ರಕ್ಷಿಸು
ವನೇನೋ, ನೋಡೋಣ, ಅಂದರು.

೫೦ ಆದರೆ ಯೇಸು ತಿರಿಗಿ ಮಹಾ ಶಬ್ದದಿಂದ ಕೂಗಿ, ಅತ್ತು
೫೧ ಬಿಟ್ಟನು. ಆಗ, ಇಗೋ, ದೇವಾಲಯದ ತೆರೆಯೂ ಮೇಲಿನಿಂದ
ಕೆಳಗಿನ ಪರ್ಯಂತರ ಎರಡಾಗಿ ಹರಿದು ಹೋಯಿತು; ಭೂಮಿ
೫೨ ಯು ಕಂಪಿಸಿತು; ಬಂಡೆಗಳು ಕೀಳಿ ಹೋದವು; ಸಮಾಧಿಗಳು
ತೆರೆಯಲ್ಪಟ್ಟವು; ಮತ್ತು ನಿದ್ದೆ ಮಾಡಿದ ಅನೇಕ ಪರಿಶುದ್ಧರ
೫3 ಶರೀರಗಳು ಎಬ್ಬಿಸಲ್ಪಟ್ಟವು. ಅವನು ಎದ್ದ ಮೇಲೆ, ಅವರು
ಸಮಾಧಿಗಳಿಂದ ಹೊರಟು, ಪರಿಶುದ್ಧ ಪಟ್ಟಣದಲ್ಲಿ ಪ್ರವೇಶಿಸಿ, ಅನೇ
೫೪ ಕರಿಗೆ ಕಾಣಿಸಿ ಕೊಂಡರು. ಅದರೆ ಶತಾಧಿಪತಿಯೂ, ಅವನ ಸಂ
ಗಡ ಯೇಸುವನ್ನು ಕಾಯುವವರೂ, ಭೂಕಂಪವನ್ನೂ ಆದ
ಕಾರ್ಯಗಳನ್ನೂ ನೋಡಿ, ಬಹು ಭಯಪಟ್ಟು, ನಿಶ್ಚಯವಾಗಿ
ಇವನು ದೇವರ ಮಗನಾಗಿದ್ದನು, ಅಂದರು.

೫೫ ಮತ್ತು ಗಲಿಲಾಯದಿಂದ ಯೇಸುವನ್ನು ಹಿಂಬಾಲಿಸಿ, ಅವನಿಗೆ
ಸೇವೆ ಮಾಡಿದ ಅನೇಕ ಸ್ತ್ರೀಯರು ಅಲ್ಲಿ ದೂರದಿಂದ ನೋಡು
೫೬ ತ್ತಿದ್ದರು. ಅವರೊಳಗೆ ಮಗ್ದಲದವಳಾದ ಮರಿಯಳೂ, ಯಾ
ಕೋಬ್ ಯೋಸೆಯರ ತಾಯಿಯಾದ ಮರಿಯಳೂ, ಜೆಬೆ
ದಾಯನ ಮಕ್ಕಳ ತಾಯಿಯೂ, ಇದ್ದರು.

೫೭ ಸಾಯಂಕಾಲವಾದಾಗ, ಅರಿಮಥಾಯದವನಾದ ಯೋಸೆಫ
ನೆಂಬ ಒಬ್ಬ ಐಶ್ವರ್ಯವುಳ್ಳ ಮನುಷ್ಯನು ಬಂದನು; ಇವನು
೫೮ ಸಹ ಯೇಸುವಿನ ಶಿಷ್ಯನಾಗಿದ್ದನು. ಇವನು ಪಿಲಾತನ ಬಳಿಗೆ
ಹೋಗಿ, ಯೇಸುವಿನ ಶರೀರವನ್ನು ಬೇಡಿ ಕೊಳ್ಳಲಾಗಿ, ಪಿಲಾ
ತನು, ಶರೀರವನ್ನು ಕೊಡ ಬೇಕೆಂದು, ಅಪ್ಪಣೆ ಕೊಟ್ಟನು.
೫೯ ಯೋಸೆಫನು ಶರೀರವನ್ನು ತೆಗೆದು ಕೊಂಡು, ಅದನ್ನು ಶುದ್ಧ
೬೦ ವಾದ ನಾರು ಮಡಿಯಲ್ಲಿ ಸುತ್ತಿ, ಬಂಡೆಯಲ್ಲಿ ತಾನು ತೋಡಿಸಿದ್ದ
ತನ್ನ ಹೊಸ ಸಮಾಧಿಯೊಳಗೆ ಅದನ್ನು ಇಟ್ಟು, ಸಮಾಧಿಯ

೭೧ ಬಾಗಲಿಗೆ ದೊಡ್ಡ ಕಲ್ಲನ್ನು ಹೊರಳಿಸಿ, ಹೋದನು. ಮಗ್ದಲದವಳಾದ ಮರಿಯಳೂ ಮತ್ತೊಬ್ಬ ಮರಿಯಳೂ ಅಲ್ಲಿ ಸಮಾಧಿಗೆ ಎದುರಾಗಿ ಕೂತು ಕೊಂಡಿದ್ದರು.

೬೦ ಸಿದ್ಧ ಮಾಡುವ ದಿವಸಕ್ಕೆ ಮಾರಣೆ ದಿವಸದಲ್ಲಿ ಪ್ರಧಾನ
೬೩ ಯಾಜಕರೂ ಫರಿಸಾಯರೂ ಪಿಲಾತನ ಬಳಿಗೆ ಕೂಡಿ ಬಂದು, ಥೊರೆಯೇ, ಆ ಮೋಸಗಾರನು ಬದುಕುತ್ತಿರುವಾಗ, ಮೂರು ದಿವಸಗಳ ಮೇಲೆ ಏಳುತ್ತೇನೆಂದು, ಹೇಳಿದ್ದನ್ನು ಜ್ಞಾಪಕ ಮಾಡಿ
೬೪ ಕೊಳ್ಳುತ್ತೇವೆ. ಆದಕಾರಣ ಅವನ ಶಿಷ್ಯರು ರಾತ್ರಿಯಲ್ಲಿ ಬಂದು, ಅವನನ್ನು ಕದ್ದು ಕೊಂಡು ಹೋಗಿ, ಸತ್ತವರೊಳಗಿಂದ ಎದ್ದಿದ್ದಾನೆಂದು, ಜನರಿಗೆ ಹೇಳಿದರೆ, ಮೊದಲಿನ ಮೋಸಕ್ಕಿಂತ ಕಡೇದು ಕೆಟ್ಟದ್ದಾಗದ ಹಾಗೆ, ಸಮಾಧಿಯನ್ನು ಮೂರನೇ ದಿವಸದ ಪರ್ಯಂತರ ಭದ್ರ ಮಾಡುವದಕ್ಕೆ ಅಪ್ಪಣೆ ಕೊಡ
೬೫ ಬೇಕು, ಅಂದರು. ಪಿಲಾತನು ಅವರಿಗೆ, ನಿಮಗೆ ಕಾವಲುಂಟು; ಹೋಗಿ, ನಿಮ್ಮ ಕೈಲಾದ ಮಟ್ಟಿಗೂ ಭದ್ರ ಮಾಡಿರಿ, ಅನ್ನಲಾಗಿ,
೬೬ ಅವರು ಹೋಗಿ, ಕಲ್ಲಿಗೆ ಮುದ್ರೆ ಹಾಕಿ, ಸಮಾಧಿಯನ್ನು ಕಾವಲಿಯಿಂದ ಭದ್ರ ಮಾಡಿದರು.

## ೨೮. ಸಂಧಿ.

೧ ಸಬ್ಬತಿನ ಮೇಲೆ ವಾರದ ಮೊದಲನೇ ದಿವಸ ಅರುಣೋದಯವಾದಾಗ, ಮಗ್ದಲದವಳಾದ ಮರಿಯಳೂ, ಆ ಮತ್ತೊಬ್ಬ
೨ ಮರಿಯಳೂ, ಸಮಾಧಿಯನ್ನು ನೋಡ ಬಂದರು. ಆಗ, ಇಗೋ, ಮಹಾ ಭೂಕಂಪ ಉಂಟಾಯಿತು; ಯಾಕಂದರೆ ಕರ್ತನ ದೂ
೩ ತನು ಆಕಾಶದಿಂದ ಇಳಿದು, ಹತ್ತರ ಬಂದು, ಬಾಗಲಿನಿಂದ ಕಲ್ಲನ್ನು ಹೊರಳಿಸಿ, ಅದರ ಮೇಲೆ ಕೂತು ಕೊಂಡನು. ಅವನ
೪ ರೂಪವು ಮಿಂಜಿನ ಹಾಗೆಯೂ, ಅವನ ವಸ್ತ್ರವು ಹಿಮದ ಹಾಗೆ
೫ ಬೆಳುಪಾಗಿಯೂ, ಇತ್ತು; ಅವನ ಭಯದಿಂದ ಕಾಯುವವರು
೬ ಕಳವಳ ಪಟ್ಟು, ಸತ್ತವರ ಹಾಗಾದರು. ಆದರೆ ದೂತನು ಸ್ತ್ರೀಯರಿಗೆ ಪ್ರತ್ಯುತ್ತರವಾಗಿ, ನೀವು ಭಯ ಪಡ ಬೇಡಿರಿ, ಯಾಕಂದರೆ
೭ ಶಿಲುಬೆಗೆ ಹಾಕಲ್ಪಟ್ಟ ಯೇಸುವನ್ನು ಹುಡುಕುತ್ತೀರೆಂದು ಬಲ್ಲೆನು; ಅವನು ಇಲ್ಲಿ ಇಲ್ಲ; ಯಾಕಂದರೆ, ತಾನು ಹೇಳಿದ ಪ್ರಕಾರ ಎದ್ದಿದ್ದಾನೆ; ಕರ್ತನು ಮಲಗಿದ್ದ ಸ್ಥಳವನ್ನು ಬಂದು ನೋಡಿರಿ;
೮ ಮತ್ತು ಬೇಗ ಹೋಗಿ, ಸತ್ತವರೊಳಗಿಂದ ಎದ್ದಿದ್ದಾನೆಂದು, ಅವನ ಶಿಷ್ಯರಿಗೆ ಹೇಳಿರಿ; ಇಗೋ, ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ, ಅಲ್ಲಿ ಅವನನ್ನು ಕಾಣುವಿರಿ. ಇಗೋ, ನಿಮಗೆ ಹೇಳಿದ್ದೇನೆ, ಅಂದನು.

೮ ಅವರು ಭಯದಿಂದಲೂ, ಮಹಾ ಸಂತೋಷದಿಂದಲೂ, ಬೇಗ ಸಮಾಧಿಯನ್ನು ಬಿಟ್ಟು ಹೊರಟು, ಅವನ ಶಿಷ್ಯರಿಗೆ ಶಿಳಿ
೯ ಸುವದಕ್ಕೆ ಓಡಿ ಹೋದರು. ಆದರೆ ಅವನ ಶಿಷ್ಯರಿಗೆ ಶಿಳಿಸುವದಕ್ಕೆ ಹೋಗುವಾಗ, ಇಗೋ, ಯೇಸು ಅವರಿಗೆದುರಾಗಿ ಬಂದು, ಶುಭವಾಗಲಿ! ಅಂದನು. ಆಗ ಅವರು ಹತ್ತರ ಬಂದು, ಅವನ
೧೦ ಪಾದಗಳನ್ನು ಹಿಡಿದು, ಅವನಿಗೆ ನಮಸ್ಕರಿಸಿದರು. ಆಗ ಯೇಸು ಅವರಿಗೆ, ಭಯ ಪಡ ಬೇಡಿರಿ; ಹೋಗಿ, ನನ್ನ ಸಹೋದರರಿಗೆ ಗಲಿಲಾಯಕ್ಕೆ ಹೋಗ ಬೇಕೆಂದು, ಶಿಳಿಸಿರಿ; ಅಲ್ಲಿ ನನ್ನನ್ನು ನೋಡುವರು, ಅಂದನು.

೧೧ ಅವರು ಹೋಗುವಾಗ, ಇಗೋ, ಕಾವಲಿಗಾರರಲ್ಲಿ ಕೆಲವರು ಪಟ್ಣಕ್ಕೆ ಬಂದು, ಆದವುಗಳನ್ನೆಲ್ಲಾ ಪ್ರಧಾನ ಯಾಜಕರಿಗೆ ಶಿಳಿಸಿ
೧೨ ದರು. ಇವರು ಹಿರಿಯರ ಸಂಗಡ ಕೂಡಿ ಕೊಂಡು, ಆಲೋಚನೆ
೧೩ ಮಾಡಿ, ರಾಣುವೆಯವರಿಗೆ ಬಹಳ ಹಣ ಕೊಟ್ಟು, ಅವನ ಶಿಷ್ಯರು ರಾತ್ರಿಯಲ್ಲಿ ಬಂದು, ನಾವು ನಿದ್ದೆ ಮಾಡುವ ವೇಳೆಯಲ್ಲಿ
೧೪ ಅವನನ್ನು ಕದ್ದು ಕೊಂಡು ಹೋದರೆಂದು ಹೇಳಿರಿ. ಇದು ಅಧಿಪತಿಗೆ ಸುದ್ದಿಯಾದರೆ, ನಾವು ಅವನನ್ನು ಸಮ್ಮತಿ ಪಡಿಸಿ, ನಿಮಗೆ
೧೫ ಭಯವಿಲ್ಲದ ಹಾಗೆ ಮಾಡುವೆವು, ಅಂದರು. ಅವರು ಆ ಹಣವನ್ನು ತಕ್ಕೊಂಡು, ಬೋಧಿಸಲ್ಪಟ್ಟ ಹಾಗೆ ಮಾಡಿದರು. ಮತ್ತು ಈ ವಾಕ್ಯವು ಇಂದಿನ ವರಿಗೂ ಯೆಹೂದ್ಯರಲ್ಲಿ ಪ್ರಸಿದ್ಧಿಯಾಗಿದೆ.

೧೬ ಆಗ ಹನ್ನೊಂದು ಮಂದಿ ಶಿಷ್ಯರು ಗಲಿಲಾಯಕ್ಕೆ, ಯೇಸು
೧೭ ತಮಗೆ ನೇಮಿಸಿದ್ದ ಬೆಟ್ಟಕ್ಕೆ ಹೊರಟು ಹೋಗಿ, ಅವನನ್ನು ಕಂಡು, ಅವನಿಗೆ ನಮಸ್ಕರಿಸಿದರು; ಆದರೆ ಕೆಲವರು ಸಂದೇಹ
೧೮ ಪಟ್ಟರು. ಮತ್ತು ಯೇಸು ಹತ್ತರ ಬಂದು, ಅವರ ಸಂಗಡ ಮಾತಾಡಿ, ಹೇಳಿದ್ದೇನಂದರೆ, ಪರಲೋಕದಲ್ಲಿಯೂ ಭೂಲೋಕದ
೧೯ ಲ್ಲಿಯೂ ಸಮಸ್ತ ಅಧಿಕಾರವು ನನಗೆ ಕೊಡಲ್ಪಟ್ಟಿದೆ; ಆದದರಿಂದ ನೀವು ಹೊರಟು ಹೋಗಿ, ಸಮಸ್ತ ಜನಾಂಗಗಳನ್ನು ಶಿಷ್ಯರಾಗ ಮಾಡಿ, ತಂದೆಯ ಮಗನ ಪರಿಶುದ್ಧಾತ್ಮದ ಹೆಸರಿ
೨೦ ನಲ್ಲಿ ಅವರಿಗೆ ಸ್ನಾನ ಕೊಟ್ಟು, ನಾನು ನಿಮಗೆ ಆಜ್ಞಾಪಿಸಿದವುಗಳನ್ನೆಲ್ಲಾ ಕೈ ಕೊಳ್ಳುವದಕ್ಕೆ ಅವರಿಗೆ ಬೋಧಿಸಿರಿ. ಇಗೋ, ನಾನು ಲೋಕಾಂತದ ವರಿಗೂ, ಎಲ್ಲಾ ದಿವಸಗಳಲ್ಲಿ, ನಿಮ್ಮ ಸಂಗಡ ಇದ್ದೇನೆ. ಆಮೆನ್.

---

# THE GOSPEL OF MARK.

## ಮಾರ್ಕನು ಬರೆದ ಸುವಾರ್ತೆ.

## ೧. ಸಂಧಿ.

೧ ದೇವರ ಮಗನಾದ ಯೇಸು ಕ್ರಿಸ್ತನ ಸುವಾರ್ತೆಯ ಪ್ರಾ
೨ ರಂಭವು. ಇಗೋ, ನಾನು ನನ್ನ ದೂತನನ್ನು ನಿನ್ನ ಮುಖದ ಮುಂದೆ ಕಳುಹಿಸುತ್ತೇನೆ; ಅವನು ನಿನ್ನ ಮಾರ್ಗವನ್ನು ನಿನ್ನ
೩ ಮುಂದೆ ಸಿದ್ಧ ಮಾಡುವನು. ಕರ್ತನ ಮಾರ್ಗವನ್ನು ಸಿದ್ಧ ಮಾಡಿರಿ, ಅವನ ಹಾದಿಗಳನ್ನು ನೆಟ್ಟಿಗೆ ಮಾಡಿರಿ, ಎಂದು ಅರಣ್ಯದಲ್ಲಿ ಕೂಗುವವನ ಶಬ್ದವದೆ ಎಂಬದಾಗಿ, ಪ್ರವಾದಿಗಳಲ್ಲಿ ಬರೆದಿ
೪ ರುವ ಪ್ರಕಾರ, ಯೋಹಾನನು ಅರಣ್ಯದಲ್ಲಿ ಸ್ನಾನ ಕೊಡುತ್ತಾ, ಪಾಪಗಳ ಪರಿಹಾರಕ್ಕಾಗಿ ಮಾನಸಾಂತರದ ಸ್ನಾನವನ್ನು
೫ ಸಾರುತ್ತಾ, ಇದ್ದನು. ಮತ್ತು ಯೆಹೂದ ದೇಶವೆಲ್ಲವೂ ಯೆರೂಸಲೇಮಿನವರೂ ಅವನ ಬಳಿಗೆ ಹೊರಟು ಹೋಗಿ, ಎಲ್ಲರು ತಮ್ಮ ಪಾಪಗಳನ್ನು ಅರಿಕೆ ಮಾಡಿ, ಯೊರ್ದನ್ ನದಿಯಲ್ಲಿ ಅವನಿಂದ ಸ್ನಾನ ಹೊಂದಿದರು.

೬ ಯೋಹಾನನು ಒಂಟೇ ಕೂದಲಿನ ವಸ್ತ್ರವನ್ನುಟ್ಟು, ತನ್ನ ನಡುವಿನ ಸುತ್ತ ತೊಗಲಿನ ನಡುಕಟ್ಟನ್ನು ಕಟ್ಟಿ ಕೊಂಡು, ಮಿಡಿತೆ
೭ ಗಳನ್ನೂ ಕಾಡ ಜೇನನ್ನೂ ತಿನ್ನುತ್ತಾ ಇದ್ದನು. ಅವನು ಸಾರಿ ಹೇಳಿದ್ದೇನಂದರೆ, ನನಗಿಂತ ಶಕ್ತನು ನನ್ನ ಹಿಂದೆ ಬರುತ್ತಾನೆ; ಅವನ ಕೆರಗಳ ಬಾರನ್ನು ಬೊಗ್ಗಿ ಕೊಂಡು ಬಿಚ್ಚುವದಕ್ಕೆ ನಾನು
೮ ಯೋಗ್ಯನಲ್ಲ. ನಾನು ನೀರಿನಿಂದ ನಿಮಗೆ ಸ್ನಾನ ಕೊಟ್ಟಿದ್ದೇನೆ; ಆದರೆ ಅವನು ಪರಿಶುದ್ಧಾತ್ಮದಿಂದ ನಿಮಗೆ ಸ್ನಾನ ಕೊಡುವನು.

೯ ಆ ದಿವಸಗಳಲ್ಲಿ ಆದದ್ದೇನಂದರೆ, ಯೇಸು ಗಲಿಲಾಯದ ನಜರೇತಿನಿಂದ ಬಂದು, ಯೋಹಾನನಿಂದ ಯೊರ್ದನಿನಲ್ಲಿ
೧೦ ಸ್ನಾನ ಹೊಂದಿದನು. ಅವನು ನೀರಿನೊಳಗಿಂದ ಏರಿ ಬಂದ ಕೂಡ್ಲೆ, ಆಕಾಶಗಳು ಭೇದವಾಗಿ, ಪರಿಶುದ್ಧಾತ್ಮವು ಪಾರಿವಾಳದಂತೆ ಅವನ ಮೇಲೆ ಇಳಿದು ಬರುವದನ್ನು ನೋಡಿದನು.
೧೧ ಮತ್ತು ನಾನು ಆನಂದ ಪಡುವ ನನ್ನ ಪ್ರಿಯ ಮಗನು ನೀನೇ, ಎಂಬ ಶಬ್ದವು ಆಕಾಶದಿಂದ ಉಂಟಾಯಿತು.

೧೨ ಸಂಗಡಲೇ ಆತ್ಮವು ಅವನನ್ನು ಅರಣ್ಯಕ್ಕೆ ವೈಯಿತು. ಅ
೧೩ ಲ್ಲಿ ಅವನು ಸೈತಾನನಿಂದ ಶೋಧಿಸಲ್ಪಡುವವನಾಗಿ, ನಾಲ್ವತ್ತು ದಿವಸ ಅರಣ್ಯದಲ್ಲಿ ಇದ್ದನು. ಮತ್ತು ಮೃಗಗಳ ಸಂಗಡ ಇದ್ದನು; ಮತ್ತು ದೂತರು ಅವನಿಗೆ ಸೇವೆ ಮಾಡಿದರು.

೧೪ ಆದರೆ ಯೋಹಾನನು ಒಪ್ಪಿಸಲ್ಪಟ್ಟ ಮೇಲೆ, ಯೇಸು ಗಲಿಲಾಯಕ್ಕೆ ಬಂದು, ಸಮಯವು ಪೂರ್ಣವಾಯಿತು; ದೇ
೧೫ ವರ ರಾಜ್ಯವು ಸಮೀಪವಾಯಿತು; ಮಾನಸಾಂತರ ಪಟ್ಟು, ಸುವಾರ್ತೆಯಲ್ಲಿ ವಿಶ್ವಾಸವಿಡಿರಿ ಎಂದು, ದೇವರ ರಾಜ್ಯದ ಸುವಾರ್ತೆಯನ್ನು ಸಾರಿ ಹೇಳಿದನು. ಅವನು ಗಲಿಲಾಯ
೧೬ ಸಮುದ್ರದ ಬಳಿಯಲ್ಲಿ ಸಂಚರಿಸುತ್ತಿರುವಾಗ, ಸೀಮೋನನೂ ಅವನ ಸಹೋದರನಾದ ಅಂದ್ರೆಯನೂ ಸಮುದ್ರದಲ್ಲಿ ಬಲೆ ಹಾಕುತ್ತಿರುವದನ್ನು ಕಂಡನು; ಯಾಕಂದರೆ ಮೀನು ಹಿಡಿಯುವವರಾಗಿದ್ದರು. ಯೇಸು ಅವರಿಗೆ, ನನ್ನ ಹಿಂದೆ ಬನ್ನಿ, ನಿಮ್ಮನ್ನು ಮನುಷ್ಯರನ್ನು ಹಿಡಿಯುವವರಾಗ ಮಾಡುವೆನು ಅನ್ನಲು;
೧೭ ಸಂಗಡಲೇ ತಮ್ಮ ಬಲೆಗಳನ್ನು ಬಿಟ್ಟು, ಅವನನ್ನು ಹಿಂಬಾಲಿಸಿದರು.

೧೮ ಅಲ್ಲಿಂದ ಸ್ವಲ್ಪ ಮುಂದೆ ಹೋಗಿ, ಜೆಬೆದಾಯನ ಮಗನಾದ ಯಾಕೋಬನೂ ಅವನ ಸಹೋದರನಾದ ಯೋಹಾ
೧೯ ನನೂ ಹಡಗದಲ್ಲಿ ತಮ್ಮ ಬಲೆಗಳನ್ನು ನೆಟ್ಟಿಗೆ ಮಾಡುತ್ತಿರುವದನ್ನು ಕಂಡು, ಸಂಗಡಲೇ ಅವರನ್ನು ಕರೆದನು. ಅವರು ತಮ್ಮ ತಂದೆಯಾದ ಜೆಬೆದಾಯನನ್ನು ಕೂಲಿಯವರ ಸಂಗಡ ಹಡಗದಲ್ಲಿ ಬಿಟ್ಟು, ಅವನ ಹಿಂದೆ ಹೊರಟರು.

೨೧ ಮತ್ತು ಕಪೆರ್ನಾಮಿನಲ್ಲಿ ಪ್ರವೇಶಿಸಿದರು; ಕೂಡ್ಲೆ ಅವನು
೨೨ ಸಬ್ಬತಿನಲ್ಲಿ, ಸಭೆಮನೆಗೆ ಹೋಗಿ, ಬೋಧಿಸಿದನು. ಮತ್ತು ಅವನ ಬೋಧನೆಗೆ ಆಶ್ಚರ್ಯ ಪಟ್ಟರು; ಯಾಕಂದರೆ ಶಾಸ್ತ್ರಿಗಳ ಹಾಗಲ್ಲ, ಅಧಿಕಾರ ಉಂಟಾದವನ ಹಾಗೆ, ಅವರಿಗೆ ಬೋಧಿ
೨೩ ಸುತ್ತಿದ್ದನು. ಇದಲ್ಲದೆ ಅವರ ಸಭೆ ಮನೆಯಲ್ಲಿ ಅಶುದ್ಧಾತ್ಮವುಳ್ಳ ಒಬ್ಬ ಮನುಷ್ಯನಿದ್ದನು. ಅವನು ಘುಟ್ಟಿಯಾಗಿ ಕೂಗಿದ್ದೇನಂ
೨೪ ದರೆ, ನಜರೇತಿನವನಾದ ಯೇಸುವೇ, ಬಿಡು; ನಮಗೂ ನಿನಗೂ ಏನು! ನಮ್ಮನ್ನು ನಾಶನ ಮಾಡ ಬಂದಿಯೋ! ನೀನು ಯಾ
೨೫ ರೆಂದು, ಬಲ್ಲೆನು; ದೇವರ ಪರಿಶುದ್ಧನೇ. ಆಗ ಯೇಸು ಅದನ್ನು ಗದರಿಸಿ, ಮೌನವಾಗಿರು, ಅವನೊಳಗಿಂದ ಹೊರಡು, ಅಂದನು.
೨೬ ಆಗ ಅಶುದ್ಧಾತ್ಮವು ಅವನನ್ನು ಒದ್ದಾಡಿಸಿ, ಮಹಾ ಶಬ್ದದಿಂದ
೨೭ ಕೂಗಿ, ಅವನೊಳಗಿಂದ ಹೊರಟಿತು. ಮತ್ತು ಎಲ್ಲರು ಅತ್ಯಾಶ್ಚರ್ಯ, ಪಟ್ಟು, ಇದೇನು! ಈ ಹೊಸ ಬೋಧನೆ ಏನು! ಅವನು ಅಶುದ್ಧಾತ್ಮಗಳಿಗೂ ಅಧಿಕಾರದಿಂದ ಅಪ್ಪಣೆ ಕೊಡುತ್ತಾನೆ; ಅವು ಅವನಿಗೆ ವಿಧೇಯವಾಗಿವೆ ಎಂದು, ತಮ್ಮಲ್ಲಿ ತರ್ಕಿಸಿ
೨೮ ಕೊಂಡರು. ಸಂಗಡಲೇ ಅವನ ಸುದ್ದಿಯು ಗಲಿಲಾಯದ ಸುತ್ತಲಿರುವ ದೇಶಕ್ಕೆಲ್ಲಾ ಹಬ್ಬಿತು.

೨೯ ಆಗಲೇ ಸಭೆಮನೆಯೊಳಗಿಂದ ಹೊರಟು, ಅವರು ಯಾ
೩೦ ಕೋಬ್ ಯೋಹಾನರ ಸಂಗಡ ಸೀಮೋನ್ ಅಂದ್ರೆಯರ ಮನೆಗೆ ಬಂದರು. ಆದರೆ ಸೀಮೋನನ ಅತ್ತೆ ಜ್ವರದಲ್ಲಿ ಬಿದ್ದಿರ
೩೧ ಲಾಗಿ, ಸಂಗಡಲೇ ಅವಳನ್ನು ಕುರಿತು ಅವನಿಗೆ ಹೇಳಿದರು. ಅವನು ಹತ್ತರ ಬಂದು, ಅವಳ ಕೈ ಹಿಡಿದು, ಅವಳನ್ನು ಎಬ್ಬಿಸಿದನು. ಆಗಲೇ ಜ್ವರವು ಅವಳನ್ನು ಬಿಟ್ಟಿತು; ಮತ್ತು ಅವರಿಗೆ ಸೇವೆ ಮಾಡಿದಳು.

೩೨ ಆದರೆ ಸಾಯಂಕಾಲವಾಗಿ, ಸೂರ್ಯನು ಮುಣುಗಿದಾಗ, ಅವರು, ಅಸಾಖ್ಯವಾಗಿಯೂ ದೆವ್ವ ಹಿಡಿದವರಾಗಿಯೂ ಇರುವ
೩೩ ವರೆಲ್ಲರನ್ನು, ಅವನ ಬಳಿಗೆ ತಂದರು. ಇದಲ್ಲದೆ ಪಟ್ಣವೆಲ್ಲಾ ಬಾಗಿಲಿನ ಬಳಿಯಲ್ಲಿ ಕೂಡಿ ಬಂದಿತ್ತು. ಆಗ ಅವನು ನಾನಾರೋಗಗ
೩೪ ಳಿಂದ ಅಸಾಖ್ಯವಾಗಿರುವ ಅನೇಕರನ್ನು ಸ್ವಸ್ಥ ಮಾಡಿ, ಅನೇಕ ದೆವ್ವಗಳನ್ನು ಹೊರದಿಸಿ, ದೆವ್ವಗಳು ಅವನನ್ನು ಅರಿತಿರುವದರಿಂದ ಅವುಗಳನ್ನು ಮಾತಾಡ ಗೊಡಿಸಲಿಲ್ಲ.

೩೫ ಬೆಳಗ್ಯೆ, ಇನ್ನು ಬಹಳ ಕತ್ತಲಿರುವಾಗ, ಅವನು ಎದ್ದು ಹೊ
ರಟು, ಅರಣ್ಯಾ ಸ್ಥಳಕ್ಕೆ ಹೋಗಿ, ಅಲ್ಲಿ ಪ್ರಾರ್ಥನೆ ಮಾಡಿದ
೩೬ ನು. ಮತ್ತು ಸೀಮೋನನೂ ಅವನ ಸಂಗಡ ಇದ್ದವರೂ ಅವನ
೩೭ ನ್ನು ಹಿಂದಟ್ಟಿ, ಅವನನ್ನು ಕಂಡು, ಎಲ್ಲರು ನಿನ್ನನ್ನು ಹುಡುಕು
೩೮ ತ್ತಾರೆಂದು ಅವನಿಗೆ ಹೇಳಿದಾಗ; ಅವನು ಅವರಿಗೆ, ನಾನು ಅಲ್ಲಿ
ಯೂ ಸಾರುವ ಹಾಗೆ ಸಮೀಪವಾಗಿರುವ ಊರುಗಳಿಗೆ ಹೋ
ಗುವ; ಯಾಕಂದರೆ ಅದಕ್ಕಾಗಿ ಹೊರಟು ಬಂದಿದ್ದೇನೆ, ಅಂ
೩೯ ದನು. ಆಗಲವನು ಗಲಿಲಾಯೆವೆಲ್ಲಾದರಲ್ಲಿ ಅವರ ಸಭೆಮನೆಗ
ಳಲ್ಲಿ ಸಾರುತ್ತಾ, ದೆವ್ವಗಳನ್ನು ಹೊರಡಿಸುತ್ತಾ ಬಂದನು.

೪೦ ಆಗ ಒಬ್ಬ ಕುಷ್ಠರೋಗಿಯು ಅವನ ಬಳಿಗೆ ಬಂದು, ಅವ
ನನ್ನು ಬೇಡಿ ಕೊಂಡು, ಸೊಣಕಾಲೂರಿ, ನಿನಗೆ ಮನಸ್ಸಿದ್ದರೆ
೪೧ ನನ್ನನ್ನು ಶುಚಿ ಮಾಡ ಬಲ್ಲಿ, ಎಂದು ಅವನಿಗೆ ಹೇಳಲು; ಯೇ
ಸು ಅಂತಃಕರಣ ಪಟ್ಟು, ಕೈ ಚಾಚಿ, ಅವನನ್ನು ಮುಟ್ಟಿ, ಮನ
೪೨ ಸ್ಸುಂಟು, ಶುಚಿಯಾಗು ಎಂದು ಅವನಿಗೆ ಹೇಳಿದನು. ಅವನು
ಹೇಳಿದ ಕೂಲ್ಲೆ ಕುಷ್ಠವು ಅವನನ್ನು ಬಿಟ್ಟಿತು, ಅವನು ಶುಚಿ
೪೩ ಯಾದನು. ಮತ್ತು ಅವನಿಗೆ ಖಂಡಿತವಾಗಿ ಆಜ್ಞಾಪಿಸಿ, ಸಂಗಡ
೪೪ ಲೇ ಅವನನ್ನು ಕಳುಹಿಸಿ ಬಿಟ್ಟು, ಯಾರಿಗೂ ಏನೂ ಹೇಳ ಬೇಡ,
ನೋಡಿಕೋ; ಆದರೆ ಹೋಗಿ, ಯಾಜಕನಿಗೆ ನಿನ್ನನ್ನು ತೋರಿ
ಸಿ ಕೊಂಡು, ಮೋಶೆಯು ನೇಮಿಸಿದವುಗಳನ್ನು ನಿನ್ನ ಶುದ್ಧೀ
ಕರಣಕ್ಕೋಸ್ಕರ ಅವರಿಗೆ ಸಾಕ್ಷಿಯಾಗಿ ಅರ್ಪಿಸೆಂದು, ಅವ
೪೫ ನಿಗೆ ಹೇಳಿದನು. ಆದರೆ ಅವನು ಹೊರಟು, ಬಹಳವಾಗಿ ಸಾರು
ವದಕ್ಕೂ ಆ ಕಾರ್ಯವನ್ನು ಹಬ್ಬಿಸುವದಕ್ಕೂ ಆರಂಭಿಸಿದ
ಕಾರಣ, ಯೇಸು ಇನ್ನು ಬಹಿರಂಗವಾಗಿ ಪಟ್ಟಣದಲ್ಲಿ ಪ್ರವೇಶಿಸ
ಲಾರದೆ, ಹೊರಗೆ ಅರಣ್ಯಾ ಸ್ಥಳಗಳಲ್ಲಿ ಇದ್ದನು; ಮತ್ತು ಎಲ್ಲಾ
ಕಡೆಯಿಂದ ಅವನ ಬಳಿಗೆ ಬಂದರು.

## ೨. ಸಂಧಿ.

೧ ಕೆಲವು ದಿವಸಗಳಾದ ಮೇಲೆ ಅವನು ತಿರಿಗಿ ಕಪೆರ್ನೌಮಿ
ನಲ್ಲಿ ಪ್ರವೇಶಿಸಿದನು. ಮತ್ತು, ಅವನು ಮನೆಯಲ್ಲಿ ಇದ್ದಾನೆಂದು
೨ ಸುದ್ದಿಯಾದಾಗಲೇ, ಬಾಗಲಿನ ಸಮೀಪದಲ್ಲಾದರೂ ಸ್ಥಳ ಸಾ
ಲದ ಹಾಗೆ, ಅನೇಕರು ಕೂಡಿಕೊಳ್ಳಲು, ಅವರಿಗೆ ವಾಕ್ಯವನ್ನು
ಹೇಳಿದನು.

೩ ಆಗ ನಾಲ್ಕು ಮಂದಿಯಿಂದ ಹೊರಲ್ಪಡುವ ಒಬ್ಬ ಪಕ್ಷವಾ
ಯು ಕೋಗಿಯನ್ನು ಅವನ ಬಳಿಗೆ ತೆಗೆದು ಕೊಂಡು ಬಂದರು.
೪ ಸಮೂಹದ ನಿಮಿತ್ತ ಅವನ ಸಮೀಪಕ್ಕೆ ಬರಲಾರದೆ, ಅವನು
ಇದ್ದಲ್ಲಿಯ ಮಾಳಿಗೆ ತೆಗೆದು, ಕೊರೆದು, ಆ ಪಕ್ಷವಾಯುಕೋ
೫ ಗಿ ಬಿದ್ದಿರುವ ಮಂಚವನ್ನು ಇಳಿಸಿದರು. ಯೇಸು ಅವರ ವಿಶ್ವಾ
ಸವನ್ನು ನೋಡಿ, ಆ ಪಕ್ಷವಾಯುಕೋಗಿಗೆ, ಮಗನೇ, ನಿನ್ನ
೬ ಪಾಪಗಳು ನಿನಗೆ ಪರಿಹರಿಸಲ್ಪಟ್ಟಿವೆ, ಅಂದನು. ಆದರೆ ಶಾಸ್ತ್ರಿ
೭ ಗಳಲ್ಲಿ ಕೆಲವರು ಅಲ್ಲಿ ಕೂತು ಕೊಂಡು, ಇವನು ಯಾಕೆ ಹೀಗೆ
ದೂಷಣೆ ಹೇಳುತ್ತಾನೆ! ದೇವರೊಬ್ಬನೇ ಹೊರ್ತು ಮತ್ತಾವ
ನು ಪಾಪಗಳನ್ನು ಪರಿಹರಿಸ ಬಲ್ಲನು! ಎಂದು ತಮ್ಮ ಹೃದ
೮ ಯಗಳಲ್ಲಿ ಆಲೋಚಿಸುತ್ತಾ ಇದ್ದರು. ಸಂಗಡಲೇ ಯೇಸು,
ಹೀಗೆ ತಮ್ಮಲ್ಲಿ ಆಲೋಚಿಸುತ್ತಾರೆಂದು, ತನ್ನ ಅತ್ಮದಲ್ಲಿ ತಿಳಿ
ಕೊಂಡು, ಅವರಿಗೆ ಹೇಳಿದ್ದೇನಂದರೆ, ನಿಮ್ಮ ಹೃದಯಗಳಲ್ಲಿ
೯ ಯಾಕೆ ಇವುಗಳನ್ನು ಆಲೋಚಿಸಿ ಕೊಳ್ಳುತ್ತೀರಿ! ಯಾವದು
ಸುಲಭ? ಪಕ್ಷವಾಯುಕೋಗಿಗೆ, ನಿನ್ನ ಪಾಪಗಳು ಪರಿಹರಿಸಲ್ಪ
ಟ್ಟಿವೆ, ಅನ್ನುವದೋ! ಎದ್ದು, ನಿನ್ನ ಮಂಚವನ್ನು ಎತ್ತಿ ನಡಿ,
ಅನ್ನುವದೋ! ಆದರೆ ಭೂಮಿಯ ಮೇಲೆ ಪಾಪಗಳನ್ನು ಪರಿ
೧೦ ಹರಿಸುವದಕ್ಕೆ ಮನುಷ್ಯನ ಮಗನಿಗೆ ಅಧಿಕಾರ ಉಂಟೆಂದು
ನೀವು ತಿಳಿಯುವ ಹಾಗೆ, ಅವನು ಪಕ್ಷವಾಯುಕೋಗಿಗೆ, ಎದ್ದು,
೧೧ ನಿನ್ನ ಮಂಚವನ್ನು ಎತ್ತಿ, ನಿನ್ನ ಮನೆಗೆ ಹೋಗೆಂದು ನಿನಗೆ ಹೇ
೧೨ ಳುತ್ತೇನೆ, ಅಂದನು. ಸಂಗಡಲೇ ಅವನು ಎದ್ದು, ತನ್ನ ಮಂಚ
ವನ್ನು ಎತ್ತಿ, ಎಲ್ಲರ ಮುಂದೆ ಹೊರಟು ಹೋದನು. ಅದಕ್ಕೆ
ಎಲ್ಲರೂ ಭ್ರಮಿಸಿ, ನಾವು ಇಂಥಾದ್ದನ್ನು ಎಂದೂ ನೋಡಲಿಲ್ಲ
ವೆಂದು, ದೇವರನ್ನು ಮಹಿಮೆ ಪಡಿಸಿದರು.

೧೩ ಅವನು ತಿರಿಗಿ ಸಮುದ್ರದ ಕಡೆಗೆ ಹೊರಟು ಹೋದನು;
ಮತ್ತು ಸಮೂಹವೆಲ್ಲಾ ಅವನ ಬಳಿಗೆ ಬಂದಾಗ, ಅವರಿಗೆ ಬೋಧಿ
೧೪ ಸಿದನು. ಹಾದು ಹೋಗುವಾಗ ಅಲ್ಫಾಯೆನ ಮಗನಾದ ಲೇವಿ
ಯೂ ಸುಂಕಕ್ಕೆ ಕೂತಿರುವದನ್ನು ನೋಡಿ, ಅವನಿಗೆ, ನನ್ನನ್ನು
ಹಿಂಬಾಲಿಸು, ಅಂದನು. ಅವನು ಎದ್ದು, ಅವನನ್ನು ಹಿಂಬಾಲಿಸಿ
ದನು. ಯೇಸು ಅವನ ಮನೆಯಲ್ಲಿ ಊಟಕ್ಕೆ ಕೂತಿರುವಾಗ
೧೫ ಆದದ್ದೇನಂದರೆ, ಅವನ ಸಂಗಡಲೂ ಅವನ ಶಿಷ್ಯರ ಸಂಗಡಲೂ
ಅನೇಕ ಸುಂಕದವರೂ ಪಾಪಿಷ್ಠರೂ ಕೂತು ಕೊಂಡಿದ್ದರು;
ಯಾಕಂದರೆ ಅನೇಕರಾಗಿ ಅವನನ್ನು ಹಿಂಬಾಲಿಸಿದರು. ಆಗ
೧೬ ಶಾಸ್ತ್ರಿಗಳೂ ಫರಿಸಾಯರೂ, ಅವನು ಸುಂಕದವರ ಪಾಪಿಷ್ಠರ
ಸಂಗಡ ಉಣ್ಣುವದನ್ನು ನೋಡಿ, ಅವನ ಶಿಷ್ಯರಿಗೆ, ಅವನು
ಸುಂಕದವರ ಪಾಪಿಷ್ಠರ ಸಂಗಡ ಉಂಡು, ಕುಡಿಯುವದೇನು!
೧೭ ಅಂದರು. ಯೇಸು ಅದನ್ನು ಕೇಳಿ, ಸ್ವಸ್ಥವಾಗಿರುವವರಿಗಲ್ಲ,
ಅಸಾಖ್ಯವಾಗಿರುವವರಿಗೆ ವೈದ್ಯನು ಬೇಕು; ನಾನು ನೀತಿವಂತರ
ನ್ನಲ್ಲ, ಪಾಪಿಷ್ಠರನ್ನು ಮಾನಸಾಂತರಕ್ಕೆ ಕರೆಯ ಬಂದಿದ್ದೇ
ನೆಂದು ಅವರಿಗೆ ಹೇಳಿದನು.

೧೮ ಇದಲ್ಲದೆ ಯೋಹಾನನ ಶಿಷ್ಯರೂ ಫರಿಸಾಯರ ಶಿಷ್ಯರೂ
ಉಪವಾಸ ಮಾಡುತ್ತಿರಲಾಗಿ, ಅವನ ಬಳಿಗೆ ಬಂದು, ಯೋ
ಹಾನನ ಶಿಷ್ಯರೂ ಫರಿಸಾಯರ ಶಿಷ್ಯರೂ ಉಪವಾಸ ಮಾ
ಡುವದೂ, ನಿನ್ನ ಶಿಷ್ಯರು ಉಪವಾಸ ಮಾಡದೆ ಇರುವದೂ,
೧೯ ಯಾಕೆ! ಅಂದರು. ಯೇಸು ಅವರಿಗೆ ಹೇಳ್ಳಿದ್ದೇನಂದರೆ, ಮದ
ಲಿಂಗನು ಅವರ ಸಂಗಡ ಇರುವಾಗ ಮದುವೆಯವರು ಉಪವಾಸ
ಮಾಡಲಾಗುವದೋ! ಮದಲಿಂಗನು ಅವರ ಸಂಗಡ ಇರುವಷ್ಟು
೨೦ ಕಾಲ ಉಪವಾಸ ಮಾಡಲಾಗದು. ಆದರೆ ಮದಲಿಂಗನು ಅವರ
ಬಳಿಯಿಂದ ವೈಯಲ್ಪಡುವ ದಿವಸಗಳು ಬರುವವು; ಆಗ
೨೧ ಆ ದಿವಸಗಳಲ್ಲಿ ಉಪವಾಸ ಮಾಡುವರು. ಮತ್ತು ಹಳೆ ವಸ್ತ್ರಕ್ಕೆ
ಹೊಸ ಬಟ್ಟೆಯ ತುಂಡು ಯಾವನೂ ಹಚ್ಚುವದಿಲ್ಲ; ಹಚ್ಚಿದರೆ,
ಹೊಸದಾದ ಅದರ ತ್ಯಾಪೆಯು ಹಳೇದನ್ನು ಹಿಂಬಾವದರಿಂದ
೨೨ ಹರಕು ಹೆಚ್ಚಾಗುವದು. ಮತ್ತು ಹೊಸ ದ್ರಾಕ್ಷೇ ರಸವನ್ನು ಹಳೇ
ಬುದ್ದಲಿಗಳಲ್ಲಿ ಯಾವನೂ ಹಾಕುವದಿಲ್ಲ; ಹಾಕಿದರೆ, ಹೊಸ ದ್ರಾ
ಕ್ಷೇ ರಸವು ಬುದ್ದಲಿಗಳನ್ನು ಒಡೆದು ಬಿಡುವದು; ದ್ರಾಕ್ಷೇ ರಸವು
ಚೆಲ್ಲಿ, ಬುದ್ದಲಿಗಳು ಕೆಟ್ಟು ಹೋಗುವವು; ಆದರೆ ಹೊಸ ದ್ರಾಕ್ಷೇ
ರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕ ಬೇಕು.

೨೩ ಇದಲ್ಲದೆ ಅವನು ಸಬ್ಬತಿನಲ್ಲಿ ಬೈರಿನ ಹೊಲಗಳನ್ನು ದಾಟಿ



ಹೋಗುವಾಗ ಏನಾಯಿತಂದರೆ, ಅವನ ಶಿಷ್ಯರು ನಡೆಯುತ್ತಾ,
೨೪ ತೆನೆಗಳನ್ನು ಕೀಳಲಾರಂಭಿಸಿದರು. ಫರಿಸಾಯರು ಅವನಿಗೆ, ಇ
ಗೋ, ಅವರು ಸಬ್ಬತಿನಲ್ಲಿ ಮಾಡ ಬಾರದ್ದನ್ನು ಮಾಡುವದೇನು!
೨೫ ಅನ್ನಲಾಗಿ; ಅವನವರಿಗೆ, ದಾವೀದನು ಅಗತ್ಯವಿದಾಗ, ಅವನೂ
ಅವನ ಸಂಗಡ ಇದ್ದವರೂ ಹಸಿದಾಗ, ಏನು ಮಾಡಿದನೆಂದೂ,
೨೬ ಅವನು ಪ್ರಧಾನ ಯಾಜಕನಾದ ಅಬಿಯಾತರನ ಕಾಲದಲ್ಲಿ ದೇವರ
ಮನೆಯಲ್ಲಿ ಪ್ರವೇಶಿಸಿ, ಯಾಜಕರು ಹೊರ್ತು ಮತ್ತಾರೂ
ತಿನ್ನ ಬಾರದ ಸಮುಖದ ಕೊಟ್ಟಿಗಳನ್ನು ತಿಂದು, ತನ್ನ ಸಂಗಡ
೨೭ ಇದ್ದವರಿಗೆ ಸಹ ಕೊಟ್ಟನೆಂದೂ, ನೀವು ಎಂದಾದರೂ ಓದಲಿಲ್ಲವೋ
ಅಂದನು. ಮತ್ತು ಅವರಿಗೆ, ಮನುಷ್ಯನು ಸಬ್ಬತಿಗೋಸ್ಕರವ
ಲ್ಲ, ಸಬ್ಬತು ಮನುಷ್ಯನಿಗೋಸ್ಕರ ಉಂಟಾಯಿತು ಹೀಗಿರಲಾ
೨೮ ಗಿ, ಮನುಷ್ಯನ ಮಗನು ಸಬ್ಬತಿಗೂ ಕರ್ತನಾಗಿದ್ದಾನೆ, ಅಂದನು.

## ೩. ಸಂಧಿ.

೧ ಅವನು ತಿರಿಗಿ ಸಭೆಮನೆಯಲ್ಲಿ ಪ್ರವೇಶಿಸಿದಾಗ, ಅಲ್ಲಿ ಬಣಗಿದ
೨ ಕೈಯುಳ್ಳ ಒಬ್ಬ ಮನುಷ್ಯನಿದ್ದನು. ಆಗ ಅವನ ಮೇಲೆ
ತಪ್ಪು ಹೊರಿಸುವ ಹಾಗೆ, ಸಬ್ಬತಿನಲ್ಲಿ ಅವನನ್ನು ಸ್ವಸ್ಥ ಮಾ
3 ಡುವನೇನೋ ಎಂದು, ಅವನನ್ನು ಹೊಂಚಿ ನೋಡಿದರು. ಆಗ
ಲವನು ಆ ಬಣಗಿದ ಕೈಯುಳ್ಳ ಮನುಷ್ಯನಿಗೆ, ಎದ್ದು, ಮಧ್ಯ
ದಲ್ಲಿ ನಿಂತುಕೋ ಎಂದು ಹೇಳಿ, ಅವರಿಗೆ, ಸಬ್ಬತಿನಲ್ಲಿ ಒಳ್ಳೇ
೪ ದನ್ನು ಮಾಡುವದೋ! ಕೆಟ್ಟದ್ದನ್ನು ಮಾಡುವದೋ! ಪ್ರಾಣ
ವನ್ನು ರಕ್ಷಿಸುವದೋ! ಕೊಲ್ಲುವದೋ! ಯಾವದು ನ್ಯಾಯ!
ಅಂದನು. ಆದರೆ ಅವರು ಸುಮ್ಮನಿದ್ದರು. ಆಗಲವನು ಅವರ
೫ ಹೃದಯದ ಕಾಠಿಣ್ಯದ ನಿಮಿತ್ತ ಮಹಾ ದುಃಖ ಪಟ್ಟು, ಕೋ
ಪದಿಂದ ಸುತ್ತಲು ಅವರನ್ನು ನೋಡಿ, ಆ ಮನುಷ್ಯನಿಗೆ, ನಿನ್ನ
ಕೈ ಚಾಚು, ಅಂದನು. ಚಾಚಿದಾಗ, ಅವನ ಕೈ ಮತ್ತೊಂದರ
೬ ಹಾಗೆ ಸ್ವಸ್ಥವಾಯಿತು. ಸಂಗಡಲೇ ಫರಿಸಾಯರು ಹೊರಟು
ಹೋಗಿ, ಅವನನ್ನು ಸಂಹರಿಸ ಬೇಕೆಂದು, ಹೆರೋದ್ಯರ ಸಂಗಡ
ಅವನಿಗೆ ವಿರೋಧವಾಗಿ ಆಲೋಚನೆ ಮಾಡಿದರು.

೭ ಮತ್ತು ಯೇಸು ತನ್ನ ಶಿಷ್ಯರ ಸಂಗಡ ಸಮುದ್ರದ ಬಳಿಗೆ
ಹೋದನು. ಆಗ ಗಲಿಲಾಯದಿಂದಲೂ, ಯೆಹೂದದಿಂದಲೂ,
೮ ಯೆರೂಸಲೇಮಿನಿಂದಲೂ, ಇದೂಮ್ಯದಿಂದಲೂ, ಯೊರ್ದ
ನಿನ ಆಚೆಯಿಂದಲೂ, ಬಹು ಸಮೂಹವು ಅವನನ್ನು ಹಿಂಬಾಲಿ
ಸಿತು. ಮತ್ತು ತೂರ್ ಸೀದೋನ್ ಸೀಮೆಗಳವರು, ಅವನ ಕ್ರಿಯೆ
ಗಳ ಸುದ್ದಿ ಕೇಳಿ, ಬಹು ಸಮೂಹವಾಗಿ ಅವನ ಬಳಿಗೆ ಬಂದರು.
೯ ಆಗಲವನು ಸಮೂಹದ ನಿಮಿತ್ತ, ತನ್ನನ್ನು ಒತ್ತದ ಹಾಗೆ,
ದೋಣಿಯು ತನಗೆ ಕಾದು ಕೊಂಡಿರ ಬೇಕೆಂದು, ತನ್ನ ಶಿಷ್ಯರಿಗೆ
೧೦ ಹೇಳ್ಳಿದನು; ಯಾಕಂದರೆ ಅವನು ಅನೇಕರನ್ನು ಸ್ವಸ್ಥ ಮಾಡಿ
ದ್ದರಿಂದ ಜಾಡ್ಯಗಳುಂಟಾದವರದ್ದು, ಅವನನ್ನು ಮುಟ್ಟ ಬೇ
೧೧ ಕೆಂದು, ಅವನ ಮೇಲೆ ಬೀಳುತ್ತಿದ್ದರು. ಅಶುದ್ಧಾತ್ಮಗಳು ಸಹ
ಅವನನ್ನು ನೋಡುವಾಗ, ಅವನಿಗೆ ಅಡ್ಡ ಬಿದ್ದು, ನೀನೇ ದೇವರ
೧೨ ಮಗನೆಂದು, ಕೂಗಿದವು. ಆದರೆ ತನ್ನನ್ನು ಪ್ರಸಿದ್ಧಿ ಮಾಡದ
ಹಾಗೆ, ಅವರನ್ನು ಬಹಳವಾಗಿ ಗದರಿಸಿದನು.

೧೩ ಅವನು ಬೆಟ್ಟವನ್ನೇರಿ, ಬೇಕಾದವರನ್ನು ಕರೆದನು; ಅವರು
೧೪ ಅವನ ಬಳಿಗೆ ಬಂದಾಗ, ತನ್ನ ಸಂಗಡ ಇರುವ ಹಾಗೆಯೂ,
ಸಾರುವದಕ್ಕೆ ತಾನು ಕಳುಹಿಸುವ ಹಾಗೆಯೂ, ರೋಗಗಳನ್ನು
೧೫ ಸ್ವಸ್ಥ ಮಾಡುವದಕ್ಕೂ ದೆವ್ವಗಳನ್ನು ಹೊರಡಿಸುವದಕ್ಕೂ
ಅಧಿಕಾರವುಳ್ಳವರಾಗುವಹಾಗೆಯೂ, ಹನ್ನೆರಡು ಮಂದಿಯನ್ನು
ನೇಮಿಸಿದನು. ಮತ್ತು ಸೀಮೋನನಿಗೆ ಪೇತ್ರನೆಂಬ ಹೆಸರಿಟ್ಟನು.
೧೬ ಮತ್ತು ಜೆಬೆದಾಯನ ಮಗನಾದ ಯಾಕೋಬನನ್ನೂ, ಯಾ
ಕೋಬನ ಸಹೋದರನಾದ ಯೋಹಾನನನ್ನೂ, ಇವರಿಗೆ ಬೊ
ವನೆರ್ಗೆಸ್ ಎಂಬ ಹೆಸರಿಟ್ಟನು; ಅದೇನಂದರೆ ಗುಡುಗಿನ ಮಕ್ಕ
೧೭ ಳು; ಮತ್ತು ಅಂದ್ರೆಯನನ್ನೂ, ಫಿಲಿಪ್ಪನನ್ನೂ, ಬಾರ್ತೊಲೊ
ಮಾಯನನ್ನೂ, ಮತ್ತಾಯನನ್ನೂ, ತೋಮನನ್ನೂ, ಅಲ್ಫಾ
ಯನ ಮಗನಾದ ಯಾಕೋಬನನ್ನೂ, ತದ್ದಾಯನನ್ನೂ, ಕನಾ
೧೮ ನ್ಯನಾದ ಸೀಮೋನನನ್ನೂ, ಅವನನ್ನು ಒಪ್ಪಿಸಿದ ಇಸ್ಕರಿಯೋ
ತೆಂಬ ಯೂದನನ್ನೂ, ನೇಮಿಸಿದನು.

೧೯ ಅವರು ಮನೆಗೆ ಬಂದಾಗ, ಸಮೂಹವು ತಿರಿಗಿ ಕೂಡಿ ಬಂದ
ದರಿಂದ, ಅವರು ಕೊಟ್ಟಿ ತಿನ್ನುವದಾದರೂ ಆಗದೆ ಹೋಯಿ
೨೦ ತು. ಅವನ ಜನರು ಅದನ್ನು ಕೇಳಿ, ಭ್ರಮೆ ಗೊಂಡಿದ್ದಾನೆಂದು
೨೧ ಹೇಳಿ, ಅವನನ್ನು ಹಿಡಿಯ ಹೋದರು. ಮತ್ತು ಯೆರೂಸಲೇ
ಮಿನಿಂದ ಇಳಿದು ಬಂದ ಶಾಸ್ತ್ರಿಗಳು ಅವನಿಗೆ ಬೆಲ್ಜೆಬೂಲುಂಟೆಂದೂ,
ದೆವ್ವಗಳ ಅಧಿಪತಿಯಿಂದ ದೆವ್ವಗಳನ್ನು ಹೊರಡಿಸುತ್ತಾನೆಂದೂ,
೨೩ ಹೇಳಿದರು. ಆಗಲವರನ್ನು ಹತ್ತರ ಕರೆದು, ಸಾಮ್ಯಗಳಿಂದ
ಅವರಿಗೆ ಹೇಳ್ಳಿದ್ದೇನಂದರೆ, ಸೈತಾನನು ಸೈತಾನನನ್ನು ಹೊರ
೨೪ ಡಿಸುವದು ಹ್ಯಾಗೆ! ಮತ್ತು ಒಂದು ರಾಜ್ಯವು ತನಗೆ ವಿರೋಧವಾ
೨೫ ಗಿ ಭೇದವಾದರೆ, ಆ ರಾಜ್ಯವು ನಿಲ್ಲಲಾರದು. ಮತ್ತು ಮನೆಯು
ತನಗೆ ವಿರೋಧವಾಗಿ ಭೇದವಾದರೆ, ಆ ಮನೆಯು ನಿಲ್ಲಲಾರದು.
೨೬ ಮತ್ತು ಸೈತಾನನು ತನಗೆ ವಿರೋಧವಾಗಿ ಎದ್ದು, ಭೇದವಾ
೨೭ ದರೆ, ನಿಲ್ಲಲಾರನು; ಅವನಿಗೆ ಅಂತ್ಯವು ಬಂತು. ಯಾವನಾದರೂ
ಬಲಿಷ್ಠನ ಮನೆಯಲ್ಲಿ ಹೊಕ್ಕು, ಅವನ ಸಾಮಾನುಗಳನ್ನು
ಸುಲು ಕೊಳ್ಳಲಾರನು. ಮೊದಲು ಬಲಿಷ್ಠನನ್ನು ಕಟ್ಟಿ ಹಾಕ
೨೮ ಬೇಕಲ್ಲ! ಆಗಲವನ ಮನೆಯನ್ನು ಸುಲು ಕೊಳ್ಳುವನು. ನಿಶ್ಚ
ಯವಾಗಿ ನಿಮಗೆ ಹೇಳುತ್ತೇನೆ, ಎಲ್ಲಾ ಪಾಪಗಳೂ, ಅವರು
ದೂಷಿಸುವ ಎಲ್ಲಾ ದೂಷಣೆಗಳೂ, ಮನುಷ್ಯರ ಮಕ್ಕಳಿಗೆ
೨೯ ಪರಿಹರಿಸಲ್ಪಡುವವು; ಆದರೆ ಪರಿಶುದ್ಧಾತ್ಮನನ್ನು ದೂಷಿಸುವವ
ನ್ಯಾವನೋ, ಅವನಿಗೆ ಎಂದೆಂದಿಗೂ ಪರಿಹಾರವಾಗುವದಿಲ್ಲ; ಆದ
೩೦ ರೆ ನಿತ್ಯ ಅಪ್ಪಿಗೆಯೊಳಗಾಗಿದ್ದಾನೆ. ಯಾಕಂದರೆ, ಅವನಿಗೆ ಅಶು
ದ್ಧಾತ್ಮವುಂಟೆಂದು, ಹೇಳಿ ಇದ್ದರು.

೩೧ ಆಗಲವನ ಸಹೋದರರೂ ತಾಯಿಯೂ ಬಂದು, ಹೊರಗೆ
೩೨ ನಿಂತು, ಅವನನ್ನು ಕರೇ ಕಳುಹಿಸಿದರು; ಆದರೆ ಅವನ ಸುತ್ತ
ಲಾಗಿ ಸಮೂಹವು ಕೂತುಕೊಂಡಿತು. ಹೀಗಿರಲಾಗಿ, ಇಗೋ,
ನಿನ್ನ ತಾಯಿಯೂ ಸಹೋದರರೂ ಹೊರಗೆ ಇದ್ದು, ನಿನ್ನನ್ನು
33 ಹುಡುಕುತ್ತಾರೆಂದು, ಅವನಿಗೆ ಹೇಳ್ಳಿದಾಗ, ಅವನವರಿಗೆ, ನನ್ನ
ತಾಯಿಯೂ ನನ್ನ ಸಹೋದರರೂ ಯಾರು! ಎಂದು ಉತ್ತರ
೩೪ ಕೊಟ್ಟು, ತನ್ನ ಬಳಿಯಲ್ಲಿ ಕೂತು ಕೊಂಡವರನ್ನು ಸುತ್ತಲಾಗಿ
ನೋಡಿ, ಇಗೋ, ನನ್ನ ತಾಯಿಯೂ ನನ್ನ ಸಹೋದರರೂ.
೩೫ ಯಾಕಂದರೆ ದೇವರ ಚಿತ್ತವನ್ನು ಮಾಡುವವನ್ಯಾವನೋ, ಅವ
ನೇ ನನ್ನ ಸಹೋದರನೂ, ಸಹೋದರಿಯೂ, ತಾಯಿಯೂ,
ಆಗಿದ್ದಾನೆ, ಅಂದನು.

## ೪. ಸಂಧಿ.

೧ ತಿರಿಗಿ ಅವನು ಸಮುದ್ರದ ಬಳಿಯಲ್ಲಿ ಬೋಧಿಸಲಾರಂಭಿಸಿ
ದನು. ಬಹು ಸಮೂಹವು ಅವನ ಬಳಿಗೆ ಕೂಡಿ ಬಂದದರಿಂದ,
ಅವನು ಹಡಗವನ್ನೇರಿ, ಸಮುದ್ರದಲ್ಲಿ ಕೂತು ಕೊಂಡನು. ಮ
ತ್ತು ಸಮೂಹವೆಲ್ಲಾ ಸಮುದ್ರದ ಬಳಿಯಲ್ಲಿ ಭೂಮಿಯ ಮೇ
ಲಿತ್ತು. ಆಗಲವನು ಸಾಮ್ಯಗಳಿಂದ ಅವರಿಗೆ ಬಹಳವಾಗಿ ಬೋ
೨ ಧಿಸಿ, ತನ್ನ ಬೋಧನೆಯಲ್ಲಿ ಅವರಿಗೆ ಹೇಳಿದ್ದೇನಂದರೆ, ಕೇಳಿರಿ;
3 ಇಗೋ, ಬಿತ್ತುವವನು ಬಿತ್ತ ಹೊರಟನು. ಬಿತ್ತುವಾಗ ಆದದ್ದೇನಂ
೪ ದರೆ, ಕೆಲವು ಮಾರ್ಗದ ಹತ್ತರ ಬಿತ್ತು; ಆಕಾಶದ ಪಕ್ಷಿಗಳು
೫ ಬಂದು, ಅದನ್ನು ತಿಂದು ಬಿಟ್ಟವು. ಬೇರೆ ಕೆಲವು ಬಹಳ ಮಣ್ಣು
ಇಲ್ಲದ ಬಂಡೆಯ ಸ್ಥಳದಲ್ಲಿ ಬಿತ್ತು; ಅದಕ್ಕೆ ಆಳವಾದ ಮಣ್ಣು
೬ ಇಲ್ಲದ ಕಾರಣ, ಸಂಗತಿಯೇ ಮೊಳಿಯಿತು; ಆದರೆ ಸೂರ್ಯೆ
ನು ಮೂಡಿದಾಗ, ಅದು ಬೆಂದು, ಅದಕ್ಕೆ ಬೇರು ಇಲ್ಲದ್ದರಿಂದ
೭ ಬಣಗಿ ಹೋಯಿತು. ಬೇರೆ ಕೆಲವು ಮುಳ್ಳುಗಳಲ್ಲಿ ಬಿತ್ತು; ಮು
ಳ್ಳುಗಳು ಬೆಳೆದು, ಅದನ್ನು ಅಣಗಿಸಿದ್ದರಿಂದ ಅದು ಫಲ ಕೊ
೮ ಡಲಿಲ್ಲ. ಬೇರೆ ಕೆಲವು ಒಳ್ಳೆ ಭೂಮಿಯಲ್ಲಿ ಬಿದ್ದು, ಬೆಳೆದು, ಅಭಿ
ವೃದ್ಧಿಯಾಗುವ ಫಲ ಕೊಟ್ಟಿತು; ಒಂದು ಮೂವತ್ತದ್ದು, ಒಂ
೯ ದು ಅರವತ್ತದ್ದು, ಒಂದು ನೂರದ್ದು. ಆಗಲವನು ಅವರಿಗೆ, ಕೇಳ
ಕಿವಿಗಳುಳ್ಳವನು ಕೇಳಲಿ, ಅಂದನು.

೧೦ ಮತ್ತು ಏಕಾಂತದಲ್ಲಿರುವಾಗ, ಅವನ ಸುತ್ತಲಿರುವವರು ಹ
ನ್ನಿರರು ಮಂದಿಯ ಸಂಗತಿ ಆ ಸಾಮ್ಯದ ವಿಷಯ ಅವನ
೧೧ ನ್ನು ಕೇಳಿದರು. ಅವನವರಿಗೆ ಹೇಳಿದ್ದೇನಂದರೆ, ದೇವರ ರಾಜ್ಯದ
ಮರ್ಮವನ್ನು ತಿಳಿಯ ನಿಮಗೆ ಕೊಡಲ್ಪಟ್ಟಿದೆ; ಆದರೆ ಆ ಹೊ
೧೨ ರಗನವರಿಗೆ—ಅವರು ಕಾಣಲೇ ಕಂಡು ನೋಡದ ಹಾಗೆ, ಕೇಳಲೇ
ಕೇಳಿ ಗ್ರಹಿಸದ ಹಾಗೆ, ಶಿರುಗಿಕೊಂಡು ಪಾಪ ಪರಿಹಾರ ಹೊಂದ
೧೩ ದ ಹಾಗೆ—ಎಲ್ಲವು ಸಾಮ್ಯಗಳಲ್ಲಿ ಆಗುತ್ತದೆ. ಮತ್ತು ಅವರಿಗೆ
ಹೇಳಿದ್ದು, ಈ ಸಾಮ್ಯವನ್ನು ಅರಿಯರಾ? ಹೀಗಿದ್ದರೆ, ಸಾಮ್ಯ
೧೪ ಗಳನ್ನೆಲ್ಲಾ ಹ್ಯಾಗೆ ತಿಳಿಯುವಿರಿ? ಬಿತ್ತುವವನು ವಾಕ್ಯವನ್ನು
೧೫ ಬಿತ್ತುತ್ತಾನೆ; ವಾಕ್ಯವು ಬಿತ್ತಲ್ಪಡುವ ಮಾರ್ಗದ ಬಳಿಯಲ್ಲಿ
ಇರುವವರು ಇವರೇ—ಕೇಳಿದ ಕೂಡಲೆ ಸೈತಾನನು ಬಂದು, ಅವ
ರ ಹೃದಯಗಳಲ್ಲಿ ಬಿತ್ತಲ್ಪಟ್ಟ ವಾಕ್ಯವನ್ನು ತೆಗೆಯುತ್ತಾನೆ.
೧೬ ಅದೇ ಪ್ರಕಾರ ಬಂಡೆಯ ಸ್ಥಳದಲ್ಲಿ ಬಿತ್ತಲ್ಪಟ್ಟವರು ಯಾರಂ
ದರೆ, ವಾಕ್ಯವನ್ನು ಕೇಳಿದ ಕೂಡಲೆ ಸಂತೋಷವಾಗಿ ಅದನ್ನು
೧೭ ಅಂಗೀಕರಿಸಿ, ತನ್ನಲ್ಲಿ ಬೇರು ಇಲ್ಲದೆ, ಸ್ವಲ್ಪ ಕಾಲಕ್ಕೆ ಮಾತ್ರ
ಇರುತ್ತಾರೆ. ತರುವಾಯ ವಾಕ್ಯದ ನಿಮಿತ್ತ ಉಪದ್ರವಾಗಲಿ ಹಿಂ
೧೮ ಸೆಯಾಗಲಿ ಉಂಟಾದರೆ, ಕೂಡಲೆ ಅಟಂಕ ಪಡುತ್ತಾರೆ. ಮುಳ್ಳುಗ
ಳಲ್ಲಿ ಬಿತ್ತಲ್ಪಟ್ಟವರು ಯಾರಂದರೆ, ವಾಕ್ಯವನ್ನು ಕೇಳುವವರು;
೧೯ ತರುವಾಯ ಈ ಲೋಕದ ಚಿಂತೆಗಳೂ ಐಶ್ವರ್ಯದ ಮೋಸ
ವೂ ಮಿಕ್ಕಾದವುಗಳ ವಿಷಯವಾದ ಆಸೆಗಳೂ ಒಳಗೆ ಹೊಕ್ಕು,
ವಾಕ್ಯವನ್ನು ಅಣಗಿಸುವದರಿಂದ ಅದು ನಿಷ್ಫಲವಾಗುತ್ತದೆ.
೨೦ ಒಳ್ಳೆ ಭೂಮಿಯ ಮೇಲೆ ಬಿತ್ತಲ್ಪಟ್ಟವರು ಯಾರಂದರೆ, ವಾ
ಕ್ಯವನ್ನು ಕೇಳಿ, ಅಂಗೀಕರಿಸಿ, ಒಂದು ಮೂವತ್ತದ್ದೂ, ಒಂದು
ಅರವತ್ತದ್ದೂ, ಒಂದು ನೂರದ್ದೂ, ಫಲ ಫಲಿಸುವವರು.

೨೧ ಮತ್ತು ಅವರಿಗೆ ಹೇಳಿದ್ದು, ದೀಪವು ಬಳ್ಳದ ಕೆಳಗಾದರೂ,
ಮಂಚದ ಕೆಳಗಾದರೂ, ಇಡಲ್ಪಡುವದಕ್ಕೆ ಬರತ್ತದೋ? ದೀಪ
೨೨ ಸ್ತಂಭದ ಮೇಲೆ ಇಡಲ್ಪಡುವದಕ್ಕಲ್ಲದೋ! ಯಾಕಂದರೆ ಬಹಿ
ರಂಗವಾಗದಂಥ ಅಂತರಂಗವಾದದ್ದು ಒಂದೂ ಇಲ್ಲ; ಮತ್ತು ಬಹಿ
೨3 ರಂಗವಾಗುವದಕೋಸ್ಕರವಲ್ಲದೆ ಏನೂ ಗುಪ್ತವಾಗಲಿಲ್ಲ. ಒಬ್ಬ
೨೪ ನು ಕೇಳ ಕಿವಿಗಳುಳ್ಳವನಾಗಿದ್ದರೆ, ಕೇಳಲಿ. ಮತ್ತು ಅವರಿಗೆ ಹೇ
ಳಿದ್ದು, ನೀವು ಕೇಳುವದೇನೆಂದು ನೋಡಿಕೊಳ್ಳಿರಿ; ಯಾವ ಅಳ
ತೆಯಿಂದ ಅಳೆಯುತ್ತೀರೋ, ಅದರಿಂದ ನಿಮಗೆ ಅಳೆಯಲ್ಪ
೨೫ ಡುವದು; ಮತ್ತು ಕೇಳುವವರಾದ ನಿಮಗೆ ಹೆಚ್ಚಾಗಿ ಕೊಡಲ್ಪ
ಡುವದು. ಯಾಕಂದರೆ ಉಂಟಾದವನು ಯಾವನೋ, ಅವನಿಗೆ
ಕೊಡಲ್ಪಡುವದು; ಮತ್ತು ಇಲ್ಲದವನು ಯಾವನೋ, ಅವನಿಂದ
ಇದ್ದದ್ದು ಸಹ ತೆಗೆಯಲ್ಪಡುವದು.

೨೬ ಇನ್ನು ಅವನು ಹೇಳಿದ್ದೇನಂದರೆ, ಒಬ್ಬ ಮನುಷ್ಯನು ಭೂ
೨೭ ಮಿಯಲ್ಲಿ ಬೀಜ ಹಾಕಿ, ರಾತ್ರಿ ಹಗಲು ಮಲಗುತ್ತಾ, ಏಳುತ್ತಾ,
ಇರಲಾಗಿ, ಆ ಬೀಜವು ಅವನಿಗೆ ತಿಳಿಯದೆ ಮೊಳೆತು ಬೆಳಿಯು
೨೮ ವದು ಹ್ಯಾಗೋ, ಹಾಗೆಯೇ ದೇವರ ರಾಜ್ಯವು. ಹ್ಯಾಗಂದರೆ
ಭೂಮಿಯು ತಾನಾಗಿ, ಮೊದಲು ಮೊಳಿಕೆಯನ್ನು, ಆ ಮೇಲೆ
ತೆನೆಯನ್ನು, ಆ ಮೇಲೆ ತೆನೆಯಲ್ಲಿ ಪೂರ್ಣ ಕಾಳನ್ನು, ಫಲಿಸು
೨೯ ತ್ತದೆ. ಆದರೆ ಫಲವಾದ ಕೂಡ್ಲೆ ಕೊಯ್ಯುವ ಕಾಲವು ಬಂದದ
ರಿಂದ, ಕುಡುಗೋಲನ್ನು ಕಳುಹಿಸುತ್ತಾನೆ.

೩೦ ಇನ್ನು ಅವನು ಹೇಳಿದ್ದೇನಂದರೆ, ದೇವರ ರಾಜ್ಯವನ್ನು ಯಾ
ವದಕ್ಕೆ ಸಮಾನ ಮಾಡುವ! ಎಂಥ ಸಾಮ್ಯಕ್ಕೆ ಅದನ್ನು
೩೧ ಸಮ ಮಾಡುವ! ಸಾಸಿವೆ ಕಾಳಿಗೆ ಸಾಮ್ಯವಾಗಿದೆ; ಅದು ಭೂಮಿ
ಯ ಮೇಲೆ ಬಿತ್ತಲ್ಪಡುವಾಗ, ಭೂಮಿಯ ಮೇಲಿರುವ ಎಲ್ಲಾ
೩೨ ಬೀಜಗಳಲ್ಲಿ ಸ್ಣಾಣಾಗಿದೆ. ಬಿತ್ತಲ್ಪಟ್ಟ ಮೇಲೆ ಮೊಳೆತು, ಎಲ್ಲಾ
ಪಲ್ಯಗಳಿಗಿಂತ ದೊಡ್ಡದಾಗಿ, ಆಕಾಶದ ಪಕ್ಷಿಗಳು ಅದರ ನೆರಳಿ
ನಲ್ಲಿ ವಾಸ ಮಾಡತಕ್ಕಷ್ಟು ದೊಡ್ಡ ಕೊಂಬೆಗಳನ್ನು ಬಿಡುತ್ತದೆ.
33 ಇಂಥ ಅನೇಕ ಸಾಮ್ಯಗಳಿಂದ ಕೇಳಲಾಗುವ ಪ್ರಕಾರ, ಅವ
ರಿಗೆ ವಾಕ್ಯವನ್ನು ಹೇಳಿದನು; ಸಾಮ್ಯವಿಲ್ಲದೆ ಅವರ ಸಂಗತಿ
೩೪ ಮಾತಾಡಲಿಲ್ಲ; ಆದರೆ ತನ್ನ ಶಿಷ್ಯರಿಗೆ ಏಕಾಂತವಾಗಿ ಎಲ್ಲವು
ಗಳನ್ನು ವಿವರಿಸಿದನು.

೩೫ ಮತ್ತು ಆ ದಿವಸದಲ್ಲಿ ಸಾಯಂಕಾಲವಾದಾಗ, ಆಚೆಗೆ ದಾಟಿ
೩೬ ಹೋಗುವ, ಎಂದು ಅವರಿಗೆ ಹೇಳಿದನು. ಆಗಲವರು ಸಮೂಹ
ಕ್ಕೆ ಅಪ್ಪಣೆ ಕೊಟ್ಟು, ಹಡಗದಲ್ಲಿ ಇದ್ದ ಹಾಗೆಯೇ ಅವನನ್ನು
ತಕ್ಕೊಂಡು ಹೊದರು. ಇದಲ್ಲದೆ ಬೇರೆ ದೋಣಿಗಳು ಸಹ ಅವ
೩೭ ನ ಸಂಗತಿ ಇದ್ದವು. ಆಗ ಮಹಾ ಬಿರುಗಾಳಿ ಉಂಟಾಗಿ, ತೆರೆಗ
ಳು ಹಡಗದ ಮೇಲೆ, ಅದು ಆಗಲೇ ತುಂಬುವ ಹಾಗೆ, ಬಿದ್ದವು;
೩೮ ಆದರೆ ಅವನು ಹಿಂಭಾಗದಲ್ಲಿ ತಲೆಗಿಂಬಿನ ಮೇಲೆ ನಿದ್ದೆ ಮಾಡು
ತ್ತಿದ್ದನು. ಆಗಲವರು ಅವನನ್ನು ಎಬ್ಬಿಸಿ, ಬೋಧಕನೇ, ನಾವು
ನಾಶವಾಗುವದು ನಿನಗೆ ಚಿಂತೆ ಇಲ್ಲವೋ? ಎಂದು ಅವನಿಗೆ ಹೇಳಿ
೩೯ ದರು. ಆಗಲವನು ಎಚ್ಚತ್ತು, ಗಾಳಿಯನ್ನು ಗದರಿಸಿ, ಸಮು
ದ್ರಕ್ಕೆ, ಸುಮ್ಮನಿರು, ನಿಶ್ಶಬ್ದವಾಗು, ಅಂದನು. ಆಗ ಗಾ
೪೦ ಳಿ ನಿಂತು ಹೋಗಿ, ಮಹಾ ಶಾಂತವಾಯಿತು. ತರುವಾಯ ಅವನ
ವರಿಗೆ, ಯಾಕೆ ಹೀಗೆ ಹೇಡಿಗಳಾಗಿದ್ದೀರಿ? ನೀವು ವಿಶ್ವಾಸವಿಲ್ಲದೆ



೪೦ ಇರುವದು ಹ್ಯಾಗೆ! ಅಂದನು. ಆಗಲವರು ಮಹಾ ಭಯಪಟ್ಟು,
ಇವನು ಎಂಥವನು! ಯಾಕಂದರೆ ಗಾಳಿಯೂ ಸಮುದ್ರವೂ
ಇವನಿಗೆ ವಿಧೇಯವಾಗಿವೆ, ಎಂದು ಒಬ್ಬರಿಗೊಬ್ಬರು ಹೇಳಿದರು.

## ೫. ಸಂಧಿ.

೧ ಆಗ ಸಮುದ್ರದ ಆಚೆಗೆ ಗದರೇನರ ದೇಶಕ್ಕೆ ಬಂದರು.
೨ ಮತ್ತು ಅವನು ಹಡಗದಿಂದಿಳಿದಾಗಲೇ, ಸಮಾಧಿಗಳೊಳಗಿಂದ
ಅಶುದ್ಧಾತ್ಮವುಳ್ಳ ಒಬ್ಬ ಮನುಷ್ಯನು ಅವನಿದುರಿಗೆ ಬಂದನು.
3 ಇವನು ಸಮಾಧಿಗಳಲ್ಲಿ ವಾಸವಾಗಿದ್ದನು; ಅವನನ್ನು ಯಾರೂ
೪ ಸಂಕೋಲೆಗಳಿಂದಾದರೂ ಕಟ್ಟಲಾರದೆ ಇದ್ದರು. ಯಾಕಂದರೆ
ಅನೇಕ ಸಾರಿ ಬಂಧಗಳಿಂದಲೂ ಸಂಕೋಲೆಗಳಿಂದಲೂ ಕಟ್ಟಲ್ಪ
ಟ್ಟು, ಸಂಕೋಲೆಗಳನ್ನು ಹರಿದು, ಬಂಧಗಳನ್ನು ಮುರಿದಿದ್ದನು;
ಮತ್ತು ಯಾರೂ ಅವನನ್ನು ಸಾಧು ಮಾಡಲಾರದೆ ಇದ್ದರು;
೫ ರಾತ್ರಿ ಹಗಲೂ ಯಾವಾಗಲೂ ಅವನು ಬೆಟ್ಟಗಳಲ್ಲಿಯೂ ಸ
ಮಾಧಿಗಳಲ್ಲಿಯೂ ಕೂಗುತ್ತಾ, ಕಲ್ಲುಗಳಿಂದ ತನ್ನನ್ನು ಕೊಯಿ
ದು ಕೊಳ್ಳುತ್ತಾ, ಇದ್ದನು.
೬ ಆದರೆ ದೂರದಿಂದ ಯೇಸುವನ್ನು ನೋಡಿದಾಗ, ಓಡಿ
೭ ಬಂದು, ಅವನಿಗೆ ನಮಸ್ಕರಿಸಿ, ಮಹೋನ್ನತನಾದ ದೇವರ ಮಗ
ನಾದ ಯೇಸುವೇ, ನಿನಗೂ ನನಗೂ ಏನು! ನನ್ನನ್ನು ಪೀಡಿಸ
ಬೇಡೆಂದು, ನಿನಗೆ ದೇವರಾಣೆ ಇಡುತ್ತೇನೆಂದು, ಮಹಾ ಶಬ್ದ
೮ ದಿಂದ ಕೂಗಿದನು. ಯಾಕಂದರೆ, ಅಶುದ್ಧಾತ್ಮವೇ, ಆ ಮನು
೯ ಷ್ಯನಿಂದ ಹೊರಡು ಎಂದು ಅವನಿಗೆ ಹೇಳಿ ಇದ್ದನು. ಮತ್ತು,
ನಿನ್ನ ಹೆಸರೇನೆಂದು, ಅವನನ್ನು ಕೇಳಿದಾಗ, ಅವನು ಪ್ರತ್ಯುತ್ತರ
ವಾಗಿ, ನನ್ನ ಹೆಸರು ಲೆಗಿಯೋನ್, ಯಾಕಂದರೆ ಅನೇಕರಾಗಿ
೧೦ ದ್ದೇವೆ, ಅಂದನು. ಮತ್ತು ತಮ್ಮನ್ನು ದೇಶದೊಳಗಿಂದ ಕಳುಹಿಸಿ
ಬಿಡದ ಹಾಗೆ, ಅವನನ್ನು ಬಹಳವಾಗಿ ಬೇಡಿ ಕೊಂಡನು.
೧೧ ಆದರೆ ಅಲ್ಲಿ, ಬೆಟ್ಟಗಳ ಸಮೀಪದಲ್ಲಿ, ಮೇಯುವ ಹಂದಿಗಳ
೧೨ ದೊಡ್ಡ ಮಂದೆ ಇತ್ತು. ಮತ್ತು ದೆವ್ವಗಳೆಲ್ಲಾ, ನಾವು ಹಂದಿಗಳಲ್ಲಿ
ಪ್ರವೇಶಿಸುವಹಾಗೆ, ಅವುಗಳೊಳಗೆ ನಮ್ಮನ್ನು ಕಳುಹಿಸೆಂದು, ಅವ
೧೩ ನನ್ನು ಬೇಡಿ ಕೊಂಡವು. ಸಂಗತಿಯೇ ಯೇಸು ಅವುಗಳಿಗೆ ಅಪ್ಪಣೆ
ಕೊಟ್ಟನು. ಆಗ ಅಶುದ್ಧಾತ್ಮಗಳು ಹೊರಟು, ಹಂದಿಗಳೊಳಗೆ
ಹೊಕ್ಕವು. ಹೆಚ್ಚು ಕಡಿಮೆ ಎರಡು ಸಾವಿರವಾಗಿದ್ದ ಆ ಮಂದೆಯೆ
ಲ್ಲಾ ಇಳಿಜಾರಿನಿಂದ ಸಮುದ್ರಕ್ಕೆ ಓಡಿ, ಸಮುದ್ರದಲ್ಲಿ ಮುಣುಗಿ
೧೪ ಹೋಯಿತು. ಆದರೆ ಹಂದಿಗಳನ್ನು ಮೇಯಿಸುವವರು ಓಡಿ ಹೋ
ಗಿ, ಪಟ್ಣದಲ್ಲಿಯೂ ಹಳ್ಳಿಗಳಲ್ಲಿಯೂ ತಿಳಿಸಿದಾಗ, ಆದದ್ದು ಏನೆಂ
೧೫ ದು, ನೋಡುವದಕ್ಕೆ ಜನರು ಹೊರಗೆ ಬಂದರು. ಯೇಸುವಿನ ಬ
ಳಿಗೆ ಬಂದು, ಲೆಗಿಯೋನ್ ಉಂಟಾಗಿದ್ದ ಆ ದೆವ್ವ ಹಿಡಿದವನು
ವಸ್ತ್ರ ಹೊದ್ದವನಾಗಿಯೂ, ಸ್ವಸ್ತಬುದ್ಧಿಯುಳ್ಳವನಾಗಿಯೂ,
ಕೂತುಕೊಂಡಿರುವದನ್ನು ನೋಡಿದಾಗ, ಭಯ ಪಟ್ಟರು.
೧೬ ಮತ್ತು ನೋಡಿದವರು, ಆ ದೆವ್ವ ಹಿಡಿದವನಿಗೆ ಹ್ಯಾಗಾಯಿ
ತೆಂದೂ, ಆ ಹಂದಿಗಳ ಸಂಗತಿಯನ್ನೂ ಅವರಿಗೆ ತಿಳಿಸಿದಾಗ;
೧೭ ಅವನು ತಮ್ಮ ಪ್ರಾಂತ್ಯಗಳನ್ನು ಬಿಟ್ಟು ಹೋಗ ಬೇಕೆಂದು
೧೮ ಬೇಡಿಕೊಳ್ಳಲಾರಂಭಿಸಿದರು. ಅವನು ಹಡಗವನ್ನೇರಿದಾಗ, ಆ
ದೆವ್ವ ಹಿಡಿದಿದ್ದವನು, ಅವನ ಸಂಗತಿ ಇರ ಬೇಕೆಂದು, ಅವನನ್ನು
೧೯ ಬೇಡಿ ಕೊಂಡನು. ಆದರೆ ಯೇಸು ಅವನಿಗೆ ಅಪ್ಪಣೆ ಕೊಡದೆ,
ನಿನ್ನ ಮನೆಗೆ, ಸ್ವಜನರ ಬಳಿಗೆ, ಹೋಗಿ, ಕರ್ತನು ನಿನ್ನನ್ನು
ಕರುಣಿಸಿ, ನಿನಗೆ ಎಂಥವುಗಳನ್ನು ಮಾಡಿದ್ದಾನೋ, ಅವುಗಳನ್ನು
೨೦ ಅವರಿಗೆ ತಿಳಿಸು, ಅಂದನು. ಆಗಲವನು ಹೋಗಿ, ಯೇಸು ತನಗೆ
ಮಾಡಿದವುಗಳನ್ನು ದೆಕಪೊಲಿಯಲ್ಲಿ ಸಾರಲಾರಂಭಿಸಲಾಗಿ, ಎಲ್ಲ
ರು ಆಶ್ಚರ್ಯ ಪಟ್ಟರು.
೨೧ ಯೇಸು ಹಡಗದಲ್ಲಿ ತಿರಿಗಿ ಆಚೆಗೆ ಹೋದ ಮೇಲೆ, ಸಮು
ದ್ರಕ್ಕೆ ಸಮೀಪವಾಗಿರುವಾಗ, ಬಹು ಸಮೂಹವು ಅವನ ಬಳಿಗೆ
೨೨ ಕೂಡಿ ಬಂತು. ಮತ್ತು, ಇಗೋ, ಸಭೆಮನೆಯ ಯಜಮಾನರಲ್ಲಿ
ಒಬ್ಬನಾಗಿರುವ ಯಾಯಿರಾನೆಂಬವನು ಬಂದು, ಅವನನ್ನು
೨3 ನೋಡಿ, ಅವನ ಪಾದಗಳ ಮುಂದೆ ಬಿದ್ದು, ನನ್ನ ಚಿಕ್ಕ ಮಗ
ಳು ಶೀರಿ ಹೋಗುವ ಹಾಗಿದ್ದಾಳೆ; ಅವಳು ಸ್ವಸ್ಥವಾಗುವ ಹಾಗೆ
ನೀನು ಬಂದು, ಅವಳ ಮೇಲೆ ಕೈಗಳನ್ನಿಡಬೇಕು; ಆಗ ಬದು
೨೪ ಕುವಳೆಂದು, ಅವನನ್ನು ಬಹಳವಾಗಿ ಬೇಡಿಕೊಂಡನು. ಆಗಲವನ
ಸಂಗತಿ ಹೋದನು. ಮತ್ತು ಬಹು ಸಮೂಹವು ಅವನನ್ನು
ಹಿಂಬಾಲಿಸಿ, ಅವನನ್ನು ಇರಿಕಿಸುತ್ತಿತ್ತು.
೨೫ ಆಗ ಹನ್ನಿರರು ವರುಷದಿಂದ ರಕ್ತಕುಸುಮ ರೋಗಿಯಾಗಿ,
೨೬ ಅನೇಕ ವೈದ್ಯರಿಂದ ಬಹು ತ್ರಸಪಟ್ಟು, ತನಗಿದ್ದದ್ದನ್ನೆಲ್ಲಾ
ವೆಚ್ಚ ಮಾಡಿದಾಗ್ಯೂ, ರೋಗ ಹೆಚ್ಚು ವದೇ ಹೊರ್ತು ಏನೂ ಪ್ರ
೨೭ ಯೋಜನ ಹೊಂದದೆ, ಇದ್ದ ಒಬ್ಬ ಸ್ತ್ರೀಯು, ಯೇಸುವಿನ
ಸಮಾಚಾರವನ್ನು ಕೇಳಿ, ಸಮೂಹದೊಳಗೆ ಹಿಂದಿನಿಂದ ಬಂದು,
೨೮ ಅವನ ವಸ್ತ್ರವನ್ನು ಮುಟ್ಟಿದಳು. ಯಾಕಂದರೆ, ಅವನ ವಸ್ತ್ರಗ
ಳನ್ನಾದರೂ ಮುಟ್ಟಿದರೆ, ಸ್ವಸ್ಥವಾಗುವೆನೆಂದು, ಅಂದು ಕೊಂಡಿ
೨೯ ದ್ದಳು. ಸಂಗತಿಯೇ ಅವಳ ರಕ್ತದ ಬುಗ್ಗೆಯು ಬತ್ತಿ ಹೋಗಲು,
ಜಾಡ್ಯ ಹೋಗಿ ಗುಣವಾದೆನೆಂದು, ಶರೀರದಲ್ಲಿ ತಿಳುಕೊಂಡಳು;
೩೦ ಸಂಗತಿಯೇ ಯೇಸು ತನ್ನಿಂದ ಬಲವು ಹೊರಟಿತೆಂದು ತನ್ನಲ್ಲಿ ತಿಳು
ಕೊಂಡು, ಸಮೂಹದಲ್ಲಿ ತಿರಿಗಿಕೊಂಡು, ಯಾರು ನನ್ನ ವಸ್ತ್ರ
೩೧ ಗಳನ್ನು ಮುಟ್ಟಿದರು! ಅಂದನು. ಅವನ ಶಿಷ್ಯರು ಅವನಿಗೆ, ಸ
ಮೂಹವು ನಿನ್ನನ್ನು ಇರಿಕಿಸುವದನ್ನು ನೋಡಿ, ಯಾರು ನನ್ನ
೩೨ ನ್ನು ಮುಟ್ಟಿದರೆಂದು ಹೇಳುತ್ತೀಯೋ? ಅಂದರು. ಆದರೆ ಅವ
ನು, ಅದನ್ನು ಮಾಡಿದವಳನ್ನು ನೋಡುವದಕ್ಕೆ ಸುತ್ತ ನೋಡಲಾ
33 ಗಿ, ಆ ಸ್ತ್ರೀಯು, ತನ್ನಲ್ಲಿ ಆದದ್ದನ್ನು ತಿಳಿಕೊಂಡು, ಭಯ ಪ
ಟ್ಟು, ನಡುಗಿ ಬಂದು, ಅವನಿಗೆ ಅಡ್ಡ ಬಿದ್ದು, ಸತ್ಯವನ್ನೆಲ್ಲಾ ಅವ
೩೪ ನಿಗೆ ಹೇಳಿದಳು. ಆದರೆ ಅವನು ಅವಳಿಗೆ, ಮಗಳೇ, ನಿನ್ನ ವಿಶ್ವಾ
ಸವು ನಿನ್ನನ್ನು ರಕ್ಷಿಸಿ ಅವೆ; ಸಮಾಧಾನವಾಗಿ ಹೋಗು; ನಿನ್ನ
ಜಾಡ್ಯ ಹೋಗಿ ಗುಣವಾಗಿರು, ಅಂದನು.
೩೫ ಅವನು ಇನ್ನೂ ಮಾತಾಡುತ್ತಿರಲಾಗಿ, ಸಭೆಮನೆಯ ಯಜಮಾ
ನನ ಕಡೆಯವರು ಬಂದು, ನಿನ್ನ ಮಗಳು ಸತ್ತಿದ್ದಾಳೆ; ಇನ್ನ್ಯಾಕೆ
೩೬ ಬೋಧಕನನ್ನು ತೊಂದರೆ ಪಡಿಸುತ್ತೀ! ಅಂದರು. ಆದರೆ ಮಾತ
ನ್ನು ಯೇಸು ಕೇಳಿದಾಗಲೇ, ಸಭೆಮನೆಯ ಯಜಮಾನನಿಗೆ,
೩೭ ಭಯ ಪಡ ಬೇಡ, ವಿಶ್ವಾಸ ಮಾತ್ರವಿರಲಿ, ಅಂದನು. ಮತ್ತು ಪೇ
ತ್ರನೂ ಯಾಕೋಬನೂ ಯಾಕೋಬನ ಸಹೋದರನಾದ
ಯೋಹಾನನೂ, ಇವರೇ ಹೊರ್ತು ಮತ್ತಾವನನ್ನು ತನ್ನ
೩೮ ಸಂಗತಿ ಹೋಗ ಗೊಡಿಸಲಿಲ್ಲ. ಮತ್ತು ಸಭೆಮನೆಯ ಯಜಮಾ
ನನ ಮನೆಗೆ ಬಂದು, ಗುಬಾರನನ್ನೂ ಬಹಳವಾಗಿ ಅತ್ತು ಕೂಗುವವ
೩೯ ರನ್ನೂ ನೋಡಿ, ಒಳಗೆ ಹೋಗಿ, ನೀವು ಗುಬಾರು ಮಾತಿ, ಅಳು

ವಕೇನು! ಹುಡುಗಿಯು ಸಾಯಲಿಲ್ಲ, ನಿದ್ದೆ ಮಾಡುತ್ತಾಳೆಂದು, ಅ
೪೦ ವರಿಗೆ ಬೇಳ್ಳದನು. ಆಗಲವನಿಗೆ ಹಾಸ್ಯ ಮಾಡಿದರು. ಆದರೆ ಅವ
ನು ಎಲ್ಲರನ್ನು ಹೊರಗೆ ಹಾಕಿ, ಹುಡುಗಿಯ ತಂದೆಯನ್ನೂ ತಾ
೪೧ ಯಿಯನ್ನೂ ತನ್ನ ಸಂಗಡ ಇರುವವರನ್ನು ಕರಕೊಂಡು, ಹುಡುಗಿ
ಮಲಗಿರುವಲ್ಲಿಗೆ ಪ್ರವೇಶಿಸಿ, ಹುಡುಗಿಯ ಕೈ ಹಿಡಿದು, ಅವಳಿಗೆ
ತಲಿಥಾ ಕೂಮಿ! ಅಂದನು. ಅದರ ಅರ್ಥವೇನೆಂದರೆ, ಹುಡುಗಿ
೪೨ ಯೇ, ಏಳೆಂದು ನಿನಗೆ ಹೇಳುತ್ತೇನೆ. ಸಂಗಡಲೇ ಹುಡುಗಿಯು
ಎದ್ದು, ತಿರುಗಾಡಿದಳು; ಯಾಕಂದರೆ ಹನ್ನೆರಡು ವರುಷದವಳಾ
ಗಿದ್ದಳು. ಮತ್ತು ಅವರು ಮಹಾ ಭ್ರಮೆಯಿಂದ ಭ್ರಮಿಸಿದರು.
೪೩ ಆಗಲವನು, ಇದು ಯಾರಿಗೂ ತಿಳಿಯಬಾರದೆಂದು, ಅವರಿಗೆ ಖಂ
ಡಿತವಾಗಿ ಹೇಳಿ, ಅವಳಿಗೆ ಊಟಕ್ಕೆ ಕೊಡ ಹೇಳಿದನು.

## ೯. ಸಂಧಿ.

೧ ಅಲ್ಲಿಂದ ಹೊರಟು, ಸ್ವಸ್ಥಳಕ್ಕೆ ಬಂದನು; ಮತ್ತು ಅವನ
೨ ಶಿಷ್ಯರು ಅವನನ್ನು ಹಿಂಬಾಲಿಸಿದರು. ಸ್ಬಬತು ಆದಾಗ, ಸಭೆ
ಮನೆಯಲ್ಲಿ ಬೋಧಿಸಲಾರಂಭಿಸಿದನು. ಮತ್ತು ಅನೇಕರು ಕೇಳಿ,
ಆಶ್ಚರ್ಯ ಪಟ್ಟು, ಇವು ಇವನಿಗೆ ಎಲ್ಲಿಂದ ಬಂದವು? ಇವನ
ಕೈಗಳಿಂದ ಇಂಥಾ ಬಲವಾದ ಕ್ರೀಯೆಗಳು ಆಗುವ ಹಾಗೆ ಇವನಿಗೆ
೩ ಕೊಡಲ್ಪಟ್ಟ ಜ್ಞಾನವು ಎಂಥಾದ್ದು? ಇವನು ಮರಿಯಳ ಮಗನಾ
ದಂಥ, ಯಾಕೋಬನ ಯೋಸೆಯ ಯೂದನ ಸೀಮೋನನ
ಸಹೋದರನಾದಂಥ, ಬಡಗಿಯವನಲ್ಲವೋ! ಮತ್ತು ಇವನ
ಸಹೋದರಿಗಳು ಇಲ್ಲಿ ನಮ್ಮ ಬಳಿಯಲ್ಲಿ ಇರುತ್ತಾರಲ್ಲವೋ! ಎಂ
೪ ದು ಹೇಳಿ, ಅವನಲ್ಲಿ ಅಟಂಕ ಪಟ್ಟರು. ಆದರೆ ಯೇಸು ಅವರಿಗೆ,
ಪ್ರವಾದಿಯು ಸ್ವಸ್ಥಳದಲ್ಲಿಯೂ ನೆಂಟರಲ್ಲಿಯೂ ಸ್ವಾಸದ
೫ ಲ್ಲಿಯೂ ಹೊರ್ತು ಮಾನಹೀನನಲ್ಲ, ಅಂದನು. ಮತ್ತು ಕೆಲವು
ಮಂದಿ ಕೋಗಿಮ್ಮರ ಮೇಲೆ ಕೈಗಳನ್ನಿಟ್ಟು, ಸ್ವಸ್ಥ ಮಾಡಿದ್ದಲ್ಲ
ದೆ, ಮತ್ಯಾವ ಬಲವಾದ ಕ್ರಿಯೆಯನ್ನು ಅಲ್ಲಿ ನಡಿಸಲಾರದೆ,
೬ ಅವರ ಅವಿಶ್ವಾಸಕ್ಕೆ ಆಶ್ಚರ್ಯ ಪಟ್ಟು, ಗ್ರಾಮಗಳನ್ನು ಸುತ್ತಿ
ಕೊಂಡು, ಬೋಧಿಸಿದನು.

೭ ಮತ್ತು ಅವನು ಹನ್ನೆರಡು ಮಂದಿಯನ್ನು ಕರೆದು, ಇಬ್ಬರಿಬ್ಬ
ರಾಗಿ ಕಳುಹಿಸಲಾರಂಭಿಸಿ, ಅವರಿಗೆ ಅಶುದ್ಧಾತ್ಮಗಳ ಮೇಲೆ ಅಧಿಕಾ
೮ ರ ಕೊಟ್ಟು, ಮಾರ್ಗಕ್ಕೆ ಕೋಲು ಹೊರ್ತು ಮತ್ಯೇನು ತೆಗೆ
ದು ಕೊಳ್ಳ ಬೇಡಿರೆಂದೂ, ಹಸಿಬಿಯನ್ನೂ ಕೊಟ್ಟಿಯನ್ನೂ
೯ ಜೇಬಲಲ್ಲಿ ಹಣವನ್ನೂ ತಕ್ಕೊಳ್ಳದೆ, ಕೆರಗಳನ್ನು ಮೆಟ್ಟಿ ಕೊಳ್ಳ
ಬೇಕೆಂದೂ, ಎರಡು ಅಂಗಿಗಳನ್ನು ತೊಟ್ಟುಕೊಳ್ಳ ಬೇಡಿರೆಂದೂ,
೧೦ ಆಜ್ಞಾಪಿಸಿದನು. ಮತ್ತು ಹೇಳ್ದೆನಂದರೆ, ನೀವು ಎಲ್ಲಿ ಬಂದು,
ಮನೆಯಲ್ಲಿ ಪ್ರವೇಶಿಸುತ್ತೀರೋ, ಅಲ್ಲಿಯೇ, ಅಲ್ಲಿಂದ ಹೊರಟುವ
೧೧ ವರ್ಯಂತರ, ಇರಿ. ಮತ್ತು ನಿಮ್ಮನ್ನು ಅಂಗೀಕರಿಸದೆ ಕೇಳದೆ
ಇರುವವರ್ಯಾರೋ, ಅಲ್ಲಿಂದ ಹೊರಟು, ನಿಮ್ಮ ಪಾದಗಳಿಗೆ ಹತ್ತಿ
ದ ಮಣ್ಣನ್ನು ಅವರಿಗೆ ಸಾಕ್ಷಿಯಾಗಿ ಝಾಡಿಸಿರಿ. ನಿಶ್ಚಯವಾ
ಗಿ ನಿಮಗೆ ಹೇಳುತ್ತೇನೆ, ನ್ಯಾಯತೀರ್ಪಿಕೆಯ ದಿವಸದಲ್ಲಿ ಆ ಪ
ಟ್ಟಣಕ್ಕಿಂತ ಸೊದೋಮಿಗೂ ಗಮೋರಕ್ಕೂ ತಾಳ ತಕ್ಕದ್ದಾಗಿರು
೧೨ ವದು. ಆಗಲವರು ಹೊರಟು, ಮಾನಸಾಂತರ ಪಡ ಬೇಕೆಂದು
೧೩ ಸಾರಿ, ಅನೇಕ ದೆವ್ವಗಳನ್ನು ಹೊರಡಿಸಿ, ಅನೇಕ ಕೋಗಿಮ್ಮ
ರನ್ನು, ಎಣ್ಣೆ ಹಚ್ಚಿ, ಸ್ವಸ್ಥ ಮಾಡಿದರು.

೧೪ ಇದಲ್ಲದೆ ಅವನ ಹೆಸರು ಪ್ರಸಿದ್ಧಿಯಾದ್ದರಿಂದ, ಅರಸನಾ
ದ ಹೆರೋದನು ಕೇಳಿ, ಸ್ನಾನಿಕನಾದ ಯೋಹಾನನು ಸತ್ತವ
ರೊಳಗಿಂದ ಎದ್ದಿದ್ದಾನೆ; ಅದಕ್ಕೋಸ್ಕರ ಬಲವಾದ ಕ್ರಿಯೆಗಳು
೧೫ ಅವನಿಂದ ಆಗುತ್ತವೆ, ಅಂದನು. ಬೇರೊಬ್ಬರು, ಅವನು ಎಲೀ
ಯನೇ, ಅಂದರು; ಬೇರೊಬ್ಬರು, ಪ್ರವಾದಿಗಳಲ್ಲಿ ಒಬ್ಬನಾಗಿದ್ದಾನೆ;
ಇಲ್ಲವೆ, ಪ್ರವಾದಿಗಳಲ್ಲಿ ಒಬ್ಬನ ಹಾಗಿದ್ದಾನೆ, ಅಂದರು. ಹೆರೋ
ದನು ಅದನ್ನು ಕೇಳಿ, ನಾನು ತಲೆ ಕೊಯಿಸಿದ ಯೋಹಾನನು
ಇವನೇ; ಅವನು ಸತ್ತವರೊಳಗಿಂದ ಎದ್ದಿದ್ದಾನೆ, ಅಂದನು.

೧೬ ಯಾಕಂದರೆ ಹೆರೋದನು, ತಾನು ಮದುವೆ ಮಾಡಿ ಕೊಂಡಂ
ಥ, ತನ್ನ ಸಹೋದರನಾದ ಫಿಲಿಪ್ಪನ ಹೆಂಡತಿಯಾದಂಥ, ಹೆ
ರೋದ್ಯಳ ನಿಮಿತ್ತ, ತಾನೇ ಕಳುಹಿಸಿ, ಯೋಹಾನನನ್ನು ಹಿಡಿ
೧೭ ದು, ಅವನನ್ನು ಶೆರೆಯಲ್ಲಿ ಕಟ್ಟಿ ಹಾಕಿಸಿದ್ದನು; ಯಾಕಂದರೆ
ಯೋಹಾನನು ಹೆರೋದನಿಗೆ, ನೀನು ನಿನ್ನ ಸಹೋದರನ ಹೆಂಡ
೧೮ ತಿಯನ್ನು ಇಟ್ಟು ಕೊಳ್ಳುವದು ನ್ಯಾಯವಲ್ಲ, ಅಂದಿದ್ದನು. ಅದ
ರೆ ಹೆರೋದ್ಯಳು ಅವನನ್ನು ಹೊಂಚಿಸೋದಿ, ಅವನನ್ನು ಕೊಲ್ಲ
೧೯ ಇಚ್ಛೈಸಿದರೂ ಆಗಲಿಲ್ಲ; ಯಾಕಂದರೆ ಹೆರೋದನು, ಅವನು
ನೀತಿವಂತನೂ ಪರಿಶುದ್ಧನೂ ಆಗಿರುವ ಮನುಷ್ಯನೆಂದು ತಿಳಿದು,
ಯೋಹಾನನಿಗೆ ಭಯ ಪಟ್ಟು, ಅವನನ್ನು ಕಾಪಾಡಿದನು; ಮತ್ತು
ಅವನ ಮಾತನ್ನು ಕೇಳಿ, ಅನೇಕ ಕೆಲಸಗಳನ್ನು ಮಾಡಿ, ಅವನ
ನ್ನು ಸಂತೋಷವಾಗಿ ಕೇಳ್ಳಿದನು.

೨೦ ಹೀಗಿರಲಾಗಿ ಹೆರೋದನು, ತಾನು ಹುಟ್ಟಿದ ದಿನದಲ್ಲಿ ತನ್ನ
ದೊಡ್ಡವರಿಗೂ ಸಹಸ್ರಾಧಿಪತಿಗಳಿಗೂ ಗಲಿಲಾಯದ ಶ್ರೇಷ್ಠರಿ
೨೧ ಗೂ ಔತಣ ಮಾಡಿಸುವ ಒಳ್ಳೆ ದಿನ ಉಂಟಾದಾಗ, ಅವಳ ಮಗ
ಳಾದ ಹೆರೋದ್ಯಳು ಒಳಗೆ ಬಂದು, ನಾಟ್ಯವಾಡಿ, ಹೆರೋದನನ್ನು
ಅವನ ಸಂಗಡ ಕೂತವರನ್ನೂ ಮೆಚ್ಚಿಸಿದಾಗ, ಅರಸನು ಹುಡುಗಿ
ಗೆ, ಮನಸ್ಸಿಗೆ ಬಂದದ್ದನ್ನು ನನ್ನಿಂದ ಬೇಡಿಕೋ; ಆಗ ನಿನಗೆ ಕೊ
ಡುತ್ತೇನೆಂದು ಹೇಳಿ, ನೀನು ನನ್ನನ್ನು ಏನು ಬೇಡಿಕೊಂಡರೂ,
೨೩ ನನ್ನ ರಾಜ್ಯದ ಅರೆವಾಸಿಯ ಪಟ್ಟಿಗೂ ನಿನಗೆ ಕೊಡುತ್ತೇನೆಂದು,
ಅವಳಿಗೆ ಆಣೆ ಇಟ್ಟು ಕೊಂಡನು.

೨೪ ಆಗಲವಳು ಹೊರಗೆ ಹೋಗಿ, ತನ್ನ ತಾಯಿಗೆ, ನಾನೇನು ಬೇ
ಡಿಕೊಳ್ಳಬೇಕು! ಅಂದಳು; ಅವಳು, ಸ್ನಾನಿಕನಾದ ಯೋ
೨೫ ಹಾನನ ತಲೆಯನ್ನು, ಅಂದಳು. ಸಂಗಡಲೇ ಅವಳು ಅರಸನ ಬಳಿ
ಗೆ ಬೇಗ ಬಂದು, ಈಗಲೇ ತಬಕಿನ ಮೇಲೆ ಸ್ನಾನಿಕನಾದ
ಯೋಹಾನನ ತಲೆಯನ್ನು ನನಗೆ ಕೊಡ ಬೇಕೆಂದು, ಬೇಡಿ
೨೬ ಕೊಂಡಳು. ಆಗ ಅರಸನು, ದುಖ್ಖಾಕ್ರಾಂತನಾಗಿದ್ದರೂ, ಆಣೆಯ
ನಿಮಿತ್ತವೂ ಸಂಗಡ ಕೂತವರ ನಿಮಿತ್ತವೂ ಅವಳನ್ನು ಅಲಕ್ಷ್ಯ
೨೭ ಮಾಡ ಮನಸ್ಸಾಗಿರದೆ, ಸಂಗಡಲೇ ಅರಸನು ಭಲ್ಲೆಯವನನ್ನು
ಕಳುಹಿಸಿ, ಅವನ ತಲೆಯನ್ನು ತರ ಬೇಕೆಂದು, ಆಜ್ಞಾಪಿಸಿದನು
೨೮ ಅವನು ಹೋಗಿ, ಶೆರೆಮನೆಯಲ್ಲಿ ಅವನ ತಲೆ ಕಡೆದು, ಅವನ ತಲೆ
ತಬಕಿನ ಮೇಲೆ ತಂದು, ಅದನ್ನು ಹುಡುಗಿಗೆ ಕೊಟ್ಟನು. ಹುಡು
೨೯ ಗಿಯು ಅದನ್ನು ತನ್ನ ತಾಯಿಗೆ ಕೊಟ್ಟಳು. ಅವನ ಶಿಷ್ಯರು
ಅದನ್ನು ಕೇಳಿ, ಬಂದು, ಅವನ ಹೆಣ ಎತ್ತಿ, ಅದನ್ನು ಸಮಾಧಿ
ಯಲ್ಲಿ ಇಟ್ಟರು.

೩೦ ಆಗ ಅಪೊಸ್ತಲರು ಯೇಸುವಿನ ಬಳಿಗೆ ಕೂಡಿ ಬಂದು, ತಾವು
ಮಾಡಿದವುಗಳನ್ನೂ ಬೋಧಿಸಿದವುಗಳನ್ನೂ, ಎಲ್ಲಾ, ಅವನಿಗೆ ತಿಳಿ



೩೧ ಸಿದರು. ಅವನು ಅವರಿಗೆ, ನೀವೇ ಏಕಾಂತವಾಗಿ ಅರಣ್ಯ ಸ್ಥಳ
ಕ್ಕೆ ಬಂದು, ಸ್ವಲ್ಪ ವಿಶ್ರಮಿಸಿ ಕೊಳ್ಳಿರಿ, ಅಂದನು. ಯಾಕಂದ
ರೆ ಬರುವವರೂ ಹೋಗುವವರೂ ಅನೇಕರಾಗಿದ್ದರಿಂದ, ಉ
೩೨ ಣ್ಣುವದಕ್ಕೆ ಸಹ ಸಮಯ ಬೀಳ್ಳಲಿಲ್ಲ. ಆಗ ಹಡಗದಲ್ಲಿ ಏಕಾಂತ
ವಾಗಿ ಅರಣ್ಯ ಸ್ಥಳಕ್ಕೆ ಹೋದರು.

೩೩ ಅವರು ಹೋಗುವದನ್ನು ಸಮೂಹಗಳು ನೋಡಿದಾಗ, ಅ
ನೇಕರು ಅವನ ಗುರುತು ತಿಳಿದು, ಸಮಸ್ತ ಪಟ್ಟಣಗಳೊಳಗಿಂದ
ಅಲ್ಲಿಗೆ ಕಾಲುನಡೆಯಾಗಿ ಕೂಡ ಓಡಿ, ಅವರಿಗೆ ಮುಂಚೆ ಕೇರಿ,
೩೪ ಅವನ ಬಳಿಗೆ ಕೂಡಿ ಬಂದರು. ಯೇಸು ಹೊರಟು ಬಂದಾಗ,
ಬಹು ಸಮೂಹವನ್ನು ನೋಡಿ, ಅವರು ಕುರುಬನಿಲ್ಲದ ಕುರಿಗಳ
ಹಾಗಿರುವದರಿಂದ ಅವರ ಮೇಲೆ ಅಂತ್ಯಕರಣ ಪಟ್ಟು, ಅವರಿಗೆ
ಅನೇಕ ಮಾತುಗಳನ್ನು ಬೋಧಿಸಲಾರಂಭಿಸಿದನು.

೩೫ ಆಗಲೇ ಬಹಳ ಹೊತ್ತಾದದರಿಂದ, ಅವನ ಶಿಷ್ಯರು ಅವನ
ಬಳಿಗೆ ಬಂದು, ಇದು ಅರಣ್ಯ ಸ್ಥಳವು; ಮತ್ತು ಈಗ ಬಹಳ ಹೊ
೩೬ ತ್ತಾಯಿತು; ಅವರು ಸುತ್ತಿರುವ ಗ್ರಾಮಗಳಿಗೂ ಹಳ್ಳಿಗಳಿಗೂ
ಹೋಗಿ, ತಮಗೆ ಕೊಟ್ಟಿಗಳನ್ನು ಕೊಂಡುಕೊಳ್ಳುವ ಹಾಗೆ ಅವರ
ನ್ನು ಕಳುಹಿಸಿ ಬಿಡು; ಯಾಕಂದರೆ ಉಣ್ಣುವದಕ್ಕೆ ಅವರಿಗೆ ಏನೂ
೩೭ ಇಲ್ಲ, ಅಂದರು. ಆದರೆ ಅವನು ಪ್ರತ್ಯುತ್ತರವಾಗಿ, ನೀವೇ ಅವರ
ಗೆ ಉಣ್ಣ ಕೊಡಿರಿ, ಎಂದು ಅವರಿಗೆ ಹೇಳ್ಳಿದನು. ಅವರು ಅವನಿಗೆ,
ನಾವು ಹೋಗಿ, ಇನ್ನೂರು ಹಣಕ್ಕೆ ಕೊಟ್ಟಿ ಕೊಂಡು ಕೊಂಡು
೩೮ ಅವರಿಗೆ ಉಣ್ಣ ಕೊಡಲೋ! ಅಂದಾಗ; ಅವನು ಅವರಿಗೆ, ನಿಮಗೆ
ಎಷ್ಟು ಕೊಟ್ಟಿಗಳಿವೆ! ಹೋಗಿ ನೋಡಿರಿ, ಅಂದನು. ತಿಳಿದ ಮೇಲೆ,
೩೯ ಐದು, ಮತ್ತು ಎರಡು ಮೀನುಗಳು, ಅಂದರು. ಆಗಲವನು, ಎಲ್ಲ
ರನ್ನು ಹಸುರಾದ ಹುಲ್ಲಿನ ಮೇಲೆ ಪಂಕ್ತಿ ಪಂಕ್ತಿಗಳಾಗಿ ಕುಂದ್ರಿಸ
೪೦ ಬೇಕೆಂದು, ಅವರಿಗೆ ಆಜ್ಞಾಪಿಸಿದನು. ಆಗಲವರು ಸಾಲು ಸಾ
ಲಿಗೆ, ನೂರು ನೂರಾಗಿಯೂ, ಐವತ್ತೈವತ್ತಾಗಿಯೂ, ಕೂತು
೪೧ ಕೊಂಡರು. ಮತ್ತು ಅವನು ಆ ಐದು ಕೊಟ್ಟಿಗಳನ್ನು, ಎರಡು
ಮೀನುಗಳನ್ನು, ತೆಗೆದು ಕೊಂಡು, ಆಕಾಶವನ್ನು ನೋಡಿ, ಸ್ತೋ
ತ್ರ ಮಾಡಿ, ಆ ಕೊಟ್ಟಿಗಳನ್ನು ಮುರಿದು, ಅವರಿಗೆ ಹಂಚಿ ಕೊಡು
ವದಕ್ಕೆ ತನ್ನ ಶಿಷ್ಯರಿಗೆ ಕೊಟ್ಟನು. ಮತ್ತು ಎರಡು ಮೀನುಗಳನ್ನು
೪೨ ಎಲ್ಲರಿಗೆ ಹಂಚಿ ಕೊಟ್ಟನು. ಆಗ ಎಲ್ಲರು ಉಂಡು, ತೃಪ್ತಿಯಾದ
೪೩ ರು. ಮತ್ತು ಹನ್ನೆರಡು ಪುಟ್ಟಿ ತುಂಬ ತುಂಡುಗಳನ್ನೂ, ಮೀನು
೪೪ ಚೂರುಗಳನ್ನು ಸಹ, ಎತ್ತಿದರು. ಆ ಕೊಟ್ಟಿಗಳನ್ನು ತಿಂದವರು
ಹೆಚ್ಚು ಕಡಿಮೆ ಐದು ಸಾವಿರ ಗಂಡಸರಾಗಿದ್ದರು.

೪೫ ಸಂಗಡಲೇ ಅವನು ತನ್ನ ಶಿಷ್ಯರಿಗೆ, ಹಡಗವನ್ನೇರಿ, ತಾನು
ಸಮೂಹವನ್ನು ಕಳುಹಿಸುವಷ್ಟರಲ್ಲಿ ಆಹೆಗೆ ಬೇತ್ಸಾಯಿದದ
೪೬ ಕಡೆಗೆ ಮುಂದೆ ಹೋಗ ಬೇಕೆಂದು, ಅಗತ್ಯ ಮಾಡಿದನು. ಅವರ
ನ್ನು ಕಳುಹಿಸಿದ ಮೇಲೆ ಪ್ರಾರ್ಥನೆ ಮಾಡುವದಕ್ಕೋಸ್ಕರ
ಒಂದು ಬೆಟ್ಟವನ್ನೇರಿದನು.

೪೭ ಸಾಯಂಕಾಲವಾದಾಗ, ಹಡಗವು ಸಮುದ್ರದ ಮಧ್ಯದಲ್ಲಿರ
೪೮ ಲಾಗಿ, ಅವನೊಬ್ಬನೇ ಭೂಮಿಯ ಮೇಲೆ ಇದ್ದನು. ಮತ್ತು ಭೂ
ಳಿಯು ಅವರಿಗೆ ವಿರೋಧವಾಗಿದ್ದದರಿಂದ, ಅವರು ಹುಟ್ಟು ಎಳೆ
ಯುವದರಲ್ಲಿ ಕಷ್ಟ ಪಡುತ್ತಾರೆಂದು ನೋಡಿ, ರಾತ್ರಿಯ ನಾಲ್ಕ
ನೇ ಝಾವಿನಲ್ಲಿ ಸಮುದ್ರದ ಮೇಲೆ ನಡೆಯುತ್ತಾ, ಅವರ
ಬಳಿಗೆ ಬಂದು, ಅವರನ್ನು ದಾಟಿ ಹೋಗ ಮನಸ್ಸಾಗಿದ್ದನು.

೪೯ ಆದರೆ ಅವರು ಅವನು ಸಮುದ್ರದ ಮೇಲೆ ನಡೆಯುವದ
೫೦ ನ್ನು ನೋಡಿ, ಭೂತವೆಂದು ನೆನಸಿ, ಕೂಗಿದರು; ಯಾಕಂದರೆ ಎ
ಲ್ಲರು ಅವನನ್ನು ನೋಡಿ, ಕಳವಳಗೊಂಡರು. ಸಂಗಡಲೇ ಅವನು
ಅವರ ಸಂಗಡ ಮಾತಾಡಿ, ಧೈರ್ಯವಾಗಿರಿ, ನಾನೇ, ಭಯ ಪಡ
೫೧ ಬೇಡಿರೆಂದು, ಅವರಿಗೆ ಹೇಳ್ಳಿ, ಹಡಗದಲ್ಲಿ ಅವರ ಬಳಿಗೆ ಏರಿದನು.
ಆಗ ಝಾಳ್ಳಿ ನಿಂತಿತು. ಮತ್ತು ಅವರು ಅತ್ಯಧಿಕವಾಗಿ ತಕ್ಕೊ
೫೨ ಳಗೆ ಭ್ರಮಿಸಿ ಆಶ್ಚರ್ಯ ಪಟ್ಟರು; ಯಾಕಂದರೆ ಅವರ ಹೃದ
ಯವು ಕಠಿಣವಾಗಿದ್ದದರಿಂದ, ಅವರು ರೊಟ್ಟಿಗಳ ಅದ್ಭುತವ
ನ್ನು ಗ್ರಹಿಸಿ ಕೊಳ್ಳಲಿಲ್ಲ.

೫೩ ಅವರು ದಾಟಿ, ಗೆನೆಜರೇತ್ ದೇಶಕ್ಕೆ ಬಂದು, ಥಡ ಹೇರಿದರು.
೫೪ ಹಡಗದಿಂದ ಇಳಿದಾಗಲೇ, ಜನರು ಅವನ ಗುರುತು ತಿಳ್ಳಿದು,
೫೫ ಆ ಹೀಮೆಯನ್ನೆಲ್ಲಾ ಸುತ್ತಿ ಕೊಂಡು, ಅವನು ಇದ್ದಾನೆಂದು ಕೇ
ಳ್ಳಿದ ಸ್ಥಳಗಳಿಗೆ ಆಸಾಖ್ಯವಾಗಿರುವವರನ್ನು ಮಂಚಗಳ ಮೇಲೆ
೫೬ ಎತ್ತಿ ಕೊಂಡು, ಹೋಗಲಾರಂಭಿಸಿದರು. ಮತ್ತು ಅವನು ಗ್ರಾಮ
ಗಳನ್ನೂ ಪಟ್ಟಣಗಳನ್ನೂ ಹೀಮೆಗಳನ್ನೂ ಎಲ್ಲಿ ಕೇರಿದನೋ, ಅಲ್ಲಿ
ಅವರು ಕೋಗಿಮ್ಮರನ್ನು ಅಂಗಡಿ ಬೀದಿಗಳಲ್ಲಿ ಇಟ್ಟು, ಅವನ
ವಸ್ತ್ರದ ಶರಗನ್ನಾದರೂ ಅವರು ಮುಟ್ಟುವ ಹಾಗೆ ಅವನನ್ನು
ಬೇಡಿ ಕೊಂಡರು. ಮತ್ತು ಅದನ್ನು ಮುಟ್ಟಿದವಕೆಲ್ಲರು, ಸ್ವಸ್ಥ
ವಾದರು.

## ೭. ಸಂಧಿ.

೧ ಆಗ ಫರಿಸಾಯರೂ ಶಾಸ್ತ್ರಿಗಳಲ್ಲಿ ಕೆಲವರೂ ಯೆರೂಸಲೇ
೨ ಮಿನಿಂದ ಬಂದು, ಅವನ ಬಳಿಗೆ ಕೂಡಿ ಕೊಂಡರು. ಇವರು ಅವನ
ಶಿಷ್ಯರಲ್ಲಿ ಕೆಲವರು ಹೊಲೆ ಎಂಬ ತೊಳೆಯದ ಕೈಗಳಿಂದ
೩ ಕೊಟ್ಟಿ ತಿನ್ನುವದನ್ನು ನೋಡಿ, ತಪ್ಪು ಹಿಡಿದರು. ಯಾಕಂದರೆ
ಫರಿಸಾಯರೂ, ಯೆಹೂದ್ಯರೆಲ್ಲರೂ, ಹಿರಿಯರ ಸಂಪ್ರದಾ
ಯವನ್ನು ಕೈ ಕೊಂಡು, ಕೈಗಳನ್ನು ಬಹಳವಾಗಿ ತೊಳ್ಳ ಕೊಂಡ
೪ ಹೊರ್ತು, ಊಟ ಮಾಡುವದಿಲ್ಲ; ಮತ್ತು ಅಂಗಡಿಯಿಂದ ಬಂ
ದಾಗ, ಸ್ನಾನ ಮಾಡಿ ಕೊಂಡ ಹೊರ್ತು, ಊಟ ಮಾಡುವದಿಲ್ಲ;
ಮತ್ತು ಪಂಚ ಪಾತ್ರೆ, ಬಟ್ಟಲು, ತಂಬಿಗೆ, ಮಂಚಗಳ ಸ್ನಾನಗಳು
ಮೊದಲಾದ ಅನೇಕ ಕಟ್ಟಳೆಗಳನ್ನು ಕೈ ಕೊಳ್ಳುವದಕ್ಕೆ ಹೊಂದಿ
೫ ದ್ದಾರೆ. ತರುವಾಯ ಫರಿಸಾಯರೂ ಶಾಸ್ತ್ರಿಗಳೂ ಅವನಿಗೆ,
ನಿನ್ನ ಶಿಷ್ಯರು ಯಾಕೆ ಹಿರಿಯರ ಸಂಪ್ರದಾಯದ ಪ್ರಕಾರ ನಡ
ಕೊಳ್ಳದೆ, ತೊಳೆಯದ ಕೈಗಳಿಂದ ಕೊಟ್ಟಿ ತಿನ್ನುತ್ತಾರೆಂದು,
೬ ಅವನನ್ನು ಕೇಳಿದಾಗ, ಅವನು ಪ್ರತ್ಯುತ್ತರವಾಗಿ ಅವರಿಗೆ ಹೇಳ್ಳಿ
ದ್ದೇನಂದರೆ, ಕಪಟಿಗಳಾದ ನಿಮ್ಮನ್ನು ಕುರಿತು ಯೆಶಾಯನು ಚ
ನ್ನಾಗಿ ಪ್ರವಾದನೆ ಹೇಳ್ಳಿದ್ದಾನೆ; ಏನಂದರೆ, ಈ ಜನರು ತುಟಿಗಳಿಂದ
ನನ್ನನ್ನು ಸನ್ಮಾನಿಸುತ್ತಾರೆ; ಆದರೆ ಅವರ ಹೃದಯವು ನನಗೆ
೭ ದೂರವಾಗಿದೆ; ಆದರೂ ಮನುಷ್ಯರ ಕಲ್ಪನೆಗಳಾದ ಬೋಧನೆ
ಗಳನ್ನು ಬೋಧಿಸಿ, ವ್ಯರ್ಥವಾಗಿ ನನ್ನನ್ನು ಭಜಿಸುತ್ತಾರೆಂದು,
೮ ಬರೆದದೆ ಅಲ್ಲವೋ! ಹ್ಯಾಗಂದರೆ, ನೀವು ದೇವರ ಕಟ್ಟಳೆಯ
ನ್ನು ಬಿಟ್ಟು ಬಿಟ್ಟು, ಮನುಷ್ಯರ ಸಂಪ್ರದಾಯವನ್ನೂ, ಬಟ್ಟಲು
ಪಂಚಪಾತ್ರೆಗಳ ಸ್ನಾನಗಳನ್ನೂ ಕೈ ಕೊಳ್ಳುತ್ತೀರಿ; ಮತ್ತು
ಇವುಗಳ ಹಾಗೆ ಬೇರೆ ಅನೇಕಗಳನ್ನು ಮಾಡುತ್ತೀರಿ.

೯ ಮತ್ತು ಅವರಿಗೆ ಹೇಳ್ಳಿದ್ದು, ನೀವು ನಿಮ್ಮ ಸಂಪ್ರದಾಯವನ್ನು

ಕೈಕೊಳ್ಳುವದಕ್ಕಾಗಿ ದೇವರ ಕಟ್ಟಳೆಯನ್ನು ಚನ್ನಾಗಿ ಅಲಕ್ಷ್ಯ
೧೦ ಮಾಡುತ್ತೀರಿ. ಹ್ಯಾಗಂದರೆ, ಮೋಶೆಯು, ನಿನ್ನ ತಂದೆಯನ್ನೂ ತಾಯಿಯನ್ನೂ ಸನ್ಮಾನಿಸು; ಮತ್ತು ತಂದೆಗಾದರೂ ತಾಯಿಗಾದರೂ ಕೆಟ್ಟ ಮಾತು ಹೇಳುವವನು ಸತ್ತೇ ಸಾಯಲಿ, ಅಂದನು.
೧೧ ಆದರೆ ನೀವು, ಬಬ್ಬ ಮನುಷ್ಯನು, ತಂದೆಗಾದರೂ ತಾಯಿಗಾದರೂ ನೀನು ನನ್ನಿಂದ ಹೊಂದುವ ಪ್ರಯೋಜನವು ಕೊರ್ಬಾನೆಂಬ ಕಾಣಿಕೆಯಾಗಿದೆ, ಎಂದು ಹೇಳಿದರೆ, ಸರಿ, ಅನ್ನುತ್ತೀರಿ; ಮತ್ತು ಅವನನ್ನು ತನ್ನ ತಂದೆಗಾದರೂ ತಾಯಿಗಾದರೂ
೧೨ ಏನೂ ಮಾಡಗೊಡಿಸದೆ, ನೀವೇ ಸ್ಥಾಪಿಸಿದ ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕ ಮಾಡುತ್ತೀರಿ; ಮತ್ತು ಇವುಗಳ ಹಾಗೆ ಅನೇಕಗಳನ್ನು ಮಾಡುತ್ತೀರಿ.

೧೩ ಆಗಲವನು ಸಮೂಹವನ್ನೆಲ್ಲಾ ಹತ್ತರ ಕರೆದು, ಅವರಿಗೆ ಹೇ
೧೪ ಳಿದ್ದೇನಂದರೆ, ಎಲ್ಲರೂ ನನಗೆ ಕಿವಿಕೊಟ್ಟು ಗ್ರಹಿಸಿರಿ. ಮನುಷ್ಯನ ಹೊರಗಿನಿಂದ ಅವನೊಳಗೆ ಶೇರುವ ಬಂದಾದರೂ ಅವನನ್ನು
೧೫ ಹೊಲೆ ಮಾಡಲಾರದು; ಆದರೆ ಅವನೊಳಗಿಂದ ಹೊರಡುವವುಗಳೇ ಮನುಷ್ಯನನ್ನು ಹೊಲೆ ಮಾಡುವಂಥವುಗಳು. ಕೇಳಿ ಕಿವಿಗಳುಳ್ಳವನು ಕೇಳಲಿ.

೧೭ ಮತ್ತು ಅವನು ಸಮೂಹವನ್ನು ಬಿಟ್ಟು, ಮನೆಯಲ್ಲಿ ಪ್ರವೇಶಿಸಿದಾಗ, ಅವನ ಶಿಷ್ಯರು ಆ ಸಾಮ್ಯವನ್ನು ಕುರಿತು ಅವನನ್ನು
೧೮ ಕೇಳಿದರು. ಅವನವರಿಗೆ ಹೇಳಿದ್ದೇನಂದರೆ, ಹಾಗಾದರೆ ನೀವು ಸಹ ಅವಿವೇಕಿಗಳಾಗಿದ್ದಿರೋ! ಹೊರಗಿನಿಂದ ಮನುಷ್ಯನೊಳಗೆ
೧೯ ಶೇರುವಂಥಾದ್ದೆಲ್ಲಾ ಅವನ ಹೃದಯದೊಳಗಲ್ಲ, ಹೊಟ್ಟೆಯೊಳಗೆ ಶೇರಿ, ಉಂಡದ್ದನ್ನೆಲ್ಲಾ ಕುಚಿ ಮಾಡಿ, ಬಹಿರ್ಭೂಮಿಗೆ ಹೊರಡುವದರಿಂದ ಅವನನ್ನು ಹೊಲೆ ಮಾಡಲಾರದೆಂದು, ನೀವು ಗ್ರಹಿಸುವದಿಲ್ಲವೋ!
೨೦ ಮತ್ತು ಅವನು ಹೇಳಿದ್ದೇನಂದರೆ, ಮನುಷ್ಯನೊಳಗಿಂದ ಹೊರಡುವಂಥಾದ್ದೇ ಮನುಷ್ಯನನ್ನು ಹೊಲೆ ಮಾಡುತ್ತದೆ.
೨೧ ಯಾಕಂದರೆ ಒಳಗಿನಿಂದ, ಮನುಷ್ಯರ ಹೃದಯದೊಳಗಿಂದ, ದುರಾಲೋಚನೆಗಳು, ವ್ಯಭಿಚಾರಗಳೂ, ಜಾರತ್ವಗಳು, ಕೊ
೨೨ ಲೆಗಳೂ, ಕಳ್ಳತನಗಳು, ಲೋಭಗಳು, ಕೆಟ್ಟತನಗಳು, ಮೋಸವೂ, ಬಂಡತನವೂ, ಕ್ರೂರದೃಷ್ಟಿಯೂ, ದೂಷಣೆಯೂ,
೨೩ ಗರ್ವವೂ, ದುರ್ಬುದ್ಧಿಯೂ, ಹೊರಡುತ್ತವೆ. ಕೆಟ್ಟವುಗಳಾದ ಇವೆಲ್ಲಾ, ಒಳಗಿನಿಂದ ಹೊರಟು, ಮನುಷ್ಯನನ್ನು ಹೊಲೆ ಮಾಡುತ್ತವೆ.

೨೪ ಅವನು ಅಲ್ಲಿಂದ ಎದ್ದು, ತೂರ್ ಸೀದೋನ್ ಪ್ರಾಂತ್ಯಗಳಿಗೆ ಹೋಗಿ, ಯಾರಿಗೂ ತಿಳಿಯ ಬಾರದೆಂದು, ಒಂದು ಮನೆಯಲ್ಲಿ
೨೫ ಪ್ರವೇಶಿಸಿದನು; ಆದರೆ ಅಡಗಿರಲಾರದೆ ಇದ್ದನು. ಹ್ಯಾಗಂದರೆ ಅಶುದ್ಧಾತ್ಮ ಹಿಡಿದ ಮಗಳು ಉಂಟಾದ ಬಬ್ಬ ಸ್ತ್ರೀಯು ಅವನ
೨೬ ಸುದ್ದಿ ಕೇಳಿ, ಬಂದು, ಅವನ ಪಾದಕ್ಕೆ ಬಿದ್ದಳು. ಆ ಸ್ತ್ರೀಯು ಜಾತಿಯಲ್ಲಿ ಸುರೊಫೊಯಿನೀಕ್ಯಳಾದ ಗ್ರೇಕಳಾಗಿದ್ದಳು. ಅವಳು ತನ್ನ ಮಗಳೊಳಗಿಂದ ದೆವ್ವವನ್ನು ಹೊರಡಿಸ ಬೇಕೆಂದು
೨೭ ಅವನನ್ನು ಬೇಡಿಕೊಂಡಾಗ, ಯೇಸು ಅವಳಿಗೆ, ಮೊದಲು ಮಕ್ಕಳಿಗೆ ತೃಪ್ತಿಯಾಗಗೊಡಿಸು; ಯಾಕಂದರೆ ಮಕ್ಕಳ ಕೊಟ್ಟಿಯನ್ನು ತೆಗೆದು. ನಾಯಿಗಳಿಗೆ ಹಾಕುವದು ಬಬ್ಬೇದಲ್ಲ, ಅಂದನು.
೨೮ ಅವಳು ಪ್ರತ್ಯುತ್ತರವಾಗಿ ಅವನಿಗೆ, ಹೌದು, ಕರ್ತನೇ, ಆದರೂ ನಾಯಿಗಳು ಮೇಜಿನ ಕೆಳಗೆ ಮಕ್ಕಳ ಎಂಜಲು ತಿನ್ನುತವೆ, ಅಂದಾ
೨೯ ಗ; ಅವನು ಅವಳಿಗೆ, ಈ ಮಾತಿಗೋಸ್ಕರ ಹೋಗು; ದೆವ್ವವು
೩೦ ನಿನ್ನ ಮಗಳಿಂದ ಹೊರಟಿದೆ, ಅಂದನು. ಆಗಲವಳು ತನ್ನ ಮನೆಗೆ ಹೋಗಿ, ದೆವ್ವ ಹೊರಟಿದ್ದನ್ನೂ, ತನ್ನ ಮಗಳು ಮಂಚದ ಮೇಲೆ ಬಿದ್ದಿರುವದನ್ನೂ, ಕಂಡಳು.

೩೧ ಅವನು ತೂರ್ ಸೀದೋನ್ ಪ್ರಾಂತ್ಯಗಳಿಂದ ತಿರಿಗಿ ಹೊರಟು, ದೆಕಪೊಲಿಯ ಪ್ರಾಂತ್ಯಗಳ ಮಧ್ಯದಿಂದ ಗಲಿಲಾಯ ಸಮುದ್ರ
೩೨ ದ ಬಳಿಗೆ ಬಂದನು. ಆಗ ನತ್ತಿ ಮಾತಾಡುವ ಕಿವುಡನನ್ನು ಅವನ ಬಳಿಗೆ ತಂದು, ಅವನ ಮೇಲೆ ಕೈ ಇಡ ಬೇಕೆಂದು ಅವನನ್ನು
೩೩ ಬೇಡಿಕೊಂಡರು. ಅವನು ಅವನನ್ನು ಸಮೂಹದಿಂದ ಏಕಾಂತವಾಗಿ ಕರಕೊಂಡು ಹೋಗಿ, ತನ್ನ ಬೆರಳುಗಳನ್ನು ಅವನ ಕಿವಿಗಳಲ್ಲಿ
೩೪ ಹಾಕಿ, ಉಗುಳಿ, ಅವನ ನಾಲಿಗೆಯನ್ನು ಮುಟ್ಟಿ, ಆಕಾಶವನ್ನು ನೋಡಿ, ಮೂಲುಗಿ, ಎಫ್ಫಥಾ ಎಂದು ಅವನಿಗೆ ಹೇಳಿದನು; ಅನೇನಂ
೩೫ ದರೆ, ತೆಕೆದಾಗು. ಸಂಗಡಲೇ ಅವನ ಕಿವಿಗಳು ತೆಕೆಯಲ್ಪಟ್ಟು, ಅವನ ನಾಲಿಗೆಯ ನರವು ಬಿಚ್ಚಲ್ಪಟ್ಟು, ಅವನು ಚನ್ನಾಗಿ ಮಾತಾಡಿ
೩೬ ದನು. ಆಗ ಯಾರಿಗೂ ಹೇಳ ಬಾರದೆಂದು, ಅವರಿಗೆ ಆಜ್ಞಾಪಿಸಿದನು. ಆದರೆ ಅವನು ಅವರಿಗೆ ಎದ್ದು ಆಜ್ಞಾಪಿಸಿದನೋ, ಅಷ್ಟ
೩೭ ಅಧಿಕಾಧಿಕವಾಗಿ ಸಾರಿದರು; ಎಲ್ಲಾ ಚನ್ನಾಗಿ ಮಾಡಿದ್ದಾನೆ; ಕಿವುಡರು ಕೇಳುವ ಹಾಗೆಯೂ, ಮೂಕರು ಮಾತಾಡುವ ಹಾಗೆಯೂ ಮಾಡುತ್ತಾನೆಂದು ಹೇಳಿ, ಅತ್ಯಧಿಕವಾಗಿ ಆಶ್ಚರ್ಯ ಪಟ್ಟರು.

## ೮. ಸಂಧಿ.

೧ ಆ ದಿವಸಗಳಲ್ಲಿ ಬಹು ದೊಡ್ಡ ಸಮೂಹವು ಇರಲಾಗಿ, ಅವರಿಗೆ ಊಟಕ್ಕೆ ಏನೂ ಇಲ್ಲದೆ ಇರುವಾಗ, ಯೇಸು ತನ್ನ ಶಿಷ್ಯ
೨ ರನ್ನು ಹತ್ತರ ಕರೆದು, ಸಮೂಹದ ಮೇಲೆ ಅಂತಃಕರಣ ಪಡುತ್ತೇನೆ; ಯಾಕಂದರೆ ಇದೇ ಮೂರನೇ ದಿವಸ ಊಟಕ್ಕೆ ಏನೂ
೩ ಇಲ್ಲದೆ ನನ್ನ ಬಳಿಯಲ್ಲಿ ಇರುತ್ತಾರೆ; ಹಾಗಾದರೆ ನಾನು ಅವರನ್ನು ಉಪವಾಸವಾಗಿ ಮನೆಗೆ ಕಳುಹಿಸಿದರೆ, ಮಾರ್ಗದಲ್ಲಿ ಬಳಲಿ ಹೋಗುವರು; ಯಾಕಂದರೆ ಅವರಲ್ಲಿ ಕೆಲಬರು ದೂರದಿಂದ ಬಂದಿದ್ದಾರೆಂದು, ಅವರಿಗೆ ಹೇಳಿದಾಗ;
೪ ಅವನ ಶಿಷ್ಯರು ಅವನಿಗೆ ಪ್ರತ್ಯುತ್ತರವಾಗಿ, ಇವರನ್ನು ಒಬ್ಬನು ಈ ಅರಣ್ಯದಲ್ಲಿ ಕೊಟ್ಟಿಗಳಿಂದ ಹ್ಯಾ
೫ ಗೆ ಪೋಷಿಸ ಬಲ್ಲನು, ಅಂದರು. ಅವನು ಅವರನ್ನು, ನಿಮಗೆ ಎದ್ದು
೬ ಕೊಟ್ಟಿಗಳುಂಟೆಂದು ಕೇಳಿದಾಗ, ಅವರು, ಏಳು, ಅಂದರು. ಆಗಲವನು ಸಮೂಹಕ್ಕೆ ನೆಲದ ಮೇಲೆ ಕೂತು ಕೊಳ್ಳಲಾಜ್ಞಾಪಿಸಿ, ಆ ಏಳು ಕೊಟ್ಟಿಗಳನ್ನು ತೆಗೆದು ಕೊಂಡು, ಸ್ತೋತ್ರ ಮಾಡಿ, ಮುರಿದು, ಹಂಚುವದಕ್ಕೆ ತನ್ನ ಶಿಷ್ಯರಿಗೆ ಕೊಟ್ಟನು; ಅವರು
೭ ಸಮೂಹಕ್ಕೆ ಹಂಚಿದರು. ಮತ್ತು ಕೆಲವು ಮೀನುಗಳು ಅವರಿಗೆ ಇರಲಾಗಿ, ಅವನು ಸ್ತೋತ್ರ ಮಾಡಿ, ಅವುಗಳನ್ನು ಸಹ ಹಂಚ
೮ ಹೇಳಿದನು. ಆಗಲವರು ಉಂಡು, ತೃಪ್ತಿಯಾಗಿ, ಮಿಕ್ಕ ತುಂಡುಗಳನ್ನು ಏಳು ಪುಟ್ಟಿ ತುಂಬ ಎತ್ತಿದರು ಉಂಡವರು ಹೆಚ್ಚು ಕಡಿ
೯ ಮೆ ನಾಲ್ಕು ಸಾವಿರ ಮಂದಿಯಾಗಿದ್ದರು. ಆ ಮೇಲೆ ಅವರನ್ನು ಕಳುಹಿಸಿ ಬಿಟ್ಟನು.

೧೦ ಮತ್ತು ಸಂಗಡಲೇ ತನ್ನ ಶಿಷ್ಯರೊಂದಿಗೆ ಹಡಗವನ್ನೇರಿ,
೧೧ ದಲ್ಮನೂತ ಸೀಮೆಗೆ ಬಂದನು. ಆಗ ಫರಿಸಾಯರು ಹೊರಟು, ಆಕಾಶದಿಂದ ಒಂದು ಗುರುತನ್ನು ಅವನ ಬಳಿಯಲ್ಲಿ ಹುಡುಕಿ ಅವನನ್ನು ಶೋಧಿಸುತ್ತಾ, ಅವನ ಸಂಗಡ ತರ್ಕ ಮಾಡಲಾರಂ



೧೨ ಭಿಸಿದರು. ಆಗಲವನು ತನ್ನ ಆತ್ಮದಲ್ಲಿ ಮೂಲುಗಿ, ಈ ಸಂತತಿಯು ಗುರುತನ್ನು ಹುಡುಕುವದೇನು! ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಈ ಸಂತತಿಗೆ ಗುರುತು ಕೊಡಲ್ಪಡದು. ಅಂದನು.
೧೩ ಮತ್ತು ಅವರನ್ನು ಬಿಟ್ಟು, ತಿರಿಗಿ ಹಡಗವನ್ನೇರಿ, ಆಚೆಗೆ ಹೊರಟು ಹೋದನು.

೧೪ ಆದರೆ ಶಿಷ್ಯರು ಕೊಟ್ಟಿಗಳನ್ನು ತಕ್ಕೊಳ್ಳುವದಕ್ಕೆ ಮರೆತು ಬಿಟ್ಟು, ಒಂದೇ ಕೊಟ್ಟಿ ಹೊರ್ತು, ಹಡಗದಲ್ಲಿ ಮತ್ತೊಂದು ಇಲ್ಲದೆ ಇದ್ದರು. ಆಗಲವನು ಅವರಿಗೆ, ನೋಡಿಕೊಳ್ಳಿರಿ, ಫರಿಸಾಯರ ಹುಳಿ ಹಿಟ್ಟಿಗೂ ಹೆರೋದನ ಹುಳಿಹಿಟ್ಟಿಗೂ ಎಚ್ಚರಿಕೆಯಾಗಿರ್ರಿ,
೧೫ ಎಂದು ಅಪ್ಪಣೆ ಕೊಟ್ಟನು. ಅದಕ್ಕೋಸ್ಕರ ಅವರು, ನಮಗೆ
೧೬ ಕೊಟ್ಟಿಗಳು ಇಲ್ಲದ ಕಾರಣವೇ, ಎಂದು ತಮ್ತುಲ್ಲಿ ಮಾತಾಡಿದಾಗ, ಯೇಸು ಅದನ್ನು ತಿಳಿದುಕೊಂಡು, ಅವರಿಗೆ ಹೇಳಿದ್ದೇನಂದರೆ, ನಿಮಗೆ ಕೊಟ್ಟಿಗಳಿಲ್ಲದ ಕಾರಣ ಮಾತಾಡುವದೇನು! ಇನ್ನೂ ಮನನಿಸಿರುವದಿಲ್ಲವೋ! ಗ್ರಹಿಸುವದಿಲ್ಲವೋ! ಇನ್ನೂ ನಿಮಗೆ ಕಠಿಣ
೧೭ ವಾದ ಹೃದಯ ಉಂಟೋ? ಕಣ್ಣುಗಳಿಂದ ಕಾಣುವದಿಲ್ಲವೋ! ಕಿವಿಗಳಿಂದ ಕೇಳುವದಿಲ್ಲವೋ! ಮತ್ತು ಜ್ಞಾಪಕ ಮಾಡಿ ಕೊಳ್ಳುವ
೧೮ ದಿಲ್ಲವೋ! ನಾನು ಆ ಐದು ಕೊಟ್ಟಿಗಳನ್ನು ಐದು ಸಾವಿರ ಮಂದಿಗೆ ಮುರಿದು ಕೊಟ್ಟಾಗ, ಎಷ್ಟು ಪುಟ್ಟಿ ತುಂಬತುಂಡುಗಳನ್ನು ಎತ್ತಿ
೧೯ ದಿರಿ! ಅವನಿಗೆ, ಹನ್ನೆರಡು, ಅಂದರು. ಇದಲ್ಲದೆ ಆ ಏಳು ಕೊಟ್ಟಿಗಳನ್ನು ನಾಲ್ಕು ಸಾವಿರ ಮಂದಿಗೆ ಮುರಿದು ಕೊಟ್ಟಾಗ, ಮಿಕ್ಕ ತುಂಡುಗಳನ್ನು ಎಷ್ಟು ಪುಟ್ಟಿಗಳನ್ನು ಎತ್ತಿದಿರಿ! ಅವರು, ಏಳು,
೨೦ ಅಂದರು. ಆಗಲವರಿಗೆ, ನೀವು ಗ್ರಹಿಸದೆ ಇರುವದು ಹ್ಯಾಗೆ! ಅಂದನು.

೨೧ ಮತ್ತು ಅವನು ಬೆತ್ಸಾಯಿದಕ್ಕೆ ಬಂದಾಗ, ಕುರುಡನನ್ನು ಅವನ ಬಳಿಗೆ ತಂದು, ಅವನನ್ನು ಮುಟ್ಟಿ ಬೇಕೆಂದು, ಅವನನ್ನು
೨೨ ಬೇಡಿ ಕೊಂಡರು. ಅವನು ಕುರುಡನ ಕೈ ಹಿಡಿದು, ಅವನನ್ನು ಗ್ರಾಮದ ಹೊರಗೆ ಕರಕೊಂಡು ಹೋಗಿ, ಅವನ ಕಣ್ಣುಗಳಲ್ಲಿ ಉಗುಳಿ, ಅವನ ಮೇಲೆ ಕೈಗಳನ್ನಿಟ್ಟು, ಏನಾದರೂ ನೋಡುತ್ತೀ
೨೩ ಯೋ? ಎಂದು, ಅವನನ್ನು ಕೇಳಿದನು. ಅವನು ಕಣ್ಣೆತ್ತಿ, ತಿರುಗಾ
೨೪ ಡುವ ಮನುಷ್ಯರನ್ನು ಮರಗಳ ಹಾಗೆ ನೋಡುತ್ತೇನೆ, ಅಂದನು ಆ ಮೇಲೆ ಅವನು ತಿರಿಗಿ ಅವನ ಕಣ್ಣುಗಳ ಮೇಲೆ ಕೈಗಳನ್ನಿಟ್ಟು, ಅವನನ್ನು ಮೇರೆ ನೋಡ ಮಾಡಿದಾಗ, ಅವನು ಸ್ವಸ್ಥವಾಗಿ, ಎಲ್ಲ
೨೫ ರನ್ನು ಸ್ಪಷ್ಟವಾಗಿ ನೋಡಿದನು. ಆಗ, ನೀನು ಗ್ರಾಮಕ್ಕೆ ಹೋಗ ಬೇಡ, ಮತ್ತು ಗ್ರಾಮದಲ್ಲಿ ಯಾರಿಗಾದರೂ ಹೇಳ ಬೇಡೆಂದು ಹೇಳಿ, ಅವನನ್ನು ಮನೆಗೆ ಕಳುಹಿಸಿದನು.

೨೬ ಮತ್ತು ಯೇಸುವೂ ಅವನ ಶಿಷ್ಯರೂ, ಫಿಲಿಪ್ಪನ ಕೈಸಕ್ಕೆಯದಗ್ರಾಮಗಳಿಗೆ ಹೋಗುವಾಗ, ಮನುಷ್ಯರು ನನ್ನನ್ನು ಯಾ
೨೭ ರೆಂದು, ಹೇಳುತ್ತಾರೆಂಬದಾಗಿ, ಮಾರ್ಗದಲ್ಲಿ ತನ್ನ ಶಿಷ್ಯರನ್ನು ಕೇಳಿದನು. ಅವರು, ಸ್ನಾನಿಕನಾದ ಯೋಹಾನನೆಂದೂ, ಕೆಲ
೨೮ ವರು, ಎಲೀಯನೆಂದೂ, ಬೇಕೆ ಕೆಲವರು, ಪ್ರವಾದಿಗಳಲ್ಲಿ ಒಬ್ಬನೆಂದೂ, ಉತ್ತರ ಕೊಟ್ಟಾಗ, ಅವನು ಅವರಿಗೆ, ಆದರೆ ನೀವು ನನ್ನನ್ನು ಯಾರೆಂದು, ಹೇಳುತ್ತೀರಿ! ಅಂದನು. ಪೇತ್ರನು ಪ್ರತ್ಯುತ್ತ
೨೯ ರವಾಗಿ ಅವನಿಗೆ, ನೀನು ಕ್ರಿಸ್ತನೇ, ಅಂದಾಗ; ತನ್ನನ್ನು ಕುರಿತು ಯಾರಿಗೂ ಹೇಳ ಬಾರದೆಂದು, ಅವರಿಗೆ ಆಜ್ಞಾಪಿಸಿದನು.
೩೦ ಮತ್ತು ಮನುಷ್ಯನ ಮಗನು ಬಹಳ ಶ್ರಮೆ ಪಟ್ಟು, ಹಿರಿಯರೂ, ಪ್ರಧಾನ ಯಾಜಕರೂ, ಶಾಸ್ತ್ರಿಗಳೂ, ಇವರಿಂದ ತಳ್ಳಲ್ಪಟ್ಟು, ಕೊಲ್ಲಲ್ಪಟ್ಟು, ಮೂರು ದಿವಸಗಳಾದ ಮೇಲೆ ಏಳ ಬೇ
೩೧ ಕೆಂದು, ಅವರಿಗೆ ಬೋಧಿಸಲಾರಂಭಿಸಿದನು. ಅವನು ಆ ಮಾತನ್ನು ಸ್ಪಷ್ಟವಾಗಿ ಹೇಳುವಾಗ, ಪೇತ್ರನು ಅವನನ್ನು ತಕ್ಕೊಂಡು,
೩೨ ಗದರಿಸಲಾರಂಭಿಸಿದನು. ಆದರೆ ಅವನು ತಿರುಗಿ ಕೊಂಡು, ತನ್ನ ಶಿಷ್ಯರನ್ನು ನೋಡಿ, ಪೇತ್ರನನ್ನು ಗದರಿಸಿ, ಸೈತಾನನೇ, ನನ್ನ ಹಿಂದೆ ಹೋಗು; ಯಾಕಂದರೆ ನೀನು ದೇವರುಗಳನ್ನಲ್ಲ, ಮನುಷ್ಯರವುಗಳನ್ನೇ ಚಿಂತಿಸುತ್ತೀ, ಅಂದನು.

೩೩ ಮತ್ತು ಸಮೂಹವನ್ನೂ ತನ್ನ ಶಿಷ್ಯರನ್ನೂ ಕೂಡ ಕರೆದು, ಅವರಿಗೆ ಹೇಳಿದ್ದೇನಂದರೆ, ನನ್ನ ಹಿಂದೆ ಬರ ಬೇಕೆಂದಿರುವವನು ತನ್ನನ್ನು ಬೊಂಕೆ, ತನ್ನ ಶಿಲುಬೆಯನ್ನು ಎತ್ತಿಕೊಂಡು, ನನ್ನನ್ನು
೩೪ ಹಿಂಬಾಲಿಸಲಿ. ಯಾಕಂದರೆ ತನ್ನ ಪ್ರಾಣವನ್ನು ರಕ್ಷಿಸ ಬೇಕೆಂದಿರುವವನು ಅದನ್ನು ಕಳ ಕೊಳ್ಳುವನು; ಆದರೆ ನನಗೋಸ್ಕರವೂ ಸುವಾರ್ತೆಗೋಸ್ಕರವೂ ತನ್ನ ಪ್ರಾಣವನ್ನು ಕಳಕೊಳ್ಳುವವನ್ಯಾ
೩೫ ವನೋ, ಅವನು ಅದನ್ನು ರಕ್ಷಿಸುವನು. ಯಾಕಂದರೆ ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿ ಕೊಂಡರೂ, ತನ್ನ ಪ್ರಾಣ
೩೬ ದ ನಷ್ಟಪಟ್ಟರೆ, ಅವನಿಗೆ ಪ್ರಯೋಜನವೇನು! ಇಲ್ಲವೆ, ತನ್ನ
೩೭ ಪ್ರಾಣಕ್ಕೆ ಬದಲಾಗಿ ಮನುಷ್ಯನು ಕೊಡ ತಕ್ಕದ್ದೇನು! ಯಾಕಂದರೆ ಈ ವ್ಯಭಿಚಾರವೂ ಪಾಪವೂ ಉಳ್ಳ ಸಂತತಿಯಲ್ಲಿ ನನಗೂ ನನ್ನ ವಾಕ್ಯಗಳಿಗೂ ನಾಚಿಕೆಪಡುವವನ್ಯಾವನೋ, ಅವನಿಗೆ ಮನುಷ್ಯನ ಮಗನು ಸಹ, ತನ್ನ ತಂದೆಯ ಮಹಿಮೆಯಲ್ಲಿ ಪರಿಶುದ್ಧ ದೂತರ ಸಂಗಡ ಬರುವಾಗ, ನಾಚಿಕೆಪಡುವನು.

## ೯. ಸಂಧಿ.

೧ ಮತ್ತು ಅವನು ಅವರಿಗೆ ಹೇಳಿದ್ದೇನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಇಲ್ಲಿ ನಿಂತವರಲ್ಲಿ ಕೆಲವರು, ದೇವರ ರಾಜ್ಯವು ಬಲವಾಗಿ ಬಂದಿರುವದನ್ನು ನೋಡುವ ತನಕ, ಮರಣವನ್ನು ರುಚಿ ನೋಡರು.

೨ ಮತ್ತು ಆರು ದಿವಸಗಳಾದ ಮೇಲೆ, ಯೇಸು ಪೇತ್ರನನ್ನೂ ಯಾಕೋಬನನ್ನೂ ಯೋಹಾನನನ್ನೂ ಕರೆದು, ಇವರನ್ನು ಮಾತ್ರ ಏಕಾಂತವಾಗಿ ಎತ್ತರವಾದ ಬೆಟ್ಟಕ್ಕೆ ಕರಕೊಂಡು ಹೋಗಿ,
೩ ಅವರ ಮುಂದೆ ರೂಪಾಂತರವಾದನು. ಮತ್ತು ಅವನ ವಸ್ತ್ರಗಳು ಭೂಮಿಯ ಮೇಲಿರುವ ಯಾವ ಅಗಸನಾದರೂ ಬಿಳುಪು ಮಾಡಲಾರದ ಪ್ರಕಾರ ಹಿಮದಂತೆ ಬಹಳ ಬಿಳುಪಾಗಿ ಪ್ರಕಾಶವಾದವು.
೪ ಮತ್ತು ಎಲೀಯನು ಮೋಶೆಯ ಸಂಗಡ ಅವರಿಗೆ ಕಾಣಿಸಿ ಕೊಂ
೫ ಡು, ಯೇಸುವಿನ ಸಂಗಡ ಸಂಭಾಷಣೆ ಮಾಡುತ್ತಿದ್ದರು. ಆಗ ಪೇತ್ರನು ಉತ್ತರ ಕೊಟ್ಟು, ಯೇಸುವಿಗೆ, ರಬ್ಬಿಯೇ, ನಾವು ಇಲ್ಲಿ ಇರುವದು ಒಳ್ಳೇದು; ಮೂರು ಪರ್ಣಶಾಲೆಗಳನ್ನು ಮಾಡುವ; ನಿನಗೆ ಒಂದು, ಮೋಶೆಗೆ ಒಂದು, ಎಲೀಯನಿಗೆ ಒಂದು, ಅಂ
೬ ನು. ಯಾಕಂದರೆ ಅವರು ಭಯಭ್ರಾಂತರಾದ ಕಾರಣ ತಾನು
೭ ಏನು ಹೇಳಿದೆಂದು, ಅವನಿಗೆ ತಿಳಿಯಲಿಲ್ಲ. ಆಗ ಮೇಘವು ಅವರ ಮೇಲೆ ನೆರಳು ಹಾಕಲಾಗಿ, ಆ ಮೇಘದೊಳಗಿಂದ, ಇವನೇ ನನ್ನ ಪ್ರಿಯ ಮಗನು, ಇವನನ್ನು ಕೇಳಿರಿ, ಎಂಬ ಶಬ್ದವು ಬಂತು.
೮ ಸಂಗಡಲೇ ಅವರು ಸುತ್ತಲು ನೋಡಿ, ತಮ್ಮ ಸಂಗಡ ಇರುವ ಯೇಸು ಒಬ್ಬನನ್ನೇ ಹೊರ್ತು, ಇನ್ಯಾವನನ್ನೂ ನೋಡಲಿಲ್ಲ.

೯ ಅವರು ಬೆಟ್ಟದಿಂದಿಳಿದು ಬರುವಾಗ, ತಾವು ನೋಡಿದವುಗಳ
ನ್ನು ಮನುಷ್ಯನ ಮಗನು ಸತ್ತವರೊಳಗಿಂದ ಏಳುವ ಪರ್ಯಂ
ತರ ಯಾರಿಗೂ ಹೇಳ ಬಾರದೆಂದು, ಅವರಿಗೆ ಅಪ್ಪಣೆ ಕೊಟ್ಟಿ
೧೦ ನು. ಆಗ ಸತ್ತವರೊಳಗಿಂದ ಏಳುವದು ಅಂದರೆ ಏನೆಂದು ತರ್ಕ
ಮಾಡಿ ಕೊಂಡು, ಆ ವಾಕ್ಯವನ್ನು ತಮ್ಮೊಳಗೆ ಇಟ್ಟು ಕೊಂಡರು.
೧೧ ಮತ್ತು ಎಲೀಯನು ಮೊದಲಾಗಿ ಬರ ಬೇಕೆಂದು, ಶಾಸ್ತ್ರಿಗಳು
ಹೇಳುವದು ಯಾಕೆಂದು ಅವನನ್ನು ಕೇಳಿದಾಗ, ಅವನು ಪ್ರತ್ಯು
೧೨ ತ್ತರವಾಗಿ ಅವರಿಗೆ ಹೀಳಿದ್ದೇನಂದರೆ, ಎಲೀಯನು ಮೊದಲಾಗಿ
ಬಂದು, ಎಲ್ಲವುಗಳನ್ನು ನೆಟ್ಟಗೆ ಮಾಡುತ್ತಾನೆ, ಸರಿ; ಮತ್ತು ಮ
ನುಷ್ಯನ ಮಗನನ್ನು ಕುರಿತು ಬರೆದಿರುವ ಪ್ರಕಾರ, ಅವನು ಬಹಳ
೧೩ ತ್ರಮೆ ಪಟ್ಟು, ಹಿಂಸೈಸಲ್ಪಡ ಬೇಕು; ಆದರೆ ಎಲೀಯನು ಬಂದಿ
ದ್ದಾನೆಂದೂ, ಅವನ ವಿಷಯವಾಗಿ ಬರೆದಿರುವ ಪ್ರಕಾರ, ಮನಸ್ಸಿಗೆ
ಬಂದ ಹಾಗೆ ಅವನಿಗೆ ಮಾಡಿದ್ದಾರೆಂದೂ, ನಿಮಗೆ ಹೇಳುತ್ತೇನೆ.

೧೪ ತರುವಾಯ ಶಿಷ್ಯರ ಬಳ್ಳಿಗೆ ಬಂದು, ಅವರ ಸುತ್ತಲು ಬಹು
ಸಮೂಹವನ್ನೂ, ಶಾಸ್ತ್ರಿಗಳು ಅವರ ಸಂಗಡ ತರ್ಕ ಮಾಡುವದ
೧೫ ನ್ನೂ, ನೋಡಿದನು. ಸಂಗಡಲೇ ಸಮೂಹವೆಲ್ಲಾ ಅವನನ್ನು
ನೋಡಿ, ಭ್ರಮೆಗೊಂಡು, ಹತ್ತರ ಓಡಿ ಬಂದು, ಅವನನ್ನು ವಂದಿಸಿ
೧೬ ದರು. ಅವರ ಸಂಗಡ ತರ್ಕ ಮಾಡುವದೇನೆಂದು ಶಾಸ್ತ್ರಿಗಳನ್ನು
೧೭ ಕೇಳಿದಾಗ, ಸಮೂಹದಲ್ಲಿ ಒಬ್ಬನು ಪ್ರತ್ಯುತ್ತರವಾಗಿ, ಬೋಧಕ
ನೇ, ಮೂಕವಾದ ಆತ್ಮ ಉಂಟಾಗಿರುವ ನನ್ನ ಮಗನನ್ನು ನಿನ್ನ
೧೮ ಬಳ್ಳಿಗೆ ತಂದಿದ್ದೇನೆ; ಅದು ಅವನನ್ನು ಹಿಡಿಯುವಲ್ಲಿ ಅವನನ್ನು
ಒದ್ದಾಡಿಸುತ್ತದೆ; ಅವನು ನೊರೆ ಸುರಿಸಿ, ಹಲ್ಲು ಕಡಿದು, ಸವೆದು
ಹೋಗುತ್ತಾನೆ; ಅದನ್ನು ಹೊರಡಿಸ ಬೇಕೆಂದು, ನಿನ್ನ ಶಿಷ್ಯರಿಗೆ
ಹೇಳಿದನು; ಆದರೆ ಅವರಿಂದ ಆಗದೆ ಹೋಯಿತು, ಅಂದನು.
೧೯ ಅವನು ಅವನಿಗೆ ಪ್ರತ್ಯುತ್ತರವಾಗಿ, ಓ ವಿಶ್ವಾಸಹೀನ ಸಂತತಿಯೇ,
ಎಷ್ಟು ಮಟ್ಟಿಗೂ ನಿಮ್ಮ ಸಂಗಡ ಇರ ಬೇಕು! ಎಷ್ಟು ಮಟ್ಟಿಗೂ
ನಿಮ್ಮನ್ನು ತಾಳ ಬೇಕು! ಅವನನ್ನು ನನ್ನ ಬಳ್ಳಿಗೆ ತನ್ನಿರಿ,
೨೦ ಅಂದನು. ಆಗಲವನನ್ನು ಅವನ ಬಳ್ಳಿಗೆ ತಂದರು. ಮತ್ತು ಅವ
ನನ್ನು ನೋಡಿದಾಗಲೇ ಆತ್ಮವು ಅವನನ್ನು ಒದ್ದಾಡಿಸಿದ್ದರಿಂದ,
ಅವನು ನೆಲಕ್ಕೆ ಬಿದ್ದು, ನೊರೆ ಸುರಿಸಿ, ಹೊರಳಾಡಿದನು.

೨೧ ಅವನ ತಂದೆಯನ್ನು, ಇದು ಅವನಿಗೆ ಬಂದು, ಎಷ್ಟು ಕಾಲವಾ
೨೨ ಯಿತೆಂದು ಕೇಳಿದಾಗ, ಅವನು, ಬಾಲ್ಯದಿಂದಲೇ; ಮತ್ತು ಅನೇಕ
ಸಾರಿ ಅವನನ್ನು ಸಂಹರಿಸುವದಕ್ಕೆ ಅವನನ್ನು ಬೆಂಕಿಯೊಳಗೂ
ನೀರೊಳಗೂ ಹಾಕಿ ಅದೆ; ಆದರೆ ನೀನು ಏನಾದರೂ ಮಾಡ ಕೂಡು
ವದಾದರೆ, ನಮ್ಮ ಮೇಲೆ ಅಂತ್ಯಕರಣವಿಟ್ಟು, ನಮಗೆ ಸಹಾಯ
೨೩ ಮಾಡು, ಅಂದನು. ಯೇಸು ಅವನಿಗೆ, ನೀನು ವಿಶ್ವಾಸಿಸ ಕೂಡು
ವದಾದರೆ, ವಿಶ್ವಾಸಿಸುವವನಿಗೆ ಎಲ್ಲಾ ಆಗುವದು, ಅಂದನು.
೨೪ ಸಂಗಡಲೇ ಹುಡುಗನ ತಂದೆಯು ಕಣ್ಣೀರಿನಿಂದ, ಕರ್ತನೇ,
ವಿಶ್ವಾಸಿಸುತ್ತೇನೆ; ನನ್ನ ಅವಿಶ್ವಾಸಕ್ಕೆ ಸಹಾಯ ಮಾಡೆಂ
೨೫ ದು, ಕೂಗಿ ಹೇಳಿದನು. ಯೇಸು, ಸಮೂಹವು ಕೂಡ ಓಡಿ ಬರು
ವದನ್ನು ನೋಡಿ, ಅಶುದ್ಧಾತ್ಮವನ್ನು ಗದರಿಸಿ, ಮೂಕ ಕಿವುಡ
ಆತ್ಮವೇ, ಅವನಿಂದ ಹೊರಟು, ಇನ್ನು ಮೇಲೆ ಅವನೊಳಗೆ ಪ್ರವೇ
೨೬ ಶಿಸ ಬೇಡೆಂದು, ನಾನು ನಿನಗೆ ಆಜ್ಞಾಪಿಸುತ್ತೇನೆ, ಅಂದನು. ಆಗ
ಅದು ಕೂಗಿ, ಅವನನ್ನು ಬಹಳವಾಗಿ ಒದ್ದಾಡಿಸಿ, ಹೊರಟಿತು.
ಮತ್ತು ಅವನು ಸತ್ತವನ ಹಾಗಾದದರಿಂದ, ಅನೇಕರು, ಅವನು
೨೭ ಸತ್ತಿದ್ದಾನೆ, ಅಂದರು. ಆದರೆ ಯೇಸು ಅವನ ಕೈ ಹಿಡಿದು, ಅವ
ನನ್ನು ಎಬ್ಬಿಸಿದಾಗ, ಅವನು ಎದ್ದನು.

೨೮ ಯೇಸು ಮನೆಯೊಳಗೆ ಪ್ರವೇಶಿಸಿದಾಗ, ಅವನ ಶಿಷ್ಯರು
ಏಕಾಂತದಲ್ಲಿ, ನಾವು ಯಾಕೆ ಅದನ್ನು ಹೊರಡಿಸಲಾರದೆ ಇ
೨೯ ದ್ದೆವು? ಎಂದು ಅವನನ್ನು ಕೇಳಿಲು; ಅವನು ಅವರಿಗೆ, ಈ ಜಾತಿಯು
ಪ್ರಾರ್ಥನೆ ಉಪವಾಸಗಳಿಂದಲೇ ಹೊರ್ತು, ಮತ್ತ್ಯಾವದರಿಂದ
ಲೂ ಹೊರಡಲಾರದೆಂದು, ಅವರಿಗೆ ಹೇಳಿದನು.

೩೦ ಅಲ್ಲಿಂದ ಅವರು ಹೊರಟು, ಗಲಿಲಾಯದ ಮೇಲೆ ಹಾದು
ಹೋದರು. ಅದು ಯಾರಿಗೂ ತಿಳಿಯ ಬಾರದೆಂದು ಅವನಿಗೆ ಮ
೩೧ ನಸ್ಸಿತ್ತು. ಯಾಕಂದರೆ ತನ್ನ ಶಿಷ್ಯರಿಗೆ ಬೋಧಿಸಿ, ಅವರಿಗೆ,
ಮನುಷ್ಯನ ಮಗನು ಮನುಷ್ಯರ ಕೈಗಳಲ್ಲಿ ಒಪ್ಪಿಸಲ್ಪಡು
ವನು; ಅವರು ಅವನನ್ನು ಕೊಂದು ಹಾಕುವರು; ಮತ್ತು ಕೊಂ
ದು ಹಾಕಲ್ಪಟ್ಟು, ಮೂರನೇ ದಿವಸದಲ್ಲಿ ಏಳುವನು, ಅಂದನು.
೩೨ ಆದರೆ ಆ ಮಾತು ತಿಳಿಯದೆ, ಅವನನ್ನು ಕೇಳುವದಕ್ಕೆ ಭಯ
ಪಟ್ಟರು.

೩೩ ಮತ್ತು ಅವನು ಕಪೆರ್ನಾಮಿಗೆ ಬೇರಿ, ಮನೆಗೆ ಬಂದ ಮೇಲೆ,
ಮಾರ್ಗದಲ್ಲಿ ಏನು ತರ್ಕ ಮಾಡಿ ಕೊಂಡಿರೆಂದು, ಅವರನ್ನು ಕೇ
೩೪ ಳಿದನು. ಆದರೆ ಅವರು ಸುಮ್ಮನಿದ್ದರು; ಯಾಕಂದರೆ, ಯಾವನು
ದೊಡ್ಡವನೆಂದು, ಅವರು ಮಾರ್ಗದಲ್ಲಿ ತರ್ಕ ಮಾಡಿಕೊಂಡಿದ್ದ
೩೫ ರು. ಆಗಲವನು ಕೂತು ಕೊಂಡು, ಹನ್ನೆರಡು ಮಂದಿಯನ್ನು ಕರೆ
ದು, ಯಾವನಾದರೂ ಮೊದಲಿನವನಾಗ ಬೇಕೆಂದಿದ್ದರೆ, ಎಲ್ಲರ
ಲ್ಲಿ ಕಡೆಯವನೂ ಎಲ್ಲರಿಗೆ ಸೇವಕನೂ ಆಗಿರಲಿ, ಎಂದು ಅವರಿಗೆ
೩೬ ಹೇಳಿದನು. ಮತ್ತು ಒಂದು ಕೂಸು ತೆಗೆದು ಕೊಂಡು, ಅವರ ಮ
೩೭ ಧ್ಯದಲ್ಲಿ ನಿಲ್ಲಿಸಿ, ಅದನ್ನು ಅಪ್ಪಿ ಕೊಂಡು, ಇಂಥ ಕೂಸುಗಳಲ್ಲಿ
ಒಂದನ್ನು ನನ್ನ ಹೆಸರಿನಲ್ಲಿ ಅಂಗೀಕರಿಸುವವನ್ಯಾವನೋ, ಅವ
ನು ನನ್ನನ್ನು ಅಂಗೀಕರಿಸುತ್ತಾನೆ; ಮತ್ತು ನನ್ನನ್ನು ಅಂಗೀಕರಿ
ಸುವವನ್ಯಾವನೋ, ಅವನು ನನ್ನನ್ನು ಅಲ್ಲ, ನನ್ನನ್ನು ಕಳುಹಿಸಿ
ದವನನ್ನು ಅಂಗೀಕರಿಸುತ್ತಾನೆಂದು, ಅವರಿಗೆ ಹೇಳಿದನು.

೩೮ ಮತ್ತು ಯೋಹಾನನು ಅವನಿಗೆ ಪ್ರತ್ಯುತ್ತರವಾಗಿ, ಬೋಧ
ಕನೇ, ನಮ್ಮನ್ನು ಹಿಂಬಾಲಿಸದವನು ನಿನ್ನ ಹೆಸರಿನಲ್ಲಿ ದೆವ್ವಗ
ಳನ್ನು ಹೊರಡಿಸುವವನನ್ನು ಕಂಡೆವು; ಆದರೆ ಅವನು ನಮ್ಮನ್ನು
೩೯ ಹಿಂಬಾಲಿಸದ ಕಾರಣ ಅವನನ್ನು ತಡೆದೆವು, ಅಂದನು. ಅದಕ್ಕೆ
ಯೇಸು ಹೇಳಿದ್ದು, ಅವನನ್ನು ತಡೆಯ ಬೇಡಿರಿ; ಯಾಕಂದರೆ
ನನ್ನ ಹೆಸರಿನಲ್ಲಿ ಬಲವಾದ ಕ್ರಿಯೆಯನ್ನು ಮಾಡಿ, ಬೇಗ ನನ್ನ
೪೦ ನ್ನು ದೂಷಿಸ ಬಲ್ಲವನು ಒಬ್ಬನೂ ಇಲ್ಲ. ಹ್ಯಾಗಂದರೆ ನಮಗೆ
೪೧ ವಿರೋಧವಾಗಿರದವನು ನಮ್ಮ ಪಕ್ಷದವನಾಗಿದ್ದಾನೆ. ಯಾಕಂ
ದರೆ ನೀವು ಕ್ರಿಸ್ತನವರಾಗಿರುವದರಿಂದ, ಒಂದು ಪಾತ್ರೆಯ ನೀ
ರು ನನ್ನ ಹೆಸರಿನಲ್ಲಿ ನಿಮಗೆ ಕುಡಿಯ ಕೊಡುವವನ್ಯಾವನೋ,
ಅವನು ತನ್ನ ಪ್ರತಿಫಲವನ್ನು ಹ್ಯಾಗೂ ಕಳ ಕೊಳ್ಳನೆಂದು,
ನಿಶ್ಚಯವಾಗಿ ನಿಮಗೆ ಹೇಳುತ್ತೇನೆ.

೪೨ ಮತ್ತು ನನ್ನಲ್ಲಿ ವಿಶ್ವಾಸವಿಡುವವರಾದ ಚಿಕ್ಕವರಲ್ಲಿ ಒಬ್ಬನ
ನ್ನು ಅಡಂಕ ಪಡಿಸುವವನ್ಯಾವನೋ, ಅವನ ಕೊರಳಿನ ಸುತ್ತಲು
ಬೀಸುವ ಕಲ್ಲು ಕಟ್ಟಲ್ಪಟ್ಟು, ಅವನು ಸಮುದ್ರದಲ್ಲಿ ಹಾಕಲ್ಪಟ್ಟ
ರೆ, ಅವನಿಗೆ ವಾಸಿ. ಮತ್ತು ನಿನ್ನ ಕೈ ನಿನ್ನನ್ನು ಅಡಂಕ ಪಡಿಸಿದ
೪೩ ರೆ, ಅದನ್ನು ಕೊಯಿದು ಹಾಕು; ನೀನು ಎರಡು ಕೈಯುಳ್ಳವ



ನಾಗಿ, ಅವರ ಹುಳುವು ಸಾಯದೆ ಬೆಂಕಿಯು ಆರದೆ ಇರುವ ನರ
ಕದೊಳಗೂ, ಆರದ ಬೆಂಕಿಯೊಳಗೂ, ಹೋಗುವದಕ್ಕಿಂತ, ಊ
೪೫ ನನಾಗಿ ಜೀವದಲ್ಲಿ ಪ್ರವೇಶಿಸುವದು ನಿನಗೆ ವಾಸಿ. ಮತ್ತು ನಿನ್ನ
ಕಾಲು ನಿನ್ನನ್ನು ಅಡಂಕ ಪಡಿಸಿದರೆ, ಅದನ್ನು ಕೊಯಿದು
೪೬ ಹಾಕು; ನೀನು ಎರಡು ಕಾಲುಳ್ಳವನಾಗಿ, ಅವರ ಹುಳುವು ಸಾಯ
ದೆ ಬೆಂಕಿಯು ಆರದೆ ಇರುವ ನರಕದೊಳಗೂ ಆರದ ಬೆಂಕಿ
ಯೊಳಗೂ ಹಾಕಲ್ಪಡುವದಕ್ಕಿಂತ, ಕುಂಟನಾಗಿ ಜೀವದಲ್ಲಿ ಪ್ರವೇ
೪೭ ಶಿಸುವದು ನಿನಗೆ ವಾಸಿ. ಮತ್ತು ನಿನ್ನ ಕಣ್ಣು ನಿನ್ನನ್ನು ಅಡಂಕ
ಪಡಿಸಿದರೆ, ಅದನ್ನು ಕಿತ್ತು ಹಾಕು; ನೀನು ಎರಡು ಕಣ್ಣುಳ್ಳವ
೪۸ ನಾಗಿ, ಅವರ ಹುಳುವು ಸಾಯದೆ ಬೆಂಕಿಯು ಆರದೆ ಇರುವ ಬೆಂ
ಕಿಯ ನರಕದಲ್ಲಿ ಹಾಕಲ್ಪಡುವದಕ್ಕಿಂತ, ಬಂದೇ ಕಣ್ಣುಳ್ಳವ
೪೯ ನಾಗಿ, ದೇವರ ರಾಜ್ಯದಲ್ಲಿ ಪ್ರವೇಶಿಸುವದು ನಿನಗೆ ವಾಸಿ. ಯಾ
ಕಂದರೆ ಬೆಂಕಿಯಿಂದ ಒಬ್ಬೊಬ್ಬನಿಗೆ ಸಾರವಾಗ ಬೇಕು; ಮತ್ತು
ಉಪ್ಪಿನಿಂದ ಪ್ರತಿ ಬಲಿಗೆ ಸಾರವಾಗ ಬೇಕು.
೫೦ ಉಪ್ಪು ಒಳ್ಳೇದೇ; ಆದರೆ ಉಪ್ಪು ನಿಸ್ಸಾರವಾದರೆ, ಅದಕ್ಕೆ
ಯಾವದರಿಂದ ರುಚಿ ಕೊಡುವಿರಿ? ನಿಮ್ಮಲ್ಲಿ ಉಪ್ಪು ಉಂಟಾದವ
ರಾಗಿರ್ರಿ. ಮತ್ತು ಒಬ್ಬರ ಸಂಗಡಲೊಬ್ಬರು ಸಮಾಧಾನವಾಗಿರ್ರಿ.

## ೧೦. ಸಂಧಿ.

೧ ಅಲ್ಲಿಂದ ಅವನು ಎದ್ದು, ಯೊರ್ದನಿನ ಆಚೆಯಾದ ಯೆ
ಹೂದ್ಯ ಪ್ರಾಂತ್ಯಗಳಿಗೆ ಬಂದನು; ಮತ್ತು ತಿರಿಗಿ ಸಮೂಹಗಳು
ಅವನ ಸಂಗಡ ಪ್ರಯಾಣ ಮಾಡುವಾಗ, ಅವನು ತನಗೆ ಮ
ರ್ಯಾದೆ ಇದ್ದ ಹಾಗೆ ತಿರಿಗಿ ಅವರಿಗೆ ಬೋಧಿಸಿದನು.
೨ ಆಗ ಫರಿಸಾಯರು ಹತ್ತರ ಬಂದು, ಅವನನ್ನು ಶೋಧಿಸಿ,
ಒಬ್ಬ ಮನುಷ್ಯನು ಹೆಂತತಿಯನ್ನು ಬಿಟ್ಟು ಬಿಡ ಬಹುದೋ!
3 ಎಂದು ಕೇಳಿದರು. ಆದರೆ ಅವನು ಪ್ರತ್ಯುತ್ತರವಾಗಿ ಅವರಿಗೆ,
೪ ಮೋಶೆಯು ನಿಮಗೆ ಏನು ಅಪ್ಪಣೆ ಕೊಟ್ಟನು! ಅಂದಾಗ; ಅವ
ರು, ಮೋಶೆಯು, ತ್ಯಾಗ ಪತ್ರವನ್ನು ಬರೆದು, ಬಿಟ್ಟು ಬಿಡಗೊಡಿಸಿ
೫ ದನು, ಅಂದರು. ಆಗ ಯೇಸು ಉತ್ತರ ಕೊಟ್ಟು, ಅವರಿಗೆ ಹೇಳಿ
ದ್ದೇನಂದರೆ, ನಿಮ್ಮ ಹೃದಯದ ಕಠಿಣ್ಯದ ನಿಮಿತ್ತ ನಿಮಗೆ ಈ
೬ ಆಜ್ಞೆ ಬರೆದು ಕೊಟ್ಟನು; ಆದರೆ ಸೃಷ್ಟಿಯ ಆರಂಭದಿಂದ ದೇ
೭ ವರು ಅವರನ್ನು ಗಂಡು ಹೆಣ್ಣಾಗಿ ಮಾಡಿದನು; ಅದಕ್ಕೋಸ್ಕರ
ಮನುಷ್ಯನು ತನ್ನ ತಂದೆಯನ್ನೂ ತಾಯಿಯನ್ನೂ ಬಿಟ್ಟು,
೮ ತನ್ನ ಹೆಂತತಿಯನ್ನು ಕೂಡಿ ಕೊಳ್ಳುವನು; ಮತ್ತು ಅವರಿಬ್ಬರು
ಒಂದೇ ಮಾಂಸವಾಗಿರುವರು. ಹೀಗಿರುವದರಿಂದ ಅವರು ಇನ್ನು
೯ ಇಬ್ಬರಲ್ಲ, ಒಂದೇ ಮಾಂಸವಾಗಿದ್ದಾರೆ. ಆದಕಾರಣ ದೇವರು
ಕೂಡಿಸಿದ್ದನ್ನು ಮನುಷ್ಯನು ಅಗಲಿಸದಿರಲಿ.
೧೦ ಆಗ ಮನೆಯೊಳಗೆ ಅವನ ಶಿಷ್ಯರು ಅದನ್ನು ಕುರಿತು ತಿರಿಗಿ
೧೧ ಅವನನ್ನು ಕೇಳಿದಾಗ, ಅವನವರಿಗೆ ಹೇಳಿದ್ದೇನಂದರೆ, ತನ್ನ ಹೆಂತ
ತಿಯನ್ನು ಬಿಟ್ಟು, ಮತ್ತೊಬ್ಬಳನ್ನು ಮದುವೆ ಮಾಡಿಕೊಳ್ಳುವವ
ನ್ಯಾವನೋ, ಅವನು ಅವಳಿಗೆ ವಿರೋಧವಾಗಿ ವ್ಯಭಿಚಾರ ಮಾಡು
೧೨ ತ್ತಾನೆ; ಮತ್ತು ಹೆಂತತಿಯು ತನ್ನ ಗಂಡನನ್ನು ಬಿಟ್ಟು, ಮತ್ತೊ
ಬ್ಬನನ್ನು ಮದುವೆ ಮಾಡಿ ಕೊಂಡರೆ, ವ್ಯಭಿಚಾರ ಮಾಡುತ್ತಾಳೆ.
೧೩ ಆಗ ಅವುಗಳನ್ನು ಮುಟ್ಟುವ ಹಾಗೆ, ಕೂಸುಗಳನ್ನು ಅವನ
ಬಳ್ಳಿಗೆ ತಂದರು; ಆದರೆ ಶಿಷ್ಯರು ತಂದವರನ್ನು ಗದರಿಸಿದರು.
೧೪ ಯೇಸು ಅದನ್ನು ನೋಡಿ, ಕೋಪಿಸಿ, ಅವರಿಗೆ ಹೇಳಿದ್ದೇನಂ
ದರೆ, ಅಡ್ಡಿ ಮಾಡದೆ, ಕೂಸುಗಳು ನನ್ನ ಬಳ್ಳಿಗೆ ಬರಗೊಡಿಸಿರಿ;
೧೫ ಯಾಕಂದರೆ ದೇವರ ರಾಜ್ಯವು ಇಂಥವರದಾಗಿದೆ. ನಿಶ್ಚಯವಾ
ಗಿ ನಿಮಗೆ ಹೇಳುತ್ತೇನೆ, ಕೂಸಿನ ಹಾಗೆ ದೇವರ ರಾಜ್ಯವನ್ನು
೧೬ ಹೊಂದದವನು ಅದರಲ್ಲಿ ಪ್ರವೇಶಿಸುವದೇ ಇಲ್ಲ. ತರುವಾಯ
ಅವುಗಳನ್ನು ಅಪ್ಪಿಕೊಂಡು, ಅವುಗಳ ಮೇಲೆ ಕೈಗಳನ್ನಿಟ್ಟು,
ಅವುಗಳನ್ನು ಆಶೀರ್ವದಿಸಿದನು.
೧೭ ಮತ್ತು ಅವನು ಪ್ರಯಾಣಕ್ಕೆ ಹೊರಡುವಾಗ, ಒಬ್ಬನು
ಮುಂದೆ ಓಡಿ, ಅವನಿಗೆ ಮೊಣಕಾಲೂರಿ, ಒಳ್ಳೇ ಬೋಧಕನೇ,
ನಾನು ನಿತ್ಯ ಜೀವವನ್ನು ಬಾಧ್ಯವಾಗಿ ಹೊಂದುವ ಹಾಗೆ ಏನು
೧೮ ಮಾಡ ಬೇಕೆಂದು, ಅವನನ್ನು ಕೇಳಿದನು. ಆದರೆ ಯೇಸು ಅವ
ನಿಗೆ ಹೇಳಿದ್ದು, ನೀನು ನನ್ನನ್ನು ಒಳ್ಳೆಯವನೆಂದು ಹೇಳುವ
ದೇನು! ದೇವರೊಬ್ಬನೇ ಹೊರ್ತು ಒಳ್ಳೆಯವನು ಯಾವ
೧೯ ನೂ ಇಲ್ಲ. ವ್ಯಭಿಚಾರ ಮಾಡ ಬೇಡ, ಕೊಲ್ಲ ಬೇಡ, ಕಳ್ಳ
ತನ ಮಾಡ ಬೇಡ, ಅಸತ್ಯಸಾಕ್ಷಿ ಹೇಳ ಬೇಡ. ಮೋಸ ಮಾಡ
ಬೇಡ, ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸ ಬೇಕು, ಎಂಬ
೨೦ ಕಟ್ಟಳೆಗಳನ್ನು ಬಲ್ಲಿ. ಆದರೆ ಅವನು ಅವರಿಗೆ ಪ್ರತ್ಯುತ್ತರವಾಗಿ,
ಬೋಧಕನೇ, ಇವುಗಳನ್ನೆಲ್ಲಾ ನನ್ನ ಚಿಕ್ಕತನದಿಂದ, ಕೈಕೊಂಡಿ
೨೧ ದ್ದೇನೆ, ಅಂದಾಗ; ಯೇಸು ಅವನ ಮೇಲೆ ದೃಷ್ಟಿ ಇಟ್ಟು, ಅವ
ನನ್ನು ಪ್ರೀತಿ ಮಾಡಿ, ಹೇಳಿದ್ದೇನಂದರೆ, ಒಂದು ನಿನಗೆ ಕಡಿಮೆ
ಯಾಗಿದೆ; ಹೋಗಿ, ನಿನ್ನವೆಲ್ಲಾ ಮಾರಿ ಬಿಟ್ಟು, ಬಡವರಿಗೆ ಕೊ
ಡು; ಆಗ ಪರಲೋಕದಲ್ಲಿ ನಿನಗೆ ದ್ರವ್ಯವಿರುವದು, ಮತ್ತು
ಬಂದು, ಶಿಲುಬೆಯನ್ನು ಎತ್ತಿ ಕೊಂಡು, ನನ್ನನ್ನು ಹಿಂಬಾಲಿಸು.
೨೨ ಆದರೆ ಅವನು ಆ ಮಾತಿಗೆ ಚಿಂತೆಗೆ ಪಟ್ಟು, ದುಃಖದಿಂದ ಹೋ
ದನು; ಯಾಕಂದರೆ ಅವನಿಗೆ ಬಹಳ ಆಸ್ತಿ ಇತ್ತು.
೨೩ ಆಗ ಯೇಸು ಸುತ್ತಲು ನೋಡಿ, ತನ್ನ ಶಿಷ್ಯರಿಗೆ, ಆಸ್ತಿ
ಉಂಟಾದವರು ದೇವರ ರಾಜ್ಯದಲ್ಲಿ ಪ್ರವೇಶಿಸುವದು ಎಷ್ಟೋ
೨೪ ಕಷ್ಟ! ಅಂದನು. ಆದರೆ ಶಿಷ್ಯರು ಅವನ ಮಾತುಗಳಿಗೆ ಭ್ರಮೆ
ಗೊಂಡರು. ತಿರಿಗಿ ಯೇಸು ಉತ್ತರ ಕೊಟ್ಟು, ಅವರಿಗೆ, ಮಕ್ಕ
ಳೇ, ಆಸ್ತಿಯಲ್ಲಿ ನಂಬಿಕೆ ಇಟ್ಟು ಕೊಂಡವರು ದೇವರ ರಾಜ್ಯದಲ್ಲಿ
೨೫ ಪ್ರವೇಶಿಸುವದು ಎಷ್ಟೋ ಕಷ್ಟ! ಐಶ್ವರ್ಯವಂತನು ದೇವರ
ರಾಜ್ಯದಲ್ಲಿ ಪ್ರವೇಶಿಸುವದಕ್ಕಿಂತ, ಒಂಟೆಯು ಸೂಜಿಯ ಬೆ
೨೬ ಜ್ಜದಲ್ಲಿ ತೂರುವದು ಸುಲಭವಾಗಿದೆ, ಅಂದನು. ಅದಕ್ಕೆ ಅವರು
ಅಧಿಕವಾಗಿ ಆಶ್ಚರ್ಯ ಪಟ್ಟು, ಹಾಗಾದರೆ ಯಾರು ರಕ್ಷಿಸಲ್ಪಡ
೨೭ ಬಹುದೆಂದು, ತಮ್ಮಲ್ಲಿ ಹೇಳಿ ಕೊಂಡರು. ಆದರೆ ಯೇಸು ಅವರ
ಮೇಲೆ ದೃಷ್ಟಿ ಇಟ್ಟು, ಅದು ಮನುಷ್ಯರ ಬಳ್ಳಿಯಲ್ಲಿ ಅಸಾ
ಧ್ಯವೇ, ಆದರೆ ದೇವರ ಬಳ್ಳಿಯಲ್ಲಿ ಅಲ್ಲ; ಯಾಕಂದರೆ ದೇವರ
ಬಳ್ಳಿಯಲ್ಲಿ ಎಲ್ಲಾ ಸಾಧ್ಯವಾಗಿದೆ, ಅಂದನು.
೨೮ ಆಗ ಪೇತ್ರನು, ಇಗೋ, ನಾವು ಎಲ್ಲಾ ಬಿಟ್ಟು ಬಿಟ್ಟು, ನಿನ್ನ
ನ್ನು ಹಿಂಬಾಲಿಸಿದೆವೆಂದು ಹೇಳಲಾರಂಭಿಸಿದಾಗ, ಯೇಸು ಪ್ರತ್ಯು
೨೯ ತ್ತರವಾಗಿ ಹೇಳಿದ್ದೇನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ,
ನನಗೋಸ್ಕರವೂ ಸುವಾರ್ತೆಗೋಸ್ಕರವೂ ಮನೆಯನ್ನಾಗಲಿ,
ಸಹೋದರರನ್ನಾಗಲಿ, ಸಹೋದರಿಗಳನ್ನಾಗಲಿ, ತಂದೆಯನ್ನಾಗ
ಲಿ, ತಾಯಿಯನ್ನಾಗಲಿ, ಹೆಂತತಿಯನ್ನಾಗಲಿ, ಮಕ್ಕಳನ್ನಾಗಲಿ,
ಹೊಲಗಳನ್ನಾಗಲಿ, ಬಿಟ್ಟು ಬಿಟ್ಟು ಯಾವನಾದರೂ ಈಗ ಈ

೩೦ ಕಾಲದಲ್ಲಿ ನೂರಮ್ಮಟ್ಟು ಮನೆಗಳನ್ನೂ, ಸಹೋದರರನ್ನೂ, ಸ
ಹೋದರಿಯರುಗಳನ್ನೂ, ತಾಯಿಗಳನ್ನೂ, ಮಕ್ಕಳನ್ನೂ, ಹೊಲಗ
ಳನ್ನೂ, ಹಿಂಸೆಗಳು ಸಹಿತವಾಗಿ, ಮತ್ತು ಬರುವ ಲೋಕದಲ್ಲಿ
೩೧ ನಿತ್ಯ ಜೀವವನ್ನು, ಹೊಂದದೆ ಇರನು. ಆದರೆ ಮೊದಲಿನವರಾ
ದ ಅನೇಕರು ಕಡೆಯವರೂ, ಕಡೆಯವರು ಮೊದಲಿನವರೂ,
ಆಗಿರುವರು.

೩೨ ಇದಲ್ಲದೆ ಅವರು ಯೆರೂಸಲೇಮಿಗೆ ಏರಿ ಹೋಗುವ ಮಾ
ರ್ಗದಲ್ಲಿ ಇದ್ದರು; ಮತ್ತು ಯೇಸು ಅವರ ಮುಂದೆ ಹೋಗು
ತ್ತಿದ್ದನು. ಹೀಗಿರಲಾಗಿ, ಅವರು ಭ್ರಮೆ ಗೊಂಡು, ಹಿಂಬಾಲಿಸುತ್ತಾ
ಭಯ ಪಟ್ಟರು. ಆಗಲವನು ತಿರಿಗಿ ಹನ್ನಿರಡು ಮಂದಿಯನ್ನು ಕರ
ಕೊಂಡು, ತನಗೆ ಸಂಭವಿಸುವದಕ್ಕಿರುವುವುಗಳನ್ನು, ಅವರಿಗೆ ಹೇ
೩೩ ಳಲಾರಂಭಿಸಿದ್ದೇನಂದರೆ, ಇಗೋ, ಯೆರೂಸಲೇಮಿಗೆ ಏರಿ ಹೋ
ಗುತ್ತೇವೆ; ಮತ್ತು ಮನುಷ್ಯನ ಮಗನು ಪ್ರಧಾನ ಯಾಜಕರಿಗೂ
ಶಾಸ್ತ್ರಿಗಳಿಗೂ ಒಪ್ಪಿಸಲ್ಪಡುವನು; ಇವರು ಅವನನ್ನು ಮರ
೩೪ ಣಕ್ಕೆ ನಿರ್ಣಯಿಸಿ, ಅವನನ್ನು ಜನಾಂಗಗಳಿಗೆ ಒಪ್ಪಿಸಿ, ಅವ
ನನ್ನು ಹಾಸ್ಯ ಮಾಡಿ, ಅವನನ್ನು ಹೊಡೆದು, ಅವನ ಮೇಲೆ
ಉಗುಳಿ, ಅವನನ್ನು ಕೊಂದು ಹಾಕುವರು; ಮತ್ತು ಮೂರನೇ
ದಿವಸದಲ್ಲಿ ಏಳುವನು.

೩೫ ಆಗ ಜೆಬೆದಾಯನ ಮಕ್ಕಳಾದ ಯಾಕೋಬನೂ, ಯೋ
ಹಾನನೂ, ಅವನ ಬಳಿಗೆ ಬಂದು, ಬೋಧಕನೇ, ನಾವು ಬೇಡಿ
೩೬ ಕೊಳ್ಳುವದನ್ನು ನೀನು ನಮಗೆ ಮಾಡಬೇಕು, ಅಂದರು. ಅವನವ
೩೭ ರಿಗೆ, ನಾನು ನಿಮಗೆ ಏನು ಮಾಡ ಬೇಕು! ಅಂದಾಗ; ಅವರು ಅವ
ನಿಗೆ, ನಾವು ನಿನ್ನ ಮಹಿಮೆಯಲ್ಲಿ—ಒಬ್ಬನು ನಿನ್ನ ಬಲಪಾರ್ಶ್ವದಲ್ಲಿ
ಒಬ್ಬನು ನಿನ್ನ ಎಡಪಾರ್ಶ್ವದಲ್ಲಿ ಕೂತ್ರುವದಕ್ಕೆ ನಮಗೆ ಕೊ
೩೮ ಡು, ಅಂದನು. ಆದರೆ ಯೇಸು ಅವರಿಗೆ, ನೀವು ಬೇಡಿಕೊಳ್ಳುವದೇ
ನೆಂದು ನಿಮಗೆ ತಿಳಿಯುವದಿಲ್ಲ; ನಾನು ಕುಡಿಯುವ ಪಾತ್ರೆಯಲ್ಲಿ
ನೀವು ಕುಡಿಯುವದೂ, ನಾನು ಹೊಂದುವ ಸ್ನಾನವನ್ನು ಹೊಂದು
೩೯ ವದೂ ನಿಮ್ಮಿಂದ ಆಗುವದೋ? ಅಂದಾಗ; ಅವರು ಅವನಿಗೆ, ಆ
ಗುವದು, ಅಂದರು. ಆಗ ಯೇಸು ಅವರಿಗೆ, ನಾನು ಕುಡಿಯುವ
ಪಾತ್ರೆಯಲ್ಲಿ ಕುಡಿಯುವಿರಿ, ಮತ್ತು ನಾನು ಹೊಂದುವ ಸ್ನಾನ
೪೦ ವನ್ನು ಹೊಂದುವಿರಿ; ಆದರೆ ನನ್ನ ಎಡ ಬಲ ಪಾರ್ಶ್ವಗಳಲ್ಲಿ ಕೂ
ತ್ರುವದನ್ನು, ಯಾರಿಗೆ ಸಿದ್ಧ ಮಾಡಲ್ಪಟ್ಟಿದೆಯೋ, ಅವರಿಗೆ
ಹೊರ್ತು, ಕೊಡುವದು ನನ್ನದಲ್ಲ, ಅಂದನು.

೪೧ ಹತ್ತು ಮಂದಿಯು ಅದನ್ನು ಕೇಳಿ, ಯಾಕೋಬ್ ಯೋಹಾ
೪೨ ನರ ಮೇಲೆ ಕೋಪಿಸಿ ಕೊಳ್ಳಲಾರಂಭಿಸಿದರು. ಆದರೆ ಯೇಸು
ಅವರನ್ನು ಹತ್ತರ ಕರೆದು, ಅವರಿಗೆ ಹೇಳಿದ್ದು, ಜನಾಂಗಗಳ
ಮೇಲೆ ಆಳುವವರೆಂದು ಅನ್ನಿಸಿಕೊಳ್ಳುವವರು ಅವರ ಮೇಲೆ ಧೊ
೪೩ ರೆತನ ಮಾಡುತ್ತಾರೆಂದೂ, ಅವರಲ್ಲಿ ದೊಡ್ಡವರು ಅವರ ಮೇಲೆ
ಅಧಿಕಾರ ಮಾಡುತ್ತಾರೆಂದೂ, ಬಲ್ಲಿರಿ. ನಿಮ್ಮಲ್ಲಿ ಹಾಗಿರಬಾರದು;
ಆದರೆ ನಿಮ್ಮಲ್ಲಿ ದೊಡ್ಡವನಾಗ ಮನಸ್ಸುಳ್ಳವನು ನಿಮ್ಮ ಸೇವಕ
೪೪ ನಾಗಿರಲಿ; ಮತ್ತು ನಿಮ್ಮಲ್ಲಿ ಶ್ರೇಷ್ಠನಾಗ ಮನಸ್ಸುಳ್ಳವನು ಎಲ್ಲರ
೪೫ ದಾಸನಾಗಿರಲಿ. ಯಾಕಂದರೆ ಮನುಷ್ಯನ ಮಗನು ಸಹ ಸೇವೆ
ಹೊಂದುವದಕ್ಕಲ್ಲ, ಸೇವೆ ಮಾಡುವದಕ್ಕೂ, ತನ್ನ ಪ್ರಾಣವನ್ನು
ಅನೇಕರಿಗೋಸ್ಕರ ವಿಮೋಚನೆ ಬಲಿಯಾಗಿ ಕೊಡುವದಕ್ಕೂ,
ಬಂದನು.

೪೬ ಆಗಲವರು ಯೆರಿಕೋವಿಗೆ ಬಂದರು. ಮತ್ತು ಅವನು ತನ್ನ
ಶಿಷ್ಯರ ಸಂಗಡಲೂ, ದೊಡ್ಡ ಸಮೂಹದ ಸಂಗಡಲೂ ಯೆರಿ
ಕೋವಿನಿಂದ ಹೊರಡುವಾಗ, ತಿಮಾಯನ ಮಗನಾಗಿರುವ ಕುರು
ಡನಾದ ಬರ್ತಿಮಾಯನು ಮಾರ್ಗದ ಬಳಿಯಲ್ಲಿ ಭಿಕ್ಷ ಬೇಡು
೪೭ ತ್ತಾ, ಕೂತು ಕೊಂಡಿದ್ದನು. ಇವನು, ನಜರೇತಿನವನಾದ ಯೇಸು
ಇದ್ದಾನೆಂದು ಕೇಳಿ, ದಾವೀದನ ಮಗನಾದ ಯೇಸುವೇ, ನನ್ನನ್ನು
೪೮ ಕರುಣಿಸೆಂದು, ಕೂಗಲಾರಂಭಿಸಿದನು. ಅನೇಕರು ಅವನಿಗೆ, ಸು
ಮ್ಮನಿರ ಬೇಕೆಂದು ಗದರಿಸಿದಾಗ, ಅವನು ಬಹು ಹೆಚ್ಚಾಗಿ, ದಾವೀ
೪೯ ದನ ಮಗನೇ, ನನ್ನನ್ನು ಕರುಣಿಸೆಂದು, ಕೂಗಿದನು. ಯೇಸು
ನಿಂತು ಕೊಂಡು, ಅವನನ್ನು ಕರೆಯ ಬೇಕೆಂದು ಹೇಳ್ಳಿದಾಗ,
ಅವರು ಕುರುಡನನ್ನು ಕರೆದು ಧೈರ್ಯವಾಗಿರು, ಏಳು, ನಿನ್ನ
೫೦ ನ್ನು ಕರೆಯುತ್ತಾನೆಂದು, ಅವನಿಗೆ ಹೇಳ್ಳಿದರು. ಆಗಲವನು ತನ್ನ
೫೧ ಮೇಲಂಗಿ ಕೆಗೆದಿಟ್ಟು, ಎದ್ದು, ಯೇಸುವಿನ ಬಳ್ಳಿಗೆ ಬಂದನು. ಯೇ
ಸು ಉತ್ತರ ಕೊಟ್ಟು, ನಾನು ನಿನಗೆ ಏನು ಮಾಡ ಬೇಕೆಂದು, ಅವ
ನಿಗೆ ಹೇಳ್ಳಿದಾಗ, ಕುರುಡನು ಅವನಿಗೆ, ಗುರುವೇ, ದೃಷ್ಟಿ ಕೊಡ
೫೨ ಬೇಕು, ಅಂದನು. ಆಗ ಯೇಸು ಅವನಿಗೆ, ಹೋಗು, ನಿನ್ನ ವಿಶ್ವಾ
ಸವು ನಿನ್ನನ್ನು ರಕ್ಷಿಸಿ ಅದೆ, ಅಂದನು. ಸಂಗಡಲೇ ಅವನು ದೃ
ಷ್ಟಿ ಹೊಂದಿ, ಯೇಸುವನ್ನು ಮಾರ್ಗದಲ್ಲಿ ಹಿಂಬಾಲಿಸಿದನು.

## ೧೧. ಸಂಧಿ.

೧ ಅವರು ಯೆರೂಸಲೇಮಿಗೆ ಸಮೀಪವಾಗಿ ಇಪ್ಪೇ ಗುನ್ದದ
ಹತ್ತರ ಇರುವ ಬೇತ್ಫಗೆಗೂ, ಬೇತಾನ್ಯಕ್ಕೂ ಕೇರಿದಾಗ, ಅವ
ನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕಳುಹಿಸಿ, ಅವರಿಗೆ ಹೇಳ್ಳಿದ್ದೇ
೨ ನಂದರೆ, ನಿಮ್ಮೆದುರಾಗಿರುವ ಗ್ರಾಮಕ್ಕೆ ಹೋಗಿರಿ; ಅದರಲ್ಲಿ
ಪ್ರವೇಶಿಸುವಾಗಲೇ, ಯಾವ ಮನುಷ್ಯನಾದರೂ ಯಾವಾಗ್ಯೂ
ಹತ್ತಿ ಕೊಳ್ಳದ ಕತ್ತೇ ಮರಿ ಕಟ್ಟಿರುವದನ್ನು ಕಾಣುವಿರಿ; ಅದನ್ನು
೩ ಬಿಚ್ಚಿ, ತನ್ನಿರಿ. ಮತ್ತು ಯಾರಾದರೂ ನಿಮಗೆ, ಇದನ್ನು ಯಾಕೆ
ಮಾಡುತ್ತೀರಿ! ಅಂದರೆ, ಅದು ಕರ್ತನಿಗೆ ಬೇಕು, ಅನ್ನಿರಿ, ಸಂಗ
೪ ಡಲೇ ಅವನು ಅದನ್ನು ಇಲ್ಲಿಗೆ ಕಳುಹಿಸಿ ಬಿಡುವನು. ಆಗಲವರು
ಹೋಗಿ, ಆ ಮರಿಯು ಅಡ್ಡ ಹಾದಿಯಲ್ಲಿ ಬಾಗಲಿಗೆ ಕಟ್ಟಿರುವದ
೫ ನ್ನು ಕಂಡು, ಅದನ್ನು ಬಿಚ್ಚಿದರು. ಅಲ್ಲಿ ನಿಂತವರಲ್ಲಿ ಕೆಲವರು ಅ
೬ ವರಿಗೆ, ಮರಿ ಬಿಚ್ಚಿ ಏನು ಮಾಡುತ್ತೀರಿ! ಅಂದಾಗ; ಅವರು ಯೇಸು
೭ ಆಜ್ಞಾಪಿಸಿದ ಹಾಗೆ ಹೇಳ್ಳಿದರು; ಆಗಲವರನ್ನು ಬಿಟ್ಟರು. ಮತ್ತು
ಮರಿಯನ್ನು ಯೇಸುವಿನ ಬಳ್ಳಿಗೆ ತಂದು, ತಮ್ಮ ವಸ್ತ್ರಗಳನ್ನು
ಅದರ ಮೇಲಿಟ್ಟರು; ಅವನು ಅದರ ಮೇಲೆ ಕೂತು ಕೊಂ
ಡನು.

೮ ಅನೇಕರು ತಮ್ಮ ವಸ್ತ್ರಗಳನ್ನು ಮಾರ್ಗದಲ್ಲಿ ಹಾಸಿದರು;
ಮತ್ತೊಬ್ಬರು ಮರಗಳಿಂದ ಕೊಂಬೆಗಳನ್ನು ಕೊಯಿದು, ಮಾ
ರ್ಗದಲ್ಲಿ ಹಾಸಿದರು. ಮತ್ತು ಮುಂದೆ ಹೋಗುವವರೂ ಹಿಂಬಾ
ಲಿಸುವವರೂ ಕೂಗಿ ಹೋಳ್ಳಿದ್ದೇನಂದರೆ, ಹೊಸನನ್ನ, ಕರ್ತನ ಹೆಸ
೯ ರಿನಲ್ಲಿ ಬರುವವನಿಗೆ ಸ್ತೋತ್ರವಾಗಲಿ! ಕರ್ತನ ಹೆಸರಿನಲ್ಲಿ ಬರುವ
೧೦ ನಮ್ಮ ತಂದೆಯಾದ ದಾವೀದನ ರಾಜ್ಯಕ್ಕೆ ಆಶೀರ್ವಾದವಾಗಲಿ!
ಅತ್ಯುನ್ನತವಾದವುಗಳಲ್ಲಿ ಹೊಸನನ್ನ!

೧೧ ಯೇಸು ಯೆರೂಸಲೇಮಿನಲ್ಲಿಯೂ ದೇವಾಲಯದಲ್ಲಿಯೂ
ಪ್ರವೇಶಿಸಿ, ಎಲ್ಲವುಗಳನ್ನು ಸುತ್ತು ನೋಡಿ ಕೊಂಡು, ಆಗ ಸಾ



ಯಂಕಾಲವಾದದರಿಂದ ಹನ್ನಿರಡು ಮಂದಿಯ ಸಂಗಡ ಬೇತಾನ್ಯ
ಕ್ಕೆ ಹೊರಟು ಹೋದನು.

೧೨ ಮಾರನೆ ದಿವಸ ಅವರು ಬೇತಾನ್ಯದಿಂದ ಹೊರಟು ಹೋಗು
೧೩ ವಾಗ, ಅವನು ಹಸಿದು, ಎಲೆಗಳುಳ್ಳ ಒಂದು ಅಂಜೂರದ ಮರ
ವನ್ನು ದೂರದಿಂದ ನೋಡಿ, ಅದರಲ್ಲಿ ತನಗೇನಾದರೂ ಕಿಕ್ಕೇ
ಕೆಂದು, ಬಂದನು. ಮತ್ತು ಅದರ ಹತ್ತರ ಬಂದು, ಎಲೆಗಳು ಹೊ
ರ್ತು ಮತ್ತೇನೂ ಕಾಣಿಲ್ಲ; ಯಾಕಂದರೆ ಅಂಜೂರಗಳ ಕಾಲ
೧೪ ವಾಗಿರಲಿಲ್ಲ. ಆಗ ಯೇಸು ಉತ್ತರ ಕೊಟ್ಟು, ಅದಕ್ಕೆ, ನಿನ್ನಿಂದ
ಇನ್ನಿಂದಿಗೂ ಯಾರೂ ಫಲವನ್ನು ತಿನ್ನದಿರಲಿ, ಅಂದನು. ಅವನ
ಶಿಷ್ಯರು ಅದನ್ನು ಕೇಳ್ಳಿದರು.

೧೫ ಅವರು ಯೆರೂಸಲೇಮಿಗೆ ಬಂದಾಗ, ಯೇಸು ದೇವಾಲಯ
ದಲ್ಲಿ ಪ್ರವೇಶಿಸಿ, ದೇವಾಲಯದಲ್ಲಿ ಕ್ರಯ ವಿಕ್ರಯ ಮಾಡುವವ
ರನ್ನು ಹೊರಗೆ ಹಾಕಲಾರಂಭಿಸಿ, ಚಿನಿವಾರರ ಮೇಜುಗಳನ್ನೂ
೧೬ ಪಾರಿವಾಳ ಮಾರುವವರ ಪೀಠಗಳನ್ನೂ ತಾಚಿ ಬಿಟ್ಟನು. ಮತ್ತು
ಒಬ್ಬನಾದರೂ ದೇವಾಲಯದ ಮಾರ್ಗವಾಗಿ ಸಾಮಾನು
೧೭ ತಕ್ಕೊಂಡು ಹೋಗ ಗೋಡಿಸಲಿಲ್ಲ. ಮತ್ತು ನನ್ನ ಮನೆಯು ಎಲ್ಲಾ
ಜನಾಂಗಗಳಿಗೆ ಪ್ರಾರ್ಥನೆಯ ಮನೆ ಎಂದು ಕರೆಯಲ್ಪಡುವದೆಂಬ
ದಾಗಿ ಬರೆದದೆ ಅಲ್ಲವೋ! ಆದರೆ ನೀವು ಅದನ್ನು ಕಳ್ಳರ ಗವಿ
ಯಾಗ ಮಾಡಿದ್ದೀರಿ, ಎಂದು ಅವರಿಗೆ ಹೇಳ್ಳಿ, ಬೋಧಿಸಿದನು.
೧೮ ಆಗ ಶಾಸ್ತ್ರಿಗಳೂ ಪ್ರಧಾನ ಯಾಜಕರೂ ಅದನ್ನು ಕೇಳ್ಳಿ, ಅವ
ನನ್ನು ಹ್ಯಾಗೆ ಸಂಹರಿಸುವ ಎಂದು, ಹುಡುಕಿದರು; ಯಾಕಂದರೆ
ಸಮೂಹವೆಲ್ಲಾ ಅವನ ಬೋಧನೆಗೆ ಭ್ರಮಿಸಿದದರಿಂದ, ಅವನಿಗೆ
ಭಯಪಟ್ಟರು.

೧೯ ಸಾಯಂಕಾಲವಾದಾಗ, ಅವನು ಪಟ್ಟಣದ ಹೊರಗೆ ಹೋದನು.
೨೦ ಹೊತಾರೆ, ಅವರು ಹೋಗುತ್ತಿರುವಾಗ, ಆ ಅಂಜೂರದ ಮರವು
೨೧ ಬೇಕೊಂದಿಗೆ ಒಣಗಿರುವದನ್ನು ಕಂಡರು. ಆಗ ಪೇತ್ರನು ಜ್ಞಾಪಕ
ಮಾಡಿ ಕೊಂಡು, ಅವನಿಗೆ ರಬ್ಬಿಯೇ, ಇಗೋ, ನೀನು ಶಪಿಸಿದ
೨೨ ಅಂಜೂರದ ಮರವು ಒಣಗಿ ಹೋಯಿತು, ಅಂದನು. ಯೇಸು
೨೩ ಪ್ರತ್ಯುತ್ತರವಾಗಿ ಅವರಿಗೆ ಹೇಳ್ಳಿದ್ದು, ದೇವರಲ್ಲಿ ನಂಬಿಕೆ ಇಡಿರಿ;
ಯಾಕಂದರೆ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಯಾವನು ತನ್ನ
ಹೃದಯದಲ್ಲಿ ಸಂದೇಹ ಪಡದೆ, ತಾನು ಹೇಳುವುವುಗಳು ಆಗುವ
ವೆಂದು ನಂಬಿ, ಈ ಬೆಟ್ಟಕ್ಕೆ, ಎದ್ದು, ಸಮುದ್ರದಲ್ಲಿ ಬೀಳೆಂ
ದು ಹೇಳುವನೋ, ಅವನು ಹೇಳುವಂಥಾದ್ದು ಅವನಿಗೆ ಆಗು
೨೪ ವದು. ಆದದರಿಂದ ನಿಮಗೆ ಹೇಳುತ್ತೇನೆ, ನೀವು ಪ್ರಾರ್ಥಿಸಿ
ಬೇಡಿಕೊಳ್ಳುವವುಗಳನ್ನೆಲ್ಲಾ ಹೊಂದುವೆವೆಂದು ನಂಬಿದರೆ, ನಿಮ
೨೫ ಗೆ ಸಿಕ್ಕುವವು. ಮತ್ತು ಪ್ರಾರ್ಥಿಸುವವರಾಗಿ ನಿಂತು ಕೊಳ್ಳುವಾಗ,
ಪರಲೋಕದಲ್ಲಿರುವ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು
ನಿಮಗೆ ಮನ್ನಿಸುವ ಹಾಗೆ, ಯಾವನ ಮೇಲೆ ಏನಾದರೂ ಇದ್ದ
೨೬ ರೆ, ಅದನ್ನು ಮನ್ನಿಸಿರಿ. ನೀವು ಮನ್ನಿಸದೆ ಇದ್ದರೆ, ಪರಲೋಕ
ದಲ್ಲಿರುವ ನಿಮ್ಮ ತಂದೆಯ ಸಹ ನಿಮ್ಮ ತಪ್ಪುಗಳನ್ನು ಮ
ನ್ನಿಸನು.

೨೭ ಆಗಲವರು ತಿರಿಗಿ ಯೆರೂಸಲೇಮಿಗೆ ಬಂದರು. ಮತ್ತು ಅವ
ನು ದೇವಾಲಯದಲ್ಲಿ ತಿರುಗಾಡುತ್ತಿರುವಾಗ, ಪ್ರಧಾನ ಯಾಜಕರೂ
೨೮ ಶಾಸ್ತ್ರಿಗಳೂ ಹಿರಿಯರೂ ಅವನ ಬಳ್ಳಿಗೆ ಬಂದು, ಇವುಗಳನ್ನು
ಯಾವ ಅಧಿಕಾರದಿಂದ ಮಾಡುತ್ತೀ! ಇವುಗಳನ್ನು ಮಾಡುವ
ದಕ್ಕೆ ನಿನಗೆ ಈ ಅಧಿಕಾರ ಕೊಟ್ಟವನ್ನಾರೆಂದು, ಅವನಿಗೆ ಹೇಳ್ಳಿ
೨೯ ದಾಗ; ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳ್ಳಿದ್ದೇನಂದರೆ ನಾ
ನು ಸಹ ನಿಮ್ಮನ್ನು ಒಂದು ಮಾತು ಕೇಳುತ್ತೇನೆ; ನನಗೆ ಉತ್ತರ
ಕೊಡಿರಿ; ಆಗ ನಾನು ಯಾವ ಅಧಿಕಾರದಿಂದ ಇವುಗಳನ್ನು ಮಾ
೩೦ ಡುತ್ತೇನೆಂದು ನಿಮಗೆ ಹೇಳುವೆನು. ಯೋಹಾನನ ಸ್ನಾನವು
ಪರಲೋಕದಿಂದಾಯಿತೋ! ಮನುಷ್ಯರಿಂದಾಯಿತೋ! ನನಗೆ
೩೧ ಉತ್ತರ ಹೇಳ್ಳಿರಿ. ಆಗಲವರು ತಮ್ಮೊಳ್ಳಗೆ ಆಲೋಚನೆ ಮಾಡಿಕೊಂ
ಡು, ಹೇಳ್ಳಿದ್ದೇವಂದರೆ, ನಾವು ಪರಲೋಕದಿಂದ, ಅಂದರೆ, ಅವನು,
೩೨ ಯಾಕೆ ಅವನಲ್ಲಿ ನಂಬಿಕೆ ಇಡಲಿಲ್ಲ! ಅನ್ನುವನು; ಮನುಷ್ಯ
ರಿಂದ ಅಂದರೆ, ಜನರಿಗೆ ಭಯ ಪಡುತ್ತಿದ್ದರು; ಯಾಕಂದರೆ
ಯೋಹಾನನು ನಿಜವಾಗಿ ಪ್ರವಾದಿ ಎಂದು, ಎಲ್ಲರು ಎಣಿಸಿ ಕೊಂ
೩೩ ಡರು. ಹೀಗಿರಲಾಗಿ ಅವರು ಉತ್ತರ ಕೊಟ್ಟು, ಯೇಸುವಿಗೆ, ನಾವ
ರಿಯೆವು, ಅಂದರು. ಮತ್ತು ಯೇಸು ಪ್ರತ್ಯುತ್ತರವಾಗಿ ಅವರಿಗೆ,
ನಾನು ಸಹ ಇವುಗಳನ್ನು ಯಾವ ಅಧಿಕಾರದಿಂದ ಮಾಡುತ್ತೇ
ನೆಂದು, ನಿಮಗೆ ಹೇಳುವದಿಲ್ಲ, ಅಂದನು.

## ೧೨. ಸಂಧಿ.

೧ ಆಗಲವನು ಸಾಮ್ಯಗಳಿಂದ ಅವರಿಗೆ ಹೇಳಲಾರಂಭಿಸಿದ್ದೇನಂ
ದರೆ, ಒಬ್ಬ ಮನುಷ್ಯನು ದ್ರಾಕ್ಷೇತೋಟ ನೆಟ್ಟು, ಸುತ್ತಲು ಬೇಲಿ
ಹಾಕಿ, ತೊಟ್ಟಿ ಅಗೆದು, ಗೋಪುರ ಕಟ್ಟಿ, ಅದನ್ನು ಒಕ್ಕಲಿಗರ
೨ ವಶಕ್ಕೆ ಕೊಟ್ಟು, ದೇಶಾಂತರಕ್ಕೆ ಹೋದನು. ಮತ್ತು ಒಕ್ಕಲಿ
ಗರಿಂದ ದ್ರಾಕ್ಷೇತೋಟದ ಫಲದಲ್ಲಿ ಪಾಲು ಹೊಂದುವ ಹಾಗೆ,
ತಕ್ಕ ಕಾಲದಲ್ಲಿ ದಾಸನನ್ನು ಒಕ್ಕಲಿಗರ ಬಳ್ಳಿಗೆ ಕಳ್ಳಹಿಸಿದನು.
೩ ಆದರೆ ಅವರು ಅವನನ್ನು ಹಿಡುಕೊಂಡು, ಹೊಡೆದು, ಬರೀದಾಗಿ
೪ ಕಳುಹಿಸಿ ಬಿಟ್ಟರು. ಮತ್ತು ಅವರ ಬಳ್ಳಿಗೆ ಬೇರೆ ದಾಸನನ್ನು ಕಳು
ಹಿಸಿದನು; ಅವನನ್ನು ಅವರು ಕಲ್ಲೆಸೆದು, ತಲೆಗೆ ಘಾಯ ಮಾಡಿ,
೫ ಅವಮಾನದಿಂದ ಕಳುಹಿಸಿ ಬಿಟ್ಟರು. ಮತ್ತು ಬೇರೊಬ್ಬನನ್ನು
ಕಳ್ಳಹಿಸಿದನು; ಅವನನ್ನೂ ಕೊಂದು ಹಾಕಿದರು. ಮತ್ತು ಬೇರೆ
ಅನೇಕರಲ್ಲಿ ಕೆಲವರನ್ನು ಹೊಡೆದರು, ಕೆಲವರನ್ನು ಕೊಂದು ಹಾಕಿ
೬ ದರು. ಹೀಗಿರುವದರಿಂದ ತನಗೆ ಪ್ರಿಯವಾದ ಒಬ್ಬನೇ ಮಗನು
ಇರಲಾಗಿ, ಕಡೆಯಲ್ಲಿ ಅವನನ್ನು ಸಹ ಅವರ ಬಳ್ಳಿಗೆ ಕಳುಹಿಸಿ,
೭ ನನ್ನ ಮಗನನ್ನು ಲಕ್ಷ್ಯ ಮಾಡುವರು, ಅಂದನು. ಆದರೆ ಆ ಒ
ಕ್ಕಲಿಗರು ಇವನೇ ಬಾಧ್ಯಸ್ಥನು, ಬನ್ನಿ, ಇವನನ್ನು ಕೊಂದು ಹಾ
ಕುವ; ಆಗ ಬಾಧ್ಯತೆ ನಮ್ಮದಾಗಿರುವದೆಂದು, ತಮ್ಮೊಳ್ಳಗೆ ಅಂ
ದು ಕೊಂಡು, ಅವನನ್ನು ಹಿಡಿದು, ಕೊಂದು, ದ್ರಾಕ್ಷೇತೋಟದ
೮ ಹೊರಗೆ ಹಾಕಿದರು. ಹಾಗಾದರೆ ದ್ರಾಕ್ಷೇತೋಟದ ಯಜಮಾ
ನನನ್ನು ಏನು ಮಾಡುವನು! ಅವನು ಬಂದು, ಆ ಒಕ್ಕಲಿಗರನ್ನು
ಸಂಹರಿಸಿ, ದ್ರಾಕ್ಷೇತೋಟವನ್ನು ಮತ್ತೊಬ್ಬರಿಗೆ ಕೊಡುವನು.
೯ ಇದಲ್ಲದೆ, ಮನೆ ಕಟ್ಟುವವರು ತಳ್ಳಿದ ಕಲ್ಲೇ ಮೂಲೆಗೆ ತಲೆಕಲ್ಲಾ
೧೦ ಯಿತು; ಅದು ಕರ್ತನಿಂದುಂಟಾಗಿ, ನಮ್ಮ ಕಣ್ಣುಗಳಿಗೆ ಲಕ್ಷ
ರ್ಯವಾಗಿದೆ, ಎಂಬ ಬರಹವನ್ನು ನೀವು ಓದಲಿಲ್ಲವೋ!
೧೧ ಆಗಲವರು, ತಮ್ಮನ್ನು ಕುರಿತು ಈ ಸಾಮ್ಯವನ್ನು ಹೇಳಿದ
ನೆಂದು ತಿಳ್ಳಕೊಂಡು, ಅವನನ್ನು ಹಿಡಿಯ ಹುಡುಕಿದರು. ಆದರೆ
ಸಮೂಹಕ್ಕೆ ಭಯ ಪಟ್ಟು, ಅವನನ್ನು ಬಿಟ್ಟು ಹೋದರು.
೧೨ ಮತ್ತು ಅವನನ್ನು ವಾಕ್ಯದಲ್ಲಿ ಹಿಡಿಯುವ ಹಾಗೆ, ಫರಿಸಾಯ

ರಲ್ಲಿಯೂ ಹೆಕ್ಕೋದ್ಯರಲ್ಲಿಯೂ ಕೆಲವರನ್ನು ಅವನ ಬಳಿಗೆ
೧೪ ಕಳ್ಳಹಿಸಿದರು. ಇವರು ಬಂದು, ಅವನಿಗೆ, ಬೋಧಕನೇ, ನೀನು
ಸತ್ಯವಂತನಾಗಿದ್ದು, ಯಾವನನ್ನು ಲಕ್ಷ್ಯ ಮಾಡುವದಿಲ್ಲವೆಂದು
ಬಲ್ಲೆವು; ಯಾಕಂದರೆ ಮನುಷ್ಯರ ಮುಖದಾಕ್ಷಿಣ್ಯ ಮಾಡದೆ
೧೫ ಸತ್ಯವಾಗಿ ದೇವರ ಮಾರ್ಗವನ್ನು ಬೋಧಿಸುತ್ತೀ. ಕೈಸರನಿಗೆ
ತೆರಿಗೆ ಕೊಡ ಬಹುದೋ? ಬಾರದೋ? ಕೊಡೋಣೋ! ಬೇ
ಡವೋ! ಅಂದಾಗ; ಅವನು ಅವರ ಕಪಟ ತಿಳ್ಕಿದು, ನೀವು ನನ್ನ
ನ್ನು ಶೋಧಿಸುವದೇನು! ನಾನು ನೋಡುವ ಹಾಗೆ, ನನಗೆ ದೆನಾ
೧೬ ರಿಯನ್ನು ತನ್ನಿರಿ, ಅಂದನು. ಅವರು ತಂದ ಮೇಲೆ ಅವನವರಿಗೆ,
ಈ ರೂಪವೂ ಮೇಲ್ಬರಹವೂ ಯಾರವು! ಅಂದಾಗ ಅವರು
೧೭ ಅವನಿಗೆ ಕೈಸರನವು, ಅಂದರು. ಆಗ ಯೇಸು ಅವರಿಗೆ ಪ್ರತ್ಯು
ತ್ತರವಾಗಿ, ಕೈಸರನದನ್ನು ಕೈಸರನಿಗೆ, ದೇವರದನ್ನು ದೇವರಿಗೆ,
ಸಲ್ಲಿಸಿರಿ, ಅಂದನು. ಆಗಲವನಿಗೆ ಆಶ್ಚರ್ಯ ಪಟ್ಟರು.

೧೮ ತರುವಾಯ ಪುನರುತ್ಥಾನವಿಲ್ಲವೆಂದು ಹೇಳುವ ಸದ್ದುಕಾಯ
೧೯ ರು ಅವನ ಬಳಿಗೆ ಬಂದು, ಅವನನ್ನು ಕೇಳಿದ್ದೇನಂದರೆ, ಬೋಧ
ಕನೇ, ಒಬ್ಬನ ಸಹೋದರನು ಸತ್ತು ಹೋಗಿ, ಮಕ್ಕಳಿಲ್ಲದೆ ಹೆಂ
ಡತಿಯನ್ನು ಉಳಿಸಿದರೆ, ಅವನ ಸಹೋದರನು ಅವನ ಹೆಂಡತಿ
೨೦ ಯನ್ನು ತಕ್ಕೊಂಡು, ತನ್ನ ಸಹೋದರನಿಗೆ ಮಕ್ಕಳನ್ನು ಹುಟ್ಟಿ
ಸ ಬೇಕೆಂದು, ಮೋಶೆಯು ನಮಗೆ ಬರೆದಿದ್ದಾನೆ. ಏಳು ಮಂದಿ
ಸಹೋದರರಿದ್ದರು. ಮೊದಲಿನವನು ಹೆಂಡತಿಯನ್ನು ತಕ್ಕೊಂಡು
೨೧ ಮಕ್ಕಳಿಲ್ಲದೆ ಸತ್ತನು. ಮತ್ತು ಎರಡನೆಯವನು ಅವಳನ್ನು ತ
ಕ್ಕೊಂಡನು; ಇವನು ಸಹ ಮಕ್ಕಳಿಲ್ಲದೆ ಸತ್ತನು. ಮೂರನೆಯ
೨೨ ವನೂ ಹಾಗೆಯೇ. ಮತ್ತು ಏಳು ಮಂದಿ ಅವಳನ್ನು ತಕ್ಕೊಂಡು,
೨೩ ಮಕ್ಕಳಿಲ್ಲದೆ ಹೋದರು. ಎಲ್ಲರ ತರುವಾಯ ಆ ಸ್ತ್ರೀಯೂ ಸ
ತ್ತು ಹೋದಳು. ಹೀಗಿರುವದರಿಂದ ಪುನರುತ್ಥಾನದಲ್ಲಿ ಅವರು
ಎದ್ದಾಗ, ಅವಳು ಅವರಲ್ಲಿ ಯಾವನ ಹೆಂಡತಿಯಾಗಿರುವಳು?
ಯಾಕಂದರೆ ಏಳು ಮಂದಿಗೂ ಹೆಂಡತಿಯಾಗಿದ್ದಳಲ್ಲ? ಅಂದರು.
೨೪ ಆಗ ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದೇನಂದರೆ, ನೀವು
ಬರಹಗಳನ್ನೂ ದೇವರ ಬಲವನ್ನೂ ಅರಿಯದ ಕಾರಣ ಮೋಸ
೨೫ ಹೋಗುತ್ತೀರಲ್ಲವೇ? ಯಾಕಂದರೆ ಸತ್ತವರೊಳಗಿಂದ ಏಳುವಾಗ,
ಅವರು ಮದುವೆ ಮಾಡಿ ಕೊಳ್ಳದೆ, ಮದುವೆ ಮಾಡಿ ಕೊಡದೆ,
೨೬ ಪರಲೋಕದಲ್ಲಿರುವ ದೂತರ ಹಾಗಿರುವರು. ಆದರೆ ಸತ್ತವರು
ಏಳುತ್ತಾರೆಂಬ ವಿಷಯ ನೀವು ಮೋಶೆಯ ಪುಸ್ತಕದಲ್ಲಿ ಪೊದೆ
ಯ ಸಂಧಿಯಲ್ಲಿ, ದೇವರು ಅವನಿಗೆ, ನಾನು ಅಬ್ರಹಾಮನ ದೇ
ವರೂ ಇಸಾಕನ ದೇವರೂ ಯಾಕೋಬನ ದೇವರೂ ಆಗಿದ್ದೇ
೨೭ ನೆಂದು ಹೇಳಿದ್ದನ್ನು ಓದಲಿಲ್ಲವೋ? ದೇವರು ಸತ್ತವರಿಗಲ್ಲ,
ಬದುಕುವವರಿಗೆ ದೇವರಾಗಿದ್ದಾನೆ; ಹೀಗಿರುವದರಿಂದ ನೀವು ಬಹ
ಳವಾಗಿ ಮೋಸ ಹೋಗುತ್ತೀರಿ.

೨೮ ಆಗ ಶಾಸ್ತ್ರಿಗಳಲ್ಲಿ ಒಬ್ಬನು ಹತ್ತರ ಬಂದು, ಅವರು ತರ್ಕ
ಮಾಡುವದನ್ನು ಕೇಳಿ, ಅವನು ಅವರಿಗೆ ಚನ್ನಾಗಿ ಉತ್ತರ ಕೊ
ಟ್ಟನೆಂದು ತಿಳ್ಕಿದು ಕೊಂಡು, ಅವನಿಗೆ, ಎಲ್ಲಾ ಕಟ್ಟಳೆಗಳಲ್ಲಿ ಮೊದ
೨೯ ಲನೇದು ಯಾವದೆಂದು, ಕೇಳಿದನು. ಯೇಸು ಅವನಿಗೆ ಪ್ರತ್ಯು
ತ್ತರವಾಗಿ ಹೇಳಿದ್ದು, ಎಲ್ಲಾ ಕಟ್ಟಳೆಗಳಲ್ಲಿ ಮೊದಲನೇದು ಯಾವ
ದಂದರೆ, ಇಸ್ರಯೇಲೇ, ಕೇಳು; ನಮ್ಮ ದೇವರಾದ ಕರ್ತನು
೩೦ ಒಬ್ಬನೇ ಕರ್ತನಾಗಿದ್ದಾನೆ; ಮತ್ತು ನಿನ್ನ ದೇವರಾದ ಕರ್ತನ
ನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ
ಪ್ರಾಣದಿಂದಲೂ, ನಿನ್ನ ಪೂರ್ಣ ಬುದ್ಧಿಯಿಂದಲೂ, ನಿನ್ನ
ಪೂರ್ಣ ಶಕ್ತಿಯಿಂದಲೂ, ಪ್ರೀತಿ ಮಾಡ ಬೇಕೆಂಬುವದೇ ಮೊದ
೩೧ ಲನೇ ಕಟ್ಟಳೆಯು. ಮತ್ತು ನಿನ್ನ ನೆಕೆಯವನನ್ನು ನಿನ್ನ ಹಾಗೆ
ಯೇ ಪ್ರೀತಿ ಮಾಡ ಬೇಕೆಂಬುವದು ಅದಕ್ಕೆ ಸಮಾನವಾಗಿರುವ
ಎರಡನೇದು. ಇವುಗಳಿಗಿಂತ ದೊಡ್ಡ ಕಟ್ಟಳೆ ಯಾವದೂ ಇಲ್ಲ.
೩೨ ಆಗ ಶಾಸ್ತ್ರಿಯು ಅವನಿಗೆ ಹೇಳಿದ್ದು, ಒಳ್ಳೇದು, ಬೋಧಕನೇ,
ನಿಜವಾಗಿ ಹೇಳಿದ್ದೀ; ಯಾಕಂದರೆ ದೇವರು ಒಬ್ಬನೇ, ಅವನಲ್ಲದೆ
೩೩ ಮತ್ತೊಬ್ಬನೂ ಇಲ್ಲ. ಮತ್ತು ಅವನನ್ನು ಪೂರ್ಣ ಹೃದಯ
ದಿಂದಲೂ, ಪೂರ್ಣ ಬುದ್ಧಿಯಿಂದಲೂ, ಪೂರ್ಣ ಪ್ರಾಣದಿಂ
ದಲೂ, ಪೂರ್ಣ ಶಕ್ತಿಯಿಂದಲೂ, ಪ್ರೀತಿ ಮಾಡಿ, ನೆಕೆಯವನ
೩೪ ನ್ನು ತನ್ನ ಹಾಗೆಯೇ ಪ್ರೀತಿ ಮಾಡುವದು, ಎಲ್ಲಾ ಸರ್ವಾಂಗ ದಹ
ನ ಮೊದಲಾದ ಬಲಿಗಳಿಗಿಂತ ಹೆಚ್ಚಾಗಿದೆ. ಆಗ ಯೇಸು, ಅವನು
ಬುದ್ಧಿಯಿಂದ ಉತ್ತರ ಕೊಟ್ಟದ್ದನ್ನು ನೋಡಿ, ನೀನು ದೇವರ
ರಾಜ್ಯಕ್ಕೆ ದೂರವಾದವನಲ್ಲವೆಂದು, ಅವನಿಗೆ ಹೇಳಿದನು. ಮತ್ತು
ಇನ್ನು ಯಾವನಾದರೂ ಅವನನ್ನು ಪ್ರಶ್ನೆ ಕೇಳ ಧೈರ್ಯಪ
ಡಲಿಲ್ಲ.

೩೫ ಮತ್ತು ಯೇಸು ಉತ್ತರ ಕೊಟ್ಟು, ದೇವಾಲಯದಲ್ಲಿ ಬೋ
ಧಿಸುತ್ತಾ, ಹೇಳಿದ್ದೇನಂದರೆ, ಕ್ರಿಸ್ತನು ದಾವೀದನ ಮಗನೆಂದು
೩೬ ಶಾಸ್ತ್ರಿಗಳು ಹೇಳುವದು ಹ್ಯಾಗೆ! ಯಾಕಂದರೆ ದಾವೀದನು ತಾ
ನೇ, ಕರ್ತನು ನನ್ನ ಕರ್ತನಿಗೆ, ನಾನು ನಿನ್ನ ಶತ್ರುಗಳನ್ನು
ನಿನ್ನ ಪಾದ ಪೀಠವಾಗಿ ಇಡುವ ಮಟ್ಟಿಗೂ ನನ್ನ ಬಲಪಾರ್ಶ್ವ
ದಲ್ಲಿ ಕೂತ್ತು ಎಂದು, ಹೇಳಿದನೆಂಬದಾಗಿ, ಪರಿಶುದ್ಧಾತ್ಮನಿಂದ
೩೭ ಹೇಳಿದ್ದಾನೆ. ದಾವೀದನು ತಾನೇ ಅವನಿಗೆ ಕರ್ತನೆಂದು ಹೇಳು
ತ್ತಾನೆ; ಹಾಗಾದರೆ ಅವನ ಮಗನಾಗಿರುವದು ಹ್ಯಾಗೆ! ಇದಲ್ಲದೆ
ಸಮೂಹದ ಜನರು ಅವನನ್ನು ಸಂತೋಷವಾಗಿ ಕೇಳಿದರು.

೩೮ ಆಗಲವನು ತನ್ನ ಬೋಧನೆಯಲ್ಲಿ ಅವರಿಗೆ ಹೇಳಿದ್ದೇನಂದರೆ,
ಉದ್ದವಾದ ಅಂಗಿಗಳಲ್ಲಿ ತಿರುಗಾಡುವದರ ಮೇಲೆಯೂ, ಅಂಗಡಿ
೩೯ ಬೀದಿಗಳಲ್ಲಿ ವಂದನೆಗಳ ಮೇಲೆಯೂ, ಸಭೆಮನೆಗಳಲ್ಲಿ ಮೊದ
ಲನೇ ಪೀಠಗಳ ಮೇಲೆಯೂ, ಔತಣಗಳಲ್ಲಿ ಮೊದಲನೇ ಪಂಕ್ತಿ
೪೦ ಗಳ ಮೇಲೆಯೂ, ಮನಸ್ಸಿಟ್ಟು, ವೆಥವೆಗಳ ಮನೆಗಳನ್ನು ತಿಂದು
ಬಿಟ್ಟು, ನೆವಕ್ಕೋಸ್ಕರ ಉದ್ದವಾದ ಪ್ರಾರ್ಥನೆ ಮಾಡುವ ಶಾ
ಸ್ತ್ರಿಗಳಿಗೆ ಎಚ್ಚರಿಕೆಯಾಗಿರ್ರಿ. ಇವರು ಅಧಿಕವಾದ ಅಜ್ಞೆ ನಿರ್ಣ
ಯ ಹೊಂದುವರು.

೪೧ ಮತ್ತು ಯೇಸು ಬೊಕ್ಕಸಕ್ಕೆ ಎದುರಾಗಿ ಕೂತು ಕೊಂಡು,
ಜನರು ಬೊಕ್ಕಸದಲ್ಲಿ ಹಣ ಹಾಕುವ ರೀತಿಯನ್ನು ನೋಡುವಾಗ,
೪೨ ಅನೇಕ ಐಶ್ವರ್ಯವಂತರು ಬಹಳ ಹಾಕಿದರು. ಆಗ ಒಬ್ಬ
ಬಡ ವೆಥವೆ ಬಂದು ದುಗ್ಗಾಣಿಯಾದ ಎರಡು ಕಾಸು ಹಾಕಿದಳು.
೪೩ ಆಗ ತನ್ನ ಶಿಷ್ಯರನ್ನು ಹತ್ತರ ಕರೆದು, ಅವರಿಗೆ ಹೇಳಿದ್ದೇನಂ
ದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಬೊಕ್ಕಸದಲ್ಲಿ ಹಾಕಿ
೪೪ ದವಕ್ಕೆಲ್ಲರಿಗಿಂತ ಈ ಬಡ ವೆಥವೆ ಹೆಚ್ಚಾಗಿ ಹಾಕಿದ್ದಾಳೆ; ಯಾಕಂ
ದರೆ ಎಲ್ಲರು ತಮ್ಮ ಹೆಚ್ಚಿಗೆಯಿಂದ ಹಾಕಿದ್ದಾರೆ; ಆದರೆ ಇವಳು
ತನ್ನ ಕೊರತೆಯಿಂದ ತನಗಿದ್ದದ್ದೆಲ್ಲಾ, ತನ್ನ ಜೀವನವೆಲ್ಲಾ ಹಾ
ಕಿದ್ದಾಳೆ.



## ೧೩. ಸಂಧಿ.

೧ ಅವನು ದೇವಾಲಯದೊಳಗಿಂದ ಹೊರಕುವಾಗ, ಅವನ
ಶಿಷ್ಯರಲ್ಲಿ ಒಬ್ಬನು ಅವನಿಗೆ, ಬೋಧಕನೇ, ನೋಡು; ಎಂಥಾ
೨ ಕಲ್ಲುಗಳೂ, ಎಂಥಾ ಶಿಲ್ಪದ ಕೆಲಸಗಳೂ! ಅಂದನು. ಯೇಸು
ಪ್ರತ್ಯುತ್ತರವಾಗಿ ಅವನಿಗೆ, ಈ ದೊಡ್ಡ ಶಿಲ್ಪದ ಕೆಲಸಗಳನ್ನು
ನೋಡುತ್ತೀಯೋ! ಕಲ್ಲಿನ ಮೇಲೆ ಕಲ್ಲು ಕೆಡವಲ್ಪಡದೆ ಬಿಡಲ್ಪ
ಡುವದಿಲ್ಲ, ಅಂದನು.

೩ ಮತ್ತು ಅವನು ಇಪ್ಪೇ ಗುಡ್ಡದ ಮೇಲೆ, ದೇವಾಲಯಕ್ಕೆ
ಎದುರಾಗಿ ಕೂತು ಕೊಂಡಾಗ, ಪೇತ್ರನೂ ಯಾಕೋಬನೂ
೪ ಯೋಹಾನನೂ ಅಂದ್ರೆಯನೂ ಏಕಾಂತವಾಗಿ, ಇವು ಯಾವಾಗ
ಆಗುವವೆಂದೂ, ಇವೆಲ್ಲಾ ಈಡೇರುವ ಕಾಲಕ್ಕೆ ಲಕ್ಷಣವೇನಿಂ
೫ ದೂ, ಅವನನ್ನು ಕೇಳಿದರು. ಯೇಸು ಅವರಿಗೆ ಪ್ರತ್ಯುತ್ತರವಾಗಿ
ಹೇಳಲಾರಂಭಿಸಿದ್ದೇನಂದರೆ, ನಿಮ್ಮನ್ನು ಯಾರೂ ಮೋಸಗೊಳ್ಳಿ
೬ ಸದ ಹಾಗೆ ನೋಡಿಕೊಳ್ಳಿರಿ. ಯಾಕಂದರೆ ಅನೇಕರು ನನ್ನ
ಹೆಸರಿನಲ್ಲಿ ಬಂದು, ನಾನೇ ಕ್ರಿಸ್ತನೆಂದು ಹೇಳಿ, ಅನೇಕರನ್ನು
೭ ಮೋಸ ಗೊಳಿಸುವರು. ಆದರೆ ನೀವು ಯುದ್ಧಗಳನ್ನೂ ಯುದ್ಧ
ಗಳ ಸುದ್ದಿಗಳನ್ನೂ ಕೇಳುವಾಗ, ಕಳವಳ ಪಡಬೇಡಿರಿ; ಯಾಕಂ
೮ ದರೆ ಅವು ಆಗ ಬೇಕು; ಆದರೆ ಅಂತ್ಯವು ಇನ್ನು ಇಲ್ಲ. ಹ್ಯಾ
ಗಂದರೆ ಜನಾಂಗದ ಮೇಲೆ ಜನಾಂಗವೂ, ರಾಜ್ಯದ ಮೇಲೆ ರಾ
ಜ್ಯವೂ, ಏಳುವದು; ಮತ್ತು ಸ್ಥಳ ಸ್ಥಳಗಳಲ್ಲಿ ಭೂಕಂಪಗಳೂ
ಬರಗಳೂ ಉಪದ್ರವಗಳೂ ಇರುವವು; ಇವೇ ವೇದನೆಗಳ ಆರಂಭ
೯ ವು. ಆದರೆ ನಿಮಗೆ ನೀವೇ ನೋಡಿ ಕೊಳ್ಳಿರಿ; ಯಾಕಂದರೆ ನಿಮ್ಮ
ನ್ನು ಮಂತ್ರಿ ಸಭೆಗಳಿಗೂ, ಸಭೆಮನೆಗಳಿಗೂ, ಒಪ್ಪಿಸುವರು. ನೀ
ವು ಹೊಡೆಯಲ್ಪಟ್ಟು, ನನ್ನ ನಿಮಿತ್ತ ಅವರಿಗೆ ಸಾಕ್ಷಿಯಾಗಿ
ಅಧಿಪತಿಗಳ ಮುಂದೆಯೂ, ಅರಸರ ಮುಂದೆಯೂ, ನಿಲ್ಲಿಸಲ್ಪ
೧೦ ಡುವಿರಿ. ಮತ್ತು ಜನಾಂಗಗಳಿಗೆಲ್ಲಾ ಮೊದಲಾಗಿ ಸುವಾರ್ತೆಯು
ಸಾರಲ್ಪಡ ಬೇಕು.

೧೧ ಆದರೆ ಅವರು ನಿಮ್ಮನ್ನು ತಕ್ಕೊಂಡು ಹೋಗಿ ಒಪ್ಪಿಸುವಾ
ಗ, ನೀವು, ಏನು ಮಾತಾಡ ಬೇಕೆಂದು ಮುಂಚೆ ಚಿಂತಿಸಿ, ಆಲೋ
ಚನೆ ಮಾಡ ಬೇಡಿರಿ; ಆದರೆ ಆ ತಾಸಿನಲ್ಲಿ ನಿಮಗೆ ಯಾವದು
ಕೊಡಲ್ಪಡುತ್ತದೆಯೋ, ಅದನ್ನು ಮಾತಾಡಿರಿ; ಯಾಕಂದರೆ
೧೨ ಮಾತಾಡುವವರು ನೀವಲ್ಲ, ಪರಿಶುದ್ಧಾತ್ಮವೇ. ಇದಲ್ಲದೆ ಸಹೋ
ದರನು ಸಹೋದರನನ್ನು, ತಂದೆಯು ಮಗನನ್ನು, ಮರಣಕ್ಕೆ
ಒಪ್ಪಿಸುವನು; ಮತ್ತು ಮಕ್ಕಳು ಹೆತ್ತವರಿಗೆ ವಿರೋಧವಾಗಿ
೧೩ ಎದ್ದು, ಅವರನ್ನು ಮರಣಕ್ಕೆ ಒಪ್ಪಿಸುವರು; ಮತ್ತು ನನ್ನ
ಹೆಸರಿನ ನಿಮಿತ್ಯ ಎಲ್ಲರಿಂದ ಹಗೆ ಮಾಡಲ್ಪಡುವಿರಿ; ಆದರೆ ಅಂ
ತ್ಯದ ಪರ್ಯಂತರ ತಾಳಿಕೊಳ್ಳುವವನ್ನಾವನೋ, ಅವನೇ ರಕ್ಷಿ
ಸಲ್ಪಡುವನು.

೧೪ ಇದಲ್ಲದೆ ಪ್ರವಾದಿಯಾದ ದಾನಿಯೇಲನು ಹೇಳಿದ ಹಾಳು
ಮಾಡುವ ಅಸಹ್ಯವು, ಬಾರದ ಸ್ಥಳದಲ್ಲಿ ನಿಂತಿರುವದನ್ನು ನೀವು
ನೋಡಲು—ಓದುವವನು ತಿಳ್ಕಿಕೊಳ್ಳಲಿ—ಆಗ ಯೆಹೂದದಲ್ಲಿರು
೧೫ ವವರು ಬೆಟ್ಟಗಳಿಗೆ ಓಡಿ ಹೋಗಲಿ, ಮನೆಯ ಮೇಲಿರುವವನು
ಮನೆಗೆ ಇಳಿದು ಹೋಗದೆ, ತನ್ನ ಮನೆಯೊಳಗಿಂದ ಏನಾದರೂ
ತೆಗೆದು ಕೊಂಡು ಹೋಗುವದಕ್ಕೆ ಒಳಗೆ ಹೋಗದೆ, ಇರಲಿ;
೧೬ ಮತ್ತು ಹೊಲದಲ್ಲಿರುವವನು ತನ್ನ ಅಂಗಿಯನ್ನು ತೆಗೆದು ಕೊ
೧೭ ಳ್ಳುವದಕ್ಕೆ ಹಿಂದಕ್ಕೆ ತಿರುಗದಿರಲಿ. ಆದರೆ ಆ ದಿವಸಗಳಲ್ಲಿ ಗ
ರ್ಭಿಣಿಗಳಿಗೂ ಮೊಲೆ ಕೊಡುವವರಿಗೂ ಅಯ್ಯೋ! ಇದಲ್ಲದೆ
ನಿಮ್ಮ ಪಲಾಯನವು ಹಿಮ ಕಾಲದಲ್ಲಿ ಆಗದ ಹಾಗೆ, ಪ್ರಾರ್ಥನೆ
೧೮ ಮಾಡಿರಿ; ಯಾಕಂದರೆ ಆ ದಿವಸಗಳು, ದೇವರು ಸೃಷ್ಟಿಸಿದ
ಸೃಷ್ಟಿಯಾರಭ್ಯ ಇಂದಿನ ವರಿಗೂ ಉಂಟಾಗದಂಥ, ಮತ್ತು
೧೯ ಉಂಟಾಗುವದಕ್ಕೆ ಇರದಂಥ, ಉಪದ್ರವಾಗಿರುವವು; ಮತ್ತು
ಕರ್ತನು ಆ ದಿವಸಗಳನ್ನು ಅಡಕ ಮಾಡದೆ ಇದ್ದರೆ, ಯಾವ
ಮಾಂಸವಾದರೂ ರಕ್ಷಿಸಲ್ಪಡದು; ಆದರೆ ತಾನು ಆದು ಕೊಂಡ
ಆಯ್ಕೆಪಟ್ಟವರಿಗೋಸ್ಕರ ಆ ದಿವಸಗಳನ್ನು ಅಡಕ ಮಾಡಿದ್ದಾನೆ.
೨೦ ಮತ್ತು ಆವಾಗ, ಇಗೋ, ಇಲ್ಲಿ ಕ್ರಿಸ್ತನು! ಇಲ್ಲವೆ, ಅಗೋ,
ಅಲ್ಲಿ! ಎಂದು ಯಾರಾದರೂ ನಿಮಗೆ ಹೇಳಿದರೆ, ನಂಬ ಬೇಡಿರಿ;
೨೧ ಯಾಕಂದರೆ ಸುಳ್ಳು ಕ್ರಿಸ್ತರೂ ಸುಳ್ಳು ಪ್ರವಾದಿಗಳೂ ಎದ್ದು,
ಅದು ಸಾಧ್ಯವಾದರೆ ಆಯ್ಕೆಪಟ್ಟವರನ್ನು ಸಹ ಮೋಸಗೊಳಿ
ಸುವ ಹಾಗೆ, ಗುರುತುಗಳನ್ನೂ ಅದ್ಭುತಗಳನ್ನೂ ತೋರಿಸು
೨೩ ವರು. ಆದರೆ ನೀವು ನೋಡಿಕೊಳ್ಳಿರಿ! ಇಗೋ, ನಿಮಗೆ ಎಲ್ಲ
ವುಗಳನ್ನು ಮುಂಚೆ ಹೇಳಿದ್ದೇನೆ.

೨೪ ಇದಲ್ಲದೆ ಆ ದಿವಸಗಳಲ್ಲಿ ಆ ಉಪದ್ರವಾದ ಮೇಲೆ ಸೂ
ರ್ಯನು ಕತ್ತಲಾಗುವನು; ಚಂದ್ರನು ತನ್ನ ಪ್ರಕಾಶವನ್ನು ಕೊ
ಡನು; ಮತ್ತು ಆಕಾಶದ ನಕ್ಷತ್ರಗಳು ಬೀಳುವವು; ಮತ್ತು ಆಕಾಶ
೨೫ ಗಳಲ್ಲಿರುವ ಬಲಗಳು ಕದಲುವವು. ಆಗ ಮನುಷ್ಯನ ಮಗನು
ಮೇಘಗಳಲ್ಲಿ ಬಹಳ ಬಲ ಮಹಿಮೆಗಳ ಸಂಗಡ ಬರುವದನ್ನು
೨೬ ನೋಡುವರು. ಆಗಲವನು ತನ್ನ ದೂತರನ್ನು ಕಳುಹಿಸಿ, ತಾನು
ಆದು ಕೊಂಡವರನ್ನು ಭೂಮಿಯ ಕೊನೆಯಿಂದ ಆಕಾಶದ
ಕೊನೆಯ ಪರ್ಯಂತರ ನಾಲ್ಕು ದಿಕ್ಕುಗಳೊಳಗಿಂದ ಕೂಡಿ
ಸುವನು.

೨೮ ಇದಲ್ಲದೆ ಅಂಜೂರದ ಮರದಿಂದ ಸಾಮ್ಯವನ್ನು ಕಲಿತು
ಕೊಳ್ಳಿರಿ ಅದರ ಕೊಂಬೆಯು ಈಗಲೇ ಹಸೀದಾಗಿ ಎಲೆಗಳು
ಚಿಗುರಿದರೆ, ಬೆಸಲು ಕಾಲವು ಸಮೀಪವೆಂದು ತಿಳ್ಕಿಕೊಳ್ಳುತ್ತೀರಿ.
೨೯ ಅದೇ ಪ್ರಕಾರ ಇವುಗಳು ಆಗುವದನ್ನು ನೀವು ನೋಡಿದರೆ, ಅದು
೩೦ ಬಾಗಲಿನ ಸಮೀಪವೆಂದು ತಿಳ್ಕಿಕೊಳ್ಳಿರಿ. ನಿಶ್ಚಯವಾಗಿ ನಿಮಗೆ
ಹೇಳುತ್ತೇನೆ, ಇವುಗಳೆಲ್ಲಾ ಆಗುವ ಮಟ್ಟಿಗೂ ಈ ಸಂತತಿಯು
೩೧ ಗತಿಸಿ ಹೋಗದು. ಆಕಾಶವೂ ಭೂಮಿಯೂ ಗತಿಸಿ ಹೋಗು
ವವು; ಆದರೆ ನನ್ನ ವಾಕ್ಯಗಳು ಗತಿಸಿ ಹೋಗವು.

೩೨ ಆದರೆ ಆ ದಿವಸವನ್ನೂ ಘಳಿಗೆಯನ್ನೂ ಕುರಿತು, ತಂದೆಗೆ
ಹೊರ್ತು, ಯಾವನಿಗೂ, ಪರಲೋಕದಲ್ಲಿರುವ ದೂತರಿಗಾದ
ರೂ, ಮಗನಿಗಾದರೂ, ತಿಳ್ಕಿಯದು.

೩೩ ನೋಡಿಕೊಳ್ಳಿರಿ; ಎಚ್ಚತ್ತು ಪ್ರಾರ್ಥಿಸಿರಿ; ಯಾಕಂದರೆ, ಆ
೩೪ ಸಮಯವು ಯಾವಾಗ ಬರುವದೋ, ಅರಿಯರಿ. ದೇಶಾಂತರಕ್ಕೆ
ಹೋದ ಒಬ್ಬ ಮನುಷ್ಯನು ತನ್ನ ಮನೆಯನ್ನು ಬಿಟ್ಟು, ತನ್ನ
ದಾಸರಿಗೆ ಅಧಿಕಾರವನ್ನೂ, ಒಬ್ಬೊಬ್ಬನಿಗೆ ಅವನವನ ಕೆಲಸ
ವನ್ನೂ, ಕೊಟ್ಟು, ಬಾಗಲು ಕಾಯುವವನಿಗೆ, ಎಚ್ಚರಿಕೆಯಾಗಿರ
೩೫ ಬೇಕೆಂದು, ಆಜ್ಞಾಪಿಸಿದ ಹಾಗಿದೆ. ಹೀಗಿರುವದರಿಂದ ಮನೇ
ಯಜಮಾನನು ಸಾಯಂಕಾಲದಲ್ಲಿಯೋ, ಮಧ್ಯ ರಾತ್ರಿಯಲ್ಲಿ
ಯೋ, ಕೋಳಿ ಕೂಗುವಾಗಲೋ, ಬೆಳ್ಳಗೆಯೋ, ಯಾವಾಗ

೩೬ ಬರುವನೋ, ನಿಮಗೆ ತಿಳಿಯದ ಕಾರಣ, ಅವನು ಥಕ್ಕನೆ ಬಂ
ದು, ನೀವು ನಿದ್ದೆ ಮಾಡುವದನ್ನು ಕಾಣದ ಹಾಗೆ, ಎಚ್ಚರಿಕೆ
೩೭ ಯಾಗಿರ್ರಿ. ಇದ್ದಲ್ಲದೆ ನಿಮಗೆ ಹೇಳುವದನ್ನು ಎಲ್ಲರಿಗೂ ಹೇಳು
ತ್ತೇನೆ—ಎಚ್ಚರಿಕೆಯಾಗಿರ್ರಿ.

## ೧೪. ಸಂಧಿ.

೧ ಎರಡು ದಿವಸಗಳಾದ ಮೇಲೆ ಪಸ್ಕವು ಹುಳಿಯಿಲ್ಲದ ಕೊಟ್ಟಿ
ಗಳ ಹಬ್ಬವೂ ಆಗುತ್ತು. ಮತ್ತು ಪ್ರಧಾನಯಾಜಕರೂ ಶಾಸ್ತ್ರಿ
ಗಳೂ ಅವನನ್ನು ಹ್ಯಾಗೆ ಮೋಸದಿಂದ ಹಿಡಿದು, ಕೊಂದು ಹಾ
೨ ಕುವ, ಎಂದು ಹುಡುಕಿದರು; ಆದರೆ, ಜನರಲ್ಲಿ ಗುಲ್ಲು ಆಗದ ಹಾಗೆ
ಹಬ್ಬದಲ್ಲಿ ಬೇಡ, ಅಂದರು.
3 ಮತ್ತು ಅವನು ಬೆತಾನ್ಯದಲ್ಲಿ ಕುಷ್ಠ ಕೋಗಿಯಾದ ಸೀಮೋ
ನನ ಮನೆಯಲ್ಲಿ ಇದ್ದು, ಊಟಕ್ಕೆ ಕೂತಿರುವಾಗ, ಬೆಲೆಯು
ಳ್ಳ ಶುದ್ಧ ಜಟಮಾಂಸಿ ತೈಲದ ಚಂದ್ರಕಾಂತ ಭರಣಿಯನ್ನು
ಹಿಡಿದು ಕೊಂಡ ಒಬ್ಬ ಸ್ತ್ರೀಯು ಬಂದು, ಆ ಚಂದ್ರಕಾಂತವನ್ನು
೪ ಒಡೆದು, ಅವನ ತಲೆಯ ಮೇಲೆ ಹೊಯಿದಳು. ಆದರೆ ಕೆಲವರು
೫ ತಮ್ಮಲ್ಲಿ ಗುಣಗುಟ್ಟಿ, ಈ ತೈಲದ ನಷ್ಟವು ಯಾಕೆ! ಅದನ್ನು
ಮುನ್ನೂರು ಹಣಕ್ಕಿಂತ ಹೆಚ್ಚು ಕ್ರಯಕ್ಕೆ ಮಾರಿ ಬಿಟ್ಟು, ಬಡ
ವರಿಗೆ ಕೊಡ ಬಹುದಾಗಿತ್ತಲ್ಲ! ಎಂದು ಹೇಳಿ, ಅವಳನ್ನು ಗದರಿ
ಸಿದರು.
೬ ಅದಕ್ಕೆ ಯೇಸು ಹೇಳಿದ್ದು, ಅವಳನ್ನು ಬಿಡಿರಿ; ಅವಳನ್ನು
ಯಾಕೆ ತೊಂದರೆ ಪಡಿಸುತ್ತೀರಿ! ಅವಳು ನನ್ನ ಮೇಲೆ ಒಳ್ಳೇ
೭ ಕ್ರಿಯೆ ಮಾಡಿದ್ದಾಳೆ; ಯಾಕಂದರೆ ಬಡವರು ನಿಮ್ಮ ಸಂಗಡ
ಯಾವಾಗಲೂ ಇದ್ದಾರೆ; ಮತ್ತು ನಿಮಗೆ ಮನಸ್ಸಿದ್ದಾಗ ಅವರಿಗೆ
ಉಪಕಾರ ಮಾಡ ಬಹುದು; ಆದರೆ ನಾನು ನಿಮ್ಮ ಸಂಗಡ ಯಾ
೮ ವಾಗ್ಯೂ ಇರುವದಿಲ್ಲ, ತನ್ನಿಂದಾಗುವದನ್ನು ಮಾಡಿದ್ದಾಳೆ. ಹೂ
ಣುವದಕ್ಕೆ ನನ್ನ ಶರೀರವನ್ನು ಅಭಿಷೇಕಿಸ ಮುಂಗೊಂಡಿದ್ದಾಳೆ.
೯ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಈ ಸುವಾರ್ತೆಯು ಸಮಸ್ತ
ಲೋಕದಲ್ಲಿ ಎಲ್ಲಿ ಪ್ರಸಂಗಿಸಲ್ಪಡುವದೋ, ಅಲ್ಲಿ ಇವಳು ಮಾ
ಡಿದ್ದು ಸಹ ಇವಳನ್ನು ನೆನಸುವದಕ್ಕೆ ಹೇಳಲ್ಪಡುವದು.
೧೦ ಮತ್ತು ಹನ್ನೆರಡು ಮಂದಿಯಲ್ಲಿ ಒಬ್ಬನಾದ ಇಸ್ಕರಿಯೋ
ತೆಂಬ ಯೂದನು, ಅವನನ್ನು ಅವರಿಗೆ ಒಪ್ಪಿಸುವದಕ್ಕಾಗಿ, ಪ್ರ
೧೧ ಧಾನಯಾಜಕರ ಬಳಿಗೆ ಹೋದನು. ಅವರು ಕೇಳಿ, ಸಂತೋಷ
ಪಟ್ಟು, ಹಣ ಕೊಡುತ್ತೇವೆಂದು, ಅವನಿಗೆ ಮಾತು ಕೊಟ್ಟರು.
ಮತ್ತು ಅವನು ಅವನನ್ನು ಬಳ್ಳೆ ಸಮಯದಲ್ಲಿ ಒಪ್ಪಿಸಿ ಕೊಡು
ವದು ಹ್ಯಾಗೆಂದು, ಹುಡುಕಿದನು.
೧೨ ಇದ್ದಲ್ಲದೆ ಅವರು ಪಸ್ಕವನ್ನು ಅರ್ಪಿಸುವ ದಿನವಾದ ಹುಳಿ
ಯಿಲ್ಲದ ಕೊಟ್ಟಿಗಳ ಮೊದಲನೇ ದಿವಸದಲ್ಲಿ, ಅವನ ಶಿಷ್ಯರು
ಅವನಿಗೆ, ನೀನು ಪಸ್ಕವನ್ನು ಉಣ್ಣುವ ಹಾಗೆ ನಾವು ಎಲ್ಲಿಗೆ ಹೋ
೧೩ ಗಿ ಸಿದ್ಧ ಮಾಡ ಬೇಕೆಂದು ಹೇಳಿದಾಗ, ಅವನು ತನ್ನ ಶಿಷ್ಯರಲ್ಲಿ
ಇಬ್ಬರನ್ನು ಕಳಹಿಸಿ, ಅವರಿಗೆ ಹೇಳಿದ್ದೇನಂದರೆ, ಪಟ್ಟಣಕ್ಕೆ
ಹೋಗಿರಿ; ಅಲ್ಲಿ ನೀರಿನ ಗಡಿಗೆಯನ್ನು ಹೊರುವ ಮನುಷ್ಯನು
೧೪ ನಿಮಗೆದುರಾಗಿ ಬರುವನು; ಅವನನ್ನು ಹಿಂಬಾಲಿಸಿರಿ; ಮತ್ತು
ಅವನು ಪ್ರವೇಶಿಸುವ ಮನೆಯ ಯಜಮಾನನಿಗೆ, ಬೋಧಕನು,
ನಾನು ನನ್ನ ಶಿಷ್ಯರ ಸಂಗಡ ಪಸ್ಕವನ್ನು ಉಣ್ಣಾ ತಕ್ಕ ಸಾಲೆ
೧೫ ಎಲ್ಲಿ! ಎಂದು ಹೇಳುತ್ತಾನೆಂಬದಾಗಿ ಹೇಳಿರಿ. ಅವನು ನಿಮಗೆ
ಸಾಮಗ್ರಿ ಇರುವ ಸಿದ್ಧವಾದ ಸೊತ್ತ ಮೇಲ್ಮಾಳಿಗೆಯನ್ನು ತೋ
೧೬ ರಿಸುವನು; ಅಲ್ಲಿ ನಮಗೆ ಸಿದ್ಧ ಮಾಡಿರಿ. ಆಗಲವನ ಶಿಷ್ಯರು
ಹೊರಟು, ಪಟ್ಟಣಕ್ಕೆ ಹೋಗಿ, ಅವನು ತಮಗೆ ಹೇಳಿದ ಹಾಗೆ
ಕಂಡು, ಪಸ್ಕವನ್ನು ಸಿದ್ಧ ಮಾಡಿದರು.
೧೭ ಮತ್ತು ಸಾಯಂಕಾಲವಾದಾಗ, ಅವನು ಹನ್ನೆರಡು ಮಂದಿಯ
೧೮ ಸಂಗಡ ಬಂದನು. ಅವರು ಕೂತುಕೊಂಡು ಉಣ್ಣುವಾಗ, ಯೇ
ಸು ಹೇಳಿದ್ದೇನಂದರೆ, ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನಿ
ಮ್ಮಲ್ಲಿ ಒಬ್ಬನು, ನನ್ನ ಸಂಗಡ ಉಣ್ಣುವವನು, ನನ್ನನ್ನು ಒಪ್ಪಿ
೧೯ ಸಿ ಕೊಡುವನು. ಅವರು ದುಃಖ ಪಟ್ಟು, ಒಬ್ಬನು, ನಾನೋ!
ಬೇಕೊಬ್ಬನು, ನಾನೋ! ಎಂದು ಒಬ್ಬೊಬ್ಬನಾಗಿ ಅವನಿಗೆ
ಹೇಳಲಾರಂಭಿಸಿದರು. ಅವನು ಉತ್ತರ ಕೊಟ್ಟು ಅವರಿಗೆ ಹೇಳಿ
೨೦ ದ್ದೇನಂದರೆ, ಹನ್ನೆರಡು ಮಂದಿಯೊಳಗೆ ನನ್ನ ಸಂಗಡ ಪಾತ್ರೆ
ಯಲ್ಲಿ ಅದ್ದುವ ಒಬ್ಬನೇ. ಮನುಷ್ಯನ ಮಗನು, ಅವನನ್ನು
೨೧ ಕುರಿತು ಬರೆದಿರುವ ಪ್ರಕಾರ, ಹೋಗಿ ಬಿಡುತ್ತಾನೆ; ಆದರೆ ಯಾ
ವನ ಮೂಲವಾಗಿ ಮನುಷ್ಯನ ಮಗನು ಒಪ್ಪಿಸಲ್ಪಡುತ್ತಾನೋ,
ಆ ಮನುಷ್ಯನಿಗೆ ಅಯ್ಯೋ! ಆ ಮನುಷ್ಯನು ಹುಟ್ಟದೆ
ಇದ್ದರೆ, ಅವನಿಗೆ ವಾಸಿ.
೨೨ ಅವರು ಉಣ್ಣುವಾಗ, ಯೇಸು ಕೊಟ್ಟಿಯನ್ನು ತೆಗೆದು ಕೊಂ
ಡು, ಸ್ತೋತ್ರ ಮಾಡಿ, ಮುರಿದು, ಅವರಿಗೆ ಕೊಟ್ಟು, ತಕ್ಕೊಳ್ಳಿರಿ,
೨೩ ತಿನ್ನಿರಿ, ಇದು ನನ್ನ ಶರೀರವಾಗಿದೆ, ಅಂದನು. ಆ ಮೇಲೆ ಪಾತ್ರೆ
ಯನ್ನು ತೆಗೆದು ಕೊಂಡು, ಸ್ತೋತ್ರ ಮಾಡಿ, ಅವರಿಗೆ ಕೊಟ್ಟನು.
೨೪ ಅವಕೆಲ್ಲರು ಅದರಲ್ಲಿ ಕುಡಿದರು. ಮತ್ತು ಅವರಿಗೆ ಹೇಳಿದ್ದು,
ಇದು ಅನೇಕರಿಗೋಸ್ಕರ ಚೆಲ್ಲಲ್ಪಟ್ಟ, ಹೊಸ ಒಡಂಬಡಿಕೆಯ
೨೫ ನನ್ನ ರಕ್ತವಾಗಿದೆ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನಾನು
ದೇವರ ರಾಜ್ಯದಲ್ಲಿ ಅದನ್ನು ಹೊಸದಾಗಿ ಕುಡಿಯುವ ಆ ದಿನ
ದ ವರಿಗೂ ದ್ರಾಕ್ಷೇ ರಸವನ್ನು ಇನ್ನು ಕುಡಿಯೆನು.
೨೬ ತರುವಾಯ ಅವರು ಕೀರ್ತನೆ ಹಾಡಿ, ಇಟ್ಟೇ ಗುಡ್ಡಕ್ಕೆ
೨೭ ಹೊರಟರು. ಮತ್ತು ಯೇಸು ಅವರಿಗೆ ಹೇಳಿದ್ದು, ನೀವೆಲ್ಲರು
ಈ ರಾತ್ರಿ ನನ್ನಲ್ಲಿ ಆಟಂಕ ಪಡುವಿರಿ; ಯಾಕಂದರೆ, ಕುರುಬ
ನನ್ನು ಹೊಡೆಯುವೆನು, ಕುರಿಗಳು ಚದರಿ ಹೋಗುವವೆಂದು,
೨೮ ಬರೆದದೆ. ಆದರೆ ನಾನು ಎದ್ದ ಮೇಲೆ, ನಿಮ್ಮ ಮುಂದಾಗಿ ಗಲಿ
೨೯ ಲಾಯಕ್ಕೆ ಹೋಗುವೆನು. ಆದರೆ ಪೇತ್ರನು ಅವನಿಗೆ, ಎಲ್ಲರು
ಆಟಂಕ ಪಟ್ಟರೂ, ನಾನಿಲ್ಲ, ಅಂದಾಗ; ಯೇಸು ಅವನಿಗೆ, ನಿಶ್ಚ
೩೦ ಯವಾಗಿ ನಿನಗೆ ಹೇಳುತ್ತೇನೆ, ಈ ಹೊತ್ತು, ಈ ರಾತ್ರಿಯಲ್ಲಿ
ಕೋಳಿ ಎರಡು ಸಾರಿ ಕೂಗುವದಕ್ಕಿಂತ ಮುಂಚೆ, ಮೂರು ಸಾರಿ
ನನ್ನನ್ನು ಕುರಿತು ಬೊಂಕುವಿ, ಅಂದನು. ಆದರೆ ಅವನು ಬಹು
೩೧ ಹೆಚ್ಚಾಗಿ, ನಾನು ನಿನ್ನ ಸಂಗಡ ಸಾಯ ಬೇಕಾದರೂ, ಹ್ಯಾಗೂ
ನಿನ್ನನ್ನು ಕುರಿತು ಬೊಂಕೆನು, ಅಂದನು. ಅದೇ ಪ್ರಕಾರ ಎಲ್ಲ
ರು ಹೇಳಿದರು.
೩೨ ತರುವಾಯ ಅವರು ಗೆತ್ಸೇಮನೆ ಎಂಬ ಸ್ಥಳಕ್ಕೆ ಬಂದಾಗ,
ಅವನು ತನ್ನ ಶಿಷ್ಯರಿಗೆ ನಾನು ಪ್ರಾರ್ಥನೆ ಮಾಡುವ ತನಕ
೩೩ ಇಲ್ಲಿ ಕೂತುಕೊಳ್ಳಿರಿ, ಎಂದು ಹೇಳಿ, ಪೇತ್ರನನ್ನೂ ಯಾಕೋ
ಬನನ್ನೂ ಯೋಹಾನನನ್ನೂ ಕರಕೊಂಡು, ಭಯಭ್ರಾಂತನಾಗ
೩೪ ಲೂ ವ್ಯಸನ ಪಡಲೂ ಆರಂಭಿಸಿ, ನನ್ನ ಪ್ರಾಣವು ಮರಣದ



ವರಿಗೂ ದುಃಖ ಕ್ರಾಂತವಾಗಿದೆ; ಇಲ್ಲಿ ಇದ್ದು, ಎಚ್ಚರಿಕೆಯಾಗಿರ್ರಿ,
೩೫ ಅಂದನು. ಆಗ ಸ್ವಲ್ಪ ದೂರ ಹೋಗಿ, ನೆಲದಲ್ಲಿ ಬಿದ್ದು, ಸಾ
ಧ್ಯವಾಗಿದ್ದರೆ, ಆ ಘಳಿಗೆಯು ತನ್ನನ್ನು ಬಿಟ್ಟು ಹೋಗ ಬೇ
೩೬ ಕೆಂದು ಪ್ರಾರ್ಥಿಸಿ, ಅಪ್ಪಾ, ತಂದೆಯೇ, ನಿನಗೆ ಎಲ್ಲಾ ಸಾಧ್ಯ
ವಾಗಿದೆ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಆದಾಗ್ಯೂ
೩೭ ನನ್ನ ಚಿತ್ತವಲ್ಲ, ನಿನ್ನದೇ ಆಗಲಿ, ಅಂದನು. ತರುವಾಯ ಬಂ
ದು, ಅವರು ನಿದ್ದೆ ಮಾಡುವದನ್ನು ಕಂಡು, ಪೇತ್ರನಿಗೆ ಸೀಮೋ
ನನೇ, ನಿದ್ದೆ ಮಾಡುತ್ತೀಯೋ! ಒಂದು ತಾಸಾದರೂ ಎಚ್ಚರಿಕೆ
೩೮ ಯಾಗಿರಲಾರಿಯಾ! ನೀವು ಶೋಧನೆಯಲ್ಲಿ ಪ್ರವೇಶಿಸದ ಹಾಗೆ
ಎಚ್ಚರಿಕೆಯಾಗಿದ್ದು, ಪ್ರಾರ್ಥನೆ ಮಾಡಿರಿ; ಆತ್ಮವು ಸಿದ್ಧವಾಗಿ
ದೆ, ಆದರೆ ಮಾಂಸವು ಬಲಹೀನವಾಗಿದೆ, ಅಂದನು.
೩೯ ಮತ್ತು ತಿರಿಗಿ ಹೋಗಿ, ಅದೇ ಮಾತನ್ನು ಹೇಳುತ್ತಾ, ಪ್ರಾ
೪೦ ರ್ಥಿಸಿದನು. ಮತ್ತು ತಿರಿಗಿ ಕೊಂಡು, ಅವರು ತಿರಿಗಿ ನಿದ್ದೆ ಮಾ
ಡುವದನ್ನು ಕಂಡನು; ಯಾಕಂದರೆ ಅವರ ಕಣ್ಣುಗಳು ಭಾರ
ವಾಗಿದ್ದವು; ಮತ್ತು ಅವನಿಗೆ ಏನು ಉತ್ತರ ಕೊಡ ಬೇಕೆಂದು,
ತಿಳಿಯದೆ ಇದ್ದರು.
೪೧ ಮತ್ತು ಮೂರನೇ ಸಾರಿ ಬಂದು, ಅವರಿಗೆ ಹೇಳಿದ್ದೇನಂದರೆ,
ಇನ್ನು ನಿದ್ದೇ ಮಾಡಿ, ವಿಶ್ರಮಿಸಿ ಕೊಳ್ಳಿರಿ; ಸಾಕಾಯಿತು; ಘಳಿ
ಗೆ ಬಂತು; ಇಗೋ, ಮನುಷ್ಯನ ಮಗನು ಪಾಪಿಷ್ಠರ ಕೈಗಳಿ
೪೨ ಗೆ ಒಪ್ಪಿಸಲ್ಪಡುತ್ತಾನೆ. ಏಳಿರಿ, ಹೋಗುವ; ಇಗೋ, ನನ್ನನ್ನು
ಒಪ್ಪಿಸುವವನು ಸಮೀಪಕ್ಕೆ ಬಂದಿದ್ದಾನೆ.
೪೩ ಅವನು ಇನ್ನು ಮಾತಾಡುತ್ತಿರುವಾಗ, ಸಂಗಡಲೇ ಹನ್ನೆರಡು
ಮಂದಿಯಲ್ಲಿ ಒಬ್ಬನಾದ ಯೂದನೂ, ಅವನ ಸಂಗಡ ಕತ್ತಿಗ
ಳನ್ನೂ ದೊಣ್ಣೆಗಳನ್ನೂ ಹಿಡಿದ ದೊಡ್ಡ ಸಮೂಹವೂ, ಪ್ರಧಾ
ನ ಯಾಜಕರ ಶಾಸ್ತ್ರಿಗಳ ಹಿರಿಯರ ಕಡೆಯಿಂದ ಬಂದರು.
೪೪ ಆದರೆ ಅವನನ್ನು ಒಪ್ಪಿಸುವವನು, ನಾನು ಯಾವನಿಗೆ ಮುದ್ದಿಕು
ತ್ತೇನೋ, ಅವನೇ; ಅವನನ್ನು ಹಿಡುಕೊಂಡು, ಭದ್ರ ಮಾಡಿ,
ತಕ್ಕೊಂಡು ಹೋಗಿರಿ, ಎಂದು ಅವರಿಗೆ ಗುರುತು ಹೇಳಿ ಕೊಟ್ಟಿ
೪೫ ದ್ದನು. ಮತ್ತು ಅವನು ಬಂದ ಕೂಡ್ಲೆ, ಅವನ ಹತ್ತರ ಹೋಗಿ,
ರಬ್ಬಿಯೇ, ರಬ್ಬಿಯೇ, ಎಂದು ಹೇಳಿ, ಅವನಿಗೆ ಮುದ್ದಿ
೪೬ ಟ್ಟನು. ಆಗಲವರು ಅವನ ಮೇಲೆ ಕೈ ಹಾಕಿ, ಅವನನ್ನು ಹಿಡಿ
ದರು.
೪೭ ಇದ್ದಲ್ಲದೆ ಹತ್ತರ ನಿಂತವರಲ್ಲಿ ಒಬ್ಬನು, ತನ್ನ ಕತ್ತಿಯನ್ನು
ಹಿಡಿದು, ಪ್ರಧಾನ ಯಾಜಕನ ದಾಸನನ್ನು ಹೊಡೆದು, ಅವನ ಕಿವಿ
೪೮ ಹರಿಯ ಕಡಿದನು. ಆಗ ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇ
ಳಿದ್ದು, ಕಳ್ಳನ ಹಾಗೆ ನನ್ನನ್ನು ಕತ್ತಿಗಳಿಂದಲೂ ದೊಣ್ಣೆಗಳಿಂ
೪೯ ದಲೂ ಹಿಡಿಯ ಹೊರಟೆಕೋ! ದಿನಾಲು ನಿಮ್ಮ ಬಳಿಯ ದೇವಾ
ಲಯದಲ್ಲಿ ಬೋಧಿಸುತ್ತಾ ಇದ್ದೆನು; ನೀವು ನನ್ನನ್ನು ಹಿಡಿಯಲಿ
೫೦ ಲ್ಲಿ; ಆದರೆ ಬರಹಗಳು ಈಡೇರುವ ಹಾಗೆಯೇ ಆಗುತ್ತದೆ. ಆಗ
ಎಲ್ಲರೂ ಅವನನ್ನು ಬಿಟ್ಟು, ಓಡಿ ಹೋದರು. ಮತ್ತು ಒಬ್ಬ
ಯೌವನಸ್ಥನು ಬರೇ ಮೈಗೆ ನಾರುಮಡಿ ಸುತ್ತಿಕೊಂಡವನಾಗಿ
ಅವನನ್ನು ಹಿಂಬಾಲಿಸುವಾಗ, ಆ ಯೌವನಸ್ಥರು ಅವನನ್ನು ಹಿಡಿ
೫೧ ದರು. ಆದರೆ ಅವನು ನಾರುಮಡಿಯನ್ನು ಬಿಟ್ಟು ಬಿಟ್ಟು, ಬೆತ್ತ
ಲೆಯಾಗಿ ಅವರ ಕೈಯೊಳಗಿಂದ ತಪ್ಪಿಸಿ ಕೊಂಡು, ಓಡಿ
ಹೋದನು.
೫೨ ಆಗಲವರು ಯೇಸುವನ್ನು ಪ್ರಧಾನ ಯಾಜಕನ ಬಳಿಗೆ ತ
ಕ್ಕೊಂಡು ಹೋದರು. ಇವನ ಸಂಗಡ ಪ್ರಧಾನ ಯಾಜಕರೂ,
೫೩ ಹಿರಿಯರೂ, ಶಾಸ್ತ್ರಿಗಳೂ, ಎಲ್ಲರು ಕೂಡಿ ಕೊಂಡರು. ಇದ
ಲ್ಲದೆ ಪೇತ್ರನು ದೂರದಿಂದ ಅವನನ್ನು ಪ್ರಧಾನ ಯಾಜಕನ
ಮನೆದೊಳಗೆ ಹಿಂಬಾಲಿಸಿ, ಉಳ್ಳಿಗದವರ ಸಂಗಡ ಕೂತು ಕೊಂ
೫೪ ಡು, ಬೆಂಕಿಯ ಹತ್ತರ ಛಳಿ ಕಾಸಿ ಕೊಳ್ಳುತ್ತಿದ್ದನು. ಪ್ರಧಾ
ನ ಯಾಜಕರೂ, ಮಂತ್ರಿ ಸಭೆಯೆಲ್ಲವೂ, ಯೇಸುವನ್ನು ಕೊ
ಲ್ಲುವದಕ್ಕೆ ಅವನಿಗೆ ವಿರೋಧವಾಗಿ ಸಾಕ್ಷಿಯನ್ನು ಹುಡುಕಿ, ಕಂ
ಡು ಕೊಳ್ಳದೆ ಹೋದರು.
೫೫ ಯಾಕಂದರೆ ಅನೇಕರು ಅವನಿಗೆ ವಿರೋಧವಾಗಿ ಅಪಸಾಕ್ಷಿ
೫೬ ಹೇಳಿದರು; ಆದರೆ ಅವರ ಸಾಕ್ಷಿಗಳು ಒಪ್ಪಿಗೆ ಆಗಲಿಲ್ಲ. ಮತ್ತು
೫೭ ಕೆಲವರು ಎದ್ದು, ಅವನಿಗೆ ವಿರೋಧವಾಗಿ ಅಪಸಾಕ್ಷಿ ಹೇಳಿ, ನಾ
ನು ಕೈ ಕೆಲಸವಾದ ಈ ದೇವಾಲಯವನ್ನು ಕೆಡವಿ, ಮೂರು ದಿನ
ದೊಳಗೆ ಕೈ ಕೆಲಸವಲ್ಲದ ಬೇರೊಂದು ಕಟ್ಟುವೆನೆಂದು, ಅವನು
೫೮ ಹೇಳಿದ್ದನ್ನು ಕೇಳಿದ್ದೇವೆ, ಅಂದರು. ಹಾಗೂ ಅವರ ಸಾಕ್ಷಿಯು
೫೯ ಒಪ್ಪಿಗೆ ಆಗಲಿಲ್ಲ. ಆಗ ಪ್ರಧಾನ ಯಾಜಕನೂ ಎದ್ದು, ಮಧ್ಯ
ದಲ್ಲಿ ನಿಂತು, ಯೇಸುವಿಗೆ, ನೀನು ಏನೂ ಉತ್ತರ ಕೊಡುವದಿ
ಲ್ಲವೋ! ಇವರು ನಿನ್ನ ಮೇಲೆ ಸಾಕ್ಷಿ ಕೊಡುವದೇನು! ಎಂದು
ಕೇಳಿದಾಗ; ಅವನು ಏನೂ ಉತ್ತರ ಕೊಡದೆ ಸುಮ್ಮನೆ ಇ
ದ್ದನು.
೬೦ ತಿರಿಗಿ ಪ್ರಧಾನ ಯಾಜಕನು, ನೀನು ಸ್ತುತಿಸ ತಕ್ಕವನ ಮಗ
ನಾಗಿರುವ ಕ್ರಿಸ್ತನಾಗಿದ್ದೀಯೋ! ಎಂದು ಅವನನ್ನು ಕೇಳಿದಾಗ;
೬೧ ಯೇಸು, ಇದ್ದೇನೆ; ಇದಲ್ಲದೆ ಮನುಷ್ಯನ ಮಗನು ಬಲದ ಬಲ
ಪಾರ್ಶ್ವದಲ್ಲಿ ಕೂತು ಕೊಂಡು, ಆಕಾಶದ ಮೇಘಗಳ ಸಂಗಡ
೬೨ ಬರುವದನ್ನು ನೋಡುವಿರಿ, ಅಂದನು. ಆಗ ಪ್ರಧಾನ ಯಾಜಕನು
ತನ್ನ ವಸ್ತ್ರಗಳನ್ನು ಹರಕೊಂಡು ಇನ್ಯಾಕೆ ನಮಗೆ ಸಾಕ್ಷಿ ಬೇ
೬೩ ಕು! ದೂಷಣೆ ಕೇಳಿದಿರಲ್ಲ! ನಿಮಗೆ ಹ್ಯಾಗೆ ತೋಚುತ್ತದೆ! ಅಂ
ದಾಗ, ಅವಲ್ಲೆರು, ಅವನು ಮರಣಕ್ಕೆ ಪಾತ್ರನೆಂದು, ನಿರ್ಣ
ಯಿಸಿದರು.
೬೪ ಆಗ ಕೆಲವರು ಅವನ ಮೇಲೆ ಉಗುಳುವದಕ್ಕೂ, ಅವನ
ಮುಖಕ್ಕೆ ಮುಸುಕು ಹಾಕಿ, ಅವನನ್ನು ಬಡಿದು, ಪ್ರವಾದನೆ ಹೇ
ಳು, ಅನ್ನುವದಕ್ಕೂ, ಆರಂಭ ಮಾಡಿದರು. ಮತ್ತು ಉಳ್ಳಿಗದ
ವರು ಅಂಗೈಯಿಂದ ಅವನನ್ನು ಬಡಿದರು.
೬೫ ಇದ್ದಲ್ಲದೆ ಪೇತ್ರನು ಕೆಳಗಿನ ಅಂಗಳದಲ್ಲಿ ಇರುವಾಗ, ಪ್ರಧಾನ
ಯಾಜಕನ ಚಾಕರಿಯವರಲ್ಲಿ ಒಬ್ಬಳು ಬಂದು, ಪೇತ್ರನು ಛಳಿ
೬೬ ಕಾಸಿ ಕೊಳ್ಳುವದನ್ನು ನೋಡಿ, ಅವನ ಮೇಲೆ ಕಣ್ಣಿಟ್ಟು, ನೀನು
ಸಹ ನಜರೇತಿನವನಾದ ಯೇಸುವಿನ ಸಂಗಡ ಇದ್ದಿ, ಅಂದಳು.
೬೭ ಆದರೆ ಅವನು ಬೊಂಕಿ, ನಾನರಿಯೆ, ನೀನು ಏನು ಹೇಳುತ್ತೀ
ಯೋ, ನನಗೆ ತಿಳಿಯುವದಿಲ್ಲ, ಎಂದು ಹೇಳಿ, ಪಟಾರಕ್ಕೆ
೬೮ ಹೊರಟಾಗ, ಕೋಳಿ ಕೂಗಿತು. ಮತ್ತು ಚಾಕರಿಯವಳು ತಿರಿಗಿ
ಅವನನ್ನು ನೋಡಿ, ಹತ್ತರ ನಿಂತವರಿಗೆ, ಇವನು ಅವರಲ್ಲಿ ಒಬ್ಬ
೭೦ ನು, ಅನ್ನಲಾಗಿ, ಅವನು ತಿರಿಗಿ ಬೊಂಕಿದನು. ಮತ್ತು ಸ್ವಲ್ಪ
ಹೊತ್ತಿನ ಮೇಲೆ ಹತ್ತರ ನಿಂತವರು, ನಿಜವಾಗಿ ಅವರಲ್ಲಿ ಒಬ್ಬನಾ
ಗಿದ್ದೀ, ನೀನು ಗಲಿಲಾಯದವನೇ, ನಿನ್ನ ಭಾಷೆ ಹಾಗಾವೆ, ಎಂದು
೭೧ ಪೇತ್ರನಿಗೆ ಹೇಳಿದಾಗ; ಅವನು, ನೀವು ಹೇಳುವ ಆ ಮನುಷ್ಯನ

ನ್ನು ನಾನರಿಯೆನೆಂದು, ಶಪಿಸಿ ಕೊಳ್ಳಲೂ, ಆಣೆ ಇಟ್ಟು ಕೊಳ್ಳ
೭೦ ಲೂ, ಆರಂಭಿಸಿದನು. ಆಗ ಕೋಳಿ ಎರಡನೇ ಸಾರಿ ಕೂಗಿತು;
ಮತ್ತು ಪೇತ್ರನು, ಕೋಳಿ ಎರಡು ಸಾರಿ ಕೂಗುವದಕ್ಕಿಂತ ಮುಂ
ಚೆ ಮೂರು ಸಾರಿ ನನ್ನನ್ನು ಕುರಿತು ಬೊಂಕುವಿ ಎಂದು, ಕರ್ತ
ನು ತನಗೆ ಹೇಳಿದ ಮಾತನ್ನು ಜ್ಞಾಪಕ ಮಾಡಿ ಕೊಂಡು, ಬಹಳ
ವಾಗಿ ಅತ್ತನು.

## ೧೫. ಸಂಧಿ.

೧ ಬೆಳಿಗ್ಯೆ ಪ್ರಧಾನ ಯಾಜಕರು, ಹಿರಿಯರೂ ಶಾಸ್ತ್ರಿಗಳೂ
ಸಮಸ್ತ ಮಂತ್ರಿ ಸಭೆಯು ಸಹಿತವಾಗಿ, ಆಲೋಚನೆ ಮಾಡಿ
ಕೊಂಡು, ಯೇಸುವನ್ನು ಕಟ್ಟಿ, ತಕ್ಕೊಂಡು ಹೋಗಿ, ಪಿಲಾತನಿಗೆ
೨ ಒಪ್ಪಿಸಿದರು. ಪಿಲಾತನು, ನೀನು ಯೆಹೂದ್ಯರ ಅರಸನಾಗಿ
ದ್ದೀಯೋ! ಎಂದು ಅವನನ್ನು ಕೇಳಿದಾಗ; ಅವನು ಉತ್ತರ
3 ಕೊಟ್ಟು, ನೀನು ಹೇಳುವದು ಸರಿ, ಅಂದನು. ಇದಲ್ಲದೆ ಪ್ರಧಾನ
ಯಾಜಕರು ಅವನ ಮೇಲೆ ಬಹಳ ದೂರುಗಳನ್ನು ಹೇಳಿದರು.
೪ ಆಗ ಪಿಲಾತನು, ಯೇನೂ ಉತ್ತರ ಹೇಳುವದಿಲ್ಲವೋ! ಇಗೋ,
ನಿನ್ನ ಮೇಲೆ ಎಷ್ಟು ಸಾಕ್ಷಿ ಹೇಳುತ್ತಾಕೆಂದು, ತಿರಿಗಿ ಅವನನ್ನು
೫ ಕೇಳಿದ್ದಕ್ಕೆ ಯೇನು ಇನ್ನೇನೂ ಉತ್ತರ ಕೊಡಲಿಲ್ಲ. ಆದದರಿಂ
ದ ಪಿಲಾತನು ಆಶ್ಚರ್ಯ ಪಟ್ಟನು.
೬ ಆದರೆ ಹಬ್ಬದಲ್ಲಿ ಅವನು, ಅವರು ಬೇಡಿ ಕೊಳ್ಳುವಂಥ ಒಬ್ಬ
೭ ಕೆಕೆಯವನನ್ನು ಅವರಿಗೆ ಬಿಡಿಸುವನು. ಹೀಗಿರಲಾಗಿ, ಬರಬ್ಬನೆಂ
ಬವನು, ತನ್ನ ಸಂಗಡ ಕಲಹ ಎಬ್ಬಿಸಿ, ಕಲಹದಲ್ಲಿ ನರಹತ್ಯ ಮಾ
೮ ಡಿದವರ ಸಂಗಡ ಕಟ್ಟಲ್ಪಟ್ಟಿದ್ದನು. ಆಗ ಸಮೂಹವು ಗದ್ದಲ
ಮಾಡಿ, ಅವನು ಯಾವಾಗಲೂ ತಮಗೆ ಮಾಡಿದ ಪ್ರಕಾರ ಮಾಡ
೯ ಬೇಕೆಂದು, ಬೇಡಿಕೊಳ್ಳಲಾರಂಭಿಸಿದರು. ಆದರೆ ಪಿಲಾತನು ಅವ
ರಿಗೆ ಪ್ರತ್ಯುತ್ತರವಾಗಿ, ನಾನು ಯೆಹೂದ್ಯರ ಅರಸನನ್ನು ನಿಮ
೧೦ ಗೆ ಬಿಡಿಸ ಬೇಕೋ? ಅಂದನು. ಯಾಕಂದರೆ ಪ್ರಧಾನ ಯಾಜ
ಕರು ಹೊಟ್ಟೆಕಿಚ್ಚಿನಿಂದ ಅವನನ್ನು ಒಪ್ಪಿಸಿದರೆಂದು ತಿಳುಕೊಂಡಿ
೧೧ ದ್ದನು. ಆದರೆ ಪ್ರಧಾನ ಯಾಜಕರು, ಅವನನ್ನಲ್ಲ, ಬರಬ್ಬ
ನನ್ನೇ ತಮಗೆ ಬಿಡಿಸುವ ಹಾಗೆ, ಸಮೂಹವನ್ನು ಎಬ್ಬಿಸಿದರು.
೧೨ ಆಗ ಪಿಲಾತನು ಉತ್ತರ ಕೊಟ್ಟು, ಹಾಗಾದರೆ ಯೆಹೂದ್ಯರ
ಅರಸನೆಂದು ನೀವು ಹೇಳುವವನಿಗೆ ನಾನೇನು ಮಾಡ ಬೇಕೆಂದು,
೧೩ ಅವರಿಗೆ ತಿರಿಗಿ ಹೇಳಿದಾಗ, ಅವರು, ಶಿಲುಬೆಗೆ ಹಾಕು! ಎಂದು ತಿರಿ
೧೪ ಗಿ ಕೂಗಿದರು. ಪಿಲಾತನು ಅವರಿಗೆ, ಅವನು ಕೆಟ್ಟದ್ದೇನು ಮಾಡಿ
ದ್ದಾನೆ! ಅಂದಾಗ, ಅವರು ಬಹು ಹೆಚ್ಚಾಗಿ, ಅವನನ್ನು ಶಿಲುಬೆಗೆ
೧೫ ಹಾಕು! ಎಂದು ಕೂಗಿದರು. ಹೀಗಿರಲಾಗಿ ಪಿಲಾತನು, ಸಮೂ
ಹವನ್ನು ಮೆಚ್ಚಿಸ ಬೇಕೆಂದು, ಬರಬ್ಬನನ್ನು ಅವರಿಗೆ ಬಿಡಿಸಿ,
ಯೇಸುವನ್ನು ಬಾರುಗಳಿಂದ ಹೊಡಿಸಿ, ಶಿಲುಬೆಗೆ ಹಾಕುವದಕ್ಕೆ
ಒಪ್ಪಿಸಿದನು.
೧೬ ರಾಣುವೆಯವರು ಅವನನ್ನು ಕಾವಲಿ ಮನೆಯಾದ ಅಸ್ಥಾ
೧೭ ನದೊಳಗೆ ತಕ್ಕೊಂಡು ಹೋಗಿ, ಕಾವಲಿಯವರನ್ನೆಲ್ಲಾ ಕೂಡ
ಕರೆದು, ಅವನಿಗೆ ಕತ್ತಾಂಬರವನ್ನು ಹೊದ್ದಿಸಿ, ಮುಳ್ಳಿನ ಕಿರೀಟ
೧೮ ವನ್ನು ಹೆಣೆದು, ಅವನ ಮೇಲಿಟ್ಟು, ಯೆಹೂದ್ಯರ ಅರಸನೇ,
೧೯ ಶುಭವಾಗಲಿ ಎಂದು, ಅವನನ್ನು ವಂದಿಸಲಾರಂಭಿಸಿ, ಅವನ ತಲೆ
ಯ ಮೇಲೆ ಬೆತ್ತದಿಂದ ಹೊಡೆದು, ಅವನ ಮೇಲೆ ಉಗುಳಿ,
ಮೊಣಕಾಲೂರಿ, ಅವನಿಗೆ ನಮಸ್ಕರಿಸಿದರು.

೨೦ ಮತ್ತು ಅವನನ್ನು ಹಾಸ್ಯ ಮಾಡಿದ ಮೇಲೆ, ಕತ್ತಾಂಬರವ
ನ್ನು ಅವನಿಂದ ತೆಗೆದು, ಸ್ವಂತ ವಸ್ತ್ರಗಳನ್ನು ಅವನಿಗೆ ಹೊ
೨೧ ದ್ದಿಸಿ, ಅವನನ್ನು ಶಿಲುಬೆಗೆ ಹಾಕುವದಕ್ಕೆ ತಕ್ಕೊಂಡು ಹೋಗು
ವಾಗ, ಹೊಲದಿಂದ ಬಂದಂಥ, ಅತೆಕ್ಸಾಂದ್ರನಿಗೂ ರೂಫನಿಗೂ
ತಂದೆಯಾದಂಥ, ಕುರೇನ್ಯನಾದ ಸೀಮೋನನೆಂಬವನನ್ನು, ಅ
ವನ ಶಿಲುಬೆ ಹೊತ್ತು ಕೊಂಡು ಹೋಗುವ ಹಾಗೆ, ಬಲವಂತ ಮಾ
೨೨ ಡಿದರು. ಅವನನ್ನು ಕಪಾಲ ಸ್ಥಳವೆಂಬ ಗೊಲ್ಗೊಥ ಎಂದು ಕರೆ
ಯಲ್ಪಟ್ಟ ಸ್ಥಳಕ್ಕೆ ತಕ್ಕೊಂಡು ಹೋದ ಮೇಲೆ, ಬೋಳಿ ಕಲಿ
೨೩ ಸಿದ ದ್ರಾಕ್ಷೇರಸವನ್ನು ಅವನಿಗೆ ಕುಡಿಯ ಕೊಟ್ಟರು; ಆದರೆ
ಅವನು ತೆಗೆದು ಕೊಳ್ಳಲಿಲ್ಲ.
೨೪ ಅವನನ್ನು ಶಿಲುಬೆಗೆ ಹಾಕಿದ ಮೇಲೆ ಅವನ ವಸ್ತ್ರಗಳಲ್ಲಿ
ಯಾವದು ಯಾವನಿಗೆ ಶಿಕ್ಕುವದೆಂದು, ಅವುಗಳಿಗೋಸ್ಕರ ಚೀ
ಟು ಹಾಕಿ, ಪಾಲು ಹಂಚಿ ಕೊಂಡರು.
೨೫ ಅವನನ್ನು ಶಿಲುಬೆಗೆ ಹಾಕುವಾಗ, ಮೂರನೇ ತಾಸಾಗಿತ್ತು.
೨೬ ಮತ್ತು, ಯೆಹೂದ್ಯರ ಅರಸನು, ಎಂಬದಾಗಿ ಅವನ ದೂಷಣ
೨೭ ಮೇಲ್ಬರಹವು ಮೇಲೆ ಬರೆಯಲ್ಪಟ್ಟಿತು. ಮತ್ತು ಅವನ ಸಂಗಡ
ಇಬ್ಬರು ಕಳ್ಳರನ್ನು, ಅವನ ಬಲ ಪಾರ್ಶ್ವದಲ್ಲಿ ಒಬ್ಬನನ್ನು,
೨೮ ಎಡ ಪಾರ್ಶ್ವದಲ್ಲಿ ಒಬ್ಬನನ್ನು, ಶಿಲುಬೆಗೆ ಹಾಕಿದರು. ಅವನು
ಅನೀತಿವಂತರ ಸಂಗಡ ಎಣಿಸಲ್ಪಟ್ಟನೆಂಬ ಬರಹವು ಹೀಗೆ ಈಡೇ
೨೯ ರಿತು. ಇದಲ್ಲದೆ ಹಾದು ಹೋಗುವವರು ತಮ್ಮ ತಲೆಗಳನ್ನು
ಅಲ್ಲಾಡಿಸಿ, ಅಯ್ಯೋ! ದೇವಾಲಯವನ್ನು ಕೆಡವಿ, ಮೂರು
೩೦ ದಿವಸಗಳಲ್ಲಿ ಕಟ್ಟುವವನೇ, ನಿನ್ನನ್ನು ನೀನೇ ರಕ್ಷಿಸಿ ಕೊಂಡು,
ಶಿಲುಬೆಯಿಂದ ಇಳಿದು ಬಾ, ಎಂದು ಹೇಳಿ, ಅವನನ್ನು ದೂಷಿ
೩೧ ಸಿದರು. ಅದೇ ಪ್ರಕಾರ ಪ್ರಧಾನ ಯಾಜಕರು ಸಹ ಶಾಸ್ತ್ರಿಗಳ
ಸಂಗಡ ಹಾಸ್ಯ ಮಾಡಿ, ಅವನು ಅನ್ಯರನ್ನು ರಕ್ಷಿಸಿದನು, ತನ್ನ
ನ್ನು ರಕ್ಷಿಸಿ ಕೊಳ್ಳಲಾರನು; ನಾವು ನೋಡಿ, ವಿಶ್ವಾಸಿಸುವ
೩೨ ಹಾಗೆ, ಇಸ್ರಯೇಲನ ಅರಸನಾದ ಕ್ರಿಸ್ತನು ಈಗಲೇ ಶಿಲುಬೆ
ಯಿಂದ ಇಳಿದು ಬರಲಿ, ಎಂದು ತಮ್ಮಲ್ಲಿ ಹೇಳಿ ಕೊಂಡರು.
ಅವನ ಸಂಗಡ ಶಿಲುಬೆಗೆ ಹಾಕಲ್ಪಟ್ಟವರು ಸಹ ಅವನನ್ನು ನಿಂದಿ
ಸಿದರು.
೩೩ ಆದರೆ ಆರನೇ ತಾಸಾದಾಗ ಒಂಭತ್ತನೇ ತಾಸಿನ ವರೆಗೂ
೩೪ ದೇಶವೆಲ್ಲಾದರ ಮೇಲೆ ಕತ್ತಲಾಯಿತು. ಮತ್ತು ಒಂಭತ್ತನೇ ತಾ
ಸಿನಲ್ಲಿ ಯೇಸು ಮಹಾ ಶಬ್ದದಿಂದ, ಎಲೊಹೀ, ಎಲೊಹೀ,
ಲಮ್ಮ ಸಬಖ್ತಾನಿ—ಅದೇನಂದರೆ, ನನ್ನ ದೇವರೇ, ನನ್ನ ದೇವ
ರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?—ಎಂದು ಕೂಗಿದನು.
೩೫ ಹತ್ತರ ನಿಂತವರಲ್ಲಿ ಕೆಲವರು ಅದನ್ನು ಕೇಳಿ, ಇಗೋ, ಎಲೀಯ
೩೬ ನನ್ನು ಕರೆಯುತ್ತಾನೆ, ಅಂದರು. ಆದರೆ ಒಬ್ಬನು ಓಡಿ, ಪಾ
ಚೆಯನ್ನು ಹುಳಿ ರಸದಿಂದ ತುಂಬಿಸಿ, ಬೆತ್ತಕ್ಕೆ ಶಿಕ್ಕಿಸಿ, ಅವನಿಗೆ
ಕುಡಿಯ ಕೊಟ್ಟು, ತಾಳಿರಿ, ಎಲೀಯನು ಅವನನ್ನು ಇಳಿಸುವದ
ಕ್ಕೆ ಬರುವನೇನೋ, ನೋಡುವ, ಅಂದನು.
೩೭ ಮತ್ತು ಯೇಸು ದೊಡ್ಡ ಶಬ್ದದಿಂದ ಕೂಗಿ, ಪ್ರಾಣ ಬಿಟ್ಟನು.
೩೮ ಆಗ ದೇವಾಲಯದ ತೆರೆಯು ಮೇಲಿನಿಂದ ಕೆಳಗಿನ ಪರ್ಯಂತ
ರ ಎರಡಾಗಿ ಹರಿದು ಹೋಯಿತು. ಮತ್ತು ಅವನೆದುರಾಗಿ ಹತ್ತರ
ನಿಂತ ಶತಾಧಿಪತಿ, ಅವನು ಹಾಗೆ ಕೂಗಿ, ಪ್ರಾಣ ಬಿಡುವದನ್ನು



ನೋಡಿ, ನಿಶ್ಚಯವಾಗಿ ಈ ಮನುಷ್ಯನು ದೇವರ ಮಗನಾಗಿದ್ದ
ನು, ಅಂದನು.
೪೦ ಇದಲ್ಲದೆ ದೂರದಿಂದ ನೋಡುವ ಸ್ತ್ರೀಯರು ಇದ್ದರು. ಅವ
ರಲ್ಲಿ, ಅವನು ಗಲಿಲಾಯದಲ್ಲಿ ಇದ್ದಾಗ ಅವನನ್ನು ಹಿಂಬಾಲಿಸಿ,
ಅವನನ್ನು ಸೇವಿಸಿದ ಮಗ್ದಲದವಳಾದ ಮರಿಯಳೂ, ಚಿಕ್ಕ
೪೧ ಯಾಕೋಬ ಯೋಸೆಯರ ತಾಯಿಯಾದ ಮರಿಯಳೂ, ಸ
ಲೋಮೆಯೂ, ಅವನ ಸಂಗಡ ಯೆರೂಸಲೇಮಿಗೆ ಏರಿ ಹೋ
ದ ಬೇರೆ ಅನೇಕ ಹೆಂಗಸರೂ, ಇದ್ದರು.
೪೨ ಮತ್ತು ಸಬ್ಬತಿನ ಮುಂಚಿನ ದಿವಸವಾದ ಸಿದ್ಧ ಮಾಡುವ
ದಿವಸವಾಗಿದ್ದದರಿಂದ, ಆಗಲೇ ಸಾಯಂಕಾಲವಾದ ಕಾರಣ ಘನ
೪೩ ವುಳ್ಳ ಮಂತ್ರಿಯು, ತಾನೂ ದೇವರ ರಾಜ್ಯವನ್ನು ನಿರೀಕ್ಷಿಸಿ
ಕೊಳ್ಳುವವನು, ಆಗಿರುವ ಅರಿಮತಾಯದವನಾದ ಯೋಸೆಫ
ನು ಬಂದು, ಧೈರ್ಯವಾಗಿ ಪಿಲಾತನ ಬಳಿಗೆ ಪ್ರವೇಶಿಸಿ, ಯೇಸು
೪೪ ವಿನ ಶರೀರವನ್ನು ಕೇಳಿ ಕೊಂಡನು. ಆದರೆ ಪಿಲಾತನು, ಅವನು
ಆಗಲೇ ಸತ್ತನೋ? ಎಂದು ಆಶ್ಚರ್ಯ ಪಟ್ಟು, ಶತಾಧಿಪತಿಯ
ನ್ನು ಕರೆದು, ಅವನು ಸತ್ತು ಹೋದನೋ? ಎಂದು ವಿಚಾರಿಸಿದ
೪೫ ನು. ಶತಾಧಿಪತಿಯಿಂದ ಅದನ್ನು ತಿಳಿದು ಕೊಂಡ ಮೇಲೆ, ಶರೀ
೪೬ ರವನ್ನು ಯೋಸೆಫನಿಗೆ ಕೊಟ್ಟು ಬಿಟ್ಟನು. ಇವನು ನಾರುಮಡಿ
ತೆಗೆದು ಕೊಂಡು, ಅವನನ್ನು ಇಳಿಸಿ, ನಾರುಮಡಿಯಲ್ಲಿ ಸುತ್ತಿ,
ಬಂಡೆಯಲ್ಲಿ ಅಗಿದಿರುವ ಸಮಾಧಿಯಲ್ಲಿ ಇಟ್ಟು, ಸಮಾಧಿಯ
೪೭ ಬಾಗಲಿಗೆ ಕಲ್ಲನ್ನು ಹೊರಳಿಸಿದನು. ಆದರೆ ಮಗ್ದಲದವಳಾದ
ಮರಿಯಳೂ, ಯೋಸೆಯ ತಾಯಿಯಾದ ಮರಿಯಳೂ, ಅವನ
ನ್ನು ಎಲ್ಲಿ ಇಡುತ್ತಾರೆಂದು ನೋಡಿದರು.

## ೧೬. ಸಂಧಿ.

೧ ಮತ್ತು ಸಬ್ಬತು ಆದ ಮೇಲೆ ಮಗ್ದಲದವಳಾದ ಮರಿಯಳೂ,
ಯಾಕೋಬನ ತಾಯಿಯಾದ ಮರಿಯಳೂ, ಸಲೋಮೆಯೂ,
ಅವನನ್ನು ಅಭಿಷೇಕಿಸುವ ಹಾಗೆ ಸುಗಂಧಗಳನ್ನು ಕೊಂಡು
೨ ಕೊಂಡರು. ಇವರು ಸಬ್ಬತಿನ ಮಾರನೆ ದಿವಸ ಅರುಣೋದ
ಯದಲ್ಲಿ, ಸೂರ್ಯನು ಉದಯಿಸುವಾಗಲೇ, ಸಮಾಧಿಯ ಬಳಿ
3 ಗೆ ಬಂದು, ಸಮಾಧಿಯ ಬಾಗಲಿಂದ ನಮಗೆ ಕಲ್ಲನ್ನು ಯಾರು
ತೆಗೆದು ಹೊರಳಿಸುವರೆಂದು, ತಮ್ಮೊಳಗೆ ಹೇಳಿ ಕೊಂಡು,
೪ ಕಣ್ಣು ಎತ್ತುವಾಗ, ಮಹಾ ದೊಡ್ಡ ಕಲ್ಲು ಹೊರಳಿಸಿ ತೆಗೆಯ
ಲ್ಪಟ್ಟಿರುವದನ್ನು ನೋಡಿದರು.
೫ ಆಗ ಸಮಾಧಿಯೊಳಗೆ ಪ್ರವೇಶಿಸಿ, ಬಿಳೀ ಅಂಗಿ ತೊಟ್ಟು
ಕೊಂಡಿರುವ ಒಬ್ಬ ಯೌವನಸ್ಥನು ಬಲಪಾರ್ಶ್ವದಲ್ಲಿ ಕೂತಿ
೬ ರುವದನ್ನು ನೋಡಿ, ಭಯ ಭ್ರಾಂತರಾದರು. ಆದರೆ ಅವನ
ವರಿಗೆ ಹೇಳಿದ್ದು, ಭಯ ಭ್ರಾಂತರಾಗ ಬೇಡಿರಿ; ಶಿಲುಬೆಗೆ ಹಾಕ
ಲ್ಪಟ್ಟ ನಜರೇತಿನವನಾದ ಯೇಸುವನ್ನು ಹುಡುಕುತ್ತೀರಿ; ಅವನು
ಎದ್ದಿದ್ದಾನೆ; ಇಲ್ಲಿ ಇಲ್ಲ, ಇಗೋ, ಅವನು ಇಡಲ್ಪಟ್ಟ ಸ್ಥಳವು;
೭ ಆದರೆ ಹೋಗಿ, ಅವನ ಶಿಷ್ಯರಿಗೂ, ಪೇತ್ರನಿಗೂ, ಅವನು
ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆಂದು ಹೇಳಿರಿ;
ಅಲ್ಲಿ, ಅವನು ನಿಮಗೆ ಹೇಳಿದ ಹಾಗೆ, ಅವನನ್ನು ನೋಡುವಿರಿ.
೮ ಆಗಲವರು ಬೇಗ ಹೊರಟು, ಸಮಾಧಿಯಿಂದ ಓಡಿ ಹೋ
ದರು; ಇದಲ್ಲದೆ ಅವರು ನಡುಗಿನಿಂದಲೂ ಭ್ರಮೆಯಿಂದಲೂ
ಹಿಡಿಯಲ್ಪಟ್ಟವರಾಗಿ, ಭಯ ಪಟ್ಟದರಿಂದ, ಯಾರಿಗೂ ಏನೂ
ಹೇಳಲಿಲ್ಲ.
೯ ಹೀಗಿರಲಾಗಿ ಅವನು ಸಬ್ಬತಿನ ಮಾರನೇ ದಿವಸದ ಬೆಳಿಗ್ಯೆ
ಸತ್ತವರೊಳಗಿಂದ ಎದ್ದು, ತಾನು ಏಳು ದೆವ್ವಗಳನ್ನು ಹೊರಡಿ
ಸಿದ್ದ ಮಗ್ದಲದವಳಾದ ಮರಿಯಳಿಗೆ ಮೊದಲು ಕಾಣಿಸಿ ಕೊಂ
೧೦ ಡನು. ಅವಳು ಹೋಗಿ, ದುಃಖ ಪಟ್ಟು ಅಳುವವರಾದ ಅವನ
೧೧ ಸಂಗಡ ಇದ್ದವರಿಗೆ ತಿಳಿಸಿದಳು. ಇವರು, ಅವನು ಬದುಕುತ್ತಾನೆ;
ಅವಳಿಗೆ ಕಾಣಿಸಿ ಕೊಂಡನೆಂದು ಕೇಳಿ, ನಂಬಲಿಲ್ಲ.
೧೨ ಇವುಗಳಾದ ಮೇಲೆ ಅವರಲ್ಲಿ ಇಬ್ಬರು ತಿರುಗಾಡಿ, ಹಳ್ಳಿಗೆ
೧೩ ಹೋಗುವಾಗ, ಅವನು ಬೇರೆ ರೂಪವಾಗಿ ಕಾಣಿಸಿ ಕೊಂಡನು.
ಅವರು ಬಂದು, ಮಿಕ್ಕಾದವರಿಗೆ ತಿಳಿಸಿದರು; ಅವರನ್ನೂ ನಂಬಲಿಲ್ಲ.
೧೪ ಆ ಮೇಲೆ ಊಟಕ್ಕೆ ಕೂತು ಕೊಂಡವರಾದ ಹನ್ನೊಂದು
ಮಂದಿಗೆ ಕಾಣಿಸಿ ಕೊಂಡು, ಎದ್ದಿದ್ದ ತನ್ನನ್ನು ನೋಡಿದವರನ್ನು,
ಅವರು ನಂಬದೆ ಹೋದ ಕಾರಣ, ಅವರ ಅವಿಶ್ವಾಸವನ್ನೂ,
ಹೃದಯದ ಕಾಠಿಣ್ಯವನ್ನೂ, ಗದರಿಸಿದನು.
೧೫ ಮತ್ತು ಅವರಿಗೆ ಹೇಳಿದ್ದೇನಂದರೆ, ಸಮಸ್ತ ಲೋಕಕ್ಕೆ
೧೬ ಹೋಗಿ, ಸಮಸ್ತ ಸೃಷ್ಟಿಗೆ ಸುವಾರ್ತೆ ಪ್ರಸಂಗಿಸಿರಿ; ವಿಶ್ವಾ
ಸಿಸಿ ಸ್ನಾನ ಹೊಂದುವವನು ರಕ್ಷಿಸಲ್ಪಡುವನು; ಆದರೆ ವಿಶ್ವಾಸಿ
೧೭ ಸದವನು ಆಜ್ಞೆನಿರ್ಣಯ ಪಡುವನು. ಇದಲ್ಲದೆ ಈ ಲಕ್ಷಣ
ಗಳು ವಿಶ್ವಾಸಿಸುವವರನ್ನು ಹಿಂಬಾಲಿಸುವವು; ಯಾವವಂದರೆ,
ನನ್ನ ಹೆಸರಿನಲ್ಲಿ ದೆವ್ವಗಳನ್ನು ಹೊರಡಿಸುವರು; ಹೊಸ ಭಾಷೆ
೧೮ ಗಳಲ್ಲಿ ಮಾತಾಡುವರು; ಸರ್ಪಗಳನ್ನು ಎತ್ತುವರು; ಮರಣಕರ
ವಾದದ್ದೇನಾದರೂ ಕುಡಿದರೂ, ಅವರಿಗೆ ನಷ್ಟವಾಗುವದಿಲ್ಲ; ಅ
ಸ್ವಾಸ್ಥ್ಯವಾಗಿರುವವರ ಮೇಲೆ ಕೈಗಳನ್ನಿಡುವರು, ಆಗ ಗುಣವಾ
ಗುವರು.
೧೯ ಆ ಮೇಲೆ ಕರ್ತನು ಅವರ ಸಂಗಡ ಮಾತಾಡಿದ ತರುವಾಯ,
ಆಕಾಶಕ್ಕೆ ಎತ್ತಲ್ಪಟ್ಟು, ದೇವರ ಬಲ ಪಾರ್ಶ್ವದಲ್ಲಿ ಕೂತು
೨೦ ಕೊಂಡನು. ಆದರೆ ಅವರು ಹೊರಟು, ಎಲ್ಲಾ ಕಡೆಯಲ್ಲಿಯೂ
ಪ್ರಸಂಗಿಸಿದರು; ಕರ್ತನು ಸಹಾಯ ಮಾಡಿ, ಹಿಂಬಾಲಿಸುವ
ಲಕ್ಷಣಗಳಿಂದ ವಾಕ್ಯವನ್ನು ಸ್ಥಿರ ಪಡಿಸಿದನು. ಆಮೆನ್.

# THE GOSPEL OF LUKE.

## ಲೂಕನು ಬರೆದ ಸುವಾರ್ತೆ.

### ೧. ಸಂಧಿ.

೧ ಉತ್ತಮ ಥಿಯೊಫಿಲನೇ! ಆದಿಯಿಂದ ತಾವೇ ನೋಡಿದ
ವರೂ ವಾಕ್ಯದ ಸೇವಕರೂ ಆಗಿದ್ದವರು ನಮಗೆ ಒಪ್ಪಿಸಿದ
೨ ಪ್ರಕಾರ, ನಮ್ಮಲ್ಲಿ ಪೂರ್ಣ ನಿಶ್ಚಯವಾದ ಕಾರ್ಯಗಳ ವಿವರ
ವನ್ನು ಕ್ರಮವಾಗಿ ಬರೆಯುವದಕ್ಕೆ, ಅನೇಕರು ಪ್ರಯತ್ನ ಮಾ
೩ ಡಿದರಿಂದ, ನಿನಗೆ ಉಪದೇಶಿಸಲ್ಪಟ್ಟ ವಾಕ್ಯಗಳ ಸ್ಥಿರತ್ವವನ್ನು
೪ ನೀನು ತಿಳಿದು ಕೊಳ್ಳುವ ಹಾಗೆ, ನಿನಗೆ ಕ್ರಮದಿಂದ ಬರೆಯುವದ
ಕ್ಕೆ, ಬುದ್ಧಿದಿಂದ ಎಲ್ಲವುಗಳನ್ನು ಜಾಗ್ರತೆಯಾಗಿ ವಿಚಾರಿಸಿದ ನನ
ಗೂ ಒಳ್ಳೇದಾಗಿ ತೋಚಿತು.

೫ ಯೆಹೂದದ ಅರಸನಾದ ಹೆರೋದನ ದಿನಗಳಲ್ಲಿ, ಅಬೀಯ
ನ ಒಂತಿನವನಾದ ಜಕರೀಯನೆಂಬ ಒಬ್ಬ ಯಾಜಕನು ಇದ್ದ
ನು; ಅವನ ಹೆಂಡತಿಯು ಅರೋನನ ಕುಮಾರ್ತೆಗಳಲ್ಲಿ ಒಬ್ಬ
೬ ಳಾಗಿದ್ದಳು; ಅವಳ ಹೆಸರು ಎಲಿಸಬೇತ್. ಅವರಿಬ್ಬರು ಕರ್ತನ
ಎಲ್ಲಾ ಕಟ್ಟಳೆಗಳಲ್ಲಿಯೂ ನಿರ್ಣಯಗಳಲ್ಲಿಯೂ ತಪ್ಪಿಲ್ಲದ
ವರಾಗಿ ನಡೆದು ಕೊಂಡು, ದೇವರ ಮುಂದೆ ನೀತಿವಂತರಾಗಿದ್ದರು.
೭ ಇದಲ್ಲದೆ ಎಲಿಸಬೇತಳು ಬಂಜೆಯಾದದರಿಂದ, ಅವರಿಗೆ ಮಕ್ಕ
ಳು ಇರಲಿಲ್ಲ; ಮತ್ತು ಅವರಿಬ್ಬರು ದಿನ ಗತಿಸಿದವರಾಗಿದ್ದರು.

೮ ಹೀಗಿರಲಾಗಿ, ಅವನು ತನ್ನ ಒಂತಿನ ಮೇಲೆಗೆ ದೆವರ ಮುಂ
೯ ದೆ ಯಾಜಕಸೇವೆ ಮಾಡುತ್ತಿರುವಾಗ, ಯಾಜಕಸೇವೆಯ ಮ
ರ್ಯಾದೆಯ ಪ್ರಕಾರ, ಕರ್ತನ ಮಂದಿರದಲ್ಲಿ ಪ್ರವೇಶಿಸಿ, ಧೂ
೧೦ ಪವರ್ಪಿಸುವದು ಅವನ ಪಾಲಿಗೆ ಬಂತು. ಮತ್ತು ಜನರ ಸಮೂ
ಹವೆಲ್ಲಾ, ಧೂಪಾರ್ಪಣೆಯ ಹೊತ್ತಿನಲ್ಲಿ ಹೊರಗೆ ಪ್ರಾರ್ಥನೆ
೧೧ ಮಾಡುತ್ತಿತ್ತು. ಆಗ ಕರ್ತನ ದೂತನು ಧೂಪಪೀಠದ ಬಲಪಾ
ರ್ಶ್ವದಲ್ಲಿ ನಿಂತು, ಅವನಿಗೆ ಕಾಣಿಸಿ ಕೊಂಡನು.

೧೨ ಜಕರೀಯನು ಅವನನ್ನು ನೋಡಿ, ಕಳವಳ ಪಟ್ಟನು; ಮತ್ತು
೧೩ ಭಯವು ಅವನ ಮೇಲೆ ಬಿತ್ತು. ಆಗ ದೂತನು ಅವನಿಗೆ, ಜಕರೀ
ಯನೇ, ಭಯ ಪಡ ಬೇಡ; ಯಾಕಂದರೆ ನಿನ್ನ ವಿಜ್ಞಾಪನೆಯು
ಕೇಳಲ್ಪಟ್ಟಿತು, ಮತ್ತು ನಿನ್ನ ಹೆಂಡತಿಯಾದ ಎಲಸಬೇತಳು
ನಿನಗೆ ಮಗನನ್ನು ಹೆರುವಳು, ಅವನಿಗೆ ಯೋಹಾನನೆಂಬ ಹೆಸ
೧೪ ರಿಡ ಬೇಕು; ಸಂತೋಷವೂ ಆನಂದವೂ ನಿನಗಿರುವವು; ಮತ್ತು
ಅನೇಕರು ಅವನ ಜನನಕ್ಕೆ ಸಂತೋಷ ಪಡುವರು; ಯಾಕಂ
೧೫ದರೆ ಅವನು ಕರ್ತನ ಮುಂದೆ ದೊಡ್ಡವನಾಗಿ, ದ್ರಾಕ್ಷೇರಸವನ್ನೂ
ಮದ್ಯವನ್ನೂ ಕುಡಿಯದೆ, ತನ್ನ ತಾಯಿಯ ಗರ್ಭದಿಂದ
೧೬ಲೇ ಪರಿಶುದ್ಧಾತ್ಮದಿಂದ ತುಂಬಿದವನಾಗುವನು. ಮತ್ತು ಇಸ್ರ
ಯೇಲನ ಮಕ್ಕಳಲ್ಲಿ ಅನೇಕರನ್ನು ಅವರ ದೇವರಾಗಿರುವ ಕರ್ತ
೧೭ನ ಕಡೆಗೆ ತಿರುಗಿಸುವನು. ಅವನು ತಂದೆಗಳ ಹೃದಯಗಳನ್ನು
ಮಕ್ಕಳ ಕಡೆಗೂ, ಅವಿಧೇಯರನ್ನು ನೀತಿವಂತರ ಬುದ್ಧಿಗೂ,
ತಿರುಗಿಸಿ, ಕರ್ತನಿಗೆ ಅಯತ್ತವಾಗಿರುವ ಜನರನ್ನು ಸಿದ್ಧ ಮಾ
ಡುವದಕ್ಕೆ, ಎಲೀಯನ ಆತ್ಮದಲ್ಲಿಯೂ ಬಲದಲ್ಲಿಯೂ ಅವನ
ಮುಂದೆ ಹೋಗುವನು.

೧೮ ಜಕರೀಯನು ದೂತನಿಗೆ, ನಾನು ಯಾತರಿಂದ ಇದನ್ನು
ತಿಳುಕೊಳ್ಳಲಿ? ಯಾಕಂದರೆ ನಾನು ಮುದುಕನು; ಮತ್ತು ನನ್ನ
೧೯ ಹೆಂಡತಿಯು ದಿನ ಗತಿಸಿದವಳು, ಅಂದಾಗ; ದೂತನು ಪ್ರತ್ಯುತ್ತರ
ವಾಗಿ ಅವನಿಗೆ ಹೇಳಿದ್ದು, ನಾನು ದೇವರ ಮುಂದೆ ನಿಂತು ಕೊ
ಳ್ಳುವ ಗಬ್ರಿಯೇಲನು; ನಿನ್ನ ಸಂಗತಿ ಮಾತಾಡಿ ಇವುಗಳನ್ನು
೨೦ ನಿನಗೆ ತಿಳಿಸುವ ಹಾಗೆ ಕಳುಹಿಸಲ್ಪಟ್ಟಿದ್ದೇನೆ. ಮತ್ತು, ಇಗೋ,
ತಕ್ಕ ಸಮಯದಲ್ಲಿ ಈಡೇರುವ ನನ್ನ ವಾಕ್ಯಗಳನ್ನು ನೀನು ನಂ
ಬದೆ ಹೋದದರಿಂದ, ಇವು ಆಗುವ ದಿನದ ವರಿಗೂ ಮೌನವಾಗಿ
೨೧ದ್ದು, ಮಾತಾಡಲಾರದೆ ಇರುವಿ. ಇದ್ದರಲ್ಲಿ ಜನರು ಜಕರೀಯನಿ
ಗೋಸ್ಕರ ಕಾದು ಕೊಂಡು, ಅವನು ದೇವಾಲಯದಲ್ಲಿ ತಡ ಮಾ
೨೨ ಡಿದ್ದಕೆ ಆಶ್ಚರ್ಯ ಪಟ್ಟರು. ಹೊರಗೆ ಬಂದಾಗ, ಅವರ ಸಂಗತಿ
ಮಾತಾಡಲಾರದೆ ಇದ್ದನು. ಆಗಲವನು ದೇವಾಲಯದಲ್ಲಿ ದರ್ಶ
ನವನ್ನು ಕಂಡಿದ್ದಾನೆಂದು, ತಿಳುಕೊಂಡರು. ಹ್ಯಾಗಂದರೆ ಅವನು
ಅವರಿಗೆ ಸಾಜ್ಞೆ ಮಾಡಿ, ಮೂಕನಾಗಿಯೇ ಇದ್ದನು.

೨೩ ಅವನ ಸೇವೆಯ ದಿವಸಗಳು ಪೂರ್ಣವಾದ ಮೇಲೆ, ತನ್ನ
೨೪ ಮನೆಗೆ ಹೋದನು. ಆ ದಿವಸಗಳಾದ ಮೇಲೆ ಅವನ ಹೆಂಡತಿಯಾ
ದ ಎಲಿಸಬೇತಳು ಗರ್ಭ ಧರಿಸಿಕೊಂಡು, ಮನುಷ್ಯರಲ್ಲಿ ನನ
ಗಾದ ಅಪಮಾನವನ್ನು ತೆಗೆದು ಹಾಕುವದಕ್ಕೆ ಕರ್ತನು ದೃಷ್ಟಿ
ಇಟ್ಟ ದಿವಸಗಳಲ್ಲಿ ಹೀಗೆ ನನಗೆ ಮಾಡಿದ್ದಾನೆಂದು ಹೇಳಿ, ಐದು
೨೫ ತಿಂಗಳು ಅಡಗಿ ಕೊಂಡಳು.

ಮತ್ತು ಆರನೇ ತಿಂಗಳಲ್ಲಿ, ಗಬ್ರಿಯೇಲನೆಂಬ ದೂತನು, ಗಲಿ
ಲಾಯದ ನಜರೇತೆಂಬ ಪಟ್ಟಣಕ್ಕೆ, ದಾವೀದನ ಮನೆತನದವನಾದ
೨೭ ಯೋಸೆಫನೆಂಬ ಒಬ್ಬ ಮನುಷ್ಯನಿಗೆ ನೇಮಕ ಮಾಡಲ್ಪಟ್ಟ
ಒಬ್ಬ ಕನ್ನಿಕೆಯ ಬಳಿಗೆ, ದೇವರಿಂದ ಕಳುಹಿಸಲ್ಪಟ್ಟನು. ಆ
ಕನ್ನಿಕೆಯ ಹೆಸರು ಮರಿಯಳು.

೨೮ ದೂತನು ಅವಳ ಬಳಿಗೆ ಪ್ರವೇಶಿಸಿ, ಕೃಪೆ ಹೊಂದಿದವಳೇ,
ಶುಭವಾಗಲಿ! ಕರ್ತನು ನಿನ್ನ ಸಂಗಡ ಇದ್ದಾನೆ; ಹೆಂಗಸರಲ್ಲಿ
೨೯ ನೀನು ಆಶೀರ್ವದಿಸಲ್ಪಟ್ಟವಳು, ಅಂದನು. ಅವಳು ಅವನನ್ನು
ನೋಡಿ, ಅವನ ಮಾತಿಗೆ ಕಳವಳ ಪಟ್ಟು, ಇದು ಎಂಥಾ ವಂದನೆ?
೩೦ ಎಂದು ಆಲೋಚನೆ ಮಾಡಿ ಕೊಂಡಿರುವಾಗ, ದೂತನು ಅವಳಿಗೆ
ಹೇಳಿದ್ದೇನಂದರೆ, ಮರಿಯಳೇ, ಭಯ ಪಡ ಬೇಡ; ದೇವರ ಬಳಿ
೩೧ಯಲ್ಲಿ ಕೃಪೆ ಹೊಂದಿದ್ದಿ. ಮತ್ತು, ಇಗೋ, ಗರ್ಭ ಧರಿಸಿಕೊಂ
ಡು, ಮಗನನ್ನು ಹೆರುವಿ; ಅವನಿಗೆ ಯೇಸುವೆಂಬ ಹೆಸರಿಡ ಬೇಕು.
೩೨ ಅವನು ದೊಡ್ಡವನಾಗಿದ್ದು, ಮಹೋನ್ನತನ ಮಗನೆಂದು ಕರೆಯ
ಲ್ಪಡುವನು; ಮತ್ತು ಕರ್ತನಾದ ದೇವರು ಅವನಿಗೆ ಅವನ ತಂದೆ
೩೩ಯಾದ ದಾವೀದನ ಸಿಂಹಾಸನವನ್ನು ಕೊಡುವನು. ಅವನು
ಯಾಕೋಬನ ಮನೆಯನ್ನು ಎಂದೆಂದಿಗೂ ಆಳುವನು; ಮತ್ತು
ಅವನ ರಾಜ್ಯಕ್ಕೆ ಅಂತ್ಯವು ಇರದು.

೩೪ ಮರಿಯಳು ದೂತನಿಗೆ, ಇದು ಹ್ಯಾಗೆ? ನಾನು ಗಂಡನನ್ನು
೩೫ ಅರಿಯೆ, ಅನ್ನಲು; ದೂತನು ಪ್ರತ್ಯುತ್ತರವಾಗಿ ಅವಳಿಗೆ ಹೇಳಿ
ದ್ದೇನಂದರೆ, ಪರಿಶುದ್ಧಾತ್ಮವು ನಿನ್ನ ಮೇಲೆ ಬರುವದು; ಮತ್ತು



ಮಹೋನ್ನತನ ಬಲವು ನಿನ್ನ ಮೇಲೆ ನೆರಳಾಗಿರುವದು; ಅದರ
ಂದ ಹುಟ್ಟುವ ಪರಿಶುದ್ಧವಾದದ್ದು ದೇವರ ಮಗನೆಂದು ಕರೆಯ
೩೬ ಲ್ಪಡುವದು. ಮತ್ತು, ಇಗೋ, ನಿನ್ನ ನೆಂಟಳಾದ ಎಲಿಸಬೇತಳು
ಸಹ ತನ್ನ ಮುಪ್ಪಿನಲ್ಲಿ ಮಗನನ್ನು ಗರ್ಭದಲ್ಲಿ ಧರಿಸಿಕೊಂಡಿ
ದ್ದಾಳೆ; ಬಂಜೆ ಎಂದು ಕರೆಯಲ್ಪಟ್ಟ ಅವಳಿಗೆ ಇವೇ ಆರನೇ ತಿಂ
೩೭ ಗಳು. ಯಾಕಂದರೆ ದೇವರ ಬಳಿಯಲ್ಲಿ ಯಾವ ಕಾರ್ಯವಾ
೩೮ದರೂ ಅಸಾಧ್ಯವಲ್ಲ. ಅದಕ್ಕೆ ಮರಿಯಳು, ಇಗೋ, ನಾನು
ಕರ್ತನ ದಾಸಿಯು, ನಿನ್ನ ಮಾತಿನ ಮೇರೆಗೆ ನನಗಾಗಲಿ, ಅಂ
ದಳು. ಆಗ ದೂತನು ಅವಳನ್ನು ಬಿಟ್ಟು ಹೋದನು.

೩೯ ಆ ದಿವಸಗಳಲ್ಲಿ ಮರಿಯಳು ಎದ್ದು, ಬೆಟ್ಟದ ಪ್ರದೇಶಕ್ಕೆ, ಯೆ
೪೦ ಹೂದದ ಪಟ್ಟಣಕ್ಕೆ, ಬೇಗ ಹೋಗಿ, ಜಕರೀಯನ ಮನೆಯಲ್ಲಿ
೪೧ ಪ್ರವೇಶಿಸಿ, ಎಲಿಸಬೇತಳನ್ನು ವಂದಿಸಿದಳು. ಎಲಿಸಬೇತಳು ಮರಿ
ಯಳ ವಂದನೆ ಕೇಳಿದಾಗ, ಅವಳ ಗರ್ಭದೊಳಗೆ ಕೂಸು ಹಾ
೪೨ ಕ್ಯಾಡಿತು. ಮತ್ತು ಎಲಿಸಬೇತಳು ಪರಿಶುದ್ಧಾತ್ಮದಿಂದ ತುಂಬಿದ
ವಳಾಗಿ, ಮಹಾ ಶಬ್ದದಿಂದ ಕೂಗಿ ಹೇಳಿದ್ದೇನಂದರೆ, ನೀನು
ಸ್ತ್ರೀಯರಲ್ಲಿ ಆಶೀರ್ವದಿಸಲ್ಪಟ್ಟವಳು, ಮತ್ತು ನಿನ್ನ ಗರ್ಭದ
೪೩ ಫಲವು ಆಶೀರ್ವದಿಸಲ್ಪಟ್ಟದ್ದು. ಇದಲ್ಲದೆ ನನ್ನ ಕರ್ತನ ತಾ
ಯಿಯು ನನ್ನ ಬಳಿಗೆ ಬಂದದ್ದು ನನಗೆ ಹ್ಯಾಗೆ ಉಂಟಾಯಿ
೪೪ತು? ಯಾಕಂದರೆ, ಇಗೋ, ನಿನ್ನ ವಂದನೆಯ ಶಬ್ದವು ನನ್ನ
ಕಿವಿಗಳಲ್ಲಿ ಬಿದ್ದಾಗ, ಕೂಸು ನನ್ನ ಗರ್ಭದಲ್ಲಿ ಉಲ್ಲಾಸದಿಂದ
೪೫ ಹಾಕ್ಯಾಡಿತು. ಇದಲ್ಲದೆ ಕರ್ತನಿಂದ ತನಗೆ ಹೇಳಲ್ಪಟ್ಟವುಗ
ಳಿಗೆ ಸಂಪೂರ್ಣತ್ವವು ಆಗುವದೆಂದು ನಂಬುವವಳು ಭಾಗ್ಯ
ವಂತಳು.

೪೬ ಆಗ ಮರಿಯಳು ಹೇಳಿದ್ದೇನಂದರೆ, ನನ್ನ ಪ್ರಾಣವು ಕರ್ತ
೪೭ ನನ್ನು ಮಹಿಮೆ ಪಡಿಸುತ್ತದೆ; ನನ್ನ ಆತ್ಮವು ನನ್ನ ರಕ್ಷಕನಾದ
೪೮ ದೇವರಲ್ಲಿ ಆನಂದ ಪಟ್ಟಿದೆ. ಯಾಕಂದರೆ ತನ್ನ ದಾಸಿಯ ದೀನ
ತ್ವದ ಮೇಲೆ ದೃಷ್ಟಿ ಇಟ್ಟಿದ್ದಾನೆ; ಇದಕ್ಕೋಸ್ಕರ, ಇಗೋ,
ಇಂದಿನಿಂದ ಸಕಲ ತಲಾಂತರಗಳು ನನ್ನನ್ನು ಭಾಗ್ಯವಂತಳೆಂದು
೪೯ ಹೇಳುವವು. ಯಾಕಂದರೆ ಬಲವುಳ್ಳವನು ನನಗೆ ಮಹತ್ತಾದವುಗ
೫೦ ಳನ್ನು ಮಾಡಿದ್ದಾನೆ; ಅವನ ಹೆಸರು ಪರಿಶುದ್ಧವಾದದ್ದು. ಮತ್ತು
ಅವನ ಕರುಣೆಯು ಅವನಿಗೆ ಭಯ ಪಡುವವರ ಮೇಲೆ ತಲತಲಾಂ
೫೧ ತರಗಳ ವರಿಗೂ ಇರುವದು. ಅವನು ತನ್ನ ಭುಜದಿಂದ ತ್ರಾಣ
ವನ್ನು ತೋರಿಸಿ, ಅವರ ಹೃದಯದ ಆಲೋಚನೆಯಿಂದ
೫೨ ಗರ್ವಿಷ್ಠರನ್ನು ಚದರಿಸಿದ್ದಾನೆ. ಪ್ರಭುಗಳನ್ನು ಸಿಂಹಾಸನಗಳಿಂದ
೫೩ ದೊಬ್ಬಿ ಹಾಕಿ, ದೀನರನ್ನು ಎತ್ತಿದ್ದಾನೆ. ಹಸಿದವರನ್ನು ಒಳ್ಳೇ
ಯವುಗಳಿಂದ ತುಂಬಿಸಿ, ಐಶ್ವರ್ಯವಂತರನ್ನು ಬರೀದಾಗಿ
೫೪ ಕಳುಹಿಸಿ ಬಿಟ್ಟಿದ್ದಾನೆ. ನಮ್ಮ ತಂದೆಗಳಾದ ಅಬ್ರಹಾಮನಿಗೂ
ಸದಾಕಾಲ ಇರುವ ಅವನ ಬೀಜಕ್ಕೂ ಅವನು ಮಾತಾಡಿದ ಮೇ
೫೫ರೆಗೆ, ಕರುಣೆಗಳನ್ನು ಜ್ಞಾಪಕ ಮಾಡಿಕೊಂಡು, ತನ್ನ ಸೇವಕ
ನಾದ ಇಸ್ರಯೇಲನನ್ನು ಆದರಿಸಿದ್ದಾನೆ.

೫೬ ಆ ಮೇಲೆ ಮರಿಯಳು ಹೆಚ್ಚು ಕಡಿಮೆ ಮೂರು ತಿಂಗಳು
ಅವಳ ಸಂಗಡ ಇದ್ದು, ತನ್ನ ಮನೆಗೆ ತಿರಿಗಿ ಹೋದಳು.

೫೭ ಇದಲ್ಲದೆ ಎಲಿಸಬೇತಳಿಗೆ ಹೆರುವ ಕಾಲ ಪೂರ್ಣವಾದಾಗ,
೫೮ ಮಗನನ್ನು ಹೆತ್ತಳು. ಆಗ ನೆರೆಮನೆಯವರೂ, ಅವಳ ನೆಂಟ
ರೂ, ಕರ್ತನು ಅವಳಲ್ಲಿ ತನ್ನ ಕರುಣೆಯನ್ನು ಅಧಿಕ ಮಾಡಿ
ದ್ದಾನೆಂದು ಕೇಳಿ, ಅವಳ ಸಂಗಡ ಸಂತೋಷಿಸಿದರು.

೫೯ ಎಂಟನೇ ದಿವಸದಲ್ಲಿ ಅವರು ಕೂಸಿಗೆ ಪರಿಛೇದನೆ ಮಾಡುವ
ದಕ್ಕೆ ಬಂದು, ಅದಕ್ಕೆ ತಂದೆಯ ಹೆಸರಾಗಿರುವ ಜಕರೀಯ
೬೦ ನೆಂಬ ಹೆಸರಿಟ್ಟರು. ಆಗಲವನ ತಾಯಿಯು ಪ್ರತ್ಯುತ್ತರವಾಗಿ,
ಹಾಗಲ್ಲ; ಯೋಹಾನನೆಂದು ಕರೆಯಲ್ಪಡ ಬೇಕು, ಅಂದಾಗ;
೬೧ ಅವರು ಅವಳಿಗೆ, ನಿನ್ನ ನೆಂಟರಲ್ಲಿ ಈ ಹೆಸರಿನಿಂದ ಕರೆಯಲ್ಪ
೬೨ ಟ್ಟವನು ಒಬ್ಬನೂ ಇಲ್ಲವೆಂದು ಹೇಳಿದರು. ಇದಲ್ಲದೆ ಅವನಿಗೆ
ಯಾವ ಹೆಸರಿಡ ಬೇಕೆಂದು, ತಂದೆಗೆ ಸಾಜ್ಞೆ ಮಾಡಿದರು. ಆಗ
೬೩ ಲವನು ಹಲಿಗೆ ಕೇಳಿ ಕೊಂಡು, ಅವನ ಹೆಸರು ಯೋಹಾನನೇ
ಎಂದು ಬರೆದನು; ಅದಕ್ಕೆ ಎಲ್ಲರು ಆಶ್ಚರ್ಯ ಪಟ್ಟರು.

೬೪ ಸಂಗತಿಯೇ ಅವನ ಬಾಯಿಯೂ ನಾಲಿಗೆಯೂ ಬಿಡಿಸಲ್ಪಟ್ಟು,
೬೫ ಅವನು ದೇವರನ್ನು ಸ್ತುತಿಸಿ, ಮಾತಾಡಿದನು. ಆಗಲವರ ಸುತ್ತ
ಲು ವಾಸ ಮಾಡುವವಕ್ಕೆಲ್ಲರ ಮೇಲೆ ಭಯ ಉಂಟಾಗಿ, ಯೆಹೂ
ದದ ಬೆಟ್ಟದ ಪ್ರದೇಶಗಳೆಲ್ಲಾ ಈ ಸಂಗತಿಗಳೆಲ್ಲಾ ಪ್ರಸಿದ್ಧವಾದವು.
೬೬ ಮತ್ತು ಕೇಳಿದವರೆಲ್ಲರು, ಈ ಕೂಸು ಎಂಥಾದ್ದಾಗುವದೋ ಎಂ
ದು ಹೇಳಿ, ಅವುಗಳನ್ನು ತಮ್ಮ ಹೃದಯದಲ್ಲಿ ಇಟ್ಟು ಕೊಂ
ಡರು. ಇದಲ್ಲದೆ ಕರ್ತನ ಕೈ ಅವನ ಸಂಗಡ ಇತ್ತು.

೬೭ ಮತ್ತು ಅವನ ತಂದೆಯಾದ ಜಕರೀಯನು ಪರಿಶುದ್ಧಾತ್ಮ
೬೮ ದಿಂದ ತುಂಬಿದವನಾಗಿ, ಪ್ರವಾದಿಸಿ ಹೇಳ್ದದ್ದೇನಂದರೆ, ಇಸ್ರಯೇ
ಲನ ದೇವರಾದ ಕರ್ತನು ಸ್ತುತಿಸ ತಕ್ಕವನು! ಯಾಕಂದರೆ ಅ
೬೯ ವನು ತನ್ನ ಜನರನ್ನು ದರ್ಶಿಸಿ, ಅವರಿಗೆ ವಿಮೋಚನೆ ಮಾಡಿ,
ತನ್ನ ಸೇವಕನಾದ ದಾವೀದನ ಮನೆಯಲ್ಲಿ ನಮಗೆ ರಕ್ಷಣೆಯ
೭೦ ಕೊಂಬನ್ನು ಏರಿಸಿದ್ದಾನೆ. ತೋಕಾದಿಯಿಂದಿದ್ದ ತನ್ನ ಪರಿಶುದ್ಧ
೭೧ ಪ್ರವಾದಿಗಳ ಬಾಯಿಯಿಂದ ತಾನು ಮಾತಾಡಿದ ಹಾಗೆ, ನಮ್ಮ
ಶತ್ರುಗಳಿಂದಲೂ ನಮ್ಮನ್ನು ಹಗೆ ಮಾಡುವವಕ್ಕೆಲ್ಲರ ಕೈಯಿಂದ
೭೨ ಲೂ ನಮ್ಮನ್ನು ರಕ್ಷಿಸಿ, ನಮ್ಮ ತಂದೆಗಳಿಗೆ ಕರುಣೆಮಾಡಿ, ತನ್ನ
೭೩ ಪರಿಶುದ್ಧ ಜಡಂಬಡಿಕೆಯನ್ನೂ ನಮ್ಮ ತಂದೆಯಾದ ಅಬ್ರಹಾಮ
ನಿಗೆ ಇಟ್ಟು ಕೊಂಡ ಆಣೆಯನ್ನೂ, ಜ್ಞಾಪಕ ಮಾಡಿಕೊಂಡು,
೭೪ ನಾವು ನಿರ್ಭಯವಾಗಿ ನಮ್ಮ ಶತ್ರುಗಳ ಕೈಯಿಂದ ತಪ್ಪಿಸ
೭೫ ಲ್ಪಟ್ಟವರಾಗಿ, ಪರಿಶುದ್ಧತ್ವದಲ್ಲಿಯೂ ನೀತಿಯಲ್ಲಿಯೂ ನಮ್ಮ
ಜೀವದ ದಿವಸಗಳೆಲ್ಲಾ ಅವನ ಮುಂದೆ ಅವನನ್ನು ಸೇವಿಸುವ ಹಾ
ಗೆ, ನಮಗೆ ಕೊಟ್ಟಿದ್ದಾನೆ.

೭೬ ಇದಲ್ಲದೆ, ಮಗುವೇ! ನೀನು ಮಹೋನ್ನತನ ಪ್ರವಾದಿ ಎಂದು
ಕರೆಯಲ್ಪಡುವಿ; ಯಾಕಂದರೆ ನೀನು ಅವನ ಹಾದಿಗಳನ್ನು
೭೭ ಸಿದ್ಧ ಮಾಡುವದಕ್ಕೂ, ಅವನ ಜನರಿಗೆ ನಮ್ಮ ದೇವರ ಕರು
ಣೆಯ ಅಂತ್ಯಕರಣದಿಂದಾಗುವ ಅವರ ಪಾಪ ಪರಿಹಾರದಲ್ಲಿ
ರಕ್ಷಣೆಯ ತಿಳುವಿಕೆಯನ್ನು ಕೊಡುವದಕ್ಕೂ ಕರ್ತನ ಮುಖ
೭೮ದ ಮುಂದೆ ಹೋಗುವಿ. ಈ ಅಂತ್ಯಕರಣದಿಂದ ಉನ್ನತದಿಂದಾ
ಗುವ ಉದಯವು ನಮ್ಮನ್ನು ದರ್ಶಿಸಿ, ನಮ್ಮ ಪಾದಗಳನ್ನು
೭೯ ಸಮಾಧಾನದ ಮಾರ್ಗದಲ್ಲಿ ನೆಟ್ಟಿಗೆ ತೇರಿಸುವ ಹಾಗೆ, ಕತ್ತಲೆ
ಯಲ್ಲಿಯೂ ಮರಣದ ನೆರಳಿನಲ್ಲಿಯೂ ಕೂತು ಕೊಂಡವರಿಗೆ
ಬೆಳಗಿ ಅದೆ.

೮೦ ಇದಲ್ಲದೆ ಕೂಸು ಬೆಳೆದು, ಆತ್ಮದಲ್ಲಿ ಬಲಗೊಂಡು, ಅದು
ಇಸ್ರಯೇಲಿಗೆ ತೋರ ಬರುವ ದಿವಸದ ವರಿಗೂ ಅರಣ್ಯ
ದಲ್ಲಿ ಇತ್ತು.

## ೨. ಸಂಧಿ.

೧ ಆ ದಿವಸದಲ್ಲಿ ಆದದ್ದೇನಂದರೆ, ಲೋಕವೆಲ್ಲಾ ಲೆಖ್ಖ ಬರಿಸಿ
ಕೊಳ್ಳ ಬೇಕೆಂದು, ಕೈಸರನಾದ ಔಗುಸ್ತನಿಂದ ಆಜ್ಞೆ ಹೊರ
೨ ಟಿತು. ಕುರೇನ್ಯನು ಸುರಿಯಕ್ಕೆ ಅಧಿಪತಿಯಾಗಿರುವಾಗ, ಈ
೩ ಮೊದಲನೇ ಲೆಖ್ಖನಾಯಿತು. ಲೆಖ್ಖ ಬರಿಸಿ ಕೊಳ್ಳುವದಕ್ಕೆ ಎಲ್ಲ
೪ ರು ತಮ್ಮು ತಮ್ಮು ಪಟ್ಟಣಗಳಿಗೆ ಹೋಗುವಾಗ, ಯೋಸೆಫನು ಸಹ,
ದಾವೀದನ ಮನೆಯವನೂ ಕುಟುಂಬದವನೂ ಆಗಿದ್ದದರಿಂದ
ಗಲಿಲಾಯದಿಂದ, ನಜರೇತ್ ಪಟ್ಟಣದಿಂದ, ಯೆಹೂದಕ್ಕೆ, ಬೇತ್ಲೆ
೫ ಹೇಮೆಂಬ ದಾವೀದನ ಪಟ್ಟಣಕ್ಕೆ, ತನಗೆ ನೇಮಕ ಮಾಡಲ್ಪಟ್ಟ
ಹೆಂಡತಿಯಾದ, ಬಸುರಾದ, ಮರಿಯಳ ಸಂಗಡ, ಬರಿಸಿ ಕೊಳ್ಳು
ವದಕ್ಕೆ ಏರಿ ಹೋದನು.
೬ ಅವರು ಅಲ್ಲಿ ಇದ್ದಾಗ, ಅವಳು ಹೆರುವದಕ್ಕೆ ದಿವಸಗಳು
೭ ಪೂರ್ಣವಾದವು. ಮತ್ತು ತನ್ನ ಚೊಚ್ಚಲ ಮಗನನ್ನು ಹೆತ್ತು,
ಅವನನ್ನು ಬಟ್ಟೆಯಲ್ಲಿ ಸುತ್ತಿ, ಛತ್ರದಲ್ಲಿ ಅವರಿಗೆ ಸ್ಥಳವಿಲ್ಲದ
ಕಾರಣ, ಗೋದಲಿಯಲ್ಲಿ ಮಲಗಿಸಿದಳು.
೮ ಇದಲ್ಲದೆ ಅದೇ ಸೀಮೆಯಲ್ಲಿ ಕುರುಬರು, ರಾತ್ರಿಯಲ್ಲಿ ತಮ್ಮು
೯ ಮಂದೆಯನ್ನು ಕಾಯುತ್ತಾ, ಹೊಲದಲ್ಲಿ ಇದ್ದರು. ಆಗ, ಇಗೋ,
ಕರ್ತನ ದೂತನು ಅವರ ಬಳಿಯಲ್ಲಿ ನಿಂತನು, ಕರ್ತನ ಮ
ಹಿಮೆಯು ಅವರ ಸುತ್ತ ಪ್ರಕಾಶಿಸಿತು, ಮತ್ತು ಅವರು ಬಹು
೧೦ ಭಯ ಪಟ್ಟರು. ಆಗ ದೂತನು ಅವರಿಗೆ ಹೇಳಿದ್ದೇನಂದರೆ,
ಭಯ ಪಡ ಬೇಡಿರಿ. ಯಾಕಂದರೆ, ಇಗೋ, ಜನರಿಗೆಲ್ಲಾ ಉಂಟಾ
೧೧ ಗುವ ಮಹಾ ಸಂತೋಷವನ್ನು ನಿಮಗೆ ಪ್ರಸಂಗಿಸುತ್ತೇನೆ; ಏನಂ
ದರೆ, ಈ ಹೊತ್ತು ಕರ್ತನಾದ ಕ್ರಿಸ್ತನೆಂಬ ರಕ್ಷಕನು ದಾವೀದನ
೧೨ ಪಟ್ಟಣದಲ್ಲಿ ನಿಮಗೆ ಹುಟ್ಟಿದ್ದಾನೆ. ಮತ್ತು ಇದೇ ನಿಮಗೆ ಗುರುತು,
ಕೂಸು ಬಟ್ಟೆಯಲ್ಲಿ ಸುತ್ತಲ್ಪಟ್ಟು, ಗೋದಲಿಯಲ್ಲಿ ಮಲಗಿರು
೧೩ ವದನ್ನು ಕಂಡು ಕೊಳ್ಳುವಿರಿ. ಕೂಡ್ಲೆ, ಪರಲೋಕ ಸೈನ್ಯದ ಸ
ಮೂಹವು ದೂತನ ಸಂಗಡ ಇತ್ತು. ಅವರು ದೇವರನ್ನು ಹೊ
೧೪ ಗಳ್ಳಿ, ಮಹೋನ್ನತವಾದವುಗಳಲ್ಲಿ ದೇವರಿಗೆ ಮಹಿಮೆಯು! ಭೂ
ಮಿಯ ಮೇಲೆ ಸಮಾಧಾನವು! ಮನುಷ್ಯರಲ್ಲಿ ದಯವು! ಅಂ
ದರು.
೧೫ ದೂತರು ಅವರನ್ನು ಬಿಟ್ಟು, ಪರಲೋಕಕ್ಕೆ ಹೋದ ಮೇಲೆ,
ಕುರುಬರಾದ ಮನುಷ್ಯರು ಒಬ್ಬರಿಗೊಬ್ಬರು, ನಾವು ಬೇತ್ಲೆ
ಹೇಮಿಗೆ ಹೋಗಿ, ಕರ್ತನು ನಮಗೆ ತಿಳಿಸಿದಂಥ, ಸಂಭವಿಸಿದಂ
೧೬ ಥ, ಈ ಕಾರ್ಯವನ್ನು ನೋಕುವ, ಎಂದು ಹೇಳಿ, ಬೇಗ ಬಂ
ದು, ಮರಿಯಳನ್ನೂ, ಯೋಸೆಫನನ್ನೂ, ಗೋದಲಿಯಲ್ಲಿ
೧೭ ಮಲಗಿರುವ ಕೂಸನ್ನೂ, ಕಂಡರು. ಕಂಡ ಮೇಲೆ, ಈ ಕೂಸಿನ
ವಿಷಯವಾಗಿ ತಮಗೆ ಹೇಳಿದ ಮಾತನ್ನು ಪ್ರಕಟಿ ಮಾಡಿದರು.
೧೮ ಆಗ, ಕೇಳಿದವರೆಲ್ಲರು, ಕುರುಬರು ತಮಗೆ ಹೇಳಿದ ಮಾತುಗಳಿಗೆ
೧೯ ಆಶ್ಚರ್ಯ ಪಟ್ಟರು. ಆದರೆ ಮರಿಯಳು ಈ ಮಾತುಗಳನ್ನೆಲ್ಲಾ
ತನ್ನ ಹೃದಯದಲಿ ಆಲೋಚಿಸಿ, ಇಟ್ಟು ಕೊಂಡಳು. ಕುರು
೨೦ ಬರು ತಮಗೆ ಹೇಳಲ್ಪಟ್ಟ ಹಾಗೆ, ತಾವು ಕೇಳಿ, ನೋಡಿ, ಎಲ್ಲವು
ಗಳಿಗೋಸ್ಕರ ದೇವರನ್ನು ಮಹಿಮೆ ಪಡಿಸುತ್ತಾ, ಹೊಗಳುತ್ತಾ,
ತಿರಿಗಿ ಹೋದರು.
೨೧ ಮತ್ತು ಕೂಸಿಗೆ ಸುನ್ನತಿ ಮಾಡುವದಕ್ಕೆ ಎಂಟು ದಿವಸಗ
ಳು ಪೂರ್ಣವಾದ ಮೇಲೆ, ಅದು ಗರ್ಭದಲ್ಲಿ ಧರಿಸಲ್ಪಟುವದ
ಕ್ಕಿಂತ ಮುಂಚೆ ದೂತನು ಇಟ್ಟ ಯೇಸುವೆಂಬ ಹೆಸರು ಅದಕ್ಕೆ
ಇಡಲ್ಪಟ್ಟಿತು.
೨೨ ಮತ್ತು ಮೋಶೆಯ ನ್ಯಾಯಪ್ರಮಾಣದ ಪ್ರಕಾರ ಅದನ
೨೩ ಶುದ್ಧೀಕರಣದ ದಿವಸಗಳು ಪೂರ್ಣವಾದ ಮೇಲೆ, ಮೊದಲು
ಗರ್ಭ ತೆಗೆಯುವಂಥ ಪ್ರತಿ ಗಂಡು ಕೂಸು ಕರ್ತನಿಗೆ ಪರಿಶು
೨೪ ದ್ಧವೆಂದು ಕರೆಯಲ್ಪಡ ಬೇಕೆಂಬದಾಗಿ, ಕರ್ತನ ನ್ಯಾಯಪ್ರ
ಮಾಣದಲ್ಲಿ ಬರೆದಿರುವ ಪ್ರಕಾರ, ಅವನನ್ನು ಕರ್ತನಿಗೆ ಒಪ್ಪಿ
ಸುವದಕ್ಕೂ, ಕರ್ತನ ನ್ಯಾಯಪ್ರಮಾಣದಲ್ಲಿ ಹೇಳಿರುವ ಪ್ರ
ಕಾರ, ಜೋಡು ಬೆಳವ ಹಕ್ಕಿಗಳನ್ನಾದರೂ, ಎರಡು ಪಾರಿವಾಳ
ಮರಿಗಳನ್ನಾದರೂ, ಬಲಿಯಾಗಿ ಕೊರುವದಕ್ಕೂ, ಅವನನ್ನು
ಯೆರೂಸಲೇಮಿಗೆ ತಕ್ಕೊಂಡು ಹೋದರು.
೨೫ ಮತ್ತು, ಇಗೋ, ಸಿಮೆಯೋನನೆಂಬ ಒಬ್ಬ ಮನುಷ್ಯನು
ಯೆರೂಸಲೇಮಿನಲ್ಲಿ ಇದ್ದನು. ಆ ಮನುಷ್ಯನು ನೀತಿಯೂ
ಭಕ್ತಿಯೂ ಉಳ್ಳವನಾಗಿದ್ದು, ಇಸ್ರಯೇಲಿನ ಆದರಣೆಯನ್ನು
ಎದುರು ನೋಡುತ್ತಿದ್ದನು; ಮತ್ತು ಪರಿಶುದ್ಧಾತ್ಮನು ಅವನ ಮೇಲೆ
೨೬ ಇತ್ತು. ಇದಲ್ಲದೆ, ಅವನು ಕರ್ತನ ಕ್ರಿಸ್ತನನ್ನು ನೋಡುವದಕ್ಕಿಂ
ತ ಮುಂಚೆ ಮರಣವನ್ನು ನೋಡುವದಿಲ್ಲವೆಂದು ಪರಿಶುದ್ಧಾತ್ಮ
೨೭ ದಿಂದ ಅವನಿಗೆ ದೈವೋತ್ತರ ಉಂಟಾಗಿತ್ತು. ಇವನು ಆತ್ಮದಿಂದ
ದೇವಾಲಯಕ್ಕೆ ಬಂದನು. ಮತ್ತು, ತಂದೆ ತಾಯಿಗಳು, ಕೂಸಾ
ದ ಯೇಸುವನನ್ನು, ಅವನ ವಿಷಯವಾಗಿ ನ್ಯಾಯಪ್ರಮಾಣದ
೨೮ ಮರ್ಯಾದೆಯ ಪ್ರಕಾರ ಮಾಡುವ ಹಾಗೆ, ಒಳಗೆ ತಂದಾಗ,
ಇವನು ಅದನ್ನು ತನ್ನ ಕೈಗಳಲ್ಲಿ ತಕ್ಕೊಂಡು, ದೇವರನ್ನು
೨೯ ಸ್ತುತಿಸಿ, ಹೇಳಿದ್ದೇನಂದರೆ, ಪ್ರಭುವೇ, ಈಗ ನಿನ್ನ ವಾಕ್ಯದ
ಪ್ರಕಾರ ನಿನ್ನ ದಾಸನನ್ನು ಸಮಾಧಾನವಾಗಿ ಕಳುಹಿಸಿ ಬಿಡುತ್ತೀ;
೩೦ ಯಾಕಂದರೆ ನೀನು ಎಲ್ಲಾ ಜನಗಳ ಸಮುಖದಲ್ಲಿ ಸಿದ್ಧ ಮಾಡಿ
೩೧ ದಂಥ, ಜನಾಂಗಗಳಿಗೆ ಪ್ರಕಟಣೆಯಾದ ಬೆಳಕೂ ನಿನ್ನ ಜನರಾ
೩೨ ದ ಇಸ್ರಯೇಲಿನ ಮಹಿಮೆಯೂ ಆದಂಥ, ನಿನ್ನ ರಕ್ಷಣೆಯ
ನ್ನು, ನನ್ನ ಕಣ್ಣುಗಳು ಕಂಡವೆ.
೩೩ ಯೋಸೆಫನೂ, ಅವನ ತಾಯಿಯೂ, ಅವನ ವಿಷಯವಾಗಿ
ಹೇಳಲ್ಪಡುವವುಗಳಿಗೆ ಆಶ್ಚರ್ಯ ಪಡುವಾಗ, ಸಿಮೆಯೋನನು
೩೪ ಅವನನ್ನು ಆಶೀರ್ವದಿಸಿ, ಅವನ ತಾಯಿಯಾದ ಮರಿಯಳಿಗೆ
ಹೇಳಿದ್ದೇನಂದರೆ, ಇಗೋ, ಇವನು ಇಸ್ರಯೇಲಿನಲ್ಲಿ ಅನೇಕರ
ಬೀಳುವಿಕೆಗೂ, ಏಳುವಿಕೆಗೂ, ಎದುರು ಮಾತಾಡಲ್ಪಡುವ ಗುರು
೩೫ ತಾಗಿಯೂ ಇಡಲ್ಪಟ್ಟಿದ್ದಾನೆ. ಮತ್ತು ನಿನ್ನ ಪ್ರಾಣವನ್ನು ಕತ್ತಿ
ಯು ತಿವಿಯುವದು; ಹೀಗೆ ಅನೇಕ ಹೃದಯಗಳ ಆಲೋಚ
ನೆಗಳು ಪ್ರತ್ಯಕ್ಷವಾಗುವವು.
೩೬ ಇದಲ್ಲದೆ ಅನೇರನ ಕುಲದವನಾದ ಫನುವೇಲನ ಮಗಳಾದ
ಪ್ರವಾದಿನಿಯಾದ ಅನ್ನಳು ಇದ್ದಳು. ಇವಳು ತನ್ನ ಕನ್ಯಾ
ಭಾವದಿಂದ ಏಳು ವರುಷ ಗಂಡನ ಸಂಗಡ ಬದುಕಿ, ಬಹು ದಿನ
೩೭ ಗತಿಸಿದವಳಾಗಿ, ಹೆಚ್ಚು ಕಡಿಮೆ ಎಂಭತ್ತು ನಾಲ್ಕು ವರುಷದ
ವಿಧವೆಯಾಗಿದ್ದು, ಉಪವಾಸಗಳಿಂದಲೂ, ಬಿನ್ನಹಗಳಿಂದಲೂ,
ರಾತ್ರಿ ಹಗಲು ಸೇವಿಸುತ್ತಾ, ದೇವಾಲಯವನ್ನು ಬಿಟ್ಟು ಹೋ
೩೮ ಗದೆ ಇದ್ದಳು. ಇವಳು ಅದೇ ಘಳಿಗೆಯಲ್ಲಿ ಹತ್ತರ ಬಂದು,



ಕರ್ತನನ್ನು ಸ್ತುತಿಸಿ, ಯೆರೂಸಲೇಮಿನಲ್ಲಿ ವಿಮೋಚನೆಯ
ನ್ನು ಎದುರು ನೋಡುವವರೆಲ್ಲರಿಗೆ ಅವನನ್ನು ಕುರಿತು ಮಾತಾ
ಡಿದಳು.
೩೯ ಕರ್ತನ ನ್ಯಾಯಪ್ರಮಾಣದ ಪ್ರಕಾರವಾದವುಗಳನ್ನೆಲ್ಲಾ
ತೀರಿಸಿದ ಮೇಲೆ, ಗಲಿಲಾಯಕ್ಕೆ ತಮ್ಮು ಸ್ವಪಟ್ಟಣವಾದ ನಜರೇ
೪೦ ತಿಗೆ ತಿರಿಗಿ ಹೋದರು. ಮತ್ತು ಕೂಸು ಬೆಳೆದು, ಜ್ಞಾನದಿಂದ
ತುಂಬಿ, ಆತ್ಮದಲ್ಲಿ ಬಲಗೊಂಡಿತು. ಮತ್ತು ದೇವರ ಕೃಪೆಯು
ಅದರ ಮೇಲೆ ಇತ್ತು.
೪೧ ಇದಲ್ಲದೆ ಅವನ ತಂದೆ ತಾಯಿಗಳು ವರುಷ ವರುಷಕ್ಕೆ
೪೨ ಪಸ್ಕ ಹಬ್ಬದಲ್ಲಿ ಯೆರೂಸಲೇಮಿಗೆ ಹೋಗುತ್ತಿದ್ದರು. ಹೀಗಿರ
ಲಾಗಿ ಅವನು ಹನ್ನೆರಡು ವರುಷದವನಾದಾಗ, ಅವರು ಹಬ್ಬದ
೪೩ ಮರ್ಯಾದೆಯ ಪ್ರಕಾರ ಯೆರೂಸಲೇಮಿಗೆ ಏರಿ ಹೋಗಿ,
ದಿನಗಳನ್ನು ತೀರಿಸಿ, ತಿರಿಗಿ ಹೋಗುವಾಗ, ಹುಡುಗನಾದ ಯೇ
ಸು ಯೆರೂಸಲೇಮಿನಲ್ಲಿ ನಿಂತನು. ಯೋಸೆಫನೂ, ಅವನ
೪೪ ತಾಯಿಯೂ, ಅದನ್ನು ತಿಳಿಯದೆ, ಅವನು ಗುಂಪಿನಲ್ಲಿದ್ದಾ
ನೆಂದು ನೆನಸಿ, ಒಂದು ದಿನದ ಹಾದಿ ನಡೆದು, ನೆಂಟರಲ್ಲಿಯೂ
೪೫ ಪರಿಚಿತರಲ್ಲಿಯೂ ಅವನನ್ನು ಹುಡುಕಿ, ಅವನನ್ನು ಕಾಣದೆ,
ಹುಡುಕುತ್ತಾ, ಯೆರೂಸಲೇಮಿಗೆ ತಿರಿಗಿ ಬಂದರು.
೪೬ ಮೂರು ದಿವಸಗಳಾದ ಮೇಲೆ ದೇವಾಲಯದೊಳಗೆ ಬೋಧ
ಕರ ಮಧ್ಯದಲ್ಲಿ ಕೂತು ಕೊಂಡು, ಅವರನ್ನು ಕೇಳುತ್ತಾ, ಅವರಿಗೆ
೪೭ ಪ್ರಶ್ನೆ ಮಾಡುತ್ತಾ, ಇರುವ ಅವನನ್ನು ಕಂಡು ಕೊಂಡರು. ಅವ
ನನ್ನು ಕೇಳುವವರೆಲ್ಲರು ಅವನ ವಿವೇಕಕ್ಕೂ, ಉತ್ತರಗಳಿಗೂ,
೪೮ ಆಶ್ಚರ್ಯ ಪಟ್ಟರು. ಅವರು ಅವನನ್ನು ನೋಡಿ, ಭ್ರಮೆಗೊಂ
ಡು, ಅವನ ತಾಯಿಯು ಅವನಿಗೆ, ಮಗನೇ, ನಮಗೆ ಹೀಗೆ ಯಾಕೆ
ಮಾಡಿದಿ? ಇಗೋ, ನಿನ್ನ ತಂದೆಯೂ, ನಾನೂ ವ್ಯಥೆ ಪಟ್ಟು
೪೯ ನಿನ್ನನ್ನು ಹುಡುಕಿದೆವು, ಅಂದಾಗ; ಅವನು ಅವರಿಗೆ ನೀವು
ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ
೫೦ ಇರ ಬೇಕೆಂದು, ನಿಮಗೆ ತಿಳಿಯಲಿಲ್ಲವೋ! ಅಂದನು. ಆದರೆ
೫೧ ಅವರು ಅವನು ತಮಗೆ ಹೇಳಿದ ಮಾತು ಗ್ರಹಿಸಲಿಲ್ಲ. ಮತ್ತು
ಅವನು ಅವರ ಸಂಗಡ ಇಳಿದು, ನಜರೇತಿಗೆ ಹೋಗಿ, ಅವರಿಗೆ
ವಿಧೇಯನಾಗಿದ್ದನು. ಮತ್ತು ಅವನ ತಾಯಿಯು ಈ ಮಾತುಗ
ಳನ್ನೆಲ್ಲಾ ತನ್ನ ಹೃದಯದಲ್ಲಿ ಇಟ್ಟು ಕೊಂಡಳು.
೫೨ ಇದಲ್ಲದೆ ಯೇಸು ಜ್ಞಾನದಲ್ಲಿಯೂ, ನೀಳದಲ್ಲಿಯೂ,
ದೇವರ ಮುಂದೆ ಮನುಷ್ಯರ ಮುಂದೆ ಕೃಪೆಯಲ್ಲಿಯೂ,
ಹೆಚ್ಚಿದನು.

## ೩. ಸಂಧಿ.

೧ ಕೈಸರನಾದ ತಿಬೇರಿಯನು ಆಳಿದ ಹದಿನೈದನೇ ವರುಷದಲ್ಲಿ,
ಪೊಂತ್ಯ ಪಿಲಾತನು ಯೆಹೂದಕ್ಕೆ ಅಧಿಪತಿಯೂ, ಹೆರೋ
ದನು ಗಲಿಲಾಯಕ್ಕೆ ಚತುರಧಿಪತಿಯೂ, ಅವನ ಸಹೋದರ
೨ ನಾದ ಫಿಲಿಪ್ಪನು ಇತುರಾಯ ತ್ರಕೋನಿತಿ ಸೀಮೆಗಳಿಗೆ ಚತುರಧಿ
ಪತಿಯೂ, ಲುಸನ್ಯನು ಅಬಿಲೇನಿಗೆ ಚತುರಧಿಪತಿಯೂ, ಅನ್ನ
ನೂ ಕಾಯಫನೂ ಪ್ರಧಾನ ಯಾಜಕರೂ, ಆಗಿರುವಾಗ, ದೇವರ
ವಾಕ್ಯ ಅರಣ್ಯದಲ್ಲಿ ಜಕರೀಯನ ಮಗನಾದ ಯೋಹಾನನಿಗೆ
ಉಂಟಾಯಿತು.
೩ ಮತ್ತು ಅವನು ಪಾಪಗಳ ಪರಿಹಾರಕ್ಕಾಗಿರುವ ಮಾನಸಾಂತ
ರದ ಸ್ನಾನವನ್ನು ಸಾರುತ್ತಾ, ಯೋರ್ದನಿನ ಸುತ್ತಲಿರುವ ಎ
೪ ಲ್ಲಾ ದೇಶಕ್ಕೆ ಬಂದನು. ಹೀಗೆ ಪ್ರವಾದಿಯಾದ ಯೆಶಾಯನ
ವಾಕ್ಯಗಳ ಪುಸ್ತಕದಲ್ಲಿ ಬರೆದಿದೆ; ಏನಂದರೆ, ಕರ್ತನ ಮಾರ್ಗ
ವನ್ನು ಸಿದ್ಧ ಮಾಡಿರಿ, ಅವನ ಹಾದಿಗಳನ್ನು ಸೆಟ್ಟಿಗೆ ಮಾಡಿರಿ,
೫ ಎಂದು ಅರಣ್ಯದಲ್ಲಿ ಕೂಗುವವನ ಶಬ್ದವು. ಸಕಲ ತಗ್ಗುಗಳು
ತುಂಬಿಸಲ್ಪಡುವವು; ಸಕಲ ಬೆಟ್ಟಗಳೂ ಗುಡ್ಡಗಳೂ ತಗ್ಗಿಸಲ್ಪ
ಡುವವು; ಹೊಂಕಾದವುಗಳು ನೆಟ್ಟಗಾಗುವವು; ಕೊರಕಲಾದ
೬ ಮಾರ್ಗಗಳು ನುಣ್ಣಗಾಗುವವು. ಮತ್ತು ಮಾಂಸವೆಲ್ಲಾ ದೇವರ
ರಕ್ಷಣೆಯನ್ನು ನೋಡುವದು.
೭ ಹೀಗಿರಲಾಗಿ, ಅವನಿಂದ ಸ್ನಾನ ಹೊಂದುವದಕ್ಕೆ ಹೊರಗೆ
ಬರುವ ಸಮೂಹಗಳಿಗೆ ಅವನು ಹೇಳುವದೇನಂದರೆ, ಸರ್ಪ ಜಾತಿ
ಯವರೇ, ಬರುವ ಕೋಪಕ್ಕೆ ತಪ್ಪಿಸಿ ಕೊಳ್ಳ ನಿಮಗೆ ತೋರಿಸಿದ
೮ ವನ್ಯಾರು? ಹೀಗಿರುವದರಿಂದ ಮಾನಸಾಂತರಕ್ಕೆ ತಕ್ಕ ಫಲಗಳ
ನ್ನು ಫಲಿಸಿರಿ. ನಮಗೆ ಅಬ್ರಹಾಮನು ತಂದೆಯಾಗಿದ್ದಾನೆಂದು,
ನಿಮ್ಮೊಳಗೆ ಹೇಳಲಾರಂಭಿಸ ಬೇಡಿರಿ; ಯಾಕಂದರೆ ಈ ಕಲ್ಲುಗಳಿಂ
ದ ದೇವರು ಅಬ್ರಹಾಮನಿಗೆ ಮಕ್ಕಳನ್ನು ಎಬ್ಬಿಸ ಬಲ್ಲನೆಂದು ನಿಮ
೯ ಗೆ ಹೇಳುತ್ತೇನೆ. ಇದಲ್ಲದೆ ಈಗಲೇ ಕೊಡ್ಲಿಯು ಮರಗಳ ಬುಡ
ದಲ್ಲಿ ಇಟ್ಟಿದೆ; ಆದದರಿಂದ ಒಳ್ಳೇ ಫಲ ಫಲಿಸದ ಮರಗಳೆಲ್ಲಾ
ಕಡಿಯಲ್ಪಟ್ಟು, ಬೆಂಕಿಯಲ್ಲಿ ಹಾಕಲ್ಪಡುತ್ತವೆ.
೧೦ ಹಾಗಾದರೆ ಏನು ಮಾಡ ಬೇಕೆಂದು ಸಮೂಹಗಳು ಅವನ
೧೧ ನ್ನು ಕೇಳುವಾಗ, ಅವನು ಅವರಿಗೆ ಪ್ರತ್ಯುತ್ತರವಾಗಿ, ಎರಡು
ಅಂಗಿಗಳುಂಟಾದವನು ಇಲ್ಲದವನಿಗೆ ಕೊಡಲಿ; ಮತ್ತು ಆಹಾರ
೧೨ ಉಂಟಾದವನು ಹಾಗೆಯೇ ಮಾಡಲಿ, ಅಂದನು. ಇದಲ್ಲದೆ ಸುಂ
ಕದವರು ಸಹ ಸ್ನಾನ ಹೊಂದುವದಕ್ಕೆ ಬಂದು, ಬೋಧಕನೇ,
ನಾವೇನು ಮಾಡ ಬೇಕೆಂದು ಅವನಿಗೆ ಹೇಳಿದಾಗ, ಅವನವರಿಗೆ,
೧೩ ನಿಮಗೆ ನೇಮಿಸಲ್ಪಟ್ಟದ್ದಕ್ಕಿಂತ ಏನೂ ಹೆಚ್ಚು ಮಾಡಿ ಕೊಳ್ಳ
೧೪ ಬೇಡಿರಿ, ಅಂದನು. ಸೈನಿಕರು ಸಹ, ನಾವೂ ಏನು ಮಾ
ಡ ಬೇಕೆಂದು ಅವನನ್ನು ಕೇಳಿದಾಗ, ಅವರಿಗೆ, ಯಾವನನ್ನಾದ
ರೂ ಬಲವಂತ ಮಾಡದೆ, ಸುಳ್ಳು ದೂರು ಹೇಳದೆ, ನಿಮ್ಮ ಸಂಬ
ಳ ಸಾಕೆಂದಿರ್ರಿ, ಅಂದನು.
೧೫ ಆದರೆ ಜನರು ಕಾದು ಕೊಂಡು, ಎಲ್ಲರು ತಮ್ಮ ಹೃದಯ
ದಲ್ಲಿ ಯೋಹಾನನ ವಿಷಯವಾಗಿ, ಅವನು ಕ್ರಿಸ್ತನೇನೋ?
೧೬ ಎಂದು ಆಲೋಚನೆ ಕೊಳ್ಳುವಾಗ, ಯೋಹಾನನು ಪ್ರತ್ಯುತ್ತರ
ವಾಗಿ ಎಲ್ಲರಿಗೆ ಹೇಳಿದ್ದೇನಂದರೆ, ನಾನು ನಿಮಗೆ ನೀರಿನಿಂದ ಸ್ನಾ
ನ ಕೊಡುತ್ತೇನೆ; ಆದರೆ ನನಗಿಂತ ಶಕ್ತನು ಬರುತ್ತಾನೆ; ಅವನ
ಕೆರಗಳ ಬಾರನ್ನು ಬಿಚ್ಚ ನಾನು ಯೋಗ್ಯನಲ್ಲ; ಅವನು ಪರಿ
ಶುದ್ಧಾತ್ಮದಿಂದಲೂ, ಬೆಂಕಿಯಿಂದಲೂ, ನಿಮಗೆ ಸ್ನಾನ ಕೊಡು
೧೭ ವನು. ಅವನ ಪೊರವು ಅವನ ಕೈಯಲ್ಲಿ ಅದೆ; ತನ್ನ ಕಣವನ್ನು
ಶುದ್ಧ ಮಾಡಿ, ಗೋಧಿಯನ್ನು ತನ್ನ ಕಣಜದಲ್ಲಿ ಕೂಡಿಸುವನು;
ಆದರೆ ಹೊಟ್ಟನ್ನು ಆರದ ಬೆಂಕಿಯಿಂದ ಸುಟ್ಟು ಬಿಡುವನು.
೧೮ ಇನ್ನು ಅನೇಕ ಮಾತುಗಳಿಂದ ಅವನು ಬುದ್ಧಿ ಹೇಳಿ, ಜನರಿಗೆ
ಸುವಾರ್ತೆ ಪ್ರಸಂಗಿಸಿದನು.
೧೯ ಆದರೆ ಚತುರಧಿಪತಿಯಾದ ಹೆರೋದನು, ತನ್ನ ಸಹೋದ
ರನಾದ ಫಿಲಿಪ್ಪನ ಹೆಂಡತಿಯಾಗಿದ್ದ ಹೆರೋದ್ಯಳ ವಿಷಯವಾಗಿ

ಯೂ, ಹೆರೋದನು ಮಾಡಿದ ಎಲ್ಲಾ ದುಷ್ಕ್ರಿಯೆಗಳ ವಿಷ
೨೦ ಯವಾಗಿಯೂ, ಅವನಿಂದ ಗದರಿಸಲ್ಪಟ್ಟು, ಯೋಹಾನನನ್ನು
ಶೆರೆಮನೆಯಲ್ಲಿ ಮುಚ್ಚಿ ಬಿಟ್ಟು, ಇದನ್ನು ಸಹ ಎಲ್ಲವುಗಳಿಗೆ ಕೂ
ಡಿಸಿದನು.

೨೧ ಆದರೆ ಜನರೆಲ್ಲಾ ಸ್ನಾನ ಹೊಂದಿದಾಗ, ಏನಾಯಿತಂದರೆ,
ಯೇಸು ಸಹ ಸ್ನಾನ ಹೊಂದಿ, ಪ್ರಾರ್ಥನೆ ಮಾಡುತ್ತಿರುವಾಗ,
೨೨ ಆಕಾಶವು ತೆರೆಯಲ್ಪಟ್ಟಿತು. ಮತ್ತು ಪರಿಶುದ್ಧಾತ್ಮವು ಶರೀರ
ಭಾವವಾದ ಆಕಾಶದಿಂದ ಪಾರಿವಾಳದ ಹಾಗೆ ಅವನ ಮೇಲೆ ಇಳಿ
ಯಿತು. ಮತ್ತು, ನೀನು ನನ್ನ ಪ್ರಿಯ ಮಗನು, ನಿನ್ನಲ್ಲಿ ಆನಂದ
ಪಡುತ್ತೇನೆ, ಎಂಬ ಶಬ್ದವು ಆಕಾಶದಿಂದ ಉಂಟಾಯಿತು.

೨೩ ಯೇಸು ಹೆಚ್ಚು ಕಡಿಮೆ ಮೂವತ್ತನೇ ವರುಷ ಆರಂಭಿಸಿದ
ವನಾಗಿ ಯೋಸೆಫನ ಮಗನೆಂದು ಎಣಿಸಲ್ಪಟ್ಟನು. ಯೋಸೆ
೨೪ ಫನು ಏಲಿಯನ ಮಗನು. ಇವನು ಮತ್ತಾತನ ಮಗನು. ಇವನು
ಲೇವಿಯನ ಮಗನು. ಇವನು ಮೆಲ್ಕಿಯ ಮಗನು. ಇವನು
ಯನ್ನಾಯನ ಮಗನು. ಇವನು ಯೋಸೆಫನ ಮಗನು. ಇವ
೨೫ ನು ಮತ್ತತೀಯನ ಮಗನು. ಇವನು ಆಮೋಸನ ಮಗನು.
ಇವನು ನಹೂಮನ ಮಗನು. ಇವನು ಎಸ್ಲಿಯನ ಮಗನು, ಇ
೨೬ ವನು ನಗ್ಗಾಯನ ಮಗನು. ಇವನು ಮಾತನ ಮಗನು. ಇವ
ನು ಮತ್ತತೀಯನ ಮಗನು. ಇವನು ಸೆಮಿಯನ ಮಗನು. ಇವ
೨೭ ನು ಯೋಸೆಫನ ಮಗನು. ಇವನು ಯೊದನ ಮಗನು. ಇವ
ನು ಯೋಹಾನನ ಮಗನು. ಇವನು ರೇಸನ ಮಗನು. ಇವ
ನು ಜೆರುಬಾಬೆಲನ ಮಗನು. ಇವನು ಸಲತಿಯೇಲನ ಮಗನು.
೨೮ ಇವನು ನೇರಿಯ ಮಗನು. ಇವನು ಮೆಲ್ಕಿಯ ಮಗನು. ಇವ
ನು ಅದ್ದಿಯ ಮಗನು. ಇವನು ಕೊಸಾಮನ ಮಗನು. ಇವನು
ಎಲ್ಮೊದಾಮನ ಮಗನು. ಇವನು ಏರನ ಮಗನು. ಇವನು
೨೯ ಯೋಸೆಯ ಮಗನು. ಇವನು ಎಲಿಯೇಸರನ ಮಗನು. ಇ
ವನು ಯೊರೀಮನ ಮಗನು. ಇವನು ಮತ್ತಾತನ ಮಗನು.
೩೦ ಇವನು ಲೇವಿಯ ಮಗನು. ಇವನು ಸಿಮಿಯೋನನ ಮಗನು.
ಇವನು ಯೂದನ ಮಗನು. ಇವನು ಯೋಸೆಫನ ಮಗನು.
ಇವನು ಯೋನನ ಮಗನು. ಇವನು ಎಲ್ಯಕೀಮನ ಮಗನು.
೩೧ ಇವನು ಮೆಲೆಯನ ಮಗನು. ಇವನು ಮಹಿನಾನನ ಮಗನು.
ಇವನು ಮತ್ತಾತನ ಮಗನು. ಇವನು ನತಾನನ ಮಗನು. ಇವ
೩೨ ನು ದಾವೀದನ ಮಗನು. ಇವನು ಇಷಾಯನ ಮಗನು. ಇವನು
ಓಬೆದನ ಮಗನು. ಇವನು ಬೋವಜನ ಮಗನು. ಇವನು
ಸಲ್ಮೋನನ ಮಗನು. ಇವನು ನಹಶ್ಶೋನನ ಮಗನು. ಇವ
೩೩ ನು ಅಮಿನದಾಬನ ಮಗನು. ಇವನು ಅರಾಮನ ಮಗನು. ಇವ
ನು ಎಸ್ರೋಮನ ಮಗನು. ಇವನು ಫಾರೆಸನ ಮಗನು. ಇವನು
೩೪ ಯೂದನ ಮಗನು. ಇವನು ಯಾಕೋಬನ ಮಗನು. ಇವನು
ಇಸಾಕನ ಮಗನು. ಇವನು ಅಬ್ರಹಾಮನ ಮಗನು. ಇವನು
೩೫ ತೇರನ ಮಗನು. ಇವನು ನಹೋರನ ಮಗನು. ಇವನು ಸೆರೂ
ಗನ ಮಗನು. ಇವನು ರಗೌವನ ಮಗನು. ಇವನು ಪೆಲೆಗನ
ಮಗನು. ಇವನು ಏಬೆರನ ಮಗನು. ಇವನು ಸಾಲನ ಮಗನು.
೩೬ ಇವನು ಕೆನಾನನ ಮಗನು. ಇವನು ಅರ್ಫಕ್ಷಾದನ ಮಗನು.
ಇವನು ಶೇಮನ ಮಗನು. ಇವನು ನೋಹನ ಮಗನು. ಇವನು
೩೭ ಲಾಮೆಕನ ಮಗನು. ಇವನು ಮೆತೂಸಲನ ಮಗನು. ಇವನು
ಹನೋಕನ ಮಗನು. ಇವನು ಯಾರೆದನ ಮಗನು. ಇವನು
ಮಾಲಿಲೇಲನ ಮಗನು. ಇವನು ಕಯಿನಾನನ ಮಗನು. ಇವನು
೩೮ ಎನೋಷನ ಮಗನು. ಇವನು ಸೇತನ ಮಗನು. ಇವನು ಆದ
ಮನ ಮಗನು. ಇವನು ದೇವರಿಂದಾದವನು.

## ೪. ಸಂಧಿ.

೧ ಯೇಸು, ಪರಿಶುದ್ಧಾತ್ಮದಿಂದ ತುಂಬಿದವನಾಗಿ, ಯೊ
ರ್ದನಿಂದ ತಿರುಗಿ ಕೊಂಡಾಗ, ಆತ್ಮದಿಂದ ಅರಣ್ಯಕ್ಕೆ ಪ್ರೈ
ಯಲ್ಪಟ್ಟು, ನಾಲ್ವತ್ತು ದಿವಸ ಪಿಶಾಚನಿಂದ ಶೋಧಿಸಲ್ಪಟ್ಟ
೨ ನು. ಆ ದಿವಸಗಳಲ್ಲಿ ಅವನು ಏನೂ ಉಣ್ಣಲಿಲ್ಲ. ಅವು ಮುಗಿದ
೩ ಮೇಲೆ ಹಸಿದನು. ಆಗ ಪಿಶಾಚನು ಅವನಿಗೆ, ನೀನು ದೇವರ ಮಗ
ನಾಗಿದ್ದರೆ, ಈ ಕಲ್ಲಿಗೆ, ಕೊಟ್ಟಿಯಾಗ ಬೇಕೆಂದು ಹೇಳು, ಅ
೪ ನ್ನಾಲು; ಯೇಸು ಅವನಿಗೆ ಪ್ರತ್ಯುತ್ತರವಾಗಿ, ಕೊಟ್ಟಿ ಮಾತ್ರದಿಂ
ದಲ್ಲ, ದೇವರ ಪ್ರತಿ ವಾಕ್ಯದಿಂದ ಮನುಷ್ಯನು ಬದುಕುವನೆಂದು
ಬರೆದದೆ, ಅಂದನು.

೫ ಮತ್ತು ಪಿಶಾಚನು ಅವನನ್ನು ಎತ್ತರವಾದ ಬೆಟ್ಟಕ್ಕೆ ಕರ
ಕೊಂಡು ಹೋಗಿ, ಅವನಿಗೆ ಒಂದು ನಿಮಿಷದಲ್ಲಿ ಲೋಕದ ರಾ
೬ ಜ್ಯಗಳನ್ನೆಲ್ಲಾ ತೋರಿಸಿದನು. ಮತ್ತು ಪಿಶಾಚನು ಅವನಿಗೆ, ಈ
ಎಲ್ಲಾ ಅಧಿಕಾರವನ್ನೂ ಅವುಗಳ ಮಹಿಮೆಯನ್ನೂ ನಿನಗೆ ಕೊ
ಡುವೆನು; ಯಾಕಂದರೆ ಅದು ನನಗೆ ಒಪ್ಪಿಸಲ್ಪಟ್ಟಿದೆ; ಮತ್ತು
೭ ಮನಸ್ಸು ಬಂದವನಿಗೆ ಅದನ್ನು ಕೊಡುತ್ತೇನೆ. ಆದದರಿಂದ ನೀ
ನು ನನ್ನ ಮುಂದೆ ನಮಸ್ಕರಿಸಿದರೆ, ಎಲ್ಲಾ ನಿನ್ನದಾಗಿರುವದು.
ಅಂದಾಗ; ಯೇಸು ಅವನಿಗೆ ಪ್ರತ್ಯುತ್ತರವಾಗಿ, ಸೈತಾನನೇ,
೮ ನನ್ನ ಹಿಂದೆ ಹೋಗು; ಯಾಕಂದರೆ, ನಿನ್ನ ದೇವರಾದ ಕರ್ತ
ನಿಗೆ ನಮಸ್ಕರಿಸಿ, ಅವನನ್ನು ಮಾತ್ರ ಆರಾಧಿಸ ಬೇಕೆಂದು, ಬರೆ
ದದೆ, ಅಂದನು.

೯ ಮತ್ತು ಅವನನ್ನು ಯೆರೂಸಲೇಮಿಗೆ ಕೊಂಡು ಹೋಗಿ,
ದೇವಾಲಯದ ಶಿಖರದ ಮೇಲೆ ನಿಲ್ಲಿಸಿ, ಅವನಿಗೆ, ನೀನು ದೇವರ
೧೦ ಮಗನಾಗಿದ್ದರೆ, ಇಲ್ಲಿಂದ ಕೆಳಗೆ ಬೀಳು; ಯಾಕಂದರೆ ಅವನು
ನಿನ್ನನ್ನು ಕುರಿತು ತನ್ನ ದೂತರಿಗೆ, ನಿನ್ನನ್ನು ಕಾಪಾಡುವ ಹಾಗೆ,
೧೧ ಅಪ್ಪಣೆ ಕೊಡುವನೆಂದೂ, ನೀನು ನಿನ್ನ ಪಾದವನ್ನು ಕಲ್ಲಿಗೆ ತಗ
ಲಿಸದ ಹಾಗೆ, ಅವರು ತಮ್ಮ ಕೈಗಳಿಂದ ನಿನ್ನನ್ನು ಎತ್ತುವರೆಂ
೧೨ ದೂ ಬರೆದದೆ, ಅಂದನು. ಯೇಸು ಅವನಿಗೆ ಪ್ರತ್ಯುತ್ತರವಾಗಿ,
ನಿನ್ನ ದೇವರಾದ ಕರ್ತನನ್ನು ಶೋಧಿಸ ಬೇಡವೆಂದು, ಹೇಳಿ
೧೩ ಅದೆ, ಅಂದನು. ಪಿಶಾಚನು ಶೋಧನೆಯನ್ನೆಲ್ಲಾ ಮುಗಿಸಿ, ಸ್ವ
ಲ್ಪ ಕಾಲ ಅವನನ್ನು ಬಿಟ್ಟು ಹೋದನು.

೧೪ ಮತ್ತು ಯೇಸು ಆತ್ಮದ ಬಲದಿಂದ ಗಲಿಲಾಯಕ್ಕೆ ತಿರಿಗಿ
ಹೋದನು. ಅವನ ಸುದ್ದಿಯು ಸುತ್ತಲಿರುವ ಪೇಶಕ್ಕೆಲ್ಲಾ ಹಬ್ಬಿ
೧೫ ತು. ಇದಲ್ಲದೆ ಅವನು ಎಲ್ಲರಿಂದ ಮಹಿಮೆ ಹೊಂದುತ್ತಾ, ಅವರ
ಸಭೇ ಮನೆಗಳಲ್ಲಿ ಬೋಧಿಸುತ್ತಿದ್ದನು.

೧೬ ಅವನು ತಾನು ಸಾಕಲ್ಪಟ್ಟ ನಜರೇತಿಗೆ ಬಂದು, ತನ್ನ ವಾಡಿಕೆ
ಯ ಮೇರೆಗೆ ಸಬ್ಬತ್ ದಿವಸದಲ್ಲಿ ಸಭೇ ಮನೆಯಲ್ಲಿ ಪ್ರವೇಶಿಸಿ,
೧೭ ಓದುವದಕ್ಕೆ ಎದ್ದನು. ಮತ್ತು ಪ್ರವಾದಿಯಾದ ಯೆಶಾಯನ ಪು
ಸ್ತಕವು ಅವನಿಗೆ ಕೊಡಲ್ಪಟ್ಟಾಗ, ಪುಸ್ತಕವನ್ನು ತೆರೆದು, ಕರ್ತ
೧೮ ನ ಆತ್ಮವು ನನ್ನ ಮೇಲಿದೆ; ಯಾಕಂದರೆ ಬಡವರಿಗೆ ಸುವಾರ್ತೆ



ಪ್ರಸಂಗಿಸುವದಕ್ಕೆ ನನ್ನನ್ನು ಅಭಿಷೇಕಿಸಿದ್ದಾನೆ. ನಲಗಿದ ಹೃ
ದಯವುಳ್ಳವರನ್ನು ಗುಣ ಮಾಡುವದಕ್ಕೂ, ಶೆರೆಯವರಿಗೆ ಬಿ
ಡುಗಡೆಯನ್ನೂ, ಕುರುಡರಿಗೆ ದೃಷ್ಟಿಯನ್ನೂ, ಸಾರುವದಕ್ಕೂ,
೧೯ ಜಜ್ಜಲ್ಪಟ್ಟವರನ್ನು ಬಿಡುಗಡೆಯಾಗಿ ಕಳುಹಿಸುವದಕ್ಕೂ, ಕ
ರ್ತನ ಹಿತಕಾದ ಸಂವತ್ಸರವನ್ನು ಸಾರುವದಕ್ಕೂ, ನನ್ನನ್ನು
ಕಳುಹಿಸಿದ್ದಾನೆಂದು, ಬರೆದಿರುವ ಸ್ಥಳವನ್ನು ಕಂಡು ಕೊಂಡನು.

೨೦ ಆಗಲವನು ಪುಸ್ತಕವನ್ನು ಮುಚ್ಚಿ, ಉಳ್ಳಿಗದವನಿಗೆ ಕೊಟ್ಟು,
ಕೂತು ಕೊಂಡಾಗ, ಸಭೆ ಮನೆಯಲ್ಲಿ ಇರುವವರೆಲ್ಲರ ಕಣ್ಣುಗಳ
೨೧ ದೃಷ್ಟಿಯು ಅವನ ಮೇಲೆ ಇರಲು, ಅವರಿಗೆ, ಈ ಹೊತ್ತು ಈ
ಬರಹವು ನಿಮ್ಮ ಕಿವಿಗಳಲ್ಲಿ ಈಡೇರಿತೆಂದು ಹೇಳಲಾರಂಭಿಸಿದಾಗ,
೨೨ ಎಲ್ಲರು ಅವನಿಗೆ ಸಾಕ್ಷಿ ಕೊಟ್ಟು, ಅವನ ಬಾಯಿಯೊಳಗಿಂದ
ಹೊರಡುವ ಕೃಪೆಯ ವಾಕ್ಯಗಳಿಗೆ, ಆಶ್ಚರ್ಯ ಪಟ್ಟು, ಇವನು
೨೩ ಯೋಸೆಫನ ಮಗನಲ್ಲವೇ? ಅಂದರು. ಅವನು ಅವರಿಗೆ, ವೈ
ದ್ಯನೇ, ನಿನ್ನನ್ನು ವಾಸಿ ಮಾಡಿಕೋ, ಎಂಬ ಗಾದೆಯನ್ನೂ, ಕಪೆ
ರ್ನೌಮಿನಲ್ಲಿ ಆದವೆಂದು ನಾವು ಕೇಳಿದವುಗಳನ್ನು ಇಲ್ಲಿ ನಿನ್ನ
ಸ್ವದೇಶದಲ್ಲಿ ಮಾಡು, ಎಂಬುವದನ್ನೂ, ನನಗೆ ಹೇಳುವಿರಲ್ಪಟ್ಟೆ,
೨೪ ಅಂದನು. ಮತ್ತು ಅಂದದ್ದೇನಂದರೆ, ನಿಶ್ಚಯವಾಗಿ ನಿಮಗೆ ಹೇ
ಳುತ್ತೇನೆ, ಯಾವ ಪ್ರವಾದಿಯಾದರೂ ಸ್ವದೇಶದಲ್ಲಿ ಸಮರ್ಪ
೨೫ ಕವಾದವನಲ್ಲ. ಆದರೆ ನಿಜವಾಗಿ ನಿಮಗೆ ಹೇಳುತ್ತೇನೆ, ಎಲೀಯ
ನ ದಿವಸಗಳಲ್ಲಿ ಮೂರು ವರುಷ ಆರು ತಿಂಗಳು ಆಕಾಶವು ಮು
ಚ್ಚಲ್ಪಟ್ಟ ವೇಳೆಯಲ್ಲಿ ದೇಶವೆಲ್ಲಾದರ ಮೇಲೆ ಮಹಾ ಬರವು
ಉಂಟಾದಾಗ, ಅನೇಕ ವೆಧವೆಗಳು ಇಸ್ರಯೇಲಿನಲ್ಲಿ ಇದ್ದರು.
೨೬ ಆದರೆ ಸಿದೋನಿನ ಸರೆಪ್ತದಲ್ಲಿರುವ ವೆಧವೆ ಸ್ತ್ರೀಯ ಬಳಿಗೆ
ಹೊರ್ತು, ಅವರಲ್ಲಿ ಯಾವಳ ಬಳಿಗೂ ಎಲೀಯನು ಕಳುಹಿಸ
೨೭ ಲ್ಪಡಲಿಲ್ಲ. ಮತ್ತು ಪ್ರವಾದಿಯಾದ ಎಲೀಷನ ಕಾಲದಲ್ಲಿ ಇಸ್ರ
ಯೇಲಿನಲ್ಲಿ ಬಹಳ ಮಂದಿ ಕುಷ್ಠ ರೋಗಿಗಳು ಇದ್ದರು. ಆದರೆ
ಸುರಿಯದವನಾದ ನೆಯೆಮಾನನೇ ಹೊರ್ತು, ಅವರಲ್ಲಿ ಯಾವ
ನಾದರೂ ಶುಚಿಯಾಗಲಿಲ್ಲ.

೨೮ ಆಗ ಸಭೇ ಮನೆಯಲ್ಲಿರುವವರೆಲ್ಲರು ಇವುಗಳನ್ನು ಕೇಳಿ,
ಕೋಪದಿಂದ ತುಂಬಿದವರಾಗಿ, ಎದ್ದು, ಅವನನ್ನು ಪಟ್ಟಣದಿಂದ
೨೯ ಹೊರಡಿಸಿ, ಅವನನ್ನು ಕೆಳಗೆ ದೊಬ್ಬಿ ಡಾಕುವದಕ್ಕೆ ಅವರ ಪಟ್ಟಣ
ವು ಕಟ್ಟಿದ್ದ ಗುಡ್ಡದ ಅಂಚೆಗೆ ನಡಿಸಿ ಕೊಂಡು ಹೋದರು. ಆದ
೩೦ ರೆ ಅವನು ಅವರ ಮಧ್ಯದಲ್ಲಿಂದ ಹಾದು, ಹೊರಟು ಹೋ
೩೧ ದನು. ಮತ್ತು ಗಲಿಲಾಯದ ಪಟ್ಟವಾದ ಕಪೆರ್ನೌಮಿಗೆ ಬಂದು,
೩೨ ಸಬ್ಬತುಗಳಲ್ಲಿ ಅವರಿಗೆ ಬೋಧಿಸುತ್ತಿದ್ದನು. ಮತ್ತು ಅವನ ವಾ
ಕ್ಯವು ಅಧಿಕಾರವುಳ್ಳದ್ದಾಗಿದ್ದದರಿಂದ ಅವನ ಬೋಧನೆಗೆ ಭ್ರಮೆ
ಗೊಂಡರು.

೩೩ ಇದಲ್ಲದೆ ಸಭೇ ಮನೆಯಲ್ಲಿ ಅಶುದ್ಧ ದೆವ್ವದ ಆತ್ಮವುಳ್ಳ ಒಬ್ಬ
ಮನುಷ್ಯನಿದ್ದನು. ಅವನು ಮಹಾ ಶಬ್ದದಿಂದ ಕೂಗಿ, ನಜರೇತಿ
೩೪ ನವನಾದ ಯೇಸುವೇ, ಬಿಡು; ನಮಗೂ ನಿನಗೂ ಏನು? ನಮ್ಮ
ನ್ನು ನಾಶ ಮಾಡ ಬಂದಿಯೋ? ನೀನ್ಯಾರೆಂದು, ಬಲ್ಲೆನು, ದೇ
೩೫ ವರ ಪರಿಶುದ್ಧನೇ, ಅಂದಾಗ; ಯೇಸು ಅವನನ್ನು ಗದರಿಸಿ, ಸು
ಮ್ಮನಿದ್ದು, ಅವನಿಂದ ಹೊರಟು ಹೋಗು, ಅಂದನು. ಆಗ
ದೆವ್ವವು ಅವನನ್ನು ಮಧ್ಯದಲ್ಲಿ ಕೆಡವಿ, ಅವನಿಗೆ ಏನೂ ಕೇಡು
೩೬ ಮಾಡದೆ, ಅವನಿಂದ ಹೊರಟಿತು. ಆಗ ಎಲ್ಲರಿಗೆ ಭ್ರಮೆ ಉಂಟಾಗಿ,
ಅವರು ತಮ್ಮೊಳಗೆ, ಈ ವಾಕ್ಯ ಏನು? ಯಾಕಂದರೆ ಅವನು
ಅಧಿಕಾರದಿಂದಲೂ ಬಲದಿಂದಲೂ ಅಶುದ್ಧಾತ್ಮಗಳಿಗೆ ಆಜ್ಞಾಪಿಸ
೩೭ ಲಾಗಿ, ಅವು ಹೊರಡುತ್ತವೆ ಎಂದು, ಹೇಳಿ ಕೊಂಡರು. ಇದಲ್ಲದೆ
ಅವನ ಸುದ್ದಿಯು ಸುತ್ತಲಿನ ದೇಶದ ಸ್ಥಳಗಳಿಗೆಲ್ಲಾ ಹಬ್ಬಿತು.

೩೮ ತರುವಾಯ ಅವನು ಎದ್ದು, ಸಭೇ ಮನೆಯನ್ನು ಬಿಟ್ಟು, ಸೀ
ಮೋನನ ಮನೆಯಲ್ಲಿ ಪ್ರವೇಶಿಸಿದನು. ಸೀಮೋನನ ಅತ್ತೆಯು
ಬಹು ಜ್ವರದಲ್ಲಿ ಬಿದ್ದಿರುವದರಿಂದ, ಅವಳಿಗೋಸ್ಕರ ಅವನನ್ನು
೩೯ ಬೇಡಿ ಕೊಂಡರು. ಅವನು ಅವಳ ಹತ್ತರ ನಿಂತು, ಜ್ವರಕ್ಕೆ ಆ
ಜ್ಞಾಪಿಸುವಾಗ, ಅದು ಅವಳನ್ನು ಬಿಟ್ಟು ಹೋಯಿತು. ಸಂಗಡಲೇ
ಅವಳು ಎದ್ದು, ಅವರಿಗೆ ಸೇವೆ ಮಾಡಿದಳು.

೪೦ ಇದಲ್ಲದೆ ಸೂರ್ಯನು ಅಸ್ತಮಿಸಿದಾಗ, ನಾನಾ ರೋಗಗ
ಳಿಂದ ಅಸ್ವಸ್ಥವಾಗಿರುವವರು ಯಾರ ಬಳಿಯಲ್ಲಿ ಇದ್ದರೋ,
ಅವರು ಅವರನ್ನು ಅವನ ಬಳಿಗೆ ತಂದರು. ಆಗಲವನು ಅವರ
ಲ್ಲಿ ಬಲ್ಬೊಬ್ಬನ ಮೇಲೆ ಕೈಗಳನ್ನಿಟ್ಟು, ಅವರನ್ನು ಸ್ವಸ್ಥ ಮಾ
ಡಿದನು. ಇದಲ್ಲದೆ ದೆವ್ವಗಳು ಸಹ, ನೀನು ದೇವರ ಮಗನಾದ
೪೧ ಕ್ರಿಸ್ತನೆಂದು ಕೂಗಿ, ಅನೇಕರನ್ನು ಬಿಟ್ಟು ಹೋದವು. ಅವು ಅವ
ನು ಕ್ರಿಸ್ತನೆಂದು ತಿಳಿದದರಿಂದ, ಅವನು ಅವುಗಳನ್ನು ಗದರಿಸಿ,
ಮಾತಾಡ ಗೊಡಿಸಲಿಲ್ಲ.

೪೨ ಆದರೆ ಬೆಳಗಾದ ಮೇಲೆ, ಅವನು ಹೊರಟು, ಅರಣ್ಯ ಸ್ಥಳ
ಕ್ಕೆ ಹೋದನು. ಸಮೂಹಗಳು ಅವನನ್ನು ಹುಡುಕಿ, ಅವನ
ಬಳಿಗೆ ಬಂದು, ಅವನು ತಮ್ಮನ್ನು ಬಿಟ್ಟು ಹೋಗದ ಹಾಗೆ, ಹಿಡು
೪೩ ಕೊಂಡರು. ಆದರೆ ಅವನವರಿಗೆ, ನಾನು ಬೇರೆ ಪಟ್ಟಣಗಳಿಗೂ ದೇ
ವರ ರಾಜ್ಯದ ಸುವಾರ್ತೆ ಪ್ರಸಂಗಿಸ ಬೇಕು; ಯಾಕಂದರೆ ಇದ
೪೪ ಕ್ಕಾಗಿಯೇ ಕಳುಹಿಸಲ್ಪಟ್ಟಿದ್ದೇನೆಂದು ಹೇಳಿ, ಗಲಿಲಾಯದ ಸಭೆ
ಮನೆಗಳಲ್ಲಿ ಪ್ರಸಂಗಿಸುತ್ತಿದ್ದನು.

## ೫. ಸಂಧಿ.

೧ ಸಮೂಹವು ದೇವರ ವಾಕ್ಯವನ್ನು ಕೇಳುವದಕ್ಕೆ ಅವನ
ಮೇಲೆ ಬಿದ್ದು ಕೊಂಡಿರುವಾಗ, ಅವನು ಗೆನೆಜರೆತ್ ಕೆರೆಯ ಬಳಿ
೨ ಯಲ್ಲಿ ನಿಂತು ಕೊಂಡು, ಕೆರೆಯ ಹತ್ತರ ನಿಂತ ಎರಡು ಹಡಗಗ
ಳನ್ನು ನೋಡಿದನು. ಆದರೆ ಮೀನುಗಾರರು ಅವುಗಳಿಂದ ಇಳಿ
೩ ದು, ಬಲೆಗಳನ್ನು ತೊಳೆಯುತ್ತಿದ್ದರು. ಆಗಲವನು ಆ ಹಡಗಗ
ಳಲ್ಲಿ ಸೀಮೋನನದಾಗಿರುವ ಬಂದರಲ್ಲಿ ಏರಿ, ಥದದಿಂದ ಸ್ವಲ್ಪ
ದೂರ ನೂಕ ಬೇಕೆಂದು, ಅವನನ್ನು ಬೇಡಿ ಕೊಂಡು, ಕೂತು,
ಹಡಗದೊಳಗಿಂದ ಸಮೂಹಗಳಿಗೆ ಬೋಧಿಸಿದನು.

೪ ಮಾತಾಡಿ ತೀರಿಸಿದ ಮೇಲೆ, ಸೀಮೋನನಿಗೆ, ಅಳವಾದ ಸ್ಥಳ
ಕ್ಕೆ ನಡಿಸಿ, ಮೀನು ಬೇಟೆಗೆ ನಿಮ್ಮ ಬಲೆಗಳನ್ನು ಇಳಿಸಿರಿ, ಅಂದ
೫ ನು. ಸೀಮೋನನು ಪ್ರತ್ಯುತ್ತರವಾಗಿ, ಅಯ್ಯಾ, ನಾವು ರಾತ್ರಿ
ಯೆಲ್ಲಾ ಕಷ್ಟ ಮಾಡಿದ್ದರೂ, ಏನೂ ಶಿಕ್ಕಲಿಲ್ಲ. ಆದಾಗ್ಯೂ
ನಿನ್ನ ಮಾತಿನ ಮೇರೆಗೆ ಬಲೆ ಇಳಿಸುತ್ತೇನೆಂದು, ಅವನಿಗೆ ಹೇಳಿ
೬ ದನು. ಅದನ್ನು ಮಾಡಿ, ಮೀನುಗಳ ದೊಡ್ಡ ಸಮೂಹವನ್ನು
ಕೂಡಿಸಿದರು. ಮತ್ತು ಅವರ ಬಲೆ ಹರಿದು ಹೋಯಿತು. ಆಗಲ
೭ ವರು ಬೇರೆ ಹಡಗದಲ್ಲಿದ್ದ ಜತೆಗಾರರಿಗೆ, ಬಂದು, ತಮಗೆ ಸಹಾ
ಯ ಮಾಡ ಬೇಕೆಂದು ಸಾಜ್ಞೆ ಮಾಡಿದರು. ಅವರು ಬಂದ ಮೇಲೆ,
ಎರಡು ಹಡಗಗಳನ್ನೂ, ಅವು ಮುಣುಗುವದ್ದು, ತುಂಬಿಸಿದರು.

೮ ಸೀಮೋನ್ ಪೇತ್ರನು ಅದನ್ನು ನೋಡಿ, ಯೇಸುವಿನ ಮೊ
ಣಕಾಲುಗಳ ಮುಂದೆ ಬಿದ್ದು, ಕರ್ತನೇ, ನನ್ನನ್ನು ಬಿಟ್ಟು ಹೋ
೯ ಗು; ಪಾಪಿಯಾದ ಮನುಷ್ಯನಾಗಿದ್ದೇನೆ, ಅಂದನು. ಯಾಕಂ
ದರೆ ಅವರು ಹಿಡಿದ ಮೀನುಗಳ ರಾಶಿಯ ನಿಮಿತ್ತ ಅವನಿಗೂ
೧೦ ಅವನ ಸಂಗಡ ಇದ್ದವರೆಲ್ಲರಿಗೂ ದಿಗಿಲು ಹುಟ್ಟಿತು. ಸೀಮೋ
ನನ ಪಾಲುಗಾರರಾದ ಜೆಬೆದಾಯನ ಮಕ್ಕಳಾದ ಯಾಕೋಬ
ನಿಗೂ ಯೋಹಾನನಿಗೂ ಅದೇ ಪ್ರಕಾರವಾಯಿತು. ಆಗ ಯೇ
ಸು ಸೀಮೋನನಿಗೆ, ಭಯ ಪಡ ಬೇಡ; ಈಗಿನಿಂದ ಮನುಷ್ಯರ
೧೧ ನ್ನು ಹಿಡಿಯುವವನಾಗಿರುವಿ, ಅಂದನು. ಮತ್ತು ಅವರು ಹಡಗಗ
ಳನ್ನು ಧಡಕ್ಕೆ ತಂದು, ಎಲ್ಲಾ ಬಿಟ್ಟು, ಅವನನ್ನು ಹಿಂಬಾಲಿಸಿ
ದರು.

೧೨ ಇದ್ದಲ್ಲದೆ ಅವನು ಬಂದಾನೊಂದು ಪಟ್ಟಣದಲ್ಲಿರುವಾಗ, ಇಗೋ,
ಕುಷ್ಠ ತುಂಬಿದ ಮನುಷ್ಯನು ಯೇಸುವನ್ನು ನೋಡಿ, ಪೋಕೆ
ಕೆಳಗಾಗಿ ಬಿದ್ದು, ಅವನನ್ನು ಬೇಡಿ ಕೊಂಡು, ಕರ್ತನೇ, ನಿನಗೆ
೧೩ ಮನಸ್ಸಿದ್ದರೆ, ನನ್ನನ್ನು ಶುಚಿ ಮಾಡ ಬಲ್ಲಿ, ಅಂದನು. ಆಗಲ
ವನು ಕೈ ಚಾಚಿ, ಅವನನ್ನು ಮುಟ್ಟಿ, ಮನಸ್ಸುಂಟು, ಶುಚಿ
ಯಾಗು, ಅಂದನು; ಸಂಗಡಲೇ ಕುಷ್ಠವು ಅವನನ್ನು ಬಿಟ್ಟು
೧೪ ಹೋಯಿತು. ಇದ್ದಲ್ಲದೆ, ನೀನು ಯಾರಿಗೂ ಹೇಳ ಬಾರದು; ಆ
ದರೆ ಹೋಗಿ, ಅವರಿಗೆ ಸಾಕ್ಷಿಯಾಗಿ ಯಾಜಕನಿಗೆ ನಿನ್ನನ್ನು
ತೋರಿಸಿ ಕೊಂಡು, ಮೋಶೆಯು ಆಜ್ಞಾಪಿಸಿದ ಹಾಗೆ ನಿನ್ನ ಶುದ್ಧೀ
ಕರಣಕ್ಕೋಸ್ಕರ ಅರ್ಪಿಸೆಂದು, ಅವನಿಗೆ ಅಪ್ಪಣೆ ಕೊಟ್ಟನು.
೧೫ ಆದರೆ ಅವನ ಸುದ್ದಿ ಹೆಚ್ಚಾಗಿ ಹಬ್ಬಿತು. ಮತ್ತು ಬಹು ಸಮೂ
ಹಗಳು ಕೇಳುವದಕ್ಕೂ, ಅವನಿಂದ ತಮ್ಮ ಜಾಡ್ಯಗಳನ್ನು ವಾಸಿ
೧೬ ಮಾಡಿಸಿ ಕೊಳ್ಳುವದಕ್ಕೂ, ಕೂಡಿ ಬಂದವು. ಆಗಲವನು ಅರ
ಣ್ಯ ಸ್ಥಳಗಳಿಗೆ ಪ್ರತ್ಯೇಕವಾಗಿ ಹೋಗಿ, ಪ್ರಾರ್ಥಿಸುತ್ತಿದ್ದನು.

೧೭ ಮತ್ತು ಒಂದಾನೊಂದು ದಿವಸದಲ್ಲಿ ಅವನು ಬೋಧಿಸುತ್ತಿರು
ವಾಗ, ಗಲಿಲಾಯ, ಯೆಹೂದ, ದೇಶಗಳ ಸಕಲ ಗ್ರಾಮಗಳಿಂದ
ಲೂ, ಯೆರೂಸಲೇಮಿನಿಂದಲೂ ಬಂದ ಫರಿಸಾಯರೂ, ನ್ಯಾ
ಯ ಶಾಸ್ತ್ರಿಗಳೂ, ಕೂತು ಕೊಂಡಿರಲು, ಕರ್ತನ ಬಲವು ಅವರ
೧೮ ನ್ನು ವಾಸಿ ಮಾಡುವದಕ್ಕೆ ಇತ್ತು. ಮತ್ತು, ಇಗೋ, ಪಕ್ಷವಾಯು
ವಿನವನಾದ ಒಬ್ಬ ಮನುಷ್ಯನನ್ನು ಮಂಚದ ಮೇಲೆ ಹೊತ್ತು
ಕೊಂಡ ಜನರು ಅವನನ್ನು ಒಳಗೆ ತಂದು, ಅವನ ಮುಂದೆ ಇಡ
೧೯ ಬೇಕೆಂದು, ಅವನನ್ನು ಒಳಗೆ ತರುವದಕ್ಕೆ ಸಮೂಹದ ನಿಮಿತ್ತ
ಮಾರ್ಗ ಕಾಣದೆ, ಮನೆಯ ಮೇಲೆ ಏರಿ, ಹೆಂಚುಗಳನ್ನು ತೆಗೆ
ದು, ಅವನನ್ನು ಮಂಚದ ಸಂಗಡ ಮಧ್ಯದಲ್ಲಿ ಯೇಸುವಿನ ಮುಂ
೨೦ ದಕ್ಕೆ ಇಳಿಸಿದರು. ಅವನು ಅವರ ವಿಶ್ವಾಸವನ್ನು ನೋಡಿ, ಮ
ನುಷ್ಯನೇ, ನಿನ್ನ ಪಾಪಗಳು ಮನ್ನಿಸಲ್ಪಟ್ಟಿವೆ, ಎಂದು ಅವನಿ
ಗೆ ಹೇಳಿದನು.

೨೧ ಶಾಸ್ತ್ರಿಗಳೂ, ಫರಿಸಾಯರೂ, ದೂಷಣೆ ಹೇಳುವ ಇವನ್ಯಾ
ರು? ದೇವಕೊಬ್ಬನೇ ಹೊರ್ತು, ಪಾಪಗಳನ್ನು ಮನ್ನಿಸ ಶಕ್ತ
ನ್ಯಾರು? ಎಂದು ತಮ್ಮಲ್ಲಿ ಆಲೋಚನೆಮಲಾರಂಭಿಸಿದಾಗ, ಯೇ
೨೨ ಸು ಅವರ ಆಲೋಚನೆಗಳನ್ನು ತಿಳಿದು, ಅವರಿಗೆ ಉತ್ತರ ಕೊಟ್ಟು,
ಹೇಳಿದ್ದೇನಂದರೆ, ನೀವು ನಿಮ್ಮ ಹೃದಯಗಳಲ್ಲಿ ಆಲೋಚನೆಸಿ
೨೩ ಕೊಳ್ಳುವದೇನು? ಯಾವದು ಸುಲಭ? ನಿನ್ನ ಪಾಪಗಳು ನಿನಗೆ
ಮನ್ನಿಸಲ್ಪಟ್ಟಿವೆ ಎಂದು ಹೇಳುವದೋ? ಇಲ್ಲವೆ ಎದ್ದು, ತಿರುಗಾಡು
೨೪ ಎಂದು ಹೇಳುವದೋ? ಆದರೆ ಭೂಮಿಯ ಮೇಲೆ ಪಾಪಗಳನ್ನು
ಮನ್ನಿಸುವದಕ್ಕೆ ಮನುಷ್ಯನ ಮಗನಿಗೆ ಅಧಿಕಾರ ಉಂಟೆಂದು
ನೀವು ತಿಳಿಯುವ ಹಾಗೆ, ಅವನು ಪಕ್ಷವಾಯುವಿನವನಿಗೆ, ಎದ್ದು,
ನಿನ್ನ ಮಂಚ ಎತ್ತಿ, ನಿನ್ನ ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ,
೨೫ ಅಂದನು. ಸಂಗಡಲೇ ಅವನು ಅವರ ಮುಂದೆ ಎದ್ದು, ತಾನು ಮ
ಲಗಿದ್ದ ಮಂಚವನ್ನು ಎತ್ತಿ, ದೇವರನ್ನು ಮಹಿಮೆ ಪಡಿಸುತ್ತಾ,
೨೬ ತನ್ನ ಮನೆಗೆ ಹೋದನು. ಆಗ ವಿಸ್ಮಯವು ಎಲ್ಲರನ್ನು ಹಿಡಿಯಿ
ತು; ಅವರು ದೇವರನ್ನು ಮಹಿಮೆ ಪಡಿಸಿ, ಇಂದು ಅಪರೂಪವಾದ
ವುಗಳನ್ನು ನೋಡಿದ್ದೇವೆಂದು ಹೇಳಿ, ಭಯ ತುಂಬಿದವರಾದರು.

೨೭ ಇವುಗಳಾದ ಮೇಲೆ ಅವನು ಹೊರಟು, ಸುಂಕಕ್ಕೆ ಕೂತು
ಕೊಂಡ ಲೇವಿ ಎಂಬ ಸುಂಕದವನನ್ನು ನೋಡಿ, ಅವನಿಗೆ, ನನ್ನನ್ನು
೨೮ ಹಿಂಬಾಲಿಸು, ಅಂದನು. ಅವನು ಎಲ್ಲಾ ಬಿಟ್ಟು, ಎದ್ದು, ಅವನ
೨೯ ನ್ನು ಹಿಂಬಾಲಿಸಿದನು. ಆ ಮೇಲೆ ಲೇವಿಯು ತನ್ನ ಮನೆಯಲ್ಲಿ ಅ
ವನಿಗೆ ದೊಡ್ಡ ಔತಣವನ್ನು ಮಾಡುವಾಗ, ಸುಂಕದವರೂ ಅವರ
ಸಂಗಡ ಕೂತು ಕೊಂಡ ಬೇರೆ ಜನರೂ, ಬಹು ಸಮೂಹವಾಗಿ
೩೦ ದ್ದರು. ಆಗಲವರ ಶಾಸ್ತ್ರಿಗಳೂ ಫರಿಸಾಯರೂ, ಅವನ ಶಿಷ್ಯರ
ಸಂಗಡ, ನೀವು ಸುಂಕದವರ ಪಾಪಿಷ್ಠರ ಸಂಗಡ ಉಂಡು ಕುಡಿ
೩೧ ಯುವವೇನೆಂದು ಗುಣುಗುಟ್ಟಿದರು. ಯೇಸು ಉತ್ತರ ಕೊಟ್ಟು
ಅವರಿಗೆ, ಸ್ವಸ್ಥವಾಗಿರುವವರಿಗಲ್ಲ, ಅಸ್ವಾಸ್ಥ್ಯವಾಗಿರುವವರಿಗೆ ವೈ
೩೨ ದ್ಯನು ಬೇಕು. ನೀತಿವಂತರನ್ನಲ್ಲ, ಪಾಪಿಷ್ಠರನ್ನು ಮಾನಸಾಂತ
ರಕ್ಕೆ ಕರೆಯ ಬಂದೆನು, ಅಂದನು.

೩೩ ಅವರು ಅವನಿಗೆ, ಯೋಹಾನನ ಶಿಷ್ಯರು, ಫರಿಸಾಯರ
ಶಿಷ್ಯರು ಸಹ, ಬಹಳ ಸಾರಿ ಉಪವಾಸ ಪ್ರಾರ್ಥನೆಗಳನ್ನು ಮಾಡ
ಲಾಗಿ, ನಿನ್ನವರು ಯಾತಕ್ಕೆ ಉಂಡು ಕುಡಿಯುತ್ತಾರೆ? ಅಂದಾಗ;
೩೪ ಅವನವರಿಗೆ, ನೀವು ಮದುವೆಯವರನ್ನು, ಮದಲಿಂಗನು ಅವರ ಸಂ
೩೫ ಗಡ ಇರುವಷ್ಟರಲ್ಲಿ, ಉಪವಾಸ ಮಾಡಿಸಲಾಗುವದೋ? ಆದರೆ
ಮದಲಿಂಗನು ಅವರ ಬಳಿಯಿಂದ ವೈಯಲ್ಪಡುವ ದಿವಸಗಳು
ಬರುವವು; ಆಗ, ಆ ದಿವಸಗಳಲ್ಲಿ, ಉಪವಾಸ ಮಾಡುವರು, ಅಂ
ದನು.

೩೬ ಮತ್ತು ಅವನು ಅವರಿಗೆ ಹೇಳಿದ ಸಾಮ್ಯವೇನಂದರೆ, ಹಳೇ
ವಸ್ತ್ರಕ್ಕೆ ಹೊಸ ಬಟ್ಟೆಯ ತುಂಡು ಯಾನನೂ ಹಚ್ಚುವ
ದಿಲ್ಲ; ಹಚ್ಚಿದರೆ ಹೊಸದು ಹರಿದು ಹೋಗುವದು, ಮತ್ತು ಹ
೩೭ ಳೇದಕ್ಕೆ ಹೊಸದರ ತುಂಡು ಸರಿ ಬೀಳುವದಿಲ್ಲ. ಮತ್ತು ಹೊಸ
ದ್ರಾಕ್ಷೇ ರಸವನ್ನು ಹಳೇ ಬುದ್ದಿಲಿಗಳಲ್ಲಿ ಯಾವನೂ ಹಾಕುವ
ದಿಲ್ಲ; ಹಾಕಿದರೆ, ಹೊಸ ದ್ರಾಕ್ಷೇ ರಸವು ಬುದ್ದಿಲಿಗಳನ್ನು ಒಡೆದು,
ತಾನು ಚೆಲ್ಲಲ್ಪಡುವದು, ಮತ್ತು ಬುದ್ದಿಲಿಗಳು ಕೆಟ್ಟು ಹೋಗು
೩೮ ವವು. ಆದರೆ ಹೊಸ ದ್ರಾಕ್ಷೇ ರಸವನ್ನು ಹೊಸ ಬುದ್ದಿಲಿಗಳಲ್ಲಿ
ಹಾಕ ಬೇಕು; ಆಗ ಎರಡೂ ಭದ್ರವಾಗಿರುವವು. ಮತ್ತು ಯಾವ
೩೯ ನಾದರೂ ಹಳೇದನ್ನು ಕುಡಿದ ಕೂಲ್ಲೆ, ಹೊಸದು ಬೇಕೆನ್ನುವ
ದಿಲ್ಲ; ಯಾಕಂದರೆ, ಹಳೇದು ಲೇಸು, ಅನ್ನುವನು.

## ೬. ಸಂಧಿ.

೧ ಇದ್ದಲ್ಲದೆ ಪಸ್ಕಕಾಲದ ಒಂದು ಸಬ್ಬತ್ ದಿವಸದಲ್ಲಿ ಅವನು
ಬೆಳೆಯ ಹೊಲಗಳನ್ನು ದಾಟಿ ಹೋಗುವಾಗ, ಅವನ ಶಿಷ್ಯರು
ತೆನೆಗಳನ್ನು ಕಿತ್ತು, ತಮ್ಮ ಕೈಗಳಲ್ಲಿ ಹೊಸಗಿ, ತಿನ್ನುತ್ತಿದ್ದರು.



೨ ಆದರೆ ಫರಿಸಾಯರಲ್ಲಿ ಕೆಲವರು, ನೀವು ಸಬ್ಬತುಗಳಲ್ಲಿ ಮಾಡ
ಬಾರದವುಗಳನ್ನು ಮಾಡುವದೇನೆಂದು ಅವರಿಗೆ ಹೇಳಿದಾಗ, ಯೇ
೩ ಸು ಅವರಿಗೆ ಪ್ರತ್ಯುತ್ತರವಾಗಿ, ದಾವೀದನು, ತಾನೂ ಅವನ
ಸಂಗಡ ಇದ್ದವರೂ ಹಸಿದಾಗ, ಏನು ಮಾಡಿದನೆಂದೂ, ಅವನು
೪ ದೇವರ ಮನೆಯಲ್ಲಿ ಪ್ರವೇಶಿಸಿ, ಯಾಜಕರು ಮಾತ್ರವೇ ಹೊ
ರ್ತು, ಮತ್ಯಾರೂ ತಿನ್ನ ಬಾರದ ಸಮುಖದ ರೊಟ್ಟಿಗಳನ್ನು
ತೆಗೆದು ಕೊಂಡು, ತಿಂದು, ತನ್ನ ಸಂಗಡ ಇದ್ದವರಿಗೆ ಸಹ ಕೊ
೫ ಟ್ಟೆನೆಂದೂ ನೀವು ಓದಲಿಲ್ಲವೋ? ಅಂದನು. ಮತ್ತು ಅವರಿಗೆ,
ಮನುಷ್ಯನ ಮಗನು ಸಬ್ಬತಿಗೂ ಕರ್ತನಾಗಿದ್ದಾನೆ, ಅಂದನು.

೬ ಇದ್ದಲ್ಲದೆ ಮತ್ತೊಂದು ಸಬ್ಬತಿನಲ್ಲಿ ಅವನು ಸಭೆ ಮನೆಯಲ್ಲಿ
ಪ್ರವೇಶಿಸಿ, ಬೋಧಿಸಲಾಗಿ, ಬಲಗೈ ಒಣಗಿದ ಒಬ್ಬ ಮನುಷ್ಯನು
೭ ಅಲ್ಲಿ ಇದ್ದನು. ಆದರೆ ಶಾಸ್ತ್ರಿಗಳೂ, ಫರಿಸಾಯರೂ ಅವನು ಸ
ಬ್ಬತಿನಲ್ಲಿ ವಾಸಿ ಮಾಡುವನೇನೋ? ಅವನ ಮೇಲೆ ತಪ್ಪು ಕಂದು
೮ ಕೊಳ್ಳ ಬೇಕೆಂದು, ಅವನಿಗೆ ಹೊಂಚಿ ಕೊಂಡಿದ್ದರು. ಹೀಗಿರ
ಲಾಗಿ ಅವನು, ಅವರ ಆಲೋಚನೆಗಳನ್ನು ತಿಳಿದು, ಒಣಗಿದ
ಕೈಯುಳ್ಳ ಮನುಷ್ಯನಿಗೆ, ಎದ್ದು, ಮಧ್ಯದಲ್ಲಿ ನಿಂತುಕೋ,
೯ ಅನ್ನಲು; ಅವನು ಎದ್ದು, ನಿಂತನು. ಆಗ ಯೇಸು ಅವರಿಗೆ, ನಿಮ್ಮ
ನ್ನು ಒಂದು ಪ್ರಶ್ನೆ ಕೇಳುತ್ತೇನೆ. ಸಬ್ಬತುಗಳಲ್ಲಿ ಯಾವದು
ನ್ಯಾಯ? ಒಳ್ಳೇದನ್ನು ಮಾಡುವದೋ, ಕೆಟ್ಟದ್ದನ್ನು ಮಾಡು
ವದೋ, ಪ್ರಾಣವನ್ನು ರಕ್ಷಿಸುವದೋ, ನಾಶ ಮಾಡುವದೋ?
೧೦ ಎಂದು ಹೇಳಿ, ಅವಕೆಲ್ಲರನ್ನು ಸುತ್ತ ನೋಡಿ, ಆ ಮನುಷ್ಯನಿಗೆ
ನಿನ್ನ ಕೈ ಚಾಚು, ಅಂದನು. ಅವನು ಹಾಗೆ ಮಾಡಿದಾಗ, ಅವನ
೧೧ ಕೈ ಮತ್ತೊಂದರ ಹಾಗೆ ಸ್ವಸ್ಥವಾಯಿತು. ಆದರೆ ಅವರು
ಮೂರ್ಖತನದಿಂದ ತುಂಬಿದವರಾಗಿ, ಯೇಸುವಿಗೆ ಏನು ಮಾ
ಡೋಣ? ಎಂದು ತಮ್ಮಲ್ಲಿ ಮಾತಾಡಿ ಕೊಂಡರು.

೧೨ ಮತ್ತು ಆ ದಿನಗಳಲ್ಲಿ ಏನಾಯಿತಂದರೆ, ಅವನು ಪ್ರಾರ್ಥನೆ
ಮಾಡುವದಕ್ಕೆ ಹೊರಟು, ಒಂದು ಬೆಟ್ಟಕ್ಕೆ ಹೋಗಿ, ಅಲ್ಲಿ
೧೩ ದೇವರ ಪ್ರಾರ್ಥನೆಯಲ್ಲಿ ರಾತ್ರಿಯೆಲ್ಲಾ ಕಳೆದನು. ಬೆಳಗಾದ
ಮೇಲೆ ಅವನು ತನ್ನ ಶಿಷ್ಯರನ್ನು ಕರೆದು, ಅವರಲ್ಲಿ ಹನ್ನೆರಡು
ಮಂದಿಯನ್ನು ಆರಿಸ ಕೊಂಡು, ಅವರಿಗೆ ಅಪೊಸ್ತಲರೆಂದು ಹೆಸರಿ
೧೪ ಟ್ಟನು. ಅವರ್ಯಾರಂದರೆ, ಅವನು ಪೇತ್ರನೆಂದು ಕರೆದ ಸೀಮೋ
ನನು; ಅವನ ಸಹೋದರನಾದ ಅಂದ್ರೆಯನು; ಯಾಕೋಬನು;
೧೫ ಯೋಹಾನನು; ಫಿಲಿಪ್ಪನು; ಬಾರ್ತೊಲೊಮಾಯನು; ಮ
ತ್ತಾಯನು; ತೋಮನು; ಅಲ್ಫಾಯನ ಮಗನಾದ ಯಾಕೋ
ಬನು; ಜೆಲೋತನೆಂಬ ಸೀಮೋನನು; ಯಾಕೋಬನ ಮಗನಾ
೧೬ ದ ಯೂದನು; ಮತ್ತು ದ್ರೋಹಿಯಾದ ಇಸ್ಕರಿಯೋತೆಂಬ
೧೭ ಯೂದನು. ಆ ಮೇಲೆ ಅವನು ಅವರ ಸಂಗಡ ಇಳಿದು, ತನ್ನ
ಶಿಷ್ಯರ ಸಮೂಹವೂ ಸಮಸ್ತ ಯೆಹೂದ್ಯದಿಂದಲೂ ಯೆರೂ
ಸಲೇಮಿನಿಂದಲೂ ತೂರ್ ಸಿದೋನಗಳ ಸಮುದ್ರ ತೀರದಿಂದಲೂ,
ಅವನನ್ನು ಕೇಳುವದಕ್ಕೂ ತಮ್ಮ ರೋಗಗಳು ಗುಣವಾಗುವದ
ಕ್ಕೂ ಬಂದ ದೊಡ್ಡ ಜನ ಸಮೂಹವು ಸಹಿತವಾಗಿ, ಬೈಲು
೧೮ ಸ್ಥಳದಲ್ಲಿ ನಿಂತು ಕೊಂಡನು. ಅಶುದ್ಧಾತ್ಮಗಳಿಂದ ಉಪದ್ರ ಪಡು
೧೯ ವವರು ಸಹ ಬಂದು, ವಾಸಿಯಾದರು. ಮತ್ತು ಅವನಿಂದ ಬಲವು
ಹೊರಟು, ಎಲ್ಲರನ್ನು ಗುಣ ಮಾಡಿದ್ದರಿಂದ, ಸಮೂಹವೆಲ್ಲಾ
ಅವನನ್ನು ಮುಟ್ಟ ಹುಡುಕಿದರು.

೨೦ ಇದ್ದಲ್ಲದೆ ಅವನು ತನ್ನ ಕಣ್ಣುಗಳನ್ನು ತನ್ನ ಶಿಷ್ಯರ ಕಡೆಗೆ
ಎತ್ತಿ, ಹೇಳಿದ್ದೇನಂದರೆ, ಬಡವರಾದ ನೀವು ಭಾಗ್ಯವಂತರು;
೨೧ ಯಾಕಂದರೆ ದೇವರ ರಾಜ್ಯವು ನಿಮ್ಮದಾಗಿದೆ. ಈಗ ಹಸಿವೆ ಪ
ಡುವವರಾದ ನೀವು ಭಾಗ್ಯವಂತರು; ಯಾಕಂದರೆ ತೃಪ್ತಿ ಹೊಂ
ದುವಿರಿ. ಈಗ ಅಳುವವರಾದ ನೀವು ಭಾಗ್ಯವಂತರು; ಯಾಕಂ
೨೨ ದರೆ ನಗುವಿರಿ. ಮನುಷ್ಯನ ಮಗನ ನಿಮಿತ್ತ ಮನುಷ್ಯರು ನಿ
ಮ್ಮನ್ನು ಹಗೆ ಮಾಡಿ, ನಿಮ್ಮನ್ನು ಪ್ರತ್ಯೇಕಿಸಿ, ನಿಂದಿಸಿ, ನಿಮ್ಮ
ಹೆಸರನ್ನು ಕೆಟ್ಟದ್ದೆಂದು ತೆಗೆದು ಹಾಕಿದರೆ, ನೀವು ಭಾಗ್ಯವಂತ
೨೩ ರಾಗಿದ್ದೀರಿ; ಆ ದಿವಸದಲ್ಲಿ ಸಂತೋಷ ಪಟ್ಟು, ಕುಣಿದಾಡಿರಿ;
ಯಾಕಂದರೆ, ಇಗೋ, ನಿಮ್ಮ ಪ್ರತಿಫಲವು ಪರಲೋಕದಲ್ಲಿ ಬಹಳ
ವಾಗಿದೆ. ಅವರ ಪಿತೃಗಳು ಪ್ರವಾದಿಗಳಿಗೆ ಹಾಗೆಯೇ ಮಾಡಿದರು.

೨೪ ಆದರೆ ಐಶ್ವರ್ಯವಂತರಾದ ನಿಮಗೆ ಅಯ್ಯೋ! ಯಾ
ಕಂದರೆ ನಿಮ್ಮ ಆದರಣೆ ಹೊಂದಿದ್ದೀರಿ. ತುಂಬಿದವರೇ, ನಿಮಗೆ
೨೫ ಅಯ್ಯೋ! ಯಾಕಂದರೆ ಹಸಿಯುವಿರಿ. ಈಗ ನಗುವವರೇ,
ನಿಮಗೆ ಅಯ್ಯೋ! ಯಾಕಂದರೆ ದುಃಖ ಪಟ್ಟು, ಅಳುವಿರಿ. ಮ
೨೬ ನುಷ್ಯರೆಲ್ಲರು ನಿಮಗೆ ಒಳ್ಳೇ ಮಾತು ಹೇಳಿದರೆ, ನಿಮಗೆ ಅ
ಯ್ಯೋ! ಯಾಕಂದರೆ ಅವರ ಪಿತೃಗಳು ಸುಳ್ಳು ಪ್ರವಾದಿಗ
ಳಿಗೆ ಹಾಗೆಯೇ ಮಾಡಿದರು.

೨೭ ಇದ್ದಲ್ಲದೆ ಕೇಳುವವರಾದ ನಿಮಗೆ ನಾನು ಹೇಳುವದೇನಂದರೆ,
ನಿಮ್ಮ ಶತ್ರುಗಳನ್ನು ಪ್ರೀತಿ ಮಾಡಿರಿ; ನಿಮ್ಮನ್ನು ಹಗೆ ಮಾಡು
೨೮ ವವರಿಗೆ ಉಪಕಾರ ಮಾಡಿರಿ; ನಿಮ್ಮನ್ನು ಶಪಿಸುವವರನ್ನು ಆಶೀ
ರ್ವದಿಸಿರಿ; ನಿಮ್ಮನ್ನು ನಿಂದಿಸುವವರಿಗೋಸ್ಕರ ಪ್ರಾರ್ಥನೆ ಮಾ
ಡಿರಿ. ಕೆನ್ನೆಯ ಮೇಲೆ ನಿನ್ನನ್ನು ಹೊಡೆಯುವವನಿಗೆ ಮತ್ತೊಂ
ದನ್ನೂ ತಿರುಗಿಸು. ಮತ್ತು ನಿನ್ನ ಅಂಗವಸ್ತ್ರವನ್ನು ತೆಗೆದುಕೊ
೩೦ ಳ್ಳುವವನಿಗೆ ಅಂಗಿಯನ್ನು ತಡೆಯ ಬೇಡ. ಇದ್ದಲ್ಲದೆ ನಿನ್ನ
ನ್ನು ಬೇಡಿಕೊಳ್ಳುವ ಪ್ರತಿ ಮನುಷ್ಯನಿಗೆ ಕೊಡು; ನಿನ್ನವುಗ
೩೧ ಳನ್ನು ತೆಗೆದು ಕೊಳ್ಳುವವನಿಂದ ತಿರಿಗಿ ಕೇಳದಿರು; ಮತ್ತು ಮ
ನುಷ್ಯರು ನಿಮಗೆ ಹ್ಯಾಗೆ ಮಾಡ ಬೇಕೆಂದಿಚ್ಛೈಸುತ್ತಿರೋ,
೩೨ ಹಾಗೆಯೇ ನೀವೂ ಅವರಿಗೆ ಮಾಡಿರಿ. ನಿಮ್ಮನ್ನು ಪ್ರೀತಿ ಮಾಡು
ವವರನ್ನು ನೀವು ಪ್ರೀತಿ ಮಾಡಿದರೆ, ನಿಮಗೆ ಏನೇಳುವೇನು? ಯಾ
ಕಂದರೆ ಪಾಪಿಷ್ಠರು ಸಹ ತಮ್ಮನ್ನು ಪ್ರೀತಿ ಮಾಡುವವರನು,
೩೩ ಪ್ರೀತಿ ಮಾಡುತ್ತಾರೆ. ಮತ್ತು ನಿಮಗೆ ಒಳ್ಳೇದನ್ನು ಮಾಡುವ
ವರಿಗೆ ನೀವು ಒಳ್ಳೇದನ್ನು ಮಾಡಿದರೆ, ನಿಮಗೆ ಏನೇಳುವೇನು?
ಯಾಕಂದರೆ ಪಾಪಿಷ್ಠರು ಸಹ ಹಾಗೆಯೇ ಮಾಡುತ್ತಾರೆ. ಮ
೩೪ ತ್ತು ಅವರಿಂದ ತಿರಿಗಿ ಹೊಂದೇವೆಂದು ನಿರೀಕ್ಷಿಸುವವರಿಗೆ ಸಾಲ
ಕೊಟ್ಟರೆ, ನಿಮಗೆ ಏನೇಳುವೇನು? ಯಾಕಂದರೆ ಪಾಪಿಷ್ಠರು
ಸಹ, ಅದನ್ನು ತಿರಿಗಿ ಹೊಂದುವ ಹಾಗೆ, ಪಾಪಿಷ್ಠರಿಗೆ ಸಾಲ
೩೫ ಕೊಡುತ್ತಾರೆ. ಆದರೆ ನಿಮ್ಮ ಶತ್ರುಗಳನ್ನು ಪ್ರೀತಿ ಮಾಡಿರಿ.
ಉಪಕಾರ ಮಾಡಿ, ಪ್ರತಿಯಾಗಿ ಏನೂ ನಿರೀಕ್ಷಿಸದೆ, ಸಾಲ ಕೊಡಿರಿ;
ಆಗ ನಿಮ್ಮ ಪ್ರತಿ ಫಲ ಬಹಳವಾಗಿರುವದು, ಮಹೋನ್ನತನ ಮ
ಕ್ಕಳಾಗಿರುವಿರಿ. ಯಾಕಂದರೆ ಅವನು ದಯೆ ನೆನಸದವರಿಗೂ,
೩೬ ಕೆಟ್ಟವರಿಗೂ ಒಳ್ಳೇಯವನಾಗಿದ್ದಾನೆ. ಹೀಗಿರುವದರಿಂದ, ನಿಮ್ಮ
ತಂದೆಯು ಕನಿಕರವುಳ್ಳವನಾಗಿರುವ ಪ್ರಕಾರ, ನೀವೂ ಕನಿಕರವು
ಳ್ಳವರಾಗಿರಿ.

೩೭ ಇದ್ದಲ್ಲದೆ ನ್ಯಾಯ ತೀರಿಸದಿರಿ; ಆಗ ನಿಮಗೂ ನ್ಯಾಯ

ತೀರಿಸಲ್ಪಡದು. ಆಜ್ಞೆನಿರ್ಣಯಿಸದಿರಿ. ಆಗ ಆಜ್ಞೆ ನಿರ್ಣಯ
೩೮ ಹೊಂದದಿರುವಿರಿ. ಬಿಡಿಸಿರಿ, ಆಗ ಬಿಡಿಸಲ್ಪಡುವಿರಿ. ಕೊಡಿರಿ, ಆಗ
ನಿಮಗೆ ಕೊಡಲ್ಪಡುವದು; ಒತ್ತಿದ, ಗಲ್ಲಿಸಿದ, ಹೊರಳ್ಳುವ,
ಒಳ್ಳೆ ಅಳತೆಯನ್ನು ನಿಮ್ಮ ಉಡಿಯಲ್ಲಿ ಕೊಡುವರು. ಯಾ
ಕಂದರೆ ನೀವು ಮಾಡುವ ಅಳತೆಯಿಂದಲೇ ನಿಮಗೆ ಬದಲಾಗಿ
ಅಳೆಯಲ್ಪಡುವದು.

೩೯ ಮತ್ತು ಅವರಿಗೆ ಸಾಮ್ಯವನ್ನು ಹೇಳಿದನು; ಏನಂದರೆ, ಕುರು
ಡನು ಕುರುಡನನ್ನು ನಡಿಸ ಬಲ್ಲನೋ? ಇಬ್ಬರು ಕೂಣಿಯೊ
೪೦ ಳಗೆ ಬೀಳುವರಲ್ಲ? ಶಿಷ್ಯನು ತನ್ನ ಬೋಧಕನಿಗಿಂತ ಹೆಚ್ಚಲ್ಲ;
ಆದರೆ ಸಂಪೂರ್ಣವಾದ ಪ್ರತಿ ಮನುಷ್ಯನು ತನ್ನ ಬೋಧಕನ
ಹಾಗೆ ಇರುವನು.

೪೧ ಇದಲ್ಲದೆ ನೀನು ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆ
ಯನ್ನು ನೋಡಿ, ನಿನ್ನ ಸ್ವಂತ ಕಣ್ಣಿನಲ್ಲಿರುವ ತೊಲೆಯನ್ನು
೪೨ ಯೋಚಿಸದೆ ಇರುವದೇನು? ಇಲ್ಲವೆ ನಿನ್ನ ಕಣ್ಣಿನಲ್ಲಿರುವ ತೊ
ಲೆಯನ್ನು ನೀನು ನೋಡದೆ, ನಿನ್ನ ಸಹೋದರನಿಗೆ, ಸಹೋದ
ರನೇ, ಬಿಡು, ನಿನ್ನ ಕಣ್ಣಿನಲ್ಲಿರುವ ರವೆಯನ್ನು ತೆಗೆಯುತ್ತೇನೆಂ
ದು, ಹ್ಯಾಗೆ ಹೇಳ ಬಹುದು? ಕಪಟಸ್ಥನೇ! ಮೊದಲು ನಿನ್ನ
ಕಣ್ಣಿನೊಳಗಿಂದ ತೊಲೆ ತೆಗೆ; ಆ ಮೇಲೆ ನಿನ್ನ ಸಹೋದರನ ಕಣ್ಣಿ
ನಲ್ಲಿರುವ ರವೆ ತೆಗೆಯುವದಕ್ಕೆ ಜನ್ನಾಗಿ ಕಾಣುವಿ.

೪೩ ಯಾಕಂದರೆ ಕೆಟ್ಟ ಫಲ ಫಲಿಸುವ ಮರವು ಒಳ್ಳೇದಲ್ಲ;
೪೪ ಒಳ್ಳೆ ಫಲ ಫಲಿಸುವ ಮರವು ಕೆಟ್ಟದ್ದಲ್ಲ. ಯಾಕಂದರೆ ಒಂ
ದೊಂದು ಮರವು ಸ್ವಂತ ಫಲದಿಂದ ತಿಳಿಯಲ್ಪಡುವದು; ಹ್ಯಾ
ಗಂದರೆ ಮುಳ್ಳುಗಳಿಂದ ಅಂಜೂರಗಳನ್ನು ಕೂಡಿಸುವದಿಲ್ಲ. ಗಜು
೪೫ ಗದಿಂದ ದ್ರಾಕ್ಷೆಯನ್ನು ಕೊಯ್ಯುವದಿಲ್ಲ. ಒಳ್ಳೆ ಮನುಷ್ಯ
ನು ತನ್ನ ಹೃದಯದ ಒಳ್ಳೆ ಬೊಕ್ಕಸದೊಳಗಿಂದ ಒಳ್ಳೇ
ದನ್ನು ಹೊರಗೆ ತರುತ್ತಾನೆ; ಕೆಟ್ಟ ಮನುಷ್ಯನು ತನ್ನ ಹೃದ
ಯದ ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟದ್ದನ್ನು ಹೊರಗೆ ತರು
ತ್ತಾನೆ; ಯಾಕಂದರೆ ಹೃದಯದ ಪೂರ್ಣತೆಯಿಂದ ಅವನ ಬಾ
ಯಿ ಮಾತಾಡುವದು.

೪೬ ಇದಲ್ಲದೆ ನೀವು ನನ್ನನ್ನು ಕರ್ತನೇ, ಕರ್ತನೇ, ಎಂದು
೪೭ ಕರೆದು, ನಾನು ಹೇಳುವದನ್ನು ಮಾಡದೆ ಇರುವದೇನು? ನನ್ನ
ಬಳಿಗೆ ಬಂದು, ನನ್ನ ವಾಕ್ಯಗಳನ್ನು ಕೇಳಿ, ಅವುಗಳನ್ನು ಮಾ
ಡುವ ಮನುಷ್ಯನು ಯಾವನಿಗೆ ಸಮಾನನೆಂದು, ನಿಮಗೆ ಶೋ
೪೮ ರಿಸುತ್ತೇನೆ. ಅವನು ಆಳವಾಗಿ ಅಗಿದು, ಬಂಡೆಯ ಮೇಲೆ ತಳಾದಿ
ಹಾಕಿ, ಮನೆ ಕಟ್ಟಿದ ಮನುಷ್ಯನಿಗೆ ಸಮಾನನಾಗಿದಾನೆ. ಪ್ರಳ
ಯವು ಬಂದು, ಪ್ರವಾಹವು ಆ ಮನೆಯನ್ನು ಬಡಿದಾಗ, ಅದರ
ತಳಾದಿ ಬಂಡೆಯ ಮೇಲೆ ಇದ್ದದರಿಂದ, ಅದನ್ನು ಚಲಿಸಲಾರದೆ
೪೯ ಹೋಯಿತು. ಆದರೆ ಕೇಳಿ ಮಾಡದವನು ತಳಾದಿ ಇಲ್ಲದೆ ಭೂ
ಮಿಯ ಮೇಲೆ ಮನೆ ಕಟ್ಟಿದ ಮನುಷ್ಯನಿಗೆ ಸಮಾನನಾಗಿದ್ದಾನೆ;
ಪ್ರವಾಹವು ಬಡಿದ ಕೂಡ್ಲೆ, ಅದು ಬಿತ್ತು; ಮತ್ತು ಆ ಮನೆಯ
ಬೀಳುವಿಕೆಯು ಕೊಡ್ಡದಾಗಿತ್ತು.

## ೭. ಸಂಧಿ.

೧ ಅವನು ತನ್ನ ವಾಕ್ಯಗಳನ್ನೆಲ್ಲಾ ಜನರ ಕಿವಿಗಳಲ್ಲಿ ತೀರಿಸಿದ
೨ ಮೇಲೆ, ಕಪೆರ್ನೌಮಿನಲ್ಲಿ ಪ್ರವೇಶಿಸಿದನು. ಮತ್ತು ಒಬ್ಬ ಶತಾ
ಧಿಪತಿಗೆ ಪ್ರಿಯನಾಗಿರುವ ದಾಸನು ಅಸಾಖ್ಯವಾಗಿದ್ದು, ಸಾ
೩ ಯಲಾಗಿದ್ದನು. ಅವನು ಯೇಸುವಿನ ಸಮಾಚಾರವನ್ನು ಕೇಳಿ,
ಬಂದು, ತನ್ನ ದಾಸನನ್ನು ಗುಣ ಮಾಡ ಬೇಕೆಂದು, ಅವನ
ನ್ನು ಬೇಡಿ ಕೊಂಡು, ಅವನ ಬಳಿಗೆ ಯೆಹೂದ್ಯರ ಹಿರಿಯರ
೪ ನ್ನು ಕಳುಹಿಸಿದನು. ಇವರು ಯೇಸುವಿನ ಬಳಿಗೆ ಬಂದು,
ಅವನನ್ನು ಬಹಳವಾಗಿ ಬೇಡಿ ಕೊಂಡು, ನೀನು ಅವನಿಗೆ ಇದನ್ನು
೫ ಮಾಡುವ ಹಾಗೆ ಅವನು ಯೋಗ್ಯನು. ಯಾಕಂದರೆ ನಮ್ಮ
ಜನಾಂಗವನ್ನು ಪ್ರೀತಿ ಮಾಡುತ್ತಾನೆ; ಮತ್ತು ಅವನೇ ನಮಗೆ
ಸಭೆ ಮನೆಯನ್ನು ಕಟ್ಟಿಸಿದ್ದಾನೆ, ಅಂದರು. ಆಗ ಯೇಸು ಅವರ
ಸಂಗಡ ಹೋದನು.

೬ ಅವನು ಮನೆಗೆ ಇನ್ನು ಸ್ವಲ್ಪ ದೂರವಿರುವಾಗ, ಶತಾಧಿಪ
ತಿಯು ಸ್ನೇಹಿತರನ್ನು ಅವನ ಬಳಿಗೆ ಕಳುಹಿಸಿ, ಅವನಿಗೆ ಹೇಳಿಸಿ
ದ್ದೇನಂದರೆ, ಕರ್ತನೇ, ಬೇಸರ ಗೊಳ್ಳ ಬೇಡ; ಯಾಕಂದರೆ
ನೀನು ನನ್ನ ಮಾಳಿಗೆಯ ಕೆಳಗೆ ಪ್ರವೇಶಿಸುವ ಹಾಗೆ ನಾನು
೭ ಯೋಗ್ಯನಲ್ಲ. ಆದದರಿಂದ ನಾನು ನಿನ್ನ ಬಳಿಗೆ ಬರುವದಕ್ಕೆ
ಸಹ ನನ್ನನ್ನು ಅಯೋಗ್ಯನೆಂದು ಎಣಿಸಿ ಕೊಂಡೆನು; ಆದ
ರೆ ಮಾತನ್ನು ಹೇಳಿದರೆ, ನನ್ನ ಆಳು ಗುಣವಾಗುವನು. ಯಾ
೮ ಕಂದರೆ ನಾನು ಸಹ ಅಧಿಕಾರಕ್ಕೊಳಗಾದ ಮನುಷ್ಯನಾಗಿದ್ದೇನೆ;
ನನ್ನ ಕೈ ಕೆಳಗೆ ರಾಣುವೆಯವರು ಇದ್ದಾರೆ. ಮತ್ತು ಇವನಿಗೆ
ಹೋಗಂದರೆ, ಹೋಗುತ್ತಾನೆ; ಮತ್ತೊಬ್ಬನಿಗೆ ಬಾ ಅಂದರೆ, ಬರು
ತ್ತಾನೆ; ಮತ್ತು ನನ್ನ ದಾಸನಿಗೆ ಇದನ್ನು ಮಾಡುಂದರೆ, ಮಾಡು
೯ ತ್ತಾನೆ. ಇವುಗಳನ್ನು ಯೇಸು ಕೇಳಿ, ಅವನಿಗೆ ಆಶ್ಚರ್ಯ ಪಟ್ಟು,
ತಿರುಗಿ ಕೊಂಡು, ತನ್ನನ್ನು ಹಿಂಬಾಲಿಸುವ ಸಮೂಹಕ್ಕೆ, ಇಸ್ರ
ಯೇಲಿನಲ್ಲಿಯೂ ನಾನು ಇದ್ದು ದೊಡ್ಡ ವಿಶ್ವಾಸವನ್ನು ಕಾಣ
೧೦ ಲಿಲ್ಲವೆಂದು, ನಿಮಗೆ ಹೇಳುತ್ತೇನೆ, ಅಂದನು. ತರುವಾಯ ಕಳು
ಹಿಸಲ್ಪಟ್ಟವರು ಮನೆಗೆ ತಿರಿಗಿ ಬಂದು, ಅಸ್ವಸ್ಥವಾಗಿದ್ದ ದಾಸನು
ಕ್ಷೇಮವಾಗಿರುವದನ್ನು ಕಂಡರು.

೧೧ ಮಾರನೆ ದಿವಸದಲ್ಲಿ ಅವನು ನಾಯಿನೆಂಬ ಪಟ್ಟಣಕ್ಕೆ ಹೋ
ದನು. ಮತ್ತು ಅವನ ಶಿಷ್ಯರಲ್ಲಿ ಅನೇಕರೂ ಬಹು ಸಮೂಹ
೧೨ ವೂ, ಅವನ ಸಂಗಡ ಹೋದರು. ಆದರೆ ಅವನು ಪಟ್ಟಣದ ಬಾಗ
ಲಿಗೆ ಸವಿಾಪಿಸುವಾಗ, ಅಗೋ, ತನ್ನ ತಾಯಿಗೆ ಒಬ್ಬನೇ ಮಗ
ನಾದ ಒಬ್ಬ ಸತ್ತವನು ಹೊರಗೆ ಶರಲ್ಪಟ್ಟನು; ಮತ್ತು ಅವಳು
ವೆಧವೆಯಾಗಿದ್ದಳು. ಮತ್ತು ಪಟ್ಟಣದವರ ಬಹು ಸಮೂಹವು ಅವಳ
೧೩ ಸಂಗಡ ಇತ್ತು. ಕರ್ತನು ಅವಳನ್ನು ನೋಡಿ, ಅವಳ ಮೇಲೆ
೧೪ ಅಂತಃಕರಣಪಟ್ಟು, ಅವಳಿಗೆ, ಅಳ ಬೇಡ, ಅಂದನು. ಮತ್ತು
ಹತ್ತರ ಬಂದು, ಪೆಟ್ಟಿಗೆಯನ್ನು ಮುಟ್ಟಿದಾಗ, ಹೊರುವವರು
ನಿಂತರು. ಆಗ, ಯೌವನಸ್ಥನೇ, ಏಳೆಂದು ನಿನಗೆ ಹೇಳುತ್ತೇನೆ,
೧೫ ಅಂದನು. ಆಗ ಸತ್ತವನು ಕೂತು ಕೊಂಡು, ಮಾತಾಡಲಾರಂಭಿ
ಸಲು, ಅವನನ್ನು ಅವನ ತಾಯಿಗೆ ಕೊಟ್ಟನು. ಆಗ ಎಲ್ಲರಿಗೆ
೧೬ ಭಯ ಹಿಡಿಯಿತು. ಅವರು ದೇವರನ್ನು ಮಹಿಮೆ ಪಡಿಸಿ, ಮಹಾ
ಪ್ರವಾದಿಯು ನಮ್ಮಲ್ಲಿ ಎದ್ದಿದ್ದಾನೆ, ಮತ್ತು ದೇವರು ತನ್ನ ಜನ
ರನ್ನು ದರ್ಶಿಸಿದ್ದಾನೆ, ಅಂದರು. ಮತ್ತು ಈ ವಾಕ್ಯವು ಅವನ
೧೭ ವಿಷಯವಾಗಿ ಯೆಹೂದವೆಲ್ಲಾದರಲ್ಲಿಯೂ, ಸುತ್ತಲಿರುವ ಎಲ್ಲಾ
ದೇಶದಲ್ಲಿಯೂ ಹಬ್ಬಿತು.

೧೮ ಇದಲ್ಲದೆ ಯೋಹಾನನಿಗೆ ಅವನ ಶಿಷ್ಯರು ಇವೆಲ್ಲವುಗಳ
ವರ್ತಮಾನವನ್ನು ತಿಳಿಸಿದಾಗ, ಯೋಹಾನನು ತನ್ನ ಶಿಷ್ಯ
ರಲ್ಲಿ ಇಬ್ಬರನ್ನು ಕರೆದು, ಯೇಸುವಿನ ಬಳಿಗೆ ಕಳುಹಿಸಿ, ಬರುವ
ವನು ನೀನೋ? ಮತ್ತೊಬ್ಬನನ್ನು ಎದುರು ನೋಡೋಣೋ?
೧೯ ಅಂದನು. ಆ ಜನರು ಅವನ ಬಳಿಗೆ ಬಂದು, ಸ್ನಾನಿಕನಾದ
ಯೋಹಾನನು, ಬರುವವನು ನೀನೋ? ಮತ್ತೊಬ್ಬನನ್ನು ಎದು
ರು ನೋಡೋಣೋ? ಎಂದು ಹೇಳಿ, ನಮ್ಮನ್ನು ನಿನ್ನ ಬಳಿಗೆ
೨೦ ಕಳುಹಿಸಿದ್ದಾನೆ, ಅಂದರು. ಅದೇ ಸಮಯದಲ್ಲಿ ಅವನು ರೋಗ
ಗಳನ್ನೂ, ಜಾಡ್ಯಗಳನ್ನೂ, ದುರಾತ್ಮಗಳನ್ನೂ, ಉಂಟಾಗಿರುವ ಅನೇಕರ
ನ್ನು ಗುಣ ಮಾಡಿ, ಅನೇಕ ಕುರುಡರಿಗೆ ದೃಷ್ಟಿ ದಯಪಾಲಿಸು
೨೧ ತ್ತಿದ್ದನು. ಹೀಗಿರಲಾಗಿ, ಯೇಸು ಉತ್ತರ ಕೊಟ್ಟು, ಅವರಿಗೆ ಹೇಳಿ
ದ್ದೇನಂದರೆ, ಹೋಗಿ, ನೀವು ನೋಡಿದವುಗಳನ್ನೂ, ಕೇಳಿದ
ವುಗಳನ್ನೂ, ಯೋಹಾನನಿಗೆ ತಿಳಿಸಿರಿ; ಏನಂದರೆ, ಕುರುಡರು
ದೃಷ್ಟಿ ಹೊಂದುತ್ತಾರೆ; ಕುಂಟರು ನಡೆಯುತ್ತಾರೆ; ಕುಷ್ಠರೋ
ಗಿಗಳು ಶುಚಿಯಾಗುತ್ತಾರೆ; ಕಿವಿಡರು ಕೇಳುತ್ತಾರೆ; ಸತ್ತವರು
ಎಬ್ಬಿಸಲ್ಪಡುತ್ತಾರೆ; ಬಡವರಿಗೆ ಸುವಾರ್ತೆ ಪ್ರಸಂಗಿಸಲ್ಪಡು
೨೩ ತ್ತದೆ. ಮತ್ತು ನನ್ನಲ್ಲಿ ಅಟಂಕ ಪಡದವನ್ಯಾವನೋ, ಅವನೇ
ಭಾಗ್ಯವಂತನು.

೨೪ ಯೋಹಾನನ ದೂತರು ಹೋದ ಮೇಲೆ, ಅವನು ಸಮೂ
ಹಗಳಿಗೆ ಯೋಹಾನನ ವಿಷಯವಾಗಿ ಮಾತಾಡಲಾರಂಭಿಸಿದ್ದೇ
೨೫ ನಂದರೆ, ಏನು ನೋಡ ಅರಣ್ಯಕ್ಕೆ ಹೊರಟಿರಿ? ಘೂಳಿಯಿಂದ
ಅಲ್ಲಾಡುವ ದಂಟನೋ? ಇಲ್ಲವೆ ಏನು ನೋಡ ಹೊರಟಿರಿ?
ನಯವಾದ ವಸ್ತ್ರಗಳನ್ನು ಧರಿಸಿದ ಮನುಷ್ಯನನೋ? ಇಗೋ,
ಘನವಾದ ವಸ್ತ್ರಗಳೂ ಭೋಗವೂ ಉಳ್ಳವರು ಅರಮನೆಗಳಲ್ಲಿ
೨೬ ಇದ್ದಾರೆ. ಇಲ್ಲವೆ ಏನು ನೋಡ ಹೊರಟಿರಿ? ಪ್ರವಾದಿಯನೋ?
ಹೌದು, ನಿಮಗೆ ಹೇಳುತ್ತೇನೆ, ಪ್ರವಾದಿಗಿಂತಲೂ ಅಧಿಕವಾದವ
ನನ್ನು.

೨೭ ಇಗೋ, ನಾನು ನನ್ನ ದೂತನನ್ನು ನಿನ್ನ ಮುಖದ ಮುಂದೆ
ಕಳುಹಿಸುತ್ತೇನೆ; ಅವನು ನಿನ್ನ ಮಾರ್ಗವನ್ನು ನಿನ್ನ ಮುಂದೆ
ಸಿದ್ಧ ಮಾಡುವನು, ಎಂದು ಯಾವನನ್ನು ಕುರಿತು ಬರೆದಿದೆ
೨೮ ಯೋ, ಅವನೇ ಇವನು. ಯಾಕಂದರೆ ಸ್ತ್ರೀಯರಿಂದ ಹುಟ್ಟಿದ
ವರಲ್ಲಿ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡ ಪ್ರವಾದಿಯು
ಯಾವನೂ ಇಲ್ಲ; ಆದರೆ ದೇವರ ರಾಜ್ಯದಲ್ಲಿ ಚಿಕ್ಕವನು ಅವನಿ
೨೯ ಗಿಂತ ದೊಡ್ಡವನಾಗಿದ್ದಾನೆಂದು ನಿಮಗೆ ಹೇಳುತ್ತೇನೆ. ಇದಲ್ಲದೆ
ಕೇಳಿದ ಜನರೆಲ್ಲರೂ, ಸುಂಕದವರೂ ಯೋಹಾನನ ಸ್ನಾನ
೩೦ ಹೊಂದಿ, ದೇವರು ನೀತಿವಂತನೆಂದು ಒಪ್ಪಿ ಕೊಂಡರು. ಆದರೆ
ಫರಿಸಾಯರೂ, ನ್ಯಾಯಶಾಸ್ತ್ರಿಗಳೂ, ಅವನಿಂದ ಸ್ನಾನ ಹೊಂ
ದದೆ, ತಮ್ಮ ವಿಷಯವಾಗಿರುವ ದೇವರ ಆಲೋಚನೆಯನ್ನು
೩೧ ಅಲಕ್ಷ್ಯ ಮಾಡಿದರು. ಮತ್ತು ಕರ್ತನು ಹೇಳಿದ್ದೇನಂದರೆ, ನಾನು
ಯಾವದಕ್ಕೆ ಈ ಸಂತತಿಯ ಮನುಷ್ಯರನ್ನು ಸಮಾನ ಮಾಡ
೩೨ ಲಿ? ಅವರು ಯಾವದಕ್ಕೆ ಸಮಾನವಾಗಿದ್ದಾರೆ? ಅವರು ಅಂಗಡಿ
ಬೀದಿಯಲ್ಲಿ ಕೂತುಕೊಂಡು, ಒಬ್ಬರಿಗೊಬ್ಬರು ಕರೆದು, ನಿಮಗೆ
ಪಿಳ್ಳಂಗೋವಿ ಊದಿದೆವು, ನೀವು ಕುಣಿಯಲಿಲ್ಲ; ನಿಮಗೆ ಗೋ
ಳಾಡಿದೆವು, ನೀವು ಅಳಲಿಲ್ಲವೆಂದು ಹೇಳುವ ಮಕ್ಕಳಿಗೆ ಸಮಾ
೩೩ ನವಾಗಿದ್ದಾರೆ. ಹ್ಯಾಗಂದರೆ ಸ್ನಾನಿಕನಾದ ಯೊಹಾನನು
ಬಂದು, ಕೊಟ್ಟಿ ಉಣ್ಣಲಿಲ್ಲ, ದ್ರಾಕ್ಷೇರಸವನ್ನು ಕುಡಿಯಲಿಲ್ಲ;
೩೪ ಆದರಿಂದ, ಅವನಿಗೆ ದೆವ್ವ ಉಂಟು, ಅನ್ನುತ್ತೀರಿ. ಮನುಷ್ಯ
ನ ಮಗನು ಬಂದು, ಉಣ್ಣುತ್ತಾನೆ, ಕುಡಿಯುತ್ತಾನೆ; ಆದದರಿಂ
ದ, ಇಗೋ, ಹೊಟ್ಟೆಬಾಕನೂ, ಮದ್ಯಪಾನಿಯೂ, ಸುಂಕದವರ
ಪಾಪಿಮ್ಮರ ಸ್ನೇಹಿತನೂ, ಆದ ಮನುಷ್ಯನೂ, ಅನ್ನುತ್ತೀರಿ.
೩೫ ಆದರೆ ಜ್ಞಾನವು ತನ್ನ ಮಕ್ಕಳೆಲ್ಲರಿಂದ ನೀತಿ ನಿರ್ಣಯ ಪಡು
ವದು.

೩೬ ಇದಲ್ಲದೆ ಫರಿಸಾಯರಲ್ಲಿ ಒಬ್ಬನು, ತನ್ನ ಸಂಗಡ ಊಟ
ಮಾಡ ಬೇಕೆಂದು, ಅವನನ್ನು ಬೇಡಿ ಕೊಂಡಾಗ, ಅವನು ಫರಿಸಾ
ಯನ ಮನೆಯಲ್ಲಿ ಪ್ರವೇಶಿಸಿ, ಊಟಕ್ಕೆ ಕೂತು ಕೊಂಡನು.
೩೭ ಮತ್ತು, ಇಗೋ, ಪಟ್ಟಣದಲ್ಲಿರುವ ಪಾಪಿಮ್ಮಳಾದ ಒಬ್ಬ ಸ್ತ್ರೀ
ಯು, ಅವನು ಫರಿಸಾಯನ ಮನೆಯಲ್ಲಿ ಊಟಕ್ಕೆ ಕೂತಿದ್ದಾ
ನೆಂದು ತಿಳಿದು, ತೈಲದ ಚಂದ್ರಕಾಂತ ಶಿಲಾಭರಣಿಯನ್ನು ತೆಗೆ
ದು ಕೊಂಡು, ಅವನ ಪಾದಗಳ ಹಿಂಗಡೆಯಲ್ಲಿ ನಿಂತು, ಅಳುತ್ತಾ,
ತನ್ನ ಕಣ್ಣೀರಿನಿಂದ ಅವನ ಪಾದಗಳನ್ನು ತ್ಯಾವ ಮಾಡಲಾರಂ
ಭಿಸಿ, ತನ್ನ ತಲೇ ಕೂದಲಿಂದ ಅವುಗಳನ್ನು ಬರಸಿ, ಅವನ ಪಾದ
೩೮ ಗಳಿಗೆ ಮುದ್ದಿಟ್ಟು, ತೈಲ ಹಚ್ಚಿದಳು. ಆದರೆ ಅವನನ್ನು ಕರೆದ
ಫರಿಸಾಯನು, ಅದನ್ನು ನೋಡಿ, ಇವನು ಪ್ರವಾದಿಯಾಗಿದ್ದರೆ,
ತನ್ನನ್ನು ಮುಟ್ಟುವ ಸ್ತ್ರೀಯು ಯಾರೋ, ಎಂಥವಳೋ, ಎಂ
ದು ತಿಳುಕೊಳ್ಳುವನು; ಯಾಕಂದರೆ ಅವಳು ಪಾಪಿಮ್ಮಳು, ಎಂ
ದು ತನ್ನೊಳಗೆ ಅಂದು ಕೊಂಡನು.

೪೦ ಆಗ ಯೇಸು ಪ್ರತ್ಯುತ್ತರವಾಗಿ ಅವನಿಗೆ, ಸೀಮೋನನೇ,
ನಿನಗೆ ಹೇಳುವದಕ್ಕೆ ನನಗೆ ಬಂದು ಮಾತು ಅದೆ, ಅಂದಾಗ;
೪೧ ಅವನು, ಬೋಧಕನೇ, ಹೇಳು, ಅಂದನು. ಸಾಲ ಕೊಟ್ಟ ಒಬ್ಬ
ನಿಗೆ ಇಬ್ಬರು ಸಾಲಗಾರರಿದ್ದರು; ಒಬ್ಬನು ಐನೂರು ಹಣ, ಮ
ತ್ತೊಬ್ಬನು ಐವತ್ತು, ಕೊಡ ಬೇಕಾಗಿತ್ತು. ಆದರೆ ಕೊಡುವದಕ್ಕೆ
೪೨ ಅವರಿಗೆ ಇಲ್ಲದ್ದರಿಂದ, ದಯೆ ಮಾಡಿ, ಇಬ್ಬರಿಗೆ ಬಿಟ್ಟನು. ಆದ
ದರಿಂದ ಅವರಲ್ಲಿ ಯಾವನು ಅವನನ್ನು ಹೆಚ್ಚಾಗಿ ಪ್ರೀತಿ ಮಾಡು
೪೩ ವನು? ಹೇಳು, ಅಂದನು. ಸೀಮೋನನು ಪ್ರತ್ಯುತ್ತರವಾಗಿ, ಯಾ
ವನಿಗೆ ದಯೆಮಾಡಿ ಹೆಚ್ಚಾಗಿ ಬಿಟ್ಟನೋ, ಅವನೇ ಎಂದು ನೆನಸು
ತ್ತೇನೆ, ಅಂದಾಗ; ಅವನವನಿಗೆ, ಸರಿಯಾಗಿ ತೀರಿಸಿದಿ, ಎಂದು
೪೪ ಹೇಳಿ, ಆ ಸ್ತ್ರೀಯ ಕಡೆಗೆ ತಿರುಗಿ ಕೊಂಡು, ಸೀಮೋನನಿಗೆ,
ಈ ಸ್ತ್ರೀಯನ್ನು ನೋಡುತ್ತೀಯೋ? ನಾನು ನಿನ್ನ ಮನೆಗೆ ಬಂ
ದಾಗ, ನನ್ನ ಪಾದಗಳಿಗೆ ನೀನು ನೀರು ಕೊಡಲಿಲ್ಲ, ಆದರೆ
ಇವಳು ಕಣ್ಣೀರಿನಿಂದ ನನ್ನ ಪಾದಗಳನ್ನು ತ್ಯಾವ ಮಾಡಿ, ತನ್ನ
೪೫ ತಲೇ ಕೂದಲಿಂದ ಒರಸಿದ್ದಾಳೆ. ನೀನು ನನಗೆ ಮುದ್ದು ಕೊಡಲಿಲ್ಲ.
ಆದರೆ ಇವಳು ನಾನು ಒಳಗೆ ಬಂದ ಕಾಲದಿಂದ ನನ್ನ ಪಾದಗಳಿಗೆ
ಮುದ್ದಿರುವದನ್ನು ಬಿಡಲಿಲ್ಲ. ನೀನು ನನ್ನ ತಲೆಗೆ ಎಣ್ಣೆ ಹಚ್ಚ
ಲಿಲ್ಲ; ಆದರೆ ಇವಳು ತೈಲವನ್ನು ನನ್ನ ಪಾದಗಳಿಗೆ ಹಚ್ಚಿದ್ದಾಳೆ.
೪೬ ಆದದರಿಂದ ನಿನಗೆ ಹೇಳುತ್ತೇನೆ, ಬಹಳವಾಗಿರುವ ಅವಳ ಪಾಪಗ
ಳು ಮನ್ನಿಸಲ್ಪಟ್ಟವೆ, ಯಾಕಂದರೆ ಅವಳು ಬಹಳ ಪ್ರೀತಿ ಮಾಡಿ
ದ್ದಾಳೆ; ಆದರೆ ಯಾವನಿಗೆ ಸ್ವಲ್ಪ ಮನ್ನಿಸಲ್ಪಟ್ಟದೆಯೋ, ಅವ
೪೭ ನು ಸ್ವಲ್ಪ ಪ್ರೀತಿ ಮಾಡುತ್ತಾನೆ. ಆಗಲವಳಿಗೆ, ನಿನ್ನ ಪಾಪಗಳು
೪೮ ಮನ್ನಿಸಲ್ಪಟ್ಟವೆ, ಅಂದನು. ಆಗ, ಸಂಗಡ ಊಟಕ್ಕೆ ಕೂತವರು,
ಪಾಪಗಳನ್ನು ಸಹ ಮನ್ನಿಸುವವನಾದ ಇವನು ಯಾರು? ಎಂ
೪೯ ದು ತಮ್ಮೊಳಗೆ ಹೇಳಿಕೊಳ್ಳಲಾರಂಭಿಸಿದರು. ಇದಲ್ಲದೆ ಅವನು

ಆ ಸ್ತ್ರೀಗೆ, ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ; ಸಮಾಧಾ
ನವಾಗಿ ಹೋಗು, ಅಂದನು.

## ೯. ಸಂಧಿ.

೧ ತರುವಾಯ ಆದದ್ದೇನಂದರೆ, ಅವನು ಸಾರುತ್ತಾ, ದೇವರ ರಾ
ಜ್ಯದ ಸುವಾರ್ತೆ ಪ್ರಸಂಗಿಸುತ್ತಾ, ಪಟ್ಣ ಗ್ರಾಮಗಳನ್ನು ಸಂಚರಿ
ಸಿದನು. ಹನ್ನಿರಡು ಮಂದಿಯು ಸಹ ಅವನ ಸಂಗಡ ಇದ್ದರು.
೨ ಇದಲ್ಲದೆ ದುರಾತ್ಮಗಳಿಂದಲೂ, ರೋಗಗಳಿಂದಲೂ, ಸ್ವಸ್ಥವಾದ
ಕೆಲವು ಹೆಂಗಸರಿದ್ದರು; ಯಾರಂದರೆ, ಏಳು ದೆವ್ವಗಳು ಹೊರಡಿ
3 ಸಲ್ಪಟ್ಟ ಮಗ್ದಲದವಳಾದ ಮರಿಯಳೂ, ಹೆರೋದನ ಉಗ್ರಾಣ
ದವನಾದ ಕೂಜನ ಹೆಂಡತಿಯಾದ ಯೊಹಾನಳೂ, ಸುಸನ್ನ
ಳೂ, ಬೇರೆ ಅನೇಕರೂ; ಇವರು ತಮಗುಂಟಾದವುಗಳಿಂದ ಅವ
ನಿಗೆ ಸೇವೆ ಮಾಡುತ್ತಿದ್ದರು.
೪ ಬಹು ಸಮೂಹವು ಕೂಡಿ, ಪ್ರತಿ ಪಟ್ಣದಿಂದ ಅವನ ಬಳಿಗೆ
೫ ಬರುವಾಗ, ಅವನು ಸಾಮ್ಯವಾಗಿ ಹೇಳಿದ್ದೇನಂದರೆ, ಬಿತ್ತುವವನು
ತನ್ನ ಬೀಜವನ್ನು ಬಿತ್ತ ಹೊರಟನು. ಅವನು ಬಿತ್ತುವಾಗ, ಕೆಲವು
ಮಾರ್ಗದ ಬಳಿಯಲ್ಲಿ ಬಿತ್ತು; ಅದು ತುಳಿಯಲ್ಪಟ್ಟಿತು; ಮ
೬ ತ್ತು ಆಕಾಶದ ಪಕ್ಷಿಗಳು ಅದನ್ನು ತಿಂದು ಬಿಟ್ಟವು. ಕೆಲವು ಬಂಡೆ
ಯ ಮೇಲೆ ಬಿತ್ತು; ಅದು ಹುಟ್ಟಿ, ಅದಕ್ಕೆ ನೀರಿಲ್ಲದ ಕಾರಣ
೭ ಬಣಗಿ ಹೋಯಿತು. ಕೆಲವು ಮುಳ್ಳುಗಳ ನಡುವೆ ಬಿತ್ತು; ಮು
೮ ಳ್ಳುಗಳು ಸಂಗಡ ಹುಟ್ಟಿ, ಅದನ್ನು ಅಣಗಿಸಿ ಬಿಟ್ಟವು. ಕೆಲವು
ಬಳ್ಳೇ ಭೂಮಿಯ ಮೇಲೆ ಬಿದ್ದು, ಹುಟ್ಟಿ, ನೂರಪಟ್ಟಾಗಿ ಫಲ
ಫಲಿಸಿತು. ಇವುಗಳನ್ನು ಹೇಳಿ, ಕೇಳ ಕಿವಿಗಳುಳ್ಳವನು ಕೇಳಲಿ,
ಎಂದು ಕೂಗಿದನು.
೯ ಅವನ ಶಿಷ್ಯರು, ಈ ಸಾಮ್ಯವು ಏನಾಗಿರ ಬಹುದೆಂದು,
೧೦ ಅವನನ್ನು ಕೇಳಿದಾಗ, ಅವನು ಹೇಳಿದ್ದೇನಂದರೆ, ನಿಮಗೆ ದೇವರ
ರಾಜ್ಯದ ಮರ್ಮಗಳ ತಿಳಿಯುವಿಕೆಯು ಕೊಟ್ಟಿದೆ; ಆದರೆ
ಬಿಕ್ಕಾದವರಿಗೆ, ಅವರು ನೋಡಿ ನೋಡದ ಹಾಗೆಯೂ, ಕೇಳಿ
೧೧ ಗ್ರಹಿಸದ ಹಾಗೆಯೂ, ಸಾಮ್ಯಗಳಲ್ಲಿ ಕೊಟ್ಟಿದೆ: ಈ ಸಾಮ್ಯ
ವು ಏನಂದರೆ, ಬೀಜವು ದೇವರ ವಾಕ್ಯವು; ಮಾರ್ಗದ ಬಳಿ
೧೨ ಯಲ್ಲಿ ಇರುವವರು ಕೇಳುವವರು; ತರುವಾಯ ಪಿಶಾಚನು ಬಂ
ದು, ಅವರು ವಿಶ್ವಾಸವಿಟ್ಟು, ರಕ್ಷಿಸಲ್ಪಡದ ಹಾಗೆ, ವಾಕ್ಯವನ್ನು
೧೩ ಅವರ ಹೃದಯದೊಳಗಿಂದ ತೆಗೆದು ಹಾಕುತ್ತಾನೆ. ಬಂಡೆಯ
ಮೇಲಿರುವವರು ಕೇಳುವಾಗಲೇ ಸಂತೋಷವಾಗಿ ವಾಕ್ಯವನ್ನು
ಅಂಗೀಕರಿಸುವವರು; ಇವರು ಸ್ವಲ್ಪ ಕಾಲ ವಿಶ್ವಾಸವಿಟ್ಟು,
ಶೋಧನೆಯ ಸಮಯದಲ್ಲಿ ತಿರುಗಿ ಬೀಳುವವರಾಗಿ, ಬೇರಿಲ್ಲದ
೧೪ ವರಾಗಿದ್ದಾರೆ. ಮುಳ್ಳುಗಳೊಳಗೆ ಬಿದ್ದದ್ದು ಕೇಳಿದ ಮೇಲೆ ಹೋ
ಗಿ, ಜೀವದ ಚಿಂತೆಗಳಿಂದಲೂ ಐಶ್ವರ್ಯದಿಂದಲೂ ಭೋಗಗ
೧೫ ಳಿಂದಲೂ ಅಣಗಿಸಲ್ಪಟ್ಟು, ಫಲ ಮಾಗಿಸದೆ ಇರುವವರು. ಆದ
ರೆ ಒಳ್ಳೇ ಭೂಮಿಯಲ್ಲಿ ಇರುವಂಥಾದ್ದು, ವಾಕ್ಯವನ್ನು ಕೇಳಿ,
ಒಳ್ಳೇ ಸದ್ಗುಣವುಳ್ಳ ಹೃದಯದಲ್ಲಿ ಇಟ್ಟು ಕೊಂಡು, ತಾಳ್ಮೆ
ಯಿಂದ ಫಲ ಫಲಿಸುವವರೇ.
೧೬ ಇದಲ್ಲದೆ ಯಾವನಾದರೂ ದೀಪ ಹಚ್ಚಿ, ಪಾತ್ರೆಯಲ್ಲಿ ಅಡ
ಗಿಸುವದಿಲ್ಲ; ಮಂಚದ ಕೆಳಗೆ ಇಡುವದಿಲ್ಲ; ಒಳಗೆ ಬರುವವರು
ಬೆಳಕನ್ನು ನೋಡುವ ಹಾಗೆ ಅದನ್ನು ದೀಪಸ್ತಂಭದ ಮೇಲೆ ಇಡು
೧೭ ವನು. ಯಾಕಂದರೆ ಬಹಿರಂಗವಾಗದಂಥ ಅಂತರಂಗವಾದದ್ದೂ, ತಿ
ಳಿಯಲ್ಪತಕರದಂಥ ಬಹಿರಂಗವಾಗಿರದಂಥ ಮರೆಯಾದದ್ದೂ
ಇಲ್ಲ. ಹಾಗಾದರೆ, ನೀವು ಹ್ಯಾಗೆ ಕೇಳುತ್ತೀರೆಂದು ನೋಡಿ ಕೊ
೧೮ ಳ್ಳಿರಿ; ಯಾಕಂದರೆ ಇದ್ದವನಿಗೆ ಕೊಡಲ್ಪಡುವದು; ಮತ್ತು,
ಇಲ್ಲದವನಿಂದ, ಉಂಟೆಂದು ಅವನು ಎಣಿಸುವಂಥಾದ್ದು ಸಹ
ತೆಗೆದು ಹಾಕಲ್ಪಡುವದು.
೧೯ ಆಗಲವನ ತಾಯಿಯೂ ಸಹೋದರರೂ ಅವನ ಬಳಿಗೆ
ಬಂದು, ಸಮೂಹದ ನಿಮಿತ್ತ ಅವನ ಹತ್ತರ ಸೇರಲಾರದೆ ಇದ್ದ
೨೦ ರು. ಜನರು, ನಿನ್ನ ತಾಯಿಯೂ ಸಹೋದರರೂ ನಿನ್ನನ್ನು
ನೋಡ ಬೇಕೆಂದು ಹೊರಗೆ ನಿಂತಿದ್ದಾರೆಂದು ಹೇಳಿ, ಅವನಿಗೆ ತಿಳಿ
೨೧ ಸಿದಾಗ, ಅವನು ಉತ್ತರ ಕೊಟ್ಟು, ದೇವರ ವಾಕ್ಯವನ್ನು ಕೇಳಿ,
ಮಾಡುವವರೇ ನನ್ನ ತಾಯಿಯೂ ಸಹೋದರರೂ ಎಂದು,
ಅವರಿಗೆ ಹೇಳಿದನು.
೨೨ ಒಂದಾನೊಂದು ದಿವಸದಲ್ಲಿ ಅವನೂ ಅವನ ಶಿಷ್ಯರೂ ಹಡ
ಗವನ್ನೇರಲಾಗಿ, ಅವನವರಿಗೆ, ಕೆರೆಯ ಆಚೆಗೆ ಹೋಗುವ, ಅಂ
೨೩ ದಾಗ, ಹೊರಟರು. ಅವರು ಹಡಗದಲ್ಲಿ ಹೋಗುವಾಗ, ಅವನು
ನಿದ್ದೆ ಮಾಡಿದನು. ಬಿರುಗಾಳಿಯು ಕೆರೆಗೆ ಇಳಿದಾಗ, ಹಡಗ ತುಂ
೨೪ ಬಿ, ಗಂಡಾಂತರ ಪಟ್ಟರು. ಆಗಲವರು ಹತ್ತರ ಬಂದು, ಅವನ
ನ್ನು ಎಬ್ಬಿಸಿ, ಅಯ್ಯಾ, ಅಯ್ಯಾ, ನಾಶವಾಗುತ್ತೇವೆ, ಅಂ
ದಾಗ; ಅವನು ಎದ್ದು, ಗಾಳಿಯನ್ನೂ ಉಕ್ಕುವ ನೀರನ್ನೂ ಗ
೨೫ ದರಿಸಿದನು; ಆಗಲವು ನಿಂತು, ಶಾಂತಿ ಆಯಿತು. ಮತ್ತು ಅವನ
ವರಿಗೆ, ನಿಮ್ಮ ವಿಶ್ವಾಸವು ಎಲ್ಲಿ? ಅಂದನು. ಆದರೆ ಅವರು ಭ
ಯಸ್ಥರಾಗಿ, ಆಶ್ಚರ್ಯ ಪಟ್ಟು, ಇವನ್ಯಾರು? ಗಾಳಿಗಳಿಗೂ
ನೀರಿಗೂ ಅಪ್ಪಣೆ ಕೊಡುತ್ತಾನೆ, ಮತ್ತು ಅವನಿಗೆ ವಿಧೇಯವಾಗು
ತ್ತವೆ ಎಂದು, ತಮ್ಮೊಳಗೆ ಹೇಳಿ ಕೊಂಡರು.
೨೬ ಮತ್ತು ಗಲಿಲಾಯಕ್ಕೆ ಎದುರಾಗಿರುವ ಗದರೇನರ ದೇಶಕ್ಕೆ
೨೭ ಮುಟ್ಟಿದರು. ಅವನು ಭೂಮಿಗೆ ಇಳಿದಾಗ, ಬಹು ಕಾಲದಿಂದ
ದೆವ್ವ ಹಿಡಿದವನಾಗಿ, ವಸ್ತ್ರ ಹಾಕಿ ಕೊಳ್ಳದೆ, ಮನೆಯಲ್ಲಿ ಅಲ್ಲ,
ಸಮಾಧಿಗಳಲ್ಲಿ ವಾಸ ಮಾಡುವ ಒಬ್ಬ ಮನುಷ್ಯನು ಪಟ್ಣದೊಳ
೨೮ ಗಿಂದ ಅವನೆದುರಿಗೆ ಬಂದನು. ಇವನು ಯೇಸುವನ್ನು ನೋಡಿ,
ಘಟ್ಟಿಯಾಗಿ ಕೂಗಿ, ಅವನ ಮುಂದೆ ಬಿದ್ದು, ಮಹಾ ಶಬ್ದದಿಂದ,
ಮಹೋನ್ನತನ ಮಗನಾದ ದೇವರ ಮಗನಾಗಿರುವ ಯೇಸು
ವೇ, ನನಗೂ ನಿನಗೂ ಏನು? ನನ್ನನ್ನು ಬಾಧಿಸ ಬೇಡವೆಂದು
೨೯ ನಿನ್ನನ್ನು ಬೇಡಿ ಕೊಳ್ಳುತ್ತೇನೆ, ಅಂದನು. ಯಾಕಂದರೆ ಅವನು
ಅಶುದ್ಧಾತ್ಮಕ್ಕೆ, ಆ ಮನುಷ್ಯನನ್ನು ಬಿಟ್ಟು ಹೋಗ ಬೇಕೆಂದು,
ಅಪ್ಪಣೆ ಕೊಟ್ಟಿದ್ದನು. ಯಾಕಂದರೆ ಅದು ಅನೇಕ ಕಾಲಗ
ಳಲ್ಲಿ ಅವನನ್ನು ಹಿಡಿದಿತ್ತು. ಮತ್ತು ಅವನು ಬಂಧಗಳಿಂದಲೂ
ಸಂಕೋಲೆಗಳಿಂದಲೂ ಕಟ್ಟಲ್ಪಟ್ಟು, ಭದ್ರ ಮಾಡಲ್ಪಟ್ಟರೂ ಬಂ
ಧಗಳನ್ನು ಕಿತ್ತು ಕೊಂಡು, ದೆವ್ವದಿಂದ ಅರಣ್ಯಕ್ಕೆ ಓಡಿಸಲ್ಪ
ಟ್ಟನು. ಯೇಸು, ನಿನ್ನ ಹೆಸರೇನೆಂದು ಅವನನ್ನು ಕೇಳಿದಾಗ,
ಅವನು, ಲೆಗಿಯೋನ್ ಅಂದನು; ಯಾಕಂದರೆ, ಅನೇಕ ದೆವ್ವ
೩೦ ಗಳು ಅವನೊಳಗೆ ಪ್ರವೇಶಿಸಿ ಇದ್ದವು. ಇದಲ್ಲದೆ ಅವು, ಅಗಾಧ
ದೊಳಗೆ ಹೋಗ ತಮಗೆ ಆಜ್ಞಾಪಿಸ ಬಾರದೆಂದು, ಅವನನ್ನು
ಬೇಡಿ ಕೊಂಡವು.
೩೧ ಹೀಗಿರಲಾಗಿ, ಅಲ್ಲಿ ಬೆಟ್ಟದ ಮೇಲೆ ಮೇಯುವ ಬಹಳ ಹಂದಿ



ಗಳ ಮಂದೆಯು ಇದ್ದದರಿಂದ, ಅವುಗಳಲ್ಲಿ ಪ್ರವೇಶಿಸ ತಮಗೆ
ಅಪ್ಪಣೆ ಕೊಡ ಬೇಕೆಂದು, ಅವು ಅವನನ್ನು ಬೇಡಿ ಕೊಂಡಾಗ,
33 ಅವುಗಳಿಗೆ ಅಪ್ಪಣೆ ಕೊಟ್ಟನು. ಆಗ ದೆವ್ವಗಳು ಆ ಮನು
ಷ್ಯನನ್ನು ಬಿಟ್ಟು, ಹಂದಿಗಳೊಳಗೆ ಪ್ರವೇಶಿಸಲು, ಮಂದೆಯು
ಇಳಿಜಾರಿನಿಂದ ಕೆರೆಯಲ್ಲಿ ಹಾರಿ, ಮುಣುಗಿ ಹೋಯಿತು. ಮೇ
೩೪ ಯಿಸುವವರು ಆದದ್ದನ್ನು ಕಂಡು, ಓಡಿ ಹೋಗಿ, ಪಟ್ಣದಲ್ಲಿಯೂ
೩೫ ಹಳ್ಳಿಗಳಲ್ಲಿಯೂ ತಿಳಿಸಿದರು. ಅವರು ಆದದ್ದನ್ನು ನೋಡುವ
ದಕ್ಕೆ ಹೊರಟು, ಯೇಸುವಿನ ಬಳಿಗೆ ಬಂದು, ದೆವ್ವಗಳು ಹೊ
ರಡಿಸಲ್ಪಟ್ಟ ಮನುಷ್ಯನು ವಸ್ತ್ರ ಹೊದ್ದು ಕೊಂಡವನಾಗಿಯೂ,
ಮನೋಸ್ವಸ್ಥವುಳ್ಳವನಾಗಿಯೂ, ಯೇಸುವಿನ ಪಾದಗಳ ಬಳಿ
೩೬ ಯಲ್ಲಿ ಕೂತಿರುವದನ್ನು ಕಂಡು, ಭಯ ಪಟ್ಟರು. ಇದಲ್ಲದೆ
ನೋಡಿದವರು ಸಹ, ಆ ದೆವ್ವ ಹಿಡಿದವನು ಸ್ವಸ್ಥವಾದ ಬಗೆ
ಯನ್ನು ಅವರಿಗೆ ತಿಳಿಸಿದರು.
೩೭ ಆಗ ಗದರೇನರ ಸುತ್ತಲಿರುವ ದೇಶದ ಸಮೂಹವೆಲ್ಲಾ ಮ
ಹಾ ಭಯ ಹಿಡಿದವರಾಗಿ, ತಮ್ಮನ್ನು ಬಿಟ್ಟು ಹೋಗ ಬೇಕೆಂದು
ಅವನನ್ನು ಬೇಡಿ ಕೊಂಡಾಗ, ಅವನು ಹಡಗವನ್ನೇರಿ, ತಿರಿಗಿ ಹೋ
೩೮ ದನು. ಆದರೆ ದೆವ್ವಗಳು ಹೊರಡಿಸಲ್ಪಟ್ಟ ಮನುಷ್ಯನು ಅವನ
ಸಂಗಡ ಇರ ಬೇಕೆಂದು, ಬೇಡಿ ಕೊಂಡಾಗ, ಯೇಸು, ನಿನ್ನ ಮ
೩೯ ನೆಗೆ ಹೋಗಿ, ದೇವರು ನಿನಗೆ ಎಂಥವುಗಳನ್ನು, ಮಾಡಿದನೋ
ವಿವರಿಸೆಂದು ಹೇಳಿ, ಅವನನ್ನು ಕಳುಹಿಸಿ ಬಿಟ್ಟನು. ಆಗಲವನು
ಹೋಗಿ, ಯೇಸು ತನಗೆ ಎಂಥವುಗಳನ್ನು ಮಾಡಿದನೋ ಪಟ್ಣ
ದಲ್ಲೆಲ್ಲಾ ಸಾರಿದನು.
೪೦ ಯೇಸು ತಿರಿಗಿ ಹೋಗುವಾಗ, ಆದದ್ದೇನಂದರೆ, ಸಮೂಹವು
ಅವನನ್ನು ಅಂಗೀಕರಿಸಿತು; ಯಾಕಂದರೆ ಎಲ್ಲರು ಅವನಿಗೋ
೪೧ ಸ್ಕರ ಕಾದು ಕೊಂಡಿದ್ದರು. ಆಗ, ಇಗೋ, ಸಭೆಮನೆಯ ಯ
ಜಮಾನನಾಗಿರುವ ಯಾಯಿರನೆಂಬ ಒಬ್ಬ ಮನುಷ್ಯನು ಬಂ
ದು, ಯೇಸುವಿನ ಪಾದಗಳ ಮುಂದೆ ಬಿದ್ದು, ತನ್ನ ಮನೆಯೊ
೪೨ ಳಗೆ ಬರ ಬೇಕೆಂದು, ಅವನನ್ನು ಬೇಡಿ ಕೊಂಡನು. ಯಾಕಂದರೆ
ಹೆಚ್ಚು ಕಡಿಮೆ ಹನ್ನೆರಡು ವರುಷದವಳಾದ ಒಬ್ಬಳೇ ಹುಟ್ಟಿದ
ಮಗಳು ಅವನಿಗಿದ್ದಳು; ಇವಳು ಸಾಯುವವಳಾಗಿದ್ದಳು. ಆದರೆ
ಅವನು ಹೋಗುತ್ತಿರಲಾಗಿ, ಸಮೂಹಗಳು ಅವನನ್ನು ಇರಿಕಿಸಿ
ದವು.
೪೩ ಮತ್ತು ಹನ್ನೆರಡು ವರುಷದಿಂದ ರಕ್ತ ಕುಸುಮವುಳ್ಳಂಥ,
ತನ್ನ ಬದುಕೆಲ್ಲಾ ವೈದ್ಯರಿಗೆ ವೆಚ್ಚ ಮಾಡಿ, ಯಾವನಿಂದಲೂ
೪೪ ದರೂ ಗುಣವಾಗಲಾರದಂಥ, ಒಬ್ಬ ಸ್ತ್ರೀಯು, ಹಿಂದಿನಿಂದ
ಬಂದು, ಅವನ ಅಂಗಿಯ ಶರಗನ್ನು ಮುಟ್ಟಿದಳು; ಸಂಗಡಲೇ
೪೫ ಅವಳ ರಕ್ತ ಕುಸುಮವು ನಿಂತು ಹೋಯಿತು. ತರುವಾಯ
ಯೇಸು, ನನ್ನನ್ನು ಮುಟ್ಟಿದವನ್ಯಾರು? ಅಂದನು. ಎಲ್ಲರು
ಇಲ್ಲನ್ನುವಾಗ, ಪೇತ್ರನೂ ಅವನ ಸಂಗಡ ಇದ್ದವರೂ, ಅಯ್ಯಾ,
ಸಮೂಹಗಳು ನಿನ್ನನ್ನು ಒತ್ತಿ, ಇರಿಕಿಸಲಾಗಿ, ನನ್ನನ್ನು ಮುಟ್ಟಿ
೪೬ ದವನ್ಯಾರು? ಅನ್ನುತ್ತೀಯೋ? ಅಂದರು. ಆದರೆ ಯೇಸು,
ನನ್ನನ್ನು ಯಾರೋ ಮುಟ್ಟಿದರು; ಯಾಕಂದರೆ ಬಲವು ನನ್ನಿಂ
ದ ಹೊರಟಿತೆಂದು, ತಿಳಿದಿದ್ದೇನೆ, ಅಂದಾಗ; ಆ ಸ್ತ್ರೀಯು, ತಾ
೪೭ ನು ಮರೆಯಾಗಿರಲಿಲ್ಲವೆಂದು ತಿಳಿದು ಕೊಂಡು, ನಡುಗುತ್ತಾ
ಬಂದು, ಅವನ ಮುಂದೆ ಬಿದ್ದು, ತಾನು ಅವನನ್ನು ಮುಟ್ಟಿದ ಕಾ
ರಣವನ್ನೂ, ಸಂಗಡಲೇ ವಾಸಿಯಾದದ್ದನ್ನೂ, ಜನರೆಲ್ಲರ ಮುಂ
೪೮ ದೆ ಅವನಿಗೆ ತಿಳಿಸಿದಳು. ಆದರೆ ಅವನವಳಿಗೆ, ಮಗಳೇ, ಧೈ
ರ್ಯವಾಗಿರು; ನಿನ್ನ ವಿಶ್ವಾಸವು ನಿನ್ನನ್ನು ರಕ್ಷಿಸಿ ಅದೆ; ಸಮಾ
ಧಾನವಾಗಿ ಹೋಗು, ಅಂದನು.
೪೯ ಅವನು ಇನ್ನೂ ಮಾತಾಡುತ್ತಿರುವಾಗ, ಸಭೇ ಮನೆಯ ಯ
ಜಮಾನನವರಲ್ಲಿ ಒಬ್ಬನು ಬಂದು, ನಿನ್ನ ಮಗಳು ಸತ್ತಿದ್ದಾಳೆ;
ಬೋಧಕನನ್ನು ಬೇಸರ ಗೊಳಿಸ ಬೇಡೆಂದು ಅವನಿಗೆ ಹೇಳಿದನು.
೫೦ ಯೇಸು ಅದನ್ನು ಕೇಳಿ, ಅವನಿಗೆ ಪ್ರತ್ಯುತ್ತರವಾಗಿ, ಭಯ ಪಡ
ಬೇಡ; ವಿಶ್ವಾಸ ಮಾತ್ರವಿರಲಿ; ಆಗ ರಕ್ಷಿಸಲ್ಪಡುವಳು, ಅಂದನು.
೫೧ ತರುವಾಯ ಮನೆಯಲ್ಲಿ ಪ್ರವೇಶಿಸಿ, ಪೇತ್ರನೂ, ಯಾಕೋಬ
ನೂ, ಯೊಹಾನನೂ, ಹುಡುಗಿಯ ತಂದೆ ತಾಯಿಗಳೂ, ಇವ
ರೇ ಹೊರತು, ಯಾವನನ್ನೂ ಒಳಗೆ ಹೋಗ ಗೊಡಿಸಲಿಲ್ಲ.
೫೨ ಎಲ್ಲರು ಅವಳಿಗೋಸ್ಕರ ಅಳುತ್ತಾ, ಬಡುಕೊಳ್ಳುತ್ತಾ ಇರುವಾಗ,
ಅವನು, ಅಳ ಬೇಡಿರಿ; ಅವಳು ಸಾಯಿಲಿಲ್ಲ; ನಿದ್ದೆ ಮಾಡುತ್ತಾಳೆ,
ಅಂದನು. ಆದರೆ ಅವರು, ಅವಳು ಸತ್ತಳೆಂದು ತಿಳಿದು, ಅವನ
೫೩ ನ್ನು ಹಾಸ್ಯ ಮಾಡಿದರು. ಆದರೆ ಅವನು ಎಲ್ಲರನ್ನು ಹೊರಗೆ
ಹಾಕಿ, ಅವಳ ಕೈ ಹಿಡಿದು, ಮಗಳೇ, ಏಳೆಂದು ಕೂಗಿದನು.
೫೪ ಆಗಲವಳ ಆತ್ಮವು ತಿರಿಗಿ ಬಂದು, ಅವಳು ಸಂಗಡಲೇ ಎದ್ದಳು.
ಮತ್ತು ಯೇಸು, ಅವಳಿಗೆ ಊಟಕ್ಕೆ ಕೊಡ ಬೇಕೆಂದು, ಅಪ್ಪಣೆ
೫೫ ಕೊಟ್ಟನು. ಅವಳ ಹೆತ್ತವರು, ಆಶ್ಚರ್ಯ ಪಟ್ಟರು. ಆದರೆ
ಅವನು, ಆದದ್ದನ್ನು ಯಾರಿಗೂ ಹೇಳ ಬೇಡವೆಂದು, ಅವರಿಗೆ
ಅಪ್ಪಣೆ ಕೊಟ್ಟನು.

## ೯. ಸಂಧಿ.

೧ ಇದಲ್ಲದೆ ಅವನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕೂ
ಡ ಕರೆದು, ಸಕಲ ದೆವ್ವಗಳ ಮೇಲೆಯೂ, ರೋಗಗಳನ್ನು
೨ ವಾಸಿ ಮಾಡುವದಕ್ಕೂ, ಅವರಿಗೆ ಬಲವನ್ನೂ ಅಧಿಕಾರವನ್ನೂ
ಕೊಟ್ಟು, ದೇವರ ರಾಜ್ಯವನ್ನು ಪ್ರಸಂಗಿಸುವದಕ್ಕೂ, ಅಸ್ವಸ
ವಾಗಿರುವವರನ್ನು ಸ್ವಸ್ಥ ಮಾಡುವದಕ್ಕೂ, ಅವರನ್ನು ಕಳುಹಿ
3 ಸಿ, ಅವರಿಗೆ ಹೇಳಿದ್ದೇನಂದರೆ, ಮಾರ್ಗಕ್ಕೆ ಏನೂ ತಕ್ಕೊಳ್ಳ
ಬೇಡಿರಿ; ಕೋಲುಗಳೂ, ಜೋಲೂ, ರೊಟ್ಟಿಯೂ, ಬೆಳ್ಳಿಯೂ,
೪ ಎರಡೆರಡು ಅಂಗಿಗಳೂ ನಿಮಗಿರ ಬಾರದು; ಮತ್ತು ಯಾವ ಮನೆ
ಯಲ್ಲಿ ಪ್ರವೇಶಿಸುತ್ತೀರೋ, ಅಲ್ಲಿ ಇದ್ದು, ಅಲ್ಲಿಂದಲೇ ಹೊರಟು
೫ ಹೋಗಿರಿ. ಮತ್ತು ನಿಮ್ಮನ್ನು ಅಂಗೀಕರಿಸದವರ್ಯಾರೋ ಆ ಪ
ಟ್ಣದೊಳಗಿಂದ ಹೊರಟು, ನಿಮ್ಮ ಪಾದಗಳ ಧೂಳನ್ನು ಅವ
ರಿಗೆ ಸಾಕ್ಷಿಯಾಗಿ ಝಾಡಿಸಿರಿ. ಆಗಲವರು ಹೊರಟು, ಎಲ್ಲೆಲ್ಲಿ
೬ ಯೂ ಸುವಾರ್ತೆ ಪ್ರಸಂಗಿಸಿ, ಸ್ವಸ್ಥ ಮಾಡಿ, ಗ್ರಾಮಗಳನ್ನು
ಹಾದು ಹೋದರು.
೭ ಆದರೆ ಚತುರಧಿಪತಿಯಾದ ಹೆರೋದನು ಅವನಿಂದಾದವು
ಗಳನ್ನೆಲ್ಲಾ ಕೇಳಿ, ಕೆಲವರು, ಯೊಹಾನನು ಸತ್ತವರೊಳಗಿಂ
ದ ಎದ್ದಿದ್ದಾನೆಂದು, ಕೆಲವರು, ಎಲೀಯನು ಪ್ರತ್ಯಕ್ಷವಾದನೆಂ
ದು, ಕೆಲವರು, ಪೂರ್ವದ ಪ್ರವಾದಿಗಳಲ್ಲಿ ಒಬ್ಬನು ಎದ್ದಿದ್ದಾ
೮ ನೆಂದು, ಹೇಳುತ್ತಿರುವದರಿಂದ, ಸಂದೇಹ ಪಟ್ಟನು. ಹೀಗಿರಲಾಗಿ
ಹೆರೋದನು, ಯೊಹಾನನ ತಲೆಯನ್ನು ನಾನು ಕೊಯಿಸಿ
ದ್ದೇನೆ, ಆದರೆ ಯಾವನನ್ನು ಕುರಿತು ಇವುಗಳನ್ನು ಕೇಳುತ್ತೇ

ನೋ, ಅವನು ಯಾರೆಂದು ಕೇಳಿ, ಅವನನ್ನು ನೋಡ ಹುರು
ಕಿದನು.
೧೦ ಆಗ ಅಪೊಸ್ತಲರು ತಿರಿಗಿ ಬಂದು, ತಾವು ಮಾಡಿದವುಗಳನ್ನೆ
ಲ್ಲಾ ಅವನಿಗೆ ವಿವರಿಸಿದ ಮೇಲೆ, ಅವನವರನ್ನು ಕರ ಕೊಂಡು, ಬೆ
ತ್ಸಾಯಿದವೆಂಬ ಪಟ್ಟಣದ ಅರಣ್ಯ ಸ್ಥಳಕ್ಕೆ ಪ್ರತ್ಯೇಕವಾಗಿ ಹೋ
೧೧ ದನು. ಆದರೆ ಸಮೂಹಗಳು ಅದನ್ನು ತಿಳಿದು, ಅವನನ್ನು ಹಿಂ
ಬಾಲಿಸಿದಾಗ, ಅವನು ಅವರನ್ನು ಅಂಗೀಕರಿಸಿ, ದೇವರ ರಾಜ್ಯ
ವನ್ನು ಕುರಿತು ಅವರ ಸಂಗಡ ಮಾತಾಡಿ, ಸ್ವಸ್ಥವಾಗ ಬೇಕಾದ
ವರನ್ನು ಸ್ವಸ್ಥ ಮಾಡಿದನು.
೧೨ ಹೊತ್ತು ಸಂದು ಹೋಗಲಾರಂಭಿಸಿದಾಗ, ಹನ್ನೆರಡು ಮಂದಿ
ಯು ಬಂದು, ನಮೂಹವು ಹೋಗಿ, ಸುತ್ತಲಿರುವ ಗ್ರಾಮಗಳಲ್ಲಿ
ಯೂ ಹಳ್ಳಿಗಳಲ್ಲಿಯೂ ಇಳು ಕೊಂಡು, ಆಹಾರವನ್ನು ಕಂ
ಡು ಕೊಳ್ಳುವ ಹಾಗೆ, ಅವರನ್ನು ಕಳುಹಿಸಿ ಬಿಡು; ಯಾಕಂದರೆ
೧೩ ಇಲ್ಲಿ ಅರಣ್ಯ ಸ್ಥಳದಲ್ಲಿ ಇದ್ದೇವೆಂದು ಅವನಿಗೆ ಹೇಳಿದಾಗ, ಅವ
ನವರಿಗೆ, ನೀವೇ ಅವರಿಗೆ ಉಣ್ಣ ಕೊಡಿರಿ, ಅಂದನು. ಅವರು,
ನಾವು ಹೋಗಿ, ಈ ಜನರಿಗೆಲ್ಲಾ ಆಹಾರವನ್ನು ಕೊಂಡು ಕೊಂಡರೆ
ಹೊರ್ತು ಐದು ಕೊಟ್ಟಿಗಳೂ ಎರಡು ಮೀನುಗಳೂ ಅಲ್ಲದೆ,
೧೪ ಮತ್ತೇನೂ ನಮಗಿಲ್ಲವಂದರು. ಹ್ಯಾಗಂದರೆ ಹೆಚ್ಚು ಕಡಿಮೆ
ಐದು ಸಾವಿರ ಗಂಡಸರಿದ್ದರು. ಆಗಲವನು ತನ್ನ ಶಿಷ್ಯರಿಗೆ, ಅವ
ರನ್ನು ಐವತ್ತೈವತ್ತಾಗಿ ಪಂಚ್ತಿಗಳಾಗಿ ಕೂಡ್ರಿಸಿರಿ, ಅಂದಾಗ; ಅವ
೧೫ ರು ಹಾಗೆ ಮಾಡಿ, ಎಲ್ಲರನ್ನು ಕೂಡ್ರಿಸಿದರು. ಆಗಲವನು ಐದು
ಕೊಟ್ಟಿಗಳನ್ನೂ, ಎರಡು ಮೀನುಗಳನ್ನೂ, ತೆಗೆದು ಕೊಂಡು,
ಆಕಾಶವನ್ನು ದೃಷ್ಟಿಸಿ, ಅವುಗಳನ್ನು ಆಶೀರ್ವದಿಸಿ, ಮುರಿದು,
೧೬ ಸಮೂಹಕ್ಕೆ ಹಂಚುವದಕ್ಕೆ ಶಿಷ್ಯರಿಗೆ ಕೊಟ್ಟನು. ಎಲ್ಲರು
ತಿಂದು, ತೃಪ್ತಿಯಾದರು. ಮತ್ತು ಅವರಿಗೆ ಮಿಕ್ಕ ತುಂಡುಗಳು
ಹನ್ನೆರಡು ಪುಟ್ಟಿ ತುಂಬ ಎತ್ತಲ್ಪಟ್ಟವು.
೧೮ ಮತ್ತು ಅವನು ಒಂಟೆಯಾಗಿ ಪ್ರಾರ್ಥಿಸುತ್ತಿರುವಾಗ, ಶಿಷ್ಯ
ರು ಅವನ ಸಂಗಡ ಇದ್ದರು. ಆಗಲವನು, ಸಮೂಹಗಳು ನನ್ನ
ನ್ನು ಯಾರೆಂದು ಹೇಳುತ್ತಾರೆಂಬದಾಗಿ, ಅವರನ್ನು ಕೇಳಿದ್ದಕ್ಕೆ,
೧೯ ಅವರು ಪ್ರತ್ಯುತ್ತರವಾಗಿ, ಸ್ನಾನಿಕನಾದ ಯೋಹಾನನೆಂದೂ,
ಮತ್ತೊಬ್ಬರು, ಎಲೀಯನೆಂದೂ, ಬೇರೊಬ್ಬರು, ಪೂರ್ವದ
ಪ್ರವಾದಿಗಳಲ್ಲಿ ಒಬ್ಬನು ಎದ್ದಿದ್ದಾನೆಂದೂ, ಹೇಳುತ್ತಾರೆ, ಅಂದ
೨೦ ರು. ಅವನವರಿಗೆ, ಆದರೆ ನೀವು ನನ್ನನ್ನು ಯಾರೆಂದು ಹೇಳು
ತ್ತೀರಿ? ಅಂದಾಗ; ಪೇತ್ರನು ಪ್ರತ್ಯುತ್ತರವಾಗಿ, ದೇವರ ಕ್ರಿಸ್ತನು,
೨೧ ಅಂದನು. ಆಗಲವನು ಅವರಿಗೆ ಆಜ್ಞಾಪಿಸಿ, ಇದನ್ನು ಯಾರಿಗೂ
೨೨ ಹೇಳ ಬಾರದೆಂದು ಅಪ್ಪಣೆ ಕೊಟ್ಟು, ಮನುಷ್ಯನ ಮಗನು ಬ
ಹಳ ಶ್ರಮೆ ಪಟ್ಟು, ಹಿರಿಯರಿಂದಲೂ ಪ್ರಧಾನ ಯಾಜಕರಿಂದ
ಲೂ ಶಾಸ್ತ್ರಿಗಳಿಂದಲೂ ತಳ್ಳಲ್ಪಟ್ಟು, ಕೊಲ್ಲಲ್ಪಟ್ಟು, ಮೂರನೇ
ದಿವಸದಲ್ಲಿ ಎಬ್ಬಿಸಲ್ಪಡ ಬೇಕಾಗಿದೆ, ಅಂದನು.
೨೩ ಇದಲ್ಲದೆ ಅವನು ಎಲ್ಲರಿಗೆ ಹೇಳ್ದೆನೆಂದರೆ, ಯಾವನಾದ
ರೂ ನನ್ನ ಹಿಂದೆ ಬರ ಮನಸ್ಸಾಗಿದ್ದರೆ, ಅವನು ತನ್ನನ್ನು ಆಶಿ
ಸದೆ, ದಿನಾಲು ತನ್ನ ಶಿಲುಬೆಯನ್ನು ಎತ್ತಿ ಕೊಂಡು, ನನ್ನನ್ನು
೨೪ ಹಿಂಬಾಲಿಸಲಿ. ಯಾಕಂದರೆ ತನ್ನ ಪ್ರಾಣವನ್ನು ರಕ್ಷಿಸ ಬೇಕೆಂದಿ
ರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತ ತನ್ನ
ಪ್ರಾಣವನ್ನು ಕಳ ಕೊಳ್ಳುವವನು ಅದನ್ನು ರಕ್ಷಿಸಿಕೊಳ್ಳುವನು.
೨೫ ಏನಂದರೆ ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿ
ಕೊಂಡರೂ, ತನ್ನನ್ನು ಕಳ ಕೊಂಡರೆ, ಇಲ್ಲವೆ ನಷ್ಟ ಪಟ್ಟರೆ,
೨೬ ಅವನಿಗೆ ಪ್ರಯೋಜನವೇನು? ಯಾಕಂದರೆ ನನಗೂ, ನನ್ನ
ವಾಕ್ಯಗಳಿಗೂ, ನಾಚಿಕೆ ಪಡುವವನ್ಯಾವನೋ, ಅವನಿಗೆ ಮನು
ಷ್ಯನ ಮಗನು, ತನಗೂ ತಂದೆಗೂ ಪರಿಶುದ್ಧ ದೂತರಿಗೂ
೨೭ ಇರುವ ಮಹಿಮೆಯಲ್ಲಿ ಬರುವಾಗ, ನಾಚಿಕೆ ಪಡುವನು. ಇದಲ್ಲದೆ
ನಿಜವಾಗಿ ನಿಮಗೆ ಹೇಳುತ್ತೇನೆ, ಇಲ್ಲಿ ನಿಂತವರಲ್ಲಿ ಕೆಲವರು, ದೇವರ
ರಾಜ್ಯವನ್ನು ನೋಡುವ ಮಟ್ಟಿಗೂ, ಮರಣವನ್ನು ರುಚಿ ನೋ
ಡರು.
೨೮ ಈ ವಾಕ್ಯಗಳಾದ ಮೇಲೆ ಹೆಚ್ಚು ಕಡಿಮೆ ಎಂಟು ದಿವಸಗಳ
ತರುವಾಯ ಆದದ್ದೇನಂದರೆ, ಅವನು ಪೇತ್ರನನ್ನೂ ಯೋಹಾ
ನನನ್ನೂ ಯಾಕೋಬನನ್ನೂ ಕರ ಕೊಂಡು, ಪ್ರಾರ್ಥನೆ ಮಾ
೨೯ ಡುವದಕ್ಕೆ ಬೆಟ್ಟವನ್ನೇರಿದನು. ಅವನು ಪ್ರಾರ್ಥಿಸುತ್ತಿರುವಾಗ,
ಅವನ ಮುಖದ ಆಕಾರವು ಬೇರೆಯಾಗಿ, ಅವನ ವಸ್ತ್ರವು ಬೆಳ್ಳ
೩೦ ಪಾಗಿ ಮಿಂಚುವಂಥಾದ್ದಾಯಿತು. ಆಗ, ಇಗೋ, ಇಬ್ಬರು ಪುರು
ಷರು ಅವನ ಸಂಗಡ ಮಾತಾಡಿದರು; ಯಾರಂದರೆ ಮೋಶೆ
೩೧ ಯೂ ಎಲೀಯನೂ. ಇವರು ಮಹಿಮೆಯಲ್ಲಿ ಕಾಣಿಸಿ ಕೊಂಡು,
ಅವನು ಯೆರೂಸಲೇಮನಲ್ಲಿ ಪೂರೈಸ ಬೇಕಾದ ಹೊರಡೋ
ಣದ ವಿಷಯ ಮಾತಾಡಿದರು.
೩೨ ಆದರೆ ಪೇತ್ರನೂ ಅವನ ಸಂಗಡ ಇದ್ದವರೂ ನಿದ್ರಾಭಾರ
ವಾಗಿದ್ದರು. ಎಚ್ಚತ್ತಾಗ, ಅವನ ಮಹಿಮೆಯನ್ನೂ, ಅವನ ಸಂ
೩೩ ಗಡ ನಿಂತ ಇಬ್ಬರು ಪುರುಷರನ್ನೂ, ನೋಡಿದರು. ಅವರು
ಅವನನ್ನು ಬಿಟ್ಟು ಹೋಗುತ್ತಿರುವಾಗ, ಪೇತ್ರನು ಯೇಸುವಿಗೆ ಹೇ
ಳಿದ್ದೇನಂದರೆ, ಅಯ್ಯಾ, ನಾವು ಇಲ್ಲಿ ಇರುವದು ಒಳ್ಳೇದು;
ಮೂರು ಪರ್ಣಶಾಲೆಗಳನ್ನು ಮಾಡುವ; ನಿನಗೆ ಒಂದು, ಮೋ
ಶೆಗೆ ಒಂದು, ಎಲೀಯನಿಗೆ ಒಂದು; ತಾನು ಹೇಳ್ದೇನೆಂದು ಅವ
೩೪ ನಿಗೆ ತಿಳಿಯಲಿಲ್ಲ. ಇದನ್ನು ಅವನು ಹೇಳುತ್ತಿರುವಾಗ, ಮೇಘ
ವು ಬಂದು, ಅವರ ಮೇಲೆ ನೆರಳಾಗಿತ್ತು. ಅವರು ಆ ಮೇಘದೊ
೩೫ ಳಗೆ ಪ್ರವೇಶಿಸುವಾಗ, ಭಯ ಪಟ್ಟರು. ಇದಲ್ಲದೆ ಮೇಘದೊಳ
ಗಿಂದ, ಇವನೇ ನನ್ನ ಪ್ರಿಯ ಮಗನು; ಇವನನ್ನು ಕೇಳಿರಿ, ಎಂಬ
೩೬ ಶಬ್ದವು ಉಂಟಾಯಿತು. ಆ ಶಬ್ದವು ಆದ ಮೇಲೆ ಯೇಸು ಮಾತ್ರ
ಕಾಣಲ್ಪಟ್ಟನು. ಆಗ ಅವರು ಸುಮ್ಮನಿದ್ದು, ತಾವು ನೋಡಿದವು
ಗಳಲ್ಲಿ ಒಂದನ್ನಾದರೂ ಆ ದಿವಸಗಳಲ್ಲಿ ಯಾರಿಗೂ ತಿಳಿಸಲಿಲ್ಲ.
೩೭ ಮಾರನೇ ದಿವಸ ಆದದ್ದೇನಂದರೆ, ಅವರು ಬೆಟ್ಟದಿಂದಿಳಿ
೩೮ ದಾಗ, ಬಹು ಸಮೂಹವು ಅವನೆದುರಿಗೆ ಬಂತು. ಆಗ, ಇಗೋ,
ಸಮೂಹದಲ್ಲಿರುವ ಒಬ್ಬ ಮನುಷ್ಯನು ಕೂಗಿ ಹೇಳ್ದೇನಂದ
ರೆ, ಬೋಧಕನೇ, ನನ್ನ ಮಗನನ್ನು ಪರಾಮರಿಸೆಂದು ನಿನ್ನನ್ನು
ಬೇಡಿಕೊಳ್ಳುತ್ತೇನೆ; ಅವನು ನನಗೆ ಒಬ್ಬನೇ ಹುಟ್ಟಿದವನು;
೩೯ ಮತ್ತು, ಇಗೋ, ಆತ್ಮವು ಅವನನ್ನು ಹಿಡಿಯುವದು; ಸಂಗಡಲೇ
ಅವನು ಕೂಗುವನು; ಮತ್ತು ಅದು ಅವನನ್ನು ನೊರೆ ಬರುವ
ಹಾಗೆ ಬದ್ದಾಡಿಸಿ, ಅವನನ್ನು ನಲಗಿಸಿ, ಪ್ರಯಾಸದಿಂದ ಅವನ
೪೦ ನ್ನು ಬಿಟ್ಟು ಹೋಗುವದು. ಇದಲ್ಲದೆ ಅದನ್ನು ಹೊರಡಿಸ ಬೇ
ಕೆಂದು ನಿನ್ನ ಶಿಷ್ಯರನ್ನು ಬೇಡಿ ಕೊಂಡಾಗ, ಅವರಿಂದ ಆಗದೆ
೪೧ ಹೋಯಿತು. ಅದಕ್ಕೆ ಯೇಸು ಉತ್ತರ ಕೊಟ್ಟು, ಓ ವಿಶ್ವಾಸ
ಹೀನವಾದ ಡೊಂಕು ಸಂತತಿಯೇ! ಎಷ್ಟು ವರಿಗೂ ನಿಮ್ಮ ಸಂ



ಗಡ ಇದ್ದು, ನಿಮ್ಮನ್ನು ತಾಳ ಬೇಕು? ನಿನ್ನ ಮಗನನ್ನು ಇಲ್ಲಿ
೪೨ ತಕ್ಕೊಂಡು ಬಾ, ಅಂದನು. ಅವನು ಹತ್ತರ ಬರುತ್ತಿರುವಾಗ,
ದೆವ್ವವು ಅವನನ್ನು ಹರಿದು ಒದ್ದಾಡಿಸಿತು. ಆದರೆ ಯೇಸು ಅ
ಶುದ್ಧಾತ್ಮನನ್ನು ಗದರಿಸಿ, ಹುಡುಗನನ್ನು ಸ್ವಸ್ಥ ಮಾಡಿ, ಅವನ
೪೩ ತಂದೆಗೆ ಕೊಟ್ಟನು. ಆಗ ಎಲ್ಲರು ದೇವರ ಮಹತ್ತಿಗೆ ಭ್ರಮೆ ಗೊಂ
ಡರು.
೪೪ ಯೇಸು ಮಾಡಿದ ಎಲ್ಲವುಗಳಿಗೆ ಎಲ್ಲರು ಆಶ್ಚರ್ಯ ಪಡು
ವಾಗ, ಅವನು ತನ್ನ ಶಿಷ್ಯರಿಗೆ ಹೇಳ್ದೇನಂದರೆ, ನೀವು ಈ ವಾ
ಕ್ಯಗಳನ್ನು ನಿಮ್ಮ ಕಿವಿಗಳಲ್ಲಿ ಇಟ್ಟು ಕೊಳ್ಳಿರಿ; ಯಾಕಂದರೆ
ಮನುಷ್ಯನ ಮಗನು ಮನುಷ್ಯರ ಕೈಗಳಿಗೆ ಒಪ್ಪಿಸಲ್ಪಡ ಬೇ
೪೫ ಕು; ಆದರೆ ಅವರು ಈ ವಾಕ್ಯವನ್ನು ತಿಳ್ಕೊಳದೆ ಇದ್ದರು. ಅದ
ನ್ನು ಗ್ರಹಿಸದ ಹಾಗೆ ಅವರಿಗೆ ಮರೆಯಾಗಿತ್ತು. ಮತ್ತು ಆ ವಾ
ಕ್ಯವನ್ನು ಕುರಿತು ಅವನನ್ನು ಕೇಳ ಭಯ ಪಟ್ಟರು.
೪೬ ಇದಲ್ಲದೆ ತಮ್ಮಲ್ಲಿ ಯಾವನು ದೊಡ್ಡವನು, ಎಂಬ ತರ್ಕವು
೪೭ ಅವರಲ್ಲಿ ಹುಟ್ಟಿತು. ಆಗ ಯೇಸು, ಅವರ ಹೃದಯದಲ್ಲಿರುವ
ತರ್ಕವನ್ನು ನೋಡಿ, ಒಂದು ಕೂಸನ್ನು ತೆಗೆದು ಕೊಂಡು,
೪೮ ತನ್ನ ಬಳಿಯಲ್ಲಿ ನಿಲ್ಲಿಸಿ, ಅವರಿಗೆ ಹೇಳ್ದೇನಂದರೆ, ಈ ಕೂಸ
ನ್ನು ನನ್ನ ಹೆಸರಿನಲ್ಲಿ ಅಂಗೀಕರಿಸುವವನ್ಯಾವನೋ, ಅವನು
ನನ್ನನ್ನು ಅಂಗೀಕರಿಸುತ್ತಾನೆ; ಮತ್ತು ನನ್ನನ್ನು ಅಂಗೀಕರಿಸು
ವವನ್ಯಾವನೋ, ಅವನು ನನ್ನನ್ನು ಕಳುಹಿಸಿದವನನ್ನು ಅಂಗೀ
ಕರಿಸುತ್ತಾನೆ; ಯಾಕಂದರೆ ನಿಮ್ಮೆಲ್ಲರಲ್ಲಿ ಚಿಕ್ಕವನಾಗಿರುವವನೇ
ದೊಡ್ಡವನಾಗಿರುವನು.
೪೯ ಆಗ ಯೋಹಾನನು ಉತ್ತರ ಕೊಟ್ಟು, ಅಯ್ಯಾ, ನಾವು
ನಿನ್ನ ಹೆಸರಿನಲ್ಲಿ ದೆವ್ವಗಳನ್ನು ಹೊರಡಿಸುವ ಒಬ್ಬನನ್ನು ನೋ
ಡಿ, ಅವನು ನಮ್ಮ ಸಂಗಡ ಹಿಂಬಾಲಿಸದ ಕಾರಣ, ಅವನನ್ನು ತಡೆ
೫೦ ದೆವು, ಅಂದಾ; ಯೇಸು ಅವನಿಗೆ, ತಡೆಯ ಬೇಡಿರಿ; ಯಾಕಂ
ದರೆ ನಮಗೆ ವಿರೋಧವಾಗಿರದವನು ನಮ್ಮ ಪಕ್ಷದವನಾಗಿದ್ದಾನೆ,
ಅಂದನು.
೫೧ ಇದಲ್ಲದೆ ಅವನು ಎತ್ತಲ್ಪಡುವದಕ್ಕೆ ದಿವಸಗಳು ಪೂರ್ಣ
ವಾದಾಗ, ಅವನು ಯೆರೂಸಲೇಮಿಗೆ ಹೋಗುವದಕ್ಕೆ ತನ್ನ
೫೨ ಮುಖವನ್ನು ಸ್ಥಿರ ಮಾಡಿ ಕೊಂಡು, ದೂತರನ್ನು ತನ್ನ ಮುಖದ
ಮುಂದೆ ಕಳುಹಿಸಿದನು. ಇವರು ಹೋಗಿ, ಅವನಿಗೆ ಸಿದ್ಧ ಮಾ
ಡುವದಕ್ಕೆ ಸಮಾರ್ಯದವರ ಒಂದು ಗ್ರಾಮದಲ್ಲಿ ಪ್ರವೇಶಿಸಿ
೫೩ ದರು. ಅವರು ಅವನನ್ನು ಅಂಗೀಕರಿಸಲಿಲ್ಲ; ಯಾಕಂದರೆ ಅ
೫೪ ವನ ಮುಖವು ಯೆರೂಸಲೇಮಿಗೆ ಹೋಗುವ ಹಾಗಿತ್ತು. ಅವನ
ಶಿಷ್ಯರಾದ ಯಾಕೋಬನೂ, ಯೋಹಾನನೂ ಅದನ್ನು
ನೋಡಿ, ಕರ್ತನೇ, ಎಲೀಯನು ಮಾಡಿದ ಹಾಗೆ ಆಕಾಶದಿಂದ
ಬೆಂಕಿ ಇಳಿದು, ಅವರನ್ನು ಸಂಹರಿಸ ಬೇಕೆಂದು, ನಾವೂ ಹೇಳುವ
೫೫ ದಕ್ಕೆ ನಿನಗೆ ಮನಸ್ಸುಂಟೋ? ಅಂದರು. ಆಗಲವನು ತಿರುಗಿ
ಕೊಂಡು, ಅವರನ್ನು ಗದರಿಸಿ, ನೀವು ಎಂಥ ಆತ್ಮದವರಾಗಿದ್ದೀ
೫೬ ರೋ, ಅರಿಯರಿ. ಯಾಕಂದರೆ ಮನುಷ್ಯನ ಮಗನು ಮನು
ಷ್ಯರ ಪ್ರಾಣಗಳನ್ನು ನಾಶನ ಮಾಡುವದಕ್ಕಲ್ಲ, ರಕ್ಷಿಸುವ
ದಕ್ಕೆ ಬಂದನೆಂದು ಹೇಳಿದನು.
೫೭ ಆಗ ಬೇರೆ ಗ್ರಾಮಕ್ಕೆ ಹೋದರು. ಅವರು ಹೋಗುತ್ತಿರಲಾಗಿ,
ಮಾರ್ಗದಲ್ಲಿ ಒಬ್ಬನು ಅವನಿಗೆ, ಕರ್ತನೇ, ನೀನು ಎಲ್ಲಿಗೆ
೫೮ ಹೋದರೂ, ನಿನ್ನನ್ನು ಹಿಂಬಾಲಿಸುವೆನು, ಅಂದನು. ಅವನಿಗೆ
ಯೇಸು, ನರಿಗಳಿಗೆ ಕೂಣೆಗಳೂ, ಆಕಾಶದ ಪಕ್ಷಿಗಳಿಗೆ ಗೂಡು
ಗಳೂ, ಉಂಟು; ಆದರೆ ಮನುಷ್ಯನ ಮಗನಿಗೆ ತಲೆ ಇಡುವ
೫೯ ಸ್ಥಳವಿಲ್ಲ, ಅಂದನು. ಬೇರೊಬ್ಬನಿಗೆ ಅವನು, ನನ್ನನ್ನು ಹಿಂಬಾ
ಲಿಸು, ಅಂದಾಗ; ಅವನು, ಕರ್ತನೇ, ನಾನು ಮೊದಲು ಹೋಗಿ,
ನನ್ನ ತಂದೆಯನ್ನು ಹೂಣುವ ಹಾಗೆ, ನನಗೆ ಅಪ್ಪಣೆ ಕೊಡು,
೬೦ ಅನ್ನಲು; ಯೇಸು ಅವನಿಗೆ, ಸತ್ತವರೇ ತಮ್ಮ ಸತ್ತವರನ್ನು
ಹೂಣಲಿ; ಆದರೆ ನೀನು ಹೋಗಿ, ದೇವರ ರಾಜ್ಯವನ್ನು ಸಾರು,
೬೧ ಅಂದನು. ಇದಲ್ಲದೆ ಬೇರೊಬ್ಬನು, ಕರ್ತನೇ, ನಿನ್ನನ್ನು ಹಿಂ
ಬಾಲಿಸುವೆನು; ಆದರೆ ಮೊದಲು ನನ್ನ ಮನೆಯವರಿಂದ ಅಪ್ಪಣೆ
೬೨ ತಕ್ಕೊಳ್ಳುವದಕ್ಕೆ ಉತ್ತರ ಕೊಡು, ಅಂದಾಗ; ಯೇಸು ಅವ
ನಿಗೆ, ತನ್ನ ಕೈಯನ್ನು ನೇಗಿಲಿಗೆ ಹಾಕಿ, ಹಿಂದಕ್ಕೆ ನೋಡುವವ
ನ್ಯಾವನಾದರೂ ದೇವರ ರಾಜ್ಯಕ್ಕೆ ತಕ್ಕವನಲ್ಲ, ಅಂದನು.

## ೧೦. ಸಂಧಿ.

೧ ಇವುಗಳಾದ ಮೇಲೆ, ಕರ್ತನು ಬೇರೆ ಎಪ್ಪತ್ತು ಮಂದಿಯ
ನ್ನು ನೇಮಿಸಿ, ಅವರನ್ನು ಇಬ್ಬರಿಬ್ಬರಾಗಿ ತನ್ನ ಮುಖದ ಮುಂದೆ,
ತಾನು ಹೋಗ ಬೇಕಾದ ಸಕಲ ಪಟ್ಟಣಗಳಿಗೂ ಸ್ಥಳಗಳಿಗೂ, ಕಳು
೨ ಹಿಸಿದನು. ಅವನವರಿಗೆ ಹೇಳ್ದೇನಂದರೆ, ಬೆಳೆ ಬಹಳ; ಆದರೆ
ಕೆಲಸದವರು ಸ್ವಲ್ಪ; ಹೀಗಿರುವದರಿಂದ ಬೆಳೆಯ ಯಜಮಾನ
ನಿಗೆ, ಅವನು ತನ್ನ ಬೆಳೆಗೆ ಕೆಲಸದವರನ್ನು ಕಳುಹಿಸ ಬೇಕೆಂದು,
೩ ಬೇಡಿ ಕೊಳ್ಳಿರಿ. ಹೋಗಿರಿ; ಇಗೋ, ನಾನು ತೋಳಗಳ ಮಧ್ಯ
೪ ದಲ್ಲಿರುವ ಕುರಿಗಳ ಹಾಗೆ ನಿಮ್ಮನ್ನು ಕಳುಹಿಸುತ್ತೇನೆ. ಹಣದ
ಚೀಲವನ್ನಾದರೂ, ಹಸಿಬಿಯನ್ನಾದರೂ, ಕೆರಗಳನ್ನಾದರೂ,
ಇಟ್ಟು ಕೊಳ್ಳ ಬೇಡಿರಿ; ಮಾರ್ಗದಲ್ಲಿ ಯಾವನನ್ನಾದರೂ
೫ ವಂದಿಸ ಬೇಡಿರಿ. ಇದಲ್ಲದೆ ನೀವು ಯಾವ ಮನೆಯಲ್ಲಿ ಪ್ರವೇಶಿ
ಸುತ್ತೀರೋ, ಮೊದಲು, ಈ ಮನೆಗೆ ಸಮಾಧಾನವಾಗಲೆಂದು
೬ ಹೇಳಿರಿ. ಸಮಾಧಾನದ ಮಗನು ಅಲ್ಲಿ ಇದ್ದರೆ, ಅವನ ಮೇಲೆ
ನಿಮ್ಮ ಸಮಾಧಾನವು ವಿಶ್ರಮಿಸಿ ಕೊಳ್ಳುವದು; ಇಲ್ಲದಿದ್ದರೆ,
೭ ನಿಮ್ಮ ಬಳಿಗೆ ತಿರುಗಿ ಕೊಳ್ಳುವದು. ಅದೇ ಮನೆಯಲ್ಲಿದ್ದು, ಅವರ
ಲ್ಲಿ ಇರುವದನ್ನು ಉಂಡು, ಕುಡಿಯಿರಿ; ಯಾಕಂದರೆ ಕೆಲಸದವ
ನು ತನ್ನ ಸಂಬಳಕ್ಕೆ ಯೋಗ್ಯನಾಗಿದ್ದಾನೆ. ಮನೆ ಮನೆಗೆ
ಹೋಗ ಬೇಡಿರಿ.
೮ ಮತ್ತು ನೀವು ಯಾವ ಪಟ್ಟಣದಲ್ಲಿ ಪ್ರವೇಶಿಸುತ್ತೀರೋ, ಅವ
ರು ನಿಮ್ಮನ್ನು ಅಂಗೀಕರಿಸಿದರೆ, ನಿಮಗೆ ಇಕ್ಕಿದವುಗಳನ್ನು ಉ
೯ ಣ್ಣಿರಿ. ಮತ್ತು ಅದರಲ್ಲಿರುವ ರೋಗಿಷ್ಠರನ್ನು ಸ್ವಸ್ಥ ಮಾಡಿ,
ದೇವರ ರಾಜ್ಯವು ನಿಮಗೆ ಸಮೀಪವಾಯಿತೆಂದು, ಅವರಿಗೆ ಹೇ
೧೦ ಳಿರಿ. ಆದರೆ ನೀವು ಪ್ರವೇಶಿಸುವ ಯಾವ ಪಟ್ಟಣದಲ್ಲಾದರೂ
ಅವರು ನಿಮ್ಮನ್ನು ಅಂಗೀಕರಿಸದೆ ಹೋದರೆ, ಅದರ ಬೀದಿಗ
೧೧ ಳಿಗೆ ಹೊರಟು, ನಿಮ್ಮ ಪಟ್ಟಣದಿಂದ ನಮಗೆ ಹತ್ತಿದ ಧೂಳನ್ನು
ಸಹ ನಿಮಗೆ ಝಾಡಿಸಿ ಬಿಡುತ್ತೇವೆ; ಆದಾಗ್ಯೂ ದೇವರ ರಾಜ್ಯವು
ನಿಮಗೆ ಸಮೀಪವಾಯಿತೆಂದು ತಿಳುಕೊಳ್ಳಿರಿ, ಎಂದು ಹೇಳಿರಿ.
೧೨ ಆ ದಿವಸದಲ್ಲಿ ಆ ಪಟ್ಟಣಕ್ಕಿಂತ ಸೊದೋಮಿಗೆ ತಾಳ ತಕ್ಕದ್ದಾ

೧೩ ಗಿರುವೆನೆಂದು, ನಿಮಗೆ ಹೇಳುತ್ತೇನೆ. ಬೊರಜಿನೇ, ನಿನಗೆ ಅ
ಯ್ಯೋ! ಬೆತ್ಸಾಯಿದವೇ, ನಿನಗೆ ಅಯ್ಯೋ! ಯಾಕಂದರೆ
ನಿಮ್ಮಲ್ಲಿ ನಡೆದ ಬಲವಾದ ಕ್ರಿಯೆಗಳು ತೂರ್ ಸಿದೋನಗಳಲ್ಲಿ
ನಡೆದಿದ್ದರೆ, ಅವರು ಪೂರ್ವದಲ್ಲಿ ಗೋಣಿ ತಟ್ಟು ಹಾಕಿ ಕೊಂ
ಡು, ಬೂದಿಯಲ್ಲಿ ಕೂತು ಕೊಂಡು, ಮಾನಸಾಂತರ ಪಡುತ್ತಿದ್ದ
೧೪ ರು. ಆದರೆ ನ್ಯಾಯೆ ತೀರ್ಪಿಕೆಯಲ್ಲಿ ನಿಮಗಿಂತ ತೂರ್ ಸಿದೋ
೧೫ ನಗಳಿಗೆ ಕಾಳ ತಕ್ಕದ್ದಾಗಿರುವದು. ಇದಲ್ಲದೆ ಆಕಾಶದ ಪರ್ಯಂ
ತರ ಎತ್ತಲ್ಪಟ್ಟ ಕಪೆರ್ನಾಮೇ, ನೀನು ಪಾತಾಳದ ಪರ್ಯಂತ
೧೬ ರ ಇಳಿಸಲ್ಪಡುವಿ. ನಿಮ್ಮನ್ನು ಕೇಳುವವನು ನನ್ನನ್ನು ಕೇಳುತ್ತಾ
ನೆ; ನಿಮ್ಮನ್ನು ಅಲಕ್ಷ್ಯ ಮಾಡುವವನು ನನ್ನನ್ನು ಅಲಕ್ಷ್ಯ
ಮಾಡುತ್ತಾನೆ; ಆದರೆ ನನ್ನನ್ನು ಅಲಕ್ಷ್ಯ ಮಾಡುವವನು ನನ್ನ
ನ್ನು ಕಳುಹಿಸಿದವನನ್ನು ಅಲಕ್ಷ್ಯ ಮಾಡುತ್ತಾನೆ.

೧೭ ಆಗ ಆ ಎಪ್ಪತ್ತು ಮಂದಿಯು ಸಂತೋಷದಿಂದ ತಿರಿಗಿ
ಬಂದು, ಕರ್ತನೇ, ದೆವ್ವಗಳು ಸಹ ನಿನ್ನ ಹೆಸರುನಲ್ಲಿ ನಮಗೆ
೧೮ ವಿಧೇಯವಾಗಿವೆ, ಅಂದಾಗ; ಅವನವರಿಗೆ ಹೇಳಿದ್ದೇನಂದರೆ, ಸೈ
ತಾನನು ಮಿಂಚಿನ ಹಾಗೆ ಆಕಾಶದಿಂದ ಬೀಳುವದನ್ನು ನೋಡಿ
೧೯ದೆನು. ಇಗೋ, ಸರ್ಪಗಳನ್ನೂ, ಚೇಳುಗಳನ್ನೂ, ಶತ್ರುವಿನ
ಸಮಸ್ತ ಬಲವನ್ನೂ, ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಡು
೨೦ ತ್ತೇನೆ; ಯಾವದೂ ನಿಮಗೆ ಹ್ಯಾಗೂ ನಷ್ಟ ಮಾಡದು. ಆದಾ
ಗ್ಯೂ, ಆತ್ಮಗಳು ನಿಮಗೆ ವಿಧೇಯವಾಗಿವೆ ಎಂದು ಸಂತೋಷ
ಪಡದೆ, ನಿಮ್ಮ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಟ್ಟಿವೆ,
ಎಂದು ಹೆಚ್ಚಾಗಿ ಸಂತೋಷ ಪಡಿರಿ.

೨೧ ಅದೇ ತಾಸಿನಲ್ಲಿ ಯೇಸು ಆತ್ಮದಲ್ಲಿ ಆನಂದ ಪಟ್ಟು, ಹೇಳಿ
ದ್ದೇನಂದರೆ, ಪರಲೋಕಗಳ ಭೂಲೋಕಗಳ ಕರ್ತನಾದ ತಂದೆ
ಯೇ, ನೀನು ಇವುಗಳನ್ನು ಜ್ಞಾನಿಗಳಿಗೂ ಬುದ್ಧಿವಂತರಿಗೂ
ಮರೆ ಮಾಡಿ, ಬಾಲಕರಿಗೆ ಪ್ರಕಟ ಮಾಡಿದ್ದರಿಂದ ನಿನಗೆ ಸ್ತೋ
ತ್ರ ಮಾಡುತ್ತೇನೆ; ಹೌದು, ತಂದೆಯೇ, ಯಾಕಂದರೆ ಹೀಗೆ ನಿನ್ನ
೨೨ ಮುಂದೆ ಒಳ್ಳೇದಾಗಿ ತೋಚಿತು. ಎಲ್ಲವುಗಳು ನನ್ನ ತಂದೆ
ಯಿಂದ ನನಗೆ ಒಪ್ಪಲ್ಪಟ್ಟಿವೆ; ಮತ್ತು ಮಗನು ಯಾರೆಂದು,
ತಂದೆಯಲ್ಲದೆ ಯಾರೂ ಅರಿಯರು; ಮತ್ತು ತಂದೆಯು ಯಾ
ರೆಂದು, ಮಗನಲ್ಲದೆ, ಯಾರಿಗೆ ಪ್ರಕಟ ಮಾಡುವದಕ್ಕೆ ಮಗ
ನಿಗೆ ಮನಸ್ಸುಂಟೋ ಅವನಲ್ಲದೆ, ಯಾರೂ ಅರಿಯರು.

೨೩ ಆಗಲವನು ಶಿಷ್ಯರ ಬಳ್ಳಿಗೆ ತಿರುಗಿ ಕೊಂಡು, ಪ್ರತ್ಯೇಕವಾಗಿ
ಹೇಳಿದ್ದೇನಂದರೆ, ನೀವು ನೋಡುವವುಗಳನ್ನು ನೋಡುವ ಕಣ್ಣು
೨೪ ಗಳು ಭಾಗ್ಯವುಳ್ಳವುಗಳು. ಹ್ಯಾಗಂದರೆ ಅನೇಕ ಪ್ರವಾದಿಗಳೂ,
ಅರಸರೂ, ನೀವು ನೋಡುವವುಗಳನ್ನು ನೋಡ ಇಚ್ಛೈಸಿ,
ನೋಡಲಿಲ್ಲ; ನೀವು ಕೇಳುವವುಗಳನ್ನು ಕೇಳ ಇಚ್ಛೈಸಿ, ಕೇಳಲಿಲ್ಲ
ವೆಂದು, ನಿಮಗೆ ಹೇಳುತ್ತೇನೆ.

೨೫ ಆಗ, ಇಗೋ, ಒಬ್ಬ ನ್ಯಾಯಶಾಸ್ತ್ರಿಯು ಎದ್ದು, ಅವನನ್ನು
ಕೋಧಿಸಿ, ಬೋಧಕನೇ, ನಿತ್ಯ ಜೀವವನ್ನು ಬಾಧ್ಯವಾಗಿ ಹೊಂ
೨೬ ದುವದಕ್ಕೆ ನಾನೇನು ಮಾಡ ಬೇಕು? ಅಂದಾಗ, ಅವನಿಗೆ, ನ್ಯಾಯ
೨೭ ಪ್ರಮಾಣದಲ್ಲಿ ಏನು ಬರೆದಿದೆ? ಹ್ಯಾಗೆ ಓದುತ್ತೀ? ಅನ್ನಲು; ಅವ
ನು ಪ್ರತ್ಯುತ್ತರವಾಗಿ, ನಿನ್ನ ದೇವರಾಗಿರುವ ಕರ್ತನನ್ನು ನಿನ್ನ
ಪೂರ್ಣ ಹೃದಯದಿಂದಲೂ, ನಿನ್ನ ಪೂರ್ಣ ಪ್ರಾಣದಿಂದ
ಲೂ, ನಿನ್ನ ಪೂರ್ಣ ಶಕ್ತಿಯಿಂದಲೂ, ನಿನ್ನ ಪೂರ್ಣ ಬುದ್ಧಿ
ಯಿಂದಲೂ, ಮತ್ತು ನಿನ್ನ ನೆರೆಯವನನ್ನು ನಿನ್ನ ಹಾಗೆಯೂ,
೨೮ ಪ್ರೀತಿ ಮಾಡ ಬೇಕು, ಅಂದನು. ಅವನು ಅವನಿಗೆ, ಸರಿಯಾಗಿ
ಉತ್ತರ ಕೊಟ್ಟೆ; ಇದನ್ನು ಮಾಡಿದರೆ ಬದುಕುವಿ, ಅಂದನು.

೨೯ ಆದರೆ ಅವನು, ತಾನು ನೀತಿವಂತನು ಅನ್ನಿಸಿಕೊಳ್ಳ ಬೇಕೆಂದು,
ಯೇಸುವಿಗೆ, ಹಾಗಾದರೆ ನನ್ನ ನೆರೆಯವನು ಯಾರು? ಅಂದನು.
೩೦ ಅದಕ್ಕೆ ಯೇಸು ಹೇಳ್ದದ್ದೇನಂದರೆ, ಒಬ್ಬ ಮನುಷ್ಯನು, ಯೆ
ರೂಸಲೇಮಿನಿಂದ ಯೆರಿಕೋಲಿಗೆ ಇಳ್ದದು ಹೋಗುವಾಗ, ಕಳ್ಳ
ರ ಕೊಳ್ಳಗೆ ಬಿದ್ದನು. ಇವರು ಅವನ ವಸ್ತ್ರಗಳನ್ನು ತೆಗೆದು, ಬೆಟ್ಟ
ಹೊಡೆದು, ಅವನನ್ನು ಅರೆ ಪ್ರಾಣದಲ್ಲಿ ಬಿಟ್ಟು, ಹೋದರು.
೩೧ ಆಗ ಅಕಸ್ಮಾತ್ತಾಗಿ ಆ ಮಾರ್ಗದಲ್ಲಿ ಒಬ್ಬ ಯಾಜಕನು ಇಳ್ದದು
ಹೋಗುವಾಗ, ಅವನನ್ನು ನೋಡಿ, ವಾಕೆಯಾಗಿ ಹೋದನು.
೩೨ ಅದೇ ಪ್ರಕಾರ ಒಬ್ಬ ಲೇವ್ಯನು ಆ ಸ್ಥಳಕ್ಕೆ ಕೇರಿ, ಬಂದು,
೩೩ ನೋಡಿ, ವಾಕೆಯಾಗಿ ಹೋದನು. ಆದರೆ ಒಬ್ಬ ಸಮಾರ್ಯನು
ಪ್ರಯಾಣವಾಗಿ ಅವನ ಹತ್ತರ ಬಂದು, ಅವನನ್ನು ನೋಡಿ, ಅಂ
೩೪ ತ್ಯಕರಣ ಪಟ್ಟು, ಹತ್ತರ ಹೋಗಿ, ಅವನ ಘಾಯಗಳಲ್ಲಿ ಎಣ್ಣೆ
ಯನ್ನೂ ದ್ರಾಕ್ಷೇ ರಸವನ್ನೂ ಹೊಯಿದು, ಕಟ್ಟಿ, ಅವನನ್ನು
ಸ್ವಂತ ವಾಹನದ ಮೇಲೆ ಏರಿಸಿ, ಛತ್ರಕ್ಕೆ ಅವನನ್ನು ತಕ್ಕೊಂ
೩೫ ಡು ಹೋಗಿ, ಅವನನ್ನು ಪರಾಮರಿಸಿದನು. ಮಾರನೇ ದಿವಸದಲ್ಲಿ
ಅವನು ಹೊರಟು ಹೋಗುವಾಗ, ಎರಡು ಹಣಗಳನ್ನು ತೆಗೆದು
ಕೊಂಡು, ಛತ್ರದವನಿಗೆ ಕೊಟ್ಟು, ಅವನಿಗೆ ಹೇಳ್ದದ್ದೇನಂದರೆ, ಇವ
ನನ್ನು ಪರಾಮರಿಸು; ಮತ್ತು ನೀನು ಹೆಚ್ಚು ಏನಾದರೂ ಪೆಚ್ಚ
೩೬ ಮಾಡಿದರೆ, ನಾನು ತಿರಿಗಿ ಬರುವಾಗ, ನಿನಗೆ ಕೊಡುತ್ತೇನೆ. ಆದ
ದರಿಂದ ಈ ಮೂವರಲ್ಲಿ ಯಾವನು ಕಳ್ಳರ ಕೊಳ್ಳಗೆ ಬಿದ್ದವನಿಗೆ ನೆ
೩೭ ರೆಯವನಾಗಿದ್ದನೆಂದು ನಿನಗೆ ಕಾಣುತ್ತದೆ? ಇವನು, ಅವನಿಗೆ
ಕರುಣೆ ತೋರಿಸಿದವನೇ, ಅಂದನು. ಆದದರಿಂದ ಯೇಸು ಅವ
ನಿಗೆ, ನೀನೂ ಹೋಗಿ, ಅನೇ ಪ್ರಕಾರ ಮಾಡು, ಅಂದನು.

೩೮ ಮತ್ತು ಅವರು ಹೋಗುತ್ತಿರುವಾಗ, ಅವನು ಬಂದು ಗ್ರಾಮ
ದೊಳ್ಳಗೆ ಪ್ರವೇಶಿಸಿದನು. ಮತ್ತು ಮಾರ್ಥಳೆಂಬ ಒಬ್ಬ ಸ್ತ್ರೀ
೩೯ ಯು ಅವನನ್ನು ತನ್ನ ಮನೆಯಲ್ಲಿ ಸೇರಿಸಿ ಕೊಂಡಳು. ಅವಳಿಗೆ
ಮರಿಯಳೆಂಬ ಒಬ್ಬ ಸಹೋದರಿ ಇದ್ದಳು. ಇವಳು ಯೇಸುವಿನ
ಪಾದಗಳ ಬಳ್ಳಿಯಲ್ಲಿ ಕೂತು ಕೊಂಡು, ಅವನ ವಾಕ್ಯವನ್ನು ಕೇ
೪೦ ಳ್ದಿದಳು. ಆದರೆ ಮಾರ್ಥಳು ಬಹಳ ಸೇವೆಯಿಂದ ತೊಂದರೆ
ಪಟ್ಟು, ಹತ್ತರ ಬಂದು, ಕರ್ತನೇ, ನನ್ನ ಸಹೋದರಿ ನನ್ನನ್ನು
ಒಬ್ಬಳಾಗಿ ಸೇವೆ ಮಾಡುವದಕ್ಕೆ ಬಿಟ್ಟಿದ್ದದ್ದಕ್ಕೆ ನಿನಗೆ ಚಿಂತೆ ಇಲ್ಲ
ವೋ? ನನಗೆ ಸಹಾಯ ಮಾಡ ಬೇಕೆಂದು ಅವಳಿಗೆ ಹೇಳು, ಅಂ
೪೧ ದಾಗ; ಯೇಸು ಅವಳಿಗೆ ಪ್ರತ್ಯುತ್ತರವಾಗಿ ಹೇಳ್ದದ್ದೇನಂದರೆ,
ಮಾರ್ಥಳೇ, ಮಾರ್ಥಳೇ, ಅನೇಕವಾದವುಗಳಿಗೋಸ್ಕರ ಚಿಂ
೪೨ತೆ ತೊಂದರೆ ಪಡುತ್ತೀ; ಆದರೆ ಬೇಕಾದದ್ದು ಒಂದೇ. ಮತ್ತು
ಮರಿಯಳು ಒಳ್ಳೇ ಪಾಲನ್ನು ಆದು ಕೊಂಡಿದ್ದಾಳೆ; ಅದು ಅವ
ಳಿಂದ ತೆಗೆಯಲ್ಪಡದು.

## ೧೧. ಸಂಧಿ.

೧ ಇದಲ್ಲದೆ ಅವನು ಬಂದು ಸ್ಥಳದಲ್ಲಿ ಪ್ರಾರ್ಥನೆ ಮಾಡುತ್ತಿರ
ಲಾಗಿ ಆದದ್ದೇನಂದರೆ, ಅವನು ಮುಗಿಸಿದಾಗ, ಅವನ ಶಿಷ್ಯರಲ್ಲಿ
ಒಬ್ಬನು ಅವನಿಗೆ, ಕರ್ತನೇ, ಯೋಹಾನನು ಸಹ ತನ್ನ ಶಿಷ್ಯ
ರಿಗೆ ಬೋಧಿಸಿದ ಹಾಗೆ, ಪ್ರಾರ್ಥನೆ ಮಾಡ ನಮಗೆ ಬೋಧಿಸು,
೨ ಅಂದಾಗ; ಅವನವರಿಗೆ ಹೇಳ್ದದ್ದೇನಂದರೆ, ನೀವು ಪ್ರಾರ್ಥನೆ ಮಾ
ಡುವಾಗ, ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು
ಪರಿಶುದ್ಧವಾಗಲಿ; ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರ
ಲೋಕದಲ್ಲಿ ಆಗುವ ಪ್ರಕಾರ ಭೂಮಿಯ ಮೇಲೆಯೂ ಆಗಲಿ;
3 ನಮ್ಮ ಅನುದಿನದ ರೊಟ್ಟಿಯನ್ನು ದಿನಾಲು ನಮಗೆ ಕೊಡು;
೪ ನಮ್ಮ ಪಾಪಗಳನ್ನು ನಮಗೆ ಮನ್ನಿಸು; ಯಾಕಂದರೆ ನಾವು
ಸಹ ನಮ್ಮ ಸಾಲಗಾರರೆಲ್ಲರಿಗೆ ಮನ್ನಿಸುತ್ತೇವೆ. ನಮ್ಮನ್ನು
ಕೋಧನೆಯಲ್ಲಿ ಸೇರಿಸದೆ, ಕೇಡಿಗೆ ನಮ್ಮನ್ನು ತಪ್ಪಿಸು, ಎಂದು
ಹೇಳ್ದರಿ.

೫ ಮತ್ತು ಅವರಿಗೆ ಹೇಳ್ದದ್ದೇನಂದರೆ, ನಿಮ್ಮಲ್ಲಿ ಒಬ್ಬನಿಗೆ ಸ್ನೇ
ಹಿತನಿರಲಾಗಿ, ಮಧ್ಯ ರಾತ್ರಿಯಲ್ಲಿ ಅವನ ಬಳ್ಳಿಗೆ ಹೋಗಿ, ಸ್ನೇ
೬ ಹಿತನೇ, ನನಗೆ ಮೂರು ರೊಟ್ಟಿಗಳನ್ನು ಕಡನಾಗಿ ಕೊಡು; ಯಾ
ಕಂದರೆ ನನ್ನ ಸ್ನೇಹಿತನು ಮಾರ್ಗಸ್ಥನಾಗಿ ನನ್ನ ಬಳ್ಳಿಗೆ ಬಂದಿ
ದ್ದಾನೆ; ಮತ್ತು ಅವನ ಮುಂದೆ ಇಡುವದಕ್ಕೆ ನನಗೆ ಏನೂ ಇಲ್ಲ
೭ ವೆಂದು, ಅವನಿಗೆ ಹೇಳ್ದದರೆ, ಅವನು ಒಳಗಿನಿಂದ ಉತ್ತರ ಕೊ
ಟ್ಟು, ನನ್ನನ್ನು ತೊಂದರೆ ಪಡಿಸ ಬೇಡ; ಈಗ ಬಾಗಲು ಮುಚ್ಚಿ
ಅದೆ; ಮತ್ತು ನನ್ನ ಮಕ್ಕಳು ನನ್ನ ಸಂಗಡ ಮಲಗಿ ಕೊಂಡಿದ್ದಾ
೮ ರೆ; ನಾನು ಎದ್ದು, ನಿನಗೆ ಕೊಡಲಾರೆನೆಂದು ಹೇಳ್ಯಾನೇ? ಅವನು
ತನಗೆ ಸ್ನೇಹಿತನಾಗಿರುವದರಿಂದ ಎದ್ದು, ಅವನಿಗೆ ಕೊಡದೆ ಇ
ದ್ದರೂ, ಅವನ ನಿರ್ಲಜ್ಜೆಯ ನಿಮಿತ್ತವಾದರೂ ಎದ್ದು, ಅವನಿಗೆ
೯ ಬೇಕಾದಷ್ಟು ಕೊಡುವನೆಂದು ನಿಮಗೆ ಹೇಳುತ್ತೇನೆ. ಮತ್ತು ನಾ
ನು ನಿಮಗೆ ಹೇಳುವದೇನಂದರೆ, ಬೇಡಿ ಕೊಳ್ಳಿರಿ; ಆಗ ನಿಮಗೆ
ಕೊಡಲ್ಪಡುವದು. ಹುಡುಕಿರಿ; ಆಗ ನಿಮಗೆ ಸಿಕ್ಕುವದು. ತಟ್ಟಿರಿ;
೧೦ ಆಗ ನಿಮಗೆ ತೆರೆಯಲ್ಪಡುವದು. ಯಾಕಂದರೆ ಬೇಡಿ ಕೊಳ್ಳು
ವ ಪ್ರತಿ ಮನುಷ್ಯನು ಹೊಂದುತ್ತಾನೆ; ಹುಡುಕುವವನಿಗೆ ಸಿಕ್ಕು
ತ್ತದೆ; ತಟ್ಟುವವನಿಗೆ ತೆರೆಯಲ್ಪಡುವದು.

೧೧ ಆದರೆ ನಿಮ್ಮಲ್ಲಿ ತಂದೆಯಾಗಿರುವ ಯಾವನಾದರೂ, ಮಗ
ನು ಕೊಟ್ಟಿಯನ್ನು ಬೇಡಿ ಕೊಂಡರೆ, ಅವನಿಗೆ ಕಲ್ಲನ್ನು ಕೊಡು
ವನೇ? ಇಲ್ಲವೆ ಮೀನನ್ನು ಬೇಡಿ ಕೊಂಡರೆ, ಮೀನಿಗೆ ಬದಲಾಗಿ
೧೨ ಅವನಿಗೆ ಸರ್ಪವನ್ನು ಕೊಡುವನೇ? ಇಲ್ಲವೆ ಮೊಟ್ಟೆಯನ್ನು ಕೇ
೧೩ ಳ್ದರೆ ಅವನಿಗೆ ಚೇಳ್ಳನ್ನು ಕೊಡುವನೇ? ಹಾಗಾದರೆ ನೀವು ಕೆ
ಟ್ಟವರಾಗಿದ್ದು, ನಿಮ್ಮ ಮಕ್ಕಳ್ಳಿಗೆ ಒಳ್ಳೆ ದಾನಗಳನ್ನು ಕೊಡ ತಿ
ಳಿದರೆ, ಎಷ್ಟು ಹೆಚ್ಚಾಗಿ ನಿಮ್ಮ ಪರಲೋಕದ ತಂದೆಯು ತನ್ನ
ನ್ನು ಬೇಡಿ ಕೊಳ್ಳುವವರಿಗೆ ಪರಿಶುದ್ಧಾತ್ಮವನ್ನು ಕೊಡುವನು!

೧೪ ಇದಲ್ಲದೆ ಅವನು ಮೂಕನಾಗಿರುವ ದೆವ್ವವನ್ನು ಹೊರಡಿಸು
ತ್ತಿರುವಾಗ ಸಂಭವಿಸಿದ್ದೇನಂದರೆ, ದೆವ್ವವು ಹೊರಟಾಗ, ಮೂಕ
ನು ಮಾತಾಡಿದನು; ಮತ್ತು ಸಮೂಹಗಳು ಆಶ್ಚರ್ಯ ಪಟ್ಟವು.
೧೫ ಆದರೆ ಅವರಲ್ಲಿ ಕೆಲವರು, ದೆವ್ವಗಳ ಅಧಿಪತಿಯಾದ ಬೆಲ್ಜೆಬೂಲ
೧೬ ನಿಂದ ದೆವ್ವಗಳನ್ನು ಹೊರಡಿಸುತ್ತಾನೆ, ಅಂದರು. ಮತ್ತೊಬ್ಬರು
ಅವನನ್ನು ಕೋಧಿಸಿ, ಆಕಾಶದಿಂದ ಗುರುತನ್ನು ಅವನಿಂದ ಕೇಳಿ
೧೭ ದರು. ಆದರೆ ಅವನು ಅವರ ಆಲೋಚನೆಗಳನ್ನು ತಿಳ್ದು, ಅ
ವರಿಗೆ ಹೇಳ್ದದ್ದೇನಂದರೆ, ತನ್ನಲ್ಲಿ ಭೇದವಾದ ಪ್ರತಿ ರಾಜ್ಯವು
ಪಾಳಾಗುವದು; ಮತ್ತು ಮನೆಗೆ ವಿರೋಧವಾದ ಮನೆಯು ಬೀಳು
೧೮ ವದು. ಸೈತಾನನು ಸಹ ತನ್ನಲ್ಲಿ ಭೇದವಾದರೆ, ಅವನ ರಾಜ್ಯ
ವು ನಿಲ್ಲುವದು ಹ್ಯಾಗೆ? ಬೆಲ್ಜೆಬೂಲಿನಿಂದ ನಾನು ದೆವ್ವಗಳನ್ನು
೧೯ ಹೊರಡಿಸುತ್ತೇನೆಂದು ಹೇಳುತ್ತೀರಲ್ಲ? ಹಾಗಾದರೆ ನಾನು ಬೆಲ್ಜೆಬೂ
ಲಿನಿಂದ ದೆವ್ವಗಳನ್ನು ಹೊರಡಿಸಿದರೆ, ನಿಮ್ಮ ಮಕ್ಕಳು ಯಾ
ರಿಂದ ಹೊರಡಿಸುತ್ತಾರೆ? ಆದದರಿಂದ ಅವರು ನಿಮಗೆ ನ್ಯಾಯ
೨೦ ತೀರಿಸುವವರಾಗುವರು. ಆದರೆ ನಾನು ದೇವರ ಬೆರಳಿನಿಂದ ದೆವ್ವ
ಗಳನ್ನು ಹೊರಡಿಸಿದರೆ, ದೇವರ ರಾಜ್ಯವು ನಿಮ್ಮಲ್ಲಿ ಬಂತಲ್ಲ?

೨೧ ಬಲಿಷ್ಠನು ಆಯುಧಗಳನ್ನು ಧರಿಸಿ ಕೊಂಡು, ತನ್ನ ಕೋಟೆ
ಯನ್ನು ಕಾಪಾಡಿ ಕೊಂಡಿರುವಾಗ, ಅವನಿಗಿದ್ದದ್ದು ಸುಖಾಧಾ
೨೨ ನವಾಗಿರುವದು; ಆದರೆ ಅವನಿಗಿಂತ ಬಲಿಷ್ಠನು ಅವನ ಮೇಲೆ
ಬಂದು, ಅವನನ್ನು ಜಯಿಸಿದರೆ, ಅವನು ನಂಬಿ ಕೊಂಡಿದ್ದ ಅವ
ನ ಸರ್ವಾಯುಧಗಳನ್ನು ತೆಗೆದು ಕೊಂಡು, ಅವನಿಂದ ಸುಲು
೨೩ ಕೊಂಡದ್ದನ್ನು ಹಂಚಿ ಕೊಡುವನು. ನನ್ನ ಸಂಗಡ ಇರದವನು
ನನಗೆ ವಿರೋಧವಾಗಿದ್ದಾನೆ; ನನ್ನ ಸಂಗಡ ಕೂಡಿಸದವನು ಚದ
ರಿಸುತ್ತಾನೆ.

೨೪ ಅಶುದ್ಧಾತ್ಮವು ಮನುಷ್ಯನನ್ನು ಬಿಟ್ಟು ಹೊರಟಾಗ, ನೀರಿ
ಲ್ಲದ ಸ್ಥಳಗಳಲ್ಲಿ ತಿರುಗಿ ಕೊಂಡು, ವಿಶ್ರಾಂತಿಯನ್ನು ಹುಡುಕು
ವದು. ಅದು ಕಾಣದೆ, ನಾನು ಹೊರಟು ಬಂದ ನನ್ನ ಮನೆಗೆ ತಿ
೨೫ ರುಗಿ ಕೊಳ್ಳುವೆನೆಂದು ಹೇಳ್ದ, ಬಂದು, ಅದು ಗುಡಿಸಿ, ಅಲಂಕರಿಸಿ
೨೬ ಇರುವದನ್ನು ನೋಡುವದು. ಆಗ ಅದು ಹೋಗಿ, ತನಗಿಂತ ಕೆ
ಟ್ಟವಾದ ಬೇರೆ ಏಳು ಆತ್ಮಗಳನ್ನು ಕರಕೊಂಡು ಬರುವದು; ಅ
ವು ಪ್ರವೇಶಿಸಿ, ಅಲ್ಲಿ ವಾಸ ಮಾಡುವವು; ಮತ್ತು ಆ ಮನುಷ್ಯನ
ಕಡೇ ಸ್ಥಿತಿ ಮೊದಲನೇದಕ್ಕಿಂತ ಕೆಟ್ಟದ್ದಾಗುವದು.

೨೭ ಅವನು ಇವುಗಳನ್ನು ಹೇಳುತ್ತಿರುವಾಗ, ಸಮೂಹದಲ್ಲಿ ಒಬ್ಬ
ಸ್ತ್ರೀ ತನ್ನ ಶಬ್ದವನೆತ್ತಿ, ನಿನ್ನನ್ನು ಹೊತ್ತ ಗರ್ಭವೂ ನೀನು
ಉಂಡ ಮೊಲೆಗಳೂ ಭಾಗ್ಯವುಳ್ಳವುಗಳೆಂದು ಅವನಿಗೆ ಹೇಳ್ದಳು.
೨೮ ಅದಕ್ಕವನು, ದೇವರ ವಾಕ್ಯವನ್ನು ಕೇಳ್ದ, ಅದನ್ನು ಕೈ ಕೊಳ್ಳು
ವವರೇ ಭಾಗ್ಯವಂತರು, ಅಂದನು.

೨೯ ಮತ್ತು ಸಮೂಹಗಳು ಗುಂಪಾಗಿ ಕೂಡಿ ಕೊಂಡಾಗ, ಅವನು
ಹೇಳಲಾರಂಭಿಸಿದ್ದೇನಂದರೆ, ಈ ಸಂತತಿಯು ಕೆಟ್ಟದ್ದೇ; ಅದು
ಗುರುತನ್ನು ಹುಡುಕುತ್ತದೆ; ಆದರೆ ಪ್ರವಾದಿಯಾದ ಯೋನನ
ಗುರುತೇ ಹೊರ್ತು ಅದಕ್ಕೆ ಗುರುತು ಕೊಡಲ್ಪಡುವದಿಲ್ಲ.
೩೦ ಹ್ಯಾಗಂದರೆ ಯೋನನು ಹ್ಯಾಗೆ ನಿನವೆಯವರಿಗೆ ಗುರುತಾ
ದನೋ, ಹಾಗೆಯೇ ಮನುಷ್ಯನ ಮಗನು ಈ ಸಂತತಿಗೆ ಆಗು
೩೧ ವನು. ದಕ್ಷಿಣದ ರಾಣಿಯು ನ್ಯಾಯತೀರ್ಪಿಕೆಯಲ್ಲಿ ಈ ಸಂ
ತತಿಯ ಜನರ ಸಂಗಡ ಎದ್ದು, ಅವರಿಗೆ ಆಜ್ಞೆ ನಿರ್ಣಯಿಸು
ವಳು. ಯಾಕಂದರೆ ಅವಳು ಸೊಲೊಮೋನನ ಜ್ಞಾನವನ್ನು ಕೇ
ಳುವದಕ್ಕೆ ಭೂಮಿಯ ಅಂತ್ಯಗಳಿಂದ ಬಂದಳು; ಮತ್ತು, ಇಗೋ,
೩೨ ಇಲ್ಲಿ ಸೊಲೊಮೋನನಿಗಿಂತ ದೊಡ್ಡವನು ಇದ್ದಾನೆ. ನಿನವೆಯ
ಜನರು ನ್ಯಾಯತೀರ್ಪಿಕೆಯಲ್ಲಿ ಈ ಸಂತತಿಯ ಸಂಗಡ ಎದ್ದು,
ಅದಕ್ಕೆ ಆಜ್ಞೆ ನಿರ್ಣಯಿಸುವರು; ಯಾಕಂದರೆ ಅವರು ಯೋ
ನನ ಪ್ರಸಂಗಕ್ಕೆ ಮಾನಸಾಂತರ ಪಟ್ಟರು. ಮತ್ತು, ಇಗೋ,
ಇಲ್ಲಿ ಯೋನನಿಗಿಂತ ದೊಡ್ಡವನು ಇದ್ದಾನೆ.

೩೩ ಇದಲ್ಲದೆ ಯಾವನಾದರೂ ದೀಪ ಮುಟ್ಟಿಸಿ, ಅದನ್ನು ಅಂ
ತರಂಗದಲ್ಯಾದರೂ, ಬಳ್ಳಿದ ಕೆಳಗಾದರೂ ಅಲ್ಲ, ಬೆಳಗೆ ಬರು
ವವರು ಪ್ರಕಾಶವನ್ನು ನೋಡುವ ಹಾಗೆ, ದೀಪಸ್ತಂಭದ ಮೇಲೆ

೩೪ ಇರುವನು. ಕಣ್ಣು ಶರೀರದ ಬೆಳಕಾಗಿದೆ; ಆದಕಾರಣ ನಿನ್ನ
ಕಣ್ಣು ಯಥಾರ್ಥವಾಗಿದ್ದರೆ, ನಿನ್ನ ಶರೀರವೆಲ್ಲಾ ಬೆಳಕಾಗಿರುವ
ದು; ಆದರೆ ಅದು ಕೆಟ್ಟದ್ದಾಗಿದ್ದರೆ, ನಿನ್ನ ಶರೀರವು ಸಹ ಕತ್ತ
೩೫ ಲಾಗಿರುವದು. ಹೀಗಿರುವದರಿಂದ ನಿನ್ನಲ್ಲಿರುವ ಬೆಳಕು ಕತ್ತಲಾಗಿ
೩೬ ರದ ಹಾಗೆ ನೋಡಿಕೊ. ಆದದರಿಂದ ಯಾವ ಭಾಗವಾದರೂ
ಕತ್ತಲಾಗಿರದೆ, ನಿನ್ನ ಶರೀರವೆಲ್ಲಾ ಬೆಳಕಾಗಿದ್ದರೆ, ದೀಪವು ಮಿಂ
ಚಿನಿಂದ ನಿನಗೆ ಬೆಳಕು ಕೊಡುವ ಪ್ರಕಾರ ಸಮಸ್ತವು ಬೆಳಕಾಗಿ
ರುವದು.

೩೭ ಅವನು ಮಾತಾಡುತ್ತಿರಲಾಗಿ, ಒಬ್ಬ ಫರಿಸಾಯನು, ತನ್ನ ಸಂ
ಗಡ ಮಧ್ಯಾಹ್ನದ ಊಟ ಮಾಡ ಬೇಕೆಂದು, ಅವನನ್ನು ಕೇಳಿ
೩೮ ದಾಗ, ಅವನು ಒಳಗೆ ಹೋಗಿ, ಕೂತು ಕೊಂಡನು. ಆದರೆ ಫರಿ
ಸಾಯನು, ಅವನು ಊಟಕ್ಕೆ ಮುಂಚೆ ತೊಳೆ ಕೊಳ್ಳಲಿಲ್ಲ
೩೯ ವೆಂದು ನೋಡಿ, ಆಶ್ಚರ್ಯಪಟ್ಟನು. ಆಗ ಕರ್ತನು ಅವನಿಗೆ
ಹೇಳಿದ್ದು, ಈಗ ಫರಿಸಾಯರಾದ ನೀವು ಪಂಚಪಾತ್ರೆ ಬಟ್ಟಲುಗಳ
ಹೊರಗಡೆಯನ್ನು ಶುಚಿ ಮಾಡುತ್ತೀರಿ; ಆದರೆ ನಿಮ್ಮ ಒಳಗಡೆ
೪೦ ಯು ಸುಲಿಗೆಯಿಂದಲೂ ಕೆಟ್ಟತನದಿಂದಲೂ ತುಂಬಿ ಅದೆ. ಬುದ್ಧಿ
ಹೀನರೇ! ಹೊರಗಿನದನ್ನು ಮಾಡಿದವನು ಒಳಗಿನದನ್ನು ಸಹ
೪೧ ಮಾಡಲಿಲ್ಲವೋ! ಆದಾಗ್ಯೂ ಉಂಟಾದವುಗಳಲ್ಲಿ ಧರ್ಮ ಕೊಡಿ
ರಿ; ಆಗ, ಇಗೋ, ಎಲ್ಲಾ ನಿಮಗೆ ಶುಚಿಯಾಗಿರುವದು.

೪೨ ಆದರೆ ಫರಿಸಾಯರಾದ ನಿಮಗೆ ಅಯ್ಯೋ! ಯಾಕಂದರೆ
ಮರಗುಬತ್ರೆ ಸೋಮಲತೆ ಮೊದಲಾದ ಸಕಲ ಪಲ್ಯಗಳಲ್ಲಿ ಹತ್ತ
ಕಲ್ಲೊಂದು ಕೊಟ್ಟು, ನ್ಯಾಯ ತೀರ್ವಿಕೆಯನ್ನೂ ದೇವರ ಪ್ರೀತಿ
ಯನ್ನೂ ಬಿಟ್ಟು ಹೋಗುತ್ತೀರಿ. ಅವುಗಳನ್ನು ಬಿಡದೆ, ಇವುಗಳ
೪೩ ನ್ನು ಮಾಡ ಬೇಕಾಗಿತ್ತು. ಫರಿಸಾಯರಾದ ನಿಮಗೆ ಅಯ್ಯೋ!
ಯಾಕಂದರೆ ಸಭೆಮನೆಗಳಲ್ಲಿ ಮೊದಲನೇ ಪೀಠವನ್ನೂ, ಅಂಗಡಿ
೪೪ ಬೀದಿಗಳಲ್ಲಿ ವಂದನೆಗಳನ್ನೂ, ಆಶಿಸುತ್ತೀರಿ. ವಂಚಕರಾದ ಶಾ
ಸ್ತ್ರೀಗಳೇ, ಫರಿಸಾಯರೇ, ನಿಮಗೆ ಅಯ್ಯೋ! ಯಾಕಂದರೆ
ಮರೆಯಾಗಿರುವ ಸಮಾಧಿಗಳ ಹಾಗಿದ್ದೀರಿ; ಅವುಗಳ ಮೇಲೆ
ತಿರುಗಾಡುವ ಮನುಷ್ಯರಿಗೆ ಅವು ತಿಳಿಯದೆ ಇರುವವು.

೪೫ ಆಗ ನ್ಯಾಯಶಾಸ್ತ್ರಿಗಳಲ್ಲಿ ಒಬ್ಬನು ಪ್ರತ್ಯುತ್ತರ ಕೊಟ್ಟು,
ಅವನಿಗೆ, ಬೋಧಕನೇ, ಇವುಗಳನ್ನು ಹೇಳಿ, ನಮ್ಮನ್ನು ಸಹ
೪೬ ನಿಂದಿಸುತ್ತೀ, ಅಂದಾಗ; ಅವನು ಹೇಳಿದ್ದೇನಂದರೆ, ನ್ಯಾಯಶಾ
ಸ್ತ್ರಿಗಳಾದ ನಿಮಗೂ ಅಯ್ಯೋ! ಯಾಕಂದರೆ ನೀವು ಮನು
ಷ್ಯರ ಮೇಲೆ ಹೊರಲಾರದ ಹೊರೆಗಳನ್ನು ಹೊರಿಸಿ, ನೀವು
ನಿಮ್ಮ ಬೆರಳುಗಳಲ್ಲಿ ಒಂದರಿಂದಾದರೂ ಆ ಹೊರೆಗಳನ್ನು ಮು
೪೭ ಟ್ಟುವದಿಲ್ಲ. ನಿಮಗೆ ಅಯ್ಯೋ! ಯಾಕಂದರೆ ಪ್ರವಾದಿಗಳ
ಸಮಾಧಿಗಳನ್ನು ಕಟ್ಟುತ್ತೀರಿ; ಆದರೆ ನಿಮ್ಮ ತಂದೆಗಳು ಅವ
೪೮ ರನ್ನು ಕೊಂದು ಹಾಕಿದರು. ಹೀಗಿರುವದರಿಂದ ನಿಮ್ಮ ತಂದೆ
ಗಳ ಕ್ರಿಯೆಗಳಿಗೆ ಸಾಕ್ಷಿ ಕೊಟ್ಟು, ಸಮ್ಮತಿಸುತ್ತೀರಿ; ಹ್ಯಾಗಂ
ದರೆ ಅವರು ಅವರನ್ನು ಕೊಂದು ಹಾಕಿದರು; ಆದರೆ ನೀವು
೪೯ ಅವರ ಸಮಾಧಿಗಳನ್ನು ಕಟ್ಟಿಸುತ್ತೀರಿ. ಆದದರಿಂದ ದೇವರ ಜ್ಞಾ
ನವು ಹೇಳಿದ್ದೇನಂದರೆ, ನಾನು ಅವರಿಗೆ ಪ್ರವಾದಿಗಳನ್ನೂ ಅಪೊ
ಸ್ತಲರನ್ನೂ ಕಳುಹಿಸುವೆನು; ಅವರಲ್ಲಿ ಕೆಲವರನ್ನು ಕೊಂದು
೫೦ ಹಾಕಿ, ಹಿಂಸಿಸುವರು; ಹೀಗೆ ಹೇಬೆಲನ ರಕ್ತ ಮೊದಲಾಗಿ ಬಲಿಪೀ
ಠಕ್ಕೂ ಮಂದಿರಕ್ಕೂ ಮಧ್ಯವಲ್ಲಿ ಸಂಹರಿಸಲ್ಪಟ್ಟ ಜಕರೀಯ
೫೧ ನ ರಕ್ತದ ಪರ್ಯಂತರ ಜಗದುತ್ಪತ್ತಿ ಮೊದಲ್ಕೊಂಡು ಚೆಲ್ಲ
ಲ್ಪಟ್ಟ ಪ್ರವಾದಿಗಳೆಲ್ಲರ ರಕ್ತವು ಈ ಸಂತತಿಯಿಂದ ಕೇಳಲ್ಪಡು
ವದು. ಹೌದು, ನಿಮಗೆ ಹೇಳುತ್ತೇನೆ, ಅದು ಈ ಸಂತತಿಯಿಂದ
೫೨ ಕೇಳಲ್ಪಡುವದು. ನ್ಯಾಯಶಾಸ್ತ್ರಿಗಳಾದ ನಿಮಗೆ ಅಯ್ಯೋ!
ಯಾಕಂದರೆ ತಿಳುವಿಕೆಯ ಬೀಗದ ಕೈ ತೆಗೆದು ಬಿಟ್ಟಿದ್ದೀರಿ; ನೀ
ವು ಪ್ರವೇಶಿಸಲಿಲ್ಲ, ಮತ್ತು ಪ್ರವೇಶಿಸುವವರನ್ನು ತಡೆದಿರಿ.

೫೩ ಅವನು ಇವುಗಳನ್ನು ಅವರಿಗೆ ಹೇಳುವಾಗ, ಶಾಸ್ತ್ರಿಗಳೂ ಫ
ರಿಸಾಯರೂ ಅವನನ್ನು ಬಹಳವಾಗಿ ದಣಿಸಿ, ಅನೇಕವಾದವುಗ
೫೪ ಳ ವಿಷಯ ಮಾತಾಡಲಾರಂಭಿಸಿ, ಅವನ ಮೇಲೆ ದೂರು ಹೇಳು
ವ ಹಾಗೆ ಅವನ ಬಾಯಿಯೊಳಗಿಂದ ಏನಾದರೂ ಹಿಡಿಯ ಹು
ಡುಕಿ, ಅವನಿಗೋಸ್ಕರ ಹೊಂಚಿ ನೋಡಿದರು.

## ೧೨. ಸಂಧಿ.

೧ ಅಷ್ಟರಲ್ಲಿ ಸಮೂಹದ ಸಾವಿರಗಳು ಒಬ್ಬರನ್ನೊಬ್ಬರು
ತುಳಿಯುವ ಹಾಗೆ ಕೂಡಿ ಬಂದಿರಲಾಗಿ, ಅವನು ಮೊದಲು ತನ್ನ
ಶಿಷ್ಯರಿಗೆ ಹೇಳಲಾರಂಭಿಸಿದ್ದೇನಂದರೆ, ಫರಿಸಾಯರ ಹುಳಿ ಎಂ
೨ ಬ ಕಪಟಕ್ಕೆ ಎಚ್ಚರಿಕೆಯಾಗಿರ್ರಿ. ಆದರೆ ಪ್ರಕಟವಾಗಲಿರದ ಮ
ರೆಯಾದದ್ದೂ, ತಿಳಿಯಲ್ಪಡಲಿರದ ಅಂತರಂಗವಾದದ್ದೂ, ಒಂದೂ
೩ ಇಲ್ಲ. ಹೀಗಿರುವದರಿಂದ ನೀವು ಕತ್ತಲೆಯಲ್ಲಿ ಹೇಳಿದ್ದೆಲ್ಲಾ ಬೆಳ
ಕಿನಲ್ಲಿ ಕೇಳ ಬರುವದು; ಮತ್ತು ನೀವು ಕೊಠಡಿಗಳಲ್ಲಿ ಕಿವಿಯಲ್ಲಿ
ಮಾತಾಡಿದ್ದು ಮಾಳಿಗೆಗಳ ಮೇಲೆ ಸಾರಲ್ಪಡುವದು.

೪ ಆದರೆ ನಾನು ನನ್ನ ಸ್ನೇಹಿತರಾದ ನಿಮಗೆ ಹೇಳುವದೇನಂ
ದರೆ, ಶರೀರವನ್ನು ಕೊಂದು, ಆ ಮೇಲೆ ಅಧಿಕವಾದದ್ದೇನಾದ
ರೂ ಮಾಡಲಾರದವರಿಗೆ ಭಯ ಪಡ ಬೇಡಿರಿ. ಆದರೆ ಯಾರಿಗೆ
೫ ಭಯ ಪಡ ಬೇಕೋ, ನಿಮಗೆ ತೋರಿಸುತ್ತೇನೆ; ಕೊಂದು ಹಾಕಿ
ದ ಮೇಲೆ ನರಕದಲ್ಲಿ ಹಾಕುವದಕ್ಕೆ ಅಧಿಕಾರ ಉಂಟಾದವನಿಗೆ
ಭಯ ಪಡಿರಿ; ಹೌದು, ನಿಮಗೆ ಹೇಳುತ್ತೇನೆ, ಅವನಿಗೆ ಭಯ
೬ ಪಡಿರಿ. ಐದು ಗುಬ್ಬಿಗಳನ್ನು ಎರಡು ಕಾಸಿಗೆ ಮಾರುವದಿಲ್ಲ
ವೋ? ಆದಾಗ್ಯೂ ಅವುಗಳಲ್ಲಿ ಒಂದಾದರೂ ದೇವರ ಮುಂದೆ
೭ ಮರೆತು ಹೋದದ್ದಲ್ಲ. ಇದಲ್ಲದೆ ನಿಮ್ಮ ತಲೆ ಕೂದಲುಗಳೆ
ಲ್ಲಾ ಸಹ ಲೆಕ್ಕ ಮಾಡಲ್ಪಟ್ಟಿವೆ. ಹೀಗಿರುವದರಿಂದ ಭಯ ಪಡ
ಬೇಡಿರಿ; ಬಹಳ ಗುಬ್ಬಿಗಳಿಗಿಂತ ಹೆಚ್ಚಾಗಿದ್ದೀರಿ.

೮ ಇದಲ್ಲದೆ ನಿಮಗೆ ಹೇಳುತ್ತೇನೆ, ಮನುಷ್ಯರ ಮುಂದೆ ನನ್ನನ್ನು
ಅರಿಕೆ ಮಾಡುವವನ್ಯಾವನೋ, ಅವನನ್ನು ಮನುಷ್ಯನ ಮಗನು
೯ ಸಹ ದೇವದೂತರ ಮುಂದೆ ಅರಿಕೆ ಮಾಡುವನು. ಆದರೆ ಮನು
ಷ್ಯರ ಮುಂದೆ ನನ್ನನ್ನು ಹೊಂಕುವವನು ದೇವದೂತರ ಮುಂದೆ
೧೦ ಹೊಂಕಲ್ಪಡುವನು. ಮತ್ತು ಮನುಷ್ಯನ ಮಗನಿಗೆ ವಿರೋಧಿ
ವಾಗಿ ಮಾತು ಹೇಳುವವನ್ಯಾವನೋ, ಅವನಿಗೆ ಮನಿಸಲ್ಪಡು
ವದು; ಆದರೆ ಪರಿಶುದ್ಧಾತ್ಮವನ್ನು ದೂಷಿಸಿದವನಿಗೆ ಮನಿಸಲ್ಪ
೧೧ ಡದು. ಇದಲ್ಲದೆ ಅವರು ನಿಮ್ಮನ್ನು ಸಭೆಮನೆಗಳಿಗೂ ಅಧಿಕಾರಿ
ಗಳ ಅಧಿಕಾರಿಗಳ ಬಳಿಗೂ ತಕ್ಕೊಂಡು ಹೋಗುವಾಗ, ಉತ್ತರ
ಕೊಡುವದು ಹ್ಯಾಗೋ! ಏನೋ! ಏನು ಹೇಳ ಬೇಕೋ! ಎಂ
೧೨ ದು ಚಿಂತೆ ಪಡ ಬೇಡಿರಿ. ಯಾಕಂದರೆ ಪರಿಶುದ್ಧಾತ್ಮನು, ಆ ತಾ
ಸಿನಲ್ಲಿ ನೀವು ಹೇಳ ಬೇಕಾದವುಗಳನ್ನು ನಿಮಗೆ ಬೋಧಿಸುವದು.

೧೩ ಆಗ ಸಮೂಹದಲ್ಲಿ ಒಬ್ಬನು ಅವನಿಗೆ, ಬೋಧಕನೇ, ನನಾ



ಸಹೋದರನಿಗೆ, ನನ್ನ ಸಂಗಡ ಬಾಧ್ಯತೆಯನ್ನು ಪಾಲಿಡ ಬೇ
೧೪ ಕೆಂದು ಹೇಳು, ಅಂದಾಗ; ಅವನಿಗೆ, ಮನುಷ್ಯನೇ, ನನ್ನನ್ನು
ನಿಮ್ಮ ಮೇಲೆ ನ್ಯಾಯಾಧಿಪತಿಯಾಗಿಯೂ ಹಂಚುವವನಾಗಿ
೧೫ ಯೂ ಇಟ್ಟವನ್ಯಾರು? ಅಂದನು. ಮತ್ತು ಅವರಿಗೆ ಹೇಳಿದ್ದೇ
ನಂದರೆ, ಲೋಭಕ್ಕೆ ನೋಡಿ ಕೊಂಡು, ಎಚ್ಚರಿಕೆಯಾಗಿರ್ರಿ.
ಯಾಕಂದರೆ ಒಬ್ಬನಿಗೆ ಐಶ್ವರ್ಯ ಹೆಚ್ಚುವಾಗ, ಅವನ ಜೀವ
ವು ಅವನ ಆಸ್ತಿಯಿಂದ ಉಂಟಾಗುವದಿಲ್ಲ.

೧೬ ಮತ್ತು ಅವರಿಗೆ ಸಾಮ್ಯವನ್ನು ಹೇಳಿದನು; ಏನಂದರೆ ಐಶ್ವ
ರ್ಯವಂತನಾದ ಒಬ್ಬ ಮನುಷ್ಯನ ಭೂಮಿಯು ಚನ್ನಾಗಿ
೧೭ ಫಲಿಸಿತು. ಆಗಲವನು, ನಾನೇನು ಮಾಡಲಿ! ಯಾಕಂದರೆ ನನ್ನ
ಫಲಗಳನ್ನು ಕೂಡಿಸುವದಕ್ಕೆ ನನಗೆ ಸ್ಥಳವಿಲ್ಲವೆಂದು ತನ್ನೊಳಗೆ
೧೮ ಆಲೋಚಿಸಿ ಕೊಂಡನು. ಮತ್ತು, ಇದನ್ನು ಮಾಡುತ್ತೇನೆ, ನ
ನ್ನ ಕಣಜಗಳನ್ನು ತೆಗೆದು ಹಾಕಿ, ಅವುಗಳಿಗಿಂತ ಹೊಡ್ಡವುಗಳ
ನ್ನು ಕಟ್ಟಿಸುತ್ತೇನೆ; ಮತ್ತು ಅಲ್ಲಿ ನನ್ನ ಬೆಳೆಗಳನ್ನೆಲ್ಲಾ, ನನ್ನ
೧೯ ಆಸ್ತಿಯನ್ನೆಲ್ಲಾ ಕೂಡಿಸುತ್ತೇನೆ. ಮತ್ತು ನನ್ನ ಪ್ರಾಣಕ್ಕೆ,
ಪ್ರಾಣವೇ, ಅನೇಕ ವರುಷಗಳಿಗೆ ನಿನಗೆ ಬಹಳ ಆಸ್ತಿ ಇಟ್ಟಿದೆ;
ವಿಶ್ರಮಿಸಿಕೋ; ಉಣ್ಣು, ಕುಡಿ, ಆನಂದವಾಗಿರು, ಎಂದು ಹೇಳು
೨೦ ತ್ತೇನೆ, ಅಂದನು. ಆದರೆ ದೇವರು ಅವನಿಗೆ, ಬುದ್ಧಿಹೀನನೇ, ಈ
ರಾತ್ರಿ ನಿನ್ನ ಪ್ರಾಣವನ್ನು ನಿನ್ನಿಂದ ಕೇಳುವರು; ಆಗ ನೀನು ಸಿ
೨೧ದ್ಧ ಮಾಡಿದವುಗಳು ಯಾರಿಗಾಗುವವು? ಅಂದನು. ತನಗೆ ದ್ರ
ವ್ಯ ಇಟ್ಟು ಕೊಂಡು, ದೇವರ ವಿಷಯವಾಗಿ ಐಶ್ವರ್ಯವಂತ
ನಾಗದೆ ಇರುವವನು ಹೀಗೆ.

೨೨ ಮತ್ತು ಅವನು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ, ಇದ
ಕ್ಕೋಸ್ಕರ ನಿಮಗೆ ಹೇಳುತ್ತೇನೆ, ನೀವು ನಿಮ್ಮ ಪ್ರಾಣಕ್ಕೆ, ಏ
ನು ಉಣ್ಣುವ ಎಂದೂ, ನಿಮ್ಮ ಶರೀರಕ್ಕೆ, ಏನು ಹೊದ್ದು ಕೊ
೨೩ ಳ್ಳುವ ಎಂದೂ, ಚಿಂತೆ ಪಡ ಬೇಡಿರಿ. ಆಹಾರಕ್ಕಿಂತ ಪ್ರಾಣವು,
೨೪ ವಸ್ತ್ರಕ್ಕಿಂತ ಶರೀರವು, ಹೆಚ್ಚಾಗಿದೆ. ಕಾಗೆಗಳನ್ನು ಯೋಚಿಸಿ
ರಿ; ಅವು ಬಿತ್ತುವದಿಲ್ಲ, ಕೊಯ್ಯುವದಿಲ್ಲ, ಅವುಗಳಿಗೆ ಉಗ್ರಾಣ
ವೂ ಕಣಜವೂ ಇಲ್ಲ; ಆದಾಗ್ಯೂ ದೇವರು ಅವುಗಳನ್ನು ಸಾಕು
೨೫ ತ್ತಾನೆ. ಪಕ್ಷಿಗಳಿಗಿಂತ ನೀವು ಎಷ್ಟೋ ಹೆಚ್ಚಾಗಿದ್ದೀರಿ! ಇದಲ್ಲದೆ
ನಿಮ್ಮಲ್ಲಿ ಯಾವನು ಚಿಂತೆ ಪಟ್ಟು, ತನ್ನ ನಿಲ್ಲಿಕ್ಕೆ ಒಂದು ಮೊ
೨೬ ಳವನ್ನು ಹೆಚ್ಚು ಮಾಡ ಬಲ್ಲನು? ಹಾಗಾದರೆ ಬಹಳ ಸಣ್ಣದು
ಸಹ ನಿಮ್ಮಿಂದ ಆಗದೆ ಹೋದರೆ, ಮಿಕ್ಕಾದವುಗಳಿಗೋಸ್ಕರ
೨೭ ನೀವು ಚಿಂತೆ ಪಡುವದೇನು? ಹೂವುಗಳು ಹ್ಯಾಗೆ ಬೆಳೆಯುತ್ತ
ವೆಂದು ಯೋಚಿಸಿರಿ. ಅವು ಕಷ್ಟ ಪಡುವದಿಲ್ಲ, ನೇಯುವದಿಲ್ಲ;
ಆದಾಗ್ಯೂ ಸೊಲೊಮೋನನು ಸಹ ತನ್ನ ಸಮಸ್ತ ಮಹಿಮೆ
ಯಲ್ಲಿ ಇವುಗಳಲ್ಲಿ ಒಂದರ ಹಾಗೆ ಹೊದ್ದು ಕೊಳ್ಳಲಿಲ್ಲವೆಂದು,
೨೮ ನಿಮಗೆ ಹೇಳುತ್ತೇನೆ. ಹಾಗಾದರೆ ಈ ಹೊತ್ತು ಇದ್ದು, ನಾಳೆ
ಒಲೆಗೆ ಹಾಕಲ್ಪಡುವ ಹೊಲದ ಹುಲ್ಲನ್ನು ದೇವರು ಈ ಪ್ರಕಾರ
ಹೊದ್ದಿಸಿದರೆ, ಎಷ್ಟೋ ಹೆಚ್ಚಾಗಿ ನಿಮ್ಮನ್ನು ಹೊದ್ದಿಸುವನು,
ಅಲ್ಪ ವಿಶ್ವಾಸಿಗಳೇ!

೨೯ ಮತ್ತು, ಏನು ಉಣ್ಣುವ? ಏನು ಕುಡಿಯುವ? ಎಂದು ಹುಡು
೩೦ ಕದೆ, ಸಂಶಯ ಪಡದೆ, ಇರ್ರಿ. ಯಾಕಂದರೆ ಇವುಗಳನ್ನೆಲ್ಲಾ
ಲೋಕದ ಜನಾಂಗಗಳು ಹುಡುಕುತ್ತವೆ; ಆದರೆ ಅವು ನಿಮಗೆ
೩೧ ಬೇಕೆಂದು, ನಿಮ್ಮ ತಂದೆಗೆ ತಿಳಿದಿದೆ. ಆದರೆ ದೇವರ ರಾಜ್ಯವ
೩೨ ನ್ನು ಹುಡುಕಿರಿ; ಆಗ ಇವೆಲ್ಲಾ ನಿಮಗೆ ಕೂಡಿಸಲ್ಪಡುವವು. ಚಿ
ಕ್ಕ ಮಂದೆಯೇ, ಭಯ ಪಡ ಬೇಡಿರಿ; ಯಾಕಂದರೆ ರಾಜ್ಯವ
ನ್ನು ನಿಮಗೆ ಕೊಡುವದಕ್ಕೆ, ನಿಮ್ಮ ತಂದೆಗೆ ಸುಚಿತ್ತ ಉಂಟು.
೩೩ ನಿಮಗುಂಟಾದವುಗಳನ್ನು ಮಾರಿ ಬಿಟ್ಟು, ಧರ್ಮ ಕೊಡಿರಿ. ಹ
ಳೇವಾಗದ ಜೇಲಗಳನ್ನೂ ನಿರಂತರವಾದ ದ್ರವ್ಯವನ್ನೂ ಪರ
ಲೋಕದಲ್ಲಿ ನಿಮಗೆ ಉಂಟು ಮಾಡಿ ಕೊಳ್ಳಿರಿ. ಅಲ್ಲಿ ಕಳ್ಳನು
೩೪ ಸಮೀಪಕ್ಕೆ ಬರುವದಿಲ್ಲ, ನುಸಿಯು ಕೆಡಿಸುವದಿಲ್ಲ. ಯಾಕಂದ
ರೆ ನಿಮ್ಮ ದ್ರವ್ಯವು ಎಲ್ಲಿಯೋ, ಅಲ್ಲಿ ನಿಮ್ಮ ಹೃದಯವು ಸಹ
ಇರುವದು.

೩೫ ನಿಮ್ಮ ನಡುವು ಕಟ್ಟಲ್ಪಟ್ಟಿರಲಿ; ನಿಮ್ಮ ದೀಪಗಳು ಉರಿಯು
೩೬ ತ್ತಾ ಇರಲಿ; ಮತ್ತು ನೀವು ಮದುವೆಯಿಂದ ಬರುವ ತನ್ನು
ಕರ್ತನಿಗೋಸ್ಕರ, ಅವನು ಬಂದು ತಟ್ಟುವಾಗ, ಅವನಿಗೆ ಬೇಗ
ತೆರೆಯುವ ಹಾಗೆ, ಕಾದು ಕೊಂಡಿರುವ ಮನುಷ್ಯರಿಗೆ ಸಮಾನ
೩೭ ವಾಗಿರ್ರಿ. ಕರ್ತನು ಬಂದು, ಯಾರನ್ನು ಎಚ್ಚರವಾಗಿ ಕಂಡು
ಕೊಳ್ಳುವನೋ, ಆ ದಾಸರು ಭಾಗ್ಯವಂತರು. ನಿಶ್ಚಯವಾಗಿ ನಿ
ಮಗೆ ಹೇಳುತ್ತೇನೆ, ಅವನು ನಡು ಕಟ್ಟಿ ಕೊಂಡು, ಅವರನ್ನು
೩೮ ಊಟಕ್ಕೆ ಕೂತ್ರಿಸಿ, ತಾನು ಬಂದು, ಅವರಿಗೆ ಸೇವಿಸುವನು. ಮ
ತ್ತು ಅವನು ಎರಡನೇ ಝಾವಿನಲ್ಲಿ ಬಂದು, ಮೂರನೇ ಝಾವಿನ
೩೯ ಲ್ಲಿಯೂ ಬಂದು, ಹಾಗೆ ಕಂಡು ಕೊಂಡರೆ, ಆ ದಾಸರು ಭಾಗ್ಯ
ವಂತರು. ಇದಲ್ಲದೆ ಇದು ನಿಮಗೆ ತಿಳಿದಿರಲಿ; ಕಳ್ಳನು ಯಾವ
ಘಳಿಗೆಯಲ್ಲಿ ಬರುತ್ತಾನೋ, ಮನೇ ಯಜಮಾನನಿಗೆ ತಿಳಿದಿದ್ದರೆ,
೪೦ ಅವನು ಎಚ್ಚತ್ತು, ತನ್ನ ಮನೆಯಲ್ಲಿ ಕನ್ನ ಕೊರೆಯ ಗೊಡಿಸ
ನು. ಹೀಗಿರುವದರಿಂದ ನೀವು ಸಹ ಸಿದ್ಧವಾಗಿರ್ರಿ; ಯಾಕಂದರೆ
ನೀವು ನೆನಸದ ಘಳಿಗೆಯಲ್ಲಿ ಮನುಷ್ಯನ ಮಗನು ಬರುತ್ತಾನೆ.

೪೧ ಪೇತ್ರನು ಅವನಿಗೆ, ಕರ್ತನೇ, ಈ ಸಾಮ್ಯವನ್ನು ನಮಗೆ
೪೨ ಹೇಳುತ್ತೀಯೋ? ಎಲ್ಲರಿಗೋ! ಅಂದಾಗ; ಕರ್ತನು ಹೇಳಿದ್ದು,
ಹಾಗಾದರೆ ತಕ್ಕ ಕಾಲದಲ್ಲಿ ಪಡಿಯನ್ನು ಕೊಡುವ ಹಾಗೆ, ಕ
ರ್ತನು ತನ್ನ ಕುಟುಂಬದ ಮೇಲೆ ಇಡುವ ನಂಬಿಕೆಯೂ ಬುದ್ಧಿ
೪೩ ಯೂ ಉಳ್ಳ ಉಗ್ರಾಣದವನು ಯಾರು? ಅವನ ಕರ್ತನು ಬ
ರುವಾಗ ಈ ಪ್ರಕಾರ ಮಾಡುವವನಾಗಿ ಕಾಣುವ ದಾಸನು ಭಾ
೪೪ ಗ್ಯವಂತನು. ನಿಜವಾಗಿ ನಿಮಗೆ ಹೇಳುತ್ತೇನೆ, ಅವನು ತನ್ನ ಆ
೪೫ ಸ್ತಿಯೆಲ್ಲಾದರ ಮೇಲೆ ಅವನನ್ನು ಇಡುವನು. ಆದರೆ ಆ ದಾಸ
ನು, ನನ್ನ ಕರ್ತನು ಬರುವದಕ್ಕೆ ತಡ ಮಾಡುತ್ತಾನೆಂದು ತನ್ನ
ಹೃದಯದಲ್ಲಿ ಅಂದು ಕೊಂಡು, ಸೇವಕ ಸೇವಕಿಯರನ್ನು ಹೊ
೪೬ ಡೆಯಲೂ, ಉಂಡು, ಕುಡಿದು, ಮತ್ತನಾಗಲೂ, ಆರಂಭಿಸಿದರೆ, ಆ
ದಾಸನ ಕರ್ತನು, ಅವನು ಎದುರು ನೋಡದ ದಿವಸದಲ್ಲಿಯೂ
ತಿಳಿಯದ ಘಳಿಗೆಯಲ್ಲಿಯೂ ಬಂದು, ಅವನನ್ನು ಕಡಿದು ಬಿಟ್ಟು,
ನಂಬಿಕೆ ಇಲ್ಲದವರ ಸಂಗಡ ಅವನಿಗೆ ಪಾಲು ಕೊಡುವನು.

೪೭ ಇದಲ್ಲದೆ ತನ್ನ ಯಜಮಾನನ ಚಿತ್ತವನ್ನು ತಿಳಿದು, ಸಿದ್ಧ
ಮಾಡಿ ಕೊಳ್ಳದೆ, ಅವನ ಚಿತ್ತದ ಪ್ರಕಾರ ಮಾಡದೆ ಇರುವ
೪೮ ದಾಸನು ಬಹಳ ಚೆಟ್ಟು ತಿನ್ನುವನು. ಆದರೆ ತಿಳಿಯದೆ ಚೆಟ್ಟುಗ
ಳಿಗೆ ತಕ್ಕವುಗಳನ್ನು ಮಾಡಿದವನು ಸ್ವಲ್ಪ ಚೆಟ್ಟು ತಿನ್ನುವನು.
ಇದಲ್ಲದೆ ಯಾರಿಗೆ ಬಹಳ ಕೊಡಲ್ಪಟ್ಟಿತೋ, ಅವನಿಂದ ಬಹಳ
ಕೇಳಲ್ಪಡುವದು; ಮತ್ತು ಯಾರ ವಶಕ್ಕೆ ಬಹಳ ಒಪ್ಪಿಸಿದರೋ,
ಅವನಿಂದ ಅಧಿಕವಾದದ್ದನ್ನು ಕೇಳುವರು.

೧೯ ಭೂಮಿಯ ಮೇಲೆ ಬೆಂಕಿ ಹಾಕ ಬಂದೆನು; ಅದು ಈಗಲೇ
೨೦ ಹೊತ್ತಿದ್ದರೆ ಮತ್ತೇನು ನನಗೆ ಬೇಕು! ಆದರೆ ನಾನು ಒಂದು
ಸ್ನಾನ ಹೊಂದ ಬೇಕು; ಅದು ತೀರುವ ಪರ್ಯಂತರ ನಾನು
೨೧ ಹ್ಯಾಗೆ ಇರಿಕಿಸಲ್ಪಟ್ಟಿದ್ದೇನೆ! ನಾನು ಭೂಮಿಯ ಮೇಲೆ ಸಮಾ
ಧಾನವನ್ನು ಕೊಡ ಬಂದೆನೆಂದು, ನೆನಸುತ್ತೀರೋ? ಅಲ್ಲ, ಭೇದ
೨೨ ವನ್ನೇ, ಎಂದು ನಿಮಗೆ ಹೇಳುತ್ತೇನೆ. ಹ್ಯಾಗಂದರೆ ಇಂದಿನಿಂದ
ಬಂದು ಮನೆಯಲ್ಲಿ ಐದು ಮಂದಿ, ಇಬ್ಬರಿಗೆ ವಿರೋಧವಾಗಿ
ಮೂವರು, ಮತ್ತು ಮೂವರಿಗೆ ವಿರೋಧವಾಗಿ ಇಬ್ಬರು, ಭೇ
೨೩ ದವಾಗಿರುವರು. ಮಗನಿಗೆ ವಿರೋಧವಾಗಿ ತಂದೆಯು, ತಂದೆಗೆ
ವಿರೋಧವಾಗಿ ಮಗನು, ಮಗಳಿಗೆ ವಿರೋಧವಾಗಿ ತಾಯಿಯು,
ತಾಯಿಗೆ ವಿರೋಧವಾಗಿ ಮಗಳು, ತನ್ನ ಸೊಸೆಗೆ ವಿರೋಧವಾ
ಗಿ ಅತ್ತೆಯು, ತನ್ನ ಅತ್ತೆಗೆ ವಿರೋಧವಾಗಿ ಸೊಸೆಯು, ಭೇದ
ವಾಗಿರುವರು.

೨೪ ಮತ್ತು ಸಮೂಹಗಳಿಗೆ ಹೇಳಿದ್ದೇನಂದರೆ, ನೀವು ಪಶ್ಚಿಮ
ದಿಂದ ಏಳುವ ಮೇಘವನ್ನು ನೋಡಿದ ಕೂಡ್ಲೆ, ಮಳೆ ಬರುವದು
೨೫ ಅನ್ನುತ್ತೀರಿ; ಮತ್ತು ಹಾಗೆ ಆಗುತ್ತದೆ. ದಕ್ಷಿಣ ಘೂಳಿ ಬೀಸು
ವದನ್ನು ನೋಡಿದರೆ, ಕೆಪೆ ಆಗುವದು, ಅನ್ನುತ್ತೀರಿ; ಮತ್ತು
೨೬ ಆಗುತ್ತದೆ. ಕಪಟಿಗಳೇ, ಭೂಮಿ ಆಕಾಶಗಳ ಮುಖವನ್ನು ನೀ
ವು ಶೋಧಿಸ ತಿಳಿದು, ಈ ಸಮಯವನ್ನು ಶೋಧಿಸದೆ ಇರುವ
ದೇನು?

೨೭ ಇದಲ್ಲದೆ ನ್ಯಾಯವಾದದ್ದನ್ನು ನಿಮಗೆ ನೀವೇ ನಿರ್ಣಯಿಸಿ
೨೮ ಕೊಳ್ಳದೆ ಇರುವದೇನು! ಏನಂದರೆ ನೀನು ನಿನ್ನ ಎದುರಾಳಿಯ
ಸಂಗಡ ನ್ಯಾಯಾಧಿಪತಿಯ ಬಳಿಗೆ ಹೋಗುತ್ತಿರುವಾಗ, ಮಾ
ರ್ಗದಲ್ಲಿಯೇ ಅವನ ಸಂಗಡ ಅನ್ಯೋನ್ಯವಾಗುವದಕ್ಕೆ ಪ್ರಯ
ತ್ನ ಮಾಡು; ಇಲ್ಲದಿದ್ದರೆ, ಅವನು ನಿನ್ನನ್ನು ನ್ಯಾಯಾಧಿಪತಿ
ಯ ಬಳಿಗೆ ಎಳೆದಾನು; ನ್ಯಾಯಾಧಿಪತಿಯು ಸೇವಕನಿಗೆ ನಿನ್ನ
ನ್ನು ಒಪ್ಪಿಸ್ಯಾನು; ಸೇವಕನು ನಿನ್ನನ್ನು ಸೆರೆಯಲ್ಲಿ ಹಾಕ್ಯಾನು.
೨೯ ನೀನು ಕಡೇ ಕಾಸು ಸಲ್ಲಿಸುವ ವರಿಗೂ ಅಲ್ಲಿಂದ ಹೊರಗೆ ಬ
ರುವದಿಲ್ಲವೆಂದು, ನಿನಗೆ ಹೇಳುತ್ತೇನೆ.

## ೧೩. ಸಂಧಿ.

೧ ಇದಲ್ಲದೆ ಆ ಕಾಲದಲ್ಲಿ ಅವನ ಹತ್ತರ ಇದ್ದ ಕೆಲವರು ಗಲಿ
ಲಾಯದವರನ್ನು ಕುರಿತು, ಪಿಲಾತನು ಅವರ ರಕ್ತವನ್ನು ಅವರ
೨ ಬಲಿಗಳ ಸಂಗಡ ಕಲಿಸಿದನೆಂದು, ಹೇಳಿದರು. ಯೇಸು ಉತ್ತರ
ವಾಗಿ ಅವರಿಗೆ ಹೇಳಿದ್ದೇನಂದರೆ, ಈ ಗಲಿಲಾಯದವರು ಇಂಥವು
ಗಳನ್ನು ಅನುಭವಿಸಿದ ಕಾರಣ, ಅವರು ಎಲ್ಲಾ ಗಲಿಲಾಯದವರಿ
3 ಗಿಂತ ಚಾಪಿಷ್ಟರಾಗಿದ್ದರೆಂದು ನೆನಸುತ್ತೀರೋ? ಅಲ್ಲವೆಂದು ನಿಮ
ಗೆ ಹೇಳುತ್ತೇನೆ; ಆದರೆ ಮಾನಸಾಂತರ ಪಡದೆ ಇದ್ದರೆ, ನೀವೆಲ್ಲ
೪ ರು ಹಾಗೆಯೇ ನಾಶವಾಗಿ ಹೋಗುವಿರಿ. ಇಲ್ಲದೆ ಸಿಲೋವಮಿನ
ಲ್ಲಿರುವ ಗೋಪುರವು ಬಿದ್ದು, ಕೊಂದು ಹಾಕಿದ ಆ ಹದಿನೆಂಟು
ಮಂದಿ ಯೆರೂಸಲೇಮಿನಲ್ಲಿ ವಾಸ ಮಾಡುವ ಮನುಷ್ಯರೆಲ್ಲರಿ
೫ ಗಿಂತ ಅಪರಾಧಿಗಳಾಗಿದ್ದರೆಂದು, ನೆನಸುತ್ತೀರೋ? ಅಲ್ಲವೆಂದು
ನಿಮಗೆ ಹೇಳುತ್ತೇನೆ; ಆದರೆ ಮಾನಸಾಂತರ ಪಡದೆ ಇದ್ದರೆ,
ನೀವೆಲ್ಲರು ಹಾಗೆಯೇ ನಾಶವಾಗಿ ಹೋಗುವಿರಿ.

೬ ಮತ್ತು ಅವರಿಗೆ ಹೇಳಿದ ಸಾಮ್ಯವೇನಂದರೆ, ಒಬ್ಬನಿಗೆ ತನ್ನ
ದ್ರಾಕ್ಷೇ ತೋಟದಲ್ಲಿ ನೆಟ್ಟ ಅಂಜೂರದ ಮರವಿತ್ತು; ಅವನು ಬಂ
೭ ದು, ಅದರಲ್ಲಿ ಫಲ ಹುಡುಕಿದಾಗ, ಶಿಕ್ಕತಿಲ್ಲ. ಆಗ ತೋಟದವ
ನಿಗೆ, ಇಗೋ! ಮೂರು ವರುಷದಿಂದ ನಾನು ಬಂದು, ಈ ಅಂಜೂ
ರದ ಮರದಲ್ಲಿ ಫಲ ಹುಡುಕಿ, ಕಂಡು ಕೊಳ್ಳಲಿಲ್ಲ; ಅದನ್ನು ಕಡಿ
೮ ದು ಬಿಡು; ಯಾಕೆ ಭೂಭಾರವಾಗಿದೆ! ಅನ್ನಲು, ಅವನು; ಪ್ರತ್ಯು
ತ್ತರವಾಗಿ, ಅಯ್ಯಾ, ನಾನು ಅದರ ಸುತ್ತಲು ಅಗೆದು, ಗೊಬ್ಬ
ರ ಹಾಕುವ ಪರ್ಯಂತರ, ಈ ವರುಷಕ್ಕೂ ಅದನ್ನು ಬಿಡು; ಫ
೯ ಲ ಫಲಿಸಿದರೆ, ಸರಿ; ಇಲ್ಲದಿದ್ದರೆ, ಆ ಮೇಲೆ ಅದನ್ನು ಕಡಿದು
ಹಾಕ ಬಹುದೆಂದು, ಅವನಿಗೆ ಹೇಳಿದನು.

೧೦ ಇದಲ್ಲದೆ ಅವನು ಸಬ್ಬತಿನಲ್ಲಿ ,ಒಂದು ಸಭೆಮನೆಯಲ್ಲಿ
೧೧ ಬೋಧಿಸುತ್ತಿರಲಾಗಿ, ಇಗೋ, ಹದಿನೆಂಟು ವರುಷದಿಂದ ಕೋ
ಗದ ಆತ್ಮವುಳ್ಳ ಒಬ್ಬ ಸ್ತ್ರೀಯು. ಅವಳು ಬೊಗ್ಗಿ ಕೊಂಡು,
೧೨ ಎಂದಾದರೂ ಮೈ ಎತ್ತಲಾರದೆ ಇದ್ದಳು. ಯೇಸು ಅವಳನ್ನು
ನೋಡಿ, ಹತ್ತರ ಕರೆದು, ಸ್ತ್ರೀಯೇ, ನಿನ್ನ ಕೋಗದಿಂದ ಬಿಡು
೧೩ ಗಡೆಯಾದಿ, ಎಂದು ಅವಳಿಗೆ ಹೇಳಿ, ಕೈಗಳನ್ನು ಅವಳ ಮೇಲೆ
ಇಟ್ಟನು. ಸಂಗಡಲೇ ಅವಳು ನೆಟ್ಟಗಾಗಿ, ದೇವರನ್ನು ಮಹಿಮೆ
ಪಡಿಸಿದಳು.

೧೪ ಆಗ ಸಭೆಮನೆಯ ಯಜಮಾನನು, ಯೇಸು ಸಬ್ಬತಿನಲ್ಲಿ
ಸ್ವಸ್ಥ ಮಾಡಿದ್ದರಿಂದ ಕೋಪ ಮಾಡಿ, ಸಮೂಹಕ್ಕೆ, ಕೆಲಸ
ಮಾಡ ತಕ್ಕ ಆರು ದಿವಸಗಳುಂಟು; ಆದದರಿಂದ ಅವುಗಳಲ್ಲಿ
ಬಂದು, ಸ್ವಸ್ಥ ಮಾಡಿಸಿ ಕೊಳ್ಳಿರಿ; ಸಬ್ಬತ್ ದಿವಸದಲ್ಲಿ ಬೇಡ,
೧೫ ಅಂದನು. ಅವನಿಗೆ ಕರ್ತನು ಉತ್ತರ ಕೊಟ್ಟು, ಹೇಳಿದ್ದೇನಂ
ದರೆ, ಕಪಟಿಗಳೇ, ನಿಮ್ಮಲ್ಲಿ ಒಬ್ಬೊಬ್ಬನು ಸಬ್ಬತಿನಲ್ಲಿ ತನ್ನ
ಎತ್ತವಾದರೂ ಕತ್ತೆಯನ್ನಾದರೂ ಗೋದಲಿಯಿಂದ ಬಿಚ್ಚಿ,
೧೬ ತಕ್ಕೊಂಡು ಹೋಗಿ, ಕುಡಿಸುವದಿಲ್ಲವೇ? ಆದರೆ ಅಬ್ರಹಾಮನ
ಮಗಳಾಗಿಯೂ, ಇಗೋ, ಹದಿನೆಂಟು ವರುಷ ಸೈತಾನನಿಂದ
ಬಂಧಿಸಲ್ಪಟ್ಟವಳಾಗಿಯೂ, ಇರುವ ಇವಳನ್ನು ಈ ಬಂಧದಿಂದ
೧೭ ಸಬ್ಬತ್ ದಿವಸದಲ್ಲಿ ಬಿಡಿಸ ಬಾರನೋ? ಇವುಗಳನ್ನು ಅವನು
ಹೇಳುವಾಗ, ಅವನ ಎದುರಾಳಿಗಳೆಲ್ಲರು ನಾಚಿಕೆ ಪಟ್ಟರು; ಮತ್ತು
ಸಮೂಹವೆಲ್ಲಾ ಅವನಿಂದಾದ ಎಲ್ಲಾ ಮಹಾ ಕ್ರಿಯೆಗಳಿಗೆ ಸಂ
ತೋಷ ಪಟ್ಟರು.

೧೮ ಇದಲ್ಲದೆ ಅವನು ಹೇಳಿದ್ದೇನಂದರೆ, ದೇವರ ರಾಜ್ಯವು ಯಾ
ವದಕ್ಕೆ ಸಮಾನವಾಗಿದೆ? ಯಾವದಕ್ಕೆ ಅದನ್ನು ಸಮಾನ
೧೯ ಮಾಡಲಿ? ಅದು ಸಾಸಿವೆ ಕಾಳಿಗೆ ಸಮಾನವಾಗಿದೆ; ಅದನ್ನು ಒ
ಬ್ಬ ಮನುಷ್ಯನು ತೆಗೆದು, ತನ್ನ ತೋಟದಲ್ಲಿ ಹಾಕಿದಾಗ, ಅ
ದು ಬೆಳೆದು, ದೊಡ್ಡ ಮರವಾಯಿತು; ಮತ್ತು ಆಕಾಶದ ಪಕ್ಷಿಗ
ಳು ಅದರ ಕೊಂಬೆಗಳಲ್ಲಿ ವಾಸ ಮಾಡಿದವು.

೨೦ ಮತ್ತು ಅವನು ಹೇಳಿದ್ದು, ದೇವರ ರಾಜ್ಯವನ್ನು ಯಾವದ
೨೧ ಕ್ಕೆ ಸಮಾನ ಮಾಡಲಿ? ಅದು ಹುಳಿಗೆ ಸಮಾನವಾಗಿದೆ; ಅದ
ನ್ನು ಒಬ್ಬ ಸ್ತ್ರೀಯು ತೆಗೆದು ಕೊಂಡು, ಮೂರು ಶೇರು ಹಿಟ್ಟಿ
ನಲ್ಲಿ, ಅವೆಲ್ಲಾ ಹುಳಿಯಾಗುವ ತನಕ, ಅಡಗಿಸಿದಳು.

೨೨ ತರುವಾಯ, ಅವನು ಬೋಧಿಸುತ್ತಾ, ಯೆರೂಸಲೇಮಿಗೆ ಪ್ರ
ಯಾಣ ಮಾಡುತ್ತಾ, ಪಟ್ಟಣ ಗ್ರಾಮಗಳನ್ನು ಹಾದು ಹೋದನು.

೨೩ ಆಗ ಒಬ್ಬನು ಅವನಿಗೆ, ಕರ್ತನೇ, ರಕ್ಷಿಸಲ್ಪಡುವವರು ಕೊಂ



ಚ ಮಂದಿಯೋ? ಅಂದಾಗ, ಅವನವರಿಗೆ ಹೇಳಿದ್ದೇನಂದರೆ,
೨೪ ಇಕ್ಕಟ್ಟಾದ ಬಾಗಲಿಂದ ಪ್ರವೇಶಿಸುವದಕ್ಕೆ ಹೋರಾಡಿರಿ; ಯಾ
ಕಂದರೆ ಅನೇಕರು ಪ್ರವೇಶಿಸ ಹುಡುಕುವರು, ಆದರೆ ಆಗದೆ
೨೫ ಹೋಗುವದೆಂದು, ನಿಮಗೆ ಹೇಳುತ್ತೇನೆ. ಮನೆಯಜಮಾನನು
ಎದ್ದು, ಬಾಗಲನ್ನು ಮುಚ್ಚಿದ ಮೇಲೆ, ನೀವು ಹೊರಗೆ ನಿಂತು,
ಬಾಗಲು ತಟ್ಟಿ, ಕರ್ತನೇ, ಕರ್ತನೇ, ನಮಗೆ ತೆಗೆ ಎಂದು ಹೇಳ
ಲಾರಂಭಿಸಲು, ಅವನು ನಿಮಗೆ ಪ್ರತ್ಯುತ್ತರವಾಗಿ, ನೀವು ಎಲ್ಲಿಂ
೨೬ ದಲೋ, ನಿಮ್ಮನ್ನು ಅರಿಯೆನೆಂದು ಹೇಳುವನು. ಆಗ, ನಿನ್ನ ಸ
ನ್ನಿಧಿಯಲ್ಲಿ ನಾವು ಉಂಡು, ಕುಡಿದೆವು; ಮತ್ತು ನಮ್ಮ ಬೀದಿಗಳಲ್ಲಿ
೨೭ ನೀನು ಬೋಧಿಸಿದ್ದಿ, ಎಂದು ಹೇಳಲಾರಂಭಿಸುವಿರಿ. ಆಗ, ನೀವು
ಎಲ್ಲಿಂದಲೋ, ನಿಮ್ಮನ್ನು ಅರಿಯೆನೆಂದು ನಿಮಗೆ ಹೇಳುತ್ತೇನೆ;
ಅನ್ಯಾಯ ನಡಿಸುವವರೆಲ್ಲರೇ, ನನ್ನನ್ನು ಬಿಟ್ಟು ಹೋಗಿರೆಂದು
೨೮ ಹೇಳುವನು. ಅಲ್ಲಿ, ನೀವು ಅಬ್ರಹಾಮನೂ ಇಸಾಕನೂ ಯಾ
ಕೋಬನೂ ಪ್ರವಾದಿಗಳೆಲ್ಲರೂ ದೇವರ ರಾಜ್ಯದಲ್ಲಿ ಇರುವದ
ನ್ನೂ, ನೀವೇ ಹೊರಗೆ ಹಾಕಲ್ಪಡುವದನ್ನೂ, ನೋಡುವಾಗ,
೨೯ ಅಳುವಿಕೆಯೂ ಹಲ್ಲು ಕಡಿಯುವಿಕೆಯೂ ಇರುವವು. ಇದಲ್ಲದೆ
ಪೂರ್ವಪಶ್ಚಿಮ ಉತ್ತರ ದಕ್ಷಿಣಗಳಿಂದ ಬಂದು, ದೇವರ ರಾಜ್ಯ
೩೦ ದಲ್ಲಿ ಕೂತು ಕೊಳ್ಳುವರು; ಮತ್ತು, ಇಗೋ, ಮೊದಲಿನವರಾಗುವ
ಕಡೆಯವರೂ, ಕಡೆಯವರಾಗುವ ಮೊದಲಿನವರೂ ಇದ್ದಾರೆ.

೩೧ ಅದೇ ದಿವಸದಲ್ಲಿ ಫರಿಸಾಯರಲ್ಲಿ ಕೆಲವರು ಹತ್ತರ ಬಂದು,
ನೀನು ಹೊರಟು, ಇಲ್ಲಿಂದ ಹೋಗು; ಯಾಕಂದರೆ ಹೆರೋದ
ನು ನಿನ್ನನ್ನು ಕೊಲ್ಲ ಬೇಕೆಂದಿದ್ದಾನೆಂದು ಅವನಿಗೆ ಹೇಳಿದಾಗ,
೩೨ ಅವನು ಅವರಿಗೆ ಹೇಳಿದ್ದೇನಂದರೆ, ನೀವು ಹೋಗಿ, ಆ ನರಿಗೆ
ಹೀಗೆ ಹೇಳಿರಿ—ಇಗೋ, ಈ ಹೊತ್ತು ನಾಳೆ ದೆವ್ವಗಳನ್ನು ಹೊರ
ದಿಸಿ, ಸ್ವಸ್ಥ ಮಾಡುವದನ್ನೂ ತೀರಿಸುತ್ತೇನೆ; ಮೂರನೇ ದಿವಸ
33 ದಲ್ಲಿ ತೀರಿ ಇರುವೆನು. ಆದಾಗ್ಯೂ ಈ ಹೊತ್ತು ನಾಳೆ ನಾಳಿದ್ದು
ನಾನು ಸಂಚರಿಸ ಬೇಕು; ಯಾಕಂದರೆ ಪ್ರವಾದಿಯು ಯೆರೂ
೩೪ ಸಲೇಮಿನ ಹೊರಗೆ ನಾಶವಾಗುವದು ಆಗದು. ಯೆರೂಸಲೇ
ಮೇ, ಯೆರೂಸಲೇಮೇ, ಪ್ರವಾದಿಗಳನ್ನು ಕೊಂದು ಹಾಕುವ
ವಳೇ, ನಿನ್ನ ಬಳಿಗೆ ಕಳುಹಿಸಲ್ಪಟ್ಟವರನ್ನು ಕಲ್ಲೆಸೆಯುವವಳೇ,
ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಹೊದಗಿಸುವ ಪ್ರಕಾರ,
ನಿನ್ನ ಮಕ್ಕಳನ್ನು ಎಷ್ಟೋ ಸಾರಿ ಹೊದಗಿಸ ಬೇಕೆಂದಿದ್ದೆನು!
೩೫ ಆದರೆ ಒಲ್ಲದೆ ಹೋದಿರಿ. ಇಗೋ, ನಿಮ್ಮ ಮನೆ ನಿಮಗೆ ಹಾಳಾ
ಗಿ ಬಿಡಲ್ಪಡುವದು; ಮತ್ತು ನಿಶ್ಚಯವಾಗಿ ನಿಮಗೆ ಹೇಳುತ್ತೇನೆ,
ಕರ್ತನ ಹೆಸರಿನಲ್ಲಿ ಬರುವವನಿಗೆ ಸ್ತೋತ್ರವಾಗಲೆಂದು ನೀವು
ಹೇಳುವ ಕಾಲವು ಬರುವ ತನಕ, ನನ್ನನ್ನು ನೋಡದೆ ಇರುವಿರಿ.

## ೧೪. ಸಂಧಿ.

೧ ಇದಲ್ಲದೆ ಅವನು, ಕೊಟ್ಟಿ ಉಣ್ಣುವದಕ್ಕೆ, ಸಬ್ಬತಿನಲ್ಲಿ ಫರಿ
ಸಾಯರ ಮುಖ್ಯಸ್ಥನಾದ ಒಬ್ಬನ ಮನೆಯಲ್ಲಿ ಪ್ರವೇಶಿಸಿದಾಗ,
೨ ಅವರು ಅವನಿಗೆ ಹೊಂಚಿ ಕೊಳ್ಳುತ್ತಿದ್ದರು. ಆಗ, ಇಗೋ,
ಜಲೋದರವುಳ್ಳ ಒಬ್ಬ ಮನುಷ್ಯನು ಅವನ ಮುಂದೆ ಇರಲಾಗಿ,
3 ಯೇಸು ಉತ್ತರ ಕೊಟ್ಟು, ನ್ಯಾಯಶಾಸ್ತ್ರಿಗಳಿಗೂ ಫರಿಸಾ
೪ಯರಿಗೂ, ಸಬ್ಬತಿನಲ್ಲಿ ಸ್ವಸ್ಥ ಮಾಡ ಬಹುದೋ? ಅನ್ನಲು; ಸು
ಮ್ಮನಿದ್ದರು. ಆಗಲವನು ಅವನನ್ನು ತೆಗೆದು ಕೊಂಡು, ಸ್ವಸ್ಥ
೫ ಮಾಡಿ, ಕಳುಹಿಸಿ ಬಿಟ್ಟು, ಅವರಿಗೆ ಉತ್ತರ ಕೊಟ್ಟು, ಹೇಳಿದ್ದೇ
ನಂದರೆ, ನಿಮ್ಮಲ್ಲಿ ಒಬ್ಬನ ಕತ್ತೆಯಾದರೂ, ಎತ್ತಾದರೂ, ಕು
ಣಿಯಲ್ಲಿ ಬಿದ್ದರೆ, ಅವನು ಸಂಗಡಲೇ ಸಬ್ಬತಿನಲ್ಲಿ ಅದನ್ನು ಮೇ
೬ ಲಕ್ಕೆ ಎಳೆಯೆನೇ? ಇವುಗಳ ವಿಷಯ ಅವನಿಗೆ ಪ್ರತ್ಯುತ್ತರ ಕೊ
ಡಲಾರದೆ ಇದ್ದರು.

೭ ಮತ್ತು ಅವನು, ಅವರು ಮೊದಲನೇ ಪಂಕ್ತಿಗಳನ್ನು ಆರಿ
ಕೊಳ್ಳುವದನ್ನು ನೋಡಿ, ಕರೆಯಲ್ಪಟ್ಟವರಿಗೆ ಹೇಳಿದ ಸಾಮ್ಯ
೮ ವೇನಂದರೆ, ನೀನು ಒಬ್ಬನಿಂದ ಮದುವೆಗೆ ಕರೆಯಲ್ಪಟ್ಟರೆ,
ಮೊದಲನೇ ಪಂಕ್ತಿಯಲ್ಲಿ ಕೂತುಕೊಳ್ಳ ಬೇಡ; ಒಂದು ವೇಳೆ
೯ ನಿನಗಿಂತ ಘನವುಳ್ಳವನು ಅವನಿಂದ ಕರೆಯಲ್ಪಟ್ಟಿರಲಾಗಿ, ನಿ
ನ್ನನ್ನೂ ಅವನನ್ನೂ ಕರೆದವನು ಬಂದು, ಇವನಿಗೆ ಸ್ಥಳ ಕೊಡೆಂ
ದು ನಿನಗೆ ಹೇಳುವಾಗ, ನೀನು ನಾಚಿಕೆಯಿಂದ ಕಡೇ ಸ್ಥಳದಲ್ಲಿ
೧೦ ಕೂತುಕೊಳ್ಳಲಾರಂಭಿಸುವಿ. ಆದರೆ ನೀನು ಕರೆಯಲ್ಪಟ್ಟಾಗ,
ಹೋಗಿ, ಕಡೇ ಸ್ಥಳದಲ್ಲಿ ಕೂತುಕೋ; ಆಗ ನಿನ್ನನ್ನು ಕರೆದವ
ನು ಬಂದು, ಸ್ನೇಹಿತನೇ, ಮೇಲಕ್ಕೆ ಏರಿ ಬಾ, ಎಂದು ನಿನಗೆ
ಹೇಳುವನು. ಆಗ ನಿನ್ನ ಸಂಗಡ ಕೂತವರ ಸನ್ನಿಧಿಯಲ್ಲಿ ನಿನಗೆ
೧೧ ಮಾನ ಉಂಟಾಗುವದು. ಯಾಕಂದರೆ ತನ್ನನ್ನು ಹೆಚ್ಚಿಸಿ ಕೊ
ಳ್ಳುವ ಪ್ರತಿ ಮನುಷ್ಯನು ತಗ್ಗಿಸಲ್ಪಡುವನು; ಮತ್ತು ತನ್ನನ್ನು
ತಗ್ಗಿಸಿ ಕೊಳ್ಳುವವನು ಹೆಚ್ಚಿಸಲ್ಪಡುವನು.

೧೨ ಮತ್ತು ಅವನು ತನ್ನನ್ನು ಕರೆದವನಿಗೆ ಹೇಳಿದ್ದೇನಂದರೆ,
ನೀನು ಮಧ್ಯಾಹ್ನಕ್ಕಾಗಲಿ, ರಾತ್ರಿಗಾಗಲಿ, ಔತಣವನ್ನು ಮಾಡಿಸು
ವಾಗ, ನಿನ್ನ ಸ್ನೇಹಿತರನ್ನಾದರೂ, ನಿನ್ನ ಸಹೋದರರನ್ನಾದ
ರೂ, ನಿನ್ನ ನೆಂಟರನ್ನಾದರೂ, ನಿನ್ನ ಐಶ್ವರ್ಯವಂತರಾದ ನೆ
ರೆಯವರನ್ನಾದರೂ, ಕರಿಸ ಬೇಡ. ಯಾಕಂದರೆ ಅವರು ಸಹ ನಿ
೧೩ ನ್ನನ್ನು ಕರೆದಾರು; ಆಗ ನಿನಗೆ ಪ್ರತ್ಯುಪಕಾರವಾದೀತು. ಆದರೆ ನೀ
ನು ಔತಣವನ್ನು ಮಾಡಿಸುವಾಗ, ಬಡವರನ್ನೂ, ಊಣರನ್ನೂ,
ಕುಂಟರನ್ನೂ, ಕುರುಡರನ್ನೂ, ಕರಿಸು; ಆಗ, ಅವರು ಪ್ರತ್ಯು
೧೪ ಪಕಾರ ಮಾಡಲಾರದ ಕಾರಣ, ಭಾಗ್ಯವಂತನಾಗಿರುವಿ; ಯಾಕಂ
ದರೆ ನೀತಿವಂತರ ಪುನರುತ್ಥಾನದಲ್ಲಿ ನಿನಗೆ ಪ್ರತ್ಯುಪಕಾರ ಉಂಟಾ
ಗುವದು.

೧೫ ಸಂಗಡ ಕೂತು ಕೊಂಡವರಲ್ಲಿ ಒಬ್ಬನು ಇದನ್ನು ಕೇಳಿ,
ದೇವರ ರಾಜ್ಯದಲ್ಲಿ ಕೊಟ್ಟಿ ತಿನ್ನುವವನು ಭಾಗ್ಯವಂತನೆಂ
೧೬ ದು, ಅವನಿಗೆ ಹೇಳಿದಾಗ; ಅವನು ಅವನಿಗೆ ಹೇಳಿದ್ದೇನಂದರೆ,
ಒಬ್ಬ ಮನುಷ್ಯನು ದೊಡ್ಡ ಔತಣ ಮಾಡಿಸಿ, ಬಹು ಜನರನ್ನು
೧೭ ಕರಿಸಿ, ಔತಣದ ಹೊತ್ತಿಗೆ ಕರೆಯಲ್ಪಟ್ಟಿವರಿಗೆ, ಬನ್ನಿರಿ, ಈಗಲೇ
ಎಲ್ಲಾ ಸಿದ್ಧವಾಗಿದೆ ಎಂದು ಹೇಳ, ತನ್ನ ದಾಸನನ್ನು ಕಳುಹಿಸಿ
೧೮ ದಾಗ, ಅವರೆಲ್ಲರು ಒಂದೇ ಮನಸ್ಸಾಗಿ, ಮನ್ನಿಸ ಬೇಕೆಂದು,
ಅನ್ನಲಾರಂಭಿಸಿದರು. ಮೊದಲನೆಯವನು ಅವನಿಗೆ, ಹೊಲವನ್ನು
ಕೊಂಡು ಕೊಂಡಿದ್ದೇನೆ; ಅದನ್ನು ಹೋಗಿ ನೋಡಬೇಕು; ನನ್ನ
ನ್ನು ಮನ್ನಿಸ ಬೇಕೆಂದು ನಿನ್ನನ್ನು ಬೇಡಿ ಕೊಳ್ಳುತ್ತೇನೆ, ಅಂದ
೧೯ ನು. ಬೇರೊಬ್ಬನು, ನಾನು ಐದು ಜೋಡು ಎತ್ತುಗಳನ್ನು
ಕೊಂಡು ಕೊಂಡಿದ್ದೇನೆ; ಅವುಗಳನ್ನು ಪರೀಕ್ಷಿಸ ಹೋಗುತ್ತೇನೆ;
ನನ್ನನ್ನು ಮನ್ನಿಸ ಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ,
೨೦ ಅಂದನು. ಬೇರೊಬ್ಬನು, ಹೆಣ್ಣು ಮದುವೆ ಮಾಡಿ ಕೊಂಡಿ
ದ್ದೇನೆ; ಅದಕ್ಕೋಸ್ಕರ ಬರಲಾರೆನು, ಅಂದನು.

೨೧ ಆ ದಾಸನು ಬಂದು, ತನ್ನ ಯಜಮಾನನಿಗೆ ಇವುಗಳನ್ನು ತಿಳಿಸಿದಾಗ, ಮನೇ ಯಜಮಾನನು ಕೋಪಿಸಿ ಕೊಂಡು, ತನ್ನ ದಾಸನಿಗೆ ಹೇಳಿದ್ದೇನಂದರೆ, ಪಟ್ಟಣದ ಬೀದಿಗಳಿಗೂ, ಸಂದುಗಳಿಗೂ ಬೇಗ ಹೋಗಿ, ಬಡವರನ್ನೂ ಊನರನ್ನೂ ಕುಂಟರನ್ನೂ ಕುರುಡರನ್ನೂ ಇಲ್ಲಿಗೆ ಕರ ಕೊಂಡು ಬಾ. ಆ ದಾಸನು, ಅಯ್ಯಾ, ನೀನು ಅಪ್ಪಣೆ ಕೊಟ್ಟ ಹಾಗಾಯಿತು; ಮತ್ತು ಇನ್ನು ೨೩ ಸ್ಥಳ ಉಂಟು, ಅಂದಾಗ; ಯಜಮಾನನು ದಾಸನಿಗೆ, ನೀನು ಹಾದಿಗಳಿಗೂ ಪೇಲಿಗಳಿಗೂ ಹೋಗಿ, ನನ್ನ ಮನೆ ತುಂಬುವ ಹಾಗೆ ೨೪ ಬಳಿಗೆ ಬರುವದಕ್ಕೆ ಅವರನ್ನು ಬಲವಂತ ಮಾಡು; ಯಾಕಂದರೆ ನಿಮಗೆ ಹೇಳುತ್ತೇನೆ, ಕಕೆಯಲ್ಪಟ್ಟ ಆ ಜನರಲ್ಲಿ ಒಬ್ಬನಾದರೂ ನನ್ನ ಔತಣವನ್ನು ರುಚಿ ನೋಡನು, ಅಂದನು.

೨೫ ಇದಲ್ಲದೆ ಬಹು ಸಮೂಹಗಳು ಅವನ ಸಂಗಡ ಪ್ರಯಾಣ ಮಾಡಲಾಗಿ, ಅವನು ತಿರುಗಿ ಕೊಂಡು, ಅವರಿಗೆ ಹೇಳಿದ್ದೇನಂದ ೨೬ ರೆ, ಒಬ್ಬನು ನನ್ನ ಬಳಿಗೆ ಬಂದು, ತನ್ನ ತಂದೆಯನ್ನೂ ತಾಯಿಯನ್ನೂ ಹೆಂಡತಿಯನ್ನೂ ಮಕ್ಕಳನ್ನೂ ಸಹೋದರರನ್ನೂ ಸಹೋದರಿಗಳನ್ನೂ ಮತ್ತು ಸ್ವಂತ ಪ್ರಾಣವನ್ನೂ ಸಹ, ಹಗೆ ೨೭ ಮಾಡದೆ ಇದ್ದರೆ, ನನ್ನ ಶಿಷ್ಯನಾಗಿರಲಾರನು. ಮತ್ತು ತನ್ನ ಶಿಲುಬೆ ಹೊತ್ತು ಕೊಂಡು, ನನ್ನ ಹಿಂದೆ ಬಾರದವನು ನನ್ನ ಶಿಷ್ಯನಾಗಿರಲಾರನು.

೨೮ ಯಾಕಂದರೆ ನಿಮ್ಮಲ್ಲಿ ಯಾವನು ಗೋಪುರ ಕಟ್ಟ ಮನಸ್ಸಾಗಿದ್ದು, ಪೊದಲು ಕೂತು ಕೊಂಡು, ಅದನ್ನು ಶೀರಿಸುವದಕ್ಕೆ ತನಗುಂಟೋ? ಎಂದು ವೆಚ್ಚ ಲೆಖ್ಖ ಮಾಡುವದಿಲ್ಲ? ಮಾಡದಿದ್ದರೆ, ಅವನು ತಳಹಾದಿ ಹಾಕಿ, ಶೀರಿಸಲಾರದಿದ್ದರೆ, ನೋಡುವ ೩೦ ವಕ್ಕೆಲ್ಲರು ಅವನನ್ನು ಹಾಸ್ಯ ಮಾಡಲಾರಂಭಿಸಿ, ಈ ಮನುಷ್ಯನು ಮನೆ ಕಟ್ಟುವದಕ್ಕೆ ಆರಂಭ ಮಾಡಿ, ಶೀರಿಸಲಾರದೆ ಹೋದನೆಂದು, ಹೇಳುವದಿಲ್ಲವೋ?

೩೧ ಮತ್ತು ಯಾವ ಅರಸನು ಬೇರೆ ಅರಸನ ಸಂಗಡ ಯುದ್ಧ ಮಾಡ ಹೋಗುವಾಗ, ಪೊದಲು ಕೂತು ಕೊಂಡು, ತಾನು ಹತ್ತು ಸಾವಿರ ಜನರಿಂದ, ತನ್ನ ಮೇಲೆ ಇಪ್ಪತ್ತು ಸಾವಿರ ಜನರ ಸಂಗಡ ಬರುವವನನ್ನು ಎದುರಿಸ ಶಕ್ತನೋ? ಎಂದು ಆಲೋಚನೆ ೩೨ ಮಾಡದೆ ಇರುವನು? ಇಲ್ಲವೆ, ಅವನು ಇನ್ನೂ ದೂರದಲ್ಲಿರುವಾಗ, ರಾಯಭಾರಿಗಳನ್ನು ಕಳುಹಿಸಿ, ಸಮಾಧಾನದ ವಿಷಯವಾಗಿ ೩೩ ಬಿನ್ನಹ ಮಾಡುವನು. ಹಾಗೆಯೇ ನಿಮ್ಮಲ್ಲಿ ಯಾವನಾದರೂ ತನಗುಂಟಾದವುಗಳನ್ನೆಲ್ಲಾ ಬಿಟ್ಟು ಬಿಡದೆ ಇದ್ದರೆ, ನನ್ನ ಶಿಷ್ಯನಾಗಿರಲಾರನು.

೩೪ ಉಪ್ಪು ಒಳ್ಳೇದೇ; ಆದರೆ ಉಪ್ಪು ನಿಸ್ಸಾರವಾದರೆ, ಯಾ ೩೫ ವದರಿಂದ ರುಚಿಯಾದೀತು? ಅದು ಭೂಮಿಗಾದರೂ ಗೊಬ್ಬರಕ್ಕಾದರೂ ಬರುವದಿಲ್ಲ; ಅದನ್ನು ಹೊರಗೆ ಹಾಕುತ್ತಾರೆ. ಕೇಳ್ಳ ಕಿವಿಗಳುಳ್ಳವನು ಕೇಳ್ಳಲಿ.

## ೧೫. ಸಂಧಿ.

೧ ಇದಲ್ಲದೆ ಎಲ್ಲಾ ಸುಂಕದವರೂ ಪಾಪಿಗಳೂ ಅವನನ್ನು ಕೇ ೨ ಳುವದಕ್ಕೆ ಅವನ ಸಮೀಪಕ್ಕೆ ಬರಲಾಗಿ, ಫರಿಸಾಯರೂ ಶಾಸ್ತ್ರಿಗಳೂ, ಇವನು ಪಾಪಿಗಳನ್ನು ಅಂಗೀಕರಿಸಿ, ಅವರ ಸಂಗಡ ಉಣ್ಣುತ್ತಾನೆಂದು ಗುಣುಗುಟ್ಟಿದರು.

೩ ಆದರೆ ಅವನು ಅವರಿಗೆ ಹೇಳಿದ ಸಾಮ್ಯವೇನಂದರೆ, ನಿಮ್ಮಲ್ಲಿ ೪ ಯಾವ ಮನುಷ್ಯನು, ನೂರು ಕುರಿಗಳಿದ್ದು, ಅವುಗಳಲ್ಲಿ ಒಂದನ್ನು ಕಳ್ಳ ಕೊಂಡರೆ, ತೊಂಭತ್ತೊಂಭತ್ತನ್ನೂ ಅರಣ್ಯದಲ್ಲಿ ಬಿಟ್ಟು, ಕಳ್ಳ ಕೊಂಡದ್ದನ್ನು, ಅದು ಶಿಕ್ಕುವ ಪರ್ಯಂತರ, ಹುಡುಕದೆ ಇರುವನು? ಶಿಕ್ಕಿದ ಮೇಲೆ, ಸಂತೋಷ ಪಟ್ಟು, ಅದನ್ನು ತನ್ನ ಹೆಗಲಿನ ಮೇಲೆ ಇಟ್ಟು ಕೊಂಡು, ಮನೆಗೆ ಬಂದು, ಸ್ನೇಹಿತರನ್ನೂ ನೆರೆಯವರನ್ನೂ ಕೂಡಾ ಕರೆದು, ನನ್ನ ಸಂಗಡ ಸಂತೋಷ ಪಡಿರಿ; ಯಾಕಂದರೆ ಕಳ್ಳ ಕೊಂಡ ನನ್ನ ಕುರಿಯು ನನಗೆ ಶಿ ೬ ಕ್ಕಿತೆಂದು, ಅವರಿಗೆ ಹೇಳುವನು. ಈ ಪ್ರಕಾರ ಮಾನಸಾಂತರ ಅವಸ್ಯವಿಲ್ಲದ ತೊಂಭತ್ತೊಂಭತ್ತು ನೀತಿವಂತರಿಗಿಂತ ಮಾನಸಾಂತರ ಪಡುವ ಒಬ್ಬ ಪಾಪಿಗೋಸ್ಕರ ಪರಲೋಕದಲ್ಲಿ ಸಂತೋಷವು ಇರುವದೆಂದು, ನಿಮಗೆ ಹೇಳುತ್ತೇನೆ.

೮ ಮತ್ತು ಯಾವ ಸ್ತ್ರೀಯು, ಹತ್ತು ಹಣಗಳಿದ್ದು, ಒಂದು ಹಣ ಕಳ್ಳ ಕೊಂಡರೆ, ದೀಪ ಹಚ್ಚಿ, ಮನೆ ಗುಡಿಸಿ, ಅದು ಶಿಕ್ಕುವ ೯ ಪರ್ಯಂತರ ಜಾಗ್ರತೆಯಾಗಿ ಹುಡುಕದೆ ಇರುವಳು? ಶಿಕ್ಕಿದ ಮೇಲೆ, ಗೆಳತಿಯರನ್ನೂ ನೆರೆಯವರನ್ನೂ ಕೂಡಾ ಕರೆದು, ನನ್ನ ಸಂಗಡ ಸಂತೋಷ ಪಡಿರಿ; ಯಾಕಂದರೆ ನಾನು ಕಳ್ಳಕೊಂ ೧೦ ಡ ಹಣವು ಶಿಕ್ಕಿತೆಂದು ಹೇಳುವಳು. ಈ ಪ್ರಕಾರ ಮಾನಸಾಂತರ ಪಡುವ ಒಬ್ಬ ಪಾಪಿಗೋಸ್ಕರ ದೇವದೂತರ ಮುಂದೆ ಸಂತೋಷವು ಇರುವದೆಂದು, ನಿಮಗೆ ಹೇಳುತ್ತೇನೆ.

೧೧ ಮತ್ತು ಅವನು ಹೇಳಿದ್ದೇನಂದರೆ, ಒಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು. ೧೨ ಅವರಲ್ಲಿ ಚಿಕ್ಕವನು ತಂದೆಗೆ, ತಂದೆಯೇ, ಆಸ್ತಿಯಲ್ಲಿ ನನಗೆ ಬರ ತಕ್ಕ ಪಾಲನ್ನು ನನಗೆ ಕೊಡು, ಅಂದಾಗ, ಬದುಕನ್ನು ಅವರಿಗೆ ಪಾಲಿಟ್ಟನು. ೧೩ ಕೆಲವು ದಿನಗಳ ಮೇಲೆ ಚಿಕ್ಕ ಮಗನು ಎಲ್ಲಾ ಕೂಡಿಸಿ ಕೊಂಡು, ದೂರ ದೇಶಕ್ಕೆ ಹೊರಟು, ಅಲ್ಲಿ ದುಂದುಗಾರನಾಗಿ ಬದುಕಿ, ತನ್ನ ಆಸ್ತಿಯನ್ನು ಹಾಳು ಮಾಡಿ ಬಿಟ್ಟನು. ೧೪ ಅವನು ಎಲ್ಲಾ ವೆಚ್ಚ ಮಾಡಿದ ಮೇಲೆ, ಆ ದೇಶದಲ್ಲಿ ಘೋರವಾದ ಬರ ಉಂಟಾಗಿ, ಅವನು ಕೊರತೆ ಪಡಲಾರಂಭಿಸಿದನು. ೧೫ ಆಗ ಹೋಗಿ, ಆ ದೇಶಸ್ಥರಲ್ಲಿ ಒಬ್ಬನನ್ನು ಹೊಂದಿ ಕೊಂಡನು. ಇವನು ಅವನನ್ನು, ಹಂದಿಗಳನ್ನು ಮೇಯಿಸುವದಕ್ಕೆ, ತನ್ನ ಹೊಲಗಳಿಗೆ ಕಳುಹಿಸಿದನು. ೧೬ ಹೀಗಿರಲಾಗಿ, ಹಂದಿಗಳು ತಿನ್ನುವ ಹಿಂಡಿಯಿಂದ ತನ್ನ ಹೊಟ್ಟೆ ತುಂಬಿಸಿ ಕೊಳ್ಳ ಅಪೇಕ್ಷಿಸಿದಾಗ, ಯಾರೂ ಅವನಿಗೆ ಕೊಡಲಿಲ್ಲ.

೧೭ ಆಗ ತೆಪ್ಪರಿಸಿ ಕೊಂಡು, ನನ್ನ ತಂದೆಯ ಹತ್ತರ ಎಷ್ಟೋ ಮಂದಿ ಕೂಲಿಯವರಿಗೆ ತುಂಬ ಕೊಟ್ಟಿ ಉಂಟು! ಆದರೆ ನಾನು ಹಸಿವೆಯಿಂದ ಸಾಯುತ್ತೇನೆ; ೧೮ ನಾನು ಎದ್ದು, ನನ್ನ ತಂದೆಯ ಬಳಿಗೆ ಹೋಗಿ, ಅವನಿಗೆ, ತಂದೆಯೇ! ಪರಲೋಕಕ್ಕೆ ವಿರೋಧವಾಗಿಯೂ, ನಿನ್ನ ಮುಂದೆಯೂ, ಪಾಪ ಮಾಡಿದ್ದೇನೆ; ೧೯ ನಾನು ಇನ್ನೂ ನಿನ್ನ ಮಗನೆಂದು ಕರೆಯಲ್ಪಡ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯವರಲ್ಲಿ ಒಬ್ಬನಂತೆ ಮಾಡು, ಅನ್ನುವೆನೆಂದು ಹೇಳಿ, ೨೦ ಎದ್ದು, ತನ್ನ ತಂದೆಯ ಬಳಿಗೆ ಬಂದನು. ಅವನು ಇನ್ನು ದೂರದಲ್ಲಿರುವಾಗ, ಅವನ ತಂದೆ ಅವನನ್ನು ನೋಡಿ, ಅಂತಃಕರಣ ಪಟ್ಟು, ಓಡಿ ಬಂದು, ಅವನ ಕೊರಳಿನ ಮೇಲೆ ಬಿದ್ದು, ಅವನನ್ನು ಮುದ್ದಿಟ್ಟನು. ೨೧ ಆದರೆ ಮಗನು ಅವನಿಗೆ, ತಂದೆಯೇ! ಪರಲೋಕಕ್ಕೆ ವಿರೋಧವಾಗಿಯೂ, ನಿನ್ನ ಮುಂದೆಯೂ, ಪಾಪ



ಮಾಡಿದ್ದೇನೆ. ನಾನು ಇನ್ನೂ ನಿನ್ನ ಮಗನೆಂದು ಕರೆಯಲ್ಪಡ ೨೨ ಯೋಗ್ಯನಲ್ಲ, ಅನ್ನಲು; ತಂದೆಯು ತನ್ನ ದಾಸರಿಗೆ, ಶ್ರೇಷ್ಠವಾದ ಅಂಗಿ ತಂದು, ಅವನಿಗೆ ಹೊದ್ದಿಸಿರಿ; ಅವನ ಕೈಗೆ ಉಂಗರವ ೨೩ ನ್ನೂ, ಪಾದಗಳಿಗೆ ಕೆರಗಳನ್ನೂ ಕೊಡಿರಿ; ಮತ್ತು ಕೊಬ್ಬಿದ ೨೪ ಕರುವನ್ನು ತಂದು ಕೊಯ್ಯಿರಿ; ಉಂಡು, ಆನಂದ ಪಡುವ; ಯಾಕಂದರೆ ನನ್ನ ಮಗನು ಸತ್ತವನಾಗಿದ್ದು, ತಿರಿಗಿ ಬದುಕಿದ್ದಾನೆ; ಕಳೆದು ಹೋದವನಾಗಿದ್ದು, ಶಿಕ್ಕಿದ್ದಾನೆ, ಅಂದನು. ಆಗ ಅನಂದ ಪಡಲಾರಂಭಿಸಿದರು.

೨೫ ಆದರೆ ಅವನ ಹಿರೇ ಮಗನು ಹೊಲದಲ್ಲಿ ಇದ್ದನು. ಅವನು ಬಂದು, ಮನೆಗೆ ಸಮೀಪಿಸುವಾಗ, ಗಾನವನ್ನೂ ನಾಟ್ಯವನ್ನೂ ೨೬ ಕೇಳ್ಳಿ, ಆಳುಗಳಲ್ಲಿ ಒಬ್ಬನನ್ನು ಕರೆದು, ಅದೇನೆಂದು ವಿಚಾರಿಸಿದ ೨೭ ನು. ಅವನು ಅವನಿಗೆ, ನಿನ್ನ ತಮ್ಮನು ಬಂದಿದ್ದಾನೆ; ಮತ್ತು ನಿನ್ನ ತಂದೆಯು, ಅವನನ್ನು ಸ್ವಸ್ಥವಾಗಿ ತಿರಿಗಿ ಹೊಂದಿದ ಕಾರಣ, ೨೮ ಕೊಬ್ಬಿದ ಕರುವನ್ನು ಕೊಯಿಸಿದ್ದಾನೆ. ಆಗಲವನು ಕೋಪಗೊಂಡು, ಒಳಗೆ ಬರಲೊಲ್ಲದೆ ಇದ್ದನು. ಆದದರಿಂದ ಅವನ ತಂ ೨೯ ದೆ ಹೊರಗೆ ಬಂದು, ಅವನನ್ನು ಬೇಡಿ ಕೊಂಡನು. ಆದರೆ ಅವನು ಪ್ರತ್ಯುತ್ತರವಾಗಿ ತಂದೆಗೆ, ಇಗೋ, ಇಷ್ಟು ವರುಷ ನಿನಗೆ ದಾಸನಾಗಿದ್ದೇನೆ; ಎಂದಾದರೂ ನಿನ್ನ ಆಜ್ಞೆ ಮೀರಲಿಲ್ಲ; ಆದಾಗ್ಯೂ ನನ್ನ ಸ್ನೇಹಿತರ ಸಂಗಡ ಅನಂದ ಪಡುವದಕ್ಕೆ ನೀನು ನ ೩೦ ನಗೆ ಎಂದಾದರೂ ಆಡುಮರಿಯಾದರೂ ಕೊಡಲಿಲ್ಲ. ಆದರೆ ನಿನ್ನ ಬದುಕನ್ನು ಸೂಳೆಯರ ಸಂಗಡ ತಿಂದು ಬಿಟ್ಟ ಈ ನಿನ್ನ ಮಗನು ಬಂದಾಗ, ಅವನಿಗೋಸ್ಕರ ಕೊಬ್ಬಿದ ಕರುವನ್ನು ಕೊಯಿ ೩೧ ಸಿದ್ದೀ, ಅಂದನು. ಆಗಲವನು ಅವನಿಗೆ, ಮಗನೇ, ನೀನು ಯಾ ೩೨ ವಾಗಲೂ ನನ್ನ ಸಂಗಡ ಇದ್ದೀ; ನನ್ನವೆಲ್ಲಾ ನಿನ್ನವೇ; ಆದರೆ ಆನಂದ ಸಂತೋಷ ಪಡ ಬೇಕಾಗಿತ್ತು; ಯಾಕಂದರೆ ಈ ನಿನ್ನ ತಮ್ಮನು ಸತ್ತವನಾಗಿದ್ದು, ತಿರಿಗಿ ಬದುಕಿದ್ದಾನೆ; ಕಳೆದು ಹೋದವನಾಗಿದ್ದು, ಶಿಕ್ಕಿದ್ದಾನೆ, ಅಂದನು.

## ೧೬. ಸಂಧಿ.

೧ ಮತ್ತು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ, ಐಶ್ವರ್ಯವಂತನಾದ ಒಬ್ಬ ಮನುಷ್ಯನಿಗೆ ಉಗ್ರಾಣಿಕನು ಇದ್ದನು. ಇವನು ಅವನಿಗೆ ಉಂಟಾಗಿದ್ದವುಗಳನ್ನು ಹಾಳು ಮಾಡುತ್ತಾನೆಂದು, ಅ ೨ ವನಿಗೆ ತಿಳಿಸಲ್ಪಟ್ಟಿತು. ಆಗ ಅವನನ್ನು ಕರೆದು, ನಿನ್ನನ್ನು ಕುರಿತು ನಾನು ಕೇಳ್ಳುವದು ಇದೇನು? ನಿನ್ನ ಮನೆವಾರ್ತೆಯ ಲೆಖ್ಖ ಒಪ್ಪಿಸು; ಯಾಕಂದರೆ ನೀನು ಇನ್ನೂ ಉಗ್ರಾಣಿಕನಾಗಿರಲಾರಿ, ೩ ಎಂದು ಅವನಿಗೆ ಹೇಳಿದನು. ಆಗ ಉಗ್ರಾಣಿಕನು, ನಾನೇನು ಮಾಡಲಿ? ನನ್ನ ಯಜಮಾನನು ಮನೆವಾರ್ತೆಯನ್ನು ನನ್ನಿಂದ ತೆಗೆದು ಹಾಕುತ್ತಾನೆ; ಅಗಿಯಲಾರೆನು; ಬೇಡುವದಕ್ಕೆ ನಾಚಿಕೆ ಪಡು ೪ ತ್ತೇನೆ; ಮನೆವಾರ್ತೆಯಿಂದ ಹೊರಗಾದ ಮೇಲೆ, ಅವರು ನನ್ನನ್ನು ತಮ್ಮ ಮನೆಗಳಲ್ಲಿ ಸೇರಿಸುವ ಹಾಗೆ, ಮಾಡ ಬೇಕಾದದ್ದನ್ನು ಬಲ್ಲೆನು, ಅಂದು ಕೊಂಡನು.

೫ ಆಗ ತನ್ನ ಯಜಮಾನನ ಸಾಲಗಾರರಲ್ಲಿ ಒಬ್ಬೊಬ್ಬನನ್ನು ಕರೆದು, ಮೊದಲನೆಯವನಿಗೆ, ನೀನು ನನ್ನ ಯಜಮಾನನಿಗೆ ಎಷ್ಟು ೬ ಕೊಡ ಬೇಕು? ಅನ್ನಲು; ನೂರು ಕೊಳ್ಳಗ ಎಣ್ಣೆ, ಅಂದಾಗ; ಅವನಿಗೆ, ನಿನ್ನ ಚೇಟು ತಕ್ಕೊಂಡು, ಬೇಗ ಕೂತು ಕೊಂಡು, ಐವತ್ತು ೭ ಬಕೆ, ಅಂದನು. ಆ ಮೇಲೆ ಬೇಕೊಬ್ಬನಿಗೆ, ಮತ್ತು ನೀನು ಎಷ್ಟು ಕೊಡ ಬೇಕು? ಅಂದಾಗ; ನೂರು ಖಂಡುಗ ಗೋಧಿ, ಅನ್ನಲು; ಅವನಿಗೆ, ನಿನ್ನ ಚೇಟು ತಕ್ಕೊಂಡು, ಎಂಭತ್ತು ಬಕೆ, ಅಂದನು. ೮ ಆಗ ಯಜಮಾನನು ಅನ್ಯಾಯವಾದ ಉಗ್ರಾಣಿಕನನ್ನು, ಅವನು ಬುದ್ಧಿಯಾಗಿ ಮಾಡಿದ್ದಾನೆಂದು, ಹೊಗಳಿದನು; ಯಾಕಂದರೆ ಈ ಲೋಕದ ಮಕ್ಕಳು ತಮ್ಮ ವಂಶದಲ್ಲಿ ಬೆಳಕಿನ ಮಕ್ಕಳಿಗಿಂತ ಬುದ್ಧಿವಂತರಾಗಿದ್ದಾರೆ.

೯ ಮತ್ತು ನಾನು ನಿಮಗೆ ಹೇಳುತ್ತೇನೆ, ನೀವು ಶೀರಿ ಹೋಗುವಾಗ, ಅವರು ನಿಮ್ಮನ್ನು ನಿತ್ಯ ಗುಡಾರಗಳಲ್ಲಿ ಅಂಗೀಕರಿಸುವ ಹಾಗೆ, ಅನ್ಯಾಯವಾದ ಮಮ್ಮೋನಿಂದ ನಿಮಗೆ ಸ್ನೇಹಿತರನ್ನು ಮಾಡಿ ಕೊಳ್ಳಿರಿ. ೧೦ ಸ್ವಲ್ಪವಾದದರಲ್ಲಿ ನಂಬಿಕೆಯುಳ್ಳವನು ಬಹಳವಾದದರಲ್ಲಿಯೂ ನಂಬಿಕೆಯುಳ್ಳವನಾಗಿದ್ದಾನೆ; ಮತ್ತು ಸ್ವಲ್ಪವಾದದರಲ್ಲಿ ಅನ್ಯಾಯವುಳ್ಳವನು ಬಹಳವಾದದರಲ್ಲಿ ೧೧ ಯೂ ಅನ್ಯಾಯವುಳ್ಳವನಾಗಿದ್ದಾನೆ. ಆದದರಿಂದ ಅನ್ಯಾಯವಾದ ಮಮ್ಮೋನಿನಲ್ಲಿ ನೀವು ನಂಬಿಕೆ ಇಲ್ಲದವರಾಗಿದ್ದರೆ, ನಿಜವಾದದ್ದನ್ನು ನಿಮಗೆ ಯಾರು ಒಪ್ಪಿಸುವರು? ೧೨ ಮತ್ತು ಮತ್ತೊಬ್ಬನದರಲ್ಲಿ ನಂಬಿಕೆ ಇಲ್ಲದವರಾಗಿದ್ದರೆ, ನಿಮ್ಮದನ್ನು ನಿಮಗೆ ೧೩ ಯಾರು ಕೊಡುವರು? ಯಾವ ಸೇವಕನಾದರೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು; ಹ್ಯಾಗಂದರೆ ಒಬ್ಬನನ್ನು ಹಗೆ ಮಾಡಿ, ಮತ್ತೊಬ್ಬನನ್ನು ಪ್ರೀತಿ ಮಾಡುವನು; ಇಲ್ಲವೆ ಒಬ್ಬನನ್ನು ಹೊಂದಿ ಕೊಂಡು, ಮತ್ತೊಬ್ಬನನ್ನು ತಿರಸ್ಕರಿಸುವನು; ನೀವು ದೇವರಿಗೂ ಮಮ್ಮೋನಿಗೂ ಸೇವೆ ಮಾಡಲಾರಿರಿ.

೧೪ ಇವುಗಳನ್ನೆಲ್ಲಾ ದ್ರವ್ಯಾಶೆಯುಳ್ಳ ಫರಿಸಾಯರು ಕೇಳ್ಳಿ, ಅವ ೧೫ ನನ್ನು ಹಾಸ್ಯ ಮಾಡಿದರು. ಆಗಲವನು ಅವರಿಗೆ ಹೇಳಿದ್ದೇನಂದರೆ, ಮನುಷ್ಯರ ಮುಂದೆ ನಿಮ್ಮನ್ನು ನೀತಿವಂತರನ್ನಿಸಿ ಕೊಳ್ಳುವವರಾಗಿದ್ದೀರಿ; ಆದರೆ ದೇವರು ನಿಮ್ಮ ಹೃದಯಗಳನ್ನು ತಿಳಿಯುತ್ತಾನೆ; ಯಾಕಂದರೆ ಮನುಷ್ಯರಲ್ಲಿ ಶ್ರೇಷ್ಠವಾದದ್ದು ೧೬ ದೇವರ ಮುಂದೆ ಅಸಹ್ಯವಾಗಿದೆ. ನ್ಯಾಯಪ್ರಮಾಣವೂ ಪ್ರವಾದಿಗಳೂ ಯೋಹಾನನ ವರಿಗೂ ಇದ್ದವು. ಆಗಿಂದ ದೇವರ ರಾಜ್ಯವು ಪ್ರಸಂಗಿಸಲ್ಪಟ್ಟುತ್ತದೆ; ಮತ್ತು ಎಲ್ಲರು ಅದರಲ್ಲಿ ಬಲ ೧೭ ವಂತದಿಂದ ಸೇರುತ್ತಾರೆ. ನ್ಯಾಯಪ್ರಮಾಣದ ಒಂದು ಗುಡುಸು ಬಿದ್ದು ಹೋಗುವದಕ್ಕಿಂತ, ಆಕಾಶವೂ ಭೂಮಿಯೂ ಗತಿಸಿ ಹೋಗುವದು ಸುಲಭ. ೧೮ ತನ್ನ ಹೆಂಡತಿಯನ್ನು ಬಿಟ್ಟು ಬಿಟ್ಟು, ಮತ್ತೊಬ್ಬಳನ್ನು ಮದುವೆ ಮಾಡಿ ಕೊಳ್ಳುವ ಪ್ರತಿ ಮನುಷ್ಯನು ವ್ಯಭಿಚಾರ ಮಾಡುತ್ತಾನೆ; ಮತ್ತು ಗಂಡನಿಂದ ಬಿಡಲ್ಪಟ್ಟವಳನ್ನು ಮದುವೆ ಮಾಡಿಕೊಳ್ಳುವವನು ವ್ಯಭಿಚಾರ ಮಾಡುತ್ತಾನೆ.

೧೯ ಇದಲ್ಲದೆ ರಕ್ತಾಂಬರವನ್ನೂ ನಾರು ಮಡಿಯನ್ನೂ ಹೊದ್ದು ಕೊಂಡು, ದಿನ ದಿನ ಸಂಭ್ರಮವಾಗಿ ಆನಂದ ಪಡುವ ಐಶ್ವರ್ಯ ೨೦ ವಂತನಾದ ಒಬ್ಬ ಮನುಷ್ಯನಿದ್ದನು. ಮತ್ತು ಅವನ ಬಾಗಲಲ್ಲಿ ೨೧ ಲಾಜರನೆಂಬ ಬಡವನು ಹುಣ್ಣು ತುಂಬಿದವನಾಗಿ ಬಿದ್ದು, ಐಶ್ವರ್ಯವಂತನ ಮೇಜಿನಿಂದ ಬೀಳುವ ಎಂಜಲಿಂದ ತೃಪ್ತಿಯಾಗುವದಕ್ಕೆ ಅಪೇಕ್ಷಿಸಿದನು. ಇದಲ್ಲದೆ ನಾಯಿಗಳು ಸಹ ಬಂದು, ೨೨ ಅವನ ಹುಣ್ಣುಗಳನ್ನು ನೆಕ್ಕಿದವು. ತರುವಾಯ ಆದದ್ದೇನಂದರೆ, ಬಡವನು ಸತ್ತು, ದೂತರಿಂದ ಅಬ್ರಹಾಮನ ಎದೆಗೆ ವೈಯಲ್ಪಟ್ಟನು. ಮತ್ತು ಐಶ್ವರ್ಯವಂತನು ಸತ್ತು, ಹೂಣಲ್ಪಟ್ಟನು.

೨೩ ಆಗಲವನು ಪಾತಾಳದಲ್ಲಿ ಬಾಧೆಗಳಲ್ಲಿದ್ದು, ತನ್ನ ಕಣ್ಣುಗಳನ್ನು
ಎತ್ತಿ, ದೂರದಿಂದ ಅಬ್ರಹಾಮನನ್ನೂ ಅವನ ಎದೆಯಲ್ಲಿರುವ ಲಾ
೨೪ ಜರನನ್ನೂ ನೋಡಿ, ತಂದೆಯಾದ ಅಬ್ರಹಾಮನೇ, ನನ್ನನ್ನು ಕ
ರುಣಿಸಿ, ಲಾಜರನನ್ನು, ಅವನು ತನ್ನ ಬೆರಳಿನ ತುದಿ ನೀರಿನಲ್ಲಿ
ಅದ್ದಿ, ನನ್ನ ನಾಲಿಗೆಯನ್ನು ತಣ್ಣಗೆ ಮಾಡುವ ಹಾಗೆ, ಕಳುಹಿ
ಸು; ಯಾಕಂದರೆ ಈ ಉರಿಯಲ್ಲಿ ವೇದನೆ ಪಡುತ್ತೇನೆ ಎಂದು,
೨೫ ಕೂಗಿ ಹೇಳಿದನು. ಆದರೆ ಅಬ್ರಹಾಮನು, ಮಗನೇ, ನೀನು
ಬದುಕುವಾಗ ನಿನ್ನ ಬಳ್ಳೆಯವುಗಳನ್ನು ಹೊಂದಿದಿ; ಮತ್ತು ಅ
ದೇ ಪ್ರಕಾರ ಲಾಜರನು ಕೆಟ್ಟವುಗಳನ್ನು ಹೊಂದಿದನೆಂದು ಜ್ಞಾಪ
ಕ ಮಾಡಿಕೋ. ಆದರೆ ಈಗ ಅವನಿಗೆ ಆದರಣೆಯೂ, ನಿನಗೆ
೨೬ ವೇದನೆಯೂ, ಆಗುತ್ತದೆ. ಅದೆಲ್ಲಾ ಹೊರ್ತು, ಬೇಕೆಂದಿರುವವ
ರು ಇಲ್ಲಿಂದ ನಿಮ್ಮ ಬಳಿಗೆ ದಾಟುವದೂ, ಅಲ್ಲಿಯವರು ನಮ್ಮ
ಬಳಿಗೆ ದಾಟುವದೂ, ಆಗದ ಹಾಗೆ, ನಮಗೂ ನಿಮಗೂ ಮಧ್ಯ
ದಲ್ಲಿ ದೊಡ್ಡ ಹೊಂಗರ ಸ್ಥಾಪಿಸಲ್ಪಟ್ಟಿದೆ, ಅಂದನು.
೨೭ ಆಗಲವನು, ಹಾಗಾದರೆ, ತಂದೆಯೇ, ಅವನನ್ನು ನನ್ನ ತಂದೆ
ಯ ಮನೆಗೆ ಕಳುಹಿಸ ಬೇಕೆಂದು, ನಿನ್ನನ್ನು ಬೇಡಿ ಕೊಳ್ಳುತ್ತೇ
೨೮ ನೆ; ಯಾಕಂದರೆ ನನಗೆ ಐದು ಮಂದಿ ಸಹೋದರರಿದ್ದಾರೆ; ಅವ
ರು ಸಹ ಈ ಬಾಧೇ ಸ್ಥಳಕ್ಕೆ ಬಾರದ ಹಾಗೆ, ಅವನವರಿಗೆ ಸಾಕ್ಷಿ
೨೯ ಕೊಡತಲಿ, ಅಂದಾಗ; ಅವನಿಗೆ ಅಬ್ರಹಾಮನು, ಅವರಿಗೆ ಮೋಶೆ
ಯೂ ಪ್ರವಾದಿಗಳೂ ಇದ್ದಾರೆ; ಅವರನ್ನೇ ಕೇಳಲಿ, ಅಂದನು.
೩೦ ಅವನು, ತಂದೆಯಾದ ಅಬ್ರಹಾಮನೇ, ಹಾಗಲ್ಲ, ಆದರೆ ಸತ್ತವ
ರೊಳಗಿಂದ ಒಬ್ಬನು ಅವರ ಬಳಿಗೆ ಹೋದರೆ, ಮಾನಸಾಂತರ
೩೧ ಪಡುವರು, ಅಂದನು. ಆದರೆ ಅವನು ಅವನಿಗೆ, ಮೋಶೆಯನ್ನೂ
ಪ್ರವಾದಿಗಳನ್ನೂ ಕೇಳದೆ ಹೋದರೆ, ಸತ್ತವರೊಳಗಿಂದ ಒಬ್ಬನು
ಎದ್ದರೂ, ಅವರು ನಂಬುವದಿಲ್ಲ, ಅಂದನು.

## ೧೩. ಸಂಧಿ.

೧ ಮತ್ತು ಅವನು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ, ಆಟಂಕಗ
ಳು ಬಾರದೆ ಇರಲಾರವು; ಆದರೆ ಯಾವನ ಮೂಲಕಾಗಿ ಅವು
೨ ಬರುತ್ತವೆಯೋ, ಅವನಿಗೆ ಅಯ್ಯೋ! ಈ ಚಿಕ್ಕವರಲ್ಲಿ ಒಬ್ಬ
ನನ್ನು ಆಟಂಕ ಪಡಿಸುವದಕ್ಕಿಂತ ಅವನ ಕೊರಳಿನ ಸುತ್ತಲು
ಬೀಸುವ ಕಲ್ಲು ಕಟ್ಟಲ್ಪಟ್ಟು, ಅವನು ಸಮುದ್ರದಲ್ಲಿ ದೊಬ್ಬಲ್ಪ
೩ ರುವದೇ ಅವನಿಗೆ ವಾಸಿ. ನಿಮಗೆ ನೀವೇ ನೋಡಿ ಕೊಳ್ಳಿರಿ! ನಿ
ನ್ನ ಸಹೋದರನು ನಿನಗೆ ವಿರೋಧವಾಗಿ ಪಾಪ ಮಾಡಿದರೆ, ಅ
ವನನ್ನು ಗದರಿಸು; ಮಾನಸಾಂತರ ಪಟ್ಟರೆ, ಅವನಿಗೆ ಮನ್ನಿಸು.
೪ ಮತ್ತು ಅವನು ದಿನಕ್ಕೆ ಏಳು ಸಾರಿ ನಿನಗೆ ವಿರೋಧವಾಗಿ ಪಾ
ಪ ಮಾಡಿ, ದಿನಕ್ಕೆ ಏಳು ಸಾರಿ, ಮಾನಸಾಂತರ ಪಡುತ್ತೇನೆಂ
ದು ಹೇಳಿ, ನಿನ್ನ ಕಡೆಗೆ ತಿರುಗಿ ಕೊಂಡರೆ, ಅವನಿಗೆ ಮನ್ನಿಸ
ಬೇಕು.
೫ ಆಗ ಅಪೊಸ್ತಲರು ಕರ್ತನಿಗೆ, ನಮಗೆ ವಿಶ್ವಾಸವನ್ನು ಹೆಚ್ಚಿ
೬ ಸು, ಅಂದರು. ಆದರೆ ಕರ್ತನು ಹೇಳ್ದಿದ್ದೇನಂದರೆ, ಸಾಸಿವೇ
ಕಾಳಷ್ಟು ವಿಶ್ವಾಸ ನಿಮಗಿದ್ದರೆ, ನೀವು ಈ ಆಲದ ಮರಕ್ಕೆ, ಬೇ
ರೊಂದಿಗೆ ಕೀಳಲ್ಪಟ್ಟು, ಸಮುದ್ರದಲ್ಲಿ ನೆಡಲ್ಪಡು, ಅನ್ನಲಾಗಿ, ನಿ
ಮಗೆ ವಿಧೇಯವಾಗುವದು.
೭ ಆದರೆ ನಿಮ್ಮಲ್ಲಿ ಯಾವನು, ಉಳುವ ಇಲ್ಲವೆ ದನ ಮೇಯಿ
ಸುವ ದಾಸನು ಇದ್ದು, ಅವನು ಹೊಲದಿಂದ ಒಳಗೆ ಬಂದಾಗಲೇ,
ಅವನಿಗೆ, ಹತ್ತರ ಬಂದು, ಊಟಕ್ಕೆ ಕೂತುಕೊ, ಅನ್ನುವನು!
೮ ನಾನು ಊಟ ಮಾಡುವ ಹಾಗೆ, ಏನಾದರೂ ಸಿದ್ಧ ಮಾಡಿ, ನನು
ಕಟ್ಟಿ ಕೊಂಡು, ನಾನು ಉಂಡು, ಕುಡಿಯುವ ಪರ್ಯಂತರ ನನಗೆ
ಸೇವೆ ಮಾಡು; ಆ ಮೇಲೆ ನೀನು ಉಂಡು ಕುಡಿಯ ಬಹುದೆಂದು
೯ ಅವನಿಗೆ ಹೇಳುವನಲ್ಲವೋ? ಅವನಿಗೆ ಆಜ್ಞಾಪಿಸಿದವುಗಳನ್ನು
ಮಾಡಿದ್ದರಿಂದ, ಅದು ಆ ದಾಸನ ದಯವೆಂದು ನೆನಸುವನೋ?
೧೦ ಇಲ್ಲವೆಂದು ನೆನಸುತ್ತೇನೆ. ಹಾಗೆಯೇ ನೀವು ಸಹ ನಿಮಗೆ ಆ
ಜ್ಞಾಪಿಸಿದವುಗಳನ್ನೆಲ್ಲಾ ಮಾಡಿದ ಮೇಲೆ, ನಿಷ್ಪ್ರಯೋಜಕರಾದ
ದಾಸರಾಗಿದ್ದೇವೆ; ಯಾಕಂದರೆ ಮಾಡ ಬೇಕಾದದ್ದನ್ನು ಮಾಡಿ
ದ್ದೇವೆಂದು, ಹೇಳಿರಿ.
೧೧ ಇದಲ್ಲದೆ ಅವನು ಯೆರೂಸಲೇಮಿಗೆ ಹೋಗುತ್ತಿರುವಾಗ, ಅ
ವನು ಸಮಾರ್ಯ ಗಲಿಲಾಯ ದೇಶಗಳ ಮಧ್ಯದಲ್ಲಿ ಹಾದು
೧೨ ಹೋದನು. ಅವನು ಒಂದು ಗ್ರಾಮದಲ್ಲಿ ಪ್ರವೇಶಿಸುವಾಗ, ಹತ್ತು
ಮಂದಿ ಕುಷ್ಠ ರೋಗಿಗಳು ಅವನೆದುರಿಗೆ ಬಂದು, ದೂರದಲ್ಲಿ ನಿಂ
೧೩ ತು, ಶಬ್ದವನೆತ್ತಿ, ಯೇಸು ಅಯ್ಯಾ! ನಮ್ಮನ್ನು ಕರುಣಿಸು,
೧೪ ಅಂದರು. ಅವನು ಅವರನ್ನು ನೋಡಿ, ಅವರಿಗೆ, ನೀವು ಹೋಗಿ,
ನಿಮ್ಮನ್ನು ಯಾಜಕರಿಗೆ ತೋರಿಸಿ ಕೊಳ್ಳಿರಿ, ಅಂದನು. ಅವರು
ಹೋಗುತ್ತಿರುವಾಗ, ಶುಚಿಯಾದರು.
೧೫ ಆದರೆ ಅವರಲ್ಲಿ ಒಬ್ಬನು, ಗುಣವಾದೆನೆಂದು ನೋಡಿ, ಮ
ಹಾ ಶಬ್ದದಿಂದ ದೇವರನ್ನು ಮಹಿಮೆ ಪಡಿಸಿ, ತಿರುಗಿ ಕೊಂಡು,
೧೬ ಅವನ ಪಾದಗಳ ಬಳಿಯಲ್ಲಿ ಅಡ್ಡ ಬಿದ್ದು, ಅವನಿಗೆ ಸ್ತೋತ್ರ ಮಾ
೧೭ ಡಿದನು; ಮತ್ತು ಅವನು ಸಮಾರ್ಯದವನಾಗಿದ್ದನು. ಆಗ
ಯೇಸು ಉತ್ತರ ಕೊಟ್ಟು, ಹತ್ತು ಮಂದಿ ಶುಚಿಯಾಗಲಿಲ್ಲವೋ?
೧೮ ಒಂಭತ್ತು ಮಂದಿ ಎಲ್ಲಿ? ಈ ಪರದೇಶಿಯೇ ಹೊರ್ತು, ದೇವರಿಗೆ
ಮಹಿಮೆ ಕೊಡುವದಕ್ಕೆ ತಿರಿಗಿ ಕೊಳ್ಳುವವರು ಶಿಕ್ಕಲಿಲ್ಲವೆಂದು
೧೯ ಹೇಳಿ, ಅವನಿಗೆ, ಎದ್ದು, ಹೋಗು; ನಿನ್ನ ವಿಶ್ವಾಸವು ನಿನ್ನನ್ನು
ರಕ್ಷಿಸಿ ಅದೆ, ಅರಿದನು.
೨೦ ಇದಲ್ಲದೆ, ದೇವರ ರಾಜ್ಯವು ಯಾವಾಗ ಬರುತ್ತದೆಂದು, ಫರಿ
ಸಾಯರು ಅವನನ್ನು ಕೇಳ್ದಾಗ, ಅವರಿಗೆ ಪ್ರತ್ಯುತ್ತರವಾಗಿ ದೇ
೨೧ ವರ ರಾಜ್ಯವು ಪ್ರತ್ಯಕ್ಷವಾಗಿ ಬರುವದಿಲ್ಲ; ಮತ್ತು, ಇಗೋ, ಇಲ್ಲಿ!
ಅಗೋ, ಇಲ್ಲಿ! ಎಂದು ಹೇಳರು; ಯಾಕಂದರೆ ದೇವರ ರಾಜ್ಯ
ವು ನಿಮ್ಮೊಳಗೆ ಅದೆ, ಅಂದನು.
೨೨ ಮತ್ತು ತನ್ನ ಶಿಷ್ಯರಿಗೆ ಹೇಳ್ದಿದ್ದೇನಂದರೆ, ನೀವು ಮನುಷ್ಯ
ನ ಮಗನ ದಿನಗಳಲ್ಲಿ ಒಂದನ್ನು ನೋಡ ಅಪೇಕ್ಷಿಸಿ, ನೋಡದೆ
೨೩ ಇರುವ ದಿವಸಗಳು ಬರುವವು. ಜನರು ನಿಮಗೆ, ಇಗೋ, ಇಲ್ಲಿ!
ಅಗೋ, ಅಲ್ಲಿ! ಅಂದರೆ, ಹೋಗ ಬೇಡಿರಿ; ಹಿಂಬಾಲಿಸ ಬೇಡಿರಿ;
೨೪ ಯಾಕಂದರೆ ಆಕಾಶದ ಒಂದು ದಿಕ್ಕಿನಿಂದ ಮಿಂಚುವ ಮಿಂಚು
ಆಕಾಶದ ಮತ್ತೊಂದು ದಿಕ್ಕಿನ ಪರ್ಯಂತರ ಹೊಳೆಯುವ
೨೫ ಹಾಗೆ, ಮನುಷ್ಯನ ಮಗನು ತನ್ನ ದಿವಸದಲ್ಲಿ ಇರುವನು. ಆದ
ರೆ ಮೊದಲು ಅವನು ಬಹಳ ಶ್ರಮೆ ಪಟ್ಟು, ಈ ಸಂತತಿಯಿಂದ
ತಿರಸ್ಕರಿಸಲ್ಪಡ ಬೇಕು.
೨೬ ಮತ್ತು ನೋಹನ ದಿವಸಗಳಲ್ಲಿ ಆದ ಹಾಗೆ, ಮನುಷ್ಯನ ಮಗ
೨೭ ನ ದಿವಸಗಳಲ್ಲಿಯೂ ಆಗುವದು. ನೋಹನು ನಾವೆಯಲ್ಲಿ ಶೇರಿದ
ದಿನದ ವರಿಗೂ ಉಣ್ಣುತ್ತಾ, ಕುಡಿಯುತ್ತಾ, ಮದುವೆ ಮಾಡುತ್ತಾ,



ಮದುವೆಯಾಗುತ್ತಾ, ಇದ್ದರು. ಆಗ ಜಲಪ್ರಳಯವು ಬಂದು,
ಎಲ್ಲರನ್ನು ಸಂಹರಿಸಿತು.
೨೮ ಅದೇ ಪ್ರಕಾರ ಲೋಟನ ದಿವಸಗಳಲ್ಲಿ ಆದ ಹಾಗೆ, ಉಣ್ಣು
ತ್ತಾ, ಕುಡಿಯುತ್ತಾ, ಕ್ರಯ ವಿಕ್ರಯ ಮಾಡುತ್ತಾ, ನೆಡುತ್ತಾ,
೨೯ ಮನೆ ಕಟ್ಟುತ್ತಾ ಇದ್ದರು. ಆದರೆ ಲೋಟನು ಸೊದೋಮಿನಿಂ
ದ ಹೊರಟ ದಿವಸದಲ್ಲಿ ಬೆಂಕಿಯೂ ಗಂಧಕವೂ ಆಕಾಶದಿಂದ
೩೦ ಗಕೆದು, ಎಲ್ಲರನ್ನು ಸಂಹರಿಸಿದವು. ಮನುಷ್ಯನ ಮಗನು ಪ್ರತ್ಯ
ಕ್ಷವಾಗುವ ದಿವಸದಲ್ಲಿ ಹಾಗೆಯೇ ಆಗುವದು.
೩೧ ಆ ದಿವಸದಲ್ಲಿ ಮಾಳಿಗೆಯ ಮೇಲೆ ಇರುವವನು ಮನೆಯಲ್ಲಿ
ಇರುವ ತನ್ನ ಸಾಮಗ್ರಿಗಳನ್ನು ತಕ್ಕೊಂಡು ಹೋಗುವದಕ್ಕೆ
ಇಳಿದು ಹೋಗದೆ ಇರಲಿ. ಅದೇ ಪ್ರಕಾರ ಹೊಲದಲ್ಲಿ ಇರುವವ
೩೨ ನು ಹಿಂದಕ್ಕೆ ತಿರುಗದೆ ಇರಲಿ. ಲೋಟನ ಹೆಂಡತಿಯನ್ನು ಜ್ಞಾ
೩೩ ಪಕ ಮಾಡಿ ಕೊಳ್ಳಿರಿ. ತನ್ನ ಪ್ರಾಣವನ್ನು ರಕ್ಷಿಸ ಬೇಕೆಂದಿರು
ವವನು ಅದನ್ನು ಕಳೆ ಕೊಳ್ಳುವನು; ಮತ್ತು ಅದನ್ನು ಕಳೆ ಕೊಳ್ಳು
೩೪ ವವನು ಅದನ್ನು ಬದುಕಿಸುವನು. ಆ ರಾತ್ರಿಯಲ್ಲಿ ಇಬ್ಬರು
ಒಂದೇ ಮಂಚದ ಮೇಲೆ ಇರುವರು. ಒಬ್ಬನು ತಕ್ಕೊಳ್ಳಲ್ಪಡು
೩೫ ವನು, ಮತ್ತೊಬ್ಬನು ಬಿಡಲ್ಪಡುವನು. ಇಬ್ಬರು ಸ್ತ್ರೀಯರು
ಕೂಡ ಬೀಸುವರು; ಒಬ್ಬಳು ತಕ್ಕೊಳ್ಳಲ್ಪಡುವಳು, ಮತ್ತೊ
೩೬ ಬ್ಬಳು ಬಿಡಲ್ಪಡುವಳು. ಇಬ್ಬರು ಹೊಲದಲ್ಲಿರುವರು; ಒಬ್ಬ
ನು ತೆಗೆದು ಕೊಂಡು ಹೋಗಲ್ಪಡುವನು, ಮತ್ತೊಬ್ಬನು ಬಿಡ
೩೭ ಲ್ಪಡುವನು, ಎಂದು ನಿಮಗೆ ಹೇಳುತ್ತೇನೆ. ಅವರು ಉತ್ತರ ಕೊ
ಟ್ಟು, ಅವನಿಗೆ, ಕರ್ತನೇ, ಎಲ್ಲಿ? ಅಂದಾಗ, ಅವನವರಿಗೆ, ಹೆಣವು
ಎಲ್ಲಿಯೋ, ಅಲಿ ಹದ್ದುಗಳು ಕೂಡಿ ಕೊಳ್ಳುವವು, ಅಂದನು.

## ೧೯. ಸಂಧಿ.

೧ ಇದಲ್ಲದೆ ಆಯಾಸ ಪಡದೆ, ಯಾವಾಗಲೂ ಪ್ರಾರ್ಥನೆ
ಮಾಡ ಬೇಕೆಂದು, ಒಂದು ಸಾಮ್ಯವನ್ನು ಅವರಿಗೆ ಹೇಳಿದನು;
೨ ಏನಂದರೆ, ದೇವರಿಗೆ ಭಯ ಪಡದೆ, ಮನುಷ್ಯನನ್ನು ಲಕ್ಷ್ಯ
ಮಾಡದೆ, ಇರುವ ಒಬ್ಬ ನ್ಯಾಯಾಧಿಪತಿಯು ಒಂದು ಪಟ್ಟಣದಲ್ಲಿ
೩ ಇದ್ದನು. ಆ ಪಟ್ಟಣದಲ್ಲಿ ಒಬ್ಬ ವೆಧವೆ ಇದ್ದಳು. ಅವಳು ಅವನ
ಬಳಿಗೆ ಬಂದು, ನನ್ನ ಎದುರಾಳಿಯಿಂದ ನನ್ನನ್ನು ಬಿಡಿಸಿ, ನನಗೆ
೪ ನ್ಯಾಯ ತೀರಿಸು, ಅಂದಳು. ಸ್ವಲ್ಪ ಕಾಲ ಅವನಿಗೆ ಮನಸ್ಸಿ
ನಲ್ಲಿ ಇರಲಿಲ್ಲ. ಆ ಮೇಲೆ, ನಾನು ದೇವರಿಗೆ ಭಯ ಪಡದೆ, ಮನುಷ್ಯನ
೫ ನ್ನು ಲಕ್ಷ್ಯ ಮಾಡದೆ ಇದ್ದಾಗ್ಯೂ, ಈ ವೆಧವೆ ನನಗೆ ತೊಂದರೆ
ಪಡಿಸುವ ಕಾರಣ, ಅವಳು ಕಡೇ ವರಿಗೂ ಬಂದು, ನನ್ನನ್ನು ಪೀ
ಡಿಸದ ಹಾಗೆ, ಅವಳಿಗೆ ನ್ಯಾಯ ತೀರಿಸಿದನು.
೬ ಕರ್ತನು ಹೇಳ್ದಿದ್ದು, ಅನ್ಯಾಯವಾದ ನ್ಯಾಯಾಧಿಪತಿ ಹೇ
೭ ಳುವದನ್ನು ಕೇಳ್ಳಿರಿ. ಹೀಗಿದ್ದರೆ, ದೇವರು, ರಾತ್ರಿ ಹಗಲು ತನಗೆ
ಮೊರೆ ಇಡುವ ತಾನು ಆದು ಕೊಂಡವರಿಗೆ, ಅವರಿಗೆ ದೀರ್ಘ
೮ ಶಾಂತನಾಗಿದ್ದು, ನ್ಯಾಯ ತೀರಿಸನೋ? ನಿಮಗೆ ಹೇಳುತ್ತೇನೆ.
ಅವರಿಗೆ ಬೇಗ ನ್ಯಾಯ ತೀರಿಸುವನು. ಆದಾಗ್ಯೂ ಮನುಷ್ಯನ
ಮಗನು ಬರುವಾಗ, ಭೂಮಿಯ ಮೇಲೆ ವಿಶ್ವಾಸವನ್ನು ಕಂಡು
೯ ಕೊಳ್ಳುವನೋ?
ಮತ್ತು ತಾವು ನೀತಿವಂತರೆಂದು ನಿಶ್ಚಯಿಸಿ ಕೊಂಡು, ಮಿಕ್ಕಾ
ದವರನ್ನು ಅಸಡ್ಡೆ ಮಾಡುವ ಕೆಲವರಿಗೆ ಈ ಸಾಮ್ಯವನ್ನು ಹೇಳಿ
೧೦ ದನು; ಏನಂದರೆ, ಇಬ್ಬರು ಮನುಷ್ಯರು ಪ್ರಾರ್ಥನೆ ಮಾಡ
ದೇವಾಲಯಕ್ಕೆ ಏರಿ ಹೋದರು; ಒಬ್ಬನು ಫರಿಸಾಯನು, ಮ
೧೧ ತ್ತೊಬ್ಬನು ಸುಂಕದವನು. ಫರಿಸಾಯನು ನಿಂತು ಕೊಂಡು, ತ
ನ್ನಲ್ಲಿ ಪ್ರಾರ್ಥಿಸಿದ್ದೇನಂದರೆ, ದೇವರೇ, ಕಳ್ಳರೂ ಅನೀತಿವಂತ
ರೂ ವ್ಯಭಿಚಾರಿಗಳೂ ಆಗಿರುವ ಮಿಕ್ಕಾದ ಮನುಷ್ಯರ ಹಾಗೆ
ಯೂ, ಈ ಸುಂಕದವನ ಹಾಗೆಯೂ, ನಾನಲ್ಲರ ಕಾರಣ, ನಿನಗೆ
೧೨ ಸ್ತೋತ್ರ ಮಾಡುತ್ತೇನೆ; ನಾನು ವಾರಕ್ಕೆ ಎರಡು ಸಾರಿ ಉಪವಾ
ಸ ಮಾಡುತ್ತೇನೆ; ನನ್ನ ಎಲ್ಲಾ ಸಂಪಾದನೆಯಲ್ಲಿ ಹತ್ತರಷ್ಟೊಂ
೧೩ ದು ಕೊಡುತ್ತೇನೆ. ಆದರೆ ಸುಂಕದವನು ದೂರದಲ್ಲಿ ನಿಂತು,
ಕಣ್ಣುಗಳನ್ನಾದರೂ ಆಕಾಶಕ್ಕೆ ಎತ್ತ ಮನಸ್ಸಿಲ್ಲದೆ, ದೇವರೇ,
ಪಾಪಿಯಾದ ನನ್ನನ್ನು ಕರುಣಿಸು ಎಂದು ಹೇಳಿ, ತನ್ನ ಎದೆ
೧೪ ಬಡು ಕೊಂಡನು. ನಿಮಗೆ ಹೇಳುತ್ತೇನೆ, ಅವನಿಗಿಂತ ಇವನು ನೀತಿ
ನೀರ್ಣಯ ಪಟ್ಟವನಾಗಿ ತನ್ನ ಮನೆಗೆ ಇಳಿದು ಹೋದನು.
ಯಾಕಂದರೆ ತನ್ನನ್ನು ಹೆಚ್ಚಿಸಿ ಕೊಳ್ಳುವವನು ತಗ್ಗಿಸಲ್ಪಡುವ
ನು; ಆದರೆ ತನ್ನನ್ನು ತಗ್ಗಿಸಿ ಕೊಳ್ಳುವವನು ಹೆಚ್ಚಿಸಲ್ಪಡುವನು.
೧೫ ಇದಲ್ಲದೆ ಅವುಗಳನ್ನು ಮುಟ್ಟುವ ಹಾಗೆ, ಕೂಸುಗಳನ್ನು ಸ
ಹ ಅವನ ಬಳಿಗೆ ತಂದು. ಶಿಷ್ಯರು ಅದನ್ನು ನೋಡಿ, ಅವರ
೧೬ ನ್ನು ಗದರಿಸಿದರು. ಆದರೆ ಯೇಸು ಅವುಗಳನ್ನು ಹತ್ತರ ಕರೆದು,
ಹೇಳ್ದಿದ್ದೇನಂದರೆ, ನನ್ನ ಬಳಿಗೆ ಬರುವದಕ್ಕೆ ಕೂಸುಗಳನ್ನು ಬಿಡಿ
ರಿ; ಅವುಗಳನ್ನು ಅಡ್ಡಿ ಮಾಡ ಬೇಡಿರಿ; ಯಾಕಂದರೆ ದೇವರ ರಾ
೧೭ ಜ್ಯವು ಇಂಥವರದಾಗಿದೆ. ನಿಶ್ಚಯವಾಗಿ ನಿಮಗೆ ಹೇಳುತ್ತೇನೆ,
ಕೂಸಾಗಿ ದೇವರ ರಾಜ್ಯವನ್ನು ಹೊಂದದವನು ಅದರಲ್ಲಿ ಪ್ರವೇ
ಶಿಸುವದು ಇಲ್ಲ.
೧೮ ಆಗ ಒಬ್ಬ ಅಧಿಪತಿ, ಒಳ್ಳೇ ಬೋಧಕನೇ, ನಿತ್ಯ ಜೀವವನ್ನು
ಬಾಧ್ಯವಾಗಿ ಹೊಂದುವದಕ್ಕೆ ನಾನೇನು ಮಾಡ ಬೇಕೆಂದು, ಅವ
೧೯ ನನ್ನು ಕೇಳ್ದಾಗ, ಯೇಸು ಅವನಿಗೆ ಹೇಳ್ದಿದ್ದೇನಂದರೆ ನನಗೆ
ಒಳ್ಳೆಯವನೆಂದು ಯಾಕೆ ಹೇಳುತ್ತೀ? ದೇವರೊಬ್ಬನೇ ಹೊ
೨೦ ರ್ತು, ಒಳ್ಳೆಯವನು ಯಾವನೂ ಇಲ್ಲ. ವ್ಯಭಿಚಾರ ಮಾಡ
ಬೇಡ; ಕೊಲ್ಲ ಬೇಡ; ಕದಿಯ ಬೇಡ; ಅಸತ್ಯಸಾಕ್ಷಿ ಹೇಳ ಬೇಡ;
ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸು, ಎಂಬ ಆಜ್ಞೆಗಳನ್ನು
೨೧ ಬಲ್ಲಿ. ಅದಕ್ಕವನು, ಇವುಗಳನ್ನೆಲ್ಲಾ ನನ್ನ ಚಿಕ್ಕತನದಿಂದ ಕೈ
೨೨ ಕೊಂಡಿದ್ದೇನೆ, ಅಂದಾಗ; ಯೇಸು ಅದನ್ನು ಕೇಳ್ದಿ, ಅವನಿಗೆ
ಹೇಳ್ದಿದ್ದು, ಇನ್ನೂ ನಿನಗೆ ಒಂದು ಕಡಿಮೆಯಾಗಿದೆ; ನಿನಗಿರುವ
ವುಗಳನ್ನೆಲ್ಲಾ ಮಾರಿ ಬಿಟ್ಟು, ಬಡವರಿಗೆ ಹಂಚಿ ಕೊಡು; ಆಗ ಪರ
ಲೋಕದಲ್ಲಿ ನಿನಗೆ ದ್ರವ್ಯವಿರುವದು. ಮತ್ತು ಬಂದು, ನನ್ನನ್ನು
೨೩ ಹಿಂಬಾಲಿಸು. ಇದನ್ನು ಕೇಳ್ದಿ, ಬಹಳ ದುಃಖವುಳ್ಳವನಾದನು;
ಯಾಕಂದರೆ ಬಹಳ ಐಶ್ವರ್ಯವಂತನಾಗಿದ್ದನು.
೨೪ ಆದರೆ ಯೇಸು, ಅವನು ದುಃಖ ಪಡುವದನ್ನು ನೋಡಿ,
ಹೇಳ್ದಿದ್ದೇನಂದರೆ, ಹಣ ಉಳುಹಿದವರು ದೇವರ ರಾಜ್ಯದಲ್ಲಿ ಸೇ
೨೫ ರುವದು ಎಷ್ಟೋ ಕಷ್ಟ! ಜಾಗಂದರೆ ಐಶ್ವರ್ಯವಂತನು ದೇ
ವರ ರಾಜ್ಯದಲ್ಲಿ ಸೇರುವದಕ್ಕಿಂತ, ಒಂಟೆಯು ಸೂಜಿಯ ಬೆಜ್ಜ
೨೬ ದಲ್ಲಿ ತೂರುವದು ಸುಲಭವಾಗಿದೆ. ಕೇಳ್ದಿದವರು, ಹಾಗಾದರೆ,
೨೭ ಯಾರು ರಕ್ಷಿಸಲ್ಪಡ ಬಹುದು? ಅಂದಾಗ, ಅವನು, ಮನುಷ್ಯ
ರಿಗೆ ಅಸಾಧ್ಯವಾದದ್ದು ದೇವರಿಗೆ ಸಾಧ್ಯವಾಗಿದೆ, ಅಂದನು.
೨೮ ಪೇತ್ರನು, ಇಗೋ, ನಾವು ಎಲ್ಲಾ ಬಿಟ್ಟು, ನಿನ್ನನ್ನು ಹಿಂಬಾಲಿ

೨೯ ನಿಜವು, ಅಂದಾಗ, ಅವನವರಿಗೆ ನಿಶ್ಚಯವಾಗಿ ನಿಮಗೆ ಹೇಳು
ತ್ತೇನೆ, ಮನೆಯನ್ನಾದರೂ, ಹೆತ್ತವರನ್ನಾದರೂ, ಸಹೋದರರ
ನ್ನಾದರೂ, ಹೆಂಡತಿಯನ್ನಾದರೂ, ಮಕ್ಕಳನ್ನಾದರೂ, ದೇವರ
೩೦ ರಾಜ್ಯದ ನಿಮಿತ್ತ ಬಿಟ್ಟವನು, ಈ ಕಾಲದಲ್ಲಿ ಅತ್ಯಧಿಕವಾದವುಗ
ಳನ್ನೂ, ಬರುವ ಲೋಕದಲ್ಲಿ ನಿತ್ಯ ಜೀವವನ್ನೂ, ಕೊಂದೆದೆ
ಇರುವದೇ ಇಲ್ಲ, ಅಂದನು.

೩೧ ಇದಲ್ಲದೆ ಅವನು ಹನ್ನಿರರು ಮಂದಿಯನ್ನು ಕರ ಕೊಂಡು, ಅವ
ರಿಗೆ ಹೇಳಿದ್ದೇನಂದರೆ, ಇಗೋ, ಯೆರೂಸಲೇಮಿಗೆ ಏರಿ ಹೋಗು
ತ್ತೇವೆ; ಮತ್ತು ಪ್ರವಾದಿಗಳಿಂದ ಮನುಷ್ಯನ ಮಗನನ್ನು ಕುರಿತು
೩೨ ಬರೆಯಲ್ಪಟ್ಟವುಗಳೆಲ್ಲಾ ಪೂರೈಸಲ್ಪಡ ಬೇಕು. ಹ್ಯಾಗಂದರೆ,
ಅವನನ್ನು ಜನಾಂಗಗಳಿಗೆ ಒಪ್ಪಿಸಿ, ಹಾಸ್ಯ ಮಾಡಿ, ನಿಂದಿಸಿ, ಅವ
೩೩ ನ ಮೇಲೆ ಉಗುಳುವರು; ಮತ್ತು ಅವನನ್ನು ಚಬುಕಿನಿಂದ ಹೊಡೆ
ದು, ಅವನನ್ನು ಕೊಂದು ಹಾಕುವರು; ಮತ್ತು ಮೂರನೇ ದಿವಸ
೩೪ ದಲ್ಲಿ ಏಳುವನು. ಆದರೆ ಅವರು ಇವುಗಳಲ್ಲಿ ಒಂದನ್ನೂ ಗ್ರಹಿಸ
ಲಿಲ್ಲ. ಆ ಮಾತು ಅವರಿಗೆ ಮರೆಯಾಗಿದ್ದದರಿಂದ, ಹೇಳಿದ್ದನ್ನು
ತಿಳಿಯದೆ ಹೋದರು.

೩೫ ಅವನು ಯೆರಿಕೋವಿಗೆ ಸಮೀಪ ಬಂದಿರಲಾಗಿ, ಒಬ್ಬ ಕುರುಡ
ನು ಭಿಕ್ಷ ಬೇಡುತ್ತಾ, ಮಾರ್ಗದ ಬಳಿಯಲ್ಲಿ ಕೂತು ಕೊಂಡಿ
೩೬ ದ್ದನು. ಇವನು ಹಾದು ಹೋಗುವ ಸಮೂಹವನ್ನು ಕೇಳಿ, ಅ
೩೭ ದೇನೆಂದು ವಿಚಾರಿಸಿದನು. ಅವರು, ನಜರೇತಿನವನಾದ ಯೇಸು
೩೮ ಹಾದು ಹೋಗುತ್ತಾನೆಂದು ಅವನಿಗೆ ತಿಳಿಸಿದಾಗ, ಅವನು, ದಾವೀ
ದನ ಮಗನಾದ ಯೇಸುವೇ, ನನ್ನನ್ನು ಕರುಣಿಸು, ಎಂದು ಕೂ
೩೯ ಗಿದನು. ಮುಂದೆ ಹೋಗುವವರು, ಸುಮ್ಮನಿರ ಬೇಕೆಂದು, ಅವ
ನನ್ನು ಗದರಿಸಿದಾಗ, ಅವನು ಬಹಳ ಹೆಚ್ಚಾಗಿ, ದಾವೀದನ ಮಗ
ನೇ, ನನ್ನನ್ನು ಕರುಣಿಸೆಂದು ಕೂಗಿದನು.

೪೦ ಆಗ ಯೇಸು ನಿಂತು, ಅವನನ್ನು ತನ್ನ ಬಳಿಗೆ ತರಲಾಜ್ಞಾ
೪೧ ಪಿಸಿ, ಅವನು ಹತ್ತರ ಬಂದಾಗ, ನಾನು ನಿನಗೆ ಏನು ಮಾಡ ಬೇ
ಕೆಂದು ಕೇಳಿದನು. ಅವನು, ಕರ್ತನೇ, ದೃಷ್ಟಿ ಕೊಡ ಬೇಕು,
೪೨ ಅಂದನು. ಯೇಸು ಅವನಿಗೆ, ದೃಷ್ಟಿ ಹೊಂದು; ನಿನ್ನ ವಿಶ್ವಾ
೪೩ ಸವು ನಿನ್ನನ್ನು ರಕ್ಷಿಸಿ ಅದೆ, ಅಂದನು. ಸಂಗಡಲೇ ಅವನು ದೃ
ಷ್ಟಿ ಹೊಂದಿ, ದೇವರನ್ನು ಮಹಿಮೆ ಪಡಿಸುತ್ತಾ, ಅವನನ್ನು ಹಿಂ
ಬಾಲಿಸಿದನು. ಜನಕೆಲ್ಲರು ಅದನ್ನು ನೋಡಿ, ದೇವರನ್ನು ಹೊಗ
ಳಿದರು.

## ೧೯. ಸಂಧಿ.

೧ ಮತ್ತು ಯೆರಿಕೋವಿನಲ್ಲಿ ಪ್ರವೇಶಿಸಿ, ಹಾದು ಹೋದನು. ಆಗ,
೨ ಇಗೋ, ಜಕ್ಕಾಯನೆಂಬ ಒಬ್ಬ ಮನುಷ್ಯನು ಇದ್ದನು; ಅ
ವನು ಸುಂಕದವರಲ್ಲಿ ಮುಖ್ಯಸ್ಥನೂ ಐಶ್ವರ್ಯವಂತನೂ ಆಗಿ
೩ ದ್ದನು. ಯೇಸುವನ್ನು, ಅವನ್ಯಾರೆಂದು, ನೋಡ ಹುಡುಕು
ತ್ತಾ, ಗಿಡ್ಡನಾಗಿದ್ದದರಿಂದ, ಸಮೂಹದ ನಿಮಿತ್ತ ನೋಡಲಾರದೆ
೪ ಇದ್ದನು. ಆಗ ಮುಂದೆ ಓಡಿ ಹೋಗಿ, ಅವನನ್ನು ನೋಡುವ
ಹಾಗೆ, ಬಂದು ಆಲದ ಮರದ ಮೇಲೆ ಏರಿದನು; ಯಾಕಂದರೆ
೫ ಆ ಮಾರ್ಗವಾಗಿ ಅವನು ಹಾದು ಬರ ಬೇಕಾಗಿತ್ತು. ಯೇಸು ಆ
ಸ್ಥಳಕ್ಕೆ ಬಂದಾಗ, ಮೇಲಕ್ಕೆ ನೋಡಿ, ಅವನನ್ನು ಕರೆದು, ಅವ
ನಿಗೆ, ಜಕ್ಕಾಯನೇ! ಬೇಗ ಇಳಿದು ಬಾ; ನಾನು ಈ ಹೊತ್ತು
೬ ನಿನ್ನ ಮನೆಯಲ್ಲಿ ಇರ ಬೇಕು, ಅಂದನು. ಆಗಲವನು ಬೇಗ
ಇಳಿದು, ಅವನನ್ನು ಸಂತೋಷದಿಂದ ಅಂಗೀಕರಿಸಿದನು.

೭ ಎಲ್ಲರು ಅದನ್ನು ನೋಡಿ, ಅವನು ಪಾಪಿಯಾದ ಮನುಷ್ಯ
ನ ಬಳಿಯಲ್ಲಿ ಇರುವದಕ್ಕೆ ಬೇರಿದ್ದಾನೆಂದು, ಗುಣುಗುಟ್ಟಿದರು.
೮ ಆದರೆ ಜಕ್ಕಾಯನು ನಿಂತು ಕೊಂಡು, ಕರ್ತನಿಗೆ, ಇಗೋ,
ಕರ್ತನೇ, ನನಗುಂಟಾದವುಗಳಲ್ಲಿ ಅರೆವಾಸಿಯನ್ನು ಬಡವರಿಗೆ
ಕೊಡುತ್ತೇನೆ; ಮತ್ತು ಒಬ್ಬನ ಮೇಲೆ ದೂರು ಹೇಳಿ, ಏನಾದರೂ
ಮೋಸ ಮಾಡಿದ್ದಾದರೆ, ನಾಲ್ಕರ್ಟು ಬದಲು ಕೊಡುತ್ತೇನೆ, ಅಂ
೯ ದನು. ಆಗ ಯೇಸು ಅವನಿಗೆ ಹೇಳಿದ್ದು, ಈ ಹೊತ್ತು ಈ ಮ
ನೆಗೆ ರಕ್ಷಣೆ ಉಂಟಾಯಿತು; ಇವನು ಸಹ ಅಬ್ರಹಾಮನ ಮಗ
೧೦ ನಲ್ಲವೋ? ಯಾಕಂದರೆ, ಮನುಷ್ಯನ ಮಗನು ಕೆಟ್ಟು ಹೋದ
ದ್ದನ್ನು ಹುಡುಕುವದಕ್ಕೂ ರಕ್ಷಿಸುವದಕ್ಕೂ ಬಂದನು.

೧೧ ಅವರು ಇವುಗಳನ್ನು ಕೇಳಿದಾಗ, ಅವನು ಯೆರೂಸಲೇಮಿಗೆ
ಸಮೀಪವಾಗಿದ್ದದರಿಂದಲೂ, ಅವರು, ದೇವರ ರಾಜ್ಯವು ಆಗಕೇ
ಪ್ರತ್ಯಕ್ಷವಾಗುತ್ತದೆಂದು ನೆನಸಿದದರಿಂದಲೂ, ಇನ್ನೂ ಮತ್ತೊಂ
೧೨ ದು ಸಾಮ್ಯವನ್ನು ಹೇಳಿದನು; ಏನಂದರೆ, ಕುಲೀನನಾದ ಒಬ್ಬ
ಮನುಷ್ಯನು ರಾಜ್ಯವನ್ನು ಸಂಪಾದಿಸಿ ಕೊಂಡು, ತಿರಿಗಿ ಬರುವ
೧೩ ದಕ್ಕೆ, ದೂರ ದೇಶಕ್ಕೆ ಹೊರಟನು. ಅವನು ತನ್ನ ಹತ್ತು ಮಂದಿ
ದಾಸರನ್ನು ಕರೆದು, ಹತ್ತು ವರಹ ಅವರಿಗೆ ಕೊಟ್ಟು, ನಾನು
೧೪ ಬರುವ ತನಕ ವ್ಯಾಪಾರ ಮಾಡಿರೆಂದು, ಅವರಿಗೆ ಹೇಳಿದನು. ಆ
ದರೆ ಅವನ ಪಟ್ಟಣದವರು ಅವನನ್ನು ಹಗೆ ಮಾಡಿ, ಇವನು ನಮ್ಮ
ನ್ನು ಆಳುವದು ನಮಗೆ ಮನಸ್ಸಿಲ್ಲವೆಂದು, ಅವನ ಹಿಂದೆ ರಾಯ
ಭಾರವನ್ನು ಕಳುಹಿಸಿದನು.

೧೫ ಅವನು ರಾಜ್ಯವನ್ನು ಸಂಪಾದಿಸಿ ಕೊಂಡು, ತಿರಿಗಿ ಬಂದಾಗ,
ವ್ಯಾಪಾರದಿಂದ ಯಾರ್ಯಾರು ಎಷ್ಟೆಷ್ಟು ಲಾಭ ಪಡ ಕೊಂಡಕೆಂ
ದು ತಿಳಿಯುವದಕ್ಕೆ, ತಾನು ಹಣ ಕೊಟ್ಟ ಆ ದಾಸರನ್ನು ತನ್ನ
೧೬ ಬಳಿಗೆ ಕರಿಸಿದನು. ಈ ಪ್ರಕಾರ ಮೊದಲನೆಯವನು ಬಂದು, ಥೊ
ಕೆಯೇ, ನಿನ್ನ ವರಹಾ ಬೇಕೆ ಹತ್ತು ವರಹ ಹೊಂದಿತು, ಅಂದಾ
೧೭ ಗ; ಅವನವನಿಗೆ ಚನ್ನಾಯಿತು, ಒಳ್ಳೆ ದಾಸನೇ; ನೀನು ಬಹಳ
ಸ್ವಲ್ಪವಾದದರಲ್ಲಿ ನಂಬಿಕೆಯುಳ್ಳವನಾದದರಿಂದ, ಹತ್ತು ಪಟ್ಟಣ
೧೮ ಗಳ ಮೇಲೆ ಅಧಿಕಾರ ಉಂಟಾದವನಾಗಿರು, ಅಂದನು. ಎರನೆ
ಯವನು ಬಂದು, ಥೊಕೆಯೇ, ನಿನ್ನ ವರಹ ಐದು ವರಹ ಉಂ
೧೯ ಟು ಮಾಡಿತು, ಅಂದಾಗ; ಅವನಿಗೂ, ನೀನು ಸಹ ಐದು ಪಟ್ಟಣ
೨೦ ಗಳಿಗೆ ಅಧಿಕಾರಿಯಾಗು, ಅಂದನು. ಮತ್ತೊಬ್ಬನು ಬಂದು, ಥೊ
೨೧ ಕೆಯೇ, ಇಗೋ, ನಿನ್ನ ವರಹ! ನೀನು ಇಡದೆ ಇರುವದನ್ನು
ಎತ್ತಿ, ಬಿತ್ತದೆ ಇರುವದನ್ನು ಕೊಯ್ಯುವ ಕಠಿಣವಾದ ಮನುಷ್ಯ
ನಾಗಿರುವದರಿಂದ, ನಿನಗೆ ಭಯ ಪಟ್ಟು, ಅದನ್ನು ಕೈ ವಸ್ತ್ರದ
೨೨ ಲ್ಲಿ ಮಡಗಿ, ಇಟ್ಟು ಕೊಂಡೆನು, ಅಂದಾಗ; ಅವನವನಿಗೆ ಹೇಳಿದ್ದು,
ಕೆಟ್ಟ ದಾಸನೇ, ನಿನ್ನ ಬಾಯಿಯಿಂದ ನಿನಗೆ ನ್ಯಾಯ ತೀರಿಸು
ವೆನು; ನಾನು ಇಡದೆ ಇರುವದನ್ನು ಎತ್ತಿ, ಬಿತ್ತದೆ ಇರುವದನ್ನು
ಕೊಯ್ಯುವ, ಕಠಿಣವಾದ ಮನುಷ್ಯನೆಂದು ನಿನಗೆ ತಿಳಿಯಿ
೨೩ ತೋ? ಹಾಗಾದರೆ ಯಾಕೆ ನನ್ನ ಹಣವನ್ನು ಚಿನಿವಾರರಿಗೆ
ಕೊಡಲಿಲ್ಲ? ಕೊಟ್ಟಿದ್ದರೆ, ನಾನು ಬಂದು, ಅದನ್ನು ಬಡ್ಡಿಯ
೨೪ ಸಂಗಡ ತಕ್ಕೊಳ್ಳ ಬಹುದಾಗಿತ್ತು. ಆಗ ಹತ್ತರ ನಿಂತವರಿಗೆ ಅವ
ನು, ಆ ವರಹ ಅವನಿಂದ ತೆಗೆದು, ಹತ್ತು ವರಹ ಉಂಟಾದವ
೨೫ ನಿಗೆ ಕೊಡಿರಿ, ಅಂದನು. ಅವರು ಅವನಿಗೆ, ಥೊಕೆಯೇ, ಅವನಿಗೆ



೨೬ ಹತ್ತು ವರಹ ಉಂಟು, ಅಂದರು. ಯಾಕಂದರೆ ಉಂಟಾಗಿರುವ
ಪ್ರತಿ ಮನುಷ್ಯನಿಗೆ ಕೊಡಲ್ಪಡುವದು; ಆದರೆ ಇಲ್ಲದವನಿಂದ
ಅವನಿಗಿದ್ದದ್ದು ಸಹ ತೆಗೆಯಲ್ಪಡುವದೆಂದು, ನಿಮಗೆ ಹೇಳುತ್ತೇ
೨೭ ನೆ. ಆದರೆ ನಾನು ತಮ್ಮನ್ನು ಆಳ ಮನಸ್ಸಿಲ್ಲದೆ ಇದ್ದ ಆ ನನ್ನ
ಶತ್ರುಗಳನ್ನು ಇಲ್ಲಿಗೆ ತಂದು, ನನ್ನ ಮುಂದೆ ಕಡಿದು ಹಾಕಿರಿ,
೨೮ ಅಂದನು. ಅವನು ಇವುಗಳನ್ನು ಹೇಳಿ, ಯೆರೂಸಲೇಮಿಗೆ ಏರು
ವ ಮಾರ್ಗದಲ್ಲಿ ಮುಂದೆ ಹೋದನು.

೨೯ ಮತ್ತು ಆದದ್ದೇನಂದರೆ, ಅವನು ಇಪ್ಪೇ ಗುಡ್ಡವೆಂಬ ಗುಡ್ಡದ
ಹತ್ತರ ಇರುವ ಬೇತ್ಫಗೆಗೂ, ಬೇತಾನ್ಯಕ್ಕೂ, ಸಮೀಪಿಸಿದಾಗ,
೩೦ ತನ್ನ ಶಿಷ್ಯರಲ್ಲಿ ಇಬ್ಬರನ್ನು ಕಳುಹಿಸಿ, ಹೇಳಿದ್ದೇನಂದರೆ, ಎದು
ರಾಗಿರುವ ಗ್ರಾಮಕ್ಕೆ ಹೋಗಿರಿ; ಅದರೊಳಗೆ ಪ್ರವೇಶಿಸುವಾಗ,
ಮನುಷ್ಯರಲ್ಲಿ ಯಾವನಾದರೂ ಕೂತು ಕೊಳ್ಳದಂಥ ಕಟ್ಟಿರು
ವಂಥ ಕತ್ತೇ ಮರಿಯು ನಿಮಗೆ ಸಿಕ್ಕುವದು; ಅದನ್ನು ಬಿಚ್ಚಿ, ತೆಗೆ
೩೧ ದು ಕೊಂಡು ಬನ್ನಿರಿ. ಮತ್ತು, ಯಾಕೆ ಬಿಚ್ಚುತ್ತೀರೆಂದು ಯಾ
ರಾದರೂ ನಿಮ್ಮನ್ನು ಕೇಳಿದರೆ, ಆವನಿಗೆ, ಅದು ಕರ್ತನಿಗೆ ಬೇ
೩೨ ಕು ಅನ್ನಿರಿ. ಕಳುಹಿಸಲ್ಪಟ್ಟವರು ಹೋಗಿ, ಅವನು ತಮಗೆ ಹೇ
೩೩ ಳಿದ ಹಾಗೆ ಕಂಡರು. ಅವರು ಮರಿ ಬಿಚ್ಚುವಾಗ, ಅದರ ಯಜ
ಮಾನರು ಅವರಿಗೆ, ನೀವು ಯಾಕೆ ಮರಿ ಬಿಚ್ಚುತ್ತೀರಿ? ಅಂದರು.
೩೪ ಆದರೆ ಅವರು, ಅದು ಕರ್ತನಿಗೆ ಬೇಕೆಂದು ಹೇಳಿ, ಅದನ್ನು
೩೫ ಯೇಸುವಿನ ಬಳಿಗೆ ತಂದು, ತಮ್ಮ ವಸ್ತ್ರಗಳನ್ನು ಮರಿಯ ಮೇ
೩೬ ಲೆ ಹಾಕಿ, ಯೇಸುವನ್ನು ಮೇಲೆ ಕೂಡ್ರಿಸಿದರು. ಅವನು ಹೋ
ಗುತ್ತಿರುವಾಗ, ತಮ್ಮ ವಸ್ತ್ರಗಳನ್ನು ಮಾರ್ಗದಲ್ಲಿ ಹಾಸಿದರು.

೩೭ ಇದಲ್ಲದೆ ಅವನು ಇಪ್ಪೇ ಗುಡ್ಡದಿಂದ ಇಳಿಯುವ ಸ್ಥಳಕ್ಕೆ
ಸಮೀಪ ಬಂದಾಗ, ಶಿಷ್ಯರ ಸಮೂಹವೆಲ್ಲಾ, ತಾವು ನೋಡಿದ
ಎಲ್ಲಾ ಬಲವಾದ ಕ್ರಿಯೆಗಳಲ್ಲಿ ಸಂತೋಷ ಪಟ್ಟು, ಮಹಾ ಶಬ್ದ
೩೮ ದಿಂದ ದೇವರನ್ನು ಹೊಗಳಿ, ಕರ್ತನ ಹೆಸರಿನಲ್ಲಿ ಬರುವ ಅರಸ
ನಿಗೆ ಸ್ತೋತ್ರವಾಗಲಿ! ಪರಲೋಕದಲ್ಲಿ ಸಮಾಧಾನವು! ಅತ್ಯು
ನ್ನತಸ್ಥಾನವುಗಳಲ್ಲಿ ಮಹಿಮೆಯು! ಎಂದು ಹೇಳಲಾರಂಭಿಸಿದರು.
೩೯ ಆಗ ಸಮೂಹದಲ್ಲಿರುವ ಫರಿಸಾಯರಲ್ಲಿ ಕೆಲವರು ಅವನಿಗೆ,
೪೦ ಬೋಧಕನೇ, ನಿನ್ನ ಶಿಷ್ಯರನ್ನು ಗದರಿಸು, ಅಂದಾಗ; ಅವನು
ಪ್ರತ್ಯುತ್ತರವಾಗಿ ಅವರಿಗೆ, ನಿಮಗೆ ಹೇಳುತ್ತೇನೆ, ಇವರು ಸುಮ್ಮ
ನಿದ್ದರೆ, ಕಲ್ಲುಗಳು ಕೂಗುವವು, ಅಂದನು.

೪೧ ತರುವಾಯ ಅವನು ಸಮೀಪಿಸಿದಾಗ, ಪಟ್ಟಣವನ್ನು ನೋಡಿ,
೪೨ ಅದಕ್ಕೋಸ್ಕರ ಅತ್ತು, ಹೇಳಿದ್ದೇನಂದರೆ, ಅಯ್ಯೋ! ನೀನು
ಈ ನಿನ್ನ ದಿವಸದಲ್ಲಾದರೂ ನಿನ್ನ ಸಮಾಧಾನಕ್ಕೆ, ಬೇಕಾದವು
ಗಳನ್ನು ತಿಳಿದಿದ್ದರೆ, ಒಳ್ಳೇದಾಗಿತ್ತು; ಆದರೆ ಈಗ ನಿನ್ನ ಕಣ್ಣು
೪೩ ಗಳಿಗೆ ಮರೆಯಾಗಿವೆ. ನಿನ್ನ ಶತ್ರುಗಳು ಮೇರುವೆಯನ್ನು ನಿನ್ನ
ಸುತ್ತ ಹಾಕಿ, ನಿನ್ನನ್ನು ಸುತ್ತಿ ಕೊಂಡು, ಎಲ್ಲಾ ಕಡೆಯಲ್ಲಿ ನಿನ್ನ
೪೪ ನ್ನು ಇರಿಕೆಸಿ, ನಿನ್ನನ್ನೂ ನಿನ್ನಲ್ಲಿರುವ ನಿನ್ನ ಮಕ್ಕಳನ್ನೂ ನೆಲ
ಸಮ ಮಾಡಿ, ನಿನ್ನಲ್ಲಿ ಕಲ್ಲಿನ ಮೇಲೆ ಕಲ್ಲು ಬಿಡದ ದಿನಗಳು
ನಿನ್ನ ಮೇಲೆ ಬರುವವು; ಯಾಕಂದರೆ ನಿನ್ನ ದರುಶನದ ಸಮ
ಯವನ್ನು ನೀನು ತಿಳುಕೊಳ್ಳಲಿಲ್ಲ.

೪೫ ಮತ್ತು ಅವನು ದೇವಾಲಯದೊಳಗೆ ಬಂದು, ಅದರಲ್ಲಿ ಕ್ರಯ
೪೬ ವಿಕ್ರಯ ಮಾಡುವವರನ್ನು ಹೊರಡಿಸಲಾರಂಭಿಸಿ, ಅವರಿಗೆ, ನನ್ನ
ಮನೆ ಪ್ರಾರ್ಥನೆಯ ಮನೆ, ಎಂದು ಬರೆದದೆ; ಆದರೆ ನೀವು
ಅದನ್ನು ಕಳ್ಳರ ಗವಿಯಾಗ ಮಾಡಿದ್ದೀರಿ, ಅಂದನು.

೪೭ ಇದಲ್ಲದೆ ಅವನು ದಿನಾಲು ದೇವಾಲಯದಲ್ಲಿ ಬೋಧಿಸುತ್ತಿ
ದ್ದನು. ಆದರೆ ಪ್ರಧಾನ ಯಾಜಕರೂ ಶಾಸ್ತ್ರಿಗಳೂ ಜನರ ಪ್ರೇ
೪೮ ಮ್ಯರೂ, ಅವನನ್ನು ಸಂಹರಿಸುವದಕ್ಕೆ ಹುಡುಕಿದಾಗ್ಯೂ, ಏನು
ಮಾಡ ಬೇಕೆಂದು, ಕಾಣದೆ ಹೋದರು; ಯಾಕಂದರೆ ಜನಕೆಲ್ಲಾ
ಅವನನ್ನು ಹತ್ತಿ ಕೊಂಡು, ಕೇಳುತ್ತಾ ಇದ್ದರು.

## ೨೦. ಸಂಧಿ.

೧ ಮತ್ತು ಆ ದಿವಸಗಳ ಒಂದರಲ್ಲಿ ಆದದ್ದೇನಂದರೆ, ಅವನು
ದೇವಾಲಯದೊಳಗೆ ಜನರಿಗೆ ಬೋಧಿಸುತ್ತಾ, ಸುವಾರ್ತೆ ಪ್ರಸಂ
ಗಿಸುತ್ತಾ ಇರಲಾಗಿ, ಪ್ರಧಾನ ಯಾಜಕರೂ ಶಾಸ್ತ್ರಿಗಳೂ ಹಿರಿ
೨ ಯರ ಸಂಗಡ ಹತ್ತರ ಬಂದು, ಅವನಿಗೆ ಹೇಳಿದ್ದೇನಂದರೆ, ಇವು
ಗಳನ್ನು ಯಾವ ಅಧಿಕಾರದಿಂದ ಮಾಡುತ್ತೀ? ಈ ಅಧಿಕಾರವ
೩ ನ್ನು ನಿನಗೆ ಕೊಟ್ಟವನ್ಯಾರು? ನಮಗೆ ಹೇಳು. ಅವನು ಉತ್ತರ
ಕೊಟ್ಟು, ಅವರಿಗೆ, ನಾನು ಸಹ ನಿಮ್ಮನ್ನು ಒಂದು ಮಾತು ಕೇ
೪ ಳುತ್ತೇನೆ; ನನಗೆ ಹೇಳಿರಿ; ಯೋಹಾನನ ಸ್ನಾನವು ಪರಲೋಕ
೫ ದಿಂದಿತ್ತೋ? ಮನುಷ್ಯರಿಂದಿತ್ತೋ? ಅಂದನು. ಆಗಲವರು ತ
ಮ್ಮೊಳಗೆ, ನಾವು, ಪರಲೋಕದಿಂದ ಅಂದರೆ, ಹಾಗಾದರೆ ಯಾ
೬ ಕೆ ಅವನಲ್ಲಿ ವಿಶ್ವಾಸವಿಡಲಿಲ್ಲ? ಅನ್ನುವನು; ಮನುಷ್ಯರಿಂದ ಅಂ
ದರೆ, ಜನಕೆಲ್ಲಾ ನಮ್ಮನ್ನು ಕಲ್ಲೆಸೆಯುವರು; ಯಾಕಂದರೆ,
ಯೋಹಾನನು ಪ್ರವಾದಿ ಎಂದು ನಂಬುತ್ತಾರೆ, ಅಂದು ಕೊಂಡು,
೭ ಎಲ್ಲಿಂದಲೋ! ಅರಿಯೆವು, ಎಂದು ಉತ್ತರ ಕೊಟ್ಟರು. ಆಗ
೮ ಯೇಸು ಅವರಿಗೆ, ನಾನು ಯಾವ ಅಧಿಕಾರದಿಂದ ಇವುಗಳನ್ನು
ಮಾಡುತ್ತೇನೆಂದು ನಿಮಗೆ ಹೇಳುವದಿಲ್ಲ, ಅಂದನು.

೯ ಇದಲ್ಲದೆ ಅವನು ಜನರಿಗೆ ಈ ಸಾಮ್ಯವನ್ನು ಹೇಳಲಾರಂಭಿ
ಸಿದನು; ಏನಂದರೆ, ಒಬ್ಬ ಮನುಷ್ಯನು ದ್ರಾಕ್ಷೇ ತೋಟವನ್ನು
ನೆಟ್ಟು, ಅದನ್ನು ಒಕ್ಕಲಿಗರಿಗೆ ಒಪ್ಪಿಸಿ ಕೊಟ್ಟು, ಬಹುಕಾಲ ಬೇರೆ
೧೦ ದೇಶದಲ್ಲಿ ಇದ್ದನು. ಮತ್ತು ತಕ್ಕ ಕಾಲದಲ್ಲಿ ಒಕ್ಕಲಿಗರ ಬಳಿಗೆ,
ದ್ರಾಕ್ಷೇ ತೋಟದ ಫಲದಲ್ಲಿ ತನಗೆ ಕೊಡ ಬೇಕೆಂದು ಹೇಳಿ, ದಾ
ಸನನ್ನು ಕಳುಹಿಸಿದನು; ಆದರೆ ಒಕ್ಕಲಿಗರು ಅವನನ್ನು ಹೊಡೆ
೧೧ ದು, ಅವನನ್ನು ಬರೀದಾಗಿ ಕಳುಹಿಸಿ ಬಿಟ್ಟರು. ಮತ್ತು ಅವನು
ಬೇರೆ ದಾಸನನ್ನು ಕಳುಹಿಸಿದಾಗ, ಅವರು ಇವನನ್ನೂ ಹೊಡೆ
೧೨ ದು, ಅವಮಾನ ಮಾಡಿ, ಬರೀದಾಗಿ ಕಳುಹಿಸಿ ಬಿಟ್ಟರು. ಮತ್ತು
ಅವನು ಮೂರನೆಯವನನ್ನು ಕಳುಹಿಸಿದಾಗ, ಅವರು ಇವನನ್ನು
ಸಹ ಘಾಯ ಮಾಡಿ, ಹೊರಗೆ ಹಾಕಿದರು.

೧೩ ಆಗ ದ್ರಾಕ್ಷೇ ತೋಟದ ಯಜಮಾನನು, ನಾನೇನು ಮಾಡ
ಲಿ? ನನ್ನ ಪ್ರಿಯ ಮಗನನ್ನು ಕಳುಹಿಸುವೆನು; ಒಂದು ವೇಳೆ
ಅವನನ್ನು ನೋಡಿ, ಲಕ್ಷ್ಯ ಮಾಡುವರು, ಅಂದನು. ಆದರೆ ಒಕ್ಕ
೧೪ ಲಿಗರು ಅವನನ್ನು ನೋಡಿ, ಇವನು ಬಾಧ್ಯಸ್ಥನು; ಬನ್ನಿರಿ, ಬಾ
ಧ್ಯತೆ ನಮ್ಮದಾಗುವ ಹಾಗೆ, ಅವನನ್ನು ಕೊಂದು ಹಾಕುವ, ಎಂ
ದು, ತಮ್ಮಲ್ಲಿ ಆಲೋಚಿಸಿ ಕೊಂಡು, ಅವನನ್ನು ದ್ರಾಕ್ಷೇ ತೋ
೧೫ ಟದ ಹೊರಗೆ ಹಾಕಿ, ಕೊಂದು ಹಾಕಿದರು. ಹಾಗಾದರೆ, ದ್ರಾಕ್ಷೇ
ತೋಟದ ಯಜಮಾನನು ಅವರಿಗೆ ಏನು ಮಾಡುವನು? ಅವನು
೧೬ ಬಂದು, ಆ ಒಕ್ಕಲಿಗರನ್ನು ನಾಶನ ಮಾಡಿ, ದ್ರಾಕ್ಷೇ ತೋಟವನ್ನು
ಬೇರೊಬ್ಬರಿಗೆ ಕೊಡುವನು. ಅವರು ಕೇಳಿ, ಆಗದು, ಅಂದರು.

೧೭ ಆದರೆ ಅವನು ಅವರನ್ನು ನೋಡಿ, ಹೇಳಿದ್ದೇನಂದರೆ, ಹಾ

ಗಾಸರೆ, ಮನೇ ಕಟ್ಟುವವರು ತಳ್ಳಿದ ಕಲ್ಲೇ ಮೂಲೆಗೆ ತಲೇ ಕ
೧೯ ಲ್ಲಾಯಿತು, ಎಂಬ ಬರಹವು ಏನು? ಆ ಕಲ್ಲಿನ ಮೇಲೆ ಬೀಳುವ
ಪ್ರತಿ ಮನುಷ್ಯನು ತುಂಡಾಗುವನು; ಆದರೆ ಅದು ಯಾವನ
ಮೇಲೆ ಬೀಳುವದೋ, ಅವನನ್ನು ಪುಡಿ ಪುಡಿ ಮಾಡುವದು, ಅಂ
೧೯ ದನು. ಆ ಸಮಯದಲ್ಲಿ ಪ್ರಧಾನ ಯಾಜಕರೂ, ಶಾಸ್ತ್ರಿಗಳೂ,
ಅವನು ತಮ್ಮನ್ನು ಕುರಿತು ಈ ಸಾಮ್ಯವನ್ನು ಹೇಳಿದನೆಂದು
ತಿಳಿದು, ಅವನ ಮೇಲೆ ಕೈ ಹಾಕುವದಕ್ಕೆ ಹುಡುಕಿ, ಜನರಿಗೆ ಭ
ಯ ಪಟ್ಟರು.

೨೦ ಮತ್ತು ಅವನನ್ನು ಅಧಿಕಾರಕ್ಕೂ, ಅಧಿಪತಿಯ ವಶಕ್ಕೂ
ಒಪ್ಪಿಸುವ ಹಾಗೆ, ಮಾತಿನಲ್ಲಿ ಅವನನ್ನು ಹಿಡಿದು ಕೊಳ್ಳುವದಕ್ಕೆ
ಹೊಂಚಿ ಕೊಂಡು, ತಾವು ನೀತಿವಂತರೆಂದು ಕಪಟದಿಂದ ಅನ್ನಿ
೨೦ ಸಿ ಕೊಳ್ಳುವ ಚಾರರನ್ನು ಕಳುಹಿಸಿದರು. ಇವರು, ಬೋಧಕನೇ,
ನೀನು ಸರಿಯಾಗಿ ಮಾತಾಡಿ, ಬೋಧಿಸುತ್ತೀ; ಮುಖದಾಕ್ಷಿಣ್ಯ
ಮಾಡದೆ, ನಿಜವಾಗಿ ದೇವರ ಮಾರ್ಗವನ್ನು ಬೋಧಿಸುತ್ತೀ ಎಂ
೨೨ ದು ಬಲ್ಲೆವು; ಕೈಸರನಿಗೆ ತೆರಿಗೆ ಕೊಡ ಬೇಕೋ, ಬೇಡವೋ? ಎಂ
೨೩ ದು ಅವನನ್ನು ಕೇಳಿದರು. ಆದರೆ ಅವನು ಅವರ ತಂತ್ರವನ್ನು
ತಿಳಿದು, ಅವರಿಗೆ ಹೇಳಿದ್ದು, ನನ್ನನ್ನು ಯಾಕೆ ಶೋಧಿಸುತ್ತೀರಿ?
೨೪ ನನಗೆ ಹಣವನ್ನು ತೋರಿಸಿರಿ. ಅದಕ್ಕೆ ಯಾವನ ರೂಪವೂ
ಮೇಲ್ಬರಹವೂ ಉಂಟು? ಅವರು ಉತ್ತರ ಕೊಟ್ಟು, ಕೈಸರನ
೨೫ ದು, ಅಂದಾಗ; ಅವನವರಿಗೆ, ಹಾಗಾದರೆ ಕೈಸರನದನ್ನು ಕೈಸ
೨೬ ರನಿಗೂ, ದೇವರದನ್ನು ದೇವರಿಗೂ ಕೊಡಿರಿ, ಅಂದನು. ಆಗಲ
ವರು ಜನರೆದುರಾಗಿ ಅವನ ಮಾತನ್ನು ಹಿಡಿಯಲಾರದೆ, ಅವನ
ಉತ್ತರಕ್ಕೆ ಆಶ್ಚರ್ಯ ಪಟ್ಟು, ಸುಮ್ಮನಿದ್ದರು.

೨೭ ಮತ್ತು ಪುನರುತ್ಥಾನವಿಲ್ಲವೆಂದು ಹೇಳುವ ಸದ್ದುಕಾಯರಲ್ಲಿ
೨೮ ಕೆಲವರು ಹತ್ತಿರ ಬಂದು, ಅವನನ್ನು ಕೇಳಿದ್ದೇನಂದರೆ, ಬೋಧ
ಕನೇ, ಒಬ್ಬನ ಸಹೋದರನು, ಹೆಂಡತಿ ಇದ್ದು, ಸತ್ತರೆ, ಅವನು
ಮಕ್ಕಳಿಲ್ಲದೆ ಸಾಯುವ ಪಕ್ಷದಲ್ಲಿ, ಅವನ ಸಹೋದರನು ಅವನ
ಹೆಂಡತಿಯನ್ನು ತೆಗೆದು ಕೊಂಡು, ತನ್ನ ಸಹೋದರನಿಗೆ ಮಕ್ಕ
೨೯ ಳನ್ನು ಹುಟ್ಟಿಸ ಬೇಕೆಂದು, ಮೋಶೆ ನಮಗೆ ಬರೆದಿದ್ದಾನೆ. ಹೀಗಿ
ರಲಾಗಿ, ಏಳು ಮಂದಿ ಸಹೋದರರಿದ್ದರು; ಮೊದಲನೆಯವನು
೩೦ ಹೆಂಡತಿಯನ್ನು ತೆಗೆದು ಕೊಂಡು, ಮಕ್ಕಳಿಲ್ಲದೆ ಸತ್ತನು; ಎರಡ
ನೆಯವನು ಆ ಹೆಂಗಸನ್ನು ತೆಗೆದು ಕೊಂಡು, ಇವನೂ ಮಕ್ಕಳಿ
೩೧ ಲ್ಲದೆ ಸತ್ತನು. ಮತ್ತು ಮೂರನೆಯವನು ಅವಳನ್ನು ತಕ್ಕೊಂ
ಡನು; ಮತ್ತು ಅದೇ ಪ್ರಕಾರ ಆ ಏಳು ಮಂದಿಯೂ; ಅವರು ಮ
೩೨ ಕ್ಕಳನ್ನು ಉಳಿಸದೆ, ಸತ್ತರು. ಎಲ್ಲರ ಕಡೆಯಲ್ಲಿ ಆ ಹೆಂಗಸು
೩೩ ಸಹ ಸತ್ತಳು. ಹಾಗಾದರೆ ಪುನರುತ್ಥಾನದಲ್ಲಿ ಅವಳೊಳಗೆ ಯಾ
ರ ಹೆಂಡತಿಯಾಗಿರುವಳು? ಯಾಕಂದರೆ ಅವಳು ಆ ಏಳು ಮಂ
ದಿಗೂ ಹೆಂಡತಿಯಾಗಿದ್ದಳು.

೩೪ ಆಗ ಯೇಸು ಅವರಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ,
ಈ ಲೋಕದ ಮಕ್ಕಳು ಮದುವೆ ಮಾಡಿ ಕೊಳ್ಳುತ್ತಾತ್ತೆ, ಮತ್ತು
೩೫ ಮದುವೆ ಮಾಡಿ ಕೊಡುತ್ತಾತ್ತೆ; ಆದರೆ ಆ ಲೋಕಕ್ಕೂ, ಸತ್ತವರ
ಪುನರುತ್ಥಾನಕ್ಕೂ ಸೇರುವದಕ್ಕೆ ಯೋಗ್ಯರಾದವರು ಮದುವೆ
೩೬ ಮಾಡಿ ಕೊಳ್ಳುವದಿಲ್ಲ, ಮದುವೆ ಮಾಡಿ ಕೊಡುವದಿಲ್ಲ. ಯಾಕಂ
ದರೆ ದೂತರಿಗೆ ಸಮಾನರಾಗಿದ್ದು, ಇನ್ನು ಮೇಲೆ ಸಾಯಲಾರ
ರು; ಪುನರುತ್ಥಾನದ ಮಕ್ಕಳಾಗಿದ್ದು, ದೇವರ ಮಕ್ಕಳಾಗಿದ್ದಾರೆ.

೩೭ ಆದರೆ ಸತ್ತವರು ಏಳುತ್ತಾರೆಂದು, ಮೋಶೆಯು ಸಹ ಪೊದೆ
ಯ ಸಂಧಿಯಲ್ಲಿ, ಕರ್ತನು ಅಬ್ರಹಾಮನ ದೇವರೂ, ಇಸಾಕ
ನ ದೇವರೂ, ಯಾಕೋಬನ ದೇವರೂ, ಎಂದು ಹೇಳಿ, ತೋ
೩೮ ರಿಸಿದ್ದಾನೆ. ಆದರೆ ಅವನು ಸತ್ತವರಲ್ಲ, ಬದುಕುವವರಿಗೆ ದೇವ
ರಾಗಿದ್ದಾನೆ; ಯಾಕಂದರೆ ಎಲ್ಲರು ಅವನಿಗೆ ಬದುಕುತ್ತಾರೆ.

೩೯ ಆಗ ಶಾಸ್ತ್ರಿಗಳಲ್ಲಿ ಕೆಲವರು ಉತ್ತರ ಕೊಟ್ಟು, ಬೋಧಕನೇ,
೪೦ ಚನ್ನಾಗಿ ಹೇಳ್ದಿ, ಅಂದರು. ಮತ್ತು ಇನ್ನು ಏನಾದರೂ ಅವ
ನನ್ನು ಕೇಳ್ಳ ಧೈರ್ಯ ಪಡಲಿಲ್ಲ.

೪೧ ಆಗಲವನು ಅವರಿಗೆ ಹೇಳಿದ್ದೇನಂದರೆ, ಕ್ರಿಸ್ತನು ದಾವೀದನ
೪೨ ಮಗನೆಂದು, ಜನರು ಹೇಳುವದೇನು? ದಾವೀದನು ತಾನೇ ಕೀರ್ತ
೪೩ ನೇ ಪುಸ್ತಕದಲ್ಲಿ, ಕರ್ತನು ನನ್ನ ಕರ್ತನಿಗೆ, ನಾನು ನಿನ್ನ ಶತ್ರು
ಗಳನ್ನು ನಿನ್ನ ಪಾದ ಪೀಠವಾಗಿ ಇಡುವ ಮಟ್ಟಿಗೂ, ನನ್ನ ಬಲ
೪೪ ಪಾರ್ಶ್ವದಲ್ಲಿ ಕೂತ್ರು ಎಂದು, ಹೇಳಿರಿಲ್ಲವೋ? ಹಾಗಾದರೆ
ದಾವೀದನು ಅವನನ್ನು ಕರ್ತನೆಂದು ಕರೆದರೆ, ಅವನ ಮಗನಾಗಿ
ರುವದು ಹ್ಯಾಗೆ?

೪೫ ಮತ್ತು ಜನರೆಲ್ಲಾ ಕೇಳಲು, ಅವನು ತನ್ನ ಶಿಷ್ಯರಿಗೆ ಹೇಳಿ
ದ್ದೇನಂದರೆ, ದೊಡ್ಡ ಅಂಗಿಗಳನ್ನು ಕೊಟ್ಟು ಕೊಂಡು, ತಿರುಗಾಡ
ಇಷ್ಟೈಸಿ, ಅಂಗಡಿ ಬೀದಿಗಳಲ್ಲಿ ವಂದನೆಗಳನ್ನೂ ಸಭೆಮನೆಗಳಲ್ಲಿ
ಮೊದಲನೇ ಪೀಠಗಳನ್ನೂ ಪೆತಣಗಳಲ್ಲಿ ಮೊದಲನೇ ಪಂಚ್ತಿಗಳ
೪೬ ನ್ನೂ ಆಶಿಸಿ, ವಿಧವೆಯರ ಮನೆಗಳನ್ನು ತಿಂದು ಬಿಟ್ಟು, ನೆವಕ್ಕೆ
ಉದ್ದವಾದ ಪ್ರಾರ್ಥನೆಗಳನ್ನು ಮಾಡುವ ಶಾಸ್ತ್ರಿಗಳಿಗೆ ಜಾಗ್ರ
ತೆಯಾಗಿರ್ರಿ. ಇವರೇ ಅಧಿಕವಾದ ಅಜ್ಞೆ ಹೊಂದುವರು.

## ೨೧. ಸಂಧಿ.

೧ ಇದಲ್ಲದೆ ಅವನು ಕಣ್ಣೆತ್ತಿ, ಐಶ್ವರ್ಯವಂತರು ತಮ್ಮ ದಾ
೨ ನಗಳನ್ನು ಬೊಕ್ಕಸದಲ್ಲಿ ಇಡುವದನ್ನು ಕಂಡನು. ಮತ್ತು ಬಡವ
ಳಾದ ಒಬ್ಬ ವಿಧವೆ ಎರಡು ಕಾಸು ಅದರಲ್ಲಿ ಹಾಕುವದನ್ನು
3 ನೋಡಿ, ಹೇಳ್ದಿದ್ದೇನಂದರೆ, ನಿಜವಾಗಿ ನಿಮಗೆ ಹೇಳುತ್ತೇನೆ, ಈ
೪ ಬಡ ವಿಧವೆ ಎಲ್ಲರಿಗಿಂತ ಹೆಚ್ಚಾಗಿ ಹಾಕಿದ್ದಾಳೆ; ಯಾಕಂದರೆ ಇ
ವಲ್ಲೆರು ತಮಗೆ ಮಿಕ್ಕಿರುವದರಲ್ಲಿ ಕೆಲವನ್ನು ದೇವರಿಗೆ ದಾನ
ವಾಗಿ ಹಾಕಿದ್ದಾರೆ; ಆದರೆ ಇವಳು ತನ್ನ ಕೊರತೆಯಲ್ಲಿ ತನಗಿದ್ದ
ಬದುಕೆಲ್ಲಾ ಹಾಕಿದ್ದಾಳೆ.

೫ ಮತ್ತು ಕೆಲವರು ದೇವಾಲಯವನ್ನು ಕುರಿತು, ಅದು ಒಳ್ಳೆ
ಕಲ್ಲುಗಳಿಂದಲೂ ಕಾಣಿಕೆಗಳಿಂದಲೂ ಶೃಂಗರಿಸಲ್ಪಟ್ಟಿದೆ, ಅಂ
೬ ದಾಗ; ಅವನು, ಇವುಗಳನ್ನು ನೋಡುತ್ತೀರಲ್ಲ? ಕೆಡವಲ್ಪಡದ ಕ
ಲ್ಲು ಕಲ್ಲಿನ ಮೇಲೆ ಬಿಡಲ್ಪಡದ ದಿವಸಗಳು ಬರುವವು, ಅಂದನು.
೭ ಅವರು, ಬೋಧಕನೇ, ಇವು ಯಾವಾಗ ಆಗುವವು? ಅವು ಆಗು
ವ ಕಾಲಕ್ಕೆ ಗುರುತೇನು? ಎಂದು ಅವನನ್ನು ಕೇಳಿದಾಗ; ಅವನು
೮ ಹೇಳ್ದು, ನೀವು ಮೋಸಗೊಳ್ಳದ ಹಾಗೆ ನೋಡಿ ಕೊಳ್ಳಿರಿ.
ಯಾಕಂದರೆ ಅನೇಕರು, ನಾನು ಕ್ರಿಸ್ತನು; ಸಮಯವು ಸಮೀಪ
ವಾಯಿತು, ಎಂದು ಹೇಳಿ, ನನ್ನ ಹೆಸರಿನಲ್ಲಿ ಬರುವರು. ಹಾಗಾದ
೯ ರೆ ಅವರ ಹಿಂದೆ ಹೋಗ ಬೇಡಿರಿ. ಆದರೆ ನೀವು ಯುದ್ಧ ಕಲಹ
ಗಳ ಸುದ್ದಿ ಕೇಳಿದರೆ, ದಿಗುಲು ಪಡ ಬೇಡಿರಿ; ಯಾಕಂದರೆ ಇವು
ಮೊದಲು ಆಗ ಬೇಕು; ಆದರೆ ಸಂಗಡಲೇ ಅಂತ್ಯವು ಇರುವದಿಲ್ಲ.
೧೦ ಆಗಲವರಿಗೆ ಹೇಳ್ದಿದ್ದೇನಂದರೆ, ಜನಾಂಗದ ಮೇಲೆ ಜನಾಂಗ



೧೧ ವು, ರಾಜ್ಯದ ಮೇಲೆ ರಾಜ್ಯವು ಏಳುವದು; ಮತ್ತು ಸ್ಥಳ ಸ್ಥಳ
ಗಳಲ್ಲಿ ದೊಡ್ಡ ಭೂಕಂಪಗಳೂ ಬರಗಳೂ ವ್ಯಾಧಿಗಳೂ ಇರು
ವವು; ಮತ್ತು ಆಕಾಶದಿಂದುಂಟಾಗುವ ಭಯಂಕರವಾದ ನೋಟ
೧೨ ಗಳೂ ದೊಡ್ಡ ಗುರುತುಗಳೂ ಇರುವವು; ಆದರೆ ಇವೆಲ್ಲಕ್ಕೆ
ಮುಂಚೆ ನಿಮ್ಮ ಮೇಲೆ ತಮ್ಮ ಕೈಗಳನ್ನು ಹಾಕಿ, ನಿಮ್ಮನ್ನು
ಸಭೆಮನೆಗಳಿಗೂ, ಕಾವಲಿಮನೆಗಳಿಗೂ, ಒಪ್ಪಿಸಿ, ನನ್ನ ಹೆಸರಿನ
ನಿಮಿತ್ತ ಅರಸುಗಳ ಮುಂದೆಯೂ ಅಧಿಪತಿಗಳ ಮುಂದೆಯೂ
೧೩ ತಕ್ಕೊಂಡು ಹೋಗಿ, ಹಿಂಸಿಸುವರು. ಇದು ನಿಮಗೆ ಸಾಕ್ಷಿಗೋ
೧೪ ಸ್ಕರ ಆಗುವದು. ಹೀಗಿರುವದರಿಂದ ಪ್ರತ್ಯುತ್ತರವನ್ನು ಹೇಳುವ
ದಕ್ಕೆ ಮೊದಲಾಗಿ ಚಿಂತೆ ಪಡ ಬಾರದೆಂದು, ನಿಮ್ಮ ಹೃದಯಗ
೧೫ ಳಲ್ಲಿ ನಿಶ್ಚಯ ಮಾಡಿರಿ. ಯಾಕಂದರೆ ನಿಮ್ಮನ್ನು ಎದುರಿಸುವವ
ರೆಲ್ಲರು ಎದುರು ಮಾತಾಡಲೂ, ಎದುರು ನಿಲ್ಲಲೂ, ಕೂಡದಂಥ
ಬಾಯಿಯನ್ನೂ ಜ್ಞಾನವನ್ನೂ ನಾನು ನಿಮಗೆ ಕೊಡುವೆನು.
೧೬ ಇದಲ್ಲದೆ ಹೆತ್ತವರೂ ಸಹೋದರರೂ ನೆಂಟರೂ ಸ್ನೇಹಿತರೂ
ನಿಮಗೆ ದ್ರೋಹ ಮಾಡುವರು; ಮತ್ತು ನಿಮ್ಮಲ್ಲಿ ಕೆಲವರನ್ನು
೧೭ ಕೊಂದು ಹಾಕುವರು; ಮತ್ತು ನನ್ನ ಹೆಸರಿನ ನಿಮಿತ್ತ ಎಲ್ಲರು
೧೮ ನಿಮ್ಮನ್ನು ಹಗೆ ಮಾಡುವರು; ಆದರೆ ನಿಮ್ಮ ತಲೇ ಕೂದಲುಗಳಲ್ಲಿ
೧೯ ಒಂದಾದರೂ ನಾಶವಾಗುವದಿಲ್ಲ; ನಿಮ್ಮ ತಾಳ್ಮೆಯಿಂದ ನಿಮ್ಮ
೨೦ ಪ್ರಾಣಗಳನ್ನು ಸ್ವತಂತ್ರಿಸಿ ಕೊಳ್ಳಿರಿ. ಆದರೆ ಯೆರೂಸಲೇ
ಮು ಸೈನ್ಯಗಳಿಂದ ಸುತ್ತಲ್ಪಟ್ಟಿರುವದನ್ನು ನೀವು ನೋಡುವಾ
ಗ, ಅದು ಹಾಳಾಗುವ ಸಮಯವು ಸಮೀಪವಾಯಿತೆಂದು, ತಿಳಿ
೨೧ ಕೊಳ್ಳಿರಿ. ಆಗ ಯೆಹೂದದಲ್ಲಿರುವವರು ಬೆಟ್ಟಗಳಿಗೆ ಓಡಿ ಹೋ
ಗಲಿ; ಅದರ ಮಧ್ಯದಲ್ಲಿರುವವರು ಹೊರಡಲಿ; ಪರಸ್ಥಳಗಳಲ್ಲಿರು
೨೨ ವವರು ಅದರಲ್ಲಿ ಸೇರದಿರಲಿ; ಯಾಕಂದರೆ ಆ ದಿವಸಗಳು ಬಕೆ
ದವುಗಳೆಲ್ಲಾ ಈಡೇರುವಂಥ ಮುಯ್ಯಿಗೆ ಮುಯ್ಯಿ ಆಗುವಂಥ
೨೩ ದಿವಸಗಳಾಗಿವೆ. ಇದಲ್ಲದೆ ಆ ದಿವಸಗಳಲ್ಲಿ ಗರ್ಭಿಣಿಯರಿಗೂ,
ಮೊಲೆ ಕೊಡುವವರಿಗೂ, ಅಯ್ಯೋ! ಯಾಕಂದರೆ ದೇಶದ
ಮೇಲೆ ಮಹಾ ಸಂಕಟವೂ, ಈ ಜನರ ಮೇಲೆ ಕೋಪವು, ಉಂ
೨೪ ಟಾಗುವದು; ಅವರು ಕತ್ತಿಯ ಬಾಯಿಯಿಂದ ಬೀಳುವರು;
ಸಮಸ್ತ ಜನಾಂಗಗಳೊಳಗೆ ಕೆಕೆಯಾಗಿ ವೈಯಲ್ಪಡುವರು;
ಮತ್ತು ಜನಾಂಗಗಳ ಸಮಯವು ಪೂರ್ಣವಾಗುವ ತನಕ, ಯೆ
ರೂಸಲೇಮು ಜನಾಂಗಗಳಿಂದ ತುಳಿಯಲ್ಪಡುತ್ತಾ ಇರುವದು.

೨೫ ಮತ್ತು ಸೂರ್ಯ ಚಂದ್ರ ನಕ್ಷತ್ರಗಳಲ್ಲಿ ಲಕ್ಷಣಗಳೂ;
ಭೂಮಿಯ ಮೇಲಿರುವ ಜನಾಂಗಗಳಿಗೆ ದಿಕ್ಕು ಕಾಣದ ಸಂಕಟ
ವೂ ಇರುವವು; ಸಮುದ್ರವೂ ತೆರೆಗಳೂ ಘೋಷಿಸುವವು;
೨೬ ಜಗತ್ತಿಗೆ ಉಂಟಾಗುವ ಕಾರ್ಯಗಳ ಭಯದಿಂದಲೂ ನಿರೀಕ್ಷೆ
ಯಿಂದಲೂ ಮನುಷ್ಯರ ಗುಂದಿಗೆ ಕುಂದುವದು; ಯಾಕಂದರೆ
೨೭ ಆಕಾಶದ ಬಲಗಳು ಕದಲಿಸಲ್ಪಡುವವು; ಆಗಲವರು ಮನುಷ್ಯನ
ಮಗನು ಮೇಘದಲ್ಲಿ ಬಹು ಬಲ ಮಹಿಮೆಗಳಿಂದ ಬರುವದನ್ನು
೨೮ ನೋಡುವರು. ಆದರೆ ಇವು ಆಗುವದಕ್ಕೆ ಆರಂಭವಾಗುವಾಗ,
ಮೇಲಕ್ಕೆ ನೋಡಿ, ನಿಮ್ಮ ತಲೆಗಳನ್ನು ಎತ್ತಿರಿ; ಯಾಕಂದರೆ
ನಿಮ್ಮ ವಿಮೋಚನೆಯು ಸಮೀಪವಾಗುತ್ತದೆ.

೨೯ ಮತ್ತು ಅವರಿಗೆ ಹೇಳಿದ ಸಾಮ್ಯವೇನಂದರೆ, ಅಂಜೂರವ
೩೦ ನ್ನೂ ಸಕಲ ಮರಗಳನ್ನೂ ನೋಡಿರಿ; ಅವು ಈಗಲೇ ಪೊಳೆತರೆ,
ಬೆಸಿಲು ಕಾಲವು ಈಗಲೇ ಸಮೀಪವೆಂದು ನಿಮಗೆ ನೀವೇ ತಿಳಿಯ ಕೊ
೩೧ ಳ್ಳುತ್ತೀರಿ. ಅದೇ ಪ್ರಕಾರ ನೀವು ಇವು ಆಗುವದನ್ನು ನೋಡಿದರೆ,
೩೨ ದೇವರ ರಾಜ್ಯವು ಸಮೀಪವೆಂದು, ತಿಳಿಯ ಕೊಳ್ಳಿರಿ. ನಿಶ್ಚಯವಾಗಿ
ನಿಮಗೆ ಹೇಳುತ್ತೇನೆ, ಎಲ್ಲಾ ಉಂಟಾಗುವ ತನಕ, ಈ ಸಂತತಿಯು
೩೩ ಗತಿಸಿ ಹೋಗದು. ಆಕಾಶವೂ ಭೂಮಿಯೂ ಗತಿಸಿ ಹೋಗುವವು,
ಆದರೆ ನನ್ನ ವಾಕ್ಯಗಳು ಗತಿಸಿ ಹೋಗವು.

೩೪ ಇದಲ್ಲದೆ ನಿಮ್ಮ ಹೃದಯಗಳು ಹೊಟ್ಟೆಬಾಕತನದಿಂದಲೂ
ಅಮಲಿಂದಲೂ ಜೀವನದ ಚಿಂತೆಗಳಿಂದಲೂ ಭಾರವಾಗಿರಲು, ಆ
ದಿವಸವು ಥಕ್ಕನೆ ನಿಮ್ಮ ಮೇಲೆ ಬಾರದ ಹಾಗೆ, ನೋಡಿ ಕೊಳ್ಳಿರಿ.
೩೫ ಯಾಕಂದರೆ ಸಮಸ್ತ ಭೂಮಿಯ ಮೇಲೆ ವಾಸವಾಗಿರುವವರೆಲ್ಲರ
೩೬ ಮೇಲೆ ಉರ್ಕಿನ ಹಾಗೆ ಬರುವದು; ಆದದರಿಂದ ಉಂಟಾಗುವದ
ಕ್ಕಿರುವ ಇವುಗಳಿಗೆಲ್ಲಾ ನೀವು ತಪ್ಪಿಸಿ ಕೊಂಡು, ಮನುಷ್ಯನ
ಮಗನ ಮುಂದೆ ನಿಂತು ಕೊಳ್ಳುವದಕ್ಕೆ ಯೋಗ್ಯರಾಗುವ ಹಾಗೆ,
ಯಾವಾಗಲೂ ಪ್ರಾರ್ಥನೆ ಮಾಡಿ, ಎಚ್ಚರಿಕೆಯಾಗಿರ್ರಿ.

೩೭ ಇದಲ್ಲದೆ ಅವನು ಹಗಲುಗಳಲ್ಲಿ ದೇವಾಲಯದೊಳಗೆ ಬೋ
ಧಿಸುತ್ತಾ ರಾತ್ರಿಗಳಲ್ಲಿ ಹೊರಗೆ ಬಂದು, ಇಪ್ಪೇ ಗುಡ್ಡವೆಂಬ ಗುಡ್ಡ
೩೮ ದಲ್ಲಿ ಇಳ್ಳು ಕೊಳ್ಳುತ್ತಾ ಇದ್ದನು. ಮತ್ತು ಅವನನ್ನು ಕೇಳುವದ
ಕ್ಕೆ, ಬೆಳ್ಳಗೆ ಜನರೆಲ್ಲಾ ದೇವಾಲಯದಲ್ಲಿ ಅವನ ಬಳ್ಳಿಗೆ ಬರುತ್ತಿ
ದ್ದರು.

## ೨೨. ಸಂಧಿ.

೧ ಇದಲ್ಲದೆ ಪಸ್ಕವೆಂಬ ಹುಳಿಯಿಲ್ಲದ ರೊಟ್ಟಿಗಳ ಹಬ್ಬವು
೨ ಸಮೀಪವಾದಾಗ, ಪ್ರಧಾನ ಯಾಜಕರೂ ಶಾಸ್ತ್ರಿಗಳೂ, ಹ್ಯಾಗೆ
ಅವನನ್ನು ಕೊಂದು ಹಾಕ ಬಹುದೆಂದು, ಹುಡುಕಿದರು; ಯಾ
3 ಕಂದರೆ, ಅವರು ಜನರಿಗೆ ಭಯ ಪಡುತ್ತಿದ್ದರು. ಆದರೆ ಹನ್ನೆರಡು
ಮಂದಿಯ ಲೆಖ್ಖದಲ್ಲಿರುವ ಇಸ್ಕರಿಯೋತೆಂಬ ಉಪನಾಮವುಳ್ಳ
೪ ಯೊದನಲ್ಲಿ ಸೈತಾನನು ಹೊಕ್ಕನು. ಆಗಲವನು ಹೋಗಿ,
ಪ್ರಧಾನ ಯಾಜಕರ ಸೈನ್ಯಾಧಿಪತಿಗಳ ಸಂಗಡ, ಅವನನ್ನು
೫ ಒಪ್ಪಿಸುವದು ಹ್ಯಾಗೆಂದು ಮಾತಾಡಿದಾಗ, ಅವರು ಸಂತೋಷ
೬ ಪಟ್ಟು, ಅವನಿಗೆ ಹಣ ಕೊಡುವದಕ್ಕೆ ಒಪ್ಪಿ ಕೊಂಡರು. ಆಗಲ
ವನು ಮಾತು ಕೊಟ್ಟು, ಗುಂಪು ಕೂಡದ ಹಾಗೆ ಅವನನ್ನು ಅವ
ರಿಗೆ ಒಪ್ಪಿಸುವದಕ್ಕೆ ಒಳ್ಳೆ ಸಮಯ ಹುಡುಕಿದನು.

೭ ಇದಲ್ಲದೆ ಪಸ್ಕವನ್ನು ಅರ್ಪಿಸ ತಕ್ಕ ಹುಳಿಯಿಲ್ಲದ ರೊ
ಟ್ಟಿಗಳ ದಿವಸ ಬಂದಾಗ, ಅವನು ಪೇತ್ರನನ್ನೂ ಯೋಹಾನ
ನನ್ನೂ ಕಳುಹಿಸಿ, ನೀವು ಹೋಗಿ, ನಾವು ಉಣ್ಣುವ ಹಾಗೆ ಪಸ್ಕ
೯ ವನ್ನು ನಮಗೆ ಸಿದ್ಧ ಮಾಡಿರಿ, ಅಂದನು. ಅವರು ಅವನಿಗೆ, ನಾ
೧೦ ವು ಎಲ್ಲಿ ಸಿದ್ಧ ಮಾಡ ಬೇಕು? ಅಂದಾಗ; ಅವನವರಿಗೆ ಹೇಳ್ದಿದ್ದು,
ಇಗೋ, ನೀವು ಪಟ್ಟಣದಲ್ಲಿ ಸೇರಿದಾಗ, ನೀರಿನ ಗಡಿಗೆ ಹೊರುವ
ಒಬ್ಬ ಮನುಷ್ಯನು ನಿಮ್ಮೆದುರಿಗೆ ಬರುವನು; ಅವನು ಹೋಗುವ
೧೧ ಮನೆಗೆ ಅವನನ್ನು ಹಿಂಬಾಲಿಸಿರಿ. ಮತ್ತು ಆ ಮನೆಯ ಯಜ
ಮಾನನಿಗೆ, ನಾನು ನನ್ನ ಶಿಷ್ಯರ ಸಂಗಡ ಪಸ್ಕವನ್ನು ಉಣ್ಣ ತ
ಕ್ಕ ಸಾಲೆ ಎಲ್ಲಿ? ಅಂತ, ಬೋಧಕನು ನಿನಗೆ ಹೇಳುತ್ತಾನೆಂಬದಾಗಿ
೧೨ ಹೇಳಿರಿ. ಅವನು ನಿಮಗೆ ಸಾಮಗ್ರಿ ಇರುವಂಥ ದೊಡ್ಡ ಮೇಲ್ಮಾ
೧೩ ಳಿಗೆಯನ್ನು ತೋರಿಸುವನು; ಅಲ್ಲಿ ಸಿದ್ಧ ಮಾಡಿರಿ. ಅವರು ಹೋ
ಗಿ, ತಮಗೆ ಹೇಳಿದ ಹಾಗೆ ಕಂಡು, ಪಸ್ಕವನ್ನು ಸಿದ್ಧ ಮಾಡಿದರು.

೧೪ ಆ ಘಳಿಗೆ ಬಂದಾಗ, ಅವನೂ, ಅವನ ಸಂಗಡ ಹನ್ನೆರಡು ಅ
೧೫ ಪೊಸ್ತಲರೂ ಕೂತು ಕೊಂಡರು. ಆಗಲವರಿಗೆ ಹೇಳ್ದಿದ್ದೇನಂದರೆ,

ನಾನು ಶ್ರಮೆ ಪಡುವದಕ್ಕಿಂತ ಮುಂಚೆ ಈ ಪಸ್ಕವನ್ನು ನಿಮ್ಮ ಸಂ
೧೬ ಗಡ ಉಣ್ಣಲ್ಲವದಕ್ಕೆ ಬಹಳವಾಗಿ ಅಪೇಕ್ಷಿಸಿದ್ದೇನೆ; ಯಾಕಂದರೆ ನಿ
ಮಗೆ ಹೇಳುತ್ತೇನೆ, ಅದು ದೇವರ ರಾಜ್ಯದಲ್ಲಿ ಸಂಪೂರ್ಣವಾಗು
೧೭ ವ ಪರ್ಯಂತರ, ನಾನು ಇನ್ನೂ ಅದನ್ನು ಉಣ್ಣುವದಿಲ್ಲ. ಮ
ತ್ತು ಅವನು ಪಾತ್ರೆ ತೆಗೆದು ಕೊಂಡು, ಸ್ತೋತ್ರ ಮಾಡಿ, ಇದನ್ನು
೧೮ ತೆಗೆದು ಕೊಂಡು, ನಿಮ್ಮಲ್ಲಿ ಹಂಚಿ ಕೊಳ್ಳಿರಿ, ಯಾಕಂದರೆ ದೇ
ವರ ರಾಜ್ಯವು ಬರುವ ತನಕ, ಈ ದ್ರಾಕ್ಷೇ ರಸವನ್ನು ಇನ್ನೂ
ಕುಡಿಯೆನೆಂದು, ನಿಮಗೆ ಹೇಳುತ್ತೇನೆ, ಅಂದನು.

೧೯ ಮತ್ತು ಕೊಟ್ಟಿ ತೆಗೆದು ಕೊಂಡು, ಸ್ತೋತ್ರ ಮಾಡಿ, ಮುರಿ
ದು, ಅವರಿಗೆ ಕೊಟ್ಟು, ಇದೇ ನಿಮಗೋಸ್ಕರ ಕೊಡಲ್ಪಡುವ ನ
ನ್ನ ಶರೀರವು; ನನ್ನನ್ನು ಜ್ಞಾಪಕ ಮಾಡಿ ಕೊಳ್ಳುವದಕ್ಕೋಸ್ಕರ
೨೦ ಇದನ್ನು ಮಾಡಿರಿ, ಅಂದನು. ಅದೇ ಪ್ರಕಾರ, ಊಟ ಮೇಲೆ,
ಪಾತ್ರೆ ತೆಗೆದು ಕೊಂಡು, ಹೇಳಿದ್ದೇನಂದರೆ, ಈ ಪಾತ್ರೆ ನಿಮ
ಗೋಸ್ಕರ ಚೆಲ್ಲಲ್ಪಡುವ ನನ್ನ ರಕ್ತದಲ್ಲಿರುವ ಹೊಸ ಬತಂಬಡಿ
ಕೆಯಾಗಿದೆ.

೨೧ ಆದಾಗ್ಯೂ, ಇಗೋ, ನನ್ನನ್ನು ಒಪ್ಪಿಸುವವನ ಕೈ ನನ್ನ ಸಂ
೨೨ ಗಡ ಮೇಜಿನ ಮೇಲೆ ಅದೆ; ಮನುಷ್ಯನ ಮಗನು, ನೇಮಿಸಲ್ಪ
ಟ್ಟ ಹಾಗೆ, ಹೋಗುತ್ತಾನೆ; ಆದಾಗ್ಯೂ, ಯಾವನಿಂದ ಒಪ್ಪಿಸ
೨೩ ಲ್ಪಡುತ್ತಾನೋ, ಆ ಮನುಷ್ಯನಿಗೆ ಅಯ್ಯೋ! ಆಗಲವರು, ಅದ
ನ್ನು ಮಾಡುವದಕ್ಕಿರುವವನು ತಮ್ಮಲ್ಲಿ ಯಾವನೆಂದು ತಮ್ಮೊಳಿ
ಗೆ ವಿಚಾರಿಸಲಾರಂಭಿಸಿದರು.

೨೪ ಇದಲ್ಲದೆ, ತಮ್ಮೊಳಿಗೆ ದೊಡ್ಡವನಾಗಿ ಎಣಿಸಲ್ಪಡುವವನ್ಯಾ
೨೫ ಕೆಂದು, ಅವರಲ್ಲಿ ವಾಗ್ವಾದ ಉಂಟಾದಾಗ, ಅವನವರಿಗೆ ಹೇಳ್ದೇ
ನಂದರೆ, ಜನಾಂಗಗಳ ಅರಸರು ಅವರ ಮೇಲೆ ಘೊರತನ ಮಾ
ಡುತ್ತಾರೆ; ಅವರ ಮೇಲೆ ಅಧಿಕಾರ ನಡಿಸುವವರು ಧರ್ಮಿಷ್ಠರೆಂ
೨೬ ದು ಕರೆಯಲ್ಪಡುತ್ತಾರೆ. ನಿಮ್ಮಲ್ಲಿ ಹಾಗಿರ ಬಾರದು; ಆದರೆ ನಿ
ಮ್ಮಲ್ಲಿ ದೊಡ್ಡವನು ಚಿಕ್ಕವನ ಹಾಗೆಯೂ, ಯಜಮಾನನು ಸೇ
೨೭ ವಕನ ಹಾಗೆಯೂ, ಆಗಲಿ. ಹ್ಯಾಗಂದರೆ ಯಾವನು ದೊಡ್ಡವ
ನು? ಊಟಕ್ಕೆ ಕೂತವನೋ? ಸೇವಿಸುವವನೋ! ಊಟಕ್ಕೆ
ಕೂತವನಲ್ಲವೋ? ಆದರೆ ನಾನು ನಿಮ್ಮ ಮಧ್ಯದಲ್ಲಿ ಸೇವಿಸು
೨೮ ವವನ ಹಾಗಿದ್ದೇನೆ. ಇದಲ್ಲದೆ ನೀವು ನನ್ನ ಶೋಧನೆಗಳಲ್ಲಿ ನನ್ನ
೨೯ ಸುಗತ ನೆಲೆಯಾದವರಾಗಿದ್ದೀರಿ. ಮತ್ತು ನೀವು ನನ್ನ ರಾಜ್ಯದ
೩೦ ಲ್ಲಿ ನನ್ನ ಮೇಜಿನ ಹತ್ತರ ಉಂಡು, ಕುಡಿದು, ಇಸ್ರಯೇಲಿನ ಹ
ನ್ನೆರಡು ಕುಲಗಳಿಗೆ ನ್ಯಾಯ ತೀರಿಸುವವರಾಗಿ, ಸಿಂಹಾಸನಗಳ
ಮೇಲೆ ಕೂತು ಕೊಳ್ಳುವ ಹಾಗೆ, ನನ್ನ ತಂದೆಯು ನನಗೆ ರಾಜ್ಯ
ವನ್ನು ನಿರ್ಣಯಿಸಿದ ಪ್ರಕಾರ, ನಿಮಗೆ ನಿರ್ಣಯಿಸುತ್ತೇನೆ.

೩೧ ಮತ್ತು ಕರ್ತನು ಹೇಳ್ದೇನಂದರೆ, ಸೀಮೋನನೇ, ಸೀ
ಮೋನನೇ, ಇಗೋ, ಸೈತಾನನು ನಿಮ್ಮನ್ನು ಗೋಧಿಯ ಹಾಗೆ ಕೇ
೩೨ ರುವದಕ್ಕೆ ಇಚ್ಛೈಸಿದ್ದಾನೆ. ಆದರೆ ನಿನ್ನ ವಿಶ್ವಾಸವು ಅಳಿದು
ಹೋಗದ ಹಾಗೆ ನಿನಗೋಸ್ಕರ ನಾನು ಬೇಡಿ ಕೊಂಡಿದ್ದೇನೆ;
ಮತ್ತು ನೀನು ತಿರುಗಿ ಕೊಂಡ ಮೇಲೆ, ನಿನ್ನ ಸಹೋದರರನ್ನು
೩೩ ಸ್ಥಿರ ಪಡಿಸು. ಅವನು ಅವನಿಗೆ, ಕರ್ತನೇ, ನಿನ್ನ ಸಂಗಡ ಸೆರೆ
೩೪ ಗೂ ಮರಣಕ್ಕೂ ಹೋಗ ಸಿದ್ಧವಾಗಿದ್ದೇನೆ, ಅಂದಾಗ; ಯೇ
ಸು ಹೇಳ್ದದ್ದು, ಪೇತ್ರನೇ, ನೀನು ನನ್ನನ್ನು, ಅರಿಯೆನೆಂದು,
ಮೂರು ಸಾರಿ ಬೊಂಕುವದಕ್ಕಿಂತ ಮುಂಚೆ, ಈ ಹೊತ್ತು ಕೋ
ಳಿ ಕೂಗದೆಂದು, ನಿನಗೆ ಹೇಳುತ್ತೇನೆ.

೩೫ ಮತ್ತು ಅವರಿಗೆ ಹೇಳ್ದೇನಂದರೆ, ನಾನು ನಿಮ್ಮನ್ನು ಹೂಡ
ಚೀಲವೂ ಹಮ್ಮಾಣಿಯೂ ಕೆರಗಳೂ ಇಲ್ಲದವರಾಗಿ ಕಳುಹಿಸಿದಾ
ಗ, ಏನಾದರೂ ಕೊರತೆ ಪಟ್ಟಿರೋ? ಅವರು, ಏನೂ ಇಲ್ಲ, ಅಂದ
೩೬ ರು. ಆಗಲವನು ಅವರಿಗೆ, ಆದರೆ ಈಗ ಹೂಡ ಚೀಲ ಉಂಟಾದವ
ನು ಅದನ್ನು, ಹಮ್ಮಾಣಿಯನ್ನು ಸಹ, ತಕ್ಕೊಳ್ಳಲಿ; ಮತ್ತು ಇಲ್ಲ
ದವನು ತನ್ನ ವಸ್ತ್ರವನ್ನು ಮಾರಿ ಬಿಟ್ಟು, ಕತ್ತಿಯನ್ನು ಕೊಂಡು
೩೭ ಕೊಳ್ಳಲಿ; ಯಾಕಂದರೆ, ಅವನು ಅನೀತಿವಂತರ ಸಂಗಡ ಎಣಿಸ
ಲ್ಪಟ್ಟನು ಎಂಬ ಬರಹವು ಸಹ ನನ್ನಲ್ಲಿ ಈಡೇರ ಬೇಕೆಂದು, ನಿ
ಮಗೆ ಹೇಳುತ್ತೇನೆ; ಯಾಕಂದರೆ ನನ್ನ ವಿಷಯವಾದವುಗಳಿಗೆ
೩೮ ಅಂತ್ಯ ಉಂಟು, ಅಂದನು. ಅವರು, ಕರ್ತನೇ, ಇಗೋ, ಇಲ್ಲಿ
ಎರಡು ಕತ್ತಿಗಳುಂಟು, ಅಂದಾಗ; ಅವನವರಿಗೆ, ಸಾಕು, ಅಂದನು.

೩೯ ತರುವಾಯ ಅವನು ವಾಡಿಕೆಯ ಪ್ರಕಾರ ಇಪ್ಪೇ ಗುಡ್ಡಕ್ಕೆ
ಹೊರಟನು; ಅವನ ಶಿಷ್ಯರು ಸಹ ಅವನನ್ನು ಹಿಂಬಾಲಿಸಿದರು.
೪೦ ಅವನು ಆ ಸ್ಥಳಕ್ಕೆ ಬಂದಾಗ, ನೀವು ಶೋಧನೆಯೊಳಗೆ ಸೇರದ
೪೧ ಹಾಗೆ ಪ್ರಾರ್ಥನೆ ಮಾಡಿರಿ, ಎಂದು ಅವರಿಗೆ ಹೇಳ್ದು, ಅವರನ್ನು
ಬಿಟ್ಟು, ಹೆಚ್ಚು ಕಡಿಮೆ ಕಲ್ಲೆಸೆಯುವದ್ದು ದೂರ ಹೋಗಿ, ಮೊ
೪೨ ಣಕಾಲೂರಿ, ಪ್ರಾರ್ಥಿಸಿದ್ದೇನಂದರೆ, ತಂದೆಯೇ, ನೀನು ಈ ಪಾ
ತ್ರೆಯನ್ನು ನನಗೆ ದೂರ ಮಾತ ಮನಸ್ಸಾಗಿದ್ದರೆ, ಮಾಡು. ಆ
ದಾಗ್ಯೂ ನನ್ನ ಚಿತ್ತವಲ್ಲ, ನಿನ್ನದೇ ಆಗಲಿ.

೪೩ ಇದಲ್ಲದೆ ಪರಲೋಕದಿಂದ ಬಂದ ಒಬ್ಬ ದೂತನು ಅವನಿಗೆ
೪೪ ಕಾಣಿಸಿ ಕೊಂಡು, ಅವನನ್ನು ಬಲ ಪಡಿಸಿದನು. ಮತ್ತು ಅವನು
ಹೋರಾಟದಲ್ಲಿದ್ದು, ಇನ್ನೂ ಚುರುಕಾಗಿ ಪ್ರಾರ್ಥಿಸಿದನು. ಇದ
ಲ್ಲದೆ ಅವನ ಬೆವರು ಭೂಮಿಗೆ ಬೀಳುವ ರಕ್ತದ ದೊಡ್ಡ ಬಿಂದುಗ
೪೫ ಳ ಹಾಗಾಯಿತು. ಅವನು ಪ್ರಾರ್ಥನೆ ಮಾಡಿ, ಎದ್ದ ಮೇಲೆ,
ಶಿಷ್ಯರ ಬಳಿಗೆ ಬಂದು, ಅವರು ದುಃಖದಿಂದ ನಿದ್ದೆ ಮಾಡುವದ
೪೬ ನ್ನು ಕಂಡು, ಅವರಿಗೆ, ನೀವು ನಿದ್ದೆ ಮಾಡುವದೇನು? ಶೋಧನೆ
ಯಲ್ಲಿ ಪ್ರವೇಶಿಸದ ಹಾಗೆ, ಎದ್ದು, ಪ್ರಾರ್ಥಿಸಿರಿ, ಅಂದನು.

೪೭ ಅವನು ಮಾತಾಡುತ್ತಿರುವಾಗ, ಇಗೋ, ಸಮೂಹವು; ಸುತ್ತ
ಹನ್ನೆರಡು ಮಂದಿಯಲ್ಲಿ ಒಬ್ಬನಾಗಿರುವ ಯೂದನು ಅವರ
ಮುಂದೆ ನಡೆದು, ಯೇಸುವಿಗೆ ಮುದ್ದಿಸುವದಕ್ಕೆ ಸಮೀಪಕ್ಕೆ
೪೮ ಬಂದನು. ಆದರೆ ಯೇಸು ಅವನಿಗೆ, ಯೂದನೇ, ಮುದ್ದಿನಿಂದ
ಮನುಷ್ಯನ ಮಗನನ್ನು ಒಪ್ಪಿಸುತ್ತೀಯೋ? ಅಂದನು. ಅವನ
ಸುತ್ತಲಿರುವವರು ಆಗ ಹೋಗುವದನ್ನು ನೋಡಿ, ಕರ್ತನೇ, ಕ
ತ್ತಿಯಿಂದ ಹೊಡೆಯೋಣೋ? ಎಂದು ಅವನಿಗೆ ಹೇಳ್ದರು.
೫೦ ಮತ್ತು ಅವರಲ್ಲಿ ಒಬ್ಬನು ಪ್ರಧಾನ ಯಾಜಕನ ದಾಸನನ್ನು
೫೧ ಹೊಡೆದು, ಅವನ ಬಲ ಕಿವಿಯನ್ನು ಹರಿಯ ಕಡಿದನು. ಆದರೆ
ಯೇಸು ಉತ್ತರ ಕೊಟ್ಟು, ಈ ಮಟ್ಟಿಗೂ ಬಿಡಿರಿ ಎಂದು ಹೇಳಿ,
ಅವನ ಕಿವಿಯನ್ನು ಮುಟ್ಟಿ, ಅವನನ್ನು ಗುಣ ಮಾಡಿದನು.

೫೨ ಮತ್ತು ಯೇಸು ತನ್ನ ಹತ್ತರ ಬಂದ ಪ್ರಧಾನ ಯಾಜಕರಿ
ಗೂ, ದೇವಾಲಯದ ಸೈನ್ಯಾಧಿಪತಿಗಳಿಗೂ, ಹಿರಿಯರಿಗೂ, ಕ
ಳ್ಳನಿಗೆ ವಿರೋಧವಾಗಿ ಬಂದ ಹಾಗೆ, ಕತ್ತಿಗಳನ್ನೂ ದೊಣ್ಣೆಗಳ
೫೩ ನ್ನೂ ಹಿಡಿದು, ಹೊರಟಿರೋ? ನಾನು ದಿನಾಲು ನಿಮ್ಮ ಸಂಗಡ
ದೇವಾಲಯದಲ್ಲಿರುವಾಗ, ನೀವು ನನ್ನ ಮೇಲೆ ಕೈ ಚಾಚಲಿಲ್ಲ;
ಆದರೆ ಇದು ನಿಮ್ಮ ಘಳಿಗೆಯೂ, ಕತ್ತಲೆಯ ಅಧಿಕಾರವೂ ಆ
ಗಿದೆ, ಅಂದನು.

೫೪ ಆಗಲವರು ಅವನನ್ನು ತೆಗೆದು ಕೊಂಡು ಹೋಗಿ, ಪ್ರಧಾನ
ಯಾಜಕನ ಮನೆಗೆ ತಂದರು; ಪೇತ್ರನು ದೂರದಿಂದ ಹಿಂಬಾಲಿಸಿ



೫೫ ದನು. ಆದರೆ ಅವರು ಅಂಗಳದ ನಡುವೆ ಬೆಂಕಿ ಉರಿಸಿ, ಕೂತು
೫೬ ಕೊಂಡಾಗ, ಪೇತ್ರನು ಅವರೊಳಗೆ ಕೂತು ಕೊಂಡನು. ಆಗ ಒ
ಬ್ಬ ದಾಸಿಯು ಬೆಳಕಿಗೆದುರಾಗಿ ಕೂತು ಕೊಂಡಿರುವ ಅವನನ್ನು
ನೋಡಿ, ಅವನ ಮೇಲೆ ದೃಷ್ಟಿ ಇಟ್ಟು, ಇವನು ಸಹ ಅವನ ಸಂ
೫೭ ಗಡ ಇದ್ದನು, ಅಂದಾಗ; ಅವನು, ಸ್ತ್ರೀಯೇ, ಅವನನ್ನು ಅರಿಯೆ
೫೮ ನೆಂದು, ಅವನನ್ನು ಬೊಂಕಿದನು. ಸ್ವಲ್ಪ ಕಾಲದ ಮೇಲೆ ಮತ್ತೊ
ಬ್ಬನು ಅವನನ್ನು ನೋಡಿ, ನೀನು ಸಹ ಅವರಲ್ಲಿ ಒಬ್ಬನಾಗಿದ್ದೀ,
೫೯ ಅಂದಾಗ; ಪೇತ್ರನು, ಮನುಷ್ಯನೇ, ನಾನಲ್ಲ, ಅಂದನು. ಮತ್ತು
ಹೆಚ್ಚು ಕಡಿಮೆ ಒಂದು ತಾಸಾದ ಮೇಲೆ, ಮತ್ತೊಬ್ಬನು, ನಿಜವಾ
ಗಿ ಇವನು ಸಹ ಅವನ ಸಂಗಡ ಇದ್ದನು; ಯಾಕಂದರೆ ಗಲಿಲಾ
೬೦ ಯದವನಾಗಿದ್ದಾನೆಂದು ದೃಢವಾಗಿ ಹೇಳ್ದಾಗ, ಪೇತ್ರನು, ಮ
ನುಷ್ಯನೇ, ನೀನು ಹೇಳುವದನ್ನು ಅರಿಯೆ, ಅಂದನು.

೬೧ ಸಂಗಡಲೇ ಅವನು ಇನ್ನು ಮಾತಾಡುತ್ತಿರುವಾಗ, ಕೋಳಿ
ಕೂಗಿತು. ಮತ್ತು ಕರ್ತನು ತಿರುಗಿ ಕೊಂಡು, ಪೇತ್ರನ ಮೇಲೆ
ದೃಷ್ಟಿ ಇಟ್ಟನು. ಆಗ ಪೇತ್ರನು, ಕೋಳಿ ಕೂಗುವದಕ್ಕಿಂತ
ಮುಂಚೆ ಮೂರು ಸಾರಿ ನನ್ನನ್ನು ಬೊಂಕುವಿ ಎಂದು, ಕರ್ತನು
೬೨ ತನಗೆ ಹೇಳಿದ ಮಾತು ಜ್ಞಾಪಕ ಮಾಡಿ ಕೊಂಡನು. ಆಗ ಪೇ
ತ್ರನು ಹೊರಗೆ ಹೋಗಿ, ಬಹಳವಾಗಿ ಅತ್ತನು.

೬೩ ಇದಲ್ಲದೆ ಯೇಸುವನ್ನು ಹಿಡಿದ ಜನರು ಅವನನ್ನು ಹಾಸ್ಯ
೬೪ ಮಾಡಿ, ಹೊಡೆದು, ಅವನಿಗೆ ಮುಸುಕು ಹಾಕಿ, ಮುಖವನ್ನು ಬ
ಡಿದು, ನಿನ್ನನ್ನು ಬಡಿದವನ್ಯಾರೆಂದು, ಪ್ರವಾದನೆ ಹೇಳೆಂಬದಾಗಿ
೬೫ ಅವನನ್ನು ಕೇಳ್ದರು. ಈ ಮೊದಲಾದ ಅನೇಕ ದೂಷಣೆಗಳ
ನ್ನು ಅವನಿಗೆ ಹೇಳ್ದರು.

೬೬ ಬೆಳಗಾಗುತ್ತಿರುವಾಗ ಜನರ ಹಿರಿಯ ಸಭೆಯೂ ಪ್ರಧಾನ ಯಾ
ಜಕರೂ ಶಾಸ್ತ್ರಿಗಳೂ ಕೂಡಿ ಕೊಂಡು, ಅವನನ್ನು ತಮ್ಮ ಮಂ
೬೭ ತ್ರಿ ಸಭೆಗೆ ತಕ್ಕೊಂಡು ಹೋಗಿ, ನೀನು ಕ್ರಿಸ್ತನಾಗಿದ್ದೀಯೋ?
ನಮಗೆ ಹೇಳು, ಅಂದರು. ಅವನವರಿಗೆ, ನಾನು ನಿಮಗೆ ಹೇಳ್ದ
೬೮ ರೆ, ನಂಬುವದೇ ಇಲ್ಲ; ನಾನು ಕೇಳ್ದರೂ, ಉತ್ತರ ಕೊಡುವದೇ
೬೯ ಇಲ್ಲ; ಮತ್ತು ನನ್ನನ್ನು ಬಿಡುವದಿಲ್ಲ; ಈಗಿನಿಂದ ಮನುಷ್ಯನ ಮ
ಗನು ದೇವರ ಬಲದ ಬಲಪಾರ್ಶ್ವದಲ್ಲಿ ಕೂತು ಕೊಂಡಿರುವನು,
೭೦ ಅಂದಾಗ; ಎಲ್ಲರು, ಹಾಗಾದರೆ ನೀನು ದೇವರ ಮಗನೋ? ಅನ್ನ
ಲು; ಅವನವರಿಗೆ, ನಾನೇ ಎಂದು ನೀವೇ ಹೇಳುತ್ತೀರಿ, ಅಂದನು.
೭೧ ಆಗಲವರು, ನಮಗೆ ಸಾಕ್ಷಿ ಇನ್ಯಾಕೆ ಬೇಕು? ನಾವೇ ಅವನ ಬಾ
ಯಿಯಿಂದ ಕೇಳ್ದಿದ್ದೇವೆ, ಅಂದರು.

## ೨೩. ಸಂಧಿ.

೧ ಆಗಲವರ ಸಮೂಹವೆಲ್ಲಾ ಎದ್ದು, ಅವನನ್ನು ಪಿಲಾತನ ಬಳಿಗೆ
೨ ತಕ್ಕೊಂಡು ಹೋದರು. ಅವರು ಅವನ ಮೇಲೆ ದೂರು ಹೇಳ್ದ
ಲಾರಂಭಿಸಿದ್ದೇನಂದರೆ, ಇವನು ಜನಾಂಗವನ್ನು ತಿರುಗ ಬೀಳ ಮಾ
ಡಿ, ತಾನು ಕ್ರಿಸ್ತನೆಂಬ ಅರಸನಾಗಿದ್ದೇನೆಂದು ಹೇಳ್ದಿ, ಕೈಸರನಿಗೆ
೩ ತೆರಿಗೆ ಕೊಡದ ಹಾಗೆ ಅಡ್ಡಿ ಮಾಡುವದನ್ನು ಕಂಡಿದ್ದೇನೆ. ಪಿಲಾ
ತನು, ನೀನು ಯೆಹೂದ್ಯರ ಅರಸನೋ? ಎಂದು ಅವನನ್ನು
೪ ಕೇಳ್ದಾಗ; ಅವನವನಿಗೆ, ನೀನು ಹೇಳುವದು ಸರಿ ಎಂದು, ಉತ್ತ
ರ ಕೊಟ್ಟನು. ಆ ಮೇಲೆ ಪಿಲಾತನು ಪ್ರಧಾನ ಯಾಜಕರಿಗೂ
೫ ಸಮೂಹಗಳಿಗೂ, ಈ ಮನುಷ್ಯನಲ್ಲಿ ಏನೂ ಅಪರಾಧ ಕಾಣೆ
ನು, ಅಂದಾಗ; ಅವರು, ಅವನು ಗಲಿಲಾಯದಿಂದ ಆರಂಭ ಮಾ
ಡಿ, ಇಲ್ಲಿಯ ವಟ್ಟಿಗೂ ಯೆಹೂದ್ಯರೆಲ್ಲಾ ಬೋಧಿಸುತ್ತಾ,
೬ ಜನರನ್ನು ಎಬ್ಬಿಸುತ್ತಾನೆಂದು ದೃಢವಾಗಿ ಹೇಳ್ದರು. ಪಿಲಾತ
ನು ಗಲಿಲಾಯವೆಂದು ಕೇಳ್ದಾಗ, ಈ ಮನುಷ್ಯನು ಗಲಿಲಾಯ
ದವನೋ? ಎಂದು ವಿಚಾರಿಸಿದನು.

೭ ಮತ್ತು, ಅವನು ಹೆರೋದನ ಅಧಿಕಾರಕ್ಕೊಳಗೆ ಇದ್ದಾನೆಂದು,
ತಿಳ್ದರು, ಆ ದಿವಸಗಳಲ್ಲಿ ಯೆರೂಸಲೇಮಿನಲ್ಲಿ ಇದ್ದ ಹೆರೋದನ
೮ ಬಳಿಗೆ ಅವನನ್ನು ಕಳುಹಿಸಿದನು. ಇದಲ್ಲದೆ ಹೆರೋದನು ಯೇ
ಸುವನ್ನು ನೋಡಿ, ಬಹು ಸಂತೋಷ ಪಟ್ಟನು. ಯಾಕಂದರೆ
ಅವನ ವಿಷಯವಾಗಿ ಅನೇಕ ಮಾತುಗಳನ್ನು ಕೇಳ್ದದರಿಂದ,
ಬಹು ಕಾಲದಿಂದ ಅವನನ್ನು ನೋಡ ಬೇಕೆಂದಿದ್ದನು; ಮತ್ತು ಅವ
೯ ನಿಂದಾಗುವ ಒಂದು ಗುರುತನ್ನು ನೋಡ ನಿರೀಕ್ಷಿಸಿದನು. ಹೀಗಿ
ರುವದರಿಂದ ಅವನನ್ನು ಬಹು ಮಾತುಗಳಿಂದ ವಿಚಾರಿಸುವಾಗ,
೧೦ ಅವನು ಅವನಿಗೆ ಏನೂ ಉತ್ತರ ಕೊಡಲಿಲ್ಲ. ಇದಲ್ಲದೆ ಪ್ರಧಾನ
ಯಾಜಕರೂ ಶಾಸ್ತ್ರಿಗಳೂ ಅವನ ಮೇಲೆ ದೃಢವಾಗಿ ದೂರು
೧೧ ಹೇಳುತ್ತಾ, ನಿಂತಿದ್ದರು. ಮತ್ತು ಹೆರೋದನು ತನ್ನ ಸೈನ್ಯದ
ವರ ಸಂಗಡ ಅವನನ್ನು ತಿರಸ್ಕರಿಸಿ, ಹಾಸ್ಯ ಮಾಡಿ, ಪ್ರಕಾಶವಾದ
ವಸ್ತ್ರವನ್ನು ಅವನಿಗೆ ಹೊದ್ದಿಸಿ, ಅವನನ್ನು ಪಿಲಾತನಿಗೆ ತಿರಿಗಿ ಕಳು
೧೨ ಹಿಸಿದನು. ಇದಲ್ಲದೆ ಪಿಲಾತನೂ ಹೆರೋದನೂ ಆ ದಿವಸದಲ್ಲಿ
ಒಬ್ಬರಿಗೊಬ್ಬರು ಸ್ನೇಹಿತರಾದರು; ಯಾಕಂದರೆ ಮುಂಚೆ
ಒಬ್ಬರಿಗೊಬ್ಬರು ಶತ್ರುಗಳಾಗಿದ್ದರು.

೧೩ ಮತ್ತು ಪಿಲಾತನು ಪ್ರಧಾನ ಯಾಜಕರನ್ನೂ ಅಧಿಪತಿಗಳನ್ನೂ
೧೪ ಜನರನ್ನೂ ಕೂಡ ಕರಿಸಿ, ಅವರಿಗೆ ಹೇಳ್ದ್ದೇನಂದರೆ, ನೀವು ಈ
ಮನುಷ್ಯನನ್ನು, ಜನರನ್ನು ತಿರುಗ ಬೀಳ ಮಾಡುವವನೆಂದು,
ನನ್ನ ಬಳಿಗೆ ತಂದಿದ್ದೀರಿ; ಮತ್ತು, ಇಗೋ, ನಾನು ನಿಮ್ಮ ಮುಂದೆ
ವಿಚಾರಿಸಿ, ನೀವು ಅವನ ಮೇಲೆ ದೂರು ಹೇಳುವವುಗಳಲ್ಲಿ ಒಂದು
೧೫ ಅಪರಾಧವನ್ನಾದರೂ ಈ ಮನುಷ್ಯನಲ್ಲಿ ಕಾಣಲಿಲ್ಲ; ಹೆರೋದ
ನು ಸಹ ಕಾಣಲಿಲ್ಲ; ಅವನ ಬಳಿಗೆ ನಿಮ್ಮನ್ನು ಕಳುಹಿಸಿದೆನಲ್ಲ?
ಮತ್ತು, ಇಗೋ, ಮರಣಕ್ಕೆ ಪಾತ್ರವಾದದ್ದೇನಾದರೂ ಅವನಿಗೆ
೧೬ ತೀರ್ಪು ಆಗಲಿಲ್ಲ. ಹೀಗಿರುವದರಿಂದ ಅವನನ್ನು ಶಿಕ್ಷಿಸಿ, ಬಿಡಿಸು
೧೭ವೆನು. ಹ್ಯಾಗಂದರೆ ಹಬ್ಬದಲ್ಲಿ ಅವರಿಗೆ ಒಬ್ಬನನ್ನು ಬಿಡಿಸು
ವದು ಅವಶ್ಯವಾಗಿತ್ತು.

೧೮ ಆಗ ಎಲ್ಲರು ಕೂತ, ಇವನನ್ನು ತೆಗೆದು ಹಾಕು, ಬರಬ್ಬನ
ನ್ನು ನಮಗೆ ಬಿಡಿಸು ಎಂದು, ಕೂಗಿದರು. ಇವನು ಪಟ್ಟಣದಲ್ಲಿ
ಉಂಟಾದ ಒಂದು ಕಲಹಕ್ಕೋಸ್ಕರವೂ, ಕೊಲೆಗೋಸ್ಕರವೂ,
೧೯ ಸೆರೆಯಲ್ಲಿ ಹಾಕಲ್ಪಟ್ಟಿದ್ದನು. ಆದದರಿಂದ ಪಿಲಾತನು, ಯೇಸು
೨೦ ವನ್ನು ಬಿಡಿಸ ಬೇಕೆಂದಿದ್ದು, ತಿರಿಗಿ ಹೇಳ್ದಾಗ, ಅವನನ್ನು ಪಿಲಾ
೨೧ ಬೆಗೆ ಹಾಕು! ಪಿಲಾಬೆಗೆ ಹಾಕು! ಎಂದು ಕೂಗಿದರು. ಆದರೆ ಮೂ
ರನೇ ಸಾರಿ ಅವರಿಗೆ, ಯಾಕೆ? ಕೆಟ್ಟದ್ದೇನು ಮಾಡಿದ್ದಾನೆ? ನಾನು
ಮರಣಕ್ಕೆ ಪಾತ್ರವಾದ ಅಪರಾಧ ಒಂದನ್ನಾದರೂ ಅವನಲ್ಲಿ
ಕಾಣಲಿಲ್ಲ; ಆದದರಿಂದ ಅವನನ್ನು ಶಿಕ್ಷಿಸಿ, ಬಿಡಿಸುವೆನು, ಅಂ
೨೩ ದನು. ಆದರೆ ಅವರು, ಅವನನ್ನು ಪಿಲಾಬೆಗೆ ಹಾಕ ಬೇಕೆಂದು,
ಮಹಾ ಶಬ್ದಗಳಿಂದ ಬೇಡಿ ಕೊಂಡು, ತೊಂದರೆ ಪಡಿಸಿದರು. ಮ
ತ್ತು ಅವರ ಶಬ್ದಗಳೂ ಪ್ರಧಾನ ಯಾಜಕರ ಶಬ್ದಗಳೂ ಪ್ರಬಲವಾ
೨೪ ದವು. ಆಗ ಪಿಲಾತನು, ಅವರ ವಿಜ್ಞಾಪನೆಯ ಮೇರೆಗೆ ಆಗ ಬೇ
ಕೆಂದು, ನಿರ್ಣಯಿಸಿ, ಕಲಹ ಕೊಲೆಗಳಿಗೋಸ್ಕರ ಸೆರೆಯಲ್ಲಿ
೨೫ ಬಿದ್ದಿರುವ, ಅವರು ಬೇಡಿ ಕೊಂಡವನನ್ನು ಅವರಿಗೆ ಬಿಡಿಸಿ, ಯೇ
ಸುವನ್ನು ಅವರ ಚಿತ್ತಕ್ಕೆ ಒಪ್ಪಿಸಿದನು.

೨೬ ಅವನನ್ನು ತಕ್ಕೊಂಡು ಹೋಗುವಾಗ, ಅವರು ಹೊಲದಿಂದ
ಬಂದ ಕುರೇನ್ಯನಾದ ಸೀಮೋನನೆಂಬವನನ್ನು ಹಿಡಿದು, ಯೇ
ಸುವಿನ ಹಿಂದೆ ಹೊರುವ ಹಾಗೆ, ಅವನ ಮೇಲೆ ಶಿಲುಬೆಯನ್ನು
೨೭ ಇಟ್ಟರು. ಇದಲ್ಲದೆ ಜನರೂ, ಅವನ ನಿಮಿತ್ತ ಬಡು ಕೊಂಡು ಅ
ಳುವ ಹೆಂಗಸರೂ, ಬಹು ಸಮೂಹವಾಗಿ ಅವನನ್ನು ಹಿಂಬಾಲಿಸಿ
೨೮ ದರು. ಆಗ ಯೇಸು ಅವರ ಕಡೆಗೆ ತಿರುಗಿ ಕೊಂಡು, ಹೇಳಿದ್ದೇ
ನಂದರೆ, ಯೆರೂಸಲೇಮಿನ ಕುಮಾರ್ತೆಗಳ್ಳೇ, ನನ್ನ ನಿಮಿತ್ತ
ಅಳ ಬೇಡಿರಿ; ನಿಮ್ಮ ನಿಮಿತ್ತವೂ ನಿಮ್ಮ ಮಕ್ಕಳ ನಿಮಿತ್ತವೂ ಅಳ್ಳಿರಿ.
೨೯ ಯಾಕಂದರೆ, ಇಗೋ, ಬಂಜೆಯಾದವರೂ, ಹೆರದ ಗರ್ಭಗ
ಳೂ, ಹಾಲು ಕೊಡದ ಮೊಲೆಗಳೂ ಭಾಗ್ಯವುಳ್ಳವುಗಳೆಂದು
೩೦ ಹೇಳುವ ದಿವಸಗಳು ಬರುತ್ತವೆ. ಆಗ ಬೆಟ್ಟಗಳಿಗೆ ನಮ್ಮ ಮೇಲೆ
ಬೀಳಿರಿ! ಗುಡ್ಡಗಳಿಗೆ, ನಮ್ಮನ್ನು ಮುಚ್ಚಿರಿ! ಎಂದು ಹೇಳಲಾರಂಭಿ
೩೧ ಸುವರು ಯಾಕಂದರೆ ಹಸೀ ಮರದಲ್ಲಿ ಇವುಗಳನ್ನು ಮಾಡಿದರೆ,
೩೨ ಒಣಗಿದ್ದರಲ್ಲಿ ಏನಾಗುವದು? ಇದಲ್ಲದೆ ದುಷ್ಟರಾದ ಬೇರೆ ಇಬ್ಬ
ರು, ಅವನ ಸಂಗಡ ಸಂಹರಿಸಲ್ಪಡುವದಕ್ಕೆ, ಪೈಯಲ್ಪಟ್ಟರು.

೩೩ ಅವರು ಕಪಾಲೆಂಬ ಸ್ಥಳಕ್ಕೆ ಹೊರಟು ಹೋದಾಗ, ಅಲ್ಲಿ
ಅವನನ್ನೂ, ಆ ದುಷ್ಟರನ್ನೂ, ಒಬ್ಬನನ್ನು ಬಲ ಪಾರ್ಶ್ವದಲ್ಲಿ,
೩೪ ಒಬ್ಬನನ್ನು ಎಡ ಪಾರ್ಶ್ವದಲ್ಲಿ, ಶಿಲುಬೆಗೆ ಹಾಕಿದರು. ಆದರೆ
ಯೇಸು, ತಂದೆಯೇ, ಅವರಿಗೆ ಮನ್ನಿಸು; ಮಾಡುವದೇನೆಂದು ಅ
ರಿಯರು, ಅಂದನು. ಇದಲ್ಲದೆ ಅವನ ವಸ್ತ್ರಗಳನ್ನು ಚಾಲಿಟ್ಟು,
೩೫ ಚೀಟು ಹಾಕಿದರು. ಜನರು ನೋಡುತ್ತಾ ನಿಂತರು. ಮತ್ತು ಅವರ
ಸಂಗಡ ಅಧಿಪತಿಗಳು ಸಹ, ಮತ್ತೊಬ್ಬರನ್ನು ರಕ್ಷಿಸಿದನು; ಇವ
ನು ದೇವರು ಆದು ಕೊಂಡ ಕ್ರಿಸ್ತನಾಗಿದ್ದರೆ, ತನ್ನನ್ನು ರಕ್ಷಿಸಿ
೩೬ ಕೊಳ್ಳಲಿ, ಎಂದು ಗೇಲಿಟ್ಟರು. ಮತ್ತು ರಾಣುವೆಯವರು ಸಹ
೩೭ ಹತ್ತರ ಬಂದು, ಹುಳಿ ರಸವನ್ನು ಅವನಿಗೆ ತಂದು, ನೀನು ಯೆಹೂ
ದ್ಯರ ಅರಸನಾಗಿದ್ದರೆ, ನಿನ್ನನ್ನು ನೀನೇ ರಕ್ಷಿಸಿಕೋ ಎಂದು ಹೇಳಿ,
೩೮ ಅವನನ್ನು ಹಾಸ್ಯ ಮಾಡಿದರು. ಇದಲ್ಲದೆ, ಇವನು ಯೆಹೂದ್ಯರ
ಅರಸನಾಗಿದ್ದಾನೆ, ಎಂಬ ಮೇಲ್ಬರಹವು ಗ್ರೇಕ ರೋಮಾಯ
ಇಬ್ರೀಯ ಅಕ್ಷರಗಳಲ್ಲಿ ಅವನ ಮೇಲ್ಗಡೆ ಬರೆಯಲ್ಪಟ್ಟಿತು.

೩೯ ಮತ್ತು ತೂಗಿರುವ ದುಷ್ಟರಲ್ಲಿ ಒಬ್ಬನು, ನೀನು ಕ್ರಿಸ್ತನಾಗಿ
ದ್ದರೆ, ನಿನ್ನನೂ ನಮ್ಮನ್ನೂ ರಕ್ಷಿಸೆಂದು, ಅವನನ್ನು ದೂಷಿಸಿ
೪೦ ದನು. ಆದರೆ ಬೇರೊಬ್ಬನು ಅವನನ್ನು ಗದರಿಸಿ, ಅದೇ ಅಜ್ಞೆ
ಯಲ್ಲಿರುವ ನೀನು ದೇವರಿಗೆ ಭಯ ಪಡುವದಿಲ್ಲವೋ? ನಮಗೆ
೪೧ ನ್ಯಾಯವಾಗಿದೆ ಸರಿ; ಯಾಕಂದರೆ ನಾವು ಮಾಡಿದವುಗಳಿಗೆ
ತಕ್ಕದ್ದನ್ನು ಹೊಂದುತ್ತೇವೆ; ಆದರೆ ಇವನು ಅಯೋಗ್ಯವಾ
೪೨ ದದ್ದೇನೂ ಮಾಡಲಿಲ್ಲ, ಎಂದು ಹೇಳಿ, ಯೇಸುವಿಗೆ, ಕರ್ತನೇ,
ನಿನ್ನ ರಾಜ್ಯದೊಳಗೆ ಬರುವಾಗ, ನನ್ನನ್ನು ಜ್ಞಾಪಕ ಮಾಡಿಕೋ,
೪೩ ಅಂದನು. ಯೇಸು ಅವನಿಗೆ, ನಿಶ್ಚಯವಾಗಿ ನಿಜಕ್ಕೆ ಹೇಳುತ್ತೇನೆ,
ಈ ಹೊತ್ತು ನನ್ನ ಸಂಗಡ ಪರದೈಸಿನಲ್ಲಿ ಇರುವಿ, ಅಂದನು.

೪೪ ಹೆಚ್ಚು ಕಡಿಮೆ ಆರನೇ ತಾಸಾದಾಗ, ದೇಶವೆಲ್ಲಾದರ ಮೇಲೆ
೪೫ ಒಂಭತ್ತನೇ ತಾಸಿನ ವರಿಗೂ ಕತ್ತಲಾಯಿತು; ಸೂರ್ಯನು ಕತ್ತ
ಲಾದನು; ಮತ್ತು ದೇವಾಲಯದ ತೆರೆಯು ಮಧ್ಯದಲ್ಲಿ ಹರಿದು
೪೬ ಹೋಯಿತು. ಆಗ ಯೇಸು ಮಹಾ ಶಬ್ದದಿಂದ ಕೂಗಿ, ತಂದೆ
ಯೇ, ನಿನ್ನ ಕೈಗಳಲ್ಲಿ ನನ್ನ ಆತ್ಮವನ್ನು ಒಪ್ಪಿಸುತ್ತೇನೆ, ಅಂ
ದನು; ಇವುಗಳನ್ನು ಹೇಳಿ, ಪ್ರಾಣ ಬಿಟ್ಟನು.

೪೭ ಶತಾಧಿಪತಿಯು, ಆದದ್ದನ್ನು ನೋಡಿ, ದೇವರನ್ನು ಮಹಿಮೆ
ಪಡಿಸಿ, ನಿಜವಾಗಿ ಈ ಮನುಷ್ಯನು ನೀತಿವಂತನಾಗಿದ್ದನು, ಅಂ
೪೮ ದನು. ಮತ್ತು ಆ ನೋಟಕ್ಕೆ ಕೂಡಿ ಬಂದ ಸಮೂಹಗಳೆಲ್ಲಾ
ಆದವುಗಳನ್ನು ನೋಡಿ, ಎದೆ ಬಡು ಕೊಂಡು, ತಿರಿಗಿ ಹೋದರು.
೪೯ ಇದಲ್ಲದೆ ಅವನ ಪರಿಚಿತರೆಲ್ಲರೂ, ಅವನ ಸಂಗಡ ಗಲಿಲಾಯದಿಂ
ದ ಬಂದು, ಅವನನ್ನು ಹಿಂಬಾಲಿಸಿದ ಸ್ತ್ರೀಯರೂ ಇವುಗಳನ್ನು
ನೋಕುತ್ತಾ, ದೂರವಲ್ಲಿ ನಿಂತಿದ್ದರು.

೫೦ ಮತ್ತು, ಇಗೋ, ಯೆಹೂದ್ಯರ ಪಟ್ಟಣವಾದ ಅರಿಮತಾಯದ
ವನಾದ ಯೋಸೆಫನೆಂಬ ಒಬ್ಬ ಮನುಷ್ಯನಿದ್ದನು. ಅವನು ಮಂ
೫೧ ತ್ರಿಯು, ನೀತಿವಂತನಾದ ಒಳ್ಳೇ ಮನುಷ್ಯನು; ಅವರ ಆಲೋ
ಚನೆಗೂ ಕೃತ್ಯಕ್ಕೂ ಸಮ್ಮತಿ ಪಡದೆ ಇದ್ದನು. ಅವನು ತಾನು
೫೨ ದೇವರ ರಾಜ್ಯವನ್ನು ನಿರೀಕ್ಷಿಸುತ್ತಿದ್ದನು. ಅವನು ಪಿಲಾತನ ಬಳಿಗೆ
೫೩ ಬಂದು, ಯೇಸುವಿನ ಶರೀರವನ್ನು ಬೇಡಿ ಕೊಂಡು, ಅದನ್ನು ಇ
ಳಿಸಿ, ಅದನ್ನು ಬಟ್ಟೆಯಲ್ಲಿ ಸುತ್ತಿ, ಇನ್ನು ಯಾರೂ ಇರಿಸಲ್ಪ
ಡದಂಥ, ಬಂಡೆಯಲ್ಲಿ ತೋಡಿದಂಥ, ಸಮಾಧಿಯಲಿ ಅದನ್ನು
೫೪ ಇಟ್ಟನು. ಇದಲ್ಲದೆ ಸಿದ್ಧ ಮಾಡುವ ದಿವಸವಾಗಿತ್ತು; ಸಬ್ಬತು
ಸುಮಾಪಿಸಿತು.

೫೫ ಮತ್ತು ಅವನ ಸಂಗಡ ಗಲಿಲಾಯದಿಂದ ಬಂದ ಹೆಂಗಸರು
ಸಹ ಹಿಂಬಾಲಿಸಿ, ಸಮಾಧಿಯನ್ನೂ, ಅವನ ಶರೀರವು ಇಡಲ್ಪ
೫೬ ಟ್ಟ ರೀತಿಯನ್ನೂ ನೋಡಿದರು. ತರುವಾಯ ಅವರು ತಿರಿಗಿ
ಹೋಗಿ, ಸುಗಂಧಗಳನ್ನೂ ತೈಲಗಳನ್ನೂ ಸಿದ್ಧ ಮಾಡಿ, ಕಟ್ಟಿ
ಳೆಯ ಮೇರೆಗೆ ಸಬ್ಬತಿನಲ್ಲಿ ಸುಮ್ಮನಿದ್ದರು.

## ೨೪. ಸಂಧಿ.

೧ ಆದರೆ ಸಬ್ಬತಿನ ಮಾರನೆ ದಿವಸದಲ್ಲಿ, ಬೆಳ್ಳಿಗ್ಯೆ, ಅವರು
ತಾವು ಸಿದ್ಧ ಮಾಡಿದ ಸುಗಂಧಗಳನ್ನು ತೆಗೆದು ಕೊಂಡು, ಬೇರೆ
೨ ಕೆಲವು ಸ್ತ್ರೀಯರ ಸಂಗಡ ಸಮಾಧಿಗೆ ಬಂದು, ಕಲ್ಲು ಸಮಾಧಿ
೩ ಯಿಂದ ಹೊರಳಿಸಿದ್ದನ್ನು ನೋಡಿ, ಒಳಗೆ ಹೋಗಿ, ಕರ್ತ
೪ ನಾದ ಯೇಸುವಿನ ಶರೀರವನ್ನು ಕಾಣಲಿಲ್ಲ. ಇದರ ವಿಷಯ
ಅವರು ಸಂದೇಹ ಪಡುತ್ತಿರುವಾಗ ಆದದ್ದೇನಂದರೆ, ಇಗೋ, ಮಿಂ
ಚುವ ವಸ್ತ್ರಗಳುಳ್ಳ ಇಬ್ಬರು ಮನುಷ್ಯರು ಅವರ ಬಳಿಯಲ್ಲಿ
೫ ನಿಂತಿದ್ದರು. ಅವರು ಭಯಸ್ಥರಾಗಿ, ಮುಖವನ್ನು ನೆಲಕ್ಕೆ ಬೊಗ್ಗಿ
ಸುವಾಗ, ಅವರು ಅವರಿಗೆ, ನೀವು ಬದುಕುವವನನ್ನು ಸತ್ತವರಲ್ಲಿ
೬ ಹುಡುಕುವದೇನು? ಅವನು ಇಲ್ಲಿ ಇಲ್ಲ, ಎದ್ದಿದ್ದಾನೆ; ಅವನು ಗಲಿ
೭ ಲಾಯದಲ್ಲಿದ್ದಾಗ, ಮನುಷ್ಯನ ಮಗನು ಪಾಪಿಷ್ಠರಾದ ಮನು
ಷ್ಯರ ಕೈಗಳಿಗೆ ಒಪ್ಪಿಸಲ್ಪಟ್ಟು, ಶಿಲುಬೆಗೆ ಹಾಕಲ್ಪಟ್ಟು, ಮೂ
ರನೇ ದಿವಸದಲ್ಲಿ ಏಳ ಬೇಕೆಂಬಹಾಗೆ ನಿಮಗೆ ಹೇಳಿದ್ದನ್ನು ಜ್ಞಾ
ಪಕ ಮಾಡಿ ಕೊಳ್ಳಿರಿ, ಅಂದರು.

೮ ಆಗ ಅವನ ಮಾತುಗಳನ್ನು ಜ್ಞಾಪಕ ಮಾಡಿ ಕೊಂಡರು. ಮ
೯ ತ್ತು ಸಮಾಧಿಯಿಂದ ತಿರಿಗಿ ಹೋಗಿ, ಹನ್ನೊಂದು ಮಂದಿಗೂ,
೧೦ ಮಿಕ್ಕಾದವರೆಲ್ಲರಿಗೂ, ಇವುಗಳನ್ನೆಲ್ಲಾ ಶಿಳ್ಳಿಸಿದರು. ಆ ಪ್ರಸ್ತಲ
ರಿಗೆ ಇವುಗಳನ್ನು ಹೇಳಿದವರು ಯಾರಂದರೆ, ಮಗ್ದಲದವಳಾದ
ಮರಿಯಳೂ, ಯೋಹಾನಳೂ, ಯಾಕೋಬನ ಮರಿಯಳೂ,
೧೧ ಅವರ ಸಂಗಡ ಇದ್ದ ಮಿಕ್ಕಾದವರೂ. ಆದರೆ ಅವರ ಮಾತುಗ
ಳು ಅವರಿಗೆ ಹರಟೆಯ ಹಾಗೆ ಕಾಣಿಸಿದವರಿಂದ, ಅವರನ್ನು ನಂ
೧೨ ಬಲಿಲ್ಲ. ಆದರೆ ಪೇತ್ರನು ಎದ್ದು, ಸಮಾಧಿಗೆ ಓಡಿ ಹೋಗಿ, ಬೊಗ್ಗಿ



ಕೊಂಡು, ಬಟ್ಟೆಗಳು ಮಾತ್ರ ಬಿದ್ದಿರುವದನ್ನು ಕಂಡು, ಆದ ಸಂ
ಗತಿಗೆ ಆಶ್ಚರ್ಯ ಪಟ್ಟು, ತನ್ನ ಮನೆಗೆ ಹೋದನು.

೧೩ ಮತ್ತು, ಇಗೋ, ಅವರಲ್ಲಿ ಇಬ್ಬರು ಅದೇ ದಿವಸದಲ್ಲಿ ಯೆ
ರೂಸಲೇಮಿಗೆ ಅರವತ್ತು ಸ್ತಾದ್ಯಗಳಷ್ಟು ದೂರವಾದ ಎಮಾಹು
೧೪ ವೆಂಬ ಗ್ರಾಮಕ್ಕೆ ಹೋಗುತ್ತಾ, ಸಂಭವಿಸಿದ ಈ ಎಲ್ಲಾ ಕಾರ್ಯ
೧೫ ಗಳ ವಿಷಯವಾಗಿ, ತಮ್ಮೊಳಗೆ ಸಂಭಾಷಿಸಿ ಕೊಳ್ಳುತ್ತಿದ್ದರು. ಅವ
ರು ಸಂಭಾಷಿಸಿ ಕೊಂಡು, ತರ್ಕಿಸುತ್ತಿರಲಾಗಿ, ಯೇಸು ತಾನೇ
೧೬ ಸಮೀಪಕ್ಕೆ ಬಂದು, ಅವರ ಸಂಗಡ ಹೋದನು. ಆದರೆ ಅವನ
ನ್ನು ತಿಳಿಯದ ಹಾಗೆ, ಅವರ ಕಣ್ಣುಗಳು ಹಿಡಿಯಲ್ಪಟ್ಟವು.

೧೭ ಅವನು ಅವರಿಗೆ, ನೀವು ನಡೆಯುತ್ತಾ, ದುಃಖ ಪಟ್ಟು, ನಿ
ಮ್ಮೊಳಗೆ ಸಂಭಾಷಿಸಿ ಕೊಳ್ಳುವ ಈ ಮಾತುಗಳೇನು? ಅಂದಾಗ;
೧೮ ಕ್ಲೋಪನೆಂಬ ಒಬ್ಬನು ಉತ್ತರ ಕೊಟ್ಟು, ಅವನಿಗೆ, ನೀನೊಬ್ಬ
ನೇ ಯೆರೂಸಲೇಮಿನಲ್ಲಿ ಪರವಾಸಿಯಾಗಿದ್ದು, ಈ ದಿವಸಗಳಲ್ಲಿ
ಅದರೊಳಗೆ ಆದವುಗಳನ್ನು ತಿಳಿಯದೆ ಇದ್ದೀಯೋ? ಅಂದನು.
೧೯ ಅವನು ಅವರಿಗೆ ಎಂಥವುಗಳನ್ನು? ಅಂದಾಗ; ಅವರು ಅವನಿಗೆ
ಹೇಳಿದ್ದು, ನಜರೇತಿನವನಾದ ಯೇಸುವಿನ ಸಂಗತಿಗಳನ್ನೇ. ದೇವ
ರ ಮುಂದೆಯೂ, ಸಮಸ್ತ ಜನರ ಮುಂದೆಯೂ, ಕ್ರಿಯೆಯಲ್ಲಿ
ಯೂ ವಾಕ್ಯದಲ್ಲಿಯೂ ಬಲವುಳ್ಳ ಪ್ರವಾದಿಯಾದ ಮನು
೨೦ ಷ್ಯನಾಗಿದ್ದ ಅವನನ್ನು ಪ್ರಧಾನ ಯಾಜಕರೂ ನಮ್ಮ ಅಧಿಪತಿ
ಗಳೂ ಮರಣದ ನಿರ್ಣಯಕ್ಕೆ ಒಪ್ಪಿಸಿ, ಅವನನ್ನು ಶಿಲುಬೆಗೆ
೨೧ ಹಾಕಿಸಿದ್ದಾರೆ. ಆದರೆ ನಾವು, ಇಸ್ರಯೇಲಿಗೆ ವಿಮೋಚನೆ ಮಾಡ
ಬೇಕಾದವನು ಇವನೇ ಎಂದು, ನಿರೀಕ್ಷಿಸಿದೆವು; ಇಷ್ಟೆಲ್ಲವುಗಳಲ್ಲದೆ,
ಇವುಗಳು ಆಗಿ, ಈ ಹೊತ್ತು ಮೂರನೇ ದಿವಸ ನಡೆಯುತ್ತದೆ.
೨೨ ಮತ್ತು ನಮ್ಮಲ್ಲಿರುವ ಕೆಲವು ಹೆಂಗಸರು ಸಹ ಬೆಳ್ಳಿಗ್ಯೆ ಸಮಾಧಿಗೆ
೨೩ ಹೋಗಿ, ಅವನ ಶರೀರವನ್ನು ಕಾಣದೆ, ಬಂದು, ಅವನು ಬದು
ಕುತ್ತಾನೆಂದು ಹೇಳುವ ದೂತರ ದರ್ಶನವನ್ನು ಸಹ ನೋಡಿ
೨೪ ದ್ದೇವೆಂದು ಹೇಳಿ, ನಮ್ಮನ್ನು ಆಶ್ಚರ್ಯ ಪಡಿಸಿದರು. ಹೀಗಿರು
ವದರಿಂದ, ನಮ್ಮ ಸಂಗಡ ಇದ್ದವರಲ್ಲಿ ಕೆಲವರು ಸಮಾಧಿಗೆ ಹೋ
ಗಿ, ಆ ಹೆಂಗಸರು ಹೇಳಿದ ಹಾಗೆಯೇ ಕಂಡರು. ಆದರೆ ಅವನ
ನ್ನು ಕಾಣಲಿಲ್ಲ.

೨೫ ಆಗಲವನು ಅವರಿಗೆ ಹೇಳಿದ್ದೇನಂದರೆ, ಓ ಬುದ್ಧಿಹೀನರೇ!
ಪ್ರವಾದಿಗಳು ಹೇಳಿದವುಗಳನ್ನೆಲ್ಲಾ ನಂಬುವದಕ್ಕೆ ಮಂದ ಹೃ
೨೬ ದಯವುಳ್ಳವರೇ! ಕ್ರಿಸ್ತನು ಈ ಪ್ರಮೆಗಳನ್ನು ಪಟ್ಟು, ತನ್ನ ಮ
೨೭ ಹಿಮೆಯಲ್ಲಿ ಪ್ರವೇಶಿಸ ಬೇಕಾಗಿರಲಿಲ್ಲವೋ? ಆಗಲವನು ಮೋಶೆ
ಯಿಂದಲೂ, ಪ್ರವಾದಿಗಳೆಲ್ಲರಿಂದಲೂ, ಆರಂಭಿಸಿ, ಸಮಸ್ತ ಬರಹ
ಗಳಲ್ಲಿ ತನ್ನ ವಿಷಯವಾದವುಗಳನ್ನು ಅವರಿಗೆ ವಿವರಿಸಿದನು.

೨೮ ಅವರು ಹೋಗುವ ಗ್ರಾಮಕ್ಕೆ ಸಮೀಪಿಸಿದಾಗ, ಅವನು ಇ
೨೯ ನ್ನು ದೂರ ಹೋಗ ಬೇಕೆಂಬ ಹಾಗೆ ಮಾಡಿದನು. ಆಗಲವರು,
ನಮ್ಮ ಸಂಗಡ ಇರು; ಸಾಯಂಕಾಲವಾಯಿತು; ದಿವಸವು ಸಂದು
ಹೋಯಿತು, ಎಂದು ಅವನಿಗೆ ಬಲವಂತ ಮಾಡಿದ್ದರಿಂದ, ಅವ
ರ ಸಂಗಡ ಇರುವದಕ್ಕೆ ಪ್ರವೇಶಿಸಿದನು.

೩೦ ಅವನು ಅವರ ಸಂಗಡ ಊಟಕ್ಕೆ ಕೂತು ಕೊಂಡಿರುವಾಗ, ಪಿ
ನಾಯಿತಂದರೆ, ಅವನು ರೊಟ್ಟಿ ತಕ್ಕೊಂಡು, ಸ್ತೋತ್ರ ಮಾಡಿ,
೩೧ ಮುರಿದು, ಅವರಿಗೆ ಕೊಟ್ಟನು. ಆಗಲವರ ಕಣ್ಣುಗಳು ತೆರೆಯ
ಲ್ಪಟ್ಟು, ಅವನ ಗುರುತು ತಿಳಿದರು. ಮತ್ತು ಅವನು ಅವರನ್ನು
ಬಿಟ್ಟು, ಕಾಣದೆ ಹೋದನು.

೩೨ ಆಗ, ಅವನು ಮಾರ್ಗದಲ್ಲಿ ನಮ್ಮ ಸಂಗಡ ಮಾತಾಡಿ, ಬರ
ಹಗಳನ್ನೂ, ನಮಗೆ ತೆರೆಯುವಾಗ, ನಮ್ಮ ಹೃದಯವು ನಮ್ಮೊ
ಳಗೆ ಉರಿಯಲಿಲ್ಲವೋ? ಎಂದು ತಮ್ಮೊಳಗೆ ಹೇಳಿ ಕೊಂಡು, ಅ
ದೇ ಘಳಿಗೆಯಲ್ಲಿ ಎದ್ದು, ಯೆರೂಸಲೇಮಿಗೆ ತಿರಿಗಿ ಹೋಗಿ,
೩೩ ಕರ್ತನು ನಿಜವಾಗಿ ಎದ್ದಿದ್ದಾನೆಂದೂ, ಸೀಮೋನನಿಗೆ ಕಾಣಿಸಿ
ಕೊಂಡಿದ್ದಾನೆಂದೂ, ಹೇಳುವ ಆ ಹನ್ನೊಂದು ಮಂದಿಯೂ,
೩೪ ಅವರ ಸಂಗಡಿಗರೂ ಕೂಡಿ ಬಂದಿರುವದನ್ನು ಕಂಡು, ತಾವೇ
ಮಾರ್ಗದಲ್ಲಿ ಆದವುಗಳನ್ನೂ, ಅವನು ರೊಟ್ಟಿ ಮುರಿಯುವ
ದರಲ್ಲಿ ತಮಗೆ ತಿಳಿಯಲ್ಪಟ್ಟನೆಂಬುವದನ್ನೂ, ವಿವರಿಸಿದರು.

೩೫ ಇವುಗಳನ್ನು ಅವರು ಮಾತಾಡುತ್ತಿರುವಾಗ, ಯೇಸು ತಾನೇ
ಅವರ ಮಧ್ಯದಲ್ಲಿ ನಿಂತು, ನಿಮಗೆ ಸಮಾಧಾನವಾಗಲಿ, ಎಂದು
೩೬ ಅವರಿಗೆ ಹೇಳಿದನು. ಆದರೆ ಅವರು ದಿಗುಲು ಪಟ್ಟು, ಭಯಸ್ಥ
ರಾಗಿ ಆತ್ಮನನ್ನು ಕಂಡೆವೆಂದು, ನೆನಸಿದರು. ಆಗಲವನು ಅವ
ರಿಗೆ ಹೇಳಿದ್ದೇನಂದರೆ, ಯಾಕೆ ಕಳವಳಗೊಳ್ಳುತ್ತೀರಿ; ಯಾಕೆ
ನಿಮ್ಮ ಹೃದಯಗಳಲ್ಲಿ ಆಲೋಚನೆಗಳು ಪುಟ್ಟುತ್ತವೆ; ನನ್ನ ಕೈ
ಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ; ನಾನೇ ಅಲ್ಲವೋ?
ನನ್ನನ್ನು ಮುಟ್ಟಿ, ನೋಡಿರಿ; ಯಾಕಂದರೆ ಮಾಂಸವೂ ಎಲು
ವುಗಳೂ, ನನಗೆ ಉಂಟೆಂದು ನೀವು ನೋಡುವ ಪ್ರಕಾರ ಆತ್ಮಕ್ಕೆ
೪೦ ಇಲ್ಲ. ಇದನ್ನು ಹೇಳಿ, ತನ್ನ ಕೈ ಕಾಲುಗಳನ್ನು ಅವರಿಗೆ ತೋರಿ
೪೧ ಸಿದನು. ಅವರು ಸಂತೋಷದಿಂದ ಇನ್ನೂ ನಂಬದೆ, ಆಶ್ಚರ್ಯ
ಪಡುವಾಗ, ಅವರಿಗೆ ಇಲ್ಲಿ ತಿನ್ನುವ ಪದಾರ್ಥ ಏನಾದರೂ ನಿ
೪೨ ಮಗೆ ಉಂಟೋ? ಅಂದನು. ಅವರು ಸುಟ್ಟ ಮೀನಿನ ತುಂಡ
ನ್ನೂ ಸ್ವಲ್ಪ ಜೇನು ತೊಟ್ಟಿಯನ್ನೂ ಅವನಿಗೆ ಕೊಟ್ಟರು.
೪೩ ಅವನು ತೆಗೆದು ಕೊಂಡು, ಅವರ ಮುಂದೆ ತಿಂದನು.

೪೪ ಮತ್ತು ಅವರಿಗೆ ಹೇಳಿದ್ದೇನಂದರೆ, ಮೋಶೆಯ ನ್ಯಾಯ
ಪ್ರಮಾಣದಲ್ಲಿಯೂ, ಪ್ರವಾದಿಗಳಲ್ಲಿಯೂ, ಕೀರ್ತನೆಗಳಲ್ಲಿ
ಯೂ, ನನ್ನನ್ನು ಕುರಿತು ಬರೆದಿರುವವುಗಳೆಲ್ಲಾ ಈಡೇರ ಬೇಕೆಂ
ದು, ನಾನು ಇನ್ನೂ ನಿಮ್ಮ ಸಂಗಡ ಇದ್ದಾಗ ನಿಮಗೆ ಹೇಳಿದ
೪೫ ವಾಕ್ಯಗಳು ಇವೇ. ಆಗಲವರು ಬರಹಗಳನ್ನು ಗ್ರಹಿಸುವ ಹಾಗೆ,
೪೬ ಅವರ ಬುದ್ಧಿಯನ್ನು ತೆರೆದು, ಅವರಿಗೆ ಹೇಳ್ದೇನಂದರೆ, ಹೀಗೆ
ಬರೆದದೆ; ಮತ್ತು ಹೀಗೆ ಕ್ರಿಸ್ತನು ಶ್ರಮೆ ಪಟ್ಟು, ಮೂರನೇ ದಿವ
೪೭ ಸದಲ್ಲಿ ಸತ್ತವರೊಳಗಿಂದ ಏಳಲೂ, ಯೆರೂಸಲೇಮಿನಿಂದ ಆರಂ
ಭವಾಗಿ ಎಲ್ಲಾ ಜನಾಂಗಗಳಿಗೆ ಮಾನಸಾಂತರವೂ ಪಾಪ ಪರಿ
೪೮ ಹಾರವೂ ಅವನ ಹೆಸರಿನಲ್ಲಿ ಸಾರಲ್ಪಡಲೂ, ಬೇಕಾಗಿತ್ತು. ನೀವು
೪೯ ಇವುಗಳಿಗೆ ಸಾಕ್ಷಿಗಳಾಗಿದ್ದೀರಿ. ಮತ್ತು, ಇಗೋ, ನನ್ನ ತಂದೆಯ
ವಾಗ್ದತ್ತವನ್ನು ನಿಮ್ಮ ಮೇಲೆ ಕಳುಹಿಸುತ್ತೇನೆ; ಆದರೆ ನೀವು
ಉನ್ನತ ಸ್ಥಳದಿಂದ ಬಲವನ್ನು ಧರಿಸಿ ಕೊಳ್ಳುವ ಪರ್ಯಂತರ,
ಯೆರೂಸಲೇಮ್ ಪಟ್ಟಣದಲ್ಲಿ ಇರಿ.

೫೦ ಆ ಮೇಲೆ ಅವರನ್ನು ಬೇತಾನ್ಯದ ವರಿಗೂ ಹೊರಗೆ ಕರ
ಕೊಂಡು ಹೋಗಿ, ತನ್ನ ಕೈಗಳನ್ನು ಎತ್ತಿ, ಅವರನ್ನು ಆಶೀ
೫೧ ರ್ವದಿಸಿದನು. ಅವನು ಅವರನ್ನು ಆಶೀರ್ವದಿಸುತ್ತಿರುವಾಗ,
೫೨ ಅವರನ್ನು ಬಿಟ್ಟು, ಪರಲೋಕಕ್ಕೆ ಎತ್ತಲ್ಪಟ್ಟನು. ಮತ್ತು ಅವ
ರು ಅವನಿಗೆ ನಮಸ್ಕರಿಸಿ, ಮಹಾ ಸಂತೋಷದಿಂದ ಯೆರೂ
೫೩ ಸಲೇಮಿಗೆ ತಿರಿಗಿ ಹೋದರು. ಮತ್ತು ದೇವರನ್ನು ಹೋಗಳುತ್ತಾ,
ಸ್ತೋತ್ರ ಮಾಡುತ್ತಾ, ಯಾವಾಗಲೂ ದೇವಾಲಯದಲ್ಲಿ ಇದ್ದ
ರು. ಆಮೆನ್.

# THE GOSPEL OF JOHN.

## ಯೋಹಾನನು ಬರೆದ ಸುವಾರ್ತೆ.

### ೧. ಸಂಧಿ.

೧ ಆದಿಯಲ್ಲಿ ವಾಕ್ಯವು ಇತ್ತು. ಆ ವಾಕ್ಯವು ದೇವರ ಬಳಿಯ
೨ ಲ್ಲಿ ಇತ್ತು. ಆ ವಾಕ್ಯವು ದೇವರಾಗಿತ್ತು. ಅದು ಆದಿಯಲ್ಲಿ ದೇ
೩ ವರ ಬಳಿಯಲ್ಲಿ ಇತ್ತು. ಅದರಿಂದ ಎಲ್ಲಾ ಉಂಟಾಯಿತು. ಅದು
೪ ಇಲ್ಲದೆ, ಉಂಟಾದವುಗಳಲ್ಲಿ ಒಂದಾದರೂ ಉಂಟಾಗಲಿಲ್ಲ. ಅದ
ರಲ್ಲಿ ಜೀವವು ಇತ್ತು. ಆ ಜೀವವು ಮನುಷ್ಯರ ಬೆಳಕಾಗಿತ್ತು.
೫ ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಗ್ರಹಿಸ
ಲಿಲ್ಲ.

೬ ದೇವರಿಂದ ಕಳುಹಿಸಲ್ಪಟ್ಟ ಒಬ್ಬ ಮನುಷ್ಯನಿದ್ದನು; ಅವನ
೭ ಹೆಸರು ಯೋಹಾನನು. ಎಲ್ಲರು ಅವನ ಮೂಲವಾಗಿ ವಿಶ್ವಾಸಿ
ಸುವ ಹಾಗೆ, ಅವನು ಬೆಳಕಿನ ವಿಷಯ ಸಾಕ್ಷಿ ಕೊಡುವದಕ್ಕೆ
೮ ಸಾಕ್ಷಿಯಾಗಿ ಬಂದನು. ಅವನು ಆ ಬೆಳಕಲ್ಲ, ಆ ಬೆಳಕಿನ ವಿಷ
ಯ ಸಾಕ್ಷಿ ಕೊಡುವದಕ್ಕೆ ಬಂದನು.

೯ ಅದು ಲೋಕಕ್ಕೆ ಬರುವ ಪ್ರತಿ ಮನುಷ್ಯನಿಗೆ ಬೆಳಕು ಕೊ
೧೦ ಡುವ ನಿಜವಾದ ಬೆಳಕಾಗಿತ್ತು. ಲೋಕದಲ್ಲಿ ಇದ್ದನು; ಲೋಕವು
ಅವನಿಂದ ಉಂಟಾಯಿತು; ಆದರೆ ಲೋಕವು ಅವನನ್ನು ಅರಿಯ
೧೧ ಲಿಲ್ಲ. ಸ್ವಂತವಾದದ್ದಕ್ಕೆ ಬಂದನು; ಆದರೆ ಸ್ವಂತವಾದವರು ಅ
೧೨ ವನನ್ನು ಅಂಗೀಕರಿಸಲಿಲ್ಲ. ಆದರೆ ಅವನನ್ನು ಅಂಗೀಕರಿಸಿದವ
ರಷ್ಟು ಅವನ ಹೆಸರಿನಲ್ಲಿ ವಿಶ್ವಾಸವಿಡುವವರಾದ ಅವರಿಗೆ, ದೇವ
೧೩ ರ ಮಕ್ಕಳಾಗುವದಕ್ಕೆ, ಅಧಿಕಾರ ಕೊಟ್ಟನು. ಇವರು ರಕ್ತದಿಂ
ದಲ್ಲ, ಮಾಂಸದ ಚಿತ್ತದಿಂದಲ್ಲ, ಪುರುಷನ ಚಿತ್ತದಿಂದಲ್ಲ, ದೇ
ವರಿಂದಲೇ ಹುಟ್ಟಿದರು.

೧೪ ಇದಲ್ಲದೆ ವಾಕ್ಯವು ಮಾಂಸವಾಯಿತು. ಕೃಪೆಯಿಂದಲೂ
ಸತ್ಯದಿಂದಲೂ ತುಂಬಾಗಿ, ನಮ್ಮಲ್ಲಿ ವಾಸ ಮಾಡಿತು. ಮತ್ತು
ತಂದೆಯಿಂದ ಒಬ್ಬನೇ ಹುಟ್ಟಿದವನ ಮಹಿಮೆಯ ಹಾಗೆ ಅವನ
ಮಹಿಮೆಯನ್ನು ನೋಡಿದೆವು.

೧೫ ಅವನನ್ನು ಕುರಿತು ಯೋಹಾನನು ಸಾಕ್ಷಿ ಕೊಟ್ಟು, ಕೂಗಿ
ದ್ದೇನಂದರೆ, ನಾನು ಹೇಳಿದವನು ಇವನೇ; ನನ್ನ ಹಿಂದೆ ಬರುವವ
ನು ನನಗೆ ಮುಂದಿನವನಾಗಿದ್ದಾನೆ; ಯಾಕಂದರೆ ನನಗೆ ಮುಂಚೆ
೧೬ ಇದ್ದನು. ಮತ್ತು ಅವನ ಸಂಪೂರ್ಣತೆಯೊಳಗಿಂದ ನಾವೆಲ್ಲರು
೧೭ ಕೃಪೆಯ ಮೇಲೆ ಕೃಪೆಯನ್ನು ಹೊಂದಿದ್ದೇವೆ. ಹ್ಯಾಗಂದರೆ
ನ್ಯಾಯಪ್ರಮಾಣವು ಮೋಶೆಯ ಮುಖಾಂತರ ಕೊಡಲ್ಪಟ್ಟಿ
ತು. ಕೃಪೆಯೂ ಸತ್ಯವೂ ಯೇಸು ಕ್ರಿಸ್ತನ ಮುಖಾಂತರ
೧೮ ಉಂಟಾದವು. ದೇವರನ್ನು ಯಾವನಾದರೂ ಎಂದೂ ನೋಡ
ಲಿಲ್ಲ. ತಂದೆಯ ಎದೆಯಲ್ಲಿರುವ ಒಬ್ಬನಾಗಿ ಹುಟ್ಟಿದ ಮಗನು,
ಅವನೇ ಅವನನ್ನು ತಿಳಿಯ ಮಾಡಿದ್ದಾನೆ.

೧೯ ಮತ್ತು ಯೋಹಾನನ ಸಾಕ್ಷಿಯು ಇದೇ;—ನೀನು ಯಾಕೆಂ
ದು ಅವನನ್ನು ಕೇಳುವದಕ್ಕೆ ಯೆಹೂದ್ಯರು ಯೆರೂಸಲೇಮಿ
೨೦ ನಿಂದ ಯಾಜಕರನ್ನೂ ಲೇವಿಯರನ್ನೂ ಕಳುಹಿಸಿದಾಗ, ಅವನು
ಬೊಂಕನೆ, ಅರಿಕೆ ಮಾಡಿ, ನಾನು ಕ್ರಿಸ್ತನಲ್ಲವೆಂದು, ಅರಿಕೆ ಮಾ
೨೧ ಡಿದನು. ಅವರು, ಹಾಗಾದರೆ ಏನು? ನೀನು ಎಲೀಯನಾಗಿದ್ದೀ
ಯೋ? ಎಂದು ಕೇಳಿದರು. ಅಲ್ಲ, ಅಂದನು. ನೀನು ಆ ಪ್ರವಾ
ದಿಯಾಗಿದ್ದೀಯೋ? ಅಲ್ಲವೆಂದು, ಉತ್ತರ ಕೊಟ್ಟನು. ಆಗಲ
೨೨ ವನಿಗೆ, ನೀನು ಯಾರು? ನಮ್ಮನ್ನು ಕಳುಹಿಸಿದವರಿಗೆ ನಾವು
ಉತ್ತರ ಕೊಡುವ ಹಾಗೆ, ನಿನ್ನ ವಿಷಯ ಏನು ಹೇಳುತ್ತೀ? ಅನ್ನ
೨೩ ಲು; ನಾನು ಪ್ರವಾದಿಯಾದ ಯೆಶಾಯನು ಹೇಳಿದ ಪ್ರಕಾರ,
ಕರ್ತನ ಮಾರ್ಗವನ್ನು ನೆಟ್ಟಗೆ ಮಾಡಿರಿ ಎಂದು, ಅರಣ್ಯ
ದಲ್ಲಿ ಕೂಗುವವನ ಶಬ್ದವಾಗಿದ್ದೇನೆ, ಅಂದನು.

೨೪ ಕಳುಹಿಸಲ್ಪಟ್ಟವರು ಫರಿಸಾಯರ ಕಡೆಯವರಾಗಿದ್ದರು. ಮ
೨೫ ತ್ತು ಅವನನ್ನು ಕೇಳಿ, ಹಾಗಾದರೆ, ನೀನು ಕ್ರಿಸ್ತನಲ್ಲದೆ, ಎಲೀಯ
ನಲ್ಲದೆ, ಆ ಪ್ರವಾದಿ ಅಲ್ಲದೆ ಇದ್ದರೆ, ಯಾಕೆ ಸ್ನಾನ ಕೊಡುತ್ತೀ?
೨೬ ಎಂದು ಅವನಿಗೆ ಹೇಳಿದರು. ಯೋಹಾನನು ಅವರಿಗೆ ಪ್ರತ್ಯುತ್ತ
ರವಾಗಿ ನಾನು ನೀರಿನಿಂದ ಸ್ನಾನ ಕೊಡುತ್ತೇನೆ; ಆದರೆ ನೀವು
೨೭ ಅರಿಯದವನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ; ಅವನು ನನ್ನ
ಹಿಂದೆ ಬಂದು, ನನಗೆ ಮುಂದಿನವನಾಗಿದ್ದಾನೆ; ಅವನ ಕೆರದ ಜಾ
ರನ್ನು ಬಿಚ್ಚುವದಕ್ಕೆ ನಾನು ಯೋಗ್ಯನಲ್ಲ, ಅಂದನು. ಇವು
ಯೊರ್ದನಿನ ಆಚೆಯ ಬೇಥಾಬರದಲ್ಲಿ ಸಂಭವಿಸಿದವು. ಅಲ್ಲಿ
ಯೋಹಾನನು ಸ್ನಾನ ಕೊಡುತ್ತಿದ್ದನು.

೨೮ ಮಾರನೆ ದಿವಸ ಯೋಹಾನನು ತನ್ನ ಬಳಿಗೆ ಬರುವ ಯೇ
ಸುವನ್ನು ನೋಡಿ, ಇಗೋ, ಲೋಕದ ಪಾಪವನ್ನು ಹೊತ್ತು
೩೦ ಕೊಂಡು ಹೋಗುವ ದೇವರ ಕುರಿಮರಿಯು! ನನ್ನ ಹಿಂದೆ ಒಬ್ಬ
ಮನುಷ್ಯನು ಬರುತ್ತಾನೆ; ಅವನು ನನಗೆ ಮುಂದಿನವನಾಗಿ
ದ್ದಾನೆ; ಯಾಕಂದರೆ ನನಗೆ ಮುಂಚೆ ಇದ್ದನು ಎಂದು, ನಾನು
೩೧ ಹೇಳಿದವನು ಇವನೇ. ನಾನು ಸಹ ಅವನನ್ನು ಅರಿಯಲಿಲ್ಲ; ಆ
ದರೆ ಅವನು ಇಸ್ರಯೇಲಿಗೆ ಪ್ರತ್ಯಕ್ಷವಾಗುವ ಹಾಗೆ, ಇದಕ್ಕೋಸ್ಕರವೇ, ನಾನು ನೀರಿನಿಂದ ಸ್ನಾನ ಕೊಡುವವನಾಗಿ ಬಂದೆನು,
ಅಂದನು. ಮತ್ತು ಯೋಹಾನನು ಸಾಕ್ಷಿ ಕೊಟ್ಟು, ಆತ್ಮವು
೩೨ ಪಾರಿವಾಳದಂತೆ ಆಕಾಶದಿಂದ ಇಳಿದು ಬಂದು, ಅವನ ಮೇಲೆ
ನೆಲೆಯಾಗಿರುವದನ್ನು ನೋಡಿದೆನು; ನಾನು ಸಹ ಅವನನ್ನು
೩೩ ಅರಿಯಲಿಲ್ಲ; ಆದರೆ ನೀರಿನಿಂದ ಸ್ನಾನ ಕೊಡುವದಕ್ಕೆ ನನ್ನನ್ನು
ಕಳುಹಿಸಿದವನು ತಾನೇ, ಯಾವನ ಮೇಲೆ ಆತ್ಮವು ಇಳಿದು, ನೆಲೆ
ಯಾಗಿರುವದನ್ನು ನೀನು ನೋಡುವಿಯೋ, ಅವನೇ ಪರಿಶುದ್ಧಾ
ತ್ಮದಿಂದ ಸ್ನಾನ ಕೊಡುವವನಾಗಿದ್ದಾನೆಂದು, ನನಗೆ ಹೇಳಿದನು.
೩೪ ನಾನು ನೋಡಿ, ಇವನೇ ದೇವರ ಮಗನೆಂದು ಸಾಕ್ಷಿ ಕೊಟ್ಟಿದ್ದೇ
ನೆ, ಅಂದನು.

೩೫ ಮಾರನೆ ದಿವಸ ತಿರಿಗಿ ಯೋಹಾನನು ಅವನ ಶಿಷ್ಯರಲ್ಲಿ
೩೬ ಇಬ್ಬರ ಸಂಗಡ ನಿಂತಿರಲಾಗಿ, ನಡೆಯುತ್ತಾ ಇರುವ ಯೇಸುವ
ನ್ನು ನೋಡಿ, ಇಗೋ, ದೇವರ ಕುರಿಮರಿ! ಅಂದಾಗ; ಆ ಇಬ್ಬಿ
ರು ಶಿಷ್ಯರು ಅವನು ಮಾತಾಡುವದನ್ನು ಕೇಳಿ, ಯೇಸುವನ್ನು
ಹಿಂಬಾಲಿಸಿದರು.

೩೭ ಆದರೆ ಯೇಸು ತಿರುಗಿ ಕೊಂಡು, ಅವರು ಹಿಂಬಾಲಿಸುವದನ್ನು
ನೋಡಿ, ಅವರಿಗೆ, ಏನು ಹುಡುಕುತ್ತೀರಿ? ಅನ್ನಲು; ಅವನಿಗೆ, ರ



ಬ್ಬಿಯೇ, ಎಲ್ಲಿ ವಾಸಿಸುತ್ತೀ? ಅಂದರು. ರಬ್ಬಿ ಅಂದರೆ, ಬೋ
೩೮ ಧಕನು. ಅವನು ಅವರಿಗೆ, ಬಂದು ನೋಡಿರಿ, ಅಂದಾಗ; ಅವರು
ಬಂದು, ಅವನು ವಾಸಿಸುವ ಸ್ಥಳವನ್ನು ನೋಡಿ, ಆ ದಿವಸ ಅವನ
ಸಂಗಡ ವಾಸಿಸಿದರು. ಆಗ ಹೆಚ್ಚು ಕಡಿಮೆ ಹತ್ತನೇ ತಾಸಾಗಿತ್ತು.
೩೯ ಯೋಹಾನನ ಮಾತನ್ನು ಕೇಳಿ, ಯೇಸುವನ್ನು ಹಿಂಬಾಲಿಸಿದ
ಇಬ್ಬರಲ್ಲಿ ಸೀಮೋನ್ ಪೇತ್ರನ ಸಹೋದರನಾದ ಅಂದ್ರೆಯ
೪೦ ನು ಒಬ್ಬನಾಗಿದ್ದನು. ಇವನು ಮೊದಲು ತನ್ನ ಸಹೋದರನಾದ
ಸೀಮೋನನನ್ನು ಕಂಡು, ಅವನಿಗೆ, ಮೆಸ್ಸೀಯನನ್ನು ಕಂಡು
ಕೊಂಡಿದ್ದೇವೆ, ಅಂದನು. ಮೆಸ್ಸೀಯನು ಅಂದರೆ, ಅಭಿಷಿಕ್ತನು.
೪೧ ಮತ್ತು ಅವನನ್ನು ಯೇಸುವಿನ ಬಳಿಗೆ ಕರ ಕೊಂಡು ಬಂದನು.
ಯೇಸು ಅವನನ್ನು ದೃಷ್ಟಿಸಿ, ನೀನು ಯೋನನ ಮಗನಾದ ಸೀ
ಮೋನನಾಗಿದ್ದೀ; ನೀನು ಕೇಫನೆಂದು ಕರೆಯಲ್ಪಡುವಿ, ಅಂದನು.
ಅದರ ಅರ್ಥವೇನಂದರೆ, ಬಂಡೆ.

೪೩ ಮಾರನೆ ದಿವಸ ಯೇಸು ಗಲಿಲಾಯಕ್ಕೆ ಹೊರಟು ಹೋ
ಗ ಬೇಕೆಂದಿರುವಾಗ, ಫಿಲಿಪ್ಪನನ್ನು ಕಂಡು, ಅವನಿಗೆ, ನನ್ನನ್ನು
೪೪ ಹಿಂಬಾಲಿಸು, ಅಂದನು. ಈ ಫಿಲಿಪ್ಪನು ಅಂದ್ರೆಯ ಪೇತ್ರರ ಪ
೪೫ ಟ್ಟಣವಾಗಿರುವ ಬೇತ್ಸಾಯಿದದವನಾಗಿದ್ದನು. ಫಿಲಿಪ್ಪನು ನತನ
ಯೇಲನನ್ನು ಕಂಡು, ಅವನಿಗೆ, ಯಾವನ ವಿಷಯ ನ್ಯಾಯ
ಪ್ರಮಾಣದಲ್ಲಿ ಮೋಶೆಯೂ ಪ್ರವಾದಿಗಳೂ ಬಕೆವರೋ, ಆ
ನಜರೇತಿನವನಾದ ಯೋಸೆಫನ ಮಗನಾದ ಯೇಸುವನ್ನು ಕಂ
೪೬ ಡು ಕೊಂಡಿದ್ದೇವೆ, ಅಂದನು. ನತನಯೇಲನು ಅವನಿಗೆ, ಒಳ್ಳೇ
ದೇನಾದರೂ ನಜರೇತಿನಿಂದ ಹುಟ್ಟಿ ಬಹುದೋ? ಅಂದಾಗ; ಫಿಲಿ
ಪ್ಪನು ಅವನಿಗೆ, ಬಂದು ನೋಡು, ಅಂದನು.

೪೭ ಯೇಸು ತನ್ನ ಬಳಿಗೆ ಬರುವ ನತನಯೇಲನನ್ನು ನೋಡಿ,
ಅವನ ವಿಷಯ, ಇಗೋ, ನಿಜವಾದ ಇಸ್ರಯೇಲ್ಯನು; ಅವನಲ್ಲಿ
೪೮ ಕಪಟವಿಲ್ಲ, ಅಂದನು. ನತನಯೇಲನು ಅವನಿಗೆ, ನನ್ನನ್ನು ಎ
ಲ್ಲಿಂದ ಅರಿತಿದ್ದೀ? ಅನ್ನಲು; ಯೇಸು ಅವನಿಗೆ ಪ್ರತ್ಯುತ್ತರವಾಗಿ,
ಫಿಲಿಪ್ಪನು ನಿನ್ನನ್ನು ಕರೆಯುವದಕ್ಕಿಂತ ಮುಂಚೆ, ನೀನು ಅಂಜೂ
ರದ ಮರದ ಕೆಳಗೆ ಇದ್ದಾಗ, ನಿನ್ನನ್ನು ನೋಡಿದೆನು, ಅಂದನು.
೪೯ ನತನಯೇಲನು ಪ್ರತ್ಯುತ್ತರವಾಗಿ ಅವನಿಗೆ, ರಬ್ಬಿಯೇ, ನೀನು
ದೇವರ ಮಗನು, ನೀನು ಇಸ್ರಯೇಲಿನ ಅರಸನು, ಅಂದನು.
೫೦ ಯೇಸು ಅವನಿಗೆ ಪ್ರತ್ಯುತ್ತರವಾಗಿ, ಅಂಜೂರದ ಮರದ ಕೆಳಗೆ
ನಿನ್ನನ್ನು ನೋಡಿದೆನೆಂದು, ನಾನು ನಿನಗೆ ಹೇಳಿದ್ದರಿಂದ ವಿಶ್ವಾ
ಸಿಸುತ್ತೀಯೋ? ಇವುಗಳಿಗಿಂತ ದೊಡ್ಡವುಗಳನ್ನು ನೋಡುವಿ,
೫೧ ಅಂದನು. ಇನ್ನೂ ಅವನಿಗೆ, ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ
ಹೇಳುತ್ತೇನೆ, ಈಗಿನಿಂದ ಆಕಾಶವು ತೆರೆಯಲ್ಪಟ್ಟಿರುವದನ್ನೂ,
ದೇವದೂತರು ಮನುಷ್ಯನ ಮಗನ ಮೇಲೆ ಏರಿ ಹೋಗುವದ
ನ್ನೂ ಇಳಿದು ಬರುವದನ್ನೂ ನೋಡುವಿರಿ, ಅಂದನು.

### ೨. ಸಂಧಿ.

೧ ಮತ್ತು ಮೂರನೇ ದಿವಸದಲ್ಲಿ ಗಲಿಲಾಯದ ಕಾನದಲ್ಲಿ ಒಂ
ದು ಮದುವೆ ಆಯಿತು. ಯೇಸುವಿನ ತಾಯಿ ಅಲ್ಲಿ ಇದ್ದಳು.
೨ ಇದಲ್ಲದೆ ಯೇಸು, ಅವನ ಶಿಷ್ಯರು ಸಹ, ಮದುವೆಗೆ ಕರೆಯಲ್ಪ
೩ ಟ್ಟರು. ಆಗ ದ್ರಾಕ್ಷೇರಸ ಕಡಿಮೆ ಆಗಲಾಗಿ, ಯೇಸುವಿನ ತಾಯಿ
೪ ಅವನಿಗೆ, ಅವರಿಗೆ ದ್ರಾಕ್ಷೇ ರಸವು ಇಲ್ಲ, ಅಂದಳು. ಯೇಸು
ಅವಳಿಗೆ, ಸ್ತ್ರೀಯೇ, ನನಗೂ ನಿನಗೂ ಏನು? ನನ್ನ ಘಳಿಗೆ
೫ ಇನ್ನೂ ಬರಲಿಲ್ಲ, ಅನ್ನಲು; ಅವನ ತಾಯಿ ಸೇವಕರಿಗೆ, ಅವನು
ನಿಮಗೆ ಏನು ಹೇಳುವನೋ ಅದನ್ನು ಮಾಡಿರಿ, ಅಂದಳು. ಇದ
ಲ್ಲದೆ ಯೆಹೂದ್ಯರ ಶುದ್ಧೀಕರಣದ ಪ್ರಕಾರ ಎಕರು ಮೂರು
ಕೊಳ್ಳಗ ಹಿಡಿಯುವ ಆರು ಕಲ್ಲಿನ ತೊಟ್ಟಿಗಳು ಅಲ್ಲಿ ಇಟ್ಟಿದ್ದವು.
೭ ಯೇಸು ಅವರಿಗೆ, ತೊಟ್ಟಿಗಳಲ್ಲಿ ನೀರು ತುಂಬಿಸಿರಿ, ಅನ್ನಲು;
೮ ಅವುಗಳನ್ನು ಕಂಠದ ಮಟ್ಟಿಗೂ, ತುಂಬಿಸಿದರು. ಆಗಲವರಿಗೆ,
ಈಗ ಮೊಗದು, ಔತಣದ ಪಾರುಪತ್ಯಗಾರನಿಗೆ ತಕ್ಕೊಂಡು
೯ ಹೋಗಿರಿ, ಅಂದಾಗ; ತಕ್ಕೊಂಡು ಹೋದರು. ಔತಣದ ಪಾರು
ಪತ್ಯಗಾರನು ದ್ರಾಕ್ಷೇ ರಸವಾದ ನೀರನ್ನು ರುಚಿ ನೋಡಿದಾಗ,
ಎಲ್ಲಿಂದ ಬಂತೋ? ಅವನಿಗೆ ತಿಳಿಯಲಿಲ್ಲ; ಆದರೆ ನೀರು ಮೊಗದ
ಸೇವಕರಿಗೆ ತಿಳಿದಿತ್ತು. ಹೀಗಿರಲಾಗಿ ಔತಣದ ಪಾರುಪತ್ಯಗಾರನು
೧೦ ಮದಲಿಂಗನನ್ನು ಕರೆದು, ಅವನಿಗೆ, ಮನುಷ್ಯರೆಲ್ಲರು ಮೊದಲು
ಒಳ್ಳೇ ದ್ರಾಕ್ಷೇ ರಸವನ್ನು, ಮತ್ತೇರಿದ ಮೇಲೆ ಕಡಿಮೆಯಾದ
ದ್ದನ್ನು ಇಡುತ್ತಾರೆ. ಆದರೆ ನೀನು ಒಳ್ಳೇ ದ್ರಾಕ್ಷೇ ರಸವನ್ನು
೧೧ ಈಗಿನ ವರಿಗೂ ಇಟ್ಟು ಕೊಂಡಿದೀ, ಅಂದನು. ಈ ಪ್ರಕಾರ
ಯೇಸು ಲಕ್ಷಣಗಳ ಈ ಆರಂಭವನ್ನು ಗಲಿಲಾಯದ ಕಾನದಲ್ಲಿ
ಮಾಡಿ, ತನ್ನ ಮಹಿಮೆಯನ್ನು ಪ್ರಕಟಿ ಮಾಡಿದನು. ಮತ್ತು
ಅವನ ಶಿಷ್ಯರು ಅವನಲ್ಲಿ ವಿಶ್ವಾಸವಿಟ್ಟರು.

೧೨ ಇದಾದ ಮೇಲೆ ಅವನೂ ಅವನ ತಾಯಿಯೂ ಅವನ ಸ
ಹೋದರರೂ ಅವನ ಶಿಷ್ಯರೂ ಕಪೆರ್ನೌಮಿಗೆ ಇಳಿದು ಹೋ
ಗಿ, ಅಲ್ಲಿ ಕೆಲವು ದಿವಸ ಇದ್ದರು.

೧೩ ಮತ್ತು ಯೆಹೂದ್ಯರ ಪಸ್ಕವು ಸಮೀಪವಾಗಿತ್ತು. ಯೇ
೧೪ ಸು ಯೆರೂಸಲೇಮಿಗೆ ಏರಿ ಹೋಗಿ, ದೇವಾಲಯದಲ್ಲಿ ದನ
ಕುರಿ ಪಾರಿವಾಳ ಮಾರುವವರನ್ನೂ ಕೂತಿರುವ ಚೆನಿವಾರರನ್ನೂ
೧೫ ಕಂಡು, ಹಗ್ಗಗಳಿಂದ ಸಣ್ಣಿ ಕೊರಡೆ ಮಾಡಿ, ಅವರೆಲ್ಲರನ್ನೂ
ಕುರಿಗಳನ್ನೂ ದನಗಳನ್ನೂ ದೇವಾಲಯದೊಳಗಿಂದ ಹೊರಡಿಸಿ,
ಚೆನಿವಾರರ ಕೊಬ್ಬುಗಳನ್ನು ಚೆಲ್ಲಿ, ಮಣೆಗಳನ್ನು ಕೆಡವಿ ಹಾಕಿ,
೧೬ ಪಾರಿವಾಳ ಮಾರುವವರಿಗೆ, ಇವುಗಳನ್ನು ಇಲ್ಲಿಂದ ತಕ್ಕೊಂಡು
ಹೋಗಿರಿ; ನನ್ನ ತಂದೆಯ ಮನೆಯನ್ನು ವ್ಯಾಪಾರದ ಮನೆ
ಮಾಡ ಬೇಡಿರಿ, ಅಂದನು. ಆಗಲವನ ಶಿಷ್ಯರು, ನಿನ್ನ ಮನೆ
೧೭ ಯ ಆಸಕ್ತಿಯು ನನ್ನನ್ನು ತಿಂದು ಬಿಟ್ಟಿದೆ ಎಂದು, ಬರೆದಿರುವ
ದನ್ನು ಜ್ಞಾಪಕ ಮಾಡಿ ಕೊಂಡರು.

೧೮ ಆಗ ಯೆಹೂದ್ಯರು ಅವನಿಗೆ ಪ್ರತ್ಯುತ್ತರವಾಗಿ, ನೀನು ಇವು
ಗಳನ್ನು ಮಾಡುವದಕ್ಕೆ ನಮಗೆ ಯಾವ ಲಕ್ಷಣ ತೋರಿಸು
೧೯ ತ್ತೀ? ಅಂದರು. ಯೇಸು ಅವರಿಗೆ ಪ್ರತ್ಯುತ್ತರವಾಗಿ, ಈ ಮಂದಿ
ರವನ್ನು ಕೆಡವಿ ಬಿಡಿರಿ; ಮೂರು ದಿವಸಗಳಲ್ಲಿ ಅದನ್ನು ಎಬ್ಬಿಸು
೨೦ ವೆನು, ಅಂದನು. ಅದಕ್ಕೆ ಯೆಹೂದ್ಯರು, ನಾಲ್ವತ್ತಾರು ವ
ರುಷ ಈ ಮಂದಿರವು ಕಟ್ಟಲ್ಪಟ್ಟಿತು. ನೀನು ಮೂರು ದಿವಸಗ
೨೧ ಳಲ್ಲಿ ಅದನ್ನು ಎಬ್ಬಿಸುವಿಯೋ? ಅಂದರು. ಆದರೆ ಅವನು
ತನ್ನ ಶರೀರವೆಂಬ ಮಂದಿರದ ವಿಷಯವಾಗಿ ಹೇಳುತ್ತಿದ್ದನು.
೨೨ ಆದದರಿಂದ ಅವನು ಸತ್ತವರೊಳಗಿಂದ ಎದ್ದಾಗ, ಅವನ ಶಿಷ್ಯರು,
ತಮಗೆ ಇದನ್ನು ಹೇಳಿದನೆಂದು, ಜ್ಞಾಪಕ ಮಾಡಿ ಕೊಂಡು, ಬರ
ಹವನ್ನೂ ಯೇಸು ಹೇಳಿದ ವಾಕ್ಯವನ್ನೂ ನಂಬಿದರು.

೨೩ ಅವನು ಪಸ್ಕಕಾಲದ ಹಬ್ಬದಲ್ಲಿ ಯೆರೂಸಲೇಮಿನಲ್ಲಿರು

ವಾಗ, ಅನೇಕರು ಅವನು ಮಾಡಿದ ಲಕ್ಷಣಗಳನ್ನು ನೋಡಿ, ಅವ
೨೪ ನ ಹೆಸರಿನಲ್ಲಿ ವಿಶ್ವಾಸವಿಟ್ಟರು. ಆದರೆ ಯೇಸು ತನ್ನನ್ನು ಅವ
ರಿಗೆ ವಶ ಮಾಡಲಿಲ್ಲ; ಯಾಕಂದರೆ ಅವನು ಎಲ್ಲರನ್ನು ಅರಿತ
೨೫ ನು. ಮತ್ತು ಅವನಿಗೆ ಮನುಷ್ಯನ ವಿಷಯ ಯಾವನಾದರೂ
ಸಾಕ್ಷಿ ಕೊಡುವದು ಅವಶ್ಯವಿರಲಿಲ್ಲ; ಯಾಕಂದರೆ ಅವನು ಮ
ನುಷ್ಯನೊಳಗೆ ಇರುವದನ್ನು ಅರಿತನು.

## ೩. ಸಂಧಿ.

೧ ಫರಿಸಾಯರಲ್ಲಿ ಯೆಹೂದ್ಯರ ಅಧಿಪತಿಯಾದ ನಿಕೊದೇಮ
೨ ನೆಂಬ ಒಬ್ಬ ಮನುಷ್ಯನಿದ್ದನು. ಇವನು ರಾತ್ರಿಯಲ್ಲಿ ಯೇಸು
ವಿನ ಬಳಿಗೆ ಬಂದು, ಅವನಿಗೆ, ರಬ್ಬಿಯೇ, ನೀನು ದೇವರ ಬಳಿ
ಯಿಂದ ಬಂದ ಬೋಧಕನೆಂದು, ಬಲ್ಲೆವು; ಹ್ಯಾಗಂದರೆ ದೇವ
ರು ಅವನ ಸಂಗಡ ಇಲ್ಲದಿದ್ದರೆ, ಯಾವನೂ ನೀನು ಮಾಡುವ
ಈ ಲಕ್ಷಣಗಳನ್ನು ಮಾಡಲಾರನು, ಅಂದನು.
೩ ಯೇಸು ಅವನಿಗೆ ಪ್ರತ್ಯುತ್ತರವಾಗಿ, ನಿಶ್ಚಯವಾಗಿ ನಿಶ್ಚಯ
ವಾಗಿ ನಿನಗೆ ಹೇಳುತ್ತೇನೆ, ಒಬ್ಬನು ಮೇಲಿನಿಂದ ಹುಟ್ಟಿದಿದ್ದರೆ,
ದೇವರ ರಾಜ್ಯವನ್ನು ನೋಡಲಾರನು, ಅಂದನು.
೪ ನಿಕೊದೇಮನು ಅವನಿಗೆ, ಮುದುಕನಾದ ಮನುಷ್ಯನು ಹು
ಟ್ಟುವದು ಹ್ಯಾಗೆ? ಅವನ ತಾಯಿಯ ಗರ್ಭದಲ್ಲಿ ತಿರಿಗಿ ಪ್ರವೇ
ಶಿಸಿ, ಹುಟ್ಟುವದು ಆದೀತೋ? ಅಂದನು.
೫ ಯೇಸು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ನಿಶ್ಚಯವಾಗಿ ನಿ
ಶ್ಚಯವಾಗಿ ನಿನಗೆ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮದಿಂ
ದಲೂ ಹುಟ್ಟಿದಿದ್ದರೆ, ದೇವರ ರಾಜ್ಯದಲ್ಲಿ ಪ್ರವೇಶಿಸಲಾರನು.
೬ ಮಾಂಸದಿಂದ ಹುಟ್ಟಿದ್ದು ಮಾಂಸವೇ; ಆತ್ಮದಿಂದ ಹುಟ್ಟಿದ್ದು
೭ ಆತ್ಮವೇ. ನೀವು ಮೇಲಿನಿಂದ ಹುಟ್ಟಬೇಕೆಂದು, ನಿನಗೆ ಹೇಳಿದ್ದ
೮ ರಿಂದ ಆಶ್ಚರ್ಯ ಪಡಬೇಡ. ಘೂಳಿಯು ಮನಸ್ಸಿದ್ದಲ್ಲಿ
ಬೀಸುತ್ತದೆ; ಅದರ ಶಬ್ದವನ್ನು ಕೇಳುತ್ತೀ; ಆದರೆ ಎಲ್ಲಿಂದ ಬ
ರುತ್ತದೋ, ಎಲ್ಲಿಗೆ ಹೋಗುತ್ತದೋ, ನೀನರಿಯೆ. ಆತ್ಮದಿಂದ
ಹುಟ್ಟಿದವರೆಲ್ಲರು ಹಾಗೆಯೇ ಇದ್ದಾರೆ.
೯ ನಿಕೊದೇಮನು ಪ್ರತ್ಯುತ್ತರವಾಗಿ, ಇವು ಹ್ಯಾಗೆ ಆಗ ಬಹು
೧೦ ದು? ಅಂದಾಗ; ಯೇಸು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂ
ದರೆ, ನೀನು ಇಸ್ರಯೇಲಿಗೆ ಬೋಧಕನಾಗಿದ್ದು, ಇವುಗಳನ್ನು
೧೧ ತಿಳಿಯದೆ ಇದ್ದೀಯೋ? ನಿಶ್ಚಯವಾಗಿ ನಿಶ್ಚಯವಾಗಿ ನಿನಗೆ ಹೇ
ಳುತ್ತೇನೆ, ತಿಳಿದದ್ದನ್ನು ಮಾತಾಡುತ್ತೇವೆ; ನೋಡಿದ್ದಕ್ಕೆ ಸಾಕ್ಷಿ
೧೨ ಕೊಡುತ್ತೇವೆ; ಆದರೆ ನೀವು ನಮ್ಮ ಸಾಕ್ಷಿ ತಕ್ಕೊಳ್ಳದಿಲ್ಲ.
ನಾನು ಭೂಮಿಯವುಗಳನ್ನು ನಿಮಗೆ ಹೇಳಿದಾಗ, ನೀವು ವಿಶ್ವಾಸಿ
ಸದೆ ಹೋದರೆ, ಪರಲೋಕದವುಗಳನ್ನು ನಿಮಗೆ ಹೇಳಿದರೆ, ಹ್ಯಾ
೧೩ ಗೆ ವಿಶ್ವಾಸಿಸುವಿರಿ? ಮತ್ತು ಪರಲೋಕದಿಂದಿಳಿದು ಬಂದ, ಪರ
ಲೋಕದಲ್ಲಿರುವ, ಮನುಷ್ಯನ ಮಗನೇ ಹೊರ್ತು, ಯಾವನೂ
೧೪ ಪರಲೋಕಕ್ಕೆ ಏರಿ ಹೋಗಲಿಲ್ಲ. ಇದಲ್ಲದೆ ಮೋಶೆಯು ಅರಣ್ಯಾ
ದಲ್ಲಿ ಹ್ಯಾಗೆ ಸರ್ಪವನ್ನು ಎತ್ತಿದನೋ, ಹಾಗೆಯೇ ಮನುಷ್ಯ
೧೫ ನ ಮಗನು, ಅವನಲ್ಲಿ ವಿಶ್ವಾಸವಿಡುವವರೆಲ್ಲರು ನಾಶವಾಗದೆ, ನಿತ್ಯ
೧೬ ಜೀವವನ್ನು ಹೊಂದುವ ಹಾಗೆ, ಎತ್ತಲ್ಪಡಬೇಕು. ಯಾಕಂದರೆ
ಅವನಲ್ಲಿ ವಿಶ್ವಾಸವಿಡುವವರೆಲ್ಲರು ನಾಶವಾಗದೆ, ನಿತ್ಯ ಜೀವ
ವನ್ನು ಹೊಂದುವ ಬಗ್ಯೆ, ದೇವರು ಒಬ್ಬನಾಗಿ ಹುಟ್ಟಿದ ತನ್ನ
ಮಗನನ್ನು ಕೊಡುವ ಹಾಗೆ, ಲೋಕವನ್ನು ಅಷ್ಟು ಪ್ರೀತಿ ಮಾಡಿ
೧೭ ದನು. ಯಾಕಂದರೆ ಲೋಕಕ್ಕೆ ಆಜ್ಞೆ ನಿರ್ಣಯಿಸುವದಕ್ಕಲ್ಲ,
ಲೋಕವು ಅವನಿಂದ ರಕ್ಷಿಸಲ್ಪಡುವ ಹಾಗೆ, ದೇವರು ತನ್ನ ಮ
ಗನನ್ನು ಲೋಕಕ್ಕೆ ಕಳುಹಿಸಿದನು.
೧೮ ಅವನಲ್ಲಿ ವಿಶ್ವಾಸಿಸುವವನಿಗೆ ಆಜ್ಞೆ ನಿರ್ಣಯವಿಲ್ಲ. ಆದರೆ
ವಿಶ್ವಾಸಿಸದವನಿಗೆ, ದೇವರ ಒಬ್ಬನಾಗಿ ಹುಟ್ಟಿದ ಮಗನ ಹೆಸರಿನ
ಲ್ಲಿ ವಿಶ್ವಾಸಿಸದ ಕಾರಣ, ಈಗಲೇ ಆಜ್ಞೆ ನಿರ್ಣಯವಾಯಿತು.
೧೯ ಆಜ್ಞೆ ನಿರ್ಣಯವು ಇದೇ—ಬೆಳಕು ಲೋಕಕ್ಕೆ ಬಂದಿದ್ದರೂ,
ಮನುಷ್ಯರು ತಮ್ಮ ಕ್ರಿಯೆಗಳು ಕೆಟ್ಟವಾಗಿರುವ ಕಾರಣ, ಬೆಳ
೨೦ ಕಿಗಿಂತ ಕತ್ತಲೆಯನ್ನು ಹೆಚ್ಚಾಗಿ ಪ್ರೀತಿ ಮಾಡಿದ್ದಾರೆ. ಯಾಕಂ
ದರೆ ದುಷ್ಕ್ರಿಯೆಗಳನ್ನು ಮಾಡುವವರೆಲ್ಲರು ಬೆಳಕನ್ನು ಹಗೆ
ಮಾಡಿ, ತಮ್ಮ ಕ್ರಿಯೆಗಳು ಖಂಡಿಸಲ್ಪಡದ ಹಾಗೆ, ಬೆಳಕಿಗೆ ಬರು
೨೧ ವದಿಲ್ಲ. ಆದರೆ ಸತ್ಯವನ್ನು ಮಾಡುವವನು, ತನ್ನ ಕ್ರಿಯೆಗಳು
ದೇವರಲ್ಲಿ ನಡಿಸಲ್ಪಟ್ಟವುಗಳೆಂದು ಪ್ರಕಟವಾಗುವ ಹಾಗೆ, ಬೆಳಕಿ
ಗೆ ಬರುತ್ತಾನೆ.
೨೨ ಇವುಗಳಾದ ಮೇಲೆ ಯೇಸು, ಅವನ ಶಿಷ್ಯರು ಸಹಿತವಾಗಿ,
ಯೆಹೂದ ದೇಶಕ್ಕೆ ಬಂದು, ಅಲ್ಲಿ ಅವರ ಸಂಗಡ ಕಾಲಕ್ಷೇಪ
೨೩ ಮಾಡಿ, ಸ್ನಾನ ಕೊಡುತ್ತಿದ್ದನು. ಇದಲ್ಲದೆ ಯೋಹಾನನು
ಸಲೀಮಿಗೆ ಸಮೀಪವಾದ ಐನೋನಿನಲ್ಲಿ ಸ್ನಾನ ಕೊಡುತ್ತಿದ್ದನು;
ಯಾಕಂದರೆ ಅಲ್ಲಿ ಬಹಳ ನೀರು ಇತ್ತು; ಮತ್ತು ಜನರು ಬಂದು,
೨೪ ಸ್ನಾನ ಹೊಂದಿದರು. ಯಾಕಂದರೆ ಯೋಹಾನನು ಇನ್ನು
ಕೆಕೆಯಲ್ಲಿ ಹಾಕಲ್ಪಡಲಿಲ್ಲ.
೨೫ ಹೀಗಿರಲಾಗಿ ಯೋಹಾನನ ಶಿಷ್ಯರಿಗೂ ಯೆಹೂದ್ಯ
೨೬ ರಿಗೂ, ಶುದ್ಧೀಕರಣವನ್ನು ಕುರಿತು, ತರ್ಕ ಉಂಟಾಗಿ, ಅವರು
ಯೋಹಾನನ ಬಳಿಗೆ ಬಂದು, ಅವನಿಗೆ, ರಬ್ಬಿಯೇ, ನಿನ್ನ ಸಂ
ಗಡ ಯೊರ್ದನಿನ ಆಚೆಯಲ್ಲಿ ಇದ್ದವನು—ನೀನು ಸಾಕ್ಷಿ ಕೊ
ಟ್ಟವನು—ಯಾವನೋ ಇಗೋ, ಅವನು ಸ್ನಾನ ಕೊಡುತ್ತಾನೆ;
೨೭ ಮತ್ತು ಎಲ್ಲರು ಅವನ ಬಳಿಗೆ ಬರುತ್ತಾರೆ, ಅಂದಾಗ; ಯೋಹಾ
ನನು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ, ಪರಲೋಕದಿಂದ ಅವ
ನಿಗೆ ಕೊಟ್ಟಲ್ಪಟ್ಟಿದ್ದರೆ ಹೊರ್ತು, ಮನುಷ್ಯನು ಯಾವದನ್ನೂ
೨೮ ಹೊಂದಲಾರನು. ನಾನು ಕ್ರಿಸ್ತನಲ್ಲ, ಅವನ ಮುಂದಾಗಿ ಕಳುಹಿಸ
ಲ್ಪಟ್ಟವನೆಂದು, ನಾನು ಹೇಳಿದ್ದಕ್ಕೆ ನೀವೇ ನನಗೆ ಸಾಕ್ಷಿಗಳಾಗಿ
೨೯ ದ್ದೀರಿ. ಮದಲಗತ್ತಿ ಉಂಟಾದವನೇ ಮದಲಿಂಗನು; ಆದರೆ ಮದ
ಲಿಂಗನ ಸ್ನೇಹಿತನು ನಿಂತು, ಅವನನ್ನು ಕೇಳಿ, ಮದಲಿಂಗನ ಶಬ್ದ
ಕ್ಕೆ ಅತಿ ಸಂತೋಷ ಪಡುತ್ತಾನೆ. ಈ ನನ್ನ ಸಂತೋಷವು ಸಂ
೩೦ ಪೂರ್ಣವಾಯಿತು. ಅವನು ಬೆಳೆಯ ಬೇಕು; ನಾನು ಕಡಿಮೆ
೩೧ ಆಗ ಬೇಕು. ಮೇಲಿನಿಂದ ಬರುವವನು ಎಲ್ಲರ ಮೇಲೆ ಇದ್ದಾ
ನೆ; ಭೂಮಿಯಿಂದಿರುವವನು ಭೂಮಿಯವನಾಗಿದ್ದು, ಭೂಭಾವ
ವಾಗಿ ಮಾತಾಡುತ್ತಾನೆ; ಪರಲೋಕದಿಂದ ಬರುವವನು ಎಲ್ಲರ
೩೨ ಮೇಲೆ ಇದ್ದಾನೆ. ತಾನು ನೋಡಿ ಕೇಳಿದ್ದಕ್ಕೆ ಸಾಕ್ಷಿ ಕೊಡುತ್ತಾ
೩೩ ನೆ, ಆದರೆ ಅವನ ಸಾಕ್ಷಿ ಯಾವನೂ ತಕ್ಕೊಳ್ಳದಿಲ್ಲ. ಅವನ
ಸಾಕ್ಷಿ ತಕ್ಕೊಳ್ಳುವವನು, ದೇವರು ಸತ್ಯವಂತನೆಂಬುವದಕ್ಕೆ
೩೪ ಮುದ್ರೆ ಹಾಕಿದ್ದಾನೆ. ಯಾಕಂದರೆ ದೇವರು ಕಳುಹಿಸಿದವನು ದೇ
ವರ ಮಾತುಗಳನ್ನಾಡುತ್ತಾನೆ; ಯಾಕಂದರೆ ದೇವರು ಅವನಿಗೆ
೩೫ ಆತ್ಮವನ್ನು ಮಿತಿಯಾಗಿ ಕೊಡುವದಿಲ್ಲ. ತಂದೆಯು ಮಗನನ್ನು



೩೬ ಪ್ರೀತಿ ಮಾಡಿ, ಎಲ್ಲವುಗಳನ್ನು ಅವನ ಕೈಗೆ ಕೊಟ್ಟಿದ್ದಾನೆ. ಮಗ
ನಲ್ಲಿ ವಿಶ್ವಾಸವಿಡುವವನಿಗೆ ನಿತ್ಯ ಜೀವ ಉಂಟು; ಆದರೆ ಮಗ
ನಿಗೆ ವಿಧೇಯವಾಗದವನು ಜೀವವನ್ನು ನೋಡುವದಿಲ್ಲ; ಆದರೆ
ದೇವರ ಕೋಪವು ಅವನ ಮೇಲೆ ನೆಲೆಯಾಗಿರುತ್ತದೆ.

## ೪. ಸಂಧಿ.

೧ ಹೀಗಿರಲಾಗಿ ಯೇಸು ಯೋಹಾನನಿಗಿಂತ ಹೆಚ್ಚು ಶಿಷ್ಯರ
ನ್ನು ಮಾತಿ, ಸ್ನಾನ ಕೊಡುತ್ತಾನೆಂಬದಾಗಿ, ಫರಿಸಾಯರು ಕೇಳಿ
೨ ದ್ದಾರೆಂದು ಕರ್ತನಿಗೆ ತಿಳಿದಾಗ, (ಯೆಹೂದವನ್ನು ಬಿಟ್ಟು, ಗಲಿ
೩ ಲಾಯಕ್ಕೆ ತಿರಿಗಿ ಹೋದನು. ಆದಾಗ್ಯೂ ಯೇಸು ತಾನು ಅಲ್ಲ,
೪ ಅವನ ಶಿಷ್ಯರು ಸ್ನಾನ ಕೊಟ್ಟರು. ಆದರೆ ಅವನು ಸಮಾ
೫ ರ್ಯವನ್ನು ಹಾದು ಹೋಗ ಬೇಕಾದದರಿಂದ, ಯಾಕೋಬ
ನು ತನ್ನ ಮಗನಾದ ಯೋಸೆಫನಿಗೆ ಕೊಟ್ಟ ಭೂಮಿಯ ಸ
ಮೀಪದಲ್ಲಿರುವ ಸುಖರೆಂಬ ಸಮಾರ್ಯದ ಪಟ್ಟಣಕ್ಕೆ ಬಂದನು.
೬ ಅಲ್ಲಿ ಯಾಕೋಬನ ಭಾವಿ ಇತ್ತು. ಆದದರಿಂದ ಯೇಸು ಮಾ
ರ್ಗಾಯಾಸ ಪಟ್ಟು, ಭಾವಿಯ ಬಳಿಯಲ್ಲಿ ಹಾಗೆ ಕೂತು ಕೊಂ
ಡನು. ಹೆಚ್ಚು ಕಡಿಮೆ ಆರನೇ ತಾಸಾಗಿತ್ತು.
೭ ಸಮಾರ್ಯದವಳಾದ ಒಬ್ಬ ಸ್ತ್ರೀಯು ನೀರು ಸೇದುವದ
ಕ್ಕೆ ಬಂದಳು. ಯೇಸು ಅವಳಿಗೆ, ನನಗೆ ಕುಡಿಯ ಕೊಡು, ಅಂ
೮ ದನು. ಯಾಕಂದರೆ ಅವನ ಶಿಷ್ಯರು ಆಹಾರವನ್ನು ಕೊಂಡು
ಕೊಳ್ಳುವದಕ್ಕೋಸ್ಕರ ಪಟ್ಟಣಕ್ಕೆ ಹೋಗಿದ್ದರು. ಹೀಗಿರಲಾಗಿ,
ಆ ಸಮಾರ್ಯದವಳಾದ ಸ್ತ್ರೀ ಅವನಿಗೆ, ಯೆಹೂದ್ಯನಾದ ನೀ
ನು ಸಮಾರ್ಯ ಸ್ತ್ರೀಯಾದ ನನ್ನಿಂದ ಕುಡಿಯ ಕೇಳುವದೇ
ನು? ಯೆಹೂದ್ಯರಿಗೂ ಸಮಾರ್ಯರಿಗೂ ಬಳಿಕೆ ಇಲ್ಲವಲ್ಲ?
೯ ಅಂದಳು. ಯೇಸು ಪ್ರತ್ಯುತ್ತರವಾಗಿ ಅವಳಿಗೆ ಹೇಳಿದ್ದು, ನೀನು
ದೇವರ ವರವನ್ನೂ, ನನಗೆ ಕುಡಿಯ ಕೊಡೆಂದು, ನಿನಗೆ ಹೇಳುವ
ವನ್ಯಾರೆಂಬುವದನ್ನೂ ತಿಳಿದರೆ, ನೀನು ಅವನನ್ನು ಬೇಡಿ ಕೊಂ
೧೦ ಡಿರುವಿ; ಮತ್ತು ನಿನಗೆ ಜೀವವುಳ್ಳ ನೀರನ್ನು ಕೊಟ್ಟಿರುವನು. ಸ್ತ್ರೀ
ಯು ಅವನಿಗೆ, ಅಯ್ಯಾ, ಕೇದುವದಕ್ಕೆ ನಿನಗೇನೂ ಇಲ್ಲ; ಮ
ತ್ತು ಭಾವಿ ಆಳವಾಗಿದೆ; ಆದಕಾರಣ ಜೀವವುಳ್ಳ ನೀರು ನಿನಗೆ
೧೧ ಎಲ್ಲಿಂದ ಬರುವದು? ನಮಗೆ ಈ ಭಾವಿಯನ್ನು ಕೊಟ್ಟು, ತಾನೂ
ಅವನ ಮಕ್ಕಳೂ ಅವನ ದನಗಳೂ ಅದರಲ್ಲಿ ಕುಡಿದ ನಮ್ಮ ತಂದೆ
ಯಾದ ಯಾಕೋಬನಿಗಿಂತ ನೀನು ದೊಡ್ಡವನಾಗಿದ್ದೀಯೋ?
೧೨ ಅನ್ನಲು; ಯೇಸು ಪ್ರತ್ಯುತ್ತರವಾಗಿ ಅವಳಿಗೆ ಹೇಳಿದ್ದು, ಈ ನೀ
ರು ಕುಡಿಯುವವರೆಲ್ಲರು ತಿರಿಗಿ ದಾಹಗೊಳ್ಳುವರು. ಆದರೆ ನಾನು
ಕೊಡುವ ನೀರು ಕುಡಿಯುವವನು ಎಂದೆಂದಿಗೂ ದಾಹಗೊಳ್ಳ
ದಿಲ್ಲ; ಆದರೆ ನಾನು ಅವನಿಗೆ ಕೊಡುವ ನೀರು ಅವನಲ್ಲಿ ನಿತ್ಯ
ಜೀವಕ್ಕೆ ಹರಿಯುವ ನೀರಿನ ಬುಗ್ಗೆಯಾಗುವದು.
೧೫ ಸ್ತ್ರೀಯು ಅವನಿಗೆ, ಅಯ್ಯಾ, ನಾನು ದಾಹಗೊಳ್ಳದೆ, ಸೇ
ದುವದಕ್ಕೆ ಇಲ್ಲಿಗೆ ಬಾರದೆ ಇರುವ ಹಾಗೆ, ನನಗೆಲ ನೀರನ್ನು ಕೊ
೧೬ ಡು, ಅನ್ನಲು; ಅವಳಿಗೆ ಯೇಸು, ಹೋಗಿ, ನಿನ್ನ ಗಂಡನನ್ನು
೧೭ ಕರಕೊಂಡು, ಇಲ್ಲಿಗೆ ಬಾ, ಅಂದನು. ಸ್ತ್ರೀಯು ಪ್ರತ್ಯುತ್ತರ
ವಾಗಿ, ನನಗೆ ಗಂಡನಿಲ್ಲ, ಅಂದಳು. ಯೇಸು ಅವಳಿಗೆ, ನನಗೆ
೧೮ ಗಂಡನಿಲ್ಲವೆಂದು ಸರಿಯಾಗಿ ಹೇಳಿದ್ದೀ; ಯಾಕಂದರೆ ನಿನಗೆ
ಐದು ಮಂದಿ ಗಂಡಂದಿರಿದ್ದರು; ಮತ್ತು ಈಗ ನಿನಗಿರುವವನು
೧೯ ನಿನ್ನ ಗಂಡನಲ್ಲ; ಇದು ನಿಜವಾಗಿ ಹೇಳಿದ್ದೀ, ಅಂದನು. ಸ್ತ್ರೀ
ಯು ಅವನಿಗೆ, ಅಯ್ಯಾ, ನೀನು ಪ್ರವಾದಿಯಾಗಿದ್ದೀ ಎಂದು,
೨೦ ನೋಡುತ್ತೇನೆ; ನಮ್ಮ ಪಿತೃಗಳು ಈ ಬೆಟ್ಟದಲ್ಲಿ ಆರಾಧಿಸಿದರು;
ಆದರೆ ನೀವು ಆರಾಧಿಸ ಬೇಕಾದ ಸ್ಥಳವು ಯೆರೂಸಲೇಮಿನಲ್ಲಿ
೨೧ ಅದೆ, ಅನ್ನುತ್ತೀರಿ, ಅಂದಾಗ; ಯೇಸು ಅವಳಿಗೆ ಹೇಳಿದ್ದು, ಸ್ತ್ರೀ
ಯೇ, ನನ್ನನ್ನು ನಂಬು; ನೀವು ಈ ಬೆಟ್ಟದಲ್ಲಾದರೂ, ಯೆರೂ
ಸಲೇಮಿನಲ್ಲಾದರೂ, ತಂದೆಯನ್ನು ಆರಾಧಿಸದೆ ಇರುವ ಕಾಲ
೨೨ ಬರುತ್ತದೆ. ನೀವು ಅರಿಯದೆ ಇರುವದನ್ನು ಆರಾಧಿಸುತ್ತೀರಿ;
ನಾವು ಅರಿತಿರುವದನ್ನು ಆರಾಧಿಸುತ್ತೇವೆ; ಯಾಕಂದರೆ ರಕ್ಷಣೆ
೨೩ ಯು ಯೆಹೂದ್ಯರಿಂದ ಉಂಟಾಗಿದೆ. ಆದರೆ ಸತ್ಯವಾಗಿ ಆರಾ
ಧಿಸುವವರು ತಂದೆಯನ್ನು ಆತ್ಮದಿಂದಲೂ ಸತ್ಯದಿಂದಲೂ ಆ
ರಾಧಿಸುವ ತಾಸು ಬರುತ್ತದೆ; ಮತ್ತು ಈಗಲೇ ಅದೆ. ಯಾಕಂ
ದರೆ ತಂದೆಯು ತನ್ನನ್ನು ಈ ಪ್ರಕಾರ ಆರಾಧಿಸುವವರನ್ನು ಇ
೨೪ ಷ್ಟೈಸುತ್ತಾನೆ. ದೇವರು ಆತ್ಮವೇ; ಮತ್ತು ಅವನನ್ನು ಆರಾಧಿಸು
೨೫ವವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸ ಬೇಕು. ಸ್ತ್ರೀ
ಯು ಅವನಿಗೆ, ಕ್ರಿಸ್ತನೆಂಬ ಮೆಸ್ಸಿಯನು ಬರುತ್ತಾನೆಂದು ಬಲ್ಲೆ
ನು; ಅವನು ಬಂದಾಗ, ನಮಗೆ ಎಲ್ಲವುಗಳನ್ನು ತಿಳಿಸುವನು,
೨೬ ಅನ್ನಲು; ಯೇಸು ಅವಳಿಗೆ, ನಿನ್ನ ಸಂಗಡ ಮಾತಾಡುವ ನಾನು
ಅವನೇ, ಅಂದನು.
೨೭ ಅಷ್ಟರೊಳಗೆ ಅವನ ಶಿಷ್ಯರು ಬಂದು, ಸ್ತ್ರೀಯ ಸಂಗಡ ಮಾ
ತಾಡುತ್ತಾನೆಂದು ಆಶ್ಚರ್ಯ ಪಟ್ಟರು; ಆದಾಗ್ಯೂ, ನಿನಗೆ ಏನು
ಬೇಕು? ಇಲ್ಲವೆ, ಯಾಕೆ ಅವಳ ಸಂಗಡ ಮಾತಾಡುತ್ತೀ? ಎಂದು
೨೮ ಯಾವನಾದರೂ ಹೇಳಲಿಲ್ಲ. ಆಗ ಸ್ತ್ರೀಯು ತನ್ನ ಕೊಡವನ್ನು
೨೯ ಬಿಟ್ಟು, ಪಟ್ಟಣಕ್ಕೆ ಹೋಗಿ, ಮನುಷ್ಯರಿಗೆ, ಬನ್ನಿರಿ; ನಾನು ಮಾಡಿ
ದವುಗಳನ್ನೆಲ್ಲಾ ನನಗೆ ಹೇಳಿದ ಮನುಷ್ಯನನ್ನು ನೋಡಿರಿ; ಇವ
೩೦ ನು ಕ್ರಿಸ್ತನಲ್ಲವೋ? ಅಂದಾಗ; ಅವರು ಪಟ್ಟಣದಿಂದ ಹೊರಟು,
ಅವನ ಬಳಿಗೆ ಬಂದರು.
೩೧ ಅಷ್ಟರೊಳಗೆ ಶಿಷ್ಯರು, ರಬ್ಬಿಯೇ, ಊಟ ಮಾಡೆಂದು,
೩೨ ಅವನನ್ನು ಬೇಡಿ ಕೊಂಡರು. ಆದರೆ ಅವನಿಗೆ, ನೀವು ಅರಿಯದ
೩೩ ಆಹಾರವು ನನಗೆ ಉಣ್ಣುವದಕ್ಕೆ ಉಂಟು, ಅಂದನು. ಆದ
ದರಿಂದ, ಯಾರಾದರೂ ಅವನಿಗೆ ಊಟಕ್ಕೆ ತಂದರೋ? ಎಂ
೩೪ ದು, ಶಿಷ್ಯರು ತಮ್ಮೊಳಗೆ ಹೇಳಿ ಕೊಂಡರು. ಯೇಸು ಅವರಿಗೆ
ಹೇಳಿದ್ದು, ನನ್ನನ್ನು ಕಳುಹಿಸಿದವನ ಚಿತ್ತವನ್ನು ಮಾತಿ, ಅವನ
೩೫ ಕೆಲಸವನ್ನು ತೀರಿಸುವದೇ ನನ್ನ ಆಹಾರವಾಗಿದೆ. ಇನ್ನು ನಾಲ್ಕು
ತಿಂಗಳಾದ ಮೇಲೆ ಬೈರು ಕೊಯ್ಯುವ ಕಾಲ ಬರುತ್ತದೆಂದು,
ನೀವು ಹೇಳುತ್ತೀರಲ್ಲ? ಇಗೋ, ನಿಮಗೆ ಹೇಳುತ್ತೇನೆ, ನಿಮ್ಮ ಕ
ಣ್ಣುಗಳನ್ನು ಎತ್ತಿ, ಹೊಲಗಳನ್ನು ನೋಡಿರಿ; ಯಾಕಂದರೆ ಅವು
೩೬ ಈಗಲೇ ಕೊಯ್ಯುವದಕ್ಕೆ ಬಿಳುಪಾಗಿವೆ. ಮತ್ತು ಕೊಯ್ಯುವ
ವನು ಕೂಲಿಯನ್ನು ಹೊಂದಿ, ನಿತ್ಯ ಜೀವಕ್ಕೆ ಫಲವನ್ನು ಕೂ
ಡಿಸುತ್ತಾನೆ; ಹೀಗೆಯೇ ಬಿತ್ತುವವನೂ ಕೊಯ್ಯುವವನೂ ಕೂಡ
೩೭ ಸಂತೋಷಿಸುವರು; ಯಾಕಂದರೆ, ಬಿತ್ತುವವನು ಬೇರೆ, ಕೊ
ಯ್ಯುವವನು ಬೇರೆ, ಎಂಬ ಮಾತು ಇದರಲ್ಲಿ ಸತ್ಯವಾಗಿದೆ.
೩೮ ನೀವು ಕಷ್ಟ ಮಾಡದ ಬೈರನ್ನು ಕೊಯ್ಯುವದಕ್ಕೆ ನಾನು ನಿ
ಮ್ಮನ್ನು ಕಳುಹಿಸಿದ್ದೇನೆ; ಬೇರೊಬ್ಬರು ಕಷ್ಟ ಮಾಡಿದರು; ನೀ
ವು ಅವರ ಕಷ್ಟದಲ್ಲಿ ಸೇರಿದ್ದೀರಿ;

೩೯ ಆ ಪಟ್ಟಣದವರಾದ ಸಮಾರ್ಯರಲ್ಲಿ ಅನೇಕರು, ನಾನು ಮಾ
ಡಿದವುಗಳನ್ನೆಲ್ಲಾ ನನಗೆ ಹೇಳಿದ್ದಾನೆಂದು ಸಾಕ್ಷಿ ಕೊಟ್ಟ ಸ್ತ್ರೀ
೪೦ ಯ ಮಾತಿಗೋಸ್ಕರ ಅವನಲ್ಲಿ ವಿಶ್ವಾಸವಿಟ್ಟರು. ಆದದರಿಂದ
ಸಮಾರ್ಯರು ಅವನ ಬಳಿಗೆ ಬಂದು, ತಮ್ಮ ಸಂಗಡ ಇರ ಬೇ
ಕೆಂದು, ಅವನನ್ನು ಬೇಡಿ ಕೊಂಡರು. ಆಗಲವನು ಎರಡು ದಿವಸ
೪೧ ಅಲ್ಲಿ ಇದ್ದನು. ಆಗ ಇನ್ನು ಅನೇಕರು ಅವನ ವಾಕ್ಯಕ್ಕೋಸ್ಕ
೪೨ ರ ವಿಶ್ವಾಸಿಸಿ, ಆ ಸ್ತ್ರೀಗೆ, ಇನ್ನು ನಾವು ನಿನ್ನ ಮಾತಿಗೋಸ್ಕ
ರ ವಿಶ್ವಾಸಿಸುವವರಲ್ಲ; ಯಾಕಂದರೆ ನಮಗೆ ನಾವೇ ಕೇಳಿ,
ಇವನೇ ನಿಜವಾಗಿ ಲೋಕದ ರಕ್ಷಕನಾದ ಕ್ರಿಸ್ತನೆಂದು ಬಲ್ಲೆವು,
ಅಂದರು.

೪೩ ಆ ಎರಡು ದಿವಸಗಳಾದ ಮೇಲೆ ಅಲ್ಲಿಂದ ಹೊರಟು, ಗಲಿಲಾ
೪೪ ಯಕ್ಕೆ ಹೋದನು. ಯಾಕಂದರೆ, ಸ್ವದೇಶದಲ್ಲಿ ಪ್ರವಾದಿಗೆ
೪೫ ಮಾನವಿಲ್ಲವೆಂದು, ಯೇಸು ತಾನೇ ಸಾಕ್ಷಿ ಹೇಳಿ ಇದ್ದನು. ಆದ
ದರಿಂದ ಅವನು ಗಲಿಲಾಯಕ್ಕೆ ಬಂದಾಗ, ಅವನು ಯೆರೂಸ
ಲೇಮಿನಲ್ಲಿ ಹಬ್ಬದಲ್ಲಿ ಮಾಡಿದವುಗಳನ್ನೆಲ್ಲಾ ನೋಡಿದ ಗಲಿಲಾ
ಯದವರು ಅವನನ್ನು ಅಂಗೀಕರಿಸಿದರು; ಯಾಕಂದರೆ ಅವರು
ಸಹ ಹಬ್ಬಕ್ಕೆ ಬಂದಿದ್ದರು.

೪೬ ಈ ಪ್ರಕಾರ ಯೇಸು ತಾನು ನೀರನ್ನು ದ್ರಾಕ್ಷೇರಸವಾಗ ಮಾ
ಡಿದ ಗಲಿಲಾಯದ ಕಾನಕ್ಕೆ ತಿರಿಗಿ ಬಂದನು. ಆಗ ಕಪೆರ್ನೌಮಿ
ನಲ್ಲಿ ಕೊಗಿಮ್ಮ ಮಗನು ಇದ್ದ ಒಬ್ಬ ಪ್ರಧಾನಿಯು ಇದ್ದನು.
೪೭ ಅವನು, ಯೇಸು ಯೆಹೂದದಿಂದ ಗಲಿಲಾಯಕ್ಕೆ ಬಂದ ವ
ರ್ತಮಾನವನ್ನು ಕೇಳಿ, ಅವನ ಬಳಿಗೆ ಹೋಗಿ, ಇಳಿದು ಬಂ
ದು, ನನ್ನ ಮಗನನ್ನು ಸ್ವಸ್ಥ ಮಾಡ ಬೇಕೆಂದು, ಅವನನ್ನು
ಬೇಡಿ ಕೊಂಡನು; ಯಾಕಂದರೆ ಅವನು ಸಾಯಲಾಗಿದ್ದನು.
೪೮ ಯೇಸು ಅವನಿಗೆ, ನೀವು ಲಕ್ಷಣಗಳನ್ನೂ ಅದ್ಭುತಗಳನ್ನೂ
ನೋಡಿದರೆ ಹೊರ್ತು, ವಿಶ್ವಾಸಿಸುವದೇ ಇಲ್ಲ, ಅಂದನು.
೪೯ ಪ್ರಧಾನಿಯು ಅವನಿಗೆ, ಕರ್ತನೇ, ನನ್ನ ಮಗನು ಸಾಯುವದ
೫೦ ಕ್ಕೆ ಮುಂಚೆ ಇಳಿದು ಬಾ, ಅನ್ನಲು; ಅವನಿಗೆ ಯೇಸು, ಹೋ
ಗು, ನಿನ್ನ ಮಗನು ಬದುಕುತ್ತಾನೆ, ಅಂದನು. ಆ ಮನುಷ್ಯನು,
೫೧ ಯೇಸು ತನಗೆ ಹೇಳಿದ ವಾಕ್ಯವನ್ನು ನಂಬಿ, ಹೋದನು. ಅವನು
ಇನ್ನು ಇಳಿದು ಹೋಗುತ್ತಿರುವಾಗ, ಅವನ ದಾಸರು ಅವನಿದು
೫೨ ರಿಗೆ ಬಂದು, ನಿನ್ನ ಮಗನು ಬದುಕುತ್ತಾನೆ, ಅಂದರು. ಆದದ
ರಿಂದ ಎಷ್ಟನೇ ತಾಸಿನಲ್ಲಿ ಅವನಿಗೆ ಲಘುವಾಯಿತೆಂದು ಅವರಲ್ಲಿ
ವಿಚಾರಿಸಲು, ಅವನಿಗೆ, ನಿನ್ನೆ ಏಳನೇ ತಾಸಿನಲ್ಲಿ ಜ್ವರವು ಅವನ
೫೩ ನ್ನು ಬಿಟ್ಟು ಹೋಯಿತು, ಅಂದರು. ಆಗ, ನಿನ್ನ ಮಗನು ಬದು
ಕುತ್ತಾನೆಂದು, ಯೇಸು ತನಗೆ ಹೇಳಿದ ತಾಸಿನಲ್ಲಿಯೇ ಆಯಿ
ತೆಂದು, ತಂದೆಯು ತಿಳ್ಕೊಂಡದರಿಂದ, ಅವನು, ತನ್ನ ಮನೆ
೫೪ ಯಲ್ಲಾ ಸಹಿತವಾಗಿ, ವಿಶ್ವಾಸಿಸಿದನು. ಈ ಎರಡನೇ ಲಕ್ಷಣವ
ನ್ನು ಯೇಸು ಯೆಹೂದದಿಂದ ಗಲಿಲಾಯಕ್ಕೆ ಬಂದಾಗ, ಮಾ
ಡಿದನು.

## ೫. ಸಂಧಿ.

೧ ಇವುಗಳಾದ ತರುವಾಯ, ಯೆಹೂದ್ಯರ ಹಬ್ಬವಿರಲಾಗಿ,
೨ ಯೇಸು ಯೆರೂಸಲೇಮಿಗೆ ಏರಿ ಹೋದನು. ಯೆರೂಸಲೇಮಿ
ನಲ್ಲಿ ಕುರಿ ಬಾಗಲಿನ ಹತ್ತರ, ಇಬ್ರೀಯ ಮಾತಿನಲ್ಲಿ ಬೆಥೆಸ್ದ
ಎಂದು ಕರೆಯಲ್ಪಟ್ಟ, ಐದು ಮಂಟಪಗಳುಳ್ಳ ಕೊಳ ಉಂಟು.
೩ ಆ ಮಂಟಪಗಳಲ್ಲಿ ವ್ಯಾಧಿಯುಳ್ಳವರೂ, ಕುರುಡರೂ ಕುಂಟರೂ
ಮೈ ಬಣಗಿದವರೂ, ಬಹು ಸಮೂಹವಾಗಿ ಬಿದ್ದು, ನೀರು ಕದ
೪ ಲುವದಕ್ಕೆ ಕಾದು ಕೊಂಡಿದ್ದರು. ಯಾಕಂದರೆ ಆಗಾಗ್ಯೆ ಒಬ್ಬ
ದೂತನು ಕೊಳದೊಳಗೆ ಇಳಿದು ಬಂದು, ನೀರನ್ನು ಕದಲಿಸು
ತ್ತಿದ್ದನು. ನೀರು ಕದಲಿಸಲ್ಪಟ್ಟ ಮೇಲೆ, ಮೊದಲು ಬಳಿಗೆ ಇಳಿದ
ವನು, ಯಾವ ರೋಗದಲ್ಲಿ ಬಿದ್ದಿದ್ದರೂ, ಸ್ವಸ್ಥವಾಗುವನು.

೫ ಹೀಗಿರಲಾಗಿ ಮುವ್ವತ್ತೆಂಟು ವರುಷದಿಂದ ವ್ಯಾಧಿಯುಳ್ಳ
೬ ಒಬ್ಬ ಮನುಷ್ಯನು ಅಲ್ಲಿ ಇದ್ದನು. ಇವನು ಬಿದ್ದಿರುವದನ್ನು
ಯೇಸು ನೋಡಿ, ಹೀಗೆಯೇ ಬಹು ಕಾಲದಿಂದಿದ್ದಾನೆಂದು ತಿಳಿದು,
೭ ಅವನಿಗೆ, ಸ್ವಸ್ಥವಾಗ ಬೇಕೋ? ಅಂದಾಗ; ವ್ಯಾಧಿಯುಳ್ಳವ
ನು ಅವನಿಗೆ ಪ್ರತ್ಯುತ್ತರವಾಗಿ, ಕರ್ತನೇ, ನೀರು ಕದಲಿಸಲ್ಪಡು
ವಾಗ, ನನ್ನನ್ನು ಕೊಳದೊಳಗೆ ಹಾಕುವ ಮನುಷ್ಯನು ನನಗಿಲ್ಲ;
ಆದರೆ ನಾನು ಬರುವಷ್ಟರಲ್ಲಿ ಮತ್ತೊಬ್ಬನು ನನಗೆ ಮುಂಚೆ
೮ ಇಳಿಯುತ್ತಾನೆ, ಅಂದನು. ಯೇಸು ಅವನಿಗೆ, ಎದ್ದು, ನಿನ್ನ
೯ ಮಂಚ ಎತ್ತಿ ಕೊಂಡು, ನಡಿ, ಅಂದನು. ಸಂಗಡಲೇ ಆ ಮನು
ಷ್ಯನು ಸ್ವಸ್ಥವಾಗಿ, ತನ್ನ ಮಂಚ ಎತ್ತಿ ಕೊಂಡು, ನಡೆದನು.

೧೦ ಆದರೆ ಆ ದಿವಸವು ಸಬ್ಬತಾಗಿತ್ತು. ಹೀಗಿರುವದರಿಂದ ಯೆ
ಹೂದ್ಯರು ಸ್ವಸ್ಥವಾದವನಿಗೆ, ಸಬ್ಬತಾಗಿದೆ, ನೀನು ಮಂಚ
೧೧ ಎತ್ತಿ ಕೊಳ್ಳ ಬಾರದು, ಅನ್ನಲು; ಅವರಿಗೆ ಪ್ರತ್ಯುತ್ತರವಾಗಿ,
ನನ್ನನ್ನು ಸ್ವಸ್ಥ ಮಾಡಿದವನೇ, ನಿನ್ನ ಮಂಚ ಎತ್ತಿ ಕೊಂಡು,
೧೨ ನಡಿ, ಎಂದು, ನನಗೆ ಹೇಳಿದನು, ಅಂದನು. ಆಗ, ನಿನ್ನ ಮಂ
ಚ ಎತ್ತಿ ಕೊಂಡು, ನಡಿ, ಎಂದು, ನಿನಗೆ ಹೇಳಿದ ಮನುಷ್ಯನು
೧೩ ಯಾಕೆಂದು, ಅವನನ್ನು ಕೇಳಿದರು. ಸ್ವಸ್ಥವಾದವನು, ಅವ
ನ್ಯಾಕೆಂದು, ತಿಳಿಯಲಿಲ್ಲ. ಯಾಕಂದರೆ ಆ ಸ್ಥಳದಲ್ಲಿ ಸಮೂ
೧೪ ಹವು ಇರುವದರಿಂದ, ಯೇಸು ತೊಲಗಿ ಹೋಗಿದ್ದನು. ಇವುಗ
ಳಾದ ಮೇಲೆ, ಯೇಸು ಅವನನ್ನು ದೇವಾಲಯದಲ್ಲಿ ಕಂಡು,
ಅವನಿಗೆ, ಇಗೋ, ಸ್ವಸ್ಥವಾದಿ; ನಿನಗೆ ಹೆಚ್ಚಾದ ಕೇಡು ಆಗದ
೧೫ ಹಾಗೆ, ಇನ್ನು ಮೇಲೆ ಭಾವ ಮಾಡ ಬೇಡ, ಅಂದನು. ಆಗ ಆ
ಮನುಷ್ಯನು ಹೋಗಿ, ತನ್ನನ್ನು ಸ್ವಸ್ಥ ಮಾಡಿದವನು ಯೇ
೧೬ ಸುವೇ ಎಂದು, ಯೆಹೂದ್ಯರಿಗೆ ತಿಳ್ಕಿಸಿದನು. ಆದದರಿಂದ ಯೆ
ಹೂದ್ಯರು ಯೇಸುವನ್ನು ಹಿಂಸಿಸಿ, ಇವುಗಳನ್ನು ಸಬ್ಬತಿನಲ್ಲಿ
ಮಾಡಿದ ಕಾರಣ, ಅವನನ್ನು ಕೊಲ್ಲ ಹುಡುಕಿದರು.

೧೭ ಆದರೆ ಯೇಸು, ನನ್ನ ತಂದೆಯು ಈ ವರಿಗೂ ಕೆಲಸ ಮಾ
ಡುತ್ತಾನೆ; ಮತ್ತು ನಾನು ಕೆಲಸ ಮಾಡುತ್ತೇನೆಂದು, ಅವರಿಗೆ ಪ್ರ
೧೮ ತ್ಯುತ್ತರ ಕೊಟ್ಟನು. ಇದಕ್ಕೋಸ್ಕರ ಅವನು ಸಬ್ಬತನ್ನು
ವಿಾರಿದ್ದರಿಂದ ಮಾತ್ರವಲ್ಲ, ದೇವರು ಸ್ವಂತ ತಂದೆ ಎಂದು
ಹೇಳಿ, ತನ್ನನ್ನು ದೇವರಿಗೆ ಸಮಾನ ಮಾಡಿದ ಕಾರಣ, ಯೆಹೂ
ದ್ಯರು ಅವನನ್ನು ಕೊಲ್ಲ ಹೆಚ್ಚಾಗಿ ಹುಡುಕಿದರು.

೧೯ ಆಗ ಯೇಸು ಪ್ರತ್ಯುತ್ತರವಾಗಿ, ನಿಶ್ಚಯವಾಗಿ ನಿಶ್ಚಯವಾಗಿ
ನಿಮಗೆ ಹೇಳುತ್ತೇನೆ, ತಂದೆಯು ಮಾಡುವದನ್ನು ಕಂಡದ್ದಲ್ಲದೆ,
ಮಗನು ತನ್ನಷ್ಟಕ್ಕೆ ತಾನೇ ಯಾವದನ್ನೂ ಮಾಡಲಾರನು.
ಯಾಕಂದರೆ ಅವನು ಮಾಡುವವುಗಳು ಯಾವವೋ, ಅವುಗಳ
೨೦ ನ್ನು ಮಗನು ಸಹ ಹಾಗೆಯೇ ಮಾಡುತ್ತಾನೆ. ಯಾಕಂದರೆ
ತಂದೆಯು ಮಗನನ್ನು ಪ್ರೀತಿ ಮಾಡಿ, ತಾನು ಮಾಡುವುಗಳ



ನ್ನೆಲ್ಲಾ ಅವನಿಗೆ ತೋರಿಸುತ್ತಾನೆ. ಮತ್ತು ನೀವು ಆಶ್ಚರ್ಯ
ಪಡುವ ಹಾಗೆ, ಇವುಗಳಿಗಿಂತ ದೊಡ್ಡ ಕೆಲಸಗಳನ್ನು ಅವನಿಗೆ
೨೧ ತೋರಿಸುವನು. ಯಾಕಂದರೆ ತಂದೆಯು ಸತ್ತವರನ್ನು ಹ್ಯಾಗೆ
ಎಬ್ಬಿಸಿ, ಬದುಕಿಸುತ್ತಾನೋ, ಹಾಗೆಯೇ ಮಗನು ಸಹ ಬೇಕಾ
೨೨ ದವರನ್ನು ಬದುಕಿಸುತ್ತಾನೆ. ಯಾಕಂದರೆ ತಂದೆಯು ಯಾವ
೨೩ ನಿಗೂ ನ್ಯಾಯ ತೀರಿಸುವದಿಲ್ಲ; ಆದರೆ ಎಲ್ಲರು ತಂದೆಯನ್ನು
ಸನ್ಮಾನಿಸುವ ಪ್ರಕಾರವೇ ಮಗನನ್ನು ಸನ್ಮಾನಿಸುವ ಹಾಗೆ, ನ್ಯಾ
ಯ ತೀರ್ಪಿಕೆಯನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ. ಮಗನನ್ನು
ಸನ್ಮಾನಿಸದವನು ಅವನನ್ನು ಕಳುಹಿಸಿದ ತಂದೆಯನ್ನು ಸನ್ಮಾ
ನಿಸುವದಿಲ್ಲ.

೨೪ ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನನ್ನ
ವಾಕ್ಯವನ್ನು ಕೇಳಿ, ನನ್ನನ್ನು ಕಳುಹಿಸಿದವನಲ್ಲಿ ವಿಶ್ವಾಸವಿಡುವ
ವನಿಗೆ ನಿತ್ಯ ಜೀವ ಉಂಟು; ಅವನು ಆಜ್ಞೆ ನಿರ್ಣಯದೊಳಗೆ
ಬರುವದಿಲ್ಲ; ಆದರೆ ಮರಣದೊಳಗಿಂದ ಜೀವಕ್ಕೆ ದಾಟಿ ಹೋಗಿ
೨೫ ದ್ದಾನೆ. ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಸತ್ತ
ವರು ದೇವರ ಮಗನ ಶಬ್ದವನ್ನು ಕೇಳುವ ಘಳಿಗೆ ಬರುತ್ತದೆ;
೨೬ ಈಗಲೇ ಅದೆ; ಕೇಳುವವರು ಬದುಕುವರು. ಹ್ಯಾಗಂದರೆ ತಂದೆ
ಯು ತನ್ನಲ್ಲಿ ಹ್ಯಾಗೆ ಜೀವ ಉಂಟಾದವನಾಗಿದ್ದಾನೋ, ಹಾಗೆ
ಯೇ ಮಗನಿಗೆ ತನ್ನಲ್ಲಿ ಜೀವ ಉಂಟಾದವನಾಗಿ ಕೊಟ್ಟಿದ್ದಾನೆ.
೨೭ ಮತ್ತು ಅವನು ಮನುಷ್ಯನ ಮಗನಾಗಿರುವದರಿಂದ, ನ್ಯಾಯ
ತೀರ್ಪಿಕೆಯನ್ನು ಸಹ ಮಾಡ ಅವನಿಗೆ ಅಧಿಕಾರವನ್ನು ಕೊಟ್ಟಿ
೨೮ ದ್ದಾನೆ. ಇದಕ್ಕೆ ಆಶ್ಚರ್ಯ ಪಡ ಬೇಡಿರಿ; ಯಾಕಂದರೆ ಸಮಾ
ಧಿಗಳಲ್ಲಿರುವವರೆಲ್ಲರು ಅವನ ಶಬ್ದವನ್ನು ಕೇಳುವ ಘಳಿಗೆ ಬರು
೨೯ ತ್ತದೆ; ಆಗ ಒಳ್ಳೇಯವುಗಳನ್ನು ಮಾಡಿದವರು ಜೀವದ ಪುನರು
ತ್ಥಾನಕ್ಕೂ, ಕೆಟ್ಟವುಗಳನ್ನು ಮಾಡಿದವರು ಆಜ್ಞೆಯ ಪುನರುತ್ಥಾ
೩೦ ನಕ್ಕೂ, ಹೊರಗೆ ಬರುವರು. ನನ್ನಷ್ಟಕ್ಕೆ ನಾನೇ ಏನೂ ಮಾಡ
ಲಾರೆನು; ಕೇಳುವ ಪ್ರಕಾರವೇ ನ್ಯಾಯ ತೀರಿಸುತ್ತೇನೆ; ಮತ್ತು
ನನ್ನ ನ್ಯಾಯತೀರ್ಪಿಕೆಯು ನೀತಿಯಾಗಿದೆ; ಯಾಕಂದರೆ
ನನ್ನ ಚಿತ್ತವನ್ನಲ್ಲ, ನನ್ನನ್ನು ಕಳುಹಿಸಿದ ತಂದೆಯ ಚಿತ್ತವ
ನ್ನೇ, ಹುಡುಕುತ್ತೇನೆ.

೩೧ ನಾನು ನನ್ನನ್ನು ಕುರಿತು ಸಾಕ್ಷಿ ಕೊಟ್ಟರೆ, ನನ್ನ ಸಾಕ್ಷಿ ನಿಜ
೩೨ ವಲ್ಲ; ನನ್ನನ್ನು ಕುರಿತು ಸಾಕ್ಷಿ ಕೊಡುವವನು ಬೇರೆ ಒಬ್ಬನಿದ್ದಾ
ನೆ. ಅವನು ನನ್ನನ್ನು ಕುರಿತು ಕೊಡುವ ಸಾಕ್ಷಿ ನಿಜವೆಂದು, ಬ
೩೩ ಲ್ಲೆನು. ನೀವು ಯೋಹಾನನ ಬಳಿಗೆ ಕಳುಹಿಸಿದಿರಿ; ಮತ್ತು ಅವ
೩೪ ನು ಸತ್ಯಕ್ಕೆ ಸಾಕ್ಷಿ ಕೊಟ್ಟನು. ನಾನು ಮನುಷ್ಯನಿಂದ ಸಾಕ್ಷಿ
ತಕ್ಕೊಳ್ಳುವದಿಲ್ಲ; ಆದರೆ ನೀವು ರಕ್ಷಿಸಲ್ಪಡುವ ಹಾಗೆ, ಇವುಗ
೩೫ ಳನ್ನು ಹೇಳುತ್ತೇನೆ. ಅವನು ಉರಿಯುವ ಪ್ರಕಾಶಿಸುವ ದೀಪವಾ
ಗಿದ್ದನು; ಮತ್ತು ನೀವು ಅವನ ಬೆಳಕಿನಲ್ಲಿ ಸ್ವಲ್ಪ ಹೊತ್ತು ಆ
೩೬ ನಂದ ಪಡ ಬೇಕೆಂದಿದ್ದಿರಿ. ಆದರೆ ಯೋಹಾನನ ಸಾಕ್ಷಿಗಿಂತ
ದೊಡ್ಡ ಸಾಕ್ಷಿ ನನಗುಂಟು. ಹ್ಯಾಗಂದರೆ ತೀರಿಸುವದಕ್ಕೆ ತಂದೆ
ಯು ನನಗೆ ಕೊಟ್ಟ ಕ್ರಿಯೆಗಳು—ನಾನು ನಡಿಸುವ ಕ್ರಿಯೆಗಳೇ,
ತಂದೆಯು ನನ್ನನ್ನು ಕಳುಹಿಸಿದನೆಂಬುವದಕ್ಕೆ ನನ್ನನ್ನು ಕುರಿ
೩೭ ತು ಸಾಕ್ಷಿ ಕೊಡುತ್ತವೆ. ಮತ್ತು ನನ್ನನ್ನು ಕಳುಹಿಸಿದ ತಂದೆಯು
ತಾನೇ ನನ್ನನ್ನು ಕುರಿತು ಸಾಕ್ಷಿ ಕೊಟ್ಟಿದ್ದಾನೆ. ಅವನ ಶಬ್ದವನ್ನು
ನೀವು ಎಂದಾದರೂ ಕೇಳಲಿಲ್ಲ, ಅವನ ರೂಪವನ್ನು ನೋಡಲಿಲ್ಲ;
೩೮ ಮತ್ತು ಅವನ ವಾಕ್ಯವು ನಿಮ್ಮಲ್ಲಿ ನೆಲೆಯಾಗಿ ನಿಮಗಿರುವದಿಲ್ಲ.
ಯಾಕಂದರೆ ಅವನು ಕಳುಹಿಸಿದವನಲ್ಲಿ ನೀವು ವಿಶ್ವಾಸವಿಡುವ
ದಿಲ್ಲ.

೩೯ ಬರಹಗಳನ್ನು ಶೋಧಿಸಿರಿ; ಯಾಕಂದರೆ ಅವುಗಳಲ್ಲಿ ನಿತ್ಯ
ಜೀವ ನಿಮಗುಂಟೆಂದು, ನೆನಸುತ್ತೀರಿ; ಮತ್ತು ಅದೇ ನನ್ನನ್ನು
೪೦ ಕುರಿತು ಸಾಕ್ಷಿ ಕೊಡುತ್ತವೆ. ಆದರೆ ಜೀವವನ್ನು ಹೊಂದುವ
೪೧ ಹಾಗೆ, ನನ್ನ ಬಳಿಗೆ ಬರುವದಕ್ಕೆ ನಿಮಗೆ ಮನಸ್ಸಿಲ್ಲ. ಮನು
೪೨ ಷ್ಯರಿಂದ ನಾನು ಮಾನವನ್ನು ತಕ್ಕೊಳ್ಳುವದಿಲ್ಲ; ಆದರೆ ನಿಮ್ಮ
೪೩ ಲ್ಲಿ ದೇವರ ಪ್ರೀತಿ ಇಲ್ಲವೆಂದು, ನಿಮ್ಮನ್ನು ಅರಿತಿದ್ದೇನೆ. ನನ್ನ
ತಂದೆಯ ಹೆಸರಿನಲ್ಲಿ ನಾನು ಬಂದಿದ್ದೇನೆ; ನೀವು ನನ್ನನ್ನು ಅಂ
ಗೀಕರಿಸುವದಿಲ್ಲ. ಬೇರೊಬ್ಬನು ಸ್ವಂತ ಹೆಸರಿನಲ್ಲಿ ಬಂದರೆ,
೪೪ ಅವನನ್ನು ಅಂಗೀಕರಿಸುವಿರಿ. ದೇವರಿಂದ ಮಾತ್ರ ಮಾನವನ್ನು
ಹುಡುಕದೆ, ಒಬ್ಬರಿಂದೊಬ್ಬರು ಮಾನವನ್ನು ತಕ್ಕೊಳ್ಳುವ ನೀ
೪೫ ವು ವಿಶ್ವಾಸಿಸುವದು ಹ್ಯಾಗೆ? ನಾನು ತಂದೆಯ ಬಳಿಯಲ್ಲಿ
ನಿಮ್ಮ ಮೇಲೆ ದೂರು ಹೇಳುವೆನೆಂದು, ನೆನಸ ಬೇಡಿರಿ; ನಿಮ್ಮ
ಮೇಲೆ ದೂರು ಹೇಳುವವನಿದ್ದಾನೆ—ನೀವು ನಂಬಿರುವ ಮೋಶೆ
೪೬ ಯೇ. ಹ್ಯಾಗಂದರೆ ನೀವು ಮೋಶೆಯನ್ನು ವಿಶ್ವಾಸಿಸಿದ್ದರೆ,
೪೭ ನನ್ನನ್ನು ವಿಶ್ವಾಸಿಸುವಿರಿ. ಯಾಕಂದರೆ ಅವನು ನನ್ನನ್ನು ಕು
ರಿತು ಬರೆದನು. ಆದರೆ ಅವನ ಬರಹಗಳನ್ನು ನೀವು ವಿಶ್ವಾಸಿಸ
ದಿದ್ದರೆ, ನನ್ನ ಮಾತುಗಳನ್ನು ವಿಶ್ವಾಸಿಸುವದು ಹ್ಯಾಗೆ?

## ೬. ಸಂಧಿ.

೧ ಇವುಗಳಾದ ಮೇಲೆ ಯೇಸು ತಿಬೇರಿಯವೆಂಬ ಗಲಿಲಾಯ
೨ ಸಮುದ್ರದ ಆಚೆಗೆ ಹೋದನು. ಆಗ ಬಹು ಸಮೂಹವು ಅವ
ನು ಅಸ್ವಸ್ಥವಾಗಿರುವವರಲ್ಲಿ ನಡಿಸಿದ ಲಕ್ಷಣಗಳನ್ನು ನೋಡಿ
೩ ದ್ದರಿಂದ ಅವನನ್ನು ಹಿಂಬಾಲಿಸಿದರು. ಆದರೆ ಯೇಸು ಬೆಟ್ಟವ
೪ ನ್ನೇರಿ, ಅಲ್ಲಿ ತನ್ನ ಶಿಷ್ಯರ ಸಂಗಡ ಕೂತು ಕೊಂಡನು. ಯೆ
ಹೂದ್ಯರ ಹಬ್ಬವಾದ ಪಸ್ಕವು ಸಮೀಪವಾಗಿತ್ತು. ಹೀಗಿರಲಾಗಿ,
೫ ಯೇಸು ಕಣ್ಣುಗಳೆತ್ತಿ, ಬಹು ಸಮೂಹವು ತನ್ನ ಬಳಿಗೆ ಬರು
ತ್ತದೆಂದು ನೋಡಿ, ಫಿಲಿಪ್ಪನಿಗೆ, ಇವರು ತಿನ್ನುವ ಹಾಗೆ, ಎಲ್ಲಿಂ
೬ ದ ಕೊಟ್ಟಿಗಳನ್ನು ಕೊಂಡು ಕೊಳ್ಳುವ? ಅಂದನು. ಅವನನ್ನು
ಶೋಧಿಸಿ, ಇದನ್ನು ಹೇಳಿದನು. ಯಾಕಂದರೆ ತಾನು ಮಾಡ
ಹೋಗುವದನ್ನು ತಿಳ್ಕಿದಿದ್ದನು.

೭ ಫಿಲಿಪ್ಪನು ಅವನಿಗೆ ಪ್ರತ್ಯುತ್ತರವಾಗಿ, ಇವರಲ್ಲಿ ಒಬ್ಬೊಬ್ಬಿ
ನು ಸ್ವಲ್ಪ ತಕ್ಕೊಳ್ಳುವ ಹಾಗೆ, ಇನ್ನೂರು ಹಣದ ರೊಟ್ಟಿ
೮ ಸಾಲದು, ಅಂದನು. ಆಗಲವನ ಶಿಷ್ಯರಲ್ಲಿ ಒಬ್ಬನಾಗಿರುವ ಸೀ
೯ ಮೋನ್ ಪೇತ್ರನ ಸಹೋದರನಾದ ಅಂದ್ರೆಯನು ಅವನಿಗೆ, ಇಲ್ಲಿ
ಒಬ್ಬ ಹುಡುಗನಿದ್ದಾನೆ. ಅವನ ಬಳಿಯಲ್ಲಿ ಐದು ಜವೆಗೋಧಿಯ
ರೊಟ್ಟಿಗಳೂ, ಎರಡು ಮೀನುಗಳೂ ಉಂಟು. ಆದರೆ ಅಷ್ಟು
೧೦ ಜನರಿಗೆ ಇವೇನು? ಅನ್ನಲಾಗಿ; ಯೇಸು, ಆ ಮನುಷ್ಯರನ್ನು
ಕೂಡ್ರಿಸಿರಿ, ಅಂದನು. ಆ ಸ್ಥಳದಲ್ಲಿ ಬಹಳ ಹುಲ್ಲು ಇದ್ದದರಿಂದ,
ಜನರು ಕೂತು ಕೊಂಡರು. ಅವರ ಲೆಕ್ಕವು ಹೆಚ್ಚು ಕಡಿಮೆ ಐದು
೧೧ ಸಾವಿರ. ತರುವಾಯ ಯೇಸು ರೊಟ್ಟಿಗಳನ್ನು ತೆಗೆದು ಕೊಂಡು,
ಸ್ತೋತ್ರ ಮಾಡಿ, ಶಿಷ್ಯರಿಗೆ ಕೊಟ್ಟನು; ಶಿಷ್ಯರು ಕೂತು ಕೊಂ
ಡಿರುವವರಿಗೆ ಹಂಚಿದರು. ಅದೇ ಪ್ರಕಾರ ಮೀನುಗಳಲ್ಲಿಯೂ

೧೨ ಬೇಕಾದಷ್ಟು ಹಂಚಿದರು. ತೃಪ್ತಿ ಆದ ಮೇಲೆ, ತನ್ನ ಶಿಷ್ಯರಿಗೆ,
ಏನಾದರೂ ಕೆಟ್ಟು ಹೋಗದ ಹಾಗೆ, ಮಿಕ್ಕಿರುವ ತುಂಡುಗಳ
೧೩ ನ್ನು ಕೂಡಿಸಿರಿ, ಅಂದನು. ಅವರು ಕೂಡಿಸಿ, ಆ ಐದು ಜವೆ
ಗೋಧಿಯ ಕೊಟ್ಟಿಗಳಲ್ಲಿ ತಿಂದವರಿಗೆ ಮಿಕ್ಕಿರುವ ತುಂಡುಗಳಿಂದ
ಹನ್ನಿರಡು ಪುಟ್ಟಿಗಳನ್ನು ತುಂಬಿದರು.

೧೪ ಆದದರಿಂದ ಆ ಮನುಷ್ಯರು ಯೇಸು ಮಾಡಿದ ಲಕ್ಷಣವ
ನ್ನು ನೋಡಿ, ಇವನು ನಿಜವಾಗಿ ಲೋಕಕ್ಕೆ ಬರುವ ಪ್ರವಾದಿ
೧೫ ಯಾಗಿದ್ದಾನೆ, ಅಂದರು. ಆಗ ಯೇಸು, ತನ್ನನ್ನು ಅರಸನಾಗ
ಮಾಡುವದಕ್ಕೆ ಅವರು ಬಂದು, ತನ್ನನ್ನು ಹಿಡುಕೊಳ್ಳುವಕೆಂದು
ತಿಳಿದು, ತಿರಿಗಿ ಒಂಟಿಯಾಗಿ ಬೆಟ್ಟಕ್ಕೆ ಹೋಗಿ ಬಿಟ್ಟನು.

೧೬ ಆದರೆ ಸಾಯಂಕಾಲವಾದಾಗ, ಅವನ ಶಿಷ್ಯರು ಸಮುದ್ರಕ್ಕೆ
೧೭ ಇಳಿದು ಹೋಗಿ, ಹಡಗವನ್ನೇರಿ, ಸಮುದ್ರದ ಆಚೆಗೆ ಕಪೆ
ರ್ನಾಮಿಗೆ ಹೋಗುತ್ತಿದ್ದರು; ಆಗಲೇ ಕತ್ತಲಾಗಿತ್ತು. ಯೇಸು
೧೮ ಅವರ ಬಳ್ಳಿಗೆ ಬಾರದೆ ಇದ್ದನು. ಮತ್ತು ದೊಡ್ಡ ಘುಳ್ಳಿ ಬೀಸು
೧೯ ವದರಿಂದ ಸಮುದ್ರವು ಉಬ್ಬಿತು. ಹೀಗಿರಲಾಗಿ ಅವರು ಇಪ್ಪ
ತ್ತೈದು ಮೂವತ್ತು ಸ್ತಾದ್ಯಗಳ ಪರ್ಯಂತರ ಹುಟ್ಟು ಹಾಕಿ,
ನಡಿಸಿದ ಮೇಲೆ, ಸಮುದ್ರದ ಮೇಲೆ ನಡೆದು, ಹಡಗಕ್ಕೆ ಸಮೀ
೨೦ ಪ ಬರುವ ಯೇಸುವನ್ನು ನೋಡಿ, ಭಯ ಪಟ್ಟರು. ಆದರೆ
೨೧ ಅವನವರಿಗೆ, ನಾನೇ, ಭಯ ಪಡ ಬೇಡಿರಿ, ಅಂದನು. ಆಗ
ಅವನನ್ನು ಹಡಗದಲ್ಲಿ ಸೇರಿಸಿ ಕೊಳ್ಳ ಮನಸ್ಸಾಗಿದ್ದರು. ಮ
ತ್ತು ಸಂಗತಿಯೇ ಹಡಗವು ಅವರು ಹೋಗುವ ಭೂಮಿಗೆ ಸೇರಿತು.

೨೨ ಮಾರನೆ ದಿವಸ ಸಮುದ್ರದ ಆಚೆಯಲ್ಲಿ ನಿಂತ ಸಮೂಹ
ವು, ಅವನ ಶಿಷ್ಯರು ಏರಿದ ಒಂದೇ ಹಡಗವು ಹೊರ್ತು ಇ
ನ್ನೊಂದು ಅಲ್ಲಿ ಇಲ್ಲವೆಂದೂ, ಅವನ ಶಿಷ್ಯರು ಮಾತ್ರ ಹೋ
ದದ್ದೇ ಹೊರ್ತು ಯೇಸು ತನ್ನ ಶಿಷ್ಯರ ಸಂಗಡ ಹಡಗವನ್ನು
೨೩ ಏರಲಿಲ್ಲವೆಂದೂ, ತಿಳಿಸಿ ಕೊಂಡರು. ಆದರೆ ಬೇರೆ ಹಡಗಗಳು,
ಕರ್ತನು ಸ್ತೋತ್ರ ಮಾಡಿದ ಮೇಲೆ ಅವರು ಕೊಟ್ಟಿ ತಿಂದ ಸ್ಥ
೨೪ ಳಕ್ಕೆ ಸಮೀಪವಾದ ತಿಬೇರಿಯದಿಂದ ಬಂದವು. ಆದಕಾರಣ
ಯೇಸೂ ಅವನ ಶಿಷ್ಯರೂ ಅಲ್ಲಿ ಇಲ್ಲವೆಂದು, ಸಮೂಹವು
ನೋಡಿ, ತಾವೇ ಹಡಗಗಳನ್ನೇರಿ, ಯೇಸುವನ್ನು ಹುಡುಕುತ್ತಾ,
ಕಪೆರ್ನಾಮಿಗೆ ಬಂದರು.

೨೫ ಸಮುದ್ರದ ಆಚೆ ಅವನನ್ನು ಕಂಡು, ಅವನಿಗೆ, ರಬ್ಬಿಯೇ,
೨೬ ಯಾವಾಗ ಇಲ್ಲಿಗೆ ಬಂದಿ! ಅಂದನು. ಯೇಸು ಅವರಿಗೆ ಪ್ರತ್ಯುತ್ತ
ರವಾಗಿ ಹೇಳಿದ್ದು, ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇ
ನೆ, ನೀವು ಲಕ್ಷಣಗಳನ್ನು ಕಂಡದ್ದರಿಂದಲ್ಲ, ಕೊಟ್ಟಿಗಳನ್ನು ತಿಂದು
ತೃಪ್ತಿಯಾದದರಿಂದಲೇ, ನನ್ನನ್ನು ಹುಡುಕುತ್ತೀರಿ. ನಾಶ
೨೭ ವಾಗುವ ಆಹಾರಕ್ಕೋಸ್ಕರವಲ್ಲ, ನಿತ್ಯ ಜೀವಕ್ಕೆ ನೆಲೆಯಾಗಿರು
ವ ಆಹಾರಕ್ಕೋಸ್ಕರ ಕಷ್ಟ ಮಾಡಿರಿ; ಅದನ್ನು ಮನುಷ್ಯನ
ಮಗನು ನಿಮಗೆ ಕೊಡುವನು; ಯಾಕಂದರೆ ತಂದೆಯಾದ ದೇವ
ರು ಅವನಿಗೆ ಮುದ್ರೆ ಹಾಕಿದ್ದಾನೆ. ಅವರು ಅವನಿಗೆ, ನಾವು ದೇವರ
೨೮ ಕ್ರಿಯೆಗಳನ್ನು ನಡಿಸುವ ಹಾಗೆ ಏನು ಮಾಡ ಬೇಕು! ಅಂದಾಗ;
ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದೇನಂದರೆ, ಅವನು ಕಳು
೨೯ ಹಿಸಿದವನಲ್ಲಿ ನೀವು ವಿಶ್ವಾಸವಿಡುವದೇ ದೇವರ ಕ್ರಿಯೇ. ಅವರು
ಅವನಿಗೆ, ಹಾಗಾದರೆ ನಾವು ನೋಡಿ, ನಿನ್ನಲ್ಲಿ ವಿಶ್ವಾಸವಿಡುವ ಹಾ
೩೦ ಗೆ ಯಾವ ಲಕ್ಷಣವನ್ನು ಮಾಡುತ್ತೀ? ಏನು ನಡಿಸುತ್ತೀ? ತಿನ್ನುವ
ದಕ್ಕೆ ಪರಲೋಕದಿಂದ ಅವರಿಗೆ ಕೊಟ್ಟಿ ಕೊಟ್ಟನೆಂದು, ಬರೆ
ದಿರುವ ಪ್ರಕಾರ, ನಮ್ಮ ಪಿತೃಗಳು ಅರಣ್ಯದಲ್ಲಿ ಮನ್ನ ತಿಂದರು.
೩೧ ಅಂದಾಗ; ಯೇಸು ಅವರಿಗೆ, ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ
ಹೇಳುತ್ತೇನೆ, ಮೋಶೆಯು ನಿಮಗೆ ಪರಲೋಕದಿಂದ ಕೊಟ್ಟಿ ಕೊ
ಡಲಿಲ್ಲ; ಆದರೆ ನನ್ನ ತಂದೆಯು ನಿಮಗೆ ಪರಲೋಕದಿಂದ ನಿಜ
೩೨ ವಾದ ಕೊಟ್ಟಿ ಕೊಡುತ್ತಾನೆ. ಏನಂದರೆ ಪರಲೋಕದಿಂದ ಇಳಿದು
ಬಂದು, ಲೋಕಕ್ಕೆ ಜೀವವನ್ನು ಕೊಡುವವನೇ ದೇವರ ಕೊಟ್ಟಿ
೩೩ ಯಾಗಿದ್ದಾನೆ, ಅಂದನು. ಆಗಲವನಿಗೆ, ಕರ್ತನೇ, ಯಾವಾಗ
೩೪ ಲೂ ನಮಗೆ ಈ ಕೊಟ್ಟಿ ಕೊಡು, ಅಂದರು. ಯೇಸು ಅವರಿಗೆ,
ನಾನೇ ಜೀವದ ಕೊಟ್ಟಿ; ನನ್ನ ಬಳ್ಳಿಗೆ ಬರುವವನು ಎಂದಿಗೂ
ಹಸಿದಿರನು; ನನ್ನಲ್ಲಿ ವಿಶ್ವಾಸವಿಡುವವನು ಎಂದಿಗೂ ದಾಹ ಪಡ
೩೫ ನು. ಆದರೆ ನೀವು ನನ್ನನ್ನು ನೋಡಿ, ವಿಶ್ವಾಸವಿಡುವದಿಲ್ಲವೆಂದು
೩೬ ನಿಮಗೆ ಹೇಳಿದ್ದೇನೆ. ತಂದೆಯು ನನಗೆ ಕೊಡುವದೆಲ್ಲಾ ನನ್ನ ಬ
ಳ್ಳಿಗೆ ಬರುವದು; ಮತ್ತು ನನ್ನ ಬಳ್ಳಿಗೆ ಬರುವವನನ್ನು ನಾನು ಹೊ
೩೭ ರಗೆ ಹಾಕುವದಿಲ್ಲ. ಯಾಕಂದರೆ ನನ್ನ ಚಿತ್ತವನ್ನಲ್ಲ, ನನ್ನನ್ನು
ಕಳುಹಿಸಿದವನ ಚಿತ್ತವನ್ನು ಮಾಡುವ ಹಾಗೆ, ಪರಲೋಕದಿಂದ
೩೮ ಇಳಿದು ಬಂದಿದ್ದೇನೆ. ನನ್ನನ್ನು ಕಳುಹಿಸಿದ ತಂದೆಯ ಚಿತ್ತವು
ಇದೇ— ಅವನು ನನಗೆ ಕೊಟ್ಟ ಎಲ್ಲಾದರಲ್ಲಿ ನಾನು ಏನೂ ಕಳ
ಕೊಳ್ಳದೆ, ಕಡೇ ದಿನದಲ್ಲಿ ಅದನ್ನು ಎಬ್ಬಿಸ ಬೇಕೆಂಬುವದೇ.
೩೯ ನನ್ನನ್ನು ಕಳುಹಿಸಿದವನ ಚಿತ್ತವು ಇದೇ— ಮಗನನ್ನು ನೋಡಿ,
ಅವನಲ್ಲಿ ವಿಶ್ವಾಸವಿಡುವವರೆಲ್ಲರಿಗೆ ನಿತ್ಯ ಜೀವವು ಇರ ಬೇಕೆಂಬು
ವದೇ; ಮತ್ತು ನಾನು ಕಡೇ ದಿನದಲ್ಲಿ ಅವನನ್ನು ಎಬ್ಬಿಸುವೆನು,
ಅಂದನು.

೪೦ ಆಗಲವನು, ನಾನೇ ಪರಲೋಕದಿಂದಿಳಿದು ಬಂದ ಕೊಟ್ಟಿ
೪೧ ಎಂದು ಹೇಳಿದ್ದಕ್ಕೆ ಯೆಹೂದ್ಯರು ಗುಣಗುಟ್ಟಿ, ಇವನು ಯೋ
ಸೆಫನ ಮಗನಾದ ಯೇಸುವಲ್ಲವೋ? ಇವನ ತಂದೆ ತಾಯಿಗಳನ್ನು
ನಾವು ಬಲ್ಲೆವಲ್ಲವೋ! ಹಾಗಾದರೆ ಪರಲೋಕದಿಂದಿಳಿದು ಬಂದೆ
೪೨ ನೆಂದು, ಇವನು ಹೇಳುವದು ಹ್ಯಾಗೆ? ಅಂದಾಗ; ಯೇಸು ಪ್ರತ್ಯು
ತ್ತರವಾಗಿ ಅವರಿಗೆ, ನಿಮ್ಮೊಳಗೆ ಗುಣಗುಟ್ಟಬೇಡಿರಿ; ನನ್ನನ್ನು ಕ
೪೩ ಳುಹಿಸಿದ ತಂದೆಯು ಅವನನ್ನು ಎಳೆದರೆ ಹೊರ್ತು, ಯಾವನೂ
ನನ್ನ ಬಳ್ಳಿಗೆ ಬರಲಾರನು; ಮತ್ತು ನಾನು ಅವನನ್ನು ಕಡೇ ದಿನ
೪೪ ದಲ್ಲಿ ಎಬ್ಬಿಸುವೆನು. ಅವರೆಲ್ಲರು ದೇವರಿಂದ ಬೋಧಿಸಲ್ಪಟ್ಟಿರುವ
ಕೆಂದು, ಪ್ರವಾದಿಗಳಲ್ಲಿ ಬರೆದದೆ; ಆದದರಿಂದ ತಂದೆಯಿಂದ ಕೇ
೪೫ ಳಿ, ಕಲಿತವರೆಲ್ಲರು ನನ್ನ ಬಳ್ಳಿಗೆ ಬರುತ್ತಾರೆ. ತಂದೆಯ ಬಳ್ಳಿಯ
ಲ್ಲಿ ಇರುವವನಲ್ಲದೆ, ಯಾವನಾದರೂ ತಂದೆಯನ್ನು ನೋಡಿದ
ನೆಂಬ ಹಾಗಲ್ಲ; ಅವನೇ ತಂದೆಯನ್ನು ನೋಡಿದ್ದಾನೆ.

೪೬ ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನನ್ನಲ್ಲಿ
೪೭ ವಿಶ್ವಾಸವಿಡುವವನಿಗೆ ನಿತ್ಯ ಜೀವ ಉಂಟು. ನಾನೇ ಜೀವದ
೪೮ ಕೊಟ್ಟಿ. ನಿಮ್ಮ ಪಿತೃಗಳು ಅರಣ್ಯದಲ್ಲಿ ಮನ್ನ ತಿಂದು, ಸತ್ತು
೪೯ ಹೋದರು. ಯಾವನಾದರೂ ಅದರಿಂದ ತಿಂದು, ಸಾಯದ
ಹಾಗೆ, ಇದೇ ಪರಲೋಕದಿಂದ ಇಳಿದು ಬಂದ ಕೊಟ್ಟಿಯಾ
೫೧ ಗಿದೆ. ನಾನೇ ಪರಲೋಕದಿಂದ ಇಳಿದು ಬಂದ ಜೀವವುಳ್ಳ
ಕೊಟ್ಟಿಯಾಗಿದ್ದೇನೆ; ಈ ಕೊಟ್ಟಿ ಯಾವನಾದರೂ ತಿಂದರೆ,
ಎಂದೆಂದಿಗೂ ಬದುಕುವನು; ಮತ್ತು ನಾನು ಕೊಡುವ ಕೊಟ್ಟಿ
ನನ್ನ ಮಾಂಸವು; ಅದನ್ನು ನಾನು ಲೋಕದ ಜೀವಕ್ಕೋಸ್ಕ
ರ ಕೊಡುವೆನು, ಅಂದನು.



೫೨ ಆಗ ಯೆಹೂದ್ಯರು, ಇವನು ನಮಗೆ ತನ್ನ ಮಾಂಸವನ್ನು
ತಿನ್ನ ಕೊಡಲಾಗುವದು ಹ್ಯಾಗೆ? ಎಂದು ಜಗಳಾಡಿ ಕೊಂಡರು.
೫೩ ಆಗ ಯೇಸು ಅವರಿಗೆ, ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇ
ಳುತ್ತೇನೆ, ನೀವು ಮನುಷ್ಯನ ಮಗನ ಮಾಂಸವನ್ನು ತಿನ್ನದೆ,
ಅವನ ರಕ್ತವನ್ನು ಕುಡಿಯದೆ ಹೋದರೆ, ನಿಮ್ಮೊಳಗೆ ಜೀವವು
೫೪ ಇಲ್ಲದವರಾಗಿದ್ದೀರಿ; ನನ್ನ ಮಾಂಸವನ್ನು ತಿಂದು, ನನ್ನ ರಕ್ತವ
ನ್ನು ಕುಡಿಯುವವನಿಗೆ ನಿತ್ಯ ಜೀವ ಉಂಟು; ಮತ್ತು ನಾನು
೫೫ ಅವನನ್ನು ಕಡೇ ದಿನದಲ್ಲಿ ಎಬ್ಬಿಸುವೆನು. ಯಾಕಂದರೆ ನನ್ನ
ಮಾಂಸವು ನಿಜವಾಗಿ ಆಹಾರವಾಗಿದೆ; ನನ್ನ ರಕ್ತವು ನಿಜವಾಗಿ
೫೬ ಪಾನವಾಗಿದೆ. ನನ್ನ ಮಾಂಸವನ್ನು ತಿಂದು, ನನ್ನ ರಕ್ತವನ್ನು
ಕುಡಿಯುವವನು ನನ್ನಲ್ಲಿ ನೆಲೆಯಾಗಿದ್ದಾನೆ; ನಾನು ಅವನಲ್ಲಿ
೫೭ ಇದ್ದೇನೆ. ಜೀವವುಳ್ಳ ತಂದೆಯು ನನ್ನನ್ನು ಕಳುಹಿಸಿ, ನಾನು
ತಂದೆಯ ಮೂಲವಾಗಿ ಬದುಕುವ ಪ್ರಕಾರ, ನನ್ನನ್ನು ತಿನ್ನುವ
೫೮ ವನು ಅವನೇ ನನ್ನ ಮೂಲವಾಗಿ ಬದುಕುವನು. ಇದೇ ಪರಲೋ
ಕದಿಂದ ಇಳಿದು ಬರುವ ಕೊಟ್ಟಿ; ನಿಮ್ಮ ಪಿತೃಗಳು ಮನ್ನ
ತಿಂದು, ಸತ್ತು ಹೋದ ಹಾಗಲ್ಲ; ಈ ಕೊಟ್ಟಿ ತಿನ್ನುವವನು
ಎಂದೆಂದಿಗೂ ಬದುಕುವನು, ಅಂದನು.

೫೯ ಇವುಗಳನ್ನು ಕಪೆರ್ನಾಮಿನಲ್ಲಿ ಬೋಧಿಸಿ, ಸಭೆಮನೆಯಲ್ಲಿ
೬೦ ಹೇಳಿದನು. ಅವನ ಶಿಷ್ಯರಲ್ಲಿ ಅನೇಕರು ಅದನ್ನು ಕೇಳಿ, ಈ
ಮಾತು ಕಠಿಣವಾಗಿದೆ; ಇದನ್ನು ಯಾರು ಕೇಳ ಬಹುದು? ಅಂ
೬೧ ದಾಗ; ಯೇಸು ತನ್ನ ಶಿಷ್ಯರು ಇದಕ್ಕೆ ಗುಣಗುಟ್ಟುತ್ತಾರೆಂ
೬೨ ದು ತನ್ನಲ್ಲಿ ತಿಳಿದು, ಅವರಿಗೆ, ಇದು ನಿಮಗೆ ಅಡಿಂಕವಾಗಿದೆ
ಯೋ? ಹಾಗಾದರೆ ಮನುಷ್ಯನ ಮಗನು ತಾನು ಮೊದಲು
ಇದ್ದಲ್ಲಿಗೆ ಏರಿ ಹೋಗುವದನ್ನು ನೀವು ನೋಡಿದರೆ, ಏನು?
೬೩ ಬದುಕಿಸುವಂಥಾದ್ದು ಆತ್ಮವೇ; ಮಾಂಸವು ಯಾವದಕ್ಕೂ ಪ್ರ
ಯೋಜನವಾಗಿರುವದಿಲ್ಲ. ನಾನು ನಿಮಗೆ ಹೇಳುವ ಮಾತುಗಳು
೬೪ ಆತ್ಮವೂ ಜೀವವೂ ಆಗಿವೆ. ಆದರೆ ವಿಶ್ವಾಸಿಸದವರು ಕೆಲವರು
ನಿಮ್ಮಲ್ಲಿ ಇದ್ದಾರೆ. ಹ್ಯಾಗಂದರೆ ವಿಶ್ವಾಸಿಸದವರು ಯಾರೆಂ
ದೂ, ತನ್ನನ್ನು ಒಪ್ಪಿಸಿ ಕೊಡುವವನು ಯಾವನೆಂದೂ, ಆದಿ
ಯಿಂದ ಯೇಸು ತಿಳ್ಳಿದನು.

೬೫ ಮತ್ತು ಅವನು ಹೇಳಿದ್ದು, ಇದಕ್ಕೋಸ್ಕರವೇ, ನನ್ನ ತಂ
ದೆಯಿಂದ ಅವನಿಗೆ ಕೊಡಲ್ಪಟ್ಟಿದ್ದರೆ ಹೊರ್ತು, ಯಾವನೂ
ನನ್ನ ಬಳ್ಳಿಗೆ ಬರಲಾರನೆಂದು, ನಿಮಗೆ ಹೇಳಿದ್ದೇನೆ, ಅಂದನು.

೬೬ ಅಂದಿನಿಂದ ಅವನ ಶಿಷ್ಯರಲ್ಲಿ ಅನೇಕರು ಅವನ ಸಂಗಡ
೬೭ ನಡೆದು ಕೊಳ್ಳದೆ, ಹಿಂದಕ್ಕೆ ಹೋದರು. ಆಗ ಯೇಸು ಹನ್ನಿ
೬೮ ರವು ಮಂದಿಗೆ, ನೀವು ಸಹ ಹೋಗ ಬೇಕೋ? ಅಂದನು. ಸೀ
ಮೋನ್ ಪೇತ್ರನು ಅವನಿಗೆ ಪ್ರತ್ಯುತ್ತರವಾಗಿ, ಕರ್ತನೇ, ನಾವು
ಯಾರ ಬಳ್ಳಿಗೆ ಹೋಗೋಣ? ನಿನಗೆ ನಿತ್ಯ ಜೀವದ ವಾಕ್ಯಗಳು
೬೯ ಉಂಟು; ಮತ್ತು ನೀನು ಜೀವವುಳ್ಳ ದೇವರ ಮಗನಾದ ಕ್ರಿಸ್ತ
೭೦ ನೆಂದು, ನಾವು ನಂಬಿ, ತಿಳಿದಿದ್ದೇವೆ, ಅಂದಾಗ; ಯೇಸು ಅವರಿಗೆ
ಪ್ರತ್ಯುತ್ತರವಾಗಿ, ಹನ್ನಿರರು ಮಂದಿಯಾದ ನಿಮ್ಮನ್ನು ನಾನು
ಆದು ಕೊಂಡೆನಲ್ಲವೋ? ನಿಮ್ಮಲ್ಲಿ ಒಬ್ಬನು ಪಿಶಾಚನಲ್ಲವೋ?
೭೧ ಅಂದನು. ಅವನು ಹೇಳಿದವನು ಸೀಮೋನನ ಮಗನಾದ ಇಸ್ಕರಿ
ಯೋತೆಂಬ ಯೂದನು; ಯಾಕಂದರೆ ಹನ್ನಿರರು ಮಂದಿಯ
ಲ್ಲಿ ಒಬ್ಬನಾದ ಇವನು ಅವನನ್ನು ಒಪ್ಪಿಸಿ ಕೊಡುವದಕ್ಕಿ
ದ್ದನು.

## ೭. ಸಂಧಿ.

೧ ಇವುಗಳಾದ ಮೇಲೆ, ಯೇಸು ಗಲಿಲಾಯದಲ್ಲಿ ಸಂಚರಿಸುತ್ತಿ
ದ್ದನು; ಯಾಕಂದರೆ ಯೆಹೂದ್ಯರು ಅವನನ್ನು ಕೊಲ್ಲ ಹುಡು
ಕಿದ್ದರಿಂದ ಯೆಹೂದದಲ್ಲಿ ಸಂಚರಿಸುವದಕ್ಕೆ ಮನಸ್ಸಿಲ್ಲದೆ
ಇದ್ದನು.

೨ ಇದಲ್ಲದೆ ಯೆಹೂದ್ಯರ ಗುಡಾರದ ಹಬ್ಬವು ಸಮೀಪವಾಗಿತ್ತು.
೩ ಆಗಲವನ ಸಹೋದರರು ಅವನಿಗೆ, ನಿನ್ನ ಶಿಷ್ಯರು ಸಹ ನೀನು
ಮಾಡುವ ಕ್ರಿಯೆಗಳನ್ನು ನೋಡುವ ಹಾಗೆ, ಇಲ್ಲಿಂದ ಹೊರಟು,
೪ ಯೆಹೂದಕ್ಕೆ ಹೋಗು, ಅಂದರು. ಯಾಕಂದರೆ ತಾನು ಬಹಿರಂ
ಗವಾಗ ಬೇಕೆಂಬುವ ಯಾವನಾದರೂ ಅಂತರಂಗದಲ್ಲಿ ಯಾವದ
ನ್ನೂ ಮಾಡುವದಿಲ್ಲ; ಇವುಗಳನ್ನು ನೀನು ಮಾಡಿದರೆ, ನಿನ್ನನ್ನು
೫ ಲೋಕಕ್ಕೆ ತೋರಿಸು. ಯಾಕಂದರೆ ಅವನ ಸಹೋದರರು
೬ ಸಹ ಅವನಲ್ಲಿ ವಿಶ್ವಾಸವಿಡದೆ ಇದ್ದರು. ಆದದರಿಂದ ಯೇಸು
ಅವರಿಗೆ, ನನ್ನ ಸಮಯವು ಇನ್ನೂ ಬರಲಿಲ್ಲ; ಆದರೆ ನಿಮ್ಮ
೭ ಸಮಯವು ಯಾವಾಗಲೂ ಸಿದ್ಧವಾಗಿದೆ. ಲೋಕವು ನಿಮ್ಮನ್ನು
ಹಗೆ ಮಾಡಲಾರದು; ಆದರೆ ನನ್ನನ್ನು ಹಗೆ ಮಾಡುತ್ತದೆ; ಯಾ
ಕಂದರೆ ನಾನು ಅದನ್ನು ಕುರಿತು, ಅದರ ಕ್ರಿಯೆಗಳು ಕೆಟ್ಟವಾಗಿವೆ
೮ ಎಂದು, ಸಾಕ್ಷಿ ಕೊಡುತ್ತೇನೆ. ನೀವೇ ಈ ಹಬ್ಬಕ್ಕೆ ಹೋಗಿರಿ;
ನನ್ನ ಸಮಯವು ಇನ್ನೂ ಪೂರ್ಣವಾಗದೆ ಇರುವದರಿಂದ ನಾ
೯ ನು ಈ ಹಬ್ಬಕ್ಕೆ ಇನ್ನೂ ಏರಿ ಹೋಗುವದಿಲ್ಲ. ಇವುಗಳ
೧೦ ನ್ನು ಅವರಿಗೆ ಹೇಳಿ, ಗಲಿಲಾಯದಲ್ಲಿ ನಿಂತನು. ಆದರೆ ಅವನ
ಸಹೋದರರು ಏರಿ ಹೋದ ಮೇಲೆ, ಅವನು ಸಹ, ಬಹಿರಂಗ
ವಾಗಿ ಅಲ್ಲ, ಅಂತರಂಗವಾಗಿ ಹಬ್ಬಕ್ಕೆ ಏರಿ ಹೋದನು.

೧೧ ಹಬ್ಬದಲ್ಲಿ ಯೆಹೂದ್ಯರು, ಅವನು ಎಲ್ಲಿ? ಎಂದು ಅವನ
೧೨ ನ್ನು ಹುಡುಕಿದರು. ಮತ್ತು ಸಮೂಹಗಳಲ್ಲಿ ಅವನ ವಿಷಯವಾಗಿ
ಬಹಳ ಗುಣಗುಟ್ಟುವಿಕೆ ಅಯಿತು. ಕೆಲವರು, ಅವನು ಒಳ್ಳೆಯ
ವನು; ಬೇರೆ ಕೆಲವರು, ಅಲ್ಲ, ಸಮೂಹವನ್ನು ಮೋಸಗೊಳಿಸು
೧೩ ತ್ತಾನೆ, ಅಂದರು. ಆದಾಗ್ಯೂ ಯೆಹೂದ್ಯರ ಭಯದಿಂದ ಯಾ
ರೂ ಅವನನ್ನು ಕುರಿತು ಧೈರ್ಯವಾಗಿ ಮಾತಾಡಲಿಲ್ಲ.

೧೪ ಆದರೆ ಹಬ್ಬದ ಮಧ್ಯದಲ್ಲಿ ಯೇಸು ದೇವಾಲಯಕ್ಕೆ ಏರಿ
೧೫ ಹೋಗಿ, ಬೋಧಿಸಿದನು. ಆಗ ಯೆಹೂದ್ಯರು, ಇವನು ಕಲಿಯ
ದೆ, ಅಕ್ಷರ ತಿಳಿಯುವದು ಹ್ಯಾಗೆ? ಎಂದು ಆಶ್ಚರ್ಯ ಪಡಲಾಗಿ,
೧೬ ಯೇಸು ಅವರಿಗೆ ಪ್ರತ್ಯುತ್ತರವಾಗಿ ಹೇಳ್ದೇನಂದರೆ, ನನ್ನ
೧೭ ಬೋಧನೆ ನನ್ನದಲ್ಲ, ನನ್ನನ್ನು ಕಳುಹಿಸಿದವನದಾಗಿದೆ. ಯಾ
ರಾದರೂ ಅವನ ಚಿತ್ತವನ್ನು ಮಾಡ ಮನಸ್ಸಾಗಿದ್ದರೆ, ಅವನು
ಬೋಧನೆಯನ್ನು ಕುರಿತು—ಅದು ದೇವರಿಂದದೆಯೋ? ನನ್ನ
ದ್ದಕ್ಕೆ ನಾನೇ ಮಾತಾಡುತ್ತೇನೋ—ತಿಳಿಯುವನು. ತನ್ನದ್ದಕ್ಕೆ
ತಾನೇ ಮಾತಾಡುವವನು ಸ್ವಂತ ಮಾನವನ್ನು ಹುಡುಕುತ್ತಾನೆ;
ಆದರೆ ತನ್ನನ್ನು ಕಳುಹಿಸಿದವನ ಮಾನವನ್ನು ಹುಡುಕುವವನೇ
೧೮ ಸತ್ಯವಂತನು; ಅವನಲ್ಲಿ ಅನ್ಯಾಯವೂ ಇಲ್ಲ. ಮೋಶೆಯು ನಿ
ಮಗೆ ನ್ಯಾಯಪ್ರಮಾಣವನ್ನು ಕೊಟ್ಟನಲ್ಲ? ಆದರೆ ನಿಮ್ಮಲ್ಲಿ
ಯಾವನಾದರೂ ನ್ಯಾಯಪ್ರಮಾಣವನ್ನು ಕೈಕೊಳ್ಳುವದಿಲ್ಲ.
೧೯ ಯಾಕೆ ನನ್ನನ್ನು ಕೊಲ್ಲ ಹುಡುಕುತ್ತೀರಿ? ಆಗ ಸಮೂಹವು

ಪ್ರತ್ಯುತ್ತರವಾಗಿ, ನಿನಗೆ ದೆವ್ವ ಉಂಟು; ಯಾರು ನಿನ್ನನ್ನು
ಕೊಲ್ಲ ಹುಡುಕುತ್ತಾರೆ? ಅಂದರು.
೨೧ ಯೇಸು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದು, ಒಂದೇ ಕ್ರಿಯೆ
೨೨ ಮಾಡಿದ್ದೇನೆ; ನೀವೆಲ್ಲರು ಆಶ್ಚರ್ಯ ಪಡುತ್ತೀರಿ. ಯಾಕಂದರೆ
ಮೋಶೆಯು ನಿಮಗೆ ಪರಿಛೇದನೆ ಕೊಟ್ಟನು; ಅದು ಮೋಶೆ
ಯಿಂದ ಎಂಬ ಹಾಗಲ್ಲ, ಪಿತೃಗಳಿಂದ ಉಂಟಾದದ್ದು. ಮತ್ತು
೨೩ ಸಬ್ಬತಿನಲ್ಲಿ ಮನುಷ್ಯನಿಗೆ ಪರಿಛೇದನೆ ಮಾಡುತ್ತೀರಿ. ಮೋಶೆ
ಯ ನ್ಯಾಯಪ್ರಮಾಣವು ಮೀರದ ಹಾಗೆ, ಸಬ್ಬತಿನಲ್ಲಿ ಒಬ್ಬ
ನು ಪರಿಛೇದನೆ ಹೊಂದಿದರೆ, ನಾನು ಮನುಷ್ಯನನ್ನು ಸಬ್ಬತಿ
ನಲ್ಲಿ ಪೂರ್ಣವಾಗಿ ಸ್ವಸ್ಥ ಮಾಡಿದ ಕಾರಣ, ನನ್ನ ಮೇಲೆ
೨೪ ಕೋಪ ಮಾಡುತ್ತೀರೋ? ಕಂಡ ಹಾಗೆ ನ್ಯಾಯ ತೀರಿಸ ಬೇಡಿರಿ;
ನೀತಿಯಾದ ನ್ಯಾಯ ತೀರ್ಪಿಕೆಯನ್ನು ಮಾಡಿರಿ.
೨೫ ಆಗ ಯೆರೂಸಲೇಮಿನವರಲ್ಲಿ ಕೆಲವರು ಹೇಳಿದ್ದು, ಅವರು
೨೬ ಕೊಲ್ಲ ಹುಡುಕುವವನು ಇವನಲ್ಲವೋ? ಇಗೋ, ಅವನು ಧೈ
ರ್ಯವಾಗಿ ಮಾತಾಡುತ್ತಾನೆ; ಅವರು ಅವನಿಗೆ ಏನೂ ಹೇಳುವ
ದಿಲ್ಲ. ಇವನು ನಿಜವಾಗಿ ಕ್ರಿಸ್ತನೆಂದು, ಅಧಿಪತಿಗಳು ನಿಜವಾಗಿ ತಿಳು
೨೭ ಕೊಂಡಿದ್ದಾರೋ? ಆದಾಗ್ಯೂ ಇವನು ಎಲ್ಲಿಂದ ಬಂದವನೆಂದು
ಬಲ್ಲೆವು; ಆದರೆ ಕ್ರಿಸ್ತನು ಬರುವಾಗ, ಅವನು ಎಲ್ಲಿಂದ ಬಂದವ
ನೆಂದು ಯಾರೂ ಅರಿಯರು.
೨೮ ಆಗ ಯೇಸು ದೇವಾಲಯದಲ್ಲಿ ಬೋಧಿಸುತ್ತಾ, ಕೂಗಿ ಹೇ
ಳಿದ್ದೇನಂದರೆ, ನನ್ನನ್ನು ಬಲ್ಲಿರಿ; ಮತ್ತು ನಾನು ಎಲ್ಲಿಂದ ಬಂದ
ವನೆಂದು, ಬಲ್ಲಿರಿ; ನನ್ನಿಚ್ಛೆಯಿಂದ ನಾನೇ ಬರಲಿಲ್ಲ. ಆದರೆ ನನ್ನ
ನ್ನು ಕಳುಹಿಸಿದವನು ಸತ್ಯವಂತನು; ಅವನನ್ನು ನೀವು ಅರಿ
೨೯ಯರಿ; ಆದರೆ ನಾನು ಅವನನ್ನು ಬಲ್ಲೆನು; ಯಾಕಂದರೆ ಅವ
೩೦ ನಿಂದ ಇದ್ದೇನೆ; ಅವನೇ ನನ್ನನ್ನು ಕಳುಹಿಸಿದ್ದಾನೆ. ಆಗಲು ಅವನ
ನ್ನು ಹಿಡಿಯ ಹುಡುಕಿದರು; ಆದರೆ ಅವನ ಘಳಿಗೆ ಇನ್ನೂ ಬಾರ
ದೆ ಇದ್ದ ಕಾರಣ, ಯಾವನೂ ಅವನ ಮೇಲೆ ಕೈ ಹಾಕಲಿಲ್ಲ.
೩೧ ಆದರೆ ಸಮೂಹದಲ್ಲಿ ಅನೇಕರು ಅವನಲ್ಲಿ ವಿಶ್ವಾಸವಿಟ್ಟು, ಕ್ರಿಸ್ತ
ನು ಬರುವಾಗ, ಇವನು ಮಾಡಿದವುಗಳಿಗಿಂತ ಹೆಚ್ಚಾದ ಲಕ್ಷಣ
ಗಳನ್ನು ಮಾಡುವನೋ? ಅಂದರು.
೩೨ ಫರಿಸಾಯರು, ಸಮೂಹವು ಅವನನ್ನು ಕುರಿತು ಇವುಗಳನ್ನು
ಗುಣಗುಟ್ಟುತ್ತಾರೆಂದು ಕೇಳಿದಾಗ, ಫರಿಸಾಯರೂ, ಪ್ರಧಾನ
ಯಾಜಕರೂ ಅವನನ್ನು ಹಿಡಿಯುವದಕ್ಕೆ ಉಳಿಗದವರನ್ನು
೩೩ ಕಳುಹಿಸಿದರು. ಆಗ ಯೇಸು ಅವರಿಗೆ ಹೇಳಿದ್ದು, ಇನ್ನು ಸ್ವಲ್ಪ
ಕಾಲ ನಿಮ್ಮ ಸಂಗಡ ಇದ್ದು, ನನ್ನನ್ನು ಕಳುಹಿಸಿದವನ ಬಳಿಗೆ
೩೪ ಹೋಗುತ್ತೇನೆ. ನನ್ನನ್ನು ಹುಡುಕಿ, ಕಾಣದೆ ಇರುವಿರಿ; ಮತ್ತು
೩೫ ನಾನು ಇರುವಲ್ಲಿಗೆ ನೀವು ಬರಲಾರಿರಿ. ಆಗ ಯೆಹೂದ್ಯರು
ತಮ್ಮಲ್ಲಿ ಹೇಳಿ ಕೊಂಡದ್ದು, ನಾವು ಅವನನ್ನು ಕಾಣದ ಹಾಗೆ,
ಇವನು ಎಲ್ಲಿಗೆ ಹೋಗುತ್ತಾನೆ? ಚದರಿ ಹೋದ ಗ್ರೇಕರ ಬಳಿಗೆ
೩೬ ಹೋಗಿ, ಗ್ರೇಕರಿಗೆ ಬೋಧಿಸುವದಕ್ಕಿದ್ದಾನೋ? ನನ್ನನ್ನು ಹು
ಡುಕಿ, ಕಾಣದೆ ಇರುವಿರೆಂದೂ, ನಾನು ಇರುವಲ್ಲಿಗೆ ನೀವು ಬರಲಾ
ರೆಂದೂ, ಅವನು ಹೇಳಿದ ಈ ಮಾತು ಏನು?
೩೭ ಹಬ್ಬದ ಮಹಾ ದಿನವಾದ ಕಡೇ ದಿವಸದಲ್ಲಿ ಯೇಸು ನಿಂತು
ಕೂಗಿದ್ದೇನಂದರೆ, ಯಾರಾದರೂ ದಾಹಗೊಂಡರೆ, ನನ್ನ ಬಳಿಗೆ
೩೮ ಬಂದು ಕುಡಿಯಲಿ. ನನ್ನಲ್ಲಿ ವಿಶ್ವಾಸವಿಡುವವನ್ಯಾನನೋ,
ಬರಹವು ಹೇಳಿದ ಪ್ರಕಾರ, ಅವನ ಹೊಟ್ಟೆಯಿಂದ ಜೀವಜಲ
೩೯ ನೀರಿನ ನದಿಗಳು ಹರಿಯುವವು. ಇದನ್ನು, ತನ್ನಲ್ಲಿ ವಿಶ್ವಾಸ
ವಿಡುವವರು ಹೊಂದಲಿರುವ ಆತ್ಮನನ್ನು ಕುರಿತು ಹೇಳಿದನು;
ಯಾಕಂದರೆ ಯೇಸು ಇನ್ನು ಮಹಿಮೆ ಹೊಂದದ ಕಾರಣ,
೪೦ ಪರಿಶುದ್ಧಾತ್ಮವು ಇನ್ನು ಬರಲಿಲ್ಲ. ಸಮೂಹದಲ್ಲಿ ಅನೇಕರು
ಆ ಮಾತನ್ನು ಕೇಳಿ, ಇವನು ನಿಜವಾಗಿ ಪ್ರವಾದಿಯಾಗಿದ್ದಾನೆ,
೪೧ ಅಂದರು. ಬೇರೊಬ್ಬರು, ಇವನೇ ಕ್ರಿಸ್ತನು, ಅಂದರು. ಬೇರೊ
೪೨ ಬ್ಬರು, ಕ್ರಿಸ್ತನು ಗಲಿಲಾಯದಿಂದ ಬರುತ್ತಾನೋ? ದಾವೀದನ
ಬೀಜದಿಂದಲೂ ದಾವೀದನು ಇದ್ದ ಬೆಥ್ಲೆಹೇಮ್ ಗ್ರಾಮದಿಂದಲೂ
ಕ್ರಿಸ್ತನು ಬರುತ್ತಾನೆಂದು, ಬರಹವು ಹೇಳಲಿಲ್ಲವೋ! ಅಂದರು.
೪೩ ಹೀಗೆ ಅವನನ್ನು ಕುರಿತು ಸಮೂಹದಲ್ಲಿ ಭೇದ ಉಂಟಾಯಿತು.
೪೪ ಅವರಲ್ಲಿ ಕೆಲವರು ಅವನನ್ನು ಹಿಡಿಯ ಬೇಕೆಂದಿದ್ದರು; ಆದರೆ
ಯಾರೂ ಅವನ ಮೇಲೆ ಕೈ ಹಾಕಲಿಲ್ಲ.
೪೫ ಆ ಮೇಲೆ ಪ್ರಧಾನ ಯಾಜಕರ, ಫರಿಸಾಯರ ಬಳಿಗೆ ಉಳಿ
ಗದವರು ಬಂದಾಗ; ಅವರು, ನೀವು ಯಾಕೆ ಅವನನ್ನು ತರಲಿಲ್ಲ!
೪೬ ಅನ್ನಲು; ಉಳಿಗದವರು, ಈ ಮನುಷ್ಯನ ಹಾಗೆ ಎಂದಾದರೂ
ಯಾವ ಮನುಷ್ಯನಾದರೂ ಮಾತಾಡಲಿಲ್ಲವೆಂದು, ಉತ್ತರ ಕೊ
೪೭ ಟ್ಟರು. ಆಗ ಫರಿಸಾಯರು ಅವರಿಗೆ ಪ್ರತ್ಯುತ್ತರವಾಗಿ ಹೇಳಿದ್ದು,
೪೮ ನೀವು ಸಹ ಮೋಸ ಹೋದಿಕೋ? ಅಧಿಪತಿಗಳಲ್ಲಿಯೂ ಫರಿ
ಸಾಯರಲ್ಲಿಯೂ ಯಾವನಾದರೂ ಅವನಲ್ಲಿ ವಿಶ್ವಾಸಿಸಿದ್ದಾ
೪೯ ನೋ? ಆದರೆ ನ್ಯಾಯಪ್ರಮಾಣವನ್ನು ಅರಿಯದ ಈ ಸಮೂ
೫೦ ಹವು ಶಾಪಗ್ರಸ್ಥರೇ. ಆಗ, ರಾತ್ರಿಯಲ್ಲಿ ಅವನ ಬಳಿಗೆ ಬಂದ,
೫೧ ಅವರೊಳಗೆ ಒಬ್ಬನಾದ, ನಿಕೊದೇಮನು ಅವರಿಗೆ, ನಮ್ಮ ನ್ಯಾ
ಯಪ್ರಮಾಣವು, ಮೊದಲು ಅವರನ್ನು ವಿಚಾರಿಸಿ, ಅವರು ಮಾಡು
ವದೇನೆಂದು ತಿಳಿಯದಿದ್ದರೆ, ಮನುಷ್ಯರಿಗೆ ನ್ಯಾಯ ತೀರಿಸುತ್ತ
೫೨ ದೋ! ಅಂದಾಗ; ಅವನಿಗೆ ಪ್ರತ್ಯುತ್ತರವಾಗಿ, ನೀನು ಸಹ ಗಲಿಲಾ
ಯದವನೋ? ಗಲಿಲಾಯದಿಂದ ಪ್ರವಾದಿಯು ಏಳುವದಿಲ್ಲವೆಂದು
೫೩ ಶೋಧಿಸಿ, ನೋಡು, ಅಂದರು. ಆಗ ಒಬ್ಬೊಬ್ಬನು ತನ್ನ ತನ್ನ
ಮನೆಗೆ ಹೋದನು.

## ೮. ಸಂಧಿ.

೧ ಆದರೆ ಯೇಸು ಇಬ್ಬೇ ಗುಡ್ಡಕ್ಕೆ ಹೋದನು. ಬೆಳಿಗ್ಯೆ ತಿ
೨ ರಿಗಿ ದೇವಾಲಯಕ್ಕೆ ಬಂದಾಗ, ಜನಕೆಲ್ಲಾ ಅವನ ಬಳಿಗೆ ಬರಲು,
೩ ಕೂತು ಕೊಂಡು, ಅವರಿಗೆ ಬೋಧಿಸಿದನು. ಆಗ ಶಾಸ್ತ್ರಿಗಳೂ
ಫರಿಸಾಯರೂ, ವ್ಯಭಿಚಾರದಲ್ಲಿ ಹಿಡಿಯಲ್ಪಟ್ಟ ಒಬ್ಬ ಸ್ತ್ರೀ
ಯನ್ನು ಅವನ ಬಳಿಗೆ ತಂದು, ಅವಳನ್ನು ಮಧ್ಯದಲ್ಲಿ ನಿಲ್ಲಿಸಿ,
೪ ಅವನಿಗೆ ಹೇಳಿದ್ದೇನಂದರೆ, ಬೋಧಕನೇ, ಈ ಸ್ತ್ರೀಯು ವ್ಯಭಿ
೫ ಚಾರ ಮಾಡುತ್ತಲೇ ಹಿಡಿಯಲ್ಪಟ್ಟಳು. ಮೋಶೆಯು ನ್ಯಾಯ
ಪ್ರಮಾಣದಲ್ಲಿ, ಇಂಥವರನ್ನು ಕಲ್ಲೆಸೆಯ ಬೇಕೆಂದು, ನಮಗೆ
೬ ಆಜ್ಞಾಪಿಸಿದ್ದಾನೆ; ಆದರೆ ನೀನು ಏನು ಹೇಳುತ್ತೀ? ಅವನ ಮೇಲೆ
ತಪ್ಪು ಹಿಡಿಯ ಬೇಕೆಂದು, ಅವನನ್ನು ಶೋಧಿಸಿ, ಇದನ್ನು
ಹೇಳಿದರು. ಆದರೆ ಯೇಸು ಬೊಗ್ಗಿ ಕೊಂಡು, ಬೆರಳಿನಿಂದ
ನೆಲದ ಮೇಲೆ ಬರೆದನು. ಅವರು ಅವನನ್ನು ಬಿಡದೆ ಕೇಳುತ್ತಿರು
೭ ವಾಗ, ಅವನು ನಿಂತು ಕೊಂಡು, ನಿಪ್ಪಾಪಿಗಳಿಗೆ ಪಾಪವಿಲ್ಲದವನು
ಮೊದಲು ಅವಳ ಮೇಲೆ ಕಲ್ಲು ಹಾಕಲಿ, ಎಂದು ಅವರಿಗೆ ಹೇಳಿ,



೮ ತಿರಿಗಿ ಬೊಗ್ಗಿ ಕೊಂಡು, ನೆಲದ ಮೇಲೆ ಬರೆದನು. ಆದರೆ ಕೇಳಿ
ದವರು, ಮನಸಾಕ್ಷಿಯಿಂದ ಖಂಡಿಸಲ್ಪಟ್ಟು, ಹಿರಿಯರು ಮೊ
ದಲ್ಗೊಂಡು ಕಡೆಯವರ ಪರಿಗೂ, ಒಬ್ಬೊಬ್ಬರಾಗಿ ಹೊರಗೆ
ಹೋದರು. ಮತ್ತು ಯೇಸು ಮಾತ್ರ ಮಧ್ಯದಲ್ಲಿ ನಿಂತ ಸ್ತ್ರೀ
೯ ಯ ಸಂಗಡ ಬಿಡಲ್ಪಟ್ಟನು. ಯೇಸು ನಿಂತು ಕೊಂಡು, ಸ್ತ್ರೀಯ
ಹೊರ್ತು ಯಾರನೂ ನೋಡದೆ, ಅವಳಿಗೆ, ಸ್ತ್ರೀಯೇ, ನಿನ್ನ
ದೂರುಗಾರರು ಎಲ್ಲಿ? ನಿನಗೆ ಯಾರೂ ಅಳ್ಳೆ ನಿರ್ಣಯಿಸಲಿ
೧೦ ಲ್ಲವೋ! ಅಂದನು. ಅವಳು, ಕರ್ತನೇ, ಯಾರೂ ಇಲ್ಲ, ಅಂದಾ
ಗ; ಯೇಸು ಅವಳಿಗೆ, ನಾನು ಸಹ ನಿನಗೆ ಅಳ್ಳೆ ನಿರ್ಣಯಿಸು
ವದಿಲ್ಲ; ಹೋಗು, ಇನ್ನು ಮೇಲೆ ಪಾಪ ಮಾಡ ಬೇಡ, ಅಂದನು.
೧೧ ತಿರಿಗಿ ಯೇಸು ಅವರ ಸಂಗಡ ಮಾತಾಡಿ, ಹೇಳಿದ್ದೇನಂದರೆ,
ನಾನೇ ಲೋಕದ ಬೆಳಕಾಗಿದ್ದೇನೆ; ನನ್ನನ್ನು ಹಿಂಬಾಲಿಸುವವನು
ಕತ್ತಲೆಯಲ್ಲಿ ನಡೆಯದೆ, ಜೀವದ ಬೆಳಕನ್ನು ಹೊಂದಿರುವನು.
೧೨ ಆಗ ಫರಿಸಾಯರು ಅವನಿಗೆ, ನಿನ್ನನ್ನು ಕುರಿತು ನೀನೇ ಸಾಕ್ಷಿ
೧೩ ಕೊಡುತ್ತೀ; ನಿನ್ನ ಸಾಕ್ಷಿ ನಿಜವಲ್ಲ, ಅಂದಾಗ; ಯೇಸು ಪ್ರತ್ಯು
ತ್ತರವಾಗಿ ಅವರಿಗೆ ಹೇಳಿದ್ದೇನಂದರೆ, ನಾನು ನನ್ನನ್ನು ಕುರಿತು
ಸಾಕ್ಷಿ ಕೊಟ್ಟರೂ, ನನ್ನ ಸಾಕ್ಷಿ ನಿಜವೇ; ಯಾಕಂದರೆ ಎಲ್ಲಿಂದ
ಬಂದೆನೋ, ಎಲ್ಲಿಗೆ ಹೋಗುತ್ತೇನೋ, ಬಲ್ಲೆನು. ಆದರೆ ನೀವು,
ನಾನು ಎಲ್ಲಿಂದ ಬರುತ್ತೇನೋ, ಎಲ್ಲಿಗೆ ಹೋಗುತ್ತೇನೋ, ಅರಿ
೧೪ಯರಿ. ನೀವು ಮಾಂಸಕ್ಕೆ ಅನುಸಾರವಾಗಿ ನ್ಯಾಯ ತೀರಿಸು
೧೫ ತ್ತೀರಿ; ನಾನು ಯಾವನಿಗೂ ನ್ಯಾಯ ತೀರಿಸುವದಿಲ್ಲ. ಆದರೆ
ನಾನು ನ್ಯಾಯತೀರಿಸಿದಾಗ್ಯೂ, ನನ್ನ ನ್ಯಾಯ ತೀರ್ಪಿಕೆಯು
ನಿಜವೇ; ಯಾಕಂದರೆ ನಾನು ಒಬ್ಬನೇ ಅಲ್ಲ, ನಾನೂ, ನನ್ನ
೧೭ ನ್ನು ಕಳುಹಿಸಿದ ತಂದೆಯೂ, ಇದ್ದೇವೆ. ನಿಮ್ಮ ನ್ಯಾಯ ಪ್ರ
ಮಾಣದಲ್ಲಿ, ಇಬ್ಬರು ಮನುಷ್ಯರ ಸಾಕ್ಷಿ ನಿಜವೆಂದು, ಬರೆದಿದೆ.
೧೮ ನಾನು ನನ್ನನ್ನು ಕುರಿತು ಸಾಕ್ಷಿ ಕೊಡುತ್ತೇನೆ; ಮತ್ತು ನನ್ನನ್ನು
ಕಳುಹಿಸಿದ ತಂದೆಯು ನನ್ನನ್ನು ಕುರಿತು ಸಾಕ್ಷಿ ಕೊಡುತ್ತಾನೆ.
೧೯ ಆಗಲವನಿಗೆ, ನಿನ್ನ ತಂದೆ ಎಲ್ಲಿ? ಅಂದರು. ಯೇಸು ಪ್ರತ್ಯು
ತ್ತರವಾಗಿ, ನನ್ನನ್ನಾದರೂ ನನ್ನ ತಂದೆಯನ್ನಾದರೂ ಅರಿ
ಯರಿ. ನನ್ನನ್ನು ಅರಿತಿದ್ದರೆ, ನನ್ನ ತಂದೆಯನ್ನು ಸಹ ಅರಿತಿ
೨೦ ರುವಿರಿ, ಅಂದನು. ಈ ಮಾತುಗಳನ್ನು ಯೇಸು ದೇವಾಲಯದ
ಲ್ಲಿ ಬೋಧಿಸುತ್ತಾ, ಬೊಕ್ಕಸದ ಮನೆಯಲ್ಲಿ ಹೇಳಿದನು. ಮ
ತ್ತು ಅವನ ಘಳಿಗೆ ಇನ್ನೂ ಬಾರದ ಕಾರಣ, ಯಾವನೂ ಅವ
ನನ್ನು ಹಿಡಿಯಲಿಲ್ಲ.
೨೧ ತಿರಿಗಿ ಯೇಸು ಅವರಿಗೆ, ನಾನು ಹೋಗುತ್ತೇನೆ; ನನ್ನನ್ನು
ಹುಡುಕುವಿರಿ; ಮತ್ತು ನಿಮ್ಮ ಪಾಪದಲ್ಲಿ ಸಾಯುವಿರಿ; ನಾನು
೨೨ ಹೋಗುವಲ್ಲಿಗೆ ನೀವು ಬರಲಾರಿರಿ, ಅಂದನು. ಆದದರಿಂದ ಯೆ
ಹೂದ್ಯರು ತನ್ನನ್ನು ಕೊಲ್ಲುವನೋ? ಯಾಕಂದರೆ, ನಾನು
೨೩ ಹೋಗುವಲ್ಲಿಗೆ ನೀವು ಬರಲಾರಿರೆಂದು ಹೇಳುತ್ತಾನೆ, ಅನ್ನಲು; ಅ
ವನು ಅವರಿಗೆ ಹೇಳಿದ್ದು, ನೀವು ಕೆಳಗಿನವರಾಗಿದ್ದೀರಿ; ನಾನು ಮೇ
ಲಿನವನಾಗಿದ್ದೇನೆ. ನೀವು ಈ ಲೋಕದವರಾಗಿದ್ದೀರಿ; ನಾನು ಈ
೨೪ ಲೋಕದವನಲ್ಲ; ಆದದರಿಂದ, ನಿಮ್ಮ ಪಾಪಗಳಲ್ಲಿ ಸಾಯುವಿ
ರೆಂದು ನಿಮಗೆ ಹೇಳಿದೆನು. ಯಾಕಂದರೆ, ನಾನೇ ಅವನೆಂದು,
೨೫ ನೀವು ನಂಬದೆ ಹೋದರೆ, ನಿಮ್ಮ ಪಾಪಗಳಲ್ಲಿ ಸಾಯುವಿರಿ. ಆಗ
ಲವನಿಗೆ, ನೀನು ಯಾರು? ಅಂದಾಗ; ಯೇಸು ಅವರಿಗೆ ಹೇಳಿ
೨೬ ದ್ದು, ಮೊದಲು ನಾನು ನಿಮಗೆ ಹೇಳಿದವನೇ. ನಿಮ್ಮ ವಿಷಯ
ವಾಗಿ ಮಾತಾಡುವದಕ್ಕೂ ನ್ಯಾಯತೀರಿಸುವದಕ್ಕೂ ನನಗೆ ಬ
ಹಳ ಉಂಟು. ಆದರೆ ನನ್ನನ್ನು ಕಳುಹಿಸಿದವನು ಸತ್ಯವಂತನು.
ಮತ್ತು ಅವನಿಂದ ನಾನು ಕೇಳಿದವುಗಳನ್ನಷ್ಟೇ ಲೋಕದಲ್ಲಿ ಹೇ
೨೭ ಳುತ್ತೇನೆ. ತಂದೆಯ ವಿಷಯವಾಗಿ ತನ್ನ ಸಂಗಡ ಮಾತಾಡಿದ
ನೆಂದು, ಅವರು ತಿಳಿದು ಕೊಳ್ಳ ಲಿಲ್ಲ.
೨೮ ಆಗ ಯೇಸು ಅವರಿಗೆ ಹೇಳಿದ್ದೇನಂದರೆ, ನೀವು ಮನುಷ್ಯನ
ಮಗನನ್ನು ಎತ್ತಿದಾಗ, ನಾನೇ ಅವನೆಂದೂ, ನನ್ನಿಚ್ಛೆಯಿಂದ
ಏನೂ ಮಾಡದೆ, ತಂದೆಯು ನನಗೆ ಬೋಧಿಸಿದ ಹಾಗೆ ಇವುಗ
೨೯ ಳನ್ನು ಮಾತಾಡುತ್ತೇನೆಂದೂ, ತಿಳಿಕೊಳ್ಳುವಿರಿ. ಇದಲ್ಲದೆ ನನ್ನ
ನ್ನು ಕಳುಹಿಸಿದವನು ನನ್ನ ಸಂಗಡ ಇದ್ದಾನೆ. ತಂದೆಯು ನನ್ನ
ನ್ನು ಒಂಟಿಯಾಗಿ ಬಿಡಲಿಲ್ಲ. ಯಾಕಂದರೆ ಅವನು ಮೆಚ್ಚುವವು
ಗಳನ್ನು ನಾನು ಯಾವಾಗ್ಯೂ ಮಾಡುತ್ತೇನೆ.
೩೦ ಅವನು ಇವುಗಳನ್ನು ಮಾತಾಡುವಾಗ, ಅನೇಕರು ಅವನಲ್ಲಿ
೩೧ ವಿಶ್ವಾಸವಿಟ್ಟರು. ಆಗ ಯೇಸು ತನ್ನಲ್ಲಿ ವಿಶ್ವಾಸವಿಟ್ಟ ಯೆ
ಹೂದ್ಯರಿಗೆ ಹೇಳಿದ್ದೇನಂದರೆ, ನೀವು ನನ್ನ ವಾಕ್ಯದಲ್ಲಿ ನೆಲೆ
೩೨ ಯಾಗಿದ್ದರೆ, ನಿಜವಾಗಿ ನನ್ನ ಶಿಷ್ಯರಾಗಿದ್ದು, ಸತ್ಯವನ್ನು ತಿಳಿ
ದು ಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡು
೩೩ ವದು. ಅವರು ಅವನಿಗೆ ಪ್ರತ್ಯುತ್ತರವಾಗಿ, ಅಬ್ರಹಾಮನ ಬೀಜ
ವಾಗಿದ್ದೇವೆ; ಯಾರಿಗೂ ಎಂದೂ ದಾಸರಾಗಿರಲಿಲ್ಲ; ಬಿಡುಗಡೆ
ಯವರಾಗುವಿರೆಂದು, ನೀನು ಹೇಳುವದು ಹ್ಯಾಗೆ? ಅಂದರು.
೩೪ ಅವರಿಗೆ ಯೇಸು ಪ್ರತ್ಯುತ್ತರವಾಗಿ ಹೇಳಿದ್ದು, ನಿಶ್ಚಯವಾಗಿ
ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಪಾಪ ಮಾಡುವವರೆಲ್ಲರು
೩೫ ಪಾಪಕ್ಕೆ ದಾಸರಾಗಿದ್ದಾರೆ, ಆದರೆ ದಾಸನು ಮನೆಯಲ್ಲಿ ಎಂ
೩೬ ದೆಂದಿಗೂ ಇರುವದಿಲ್ಲ; ಮಗನು ಎಂದೆಂದಿಗೂ ಇರುತ್ತಾನೆ. ಆದ
ದರಿಂದ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ, ನಿಜವಾಗಿ ಬಿಡು
೩೭ ಗಡೆಯಾಗಿರುವಿರಿ. ನೀವು ಅಬ್ರಹಾಮನ ಬೀಜವೆಂದು, ಬಲ್ಲೆನು.
ಆದರೆ ನಿಮ್ಮಲ್ಲಿ ನನ್ನ ವಾಕ್ಯಕ್ಕೆ ಸ್ಥಳವಿಲ್ಲದ ಕಾರಣ, ನನ್ನನ್ನು
೩೮ ಕೊಲ್ಲ ಹುಡುಕುತ್ತೀರಿ. ನಾನು ನನ್ನ ತಂದೆಯ ಜಳಿಯಲ್ಲಿ ನೋ
ಡಿದ್ದನ್ನು ಮಾತಾಡುತ್ತೇನೆ; ಮತ್ತು ನೀವು ನಿಮ್ಮ ತಂದೆಯ ಜಳಿ
೩೯ ಯಲ್ಲಿ ನೋಡಿದ್ದನ್ನು ಮಾಡುತ್ತೀರಿ. ಅವರು ಅವನಿಗೆ ಪ್ರತ್ಯು
ತ್ತರವಾಗಿ, ನಮ್ಮ ತಂದೆಯು ಅಬ್ರಹಾಮನೇ, ಅಂದಾಗ; ಯೇಸು
ಅವರಿಗೆ ಹೇಳಿದ್ದು, ನೀವು ಅಬ್ರಹಾಮನ ಮಕ್ಕಳಾಗಿದ್ದರೆ, ಅಬ್ರ
೪೦ ಹಾಮನ ಕ್ರಿಯೆಗಳನ್ನು ಮಾಡುವಿರಿ. ಆದರೆ ಈಗ ದೇವರಿಂದ
ನಾನು ಕೇಳಿದ ಸತ್ಯವನ್ನು ನಿಮಗೆ ಹೇಳಿದ ಮನುಷ್ಯನಾದ
ನನ್ನನ್ನು ಕೊಲ್ಲ ಹುಡುಕುತ್ತೀರಿ; ಇದನ್ನು ಅಬ್ರಹಾಮನು ಮಾ
೪೧ ಡಲಿಲ್ಲ. ನೀವು ನಿಮ್ಮ ತಂದೆಯ ಕ್ರಿಯೆಗಳನ್ನು ಮಾಡುತ್ತೀರಿ.
ಆಗಲವರು ಅವನಿಗೆ, ನಾವು ಜಾರತ್ವದಿಂದ ಹುಟ್ಟಿದವರಲ್ಲ; ನಮ
ಗೆ ಒಬ್ಬನೇ ತಂದೆ—ದೇವರೇ—ಅಂದರು.
೪೨ ಯೇಸು ಅವರಿಗೆ ಹೇಳಿದ್ದು, ದೇವರು ನಿಮ್ಮ ತಂದೆಯಾಗಿ
ದ್ದರೆ, ನನ್ನನ್ನು ಪ್ರೀತಿ ಮಾಡುವಿರಿ; ಯಾಕಂದರೆ ನಾನು ದೇವರ
ಬಳಿಯಿಂದ ಹೊರಟು ಬಂದಿದ್ದೇನೆ; ಹ್ಯಾಗಂದರೆ ನನ್ನಿಚ್ಛೆಯಿಂ
೪೩ ದೆ ನಾನೇ ಬರಲಿಲ್ಲ; ಅವನೇ ನನ್ನನ್ನು ಕಳುಹಿಸಿದ್ದಾನೆ. ಯಾಕೆ ನನ್ನ
ಮಾತನ್ನು ತಿಳಿಯದೆ ಇದ್ದೀರಿ? ನನ್ನ ವಾಕ್ಯವನ್ನು ಕೇಳಲಾರ
೪೪ ದೆ ಇರುವದರಿಂದಲೇ. ನೀವು ನಿಮ್ಮ ತಂದೆಯಾದ ಪಿಶಾಚನಿಂದ

ಉಂಟೋ, ನಿಮ್ಮ ತಂದೆಯ ಇಚ್ಛೆಗಳನ್ನು ಮಾಡ ಬೇಕೆಂದಿದ್ದೀರಿ. ಅವನು ಆದಿಯಿಂದ ಕೊಲೆಗಾರನಾಗಿದನು; ಅವನು ಸತ್ಯದಲ್ಲಿ ನೆಲೆಯಾಗಿರಲಿಲ್ಲ; ಯಾಕಂದರೆ ಅವನಲ್ಲಿ ಸತ್ಯವು ಇಲ್ಲ; ಅವನು ಸುಳ್ಳು ಮಾತಾಡುವಾಗ, ಸ್ವಂತವಾದವುಗಳಿಂದ, ಮಾತಾಡುತ್ತಾನೆ; ಯಾಕಂದರೆ ಸುಳ್ಳುಗಾರನೂ ಸುಳ್ಳಿನ ತಂದೆಯೂ ಆಗಿದ್ದಾನೆ. ಆದರೆ ನಾನು ಸತ್ಯವನ್ನು ಹೇಳುವದರಿಂದ ನನ್ನನ್ನು ನಂಬದೆ ಇದ್ದೀರಿ. ನಿಮ್ಮಲ್ಲಿ ಯಾವನು ನನ್ನಲ್ಲಿ ಪಾಪವನ್ನು ತೋರಿಸುತ್ತಾನೆ? ಆದರೆ ನಾನು ಸತ್ಯವನ್ನು ಹೇಳಿದರೆ, ಯಾಕೆ ನೀವು ನನ್ನನ್ನು ನಂಬುವದಿಲ್ಲ? ದೇವರಿಂದಿರುವವನು ದೇವರ ಮಾತುಗಳನ್ನು ಕೇಳುತ್ತಾನೆ. ಇದಕ್ಕೋಸ್ಕರವೇ, ನೀವು ದೇವರಿಂದಲ್ಲದ ಕಾರಣ, ಕೇಳುವದಿಲ್ಲ.

೪೮ ಆಗ ಯೆಹೂದ್ಯರು ಅವನಿಗೆ ಪ್ರತ್ಯುತ್ತರವಾಗಿ, ನೀನು ಸಮಾರ್ಯನಾಗಿದ್ದೀ; ನಿನಗೆ ದೆವ್ವ ಉಂಟೆಂದು ನಾವು ಹೇಳುವದು ಸರಿಅಲ್ಲವೋ? ಅನ್ನಲು; ಯೇಸು ಪ್ರತ್ಯುತ್ತರವಾಗಿ ಹೇಳಿದ್ದನು, ನನಗೆ ದೆವ್ವವಿಲ್ಲ; ಆದರೆ ನನ್ನ ತಂದೆಯನ್ನು ಸನ್ಮಾನಿಸುತ್ತೇನೆ; ೪೯ ನೀವು ನನ್ನನ್ನು ಅವಮಾನಿಸುತ್ತೀರಿ. ಆದರೆ ನಾನು ನನ್ನ ಮಹಿಮೆಯನ್ನು ಹುಡುಕುವದಿಲ್ಲ; ಹುಡುಕುವವನು ನ್ಯಾಯ ತೀರಿಸುವವನು ಇದ್ದಾನೆ. ೫೦ ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಯಾವನಾದರೂ ನನ್ನ ವಾಕ್ಯವನ್ನು ಕೈ ಕೊಂಡರೆ, ಅವನು ಎಂದೆಂದಿಗೂ ಮರಣವನ್ನು ನೋಡುವದಿಲ್ಲ.

೫೧ ಆಗ ಯೆಹೂದ್ಯರು ಅವನಿಗೆ ಹೇಳಿದ್ದು, ನಿನಗೆ ದೆವ್ವ ಉಂಟೆಂದು ಈಗ ತಿಳಿದಿದ್ದೇವೆ. ಅಬ್ರಹಾಮನೂ ಪ್ರವಾದಿಗಳೂ ಸತ್ತರು; ಆದರೆ ನೀನು, ಯಾವನಾದರೂ ನನ್ನ ವಾಕ್ಯವನ್ನು ಕೈ ಕೊಂಡರೆ, ಅವನು ಎಂದೆಂದಿಗೂ ಮರಣವನ್ನು ರುಚಿ ನೋ ೫೩ ರುವದಿಲ್ಲವೆಂದು ಹೇಳುತ್ತೀ. ಸತ್ತು ಹೋದ ನಮ್ಮ ತಂದೆಯಾದ ಅಬ್ರಹಾಮನಿಗಂತ ನೀನು ದೊಡ್ಡವನೋ! ಮತ್ತು ಪ್ರವಾದಿಗಳೂ ಸತ್ತರು; ನಿನ್ನನ್ನು ನೀನೇ ಯಾರೆಂದು ಮಾಡಿ ಕೊಳ್ಳುತ್ತೀ.

೫೪ ಯೇಸು ಪ್ರತ್ಯುತ್ತರವಾಗಿ ಹೇಳಿದ್ದು, ನಾನು ನನ್ನನ್ನು ಮಹಿಮೆ ಪಡಿಸಿ ಕೊಂಡರೆ, ನನ್ನ ಮಹಿಮೆಯು ಏನೂ ಇಲ್ಲ; ನನ್ನನ್ನು ಮಹಿಮೆ ಪಡಿಸುವವನು ನಿಮ್ಮ ದೇವರೆಂದು ನೀವು ಹೇಳುವ ೫೫ ನನ್ನ ತಂದೆಯೇ. ಅವನನ್ನು ಅರಿಯರು; ಆದರೆ ನಾನು ಅವನನ್ನು ಬಲ್ಲೆನು; ಅವನನ್ನು ಅರಿಯೆನೆಂದು ಹೇಳಿದರೆ, ನಿಮ್ಮ ಹಾಗೆ ಸುಳ್ಳುಗಾರನಾಗಿರುವೆನು. ಆದರೆ ನಾನು ಅವನನ್ನು ಅರಿತು, ೫೬ ಅವನ ವಾಕ್ಯವನ್ನು ಕೈ ಕೊಳ್ಳುತ್ತೇನೆ. ನಿಮ್ಮ ತಂದೆಯಾದ ಅಬ್ರಹಾಮನು ನನ್ನ ದಿನವನ್ನು ನೋಡ ಬೇಕೆಂದು ಹರ್ಷಿಸಿ ೫೭ ದನು; ಅದನ್ನು ನೋಡಿ, ಸಂತೋಷವಾಗಿದ್ದನು. ಆಗ ಯೆಹೂದ್ಯರು ಅವನಿಗೆ, ನಿನಗೆ ಇನ್ನೂ ಐವತ್ತು ವರುಷ ಇಲ್ಲ; ಅಬ್ರ ೫೮ ಹಾಮನನ್ನು ನೋಡಿದ್ದೀಯೋ, ಅಂದಾಗ; ಯೇಸು ಅವರಿಗೆ, ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಅಬ್ರಹಾಮನು ೫೯ ಇರುವದಕ್ಕಿಂತ ಮುಂಚೆ ನಾನು ಇದ್ದೇನೆ, ಅಂದನು. ಆಗಲವನ ಮೇಲೆ ಎಸೆಯುವದಕ್ಕೆ ಕಲ್ಲುಗಳನ್ನು ಎತ್ತಿದರು. ಆದರೆ ಯೇಸು ಅಡಗಿ ಕೊಂಡು, ದೇವಾಲಯದಿಂದ ಹೊರಟು, ಅವರ ಮಧ್ಯದಲ್ಲಿಂದ ಹಾದು, ಹಾಗೆ ಹೋದನು.

## ೯ ಸಂಧಿ.

೧ ಹೋಗುವಾಗ, ಹುಟ್ಟು ಕುರುಡನಾದ ಮನುಷ್ಯನನ್ನು ಕಂ ೨ ಡನು. ಅವನ ಶಿಷ್ಯರು, ರಬ್ಬಿಯೇ, ಇವನು ಕುರುಡನಾಗಿ ಹುಟ್ಟುವ ಹಾಗೆ ಯಾರು ಪಾಪ ಮಾಡಿದರು? ಇವನೋ, ಇವನ ೩ ತಂದೆಗೋ? ಎಂದು ಅವನನ್ನು ಕೇಳಿದಾಗ; ಯೇಸು ಪ್ರತ್ಯುತ್ತರವಾಗಿ ಹೇಳಿದ್ದು, ಇವನಾದರೂ ಇವನ ತಂದೆಗಾದರೂ ಪಾಪ ಮಾಡಲಿಲ್ಲ; ದೇವರ ಕ್ರಿಯೆಗಳು ಅವನಲ್ಲಿ ಪ್ರಕಟವಾಗುವ ಹಾಗೆ ೪ ಯೇ ಆಯಿತು. ನಾನು ನನ್ನನ್ನು ಕಳುಹಿಸಿದವನ ಕ್ರಿಯೆಗಳನ್ನು ಹಗಲಿರುವ ತನಕ, ನಡಿಸ ಬೇಕು; ಯಾರೂ ಕೆಲಸ ಮಾಡಲಾರದ ರಾತ್ರಿಯು ಬರುತ್ತದೆ; ೫ ನಾನು ಲೋಕದಲ್ಲಿರುವಾಗ, ಲೋಕದ ಬೆಳಕಾಗಿದ್ದೇನೆ. ಇವುಗಳನ್ನು ಹೇಳಿ, ನೆಲದ ಮೇಲೆ ಉಗುಳಿ, ಉಗುಳ್ಳಿನಿಂದ ಕೆಸರು ಮಾಡಿ, ಕೆಸರನ್ನು ಕುರುಡನ ಕಣ್ಣುಗ ೬ ಳಿಗೆ ಹಚ್ಚಿ, ಅವನಿಗೆ, ನೀನು ಹೋಗಿ, ಸಿಲೋವ ಕೊಳದಲ್ಲಿ ತೊಳೆದುಕೋ, ಅಂದನು. ಸಿಲೋವ ಅಂದರೆ, ಕಳುಹಿಸಲ್ಪಟ್ಟವನು. ಅವನು ಹೋಗಿ, ತೊಳೆ ಕೊಂಡು, ನೋಡುವವನಾಗಿ ೭ ಬಂದನು.

ಆಗ ನೆರೆಯವರೂ, ಅವನನ್ನು ಕುರುಡನಾಗಿ ಮುಂಚೆನೋಡಿದವರೂ, ಇವನು ಕೂತುಕೊಂಡು ಭಿಕ್ಷ ಬೇಡಿದವನಲ್ಲವೋ? ೮ ಅಂದರು. ಬೇರೆಕೊಬ್ಬರು, ಇವನೇ ಅಂದರು; ಮತ್ತೊಬ್ಬರು. ಅವನ ಹಾಗೆ ಇದ್ದಾನೆ, ಅಂದರು. ಅವನು, ನಾನೇ, ಅಂದ ೯ ನು. ಆಗಲವರು ಅವನಿಗೆ, ನಿನ್ನ ಕಣ್ಣುಗಳು ಹ್ಯಾಗೆ ತೆರೆಯಲ್ಪ ೧೦ ಟ್ಟವು? ಅಂದಾಗ; ಅವನು ಪ್ರತ್ಯುತ್ತರವಾಗಿ ಹೇಳಿದ್ದು, ಯೇಸು ಎಂಬ ಒಬ್ಬ ಮನುಷ್ಯನು ಕೆಸರು ಮಾಡಿ, ನನ್ನ ಕಣ್ಣುಗಳಿಗೆ ಹಚ್ಚಿ, ಸಿಲೋವ ಕೊಳಕ್ಕೆ ಹೋಗಿ, ತೊಳೆದುಕೋ ಎಂದು, ನನಗೆ ಹೇಳಿದನು. ನಾನು ಹೋಗಿ, ತೊಳೆಕೊಂಡು, ನೋಡಿ ೧೧ ದೆನು. ಆಗಲವನಿಗೆ, ಅವನು ಎಲ್ಲಿ? ಅನ್ನಲು; ಅರಿಯೆ, ಅಂದನು.

೧೨ ಮುಂಚೆ ಕುರುಡನಾಗಿದ್ದ ಅವನನ್ನು ಫರಿಸಾಯರ ಬಳಿಗೆ ೧೩ ಕರೆತಂದು ಹೋದರು. ಆದರೆ ಯೇಸು ಕೆಸರು ಮಾಡಿ, ಅವನ ೧೪ ಕಣ್ಣುಗಳನ್ನು ತೆರೆದಾಗ, ಸಬ್ಬತಾಗಿತ್ತು. ಫರಿಸಾಯರು, ಹ್ಯಾಗೆ ದೃಷ್ಟಿ ಹೊಂದಿದಿ? ಎಂದು ತಿರಿಗಿ ಅವನನ್ನು ಕೇಳಿದಾಗ; ಅವರಿಗೆ, ನನ್ನ ಕಣ್ಣುಗಳ ಮೇಲೆ ಕೆಸರನ್ನಿಟ್ಟನು; ನಾನು ತೊಳೆಕೊ ೧೫ ಡು, ನೋಡುತ್ತೇನೆ, ಅಂದನು. ಆಗ ಫರಿಸಾಯರಲ್ಲಿ ಕೆಲವರು, ಈ ಮನುಷ್ಯನು ದೇವರಿಂದ ಬಂದವನಲ್ಲ; ಯಾಕಂದರೆ ಅವನು ಸಬ್ಬತನ್ನು ಕೈ ಕೊಳ್ಳುವದಿಲ್ಲ, ಅಂದರು. ಬೇರೆಕೊಬ್ಬರು, ಪಾಪಿಷ್ಠನಾದ ಮನುಷ್ಯನು ಇಂಥ ಲಕ್ಷಣಗಳನ್ನು ಮಾಡಲಾಗುವದು ಹ್ಯಾಗೆ? ಅಂದರು. ಹೀಗೆ ಅವರಲ್ಲಿ ಭೇದವಾಯಿತು.

೧೬ ತಿರಿಗಿ ಕುರುಡನಿಗೆ, ನಿನ್ನ ಕಣ್ಣುಗಳನ್ನು ತೆರೆದದ್ದರಿಂದ ನೀನು ಅವನನ್ನು ಕುರಿತು ಏನು ಹೇಳುತ್ತೀ? ಅಂದರು. ಪ್ರವಾದಿಯಾ ೧೭ ಗಿದ್ದಾನೆ, ಅಂದನು. ಆದರೆ ಯೆಹೂದ್ಯರು, ಅವನು ಕುರುಡನಾಗಿದ್ದು, ದೃಷ್ಟಿ ಹೊಂದಿದನೆಂದು, ದೃಷ್ಟಿ ಹೊಂದಿದವನ ತಂ ೧೮ ದೆವರನ್ನು ಕರಿಸುವ ಮಟ್ಟಿಗೂ ನಂಬದೆ, ಕುರುಡನಾಗಿ ಹುಟ್ಟಿದನಂದು, ನೀವು ಹೇಳುವ ನಿಮ್ಮ ಮಗನು ಇವನೋ! ಹಾಗಾದರೆ ಈಗ ೧೯ ಹ್ಯಾಗೆ ನೋಡುತ್ತಾನೆಂದು, ಅವರನ್ನು ಕೇಳಿದರು. ಅವನ ತಂದೆವರು ಅವರಿಗೆ ಪ್ರತ್ಯುತ್ತರವಾಗಿ ಹೇಳಿದ್ದು, ಇವನು ನಮ್ಮ ಮಗನೆಂದೂ, ಕುರುಡನಾಗಿ ಹುಟ್ಟಿದನೆಂದೂ ಬಲ್ಲೆವು; ೨೦ ಆದರೆ ಈಗ ಹ್ಯಾಗೆ ನೋಡುತ್ತಾನೋ, ಅರಿಯವು; ಅವನ ಕಣ್ಣುಗಳನ್ನು ತೆರೆ



ದವನ್ಯಾರೋ, ನಾವರಿಯೆವು; ಅವನು ಪ್ರಾಯದವನು; ಅವನನ್ನು ಕೇಳಿರಿ; ಅವನೇ ತನ್ನನ್ನು ಕುರಿತು ಮಾತಾಡುವನು.

೨೨ ಯೆಹೂದ್ಯರಿಗೆ ಭಯ ಪಟ್ಟದರಿಂದ ಅವನ ತಂದೆವರು ಇವುಗಳನ್ನು ಹೇಳಿದರು. ಯಾಕಂದರೆ, ಯಾರಾದರೂ ಅವನು ಕ್ರಿಸ್ತನೆಂದು ಅರಿಕೆ ಮಾಡಿದರೆ, ಅವನನ್ನು ಸಭೆಯಿಂದ ಹೊರಗೆ ಹಾಕ ಬೇಕೆಂದು, ಯೆಹೂದ್ಯರು ಆಗಲೇ ನಿರ್ಧಾರ ಮಾಡಿ ೨೩ ಕೊಂಡಿದ್ದರು. ಇದಕ್ಕೋಸ್ಕರ ಅವನ ತಂದೆವರು, ಅವನು ಪ್ರಾಯದವನು; ಅವನನ್ನು ಕೇಳಿರಿ, ಅಂದರು.

೨೪ ಆಗಲವರು ಕುರುಡನಾಗಿದ್ದ ಮನುಷ್ಯನನ್ನು ಎರಡನೇ ಸಾರಿ ಕರೆದು, ಅವನಿಗೆ, ದೇವರಿಗೆ ಮಹಿಮೆ ಕೊಡು; ಈ ಮನುಷ್ಯನು ಪಾಪಿಯಾಗಿದ್ದಾನೆಂದು ನಾವು ಬಲ್ಲೆವು, ಅಂದರು. ಅವನು ಪ್ರ ೨೫ ತ್ಯುತ್ತರವಾಗಿ ಅವನು ಪಾಪಿ ಏನೋ, ನಾನರಿಯೆ; ಇದೊಂದು ಬಲ್ಲೆನು— ಕುರುಡನಾಗಿದ್ದು, ಈಗ ನೋಡುತ್ತೇನೆ, ಅಂದನು. ೨೬ ಅವರು ತಿರಿಗಿ ಅವನಿಗೆ, ನಿನಗೆ ಏನು ಮಾಡಿದನು? ನಿನ್ನ ಕಣ್ಣುಗ ೨೭ ಳನ್ನು ಹ್ಯಾಗೆ ತೆರೆದನು? ಅನ್ನಲಾಗಿ; ಅವರಿಗೆ ಪ್ರತ್ಯುತ್ತರವಾಗಿ, ಮುಂಚೆ ನಿಮಗೆ ಹೇಳಿದೆನು; ನೀವು ಕೇಳಿಲಿಲ್ಲ. ಯಾಕೆ ತಿರಿಗಿ ಕೇಳ ಬೇಕು? ನೀವು ಸಹ ಅವನ ಶಿಷ್ಯರಾಗ ಬೇಕೋ? ಅಂದ ೨೮ ನು. ಆಗ ಅವನನ್ನು ನಿಂದಿಸಿ, ನೀನು ಅವನ ಶಿಷ್ಯನು; ನಾವು ೨೯ ಮೋಶೆಯ ಶಿಷ್ಯರು; ಮೋಶೆಯ ಸಂಗಡ ದೇವರು ಮಾತಾಡಿದನೆಂದು, ನಾವು ಬಲ್ಲೆವು; ಆದರೆ ಇವನು ಎಲ್ಲಿಂದ ಬಂದವನೋ, ಅರಿಯೆವು, ಅಂದರು.

೩೦ ಆ ಮನುಷ್ಯನು ಪ್ರತ್ಯುತ್ತರವಾಗಿ ಅವರಿಗೆ ಹೇಳಿದ್ದು, ಇದು ಮಾತ್ರ ಆಶ್ಚರ್ಯ! ಅವನು ಎಲ್ಲಿಂದ ಬಂದವನೋ, ನೀವು ಅರಿ ೩೧ ಯರಿ; ಆದರೆ ನನ್ನ ಕಣ್ಣುಗಳನ್ನು ತೆರೆದಿದ್ದಾನೆ. ಪಾಪಿಷ್ಠರನ್ನು ದೇವರು ಕೇಳುವದಿಲ್ಲ; ಆದರೆ ಒಬ್ಬನು ದೇವ ಭಕ್ತನಾಗಿದ್ದು, ಅವನ ಚಿತ್ತವನ್ನು ಮಾಡಿದರೆ, ಅವನನ್ನು ಕೇಳುತ್ತಾನೆಂದು ಬಲ್ಲೆ ೩೨ ವು. ಹುಟ್ಟು ಕುರುಡನ ಕಣ್ಣುಗಳನ್ನು ಯಾವನಾದರೂ ತೆರೆದ ೩೩ ನೆಂದು, ಲೋಕಾದಿಯಿಂದ ಕೇಳಿದ್ದಿಲ್ಲ; ಇವನು ದೇವರಿಂದ ಬಂ ೩೪ ದವನಲ್ಲದಿದ್ದರೆ, ಏನೂ ಮಾಡಲಾರದೆ ಇರುವನು. ಅವರು ಅವನಿಗೆ ಪ್ರತ್ಯುತ್ತರವಾಗಿ, ಪೂರ್ಣವಾಗಿ ಪಾಪಗಳಲ್ಲಿ ಹುಟ್ಟಿದವನಾದ ನೀನು ನಮಗೆ ಬೋಧಿಸುತ್ತೀಯೋ? ಎಂದು ಹೇಳಿ, ಅವನನ್ನು ಹೊರಗೆ ಹಾಕಿದರು.

೩೫ ಅವನನ್ನು ಹೊರಗೆ ಹಾಕಿದ್ದಾರೆಂದು, ಯೇಸು ಕೇಳಿ, ಅವನನ್ನು ಕಂಡು ಕೊಂಡು, ಅವನಿಗೆ, ದೇವರ ಮಗನಲ್ಲಿ ವಿಶ್ವಾಸವಿಡು ೩೬ ತ್ತೀಯೋ? ಅಂದನು. ಅವನು ಪ್ರತ್ಯುತ್ತರವಾಗಿ, ಕರ್ತನೇ, ನಾನು ಅವನಲ್ಲಿ ವಿಶ್ವಾಸವಿಡುವ ಹಾಗೆ, ಅವನು ಯಾರು! ಅಂದಾಗ; ೩೭ ಯೇಸು ಅವನಿಗೆ, ಅವನನ್ನು ನೋಡಿದ್ದೀ; ನಿನ್ನ ಸಂಗಡ ಮಾ ೩೮ ತಾಡುವವನು ಅವನೇ, ಅಂದನು. ಅವನು, ಕರ್ತನೇ, ವಿಶ್ವಾಸಿ ೩೯ ಸುತ್ತೇನೆ ಎಂದು ಹೇಳಿ, ಅವನಿಗೆ ನಮಸ್ಕರಿಸಿದನು. ಆಗ ಯೇಸು ಹೇಳಿದ್ದು, ನೋಡದವರು ನೋಡುವ ಹಾಗೆಯೂ, ನೋಡುವವರು ಕುರುಡರಾಗುವ ಹಾಗೆಯೂ, ನ್ಯಾಯತೀರ್ಪಿಕೆಗೋಸ್ಕರ ನಾನು ಈ ಲೋಕಕ್ಕೆ ಬಂದೆನು.

೪೦ ಫರಿಸಾಯರಲ್ಲಿ ಕೆಲವರು ಅವನ ಸಂಗಡ ಇದ್ದು, ಇದನ್ನು ೪೧ ಕೇಳಿ, ಅವನಿಗೆ, ನಾವು ಸಹ ಕುರುಡರೋ! ಅನ್ನಲು; ಯೇಸು ಅವರಿಗೆ, ನೀವು ಕುರುಡರಾಗಿದ್ದರೆ, ನಿಮಗೆ ಪಾಪವು ಇರದು. ಆದರೆ, ಈಗ ನೋಡುತ್ತೇವೆಂದು ಹೇಳುತ್ತೀರಿ; ಆದಕಾರಣ ನಿಮ್ಮ ಪಾಪವು ಇರುತ್ತದೆ, ಅಂದನು.

## ೧೦. ಸಂಧಿ.

೧ ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ಕುರಿ ಹಟ್ಟಿಯಲ್ಲಿ ಬಾಗಲಿಂದ ಪ್ರವೇಶಿಸದೆ, ಬೇರೆ ಎಲ್ಲಿಂದಲಾದರೂ ಏರಿ ಬರುವವನ್ನಾವನೋ, ಅವನು ಕಳ್ಳನೂ ಸುಲುಕೊಳ್ಳುವವನೂ ಆಗಿ ೨ ದ್ದಾನೆ; ಆದರೆ ಬಾಗಲಿಂದ ಪ್ರವೇಶಿಸುವವನು ಕುರಿಗಳ ಕುರುಬನಾ ೩ ದ್ದಾನೆ. ಇವನಿಗೆ ಬಾಗಲು ಕಾಯುವವನು ತೆರೆಯುತ್ತಾನೆ; ಮತ್ತು ಕುರಿಗಳು ಅವನ ಶಬ್ದವನ್ನು ಕೇಳುತ್ತವೆ; ಸ್ವಂತ ಕುರಿಗಳನ್ನು ೪ ಹೆಸರಿನಿಂದ ಕರೆದು, ಅವುಗಳನ್ನು ಹೊರಗೆ ನಡಿಸುತ್ತಾನೆ. ಸ್ವಂತ ಕುರಿಗಳನ್ನು ಹೊರಗೆ ಹಾಕಿದಾಗ, ಅವುಗಳ ಮುಂದೆ ಹೋಗುತ್ತಾನೆ; ಕುರಿಗಳು ಅವನ ಶಬ್ದವನ್ನು ತಿಳಿಯುವದರಿಂದ ಅವನ ೫ ನ್ನು ಹಿಂಬಾಲಿಸುತ್ತವೆ. ಆದರೆ ಅನ್ಯನನ್ನು ಹಿಂಬಾಲಿಸದೆ, ಅವನ ಬಳಿಯಿಂದ ಓಡಿ ಹೋಗುವವು; ಯಾಕಂದರೆ ಅನ್ಯರ ಶಬ್ದ ೬ ವನ್ನು ಅರಿಯವು.

ಈ ಸಾಮ್ಯವನ್ನು ಯೇಸು ಅವರಿಗೆ ಹೇಳಿದನು; ಆದರೆ ಅ ೭ ವರು, ತಮಗೆ ಹೇಳಿದ್ದೇನೆಂದು ತಿಳಿಯದೆ ಹೋದರು. ಆಗ ಯೇಸು ಅವರಿಗೆ ತಿರಿಗಿ ಹೇಳಿದ್ದು, ನಿಶ್ಚಯವಾಗಿ ನಿಶ್ಚಯವಾಗಿ ೮ ನಿಮಗೆ ಹೇಳುತ್ತೇನೆ, ನಾನು ಕುರಿಗಳಿಗೆ ಬಾಗಲಾಗಿದ್ದೇನೆ; ನನಗೆ ಮುಂಚೆ ಬಂದವರೆಲ್ಲರು ಕಳ್ಳರೂ ಸುಲುಕೊಳ್ಳುವವರೂ ಆಗಿ ೯ ದ್ದಾರೆ; ಆದರೆ ಕುರಿಗಳು ಅವರನ್ನು ಕೇಳಲಿಲ್ಲ. ನಾನು ಬಾಗಲಾಗಿದ್ದೇನೆ; ನನ್ನಿಂದ ಯಾವನಾದರೂ ಪ್ರವೇಶಿಸಿದರೆ, ರಕ್ಷಿಸಲ್ಪಟ್ಟು, ಒಳಗೆ ಹೋಗುತ್ತಾ, ಹೊರಗೆ ಬರುತ್ತಾ, ಮೇವನ್ನು ಕಲುಕೊಳ್ಳು ೧೦ ವನು. ಕಳ್ಳನು ಕದ್ದು ಕೊಂಡು, ಸಂಹರಿಸುವದಕ್ಕೋಸ್ಕರವೇ ಹೊರ್ತು ಬರುವದಿಲ್ಲ. ನಾನು, ಅವುಗಳಿಗೆ ಜೀವ ಉಂಟಾಗಿರುವ ಹಾಗೆಯೂ, ಅದು ಸಂಪೂರ್ಣವಾಗಿರುವ ಹಾಗೆಯೂ, ಬಂ ೧೧ ದೆನು. ನಾನು ಒಳ್ಳೆ ಕುರುಬನಾಗಿದ್ದೇನೆ; ಒಳ್ಳೆ ಕುರುಬನು ಕುರಿ ೧೨ ಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ. ಆದರೆ ಕೂಲಿಯವನು ಕುರುಬನಾಗದೆ, ಕುರಿಗಳ ಒಡೆಯನಾಗದೆ, ತೋಳ ಬರುವದನ್ನು ಕಂಡು, ಕುರಿಗಳನ್ನು ಬಿಟ್ಟು, ಓಡಿ ಹೋಗುತ್ತಾನೆ; ತೋಳವು ಅವುಗಳನ್ನು ಸುಲುಕೊಂಡು, ಕುರಿಗಳನ್ನು ಚದರ ೧೩ ಮಾಡುತ್ತದೆ. ಕೂಲಿಯವನು ಕೂಲಿಯವನಾಗಿರುವ ಕಾರಣ ಕುರಿಗಳಿಗೋಸ್ಕರ ಚಿಂತೆ ಪಡದೆ, ಓಡಿ ಹೋಗುತ್ತಾನೆ.

೧೪ ನಾನು ಒಳ್ಳೆ ಕುರುಬನಾಗಿದ್ದು, ನನ್ನವುಗಳನ್ನು ತಿಳಿದು ಕೊಳ್ಳುತ್ತೇನೆ; ನನ್ನವುಗಳಿಂದ ತಿಳಿಯಲ್ಪಟ್ಟುತ್ತೇನೆ. ತಂದೆಯು ೧೫ ನನ್ನನ್ನು ತಿಳಿಯುವ ಪ್ರಕಾರವೇ, ನಾನೂ ತಂದೆಯನ್ನು ತಿಳಿಯುತ್ತೇನೆ; ಮತ್ತು ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು ೧೬ ಕೊಡುತ್ತೇನೆ. ಇದಲ್ಲದೆ ಈ ಹಟ್ಟಿಗೆ ಸೇರದ ಬೇರೆ ಕುರಿಗಳು ನನಗುಂಟು; ಅವುಗಳನ್ನು ಸಹ ನಾನು ತರ ಬೇಕು; ನನ್ನ ಶಬ್ದವನ್ನು ಕೇಳುವವು; ಆಗ ಒಂದೇ ಮಂದೆಯೂ, ಒಬ್ಬನೇ ಕುರು ೧೭ ಬನೂ, ಆಗುವದು. ನಾನು ನನ್ನ ಪ್ರಾಣವನ್ನು ತಿರಿಗಿ ತಕ್ಕೊಳ್ಳುವದಕ್ಕೆ, ಅದನ್ನು ಕೊಡುವದರಿಂದ, ನನ್ನ ತಂದೆ ನನ್ನನ್ನು ೧೮ ಪ್ರೀತಿ ಮಾಡುತ್ತಾನೆ. ಯಾವನಾದರೂ ಅದನ್ನು ನನ್ನಿಂದ ತೆಗೆಯುವದಿಲ್ಲ; ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು; ಅದನ್ನು ತಿರಿ

ತಕ್ಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು. ಈ ಕಟ್ಟಳೆ ನನ್ನ
ತಂದೆಯಿಂದ ಹೊಂದಿದ್ದೇನೆ.
೧೯ ಆಗ ಈ ಮಾತುಗಳ್ಳ ಸಲವಾಗಿ ಯೆಹೂದ್ಯರಲ್ಲಿ ತಿರಿಗಿ ಭೇದ
೨೦ ವಾಯಿತು. ಅವರಲ್ಲಿ ಅನೇಕರು, ಅವನಿಗೆ ದೆವ್ವ ಉಂಟು; ಮರು
೨೧ ಳಾಗಿದ್ದಾನೆ; ಯಾಕೆ ಅವನನ್ನು ಕೇಳುತ್ತೀರಿ! ಅಂದರು. ಬೇ
ರೊಬ್ಬರು, ಇವು ದೆವ್ವ ಹಿಡಿದವನ ಮಾತುಗಳ್ಳಲ್ಲ; ದೆವ್ವವು
ಕುರುಡರ ಕಣ್ಣುಗಳನ್ನು ತೆರೆಯಲಾಗುವದೋ? ಅಂದರು.
೨೨ ಯೆರೂಸಲೇಮಿನಲ್ಲಿ ಪ್ರತಿಷ್ಠೆಯ ಹಬ್ಬವಾಗಿ ಛಳಿ ಕಾಲವಾ
೨೩ ಗಿತ್ತು. ಆಗ ಯೇಸು ದೇವಾಲಯದೊಳಗೆ ಸೊಲೊಮೋನನ
೨೪ ಮಂಟಪದಲ್ಲಿ ಸಂಚರಿಸುತ್ತಿರುವಾಗ, ಯೆಹೂದ್ಯರು ಅವನನ್ನು
ಸುತ್ತಿ ಕೊಂಡು, ಅವನಿಗೆ, ಎಷ್ಟು ಮಟ್ಟಿಗೂ ನಮ್ಮ ಮನಸ್ಸನ್ನು
ಸಂದೇಹ ಪಡಿಸುತ್ತೀ? ನೀನು ಕ್ರಿಸ್ತನಾಗಿದ್ದರೆ, ನಮಗೆ ಸ್ಪಷ್ಟ
೨೫ ವಾಗಿ ಹೇಳ್ಳು, ಅಂದರು. ಯೇಸು ಅವರಿಗೆ ಪ್ರತ್ಯುತ್ತರವಾಗಿ
ಹೇಳಿದ್ದು, ನಿಮಗೆ ಹೇಳಿದಾಗ್ಯೂ ನೀವು ನಂಬುವದಿಲ್ಲ; ನನ್ನ
ತಂದೆಯ ಹೆಸರಿನಲ್ಲಿ ನಾನು ಮಾಡುವ ಕ್ರಿಯೆಗಳ್ಳು, ಅವೇ ನನ್ನ
೨೬ ನ್ನು ಕುರಿತು ಸಾಕ್ಷಿ ಕೊಡುತ್ತವೆ. ಆದರೆ ನೀವು ನಂಬುವದಿಲ್ಲ;
ಯಾಕಂದರೆ, ನಾನು ನಿಮಗೆ ಹೇಳಿದ ಹಾಗೆ, ನೀವು ನನ್ನ ಕುರಿ
೨೭ ಗಳ್ಳಲ್ಲ. ನನ್ನ ಕುರಿಗಳು ನನ್ನ ಶಬ್ದವನ್ನು ಕೇಳುತ್ತವೆ; ನಾನು
ಅವುಗಳನ್ನು ತಿಳಿಯುತ್ತೇನೆ; ಅವು ನನ್ನನ್ನು ಹಿಂಬಾಲಿಸುತ್ತವೆ;
ಮತ್ತು ನಾನು ನಿತ್ಯ ಜೀವವನ್ನು ಅವುಗಳಿಗೆ ಕೊಡುತ್ತೇನೆ; ಅವು
೨೮ ಎಂದೆಂದಿಗೂ ನಾಶವಾಗವು; ಮತ್ತು ಯಾವನೂ ಅವುಗಳನ್ನು
ನನ್ನ ಕೈಯೊಳಗಿಂದ ಕಸಕೊಳ್ಳನು. ಅವುಗಳನ್ನು ನನಗೆ
ಕೊಟ್ಟ ನನ್ನ ತಂದೆಯು ಎಲ್ಲರಿಗಿಂತ ದೊಡ್ಡವನಾಗಿದ್ದಾನೆ; ಮ
ತ್ತು ಯಾವನೂ ನನ್ನ ತಂದೆಯ ಕೈಯೊಳಗಿಂದ ಅವುಗಳ
ನ್ನು ಕಸಕೊಳ್ಳಲಾರನು. ನಾನೂ ತಂದೆಯೂ ಒಂದೇ.
೩೦ ಆಗ ಯೆಹೂದ್ಯರು ಅವನ ಮೇಲೆ ಎಸೆಯುವದಕ್ಕೆ ಕಲ್ಲು
೩೧ ಗಳನ್ನು ತಿರಿಗಿ ಎತ್ತಿದರು. ಯೇಸು ಅವರಿಗೆ, ನನ್ನ ತಂದೆಯ
ಕಡೆಯಿಂದ ನಿಮಗೆ ಅನೇಕ ಒಳ್ಳೆ ಕ್ರಿಯೆಗಳನ್ನು ತೋರಿಸಿದ್ದೇ
೩೨ ನೆ. ಅವುಗಳಲ್ಲಿ ಯಾವ ಕ್ರಿಯೆಗೋಸ್ಕರ ನನ್ನನ್ನು ಕಲ್ಲೆಸೆ
ಯುತ್ತೀರಿ! ಎಂದು ಉತ್ತರ ಕೊಟ್ಟಾಗ, ಯೆಹೂದ್ಯರು ಅವನಿಗೆ
೩೩ ಪ್ರತ್ಯುತ್ತರವಾಗಿ, ಒಳ್ಳೆ ಕ್ರಿಯೆಗೋಸ್ಕರವಲ್ಲ, ದೂಷಣೆಗೋ
ಸ್ಕರವೂ, ನೀನು ಮನುಷ್ಯನಾಗಿದ್ದು, ನಿನ್ನನ್ನು ನೀನೇ ದೇವ
ರೆಂದು ಮಾಡಿಕೊಳ್ಳುವದಕ್ಕೋಸ್ಕರವೂ, ನಿನ್ನನ್ನು ಕಲ್ಲೆಸೆ
೩೪ ಯುತ್ತೇವೆ, ಅಂದರು. ಯೇಸು ಅವರಿಗೆ ಪ್ರತ್ಯುತ್ತರವಾಗಿ ಹೇ
ಳಿದ್ದು, ದೇವರುಗಳಾಗಿರೆಂದು ನಾನು ಹೇಳಿದ್ದೇನೆ ಎಂಬದಾಗಿ,
೩೫ ನಿಮ್ಮ ನ್ಯಾಯಪ್ರಮಾಣದಲ್ಲಿ ಬರೆದಿರುವದಿಲ್ಲವೋ! ಹಾಗಾದರೆ
ಯಾರಿಗೆ ದೇವರ ವಾಕ್ಯ ಉಂಟಾಯಿತೋ, ಅವರನ್ನು ದೇವ
೩೬ ರುಗಳೆಂದು ಅವನು ಕರೆದಿದ್ದಾದರೆ—ಮತ್ತು ಬರಹವನ್ನು ವಿಚಾರ
ಕೂಡದಾದರೆ—ತಂದೆಯು ಪರಿಶುದ್ಧ ಮಾಡಿ, ಲೋಕಕ್ಕೆ ಕಳ್ಳು
ಹಿಸಿದವನನ್ನು ಕುರಿತು, ನಾನು ದೇವರ ಮಗನಾಗಿದ್ದೇನೆಂದು
೩೭ ಹೇಳಿದ ಕಾರಣ, ನೀನು ದೂಷಿಸುತ್ತೀ ಎಂದು ಹೇಳುತ್ತೀಯೋ?
ನಾನು ನನ್ನ ತಂದೆಯ ಕ್ರಿಯೆಗಳನ್ನು ಮಾಡದೆ ಇದ್ದರೆ, ನನ್ನ
೩೮ ನ್ನು ನಂಬ ಬೇಡಿರಿ. ಆದರೆ ಮಾಡಿದರೆ, ತಂದೆ ನನ್ನಲ್ಲಿಯೂ
ನಾನು ಅವನಲ್ಲಿಯೂ ಇರುವದನ್ನು ನೀವು ತಿಳಿ ಕೊಂಡು, ನಂ
ಬುವ ಹಾಗೆ, ನನ್ನನ್ನು ನಂಬದೆ ಇದ್ದಾಗ್ಯೂ, ಕ್ರಿಯೆಗಳನ್ನು
ನಂಬಿರಿ.
೩೯ ಆಗ ತಿರಿಗಿ ಅವನನ್ನು ಹಿಡಿಯ ಹುಡುಕಿದರು. ಆದರೆ ಅವರ
೪೦ ಕೈಯಿಂದ ತಪ್ಪಿಸಿ ಕೊಂಡು, ಯೊರ್ದನಿನ ಆಚೆಗೆ—ಯೋ
ಹಾನನು ಮೊದಲು ಸ್ನಾನ ಕೊಡುತ್ತಿದ್ದ ಸ್ಥಳಕ್ಕೆ—ತಿರಿಗಿ ಹೋಗಿ,
೪೧ ಅಲ್ಲಿ ಇದ್ದನು. ಮತ್ತು ಅನೇಕರು ಅವನ ಬಳ್ಳಿಗೆ ಬಂದು, ಯೋ
ಹಾನನು ಯಾವ ಲಕ್ಷಣವನ್ನೂ ಮಾಡಲಿಲ್ಲ; ಆದರೆ ಯೋಹಾ
ನನು ಇವನನ್ನು ಕುರಿತು ಹೇಳಿದ್ದೆಲ್ಲಾ ನಿಜವಾಗಿತ್ತು, ಅಂದರು.
೪೨ ಮತ್ತು ಅಲ್ಲಿ ಅನೇಕರು ಅವನಲ್ಲಿ ವಿಶ್ವಾಸವಿಟ್ಟರು.

## ೧೧. ಸಂಧಿ.

೧ ಇದಲ್ಲದೆ ಮರಿಯಳ್ಳ, ಅವಳ ಸಹೋದರಿಯಾದ ಮಾರ್ಥ
ಳ್ಳ, ಗ್ರಾಮವಾಗಿರುವ ಬೇತಾನ್ಯದವನಾದ ಲಾಜರನೆಂಬವನು
೨ ಅಸ್ವಸ್ಥವಾಗಿದ್ದನು. ಯಾವ ಮರಿಯಳ್ಳಂದರೆ, ಕರ್ತನಿಗೆ ತೈಲ
ಹಚ್ಚಿ ಅವನ ಪಾದಗಳ್ಳನ್ನು ತನ್ನ ಕೂದಲುಗಳ್ಳಿಂದ ಬರಸಿದವಳ್ಳ.
೩ ಇವಳ್ಳ ಸಹೋದರನಾದ ಲಾಜರನು ಅಸ್ವಸ್ಥವಾಗಿದ್ದನು. ಹೀಗಿ
ರಲಾಗಿ ಅವನ ಸಹೋದರಿಗಳ್ಳು, ಕರ್ತನೇ, ಇಗೋ, ನೀನು
ಸ್ನೇಹಿಸುವವನು ಅಸ್ವಸ್ಥವಾಗಿದ್ದಾನೆಂದು, ಅವನ ಬಳ್ಳಿಗೆ ಹೇಳಿ
ಕಳ್ಳುಹಿಸಿದರು.
೪ ಯೇಸು ಕೇಳ್ಳಿ, ಈ ಕೋಗವು ಮರಣಕ್ಕಲ್ಲ, ದೇವರ ಮ
ಗನು ಅದರ ಮೂಲವಾಗಿ ಮಹಿಮೆ ಪಡುವ ಹಾಗೆ, ದೇವರ ಮ
ಹಿಮೆಗೋಸ್ಕರವೇ ಅದೆ, ಅಂದನು. ಆದರೆ ಯೇಸು ಮಾರ್ಥ
ಳ್ಳನೂ ಅವಳ್ಳ ಸಹೋದರಿಯನೂ, ಲಾಜರನನ್ನೂ ಪ್ರೀತಿ ಮಾ
ಡಿದನು. ಆಗ ಅಸ್ವಸ್ಥವಾಗಿದ್ದಾನೆಂದು ಕೇಳ್ಳಿ, ತಾನಿದ್ದ ಸ್ಥಳದಲ್ಲಿ
೬ ಎರಡು ದಿವಸ ಇದ್ದನು. ಆ ಮೇಲೆ ತನ್ನ ಶಿಷ್ಯರಿಗೆ, ಯೆಹೂ
ದಕ್ಕೆ ತಿರಿಗಿ ಹೋಗುವ, ಅಂದನು. ಶಿಷ್ಯರು ಅವನಿಗೆ, ರಬ್ಬಿ
ಯೇ, ಆಗಲೇ ಯೆಹೂದ್ಯರು ನಿನ್ನನ್ನು ಕಲ್ಲೆಸೆಯುವದಕ್ಕೆ
ಹುಡುಕಿದರು; ಅಲ್ಲಿಗೆ ತಿರಿಗಿ ಹೋಗುತ್ತೀಯೋ! ಅಂದಾಗ;
೮ ಯೇಸು ಪ್ರತ್ಯುತ್ತರವಾಗಿ ಹೇಳಿದ್ದು, ಹಗಲಿಗೆ ಹನ್ನಿರಡು ತಾ
ಸು ಇಲ್ಲವೋ? ಜಬ್ಬನು ಹಗಲಿನಲ್ಲಿ ಸಂಚರಿಸಿದರೆ, ಎಡವುವದಿ
ಲ್ಲ; ಯಾಕಂದರೆ ಈ ಲೋಕದ ಬೆಳ್ಳಕನ್ನು ನೋಡುತ್ತಾನೆ.
೧೦ ಆದರೆ ಒಬ್ಬನು ರಾತ್ರಿಯಲ್ಲಿ ಸಂಚರಿಸಿದರೆ, ಎಡವುತ್ತಾನೆ; ಯಾ
ಕಂದರೆ ಬೆಳ್ಳಕು ಅವನಲ್ಲಿ ಇಲ್ಲ.
೧೧ ಇವುಗಳನ್ನು ಹೇಳಿದ ತರುವಾಯ ಅವರಿಗೆ ಹೇಳಿದ್ದೇನಂದ
ರೆ, ನಮ್ಮ ಸ್ನೇಹಿತನಾದ ಲಾಜರನು ನಿದ್ದೆ ಹೋಗಿದ್ದಾನೆ; ಆದರೆ
೧೨ ಅವನನ್ನು ನಿದ್ದೆಯಿಂದ ಎಬ್ಬಿಸ ಹೋಗುತ್ತೇನೆ. ಆಗ ಅವನ
ಶಿಷ್ಯರು, ಕರ್ತನೇ, ಅವನು ನಿದ್ದೆ ಮಾಡಿದರೆ, ಗುಣವಾಗುವ
೧೩ ನು, ಅಂದರು. ಆದರೆ ಯೇಸು ಅವನ ಮರಣದ ವಿಷಯವಾಗಿ
ಹೇಳಿ ಇದ್ದನು; ಅವರು ಅವನು ವಿಶ್ರಾಂತಿಯಾಗುವ ನಿದ್ದೆಯ
೧೪ ನ್ನು ಕುರಿತು ಮಾತಾಡುತ್ತಾನೆಂದು ನೆನಸಿದರು. ಆಗ ಯೇಸು
೧೫ ಅವರಿಗೆ ಸ್ಪಷ್ಟವಾಗಿ, ಲಾಜರನು ಸತ್ತಿದ್ದಾನೆ; ಮತ್ತು ನಾನು ಅಲ್ಲಿ
ಇರದ ಕಾರಣ ನಿಮಗೋಸ್ಕರ, ನೀವು ವಿಶ್ವಾಸಿಸುವ ಹಾಗೆ,
ಸಂತೋಷ ಪಡುತ್ತೇನೆ; ಆದರೆ ಅವನ ಬಳ್ಳಿಗೆ ಹೋಗುವ, ಅಂದ
೧೬ ನು. ಆಗ ದಿದುಮನೆಂಬ ತೋಮನು ಜತೆ ಶಿಷ್ಯರಿಗೆ, ನಾವು ಸಹ
ಹೋಗಿ, ಅವನ ಸಂಗಡ ಸಾಯುವ, ಅಂದನು.
೧೭ ಹೀಗಿರಲಾಗಿ ಯೇಸು ಬಂದು, ಅವನು ಆಗಲೇ ನಾಲ್ಕು ದಿವಸ



೧೭ ಸಮಾಧಿಯಲ್ಲಿ ಇದ್ದನೆಂದು ಕಂಡನು. ಆದರೆ ಬೇಥಾನ್ಯವು
ಯೆರೂಸಲೇಮಿಗೆ ಹತ್ತು ಕಡಿಮೆ ಹದಿನೈದು ಸ್ತಾದ್ಯಗಳ್ಳಷ್ಟು
೧೮ ಸಮೀಪವಾಗಿತ್ತು. ಮತ್ತು ಯೆಹೂದ್ಯರಲ್ಲಿ ಅನೇಕರು ಮಾ
ರ್ಥಳ್ಳ ಮರಿಯಳ್ಳ ಬಳ್ಳಿಗೆ, ಅವರ ಸಹೋದರನ ವಿಷಯವಾಗಿ
೧೯ ಅವರನ್ನು ಆದರಿಸುವದಕ್ಕೆ, ಬಂದಿದ್ದರು. ಹೀಗಿರಲಾಗಿ ಮಾ
ರ್ಥಳ್ಳು, ಯೇಸು ಬರುತ್ತಾನೆಂದು ಕೇಳ್ಳಿ, ಅವಸರಿಸುವಾಗಿ ಬಂ
ದಳ್ಳು; ಆದರೆ ಮರಿಯಳ್ಳು ಮನೆಯಲ್ಲಿ ಕೂತು ಕೊಂಡಿದ್ದಳ್ಳು.
೨೦ ಆಗ ಮಾರ್ಥಳ್ಳು ಯೇಸುವಿಗೆ, ಕರ್ತನೇ, ನೀನು ಇಲ್ಲಿ ಇದ್ದರೆ,
೨೧ ನನ್ನ ಸಹೋದರನು ಸಾಯನು; ಆದಾಗ್ಯೂ ಈಗಲೇ ನೀನು
ದೇವರನ್ನು ಬೇಡಿ ಕೊಳ್ಳುವದಲ್ಲಿ ದೇವರು ನಿನಗೆ ಕೊಡುವದೆಂ
೨೩ ದು ಬಲ್ಲೆನು, ಅನ್ನಲು; ಯೇಸು ಅವಳ್ಳಿಗೆ, ನಿನ್ನ ಸಹೋದರ
೨೪ ನು ಏಳ್ಳುವನು, ಅಂದನು. ಮಾರ್ಥಳ್ಳು ಅವನಿಗೆ, ಕಡೇ ದಿನದ
ಪುನರುತ್ಥಾನದಲ್ಲಿ ಏಳ್ಳುವನೆಂದು ಬಲ್ಲೆನು, ಅಂದಾಗ; ಯೇಸು
೨೫ ಅವಳ್ಳಿಗೆ ಹೇಳಿದನು—ನಾನೇ ಪುನರುತ್ಥಾನವೂ ಜೀವವೂ ಆಗಿ
ದ್ದೇನೆ; ನನ್ನಲ್ಲಿ ವಿಶ್ವಾಸವಿಡುವವನು ಸತ್ತರೂ, ಬದುಕುವನು.
೨೬ ಮತ್ತು ಬದುಕಿ ನನ್ನಲ್ಲಿ ವಿಶ್ವಾಸವಿಡುವವನು ಎಂದೆಂದಿಗೂ
ಸಾಯುವದಿಲ್ಲ. ಇದನ್ನು ನಂಬುತ್ತೀಯೋ? ಅವಳ್ಳು ಅವನಿಗೆ,
೨೭ ಹೌದು, ಕರ್ತನೇ, ನೀನು ಲೋಕಕ್ಕೆ ಬರುವವನಾದ ದೇವರ
ಮಗನಾದ ಕ್ರಿಸ್ತನಾಗಿದ್ದೀ ಎಂದು ನಂಬಿದ್ದೇನೆಂದು ಹೇಳ್ಳಿದಳ್ಳು.
೨೮ ಇವುಗಳನ್ನು ಹೇಳ್ಳಿ, ಹೋಗಿ, ತನ್ನ ಸಹೋದರಿಯಾದ ಮ
ರಿಯಳ್ಳನ್ನು ಗುಪ್ತವಾಗಿ ಕರೆದು, ಬೋಧಕನು ಬಂದಿದ್ದಾನೆ, ನಿನ್ನ
ೲ ನ್ನು ಕರೆಯುತ್ತಾನೆ, ಅಂದಳ್ಳು. ಅವಳ್ಳು ಕೇಳ್ಳುತ್ತಲೇ ಬೇಗ
೩೦ ಎದ್ದು, ಅವನ ಬಳ್ಳಿಗೆ ಬಂದಳ್ಳು. ಆದರೆ ಯೇಸು ಇನ್ನೂ ಗ್ರಾಮ
ಕ್ಕೆ ಬಾರದೆ, ಮಾರ್ಥಳ್ಳು ಅವನನ್ನು ಎದುರುಗೊಂಡ ಸ್ಥಳದಲ್ಲಿ
೩೧ ಇದ್ದನು. ಹೀಗಿರಲಾಗಿ ಅವಳ್ಳನ್ನು ಆದರಿಸುತ್ತಾ, ಅವಳ್ಳ ಸಂಗಡ
ಮನೆಯಲ್ಲಿದ್ದ ಯೆಹೂದ್ಯರು, ಮರಿಯಳ್ಳು ಬೇಗ ಎದ್ದು ಹೊ
ರಗೆ ಹೋಗುವದನ್ನು ನೋಡಿ, ಅವಳ್ಳು ಸಮಾಧಿಗೆ, ಅಲ್ಲಿ ಅಳು
ವದಕ್ಕೆ, ಹೋಗುತ್ತಾಳೆಂದು ಹೇಳ್ಳಿ, ಅವಳ್ಳನ್ನು ಹಿಂಬಾಲಿಸಿ
ೳ ದರು. ಆದರೆ ಮರಿಯಳ್ಳು ಯೇಸು ಇದ್ದಲ್ಲಿಗೆ ಬಂದು, ಅವನ
ನ್ನು ನೋಡಿ, ಅವನ ಪಾದಗಳ್ಳ ಮೇಲೆ ಬಿದ್ದು, ಅವನಿಗೆ ಕರ್ತ
ನೇ, ನೀನು ಇಲ್ಲಿ ಇದ್ದರೆ, ನನ್ನ ಸಹೋದರನು ಸಾಯನು, ಅಂ
ದಳ್ಳು.
ೳ ಯೇಸು ಅವಳ್ಳು ಅಳುವದನ್ನೂ, ಅವಳ್ಳ ಸಂಗಡ ಬಂದ
ಯೆಹೂದ್ಯರು ಅಳುವದನ್ನೂ ನೋಡಿದಾಗ, ಅತ್ಮದಲ್ಲಿ ನೊಂ
ದು ಕೊಂಡು, ಕಳವಳ ಪಟ್ಟು, ಅವನನ್ನು ಎಲ್ಲಿ ಇಟ್ಟಿದ್ದೀರಿ?
ೳ ಅಂದನು. ಅವನಿಗೆ, ಕರ್ತನೇ, ಬಂದು ನೋಡು, ಅಂದರು.
ೳ ಯೇಸು ಕಣ್ಣೀರಿಟ್ಟನು. ಆಗ ಯೆಹೂದ್ಯರು, ಇಗೋ, ಅವನ
ೳ ನ್ನು ಎಷ್ಟೋ ಸ್ನೇಹಿಸಿದನು! ಅಂದರು. ಮತ್ತು ಅವರಲ್ಲಿ ಕೆಲ
ವರು, ಕುರುಡನ ಕಣ್ಣುಗಳನ್ನು ತೆರೆದ ಇವನು ಅವನು ಸಾಯ
ೳ ದ ಹಾಗೆ ಮಾಡಲಾರದೆ ಇದ್ದನೋ! ಅಂದರು. ಯೇಸು ತಿರಿಗಿ
ೳ ತನ್ನಲ್ಲಿ ನೊಂದು ಕೊಂಡು ಸಮಾಧಿಗೆ ಬಂದನು. ಅದು ಗುಹೆ
ಯಾಗಿತ್ತು; ಮತ್ತು ಕಲ್ಲು ಅದರ ಮೇಲೆ ಬಿದ್ದಿತ್ತು. ಯೇಸು,
ೳ ಕಲ್ಲು ಎತ್ತಿ ಹಾಕಿರಿ, ಅಂದನು. ಆಗ ಸತ್ತವನ ಸಹೋದರಿಯಾದ
ಮಾರ್ಥಳ್ಳು ಅವನಿಗೆ, ಕರ್ತನೇ, ಈಗಲೇ ನಾರುತ್ತಾನೆ; ಅವನು
ಸತ್ತು ನಾಲ್ಕು ದಿವಸವಾಯಿತು, ಅಂದಳ್ಳು.
ೳ ಯೇಸು ಅವಳ್ಳಿಗೆ, ನೀನು ವಿಶ್ವಾಸಿಸಿದರೆ, ದೇವರ ಮಹಿಮೆ
ಯನ್ನು ನೋಡುವಿ ಎಂದು ನಿನಗೆ ನಾನು ಹೇಳಿಲ್ಲವೋ? ಅಂ
ದನು. ಆಗ ಸತ್ತವನು ಬಿದ್ದಲ್ಲಿದ್ದ ಕಲ್ಲು ಎತ್ತಿ ಹಾಕಿರು. ಆಗ
ಯೇಸು ಕಣ್ಣುಗಳ್ಳನ್ನು ಮೇಲಕ್ಕೆ ಎತ್ತಿ, ತಂದೆಯೇ, ನೀನು
ೳ ನನ್ನನ್ನು ಕೇಳಿದ್ದರಿಂದ ನಿನ್ನನ್ನು ಸ್ತುತಿಸುತ್ತೇನೆ; ನೀನು ಯಾ
ವಾಗಲೂ ನನ್ನನ್ನು ಕೇಳುತ್ತೀ ಎಂದು ಬಲ್ಲೆನು; ಆದರೆ ಸುತ್ತಲು
ನಿಂತ ಸಮೂಹದ ನಿಮಿತ್ತ ನೀನೇ ನನ್ನನ್ನು ಕಳುಹಿಸಿದ್ದೀ ಎಂ
ೳ ದು, ಅವರು ನಂಬುವ ಹಾಗೆ, ಹೇಳಿದ್ದೇನೆ, ಅಂದನು. ಇದನ್ನು
ಹೇಳ್ಳಿ, ಮಹಾ ಶಬ್ದದಿಂದ, ಲಾಜರನೇ, ಹೊರಗೆ ಬಾ, ಎಂದು ಕೂ
ೳ ಗಿದನು. ಆಗ ಸತ್ತವನು ಪಟ್ಟಿಗಳ್ಳಿಂದ ಕೈ ಕಾಲು ಕಟ್ಟಿದವನಾಗಿ
ಹೊರಗೆ ಬಂದನು; ಇದಲ್ಲದೆ ಅವನ ಮುಖಕ್ಕೆ ಕೈವಸ್ತ್ರ ಸುತ್ತ
ಲ್ಪಟ್ಟಿತ್ತು. ಯೇಸು ಅವರಿಗೆ, ಅವನನ್ನು ಬಿಚ್ಚಿ, ಹೋಗ ಬಿಡಿರಿ,
ೳ ಅಂದನು.
ೳ ಆಗ ಮರಿಯಳ್ಳ ಬಳ್ಳಿಗೆ ಬಂದ ಯೆಹೂದ್ಯರಲ್ಲಿ ಅನೇಕರು,
ಯೇಸು ಮಾಡಿದವುಗಳನ್ನು ನೋಡಿ, ಅವನಲ್ಲಿ ವಿಶ್ವಾಸವಿಟ್ಟರು.
ೳ ಆದರೆ ಅವರಲ್ಲಿ ಕೆಲವರು ಫರಿಸಾಯರ ಬಳ್ಳಿಗೆ ಹೋಗಿ, ಯೇಸು
ಮಾಡಿದವುಗಳನ್ನು ಅವರಿಗೆ ತಿಳ್ಳಿಸಿದರು.
ೳ ಆಗ ಪ್ರಧಾನ ಯಾಜಕರೂ ಫರಿಸಾಯರೂ ಮಂತ್ರಿ ಸಭೆಯ
ನ್ನು ಕೂಡಿಸಿ ಹೇಳ್ಳಿದ್ದೇನಂದರೆ, ಏನು ಮಾಡುವ! ಈ ಮನು
ೳ ಷ್ಯನು ಬಹಳ ಲಕ್ಷಣಗಳನ್ನು ಮಾಡುತ್ತಾನೆ. ನಾವು ಅವನನ್ನು
ಹೀಗೆ ಬಿಟ್ಟರೆ, ಎಲ್ಲರು ಅವನಲ್ಲಿ ವಿಶ್ವಾಸವಿಡುವರು; ಮತ್ತು
ರೋಮಾಯರು ಬಂದು, ನಮ್ಮ ಸ್ಥಳವನ್ನೂ ಜನಾಂಗವನ್ನೂ
ೳ ತೆಗೆದು ಹಾಕುವರು. ಆದರೆ ಅವರಲ್ಲಿ ಒಬ್ಬನೂ, ಆ ವರುಷದ
ಪ್ರಧಾನ ಯಾಜಕನೂ, ಆಗಿರುವ ಕಾಯಫನು ಅವರಿಗೆ, ನಿಮಗೆ
ೳ ಏನೂ ತಿಳ್ಳಿಯುವದಿಲ್ಲ; ಜನಾಂಗವೆಲ್ಲಾ ನಾಶವಾಗದ ಹಾಗೆ ಒಬ್ಬ
ಮನುಷ್ಯನು ಜನರಿಗೋಸ್ಕರ ಸಾಯುವದು ನಮಗೆ ಒಳ್ಳೇ
ೳ ದೆಂದು ಆಲೋಚಿಸುವದಿಲ್ಲ, ಅಂದನು. ಇದನ್ನು ತನ್ನಷ್ಟಕ್ಕೆ
ತಾನೇ ಹೇಳಿದ್ದಲ್ಲ, ಆದರೆ ಆ ವರುಷಕ್ಕೆ ಪ್ರಧಾನ ಯಾಜಕನಾ
ೳ ಗಿದ್ದು, ಯೇಸು ಆ ಜನಾಂಗಕ್ಕೋಸ್ಕರವೂ, ಆ ಜನಾಂಗ
ಕ್ಕೋಸ್ಕರ ಮಾತ್ರವಲ್ಲ, ಚದರಿದ ದೇವರ ಮಕ್ಕಳ್ಳನ್ನು ಒಂ
ದಾಗಿ ಕೂಡಿಸುವದಕ್ಕೋಸ್ಕರವೂ ಸಾಯ ಬೇಕೆಂದು ಪ್ರವಾ
ದನೆ ಹೇಳ್ಳಿದನು. ಅಂದಿನಿಂದ ಅವನನ್ನು ಕೊಂದು ಹಾಕ ಬೇ
ೳ ಕೆಂದು, ಆಲೋಚನೆ ಮಾಡಿದರು.
ೳ ಹೀಗಿರುವದರಿಂದ ಯೇಸು ಯೆಹೂದ್ಯರೊಳ್ಳಗೆ ಇನ್ನು ಬಹಿ
ರಂಗವಾಗಿ ಸಂಚರಿಸದೆ, ಅಲ್ಲಿಂದ ಅರಣ್ಯಕ್ಕೆ ಸಮೀಪವಾದ
ದೇಶಕ್ಕೂ ಎಫ್ರಯಿಮೆಂಬ ಪಟ್ಟಣಕ್ಕೂ ಹೋಗಿ, ಅಲ್ಲಿ ತನ್ನ
ೳ ಶಿಷ್ಯರ ಸಂಗಡ ವಾಸ ಮಾಡಿದನು. ಆದರೆ ಯೆಹೂದ್ಯರ
ಪಸ್ಕವು ಸಮೀಪವಾಗಿತ್ತು; ಮತ್ತು ಅನೇಕರು ತಮ್ಮನ್ನು ಪರಿ
ಶುದ್ಧ ಮಾಡಿ ಕೊಳ್ಳುವ ಹಾಗೆ, ಪಸ್ಕಕ್ಕೆ ಮುಂಚೆ ದೇಶದೊಳ್ಳ
ೳ ಗಿಂದ ಯೆರೂಸಲೇಮಿಗೆ ಏರಿ ಹೋದರು. ಇವರು ಯೇಸುವ
ನ್ನು ಹುಡುಕಿ, ದೇವಾಲಯದಲ್ಲಿ ನಿಂತು, ನಿಮಗೆ ಹ್ಯಾಗೆ ಕಾಣು
ತ್ತದೆ? ಅವನು ಹಬ್ಬಕ್ಕೆ ಬರುವದಿಲ್ಲವೋ? ಎಂದು ತಮ್ಮೊಳ್ಳಗೆ
ಹೇಳ್ಳಿ ಕೊಂಡರು. ಆದರೆ ಪ್ರಧಾನ ಯಾಜಕರು ಫರಿಸಾಯ
ರೂ, ಅವನು ಎಲ್ಲಿ ಎಂದು ಯಾರಾದರೂ ತಿಳ್ಳಿದರೆ, ಅವನ
ನ್ನು ಹಿಡಿಯುವ ಹಾಗೆ ತಿಳ್ಳಿಸ ಬೇಕೆಂದು, ಅಪ್ಪಣೆ ಕೊಟ್ಟಿದ್ದರು.

## ೧೨. ಸಂಧಿ.

೧ ಪಸ್ಕಕ್ಕೆ ಆರು ದಿವಸಕ್ಕೆ ಮುಂಚೆ, ಯೇಸು ಬೇಥಾನ್ಯಕ್ಕೆ
ಬಂದನು. ಅಲ್ಲಿ ಸತ್ತವನಾಗಿದ್ದಂಥ, ಅವನು ಸತ್ತವರೊಳಗಿಂದ
೨ ಎಬ್ಬಿಸಿದಂಥ ಲಾಜರನು ಇದ್ದನು. ಅಲ್ಲಿ ಅವನಿಗೆ ಔತಣ ಮಾ
ಡಿದರು. ಮತ್ತು ಮಾರ್ಥಳು ಸೇವಿಸಿದಳು. ಆದರೆ ಲಾಜರನು
ಅವನ ಸಂಗಡ ಔತಣಕ್ಕೆ ಕೂತವರಲ್ಲಿ ಒಬ್ಬನಾಗಿದ್ದನು.

೩ ಹೀಗಿರಲಾಗಿ ಮರಿಯಳು ಪರೆಯಯ್ಯಳ ಬಂದು ಸೇರು ಜಟ
ಮಾಂಸಿ ತೈಲವನ್ನು ತೆಗೆದು ಕೊಂಡು, ಯೇಸುವಿನ ಪಾದಗಳಿಗೆ
ಹಚ್ಚಿ, ತನ್ನ ಕೂದಲಿಂದ ಅವನ ಪಾದಗಳನ್ನು ಬರಸಿದಳು;
೪ ಮತ್ತು ಮನೆಯು ತೈಲದ ಪರಿಮಳದಿಂದ ತುಂಬಿತು. ಆಗಲವನ
ಶಿಷ್ಯರಲ್ಲಿ ಒಬ್ಬನಾದಂಥ, ಅವನನ್ನು ಒಪ್ಪಿಸಿ ಕೊಡುವದಕ್ಕಿ
ದ್ದಂಥ, ಸೀಮೋನನ ಮಗನಾದ ಇಸ್ಕರಿಯೋತನೆಂಬ ಯೂ
೫ದನು, ಈ ತೈಲವನ್ನು ಯಾಕೆ ಮುನೂರು ಹಣಕ್ಕೆ ಮಾರಿ,
೬ ಬಡವರಿಗೆ ಕೊಡಲಿಲ್ಲ, ಅಂದನು. ಇದನ್ನು ಅವನು ಬಡವರಿಗೋ
ಸ್ಕರ ಚಿಂತೆ ಪಟ್ಟದ್ದರಿಂದಲ್ಲ, ತಾನು ಕಳ್ಳನಾಗಿದ್ದು, ಹಣದ ಚೀ
ಲವನ್ನಿಟ್ಟು ಕೊಂಡು, ಅದರಲ್ಲಿ ಹಾಕಲ್ಪಡುವವುಗಳನ್ನು ಜೊರು
೭ ವವನಾಗಿದ್ದದರಿಂದ, ಹೇಳಿದನು. ಆಗ ಯೇಸು, ಅವಳನ್ನು
೮ ಬಿಡು, ನನ್ನನ್ನು ಹೂಣಿಡುವ ದಿವಸಕ್ಕಾಗಿ ಇದನ್ನು ಇಟ್ಟು
ಕೊಂಡಿದ್ದಾಳೆ; ಬಡವರು ಯಾವಾಗ್ಯೂ ನಿಮ್ಮ ಸಂಗಡ ಇದ್ದಾರೆ;
ಆದರೆ ನಾನು ಯಾವಾಗ್ಯೂ ಇರುವದಿಲ್ಲ, ಅಂದನು.

೯ ಹೀಗಿರುವಾಗ್ಯೆ ಯೆಹೂದ್ಯರಲ್ಲಿ ಬಹು ಸಮೂಹವು, ಅವ
ನು ಅಲ್ಲಿ ಇದ್ದಾನೆಂದು ತಿಳಿದು, ಯೇಸುವಿನ ನಿಮಿತ್ತ ಮಾತ್ರ
ವಲ್ಲ, ಅವನು ಸತ್ತವರೊಳಗಿಂದ ಎಬ್ಬಿಸಿದ ಲಾಜರನನ್ನು ನೋ
೧೦ ಡುವದಕ್ಕೆ ಬಂದರು. ಆದರೆ ಪ್ರಧಾನ ಯಾಜಕರು ಲಾಜರನನ್ನು
೧೧ ಸಹ ಕೊಂದು ಹಾಕುವದಕ್ಕೆ ಆಲೋಚನೆ ಕೊಂಡರು. ಯಾ
ಕಂದರೆ ಅವನ ನಿಮಿತ್ತ ಯೆಹೂದ್ಯರಲ್ಲಿ ಅನೇಕರು ಹೋಗಿ,
ಯೇಸುವಿನಲ್ಲಿ ವಿಶ್ವಾಸಪಟ್ಟರು.

೧೨ ಮಾರನೆ ದಿವಸದಲ್ಲಿ ಹಬ್ಬಕ್ಕೆ ಬಂದ ಬಹು ಸಮೂಹವು,
ಯೇಸು ಯೆರೂಸಲೇಮಿಗೆ ಬರುತ್ತಾನೆಂದು ಕೇಳಿ, ಖರ್ಜೂ
೧೩ರದ ಗರಿಗಳನ್ನು ತೆಗೆದು, ಅವನೆದುರಿಗೆ ಹೋಗಿ, ಹೊಸನ್ನಾ!
ಕರ್ತನ ಹೆಸರಿನಲ್ಲಿ ಬರುವವನಾದ ಇಸ್ರಯೇಲನ ಅರಸನಿಗೆ
೧೪ ಆಶೀರ್ವಾದವಾಗಲಿ, ಎಂದು ಕೂಗಿದರು. ಮತ್ತು ಯೇಸು ಕತ್ತೆ
೧೫ ಮರಿಯನ್ನು ಕಂಡು ಕೊಂಡು—ಚೆಯೋನಿನ ಮಗಳೇ, ಭಯ
ಪಡ ಬೇಡ; ಇಗೋ, ನಿನ್ನ ಅರಸನು ಕತ್ತೆಮರಿಯ ಮೇಲೆ
ಕೂತು ಕೊಂಡು ಬರುತ್ತಾನೆಂದು ಬರೆದಿರುವ ಪ್ರಕಾರ—ಅದರ
೧೬ ಮೇಲೆ ಕೂತು ಕೊಂಡನು. ಇವುಗಳನ್ನು ಅವನ ಶಿಷ್ಯರು ಮೊ
ದಲು ತಿಳುಕೊಳ್ಳಲಿಲ್ಲ; ಆದರೆ ಯೇಸು ಮಹಿಮೆ ಹೊಂದಿದ
ಮೇಲೆ, ಅವು ಅವನ ವಿಷಯವಾಗಿ ಬರೆಯಲ್ಪಟ್ಟವೆಂದೂ, ಇವು
ಗಳನ್ನು ಅವನಿಗೆ ಮಾಡಿದರೆಂದೂ ಜ್ಞಾಪಕ ಮಾಡಿ ಕೊಂಡರು.

೧೭ ಅವನು ಲಾಜರನನ್ನು ಸಮಾಧಿಯೊಳಗಿಂದ ಕರೆದು, ಅವ
ನನ್ನು ಸತ್ತವರೊಳಗಿಂದ ಎಬ್ಬಿಸಿದಾಗ, ಅವನ ಸಂಗಡ ಇದ್ದ
೧೮ ಸಮೂಹವು ಅವನಿಗೆ ಸಾಕ್ಷಿ ಕೊಟ್ಟರು. ಅವನು ಆ ಲಕ್ಷಣವ
ನ್ನು ಮಾಡಿದನೆಂದು ಕೇಳಿದ್ದರಿಂದ ಸಮೂಹವು ಅವನೆದುರಿಗೆ
೧೯ ಬಂತು. ಹೀಗಿರಲಾಗಿ ಫರಿಸಾಯರು, ನಿಮಗೆ ಏನೂ ಅನುಕೂಲ
ವಿಲ್ಲವೆಂದು ನೋಡುತ್ತೀರೋ? ಇಗೋ, ಲೋಕವು ಅವನ ಹಿಂದೆ
ಹೋಯಿತೆಂದು ತಮ್ಮಲ್ಲಿ ಅಂದು ಕೊಂಡರು.

೨೦ ಇದಲ್ಲದೆ ಹಬ್ಬದಲ್ಲಿ ಆರಾಧಿಸುವದಕ್ಕೆ ಏರಿ ಬಂದವರಲ್ಲಿ
೨೧ ಕೆಲವರು ಗ್ರೇಕರಿದ್ದರು. ಇವರು, ಗಲಿಲಾಯದ ಬೆಥ್ಸಾಯಿದದ
ವನಾದ ಫಿಲಿಪ್ಪನ ಬಳಿಗೆ ಬಂದು, ಅಯ್ಯಾ, ಯೇಸುವನ್ನು
೨೨ ನೋಡ ಬೇಕೆಂದು ಅವನನ್ನು ಬೇಡಿ ಕೊಂಡರು. ಫಿಲಿಪ್ಪನು ಬಂ
೨೩ದು, ಅಂದ್ರೆಯನಿಗೆ ಹೇಳಿದನು. ಮತ್ತು ಅಂದ್ರೆಯನೂ ಫಿಲಿ
ಪ್ಪನೂ ಯೇಸುವಿಗೆ ಹೇಳಿದರು. ಆಗ ಯೇಸು ಅವರಿಗೆ ಪ್ರತ್ಯು
ತ್ತರವಾಗಿ ಹೇಳಿದ್ದೇನಂದರೆ, ಮನುಷ್ಯನ ಮಗನು ಮಹಿಮೆ
೨೪ ಪಡುವದಕ್ಕೆ ಘಳಿಗೆ ಬಂತು. ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ
ಹೇಳುತ್ತೇನೆ, ಗೋಧಿಯ ಕಾಳು ಭೂಮಿಯಲ್ಲಿ ಬಿದ್ದು, ಸತ್ತರೆ
ಹೊರ್ತು, ಅದು ಬಂಟಿಯಾಗಿ ಇರುವದು. ಆದರೆ ಸತ್ತರೆ,
೨೫ ಬಹಳ ಫಲ ಫಲಿಸುವದು. ತನ್ನ ಪ್ರಾಣವನ್ನು ಸ್ನೇಹಿಸುವವನು
ಅದನ್ನು ಕಳಕೊಳ್ಳುವನು. ಮತ್ತು ಈ ಲೋಕದಲ್ಲಿ ತನ್ನ ಪ್ರಾ
ಣವನ್ನು ಹಗೆ ಮಾಡುವವನು ನಿತ್ಯ ಜೀವಕ್ಕೆ ಅದನ್ನು ಕಾಪಾ
೨೬ ಡಿ ಕೊಳ್ಳುವನು. ಯಾವನಾದರೂ ನನ್ನನ್ನು ಸೇವಿಸಿದರೆ, ನನ್ನ
ನ್ನು ಹಿಂಬಾಲಿಸಲಿ. ಮತ್ತು ನಾನು ಇರುವಲ್ಲಿಯೇ ನನ್ನ ಸೇವ
ಕನು ಸಹ ಇರುವನು. ಮತ್ತು ಯಾವನಾದರೂ ನನ್ನನ್ನು ಸೇ
ವಿಸಿದರೆ, ತಂದೆಯು ಅವನನ್ನು ಘನ ಪಡಿಸುವನು.

೨೭ ಈಗ ನನ್ನ ಪ್ರಾಣವು ಕಳವಳಗೊಂಡಿದೆ. ಮತ್ತು ಏನು ಹೇ
ಳಲಿ? ತಂದೆಯೇ, ಈ ಘಳಿಗೆಯೊಳಗಿಂದ ನನ್ನನ್ನು ರಕ್ಷಿಸು.
೨೮ ಆದರೆ ಇದಕ್ಕೋಸ್ಕರ ಈ ಘಳಿಗೆಗೆ ಬಂದೆನು. ತಂದೆಯೇ,
ನಿನ್ನ ಹೆಸರನ್ನು ಮಹಿಮೆ ಪಡಿಸು. ಆಗ, ಮಹಿಮೆ ಪಡಿಸಿದ್ದೇನೆ,
ಮತ್ತು ತಿರಿಗಿ ಮಹಿಮೆ ಪಡಿಸುವೆನು, ಎಂಬ ಶಬ್ದವು ಆಕಾಶದಿಂದ
೨೯ ಬಂತು. ಹೀಗಿರುವದರಿಂದ, ನಿಂತು ಕೇಳಿದ ಸಮೂಹವು, ಗುಡು
ಗಾಯಿತು, ಅಂದರು. ಬೇರೊಬ್ಬರು, ದೂತನು ಅವನ ಸಂಗಡ
೩೦ ಮಾತಾಡಿದ್ದಾನೆ, ಅಂದರು. ಯೇಸು ಪ್ರತ್ಯುತ್ತರವಾಗಿ ಹೇಳಿ
ದನು, ನನಗೋಸ್ಕರವಲ್ಲ, ನಿಮಗೋಸ್ಕರವೇ ಈ ಶಬ್ದವಾಯಿ
೩೧ತು. ಈಗಲೇ ಈ ಲೋಕದ ನ್ಯಾಯ ತೀರ್ವಿಕೆ ಆಗುತ್ತದೆ
ಈಗಲೇ ಈ ಲೋಕದ ಅಧಿಪತಿಯು ಹೊರಗೆ ಹಾಕಲ್ಪಡುವನು.
೩೨ ಮತ್ತು ನಾನು ಭೂಮಿಯಿಂದ ಎತ್ತಲ್ಪಟ್ಟಿರೆ, ಎಲ್ಲರನ್ನು ನನ್ನ
೩೩ ಬಳಿಗೆ ಎಳಕೊಳ್ಳುವೆನು. ತಾನು ಎಂಥ ಮರಣದಿಂದ ಸಾಯ
ಬೇಕಾಗುತ್ತೆಂದು ಸೂಚಿಸಿ, ಇದನ್ನು ಹೇಳಿದನು.

೩೪ ಅವನಿಗೆ ಸಮೂಹವು, ಕ್ರಿಸ್ತನು ಎಂದೆಂದಿಗೂ ಇರುತ್ತಾನೆಂ
ದು, ನಾವು ನ್ಯಾಯಪ್ರಮಾಣದಿಂದ ಕೇಳಿದ್ದೇವೆ; ಹಾಗಾದರೆ
ಮನುಷ್ಯನ ಮಗನು ಎತ್ತಲ್ಪಡ ಬೇಕೆಂದು ನೀನು ಹೇಳುವದೇ
೩೫ನು? ಈ ಮನುಷ್ಯನ ಮಗನು ಯಾರು? ಎಂದು ಉತ್ತರ ಕೊ
ಟ್ಟಾಗ; ಯೇಸು ಅವರಿಗೆ ಹೇಳಿದನು, ಇನ್ನು ಸ್ವಲ್ಪ ಕಾಲ
ಬೆಳಕು ನಿಮ್ಮಲ್ಲಿ ಇರುತ್ತದೆ; ಕತ್ತಲು ನಿಮ್ಮನ್ನು ಹಿಡಿಯದ ಹಾಗೆ,
ಬೆಳಕು ನಿಮಗಿರುವ ಮಟ್ಟಿಗೂ ಸಂಚರಿಸಿರಿ. ಕತ್ತಲಲ್ಲಿ ಸಂಚರಿ
೩೬ ಸುವವನು, ತಾನು ಎಲ್ಲಿಗೆ ಹೋಗುತ್ತಾನೋ, ಅರಿಯನು. ನೀವು
ಬೆಳಕಿನ ಮಕ್ಕಳಾಗುವ ಹಾಗೆ, ಬೆಳಕು ನಿಮಗಿರುವ ಮಟ್ಟಿಗೂ
ಬೆಳಕಿನಲ್ಲಿ ವಿಶ್ವಾಸವಿಡಿರಿ. ಯೇಸು ಇವುಗಳನ್ನು ಮಾತಾಡಿದ
ಮೇಲೆ ಅವರನ್ನು ಬಿಟ್ಟು ಹೋಗಿ, ಅಡಗಿ ಕೊಂಡನು.

೩೭ ಆದರೆ ಅವನು ಅಷ್ಟು ಲಕ್ಷಣಗಳನ್ನು ಅವರ ಮುಂದೆ ಮಾ



೩೮ ದಿದ್ದಾಗ್ಯೂ, ಅವರು ಅವನಲ್ಲಿ ವಿಶ್ವಾಸವಿಡಲಿಲ್ಲ. ಹೀಗೆ, ಕರ್ತ
ನೇ, ನಮ್ಮ ಸುದ್ದಿಯನ್ನು ಯಾರು ನಂಬಿದ್ದಾರೆ? ಕರ್ತನ ಭು
ಜವು ಯಾರಿಗೆ ಪ್ರಕಟವಾಯಿತು? ಎಂಬುವ ಪ್ರವಾದಿಯಾದ
೩೯ ಯೆಶಾಯನ ವಾಕ್ಯವು ಈಡೇರಿತು. ಮತ್ತು ಕಣ್ಣುಗಳಿಂದ ನೋ
ಡದೆ, ಹೃದಯದಿಂದ ಗ್ರಹಿಸದೆ, ತಿರುಗಿ ಕೊಳ್ಳದೆ, ನಾನು ಅವ
ರನ್ನು ಗುಣ ಮಾಡದೆ ಇರುವ ಹಾಗೆಯೇ, ಅವರ ಕಣ್ಣುಗಳನ್ನು
ಕುರುಡ ಮಾಡಿ, ಅವರ ಹೃದಯಗಳನ್ನು ಕಠಿಣ ಪಡಿಸಿದ್ದಾನೆಂ
೪೦ ದು ಯೆಶಾಯನು ಹೇಳಿದ್ದರಿಂದ ಅವರು ವಿಶ್ವಾಸಿಸಲಾರದೆ ಇ
೪೧ ದ್ದರು. ಯೆಶಾಯನು, ಅವನ ಮಹಿಮೆಯನ್ನು ನೋಡಿ, ಅವ
ನನ್ನು ಕುರಿತು ಮಾತಾಡಿದಾಗ, ಇವುಗಳನ್ನು ಹೇಳಿದನು. ಆದಾ
ಗ್ಯೂ ಅಧಿಪತಿಗಳಲ್ಲಿಯೂ ಅನೇಕರು ಅವನಲ್ಲಿ ವಿಶ್ವಾಸಪಟ್ಟರು;
೪೨ ಆದರೆ ತಾವು ಸಭೆಯಿಂದ ಹೊರಗೆ ಹಾಕಲ್ಪಟ್ಟೇವೆಂದು, ಫರಿಸಾ
೪೩ಯರ ನಿಮಿತ್ತ, ಅರಿಕೆ ಮಾಡಲಿಲ್ಲ. ಯಾಕಂದರೆ ದೇವರ ಮಹಿ
ಮೆಗಿಂತ ಮನುಷ್ಯರ ಮಹಿಮೆಯನ್ನು ಹೆಚ್ಚಾಗಿ ಪ್ರೀತಿ ಮಾಡಿ
ದರು.

೪೪ ಆದರೆ ಯೇಸು ಕೂಗಿ ಹೇಳಿದ್ದೇನಂದರೆ, ನನ್ನಲ್ಲಿ ವಿಶ್ವಾ
ಸವಿಡುವವನು ನನ್ನಲ್ಲಿ ಅಲ್ಲ, ನನ್ನನ್ನು ಕಳುಹಿಸಿದವನಲ್ಲಿ ವಿಶ್ವಾ
೪೫ ಸವಿಡುತ್ತಾನೆ. ಮತ್ತು ನನ್ನನ್ನು ನೋಡುವವನು ನನ್ನನ್ನು ಕಳು
೪೬ ಹಿಸಿದವನನ್ನು ನೋಡುತ್ತಾನೆ. ನನ್ನಲ್ಲಿ ವಿಶ್ವಾಸವಿಡುವವಲ್ಲೆಲ್ಲರೂ
ಕತ್ತಲಲ್ಲಿ ಇರದ ಹಾಗೆ, ನಾನು ಬೆಳಕಾಗಿ ಈ ಲೋಕಕ್ಕೆ ಬಂದೆ
೪೭ ನು. ಮತ್ತು ಯಾವನಾದರೂ ನನ್ನ ಮಾತುಗಳನ್ನು ಕೇಳಿ ವಿಶ್ವಾ
ಸಿಸದೆ ಹೋದರೆ, ನಾನು ಅವನಿಗೆ ಅಜ್ಞೆ ನಿರ್ಣಯಿಸುವದಿ
ಲ್ಲ; ಯಾಕಂದರೆ ಅಜ್ಞೆ ನಿರ್ಣಯಿಸುವದಕ್ಕಲ್ಲ, ಲೋಕವನ್ನು
೪೮ ರಕ್ಷಿಸುವದಕ್ಕೆ ಬಂದೆನು. ನನ್ನನ್ನು ಅಲಕ್ಷ್ಯ ಮಾಡಿ, ನನ್ನ ಮಾ
ತುಗಳನ್ನು ಅಂಗೀಕರಿಸದವನಿಗೆ ನ್ಯಾಯ ತೀರಿಸುವವನು ಇದ್ದಾ
ನೆ; ನಾನು ಮಾತಾಡಿದ ವಾಕ್ಯವೇ ಕಡೇ ದಿವಸದಲ್ಲಿ ಅವನಿಗೆ
೪೯ ನ್ಯಾಯ ತೀರಿಸುವದು. ಯಾಕಂದರೆ ನಾನು ನನ್ನಿಂದಲೇ ಮಾ
ತಾಡಲಿಲ್ಲ; ನನ್ನನ್ನು ಕಳುಹಿಸಿದ ತಂದೆಯು ನಾನು ಏನು ಹೇಳ
ಬೇಕೋ, ಏನು ಮಾತಾಡ ಬೇಕೋ, ಕಟ್ಟಳೆ ನನಗೆ ಕೊಟ್ಟಿ
೫೦ ದ್ದಾನೆ. ಮತ್ತು ಅವನ ಕಟ್ಟಳೆ ನಿತ್ಯ ಜೀವವಾಗಿದೆ ಎಂದು ಬಲ್ಲೆ
ನು; ಆದದರಿಂದ ನಾನು ಮಾತಾಡುವವುಗಳನ್ನು ತಂದೆಯು
ನನಗೆ ಹೇಳಿದ ಮೇರೆಗೆ ಮಾತಾಡುತ್ತೇನೆ.

## ೧೩. ಸಂಧಿ.

೧ ಆದರೆ ಪಸ್ಕ ಹಬ್ಬಕ್ಕೆ ಮುಂಚೆ ಯೇಸು, ತಾನು ಈ ಲೋ
ಕವನ್ನು ಬಿಟ್ಟು ತಂದೆಯ ಬಳಿಗೆ ಹೋಗುವದಕ್ಕೆ ಘಳಿಗೆ ಬಂ
ದೆಂದು ತಿಳಿದು ಕೊಂಡು, ಲೋಕದಲ್ಲಿರುವ ಸ್ವಜನರನ್ನು ಪ್ರೀತಿ
ಮಾಡಿ, ಅಂತ್ಯದ ಪರ್ಯಂತರ ಅವರನ್ನು ಪ್ರೀತಿ ಮಾಡಿದನು.
೨ ಮತ್ತು ಭೋಜನವಾದ ಮೇಲೆ, ಪಿಶಾಚನು ಅವನನ್ನು ಒಪ್ಪಿಸಿ
ಕೊಡ ಬೇಕೆಂದು ಸೀಮೋನನ ಮಗನಾದ ಇಸ್ಕರಿಯೋತೆಂಬ
೩ ಯೂದನ ಹೃದಯವನ್ನು ಪ್ರೇರೇಪಿಸಿದ ಮೇಲೆ, ಯೇಸು
ತಂದೆಯು ಎಲ್ಲವುಗಳನ್ನು ತನ್ನ ಕೈಗಳಲ್ಲಿ ಕೊಟ್ಟನೆಂದೂ,
ತಾನು ದೇವರ ಬಳಿಯಿಂದ ಹೊರಟು ದೇವರ ಬಳಿಗೆ ಹೋಗು
೪ ತ್ತೇನೆಂದೂ ತಿಳಿದು, ಭೋಜನದಿಂದ ಎದ್ದು, ವಸ್ತ್ರಗಳನ್ನು ತೆಗೆ
ದಿಟ್ಟು, ಅಂಗವಸ್ತ್ರವನ್ನು ತಕ್ಕೊಂಡು, ನಡು ಕಟ್ಟಿ ಕೊಂಡನು.
೫ ಆ ಮೇಲೆ ತೊಳೆಯುವ ಪಾತ್ರೆಯಲ್ಲಿ ನೀರು ಹೊಯಿದು, ಶಿ
ಷ್ಯರ ಪಾದಗಳನ್ನು ತೊಳೆಯಲೂ, ತಾನು ನಡುವಿಗೆ ಕಟ್ಟಿ
ಕೊಂಡಿದ್ದ ಅಂಗವಸ್ತ್ರದಿಂದ ಬರಸಲೂ ಆರಂಭ ಮಾಡಿದನು.
೬ ಸೀಮೋನ್ ಪೇತ್ರನ ಬಳಿಗೆ ಬರುವಾಗ, ಇವನು ಅವನಿಗೆ, ಕ
ರ್ತನೇ, ನೀನು ನನ್ನ ಪಾದಗಳನ್ನು ತೊಳೆಯುತ್ತೀಯೋ?
೭ ಅಂದನು. ಯೇಸು ಪ್ರತ್ಯುತ್ತರವಾಗಿ ಅವನಿಗೆ, ನಾನು ಮಾಡು
ವದು ಈಗ ನಿನಗೆ ತಿಳಿಯುವದಿಲ್ಲ; ಇನ್ನು ಮೇಲೆ ತಿಳಿಯುವದು,
೮ ಅಂದನು. ಪೇತ್ರನು ಅವನಿಗೆ, ನೀನು ನನ್ನ ಪಾದಗಳನ್ನು ಎಂ
ದಿಗೂ ತೊಳೆಯ ಬಾರದು, ಅನ್ನಲು; ಯೇಸು ಅವನಿಗೆ ಪ್ರತ್ಯು
ತ್ತರವಾಗಿ, ನಾನು ನಿನ್ನನ್ನು ತೊಳೆಯದಿದ್ದರೆ, ನನ್ನ ಸಂಗಡ
೯ ನಿನಗೆ ಪಾಲಿಲ್ಲ, ಅಂದನು. ಸೀಮೋನ್ ಪೇತ್ರನು ಅವನಿಗೆ,
ಕರ್ತನೇ, ನನ್ನ ಪಾದಗಳನ್ನು ಮಾತ್ರವಲ್ಲ, ನನ್ನ ಕೈಗಳನ್ನೂ
೧೦ ತಲೆಯನ್ನೂ ತೊಳ್ಳಿ, ಅಂದಾಗ; ಯೇಸು ಅವನಿಗೆ ಮೈತೊಳೆದ
ವನಿಗೆ ಪಾದಗಳನ್ನು ಹೊರ್ತು ತೊಳೆಯುವದಕ್ಕೆ ಅವಶ್ಯವಿಲ್ಲ;
ಸಂಪೂರ್ಣವಾಗಿ ಶುದ್ಧವಾಗಿದ್ದಾನೆ. ಮತ್ತು ನೀವು ಶುದ್ಧರಾಗಿ
೧೧ದ್ದೀರಿ; ಆದರೆ ಎಲ್ಲರೂ ಅಲ್ಲ, ಅಂದನು. ಯಾಕಂದರೆ ತನ್ನ
ನ್ನು ಒಪ್ಪಿಸಿ ಕೊಡುವವನನ್ನು ತಿಳಿಕೊಂಡನು. ಆದದರಿಂದ,
ನೀವೆಲ್ಲರೂ ಶುದ್ಧರಲ್ಲವೆಂದು ಹೇಳಿದನು.

೧೨ ಅವರ ಪಾದಗಳನ್ನು ತೊಳೆದ ಮೇಲೆ ತನ್ನ ವಸ್ತ್ರಗಳನ್ನು
ತಕ್ಕೊಂಡು, ತಿರಿಗಿ ಕೂತು ಕೊಂಡು, ಅವರಿಗೆ ಹೇಳ್ದೇನಂದರೆ,
ನಾನು ನಿಮಗೆ ಮಾಡಿದ್ದೇನೆಂದು ತಿಳಿಯುತ್ತೀರೋ? ನೀವು ನನ್ನ
೧೩ ನ್ನು ಬೋಧಕನೆಂದು, ಕರ್ತನೆಂದು, ಅನ್ನುತ್ತೀರಿ; ಮತ್ತು ಸರಿ
೧೪ ಯಾಗಿ ಹೇಳುತ್ತೀರಿ; ಯಾಕಂದರೆ ಹಾಗೆಯೇ ಇದ್ದೇನೆ. ಹಾ
ಗಾದರೆ ಕರ್ತನೂ ಬೋಧಕನೂ ಆಗಿರುವ ನಾನು ನಿಮ್ಮ ಪಾ
ದಗಳನ್ನು ತೊಳೆದಿದ್ದರೆ, ನೀವು ಸಹ ಒಬ್ಬರಿಗೊಬ್ಬರು ಪಾದ
೧೫ ಗಳನ್ನು ತೊಳೆಯ ಬೇಕು. ಯಾಕಂದರೆ ನಾನು ನಿಮಗೆ ಮಾ
ಡಿದ ಪ್ರಕಾರವೇ ನೀವೂ ಮಾಡುವ ಹಾಗೆ, ನಿಮಗೆ ಮಾದರಿ ಕೊ
೧೬ ಟ್ಟಿದ್ದೇನೆ. ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ,
ದಾಸನು ತನ್ನ ಕರ್ತನಿಗಿಂತ ದೊಡ್ಡವನಲ್ಲ; ಮತ್ತು ಕಳುಹಿಸ
ಲ್ಪಟ್ಟವನು ತನ್ನನ್ನು ಕಳುಹಿಸಿದವನಿಗಿಂತ ದೊಡ್ಡವನಲ್ಲ. ನೀವು
೧೭ ಇವುಗಳನ್ನು ತಿಳ್ಕಿದು, ಇವುಗಳನ್ನು ಮಾಡಿದರೆ, ಭಾಗ್ಯವಂತರಾ
ಗಿದ್ದೀರಿ. ನಿಮ್ಮೆಲ್ಲರ ವಿಷಯವಾಗಿ ಹೇಳುವದಿಲ್ಲ; ನಾನು ಆರಿ
ಕೊಂಡವರನ್ನು ಬಲ್ಲೆನು; ಆದರೆ, ನನ್ನ ಸಂಗಡ ಕೊಟ್ಟಿ ಉಣ್ಣು
ವವನು ತನ್ನ ಹಿಮ್ಮಡಿಯನ್ನು ನನ್ನ ಮೇಲೆ ಎತ್ತಿದ್ದಾನೆಂಬ ಬರ
೧೮ ಹವು ಈಡೇರ ಬೇಕು. ಅದು ಆಗುವಾಗ, ನಾನೇ ಅವನೆಂದು ನೀ
ವು ನಂಬುವ ಹಾಗೆ, ಅದು ಆಗುವದಕ್ಕಿಂತ ಮುಂಚೆ ಈಗ ನಿಂದ
೧೯ ನಿಮಗೆ ಹೇಳುತ್ತೇನೆ. ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳು
ತ್ತೇನೆ, ನಾನು ಕಳುಹಿಸುವವನನ್ನು ಅಂಗೀಕರಿಸುವವನು ನನ್ನ
ನ್ನು ಅಂಗೀಕರಿಸುತ್ತಾನೆ; ಮತ್ತು ನನ್ನನ್ನು ಅಂಗೀಕರಿಸುವವನು
ನನ್ನನ್ನು ಕಳುಹಿಸಿದವನನ್ನು ಅಂಗೀಕರಿಸುತ್ತಾನೆ.

೨೦ ಇವುಗಳನ್ನು ಹೇಳಿದ ಮೇಲೆ ಯೇಸು ಅತ್ಮದಲ್ಲಿ ಕಳವಳ
ಗೊಂಡು, ಸಾತ್ಯಿಯಾಗಿ ಹೇಳ್ದೇನಂದರೆ, ನಿಶ್ಚಯವಾಗಿ ನಿಶ್ಚ
ಯವಾಗಿ ನಿಮಗೆ ಹೇಳುತ್ತೇನೆ, ನಿಮ್ಮಲ್ಲಿ ಒಬ್ಬನು ನನ್ನನ್ನು
೨೧ ಒಪ್ಪಿಸಿ ಕೊಡುವನು. ಆಗ ಶಿಷ್ಯರು, ಯಾವನನ್ನು ಕುರಿತು ಹೇ
ಳುತ್ತಾನೆಂದು ಅನುಮಾನ ಪಟ್ಟು, ಒಬ್ಬರನ್ನೊಬ್ಬರು ನೋಡಿ

೧೩ ಕೊಂಡರು. ಆದರೆ ಯೇಸುವಿನ ಎದೆಯ ಬಳ್ಳಿಯಲ್ಲಿ ಅವನ
ಶಿಷ್ಯರಲ್ಲಿ ಒಬ್ಬನು ಮಲಗಿ ಕೊಂಡಿದ್ದನು. ಅವನನ್ನು ಯೇಸು
೧೪ ಪ್ರೀತಿ ಮಾಡಿದನು. ಆದರಿಂದ ಸೀಮೋನ್ ಪೇತ್ರನು, ಅವನು
ಯಾವನನ್ನು ಕುರಿತು ಹೇಳುತ್ತಾನೆಂದು, ಕೇಳುವದಕ್ಕೆ ಇವನಿಗೆ
೧೫ ಸಾಜ್ಞೆ ಮಾಡಿದನು. ಇವನು ಯೇಸುವಿನ ಎದೆಯ ಮೇಲೆ ಆತು
೧೬ ಕೊಂಡು, ಅವನಿಗೆ, ಕರ್ತನೇ, ಯಾರು? ಅನ್ನಲು; ಯೇಸು ಪ್ರ
ತ್ಯುತ್ತರವಾಗಿ, ನಾನು ರೊಟ್ಟಿಯ ತುಂಡು ಅದ್ದಿ, ಯಾರಿಗೆ ಕೊ
ಡುವೆನೋ, ಅವನೇ, ಅಂದನು. ಆಗ ರೊಟ್ಟಿಯ ತುಂಡು ಅದ್ದಿ,
ಸೀಮೋನನ ಮಗನಾದ ಇಸ್ಕರಿಯೋತೆಂಬ ಯೂದನಿಗೆ ಕೊ
೧೭ ಟ್ಟನು. ತುಂಡು ತಕ್ಕೊಂಡ ಮೇಲೆ ಸೈತಾನನು ಅವನೊಳಗೆ
ಹೊಕ್ಕನು. ಆಗ ಯೇಸು ಅವನಿಗೆ, ನೀನು ಮಾಡುವದನ್ನು
೧೮ ಬೇಗ ಮಾಡು, ಅಂದನು. ಇದನ್ನು ಅವನಿಗೆ ಯಾವ ಕಾರಣದಿಂ
ದ ಹೇಳಿದನೆಂದು, ಕೂತು ಕೊಂಡವರಲ್ಲಿ ಒಬ್ಬನಿಗೂ ತಿಳಿಯ
೧೯ ಲಿಲ್ಲ. ಹ್ಯಾಗಂದರೆ ಯೂದನು ಹಣದ ಚೀಲವನ್ನಿಟ್ಟು ಕೊಂಡಿ
ರುವದರಿಂದ, ಯೇಸು ಅವನಿಗೆ, ಹಬ್ಬಕ್ಕೋಸ್ಕರ ನಮಗೆ
ಬೇಕಾದವುಗಳನ್ನು ಕೊಂಡುಕೋ, ಇಲ್ಲವೇ, ಬಡವರಿಗೆ ಏನಾದ
೨೦ ರೂ ಕೊಡು, ಅನುತ್ತಾನೆಂಬದಾಗಿ ಕೆಲವರು ನೆನಸಿದರು. ಆದರೆ
ಅವನು ತುಂಡು ತಕ್ಕೊಂಡು, ಸಂಗಡಲೇ ಹೊರಟನು. ಆಗ
ರಾತ್ರಿಯಾಗಿತ್ತು.

೨೧ ಅವನು ಹೋದ ಮೇಲೆ ಯೇಸು ಹೇಳಿದ್ದೇನಂದರೆ, ಈಗ
ಮನುಷ್ಯನ ಮಗನು ಮಹಿಮೆ ಪಟ್ಟಿದ್ದಾನೆ; ಮತ್ತು ದೇವರು ಅವ
೨೨ ನಲ್ಲಿ ಮಹಿಮೆ ಪಟ್ಟಿದ್ದಾನೆ. ದೇವರು ಅವನಲ್ಲಿ ಮಹಿಮೆ ಪಟ್ಟಿದ್ದರೆ,
ದೇವರು ಅವನನ್ನು ತನ್ನಲ್ಲಿಯೇ ಮಹಿಮೆ ಪಡಿಸುವನು; ಸಂಗ
೨೩ ಡಲೇ ಅವನನ್ನು ಮಹಿಮೆ ಪಡಿಸುವನು. ಮಕ್ಕಳೇ, ಇನ್ನು
ಸ್ವಲ್ಪ ಕಾಲ ನಿಮ್ಮ ಸಂಗಡ ಇದ್ದೇನೆ; ನನ್ನನ್ನು ಹುಡುಕುವಿರಿ;
ಮತ್ತು ನಾನು ಹೋಗುವಲ್ಲಿಗೆ ನೀವು ಬರಲಾರಿರೆಂದು, ಯೆಹೂ
ದ್ಯರಿಗೆ ಹೇಳಿದ ಹಾಗೆಯೇ, ಈಗ ನಿಮಗೂ ಹೇಳುತ್ತೇನೆ.
೩೪ ಒಬ್ಬರನೊಬ್ಬರು ಪ್ರೀತಿ ಮಾಡ ಬೇಕೆಂಬ ಹೊಸ ಆಜ್ಞೇ ನಿಮ
ಗೆ ಕೊಡುತ್ತೇನೆ; ನಾನು ನಿಮ್ಮನ್ನು ಪ್ರೀತಿ ಮಾಡಿದ ಹಾಗೆ, ನೀವು
೩೫ ಒಬ್ಬರನೊಬ್ಬರು ಪ್ರೀತಿ ಮಾಡ ಬೇಕು. ಒಬ್ಬರಲೊಬ್ಬರು
ಪ್ರೀತಿ ಇಟ್ಟರೆ, ಇದರಿಂದ ನೀವು ನನ್ನ ಶಿಷ್ಯರಾಗಿದ್ದೀರೆಂದು,
ಎಲ್ಲರೂ ತಿಳಿಯಕೊಳ್ಳುವರು.

೩೬ ಸೀಮೋನ್ ಪೇತ್ರನು ಅವನಿಗೆ, ಕರ್ತನೇ, ಎಲ್ಲಿಗೆ ಹೋಗು
ತ್ತೀ? ಅನ್ನಲು; ಯೇಸು ಅವನಿಗೆ ಪ್ರತ್ಯುತ್ತರವಾಗಿ, ನಾನು
ಹೋಗುವಲ್ಲಿಗೆ ಈಗ ನನ್ನನ್ನು ಹಿಂಬಾಲಿಸಲಾರಿ, ಆದರೆ ತರು
೩೭ ವಾಯೆ ನನ್ನನ್ನು ಹಿಂಬಾಲಿಸುವಿ, ಅಂದನು. ಪೇತ್ರನು ಅವನಿ
ಗೆ, ಕರ್ತನೇ, ಯಾಕೆ ಈಗ ನಿನ್ನನ್ನು ಹಿಂಬಾಲಿಸಲಾರೆನು? ನಿನ
೩೮ ಗೋಸ್ಕರ ನನ್ನ ಪ್ರಾಣವನ್ನು ಕೊಡುವೆನು, ಅನ್ನಲು; ಯೇಸು
ಅವನಿಗೆ ಪ್ರತ್ಯುತ್ತರವಾಗಿ, ನನಗೋಸ್ಕರ ನಿನ್ನ ಪ್ರಾಣವನ್ನು
ಕೊಡುವಿಯೋ? ನಿಶ್ಚಯವಾಗಿ ನಿಶ್ಚಯವಾಗಿ ನಿನಗೆ ಹೇಳುತ್ತೇ
ನೆ, ನೀನು ಮೂರು ಸಾರಿ ನನ್ನನ್ನು ಬೊಂಕುವ ಪರ್ಯಂತರ
ಕೋಳಿ ಕೂಗುವದಿಲ್ಲ, ಅಂದನು.

## ೧೩. ಸಂಧಿ.

೧ ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರಲ್ಲಿ
೨ ವಿಶ್ವಾಸವಿಡಿರಿ, ನನ್ನಲ್ಲಿಯೂ ವಿಶ್ವಾಸವಿಡಿರಿ. ನನ್ನ ತಂದೆಯ
ಮನೆಯಲ್ಲಿ ಅನೇಕ ನಿವಾಸಗಳು ಅವೆ; ಇಲ್ಲದಿದ್ದರೆ, ನಿಮಗೆ ಹೇ
ಳಿ ಇದ್ದೆನು; ನಿಮಗೆ ಸ್ಥಳವನ್ನು ಸಿದ್ಧ ಮಾಡ ಹೋಗುತ್ತೇನೆ.
೩ ಹೋಗಿ, ನಿಮಗೆ ಸ್ಥಳ ಸಿದ್ಧ ಮಾಡಿದರೆ, ನಾನು ಪುನಃ ಬಂದು,
ನಾನಿರುವಲ್ಲಿ ನೀವೂ ಇರುವ ಹಾಗೆ, ನಿಮ್ಮನ್ನು ನನ್ನ ಬಳ್ಳಿಗೆ ಸೇ
೪ ರ ತೆಗೆಯುವೆನು. ನಾನು ಎಲ್ಲಿ ಹೋಗುತ್ತೇನೋ, ಬಲ್ಲಿರಿ; ಮಾ
ರ್ಗವನ್ನು ಬಲ್ಲಿರಿ.

೫ ಆಗ ತೋಮನು ಅವನಿಗೆ, ಕರ್ತನೇ, ನೀನು ಎಲ್ಲಿಗೆ ಹೋ
ಗುತ್ತೀಯೋ, ಅರಿಯೆವು; ಮಾರ್ಗವನ್ನು ಹ್ಯಾಗೆ ತಿಳಿಯ
೬ ಬಹುದು ಅನ್ನಲಾಗಿ; ಯೇಸು ಅವನಿಗೆ ಹೇಳಿದನು, ನಾನೇ
ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ; ನನ್ನ ಮು
ಖಾಂತರವಲ್ಲದೆ, ಯಾವನೂ ತಂದೆಯ ಬಳ್ಳಿಗೆ ಬರುವದಿಲ್ಲ.
೭ ನೀವು ನನ್ನನ್ನು ತಿಳಿದಿದ್ದರೆ, ನನ್ನ ತಂದೆಯನ್ನು ತಿಳಿದಿರುವಿರಿ;
ಮತ್ತು ಈಗಿನಿಂದ ಅವನನ್ನು ತಿಳಿದು, ಅವನನ್ನು ನೋಡಿದ್ದೀರಿ.

೮ ಫಿಲಿಪ್ಪನು ಅವನಿಗೆ, ಕರ್ತನೇ, ನಮಗೆ ತಂದೆಯನ್ನು ತೋ
೯ ರಿಸು, ಅದು ನಮಗೆ ಸಾಕು, ಅನ್ನಲು; ಯೇಸು ಅವನಿಗೆ ಹೇಳಿ
ದನು, ಫಿಲಿಪ್ಪನೇ, ಇಷ್ಟು ಕಾಲ ನಿಮ್ಮ ಸಂಗಡ ಇದ್ದ ಮೇಲೆ
ನೀನು ನನ್ನನ್ನು ತಿಳಿಯಲಿಲ್ಲವೋ? ನನ್ನನ್ನು ನೋಡಿದವನು
ತಂದೆಯನ್ನು ನೋಡಿದ್ದಾನೆ. ಹಾಗಾದರೆ ತಂದೆಯನ್ನು ನಮಗೆ
೧೦ ತೋರಿಸೆಂದು ನೀನು ಹೇಳುವದೇನು? ನಾನು ತಂದೆಯಲ್ಲಿ ಇದೇ
ನೆ, ತಂದೆಯು ನನ್ನಲ್ಲಿ ಇದ್ದಾನೆ ಎಂದು, ನೀನು ನಂಬುವದಿಲ್ಲ
ವೋ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಿಂದಲೇ
ಹೇಳುವದಿಲ್ಲ; ಆದರೆ ನನ್ನಲ್ಲಿ ನೆಲೆಯಾಗಿರುವ ತಂದೆಯು ತಾ
೧೧ ನೇ ಕ್ರಿಯೆಗಳನ್ನು ಮಾಡುತ್ತಾನೆ. ನಾನು ತಂದೆಯಲ್ಲಿ ಇದ್ದೇನೆ,
ತಂದೆ ನನ್ನಲ್ಲಿ ಇದ್ದಾನೆ, ಎಂದು ನನ್ನನ್ನು ನಂಬಿರಿ; ಇಲ್ಲದಿದ್ದರೆ,
೧೨ ಕ್ರಿಯೆಗಳ ನಿಮಿತ್ತವೇ ನನ್ನನ್ನು ನಂಬಿರಿ. ನಿಶ್ಚಯವಾಗಿ ನಿಶ್ಚಯ
ವಾಗಿ ನಿಮಗೆ ಹೇಳುತ್ತೇನೆ, ನನ್ನಲ್ಲಿ ವಿಶ್ವಾಸವಿಡುವವನು ನಾನು
ಮಾಡುವ ಕ್ರಿಯೆಗಳನ್ನು ತಾನು ಮಾಡುವನು. ಮತ್ತು ಇವುಗಳಿ
ಗಿಂತ ದೊಡ್ಡವುಗಳನ್ನು ಮಾಡುವನು; ಯಾಕಂದರೆ ನಾನು ನ
೧೩ ನ್ನ ತಂದೆಯ ಬಳ್ಳಿಗೆ ಹೋಗುತ್ತೇನೆ. ಮತ್ತು ತಂದೆ ಮಗನಲ್ಲಿ
ಮಹಿಮೆ ಪಡುವ ಹಾಗೆ, ನೀವು ನನ್ನ ಹೆಸರಿನಲ್ಲಿ ಏನೂ ಬೇಡಿ
೧೪ ಕೊಳ್ಳುವಿರೋ, ಅದನ್ನು ಮಾಡುವೆನು. ನನ್ನ ಹೆಸರಿನಲ್ಲಿ ಏನಾ
ದರೂ ಬೇಡಿ ಕೊಂಡರೆ, ನಾನು ಮಾಡುವೆನು.

೧೫ ನನ್ನನ್ನು ಪ್ರೀತಿಮಾಡಿದರೆ, ನನ್ನ ಕಟ್ಟಳೆಗಳನ್ನು ಕೈಕೊಳ್ಳಿರಿ.
೧೬ ಮತ್ತು ನಾನು ತಂದೆಯನ್ನು ಬೇಡಿ ಕೊಳ್ಳುವೆನು; ಆಗಲವನು,
ಎಂದೆಂದಿಗೂ ನಿಮ್ಮ ಸಂಗಡ ಇರುವದಕ್ಕೆ ಬೇರೊಬ್ಬ ಆದರಿಕೆ
೧೭ ನ್ನು ನಿಮಗೆ ಕೊಡುವನು, ಸತ್ಯದ ಆತ್ಮವನ್ನೇ. ಲೋಕವು ಅದ
ನ್ನು ನೋಡದೆ, ಅರಿಯದೆ ಇರುವದರಿಂದ, ಅದನ್ನು ಹೊಂದಲಾ
ರದು; ಆದರೆ ನೀವು ಅದನ್ನು ತಿಳಿಯುತ್ತೀರಿ. ಹ್ಯಾಗಂದರೆ ನಿ
ಮ್ಮ ಬಳ್ಳಿಯಲ್ಲಿ ಅದು ನೆಲೆಯಾಗಿದೆ; ಮತ್ತು ನಿಮ್ಮಲ್ಲಿ ಇರುವದು.
೧೮ ನಿಮ್ಮನ್ನು ದಿಕ್ಕಿಲ್ಲದವರಾಗಿ ಬಿಡೆನು; ನಿಮ್ಮ ಬಳ್ಳಿಗೆ ಬರುತ್ತೇನೆ.
೧೯ ಇನ್ನೂ ಸ್ವಲ್ಪ ಕಾಲವಾದ ಮೇಲೆ ಲೋಕವು ನನ್ನನ್ನು ಇನ್ನೂ
ನೋಡುವದಿಲ್ಲ; ಆದರೆ ನೀವು ನನ್ನನ್ನು ನೋಡುತ್ತೀರಿ. ನಾನು
೨೦ ಬದುಕುವದರಿಂದ, ನೀವು ಸಹ ಬದುಕುವಿರಿ. ಆ ದಿವಸದಲ್ಲಿ ನಾ
ನು ನನ್ನ ತಂದೆಯಲ್ಲಿಯೂ, ನೀವು ನನ್ನಲ್ಲಿಯೂ, ನಾನು



೨೧ ನಿಮ್ಮಲ್ಲಿಯೂ ಇರುವದನ್ನು ತಿಳಿದು ಕೊಳ್ಳುವಿರಿ. ನನ್ನ ಕಟ್ಟ
ಳೆಗಳು ಉಂಟಾದವನಾಗಿ ಅವುಗಳನ್ನು ಕೈಕೊಳ್ಳುವವನೇ ನನ್ನ
ನ್ನು ಪ್ರೀತಿ ಮಾಡುವವನಾಗಿದ್ದಾನೆ; ನನ್ನನ್ನು ಪ್ರೀತಿ ಮಾಡುವ
ವನು ನನ್ನ ತಂದೆಗೆ ಪ್ರಿಯನಾಗಿರುವನು; ಮತ್ತು ನಾನು ಅವನ
ನ್ನು ಪ್ರೀತಿ ಮಾಡಿ, ಅವನಿಗೆ ಕಾಣಿಸಿ ಕೊಳ್ಳುವೆನು.

೨೨ ಆಗ ಇಸ್ಕರಿಯೋತೆಂಬವನಲ್ಲದ ಯೂದನು ಅವನಿಗೆ, ಕ
ರ್ತನೇ, ಯಾಕೆ ನೀನು ಲೋಕಕ್ಕೆ ಅಲ್ಲ, ನಮಗೆ ಕಾಣಿಸಿ ಕೊ
೨೩ ಳ್ಳುವಿ! ಅನ್ನಲು; ಯೇಸು ಪ್ರತ್ಯುತ್ತರವಾಗಿ ಅವನಿಗೆ ಹೇಳಿದನು,
ಯಾವನಾದರೂ ನನ್ನನ್ನು ಪ್ರೀತಿ ಮಾಡಿದರೆ, ನನ್ನ ವಾಕ್ಯವ
ನ್ನು ಕೈಕೊಳ್ಳುವನು; ಮತ್ತು ನನ್ನ ತಂದೆಯು ಅವನನ್ನು ಪ್ರೀತಿ
ಮಾಡುವನು; ಮತ್ತು ಅವನ ಬಳ್ಳಿಗೆ ಬಂದು, ಅವನ ಬಳ್ಳಿಯಲ್ಲಿ
೨೪ ವಾಸ ಮಾಡುವೆವು. ನನ್ನನ್ನು ಪ್ರೀತಿ ಮಾಡದವನು ನನ್ನ ವಾಕ್ಯ
ಗಳನ್ನು ಕೈಕೊಳ್ಳುವದಿಲ್ಲ; ಮತ್ತು ನೀವು ಕೇಳುವ ವಾಕ್ಯವು
ನನ್ನದಲ್ಲ, ನನ್ನನ್ನು ಕಳುಹಿಸಿದ ತಂದೆಯದೇ.

೨೫ ಇವುಗಳನ್ನು ನಿಮ್ಮ ಬಳ್ಳಿಯಲ್ಲಿ ಇದ್ದು, ನಿಮ್ಮ ಸಂಗಡ ಮಾ
೨೬ ತಾಡಿದ್ದೇನೆ; ಆದರೆ ತಂದೆಯು ನನ್ನ ಹೆಸರಿನಲ್ಲಿ ಕಳುಹಿಸುವ ಪರಿ
ಶುದ್ಧಾತ್ಮವೆಂಬ ಆದರಿಕನು ತಾನೇ ಎಲ್ಲವುಗಳನ್ನು ನಿಮಗೆ ಬೋ
ಧಿಸಿ, ನಾನು ನಿಮಗೆ ಹೇಳಿದವುಗಳನ್ನೆಲ್ಲಾ ನಿಮಗೆ ಜ್ಞಾಪಕ ಮಾ
೨೭ ಡುವನು. ಸಮಾಧಾನ ನಿಮಗೆ ಬಿಟ್ಟುತ್ತೇನೆ; ನನ್ನ ಸಮಾಧಾನ
ನಿಮಗೆ ಕೊಡುತ್ತೇನೆ. ಲೋಕವು ಕೊಡುವ ಪ್ರಕಾರ ನಾನು ನಿಮಗೆ
ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದೆ, ಅಂಜದೆ
೨೮ ಇರಲಿ. ಹೋಗಿ, ನಿಮ್ಮ ಬಳ್ಳಿಗೆ ಬರುತ್ತೇನೆಂದು, ನಾನು ನಿಮಗೆ
ಹೇಳಿದ್ದನ್ನು ಕೇಳಿದ್ದೀರಿ. ನೀವು ನನ್ನನ್ನು ಪ್ರೀತಿ ಮಾಡಿದ್ದರೆ,
ನಾನು ತಂದೆಯ ಬಳ್ಳಿಗೆ ಹೋಗುತ್ತೇನೆಂದು ಹೇಳಿದ್ದಕ್ಕೆ ಸಂ
ತೋಷ ಪಡುವಿರಿ; ಯಾಕಂದರೆ ನನ್ನ ತಂದೆ ನನಗಿಂತ ದೊಡ್ಡ
೨೯ ವನು. ಇದಲ್ಲದೆ ಅದು ಆಗುವಾಗ ನೀವು ನಂಬುವ ಹಾಗೆ, ಆಗು
೩೦ ವದಕ್ಕೆ ಮುಂಚೆ ಈಗ ನಿಮಗೆ ಹೇಳಿದ್ದೇನೆ. ಇನ್ನು ನಿಮ್ಮ ಸಂ
ಗಡ ಬಹಳ ಮಾತಾಡೆನು; ಯಾಕಂದರೆ ಈ ಲೋಕದ ಅಧಿಪತಿ
೩೧ ಬರುತ್ತಾನೆ, ಮತ್ತು ನನ್ನಲ್ಲಿ ಅವನಿಗೆ ಏನಾದರೂ ಇಲ್ಲ. ಆದರೆ
ತಂದೆಯನ್ನು ಪ್ರೀತಿ ಮಾಡುತ್ತೇನೆಂದು ಲೋಕವು ತಿಳಿಯುವ
ಹಾಗೆ, ತಂದೆ ನನಗೆ ಆಜ್ಞಾಪಿಸಿದ ಪ್ರಕಾರವೇ ಮಾಡುತ್ತೇನೆ. ಏಳಿರಿ,
ಇಲ್ಲಿಂದ ಹೋಗುವ.

## ೧೫. ಸಂಧಿ.

೧ ನಾನೇ ನಿಜವಾದ ದ್ರಾಕ್ಷೇ ಬಳ್ಳಿ; ನನ್ನ ತಂದೆ ಒಕ್ಕಲಿಗನು.
೨ ನನ್ನಲ್ಲಿ ಫಲ ಫಲಿಸದ ಕೊಂಬೆಗಳನ್ನೆಲ್ಲಾ ತೆಗೆದು ಹಾಕುತ್ತಾನೆ;
ಫಲ ಫಲಿಸುವವುಗಳನ್ನೆಲ್ಲಾ, ಹೆಚ್ಚಾಗಿ ಫಲ ಫಲಿಸುವ ಹಾಗೆ, ಶು
೩ ದ್ಧ ಮಾಡುತ್ತಾನೆ. ಈಗಲೇ ನೀವು, ನಾನು ನಿಮಗೆ ಹೇಳಿದ ಮಾ
೪ ತಿನಿಂದ ಶುದ್ಧರಾಗಿದ್ದೀರಿ. ನಾನು ನಿಮ್ಮಲ್ಲಿ ಇರುವ ಪ್ರಕಾರ ನೀ
ವು ನನ್ನಲ್ಲಿ ನೆಲೆಯಾಗಿರ್ರಿ. ಕೊಂಬೆಯು ದ್ರಾಕ್ಷೇ ಬಳ್ಳಿಯಲ್ಲಿ ನೆ
ಲೆಯಾಗಿದ್ದರೆ ಹೊರ್ತು, ತನ್ನಷ್ಟಕ್ಕೆ ತಾನೇ ಫಲ ಫಲಿಸಲಾರದ
ಪ್ರಕಾರ, ನೀವು ನನ್ನಲ್ಲಿ ನೆಲೆಯಾಗಿರದಿದ್ದರೆ, ಫಲ ಫಲಿಸಲಾರಿರಿ.
೫ ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿ
ಯೂ, ನಾನು ಅವನಲ್ಲಿಯೂ ನೆಲೆಯಾಗಿದ್ದರೆ, ಅವನು ಬಹಳ ಫಲ
ಫಲಿಸುತ್ತಾನೆ; ಯಾಕಂದರೆ ನಾನಿಲ್ಲದೆ ಏನೂ ಮಾಡಲಾರಿರಿ.
೬ ಯಾವನಾದರೂ ನನ್ನಲ್ಲಿ ನೆಲೆಯಾಗಿರದಿದ್ದರೆ, ಕೊಂಬೆಯ
ಹಾಗೆ ಹೊರಗೆ ಬಿಸಾಡಲ್ಪಟ್ಟು, ಒಣಗಿ ಹೋಗುವನು; ಮತ್ತು
ಅವುಗಳನ್ನು ಕೂಡಿಸಿ, ಬೊಂಕಿಯೊಳಗೆ ಹಾಕಿ, ಸುಡುತ್ತಾರೆ.
೭ ನೀವು ನನ್ನಲ್ಲಿಯೂ, ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆ
ಯಾಗಿದ್ದರೆ, ಬೇಕಾದದ್ದನ್ನು ಬೇಡಿ ಕೊಳ್ಳುವಾಗ, ನಿಮಗೆ ಆಗು
೮ ವದು. ನೀವು ಬಹಳ ಫಲಿಸುವದರಿಂದಲೇ ನನ್ನ ತಂದೆ ಮಹಿ
ಮೆ ಪಡುತ್ತಾನೆ. ಹೀಗೆ ನನ್ನ ಶಿಷ್ಯರಾಗುವಿರಿ. ತಂದೆಯು ನನ್ನ
ನ್ನು ಪ್ರೀತಿ ಮಾಡಿದ ಮೇರೆಗೆ ನಾನೂ ನಿಮ್ಮನ್ನು ಪ್ರೀತಿ ಮಾ
೯ ಡಿದ್ದೇನೆ. ನನ್ನ ಪ್ರೀತಿಯಲ್ಲಿ ನೆಲೆಯಾಗಿರ್ರಿ. ನಾನು ನನ್ನ ತಂದೆ
ಯ ಕಟ್ಟಳೆಗಳನ್ನು ಕೈಕೊಂಡು, ಅವನ ಪ್ರೀತಿಯಲ್ಲಿ ನೆಲೆಯಾ
ಗಿರುವ ಪ್ರಕಾರ, ನೀವು ನನ್ನ ಕಟ್ಟಳೆಗಳನ್ನು ಕೈಕೊಂಡರೆ, ನನ್ನ
ಪ್ರೀತಿಯಲ್ಲಿ ನೆಲೆಯಾಗಿರುವಿರಿ.

೧೧ ನನ್ನ ಸಂತೋಷವು ನಿಮ್ಮಲ್ಲಿ ನೆಲೆಯಾಗಿರುವ ಹಾಗೆಯೂ,
ನಿಮ್ಮ ಸಂತೋಷವು ಸಂಪೂರ್ಣವಾಗುವ ಹಾಗೆಯೂ, ಇವುಗ
೧೨ ಳನ್ನು ನಿಮಗೆ ಹೇಳಿದ್ದೇನೆ. ನಾನು ನಿಮ್ಮನ್ನು ಪ್ರೀತಿ ಮಾಡಿದ
ಮೇರೆಗೆ ನೀವು ಒಬ್ಬರನೊಬ್ಬರು ಪ್ರೀತಿ ಮಾಡ ಬೇಕೆಂಬುವ
೧೩ ದೇ ನನ್ನ ಆಜ್ಞೆಯಾಗಿದೆ. ಒಬ್ಬನು ತನ್ನ ಸ್ನೇಹಿತನಿಗೋಸ್ಕರ
ತನ್ನ ಪ್ರಾಣವನ್ನು ಕೊಡುವದಕ್ಕಿಂತ ದೊಡ್ಡ ಪ್ರೀತಿಯು
೧೪ ಯಾವನಿಗೂ ಇಲ್ಲ. ನಾನು ನಿಮಗೆ ಆಜ್ಞಾಪಿಸುವವುಗಳನ್ನು
೧೫ ನೀವು ಮಾಡಿದರೆ, ನನ್ನ ಸ್ನೇಹಿತರಾಗಿದ್ದೀರಿ. ಇನ್ನು ಮೇಲೆ
ನಿಮ್ಮನ್ನು ದಾಸರೆಂದು ನಾನು ಹೇಳುವದಿಲ್ಲ; ಯಾಕಂದರೆ ದಾ
ಸನು, ತನ್ನ ಯಜಮಾನನು ಏನು ಮಾಡುತ್ತಾನೆಂದು ಅರಿಯ
ನು; ಆದರೆ ನನ್ನ ತಂದೆಯ ಬಳ್ಳಿಯಲ್ಲಿ ನಾನು ಕೇಳಿದವುಗಳ
ನ್ನೆಲ್ಲಾ ನಿಮಗೆ ತಿಳಿಸಿದ್ದರಿಂದ, ನಿಮ್ಮನ್ನು ಸ್ನೇಹಿತರೆಂದು ಹೇಳಿ
೧೬ ದ್ದೇನೆ. ನೀವು ನನ್ನನ್ನು ಆದು ಕೊಳ್ಳಲಿಲ್ಲ; ಆದರೆ ನಾನು
ನಿಮ್ಮನ್ನು ಆದು ಕೊಂಡು, ನೀವು ಹೋಗಿ, ಫಲ ಫಲಿಸುವ ಹಾ
ಗೆಯೂ, ನಿಮ್ಮ ಫಲವು ನೆಲೆಯಾಗಿರುವ ಹಾಗೆಯೂ, ನಿಮ್ಮ
ನ್ನು ನೇಮಿಸಿದ್ದೇನೆ. ಆದಕಾರಣ ನೀವು ನನ್ನ ಹೆಸರಿನಲ್ಲಿ ತಂದೆ
೧೭ ಯನ್ನು ಏನು ಬೇಡಿದರೂ, ನಿಮಗೆ ಕೊಡುವನು. ನೀವು ಒಬ್ಬ
ರನೊಬ್ಬರು ಪ್ರೀತಿ ಮಾಡುವ ಹಾಗೆಯೇ, ಇವುಗಳನ್ನು ನಿಮಗೆ
ಆಜ್ಞಾಪಿಸುತ್ತೇನೆ.

೧೮ ಲೋಕವು ನಿಮ್ಮನ್ನು ಹಗೆ ಮಾಡಿದರೆ, ನಿಮಗೆ ಮುಂಚೆ ನನ್ನ
೧೯ ನ್ನು ಹಗೆ ಮಾಡಿತೆಂದು ತಿಳಿಕೊಳ್ಳಿರಿ. ನೀವು ಲೋಕದವರಾಗಿ
ದ್ದರೆ, ಲೋಕವು ಸ್ವಂತವಾದದ್ದನ್ನು ಸ್ನೇಹಿಸುವದು; ಆದರೆ
ನೀವು ಲೋಕದವರಲ್ಲದೆ ಇರುವದರಿಂದಲೂ, ನಾನು ಲೋಕ
ದೊಳಗಿಂದ ನಿಮ್ಮನ್ನು ಆದು ಕೊಂಡದರಿಂದಲೂ, ಲೋಕವು
೨೦ ನಿಮ್ಮನ್ನು ಹಗೆ ಮಾಡುತ್ತದೆ. ದಾಸನು ತನ್ನ ಯಜಮಾನನಿಗಿಂತ
ದೊಡ್ಡವನಲ್ಲವೆಂದು, ನಾನು ನಿಮಗೆ ಹೇಳಿದ ಮಾತು ಜ್ಞಾಪಕ
ಮಾಡಿ ಕೊಳ್ಳಿರಿ. ಅವರು ನನ್ನನ್ನು ಹಿಂಸಿಸಿದ್ದರೆ, ನಿಮ್ಮನ್ನು
ಹಿಂಸಿಸುವರು; ನನ್ನ ಮಾತು ಕೈಕೊಂಡಿದ್ದರೆ, ನಿಮ್ಮದನ್ನು ಕೈ
೨೧ ಕೊಳ್ಳುವರು. ಆದರೆ ಇವುಗಳನ್ನೆಲ್ಲಾ ನನ್ನ ಹೆಸರಿನ ನಿಮಿತ್ತ,
ನನ್ನನ್ನು ಕಳುಹಿಸಿದವನನ್ನು ಅರಿಯದ ಕಾರಣ, ನಿಮಗೆ ಮಾ
೨೨ ಡುವರು. ನಾನು ಬಂದು ಅವರಿಗೆ ಹೇಳಿದೆ ಇದ್ದರೆ, ಅವರಿಗೆ ಪಾ
ಪವು ಇದ್ದಿಲ್ಲ; ಆದರೆ ಈಗ ತಮ್ಮ ಪಾಪಕ್ಕೆ ಅವರಿಗೆ ನೆವಿಲ್ಲ.
೨೩ ನನ್ನನ್ನು ಹಗೆ ಮಾಡುವವನು ನನ್ನ ತಂದೆಯನ್ನು ಹಗೆ ಮಾ

೨೪ ರುತ್ತಾನೆ. ಬೇರೆ ಯಾವನಾದರೂ ಮಾಡದ ಕ್ರಿಯೆಗಳನ್ನು
ನಾನು ಅವರೊಳಗೆ ಮಾಡದೆ ಇದ್ದರೆ, ಅವರಿಗೆ ಪಾಪವು ಇದ್ದಿಲ್ಲ;
ಆದರೆ ಈಗ ಅವರು ನನ್ನನ್ನೂ ನನ್ನ ತಂದೆಯನ್ನೂ ನೋಡಿ,
೨೫ ಹಗೆ ಮಾಡಿದ್ದಾರೆ. ಆದಾಗ್ಯೂ ಸುಮ್ಮನೆ ನನ್ನನ್ನು ಹಗೆ ಮಾಡಿ
ದರೆಂದು, ಅವರ ನ್ಯಾಯ ಪ್ರಮಾಣದಲ್ಲಿ ಬರೆದಿರುವ ವಾಕ್ಯವು
ಈಡೇರುವ ಹಾಗೆ ಆಯಿತು.

೨೬ ಆದರೆ ನಾನು ತಂದೆಯ ಬಳ್ಳಿಯಿಂದ ನಿಮಗೆ ಕಳುಹಿಸುವಂ
ಥ, ತಂದೆಯ ಬಳ್ಳಿಯಿಂದ ಹೊರಡುವಂಥ, ಸತ್ಯದ ಆತ್ಮವೆಂಬ
ಆದರಿಕನು ಬಂದಾಗ, ಅವನೇ ನನ್ನನ್ನು ಕುರಿತು ಸಾಕ್ಷಿ ಕೊಡು
೨೭ ವನು. ಮತ್ತು ನೀವು ಸಹ, ಆದಿಯಿಂದ ನನ್ನ ಸಂಗಡ ಇದ್ದ
ಕಾರಣ, ಸಾಕ್ಷಿ ಕೊಡುವಿರಿ.

## ೧೬. ಸಂಧಿ.

೧ ನೀವು ಆತಂಕ ಪಡದ ಹಾಗೆ, ಇವುಗಳನ್ನು ನಿಮ್ಮ ಸಂಗಡ ಮಾ
೨ ತಾಡಿದ್ದೇನೆ. ನಿಮ್ಮನ್ನು ಸಭೆಯಿಂದ ಹೊರಗೆ ಹಾಕುವರು; ಮ
ತ್ತು ನಿಮ್ಮನ್ನು ಕೊಂದು ಹಾಕುವವರೆಲ್ಲರು, ದೇವರಿಗೆ ಸೇವೆ ಮಾ
೩ ಡುತ್ತೇವೆಂದು, ನೆನಸುವ ಘಳಿಗೆ ಬರುತ್ತದೆ. ಇವುಗಳನ್ನು ಅವ
ರು, ತಂದೆಯನ್ನಾದರೂ ನನ್ನನ್ನಾದರೂ ಅರಿಯದ ಕಾರಣ,
೪ ನಿಮಗೆ ಮಾಡುವರು. ಆದರೆ ಆ ಘಳಿಗೆ ಬರುವಾಗ, ನಾನು ನಿಮಗೆ
ಹೇಳಿದ್ದೇನೆಂದು ಅವುಗಳನ್ನು ನೀವು ಜ್ಞಾಪಕ ಮಾಡಿ ಕೊಳ್ಳುವ
ಹಾಗೆ, ಇವುಗಳನ್ನು ನಿಮ್ಮ ಸಂಗಡ ಮಾತಾಡಿದ್ದೇನೆ. ಆದಿಯಿಂದ
ಇವುಗಳನ್ನು ನಿಮಗೆ ಹೇಳಿಲ್ಲ; ಯಾಕಂದರೆ ನಿಮ್ಮ ಸಂಗಡ
೫ ಇದ್ದೆನು. ಆದರೆ ಈಗ ನನ್ನನ್ನು ಕಳುಹಿಸಿದವನ ಬಳ್ಳಿಗೆ ಹೋ
ಗುತ್ತೇನೆ; ಮತ್ತು ನಿಮ್ಮಲ್ಲಿ ಯಾವನಾದರೂ, ಎಲ್ಲಿ ಹೋಗುತ್ತೀ
೬ ಎಂದು, ನನ್ನನ್ನು ಕೇಳುವದಿಲ್ಲ. ಆದರೆ ಇವುಗಳನ್ನು ನಿಮಗೆ
ಹೇಳಿದ್ದರಿಂದ ದುಖ್ಖವು ನಿಮ್ಮ ಹೃದಯದಲ್ಲಿ ತುಂಬಿ ಕೊಂ
ಡಿದೆ.

೭ ಆದಾಗ್ಯೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ; ನಾನು
ಹೋಗುವದು ನಿಮಗೆ ಪ್ರಯೋಜನವಾಗಿದೆ; ಹ್ಯಾಗಂದರೆ,
ಹೋಗದಿದ್ದರೆ, ಆದರಿಕನು ನಿಮ್ಮ ಬಳ್ಳಿಗೆ ಬರುವದಿಲ್ಲ; ಆದರೆ
೮ ಹೋದರೆ, ಅವನನ್ನು ನಿಮ್ಮ ಬಳ್ಳಿಗೆ ಕಳುಹಿಸುವೆನು. ಮತ್ತು
ಅವನು ಬಂದು, ಪಾಪವನ್ನು ಕುರಿತೂ, ನೀತಿಯನ್ನು ಕುರಿತೂ,
ಅಜ್ಞೆನಿರ್ಣಯವನ್ನು ಕುರಿತೂ, ಲೋಕವನ್ನು ಶಿಕ್ಷಿಸುವನು.
೯ ಅವನು ನನ್ನಲ್ಲಿ ವಿಶ್ವಾಸಪಡದೆ ಇರುವದರಿಂದ ಪಾಪವನ್ನು ಕು
೧೦ ರಿತೂ, ನಾನು ನನ್ನ ತಂದೆಯ ಬಳ್ಳಿಗೆ ಹೋಗಿ, ನಿಮಗೆ ಇನ್ನು
೧೧ ಕಾಣಿಸದೆ ಇರುವದರಿಂದ ನೀತಿಯನ್ನು ಕುರಿತೂ, ಈ ಲೋಕದ
ಅಧಿಪತಿ ಅಜ್ಞೆ ನಿರ್ಣಯ ಪಟ್ಟದರಿಂದ ಅಜ್ಞೆ ನಿರ್ಣಯವನ್ನು
ಕುರಿತೂ, ಶಿಕ್ಷಿಸುವನು.

೧೨ ನಿಮಗೆ ಹೇಳುವದಕ್ಕೆ ಇನ್ನೂ ಬಹಳ ನನಗುಂಟು; ಆದರೆ
೧೩ ಈಗ ಸಹಿಸಲಾರಿರಿ. ಆದರೆ ಸತ್ಯದ ಆತ್ಮವೆಂಬವನು ಬಂದಾಗ,
ಅವನು ನಿಮ್ಮನ್ನು ಎಲ್ಲಾ ಸತ್ಯದಲ್ಲಿ ಶೇರಿಸುವನು; ಯಾಕಂದರೆ
ಅವನು ತನ್ನಿಂದ ಮಾತಾಡದೆ, ಕೇಳಿದವುಗಳನ್ನೇ ಮಾತಾಡು
೧೪ ವನು; ಮತ್ತು ಬರುವವುಗಳನ್ನು ನಿಮಗೆ ತಿಳಿಸುವನು. ಅವನು
ನನ್ನದರಲ್ಲಿ ತೆಗೆದು, ನಿಮಗೆ ತಿಳಿಸಿ, ನನ್ನನ್ನು ಮಹಿಮೆ ಪಡಿಸು
೧೫ ವನು. ತಂದೆಗೆ ಉಂಟಾದವುಗಳೆಲ್ಲಾ ನನ್ನವೇ. ಆದದರಿಂದ, ನನ್ನ
೧೬ ದರಲ್ಲಿ ತೆಗೆದು, ನಿಮಗೆ ತಿಳಿಸುವನೆಂದು ಹೇಳಿದ್ದೇನೆ. ಸ್ವಲ್ಪ
ಕಾಲವಾದ ಮೇಲೆ ನನ್ನನ್ನು ಕಾಣದೆ ಇರುವಿರಿ; ಇನ್ನು ಸ್ವಲ್ಪ
ಕಾಲವಾದ ಮೇಲೆ ನನ್ನನ್ನು ಕಾಣುವಿರಿ; ಯಾಕಂದರೆ ತಂದೆಯ
ಬಳ್ಳಿಗೆ ಹೋಗುತ್ತೇನೆ.

೧೭ ಆಗಲವನ ಶಿಷ್ಯರಲ್ಲಿ ಕೆಲವರು ತಮ್ಮಲ್ಲಿ ಹೇಳಿ ಕೊಂಡರು—
ಸ್ವಲ್ಪ ಕಾಲವಾದ ಮೇಲೆ ನನ್ನನ್ನು ಕಾಣದೆ ಇರುವಿರಿ; ಇನ್ನು
ಸ್ವಲ್ಪ ಕಾಲವಾದ ಮೇಲೆ ನನ್ನನ್ನು ಕಾಣುವಿರಿ; ಮತ್ತು, ನಾನು
ತಂದೆಯ ಬಳ್ಳಿಗೆ ಹೋಗುತ್ತೇನೆಂದು, ಅವನು ನಮಗೆ ಹೇಳುವ
೧೮ದೇನು? ಆದದರಿಂದ, ಅವನು ಸ್ವಲ್ಪ ಕಾಲವಂತ ಹೇಳುವದೇನು?
೧೯ ಏನು ಮಾತಾಡುತ್ತಾನೋ, ಅರಿಯೆವು, ಅಂದರು. ತನ್ನನ್ನು
ಕೇಳ ಬೇಕೆಂದಿದ್ದಾರೆಂದು ಯೇಸು ತಿಳಿದು, ಅವರಿಗೆ ಹೇಳ್ದೇ
ನಂದರೆ, ಸ್ವಲ್ಪ ಕಾಲವಾದ ಮೇಲೆ ನನ್ನನ್ನು ಕಾಣದೆ ಇರುವಿರಿ;
ಇನ್ನು ಸ್ವಲ್ಪ ಕಾಲವಾದ ಮೇಲೆ ನನ್ನನ್ನು ಕಾಣುವಿರಿ ಎಂದು,
ನಾನು ಹೇಳಿದ್ದಕ್ಕೋಸ್ಕರ ನಿಮ್ಮಲ್ಲಿ ವಿಚಾರಿಸಿ ಕೊಳ್ಳುತ್ತೀರೋ?
೨೦ ನಿಶ್ಚಯವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ಅತ್ತು,
ಗೋಳಿಡುವಿರಿ, ಆದರೆ ಲೋಕವು ಸಂತೋಷ ಪಡುವದು; ನೀ
ವು ದುಖ್ಖ ಪಡುವಿರಿ, ಆದರೆ ನಿಮ್ಮ ದುಖ್ಖವು ಸಂತೋಷವಾಗು
೨೧ ವದು. ಸ್ತ್ರಿಯು ಹೆರುವಾಗ ದುಖ್ಖ ಪಡುತ್ತಾಳೆ; ಯಾಕಂದರೆ
ಅವಳ ಘಳಿಗೆ ಬಂತು; ಆದರೆ ಕೂಸು ಹುಟ್ಟಿದ ಮೇಲೆ, ಒಬ್ಬ
ಮನುಷ್ಯನು ಲೋಕದಲ್ಲಿ ಹುಟ್ಟಿದನೆಂದು ಸಂತೋಷದಿಂದ
೨೨ ಇನ್ನು ಉಪದ್ರವನ್ನು ನೆನಸುವದಿಲ್ಲ. ಮತ್ತು ಈಗ ನಿಮಗೂ
ದುಖ್ಖ ಉಂಟು; ಆದರೆ ತಿರಿಗಿ ನಿಮ್ಮನ್ನು ನೋಡುವೆನು; ಆಗ
ನಿಮ್ಮ ಹೃದಯವು ಸಂತೋಷ ಪಡುವದು; ಮತ್ತು ನಿಮ್ಮ ಸಂ
೨೩ ತೋಷವನ್ನು ಯಾವನಾದರೂ ನಿಮ್ಮಿಂದ ತೆಗೆಯುವದಿಲ್ಲ. ಮ
ತ್ತು ಆ ದಿವಸದಲ್ಲಿ ನನ್ನನ್ನು ಏನೂ ಕೇಳದೆ ಇರುವಿರಿ. ನಿಶ್ಚಯ
ವಾಗಿ ನಿಶ್ಚಯವಾಗಿ ನಿಮಗೆ ಹೇಳುತ್ತೇನೆ, ನೀವು ನನ್ನ ಹೆಸರಿನ
ಲ್ಲಿ ತಂದೆಯನ್ನು ಬೇಡಿ ಕೊಳ್ಳುವದೆಲ್ಲಾ ನಿಮಗೆ ಕೊಡುವನು.
೨೪ ಈ ವರಿಗೂ ನೀವು ನನ್ನ ಹೆಸರಿನಲ್ಲಿ ಏನೂ ಬೇಡಿ ಕೊಳ್ಳಲಿಲ್ಲ;
ನಿಮ್ಮ ಸಂತೋಷವು ಸಂಪೂರ್ಣವಾಗಿರುವ ಹಾಗೆ ಬೇಡಿ ಕೊ
ಳ್ಳಿರಿ; ಆಗ ನಿಮಗೆ ಶಿಕ್ಕುವದು.

೨೫ ಇವುಗಳನ್ನು ಸಾಮ್ಯಗಳಿಂದ ನಿಮ್ಮ ಸಂಗಡ ಮಾತಾಡಿದ್ದೇ
ನೆ; ಆದರೆ ನಾನು ಇನ್ನು ಸಾಮ್ಯಗಳಿಂದ ನಿಮ್ಮ ಸಂಗಡ ಮಾ
ತಾಡದೆ, ತಂದೆಯನ್ನು ಕುರಿತು ನಿಮಗೆ ಸ್ಪಷ್ಟವಾಗಿ ತಿಳಿಸುವ
೨೬ ಘಳಿಗೆ ಬರುತ್ತದೆ. ಆ ದಿವಸದಲ್ಲಿ ನನ್ನ ಹೆಸರಿನಲ್ಲಿ ಬೇಡಿ ಕೊಳ್ಳುವಿ
ರಿ; ಮತ್ತು ನಿಮಗೋಸ್ಕರ ತಂದೆಯನ್ನು ಬೇಡಿ ಕೊಳ್ಳುವೆನೆಂದು
೨೭ ನಾನು ಹೇಳುವದಿಲ್ಲ; ಯಾಕಂದರೆ ನೀವು ನನ್ನನ್ನು ಸ್ನೇಹಿಸಿ,
ನಾನು ದೇವರ ಬಳ್ಳಿಯಿಂದ ಹೊರಟು ಬಂದೆನೆಂದು ವಿಶ್ವಾಸಿಸಿ
೨೮ದ್ದರಿಂದ, ತಂದೆಯು ತಾನೇ ನಿಮ್ಮನ್ನು ಸ್ನೇಹಿಸುತ್ತಾನೆ. ತಂದೆ
ಯ ಬಳ್ಳಿಯಿಂದ ಹೊರಟು, ಲೋಕಕ್ಕೆ ಬಂದೆನು; ಲೋಕವ
ನ್ನು ಬಿಟ್ಟು, ತಂದೆಯ ಬಳ್ಳಿಗೆ ತಿರಿಗಿ ಹೋಗುತ್ತೇನೆ.

೨೯ ಅವನ ಶಿಷ್ಯರು ಅವನಿಗೆ, ಇಗೋ, ಈಗ ಸ್ಪಷ್ಟವಾಗಿ ಮಾತಾ
ಡುತ್ತೀ, ಯಾವ ಸಾಮ್ಯವನ್ನು ಹೇಳುವದಿಲ್ಲ; ನಿನಗೆ ಎಲ್ಲಾ ತಿಳಿ
೩೦ ದಿದೆ, ಯಾವನು ನಿನ್ನನ್ನು ಕೇಳುವದಕ್ಕೆ ಅಗತ್ಯವಿಲ್ಲವೆಂದು,
ಈಗ ಬಲ್ಲೆವು; ಆದಕಾರಣ ನೀನು ದೇವರ ಬಳ್ಳಿಯಿಂದ ಬಂದಿ,
೩೧ ಎಂದು ವಿಶ್ವಾಸಿಸುತ್ತೇವೆ, ಅನ್ನಲು; ಯೇಸು ಅವರಿಗೆ ಪ್ರತ್ಯು



೩೨ ತ್ತರವಾಗಿ ಹೇಳಿದನು, ಈಗ ವಿಶ್ವಾಸಿಸುತ್ತೀರೋ? ಇಗೋ, ನೀ
ವು ಒಬ್ಬೊಬ್ಬರು ಸ್ವಸ್ಥಳಗಳಿಗೆ ಚದರಿ, ನನ್ನನ್ನು ಒಂಟಿ
ಯಾಗಿ ಬಿಟ್ಟು ಬಿಡುವ ಘಳಿಗೆ ಬರುತ್ತದೆ; ಈಗ ಬಂದದೆ. ಆದರೆ
ತಂದೆಯು ನನ್ನ ಸಂಗಡ ಇರುವದರಿಂದ, ನಾನು ಒಂಟಿಗನಲ್ಲ.
೩೩ ನನ್ನಲ್ಲಿ ನಿಮಗೆ ಸಮಾಧಾನ ಇರುವ ಹಾಗೆ, ಇವುಗಳನ್ನು ನಿಮಗೆ
ಹೇಳಿದ್ದೇನೆ. ಲೋಕದಲ್ಲಿ ನಿಮಗೆ ಉಪದ್ರವುಂಟು; ಆದರೆ ಧೈ
ರ್ಯವಾಗಿರ್ರಿ, ನಾನು ಲೋಕವನ್ನು ಜಯಿಸಿದ್ದೇನೆ.

## ೧೭. ಸಂಧಿ.

೧ ಇವುಗಳನ್ನು ಯೇಸು ಮಾತಾಡಿ, ತನ್ನ ಕಣ್ಣುಗಳನ್ನು ಆಕಾ
ಶಕ್ಕೆ ಎತ್ತಿ, ಹೇಳಿದ್ದೇನಂದರೆ, ತಂದೆಯೇ, ಘಳಿಗೆ ಬಂತು. ನಿನ್ನ
೨ ಮಗನು ನಿನ್ನನ್ನು ಮಹಿಮೆ ಪಡಿಸುವ ಹಾಗೆ, ನಿನ್ನ ಮಗನನ್ನು
ಮಹಿಮೆ ಪಡಿಸು. ನೀನು ಅವನಿಗೆ ಕೊಟ್ಟವರಿಗೆಲ್ಲಾ ಅವನು ನಿತ್ಯ
೩ ಜೀವವನ್ನು ಕೊಡುವ ಹಾಗೆ, ಅವನಿಗೆ ಮಾಂಸವೆಲ್ಲಾದರ ಮೇಲೆ
ಅಧಿಕಾರ ಕೊಟ್ಟ ಪ್ರಕಾರವೇ. ನಿತ್ಯ ಜೀವವು ಇದೇ, ಅವರು
ಒಬ್ಬನೇ ನಿಜವಾದ ದೇವರಾಗಿರುವ ನಿನ್ನನ್ನೂ ನೀನು ಕಳುಹಿ
೪ ಸಿದ ಯೇಸು ಕ್ರಿಸ್ತನನ್ನೂ ಅರಿಯುವದೇ. ನಾನು ಭೂಮಿಯ
ಮೇಲೆ ನಿನ್ನನ್ನು ಮಹಿಮೆ ಪಡಿಸಿದ್ದೇನೆ; ನಾನು ಮಾಡುವದಕ್ಕೆ
೫ ನೀನು ನನಗೆ ಕೊಟ್ಟ ಕ್ರಿಯೆಯನ್ನು ತೀರಿಸಿದ್ದೇನೆ. ಮತ್ತು ಈಗ,
ತಂದೆಯೇ, ಲೋಕವಿರುವದಕ್ಕಿಂತ ಮುಂಚೆ ನಿನ್ನ ಬಳ್ಳಿಯಲ್ಲಿ
ನನಗಿದ್ದ ಮಹಿಮೆಯಿಂದ, ನಿನ್ನ ಬಳ್ಳಿಯಲ್ಲಿ ನೀನು ನನ್ನನ್ನು
ಮಹಿಮೆ ಪಡಿಸು.

೬ ನೀನು ಲೋಕದೊಳಗಿಂದ ನನಗೆ ಕೊಟ್ಟ ಮನುಷ್ಯರಿಗೆ
ನಿನ್ನ ಹೆಸರನ್ನು ಪ್ರಕಟ ಮಾಡಿದ್ದೇನೆ. ನಿನ್ನವರಾಗಿದ್ದರು; ಅವ
ರನ್ನು ನನಗೆ ಕೊಟ್ಟಿ; ನಿನ್ನ ವಾಕ್ಯವನ್ನು ಕೈ ಕೊಂಡಿದ್ದಾರೆ.
೭ ನೀನು ನನಗೆ ಕೊಟ್ಟವುಗಳೆಲ್ಲಾ ನಿನ್ನಿಂದಲೇ ಅವೆ ಎಂದು, ಈಗ
೮ ತಿಳಿದು ಕೊಂಡಿದ್ದಾರೆ. ಯಾಕಂದರೆ ನೀನು ನನಗೆ ಕೊಟ್ಟ
ಮಾತುಗಳನ್ನು ಅವರಿಗೆ ಕೊಟ್ಟಿದ್ದೇನೆ; ಅವರು ಅವುಗಳನ್ನು ತ
ಕ್ಕೊಂಡು, ನಾನು ನಿನ್ನ ಬಳ್ಳಿಯಿಂದ ಬಂದೆನೆಂದು ನಿಜವಾಗಿ
೯ ತಿಳಿದು, ನೀನೇ ನನ್ನನ್ನು ಕಳುಹಿಸಿದಿ ಎಂದು ನಂಬಿದ್ದಾರೆ. ಅವ
ರಿಗೋಸ್ಕರ ನಾನು ಬೇಡಿ ಕೊಳ್ಳುತ್ತೇನೆ; ಲೋಕಕ್ಕೋಸ್ಕರ
ವಲ್ಲ; ನೀನು ನನಗೆ ಕೊಟ್ಟವರಿಗೋಸ್ಕರವೇ, ಅವರು ನಿನ್ನವರಾ
೧೦ ಗಿರುವದರಿಂದ, ಬೇಡಿ ಕೊಳ್ಳುತ್ತೇನೆ. ಮತ್ತು ನನ್ನವುಗಳೆಲ್ಲಾ
೧೧ ನಿನ್ನವುಗಳೇ, ನಿನ್ನವುಗಳು ನನ್ನವುಗಳೇ. ಮತ್ತು ಅವರಲ್ಲಿ ಮ
ಹಿಮೆ ಪಟ್ಟಿದ್ದೇನೆ. ನಾನು ಇನ್ನೂ ಲೋಕದಲ್ಲಿ ಇರುವದಿಲ್ಲ.
ಇವರು ಲೋಕದಲ್ಲಿ ಇರುತ್ತಾರೆ; ನಾನು ನಿನ್ನ ಬಳ್ಳಿಗೆ ಬರುತ್ತೇನೆ.
ಪರಿಶುದ್ಧ ತಂದೆಯೇ, ನೀನು ನನಗೆ ಕೊಟ್ಟವರನ್ನು, ಅವರು
ನಮ್ಮ ಹಾಗೆಯೇ ಒಂದಾಗಿರುವ ಹಾಗೆ, ನಿನ್ನ ಹೆಸರಿನಲ್ಲಿ ಕಾಪಾ
೧೨ ಡು. ಲೋಕದಲ್ಲಿ ಅವರ ಸಂಗಡ ಇದ್ದಾಗ, ನಾನು ನಿನ್ನ ಹೆಸರಿ
ನಲ್ಲಿ ಅವರನ್ನು ಕಾಪಾಡಿದೆನು. ನೀನು ನನಗೆ ಕೊಟ್ಟವರನ್ನು
ಕಾಪಾಡಿದ್ದೇನೆ. ಬರಹವು ಈಡೇರುವ ಹಾಗೆ, ನಾಶನದ ಮಗನೇ
೧೩ ಹೊರ್ತು, ಅವರಲ್ಲಿ ಮತ್ಯಾವನೂ ನಾಶವಾಗಲಿಲ್ಲ. ಆದರೆ ಈಗ
ನಿನ್ನ ಬಳ್ಳಿಗೆ ಬರುತ್ತೇನೆ; ಮತ್ತು ಅವರು ನನ್ನ ಸಂತೋಷವನ್ನು
ತಮ್ಮಲ್ಲಿ ಪೂರ್ಣಸಲ್ಪಟ್ಟದ್ದಾಗಿ ಹೊಂದುವ ಹಾಗೆ, ಇವುಗಳನ್ನು
ಲೋಕದಲ್ಲಿ ಮಾತಾಡುತ್ತೇನೆ.

೧೪ ನಾನು ನಿನ್ನ ವಾಕ್ಯವನ್ನು ಅವರಿಗೆ ಕೊಟ್ಟಿದ್ದೇನೆ; ಮತ್ತು
ನಾನು ಲೋಕದವನಲ್ಲದ ಪ್ರಕಾರ, ಅವರು ಲೋಕದವರಲ್ಲದೆ
೧೫ ಇರುವದರಿಂದ, ಲೋಕವು ಅವರನ್ನು ಹಗೆ ಮಾಡಿ ಅದೆ. ಲೋ
ಕದೊಳಗಿಂದ ಅವರನ್ನು ಎತ್ತಿ ತೆಗೆಯ ಬೇಕೆಂದಲ್ಲ, ಕೇಡಿಗೆ
ಅವರನ್ನು ತಪ್ಪಿಸಿ ಕಾಪಾಡ ಬೇಕೆಂದು ಬೇಡಿ ಕೊಳ್ಳುತ್ತೇನೆ.
೧೬ ನಾನು ಲೋಕದವನಲ್ಲದ ಪ್ರಕಾರ, ಅವರು ಲೋಕದವರಲ್ಲ.
೧೭ ನಿನ್ನ ಸತ್ಯದಿಂದ ಅವರನ್ನು ಪರಿಶುದ್ಧ ಮಾಡು; ನಿನ್ನ ವಾಕ್ಯವು
ಸತ್ಯವೇ. ನೀನು ನನ್ನನ್ನು ಲೋಕಕ್ಕೆ ಕಳುಹಿಸಿದ ಪ್ರಕಾರ,
೧೮ ನಾನು ಅವರನ್ನು ಲೋಕಕ್ಕೆ ಕಳುಹಿಸಿದ್ದೇನೆ. ಮತ್ತು ಅವರು
ಸತ್ಯದಿಂದ ಪರಿಶುದ್ಧ ಮಾಡಲ್ಪಟ್ಟವರಾಗಿರುವ ಹಾಗೆ, ನಾನು
ಅವರಿಗೋಸ್ಕರ ನನ್ನನ್ನು ಪರಿಶುದ್ಧ ಮಾಡಿ ಕೊಳ್ಳುತ್ತೇನೆ.

೨೦ ಆದರೆ ಇವರಿಗೋಸ್ಕರ ಮಾತ್ರವಲ್ಲ, ಇವರ ವಾಕ್ಯದ ಮೂ
ಲವಾಗಿ ನನ್ನಲ್ಲಿ ವಿಶ್ವಾಸವಿಡುವದಕ್ಕಿರುವವರಿಗೋಸ್ಕರ ಸಹ—
೨೧ ಅವರೆಲ್ಲರು ಒಂದಾಗ ಬೇಕೆಂದೂ, ನೀನು ನನ್ನನ್ನು ಕಳುಹಿಸಿದಿ
ಅಂತ ಲೋಕವು ನಂಬುವ ಹಾಗೆ, ತಂದೆಯಾದ ನೀನು ನನ್ನಲ್ಲಿ
ಯೂ, ನಾನು ನಿನ್ನಲ್ಲಿಯೂ ಇರುವ ಪ್ರಕಾರ, ಅವರು ಸಹ
೨೨ ನಮ್ಮಲ್ಲಿ ಒಂದಾಗ ಬೆಕೆಂದೂ—ಬೇಡಿ ಕೊಳ್ಳುತ್ತೇನೆ. ಮತ್ತು
ನಾವು ಒಂದಾಗಿರುವ ಪ್ರಕಾರ, ಅವರು ಒಂದಾಗಿರುವ ಹಾಗೆಯೂ,
೨೩ ನಾನು ಅವರಲ್ಲಿ, ನೀನು ನನ್ನಲ್ಲಿ ಇರಲಾಗಿ, ಅವರು ಒಂದಾಗಿ
ಸಂಪೂರ್ಣ ಮಾಡಲ್ಪಟ್ಟಿರುವ ಹಾಗೆಯೂ, ನೀನು ನನ್ನನ್ನು
ಕಳುಹಿಸಿದಿ ಎಂದೂ, ನನ್ನನ್ನು ಪ್ರೀತಿ ಮಾಡಿದ ಪ್ರಕಾರ ಅವರ
ನ್ನು ಪ್ರೀತಿ ಮಾಡಿದಿ ಎಂದೂ ಲೋಕವು ತಿಳಿಯುವ ಹಾಗೆ
ಯೂ, ನೀನು ನನಗೆ ಕೊಟ್ಟ ಮಹಿಮೆಯನ್ನು ನಾನು ಅವರಿಗೆ
ಕೊಟ್ಟಿದ್ದೇನೆ.

೨೪ ತಂದೆಯೇ, ನೀನು ನನಗೆ ಕೊಟ್ಟವರು, ನೀನು ಜಗದುತ್ಪತ್ತಿಗೆ
ಮುಂಚೆ ನನ್ನನ್ನು ಪ್ರೀತಿ ಮಾಡಿದ್ದರಿಂದ, ನನಗೆ ಕೊಟ್ಟ ನನ್ನ
ಮಹಿಮೆಯನ್ನು ನೋಡುವ ಹಾಗೆ, ನಾನು ಇರುವಲ್ಲಿ ಅವರು
೨೫ ಸಹ ನನ್ನ ಸಂಗಡ ಇರ ಬೇಕೆಂದು ಇಚ್ಛೈಸುತ್ತೇನೆ. ನೀತಿಯು
ಳ್ಳ ತಂದೆಯೇ, ಲೋಕವು ನಿನ್ನನ್ನು ಅರಿಯದು; ಆದರೆ ನಾ
ನು ನಿನ್ನನ್ನು ಅರಿಯುತ್ತೇನೆ; ಮತ್ತು ಇವರು, ನೀನೇ ನನ್ನನ್ನು
೨೬ ಕಳುಹಿಸಿದಿ ಎಂದು, ಅರಿತಿದ್ದಾರೆ. ಮತ್ತು ನೀನು ನನಗೆ ಮಾಡಿದ
ಪ್ರೀತಿಯು ಅವರಲ್ಲಿ ಇರುವ ಹಾಗೆಯೂ, ನಾನು ಅವರಲ್ಲಿ ಇರು
ವ ಹಾಗೆಯೂ, ನಿನ್ನ ಹೆಸರನ್ನು ಅವರಿಗೆ ತಿಳಿಸಿದ್ದೇನೆ, ಮತ್ತೂ
ತಿಳಿಸುವೆನು.

## ೧೮. ಸಂಧಿ.

೧ ಇವುಗಳನ್ನು ಹೇಳಿದ ಮೇಲೆ, ಯೇಸು ತನ್ನ ಶಿಷ್ಯರ ಸಂ
ಗಡ ಕೆದ್ರೊನ್ ಹಳ್ಳದ ಆಚೆಗೆ ಹೋಗಿ, ಅಲ್ಲಿ ಇದ್ದ ತೋಟದೊ
೨ ಳಗೆ ಅವನೂ ಅವನ ಶಿಷ್ಯರು ಪ್ರವೇಶಿಸಿದರು. ಆದರೆ ಯೇ
ಸು ಅನೇಕ ಸಾರಿ ತನ್ನ ಶಿಷ್ಯರ ಸಂಗಡ ಅಲ್ಲಿ ಕೂಡಿ ಕೊಂಡ
ದರಿಂದ, ಆ ಸ್ಥಳವು ಅವನನ್ನು ಒಪ್ಪಿಸಿ ಕೊಟ್ಟ ಯೂದನಿಗೂ
೩ ತಿಳಿದಿತ್ತು. ಹೀಗಿರುವದರಿಂದ ಯೂದನು, ಜನರ ಗುಂಪನ್ನೂ,
ಪ್ರಧಾನ ಯಾಜಕರ, ಫರಿಸಾಯರ ಉಳ್ಳಗದವರನ್ನೂ, ತೆಗೆದು
ಕೊಂಡು, ಬೆಳ್ಳಕುಗಳೂ ದೀಪಗಳೂ ಆಯುಧಗಳೂ ಸಹಿತವಾ
ಗಿ ಅಲ್ಲಿಗೆ ಬಂದನು.

೪ ಆಗ ಯೇಸು, ತನ್ನ ಮೇಲೆ ಬರುವುಗಳನ್ನೆಲ್ಲಾ ತಿಳಿದು,
ಹೊರಗೆ ಹೋಗಿ, ಅವರಿಗೆ, ಯಾರನ್ನು ಹುಡುಕುತ್ತೀರಿ? ಅಂದ
ನು. ಅವನಿಗೆ ಪ್ರತ್ಯುತ್ತರವಾಗಿ, ನಜರೇಥಿನವನಾದ ಯೇಸುವ
೫ ನ್ನು, ಅಂದರು. ಯೇಸು ಅವರಿಗೆ, ನಾನೇ, ಅಂದನು. ಮತ್ತು
ಅವನನ್ನು ಒಪ್ಪಿಸಿ ಕೊಟ್ಟ ಯೂದನು ಸಹ ಅವರ ಸಂಗಡ
೬ ನಿಂತಿದ್ದನು. ಅವನವರಿಗೆ, ನಾನೇ, ಅಂದಾಗ, ಅವರು ಹಿಂದಕ್ಕೆ
೭ ಹೋಗಿ, ನೆಲಕ್ಕೆ ಬಿದ್ದರು. ತಿರಿಗಿ ಅವರಿಗೆ, ಯಾರನ್ನು ಹುಡುಕು
ತ್ತೀರಿ? ಅಂದಾಗ; ನಜರೇಥಿನವನಾದ ಯೇಸುವನ್ನು, ಅಂದರು.
೮ ನೀನು ನನಗೆ ಕೊಟ್ಟವರಲ್ಲಿ ಒಬ್ಬನನ್ನು ಕಳಕೊಳ್ಳಲಿಲ್ಲವೆಂದು
ಹೇಳಿದ ಮಾತು ಈಡೇರುವ ಹಾಗೆ, ಯೇಸು, ನಾನೇ ಎಂದು
ನಿಮಗೆ ಹೇಳಿದ್ದೇನೆ; ಆದದರಿಂದ ನನ್ನನ್ನು ಹುಡುಕಿದರೆ, ಇವರ
ನ್ನು ಹೋಗ ಗೊಡಿಸಿರೆಂದು, ಉತ್ತರ ಕೊಟ್ಟನು.

೧೦ ಆಗ ಸೀಮೋನೆಂಬ ಪೇತ್ರನು ಕತ್ತಿ ಉಂಟಾದವನಾಗಿ, ಅದ
ನ್ನು ಹಿರಿದು, ಪ್ರಧಾನ ಯಾಜಕನ ದಾಸನನ್ನು ಹೊಡೆದು, ಅ
೧೧ ವನ ಬಲ ಕಿವಿಯನ್ನು ಹರಿಯ ಕಡಿದನು. ಆ ದಾಸನ ಹೆಸರು
ಮಲ್ಕನು. ಆಗ ಯೇಸು ಪೇತ್ರನಿಗೆ, ನಿನ್ನ ಕತ್ತಿಯನ್ನು ಒಳ
ಯಲ್ಲಿ ಹಾಕು. ತಂದೆ ನನಗೆ ಕೊಟ್ಟ ಪಾತ್ರೆಯಲ್ಲಿ ನಾನು ಕುಡಿ
ಯ ಬೇಡವೋ? ಅಂದನು.

೧೨ ಆ ಮೇಲೆ ಆ ಜನರ ಗುಂಪೂ, ಸಹಸ್ರಾಧಿಪತಿಯೂ, ಯೆ
೧೩ ಹೂದ್ಯರ ಉಳ್ಳಿಗದವರೂ, ಯೇಸುವನ್ನು ಹಿಡಿದು, ಅವನನ್ನು
ಕಟ್ಟಿ, ಮೊದಲು ಅನ್ನನ ಬಳ್ಳಿಗೆ ಅವನನ್ನು ತಕ್ಕೊಂಡು ಹೋದ
ರು; ಯಾಕಂದರೆ ಇವನು ಆ ವರುಷದ ಪ್ರಧಾನ ಯಾಜಕನಾದ
೧೪ ಕಾಯಫನಿಗೆ ಮಾವನಾಗಿದ್ದನು. ಆ ಕಾಯಫನು, ಜನರಿಗೋ
ಸ್ಕರ ಒಬ್ಬ ಮನುಷ್ಯನು ಸಂಹರಿಸಲ್ಪಡುವದು ಪ್ರಯೋಜನ
ವಾಗಿದೆ ಎಂದು, ಯೆಹೂದ್ಯರಿಗೆ ಆಲೋಚನೆ ಹೇಳಿದವನೇ.

೧೫ ಇದಲ್ಲದೆ ಸೀಮೋನ್ ಪೇತ್ರನೂ, ಆ ಬೇರೆ ಶಿಷ್ಯನೂ
ಯೇಸುವನ್ನು ಹಿಂಬಾಲಿಸಿದರು. ಆ ಶಿಷ್ಯನ ಗುರುತು ಪ್ರಧಾನ
ಯಾಜಕನಿಗೆ ತಿಳಿದಿರುವದರಿಂದ, ಯೇಸುವಿನ ಸಂಗಡ ಪ್ರಧಾನ
೧೬ ಯಾಜಕನ ಅಂಗಳದಲ್ಲಿ ಪ್ರವೇಶಿಸಿದನು. ಆದರೆ ಪೇತ್ರನು ಬಾ
ಗಲಿನ ಬಳ್ಳಿಯಲ್ಲಿ ಹೊರಗೆ ನಿಂತಿದ್ದನು. ಹೀಗಿರಲಾಗಿ, ಪ್ರಧಾನ
ಯಾಜಕನಿಗೆ ಗುರುತು ತಿಳಿದವನಾದ ಆ ಬೇರೆ ಶಿಷ್ಯನು ಹೊರ
ಗೆ ಹೋಗಿ, ಬಾಗಲು ಕಾಯುವವಳ ಸಂಗಡ ಮಾತಾಡಿ, ಪೇತ್ರನ
೧೭ ನ್ನು ಒಳಗೆ ಕರಕೊಂಡು ಬಂದನು. ಬಾಗಲು ಕಾಯುವವಳು ಪೇ
ತ್ರನಿಗೆ, ನೀನು ಸಹ ಈ ಮನುಷ್ಯನ ಶಿಷ್ಯರಲ್ಲಿ ಸೇರಿದವನಲ್ಲ
೧೮ ವೋ? ಅಂದಾಗ; ಅವನು, ಅಲ್ಲ, ಅಂದನು. ಆದರೆ ದಾಸರೂ,
ಉಳ್ಳಿಗದವರೂ, ಛಳಿ ಆದದರಿಂದ, ಇದ್ದಲಿನ ಬೆಂಕಿಯನ್ನು
ಹೊತ್ತಿಸಿ, ಛಳಿ ಕಾಸಿಕೊಳ್ಳುತ್ತಾ ನಿಂತಿರುವಾಗ, ಪೇತ್ರನು ಅವರ
ಸಂಗಡ ನಿಂತು ಛಳಿ ಕಾಸಿ ಕೊಳ್ಳುತ್ತಿದ್ದನು.

೧೯ ಹೀಗಿರುವಾಗ್ಯೆ ಪ್ರಧಾನ ಯಾಜಕನು, ಅವನ ಶಿಷ್ಯರನ್ನು
ಕುರಿತೂ, ಅವನ ಬೋಧನೆಯನ್ನು ಕುರಿತೂ, ಯೇಸುವನ್ನು ವಿ
೨೦ ಚಾರಿಸಿದಾಗ, ಯೇಸು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂ
ದರೆ, ನಾನು ಬಹಿರಂಗವಾಗಿ, ಲೋಕದ ಮುಂದೆ ಮಾತಾಡಿದ್ದೇನೆ;
ಯೆಹೂದ್ಯರು ಯಾವಾಗಲೂ ಕೂಡಿ ಬರುವ ಸಭೆಮನೆಯಲ್ಲಿ
ಯೂ, ದೇವಾಲಯದಲ್ಲಿಯೂ, ನಾನು ಯಾವಾಗಲೂ ಬೋ
೨೧ ಧಿಸಿದ್ದೇನೆ; ಗುಪ್ತವಾಗಿ ಏನೂ ಮಾತಾಡಲಿಲ್ಲ. ಯಾಕೆ ನನ್ನನ್ನು
ವಿಚಾರಿಸುತ್ತೀ? ಕೇಳಿದವರನ್ನು, ನಾನು ಅವರ ಸಂಗಡ ಮಾತಾ
ಡಿದ್ದು ಏನೆಂದು ವಿಚಾರಿಸು; ಇಗೋ, ನಾನು ಹೇಳಿದ್ದನ್ನು ಅವರು
೨೨ ಬಲರು. ಅವನು ಇದನ್ನು ಹೇಳಲಾಗಿ, ಉಳ್ಳಿಗದವರಲ್ಲಿ ಹತ್ತರ
ನಿಂತ ಒಬ್ಬನು ಯೇಸುವಿಗೆ ಬೆಟ್ಟು ಹೊಡೆದು, ಪ್ರಧಾನ ಯಾ
೨೩ ಜಕನಿಗೆ, ಹೀಗೆ ಉತ್ತರ ಕೊಡುತ್ತೀಯೋ? ಅಂದನು. ಯೇಸು
ಅವನಿಗೆ ಪ್ರತ್ಯುತ್ತರವಾಗಿ, ನಾನು ಕೆಟ್ಟದ್ದನ್ನು ಮಾತಾಡಿದ್ದರೆ,
ಕೆಟ್ಟದರ ವಿಷಯವಾಗಿ ಸಾಕ್ಷಿ ಕೊಡು; ಒಳ್ಳೇದನ್ನು ಮಾತಾ
೨೪ ಡಿದ್ದರೆ, ಯಾಕೆ ನನ್ನನ್ನು ಹೊಡೆಯುತ್ತೀ? ಅಂದನು. ಅನ್ನನು
ಅವನನ್ನು ಕಟ್ಟಿದವನಾಗಿ ಪ್ರಧಾನ ಯಾಜಕನಾದ ಕಾಯಫನ
ಬಳ್ಳಿಗೆ ಕಳ್ಳುಹಿಸಿ ಇದ್ದನು.

೨೫ ಆಗ ಸೀಮೋನ್ ಪೇತ್ರನು ನಿಂತು, ಛಳಿ ಕಾಸಿ ಕೊಳ್ಳುತ್ತಿರ
ಲಾಗಿ, ಅವನಿಗೆ, ನೀನು ಸಹ ಅವನ ಶಿಷ್ಯರಲ್ಲಿ ಒಬ್ಬನಲ್ಲವೋ?
೨೬ ಎಂದು ಹೇಳಿದರು. ಅವನು ಅಲ್ಲವೆಂದು, ಬೊಂಕಿದನು. ಪೇತ್ರನು
ಕಿವಿ ಕಡಿದು ಹಾಕಿದವನ ನೆಂಟನಾಗಿಯೂ, ಪ್ರಧಾನ ಯಾಜಕನ
ದಾಸನಾಗಿಯೂ ಇರುವ ಒಬ್ಬನು, ನಿನ್ನನ್ನು ತೋಟದಲ್ಲಿ ಅವ
೨೭ ನೊಂದಿಗೆ ನಾನು ನೋಡಲಿಲ್ಲವೋ? ಅಂದಾಗ; ಪೇತ್ರನು ತಿರಿಗಿ
ಬೊಂಕಿದನು. ಸಂಗಡಲೇ ಕೋಳಿ ಕೂಗಿತು.

೨೮ ತರುವಾಯ ಹೊತಾರೆಯಾಗಿ, ಯೇಸುವನ್ನು ಕಾಯಫನ
ಬಳ್ಳಿಯಿಂದ ನ್ಯಾಯಸ್ಥಾನಕ್ಕೆ ತಕ್ಕೊಂಡು ಹೋದರು. ಆದರೆ
ಅವರು ಕಳಂಕವಾಗದೆ ಪಸ್ಕವನ್ನು ತಿನ್ನುವ ಹಾಗೆ, ನ್ಯಾಯ
೨೯ ಸ್ಥಾನದಲ್ಲಿ ಪ್ರವೇಶಿಸಲಿಲ್ಲ. ಆದದರಿಂದ ಪಿಲಾತನು ಅವರ ಬಳ್ಳಿಗೆ
ಹೊರಗೆ ಬಂದು, ಈ ಮನುಷ್ಯನಿಗೆ ವಿರೋಧವಾಗಿ ಏನು ದೂ
೩೦ ರನ್ನು ತರುತ್ತೀರಿ? ಅಂದಾಗ; ಅವನಿಗೆ ಪ್ರತ್ಯುತ್ತರವಾಗಿ, ಇವನು
ಅಕ್ರಮಕಾರನಲ್ಲದಿದ್ದರೆ, ನಾವು ಅವನನ್ನು ನಿನಗೆ ಒಪ್ಪಿಸಿರುವ
೩೧ ದಿಲ್ಲ, ಅಂದರು. ಆಗ ಪಿಲಾತನು ಅವರಿಗೆ, ನೀವೇ ಅವನನ್ನು ತ
ಕ್ಕೊಂಡು, ನಿಮ್ಮ ನ್ಯಾಯಪ್ರಮಾಣದ ಪ್ರಕಾರ ಅವನಿಗೆ ನ್ಯಾ
ಯ ತೀರಿಸಿರಿ, ಅಂದಾಗ; ಯೆಹೂದ್ಯರು ಅವನಿಗೆ, ನಾವು ಯಾ
೩೨ ವನನ್ನಾದರೂ ಕೊಂದು ಹಾಕ ಕೂಡದು, ಅಂದರು. ಹೀಗೆ ಯೇ
ಸು, ತಾನು ಎಂಥ ಮರಣದಿಂದ ಸಾಯ ಬೇಕೆಂದು ಸೂಚಿಸಿ
ಹೇಳಿದ ಮಾತು ಈಡೇರಿತು.

೩೩ ಆಗ ಪಿಲಾತನು ತಿರಿಗಿ ನ್ಯಾಯಸ್ಥಾನದಲ್ಲಿ ಪ್ರವೇಶಿಸಿ, ಯೇ
ಸುವನ್ನು ಕರೆದು, ಅವನಿಗೆ, ನೀನು ಯೆಹೂದ್ಯರ ಅರಸನೋ?
೩೪ ಅನ್ನಲು; ಯೇಸು ಅವನಿಗೆ ಪ್ರತ್ಯುತ್ತರವಾಗಿ, ನಿನ್ನಷ್ಟಕ್ಕೆ ನೀ
ನೇ ಇದನ್ನು ಹೇಳುತ್ತೀಯೋ? ಬೇರೆಯೊಬ್ಬರು ನನ್ನ ವಿಷಯ
೩೫ ವಾಗಿ ನಿನಗೆ ಹೇಳಿದ್ದಾರೋ? ಅನ್ನಲು; ಪಿಲಾತನು, ನಾನು ಯೆ
ಹೂದ್ಯನೋ? ನಿನ್ನ ಜನಾಂಗವೂ ಪ್ರಧಾನ ಯಾಜಕರೂ ನಿನ್ನ
ನ್ನು ನನಗೆ ಒಪ್ಪಿಸಿದ್ದಾರೆ? ಏನು ಮಾಡಿದ್ದೀ? ಎಂದು ಉತ್ತರ
೩೬ ಕೊಟ್ಟನು. ಯೇಸು ಪ್ರತ್ಯುತ್ತರವಾಗಿ ಹೇಳಿದನು, ನನ್ನ ರಾ
ಜ್ಯವು ಈ ಲೋಕದ್ದಲ್ಲ; ನನ್ನ ರಾಜ್ಯವು ಈ ಲೋಕದ್ದಾಗಿದ್ದ
ರೆ, ನಾನು ಯೆಹೂದ್ಯರಿಗೆ ಒಪ್ಪಿಸಲ್ಪಡದ ಹಾಗೆ, ನನ್ನ ಉಳ್ಳಿ
ಗದವರು ಯುದ್ಧ ಮಾಡುವರು. ಆದರೆ ಈಗ ನನ್ನ ರಾಜ್ಯವು
೩೭ ಇಲ್ಲಿಯದ್ದಲ್ಲ. ಪಿಲಾತನು ಅವನಿಗೆ, ಹಾಗಾದರೆ ನೀನು ಅರಸ
ನೋ? ಅನ್ನಲು; ಯೇಸು ಪ್ರತ್ಯುತ್ತರವಾಗಿ ಹೇಳಿದನು, ನಾನು
ಅರಸನಾಗಿದ್ದೇನೆಂದು ನೀನೇ ಹೇಳುತ್ತೀ. ನಾನು ಸತ್ಯಕ್ಕೆ ಸಾಕ್ಷಿ
ಕೊಡುವದಕ್ಕೋಸ್ಕರವೇ ಹುಟ್ಟಿ, ಅದಕ್ಕೋಸ್ಕರವೇ ಲೋ
ಕಕ್ಕೆ ಬಂದಿದ್ದೇನೆ. ಸತ್ಯದವಕೆಲ್ಲರೂ ನನ್ನ ಶಬ್ದವನ್ನು ಕೇಳುತ್ತಾ
ಕೆ. ಪಿಲಾತನು ಅವನಿಗೆ, ಸತ್ಯವಂದರೇನು! ಅಂದನು.

೩೮ ಇದನ್ನು ಹೇಳಿ, ತಿರಿಗಿ ಯೆಹೂದ್ಯರ ಬಳ್ಳಿಗೆ ಹೊರಗೆ ಬಂ



ದು, ಅವರಿಗೆ ಹೇಳಿದ್ದೇನಂದರೆ, ನಾನು ಅವನಲ್ಲಿ ಯಾವ ಅಪರಾ
೩೯ ಧವನ್ನೂ ಕಾಣೆನು. ಆದರೆ ಪಸ್ಕದಲ್ಲಿ ನಿಮಗೆ ಒಬ್ಬನನ್ನು
ಬಿಟ್ಟು ಕೊಡುವ ಮರ್ಯಾದೆ ನಿಮಗುಂಟು; ಆದದರಿಂದ ಯೆ
೪೦ ಹೂದ್ಯರ ಅರಸನನ್ನು ನಿಮಗೆ ಬಿಟ್ಟು ಕೊಡ ಬೇಕೋ? ಆಗ
ತಿರಿಗಿ ಎಲ್ಲರು, ಇವನಲ್ಲ, ಬರಬ್ಬನನ್ನೋ, ಎಂದು ಕೂಗಿದರು.
ಬರಬ್ಬನು ಕಳ್ಳನಾಗಿದ್ದನು.

## ೧೯. ಸಂಧಿ.

೧ ಆಗ ಪಿಲಾತನು ಯೇಸುವನ್ನು ತಕ್ಕೊಂಡು, ಬಾರುಗಳಿಂದ
೨ ಹೊಡಿಸಿದನು. ಮತ್ತು ರಾಣುವೆಯವರು ಮುಳ್ಳುಗಳಿಂದ ಕಿರೀಟ
ವನ್ನು ಹೆಣೆದು, ಅವನ ತಲೆಯ ಮೇಲೆ ಇಟ್ಟು, ರಕ್ತಾಂಬರವ
೩ ನ್ನು ಅವನಿಗೆ ಹೊದ್ದಿಸಿ, ಯೆಹೂದ್ಯರ ಅರಸನೇ, ಶುಭವಾಗಲಿ!
ಎಂದು ಹೇಳಿ, ಅವನಿಗೆ ಬೆಟ್ಟು ಹೊಡೆದರು.

೪ ಆಗ ಪಿಲಾತನು ತಿರಿಗಿ ಹೊರಗೆ ಬಂದು, ಅವರಿಗೆ ಹೇಳಿದ್ದೇ
ನಂದರೆ, ಇಗೋ, ನಾನು ಅವನಲ್ಲಿ ಯಾವ ಅಪರಾಧವನ್ನೂ
ಕಾಣೆನೆಂದು, ನೀವು ತಿಳುಕೊಳ್ಳುವ ಹಾಗೆ, ಅವನನ್ನು ನಿಮಗೋ
೫ ಸ್ಕರ ಹೊರಗೆ ತರುತ್ತೇನೆ. ಆಗ ಯೇಸು ಮುಳ್ಳಿನ ಕಿರೀಟವ
ನ್ನೂ, ರಕ್ತಾಂಬರವನ್ನೂ ಧರಿಸಿ ಕೊಂಡವನಾಗಿ ಹೊರಗೆ ಬರಲು,
ಪಿಲಾತನು ಅವರಿಗೆ, ಇಗೋ, ಈ ಮನುಷ್ಯನು! ಅಂದನು.
೬ ಪ್ರಧಾನ ಯಾಜಕರೂ ಉಳ್ಳಿಗದವರೂ ಅವನನ್ನು ನೋಡಿದಾಗ,
ಶಿಲುಬೆಗೆ ಹಾಕು, ಶಿಲುಬೆಗೆ ಹಾಕು, ಎಂದು ಕೂಗಿದರು. ಪಿಲಾತ
ನು ಅವರಿಗೆ, ನೀವೇ ಅವನನ್ನು ತಕ್ಕೊಂಡು, ಶಿಲುಬೆಗೆ ಹಾಕಿರಿ;
ಯಾಕಂದರೆ ನಾನು ಅವನಲ್ಲಿ ಏನೂ ಅಪರಾಧ ಕಾಣೆನು, ಅಂದ
೭ ನು. ಯೆಹೂದ್ಯರು ಅವನಿಗೆ ಪ್ರತ್ಯುತ್ತರವಾಗಿ, ನಮಗೆ ನ್ಯಾ
ಯಪ್ರಮಾಣ ಉಂಟು; ನಮ್ಮ ನ್ಯಾಯಪ್ರಮಾಣದ ಪ್ರಕಾರ
ಅವನು ಸಾಯ ಬೇಕು, ಯಾಕಂದರೆ ತನ್ನನ್ನು ದೇವರ ಮಗ
ನೆಂದು ಮಾಡಿ ಕೊಂಡಿದ್ದಾನೆ, ಅಂದರು.

೮ ಪಿಲಾತನು ಈ ಮಾತು ಕೇಳಿ, ಇನ್ನೂ ಭಯ ಪಟ್ಟು, ತಿರಿಗಿ
೯ ನ್ಯಾಯಸ್ಥಾನದಲ್ಲಿ ಪ್ರವೇಶಿಸಿ, ಯೇಸುವಿಗೆ, ನೀನು ಎಲ್ಲಿಂದ
೧೦ ಬಂದವನು? ಅಂದನು. ಆದರೆ ಯೇಸು ಅವನಿಗೆ ಉತ್ತರ ಕೊಡ
ಲಿಲ್ಲ. ಹೀಗಿರುವಾಗ ಪಿಲಾತನು ಅವನಿಗೆ, ನೀನು ನನ್ನ ಸಂಗಡ
ಮಾತಾಡುವದಿಲ್ಲವೋ? ನಿನ್ನನ್ನು ಶಿಲುಬೆಗೆ ಹಾಕಿಸುವದಕ್ಕೆ ಅಧಿ
ಕಾರವೂ, ನಿನ್ನನ್ನು ಬಿಡಿಸುವದಕ್ಕೆ ಅಧಿಕಾರವೂ ನನಗುಂಟೆಂದು
೧೧ ತಿಳಿಯುವದಿಲ್ಲವೋ? ಅಂದನು. ಯೇಸು ಪ್ರತ್ಯುತ್ತರವಾಗಿ ಹೇ
ಳಿದನು, ನಿನಗೆ ಮೇಲಿನಿಂದ ಕೊಡಲ್ಪಟ್ಟಿದ್ದರೆ ಹೊರ್ತು, ನನ್ನ
ಮೇಲೆ ನಿನಗೆ ಏನೂ ಅಧಿಕಾರವಿರದು; ಆದದರಿಂದ ನಿನಗೆ ನನ್ನ
ನ್ನು ಒಪ್ಪಿಸಿದವನಿಗೆ ಹೆಚ್ಚಾದ ಪಾಪ ಉಂಟು.

೧೨ ಆಗಿನಿಂದ ಪಿಲಾತನು ಅವನನ್ನು ಬಿಡಿಸ ಹುಡಿಕಿದನು; ಆದರೆ
ಯೆಹೂದ್ಯರು, ಇವನನ್ನು ಬಿಡಿಸಿದರೆ, ನೀನು ಕೈಸರನ ಸ್ನೇ
ಹಿತನಲ್ಲ; ತನ್ನನ್ನು ಅರಸನಾಗ ಮಾಡಿ ಕೊಳ್ಳುವ ಒಬ್ಬೊಬ್ಬ
೧೩ ನು ಕೈಸರನಿಗೆ ವಿರೋಧವಾಗಿ ಮಾತಾಡುತ್ತಾನೆಂದು ಕೂಗಿ ಹೇ
ಳಿದರು. ಪಿಲಾತನು ಈ ಮಾತು ಕೇಳಿ, ಯೇಸುವನ್ನು ಹೊರಗೆ
ಕರಕೊಂಡು ಹೋಗಿ, ಕಲ್ಲು ಕಟ್ಟಸೆ ಎಂದೂ, ಇಬ್ರೀಯ ಮಾತಿ
೧೪ ನಲ್ಲಿ ಗಬ್ಬತವೆಂದೂ, ಕರೆಯಲ್ಪಟ್ಟ ಸ್ಥಳದಲ್ಲಿ ಪೀಠದ ಮೇಲೆ
ಕೂತು ಕೊಂಡನು. ಪಸ್ಕಕ್ಕೆ ಸಿದ್ಧ ಮಾಡುವ ದಿವಸ ಹೆಚ್ಚು
ಕಡಿಮೆ ಆರನೇ ತಾಸಾಗಿತ್ತು. ಆಗ ಯೆಹೂದ್ಯರಿಗೆ, ಇಗೋ,
೧೫ ನಿಮ್ಮ ಅರಸನು! ಅಂದನು. ಆದರೆ, ತೆಗದು ಹಾಕ! ತೆಗದು ಹಾ
ಕು! ಅವನನ್ನು ಶಿಲುಬೆಗೆ ಹಾಕ! ಎಂದು ಕೂಗಿದರು. ಪಿಲಾತನು
ಅವರಿಗೆ, ನಿಮ್ಮ ಅರಸನನ್ನು ಶಿಲುಬೆಗೆ ಹಾಕಲೋ? ಅಂದಾಗ;
ಪ್ರಧಾನ ಯಾಜಕರು, ಕೈಸರನೇ ಹೊರ್ತು, ನಮಗೆ ಅರಸನಿ
೧೬ ಲ್ಲವೆಂದು ಉತ್ತರ ಕೊಟ್ಟರು. ಆಗ ಶಿಲುಬೆಗೆ ಹಾಕಲ್ಪಟ್ಟುವದಕ್ಕೆ
ಅವನನ್ನು ಅವರಿಗೆ ಒಪ್ಪಿಸಿದನು. ತರುವಾಯ ಯೇಸುವನ್ನು
ತಕ್ಕೊಂಡು ಹೋದರು.

೧೭ ಅವನು ತನ್ನ ಶಿಲುಬೆಯನ್ನು ಹೊತ್ತು ಕೊಂಡು, ಕಪಾಲ
ಸ್ಥಳವೆಂದೂ, ಇಬ್ರೀಯ ಮಾತಿನಲ್ಲಿ ಗೊಲ್ಗೊಥೆಂದು, ಕರೆಯ
೧೮ ಲ್ಪಟ್ಟ ಸ್ಥಳಕ್ಕೆ ಬಂದನು. ಅಲ್ಲಿ ಅವನನ್ನೂ, ಅವನ ಸಂಗಡ, ಈ
ಕಡೆ ಆ ಕಡೆಯಾಗಿ ಬೇರೆ ಇಬ್ಬರನ್ನೂ, ಮಧ್ಯದಲ್ಲಿ ಯೇಸುವ
ನ್ನೂ, ಶಿಲುಬೆಗೆ ಹಾಕಿದರು.

೧೯ ಇದಲ್ಲದೆ ಪಿಲಾತನು ಮೇಲ್ಬರಹವನ್ನು ಬರೆದು, ಶಿಲುಬೆಯ
ಮೇಲೆ ಇಡಿಸಿದನು. ಬರದದ್ದೇನಂದರೆ, ಯೆಹೂದ್ಯರ ಅರಸನಾ
೨೦ ಗಿರುವ ನಜರೇಥಿನವನಾದ ಯೇಸು. ಈ ಮೇಲ್ಬರಹವನ್ನು ಯೆ
ಹೂದ್ಯರಲ್ಲಿ ಅನೇಕರು ಓದಿ ಕೊಂಡರು. ಯಾಕಂದರೆ ಯೇಸು
ಶಿಲುಬೆಗೆ ಹಾಕಲ್ಪಟ್ಟ ಸ್ಥಳವು ಪಟ್ಟಣಕ್ಕೆ ಸಮೀಪವಾಗಿತ್ತು; ಮತ್ತು
ಅದು ಇಬ್ರೀಯ, ಗ್ರೀಕ, ಕೋಮಾಯ ಭಾಷೆಗಳಲ್ಲಿ ಬರೆದಿತ್ತು.
೨೧ ಹೀಗಿರಲಾಗಿ, ಯೆಹೂದ್ಯರ ಪ್ರಧಾನಯಾಜಕರು ಪಿಲಾತನಿಗೆ, ಯೆ
ಹೂದ್ಯರ ಅರಸನೆಂದಲ್ಲ, ಅವನು ಯೆಹೂದ್ಯರ ಅರಸನಾಗಿ
೨೨ ದ್ದೇನೆಂದು ಹೇಳ್ದದನೆಂಬದಾಗಿ, ಬರೆಯ ಬೇಕು, ಅಂದಾಗ; ಪಿಲಾತ
ನು ಪ್ರತ್ಯುತ್ತರವಾಗಿ, ನಾನು ಬರೆದದ್ದನ್ನು ಬರೆದಿದ್ದೇನೆ, ಅಂದನು.

೨೩ ಇದಲ್ಲದೆ ರಾಣುವೆಯವರು ಯೇಸುವನ್ನು ಶಿಲುಬೆಗೆ ಹಾಕಿದ
ಮೇಲೆ, ಅವನ ವಸ್ತ್ರಗಳನ್ನು ತೆಗದು, ಒಬ್ಬೊಬ್ಬ ರಾಣುವೆಯವ
ನಿಗೆ, ಒಂದೊಂದು ಪಾಲಾಗಿ, ನಾಲ್ಕು ಪಾಲು ಮಾಡಿದರು. ಅಂಗಿ
ಯನ್ನೂ ಸಹ ತಕ್ಕೊಂಡರು. ಆದರೆ ಅಂಗಿಯು ಹೊಲಿಗೆ ಇಲ್ಲದೆ
೨೪ ಮೇಲಿನಿಂದಲೇ ಎಲ್ಲಾ ನೇಯಿದದ್ದಾಗಿರುವದರಿಂದ, ಅದನ್ನು
ಹರಿಯದೆ, ಯಾರಿಗೆ ಆಗುವದೋ, ಅದಕ್ಕೋಸ್ಕರ ಚೀಟು
ಹಾಕುವ, ಎಂದು ತಮ್ಮೊಳಗೆ ಹೇಳ್ದ ಕೊಂಡರು. ನನ್ನ ವಸ್ತ್ರಗ
ಳನ್ನು ಪಾಲಿಟ್ಟು ಕೊಂಡು, ನನ್ನ ಅಂಗಿಗೋಸ್ಕರ ಚೀಟು ಹಾಕಿ
ದರು, ಎಂಬ ಬರಹವು ಈಡೇರುವ ಹಾಗೆ ರಾಣುವೆಯವರು ಹೀಗೆ
ಮಾಡಿದರು.

೨೫ ಆದರೆ ಯೇಸುವಿನ ಶಿಲುಬೆಗೆ ಸಮೀಪವಾಗಿ ಅವನ ತಾಯಿ
ಯೂ, ಅವನ ತಾಯಿಯ ಸಹೋದರಿಯಾಗಿರುವ ಕ್ಲೋಪನ
ಹೆಂಡತಿಯಾದ ಮರಿಯಳೂ, ಮಗ್ದಲದವಳಾದ ಮರಿಯಳೂ
೨೬ ನಿಂತಿದ್ದರು. ಯೇಸು, ತನ್ನ ತಾಯಿಯೂ, ತಾನು ಪ್ರೀತಿ ಮಾ
ಡಿದ ಶಿಷ್ಯನೂ, ಹತ್ತರ ನಿಂತಿರುವದನ್ನು ನೋಡಿ, ತನ್ನ ತಾಯಿ
೨೭ ಗೆ, ಸ್ತ್ರೀಯೇ, ಇಗೋ, ನಿನ್ನ ಮಗನು! ಅಂದನು. ಆಗ ಆ
ಶಿಷ್ಯನಿಗೆ, ಇಗೋ, ನಿನ್ನ ತಾಯಿ! ಅಂದನು. ಆ ಘಳ್ಳಿಗೆಯಿಂದ
ಆ ಶಿಷ್ಯನು ಅವಳನ್ನು ಸ್ವಂತ ಮನೆಯಲ್ಲಿ ಸೇರಿಸಿ ಕೊಂಡನು.

೨೮ ಆ ಮೇಲೆ ಯೇಸು, ಈಗ ಎಲ್ಲಾ ತೀರಿತೆಂದು ತಿಳುಕೊಂಡು,
೨೯ ಬರಹವು ಈಡೇರುವ ಹಾಗೆ, ದಾಹವಾಯಿತು, ಅಂದನು. ಹುಳಿ ರಸ
ತುಂಬಿದ ಪಾತ್ರೆಯು ಅಲ್ಲಿ ಇತ್ತು. ಆಗ ಅವರು ಪಾಚಿಯನ್ನು
ಹುಳಿ ರಸದಿಂದ ತ್ಯಾವಿಸಿ ಹಿಸ್ಸೋಪಿನ ಕೋಲಿಗೆ ಸಿಕ್ಕಿಸಿ, ಅವನ ಬಾ
೩೦ ಯಿಗೆ ಹಾಕಿದರು. ಆಹುಳಿ ರಸವನ್ನು ಯೇಸು ತಕ್ಕೊಂಡ ಮೇಲೆ,
ತೀರಿತು, ಎಂದು ಹೇಳಿ, ತಲೆ ಬಾಗಿಸಿ, ಆತ್ಮವನ್ನು ಒಪ್ಪಿಸಿದನು.

೩೧ ಆಗ ಯೆಹೂದ್ಯರು, ದೊಡ್ಡದಾದ ಆ ಸಬ್ಬತಿನ ದಿವಸಕ್ಕೆ ಸಿದ್ಧ ಮಾಡುವ ದಿವಸವಿರುವದರಿಂದ, ಸಬ್ಬತಿನಲ್ಲಿ ಶರೀರಗಳು ಶಿಲುಬೆಯಲ್ಲಿ ಇರದ ಹಾಗೆ, ಅವರ ಕಾಲುಗಳನ್ನು ಮುರಿದು, ಅವನನ್ನು
೩೨ ಇಳಿಸ ಬೇಕೆಂದು, ಪಿಲಾತನನ್ನು ಬೇಡಿ ಕೊಂಡರು. ಆಗ ರಾಣುವೆಯವರು ಬಂದು, ಯೇಸುವಿನ ಸಂಗಡ ಶಿಲುಬೆಗೆ ಹಾಕಲ್ಪಟ್ಟ ಮೊದಲನೆಯವನ ಕಾಲುಗಳನ್ನೂ, ಮತ್ತೊಬ್ಬನ ಕಾಲುಗಳ
೩೩ ನ್ನೂ ಮುರಿದು, ಯೇಸುವಿನ ಬಳಿಗೆ ಬಂದು, ಅವನು ಆಗಲೇ ಸತ್ತಿರುವದನ್ನು ನೋಡಿ, ಅವನ ಕಾಲುಗಳನ್ನೂ ಮುರಿಯಲಿಲ್ಲ;
೩೪ ಆದರೆ ರಾಣುವೆಯವರಲ್ಲಿ ಒಬ್ಬನು ಭಲ್ಲೆಯಿಂದ ಅವನ ಪಕ್ಕೆ ತಿವಿದನು. ಸಂಗಡಲೇ ನೀರೂ ರಕ್ತವೂ ಹೊರಗೆ ಬಂತು.

೩೫ ಅದನ್ನು ನೋಡಿದವನು ಸಾಕ್ಷಿ ಕೊಟ್ಟಿದ್ದಾನೆ; ಅವನ ಸಾಕ್ಷಿ ನಿಜವೇ; ಮತ್ತು ನೀವು ನಂಬುವ ಹಾಗೆ ಸತ್ಯವನ್ನು ಹೇಳುತ್ತಾ
೩೬ ನೆಂದು ಅವನು ಬಲ್ಲನು. ಯಾಕಂದರೆ ಅವನ ಎಲುವು ಮುರಿಯಲ್ಪಡಬೆಂಬ ಬರಹವು ಈಡೇರುವ ಹಾಗೆ, ಇವು ಉಂಟಾದವು.
೩೭ ಇನ್ನು ಬೇರೆ ಬರಹವು, ಅವರು ತಾವು ತಿವಿದವನನ್ನು ನೋಡುವರೆಂದು ಹೇಳುತ್ತದೆ.

೩೮ ಇವುಗಳಾದ ಮೇಲೆ ಯೆಹೂದ್ಯರ ಭಯದಿಂದ ಗುಪ್ತವಾಗಿ ಯೇಸುವಿನ ಶಿಷ್ಯನಾಗಿದ್ದ ಅರಿಮಥಾಯದವನಾದ ಯೋಸೆಫನು, ತಾನು ಯೇಸುವಿನ ಶರೀರವನ್ನು ತಕ್ಕೊಂಡು ಹೋಗುವ ಹಾಗೆ, ಪಿಲಾತನನ್ನು ಬೇಡಿ ಕೊಳ್ಳಲು, ಪಿಲಾತನು ಅಪ್ಪಣೆ ಕೊಟ್ಟನು. ಆದದರಿಂದ ಅವನು ಬಂದು, ಯೇಸುವಿನ ಶರೀರವನ್ನು
೩೯ ತಕ್ಕೊಂಡು ಹೋದನು. ಇದಲ್ಲದೆ ಮೊದಲು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದ ನಿಕೊದೇಮನು ಸಹ, ಕಲಿಸಿದ ಬೋಳ್ಳವೂ, ಅಗರೂ, ಹೆಚ್ಚು ಕಡಿಮೆ ನೂರು ಶೇರು, ತೆಗೆದು ಕೊಂಡು ಬಂ
೪೦ ದನು. ಆಗ ಯೇಸುವಿನ ಶರೀರವನ್ನು ತಕ್ಕೊಂಡು, ಯೆಹೂದ್ಯರಲ್ಲಿ ಹೂಣಿಡುವ ಮರ್ಯಾದೆಯ ಪ್ರಕಾರ ಅದನ್ನು ಸುಗಂ
೪೧ ಧಗಳ ಸಂಗಡ ಬಟ್ಟೆಗಳಿಂದ ಸುತ್ತಿದರು. ಇದಲ್ಲದೆ ಅವನು ಶಿಲುಬೆಗೆ ಹಾಕಲ್ಪಟ್ಟಲ್ಲಿ ತೋಟವಿತ್ತು; ತೋಟದಲ್ಲಿ ಯಾವನೂ
೪೨ ಎಂದೂ ಇಡಲ್ಪಡದ ಹೊಸ ಸಮಾಧಿ ಇತ್ತು. ಆ ಸಮಾಧಿ ಸಮೀಪವಾಗಿರುವದರಿಂದ, ಯೆಹೂದ್ಯರು ಸಿದ್ಧ ಮಾಡುವ ದಿವಸಕ್ಕೋಸ್ಕರ, ಯೇಸುವನ್ನು ಅಲ್ಲಿ ಇಟ್ಟರು.

## ೨೦. ಸಂಧಿ.

೧ ಸಬ್ಬತಿನ ಮಾರಣೆ ದಿವಸ ಮಗ್ದಲದವಳಾದ ಮರಿಯಳು ಬೆಳಿಗ್ಯೆ ಇನ್ನು ಕತ್ತಲಿರುವಾಗ, ಸಮಾಧಿಗೆ ಬಂದು, ಕಲ್ಲು ಸಮಾ
೨ ಧಿಯಿಂದ ತೆಗೆದದೆ ಎಂದು ನೋಡಿ, ಸೀಮೋನ್ ಪೇತ್ರನ ಬಳಿಗೂ, ಯೇಸು ಸ್ನೇಹಿಸಿದ ಆ ಬೇರೆ ಶಿಷ್ಯನ ಬಳಿಗೂ ಓಡಿ ಬಂದು, ಅವರಿಗೆ, ಕರ್ತನನ್ನು ಸಮಾಧಿಯೊಳಗಿಂದ ತಕ್ಕೊಂಡು ಹೋಗಿದ್ದಾರೆ; ಅವನನ್ನು ಎಲ್ಲಿ ಇಟ್ಟಿದ್ದಾರೋ, ಅರಿಯೆವು, ಅಂ
೩ ದಳು. ಆಗ ಪೇತ್ರನೂ, ಆ ಬೇರೆ ಶಿಷ್ಯನೂ ಹೊರಟು ಹೋಗಿ, ಸಮಾಧಿಗೆ ಬಂದರು.

೪ ಅವರಿಬ್ಬರು ಕೂಡ ಓಡಿದರು. ಆದರೆ ಆ ಬೇರೆ ಶಿಷ್ಯನು
೫ ಪೇತ್ರನಿಗಿಂತ ಬೇಗ ಓಡಿ, ಮೊದಲು ಸಮಾಧಿಗೆ ಬಂದನು. ಬಾಗಿ ನೋಡಿ, ಬಿದ್ದಿರುವ ಬಟ್ಟೆಗಳನ್ನು ಕಂಡನು; ಆದರೆ ಒಳಗೆ ಹೋ
೬ ಗಲಿಲ್ಲ. ಆ ಮೇಲೆ ಸೀಮೋನ್ ಪೇತ್ರನು, ಅವನನ್ನು ಹಿಂದಟ್ಟಿ ಬಂದು, ಸಮಾಧಿಯೊಳಗೆ ಪ್ರವೇಶಿಸಿ, ಬಿದ್ದಿರುವ ಬಟ್ಟೆಗಳ
೭ ನ್ನೂ—ಅವನ ತಲೆಯ ಮೇಲಿದ್ದ ಕೈವಸ್ತ್ರವು ಬಟ್ಟೆಗಳ ಸಂಗಡ ಇಲ್ಲ, ಬೇರೆ ಬಂದು ಕಡೆಯಲ್ಲಿ ಸುತ್ತಿರುವದನ್ನೂ, ನೋಡಿದ
೮ ನು. ಆಗ ಮೊದಲು ಸಮಾಧಿಗೆ ಬಂದ ಆ ಬೇರೆ ಶಿಷ್ಯನು ಸಹ ಹೊಕ್ಕು, ನೋಡಿ, ನಂಬಿದನು. ಯಾಕಂದರೆ ಅವನು
೯ ಸತ್ತವರೊಳಗಿಂದ ಎಳ್ಳ ಬೇಕೆಂಬ ಬರಹವು ಅವರಿಗೆ ಇನ್ನೂ ತಿಳಿಯಲಿಲ್ಲ. ಆಗ ಶಿಷ್ಯರು ತಿರಿಗಿ ಮನೆಗೆ ಹೋದರು.

೧೦ ಆದರೆ ಮರಿಯಳು ಅಳುತ್ತಾ ಸಮಾಧಿಯ ಸವಿಾಪದಲ್ಲಿ
೧೧ ಹೊರಗೆ ನಿಂತಿದ್ದಳು. ಅವಳು ಅಳುತ್ತಾ, ಸಮಾಧಿಯೊಳಗೆ ಬಾಗಿ
೧೨ ನೋಡಿ, ಬಿಳೀ ವಸ್ತ್ರ ಧರಿಸಿ ಕೊಂಡ ಇಬ್ಬರು ದೂತರು ಯೇಸುವಿನ ಶರೀರವು ಇದ್ದಲ್ಲಿ, ಒಬ್ಬನು ತಲೆಯ ಹತ್ತರ, ಒಬ್ಬ
೧೩ ನು ಪಾದಗಳ ಹತ್ತರ, ಕೂತಿರುವದನ್ನು ಕಂಡಳು. ಅವರು ಅವಳಿಗೆ, ಸ್ತ್ರೀಯೇ, ನೀನು ಅಳುವದೇನು? ಅನ್ನಲು; ಅವರಿಗೆ, ನನ್ನ ಕರ್ತನನ್ನು ತಕ್ಕೊಂಡು ಹೋಗಿದ್ದಾರೆ; ಅವನನ್ನು ಎಲ್ಲಿ ಇಟ್ಟಿ
೧೪ ದ್ದಾರೋ, ಅರಿಯೆನು, ಅಂದಳು. ಇದನ್ನು ಹೇಳುತ್ತಾ, ಹಿಂದೆ ತಿರುಗಿ ಕೊಂಡು, ಯೇಸು ನಿಂತಿರುವದನ್ನು ಕಂಡು, ಅವನು ಯೇಸುವೆಂದು ತಿಳಿಯದೆ ಇದ್ದಳು.

೧೫ ಯೇಸು ಅವಳಿಗೆ, ಸ್ತ್ರೀಯೇ, ನೀನು ಅಳುವದೇನು? ಯಾರನ್ನು ಹುಡುಕುತ್ತೀ? ಅನ್ನಲು, ಅವಳು, ಅವನು ತೋಟಿಗಾರನೆಂದು ನೆನಸಿ, ಅವನಿಗೆ, ಅಯ್ಯಾ, ನೀನು ಅವನನ್ನು ತಕ್ಕೊಂಡು ಹೋಗಿದ್ದರೆ, ಅವನನ್ನು ಎಲ್ಲಿ ಎಟ್ಟಿದ್ದೀ ಎಂದು ನನಗೆ ಹೇಳು, ಆಗ ನಾನು ಅವನನ್ನು ತಕ್ಕೊಂಡು ಹೋಗುವೆನು, ಅಂದಳು.
೧೬ ಯೇಸು ಅವಳಿಗೆ, ಮರಿಯಳೇ! ಅನ್ನಲು, ಅವಳು ತಿರುಗಿ ಕೊಂಡು, ಅವನಿಗೆ, ರಬ್ಬೂನಿ! ಅಂದಳು; ಅದೇನಂದರೆ, ಬೋಧಕನೇ.
೧೭ ಯೇಸು ಅವಳಿಗೆ ಹೇಳಿದ್ದೇನಂದರೆ, ನನ್ನನ್ನು ಮುಟ್ಟಿ ಬೇಡ, ಯಾಕಂದರೆ ನಾನು ಇನ್ನೂ ನನ್ನ ತಂದೆಯ ಬಳಿಗೆ ಏರಿ ಹೋಗಲಿಲ್ಲ; ಆದರೆ ನನ್ನ ಸಹೋದರರ ಬಳಿಗೆ ಹೋಗಿ, ನನ್ನ ತಂದೆಯೂ, ನಿಮ್ಮ ತಂದೆಯೂ, ನನ್ನ ದೇವರೂ, ನಿಮ್ಮ ದೇವರೂ, ಆಗಿರುವವನ ಬಳಿಗೆ ಏರಿ ಹೋಗುತ್ತೇನೆಂದು ಅವರಿಗೆ ಹೇಳು. ಮ
೧೮ ಗ್ದಲದವಳಾದ ಮರಿಯಳು ಬಂದು, ಕರ್ತನನ್ನು ನೋಡಿದ್ದೇನೆಂದೂ, ಇವುಗಳನ್ನು ನನಗೆ ಹೇಳಿದನೆಂದೂ, ಶಿಷ್ಯರಿಗೆ ತಿಳಿಸಿದಳು.

೧೯ ಆಗ ಸಬ್ಬತಿನ ಮಾರಣೆ ದಿವಸವಾದ ಆ ದಿವಸದ ಸಾಯಂಕಾಲವಾದಾಗ, ಶಿಷ್ಯರು ಕೂಡಿರುವಲ್ಲಿ ಯೆಹೂದ್ಯರ ಭಯಕ್ಕೋಸ್ಕರ ಬಾಗಲುಗಳು ಮುಚ್ಚಿರಲಾಗಿ, ಯೇಸು ಬಂದು, ಮಧ್ಯದಲ್ಲಿ ನಿಂತು, ಅವರಿಗೆ, ನಿಮಗೆ ಸಮಾಧಾನವಾಗಲಿ, ಅಂ
೨೦ ದನು. ಇದನ್ನು ಹೇಳಿ, ತನ್ನ ಕೈಗಳನ್ನೂ, ಪಕ್ಕೆಯನ್ನೂ ಅವರಿಗೆ ತೋರಿಸಿದನು. ಆಗ ಶಿಷ್ಯರು, ಕರ್ತನನ್ನು ನೋಡಿ,
೨೧ ಸಂತೋಷಪಟ್ಟರು. ಆಗ ಯೇಸು ತಿರಿಗಿ ಅವರಿಗೆ, ನಿಮಗೆ ಸಮಾಧಾನವಾಗಲಿ. ತಂದೆಯು ನನ್ನನ್ನು ಕಳುಹಿಸಿದ ಮೇರೆಗೆ, ನಾನೂ
೨೨ ನಿಮ್ಮನ್ನು ಕಳುಹಿಸುತ್ತೇನೆ, ಅಂದನು. ಇದನ್ನು ಹೇಳಿ, ಅವರ
೨೩ ಮೇಲೆ, ಊದಿ, ಅವರಿಗೆ ಪರಿಶುದ್ಧಾತ್ಮನನ್ನು ಹೊಂದಿರಿ. ಯಾರ ಪಾಪಗಳನ್ನು ಬಿಡುತ್ತೀರೋ, ಅವರಿಗೆ ಬಿಟ್ಟಿವೆ; ಯಾರವುಗಳನ್ನು ಹಿಡಿಯುತ್ತೀರೋ, ಹಿಡಿಯಲ್ಪಟ್ಟಿವೆ, ಅಂದನು.

೨೪ ಆದರೆ ಹನ್ನಿರಡು ಮಂದಿಯಲ್ಲಿ ಒಬ್ಬನಾದ ದಿದುಮನೆಂಬ
೨೫ ಶೋಮನು, ಯೇಸು ಬಂದಾಗ, ಅವರ ಸಂಗಡ ಇರಲಿಲ್ಲ. ಆದದರಿಂದ ಬೇರೆ ಶಿಷ್ಯರು, ಕರ್ತನನ್ನು ನೋಡಿದೆವೆಂದು ಅವನಿಗೆ ಹೇಳಿದಾಗ, ಅವನು ಅವರಿಗೆ, ನಾನು ಪೊಳೆಗಳ ಗುರುತನ್ನು ಅವನ ಕೈಗಳಲ್ಲಿ ನೋಡಿ, ನನ್ನ ಬೆರಳನ್ನು ಪೊಳೆಗಳ ಗುರುತಿನಲ್ಲಿ ಹಾಕಿ, ಅವನ ಪಕ್ಕೆಯಲ್ಲಿ ನನ್ನ ಕೈ ಹಾಕಿದರೆ ಹೊರ್ತು, ನಂಬುವದಿಲ್ಲ, ಅಂದನು.



೨೬ ಮತ್ತು ಎಂಟು ದಿವಸಗಳಾದ ಮೇಲೆ ಅವನ ಶಿಷ್ಯರೂ, ಅವರ ಸಂಗಡ ತೋಮನೂ ಒಳಗಿರುವಾಗ, ಬಾಗಲುಗಳು ಮುಚ್ಚಿರಲಾಗಿ, ಯೇಸು ಬಂದು, ಮಧ್ಯದಲ್ಲಿ ನಿಂತು, ನಿಮಗೆ ಸಮಾಧಾ
೨೭ ನವಾಗಲಿ, ಅಂದನು. ತರುವಾಯ ತೋಮನಿಗೆ, ನಿನ್ನ ಬೆರಳನ್ನು ಇಲ್ಲಿಗೆ ಚಾಚಿ, ನನ್ನ ಕೈಗಳನ್ನು ನೋಡು; ಮತ್ತು ನಿನ್ನ ಕೈ ಚಾಚಿ, ನನ್ನ ಪಕ್ಕೆಯಲ್ಲಿ ಹಾಕು, ಮತ್ತು ಅವಿಶ್ವಾಸಿಯಾಗಿರದೆ,
೨೮ ವಿಶ್ವಾಸಿಯಾಗಿರು, ಅಂದನು. ತೋಮನು ಪ್ರತ್ಯುತ್ತರವಾಗಿ
೨೯ ಅವನಿಗೆ, ನನ್ನ ಕರ್ತನೇ! ನನ್ನ ದೇವರೇ! ಅನ್ನಲು, ಯೇಸು ಅವನಿಗೆ, ತೋಮನೇ, ನನ್ನನ್ನು ನೋಡಿದ್ದರಿಂದ ವಿಶ್ವಾಸಿಸಿದ್ದೀ, ನೋಡದೆ ವಿಶ್ವಾಸಿಸುವವರು ಭಾಗ್ಯವಂತರು, ಅಂದನು.

೩೦ ಈ ಪುಸ್ತಕದಲ್ಲಿ ಬರೆಯಲ್ಪಡದ ಬೇರೆ ಅನೇಕ ಲಕ್ಷಣಗಳ
೩೧ ನ್ನು ಯೇಸು ತನ್ನ ಶಿಷ್ಯರ ಮುಂದೆ ತೋರಿಸಿದನು. ಆದರೆ, ಯೇಸುವೇ ದೇವರ ಮಗನಾದ ಕ್ರಿಸ್ತನೆಂದು ನೀವು ನಂಬುವ ಹಾಗೆಯೂ, ನಂಬಿ ಅವನ ಹೆಸರಿನಲ್ಲಿ ಜೀವ ಹೊಂದುವ ಹಾಗೆಯೂ, ಇವು ಬರೆಯಲ್ಪಟ್ಟಿವೆ.

## ೨೧. ಸಂಧಿ.

೧ ಇವುಗಳಾದ ಮೇಲೆ ಯೇಸು ತಿರಿಗಿ ತಿಬೆರಿಯ ಸಮುದ್ರದ ಸವಿಾಪದಲ್ಲಿ ತನ್ನ ಶಿಷ್ಯರಿಗೆ ತನ್ನನ್ನು ತೋರಿಸಿದನು; ಹ್ಯಾಗೆ
೨ ತೋರಿಸಿದನಂದರೆ, ಸೀಮೋನ್ ಪೇತ್ರನೂ, ದಿದುಮನೆಂಬ ತೋಮನೂ, ಗಲಿಲಾಯದ ಕಾನದವನಾದ ನತನಯೇಲನೂ, ಜೆಬೆದಾಯನವರೂ, ಅವನ ಶಿಷ್ಯರಲ್ಲಿ ಇನ್ನಿಬ್ಬರೂ, ಕೂಡಿರಲಾಗಿ,
೩ ಸೀಮೋನ್ ಪೇತ್ರನು ಅವರಿಗೆ, ನಾನು ಹಿಡಿಯ ಹೋಗುತ್ತೇನೆ, ಅಂದನು. ನಾವು ಸಹ ನಿನ್ನ ಸಂಗಡ ಬರುತ್ತೇವೆ, ಎಂದು ಅವನಿಗೆ ಹೇಳಿ, ಹೊರಟು, ಸಂಗಡಲೇ ಹಡಗವನ್ನೇರಿ, ಆ ರಾತ್ರಿಯಲ್ಲಿ ಏನೂ ಹಿಡಿಯಲಿಲ್ಲ.

೪ ಆದರೆ ಹೊತ್ತಾರೆಯಾಗಿ ಯೇಸು ಧಡಲ್ಲಿ ನಿಂತಿದ್ದನು. ಆದಾಗ್ಯೂ ಅವನು ಯೇಸುವೆಂದು ಶಿಷ್ಯರಿಗೆ ತಿಳಿಯಲಿಲ್ಲ.
೫ ಆಗ ಯೇಸು ಅವರಿಗೆ, ಮಕ್ಕಳೇ, ಉಣ್ಣುವದಕ್ಕೆ ಏನಾದರೂ
೬ ಉಂಟೋ? ಅನ್ನಲು; ಅವನಿಗೆ, ಇಲ್ಲ, ಅಂದರು. ಅವನವರಿಗೆ, ಹಡಗದ ಬಲಗಡೆಯಲ್ಲಿ ಬಲೆ ಹಾಕಿರಿ, ಆಗ ಶಿಕ್ಕುವದು, ಅಂದನು. ಈ ಮೇರೆಗೆ ಅವರು ಹಾಕಲಾಗಿ, ಮೀನುಗಳ ಸಮೂಹದ ನಿಮಿ
೭ ತ್ತ, ಅದನ್ನು ಇನ್ನು ಎಳೆಯಲಾರದೆ ಹೋದರು. ಆಗ ಯೇಸು ಪ್ರೀತಿ ಮಾಡಿದ ಶಿಷ್ಯನು ಪೇತ್ರನಿಗೆ, ಅವನು ಕರ್ತನು, ಅಂದನು. ಸೀಮೋನ್ ಪೇತ್ರನು, ಅವನು ಕರ್ತನೆಂದು ಕೇಳಿ, ತಾನು ಬೆತ್ತಲೆಯಾಗಿದ್ದದರಿಂದ ಒಳ್ಳಿಯನ್ನು ನಡುವಿಗೆ ಕಟ್ಟಿ ಕೊಂಡು, ಸ
೮ ಮುದ್ರದೊಳಗೆ ಹಾರಿದನು. ಆದರೆ ಮಿಕ್ಕಾದ ಶಿಷ್ಯರು ಭೂಮಿಗೆ ದೂರವಾಗಿರದೆ, ಹೆಚ್ಚು ಕಡಿಮೆ ಇನ್ನೂರು ಮೊಳವಷ್ಟು ಇದ್ದದರಿಂದ, ಮೀನುಗಳ ಬಲೆಯನ್ನು ಎಳೆಯುತ್ತಾ, ಹಡಗದಲ್ಲಿ ಬಂದರು.

೯ ಇವರು ಭೂಮಿಗೆ ಇಳಿದಾಗ, ಕೆಂಡಗಳನ್ನೂ, ಅವುಗಳ ಮೇ
೧೦ ಲೆಇಟ್ಟ ಮೀನನ್ನೂ, ರೊಟ್ಟಿಯನ್ನೂ ನೋಡಿದರು. ಯೇ
೧೧ ಸು ಅವರಿಗೆ, ನೀವು ಈಗ ಹಿಡಿದ ಮೀನುಗಳಲ್ಲಿ ಕೆಲವು ತನ್ನಿ, ಅನ್ನಲು; ಸೀಮೋನ್ ಪೇತ್ರನು ಏರಿ ನೂರಾ ಐವತ್ತು ಮೂರು ದೊಡ್ಡ ಮೀನು ತುಂಬಿರುವ ಬಲೆಯನ್ನು ಭೂಮಿಗೆ ಎಳೆದನು. ಅಷ್ಟು ಇದ್ದಾಗ್ಯೂ ಬಲೆ ಹರಿಯಲಿಲ್ಲ. ಯೇಸು ಅವರಿಗೆ, ಬಂ
೧೨ ದು ಊಟ ಮಾಡಿರಿ, ಅಂದನು. ಆದರೆ ಶಿಷ್ಯರು, ಅವನು ಕರ್ತನೆಂದು ತಿಳಿದ್ದರಿಂದ, ಅವರಲ್ಲಿ ಯಾವನಿಗಾದರೂ, ನೀನು ಯಾ
೧೩ ರೆಂದು, ಅವನನ್ನು ಕೇಳ ಧೈರ್ಯವಾಗಲಿಲ್ಲ. ಹೀಗಿರಲಾಗಿ ಯೇಸು ಬಂದು, ರೊಟ್ಟಿಯನ್ನೂ ಮೀನನ್ನೂ ಸಹ ತೆಗೆದು,
೧೪ ಅವರಿಗೆ ಕೊಟ್ಟನು. ಯೇಸು ಸತ್ತವರೊಳಗಿಂದ ಎದ್ದ ಮೇಲೆ ತನ್ನ ಶಿಷ್ಯರಿಗೆ ಪ್ರತ್ಯಕ್ಷವಾದದ್ದು ಇದು ಮೂರನೇ ಸಾರಿ.

೧೫ ಅವರು ಊಟ ಮಾಡಿದ ಮೇಲೆ ಯೇಸು ಸೀಮೋನ್ ಪೇತ್ರನಿಗೆ, ಯೋನನ ಮಗನಾದ ಸೀಮೋನನೇ, ಇವರಿಗಿಂತ ಹೆಚ್ಚಾಗಿ ನನ್ನನ್ನು ಪ್ರೀತಿ ಮಾಡುತ್ತೀಯೋ? ಅನ್ನಲು, ಅವನಿಗೆ, ಹೌದು, ಕರ್ತನೇ, ನಿನ್ನನ್ನು ಸ್ನೇಹಿಸುತ್ತೇನೆಂದು ನೀನು ಬಲ್ಲಿ, ಅನ್ನಲು, ಅವನಿಗೆ ನನ್ನ ಕುರಿ ಮರಿಗಳನ್ನು ಮೇಯಿಸು, ಅಂದನು.
೧೬ ತಿರಿಗಿ ಎರಡನೇ ಸಾರಿ ಅವನಿಗೆ, ಯೋನನ ಮಗನಾದ ಸೀಮೋನನೇ, ನನ್ನನ್ನು ಪ್ರೀತಿ ಮಾಡುತ್ತೀಯೋ? ಅನ್ನಲು; ಅವನಿಗೆ, ಹೌದು, ಕರ್ತನೇ, ನಿನ್ನನ್ನು ಸ್ನೇಹಿಸುತ್ತೇನೆಂದು ನೀನು ಬಲ್ಲಿ, ಅ
೧೭ ವನಿಗೆ, ನನ್ನ ಕುರಿಗಳನ್ನು ಮೇಯಿಸು, ಅಂದನು. ಮೂರನೇ ಸಾರಿ ಅವನಿಗೆ, ಯೋನನ ಮಗನಾದ ಸೀಮೋನನೇ, ನನ್ನನ್ನು ಸ್ನೇಹಿಸುತ್ತೀಯೋ? ಅನ್ನಲು; ತನಗೆ ಮೂರನೇಸಾರಿ, ನನ್ನನ್ನು ಸ್ನೇಹಿಸುತ್ತೀಯೋ? ಎಂದು ಹೇಳಿದ್ದರಿಂದ ಪೇತ್ರನು ದುಃಖಪಟ್ಟು, ಅವನಿಗೆ, ಕರ್ತನೇ, ನಿನಗೆ ಎಲ್ಲಾ ತಿಳಿದದೇ, ನಿನ್ನನ್ನು ಸ್ನೇಹಿಸುತ್ತೇನೆಂದು ನೀನು ಬಲ್ಲಿ, ಅನ್ನಲು, ಯೇಸು ಅವನಿಗೆ
೧೮ ಹೇಳಿದನು, ನನ್ನ ಕುರಿಗಳನ್ನು ಮೇಯಿಸು. ನಿಶ್ಚಯವಾಗಿ ನಿಶ್ಚಯವಾಗಿ ನಿನಗೆ ಹೇಳುತ್ತೇನೆ, ನೀನು ಯೌವನಸ್ಥನಾಗಿದ್ದಾಗ, ನಡು ಕಟ್ಟಿ ಕೊಂಡು ಬೇಕಾದಲ್ಲಿ ಸಂಚರಿಸುತ್ತಿದ್ದಿ; ಆದರೆ ಮುಪ್ಪಾಗಲು, ನಿನ್ನ ಕೈಗಳನ್ನು ಚಾಚುವಿ, ಬೇರೊಬ್ಬನು ನಿನ್ನ ನಡು ಕಟ್ಟಿ, ನಿನ್ನನ್ನು ಬೇಡವಾದಲ್ಲಿಗೆ ತಕ್ಕೊಂಡು ಹೋಗುವನು.
೧೯ ಅವನು, ಎಂಥ ಮರಣದಿಂದ ದೇವರನ್ನು ಮಹಿಮೆ ಪಡಿಸುವನೆಂದು ಸೂಚಿಸಿ, ಇದನ್ನು ಹೇಳಿದನು. ಇದನ್ನು ಹೇಳಿದ ಮೇಲೆ ಅವನಿಗೆ, ನನ್ನ ಹಿಂದೆ ಬಾ, ಅಂದನು.

೨೦ ಆದರೆ ಪೇತ್ರನು ತಿರುಗಿ ಕೊಂಡು, ಯೇಸು ಪ್ರೀತಿ ಮಾಡಿದಂಥ ಉಟದಲ್ಲಿ ಅವನ ಎದೆಯ ಬಳಿಯಲ್ಲಿ ಕೂತು ಕೊಂಡು, ಕರ್ತನೇ, ನಿನ್ನನ್ನು ಒಪ್ಪಿಸಿ ಕೊಡುವವನ್ಯಾರೆಂದು, ಹೇಳಿದಂಥ,
೨೧ ಶಿಷ್ಯನು ಹಿಂಬಾಲಿಸುವದನ್ನು ನೋಡಿದನು. ಇವನನ್ನು ಪೇತ್ರನು ನೋಡಿ, ಯೇಸುವಿಗೆ, ಕರ್ತನೇ, ಇವನು ಏನು ಮಾಡ ಬೇಕು!
೨೨ ಅನ್ನಲು; ಯೇಸು ಅವನಿಗೆ, ನಾನು ಬರುವ ಪರ್ಯಂತರ ಅವನು ಇರ ಬೇಕೆಂದು ನನಗೆ ಮನಸ್ಸಿದ್ದರೆ, ನಿನಗೆ ಏನು? ನೀನು
೨೩ ನನ್ನ ಹಿಂದೆ ಬಾ, ಅಂದನು. ಹೀಗಿರುವದರಿಂದ, ಆ ಶಿಷ್ಯನು ಸಾಯುವದಿಲ್ಲವೆಂಬ ಮಾತು ಸಹೋದರರಲ್ಲಿ ಹೊರಟಿತು. ಆದಾಗ್ಯೂ ಯೇಸು, ಅವನು ಸಾಯುವದಿಲ್ಲವೆಂದಲ್ಲ, ನಾನು ಬರುವ ಪರ್ಯಂತರ ಅವನು ಇರ ಬೇಕೆಂದು ನನಗೆ ಮನಸ್ಸಿದ್ದರೆ, ನಿನಗೇನೆಂದು ಅವನಿಗೆ ಹೇಳಿದನು.

೨೪ ಇವನು ಇವುಗಳ ವಿಷಯವಾಗಿ ಸಾಕ್ಷಿ ಕೊಟ್ಟು, ಇವುಗಳನ್ನು
೨೫ ಬರೆದ ಶಿಷ್ಯನೇ; ಮತ್ತು ಅವನ ಸಾಕ್ಷಿ ನಿಜವೆಂದು ಬಲ್ಲೆವು. ಇದಲ್ಲದೆ ಯೇಸು ಮಾಡಿದ ಬೇರೆ ಅನೇಕ ಕ್ರಿಯೆಗಳು ಉಂಟು; ಅವುಗಳನ್ನು ಒಂದೊಂದಾಗಿ ಬರೆದರೆ, ಬರೆಯಲ್ಪಡುವ ಪುಸ್ತಕಗಳನ್ನು ಈ ಲೋಕವು ಹಿಡಿಯದೆ, ಇದ್ದೀತೆಂದು ನೆನಸುತ್ತೇನೆ. ಆಮೆನ್.

# THE ACTS OF THE APOSTLES.

## ಅಪೊಸ್ತಲರ ಕ್ರಿಯೆಗಳು.

### ೧. ಸಂಧಿ.

೧ ಓ ಥೆಯೊಫಿಲನೇ, ಯೇಸು, ತಾನು ಆರಿಸಿ ಕೊಂಡ ಅಪೊ
ಸ್ತಲರಿಗೆ ಪರಿಶುದ್ಧಾತ್ಮದಿಂದ ಕಟ್ಟಳೆ ಕೊಟ್ಟು, ಎತ್ತಲ್ಪಟ್ಟ ದಿವ
೨ ಸದ ವರಿಗೆ, ಮಾಡಲೂ ಬೋಧಿಸಲೂ ಆರಂಭಿಸಿದ ಎಲ್ಲವುಗಳ
೩ ವಿಷಯವಾಗಿ ಮೊದಲನೇ ಚರಿತ್ರೆಯನ್ನು ಬರೆದಿದ್ದೇನೆ. ಅವನು
ಶ್ರಮೆ ಪಟ್ಟ ಮೇಲೆ ನಾಲ್ವತ್ತು ದಿವಸಗಳ ಪರ್ಯಂತರ ಅವ
ರಿಗೆ ಕಾಣಿಸಿ ಕೊಂಡು, ದೇವರ ರಾಜ್ಯದವುಗಳನ್ನು ಹೇಳುತ್ತಾ,
ಅನೇಕ ಗುರುತುಗಳಿಂದ ತನ್ನನ್ನು ಬದುಕುವವನಾಗಿ ತೋರಿಸಿ
೪ ದನು. ಮತ್ತು ಅವರ ಸಂಗಡ ಕೂಡಿ ಕೊಂಡು, ನೀವು ಯೆರೂ
ಸಲೇಮನ್ನು ಬಿಡದೆ, ನನ್ನಿಂದ ಕೇಳಿದ ತಂದೆಯ ವಾಗ್ದತ್ತ
೫ ಕ್ಕೋಸ್ಕರ ಕಾದು ಕೊಂಡಿರ ಬೇಕು; ಯಾಕಂದರೆ ಯೋ
ಹಾನನು ನೀರಿನಿಂದ ಸ್ನಾನ ಕೊಟ್ಟನು; ಆದರೆ ಇನ್ನು ಬಹಳ
ದಿವಸ ಹೋಗುವದಕ್ಕಿಂತ ಮುಂಚೆ, ನೀವು ಪರಿಶುದ್ಧಾತ್ಮದಿಂದ
ಸ್ನಾನ ಹೊಂದುವಿರೆಂದು ಅವರಿಗೆ ಅಪ್ಪಣೆ ಕೊಟ್ಟನು.

೬ ಆದದರಿಂದ ಅವರು ಕೂಡಿ ಬಂದು, ಕರ್ತನೇ, ಈ ಕಾಲದ
ಲ್ಲಿ ಇಸ್ರಯೇಲಿಗೆ ರಾಜ್ಯವನ್ನು ತಿರಿಗಿ ಸ್ಥಾಪಿಸುತ್ತೀಯೋ?
೭ ಎಂದು ಅವನನ್ನು ಕೇಳಿದರು. ಅವನು ಅವರಿಗೆ, ತಂದೆಯು
ಸ್ವಂತ ಅಧಿಕಾರದಲ್ಲಿ ಇಟ್ಟು ಕೊಂಡ ಕಾಲಗಳನ್ನೂ ಸಮಯ
೮ ಗಳನ್ನೂ ತಿಳಿಯುವದು ನಿಮ್ಮದಲ್ಲ; ಆದರೆ ಪರಿಶುದ್ಧಾತ್ಮವು
ನಿಮ್ಮ ಮೇಲೆ ಬಂದಾಗ, ನೀವು ಬಲವನ್ನು ಹೊಂದಿ, ಯೆರೂಸ
ಲೇಮಿನಲ್ಲಿಯೂ, ಸಮಸ್ತ ಯೆಹೂದ ಸಮಾರ್ಯಗಳಲ್ಲಿ
ಯೂ, ಭೂಮಿಯ ಅಂತ್ಯದ ವರಿಗೂ ನನಗೆ ಸಾಕ್ಷಿಗಳಾಗಿರು
ವಿರಿ, ಅಂದನು.

೯ ಇವುಗಳನ್ನು ಹೇಳಿ, ಅವರು ನೋಡುತ್ತಿರಲಾಗಿ, ಎತ್ತಲ್ಪಟ್ಟ
ನು; ಮೇಘವು ಅವನನ್ನು ಅವರ ಕಣ್ಣುಗಳಿಗೆ ಮರೆಯಾಗಿ ತೆಗೆ
೧೦ ದು ಕೊಂಡು ಹೋಯಿತು. ಅವನು ಹೋಗುತ್ತಿರುವಾಗ, ಅವರು
ಆಕಾಶವನ್ನು ದೃಷ್ಟಿಸಲಾಗಿ, ಇಗೋ, ಬಿಳೀ ವಸ್ತ್ರಗಳನ್ನು
ಉಟ್ಟು ಕೊಂಡ ಇಬ್ಬರು ಪುರುಷರು ಅವರ ಬಳಿಯಲ್ಲಿ ನಿಂತು
೧೧ ಕೊಂಡು, ಗಲಿಲಾಯದವರೇ, ಯಾಕೆ ಆಕಾಶವನ್ನು ದೃಷ್ಟಿಸು
ತ್ತಾ, ನಿಂತು ಕೊಂಡಿದ್ದೀರಿ? ನಿಮ್ಮಲ್ಲಿಂದ ಪರಲೋಕಕ್ಕೆ ಎತ್ತ
ಲ್ಪಟ್ಟವನಾದ ಈ ಯೇಸು ಯಾವ ರೀತಿಯಿಂದ ಪರಲೋಕ
ಕ್ಕೆ ಹೋಗುವದನ್ನು ನೀವು ನೋಡಿದಿರೋ, ಅದೇ ರೀತಿಯಿಂದ
ಬರುವನು, ಅಂದರು.

೧೨ ಆಗಲವರು ಯೆರೂಸಲೇಮಿಗೆ ಸಮೀಪವಾಗಿ ಸಬ್ಬತಿನ ಹಾ
ದಿಯೆಷ್ಟು ದೂರವಾಗಿರುವ ಇಪ್ಪೇ ಗುಡ್ಡವೆಂಬ ಗುಡ್ಡದಿಂದ
೧೩ ಯೆರೂಸಲೇಮಿಗೆ ತಿರಿಗಿ ಬಂದರು. ಬಂದಾಗ, ತಮ್ಮ ಉಪ್ಪರಿ
ಗೆಗೆ ಹೋದರು. ಅಲ್ಲಿ ಪೇತ್ರನೂ, ಯಾಕೋಬನೂ, ಯೋ
ಹಾನನೂ, ಅಂದ್ರೆಯನೂ, ಫಿಲಿಪ್ಪನೂ, ಶೋಮನೂ, ಬಾ
ರ್ತೊಲೊಮಾಯನೂ, ಮತ್ತಾಯನೂ, ಅಲ್ಫಾಯನ ಮಗ
ನಾದ ಯಾಕೋಬನೂ, ಜೆಲೋತನೆಂಬ ಸೀಮೋನನೂ, ಯಾ
೧೪ ಕೋಬನ ಸಹೋದರನಾದ ಯೂದನೂ ಇರುತ್ತಿದ್ದರು. ಇವ
ರೆಲ್ಲರು ಸ್ತ್ರೀಯರ ಸಂಗಡಲೂ, ಯೇಸುವಿನ ತಾಯಿಯಾದ
ಮರಿಯಳ ಸಂಗಡಲೂ, ಅವನ ತಮ್ಮಂದಿರ ಸಂಗಡಲೂ, ಏಕ
ಮನಸ್ಸಾಗಿ, ಪ್ರಾರ್ಥನೆ ವಿಜ್ಞಾಪನೆಗಳಲ್ಲಿ ನೆಲೆಗೊಂಡಿದ್ದರು.

೧೫ ಆ ದಿವಸಗಳಲ್ಲಿ ಹೆಚ್ಚು ಕಡಿಮೆ ನೂರಿಪ್ಪತ್ತು ಮಂದಿ ಶಿಷ್ಯ
ರು ಇರಲಾಗಿ, ಅವರ ಮಧ್ಯದಲ್ಲಿ ಪೇತ್ರನು ಎದ್ದು, ಹೇಳಿದ್ದೇ
೧೬ ನಂದರೆ, ಸಹೋದರರೇ, ಯೇಸುವನ್ನು ಹಿಡಿದವರಿಗೆ ದಾರಿ
ತೋರಿಸಿದವನಾದ ಯೂದನನ್ನು ಕುರಿತು ಪರಿಶುದ್ಧಾತ್ಮವು ದಾ
ವೀದನ ಬಾಯಿಯಿಂದ ಮುಂದಾಗಿ ಹೇಳಿದ ಆ ಬರಹವು
೧೭ ಈಡೇರ ಬೇಕಾಗಿತ್ತು. ಹ್ಯಾಗಂದರೆ, ಅವನು ನಮ್ಮ ಸಂಗಡ
ಎಣಿಸಲ್ಪಟ್ಟು, ಈ ಸೇವೆಯಲ್ಲಿ ಪಾಲು ಹೊಂದಿದವನಾಗಿ,
೧೮ ಅನ್ಯಾಯದ ಸಂಬಳದಿಂದ ಹೊಲವನ್ನು ಕೊಂಡು ಕೊಂಡು,
ಬೋರಲ ಬಿದ್ದು, ನಡು ಒಡೆದು ಹೋಗಿ, ಅವನ ಕರುಳುಗಳೆಲ್ಲ
೧೯ ಚೆಲ್ಲಲ್ಪಟ್ಟವು. ಇದು ಯೆರೂಸಲೇಮಿನಲ್ಲಿ ವಾಸವಾಗಿರುವವರೆ
ಲ್ಲರಿಗೆ ತಿಳಿಯ ಬಂದದರಿಂದ, ಆ ಹೊಲಕ್ಕೆ ಅವರ ಸ್ವಭಾಷೆ
ಯಲ್ಲಿ, ಕಕ್ತದ ಹೊಲವೆಂಬ ಅಕೆಲ್ದಮ ಎಂದು ಹೆಸರಾಯಿತು.
೨೦ ಯಾಕಂದರೆ, ಅವನ ನಿವಾಸವು ಹಾಳಾಗಲಿ; ಅದರಲ್ಲಿ ವಾಸ
ಮಾಡುವವನು ಇಲ್ಲದೆ ಹೋಗಲಿ ಎಂದೂ, ಅವನ ಅಧ್ಯಕ್ಷತ್ವವ
ನ್ನು ಬೇರೊಬ್ಬನು ತಕ್ಕೊಳ್ಳಲಿ ಎಂದೂ, ಕೀರ್ತನೆಗಳ ಪು
೨೧ ಸ್ತಕದಲ್ಲಿ ಬರೆದಿದೆ, ಹೀಗಿರುವದರಿಂದ, ಯೋಹಾನನ ಸ್ನಾನವು
ಮೊದಲ್ಗೊಂಡು ಕರ್ತನಾದ ಯೇಸು ನಮ್ಮಲ್ಲಿಂದ ಎತ್ತಲ್ಪ
೨೨ ಟ್ಟ ದಿವಸದ ವರಿಗೂ, ಅವನು ನಮ್ಮಲ್ಲಿ ಬರುತ್ತಾ ಹೋಗುತ್ತಾ
ಇದ್ದ ಕಾಲವೆಲ್ಲಾ ನಮ್ಮ ಸಂಗಡ ಇದ್ದ ಜನರಾದ ಇವರಲ್ಲಿ ಒಬ್ಬ
ನು ನಮ್ಮ ಕೂಡ ಅವನ ಪುನರುತ್ಥಾನಕ್ಕೆ ಸಾಕ್ಷಿಯಾಗ ಬೇಕು.

೨೩ ಆಗಲವರು ಯುಸ್ತನೆಂಬ ಉಪನಾಮವುಳ್ಳ ಬರ್ಸಬನೆಂಬ
ಯೋಸೆಫನು, ಮತ್ತೀಯನು, ಇವರಿಬ್ಬರನ್ನು ನಿಲ್ಲಿಸಿ, ಪ್ರಾ
೨೪ ರ್ಥನೆ ಮಾಡಿದ್ದೇನಂದರೆ, ಎಲ್ಲರ ಹೃದಯಗಳನ್ನು ತಿಳಿದ
೨೫ ನಾದ ಕರ್ತನೇ, ಯೂದನು ಸ್ವಸ್ಥಳಕ್ಕೆ ಹೋಗುವ ಹಾಗೆ,
ಅಪರಾಧಿಯಾಗಿ ಕಳೆದು ಕೊಂಡ ಅಪೊಸ್ತಲತನವೆಂಬ ಸೇವೆಯ
ಲ್ಲಿ ಪಾಲನ್ನು ಹೊಂದುವದಕ್ಕೆ ಈ ಇಬ್ಬರೊಳಗೆ ನೀನು ಆರಿ
೨೬ ಕೊಂಡವನನ್ನು ತೋರಿಸು. ಆಗಲವರ ಚೇಟುಗಳನ್ನು ಹಾಕಿ
ಕೊಡುವಾಗ, ಮತ್ತೀಯನಿಗೆ ಚೇಟು ಬಂದದರಿಂದ, ಅವನು
ಹನ್ನೊಂದು ಅಪೊಸ್ತಲರ ಸಂಗಡ ಎಣಿಸಲ್ಪಟ್ಟನು.

### ೨. ಸಂಧಿ.

೧ ಮತ್ತು ಪಂಚಾಶತ್ತಿನ ದಿವಸವು ಪೂರ್ಣವಾದಾಗ, ಎಲ್ಲರು
೨ ಏಕ ಮನಸ್ಸಾಗಿ ಒಂದು ಸ್ಥಳದಲ್ಲಿ ಇರಲಾಗಿ, ಬೀಸುವ ಬಿರು
ಘುಳಿಯಂತಿರುವ ಶಬ್ದವು ಫಕ್ಕನೆ ಆಕಾಶದಲ್ಲಿ ಉಂಟಾಗಿ, ಅವ
೩ ರು ಕೂತು ಕೊಂಡಿರುವ ಮನೆಯಲ್ಲಾ ತುಂಬಿತು. ಮತ್ತು ಬೆಂಕಿ
ಯ ಉರಿಯಂತೆ ಭಾಗವಾದ ನಾಲಿಗೆಗಳು ಅವರಿಗೆ ಕಾಣಿಸಿ, ಅವ
೪ ರಲ್ಲಿ ಒಬ್ಬೊಬ್ಬನ ಮೇಲೆ ಕೂತು ಕೊಂಡವು. ಮತ್ತು ಎಲ್ಲರು
ಪರಿಶುದ್ಧಾತ್ಮದಿಂದ ತುಂಬಿದವರಾಗಿ, ಆತ್ಮವು ಅವರಿಗೆ ನುಡಿಯ
ಕೊಟ್ಟ ಪ್ರಕಾರ ಬೇರೆ ಭಾಷೆಗಳಿಂದ ಮಾತಾಡಲಾರಂಭಿಸಿದರು.



೫ ಆಕಾಶದ ಕೆಳಗಿರುವ ಸಕಲ ಜನಾಂಗಗಳೊಳಗೆ ಭಕ್ತಿಯುಳ್ಳ
ಜನರಾದ ಯೆಹೂದ್ಯರು ಯೆರೂಸಲೇಮಿನಲ್ಲಿ ವಾಸವಾಗಿದ್ದರು.
೬ ಆ ಶಬ್ದವು ಉಂಟಾಗುವಾಗ, ಸಮೂಹವು ಕೂಡಿ ಬಂದು, ಕಳ
ವಳ ಪಟ್ಟಿತು; ಯಾಕಂದರೆ ಒಬ್ಬೊಬ್ಬನು ತನ್ನ ತನ್ನ ಭಾಷೆ
೭ ಯಲ್ಲಿ ಅವರು ಮಾತಾಡುವದನ್ನು ಕೇಳಿದನು. ಆಗ ಎಲ್ಲರು
ಭ್ರಮಿಸಿ, ಆಶ್ಚರ್ಯ ಪಟ್ಟು, ಒಬ್ಬರಿಗೊಬ್ಬರು ಹೇಳಿ ಕೊಂಡ
ದ್ದೇನಂದರೆ, ಇಗೋ, ಮಾತಾಡುವ ಇವರೆಲ್ಲರು ಗಲಿಲಾಯದವ
೮ ರಲ್ಲವೋ? ಹಾಗಾದರೆ, ನಮ್ಮಲ್ಲಿ ಒಬ್ಬೊಬ್ಬರು ತಮ್ಮ ತಮ್ಮ
ಹುಟ್ಟು ಭಾಷೆಯಲ್ಲಿ ಕೇಳುವದೇನು? ಪಾರ್ಥ್ಯರೂ, ಮೇದ್ಯ
೯ ರೂ, ಎಲಾಮ್ಯರೂ, ಮೆಸೊಪೊತಾಮ್ಯ, ಯೆಹೂದ್ಯ, ಕಪ್ಪ
೧೦ ದೋಕ್ಯ, ಪೊಂತ, ಆಸ್ಯ, ಫ್ರುಗ್ಯ, ಪಂಫುಲ್ಯ, ಐಗುಪ್ತ ದೇಶಗ
ಳಲ್ಲಿಯೂ, ಕುರೇನೆಗೆ ಸಮೀಪವಾದ ಲುಬ್ಯದ ಭೀಮಗಳಲ್ಲಿ
೧೧ ಯೂ, ವಾಸವಾಗಿರುವವರೂ, ಪರವಾಸ ಮಾಡುವ ರೋಮಾಯ
ರೂ, ಯೆಹೂದ್ಯರೂ, ಮತ ಶೇರಿದವರೂ, ಕ್ರೇತ್ಯರೂ, ಅರಾ
೧೨ ಬ್ಯರೂ ಆಗಿರುವ ನಾವು, ಅವರು ನಮ್ಮ ಭಾಷೆಗಳಲ್ಲಿ ದೇವರ
ಮಹತ್ತಾದವುಗಳನ್ನು ನುಡಿಯುವದನ್ನು ಕೇಳುತ್ತೇವೆ. ಎಲ್ಲರು
ಭ್ರಮಿಸಿ, ಸಂದೇಹ ಪಟ್ಟು, ಒಬ್ಬರಿಗೊಬ್ಬರು, ಇದು ಏನಾದೀತು?
೧೩ ಅಂದರು. ಬೇರೆ ಕೆಲವರು ಹಾಸ್ಯ ಮಾಡಿ, ಅವರು ಭೀಯಾದ
ದ್ರಾಕ್ಷೇ ರಸದಿಂದ ತುಂಬಿದವರಾಗಿದ್ದಾರೆ, ಅಂದರು.

೧೪ ಆದರೆ ಪೇತ್ರನು ಹನ್ನೊಂದು ಮಂದಿಯ ಸಂಗಡ ನಿಂತು
ಕೊಂಡು, ತನ್ನ ಶಬ್ದವನ್ನೆತ್ತಿ, ಅವರಿಗೆ ಹೇಳ್ದೇನಂದರೆ, ಯೆಹೂ
೧೫ ದ್ಯರಾದ ಜನರೇ, ಯೆರೂಸಲೇಮಿನಲ್ಲಿ ವಾಸ ಮಾಡುವವರೆಲ್ಲ
ರೇ, ಇದು ನಿಮಗೆ ತಿಳಿದಿರಲಿ, ನನ್ನ ಮಾತುಗಳಿಗೆ ಕಿವಿ ಕೊಡಿರಿ;
ಏನಂದರೆ, ನೀವು ನೆನಸುವ ಪ್ರಕಾರ, ಇವರು ಮತ್ತರಲ್ಲ; ಯಾಕಂ
೧೬ ದರೆ ಇದು ಹಗಲಿನ ಮೂರನೇ ತಾಸು. ಆದರೆ ಇದು ಪ್ರವಾದಿಯಾ
೧೭ ದ ಯೋವೇಲನ ಮುಖಾಂತರವಾಗಿ ಹೇಳ್ಪಡ್ಡದ್ದು— ಕಡೇ ದಿನಗಳಲ್ಲಿ
ಏನಾಗುವದಂದರೆ, ಮಾಂಸವೆಲ್ಲಾದರ ಮೇಲೆ ನನ್ನ ಆತ್ಮವನ್ನು
ಹೊಯ್ಯುವೆನು; ನಿಮ್ಮ ಕುಮಾರ ಕುಮಾರ್ತೆಗಳು ಪ್ರವಾದಿಸು
ವರು; ನಿಮ್ಮ ಯೌವನಸ್ಥರು ದರ್ಶನಗಳನ್ನು ನೋಡುವರು;
೧೮ ನಿಮ್ಮ ಹಿರಿಯರು ಕನಸುಗಳನ್ನು ಕಾಣುವರು; ಆ ದಿನಗಳಲ್ಲಿ ನ
ನ್ನ ದಾಸರ ಮೇಲೆಯೂ, ನನ್ನ ದಾಸಿಗಳ ಮೇಲೆಯೂ, ನನ್ನ
೧೯ ಆತ್ಮನನ್ನು ಹೊಯ್ಯುವೆನು; ಆಗಲವರು ಪ್ರವಾದಿಸುವರು; ಮ
ತ್ತು ಮೇಲಿರುವ ಆಕಾಶದಲ್ಲಿ ಅದ್ಭುತಗಳನ್ನು ಕೆಳಗಿರುವ ಭೂ
ಮಿಯಲ್ಲಿ ಲಕ್ಷಣಗಳನ್ನೂ, ರಕ್ತವನ್ನೂ, ಬೆಂಕಿಯನ್ನೂ, ಹೊ
೨೦ ಗೆಯ ಹಬೆಯನ್ನೂ, ಕೊಡುವೆನು; ಕರ್ತನ ಪ್ರಸಿದ್ಧಿಯಾದ
ಮಹಾ ದಿನವು ಬರುವದಕ್ಕೆ ಮುಂಚೆ ಸೂರ್ಯನು ಕತ್ತಲೆಗೂ,
೨೧ ಚಂದ್ರನು ರಕ್ತಕ್ಕೂ, ಮಾರ್ಪಡುವವು; ಮತ್ತು ಆಗುವದೇನಂದ
ರೆ, ಕರ್ತನ ಹೆಸರನ್ನು ಕರೆಯುವವರೆಲ್ಲರು ರಕ್ಷಿಸಲ್ಪಡುವರೆಂ
ದು, ದೇವರು ಹೇಳುತ್ತಾನೆ.

೨೨ ಇಸ್ರಯೇಲ್ಯರಾದ ಜನರೇ, ಈ ವಾಕ್ಯಗಳನ್ನು ಕೇಳಿರಿ. ನಿಮ
ಗೂ ತಿಳಿದಿರುವ ಪ್ರಕಾರ ದೇವರು ನಿಮ್ಮ ಮಧ್ಯದಲ್ಲಿ ಅವನ
ಮುಖಾಂತರವಾಗಿ ನಡಿಸಿದ ಬಲವಾದ ಕ್ರಿಯೆಗಳಿಂದಲೂ, ಅ
ದ್ಭುತಗಳಿಂದಲೂ, ಲಕ್ಷಣಗಳಿಂದಲೂ ದೇವರು ನಮಗೆ ತೋರಿ
ಸಿದ ಮನುಷ್ಯನಾದ ನಜರೇತಿನ ಯೇಸುವನ್ನೇ, ದೇವರ ನಿಶ್ಚ
೨೩ ಯವಾದ ಚಿತ್ತ ಮುಂತಿಳಿವಿಕೆಗಳಿಂದ ಒಪ್ಪಿಸಲ್ಪಟ್ಟವನಾಗಿ,
ನೀವು ಹಿಡಿದು, ಅನ್ಯಾಯವಾದ ಕೈಗಳಿಂದ ಮೊಳೆ ಜಡಿದು,
೨೪ ಕೊಂದು ಹಾಕಿದಿರಿ. ದೇವರು ಮರಣದ ವ್ಯಥೆಗಳನ್ನು ಬಿಚ್ಚಿ,
ಅವನನ್ನು ಎಬ್ಬಿಸಿದನು; ಯಾಕಂದರೆ ಅವನು ಆರಿಂದ ಹಿಡಿ
೨೫ ಯಲ್ಪಡುವದು ಅಸಾಧ್ಯವಾಗಿತ್ತು. ಹ್ಯಾಗಂದರೆ ಅವನನ್ನು
ಕುರಿತು ದಾವೀದನು ಹೇಳುವದೇನಂದರೆ, ಕರ್ತನನ್ನು ಯಾವಾ
ಗ್ಯೂ ನನ್ನ ಮುಂದೆ ಮುಂನೋಡಿದೆನು ನಾನು ಕದಲದ ಹಾಗೆ
೨೬ ಅವನು ನನ್ನ ಬಲಗಡೆಯಲ್ಲಿ ಇದ್ದಾನೆ. ಆದಕ್ಕೋಸ್ಕರ ನನ್ನ
ಹೃದಯಕ್ಕೆ ಸಂತೋಷವೂ, ನನ್ನ ನಾಲಿಗೆಗೆ ಉಲ್ಲಾಸವೂ,
ಆಯಿತು. ಇದ್ದಲ್ಲದೆ ನನ್ನ ಮಾಂಸವು ನಿರೀಕ್ಷೆಯಾಗಿ ವಾಸ
೨೭ ಮಾಡುವದು; ಯಾಕಂದರೆ ನನ್ನ ಪ್ರಾಣವನ್ನು ಪಾತಾಳದಲ್ಲಿ
ಬಿಡದೆ, ನಿನ್ನ ಪರಿಶುದ್ಧನನ್ನು ಕೊಳೆಯುವಿಕೆ ನೋಡ ಗೊಡ
೨೮ ದೆ ಇರುವಿ; ಜೀವದ ಮಾರ್ಗಗಳನ್ನು ನನಗೆ ತಿಳಿಸಿದಿ; ನಿನ್ನ
ಸಮುಖದಲ್ಲಿ ನನ್ನನ್ನು ಸಂತೋಷದಿಂದ ತುಂಬಿಸುವಿ.

೨೯ ಸಹೋದರರಾದ ಜನರೇ, ಮೂಲ ಪಿತೃವಾದ ದಾವೀದನ
ವಿಷಯ ಧೈರ್ಯವಾಗಿ ನಿಮ್ಮ ಸಂಗಡ ಮಾತಾಡ ಬಹುದು.
ಅವನು ತೀರಿ ಹೋಗಿ, ಹೂಣಲ್ಪಟ್ಟನು; ಅವನ ಸಮಾಧಿಯು
೩೦ ಇಂದಿನ ವರಿಗೂ ನಮ್ಮಲ್ಲಿ ಅದೆ. ಅವನು ಪ್ರವಾದಿಯಾಗಿದ್ದು,
ತನ್ನ ಸಿಂಹಾಸನದ ಮೇಲೆ ಕೂತು ಕೊಳ್ಳುವದಕ್ಕೆ, ಕ್ರಿಸ್ತನನ್ನು
ಮಾಂಸದ ಪ್ರಕಾರ ತನ್ನ ಕೊಡೆಯ ಫಲದಿಂದ ಎಬ್ಬಿಸುವೆನೆಂ
೩೧ ದು, ದೇವರು ಆಣೆಯಿಂದ ತನಗೆ ಪ್ರಮಾಣ ಮಾಡಿದನೆಂದು
ತಿಳಿದು, ಕ್ರಿಸ್ತನ ಪುನರುತ್ಥಾನವನ್ನು ಕುರಿತು, ಅವನ ಪ್ರಾಣವು
ಪಾತಾಳದಲ್ಲಿ ಬಿಡಲ್ಪಡದೆ ಇರುವದನ್ನೂ ಅವನ ಮಾಂಸವು
ಕೊಳೆಯುವಿಕೆ ನೋಡದೆ ಇರುವದನ್ನೂ ಮುಂನೋಡಿ, ಮಾತಾ
೩೨ ಡಿದನು. ಈ ಯೇಸುವನ್ನು ದೇವರು ಎಬ್ಬಿಸಿದ್ದಾನೆ; ಅದಕ್ಕೆ
೩೩ ನಾವೆಲ್ಲರು ಸಾಕ್ಷಿಗಳಾಗಿದ್ದೇವೆ. ಹೀಗಿರುವದರಿಂದ ಅವನು ದೇವರ
ಬಲಗೈಯಿಂದ ಎತ್ತಲ್ಪಟ್ಟು, ಪರಿಶುದ್ಧಾತ್ಮದ ವಾಗ್ದತ್ತವನ್ನು ತಂ
೩೪ ದೆಯಿಂದ ಹೊಂದಿ, ನೀವು ಈಗ ನೋಡಿ ಕೇಳುವದನ್ನು ಹೊ
ಯಿದಿದ್ದಾನೆ. ಯಾಕಂದರೆ ದಾವೀದನು ಆಕಾಶಗಳಿಗೆ ಏರಿ ಹೋ
ಗಲಿಲ್ಲ; ಆದರೆ, ನಾನು ನಿನ್ನ ಶತ್ರುಗಳನ್ನು ನಿನ್ನ ಪಾದಗಳಿಗೆ
ಪೀಠವಾಗಿ ಇಡುವ ವರಿಗೂ ನನ್ನ ಬಲಪಾರ್ಶ್ವದಲ್ಲಿ ಕೂತು
೩೫ ಕೋ ಎಂದು, ಕರ್ತನು ನನ್ನ ಕರ್ತನಿಗೆ ಹೇಳ್ದದನೆಂಬದಾಗಿ ಅ
ವನೇ ಹೇಳುತ್ತಾನೆ.

೩೬ ಆದದರಿಂದ ನೀವು ಖಚಿತವಾಗಿ ಹಾಕಿದ ಈ ಯೇಸುವನ್ನೇ,
ದೇವರು ಕರ್ತನಾಗಿಯೂ ಕ್ರಿಸ್ತನಾಗಿಯೂ ಮಾಡಿದ್ದಾನೆಂದು,
ಇಸ್ರಯೇಲನ ಮನೆಯೆಲ್ಲಾ ನಿಶ್ಚಯವಾಗಿ ತಿಳುಕೊಳ್ಳಲಿ.

೩೭ ಇದನ್ನು ಕೇಳಿ, ಅವರು ಹೃದಯದಲ್ಲಿ ತಿವಿಯಲ್ಪಟ್ಟು,
ಪೇತ್ರನಿಗೂ ಮಿಕ್ಕಾದ ಅಪೊಸ್ತಲರಿಗೂ, ಸಹೋದರರಾದ ಜನ
೩೮ ರೇ, ಏನು ಮಾಡುವ? ಅಂದರು. ಪೇತ್ರನು ಅವರಿಗೆ, ನಿಮ್ಮಲ್ಲಿ
ಒಬ್ಬೊಬ್ಬನು ಮಾನಸಾಂತರ ಪಟ್ಟು, ನೀವೆಲ್ಲರು ಪಾಪಗಳ ಪರಿಹಾ
ರಕ್ಕೋಸ್ಕರ ಯೇಸು ಕ್ರಿಸ್ತನ ಹೆಸರಿನಲ್ಲಿ ಸ್ನಾನ ಹೊಂದಿರಿ;
೩೯ ಆಗ ಪರಿಶುದ್ಧಾತ್ಮದ ವರವನ್ನು ಹೊಂದುವಿರಿ. ಯಾಕಂದರೆ
ವಾಗ್ದತ್ತವು ನಿಮ್ಮ ದೇವರಾದ ಕರ್ತನು ಕರೆಯುವವ್ವರಾದ
ನಿಮಗೂ, ನಿಮ್ಮ ಮಕ್ಕಳಿಗೂ, ದೂರದಲ್ಲಿರುವವರೆಲ್ಲರಿಗೂ ಇ
೪೦ ರುತ್ತದೆ, ಅಂದನು. ಇನ್ನು ಬೇರೆ ಅನೇಕ ಮಾತುಗಳಿಂದ ಸಾಕ್ಷಿ
ಕೊಟ್ಟು, ಬುದ್ಧಿ ಹೇಳಿ, ಈ ಮೂರ್ಖ ಸಂತತಿಯಿಂದ ತಪ್ಪಿಸಿ
ಕೊಳ್ಳಿರಿ, ಅಂದನು.

೪೦ ಆಗಲವನ ವಾಕ್ಯವನ್ನು ಸಂತೋಷದವಾಗಿ ಅಂಗೀಕರಿಸಿದವರು ಸಾಯನ ಹೊಂದಿದರು. ಆ ದಿನದಲ್ಲಿ ಹೆಚ್ಚು ಕಡಿಮೆ ಮೂ
೪೧ ರು ಸಾವಿರ ಪ್ರಾಣಗಳು ಸೇರಿಸಲ್ಪಟ್ಟಿವು. ಅವರು ಅಪೊಸ್ತಲರ
ಬೋಧನೆಯಲ್ಲಿಯೂ, ಅನ್ಯೋನ್ಯದಲ್ಲಿಯೂ, ರೊಟ್ಟಿ ಮುರಿ
ಯುವದರಲ್ಲಿಯೂ, ಪ್ರಾರ್ಥನೆಗಳಲ್ಲಿಯೂ ನೆಲೆಯಾಗಿದ್ದರು.
೪೩ ಮತ್ತು ಎಲ್ಲ ಪ್ರಾಣಗಳಿಗೂ ಭಯವಾಯಿತು. ಅನೇಕ ಅದ್ಭು
ತಗಳೂ ಲಕ್ಷಣಗಳೂ ಅಪೊಸ್ತಲರ ಕೈಯಿಂದ ಉಂಟಾದವು.
೪೪ ಮತ್ತು ವಿಶ್ವಾಸಿಗಳೆಲ್ಲರು ಕೂಡಿ ಇದ್ದು, ಎಲ್ಲವನ್ನು ಹುದುವಾಗಿ
೪೫ ಅನುಭವಿಸಿ, ಆಸ್ತಿ ಸೊತ್ತುಗಳನ್ನು ಮಾರಿ ಬಿಟ್ಟು, ಒಬ್ಬೊಬ್ಬ
ರಿಗೆ ಬೇಕಾದ ಹಾಗೆ ಎಲ್ಲರಿಗೆ ಹಂಚಿ ಕೊಟ್ಟರು. ಮತ್ತು ದಿನಾಲ
ಏಕ ಮನಸ್ಸಾಗಿ ದೇವಾಲಯದಲ್ಲಿ ನೆಲೆಯಾಗಿದ್ದು, ಮನೆ ಮನೆ
ಯಲ್ಲಿ ಕೊಟ್ಟಿ ಮುರಿದು, ದೇವರನ್ನು ಹೊಗಳುತ್ತಾ, ಜನಕ್ಕೆಲ್ಲರ
೪೭ ದಯೆ ಹೊಂದುತ್ತಾ, ಆನಂದದಲ್ಲಿಯೂ ಹೃದಯದ ಸಾಧು
ತ್ವದಲ್ಲಿಯೂ ಆಹಾರವನ್ನು ತೆಗೆದು ಕೊಳ್ಳುತ್ತಿದ್ದರು. ಕರ್ತ
ನು ರಕ್ಷಿಸಲ್ಪಡುವವರನ್ನು ದಿನ ದಿನಕ್ಕೆ ಸಭೆಯಲ್ಲಿ ಸೇರಿಸಿದನು.

## ೩. ಸಂಧಿ.

೧ ಮತ್ತು ಪೇತ್ರನೂ ಯೋಹಾನನೂ ಪ್ರಾರ್ಥನೆಯ ತಾಸಾದ
ಬಂಥತ್ತನೇ ತಾಸಿನಲ್ಲಿ ದೇವಾಲಯಕ್ಕೆ ಕೂಡ ಏರಿ ಹೋದರು.
೨ ಆಗ ತನ್ನ ತಾಯಿಯ ಗರ್ಭದಿಂದಲೇ ಕುಂಟನಾದ ಒಬ್ಬ
ಮನುಷ್ಯನು ತರಲ್ಪಟ್ಟಿದ್ದನು. ದೇವಾಲಯದಲ್ಲಿ ಪ್ರವೇಶಿಸು
ವವರಿಂದ ಭಿಕ್ಷ ಬೇಡುವದಕ್ಕೋಸ್ಕರ ದೇವಾಲಯದ ಸುಂದರ
ವೆಂಬ ಹೆಸರುಳ್ಳ ಬಾಗಲಲ್ಲಿ ಅವನನ್ನು ದಿನ ದಿನಕ್ಕೆ ಕೂಡ್ರಿಸು
3 ತ್ತಿದ್ದರು. ಅವನು ದೇವಾಲಯದಲ್ಲಿ ಪ್ರವೇಶಿಸುವದಕ್ಕಿರುವ ಪೇತ್ರ
೪ ನನ್ನೂ ಯೋಹಾನನನ್ನೂ ನೋಡಿ, ಭಿಕ್ಷ ಬೇಡಲಾಗಿ, ಪೇತ್ರ
ನು ಯೋಹಾನನ ಕೂಡ ಅವನ ಮೇಲೆ ಕಣ್ಣಿಟ್ಟು, ನಮ್ಮನ್ನು
೫ ನೋಡು, ಅಂದನು. ಅವನು ಅವರಿಂದ ಏನಾದರೂ ಹೊಂದುವೆ
ನೆಂದು ನೆನಸಿ, ಅವರ ಮೇಲೆ ದೃಷ್ಟಿ ಇಟ್ಟನು.

೬ ಆಗ ಪೇತ್ರನು, ಬೆಳ್ಳಿಯೂ ಭಂಗಾರವೂ ನನಗೆ ಇಲ್ಲ; ಆದ
ರೆ ನನಗೆ ಇರುವದನ್ನು ನಿನಗೆ ಕೊಡುತ್ತೇನೆ; ನಜರೇತಿನವನಾದ
೭ ಯೇಸು ಕ್ರಿಸ್ತನ ಹೆಸರಿನಲ್ಲಿ ಎದ್ದು, ನಡೆದುಕೋ ಎಂದು ಹೇಳಿ,
೮ ಅವನ ಬಲಗೈಯನ್ನು ಹಿಡಿದು, ಅವನನ್ನು ಎತ್ತಿದನು. ಸಂಗತ
ಲೇ ಅವನ ಕಾಲುಗಳೂ ಗಿರಿಗೆಗಳೂ ಸ್ಥಿರವಾದವು. ಮತ್ತು ಅವನು
ಹಾರಿ, ನಿಂತು, ನಡೆದನು. ಮತ್ತು ನಡೆಯುತ್ತಾ, ಹಾರುತ್ತಾ, ದೇ
ವರನ್ನು ಹೊಗಳುತ್ತಾ, ಅವರ ಸಂಗತ ದೇವಾಲಯದೊಳಗೆ ಪ್ರ
೯ ವೇಶಿಸಿದನು. ಮತ್ತು ಜನಕ್ಕೆಲ್ಲರು ಅವನು ನಡೆಯುತ್ತಾ, ದೇವ
೧೦ ರನ್ನು ಹೊಗಳುತ್ತಾ ಇರುವದನ್ನು ನೋಡಿ, ದೇವಾಲಯದ
ಸುಂದರ ಬಾಸಲಲ್ಲಿ ಭಿಕ್ಷಕ್ಕೆ ಕೂತು ಕೊಂಡವನು ಇವನೇ ಎಂ
ದು ತಿಳಿದು, ಅವನಿಗೆ ಸಂಭವಿಸಿದ್ದಕ್ಕೆ ಭ್ರಮೆಯಿಂದಲೂ ವಿಸ್ಮ
ಯದಿಂದಲೂ ತುಂಬಾದರು.

೧೧ ಸ್ವಸ್ಥವಾದ ಆ ಕುಂಟನು ಪೇತ್ರನನ್ನೂ ಯೋಹಾನನ್ನೂ
ಹಿಡಿದಿರಲಾಗಿ, ಜನಕ್ಕೆಲ್ಲರು ಭ್ರಮೆಗೊಂಡು, ಅವರ ಬಳಿಗೆ ಸೊ
೧೨ ಲೊಪೋನನವೆಂಬ ಮಂಟಪಕ್ಕೆ ಓಡಿ, ಕೂಡಿ ಬಂದರು. ಪೇ
ತ್ರನು ಅದನ್ನು ನೋಡಿ, ಜನರಿಗೆ ಪ್ರತ್ಯುತ್ತರವಾಗಿ ಹೇಳಿದ್ದೇ
ನಂದರೆ, ಇಸ್ರಯೇಲ್ಯರಾದ ಜನರೇ, ಇದಕ್ಕೆ ನೀವು ಆಶ್ಚರ್ಯ
ಪಡುವದೇನು? ನಾವು ಸ್ವಂತ ಬಲದಿಂದಲಾದರೂ ಭಕ್ತಿಯಿಂದ
ಲಾದರೂ ಇವನನ್ನು ನಡಿಯ ಮಾಡಿದೆವೆಂದು, ನಮ್ಮ ಮೇಲೆ
೧೩ ಕಣ್ಣಿಡುವದೇನು? ಅಬ್ರಹಾಮನ, ಈಸಾಕನ, ಯಾಕೋಬನ
ದೇವರಾದ ನಮ್ಮ ಪಿತೃಗಳ ದೇವರು ತನ್ನ ಮಗನಾದ ಯೇಸು
ವನ್ನು ಮಹಿಮೆ ಪಡಿಸಿದ್ದಾನೆ. ಅವನನ್ನು ನೀವು ಒಪ್ಪಿಸಿ ಕೊಟ್ಟು,
ಅವನನ್ನು ಬಿಡಿಸುವದಕ್ಕೆ ನಿರ್ಣಯಿಸಿದ ಪಿಲಾತನ ಸಮುಖದಲ್ಲಿ
೧೪ ಬೊಂಕಿದಿರಿ. ಆದರೆ ನೀವು ಪರಿಶುದ್ಧತ್ವವೂ ನೀತಿಯೂ ಉಳ್ಳ
ವನನ್ನು ಬೊಂಕಿ, ಕೊಲೆಗಾರನಾದ ಮನುಷ್ಯನು ನಿಮಗೆ ದಯ
೧೫ ಪಾಲಿಸಲ್ಪಡುವದಕ್ಕೆ ಬೇಡಿ ಕೊಂಡಿರಿ. ಆದರೆ ಜೀವದ ನಾಯ
ಕನನ್ನು ಕೊಂದಿರಿ. ಅವನನ್ನು ದೇವರು ಸತ್ತವರೊಳಗಿಂದ ಎಬ್ಬಿ
೧೬ ಸಿದನು; ಅದಕ್ಕೆ ನಾವು ಸಾಕ್ಷಿಗಳಾಗಿದ್ದೇವೆ. ಮತ್ತು ಅವನ ಹೆಸ
ರು, ನೀವು ನೋಡುವಂಥ, ಗುರುತು ಕಂಡಂಥ ಇವನನ್ನು, ಅವನ
ಹೆಸರಿನ ವಿಶ್ವಾಸದಿಂದಲೇ ಸ್ಥಿರ ಮಾಡಿ ಅದೆ. ಅವನ ಮೂಲಕ
ವಾದ ವಿಶ್ವಾಸವು ನಿಮ್ಮೆಲ್ಲರ ಸನ್ನಿಧಿಯಲ್ಲಿ ಅವನಿಗೆ ಈ ಅಂಗ
ಕ್ಷೇಮವನ್ನು ಉಂಟು ಮಾಡಿತು.

೧೭ ಆದರೆ, ಸಹೋದರರೇ, ನಿಮ್ಮ ಅಧಿಪತಿಗಳ ಪ್ರಕಾರವೇ ನೀವು
ಅಜ್ಞಾನದಿಂದ ಮಾಡಿದಿರೆಂದು ಬಲ್ಲೆನು. ಆದರೆ ದೇವರು ತನ್ನ
ಸಕಲ ಪ್ರವಾದಿಗಳ ಬಾಯಿಯಿಂದ, ಕ್ರಿಸ್ತನು ಶ್ರಮೆ ಪಡ ಬೇ
೧೮ ಕೆಂದು, ಮುಂತಿಳಿಸಿದವುಗಳನ್ನು ಹೀಗೆ ಪೂರೈಸಿದ್ದಾನೆ. ಆದಕಾ
ರಣ ಕರ್ತನ ಸಮುಖದಿಂದ ವಿಶ್ರಾಂತಿಯ ಕಾಲಗಳು ಬರುವ
೧೯ ಹಾಗೆಯೂ, ದೇವರು ಲೋಕದಾರಭ್ಯ ತನ್ನ ಸಕಲ ಪರಿಶುದ್ಧ
ಪ್ರವಾದಿಗಳ ಬಾಯಿಯಿಂದ ಮಾತಾಡಿದಂಥ, ಸರ್ವವು ಹೊ
೨೦ ಸದಾಗಿ ಸ್ಥಾಪಿಸಲ್ಪಡುವಂಥ, ಕಾಲಗಳ ವರಿಗೂ, ಪರಲೋಕವು
ಅಂಗೀಕರಿಸ ಬೇಕಾದಂಥ, ಮುಂಚೆ ನಿಮಗೆ ಸಾರಲ್ಪಟ್ಟ ಯೇ
ಸು ಕ್ರಿಸ್ತನನ್ನು ದೇವರು ಕಳುಹಿಸುವ ಹಾಗೆಯೂ, ನಿಮ್ಮ ಪಾ
ಪಗಳು ಅಳಿಸಲ್ಪಡುವದಕ್ಕೆ ಮಾನಸಾಂತರ ಪಟ್ಟು, ತಿರುಗಿ
ಕೊಳ್ಳಿರಿ.

೨೨ ಯಾಕಂದರೆ ಮೋಶೆಯು ಪಿತೃಗಳಿಗೆ ಹೇಳಿದ್ದೇನಂದರೆ,
ನಿಮ್ಮ ದೇವರಾದ ಕರ್ತನು ನನ್ನ ಹಾಗಿರುವ ಪ್ರವಾದಿಯನ್ನು
ನಿಮ್ಮ ಸಹೋದರರೊಳಗಿಂದ ನಿಮಗೆ ಎಬ್ಬಿಸುವನು; ಅವನು
ನಿಮಗೆ ಹೇಳುವ ಎಲ್ಲಾ ವಿಷಯಗಳಲ್ಲಿ ಅವನನ್ನು ಕೇಳ ಬೇಕು.
೨೩ ಮತ್ತು ಆ ಪ್ರವಾದಿಯನ್ನು ಕೇಳದೆ ಇರುವ ಪ್ರಾಣಗಳೆಲ್ಲಾ ಜ
೨೪ ನರೊಳಗಿಂದ ನಾಶವಾಗಿ ಹೋಗುವವು. ಇದಲ್ಲದೆ ಸಮುವೇಲ
ನು ಮೊದಲುಗೊಂಡು ಮಾತಾಡಿದ ಎಲ್ಲಾ ಪ್ರವಾದಿಗಳು ಸಹ
ಈ ದಿವಸಗಳನ್ನು ಮುಂತಿಳಿಸಿದರು. ನೀವು ಪ್ರವಾದಿಗಳ ಮಕ್ಕ
೨೫ ಳೂ, ನಿನ್ನ ಬೀಜದಿಂದ ಭೂಮಿಯ ಸಮಸ್ತ ಸಂತತಿಗಳು ಆಶೀ
ರ್ವದಿಸಲ್ಪಡುವವೆಂದು, ಅಬ್ರಹಾಮನಿಗೆ ಹೇಳಿ, ದೇವರು ನಮ್ಮ
೨೬ ಪಿತೃಗಳಿಗೆ ಮಾತಿದ ಬಡಂಬಡಿಕೆಯ ಮಕ್ಕಳೂ—ಆಗಿದ್ದೀರಿ. ನಿ
ಮಗೆ ಮೊದಲು ದೇವರು ತನ್ನ ಮಗನಾದ ಯೇಸುವನ್ನು ಎಬ್ಬಿಸಿ,
ಒಬ್ಬೊಬ್ಬನನ್ನು ನಿಮ್ಮ ಕೆಟ್ಟತನಗಳಿಂದ ತೊಲಗಿಸುವದರಲ್ಲಿ
ನಿಮ್ಮನ್ನು ಆಶೀರ್ವದಿಸುವದಕ್ಕೆ ಅವನನ್ನು ಕಳುಹಿಸಿದ್ದಾನೆ.

## ೪. ಸಂಧಿ.

೧ ಅವರು ಜನರ ಸಂಗತ ಮಾತಾಡುತ್ತಿರಲಾಗಿ, ಯಾಜಕರೂ,
೨ ದೇವಾಲಯದ ಅಧಿಪತಿಯೂ, ಸದ್ದುಕಾಯರೂ, ಅವರು ಜನರಿ



ಗೆ ಬೋಧಿಸಿದ್ದಕ್ಕೂ, ಯೇಸುವಿನ ಮುಖಾಂತರ ಸತ್ತವರ ಪುನ
ರುತ್ಥಾನವನ್ನು ಪ್ರಸಂಗಿಸಿದಕ್ಕೂ ಕಕೆಕಕೆ ಪಟ್ಟು, ಅವರಿಗೆ ವಿ
3 ರೋಧವಾಗಿ ಎದ್ದು, ಅವರ ಮೇಲೆ ಕೈ ಹಾಕಿ, ಅವರನ್ನು ಮಾ
ರಣೆ ದಿವಸದ ವರಿಗೂ ಕಾವಲಿಯಲ್ಲಿ ಇಟ್ಟರು; ಯಾಕಂದರೆ
೪ ಸಂಜೆಯಾಗಿತ್ತು. ಆದರೆ ವಾಕ್ಯವನ್ನು ಕೇಳಿದವರಲ್ಲಿ ಅನೇಕ
ರು ವಿಶ್ವಾಸಿಸಿದರು; ಗಂಡಸರ ಲೆಖ್ಖವು ಹೆಚ್ಚು ಕಡಿಮೆ ಐದು
ಸಾವಿರವಾಗಿತ್ತು.

೫ ಮಾರಣೆ ದಿವಸ ಅವರ ಅಧಿಪತಿಗಳೂ, ಹಿರಿಯರೂ, ಶಾ
೬ ಸ್ತ್ರಿಗಳೂ, ಪ್ರಧಾನ ಯಾಜಕನಾದ ಅನ್ನಾನೂ, ಕಾಯಫನೂ,
ಯೋಹಾನನೂ, ಅಲೆಕ್ಸಾಂದ್ರನೂ, ಪ್ರಧಾನ ಯಾಜಕನ ನೆಂಟ
೭ ರೆಲ್ಲರೂ ಯೆರೂಸಲೇಮಿಗೆ ಕೂಡಿ ಬರೋಣವಾಯಿತು. ಇವ
ರು ಅವರನ್ನು ಮಧ್ಯದಲ್ಲಿ ನಿಲ್ಲಿಸಿ, ನೀವು ಯಾವ ಬಲದಿಂದ,
ಇಲ್ಲವೆ ಯಾವ ಹೆಸರಿನಿಂದ, ಇದನ್ನು ಮಾಡಿದಿರೆಂದು ಕೇಳಿ
ದರು.

೮ ಆಗ ಪೇತ್ರನು ಪರಿಶುದ್ಧಾತ್ಮದಿಂದ ತುಂಬಿದವನಾಗಿ, ಅವರಿಗೆ,
ಹೇಳಿದ್ದೇನಂದರೆ, ಜನರ ಅಧಿಪತಿಗಳೇ, ಇಸ್ರಯೇಲಿನ ಹಿರಿಯ
೯ ರೇ, ಕೋಗಿಷ್ಮನಾದ ಮನುಷ್ಯನಿಗೆ ಉಂಟಾದ ಉಪಕಾರದ ವಿ
ಷಯ, ಅವನು ಹ್ಯಾಗೆ ಸ್ವಸ್ಥವಾದನೆಂದು, ನಾವು ಈ ಹೊತ್ತು
೧೦ ವಿಚಾರಿಸಲ್ಪಟ್ಟರೆ, ನಿಮ್ಮೆಲ್ಲರಿಗೂ ಇಸ್ರಯೇಲಿನ ಜನಕ್ಕೆಲ್ಲರಿಗೂ
ಇದು ತಿಳಿದಿರಲಿ—ನೀವು ಶಿಲುಬೆಗೆ ಹಾಕಿದವನೂ, ಸತ್ತವರೊಳ
ಗಿಂದ ದೇವರು ಎಬ್ಬಿಸಿದವನೂ, ಆಗಿರುವ ನಜರೇತಿನವನಾದ
ಯೇಸು ಕ್ರಿಸ್ತನ ಹೆಸರಿನಿಂದಲೇ ಇವನು ನಿಮ್ಮ ಮುಂದೆ ಸ್ವಸ್ಥ
೧೧ ವಾಗಿ ನಿಂತು ಕೊಂಡಿದ್ದಾನೆ. ಅವನೇ ಮನೆ ಕಟ್ಟುವವರಾದ ನಿ
ಮ್ಮಿಂದ ತಿರಸ್ಕರಿಸಲ್ಪಟ್ಟು, ಕೋಣಾಗ್ರದ್ದಾದ ಕಲ್ಲಾಗಿದ್ದಾನೆ.
೧೨ ಮತ್ಯಾವನಲ್ಲಿಯೂ ರಕ್ಷಣೆ ಇಲ್ಲ; ಹ್ಯಾಗಂದರೆ, ಅದರಿಂದ
ನಾವು ರಕ್ಷಿಸಲ್ಪಡ ಬೇಕೆಂದು, ಆಕಾಶದ ಕೆಳಗೆ ಮನುಷ್ಯರಲ್ಲಿ
ಕೊಡಲ್ಪಟ್ಟ ಬೇರೆ ಹೆಸರು ಇಲ್ಲವೇ ಇಲ್ಲ.

೧೩ ಆದರೆ ಪೇತ್ರನ, ಯೋಹಾನನ ಧೈರ್ಯವನ್ನು ನೋಡಿ,
ಅವರು ಅಕ್ಷರ ಬಾರದವರೂ ಕಲಿಯದವರೂ ಎಂದು ಅರಿತು,
ಆಶ್ಚರ್ಯ ಪಟ್ಟು, ಅವರು ಯೇಸುವಿನ ಸಂಗತ ಇದ್ದರೆಂದು
೧೪ ತಿಳಿದು ಕೊಂಡರು. ಸ್ವಸ್ಥವಾದ ಆ ಮನುಷ್ಯನು ಅವರ ಸಂಗ
ತ ನಿಂತಿರುವದನ್ನು ನೋಡಿದಾಗ, ಅವರಿಗೆ ಅಡ್ಡಿ ಮಾತು ಇಲ್ಲದೆ
೧೫ ಹೋಯಿತು. ಆದರೆ ಅವರನ್ನು ಸಭೆಯ ಹೊರಗೆ ಹೋಗ ಆ
ಜ್ಞಾಪಿಸಿ ತಮ್ಮೊಳಗೆ ಆಲೋಚಿಸಿ ಕೊಂಡು, ಹೇಳಿದ್ದೇನಂದರೆ,
೧೬ ಈ ಮನುಷ್ಯರನ್ನು ಏನು ಮಾಡುವ? ಯಾಕಂದರೆ ಪ್ರಸಿದ್ಧವಾದ
ಅದ್ಭುತವು ಇವರಿಂದ ಆಯಿತೆಂದು ಯೆರೂಸಲೇಮಿನಲ್ಲಿ ವಾಸ
೧೭ ಮಾಡುವವರೆಲ್ಲರಿಗೆ ತಿಳಿದದೆ; ಅದನ್ನು ಬೊಂಕಲಾರೆವು. ಆದರೆ
ಅದು ಜನರಲ್ಲಿ ಹೆಚ್ಚಾಗಿ ಪ್ರಖ್ಯಾತವಾಗದ ಹಾಗೆ, ಈ ಹೆಸರಿನಲ್ಲಿ
ಇನ್ನೂ ಯಾವ ಮನುಷ್ಯನ ಸಂಗತಲಾದರೂ ಮಾತಾಡ ಬಾರ
೧೮ ದೆಂದು, ಅವರಿಗೆ ಖಂಡಿತವಾಗಿ ಬೆದರಿಸುವ. ಆಗಲವರನ್ನು ಕರಿಸಿ,
ಯೇಸುವಿನ ಹೆಸರನಲ್ಲಿ ಎದ್ದು ಮಾತ್ರ ಮಾತಾಡಲೂ ಬೋಧಿ
ಸಲೂ ಬಾರದೆಂದು, ಅವರಿಗೆ ಆಜ್ಞಾಪಿಸಿದರು.

೧೯ ಆದರೆ ಪೇತ್ರನು ಯೋಹಾನನೂ ಅವರಿಗೆ ಪ್ರತ್ಯುತ್ತರವಾಗಿ
ಹೇಳಿದ್ದೇನಂದರೆ, ದೇವರಿಗಿಂತ ನಿಮ್ಮನ್ನು ಹೆಚ್ಚಾಗಿ ಕೇಳುವದು
೨೦ ನ್ಯಾಯವೋ? ನಿರ್ಣಯಿಸಿರಿ. ಯಾಕಂದರೆ ನಾವು ನೋಡದ
೨೧ ವುಗಳನ್ನೂ ಕೇಳಿದವುಗಳನ್ನೂ ಮಾತಾಡದೆ ಇರಲಾರೆವು. ಆದರೆ
ಇವರು ಅವರನ್ನು ದಂಡಿಸುವ ಮಾರ್ಗವನ್ನು ಕಾಣದೆ, ಅವರ
ನ್ನು ಅಧಿಕವಾಗಿ ಬೆದರಿಸಿ, ಜನರ ನಿಮಿತ್ತ ಬಿಟ್ಟು ಬಿಟ್ಟರು; ಯಾ
ಕಂದರೆ ಆದ ಕಾರ್ಯಕ್ಕೋಸ್ಕರ ಎಲ್ಲರೂ ದೇವರನ್ನು ಮಹಿ
೨೨ ಮೆ ಪಡಿಸಿದರು. ಯಾಕಂದರೆ ಸ್ವಸ್ಥ ಮಾಡುವ ಗುರುತು ಉಂಟಾ
ದ ಆ ಮನುಷ್ಯನು ನಾಲ್ವತ್ತು ವರುಷದ ಮೇಲಿನವನಾಗಿದ್ದನು.

೨೩ ಅವರು ಬಿಡಿಸಲ್ಪಟ್ಟು, ತಮ್ಮ ಜನರ ಬಳಿಗೆ ಬಂದು, ಪ್ರಧಾನ
ಯಾಜಕರೂ ಹಿರಿಯರೂ ತಮಗೆ ಹೇಳಿದವುಗಳನೆಲ್ಲಾ ತಿಳಿಸಿದ
೨೪ ರು. ಇವರು ಕೇಳಿ, ಏಕ ಮನಸ್ಸಾಗಿ ದೇವರ ಕಡೆಗೆ ಶಬ್ದವನೆತ್ತಿ,
ಹೇಳಿದ್ದೇನಂದರೆ, ಪ್ರಭುವೇ, ಆಕಾಶವನ್ನೂ, ಭೂಮಿಯನ್ನೂ,
ಸಮುದ್ರವನ್ನೂ, ಅವುಗಳೊಳಗಿರುವ ಎಲ್ಲವುಗಳನ್ನೂ ನಿರ್ಮ
೨೫ ಸಿದ ದೇವರು ನೀನೇ. ಜನಾಂಗಳು ಗುಲ್ಲು ಮಾಡುವದೂ, ಜನ
ಗಳು ವ್ಯರ್ಥವಾದದ್ದನ್ನು ಯೋಚಿಸುವದೂ ಯಾಕೆ? ಕರ್ತ
ನಿಗೆ ವಿರೋಧವಾಗಿಯೂ ಅವನ ಕ್ರಿಸ್ತನಿಗೆ ವಿರೋಧವಾಗಿಯೂ
೨೬ ಭೂರಾಜರೂ ನಿಂತು ಕೊಂಡು, ಅಧಿಪತಿಗಳು ಕೂಡಿ ಕೊಂಡರೆಂ
ದು, ನಿನ್ನ ಸೇವಕನಾದ ದಾವೀದನ ಬಾಯಿಂದಂದ ಹೇಳಿದವನು
೨೭ ನೀನೇ. ನಿಜವಾಗಿ ನೀನು ಅಭಿಷೇಕಿಸಿದ ನಿನ್ನ ಪರಿಶುದ್ಧ ಮಗನಾ
ದ ಯೇಸುವಿಗೆ ವಿರೋಧವಾಗಿ ಹೆರೋದನೂ ಪೊಂತ್ಯ ಪಿಲಾತ
ನೂ, ಜನಾಂಗಗಳ ಸಂಗತಲೂ, ಇಸ್ರಯೇಲಿನ ಜನರ ಸಂಗತ
೨೮ ಲೂ, ನಿನ್ನ ಕೈಯೂ ನಿನ್ನ ಚಿತ್ತವೂ ಮುಂನೇಮಿಸಿದಂಥ ಆಗ
೨೯ ತಕ್ಕವುಗಳೆನ್ನೆಲ್ಲಾ ಮಾಡುವದಕ್ಕೆ ಕೂಡಿ ಕೊಂಡರು. ಮತ್ತು,
ಕರ್ತನೇ, ಈಗ ಅವರ ಬೆದರಿಸುವಿಕೆಗಳನ್ನು ನೋಡಿ, ಸ್ವಸ್ಥ
೩೦ ಮಾಡುವದಕ್ಕೂ, ನಿನ್ನ ಪರಿಶುದ್ಧ ಮಗನಾದ ಯೇಸುವಿನ ಹೆಸ
ರಿನಿಂದ ಲಕ್ಷಣಗಳೂ ಅದ್ಭುತಗಳೂ ಆಗುವದಕ್ಕೂ, ನಿನ್ನ ಕೈ
ಯನ್ನು ಚಾಚಿ, ನಿನ್ನ ವಾಕ್ಯವನ್ನು ಪೂರ್ಣ ಧೈರ್ಯದಿಂದ
೩೧ ಮಾತಾಡುವದಕ್ಕೆ ನಿನ್ನ ದಾಸರಿಗೆ ಕೊಡು. ಅವರು ಪ್ರಾರ್ಥಿಸ
ಲಾಗಿ, ಅವರು ಕೂಡಿ ಕೊಂಡಿರುವ ಸ್ಥಳವು ಕದಲಿತು; ಮತ್ತು
ಎಲ್ಲರು ಪರಿಶುದ್ಧಾತ್ಮದಿಂದ ತುಂಬಿದವರಾಗಿ, ದೇವರ ವಾಕ್ಯ
ವನ್ನು ಧೈರ್ಯವಾಗಿ ನುಡಿದರು.

೩೨ ವಿಶ್ವಾಸಿಸುವವರ ಸಮೂಹದ ಹೃದಯವೂ ಆತ್ಮವೂ ಒಂದೇ
ಆಗಿತ್ತು. ಮತ್ತು ಒಬ್ಬನಾದರೂ ತನಗೆ ಉಂಟಾದವುಗಳಲ್ಲಿ ಒಂ
ದಾದರೂ ತನ್ನದೆಂದು ಹೇಳಿಲ್ಲ; ಆದರೆ ಎಲ್ಲಾ ಅವರಿಗೆ ಹುದು
33 ವಾಗಿತ್ತು. ಮತ್ತು ಅಪೊಸ್ತಲರು ಮಹಾ ಬಲದಿಂದ ಕರ್ತನಾದ
ಯೇಸುವಿನ ಪುನರುತ್ಥಾನಕ್ಕೆ ಸಾಕ್ಷಿ ಕೊಟ್ಟರು; ಮಹಾ ಕೃಪೆ
೩೪ ಯು ಅವರೆಲ್ಲರ ಮೇಲೆ ಇತ್ತು. ಹ್ಯಾಗಂದರೆ ಅವರೊಳಗೆ ಕೊ
ರತೆ ಪಡುವವನು ಒಬ್ಬನೂ ಇರಲಿಲ್ಲ; ಯಾಕಂದರೆ ಹೊಲಗಳಾ
ದರೂ ಮನೆಗಳಾದರೂ ಉಂಟಾದವರೆಲ್ಲರು ಮಾರಿ ಬಿಟ್ಟು, ಮಾರಿ
೩೫ ದವುಗಳ ಕ್ರಯವನ್ನು ತಂದು, ಅಪೊಸ್ತಲರ ಪಾದಗಳ ಹತ್ತರ
ಇಟ್ಟರು; ಮತ್ತು ಒಬ್ಬೊಬ್ಬನಿಗೆ ಅಗತ್ಯವಿದ್ದ ಹಾಗೆ ಹಂಚಿ
ಕೊಡಲ್ಪಟ್ಟಿತು.

೩೬ ಮತ್ತು ಆದರಣೆಯ ಮಗನೆಂಬ ಅರ್ಥವುಳ್ಳ ಬರ್ನಬನೆಂ
ದು ಉಪನಾಮವನ್ನು ಅಪೊಸ್ತಲರಿಂದ ಹೊಂದಿದಂಥ, ಕುಪ್ರದಲ್ಲಿ
೩೭ ಹುಟ್ಟಿದಂಥ ಲೇವ್ಯನಾದಂಥ, ಯೋಸೆಯು ಭೂಮಿ ಉಂಟಾ
ದವನಾಗಿ ಅದನ್ನು ಮಾರಿ ಬಿಟ್ಟು, ಹಣವನ್ನು ತಂದು, ಅಪೊಸ್ತ
ಲರ ಪಾದಗಳ ಹತ್ತರ ಇಟ್ಟನು.

## ೫. ಸಂಧಿ.

೧ ಆದರೆ ಅನನೀಯನೆಂಬ ಒಬ್ಬ ಮನುಷ್ಯನು ತನ್ನ ಹೆಂಡತಿ
ಯಾದ ಸಪ್ಫೈರಳ ಸಂಗಡ ಒಂದು ಆಸ್ತಿಯನ್ನು ಮಾರಿ ಬಿಟ್ಟ
೨ ನು. ಅವನು, ಹೆಂಡತಿಗೂ ತಿಳಿದಿರಲಾಗಿ, ಕ್ರಯದಲ್ಲಿ ಬಂದು
ಪಾಲು ಮಡಗಿ ಕೊಂಡು, ಒಂದು ಪಾಲು ತಂದು, ಅಪೊಸ್ತಲರ
೩ ಪಾದಗಳ ಹತ್ತರ ಇಟ್ಟನು. ಆಗ ಪೇತ್ರನು, ಅನನೀಯನೇ, ನೀ
ನು ಪರಿಶುದ್ಧಾತ್ಮಕ್ಕೆ ಸುಳ್ಳಾಡಿ, ಆ ಹೊಲದ ಕ್ರಯದಲ್ಲಿ ಬಂದು
ಪಾಲು ಮಡಗಿ ಕೊಳ್ಳುವ ಹಾಗೆ, ಸೈತಾನನು ಯಾಕೆ ನಿನ್ನ
೪ ಹೃದಯವನ್ನು ತುಂಬಿಸಿದ್ದಾನೆ? ಅದು ನಿನ್ನಲ್ಲಿ ಇದ್ದು, ನಿನ್ನ
ದಾಗಿತ್ತಲ್ಲವೋ! ಮಾರಿದ ಮೇಲೆ ನಿನ್ನ ವಶವಾಗಿತ್ತಲ್ಲವೋ?
ಯಾಕೆ ಈ ಕಾರ್ಯವನ್ನು ನಿನ್ನ ಹೃದಯದಲ್ಲಿ ಇಟ್ಟು ಕೊಂ
೫ ಡಿ! ಮನುಷ್ಯರಿಗಲ್ಲ, ದೇವರಿಗೆ ಸುಳ್ಳಾಡಿದಿ, ಅಂದನು. ಅನನೀ
ಯನು ಈ ಮಾತುಗಳನ್ನು ಕೇಳಿ, ಬಿದ್ದು, ಪ್ರಾಣ ಬಿಟ್ಟನು.
ಮತ್ತು ಇವುಗಳನ್ನು ಕೇಳುವವರೆಲ್ಲರಿಗೆ ಮಹಾ ಭಯ ಉಂಟಾ
೬ ಯಿತು. ಯೌವನಸ್ಥರು ಎದ್ದು, ಅವನನ್ನು ಕಟ್ಟಿ, ಹೊತ್ತು
ಕೊಂಡು ಹೋಗಿ, ಹೂಣಿಟ್ಟರು.

೭ ಹೆಚ್ಚು ಕಡಿಮೆ ಮೂರು ತಾಸಿನ ಹೊತ್ತು ಹೋದ ಮೇಲೆ,
ಅವನ ಹೆಂಡತಿಯು, ಆದದ್ದನ್ನು ತಿಳಿಯದೆ, ಒಳಗೆ ಬಂದಳು.
೮ ಪೇತ್ರನು ಅವಳಿಗೆ, ಅಮ್ಮಾ ಹೂಣಕ್ಕೆ ಆ ಹೊಲವನ್ನು ಮಾರಿ
ಬಿಟ್ಟಿರೋ? ನನಗೆ ಹೇಳು, ಅನ್ನಲಾಗಿ, ಅವಳು, ಹೌದು, ಅಮ್ಮಾ
೯ ಕ್ಕೆ, ಅಂದಳು. ಆಗ ಪೇತ್ರನು ಅವಳಿಗೆ, ಕರ್ತನ ಆತ್ಮವನ್ನು
ಶೋಧಿಸುವದಕ್ಕೆ ನೀವು ಸಮ್ಮತಿಸಿದ್ದು ಯಾಕೆ! ಇಗೋ, ನಿನ್ನ
ಗಂಡನನ್ನು ಹೂಣಿಟ್ಟವರ ಪಾದಗಳು ಬಾಗಲಲ್ಲಿ ಅವೆ; ಅವರು
೧೦ ನಿನ್ನನ್ನೂ ಹೊತ್ತು ಕೊಂಡು ಹೋಗುವರು, ಅಂದನು. ಸಂಗ
ತಪೇ ಅವಳು ಅವನ ಪಾದಗಳ ಹತ್ತರ ಬಿದ್ದು, ಪ್ರಾಣ ಬಿಟ್ಟಳು.
ಯೌವನಸ್ಥರು ಒಳಗೆ ಬಂದು, ಅವಳು ಸತ್ತಿರುವದನ್ನು ಕಂಡು,
ಅವಳನ್ನು ಹೊತ್ತು ಕೊಂಡು ಹೋಗಿ, ಅವಳ ಗಂಡನ ಹತ್ತರ
೧೧ ಹೂಣಿಟ್ಟರು. ಮತ್ತು ಸಮಸ್ತ ಸಭೆಗೂ, ಇವುಗಳನ್ನು ಕೇಳು
ವವರೆಲ್ಲರಿಗೂ, ಮಹಾ ಭಯವಾಯಿತು.

೧೨ ಇದಲ್ಲದೆ ಅಪೊಸ್ತಲರ ಕೈಗಳಿಂದ ಜನರಲ್ಲಿ ಅನೇಕ ಲಕ್ಷಣ
ಗಳೂ ಅದ್ಭುತಗಳೂ ಉಂಟಾದವು. ಮತ್ತು ಅವರೆಲ್ಲರು ಏಕ
೧೩ ಮನಸ್ಸಾಗಿ ಸೊಲೊಮೋನನ ಮಂಟಪದಲ್ಲಿ ಇದ್ದರು. ಮಿಕ್ಕಾ
ದವರಲ್ಲಿ ಯಾವನೂ ಅವರಿಗೆ ಕೂಡಿ ಕೊಳ್ಳ ಧೈರ್ಯ ಪಡ
೧೪ ಲಿಲ್ಲ; ಆದರೆ ಜನರು ಅವರನ್ನು ಮಹಿಮೆ ಪಡಿಸಿದರು. ಮತ್ತು
ವಿಶ್ವಾಸಿಸುವವರಾದ ಗಂಡಸರು, ಹೆಂಗಸರ ಸಮೂಹಗಳು ಹೆಚ್ಚಾ
೧೫ ಗಿ ಕರ್ತನಿಗೆ ಸೇರಿಸಲ್ಪಟ್ಟವು. ಹೀಗಿರುವದರಿಂದ ಪೇತ್ರನು ಬರ
ಲಾಗಿ, ಅವನ ನೆರಳಾದರೂ ಅವರಲ್ಲಿ ಯಾವನ ಮೇಲಾದರೂ
ಬಿದ್ದೀತೇನೋ ಎಂದು; ಕೋಗಿಮ್ಮರನ್ನು ಬೀದಿಗಳಲ್ಲಿ ಹೊರಗೆ
ತಂದು, ಮಂಚಗಳ ಮೇಲೆಯೂ ಹಾಸಿಗೆಗಳ ಮೇಲೆಯೂ ಇ
೧೬ ಟ್ಟರು. ಇದಲ್ಲದೆ ಸುತ್ತಲಿರುವ ಪಟ್ಟಣಗಳ ಸಮೂಹವು ಸಹ ಗುಂ
ಪಾಗಿ ಕೋಗಿಮ್ಮರನ್ನೂ, ಅಶುದ್ಧಾತ್ಮಗಳಿಂದ ಕಷ್ಟ ಪಡುವವರ
ನ್ನೂ, ತೆಗೆದು ಕೊಂಡು ಬಂದರು. ಅವರೆಲ್ಲರು ಸ್ವಸ್ಥ ಮಾಡ
ಲ್ಪಟ್ಟರು.

೧೭ ಆಗ ಪ್ರಧಾನ ಯಾಜಕನೂ, ಅವನ ಸಂಗಡ ಇದ್ದ ಸದ್ದುಕಾ
ಯರ ಮತವಲ್ಲವೂ ಎದ್ದು, ಆಸಕ್ತಿಯಿಂದ ತುಂಬಿದವರಾಗಿ,
೧೮ ಅಪೊಸ್ತಲರ ಮೇಲೆ ತಮ್ಮ ಕೈಗಳನ್ನು ಹಾಕಿ, ಅವರನ್ನು ಪಟ್ಟಣ
೧೯ ದ ಶೆರೆಮನೆಯಲ್ಲಿ ಇಟ್ಟರು. ಆದರೆ ರಾತ್ರಿಯಲ್ಲಿ ಕರ್ತನ ದೂ
ತನು ಶೆರೆಮನೆಯ ಬಾಗಲುಗಳನ್ನು ತೆರೆದು, ಅವರನ್ನು ಹೊರಗೆ
೨೦ ನಡಿಸಿ, ನೀವು ಹೋಗಿ ದೇವಾಲಯದಲ್ಲಿ ನಿಂತು ಕೊಂಡು, ಈ ಜೀ
೨೧ ವದ ಮಾತುಗಳನ್ನೆಲ್ಲಾ ಜನರಿಗೆ ಹೇಳಿರಿ, ಅಂದನು. ಅವರು ಕೇಳಿ,
ಬೆಳಿಗ್ಯೆ ದೇವಾಲಯಕ್ಕೆ ಹೋಗಿ, ಬೋಧಿಸಿದರು. ಆದರೆ ಪ್ರಧಾ
ನ ಯಾಜಕನೂ, ಅವನ ಸಂಗಡ ಇದ್ದವರೂ ಬಂದು, ಮಂತ್ರಿ ಸ
ಭೆಯನ್ನೂ ಇಸ್ರಯೇಲನ ಮಕ್ಕಳ ಹಿರಿಯರೆಲ್ಲರನ್ನೂ ಕೂಡ
ಕರಿಸಿ, ಅವರನ್ನು ತರ ಬೇಕೆಂದು, ಶೆರೆಮನೆಗೆ ಕಳುಹಿಸಿದರು.

೨೨ ಊಳಿಗದವರು ಬಂದು, ಶೆರೆಮನೆಯಲ್ಲಿ ಅವರನ್ನು ಕಾಣದೆ,
೨೩ ತಿರಿಗಿ ಹೋಗಿ, ಶೆರೆಮನೆಯು ಬಹಳ ಭದ್ರವಾಗಿ ಮುಚ್ಚಿ ಇರುವ
ದನ್ನೂ, ಕಾವಲಿಗಾರರು ಬಾಗಲುಗಳ ಮುಂದೆ ನಿಂತಿರುವದನ್ನೂ
ಕಂಡೆವು; ಆದರೆ ತೆರೆದಾಗ, ಒಳಗೆ ಯಾರನ್ನೂ ಕಾಣಲಿಲ್ಲವೆಂದು
೨೪ ತಿಳಿಸಿದರು. ಪ್ರಧಾನ ಯಾಜಕನೂ, ದೇವಾಲಯದ ಅಧಿಪತಿ
ಯೂ, ಮುಖ್ಯ ಯಾಜಕರೂ ಈ ಮಾತುಗಳನ್ನು ಕೇಳಿ, ಇದೇ
೨೫ ನಾದೀತೆಂದು, ಅವುಗಳ ವಿಷಯವಾಗಿ ಸಂದೇಹ ಪಟ್ಟರು. ಆಗ
ಒಬ್ಬನು ಬಂದು, ಇಗೋ, ನೀವು ಶೆರೆಯಲ್ಲಿ ಇಟ್ಟ ಮನುಷ್ಯರು
ದೇವಾಲಯದಲ್ಲಿ ನಿಂತು ಕೊಂಡು, ಜನರಿಗೆ ಬೋಧಿಸುತ್ತಾ ಇ
ದ್ದಾರೆಂದು, ಅವರಿಗೆ ತಿಳಿಸಿದನು.

೨೬ ಆಗ ಅಧಿಪತಿಯು ಊಳಿಗದವರ ಸಂಗಡ ಹೋಗಿ, ಅವರ
ನ್ನು ಕರಕೊಂಡು ಬಂದನು; ಬಲಾತ್ಕಾರದಿಂದಲ್ಲ; ಯಾಕಂದರೆ
೨೭ ತಾವು ಕಲ್ಲೆಸೆಯಲ್ಪಟ್ಟೀವೆಂದು, ಜನರಿಗೆ ಭಯ ಪಟ್ಟರು. ಅವರ
ನ್ನು ಕರಕೊಂಡು ಬಂದು, ಮಂತ್ರಿ ಸಭೆಯಲ್ಲಿ ನಿಲ್ಲಿಸಿದಾಗ, ಪ್ರಧಾ
೨೮ ನ ಯಾಜಕನು ಅವರನ್ನು ಕೇಳಿದ್ದೇನಂದರೆ, ಈ ಹೆಸರಿನಲ್ಲಿ
ಬೋಧಿಸ ಬಾರದೆಂದು, ನಾವು ನಿಮಗೆ ಖಂಡಿತವಾಗಿ ಆಜ್ಞಾಪಿಸ
ಲಿಲ್ಲವೋ? ಮತ್ತು, ಇಗೋ, ಯೆರೂಸಲೇಮನ್ನೆಲ್ಲಾ ನಿಮ್ಮ
ಬೋಧನೆಯಿಂದ ತುಂಬಿಸಿದ್ದೀರಿ. ಈ ಮನುಷ್ಯನ ರಕ್ತವನ್ನು
ನಮ್ಮ ಮೇಲೆ ಬರ ಮಾಡ ಬೇಕೆಂದಿದ್ದೀರಿ.

೨೯ ಆಗ ಪೇತ್ರನೂ ಅಪೊಸ್ತಲರೂ ಪ್ರತ್ಯುತ್ತರವಾಗಿ ಹೇಳಿದ್ದೇ
ನಂದರೆ, ಮನುಷ್ಯರಿಗಿಂತ ಹೆಚ್ಚಾಗಿ ದೇವರಿಗೆ ವಿಧೇಯರಾಗಿರ
೩೦ ಬೇಕು. ನೀವು ಮರದ ಮೇಲೆ ತೂಗಿಸಿ, ಕೊಂದು ಹಾಕಿದ
೩೧ ಯೇಸುವನ್ನು ನಮ್ಮ ಪಿತೃಗಳ ದೇವರು ಎಬ್ಬಿಸಿದ್ದಾನೆ. ದೇವ
ರು ಇವನನ್ನು ನಾಯಕನಾಗಿಯೂ ರಕ್ಷಕನಾಗಿಯೂ ಇಸ್ರ
ಯೇಲಿಗೆ ಮಾನಸಾಂತರವನ್ನೂ ಪಾಪಗಳ ಪರಿಹಾರವನ್ನೂ
೩೨ ಕೊಡುವದಕ್ಕೋಸ್ಕರ ತನ್ನ ಬಲಗೈಯಿಂದ ಎತ್ತಿದ್ದಾನೆ. ಮ
ತ್ತು ಈ ಮಾತುಗಳಿಗೆ ನಾವೂ, ತನಗೆ ವಿಧೇಯವಾಗಿರುವವರಿಗೆ
ದೇವರು ಕೊಟ್ಟ ಪರಿಶುದ್ಧಾತ್ಮವೂ, ಅವನ ಸಾಕ್ಷಿಗಳಾಗಿದ್ದೇವೆ.

೩೩ ಅವರು ಕೇಳಿ, ಇರಿಯಲ್ಪಟ್ಟು, ಅವರನ್ನು ಕೊಲ್ಲುವದಕ್ಕೆ
೩೪ ಯೋಚನೆ ಮಾಡಿದರು. ಆದರೆ ಸಮಸ್ತ ಜನರಲ್ಲಿ ಘನವುಳ್ಳ
ವನೂ ನ್ಯಾಯಶಾಸ್ತ್ರಿಯೂ ಆಗಿರುವ ಗಮಾಲಿಯೇಲನೆಂಬ
ಒಬ್ಬ ಫರಿಸಾಯನು ಮಂತ್ರಿ ಸಭೆಯಲ್ಲಿ ಎದ್ದು, ಅಪೊಸ್ತಲರನ್ನು
ಸ್ವಲ್ಪ ಹೊರಗೆ ಕಳುಹಿಸ ಆಜ್ಞಾಪಿಸಿ, ಅವರಿಗೆ ಹೇಳ್ದೇನಂದರೆ,
೩೫ ಇಸ್ರಯೇಲ್ಯರಾದ ಜನರೇ, ಈ ಮನುಷ್ಯರ ವಿಷಯವಾಗಿ ನೀ
ವು ಮಾಡಲಿಕ್ಕಿರುವದೇನೆಂದು, ನಿಮಗೆ ನೀವೇ ಜಾಗ್ರತೆಯಾಗಿರಿ.



೩೬ ಯಾಕಂದರೆ ಈ ದಿವಸಗಳಿಗೆ ಮುಂಚೆ ಥೈದನು, ತಾನು ಒಬ್ಬ
ನೆಂದು ಅಂದು ಕೊಂಡು, ಎದ್ದನು. ಅವನಿಗೆ ಹೆಚ್ಚು ಕಡಿಮೆ ನಾ
ನೂರು ಮಂದಿ ಕೂಡಿ ಕೊಂಡರು; ಅವನು ಕೊಲ್ಲಲ್ಪಟ್ಟನು;
೩೭ ಅವನನ್ನು ನಂಬಿದವರೆಲ್ಲರು ಚದರಿ, ಇಲ್ಲದೆ ಹೋದರು. ಇವನ
ತರುವಾಯ ಮನೇ ಲೆಖ್ಖ ಬರೆದ ದಿವಸಗಳಲ್ಲಿ ಗಲಿಲಾಯದವ
ನಾದ ಯೂದನು ಎದ್ದು, ಬಹು ಜನರನ್ನು ತನ್ನ ಹಿಂದೆ ಎಳ್ಳ
ಕೊಂಡನು. ಅವನು ಸಹ ನಾಶವಾದನು; ಅವನನ್ನು ನಂಬಿದವ
೩೮ ರೆಲ್ಲರು ಚದರಿ ಹೋದರು. ಈಗ ನಾನು ನಿಮಗೆ ಹೇಳುವದೇ
ನಂದರೆ, ಈ ಮನುಷ್ಯರ ಗೊಡವೆಗೆ ಹೋಗದೆ, ಅವರನ್ನು ಬಿ
ಡಿರಿ; ಯಾಕಂದರೆ ಈ ಆಲೋಚನೆಯೂ ಈ ಕೆಲಸವೂ ಮನು
೩೯ ಷ್ಯರದಾಗಿದ್ದರೆ, ಲಯವಾಗುವದು. ಆದರೆ ದೇವರದಾಗಿದ್ದರೆ,
ಅದನ್ನು ಲಯ ಮಾಡಲಾರಿರಿ; ಬಂದು ವೇಳೆ ನೀವು ದೇವ ವಿರೋ
೪೦ ಧಿಗಳಾಗಿ ಕಾಣಲ್ಪಡುವಿರಿ. ಅವರು ಇವನಿಗೆ ಒಪ್ಪಿ ಕೊಂಡು,
ಅಪೊಸ್ತಲರನ್ನು ಕರೇ ಕಳುಹಿಸಿ, ಹೊಡಿಸಿ, ಯೇಸುವಿನ ಹೆಸರಿ
ನಲ್ಲಿ ಮಾತಾಡ ಬಾರದೆಂದು ಆಜ್ಞಾಪಿಸಿ, ಅವರನ್ನು ಬಿಟ್ಟು ಬಿ
ಟ್ಟರು.

೪೧ ಆದರೆ ಇವರು, ಯೇಸುವಿನ ಹೆಸರಿನ ನಿಮಿತ್ತ ನಿಂದೆ ಪಡು
ವದಕ್ಕೆ ಯೋಗ್ಯರಾಗಿ ಎಣಿಸಲ್ಪಟ್ಟೆವೆಂದು, ಸಂತೋಷ
೪೨ ಪಟ್ಟು, ಮಂತ್ರಿಸಭೆಯ ಸಮುಖದಿಂದ ಹೊರಟು ಹೋಗಿ, ದಿ
ನಾಲು ಬಿಡದೆ ದೇವಾಲಯದಲ್ಲಿಯೂ ಮನೆ ಮನೆಯಲ್ಲಿಯೂ
ಬೋಧಿಸುತ್ತಾ, ಕ್ರಿಸ್ತನಾದ ಯೇಸುವನ್ನು ಪ್ರಸಂಗಿಸುತ್ತಾ ಇ
ದ್ದರು.

## ೬. ಸಂಧಿ.

೧ ಆ ದಿನಗಳಲ್ಲಿ ಶಿಷ್ಯರು ಹೆಚ್ಚಲಾಗಿ, ಗ್ರೇಕರ ವೆಧವೆಗಳು ದಿನ
ದಿನದ ಸೇವೆಯಲ್ಲಿ ಅಸಡ್ಡೆ ಮಾಡಲ್ಪಟ್ಟದರಿಂದ, ಇಬ್ರೀಯರಿಗೆ
೨ ವಿರೋಧವಾಗಿ ಗ್ರೇಕರಲ್ಲಿ ಗುಣಗುಟ್ಟುವಿಕೆ ಉಂಟಾಯಿತು. ಆಗ
ಹನ್ನೆರಡು ಮಂದಿಯು ಶಿಷ್ಯರ ಸಮೂಹವನ್ನು ಕರಿಸಿ, ಹೇಳಿ
ದ್ದೇನಂದರೆ, ನಾವು ದೇವರ ವಾಕ್ಯವನ್ನು ಬಿಟ್ಟು, ಮೇಜುಗಳಿಗೆ
೩ ಸೇವೆ ಮಾಡುವದು ಹಿತವಲ್ಲ. ಆದದರಿಂದ, ಸಹೋದರರೇ,
ಪರಿಶುದ್ಧಾತ್ಮದಿಂದಲೂ ಜ್ಞಾನದಿಂದಲೂ ತುಂಬಿರುವಂಥ, ಸಾಕ್ಷಿ
ಗೊಡಿರುವಂಥ, ಏಳು ಜನರನ್ನು ನಿಮ್ಮೊಳಗೆ ನೋಡಿ ಕೊಳ್ಳಿರಿ;
೪ ಅವರನ್ನು ಈ ಅವಶ್ಯ ಕಾರ್ಯಕ್ಕೆ ಇರಿಸುವ; ಆದರೆ ನಾವು
ಪ್ರಾರ್ಥನೆಯಲ್ಲಿಯೂ ವಾಕ್ಯದ ಸೇವೆಯಲ್ಲಿಯೂ ನೆಲೆಯಾ
೫ ಗಿರುವೆವು. ಈ ಮಾತು ಸಮೂಹಕ್ಕೆಲ್ಲಾ ಹಿತವಾದದರಿಂದ, ಅವ
ರು ವಿಶ್ವಾಸವೂ ಪರಿಶುದ್ಧಾತ್ಮವೂ ತುಂಬಿರುವ ಪುರುಷನಾದ
ಸ್ತೆಫನನನ್ನೂ, ಫಿಲಿಪ್ಪನನ್ನೂ, ಪ್ರೊಖೋರನನ್ನೂ, ನಿಕನೋ
ರನನ್ನೂ, ತಿಮೋನನನ್ನೂ, ಪರ್ಮೆನನನ್ನೂ, ಅಂತಿಯೋಕ್ಯ
ದವನಾದ ಮತ ಶೇರಿದ ನಿಕೊಲಾಯನನ್ನೂ ಆದು ಕೊಂಡು,
೬ ಅವರನ್ನು, ಅಪೊಸ್ತಲರ ಮುಂದೆ ನಿಲ್ಲಿಸಿದರು. ಇವರು ಪ್ರಾ
೭ ರ್ಥನೆ ಮಾಡಿ, ಅವರ ಮೇಲೆ ಕೈಗಳನ್ನು ಇಟ್ಟರು. ಮತ್ತು ದೇ
ವರ ವಾಕ್ಯವು ಬೆಳೆದು, ಶಿಷ್ಯರ ಲೆಖ್ಖವು ಯೆರೂಸಲೇಮಿನಲ್ಲಿ
ಬಹಳವಾಗಿ ಹೆಚ್ಚಿತು; ಮತ್ತು ಯಾಜಕರಲ್ಲಿ ಬಹು ಜನರು ವಿಶ್ವಾ
ಸಕ್ಕೆ ವಿಧೇಯರಾದರು.

೮ ಮತ್ತು ಸ್ತೆಫನನು ವಿಶ್ವಾಸದಿಂದಲೂ ಬಲದಿಂದಲೂ ತುಂಬಿ
ದವನಾಗಿ, ದೊಡ್ಡ ಅದ್ಭುತಗಳನ್ನೂ ಲಕ್ಷಣಗಳನ್ನೂ ಜನರಲ್ಲಿ
೯ ನಡಿಸಿದನು. ಆಗ ಲಿಬರ್ತೀನನೆಂಬ ಸಭೆಯಲ್ಲಿಯೂ, ಕುರೇನ
ರಲ್ಲಿಯೂ, ಅಲೆಕ್ಸಾಂದ್ರಿಯದವರಲ್ಲಿಯೂ, ಕಿಲಿಕ್ಯದವರಲ್ಲಿ
ಯೂ, ಆಸ್ಯದವರಲ್ಲಿಯೂ, ಕೆಲವರು ಎದ್ದು, ಸ್ತೆಫನನ ಸಂಗ
೧೦ ಡ ತರ್ಕಿಸಿದರು. ಆದರೆ ಅವನ ಜ್ಞಾನವನ್ನೂ, ಅವನು ಮಾತಾ
೧೧ ಡಿದ ಆತ್ಮವನ್ನೂ, ಎದುರಿಸಲಾರದೆ ಇದ್ದರು. ಆಗಲವರು, ಇವ
ನು ಮೋಶೆಗೂ ದೇವರಿಗೂ ವಿರೋಧವಾಗಿ ದೂಷಣೆ ಮಾತುಗ
ಳಾಡುವದನ್ನು ಕೇಳಿದೆವೆಂದು, ಹೇಳುವ ಜನರನ್ನು ರಹಸ್ಯವಾಗಿ
೧೨ ಸಿದ್ಧ ಮಾಡಿದರು. ಮತ್ತು ಜನರನ್ನೂ, ಹಿರಿಯರನ್ನೂ, ಶಾಸ್ತ್ರಿ
ಗಳನ್ನೂ ಪ್ರೇರೇಪಿಸಿ, ಅವನ ಮೇಲೆ ಬಿದ್ದು, ಅವನನ್ನು ಮಂತ್ರಿ
ಸಭೆಗೆ ಪೈರು ಕೊಂಡು ಹೋಗಿ, ಅಬದ್ಧ ಸಾಕ್ಷಿಗಳನ್ನೂ ನಿಲ್ಲಿಸಿ
೧೩ ದರು. ಇವರು ಹೇಳ್ದಿದ್ದೇನಂದರೆ, ಈ ಮನುಷ್ಯನು ಈ ಪರಿಶು
ದ್ಧ ಸ್ಥಳಕ್ಕೂ ನ್ಯಾಯಪ್ರಮಾಣಕ್ಕೂ ವಿರೋಧವಾಗಿ ದೂಷ
೧೪ ಣೆ ಮಾತುಗಳನ್ನಾಡುವದನ್ನು ಬಿಡುವದಿಲ್ಲ. ಏನಂದರೆ, ನಜರೇ
ತಿನವನಾದ ಯೇಸು ಈ ಸ್ಥಳವನ್ನು ಲಯ ಮಾಡಿ, ಮೋಶೆಯು
ನಮಗೆ ಕೊಟ್ಟ ಸಂಪ್ರದಾಯಗಳನ್ನು ಮಾರ್ಪಡಿಸುವನೆಂದು,
೧೫ ಅವನು ಹೇಳ್ದಿದ್ದನ್ನು ಕೇಳ್ದೆವು. ಮತ್ತು ಮಂತ್ರಿಸಭೆಯಲ್ಲಿ ಕೂ
ತು ಕೊಂಡವರೆಲ್ಲರು ಅವನ ಮೇಲೆ ಕಣ್ಣಿಟ್ಟು, ಅವನ ಮುಖವು
ದೂತನ ಮುಖದ ಹಾಗಿರುವದನ್ನು ನೋಡಿದರು.

## ೭. ಸಂಧಿ.

೧ ಆಗ ಪ್ರಧಾನ ಯಾಜಕನು, ಇವು ಹಾಗೋ? ಅನ್ನಲಾಗಿ; ಅವ
೨ ನು ಹೇಳ್ದಿದ್ದೇನಂದರೆ, ಸಹೋದರರೂ ತಂದೆಗಳೂ ಆಗಿರುವ ಜನ
ರೇ, ಕೇಳಿರಿ; ಮಹಿಮೆಯ ದೇವರು ನಮ್ಮ ತಂದೆಯಾದ ಅಬ್ರ
ಹಾಮನಿಗೆ, ಅವನು ಹಾರಾನಿನಲ್ಲಿ ವಾಸ ಮಾಡುವದಕ್ಕೆ ಮುಂಚೆ,
3 ಮೆಸೊಪೊತಾಮ್ಯದಲ್ಲಿರುವಾಗ, ಪ್ರತ್ಯಕ್ಷವಾಗಿ, ಅವನಿಗೆ ಹೇಳ್
ದ್ದೇನಂದರೆ, ನಿನ್ನ ದೇಶದೊಳಗಿಂದಲೂ ನಿನ್ನ ನೆಂಟರೊಳಗಿಂ
ದಲೂ ಹೊರಟು, ನಾನು ನಿನಗೆ ತೋರಿಸುವ ದೇಶಕ್ಕೆ ಬಾ.
೪ ಆಗಲವನು ಕಲ್ದೀಯರ ದೇಶದೊಳಗಿಂದ ಹೊರಟು ಬಂದು,
ಹಾರಾನಿನಲ್ಲಿ ವಾಸವಾಗಿದ್ದನು. ಅವನ ತಂದೆ ಸತ್ತ ಮೇಲೆ, ಅಲ್ಲಿಂ
ದ ವಾಸಾಂತರ ಮಾಡಿಸಿ, ಅವನನ್ನು ನೀವು ಈಗ ನಿವಾಸವಾಗಿ
೫ ರುವ ಈ ದೇಶಕ್ಕೆ ಸೇರಿಸಿದನು. ಅದರಲ್ಲಿ ದೇವರು ಅವನಿಗೆ
ಹೆಜ್ಜೆ ಯಷ್ಟಾದರೂ ಬಾಧ್ಯತೆಯನ್ನು ಕೊಡಲಿಲ್ಲ. ಆದಾಗ್ಯೂ,
ಅವನಿಗೆ ಮಗುವಿಲ್ಲದಿರುವಾಗ, ನಿನಗೂ ನಿನ್ನ ತರುವಾಯ ನಿನ್ನ
ಬೀಜಕ್ಕೂ ಅದನ್ನು ಸ್ವಾಸ್ತ್ಯವಾಗಿ ಕೊಡುತ್ತೇನೆಂದು, ವಾಗ್ದ
ತ್ತ ಮಾಡಿದನು.

೬ ಮತ್ತು ದೇವರು ಹೀಗೆ ಹೇಳಿದನು; ಏನಂದರೆ, ಅವನ ಬೀಜ
ವು ಅನ್ಯ ದೇಶದಲ್ಲಿ ವಾಸವಾಗಿರುವದು; ಅವರು ಅವರನ್ನು ದಾಸ
೭ ರಾಗ ಮಾಡಿ, ನಾನೂರು ವರುಷ ಕೇಡು ಮಾಡುವರು; ಮತ್ತು
ಅವರು ದಾಸರಾಗಿ ಸೇವಿಸುವ ಜನಾಂಗಕ್ಕೆ ನಾನು ನ್ಯಾಯ ತೀ
ರಿಸುವೆನು; ತರುವಾಯ ಅವರು ಹೊರಟು ಬಂದು, ಈ ಸ್ಥಳದಲ್ಲಿ
ನನ್ನನ್ನು ಆರಾಧಿಸುವರೆಂದು, ದೇವರು ಹೇಳಿದನು. ಮತ್ತು ಪರಿ
೮ ಛೇದನೆಯ ಬಡಂಬದಿಕೆಯನ್ನು ಅವನಿಗೆ ಕೊಟ್ಟನು. ಹೀಗೆ ಅವ
ನು ಇಸಾಕನನ್ನು ಪಡೆದು, ಎಂಟನೇ ದಿವಸದಲ್ಲಿ ಅವನಿಗೆ ಪರಿ
ಛೇದನೆ ಮಾಡಿದನು. ಹಾಗೆಯೇ ಇಸಾಕನು ಯಾಕೋಬನ

ನುಳಿ, ಯಾಕೋಬನು ಹನ್ನೆರಡು ಮೂಲ ಪಿತೃಗಳಿನುಳಿ ಪಡೆ
ದನು.

೯ ಮತ್ತು ಮೂಲ ಪಿತೃಗಳು ಹೊಟ್ಟೆಕಿಚ್ಚು ಪಟ್ಟು, ಯೋಸೆ
೧೦ ಫನನ್ನು ಐಗುಪ್ತಕ್ಕೆ ಮಾರಿ ಬಿಟ್ಟರು. ಆದರೆ ದೇವರು ಅವನ
ಸಂಗಡ ಇದ್ದು, ಅವನ ಎಲ್ಲಾ ಉಪದ್ರಗಳಿಂದ ಅವನನ್ನು ತ
ಪ್ಪಿಸಿ, ಐಗುಪ್ತದ ಅರಸನಾದ ಫರೋನನ ಸಮುಖದಲ್ಲಿ ಕೃಪೆ
ಯನ್ನೂ ಜ್ಞಾನವನ್ನೂ ಕೊಟ್ಟನು. ಇವನು ಅವನನ್ನು ಐಗುಪ್ತ
ದ ಮೇಲೆಯೂ, ತನ್ನ ಮನೆಯೆಲ್ಲಾದರ ಮೇಲೆಯೂ ಅಧಿಕಾ
೧೧ ರಿಯಾಗಿ ಇರಿಸಿದನು. ಆದರೆ ಸಮಸ್ತ ಐಗುಪ್ತ ಕಾನನ್ ದೇಶ
ಗಳ ಮೇಲೆ ಬರವೂ ಮಹಾ ಉಪದ್ರವೂ ಬಂದವು; ನಮ್ಮ ಪಿತೃ
೧೨ ಗಳಿಗೆ ಆಹಾರ ಸಿಕ್ಕಲಿಲ್ಲ. ಆದರೆ ಯಾಕೋಬನು, ಐಗುಪ್ತದಲ್ಲಿ
ಧಾನ್ಯ ಉಂಟೆಂದು ಕೇಳಿ, ನಮ್ಮ ಪಿತೃಗಳನ್ನು ಮೊದಲನೇ
೧೩ ಸಾರಿ ಕಳುಹಿಸಿದನು. ಎರಡನೇ ಸಾರಿ ಯೋಸೆಫನು ತನ್ನ ಸ
ಹೋದರರಿಂದ ತಿಳಿಯಲ್ಪಟ್ಟನು; ಮತ್ತು ಫರೋನನಿಗೆ ಯೋ
೧೪ ಸೆಫನ ವಂಶವು ತಿಳಿಯ ಬಂತು. ಆಗ ಯೋಸೆಫನು ತನ್ನ ತಂ
ದೆಯಾದ ಯಾಕೋಬನನ್ನೂ, ಎಪ್ಪತ್ತೈದು ಮಂದಿಯಾದ
೧೫ ಅವನ ಸಮಸ್ತ ವಂಶವನ್ನೂ ಕರೇಕಳುಹಿಸಿದನು. ಆಗ ಯಾ
ಕೋಬನು ಐಗುಪ್ತಕ್ಕೆ ಇಳಿದು ಹೋದನು. ಅಲ್ಲಿ ಅವನೂ ನಮ್ಮ
೧೬ ಪಿತೃಗಳೂ ತೀರಿ ಹೋದರು. ಮತ್ತು ಅವರು ಶಿಖೆಮಿಗೆ ವೈಯ
ಲ್ಪಟ್ಟು, ಅಬ್ರಹಾಮನು ಶಿಖೆಮಿನ ತಂದೆಯಾದ ಹಮೋರನ
ಮಕ್ಕಳಿಂದ ಬೆಳ್ಳಿ ಕ್ರಯಕ್ಕೆ ತಕ್ಕೊಂಡ ಸಮಾಧಿಯಲ್ಲಿ ಇಡಲ್ಪ
ಟ್ಟರು.

೧೭ ಆದರೆ ದೇವರು ಅಬ್ರಹಾಮನಿಗೆ ಪ್ರಮಾಣ ಮಾಡಿದ ವಾಗ್ದ
೧೮ ತ್ತದ ಕಾಲವು ಸಮೀಪಿಸಲಾಗಿ, ಜನರು ಐಗುಪ್ತದಲ್ಲಿ ಬೆಳೆದು,
ಯೋಸೆಫನನ್ನು ಅರಿಯದ ಬೇರೊಬ್ಬ ಅರಸನು ಏಳುವ
೧೯ ವರಿಗೂ, ಹೆಚ್ಚಾದರು. ಇವನು ನಮ್ಮ ವಂಶಕ್ಕೆ ತಂಟೆ ಮಾಡಿ,
ನಮ್ಮ ಪಿತೃಗಳಿಗೆ, ಅವರ ಕೂಸುಗಳು ಬದುಕದ ಹಾಗೆ, ಅವು
ಗಳನ್ನು ಹೊರಗೆ ಹಾಕ ಬೇಕೆಂದು, ಆಜ್ಞಾಪಿಸಿ, ಕೇಡು ಮಾಡಿ
ದನು.

೨೦ ಆ ಕಾಲದಲ್ಲಿ ಮೋಶೆಯು ಹುಟ್ಟಿ, ದಿವ್ಯ ಸೌಂದರ್ಯವು
ಳ್ಳವನಾಗಿದ್ದು, ಅವನ ತಂದೆಯ ಮನೆಯಲ್ಲಿ ಮೂರು ತಿಂಗಳು
೨೧ ಸಾಕಲ್ಪಟ್ಟು, ಹೊರಗೆ ಇಡಲ್ಪಟ್ಟಾಗ, ಫರೋನನ ಮಗಳು
ಅವನನ್ನು ಎತ್ತಿ ಕೊಂಡು, ತನಗೆ ಮಗನಾದ ಅವನನ್ನು ಸಾಕಿ
೨೨ ದಳು. ಮತ್ತು ಮೋಶೆಯು ಐಗುಪ್ತ್ಯರ ಸಮಸ್ತ ಜ್ಞಾನದಲ್ಲಿ
ಉಪದೇಶಿಸಲ್ಪಟ್ಟು, ವಾಕ್ಯಗಳಲ್ಲಿಯೂ ಕ್ರಿಯೆಗಳಲ್ಲಿಯೂ ಸ
೨೩ ಮರ್ಥನಾಗಿದ್ದನು. ಆದರೆ ಅವನಿಗೆ ನಾಲ್ವತ್ತು ವರುಷ ಪ್ರಾ
ಯವು ಪೂರ್ತಿಯಾದಾಗ, ಇಸ್ರಯೇಲನ ಮಕ್ಕಳಾದ ತನ್ನ
ಸಹೋದರರನ್ನು ನೋಡ ಬೇಕೆಂಬ ಅಪೇಕ್ಷೆಯು ಅವನ ಹೃ
೨೪ ದಯದಲ್ಲಿ ಹುಟ್ಟಿತು. ಮತ್ತು ಅನ್ಯಾಯ ಪಡುವ ಒಬ್ಬನನ್ನು
ನೋಡಿ, ಸಹಾಯ ಮಾಡಿ, ಐಗುಪ್ತ್ಯನನ್ನು ಹೊಡೆದು, ಕಷ್ಟ
ಪಡುವವನಿಗೋಸ್ಕರ ಮುಯ್ಯಿಗೆ ಮುಯ್ಯಿ ತೀರಿಸಿದನು.
೨೫ ಯಾಕಂದರೆ, ತನ್ನ ಕೈಯಿಂದ ದೇವರು ತಮಗೆ ರಕ್ಷಣೆ ಕೊ
ಡುವನೆಂದು, ತನ್ನ ಸಹೋದರರು ತಿಳುಕೊಳ್ಳುವರೆಂದು ನೆನಸಿ
ದನು. ಆದರೆ ಅವರು ತಿಳುಕೊಳ್ಳಲಿಲ್ಲ.

೨೬ ಮಾರಣೆ ದಿವಸ, ಅವರು ಜಗಳವಾಡುವಾಗ, ಅವರಿಗೆ ಕಾಣಿಸಿ
ಕೊಂಡು, ಜನರೇ, ನೀವು ಸಹೋದರರಲ್ಲವೋ? ಒಬ್ಬರಿಗೊ
ಬ್ಬರು ಅನ್ಯಾಯ ಮಾಡುವದು ಯಾಕೆ? ಎಂದು ಹೇಳಿ, ಅವ
೨೭ ರನ್ನು ಸಮಾಧಾನಕ್ಕೆ ಪ್ರೇರೇಪಿಸಿದನು. ಆದರೆ ತನ್ನ ನೆರೆಯ
ವನಿಗೆ ಅನ್ಯಾಯ ಮಾಡಿದವನು, ನಿನ್ನನ್ನು ನಮ್ಮ ಮೇಲೆ ಅಧಿ
ಕಾರಿಯಾಗಿಯೂ ನ್ಯಾಯಾಧಿಪತಿಯಾಗಿಯೂ ಯಾರು ಇ
೨೮ ಟ್ಟರು? ನಿನ್ನೆ ಐಗುಪ್ತ್ಯನನ್ನು ಕೊಂದ ಪ್ರಕಾರ, ನನ್ನನ್ನು ಕೊ
ಲ್ಲ ಬೇಕೆಂದಿದ್ದೀಯೋ? ಎಂದು ಹೇಳಿ, ಅವನನ್ನು ತಳ್ಳಿ ಬಿಟ್ಟ
೨೯ ನು. ಆ ಮಾತಿಗೋಸ್ಕರ ಮೋಶೆಯು ಓಡಿ ಹೋಗಿ, ಮಿದ್ಯಾ
ದೇಶದಲ್ಲಿ ಪರವಾಸವಾಗಿ, ಅಲ್ಲಿ ಇಬ್ಬರು ಮಕ್ಕಳನ್ನು ಪಡೆ
ದನು.

೩೦ ನಾಲ್ವತ್ತು ವರುಷಗಳು ಪೂರ್ತಿಯಾದಾಗ, ಸೀನಾಯ ಪ
ರ್ವತದ ಅರಣ್ಯದಲ್ಲಿ ಅವನಿಗೆ ಕರ್ತನ ದೂತನು ಪೊದೆಯ
೩೧ ಅಗ್ನಿ ಜ್ವಾಲೆಯಲ್ಲಿ ಪ್ರತ್ಯಕ್ಷವಾದನು. ಮೋಶೆಯು ಕಂಡು,
೩೨ ಆ ನೋಟಕ್ಕೆ ಆಶ್ಚರ್ಯ ಪಟ್ಟನು. ಅದನ್ನು ದೃಷ್ಟಿಸುವದ
ಕ್ಕೆ ಹತ್ತರ ಬಂದಾಗ, ನಾನು ನಿನ್ನ ಪಿತೃಗಳ ದೇವರೂ, ಅಬ್ರ
ಹಾಮನ ದೇವರೂ, ಇಸಾಕನ ದೇವರೂ, ಯಾಕೋಬನ ದೇ
ವರೂ, ಆಗಿದ್ದೇನೆಂದು ಕರ್ತನ ಶಬ್ದವು ಅವನಿಗೆ ಉಂಟಾಯಿ
ತು. ಆಗ ಮೋಶೆಯು ನಡುಗಿ, ದೃಷ್ಟಿಸುವದಕ್ಕೆ ಧೈರ್ಯ
೩೩ ಪಡಲಿಲ್ಲ. ಆಗ ಕರ್ತನು ಅವನಿಗೆ ಹೇಳಿದ್ದೇನಂದರೆ, ನಿನ್ನ ಪಾ
ದಗಳ ಕೆರವನ್ನು ತೆಗೆದು ಹಾಕು; ಯಾಕಂದರೆ ನೀನು ನಿಂತು
೩೪ ಕೊಂಡಿರುವ ಸ್ಥಳವು ಪರಿಶುದ್ಧ ಭೂಮಿಯಾಗಿದೆ. ಐಗುಪ್ತದಲ್ಲಿ
ರುವ ನನ್ನ ಜನರ ಕೇಡನ್ನು ದೃಷ್ಟಿಸಿ ನೋಡಿದ್ದೇನೆ; ಅವರ
ಮೂಲುಗುವಿಕೆಯನ್ನು ಕೇಳಿದ್ದೇನೆ; ಅವರನ್ನು ಬಿಡಿಸುವದಕ್ಕೆ
ಇಳಿದು ಬಂದಿದ್ದೇನೆ; ಈಗ ಬಾ, ನಿನ್ನನ್ನು ಐಗುಪ್ತಕ್ಕೆ ಕಳುಹಿ
ಸುತ್ತೇನೆ.

೩೫ ನಿನ್ನನ್ನು ಅಧಿಕಾರಿಯಾಗಿಯೂ ನ್ಯಾಯಾಧಿಪತಿಯಾಗಿ
ಯೂ, ಯಾರು ಇಟ್ಟರೆಂದು ಹೇಳಿ, ಅವರು ಬೇಡೆಂದು ಬಿಟ್ಟ
ಈ ಮೋಶೆಯನ್ನೇ ದೇವರು ಪೊದೆಯೊಳಗೆ ಅವನಿಗೆ ಪ್ರತ್ಯಕ್ಷ
ವಾದ ದೂತನ ಕೈಯಿಂದ, ಅಧಿಪತಿಯಾಗಿಯೂ ವಿಮೋಚಕ
೩೬ ನಾಗಿಯೂ ಕಳುಹಿಸಿದನು. ಇವನು ಐಗುಪ್ತ ದೇಶದಲ್ಲಿಯೂ,
ಕೆಂಪು ಸಮುದ್ರದಲ್ಲಿಯೂ ಅರಣ್ಯದಲ್ಲಿಯೂ ನಾಲ್ವತ್ತು
ವರುಷ ಅದ್ಭುತಗಳನ್ನೂ ಲಕ್ಷಣಗಳನ್ನೂ ಮಾಡಿ, ಅವರನ್ನು
೩೭ ಹೊರಗೆ ತಂದನು. ನಿಮ್ಮ ದೇವರಾದ ಕರ್ತನು ನಿಮ್ಮ ಸಹೋ
ದರರೊಳಗಿಂದ ನನ್ನ ಹಾಗಿರುವ ಒಬ್ಬ ಪ್ರವಾದಿಯನ್ನು ನಿಮಗೆ
ಎಬ್ಬಿಸುವನು; ಅವನನ್ನು ಕೇಳಿರೆಂದು, ಇಸ್ರಯೇಲನ ಮಕ್ಕಳಿ
ಗೆ ಹೇಳಿದ ಮೋಶೆಯು ಇವನೇ.

೩೮ ಸೀನಾಯ ಪರ್ವತದಲ್ಲಿ ಅವನ ಸಂಗಡ ಮಾತಾಡಿದ ದೂ
ತನ ಸಂಗಡಲೂ, ನಮ್ಮ ಪಿತೃಗಳ ಸಂಗಡಲೂ, ಅರಣ್ಯದಲ್ಲಿ
ರುವ ಸಭೆಯಲ್ಲಿ ಇದ್ದವನೂ, ನಮಗೆ ಕೊಡುವದಕ್ಕೆ ಜೀವಿಸುಳ್ಳ
ದೈವೋತ್ತರಗಳನ್ನು ಹೊಂದಿದವನೂ, ಇವನೇ.

೩೯ ಇವನಿಗೆ ನಮ್ಮ ಪಿತೃಗಳು ವಿಧೇಯರಾಗ ಮನಸ್ಸಿಲ್ಲದೆ
ಅವನನ್ನು ತಳ್ಳಿ ಬಿಟ್ಟು, ತಮ್ಮ ಹೃದಯಗಳಲ್ಲಿ ಐಗುಪ್ತಕ್ಕೆ
೪೦ ತಿರುಗಿ ಕೊಂಡು, ಆರೋನನಿಗೆ ಹೇಳಿದ್ದೇನಂದರೆ, ನಮ್ಮ ಮುಂದೆ
ನಡೆದು ಹೋಗುವದಕ್ಕೆ, ದೇವರುಗಳನ್ನು ನಮಗೆ ಮಾಡು;
ಯಾಕಂದರೆ ಐಗುಪ್ತ ದೇಶದೊಳಗಿಂದ ನಮ್ಮನ್ನು ಹೊರಗೆ



೪೧ ತಂದ ಈ ಮೋಶೆಗೆ ಏನಾಯಿತೋ, ಅರಿಯೆವು. ಆ ದಿನಗಳಲ್ಲಿ
ಕರುವನ್ನು ಮಾಡಿ, ವಿಗ್ರಹಕ್ಕೆ ಬಲಿ ಅರ್ಪಿಸಿ, ತಮ್ಮ ಕೈ ಕೆಲಸ
೪೨ ಗಳಲ್ಲಿ ಆನಂದ ಪಟ್ಟರು. ಆಗ ದೇವರು ತಿರುಗಿ ಕೊಂಡು, ಆಕಾಶ
ದ ಸೈನ್ಯವನ್ನು ಆರಾಧಿಸುವದಕ್ಕೆ ಅವರನ್ನು ಒಪ್ಪಿಸಿ ಬಿಟ್ಟ
ನು. ಹೀಗೆ ಪ್ರವಾದಿಗಳ ಪುಸ್ತಕದಲ್ಲಿ ಬರೆದದೆ; ಏನಂದರೆ, ಇಸ್ರ
ಯೇಲನ ಮನೆಯೇ, ಅರಣ್ಯದಲ್ಲಿ ನಾಲ್ವತ್ತು ವರುಷ ನನಗೆ
೪೩ ಬಲಿಗಳನ್ನೂ ಅರ್ಪಣೆಗಳನ್ನೂ ಅರ್ಪಿಸಿದಿರೋ? ನಮಸ್ಕರಿ
ಸುವದಕ್ಕೆ ನೀವೇ ಮಾಡಿ ಕೊಂಡ ಮೂರ್ತಿಗಳಾದ ಮೊಲೋ
ಕನ ಗುಡಾರವನ್ನೂ, ನಿಮ್ಮ ದೇವರಾದ ರೆಂಫಾನನ ನಕ್ಷತ್ರವ
ನ್ನೂ ಹೇರಿಸಿ ಕೊಂಡಿರಲ್ಲ? ಆದದರಿಂದ ಬಾಬೆಲಿನ ಆಚೆಗೆ
ನಿಮ್ಮನ್ನು ವಾಸಾಂತರ ಮಾಡ ಕಳುಹಿಸುವೆನು.

೪೪ ನೀನು ನೋಡಿದ ಮಾದರಿಯ ಪ್ರಕಾರ ಅದನ್ನು ಮಾಡೆಂ
ದು, ಮೋಶೆಯ ಸಂಗಡ ಮಾತಾಡಿದವನು ಆಜ್ಞಾಪಿಸಿದ ಹಾಗಿ
ರುವ ಸಾಕ್ಷಿಯ ಗುಡಾರವು ನಮ್ಮ ಪಿತೃಗಳ ಸಂಗಡ ಅರಣ್ಯ
೪೫ ದಲ್ಲಿ ಇತ್ತು. ಅದನ್ನು ನಮ್ಮ ಪಿತೃಗಳು ಅವರಿಂದ ಹೊಂದಿ,
ದೇವರು ದಾವೀದನ ದಿನಗಳ ಪರ್ಯಂತರ ನಮ್ಮ ಪಿತೃಗಳ
ಸಮುಖದಿಂದ ಹೊರಡಿಸಿ ಬಿಟ್ಟ ಜನಾಂಗಗಳ ಸ್ವಾಸ್ಥ್ಯದಲ್ಲಿ
೪೬ ಯೆಹೋಶುವನ ಸಂಗಡ ತಂದರು. ದಾವೀದನು ದೇವರ ಮುಂದೆ
ಕೃಪೆ ಹೊಂದಿ, ಯಾಕೋಬನ ದೇವರಿಗೋಸ್ಕರ ಗುಡಾರ ದೊ
೪೭ ರಕಿಸ ಬೇಕೆಂದು ಬೇಡಿ ಕೊಂಡನು. ಆದರೆ ಸೊಲೊಮೋನನು
೪೮ ಅವನಿಗೆ ಮನೆಯನ್ನು ಕಟ್ಟಿಸಿದನು. ಆದರೆ ಮಹೋನ್ನತನು
೪೯ ಕೈಯಿಂದಾದ ಮಂದಿರಗಳಲ್ಲಿ ವಾಸ ಮಾಡನು. ಅದಕ್ಕೆ ಪ್ರವಾ
ದಿಯು ಹೇಳುವದೇನಂದರೆ, ಆಕಾಶವು ನನಗೆ ಸಿಂಹಾಸನವು,
ಭೂಮಿಯು ನನ್ನ ಪಾದಪೀಠವು; ಎಂಥಾ ಮನೆಯನ್ನು ನನಗೆ
೫೦ ಕಟ್ಟುವಿರಿ? ಇಲ್ಲವೆ ನನ್ನ ವಿಶ್ರಾಂತಿಯ ಸ್ಥಳವು, ಎಲ್ಲಿ? ನನ್ನ ಕೈ
ಇವುಗಳನ್ನೆಲ್ಲಾ ಮಾಡಿತಲ್ಲವೋ? ಎಂದು ಕರ್ತನು ಹೇಳುತ್ತಾನೆ.

೫೧ ಬೊಗ್ಗದ ಕುತ್ತಿಗೆಯುಳ್ಳವರೇ! ಹೃದಯದಲ್ಲಿಯೂ ಕಿವಿ
ಗಳಲ್ಲಿಯೂ ಪರಿಛೇದನೆ ಹೊಂದದವರೇ! ನೀವು ಯಾವಾಗಲೂ
ಪರಿಶುದ್ಧಾತ್ಮಕ್ಕೆ ಎದುರು ಬೀಳುತ್ತೀರಿ; ನಿಮ್ಮ ಪಿತೃಗಳು ಹ್ಯಾ
೫೨ ಗೋ, ಹಾಗೆಯೇ ನೀವು. ಪ್ರವಾದಿಗಳಲ್ಲಿ, ನಿಮ್ಮ ಪಿತೃಗಳು ಹಿಂಸಿ
ಸದವನ್ಯಾರು? ನೀವು ಈಗ ಒಪ್ಪಿಸಿ ಕೊಟ್ಟು, ಕೊಂದು ಹಾಕಿ
ದ ನೀತಿವಂತನ ಬರುವಿಕೆಯ ವಿಷಯವಾಗಿ ಮುಂತಿಳಿಸಿದವರ
೫೩ ನ್ನು ಅವರು ಕೊಂದು ಹಾಕಿದರು. ನೀವು ದೂತರ ನೇಮಕಗ
ಳಿಂದ ನ್ಯಾಯಪ್ರಮಾಣವನ್ನು ಹೊಂದಿ, ಕೈ ಕೊಳ್ಳಲಿಲ್ಲ.

೫೪ ಇವುಗಳನ್ನು ಕೇಳಿ, ತಮ್ಮ ಹೃದಯಗಳಲ್ಲಿ ಇರಿಯಲ್ಪಟ್ಟು
೫೫ ಅವನ ಮೇಲೆ ಹಲ್ಲು ಕಡಿದರು. ಆದರೆ ಅವನು ಪರಿಶುದ್ಧಾತ್ಮದಿಂ
ದ ತುಂಬಿದವನಾಗಿ, ಆಕಾಶವನ್ನು ದೃಷ್ಟಿಸಿ, ದೇವರ ಮಹಿಮೆ
ಯನ್ನೂ, ದೇವರ ಬಲಪಾರ್ಶ್ವದಲ್ಲಿ ಯೇಸು ನಿಂತು ಕೊಂ
೫೬ ಡಿರುವದನ್ನೂ ನೋಡಿ, ಇಗೋ, ಆಕಾಶಗಳು ತೆರದಿರುವದನ್ನೂ
ಮನುಷ್ಯನ ಮಗನು ದೇವರ ಬಲಪಾರ್ಶ್ವದಲ್ಲಿ ನಿಂತು ಕೊಂ
ಡಿರುವದನ್ನೂ ನೋಡುತ್ತೇನೆ, ಅಂದನು.

೫೭ ಆಗಲವರು ಮಹಾ ಶಬ್ದದಿಂದ ಕೂಗಿ, ತಮ್ಮ ಕಿವಿಗಳನ್ನು
ಮುಚ್ಚಿ ಕೊಂಡು, ಏಕ ಮನಸ್ಸಾಗಿ ಅವನ ಮೇಲೆ ಬಿದ್ದು, ಅವ
೫೮ ನನ್ನು ಪಟ್ಟಣದ ಹೊರಗೆ ಹಾಕಿ, ಕಲ್ಲೆಸೆದರು. ಮತ್ತು ಸಾಕ್ಷಿಯ
ವರು ತಮ್ಮ ವಸ್ತ್ರಗಳನ್ನು ಸೌಲನೆಂಬ ಒಬ್ಬ ಯೌವನಸ್ಥನ
೫೯ ಪಾದಗಳ ಹತ್ತರ ಇಟ್ಟರು. ಆಗ, ಕರ್ತನಾದ ಯೇಸುವೇ, ನನ್ನ
ಆತ್ಮವನ್ನು ಅಂಗೀಕರಿಸೆಂದು, ಕರೆದು ಹೇಳುವ ಸ್ತೆಫನನನ್ನು
೬೦ ಕಲ್ಲೆಸೆದರು. ಅವನು ಮೊಣಕಾಲೂರಿ ಕೊಂಡು, ಮಹಾ ಶಬ್ದದಿಂ
ದ, ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸ ಬೇ
ಡವೆಂದು ಕೂಗಿದನು. ಇದನ್ನು ಹೇಳಿ, ನಿದ್ದೆ ಹೋದನು.

## ೯. ಸಂಧಿ.

೧ ಮತ್ತು ಸೌಲನು ಅವನ ಕೊಲೆಗೆ ಸಮ್ಮತಿ ಪಡುತ್ತಿದ್ದನು.
೨ ಮತ್ತು ಆ ಕಾಲದಲ್ಲಿ ಯೆರೂಸಲೇಮನಲ್ಲಿರುವ ಸಭೆಗೆ ದೊಡ್ಡ ಹಿಂಸೆ
ಆಯಿತು. ಅಪೊಸ್ತಲರ ಹೊರ್ತು ವಿಕ್ಕಾದಿನಲೆಲ್ಲರು ಯೆಹೂ
ದ್ಯ ಸಮಾರ್ಯ ದೇಶಗಳಲ್ಲಿ ಚದರಿ ಹೋದರು. ಆದರೆ ಭಕ್ತಿ
ಯುಳ್ಳ ಮನುಷ್ಯರು ಸ್ತೆಫನನನ್ನು ಹೂಣಿಟ್ಟು, ಅವನಿಗೋ
3 ಸ್ಕರ ದೊಡ್ಡ ಗೊಳ್ಳಾಟ ಮಾಡಿದರು. ಆದರೆ ಸೌಲನು ಮನೆ
ಮನೆಗಳಲ್ಲಿ ಹೊಕ್ಕು, ಗಂಡಸರನ್ನೂ ಹೆಂಗಸರನ್ನೂ ಎಳೆದು,
ಸೆರೆಯಲ್ಲಿ ಒಪ್ಪಿಸಿ ಕೊಟ್ಟು, ಸಭೆಯನ್ನು ಹಾಳು ಮಾಡಿದನು.

೪ ಆದದರಿಂದ ಚದರಿ ಹೋದವರು ವಾಕ್ಯವನ್ನು ಪ್ರಸಂಗಿಸು
೫ ತ್ತಾ, ಅಲ್ಲಲ್ಲಿಗೆ ಹೋದರು. ಆಗ ಫಿಲಿಪ್ಪನು ಸಮಾರ್ಯ ಪ
ಟ್ಟಣಕ್ಕೆ ಇಳಿದು ಹೋಗಿ, ಅವರಿಗೆ ಕ್ರಿಸ್ತನನ್ನು ಸಾರಿದನು. ಮ
ತ್ತು ಸಮೂಹಗಳು ಫಿಲಿಪ್ಪನು ಮಾಡಿದ ಗುರುತುಗಳನ್ನು ಕೇಳಿ,
ನೋಡಿ, ಅವನು ಹೇಳಿದವುಗಳಿಗೆ ಏಕ ಮನಸ್ಸಾಗಿ ಕಿವಿ ಕೊ
೭ ಟ್ಟರು. ಯಾಕಂದರೆ ಅನೇಕರಲ್ಲಿರುವ ಅಶುದ್ಧಾತ್ಮಗಳು ಮಹಾ
ಶಬ್ದದಿಂದ ಕೂಗಿ, ಹೊರಟು ಬಂದವು. ಮತ್ತು ಅನೇಕ ಪಕ್ಷವಾ
೮ ಯುವಿನವರೂ, ಕುಂಟರೂ ಸ್ವಸ್ಥ ಮಾತಲ್ಪಟ್ಟರು. ಮತ್ತು
ಆ ಪಟ್ಟಣದಲ್ಲಿ ಮಹಾ ಸಂತೋಷ ಉಂಟಾಯಿತು.

೯ ಆದರೆ ಸೀಮೋನನೆಂಬ ಒಬ್ಬ ಮನುಷ್ಯನು ಮಂತ್ರ ನಡಿ
ಸುವವನಾಗಿಯೂ, ತನ್ನನ್ನು ದೊಡ್ಡವನೆಂದು ಹೇಳಿ ಕೊಂಡು,
ಸಮಾರ್ಯ ಜನಾಂಗವನ್ನು ಭ್ರಮೆಗೊಳ್ಳಿಸುವವನಾಗಿಯೂ,
೧೦ ಮುಂಚೆ ಆ ಪಟ್ಟಣದಲ್ಲಿ ಇದ್ದನು. ಇವನೇ ದೇವರ ಮಹಾ ಬಲ
೧೧ ವೆಂದು, ಹಿರಿ ಕಿರಿಯರೆಲ್ಲರು ಅವನ ಮೇಲೆ ಮನಸ್ಸಿಟ್ಟಿರು. ಅವ
ನು ಬಹು ಕಾಲ ಅವರನ್ನು ಮಂತ್ರಗಳಿಂದ ಭ್ರಮೆಗೊಳ್ಳಿಸಿದ
೧೨ ಕಾರಣ, ಅವನ ಮೇಲೆ ಮನಸ್ಸಿಟ್ಟಿರು. ಆದರೆ ಗಂಡಸರೂ,
ಹೆಂಗಸರೂ, ದೇವರ ರಾಜ್ಯವನ್ನೂ ಯೇಸು ಕ್ರಿಸ್ತನ ಹೆಸರ
ನ್ನೂ ಕುರಿತವುಗಳನ್ನು ಪ್ರಸಂಗಿಸುವ ಫಿಲಿಪ್ಪನನ್ನು ವಿಶ್ವಾಸಿಸಿ
೧೩ ದಾಗ, ಸ್ನಾನ ಹೊಂದಿದರು. ಆಗ ಸೀಮೋನನು ತಾನೇ ವಿಶ್ವಾ
ಸಿಸಿ, ಸ್ನಾನ ಹೊಂದಿ, ಫಿಲಿಪ್ಪನನ್ನು ಬಿಡದೆ, ಗುರುತುಗಳೂ
ಮಹಾ ಬಲವಾದ ಕ್ರಿಯೆಗಳೂ ಉಂಟಾಗುವದನ್ನು ನೋಡಿ,
ಭ್ರಮೆಗೊಂಡನು.

೧೪ ಆದರೆ, ಸಮಾರ್ಯವು ದೇವರ ವಾಕ್ಯವನ್ನು ಅಂಗೀಕರಿಸಿ
ತೆಂದು, ಯೆರೂಸಲೇಮನಲ್ಲಿರುವ ಅಪೊಸ್ತಲರು ಕೇಳಿ, ಪೇತ್ರ
೧೫ ನನ್ನೂ ಯೋಹಾನನನ್ನೂ ಅವರ ಬಳಿಗೆ ಕಳುಹಿಸಿದರು. ಇವ
ರು ಇಳಿದು ಹೋಗಿ, ಅವರು ಪರಿಶುದ್ಧಾತ್ಮನನ್ನು ಹೊಂದ ಬೇ
೧೬ ಕೆಂದು, ಅವರಿಗೋಸ್ಕರ ಪ್ರಾರ್ಥಿಸಿದರು. ಯಾಕಂದರೆ ಅದು
ಅವರಲ್ಲಿ ಯಾವನ ಮೇಲಾದರೂ, ಇನ್ನೂ ಬೀಳಲಿಲ್ಲ; ಕರ್ತ
ನಾದ ಯೇಸುವಿನ ಹೆಸರಿನಲ್ಲಿ ಸ್ನಾನ ಮಾತ್ರ ಹೊಂದಿದ್ದರು.
೧೭ ಆಗ ಅವರ ಮೇಲೆ ಕೈಗಳನ್ನಿಟ್ಟಾಗ, ಪರಿಶುದ್ಧಾತ್ಮವನ್ನು ಹೊಂ
ದಿದರು.

೧೮ ಅಪೊಸ್ತಲರ ಕೈಯಿಡುವಿಕೆಯಿಂದ ಪರಿಶುದ್ಧಾತ್ಮವು ಕೊ
ಡಲ್ಪಡುತ್ತದೆ ಎಂದು, ಸೀಮೋನನು ನೋಡಿ, ಅವರಿಗೆ ಹಣ ತಂ
೧೯ ದು, ನಾನು ಯಾವನ ಮೇಲೆ ಕೈಗಳನ್ನಿಡುತ್ತೇನೋ, ಅವನು ಪ
ರಿಶುದ್ಧಾತ್ಮವನ್ನು ಹೊಂದುವ ಹಾಗೆ, ನನಗೂ ಈ ಅಧಿಕಾರವನ್ನು
೨೦ ಕೊಡಿರಿ, ಅಂದನು. ಆದರೆ ಪೇತ್ರನು ಅವನಿಗೆ ಹೇಳಿದ್ದು, ದೇವರ
ವರವನ್ನು ಹಣದಿಂದ ಕೊಂಡು ಕೊಳ್ಳಬಹುದೆಂದು, ನೀನು
ನೆನಸಿದ ಕಾರಣ, ನಿನ್ನ ಬೆಳ್ಳಿಯು ನಿನ್ನ ಸಂಗಡ ನಾಶವಾಗಲಿ;
೨೧ ಈ ಕಾರ್ಯದಲ್ಲಿ ನಿನಗೆ ಪಾಲೂ ಭಾಗವೂ ಇಲ್ಲ; ಯಾಕಂದರೆ
೨೨ ನಿನ್ನ ಹೃದಯವು ದೇವರ ಮುಂದೆ ನೆಟ್ಟಗಲ್ಲ. ಆದದರಿಂದ ಈ
ನಿನ್ನ ಕೆಟ್ಟತನವನ್ನು ಬಿಟ್ಟು, ಮಾನಸಾಂತರ ಪಟ್ಟು, ನಿನ್ನ ಹೃ
ದಯದ ಯೋಚನೆಯೂ ನಿನಗೆ ಮನ್ನಿಸಲ್ಪಟ್ಟೀತೇನೋ,
೨೩ ದೇವರನ್ನು ಬೇಡಿಕೋ. ಯಾಕಂದರೆ ನೀನು ಕಹಿಯಾದ ಪಿತ್ತ
ದಲ್ಲಿಯೂ ಅನ್ಯಾಯದ ಬಂಧದಲ್ಲಿಯೂ, ಇರುತ್ತೀ ಎಂದು,
೨೪ ನೋಡುತ್ತೇನೆ. ಆಗ ಸೀಮೋನನು ಪ್ರತ್ಯುತ್ತರವಾಗಿ, ನೀವು ಹೇ
ಳಿದವುಗಳಲ್ಲಿ ಬಂದಾದರೂ ನನ್ನ ಮೇಲೆ ಬಾರದ ಹಾಗೆ, ನೀವೇ
ನನಗೋಸ್ಕರ ಕರ್ತನನ್ನು ಬೇಡಿ ಕೊಳ್ಳಿರಿ, ಅಂದನು.

೨೫ ಮತ್ತು ಅವರು ಕರ್ತನ ವಾಕ್ಯವನ್ನು ಸಾಕ್ಷಿ ಹೇಳಿ, ಮಾ
ತಾಡಿದ ಮೇಲೆ, ಯೆರೂಸಲೇಮಿಗೆ ತಿರಿಗಿ ಬರುವಾಗ್ಯೆ, ಸಮಾ
ರ್ಯರ ಅನೇಕ ಗ್ರಾಮಗಳಲ್ಲಿ ಸುವಾರ್ತೆ ಪ್ರಸಂಗಿಸಿದರು.

೨೬ ಮತ್ತು ಕರ್ತನ ದೂತನು ಫಿಲಿಪ್ಪನ ಸಂಗಡ ಮಾತಾಡಿ,
ಹೇಳಿದ್ದೇನಂದರೆ, ನೀನು ಎದ್ದು, ಯೆರೂಸಲೇಮಿನಿಂದ ಗಾಜ
ಕ್ಕೆ ಇಳಿದು ಹೋಗುವ ಮಾರ್ಗವಾದ ತೆಂಕಣ ಕಡೆಗೆ ಹೊರ
೨೭ ಟು ಹೋಗು. ಅದು ಅರಣ್ಯವು. ಅವನು ಎದ್ದು, ಹೊರಟನು.
ಆಗ, ಇಗೋ, ಐಥಿಯೋಪ್ಯನಾದ ನಪುಂಸಕನೂ, ಐಥಿಯೋ
ಪ್ಯರ ರಾಣಿಯಾದ ಕಂದಾಕೆಯ ಪ್ರಭುವೂ, ಅವಳ ಸಮಸ್ತ
ಬೊಕ್ಕಸದ ಮೇಲೆ ಅಧಿಕಾರಿಯೂ, ಆಗಿರುವ ಒಬ್ಬ ಮನು
೨೮ ಷ್ಯನು. ಅವನು ಆರಾಧನೆಗೋಸ್ಕರ ಯೆರೂಸಲೇಮಿಗೆ ಬಂದು,
ತಿರಿಗಿ ಹೋಗಿ, ತನ್ನ ರಥದ ಮೇಲೆ ಕೂತು ಕೊಂಡು, ಪ್ರವಾದಿ
ಯಾದ ಯೆಶಾಯನ ಪುಸ್ತಕವನ್ನು ಓದುತ್ತಾ ಇದ್ದನು.

೨೯ ಆಗ ಆತ್ಮವು ಫಿಲಿಪ್ಪನಿಗೆ, ಹತ್ತರ ಹೋಗಿ, ಆ ರಥಕ್ಕೆ ಕೂ
೩೦ ಡಿಕೋ, ಎಂದು ಹೇಳಿತು. ಫಿಲಿಪ್ಪನು ಹತ್ತರಕ್ಕೆ ಓಡಿ, ಅವನು
ಪ್ರವಾದಿಯಾದ ಯೆಶಾಯನ ಪುಸ್ತಕ ಓದುವದನ್ನು ಕೇಳಿ,
೩೧ ಓದುವವುಗಳನ್ನು ತಿಳುಕೊಳ್ಳುತ್ತೀಯೋ? ಅಂದನು. ಅದಕ್ಕೆ
ಅವನು, ಒಬ್ಬನು ನನಗೆ ಉಪದೇಶಿಸಿದರೆ ಹೊರ್ತು, ಹ್ಯಾಗೆ
ತಿಳುಕೊಂಡೇನೆಂದು ಹೇಳಿ, ನೀನು ಏರಿ, ನನ್ನ ಸಂಗಡ ಕೂತ್ರ
೩೨ ಬೇಕೆಂದು, ಫಿಲಿಪ್ಪನನ್ನು ಬೇಡಿ ಕೊಂಡನು. ಅವನು ಓದುತ್ತಿದ್ದ
ಬರಹದ ವಚನವೇನಂದರೆ, ಕುರಿಯ ಹಾಗೆ ಅವನು ಕೊಲ್ಲಲ್ಪ
ಡುವದಕ್ಕೆ ನಡಿಸಲ್ಪಟ್ಟನು; ಕತ್ತರಿಸುವವನ ಮುಂದೆ ನಿಶ್ಶಬ್ದವಾಗಿ
ರುವ ಕುರಿಮರಿಯ ಹಾಗೆ ತನ್ನ ಬಾಯಿಯನ್ನು ತೆರೆಯುವದಿಲ್ಲ;
೩೩ ಅವನ ದೀನತ್ವದಲ್ಲಿ ಅವನ ನ್ಯಾಯತೀರ್ಪಿಕೆಯು ತೆಗೆದು ಹಾ
ಕಲ್ಪಟ್ಟಿತು; ಅವನ ಸಂತಾನವನ್ನು ಯಾವನು ವರ್ಣಿಸುವನು?
ಯಾಕಂದರೆ ಅವನ ಜೀವವು ಭೂಮಿಯಿಂದ ತೆಗೆದು ಹಾಕಲ್ಪ
೩೪ ಡುತ್ತದೆ. ಆಗ ನಪುಂಸಕನು ಫಿಲಿಪ್ಪನಿಗೆ ಪ್ರತ್ಯುತ್ತರವಾಗಿ, ಪ್ರವಾ
ದಿಯು ಯಾರ ವಿಷಯವಾಗಿ ಇದನ್ನು ಹೇಳುತ್ತಾನೆ? ತನ್ನ
ವಿಷಯವಾಗಿಯೋ, ಬೇಕೊಬ್ಬನ ವಿಷಯವಾಗಿಯೋ? ದ
೩೫ ಯ ಮಾಡಿ ಹೇಳ ಬೇಕು, ಅಂದನು. ಆಗ ಫಿಲಿಪ್ಪನು ತನ್ನ ಬಾ
ಯಿ ತೆರೆದು, ಆ ಬರಹದಿಂದ ಆರಂಭ ಮಾಡಿ, ಅವನಿಗೆ ಯೇ
ಸುವನ್ನು ಪ್ರಸಂಗಿಸಿದನು.

೩೬ ಅವರು ಮಾರ್ಗದಲ್ಲಿ ಹೋಗುತ್ತಿರಲಾಗಿ, ನೀರಿನ ಬಳ್ಳಿಗೆ ಬಂ
ದರು. ಆಗ ನಪುಂಸಕನು, ಇಗೋ, ನೀರು; ನಾನು ಸ್ನಾನ ಹೊಂ
೩೭ ದುವದಕ್ಕೆ ಅಡ್ಡಿ ಏನು? ಅಂದನು. ಫಿಲಿಪ್ಪನು, ನೀನು ಪೂ
ರ್ಣ ಹೃದಯದಿಂದ ವಿಶ್ವಾಸಿಸಿದರೆ, ಆಗ ಬಹುದು, ಅನ್ನಲು;
ಯೇಸು ಕ್ರಿಸ್ತನು ದೇವರ ಮಗನಾಗಿದ್ದಾನೆಂದು, ವಿಶ್ವಾಸಿಸು
ತ್ತೇನೆಂಬದಾಗಿ, ಅವನು ಪ್ರತ್ಯುತ್ತರ ಹೇಳಿ, ರಥ ನಿಲ್ಲಿಸ ಅಪ್ಪ
ಣೆ ಕೊಟ್ಟನು. ಆಗ ಫಿಲಿಪ್ಪನೂ ನಪುಂಸಕನೂ, ಇಬ್ಬರು ನೀರು
೩೮ ನಲ್ಲಿ ಇಳಿದು ಹೋದರು. ಮತ್ತು ಅವನಿಗೆ ಸ್ನಾನ ಕೊಟ್ಟನು.
ಅವರು ನೀರಿನಿಂದ ಏರಿ ಬಂದಾಗ, ಕರ್ತನ ಆತ್ಮವು ಫಿಲಿಪ್ಪನ
೩೯ ನ್ನು ಎತ್ತಿ ಕೊಂಡು ಹೋಯಿತು. ನಪುಂಸಕನು ಅವನನ್ನು
ಇನ್ನು ನೋಡಲಿಲ್ಲ. ಮತ್ತು ಸಂತೋಷದಿಂದ ತನ್ನ ಮಾರ್ಗ
೪೦ ವಾಗಿ ಹೋದನು. ಆದರೆ ಫಿಲಿಪ್ಪನು ಅಜೋತಿನಲ್ಲಿ ಕಾಣಲ್ಪ
ಟ್ಟು, ಕೈಸರ್ಯೆಯಕ್ಕೆ ಬರುವ ಪರ್ಯಂತರ ಪಟ್ಟಣಗಳೆಲ್ಲಾ ಹಾ
ದು ಹೋಗಿ, ಸುವಾರ್ತೆ ಪ್ರಸಂಗಿಸಿದನು.

## ೯. ಸಂಧಿ.

೧ ಮತ್ತು ಸೌಲನು ಕರ್ತನ ಶಿಷ್ಯರಿಗೆ ವಿರೋಧವಾಗಿ ಇನ್ನು
ಬೆದರಿಕೆಯಿಂದಲೂ ಕೊಲೆಯಿಂದಲೂ ಉಸುರು ಬಿಡುತ್ತಾ,
೨ ಪ್ರಧಾನ ಯಾಜಕನ ಬಳ್ಳಿಗೆ ಹೋಗಿ, ತಾನು ಆ ಮಾರ್ಗಸ್ಥರಾದ
ಗಂಡಸರನೂ ಹೆಂಗಸರನೂ ಕಂಡರೆ, ಅವರನ್ನು ಕಟ್ಟಿ, ಯೆ
ರೂಸಲೇಮಿಗೆ ಕರ ಕೊಂಡು ಬರುವ ಹಾಗೆ, ದಮಸ್ಕದಲ್ಲಿರುವ
ಸಭೆಗಳಿಗೆ ಪತ್ರಿಕೆಗಳನ್ನು ಕೊಡ ಬೇಕೆಂದು, ಅವನನ್ನು ಬೇಡಿ
ಕೊಂಡನು.

೩ ಆದರೆ ಅವನು ಪ್ರಯಾಣವಾಗಿ, ದಮಸ್ಕಕ್ಕೆ ಸಮೀಪಿಸು
ವಾಗ, ಫಕ್ಕನೆ ಆಕಾಶದಿಂದ ಬೆಳಕು ಅವನ ಸುತ್ತಲು ಮಿಂಚಿತು.
೪ ಅವನು ನೆಲಕ್ಕೆ ಬಿದ್ದು, ಸೌಲನೇ, ಸೌಲನೇ, ನನ್ನನ್ನು ಯಾಕೆ
ಹಿಂಸಿಸುತ್ತೀ? ಎಂದು ತನಗೆ ಹೇಳುವ ಶಬ್ದವನ್ನು ಕೇಳಿದನು.
೫ ಅವನು, ಕರ್ತನೇ, ನೀನು ಯಾರು? ಅನ್ನಲಾಗಿ; ಕರ್ತನು,
ನಾನು ನೀನು ಹಿಂಸಿಸುವ ಯೇಸುವೇ; ಮುಳ್ಳುಗಳ ಮೇಲೆ ಒದೆ
೬ ಯುವದು ನಿನಗೆ ಕಠಿಣವು, ಅಂದನು. ಅವನು ನಡುಗಿ, ಭಯಪಿಸಿ,
ಕರ್ತನೇ, ನಾನು ಏನು ಮಾಡ ಇಚ್ಛೈಸುತ್ತೀ? ಅನ್ನಲು; ಕರ್ತನು
ಅವನಿಗೆ, ನೀನು ಎದ್ದು, ಪಟ್ಟಣದಲ್ಲಿ ಪ್ರವೇಶಿಸು; ಆಗ ನೀನು ಮಾ
೭ ಡ ಬೇಕಾದದ್ದು ನಿನಗೆ ಹೇಳಲ್ಪಡುವದು, ಅಂದನು. ಅವನ ಸಂ
ಗಡ ಪ್ರಯಾಣ ಮಾಡುವ ಜನರು ಶಬ್ದವನ್ನು ಕೇಳಿ, ಯಾರ
೮ ನ್ನೂ ನೋಡದೆ, ಮೂಗರಾಗಿ ನಿಂತರು. ಸೌಲನು ನೆಲದಿಂದ
ಎದ್ದು, ತನ್ನ ಕಣ್ಣುಗಳನ್ನು ತೆರೆಯುವಾಗ, ಯಾರನ್ನೂ ನೋ
ಡಲಿಲ್ಲ. ಆಗ ಅವರು ಅವನನ್ನು ಕೈ ಹಿಡಿದು, ನಡಿಸಿ, ದಮಸ್ಕ
೯ ಕ್ಕೆ ಕರ ಕೊಂಡು ಬಂದರು. ಮತ್ತು ಅವನು ಮೂರು ದಿವಸ
ಕಣ್ಣು ಕಾಣದೆ, ಉಣ್ಣಲಿಲ್ಲ, ಕುಡಿಯಲಿಲ್ಲ.

೧೦ ಆದರೆ ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನಿದ್ದನು.
ಅವನಿಗೆ ಕರ್ತನು ದರ್ಶನದಲ್ಲಿ, ಅನನೀಯನೇ! ಎಂದು ಕರೆ
೧೧ ದನು. ಅವನು, ಇಗೋ, ಇದ್ದೇನೆ, ಕರ್ತನೇ! ಅನ್ನಲಾಗಿ; ಕರ್ತ



ನು ಅವನಿಗೆ ಹೇಳಿದ್ದು, ನೀನು ಎದ್ದು, ನೆಟ್ಟನೆ ಬೀದಿ ಎಂಬ ಬೀ
ದಿಗೆ ಹೋಗಿ, ಯೂದನ ಮನೆಯಲ್ಲಿ ತಾರ್ಸದವನಾದ ಸೌಲ
ನನ್ನು ಹುಡುಕು; ಯಾಕಂದರೆ, ಇಗೋ, ಪ್ರಾರ್ಥಿಸುತ್ತಾನೆ;
೧೨ ಮತ್ತು ದರ್ಶನದಲ್ಲಿ ಅನನೀಯನೆಂಬ ಒಬ್ಬ ಮನುಷ್ಯನು
ಪ್ರವೇಶಿಸಿ, ತಾನು ದೃಷ್ಟಿಯನ್ನು ಹೊಂದುವ ಹಾಗೆ, ತನ್ನ
೧೩ ಮೇಲೆ ಕೈ ಇಟ್ಟದ್ದನ್ನು ಕಂಡಿದ್ದಾನೆ. ಆಗ ಅನನೀಯನು ಪ್ರ
ತ್ಯುತ್ತರವಾಗಿ, ಕರ್ತನೇ, ಈ ಮನುಷ್ಯನು ಯೆರೂಸಲೇಮಿ
ನಲ್ಲಿ ನಿನ್ನ ಪರಿಶುದ್ಧರಿಗೆ ಬಹಳ ಕೇಡು ಮಾಡಿದ್ದಾನೆಂದು, ಅನೇ
೧೪ ಕರಿಂದ ಕೇಳಿದ್ದೇನೆ. ಮತ್ತು ಇಲ್ಲಿ ನಿನ್ನ ಹೆಸರನ್ನು ಕರೆಯುವವ
ರೆಲ್ಲರನ್ನು ಕಟ್ಟುವದಕ್ಕೆ, ಪ್ರಧಾನ ಯಾಜಕರಿಂದ ಅವನಿಗೆ ಅಧಿ
೧೫ ಕಾರ ಉಂಟು, ಅಂದನು. ಆಗ ಕರ್ತನು ಅವನಿಗೆ ಹೇಳಿದ್ದು,
ನೀನು ಹೋಗು; ಯಾಕಂದರೆ, ಇವನು ಜನಾಂಗಗಳ ಮುಂದೆ
ಯೂ, ಅರಸರ ಮುಂದೆಯೂ, ಇಸ್ರಯೇಲನ ಮಕ್ಕಳ ಮುಂ
ದೆಯೂ, ನನ್ನ ಹೆಸರನ್ನು ಎತ್ತುವದಕ್ಕೆ, ನನಗೆ ಆಯಲ್ಪಟ್ಟ
೧೬ ಪಾತ್ರೆಯಾಗಿದ್ದಾನೆ. ಮತ್ತು ಅವನು ನನ್ನ ನಾಮಕ್ಕೋಸ್ಕರ
ಎಷ್ಟು ಶ್ರಮೆ ಪಡ ಬೇಕೆಂದು, ಅವನಿಗೆ ತೋರಿಸುವೆನು.

೧೭ ಆಗ ಅನನೀಯನು ಹೊರಟು ಹೋಗಿ, ಆ ಮನೆಯಲ್ಲಿ ಪ್ರ
ವೇಶಿಸಿ, ಅವನ ಮೇಲೆ ಕೈಗಳನ್ನಿಟ್ಟು, ಸಹೋದರನಾದ ಸೌಲ
ನೇ, ನೀನು ಬಂದ ಮಾರ್ಗದಲ್ಲಿ ನಿನಗೆ ಪ್ರತ್ಯಕ್ಷವಾದ ಯೇ
ಸುವೆಂಬ ಕರ್ತನು, ನೀನು ನೋಡುವ ಹಾಗೆಯೂ, ಪರಿಶುದ್ಧಾ
ತ್ಮದಿಂದ ತುಂಬಿಸಲ್ಪಡುವ ಹಾಗೆಯೂ, ನನ್ನನ್ನು ಕಳುಹಿಸಿದ್ದಾ
೧೮ ನೆ, ಅಂದನು. ಸಂಗಡಲೇ ಸಿಪ್ಪೆಗಳ ಹಾಗೆ ಇರುವವುಗಳು ಅವನ
ಕಣ್ಣುಗಳಿಂದ ಬಿದ್ದವು. ಅವನು ಕ್ಷಣದಲ್ಲಿ ದೃಷ್ಟಿಯನ್ನು
ಹೊಂದಿ, ಎದ್ದು, ಸ್ನಾನ ಹೊಂದಿ, ಊಟ ಮಾಡಿ, ಬಲಗೊಂ
೧೯ ಡನು. ಮತ್ತು ಸೌಲನು ದಮಸ್ಕದಲ್ಲಿರುವ ಶಿಷ್ಯರ ಸಂಗಡ ಕೆಲ
ವು ದಿವಸಗಳಿದ್ದನು.

೨೦ ಮತ್ತು ಸಂಗಡಲೇ ಸಭೆಮನೆಗಳಲ್ಲಿ ಕ್ರಿಸ್ತನನ್ನು, ಇವನು ದೇ
೨೧ ವರ ಮಗನೆಂದು ಸಾರಿದನು. ಆದರೆ ಕೇಳುವವರೆಲ್ಲರು ಭ್ರಮೆ
ಗೊಂಡು, ಈ ಹೆಸರನ್ನು ಕರೆಯುವವರನ್ನು ಯೆರೂಸಲೇಮಿ
ನಲ್ಲಿ ಹಾಳು ಮಾಡಿ, ಇಲ್ಲಿಯೂ ಅಂಥವರನ್ನು ಕಟ್ಟಿ, ಪ್ರಧಾನ
ಯಾಜಕರ ಹತ್ತರ ವೈಯುವದಕ್ಕೋಸ್ಕರವೇ ಬಂದವನು
೨೨ ಇವನೇ ಅಲ್ಲವೋ? ಎಂದು ಹೇಳಿದರು. ಆದರೆ ಸೌಲನು ಹೆಚ್ಚು
ಬಲಗೊಂಡು, ಇವನೇ ಕ್ರಿಸ್ತನೆಂದು ಸ್ಥಾಪಿಸಿ, ದಮಸ್ಕದಲ್ಲಿರುವ
೨೩ ಯೆಹೂದ್ಯರನ್ನು ಭಂಗ ಪಡಿಸಿದನು. ಬಹು ದಿವಸಗಳಾದ ಮೇ
ಲೆ ಯೆಹೂದ್ಯರು ಅವನನ್ನು ಕೊಲ್ಲುವದಕ್ಕೆ ಆಲೋಚನೆ ಮಾ
೨೪ ಡಿದರು. ಆದರೆ ಅವರ ಆಲೋಚನೆಯು ಸೌಲನಿಗೆ ತಿಳಿಯ
ಬಂತು. ಇದಲ್ಲದೆ ಅವರು, ಅವನನ್ನು ಕೊಲ್ಲ ಬೇಕೆಂದು, ಪಟ್ಟಣ
ದ ಬಾಗಲುಗಳನ್ನು ರಾತ್ರಿ ಹಗಲು ಜಾಗ್ರತೆಯಾಗಿ ಕಾಯುತ್ತಿ
೨೫ ದ್ದರು. ಆಗ ಶಿಷ್ಯರು ರಾತ್ರಿಯಲ್ಲಿ ಅವನನ್ನು ಕರಕೊಂಡು ಹೋ
ಗಿ, ಪುಟ್ಟಿಯಲ್ಲಿ ಇಟ್ಟು, ಗೋಡೆಯಿಂದ ಇಳಿಸಿದರು.

೨೬ ಆ ಮೇಲೆ ಸೌಲನು ಯೆರೂಸಲೇಮಿಗೆ ಬಂದು, ಶಿಷ್ಯರನ್ನಿ
ಳೇರ ಬೇಕೆಂದು, ಪ್ರಯತ್ನ ಮಾಡುವಾಗ, ಅವರೆಲ್ಲರು ಅವನು
೨೭ ಶಿಷ್ಯನೆಂದು ನಂಬದೆ, ಅವನಿಗೆ ಭಯ ಪಟ್ಟರು. ಆದರೆ ಬರ್ನ
ಬನು ಅವನನ್ನು ಕೈ ಹಿಡಿದು, ಅಪೊಸ್ತಲರ ಬಳ್ಳಿಗೆ ಕರ ಕೊಂಡು
ಬಂದು, ಅವನು ಮಾರ್ಗದಲ್ಲಿ ಕರ್ತನನ್ನು ಕಂಡದ್ದನ್ನೂ, ಕರ್ತನು ಅವನ ಸಂಗಡ ಮಾತಾಡಿದ್ದನ್ನೂ, ದಮಸ್ಕದಲ್ಲಿ
ಯೇಸುವಿನ ಹೆಸರನ್ನಿಗೆ ಧೈರ್ಯವಾಗಿ ಪ್ರಸಂಗಿಸಿದ್ದನ್ನೂ, ಅವ
೨೮ ರಿಗೆ ತಿಳಿಸಿದನು. ಆಗಲವನು ಯೆರೂಸಲೇಮಿನಲ್ಲಿ ಅವರ ಸಂಗಡ
ಬರುತ್ತಾ, ಹೋಗುತ್ತಾ, ಕರ್ತನಾದ ಯೇಸುವಿನ ಹೆಸರನ್ನಿಗೆ
೨೯ ಧೈರ್ಯವಾಗಿ ಪ್ರಸಂಗಿಸುತ್ತಾ ಇದ್ದನು. ಮತ್ತು ಗ್ರೇಕರ ಸಂ
ಗಡ ಮಾತಾಡಿ ತರ್ಕಿಸಿದನು. ಆದರೆ ಇವರು ಅವನನ್ನು ಕೊ
೩೦ ಲ್ಲುವದಕ್ಕೆ ಪ್ರಯತ್ನ ಮಾಡಿದರು. ಸಹೋದರರು ಅದನ್ನು
ತಿಳಿದು ಕೊಂಡು, ಅವನನ್ನು ಕೈಸರ್ಯೆಯಕ್ಕೆ ಕರ ಕೊಂಡು ಹೋ
ಗಿ, ತಾರ್ಸಕ್ಕೆ ಕಳುಹಿಸಿದರು.

೩೧ ಹೀಗಿರುವದರಿಂದ ಸಮಸ್ತ ಯೆಹೂದ, ಗಲಿಲಾಯ, ಸಮಾ
ರ್ಯಗಳಲ್ಲಿ ಇರುವ ಸಭೆಗಳು ಸಮಾಧಾನವಾಗಿದ್ದು, ಕಟ್ಟಲ್ಪಡು
ತ್ತು, ದೇವರ ಭಯದಲ್ಲಿಯೂ, ಪರಿಶುದ್ಧಾತ್ಮದ ಆದರಣೆಯ
ಲ್ಲಿಯೂ, ನಡ ಕೊಂಡು, ಅಭಿವೃದ್ಧಿಯಾದವು.

೩೨ ಮತ್ತು ಪೇತ್ರನು ಎಲ್ಲಾ ಕಡೆ ಸಂಚಾರ ಮಾಡುತ್ತಿರಲಾಗಿ,
೩೩ ಲುದ್ದದಲ್ಲಿ ವಾಸವಾಗಿರುವ ಪರಿಶುದ್ಧರ ಬಳ್ಳಿಗೆ ಬಂದನು. ಅಲ್ಲಿ
ಅವನು ಪಕ್ಷವಾಯು ರೋಗದವನೂ, ಎಂಟು ವರುಷಗಳಿಂದ
ಮಂಚದ ಮೇಲೆ ಬಿದ್ದವನೂ, ಆದ ಐನೇಯನೆಂಬ ಒಬ್ಬ ಮ
೩೪ ನುಷ್ಯನನ್ನು ಕಂಡನು. ಅವನಿಗೆ ಪೇತ್ರನು, ಐನೇಯನೇ, ಕ್ರಿಸ್ತ
ನಾದ ಯೇಸು ನಿನ್ನನ್ನು ಸ್ವಸ್ಥ ಮಾಡುತ್ತಾನೆ; ಎದ್ದು, ನಿನ್ನ
೩೫ ಹಾಸಿಗೆಯನ್ನು ಹಾಸಿಕೋ, ಅಂದನು. ಸಂಗಡಲೇ ಎದ್ದನು.
ಮತ್ತು ಲುದ್ದದಲ್ಲಿಯೂ ಸಾರೋನಿನಲ್ಲಿಯೂ ವಾಸವಾಗಿರುವವ
ರೆಲ್ಲರು ಅವನನ್ನು ನೋಡಿ, ಕರ್ತನ ಕಡೆಗೆ ತಿರುಗಿ ಕೊಂಡರು.

೩೬ ಇದಲ್ಲದೆ ಯೊಪ್ಪದಲ್ಲಿ ದೊರ್ಕಳೆಂಬ ಅರ್ಥವುಳ್ಳ ತಬೀಥ
ಎಂಬ ಹೆಸರುಳ್ಳ ಒಬ್ಬ ಶಿಷ್ಯಳು ಇದ್ದಳು. ಅವಳು ಮಾಡಿದ
ಒಳ್ಳೇ ಕ್ರಿಯೆಗಳಿಂದಲೂ ಧರ್ಮಗಳಿಂದಲೂ ತುಂಬಿದವಳಾಗಿ
೩೭ ದ್ದಳು. ಅವಳು ಆ ದಿನಗಳಲ್ಲಿ ರೋಗದಲ್ಲಿ ಬಿದ್ದು, ಸತ್ತಳು. ಆಗ
೩೮ ಅವಳನ್ನು ತೊಳೆದು, ಮೇಲ್ಮಾಳಿಗೆಯಲ್ಲಿ ಇಟ್ಟರು. ಆದರೆ ಲುದ್ದ
ವು ಯೊಪ್ಪಕ್ಕೆ ಸಮೀಪವಾಗಿರುವದರಿಂದ, ಶಿಷ್ಯರು, ಪೇತ್ರ
ನು ಅಲ್ಲಿದ್ದಾನೆಂದು, ಕೇಳಿ, ಇಬ್ಬರನ್ನು ಅವನ ಬಳ್ಳಿಗೆ ಕಳುಹಿಸಿ,
ತಡ ಮಾಡದೆ, ತಮ್ಮ ಬಳ್ಳಿಗೆ ಬರ ಬೇಕೆಂದು ಬೇಡಿ ಕೊಂಡರು.

೩೯ ಆಗ ಪೇತ್ರನು ಎದ್ದು, ಅವರ ಸಂಗಡ ಬಂದನು. ಬಂದಾಗ,
ಅವನನ್ನು ಮೆಲ್ಮಾಳಿಗೆಗೆ ಕರ ಕೊಂಡು ಹೋದರು. ಮತ್ತು
ವೆಧವೆಯರೆಲ್ಲರು ಅಳುತ್ತಾ, ದೊರ್ಕಳು ತಮ್ಮ ಸಂಗಡ ಇದ್ದಾಗ
ಮಾಡಿದ ಅಂಗಿಗಳನ್ನೂ ವಸ್ತ್ರಗಳನ್ನೂ ತೋರಿಸುತ್ತಾ, ಅವನ
೪೦ ಹತ್ತರ ನಿಂತು ಕೊಂಡರು. ಆದರೆ ಪೇತ್ರನು ಎಲ್ಲರನ್ನು ಹೊರಗೆ
ಹಾಕಿ, ಮೊಣಕಾಲೂರಿ, ಪ್ರಾರ್ಥಿಸಿದನು. ಮತ್ತು ಶರೀರದ ಹ
ತ್ತರ ತಿರುಗಿ ಕೊಂಡು, ತಬೀಥಳೇ, ಏಳು, ಅಂದನು. ಆಗಲವಳು
ತನ್ನ ಕಣ್ಣುಗಳನ್ನು ತೆರೆದು, ಪೇತ್ರನನ್ನು ನೋಡಿ, ಕೂತು
೪೧ ಕೊಂಡಳು. ಅವನು ಅವಳಿಗೆ ಕೈ ಕೊಟ್ಟು, ಅವಳನ್ನು ಎಬ್ಬಿಸಿ
ದನು. ಮತ್ತು ಪರಿಶುದ್ಧರನ್ನೂ ವೆಧವೆಯರನ್ನೂ ಕರೆದು, ಅವ
೪೨ ಳನ್ನು ಬದುಕುವವಳಾಗಿ ಅವರ ಮುಂದೆ ನಿಲ್ಲಿಸಿದನು. ಇದು
ಯೊಪ್ಪದಲ್ಲೆಲ್ಲಾ ತಿಳಿಯ ಬಂದದರಿಂದ, ಅನೇಕರು ಕರ್ತನಲ್ಲಿ
೪೩ ವಿಶ್ವಾಸವಿಟ್ಟರು. ಮತ್ತು ಅವನು ಯೊಪ್ಪದಲ್ಲಿ ಸೀಮೋನನೆಂಬ
ಒಬ್ಬ ತೊಗಲುಗಾರನ ಸಂಗಡ ಬಹು ದಿವಸ ವಾಸವಾಗಿದ್ದನು.

## ೧೦. ಸಂಧಿ.

೧ ಮತ್ತು ಕೈಸಕ್ಕೈಯವಲ್ಲಿ ಕೊರ್ನೇಲ್ಯನೆಂಬ ಒಬ್ಬ ಮನು
ಷ್ಯನಿದ್ದನು. ಅವನು ಇತಾಲಿಕ ಎಂಬ ಹೆಸರುಳ್ಳ ರಾಣುವೆಯ
೨ ಲ್ಲಿ ಶತಾಧಿಪತಿಯೂ, ಭಕ್ತಿಯುಳ್ಳವನೂ, ತನ್ನ ಎಲ್ಲಾ ಮನೆಯ
ಸಂಗಡ ದೇವರಿಗೆ ಭಯ ಪಡುವವನೂ, ಜನರಿಗೆ ಬಹಳ ಧರ್ಮ
ಗಳನ್ನು ಮಾಡುವವನೂ, ದೇವರನ್ನು ಯಾವಾಗಲೂ ಬೇಡಿಕೊ
3 ಳ್ಳುವವನೂ, ಆಗಿದ್ದನು. ಅವನು ಹಗಲಿನ ಹೆಚ್ಚು ಕಡಿಮೆ ಬಂಭ
ತ್ತನೇ ತಾಸಿನಲ್ಲಿ ದೇವರ ದೂತನು ತನ್ನ ಹತ್ತರ ಪ್ರವೇಶಿಸಿ, ಕೊ
ರ್ನೇಲ್ಯನೇ! ಎಂದು, ತನಗೆ ಕರೆದದ್ದನ್ನು ದರ್ಶನದಲ್ಲಿ ಪ್ರತ್ಯ
ಕ್ಷವಾಗಿ ಕಂಡನು.

೪ ಅವನ ಮೇಲೆ ಕಣ್ಣಿಟ್ಟು, ಭಯ ಪಟ್ಟು, ಕರ್ತನೇ, ಏನು?
ಅಂದನು. ದೂತನು ಅವನಿಗೆ ಹೇಳಿದ್ದು, ನಿನ್ನ ಪ್ರಾರ್ಥನೆಗ
ಳೂ, ನಿನ್ನ ಧರ್ಮಗಳೂ ದೇವರ ಮುಂದೆ ಜ್ಞಾಪಕವಾಗಿ ಏರಿ
೫ ಬಂದವು. ಈಗ ಯೊಪ್ಪಕ್ಕೆ ಜನರನ್ನು ಕಳುಹಿಸಿ, ಪೇತ್ರನೆಂಬಸೀ
ಮೋನನನ್ನು ಕರಿಸು. ಇವನು ತೊಗಲುಗಾರನಾದ ಸೀಮೋನ
೬ ನೆಂಬವನ ಸಂಗಡ ವಾಸ ಮಾಡುತ್ತಾನೆ. ಅವನ ಮನೆಯು ಸಮು
ದ್ರದ ಬಳಿಯಲ್ಲಿ ಅದೆ. ಅವನು, ನೀನು ಮಾಡ ಬೇಕಾದದ್ದೇನೆಂ
೭ ದು, ನಿನಗೆ ಹೇಳುವನು. ಕೊರ್ನೇಲ್ಯನ ಸಂಗಡ ಮಾತಾಡಿದ
ದೂತನು ಹೊರಟು ಹೋದಾಗ, ಅವನು ತನ್ನ ಮನೇ ಚಾಕರಿ
ಯವರಲ್ಲಿ ಇಬ್ಬರನ್ನೂ, ತನ್ನ ಬಳಿಯಲ್ಲಿ ಕಾದು ಕೊಂಡಿದ್ದ
ರಾಣುವೆಯವರಲ್ಲಿ ಒಬ್ಬ ಭಕ್ತಿಯುಳ್ಳವನನ್ನೂ, ಕರೆದು, ಅವ
ರಿಗೆ ಎಲ್ಲವನ್ನು ತಿಳಿಸಿ, ಅವರನ್ನು ಯೊಪ್ಪಕ್ಕೆ ಕಳುಹಿಸಿದನು.

೯ ಮಾರಣೆ ದಿವಸ ಅವರು ಪ್ರಯಾಣವಾಗಿ ಪಟ್ಟಣಕ್ಕೆ ಸಮೀಪಿ
ಸಿದಾಗ, ಪೇತ್ರನು ಹೆಚ್ಚು ಕಡಿಮೆ ಆರನೇ ತಾಸಿನಲ್ಲಿ ಪ್ರಾರ್ಥನೆ
೧೦ ಮಾಡುವದಕ್ಕೋಸ್ಕರ ಮಾಳಿಗೆಗೆ ಏರಿದನು. ಆದರೆ ಅವನು
೧೧ ಬಹಳವಾಗಿ ಹಸಿದು, ಊಟ ಮಾಡ ಬೇಕೆಂದಿದ್ದನು. ಅವರು ಸಿದ್ಧ
ಮಾಡುತ್ತಿರುವಾಗ್ಯೆ ಅವನು ಪರವಶವಾಗಿ, ಆಕಾಶವು ತೆರೆದಿರುವ
ದನ್ನೂ, ನಾಲ್ಕು ಕೊನೆ ಕಟ್ಟಿದ ದೊಡ್ಡ ದುಪ್ಪಟಿಯ ಹಾಗಿರು
ವಂಥ, ಭೂಮಿಯ ಮೇಲೆ ಇಳಿಸಲ್ಪಡುವಂಥ, ವಸ್ತುವು ತನ್ನ
೧೨ ಕಡೆಗೆ ಇಳಿದು ಬರುವದನ್ನೂ, ನೋಡಿದನು. ಅದಕೊಳಗೆ ಭೂ
ಮಿಯ ಸಕಲ ಚತುಷ್ಪಾದಗಳೂ, ಮೃಗಗಳೂ, ಕ್ರಿಮಿಗಳೂ,
೧೩ ಆಕಾಶದ ಪಕ್ಷಿಗಳೂ ಇದ್ದವು. ಮತ್ತು, ಪೇತ್ರನೇ, ಎದ್ದು, ಕೊಂ
೧೪ ದು, ತಿನ್ನು, ಎಂಬ ಶಬ್ದವು ಅವನಿಗಾಯಿತು. ಆದರೆ ಪೇತ್ರನು,
ಕರ್ತನೇ, ಬೇಡವೇ ಬೇಡ; ನಾನು ಎಂದೂ ಹೊಲೆಯಾದ
ದ್ದೂ ಅಶುದ್ಧವಾದದ್ದೂ ಏನಾದರೂ ತಿನ್ನಲಿಲ್ಲ, ಅಂದನು.
೧೫ ಮತ್ತು ಶಬ್ದವು ತಿರಿಗಿ ಎರಡನೇ ಸಾರಿ, ದೇವರು ಶುದ್ಧ ಮಾಡಿ
ದ್ದನ್ನು ನೀನು ಹೊಲೆ ಅನ್ನ ಬೇಡ, ಎಂದು ಅವನಿಗೆ ಹೇಳಿತು.
೧೬ ಇದು ಮೂರು ಸಾರಿ ಆಯಿತು. ತರುವಾಯ ಆ ವಸ್ತು ತಿರಿಗಿ
ಆಕಾಶಕ್ಕೆ ಎತ್ತಲ್ಪಟ್ಟಿತು.

೧೭ ತಾನು ಕಂಡ ನೋಟವು ಏನೆಂದು, ಪೇತ್ರನು ತನ್ನಲ್ಲಿ ಅನು
ಮಾನ ಪಡುತ್ತಿರುವಾಗ, ಇಗೋ, ಕೊರ್ನೇಲ್ಯನ ಕಡೆಯಿಂದ
ಕಳುಹಿಸಲ್ಪಟ್ಟ ಜನರು ಸೀಮೋನನ ಮನೆಯನ್ನು ವಿಚಾರಿಸಿ,
೧೮ ಬಾಗಲಿನ ಬಳಿಯಲ್ಲಿ ನಿಂತು ಕೊಂಡು, ಕೂಗಿ, ಪೇತ್ರನೆಂಬ ಸೀ
ಮೋನನು ಇಲ್ಲಿ ವಾಸವಾಗಿದ್ದಾನೋ! ಎಂದು ವಿಚಾರಿಸಿದರು.

೧೯ ಆದರೆ ಪೇತ್ರನು ಆ ದರ್ಶನವನ್ನು ಆಲೋಚಿಸುವಾಗ, ಆತ್ಮನು
ಅವನಿಗೆ, ಇಗೋ, ಮೂರು ಜನರು ನಿನ್ನನ್ನು ಹುಡುಕುತ್ತಾರೆ;
೨೦ ಆದದರಿಂದ ನೀನು ಎದ್ದು, ಇಳಿದು, ಏನೂ ಸಂದೇಹ ಪಡದೆ,
ಅವರ ಸಂಗಡ ಹೋಗು; ಯಾಕಂದರೆ ನಾನು ಅವರನ್ನು ಕಳು
ಹಿಸಿದ್ದೇನೆಂದು ಹೇಳ್ದಿತು.

೨೧ ಆಗ ಪೇತ್ರನು ಕೊರ್ನೇಲ್ಯನ ಬಳಿಯಿಂದ ತನ್ನ ಬಳಿಗೆ
ಕಳುಹಿಸಲ್ಪಟ್ಟ ಜನರ ಹತ್ತರ ಇಳಿದು ಹೋಗಿ, ಇಗೋ, ನೀವು
ಹುಡುಕುವವನು ನಾನೇ; ನೀವು ಬಂದ ಕಾರಣವೇನು? ಅಂದನು.
೨೨ ಅವರು ಶತಾಧಿಪತಿಯೂ, ನೀತಿವಂತ ಮನುಷ್ಯನೂ, ದೇವರು
ಗೆ ಭಯ ಪಡುವವನೂ, ಯೆಹೂದ್ಯರ ಸಮಸ್ತ ಜನರಿಂದ ಸಾಕ್ಷಿ
ಗೊಂಡವನೂ, ಆಗಿರುವ ಕೊರ್ನೇಲ್ಯನು ನಿನ್ನನ್ನು ತನ್ನ ಮ
ನೆಗೆ ಕರೇ ಕಳುಹಿಸಿ, ನಿನ್ನಿಂದ ವಾಕ್ಯಗಳನ್ನು ಕೇಳ ಬೇಕೆಂದು,
23 ಪರಿಶುದ್ಧ ದೂತನಿಂದ ಅಪ್ಪಣೆ ಹೊಂದಿದನು, ಅಂದರು. ಆಗಲ
ವನು ಅವರನ್ನು ಒಳಗೆ ಕರೆದು, ಉಪಚರಿಸಿದನು.

೨೪ ಮಾರಣೆ ದಿವಸ ಪೇತ್ರನು ಅವರ ಸಂಗಡ ಹೊರಟನು. ಮ
ತ್ತು ಯೊಪ್ಪದವರಾದ ಸಹೋದರರಲ್ಲಿ ಕೆಲವರು ಅವನ ಸಂಗಡ
ಹೋದರು. ಮಾರಣೆ ದಿವಸ ಕೈಸಕ್ಕೈಯಕ್ಕೆ ಸೇರಿದರು. ಆಗ
ಕೊರ್ನೇಲ್ಯನು ತನ್ನ ನೆಂಟರನ್ನೂ, ಆಪ್ತ ಸ್ನೇಹಿತರನ್ನೂ
ಕೂಡ ಕರಿಸಿ, ಅವರನ್ನು ಎದುರು ನೋಡುತ್ತಿದ್ದನು.

೨೫ ಪೇತ್ರನು ಒಳಗೆ ಬರಲಾಗಿ, ಕೊರ್ನೇಲ್ಯನು ಅವನನ್ನು ಎ
ದುರುಗೊಂಡು, ಅವನ ಪಾದಗಳ ಮುಂದೆ ಬಿದ್ದು, ನಮಸ್ಕರಿಸಿ
೨೬ ದನು. ಆದರೆ ಪೇತ್ರನು, ಏಳು, ನಾನೂ ಮನುಷ್ಯನಾಗಿದ್ದೇನೆಂ
೨೭ ದು ಹೇಳ್ದಿ, ಅವನನ್ನು ಎತ್ತಿದನು. ಮತ್ತು ಅವನ ಸಂಗಡ ಮಾ
ತಾಡುತ್ತಾ ಒಳಗೆ ಬಂದು, ಕೂಡ ಬಂದಿರುವ ಅನೇಕರನ್ನು ನೋ
೨೮ ಡಿ, ಅವರಿಗೆ ಹೇಳ್ದಿದ್ದೇನಂದರೆ, ಅನ್ಯ ಜಾತಿಯವನನ್ನು ಕೂಡಿ
ಕೊಳ್ಳುವದೂ ಮುಟ್ಟುವದೂ ಯೆಹೂದ್ಯನಾದ ಮನುಷ್ಯನಿಗೆ
ನ್ಯಾಯವಲ್ಲವೆಂದು ನೀವು ಬಲ್ಲಿರಿ. ಆದರೆ, ಯಾವ ಮನುಷ್ಯ
ನನ್ನಾದರೂ ಹೊಲೆಯನೂ ಅಶುದ್ಧನೂ ಎಂದು ಹೇಳ್ದ ಬಾರ
೨೯ ದೆಂಬದಾಗಿ, ದೇವರು ನನಗೆ ತೋರಿಸಿದ್ದಾನೆ. ಆದದರಿಂದ ನಾನು
ಎದುರು ಮಾತಾಡದೆ, ಕರಿಸಲ್ಪಟ್ಟಾಗಲೇ ಬಂದೆನು. ಹೀಗಿರುವದ
ರಿಂದ, ನೀವು ನನ್ನನ್ನು ಕರಿಸಿದ ಕಾರಣವೇನೆಂದು ಕೇಳುತ್ತೇನೆ.

30 ಆಗ ಕೊರ್ನೇಲ್ಯನು, ನಾಲ್ಕು ದಿವಸಗಳ ಹಿಂದೆ ಇದ್ದೇ
ಹೊತ್ತಿನ ಪರ್ಯಂತರ ಉಪವಾಸ ಮಾಡಿ, ಒಂಭತ್ತನೇ ತಾಸಿ
ನಲ್ಲಿ ನನ್ನ ಮನೆಯೊಳಗೆ ಪ್ರಾರ್ಥನೆ ಮಾಡುತ್ತಿದ್ದೆನು; ಆಗ,
ಇಗೋ, ಮಿಂಚುವ ವಸ್ತ್ರ ಧರಿಸಿ ಕೊಂಡ ಮನುಷ್ಯನು ನನ್ನ
31 ಮುಂದೆ ನಿಂತು ಕೊಂಡು, ಹೇಳ್ದಿದ್ದೇನಂದರೆ, ಕೊರ್ನೇಲ್ಯನೇ,
ನಿನ್ನ ಪ್ರಾರ್ಥನೆ ಕೇಳ್ದ ಬಂದವೆ; ನಿನ್ನ ಧರ್ಮಗಳು ದೇವರ
32 ಮುಂದೆ ಜ್ಞಾಪಕವಾಗಿ ಬಂದವೆ. ಆದಕಾರಣ ಯೊಪ್ಪಕ್ಕೆ ಕಳು
ಹಿಸಿ, ಪೇತ್ರನೆಂಬ ಸೀಮೋನನನ್ನು ಕರಿಸು. ಅವನು ತೊಗಲುಗಾ
ರನಾದ ಸೀಮೋನನ ಮನೆಯಲ್ಲಿ ಸಮುದ್ರದ ಹತ್ತರ ವಾಸ
ಮಾಡುತ್ತಾನೆ; ಅವನು ಬಂದು, ನಿನ್ನ ಸಂಗಡ ಮಾತಾಡುವನು.
33 ಹೀಗಿರಲಾಗಿ ಸಂಗಡಲೇ ನಿನ್ನ ಬಳಿಗೆ ಕಳುಹಿಸಿದೆನು; ಮತ್ತು ನೀ
ನು ಬಂದದ್ದು ಬಳ್ಳೇದಾಯಿತು. ಆದದರಿಂದ ಈಗ ದೇವರಿಂದ
ನಿನಗೆ ಆಜ್ಞಾಪಿಸಲ್ಪಟ್ಟವುಗಳೆಲ್ಲಾ ಕೇಳುವದಕ್ಕೆ ನಾವೆಲ್ಲರು
ದೇವರ ಮುಂದೆ ಇಲ್ಲಿ ಇದ್ದೇವೆ.



34 ಆಗ ಪೇತ್ರನು ಬಾಯಿ ತೆರೆದು, ಹೇಳ್ದಿದ್ದೇನಂದರೆ, ದೇವರು
ಮುಖದಾಕ್ಷಿಣ್ಯ ನೋಡುವವನಲ್ಲವೆಂದೂ, ಸಕಲ ಜನಾಂಗಗಳಲ್ಲಿ
35 ಅವನಿಗೆ ಭಯ ಪಟ್ಟು, ನೀತಿಯನ್ನು ನಡಿಸುವವನು ಅವನಿಗೆ ಸ
ಮರ್ಪಕವಾಗಿದ್ದಾನೆಂದೂ, ನಿಶ್ಚಯವಾಗಿ ಗ್ರಹಿಸುತ್ತೇನೆ. ಅವ
ನು, ಎಲ್ಲರ ಕರ್ತನಾಗಿರುವ ಯೇಸು ಕ್ರಿಸ್ತನ ಮುಖಾಂತರ
ವಾಗಿ ಸಮಾಧಾನವನ್ನು ಪ್ರಸಂಗಿಸಿ, ಇಸ್ರಯೇಲನ ಮಕ್ಕಳಿಗೆ
36 ಕಳುಹಿಸಿದ ವಾಕ್ಯವನ್ನು ನೀವು ಬಲ್ಲಿರಿ. ಆ ವಾಕ್ಯವು ಯೋ
ಹಾನನು ಸಾರಿದ ಸ್ನಾನದ ತರುವಾಯ ಗಲಿಲಾಯದಿಂದ ಆರಂ
ಭವಾಗಿ, ಸಮಸ್ತ ಯೆಹೂದಕ್ಕೆ ಆಯಿತು; ಅನೇನಂದರೆ, ನಜ
37 ರೇತಿವನವನಾದ ಯೇಸುವನ್ನು ದೇವರು ಪರಿಶುದ್ಧಾತ್ಮದಿಂದಲೂ
ಬಲದಿಂದಲೂ ಅಭಿಷೇಕಿಸಿದನು. ಅವನ ಸಂಗಡ ದೇವರು ಇದ್ದ
ದರಿಂದ, ಅವನು ಉಪಕಾರ ಮಾಡುತ್ತಾ, ಪಿಶಾಚನಿಂದ ಬಲಾ
ತ್ಕಾರ ಪಟ್ಟವರೆಲ್ಲರನ್ನು ಸ್ವಸ್ಥ ಮಾಡುತ್ತಾ, ಸಂಚರಿಸಿದನೆಂಬು
38 ವೇ. ಅವನು ಯೆಹೂದ್ಯರ ದೇಶದಲ್ಲಿಯೂ ಯೆರೂಸಲೇ
ಮನಲ್ಲಿಯೂ ಮಾಡಿದವುಗಳಿಗೆಲ್ಲಾ ನಾವು ಸಾಕ್ಷಿಗಳಾಗಿದ್ದೇವೆ.
೪೦ ಅವನನ್ನು ಮರದ ಮೇಲೆ ತೂಗ ಹಾಕಿ, ಕೊಂದು ಬಿಟ್ಟರು.
ಅವನನ್ನು ದೇವರು ಮೂರನೇ ದಿವಸದಲ್ಲಿ ಎಬ್ಬಿಸಿ, ಪ್ರತ್ಯಕ್ಷ
೪೧ ವಾಗ ಮಾಡಿದನು. ಸಮಸ್ತ ಜನರಿಗೆ ಅಲ್ಲ, ಮುಂಚೆ ದೇವರಿಂದ
ಆದು ನೇಮಿಸಲ್ಪಟ್ಟು, ಅವನು ಸತ್ತವರೊಳಗಿಂದ ಎದ್ದ ಮೇಲೆ
ಅವನ ಸಂಗಡ ಉಂಡು ಕುಡಿದ ಸಾಕ್ಷಿಗಳಾದ ನಮಗೆ ಮಾತ್ರವೇ.
೪೨ ಮತ್ತು ಅವನೇ ಬದುಕುವವರಿಗೂ ಸತ್ತವರಿಗೂ ದೇವರಿಂದ ನೇಮಿ
ಸಲ್ಪಟ್ಟ ನ್ಯಾಯಾಧಿಪತಿಯಾಗಿದ್ದಾನೆಂದು ಸಾಕ್ಷಿ ಕೊಟ್ಟು,
43 ಜನರಿಗೆ ಸಾರ ಬೇಕೆಂದು, ನಮಗೆ ಅಪ್ಪಣೆ ಕೊಟ್ಟಿದ್ದಾನೆ. ಅವನ
ಹೆಸರಿನಿಂದ ಅವನಲ್ಲಿ ವಿಶ್ವಾಸವಿಡುವವರೆಲ್ಲರು ಪಾಪ ಪರಿಹಾರ
ವನ್ನು ಹೊಂದುತ್ತಾರೆಂದು, ಪ್ರವಾದಿಗಳೆಲ್ಲರು ಅವನಿಗೆ ಸಾಕ್ಷಿ
ಕೊಡುತ್ತಾರೆ.

೪೪ ಪೇತ್ರನು ಇನ್ನು ಈ ಮಾತುಗಳನ್ನಾಡುತ್ತಿರಲಾಗಿ, ವಾಕ್ಯವ
೪೫ ನ್ನು ಕೇಳುವವರೆಲ್ಲರ ಮೇಲೆ ಪರಿಶುದ್ಧಾತ್ಮವು ಬಿತ್ತು. ಜನಾಂಗ
ಗಳ ಮೇಲೆ ಸಹ ಪರಿಶುದ್ಧಾತ್ಮದ ವರವು ಹೊಯ್ಯಲ್ಪಟ್ಟದ
ರಿಂದ, ಪೇತ್ರನ ಸಂಗಡ ಬಂದ ಪರಿಚ್ಛೇದನೆಯವರಾದ ವಿಶ್ವಾಸಿ
೪೬ ಗಳು ಭ್ರಮೆ ಗೊಂಡರು. ಯಾಕಂದರೆ ಅವರು ಭಾಷೆಗಳಿಂದ
ಮಾತಾಡಿ, ದೇವರನ್ನು ಮಹಿಮೆ ಪಡಿಸುವದನ್ನು ಕೇಳ್ದಿದರು.
೪೭ ಆಗ ಪೇತ್ರನು ಪ್ರತ್ಯುತ್ತರವಾಗಿ, ನಮ್ಮ ಹಾಗೆಯೇ ಪರಿಶುದ್ಧಾ
ತ್ಮನನ್ನು ಹೊಂದಿದ ಇವರು ಸ್ನಾನ ಹೊಂದದ ಹಾಗೆ, ಯಾರಾ
೪೮ ದರೂ ನೀರು ತಡೆಯ ಬಹುದೇ? ಎಂದು ಹೇಳ್ದಿ, ಕರ್ತನ ಹೆಸರು
ನಲ್ಲಿ ಅವರಿಗೆ ಸ್ನಾನ ಕೊಡ ಬೇಕೆಂದು, ಆಜ್ಞಾಪಿಸಿದನು. ಆಗ,
ಕೆಲವು ದಿವಸ ಇರ ಬೇಕೆಂದು, ಅವನನ್ನು ಬೇಡಿ ಕೊಂಡರು.

## ೧೧. ಸಂಧಿ.

೧ ಆದರೆ ಜನಾಂಗಗಳು ದೇವರ ವಾಕ್ಯವನ್ನು ಅಂಗೀಕರಿಸಿದ
ವೆಂದು ಅಪೊಸ್ತಲರೂ ಯೆಹೂದದಲ್ಲಿರುವ ಸಹೋದರರೂ
೨ ಕೇಳ್ದರು. ಹತ್ತು ಪೇತ್ರನು ಯೆರೂಸಲೇಮಿಗೆ ಏರಿ ಬಂದಾಗ,
3 ಪರಿಚ್ಛೇದನೆಯವರು ಅವನ ಸಂಗಡ, ನೀನು ಅಪರಿಚ್ಛೇದನೆಯ
ರಾದ ಜನರ ಹತ್ತರ ಪ್ರವೇಶಿಸಿ, ಅವರ ಸಂಗಡ ಊಟ ಮಾಡಿದಿ
ಎಂದು ವಿವಾದ ಮಾಡಿದರು.

೪ ಆಗ ಪೇತ್ರನು ಮೊದಲಿನಿಂದ ಕ್ರಮವಾಗಿ ಅವರಿಗೆ ವಿವರಿಸಿ ಹೇ
ಳ್ದಿದ್ದೇನಂದರೆ, ನಾನು ಯೊಪ್ಪ ಪಟ್ಟಣದಲ್ಲಿ ಪ್ರಾರ್ಥಿಸುತ್ತಿರುವಾಗ
ರವಸವಾಗಿ, ದರ್ಶನವನ್ನು ಕಂಡೆನು. ಏನಂದರೆ, ಆಕಾಶದೊಳ
ಗಿಂದ, ನಾಲ್ಕು ಕೊನೆಗಳಿಂದ ಇಳಿಸಲ್ಪಟ್ಟ ದೊಡ್ಡ ದುಪ್ಪಟಿ
೬ ಯ ಹಾಗಿರುವ ವಸ್ತುವು ಇಳಿಯಿತು. ಅದರ ಮೇಲೆ ನಾನು
ಕಣ್ಣಿಟ್ಟು, ಯೋಚನೆ ಮಾಡಿ, ಭೂಮಿಯ ಚತುಷ್ಪಾದಗಳ
ನ್ನೂ, ಮೃಗಗಳನ್ನೂ, ಕ್ರಿಮಿಗಳನ್ನೂ, ಆಕಾಶ ಪಕ್ಷಿಗಳ
೭ ನ್ನೂ ನೋಡಿದೆನು. ಮತ್ತು, ಪೇತ್ರನೇ, ಎದ್ದು, ಕೊಂದು, ತಿನ್ನು,
೮ ಎಂದು ಹೇಳುವ ಶಬ್ದವನ್ನು ಕೇಳ್ದಿದೆನು. ಆಗ ನಾನು, ಕರ್ತನೇ,
ಬೇಡವೇ ಬೇಡ. ಹೊಲೆಯಾದದ್ದೂ ಅಶುದ್ಧವಾದದ್ದೂ ಏನಾ
ದರೂ ಎಂದೂ ನನ್ನ ಬಾಯಿಯೊಳಗೆ ಹೋಗಲಿಲ್ಲ, ಅಂದೆನು.
೯ ಆದರೆ ಎರಡನೇ ಸಾರಿ ಆ ಶಬ್ದವು ಆಕಾಶದಿಂದ ನನಗೆ, ದೇವರು
ಪರಿಶುದ್ಧ ಮಾಡಿದವುಗಳನ್ನು ನೀನು ಹೊಲೆ ಅನ್ನ ಬೇಡವೆಂದು,
೧೦ ಉತ್ತರ ಹೇಳ್ದಿತು. ಇದು ಮೂರು ಸಾರಿ ಆಯಿತು. ಆಗ ಎಲ್ಲಾ
ಆಕಾಶಕ್ಕೆ ತಿರಿಗಿ ಎತ್ತಲ್ಪಟ್ಟಿತು.

೧೧ ಮತ್ತು, ಇಗೋ, ಆ ಕ್ಷಣದಲ್ಲಿ ಮೂರು ಜನರು ಕೈಸಕ್ಕೈ
ಯದಿಂದ ನನ್ನ ಬಳಿಗೆ ಕಳುಹಿಸಲ್ಪಟ್ಟು, ನಾನಿದ್ದ ಮನೆಯ ಬಳಿ
೧೨ ಯಲ್ಲಿ ನಿಂತು ಕೊಂಡಿದ್ದರು. ಮತ್ತು ಆತ್ಮನು, ಏನೂ ಸಂದೇಹ
ಪಡದೆ, ಅವರ ಸಂಗಡ ಹೋಗ ಬೇಕೆಂದು ನನಗೆ ಹೇಳ್ದಿತು. ಈ
ಆರು ಮಂದಿ ಸಹೋದರರು ಸಹ ನನ್ನ ಸಂಗಡ ಬಂದರು. ನಾ
೧೩ ವು ಆ ಮನುಷ್ಯನ ಮನೆಯಲ್ಲಿ ಪ್ರವೇಶಿಸಿದೆವು. ಅವನು ನಮಗೆ,
ಯೊಪ್ಪಕ್ಕೆ ಜನರನ್ನು ಕಳುಹಿಸಿ, ಪೇತ್ರನೆಂಬ ಸೀಮೋನನನ್ನು
೧೪ ಕರಿಸು; ನಿನ್ನನ್ನೂ ನಿನ್ನ ಸಮಸ್ತ ಮನೆಯನ್ನೂ ರಕ್ಷಿಸ ತಕ್ಕ
ಮಾತುಗಳನ್ನೂ ಅವನು ನಿನಗೆ ಹೇಳುವನೆಂದು, ತನ್ನ ಮನೆಯ
ಲ್ಲಿ ನಿಂತು ಕೊಂಡು, ತನಗೆ ಹೇಳುವ ದೂತನನ್ನು ಕಂಡೆನೆಂಬು
ವದನ್ನು ತಿಳಿಸಿದನು.

೧೫ ನಾನು ಮಾತಾಡಲಾರಂಭಿಸಿದಾಗ, ಪರಿಶುದ್ಧಾತ್ಮವು ಆರಂಭ
ದಲ್ಲಿ ನಮ್ಮ ಮೇಲೆ ಬಿದ್ದ ಪ್ರಕಾರವೇ, ಅವರ ಮೇಲೆಯೂ ಬಿತ್ತು.
೧೬ ಮತ್ತು, ಯೋಹಾನನು ನೀರಿನಿಂದ ಸ್ನಾನ ಕೊಟ್ಟನು; ಆ
ದರೆ ನೀವು ಪರಿಶುದ್ಧಾತ್ಮದಿಂದ ಸ್ನಾನ ಹೊಂದುವಿರಿ, ಎಂದು
೧೭ ಕರ್ತನು ಹೇಳ್ದಿದ ಮಾತನ್ನು ಜ್ಞಾಪಕ ಮಾಡಿ ಕೊಂಡೆನು. ಆದ
ದರಿಂದ, ಕರ್ತನಾದ ಯೇಸುವನ್ನಲ್ಲಿ ವಿಶ್ವಾಸಿಸಿದ ನಮಗೆ ದೇವ
ರು ಕೊಟ್ಟದ್ದಕ್ಕೆ ಸರಿಯಾದ ವರವನ್ನು ಅವರಿಗೂ ಕೊಟ್ಟಿ
ದ್ದರೆ, ದೇವರಿಗೆ ಅಡ್ಡಿ ಮಾಡುವದಕ್ಕೆ ನಾನು ಎಷ್ಟರವನು? ಇವು
ಗಳನ್ನು ಕೇಳ್ದಿ, ಸುಮ್ಮನಿದ್ದು, ಹಾಗಾದರೆ ದೇವರು ಜನಾಂಗಳಿ
ಗೂ ಜೀವಕ್ಕೆ ಮಾನಸಾಂತರವನ್ನು ಕೊಟ್ಟಿದ್ದಾನೆಂದು, ದೇವರ
ನ್ನು ಮಹಿಮೆ ಪಡಿಸಿದರು.

೧೯ ಆದರೆ ಸ್ತೆಫನನಿಗೋಸ್ಕರ ಉಂಟಾದ ಉಪದ್ರವದಿಂದ ಚದರಿ
ಹೋದವರು, ಯೆಹೂದ್ಯರಿಗೆ ಹೊರ್ತು, ಮತ್ಯಾರಿಗೂ ವಾ
ಕ್ಯವನ್ನು ಹೇಳ್ದೆ, ಫೊಯಿನಿಕೆ, ಕುಪ್ರ, ಅಂತಿಯೋಕ್ಯಗಳ
೨೦ ವರಿಗೂ ಸಂಚಾರ ಮಾಡಿದರು. ಮತ್ತು ಅವರಲ್ಲಿ ಕೆಲವು ಮಂದಿ
ಕುಪ್ರಿಯರೂ ಕುರೇನ್ಯರೂ ಆಗಿದ್ದರು. ಇವರು ಅಂತಿಯೋ
ಕ್ಯಕ್ಕೆ ಬಂದು, ಕರ್ತನಾದ ಯೇಸುವನ್ನು ಪ್ರಸಂಗಿಸಿ, ಗ್ರೇಕರ
ಸಂಗಡ ಮಾತಾಡಿದರು. ಮತ್ತು ಕರ್ತನ ಕೈ ಅವರ ಸಂಗಡ
ಇತ್ತು. ಆದದರಿಂದ ಬಹು ಮಂದಿ ವಿಶ್ವಾಸಿಸಿ, ಕರ್ತನ ಕಡೆಗೆ
ತಿರುಗಿ ಕೊಂಡರು.

೨೨ ಅವರ ವಿಷಯವಾದ ವರ್ತಮಾನವು ಯೆರೂಸಲೇಮಿನಲ್ಲಿರುವ
ಸಭೆಯ ಕಿವಿಗಳಿಗೆ ಕೇಳಿಸಿದಾಗ, ಅವರು ಬಾರ್ನಬನನ್ನು ಅಂತಿ
೨೩ ಯೋಕ್ಯದ ವರಿಗೆ ಹೋಗ ಕಳುಹಿಸಿದರು. ಇವನು ಬಂದು,
ದೇವರ ಕೃಪೆಯನ್ನು ನೋಡಿ, ಸಂತೋಷ ಪಟ್ಟು, ಹೃದಯ
ದ ನಿರ್ಣಯದಿಂದ ಕರ್ತನಲ್ಲಿ ನೆಲೆಯಾಗಿರ ಬೇಕೆಂದು, ಅವ
೨೪ ಕ್ಕೆಲ್ಲರನ್ನು ಬೇಡಿ ಕೊಂಡನು. ಯಾಕಂದರೆ ಅವನು ಒಳ್ಳೇ ಮ
ನುಷ್ಯನೂ ಪರಿಶುದ್ಧಾತ್ಮದಿಂದಲೂ ವಿಶ್ವಾಸದಿಂದಲೂ ತುಂಬಿ
ದವನೂ, ಆಗಿದ್ದನು. ಮತ್ತು ಬಹು ಸಮೂಹವು ಕರ್ತನಿಗೆ ಕೂಡಿಸಲ್ಪಟ್ಟಿತು.

೨೫ ಆಗ ಬಾರ್ನಬನು ಶೌಲನನ್ನು ಹುಡುಕುವದಕ್ಕೆ ತಾರ್ಸ
ಕ್ಕೆ ಹೊರಟು ಹೋಗಿ, ಅವನನ್ನು ಕಂಡು, ಅಂತಿಯೋಕ್ಯಕ್ಕೆ
೨೬ ಕರಕೊಂಡು ಬಂದನು. ಮತ್ತು ಅದದ್ದೇನಂದರೆ, ಅವರು ಪೂ
ರ್ಣ ವರುಷ ಸಭೆಯ ಸಂಗಡ ಕೂಡಿ ಇದ್ದು, ಬಹು ಸಮೂ
ಹಕ್ಕೆ ಉಪದೇಶ ಮಾಡಿದರು. ಅಂತಿಯೋಕ್ಯದಲ್ಲಿ ಮೊದಲು
ಶಿಷ್ಯರಿಗೆ ಕ್ರಿಸ್ತ್ಯರೆಂಬ ಹೆಸರು ಉಂಟಾಯಿತು.

೨೭ ಆ ದಿನಗಳಲ್ಲಿ ಪ್ರವಾದಿಗಳು ಯೆರೂಸಲೇಮಿನಿಂದ ಅಂತಿ
೨೮ ಯೋಕ್ಯಕ್ಕೆ ಇಳಿದು ಬಂದರು. ಅವರಲ್ಲಿ ಅಗಬನೆಂಬ ಒಬ್ಬ
ನು ಎದ್ದು, ಲೋಕದಲ್ಲೆಲ್ಲಾ ದೊಡ್ಡ ಬರವು ಉಂಟಾಗುವದೆಂದು,
೨೯ ಆತ್ಮದ ಮೂಲವಾಗಿ ಸೂಚಿಸಿದನು. ಅದು ಕೈಸರನಾದ ಕ್ಲಾ
ಡ್ಯನ ಕಾಲದಲ್ಲಿ ಉಂಟಾಯಿತು. ಆಗ ಶಿಷ್ಯರಲ್ಲಿ ಒಬ್ಬೊಬ್ಬನು,
ಕೈಲಾದ ಮಟ್ಟಿಗೂ, ಯೆಹೂದ್ಯದಲ್ಲಿ ವಾಸವಾಗಿರುವ ಸಹೋ
ದರರ ಸೇವೆಗೋಸ್ಕರ ಕಳುಹಿಸ ಬೇಕೆಂದು, ನಿರ್ಣಯಿಸಿ
೩೦ ಕೊಂಡರು. ಅದನ್ನು ಮಾಡಿ, ಬಾರ್ನಬನ, ಶೌಲನ ಮುಖಾಂ
ತರ ಹಿರಿಯರ ಬಳಿಗೆ ಕಳುಹಿಸಿದರು.

## ೧೨. ಸಂಧಿ.

೧ ಆ ಕಾಲದಲ್ಲಿ ಅರಸನಾದ ಹೆರೋದನು ಸಭೆಯವರಲ್ಲಿ ಕೆಲ
೨ ವರಿಗೆ ಕೇಡು ಮಾಡ ಕೈ ಹಾಕಿದನು. ಮತ್ತು ಯೋಹಾನನ
ಸಹೋದರನಾದ ಯಾಕೋಬನನ್ನು ಕತ್ತಿಯಿಂದ ಕೊಂದು
3 ಹಾಕಿ, ಅದು ಯೆಹೂದ್ಯರಿಗೆ ಹಿತವಾಗಿದೆ ಎಂದು ನೋಡಿ, ಪೇ
ತ್ರನನ್ನು ಸಹ ಹಿಡಿಯುವದಕ್ಕೆ ನಿಶ್ಚೈಸಿ ಕೊಂಡನು. ಆಗ ಹುಳಿ
೪ ಇಲ್ಲದ ರೊಟ್ಟಿಗಳ ದಿವಸಗಳಿದ್ದವು. ಅವನನ್ನು ಹಿಡಿಸಿ, ಶೆರೆ
ಯಲ್ಲಿ ಹಾಕಿಸಿ, ಪಸ್ಕ ಹಬ್ಬವು ಆದ ಮೇಲೆ ಜನರ ಮುಂದೆ
ಅವನನ್ನು ತರ ಬೇಕೆಂದು ನಾಲ್ಕು ನಾಲ್ಕು ರಾಣುವೆಯವರಾದ
ನಾಲ್ಕು ಗುಂಪುಗಳಿಗೆ ಅವನನ್ನು ಕಾಯುವದಕ್ಕೆ ಒಪ್ಪಿಸಿದನು.
೫ ಆದಕಾರಣ ಪೇತ್ರನು ಶೆರೆಯಲ್ಲಿ ಕಾಯಲ್ಪಟ್ಟನು. ಆದರೆ ಸಭೆ
ಯಿಂದ ಅವನಿಗೋಸ್ಕರ ದೇವರಿಗೆ ಎಡೆಬಿಡದೆ ಪ್ರಾರ್ಥನೆ
ಮಾಡಲ್ಪಡುತ್ತಾ ಇತ್ತು.

೬ ಆದರೆ ಹೆರೋದನು ಅವನನ್ನು ತರುವದಕ್ಕಿದ್ದ ರಾತ್ರಿಯ
ಲ್ಲೇ ಪೇತ್ರನು ಎರಡು ಸಂಕೋಲೆಗಳಿಂದ ಕಟ್ಟಲ್ಪಟ್ಟು, ಇಬ್ಬರು
ರಾಣುವೆಯವರ ಮಧ್ಯದಲ್ಲಿ ಮಲಗುತ್ತಿದ್ದನು. ಮತ್ತು ಬಾಗಲಿನ
೭ ಹೊರಗೆ ಕಾವಲಿಯವರು ಕಾವಲಾಗಿದ್ದರು. ಆಗ, ಇಗೋ, ಕರ್ತ
ನ ದೂತನು ಹತ್ತರ ನಿಂತು ಕೊಂಡನು; ಮತ್ತು ಶೆರೆಮನೆ
ಯೊಳಗೆ ಬೆಳಕು ಪ್ರಕಾಶಿಸಿತು. ಅವನು ಪೇತ್ರನ ಪಕ್ಕೆಯನ್ನು
೮ ತಟ್ಟಿ, ಬೇಗ ಏಳು, ಎಂದು, ಅವನನ್ನು ಎಬ್ಬಿಸಿದನು. ಆಗ
ಅವನ ಸಂಕೋಲೆಗಳು ಕೈಗಳಿಂದ ಕಳಚಿ ಬಿದ್ದವು. ಆಗ ದೂತ
ನು ಅವನಿಗೆ, ನಡು ಕಟ್ಟಿ ಕೊಂಡು, ನಿನ್ನ ಕೆರಗಳನ್ನು ಮೆಟ್ಟಿ
ಕೋ, ಅಂದನು. ಅವನು ಹಾಗೆ ಮಾಡಿದನು. ಮತ್ತು ಅವನಿಗೆ,
ನಿನ್ನ ಅಂಗಿಯನ್ನು ಹೊದ್ದು ಕೊಂಡು, ನನ್ನ ಹಿಂದೆ ಬಾ, ಅಂ
೯ ದನು. ಆಗ ಹೊರಟು, ಅವನ ಹಿಂದೆ ಬಂದು, ದೂತನಿಂದ ಉಂ
ಟಾಗುವಂಥಾದ್ದು ನಿಜವೆಂದು ತಿಳಿಯದೆ, ದರ್ಶನವನ್ನು ಕಂಡೆ
೧೦ ನೆಂದು, ನೆನಸಿ ಕೊಂಡನು. ಅವರು ಮೊದಲನೇ, ಎರಡನೇ, ಕಹ
ಕೆಗಳನ್ನು ದಾಟಿ, ಪಟ್ಟಣಕ್ಕೆ ಹೋಗುವ ಕಬ್ಬಿಣದ ಬಾಗಲಿಗೆ
ಬಂದಾಗ, ಅದು ತಾನಾಗಿ ಅವರಿಗೆ ತೆರೆಯಲ್ಪಟ್ಟಿತು. ಅವರು
ಹೊರಟು ಬಂದು, ಬೀದಿಯನ್ನು ದಾಟಿದ ಕೂಡ್ಲೆ, ದೂತನು
೧೧ ಅವನನ್ನು ಬಿಟ್ಟು ಹೋದನು. ಆಗ ಪೇತ್ರನು ಎಚ್ಚತ್ತು, ಹೇಳಿ
ದ್ದೇನಂದರೆ, ಕರ್ತನು ತನ್ನ ದೂತನನ್ನು ಕಳುಹಿಸಿ, ಹೆರೋ
ದನ ಕೈಗೂ, ಯೆಹೂದ್ಯರ ಜನರ ಸಕಲ ನಿರೀಕ್ಷಣೆಗೂ ನನ್ನ
ನ್ನು ತಪ್ಪಿಸಿದ್ದಾನೆಂದು, ಈಗ ನಿಶ್ಚಯವಾಗಿ ಬಲ್ಲೆನು.

೧೨ ತರುವಾಯ ಅವನು ನೋಡಿ ಕೊಂಡು, ಮಾರ್ಕನೆಂಬ
ಯೋಹಾನನ ತಾಯಿಯಾದ ಮರಿಯಳ ಮನೆಗೆ ಬಂದನು.
೧೩ ಅಲ್ಲಿ ಅನೇಕರು ಕೂಡಿ ಕೊಂಡು, ಪ್ರಾರ್ಥಿಸುತ್ತಿದ್ದರು. ಆದರೆ
ಪೇತ್ರನು ಬಾಗಲಿನ ಕದವನ್ನು ತಟ್ಟುವಾಗ, ಕೋದೆ ಎಂಬ ಒಬ್ಬ
೧೪ ಚಾಕರಿಯವಳು ಕೇಳುವದಕ್ಕೆ ಬಂದಳು. ಪೇತ್ರನ ಶಬ್ದವನ್ನು
ತಿಳಿದು, ಸಂತೋಷದಿಂದ ಬಾಗಲನ್ನು ತೆರೆಯದೆ, ಒಳಗೆ ಓಡಿ,
ಬಾಗಲಿನ ಮುಂದೆ ಪೇತ್ರನು ನಿಂತು ಕೊಂಡಿದ್ದಾನೆಂದು ತಿಳಿಸಿದ
೧೫ ಳು. ಅವರು ಅವಳಿಗೆ, ಮರುಳಾಗಿದ್ದೀ, ಅಂದರು. ಅವಳು ಹೀಗೆ
ಅದೆ ಎಂದು ದೃಢವಾಗಿ ಹೇಳಿದಳು. ಅವರು, ಅವನ ದೂತನು,
೧೬ ಅಂದರು. ಆದರೆ ಪೇತ್ರನು ತಟ್ಟುವದನ್ನು ಬಿಡಲಿಲ್ಲ. ಆಗಲವರು
೧೭ ತೆರೆದು, ಅವನನ್ನು ನೋಡಿ, ಭ್ರಮೆಗೊಂಡರು. ಆದರೆ ಅವನು
ಅವರಿಗೆ, ಸುಮ್ಮನಿರ ಬೇಕೆಂದು, ಕೈಯಿಂದ ಸಾಜ್ಞೆ ಮಾಡಿ,
ಕರ್ತನು ತನ್ನನ್ನು ಶೆರೆಮನೆಯೊಳಗಿಂದ ಹ್ಯಾಗೆ ಹೊರಗೆ
ಬಿಡಿಸಿದನೆಂದು ಅವರಿಗೆ ವಿವರಿಸಿ, ಇವುಗಳನ್ನು ಯಾಕೋಬನಿ
ಗೂ ಸಹೋದರರಿಗೂ ತಿಳಿಸಿರೆಂದು ಹೇಳಿದನು. ತರುವಾಯ
ಹೊರಟು, ಬೇರೆ ಸ್ಥಳಕ್ಕೆ ಹೋದನು.

೧೮ ಬೆಳಗಾದ ಮೇಲೆ, ಪೇತ್ರನು ಏನಾದನೆಂದು, ರಾಣುವೆಯವ
೧೯ ರಲ್ಲಿ ಬಹು ಗದ್ದಲ ಉಂಟಾಯಿತು. ಹೆರೋದನು ಅವನನ್ನು
ಹುಡುಕಿ, ಕಾಣದೆ ಇದ್ದದರಿಂದ, ಕಾವಲಿಯವರಿಗೆ ನ್ಯಾಯ ವಿ
ರಿಸಿ, ಅವರನ್ನು ಕೊಂದು ಹಾಕ ಬೇಕೆಂದು ಆಜ್ಞಾಪಿಸಿ, ಯೆಹೂ
ದಿಯಿಂದ ಕೈಸರ್ಯೆಯಕ್ಕೆ ಹೋಗಿ, ವಾಸ ಮಾಡಿದನು.

೨೦ ಮತ್ತು ಹೆರೋದನು ತೂರ್ಯರ ಸಂಗಡಲೂ ಸಿದೋನ್ಯರ
ಸಂಗಡಲೂ ಯುದ್ಧ ಮಾಡ ಬೇಕೆಂದಿರಲಾಗಿ, ಅವರು ಏಕ ಮನ
ಸ್ಸಾಗಿ ಅವನ ಬಳಿಗೆ ಬಂದು, ರಾಣಿವಾಸಕ್ಕೆ ಅಧಿಪತಿಯಾದ
ಬ್ಲಸ್ತನನ್ನು ಸಮ್ಮತಿ ಪಡಿಸಿ, ಸಮಾಧಾನವನ್ನು ಬೇಡಿ ಕೊಂಡ
ರು. ಯಾಕಂದರೆ ಅರಸನ ಪೀಮೆಯಿಂದ ಅವರ ಪೀಮೆಗೆ ಗ್ರಾಸ
ಬರುತ್ತಿತ್ತು.

೨೧ ಆದರೆ ನೇಮಕವಾದ ಒಂದು ದಿನದಲ್ಲಿ ಹೆರೋದನು ರಾಜವ
ಸ್ತ್ರವನ್ನು ಧರಿಸಿ ಕೊಂಡು, ಪೀಠದ ಮೇಲೆ ಕೂತು ಕೊಂಡು,
೨೨ ಅವರಿಗೆ ಪ್ರಸಂಗಿಸಿದನು. ಅದಕ್ಕೆ ಸಮೂಹವು, ಇದು ದೇವರ
೨೩ ಶಬ್ದವೇ ಹೊರ್ತು, ಮನುಷ್ಯನದಲ್ಲ, ಎಂದು ಕೂಗಿತು. ಅವ



ನು ದೇವರಿಗೆ ಮಹಿಮೆಯನ್ನು ಕೊಡದ ಕಾರಣ, ಸಂಗತಿಯೇ
ಕರ್ತನ ದೂತನು ಅವನನ್ನು ಹೊಡೆದನು. ಆದದರಿಂದ ಅವ
ನು ಹುಳಗಳಿಂದ ತಿನ್ನಲ್ಪಟ್ಟು, ಪ್ರಾಣ ಬಿಟ್ಟನು.

೨೪ ಆದರೆ ದೇವರ ವಾಕ್ಯವು ಬೆಳೆದು, ಪ್ರಬಲವಾಯಿತು. ಮತ್ತು
೨೫ ಬಾರ್ನಬನೂ ಶೌಲನೂ ಸೇವೆಯನ್ನು ಪೂರೈಸಿ, ಮಾರ್ಕ
ನೆಂಬ ಯೋಹಾನನನ್ನೂ ಕೂಡ ಕರಕೊಂಡು, ಯೆರೂಸಲೇಮಿ
ನಿಂದ ತಿರಿಗಿ ಬಂದರು.

## ೧೩. ಸಂಧಿ.

೧ ಮತ್ತು ಅಂತಿಯೋಕ್ಯದಲ್ಲಿರುವ ಸಭೆಯಲ್ಲಿ ಬಾರ್ನಬನೂ,
ನೀಗರೆಂಬ ಸಿಮೆಯೋನನೂ, ಕುರೇನ್ಯನಾದ ಲೂಕ್ಯನೂ,
ಚತುರಧಿಪತಿಯಾದ ಹೆರೋದನ ಸಂಗಡ ಸಾಕಲ್ಪಟ್ಟ ಮನಸೇ
ನನೂ, ಶೌಲನೂ, ಎಂಬ ಕೆಲವು ಪ್ರವಾದಿಗಳೂ ಬೋಧಕರೂ
೨ ಇದ್ದರು. ಅವರು ಕರ್ತನಿಗೆ ಆರಾಧನೆ ಮಾಡಿ, ಉಪವಾಸ ಮಾ
ಡುತ್ತಿರುವಾಗ, ನಾನು ಅವರನ್ನು ಕರೆದ ಕೆಲಸಕ್ಕೋಸ್ಕರ ಬಾ
ರ್ನಬನನ್ನೂ ಶೌಲನನ್ನೂ ನನಗೆ ಪ್ರತ್ಯೇಕಿಸಿರಿಂದು, ಪರಿಶುದ್ಧಾ
3 ತ್ಮವು ಹೇಳಿತು. ಆಗಲವರು ಉಪವಾಸವನ್ನೂ ಪ್ರಾರ್ಥನೆಯ
ನ್ನೂ ಮಾಡಿ, ಅವರ ಮೇಲೆ ಕೈಗಳನ್ನಿಟ್ಟು, ಅವರನ್ನು ಕಳು
ಹಿಸಿ ಬಿಟ್ಟರು.

೪ ಇವರು ಪರಿಶುದ್ಧಾತ್ಮದಿಂದ ಕಳುಹಿಸಲ್ಪಟ್ಟು, ಸೆಲೂಕ್ಯಕ್ಕೆ
ಹೋಗಿ, ಅಲ್ಲಿಂದ ಕುಪ್ರಕ್ಕೆ ಹಡಗ ಮಾರ್ಗವಾಗಿ ಹೋದರು.
೫ ಮತ್ತು ಸಲಮಿನಸಿಗೆ ಬಂದು, ಯೆಹೂದ್ಯರ ಸಭೆಮನೆಗಳಲ್ಲಿ ದೇ
ವರ ವಾಕ್ಯವನ್ನು ಪ್ರಸಂಗಿಸಿದರು. ಇದ್ದಲ್ಲಿಯೆ ಯೋಹಾನನು
ಸಹ ಅವರಿಗೆ ಉಳ್ಳಿಗದವನಾಗಿದ್ದನು.

೬ ಅವರು ಪಾಫೊಸಿನ ಪರ್ಯಂತರ ದ್ವೀಪವನ್ನು ಹಾದು
ಹೋದಾಗ, ಬಾರ್ ಯೇಸುವೆಂಬ ಯೆಹೂದ್ಯನಾದ ಮಂತ್ರ
7 ಗಾರನಾಗಿರುವ ಒಬ್ಬ ಸುಳ್ಳು ಪ್ರವಾದಿಯನ್ನು ಕಂಡರು. ಇವನು
ಬುದ್ಧಿಯುಳ್ಳ ಮನುಷ್ಯನಾದ ಸೆರ್ಗ್ಯ ಪೌಲನೆಂಬ ಪ್ರತಿಥೊ
ಕೆಯ ಸಂಗಡ ಇದ್ದನು. ಇವನು ಬಾರ್ನಬನನ್ನೂ ಶೌಲನ
ನ್ನೂ ಕರೇ ಕಳುಹಿಸಿ, ದೇವರ ವಾಕ್ಯವನ್ನು ಕೇಳ ಹುಡುಕಿದನು.
೮ ಆದರೆ ಮಂತ್ರಗಾರನೆಂಬ ಅರ್ಥವುಳ್ಳ ಹೆಸರು ಉಂಟಾದ ಎಲ
ಮನು ಪ್ರತಿಥೊಕೆಯನ್ನು ವಿಶ್ವಾಸದಿಂದ ತಿರಿಗಿಸ ಹುಡುಕಿ,
೯ ಅವರನ್ನು ಎದುರಿಸಿದನು. ಆಗ ಪೌಲನೆಂಬ ಶೌಲನು ಪರಿಶುದ್ಧಾ
೧೦ ತ್ಮದಿಂದ ತುಂಬಿ, ಅವನ ಮೇಲೆ ಕಣ್ಣಿಟ್ಟು, ಓ ಸಮಸ್ತ ಕಪಟ
ದಿಂದಲೂ ಸಮಸ್ತ ತಂತ್ರದಿಂದಲೂ ತುಂಬಿದ ಪಿಶಾಚನ ಮಗನೇ,
ಎಲ್ಲಾ ನೀತಿಗೆ ಶತ್ರುವೇ, ಕರ್ತನ ನೆಟ್ಟಗಾದ ಹಾದಿಗಳನ್ನು ತಿರು
ಗಿಸುವದನ್ನು ನೀನು ಬಿಡುವದಿಲ್ಲವೋ? ಈಗ, ಇಗೋ, ಕರ್ತನ
೧೧ ಕೈ ನಿನ್ನ ಮೇಲೆ ಅದೆ. ಕೆಲವು ಕಾಲದ ಪರ್ಯಂತರ ಸೂರ್ಯನ
ನ್ನು ನೋಡದೆ, ಕುರುಡನಾಗಿರುವಿ, ಅಂದನು. ಸಂಗತಿಯೇ ಅವನ
ಮೇಲೆ ಪೊಡವೂ ಕತ್ತಲೂ ಬಿತ್ತು. ಮತ್ತು ಅವನು ತಿರುಗಿ
೧೨ ಕೊಂಡು, ಕೈಲಾಗು ಕೊಡುವವರನ್ನು ಹುಡುಕಿದನು. ಪ್ರತಿಥೊ
ಕೆಯು ಆದದ್ದನ್ನು ನೋಡಿ, ಕರ್ತನ ಬೋಧನೆಗೆ ಆಶ್ಚರ್ಯ
ಪಟ್ಟು, ವಿಶ್ವಾಸಿಸಿದನು.

೧೩ ತರುವಾಯ ಪೌಲನ ಸಂಗಡ ಇದ್ದವರು ಪಾಫೊಸನ್ನು ಬಿ
ಟ್ಟು, ಪಂಫುಲ್ಯದಲ್ಲಿರುವ ಪೆರ್ಗೆಗೆ ಬಂದರು. ಆದರೆ ಯೋಹಾ
ನನು ಅವರನ್ನು ಬಿಟ್ಟು, ಯೆರೂಸಲೇಮಿಗೆ ತಿರಿಗಿ ಹೋದನು.
೧೪ ಅವರು ಪೆರ್ಗೆಯಿಂದ ಹೊರಟು, ಪಿಸಿದ್ಯದಲ್ಲಿರುವ ಅಂತಿ
ಯೋಕ್ಯಕ್ಕೆ ಬಂದು, ಸಬ್ಬತ್ ದಿನದಲ್ಲಿ ಸಭೆಮನೆಯಲ್ಲಿ
೧೫ ಪ್ರವೇಶಿಸಿ ಕೂತುಕೊಂಡರು. ನ್ಯಾಯ ಪ್ರಮಾಣವೂ ಪ್ರವಾದಿ
ಗಳ ಗ್ರಂಥವೂ ಪಾರಾಯಣವಾದ ಮೇಲೆ, ಸಭೆಯ ಯಜಮಾ
ನರು ಅವರಿಗೆ, ಸಹೋದರರಾದ ಜನರೇ, ಜನರಿಗೆ ಬೇಳುವದಕ್ಕೆ
ಬುದ್ಧಿ ಮಾತು ಏನಾದರೂ ನಿಮಗಿದ್ದರೆ, ಹೇಳಿರೆಂದು, ಹೇಳಿ
ಕಳುಹಿಸಿದರು.

೧೬ ಆಗ ಪೌಲನು ಎದ್ದು, ಕೈಯಿಂದ ಸಾಜ್ಞೆ ಮಾಡಿ, ಹೇಳಿ
ದ್ದೇನಂದರೆ, ಇಸ್ರಾಯೇಲ್ಯರಾದ ಜನರೇ, ದೇವರಿಗೆ ಭಯ ಪಡು
೧೭ ವವರೇ, ಕೇಳಿರಿ. ಈ ಇಸ್ರಾಯೇಲನ ಜನರ ದೇವರು ನಮ್ಮ ಪಿತೃ
ಗಳನ್ನು ಆರಿಸ ಕೊಂಡು, ಐಗುಪ್ತದಲ್ಲಿ ಪರವಾಸವಾಗಿರುವ ಸಮ
ಯದಲ್ಲಿ ಜನರನ್ನು ಹೆಚ್ಚಿಸಿ, ಎತ್ತರವಾದ ಭುಜದಿಂದ ಅವರನ್ನು
೧೮ ಅದರಿಂದ ಹೊರಗೆ ತಂದನು. ಮತ್ತು ಹೆಚ್ಚು ಕಡಿಮೆ ನಾ
ಲ್ವತ್ತು ವರುಷ ಅರಣ್ಯದಲ್ಲಿ ಅವರ ನಡತೆಯನ್ನು ಸಹಿಸಿದನು.
೧೯ ಮತ್ತು ಕಾನಾ ದೇಶದಲ್ಲಿದ್ದ ಏಳು ಜನಾಂಗಗಳನ್ನು ತೆಗೆದು
೨೦ ಹಾಕಿ, ಅವರ ದೇಶವನ್ನು ಇವರಿಗೆ ಹಂಚಿ ಕೊಟ್ಟನು. ಇವುಗಳಾ
ದ ತರುವಾಯ ಹೆಚ್ಚು ಕಡಿಮೆ ನಾನೂರಾ ಐವತ್ತು ವರುಷಗಳ
ಮೇಲೆ, ಪ್ರವಾದಿಯಾದ ಸಮುವೇಲನ ಪರ್ಯಂತರ, ಅವರಿಗೆ
ನ್ಯಾಯಾಧಿಪತಿಗಳನ್ನು ಕೊಟ್ಟನು.

೨೧ ಆ ಮೇಲೆ ಅವರು ಅರಸನನ್ನು ಬೇಡಿ ಕೊಂಡ ಕಾರಣ, ದೇ
ವರು ಅವರಿಗೆ ನಾಲ್ವತ್ತು ವರುಷಗಳ ಪರ್ಯಂತರ ಬೆನ್ಯಾಮಿ
ನನ ಕುಲದ ಕೀಷನ ಮಗನಾದ ಸೌಲನನ್ನು ಕೊಟ್ಟನು. ಮತ್ತು
ಅವನನ್ನು ತೆಗೆದು ಹಾಕಿ, ಅವರಿಗೆ ದಾವೀದನನ್ನು ಅರಸನಾಗಿ
ಎಬ್ಬಿಸಿದನು. ಇವನಿಗೆ ಸಾಕ್ಷಿಯಾಗಿ, ನನ್ನ ಹೃದಯಕ್ಕೆ
ಅನುಸರಣೆಯಾದ ಮನುಷ್ಯನಾಗಿರುವ ಇಷಾಯನ ಮಗನಾ
ದ ದಾವೀದನನ್ನು ಕಂಡು ಕೊಂಡೆನು; ಅವನು ನನ್ನ ಅಪೇಕ್ಷೆಗ
ಳನ್ನೆಲ್ಲಾ ತೀರಿಸುವನೆಂದು ಹೇಳಿದನು.

೨೩ ಇವನ ಬೀಜದಿಂದ ದೇವರು, ವಾಗ್ದತ್ತದ ಪ್ರಕಾರ, ಇಸ್ರಾಯೇ
೨೪ ಲಿಗೆ ರಕ್ಷಕನಾದ ಯೇಸುವನ್ನು ಎಬ್ಬಿಸಿದ್ದಾನೆ. ಇವನ ಪ್ರವೇಶ
ಕ್ಕೆ ಮುಂಚೆ ಯೋಹಾನನು ಇಸ್ರಾಯೇಲನ ಜನರೆಲ್ಲಾ ಮಾ
೨೫ ನಸಾಂತರದ ಸ್ನಾನವನ್ನು ಸಾರಿದನು. ಆದರೆ ಯೋಹಾನನು
ತನ್ನ ಓಟವನ್ನು ಪೂರೈಸುವಾಗ, ನನ್ನನ್ನು ಯಾರೆಂದು ನೆನೆ
ಸುತ್ತೀರಿ? ನಾನು ಅವನಲ್ಲ; ಆದರೆ, ಇಗೋ, ನನ್ನ ಹಿಂದೆ ಬರು
ತ್ತಾನೆ; ಅವನ ಕೆರಗಳನ್ನು ಬಿಚ್ಚ ನಾನು ಪಾತ್ರನಲ್ಲ, ಅಂದನು.

೨೬ ಅಬ್ರಹಾಮನ ಸಂತತಿಯ ಮಕ್ಕಳಾಗಿರುವ ಸಹೋದರರಾ
ದ ಜನರೇ, ಮತ್ತು ನಿಮ್ಮಲ್ಲಿರುವ ದೇವ ಭಕ್ತರೇ, ನಿಮಗೆ ಈ
೨೭ ರಕ್ಷಣೆಯ ವಾಕ್ಯವು ಕಳುಹಿಸಲ್ಪಟ್ಟಿದೆ. ಯಾಕಂದರೆ ಯೆರೂ
ಸಲೇಮಿನ ನಿವಾಸಿಗಳೂ ಅವರ ಅಧಿಪತಿಗಳೂ ಇವನನ್ನೂ,
ಪ್ರತಿ ಸಬ್ಬತ್ ದಿವಸ ಓದಿ ಹೇಳುವ ಪ್ರವಾದಿಗಳ ಶಬ್ದಗಳನ್ನೂ
ತಿಳಿಯದೆ, ಅವನಿಗೆ ಆಜ್ಞೆ ನಿರ್ಣಯಿಸಿ, ಅವುಗಳನ್ನು ಪೂರೈ
೨೮ ಸಿದರು. ಮತ್ತು ಮರಣಾಜ್ಞೆಗುರಿಯಾದ ಯಾವ ಕಾರಣವನ್ನಾದರೂ
ಕಾಣದೆ, ಅವನನ್ನು ಕೊಲ್ಲಲ್ಪಬೇಕೆಂದು, ಪಿಲಾತನನ್ನು ಬೇಡಿ
೨೯ ಕೊಂಡರು. ಅವನ ವಿಷಯವಾಗಿ ಬರೆದವುಗಳನ್ನೆಲ್ಲಾ ತೀರಿಸಿದ
ಮೇಲೆ, ಅವನನ್ನು ಮರದಿಂದ ಇಳಿಸಿ, ಸಮಾಧಿಯೊಳಗೆ ಇಟ್ಟಿ

೩೦ ರು. ಆದರೆ ದೇವರು ಅವನನ್ನು ಸತ್ತವರೊಳಗಿಂದ ಎಬ್ಬಿಸಿದ
೩೧ ನು. ಅವನು ತನ್ನ ಸಂಗಡ ಗಲಿಲಾಯದಿಂದ ಯೆರೂಸಲೇಮಿಗೆ
ಏರಿ ಬಂದವರಿಗೆ ಅನೇಕ ದಿವಸಗಳ ದರ್ಯಂತರ ಕಾಣಲ್ಪಟ್ಟ
ನು. ಇವರು ಜನರ ಮುಂದೆ ಅವನಿಗೆ ಸಾಕ್ಷಿಗಳಾಗಿದ್ದಾರೆ.

೩೨ ಪಿತೃಗಳಿಗೆ ಆದ ವಾಗ್ದತ್ತವನ್ನು ನಾವು ನಿಮಗೆ ಪ್ರಸಂಗಿಸು
೩೩ ತ್ತೇವೆ. ಯಾಕಂದರೆ ಅವರ ಮಕ್ಕಳಾದ ನಮಗೆ, ದೇವರು,
ಯೇಸುವನ್ನು ಎಬ್ಬಿಸಿ, ಅದನ್ನು ಪೂರೈಸಿದ್ದಾನೆ—ನೀನು ನನ್ನ
ಮಗನು; ನಾನು ಈ ಹೊತ್ತು ನಿನ್ನನ್ನು ಪಡೆದಿದ್ದೇನೆಂದು, ಎರ
೩೪ ಡನೇ ಕೀರ್ತನೆಯಲ್ಲಿ ಬರೆದಿರುವ ಪ್ರಕಾರವೇ. ಮತ್ತು, ಇನ್ನು
ಕೊಳೆಯುವಿಕೆಗೆ ತಿರುಗದ ಹಾಗೆ, ಅವನನ್ನು ಸತ್ತವರೊಳಗಿಂದ
ಎಬ್ಬಿಸಿದ್ದರಿಂದ, ದಾವೀದನ ನಿಶ್ಚಯವಾದ ಕೃಪೆಗಳನ್ನು ನಿ
ಮಗೆ ಕೊಡುವೆನೆಂದು ಹೇಳಿದನು. ಆದದರಿಂದ ಬೇರೆ ಕೀರ್ತನೆ
೩೫ ಯಲ್ಲಿ ಹೇಳುವದೇನಂದರೆ, ನಿನ್ನ ಪರಿಶುದ್ಧನನ್ನು ಕೊಳೆಯು
೩೬ ವಿಕೆಯನ್ನು ನೋಡ ಗೊಡಿಸದೆ ಇರುವಿ. ಹ್ಯಾಗಂದರೆ ದಾವೀದ
ನು, ಸ್ವಂತ ಸಂತತಿಯಲ್ಲಿ ದೇವರ ಚಿತ್ತವನ್ನು ಸೇವಿಸಿದ ಮೇ
ಲೆ, ನಿದ್ದೆ ಹೋಗಿ, ತನ್ನ ಪಿತೃಗಳ ಬಳಿಯಲ್ಲಿ ಇಡಲ್ಪಟ್ಟು,
೩೭ ಕೊಳೆಯುವಿಕೆಯನ್ನು ನೋಡಿದೆನು. ಆದರೆ ದೇವರು ಯಾವ
ನನ್ನು ಎಬ್ಬಿಸಿದನೋ, ಅವನು ಕೊಳೆಯುವಿಕೆಯನ್ನು ನೋ
ಡಲಿಲ್ಲ.

೩೮ ಹೀಗಿರುವದರಿಂದ, ಸಹೋದರರಾದ ಜನರೇ, ಇವನ ಮು
ಖಾಂತರವಾಗಿ ನಿಮಗೆ ಪಾಪ ಪರಿಹಾರವು ಪ್ರಸಂಗಿಸಲ್ಪಡುತ್ತ
೩೯ ದೆಂದೂ, ಮೋಶೆಯ ನ್ಯಾಯಪ್ರಮಾಣದಲ್ಲಿ ಯಾವವುಗಳೊ
ಳಗಿಂದ ನೀತಿ ನಿರ್ಣಯ ಪಡಲಾರದೆ ಇದ್ದಿರೋ, ಅವೆಲ್ಲವುಗ
ಳೊಳಗಿಂದ ಇವನಲ್ಲಿ ವಿಶ್ವಾಸಿಸುವವರೆಲ್ಲರು ನೀತಿ ನಿರ್ಣಯ
೪೦ ಪಡುತ್ತಾರೆಂದೂ, ನಿಮಗೆ ತಿಳಿದಿರಲಿ. ಹೀಗಿರುವದರಿಂದ, ಪ್ರವಾ
ದಿಗಳು ಹೇಳಿದ್ದು ನಿಮ್ಮ ಮೇಲೆ ಬಾರದ ಹಾಗೆ, ನೋಡಿ ಕೊ
೪೧ ಳ್ಳಿರಿ. ಅದೇನಂದರೆ, ತಿರಸ್ಕರಿಸುವವರೇ, ನೋಡಿ, ಘಮಿಸಿ, ನಾ
ಶವಾಗಿರಿ; ಯಾಕಂದರೆ, ಒಬ್ಬನು ನಿಮಗೆ ವಿವರಿಸಿದರೂ, ನೀವು
ನಂಬದೆ ಇರುವ ಕೆಲಸವನ್ನು ನಾನು ನಿಮ್ಮ ದಿವಸಗಳಲ್ಲಿ ನಡಿಸು
ತ್ತೇನೆ.

೪೨ ಯೆಹೂದ್ಯರು ಸಭೆಮನೆಯೊಳಗಿಂದ ಹೋದ ಮೇಲೆ,
ಜನಾಂಗಗಳವರು, ನಾಳೆ ಸಬ್ಬತಿನಲ್ಲಿ ತಮಗೆ ಈ ಮಾತುಗಳನ್ನು
೪೩ ಹೇಳಬೇಕೆಂದು, ಬೇಡಿ ಕೊಂಡರು. ಮತ್ತು ಕೂಟವು ಅಗಲಿದ
ಮೇಲೆ, ಯೆಹೂದ್ಯರಲ್ಲಿಯೂ, ಮತ ಸೇರಿದವರಾದ ಭಕ್ತಿಯು
ಳ್ಳವರಲ್ಲಿಯೂ ಅನೇಕರು ಪೌಲನನ್ನೂ ಬಾರ್ನಬನನ್ನೂ ಹಿಂ
ಬಾಲಿಸಿದರು. ಇವರು ಅವರ ಸಂಗಡ ಮಾತಾಡಿ, ದೇವರ ಕೃಪೆ
ಯಲ್ಲಿ ನೆಲೆಯಾಗಿರ ಬೇಕೆಂದು, ಅವರನ್ನು ಸಮ್ಮತಿ ಪಡಿಸಿದರು.

೪೪ ಮತ್ತು ಬರುವ ಸಬ್ಬತಿನಲ್ಲಿ ಸ್ವಲ್ಪ ಕಡಿಮೆ ಪಟ್ಟಣವೆಲ್ಲಾ ಬೇ
೪೫ ವರ ವಾಕ್ಯವನ್ನು ಕೇಳಿಬರಬೇಕೆಂದು ಕೂಡಿ ಬಂತು. ಆಗ ಯೆಹೂ
ದ್ಯರು ಸಮೂಹಗಳನ್ನು ನೋಡಿ, ಹೊಟ್ಟೆಕಿಚ್ಚಿನಿಂದ ತುಂಬಿ,
ಎದುರು ಮಾತಾಡಿ, ದೂಷಿಸಿ, ಪೌಲನು ಹೇಳಿದವುಗಳನ್ನು ಎ
೪೬ ದುರಿಸಿದರು. ಆದರೆ ಪೌಲನೂ ಬಾರ್ನಬನೂ ಧೈರ್ಯ ಪಟ್ಟು
ಹೇಳಿದ್ದೇನಂದರೆ, ನಿಮಗೆ ಮೊದಲು ದೇವರ ವಾಕ್ಯವನ್ನು ಹೇಳ
ಬೇಕಾಗಿತ್ತು; ಆದರೆ ನೀವು ಅದನ್ನು ತಳ್ಳಿ, ನಿಮ್ಮನ್ನು ನಿತ್ಯ
ಜೀವಕ್ಕೆ ಅಪಾತ್ರರೆಂದು, ಎಣಿಸುವದರಿಂದ, ಇಗೋ, ಜನಾಂಗ
೪೭ ಗಳ ಕಡೆಗೆ ತಿರುಗುತ್ತೇವೆ. ಯಾಕಂದರೆ, ನೀನು ಭೂಮ್ಯಾಂತ್ಯ
ದ ವರೆಗೂ ರಕ್ಷಣೆಯಾಗಿರುವದಕ್ಕೆ ನಿನ್ನನ್ನು ಜನಾಂಗಗಳಿಗೆ
ಬೆಳಕಾಗಿ ಇಟ್ಟಿದ್ದೇನೆ ಎಂದಿದಾಗಿ ಕರ್ತನು ನಮಗೆ ಆಜ್ಞಾಪಿಸಿ
ದ್ದಾನೆ.

೪೮ ಜನಾಂಗಗಳು ಕೇಳಿ, ಸಂತೋಷ ಪಟ್ಟು, ಕರ್ತನ ವಾಕ್ಯವ
ನ್ನು ಮಹಿಮೆ ಪಡಿಸಿದರು. ಮತ್ತು ನಿತ್ಯ ಜೀವಕ್ಕೆ ನೇಮಿಸಲ್ಪ
೪೯ ಟ್ಟವರದ್ದು ವಿಶ್ವಾಸಿಸಿದರು. ಮತ್ತು ಕರ್ತನ ವಾಕ್ಯವು ದೇಶವ
೫೦ ಲ್ಲಾದರಲ್ಲಿ ವಿಸ್ತರಿಸಲ್ಪಟ್ಟಿತು. ಆದರೆ ಯೆಹೂದ್ಯರು ಭಕ್ತಿಯೂ
ಘನವೂ ಉಳ್ಳ ಸ್ತ್ರೀಯರನ್ನೂ ಪಟ್ಟದ ಪ್ರೇಷ್ಠರನ್ನೂ ಪ್ರೇ
ರೇಪಿಸಿ, ಪೌಲನಿಗೂ ಬಾರ್ನಬನಿಗೂ ವಿರೋಧವಾಗಿ ಹಿಂಸೆ
ಎಬ್ಬಿಸಿ, ಅವರನ್ನು ತಮ್ಮ ಪ್ರಾಂತ್ಯಗಳಿಂದ ಹೊರಡಿಸಿದರು.
೫೧ ಆದರೆ ಇವರು ತಮ್ಮ ಪಾದ ಧೂಳನ್ನು ಅವರೆದುರಿಗೆ ಝಾಡಿಸಿ
೫೨ ಹಾಕಿ, ಇಕೊನ್ಯಕ್ಕೆ ಬಂದರು. ಮತ್ತು ಶಿಷ್ಯರು ಸಂತೋಷ
ದಿಂದಲೂ ಪರಿಶುದ್ಧಾತ್ಮದಿಂದಲೂ ತುಂಬಿದವರಾದರು.

## ೧೩. ಸಂಧಿ.

೧ ಮತ್ತು ಇಕೊನ್ಯದಲ್ಲಿ ಆದದ್ದೇನಂದರೆ, ಅವರು ಯೆಹೂ
ದ್ಯರ ಸಭೆಮನೆಯಲ್ಲಿ ಕೂಡ ಒಂದು, ಯೆಹೂದ್ಯರಲ್ಲಿಯೂ
ಗ್ರೀಕರಲ್ಲಿಯೂ ಬಹು ಸಮೂಹವು ವಿಶ್ವಾಸಿಸುವ ಹಾಗೆ, ಮಾ
೨ ತಾಡಿದರು. ಆದರೆ ವಿಶ್ವಾಸಿಸದ ಯೆಹೂದ್ಯರು ಸಹೋದರರಿ
ಗೆ ವಿರೋಧವಾಗಿ ಜನಾಂಗಗಳವರ ಮನಸ್ಸುಗಳನ್ನು ಎಬ್ಬಿಸಿ, ಕೆಡಿ
೩ ಸಿದರು. ಆದದರಿಂದ, ತನ್ನ ಕೃಪೆಯ ವಾಕ್ಯಕ್ಕೆ ಸಾಕ್ಷಿ ಕೊ
ಟ್ಟು, ಅವರ ಕೈಗಳಿಂದ ಲಕ್ಷಣಗಳನ್ನೂ ಅದ್ಭುತಗಳನ್ನೂ
ನಡಿಸುವ ಕರ್ತನಲ್ಲಿ ಅವರು ಧೈರ್ಯವಾಗಿ ಮಾತಾಡಿ, ಬಹು
ಕಾಲ ಅಲ್ಲಿ ಇದ್ದರು.

೪ ಆದರೆ ಪಟ್ಟದ ಸಮೂಹವು ಭೇದವಾಗಿ, ಕೆಲವರು ಯೆಹೂ
ದ್ಯರ ಕಡೆಯಲ್ಲಿಯೂ, ಕೆಲವರು ಅಪೊಸ್ತಲರ ಕಡೆಯಲ್ಲಿ
೫ ಯೂ, ಇದ್ದರು. ಮತ್ತು, ಅವರನ್ನು ನಿಂದಿಸಿ, ಕಲ್ಲೆಸೆಯ ಬೇ
ಕೆಂದು, ಜನಾಂಗಗಳೂ, ಯೆಹೂದ್ಯರೂ, ಅವರ ಅಧಿಪತಿಗಳೂ
೬ ಕಲಸ ಉಂಟು ಮಾಡುವಾಗ, ಅವರು ತಿಳುಕೊಂಡು, ಲುಕವೊ
ನ್ಯದಲ್ಲಿರುವ ಲುಸ್ತ್ರವೂ ದೆರ್ಬೆಯೂ ಎಂಬ ಪಟ್ಟಣಗಳಿಗೂ ಸು
೭ ತ್ತಲಿರುವ ದೇಶಕ್ಕೂ ಓಡಿ ಹೋಗಿ, ಅಲ್ಲಿಯೂ ಸುವಾರ್ತೆ ಪ್ರ
ಸಂಗಿಸುತ್ತಾ ಇದ್ದರು.

೮ ಮತ್ತು ಲುಸ್ತ್ರದಲ್ಲಿ ತಾಯಿ ಗರ್ಭದಿಂದ ಕುಂಟನಾಗಿ, ಎಂ
ದೂ ನಡಿಯದೆ, ಕಾಲುಗಳಲ್ಲಿ ಬಲವಿಲ್ಲದ ಒಬ್ಬ ಮನುಷ್ಯನು
೯ ಕೂತು ಕೊಂಡಿದ್ದನು. ಅವನು ಪೌಲನು ಮಾತಾಡುವದನ್ನು ಕೇ
ಳಿದನು. ಇವನು ಅವನ ಮೇಲೆ ಕಣ್ಣಿಟ್ಟು, ಅವನಲ್ಲಿ ರಕ್ಷಿಸಲ್ಪ
೧೦ ಡುವದಕ್ಕೆ ವಿಶ್ವಾಸ ಉಂಟೆಂದು ನೋಡಿ, ಮಹಾ ಶಬ್ದದಿಂದ,
ನಿನ್ನ ಪಾದಗಳನ್ನೂರಿ, ನೆಟ್ಟಗೆ ನಿಂತುಕೋ, ಅಂದನು. ಆಗಲವ
ನು ಹಾರಿ, ನಡೆದನು.

೧೧ ಮತ್ತು ಸಮೂಹಗಳು ಪೌಲನು ಮಾಡಿದ್ದನ್ನು ನೋಡಿ, ಶ
ಬ್ದ ಕೆಬ್ಬನೆತ್ತಿ, ದೇವರುಗಳು ಮನುಷ್ಯರ ರೂಪವಾಗಿ ನಮ್ಮ
ಬಳಿಗೆ ಇಳಿದು ಬಂದಿದ್ದಾರೆಂದು, ಲುಕವೊನ್ಯ ಭಾಷೆಯಲ್ಲಿ ಹೇ
೧೨ ಳಿದರು. ಬಾರ್ನಬನನ್ನು ಬೃಹಸ್ಪತಿ ಎಂದೂ, ಪೌಲನು ಮು



ಖ್ಯ ಪ್ರಸಂಗಿ ಆಗಿರುವದರಿಂದ, ಅವನನ್ನು ಬುಧನೆಂದೂ ಕರೆ
೧೩ ದರು. ಮತ್ತು ಅವರ ಪಟ್ಟಣದ ಮುಂದೆ ಇರುವ ಬೃಹಸ್ಪತಿಯ
ಯಾಜಕನು ಎತ್ತುಗಳನ್ನೂ ಹೂಮಾಲೆಗಳನ್ನೂ ಬಾಗಲುಗಳ
ಹತ್ತರಕ್ಕೆ ತಂದು, ಸಮೂಹಗಳ ಸಂಗಡ ಅರ್ಪಿಸ ಬೇಕೆಂದಿ
ದ್ದನು.

೧೪ ಆದರೆ ಅಪೊಸ್ತಲರಾದ ಬಾರ್ನಬನೂ ಪೌಲನೂ ಅದನ್ನು
ಕೇಳಿ, ತಮ್ಮ ವಸ್ತ್ರಗಳನ್ನು ಹರಕೊಂಡು, ಸಮೂಹದೊಳಗೆ
೧೫ ಓಡಿ ಹೋಗಿ, ಕೂಗಿ ಹೇಳಿದ್ದೇನಂದರೆ, ಜನರೇ, ಇವುಗಳನ್ನು
ಯಾಕೆ ಮಾಡುತ್ತೀರಿ? ನಾವು ಸಹ ನಿಮಗೆ ಸಮಾನ ಸ್ವಭಾವ
ವುಳ್ಳ ಮನುಷ್ಯರಾಗಿದ್ದು, ನೀವು ಈ ವ್ಯರ್ಥವಾದವುಗಳನ್ನು
ಬಿಟ್ಟು, ಆಕಾಶವನ್ನೂ, ಭೂಮಿಯನ್ನೂ, ಸಮುದ್ರವನ್ನೂ, ಅ
ವುಗಳಲ್ಲಿರುವ ಎಲ್ಲವುಗಳನ್ನೂ ಸೃಷ್ಟಿಸಿದ ದೇವರ ಬಳಿಗೆ ತಿರುಗಿ
೧೬ ಕೊಳ್ಳಬೇಕೆಂದು, ನಿಮಗೆ ಪ್ರಸಂಗಿಸುತ್ತೇವೆ. ಅವನು ಹೋದ
ತಲಾಂತರಗಳಲ್ಲಿ ಜನಾಂಗಗಳನ್ನೆಲ್ಲಾ ತಮ್ಮ ತಮ್ಮ ಮಾರ್ಗಗ
೧೭ ಳಲ್ಲಿ ನಡೆಯ ಗೊಡಿಸಿದನು. ಆದಾಗ್ಯೂ ಅವನು ಆಕಾಶದಿಂದ
ನಮಗೆ ಮಳೆಗಳನ್ನೂ, ಫಲ ಫಲಿಸುವ ಕಾಲಗಳನ್ನೂ ಕೊಟ್ಟು,
ನಮ್ಮ ಹೃದಯಗಳನ್ನು ಆಹಾರದಿಂದಲೂ ಆನಂದದಿಂದಲೂ
ತುಂಬಿಸಿ, ಒಳ್ಳೇದನ್ನು ಮಾತಾಡಿ, ತನಗೆ ತಾನೇ ಸಾಕ್ಷಿಯನ್ನು
೧೮ ಕೊಡದೆ ಇರಲಿಲ್ಲ. ಇವುಗಳನ್ನು ಹೇಳಿ, ತಮಗೆ ಅರ್ಪಿಸಿದ ಹಾ
ಗೆ ಸಮೂಹಗಳನ್ನು ತಡೆಯುವದು ಪ್ರಯಾಸವಾಯಿತು.

೧೯ ತರುವಾಯ ಅಂತಿಯೋಕ್ಯದಿಂದಲೂ ಇಕೊನ್ಯದಿಂದಲೂ
ಯೆಹೂದ್ಯರು ಬಂದು, ಸಮೂಹಗಳನ್ನು ಸಮ್ಮತಿ ಪಡಿಸಿ,
ಪೌಲನನ್ನು ಕಲ್ಲೆಸೆದು, ಅವನು ಸತ್ತನೆಂದು ನೆನಸಿ, ಪಟ್ಟಣದ ಹೊ
೨೦ ರಗೆ ಹಾಕಿದರು. ಆದರೆ ಶಿಷ್ಯರು ಅವನನ್ನು ಸುತ್ತಿ ಕೊಂಡಿರು
ವಾಗ, ಅವನು ಎದ್ದು ಪಟ್ಟಣದಲ್ಲಿ ಪ್ರವೇಶಿಸಿ, ಮಾರಣೆ ದಿವಸ
೨೧ ಬಾರ್ನಬನ ಸಂಗಡ ದೆರ್ಬೆಗೆ ಹೊರಟು ಹೋದನು. ಆ ಪಟ್ಟ
ದಲ್ಲಿ ಅವರು ಸುವಾರ್ತೆ ಪ್ರಸಂಗಿಸಿ, ಅನೇಕರನ್ನು ಶಿಷ್ಯರಾಗ
ಮಾಡಿದ ಮೇಲೆ, ಲುಸ್ತ್ರಕ್ಕೂ, ಇಕೊನ್ಯಕ್ಕೂ, ಅಂತಿಯೋ
೨೨ ಕ್ಯಕ್ಕೂ ತಿರಿಗಿ ಹೋಗಿ, ಶಿಷ್ಯರ ಹೃದಯಗಳನ್ನು ಸ್ಥಿರ ಪ
ಡಿಸಿ, ವಿಶ್ವಾಸದಲ್ಲಿ ನೆಲೆಯಾಗಿರ ಬೇಕೆಂದೂ, ನಾವು ಬಹು
ಉಪದ್ರಗಳಿಂದ ದೇವರ ರಾಜ್ಯದಲ್ಲಿ ಪ್ರವೇಶಿಸ ಬೇಕೆಂದೂ,
೨೩ ಅವರಿಗೆ ಬುದ್ಧಿ ಹೇಳಿದರು. ಮತ್ತು ಅವರಿಗೆ ಸಭೆ ಸಭೆಯಲ್ಲಿ ಹಿರಿ
ಯರನ್ನು ನೇಮಿಸಿ, ಉಪವಾಸವಾಗಿ ಪ್ರಾರ್ಥನೆ ಮಾಡಿ, ಅವ
೨೪ ರು ವಿಶ್ವಾಸಿಸಿದ ಕರ್ತನಿಗೆ ಅವರನ್ನು ಒಪ್ಪಿಸಿದರು. ತರುವಾ
ಯ ಅವರು ಪಿಸಿದ್ಯವನ್ನು ಹಾದು, ಪಂಫುಲ್ಯಕ್ಕೆ ಬಂದರು.
೨೫ ಮತ್ತು ಪೆರ್ಗೆಯಲ್ಲಿ ವಾಕ್ಯವನ್ನು ಹೇಳಿ, ಅತ್ತಾಲ್ಯಕ್ಕೆ ಇಳಿ
೨೬ ದು ಹೋದರು. ಅಲ್ಲಿಂದ ಹಡಗ ಮಾರ್ಗವಾಗಿ ತಾವು ಪೂರೈ
ಸಿದ ಕೆಲಸಕ್ಕೋಸ್ಕರ ದೇವರ ಕೃಪೆಗೆ ಒಪ್ಪಿಸಲ್ಪಟ್ಟಿದ್ದ ಅಂತಿ
೨೭ ಯೋಕ್ಯಕ್ಕೆ ಸೇರಿದರು. ಸೇರಿ, ಸಭೆಯನ್ನು ಕೂಡ ಕರೆಸಿ,
ದೇವರು ತಮಗೆ ಮಾಡಿದವುಗಳನ್ನೂ, ಜನಾಂಗಗಳಿಗೆ ವಿಶ್ವಾಸ
೨೮ ದ ಬಾಗಲನ್ನು ತೆರೆದದ್ದನ್ನೂ ತಿಳಿಸಿದರು. ತರುವಾಯ ಅಲ್ಲಿ
ಬಹು ಕಾಲ ಶಿಷ್ಯರ ಸಂಗಡ ವಾಸವಾಗಿದ್ದರು.

## ೧೪. ಸಂಧಿ.

೧ ಆ ಮೇಲೆ ಯೆಹೂದದಿಂದ ಕೆಲವರು ಇಳಿದು ಬಂದು, ಸ
ಹೋದರರಿಗೆ, ನೀವು, ಮೋಶೆಯ ರೀತಿಯ ಪ್ರಕಾರ ಪರಿಛೇದನೆ
ಹೊಂದಿದರೆ ಹೊರ್ತು, ರಕ್ಷಿಸಲ್ಪಡಲಾರಿರಿ, ಎಂದು ಬೋಧಿಸಿ
೨ ದರು. ಹೀಗಿರುವದರಿಂದ ಪೌಲನಿಗೂ ಬಾರ್ನಬನಿಗೂ ಅವರ
ಸಂಗಡ ಬಹು ವಿವಾದವೂ ತರ್ಕವೂ ಉಂಟಾಗಲು, ಆ ವಿಷಯ
ದಲ್ಲಿ ಪೌಲನನ್ನೂ, ಬಾರ್ನಬನನ್ನೂ, ತಮ್ಮಲ್ಲಿ ಬೇರೆ ಕೆಲವ
ರನ್ನೂ ಯೆರೂಸಲೇಮಿನಲ್ಲಿರುವ ಅಪೊಸ್ತಲರ, ಹಿರಿಯರ ಬಳಿಗೆ
ಏರಿ ಹೋಗ ನೇಮಿಸಿದರು.

೩ ಇವರು ಸಭೆಯಿಂದ ಮುಂಕಳುಹಿಸಲ್ಪಟ್ಟು, ಫೊಯಿನಿಕೆ
ಯನ್ನೂ ಸಮಾರ್ಯವನ್ನೂ ಹಾದು ಹೋಗಿ, ಜನಾಂಗಗಳು
ತಿರುಗಿ ಕೊಳ್ಳುತ್ತಾಕೆಂಬುವದನ್ನು ತಿಳಿಸಿ, ಸಹೋದರರೆಲ್ಲರನ್ನು
೪ ಬಹಳವಾಗಿ ಸಂತೋಷ ಪಡಿಸಿದರು. ಯೆರೂಸಲೇಮಿಗೆ ಸೇರಿ,
ಸಭೆಯಿಂದಲೂ, ಅಪೊಸ್ತಲರಿಂದಲೂ, ಹಿರಿಯರಿಂದಲೂ, ಅಂಗೀ
ಕರಿಸಲ್ಪಟ್ಟು, ದೇವರು ತಮ್ಮ ಸಂಗಡ ಮಾಡಿದವುಗಳನ್ನು ತಿಳಿ
೫ ಸಿದರು. ಆಗ ಫರಿಸಾಯರ ಮತದವರಾದ ವಿಶ್ವಾಸಿಸಿದ ಕೆಲವ
ರು ಎದ್ದು, ಅವರಿಗೆ ಪರಿಛೇದನೆ ಮಾತಿ, ಮೋಶೆಯ ನ್ಯಾಯ
ಪ್ರಮಾಣವನ್ನು ಕೈ ಕೊಳ್ಳುವದಕ್ಕೆ ಆಜ್ಞಾಪಿಸ ಬೇಕೆಂದು, ಹೇ
ಳಿದರು.

೬ ಆಗ ಈ ಮಾತನ್ನು ಕುರಿತು ವಿಚಾರಿಸುವ ಬಗ್ಯೆ, ಅಪೊಸ್ತಲ
೭ ರೂ ಹಿರಿಯರೂ ಕೂಡಿ ಬಂದರು. ಬಹಳ ತರ್ಕವಾದ ಮೇಲೆ
ಪೇತ್ರನು ಎದ್ದು, ಅವರಿಗೆ ಹೇಳಿದ್ದೇನಂದರೆ, ಸಹೋದರರಾದ
ಜನರೇ, ಪೂರ್ವ ದಿವಸಗಳಿಂದ, ಜನಾಂಗಗಳು ನನ್ನ ಬಾಯಿ
ಯಿಂದ ಸುವಾರ್ತೆಯ ವಾಕ್ಯವನ್ನು ಕೇಳಿ, ವಿಶ್ವಾಸಿಸುವ
ಹಾಗೆ, ದೇವರು ನಮ್ಮೊಳಗೆ ಆದು ಕೊಂಡೆನೆಂದು, ನೀವೆಲ್ಲರಿ.
೮ ಮತ್ತು ಹೃದಯಗಳನ್ನು ತಿಳಿದವನಾದ ದೇವರು ವಿಶ್ವಾಸದಿಂ
೯ ದ ಅವರ ಹೃದಯಗಳನ್ನು ಶುಚಿ ಮಾತಿ, ನಮಗೂ ಅವರಿ
ಗೂ ಏನೂ ಹೆಚ್ಚು ಕಡಿಮೆ ಮಾಡದೆ, ನಮ್ಮ ಹಾಗೆ ಅವರಿಗೂ
೧೦ ಪರಿಶುದ್ಧಾತ್ಮವನ್ನು ಕೊಟ್ಟು, ಅವರಿಗೆ ಸಾಕ್ಷಿ ಕೊಟ್ಟನು. ಹೀಗಿ
ರುವದರಿಂದ ನಮ್ಮ ಪಿತೃಗಳಾದರೂ ನಾವಾದರೂ ಹೊರಲಾರ
ದ ನೊಗವನ್ನು ಈಗ ನೀವು ಶಿಷ್ಯರ ಕುತ್ತಿಗೆಯ ಮೇಲೆ ಇಟ್ಟು,
೧೧ ದೇವರನ್ನು ಶೋಧಿಸುವದು ಯಾಕೆ? ಅವರ ಹಾಗೆಯೇ ನಾವು
ಕರ್ತನಾದ ಯೇಸು ಕ್ರಿಸ್ತನ ಕೃಪೆಯಿಂದ ರಕ್ಷಿಸಲ್ಪಡುತ್ತೇ
ವೆಂದು, ನಂಬುತ್ತೇವಲ್ಲ?

೧೨ ಆಗ ಸಮೂಹವೆಲ್ಲಾ ಸುಮ್ಮನೆ ಇದ್ದು, ಬಾರ್ನಬನೂ ಪೌ
ಲನೂ, ದೇವರು ತಮ್ಮ ಮುಖಾಂತರವಾಗಿ ಜನಾಂಗಗಳಲ್ಲಿ ಮಾ
ಡಿದ ಲಕ್ಷಣಗಳನ್ನೂ, ಅದ್ಭುತಗಳನ್ನೂ ವಿವರಿಸುವದನ್ನು ಕೇ
ಳಿದರು.

೧೩ ಅವರು ಸುಮ್ಮನೆ ಆದ ಮೇಲೆ, ಯಾಕೋಬನೂ ಪ್ರತ್ಯು
೧೪ ತ್ತರವಾಗಿ ಹೇಳಿದ್ದೇನಂದರೆ, ಸಹೋದರರಾದ ಜನರೇ, ನನಗೆ
ಕಿವಿ ಕೊಡಿರಿ. ದೇವರು ತನ್ನ ಹೆಸರಿನ ನಿಮಿತ್ತ ಜನಾಂಗಗಳೊಳ
ಗಿಂದ ಪ್ರಜೆಯನ್ನು ತಕ್ಕೊಳ್ಳುವದಕ್ಕೆ ಮೊದಲು ದರ್ಶಿಸಿದ್ದು
೧೫ ನ್ನು ಸೀಮೋನನು ವಿವರಿಸಿದ್ದಾನೆ. ಇದಕ್ಕೆ ಪ್ರವಾದಿಗಳ ವಾಕ್ಯ
೧೬ ವು ಸರಿಯಾಗಿದೆ; ಬಳಿದ್ದೇನಂದರೆ, ಇವುಗಳ ತರುವಾಯ
ನಾನು ತಿರಿಗಿ ಬಂದು, ದಾವೀದನ ಬಿದ್ದ ಗುಡಾರವನ್ನು ತಿರಿ
೧೭ ಕಟ್ಟುವೆನು. ಮನುಷ್ಯರಲ್ಲಿ ಬಿಕ್ಕಾದವರೂ, ನನ್ನ ಹೆಸರು
ಯಾರ ಮೇಲೆ ಕರೆಯಲ್ಪಟ್ಟಿದೆಯೋ, ಆ ಎಲ್ಲಾ ಜನಾಂಗ

ಳೂ, ಕರ್ತನನ್ನು ಹುಡುಕುವ ಹಾಗೆ, ಅದರಲ್ಲಿ ಹಾಳಾದವುಗಳ
ನ್ನು ತಿರಿಗಿ ಕಟ್ಟಿ, ಅದನ್ನು ನೆಟ್ಟಗೆ ಮಾಡುವೆನೆಂದು, ಇವುಗಳ
೧೮ ನ್ನೆಲ್ಲಾ ಮಾಡುವ ಕರ್ತನು ಹೇಳುತ್ತಾನೆ. ಲೋಕಾರಭ್ಯ ದೇವ
೧೯ ರಿಗೆ ತನ್ನ ಕ್ರಿಯೆಗಳೆಲ್ಲಾ ತಿಳ್ಳಿದವೆ. ಆದದರಿಂದ ಜನಾಂಗಗಳೊ
ಳಗಿಂದ ದೇವರ ಕಡೆಗೆ ತಿರುಗುವವರನ್ನು ಹೆಚ್ಚಾಗಿ ತೊಂದರೆ
೨೦ ಪಡಿಸದೆ, ವಿಗ್ರಹಗಳ ಅಶುಚಿಯಾದವುಗಳಿಂದಲೂ, ಜಾರತ್ವದಿಂ
ದಲೂ, ಕೊರಳು ಹಿಸಕಲ್ಪಟ್ಟದರಿಂದಲೂ, ರಕ್ತದಿಂದಲೂ ತೊ
ಲಗುವದಕ್ಕೆ ಆಜ್ಞಾಪಿಸ ಬೇಕೆಂದು, ನಾನು ನಿರ್ಣಯಿಸುತ್ತೇನೆ.
೨೧ ಯಾಕಂದರೆ ಪೂರ್ವ ತಲಾಂತರಗಳಾರಭ್ಯ ಪಟ್ಣ ಪಟ್ಣದಲ್ಲಿ
ವೋಸೆಗೆ, ಅವನನ್ನು ಸಾರುವವರಿದ್ದಾರೆ, ಅವನು ಪ್ರತಿ ಸಬ್ಬತಿಗೆ
ಸಭೆಗಳಲ್ಲಿ ಓದಲ್ಪಡುತ್ತಾನೆ.

೨೨ ಆಗ ತಮ್ಮೊಳಗಿಂದ ಆಯಲ್ಪಟ್ಟಿಂಥ, ಸಹೋದರರಲ್ಲಿ ನಾ
ಯಕರಾದಂಥ ಬಾರ್ನಬನೆಂಬ ಯೂದನನ್ನೂ ಸೀಲನನ್ನೂ
ಪೌಲನ ಸಂಗಡಲೂ ಬರ್ನಬನ ಸಂಗಡಲೂ ಅಂತಿಯೋಕ್ಯಕ್ಕೆ
ಕಳುಹಿಸುವದು ಅಪೊಸ್ತಲರಿಗೂ ಹಿರಿಯರಿಗೂ ಸಮಸ್ತ ಸಭೆ
೨೩ ಗೂ ಒಳ್ಳೇದಾಗಿ ತೋಚಿತು. ಇವರ ಕೈಯಿಂದ ಅವರು ಬರೆ
ದು ಕಳುಹಿಸಿದ್ದೇನಂದರೆ, ಅಪೊಸ್ತಲರೂ ಹಿರಿಯರೂ ಸಹೋದ
ರರೂ, ಅಂತಿಯೋಕ್ಯದಲ್ಲಿಯೂ, ಸುರ್ಯದಲ್ಲಿಯೂ, ಕಿಲಿ
ಕ್ಯದಲ್ಲಿಯೂ ಇರುವಂಥ ಜನಾಂಗಗಳವರಾದ ಸಹೋದರರಿಗೆ
೨೪ ಶುಭವಾಗಲಿ. ನಮ್ಮಲ್ಲಿಂದ ಹೊರಟ ಕೆಲವರು ನಮ್ಮ ಅಪ್ಪಣೆ
ಇಲ್ಲದೆ ನಿಮ್ಮ ಹೃದಯಗಳನ್ನು ಗಲಿಬಿಲಿ ಮಾಡಿ, ನೀವು ಪರಿ
ಛೇದನೆ ಮಾಡಿಸಿ ಕೊಂಡು, ನ್ಯಾಯಪ್ರಮಾಣವನ್ನು ಕೈ ಕೊಳ್ಳ
ಬೇಕೆಂದು ಹೇಳಿ, ನಿಮ್ಮನ್ನು ಮಾತುಗಳಿಂದ ಕಳವಳ ಪಡಿಸಿದ
೨೫ ರೆಂದು ಕೇಳಿದ್ದರಿಂದ, ನಾವು ಏಕ ಮನಸ್ಸಾಗಿದ್ದು, ನಮ್ಮ ಕ
ರ್ತನಾದ ಯೇಸು ಕ್ರಿಸ್ತನ ಹೆಸರಿನ ನಿಮಿತ್ತ ತಮ್ಮ ಪ್ರಾಣಗಳ
೨೬ ನ್ನು ಒಪ್ಪಿಸಿದ ಮನುಷ್ಯರಾದ ನಮ್ಮ ಪ್ರಿಯ ಬಾರ್ನಬನ,
ಪೌಲನ ಸಂಗಡ ಆಯಲ್ಪಟ್ಟ ಜನರನ್ನು ನಿಮ್ಮ ಬಳಿಗೆ ಕಳುಹಿ
೨೭ ಸುವದು ನಮಗೆ ಒಳ್ಳೇದಾಗಿ ತೋಚಿತು. ಅದೇ ಕಾರ್ಯಗಳ
ನ್ನು ಬಾಯಿಯಿಂದ ನಿಮಗೆ ತಿಳ್ಳಿಸುವದಕ್ಕೆ ಯೂದನನ್ನೂ
೨೮ ಸೀಲನನ್ನೂ ಕಳುಹಿಸಿದ್ದೇವೆ. ಏನಂದರೆ, ವಿಗ್ರಹ ಬಲಿಗಳಿಂದ
೨೯ ಲೂ, ರಕ್ತದಿಂದಲೂ, ಕೊರಳು ಹಿಸಕಲ್ಪಟ್ಟದರಿಂದಲೂ, ಜಾರ
ತ್ವದಿಂದಲೂ ತೊಲಗ ಬೇಕೆಂಬ ಅವಶ್ಯವಾಗಿರುವ ಭಾರಕ್ಕಿಂತ
ಹೆಚ್ಚಾದದ್ದನ್ನು ನಿಮ್ಮ ಮೇಲೆ ಇಡದೆ ಇರುವದು ಪರಿಶುದ್ಧಾತ್ಮ
ಕ್ಕೂ ನಮಗೂ ಒಳ್ಳೇದಾಗಿ ತೋಚಿತು. ಅವುಗಳನ್ನು ಬಿಟ್ಟು,
ನಿಮ್ಮನ್ನು ನೀವೇ ಕಾಪಾಡಿ ಕೊಂಡರೆ, ಚನ್ನಾಗಿ ಮಾಡುವಿರಿ.
ಕ್ಷೇಮವಾಗಲಿ.

೩೦ ಆಗ ಇವರು ಅಪ್ಪಣೆ ತೆಗೆದು ಕೊಂಡು, ಅಂತಿಯೋಕ್ಯ
ಕ್ಕೆ ಬಂದು, ಸಮೂಹವನ್ನು ಕೂಡ ಕರಸಿ, ಪತ್ರಿಕೆಯನ್ನು ಕೊ
೩೧ ಟ್ಟರು. ಅವರು ಓದಿ, ಆದರಣೆ ಹೊಂದಿ, ಸಂತೋಷ ಪಟ್ಟರು.
೩೨ ಮತ್ತು ಯೂದನೂ ಸೀಲನೂ, ತಾವೇ ಪ್ರಾವಾದಿಗಳಾಗಿದ್ದು, ಅ
ನೇಕ ವಾಕ್ಯಗಳಿಂದ ಸಹೋದರರನ್ನು ಆದರಿಸಿ ಸ್ಥಿರ ಪಡಿಸಿದ
೩೩ ರು. ಕಾಲ ಕಳೆದ ಮೇಲೆ, ಸಹೋದರರಿಂದ ಅಪೊಸ್ತಲರ ಬಳಿಗೆ
೩೪ ಹೋಗ ಸಮಾಧಾನವಾಗಿ ಅಪ್ಪಣೆ ಹೊಂದಿದರು. ಆದರೆ ಸೀ
೩೫ ಲನಿಗೆ ಅಲ್ಲಿ ನಿಲ್ಲ ಮನಸ್ಸಾಯಿತು. ಮತ್ತು ಪೌಲನೂ, ಬಾರ್ನ
ಬನೂ, ಬೇರೆ ಅನೇಕರೂ ದೇವರ ವಾಕ್ಯವನ್ನು ಬೋಧಿಸುತ್ತಾ,
ಪ್ರಸಂಗಿಸುತ್ತಾ, ಅಂತಿಯೋಕ್ಯದಲ್ಲಿ ಇದ್ದರು.

೩೬ ಆದರೆ ಕೆಲವು ದಿವಸಗಳ ಮೇಲೆ, ಪೌಲನು ಬಾರ್ನಬನಿ
ಗೆ, ನಾವು ದೇವರ ವಾಕ್ಯವನ್ನು ತಿಳ್ಳಿಸಿದ ಪಟ್ಣ ಪಟ್ಣದಲ್ಲಿರುವ
ನಮ್ಮ ಸಹೋದರರು ಹ್ಯಾಗೆ ಇದ್ದಾರೆಂದು ನೋಡುವದಕ್ಕೆ
೩೭ ತಿರಿಗಿ ಹೋಗುವ, ಅಂದನು. ಆಗ ಬಾರ್ನಬನು ಮಾರ್ಕನೆಂಬ
ಯೋಹಾನನನ್ನು ಸಂಗಡ ಕರಕೊಂಡು ಹೋಗ ಬೇಕೆಂದಿದ್ದ
೩೮ ನು. ಆದರೆ ಪೌಲನು, ಪಂಫುಲ್ಯದಲ್ಲಿರುವಾಗ ತಮ್ಮನ್ನು ಬಿಟ್ಟು
ಹೋಗಿ, ತಮ್ಮ ಸಂಗಡ ಕೆಲಸಕ್ಕೆ ಬಾರದೆ ಇದ್ದವನನ್ನು ಕರ
೩೯ ಕೊಂಡು ಹೋಗುವದು ಯುಕ್ತವಲ್ಲವೆಂದೆಣಿಸಿದನು. ಆದದ
ರಿಂದ ಉರಿ ಉಂಟಾಗಿ, ಅವರು ಒಬ್ಬರನ್ನೊಬ್ಬರು ಬಿಟ್ಟು ಹೋ
ದರು. ಬಾರ್ನಬನು ಮಾರ್ಕನನ್ನು ಕರಕೊಂಡು ಹಡಗ ಮಾ
೪೦ ರ್ಗವಾಗಿ ಕುಪ್ರಕ್ಕೆ ಹೋದನು. ಪೌಲನು ಸೀಲನನ್ನು ಆದು
ಕೊಂಡು, ಸಹೋದರರಿಂದ ದೇವರ ಕೃಪೆಗೆ ಒಪ್ಪಿಸಲ್ಪಟ್ಟು
೪೧ ಹೊರಟು, ಸಭೆಗಳನ್ನು ಸ್ಥಿರ ಪಡಿಸುತ್ತಾ, ಸುರ್ಯವನ್ನೂ ಕಿಲಿ
ಕ್ಯವನ್ನೂ ಸಂಚರಿಸಿದನು.

## ೧೬. ಸಂಧಿ.

೧ ತರುವಾಯ ಅವನು ದೆರ್ಬೆಗೂ ಲುಸ್ತ್ರಕ್ಕೂ ಬಂದನು.
ಅಲ್ಲಿ, ಇಗೋ, ವಿಶ್ವಾಸಿಸುವವಳಾದ ಒಬ್ಬ ಯೆಹೂದ್ಯ ಸ್ತ್ರೀ
ಗೂ ಗ್ರೇಕ ತಂದೆಗೂ ಮಗನಾದ ತಿಮೊಥೆಯನೆಂಬ ಒಬ್ಬ ಶಿಷ್ಯ
೨ ನಿದ್ದನು. ಅವನು ಲುಸ್ತ್ರದಲ್ಲಿಯೂ ಇಕೊನ್ಯದಲ್ಲಿಯೂ ಇರು
೩ ವ ಸಹೋದರರಿಂದ ಸಾಕ್ಷಿ ಗೊಂಡಿದ್ದನು. ಇವನು ತನ್ನ ಸಂ
ಗಡ ಹೊರಟು ಬರ ಬೇಕೆಂದು, ಪೌಲನು ಇಚ್ಛೈಸಿ, ಅವನನ್ನು
ತಕ್ಕೊಂಡು, ಆ ಸ್ಥಳಗಳಲ್ಲಿರುವ ಯೆಹೂದ್ಯರ ನಿಮಿತ್ತ ಪರಿಛೇ
ದನೆ ಮಾಡಿಸಿದನು. ಯಾಕಂದರೆ, ಅವನ ತಂದೆಯು ಗ್ರೇಕನಾ
೪ ಗಿದ್ದನೆಂದು, ಅವರೆಲ್ಲರಿಗೆ ತಿಳ್ಳಿದಿತ್ತು. ಅವರು ಪಟ್ಣಗಳನ್ನು ಸಂ
ಚರಿಸುತ್ತಿರುವಾಗ, ಯೆರೂಸಲೇಮಿನಲ್ಲಿರುವ ಅಪೊಸ್ತಲರೂ ಹಿರಿ
ಯರೂ ನೇಮಿಸಿದ ಆಜ್ಞೆಗಳನ್ನು ಕಾಯ ಬೇಕೆಂದು, ಅವರಿಗೆ
೫ ಒಪ್ಪಿಸಿದರು. ಹೀಗಿರಲಾಗಿ ಸಭೆಗಳು ವಿಶ್ವಾಸದಲ್ಲಿ ಸ್ಥಿರ ಪಟ್ಟ
ವು; ಮತ್ತು ಅವುಗಳ ಲೆಖ್ಖವು ದಿನ ದಿನ ಹೆಚ್ಚಿತು.

೬ ಅವರು ಫ್ರುಗ್ಯವನ್ನೂ ಗಲಾತ್ಯ ಶೀಮೆಯನ್ನೂ ಹಾದು,
೭ ಆಸ್ಯದಲ್ಲಿ ವಾಕ್ಯವನ್ನು ಪ್ರಸಂಗಿಸದ ಹಾಗೆ ಪರಿಶುದ್ಧಾತ್ಮದಿಂದ
ತಡೆಯಲ್ಪಟ್ಟು, ಮೂಸ್ಯಕ್ಕೆ ಬಂದು, ಬಿಥೂನ್ಯಕ್ಕೆ ಹೋಗು
೮ ವದಕ್ಕೆ ಪ್ರಯತ್ನ ಮಾಡಿದರು. ಆದರೆ ಆತ್ಮವು ಅವರನ್ನು
೯ ಹೋಗ ಗೊಡಿಸಲಿಲ್ಲ. ಆಗಲವರು ಮೂಸ್ಯವನ್ನು ಹಾದು, ತ್ರೋ
ಯಕ್ಕೆ ಇಳಿದು ಹೋದರು. ಮತ್ತು ರಾತ್ರಿಯಲ್ಲಿ ಪೌಲನಿಗೆ
ದರ್ಶನವು ಕಾಣಿಸಿತು; ಏನಂದರೆ, ಒಬ್ಬ ಮಕೆದೋನ್ಯ ಮ
೧೦ ನುಷ್ಯನು, ನೀನು ಮಕೆದೋನ್ಯಕ್ಕೆ ಬಂದು, ನಮಗೆ ಸಹಾಯ
ಮಾಡು, ಎಂದು ಅವನನ್ನು ಬೇಡಿ ಕೊಂಡು, ನಿಂತಿದ್ದನು. ಅವ
ನು ಆ ದರ್ಶನವನ್ನು ಕಂಡಾಗಲೇ, ಅವರಿಗೆ ಸುವಾರ್ತೆ ಪ್ರಸಂ
ಗಿಸುವದಕ್ಕೆ ಕರ್ತನು ನಮ್ಮನ್ನು ಕರೆದಿದ್ದಾನೆಂದು ತಿಳ್ಳಿ ಕೊಂ
ಡು, ಮಕೆದೋನ್ಯಕ್ಕೆ ಹೋಗುವದಕ್ಕೆ ಪ್ರಯತ್ನ ಮಾಡಿ
ದೆವು.

೧೧ ಆದದರಿಂದ ತ್ರೋಯವನ್ನು ಬಿಟ್ಟು, ಸರಿಯಾಗಿ ಸಮೊಥ್ರಾ
೧೨ ಕೆಗೆ ಹೋಗಿ, ಮಾರನೆ ದಿವಸ ನೆಯಾಪೊಲಿಗೆ, ಅಲ್ಲಿಂದ ಮಕೆ
ದೋನ್ಯದ ಆ ಪ್ರಾಂತ್ಯಕ್ಕೆ ಮೊದಲನೇ ಪಟ್ಣವೂ ಪರವಾಸವೂ



೧೩ ಆಗಿರುವ ಫಿಲಿಪ್ಪಿಗೆ ಸೇರಿದೆವು. ಆ ಪಟ್ಣದಲ್ಲಿ ಕೆಲವು ದಿವಸಗಳಿ
ದ್ದೆವು. ಮತ್ತು ಸಬ್ಬತಿನ ದಿವಸದಲ್ಲಿ ಪಟ್ಣದ ಹೊರಗೆ ನದಿಯ
ಸಮೀಪವದಲ್ಲಿ ವಾಡಿಕೆಯಾಗಿ ಪ್ರಾರ್ಥನೆ ಮಾಡುವ ಸ್ಥಳಕ್ಕೆ
ಹೋಗಿ, ಕೂತು ಕೊಂಡು, ಕೂಡಿ ಬಂದಿದ್ದ ಸ್ತ್ರೀಯರ ಸಂಗಡ
೧೪ ಮಾತಾಡಿದೆವು. ಆಗ ರಕ್ತಾಂಬರ ಮಾರುವವಳೂ ಥುವತ್ಯೆರ ಪ
ಟ್ಣದವಳೂ ದೇವರಿಗೆ ಭಯ ಪಡುವವಳೂ ಆಗಿರುವ ಲೂದ್ಯ
ಳೆಂಬ ಒಬ್ಬ ಸ್ತ್ರೀಯು ಕೇಳ್ಳಿದಳು. ಪೌಲನು ಮಾತಾಡಿದವುಗ
ಳಿಗೆ ಲಕ್ಷ್ಯವಿಡುವದಕ್ಕೆ ಕರ್ತನು ಅವಳ ಹೃದಯವನ್ನು ತೆಗೆ
೧೫ ದನು. ಅವಳೂ ಅವಳ ಮನೆಯೂ ಸ್ನಾನ ಹೊಂದಿದಾಗ, ನ
ನ್ನನ್ನು ಕರ್ತನಿಗೆ ನಂಬಿಗಸ್ಥಳೆಂದು, ನೀವು ನೆನಸಿ ಕೊಂಡರೆ,
ನನ್ನ ಮನೆಯೊಳಗೆ ಬಂದು, ಇರ್ರಿ, ಎಂದು ಬೇಡಿ ಕೊಂಡು,
ನಮಗೆ ಬಲವಂತ ಮಾಡಿದಳು.

೧೬ ತರುವಾಯ ನಾವು ಪ್ರಾರ್ಥನೆಗೆ ಹೋಗುವಾಗ, ಏನಾಯಿ
ತಂದರೆ, ಕಣಿ ಹೇಳುವದರಿಂದ ತನ್ನ ಯಜಮಾನರಿಗೆ ಬಹಳ
ಆದಾಯವನ್ನುಂಟು ಮಾಡುವಂಥ ಪೃಥೋನನ ಆತ್ತವುಳ್ಳಂಥ
೧೭ ಒಬ್ಬ ದಾಸಿ ನಮ್ಮೆದುರಿಗೆ ಬಂದಳು. ಇವಳು ಪೌಲನನ್ನೂ ನ
ಮ್ಮನ್ನೂ ಹಿಂಬಾಲಿಸಿ, ಈ ಮನುಷ್ಯರು ನಮಗೆ ರಕ್ಷಣೆಯ
ಮಾರ್ಗವನ್ನು ತಿಳ್ಳಿಸುವ ಮಹೋನ್ನತನಾದ ದೇವರ ದಾಸರಾ
೧೮ ಗಿದ್ದಾರೆಂದು ಕೂಗಿದಳು. ಇದನ್ನು ಅನೇಕ ದಿವಸ ಮಾಡಿದಳು.
ಆದರೆ ಪೌಲನು ಕಕೆಕೆಪಟ್ಟು, ತಿರುಗಿ ಕೊಂಡು, ಅವಳಿಂದ
ಹೊರಗೆ ಬರ, ಯೇಸು ಕ್ರಿಸ್ತನ ಹೆಸರಿನಲ್ಲಿ ನಿನಗೆ ಆಜ್ಞಾಪಿಸು
ತ್ತೇನೆ, ಎಂದು ಆತ್ಮಕ್ಕೆ ಹೇಳ್ಳಿದನು. ಅದೇ ಘಳ್ಳಿಗೆಯಲ್ಲಿ ಅದು
ಹೊರಗೆ ಬಂತು.

೧೯ ಆದರೆ ಅವಳ ಯಜಮಾನರು, ತಮ್ಮ ಆದಾಯದ ನಿರೀಕ್ಷೆ
ಯು ಹೋಯಿತೆಂದು ನೋಡಿ, ಪೌಲನನ್ನೂ ಸೀಲನನ್ನೂ ಸಂ
೨೦ ಶೇ ಬೀದಿಗೆ ಅಧಿಪತಿಗಳ ಬಳಿಗೆ ಎಳ್ಳೆದರು. ಮತ್ತು ಅವರನ್ನು ಸೈ
ನ್ಯಾಧಿಪತಿಗಳ ಬಳಿಗೆ ತಂದು, ಹೇಳ್ಳಿದ್ದೇನಂದರೆ, ಯೆಹೂದ್ಯ
ರಾದ ಈ ಮನುಷ್ಯರು ನಮ್ಮ ಪಟ್ಣವನ್ನು ಕಳವಳ ಪಡಿಸಿ,
೨೧ ರೋಮಾಯರಾದ ನಾವು ಅಂಗೀಕರಿಸಲೂ ಮಾಡಲೂ ಬಾರದ
೨೨ ರೀತಿಗಳನ್ನು ತಿಳ್ಳಿಸುತ್ತಾರೆ. ಆಗ ಸಮೂಹವು ಅವರಿಗೆ ವಿರೋಧ
ವಾಗಿ ಕೂಡ ಎದ್ದಿತು. ಮತ್ತು ಸೈನ್ಯಾಧಿಪತಿಗಳು ಅವರ ವಸ್ತ್ರ
ಗಳನ್ನು ಹರಿದು ಹಾಕಿ, ಬೆತ್ತಗಳಿಂದ ಹೊಡೆಯ ಆಜ್ಞಾಪಿಸಿದರು.
೨೩ ಅವರಿಗೆ ಶಾಸ್ತಿ ಚೆಟ್ಟು ಹೊಡೆದು, ಅವರನ್ನು ಶೆರೆಮನೆಯಲ್ಲಿ ಹಾ
ಕಿ, ಭದ್ರವಾಗಿ ಕಾಯ ಬೇಕೆಂದು, ಶೆರೆ ಕಾವಲಿಗಾರನಿಗೆ ಅಪ್ಪಣೆ
೨೪ ಕೊಟ್ಟರು. ಇವನು ಇಂಥ ಅಪ್ಪಣೆ ಹೊಂದಿ, ಅವರನ್ನು ಬಳ
ಗಿನ ಶೆರೆಮನೆಯಲ್ಲಿ ಹಾಕಿ, ಅವರ ಕಾಲುಗಳನ್ನು ಕೋಳ್ಳದಲಿ
ಹಾಕಿ, ಬಿಗಿ ಮಾಡಿದನು.

೨೫ ಆದರೆ ಮಧ್ಯರಾತ್ರಿಯಲ್ಲಿ ಪೌಲನೂ ಸೀಲನೂ ಪ್ರಾರ್ಥಿಸಿ,
೨೬ ದೇವರಿಗೆ ಹಾಡಿದರು. ಶೆರೆಯವರು ಅದನ್ನು ಕೇಳ್ಳಿದರು. ಆಗ
ಛಕ್ಕನೆ ಮಹಾ ಭೂಕಂಪ ಉಂಟಾದದರಿಂದ, ಶೆರೆಮನೆಯ ಅಸ್ತಿ
ವಾರಗಳು ಕದಲಿದವು; ಆ ಕ್ಷಣವೇ ಬಾಗಲುಗಳೆಲ್ಲಾ ತೆರೆಯಲ್ಪ
೨೭ ಟ್ಟವು; ಎಲ್ಲರ ಬಂಧಗಳು ಬಿಚ್ಚಿ ಹೋದವು. ಆಗ ಶೆರೆ ಕಾವಲಿ
ಗಾರನು ನಿದ್ದೆ ತಿಳ್ಳಿದು, ಶೆರೆಮನೆಯ ಬಾಗಲುಗಳು ತೆರೆದಿರುವದ
ನ್ನು ನೋಡಿ, ಶೆರೆಯವರು ಓಡಿ ಹೋದರೆಂದು ನೆನಸಿ, ಕತ್ತಿ ಹಿ
೨೮ ಡಿದು, ತನ್ನನ್ನು ಕೊಂದು ಕೊಳ್ಳುವದಕ್ಕಿದ್ದನು. ಆದರೆ ಪೌಲ
ನು ಮಹಾ ಶಬ್ದದಿಂದ, ನಿನಗೆ ಯಾವ ಕೇಡು ಮಾಡಿ ಕೊಳ್ಳ
೨೯ ಬೇಡ; ನಾವೆಲ್ಲರು ಇಲ್ಲಿ ಇದ್ದೇವೆಂದು ಕೂಗಿದನು. ಆಗಲವನು,
ದೀಪ ಬೇಕೆಂದು, ಕೂಗಿ, ಒಳಗೆ ಹಾರಿ, ನಡುಗುತ್ತಾ, ಪೌಲನ
೩೦ ಸೀಲನ ಮುಂದೆ ಬಿದ್ದನು. ಮತ್ತು ಅವರನ್ನು ಹೊರಗೆ ತಂದು,
ಅಯ್ಯಗಳೇ, ನಾನು ರಕ್ಷಿಸಲ್ಪಡುವ ಹಾಗೆ, ಏನು ಮಾಡ ಬೇ
೩೧ ಕು? ಅಂದನು. ಅವರು, ಕರ್ತನಾದ ಯೇಸು ಕ್ರಿಸ್ತನಲ್ಲಿ ವಿಶ್ವಾ
೩೨ ಸವಿತು; ಆಗ ನೀನೂ ನಿನ್ನ ಮನೆಯವರೂ ರಕ್ಷಿಸಲ್ಪಡುವಿರಿ,
ಎಂದು ಹೇಳ್ಳಿ, ಅವನಿಗೂ ಅವನ ಮನೆಯವರೆಲ್ಲರಿಗೂ ದೇವರ
೩೩ ವಾಕ್ಯವನ್ನು ಹೇಳ್ಳಿದರು. ಆಗಲವನು ರಾತ್ರಿಯ ಅದೇ ಘಳ್ಳಿಗೆ
ಯಲ್ಲಿ ಅವರನ್ನು ತಕ್ಕೊಂಡು, ಅವರ ಘಾಯಗಳನ್ನು ತೊಳ್ಳೆ
ದನು. ಮತ್ತು ಆಗಲೇ ಅವನೂ ಅವನ ಮನೆಯವರೆಲ್ಲರೂ ಸ್ನಾ
೩೪ ನ ಹೊಂದಿದರು. ತರುವಾಯ ಅವರನ್ನು ತನ್ನ ಮನೆಗೆ ಕರ
ಕೊಂಡು ಹೋಗಿ, ಮೇಜನ್ನಿಟ್ಟು, ಮನೆಯವರೆಲ್ಲರ ಸಂಗಡ ದೇ
ವರಲ್ಲಿ ವಿಶ್ವಾಸವಿಟ್ಟು, ಆನಂದ ಪಟ್ಟನು.

೩೫ ಬೆಳಗಾದ ಮೇಲೆ ಸೈನ್ಯಾಧಿಪತಿಗಳು, ಆ ಮನುಷ್ಯರನ್ನು
ಬಿಟ್ಟು ಬಿಡು, ಎಂದು, ಕೋಲುಕಾರರ ಸಂಗಡ ಹೇಳ್ಳಿ ಕಳುಹಿಸಿದ
೩೬ ರು. ಆಗ ಶೆರೆ ಕಾವಲಿಗಾರನು ಆ ಮಾತುಗಳನ್ನು ಪೌಲನಿಗೆ ತಿಳ್ಳಿ
ಸಿ, ಹೇಳ್ಳಿದ್ದೇನಂದರೆ, ಸೈನ್ಯಾಧಿಪತಿಗಳು, ನಿಮ್ಮನ್ನು ಬಿಟ್ಟು ಬಿ
ಡ ಬೇಕೆಂದು ಹೇಳ್ಳಿ ಕಳುಹಿಸಿದ್ದಾರೆ. ಆದಕಾರಣ ಈಗ ಹೊರಟು,
೩೭ ಸಮಾಧಾನವಾಗಿ ಹೋಗಿರಿ. ಆದರೆ ಪೌಲನು ಅವರಿಗೆ, ರೋ
ಮಾಯರಾದ ನಮ್ಮನ್ನು ಅವರು ನ್ಯಾಯ ವಿಚಾರಿಸದೆ, ಬಹಿರಂ
ಗವಾಗಿ ಹೊಡೆದು, ಶೆರೆಯಲ್ಲಿ ಹಾಕಿ, ಈಗ ಅಂತರಂಗವಾಗಿ ಹೊ
ರಗೆ ಬಿಡುತ್ತಾರೋ? ಹಾಗಲ್ಲ; ಅವರೇ ಬಂದು, ನಮ್ಮನ್ನು ಹೊ
೩೮ ರಗೆ ಕರಕೊಂಡು ಹೋಗಲಿ, ಅಂದನು. ಕೋಲುಕಾರರು ಸೈನ್ಯಾ
ಧಿಪತಿಗಳಿಗೆ ಈ ಮಾತುಗಳನ್ನು ತಿಳ್ಳಿಸಿದಾಗ, ಅವರು ರೋಮಾ
ಯರಾಗಿದ್ದಾರೆಂದು ಕೇಳ್ಳಿ, ಭಯ ಪಟ್ಟರು. ಆಗ ಬಂದು, ಅವ
೩೯ ರನ್ನು ಹೊರಗೆ ತಂದು, ಪಟ್ಣವನ್ನು ಬಿಟ್ಟು ಹೋಗ ಬೇಕೆಂದು
೪೦ ಬೇಡಿ ಕೊಂಡರು. ಅವರು ಶೆರೆಮನೆಯಿಂದ ಹೊರಟು, ಲೂದ್ಯ
ಳ ಬಳ್ಳಿಗೆ ಬಂದು, ಸಹೋದರರನ್ನು ಕಂಡು, ಆದರಿಸಿ, ಹೊರಟು
ಹೋದರು.

## ೧೭. ಸಂಧಿ.

೧ ತರುವಾಯ ಅವರು ಅಂಫಿಪೊಲಿಯನ್ನೂ ಅಪೊಲ್ಲೋನ್ಯವ
ನ್ನೂ ಹಾದು, ಥೆಸ್ಸಲೊನೀಕಕ್ಕೆ ಬಂದರು. ಅಲ್ಲಿ ಯೆಹೂದ್ಯ
೨ ರ ಸಭೆಮನೆಯು ಇತ್ತು. ಪೌಲನು ತನ್ನ ವಾಡಿಕೆಯ ಪ್ರಕಾರ ಅ
ವರ ಬಳ್ಳಿಗೆ ಪ್ರವೇಶಿಸಿ, ಮೂರು ಸಬ್ಬತುಗಳ್ಳಲ್ಲಿ ಬರಹಗಳ ವಿಷ
ಯವಾಗಿ ಅವರ ಸಂಗಡ ಸಂಭಾಷಣೆ ಮಾಡಿ, ಕ್ರಿಸ್ತನು ಶ್ರಮೆ
೩ ಪಟ್ಟು, ಸತ್ತವರೊಳಗಿಂದ ಏಳ್ಳ ಬೇಕಾಗಿತ್ತೆಂದೂ, ನಾನು ನಿಮಗೆ
ತಿಳ್ಳಿಸುವ ಯೇಸುವೇ ಕ್ರಿಸ್ತನು ಎಂದೂ, ವ್ಯಾಖ್ಯಾನ ಮಾಡಿ,
೪ ಸ್ಥಾಪಿಸಿದನು. ಆಗಲವರಲ್ಲಿ ಕೆಲವರು ಸಮ್ಮತಿ ಪಟ್ಟು, ಭಕ್ತಿಯು
ಳ್ಳ ಗ್ರೇಕರ ಬಹು ಸಮೂಹದ ಸಂಗಡಲೂ, ಪ್ರಧಾನ ಸ್ತ್ರೀಯ
ರಲ್ಲಿ ಅನೇಕರ ಸಂಗಡಲೂ, ಪೌಲನಿಗೂ ಸೀಲನಿಗೂ ಕೂಡಿ
ಕೊಂಡರು.

೫ ಆಗ ಅವಿಶ್ವಾಸಿಗಳಾದ ಯೆಹೂದ್ಯರು ಹೊಟ್ಟೆಕಿಚ್ಚು ಪಟ್ಟು,
ನೀಚರಾದ ಕೆಲವು ದುಷ್ಟ ಜನರನ್ನು ಕರಕೊಂಡು, ಗುಂಪು ಕೂ

ಡಿಸಿ, ಪಟ್ಣವನ್ನು ಗಲಿಬಿಲಿ ಮಾಡಿ, ಯಾಸೋನನ ಮನೆಯನ್ನು
ಕವಿದು, ಅವರನ್ನು ಜನರ ಬಳಿಗೆ ಹೊರಗೆ ತರುವದಕ್ಕೆ ಪ್ರಯ
೬ ತ್ನ ಮಾಡಿದರು. ಆದರೆ ಅವರನ್ನು ಕಾಣದೆ, ಯಾಸೋನನ
ನ್ನೂ, ಇನ್ನು ಕೆಲವು ಸಹೋದರರನ್ನೂ ಪಟ್ಣದ ಅಧಿಪತಿಗಳ
ಬಳಿಗೆ ಎಳೆದು, ಕೂಗಿದ್ದೇನಂದರೆ, ಲೋಕವನ್ನು ಗಲಿಬಿಲಿ ಮಾ
೭ ಡುವವರಾದ ಇವರು ಇಲ್ಲಿಗೂ ಬಂದಿದ್ದಾರೆ; ಯಾಸೋನನು ಅವ
ರನ್ನು ಅಂಗೀಕರಿಸಿದ್ದಾನೆ; ಇವರೆಲ್ಲರು ಯೇಸುವೆಂಬ ಬೇರೆ ಅರ
ಸನು ಇದ್ದಾನೆಂದು ಹೇಳಿ, ಕೈಸರನ ಆಜ್ಞೆಗಳಿಗೆ ವಿರೋಧವಾಗಿ
೮ ನಡೆಯುತ್ತಾರೆ. ಈ ಪ್ರಕಾರ ಅವರು, ಇವುಗಳನ್ನು ಕೇಳಿದ ಸ
ಮೂಹವನ್ನೂ ಪಟ್ಣದ ಅಧಿಪತಿಗಳನ್ನೂ ಕಳವಳ ಪಡಿಸಿದ್ದರಿಂದ,
೯ ಅವರು ಯಾಸೋನನು ಮೊದಲಾದವರಿಂದ ಹೊಣೆ ತಕ್ಕೊಂ
ಡು, ಅವರನ್ನು ಬಿಟ್ಟರು.

೧೦ ಆಗ ಸಹೋದರರು ರಾತ್ರಿಯಲ್ಲಿ ಪೌಲನನ್ನೂ ಸೀಲನನ್ನೂ
ಬೆರೋಯಕ್ಕೆ ಕಳಿಹಿಸಿದರು. ಅವರು ಸೇರಿ, ಯೆಹೂದ್ಯರ
೧೧ ಸಭೆಮನೆಗೆ ಹೋದರು. ಇವರು ಥೆಸ್ಸಲೊನೀಕದವರಿಗಿಂತ ಸು
ಜನರಾಗಿದ್ದದರಿಂದ, ವಾಕ್ಯವನ್ನು ಪೂರ್ಣ ಮನಸ್ಸಾಗಿ ಅಂಗೀ
ಕರಿಸಿ, ಇವು ಹೀಗೋ? ಎಂದು, ದಿನ ದಿನಕ್ಕೆ ಬರಹಗಳನ್ನು ಶೋ
೧೨ ಧಿಸಿದರು. ಆದದರಿಂದ ಅವರಲ್ಲಿ ಅನೇಕರೂ, ಸುಚರಿತ್ರೆಯುಳ್ಳ
ಗ್ರೇಕ ಹೆಂಗಸರಲ್ಲಿಯೂ ಗಂಡಸರಲ್ಲಿಯೂ ಅನೇಕರೂ, ವಿಶ್ವಾ
೧೩ ಸಿಸಿದರು. ಆದರೆ ಥೆಸ್ಸಲೊನೀಕದ ಯೆಹೂದ್ಯರು, ಬೆರೋ
ಯದಲ್ಲಿ ಪೌಲನು ದೇವರ ವಾಕ್ಯವನ್ನು ಪ್ರಸಂಗಿಸುತ್ತಾನೆಂದು
೧೪ ಕೇಳಿ, ಅಲ್ಲಿಗೂ ಬಂದು, ಸಮೂಹಗಳನ್ನು ಕದಲಿಸಿದರು. ಸಂ
ಗಡಲೇ ಸಹೋದರರು ಪೌಲನನ್ನು ಹಡಗ ಮಾರ್ಗವಾಗಿ ಕಳು
ಹಿಸಿ ಬಿಟ್ಟರು. ಆದರೆ ಸೀಲನೂ ತಿಮೊಥೆಯನೂ ಅಲ್ಲಿ ನಿಂತರು.

೧೫ ಆದರೆ ಪೌಲನನ್ನು ಸಾಗ ಕಳುಹಿಸಿದವರು ಅವನನ್ನು ಅಥೇ
ನೆಯ ವರಿಗೂ ಕರ ಕೊಂಡು ಹೋಗಿ, ಸೀಲನಿಗೂ ತಿಮೊಥೆಯ
ನಿಗೂ, ಕೂಡುವಹಾಗೆ ಬೇಗ ತನ್ನ ಬಳಿಗೆ ಬರ ಬೇಕೆಂದು, ಹೇ
ಳುವದಕ್ಕೆ ಅಪ್ಪಣೆ ಹೊಂದಿ, ಹೋದರು.

೧೬ ಮತ್ತು ಪೌಲನು ಅಥೇನೆಯಲ್ಲಿ ಅವರಿಗೋಸ್ಕರ ಕಾದು
ಕೊಂಡಿರುವಾಗ, ಆ ಪಟ್ಣವು ವಿಗ್ರಹಾಧೀನವಾಗಿರುವದನ್ನು ನೋ
೧೭ ಡಿದ್ದರಿಂದ, ಅವನ ಆತ್ಮವು ಅವನಲ್ಲಿ ಉರಿಯಿತು. ಆದಕಾರಣ
ಸಭೆಮನೆಯಲ್ಲಿ ಯೆಹೂದ್ಯರ ಸಂಗಡಲೂ ಭಕ್ತರ ಸಂಗಡಲೂ
ಸಂತೇ ಬೀದಿಯಲ್ಲಿ ದಿನ ದಿನ ಕಂಡವರ ಸಂಗಡಲೂ ಸಂಭಾಷಣೆ
೧೮ ಮಾಡಿದನು. ಆಗ ಎಪಿಕೂರ್ಯರೂ ಸ್ತೊವಿಕರೂ ಆದ ಜ್ಞಾನಿಗ
ಳಲ್ಲಿ ಕೆಲವರು ಅವನ ಸಂಗಡ ತರ್ಕ ಮಾಡಿದರು. ಕೆಲವರು ಈ
ಹರಟೆಯವನು ಏನು ಹೇಳ ಬೇಕೆಂದಿದ್ದಾನೆಂದೂ, ಕೆಲವರು, ಪರ
ದೈವಗಳನ್ನು ಶಿಳ್ಳಿಸುವವನಾಗಿ ಕಾಣಿಸುತ್ತಾನೆಂದೂ, ಹೇಳಿದರು.
ಯಾಕಂದರೆ ಅವನು ಯೇಸುವನ್ನೂ ಪುನರುತ್ಥಾನವನ್ನೂ ಅವ
೧೯ ರಿಗೆ ಪ್ರಸಂಗಿಸಿದನು. ಆಗಲವರು ಅವನನ್ನು ಅಥೆಯೊಪಾಗಕ್ಕೆ
ಕರಕೊಂಡು ಹೋಗಿ, ನೀನು ಹೇಳುವ ಈ ಹೊಸ ಬೋಧನೆ
೨೦ ಯು ಏನೆಂದು, ನಾವು ತಿಳಿಯ ಬಹುದೋ? ಯಾಕಂದರೆ ಅಪ
ರೂಪವಾದವುಗಳನ್ನು ನಮ್ಮ ಕಿವಿಗಳಲ್ಲಿ ಬೀಳ್ಳ ಮಾಡುತ್ತೀ; ಆದ
ರಿಂದ ಇವು ಏನಾದಾವೆಂದು, ತಿಳಿಯ ಬೇಕೆಂದಿದ್ದೇವೆ, ಅಂದ
೨೧ ರು. ಯಾಕಂದರೆ, ಅಥೇನ್ಯರೆಲ್ಲರಿಗೂ ಅಲ್ಲಿ ವಾಸವಾಗಿರುವ ಅ
ನ್ಯದೇಶಸ್ಥರಿಗೂ, ನೂತನವಾದದ್ದೇನಾದರೂ ಮಾತಾಡುವದೂ
ಕೇಳುವದೂ ಹೊರತು, ಬೇರೆ ಯಾವದಕ್ಕೂ ಸಾವಕಾಶವಿಲ್ಲ.

೨೨ ಆಗ ಪೌಲನು ಅಥೆಯೊಪಾಗದ ಮಧ್ಯದಲ್ಲಿ ನಿಂತು ಕೊಂ
ಡು, ಹೇಳಿದ್ದೇನಂದರೆ, ಅಥೇನ್ಯರಾದ ಜನರೇ, ನೀವು ಎಲ್ಲಾ ವಿ
೨೩ ಷಯಗಳಲ್ಲಿ ಅತಿ ಭಕ್ತರೆಂದು ನೋಡುತ್ತೇನೆ. ಹ್ಯಾಗಂದರೆ ನಾ
ನು ಹಾದು ಬಂದು, ನಿಮ್ಮ ಆರಾಧನೆಗಳನ್ನು ನೋಡಿ, ತಿಳಿಯದ
ದೇವರಿಗೆ, ಎಂದು, ಮೇಲೆ ಬರೆದಿರುವ ಪೀಠವನ್ನು ಸಹ ಕಂಡು
ಕೊಂಡೆನು; ಆದದರಿಂದ ನೀವು ತಿಳಿಯದೆ ಭಜಿಸುವವನನ್ನೇ ನಾ
೨೪ ನು ನಿಮಗೆ ತಿಳಿಸುತ್ತೇನೆ. ಲೋಕವನ್ನೂ ಅದರಲ್ಲಿರುವ ಎಲ್ಲವು
ಗಳನ್ನೂ ಉಂಟು ಮಾಡಿದ ದೇವರು, ತಾನೇ ಪರಲೋಕ ಭೂ
ಲೋಕಗಳ ಕರ್ತನಾಗಿದ್ದು, ಕೈಯಿಂದಾದ ಮಂದಿರಗಳಲ್ಲಿ ವಾ
೨೫ ಸ ಮಾಡನು. ತಾನೇ ಎಲ್ಲರಿಗೆ ಜೀವವನ್ನೂ ಉಸುರನ್ನೂ ಎಲ್ಲ
ವುಗಳನ್ನೂ ಕೊಡುವವನಾಗಿ, ಏನಾದರೂ ಬೇಕಾದವನ ಹಾಗೆ,
೨೬ ಮನುಷ್ಯರ ಕೈಗಳಿಂದ ಪೂಜಿಸಲ್ಪಡುವದಿಲ್ಲ. ಅವನು ಬಂಧೇ
ರಕ್ತದಿಂದ ಮನುಷ್ಯರ ಎಲ್ಲಾ ಜನಾಂಗಗಳನ್ನು ಉಂಟು ಮಾಡಿ,
ಮುಂನೇಮಿಸಿದ ಕಾಲಗಳನ್ನೂ, ಅವರ ನಿವಾಸದ ಮೇರೆಗಳನ್ನೂ
೨೭ ಗೊತ್ತು ಮಾಡಿ, ಅವರು ತಡವಿ, ಕರ್ತನನ್ನು ಕಂಡು ಕೊಂಡಾರೇ
ನೋ ಎಂದು, ಅವನನ್ನು ಹುಡುಕುವ ಹಾಗೆ, ಭೂಮಿಯ ಮೇ
ಲ್ಭಾಗದಲ್ಲೆಲ್ಲಾ ನಿವಾಸವಾಗಿರ ಮಾಡಿದ್ದಾನೆ. ಆದಾಗ್ಯೂ ಅವನು
೨೮ ನಮ್ಮಲ್ಲಿ ಯಾವನೊಬ್ಬನಿಗಾದರೂ ದೂರವಾದವನಲ್ಲ. ಯಾ
ಕಂದರೆ, ಅವನ ವಂಶದವರಾಗಿದ್ದೇವೆಂದು, ನಿಮ್ಮ ಕವಿಗಳಲ್ಲಿ ಕೆಲ
ವರು ಹೇಳಿದ ಪ್ರಕಾರ, ಅವನಲ್ಲಿ ಬದುಕುತ್ತೇವೆ, ಚಲಿಸುತ್ತೇವೆ,
೨೯ ಇರುತ್ತೇವೆ. ಆದದರಿಂದ ನಾವು ದೇವರ ವಂಶವಾಗಿದ್ದರೆ, ದೈವ
ವು ಮನುಷ್ಯನ ಚಮತ್ಕಾರದಿಂದಲೂ ಆಲೋಚನೆಯಿಂದಲೂ
ಉಂಟಾದ ನಿರ್ಮಾಣವಾಗಿರುವ ಚಿನ್ನಕ್ಕಾದರೂ, ಬೆಳ್ಳಿಗಾದ
ರೂ, ಕಲ್ಲಿಗಾದರೂ, ಸಮಾನವಾಗಿದೆ ಎಂದು, ನಾವು ನೆನೆಸ ಬಾ
೩೦ ರದು. ದೇವರು ಆ ಅಜ್ಞಾನದ ಕಾಲಗಳನ್ನು ಲಕ್ಷ್ಯ ಮಾಡದೆ ಇ
ದ್ದನು. ಆದರೆ ಈಗ ಮಾನಸಾಂತರ ಪಡ ಬೇಕೆಂದು, ಎಲ್ಲಾ ಕ
೩೧ ಡೆಯಲ್ಲಿರುವ ಎಲ್ಲಾ ಮನುಷ್ಯರಿಗೆ ಅಪ್ಪಣೆ ಕೊಡುತ್ತಾನೆ. ಆದ
ಕಾರಣ ತಾನು ನೇಮಿಸಿದ ಮನುಷ್ಯನಿಂದ ಲೋಕಕ್ಕೆ ನೀತಿ
ಯಾಗಿ ನ್ಯಾಯ ತೀರಿಸುವದಕ್ಕಿರುವ ದಿವಸವನ್ನು ನಿಶ್ಚಯಿಸಿ
ಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಿಸಿ, ಎಲ್ಲರಿಗೆ
ನಂಬಿಕೆ ಉಂಟು ಮಾಡಿದ್ದಾನೆ.

೩೨ ಆದರೆ ಸತ್ತವರ ಪುನರುತ್ಥಾನವನ್ನು ಕುರಿತು ಕೇಳಿ, ಕೆಲವರು
ಹಾಸ್ಯ ಮಾಡಿದರು; ಕೆಲವರು, ಇದರ ವಿಷಯ ತಿರಿಗಿ ನಿನ್ನನ್ನು
೩೩ ಕೇಳುತ್ತೇವೆ, ಅಂದರು. ಹೀಗಾಗಿ, ಪೌಲನು ಅವರ ಮಧ್ಯದ
೩೪ ಲ್ಲಿಂದ ಹೊರಟು ಹೋದನು. ಆದರೆ ಕೆಲವು ಜನರು ಅವನಿಗೆ
ಕೂಡಿ ಕೊಂಡು, ವಿಶ್ವಾಸಿಸಿದರು. ಅವರಲ್ಲಿ ಅಥೆಯೊಪಾಗದವ
ನಾದ ದಿಯೊನುಸ್ಯನೂ, ದಾಮರಿ ಎಂಬ ಸ್ತ್ರೀಯೂ, ಅವರ
ಸಂಗಡ ಬೇರೆ ಜನರೂ, ಇದ್ದರು.

## ೧೯. ಸಂಧಿ.

೧ ಇವುಗಳಾದ ಮೇಲೆ, ಪೌಲನು ಅಥೇನೆಯನ್ನು ಬಿಟ್ಟು ಕೊ
೨ ರಿಂಥಕ್ಕೆ ಬಂದನು. ಮತ್ತು, ಯೆಹೂದ್ಯರೆಲ್ಲರು ರೋಮವನ್ನು
ಬಿಟ್ಟು ಹೋಗ ಬೆಕೆಂದು ಕ್ಲಾಡ್ಯನು ಆಜ್ಞಾಪಿಸಿದ ಕಾರಣ,
ಸ್ವಲ್ಪ ಕಾಲಕ್ಕೆ ಮುಂಚೆ ಇತಾಲ್ಯದಿಂದ ಬಂದಂಥ, ಪೊಂತದ



ಲ್ಲಿ ಹುಟ್ಟಿದಂಥ, ಅಕ್ವಿಲನೆಂಬ ಒಬ್ಬ ಯೆಹೂದ್ಯನನ್ನೂ, ಅವ
ನ ಹೆಂಡತಿಯಾದ ಪ್ರಿಸ್ಕಿಲ್ಲಳನ್ನೂ ಕಂಡು, ಅವರ ಬಳಿಗೆ ಬಂದ
೩ ನು. ಮತ್ತು ಅವನು ಅದೇ ಉದ್ಯೋಗಸ್ಥನಾದದರಿಂದ ಅವರ
ಬಳಿಯಲ್ಲಿ ಇದ್ದು, ಕೆಲಸ ಮಾಡಿದನು; ಯಾಕಂದರೆ ಅವರು
೪ ಗುಡಾರ ಮಾಡುವ ಉದ್ಯೋಗಸ್ಥರಾಗಿದ್ದರು. ಮತ್ತು ಪ್ರತಿ ಸಬ್ಬ
ತಿಗೆ ಅವನು ಸಭೆಮನೆಯಲ್ಲಿ ಸಂಭಾಷಣೆ ಮಾಡಿ, ಯೆಹೂದ್ಯ
ರನ್ನೂ ಗ್ರೇಕರನ್ನೂ ಸಮ್ಮತಿ ಪಡಿಸಿದರು.

೫ ಇದಲ್ಲದೆ ಸೀಲನೂ ತಿಮೊಥೆಯನೂ ಮಕೆದೊನ್ಯದಿಂದ
ಇಳಿದು ಬಂದಾಗ, ಪೌಲನು ಅತ್ಮದಲ್ಲಿ ಇರಿಕಿಸಲ್ಪಟ್ಟವನಾಗಿ,
ಯೇಸುವು ಕ್ರಿಸ್ತನೇ ಎಂದು, ಯೆಹೂದ್ಯರಿಗೆ ಸಾಕ್ಷಿ ಹೇಳಿದನು.
೬ ಆದರೆ ಅವರು ಎದುರಿಸಿ, ದೂಷಿಸಿದಾಗ, ಅವನು ತನ್ನ ವಸ್ತ್ರಗ
ಳನ್ನು ಝಾಡಿಸಿ, ಅವರಿಗೆ, ನಿಮ್ಮ ರಕ್ತವು ನಿಮ್ಮ ತಲೆಯ ಮೇಲೆ
ಇರಲಿ; ನಾನು ಶುದ್ಧನು; ಇಂದಿನಿಂದ ಜನಾಂಗಗಳ ಬಳಿಗೆ ಹೋ
೭ ಗುತ್ತೇನೆಂದು ಹೇಳಿ, ಅಲ್ಲಿಂದ ತೊಲಗಿ, ಯುಸ್ತನೆಂಬ ಒಬ್ಬ
ದೇವ ಭಕ್ತನ ಮನೆಗೆ ಹೋದನು; ಅವನ ಮನೆಯು ಸಭೆಮನೆಗೆ
೮ ಸಮೀಪವಾಗಿತ್ತು. ಸಭೆಮನೆಯ ಯಜಮಾನನಾದ ಕ್ರಿಸ್ಪನು
ತನ್ನ ಮನೆಯವರೆಲ್ಲರ ಸಂಗಡ ಕರ್ತನಲ್ಲಿ ವಿಶ್ವಾಸಿಸಿದನು.
ಮತ್ತು ಕೊರಿಂಥದಲ್ಲಿ ಅನೇಕರು ಕೇಳಿ, ವಿಶ್ವಾಸಿಸಿ, ಸ್ನಾನ
ಹೊಂದಿದರು.

೯ ಆಗ ಕರ್ತನು ದರ್ಶನದಲ್ಲಿ ಪೌಲನಿಗೆ, ಭಯ ಪಡ ಬೇಡ;
೧೦ ಸುಮ್ಮನಿರಬೆ, ಮಾತಾಡು; ಯಾಕಂದರೆ ನಾನು ನಿನ್ನ ಸಂಗಡ
ಇದ್ದೇನೆ; ನಿನಗೆ ಕೇಡು ಮಾಡುವದಕ್ಕೆ ಒಬ್ಬನಾದರೂ ನಿನ್ನ
ಮೇಲೆ ಕೈ ಹಾಕನು, ಯಾಕಂದರೆ ಬಹು ಜನರು ಈ ಪಟ್ಣದಲ್ಲಿ
೧೧ ನನಗೆ ಇದ್ದಾರೆಂದು ಹೇಳಿದನು. ಈ ಪ್ರಕಾರ ಅವನು ಒಂದು
ವರುಷ ಆರು ತಿಂಗಳು ಇದ್ದು, ಅವರಲ್ಲಿ ದೇವರ ವಾಕ್ಯವನ್ನು
ಬೋಧಿಸುತ್ತಾ ಬಂದನು.

೧೨ ತರುವಾಯ ಗಲ್ಲಿಯೋನನು ಅಕಾಯದಲ್ಲಿ ಪ್ರತಿನಿಧಿಯಾ
ಗಿದ್ದಾಗ, ಯೆಹೂದ್ಯರು ಏಕ ಮನಸ್ಸಾಗಿ ಪೌಲನ ಮೇಲೆ ಕೈ
ಹಾಕಿ, ಅವನನ್ನು ಪೀಠದ ಬಳಿಗೆ ತಂದು, ಇವನು ನ್ಯಾಯಪ್ರ
೧೩ ಮಾಣಕ್ಕೆ ವಿರೋಧವಾಗಿ ದೇವರನ್ನು ಭಜಿಸ, ಜನರನ್ನು ಸಮ್ಮ
೧೪ತಿ ಪಡಿಸುತ್ತಾನೆಂದು ಹೇಳಿದರು. ಆಗ ಪೌಲನು ಬಾಯಿ ತೆಕೆ
ಯುವದಕ್ಕಿರುವಾಗ, ಗಲ್ಲಿಯೋನನು ಯೆಹೂದ್ಯರಿಗೆ, ಓ
ಯೆಹೂದ್ಯರೇ, ಬಂದು ಅನ್ಯಾಯವಾದರೂ ಕೆಟ್ಟ ಪೋಕರಿತ
ನವಾದರೂ ಇದ್ದರೆ, ನಾನು ನಿಮ್ಮನ್ನು ತಾಳುವದು ಯೋಗ್ಯ
೧೫ವಾಗಿರುವದು. ಆದರೆ ನಿಮ್ಮಲ್ಲಿರುವ ವಾಕ್ಯ, ನಾಮ, ನ್ಯಾಯಪ್ರ
ಮಾಣಗಳನ್ನು ಕುರಿತಂಥ ತರ್ಕವಾಗಿದ್ದರೆ, ನೀವೇ ನೋಡಿ ಕೊ
೧೬ ಳ್ಳಿರಿ; ಯಾಕಂದರೆ ಇವುಗಳ ವಿಷಯ ನ್ಯಾಯಾಧಿಪತಿಯಾಗಿ
ರ ನನಗೆ ಮನಸ್ಸಿಲ್ಲವೆಂದು ಹೇಳಿ, ಅವರನ್ನು ಪೀಠದ ಬಳಿಯಿಂ
೧೭ ದ ಹೊರದಿಸಿದನು. ಆಗ ಗ್ರೇಕರೆಲ್ಲರು ಸಭೆಮನೆಯ ಯಜಮಾ
ನನಾದ ಸೊಸ್ಥೆನನನ್ನು ಹಿಡಿದು ಕೊಂಡು, ನ್ಯಾಯ ಪೀಠದ
ಮುಂದೆ ಹೊಡೆದರು. ಗಲ್ಲಿಯೋನನು ಇವುಗಳಲ್ಲಿ ಯಾವದ
ನ್ನೂ ಚಿಂತಿಸಲಿಲ್ಲ.

೧೮ ಮತ್ತು ಪೌಲನು ಇನ್ನು ಬಹು ದಿವಸಗಳು ಇದ್ದ ಮೇಲೆ, ಸ
ಹೋದರರಿಂದ ಅಪ್ಪಣೆ ತೆಗದು ಕೊಂಡು, ಹಡಗ ಮಾರ್ಗವಾ
ಗಿ ಪ್ರಿಸ್ಕಿಲ್ಲಳ ಸಂಗಡಲೂ, ಅಕ್ವಿಲನ ಸಂಗಡಲೂ ಸುರ್ಯಕ್ಕೆ
೧೯ ಹೋಗಿ, ತನಗೆ ಹರಕೆ ಇರುವದರಿಂದ ಕೆಂಕ್ರೆಯದಲ್ಲಿ ತಲೆ ಬೋ
ಳಿಸಿ ಕೊಂಡು, ಎಫೆಸಕ್ಕೆ ಸೇರಿ, ಅವರನ್ನು ಅಲ್ಲಿ ಬಿಟ್ಟನು. ತರು
ವಾಯ ಸಭೆಮನೆಯಲ್ಲಿ ಪ್ರವೇಶಿಸಿ, ಯೆಹೂದ್ಯರ ಸಂಗಡ ಸಂ
೨೦ ಭಾಷಣೆ ಮಾಡಿದನು. ಆದರೆ, ಹೆಚ್ಚು ಕಾಲ ತಮ್ಮ ಸಂಗಡ ಇರ
೨೧ ಬೇಕೆಂದು, ಅವರು ಬೇಡಿ ಕೊಂಡಾಗ, ಅವನು ಒಪ್ಪದೆ, ಬರುವ
ಹಬ್ಬವನ್ನು ಹ್ಯಾಗಾದರೂ ನಾನು ಯೆರೂಸಲೇಮಿನಲ್ಲಿ ಆಚ
ರಿಸ ಬೇಕು; ದೇವರ ಚಿತ್ತವಾದರೆ, ತಿರಿಗಿ ನಿಮ್ಮ ಬಳಿಗೆ ಬರುವೆನು,
ಎಂದು ಹೇಳಿ, ಅವರಿಂದ ಅಪ್ಪಣೆ ತೆಗದು ಕೊಂಡು, ಎಫೆಸ
೨೨ ನ್ನು ಬಿಟ್ಟು, ಹಡಗ ಮಾರ್ಗವಾಗಿ ಕೈಸರ್ಯಕ್ಕೆ ಬಂದು, ಪಿ
ರಿ ಹೋಗಿ, ಸಭೆಯನ್ನು ವಂದಿಸಿ, ಅಂತಿಯೋಕ್ಯಕ್ಕೆ ಇಳಿದು
೨೩ ಹೋದನು. ಅಲ್ಲಿ ಸ್ವಲ್ಪ ಕಾಲ ಕಳೆದು, ಹೊರಟು, ಗಲಾತ್ಯ
ಪ್ರದೇಶವನ್ನೂ ಫ್ರುಗ್ಯವನ್ನೂ ಕ್ರಮದಿಂದ ಸಂಚರಿಸಿ, ಶಿಷ್ಯರೆ
ಲ್ಲರನ್ನು ಸ್ಥಿರ ಪಡಿಸಿದನು.

೨೪ ಮತ್ತು ಅಪೊಲ್ಲೋಸ್ ಎಂಬ ಹೆಸರುಳ್ಳ, ಅಲೆಕ್ಸಾಂದ್ರಿಯ
ದಲ್ಲಿ ಹುಟ್ಟಿದ, ವಾಕ್ಚಾತುರ್ಯವುಳ್ಳ, ಬರಹಗಳಲ್ಲಿ ಸಮರ್ಥ
೨೫ ನಾದ, ಒಬ್ಬ ಯೆಹೂದ್ಯನು ಎಫೆಸಕ್ಕೆ ಬಂದನು. ಇವನು ಕ
ರ್ತನ ಮಾರ್ಗದಲ್ಲಿ ಉಪದೇಶಿಸಲ್ಪಟ್ಟು, ಆತ್ಮದಲ್ಲಿ ಚುರುಕಾ
ಗಿ, ಯೋಹಾನನ ಸ್ನಾನವನ್ನು ಮಾತ್ರ ತಿಳಿದು, ಕರ್ತನ ವಿ
ಷಯವಾದವುಗಳನ್ನು ಜಾಗ್ರತೆಯಾಗಿ ಹೇಳುತ್ತಾ, ಬೋಧಿಸು
೨೬ ತ್ತಾ, ಇದ್ದನು. ಇವನು ಸಭೆಯಲ್ಲಿ ಧೈರ್ಯದಿಂದ ಮಾತಾಡ
ಲಾರಂಭಿಸಿದಾಗ, ಅಕ್ವಿಲನೂ ಪ್ರಿಸ್ಕಿಲ್ಲಳೂ ಅವನನ್ನು ಕೇಳಿ,
ಅವನನ್ನು ಅಂಗೀಕರಿಸಿ, ದೇವರ ಮಾರ್ಗವನ್ನು ಇನ್ನು ಜಾಗ್ರ
ತೆಯಾಗಿ ಅವನಿಗೆ ವಿವರಿಸಿದರು.

೨೭ ಮತ್ತು ಅವನು ಅಕಾಯಕ್ಕೆ ಹೋಗ ಇಚ್ಛೈಸಿದಾಗ, ಸಹೋ
ದರರು ಶಿಷ್ಯರಿಗೆ, ಅವನನ್ನು ಅಂಗೀಕರಿಸ ಬೇಕೆಂದು ಬರೆದು,
ಎಚ್ಚರಿಸಿದರು. ಅವನು ಶೇರಿ, ಕೃಪೆಯ ಮೂಲವಾಗಿ ವಿಶ್ವಾಸಿ
೨೮ ಸಿದವರಿಗೆ ಬಹಳ ಸಹಾಯ ಮಾಡಿದನು. ಹ್ಯಾಗಂದರೆ ಅವನು,
ಯೇಸುವು ಕ್ರಿಸ್ತನೇ ಎಂದು, ಬರಹಗಳಿಂದ ತೋರಿಸಿ, ಯೆಹೂ
ದ್ಯರನ್ನು ಬಲವಾಗಿ ಬಹಿರಂಗದಲ್ಲಿ ಖಂಡಿಸುತ್ತಿದ್ದನು.

## ೧೯. ಸಂಧಿ.

೧ ಅಪೊಲ್ಲೋಸ್ ಕೊರಿಂಥದಲ್ಲಿರುವಾಗ ಆದದ್ದೇನಂದರೆ, ಪೌ
ಲನು ಮೇಲಿನ ಸೀಮೆಗಳನ್ನು ಹಾದು, ಎಫೆಸಕ್ಕೆ ಬಂದನು. ಮ
೨ ತ್ತು ಕೆಲವು ಶಿಷ್ಯರನ್ನು ಕಂಡು, ಅವರಿಗೆ, ನೀವು ವಿಶ್ವಾಸಿಸಿದ
ಮೇಲೆ ಪರಿಶುದ್ಧಾತ್ಮವನ್ನು ಹೊಂದಿದ್ದೀರೋ? ಅನ್ನಲಾಗಿ, ಅವ
ರು, ಪರಿಶುದ್ಧಾತ್ಮವು ಉಂಟೇನೋ, ನಾವು ಕೇಳಲೇ ಇಲ್ಲವೆಂ
೩ ದು, ಅವನಿಗೆ ಹೇಳಿದರು. ಅವನು ಅವರ ಸಂಗಡ, ಹಾಗಾದರೆ
೪ ಯಾವದಕ್ಕೆ ಸ್ನಾನ ಹೊಂದಿದಿರಿ? ಅಂದನು. ಅವರು, ಯೋ
ಹಾನನ ಸ್ನಾನಕ್ಕೆ, ಅಂದರು. ಆಗ ಪೌಲನು ಹೇಳಿದ್ದು, ಯೋ
ಹಾನನು, ತನ್ನ ಹಿಂದೆ ಬರುವವನಲ್ಲಿ—ಅಂದರೆ ಕ್ರಿಸ್ತ ಯೇಸುವ
ನಲ್ಲಿ—ವಿಶ್ವಾಸವಿಡ ಬೇಕೆಂದು, ಜನರಿಗೆ ಹೇಳಿ, ಮಾನಸಾಂತರದ
೫ ಸ್ನಾನವನ್ನು ಕೊಟ್ಟನು. ಅವರು ಇದನ್ನು ಕೇಳಿ, ಕರ್ತನಾದ
೬ ಯೇಸುವಿನ ಹೆಸರಿನಲ್ಲಿ ಸ್ನಾನ ಹೊಂದಿದರು. ತರುವಾಯ
ಪೌಲನು ಅವರ ಮೇಲೆ ಕೈಗಳನ್ನು ಇಡಲಾಗಿ, ಪರಿಶುದ್ಧಾತ್ಮವು
ಅವರ ಮೇಲೆ ಬಂತು. ಮತ್ತು ಅವರು ಭಾಷೆಗಳಿಂದ ಮಾತಾಡಿ,

೭ ಪ್ರವಾದಿಸಿದರು. ಆ ಗಂಡಸರೆಲ್ಲರು ಹೆಚ್ಚು ಕಡಿಮೆ ಹನ್ನೆರಡು
ಮಂದಿಯಾಗಿದ್ದರು.
೮ ತರುವಾಯ ಅವನು ಸಭೆಮನೆಯಲ್ಲಿ ಪ್ರವೇಶಿಸಿ, ಮೂರು
ತಿಂಗಳು ಸಂಭಾಷಿಸಿ, ದೇವರ ರಾಜ್ಯದವುಗಳ ವಿಷಯವಾಗಿ ಸ
೯ ಮ್ಮತಿ ಪಡಿಸುತ್ತಾ, ಧೈರ್ಯದಿಂದ ಮಾತಾಡಿದನು. ಆದರೆ ಕೆ
ಲವರು ಕಠಿಣರಾಗಿ, ವಿಶ್ವಾಸಿಸದೆ, ಸಮೂಹದ ಮುಂದೆ ಆ ಮಾ
ರ್ಗವನ್ನು ನಿಂದಿಸುವಾಗ, ಅವನು ಅವರನ್ನು ಬಿಟ್ಟು, ಶಿಷ್ಯರನ್ನು
ಪ್ರತ್ಯೇಕಿಸಿ, ತುರನ್ನನೆಂಬ ಒಬ್ಬನ ಸಾಲೆಯಲ್ಲಿ ದಿನಾಲು ಸಂ
೧೦ ಭಾಷಣೆ ಮಾಡಿದನು. ಇದು ಎರಡು ವರುಷಗಳ ಪರ್ಯಂತರ
ನಡೆದ್ದರಿಂದ, ಆಸ್ಯದಲ್ಲಿ ವಾಸವಾಗಿರುವ ಯೆಹೂದ್ಯರೂ ಗ್ರೇಕ
ರೂ ಎಲ್ಲರು ಕರ್ತನಾದ ಯೇಸುವಿನ ವಾಕ್ಯವನ್ನು ಕೇಳಿದರು.
೧೧ ಮತ್ತು ದೇವರು ಅಪರೂಪ ಬಲವಾದ ಕ್ರಿಯೆಗಳನ್ನು ಪೌಲ
೧೨ ನ ಕೈಯಿಂದ ನಡಿಸಿದ ಕಾರಣ, ಅವರು ಅವನ ಮೈ ಮೇಲಿನಿಂ
ದ ಕೈ ವಸ್ತ್ರಗಳನ್ನೂ ನಡುಕಟ್ಟುಗಳನ್ನೂ ರೋಗಿಷ್ಠರ ಮೇಲೆ
ತಂದು ಹಾಕಿದಾಗ, ರೋಗಗಳು ಅವರನ್ನು ಬಿಟ್ಟು ಹೋದವು;
ದುರಾತ್ಮಗಳು ಅವರಿಂದ ಹೊರಟು ಹೋದವು.
೧೩ ಆಗ ತಿರುಗಾಡುವ ಮಂತ್ರಜ್ಞರಾದ ಯೆಹೂದ್ಯರಲ್ಲಿ ಕೆಲವರು
ದುರಾತ್ಮಗಳುಂಟಾದವರಿಗೆ, ಪೌಲನು ಸಾರುವ ಯೇಸುವಿನ ಆ
ಜ್ಞೆ ನಿಮಗೆ ಇಡುತ್ತೇವೆಂದು, ಕರ್ತನಾದ ಯೇಸುವಿನ ಹೆಸರ
೧೪ ನ್ನು ಉಚ್ಚರಿಸ ಮುಂಕೊಂಡರು. ಯೆಹೂದ್ಯರ ಪ್ರಧಾನ ಯಾ
ಜಕನಾದ ಸ್ಕೇವನ ಏಳು ಮಂದಿ ಮಕ್ಕಳು ಇದನ್ನು ಮಾಡಿದ
೧೫ ರು. ಆಗ ದುರಾತ್ಮವು ಪ್ರತ್ಯುತ್ತರವಾಗಿ, ಯೇಸುವನ್ನು ಅರಿತಿ
ದ್ದೇನೆ; ಪೌಲನನ್ನೂ ಬಲ್ಲೆನು; ಆದರೆ ನೀವು ಯಾರು? ಎಂದು
೧೬ ಹೇಳಿತು. ಮತ್ತು ಆ ದುರಾತ್ಮವುಳ್ಳ ಮನುಷ್ಯನು ಅವರ ಮೇ
ಲೆ ಹಾರಿ, ಅವರನ್ನು ಜಯಿಸಿ, ಬಲಾತ್ಕಾರ ಮಾಡಿದ್ದರಿಂದ, ಅವ
ರು ಬೆತ್ತಲೆಯಾಗಿಯೂ ಘಾಯವಾಗಿಯೂ ಆ ಮನೆಯನ್ನು
೧೭ ಬಿಟ್ಟು ಓಡಿ ಹೋದರು. ಇದು ಎಫೆಸದಲ್ಲಿ ವಾಸವಾಗಿರುವ ಸ
ಮಸ್ತ ಯೆಹೂದ್ಯರಿಗೂ ಗ್ರೇಕರಿಗೂ ತಿಳಿಯ ಬಂದದರಿಂದ,
ಅವರೆಲ್ಲರ ಮೇಲೆ ಭಯವು ಬಿತ್ತು; ಮತ್ತು ಕರ್ತನಾದ ಯೇ
ಸುವಿನ ಹೆಸರು ಮಹಿಮೆ ಹೊಂದಿತು.
೧೮ ಮತ್ತು ವಿಶ್ವಾಸಿಸಿದವರಲ್ಲಿ ಅನೇಕರು ತಮ್ಮ ಕ್ರಿಯೆಗಳನ್ನು
೧೯ ಅರಿಕೆ ಮಾಡಿ, ತಿಳಿಸಲಾರಂಭಿಸಿದರು. ಮತ್ತು ಚಮತ್ಕಾರಗಳ
ನ್ನು ನಡಿಸಿದವರಲ್ಲಿ ಬಹು ಮಂದಿ ತಮ್ಮ ಪುಸ್ತಕಗಳನ್ನು ತಂದು,
ಕೂಡಿಸಿ, ಎಲ್ಲರ ಮುಂದೆ ಸುಟ್ಟು ಬಿಟ್ಟರು. ಮತ್ತು ಅವುಗಳ ಕ್ರ
ಯವನ್ನು ಲೆಖ್ಖ ಮಾಡಿ, ಅದು ಐವತ್ತು ಸಾವಿರ ಬೆಳ್ಳಿ ಹಣವೆಂ
೨೦ ದು, ಕಂಡರು. ಈ ಪ್ರಕಾರ ಕರ್ತನ ವಾಕ್ಯವು ತ್ರಾಣವಾಗಿ ಬೆ
ಳೆದು, ಬಲಗೊಂಡಿತು.
೨೧ ಇವುಗಳು ಸಂಪೂರ್ಣವಾದ ಮೇಲೆ, ಪೌಲನು ಮಕೆದೋ
ನ್ಯವನ್ನೂ ಅಕಾಯವನ್ನೂ ಹಾದು, ಯೆರೂಸಲೇಮಿಗೆ ಹೋ
ಗುವದಕ್ಕೆ ನಿಶ್ಚಯಿಸಿ ಕೊಂಡು, ಅಲ್ಲಿಗೆ ಬಂದ ಮೇಲೆ ರೋಮ
೨೨ ವನ್ನು ಸಹ ನೋಡ ಬೇಕೆಂದು ಹೇಳಿದನು. ಮತ್ತು ತನಗೆ ಸೇ
ವೆ ಮಾಡುವವರಲ್ಲಿ ತಿಮೊಥೆಯನೂ ಎರಸ್ತನೂ, ಈ ಇಬ್ಬರ
ನ್ನು ಮಕೆದೋನ್ಯಕ್ಕೆ ಕಳಿಹಿಸಿ, ತಾನು ಸ್ವಲ್ಪ ಕಾಲ ಆಸ್ಯದ
ಲ್ಲಿ ನಿಂತನು.
೨೩ ಆದರೆ ಆ ಸಮಯದಲ್ಲಿ ಈ ಮಾರ್ಗದ ವಿಷಯ ಬಹು
೨೪ ಕಳವಳ ಉಂಟಾಯಿತು. ಹ್ಯಾಗಂದರೆ ದೆಮೇತ್ರಿಯನೆಂಬ ಒಬ್ಬ
ಅಕ್ಕಸಾಲಿಗನು ಅರ್ತೆಮಿಯ ಬೆಳ್ಳಿ ಗುಡಿಗಳನ್ನು ಮಾಡಿ, ಆ
೨೫ ಉದ್ಯೋಗಸ್ಥರಿಗೆ ಬಹಳ ಕೆಲಸ ಕೊಡುತ್ತಾ ಇದ್ದನು. ಅವನು
ಇವರನ್ನೂ, ಅದೇ ತರದ ಪಂಚಾಳರನ್ನೂ ಕೂಡ ಕರೆದು, ಜನ
ರೇ, ಈ ಕೆಲಸದಿಂದ ನಮಗೆ ಆದಾಯ ಉಂಟಾಗುತ್ತದೆಂದು ಬ
೨೬ ಲ್ಲಿರಿ; ಮತ್ತು ಈ ಪೌಲನು ಎಫೆಸದಲ್ಲಿ ಮಾತ್ರವಲ್ಲ, ಸ್ವಲ್ಪ ಕಡಿ
ಮೆ ಸಮಸ್ತ ಆಸ್ಯದಲ್ಲಿ, ಕೈಗಳಿಂದ ಆಗುವವುಗಳು ದೇವರುಗ
ಳಲ್ಲವೆಂದು ಹೇಳಿ, ಬಹು ಸಮೂಹವನ್ನು ಸಮ್ಮತಿ ಪಡಿಸಿ, ತಿರು
೨೭ ಗಿಸಿ ಬಿಟ್ಟಿದ್ದಾನೆಂದು ನೋಡಿ, ಕೇಳುತ್ತೀರಿ. ಇದರಿಂದ ಈ ನಮ್ಮ
ಉದ್ಯೋಗವು ಅಸಡ್ಡೆಯಾಗುವದಲ್ಲದೆ, ಸಮಸ್ತ ಆಸ್ಯವೂ
ಲೋಕವೂ ಭಜಿಸುವ ಮಹಾ ದೇವಿಯಾದ ಅರ್ತೆಮಿಯ ಮಂ
ದಿರವು ಎನೂ ಇಲ್ಲವೆಂದು ಎಣಿಸಲ್ಪಟ್ಟು, ಅವಳ ಮಹಿಮೆಯು
ನಾಶನವಾಗುವ ಗಂಡಾಂತರವಾಯಿತು, ಅಂದನು.
೨೮ ಅವರು ಇದನ್ನು ಕೇಳಿ, ಉಗ್ರದಿಂದ ತುಂಬಿದವರಾಗಿ, ಎಫೆ
೨೯ ಸ್ಯರ ಅರ್ತೆಮಿಯು ದೊಡ್ಡವಳು! ಎಂದು ಕೂಗಿದರು. ಆಗ
ಪಟ್ಟಣವೆಲ್ಲಾ ಗಲಿಬಿಲಿಯಿಂದ ತುಂಬಿತು. ಮತ್ತು ಅವರು ಪೌಲನ
ಸಂಗಡ ಪ್ರಯಾಣ ಮಾಡಿದ ಮಕೆದೋನ್ಯರಾದ ಗಾಯನ
ನೂ ಅರಿಸ್ತಾರ್ಕನನೂ ಕೂಡ ಎಳೆ ಕೊಂಡು, ಏಕ ಮನಸ್ಸಾ
೩೦ ಗಿ ರಂಗಸ್ಥಾನಕ್ಕೆ ಓಡಿ ಹೋದರು. ಆದರೆ ಪೌಲನು ಜನರಲ್ಲಿ
೩೧ ಪ್ರವೇಶಿಸ ಬೇಕೆಂದಿದ್ದಾಗ, ಶಿಷ್ಯರು ಅವನನ್ನು ಬಿಡಲಿಲ್ಲ. ಮ
ತ್ತು ಆಸ್ಯದ ಅಧಿಪತಿಗಳಲ್ಲಿ ಕೆಲವರು ಅವನ ಸ್ನೇಹಿತರಾಗಿದ್ದದ
ರಿಂದ, ಜನರನ್ನು ಅವನ ಬಳಿಗೆ ಕಳಿಹಿಸಿ, ರಂಗಸ್ಥಾನಕ್ಕೆ ಹೋ
೩೨ ಗ ಬಾರದೆಂದು, ಬೇಡಿ ಕೊಂಡರು. ಹೀಗಿರಲಾಗಿ, ಒಬ್ಬರು ಹೀಗೆ,
ಒಬ್ಬರು ಹಾಗೆ ಕೂಗಿದರು; ಯಾಕಂದರೆ ಗುಂಪು ಗಲಿಬಿಲಿಯಾ
ಗಿತ್ತು; ತಾವು ಕೂಡಿ ಬಂದ ಕಾರಣವೇನೆಂದು, ಹೆಚ್ಚಾದ ಜನರು
೩೩ ತಿಳಿಯದೆ ಇದ್ದರು. ಆಗ ಯೆಹೂದ್ಯರು ಅಲೆಕ್ಸಾಂದ್ರನನ್ನು
ಮುಂದೆ ನೂಕಲಾಗಿ, ಸಮೂಹದೊಳಗಿಂದ ಅವನನ್ನು ಮುನಿ
ಲ್ಲಿಸಿದರು. ಅಲೆಕ್ಸಾಂದ್ರನು ಕೈ ಸಾಜ್ಞೆ ಮಾಡಿ, ಸಮೂಹಕ್ಕೆ
೩೪ ಪ್ರತ್ಯುತ್ತರ ಕೊಡ ಬೇಕೆಂದಿದ್ದನು. ಆದರೆ, ಅವನು ಯೆಹೂ
ದ್ಯನೆಂದು, ಅವರು ತಿಳಿದು ಕೊಂಡಾಗ, ಎಲ್ಲರು ಏಕ ಶಬ್ದದಿಂದ,
ಎಫೆಸ್ಯರ ಅರ್ತೆಮಿಯು ದೊಡ್ಡವಳು! ಎಂದು, ಹೆಚ್ಚು ಕಡಿಮೆ
ಎರಡು ತಾಸು ಕೂಗಿದರು.
೩೫ ಆ ಮೇಲೆ ಶಾಸನಭೋಗನು ಸಮೂಹವನ್ನು ಶಾಂತಿ ಪಡಿಸಿ,
ಹೇಳಿದ್ದೇನಂದರೆ, ಎಫೆಸ್ಯರಾದ ಜನರೇ, ಮಹಾ ದೇವಿಯಾದ
ಅರ್ತೆಮಿಯನ್ನೂ ಆಕಾಶದಿಂದ ಬಿದ್ದ ಮೂರ್ತಿಯನ್ನೂ ಎ
ಫೆಸ್ಯರ ಪಟ್ಟಣವು ಆರಾಧಿಸುವಂಥಾದ್ದಾಗಿದೆ ಎಂದು, ತಿಳಿಯದ
೩೬ ಮನುಷ್ಯನು ಯಾರು? ಇವುಗಳಿಗೆ ಎದುರು ಮಾತಾಡ ಕೂಡದೆ
ಇರುವದರಿಂದ, ನೀವು ಶಾಂತವಾಗಿದ್ದು, ಪದರಾಟವಾಗಿ ಏನಾದ
೩೭ ರೂ ನಡಿಸ ಬಾರದು. ದೇವಸ್ಥಾನದಲ್ಲಿ ಕಳ್ಳತನ ಮಾಡದೆ, ನಿ
ಮ್ಮ ದೇವಿಯನ್ನು ದೂಷಿಸದೆ ಇರುವ ಈ ಮನುಷ್ಯರನ್ನು
೩೮ ಎಳೆ ಕೊಂಡು ಬಂದಿರಲ್ಲ? ಆದದರಿಂದ ದೆಮೇತ್ರಿಯನಿಗೂ ಅವನ
ಕಡೆಯ ಪಂಚಾಳರಿಗೂ ಯಾವನ ಮೇಲಾದರೂ ಮಾತು ಇದ್ದ
ರೆ, ನ್ಯಾಯ ದಿನಗಳು ಉಂಟು; ಪ್ರತಿ ದೊರೆಗಳು ಇದ್ದಾರೆ;
೩೯ ಒಬ್ಬರ ಮೇಲೊಬ್ಬರು ವ್ಯವಹಾರ ಮಾಡಿ ಕೊಳ್ಳಲಿ. ಆದರೆ
ಬೇರೆ ವಿಷಯಗಳಲ್ಲಿ ನೀವು ವಿಚಾರಿಸಿದರೆ, ಅದು ನ್ಯಾಯವಾ



೪೦ ದ ಸಭೆಯಲ್ಲಿ ತೀರಿಸಲ್ಪಡುವದು. ಯಾಕಂದರೆ ಈ ಕೂಟ
ಕ್ಕೋಸ್ಕರ ನಾವು ಉತ್ತರ ಕೊಡುವದಕ್ಕೆ ಯಾವ ಕಾರಣವು
ಇಲ್ಲದ್ದರಿಂದ, ಈ ದಿವಸಕ್ಕೋಸ್ಕರ ನಾವು ಕಲಹದ ವಿಷಯ
೪೧ ವಿಚಾರಿಸಲ್ಪಡುವ ಗಂಡಾಂತರ ಉಂಟಾಯಿತು. ಇವುಗಳನ್ನು
ಹೇಳಿ, ಸಭೆಯನ್ನು ಕಳಿಹಿಸಿ ಬಿಟ್ಟನು.

## ೨೦. ಸಂಧಿ.

೧ ಗುಜಾರು ನಿಂತ ಮೇಲೆ, ಪೌಲನು ಶಿಷ್ಯರನ್ನು ಕರೆದು, ಅ
ಪ್ಪಿ ಕೊಂಡು, ಮಕೆದೋನ್ಯಕ್ಕೆ ಹೋಗುವದಕ್ಕೆ ಹೊರಟನು.
೨ ಆ ಪ್ರಾಂತ್ಯಗಳನ್ನು ಸಂಚರಿಸಿ, ಬಹು ವಾಕ್ಯಗಳಿಂದ ಅವರನ್ನು
3 ಎಚ್ಚರಿಸಿ, ಗ್ರೇಕ ದೇಶಕ್ಕೆ ಬಂದನು. ಅವನು ಅಲ್ಲಿ ಮೂರು ತಿಂ
ಗಳು ಕಳೆದು, ಸುರ್ಯಕ್ಕೆ ಹೋಗಲಿರುವಾಗ, ಯೆಹೂದ್ಯರು
ಅವನಿಗೋಸ್ಕರ ಹೊಂಚೆ ಕೊಂಡದರಿಂದ ಮಕೆದೋನ್ಯವನ್ನು
೪ ಹಾದು, ತಿರಿಗಿ ಬರುವದಕ್ಕೆ ಮನಸ್ಸಾಗಿದ್ದನು. ಮತ್ತು ಬೆರೋ
ಯದವನಾದ ಸೋಪತ್ರನೂ, ಥೆಸ್ಸಲೊನೀಕದವರಾದ ಅರಿಸ್ತಾ
ರ್ಕನೂ ಸೆಕುಂದನೂ, ದೆರ್ಬೆಯವನಾದ ಗಾಯನೂ, ತಿಮೊ
ಥೆಯನೂ, ಆಸ್ಯದವರಾದ ತುಕಿಕನೂ, ತ್ರೊಫಿಮನೂ, ಆಸ್ಯ
೫ ದ ಪರ್ಯಂತರ ಅವನ ಸಂಗಡ ಬಂದರು. ಇವರು ಮುಂಚೆ
ಹೋಗಿ, ತ್ರೋಯದಲ್ಲಿ ನಮಗೋಸ್ಕರ ಕಾದು ಕೊಂಡರು.
೬ ಮತ್ತು ನಾವು ಹುಳಿ ಇಲ್ಲದ ರೊಟ್ಟಿಗಳ ದಿನಗಳಾದ ಮೇಲೆ ಫಿಲಿ
ಪ್ಪಿಯಿಂದ ಹಡಗ ಮಾರ್ಗವಾಗಿ ಹೋಗಿ, ಐದು ದಿವಸಗಳಾದ
ಮೇಲೆ ಅವರ ಬಳಿಗೆ ತ್ರೋಯಕ್ಕೆ ಸೇರಿದೆವು. ಅಲ್ಲಿ ಏಳು ದಿವ
ಸ ವಾಸವಾಗಿದ್ದೆವು.
೭ ಮತ್ತು ವಾರದ ಮೊದಲನೇ ದಿವಸದಲ್ಲಿ ಶಿಷ್ಯರು ರೊಟ್ಟಿ
ಮುರಿಯುವದಕ್ಕೆ ಕೂಡಿ ಬಂದಾಗ, ಪೌಲನು ಮಾರಣೆ ದಿವಸ
ಹೊರಡ ಮನಸ್ಸಾಗಿದ್ದು, ಅವರಿಗೆ ಪ್ರಸಂಗ ಮಾಡಿ, ಮಧ್ಯ ರಾ
೮ ತ್ರಿಯ ಪರ್ಯಂತರ ವಾಕ್ಯವನ್ನು ವಿಸ್ತರಿಸುತ್ತಾ ಇದ್ದನು. ಮ
ತ್ತು ಅವರು ಕೂಡಿ ಕೊಂಡಿರುವ ಉಪ್ಪರಿಗೆಯಲ್ಲಿ ಬಹು ದೀಪಗ
೯ ಳಿದ್ದವು. ಆದರೆ ಯೂತುಕನೆಂಬ ಒಬ್ಬ ಯೌವನಸ್ಥನು ಕಿಟಿಕಿ
ಯಲ್ಲಿ ಕೂತು ಕೊಂಡು, ಗಾಢ ನಿದ್ದೆ ಹೋಗಿ, ಪೌಲನು ಬಹು
ಕಾಲ ಪ್ರಸಂಗ ಮಾಡುವಾಗ, ನಿದ್ರಾಭಾರದಿಂದ ಮೂರನೇ ಅಂತ
೧೦ ಸ್ತಿನಿಂದ ಕೆಳಗೆ ಬಿದ್ದು, ಸತ್ತವನಾಗಿ ಎತ್ತಲ್ಪಟ್ಟನು. ಆಗ ಪೌಲ
ನು ಇಳಿದು, ಅವನ ಮೇಲೆ ಬಿದ್ದು, ಅವನನ್ನು ಅಪ್ಪಿ ಕೊಂಡು,
ಕಳವಳ ಪಡ ಬೇಡಿರಿ; ಯಾಕಂದರೆ ಅವನ ಪ್ರಾಣವು ಅವನಲ್ಲಿ
೧೧ ಉಂಟು, ಅಂದನು. ಮತ್ತು ಅವನು ಏರಿ ಹೋಗಿ, ರೊಟ್ಟಿಯ
ನ್ನು ಮುರಿದು, ಊಟ ಮಾಡಿ, ಬೆಳಗಿನ ಪರ್ಯಂತರ ಬಹಳ
೧೨ ಮಾತಾಡಿ, ಹಾಗೆ ಹೊರಟು ಹೋದನು. ಆಗಲವರು ಜೀವಿತನಾ
ದ ಆ ಯೌವನಸ್ಥನನ್ನು ಕರ ಕೊಂಡು ಹೋಗಿ, ಅತ್ಯಧಿಕವಾದ
ಆದರಣೆ ಪಟ್ಟರು.
೧೩ ಮತ್ತು ನಾವು ಮೊದಲು ಹಡಗವನ್ನೇರಿ, ಆಸ್ಯಕ್ಕೆ ಹೋಗಿ,
ಅಲ್ಲಿ ಪೌಲನನ್ನು ಏರಿಸಿ ಕೊಳ್ಳ ಬೇಕೆಂದಿದ್ದೆವು. ಯಾಕಂದರೆ
ಅವನು ನಡೆದು ಬರ ಮನಸ್ಸು ಮಾಡಿ, ಹಾಗೆ ಅಪ್ಪಣೆ ಕೊಟ್ಟಿ
೧೪ ದ್ದನು. ಅವನು ಆಸ್ಯದಲ್ಲಿ ನಮ್ಮನ್ನು ಕಲಶ ಮೇಲೆ, ಅವನನ್ನು
೧೫ ಏರಿಸಿ ಕೊಂಡು, ಮಿತುಲೇನೆಗೆ ಬಂದೆವು. ಮಾರಣೆ ದಿವಸ ಅಲ್ಲಿಂ
ದ ಹೊರಟು, ಖೀಯಕ್ಕೆ ಎದುರಾಗಿ ಬಂದೆವು. ಆ ಮಾರಣೆ
೧೬ ದಿವಸ ಸಾಮಕ್ಕೆ ಸೇರಿ, ತ್ರೊಗುಲ್ಲಿಯದಲ್ಲಿ ಇದ್ದು, ಮಾರಣೆ
೧೭ ದಿವಸ ಮಿಲೇತಕ್ಕೆ ಬಂದೆವು. ಯಾಕಂದರೆ ಪೌಲನು, ಆಸ್ಯದ
ಲ್ಲಿ ಹೊತ್ತು ಕಳೆಯದ ಹಾಗೆ, ಎಫೆಸವನ್ನು ಬಿಟ್ಟು ಹೋಗ
ನಿರ್ಣಯಿಸಿದನು. ಯಾಕಂದರೆ, ತನಗೆ ಸಾಧ್ಯವಾದರೆ, ಪಂ
ಚಾಶತ್ತಿನ ದಿವಸಕ್ಕೆ ಯೆರೂಸಲೇಮಿನಲ್ಲಿ ಇರ ಬೇಕೆಂದು, ತ್ವ
ರೆ ಪಡುತ್ತಿದ್ದನು.
೧೭ ಮತ್ತು ಮಿಲೇತದಿಂದ ಎಫೆಸಕ್ಕೆ ಹೇಳಿ ಕಳುಹಿಸಿ, ಸಭೆಯ
೧೮ ಹಿರಿಯರನ್ನು ಕರಿಸಿದನು. ಇವರು ಅವನ ಬಳಿಗೆ ಬಂದಾಗ, ಅವ
೧೯ ರಿಗೆ ಹೇಳಿದ್ದೇನಂದರೆ, ನಾನು ಆಸ್ಯಕ್ಕೆ ಬಂದ ಮೊದಲನೇ ದಿವ
ಸದಿಂದ ಪೂರ್ಣ ಮನೋದೀನತ್ವದಿಂದಲೂ, ಬಹು ಕಣ್ಣೀರಿ
ನಿಂದಲೂ, ಯೆಹೂದ್ಯರು ಹೊಂಚೆ ನೋಡಿದ್ದರಿಂದ ನನಗೆ ಉಂ
೨೦ ಟಾದ ಕೋಧನೆಗಳಿಂದಲೂ, ಕರ್ತನಿಗೆ ಸೇವೆ ಮಾಡಿ, ಪ್ರಯೋ
ಜನವಾದವುಗಳಲ್ಲಿ ಯಾವದನ್ನಾದರೂ ನಿಮಗೆ ಮರೆ ಮಾಡದೆ,
ಬಹಿರಂಗವಾಗಿಯೂ ಮನೆ ಮನೆಯಲ್ಲಿಯೂ ನಿಮಗೆ ಬೋಧಿಸಿ,
೨೧ ಯೆಹೂದ್ಯರಿಗೂ ಗ್ರೇಕರಿಗೂ ದೇವರ ವಿಷಯವಾದ ಮಾನ
ಸಾಂತರವನ್ನೂ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿರುವ
ವಿಶ್ವಾಸವನ್ನೂ ಸಾಕ್ಷಿಯಾಗಿ ಹೇಳಿ, ಹ್ಯಾಗೆ ನಿಮ್ಮ ಸಂಗಡ
ಸರ್ವ ಕಾಲದಲ್ಲಿ ಇದ್ದೆನೆಂದು, ನೀವೇ ಬಲ್ಲಿರಿ.
೨೨ ಮತ್ತು ಈಗ, ಇಗೋ, ನಾನು ಆತ್ಮದಲ್ಲಿ ಬಂಧಿಸಲ್ಪಟ್ಟವ
೨೩ ನಾಗಿ, ಯೆರೂಸಲೇಮಿಗೆ ಹೋಗುತ್ತೇನೆ. ಬಂಧಗಳೂ ಉಪದ್ರ
ಗಳೂ ನನಗೆ ಕಾದಿರುತ್ತವೆ ಎಂದು, ಪರಿಶುದ್ಧಾತ್ಮವು ಪಟ್ಟಣ ಪಟ್ಟಣ
ದಲ್ಲಿ ಸಾಕ್ಷಿ ಕೊಡುವದೇ ಹೊರ್ತು, ಅಲ್ಲಿ ನನಗೆ ಸಂಭವಿಸುವ
೨೪ ವುಗಳನ್ನು ಅರಿಯೆನು. ಆದರೆ ನಾನು ಯಾವದನ್ನಾದರೂ ಚಿಂ
ತಿಸುವದಿಲ್ಲ. ನನ್ನ ಓಟವನ್ನೂ, ದೇವರ ಕೃಪೆಯ ಸುವಾರ್ತೆಗೆ
ಸಾಕ್ಷಿ ಕೊಡುವದಕ್ಕೆ ಕರ್ತನಾದ ಯೇಸುವಿನಿಂದ ನಾನು ಹೊಂ
ದಿದ ಸೇವೆಯನ್ನೂ, ಸಂತೋಷದಿಂದ ಪೂರ್ತಿಸುವ ಹಾಗೆ, ನನ್ನ
ಪ್ರಾಣವು ನನಗೆ ಪ್ರಿಯವೆಂದೇಣಿಸುವದಿಲ್ಲ.
೨೫ ಮತ್ತು ಈಗ, ಇಗೋ, ನಿಮ್ಮೊಳಗೆ ಸಂಚರಿಸಿ ದೇವರ ರಾಜ್ಯ
ವನ್ನು ಸಾರಿದವನಾದ ನನ್ನ ಮುಖವನ್ನು ನೀವೆಲ್ಲರು ಇನ್ನೂ
೨೬ ನೋಡುವದಿಲ್ಲವೆಂದು ಬಲ್ಲೆನು. ಆದದರಿಂದ ನಾನು ಎಲ್ಲರ ರಕ್ತ
ದ ವಿಷಯದಲ್ಲಿ ಶುದ್ಧನಾಗಿದ್ದೇನೆಂದು, ಇಂದಿನ ದಿವಸದಲ್ಲಿ ನಿ
೨೭ ಮಗೆ ಸಾಕ್ಷಿ ಕೊಡುತ್ತೇನೆ. ಹ್ಯಾಗಂದರೆ ದೇವರ ಚಿತ್ತವನ್ನೆಲ್ಲಾ
ನಾನು ನಿಮಗೆ ತಿಳಿಸದ ಹಾಗೆ, ಹಿಂದೆಗೆಯಲಿಲ್ಲ.
೨೮ ಹೀಗಿರುವದರಿಂದ ದೇವರು ಸ್ವಂತ ರಕ್ತದಿಂದ ಕೊಂಡು
ಕೊಂಡ ಸಭೆಯನ್ನು ಮೇಯಿಸುವದಕ್ಕೆ ಪರಿಶುದ್ಧಾತ್ಮವು ನಿ
ಮ್ಮನ್ನು ಯಾವದರ ಮೇಲೆ ಅಧ್ಯಕ್ಷರಾಗಿ ಇಟ್ಟಿದೆಯೋ, ಆ
೨೯ ಸಮಸ್ತ ಮಂದೆಗೂ ನಿಮಗೂ ಜಾಗ್ರತೆಯಾಗಿರಿ. ಯಾಕಂದರೆ
ನಾನು ಹೋದ ಮೇಲೆ, ಮಂದೆಯನ್ನು ಕನಿಕರಿಸದ ಕಠಿಣವಾದ
೩೦ ತೋಳಗಳು ನಿಮ್ಮೊಳಗೆ ಬರುವವೆಂದೂ, ಶಿಷ್ಯರನ್ನು ತಮ್ಮು
ಹಿಂದೆ ಎಳೆಯುವದಕ್ಕೋಸ್ಕರ ಡೊಂಕು ಮಾತುಗಳನ್ನು ಮಾ
ತಾಡುವ ಜನರು ನಿಮ್ಮೊಳಗಿಂದಲೇ ಎಳ್ಳುವರೆಂದೂ, ಬಲ್ಲೆನು.
೩೧ ಆದಕಾರಣ ಎಚ್ಚರವಾಗಿರಿ. ನಾನು ಮೂರು ವರುಷ, ರಾತ್ರಿ
ಹಗಲು ಕಣ್ಣೀರು ಹಾಕುತ್ತಾ, ಒಬ್ಬೊಬ್ಬನನ್ನು ಎಚ್ಚರಿಬಿಡದೆ ಎ
ಚ್ಚರಿಸಿದೆನೆಂದು, ಜ್ಞಾಪಕ ಮಾಡಿ ಕೊಳ್ಳಿರಿ.
೩೨ ಮತ್ತು, ಸಹೋದರರೇ, ಈಗ ನಿಮ್ಮನ್ನು ಕಟ್ಟಿಲೂ, ಸಮಸ್ತ

ಪರಿಶುದ್ಧಕೊಳ್ಳಗೆ ನಿಮಗೆ ಬಾಧ್ಯತೆಯನ್ನು ಕೊಡಲೂ, ಶಕ್ತನಾ
ದ ದೇವರಿಗೂ, ಅವನ ಕೃಪೆಯ ವಾಕ್ಯಕ್ಕೂ, ನಿಮ್ಮನ್ನು ಒ
33 ಪ್ಪಿಸುತ್ತೇನೆ. ಯಾವನ ಬೆಳ್ಳಿ ಯನ್ನಾಗದರೂ, ಭಂಗಾರವನ್ನಾ
34 ದರೂ, ವಸ್ತ್ರವನ್ನಾದರೂ ನಾನು ಆಶಿಸಲಿಲ್ಲ; ಆದರೆ ನನ್ನ ಅ
ವಶ್ಯಗಳಿಗೂ, ನನ್ನ ಸಂಗಡ ಇದ್ದವರಿಗೂ, ಈ ಕೈಗಳು ಸೇವಿ
35 ಸಿದವೆಂದು, ನೀವೇ ಬಲ್ಲಿರಿ. ಈ ಪ್ರಕಾರ ಕಷ್ಟ ಮಾಡಿ, ಬಲಹೀನರ
ನ್ನು ಸಂರಕ್ಷಿಸಲೂ, ತೆಗೆದು ಕೊಳ್ಳುವದಕ್ಕಿಂತ ಕೊಡುವದು ಹೆ
ಚ್ಚು ಭಾಗ್ಯವೆಂದು, ಕರ್ತನಾದ ಯೇಸು ತಾನು ಹೇಳಿದ ಮಾ
ತುಗಳನ್ನು ಜ್ಞಾಪಕ ಮಾಡಿ ಕೊಳ್ಳಲೂ, ಬೇಕೆಂದು, ನಿಮಗೆ ಎ
ಲ್ಲಾ ತೋರಿಸಿದ್ದೇನೆ.

36 ಇವುಗಳನ್ನು ಹೇಳಿ, ಮೊಣಕಾಲೂರಿ ಕೊಂಡು, ಅವರೆಲ್ಲರ
37 ಸಂಗಡ ಪ್ರಾರ್ಥನೆ ಮಾಡಿದನು. ಆಗ ಎಲ್ಲರು ಬಹಳವಾಗಿ
ಅತ್ತು, ಪೌಲನ ಕೊರಳಿನ ಮೇಲೆ ಬಿದ್ದು, ಅವನನ್ನು ಮುದ್ದಿ
38 ಟ್ಟು, ನನ್ನ ಮುಖವನ್ನು ಇನ್ನೂ ನೋಡುವದಿಲ್ಲವೆಂದು, ಅವನು
ಹೇಳಿದ ಮಾತಿಗೆ ಮುಖ್ಯವಾಗಿ ವ್ಯಥೆ ಪಟ್ಟು, ಅವನನ್ನು ಹಡಗ
ಕ್ಕೆ ಸಾಗ ಕಳುಹಿಸಿದರು.

## ೨೧. ಸಂಧಿ.

1 ನಾವು ಅವರನ್ನು ಬಿಟ್ಟು ಮೇಲೆ, ಹಡಗವನ್ನು ಏರಿ ಹೋದಾಗ, ಸ
ರಿಯಾಗಿ ಹೋಗಿ, ಕೋಯಿನ ಎದುರಿಗೂ, ಮಾರಣೆ ದಿವಸಕೋ
2 ದಕ್ಕೂ, ಅಲ್ಲಿಂದ ಪತರಕ್ಕೂ, ಬಂದೆವು. ಮತ್ತು ಫೊಯಿನೀಕೆ
ಗೆಹೋಗುವ ಹಡಗವನ್ನು ಕಂಡು ಕೊಂಡು, ಏರಿ, ಹೊರಟೆವು.

3 ಆಗ ಕುಪ್ರವನ್ನು ಕಂಡು, ಅದನ್ನು ಎಡಗಡೆಗೆ ಬಿಟ್ಟು, ಸು
ರ್ಯಕ್ಕೆ ಹೋಗಿ, ತೂರಿನಲ್ಲಿ ಇಳಿದೆವು; ಯಾಕಂದರೆ ಅಲ್ಲಿ
4 ಹಡಗವು ಹೊರೆ ಇಳಿಸುವದಕ್ಕೆ ಇತ್ತು. ಮತ್ತು ಶಿಷ್ಯರನ್ನು
ಕಂಡು ಕೊಂಡು, ಅಲ್ಲಿ ಏಳು ದಿವಸ ಇದ್ದೆವು. ಯೆರೂಸಲೇಮಿಗೆ
ಏರಿ ಹೋಗ ಬಾರದೆಂದು, ಅವರು ಪೌಲನಿಗೆ ಆತ್ಮದಿಂದ ಹೇಳಿ
5 ದರು. ಆ ದಿವಸಗಳನ್ನು ಪೂರೈಸಿದ ಮೇಲೆ, ಪ್ರಯಾಣಕ್ಕೆ
ಹೊರಟು ಹೋಗುವಾಗ, ಹೆಂಗಸರೂ ಮಕ್ಕಳೂ ಸಹಿತವಾಗಿ,
ಅವರೆಲ್ಲರು ನಮ್ಮನ್ನು ಪಟ್ಟಣದ ಹೊರಗೆ ಸಾಗ ಕಳುಹಿಸಿದರು.
ಮತ್ತು ಸಮುದ್ರದ ಥಡದಲ್ಲಿ ಮೊಣಕಾಲೂರಿ ಕೊಂಡು, ಪ್ರಾ
6 ರ್ಥನೆ ಮಾಡಿದೆವು. ತರುವಾಯ ಒಬ್ಬರನ್ನೊಬ್ಬರು ವಂದಿಸಿ,
ಹಡಗವನ್ನೇರಿದೆವು. ಅವರು ತಿರಿಗಿ ಸ್ವಸ್ಥಳಗಳಿಗೆ ಹೋದರು.

7 ಆದರೆ ನಾವು ಹಡಗದ ಪ್ರಯಾಣವನ್ನು ಮುಗಿಸಿ, ತೂರಿ
ನಿಂದ ಪ್ತೊಲೆಮಾಯಕ್ಕೆ ಸೇರಿದೆವು. ಅಲ್ಲಿ ಸಹೋದರರನ್ನು
8 ವಂದಿಸಿ, ಒಂದು ದಿವಸ ಅವರ ಬಳ್ಳಿಯಲ್ಲಿ ಇದ್ದೆವು. ಮಾರಣೆ
ದಿವಸ ಪೌಲನ ಬಳ್ಳಿಯವರು ಹೊರಟು, ಕೈಸರ್ಕೈಯಕ್ಕೆ ಬಂ
ದು, ಆ ಪಿಳ್ಳರಲ್ಲಿ ಒಬ್ಬನಾದ ಸುವಾರ್ತಿಕನಾಗಿರುವ ಫಿಲಿಪ್ಪ
9 ನ ಮನೆಯಲ್ಲಿ ಪ್ರವೇಶಿಸಿ, ಅವನ ಬಳ್ಳಿಯಲ್ಲಿ ಇದ್ದೆವು. ಇವನಿಗೆ
ಪ್ರವಾದಿಗಳ್ಳಾದ ಕನ್ಯಾಸ್ತ್ರೀಯರಾಗಿರುವ ನಾಲ್ಕು ಮಂದಿ ಕು
ಮಾರ್ತೆಗಳು ಇದ್ದರು.

10 ಅಲ್ಲಿ ನಾವು ಅನೇಕ ದಿವಸ ಇರುವಾಗ, ಯೆಹೂದದಿಂದ ಅ
11 ಗಬನೆಂಬ ಒಬ್ಬ ಪ್ರವಾದಿಯು ಇಳಿದು ಬಂದನು. ನಮ್ಮ ಬಳ್ಳಿಗೆ
ಬಂದು, ಪೌಲನ ನಡುಕಟ್ಟನ್ನು ತೆಗೆದು, ತನ್ನ ಕೈಕಾಲುಗಳನ್ನು
ಕಟ್ಟಿ ಕೊಂಡು, ಈ ನಡುಕಟ್ಟು ಉಂಟಾದ ಮನುಷ್ಯನನ್ನು ಯೆ
ಹೂದ್ಯರು ಯೆರೂಸಲೇಮಿನಲ್ಲಿ ಹೀಗೆಯೇ ಕಟ್ಟಿ, ಜನಾಂಗಗ
ಳ ಕೈಗೆ ಒಪ್ಪಿಸುವರೆಂದು, ಪರಿಶುದ್ಧಾತ್ಮವು ಹೇಳುತ್ತದೆ, ಅಂದ
12 ನು. ಇವುಗಳನ್ನು ನಾವು ಕೇಳಿದ ಮೇಲೆ, ಅವನು ಯೆರೂಸಲೇ
ಮಿಗೆ ಏರಿ ಹೋಗ ಬಾರದೆಂದು, ನಾವೂ ಆ ಸ್ಥಳದವರೂ ಬೇಡಿ
13 ಕೊಂಡೆವು. ಆಗ ಪೌಲನು ಪ್ರತ್ಯುತ್ತರವಾಗಿ, ನೀವು ಅತ್ತು, ನ
ನ್ನ ಹೃದಯವನ್ನು ಒಡೆಯುವದೇನು? ನಾನು ಯೆರೂಸಲೇ
ಮಿನಲ್ಲಿ ಕರ್ತನಾದ ಯೇಸುವಿನ ಹೆಸರಿನ ನಿಮಿತ್ತ ಬಂಧಿಸಲ್ಪ
ಡುವದಕ್ಕೆ ಮಾತ್ರವಲ್ಲ, ಸಾಯುವದಕ್ಕೂ ಸಿದ್ಧವಾಗಿದ್ದೇನೆ,
14 ಅಂದನು. ಅವನು ಸಮ್ಮತಿ ಪಡದೆ ಇರುವದರಿಂದ, ಕರ್ತನ ಚಿ
ತ್ತವೇ ಆಗಲಿ ಎಂದು ಹೇಳಿ, ನಾವು ಸುಮ್ಮನಿದ್ದೆವು.

15 ಆ ದಿವಸಗಳು ಕಳೆದ ಮೇಲೆ, ಸಾಮಾನು ಕಟ್ಟಿ ಕೊಂ
16 ಡು, ಯೆರೂಸಲೇಮಿಗೆ ಏರಿ ಹೋದೆವು. ಮತ್ತು ಕೈಸರ್ಕೈಯ
ದವರಾದ ಶಿಷ್ಯರಲ್ಲಿ ಕೆಲವರು ಸಹ ನಮಗೆ ಆತಿಥ್ಯ ಮಾಡುವ
ದಕ್ಕಿರುವ ಹಳೆ ಶಿಷ್ಯನಾದ ಕುಪ್ರದವನಾಗಿರುವ ಮ್ನಾಸೋನ
ನನ್ನು ಕರಕೊಂಡು, ನಮ್ಮ ಸಂಗಡ ಹೊರಟಿರು.

17 ನಾವು ಯೆರೂಸಲೇಮಿಗೆ ಸೇರಿದಾಗ, ಸಹೋದರರು ಸಂ
18 ತೋಷವಾಗಿ ನಮ್ಮನ್ನು ಅಂಗೀಕರಿಸಿದರು. ಮಾರಣೆ ದಿವಸ
19 ಪೌಲನು ನಮ್ಮ ಸಂಗಡ ಯಾಕೋಬನ ಬಳ್ಳಿಗೆ ಬಂದನು. ಹಿರಿ
ಯರೆಲ್ಲರೂ ಕೂಡಿ ಬಂದರು. ಅವನು ಅವರನ್ನು ವಂದಿಸಿ, ತನ್ನ
ಸೇವೆಯ ಮೂಲವಾಗಿ ದೇವರು ಜನಾಂಗಗಳಲ್ಲಿ ಮಾಡಿದವುಗಳ
ನ್ನು ಒಂದೊಂದಾಗಿ ವಿವರಿಸಿದನು.

20 ಅವರು ಕೇಳಿ, ಕರ್ತನನ್ನು ಮಹಿಮೆ ಪಡಿಸಿ, ಅವನಿಗೆ ಹೇ
ಳಿದ್ದೇನಂದರೆ, ಸಹೋದರನೇ, ವಿಶ್ವಾಸಿಸಿದ ಯೆಹೂದ್ಯರು
ಎಷ್ಟು ಸಾವಿರಗಳಾಗಿದ್ದಾರೆಂದು, ನೋಡುತ್ತಿ. ಅವರೆಲ್ಲರು ನ್ಯಾ
21 ಯಪ್ರಮಾಣಕ್ಕೋಸ್ಕರ ಆಸಕ್ತಿ ಪಡುವವರಾಗಿದ್ದಾರೆ. ನೀನು
ಜನಾಂಗಗಳೊಳಗಿರುವ ಸಕಲ ಯೆಹೂದ್ಯರಿಗೆ, ತಮ್ಮ ಮಕ್ಕ
ಳಿಗೆ ಪರಿಛೇದನೆ ಮಾಡಿಸಲೂ, ಸಂಪ್ರದಾಯಗಳಲ್ಲಿ ನಡೆಯಲೂ,
ಬಾರದೆಂದು ಹೇಳಿ, ಮೋಶೆಯನ್ನು ಬಿಟ್ಟು ಹೋಗುವದಕ್ಕೆ
ಬೋಧಿಸುತ್ತೀ ಎಂದು, ನಿನ್ನನ್ನು ಕುರಿತು ಸುದ್ದಿ ಕೇಳಿದ್ದಾರೆ.
22 ಹೀಗಾದರೆ ಏನು? ಸಮೂಹವು ಅವಶ್ಯ ಕೂಡಿ ಬರುವದು;
23 ಯಾಕಂದರೆ, ನೀನು ಬಂದಿದ್ದೀ ಎಂದು, ಕೇಳುವರು. ಆದಕಾರ
ಣ ನಾವು ನಿನಗೆ ಹೇಳುವದನ್ನು ಮಾಡು; ತಮ್ಮ ಮೇಲೆ ಹರಿಕೆ
24 ಇಟ್ಟು ಕೊಂಡ ನಾಲ್ಕು ಮಂದಿ ನಮ್ಮಲ್ಲಿದ್ದಾರೆ; ಇವರನ್ನು ಕರ
ಕೊಂಡು, ಅವರ ಸಂಗಡ ನಿನ್ನನ್ನೂ ಶುಚಿ ಮಾಡಿ ಕೊಂಡು,
ಅವರು ತಲೆ ಬೋಳಿಸಿ ಕೊಳ್ಳುವ ಹಾಗೆ ಅವರಿಗೋಸ್ಕರ ಸೆಚ್ಚ
ಮಾಡು. ಆಗ ನಿನ್ನ ವಿಷಯವಾಗಿ ಕೇಳಿದವುಗಳಲ್ಲಿ ಏನೂ ಇ
ಲ್ಲವೆಂದೂ, ನೀನು ನ್ಯಾಯಪ್ರಮಾಣವನ್ನು ಕೈಕೊಳ್ಳುವವನಾ
25 ಗಿ ನಡೆಯುತ್ತೀ ಎಂದೂ, ಎಲ್ಲರು ತಿಳಿಕೊಳ್ಳುವರು. ಆದರೆ
ವಿಶ್ವಾಸಿಸಿದ ಜನಾಂಗಗಳ ವಿಷಯವಾಗಿ, ಅವರು ವಿಗ್ರಹ ಬಲಿ
ಯನ್ನೂ ರಕ್ತವನ್ನೂ, ಕೊರಳು ಹಿಸಕಲ್ಪಟ್ಟದ್ದನ್ನೂ, ಜಾರ
ತ್ವವನ್ನೂ ಬಿಟ್ಟಿರುವದೇ ಹೊರ್ತು, ಅಂಥಾದ್ದೇನಾದರೂ ಕೈ
ಕೊಳ್ಳುವದು ಬೇಡವೆಂದು ತೀರ್ಪು ಮಾಡಿ ಬರೆದೆವು.

26 ಆಗ ಪೌಲನು ಆ ಜನರನ್ನು ಕರಕೊಂಡು, ಮಾರಣೆ ದಿವಸ
ಅವರ ಸಂಗಡ ಶುಚಿ ಮಾಡಿ ಕೊಂಡು, ಅವರಲ್ಲಿ ಒಬ್ಬೊಬ್ಬನಿ
ಗೋಸ್ಕರ ಬಲಿ ಅರ್ಪಿಸಲ್ಪಡುವ ಪರ್ಯಂತರ ಶುಚಿ ಮಾಡುವ



ದಿವಸಗಳ ಪೂರ್ಣತೆಯನ್ನು ತಿಳಿಸುವದಕ್ಕೆ ದೇವಾಲಯದೊ
ಳಗೆ ಪ್ರವೇಶಿಸಿದನು.

27 ಆದರೆ ಆ ಏಳು ದಿವಸಗಳು ಮುಗಿಯುವದಕ್ಕಿರುವಾಗ,
ಆಸ್ಯದವರಾದ ಯೆಹೂದ್ಯರು ಅವನನ್ನು ದೇವಾಲಯದಲ್ಲಿ
28 ಕಂಡು, ಸಮೂಹವನ್ನೆಲ್ಲಾ ಕೂಡಿಸಿ, ಅವನ ಮೇಲೆ ಕೈಗಳನ್ನು
ಹಾಕಿ, ಇಸ್ರಯೇಲ್ಯರಾದ ಜನರೇ, ಸಹಾಯ ಮಾಡಿರಿ! ಜನರಿಗೂ
ನ್ಯಾಯಪ್ರಮಾಣಕ್ಕೂ, ಈ ಸ್ಥಳಕ್ಕೂ ವಿರೋಧವಾಗಿ ಸರ್ವರಿ
ಗೆ ಎಲ್ಲೆಲ್ಲಿಯೂ ಬೋಧಿಸುವ ಮನುಷ್ಯನು ಇವನೇ; ಮತ್ತು
ಇವನು ಗ್ರೇಕರನ್ನು ಸಹ ದೇವಾಲಯದೊಳಗೆ ತಂದು, ಈ ಪರಿ
29 ಶುದ್ಧ ಸ್ಥಳವನ್ನು ಹೊಲೆ ಮಾಡಿದ್ದಾನೆಂದು ಕೂಗಿದರು. ಯಾ
ಕಂದರೆ ಅವರು ಮುಂಚೆ ಎಫೆಸದವನಾದ ತ್ರೊಫಿಮನನ್ನು ಅವನ
ಸಂಗಡ ಪಟ್ಟಣದಲ್ಲಿ ಕಂಡಿದ್ದರು. ಅವನನ್ನು ಪೌಲನು ದೇವಾಲಯ
30 ಕ್ಕೆ ಕರಕೊಂಡು ಬಂದನೆಂದು ನೆನಸಿದರು. ಆಗ ಪಟ್ಟಣವೆಲ್ಲಾ ಗಲಿ
ಬಿಲಿಯಾಗಿ, ಜನರು ಓಡಿ ಬಂದು, ಪೌಲನನ್ನು ಹಿಡಿದು, ದೇವಾಲ
ಯದ ಹೊರಗೆ ಎಳೆದರು. ಸಂಗಡಲೇ ಬಾಗಲುಗಳು ಮುಚ್ಚಲ್ಪ
ಟ್ಟವು.

31 ಅವರು ಅವನನ್ನು ಕೊಂದು ಹಾಕುವದಕ್ಕೆ ಹುರುಕುತ್ತಿರು
ವಾಗ, ಯೆರೂಸಲೇಮೆಲ್ಲಾ ಗಲಿಬಿಲಿಯಾಯಿತೆಂದು ಕಾವಲಿಯ
ಸಹಸ್ರಾಧಿಪತಿಗೆ ವರ್ತಮಾನ ಬಂತು. ಇವನು ಸಂಗಡಲೇ ರಾಣು
ವೆಯವರನ್ನು ಶತಾಧಿಪತಿಗಳನ್ನು ಕರಕೊಂಡು, ಅವರ ಬಳ್ಳಿಗೆ ಓ
32 ಡಿ ಬಂದನು. ಅವರು ಸಹಸ್ರಾಧಿಪತಿಯನ್ನು ರಾಣುವೆಯವರನ್ನು
ನೋಡಿ, ಪೌಲನನ್ನು ಹೊಡೆಯುವದನ್ನು ಬಿಟ್ಟರು. ಆಗ ಸಹ
ಸ್ರಾಧಿಪತಿಯು ಸಮೀಪಕ್ಕೆ ಬಂದು, ಅವನನ್ನು ಹಿಡಿದು, ಎರಡು
ಸಂಕೋಲೆಗಳಿಂದ ಕಟ್ಟ ಬೇಕೆಂದು ಅಪ್ಪಣೆ ಕೊಟ್ಟು, ಅವನ್ಯಾ
33 ರು? ಅವನು ಮಾಡಿದ್ದು ಏನು? ಎಂದು ಕೇಳಿದನು. ಸಮೂಹದ
ಲ್ಲಿ ಒಬ್ಬರು ಹೀಗೆ, ಒಬ್ಬರು ಹಾಗೆ ಕೂಗುವಾಗ, ಅವನು ಗುಬಾರಿ
ನ ನಿಮಿತ್ತ ನಿಶ್ಚಯವನ್ನು ತಿಳಿಯಲಾರದೆ, ಅವನನ್ನು ಕೋಟೆಗೆ
34 ತಕ್ಕೊಂಡು ಹೋಗ ಬೇಕೆಂದು ಅಪ್ಪಣೆ ಕೊಟ್ಟನು. ಅವನು
ಮೆಟ್ಟಲುಗಳ ಪರ್ಯಂತರ ಬಂದಾಗ, ಸಮೂಹದ ಬಲಾತ್ಕಾರದ
35 ನಿಮಿತ್ತ ರಾಣುವೆಯವರು ಅವನನ್ನು ಹೊತ್ತು ಕೊಂಡು ಹೋಗ
ಬೇಕಾಯಿತು? ಯಾಕಂದರೆ ಜನರ ಸಮೂಹವು, ಅವನನ್ನು ತೆ
ಗೆದು ಹಾಕು! ಎಂದು ಕೂಗುತ್ತಾ ಹಿಂಬಾಲಿಸಿತು.

36 ಆದರೆ ಪೌಲನು ಕೋಟೆಯೊಳಗೆ ಸೇರುವದಕ್ಕಿರುವಾಗ, ಸ
ಹಸ್ರಾಧಿಪತಿಗೆ, ನಿನಗೆ ಒಂದು ಮಾತು ಹೇಳುವದಕ್ಕೆ ಅಪ್ಪಣೆ
37 ಯೋ? ಅಂದನು. ಅವನು ನಿನಗೆ ಗ್ರೇಕ್ ಮಾತು ಬರುತ್ತದೋ?
ಸ್ವಲ್ಪ ದಿವಸಗಳಿಗೆ ಮುಂಚೆ ಕಲಹ ಎಬ್ಬಿಸಿ, ನಾಲ್ಕು ಸಾವಿರ ಜನ
38 ಕೊಲೆ ಪಾತಕರನ್ನು ಅರಣ್ಯಕ್ಕೆ ಕರ ಕೊಂಡು ಹೋದ ಐಗು
ಪ್ತನು ನೀನಲ್ಲವೋ? ಅಂದನು. ಆಗ ಪೌಲನು ನಾನು ತಾರ್ಸ
ದವನಾದ ಯೆಹೂದ್ಯನೂ, ಕಿಲಿಕ್ಯದ ಅಲ್ಪವಲ್ಲದ ಪಟ್ಟಣದ
ಗೃಹಸ್ತನೂ, ಆಗಿದ್ದೇನೆ? ಜನರ ಸಂಗಡ ಮಾತಾಡುವದಕ್ಕೆ ನ
ನಗೆ ಅಪ್ಪಣೆ ಆಗ ಬೇಕೆಂದು, ನಿನ್ನನ್ನು ಬೇಡಿಕೊಳ್ಳುತ್ತೇನೆ,
39 ಅಂದನು. ಅವನು ಅಪ್ಪಣೆ ಕೊಡಲು, ಪೌಲನು ಮೆಟ್ಟಲುಗಳ ಮೇ
ಲೆ ನಿಂತು ಕೊಂಡು, ಕೈಯಿಂದ ಜನರಿಗೆ ಸಾಜ್ಞೆ ಮಾಡಿದನು. ಬ
ಹು ಮೌನವಾದ ಮೇಲೆ, ಇಬ್ರೀಯ ಭಾಷೆಯಲ್ಲಿ ಮಾತಾಡಿ,
ಹೇಳಿದ್ದೇನಂದರೆ,

## ೨೨. ಸಂಧಿ.

1 ಸಹೋದರರೂ ತಂದೆಗಳೂ ಆದ ಜನರೇ, ಈಗ ನಾನು ನಿಮ
2 ಗೆ ಮಾಡುವ ಪ್ರತಿವಾದವನ್ನು ಕೇಳಿರಿ! ಅವನು ಇಬ್ರೀಯ ಮಾತಿ
ನಲ್ಲಿ ತಮಗೆ ಪ್ರಸಂಗ ಮಾಡುವದನ್ನು ಕೇಳಿ, ಅವರು ಅತಿ ಮೌನ
3 ವಾದರು. ತರುವಾಯ ಅವನು ಹೇಳಿದ್ದೇನಂದರೆ, ನಾನು ಯೆಹೂ
ದ್ಯ ಮನುಷ್ಯನಾಗಿ, ಕಿಲಿಕ್ಯದ ತಾರ್ಸದಲ್ಲಿ ಹುಟ್ಟಿ, ಈ ಪಟ್ಟಣದ
ಲ್ಲಿ ಗಮಾಲಿಯೇಲನ ಪಾದಗಳ ಬಳ್ಳಿಯ ಸಾಕಲ್ಪಟ್ಟು, ಪಿತೃಗಳ
ನ್ಯಾಯಪ್ರಮಾಣದ ನಿಮ್ಮೆಯಲ್ಲಿ ಉಪದೇಶಿಸಲ್ಪಟ್ಟು, ನೀವೆಲ್ಲ
ರೂ ಈ ಹೊತ್ತು ಇರುವ ಪ್ರಕಾರ ದೇವರಿಗೋಸ್ಕರ ಆಸಕ್ತಿ ಪ
4 ಡುವವನಾಗಿದ್ದು, ಗಂಡಸರನ್ನೂ ಹೆಂಗಸರನ್ನೂ ಕಟ್ಟಿ ಹಾಕಿ,
ಕೆರೆಮನೆಗಳಲ್ಲಿ ಒಪ್ಪಿಸಿ, ಈ ಮಾರ್ಗವನ್ನು ಮರಣದ ವರಿಗೂ
5 ಹಿಂಸಿಸಿದೆನು. ಈ ಮೇರೆಗೆ ಪ್ರಧಾನ ಯಾಜಕರೂ, ಸಮಸ್ತ ಹಿರಿ
ಯ ಸಭೆಯೂ ನನಗೆ ಸಾಕ್ಷಿ ಕೊಡುವರು. ಅವರಿಂದ ನಾನು,
ಅಲ್ಲಿಯೂ ಇರುವವರನ್ನು ಕಟ್ಟಿಸಿ, ಶಿಕ್ಷಿಸುವದಕ್ಕೆ ಯೆರೂಸ
ಲೇಮಿಗೆ ತರ ಬೇಕೆಂದು, ಸಹೋದರರಿಗೆ ಬರೆದ ಕಾಗದಗಳನ್ನು
ಹೊಂದಿ, ದಮಸ್ಕಕ್ಕೆ ಹೊರಟು ಹೋದೆನು.

6 ಆದರೆ ನಾನು ಪ್ರಯಾಣವಾಗಿ, ಹೆಚ್ಚು ಕಡಿಮೆ ಮಧ್ಯಾಹ್ನ
ಸಮಯದಲ್ಲಿ ದಮಸ್ಕಕ್ಕೆ ಸಮೀಪಿಸುತ್ತಿರಲಾಗಿ, ಫಕ್ಕನೆ ಆಕಾ
7 ಶದಿಂದ ದೊಡ್ಡ ಬೆಳಕು ನನ್ನ ಸುತ್ತಲು ಮಿಂಚಿತು. ನೆಲಕ್ಕೆ ಬಿ
ದ್ದು, ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸಿಸುತ್ತೀ? ಎಂ
8 ದು ನನಗೆ ಹೇಳುವ ಶಬ್ದವನ್ನು ಕೇಳಿದೆನು. ಆಗ ನಾನು, ಕರ್ತ
ನೇ, ನೀನು ಯಾರು? ಎಂದು ಉತ್ತರ ಕೊಡಲಾಗಿ, ಅವನು ನನ
ಗೆ, ನಾನು, ನೀನು ಹಿಂಸಿಸುವ ನಜರೇತಿನವನಾದ ಯೇಸುವೇ,
9 ಅಂದನು. ನನ್ನ ಸಂಗಡ ಇದ್ದವರು ಬೆಳಕನ್ನು ನೋಡಿ, ಭಯ
ಸ್ಥರಾದರು; ಆದರೆ ನನ್ನ ಸಂಗಡ ಮಾತಾಡುವವನ ಶಬ್ದವನ್ನು
10 ಕೇಳಲಿಲ್ಲ. ಆಗ ನಾನು, ಕರ್ತನೇ, ಏನು ಮಾಡ ಬೇಕು! ಅನ್ನ
ಲಾಗಿ; ಕರ್ತನು ನನಗೆ, ನೀನು ಎದ್ದು, ದಮಸ್ಕಕ್ಕೆ ಹೋಗು;
ಅಲ್ಲಿ ನೀನು ಮಾಡುವದಕ್ಕೆ ನೇಮಿಸಲ್ಪಟ್ಟ ಎಲ್ಲವುಗಳ ವಿಷ
ಯವಾಗಿ ನಿನಗೆ ಹೇಳಲ್ಪಡುವದು, ಅಂದನು.

11 ಆಗ ಆ ಬೆಳಕಿನ ಮಹಿಮೆಯಿಂದ ಕಣ್ಣು ಕಾಣದೆ ಇದ್ದ ಕಾರ
ಣ, ನನ್ನ ಸಂಗಡ ಇದ್ದವರ ಕೈಯಿಂದ ನಡಿಸಲ್ಪಟ್ಟು, ದಮ
12 ಸ್ಕಕ್ಕೆ ಬಂದೆನು. ಅಲ್ಲಿ ವಾಸವಾಗಿರುವ ಯೆಹೂದ್ಯರಲ್ಲಿರಿಂದ
ಸಾಕ್ಷಿ ಗೊಂಡ, ನ್ಯಾಯಪ್ರಮಾಣದ ಪ್ರಕಾರ ಭಕ್ತಿಯುಳ್ಳವನಾ
13 ದ, ಅನನೀಯನೆಂಬವನು ನನ್ನ ಬಳ್ಳಿಗೆ ಬಂದು, ನಿಂತು ಕೊಂಡು,
ನನಗೆ, ಸಹೋದರನಾದ ಸೌಲನೇ, ಮೇಲೆ ನೋಡು, ಅಂದನು.
14 ಅದೇ ತಾಸಿನಲ್ಲಿ ಅವನ ಮೇಲೆ ದೃಷ್ಟಿ ಇಟ್ಟೆನು. ಮತ್ತು ಅವನು
ಹೇಳಿದ್ದು, ನಮ್ಮ ಪಿತೃಗಳ ದೇವರು ತನ್ನ ಚಿತ್ತವನ್ನು ತಿಳಿ
ಯುವದಕ್ಕೂ, ಆ ನೀತಿವಂತನನ್ನು ನೋಡುವದಕ್ಕೂ, ಅವನ
ಬಾಯಿಯೊಳಗಿಂದ ಶಬ್ದವನ್ನು ಕೇಳುವದಕ್ಕೂ, ನಿನ್ನನ್ನು
15 ಮುಂನೇಮಿಸಿದ್ದಾನೆ; ಯಾಕಂದರೆ ಅವನಿಗೆ ಸಾಕ್ಷಿಯಾಗಿ, ನೀ
ನು ನೋಡಿ, ಕೇಳಿದವುಗಳನ್ನು ಸಮಸ್ತ ಮನುಷ್ಯರಿಗೆ ಹೇಳ
16 ಬೇಕು. ಈಗ ಯಾಕೆ ತಡ ಮಾಡುತ್ತೀ? ಎದ್ದು, ಸ್ನಾನ ಹೊಂದಿ,
ಕರ್ತನ ಹೆಸರನ್ನು ಕರೆದು, ನಿನ್ನ ಪಾಪಗಳನ್ನು ತೊಳೆದು ಬಿಡು.

17 ತರುವಾಯ ಯೆರೂಸಲೇಮಿಗೆ ತಿರಿಗಿ ಬಂದು, ದೇವಾಲಯ

ದಲ್ಲಿ ಪ್ರಾರ್ಥಿಸುವಾಗ, ಆದದ್ದೇನಂದರೆ, ನಾನು ಪರವಶವಾಗಿ,
೧೮ ಅವನು ನೀನು ತ್ವರೆ ಪಟ್ಟು, ಶೀಘ್ರವಾಗಿ ಯೆರೂಸಲೇಮಿನಿಂದ
ಹೊರಟು ಹೋಗು; ಯಾಕಂದರೆ ನೀನು ನನಗೋಸ್ಕರ ಕೊಡು
ವ ಸಾಕ್ಷಿಯನ್ನು ಅವರು ಹೊಂದರೆಂದು, ನನಗೆ ಹೇಳ್ಳುವದನ್ನು
೧೯ ಕಂಡೆನು. ಆಗ ನಾನು, ಕರ್ತನೇ, ನಿನ್ನಲ್ಲಿ ವಿಶ್ವಾಸವಿಡುವವರ
ನ್ನು ಎಲ್ಲಾ ಸಭೆಮನೆಗಳಲ್ಲಿ ಸೆರೆ ಹಿಡಿದು, ಹೊಡಿಸಿ, ಮತ್ತು ನಿನ್ನ
೨೦ ಸಾಕ್ಷಿಯಾದ ಸ್ತೆಫನನ ರಕ್ತವು ಚೆಲ್ಲಲ್ಪಡುವಾಗ, ನಾನು ಹತ್ತರ
ನಿಂತು ಕೊಂಡು, ಅವನನ್ನು ತೆಗೆದು ಹಾಕುವದಕ್ಕೆ ಸಮ್ಮತಿ ಪ
ಟ್ಟು, ಅವನನ್ನು ಕೊಲ್ಲುವವರ ವಸ್ತ್ರಗಳನ್ನು ಕಾಯುತ್ತಾ ಇದ್ದ
೨೧ ದ್ದನ್ನು ಬಲ್ಲರು, ಅಂದೆನು. ಆಗ ಅವನು, ನನಗೆ ಹೋಗು; ಯಾ
ಕಂದರೆ ನಿನ್ನನ್ನು ಜನಾಂಗಗಳ ಬಳಿಗೆ ದೂರ ಕಳುಹಿಸುವೆನು,
ಅಂದನು.

೨೨ ಈ ಮಾತಿನ ಪರ್ಯಂತರ ಅವನಿಗೆ ಕಿವಿ ಕೊಟ್ಟು, ತಮ್ಮು
ಕಬ್ದವನ್ನೆತ್ತಿ, ಇಂಥವನನ್ನು ಭೂಮಿಯಿಂದ ತೆಗೆದು ಹಾಕು; ಅವ
೨೩ ನು ಬದುಕುವದು ಯುಕ್ತವಲ್ಲ, ಅಂದರು. ಅವರು ಕೂಗಿ, ವಸ್ತ್ರ
೨೪ ಗಳನ್ನು ಹರು ಕೊಂಡು, ಆಕಾಶಕ್ಕೆ ಧೂಳ್ಳನ್ನು ಹಾಕುವಾಗ, ಸ
ಹಸ್ರಾಧಿಪತಿಯು ಅವನನ್ನು ಕೋಟೆಯೊಳಗೆ ಕರ ಕೊಂಡು
ಹೋಗಲಾಜ್ಞಾಪಿಸಿ, ಅವರು ಇವನಿಗೆ ವಿರೋಧವಾಗಿ ಈ ಪ್ರಕಾರ
ಕೂಗುವ ಕಾರಣವೇನೆಂದು, ತಿಳ್ಳಿಯುವ ಹಾಗೆ, ಹೊಡೆದು, ವಿಚಾ
೨೫ ರಿಸ ಬೇಕೆಂದು ಹೇಳ್ಳಿದನು. ಆದದರಿಂದ ಅವನನ್ನು ಬಾರುಗ
ಳಿಂದ ಕಟ್ಟುವಾಗ, ಪೌಲನು ರೋಮಾಯನಾದ ಮನುಷ್ಯನ
ನ್ನು ನ್ಯಾಯ ತೀರಿಸದೆ, ಹೊಡೆಯುವದು ನಿಮಗೆ ನ್ಯಾಯ
೨೬ ವೋ? ಎಂದು, ಹತ್ತರ ನಿಂತಿರುವ ಶತಾಧಿಪತಿಗೆ ಹೇಳ್ಳಿದನು. ಶತಾಧಿ
ಪತಿಯು ಅದನ್ನು ಕೇಳ್ಳಿ, ಬಂದು, ಸಹಸ್ರಾಧಿಪತಿಗೆ ತಿಳ್ಳಿಸಿ, ನೀನು
ಮಾಡಲಿರುವದೇನೆಂದು, ನೋಡು; ಯಾಕಂದರೆ ಈ ಮನುಷ್ಯ
೨೭ ನು ರೋಮಾಯನು, ಅಂದನು. ಆಗ ಸಹಸ್ರಾಧಿಪತಿಯು ಹತ್ತ
ರ ಬಂದು, ನೀನು ರೋಮಾಯನೋ? ನನಗೆ ಹೇಳ್ಳು, ಎಂದು
೨೮ ಅವನಿಗೆ ಹೇಳ್ಳಿದಾಗ, ಅವನು ಹೌದುಂದನು. ಆಗ ಸಹಸ್ರಾಧಿಪ
ತಿಯು, ನಾನು ಈ ಪಟ್ಟಣವಾಸವನ್ನು ಬಹಳ ಹಣದಿಂದ ಸಂಪಾ
ದಿಸಿ ಕೊಂಡೆನೆಂದು ಹೇಳ್ಳುವಾಗ; ಪೌಲನು, ನಾನು ಅಂಥವನಾಗಿ
೨೯ ಹುಟ್ಟಿದೆನು, ಅಂದನು. ಹೀಗಿರುವದರಿಂದ ಅವನನ್ನು ವಿಚಾರಿಸುವ
ದಕ್ಕೆ ಇದ್ದವರು ಸಂಗತಲೇ ಅವನನ್ನು ಬಿಟ್ಟರು. ಮತ್ತು ಸಹ
ಸ್ರಾಧಿಪತಿಯು, ಅವನು ರೋಮಾಯನೆಂದು ತಿಳ್ಳಿದು, ಅವನನ್ನು
ಕಟ್ಟಿಸಿದ್ದರಿಂದ ಭಯ ಪಟ್ಟನು.

೩೦ ಮಾರಣೆ ದಿವಸ ಯೆಹೂದ್ಯರು ಅವನ ಮೇಲೆ ಹೇಳ್ಳುವ
ದೂರು ಏನೆಂದು, ನಿಶ್ಚಯವಾಗಿ ತಿಳ್ಳಿಯ ಇಷ್ಟೆಸಿ, ಅವನ ಬಂಧಗ
ಳನ್ನು ಬಿಚ್ಚಿ, ಪ್ರಧಾನ ಯಾಜಕರನ್ನೂ ಅವರ ಸಮಸ್ತ ಸಭೆಯ
ನ್ನೂ ಬರ ಆಜ್ಞಾಪಿಸಿ, ಇಳ್ಳಿದು ಹೋಗಿ, ಪೌಲನನ್ನು ಕರ ಕೊಂ
ಡು, ಅವರ ಮುಂದೆ ನಿಲ್ಲಿಸಿದನು.

## ೨೩. ಸಂಧಿ.

೧ ಆಗ ಪೌಲನು ಮಂತ್ರಿಸಭೆಯ ಮೇಲೆ ಕಣ್ಣಿಟ್ಟು, ಸಹೋದರರಾ
ದ ಜನರೇ, ನಾನು ಇಂದಿನ ವರಿಗೂ ಪೂರ್ಣ ಬಳ್ಳೇ ಮನಸಾಕ್ಷಿ
ಯಿಂದ ದೇವರ ಎದುರಿನಲ್ಲಿ ನಡೆದು ಕೊಂಡಿದ್ದೇನೆ, ಅಂದನು.
೨ ಆಗ ಪ್ರಧಾನ ಯಾಜಕನಾದಅನನೀಯನು, ಅವನ ಬಾಯಿ
ಹೊಡೆಯ ಬೇಕೆಂದು, ಅವನ ಹತ್ತರ ನಿಂತು ಕೊಂಡವರಿಗೆ ಆ
3 ಜ್ಞಾಪಿಸಿದನು. ಪೌಲನು ಅವನಿಗೆ, ತೊಡೆದ ಗೋಡೆಯೇ, ದೇವರು
ನಿನ್ನನ್ನು ಹೊಡೆಯುವನು; ನೀನು ನ್ಯಾಯಪ್ರಮಾಣದ ಪ್ರಕಾರ
ನನಗೆ ನ್ಯಾಯ ತೀರಿಸುವದಕ್ಕೆ ಕೂತು ಕೊಂಡು, ನ್ಯಾಯ
ಪ್ರಮಾಣವನ್ನು ಮೀರಿ, ನನ್ನನ್ನು ಹೊಡೆಯುವದಕ್ಕೆ ಆಜ್ಞಾಪಿ
೪ ಸುತ್ತೀಯೋ? ಅಂದನು. ಹತ್ತರ ನಿಂತಿದ್ದವರು, ದೇವರ ಪ್ರಧಾನ
೫ ಯಾಜಕನನ್ನು ದೂಷಿಸುತ್ತೀಯೋ? ಅನ್ನಲಾಗಿ; ಪೌಲನು, ಸ
ಹೋದರರೇ, ಅವನು ಪ್ರಧಾನ ಯಾಜಕನೆಂದು ನನಗೆ ತಿಳ್ಳಿಯ
ಲಿಲ್ಲ. ಯಾಕಂದರೆ, ನಿನ್ನ ಜನರ ಅಧಿಕಾರಿಯನ್ನು ಕುರಿತು ಕೆಟ್ಟ
ಮಾತು ಹೇಳ್ಳ ಬೇಡೆಂದು ಬರೆದದೆ, ಅಂದನು.

೬ ತರುವಾಯ ಪೌಲನು, ಒಂದು ಪೌಲು ಸದ್ದುಕಾಯರೂ, ಒಂ
ದು ಪೌಲು ಫರಿಸಾಯರೂ ಆಗಿದ್ದಾರೆಂದು ತಿಳ್ಳಿದು, ಮಂತ್ರಿಸಭೆ
ಯಲ್ಲಿ, ಸಹೋದರರಾದ ಜನರೇ, ನಾನು ಫರಿಸಾಯನೂ, ಫರಿ
ಸಾಯನ ಮಗನು; ಸತ್ತವರ ಪುನರುತ್ಥಾನದ ವಿಷಯವಾಗಿಯೂ,
ನಿರೀಕ್ಷೆಯ ವಿಷಯವಾಗಿಯೂ ವಿಚಾರಿಸಲ್ಪಡುತ್ತೇನೆಂದು ಕೂ
೭ ಗಿದನು. ಇದನ್ನು ಅವನು ಹೇಳ್ಳಿದಾಗ, ಫರಿಸಾಯರಿಗೂ ಸದ್ದು
ಕಾಯರಿಗೂ ಕಲಹ ಉಂಟಾಗಿ, ಸಮೂಹವು ಭೇದವಾಯಿತು.
೮ ಹ್ಯಾಗಂದರೆ ಸದ್ದುಕಾಯರು, ಪುನರುತ್ಥಾನವು ಇಲ್ಲವೆಂದೂ,
ದೂತನೂ ಆತ್ಮವೂ ಇಲ್ಲವೆಂದೂ, ಹೇಳ್ಳುತ್ತಾರೆ. ಆದರೆ ಫರಿಸಾ
ಯರು, ಎರಡೂ ಉಂಟೆಂದು ಬಿಚ್ಚುತ್ತಾರೆ. ಆಗ ದೊಡ್ಡ ಗುಲ್ಲು
೯ ಉಂಟಾಯಿತು. ಮತ್ತು ಫರಿಸಾಯರ ಪಕ್ಷದವರಾದ ಶಾಸ್ತ್ರಿಗಳು
ಎದ್ದು, ಈ ಮನುಷ್ಯನಲ್ಲಿ ನಾವು ಕೆಟ್ಟದ್ದೇನೂ ಕಾಣೆವು; ಆತ್ಮ
ವಾದರೂ, ದೂತನಾದರೂ ಅವನ ಸಂಗತ ಮಾತಾಡಿದ್ದಾದರೆ,
ದೇವರ ಸಂಗತ ಯುದ್ಧ ಮಾಡಲಾರೆವೆಂದು, ವಿವಾದ ಮಾಡಿದ
೧೦ ರು. ಆದರೆ ಕಲಹವು ಬಹಳವಾದಾಗ, ಅವರು ಪೌಲನನ್ನು ಹರಿ
ದು ಬಿಟ್ಟಾರೆಂದು, ಸಹಸ್ರಾಧಿಪತಿಯು ಭಯ ಪಟ್ಟು, ರಾಣುವೆ
ಯವರಿಗೆ, ನೀವು ಇಳ್ಳಿದು, ಅವನನ್ನು ಅವರ ಮಧ್ಯದಿಂದ ಹಿ
ಡು ಕೊಂಡು ಹೋಗಿ, ಕೋಟೆಗೆ ತರ ಬೇಕೆಂದು ಆಜ್ಞಾಪಿಸಿದ್ದನು.

೧೧ ಆ ರಾತ್ರಿಯಲ್ಲಿ ಕರ್ತನು ಅವನ ಹತ್ತರ ನಿಂತು ಕೊಂಡು,
ಪೌಲನೇ ಧೈರ್ಯವಾಗಿರು; ನೀನು ಯೆರೂಸಲೇಮಿನಲ್ಲಿ ನನ್ನ
ವಿಷಯವಾಗಿ ಸಾಕ್ಷಿ ಕೊಟ್ಟ ಪ್ರಕಾರವೇ, ರೋಮದಲ್ಲಿಯೂ
ಸಾಕ್ಷಿ ಕೊಡ ಬೇಕು, ಅಂದನು.

೧೨ ಬೆಳಗಾದ ಮೇಲೆ ಯೆಹೂದ್ಯರಲ್ಲಿ ಕೆಲವರು ಕೂಡೆ ಕೂಡಿ
ಸಿ, ತಾವು ಪೌಲನನ್ನು ಕೊಲ್ಲುವ ಪರ್ಯಂತರ ಉಣ್ಣುವದೂ,
ಕುಡಿಯುವದೂ ಇಲ್ಲವೆಂದು, ಶಪಥವನ್ನು ಮಾಡಿ ಕೊಂಡರು.
೧೩ ಈ ಪ್ರಕಾರ ಆಣೆ ಇಟ್ಟು ಕೊಂಡವರು ನಾಲ್ವತ್ತು ಮಂದಿಗಿಂತ
೧೪ ಹೆಚ್ಚಾಗಿದ್ದರು. ಅವರು ಪ್ರಧಾನಯಾಜಕರ ಬಳಿಗೂ ಹಿರಿಯರ
ಬಳಿಗೂ ಬಂದು, ನಾವು ಪೌಲನನ್ನು ಕೊಲ್ಲುವ ಪರ್ಯಂತರ
ಯಾವದನ್ನೂ ರುಚಿ ನೋಡುವದಿಲ್ಲವೆಂದು, ಶಪಥವನ್ನು ಮಾ
೧೫ ಡಿ ಕೊಂಡಿದ್ದೇವೆ; ಆದದರಿಂದ, ಅವನ ವಿಷಯವಾದವುಗಳನ್ನು
ಇನ್ನು ಚನ್ನಾಗಿ ತಿಳ್ಳಿಯ ಬೇಕೆಂಬುವ ಹಾಗೆ, ಅವನನ್ನು ನಾಳೆ
ನಿಮ್ಮ ಬಳಿಗೆ ಇಳ್ಳಿಸಿ ತರ ಬೇಕೆಂದು, ಮಂತ್ರಿ ಸಭೆ ಸಹಿತವಾಗಿ
ನೀವು ಸಹಸ್ರಾಧಿಪತಿಗೆ ತಿಳ್ಳಿಸ ಬೇಕು. ಅವನು ಸಮೀಪಾಪಿಸುವದ
ಕ್ಕೆ ಮುಂಚೆ, ನಾವು ಅವನನ್ನು ಕೊಲ್ಲ ಸಿದ್ಧವಾಗಿದ್ದೇವೆ, ಅಂದರು.
೧೬ ಆದರೆ ಪೌಲನ ಸಹೋದರಿಯ ಮಗನು ಅವರು ಹೊಂಚು



ವದನ್ನು ಕೇಳ್ಳಿ, ಕೋಟೆಯೊಳಗೆ ಹೋಗಿ, ಪೌಲನಿಗೆ ತಿಳ್ಳಿಸಿ
೧೭ ದನು. ಆಗ ಪೌಲನು ಶತಾಧಿಪತಿಗಳಲ್ಲಿ ಒಬ್ಬನನ್ನು ಕರೆದು,
ಈ ಯೌವನಸ್ಥನನ್ನು ಸಹಸ್ರಾಧಿಪತಿಯ ಬಳಿಗೆ ಕರ ಕೊಂಡು
ಹೋಗು; ಯಾಕಂದರೆ ಅವನಿಗೆ ತಿಳ್ಳಿಸುವದಕ್ಕೆ ಒಂದು ಮಾತು
೧೮ ಉಂಟು, ಅಂದನು. ಇವನು ಅವನನ್ನು ಕರ ಕೊಂಡು, ಸಹಸ್ರಾಧಿ
ಪತಿಯ ಬಳಿಗೆ ಬಂದು, ಸೆರೆಯವನಾದ ಪೌಲನು ನನ್ನನ್ನು ಕರೆ
ದು, ನಿನಗೆ ಒಂದು ಮಾತು ಹೇಳ್ಳ ಬೇಕಾಗಿರುವ ಈ ಯೌವನ
ಸ್ಥನನ್ನು ನಿನ್ನ ಬಳಿಗೆ ಕರ ಕೊಂಡು ಹೋಗ ಬೇಕೆಂದು, ಬೇಡಿ
೧೯ ಕೊಂಡನು, ಅಂದನು. ಆಗ ಸಹಸ್ರಾಧಿಪತಿಯು ಅವನ ಕೈ ಹಿ
ಡಿದು, ಏಕಾಂತವಾದ ಸ್ಥಳಕ್ಕೆ ಹೋಗಿ, ನೀನು ನನಗೆ ತಿಳ್ಳಿಸ ಬೇ
೨೦ ಕಾಗಿರುವದೇನು? ಎಂದು ಕೇಳ್ಳಿದನು. ಅವನು, ಯೆಹೂದ್ಯರು,
ಪೌಲನ ವಿಷಯವಾಗಿ ಇನ್ನು ಚನ್ನಾಗಿ ತಿಳ್ಳಿಯ ಬೇಕೆಂಬುವ
ಹಾಗೆ, ಅವನನ್ನು ನಾಳೆ ಮಂತ್ರಿ ಸಭೆಗೆ ಇಳ್ಳಿಸಿ ತರ ಬೇಕೆಂದು,
೨೧ ನಿನ್ನನ್ನು ಬೇಡಿ ಕೊಳ್ಳುವದಕ್ಕೆ ಕೂಡ ಆಲೋಚಿಸಿದ್ದಾರೆ; ಆದ
ದರಿಂದ ನೀನು ಅವರಿಗೆ ಸಮ್ಮತಿಸ ಬೇಡ; ಯಾಕಂದರೆ ಅವ
ಕೊಳಗೆ ನಾಲ್ವತ್ತಕ್ಕಿಂತ ಹೆಚ್ಚು ಮಂದಿ, ಅವನನ್ನು ಕೊಲ್ಲುವ
ಮಟ್ಟಿಗೂ ಉಣ್ಣುವದೂ ಕುಡಿಯುವದೂ ಇಲ್ಲವೆಂದು, ಶಪಥ
ವನ್ನು ಮಾಡಿ ಕೊಂಡು, ಅವನಿಗೋಸ್ಕರ ಹೊಂಚೆ ನೋಡು
ತ್ತಾರೆ. ಅವರು ನಿನ್ನ ಅಪ್ಪಣೆಗೋಸ್ಕರ ಕಾದು ಕೊಂಡು, ಈ
೨೨ ಗಲೇ ಸಿದ್ಧವಾಗಿದ್ದಾರೆ, ಅಂದನು. ಆದದರಿಂದ ಸಹಸ್ರಾಧಿಪತಿ
ಯು, ಇವುಗಳನ್ನು ನನಗೆ ತಿಳ್ಳಿಸಿದಿ ಎಂದು, ಯಾರಿಗೂ ಹೇಳ್ಳ
ಬೇಡವೆಂದು ಎಚ್ಚರಿಸಿ, ಯೌವನಸ್ಥನನ್ನು ಕಳ್ಳಹಿಸಿ ಬಿಟ್ಟನು.

೨೩ ತರುವಾಯ ಅವನು ಶತಾಧಿಪತಿಗಳಲ್ಲಿ ಇಬ್ಬರನ್ನು ಕರೆದು,
ರಾತ್ರಿಯ ಮೂರನೇ ತಾಸಿನಲ್ಲಿ ಕೈಸರೈಯಕ್ಕೆ ಹೋಗುವದ
ಕ್ಕೆ, ಇನೂರು ರಾಣುವೆಯವರನ್ನೂ, ಎಪ್ಪತ್ತು ರಾಹುತರ
೨೪ ನ್ನೂ, ಇನೂರು ಭಲ್ಲೆಯವರನ್ನೂ ಸಿದ್ಧ ಮಾಡಿರಿ; ಪೌಲನ
ನ್ನು ಹತ್ತಿಸಿ, ಭದ್ರವಾಗಿ ಅಧಿಪತಿಯಾದ ಫೇಲಿಕ್ಸನ ಬಳಿಗೆ ತ
ಕ್ಕೊಂಡು ಹೋಗುವದಕ್ಕೆ ಪಶುಗಳನ್ನು ಸಹ ಸಿದ್ಧ ಮಾಡ ಬೇ
೨೫ ಕು, ಅಂದನು. ಮತ್ತು ಕಾಗದವನ್ನು ಬರೆದನು. ಅದರಲ್ಲಿದ್ದ ಅ
೨೬ ಭಿಪ್ರಾಯವೇನಂದರೆ, ಶ್ರೀಮತ್ ಅಧಿಪತಿಯಾದ ಫೇಲಿಕ್ಸನಿಗೆ,
೨೭ ಕ್ಲಾದ್ಯ ಲೂಸ್ಯನು, ಶುಭವಾಗಲಿ. ಈ ಮನುಷ್ಯನು ಯೆಹೂ
ದ್ಯರಿಂದ ಹಿಡಿಯಲ್ಪಟ್ಟು, ಅವರಿಂದ ಕೊಲ್ಲಲ್ಪಡುವದಕ್ಕಿದ್ದಾಗ,
ಅವನು ರೋಮಾಯನೆಂದು ನಾನು ತಿಳ್ಳಿದು, ರಾಣುವೆಯವರ
೨೮ ಸಂಗತ ಬಂದು, ಅವನನ್ನು ತಪ್ಪಿಸಿದೆನು. ಮತ್ತು ಅವರು ಅವನ
ಮೇಲೆ ಹೊರಿಸುವ ಅಪರಾಧವನ್ನು ತಿಳ್ಳಿಯ ಇಷ್ಟೆಸಿ, ಅವನನ್ನು
೨೯ ಅವರ ಮಂತ್ರಿ ಸಭೆಗೆ ಕರಕೊಂಡು ಹೋಗಿ, ಅವನ ಮೇಲೆ, ಅವರ
ನ್ಯಾಯಪ್ರಮಾಣದ ತರ್ಕಗಳ ವಿಷಯವಾದ ದೂರೇ ಹೊ
ರ್ತು, ಮರಣಕ್ಕಾದರೂ ಬಂಧಗಳಿಗಾದರೂ ತಕ್ಕ ಯಾವ ಅ
೩೦ ಪರಾಧವೂ ಇಲ್ಲವೆಂದು, ಕಂಡೆನು. ಆದರೆ, ಯೆಹೂದ್ಯರು ಈ
ಮನುಷ್ಯರಿಗೋಸ್ಕರ ಹೊಂಚೆ ಕೊಳ್ಳುವದಕ್ಕಿದ್ದಾರೆಂದು ನನ
ಗೆ ತಿಳ್ಳಿಸಲ್ಪಟ್ಟಾಗ, ಸಂಗತಲೇ ಅವನನ್ನು ನಿನ್ನ ಬಳಿಗೆ ಕಳ್ಳಹಿಸಿ,
ದೂರು ಹೇಳ್ಳುವವರಿಗೆ ಸಹ, ಅವನ ವಿಷಯವಾದವುಗಳನ್ನು ನಿ
ನ್ನ ಮುಂದೆ ಹೇಳ್ಳ ಬೇಕೆಂದು, ಆಜ್ಞಾಪಿಸಿದ್ದೇನೆ. ಕ್ಷೇಮವಾಗಲಿ.

೩೧ ಆದದರಿಂದ ರಾಣುವೆಯವರು, ತಮಗಾದ ಅಪ್ಪಣೆಯ ಪ್ರ
ಕಾರ, ಪೌಲನನ್ನು ಕರಕೊಂಡು, ರಾತ್ರಿಯಲ್ಲಿ ಅಂತಿಪತ್ರಿಗೆ ಹೋ
೩೨ ದರು. ಮಾರಣೆ ದಿವಸ ಅವರು ರಾಹುತರನ್ನು ಅವನ ಸಂಗತ
೩೩ ಹೋಗ ಗೊಡಿಸಿ, ಕೋಟೆಗೆ ತಿರಿಗಿ ಬಂದರು. ಅವರು ಕೈಸರೈ
ಯಕ್ಕೆ ಬಂದು, ಕಾಗದವನ್ನು ಅಧಿಪತಿಗೆ ಕೊಟ್ಟು, ಪೌಲನನ್ನೂ
೩೪ ಸಹ ಅವನ ಮುಂದೆ ನಿಲ್ಲಿಸಿದರು. ಅಧಿಪತಿಯು ಅದನ್ನು ಓದಿ,
ಪೌಲನು ಯಾವ ಶೀಮೆಯವನೆಂದು ಕೇಳ್ಳಿ, ಅವನು ಕಿಲಿಕ್ಯದ
೩೫ ವನೆಂದು ತಿಳ್ಳಿಕೊಂಡು, ನಿನ್ನ ಮೇಲೆ ದೂರು ಹೇಳ್ಳುವವರು
ಬಂದ ತರುವಾಯ, ನಿನ್ನನ್ನು ಕೇಳ್ಳುವೆನು, ಅಂದನು. ಮತ್ತು,
ಹೆರೋದನ ನ್ಯಾಯಸ್ಥಾನದಲ್ಲಿ ಅವನನ್ನು ಕಾಯ ಬೇಕೆಂದು,
ಅಪ್ಪಣೆ ಕೊಟ್ಟನು.

## ೨೪. ಸಂಧಿ.

೧ ಐದು ದಿವಸಗಳ ಮೇಲೆ, ಪ್ರಧಾನ ಯಾಜಕನಾದ ಅನನೀ
ಯನೂ, ಹಿರಿಯರೂ, ಪ್ರಸಂಗಿಯಾದ ತೆರ್ತುಲ್ಲನೆಂಬವನು
ಸಹಿತವಾಗಿ, ಇಳ್ಳಿದು ಹೋಗಿ, ಪೌಲನ ವಿಷಯವಾದವುಗಳನ್ನು
೨ ಅಧಿಪತಿಗೆ ತಿಳ್ಳಿಸಿದರು. ಅವನು ಕರೆಯಲ್ಪಟ್ಟಾಗ, ತೆರ್ತುಲ್ಲನು
ಅವನ ಮೇಲೆ ದೂರು ಹೇಳ್ಳಲಾರಂಭಿಸಿ, ಶ್ರೀಮತ್ ಫೇಲಿಕ್ಸನೇ,
ನಿನ್ನ ಮುಖಾಂತರ ನಮಗೆ ಬಹಳ ಸಮಾಧಾನ ಉಂಟು. ನಿನ್ನ
ಪರಾಮರಿಕೆಯಿಂದ ಈ ಜನಾಂಗಕ್ಕೆ ಉಪಕಾರಗಳು ಆಗುತ್ತವೆ.
೩ ಆದದರಿಂದ ಈ ದಯವನ್ನು ಎಂದೂ ಎಲ್ಲಿಯೂ ಪೂರ್ಣ
೪ ಸ್ತೋತ್ರದಿಂದ ಅನುಭವಿಸುತ್ತಾ ಇದ್ದೇವೆ. ಆದರೆ ನಿನ್ನನ್ನು ಹೆ
ಚ್ಚಾಗಿ ಬೇಸರಗೊಳ್ಳಿಸದ ಹಾಗೆ, ನಿನ್ನ ತಾಳ್ಮೆಯಿಂದ ನಮ್ಮ ಸಂ
ಕ್ಷೇಪವಾದ ಮಾತಿಗೆ ಕಿವಿ ಕೊಡ ಬೇಕೆಂದು ಬೇಡಿ ಕೊಳ್ಳುತ್ತೇನೆ.
೫ ಏನಂದರೆ, ಈ ಮನುಷ್ಯನನ್ನು ತಂಟೆನಾಗಿಯೂ, ಲೋಕದ
ಲ್ಲಿರುವ ಯೆಹೂದ್ಯರೆಲ್ಲರಲ್ಲಿ ಕಲಹ ಎಬ್ಬಿಸುವವನಾಗಿಯೂ,
ನಜರೇತಿನವರ ಪಾಷಂಡದಲ್ಲಿ ಮುಖ್ಯಸ್ಥನಾಗಿಯೂ, ಕಂಡೆವು.
೬ ಅವನು ದೇವಾಲಯವನ್ನು ಹೊಲೆ ಮಾಡುವದಕ್ಕೆ ಪ್ರಯತ್ನ
ಮಾಡಿದನು. ನಾವು ಅವನನ್ನು ಹಿಡಿದು, ನಮ್ಮ ನ್ಯಾಯಪ್ರಮಾ
೭ ಣದ ಪ್ರಕಾರ ನ್ಯಾಯ ತೀರಿಸ ಬೇಕೆಂದಿದ್ದೆವು. ಆಗ ಸಹಸ್ರಾ
ಧಿಪತಿಯಾದ ಲೂಸ್ಯನು ಬಂದು, ಬಹಳ ಬಲಾತ್ಕಾರವಾಗಿ ನ
೮ ಮ್ಮ ಕೈಗಳೊಳಗಿಂದ ಅವನನ್ನು ತೆಗದು ಕೊಂಡು ಹೋಗಿ, ಅ
ವನ ಮೇಲೆ ದೂರು ಹೇಳ್ಳುವವರು ನಿನ್ನ ಬಳಿಗೆ ಹೋಗ ಬೇಕೆಂ
ದು, ಅಪ್ಪಣೆ ಕೊಟ್ಟನು. ನಾವು ಇವನ ಮೇಲೆ ದೂರು ಹೇಳ್ಳುವ
ಎಲ್ಲವುಗಳ ವಿಷಯವಾಗಿ ನೀನು ಇವನಿಂದ ವಿಚಾರಿಸಿ, ತಿಳ್ಳಿದು ಕೊ
೯ ಳ್ಳ ಬಹುದು, ಅಂದನು. ಆಗ ಯೆಹೂದ್ಯರು ಸಹ, ಇವು ಹೀ
ಗೆಯೇ ಹೌದು, ಎಂದು ಸಮ್ಮತಿಸಿದರು.

೧೦ ಆಗ ಅಧಿಪತಿಯು ಪೌಲನಿಗೆ ಮಾತಾಡುವದಕ್ಕೆ ಶಾಜ್ಞೆ ಮಾ
ಡಿದಾಗ, ಅವನು ಪ್ರತ್ಯುತ್ತರವಾಗಿ, ಬಹಳ ವರುಷಗಳಿಂದ ನೀನು
ಈ ಜನಾಂಗಕ್ಕೆ ಅಧಿಪತಿಯಾಗಿರುತ್ತೀ ಎಂದು ತಿಳ್ಳಿದು, ಅತಿ
ಧೈರ್ಯದಿಂದ ನನ್ನ ಕಾರ್ಯಗಳನ್ನು ಕುರಿತು ಉತ್ತರ ಕೊ
೧೧ ಡುತ್ತೇನೆ. ಯಾಕಂದರೆ ನಾನು ಯೆರೂಸಲೇಮಿನಲ್ಲಿ ಆರಾಧಿ
ಸುವದಕ್ಕೆ ಏರಿ ಹೋದಂದಿನಿಂದ ಹನ್ನೆರಡಕ್ಕಿಂತ ಹೆಚ್ಚು ದಿವ
೧೨ ಸಗಳು ಆಗಲಿಲ್ಲವೆಂದು, ನೀನು ತಿಳ್ಳಿಯ ಬಹುದು. ಮತ್ತು ನಾನು
ದೇವಾಲಯದಲ್ಲಿ ಯಾವನ ಸಂಗತಲಾದರೂ ಸಂಭಾಷಣೆ ಮಾ
ಡಿದ್ದನ್ನೂ, ಸಭೆಮನೆಗಳಲ್ಲಾಗಲಿ ಪಟ್ಟಣದಲ್ಲಾಗಲಿ ಸಮೂಹ ಎ
೧೩ ಬ್ಬಿಸಿದ್ದನ್ನೂ, ಅವರು ಕಾಣಲಿಲ್ಲ. ಮತ್ತು ಅವರು ಈಗ ನನ್ನ

ಅಪೊಸ್ತ. ಕ್ರಿಯೆ. ೨೫.

ಮೇಲೆ ಹೇಳುವ ದೂರುಗಳಿಗೆ ದೃಷ್ಟಾಂತವನ್ನು ಕೊಡಲಾರದೆ
೧೮ ಇದ್ದಾರೆ. ಆದಾಗ್ಯೂ ನಾನು ನ್ಯಾಯಪ್ರಮಾಣದಲ್ಲಿಯೂ
ಪ್ರವಾದಿಗಳಲ್ಲಿಯೂ ಬರೆದಿರುವ ಎಲ್ಲವುಗಳನ್ನು ವಿಶ್ವಾಸಿಸಿ,
೧೨ ನೀತಿವಂತರೂ ಅನೀತಿವಂತರೂ ಆದ ಸತ್ತವರಿಗೆ ಪುನರುತ್ಥಾನವು
ಆಗುವದೆಂದು, ಅವರೇ ಅಂಗೀಕರಿಸಿದ ನಿರೀಕ್ಷೆಯನ್ನು ದೇವರ
ಲ್ಲಿಟ್ಟು ಅವರು ಪಾಪುಂಡನೆಂದು ಹೇಳುವ ಮಾರ್ಗಕ್ಕೆ ಅನುಸ
ರಣೆಯಾಗಿ, ಪಿತೃಗಳ ದೇವರಿಗೆ ಸೇವೆ ಮಾಡುತ್ತೇನೆಂದು, ನಿನ
೧೬ ಗೆ ಅರಿಕೆ ಮಾಡುತ್ತೇನೆ. ಮತ್ತು ದೇವರ ಕಡೆಗೂ ಮನುಷ್ಯರ
ಕಡೆಗೂ ಯಾವಾಗಲೂ ಆಟಂಕವಿಲ್ಲದ ಮನಸಾಕ್ಷಿ ಇರ ಬೇಕೆಂ
ಬುವದರಲ್ಲಿಯೇ ಅಭ್ಯಾಸ ಮಾಡಿ ಕೊಳ್ಳುತ್ತೇನೆ.

೧೭ ಆದರೆ ಅನೇಕ ವರುಷಗಳಾದ ಮೇಲೆ, ನನ್ನ ಜನಾಂಗಕ್ಕೆ
೧೮ ಧರ್ಮಗಳನ್ನೂ ಕಾಣಿಕೆಗಳನ್ನೂ ತರುವವನಾಗಿ ಬಂದೆನು. ಹೀ
ಗಿರುವಾಗ ಸಮೂಹದ ಸಂಗಡ ಅಲ್ಲ, ಗುಬಾರಿನಿಂದ ಅಲ್ಲ, ದೇ
ವಾಲಯದಲ್ಲಿ ಶುದ್ಧ ಮಾಡಿ ಕೊಂಡವನಾದ ನನ್ನನ್ನು, ಆಸ್ಯ
೧೯ ದಿಂದ ಬಂದ ಕೆಲವು ಯೆಹೂದ್ಯರು ಕಂಡರು. ಇವರಿಗೆ ನನ್ನ
ಮೇಲೆ ಏನಾದರೂ ದೂರು ಹೇಳುವದಕ್ಕಿದ್ದರೆ, ಅವರೇ ನಿನ್ನ
೨೦ ಸನ್ನಿಧಿಗೆ ಬಂದು, ಹೇಳ ತಕ್ಕದ್ದು. ಇಲ್ಲವೆ ನಾನು ಅವರೊಳಗೆ
ನಿಂತು ಕೊಂಡಾಗ, ಸತ್ತವರ ಪುನರುತ್ಥಾನದ ವಿಷಯ ಈ ಹೊ
೨೧ ತ್ತು ನಿಮ್ಮಿಂದ ನನಗೆ ನ್ಯಾಯ ತೀರಿಸಲ್ಪಡುತ್ತದೆಂದು, ನಾನು
ಕೂಗಿದ ಒಂದೇ ಶಬ್ದವು ಹೊರ್ತು, ಮಂತ್ರಿ ಸಭೆಯ ಮುಂದೆ
ನಾನು ನಿಂತಿರುವಾಗ, ನನ್ನಲ್ಲಿ ಏನಾದರೂ ಅಪರಾಧ ಕಂಡಿದ್ದರೆ,
ಇವರೇ ಹೇಳಲಿ, ಅಂದನು.

೨೨ ಫೇಲಿಕ್ಸನು ಇವುಗಳನ್ನು ಕೇಳಿ, ಈ ಮಾರ್ಗದ ವಿಷಯ
ಚನ್ನಾಗಿ ತಿಳಿದವನಾಗಿದ್ದದರಿಂದ, ಸಹಸ್ರಾಧಿಪತಿಯಾದ ಲೂ
ಸ್ಯನು ಇಳಿದು ಬಂದಾಗ, ನಿಮ್ಮ ಸಂಗತಿಯನ್ನು ಚನ್ನಾಗಿ ವಿ
೨೩ ಚಾರಿಸುವೆನೆಂದು ಹೇಳಿ, ಅವರನ್ನು ತಡೆ ಮಾಡಿದನು. ಮತ್ತು
ಪೌಲನನ್ನು ಸಡ್ಲು ಬಿಟ್ಟು, ಸ್ವಜನರಲ್ಲಿ ಯಾರಾದರೂ ಅವನಿಗೆ
ಸೇವಿಸುವದಕ್ಕೂ ಅವನ ಬಳಿಗೆ ಬರುವದಕ್ಕೂ ಅಡ್ಡಿ ಮಾಡದೆ,
ಕಾಯ ಬೇಕೆಂದು, ಶತಾಧಿಪತಿಗೆ ಅಪ್ಪಣೆ ಕೊಟ್ಟನು.

೨೪ ಕೆಲವು ದಿವಸಗಳ ಮೇಲೆ, ಫೇಲಿಕ್ಸನು ಯೆಹೂದ್ಯಳಾದ
ದ್ರುಸಿಲ್ಲಳೆಂಬ ತನ್ನ ಹೆಂಡತಿಯ ಸಂಗಡ ಬಂದು, ಪೌಲನನ್ನು
ಕರಿಸಿ, ಕ್ರಿಸ್ತನಲ್ಲಿಡುವ ವಿಶ್ವಾಸವನ್ನು ಕುರಿತು ಅವನನ್ನು ಕೇಳಿ
೨೫ ದನು. ಆದರೆ ಅವನು ನೀತಿಯನ್ನೂ, ಮಿತಿಯನ್ನೂ, ಬರುವ
ನ್ಯಾಯತೀರ್ಪುಕೆಯನ್ನೂ ಕುರಿತು ಪ್ರಸಂಗ ಮಾಡುವಾಗ, ಫೇ
ಲಿಕ್ಸನು ಭಯಸ್ಥನಾಗಿ, ಈಗ ಹೋಗು; ಸಮಯ ಸಿಕ್ಕುವಾಗ,
೨೬ ನಿನ್ನನ್ನು ಕರಿಸುವೆನು, ಅಂದನು. ಇದಲ್ಲದೆ, ಬಿಡುಗಡೆಯಾಗುವ
ದಕ್ಕೆ ಪೌಲನು ತನಗೆ ಹಣ ಕೊಡುವನೆಂದು ನಿರೀಕ್ಷಿಸಿ, ಅನೇಕ
೨೭ ಸಾರಿ ಅವನನ್ನು ಕರಿಸಿ, ಸಂಭಾಷಿಸಿದನು. ಆದರೆ ಎರಡು ವರು
ಷಗಳಾದ ಮೇಲೆ, ಫೇಲಿಕ್ಸನಿಗೆ ಬದಲಾಗಿ ಪೊರ್ಕಿಯ ಫೆಸ್ತನು
ಬಂದನು. ಫೇಲಿಕ್ಸನು ಯೆಹೂದ್ಯರನ್ನು ಮೆಚ್ಚಿಸ ಬೇಕೆಂದು
ಇಚ್ಛೈಸಿ, ಪೌಲನನ್ನು ಬಂಧಕದಲ್ಲಿ ಬಿಟ್ಟನು.

## ೨೫. ಸಂಧಿ.

೧ ಫೆಸ್ತನು ಪ್ರಾಂತಕ್ಕೆ ಬಂದು, ಮೂರು ದಿವಸಗಳ ಮೇಲೆ ಕೈಸ
೨ ರ್ಯೆಯಿಂದ ಯೆರೂಸಲೇಮಿಗೆ ಏರಿ ಹೋದನು. ಅಲ್ಲಿ ಪ್ರಧಾನ
ಯಾಜಕರೂ ಯೆಹೂದ್ಯರ ಶ್ರೇಷ್ಠರೂ ಪೌಲನ ವಿಷಯವಾಗಿ
3 ಅವನಿಗೆ ತಿಳಿಸಿ, ಅವನನ್ನು ಮಾರ್ಗದಲ್ಲಿ ಕೊಂದು ಹಾಕ ಬೇ
ಕೆಂದು ಹೊಂಚೆ ಕೊಂಡು, ದಯೆ ಮಾಡಿ ಅವನನ್ನು ಯೆರೂ
ಸಲೇಮಿಗೆ ಕರಸ ಬೇಕೆಂದು, ಅವನಿಗೆ ವಿರೋಧವಾಗಿ ಬೇಡಿ
೪ ಕೊಂಡರು. ಅದಕ್ಕೆ ಫೆಸ್ತನು ಪ್ರತ್ಯುತ್ತರವಾಗಿ, ಪೌಲನು ಕೈ
ಸರ್ಯೆಯದಲ್ಲಿ ಕಾಯಲ್ಪಡ ಬೇಕು; ನಾನು ಸಹ ಬೇಗ ಹೊರ
೫ ಡುವದಕ್ಕಿದ್ದೇನೆ, ಅಂದನು. ಆದದರಿಂದ ನಿಮ್ಮಲ್ಲಿ ಬರ ಬಲ್ಲವ
ರು ನನ್ನ ಸಂಗಡ ಇಳಿದು ಬಂದು, ಈ ಮನುಷ್ಯನಲ್ಲಿ ಏನಾದ
ರೂ ಇದ್ದರೆ, ಅವನ ಮೇಲೆ ತಪ್ಪು ಹೊರಿಸಿರಿ, ಅಂದನು.

೬ ಅವನು ಹತ್ತಕ್ಕಿಂತ ಹೆಚ್ಚು ದಿನ ಅವರೊಳಗೆ ವಾಸ ಮಾಡಿ,
ಕೈಸರ್ಯೆಯಕ್ಕೆ ಇಳಿದು ಹೋದ ಮಾರನೆ ದಿವಸ ಪೀಠದಲ್ಲಿ
ಕೂತು ಕೊಂಡು, ಪೌಲನನ್ನು ತರ ಬೇಕೆಂದು ಆಜ್ಞಾಪಿಸಿದನು.
೭ ಅವನು ಬಂದ ಮೇಲೆ, ಯೆರೂಸಲೇಮಿನಿಂದ ಇಳಿದು ಬಂದ
ಯೆಹೂದ್ಯರು ದೃಷ್ಟಾಂತ ಹೇಳಲಾರದ ಅನೇಕ ಕಠಿಣವಾದ
ದೂರುಗಳನ್ನು ಪೌಲನಿಗೆ ವಿರೋಧವಾಗಿ ತಂದು, ಸುತ್ತಲು ನಿಂತು
೮ ಕೊಂಡರು. ಆಗಲವನು, ಯೆಹೂದ್ಯರ ನ್ಯಾಯಪ್ರಮಾಣಕ್ಕಾ
ದರೂ, ದೇವಾಲಯಕ್ಕಾದರೂ, ಕೈಸರನಿಗಾದರೂ ವಿರೋಧವಾ
ದ ಪಾಪವನ್ನು ತಾನು ಮಾಡಲಿಲ್ಲವೆಂದು, ಪ್ರತ್ಯುತ್ತರ ಹೇಳಲಾ
೯ ಗಿ, ಫೆಸ್ತನು, ಯೆಹೂದ್ಯರನ್ನು ಮೆಚ್ಚಿಸ ಬೇಕೆಂದು, ಪೌಲನಿಗೆ,
ನೀನು ಯೆರೂಸಲೇಮಿಗೆ ಏರಿ ಹೋಗಿ, ಅಲ್ಲಿ ನನ್ನ ಮುಂದೆ
ಇವುಗಳ ವಿಷಯವಾಗಿ ನ್ಯಾಯ ತೀರಿಸಲ್ಪಡುವದಕ್ಕೆ ಮನ
೧೦ ಸ್ಸಾಗಿದ್ದೀಯೋ? ಎಂದು ಪ್ರತ್ಯುತ್ತರ ಹೇಳಿದನು. ಆದಕ್ಕೆ
ಪೌಲನು, ಕೈಸರನ ಪೀಠದ ಮುಂದೆ ನಿಂತು ಕೊಂಡಿದ್ದೇನೆ;
ಇಲ್ಲಿಯೇ ನನಗೆ ನ್ಯಾಯ ತೀರಿಸಲ್ಪಡ ಬೇಕು. ಯೆಹೂದ್ಯ
ರಿಗೆ ನಾನು ಏನೂ ಅನ್ಯಾಯ ಮಾಡಲಿಲ್ಲವೆಂದು ನಿನಗೂ ಚ
೧೧ ನ್ನಾಗಿ ತಿಳಿದದೆ; ಯಾಕಂದರೆ ನಾನು ಅನ್ಯಾಯ ಮಾಡಿ, ಮರ
ಣಕ್ಕೆ ಪಾತ್ರವಾದದ್ದೇನಾದರೂ ನಡಿಸಿದ್ದಾದರೆ, ಸಾಯಲೊಲ್ಲೆ
ನೆಂದು ಹೇಳುವದಿಲ್ಲ. ಆದರೆ ಇವರು ನನ್ನ ಮೇಲೆ ಹೇಳುವ
ದೂರುಗಳಲ್ಲಿ ಬಂದೂ ಆಗದಿದ್ದರೆ, ಯಾರೂ ನನ್ನನ್ನು ಅವರಿ
ಗೆ ಒಪ್ಪಿಸ ಕೂಡದು; ಕೈಸರನಿಗೆ ಮೊರೆ ಇಡುತ್ತೇನೆ, ಅಂದ
೧೨ ನು. ಆಗ ಫೆಸ್ತನು ಅಲೋಚನೆಯ ಸಭೆಯ ಸಂಗಡ ಸಂಭಾಷಣೆ
ಮಾಡಿ, ಕೈಸರನಿಗೆ ಮೊರೆ ಇಟ್ಟಿದ್ದೀಯೋ? ಕೈಸರನ ಬಳಿಗೆ
ಹೋಗ ಬೇಕು, ಎಂದು ಅಪ್ಪಣೆ ಕೊಟ್ಟನು.

೧೩ ಕೆಲವು ದಿವಸಗಳಾದ ಮೇಲೆ, ಅರಸನಾದ ಅಗ್ರಿಪ್ಪನೂ
ಬೆರ್ನಿಕೆಯೂ ಫೆಸ್ತನನ್ನು ವಂದಿಸುವದಕ್ಕೆ ಕೈಸರ್ಯೆಯಕ್ಕೆ
೧೪ ಬಂದರು. ಅವರು ಅನೇಕ ದಿವಸ ಅಲ್ಲಿ ವಾಸ ಮಾಡಿದ್ದಾಗ, ಫೆಸ್ತ
ನು ಪೌಲನ ಸಂಗತಿಯನ್ನು ಅರಸನಿಗೆ ತಿಳಿಸಿ, ಫೇಲಿಕ್ಸನು
ಬಿಟ್ಟು ಹೋದ ಕೆಲೆಯವನಾದ ಒಬ್ಬ ಮನುಷ್ಯನು ಇದ್ದಾನೆ;
೧೫ ನಾನು ಯೆರೂಸಲೇಮಿನಲ್ಲಿದ್ದಾಗ, ಅವನ ವಿಷಯ ನನಗೆ ತಿಳಿಸಿ,
ಪ್ರಧಾನ ಯಾಜಕರೂ, ಯೆಹೂದ್ಯರ ಹಿರಿಯರೂ ಅವನಿಗೆ
೧೬ ವಿರೋಧವಾಗಿ ಅಜ್ಞೆ ತೀರಿಸ ಬೇಕೆಂದು, ಬೇಡಿ ಕೊಂಡರು. ಆದ
ಕೆ ದೂರು ಹೊರಿಸಲ್ಪಟ್ಟವನು ದೂರುಗಾರರನ್ನು ಮುಖಾಮು
ಖಿಯಾಗಿ ನೋಡಿ, ದೂರನ್ನು ಕುರಿತು ಪ್ರತ್ಯುತ್ತರ ಹೇಳ ಸಮ
ಯ ಹೊಂದುವದಕ್ಕೆ ಮುಂಚೆ, ಯಾವ ಮನುಷ್ಯನನ್ನಾದ
ರೂ ನಾಶನಕ್ಕಾಗಿ ಒಪ್ಪಿಸುವದು ರೋಮಾಯರಿಗೆ ಪದ್ಧತಿ

ಅಪೊಸ್ತ. ಕ್ರಿಯೆ. ೨೬.

೧೭ ಇಲ್ಲವೆಂದು, ನಾನು ಉತ್ತರ ಕೊಟ್ಟು, ಅವರು ಇಲ್ಲಿಗೆ ಕೂಡಿ
ಬಂದ ಮೇಲೆ, ಏನೂ ತಡ ಮಾಡದೆ, ಮಾರನೆ ದಿವಸ ಪೀಠದ
ಮೇಲೆ ಕೂತು ಕೊಂಡು, ಆ ಮನುಷ್ಯನನ್ನು ತರ ಬೇಕೆಂದು
೧೮ ಅಪ್ಪಣೆ ಕೊಟ್ಟೆನು. ಅವನಿಗೆ ವಿರೋಧವಾಗಿ ದೂರುಗಾರರು
ನಿಂತು ಕೊಂಡು ನಾನು ನೆನಸಿದ ಅಪರಾಧಗಳಲ್ಲಿ ಯಾವದನ್ನಾ
ದರೂ ಹೊರಿಸದೆ, ತಮ್ಮ ಸ್ವಂತ ದೈವ ಭಕ್ತಿಯ ವಿಷಯವಾ
೧೯ ಗಿಯೂ, ಸತ್ತು ಹೋದಂಥ, ಬದುಕುತ್ತಾನೆಂದು ಪೌಲನು ಹೇ
ಳುವಂಥ, ಯೇಸುವೆಂಬ ಒಬ್ಬನ ವಿಷಯವಾಗಿಯೂ, ಅವ
೨೦ ನ ಸಂಗಡ ಕೆಲವು ತರ್ಕಗಳನ್ನು ಮಾಡಿದರು. ಆದರೆ ನಾನು
ಇಂಥ ತರ್ಕಗಳ ವಿಷಯವಾಗಿ ಸಂಶಯ ಪಟ್ಟದರಿಂದ, ಯೆ
ರೂಸಲೇಮಿಗೆ ಹೋಗಿ, ಅಲ್ಲಿ ಇವುಗಳನ್ನು ಕುರಿತು ನ್ಯಾಯ
೨೧ ತೀರಿಸಲ್ಪಡುವದಕ್ಕೆ ಮನಸ್ಸುಂಟೋ? ಎಂದು ಕೇಳಿದೆನು. ಆದ
ರೆ ಮಹಾ ರಾಜನ ವಿಚಾರಣೆಗಾಗಿ ತಾನು ಕಾಯಲ್ಪಡ ಬೇಕೆಂ
ದು, ಪೌಲನು ಮೊರೆ ಇಟ್ಟಾಗ, ಕೈಸರನ ಬಳಿಗೆ ಕಳುಹಿಸುವ
ಪರ್ಯಂತರ, ಅವನನ್ನು ಕಾಯ ಬೇಕೆಂದು ಅಪ್ಪಣೆ ಕೊಟ್ಟೆ
೨೨ ನು, ಅಂದನು. ಆಗ ಅಗ್ರಿಪ್ಪನು, ಈ ಮನುಷ್ಯನನ್ನು ಕೇಳ
ನನಗೂ ಮನಸ್ಸುಂಟು ಎಂದು ಫೆಸ್ತನಿಗೆ ಹೇಳಲಾಗಿ, ಅವನು,
ನಾಳೆ ಕೇಳ ಬಹುದು, ಅಂದನು.

೨೩ ಆದದರಿಂದ ಮಾರನೆ ದಿವಸ ಅಗ್ರಿಪ್ಪನೂ ಬೆರ್ನಿಕೆಯೂ
ಬಹಳ ಅಟ್ಟಹಾಸದಿಂದ ಬಂದು, ಸಹಸ್ರಾಧಿಪತಿಗಳ ಸಂಗಡಲೂ
ಪಟ್ಟಣದ ಶ್ರೇಷ್ಠರ ಸಂಗಡಲೂ ಸಭಾಸ್ಥಾನದಲ್ಲಿ ಪ್ರವೇಶಿಸಿದಾಗ,
೨೪ ಫೆಸ್ತನು ಅಪ್ಪಣೆ ಕೊಟ್ಟದರಿಂದ ಪೌಲನು ತರಲ್ಪಟ್ಟನು. ಆಗ
ಫೆಸ್ತನು, ಅರಸನಾದ ಅಗ್ರಿಪ್ಪನೇ, ನಮ್ಮ ಸಂಗಡ ಕೂಡಿ ಬಂದ
ಎಲ್ಲಾ ಜನರೇ, ಈ ಮನುಷ್ಯನನ್ನು ನೋಡುತ್ತೀರಿ. ಇವನನ್ನು
ಕುರಿತು ಯೆಹೂದ್ಯರ ಸಮೂಹವೆಲ್ಲಾ ಯೆರೂಸಲೇಮಿನಲ್ಲಿ
ಯೂ ಇಲ್ಲಿಯೂ ನನ್ನ ಮುಂದೆ ಬಂದು, ಅವನು ಇನ್ನು ಬದು
೨೫ ಕ ಬಾರದೆಂದು ಕೂಗಿದರು. ಆದರೆ ಅವನು ಮರಣಕ್ಕೆ ಪಾತ್ರ
ವಾದದ್ದೇನೂ ಮಾಡಲಿಲ್ಲವೆಂದು, ನಾನು ತಿಳಿದು ಕೊಂಡದರಿಂದ
ಲೂ, ಅವನು ತಾನು ಮಹಾ ರಾಜನಿಗೆ ಮೊರೆ ಇಟ್ಟದರಿಂದಲೂ
೨೬ ಅವನನ್ನು ಕಳುಹಿಸ ನಿರ್ಣಯಿಸಿದ್ದೇನೆ. ಅವನನ್ನು ಕುರಿತು
ದೊರೆಗೆ ಬರೆಯ ನಿಶ್ಚಯವಾದದ್ದೇನಾದರೂ ನನಗೆ ಇಲ್ಲ. ಆದ
ರಿಂದ, ವಿಚಾರಣೆ ಆದ ಮೇಲೆ ಬರೆಯುವದಕ್ಕೆ ಏನಾದರೂ
ಸಿಕ್ಕುವ ಹಾಗೆ, ಅವನನ್ನು ನಿಮ್ಮ ಮುಂದೆಯೂ, ಮುಖ್ಯವಾಗಿ,
ಅರಸನಾದ ಅಗ್ರಿಪ್ಪನೇ! ನಿನ್ನ ಮುಂದೆಯೂ, ತರಿಸಿದ್ದೇನೆ.
೨೭ ಯಾಕಂದರೆ ಕೆಲೆಯವನನ್ನು ಕಳುಹಿಸಿ, ಅವನ ಮೇಲೆ ಹೊರಿಸಿ
ದ ಅಪರಾಧಗಳನ್ನು ತೋರಿಸದೆ ಇರುವದು ಅಯುಕ್ತವೆಂದು,
ನನಗೆ ಕಾಣುತದೆ.

## ೨೬. ಸಂಧಿ.

೧ ಆಗ ಅಗ್ರಿಪ್ಪನು, ನಿನಗೋಸ್ಕರ ಮಾತಾಡುವದಕ್ಕೆ ನಿನಗೆ
ಅಪ್ಪಣೆ ಉಂಟೆಂದು, ಪೌಲನಿಗೆ ಹೇಳಲಾಗಿ, ಅವನು ಕೈ ಚಾಚಿ,
೨ ಉತ್ತರ ಕೊಟ್ಟದ್ದೇನಂದರೆ, ಅರಸನಾದ ಅಗ್ರಿಪ್ಪನೇ, ಯೆಹೂ
ದ್ಯರು ನನ್ನ ಮೇಲೆ ದೂರು ಹೇಳುವ ಎಲ್ಲವುಗಳ ವಿಷಯವಾಗಿ
ಈ ಹೊತ್ತು ನಿನ್ನ ಮುಂದೆ ಉತ್ತರ ಕೊಡುವದಕ್ಕಿರುವದರಿಂದ
3 ಲೂ, ಮುಖ್ಯವಾಗಿ ನೀನು ಯೆಹೂದ್ಯರಲ್ಲಿರುವ ಸಕಲ ಸಂಪ್ರ
ದಾಯಗಳನ್ನೂ ತರ್ಕಗಳನ್ನೂ ಅರಿತವನಾಗಿರುವದರಿಂದಲೂ,
ನನ್ನನ್ನು ಭಾಗ್ಯವಂತನೆಂದೆಣಿಸಿ ಕೊಳ್ಳುತ್ತೇನೆ. ಆದದರಿಂದ
ತಾಳ್ಮೆಯಿಂದ ನನ್ನನ್ನು ಕೇಳ ಬೇಕೆಂದು, ನಿನ್ನನ್ನು ಬೇಡಿ
ಕೊಳ್ಳುತ್ತೇನೆ.

೪ ನಾನು ಆರಂಭದಿಂದ ನನ್ನ ಜನಾಂಗದೊಳಗೆ ಯೆರೂಸಲೇ
ಮಿನಲ್ಲಿ ಇದ್ದು ಚಿಕ್ಕತನದಿಂದ ಬದುಕಿದ ರೀತಿಯನ್ನು ಯೆ
೫ ಹೂದ್ಯರೆಲ್ಲರು ತಿಳಿದಿದ್ದಾರೆ. ಸಾಕ್ಷಿ ಕೊಡುವದಕ್ಕೆ ಅವರಿಗೆ
ಮನಸ್ಸಿದ್ದರೆ, ನಾನು ನಮ್ಮ ಭಕ್ತಿ ಮಾರ್ಗದ ಬಹು ಖಂಡಿತವಾ
ದ ಮತದ ಪ್ರಕಾರ ಫರಿಸಾಯನಾಗಿ ಬದುಕಿದೆನೆಂದು, ಪೂರ್ವ
೬ ದಿಂದಲೇ ನನ್ನನ್ನು ಬಲ್ಲರು. ಮತ್ತು ಈಗ ನಮ್ಮ ಪಿತೃಗಳಿಗೆ
ದೇವರಿಂದಾದ ವಾಗ್ದತ್ತದ ನಿರೀಕ್ಷೆಗೋಸ್ಕರ ವಿಚಾರಿಸಲ್ಪಡುವವ
೭ ನಾಗಿ ನಿಂತು ಕೊಂಡಿದ್ದೇನೆ. ಅದಕ್ಕೆ ನಮ್ಮ ಹನ್ನೆರಡು ಕುಲಗ
ಳು, ರಾತ್ರಿ ಹಗಲು ಎಡೆ ಬಿಡದೆ ಸೇವೆ ಮಾಡಿ, ಶೇರುತ್ತೇವೆಂದು
೮ ನಿರೀಕ್ಷಿಸುತ್ತವೆ. ಆ ನಿರೀಕ್ಷೆಗೋಸ್ಕರ, ಓ ಅರಸನಾದ ಅಗ್ರಿಪ್ಪ
ನೇ, ಯೆಹೂದ್ಯರು ನನ್ನ ಮೇಲೆ ದೂರು ಹೇಳುತ್ತಾರೆ; ದೇವ
ರು ಸತ್ತವರನ್ನು ಎಬ್ಬಿಸುವದು ನಂಬ ಬಾರದ ಕಾರ್ಯವೆಂದು,
ನೀವು ಎಣಿಸುವದೇನು!

೯ ನಜರೇತಿನವನಾದ ಯೇಸುವಿನ ಹೆಸರಿಗೆ ವಿರೋಧವಾಗಿ ಅನೇ
ಕ ಕಾರ್ಯಗಳನ್ನು ಮಾಡ ಬೇಕೆಂದು, ನಾನು ನನ್ನಲ್ಲಿ ನೆನಸಿ
೧೦ ಕೊಂಡೆನು. ಹಾಗೆಯೇ ಯೆರೂಸಲೇಮಿನಲ್ಲಿ ಮಾಡಿದೆನು. ಮ
ತ್ತು ಪ್ರಧಾನ ಯಾಜಕರಿಂದ ಅಧಿಕಾರವನ್ನು ಹೊಂದಿ, ಪರಿಶುದ್ಧ
ರಲ್ಲಿ ಅನೇಕರನ್ನು ಸೆರೆಮನೆಗಳಲ್ಲಿ ಮುಚ್ಚಿ ಹಾಕಿಸಿ, ಅವರು ಕೊ
೧೧ ಲ್ಲಲ್ಪಡುವಾಗ ಸಮ್ಮತಿಸಿದೆನು. ಮತ್ತು ಎಲ್ಲಾ ಸಭೆಮನೆಗಳಲ್ಲಿ
ಅನೇಕ ಸಾರಿ ಅವರನ್ನು ದಂಡಿಸಿ, ಅವರು ದೂಷಿಸುವ ಹಾಗೆ
ಬಲಾತ್ಕಾರ ಮಾಡಿದೆನು. ಮತ್ತು ಅವರ ಮೇಲೆ ಅಧಿಕವಾಗಿ ವೈ
ರಭ್ರಮೆ ಗೊಂಡು, ಪರಪಟ್ಟಣಗಳ ಪರ್ಯಂತರ ಹಿಂಸಿಸಿದೆನು.

೧೨ ಹೀಗಿರಲಾಗಿ, ನಾನು ಪ್ರಧಾನ ಯಾಜಕರು ಕೊಟ್ಟ ಅಧಿಕಾರ
ದಿಂದಲೂ ಅಪ್ಪಣೆಯಿಂದಲೂ ದಮಸ್ಕಕ್ಕೆ ಹೋಗುವಾಗ,
೧೩ ಮಧ್ಯಾಹ್ನದಲ್ಲಿ, ಓ ಅರಸನೇ, ನನ್ನ ಸುತ್ತಲೂ, ನನ್ನ ಸಂಗಡ
ಪ್ರಯಾಣ ಮಾಡುವವರ ಸುತ್ತಲೂ ಸೂರ್ಯನಿಗಿಂತ ಕಾಂತಿ
ಯುಳ್ಳ ಬೆಳಕು ಆಕಾಶದಿಂದ ಮಿಂಚುವದನ್ನು ಮಾರ್ಗದಲ್ಲಿ
೧೪ ಕಂಡೆನು. ನಾವೆಲ್ಲರು ನೆಲಕ್ಕೆ ಬಿದ್ದ ಮೇಲೆ, ನನ್ನ ಸಂಗಡ ಮಾ
ತಾಡಿ, ಇಬ್ರೀಯ ಭಾಷೆಯಲ್ಲಿ ಸೌಲನೇ, ಸೌಲನೇ, ನನ್ನನ್ನು
ಯಾಕೆ ಹಿಂಸಿಸುತ್ತೀ? ಮುಳ್ಳುಗಳ ಮೇಲೆ ಒದೆಯುವದು ನಿನಗೆ
೧೫ ಕಠಿಣವಾಗಿದೆ, ಎಂದು ಹೇಳುವ ಶಬ್ದವನ್ನು ಕೇಳಿದೆನು. ಆಗ
ನಾನು, ಕರ್ತನೇ, ನೀನು ಯಾರು! ಅನ್ನಲಾಗಿ; ನಾನು, ನೀನು
೧೬ ಹಿಂಸಿಸುವ ಯೇಸುವೇ; ಆದರೆ ನೀನು ಎದ್ದು, ಕಾಲೂರಿ ನಿಂತು
ಕೋ; ಯಾಕಂದರೆ ಪಾಪ ಪರಿಹಾರವನ್ನೂ, ನನ್ನಲ್ಲಿ ಇರುವ
ವಿಶ್ವಾಸದಿಂದ ಪರಿಶುದ್ಧರಾದವರಲ್ಲಿ ಬಾಧ್ಯತೆಯನ್ನೂ ಹೊಂ
ದುವದಕ್ಕೋಸ್ಕರ, ಅವರ ಕಣ್ಣುಗಳನ್ನು ತೆರೆದು, ಅವರನ್ನು
೧೭ ಕತ್ತಲೆಯೊಳಗಿಂದ ಬೆಳಕಿಗೂ, ಸೈತಾನನ ಅಧಿಕಾರದೊಳಗಿಂದ
ದೇವರ ಕಡೆಗೂ, ತಿರುಗಿಸುವದಕ್ಕೆ, ಪ್ರಜೆಗೂ ನಾನು ಈಗ ನಿನ್ನ
೧೮ ನ್ನು ಕಳುಹಿಸುವ ಜನಾಂಗಗಳಿಗೂ ನಿನ್ನನ್ನು ತಪ್ಪಿಸಿ, ನೀನು
ನೋಡಿದವುಗಳಿಗೂ, ನಾನು ಕಾಣಿಸಿ ಕೊಂಡು, ಪ್ರತ್ಯಕ್ಷವಾಗಿ
ನಿನಗೆ ತಿಳಿಸುವದಕ್ಕಿರುವ ಕಾರ್ಯಗಳಿಗೂ, ಸಾಕ್ಷಿಯಾಗಿಯೂ

ಉಳಿಗದವನಾಗಿಯೂ ನಿನ್ನನ್ನು ಮುಂದೇಮಿನ ಬೇಕೆಂದು,
ನಿನಗೆ ಪ್ರತ್ಯಕ್ಷವಾಗಿದ್ದೇನೆ, ಅಂದನು.
೧೯ ಆದದರಿಂದ, ಅರಸನಾದ ಅಗ್ರಿಪ್ಪನೇ, ಆಕಾಶದಿಂದಾದ ದ
೨೦ ರ್ಶನಕ್ಕೆ ಅವಿಧೇಯನಾಗದೆ, ಮೊದಲು ದಮಸ್ಕದಲ್ಲಿರುವವರಿ
ಗೂ ಯೆರೂಸಲೇಮಿನವರಿಗೂ, ಆ ಮೇಲೆ ಸಮಸ್ತ ಯೆಹೂ
ದ್ಯ ದೇಶದಲ್ಲಿಯೂ, ಜನಾಂಗಗಳಿಗೂ, ಮಾನಸಾಂತರ ಪಟ್ಟು,
ಮಾನಸಾಂತರಕ್ಕೆ ತಕ್ಕ ಕ್ರಿಯೆಗಳನ್ನು ಮಾಡಿ, ದೇವರ ಕಡೆಗೆ
೨೧ ತಿರುಗ ಬೇಕೆಂದು ತಿಳಿಸಿದೆನು. ಇವುಗಳಿಗೋಸ್ಕರ ಯೆಹೂ
ದ್ಯರು ದೇವಾಲಯದಲ್ಲಿ ನನ್ನನ್ನು ಹಿಡಿದು ಕೊಳ್ಳುವದಕ್ಕೆ ಪ್ರ
೨೨ ಯತ್ನ ಮಾಡಿದರು. ಆದರೆ ದೇವರಿಂದ ಸಹಾಯವನ್ನು ಹೊಂ
ದಿ, ಪ್ರವಾದಿಗಳೂ ಮೋಶೆಯೂ, ಸಂಭವಿಸುವದಕ್ಕಿರುತ್ತವೆಂದು
೨೩ ಹೇಳಿದವುಗಳೇ ಹೊರ್ತು, ಮತ್ತೇನೂ ಹೇಳದೆ, ಹಿರಿ ಕಿರಿಯರಿ
ಗೆ ಸಾಕ್ಷಿ ಕೊಟ್ಟು, ಇಂದಿನ ವರಿಗೂ ನಿಂತಿದ್ದೇನೆ. ಏನಂದರೆ,
ಕ್ರಿಸ್ತನು ಶ್ರಮೆ ಪಟ್ಟು, ಸತ್ತವರೊಳಗಿಂದ ಎದ್ದ ಮೊದಲಿನವನಾ
ಗಿ, ಜನರಿಗೂ ಜನಾಂಗಗಳಿಗೂ ಬೆಳಕನ್ನು ತಿಳಿಸುವದಕ್ಕಿದ್ದಾನೆ.
೨೪ ಅವನು ಈ ಮೇರೆಗೆ ಪ್ರತಿವಾದ ಮಾಡುವಾಗ ಫೆಸ್ತನು ಮಹಾ
ಶಬ್ದದಿಂದ, ಪೌಲನೇ, ಮರುಳಾಗಿದ್ದೀ; ಬಹು ವಿದ್ಯವು ನಿನ್ನನ್ನು
೨೫ ಮರುಳುಗೊಳಿಸುತ್ತದೆ, ಅಂದನು. ಅದಕ್ಕೆ ಅವನು, ಶ್ರೀಮತಿ
ಫೆಸ್ತನೇ, ನಾನು ಮರುಳಾಗಲಿಲ್ಲ; ಸತ್ಯವೂ ಸ್ವಸ್ಥ ಬುದ್ಧಿಯೂ
೨೬ ಆದ ವಾಕ್ಯಗಳನ್ನು ನುಡಿಯುತ್ತೇನೆ; ಹ್ಯಾಗಂದರೆ ಅರಸನು
ಇವುಗಳ ವಿಷಯ ತಿಳಿದವನಾಗಿದ್ದಾನೆ; ಅವನ ಮುಂದೆ ಧೈರ್ಯ
ವಾಗಿ ಮಾತಾಡುತ್ತೇನೆ; ಯಾಕಂದರೆ ಇವುಗಳಲ್ಲಿ ಒಂದಾದರೂ
ಅವನಿಗೆ ಮರೆಯಾದದ್ದಲ್ಲವೆಂದು, ನಂಬುತ್ತೇನೆ; ಇದು ಮೂಲೆ
೨೭ ಯಲ್ಲಿ ನಡೆದದ್ದಲ್ಲ. ಅರಸನಾದ ಅಗ್ರಿಪ್ಪನೇ, ಪ್ರವಾದಿಗಳಲ್ಲಿ
ವಿಶ್ವಾಸಿಸುತ್ತೀಯೋ? ವಿಶ್ವಾಸಿಸುತ್ತೀ ಎಂದು ಬಲ್ಲೆನು, ಅಂದ
೨೮ ನು. ಆಗ ಅಗ್ರಿಪ್ಪನು ಪೌಲನಿಗೆ, ನಾನು ಕ್ರಿಸ್ತನವನಾಗುವ
ಹಾಗೆ, ನನ್ನನ್ನು ಸ್ವಲ್ಪ ಕಡಿಮೆಯಾಗಿ ಸಮ್ಮತಿ ಪಡಿಸುತ್ತೀ,
೨೯ ಅಂದನು. ಆಗ ಪೌಲನು, ನೀನು ಮಾತ್ರವಲ್ಲ, ಈ ಹೊತ್ತು
ನನ್ನನ್ನು ಕೇಳುವವಕೆಲ್ಲರು, ಈ ಬಂಧಗಳೇ ಹೊರ್ತು, ಸ್ವಲ್ಪ
ಕಡಿಮೆಯಾಗಿ ಮಾತ್ರವಲ್ಲ, ಪೂರ್ಣವಾಗಿ ನನ್ನಂಥವರಾಗ ಬೇ
ಕೆಂದು, ದೇವರ ಮುಂದೆ ಅಪೇಕ್ಷಿಸುತ್ತೇನೆ, ಅಂದನು.
೩೦ ಅವನು ಇವುಗಳನ್ನು ಹೇಳಿದ ಮೇಲೆ, ಅರಸನೂ, ಅಧಿಪತಿ
ಯೂ, ಬೆರ್ನಿಕೆಯೂ, ಅವರ ಸಂಗಡ ಕೂತು ಕೊಂಡವರೂ
೩೧ ಎದ್ದರು. ಮತ್ತು ಅತ್ತಲು ಹೋಗಿ, ಈ ಮನುಷ್ಯನು ಮರಣ
ಕ್ಕಾದರೂ ಬಂಧಗಳಿಗಾದರೂ ಪಾತ್ರವಾದದ್ದೇನೂ ಮಾಡಲಿಲ್ಲ
೩೨ ವೆಂದು, ಒಬ್ಬರ ಸಂಗಡಲೊಬ್ಬರು ಮಾತಾಡಿದರು. ಆಗ ಅ
ಗ್ರಿಪ್ಪನು ಫೆಸ್ತನಿಗೆ, ಈ ಮನುಷ್ಯನು ಕೈಸರನಿಗೆ ಮೊರೆ ಇಡ
ದೆ ಇದ್ದರೆ, ಬಿಡಲ್ಪಡ ಬಹುದಾಗಿತ್ತು, ಅಂದನು.

## ೨೩. ಸಂಧಿ.

೧ ಆದರೆ, ನಾವು ಇತಾಲ್ಯಕ್ಕೆ ಹಡಗ ಮಾರ್ಗವಾಗಿ ಹೋಗ
ಬೇಕೆಂದು ನಿಶ್ಚಯಿಸಲ್ಪಟ್ಟಾಗ, ಪೌಲನನ್ನೂ ಬೇರೆ ಕೆಲವು
ಶೆರೆಯವರನ್ನೂ ಮಹಾ ರಾಜನದೆಂದು ಕರೆಯಲ್ಪಟ್ಟ ರಾಣುವೆ
ಗೆ ಶತಾಧಿಪತಿಯಾದ ಯೂಲ್ಯನೆಂಬವನ ಕೈಗೆ ಒಪ್ಪಿಸಿದರು.
೨ ಹೀಗಿರಲಾಗಿ, ಅದ್ರಮುತ್ತಿಯದ ಹಡಗವನ್ನೇರಿ, ಆಸ್ಯದ ತೀರ್ಮೆ
ಗಳ ಕಡೆಗೆ ಹೋಗ ಬೇಕೆಂದು, ಹೊರಟೆವು. ಥೆಸ್ಸಲೊನೀಕ
ದಿಂದ ಬಂದ ಮಕೆದೋನ್ಯದವನಾದ ಅರಿಸ್ತಾರ್ಕನು ನಮ್ಮ
ಸಂಗಡ ಇದ್ದನು. ಮಾರಣೆ ದಿವಸ ಸಿದೋನಿಗೆ ಶೇರದೆವು.
೩ ಯೊಲ್ಯನು ಪೌಲನಿಗೆ ಉಪಚಾರ ಮಾಡಿ, ಸ್ನೇಹಿತರ ಬಳಿಗೆ
ಹೋಗಿ, ವಿಶ್ರಮಿಸಿ ಕೊಳ್ಳ ಬಹುದೆಂದು, ಅಪ್ಪಣೆ ಕೊಟ್ಟನು.
೪ ಅಲ್ಲಿಂದ ಹೊರಟು, ಘೂಳ್ಳಿಗಳು ಎದುರಾಗಿದ್ದ ಕಾರಣ, ಕುಪ್ರದ
೫ ಕೆಳಗಾಗಿ ಹಡಗವನ್ನು ನಡಿಸಿದೆವು. ಮತ್ತು ಕಿಲಿಕ್ಯಕ್ಕೂ ಪಂಫು
ಲ್ಯಕ್ಕೂ ಎರುರಾಗಿರುವ ಸಮುದ್ರವನ್ನು ದಾಟಿ, ಲೂಕ್ಯದಲ್ಲಿರು
ವ ಮುರಕ್ಕೆ ಬಂದೆವು.
೬ ಅಲ್ಲಿ ಶತಾಧಿಪತಿಯು ಇತಾಲ್ಯಕ್ಕೆ ಹೋಗುವ ಅಲೆಕ್ಸಾಂದ್ರಿ
ಯದ ಹಡಗವನ್ನು ಕಂಡು, ನಮ್ಮನ್ನು ಅದರ ಮೇಲೆ ಏರಿಸಿದನು.
೭ ಬಹು ದಿವಸಗಳು ಮೆಲ್ಲಗೆ ಹೋಗಿ, ಕ್ನೀದಕ್ಕೆ ಎದುರಾಗಿ ಬರುವ
ದಕ್ಕೆ ಪ್ರಯಾಸ ಪಟ್ಟದರಿಂದ, ಘೂಳ್ಳಿಯು ನಮ್ಮನ್ನು ತಡೆ
ಯುವ ಕಾರಣ, ಕ್ರೇತದ ಕೆಳಗಾಗಿ ಸಲ್ಮೋನನ ಕಡೆಗೆ ಹಡಗವ
೮ ನ್ನು ನಡಿಸಿದೆವು. ಪ್ರಯಾಸದಿಂದ ಅದನ್ನು ದಾಟಿ, ಬಳ್ಳೇ ಕೇ
ವುಗಳೆಂಬ ಒಂದು ಸ್ಥಳಕ್ಕೆ ಬಂದೆವು. ಅದರ ಹತ್ತರ ಲಸಾಯ
ಪಟ್ಟಣವು ಉಂಟು.
೯ ಬಹು ಕಾಲ ಕಳೆದ ಮೇಲೆ, ಉಪವಾಸದ ಕಾಲ ಗತಿಸಿ ಹೋದ
ಕಾರಣ, ಹಡಗದ ಪ್ರಯಾಣ ಗಂಡಾಂತರವಾದದರಿಂದ, ಪೌಲ
೧೦ ನು ಎಚ್ಚರಿಸಿ, ಅವರಿಗೆ, ಜನರೇ, ನಮ್ಮ ಪ್ರಯಾಣದಿಂದ ಹಡಗ
ಕ್ಕೂ ಅದರ ಹೊರೆಗೂ ಮಾತ್ರವಲ್ಲ, ನಮ್ಮ ಪ್ರಾಣಗಳಿಗೂ
ಸಹ, ಮೋಸವೂ ಬಹಳ ನಷ್ಟವೂ ಲಿಗುವದೆಂದು ನೋಡುತ್ತೇ
೧೧ ನೆ, ಅಂದನು. ಆದರೆ ಶತಾಧಿಪತಿಯು ಪೌಲನು ಹೇಳಿದ ಮಾ
ತುಗಳಿಗಿಂತ ಹಡಗವನ್ನಾಳುವವನೂ ಅದರ ಯಜಮಾನನೂ
೧೨ ಹೇಳುವದನ್ನು ನಂಬಿದನು. ಮತ್ತು ಹಿಮ ಕಾಲ ಕಳೆಯುವದ
ಕ್ಕೆ ಆ ಕೇವು ಒಳ್ಳೇದಲ್ಲದ ಕಾರಣ, ಅನೇಕರು, ಈ ಸ್ಥಳವನ್ನು
ಬಿಟ್ಟು ಹ್ಯಾಗಾದರೂ ಫೊಯಿನಿಕೆಗೆ ಶೇರಿ ಹಿಮ ಕಾಲ ಕಳೆಯ
ಬೇಕೆಂದು, ಆಲೋಚನೆ ಹೇಳಿದರು. ಅದು ನೈರುತ್ಯ ವಾಯು
ವ್ಯ ದಿಕ್ಕುಗಳಿಗೆ ಎದುರಾಗಿರುವಂಥ ಕ್ರೇತೆಯ ಕೇವು ಆಗಿದೆ.
೧೩ ದಕ್ಷಿಣ ಘೂಳ್ಳಿ ಮೆಲ್ಲಗೆ ಬೀಸುವಾಗ, ತಮ್ಮ ಆಲೋಚನೆ
ಪ್ರಾಪ್ತವಾಯಿತೆಂದು ನೆನಸಿ, ಲಂಗರವನ್ನು ಎಳೆದು, ಕ್ರೇತೆಗೆ
೧೪ ಸಮೀಪವಾಗಿ ಹೋದರು. ಸ್ವಲ್ಪ ಹೊತ್ತಾದ ಮೇಲೆ, ಯು
ರೊಕ್ಲೊದೋನೆಂಬ ಬಿರು ಘೂಳ್ಳಿಯು ಹಡಗಕ್ಕೆ ಎದುರಾಗಿ ಬಡಿ
೧೫ ಯಿತು. ಹಡಗವು ಸಹ ಸೀಕ್ಕಿ ಕೊಂಡು, ಘೂಳ್ಳಿಯನ್ನು ಎದು
ರಿಸಲಾರದೆ ಇದ್ದದರಿಂದ, ಚುಕಾಣಿ ಬಿಟ್ಟು, ಧೈರ್ಯಪಟ್ಟೆವು.
೧೬ ಮತ್ತು ಕ್ಲೌದೆ ಎಂಬ ದ್ವೀಪದ ಕೆಳಗಾಗಿ ಓಡಿ, ಪ್ರಯಾಸದಿಂದ
೧೭ ದೋಣಿಯನ್ನು ಹಿಡಿದು ಕೊಂಡೆವು. ಅದನ್ನು ಎತ್ತಿ, ಸಾಧನ
ಗಳನ್ನು ಮಾಡಿ ಕೊಂಡು, ಹಡಗವನ್ನು ಕೆಳಗಿನಿಂದ ಬಿಗಿ ಕಟ್ಟಿದ
ರು. ಮತ್ತು ಕಳ್ಳುಸುಬಿನಲ್ಲಿ ಬಿದ್ದೇವೆಂದು ಭಯ ಪಟ್ಟು, ಪಗ
೧೮ ಳನ್ನಿಳಿಸಿ, ಹಾಗೆ ಬಡಿಯಲ್ಪಟ್ಟು ಹೋದರು. ಮತ್ತು ಬಹು
ಘೂಳ್ಳಿ ನಮ್ಮನ್ನು ಬಡಿಯುವ ಕಾರಣ, ಮಾರಣೆ ದಿವಸ ಸಾ
೧೯ ಮಾನು ಬಿಸಾಟು ಬಿಟ್ಟರು. ಮೂರನೇ ದಿವಸದಲ್ಲಿ ಸ್ವಂತ
೨೦ ಕೈಗಳಿಂದ ಹಡಗದ ಸಾಮಗ್ರಿಯನ್ನು ಬಿಸಾಟು ಬಿಟ್ಟೆವು. ಮ
ತ್ತು ಬಹು ದಿವಸಗಳಿಂದ ಸೂರ್ಯನನ್ನಾದರೂ ನಕ್ಷತ್ರಗಳ
ನ್ನಾದರೂ ಕಾಣದೆ, ನಮ್ಮ ಮೇಲೆ ಬಹು ಬಿರು ಘೂಳ್ಳಿ ಬಿದ್ದಿರು
ವಾಗ, ರಕ್ಷಿಸಲ್ಪಡುವ ನಂಬಿಕೆ ಏನೂ ಕಾಣದೆ ಹೋಯಿತು.
೨೧ ಆದರೆ ಬಹು ಕಾಲ ಅವರು ಆಹಾರವಿಲ್ಲದೆ ಇದ್ದಾಗ, ಪೌಲನು



ಅವರ ಮಧ್ಯದಲ್ಲಿ ನಿಂತು ಕೊಂಡು, ಓ ಜನರೇ, ನನ್ನ ಮಾತು
ಕೇಳಿ, ಕ್ರೇತೆಯನ್ನು ಬಿಟ್ಟು ಹೋಗದೆ, ಈ ಮೋಸದಲ್ಲಿಯೂ
೨೨ ನಷ್ಟದಲ್ಲಿಯೂ ಬೀಳದೆ ಇರ ಬೇಕಾಗಿತ್ತು. ಆದಾಗ್ಯೂ ಈಗ
ಧೈರ್ಯವಾಗಿರೆಂದು, ನಿಮ್ಮನ್ನು ಬೇಡಿ ಕೊಳ್ಳುತ್ತೇನೆ; ಯಾ
ಕಂದರೆ ಹಡಗದ ನಷ್ಟವೇ ಹೊರ್ತು, ನಿಮ್ಮೊಳಗೆ ಯಾರ ಪ್ರಾ
೨೩ ಣಕ್ಕೂ ನಷ್ಟವಾಗುವದಿಲ್ಲ. ಯಾಕಂದರೆ ನಾನು ವಶವಾಗಿದ್ದು
ಸೇವಿಸುವ ದೇವರ ದೂತನು ಈ ರಾತ್ರಿಯಲ್ಲಿ ನನ್ನ ಹತ್ತರ
೨೪ ನಿಂತು ಕೊಂಡು, ಪೌಲನೇ, ಭಯ ಪಡ ಬೇಡ; ನೀನು ಕೈಸರನ
ಮುಂದೆ ನಿಲ್ಲ ಬೇಕು; ಮತ್ತು, ಇಗೋ, ದೇವರು ನಿನ್ನ ಸಂಗಡ
ಹಡಗದಲ್ಲಿರುವರೆಲ್ಲರನ್ನು ನಿನಗೆ ದಯೆ ಪಾಲಿಸಿದ್ದಾನೆ, ಅಂದನು.
೨೫ ಆದದರಿಂದ, ಜನರೇ, ಧೈರ್ಯವಾಗಿರಿ; ಯಾಕಂದರೆ, ನನಗೆ
ಹೇಳಲ್ಪಟ್ಟಿ ಪ್ರಕಾರವೇ ಆಗುವದೆಂದು, ದೇವರನ್ನು ನಂಬುತ್ತೇನೆ;
೨೬ ಆದರೆ ಬಂದು ದ್ವೀಪದಲ್ಲಿ ನಾವು ಬೀಳ ಬೇಕಾಗಿದೆ, ಅಂದನು.
೨೭ ತರುವಾಯ ಹದಿನಾಲ್ಕನೇ ರಾತ್ರಿ ಆದಾಗ, ನಾವು ಆದ್ರಿಯ
ಸಮುದ್ರದಲ್ಲಿ ಅಲೆದು ಪೈಯಲ್ಪಟ್ಟುತ್ತಿರಲಾಗಿ, ಮಧ್ಯ ರಾತ್ರಿ
ಯಲ್ಲಿ ನಾವಿಕರು, ಬಂದು ದೇಶದ ಹತ್ತರ ಬಂದೆವೆಂದು ನೆನಸಿ,
೨೮ ಅಳತೆ ಗುಂಡನ್ನು ಹಾಕಿ, ಇಪ್ಪತ್ತು ಮಾರು ಎಂದು, ಕಂಡರು.
ಇನ್ನು ಸ್ವಲ್ಪ ದೂರ ಹೋದ ಮೇಲೆ, ತಿರಿಗಿ ಹಾಕಿ, ಹದಿನೈ
೨೯ ದು ಮಾರು ಎಂದು ಕಂಡರು. ಆಗ ಕೊರಕಲಾದ ಸ್ಥಳದಲ್ಲಿ ಬಿ
ದ್ದೇವೆಂದು ಭಯ ಪಟ್ಟು, ಹಿಂಭಾಗದಲ್ಲಿಂದ ನಾಲ್ಕು ಲಂಗರುಗ
ಳನ್ನು ಹಾಕಿ, ಬೆಳಕಾಗ ಬೇಕೆಂದು ಅಪೇಕ್ಷಿಸಿದರು.
೩೦ ಆದರೆ ನಾವಿಕರು ಹಡಗದೊಳಗಿಂದ ಓಡಿ ಹೋಗ ಹುಡಿಕಿ,
ತಾವು ಮುಂಭಾಗದಲ್ಲಿಂದ ಲಂಗರುಗಳನ್ನು ಹಾಕ ಬೇಕೆಂಬುವ
೩೧ ಹಾಗೆ ಹೇಳಿ, ದೋಣಿಯನ್ನು ಸಮುದ್ರದಲ್ಲಿ ಇಳಿಸುವಾಗ, ಪೌಲ
ನು ಶತಾಧಿಪತಿಗೂ ರಾಣುವೆಯವರಿಗೂ, ಇವರು ಹಡಗದಲ್ಲಿ
ಇದ್ದರೆ ಹೊರ್ತು, ನೀವು ತಪ್ಪಿಸಿ ಕೊಳ್ಳಲಾರಿರಿ, ಅಂದನು.
೩೨ ಆಗ ರಾಣುವೆಯವರು ದೋಣಿಯ ಹಗ್ಗಗಳನ್ನು ಕೊಯಿದು,
ಅದನ್ನು ಬೀಳ ಗೊಡಿಸಿದರು.
೩೩ ಮತ್ತು ಬೆಳಕಾಗುವದ್ದರಲ್ಲಿ ಪೌಲನು, ಊಟ ಮಾಡ ಬೇಕೆಂ
ದು, ಎಲ್ಲರನ್ನು ಬೇಡಿ ಕೊಂಡು, ಈ ಹೊತ್ತು ನೀವು ಕಾದು
ಕೊಂಡು, ಏನೂ ಉಣ್ಣದೆ, ಆಹಾರವಿಲ್ಲದೆ ಕಳೆದ ಹದಿನಾಲ್ಕನೇ
೩೪ ದಿವಸವಾಯಿತು. ಆದದರಿಂದ ಆಹಾರ ತಕ್ಕೊಳ್ಳ ಬೇಕೆಂದು,
ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಇದು ನಿಮ್ಮ ಕ್ಷೇಮಕ್ಕೋಸ್ಕ
ರ ಅವಶ್ಯವಾದದ್ದು. ಯಾಕಂದರೆ ನಿಮ್ಮಲ್ಲಿ ಯಾರ ತಲೆ
೩೫ಯಿಂದಾದರೂ ಒಂದು ಕೂದಲು ಬೀಳುವದಿಲ್ಲ, ಅಂದನು. ಇವು
ಗಳನ್ನು ಹೇಳಿ, ರೊಟ್ಟಿಯನ್ನು ತೆಗೆದು ಕೊಂಡು, ಎಲ್ಲರ ಮುಂ
ದೆ ದೇವರಿಗೆ ಸ್ತೋತ್ರ ಮಾಡಿ, ಮುರಿದು, ತಿನ್ನಲಾರಂಭಿಸಿದನು.
೩೬ ಆಗ ಎಲ್ಲರು ಧೈರ್ಯ ಪಟ್ಟು, ತಾವು ಸಹ ಆಹಾರವನ್ನು ತ
೩೭ ಕ್ಕೊಂಡರು. ಹಡಗದಲ್ಲಿದ್ದ ನಾವೆಲ್ಲರು ಇನ್ನೂರು ಎಪ್ಪತ್ತಾರು
೩೮ ಮಂದಿಯಾಗಿದ್ದೆವು. ತೃಪ್ತಿ ಆದ ಮೇಲೆ, ಧಾನ್ಯವನ್ನು ಸಮು
ದ್ರದಲ್ಲಿ ಬಿಸಾಟು, ಹಡಗವನ್ನು ಹಾಳ ಮಾಡಿದರು.
೩೯ ಬೆಳಕಾದ ಮೇಲೆ ಆ ಭೂಮಿಯ ಗುರುತನ್ನು ಅರಿಯದೆ
ಇದ್ದರು. ಆದರೆ ಇಳಿಜಾರಾದ ಒಂದು ಕೊಲ್ಲಿಯನ್ನು ನೋಡಿ,
ಸಾಧ್ಯವಾದರೆ, ಹಡಗವನ್ನು ಅದರೊಳಗೆ ನೂಕ ಬೇಕೆಂದು
೪೦ ಇಷ್ಟೈಸಿದರು. ಆಗ ಲಂಗರುಗಳನ್ನು ಕೊಯಿದು, ಸಮುದ್ರದ
ಲ್ಲಿ ಬಿಟ್ಟು ಬಿಟ್ಟು, ಚುಕಾಣಿಯ ಕಟ್ಟುಗಳನ್ನು ಬಿಚ್ಚಿ, ದೊಡ್ಡ
ಪಟವನ್ನು ಘೂಳ್ಳಾಗೆ ಸರಿಯಾಗಿ ಎತ್ತಿ, ಹಡಗವನ್ನು ಥಡದ ಕಡೆ
೪೧ ಗೆ ನಡಿಸಿದರು. ಆದರೆ ಎರಡು ಸಮುದ್ರದ ಶಳಗಳು ಕೂಡುವ
ಸ್ಥಳದಲ್ಲಿ ಬಿದ್ದು, ಹಡಗವನ್ನು ತಗಲಿಸಿದ್ದರಿಂದ, ಮುಂಭಾಗವು
ಶಿಕ್ಕಿ ಕೊಂಡು, ಅಲ್ಲಾಡದೆ ನಿಂತಿತು. ಹಿಂಭಾಗವು ತೆರೆಗಳ ಬಲ
ದಿಂದ ಬಿಚ್ಚಿ ಹೋಯಿತು.
೪೨ ಆಗ ರಾಣುವೆಯವರು, ಶೆರೆಯವರಲ್ಲಿ ಯಾವವಾದರೂ
ಈಜಿ, ಓಡಿ ಹೋಗದ ಹಾಗೆ, ಅವರನ್ನು ಕೊಲ್ಲ ಬೇಕೆಂದು,
೪೩ ಆಲೋಚನೆ ಹೇಳಿದರು. ಆದರೆ ಶತಾಧಿಪತಿಯು, ಪೌಲನನ್ನು
ಸಂರಕ್ಷಿಸ ಬೇಕೆಂದು, ಅವರ ಆಲೋಚನೆಗೆ ಅಡ್ಡಿ ಮಾಡಿ, ಈಜ
ಬಲ್ಲವರು ಮೊದಲು ಘುಮ್ಮುಕಿ, ಭೂಮಿಗೆ ಶೇರ ಬೇಕೆಂದೂ,
೪೪ ಮಿಕ್ಕಾದವರಲ್ಲಿ ಕೆಲವರು ಹಲಿಗೆಗಳ ಮೇಲೆಯೂ, ಕೆಲವರು ಹಡ
ಗದಿಂದ ತೇಲುವ ತುಂಡುಗಳ ಮೇಲೆಯೂ, ಶೇರ ಬೇಕೆಂದೂ,
ಅಪ್ಪಣೆ ಕೊಟ್ಟನು. ಈ ಪ್ರಕಾರ ಎಲ್ಲರು ರಕ್ಷಿಸಲ್ಪಟ್ಟು, ಭೂ
ಮಿಗೆ ಶೇರಿದರು.

## ೨೮. ಸಂಧಿ.

೧ ಮತ್ತು ರಕ್ಷಿಸಿ ಕೊಂಡ ಮೇಲೆ, ಆ ದ್ವೀಪದ ಹೆಸರು ಮೆಲಿತೆ
೨ ಎಂದು, ತಿಳು ಕೊಂಡರು. ಅಲ್ಲಿರುವ ಬರ್ಬರರು ಅಪರೂಪವಾ
ದ ದಯವನ್ನು ನಮಗೆ ತೋರಿಸಿ, ಆಗ ಬೀಳುವ ಮಳೆಗೋಸ್ಕ
ರವೂ ಛಳಿಗೋಸ್ಕರವೂ ಬೆಂಕಿ ಹೊತ್ತಿಸಿ, ನಮ್ಮೆಲ್ಲರನ್ನು ಶೇರಿ
ಸಿ ಕೊಂಡರು.
೩ ಆದರೆ ಪೌಲನು ಕಟ್ಟಿಗೆ ರಾಶಿಯನ್ನು ಕೂಡಿಸಿ, ಬೆಂಕಿಯ
ಮೇಲೆ ಹಾಕುವಾಗ, ಒಂದು ಹಾವು ಶೆಖೆಯಿಂದ ಹೊರಗೆ ಬಂದು,
೪ ಅವನ ಕೈ ಕಚ್ಚಿತು. ಆ ಬರ್ಬರರು ಅವನ ಕೈಯಿಂದ ತೂ
ಗಾಡುವ ಜಂತನ್ನು ನೋಡಿ, ಈ ಮನುಷ್ಯನು ಕೊಲೆಗಾರನೇ
ಸರಿ; ಇವನು ಸಮುದ್ರಕ್ಕೆ ತಪ್ಪಿಸಿ ಕೊಂಡಾಗ್ಯೂ, ನ್ಯಾಯವು
ಅವನನ್ನು ಬದುಕಲೀಸದು ಎಂದು, ತಮ್ಮೊಳಗೆ ಹೇಳಿ ಕೊಂಡ
೫ ರು. ಆದರೆ ಅವನು ಆ ಜಂತನ್ನು ಬೆಂಕಿಯೊಳಗೆ ಝಾಡಿಸಿ
೬ ಹಾಕಿ, ಏನೂ ನಷ್ಟ ಪಡಲಿಲ್ಲ. ಅವನು ಬಾತು ಹೋಗುವನೋ?
ಇಲ್ಲವೆ ಥೆಪ್ಪನೆ ಬಿದ್ದು ಸಾಯುವನೋ? ಎಂದು ಅವರು ಕಾದು
ಕೊಂಡರು. ಬಹಳ ಹೊತ್ತು ಕಾದು ಕೊಂಡ ಮೇಲೆ, ಅವನಿಗೆ ಏ
ನೂ ಕೇಡು ಸಂಭವಿಸಲಿಲ್ಲವೆಂದು ನೋಡಿ, ಬೇರೆ ಯೋಚನೆ
ಮಾಡಿ, ಅವನು ದೇವರು, ಅಂದರು.
೭ ಆ ಸ್ಥಳಕ್ಕೆ ಸಮೀಪವಾಗಿ, ದ್ವೀಪದ ಶ್ರೇಷ್ಠನಾದ ಪೊಪ್ಲಿಯ
ನೆಂಬವನ ಭೂಮಿ ಇತ್ತು. ಇವನು ನಮ್ಮನ್ನು ಅಂಗೀಕರಿಸಿ, ಮೂ
೮ ರು ದಿವಸ ಉಪಚರಿಸಿ ಆತಿಥ್ಯ ಮಾಡಿದನು. ಮತ್ತು ಪೊಪ್ಲಿಯ
ನ ತಂದೆಯು ಜ್ವರದಿಂದಲೂ ಉಚ್ಚಾಟದಿಂದಲೂ ಉಪದ್ರ ಪ
ಟ್ಟು ಬಿದ್ದಿರಲಾಗಿ, ಪೌಲನು ಅವನ ಬಳಿಗೆ ಪ್ರವೇಶಿಸಿ, ಪ್ರಾರ್ಥನೆ
ಮಾಡಿ, ಅವನ ಮೇಲೆ ಕೈಗಳನ್ನಿಟ್ಟು, ಅವನನ್ನು ಸ್ವಸ್ಥ ಮಾಡಿ
೯ ದನು. ಇದು ಸಂಭವಿಸಿದ್ದರಿಂದ, ದ್ವೀಪದಲ್ಲಿದ್ದ ಮಿಕ್ಕಾದ ರೋ
೧೦ ಗಿಷ್ಠರು ಸಹ ಬಂದು, ಗುಣವಾದರು. ಇವರು ಬಹಳ ಮಾನಗ
ಳಿಂದ ನಮ್ಮನ್ನು ಸನ್ಮಾನಿಸಿ, ನಾವು ಹೊರಡುವಾಗ, ಬೇಕಾದವು
ಗಳನ್ನು ನಮಗೆ ತಂದು ಕೊಟ್ಟರು.
೧೧ ಮತ್ತು ಮೂರು ತಿಂಗಳಾದ ಮೇಲೆ, ಮಿಥುನವೆಂಬ ಧ್ವಜವು
೧೨ ಳ್ಳ, ಆ ದ್ವೀಪದಲ್ಲಿ ಹಿಮ ಕಾಲವನ್ನು ಕಳೆದ, ಅಲೆಕ್ಸಾಂದ್ರಿಯ

ದ ಹಡಗವನ್ನೇರಿ, ಹೊರಟು, ಸುರಕೂಸಕ್ಕೆ ಬಂದು, ಮೂರು
ದಿವಸ ನಿಂತಿವು. ಅಲ್ಲಿಂದ ಸುತ್ತಿ ಕೊಂಡು, ಕೇಗಿಯಕ್ಕೆ ಸೇರಿ
೧೩ ದೆವು. ಒಂದು ದಿನವಾದ ಮೇಲೆ, ದಕ್ಷಿಣ ಘಾಳಿ ಬೀಸುವಾಗ,
೧೪ ಎರಡು ದಿನ ಪ್ರಯಾಣವಾಗಿ ಪೊತಿಯೊಲಕ್ಕೆ ಬಂದೆವು. ಅಲ್ಲಿ
ನಮಗೆ ಶಿಕ್ಕಿದ ಸಹೋದರರು, ತಮ್ಮ ಸಂಗಡ ಏಳು ದಿವಸ
ಇರ ಬೇಕೆಂದು, ಬೇಡಿ ಕೊಂಡರು. ಮತ್ತು ಈ ಪ್ರಕಾರ ರೋ
೧೫ ಮಕ್ಕೆ ಬಂದೆವು. ಅಲ್ಲಿರುವ ಸಹೋದರರು ನಮ್ಮ ಸಮಾಚಾ
ರವನ್ನು ಕೇಳಿ, ಅಪ್ಪಿಯ ಬೇಟೆಯ ಪರ್ಯಂತರಕ್ಕೂ, ತ್ರಿಚ
ತ್ರದ ಪರ್ಯಂತರಕ್ಕೂ, ನಮಗೆದುರು ಹೊರಟು ಬಂದರು.
ಪೌಲನು ಅವರನ್ನು ನೋಡಿ, ದೇವರಿಗೆ ಸ್ತೋತ್ರ ಮಾಡಿ, ಧೈ
ರ್ಯ ಗೊಂಡನು.

೧೬ ಮತ್ತು ನಾವು ರೋಮಕ್ಕೆ ಬಂದಾಗ, ಶತಾಧಿಪತಿಯು ಶೆರೆ
ಯವರನ್ನು ಸೈನ್ಯಾಧಿಪತಿಗೆ ಒಪ್ಪಿಸಿದನು. ಆದರೆ ತನ್ನನ್ನು
ಕಾಯುವ ರಾಣುವೆಯವನ ಸಂಗಡ ಪ್ರತ್ಯೇಕವಾಗಿ ಇರ ಬಹು
ದೆಂದು, ಪೌಲನಿಗೆ ಅಪ್ಪಣೆ ಆಯಿತು.

೧೭ ಮತ್ತು ಮೂರು ದಿವಸಗಳಾದ ಮೇಲೆ, ಆದದ್ದೇನಂದರೆ, ಪೌ
ಲನು ಯೆಹೂದ್ಯರ ಶ್ರೇಷ್ಠರನ್ನು ಕೂಡಿ ಕರಿಸಿದನು. ಅವರು
ಕೂಡಿ ಬಂದ ಮೇಲೆ, ಅವರಿಗೆ, ಸಹೋದರರಾದ ಜನರೇ, ನಾನು
ಜನರಿಗಾದರೂ ಪಿತೃಗಳ ಸಂಪ್ರದಾಯಗಳಿಗಾದರೂ ವಿರೋಧ
ವಾದದ್ದೇನೂ ಮಾಡದೆ, ಯೆರೂಸಲೇಮಿನಿಂದ ರೋಮಾಯರ
೧೮ ಕೈಗೆ ಶೆರೆಯವನಾಗಿ ಒಪ್ಪಿಸಲ್ಪಟ್ಟೆನು. ಇವರು ನನ್ನನ್ನು ವಿ
ಚಾರಿಸಿ, ನನ್ನಲ್ಲಿ ಮರಣದ ಅಪರಾಧ ಏನೂ ಇಲ್ಲದ್ದರಿಂದ,
೧೯ ನನ್ನನ್ನು ಬಿಡ ಬೇಕೆಂದಿದ್ದರು. ಆದರೆ ಯೆಹೂದ್ಯರು ಅಡ್ಡಿ
ಮಾತಾಡುವದರಿಂದ, ನಾನು ಕೈಸರನಿಗೆ ಮೊರೆ ಇಡ ಬೇಕಾಯಿ
ತು; ಆದರೆ ನನ್ನ ಜನಾಂಗಕ್ಕೆ ವಿರೋಧವಾಗಿ ನಾನು ಏನಾದರೂ
೨೦ ದೂರು ಹೇಳ ಬೇಕಂತಲ್ಲ. ಇದಕ್ಕೆ ನಿಮ್ಮನ್ನು ಕಂಡು, ಮಾತಾ
ಡುವದಕ್ಕೆ ಕರಿಸಿದ್ದೇನೆ; ಯಾಕಂದರೆ ಇಸ್ರಯೇಲಿನ ನಿರೀಕ್ಷೆ
ಗೋಸ್ಕರ ಈ ಸಂಕೋಲೆಯಿಂದ ಬಂಧಿಸಲ್ಪಟ್ಟಿದ್ದೇನೆ, ಅಂದ
೨೧ ನು. ಆಗಲವರು ಅವನಿಗೆ, ನಮಗೆ ಯೆಹೂದದಿಂದ ನಿನ್ನ ವಿಷ
ಯವಾದ ಕಾಗದಗಳು ಬರಲಿಲ್ಲ; ಸಹೋದರರಲ್ಲಿ ಯಾವನಾದ
ರೂ ಬಂದು, ನಿನ್ನ ವಿಷಯವಾಗಿ ಕೆಟ್ಟದ್ದೇನಾದರೂ ತಿಳಿಸಿದ್ದೂ
೨೨ ಮಾತಾಡಿದ್ದೂ ಇಲ್ಲ. ಆದರೆ ನೀನು ನೆನಸುವವುಗಳನ್ನು ನಿನ್ನಿಂ
ದ ಕೇಳ್ಳ ಬೇಕೆಂದಿದ್ದೇವೆ; ಯಾಕಂದರೆ ಈ ಹೊಸ ಮತಕ್ಕೆ ಎಲ್ಲಿ
ಯೂ ಅಡ್ಡಿ ಮಾತಾಡುತ್ತಾರೆಂದು, ನಮಗೆ ತಿಳಿದಿದೆ, ಅಂದರು.

೨೩ ಆಗಲವನಿಗೆ ಒಂದು ದಿವಸವನ್ನು ನೇಮಿಸಿ, ಬಹಳ ಮಂದಿ
ಅವನ ಬಳಿಗೆ ಅವನ ಮನೆಗೆ ಬಂದರು. ಅವನು ಬೆಳಿಗ್ಯೆಯಿಂದ
ಸಂಜೆಯ ಪರ್ಯಂತರ ದೇವರ ರಾಜ್ಯಕ್ಕೆ ಸಾಕ್ಷಿ ಕೊಟ್ಟು,
ಮೋಸೆಯ ನ್ಯಾಯ ಪ್ರಮಾಣದಿಂದಲೂ ಪ್ರವಾದಿಗಳಿಂದಲೂ
ಯೇಸು ಕ್ರಿಸ್ತನ ವಿಷಯಗಳನ್ನು, ಅವರನ್ನು ಸಮ್ಮತಿ ಪಡಿಸ
೨೪ ಬೇಕೆಂದು, ವಿವರಿಸಿದನು. ಮತ್ತು ಕೆಲವರು ಹೇಳಿದವುಗಳಿಗೆ
೨೫ ಸಮ್ಮತಿ ಪಟ್ಟರು; ಕೆಲವರು ವಿಶ್ವಾಸಿಸಲಿಲ್ಲ. ಹೀಗೆ ತಮ್ಮಲ್ಲಿ
ಒಪ್ಪಿ ಕೊಳ್ಳದೆ, ಹೋಗಿ ಬಿಡುವಾಗ, ಪೌಲನು ಒಂದು ಮಾತು
ಹೇಳಿದನು; ಏನಂದರೆ, ಪರಿಶುದ್ಧಾತ್ಮವು ಪ್ರವಾದಿಯಾದ ಯೆಶಾ
ಯನ ಮುಖಾಂತರ ನಮ್ಮ ಪಿತೃಗಳಿಗೆ ಜನಾಗಿ ಹೇಳಿದು
೨೬ ಏನಂದರೆ, ಈ ಜನರ ಬಳಿಗೆ ಹೋಗಿ, ಕಿವಿಯಿಂದ ಕೇಳಿ, ಗ್ರಹಿಸ
ದೆ ಇರುವಿರಿ; ಕಣ್ಣಿನಿಂದ ಕಂಡು, ನೋಡದೆ ಇರುವಿರಿ, ಎಂದು
೨೭ ಹೇಳು; ಯಾಕಂದರೆ ಅವರು ಕಣ್ಣುಗಳಿಂದ ಕಾಣದೆ, ಕಿವಿಗಳಿಂದ
ಕೇಳ್ಳದೆ, ಹೃದಯದಿಂದ ಗ್ರಹಿಸದೆ, ತಿರುಗಿ ಕೊಳ್ಳದೆ, ನಾನು
ಅವರನ್ನು ಸ್ವಸ್ಥ ಮಾಡದೆ ಇರುವ ಹಾಗೆ, ಈ ಜನರ ಹೃದ
ಯವು ಕೊಬ್ಬಾಯಿತು. ಕಿವಿಗಳಿಂದ ಮಂದವಾಗಿ ಕೇಳುತ್ತಾರೆ;
೨೮ ಮತ್ತು ತಮ್ಮ ಕಣ್ಣುಗಳನ್ನು ಮುಚ್ಚಿ ಕೊಂಡಿದ್ದಾರೆ. ಹೀಗಿರುವ
ದರಿಂದ, ದೇವರ ರಕ್ಷಣೆಯು ಜನಾಂಗಗಳಿಗೆ ಕಳುಹಿಸಲ್ಪಟ್ಟಿದೆ,
೨೯ ಎಂದು ನಿಮಗೆ ತಿಳಿದಿರಲಿ; ಅವರೇ ಕೇಳುವರು. ಇವುಗಳನ್ನು
ಅವನು ಹೇಳಿದಾಗ, ಯೆಹೂದ್ಯರು ತಮ್ಮೊಳಗೆ ಬಹಳ ತರ್ಕ
ಮಾಡಿ ಕೊಳ್ಳುತ್ತಾ ಹೋಗಿ ಬಿಟ್ಟರು.

೩೦ ಮತ್ತು ಪೌಲನು ಎರಡು ವರುಷಗಳು ಪೂರ ತಾನು ಮಾಡಿ
ಕೊಂಡ ಬಾಡಿಗೇ ಮನೆಯಲ್ಲಿ ಇದ್ದು, ತನ್ನ ಬಳಿಗೆ ಬರುವವೆಲ್ಲಿ
೩೧ ರನ್ನು ಸೇರಿಸಿ ಕೊಂಡು, ತಡೆ ಇಲ್ಲದೆ, ಪೂರ್ಣ ಧೈರ್ಯದಿಂ
ದ ದೇವರ ರಾಜ್ಯವನ್ನು ಸಾರಿ, ಕರ್ತನಾದ ಯೇಸು ಕ್ರಿಸ್ತನ
ವಿಷಯಗಳನ್ನುಬೋಧಿಸುತ್ತಾ ಇದ್ದನು.

---

# EPISTLE OF PAUL THE APOSTLE TO THE ROMANS.

## ಅಪೊಸ್ತಲನಾದ ಪೌಲನು ರೋಮಾಯರಿಗೆ ಬರೆದ ಪತ್ರಿಕೆ.

### ೧ ಸಂಧಿ.

೧ ಮಾಂಸದ ಪ್ರಕಾರ ದಾವೀದನ ಬೀಜದಿಂದ ಹುಟ್ಟಿ, ಪರಿಶು
೪ ದ್ಧತ್ವದ ಆತ್ಮದ ಪ್ರಕಾರ ದೇವರ ಮಗನೆಂದು ಸತ್ತವರ ಪುನರು
ತ್ಥಾನದಿಂದ ಬಲವಾಗಿ ನಿರ್ಣಯಿಸಲ್ಪಟ್ಟ ನಮ್ಮ ಕರ್ತನಾದ
೩ ಯೇಸು ಕ್ರಿಸ್ತನೆಂಬ ತನ್ನ ಮಗನನ್ನು ಕುರಿತು, ದೇವರು ಪರಿಶು
ದ್ಧವಾದ ಬರಹಗಳಲ್ಲಿ ತನ್ನ ಪ್ರವಾದಿಗಳ ಮುಖಾಂತರ ಪೂರ್ವ
೪ ದಲ್ಲಿ ವಾಗ್ದತ್ತ ಮಾಡಿದ ಸುವಾರ್ತೆಗೆ ಏರ್ಪಡಿಸಲ್ಪಟ್ಟಂಥ, ಕರೆ
ಯಲ್ಪಟ್ಟ ಅಪೊಸ್ತಲನಾದಂಥ, ಯೇಸು ಕ್ರಿಸ್ತನ ದಾಸನಾದ
೫ ಪೌಲನು, ರೋಮದಲ್ಲಿರುವ ದೇವರ ಪ್ರಿಯರೂ ಕರೆಯಲ್ಪ
ಟ್ಟ ಪರಿಶುದ್ಧರೂ ಆಗಿರುವವರೆಲ್ಲರಿಗೆ—ನಮ್ಮ ತಂದೆಯಾದ ದೇವ
ರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ ನಿಮಗೆ ಕೃಪೆ
೬ ಯೂ ಸಮಾಧಾನವೂ ಆಗಲಿ. ಅವನ ಹೆಸರಿನ ನಿಮಿತ್ತ ಎಲ್ಲಾ
ಜನಾಂಗಗಳಲ್ಲಿ ವಿಶ್ವಾಸದ ವಿಧೇಯತ್ವಕ್ಕೋಸ್ಕರ ಅವನ
ಮುಖಾಂತರ ಕೃಪೆಯನ್ನೂ ಅಪೊಸ್ತಲತನವನ್ನೂ ಹೊಂದಿ
೭ ದ್ದೇವೆ. ಅವರಲ್ಲಿ ಯೇಸು ಕ್ರಿಸ್ತನಿಂದ ಕರೆಯಲ್ಪಟ್ಟವರಾದ ನೀ
ವು ಸಹ ಇದ್ದೀರಿ.

೮ ಮೊದಲಾಗಿ, ನಿಮ್ಮ ವಿಶ್ವಾಸವು ಸರ್ವ ಲೋಕದಲ್ಲಿ ಹೆಸ
ರ್ಗೊಂಡಿರುವದರಿಂದ, ನಿಮ್ಮೆಲ್ಲರನ್ನು ಕುರಿತು ಯೇಸು ಕ್ರಿಸ್ತ
೯ ನ ಮುಖಾಂತರ ನನ್ನ ದೇವರನ್ನು ಸ್ತುತಿಸುತ್ತೇನೆ. ಯಾಕಂದರೆ
ಎಡೆಬಿಡದೆ ನಿಮ್ಮನ್ನು ಎಚ್ಚೋ ಜ್ಞಾಪಕ ಮಾಡಿ ಕೊಂಡು, ಯಾ
೧೦ ವಾಗಲೂ ನನ್ನ ಪ್ರಾರ್ಥನೆಗಳಲ್ಲಿ, ಇನ್ನು ಮೇಲೆ ಹ್ಯಾಗಾದ
ರೂ ನಿಮ್ಮ ಬಳಿಗೆ ಬರ, ದೇವರ ಚೆತ್ತದಿಂದ ನನಗೆ ಬಳ್ಳೆ ಪಯ
೧೧ ಣವಾಗುವ ಹಾಗೆ ಬೇಡಿ ಕೊಳ್ಳುತ್ತೇನೆಂಬುವದಕ್ಕೆ, ಅವನ ಮಗ
ನ ಸುವಾರ್ತೆಯಲ್ಲಿ ನನ್ನ ಆತ್ಮದಿಂದ ನಾನು ಸೇವಿಸುವ ದೇವ
೧೨ ರು ನನಗೆ ಸಾಕ್ಷಿಯಾಗಿದ್ದಾನೆ. ಯಾಕಂದರೆ ನೀವು ಸ್ಥಿರ ಪಡು
ವದಕ್ಕೋಸ್ಕರ ನಿಮಗೆ ಯಾವದೊಂದು ಆತ್ಮ ವರವನ್ನು ಕೊ
ಟ್ಟು, ನಿಮ್ಮ ನನ್ನ ಅನ್ಯೋನ್ಯ ವಿಶ್ವಾಸದಿಂದ ನಿಮ್ಮಲ್ಲಿ ಕೂಡ
ಆದರಿಸಲ್ಪಡುವ ಹಾಗೆ, ನಿಮ್ಮನ್ನು ನೋಡ ಅಪೇಕ್ಷಿಸುತ್ತೇನೆ.

೧೩ ಇದಲ್ಲದೆ, ಸಹೋದರರೇ, ಬಿಕ್ಕಾದ ಜನಾಂಗಗಳಲ್ಲಿಯೂ
ಆದ ಹಾಗೆ, ನಿಮ್ಮಲ್ಲಿಯೂ ಏನಾದರೂ ಫಲವನ್ನು ಹೊಂದುವ
ಬಗ್ಯೆ, ನಿಮ್ಮ ಬಳಿಗೆ ಬರ, ಅನೇಕ ಸಾರಿ ನಿಶ್ಚರ್ಯೆ ಮಾಡಿ
ಕೊಂಡಾಗ್ಯೂ, ಈ ವರಿಗೂ ತಡೆಯಲ್ಪಟ್ಟೆನೆಂದು ನಿಮಗೆ ತಿಳಿ
೧೪ ಯದಿರ ನನಗೆ ಮನಸ್ಸಿಲ್ಲ. ಗ್ರೇಕರಿಗೂ ಬರ್ಬರರಿಗೂ ಜ್ಞಾನಿಗ
೧೫ ಳಿಗೂ ಮೂಢರಿಗೂ ಹಂಗಿನವನಾಗಿದ್ದೇನೆ. ಹೀಗೆ, ನನ್ನಿಂದಲಾದ
ಮಟ್ಟಿಗೂ, ರೋಮದಲ್ಲಿರುವ ನಿಮಗೂ ಸುವಾರ್ತೆ ಪ್ರಸಂಗಿಸು
೧೬ ವದಕ್ಕೆ ಸಿದ್ಧವಾಗಿದ್ದೇನೆ; ಯಾಕಂದರೆ ಕ್ರಿಸ್ತನ ಸುವಾರ್ತೆಗೆ
ನಾಚಿಕೆ ಪಡೆನು. ಅದು ವಿಶ್ವಾಸಿಸುವವರೆಲ್ಲರಿಗೆ, ಮೊದಲು ಯೆ
ಹೂದ್ಯನಿಗೆ, ಗ್ರೇಕನಿಗೆ ಸಹ, ರಕ್ಷಣೆಗೋಸ್ಕರವಾದ ದೇವರ
೧೭ ಬಲವಾಗಿದೆ. ಹ್ಯಾಗಂದರೆ, ನೀತಿವಂತನು ವಿಶ್ವಾಸದಿಂದ ಬದು
ಕುವನೆಂದು ಬರೆದಿರುವ ಹಾಗೆ, ದೇವರ ನೀತಿಯು ಅದರಲ್ಲಿ ವಿ
ಶ್ವಾಸದಿಂದ ವಿಶ್ವಾಸಕ್ಕೆ ಪ್ರಕಟವಾಗುತ್ತಾ ಇದೆ. ಯಾಕಂದರೆ
ದೇವರ ಕೋಪವು ಸತ್ಯವನ್ನು ಅನೀತಿಯಿಂದ ಹಿಡಿದು ಕೊಳ್ಳು
೧೮ ವ ಮನುಷ್ಯರ ಸಕಲ ಭಕ್ತಿಹೀನತ್ವದ ಮೇಲೆಯೂ ಅನೀತಿ
ಯ ಮೇಲೆಯೂ ಪರಲೋಕದಿಂದ ಪ್ರಕಟವಾಗುತ್ತಾ ಇದೆ.
೧೯ ಯಾಕಂದರೆ ದೇವರನ್ನು ಕುರಿತು ತಿಳಿಯ ತಕ್ಕದ್ದು ಅವರಲ್ಲಿ
ತೋರಿ ಇದೆ; ಯಾಕಂದರೆ ದೇವರು ಅದನ್ನು ಅವರಿಗೆ ತೋರಿಸಿ
೨೦ ದ್ದಾನೆ. ಹ್ಯಾಗಂದರೆ ಲೋಕಸೃಷ್ಟಿಯಿಂದ ಅವನ ಅದೃಶ್ಯ
ವಾದವುಗಳು, ಅವನ ನಿತ್ಯ ಬಲವೂ ದೈವತ್ವವೂ ನಿರ್ಮಾ
ಣಗಳಿಂದ ಗ್ರಹಿಸಲ್ಪಟ್ಟು, ಪ್ರತ್ಯಕ್ಷವಾಗಿವೆ; ಆದದರಿಂದ ನೆವಿ
೨೧ ಲ್ಲದವರಾಗಿದ್ದಾರೆ. ಯಾಕಂದರೆ ದೇವರನ್ನು ತಿಳಿದು, ಅವನನ್ನು
ದೇವರೆಂದು ಮಹಿಮೆ ಪಡಿಸದೆ, ಸ್ತುತಿಸದೆ, ತಮ್ಮ ಯೋಚನೆ
ಗಳಲ್ಲಿ ನಿಷ್ಪ್ರಯೋಜಕರಾಗಿ, ಅವರ ಬುದ್ಧಿ ಇಲ್ಲದ ಹೃದಯ
೨೨ ವು ಅಂಧಕಾರವಾಯಿತು. ತಾವು ಜ್ಞಾನಿಗಳೆಂದು ಅಂದುಕೊಂಡು,
೨೩ ಹುಚ್ಚರಾದರು. ಮತ್ತು ಲಯವಿಲ್ಲದ ದೇವರ ಮಹಿಮೆಯನ್ನು,
ಲಯವಾಗುವ ನರ ಪಕ್ಷಿ ಚತುಷ್ಪಾದ ಕ್ರಿಮಿಗಳಿಗೆ ಸಮಾನ
ರೂಪವಾಗಿ ಮಾರ್ಪಡಿಸಿದರು.

೨೪ ಆದಕಾರಣ ತಮ್ಮ ಶರೀರಗಳನ್ನು ತಮ್ಮಲ್ಲಿ ಅವಮಾನ ಪಡಿ
ಸುವ ಹಾಗೆ, ದೇವರು, ಅವರ ಹೃದಯಗಳ ಆಸೆಗಳ ಪ್ರಕಾರ,
೨೫ ಅವರನ್ನು ಅಶುದ್ಧತ್ವಕ್ಕೆ ಒಪ್ಪಿಸಿ ಬಿಟ್ಟನು. ಇವರು ದೇವರ
ಸತ್ಯವನ್ನು ಸುಳ್ಳಿಗಾಗಿ ಮಾರ್ಪಡಿಸಿ, ಸೃಷ್ಟಿ ಕರ್ತನಿಗಿಂತ
ಸೃಷ್ಟಿಯನ್ನು ಪೂಜಿಸಿ, ಸೇವಿಸಿದರು. ಅವನೇ ಎಂದೆಂದಿಗೂ
೨೬ ಸ್ತುತಿಸ ತಕ್ಕವನು. ಆಮೆನ್. ಆದದರಿಂದ ದೇವರು ಅವರನ್ನು
ಅವಮಾನವಾದ ಕಾಮಗಳಿಗೆ ಒಪ್ಪಿಸಿ ಬಿಟ್ಟನು. ಹ್ಯಾಗಂದರೆ ಅ
ವರ ಹೆಂಗಸರು ಸ್ವಭಾವವಾದ ಅನುಭೋಗವನ್ನು ಸ್ವಭಾವ
ವಿರೋಧವಾದದ್ದಕ್ಕೆ ಮಾರ್ಪಡಿಸಿದರು. ಹಾಗೆಯೇ ಗಂಡಸರು
೨೭ ಸಹ, ಸ್ವಭಾವವಾದ ಸ್ತ್ರೀಯನುಭೋಗವನ್ನು ಬಿಟ್ಟು, ಒಬ್ಬರ
ಮೇಲೊಬ್ಬರು ತಮ್ಮ ಕಾಮಾತುರದಿಂದ ತಾವ ಕುತ್ತಾ, ಗಂಡ
ಸರ ಸಂಗಡ ಗಂಡಸರು ಅಯೋಗ್ಯವಾದದ್ದನ್ನು ಮಾಡಿ, ತ
ಮ್ಮ ತಪ್ಪಿಗೆ ತಕ್ಕ ಪ್ರತಿ ಫಲವನ್ನು ತಮ್ಮಲ್ಲಿ ಹೊಂದಿದರು.
೨೮ ಮತ್ತು ಅವರು ದೇವರನ್ನು ತಿಳುವಿಕೆಯಲ್ಲಿ ಇಟ್ಟು ಕೊಳ್ಳುವದು
ಯುಕ್ತವೆಂದೆಣಿಸದ್ದರಿಂದ, ಅಕೃತ್ಯಗಳನ್ನು ಮಾಡುವ ಹಾಗೆ,
೨೯ ದೇವರು ಅವರನ್ನು ಅಯುಕ್ತ ಬುದ್ಧಿಗೆ ಒಪ್ಪಿಸಿ ಬಿಟ್ಟನು. ಸಕಲ
ಅನ್ಯಾಯ, ಜಾರತ್ವ, ದುರ್ಮಾರ್ಗತನ, ಲೋಭ, ದುಷ್ಟತ್ವ
ಗಳಿಂದ ಭರಿತರೂ; ಹೊಟ್ಟೆಕಿಚ್ಚು, ಕೊಲೆ, ಜಗಳ, ಮೋಸ,
೩೦ ಶುಂಟಾಟಗಳಿಂದ ತುಂಬಿದವರೂ; ಚಾಡಿಕಾರರೂ, ದೂರುಗಾ
ರರೂ ದೇವದ್ವೇಷಿಗಳೂ, ಗರ್ವಿಷ್ಠರೂ, ಅಹಂಕಾರಿಗಳೂ,
೩೧ ಡಾಂಬಿಕರೂ, ದುರಾಲೋಚಕರೂ, ಹೆತ್ತವರಿಗೆ ಅವಿಧೇಯರೂ,
ಬುದ್ಧಿಹೀನರೂ, ಅಪ್ರಮಾಣಿಕರೂ, ವಾತ್ಸಲ್ಯವಿಲ್ಲದವರೂ, ಅ
ನ್ಯೋನ್ಯವಾಗದವರೂ, ಕರುಣೆ ಇಲ್ಲದವರೂ, ಆಗಿ ಇದ್ದಾರೆ.

೩೦ ಅಂಥವುಗಳನ್ನು ಮಾಡುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ
ದೇವರ ನಿರ್ಣಯವನ್ನು, ಇವರು ತಿಳಿದು, ಅವುಗಳನ್ನು ಮಾ
ಡುತ್ತಾರೆ; ಅದಲ್ಲದೆ, ಮಾಡುವವರಿಗೆ ಸಮ್ಮತಿಸುತ್ತಾರೆ.

## ೨. ಸಂಧಿ.

೧ ಆದದರಿಂದ, ನ್ಯಾಯ ತೀರಿಸುವ ಓ ಮನುಷ್ಯನೇ, ನೀನು
ಯಾರಾದರೂ ಸರಿ; ನೆವವಿಲ್ಲದವನಾಗಿದ್ದೀ. ಹ್ಯಾಗಂದರೆ ನ್ಯಾ
ಯ ತೀರಿಸುವವನಾದ ನೀನು, ಅದೇ ಕಾರ್ಯಗಳನ್ನು ಮಾಡು
ತ್ತಿರುವದರಿಂದ, ಮತ್ತೊಬ್ಬನಿಗೆ ನ್ಯಾಯ ತೀರಿಸುವದರಲ್ಲಿಯೇ,
೨ ನಿನಗೆ ನೀನೇ ಅಜ್ಞೆ ನಿರ್ಣಯಿಸಿ ಕೊಳ್ಳುತ್ತೀ. ಆದರೆ ಅಂಥ
ವುಗಳನ್ನು ಮಾಡುವವರ ಮೇಲೆ, ದೇವರ ನ್ಯಾಯ ತೀರ್ಪಿಕೆ
೩ ಸತ್ಯದ ಪ್ರಕಾರವಾಗಿದೆ ಎಂದು ಬಲ್ಲೆವು. ಆದರೆ ಅಂಥವುಗಳ
ನ್ನು ಮಾಡುವವರಿಗೆ ನ್ಯಾಯ ತೀರಿಸಿ, ಅವುಗಳನ್ನು ಮಾಡುವ
ಓ ಮನುಷ್ಯನೇ, ದೇವರ ನ್ಯಾಯ ತೀರ್ಪಿಕೆಗೆ ತಪ್ಪಿಸಿ ಕೊ
೪ ಳ್ಳುವಿ ಎಂದು ನೆನಸುತ್ತೀಯಾ? ಏನು! ದೇವರ ದಯವು ಮಾ
ನಸಾಂತರಕ್ಕೆ ನಿನ್ನನ್ನು ಪ್ರೇರಣೆ ಮಾಡುತ್ತದೆ ಎಂದು ತಿಳಿಯ
ದೆ, ಅವನ ದಯೆ, ತಾಳ್ಮೆ, ದೀರ್ಘಶಾಂತಿಗಳ ಐಶ್ವರ್ಯವ
೫ ನ್ನು ಅಸಡ್ಡೆ ಮಾಡುತ್ತೀಯಾ? ಆದರೆ ನಿನ್ನ ಕಾಠಿಣ್ಯದ ಪ್ರಕಾ
ರವಾಗಿಯೂ, ನಿನ್ನ ಮಾನಸಾಂತರವಿಲ್ಲದ ಹೃದಯದ ಪ್ರಕಾ
ರವಾಗಿಯೂ, ದೇವರ ನೀತಿಯಾದ ತೀರ್ಪಿಕೆ ಪ್ರಕಟವಾಗುವಂಥ
ಕೋಪದ ದಿವಸಕ್ಕೆ ಕೋಪವನ್ನು ನಿನಗೆ ನೀನೇ ಕೂಡಿಟ್ಟು
೬ ಕೊಳ್ಳುತ್ತೀ. ಅವನು ಒಬ್ಬೊಬ್ಬನಿಗೆ ಅವನವನ ಕ್ರಿಯೆಗಳ
೭ ಪ್ರಕಾರ, ಬದಲು ಕೊಡುವನು. ಸತ್ಕರ್ಮದಲ್ಲಿ ತಾಳ್ಮೆ ಕೊಂಡು,
ಮಹಿಮೆಯನ್ನೂ ಮಾನವನ್ನೂ ನಿರ್ಕಯವನ್ನೂ ಹುಡುಕು
೮ ವವರಿಗೆ, ನಿತ್ಯ ಜೀವವೂ. ಜಗಳಗಂಟರಾಗಿ, ಸತ್ಯಕ್ಕೆ ಅವಿಧೇ
ಯರಾಗಿದ್ದು, ಅನ್ಯಾಯಕ್ಕೆ ವಿಧೇಯರಾಗಿರುವವರಿಗೆ, ಕೋಪ
೯ ವೂ, ಉಗ್ರವೂ, ಕಟ್ಟಿದ್ದನ್ನು ಮಾಡುವ ಒಬ್ಬೊಬ್ಬ ಮನುಷ್ಯ
ನ ಪ್ರಾಣದ ಮೇಲೆ—ಮೊದಲು ಯೆಹೂದ್ಯನ ಮೇಲೆ, ಗ್ರೇಕ
೧೦ ನ ಮೇಲೆ ಸಹ—ಉಪದ್ರವೂ, ಸಂಕಟವೂ. ಆದರೆ ಒಳ್ಳೇದನ್ನು
ಮಾಡುವ ಒಬ್ಬೊಬ್ಬನಿಗೆ—ಮೊದಲು ಯೆಹೂದ್ಯನಿಗೆ ಗ್ರೇಕ
೧೧ ನಿಗೆ ಸಹ—ಮಹಿಮೆಯೂ ಮಾನವೂ ಸಮಾಧಾನವೂ. ಯಾಕಂ
ದರೆ ದೇವರ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲ.
೧೨ ಹ್ಯಾಗಂದರೆ ನ್ಯಾಯಪ್ರಮಾಣವಿಲ್ಲದೆ ಪಾಪ ಮಾಡಿದವರ
ದ್ದು ನ್ಯಾಯಪ್ರಮಾಣವಿಲ್ಲದೆ ನಾಶವಾಗುವರು. ಆದರೆ ನ್ಯಾ
ಯಪ್ರಮಾಣದೊಳಗೆ ಪಾಪ ಮಾಡಿದವರದ್ದು ನ್ಯಾಯಪ್ರಮಾ
೧೩ ಣದಿಂದ ತೀರ್ಪಿಕೆಯನ್ನು ಹೊಂದುವರು. ಯಾಕಂದರೆ ನ್ಯಾ
ಯಪ್ರಮಾಣ ಕೇಳಿದವರು ದೇವರ ಮುಂದೆ ನೀತಿವಂತರಲ್ಲ,
ನ್ಯಾಯಪ್ರಮಾಣ ಮಾಡುವವರೇ ನೀತಿನಿರ್ಣಯ ಪಡುವರು.
೧೪ ಹ್ಯಾಗಂದರೆ ನ್ಯಾಯಪ್ರಮಾಣವಿಲ್ಲದ ಜನಾಂಗಗಳು ಸ್ವಭಾವ
ದಿಂದ ನ್ಯಾಯಪ್ರಮಾಣದವುಗಳನ್ನು ಮಾಡುವಾಗ, ಅವರು
ನ್ಯಾಯಪ್ರಮಾಣವಿಲ್ಲದವರಾಗಿದ್ದು, ತಮಗೆ ತಾವೇ ನ್ಯಾಯ
೧೫ ಪ್ರಮಾಣವಾಗಿದ್ದಾರೆ. ಅವರ ಮನಸಾಕ್ಷಿ ಕೂಡ ಸಾಕ್ಷಿ ಕೊಟ್ಟು,
ಅವರ ಯೋಚನೆಗಳು ಒಂದಕ್ಕೊಂದು ತಪ್ಪು ಹೊರಿಸುತ್ತಾ,
ಇಲ್ಲವೆ ಪ್ರತ್ಯುತ್ತರ ಕೊಡುತ್ತಾ, ಇರುವದರಿಂದ, ಅವರು ತಮ್ಮ
ಹೃದಯಗಳಲ್ಲಿ ಬರೆದಿರುವ ನ್ಯಾಯಪ್ರಮಾಣದ ಕ್ರಿಯೆಯ
೧೬ ನ್ನು ತೋರಿಸುತ್ತಾರೆ. ದೇವರು ಮನುಷ್ಯರ ರಹಸ್ಯವಾದವುಗ
ಳನ್ನು ಕುರಿತು, ನನ್ನ ಸುವಾರ್ತೆಯ ಪ್ರಕಾರ, ಯೇಸು ಕ್ರಿಸ
ನ ಮುಖಾಂತರ ನ್ಯಾಯ ತೀರಿಸುವ ದಿವಸದಲ್ಲಿಯೇ.

೧೭ ಇಗೋ, ನೀನು ಯೆಹೂದ್ಯನೆಂದು ಕರೆಯಲ್ಪಟ್ಟು, ನ್ಯಾ
ಯಪ್ರಮಾಣ ಊರಿ ಕೊಂಡು, ದೇವರಲ್ಲಿ ಹೆಚ್ಚಳ ಪಡುತ್ತೀ.
೧೮ ಮತ್ತು ಅವನ ಚಿತ್ತವನ್ನು ತಿಳಿದು, ನ್ಯಾಯಪ್ರಮಾಣದಿಂದ
ಶಿಕ್ಷಿತನಾಗಿದ್ದು, ಹೆಚ್ಚು ಕಡಿಮೆಯಾದವುಗಳನ್ನು ಪರೀಕ್ಷಿಸುತ್ತೀ.
೧೯ ಕುರುಡರ ನಡಿಸುವವನಾಗಿಯೂ, ಕತ್ತಲಲ್ಲಿರುವವರ ಬೆಳಕಾಗಿ
೨೦ ಯೂ, ಮೂಢರ ಉಪಾಧ್ಯಾಯನಾಗಿಯೂ, ಬಾಲಕರ ಬೋಧಕ
ನಾಗಿಯೂ, ನ್ಯಾಯಪ್ರಮಾಣದಲ್ಲಿರುವ ತಿಳುವಿಕೆ ಸತ್ಯಗಳ
ಸ್ವರೂಪ ಉಂಟಾದವನಾಗಿಯೂ, ಇದ್ದೇನೆಂದು ನಂಬಿ ಕೊ
೨೧ ಳ್ಳುತ್ತೀ. ಬೇರೊಬ್ಬನಿಗೆ ಬೋಧಿಸುವ ನೀನು ನಿನಗೆ ಬೋಧಿ
ಸಿ ಕೊಳ್ಳುವದಿಲ್ಲವೋ? ಕದಿಯ ಬೇಡೆಂದು ಸಾರುವ ನೀನು
೨೨ ಕದಿಯುತ್ತೀಯೋ? ವ್ಯಭಿಚಾರ ಮಾಡ ಬೇಡೆಂಬುವ ನೀನು
ವ್ಯಭಿಚಾರ ಮಾಡುತ್ತೀಯೋ? ವಿಗ್ರಹಗಳನ್ನು ಅಸಂಹಿಸುವ
೨೩ ನೀನು ಪರಿಶುದ್ಧವಾದದ್ದನ್ನು ಕೊಳ್ಳೆ ಇಡುತ್ತೀಯೋ? ನ್ಯಾ
ಯಪ್ರಮಾಣದಲ್ಲಿ ಹೆಚ್ಚಳ ಪಡುವ ನೀನು ನ್ಯಾಯಪ್ರಮಾಣದ
ಮೀರುವಿಕೆಯಿಂದ ದೇವರನ್ನು ಅವಮಾನ ಪಡಿಸುತ್ತೀಯೋ?
೨೪ ಯಾಕಂದರೆ, ಬರೆದಿರುವ ಪ್ರಕಾರ, ನಿಮ್ಮ ಮುಖಾಂತರ ದೇವರ
೨೫ ಹೆಸರು ಜನಾಂಗಗಳಲ್ಲಿ ದೂಷಿಸಲ್ಪಡುತ್ತದೆ. ಯಾಕಂದರೆ ನೀ
ನು ನ್ಯಾಯಪ್ರಮಾಣದ ಪ್ರಕಾರ ನಡೆದರೆ, ಪರಿಛೇದನೆ ಪ್ರ
ಯೋಜನವಾಗಿದೆ. ಆದರೆ ನ್ಯಾಯಪ್ರಮಾಣವನ್ನು ಮೀರುವ
೨೬ ವನಾದರೆ, ನಿನ್ನ ಪರಿಛೇದನೆ ಅಪರಿಛೇದನೆ ಆಯಿತು. ಹೀಗಿರು
ವಾಗ್ಯೆ, ಅಪರಿಛೇದನೆಯು ನ್ಯಾಯಪ್ರಮಾಣದ ನಿರ್ಣಯಗ
ಳನ್ನು ಕೈಕೊಂಡರೆ, ಅವನ ಅಪರಿಛೇದನೆಯು ಪರಿಛೇದನೆ
೨೭ ಎಂದು, ಎಣಿಸಲ್ಪಡುವದಿಲ್ಲವೋ? ಮತ್ತು ನ್ಯಾಯಪ್ರಮಾಣ
ವನ್ನು ಪೂರೈಸುವ ಸ್ವಭಾವದ ಅಪರಿಛೇದನೆಯು ಅಕ್ಷರವೂ
ಪರಿಛೇದನೆಯೂ ಉಂಟಾದವನಾಗಿ, ನ್ಯಾಯಪ್ರಮಾಣ ಮೀ
೨೮ ರುವ ನಿನಗೆ ಅಜ್ಞೆ ನಿರ್ಣಯಿಸುವದಿಲ್ಲವೋ? ಯಾಕಂದರೆ
ಬಹಿರಂಗವಾಗಿರುವವನು ಯೆಹೂದ್ಯನಲ್ಲ. ಬಹಿರಂಗವಾಗಿ ಮಾಂ
೨೯ ಸದಲ್ಲಿರುವಂಥಾದ್ದು ಪರಿಛೇದನೆ ಅಲ್ಲ. ಆದರೆ ಅಂತರಂಗವಾಗಿ
ರುವವನೇ ಯೆಹೂದ್ಯನು; ಮತ್ತು ಪರಿಛೇದನೆಯು ಹೃದಯ
ದ್ದು; ಅಕ್ಷರದಲ್ಲಿ ಅಲ್ಲ, ಆತ್ಮದಲ್ಲಿಯೇ. ಅವನ ಸ್ತೋತ್ರವು
ಮನುಷ್ಯರಿಂದಲ್ಲ, ದೇವರಿಂದಲೇ.

## ೩. ಸಂಧಿ.

೧ ಹಾಗಾದರೆ, ಯೆಹೂದ್ಯನಿಗೆ ಹೆಚ್ಚು ಏನು? ಇಲ್ಲವೆ ಪರಿಛೇ
೨ ದನೆಯ ಪ್ರಯೋಜನವೇನು? ಎಲ್ಲಾ ವಿಷಯಗಳಲ್ಲಿ ಬಹಳ.
ಏನಂದರೆ, ಮೊದಲು ದೇವರ ವಚನಗಳು ಅವರಿಗೆ ಒಪ್ಪಿಸಲ್ಪ
೩ ಟ್ಟವು. ಯಾಕಂದರೆ, ಕೆಲಬರು ನಂಬದೆ ಹೋಗಿದ್ದರೆ, ಏನು?
ಅವರ ಅವನಂಬಿಕೆಯು ದೇವರ ನಂಬಿಕೆಯನ್ನು ವ್ಯರ್ಥ ಮಾ
೪ ಡುವದೋ? ಅಗದು. ದೇವರು ಸತ್ಯವಂತನಾಗಿರಲಿ; ಆದರೆ ಎಲ್ಲಾ
ಮನುಷ್ಯರು ಸುಳ್ಳುಗಾರರು—ನೀನು ನಿನ್ನ ವಾಕ್ಯಗಳಲ್ಲಿ ನೀತಿ
ನಿರ್ಣಯ ಪಡುವ ಹಾಗೆಯೂ, ನಿನಗೆ ನ್ಯಾಯಶೀರ್ಪಿಕೆ
೫ ಆಗುವಾಗ್ಯೆ ಜಯಿಸುವ ಹಾಗೆಯೂ ಎಂದು ಬರೆದಿರುವ ಪ್ರಕಾರ



ಕೇ. ಆದರೆ ನನ್ನ ಅನೀತಿಯು ದೇವರ ನೀತಿಯನ್ನು ಪ್ರತಿಷ್ಠೆ
ಮಾಡಿದರೆ, ಏನು ಹೇಳುವೆವು? ಕೋಪವನ್ನು ಇಳಿಯ ಮಾಡು
ವ ದೇವರು ಅನೀತಿವಂತನೋ! ಮನುಷ್ಯನ ಪ್ರಕಾರ ಹೇಳುತ್ತೇ
೬ ನೆ. ಅಗದು. ಹಾಗಾದರೆ, ದೇವರು ಲೋಕಕ್ಕೆ ಜ್ಯಾಗೆ ನ್ಯಾ
೭ ಯ ತೀರಿಸುವನು! ಯಾಕಂದರೆ ದೇವರ ಸತ್ಯವು ನನ್ನ ಸುಳ್ಳಿ
ನಿಂದ ಅವನ ಮಹಿಮೆಗಾಗಿ ಹೆಚ್ಚಿದ್ದರೆ, ಇನ್ನು ಯಾಕೆ ನನಗೆ
೮ ಪಾಪಿಗೆಂದು ಅಜ್ಞೆ ನಿರ್ಣಯವಾಗುತ್ತದೆ? ಮತ್ತು ನಾವು ದೂ
ಷಿಸಲ್ಪಡುವ ಪ್ರಕಾರವಾಗಿಯೂ, ನಾವು ಹೇಳುತ್ತೇವೆಂದು ಕೆಲ
ವರು ಅನುಭವ ಪ್ರಕಾರವಾಗಿಯೂ, ಒಳ್ಳೆಯವುಗಳು ಬರುವ
ಹಾಗೆ ಕೆಟ್ಟವುಗಳನ್ನು ಮಾಡೋಣೋ? ಅಂಥವರ ಅಜ್ಞೆನಿರ್ಣ
ಯವು ಯುಕ್ತವಾಗಿದೆ.

೯ ಹಾಗಾದರೆ ಏನು? ಶ್ರೇಷ್ಠರಾಗಿದ್ದೇವೋ? ಇಲ್ಲವೇ ಇಲ್ಲ.
ಯಾಕಂದರೆ ಯೆಹೂದ್ಯರು, ಗ್ರೇಕರು ಸಹ, ಎಲ್ಲರು ಪಾಪ
೧೦ ಕ್ಕೊಳಗಾಗಿದ್ದಾರೆಂದು ಮುಂಚೆ ಸ್ಥಾಪಿಸಿದ್ದೇವೆ. ಇದಕ್ಕೆ ಬರೆದ
೧೧ ದ್ದೇನಂದರೆ, ನೀತಿವಂತನು ಇಲ್ಲ, ಒಬ್ಬನೂ ಇಲ್ಲ. ತಿಳಿದವನು
೧೨ ಇಲ್ಲ, ದೇವರನ್ನು ಹುಡುಕುವವನು ಇಲ್ಲ. ಎಲ್ಲರು ತಪ್ಪಿ ಹೋ
ದರು; ಏಕವಾಗಿ ನಿಷ್ಪ್ರಯೋಜಕರಾದರು; ಒಳ್ಳೇದನ್ನು ಮಾ
೧೩ ಡುವವನು ಇಲ್ಲ, ಒಬ್ಬನಾದರೂ ಇಲ್ಲ. ಅವರ ಗಂಟ್ಲು ತೆರೆದ
ಸಮಾಧಿಯಾಗಿದೆ; ತಮ್ಮ ನಾಲಿಗೆಗಳಿಂದ ವಂಚಿಸುತ್ತಾರೆ; ಹಾವು
೧೪ ಗಳ ವಿಷವು ಅವರ ತುಟಿಗಳ ಕೆಳಗೆ ಅದೆ; ಅವರ ಬಾಯಿ ಶಾಪ
೧೫ ದಿಂದಲೂ ಕಹಿಯಿಂದಲೂ ತುಂಬಿ ಅದೆ; ಅವರ ಕಾಲುಗಳು ರಕ್ತ
೧೬ ವನ್ನು ಚೆಲ್ಲುವದಕ್ಕೆ ತ್ವರೆ ಪಡುತ್ತವೆ; ಕ್ಷಯವೂ ಸಂಕಟವೂ
೧೭ ಅವರ ಮಾರ್ಗಗಳಲ್ಲಿ ಇರುತ್ತವೆ; ಮತ್ತು ಸಮಾಧಾನದ ಮಾ
೧೮ ರ್ಗವನ್ನು ಅರಿಯರು; ದೇವರ ಭಯವು ಅವರ ಕಣ್ಣುಗಳಿಗೆದು
ರಾಗಿಲ್ಲ. ಮತ್ತು ಬಾಯಿಗಳೆಲ್ಲಾ ಮುಚ್ಚಲ್ಪಡುವ ಹಾಗೆಯೂ,
ಸರ್ವ ಲೋಕವು ದೇವರ ಮುಂದೆ ಅಜ್ಞೆಗೊಳಗಾಗುವ ಹಾಗೆ
೧೯ ಯೂ, ನ್ಯಾಯಪ್ರಮಾಣವು ಹೇಳುವವುಗಳನ್ನುಷ್ಟು, ನ್ಯಾಯ
೨೦ ಪ್ರಮಾಣದಲ್ಲಿರುವವರಿಗೆ ಹೇಳುತ್ತದೆಂದು ಬಲ್ಲೆವು. ಆದದರಿಂದ
ನ್ಯಾಯಪ್ರಮಾಣದ ಕ್ರಿಯೆಗಳಿಂದ ಯಾವ ಮಾಂಸವಾದರೂ
ಅವನ ಮುಂದೆ ನೀತಿನಿರ್ಣಯ ಪಡುವದಿಲ್ಲ. ಯಾಕಂದರೆ ನ್ಯಾ
ಯಪ್ರಮಾಣದಿಂದ ಪಾಪದ ತಿಳುವಿಕೆಯು ಅಗುತ್ತದೆ.

೨೧ ಆದರೆ ನ್ಯಾಯಪ್ರಮಾಣದಿಂದಲೂ ಪ್ರವಾದಿಗಳಿಂದಲೂ ಸಾ
ಕ್ಷಿಗೊಂಡ ದೇವರ ನೀತಿಯು ಈಗ ನ್ಯಾಯಪ್ರಮಾಣವಿಲ್ಲದೆ ಪ್ರ
೨೨ ಕಟವಾಯಿತು. ವಿಶ್ವಾಸಿಸುವ ಎಲ್ಲರಿಗೂ, ಎಲ್ಲರ ಮೇಲೆಯೂ,
ಯೇಸು ಕ್ರಿಸ್ತನ ವಿಶ್ವಾಸದಿಂದಾಗುವ ದೇವರ ನೀತಿಯೇ. ಯಾ
೨೩ ಕಂದರೆ ವ್ಯತ್ಯಾಸವಿಲ್ಲ. ಎಲ್ಲರು ಪಾಪ ಮಾಡಿ, ದೇವರ ಮಹಿ
೨೪ ಮೆಗೆ ತಪ್ಪಿ, ಈಗಿನ ಕಾಲದಲ್ಲಿ ತನ್ನ ನೀತಿಯನ್ನು ತೋರಿಸ ಬೇ
ಕೆಂದು, ಯೇಸುವಿನಲ್ಲಿರುವ ವಿಶ್ವಾಸವುಳ್ಳವನನ್ನು ನೀತಿನಿರ್ಣ
೨೫ ಯ ಪಡಿಸುವದರಲ್ಲಿ ತಾನು ನೀತಿವಂತನಾಗಿರುವ ಹಾಗೆ, ದೇವರ
ತಾಳ್ಮೆಯಲ್ಲಿ ಮುಂಚೆ ಅದ ಪಾಪಗಳ ಪರಿಹಾರವನ್ನು ಕುರಿತು
ತನ್ನ ನೀತಿಯನ್ನು ತೋರಿಸುವದಕ್ಕೆ ಅವನ ರಕ್ತದಲ್ಲಿರುವ
೨೬ ವಿಶ್ವಾಸದಿಂದ ಶಾಂತೀಕರಣವಾಗಿ, ದೇವರು ಮುಂದಿಟ್ಟು, ಯೇ
ಸು ಕ್ರಿಸ್ತನಿಂದಾದ ವಿಮೋಚನೆಯ ಮುಖಾಂತರ, ಅವನ ಕೃಪೆ
ಯಿಂದ ಉಚಿತವಾಗಿ ನೀತಿನಿರ್ಣಯ ಪಡುತ್ತಾರೆ.

೨೭ ಹಾಗಾದರೆ, ಹೆಚ್ಚಳ ಎಲ್ಲಿ? ತಳ್ಳಲ್ಪಟ್ಟಿತು. ಯಾವ ನ್ಯಾಯ
ಪ್ರಮಾಣದಿಂದ? ಕ್ರಿಯೆಗಳದರಿಂದಲೋ? ಅಲ್ಲ; ವಿಶ್ವಾಸದ
೨೮ ನ್ಯಾಯಪ್ರಮಾಣದಿಂದಲೇ. ಆದದರಿಂದ ಮನುಷ್ಯನು ನ್ಯಾ
ಯಪ್ರಮಾಣದ ಕ್ರಿಯೆಗಳಲ್ಲದೆ ವಿಶ್ವಾಸದಿಂದ ನೀತಿನಿರ್ಣಯ
೨೯ ಪಡುತ್ತಾನೆಂದು, ತೀರಿಸುತ್ತೇವೆ. ಅವನು ಯೆಹೂದ್ಯರಿಗೆ ಮಾತ್ರ
ದೇವರೋ! ಜನಾಂಗಗಳಿಗೂ ಸಹ ಅಲ್ಲವೋ! ಹೌದು, ಜನಾಂ
೩೦ ಗಗಳಿಗೂ ಸಹ. ಯಾಕಂದರೆ ಪರಿಛೇದನೆಗೆ ವಿಶ್ವಾಸದಿಂದಲೂ,
ಅಪರಿಛೇದನೆಗೆ ವಿಶ್ವಾಸದ ಮುಖಾಂತರವಾಗಿಯೂ, ನೀತಿನಿರ್ಣ
೩೧ ಯಿಸುವವನು ಒಬ್ಬನೇ ದೇವರು. ಹಾಗಾದರೆ ವಿಶ್ವಾಸದಿಂದ
ನ್ಯಾಯಪ್ರಮಾಣವನ್ನು ವ್ಯರ್ಥ ಮಾಡುತ್ತೇವೋ? ಅಗದು.
ನ್ಯಾಯಪ್ರಮಾಣವನ್ನು ಸ್ಥಾಪಿಸುತ್ತೇವೆ.

## ೪. ಸಂಧಿ.

೧ ಹಾಗಾದರೆ ನಮ್ಮ ತಂದೆಯಾದ ಅಬ್ರಹಾಮನು ಮಾಂಸದ
೨ ಪ್ರಕಾರ ಏನು ಕಂಡು ಕೊಂಡನೆಂದು ಹೇಳುವೆವು? ಯಾಕಂದರೆ
ಅಬ್ರಹಾಮನು ಕ್ರಿಯೆಗಳಿಂದ ನೀತಿನಿರ್ಣಯ ಪಟ್ಟಿದ್ದರೆ, ಅವ
೩ ನಿಗೆ ಹೆಚ್ಚಳ ಉಂಟು; ಆದರೆ ದೇವರ ಮುಂದೆ ಅಲ್ಲ. ಅದಕ್ಕೆ ಬ
ರಹವು ಏನು ಹೇಳುತ್ತದೆ? ಅಬ್ರಹಾಮನು ದೇವರನ್ನು ವಿಶ್ವಾಸಿ
೪ ಸಿದನು; ಅದು ಅವನಿಗೆ ನೀತಿ ಎಂದು ಎಣಿಸಲ್ಪಟ್ಟಿತು. ಆದರೆ
ಕ್ರಿಯೆ ಮಾಡುವವನಿಗೆ ಪ್ರತಿ ಫಲವು ಕೃಪೆಯ ಪ್ರಕಾರವಲ್ಲ, ಸಾಲ
೫ ದ ಪ್ರಕಾರ ಎಣಿಸಲ್ಪಡುವದು. ಆದರೆ ಕ್ರಿಯೆ ಮಾಡದೆ, ಭಕ್ತಿ
ಹೀನನಿಗೆ ನೀತಿ ನಿರ್ಣಯಿಸುವವನಲ್ಲಿ ವಿಶ್ವಾಸವಿಡುವವನಿಗೆ,
೬ ಅವನ ವಿಶ್ವಾಸವು ನೀತಿ ಎಂದು ಎಣಿಸಲ್ಪಡುವದು. ಹಾಗೆ
ಯೇ, ದೇವರು ಕ್ರಿಯೆಗಳಲ್ಲದೆ ಯಾವನಿಗೆ ನೀತಿಯನ್ನು ಎಣಿ
ಸುತ್ತಾನೋ, ಆ ಮನುಷ್ಯನ ಭಾಗ್ಯವನ್ನು ದಾವೀದನು ಹೇಳು
೭ ತ್ತಾನೆ; ಹ್ಯಾಗಂದರೆ, ಯಾರ ಅನ್ಯಾಯಗಳು ಪರಿಹರಿಸಲ್ಪಟ್ಟಿ
ವೆಯೋ, ಯಾರ ಪಾಪಗಳು ಮುಚ್ಚಲ್ಪಟ್ಟವೆಯೋ, ಅವರೇ
೮ ಭಾಗ್ಯವಂತರು. ಯಾವನಿಗೆ ಕರ್ತನು ಪಾಪವನ್ನು ಎಣಿಸುವ
ದಿಲ್ಲವೋ, ಆ ಮನುಷ್ಯನು ಭಾಗ್ಯವಂತನು.

೯ ಹಾಗಾದರೆ ಈ ಭಾಗ್ಯವು ಪರಿಛೇದನೆಗೆ ಮಾತ್ರವೋ? ಇಲ್ಲವೆ
ಅಪರಿಛೇದನೆಗೂ ಅಗುತ್ತದೋ? ಯಾಕಂದರೆ ಅಬ್ರಹಾಮನಿಗೆ
ವಿಶ್ವಾಸವು ನೀತಿ ಎಂದು ಎಣಿಸಲ್ಪಟ್ಟಿತೆಂಬದಾಗಿ ಹೇಳುತ್ತೇವೆ.
೧೦ ಹಾಗಾದರೆ, ಅವನಿಗೆ ಹ್ಯಾಗೆ ಎಣಿಸಲ್ಪಟ್ಟಿತು? ಪರಿಛೇದನೆಯಲ್ಲಿ
ಯೋ? ಅಪರಿಛೇದನೆಯಲ್ಲಿಯೋ? ಪರಿಛೇದನೆಯಲ್ಲಿ ಅಲ್ಲ,
೧೧ ಅಪರಿಛೇದನೆಯಲ್ಲಿಯೇ. ಮತ್ತು ಅವನು ಅಪರಿಛೇದನೆಯಾಗಿ
ವಿಶ್ವಾಸಿಸುವವಕ್ಕೆಲ್ಲರಿಗೆ, ಅವರಿಗೆ ಸಹ, ನೀತಿ ಎಣಿಸಲ್ಪಡುವ ಹಾ
೧೨ ಗೆ ತಂದೆಯೂ; ಪರಿಛೇದನೆಯವರಾಗಿರುವದಲ್ಲದೆ, ನಮ್ಮ ತಂದೆ
ಯಾದ ಅಬ್ರಹಾಮನಿಗೆ, ಅಪರಿಛೇದನೆಯಲ್ಲಿರುವಾಗ, ಉಂಟಾದ
ವಿಶ್ವಾಸದ ಹೆಜ್ಜೆಗಳಲ್ಲಿ ನಡೆಯುವವರಿಗೂ ಪರಿಛೇದನೆಯ ತಂದೆ
ಯೂ ಅಗುವ ಹಾಗೆ, ಅಪರಿಛೇದನೆಯಲ್ಲಿರುವಾಗ ಉಂಟಾದ ವಿ
ಶ್ವಾಸದ ನೀತಿಯ ಮುದ್ರೆಯಾದ ಪರಿಛೇದನೆಯನ್ನು ಗುರು
ತಾಗಿ ಹೊಂದಿದನು.

೧೩ ಯಾಕಂದರೆ ಅಬ್ರಹಾಮನಿಗಾದರೂ, ಅವನ ಬೀಜಕ್ಕಾದರೂ
ಅವನು ಲೋಕಕ್ಕುತ್ತರಾಗಿರುವನೆಂಬುವ ವಾಗ್ದತ್ತವು ನ್ಯಾಯಪ್ರ
ಮಾಣದಿಂದಲ್ಲ, ವಿಶ್ವಾಸದ ನೀತಿಯಿಂದಲೇ, ಆಯಿತು. ಯಾ
೧೪ ಕಂದರೆ ನ್ಯಾಯಪ್ರಮಾಣದವರು ಬಾಧ್ಯರಾದರೆ, ವಿಶ್ವಾಸವು
೧೫ ಬರೀದಾಯಿತು, ವಾಗ್ದತ್ತವೂ ವ್ಯರ್ಥವಾಯಿತು. ಯಾಕಂದರೆ

ನ್ಯಾಯಪ್ರಮಾಣವು ಕೊಟಪವನ್ನು ಉಂಟು ಮಾಡುತ್ತದೆ; ಹ್ಯಾ
ಗಂದರೆ ನ್ಯಾಯಪ್ರಮಾಣವು ಇಲ್ಲದ ಪಕ್ಷದಲ್ಲಿ ವಿಮಾರುವಿಕೆಯು
೧೩ ಇಲ್ಲ. ಆದಕಾರಣ ವಾಗ್ದತ್ತವು ಬೀಜಕ್ಕೆಲ್ಲಾ—ನ್ಯಾಯಪ್ರಮಾಣ
ವುಳ್ಳದ್ದಕ್ಕೆ ಮಾತ್ರವಲ್ಲ, ಅಬ್ರಹಾಮನ ವಿಶ್ವಾಸವುಳ್ಳದ್ದಕ್ಕೂ
ಸ್ಥಿರವಾಗಿರುವ ಹಾಗೆ, ಕೃಪೆಯ ಪ್ರಕಾರವಾಗುವದಕ್ಕೆ, ವಿಶ್ವಾಸ
೧೪ ದಿಂದಲೇ ಆಯಿತು. ನಿನ್ನನ್ನು ಅನೇಕ ಜನಾಂಗಗಳಿಗೆ ತಂದೆ
ಯಾಗಿ ನೇಮಿಸಿದ್ದೇನೆಂದು ಬರೆದಿರುವ ಪ್ರಕಾರ, ಅವನು ಸತ್ತವ
ರನ್ನು ಬದುಕಿಸುವಂಥ, ಇಲ್ಲದವುಗಳನ್ನು ಇರುವವುಗಳ ಹಾಗೆ
ಕರೆಯುವಂಥ, ತಾನು ವಿಶ್ವಾಸಿಸಿದ ದೇವರ ಮುಂದೆ ನಮ್ಮೆಲ್ಲರಿ
ಗೆ ತಂದೆಯಾಗಿದ್ದಾನೆ.
೧೮ ನಿನ್ನ ಬೀಜವು ಹಿಗಾಗುವದೆಂದು ಹೇಳಿದ ಪ್ರಕಾರ, ಅನೇಕ
ಜನಾಂಗಗಳಿಗೆ ತಂದೆಯಾಗುವ ಹಾಗೆ, ಅವನು ನಿರೀಕ್ಷೆಗೆ ಅಸ್ಪ
೧೯ ದವಿಲ್ಲದೆ ನಿರೀಕ್ಷಿಸಿ, ವಿಶ್ವಾಸಿಸಿದನು. ಮತ್ತು ವಿಶ್ವಾಸದಲ್ಲಿ ಬಲ
ಹೀನನಾಗಿರದೆ, ತಾನು ಹೆಚ್ಚು ಕಡಿಮೆ ನೂರು ವರುಷದವನಾಗಿ
ದ್ದು, ತನ್ನ ಶರೀರವು ಆಗಲೇ ಮರಣವಾದದ್ದನ್ನು, ಸಾರಳ
೨೦ ಗರ್ಭದ ಮರಣವನ್ನೂ ಲಕ್ಷ್ಯ ಮಾಡಲಿಲ್ಲ. ಆದರೆ ದೇವರ
ವಾಗ್ದತ್ತವನ್ನು ಕುರಿತು ಅವಿಶ್ವಾಸದಿಂದ ಅನುಮಾನ ಪಡದೆ,
೨೧ ವಿಶ್ವಾಸದಲ್ಲಿ ಬಲಿಷ್ಠನಾಗಿ, ದೇವರಿಗೆ ಮಹಿಮೆ ಕೊಟ್ಟು, ವಾಗ್ದ
ತ್ತ ಮಾಡಿದ್ದನ್ನು ನಡಿಸುವದಕ್ಕೆ ಬಲವುಳ್ಳವನಾಗಿದ್ದಾನೆಂದು,
೨೨ ತುಂಬ ಭರವಸವುಳ್ಳವನಾಗಿದ್ದನು. ಆದದರಿಂದ ಅದು ಅವನಿಗೆ
೨೩ ನೀತಿ ಎಂದು ಎಣಿಸಲ್ಪಟ್ಟಿತು. ಆದರೆ, ಅವನಿಗೆ ಎಣಿಸಲ್ಪಟ್ಟಿ
ತೆಂಬುವದು, ಅವನ ಸಲವಾಗಿ ಮಾತ್ರವಲ್ಲ, ನಮ್ಮ ಸಲವಾಗಿ ಸಹ
೨೪ ಬರೆಯಲ್ಪಟ್ಟಿತು. ನಮ್ಮ ಕರ್ತನಾದ ಯೇಸುವನ್ನು ಸತ್ತವ
ರೊಳಗಿಂದ ಎಬ್ಬಿಸಿದವನ ಮೇಲೆ ವಿಶ್ವಾಸಿಸುವ ನಮಗೂ ಎಣಿ
೨೫ ಸಲ್ಪಡುವದಕ್ಕಿರುವದು. ಅವನು ನಮ್ಮ ಅಕ್ರಮಗಳಿಗೋಸ್ಕರ
ಒಪ್ಪಿಸಲ್ಪಟ್ಟು, ನಮ್ಮ ನೀತಿ ನಿರ್ಣಯಕ್ಕೋಸ್ಕರ ಎಬ್ಬಿಸ
ಲ್ಪಟ್ಟನು.

## ೫. ಸಂಧಿ.

೧ ಆದಕಾರಣ ವಿಶ್ವಾಸದಿಂದ ನೀತಿನಿರ್ಣಯ ಪಟ್ಟ ನಮಗೆ ದೇ
ವರ ಸಂಗಡ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ
೨ ಸಮಾಧಾನ ಉಂಟು. ಇವನ ಮುಖಾಂತರ ನಾವು ನಿಂತು ಕೊಂ
ಡಿರುವ ಈ ಕೃಪೆಯಲ್ಲಿ ಪ್ರವೇಶವನ್ನು ಸಹ ವಿಶ್ವಾಸದಿಂದ
ಹೊಂದಿ, ದೇವರ ಮಹಿಮೆಯ ನಿರೀಕ್ಷೆಯಲ್ಲಿ ಹೆಚ್ಚಳ ಪಡುತ್ತೇವೆ.
3 ಅದು ಮಾತ್ರವಲ್ಲ, ಉಪದ್ರಗಳಲ್ಲಿಯೂ ಹೆಚ್ಚಳ ಪಡುತ್ತೇವೆ.
೪ ಉಪದ್ರವು ತಾಳ್ಮೆಯನ್ನು, ತಾಳ್ಮೆಯು ಪರೀಕ್ಷೆಯನ್ನು ಪರೀಕ್ಷೆ
ಯು ನಿರೀಕ್ಷೆಯನ್ನು, ಉಂಟು ಮಾಡುತ್ತವೆ. ಎಂದು ತಿಳಿದಿರು
೫ ವದರಿಂದಲೇ. ನಿರೀಕ್ಷೆಯಾದರೆ, ನಾಚಿಕೆ ಪಡಿಸುವದಿಲ್ಲ. ಯಾ
ಕಂದರೆ ದೇವರ ಪ್ರೀತಿಯು ನಮಗೆ ಕೊಡಲ್ಪಟ್ಟ ಪರಿಶುದ್ಧಾತ್ಮ
೬ ದಿಂದ ನಮ್ಮ ಹೃದಯಗಳಲ್ಲಿ ಹೊಯ್ಯಲ್ಪಟ್ಟಿದೆ. ಯಾಕಂದ
ರೆ ನಾವು ಇನ್ನು ಬಲಹೀನವಾಗಿರುವಾಗ್ಯೇ, ತಕ್ಕ ಸಮಯದಲ್ಲಿ
೭ ಕ್ರಿಸ್ತನು ಭಕ್ತಿ ಹೀನರಿಗೋಸ್ಕರ ಸತ್ತನು. ಏನಂದರೆ, ನೀತಿವಂತ
ನಿಗೋಸ್ಕರ ಯಾವನಾದರೂ ಸಾಯುವದು ದುರ್ಲಭವಾಗಿದೆ.
ಒಂದು ವೇಳೆ, ಉಪಕಾರಿಗೋಸ್ಕರ ಯಾವನಾದರೂ ಸಾಯು
೮ ವದಕ್ಕೆ ಅಪ್ಪಟ ಧೈರ್ಯ ಪಟ್ಟಾನು. ಆದರೆ, ನಾವು ಇನ್ನು
ಪಾಪಿಗಳಾಗಿರುವಾಗ ಕ್ರಿಸ್ತನು ನಮಗೋಸ್ಕರ ಸತ್ತದರಿಂದ, ದೇ
ವರು ನನ್ನು ಮೇಲಿರುವ ತನ್ನ ಪ್ರೀತಿಯನ್ನು ಪ್ರತಿಷ್ಠೆ ಮಾಡು
೯ ತ್ತಾನೆ. ಹಾಗಾದರೆ, ಬಹು ಹೆಚ್ಚಾಗಿ ಈಗ ಅವನ ರಕ್ತದಿಂದ ನೀತಿ
ನಿರ್ಣಯ ಪಟ್ಟು, ಅವನ ಮುಖಾಂತರ ಕೋಪದೊಳಗಿಂದ
೧೦ ರಕ್ಷಿಸಲ್ಪಡುವೆವು. ಯಾಕಂದರೆ ಶತ್ರುಗಳಾಗಿದ್ದು, ಅವನ ಮಗನ
ಮರಣದ ಮುಖಾಂತರ ದೇವರಿಗೆ ಅನ್ಯೋನ್ಯ ಮಾಡಲ್ಪಟ್ಟಿದ್ದ
ರೆ, ಬಹು ಹೆಚ್ಚಾಗಿ ಅನ್ಯೋನ್ಯ ಮಾಡಲ್ಪಟ್ಟು, ಅವನ ಜೀವ
೧೧ ದಿಂದ ರಕ್ಷಿಸಲ್ಪಡುವೆವು. ಅದು ಮಾತ್ರವಲ್ಲ, ಈಗ ಯಾವನ
ಮುಖಾಂತರ ಅನ್ಯೋನ್ಯವನ್ನು ಹೊಂದಿದ್ದೇವೋ, ಆ ನಮ್ಮ
ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ದೇವರಲ್ಲಿ ಹೆಚ್ಚಳ
ಪಡುತ್ತೇವೆ.
೧೨ ಆದದರಿಂದ ಒಬ್ಬ ಮನುಷ್ಯನಿಂದ ಪಾಪವು, ಪಾಪದಿಂದ
ಮರಣವೂ, ಲೋಕದಲ್ಲಿ ಪ್ರವೇಶಿಸಿ, ಈ ಪ್ರಕಾರ ಎಲ್ಲರು ಪಾಪ
ಮಾಡಿದ್ದಲ್ಲಿ, ಮರಣವು ಎಲ್ಲರ ಮೇಲೆ ವ್ಯಾಪಿಸಿದ ಹಾಗಿರುವದು.
೧೩ ಹ್ಯಾಗಂದರೆ ನ್ಯಾಯಪ್ರಮಾಣದ ಮಟ್ಟಿಗೂ ಪಾಪವು ಲೋ
ಕದಲ್ಲಿ ಇತ್ತು. ಆದರೆ ನ್ಯಾಯಪ್ರಮಾಣವು ಇಲ್ಲದಿರುವಾಗ,
೧೪ ಪಾಪವು ಎಣಿಸಲ್ಪಡುವದಿಲ್ಲ. ಆದರೆ ಆದಮನಿಂದ ಮೋಸೆಯ
ವರೆಗೂ, ಬರುವವನಿಗೆ ಮುಂಗುರುತಾಗಿರುವ ಆದಮನ ಮಾರುವಿ
ಕೆಯ ಹೋಲಿಕೆಯಾಗಿ ಪಾಪ ಮಾಡದವರ ಮೇಲೆಯೂ ಮ
೧೫ ರಣವು ದೊರೆತನ ಮಾಡಿತು. ಆದರೆ ಅಕ್ರಮವು ಹ್ಯಾಗೋ,
ಕೃಪೆಯ ವರವು ಹಾಗಲ್ಲ; ಹ್ಯಾಗಂದರೆ ಒಬ್ಬನ ಅಕ್ರಮದಿಂದ
ಅನೇಕರಾದವರು ಸತ್ತಿದ್ದರೆ, ಬಹು ಅಧಿಕವಾಗಿ ದೇವರ ಕೃಪೆ
ಯೂ, ಯೇಸು ಕ್ರಿಸ್ತನಾದ ಒಬ್ಬ ಮನುಷ್ಯನ ಕೃಪೆಯಿಂ
೧೬ ದಾಗುವ ವರವೂ, ಅನೇಕರಾದವರಿಗೆ ಹೆಚ್ಚಿದವು. ಮತ್ತು ಪಾಪ
ಮಾಡಿದ ಒಬ್ಬನಿಂದ ಹ್ಯಾಗೋ, ವರವು ಹಾಗಲ್ಲ; ಹ್ಯಾಗಂದರೆ
ನ್ಯಾಯತೀರ್ಪಿಕೆಯು ಒಬ್ಬನಿಂದ ಅಜ್ಞೆ ನಿರ್ಣಯಕ್ಕಾಯಿ
ತು; ಆದರೆ ಕೃಪೆಯ ವರವು ಅನೇಕ ಅಕ್ರಮಗಳೊಳಗಿಂದ
೧೭ ನೀತಿನಿರ್ಣಯಕ್ಕಾಯಿತು. ಯಾಕಂದರೆ ಆ ಒಬ್ಬನ ಅಕ್ರಮ
ದಿಂದ ಮರಣವು ಒಬ್ಬನ ಮುಖಾಂತರ ದೊರೆತನ ಮಾಡಿದ್ದರೆ,
ಬಹು ಹೆಚ್ಚಾಗಿ ಕೃಪೆಯ ಪೂರ್ತಿಯನ್ನೂ, ನೀತಿಯ ವರದ
ಪೂರ್ತಿಯನ್ನೂ, ಹೊಂದುವವರು ಯೇಸು ಕ್ರಿಸ್ತನಾದ ಒಬ್ಬನ
೧೮ ಮುಖಾಂತರ ಜೀವದಲ್ಲಿ ದೊರೆತನ ಮಾಡುವರು. ಆದದರಿಂದ
ಒಬ್ಬನ ಅಕ್ರಮದಿಂದ ಎಲ್ಲಾ ಮನುಷ್ಯರಿಗೆ ಹ್ಯಾಗೆ ಅಜ್ಞೆನಿರ್ಣ
ಯಕ್ಕಾಯಿತೋ, ಹಾಗೆಯೇ ಒಬ್ಬನ ನೀತಿಯಿಂದ ಎಲ್ಲಾ ಮ
೧೯ ನುಷ್ಯರಿಗೆ ಜೀವದ ನೀತಿನಿರ್ಣಯಕ್ಕಾಯಿತು. ಹ್ಯಾಗಂದರೆ
ಯಾವ ಪ್ರಕಾರ ಒಬ್ಬನೇ ಮನುಷ್ಯನ ಅವಿಧೇಯತ್ವದಿಂದ ಅ
ನೇಕರಾದವರು ಪಾಪಿಗಳಾಗಲ್ಪಟ್ಟರೋ, ಅದೇ ಪ್ರಕಾರ ಒಬ್ಬನಾ
ದವನ ವಿಧೇಯತ್ವದಿಂದ ಅನೇಕರಾದವರು ನೀತಿವಂತರಾಗಲ್ಪ
೨೦ ಡುವರು. ಆದರೆ ಅಕ್ರಮ ಹೆಚ್ಚುವ ಹಾಗೆ, ನ್ಯಾಯ-ಪ್ರಮಾಣವು
ನಡುವೆ ಬಂತು. ಆದರೆ ಪಾಪವು ಹೆಚ್ಚಿದ್ದಲ್ಲಿ ಕೃಪೆಯು ಮತ್ತು
೨೧ ಹೆಚ್ಚಿತು. ಯಾವ ಪ್ರಕಾರ ಪಾಪವು ಮರಣದಲ್ಲಿ ದೊರೆತನ ಮಾ
ಡಿತೋ, ಅದೇ ಪ್ರಕಾರ ಕೃಪೆಯು ಸಹ ನಮ್ಮ ಕರ್ತನಾದ



ಯೇಸು ಕ್ರಿಸ್ತನಿಂದ ನೀತಿಯ ಮುಖಾಂತರ, ನಿತ್ಯ ಜೀವಕ್ಕಾಗಿ
ಥೊರೆತನ ಮಾಡುವ ಹಾಗೆಯೇ.

## ೬. ಸಂಧಿ.

೧ ಹಾಗಾದರೆ, ಏನು ಹೇಳುವ! ಕೃಪೆಯು ಹೆಚ್ಚುವ ಹಾಗೆ
೨ ಪಾಪದಲ್ಲಿ ನಿಲ್ಲೋಣೋ! ಆಗದು. ಪಾಪಕ್ಕೆ ಸತ್ತವರಾದ ನಾ
3 ವು ಇನ್ನು ಹ್ಯಾಗೆ ಅದರಲ್ಲಿ ಬದುಕುವೆವು? ಏನು! ಕ್ರಿಸ್ತ ಯೇ
ಸುವಿಗಾಗಿ ಸ್ನಾನ ಹೊಂದಿದವರಾದ್ದು ಅವನ ಮರಣಕ್ಕಾಗಿ ಸ್ನಾ
೪ ನ ಹೊಂದಿದೆವೆಂದು ಅರಿಯರಾ? ಹಾಗಾದರೆ, ಯಾವ ಪ್ರಕಾರ
ಕ್ರಿಸ್ತನು ತಂದೆಯ ಮಹಿಮೆಯಿಂದ ಸತ್ತವರೊಳಗಿಂದ ಎಬ್ಬಿ
ಸಲ್ಪಟ್ಟನೋ, ಅದೇ ಪ್ರಕಾರ ನಾವು ಸಹ ಹೊಸ ಜೀವದಲ್ಲಿ
ನಡೆದು ಕೊಳ್ಳುವ ಹಾಗೆ, ಅವನ ಸಂಗಡ ಸ್ನಾನದಿಂದ ಮರಣ
೫ ಕ್ಕಾಗಿ ಹೂಣಲ್ಪಟ್ಟೆವು. ಯಾಕಂದರೆ ಅವನ ಮರಣದ ಹೋ
ಲಿಕೆಯಾಗಿ ಕೂಡ ನೆಡಲ್ಪಟ್ಟವರಾಗಿದ್ದರೆ, ಅವನ ಪುನರುತ್ಥಾನ
೬ ದ ಹೋಲಿಕೆಯಾಗಿಯೂ ಇರುವೆವು. ಪಾಪ ಶರೀರವು ನಾಶ
ವಾಗಿ, ನಾವು ಪಾಪಕ್ಕೆ ಇನ್ನು ಸೇವೆ ಮಾಡದ ಹಾಗೆ, ನಮ್ಮ
ಹಳೇ ಮನುಷ್ಯನು ಕೂಡ ಶಿಲುಬೆಗೆ ಹಾಕಲ್ಪಟ್ಟನೆಂಬುವದನ್ನು
೭ ತಿಳಿದಿದ್ದೇವೆ. ಯಾಕಂದರೆ ಸತ್ತವನು ಪಾಪದೊಳಗಿಂದ ನೀತಿ
೮ ನಿರ್ಣಯ ಪಟ್ಟಿದ್ದಾನೆ. ನಾವು ಕ್ರಿಸ್ತನ ಸಂಗಡ ಸತ್ತವರಾದರೆ,
ಅವನ ಸಂಗಡ ಬದುಕುವೆವೆಂದು ನಂಬುತ್ತೇವೆ. ಕ್ರಿಸ್ತನು ಸತ್ತವ
ರೊಳಗಿಂದ ಎಬ್ಬಿಸಲ್ಪಟ್ಟು, ಇನ್ನು ಸಾಯನೆಂದು ಬಲ್ಲೆವು.
೯ ಮರಣವು ಇನ್ನು ಅವನನ್ನು ಆಳುವದಿಲ್ಲ. ಯಾಕಂದರೆ ಅವನು
ಸತ್ತದ್ದು, ಒಂದೇ ಸಾರಿ ಪಾಪಕ್ಕೆ ಸತ್ತನು; ಆದರೆ, ಅವನು ಬ
೧೦ ದುಕುವದು, ದೇವರಿಗೆ ಬದುಕುತ್ತಾನೆ. ಹಾಗೆಯೇ ನೀವೂ ನಿಮ್ಮನ್ನು
ಪಾಪಕ್ಕೆ ಸತ್ತವರೆಂದೂ, ನಮ್ಮ ಕರ್ತನಾದ ಕ್ರಿಸ್ತ ಯೇಸು
೧೧ ವಿನಲ್ಲಿ ದೇವರಿಗೆ ಬದುಕುವವರೆಂದೂ, ಎಣಿಸಿ ಕೊಳ್ಳಿರಿ. ಹಾಗಾದ
ರೆ, ಪಾಪವು ನಿಮ್ಮ ಮರ್ತ್ಯ ಶರೀರದಲ್ಲಿ—ನೀವು ಅದರ ಆಶೆಗಳಿ
೧೨ ಗೆ ವಿಧೇಯರಾಗುವ ಹಾಗೆ—ಆಳಗೆ ಇರಲಿ. ಮತ್ತು, ನಿಮ್ಮ ಅಂಗಗ
ಳನ್ನು ಅನೀತಿಯ ಆಯುಧಗಳಾಗಿ ಪಾಪಕ್ಕೆ ಒಪ್ಪಿಸದೆ, ನಿಮ್ಮ
ನ್ನು ದೇವರಿಗೆ ಸತ್ತವರೊಳಗಿಂದ ಬದುಕುವವರಾಗಿಯೂ, ನಿಮ್ಮ
ಅಂಗಗಳನ್ನು ದೇವರಿಗೆ ನೀತಿಯ ಆಯುಧಗಳಾಗಿಯೂ, ಒಪ್ಪಿ
೧೩ ಸಿರಿ. ಯಾಕಂದರೆ ಪಾಪವು ನಿಮ್ಮನ್ನು ಆಳುವದಿಲ್ಲ; ಯಾ
ಕಂದರೆ ನ್ಯಾಯಪ್ರಮಾಣಕ್ಕೊಳಗಾಗಿರದೆ, ಕೃಪೆಗೊಳಗಾಗಿ
ದ್ದೀರಿ.
೧೪ ಹಾಗಾದರೇನು! ನ್ಯಾಯಪ್ರಮಾಣಕ್ಕೊಳಗಾಗಿರದೆ, ಕೃಪೆ
೧೫ ಗೊಳಗಾಗಿರುವದರಿಂದ ಪಾಪ ಮಾಡೋಣೋ? ಆಗದು. ನಿಮ್ಮ
ನ್ನು ಯಾವದಕ್ಕೆ ದಾಸರಾಗಿ ವಿಧೇಯತ್ವಕ್ಕಾಗಿ ಒಪ್ಪಿಸುತ್ತೀ
ರೋ—ಮರಣಕ್ಕಾಗಿ ಪಾಪಕ್ಕಾದರೂ, ನೀತಿಗಾಗಿ ವಿಧೇಯತ್ವ
ಕ್ಕಾದರೂ—ಯಾವದಕ್ಕೆ ವಿಧೇಯರಾಗಿದ್ದೀರೋ, ಅದಕ್ಕೆ ದಾ
೧೭ ಸರಾಗಿದ್ದೀರೆಂದು ಅರಿಯರಾ? ಆದರೆ ನೀವು ಪಾಪದ ದಾಸರಾಗಿ
ದ್ದವರಾದರೂ, ನಿಮಗೆ ಒಪ್ಪಿಸಲ್ಪಟ್ಟ ಬೋಧನೆಯ ಪ್ರಮಾಣ
ಕ್ಕೆ ಹೃದಯದಿಂದ ವಿಧೇಯರಾದದರಿಂದ, ದೇವರಿಗೆ ಸ್ತೋತ್ರ
೧೮ ವು. ಮತ್ತು ಪಾಪದಿಂದ ಬಿಡಿಸಲ್ಪಟ್ಟು, ನೀತಿಗೆ ದಾಸರಾದಿರಿ.
ನಿಮ್ಮ ಮಾಂಸದ ಅಶಕ್ತಿಯ ನಿಮಿತ್ತ, ಮನುಷ್ಯ ರೀತಿಯಾಗಿ
ಹೇಳುತ್ತೇನೆ. ಹ್ಯಾಗಂದರೆ, ಯಾವ ಪ್ರಕಾರ ನಿಮ್ಮ ಅಂಗಗಳ
ನ್ನು ಅನ್ಯಾಯಕ್ಕಾಗಿ ಅಶುದ್ಧತ್ವಕ್ಕೂ, ಅನ್ಯಾಯಕ್ಕೂ ದಾ
ಸರಾಗಿ ಒಪ್ಪಿಸಿದಿರೋ, ಅದೇ ಪ್ರಕಾರ, ಈಗ ನಿಮ್ಮ ಅಂಗಗ
ಳನ್ನು ಪರಿಶುದ್ಧವಾಗುವದಕ್ಕಾಗಿ, ನೀತಿಗೆ ದಾಸರಾಗಿ ಒಪ್ಪಿಸಿರಿ.
೧೯ ಯಾಕಂದರೆ, ನೀವು ಪಾಪಕ್ಕೆ ದಾಸರಾಗಿರುವಾಗ್ಯೇ, ನೀತಿಗೆ
೨೦ ಬಿಡುಗಡೆಯಾಗಿದ್ದೀರಿ. ಹಾಗಾದರೆ, ಯಾವವುಗಳಿಗೆ ಈಗ ನಾಚಿ
ಕೆ ಪಡುತ್ತೀರೋ, ಅವುಗಳಿಂದ ಆಗ ಏನು ಫಲವನ್ನು ಹೊಂದಿ
೨೧ ದಿರಿ? ಯಾಕಂದರೆ ಅವುಗಳ ಅಂತ್ಯವು ಮರಣವೇ. ಆದರೆ
ಈಗ ಪಾಪಕ್ಕೆ ಬಿಡುಗಡೆಯಾಗಿ, ದೇವರಿಗೆ ದಾಸರಾಗಿ, ನಿಮ್ಮ
ಫಲವನ್ನು ಪರಿಶುದ್ಧತ್ವಕ್ಕಾಗಿ ಹೊಂದುತ್ತೀರಿ; ಅಂತ್ಯವೋ, ನಿ
೨೩ ತ್ಯ ಜೀವವೇ. ಯಾಕಂದರೆ ಪಾಪದ ಸಂಬಳವು ಮರಣವು;
ಆದರೆ ದೇವರ ಕೃಪೆಯ ವರವು ನಮ್ಮ ಕರ್ತನಾದ ಯೇಸು
ಖಿಸ್ತನಲ್ಲಿರುವ ನಿತ್ಯ ಜೀವವು.

## ೩. ಸಂಧಿ.

೧ ನ್ಯಾಯಪ್ರಮಾಣವನ್ನು ತಿಳಿದವರ ಸಂಗಡ ಮಾತಾಡುತ್ತೇನೆ.
ಏನು, ಸಹೋದರರೇ, ನ್ಯಾಯಪ್ರಮಾಣವು ಮನುಷ್ಯನನ್ನು,
ಅವನು ಬದುಕುವ ಮಟ್ಟಿಗೂ, ಆಳುತ್ತದೆ ಎಂದು ಅರಿಯರಾ?
೨ ಹ್ಯಾಗಂದರೆ, ಗಂಡನಿಗೆ ಅಧೀನಳಾದ ಹೆಂಡತಿಯು ಬದುಕುವ
ಗಂಡನಿಗೆ ನ್ಯಾಯದಿಂದ ಕಟ್ಟಲ್ಪಟ್ಟಿದ್ದಾಳೆ. ಆದರೆ ಗಂಡನು
3 ಸತ್ತರೆ, ಗಂಡನ ನ್ಯಾಯದಿಂದ ಬಿಡಿಸಲ್ಪಟ್ಟಿದ್ದಾಳೆ. ಹಾಗಾದ
ರೆ, ಗಂಡನು ಬದುಕುತ್ತಿರುವಾಗ, ಬೇರೆ ಗಂಡನಿಗೆ ಸೇರಿ ಕೊಂಡ
ರೆ, ವ್ಯಭಿಚಾರಿ ಎಂದು ಕರೆಯಲ್ಪಡುವಳು. ಆದರೆ ಗಂಡನು
ಸತ್ತರೆ, ಆ ನ್ಯಾಯಕ್ಕೆ ಬಿಡಿಸಲ್ಪಟ್ಟಿದ್ದಾಳೆ; ಆದಕಾರಣ ಬೇರೆ
೪ ಗಂಡನಿಗೆ ಸೇರಿ ಕೊಂಡರೂ, ವ್ಯಭಿಚಾರಿಯಾಗಿರುವದಿಲ್ಲ. ಹಾಗೆ
ಯೇ, ನನ್ನ ಸಹೋದರರೇ, ನಾವು ದೇವರಿಗೆ ಫಲ ಫಲಿಸುವದ
ಕ್ಕೋಸ್ಕರ, ಸತ್ತವರೊಳಗಿಂದ ಎದ್ದಿರುವ ಬೇರೊಬ್ಬನಿಗೆ ಸೇರಿ
ಕೊಳ್ಳುವ ಹಾಗೆ, ನೀವು ಸಹ ಕ್ರಿಸ್ತನ ಶರೀರದ ಮೂಲಕವಾಗಿ
೫ ನ್ಯಾಯಪ್ರಮಾಣಕ್ಕೆ ಸತ್ತವರಾದಿರಿ. ಯಾಕಂದರೆ ನಾವು ಮಾಂ
ಸದಲ್ಲಿರಲಾಗಿ, ನ್ಯಾಯಪ್ರಮಾಣದಿಂದ ಅದ ಪಾಪಗಳ ಇಚ್ಛೆ
ಗಳು ಮರಣಕ್ಕೆ ಫಲ ಫಲಿಸುವ ಹಾಗೆ, ನಮ್ಮ ಅಂಗಗಳಲ್ಲಿ ಚು
೬ ರುಕಾಗಿದ್ದವು. ಆದರೆ ಈಗ ಯಾತಕರಲ್ಲಿ ಹಿಡಿಯಲ್ಪಟ್ಟಿದ್ದೋ,
ಆ ನ್ಯಾಯಪ್ರಮಾಣಕ್ಕೆ ಸತ್ತವರಾಗಿದ್ದು, ಅದರಿಂದ ಬಿಡಿಸಲ್ಪ
ಟ್ಟಿದ್ದೇವೆ. ನಾವು ಹಳೇ ಅಕ್ಷರದಲ್ಲಿ ಅಲ್ಲ, ಹೊಸ ಆತ್ಮದಲ್ಲಿ
ಸೇವಿಸುವದಕ್ಕೋಸ್ಕರವೇ.

೭ ಹಾಗಾದರೆ, ಏನು ಹೇಳುವ! ನ್ಯಾಯಪ್ರಮಾಣವು ಪಾಪ
ವೋ! ಆಗದು. ಆದರೆ ನ್ಯಾಯಪ್ರಮಾಣದಿಂದಲೇ ಹೊ
ರ್ತು, ಪಾಪವನ್ನು ಅರಿಯದೆ ಇದ್ದೆನು. ಹ್ಯಾಗಂದರೆ ನ್ಯಾ
ಯಪ್ರಮಾಣವು, ನೀನು ಆಶೆಸ ಬೇತವೆಂದು ಹೇಳದೆ ಇದ್ದರೆ,
೮ ಆಶೆಯನ್ನು ಅರಿಯದೆ ಇದ್ದೆನು. ಆದರೆ ಪಾಪವು ಕಟ್ಟಳೆಯಿಂ
ದ ಸಮಯ ತಕ್ಕೊಂಡು, ನನ್ನಲ್ಲಿ ಸಕಲ ವಿಧವಾದ ಆಶೆಗಳ
ನ್ನು ಉಂಟು ಮಾಡಿತು. ಯಾಕಂದರೆ ನ್ಯಾಯಪ್ರಮಾಣಿಲ್ಲ
೯ ದೆ ಪಾಪವು ಸತ್ತದೆ. ನಾನೇ ಒಂದು ಕಾಲದಲ್ಲಿ ನ್ಯಾಯಪ್ರಮಾ

ಣವಿಲ್ಲದೆ ಬದುಕುತ್ತಿದ್ದೆನು; ಆದರೆ ಕಟ್ಟಳೆ ಬಂದಾಗ, ಪಾಪವು
೧೦ ತಿರಿಗಿ ಬದುಕಿತು, ನಾನು ಸತ್ತೆನು. ಹೀಗೆ ಜೀವಕ್ಕಾದ ಕಟ್ಟಳೆ
೧೧ ಯೇ ಮರಣಕ್ಕಾಯಿತೆಂದು, ನಾನು ಕಂಡು ಕೊಂಡೆನು. ಹ್ಯಾ
ಗಂದರೆ, ಪಾಪವು ಕಟ್ಟಳೆಯಿಂದ ಸಮಯ ತಕ್ಕೊಂಡು, ನ
೧೨ ನ್ನನ್ನು ವಂಚಿಸಿ, ಅದರಿಂದ ನನ್ನನ್ನು ಕೊಂದು ಹಾಕಿತು. ಆದ
ದರಿಂದ ನ್ಯಾಯಪ್ರಮಾಣವು ಪರಿಶುದ್ಧವಾದದ್ದು, ಕಟ್ಟಳೆಯು
೧೩ ಪರಿಶುದ್ಧವಾಗಿಯೂ, ನೀತಿಯಾಗಿಯೂ, ಒಳ್ಳೇದಾಗಿಯೂ
ಅದೆ. ಹಾಗಾದರೆ, ಒಳ್ಳೇದು ನನಗೆ ಮರಣವಾಯಿತೋ! ಆಗ
ದು. ಪಾಪವೇ, ಒಳ್ಳೇದರಿಂದ ನನಗೆ ಮರಣವನ್ನು ಉಂಟು
ಮಾಡಿ, ಪಾಪವೆಂದು ತೋರುವ ಹಾಗೆಯೂ, ಪಾಪವು ಕಟ್ಟಳೆ
ಯಿಂದ ಬಹು ಹೆಚ್ಚಾಗಿ ಪಾಪವುಳ್ಳದ್ದಾಗುವ ಹಾಗೆಯೂ, ತಾ
೧೪ ನೇ. ಯಾಕಂದರೆ ನ್ಯಾಯಪ್ರಮಾಣವು ಆತ್ಮಭಾವವಾಗಿದೆ ಎಂ
ದು ಬಲ್ಲೆವು. ಆದರೆ ನಾನು ಪಾಪಕ್ಕೊಳ್ಳಗಾಗಿ ಮಾರಲ್ಪಟ್ಟು,
೧೫ ಮಾಂಸಭಾವವಾಗಿದ್ದೇನೆ. ಯಾಕಂದರೆ ನಾನು ಮಾಡುವದನ್ನು
ಅರಿಯೆನು; ಹ್ಯಾಗಂದರೆ, ಇಷ್ಟೈಸುವದನ್ನು ಮಾಡದೆ, ಹಗೆ
೧೬ ಮಾಡುವದನ್ನೇ ಮಾಡುತ್ತೇನೆ. ಆದರೆ ನಾನು ಇಷ್ಟೈಸದ್ದನ್ನು
ಮಾಡಿದರೆ, ನ್ಯಾಯಪ್ರಮಾಣವು ಒಳ್ಳೇದೆಂದು ಒಪ್ಪಿಕೊಳ್ಳು
೧೭ ತ್ತೇನೆ. ಆದದರಿಂದ ಈಗ ಅದನ್ನು ಮಾಡುವವನು ಇನ್ನು ನಾ
ನಲ್ಲ, ನನ್ನಲ್ಲಿ ವಾಸವಾಗಿರುವ ಪಾಪವೇ. ಯಾಕಂದರೆ, ನನ್ನ
೧೮ ಲ್ಲಿ, ಅಂದರೆ, ನನ್ನ ಮಾಂಸದಲ್ಲಿ, ಒಳ್ಳೇದು ವಾಸವಾಗಿರುವದಿ
ಲ್ಲವೆಂದು ಬಲ್ಲೆನು; ಹ್ಯಾಗಂದರೆ, ಇಷ್ಟೈಸುವದು ನನಗೆ ಸಿದ್ಧ
೧೯ ವಾಗಿದೆ; ಆದರೆ ಒಳ್ಳೇದನ್ನು ಮಾಡ ಕಾಣೆನು. ಯಾಕಂದರೆ,
ಇಷ್ಟೈಸುವ ಒಳ್ಳೇದನ್ನು ಮಾಡದೆ, ಇಷ್ಟೈಸದ ಕೆಟ್ಟದ್ದನ್ನು
೨೦ ಮಾಡುತ್ತೇನೆ. ಆದರೆ ನಾನು ಇಷ್ಟೈಸದ್ದನ್ನು ಮಾಡಿದರೆ, ಅದ
ನ್ನು ಮಾಡುವವನು ಇನ್ನು ನಾನಲ್ಲ, ನನ್ನಲ್ಲಿ ವಾಸವಾಗಿರುವ ಪಾ
೨೧ ಪವೇ. ಆದದರಿಂದ ಒಳ್ಳೇದನ್ನು ಮಾಡ ಬೇಕೆಂದು ಇಷ್ಟೈಸುವ
ನನಗೆ ಕೆಟ್ಟದ್ದು ಸಿದ್ಧವಾಗಿದೆ, ಎಂಬುದ ಪ್ರಮಾಣವನ್ನು ಕಾಣು
೨೨ ತ್ತೇನೆ. ಹ್ಯಾಗಂದರೆ, ಒಳ್ಳೆ ಮನುಷ್ಯನ ಪ್ರಕಾರ ದೇವರ ನ್ಯಾ
೨೩ ಯಪ್ರಮಾಣದಲ್ಲಿ ಆನಂದ ಪಡುತ್ತೇನೆ. ಆದರೆ ನನ್ನ ಮನಸ್ಸಿ
ನ ಪ್ರಮಾಣದ ಸಂಗಡ ಯುದ್ಧ ಮಾಡಿ, ನನ್ನ ಅಂಗಗಳಲ್ಲಿರುವ
ಪಾಪದ ಪ್ರಮಾಣಕ್ಕೆ ನನ್ನನ್ನು ಸೆರೆ ಬೀಳ ಮಾಡುವ ಬೇಕೆ
೨೪ ಪ್ರಮಾಣವನ್ನು ನನ್ನ ಅಂಗಗಳಲ್ಲಿ ನೋಡುತ್ತೇನೆ. ಅಯ್ಯೋ!
ನಾನು ಸಂಕಟವುಳ್ಳ ಮನುಷ್ಯ! ಈ ಮರಣದ ಶರೀರದಿಂದ ನ
ನ್ನನ್ನು ತಪ್ಪಿಸುವವನ್ಯಾರು! ನಮ್ಮ ಕರ್ತನಾದ ಯೇಸು ಕ್ರಿಸ್ತ
೨೫ ನ ಮುಖಾಂತರ ದೇವರನ್ನು ಸ್ತುತಿಸುತ್ತೇನೆ. ಹಾಗಾದರೆ, ಈಗ
ನಾನೇ ಮನಸ್ಸಿನಿಂದ ದೇವರ ನ್ಯಾಯಪ್ರಮಾಣಕ್ಕೆ, ಆದರೆ
ಮಾಂಸದಿಂದ ಪಾಪದ ಪ್ರಮಾಣಕ್ಕೆ, ಸೇವೆ ಮಾಡುತ್ತೇನೆ.

## ೮. ಸಂಧಿ.

೧ ಆದದರಿಂದ ಈಗ ಕ್ರಿಸ್ತ ಯೇಸುವಿನಲ್ಲಿದ್ದು, ಮಾಂಸದ ಪ್ರ
ಕಾರವಲ್ಲ, ಆತ್ಮದ ಪ್ರಕಾರ ನಡೆಯುವವರಿಗೆ ಆಜ್ಞೆನಿರ್ಣಯ
೨ ಏನೂ ಇಲ್ಲ. ಯಾಕಂದರೆ ಕ್ರಿಸ್ತ ಯೇಸುವಿನಲ್ಲಿರುವ ಜೀವದ
ಆತ್ಮದ ನ್ಯಾಯಪ್ರಮಾಣವು ಪಾಪ ಮರಣಗಳ ಪ್ರಮಾಣದಿಂ
೩ ದ ನನ್ನನ್ನು ಬಿಡುಗಡೆ ಮಾಡಿ ಅದೆ. ಯಾಕಂದರೆ ಮಾಂಸದಿಂ
ದ ಬಲಹೀನವಾಗಿದ್ದ ನ್ಯಾಯಪ್ರಮಾಣಕ್ಕೆ ಅಸಾಧ್ಯವಾದದ್ದ
ನ್ನು ಮಾಡುವಕ್ಕೆ, ದೇವರು ತನ್ನ ಮಗನನ್ನು ಪಾಪ ಮಾಂಸ
ದ ಹೋಲಿಕೆಯಾಗಿಯೂ, ಪಾಪದ ನಿಮಿತ್ತವಾಗಿಯೂ, ಕಳು
೪ ಹಿಸಿ, ಮಾಂಸದಲ್ಲಿ ಪಾಪಕ್ಕೆ ಆಜ್ಞೆ ನಿರ್ಣಯಿಸಿದನು. ಮಾಂ
ಸದ ಪ್ರಕಾರವಲ್ಲ ಆತ್ಮದ ಪ್ರಕಾರ ನಡೆಯುವ ನಮ್ಮಲ್ಲಿ ನ್ಯಾ
ಯಪ್ರಮಾಣದ ನೀತಿಯು ಪೂರ್ತಿಯಾಗುವದಕ್ಕೆ ಹೀಗಾ
೫ ಯಿತು. ಯಾಕಂದರೆ ಮಾಂಸದ ಪ್ರಕಾರವಿರುವವರು ಮಾಂಸ
ದವುಗಳ ಮೇಲೆ ಮನಸ್ಸಿರುತ್ತಾರೆ. ಆತ್ಮದ ಪ್ರಕಾರದವರು ಆ
೬ ತ್ಮದವುಗಳ ಮೇಲೆಯೇ. ಮತ್ತು ಮಾಂಸದ ಮನಸ್ಸು ಮರ
ಣವು; ಆತ್ಮದ ಮನಸ್ಸು ಜೀವವೂ, ಸಮಾಧಾನವೂ. ಯಾ
೭ ಕಂದರೆ ಮಾಂಸದ ಮನಸ್ಸು ದೇವರಿಗೆ ಶತ್ರುತ್ವ. ಯಾಕಂದ
ರೆ ಅದು ದೇವರ ನ್ಯಾಯಪ್ರಮಾಣಕ್ಕೆ ವಿಧೇಯವಾಗಿರದು.
೮ ಮತ್ತು ಇರಲಾರದು. ಹಾಗಾದರೆ, ಮಾಂಸದಲ್ಲಿರುವವರು ದೇವ
ರನ್ನು ಮೆಚ್ಚಿಸಲಾರರು. ನೀವೋ, ಮಾಂಸದಲ್ಲಿ ಅಲ್ಲ, ದೇವರ
ಆತ್ಮವು ನಿಮ್ಮಲ್ಲಿ ವಾಸವಾಗಿದ್ದರೆ, ಆತ್ಮದಲ್ಲಿ ಇದ್ದೀರಿ. ಆದರೆ
ಯಾವನಿಗಾದರೂ ಕ್ರಿಸ್ತನ ಆತ್ಮವು ಇಲ್ಲದಿದ್ದರೆ, ಅವನು ಕ್ರಿಸ್ತ
೧೦ ನವನಲ್ಲ. ಆದರೆ ಕ್ರಿಸ್ತನು ನಿಮ್ಮಲ್ಲಿ ಇದ್ದರೆ, ಶರೀರವು ಪಾಪದ
೧೧ ನಿಮಿತ್ತ ಸತ್ತದ್ದು; ಆತ್ಮವೋ, ನೀತಿಯ ನಿಮಿತ್ತ ಜೀವವು. ಇದ
ಲ್ಲದೆ, ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದವನ ಆತ್ಮವು
ನಿಮ್ಮಲ್ಲಿ ವಾಸವಾಗಿದ್ದರೆ, ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿ
ಸಿದವನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮದಿಂದ ನಿಮ್ಮ ಮ
ರ್ತ್ಯ ಶರೀರಗಳನ್ನು ಸಹ ಬದುಕಿಸುವನು.

೧೨ ಆದದರಿಂದ, ಸಹೋದರರೇ, ಹಂಗಿನವರಾಗಿದ್ದೇವೆ, ಮಾಂಸ
೧೩ ದ ಪ್ರಕಾರ ಬದುಕುವ ಹಾಗೆ ಮಾಂಸಕ್ಕೆ ಅಲ್ಲ. ಯಾಕಂದರೆ
ಮಾಂಸದ ಪ್ರಕಾರ ಬದುಕಿದರೆ, ಸಾಯಲಿಗಾದ್ದೀರಿ. ಆದರೆ ಆತ್ಮ
೧೪ ದಿಂದ ಶರೀರದ ಕರ್ಮಗಳನ್ನು ಕೊಂದರೆ, ಬದುಕುವಿರಿ. ಯಾ
ಕಂದರೆ ದೇವರ ಆತ್ಮದಿಂದ ನಡಿಸಲ್ಪಡುವವರಲ್ಲ ದೇವರ ಮ
೧೫ ಕ್ಕಳಾಗಿದ್ದಾರೆ. ಯಾಕಂದರೆ ತಿರಿಗಿ ಭಯಕ್ಕಾಗಿ ದಾಸತ್ವದ
ಆತ್ಮವನ್ನು ಹೊಂದದೆ, ಪುತ್ರಸ್ವೀಕಾರದ ಆತ್ಮವನ್ನು ಹೊಂದಿ
ದ್ದೀರಿ. ಅದರಿಂದ ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ.
೧೬ ದೇವರ ಮಕ್ಕಳಾಗಿದ್ದೇವೆಂದು, ಆತ್ಮವು ತಾನೇ ನಮ್ಮ ಆತ್ಮದ
೧೭ ಸಂಗಡ ಸಾಕ್ಷಿ ಕೊಡುತ್ತದೆ. ಮತ್ತು ಮಕ್ಕಳಾದರೆ, ಬಾಧ್ಯರು;
ದೇವರಿಗೆ ಬಾಧ್ಯರು; ಕೂಡ ಮಹಿಮೆಯನ್ನು ಹೊಂದುವ ಹಾ
ಗೆ, ಕೂಡ ಶ್ರಮೆ ಪಟ್ಟರೆ, ಕ್ರಿಸ್ತನ ಕೂಡ ಬಾಧ್ಯರು ಆಗಿದ್ದೇವೆ.
೧೮ ಯಾಕಂದರೆ, ಈಗಿನ ಕಾಲದ ಶ್ರಮೆಗಳು ನಮ್ಮಲ್ಲಿ ಪ್ರತ್ಯಕ್ಷವಾ
ಗಲಿರುವ ಮಹಿಮೆಗೆ ಸರಿಯಾದವುಗಳಲ್ಲವೆಂದು ಎಣಿಸುತ್ತೇನೆ.
೧೯ ಯಾಕಂದರೆ ಸೃಷ್ಟಿಯು ಅಭಿಲಾಷೆಯು ದೇವರ ಮಕ್ಕಳು ಪ್ರ
೨೦ ತ್ಯಕ್ಷವಾಗುವದನ್ನು ಎದುರು ನೋಡುತ್ತದೆ. ಯಾಕಂದರೆ ಸೃ
ಷ್ಟಿಯು ಮಾಯೆಗೆ ಅಧೀನವಾಯಿತು; ಸ್ವಯಿಚ್ಛೆಯಿಂದಲ್ಲ,
೨೧ ಅಧೀನ ಮಾಡಿದವನ ಮುಖಾಂತರ, ನಿರೀಕ್ಷೆಯಲ್ಲಿಯೇ. ಏ
ನಂದರೆ, ಸೃಷ್ಟಿಯೂ ತಾನೇ ಕ್ಷಯದ ದಾಸತ್ವದೊಳಗಿಂದ
ದೇವರ ಮಕ್ಕಳ ಮಹಿಮೆಯಾದ ಬಿಡುಗಡೆಗೋಸ್ಕರ ಬಿಡುಗಡೆ
೨೨ ಮಾಡಲ್ಪಡುವದು. ಯಾಕಂದರೆ ಸರ್ವ ಸೃಷ್ಟಿಯು ಈಗಿನ
ಮಟ್ಟಿಗೂ ಕೂಡ ನರಳಿ, ಪ್ರಸವವೇದನೆ ಪಡುತ್ತದೆಂದು ಬಲ್ಲೆವು.
೨೩ ಅದಲ್ಲದೆ, ಆತ್ಮದ ಪ್ರಥಮ ಫಲವನ್ನು ಹೊಂದಿರುವನಾವು ಸಹ,
ನಮ್ಮ ಶರೀರದ ವಿಮೋಚನೆಯಾದ ಪುತ್ರಸ್ವೀಕಾರವನ್ನು ಎದು



೨೪ ರುನೋಡುತ್ತಾ, ನಮ್ಮೊಳಗೆ ನಾವೇ ಮೂಲುಗುತ್ತೇವೆ. ಯಾಕಂ
ದರೆ ನಿರೀಕ್ಷೆಯಲ್ಲಿ ರಕ್ಷಿಸಲ್ಪಟ್ಟಿದ್ದೇವೆ; ಆದರೆ ಕಾಣಲ್ಪಡುವ ನಿ
ರೀಕ್ಷೆಯು ನಿರೀಕ್ಷೆ ಅಲ್ಲ. ಯಾಕಂದರೆ ಒಬ್ಬನು ಕಾಣುವದನ್ನು
೨೫ ಇನ್ನು ನಿರೀಕ್ಷಿಸುವದು ಯಾಕೆ? ಆದರೆ, ನಾವು ಕಾಣದೆ ಇರುವ
ದನ್ನು ನಿರೀಕ್ಷಿಸಿದರೆ, ತಾಳ್ಮೆಯಿಂದ ಎದುರು ನೋಡುತ್ತೇವೆ.
೨೬ ಹಾಗೆಯೇ, ಆತ್ಮವು ಸಹ ನಮ್ಮ ಅಶಕ್ತಿಗಳಿಗೆ ಕೂಡ ಸಹಾ
ಯ ಮಾಡುತ್ತದೆ. ಹ್ಯಾಗಂದರೆ, ನಾವು ಯುಕ್ತವಾಗಿ ಏನು ಬೇಡಿ
ಕೊಳ್ಳ ಬೇಕೋ, ಅರಿಯೆವು. ಆದರೆ ಆತ್ಮವು ತಾನೇ ಉಚ್ಚರಿಸ
ಲಾರದ ಮೂಲುಗುವಿಕೆಗಳಿಂದ ನಮಗೋಸ್ಕರ ವಿಜ್ಞಾಪನೆ ಮಾಡು
೨೭ ತ್ತದೆ. ಆದರೆ ಹೃದಯಗಳನ್ನು ಶೋಧಿಸುವವನು ಆತ್ಮದ ಮ
ನಸ್ಸು ಏನೆಂದು ಬಲ್ಲನು. ಯಾಕಂದರೆ ದೇವರಿಗೆ ತಕ್ಕ ಹಾಗೆ ಪ
ರಿಶುದ್ಧರಿಗೋಸ್ಕರ ವಿಜ್ಞಾಪನೆ ಮಾಡುತ್ತದೆ. ಇದಲ್ಲದೆ, ನಿರ್ಣ
ಯದ ಪ್ರಕಾರ ಕರೆಯಲ್ಪಟ್ಟವರಾಗಿ ದೇವರನ್ನು ಪ್ರೀತಿ ಮಾಡು
ವವರಿಗೆ ಮೇಲಿಗಾಗಿ ಎಲ್ಲವುಗಳು ಕೈ ಕೂಡಿ ಬರುತ್ತವೆಂದು ಬಲ್ಲೆ
೨೮ ವು. ಯಾಕಂದರೆ ಅವನು ಅನೇಕ ಸಹೋದರರಲ್ಲಿ ಹೊಚ್ಚಲವ
ನಾಗಿರುವ ಹಾಗೆ ತಾನು ಮುಂತಿಳಿದವರನ್ನು ತನ್ನ ಮಗನ ಹೋ
೨೯ ಲಿಕೆಯ ಸಾರೂಪ್ಯವುಳ್ಳವರಾಗ ಮುಂನೇಮಿಸಿದನು. ಮತ್ತು
ಯಾರನ್ನು ಮುಂನೇಮಿಸಿದನೋ, ಅವರನ್ನು ಕರೆದನು; ಯಾ
ರನ್ನು ಕರೆದನೋ, ಅವರನ್ನು ನೀತಿನಿರ್ಣಯ ಪಡಿಸಿದನು;
ಯಾರನ್ನು ನೀತಿನಿರ್ಣಯ ಪಡಿಸಿದನೋ, ಅವರನ್ನು ಮಹಿ
ಮೆ ಪಡಿಸಿದನು.

೩೦ ಹಾಗಾದರೆ, ಇವುಗಳನ್ನು ಕುರಿತು ಏನು ಹೇಳುವ? ದೇವರು
೩೧ ನಮ್ಮ ಕಡೆಯವನಾದರೆ, ನಮಗೆದುರು ಯಾರು? ಸ್ವಂತ ಮಗನ
ನ್ನು ಕನಿಕರಿಸದೆ, ಅವನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿ ಕೊ
ಟ್ಟವನು ಅವನ ಸಂಗಡ ನಮಗೆ ಎಲ್ಲಾ ದಯಪಾಲಿಸದೆ ಇರುವ
೩೨ ದು ಹ್ಯಾಗೆ? ದೇವರು ಅದು ಕೊಡವರ ಮೇಲೆ ತಪ್ಪು ಹೊರಿ
೩೩ ಸುವವನ್ಯಾರು? ನೀತಿನಿರ್ಣಯಿಸುವವನು ದೇವಕ್ಕೇ. ಆಜ್ಞೆನಿ
ರ್ಣಯಿಸುವವನ್ಯಾರು? ಸತ್ತವನು, ಅದಲ್ಲದೆ ಎದ್ದವನು, ದೇವ
ರ ಬಲಪಾರ್ಶ್ವದಲ್ಲಿ ಇರುವವನು, ನಮಗೋಸ್ಕರ ವಿಜ್ಞಾಪನೆ
೩೪ ಮಾಡುವವನು, ಕ್ರಿಸ್ತನೇ. ಕ್ರಿಸ್ತನ ಪ್ರೀತಿಗೆ ನಮ್ಮನ್ನು ಅಗಲಿಸುವ
ವನ್ಯಾರು? ಉಪದ್ರವೋ! ಸಂಕಟವೋ? ಹಿಂಸೆಯೋ? ಬರ
೩೫ ವೋ? ಬೆತ್ತಲೆಯೋ? ಗಂಡಾಂತರವೋ? ಖಡ್ಗವೋ?—ನಿನ್ನ ನಿ
ಮಿತ್ತ ದಿನವೆಲ್ಲಾ ಕೊಲ್ಲಲ್ಪಡುತ್ತೇವೆ. ಕೊಯ್ಯಲ್ಪಡುವ ಕುರಿಗ
೩೬ ಳಂತ ಎಣಿಸಲ್ಪಟ್ಟಿದ್ದೇವೆಂದು, ಬರೆದಿರುವ ಪ್ರಕಾರವೇ. ಆದರೆ ಇ
ವೆಲ್ಲವುಗಳಲ್ಲಿ ನಮ್ಮನ್ನು ಪ್ರೀತಿ ಮಾಡಿದವನ ಮುಖಾಂತರ ಅಧಿ
೩೭ ಕ ಜಯಶಾಲಿಗಳಾಗುತ್ತೇವೆ. ಯಾಕಂದರೆ ಮರಣವಾದರೂ,
ಜೀವವಾದರೂ, ದೂತರಾದರೂ, ಅಧಿಕಾರಗಳಾದರೂ, ಬಲಗಳಾ
೩೮ ದರೂ, ಇರುವವುಗಳಾದರೂ, ಬರುವವುಗಳಾದರೂ, ಎತ್ತರವಾ
ದರೂ, ಅಳವಾದರೂ, ಬೇಕೆ ಯಾವ ಸೃಷ್ಟಿಯಾದರೂ, ನ
ಮ್ಮನ್ನು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ದೇವರ
ಪ್ರೀತಿಗೆ ಅಗಲಿಸಲಾರದೆಂದು, ನಿಶ್ಚಯಿಸಿ ಕೊಂಡಿದ್ದೇನೆ.

## ೯. ಸಂಧಿ.

೧ ಕ್ರಿಸ್ತನಲ್ಲಿ ಸತ್ಯವನ್ನು ಹೇಳುತ್ತೇನೆ, ಸುಳ್ಳಾಡುವದಿಲ್ಲ; ನನ್ನ
ಮನಸಾಕ್ಷಿ ಪರಿಶುದ್ಧಾತ್ಮದಲ್ಲಿ ನನಗೆ ಕೂಡ ಸಾಕ್ಷಿ ಕೊಡುತ್ತದೆ.
೨ ಏನಂದರೆ, ನನಗೆ ಮಹಾ ದುಃಖವೂ, ನನ್ನ ಹೃದಯಕ್ಕೆ ಎಡೆ ಬಿ
೩ ಡದ ನೋವೂ, ಉಂಟು. ಯಾಕಂದರೆ ಮಾಂಸದ ಪ್ರಕಾರ ನನ್ನ
ನೆಂಟರಾದ ನನ್ನ ಸಹೋದರರಿಗೋಸ್ಕರ ನಾನೇ ಕ್ರಿಸ್ತನಿಂದ ಸಾ
೪ ಪಸ್ತಸ್ತಾಗಿರ ಇಚ್ಛೈಸ್ಯೇನು. ಅವರು ಇಸ್ರಯೇಲ್ಯರಾಗಿದ್ದಾರೆ;
ಪುತ್ರಸ್ವೀಕಾರವೂ, ಮಹಿಮೆಯೂ, ಒಕಂಬಡಿಕೆಗಳೂ, ನ್ಯಾ
ಯ ನೇಮಕವೂ, ಆರಾಧನೆಯೂ, ವಾಗ್ದತ್ತಗಳೂ ಅವರವು;
೫ ಪಿತೃಗಳು ಅವರ ಪಿತೃಗಳೇ; ಅವರಿಂದ ಮಾಂಸದ ಪ್ರಕಾರ ಕ್ರಿ
ಸ್ತನು; ಅವನು ಎಂದೆಂದಿಗೂ ಸ್ತುತಿಸತಕ್ಕ ಸರ್ವಕ್ಕೂ ಮೇಲಾ
ದ ದೇವರೇ. ಆಮೆನ್.

೬ ಆದರೆ ದೇವರ ವಾಕ್ಯವು ಬಿದ್ದು ಹೋಯಿತು ಅಂತಲ್ಲ.
೭ ಯಾಕಂದರೆ ಇಸ್ರಯೇಲಿನವರೆಲ್ಲರು ಇಸ್ರಯೇಲ್ಯರಲ್ಲ. ಮತ್ತು ಅ
ಬ್ರಹಾಮನ ಬೀಜವಾಗಿರುವದರಿಂದ ಎಲ್ಲರು ಮಕ್ಕಳಲ್ಲ; ಆದರೆ
೮ ಇಸಾಕನಲ್ಲಿ ನಿನಗೆ ಬೀಜವು ಕರೆಯಲ್ಪಡುವದು. ಏನಂದರೆ,
ಮಾಂಸದ ಮಕ್ಕಳು ದೇವರ ಮಕ್ಕಳಲ್ಲ, ವಾಗ್ದತ್ತದ ಮಕ್ಕಳೇ
೯ ಬೀಜವೆಂದು ಎಣಿಸಲ್ಪಡುತ್ತಾರೆ. ಯಾಕಂದರೆ ವಾಗ್ದತ್ತದ ಮಾ
ತು ಇದೇ—ಈ ಸಮಯಕ್ಕೆ ಬರುವೆನು, ಆಗ ಸಾರಳಿಗೆ ಮಗನು
೧೦ ಇರುವನು. ಅದು ಮಾತ್ರವಲ್ಲ, ರೆಬೆಕ್ಕಳು ಸಹ ನಮ್ಮ ತಂದೆ
೧೧ ಯಾದ ಇಸಾಕನೊಬ್ಬನಿಂದಲೇ ಗರ್ಭವತಿಯಾಗಿರಲಾಗಿ, ಅ
ಯುಖಿಕೆಯ ಪ್ರಕಾರವಾದ ದೇವರ ನಿರ್ಣಯವು ಕ್ರಿಯೆಗಳಿಂದ
೧೨ ಲ್ಲ, ಕರೆಯುವವನಿಂದಲೇ ನಿಲ್ಲುವ ಹಾಗೆ, ಯಾಕೋಬನನ್ನು ಪ್ರೀ
ತಿ ಮಾಡಿ, ಏಸಾವನನ್ನು ಹಗೆ ಮಾಡಿದ್ದೇನೆಂದು, ಬರೆದಿರುವ ಪ್ರ
ಕಾರ, ಅವರು ಇನ್ನು ಹುಟ್ಟದೆ, ಒಳ್ಳೇದು ಕೆಟ್ಟದ್ದು ಏನೂ ಮಾಡ
೧೩ ದೆ ಇರುವಾಗ, ಅಣ್ಣನು ತಮ್ಮನಿಗೆ ದಾಸನಾಗಿರುವನೆಂದು, ಅವಳಿ
ಗೆ ಹೇಳಲ್ಪಟ್ಟಿತು.

೧೪ ಹಾಗಾದರೆ, ಏನು ಹೇಳುವ? ದೇವರ ಬಳಿಯಲ್ಲಿ ಅನ್ಯಾಯ
೧೫ ಉಂಟೋ? ಆಗದು. ಯಾಕಂದರೆ ನಾನು ಕರುಣಿಸುವವನನ್ನು ಕ
ರುಣಿಸುವೆನು, ನಾನು ಕನಿಕರಿಸುವವನನ್ನು ಕನಿಕರಿಸುವೆನು ಎಂ
೧೬ ದು, ಮೋಶೆಗೆ ಹೇಳುತ್ತಾನೆ. ಆದದರಿಂದ ಇಚ್ಛೈಸುವವನಿಂದ
೧೭ ಲ್ಲ, ಓಡುವವನಿಂದಲ್ಲ, ಕರುಣಿಸುವ ದೇವರಿಂದಲೇ. ಯಾಕಂದರೆ
ನಿನ್ನಲ್ಲಿ ನನ್ನ ಬಲವನ್ನು ತೋರಿಸುವ ಹಾಗೆಯೂ, ಸರ್ವ ಭೂ
ಮಿಯಲ್ಲಿ ನನ್ನ ನಾಮವು ಪ್ರಸಿದ್ಧವಾಗುವ ಹಾಗೆಯೂ, ಇದ
ಕ್ಕೋಸ್ಕರವೇ ನಿನ್ನನ್ನು ಎಬ್ಬಿಸಿದ್ದೇನೆಂದು, ಬರಹವು ಫರೋಹ
೧೮ ನಿಗೆ ಹೇಳುತ್ತದೆ. ಹಾಗಾದರೆ, ಬೇಕಾದವನನ್ನು ಕರುಣಿಸುತ್ತಾನೆ,
ಬೇಕಾದವನನ್ನು ಕಠಿಣ ಪಡಿಸುತ್ತಾನೆ.

೧೯ ಹೀಗಿರಲಾಗಿ, ಇನ್ನು ಯಾಕೆ ತಪ್ಪು ಹಿಡಿಯುತ್ತಾನೆ? ಅವನ
೨೦ ಚಿತ್ತವನ್ನು ಎದುರಿಸಿದವನ್ಯಾರೆಂದು, ನನಗೆ ಹೇಳುವಿ. ಛೀ! ಮ
ನುಷ್ಯನೇ, ದೇವರಿಗೆ ಎದುರಾಡುವ ನೀನ್ಯಾರು? ನಿರ್ಮಾಣವು
ನಿರ್ಮಾಣಿಕನಿಗೆ, ನನ್ನನ್ನು ಹೀಗೆ ಮಾಡಿದ್ದೇನೆಂದು ಹೇಳುವದುಂ
೨೧ ಟೋ? ಏನು! ಒಂದೇ ಮುದ್ದೆಯಿಂದ, ಮಾನಕ್ಕೆ ಒಂದು ಪಾತ್ರೆ
ಯನ್ನೂ, ಅವಮಾನಕ್ಕೆ ಮತ್ತೊಂದನ್ನೂ ಮಾಡ, ಮಣ್ಣಿನ
೨೨ ಮೇಲೆ ಕುಂಬಾರನಿಗೆ ಅಧಿಕಾರವಿಲ್ಲವೋ? ದೇವರು ತನ್ನ ಕೋಪವ
ನ್ನು ತೋರಿಸಲೂ, ತನಗೆ ಸಾಧ್ಯವಾದದ್ದನ್ನು ತಿಳಿಯ ಮಾಡ
ಲೂ, ಮನಸ್ಸಾಗಿದ್ದು, ನಾಶಕ್ಕೆ ಸಿದ್ಧ ಮಾಡಲ್ಪಟ್ಟ ಕೋಪದ
೨೩ ಪಾತ್ರೆಗಳನ್ನು ಬಹು ದೀರ್ಘ ಕಾಂತಿಯಿಂದ ತಾಳಿ ಕೊಂಡು, ತಾ
ನು ಮುಂಚೆ ಮಹಿಮೆಗೆ ಸಿದ್ಧ ಮಾಡಿದ ಕೃಪೆಯ ಪಾತ್ರೆಗಳ ಮೇ

ಲೆ ತನ್ನ ಮಹಿಮೈಶ್ವರ್ಯವನ್ನು ತಿಳಿಯ ಮಾಡಿದರೇನು?
೨೪ ಯೆಹೂದ್ಯರಿಂದ ಮಾತ್ರವಲ್ಲ, ಜನಾಂಗಗಳಿಂದ ಸಹ ಅವನು ಕರೆ
೨೫ದ ನನ್ನು ಮೇಲೆಯೇ. ಹಾಗೆಯೇ, ಹೊಶೇಯನಲ್ಲಿ ಹೇಳುತ್ತಾ
ನೆ—ನನ್ನ ಪ್ರಜೆಯಲ್ಲದ್ದನ್ನು ನನ್ನ ಪ್ರಜೆಯೆಂದೂ, ಪ್ರಿಯಳಲ್ಲ
೨೬ದವಳನ್ನು ಪ್ರಿಯಳೆಂದೂ, ಕರೆಯುವೆನು. ಮತ್ತು ಆಗುವದೇ
ನಂದರೆ, ಯಾವ ಸ್ಥಳದಲ್ಲಿ ನೀವು ನನ್ನ ಪ್ರಜೆ ಅಲ್ಲವೆಂದು ಅವರಿ
ಗೆ ಹೇಳಲ್ಪಟ್ಟಿತೋ, ಅಲ್ಲಿ ಜೀವವುಳ್ಳ ದೇವರ ಮಕ್ಕಳೆಂದು ಕರೆ
೨೭ ಯಲ್ಪಡುವರು. ಆದರೆ, ಯೆಶಾಯನು ಇಸ್ರಯೇಲನ್ನು ಕುರಿತು
ಕೂಗುವದೇನಂದರೆ—ಇಸ್ರಯೇಲನ ಮಕ್ಕಳ ಲೆಖ್ಖವು ಸಮುದ್ರ
೨೮ದ ಮರಳಿನ ಹಾಗಿದ್ದರೂ, ಉಳಿವು ರಕ್ಷಿಸಲ್ಪಡುವದು. ಹ್ಯಾ
ಗಂದರೆ, ಕಾರ್ಯವನ್ನು ನೀತಿಯಿಂದ ತೀರಿಸಿ, ಅಡಕ ಮಾಡು
ವನು; ಯಾಕಂದರೆ ಕರ್ತನು ಭೂಮಿಯಲ್ಲಿ ಅಡಕವಾದ ಕಾ
೨೯ರ್ಯವನ್ನು ಮಾಡುವನು. ಮತ್ತು ಯೆಶಾಯನು ಮುಂಚೆ
ಹೇಳಿದ ಹಾಗೆ, ಸೈನ್ಯಗಳ ಕರ್ತನು ನಮಗೆ ಬೀಜವನ್ನು ಉಳಿ
ಸದಿದ್ದರೆ, ಸೊದೋಮಿನ ಹಾಗೆ ಆಗುತ್ತಿದ್ದೆವು, ಗಮೋರಕ್ಕೆ
ಸಮಾನ ಮಾಡಲ್ಪಡುತ್ತಿದ್ದೆವು.

೩೦ ಹಾಗಾದರೆ, ಏನು ಹೇಳುವ? ನೀತಿಯನ್ನು ಹಿಂದಟ್ಟದ ಜನಾಂ
ಗಗಳು ನೀತಿಯನ್ನು, ವಿಶ್ವಾಸದಿಂದಾಗುವ ನೀತಿಯನ್ನೇ, ಹಿಡಿದಿ
೩೧ದ್ದಾರೆ. ಆದರೆ ನೀತಿಯ ಪ್ರಮಾಣವನ್ನು ಹಿಂದಟ್ಟಿದ ಇಸ್ರಯೇ
೩೨ಲು ನೀತಿಯ ಪ್ರಮಾಣಕ್ಕೆ ಮುಟ್ಟಲಿಲ್ಲ. ಯಾಕೆ? ವಿಶ್ವಾಸದಿಂದ
ಲ್ಲ, ನ್ಯಾಯಪ್ರಮಾಣದ ಕ್ರಿಯೆಗಳಿಂದಾದ ಹಾಗೆ ಹಿಂದಟ್ಟಿದ್ದ
೩೩ರಿಂದಲೇ. ಯಾಕಂದರೆ ಎಡವುವ ಕಲ್ಲಿಗೆ ಎಡವಿದರು. ಇದಕ್ಕೆ ಬ
ರೆದಿದ್ದೇನಂದರೆ, ಇಗೋ, ಚಿಯೋನಿನಲ್ಲಿ ಎಡವುವ ಕಲ್ಲನ್ನೂ,
ಅಟಂಕದ ಬಂಡೆಯನ್ನೂ, ಇಡುತ್ತೇನೆ. ಮತ್ತು ಅದರ ಮೇಲೆ ವಿ
ಶ್ವಾಸವಿಡುವ ಯಾವನಾದರೂ ನಾಚಿಕೆ ಪಡುವದಿಲ್ಲ.

## ೧೦. ಸಂಧಿ.

೧ ಸಹೋದರರೇ, ಇಸ್ರಯೇಲಿಗೋಸ್ಕರ ನನ್ನ ಹೃದಯದ
ಅಪೇಕ್ಷೆಯೂ ದೇವರಿಗೆ ಮಾಡುವ ವಿಜ್ಞಾಪನೆಯೂ ರಕ್ಷಣೆಗಾಗಿ
೨ ವೆ. ಯಾಕಂದರೆ ದೇವಾಸಕ್ತಿಯುಳ್ಳವರಾಗಿದ್ದಾರೆಂದು ಅವರಿ
೩ ಗೆ ಸಾಕ್ಷಿ ಕೊಡುತ್ತೇನೆ. ಆದರೆ ತಿಳಿವಿಕೆಯ ಪ್ರಕಾರವಲ್ಲ. ಹ್ಯಾ
ಗಂದರೆ, ಅವರು ದೇವರ ನೀತಿಯನ್ನು ತಿಳಿಯದೆ, ತಮ್ಮ ನೀತಿ
ಯನ್ನು ಸ್ಥಾಪಿಸ ಹುಡುಕಿ, ದೇವರ ನೀತಿಗೆ ವಿಧೇಯರಾಗಲಿಲ್ಲ.
೪ ಯಾಕಂದರೆ ಕ್ರಿಸ್ತನು ವಿಶ್ವಾಸಿಸುವವರೆಲ್ಲರಿಗೆ ನೀತಿಗೋಸ್ಕರ
೫ ನ್ಯಾಯಪ್ರಮಾಣದ ಅಂತ್ಯವಾಗಿದ್ದಾನೆ. ಯಾಕಂದರೆ ಮೋಶೆ
ನ್ಯಾಯಪ್ರಮಾಣದಿಂದಾಗುವ ನೀತಿಯನ್ನುಕುರಿತು, ಅವುಗಳನ್ನು
ಮಾಡುವ ಮನುಷ್ಯನು ಅವುಗಳಿಂದ ಬದುಕುವನೆಂದು ಬರೆಯು
೬ ತ್ತಾನೆ. ಆದರೆ ವಿಶ್ವಾಸದಿಂದಾಗುವ ನೀತಿಯು ಹೀಗೆ ಹೇಳುತ್ತದೆ
—ಕ್ರಿಸ್ತನನ್ನು ಕೆಳಗೆ ತರ ಬೇಕೆಂಬುವ ಹಾಗೆ ಯಾವನು ಪರ
೭ ಲೋಕಕ್ಕೆ ಏರುವನೆಂದೂ, ಇಲ್ಲವೆ ಸತ್ತವರೊಳಗಿಂದ ಕ್ರಿಸ್ತನನ್ನು
ಮೇಲಕ್ಕೆ ತರ ಬೇಕೆಂಬುವ ಹಾಗೆ ಯಾವನು ಅಗಾಧಕ್ಕೆ ಇಳಿ
ಯುವನೆಂದೂ, ನಿನ್ನ ಹೃದಯದಲ್ಲಿ ಅಂದು ಕೊಳ್ಳ ಬೇಡ.
೮ ಮತ್ಯೇನು ಹೇಳುತ್ತದೆ? ಮಾತು ನಿನ್ನ ಸಮೀಪದಲ್ಲಿ, ನಿನ್ನ ಬಾ
ಯಿಯಲ್ಲಿಯೂ, ನಿನ್ನ ಹೃದಯದಲ್ಲಿಯೂ, ಇದೆ; ಅದು ನಾ
೯ ವು ಪ್ರಸಂಗಿಸುವ ವಿಶ್ವಾಸದ ಮಾತೇ. ಏನಂದರೆ, ನಿನ್ನ ಬಾಯಿ
ಯಿಂದ ಕರ್ತನಾದ ಯೇಸುವನ್ನು ಅರಿಕೆ ಮಾಡಿ, ದೇವರು ಸ
ತ್ತವರೊಳಗಿಂದ ಅವನನ್ನು ಎಬ್ಬಿಸಿದನೆಂದು ನಿನ್ನ ಹೃದಯದಲ್ಲಿ
೧೦ ವಿಶ್ವಾಸಿಸಿದರೆ, ರಕ್ಷಿಸಲ್ಪಡುವಿ. ಯಾಕಂದರೆ ಹೃದಯದಿಂದ
ನೀತಿಗಾಗಿ ವಿಶ್ವಾಸಿಸುವದೂ, ಬಾಯಿಯಿಂದ ರಕ್ಷಣೆಗಾಗಿ ಅರಿಕೆ
೧೧ ಮಾಡುವದೂ, ಉಂಟು. ಯಾಕಂದರೆ ಅವನ ಮೇಲೆ ವಿಶ್ವಾಸವಿ
ಡುವವರೆಲ್ಲರು ನಾಚಿಕೆ ಪಡುವದಿಲ್ಲವೆಂದು, ಬರಹವು ಹೇಳುತ್ತದೆ.
೧೨ ಯೆಹೂದ್ಯನಿಗೂ, ಗ್ರೇಕನಿಗೂ, ವ್ಯತ್ಯಾಸವಿಲ್ಲ. ಯಾಕಂದರೆ
ಎಲ್ಲರಿಗೂ ಒಬ್ಬನೇ ಕರ್ತನಾಗಿರುವವನು ತನ್ನನ್ನು ಕರೆಯುವವ
೧೩ ರೆಲ್ಲರಿಗೆ ಐಶ್ವರ್ಯವುಳ್ಳವನಾಗಿದ್ದಾನೆ. ಯಾಕಂದರೆ ಯಾರು
ಕರ್ತನ ಹೆಸರನ್ನು ಕರೆಯುವರೋ, ಅವರೆಲ್ಲರೂ ರಕ್ಷಿಸಲ್ಪ
ಡುವರು.

೧೪ ಹಾಗಾದರೆ, ತಾವು ವಿಶ್ವಾಸಿಸದವನನ್ನು ಹ್ಯಾಗೆ ಕರೆಯುವ
ರು? ತಾವು ಕೇಳದವನನ್ನು ಹ್ಯಾಗೆ ವಿಶ್ವಾಸಿಸುವರು? ಸಾರು
೧೫ವನಿಲ್ಲದೆ, ಹ್ಯಾಗೆ ಕೇಳುವರು? ಕಳುಹಿಸಲ್ಪಡದಿದ್ದರೆ, ಹ್ಯಾಗೆ
ಸಾರುವರು? ಇದಕ್ಕೆ ಬರೆದಿದ್ದೇನಂದರೆ, ಸಮಾಧಾನದ ಸುವಾ
ರ್ತೆಯನ್ನೂ ಒಳ್ಳೆಯವುಗಳ ಸುವಾರ್ತೆಯನ್ನೂ ಪ್ರಸಂಗಿ
೧೬ ಸುವವರ ಪಾದಗಳು ಎಷ್ಟೋ ಅಂದವಾಗಿವೆ! ಆದರೆ ಎಲ್ಲರೂ
ಸುವಾರ್ತೆಗೆ ವಿಧೇಯರಾಗಲಿಲ್ಲ. ಏನಂದರೆ, ಯೆಶಾಯನು, ಕ
ರ್ತನೇ, ನಮ್ಮ ಸುದ್ದಿಯನ್ನು ವಿಶ್ವಾಸಿಸಿದವನ್ಯಾರೆಂದು ಹೇಳು
೧೭ ತ್ತಾನೆ. ಹಾಗಾದರೆ ವಿಶ್ವಾಸವು ಕೇಳ್ವಿಕೆಯಿಂದ, ಕೇಳ್ವಿಕೆಯು
ದೇವರ ಮಾತಿನಿಂದ, ಆಗುತ್ತದೆ. ಆದರೆ ಅವರು ಕೇಳಲಿಲ್ಲವೋ?
೧೮ ಅನ್ನುತ್ತೇನೆ. ಸಂದೇಹವೇನು? ಅವರ ಶಬ್ದವು ಸಮಸ್ತ ಭೂಮಿ
ಗೂ, ಅವರ ಮಾತುಗಳು ಲೋಕಾಂತಗಳಿಗೂ, ಹೊರಟಿವೆ. ಆದ
ರೆ ಇಸ್ರಯೇಲು ತಿಳಿದು ಕೊಳ್ಳಲಿಲ್ಲವೋ? ಅನ್ನುತ್ತೇನೆ. ಮೊದಲು
೧೯ ಮೋಶೆ, ನಾನು ಪ್ರಜೆ ಅಲ್ಲದ್ದರಿಂದ ನಿಮ್ಮನ್ನು ಆಸಕ್ತಿ ಪಡಿಸುವೆ
ನು; ಬುದ್ಧಿಯಿಲ್ಲದ ಜನಾಂಗದಿಂದ ನಿಮಗೆ ಕೋಪವೆಬ್ಬಿಸುವೆನೆಂ
೨೦ ದು ಹೇಳುತ್ತಾನೆ. ಆದರೆ, ಯೆಶಾಯನು ಬಹು ಧೈರ್ಯವಾಗಿ,
ನನ್ನನ್ನು ಹುಡುಕದವರಿಗೆ ಶಿಕ್ಕಿದೆನು, ನನ್ನನ್ನು ವಿಚಾರಿಸದವರಿಗೆ
೨೧ ಪ್ರತ್ಯಕ್ಷವಾದೆನೆಂದು ಹೇಳುತ್ತಾನೆ. ಆದರೆ ಇಸ್ರಯೇಲಿಗೆ, ದಿನವೆ
ಲ್ಲಾ ಅವಿಧೇಯವಾದ ಎದುರಾಡುವ ಜನರಿಗೆ ನನ್ನ ಕೈಗಳನ್ನು
ಚಾಚಿದೆನೆಂದು ಹೇಳುತ್ತಾನೆ.

## ೧೧. ಸಂಧಿ.

೧ ಹಾಗಾದರೆ, ದೇವರು ತನ್ನ ಜನರನ್ನು ತಳ್ಳಿ ಬಿಟ್ಟಿದ್ದಾನೋ?
ಅನ್ನುತ್ತೇನೆ. ಅಗದು. ಯಾಕಂದರೆ ನಾನೂ ಇಸ್ರಯೇಲ್ಯನಾಗಿ
ದ್ದೇನೆ—ಅಬ್ರಹಾಮನ ಬೀಜದವನು, ಬೆನ್ಯಮೀನನ ಕುಲದವನು.
೨ ದೇವರು ತಾನು ಮುಂತಿಳಿದ ತನ್ನ ಜನರನ್ನು ತಳ್ಳಿ ಬಿಡಲಿಲ್ಲ. ಏನು!
ಎಲೀಯನ ವಿಷಯ ಬರಹವು ಹೇಳುವದನ್ನು ಅರಿಯರಾ?
೩ ಏನಂದರೆ, ಅವನು, ಕರ್ತನೇ, ನಿನ್ನ ಪ್ರವಾದಿಗಳನ್ನು ಕೊಂದು,
ನಿನ್ನ ಪೀಠಗಳನ್ನು ಕೆಡವಿ ಬಿಟ್ಟಿದ್ದಾರೆ, ನಾನೊಬ್ಬನೇ ಉಳಿದಿದ್ದೇ
ನೆ, ನನ್ನ ಪ್ರಾಣವನ್ನು ಸಹ ಹುಡುಕುತ್ತಾರೆ ಎಂದು, ಇಸ್ರಯೇಲಿ
೪ ಗೆ ವಿರೋಧವಾಗಿ ದೇವರ ಮುಂದೆ ಬರುತ್ತಾನೆ. ಆದರೆ ದೈವೋತ್ತ
ರವು ಅವನಿಗೆ ಏನು ಹೇಳುತ್ತದೆ? ಬಾಳನ ವಿಗ್ರಹಕ್ಕೆ ಮೊಣಕಾ
ಲೂರದ ಏಳು ಸಾವಿರ ಮನುಷ್ಯರನ್ನು ನನಗೆ ಉಳಿಸಿ ಕೊಂಡಿ
೫ ದ್ದೇನೆ. ಹಾಗೆಯೇ, ಈಗಿನ ಕಾಲದಲ್ಲಿ ಕೃಪೆಯ ಆಯುವಿಕೆಯ



೬ ಪ್ರಕಾರ ಉಳಿವು ಉಂಟು. ಆದರೆ ಕೃಪೆಯಿಂದಾದರೆ, ಇನ್ನು
ಕ್ರಿಯೆಗಳಿಂದಲ್ಲ; ಇಲ್ಲದಿದ್ದರೆ, ಕೃಪೆಯು ಇನ್ನು ಕೃಪೆಯಾಗಿ
ರದು. ಇದಲ್ಲದೆ ಕ್ರಿಯೆಗಳಿಂದಾದರೆ, ಇನ್ನು ಕೃಪೆಯಲ್ಲ; ಇ
ಲ್ಲದಿದ್ದರೆ, ಕ್ರಿಯೆಯು ಇನ್ನು ಕ್ರಿಯೆಯಲ್ಲ.

೭ ಹಾಗಾದರೇನು? ಇಸ್ರಯೇಲು ಹುಡುಕುವದನ್ನು ಹೊಂದಲಿ
ಲ್ಲ; ಆದರೆ ಆಯುವಿಕೆ ಹೊಂದಿತು; ಮಿಕಕ್ಕವರು ಕಠಿಣರಾದರು.
೮ ಅದಕ್ಕೆ ಬರದದ್ದೇನಂದರೆ, ದೇವರು ತೂಕಡಿಕೆಯ ಆತ್ಮವನ್ನೂ,
ಕಾಣದ ಕಣ್ಣುಗಳನ್ನೂ, ಕೇಳದ ಕಿವಿಗಳನ್ನೂ, ಇಂದಿನ ಮಟ್ಟಿ
೯ ಗೂ ಅವರಿಗೆ ಕೊಟ್ಟಿದ್ದಾನೆ. ಮತ್ತು ದಾವೀದನು, ಅವರ ಮೇಜು
ಅವರಿಗೆ ಉರುಲೂ, ಬೋನೂ, ಆಟಂಕವೂ, ಮುಯ್ಯಿಗೆ ಮು
೧೦ ಯ್ಯೂ ಆಗಲಿ; ಅವರ ಕಣ್ಣುಗಳು ಕಾಣದ ಹಾಗೆ, ಅಂಧಕಾರ
ವಾಗಲಿ; ಅವರ ಬೆನ್ನನ್ನು ಯಾವಾಗಲೂ ಬೊಗ್ಗಿಸಿ ಬಿಡು ಎಂದು
೧೧ ಹೇಳುತ್ತಾನೆ. ಹಾಗಾದರೆ, ಬೀಳುವ ಹಾಗೆ ಎಡವಿದ್ದಾರೋ? ಅನ್ನು
ತ್ತೇನೆ. ಆಗದು. ಆದರೆ ಅವರನ್ನು ಆಸಕ್ತಿ ಪಡಿಸುವದಕ್ಕೋಸ್ಕ
ರ, ಅವರ ಬೀಳ್ವಿಕೆಯಿಂದ ಜನಾಂಗಗಳಿಗೆ ರಕ್ಷಣೆ ಆಯಿತು.
೧೨ ಆದರೆ ಅವರ ಬೀಳ್ವಿಕೆಯು ಲೋಕದ ಐಶ್ವರ್ಯವೂ, ಅವರ
ಕೊರತೆಯು ಜನಾಂಗಗಳ ಐಶ್ವರ್ಯವೂ ಆದರೆ, ಎಷ್ಟೋ
ಹೆಚ್ಚಾಗಿ ಅವರ ಪೂರ್ಣತೆಯು! ಯಾಕಂದರೆ, ಜನಾಂಗಗಳವ
೧೩ ರಾದ ನಿಮಗೆ ಹೇಳುತ್ತೇನೆ. ಹ್ಯಾಗಾದರೂ ನನ್ನ ಮಾಂಸವನ್ನು
ಆಸಕ್ತಿ ಪಡಿಸಿ, ಅವರಲ್ಲಿ ಕೆಲವರನ್ನು ರಕ್ಷಿಸುವೆನೇನೋ? ಅಂತ,
೧೪ ನಾನು ಜನಾಂಗಗಳ ಅಪೊಸ್ತಲನಾಗಿರುವದರಿಂದ ನನ್ನ ಸೇವೆಯ
೧೫ನ್ನು ಮಹಿಮೆ ಪಡಿಸುತ್ತೇನೆ. ಯಾಕಂದರೆ ಅವರ ಬಿನಾಡುವಿಕೆ
ಯು ಲೋಕದ ಅನ್ಯೋನ್ಯವಾದರೆ, ಅವರ ಅಂಗೀಕಾರವು ಸ
ತ್ತವರೊಳಗಿಂದ ಜೀವವೇ ಹೊರ್ತು, ಮತ್ಯೇನು?

೧೬ ಇದಲ್ಲದೆ, ಪ್ರಥಮ ಫಲವು ಪರಿಶುದ್ಧವಾದರೆ, ಮುದ್ದೆಯೂ
ಹಾಗೆಯೇ. ಮತ್ತು ಬೇರು ಪರಿಶುದ್ಧವಾದರೆ, ಕೊಂಬೆಗಳೂ ಹಾ
೧೭ ಗೆಯೇ. ಆದರೆ ಕೊಂಬೆಗಳಲ್ಲಿ ಕೆಲವು ಮುರಿದು ಹಾಕಲ್ಪಟ್ಟು,
ಕಾಡಿಪ್ಪೆಯಾದ ನೀನು ಅವುಗಳಲ್ಲಿ ಅಂಟ್ಟಿಕ್ಕಲ್ಪಟ್ಟು, ಇಪ್ಪೆಯ
೧೮ ಬೇರಿನಲ್ಲಿಯೂ, ಸಾರದಲ್ಲಿಯೂ, ಪಾಲುಗೊಂಡಿದ್ದರೆ, ಕೊಂಬೆ
ಗಳ ಮೇಲೆ ಹೆಚ್ಚಳ ಪಡ ಬೇಡ; ಹೆಚ್ಚಳ ಪಟ್ಟರೆ, ನೀನು ಬೇರನ್ನು
೧೯ ಲ್ಲ, ಬೇರು ನಿನ್ನನ್ನೇ ಆತು ಕೊಳ್ಳುತ್ತದೆ. ಹಾಗಾದರೆ, ನಾನು
ಅಂಟಿಕ್ಕಲ್ಪಡುವ ಹಾಗೆ ಕೊಂಬೆಗಳು ಮುರಿದು ಹಾಕಲ್ಪಟ್ಟವೆಂ
೨೦ ದು ಹೇಳುವಿ. ಒಳ್ಳೇದು; ಅವಿಶ್ವಾಸದಿಂದ ಮುರಿದು ಹಾಕಲ್ಪ
ಟ್ಟವು; ನೀನು ವಿಶ್ವಾಸದಿಂದ ನಿಂತು ಕೊಳ್ಳುತ್ತೀ. ಉಬ್ಬಿದ
೨೧ ಮನಸ್ಸಾಗಿರದೆ ಭಯ ಪಡು. ಯಾಕಂದರೆ ದೇವರು ಸ್ವಭಾವ
ವಾದ ಕೊಂಬೆಗಳನ್ನು ಕನಿಕರಿಸದೆ ಇದ್ದರೆ, ಒಂದು ವೇಳೆ ನಿನ್ನ
೨೨ ನ್ನು ಕನಿಕರಿಸದೆ ಇದ್ದಾನು. ಹಾಗಾದರೆ, ದೇವರ ದಯವನ್ನೂ
ಕಾಠಿಣ್ಯವನ್ನೂ ನೋಡು! ಬಿದ್ದವರ ಮೇಲೆ ಕಾಠಿಣ್ಯವನ್ನೂ, ನಿ
ನ್ನ ಮೇಲೆ ದಯವನ್ನೂ, ಅವನ ದಯದಲ್ಲಿ ನೆಲೆಯಾಗಿದ್ದರೆ;
೨೩ ಇಲ್ಲದಿದ್ದರೆ, ನೀನು ಸಹ ಕಡಿದು ಹಾಕಲ್ಪಡುವಿ. ಆದರೆ ಅವರೂ
ಅವಿಶ್ವಾಸದಲ್ಲಿ ನಿಲ್ಲದೆ ಇದ್ದರೆ, ಅಂಟಿಕ್ಕಲ್ಪಡುವರು. ಯಾಕಂ
೨೪ ದರೆ ದೇವರು ಅವರನ್ನು ತಿರಿಗಿ ಅಂಟ್ಟಿಕ್ಕ ಬಲ್ಲನು. ಯಾಕಂದ
ರೆ ನೀನು ಸ್ವಭಾವವಾದ ಕಾಡಿಪ್ಪೆಯಿಂದ ಕಡಿಯಲ್ಪಟ್ಟು, ಸ್ವ
ಭಾವಕ್ಕೆ ವಿರೋಧವಾಗಿ ಒಳ್ಳೇ ಇಪ್ಪೆಯಲ್ಲಿ ಅಂಟಿಕ್ಕಲ್ಪಟ್ಟಿದ್ದ
ರೆ, ಎಷ್ಟೋ ಹೆಚ್ಚಾಗಿ ಸ್ವಭಾವದವರಾದ ಇವರು ತಮ್ಮ ಸ್ವಂ
ತ ಇಪ್ಪೆಯಲ್ಲಿ ಅಂಟಿಕ್ಕಲ್ಪಡುವರು.

೨೫ ಯಾಕಂದರೆ, ಸಹೋದರರೇ, ನಿಮ್ಮನ್ನು ನೀವೇ ಬುದ್ಧಿ
ವಂತರೆಂದು ನೆನಿಸಿ ಕೊಳ್ಳದ ಹಾಗೆ, ನೀವು ಈ ಮರ್ಮವನ್ನು
ಅರಿಯದಿರ ನನಗೆ ಮನಸ್ಸಿಲ್ಲ. ಏನಂದರೆ, ಜನಾಂಗಳ ಪೂ
ರ್ಣತೆಯು ಒಳಗೆ ಸೇರುವ ಮಟ್ಟಿಗೂ, ಇಸ್ರಯೇಲಿಗೆ ಪಾಲಾ
೨೬ಗಿ ಕಾಠಿಣ್ಯವು ಆಯಿತು. ಮತ್ತು ಹೀಗೆ ಚಿಯೋನಿನಿಂದ ವಿ
ಮೋಚಕನು ಬಂದು, ಯಾಕೋಬನಿಗೆ ಭಕ್ತಿ ಹೀನತ್ವಗಳನ್ನು
ನಿವಾರಣೆ ಮಾಡುವನೆಂದೂ, ನಾನು ಅವರ ಪಾಪಗಳನ್ನು ಪರಿಹ
೨೭ರಿಸುವಾಗ, ಅವರಿಗೆ ನನ್ನಿಂದ ಉಂಟಾದ ಒಡಂಬಡಿಕೆ ಇದೇ ಎಂ
ದು ಬರೆದಿರುವ ಪ್ರಕಾರ, ಇಸ್ರಯೇಲೆಲ್ಲಾ ರಕ್ಷಿಸಲ್ಪಡುವದು.
೨೮ ಸುವಾರ್ತೆಯ ವಿಷಯವಾಗಿ ನಿಮ್ಮ ನಿಮಿತ್ತ ಶತ್ರುಗಳಾಗಿದ್ದಾರೆ.
ಆದರೆ ಆಯುವಿಕೆಯ ವಿಷಯವಾಗಿ ಪಿತೃಗಳ ನಿಮಿತ್ತ ಪ್ರಿಯ
ರಾಗಿದ್ದಾರೆ. ಯಾಕಂದರೆ ದೇವರ ವರಗಳೂ ಕರೆಯುವಿಕೆಯೂ,
೨೯ ಪಶ್ಚಾತ್ತಾಪವಿಲ್ಲದವುಗಳೇ. ಯಾಕಂದರೆ ಯಾವ ಪ್ರಕಾರ ನೀವು
ಮುಂಚೆ ದೇವರಿಗೆ ಅವಿಧೇಯರಾಗಿದ್ದು, ಇವರ ಅವಿಧೇಯತ್ವ
೩೦ದಿಂದ ಈಗ ಕರುಣೆಸಲ್ಪಟ್ಟಿರೋ, ಅದೇ ಪ್ರಕಾರ ಇವರೂ ನಿ
ಮಗೆ ಉಂಟಾದ ಕರುಣೆಯಿಂದ ಕರುಣೆಸಲ್ಪಡುವ ಹಾಗೆ, ಅವ
೩೧ರು ಸಹ ಈಗ ಅವಿಧೇಯರಾದರು. ಯಾಕಂದರೆ ದೇವರು ಎ
ಲ್ಲರನ್ನು ಕರುಣಿಸುವ ಹಾಗೆ, ಎಲ್ಲರನ್ನು ಅವಿಧೇಯತ್ವದಲ್ಲಿ
ಮುಚ್ಚಿ ಹಾಕಿದ್ದಾನೆ.

೩೩ ಓ ದೇವರ ಜ್ಞಾನ ತಿಳುವಿಕೆಗಳ ಐಶ್ವರ್ಯದ ಅಗಾಧವೇ!
ಅವನ ನ್ಯಾಯ ತೀರ್ವಿಕೆಗಳು ಎಷ್ಟೋ ಅಶೋಧ್ಯವಾಗಿವೆ!
೩೪ ಅವನ ಹಾದಿಗಳು ಎಷ್ಟೋ ಅಮಾರ್ಗ್ಯವಾಗಿವೆ! ಯಾಕಂದರೆ
೩೫ ಕರ್ತನ ಮನಸ್ಸನ್ನು ತಿಳಿದವನ್ಯಾರು? ಇಲ್ಲವೆ ಅವನಿಗೆ ಆಲೋ
ಚನೆ ಹೇಳಿದವನ್ಯಾರು? ಇಲ್ಲವೆ ತನಗೆ ತಿರಿಗಿ ಕೊಡಲ್ಪಡುವ ಹಾ
೩೬ ಗೆ, ಅವನಿಗೆ ಮುಂಕೊಟ್ಟವನ್ಯಾರು? ಯಾಕಂದರೆ ಅವನ ಬೆಸೆ
ಯಿಂದಲೂ, ಅವನ ಮೂಲವಾಗಿಯೂ, ಅವನಿಗಾಗಿಯೂ, ಸ
ಮಸ್ತವು ಉಂಟು. ಅವನಿಗೆ ಎಂದೆಂದಿಗೂ ಮಹಿಮೆ ಆಗಲಿ. ಆ
ಮೆನ್.

## ೧೨. ಸಂಧಿ.

೧ ಆದದರಿಂದ, ಸಹೋದರರೇ, ನಿಮ್ಮ ಶರೀರಗಳನ್ನು ಬದುಕು
ವಂಥ, ಪರಿಶುದ್ಧವಾದಂಥ, ದೇವರಿಗೆ ಸಮರ್ಪಕವಾದಂಥ, ಬಲಿ
ಯಾಗಿ ಅರ್ಪಿಸ ಬೇಕೆಂದು, ದೇವರ ಕನಿಕರಗಳ ನಿಮಿತ್ತ ನಿಮ್ಮ
ನ್ನು ಬೇಡಿ ಕೊಳ್ಳುತ್ತೇನೆ. ಇದು ನಿಮ್ಮ ಬುದ್ಧಿಯುಳ್ಳ ಆರಾ
೨ ಧನೆ. ಮತ್ತು ಒಳ್ಳೇದೂ, ಸಮರ್ಪಕವೂ, ಪೂರ್ಣವೂ ಆಗಿ
ರುವ ದೇವರ ಚಿತ್ತವು ಏನೆಂದು ನೀವು ಪರೀಕ್ಷಿಸುವದಕ್ಕೋಸ್ಕರ
ಈ ಯುಗಕ್ಕೆ ಅನುಕೂಲವಾಗದೆ, ನಿಮ್ಮ ಮನಸ್ಸಿನ ನವೀಕರಣ
೩ ದಿಂದ ರೂಪಾಂತರವಾಗಿರಿ. ಯಾಕಂದರೆ ನನಗೆ ಕೊಡಲ್ಪಟ್ಟ
ಕೃಪೆಯಿಂದ ನಿಮ್ಮಲ್ಲಿರುವ ಒಬ್ಬೊಬ್ಬನಿಗೆ, ಎಣಿಸ ತಕ್ಕದ್ದ
ಕ್ಕಿಂತ ಹೆಚ್ಚಾಗಿ ಎಣಿಸದೆ, ದೇವರು ಒಬ್ಬೊಬ್ಬನಿಗೆ ವಿಶ್ವಾಸ
ದ ಅಳತೆಯನ್ನು ಹಂಚ್ಚಿ ಕೊಟ್ಟ ಪ್ರಕಾರ, ಸ್ವಸ್ಥ ಬುದ್ಧಿಯಾಗಿ
೪ ಎಣಿಸ ಹೇಳುತ್ತೇನೆ. ಯಾಕಂದರೆ ಯಾವ ಪ್ರಕಾರ ಒಂದೇ ಶರೀ
ರದಲ್ಲಿ ಅನೇಕ ಅಂಗಗಳು ನಮಗೆ ಇರಲಾಗಿ, ಎಲ್ಲಾ ಅಂಗಗಳಿಗೆ
೫ ಒಂದೇ ಕೆಲಸವಿರುವದಿಲ್ಲವೋ, ಅದೇ ಪ್ರಕಾರ ಅನೇಕರಾದ ನಾ

ವು ಕ್ರಿಸ್ತನಲ್ಲಿ ಒಂದೇ ಶರೀರವಾಗಿದ್ದು, ಒಬ್ಬರಿಗೊಬ್ಬರು ಅಂಗ
೬ ಗಳಾಗಿದ್ದೇವೆ. ನಮಗೆ ಕೊಡಲ್ಪಟ್ಟ ಕೃಪೆಯ ಪ್ರಕಾರ ಬೇರೆ
ಬೇರೆ ವರಗಳುಳ್ಳವರಾಗಿದ್ದೇವೆ. ಪ್ರವಾದನೆಯಾದರೆ, ವಿಶ್ವಾಸ
೭ ಪ್ರಮಾಣದ ಪ್ರಕಾರವಾಗಿಯೂ, ಸೇವೆಯಾದರೆ, ಸೇವೆಯಲ್ಲಿ
ಯೂ, ಬೋಧಿಸುವವನಾದರೆ, ಬೋಧನೆಯಲ್ಲಿಯೂ, ಬುದ್ಧಿ
೮ ಹೇಳುವವನಾದರೆ, ಬುದ್ಧಿ ಹೇಳುವದರಲ್ಲಿಯೂ, ಇರಲಿ. ಹಂಚಿ
ಕೊಡುವವನು ಯಥಾರ್ಥವಾಗಿ, ಅಧಿಕಾರ ಮಾಡುವವನು ಜಾ
ಗ್ರತೆಯಾಗಿ, ಕರುಣೆಸುವವನು ಸಂತೋಷವಾಗಿ, ಮಾಡಲಿ.

೯ ಪ್ರೀತಿಯು ನಿಷ್ಕಪಟವಾಗಿರಲಿ; ಕೆಟ್ಟತನವನ್ನು ಅಸಂಹಿಸಿರಿ;
೧೦ ಒಳ್ಳೇದನ್ನು ಅಂಟಿ ಕೊಳ್ಳಿರಿ. ಸಹೋದರ ಸ್ನೇಹದಲ್ಲಿ ಒಬ್ಬ
ರ ಮೇಲೊಬ್ಬರು ವಾತ್ಸಲ್ಯವುಳ್ಳವರಾಗಿದ್ದು, ಮರ್ಯಾದೆಯ
೧೧ ಲ್ಲಿ ಒಬ್ಬರಿಗೊಬ್ಬರು ಮುಂಕೊಂಡು, ಜಾಗ್ರತೆಯಲ್ಲಿ ಮೈಗಳ್ಳ
ರಾಗಿರದೆ, ಆತ್ಮದಲ್ಲಿ ಚುರುಕಾಗಿದ್ದು, ಕರ್ತನಿಗೆ ಸೇವೆ ಮಾಡಿ,
೧೨ ನಿರೀಕ್ಷೆಯಲ್ಲಿ ಸಂತೋಷ ಪಟ್ಟು, ಉಪದ್ರವದಲ್ಲಿ ತಾಳಿ ಕೊಂಡು,
೧೩ ಪ್ರಾರ್ಥನೆಯಲ್ಲಿ ನೆಲೆಗೊಂಡು, ಪರಿಶುದ್ಧರ ಕೊರತೆಗಳಿಗೆ ಸಹಾ
೧೪ ಯ ಮಾಡಿ, ಆತಿಥ್ಯವನ್ನು ಅಭ್ಯಾಸಿಸಿ, ನಿಮ್ಮನ್ನು ಹಿಂಸಿಸುವ
೧೫ ವರನ್ನು ಆಶೀರ್ವದಿಸಿರಿ; ಶಪಿಸದೆ ಆಶೀರ್ವದಿಸಿರಿ. ಸಂತೋಷ
ಪಡುವವರ ಸಂಗಡ ಸಂತೋಷ ಪಡಿರಿ; ಅಳುವವರ ಸಂಗಡ ಅ
೧೬ ಳಿರಿ. ಒಬ್ಬರಿಗೊಬ್ಬರು ಒಂದೇ ಮನಸುಳ್ಳವರಾಗಿರ್ರಿ. ಉನ್ನತ
ವಾದವುಗಳ ಮೇಲೆ ಮನಸ್ಸಿನಡೆದೆ, ದೀನವಾದವುಗಳಿಗೆ ಬೊಗ್ಗಿ
೧೭ ಕೊಳ್ಳಿರಿ. ನಿಮಗೆ ನೀವೇ ಬುದ್ಧಿವಂತರಾಗ ಬೇಡಿರಿ. ಯಾವನಿಗಾ
ದರೂ ಕೇಡಿಗೆ ಕೇಡು ಮಾಡ ಬೇಡಿರಿ. ಎಲ್ಲಾ ಮನುಷ್ಯರ ಮುಂ
೧೮ ದೆ ಒಳ್ಳೆಯವುಗಳನ್ನು ಮುಂನೆನಸಿರಿ. ಸಾಧ್ಯವಾದರೆ, ನಿಮ್ಮಿಂ
ದಾಗುವ ಮಟ್ಟಿಗೂ, ಎಲ್ಲಾ ಮನುಷ್ಯರ ಸಂಗಡ ಸಮಾಧಾನವಾ
೧೯ ಗಿರ್ರಿ. ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ಕೊಡ ಬೇ
ಡಿರಿ; ಆದರೆ ಕೋಪಕ್ಕೆ ಸ್ಥಳ ಬಿಡಿರಿ; ಯಾಕಂದರೆ ಮುಯ್ಯಿಗೆ
ಮುಯ್ಯಿ ಕೊಡುವದು ನನ್ನದು, ನಾನೇ ಬದಲು ಕೊಡುವೆನಂತ
೨೦ ಕರ್ತನು ಹೇಳುತ್ತಾನೆಂದು ಬರೆದದೆ. ಹಾಗಾದರೆ, ನಿನ್ನ ಶತ್ರು
ವಿಗೆ ಹಸಿವಿಯಾದರೆ, ಅವನಿಗೆ ಉಣ್ಣಾ ಕೊಡು; ದಾಹವಾದರೆ, ಅವ
ನಿಗೆ ಕುಡಿಯ ಕೊಡು. ಯಾಕಂದರೆ ಇದನ್ನು ಮಾಡಿದರೆ, ಅ
೨೧ ವನ ತಲೆಯ ಮೇಲೆ ಉರಿ ಕೆಂಡಗಳನ್ನು ಕುಪ್ಪೆ ಹಾಕುವಿ. ಕೆಟ್ಟ
ದ್ದರಿಂದ ಜಯಿಸಲ್ಪಡದೆ, ಒಳ್ಳೇದರಿಂದ ಕೆಟ್ಟದ್ದನ್ನು ಜಯಿಸು.

## ೧೩. ಸಂಧಿ.

೧ ಒಬ್ಬೊಬ್ಬ ಮನುಷ್ಯನು ಮೇಲಾಗಿರುವ ಅಧಿಕಾರಗಳಿಗೆ ವಿ
ಧೇಯನಾಗಿರಲಿ. ಯಾಕಂದರೆ ದೇವರಿಂದಲೇ ಹೊರ್ತು, ಯಾ
ವ ಅಧಿಕಾರವೂ ಇಲ್ಲ; ಇರುವ ಅಧಿಕಾರಗಳು ದೇವರಿಂದ ನೇಮಿ
೨ ಸಲ್ಪಟ್ಟಿವೆ. ಹೀಗಿರುವದರಿಂದ ಅಧಿಕಾರವನ್ನು ಎದುರಿಸುವವನು
ದೇವರ ನೇಮಕವನ್ನು ಎದುರಿಸುತ್ತಾನೆ. ಆದರೆ ಎದುರಿಸುವವರು
೩ ತಮಗೆ ತಾವೇ ಅಪ್ಪಿಷ್ಟೆ ನಿರ್ಣಯವನ್ನು ಹೊಂದುವರು. ಯಾ
ಕಂದರೆ ಅಧಿಪತಿಗಳು ಒಳ್ಳೇ ಕ್ರಿಯೆಗಳಿಗಲ್ಲ, ಕೆಟ್ಟವುಗಳಿಗೆ ಭ
ಯಂಕರವಾಗಿದ್ದಾರೆ. ಹಾಗಾದರೆ, ಅಧಿಕಾರಕ್ಕೆ ಭಯ ಪಡದೆ ಇರ
ಬೇಕೋ? ಒಳ್ಳೇದನ್ನು ಮಾಡು, ಆಗ ಅದರಿಂದ ಹೊಗಳಿಕೆ
೪ ಯನ್ನು ಹೊಂದುವಿ; ಯಾಕಂದರೆ ನಿನಗೆ ಮೇಲಿಗಾಗಿ ದೇವರ
ಸೇವಕನಾಗಿದ್ದಾನೆ. ಆದರೆ ಕೆಟ್ಟದ್ದನ್ನು ಮಾಡಿದರೆ, ಭಯ ಪ
ಡು; ಯಾಕಂದರೆ ಸುಮ್ಮನೆ ಕತ್ತಿಯನ್ನು ಧರಿಸಿ ಕೊಳ್ಳುವದಿಲ್ಲ;
ಕೆಟ್ಟದ್ದನ್ನು ನಡಿಸುವವನಿಗೆ ಕೋಪಕ್ಕಾಗಿ ಶಿಕ್ಷೆ ಮಾಡುವ
೫ ದೇವರ ಸೇವಕನಾಗಿದ್ದಾನೆ. ಆದಕಾರಣ ಕೋಪದ ನಿಮಿತ್ತ ಮಾ
ತ್ರವಲ್ಲ, ಮನಸ್ಸಾಕ್ಷಿಯ ನಿಮಿತ್ತವೂ ವಿಧೇಯವಾಗಿರುವದು ಅ
೬ ವಶ್ಯವು. ಇದಕ್ಕೋಸ್ಕರವೇ ತೆರಿಗೆ ಕೊಡುತ್ತೀರಿ. ಯಾಕಂದ
ರೆ ದೇವರ ಸೇವಕರಾಗಿ ಇದೇ ಕೆಲಸಕ್ಕೆ ಯಾವಾಗಲೂ ಸಿದ್ಧವಾ
೭ ಗಿದ್ದಾರೆ. ಆದದರಿಂದ ಎಲ್ಲರಿಗೂ ಸಲ್ಲಿಸ ತಕ್ಕವುಗಳನ್ನು ಸಲ್ಲಿ
ಸಿರಿ—ಯಾರಿಗೆ ತೆರಿಗೆಯೋ, ತೆರಿಗೆಯನ್ನೂ; ಯಾರಿಗೆ ಸುಂಕ
ವೋ, ಸುಂಕವನ್ನೂ; ಯಾರಿಗೆ ಭಯವೋ, ಭಯವನ್ನೂ;
೮ ಯಾರಿಗೆ ಮಾನವೋ, ಮಾನವನ್ನೂ. ಒಬ್ಬರನ್ನೊಬ್ಬರು ಪ್ರೀತಿ
ಮಾಡುವದಕ್ಕೆ ಹೊರ್ತು, ಯಾವನಿಗಾದರೂ ಯಾವ ಹಂಗಿನ
ಲ್ಲಿರ ಬೇಡಿರಿ; ಯಾಕಂದರೆ ಮತ್ತೊಬ್ಬನನ್ನು ಪ್ರೀತಿ ಮಾಡುವ
೯ ವನು ನ್ಯಾಯಪ್ರಮಾಣವನ್ನು ಪೂರೈಸಿದ್ದಾನೆ. ಹ್ಯಾಗಂದರೆ
ವ್ಯಭಿಚಾರ ಮಾಡ ಬೇಡ, ಕೊಲ್ಲ ಬೇಡ, ಕದಿಯ ಬೇಡ, ಅಪ
ಸಾಕ್ಷಿ ಹೇಳ ಬೇಡ, ಆಶಿಸ ಬೇಡ, ಎಂಬುವದು, ಮತ್ತು ಬೇಕೊಂ
ದು ಕಟ್ಟಳೆ ಇದ್ದರೆ, ನಿನ್ನ ನೆರೆಯವನನ್ನು ನಿನ್ನ ಹಾಗೆಯೇ
೧೦ ಪ್ರೀತಿ ಮಾಡು ಎಂಬ ಈ ವಾಕ್ಯದಲ್ಲಿ ಅಡಕವಾಗಿದೆ. ಪ್ರೀತಿಯು
ನೆರೆಯವನಿಗೆ ಕೇಡು ಮಾಡದು; ಆದದರಿಂದ ಪ್ರೀತಿಯು ನ್ಯಾ
ಯಪ್ರಮಾಣದ ಪೂರ್ತಿಯಾಗಿದೆ.

೧೧ ಮತ್ತು ನಾವು ನಿದ್ರೆಯಿಂದ ಎಚ್ಚರ ಪಡುವದಕ್ಕೆ ಇದೇ ವೇ
ಳೆ ಎಂದು, ಸಮಯ ತಿಳಿದು ಇದನ್ನು ಮಾಡುವ. ಯಾಕಂದ
ರೆ ನಾವು ವಿಶ್ವಾಸಿಸಿದ ಸಮಯಕ್ಕಿಂತ ಈಗ ನಮ್ಮ ರಕ್ಷಣೆಯು
ಸಮೀಪವಾಗಿದೆ. ರಾತ್ರಿ ಕಳೆದು ಹೋಗಿ, ಹಗಲು ಸಮೀಪವಾ
೧೨ ಯಿತು; ಆದದರಿಂದ ಅಂಧಕಾರದ ಕ್ರಿಯೆಗಳನ್ನು ತೆಗೆದು ಹಾಕಿ,
ಬೆಳಕಿನ ಆಯುಧಗಳನ್ನು ಧರಿಸಿ ಕೊಳ್ಳುವ. ಹಗಲಿಗೆ ತಕ್ಕ ಹಾ
೧೩ ಗೆ ಯುಕ್ತವಾಗಿ ನಡಿಯುವ. ದುಂದಾತನಗಳಲ್ಲಿಯೂ, ಅಮ
ಲುಗಳಲ್ಲಿಯೂ, ಅಲ್ಲ; ಸೂಳೆತನಗಳಲ್ಲಿಯೂ, ಬಂಠತನಗಳಲ್ಲಿ
ಯೂ, ಅಲ್ಲ; ಜಗಳದಲ್ಲಿಯೂ, ಹೊಟ್ಟಿಕಿಚ್ಚಿನಲ್ಲಿಯೂ, ಅಲ್ಲ;
೧೪ ಆಶೆಗಳಿಗಾಗಿ ಮಾಂಸಕ್ಕೆ ಮುಂಚಿಂತೆ ಮಾಡದೆ, ಕರ್ತನಾದ
ಯೇಸು ಕ್ರಿಸ್ತನನ್ನು ಧರಿಸಿ ಕೊಳ್ಳಿರಿ.

## ೧೪. ಸಂಧಿ.

೧ ವಿಶ್ವಾಸದಲ್ಲಿ ಬಲಹೀನನನ್ನು ಅಂಗೀಕರಿಸಿರಿ; ಸಂದೇಹವಾದ
೨ ತರ್ಕಗಳಿಗಲ್ಲ. ಒಬ್ಬನು ಎಲ್ಲಾ ಉಣ್ಣಾ ಬಹುದೆಂದು ನಂಬು
೩ ತ್ತಾನೆ; ಆದರೆ ಬಲಹೀನನು ಪಲ್ಯಗಳನ್ನು ತಿನ್ನುತ್ತಾನೆ. ತಿನ್ನು
ವವನು ತಿನ್ನದವನನ್ನು ಅಸಡ್ಡೆ ಮಾಡದೆ ಇರಲಿ; ತಿನ್ನದವನು ತಿ
ನ್ನುವವನಿಗೆ ನ್ಯಾಯ ತೀರಿಸದೆ ಇರಲಿ. ಯಾಕಂದರೆ ದೇವರು
೪ ಅವನನ್ನು ಅಂಗೀಕರಿಸಿದ್ದಾನೆ. ಮತ್ತೊಬ್ಬನ ಉಳ್ಳಿಗದವನಿಗೆ ನ್ಯಾ
ಯ ತೀರಿಸುವವನಾದ ನೀನ್ಯಾರು? ಸ್ವಂತ ಯಜಮಾನನಿಗೆ ನಿ
ಲ್ಲುವನು, ಇಲ್ಲವೆ ಬೀಳುವನು; ಆದರೆ ನಿಲ್ಲಿಸಲ್ಪಡುವನು; ಯಾ
೫ ಕಂದರೆ ದೇವರು ಅವನನ್ನು ನಿಲ್ಲಿಸ ಬಲ್ಲನು. ಒಬ್ಬನು ದಿನಕ್ಕಿಂ
ತ ದಿನವನ್ನು ವಿಶೇಷ ಮಾಡುತ್ತಾನೆ; ಮತ್ತೊಬ್ಬನು ಎಲ್ಲಾ ದಿನ
ಗಳನ್ನು ವಿಶೇಷ ಮಾಡುತ್ತಾನೆ. ಒಬ್ಬೊಬ್ಬನಿಗೆ ಸ್ವಂತ ಮನ
೬ ಸ್ಸಿನಲ್ಲಿ ಪೂರ್ಣ ನಿಶ್ಚಯವಿರಲಿ. ದಿನವನ್ನು ಲಕ್ಷ್ಯ ಮಾಡುವ
ವನು ಕರ್ತನಿಗೆ ಲಕ್ಷ್ಯ ಮಾಡುತ್ತಾನೆ; ದಿನವನ್ನು ಲಕ್ಷ್ಯ ಮಾಡ



ದವನು ಕರ್ತನಿಗೆ ಲಕ್ಷ್ಯ ಮಾಡದೆ ಇದ್ದಾನೆ. ತಿನ್ನುವವನು ಕ
ರ್ತನಿಗೆ ತಿನ್ನುತ್ತಾನೆ; ಯಾಕಂದರೆ ದೇವರನ್ನು ಸ್ತುತಿಸುತ್ತಾನೆ.
ತಿನ್ನದವನು ಕರ್ತನಿಗೆ ತಿನ್ನದೆ ಇದ್ದಾನೆ; ಮತ್ತು ದೇವರನ್ನು
೭ ಸ್ತುತಿಸುತ್ತಾನೆ. ಯಾಕಂದರೆ ನಮ್ಮಲ್ಲಿ ಯಾವನಾದರೂ ತನ
ಗೆ ಬದುಕುವದಿಲ್ಲ, ಮತ್ತು ಯಾವನಾದರೂ ತನಗೆ ಸಾಯುವದಿ
ಲ್ಲ. ಹ್ಯಾಗಂದರೆ ಬದುಕಿದರೆ, ಕರ್ತನಿಗೆ ಬದುಕುತ್ತೇವೆ; ಸತ್ತ
೮ ರೆ, ಕರ್ತನಿಗೆ ಸಾಯುತ್ತೇವೆ. ಹಾಗಾದರೆ, ಬದುಕಿದರೂ, ಸತ್ತ
೯ ರೂ, ಕರ್ತನವರಾಗಿದ್ದೇವೆ. ಯಾಕಂದರೆ ಸತ್ತವರಿಗೂ ಬದುಕು
ವವರಿಗೂ ಕರ್ತನಾಗುವ ಹಾಗೆ, ಇದಕ್ಕೋಸ್ಕರ ಕ್ರಿಸ್ತನು ಸ
ತ್ತು, ಎದ್ದು, ತಿರಿಗಿ ಬದುಕಿದನು.

೧೦ ಆದರೆ ನೀನು ನಿನ್ನ ಸಹೋದರನಿಗೆ ನ್ಯಾಯ ತೀರಿಸುವ
ದೇನು? ಇಲ್ಲವೆ ನೀನು ನಿನ್ನ ಸಹೋದರನನ್ನು ಅಸಡ್ಡೆ ಮಾ
ಡುವದೇನು? ಎಲ್ಲರು ಕ್ರಿಸ್ತನ ನ್ಯಾಯಾಸನದ ಮುಂದೆ ನಿಲ್ಲುವೆ
೧೧ ವಲ್ಲ? ಯಾಕಂದರೆ ನನ್ನ ಜೀವದಾಣೆ, ಎಲ್ಲಾ ಮೊಣಕಾಲುಗ
ಳು ನನಗೆ ಊರುವವು, ಎಲ್ಲಾ ನಾಲಿಗೆಗಳು ದೇವರಿಗೆ ಅರಿಕೆ ಮಾ
೧೨ ಡುವವು ಎಂದು, ಕರ್ತನು ಹೇಳುತ್ತಾನೆಂಬದಾಗಿ ಬರೆದದೆ. ಹಾ
ಗಾದರೆ, ನಮ್ಮಲ್ಲಿ ಒಬ್ಬೊಬ್ಬನು ತನ್ನನ್ನು ಕುರಿತು ದೇವರಿಗೆ
೧೩ ಲೆಖ್ಖ ಒಪ್ಪಿಸುವನು. ಆದದರಿಂದ ಇನ್ನು ಮೇಲೆ ಒಬ್ಬರಿಗೊಬ್ಬ
ರು ನಿರ್ಣಯ ಮಾಡದೆ ಇರುವ; ಅದನ್ನು ಬಿಟ್ಟು ಸಹೋದರ
ನಿಗೆ ಎಡತಡೆಯನ್ನಾದರೂ, ಅಟಂಕವನ್ನಾದರೂ, ಇಡದೆ ಇರುವ
೧೪ ದನ್ನೇ ನಿರ್ಣಯಿಸಿ ಕೊಳ್ಳಿರಿ. ಯಾವದಾದರೂ ತನ್ನಲ್ಲಿ
ಹೊಲೆಯಾದದ್ದಲ್ಲವೆಂದು ಕರ್ತನಾದ ಯೇಸುವಿನಿಂದ ತಿಳಿದು,
ನಿಶ್ಚಯಿಸಿ ಕೊಂಡಿದ್ದೇನೆ. ಯಾವದನ್ನಾದರೂ ಹೊಲೆ ಎಂದೆ
೧೫ ನಿಸುವವನಿಗೆ ಮಾತ್ರ ಅದು ಹೊಲೆಯೇ. ಆದರೆ ಆಹಾರದ ವಿ
ಷಯ ನಿನ್ನ ಸಹೋದರನು ದುಃಖ ಪಟ್ಟರೆ, ಈಗ ಪ್ರೀತಿಯ
ಪ್ರಕಾರ ನಡಿಯದೆ ಇದ್ದೀ. ನಿನ್ನ ಆಹಾರದಿಂದ ಅವನನ್ನು ಕೆಡಿಸ
೧೬ ಬೇಡ; ಅವನಿಗೋಸ್ಕರ ಕ್ರಿಸ್ತನು ಸತ್ತನಲ್ಲ? ಹಾಗಾದರೆ, ನಿಮ್ಮ
೧೭ ಮೇಲು ದೂಷಿಸಲ್ಪಡದಿರಲಿ. ಯಾಕಂದರೆ ದೇವರ ರಾಜ್ಯವು
ಆಹಾರವೂ ಪಾನವೂ ಅಲ್ಲ, ನೀತಿಯೂ, ಸಮಾಧಾನವೂ, ಪರಿ
ಶುದ್ಧಾತ್ಮದಿಂದಾಗುವ ಸಂತೋಷವೂ ಆಗಿದೆ. ಯಾಕಂದರೆ ಇವು
ಗಳಲ್ಲಿ ಕ್ರಿಸ್ತನಿಗೆ ಸೇವೆ ಮಾಡುವವನು ದೇವರಿಗೆ ಸಮರ್ಪಕನಾ
ಗಿಯೂ, ಮನುಷ್ಯರಿಗೆ ಪರೀಕ್ಷಿತನಾಗಿಯೂ, ಇದ್ದಾನೆ.

೧೯ ಹಾಗಾದರೆ, ಸಮಾಧಾನದವುಗಳನ್ನೂ ಒಬ್ಬರಿಗೊಬ್ಬರು
೨೦ ಆತ್ಮ ವೃದ್ಧಿ ಮಾಡ ತಕ್ಕವುಗಳನ್ನೂ ಹಿಂದಟ್ಟುವ. ಆಹಾರ
ಕ್ಕೋಸ್ಕರ ದೇವರ ಕೆಲಸವನ್ನು ಕೆಡಿಸ ಬೇಡ. ಎಲ್ಲಾ ಪವಿತ್ರ
ವೇ, ಆದರೆ ಎಡತಡೆಯಾಗಿ ತಿನ್ನುವ ಮನುಷ್ಯನಿಗೆ ಕೆಟ್ಟದ್ದಾ
೨೧ ಗಿದೆ. ಬಾಡು ಉಣ್ಣದೆ ಇರುವದೂ, ದ್ರಾಕ್ಷೇ ರಸವನ್ನು ಕುಡಿಯ
ದೆ ಇರುವದೂ, ಯಾವದರಿಂದ ನಿನ್ನ ಸಹೋದರನು ಎಡವು
ತ್ತಾನೋ, ಇಲ್ಲವೆ ಅಟಂಕ ಪಡುತ್ತಾನೋ, ಇಲ್ಲವೆ ಬಲಹೀನನಾ
೨೨ ಗುತ್ತಾನೋ, ಅದನ್ನು ಬಿಡುವದು ಒಳ್ಳೇದು. ನಿನಗೆ ವಿಶ್ವಾಸ
ಉಂಟೋ? ನಿನ್ನಲ್ಲಿಯೇ ದೇವರ ಮುಂದೆ ಇರಲಿ. ತಾನು ಒಪ್ಪು
ವದರಲ್ಲಿ ತನ್ನ ಮೇಲೆ ತಪ್ಪು ಹೊರಿಸಿ ಕೊಳ್ಳದವನು ಭಾಗ್ಯವಂ
೨೩ ತನು. ಅನುಮಾನ ಪಡುವವನು ಉಂಡಕಡೆ, ಅಪ್ಪಿಷ್ಟೆ ನಿರ್ಣಯ ಪ
ಟ್ಟಿದ್ದಾನೆ. ಯಾಕಂದರೆ ಅದು ವಿಶ್ವಾಸದಿಂದಲ್ಲ; ವಿಶ್ವಾಸದಿಂ
ದುಂಟಾಗದ್ದೆಲ್ಲಾ ಪಾಪವಾಗಿದೆ.

## ೧೫. ಸಂಧಿ.

೧ ಆದರೆ ಬಲವುಳ್ಳವರಾದ ನಾವು ನಮ್ಮನ್ನು ಮೆಚ್ಚಿಸಿ ಕೊಳ್ಳಿ
೨ ದೆ, ಬಲಹೀನರ ಅಶಕ್ತಿಗಳನ್ನು ತಾಳಿ ಕೊಳ್ಳ ತಕ್ಕದ್ದು. ನಮ್ಮ
ಲ್ಲಿ ಒಬ್ಬೊಬ್ಬನು ಮೇಲಿಗಾಗಿ ಆತ್ಮವೃದ್ಧಿಗೋಸ್ಕರ, ತನ್ನ
೩ ನೆರೆಯವನನ್ನು ಮೆಚ್ಚಿಸಲಿ. ಯಾಕಂದರೆ ಕ್ರಿಸ್ತನು ಸಹ ತನ್ನ
ನ್ನು ಮೆಚ್ಚಿಸಿ ಕೊಳ್ಳಲಿಲ್ಲ; ಆದರೆ ನಿನ್ನನ್ನು ನಿಂದಿಸುವವರ ನಿಂ
೪ ದೆಗಳು ನನ್ನ ಮೇಲೆ ಬಿದ್ದವೆಂದು ಬರೆದಿರುವ ಪ್ರಕಾರವೇ. ಯಾ
ಕಂದರೆ ತಾಳ್ಮೆಯಿಂದಲೂ ಬರಹಗಳ ಆದರಣೆಯಿಂದಲೂ ನ
ಮಗೆ ನಿರೀಕ್ಷೆ ಉಂಟಾಗುವ ಹಾಗೆ, ಮುಂಬರೆದವುಗಳದ್ದು ನಮ್ಮ
೫ ಬೋಧನೆಗೋಸ್ಕರ ಮುಂಬರೆಯಲ್ಪಟ್ಟವು; ಮತ್ತು ನೀವು ಏಕ
ಚಿತ್ತವಾಗಿ ಒಂದೇ ಬಾಯಿಯಿಂದ ನಮ್ಮ ಕರ್ತನಾದ ಯೇಸು
ಕ್ರಿಸ್ತನ ತಂದೆಯಾದ ದೇವರನ್ನು ಮಹಿಮೆ ಪಡಿಸುವ ಹಾಗೆ, ತಾ
೬ ಳ್ಮೆ ಆದರಣೆಗಳ ದೇವರು, ನಿಮಗೆ ಕ್ರಿಸ್ತ ಯೇಸುವಿನ ಪ್ರಕಾರ,
ಒಬ್ಬರಲೊಬ್ಬರು ಒಂದೇ ಮನಸ್ಸಾಗಿರುವ ಹಾಗೆ ದಯೆ ಪಾ
ಲಿಸಲಿ.

೭ ಆದಕಾರಣ ಕ್ರಿಸ್ತನು ದೇವರ ಮಹಿಮೆಗೆ ನಮನ್ನು ಅಂಗೀ
ಕರಿಸಿದ ಹಾಗೆ, ಒಬ್ಬರನ್ನೊಬ್ಬರು ಅಂಗೀಕರಿಸಿರಿ. ಮತ್ತು ಯೇ
೮ ಸು ಕ್ರಿಸ್ತನು ದೇವರ ಸತ್ಯದ ನಿಮಿತ್ತ ಪಿತೃಗಳಿಗಾದ ವಾಗ್ದತ್ತಗ
ಳನ್ನು ದೃಢ ಪಡಿಸುವ ಹಾಗೆ, ಪರಿಛೇದನೆಯ ಸೇವಕನಾದೆಂ
ದೂ, ಜನಾಂಗಗಳು ಕರುಣೆಯ ನಿಮಿತ್ತ ದೇವರನ್ನು ಮಹಿಮೆ
೯ ಪಡಿಸುತ್ತಾರೆಂದೂ, ಹೇಳುತ್ತೇನೆ. ಇದಕ್ಕೆ ಬರೆದದ್ದೇನಂದರೆ,
ಈ ಕಾರಣದಿಂದ ಜನಾಂಗಗಳಲ್ಲಿ ನಿನಗೆ ಅರಿಕೆ ಮಾಡಿ, ನಿನ್ನ ನಾ
೧೦ ಮಕ್ಕೆ ಹಾಡುವೆನು. ಮತ್ತೂ, ಜನಾಂಗಗಳೇ, ಅವನ ಪ್ರಜೆಯ
೧೧ ಸಂಗಡ ಆನಂದ ಪಡಿರಿ, ಅನ್ನುತ್ತಾನೆ. ಮತ್ತೂ, ಸಕಲ ಜನಾಂಗ
ಗಳೇ, ಕರ್ತನನ್ನು ಹೊಗಳಿರಿ; ಸಕಲ ಪ್ರಜೆಗಳೇ, ಅವನನ್ನು
೧೨ ಕೊಂಡಾಡಿರಿ, ಅನ್ನುತ್ತಾನೆ. ಮತ್ತೂ ಇಶಾಯನ ಬೇರೂ, ಜ
ನಾಂಗಗಳನ್ನು ಆಳ ಪಿಳ್ಳವನೂ ಇರುವನು; ಅವನನ್ನು ಜನಾಂ
ಗಳು ನಿರೀಕ್ಷಿಸುವರು ಎಂದು, ಯೆಶಾಯನು ಹೇಳುತ್ತಾನೆ.
೧೩ ಹೀಗಿರಲಾಗಿ ನಿರೀಕ್ಷೆಯ ದೇವರು, ನೀವು ಪರಿಶುದ್ಧಾತ್ಮದ ಬಲ
ದಿಂದ ನಿರೀಕ್ಷೆಯಲ್ಲಿ ಹೆಚ್ಚುವ ಹಾಗೆ, ವಿಶ್ವಾಸಿಸುವದರಲ್ಲಿ ಎಲ್ಲಾ
ಸಂತೋಷದಿಂದಲೂ ಸಮಾಧಾನದಿಂದಲೂ ನಿಮ್ಮನ್ನು ತುಂಬಿ
ಸಲಿ.

೧೪ ಇದಲ್ಲದೆ, ನನ್ನ ಸಹೋದರರೇ, ನೀವೇ ಒಳ್ಳೇತನದಿಂದ
ಭರಿತರಾಗಿಯೂ, ಎಲ್ಲಾ ತಿಳುವಿಕೆಯಿಂದ ತುಂಬಿದವರಾಗಿಯೂ,
ಒಬ್ಬರಿಗೊಬ್ಬರು ಬುದ್ಧಿ ಹೇಳ ತಕ್ಕರಾಗಿಯೂ ಇದ್ದೀರೆಂದು,
ನಿಮ್ಮನ್ನು ಕುರಿತು ನನ್ನಿಂದ ನಾನೇ ನಿಶ್ಚಯಿಸಿ ಕೊಂಡಿದ್ದೇನೆ.
೧೫ ಆದರೂ, ಸಹೋದರರೇ, ಜನಾಂಗಗಳ ಕಾಣಿಕೆಯು ಪರಿಶುದ್ಧಾ
ತ್ಮದಿಂದ ಪರಿಶುದ್ಧ ಮಾಡಲ್ಪಟ್ಟು, ಸಮರ್ಪಕವಾಗುವ ಹಾಗೆ,
೧೬ ನಾನು ದೇವರ ಸುವಾರ್ತೆಯಲ್ಲಿ ಯಾಜಕ ಸೇವೆ ಮಾಡುತ್ತಾ,
ಜನಾಂಗಗಳಿಗೋಸ್ಕರ ಯೇಸು ಕ್ರಿಸ್ತನ ಸೇವಕನಾಗಿರುವದಕ್ಕೆ,
ದೇವರಿಂದ ನನಗೆ ಕೊಡಲ್ಪಟ್ಟ ಕೃಪೆಯ ಮುಖಾಂತರ ನಿಮಗೆ
ಜ್ಞಾಪಕ ಮಾಡುವವನಾಗಿ, ಸ್ವಲ್ಪ ಹೆಚ್ಚಾದ ಧೈರ್ಯದಿಂದ
೧೭ ನಿಮಗೆ ಬರೆದಿದ್ದೇನೆ. ಆದದರಿಂದ, ದೇವರ ಕಾರ್ಯಗಳಲ್ಲಿ
ಯೇಸು ಕ್ರಿಸ್ತನಲ್ಲಿ ನನಗೆ ಹೆಚ್ಚಳ ಉಂಟು. ಯಾಕಂದರೆ ಕ್ರಿಸ್ತ
೧೮ ನು ಜನಾಂಗಗಳ ವಿಧೇಯತ್ವಕ್ಕಾಗಿ ಮಾತಿನಿಂದಲೂ, ಕ್ರಿಯೆ

ಯಿಂದಲೂ, ಲಕ್ಷಣ ಅದ್ಭುತಗಳ ಬಲದಿಂದ, ದೇವರ ಆತ್ಮದ
ಬಲದಿಂದ, ನನ್ನ ಮುಖಾಂತರ ಮಾತಿದವುಗಳೇ ಹೊರ್ತು, ಏ
೧೯ ನಾದರೂ ಮಾತಾಡ ಧೈರ್ಯ ಪಡುವದಿಲ್ಲ. ಹೀಗೆ ನಾನು ಯೆ
ರೂಸಲೇಮಿನಿಂದ ಇಲ್ಲುರಿಕದ ಮಟ್ಟಿಗೂ ಸುತ್ತಲಾಗಿ ಕ್ರಿಸ್ತನ
೨೦ ಸುವಾರ್ತೆಯ ಕಾರ್ಯವನ್ನು ಪೂರೈಸಿದೆನು. ಈ ಮೇರೆಗೆ
ಪ್ರಯಾಸ ಪಟ್ಟು ಸುವಾರ್ತೆ ಪ್ರಸಂಗಿಸುತ್ತೇನೆ; ಮತ್ತೊಬ್ಬನ
ಅಸ್ತಿವಾರದ ಮೇಲೆ ಕಟ್ಟಿದ ಹಾಗೆ, ಕ್ರಿಸ್ತನ ಹೆಸರು ಹೇಳಲ್ಪಟ್ಟ
೨೧ ಲ್ಲಿ ಅಲ್ಲ, ಆದಕೆ ಅವನ ಸಮಾಚಾರ ತಿಳ್ಳಿಯದವರು ನೋಡುವ
ರು, ಕೇಳದವರು ಗ್ರಹಿಸುವರು, ಎಂದು ಬರೆದಿರುವ ಪ್ರಕಾರವೇ.
೨೨ ಆದದರಿಂದ, ನಿಮ್ಮ ಬಳ್ಳಿಗೆ ಬರ ಬಹುದಾ ತತೆಯಲ್ಪಟ್ಟಿನು.
೨೩ ಆದಕೆ ಈಗ ಈ ಕೀಮೆಗಳ್ಳಲ್ಲಿ ನನಗೆ ಸ್ಥಳವಿಲ್ಲದೆ ಇರುವದರಿಂದ
ಲೂ, ನಿಮ್ಮ ಬಳ್ಳಿಗೆ ಬರ ನನಗೆ ಅನೇಕ ವರುಷಗಳಿಂದ ಅಭಿಲಾ
೨೪ ಷೆ ಇರುವದರಿಂದಲೂ, ನಾನು ಸ್ಪಾನ್ಯಕ್ಕೆ ಪಯಣ ಮಾಡು
ವಾಗ, ನಿಮ್ಮ ಬಳ್ಳಿಗೆ ಬರುವೆನು. ಯಾಕಂದರೆ ಹಾದು ಹೋಗು
ತ್ತಾ ನಿಮ್ಮನ್ನು ಕಂಡು, ಕೊದಲು ನಿಮ್ಮಿಂದ ಸ್ವಲ್ಪ ತೃಪ್ತನಾ
ದ ತರುವಾಯ, ಅಲ್ಲಿಗೆ ನಿಮ್ಮಿಂದ ಮುಂಕಳುಹಿಸಲ್ಪಡ ನಿರೀಕ್ಷಿ
೨೫ ಸುತ್ತೇನೆ. ಆದರೆ ಈಗ ಪರಿಶುದ್ಧರ ಸೇವಕನಾಗಿ ಯೆರೂಸಲೇ
೨೬ ಮಿಗೆ ಪಯಣ ಮಾಡುತ್ತೇನೆ. ಯಾಕಂದರೆ ಯೆರೂಸಲೇಮಿ
ನಲ್ಲಿರುವ ದರಿದ್ರ ಪರಿಶುದ್ಧರಿಗೆ ಏನಾದರೂ ಸಹಾಯ ಮಾಡ
೨೭ ಮಕೆದೋನ್ಯಕ್ಕೂ ಅಕಾಯಕ್ಕೂ ಮನಸ್ಸಾಯಿತು. ಅವರಿಗೆ
ಮನಸ್ಸಾಯಿತು ಸರಿ; ಮತ್ತು ಅವರ ಹಂಗಿನವರಾಗಿದ್ದಾರೆ.
ಯಾಕಂದರೆ ಜನಾಂಗಗಳು ಅವರ ಆತ್ಮದವುಗಳಲ್ಲಿ ಪಾಲು ಹೊಂ
ದಿದ್ದರೆ, ಮಾಂಸದವುಗಳಿಂದ ಅವರಿಗೆ ಸೇವೆ ಮಾಡ ಹಂಗಿನಲ್ಲಿ
೨೮ ದ್ದಾರೆ. ಹೀಗಿರುವದರಿಂದ, ಇದನ್ನು ತೀರಿಸಿ, ಅವರಿಗೋಸ್ಕರ
ಈ ಫಲಕ್ಕೆ ಮುದ್ರೆ ಹಾಕಿ, ನಿಮ್ಮ ವಾರ್ಗವಾಗಿ ಸ್ಪಾನ್ಯಕ್ಕೆ
೨೯ ಹೋಗುವೆನು. ಇದಲ್ಲದೆ, ನಿಮ್ಮ ಬಳ್ಳಿಗೆ ಬರುವಾಗ್ಯೆ, ಕ್ರಿಸ್ತನ
ಸುವಾರ್ತೆಯ ಆಶೀರ್ವಾದದ ಪರಿಪೂರ್ಣತೆಯೊಂದಿಗೆ ಬರು
ವೆನೆಂದು ಬಲ್ಲೆನು.
೩೦ ಆದಕೆ, ಸಹೋದರರೇ, ನಾನು ಯೆಹೂದದಲ್ಲಿರುವ ಅವಿಧೇ
ಯರಿಗೆ ತಪ್ಪಿಸಲ್ಪಡುವ ಹಾಗೆಯೂ, ಯೆರೂಸಲೇಮಿಗೋಸ್ಕ
ರವಾದ ನನ್ನ ಸೇವೆ ಪರಿಶುದ್ಧರಿಗೆ ಸಮರ್ಪಕವಾಗುವ ಹಾಗೆ
೩೧ ಯೂ, ದೇವರ ಚಿತ್ತದಿಂದ ನಾನು ಸಂತೋಷವಾಗಿ ಬಂದು, ನಿ
ಮ್ಮಲ್ಲಿ ವಿಶ್ರಮಿಸಿ ಕೊಳ್ಳುವ ಹಾಗೆಯೂ, ನೀವು ನನಗೋಸ್ಕರ
೩೨ ದೇವರಿಗೆ ಮಾಡುವ ಪ್ರಾರ್ಥನೆಗಳಲ್ಲಿ ನನ್ನ ಕೂಡ ಹೋರಾಡ
ಬೇಕೆಂದು, ನಮ್ಮ ಕರ್ತನಾದ ಯೇಸು ಕ್ರಿಸ್ತನ ನಿಮಿತ್ತವೂ,
ಆತ್ಮದ ಪ್ರೀತಿಯ ನಿಮಿತ್ತವೂ, ನಿಮ್ಮನ್ನು ಬೇಡಿ ಕೊಳ್ಳುತ್ತೇನೆ.
೩೩ ಸಮಾಧಾನದ ದೇವರು ನಿಮ್ಮೆಲ್ಲರ ಸಂಗಡ ಇರಲಿ. ಆರ್ಮೆ.

## ೧೬. ಸಂಧಿ.

೧ ಕೆಂಕ್ರೆಯದಲ್ಲಿರುವ ಸಭೆಯ ಸೇವಕಳಾಗಿರುವ ನಮ್ಮ ಸ
೨ ಹೋದರಿಯಾದ ಫೊಯಿಬೆಯನ್ನು ನಿಮಗೆ ಒಪ್ಪಿಸುತ್ತೇನೆ. ಪ
ರಿಶುದ್ಧರಿಗೆ ತಕ್ಕ ಹಾಗೆ ಅವಳನ್ನು ಕರ್ತನಲ್ಲಿ ಅಂಗೀಕರಿಸಿ, ಬೇ
ಕಾದ ಯಾವ ಕೆಲಸದಲ್ಲಿಯೂ ಅವಳಿಗೆ ಸಹಾಯ ಮಾಡಿರಿ.
ಯಾಕಂದರೆ ಅವಳು ಅನೇಕರನ್ನೂ, ನನ್ನನ್ನೂ ಪರಾಮರಿಸಿದ
3 ವಳು. ಕ್ರಿಸ್ತ ಯೇಸುವಿನಲ್ಲಿ ನನ್ನ ಜತೆ ಕೆಲಸದವರಾದ ಪ್ರಿಸ್ಕಿ
೪ ಲ್ಲಳನ್ನೂ,, ಅಕ್ವಿಲನನ್ನೂ ವಂದಿಸಿರಿ. ಅವರು ನನ್ನ ಪ್ರಾಣ
ಕ್ಕೋಸ್ಕರ ತಮ್ಮ ಕೊರಳು ಚಾಚಿದರು; ಅವರಿಗೆ ನಾನು ಮಾ
ತ್ರವಲ್ಲ, ಜನಾಂಗಗಳ ಸಭೆಗಳೆಲ್ಲಾ ಸಹ ಸ್ತೋತ್ರ ಮಾಡುತ್ತವೆ.
೫ ಅವರ ಮನೆಯಲ್ಲಿರುವ ಸಭೆಯನ್ನು ವಂದಿಸಿರಿ. ಅಕಾಯದಲ್ಲಿ
ಕ್ರಿಸ್ತನಿಗೆ ಪ್ರಥಮ ಫಲವಾಗಿರುವ ನನ್ನ ಪ್ರಿಯನಾದ ಎಪೈನೇತ
೬ ನನ್ನು ವಂದಿಸಿರಿ. ನಮಗೋಸ್ಕರ ಬಹು ಪ್ರಯಾಸ ಪಟ್ಟ ಮರಿ
ಯಳನ್ನು ವಂದಿಸಿರಿ. ನನ್ನ ನೆಂಟರಾಗಿಯೂ, ಜತೆ ಕೆಕೆಯವ
ರಾಗಿಯೂ, ಇರುವ ಅಂದ್ರೋನಿಕನನ್ನೂ, ಯೂನ್ಯನನ್ನೂ,
೭ ವಂದಿಸಿರಿ. ಅವರು ಅಪೊಸ್ತಲರಲ್ಲಿ ಪ್ರಸಿದ್ಧರಾಗಿದ್ದಾರೆ; ಮತ್ತು ನ
ನಗಿಂತ ಮುಂಚೆ ಕ್ರಿಸ್ತನಲ್ಲಿದ್ದರು. ಕರ್ತನಲ್ಲಿ ನನಗೆ ಪ್ರಿಯನಾ
೮ ದ ಅಂಪ್ಲಿಯನನ್ನು ವಂದಿಸಿರಿ. ಕ್ರಿಸ್ತನಲ್ಲಿ ನಮ್ಮ ಜತೆ ಕೆಲಸದವ
ನಾದ ಉರ್ಬಾನನನ್ನೂ, ನನ್ನ ಪ್ರಿಯನಾದ ಸ್ತಾಕುನನನ್ನೂ
೯ ವಂದಿಸಿರಿ. ಕ್ರಿಸ್ತನಲ್ಲಿ ಪರೀಕ್ಷಿತನಾದ ಅಬೆಲ್ಲನನ್ನು ವಂದಿಸಿರಿ. ಅ
೧೦ ರಿಸ್ತೊಬೂಲನವರಲ್ಲಿ ಇರುವವರನ್ನು ವಂದಿಸಿರಿ. ನನ್ನ ನೆಂಟನಾ
ದ ಹೆರೋದ್ಯನನ್ನು ವಂದಿಸಿರಿ. ನರ್ಕಿಸ್ಸನವರೊಳಗೆ ಕರ್ತ
೧೧ ನಲ್ಲಿರುವವರನ್ನು ವಂದಿಸಿರಿ. ಕರ್ತನಲ್ಲಿ ಪ್ರಯಾಸ ಪಡುವವರಾ
ದ ತ್ರುಫೈನಳನ್ನೂ, ತ್ರುಫೋಸಳನ್ನೂ ವಂದಿಸಿರಿ. ಕರ್ತನಲ್ಲಿ
ಬಹು ಪ್ರಯಾಸ ಪಟ್ಟ ಪ್ರಿಯಳಾದ ಪೆರ್ಸಿಸಳನ್ನೂ ವಂದಿಸಿರಿ.
೧೩ ಕರ್ತನಲ್ಲಿ ಆಯಲ್ಪಟ್ಟ ರೂಫನನ್ನೂ, ನನ್ನ ತಾಯಿಯಾದ
೧೪ ಅವನ ತಾಯಿಯನ್ನೂ ವಂದಿಸಿರಿ. ಅಸುಂಕ್ರಿತನನ್ನೂ, ಫ್ಲೆಗೋ
ನನನ್ನೂ, ಹೆರ್ಮನನ್ನೂ, ಪತ್ರೋಬನನ್ನೂ, ಹೆರ್ಮಿಯ
ನ್ನೂ, ಅವರೊಂದಿಗಿರುವ ಸಹೋದರರನ್ನೂ ವಂದಿಸಿರಿ. ಫಿಲೊ
೧೫ ಲಗನನ್ನೂ, ಯೂಲ್ಯಳನ್ನೂ, ನೇರ್ಯನನ್ನೂ, ಅವನ ಸಹೋ
ದರಿಯನ್ನೂ, ಒಲಂಪನನ್ನೂ, ಅವರೊಂದಿಗಿರುವ ಪರಿಶುದ್ಧರೆ
ಲ್ಲರನ್ನೂ ವಂದಿಸಿರಿ. ಪರಿಶುದ್ಧ ಮುದ್ದಿನಿಂದ ಒಬ್ಬರನ್ನೊಬ್ಬ
ರು ವಂದಿಸಿರಿ. ಕ್ರಿಸ್ತನ ಸಭೆಗಳು ನಿಮ್ಮನ್ನು ವಂದಿಸುತ್ತವೆ.
೧೬ ಆದಕೆ, ಸಹೋದರರೇ, ನೀವು ಕಲಿತ ಬೋಧನೆಗೆ ವಿರೋಧ
ವಾಗಿ ಭೇದಗಳನ್ನೂ, ಆಟಂಕಗಳನ್ನೂ ಮಾಡುವವರನ್ನು ಗುರು
ತಿಟ್ಟು, ಅವರ ಬಳ್ಳಿಯಿಂದ ತೊಲಗಿ ಹೋಗಿರೆಂದು ನಿಮ್ಮನ್ನು
೧೭ ಬೇಡಿಕೊಳ್ಳುತ್ತೇನೆ. ಯಾಕಂದರೆ ಅಂಥವರು ನಮ್ಮ ಕರ್ತನಾ
ದ ಯೇಸು ಕ್ರಿಸ್ತನಿಗಲ್ಲ, ತಮ್ಮ ಹೊಟ್ಟೆಗೆ ಸೇವೆ ಮಾಡಿ, ನಯ
ಮಾತುಗಳಿಂದಲೂ, ಹೊಗಳಿಕೆಯಿಂದಲೂ, ಕೆಟ್ಟತನವಿಲ್ಲದವರ
೧೮ ಹೃದಯಗಳನ್ನು ಮೋಸಗೊಳಿಸುತ್ತಾರೆ. ನಿಮ್ಮ ವಿಧೇಯತ್ವ
ವು ಎಲ್ಲರಿಗೆ ಬೈಲಾಯಿತು; ಆದದರಿಂದ ನಿಮ್ಮ ನಿಮಿತ್ತ ಸಂತೋ
ಷ ಪಡುತ್ತೇನೆ. ಆದಕೆ ನೀವು ಬಳ್ಳೇತನಕ್ಕೆ ಜ್ಞಾನಿಗಳಾಗಿಯೂ,
ಕೆಟ್ಟತನಕ್ಕೆ ನಿರ್ಮಲರಾಗಿಯೂ ಇರ ಬೇಕೆಂದು ಇಚ್ಛೈಸು
೨೦ ತ್ತೇನೆ. ಆದರೆ, ಸಮಾಧಾನದ ದೇವರು ಸೈತಾನನನ್ನು ಬೇಗ
ನಿಮ್ಮ ಪಾದಗಳ ಕೆಳಗೆ ಜಜ್ಜುವನು. ನಮ್ಮ ಕರ್ತನಾದ ಯೇಸು
೨೧ ಕ್ರಿಸ್ತನ ಕೃಪೆಯು ನಿಮ್ಮ ಸಂಗಡ ಇರಲಿ. ಆರ್ಮೆ. ನನ್ನ
ಜತೆ ಕೆಲಸದವನಾದ ತಿಮೊಥೆಯನೂ, ನನ್ನ ನೆಂಟರಾದ ಲೂ
ಕ್ಯನೂ, ಯೆಸೋನನೂ, ಸೋಸಿಪತ್ರನೂ ನಿಮ್ಮನ್ನು ವಂದಿ
೨೨ ಸುತ್ತಾರೆ. ಈ ಪತ್ರಿಕೆಯನ್ನು ಬರೆದ ತೆರ್ತ್ಯನೆಂಬ ನಾನು ಕ
೨೩ ರ್ತನಲ್ಲಿ ನಿಮ್ಮನ್ನು ವಂದಿಸುತ್ತೇನೆ. ನನಗೂ ಎಲ್ಲಾ ಸಭೆಗೂ,
ಉಪಚಾರಿಯಾದ ಗಾಯನು; ನಿಮ್ಮನ್ನು ವಂದಿಸುತ್ತಾನೆ. ಪಟ್ಟಣ
ದ ಉಗ್ರಾಣಿಕನಾದ ಎರಸ್ತನೂ, ಸಹೋದರನಾದ ಕ್ವರ್ತ



೨೪ ನೂ ನಿಮ್ಮನ್ನು ವಂದಿಸುತ್ತಾರೆ. ನಮ್ಮ ಕರ್ತನಾದ ಯೇಸು
ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆರ್ಮೆ.

೨೫ ಈಗ, ನನ್ನ ಸುವಾರ್ತೆಯ ಪ್ರಕಾರವಾಗಿಯೂ, ಯೇಸು
ಕ್ರಿಸ್ತನ ಪ್ರಸಂಗದ ಪ್ರಕಾರವಾಗಿಯೂ, ಆದಿ ಕಾಲಗಳಿಂದ ಮರೆ
೨೬ ಯಾಗಿದ್ದು, ಈಗ ಪ್ರತ್ಯಕ್ಷವಾಗಿ, ಪ್ರವಾದಿಗಳ ಬರಹಗಳ ಮು
ಖಾಂತರ ನಿತ್ಯ ದೇವರ ಅಪ್ಪಣೆಯ ಮೇರೆಗೆ, ವಿಶ್ವಾಸದ ವಿ
ಧೇಯತ್ವಕ್ಕೋಸ್ಕರ ಸಮಸ್ತ ಜನಾಂಗಗಳಿಗೆ ತಿಳ್ಳಿಯ ಮಾಡ
೨೭ ಲ್ಪಟ್ಟ ಮರ್ಮದ ಪ್ರಕಟಣೆಯ ಪ್ರಕಾರವಾಗಿಯೂ, ನಿಮ್ಮನ್ನು ಸ್ಥಿ
ರ ಪಡಿಸ ಶಕ್ತನಾಗಿರುವ ಒಬ್ಬನೇ ಜ್ಞಾನಿಯಾದ ದೇವರಿಗೆ,
ಯೇಸು ಕ್ರಿಸ್ತನ ಮುಖಾಂತರ, ಎಂದೆಂದಿಗೂ ಮಹಿಮೆ ಆಗಲಿ.
ಆರ್ಮೆ.

---

# THE FIRST EPISTLE OF
# PAUL THE APOSTLE TO THE CORINTHIANS.

## ಅಪೊಸ್ತಲನಾದ ಪೌಲನು ಕೊರಿಂಥ್ಯರಿಗೆ ಬರೆದ ಮೊದಲನೇ ಪತ್ರಿಕೆ.

## ೧. ಸಂಧಿ.

೧ ದೇವರ ಚಿತ್ತದಿಂದ ಯೇಸು ಕ್ರಿಸ್ತನು ಕರೆದ ಅಪೊಸ್ತಲನಾ
೨ ದ ಪೌಲನೂ, ಸಹೋದರನಾದ ಸೋಸ್ಥೆನನೂ, ಕ್ರಿಸ್ತ ಯೇ
ಸುವಿನಲ್ಲಿ ಪರಿಶುದ್ಧ ಮಾಡಲ್ಪಟ್ಟು, ಕರೆಯಲ್ಪಟ್ಟ ಪರಿಶುದ್ಧರಾ
ದಂಥ, ಕೊರಿಂಥದಲ್ಲಿರುವ ದೇವರ ಸಭೆಗೂ, ಸಕಲ ಸ್ಥಳಗಳಲ್ಲಿ
ಅವರಿಗೂ ನಮಗೂ ಕರ್ತನಾಗಿರುವ ಯೇಸು ಕ್ರಿಸ್ತನ ಹೆಸರ
3 ನ್ನು ಕರೆಯುವವರೆಲ್ಲರಿಗೂ—ನಮ್ಮ ತಂದೆಯಾದ ದೇವರಿಂದ
ಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆ
ಯೂ ಸಮಾಧಾನವೂ ಆಗಲಿ.
೪ ಯೇಸು ಕ್ರಿಸ್ತನಲ್ಲಿ ನಿಮಗೆ ಕೊಡಲ್ಪಟ್ಟ ದೇವರ ಕೃಪೆಗೋ
ಸ್ಕರ ನಿಮ್ಮನ್ನು ಕುರಿತು ನನ್ನ ದೇವರನ್ನು ಯಾವಾಗಲೂ ಸ್ತು
೫ ತಿಸುತ್ತೇನೆ. ಯಾಕಂದರೆ, ಕ್ರಿಸ್ತನ ಸಾಕ್ಷಿ ನಿಮ್ಮಲ್ಲಿ ಸ್ಥಿರ ಪಟ್ಟ
೬ ಹಾಗೆಯೇ, ಸಮಸ್ತ ವಾಕ್ಯದಲ್ಲಿಯೂ, ಸಮಸ್ತ ತಿಳ್ಳುಕೆಯಲ್ಲಿ
೭ ಯೂ, ಎಲ್ಲಾದರಲ್ಲಿ ಅವನಿಂದ ಐಶ್ವರ್ಯವಂತರಾದಿರಿ. ಆದ
ಕಾರಣ ಯಾವ ವರದಲ್ಲಿಯೂ ಕೊರತೆಯಾಗಿಲದೆ, ನಮ್ಮ ಕ
ರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷವಾಗುವದನ್ನು ಎದುರು
೮ ನೋಡುತ್ತಾ ಇದ್ದೀರಿ. ಅವನೇ ನಮ್ಮ ಕರ್ತನಾದ ಯೇಸು ಕ್ರಿ
ಸ್ತನ ದಿವಸದಲ್ಲಿ, ನೀವು ನಿರಪರಾಧಿಗಳಾಗಿರುವ ಹಾಗೆ, ಕಡೇ ವರ
೯ ಗೂ ನಿಮ್ಮನ್ನು ಸ್ಥಿರ ಪಡಿಸುವನು. ಯೇಸು ಕ್ರಿಸ್ತನೆಂಬ ನಮ್ಮ
ಕರ್ತನಾಗಿರುವ ತನ್ನ ಮಗನ ಅನ್ಯೋನ್ಯಕ್ಕೆ ನಿಮ್ಮನ್ನು ಕರೆ
ದ ದೇವರು ನಂಬಿಕೆಯುಳ್ಳವನಾಗಿದ್ದಾನೆ.
೧೦ ಮತ್ತು, ಸಹೋದರರೇ, ನೀವೆಲ್ಲರು ಒಂದನ್ನೇ ಹೇಳ್ಳ ಬೇ
ಕೆಂದೂ, ನಿಮ್ಮೊಳಗೆ ಭೇದಗಳು ಇಲ್ಲದೆ, ಒಂದೇ ಮನಸ್ಸಿನಲ್ಲಿ
ಯೂ ಒಂದೇ ಆಲೋಚನೆಯಲ್ಲಿಯೂ ಯುಕ್ತವಾಗಿ ಕೂಡಿರ
ಬೇಕೆಂದೂ, ನನ್ನ ಕರ್ತನಾದ ಯೇಸು ಕ್ರಿಸ್ತನ ಹೆಸರಿನಿಂದ
೧೧ ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಯಾಕಂದರೆ, ನನ್ನ ಸಹೋದ
ರರೇ, ನಿಮ್ಮಳಗೆ ವಾಗ್ವಾದಗಳುಂಟೆಂದು, ನಿಮ್ಮನ್ನು ಕುರಿತು
೧೨ ಕ್ಲೋವೆಯವರಿಂದ ನನಗೆ ತಿಳ್ಳಿಸಲ್ಪಟ್ಟಿತು. ನಾನು ಹೇಳುವದೇ
ನಂದರೆ, ನಿಮ್ಮಲ್ಲಿ ಒಬ್ಬೊಬ್ಬನು, ನಾನು ಪೌಲನವನು, ನಾನು ಅ
ಪೊಲ್ಲೋಸನವನು, ನಾನು ಕೇಫನವನು, ನಾನು ಕ್ರಿಸ್ತನವನು,
೧೩ ಎಂದು ಹೇಳಿ ಕೊಳ್ಳುತ್ತಾನೆ. ಕ್ರಿಸ್ತನು ವಿಭಾಗಿಸಲ್ಪಟ್ಟಿದ್ದಾನೋ?
ಪೌಲನು ನಿಮಗೋಸ್ಕರ ಶಿಲುಬೆಗೆ ಹಾಕಲ್ಪಟ್ಟಿನೋ? ಇಲ್ಲವೆ
೧೪ ಪೌಲನ ಹೆಸರಿನಲ್ಲಿ ಸ್ನಾನ ಹೊಂದಿದಿರೋ? ನನ್ನ ಸ್ವಂತ ಹೆ
ಸರಿನಲ್ಲಿ ಸ್ನಾನ ಕೊಟ್ಟಿನೆಂದು ಯಾರಾದರೂ ಹೇಳ್ಳದ ಹಾಗೆ,
೧೫ ಕ್ರಿಸ್ಪನಿಗೂ ಗಾಯನಿಗೂ ಹೊರ್ತಾಗಿ, ಮತ್ಯಾರಿಗೂ ಸ್ನಾನ
೧೬ ಕೊಡದದರಿಂದ ದೇವರನ್ನು ಸ್ತುತಿಸುತ್ತೇನೆ. ಇದಲ್ಲದೆ ಸ್ತೆಫನನ
ಮನೆಯವರಿಗೆ ಸ್ನಾನ ಕೊಟ್ಟಿನು. ಇವರ ಹೊರ್ತು, ಮತ್ಯಾರಿ
೧೭ ಗೆ ಸ್ನಾನ ಕೊಟ್ಟಿನೋ, ನಾನರಿಯೆ. ಯಾಕಂದರೆ ಸ್ನಾನ ಕೊ
ಡುವದಕ್ಕಲ್ಲ, ಸುವಾರ್ತೆ ಪ್ರಸಂಗಿಸುವದಕ್ಕೆ ಕ್ರಿಸ್ತನು ನನ್ನ
ನ್ನು ಕಳುಹಿಸಿದನು; ಆದರೆ ಕ್ರಿಸ್ತನ ಶಿಲುಬೆ ವ್ಯರ್ಥವಾಗದ
ಹಾಗೆ, ವಾಕ್ಯದ ಜ್ಞಾನದಿಂದಲ್ಲ. ಯಾಕಂದರೆ, ಶಿಲುಬೆಯ ವಾ
೧೮ ಕ್ಯವು ನಾಶವಾಗುವವರಿಗೆ ಹುಚ್ಚು ತನವಾಗಿದೆ. ಆದರೆ ಕಿಡ್ಡಿಸಲ್ಪ
ಡುವ ನಮಗೆ ದೇವರ ಬಲವಾಗಿದೆ. ಯಾಕಂದರೆ ಜ್ಞಾನಿಗಳ ಜ್ಞಾನ
ವನ್ನು ನಾಶ ಮಾಡಿ, ವಿವೇಕಿಗಳ ವಿವೇಕವನ್ನು ತೆಗೆದು ಹಾಕುವೆ
೧೯ ನೆಂದು, ಬರೆದಿದೆ.
೨೦ ಜ್ಞಾನಿ ಎಲ್ಲಿ? ಶಾಸ್ತ್ರಿ ಎಲ್ಲಿ? ಈ ಲೋಕದ ತರ್ಕವಾದಿ ಎಲ್ಲಿ?
ದೇವರು ಈ ಲೋಕದ ಜ್ಞಾನವನ್ನು ಹುಚ್ಚು ತನ ಮಾಡಿದ್ದಾನಲ್ಲ
ವೇ? ಯಾಕಂದರೆ ದೇವರ ಜ್ಞಾನದ ಪ್ರಕಾರ ಲೋಕವು ದೇವರ
೨೧ ನ್ನು ಜ್ಞಾನದಿಂದ ಅರಿಯದೆ ಇರಲಾಗಿ, ಪ್ರಸಂಗದ ಹುಚ್ಚು ತನ
ದಿಂದ ವಿಶ್ವಾಸಿಸುವವರನ್ನು ರಕ್ಷಿಸುವದು ದೇವರಿಗೆ ಬೈಗೇದಾಗಿ
೨೨ ತೋಚಿತು. ಹ್ಯಾಗಂದರೆ, ಯೆಹೂದ್ಯರು ಗುರುತನ್ನು ಕೇಳು
೨೩ ತ್ತಾರೆ, ಗ್ರೀಕರು ಜ್ಞಾನವನ್ನು ಹುಡುಕುತ್ತಾರೆ, ಆದರೆ ನಾವು ಶಿ
ಲುಬೆಗೆ ಹಾಕಲ್ಪಟ್ಟ ಕ್ರಿಸ್ತನನ್ನು ಸಾರುತ್ತೇವೆ—ಯೆಹೂದ್ಯರಿಗೆ
೨೪ ಅಟಂಕವೂ ಗ್ರೀಕರಿಗೆ ಹುಚ್ಚು ತನವೂ, ಆದರೆ ಕರೆಯಲ್ಪಟ್ಟವ
ರಾದ ಯೆಹೂದ್ಯರಿಗೂ ಗ್ರೀಕರಿಗೂ ದೇವರ ಬಲವೂ ದೇವರ
೨೫ ಜ್ಞಾನವೂ ಆಗಿರುವ ಕ್ರಿಸ್ತನನ್ನೇ. ಯಾಕಂದರೆ ದೇವರ ಹುಚ್ಚಾದ
ದ್ದು ಮನುಷ್ಯರಿಗಿಂತ ಜ್ಞಾನವುಳ್ಳದ್ದಾಗಿದೆ, ಮತ್ತು ದೇವರ ಬಲ
ಹೀನವಾದದ್ದು ಮನುಷ್ಯರಿಗಿಂತ ಶಕ್ತವಾದದ್ದಾಗಿದೆ.
೨೬ ಹ್ಯಾಗಂದರೆ, ಸಹೋದರರೇ, ನಿಮ್ಮ ಕರೆಯುವಿಕೆಯನ್ನು
೨೭ ನೋಡಿರಿ. ಏನಂದರೆ, ಯಾವ ಮಾಂಸವಾದರೂ ಅವನ ಸಮು
ಖದಲ್ಲಿ ಹೆಚ್ಚಳ ಪಡದ ಹಾಗೆ, ಮಾಂಸದ ಪ್ರಕಾರ ಜ್ಞಾನಿಗಳು ಅ
ನೇಕರಲ್ಲ, ಬಲವುಳ್ಳವರು ಅನೇಕರಲ್ಲ, ಕುಲೀನರು ಅನೇಕರಲ್ಲ;
೨೮ ಆದರೆ ಜ್ಞಾನಿಗಳನ್ನು ನಾಚಿಕೆ ಪಡಿಸುವ ಹಾಗೆ, ಲೋಕದ ಹು
ಚ್ಚಾದವುಗಳನ್ನು ದೇವರು ಆದು ಕೊಂದಿದ್ದಾನೆ; ಮತ್ತು ಶಕ್ತವಾ
ದವುಗಳನ್ನು ನಾಚಿಕೆ ಪಡಿಸುವ ಹಾಗೆ, ಲೋಕದ ಬಲಹೀನವಾದವು
೨೯ ಗಳನ್ನು ದೇವರು ಆದು ಕೊಂದಿದ್ದಾನೆ; ಮತ್ತು ಇರುವವುಗಳನ್ನು
ಹೀನ ಮಾಡುವ ಹಾಗೆ, ಲೋಕದ ಕುಲಹೀನವಾದವುಗಳನ್ನೂ,

ಅಸದ್ದೆ ಮಾಡಲ್ಪಟ್ಟವುಗಳನ್ನೂ, ಇಲ್ಲದವುಗಳನ್ನೂ, ದೇವರು
೩೦ ಆದು ಕೊಂಡಿದ್ದಾನೆ. ಆದಕೆ ಅವನಿಂದ ನೀವು ಕ್ರಿಸ್ತ ಯೇಸುವಿ
ನಲ್ಲಿ ಇದ್ದೀರಿ. ಇವನು ದೇವರಿಂದ ನಮಗೆ ಜ್ಞಾನವಾಗಿಯೂ, ನೀತಿ
ಯಾಗಿಯೂ, ಪರಿಶುದ್ಧವಾಗಿಯೂ, ವಿಮೋಚನೆಯಾಗಿಯೂ,
೩೧ ಮಾಡಲ್ಪಟ್ಟಿದ್ದಾನೆ. ಆದದರಿಂದ, ಬಕೆದಿರುವ ಪ್ರಕಾರ, ಹೆಚ್ಚಳ
ಪಡುವವನು ಕರ್ತನಲ್ಲಿ ಹೆಚ್ಚಳ ಪಡಲಿ.

## ೨. ಸಂಧಿ.

೧ ಮತ್ತು ನಾನು, ಸಹೋದರರೇ, ನಿಮ್ಮ ಬಳ್ಳಿಗೆ ಬಂದಾಗ, ಘನ
ವಾದ ವಾಕ್ಯದಿಂದಲಾದರೂ ಜ್ಞಾನದಿಂದಲಾದರೂ ಅಲ್ಲ, ದೇವರ
೨ ಸಾಕ್ಷಿಯನ್ನು ನಿಮಗೆ ತಿಳ್ಳಿಸುವವನಾಗಿ ಬಂದೆನು. ಯಾಕಂದರೆ
ನಾನು ಪಿಲಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊ
ರ್ತು, ನಿಮ್ಮಲ್ಲಿ ಏನಾದರೂ ತಿಳ್ಳಿಯದಿರ ನಿರ್ಣಯಿಸಿ ಕೊಂ
3 ಡೆನು. ಮತ್ತು ನಾನು ಬಲಹೀನತ್ವದಲ್ಲಿಯೂ, ಭಯದಲ್ಲಿಯೂ,
೪ ಬಹಳ ನಡುಗುವಿಕೆಯಲ್ಲಿಯೂ ನಿಮ್ಮ ಹತ್ತರ ಇದ್ದೆನು. ಇದಲ್ಲ
೫ ದೆ ನಿಮ್ಮ ವಿಶ್ವಾಸವು ಮನುಷ್ಯ ಜ್ಞಾನದಲ್ಲಿ ಅಲ್ಲ, ದೇವರ ಬಲ
ದಲ್ಲಿ ಇರುವ ಹಾಗೆ, ನನ್ನ ವಾಕ್ಯವೂ ನನ್ನ ಪ್ರಸಂಗವೂ ಮನು
ಷ್ಯರ ಜ್ಞಾನದ ಇಚ್ಛಕದ ವಾಕ್ಯದಲ್ಲಿ ಅಲ್ಲ, ಆತ್ಮ ಬಲಗಳ ದೃ
ಷ್ಟಾಂತದಲ್ಲಿ ಇದ್ದವು.

೬ ಆದಕೆ ಸಂಪೂರ್ಣರಲ್ಲಿ ಜ್ಞಾನವನ್ನು ಹೇಳುತ್ತೇವೆ. ಈ ಲೋ
ಕದ ಜ್ಞಾನವನ್ನಾದರೂ, ಈ ಲೋಕದ ನಾಶವಾಗುವ ಪ್ರಭುಗಳ
೭ ಜ್ಞಾನವನ್ನಾದರೂ ಅಲ್ಲ, ಮರೆಯಾಗಿದ್ದಂಥ, ದೇವರು ಯುಗಗ
ಳ ಮುಂಚೆ ನಮ್ಮ ಮಹಿಮೆಗೆ ಮುಂಸೇವಿಸಿದಂಥ, ಮರ್ಮದಲ್ಲಿ
೮ ರುವ ದೇವರ ಜ್ಞಾನವನ್ನೇ ಹೇಳುತ್ತೇವೆ. ಇದನ್ನು ಈ ಲೋಕದ
ಪ್ರಭುಗಳಲ್ಲಿ ಯಾವನಾದರೂ ಅರಿಯಲಿಲ್ಲ. ಯಾಕಂದರೆ ಅವ
ರು ಅರಿತಿದ್ದರೆ, ಮಹಿಮೆಯ ಕರ್ತನನ್ನು ಪಿಲಬೆಗೆ ಹಾಕರು.
೯ ಆದರೆ ಬಕೆದಿರುವ ಪ್ರಕಾರ, ದೇವರು ತನ್ನನ್ನು ಪ್ರೀತಿ ಮಾಡುವ
ವರಿಗೆ ಸಿದ್ಧ ಮಾಡಿದವುಗಳನ್ನು ಕಣ್ಣು ನೋಡಲಿಲ್ಲ, ಕಿವಿ ಕೇಳಲಿ
೧೦ ಲ್ಲ, ಅವು ಮನುಷ್ಯನ ಹೃದಯದಲ್ಲಿ ಹೇರಲಿಲ್ಲ; ಆದರೆ ದೇವ
ರು ಅವುಗಳನ್ನು ತನ್ನ ಆತ್ಮದಿಂದ ನಮಗೆ ಪ್ರಕಟ ಮಾಡಿದ್ದಾನೆ.
ಯಾಕಂದರೆ, ಆತ್ಮವು ಎಲ್ಲವುಗಳನ್ನು ಶೋಧಿಸುತ್ತದೆ—ದೇವರ
ಅಗಾಧಗಳನ್ನು ಸಹ.

೧೧ ಹ್ಯಾಗಂದರೆ, ಮನುಷ್ಯನವುಗಳನ್ನು ಅವನಲ್ಲಿರುವ ಮನು
ಷ್ಯಾತ್ಮವೇ ಹೊರ್ತು, ಮನುಷ್ಯರಲ್ಲಿ ಯಾವನು ತಿಳ್ಳಿಯು
ತ್ತಾನೆ? ಹಾಗೆಯೇ ದೇವರವುಗಳನ್ನು ದೇವಾತ್ಮವೇ ಹೊರ್ತು,
೧೨ ಯಾವನಾದರೂ ತಿಳ್ಳಿಯನು. ಆದರೆ ನಾವು ದೇವರಿಂದ ನಮಗೆ
ದಯೆ ಮಾಡಲ್ಪಟ್ಟವುಗಳನ್ನು ತಿಳ್ಳಿಯುವ ಹಾಗೆ, ಲೋಕದ ಆ
೧೩ತ್ಮವನ್ನಲ್ಲ, ದೇವರಿಂದಾದ ಆತ್ಮವನ್ನು ಹೊಂದಿದ್ದೇವೆ. ಮತ್ತು
ಇವುಗಳನ್ನು ಮನುಷ್ಯನ ಜ್ಞಾನವು ಬೋಧಿಸಿದ ವಾಕ್ಯಗಳಿಂದ
ಲ್ಲ, ಪರಿಶುದ್ಧಾತ್ಮವು ಬೋಧಿಸಿದವುಗಳಿಂದಲೇ, ಆತ್ಮದವುಗಳ
೧೪ ನ್ನು ಆತ್ಮದವುಗಳಿಗೆ ಹೋಲಿಸಿ ಹೇಳುತ್ತೇವೆ. ಆದರೆ ಪ್ರಾಣ
ಭಾವದ ಮನುಷ್ಯನು ದೇವರ ಆತ್ಮದವುಗಳನ್ನು ಗ್ರಹಿಸನು;
ಯಾಕಂದರೆ ಅವನಿಗೆ ಹುಚ್ಚುತನವಾಗಿದೆ. ಮತ್ತು ಅವು ಆತ್ಮ
ದ ಪ್ರಕಾರ ವಿಚಾರಿಸಲ್ಪಡುವ ಕಾರಣ, ಅವುಗಳನ್ನು ಅರಿಯಲಾರ
೧೫ ನು. ಆದರೆ ಆತ್ಮಭಾವದವನು ಎಲ್ಲಾ ವಿಚಾರಿಸುತ್ತಾನೆ, ತಾನೇ
ಯಾರಿಂದಲೂ ವಿಚಾರಿಸಲ್ಪಡನು. ಯಾಕಂದರೆ ಅವನನ್ನು ಉ
ಪದೇಶಿಸುವ ಹಾಗೆ, ಕರ್ತನ ಮನಸ್ಸನ್ನು ಅರಿತವನ್ಯಾರು? ಆ
ದರೆ ನಮಗೆ ಕ್ರಿಸ್ತನ ಮನಸ್ಸು ಉಂಟು.

## ೩. ಸಂಧಿ.

೧ ಮತ್ತು ನಾನು, ಸಹೋದರರೇ, ನಿಮಗೆ ಆತ್ಮಭಾವದವರಿಗೆಂದು
ಮಾತಾಡಲಾರದೆ, ಮಾಂಸಭಾವದವರಿಗೆಂದು, ಕ್ರಿಸ್ತನಲ್ಲಿರುವ ಎಳೆ
೨ ಕೂಸುಗಳಿಗೆಂದು ಮಾತಾಡಿದೆನು. ಹಾಲು ನಿಮಗೆ ಕುಡಿಸಿದೆನು, ಆ
ಹಾರ ಕೊಡಲಿಲ್ಲ, ಯಾಕಂದರೆ ಆಗ ನಿಮಗೆ ಆಗದೆ ಇತ್ತು; ಮತ್ತು
3 ಈಗ ಇನ್ನೂ ಆಗದು; ಯಾಕಂದರೆ ಇನ್ನು ಮಾಂಸಭಾವದವರಾಗಿ
ದ್ದೀರಿ. ಹ್ಯಾಗಂದರೆ, ನಿಮ್ಮಲ್ಲಿ ಹೊಟ್ಟೇಕಿಚ್ಚೂ, ವಾಗ್ವಾದವೂ, ಭೇ
ದಗಳೂ ಉಂಟಾಗಿರಲಾಗಿ, ಮಾಂಸಭಾವದವರಾಗಿದ್ದೀರಲ್ಲವೋ?
ಮನುಷ್ಯ ರೀತಿಯಾಗಿ ನಡೆಯುತ್ತೀರಲ್ಲವೋ? ಹ್ಯಾಗಂದರೆ, ಒ
೪ ಬ್ಬನು, ನಾನು ಪೌಲನವನು; ಬೇರೊಬ್ಬನು, ನಾನು ಅಪೊಲ್ಲೋಸ
ನವನು ಎಂದು ಹೇಳುವಾಗ, ಮಾಂಸಭಾವದವರಾಗಿದ್ದೀರಲ್ಲವೋ?

೫ ಹಾಗಾದರೆ, ಕರ್ತನು ಒಬ್ಬೊಬ್ಬನಿಗೆ ಕೊಟ್ಟ ಹಾಗೆ ನೀವು
ವಿಶ್ವಾಸಿಸಿದ್ದಕ್ಕೆ ಕಾರಣವಾದ ಸೇವಕರಲ್ಲವೆ, ಪೌಲನು ಯಾ
ರು? ಅಪೊಲ್ಲೋಸನು ಯಾರು? ನಾನು ನೆಟ್ಟೆನು, ಅಪೊಲ್ಲೋ
೬ ಸನು ನೀರು ಹಾಕಿದನು; ಆದರೆ ದೇವರು ಬೆಳ್ಳಿಸಿದನು. ಆದದ
ರಿಂದ ನೆಡುವವನಾದರೂ, ನೀರು ಹಾಕುವವನಾದರೂ, ಏನೂ ಇ
೭ ಲ್ಲ; ಆದರೆ ಬೆಳ್ಳಿಸುವ ದೇವರೇ. ನೆಡುವವನೂ, ನೀರು ಹಾಕುವ
ವನೂ ಒಂದೇ; ಆದರೆ ಅವನವನು ಸ್ವಂತ ಕಷ್ಟದ ಪ್ರಕಾರ ಸ್ವಂ
೮ ತ ಕೂಲಿ ತಕ್ಕೊಳ್ಳುವನು. ಯಾಕಂದರೆ ನಾವು ದೇವರ ಜತೆಕೆ
ಲಸದವರಾಗಿದ್ದೇವೆ; ನೀವು ದೇವರ ಆರಂಬವೂ ದೇವರ ಕಟ್ಟುವಿ
೯ ಕೆಯೂ ಆಗಿದೀರಿ. ನನಗೆ ಕೊಡಲ್ಪಟ್ಟ ದೇವರ ಕೃಪೆಯ ಪ್ರ
ಕಾರ, ನಾನು ಬುದ್ಧಿಯುಳ್ಳ ಶಿಲ್ಪಿಯಾಗಿ ಅಸ್ತಿವಾರ ಹಾಕಿದ್ದೇ
ನೆ; ಮತ್ತೊಬ್ಬನು ಮೇಲೆ ಕಟ್ಟುತ್ತಾನೆ. ಆದರೆ ಒಬ್ಬೊಬ್ಬನು
೧೦ ಹ್ಯಾಗೆ ಮೇಲೆ ಕಟ್ಟುತ್ತಾನೋ, ನೋಡಿ ಕೊಳ್ಳಲಿ; ಯಾಕಂದರೆ
ಯೇಸು ಕ್ರಿಸ್ತನಾಗಿರುವ ಹಾಕಲ್ಪಟ್ಟ ಅಸ್ತಿವಾರವನ್ನಲ್ಲದೆ, ಮ
೧೧ ತ್ತೊಂದನ್ನು ಯಾವನೂ ಹಾಕಲಾರನು. ಮತ್ತು ಯಾವನಾದರೂ
ಈ ಅಸ್ತಿವಾರದ ಮೇಲೆ ಚಿನ್ನ, ಬೆಳ್ಳಿ, ಬೆಲೆಯುಳ್ಳ ಕಲ್ಲುಗಳನ್ನೂ,
ಕಟ್ಟಿಗೆ, ಹುಲ್ಲು, ಕೂಳೆಗಳನ್ನೂ ಕಟ್ಟಿದರೆ, ಅವನವನ ಕೆಲಸ ತೋ
೧೩ ರಲ್ಪಡುವದು. ಆ ದಿವಸವು ಅದನ್ನು ಪ್ರಕಟ ಮಾಕುವದು.
ಹ್ಯಾಗಂದರೆ, ಬೆಂಕಿಯಿಂದ ಪ್ರತ್ಯಕ್ಷವಾಗುವದು. ಮತ್ತು ಅವ
೧೪ ನವನ ಕೆಲಸ ಎಂಥಾದ್ದೋ, ಬೆಂಕಿ ತೋರಿಸುವದು. ಮೇಲೆ ಕ
೧೫ ಟ್ಟಿದ ಒಬ್ಬನ ಕೆಲಸ ನಿಂತರೆ, ಪ್ರತಿ ಫಲ ತಕ್ಕೊಳ್ಳುವನು. ಒಬ್ಬ
ನ ಕೆಲಸ ಸುಟ್ಟು ಹೋದರೆ, ನಷ್ಟ ಪಡುವನು; ತಾನೇ ರಕ್ಷಿಸಲ್ಪ
೧೬ ಡುವನು; ಆದರೆ ಬೆಂಕಿಯಿಂದಾದ ಹಾಗೆ. ನೀವು ದೇವರ ಮಂದಿರ
ವಾಗಿದ್ದೀರೆಂದೂ, ದೇವರ ಆತ್ಮವು ನಿಮ್ಮಲ್ಲಿ ವಾಸ ಮಾಡುತ್ತದೆಂ
೧೭ ದೂ ಅರಿಯರಾ? ಯಾವನಾದರೂ ದೇವರ ಮಂದಿರವನ್ನು ಕೆಡಿ
ಸಿದರೆ, ಅವನನ್ನು ದೇವರು ಕೆಡಿಸುವನು; ಯಾಕಂದರೆ ದೇವರ
ಮಂದಿರ ಪರಿಶುದ್ಧವಾದದ್ದು; ಆ ಮಂದಿರವು ನೀವೇ.

೧೮ ಯಾವನಾದರೂ ತನ್ನನ್ನು ವೋಸಗೊಳಿಸದೆ ಇರಲಿ. ಯಾ
ವನಾದರೂ ಈ ಲೋಕದಲ್ಲಿ ಜ್ಞಾನಿ ಎಂದು ನಿಮ್ಮಲ್ಲಿ ಕಾಣಿಸಿದ
೧೯ ರೆ, ಜ್ಞಾನಿಯಾಗುವ ಹಾಗೆ ಹುಚ್ಚನಾಗಲಿ. ಯಾಕಂದರೆ ಈ



ಲೋಕದ ಜ್ಞಾನವು ದೇವರ ಮುಂದೆ ಹುಚ್ಚುತನವಾಗಿದೆ. ಹ್ಯಾ
ಗಂದರೆ, ಜ್ಞಾನಿಗಳನ್ನು ಅವರ ತಂತ್ರದಲ್ಲಿಯೇ ಹಿಡಿಯುವನು;
೨೦ ಮತ್ತು, ಜ್ಞಾನಿಗಳ ಯೋಚನೆಗಳು ವ್ಯರ್ಥವಾಗಿವೆ ಎಂದು, ಕ
೨೧ ರ್ತನು ತಿಳ್ಳಿಯುತ್ತಾನೆ ಎಂಬದಾಗಿ ಬಕೆದಿದೆ. ಆದಕಾರಣ ಯಾ
೨೨ ವನಾದರೂ ಮನುಷ್ಯರಲ್ಲಿ ಹೆಚ್ಚಳ ಪಡದೆ ಇರಲಿ. ಯಾಕಂದರೆ
ಎಲ್ಲಾ ನಿಮ್ಮದು; ಪೌಲನಾಗಲಿ, ಅಪೊಲ್ಲೋಸನಾಗಲಿ, ಕೇಫನಾ
ಗಲಿ, ಲೋಕವಾಗಲಿ, ಜೀವವಾಗಲಿ, ಮರಣವಾಗಲಿ, ಇರುವವುಗ
೨೩ ಳಾಗಲಿ, ಬರುವವುಗಳಾಗಲಿ, ಎಲ್ಲಾ ನಿಮ್ಮದೇ. ನೀವು ಕ್ರಿಸ್ತನವರು,
ಕ್ರಿಸ್ತನೂ ದೇವರವನು.

## ೪. ಸಂಧಿ.

೧ ಕ್ರಿಸ್ತನ ಉಳ್ಳಿಗದವರೆಂದೂ, ದೇವರ ಮರ್ಮಗಳ ಉಗ್ರಾಣ
೨ ದವರೆಂದೂ, ಹೀಗೆ ಮನುಷ್ಯರು ನಮ್ಮನ್ನು ಎಣಿಸಲಿ. ಇದಲ್ಲ
ದೆ ಉಗ್ರಾಣದವರಲ್ಲಿ, ಒಬ್ಬೊಬ್ಬನು ನಂಬಿಕೆಯುಳ್ಳವನಾಗಿ
3 ರಬೇಕೆಂದು, ನೋಡುತ್ತಾರೆ. ಆದರೆ ನಿಮ್ಮಿಂದಲಾದರೂ ಮ
೪ನುಷ್ಯ ದಿವಸದಿಂದಲಾದರೂ ವಿಚಾರಿಸಲ್ಪಡುವದು ನನಗೆ ಬಹು
ಸ್ವಲ್ಪವಾಗಿದೆ. ಅದಲ್ಲದೆ ನನ್ನನ್ನು ನಾನೇ ವಿಚಾರಿಸಿ ಕೊಳ್ಳೆನು;
೫ ಯಾಕಂದರೆ ನನ್ನ ವಿಷಯ ನಾನೇನೂ ಅರಿಯೆ; ಆದಾಗ್ಯೂ
ಇದರಿಂದ ನಾನು ನೀತಿನಿರ್ಣಯ ಪಟ್ಟವನಲ್ಲ, ನನ್ನನ್ನು ವಿಚಾ
೬ ರಿಸುವವನು ಕರ್ತನೇ. ಆದಕಾರಣ, ಕರ್ತನು ಬರುವ ಮಟ್ಟಿ
ಗೂ, ಸಮಯಕ್ಕೆ ಮುಂಚೆ ಏನೂ ನಿರ್ಣಯಿಸ ಬೇಡಿರಿ. ಅ
ವನೇ ಅಂಧಕಾರದ ರಹಸ್ಯಗಳನ್ನು ಬೆಳ್ಳಕಿಗೆ ತಂದು, ಹೃದ
ಯಗಳ ಆಲೋಚನೆಗಳನ್ನು ಬೈಲು ಪಡಿಸುವನು; ಆಗಲೇ ಬ
ಬ್ಬೊಬ್ಬನಿಗೆ, ದೇವರಿಂದ ಹೊಗಳಿಕೆ ಉಂಟಾಗುವದು.

೭ ಮತ್ತು, ಸಹೋದರರೇ, ಒಬ್ಬನ ಮೇಲೊಬ್ಬನು ಮತ್ತೊ
ಬ್ಬನ ವಿಷಯ ಉಬ್ಬಿ ಕೊಳ್ಳದ ಹಾಗೆ, ಬಕೆದದ್ದಕ್ಕಿಂತ ಹೆ
ಚ್ಚಾಗಿ ಮನುಷ್ಯರನ್ನು ಎಣಿಸದಿರ, ನಮ್ಮಲ್ಲಿ ಕಲಿತು ಕೊಳ್ಳುವ
ಹಾಗೆ, ನಿಮಗೋಸ್ಕರ ಇವುಗಳನ್ನು ನನಗೂ ಅಪೊಲ್ಲೋಸನಿ
೮ಗೂ ಸಾಮ್ಯ ಮಾಡಿದ್ದೇನೆ. ಯಾಕಂದರೆ ನಿನ್ನನ್ನು ವಿಶೇಷ
ಮಾಡುವವನ್ಯಾರು? ಹೊಂದದ್ದು ನಿನಗೇನದೆ? ಆದರೆ ಹೊಂದಿ
ದ್ದರೆ, ಹೊಂದದೆ ಇದ್ದ ಹಾಗೆ ಹೆಚ್ಚಳ ಪಡುವದೇನು? ಈಗ ತೃ
ಪ್ತಿ ಪಟ್ಟಿದ್ದೀರಿ. ಈಗ ಐಶ್ವರ್ಯವಂತರಾದಿರಿ, ನಾವಿಲ್ಲದೆ ಧೊ
ರೆತನ ಮಾಡಿದಿರಿ. ಧೊರೆತನ ಮಾಡಿದರೆ, ಎಷ್ಟೋ ಒಳ್ಳೇದು!
ಆಗ ನಾವು ಸಹ ನಿಮ್ಮ ಸಂಗಡ ಧೊರೆತನ ಮಾಡುತ್ತಿರುವೆವು.
೯ ಯಾಕಂದರೆ ದೇವರು ಅಪೊಸ್ತಲರಾದ ನಮ್ಮನ್ನು ಮರಣಕ್ಕೆ
ಗುರಿಯಾದವರ ಪ್ರಕಾರ ಕಡೆಯವರಾಗಿ ತೋರ ಮಾಡಿದ್ದಾನೆಂ
ದೂ, ಲೋಕಕ್ಕೂ ದೂತರಿಗೂ ಮನುಷ್ಯರಿಗೂ ನೋಟ ಮಾ
೧೦ ಕಲ್ಪಟ್ಟಿದ್ದೇವೆಂದೂ, ನೆನಸುತ್ತೇವೆ. ನಾವು ಕ್ರಿಸ್ತನ ನಿಮಿತ್ತ ಹು
ಚ್ಚರು; ನೀವು ಕ್ರಿಸ್ತನಲ್ಲಿ ವಿವೇಕಿಗಳು; ನಾವು ಬಲಹೀನರು, ನೀವು
ಶಕ್ತರು. ನೀವು ಘನವುಳ್ಳವರು, ನಾವು ಮಾನ ಹೀನರು. ಇದೇ
೧೧ ಳ್ಳಿಗೆಯ ಮಟ್ಟಿಗೂ ಹಸಿವೆಯುಳ್ಳವರಾಗಿಯೂ, ದಾಹವುಳ್ಳ
ವರಾಗಿಯೂ, ಬೆತ್ತಲೆಯವರಾಗಿಯೂ, ಗುದ್ದಲ್ಪಡುವವರಾಗಿ
ಯೂ, ನೆಲೆಯಿಲ್ಲದವರಾಗಿಯೂ, ಸ್ವಂತ ಕೈಗಳಿಂದ ಕೆಲಸ
೧೨ ಮಾತ್ತಿ, ಕಷ್ಟ ಪಡುವವರಾಗಿಯೂ, ಇದ್ದೇವೆ. ನಿಂದೆ ಪಡುವವರಾ
ಗಿ, ಆಶೀರ್ವದಿಸುತ್ತೇವೆ; ಹಿಂಸೆ ಪಡುವವರಾಗಿ, ತಾಳ್ಳಿ ಕೊಳ್ಳುತ್ತೇ
೧೩ವೆ; ದೂಷಣೆ ಪಡುವವರಾಗಿ, ಬೇಡಿ ಕೊಳ್ಳುತ್ತೇವೆ; ಲೋಕದ
ಕಲ್ಮಷವಾಗಿಯೂ, ಎಲ್ಲಾವರ ಕಸವಾಗಿಯೂ ಈ ಕರಿಗೂ ಮಾ
೧೪ ಡಲ್ಪಟ್ಟಿದ್ದೇವೆ. ನಿಮ್ಮನ್ನು ನಾಚಿಕೆ ಪಡಿಸುವದಕ್ಕೆ ಇವುಗಳನ್ನು
ಬರೆಯದೆ, ನನ್ನ ಪ್ರಿಯ ಮಕ್ಕಳಿಗೆಂದು ಬುದ್ಧಿ ಹೇಳುತ್ತೇನೆ.
೧೫ ಯಾಕಂದರೆ ಕ್ರಿಸ್ತನಲ್ಲಿ ನಿಮಗೆ ಉಪಾಧ್ಯರು ಸಾವಿರಾರು ಇದ್ದ
ರೂ, ತಂದೆಗಳು ಅನೇಕರಿಲ್ಲ. ಹ್ಯಾಗಂದರೆ, ನಾನೇ ಸುವಾರ್ತೆ
ಯ ಮೂಲವಾಗಿ ಕ್ರಿಸ್ತ ಯೇಸುವಿನಿಂದ ನಿಮ್ಮನ್ನು ಪಡೆದೆನು
೧೬ ಆದಕಾರಣ ನನ್ನನ್ನು ಅನುಸರಿಸುವವರಾಗಿರಿಂದು, ನಿಮ್ಮನ್ನು
ಬೇಡಿ ಕೊಳ್ಳುತ್ತೇನೆ.

೧೭ ಇದರ ನಿಮಿತ್ತ ಕರ್ತನಲ್ಲಿ ನಂಬಿಕೆಯುಳ್ಳ ನನ್ನ ಪ್ರಿಯ
ಮಗನಾದ ತಿಮೊಥೆಯನನ್ನು ನಿಮ್ಮ ಬಳ್ಳಿಗೆ ಕಳುಹಿಸಿದ್ದೇನೆ. ಅ
ವನು ಎಲ್ಲೆಲ್ಲಿಯೂ, ಎಲ್ಲಾ ಸಭೆಗಳಲ್ಲಿಯೂ, ನಾನು ಬೋಧಿಸು
ವ ಪ್ರಕಾರವೇ ಕ್ರಿಸ್ತನಲ್ಲಿರುವ ನನ್ನ ಮಾರ್ಗಗಳನ್ನು ನಿಮಗೆ
೧೮ ಜ್ಞಾಪಕ ಮಾಡುವನು. ನಾನು ನಿಮ್ಮ ಬಳ್ಳಿಗೆ ಬರುವದಿಲ್ಲವೆಂದು,
೧೯ ಕೆಲವರು ಉಬ್ಬಿ ಕೊಂಡಿದ್ದಾರೆ. ಆದರೂ ಕರ್ತನ ಚಿತ್ತವಾದರೆ,
ಬೇಗ ನಿಮ್ಮ ಬಳ್ಳಿಗೆ ಬಂದು, ಉಬ್ಬಿ ಕೊಂಡವರ ವಾಕ್ಯವನ್ನಲ್ಲ,
೨೦ ಬಲವನ್ನೇ ತಿಳ್ಳಿಯುವೆನು. ಯಾಕಂದರೆ ದೇವರ ರಾಜ್ಯವು ವಾ
೨೧ ಕ್ಯದಲ್ಲಿ ಅಲ್ಲ, ಬಲದಲ್ಲಿಯೇ ಅದೆ. ಏನು ಬೇಕು? ಬೆತ್ತದಿಂದ
ನಿಮ್ಮ ಬಳ್ಳಿಗೆ ಬರಲೋ? ಪ್ರೀತಿಯಿಂದಲೂ ಸಾಧುವಾದ ಆತ್ಮದಿಂ
ದಲೂ ಬರಲೋ?

## ೫. ಸಂಧಿ.

೧ ನಿಮ್ಮಲ್ಲಿ ಜಾರತ್ವವದೆ ಎಂದು ಸುದ್ದಿ ಬಹಳ ಉಂಟು. ಏನಂದ
ರೆ, ಒಬ್ಬನು ತನ್ನ ತಂದೆಯ ಹೆಂಡತಿಯನ್ನು ಇಟ್ಟು ಕೊಳ್ಳು
ವದು. ಇಂಥ ಜಾರತ್ವಕ್ಕೆ ಜನಾಂಗಗಳಲ್ಲಿಯೂ ಹೆಸರು ಇಲ್ಲ.
೨ ಆದರೆ ನೀವು, ಇಂಥ ಕೆಲಸ ಮಾಡಿದವನು ನಿಮ್ಮಲ್ಲಿಂದ ತೆಗೆ
ಲ್ಪಡುವ ಹಾಗೆ, ಎದ್ದು ಮಾತ್ರ ದುಃಖ ಪಡದೆ, ಉಬ್ಬಿ ಕೊಂಡವ
3 ರಾಗಿದ್ದೀರಿ. ನಾನಾದರೆ, ಶರೀರದಿಂದ ದೂರವಾಗಿ, ಆತ್ಮದಿಂದ
ಸಮೀಪವಾಗಿ ಇದ್ದು, ಈಗಲೇ ಸಮೀಪವಾಗಿದ್ದ ಪ್ರಕಾರ, ಈ ಕೆ
೪ ಲಸ ಹಾಗೆ ಮಾಡಿದವನಿಗೆ ನ್ಯಾಯ ತೀರಿಸಿದ್ದೇನೆ. ನೀವೂ ನನ್ನ
ಆತ್ಮವೂ ನಮ್ಮ ಕರ್ತನಾದ ಯೇಸು ಕ್ರಿಸ್ತನ ಬಲದ ಸಂಗಡ
೫ ಕೂಡಿ ಬಂದಿರುವಾಗ, ಕರ್ತನಾದ ಯೇಸುವಿನ ದಿವಸದಲ್ಲಿ ಆತ್ಮ
ವು ರಕ್ಷಿಸಲ್ಪಡುವ ಹಾಗೆ, ಮಾಂಸದ ನಾಶಕ್ಕಾಗಿ ನಮ್ಮ ಕರ್ತನಾ
ದ ಯೇಸು ಕ್ರಿಸ್ತನ ಹೆಸರಿನಲ್ಲಿ ಇಂಥವನನ್ನು ಸೈತಾನನಿಗೆ ಒ
ಪ್ಪಿಸ ಬೇಕು.

೬ ನಿಮ್ಮ ಹೆಚ್ಚಳ ಒಳ್ಳೇದಲ್ಲ; ಸ್ವಲ್ಪ ಹುಳಿ ಮುದ್ದೆಯನ್ನೆ
3 ಲ್ಲಾ ಹುಳಿ ಮಾಡುವದೆಂದು ಅರಿಯರಾ? ಆದಕಾರಣ, ನೀವು ಹು
ಳಿ ಇಲ್ಲದವರಾಗಿರುವ ಪ್ರಕಾರ, ಹೊಸ ಮುದ್ದೆ ಆಗುವದಕ್ಕೆ ಹಳೆ
ಹುಳಿಯನ್ನುಳಿಸೆದು ಹಾಕಿರಿ. ಯಾಕಂದರೆ ಕ್ರಿಸ್ತನಾಗಿರುವ ನ
೮ ಮ್ಮ ಪಸ್ಕವು ನಮಗೋಸ್ಕರ ಕಡಿಯಲ್ಪಟ್ಟಿದೆ. ಆದದರಿಂದ
ಹಳೆ ಹುಳಿಯಿಂದಲಾದರೂ, ದುರ್ಮಾರ್ಗತನವೂ ಕೆಟ್ಟತನವೂ
ಎಂಬ ಹುಳಿಯಿಂದಲಾದರೂ ಅಲ್ಲ, ನಿರ್ಮಲವೂ ಸತ್ಯವೂ
ಎಂಬ ಹುಳಿಯಿಲ್ಲದವುಗಳಿಂದ ಹಬ್ಬವನ್ನು ಆಚರಿಸುವ.

೯ ಜಾರರ ಸಂಗಡ ಕೂಡಿ ಕೊಳ್ಳ ಬೇಡೆಂದು, ನಿನಗೆ ಪತ್ರಿಕೆ
೧೦ ಯಲ್ಲಿ ಬಕೆದಿದ್ದೇನೆ. ಆದರೆ ಪೂರ್ಣವಾಗಿ ಈ ಲೋಕದ ಜಾ

ರರ ಸಂಗಡಲಾದರೂ, ಕೋಳಿಗಳ ಸಂಗಡಲಾದರೂ, ಕೊಳ್ಳೆ
ಗಾರರ ಸಂಗಡಲಾದರೂ, ವಿಗ್ರಹಾರಾಧಕರ ಸಂಗಡಲಾದರೂ,
ಅಂತಲ್ಲ. ಹೀಗಿದ್ದರೆ, ನೀವು ಕೋಕಡಿಂದ ಹೊರಟು ಹೋಗ ಬೇ
೧೦ ಕಾಗುವದು. ಆದರೆ ಈಗ, ಸಹೋದರನೆಂದು ಕರೆಯಲ್ಪಡು
ವವನೊಬ್ಬನು ಜಾರನಾದರೂ, ಲೋಭಿಯಾದರೂ, ವಿಗ್ರಹಾರಾ
ಧಕನಾದರೂ, ಶೈಯುವವನಾದರೂ, ಮದ್ಯಪಾನಿಯಾದರೂ,
ಕೊಳ್ಳೆಗಾರನಾದರೂ, ಆಗಿದ್ದರೆ, ಕೂಡಿ ಕೊಳ್ಳಲೂ, ಇಂಥವ
ನ ಸಂಗಡ ಭೋಜನಲೂ, ಬೇಡಿರೆಂದು ನಿಮಗೆ ಬರೆದಿದ್ದೇನೆ.
೧೨ ಯಾಕಂದರೆ ಹೊರಗಿನವರಿಗೂ ನ್ಯಾಯ ತೀರಿಸುವದು ನನಗೇ
ನು? ಒಳಗಿನವರಿಗೆ ನೀವು ನ್ಯಾಯ ತೀರಿಸುತ್ತೀರಲ್ಲವೋ? ಹೊ
೧೩ ರಗಿನವರಿಗೆ ದೇವರು ನ್ಯಾಯ ತೀರಿಸುತ್ತಾನೆ. ಹಾಗಾದರೆ, ಆ
ದುರ್ಮಾರ್ಗನನ್ನು ನಿಮ್ಮೊಳಗಿಂದ ತಳ್ಳಿ ಬಿಡಿರಿ.

## ೬. ಸಂಧಿ.

೧ ಮತ್ತೊಬ್ಬನ ಮೇಲೆ ವ್ಯವಹಾರವಿದ್ದರೆ, ಪರಿಶುದ್ಧರ ಮುಂದೆ
ಅಲ್ಲ, ಅನೀತಿವಂತರ ಮುಂದೆ ವ್ಯಾಜ್ಯವಾಡುವದಕ್ಕೆ, ನಿಮ್ಮಲ್ಲಿ
೨ ಯಾವನಿಗಾದರೂ ಧೈರ್ಯ ಉಂಟೋ? ಪರಿಶುದ್ಧರೂ ಲೋಕ
ಕ್ಕೆ ನ್ಯಾಯ ತೀರಿಸುವರೆಂದು ಅರಿಯರಾ? ಹೀಗಿರಲಾಗಿ, ನಿ
ಮ್ಮುಂದ ಕೋಕಕ್ಕೆ ನ್ಯಾಯ ತೀರಿಸಲ್ಪಟ್ಟಿರೆ, ಬಹು ಅಲ್ಪವಾದ
3 ತೀರ್ಪುಗಳಿಗೆ ಅಯೋಗ್ಯರಾಗಿದ್ದೀರೋ? ದೂತರಿಗೆ ನ್ಯಾಯ
೪ ತೀರಿಸುವೆವೆಂದು ಅರಿಯರಾ? ಈ ಜೀವದವುಗಳನ್ನು ತೀರಿಸಲಾ
ಗದೋ? ಹೀಗಿರುವದರಿಂದ ಈ ಜೀವದ ವ್ಯಾಜ್ಯಗಳು ನಿಮಗೆ
ಇದ್ದರೆ, ಸಭೆಯಲ್ಲಿ ಅಸಡ್ಡೆ ಮಾಡಲ್ಪಟ್ಟವರನ್ನೇ ಕುಳ್ಳಿರಿಸಿರಿ.
೫ ನಿಮ್ಮನ್ನು ನಾಚಿಸುವದಕ್ಕೆ ಹೇಳುತ್ತೇನೆ. ಹಾಗೋ? ತನ್ನ ಸ
ಹೋದರರಲ್ಲಿ ನ್ಯಾಯ ತೀರಿಸ ಸಾಮರ್ಥ್ಯವುಳ್ಳ ಬುದ್ಧಿವಂತ
೬ ನು ನಿಮ್ಮಲ್ಲಿ ಒಬ್ಬನಾದರೂ ಇಲ್ಲವೋ! ಆದರೆ, ಸಹೋದರ
ನು ಸಹೋದರನ ಸಂಗಡ ಅವಿಶ್ವಾಸಿಗಳ ಮುಂದೆ ಸಹ, ವ್ಯಾ
೭ ಜ್ಯವಾಡುತ್ತಾನೆ. ಈಗ ಒಬ್ಬರ ಸಂಗಡಲೊಬ್ಬರಿಗೆ ವ್ಯಾಜ್ಯಗ
ಳು ಇರುವದು ನಿಮಗೆ ಶುದ್ಧ ತಪ್ಪಾಯಿತು. ಅದಕ್ಕಿಂತ ಅ
ನ್ಯಾಯ ಪಡುವದು ಬಳ್ಳೇದಲ್ಲವೋ? ಅದಕ್ಕಿಂತ ಅಪಹಾರ
೮ ಪಡುವದು ಬಳ್ಳೇದಲ್ಲವೋ? ಆದರೆ ನೀವೇ ಅನ್ಯಾಯ ಮಾಡು
ತ್ತೀರಿ, ಅಪಹರಿಸುತ್ತೀರಿ; ಸಹೋದರರಿಗೆ ಸಹ ಹೀಗೆ ಮಾಡು
೯ ತ್ತೀರಿ. ಏನು! ಅನ್ಯಾಯಸ್ಥರು ದೇವರ ರಾಜ್ಯವನ್ನು ಬಾಧ್ಯವಾ
ಗಿ ಹೊಂದುವದಿಲ್ಲವೆಂದು ಅರಿಯರಾ? ಮೋಸ ಹೋಗ ಬೇಡಿರಿ;
೧೦ ಜಾರರಾದರೂ, ವಿಗ್ರಹಾರಾಧಕರಾದರೂ, ವ್ಯಭಿಚಾರಿಗಳಾದರೂ,
ಪುರುಷ ಸಂಗಮ ಪಡುವವರಾದರೂ, ಮಾಡುವವರಾದರೂ, ಕ
ಳ್ಳರಾದರೂ, ಲೋಭಿಗಳಾದರೂ, ಮದ್ಯಪಾನಿಗಳಾದರೂ, ಶೈ
ಯುವವರಾದರೂ, ಕೊಳ್ಳೆಗಾರರಾದರೂ, ದೇವರ ರಾಜ್ಯವನ್ನು
೧೧ ಬಾಧ್ಯವಾಗಿ ಹೊಂದರು. ಮತ್ತು ಕೆಲವರು ಇಂಥವರಾಗಿದ್ದಿರಿ; ಆ
ದರೆ ತೊಳೆಯಲ್ಪಟ್ಟಿದ್ದೀರಿ; ಆದರೆ ಪರಿಶುದ್ಧ ಮಾಡಲ್ಪಟ್ಟಿದ್ದೀ
ರಿ; ಆದರೆ ನೀತಿನಿರ್ಣಯ ಪಟ್ಟಿದ್ದೀರಿ; ಕರ್ತನಾದ ಯೇಸುವಿನ
ನಾಮದಿಂದಲೂ ನಮ್ಮ ದೇವರ ಆತ್ಮದಿಂದಲೂ ತಾನೇ.

೧೨ ಎಲ್ಲಕ್ಕೂ ನನಗೆ ಅಧಿಕಾರ ಉಂಟು; ಆದರೆ ಎಲ್ಲಾ ಪ್ರಯೋ
ಜನವಾಗುವದಿಲ್ಲ. ಎಲ್ಲಕ್ಕೂ ನನಗೆ ಅಧಿಕಾರ ಉಂಟು; ಆದರೆ
೧೩ ನಾನು ಒಂದಕ್ಕಾದರೂ ಅಧೀನವಾಗೆನು. ಆಹಾರಗಳು ಕೊಟ್ಟಿಗೆ;
೧೪ ಹೊಟ್ಟೆಯೂ ಆಹಾರಗಳಿಗೆ. ಆದರೆ ದೇವರು ಅದನ್ನೂ ಅವು
ಗಳನ್ನೂ ಲಯ ಮಾಡುವನು. ಮತ್ತು ಶರೀರವು ಜಾರತ್ವಕ್ಕಲ್ಲ,
ಕರ್ತನಿಗೆ; ಮತ್ತು ಕರ್ತನು ಶರೀರಕ್ಕೆ. ಇದಲ್ಲದೆ ದೇವರು ಕ
ರ್ತನನ್ನು ಎಬ್ಬಿಸಿದನು; ನಮ್ಮನ್ನು ಸಹ ತನ್ನ ಬಲದಿಂದ ಎಬ್ಬಿ
ಸುವನು.

೧೫ ನಿಮ್ಮ ಶರೀರಗಳು ಕ್ರಿಸ್ತನ ಅಂಗಗಳಾಗಿವೆ ಎಂದು, ಅರಿಯ
ರಾ? ಹೀಗಿರಲಾಗಿ, ಕ್ರಿಸ್ತನ ಅಂಗಗಳನ್ನು ತೆಗೆದು ಕೊಂಡು,
೧೬ ಜಾರೆಯ ಅಂಗಗಳಾಗ ಮಾಡಬೇಕೋ? ಆಗದು. ಏನು! ಜಾರೆಯ
ಸಂಗಡ ಕೂಡುವವನು ಒಂದೇ ಶರೀರವಾಗಿದ್ದಾನೆಂದು, ಅರಿಯ
ರಾ? ಯಾಕಂದರೆ ಅವರಿಬ್ಬರು ಒಂದೇ ಮಾಂಸವಾಗಿರುವರೆಂ
೧೭ ದು ಹೇಳುತ್ತಾನೆ. ಆದರೆ ಕರ್ತನ ಸಂಗಡ ಕೂಡುವವನು ಒಂದೇ
ಆತ್ಮವಾಗಿದ್ದಾನೆ. ಜಾರತ್ವ ಬಿಟ್ಟು ಓಡಿ ಹೋಗಿರಿ. ಮನುಷ್ಯನು
ಮಾಡುವ ಎಲ್ಲಾ ಪಾಪವು ಶರೀರಕ್ಕೆ ಹೊರಗಾಗಿವೆ; ಆದರೆ ಜಾ
೧೮ ರತ್ವ ಮಾಡುವವನು ತನ್ನ ಶರೀರಕ್ಕೆ ಪಾಪ ಮಾಡುತ್ತಾನೆ. ಏನು!
ನಿಮ್ಮ ಶರೀರವು ದೇವರಿಂದುಂಟಾದ ನಿಮ್ಮೊಳಗಿರುವ ಪರಿಶುದ್ಧಾ
ತ್ಮದ ಮಂದಿರವಾಗಿದೆ ಎಂದೂ, ನೀವು ನಿಮ್ಮ ಸ್ವಂತವಾದವರಲ್ಲ
೧೯ ವೆಂದೂ, ಅರಿಯರಾ? ಯಾಕಂದರೆ ಬೆಲೆಯಿಂದ ಕೊಳ್ಳಲ್ಪಟ್ಟಿ
ದ್ದೀರಿ; ಅದಕಾರಣ, ದೇವರವುಗಳಾಗಿರುವ ನಿಮ್ಮ ಶರೀರದಿಂದ
ಲೂ ನಿಮ್ಮ ಆತ್ಮದಿಂದಲೂ ದೇವರನ್ನು ಮಹಿಮೆ ಪಡಿಸಿರಿ.

## ೭. ಸಂಧಿ.

೧ ಮತ್ತು ನೀವು ನನಗೆ ಬರೆದವುಗಳ ವಿಷಯವಾಗಿ, ಸ್ತ್ರೀಯ
ನ್ನು ಮುಟ್ಟದೆ ಇರುವದು ಮನುಷ್ಯನಿಗೆ ಒಳ್ಳೇದು. ಆದಾ
೨ ಗ್ಯೂ, ಜಾರತ್ವಗಳ ನಿಮಿತ್ತ ಒಬ್ಬೊಬ್ಬನಿಗೆ ಸ್ವಂತ ಹೆಂಡತಿ
3 ಯು ಇರಲಿ; ಒಬ್ಬೊಬ್ಬಳಿಗೆ ಸ್ವಂತ ಗಂಡನು ಇರಲಿ. ಹೆಂಡ
ತಿಗೆ ಗಂಡನು ತಕ್ಕ ಸ್ನೇಹವನ್ನು ಸಲ್ಲಿಸಲಿ; ಹಾಗೆಯೇ ಹೆಂಡತಿ
೪ ಯೂ ಗಂಡನಿಗೆ. ಹೆಂಡತಿಯು ತನ್ನ ಶರೀರಕ್ಕೆ ಸ್ವತಂತ್ರಳಲ್ಲ,
ಗಂಡನೇ. ಹಾಗೆಯೇ ಗಂಡನು ತನ್ನ ಶರೀರಕ್ಕೆ ಸ್ವತಂತ್ರನಲ್ಲ,
೫ ಹೆಂಡತಿಯೇ. ಉಪವಾಸ ಪ್ರಾರ್ಥನೆಗಳಿಗೋಸ್ಕರ ನಿಮಗೆ ಸಾ
ವಕಾಶವಾಗುವ ಹಾಗೆ, ಸ್ವಲ್ಪ ಕಾಲ ಬಿಡಬಿಡಿಕೆಯಿಂದತೇ
ಹೊರ್ತು, ಒಬ್ಬರಿಗೊಬ್ಬರು ಅಪಹಾರ ಮಾಡ ಬೇಡಿರಿ; ಮ
ತ್ತು ಶೈತಾನನು ನಿಮ್ಮ ಅಸಂಯಮದಿಂದ ನಿಮ್ಮನ್ನು ಶೋಧಿಸ
೬ ದ ಹಾಗೆ, ಶಿರಿಗಿ ಏಕವಾಗಿ ಕೂಡಿ ಬನ್ನಿ. ಆದರೆ ಇದನ್ನು ಆ
ಲೋಚನೆಯ ಪ್ರಕಾರ ಹೇಳುತ್ತೇನೆ, ಆಜ್ಞೆಯ ಪ್ರಕಾರವಲ್ಲ.
೭ ಯಾಕಂದರೆ, ಎಲ್ಲಾ ಮನುಷ್ಯರು ನನ್ನ ಹಾಗೆಯೇ ಇರ ಇ
ಚ್ಛೈಸುತ್ತೇನೆ. ಆದರೆ ಒಬ್ಬೊಬ್ಬನು ಸ್ವಂತ ವರವನ್ನು ದೇ
ವರಿಂದ ಹೊಂದಿದ್ದಾನೆ; ಒಬ್ಬನು ಹೀಗೆ, ಒಬ್ಬನು ಹಾಗೆ.

೮ ಆದರೆ, ಮದುವೆ ಇಲ್ಲದವರಿಗೂ ವಿಧವೆಗಳಿಗೂ, ನನ್ನ ಹಾ
೯ ಗೆಯೇ ಇರುವದು ಅವರಿಗೆ ಒಳ್ಳೇದೆಂದು, ಹೇಳುತ್ತೇನೆ. ಆದರೆ
ಸಂಯತರಲ್ಲದಿದ್ದರೆ, ಮದುವೆ ಮಾಡಿ ಕೊಳ್ಳಲಿ; ಯಾಕಂದರೆ
ಕಾಪ ಪಡುವದಕ್ಕಿಂತ ಮದುವೆ ಮಾಡಿ ಕೊಳ್ಳುವದು ಉತ್ತಮ.
೧೦ ಮತ್ತು ಮದುವೆ ಮಾಡಿ ಕೊಂಡಿರುವವರಿಗೆ ನಾನಲ್ಲ, ಕರ್ತನು
ಆಜ್ಞಾಪಿಸುವದೇನಂದರೆ—ಹೆಂಡತಿ ಗಂಡನನ್ನು ಅಗಲದೆ ಇರಲಿ.
೧೧ ಅಗಲಿದರೂ, ಮದುವೆ ಇಲ್ಲದೆ ಇರಲಿ; ಇಲ್ಲವೆ ಗಂಡನ ಸಂಗಡ
ಅನ್ಯೋನ್ಯವಾಗಲಿ; ಮತ್ತು ಗಂಡನು ಹೆಂಡತಿಯನ್ನು ಬಿಡದೆ



೧೨ ಇರಲಿ. ಮಿಕ್ಕಾದವರಿಗೆ ಕರ್ತನಲ್ಲ, ನಾನೇ ಹೇಳುವದೇನಂದರೆ,
ಒಬ್ಬ ಸಹೋದರನಿಗೆ ಅವಿಶ್ವಾಸಿಯಾದ ಹೆಂಡತಿ ಇರಲಾಗಿ,
ಅವಳು ಅವನ ಸಂಗಡ ಒಗತನ ಮಾಡ ಮನಸ್ಸಾಗಿದ್ದರೆ, ಅವ
೧೩ ನನ್ನು ಬಿಡದೆ ಇರಲಿ. ಮತ್ತು ಹೆಂಡತಿಗೆ ಅವಿಶ್ವಾಸಿಯಾದ ಗಂ
ಡನು ಇರಲಾಗಿ, ಅವನು ಅವಳ ಸಂಗಡ ಒಗತನ ಮಾಡ ಮನ
೧೪ ಸ್ಸಾಗಿದ್ದರೆ, ಅವನನ್ನು ಬಿಡದೆ ಇರಲಿ. ಯಾಕಂದರೆ ಅವಿಶ್ವಾಸಿ
ಯಾದ ಗಂಡನು ಹೆಂಡತಿಯಿಂದ ಪರಿಶುದ್ಧ ಮಾಡಲ್ಪಟ್ಟಿದ್ದಾನೆ;
ಮತ್ತು ಅವಿಶ್ವಾಸಿಯಾದ ಹೆಂಡತಿಯು ಗಂಡನಿಂದ ಪರಿಶುದ್ಧ
ಮಾಡಲ್ಪಟ್ಟಿದ್ದಾಳೆ; ಇಲ್ಲದಿದ್ದರೆ, ನಿಮ್ಮ ಮಕ್ಕಳು ಅಪವಿತ್ರರಾ
೧೫ ಗಿರುವರು; ಆದರೆ ಈಗ ಪರಿಶುದ್ಧರಾಗಿದ್ದಾರೆ. ಆದಾಗ್ಯೂ ಅವಿ
ಶ್ವಾಸಿಯಾದವನು ಅಗಲಿದರೆ, ಅಗಲಲಿ. ಸಹೋದರನಾದರೂ
ಸಹೋದರಿಯಾದರೂ ಅಂಥವುಗಳಲ್ಲಿ ಬಂಧಿಸಲ್ಪಟ್ಟಿವರಲ್ಲ; ಆ
೧೬ ದರೆ ಸಮಾಧಾನದಲ್ಲಿ ದೇವರು ನಮ್ಮನ್ನು ಕರೆದಿದ್ದಾನೆ. ಯಾಕಂ
ದರೆ, ಹೆಂಡತಿಯೇ, ಗಂಡನನ್ನು ರಕ್ಷಿಸುವಿ ಏನೋ, ಹ್ಯಾಗೆ ಬಲ್ಲಿ?
ಇಲ್ಲವೆ, ಗಂಡನೇ, ಹೆಂಡತಿಯನ್ನು ರಕ್ಷಿಸುವಿ ಏನೋ, ಹ್ಯಾಗೆ
೧೭ ಬಲ್ಲಿ?

ಆದರೆ ದೇವರು ಒಬ್ಬೊಬ್ಬನಿಗೆ ಹ್ಯಾಗೆ ಪಾಲಿಟ್ಟಿನೋ,
ಕರ್ತನು ಹ್ಯಾಗೆ ಒಬ್ಬೊಬ್ಬನನ್ನು ಕರೆದನೋ, ಹಾಗೆಯೇ
ನಡೆಯಲಿ; ಮತ್ತು ಹೀಗೆ ಎಲ್ಲಾ ಸಭೆಗಳಲ್ಲಿ ನೇಮಿಸುತ್ತೇನೆ.
೧೮ ಒಬ್ಬನು ಪರಿಛೇದನೆಯುಳ್ಳವನಾಗಿ ಕರೆಯಲ್ಪಟ್ಟನೋ? ಪರಿಛೇ
ದನೆ ಬಿಡದೆ ಇರಲಿ. ಒಬ್ಬನು ಅಪರಿಛೇದನೆಯಲ್ಲಿ ಕರೆಯಲ್ಪಟ್ಟ
೧೯ ನೋ? ಪರಿಛೇದನೆ ಹೊಂದದೆ ಇರಲಿ. ಪರಿಛೇದನೆ ಏನೂ ಇಲ್ಲ,
ಅಪರಿಛೇದನೆಯೂ ಏನೂ ಇಲ್ಲ, ಆದರೆ ದೇವರ ಕಟ್ಟಳೆಗಳನ್ನು
೨೦ ಕೈಕೊಳ್ಳುವದೇ. ಒಬ್ಬೊಬ್ಬನು ಯಾವ ಕರೆಯುವಿಕೆಯಲ್ಲಿ
೨೧ ಕರೆಯಲ್ಪಟ್ಟನೋ, ಅದರಲ್ಲಿಯೇ ಇರಲಿ. ದಾಸನಾಗಿ ಕರೆಯ
ಲ್ಪಟ್ಟೆಯೋ? ಚಿಂತೆ ಪಡ ಬೇಡ. ಆದಾಗ್ಯೂ ಸ್ವತಂತ್ರನಾಗ
೨೨ ಬಹುದಾದರೆ, ಅದೇ ಉತ್ತಮವೆಂದು, ಬಳಸಿಕೋ. ಯಾಕಂದರೆ
ದಾಸನಾಗಿ ಕರ್ತನಿಂದ ಕರೆಯಲ್ಪಟ್ಟವನು ಕರ್ತನ ಸ್ವತಂತ್ರ
ನಾಗಿದ್ದಾನೆ; ಅದೇ ಪ್ರಕಾರ ಸ್ವತಂತ್ರನಾಗಿ ಕರೆಯಲ್ಪಟ್ಟವನು
೨೩ ಕ್ರಿಸ್ತನ ದಾಸನಾಗಿದ್ದಾನೆ. ಬೆಲೆಯಿಂದ ಕೊಳ್ಳಲ್ಪಟ್ಟಿದ್ದೀರಿ; ಮ
ನುಷ್ಯರ ದಾಸರಾಗ ಬೇಡಿರಿ. ಸಹೋದರರೇ, ಒಬ್ಬೊಬ್ಬನು
ಯಾವದರಲ್ಲಿ ಕರೆಯಲ್ಪಟ್ಟನೋ, ಅದರಲ್ಲಿಯೇ ದೇವರ ಸಂ
ಗಡ ಇರಲಿ.

೨೪ ಮತ್ತು ಕನ್ಯಿಕೆಯರನ್ನು ಕುರಿತು ಕರ್ತನಿಂದ ಅಪ್ಪಣೆ ಹೊಂ
ದಲಿಲ್ಲ; ಆದರೆ ನಂಬಿಕೆಯುಳ್ಳವನಾಗಿರ ಕರ್ತನಿಂದ ಕರುಣೆ
೨೫ ಯನ್ನು ಹೊಂದಿದವನಾಗಿ, ಆಲೋಚನೆ ಹೇಳುತ್ತೇನೆ. ಆದ
ಕಾರಣ, ಈಗಿನ ಇಕ್ಕಟ್ಟಿಗೋಸ್ಕರ ಇದು ಒಳ್ಳೇದಾಗಿದೆ ಎಂ
ದು, ನೆನಸುತ್ತೇನೆ; ಏನಂದರೆ, ಹಾಗೆಯೇ ಇರುವದು ಮನು
೨೬ ಷ್ಯನಿಗೆ ಒಳ್ಳೇದು. ಹೆಂಡತಿಗೆ ಬಂಧಿಸಲ್ಪಟ್ಟಿದ್ದೀಯೋ? ಬಿ
ಡುಗಡೆಯನ್ನು ಹುಡುಕ ಬೇಡ. ಹೆಂಡತಿಯಿಂದ ಬಿಡುಗಡೆಯಾ
೨೭ ಗಿದ್ದೀಯೋ? ಹೆಂಡತಿಯನ್ನು ಹುಡುಕ ಬೇಡ. ಆದಾಗ್ಯೂ
ಮದುವೆ ಮಾಡಿ ಕೊಂಡರೆ, ನಿನಗೆ ಪಾಪವಿಲ್ಲ; ಮತ್ತು ಕನ್ಯಿಕೆ
ಯು ಮದುವೆ ಮಾಡಿ ಕೊಂಡರೆ, ಅವಳಿಗೆ ಪಾಪವಿಲ್ಲ; ಆದರೆ ಇಂ
ಥವರಿಗೆ ಮಾಂಸದಲ್ಲಿ ಉಪದ್ರವಾಗುವದು; ಆದರೆ ನಾನು ನಿಮ್ಮ
೨೮ ನ್ನು ಕನಿಕರಿಸುತ್ತೇನೆ. ಆದರೆ, ಸಹೋದರರೇ, ಇದನ್ನು ಹೇಳು
ತ್ತೇನೆ, ಏನಂದರೆ—ಸಮಯವು ಅತಕವಾಗಿದೆ; ಇನ್ನು ಮೇಲೆ
೩೦ ಹೆಂಡತಿಯುಳ್ಳವರು ಇಲ್ಲದವರಾಗಿಯೂ, ಅಳುವವರು ಅಳದ
ವರ ಹಾಗೆಯೂ, ಸಂತೋಷ ಪಡುವವರು ಸಂತೋಷ ಪಡದ
ವರ ಹಾಗೆಯೂ, ಕೊಂಡು ಕೊಳ್ಳುವವರು ಉಂಟಾದವರಲ್ಲದ
೩೧ ಹಾಗೆಯೂ, ಈ ಲೋಕವನ್ನು ಅನುಭವಿಸುವವರು ದುರನುಭವ
ಮಾಡದವರ ಹಾಗೆಯೂ ಇರಲಿ; ಯಾಕಂದರೆ ಈ ಲೋಕದ
೩೨ ಆಕಾರವು ಜರಿಗಿ ಹೋಗುವದು. ಆದರೆ ನೀವು ಚಿಂತೆ ಇಲ್ಲದವ
ರಾಗಿರ ಇಚ್ಛೈಸುತ್ತೇನೆ. ಮದುವೆ ಇಲ್ಲದವನು ಕರ್ತನನ್ನು
ಹ್ಯಾಗೆ ಮೆಚ್ಚಿಸುವೆನೆಂದು, ಕರ್ತನವುಗಳನ್ನು ಚಿಂತಿಸುತ್ತಾನೆ.
೩೩ ಮದುವೆಯಾದವನು ಹೆಂಡತಿಯನ್ನು ಹ್ಯಾಗೆ ಮೆಚ್ಚಿಸುವನೆಂದು
೩೪ ಲೋಕದವುಗಳನ್ನು ಚಿಂತಿಸುತ್ತಾನೆ. ಹೆಂಡತಿಗೂ ಕನ್ಯಿಕೆಗೂ ಹೆ
ಚ್ಚು ಕಡಿಮೆ ಉಂಟು. ಮದುವೆ ಇಲ್ಲದವಳು ಶರೀರದಲ್ಲಿಯೂ
ಆತ್ಮದಲ್ಲಿಯೂ ಪರಿಶುದ್ಧಳಾಗಿರುವ ಹಾಗೆ, ಕರ್ತನವುಗಳನ್ನು
೩೫ ಚಿಂತಿಸುತ್ತಾಳೆ. ಮದುವೆಯಾದವಳು ಗಂಡನನ್ನು ಹ್ಯಾಗೆ ಮೆ
ಚ್ಚಿಸುವಳೆಂದು, ಲೋಕದವುಗಳನ್ನು ಚಿಂತಿಸುತ್ತಾಳೆ. ನಿಮ್ಮ
ಸ್ವಂತ ಪ್ರಯೋಜನಕ್ಕೆ ಇದನ್ನು ಹೇಳುತ್ತೇನೆ; ನಿಮಗೆ ಉ
ರುಳೊಡ್ಡುವದಕ್ಕಲ್ಲ, ಆದರೆ ಕರ್ತನ ವಿಷಯವಾದ ಯೋಗ್ಯ
ತೆಯೂ ಚಪಲವಿಲ್ಲದ ಜಾಗ್ರತೆಯೂ ಇವುಗಳಿಗೋಸ್ಕರವೇ.
೩೬ ಆದರೆ ಒಬ್ಬನು ತನ್ನ ಕನ್ಯಿಕೆಯನ್ನು ಕುರಿತು ಹೆಚ್ಚು ಚ್ಯಾಯ
ವಾಗುವದು ಅಯುಕ್ತವೆಂದು ನೆನಸಿದರೆ, ಮತ್ತು ಹಾಗೆ ಆಗ
ಬೇಕಾದರೆ, ಮನಸ್ಸು ಬಂದ ಹಾಗೆ ಮಾಡಲಿ; ಪಾಪ ಮಾಡನು;
೩೭ ಅವರು ಮದುವೆ ಮಾಡಿ ಕೊಳ್ಳಲಿ. ಆದರೆ ತನ್ನ ಹೃದಯದ
ಲ್ಲಿ ದೃಢವಾಗಿದ್ದು, ಅವಸರವಿಲ್ಲದೆ, ತನ್ನ ಚಿತ್ತಕ್ಕೆ ಸ್ವತಂತ್ರ
ನಾಗಿದ್ದು, ತನ್ನ ಕನ್ಯಿಕೆಯನ್ನು ಕೊಡದೆ ಇರುವೆನೆಂದು, ತನ್ನ
ಹೃದಯದಲ್ಲಿ ನಿರ್ಣಯಿಸಿ ಕೊಂಡಿರುವವನು ಚನ್ನಾಗಿ ಮಾ
೩೮ ಡುತ್ತಾನೆ. ಹೀಗಿರಲಾಗಿ, ಮದುವೆ ಮಾಡಿ ಕೊಡುವವನು ಚನ್ನಾ
ಗಿ ಮಾಡುತ್ತಾನೆ. ಆದರೆ ಮದುವೆ ಮಾಡಿ ಕೊಡದವನು ಮತ್ತು
ಚನ್ನಾಗಿ ಮಾಡುತ್ತಾನೆ.

೩೯ ಹೆಂಡತಿಯು ತನ್ನ ಗಂಡನು ಬದುಕುವದ್ದು ಕಾಲ ನ್ಯಾಯ
ದಿಂದ ಬಂಧಿಸಲ್ಪಟ್ಟಿದ್ದಾಳೆ. ಆವಳ ಗಂಡನು ಸತ್ತಿದ್ದರೆ, ಬೇಕಾದ
ವನನ್ನು ಮದುವೆ ಮಾಡಿ ಕೊಳ್ಳ ಸ್ವತಂತ್ರಳಾಗಿದ್ದಾಳೆ; ಕರ್ತ
೪೦ ನಲ್ಲಿ ಮಾತ್ರ ಆಗಲಿ. ಆದರೆ ಅವಳು ಹಾಗೆ ಇರುತ್ತಿದ್ದರೆ, ನನ್ನ
ಆಲೋಚನೆಯ ಪ್ರಕಾರ, ಅಧಿಕ ಭಾಗ್ಯವಂತಳಾಗಿದ್ದಾಳೆ. ಮತ್ತು
ನಾನು ಸಹ ದೇವರ ಆತ್ಮವನ್ನು ಹೊಂದಿದ್ದೇನೆಂದು ನೆನಸುತ್ತೇನೆ.

## ೮. ಸಂಧಿ.

೧ ಇದಲ್ಲದೆ ವಿಗ್ರಹ ಬಲಿಗಳನ್ನು, ಕುರಿತು ಎಲ್ಲರು ತಿಳುವಿಕೆಯು
ಳ್ಳವರಾಗಿದ್ದೇವೆಂದು ಬಲ್ಲೆವು. ತಿಳುವಿಕೆಯು ಉಬ್ಬಿಸುತ್ತದೆ,
೨ ಆದರೆ ಪ್ರೀತಿಯು ಆತ್ಮವೃದ್ಧಿ ಮಾಡುತ್ತದೆ. ಮತ್ತು ಒಬ್ಬನು
ಏನಾದರೂ ತಿಳಿಯುತ್ತೇನೆಂದು ನೆನೆಸಿದರೆ, ತಿಳಿಯ ತಕ್ಕ ಹಾ
3 ಗೆ ಇನ್ನೂ ಏನೂ ಅರಿಯನು. ಆದರೆ ದೇವರನ್ನು ಒಬ್ಬನು
೪ ಪ್ರೀತಿ ಮಾಡಿದರೆ, ಇವನು ಅವನಿಂದ ತಿಳಿಯಲ್ಪಟ್ಟಿದ್ದಾನೆ. ಆದ
ಕಾರಣ ವಿಗ್ರಹ ಬಲಿಗಳ ಉಣ್ಣುವದನ್ನು ಕುರಿತು, ವಿಗ್ರಹವು ಲೋ
ಕದಲ್ಲಿ ಏನೂ ಇಲ್ಲವೆಂದೂ, ಒಬ್ಬನೇ ಹೊರ್ತು ಬೇರೆ ದೇವ
ರು ಇಲ್ಲವೆಂದೂ, ಬಲ್ಲೆವು. ಯಾಕಂದರೆ ಆಕಾಶದಲ್ಯಾದರೂ
೫ ಇಲ್ಲವೆಂದೂ, ಬಲ್ಲೆವು. ಯಾಕಂದರೆ ಅನೇಕ ದೇವರುಗಳು

ಭೂಮಿಯ ಮೇಲಾದರೂ ದೇವರುಗಳೆಂದು ಕರೆಯಲ್ಪಡುವ
ವುಗಳು ಇದ್ದರೂ—ಅನೇಕ ದೇವರುಗಳೂ ಅನೇಕ ಕರ್ತರೂ
೬ ಇದ್ದಾರಲ್ಲ?—ಆದರೆ ನಮಗೆ ತಂದೆಯಾದ ಒಬ್ಬನೇ ದೇವರು.
ಅವನಿಂದ ಸಮಸ್ತವು; ಮತ್ತು ನಾವು ಅವನಿಗೋಸ್ಕರವು. ಇದ
ಲ್ಲದೆ ಯೇಸು ಕ್ರಿಸ್ತನಾದ ಒಬ್ಬನೇ ಕರ್ತನು. ಅವನ ಮು
೭ ಖಾಂತರ ಸಮಸ್ತವು; ಮತ್ತು ನಾವು ಅವನ ಮುಖಾಂತರವು. ಆ
ದರೆ ಆ ತಿಳುವಿಕೆಯು ಎಲ್ಲರಲ್ಲಿ ಇಲ್ಲ; ಕೆಲವರು ವಿಗ್ರಹದ ಭಾವ
ನೆಯಿಂದ ಈವರಿಗೂ ವಿಗ್ರಹ ಬಲಿ ಎಂದು ಉಣ್ಣುತ್ತಾತೆ; ಹೀಗೆ
ಅವರ ಮನಸ್ಸಾಕ್ಷಿಯು ಬಲಹೀನವಾಗುದ್ದು, ಮಲಿನವಾಗುತ್ತದೆ.
೮ ಆದರೆ ಆಹಾರವು ನಮ್ಮನ್ನು ದೇವರ ಮುಂದೆ ಪ್ರತಿಷ್ಠೆ ಮಾಡು
ವದಿಲ್ಲ; ಯಾಕಂದರೆ ಉಂಡರೆ, ನಮಗೆ ಹೆಚ್ಚು ಇಲ್ಲ; ಉಣ್ಣದಿ
ದ್ದರೆ, ಕಡಿಮೆ ಇಲ್ಲ.

೯ ಆದರೆ ನಿಮ್ಮ ಅಧಿಕಾರವು ಒಂದು ವೇಳೆ ಬಲಹೀನರಿಗೆ ಎಡ
೧೦ ತಡೆಯಾಗದ ಹಾಗೆ, ನೋಡಿ ಕೊಳ್ಳಿರಿ. ಯಾಕಂದರೆ ತಿಳುವಿ
ಕೆಯುಳ್ಳ ನೀನು ವಿಗ್ರಹ ಸ್ಥಾವದಲ್ಲಿ ಪಂಕ್ತಿಯಲ್ಲಿರುವದನ್ನು ಒ
ಬ್ಬನು ನೋಡಿದರೆ, ಬಲಹೀನನಾದಂಥ ಅವನ ಮನಸ್ಸಾಕ್ಷಿಯು
ವಿಗ್ರಹ ಬಲಿಯನ್ನು ಉಣ್ಣುವದಕ್ಕೆ ಧೈರ್ಯವಾಗುವದಿಲ್ಲವೋ?
೧೧ ಮತ್ತು ಯಾವನಿಗೋಸ್ಕರ ಕ್ರಿಸ್ತನು ಸತ್ತನೋ, ಆ ಬಲಹೀನ
೧೨ ಸಹೋದರನು ನಿನ್ನ ತಿಳುವಿಕೆಯ ನಿಮಿತ್ತ ನಾಶವಾಗಲೋ? ಆ
ದರೆ ಹೀಗೆಯೇ ಸಹೋದರರ ಮೇಲೆ ಪಾಪ ಮಾಡಿ, ಅವರ ಬ
ಲಹೀನವಾದ ಮನಸ್ಸಾಕ್ಷಿಯನ್ನು ನೋಯಿಸಿ, ಕ್ರಿಸ್ತನ ಮೇಲೆ
೧೩ ಪಾಪ ಮಾಡುತ್ತೀರಿ. ಆದದರಿಂದ ಆಹಾರವು ನನ್ನ ಸಹೋದರ
ನನ್ನು ಆಟಂಕಿಸಿದರೆ, ನನ್ನ ಸಹೋದರನನ್ನು ಆಟಂಕಿಸದ ಹಾ
ಗೆ, ನಾನು ಎಂದೆಂದಿಗೂ ಬಾಡು ಉಣ್ಣುವದಿಲ್ಲ.

## ೯. ಸಂಧಿ.

೧ ನಾನು ಅಪೊಸ್ತಲನಲ್ಲವೋ? ಸ್ವತಂತ್ರನಲ್ಲವೋ? ನಮ್ಮ ಕ
ರ್ತನಾದ ಯೇಸು ಕ್ರಿಸ್ತನನ್ನು ಕಂಡವನಲ್ಲವೋ? ಕರ್ತನಲ್ಲಿ
ನನ್ನ ಕೆಲಸವು ನೀವಲ್ಲವೋ? ಬೇರೊಬ್ಬರಿಗೆ ಅಪೊಸ್ತಲನಲ್ಲದಿ
೨ ದ್ದರೆ, ನಿಮಗಾದರೂ ಇದ್ದೇನೆ. ಯಾಕಂದರೆ ನೀವೇ ಕರ್ತನಲ್ಲಿ
೩ ನನ್ನ ಅಪೊಸ್ತಲತನದ ಮುದ್ರೆಯಾಗಿದ್ದೀರಿ. ನನ್ನನ್ನು ವಿಚಾರಿ
೪ ಸುವವರಿಗೆ ನನ್ನ ಉತ್ತರವು ಇದೇ—ಉಣ್ಣಲೂ ಕುಡಿಯಲೂ ನ
೫ ಮಗೆ ಅಧಿಕಾರವಿಲ್ಲವೋ? ಸಹೋದರಿಯಾದ ಹೆಂಡತಿಯನ್ನು
ಕರೆ ಕೊಂಡು ಹೋಗುವದಕ್ಕೆ, ಮಿಕ್ಕಾದ ಅಪೊಸ್ತಲರೂ ಕರ್ತ
ನ ಸಹೋದರರೂ, ಕೇಫನೂ, ಇವರ ಹಾಗೆ ನಮಗೆ ಅಧಿಕಾರವಿ
ಲ್ಲವೋ?

೬ ಇಲ್ಲವೆ ಕೆಲಸ ಮಾಡದಿರ ನನಗೂ ಬಾರ್ನಬನಿಗೂ ಮಾತ್ರ
೭ ಅಧಿಕಾರವಿಲ್ಲವೋ? ಎಂದಾದರೂ ಸ್ವಂತ ವೆಚ್ಚದಿಂದ ದಂಡು
ಸೇವೆ ಮಾಡುವವನ್ಯಾರು? ದ್ರಾಕ್ಷೇ ತೋಟ ನೆಟ್ಟು, ಅದರ ಫಲದಲ್ಲಿ
ತಿನ್ನದವನ್ಯಾರು? ಇಲ್ಲವೆ ಮಂದೆ ಮೇಯಿಸಿ, ಮಂದೆಯ ಹಾಲಿ
೮ ನಲ್ಲಿ ಉಣ್ಣದವನ್ಯಾರು? ಮನುಷ್ಯನ ಪ್ರಕಾರ ಇವುಗಳನ್ನು ಹೇ
ಳುತ್ತೇನೋ? ಇಲ್ಲವೆ ನ್ಯಾಯಪ್ರಮಾಣವು ಸಹ ಇವುಗಳನ್ನು
೯ ಹೇಳುತ್ತದಲ್ಲವೋ? ಯಾಕಂದರೆ ಮೋಶೆಯ ನ್ಯಾಯಪ್ರಮಾ
ಣದಲ್ಲಿ, ಕಣ ತುಳಿಯುವ ಎತ್ತಿನ ಬಾಯಿ ಕಟ್ಟ ಬೇಡೆಂದು ಬ
೧೦ ರೆದದೆ. ಎತ್ತುಗಳಿಗೋಸ್ಕರ ದೇವರು ಚಿಂತೆ ಪಡುತ್ತಾತೋ? ಇ
ಲ್ಲವೆ ನಮಗೋಸ್ಕರ ಪೂರ್ಣವಾಗಿ ಹೇಳುತ್ತಾತೋ? ಹೌದು,
ನಮಗೋಸ್ಕರ ಬರೆಯಲ್ಪಟ್ಟಿತು; ಯಾಕಂದರೆ ಉಳುವವನು
ನಿರೀಕ್ಷೆಯಾಗಿ ಉಳ ತಕ್ಕದ್ದು; ಮತ್ತು ಕಣ ತುಳಿಸುವವನು ತನ್ನ
ನಿರೀಕ್ಷೆಯ ಪಾಲು ಹೊಂದುವ ನಿರೀಕ್ಷೆಯಲ್ಲಿ ತುಳಿಸ ತಕ್ಕದ್ದು.
೧೧ ನಾವು ನಿಮಗೆ ಆತ್ಮದವುಗಳನ್ನು ಬಿತ್ತಿದ್ದರೆ, ನಾವು ನಿಮ್ಮ ಮಾಂ
೧೨ ಸದವುಗಳನ್ನು ಕೊಯಿದು ಕೊಳ್ಳುವದು ದೊಡ್ಡದೋ? ಬೇರೊ
ಬ್ಬರು ನಿಮ್ಮ ಮೇಲಿರುವ ಅಧಿಕಾರದಲ್ಲಿ ಪಾಲುಗಾರರಾಗಿದ್ದರೆ,
ಹೆಚ್ಚಾಗಿ ನಾವಲ್ಲವೋ? ಆದರೆ ಈ ಅಧಿಕಾರವನ್ನು ಬಳಸಿ ಕೊ
ಳ್ಳಲಿಲ್ಲ. ಆದರೆ ಕ್ರಿಸ್ತನ ಸುವಾರ್ತೆಗೆ ಏನೂ ಅಡ್ಡಿ ಹಾಕದ ಹಾಗೆ,
೧೩ ಎಲ್ಲಾ ತಾಳ್ಮೆ ಕೊಳ್ಳುತ್ತೇವೆ. ದೇವಾಲಯದ ಕೆಲಸಗಳನ್ನು ನಡಿಸು
ವವರು ದೇವಾಲಯದಿಂದ ಉಣ್ಣುತ್ತಾರೆಂದೂ, ಬಲಿಪೀಠದ ಬಳಿ
ಯಲ್ಲಿ ಕಾದು ಕೊಳ್ಳುವವರು ಬಲಿಪೀಠದ ಸಂಗಡ ಪಾಲುಗಾರರಾ
೧೪ ಗಿದ್ದಾರೆಂದೂ, ಅರಿಯರಾ? ಹಾಗೆಯೇ ಕರ್ತನು ಸುವಾರ್ತೆ
ಹೇಳುವವರಿಗೆ ಸುವಾರ್ತೆಯಿಂದ ಬದುಕ ನೇಮಿಸಿದ್ದಾನೆ.

೧೫ ಆದರೆ ನಾನು ಇವುಗಳಲ್ಲಿ ಒಂದನ್ನೂ ಬಳಸಿ ಕೊಳ್ಳಲಿಲ್ಲ;
ಮತ್ತು ಹಾಗೆ ನನಗೆ ಆಗ ಬೇಕೆಂದು, ಇವುಗಳನ್ನು ಬರೆಯಲಿಲ್ಲ.
ಯಾಕಂದರೆ ಯಾವನಾದರೂ ನನ್ನ ಹೆಚ್ಚಳವನ್ನು ಹೀನ ಮಾ
ಡುವದಕ್ಕಿಂತ ಸಾಯುವದು ನನಗೆ ಬಹು ಒಳ್ಳೇದು. ಯಾಕಂದ
೧೬ ರೆ ಸುವಾರ್ತೆ ಪ್ರಸಂಗಿಸಿದರೆ, ನನಗೆ ಹೆಚ್ಚಳವಿಲ್ಲ. ಹ್ಯಾಗಂದರೆ
ಅದು ನನ್ನ ಮೇಲೆ ಬಿದ್ದ ಭಾರ; ಮತ್ತು ಸುವಾರ್ತೆ ಪ್ರಸಂಗಿಸ
ದಿದ್ದರೆ, ನನಗೆ ಅಯ್ಯೋ! ಯಾಕಂದರೆ ಇದನ್ನು ಮನಸ್ಸುಳ್ಳ
೧೭ ವನಾಗಿ ಮಾಡಿದರೆ, ನನಗೆ ಬಹುಮಾನ ಉಂಟು; ಮನಸ್ಸಿಲ್ಲ
ದವನಾದರೆ, ಮನವಾರ್ತೆ ನನಗೆ ಒಪ್ಪಿಸಲ್ಪಟ್ಟಿದೆ. ಹಾಗಾದರೆ
ನನಗೆ ಬಹುಮಾನವೇನು? ಸುವಾರ್ತೆ ಪ್ರಸಂಗಿಸುವಾಗ, ಸುವಾ
ರ್ತೆಯಲ್ಲಿರುವ ನನ್ನ ಅಧಿಕಾರವನ್ನು ದುರನುಭವ ಮಾಡದ
೧೮ ಹಾಗೆ, ಕ್ರಿಸ್ತನ ಸುವಾರ್ತೆಯನ್ನು ವೆಚ್ಚವಿಲ್ಲದೆ ತಂದಿಡುವದೇ.
ಯಾಕಂದರೆ ಎಲ್ಲರ ವಿಷಯ ಸ್ವತಂತ್ರನಾಗಿದ್ದು, ಇನ್ನೂ ಅ
ನೇಕರನ್ನು ಸಂಪಾದಿಸುವದಕ್ಕೆ, ಎಲ್ಲರಿಗೆ ನನ್ನನ್ನು ದಾಸನಾಗ
೧೯ ಮಾಡಿ ಕೊಂಡಿದ್ದೇನೆ. ಮತ್ತು ಯೆಹೂದ್ಯರನ್ನು ಸಂಪಾದಿಸುವ
ದಕ್ಕೆ, ಯೆಹೂದ್ಯರಿಗೆ ಯೆಹೂದ್ಯನ ಹಾಗೆಯೂ, ನ್ಯಾಯಪ್ರ
ಮಾಣಾಧೀನರನ್ನು ಸಂಪಾದಿಸುವದಕ್ಕೆ, ನ್ಯಾಯಪ್ರಮಾಣಾ
ಧೀನರಿಗೆ ನ್ಯಾಯಪ್ರಮಾಣಾಧೀನನ ಹಾಗೆಯೂ, ನ್ಯಾಯಪ್ರ
೨೦ ಮಾಣವಿಲ್ಲದವರನ್ನು ಸಂಪಾದಿಸುವದಕ್ಕೆ, ನ್ಯಾಯಪ್ರಮಾಣ
ವಿಲ್ಲದವರಿಗೆ ನ್ಯಾಯಪ್ರಮಾಣವಿಲ್ಲದವನ ಹಾಗೆಯೂ, ಆದೆನು.
ಆದರೆ ದೇವರಿಗೆ ನ್ಯಾಯಪ್ರಮಾಣವಿಲ್ಲದವನಾಗಿರದೆ, ಕ್ರಿಸ್ತನಿಗೆ
೨೧ ನ್ಯಾಯಪ್ರಮಾಣಾಧೀನನಾಗಿದ್ದೇನೆ. ಬಲಹೀನರನ್ನು ಸಂಪಾದಿ
ಸುವದಕ್ಕೆ, ಬಲಹೀನರಿಗೆ ಬಲಹೀನನ ಹಾಗೆ ಆದೆನು; ಹ್ಯಾಗಾದ
೨೩ ರೂ ಕೆಲವರನ್ನು ರಕ್ಷಿಸುವದಕ್ಕೆ, ಎಲ್ಲರಿಗೆ ಎಲ್ಲಾ ಆದೆನು. ಮತ್ತು
ಅವರಲ್ಲಿ ಜತೆ ಪಾಲುಗಾರನಾಗುವ ಹಾಗೆ, ಇದನ್ನು ಸುವಾರ್ತೆ
೨೪ ಗೋಸ್ಕರ ಮಾಡುತ್ತೇನೆ.

ಓಟದ ರಂಗದಲ್ಲಿ ಓಡುವವರು ಎಲ್ಲರು ಓಡುತ್ತಾರೆ, ಆದರೆ
ಒಬ್ಬನು ಬಹುಮಾನ ತಕ್ಕೊಳ್ಳುತ್ತಾನೆಂದು, ಅರಿಯರಾ? ಹಿಡಿ
ದು ಕೊಳ್ಳುವ ಹಾಗೆಯೇ ಓಡಿರಿ.

೨೫ ಮತ್ತು ಜಟ್ಟಿಗಳೆಲ್ಲರು ಎಲ್ಲವುಗಳಲ್ಲಿ ಮಿತಿಯಾಗಿದ್ದಾರೆ. ಅ
ವರು ಲಯವಾಗುವ ಕಿರೀಟವನ್ನು ತಕ್ಕೊಳ್ಳುವ ಹಾಗೆ, ನಾವೇ



೨೬ ನಿರ್ಲಯವಾದದ್ದನ್ನು. ಆದದರಿಂದ ನಾನು ಹಾಗೆಯೇ ಓಡುತ್ತೇ
ನೆ, ನಿಶ್ಚಯವಿಲ್ಲದ ಹಾಗಲ್ಲ; ಹಾಗೆಯೇ ಗುದ್ದಾಡುತ್ತೇನೆ, ಭೂ
೨೭ ಳಿಯನ್ನು ಬಡಿಯುವ ಹಾಗಲ್ಲ. ಆದರೆ ಒಂದು ವೇಳೆ ಬೇರೊ
ಬ್ಬರಿಗೆ ಸಾರಿದ ಮೇಲೆ ನಾನೇ ಅಗದವನಾಗಿ ಹೋಗದ ಹಾ
ಗೆ, ನನ್ನ ಶರೀರವನ್ನು ಕುಟ್ಟಿ, ಕೆಳಗೆ ಮಾಡುತ್ತೇನೆ.

## ೧೦. ಸಂಧಿ.

೧ ಇದಲ್ಲದೆ, ಸಹೋದರರೇ, ನೀವು ಇದನ್ನು ಅರಿಯದಿರ, ನ
ನಗೆ ಮನಸ್ಸಿಲ್ಲ—ಏನಂದರೆ, ನಮ್ಮ ಪಿತೃಗಳೆಲ್ಲರು ಮೇಘದ
೨ ಕೆಳಗೆ ಇದ್ದರು; ಎಲ್ಲರು ಸಮುದ್ರವನ್ನು ಹಾದು ಹೋದರು; ಎ
ಲ್ಲರು ಮೋಶೆಗಾಗಿ ಮೇಘದಲ್ಲಿಯೂ ಸಮುದ್ರದಲ್ಲಿಯೂ
೩ ಸ್ನಾನ ಹೊಂದಿದರು; ಎಲ್ಲರು ಒಂದೇ ಆತ್ಮಭಾವದ ಆಹಾರವ
೪ ನ್ನು ಉಂಡರು; ಎಲ್ಲರು ಒಂದೇ ಆತ್ಮಭಾವದ ಪಾನವನ್ನು ಕುಡಿ
ದರು; ಹ್ಯಾಗಂದರೆ, ಹಿಂಬಾಲಿಸಿದ ಆತ್ಮಭಾವದ ಬಂಡೆಯಿಂದ
ಕುಡಿದರು. ಆ ಬಂಡೆಯು ಕ್ರಿಸ್ತನೇ.

೫ ಆದರೆ ಅವರಲ್ಲಿ ಬಹು ಜನರಿಗೆ ದೇವರು ಮೆಚ್ಚಿ ಕೊಳ್ಳಲಿಲ್ಲ;
೬ ಹ್ಯಾಗಂದರೆ, ಅರಣ್ಯದಲ್ಲಿ ಕೆಡವಿ ಹಾಕಲ್ಪಟ್ಟರು. ಆದರೆ ಅವ
ರು ಸಹ ಆಶಿಸಿದ ಪ್ರಕಾರ, ನಾವು ಕೆಟ್ಟವುಗಳನ್ನು ಆಶಿಸದೆ ಇರುವ
೭ ಹಾಗೆ, ಇವುಗಳು ನಮಗೆ ಮುಂಗುರುತುಗಳಾದವು. ಮತ್ತು ಜನ
ರು ಉಣ್ಣಲೂ ಕುಡಿಯಲೂ ಕೂತು, ಆಡುವದಕ್ಕೆ ಎದ್ದರೆಂದು,
ಬರೆದಿರುವ ಪ್ರಕಾರ, ಅವರಲ್ಲಿ ಕೆಲವರ ಹಾಗೆ ವಿಗ್ರಹಾರಾಧಕರಾಗ
೮ ಬೇಡಿರಿ. ಮತ್ತು ಅವರಲ್ಲಿ ಕೆಲವರು ಜಾರತ್ವ ಮಾಡಿ, ಒಂದೇ ದಿ
ವಸದಲ್ಲಿ ಇಪ್ಪತ್ತು ಮೂರು ಸಾವಿರ ಮಂದಿ ಬಿದ್ದ ಹಾಗೆ, ಜಾರ
೯ ತ್ವ ಮಾಡದೆ ಇರುವ. ಮತ್ತು ಅವರಲ್ಲಿ ಕೆಲವರು ಶೋಧಿಸಿ, ಸ
ರ್ಪಗಳಿಂದ ನಾಶವಾದ ಹಾಗೆ, ಕ್ರಿಸ್ತನನ್ನು ಶೋಧಿಸದೆ ಇರುವ.
೧೦ ಮತ್ತು ಅವರಲ್ಲಿ ಕೆಲವರು ಗುಣಗುಟ್ಟಿ, ಸಂಹಾರಿಯಿಂದ ನಾಶವಾ
೧೧ ದ ಹಾಗೆ, ಗುಣಗುಟ್ಟ ಬೇಡಿರಿ. ಇವುಗಳೆಲ್ಲಾ ಮುಂಗುರುತುಗ
ಳಾಗಿ ಅವರಿಗೆ ಸಂಭವಿಸಿ, ಯುಗಗಳ ಅಂತ್ಯಗಳಲ್ಲಿ ಸೇರಿದ ನ
೧೨ ಮ್ಮ ಬೋಧನೆಗೋಸ್ಕರ ಬರೆಯಲ್ಪಟ್ಟವು. ಆದಕಾರಣ ತಾನು
ನಿಲ್ಲುತ್ತೇನೆಂದು ನೆನಸುವವನು, ಬೀಳದ ಹಾಗೆ ನೋಡಿ ಕೊಳ್ಳಲಿ.
೧೩ ಮನುಷ್ಯರಿಗೆ ಆಗುವ ಶೋಧನೆ ಅಲ್ಲದೆ, ಮತ್ಯಾವದು ನಿ
ಮ್ಮನ್ನು ಹಿಡಿಯಲಿಲ್ಲ; ಮತ್ತು ದೇವರು ನಂಬಿಕೆಯುಳ್ಳವನು; ಅ
ವನು ನಿಮ್ಮ ಬಲಕ್ಕಿಂತ ಹೆಚ್ಚಾಗಿ ನಿಮ್ಮನ್ನು ಶೋಧಿಸಲ್ಪಡ ಗೊ
ಡಿಸುವದಿಲ್ಲ; ಆದರೆ ನೀವು ಸಹಿಸ ಕೂಡುವ ಹಾಗೆ, ಶೋಧನೆಯ
೧೪ ಸಂಗಡ, ತಪ್ಪಿಸಿ ಕೊಳ್ಳುವ ಮಾರ್ಗವನ್ನು ಮಾಡುವನು. ಆದದ
ರಿಂದ, ನನ್ನ ಪ್ರಿಯರೇ, ವಿಗ್ರಹಾರಾಧನೆಯನ್ನು ಬಿಟ್ಟು, ಓಡಿ
ಹೋಗಿರಿ.

೧೫ ಬುದ್ಧಿವಂತರಿಗೆಂದು ಹೇಳುತ್ತೇನೆ; ನಾನು ಹೇಳುವದನ್ನು ನೀ
ವು ವಿಚಾರಿಸಿ ಕೊಳ್ಳಿರಿ. ನಾವು ಆಶೀರ್ವದಿಸುವ ಆಶೀರ್ವಾದದ
೧೬ ಪಾತ್ರೆಯು ಕ್ರಿಸ್ತನ ರಕ್ತದ ಅಸ್ಯೋನ್ಯವಲ್ಲವೋ? ನಾವು ಮು
ರಿಯುವ ಕೊಟ್ಟಿಯು ಕ್ರಿಸ್ತನ ಶರೀರದ ಅಸ್ಯೋನ್ಯವಲ್ಲವೋ?
ಯಾಕಂದರೆ ಅನೇಕರಾದ ನಾವು ಒಂದೇ ಕೊಟ್ಟಿಯೂ, ಒಂದೇ
೧೭ ಶರೀರವೂ ಆಗಿದ್ದೇವೆ. ಯಾಕಂದರೆ ಎಲ್ಲರು ಆ ಒಂದೇ ಕೊಟ್ಟಿ
ಯಲ್ಲಿ ಪಾಲುಗಾರರಾಗಿದ್ದೇವೆ. ಮಾಂಸದ ಪ್ರಕಾರವಾದ ಇಸ್ರ
ಯೇಲನ್ನು ನೋಡಿರಿ; ಬಲಿಗಳನ್ನು ಉಣ್ಣುವವರು ಬಲಿಪೀಠದ
೧೮ ಪಾಲುಗಾರರಾಗಿದ್ದಾರಲ್ಲವೋ? ಹಾಗಾದರೆ, ಏನು ಹೇಳುತ್ತೇನೆ?
ವಿಗ್ರಹವು ಏನಾದರೂ ಇರುತ್ತದೆಂದೂ, ಇಲ್ಲದೆ ವಿಗ್ರಹ ಬಲಿಯು
೧೯ ಏನಾದರೂ ಇರುತ್ತದೆಂದೂ, ಹೇಳುತ್ತೇನೋ? ಅದರೆ ಜನಾಂ
ಗಗಳು ಕಡಿಯುವಂಥವುಗಳನ್ನು ದೇವರಿಗಲ್ಲ, ದೆವ್ವಗಳಿಗೆ ಕಡಿ
ಯುತ್ತಾರೆಂದು, ಹೇಳುತ್ತೇನೆ. ಆದರೆ ನೀವು ದೆವ್ವಗಳ ಸಂಗ
೨೦ ಡ ಪಾಲುಗಾರರಾಗಿರ, ನನಗೆ ಮನಸ್ಸಿಲ್ಲ. ಕರ್ತನ ಪಾತ್ರೆಯ
ಲ್ಲಿಯೂ ದೆವ್ವಗಳ ಪಾತ್ರೆಯಲ್ಲಿಯೂ ಕುಡಿಯಲಾರಿರಿ. ಕರ್ತ
ನ ಮೇಜಿನಲ್ಲಿಯೂ ದೆವ್ವಗಳ ಮೇಜಿನಲ್ಲಿಯೂ ಪಾಲುಗಾರರಾಗಿ
೨೧ ರಲಾರಿರಿ. ಕರ್ತನಿಗೆ ಕೋಪ ಹುಟ್ಟಿಸಲೋ? ಅವನಿಗಂತ ಶಕ್ತರಾ
೨೩ ಗಿದ್ದೇವೋ? ಎಲ್ಲಕ್ಕೂ ನನಗೆ ಅಧಿಕಾರ ಉಂಟು, ಆದರೆ ಎಲ್ಲಾ
ಪ್ರಯೋಜನವಾಗುವದಿಲ್ಲ; ಎಲ್ಲಕ್ಕೂ ನನಗೆ ಅಧಿಕಾರ ಉಂಟು,
೨೪ ಆದರೆ ಎಲ್ಲಾ ಆತ್ಮವೃದ್ಧಿ ಮಾಡುವದಿಲ್ಲ. ಯಾವನಾದರೂ ತ
ನ್ನವದನ್ನಲ್ಲ; ಒಬ್ಬೊಬ್ಬನು ಬೇರೊಬ್ಬನದನ್ನು ಹುಡುಕಲಿ.

೨೫ ಕಟಿಗರ ಕೇರಿಯಲ್ಲಿ ಮಾರುವದನ್ನೆಲ್ಲಾ, ಮನಸ್ಸಾಕ್ಷಿಯ ನಿಮಿ
೨೬ ತ್ತ ಏನೂ ವಿಚಾರಿಸದೆ, ಉಣ್ಣಿರಿ. ಯಾಕಂದರೆ ಭೂಮಿಯೂ,
೨೭ ಅದರ ಪರಿಪೂರ್ಣತೆಯೂ ಕರ್ತನವೇ. ಅವಿಶ್ವಾಸಿಗಳಲ್ಲಿ ಒ
ಬ್ಬನು ನಿಮ್ಮನ್ನು ಕರೆಯುವಾಗ, ಹೋಗ ಮನಸ್ಸಾಗಿದ್ದರೆ, ನಿ
ಮ್ಮ ಮುಂದೆ ಇಟ್ಟದ್ದನ್ನೆಲ್ಲಾ, ಮನಸ್ಸಾಕ್ಷಿಯ ನಿಮಿತ್ತ ಏನೂ ವಿ
೨೮ ಚಾರಿಸದೆ, ಉಣ್ಣಿರಿ. ಆದರೆ ಒಬ್ಬನು ನಿಮಗೆ, ಇದು ವಿಗ್ರಹ ಬಲಿ
ಎಂದು ಹೇಳಿದರೆ, ತಿಳಿಸಿದ ಆ ಮನುಷ್ಯನ ನಿಮಿತ್ತವಾಗಿಯೂ
ಮನಸ್ಸಾಕ್ಷಿಯ ನಿಮಿತ್ತವಾಗಿಯೂ ಉಣ್ಣ ಬೇಡಿರಿ. ಯಾಕಂದ
೨೯ ರೆ ಭೂಮಿಯೂ, ಅದರ ಪರಿಪೂರ್ಣತೆಯೂ ಕರ್ತನವೇ. ಆದ
ರೆ ಸ್ವಂತ ಮನಸ್ಸಾಕ್ಷಿಯನ್ನು ಕುರಿತಲ್ಲ, ಬೇರೊಬ್ಬನದನ್ನು
ಕುರಿತು ಹೇಳುತ್ತೇನೆ. ಯಾಕಂದರೆ ನನ್ನ ಸ್ವತಂತ್ರವು ಬೇರೆ
೩೦ ಮನಸ್ಸಾಕ್ಷಿಯಿಂದ ವಿಚಾರಿಸಲ್ಪಡುವದೇನು? ಮತ್ತು, ನಾನು ಕೃ
ತಜ್ಞತೆಯಲ್ಲಿ ಪಾಲುಗಾರನಾದರೆ, ನಾನು ಯಾತರ ನಿಮಿತ್ತ ಸ್ತೋತ್ರ
ಮಾಡುತ್ತೇನೋ, ಅದಕ್ಕೋಸ್ಕರ ದೂಷಿಸಲ್ಪಡುವದೇನು?
೩೧ ಹಾಗಾದರೆ, ಉಂಡರೂ, ಕುಡಿದರೂ, ಏನು ಮಾಡಿದರೂ, ಎಲ್ಲಾ
೩೨ ದೇವರ ಮಹಿಮೆಗಾಗಿ ಮಾಡಿರಿ. ಯೆಹೂದ್ಯರಿಗೂ, ಗ್ರೀಕರಿಗೂ,
೩೩ ದೇವರ ಸಭೆಗೂ ಆಟಂಕವಿಲ್ಲದವರಾಗಿರಿ. ಹೀಗೆ ನಾನು ಸಹ ಸ್ವಂ
ತ ಪ್ರಯೋಜನವನ್ನಲ್ಲ, ಅನೇಕರದನ್ನು—ಅವರು ರಕ್ಷಿಸಲ್ಪಡು
ವ ಹಾಗೆ—ಹುಡುಕಿ, ಎಲ್ಲರನ್ನು ಎಲ್ಲ ವುಗಳಲ್ಲಿ ಮೆಚ್ಚಿಸುತ್ತೇನೆ.

## ೧೧. ಸಂಧಿ.

೧ ನಾನು ಸಹ ಕ್ರಿಸ್ತನನ್ನು ಅನುಸರಿಸುವ ಪ್ರಕಾರ, ನನ್ನನ್ನು
ಅನುಸರಿಸಿರಿ.

೨ ಈಗ, ಸಹೋದರರೇ, ನೀವು ನನ್ನವುಗಳನ್ನೆಲ್ಲಾ ನೆನವು
ಮಾಡಿ ಕೊಳ್ಳುತ್ತೀರೆಂದೂ, ನಾನು ನಿಮಗೆ ಒಪ್ಪಿಸಿದ ಮೇರೆಗೆ
ಸಂಪ್ರದಾಯಗಳನ್ನು ಕೈ ಕೊಳ್ಳುತ್ತೀರೆಂದೂ, ನಿಮ್ಮನ್ನು ಹೊ
೩ ಗಳುತ್ತೇನೆ. ಆದರೆ ಪ್ರತಿ ಪುರುಷನ ತಲೆಯು ಕ್ರಿಸ್ತನೂ; ಸ್ತ್ರೀ
ಯ ತಲೆಯು ಪುರುಷನೂ; ಕ್ರಿಸ್ತನ ತಲೆಯು ದೇವರೂ, ಎಂ
ದು ನೀವು ತಿಳಿಯ ಇಚ್ಛೈಸುತ್ತೇನೆ. ತಲೆ ಮುಚ್ಚಿ ಕೊಂಡು, ಪ್ರಾ
೪ ರ್ಥನೆಯಾದರೂ ಪ್ರವಾದನೆಯಾದರೂ ಮಾಡುವ ಪ್ರತಿ ಪುರು
ಷನು ತನ್ನ ತಲೆಯನ್ನು ಅವಮಾನ ಮಾಡುತ್ತಾನೆ. ಆದರೆ ತಲೆ
೫ ಮುಸುಕಿಲ್ಲದೆ, ಪ್ರಾರ್ಥನೆಯಾದರೂ ಪ್ರವಾದನೆಯಾದರೂ

ಮಾಡುವ ಪ್ರತಿ ಸ್ತ್ರೀಯು ತನ್ನ ತಲೆಯನ್ನು ಅವಮಾನ ಮಾಡು
ತ್ತಾಳೆ; ಯಾಕಂದರೆ ಅದು ಅವಳು ಬೋಳಿಸಲ್ಪಟ್ಟಿ ಹಾಗೆಯೇ
೬ ಇರುವದು. ಯಾಕಂದರೆ ಸ್ತ್ರೀಯು ಮುಸುಕು ಹಾಕದಿದ್ದರೆ,
೭ ಮತ್ತು ಕತ್ತರಿಸಿ ಕೊಳ್ಳಲಿ. ಆದರೆ ಕತ್ತರಿಸಿ ಕೊಳ್ಳುವದಾದರೂ,
ಬೋಳಿಸಿ ಕೊಳ್ಳುವದಾದರೂ ಸ್ತ್ರೀಗೆ ನಾಚಿಕೆಯಾಗಿದ್ದರೆ, ಮು
ಸುಕು ಹಾಕಿ ಕೊಳ್ಳಲಿ. ಹ್ಯಾಗಂದರೆ ದೇವರ ಹೊಲಿಕೆಯೂ
ಮಹಿಮೆಯೂ ಉಂಟಾಗಿರುವ ಪುರುಷನಿಗೆ ತಲೆ ಮುಚ್ಚಿ ಕೊ
ಳ್ಳುವದು ಅಗತ್ಯವಿಲ್ಲ. ಆದರೆ ಸ್ತ್ರೀಯು ಪುರುಷನ ಮಹಿಮೆ
೮ ಯಾಗಿದ್ದಾಳೆ. ಯಾಕಂದರೆ ಪುರುಷನು ಸ್ತ್ರೀಯಿಂದಲ್ಲ; ಸ್ತ್ರೀ
೯ ಯು ಪುರುಷನಿಂದಲೇ. ಮತ್ತು ಪುರುಷನು ಸ್ತ್ರೀಗೋಸ್ಕರ ನಿ
೧೦ರ್ಮಿಸಲ್ಪಡಲಿಲ್ಲ, ಸ್ತ್ರೀಯು ಪುರುಷನಿಗೋಸ್ಕರವೇ. ಇದ
ಕ್ಕೋಸ್ಕರ ಸ್ತ್ರೀಗೆ ದೂತರ ನಿಮಿತ್ತ, ತಲೆಯ ಮೇಲೆ ಅಧಿಕಾ
೧೧ರವಿರ ಬೇಕು. ಆದಾಗ್ಯೂ ಕರ್ತನಲ್ಲಿ ಸ್ತ್ರೀಯ ಹೊರ್ತು ಪುರು
೧೨ಷನಿಲ್ಲ; ಪುರುಷನ ಹೊರ್ತು ಸ್ತ್ರೀಯಿಲ್ಲ. ಯಾಕಂದರೆ ಸ್ತ್ರೀ
ಯು ಪುರುಷನಿಂದ ಹ್ಯಾಗೋ, ಹಾಗೆಯೇ ಪುರುಷನು ಸ್ತ್ರೀ
೧೩ಯಿಂದ; ಅದರೆ ಎಲ್ಲಾ ದೇವರಿಂದಲೇ. ನಿಮ್ಮಲ್ಲಿ ನೀವೇ ನಿರ್ಣ
ಯಿಸಿರಿ; ಸ್ತ್ರೀಯು ಮುಸುಕಿಲ್ಲದೆ ದೇವರಿಗೆ ಪ್ರಾರ್ಥಿಸುವದು
೧೪ಯುಕ್ತವಾಗಿರುವೋ? ಏನು! ಪುರುಷನು ಕೂದಲು ಬೆಳಿಸಿ ಕೊಂ
೧೫ಡರೆ, ಅವನಿಗೆ ಅವಮಾನವಾಗಿದೆ ಎಂದೂ, ಸ್ತ್ರೀಯು ಕೂದಲು
ಬೆಳಿಸಿ ಕೊಂಡರೆ, ಅವಳಿಗೆ ಮಹಿಮೆಯಾಗಿದೆ ಎಂದೂ, ಸ್ವಭಾ
ವವು ತಾನೇ ನಿಮಗೆ ಬೋಧಿಸುವದಿಲ್ಲವೋ? ಏನಂದರೆ, ಅವಳಿಗೆ
೧೬ ಕೂದಲು ಮುಸುಕಾಗಿ ಕೊಡಲ್ಪಟ್ಟಿದೆ. ಆದರೆ ಒಬ್ಬನು ತರ್ಕ
ಪ್ರಿಯನಾಗಿರ ಬೇಕೆಂದಿದ್ದರೆ, ನಮಗಾದರೂ ದೇವರ ಸಭೆಗಳಿಗಾ
ದರೂ ಇಂಥ ಮರ್ಯಾದೆ ಇಲ್ಲ.

೧೭ ಮತ್ತು ಹೀಗೆ ಅಪ್ಪಣೆ ಕೊಡಲಾಗಿ ನಿಮ್ಮನ್ನು ಹೊಗಳುವದಿ
ಲ್ಲ; ಏನಂದರೆ, ಹೆಚ್ಚು ಬೇಳಿಗಲ್ಲ, ಹೆಚ್ಚು ಕೇಡಿಗೆ ಕೂಡಿ ಬರು
೧೮ತ್ತೀರಿ. ಹ್ಯಾಗಂದರೆ, ಮೊದಲನೇದು, ನೀವು ಸಭೆಯಲ್ಲಿ ಕೂಡಿ
ಬರುವಾಗ್ಯೆ, ನಿಮ್ಮಲ್ಲಿ ಭೇದಗಳುಂಟೆಂದು ಕೇಳುತ್ತೇನೆ; ಮತ್ತು
೧೯ ಸ್ವಲ್ಪ ನಂಬುತ್ತೇನೆ. ಯಾಕಂದರೆ ಯೋಗ್ಯರು ನಿಮ್ಮಲ್ಲಿ ಶೋ
ಧಿಸಲ್ಪಡುವ ಹಾಗೆ, ನಿಮ್ಮಲ್ಲಿ ಭೇದಗಳು ಸಹ ಉಂಟಾಗಿರ ಬೇ
೨೦ಕು. ಹಾಗಾದರೆ, ನೀವು ಒಂದೇ ಸ್ಥಳಕ್ಕೆ ಕೂಡಿ ಬರುವಾಗ್ಯೆ, ಅ
೨೧ದು ಕರ್ತನ ಭೋಜನವನ್ನು ಉಣ್ಣುವದು ಅಲ್ಲ. ಯಾಕಂದರೆ
ಉಣ್ಣುವದರಲ್ಲಿ ಒಬ್ಬೊಬ್ಬನು ಸ್ವಂತ ಭೋಜನವನ್ನು ಮುಂ
ತೆಗೆದು ಕೊಳ್ಳುತ್ತಾನೆ; ಮತ್ತು ಒಬ್ಬನು ಹಸಿಯುತ್ತಾನೆ; ಮತ್ತೊ
೨೨ಬ್ಬನು ಮತ್ತನಾಗಿದ್ದಾನೆ. ಇದೇನು? ಉಣ್ಣುವದಕ್ಕೂ ಕುಡಿಯು
ವದಕ್ಕೂ ನಿಮಗೆ ಮನೆಗಳಿಲ್ಲವೋ? ಇಲ್ಲವೆ ದೇವರ ಸಭೆಯನ್ನು
ಅಸಡ್ಡೆ ಮಾಡಿ, ಇಲ್ಲದವರನ್ನು ನಾಚಿಕೆ ಪಡಿಸುತ್ತೀರೋ? ನಿಮ
ಗೇನು ಹೇಳಲಿ? ಇದರಲ್ಲಿ ನಿಮ್ಮನ್ನು ಹೊಗಳಲೋ? ಹೊಗಳುವ
೨೩ದಿಲ್ಲ. ಯಾಕಂದರೆ ನಿಮಗೆ ಒಪ್ಪಿಸಿದ್ದನ್ನೇ ಕರ್ತನಿಂದ ಹೊಂ
ದಿದೆನು; ಏನಂದರೆ, ಕರ್ತನಾದ ಯೇಸು ಒಪ್ಪಿಸಲ್ಪಟ್ಟ ರಾತ್ರಿ
ಯಲ್ಲಿ ಕೊಟ್ಟಿಯೆನ್ನು ತೆಗೆದು ಕೊಂಡು, ಸ್ತೋತ್ರ ಮಾಡಿ, ಮು
೨೪ರಿದು, ಹೇಳಿದ್ದೇನಂದರೆ—ತಕ್ಕೊಳ್ಳಿರಿ, ಉಣ್ಣಿರಿ; ಇದು ನಿಮಗೋ
ಸ್ಕರ ಮುರಿಯಲ್ಪಡುವ ನನ್ನ ಶರೀರವಾಗಿದೆ; ನನ್ನನ್ನು ನೆನಸು
೨೫ವದಕ್ಕೆ ಇದನ್ನು ಮಾಡಿರಿ. ಅದೇ ಪ್ರಕಾರ, ಭೋಜಿಸಿದ ಮೇ
ಲೆ, ಪಾತ್ರೆಯನ್ನು ತೆಗೆದು ಕೊಂಡು, ಹೇಳಿದ್ದೇನಂದರೆ—ಈ ಪಾ
ತ್ರೆಯು ನನ್ನ ರಕ್ತದಲ್ಲಿರುವ ಹೊಸ ಒಡಂಬಡಿಕೆಯಾಗಿದೆ; ನೀ
ವು ಕುಡಿಯುವಷ್ಟು ಸಾರಿ ನನ್ನನ್ನು ನೆನಸುವದಕ್ಕೆ ಇದನ್ನು
೨೬ ಮಾಡಿರಿ. ಯಾಕಂದರೆ ಎಷ್ಟು ಸಾರಿ ಈ ರೊಟ್ಟಿಯನ್ನು ತಿಂದು,
ಈ ಪಾತ್ರೆಯಲ್ಲಿ ಕುಡಿಯುವಿರೋ, ಕರ್ತನ ಮರಣವನ್ನು, ಅ
ವನು ಬರುವ ಮಟ್ಟಿಗೂ, ಶೋರಿಸುತ್ತೀರಿ. ಆದದರಿಂದ, ಯಾ
೨೭ವನು ಅಯೋಗ್ಯವಾಗಿ ಈ ರೊಟ್ಟಿಯನ್ನು ತಿನ್ನುವನೋ, ಇ
ಲ್ಲವೆ ಕರ್ತನ ಪಾತ್ರೆಯಲ್ಲಿ ಕುಡಿಯುವನೋ, ಅವನು ಕರ್ತ
೨೮ನ ಶರೀರಕ್ಕೂ ರಕ್ತಕ್ಕೂ ಅಪರಾಧಿಯಾಗಿರುವನು. ಹಾಗಾದರೆ,
ಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಳ್ಳಲಿ. ಮತ್ತು ಹೀಗೆಅ ರೊ
ಟ್ಟಿಯಲ್ಲಿ ತಿಂದು, ಆ ಪಾತ್ರೆಯಲ್ಲಿ ಕುಡಿಯಲಿ. ಯಾಕಂದರೆ
೨೯ಅಯೋಗ್ಯವಾಗಿ ತಿಂದು ಕುಡಿಯುವವನು ಕರ್ತನ ಶರೀರವ
ನ್ನು ವಿಶೇಷ ಮಾಡದೆ, ತನಗೆ ಅಜ್ಞೆ ನಿರ್ಣಯವನ್ನು ತಿಂದು
೩೦ ಕುಡಿಯುತ್ತಾನೆ. ಇದಕ್ಕೋಸ್ಕರ ನಿಮ್ಮಲ್ಲಿ ಅನೇಕ ಬಲಹೀನ
ರೂ, ರೋಗಿಷ್ಠರೂ ಇದ್ದಾರೆ; ಮತ್ತು ಬಹು ಮಂದಿ ನಿದ್ದೆ ಮಾ
೩೧ಡುತ್ತಾರೆ. ನಿಶ್ಚಯವಾಗಿ ನಾವು ನಮ್ಮನ್ನು ವಿಚಾರಿಸಿ ಕೊಂಡರೆ,
೩೨ ನ್ಯಾಯ ತೀರಿಸಲ್ಪಡದೆ ಇರುವೆವು. ಆದರೆ ನ್ಯಾಯ ತೀರಿಸಲ್ಪ
ಡಲಾಗಿ, ಲೋಕದ ಸಂಗಡ ಅಜ್ಞೆ ನಿರ್ಣಯ ಪಡದ ಹಾಗೆ, ಕ
೩೩ರ್ತನಿಂದ ಶಿಕ್ಷೆ ಪಡುತ್ತೇವೆ. ಆದಕಾರಣ, ನನ್ನ ಸಹೋದರರೇ,
ಉಣ್ಣುವದಕ್ಕೆ ಕೂಡಿ ಬರುವಾಗ, ಒಬ್ಬರಿಗೊಬ್ಬರು ಕಾದು
೩೪ಕೊಳ್ಳಿರಿ. ಮತ್ತು ನೀವು ಅಜ್ಞೆ ನಿರ್ಣಯಕ್ಕಾಗಿ ಕೂಡಿ ಬಾರ
ದ ಹಾಗೆ, ಒಬ್ಬನು ಹಸಿದರೆ, ಮನೆಯಲ್ಲಿ ತಿನ್ನಲಿ. ಮಿಕ್ಕಾದವು
ಗಳನ್ನು ನಾನು ಬಂದಾಗ, ನೇಮಿಸುತ್ತೇನೆ.

## ೧೨. ಸಂಧಿ.

೧ ಇದಲ್ಲದೆ, ಸಹೋದರರೇ, ಆತ್ಮದವುಗಳನ್ನು ಕುರಿತು ನೀವು
೨ ಅರಿಯದಿರ, ನನಗೆ ಮನಸ್ಸಿಲ್ಲ. ಮೂಕವಾದ ವಿಗ್ರಹಗಳ ಬಳಿ
ಗೆ ನಡಿಸಲ್ಪಟ್ಟ ಪ್ರಕಾರ, ಪೈಯಲ್ಪಡುವ ಜನಾಂಗಗಳವರಾಗಿದ್ದಿ
೩ ರೆಂದು, ಬಲ್ಲಿರಿ. ಆದಕಾರಣ ನಾನು ನಿಮಗೆ ತಿಳಿಸುವದೇನಂದರೆ
—ದೇವರ ಆತ್ಮದಿಂದ ಮಾತಾಡುವನ್ಯಾವನಾದರೂ, ಯೇಸು
ಶಾಪಗ್ರಸ್ತನೆಂದು ಹೇಳನು; ಮತ್ತು ಪರಿಶುದ್ಧಾತ್ಮದಿಂದಲ್ಲದೆ,
ಯಾವನಾದರೂ ಯೇಸುವನ್ನು ಕರ್ತನೆಂದು ಹೇಳಲಾರನು. ವರಗ
೪ ಳ ವ್ಯತ್ಯಾಸಗಳು ಉಂಟು; ಆದರೆ ಒಂದೇ ಆತ್ಮವು. ಸೇವೆ
೫ ಗಳ ವ್ಯತ್ಯಾಸಗಳು ಉಂಟು; ಒಬ್ಬನೇ ಕರ್ತನು. ಯತ್ನಗಳ ವ್ಯ
೬ ತ್ಯಾಸಗಳು ಉಂಟು; ಆದರೆ ಎಲ್ಲರಲ್ಲಿ ಎಲ್ಲಾ ಯತ್ನೈಸುವವ
೭ ನು ಒಬ್ಬನೇ ದೇವರು. ಆದರೆ ಒಬ್ಬೊಬ್ಬನಿಗೆ ಆತ್ಮದ ಪ್ರಕಟ
೮ ಣೆಯು ಪ್ರಯೋಜನಕ್ಕಾಗಿ ಕೊಡಲ್ಪಟ್ಟಿದೆ. ಹ್ಯಾಗಂದರೆ, ಒ
ಬ್ಬನಿಗೆ ಆತ್ಮದ ಮುಖಾಂತರ ಜ್ಞಾನದ ವಾಕ್ಯವು ಕೊಡಲ್ಪಟ್ಟಿ
ದೆ; ಮತ್ತೊಬ್ಬನಿಗೆ ಅದೇ ಆತ್ಮದ ಪ್ರಕಾರ ತಿಳುವಿಕೆಯ ವಾಕ್ಯ
೯ ವು. ಬೇರೊಬ್ಬನಿಗೆ ಅದೇ ಆತ್ಮದಿಂದ ವಿಶ್ವಾಸವು; ಮತ್ತೊಬ್ಬ
೧೦ನಿಗೆ ಅದೇ ಆತ್ಮದಿಂದ ವಾಸಿ ಮಾಡುವ ವರಗಳು. ಮತ್ತೊಬ್ಬನಿಗೆ
ಬಲವಾದ ಕ್ರಿಯೆಗಳ ಯತ್ನಗಳು; ಮತ್ತೊಬ್ಬನಿಗೆ ಪ್ರವಾದನೆ
ಯು; ಮತ್ತೊಬ್ಬನಿಗೆ ಆತ್ಮಗಳ ವಿವೇಕಗಳು. ಬೇರೊಬ್ಬನಿಗೆ
೧೧ ಭಾಷೆಗಳ ವಿಧಗಳು; ಮತ್ತೊಬ್ಬನಿಗೆ ಭಾಷೆಗಳ ವಿವರವು. ಅದ
ಕೆ ಇವುಗಳೆನ್ನಿಲ್ಲಾ ಅದೇ ಒಂದೇ ಆತ್ಮವು ತನ್ನ ಚಿತ್ತದ ಪ್ರಕಾರ
೧೨ ಒಬ್ಬೊಬ್ಬನಿಗೆ ಪ್ರತ್ಯೇಕವಾಗಿ ಹಂಚಿ ಯತ್ನೈಸುತ್ತದೆ. ಯಾ
ಕಂದರೆ ಹ್ಯಾಗೆ ಶರೀರವು ಒಂದಾಗಿದ್ದು, ಅನೇಕ ಅಂಗಗಳುಳ್ಳ



ದ್ದಾಗಿದೆಯೋ, ಮತ್ತು ಒಂದೇ ಶರೀರದ ಅಂಗಗಳೆಲ್ಲಾ ಅನೇ
ಕವಾಗಿದ್ದು, ಒಂದೇ ಶರೀರವಾಗಿವೆಯೋ, ಹಾಗೆ ಕ್ರಿಸ್ತನು ಸಹ.
೧೩ ಮತ್ತು ಯೆಹೂದ್ಯರಾಗಲಿ, ಗ್ರೇಕರಾಗಲಿ, ದಾಸರಾಗಲಿ, ಸ್ವತಂ
ತ್ರರಾಗಲಿ, ನಾವೆಲ್ಲರು ಒಂದು ಆತ್ಮದಲ್ಲಿ ಒಂದೇ ಶರೀರಕ್ಕಾಗಿ
ಸ್ನಾನ ಹೊಂದಿದೆವು; ಮತ್ತು ಎಲ್ಲರು ಒಂದೇ ಆತ್ಮಕ್ಕಾಗಿ ಕುಡಿಯ
ಮಾಡಲ್ಪಟ್ಟಿವು. ಯಾಕಂದರೆ ಶರೀರವು ಒಂದೇ ಅಂಗವಲ್ಲ, ಅ
೧೪ ನೇಕವಾಗಿದೆ. ಕಾಲು, ನಾನು ಕೈಯಲ್ಲ, ನಾನು ಶರೀರದ್ದಲ್ಲ ಅಂ
೧೫ದರೆ, ಅದರದೆಸೆಯಿಂದ ಶರೀರದ್ದಲ್ಲವೋ? ಮತ್ತು ಕಿವಿ, ನಾ
ನು ಕಣ್ಣಲ್ಲ, ನಾನು ಶರೀರದ್ದಲ್ಲ ಅಂದರೆ, ಅದರ ದೆಸೆಯಿಂದ
೧೬ ಶರೀರದ್ದಲ್ಲವೋ? ಶರೀರವೆಲ್ಲಾ ಕಣ್ಣಾದರೆ, ಕೇಳ್ವಿಕೆ ಎಲ್ಲಿ? ಎ
೧೭ಲ್ಲಾ ಕೇಳ್ವಿಕೆಯಾದರೆ, ಮೂಸಿ ನೋಡುವಿಕೆ ಎಲ್ಲಿ? ಆದರೆ ಈ
ಗ ದೇವರು ಅಂಗಗಳನ್ನು ಅವುಗಳಲ್ಲಿ ಒಂದೊಂದನ್ನು ಶರೀರದ
೧೮ ಲಿ ತನ್ನ ಚಿತ್ತದ ಪ್ರಕಾರ ಇಟ್ಟಿದ್ದಾನೆ. ಮತ್ತು ಅವುಗಳೆಲ್ಲಾ ಒಂ
೧೯ ದೇ ಅಂಗವಾದರೆ, ಶರೀರವು ಎಲ್ಲಿ? ಆದರೆ ಈಗ ಅಂಗಗಳು ಅ
೨೦ ನೇಕವು, ಶರೀರವು ಒಂದೇ. ಕಣ್ಣು ಕೈಗೆ, ನೀನು ನನಗೆ ಅಗತ್ಯ
ವಿಲ್ಲವೆಂದೂ, ತಲೆಯು ಕಾಲುಗಳಿಗೆ, ನೀವು ನನಗೆ ಅಗತ್ಯವಿಲ್ಲ
೨೧ ವೆಂದೂ, ಹೇಳ ಕೂಡದು. ಶರೀರದ ಅಂಗಗಳಲ್ಲಿ ಬಲಹೀನವಾಗಿ
೨೨ ಕಾಣಿಸುವವುಗಳು ಇನ್ನು ಬಹು ಅವಶ್ಯವಾಗಿವೆ. ಮತ್ತು ಶರೀರ
ದಲ್ಲಿ ಯಾವವುಗಳಿಗೆ ಕಡಿಮೆ ಮಾನವೆಂದು ನೆನಸುತ್ತೇವೋ, ಅ
ವುಗಳಲ್ಲಿ ಹೆಚ್ಚು ಮಾನವಿಡುತ್ತೇವೆ; ಮತ್ತು ನಮ್ಮ ಕುರೂಪವಾ
೨೩ ದವುಗಳಿಗೆ ಹೆಚ್ಚಾದ ಸುರೂಪವು ಅದೆ. ನಮ್ಮ ಸುರೂಪವಾದ
೨೪ವುಗಳಿಗೆ ಅಗತ್ಯವಿಲ್ಲ. ಆದರೆ ಶರೀರದಲ್ಲಿ ಭೇದವು ಇರದೆ, ಅಂ
ಗಗಳು ಬಂದಕ್ಕೊಂದು ಒಂದೇ ಚಿಂತೆ ಪಡುವ ಹಾಗೆ, ದೇವರು
ಕೊರತೆಯಾದದ್ದಕ್ಕೆ ಹೆಚ್ಚಾದ ಮಾನ ಕೊಟ್ಟು, ಶರೀರವನ್ನು
೨೫ ಸಂಕಲ್ಪಿಸಿದ್ದಾನೆ. ಇದಲ್ಲದೆ ಒಂದು ಅಂಗ ನೊಂದರೆ, ಎಲ್ಲಾ
ಅಂಗಗಳು ಕೂಡ ನೋಯುತ್ತವೆ; ಇಲ್ಲವೆ ಒಂದು ಅಂಗ ಮಹಿಮೆ
ಪಟ್ಟರೆ, ಎಲ್ಲಾ ಅಂಗಗಳು ಕೂಡ ಸಂತೋಷ ಪಡುತ್ತವೆ.

೨೭ ಆದರೆ ನೀವು ಕ್ರಿಸ್ತನ ಶರೀರವಾಗಿಯೂ, ಭಾಗವಾಗಿ ಅಂಗ
೨೮ ಗಳಾಗಿಯೂ ಇದ್ದೀರಿ. ಮತ್ತು ದೇವರು ಕೆಲವರನ್ನು—ಮೊದಲ
ನೇದು ಅಪೊಸ್ತಲರಾಗಿಯೂ, ಎರಡನೇದು ಪ್ರವಾದಿಗಳಾಗಿ
ಯೂ, ಮೂರನೇದು ಬೋಧಕರಾಗಿಯೂ—ಸಭೆಯಲ್ಲಿ ಇಟ್ಟಿ
ದ್ದಾನೆ; ಆ ತರುವಾಯ ಬಲವಾದ ಕ್ರಿಯೆಗಳನ್ನೂ, ತರುವಾಯ
ವಾಸಿ ಮಾಡುವ ವರಗಳನ್ನೂ, ಸಹಾಯಗಳನ್ನೂ, ಯಜಮಾ
೨೯ ನತ್ವಗಳನ್ನೂ, ಭಾಷೆಗಳ ವಿಧಗಳನ್ನೂ. ಎಲ್ಲರು ಅಪೊಸ್ತಲ
ರೋ? ಎಲ್ಲರು ಪ್ರವಾದಿಗಳೋ? ಎಲ್ಲರು ಬೋಧಕರೋ? ಎಲ್ಲ
೩೦ರು ಬಲವಾದ ಕ್ರಿಯೆಗಳನ್ನು ನಡಿಸುವವರೋ? ಎಲ್ಲರು ವಾಸಿ
ಮಾಡುವ ವರಗಳುಳ್ಳವರೋ? ಎಲ್ಲರು ಭಾಷೆಗಳಿಂದ ಮಾತಾ
೩೧ಡುತ್ತಾರೋ? ಎಲ್ಲರು ವಿವರಿಸುತ್ತಾರೋ? ಉತ್ತಮ ವರಗಳ
ಮೇಲೆ ಆಸಕ್ತಿ ಪಡಿರಿ. ಮತ್ತು ಇನ್ನು ಅತಿ ಶ್ರೇಷ್ಠ ಮಾರ್ಗವ
ನ್ನು ನಿಮಗೆ ತೋರಿಸುತ್ತೇನೆ.

## ೧೩. ಸಂಧಿ.

೧ ಮನುಷ್ಯರ ಭಾಷೆಗಳಲ್ಲಿಯೂ ದೂತರ ಭಾಷೆಗಳಲ್ಲಿಯೂ
ಮಾತಾಡಿದರೂ, ಪ್ರೀತಿ ಇಲ್ಲದವನಾದರೆ, ಧ್ವನಿಯಾಗುವ ಹಿ
೨ ತ್ತಾಳಿಯೂ, ಝಣಝಣಿಸುವ ಕೈತಾಳವೂ, ಆಗಿದ್ದೇನೆ. ಮತ್ತು
ಪ್ರವಾದನೆಯುಳ್ಳವನಾಗಿಯೂ, ಎಲ್ಲಾ ಮರ್ಮಗಳನ್ನೂ ಎ
ಲ್ಲಾ ತಿಳುವಿಕೆಯನ್ನೂ ಅರಿತವನಾಗಿಯೂ ಇದ್ದರೂ, ಬೆಟ್ಟಗಳ
ನ್ನು ಕಿತ್ತಿಡುವ ಹಾಗೆ ಎಲ್ಲಾ ವಿಶ್ವಾಸವುಳ್ಳವನಾಗಿದ್ದರೂ, ಪ್ರೀ
೩ತಿ ಇಲ್ಲದವನಾದರೆ, ನಾನೇನೂ ಇಲ್ಲ. ಮತ್ತು ನನಗೆ ಉಂಟಾದ
ದ್ದನ್ನೆಲ್ಲಾ ಉಣ್ಣಾ ಕೊಟ್ಟರೂ, ನನ್ನ ಶರೀರವನ್ನು ಸುಡುವದಕ್ಕೆ
ಒಪ್ಪಿಸಿದರೂ, ಪ್ರೀತಿ ಇಲ್ಲದವನಾದರೆ, ನನಗೇನೂ ಪ್ರಯೋಜ
೪ನವಿಲ್ಲ. ಪ್ರೀತಿಯು ಬಹು ತಾಳ್ಮೆಪಡುವದು, ದಯೆ ಮಾಡುವದು;
೫ ಪ್ರೀತಿಯು ಹೊಟ್ಟೆಕಿಚ್ಚು ಪಡದು; ಪ್ರೀತಿಯು ಡಂಭ ಮಾಡ
ದು, ಉಬ್ಬಿ ಕೊಳ್ಳದು, ಮರ್ಯಾದೆ ವಿಚಾರದು, ತನ್ನವು
ಗಳನ್ನು ಹುಡುಕದು, ಶಿಟ್ಟು ಮಾಡದು, ಕೆಟ್ಟದ್ದನ್ನು ನೆನಸದು.
೬ ಅನ್ಯಾಯಕ್ಕೆ ಸಂತೋಷ ಪಡದು, ಆದರೆ ಸತ್ಯದಲ್ಲಿ ಸಂತೋ
೭ ಷ ಪಡುವದು; ಎಲ್ಲಾ ಮುಚ್ಚುವದು, ಎಲ್ಲಾ ವಿಶ್ವಾಸಿಸುವದು,
೮ ಎಲ್ಲಾ ನಿರೀಕ್ಷಿಸುವದು, ಎಲ್ಲಾ ಸಹಿಸುವದು. ಪ್ರೀತಿಯು ಎಂದಿ
ಗೂ ಬಿದ್ದು ಹೋಗದು. ಆದರೆ ಪ್ರವಾದನೆಗಳಾಗಲಿ, ತೆಗೆದು ಹಾ
ಕಲ್ಪಡುವವು; ಭಾಷೆಗಳಾಗಲಿ, ತೀರುವವು; ತಿಳುವಿಕೆಯಾಗಲಿ, ತೆ
೯ ಗೆದು ಹಾಕಲ್ಪಡುವದು. ಯಾಕಂದರೆ ಭಾಗವಾಗಿ ತಿಳಿಯುತ್ತೇ
೧೦ವೆ, ಮತ್ತು ಭಾಗವಾಗಿ ಪ್ರವಾದಿಸುತ್ತೇವೆ; ಆದರೆ ಸಂಪೂರ್ಣ
ವಾದದ್ದು ಬಂದಾಗಲೇ, ಭಾಗವಾದದ್ದು ತೆಗೆದು ಹಾಕಲ್ಪಡುವದು.
೧೧ ಬಾಲಕನಾಗಿರುವಾಗ, ಬಾಲಕನ ಹಾಗೆ ಮಾತಾಡಿದೆನು, ಬಾಲಕನ
ಹಾಗೆ ನೆನಸಿದೆನು, ಬಾಲಕನ ಹಾಗೆ ಆಲೋಚಿಸಿದೆನು; ಆದರೆ ಪುರು
೧೨ಷನಾದಾಗ, ಬಾಲಕನವುಗಳನ್ನು ತೆಗೆದು ಹಾಕಿದೆನು. ಯಾಕಂದ
ರೆ ಈಗ ಕನ್ನಡಿಯಿಂದ ಒಗಟಾಗಿ ನೋಡುತ್ತೇವೆ, ಆಗ ಮುಖಾ
ಮುಖಿಯಾಗಿ; ಈಗ ಭಾಗವಾಗಿ ತಿಳಿಯುತ್ತೇನೆ, ಆಗ ತಿಳಿಯ
೧೩ಲ್ಪಟ್ಟ ಹಾಗೆ ತಿಳಿಯುವೆನು. ಈಗಾದರೆ, ವಿಶ್ವಾಸವೂ, ನಿರೀಕ್ಷೆ
ಯೂ, ಪ್ರೀತಿಯೂ, ಈ ಮೂರು ಇರುತ್ತವೆ; ಇವುಗಳಲ್ಲಿ ದೊ
ಡ್ಡದು ಪ್ರೀತಿಯೇ.

## ೧೪. ಸಂಧಿ.

೧ ಪ್ರೀತಿಯನ್ನು ಹಿಂದಟ್ಟಿರಿ; ಆದರೆ, ವಿಶೇಷವಾಗಿ ಪ್ರವಾದಿಸುವ
೨ ಹಾಗೆ, ಆತ್ಮದವುಗಳಿಗೆ ಆಸಕ್ತಿ ಪಡಿರಿ. ಯಾಕಂದರೆ ಭಾಷೆಯಲ್ಲಿ
ಮಾತಾಡುವವನು ಮನುಷ್ಯರಿಗಲ್ಲ, ದೇವರಿಗೆ ಮಾತಾಡುತ್ತಾನೆ.
ಹ್ಯಾಗಂದರೆ ಯಾವನೂ ಕೇಳಿಸದಿಲ್ಲ, ಆದರೆ ಇವನು ಆತ್ಮದಲ್ಲಿ
೩ ಮರ್ಮಗಳನ್ನು ಮಾತಾಡುತ್ತಾನೆ; ಆದರೆ ಪ್ರವಾದಿಸುವವನು
ಮನುಷ್ಯರ ಆತ್ಮ ವೃದ್ಧಿಗೂ, ಬುದ್ಧಿಗೂ, ಆದರಣೆಗೂ ಮಾ
೪ತಾಡುತ್ತಾನೆ. ಭಾಷೆಯಲ್ಲಿ ಮಾತಾಡುವವನು ತನಗೆ ಆತ್ಮವೃ
ದ್ಧಿ ಮಾಡಿಕೊಳ್ಳುತ್ತಾನೆ; ಪ್ರವಾದಿಸುವವನು ಸಭೆಗೆ ಮಾತಾಡುತ್ತಾನೆ.
೫ ನೀವೆಲ್ಲರು ಭಾಷೆಗಳಲ್ಲಿ ಮಾತಾಡ ಬೇಕೆಂದು, ವಿಶೇಷವಾಗಿ ಪ್ರ
ವಾದಿಸ ಬೇಕೆಂದು, ಇಚ್ಛೈಸುತ್ತೇನೆ; ಯಾಕಂದರೆ ಸಭೆಯು
ಆತ್ಮವೃದ್ಧಿಯನ್ನು ಹೊಂದುವ ಹಾಗೆ ಅವನು ವಿವರಿಸದರೆ ಹೊ
ರ್ತು, ಭಾಷೆಗಳಲ್ಲಿ ಮಾತಾಡುವವನಿಗಿಂತ ಪ್ರವಾದಿಸುವವನು
೬ ದೊಡ್ಡವನು. ಈಗ, ಸಹೋದರರೇ, ಭಾಷೆಗಳಲ್ಲಿ ಮಾತಾಡು
ತ್ತಾ ನಿಮ್ಮ ಬಳಿಗೆ ಬಂದರೆ, ಪ್ರಕಟಣೆಯಿಂದಲಾದರೂ, ತಿಳು
ವಿಕೆಯಿಂದಲಾದರೂ, ಪ್ರವಾದನೆಯಿಂದಲಾದರೂ, ಬೋಧನೆ
ಯಿಂದಲಾದರೂ, ನಿಮ್ಮ ಸಂಗಡ ಮಾತಾಡಿದರೆ ಹೊರ್ತು, ನಿ
೭ ಮಗೆ ಪ್ರಯೋಜನವೇನು? ಅದೇ ಪ್ರಕಾರ ಕೆಬ್ಬ ಕೊಡುವ ನಿ

ಜೀವವಾದವುಗಳು, ಪಿಳ್ಳಂಗೋವಿಯಾಗಲಿ, ವೀಣೆಯಾಗಲಿ, ಸ್ವರಗಳಲ್ಲಿ ಭೇದ ಮಾಡದಿದ್ದರೆ, ಊದಿದ್ದಾದರೂ ವಿಖಾಟಿದ್ದಾದ
೮ ರೂ ತಿಳಿಯುವದು ಹ್ಯಾಗೆ? ಮತ್ತು ತುತೂರಿಯು ಗೊತ್ತಿಲ್ಲದ ಶಬ್ದ ಕೊಟ್ಟರೆ, ಯುದ್ಧಕ್ಕೆ ಯಾವನು ಸಿದ್ಧ ಮಾಡಿ ಕೊಳ್ಳುವ
೯ ನು? ಹಾಗೆಯೇ ನೀವು ನಾಲಿಗೆಯಿಂದ ಅರ್ಥವುಳ್ಳ ಮಾತು ನುಡಿದರೆ ಹೊರ್ತು, ಮಾತಾಡಿದ್ದು ತಿಳಿಯುವದು ಹ್ಯಾಗೆ? ಯಾ
೧೦ ಕಂದರೆ ಘುಳ್ಳಿಗೆ ಮಾತಾಡುತ್ತಾ ಇರುವಿರಿ. ಲೋಕದಲ್ಲಿ ಅನ್ನುವ
೧೧ ಶಬ್ದ ವಿಧಗಳು ಇದ್ದೀತು; ಮತ್ತು ಅವುಗಳಲ್ಲಿ ಗೊತ್ತಿಲ್ಲದ್ದು ಒಂದೂ ಇಲ್ಲ; ಆದಕಾರಣ ಶಬ್ದದ ಅರ್ಥವು ತಿಳಿಯದಿದ್ದರೆ, ಮಾತಾಡುವವನಿಗೆ ನಾನು ಬರ್ಬರನಾಗಿರುವೆನು; ಮತ್ತು ಮಾ
ತಾಡುವವನು ನನಗೆ ಬರ್ಬರನಾಗಿರುವನು.

೧೨ ಹೀಗೆಯೇ ನೀವು ಆತ್ಮದವುಗಳಿಗೆ ಆಸಕ್ತಿಯುಳ್ಳವರಾಗಿರುವದರಿಂದ ಸಭೆಯ ಆತ್ಮವೃದ್ಧಿಗೋಸ್ಕರ ಹೆಚ್ಚುವ ಹಾಗೆ ಹುಡು
೧೩ ಕಿರಿ. ಆದಕಾರಣ ಭಾಷೆಯಲ್ಲಿ ಮಾತಾಡುವವನು ವಿವರಿಸುವ ಹಾಗೆ
೧೪ ಪ್ರಾರ್ಥಿಸಲಿ. ಯಾಕಂದರೆ ಭಾಷೆಯಲ್ಲಿ ಪ್ರಾರ್ಥಿಸಿದರೆ, ನನ್ನ ಆತ್ಮವು ಪ್ರಾರ್ಥಿಸುತ್ತದೆ, ಆದರೆ ನನ್ನ ಬುದ್ಧಿಯು ನಿಷ್ಫಲವಾ
೧೫ ಗಿದೆ. ಹಾಗಾದರೇನು? ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ, ಪ್ರಾರ್ಥಿಸುವೆನು; ಆತ್ಮದಿಂದ ಹಾಡುವೆನು, ಬುದ್ಧಿಯಿಂದ
೧೬ ಲೂ ಹಾಡುವೆನು. ಇಲ್ಲದಿದ್ದರೆ, ನೀನು ಆತ್ಮದಿಂದ ಆಶೀರ್ವದಿಸಿದರೆ, ಕಲಿಯದವನ ಸ್ಥಳದಲ್ಲಿ ಇರುವವನು ನೀನು ಹೇಳುವದನ್ನು ಅರಿಯದವನಾಗಿ, ನೀನು ಮಾಡುವ ಸ್ತೋತ್ರಕ್ಕೆ ಆಮೆನ್ ಎಂದು ಹೇಳುವದು ಹ್ಯಾಗೆ? ಯಾಕಂದರೆ ನೀನು ಚನ್ನಾಗಿ ಸ್ತೋತ್ರ
೧೭ ಮಾಡುತ್ತೀ; ಆದರೆ ಬೇರೊಬ್ಬನು ಆತ್ಮವೃದ್ಧಿ ಹೊಂದುವದಿ
೧೮ ಲ್ಲ. ನಿಮ್ಮೆಲ್ಲರಿಗಿಂತ ಹೆಚ್ಚಾಗಿ ಭಾಷೆಗಳಲ್ಲಿ ಮಾತಾಡುತ್ತೇನೆಂದು, ನನ್ನ ದೇವರನ್ನು ಸ್ತುತಿಸುತ್ತೇನೆ. ಆದಾಗ್ಯೂ ಸಭೆಯಲ್ಲಿ ಭಾ
ಷೆಯಿಂದ ಸಾವಿರಾರು ಮಾತುಗಳನ್ನು ಆಡುವದಕ್ಕಿಂತ, ಮ
ತ್ತೊಬ್ಬರನ್ನು ಸಹ ಉಪದೇಶಿಸುವ ಹಾಗೆ, ನನ್ನ ಬುದ್ಧಿಯಿಂದ
೧೯ ಐದು ಮಾತುಗಳನ್ನು ಅರ ಇಚ್ಛೈಸುತ್ತೇನೆ. ಸಹೋದರರೇ, ಮತಿಯಲ್ಲಿ ಬಾಲಕರಾಗದೆ, ಕೆಟ್ಟತನದಲ್ಲಿ ಕೂಸುಗಳಾಗಿರಿ; ಆದ
ರೆ ಮತಿಯಲ್ಲಿ ಸಂಪೂರ್ಣರಾಗಿರಿ.
೨೦ ನ್ಯಾಯಪ್ರಮಾಣದಲ್ಲಿ ಬರೆದದ್ದೇನಂದರೆ—ಬೇರೆ ಭಾಷೆಗಳಿಂದಲೂ ಬೇರೆ ತುಟಿಗಳಿಂದಲೂ
ಈ ಜನರಿಗೆ ಮಾತಾಡುವೆನು; ಆದಾಗ್ಯೂ ಹಾಗೆಯೂ ನನಗೆ ಕಿ
೨೧ ವಿ ಕೊಡತೆಂದು, ಕರ್ತನು ಹೇಳುತ್ತಾನೆ. ಹೀಗಿರಲಾಗಿ, ಭಾಷೆಗಳು ಗುರುತಾಗಿವೆ, ವಿಶ್ವಾಸಿಸುವವರಿಗಲ್ಲ, ಅವಿಶ್ವಾಸಿಗಳಿಗೆ.
ಆದರೆ ಪ್ರವಾದನೆಯು ಅವಿಶ್ವಾಸಿಗಳಿಗಲ್ಲ, ವಿಶ್ವಾಸಿಸುವವರಿಗೆ
೨೩ ಗುರುತಾಗಿದೆ.

ಹಾಗಾದರೆ, ಸಭೆ ಎಲ್ಲಾ ಒಂದೇ ಸ್ಥಳಕ್ಕೆ ಕೂಡಿ ಬಂದು, ಎಲ್ಲರು ಭಾಷೆಗಳಿಂದ ಮಾತಾಡುವಾಗ, ಕಲಿಯದವರಾದರೂ ಅವಿ
ಶ್ವಾಸಿಗಳಾದರೂ ಒಳಗೆ ಬಂದರೆ, ಹುಚ್ಚರಾಗಿದ್ದೀರೆಂದು, ಹೇಳ
೨೪ ಕೋ? ಆದರೆ ಎಲ್ಲರು ಪ್ರವಾದಿಸುವಾಗ, ಒಬ್ಬ ಅವಿಶ್ವಾಸಿಯಾ
ದರೂ ಕಲಿಯದವನಾದರೂ ಒಳಗೆ ಬಂದರೆ, ಎಲ್ಲರಿಂದ ಶಿಕ್ಷೆಸ್ಪ
೨೫ ಡುತ್ತಾನೆ; ಎಲ್ಲರಿಂದ ವಿಚಾರಿಸ್ಪಡುತ್ತಾನೆ. ಮತ್ತು ಹೀಗೆ ಅವನ ಹೃದಯದ ರಹಸ್ಯಗಳು ಬೋರಲ್ಪಡುತ್ತವೆ. ಮತ್ತು ಹೀಗೆ
ಮೋಕೆ ಕೆಳಗಾಗಿ ಬಿದ್ದು, ದೇವರಿಗೆ ನಮಸ್ಕರಿಸಿ, ದೇವರು ನಿಜ
ವಾಗಿ ನಿಮ್ಮಲ್ಲಿ ಇದ್ದಾನೆಂದು, ಅರಿಕೆ ಮಾಡುವನು.

೨೬ ಹಾಗಾದರೇನು? ಸಹೋದರರೇ, ನೀವು ಕೂಡಿ ಬರುವಾಗ್ಯೆ, ನಿಮ್ಮಲ್ಲಿ ಒಬ್ಬೊಬ್ಬನಿಗೆ ಹಾಡು ಉಂಟು, ಬೋಧನೆ ಉಂಟು,
ಭಾಷೆ ಉಂಟು, ಪ್ರಕಟಣೆ ಉಂಟು, ವಿವರ ಉಂಟು. ಎಲ್ಲಾ ಆತ್ಮ
೨೭ ವೃದ್ಧಿಗೋಸ್ಕರ ಆಗಲಿ. ಭಾಷೆಯಿಂದ ಮಾತಾಡುವದು ಇದ್ದರೆ, ಇಬ್ಬರಾಗಿ, ಇಲ್ಲವೆ ಮೂವರಾಗಿ ಆಟ್ಟೇ, ಒಂತಿನ ಮೇರೆಗೆ
೨೮ ಮಾತಾಡಲಿ; ಮತ್ತು ಒಬ್ಬನು ವಿವರಿಸಲಿ. ಆದರೆ ವಿವರಿಸುವವನು ಇಲ್ಲದಿದ್ದರೆ, ಸಭೆಯಲ್ಲಿ ಮೌನವಾಗಿರಲಿ; ಆದರೆ ತನಗೂ ದೇವ
೨೯ ರಿಗೂ ಮಾತಾಡಲಿ. ಪ್ರವಾದಿಗಳು ಇಬ್ಬರಾಗಲಿ ಮೂವರಾಗಲಿ
೩೦ ಮಾತಾಡಲಿ; ಮತ್ತೊಬ್ಬರು ಕೋಧಿಸಲಿ. ಕುಳಿತಿರುವ ಮತ್ತೊ
ಬ್ಬನಿಗೆ ಪ್ರಕಟಣೆ ಉಂಟಾದರೆ, ಮೊದಲಿನವನು ಮೌನವಾಗಿರ
೩೧ ಲಿ. ಯಾಕಂದರೆ ಎಲ್ಲರು ಕಲಿತು ಕೊಳ್ಳುವ ಹಾಗೆಯೂ, ಎಲ್ಲರು ಆದರಿಸಲ್ಪಡುವ ಹಾಗೆಯೂ, ಒಬ್ಬೊಬ್ಬನಾಗಿ ನೀವೆಲ್ಲರು
೩೨ ಪ್ರವಾದಿಸಬಹುದು. ಮತ್ತು ಪ್ರವಾದಿಗಳ ಆತ್ಮಗಳು ಪ್ರವಾದಿಗಳಿ
೩೩ ಗೆ ವಶವಾಗಿವೆ. ಯಾಕಂದರೆ ದೇವರು ಕ್ರಮಹೀನತ್ವಕ್ಕಲ್ಲ, ಸಮಾಧಾನಕ್ಕೆ ದೇವರಾಗಿದ್ದಾನೆ; ಪರಿಶುದ್ಧರ ಎಲ್ಲಾ ಸಭೆಗಳಲ್ಲಿ ಹೀ
ಗೆಯೇ.

೩೪ ನಿಮ್ಮ ಸ್ತ್ರೀಯರು ಸಭೆಗಳಲ್ಲಿ ಮೌನವಾಗಿರಲಿ. ಯಾಕಂದರೆ ಮಾತಾಡುವದಕ್ಕಲ್ಲ, ಅಧೀನವಾಗಿರುವದಕ್ಕೆ ಅವರಿಗೆ ಅಪ್ಪ
೩೫ ಣೆ ಉಂಟು. ಅದೇ ಪ್ರಕಾರ ನ್ಯಾಯಪ್ರಮಾಣವೂ ಹೇಳುತ್ತದೆ. ಮತ್ತು ಅವರು ಏನಾದರೂ ಕಲಿಯ ಬೇಕೆಂದಿದ್ದರೆ, ಮನೆಯಲ್ಲಿ ತ
ಮ್ಮ ಗಂಡಂದಿರನ್ನು ಕೇಳಲಿ. ಯಾಕಂದರೆ ಸಭೆಯಲ್ಲಿ ಮಾತಾ
೩೬ ಡುವದು ಸ್ತ್ರೀಯರಿಗೆ ನಾಚಿಕೆಯಾಗಿದೆ. ಏನು! ನಿಮ್ಮಿಂದ ದೇವರವಾಕ್ಯವು ಹೊರಟಿತೋ? ಇಲ್ಲವೆ ನಿಮಗೆ ಮಾತ್ರ ಮುಟ್ಟಿತೋ?
೩೭ ಒಬ್ಬನು ತಾನು ಪ್ರವಾದಿ ಎಂದು, ಇಲ್ಲವೆ ಆತ್ಮ ಭಾವದವನೆಂದು, ನೆನಸಿ ಕೊಂಡರೆ, ನಾನು ನಿಮಗೆ ಬರೆಯುವಪ್ರಗಳನ್ನು ಕರ್ತನ
೩೮ ಕಟ್ಟಳೆಗಳೆಂದು, ತಿಳಿದು ಕೊಳ್ಳಲಿ. ಆದರೆ ಒಬ್ಬನು ಅರಿಯದಿದ್ದರೆ, ಅರಿಯದಿರಲಿ. ಆದಕಾರಣ, ಸಹೋದರರೇ, ಪ್ರವಾದಿಸ
೩೯ ಬೇಕೆಂದು ಆಸಕ್ತಿ ಪಡಿರಿ. ಭಾಷೆಗಳಲ್ಲಿ ಮಾತಾಡುವದಕ್ಕೆ ಅಡ್ಡಿ
೪೦ ಮಾಡ ಬೇರಿರಿ. ಎಲ್ಲಾ ಮರ್ಯಾದೆಯಾಗಿಯೂ ಕ್ರಮದಿಂದಲೂ ಆಗಲಿ.

## ೧೫. ಸಂಧಿ.

೧ ಇದಲ್ಲದೆ, ಸಹೋದರರೇ, ನಾನು ನಿಮಗೆ ಪ್ರಸಂಗಿಸಿದ ಸುವಾರ್ತೆಯನ್ನು ನಿಮಗೆ ತಿಳಿಸುತ್ತೇನೆ; ಅದನ್ನೇ ಹೊಂದಿದಿರಿ; ಅ
೨ ದರಲ್ಲಿ ನಿಂತಿರುತ್ತೀರಿ; ಅದರಿಂದಲೇ, ಯಾವ ವಾಕ್ಯದಿಂದ ನಿಮಗೆ ಪ್ರಸಂಗ ಮಾಡಿದೆನೋ, ಅದನ್ನು ಹಿಡಿದು ಕೊಂಡರೆ, ವ್ಯ
೩ ರ್ಥವಾಗಿ ವಿಶ್ವಾಸಿಸದೆ ಇದ್ದರೆ, ರಕ್ಷಿಸಲ್ಪಡುತ್ತೀರಿ. ಯಾಕಂದರೆ ನಾನು ಹೊಂದಿದ್ದನ್ನೇ ಮೊದಲಿನವುಗಳಲ್ಲಿ ನಿಮಗೆ ಒಪ್ಪಿ
ದೆನು. ಏನಂದರೆ—ಕ್ರಿಸ್ತನು ಬರಹಗಳ ಪ್ರಕಾರ ನಮ್ಮ ಪಾಪಗಳ
೪ ನಿಮಿತ್ತ ಸತ್ತನು; ಮತ್ತು ಹೂಣಲ್ಪಟ್ಟನು; ಮತ್ತು ಬರಹಗಳ
೫ ಪ್ರಕಾರ ಮೂರನೇ ದಿವಸದಲ್ಲಿ ಎಬ್ಬಿಸಲ್ಪಟ್ಟನು; ಮತ್ತು ಕೇಫ
೬ ನಿಗೂ, ತರುವಾಯ ಹನ್ನೆರಡು ಮಂದಿಗೂ, ಕಾಣಲ್ಪಟ್ಟನು; ಆ ತರುವಾಯ ಐನೂರರ ಮೇಲೆ ಹೆಚ್ಚಾದ ಸಹೋದರರಿಗೆ ಒಂದೇ
೭ ವೇಳೆ ಕಾಣಲ್ಪಟ್ಟನು. ಇವರಲ್ಲಿ ಬಹು ಜನ ಈ ವರಿಗೂ ಇರುತ್ತಾ
ರೆ. ಆದರೆ ಕೆಲವರು ನಿದ್ದೆ ಹೋಗಿದ್ದಾರೆ. ಆ ತರುವಾಯ ಯಾ
ಕೋಬನಿಗೂ, ತರುವಾಯ ಅಪೊಸ್ತಲರೆಲ್ಲರಿಗೂ, ಕಾಣಲ್ಪಟ್ಟಿ



೮ ನು. ಆದರೆ ಕಟ್ಟಿ ಕಡೆಯಲ್ಲಿ ಬಿದ್ದ ಬಸುರಿನ ಹಾಗಾದ ನನಗೂ
೯ ಕಾಣಲ್ಪಟ್ಟಿನು. ಯಾಕಂದರೆ ನಾನು ಅಪೊಸ್ತಲರಲ್ಲಿ ಚಿಕ್ಕವನು, ದೇವರ ಸಭೆಯನ್ನು ಹಿಂಸೆ ಮಾಡಿದ್ದರಿಂದ, ಅಪೊಸ್ತಲ
೧೦ ನೆಂದು ಕರೆಯಲ್ಪಡ ಯೋಗ್ಯನಲ್ಲ. ಆದರೆ ಏನಾಗಿದ್ದೇನೋ, ದೇವರ ಕೃಪೆಯಿಂದ ಇದ್ದೇನೆ; ಮತ್ತು ನನ್ನಲ್ಲಿದ್ದ ಅವ
ನ ಕೃಪೆಯು ವ್ಯರ್ಥವಾಗದೆ, ಅವರೆಲ್ಲರಿಗಿಂತ ಹೆಚ್ಚಾಗಿ ಕಷ್ಟ
ಪಟ್ಟೆನು. ಆದರೆ ನಾನಲ್ಲ, ನನ್ನ ಸಂಗಡ ಇದ್ದ ದೇವರ ಕೃಪೆ
೧೧ ಯೇ. ಹಾಗಾದರೆ, ನಾನಾಗಲಿ, ಅವರಾಗಲಿ, ಹೀಗೆ ಸಾರುತ್ತೇವೆ; ಮತ್ತು ಹೀಗೆ ವಿಶ್ವಾಸಿಸಿದಿರಿ.

೧೨ ಆದರೆ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನೆಂದು, ಕ್ರಿಸ್ತನು ಸಾ
ರಲ್ಪಟ್ಟರೆ, ನಿಮ್ಮಲ್ಲಿ ಕೆಲವರು ಸತ್ತವರ ಪುನರುತ್ಥಾನವು ಇಲ್ಲ
೧೩ ವೆಂದು ಹೇಳುವದು ಹ್ಯಾಗೆ? ಆದರೆ ಸತ್ತವರ ಪುನರುತ್ಥಾನವು ಇ
೧೪ ಲ್ಲದಿದ್ದರೆ, ಕ್ರಿಸ್ತನು ಸಹ ಎಬ್ಬಿಸಲ್ಪಡಲಿಲ್ಲ. ಮತ್ತು ಕ್ರಿಸ್ತನು ಎ
ಬ್ಬಿಸಲ್ಪಡದಿದ್ದರೆ, ನಮ್ಮ ಪ್ರಸಂಗವು ವ್ಯರ್ಥವೇ ಸರಿ; ನಿಮ್ಮ
೧೫ ವಿಶ್ವಾಸವು ಸಹ ವ್ಯರ್ಥವೇ. ಇದಲ್ಲದೆ ಸತ್ತವರು ಎಬ್ಬಿಸಲ್ಪಡದ ಪಕ್ಷದಲ್ಲಿ, ಅವನು ಎಬ್ಬಿಸದ ಕ್ರಿಸ್ತನನ್ನು ಎಬ್ಬಿಸಿದನೆಂದು ದೇ
ವರನ್ನು ಕುರಿತು ಸಾಕ್ಷಿ ಹೇಳ್ಳಿ, ದೇವರ ಅಪಸಾಕ್ಷಿಗಳಾಗಿ ಶಿಕ್ಕಿ
೧೬ ಕೊಳ್ಳುವೆವು. ಯಾಕಂದರೆ ಸತ್ತವರು ಎಬ್ಬಿಸಲ್ಪಡದಿದ್ದರೆ, ಕ್ರಿ
೧೭ ಸ್ತನು ಎಬ್ಬಿಸಲ್ಪಡಲಿಲ್ಲ. ಮತ್ತು ಕ್ರಿಸ್ತನು ಎಬ್ಬಿಸಲ್ಪಡದಿದ್ದ
ರೆ ನಿಮ್ಮ ವಿಶ್ವಾಸವು ವ್ಯರ್ಥವೇ; ಇನ್ನು ನಿಮ್ಮ ಪಾಪಗಳಲ್ಲಿ
೧೮ ಇದ್ದೀರಿ. ಹಾಗಾದರೆ, ಕ್ರಿಸ್ತನಲ್ಲಿ ನಿದ್ದೆ ಹೋದವರು ನಾಶವಾ
೧೯ ಗಿದ್ದಾರೆ. ನಾವು ಈ ಜೀವದಲ್ಲಿ ಮಾತ್ರ ಕ್ರಿಸ್ತನಲ್ಲಿ ನಿರೀಕ್ಷಿಸಿದವ
೨೦ ರಾಗಿದ್ದರೆ, ಎಲ್ಲಾ ಮನುಷ್ಯರಿಗಿಂತ ನಿರ್ಭಾಗ್ಯರಾಗಿದ್ದೇವೆ. ಆ
ದರೆ ಈಗ ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟು, ನಿದ್ದೆ
೨೧ ಹೋದವರಲ್ಲಿ ಪ್ರಥಮ ಫಲವಾದನು. ಯಾಕಂದರೆ ಮನುಷ್ಯನಿಂದ ಮರಣವು ಬಂದ ಕಾರಣ, ಸತ್ತವರ ಪುನರುತ್ಥಾನವು ಮನು
೨೨ ಷ್ಯನಿಂದಲೇ. ಹ್ಯಾಗಂದರೆ, ಯಾವ ಪ್ರಕಾರ ಆದಮನಲ್ಲಿ ಎಲ್ಲರು ಸಾಯುತ್ತಾರೋ, ಅದೇ ಪ್ರಕಾರ ಕ್ರಿಸ್ತನಲ್ಲಿ ಎಲ್ಲರು ಬದು
೨೩ ಕಿಸಲ್ಪಡುವರು. ಆದರೆ ಒಬ್ಬೊಬ್ಬನು ಸ್ವಂತ ಕ್ರಮದಲ್ಲಿ; ಪ್ರಥಮ ಫಲ ಕ್ರಿಸ್ತನು; ತರುವಾಯ ಅವನ ಬರುವಿಕೆಯಲ್ಲಿ ಕ್ರಿಸ್ತನ
೨೪ ವರು. ಆ ಮೇಲೆ ಅಂತ್ಯವು—ಅವನು ಎಲ್ಲಾ ಥೊರೆತನವನ್ನು, ಎ
ಲ್ಲಾ ಅಧಿಕಾರ ಬಲಗಳನ್ನು ತೆಗೆದು ಹಾಕಿ, ತಂದೆಯಾದ ದೇವರಿಗೆ
೨೫ ರಾಜ್ಯವನ್ನು ಒಪ್ಪಿಸಿದಾಗಲೇ. ಯಾಕಂದರೆ ಎಲ್ಲಾ ಶತ್ರುಗಳನ್ನು ಅವನ ಪಾದಗಳ ಕೆಳಗೆ ಇಟ್ಟಿರುವ ಮಟ್ಟಿಗೂ, ಅವನು ರಾಜ್ಯ
೨೬ ವಾಳ್ವ ಬೇಕು. ಮರಣವು ಕಡೇ ಶತ್ರುವಾಗಿ ಲಯ ಮಾಡಲ್ಪಡುವ
೨೭ ದು. ಯಾಕಂದರೆ ಎಲ್ಲವುಗಳನ್ನು ಅವನ ಪಾದಗಳ ಕೆಳಗೆ ಇಟ್ಟಿದ್ದಾನೆ. ಆದರೆ ಎಲ್ಲವುಗಳು ಕೆಳಗೆ ಇಟ್ಟವೆ ಎಂದು ಹೇಳುವಾ
ಗ, ಎಲ್ಲವುಗಳನ್ನು ಅವನ ಕೆಳಗೆ ಇಟ್ಟವನು ಹೊರ್ತು ಎಂಬು
೨೮ ವದು ತೋರುತ್ತದೆ. ಮತ್ತು ಎಲ್ಲವುಗಳು ಅವನ ಕೆಳಗಾದಾಗ, ದೇವರು ಎಲ್ಲವುಗಳಲ್ಲಿ ಎಲ್ಲಾ ಆಗುವ ಹಾಗೆ, ಎಲ್ಲವುಗಳನ್ನು ಕೆಳ
೨೯ ಗಾಗ ಮಾಡಿದವನಿಗೆ ಮಗನು ತಾನೇ ಕೆಳಗಾಗುವನು. ಇಲ್ಲದಿದ್ದರೆ, ಸತ್ತವರು ಎದಿಗೂ ಏಳದಿದ್ದರೆ, ಸತ್ತವರ ನಿಮಿತ್ತ ಸ್ನಾನ
೩೦ ಹೊಂದುವವರು ಏನು ಮಾಡುವರು? ಇನ್ನು ಸತ್ತವರ ನಿಮಿತ್ತ ಸ್ನಾನ ಹೊಂದುವದು ಯಾಕೆ? ಇದಲ್ಲದೆ, ನಾವು ಘುಳಿಗೆ ಘು
೩೧ ಳಿಗೆಗೂ ಗಂಡಾಂತರದಲ್ಲಿರುವದು ಯಾಕೆ? ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ನನಗೆ ಉಂಟಾಗಿರುವ ನಿಮ್ಮ ಹೆಚ್ಚಳದ ಸಾ
೩೨ ಕ್ಷಿಯಾಗಿ, ದಿನಾಲು ಸಾಯುತ್ತೇನೆ. ನಾನು ಮನುಷ್ಯನ ಪ್ರಕಾರ ಎಫೆಸದಲ್ಲಿ ಮೃಗಯುದ್ಧ ಮಾಡಿದ್ದಾಗ್ಯೂ, ಸತ್ತವರು ಏಳದ
ಪಕ್ಷದಲ್ಲಿ, ನನಗೆ ಪ್ರಯೋಜನವೇನು? ಉಣ್ಣುವ, ಕುಡಿಯುವ,
33 ನಾಳೆ ಸಾಯುತ್ತೇವೆ. ತಪ್ಪು ಹೋಗ ಬೇಡಿರಿ; ಕೆಟ್ಟ ಸಂಭಾಷ
೩೪ ಣೆಗಳು ಒಳ್ಳೆ ಮರ್ಯಾದೆಗಳನ್ನು ಕೆಡಿಸುತ್ತವೆ. ತಕ್ಕ ಹಾಗೆ ಎಚ್ಚರಿಕೆಯಾಗಿರಿ, ಪಾಪ ಮಾಡ ಬೇಡಿರಿ; ಯಾಕಂದರೆ ದೇವರನ್ನು ಕುರಿತು ಕೆಲವರಿಗೆ ಅಜ್ಞಾನ ಉಂಟು. ನಿಮ್ಮನ್ನು ನಾಚಿಕೆ ಪಡಿಸ ಇದನ್ನು ಹೇಳುತ್ತೇನೆ.

೩೫ ಆದರೆ ಸತ್ತವರು ಹ್ಯಾಗೆ ಎಬ್ಬಿಸಲ್ಪಡುತ್ತಾರೆ? ಯಾವ ಶ
೩೬ ರೀರದಿಂದ ಬರುತ್ತಾರೆ? ಎಂದು ಒಬ್ಬನು ಹೇಳುವನು. ಮೂಢನೇ, ನೀನು ಬಿತ್ತುವಂಥಾದ್ದು, ಸತ್ತರೆ ಹೊರ್ತು, ಬದುಕಿಸಲ್ಪ
೩೭ ಡದು. ಮತ್ತು ನೀನು ಬಿತ್ತುವಂಥಾದ್ದು, ಉಂಟಾಗುವ ಶರೀರವನ್ನಲ್ಲ, ಬರೇ ಕಾಳನ್ನೇ, ಒಂದು ವೇಳೆ ಗೋಧಿಯಾಗಲ್ಲಿ, ವಿ
೩೮ ಕ್ಕಾದವುಗಳಲ್ಲಿ ಒಂದು ಆಗಲಿ, ಬಿತ್ತುತ್ತೀ. ಆದರೆ ದೇವರು ತನ್ನ ಮನಸ್ಸಿಗೆ ಬಂದ ಹಾಗೆ ಅದಕ್ಕೆ ಶರೀರವನ್ನು—ಒಂದೊಂ
೩೯ ದು ಬೀಜಕ್ಕೆ ಸ್ವಂತ ಶರೀರವನ್ನು—ಕೊಡುತ್ತಾನೆ. ಎಲ್ಲಾ ಮಾಂ
ಸವು ಒಂದೇ ಮಾಂಸವಲ್ಲ. ಆದರೆ ಮನುಷ್ಯನ ಮಾಂಸವು ಬೇರೆ, ಪಶುಗಳ ಮಾಂಸವು ಬೇರೆ, ಮೀನುಗಳದು ಬೇರೆ, ಪಕ್ಷಿ
೪೦ ಗಳದು ಬೇರೆ. ಇದಲ್ಲದೆ, ಆಕಾಶದ ಶರೀರಗಳು ಉಂಟು, ಭೂ
ಮಿಯ ಶರೀರಗಳು ಉಂಟು. ಆದರೆ ಆಕಾಶದವುಗಳ ಮಹಿಮೆ
೪೧ ಬೇರೆ, ಭೂಮಿಯವುಗಳದು ಬೇರೆ. ಸೂರ್ಯನ ಮಹಿಮೆ ಬೇರೆ, ಚಂದ್ರನ ಮಹಿಮೆ ಬೇರೆ, ನಕ್ಷತ್ರಗಳ ಮಹಿಮೆ ಬೇರೆ;
ಯಾಕಂದರೆ, ನಕ್ಷತ್ರಕ್ಕೆ ನಕ್ಷತ್ರ ಮಹಿಮೆಯಲ್ಲಿ ಹೆಚ್ಚು ಕಡಿಮೆ
೪೨ ಆಗಿದೆ. ಹಾಗೆಯೇ ಸತ್ತವರ ಪುನರುತ್ಥಾನವು. ಲಯವಾಗಿ ಬಿತ್ತ
೪೩ ಲ್ಪಡುವದು, ನಿರ್ಲಯವಾಗಿ ಎಬ್ಬಿಸಲ್ಪಡುವದು; ಅವಮಾನದಲ್ಲಿ ಬಿತ್ತಲ್ಪಡುವದು, ಮಹಿಮೆಯಲ್ಲಿ ಎಬ್ಬಿಸಲ್ಪಡುವದು,
ಅಶಕ್ತಿಯಲ್ಲಿ ಬಿತ್ತಲ್ಪಡುವದು, ಬಲದಲ್ಲಿ ಎಬ್ಬಿಸಲ್ಪಡುವದು;
೪೪ ಪ್ರಾಣ ಭಾವದ ಶರೀರವು ಬಿತ್ತಲ್ಪಡುವದು, ಆತ್ಮ ಭಾವದ ಶ
೪೫ ರೀರವು ಎಬ್ಬಿಸಲ್ಪಡುವದು. ಪ್ರಾಣ ಭಾವದ ಶರೀರ ಉಂಟು, ಆತ್ಮ ಭಾವದ ಶರೀರ ಉಂಟು. ಮತ್ತು ಹೀಗೆ ಬರೆದದೆ—ಮೊ
ದಲನೇ ಮನುಷ್ಯನಾದ ಆದಮನು ಬದುಕುವ ಪ್ರಾಣವಾದ
೪೬ ನು; ಕಡೇ ಆದಮನು ಬದುಕಿಸುವ ಆತ್ಮವಾದನು. ಆದರೆ ಆತ್ಮ ಭಾವದ್ದು ಮೊದಲನೇದಲ್ಲ, ಪ್ರಾಣಭಾವದ್ದೇ; ತರುವಾಯ ಆ
೪೭ ತ್ಮಭಾವದ್ದು. ಮೊದಲನೇ ಮನುಷ್ಯನು ಭೂಮಿಯಿಂದ ಉಂಟಾದ ಮಣ್ಣಿನವನು; ಎರಡನೇ ಮನುಷ್ಯನು ಪರಲೋಕದಿಂದ
೪೮ ಬಂದ ಕರ್ತನು. ಮಣ್ಣಿನವನು ಎಂಥವನೋ, ಅಂಥವರೇ ಮಣ್ಣಿ
ನವರು; ಪರಲೋಕದವನು ಎಂಥವನೋ, ಅಂಥವರೇ ಪರಲೋ
೪೯ ಕದವರು. ಮತ್ತು ಮಣ್ಣಿನವನ ಹೋಲಿಕೆಯನ್ನು ವಹಿಸಿದ ಹಾಗೆ, ಪರಲೋಕದವನ ಹೋಲಿಕೆಯನ್ನು ಸಹ ವಹಿಸುವೆವು.

೫೦ ಆದರೆ, ಸಹೋದರರೇ, ನಾನು ಹೇಳುವದೇನಂದರೆ—ರಕ್ತ ಮಾಂಸಗಳು ದೇವರ ರಾಜ್ಯವನ್ನು ಸ್ವತಂತ್ರಿಸಿ ಕೊಳ್ಳಲಾರವು;
ಮತ್ತು ಲಯವು ನಿರ್ಲಯವನ್ನು ಸ್ವತಂತ್ರಿಸಿ ಕೊಳ್ಳದು.
೫೧ ಇಗೋ, ಮರ್ಮವನ್ನು ನಿಮಗೆ ಹೇಳುತ್ತೇನೆ—ಎಲ್ಲರು ನಿದ್ದೆ
೫೨ ಹೋಗೆವು; ಆದರೆ ಕ್ಷಣದಲ್ಲಿ, ಕೆಪ್ಪೆ ಬಡಿಯುವದರಲ್ಲಿ, ಕಡೇ

ಶುತೂರಿಯಲ್ಲಿ, ಎಲ್ಲರು ಮಾರ್ಪಡುವೆವು. ಯಾಕಂದರೆ ಶು
ತೂರಿಯು ಧ್ವನಿಯಾಗುವದು; ಆಗ ಸತ್ತವರು ನಿರ್ಲಯವಾ
೫೩ ಗಿ ಎಬ್ಬಿಸಲ್ಪಡುವರು; ಮತ್ತು ನಾವು ಮಾರ್ಪಡುವೆವು. ಯಾ
ಕಂದರೆ ಈ ಲಯವಾದದ್ದು ನಿರ್ಲಯವನ್ನು ಧರಿಸಿ ಕೊಳ್ಳ ಬೇ
ಕು; ಮತ್ತು ಈ ಮರ್ತ್ಯವಾದದ್ದು ಅಮರತ್ವವನ್ನು ಧರಿಸಿ ಕೊ
೫೪ ಳ್ಳ ಬೇಕು. ಆದರೆ ಈ ಲಯವಾದದ್ದು ನಿರ್ಲಯವನ್ನು ಧರಿಸಿ
ಕೊಂಡಾಗಲೂ, ಈ ಮರ್ತ್ಯವಾದದ್ದು ಅಮರತ್ವವನ್ನು ಧರಿಸಿ
೫೫ ಕೊಂಡಾಗಲೂ, ಬರೆದ ಮಾತು ಉಂಟಾಗುವದು. ಏನಂದರೆ,
ಮರಣವು ಜಯದಲ್ಲಿ ನುಂಗಲ್ಪಟ್ಟಿದೆ. ಮರಣವೇ, ನಿನ್ನ ಕೊಂ
೫೬ ಡಿಯು ಎಲ್ಲಿ? ಪಾತಾಳವೇ, ನಿನ್ನ ಜಯವು ಎಲ್ಲಿ? ಮರಣದ
ಕೊಂಡಿಯು ಪಾಪವೇ; ಪಾಪದ ಬಲವು ನ್ಯಾಯಪ್ರಮಾಣವೇ.
೫೭ ಆದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲವಾಗಿ ನ
೫೮ ಮಗೆ ಜಯವನ್ನು ಕೊಡುವ ದೇವರಿಗೆ ಸ್ತೋತ್ರವು. ಆದದರಿಂ
ದ, ನನ್ನ ಪ್ರಿಯ ಸಹೋದರರೇ, ನಿಮ್ಮ ಪ್ರಯಾಸವು ಕರ್ತ
ನಲ್ಲಿ ವ್ಯರ್ಥವಲ್ಲವೆಂದು ತಿಳಿದು ಕೊಂಡು, ಸ್ಥಿರವಾದವರಾಗಿ
ಯೂ, ಕದಲದವರಾಗಿಯೂ, ಕರ್ತನ ಕೆಲಸದಲ್ಲಿ ಯಾವಾಗ
ಲೂ ಹೆಚ್ಚುವವರಾಗಿಯೂ, ಇರ್ರಿ.

## ೧೬. ಸಂಧಿ.

೧ ಆದರೆ ಪರಿಶುದ್ಧರಿಗೋಸ್ಕರ ಕೂಡಿಸುವದನ್ನು ಕುರಿತು ಗ
ಲಾತ್ಯದ ಸಭೆಗಳಿಗೆ ಹ್ಯಾಗೆ ನೇಮಿಸಿದೆನೋ, ಹಾಗೆಯೇ ನೀವು
೨ ಮಾಡಿರಿ. ನಾನು ಬಂದಾಗ, ಕೂಡಿಸುವಿಕೆಗಳು ಆಗದ ಹಾಗೆ,
ವಾರಗಳ ಮೊದಲನೇ ದಿವಸದಲ್ಲಿ ನಿಮ್ಮಲ್ಲಿ ಒಬ್ಬೊಬ್ಬನು ತನ್ನ
ಜಾಣ್ಮನ ಪ್ರಕಾರ ತನ್ನ ಬಳಿಯಲ್ಲಿ ಇಟ್ಟು ಕೊಂಡು ಮಡಗಲಿ.
೩ ಮತ್ತು ನಾನು ಸೇರಿದಾಗ, ನೀವು ಪತ್ರಿಕೆಗಳಿಂದ ಯಾರನ್ನು
ಯೋಗ್ಯವೆಂದು ದೇಳುವಿರೋ, ಅವರನ್ನು ನಿಮ್ಮ ಉಪಕಾರವ
ನ್ನು ಯೆರೂಸಲೇಮಿಗೆ ತಕ್ಕೊಂಡು ಹೋಗ ಕಳುಹಿಸುವೆನು.
೪ ಮತ್ತು ನಾನು ಸಹ ಪಯಣ ಮಾಡುವದಕ್ಕೆ, ತಕ್ಕದ್ದಾಗಿದ್ದರೆ,
೫ ನನ್ನ ಸಂಗಡ ಪಯಣ ಮಾಡುವರು. ಇದಲ್ಲದೆ, ಮಕೆದೋನ್ಯ
ವನ್ನು ಹಾದು ಹೋದಾಗ, ನಿಮ್ಮ ಬಳಿಗೆ ಬರುವೆನು; ಯಾ
೬ ಕಂದರೆ ಮಕೆದೋನ್ಯವನ್ನು ಹಾದು ಹೋಗುತ್ತೇನೆ. ಮತ್ತು
ನಿಮ್ಮ ಬಳಿಯಲ್ಲಿ ಒಂದು ವೇಳೆ ಇಳು ಕೊಳ್ಳುವೆನು; ಇಲ್ಲವೆ ಎಲ್ಲಿ
ಗೆ ಪಯಣ ಮಾಡಿದರೂ, ಅಲ್ಲಿಗೆ ನೀವು ನನ್ನನ್ನು ಮುಂದೆ ಕ
೭ ಳುಹಿಸುವ ಹಾಗೆ, ಹಿಮಕಾಲದಲ್ಲಿ ವಾಸ ಮಾಡುವೆನು. ಯಾ
ಕಂದರೆ ಈಗಲೇ ಮಧ್ಯ ಮಾರ್ಗದಲ್ಲಿ ನಿಮ್ಮನ್ನು ನೋಡ ನನ
ಗೆ ಮನಸ್ಸಿಲ್ಲ; ಆದರೆ ಕರ್ತನು ಅಪ್ಪಣೆ ಕೊಟ್ಟರೆ, ನಿಮ್ಮ
೮ ಬಳಿಯಲ್ಲಿ ಸ್ವಲ್ಪ ಕಾಲ ಇರುವದಕ್ಕೆ ನಿರೀಕ್ಷಿಸುತ್ತೇನೆ. ಆದರೆ
೯ ಪಂಚಾಶತ್ತಿನ ಮಟ್ಟಿಗೂ ಎಫೆಸದಲ್ಲಿ ಇರುವೆನು. ಯಾಕಂದರೆ
ಬಲವಾದ ದೊಡ್ಡ ಬಾಗಲು ನನಗೆ ತೆರೆದವೆ; ಮತ್ತು ಎದುರಾಳಿಗ
ಳು ಅನೇಕರು.
೧೦ ಇದಲ್ಲದೆ, ತಿಮೊಥೆಯನು ಬಂದರೆ, ಅವನು ನಿರ್ಭಯವಾಗಿ
ನಿಮ್ಮ ಬಳಿಯಲ್ಲಿ ಇರುವ ಹಾಗೆ, ನೋಡಿ ಕೊಳ್ಳಿರಿ. ಯಾಕಂದ
೧೧ ರೆ ನನ್ನ ಹಾಗೆಯೇ ಕರ್ತನ ಕೆಲಸವನ್ನು ನಡಿಸುತ್ತಾನೆ. ಆದ
ದರಿಂದ ಯಾವನಾದರೂ ಅವನನ್ನು ಅಸಡ್ಡೆ ಮಾಡದೆ ಇರಲಿ; ಆ
ದರೆ ನನ್ನ ಬಳಿಗೆ ಬರುವ ಹಾಗೆ, ಅವನನ್ನು ಸಮಾಧಾನವಾಗಿ
ಮುಂದೆ ಕಳುಹಿಸಿರಿ; ಯಾಕಂದರೆ ಅವನನ್ನು ಸಹೋದರರ
೧೨ ಸಂಗಡ ಎದುರು ನೋಡುತ್ತೇನೆ; ಸಹೋದರನಾದ ಅಪೊಲ್ಲೋ
ನನ್ನು ಕುರಿತೇನಂದರೆ, ಸಹೋದರರ ಸಂಗಡ ನಿಮ್ಮ ಬಳಿಗೆ
ಬರ ಬೇಕೆಂದು, ಅವನನ್ನು ಬಹಳವಾಗಿ ಬೇಡಿ ಕೊಂಡೆನು. ಆದರೆ
ಈಗಲೇ ಬರ ಅವನಿಗೆ ಎಷ್ಟು ಮಾತ್ರವೂ ಮನಸ್ಸಿರಲಿಲ್ಲ; ಆದಾ
ಗ್ಯೂ ಅವನಿಗೆ ಬಳ್ಳಿ ಸಮಯವಾದಾಗ ಬರುವನು.
೧೩ ಎಚ್ಚರಿಕೆಯಾಗಿರ್ರಿ; ವಿಶ್ವಾಸದಲ್ಲಿ ನಿಲ್ಲಿರಿ; ಪೌರುಷವಾಗಿರ್ರಿ;
೧೪ ತ್ರಾಣವಾಗಿರ್ರಿ; ನಿಮ್ಮವುಗಳೆಲ್ಲಾ ಪ್ರೀತಿಯಿಂದ ಆಗಲಿ. ಸ್ತೆಫನನ
೧೫ ಮನೆಯು ಅಕಾಯದ ಪ್ರಥಮ ಫಲವಾಗಿದೆ ಎಂದೂ, ಪರಿಶುದ್ಧರ
೧೬ ಸೇವೆಗೆ ತಮ್ಮನ್ನು ಒಪ್ಪಿಸಿದ್ದಾರೆಂದೂ, ಬಲ್ಲಿರಿ. ಸಹೋದರರೇ,
ಇಂಥವರಿಗೂ ನಮ್ಮ ಸಂಗಡ ಕೆಲಸ ಮಾಡಿ ಪ್ರಯಾಸ ಪಡುವವರೆ
ಲ್ಲರಿಗೂ, ನೀವು ಸಹ ಅಧೀನರಾಗಿರ ಬೇಕೆಂದು ನಿಮ್ಮನ್ನು ಬೇಡಿ
೧೭ ಕೊಳ್ಳುತ್ತೇನೆ. ಸ್ತೆಫನನೂ, ಫೊರ್ತುನಾತನೂ, ಅಕಾಯಿಕನೂ,
ಬಂದದರಿಂದ ಸಂತೋಷ ಪಡುತ್ತೇನೆ; ಯಾಕಂದರೆ ನಮ್ಮಿಂದಾ
೧೮ ದ ಕೊರತೆಯನ್ನು ಇವರು ಪೂರ್ತಿ ಮಾಡಿದ್ದಾರೆ. ಯಾಕಂದ
ರೆ ನನ್ನ ಆತ್ಮನನ್ನೂ ನಿಮ್ಮದನ್ನೂ ಸಂತೈಸಿದ್ದಾರೆ. ಆದಕಾರ
ಣ ಅಂಥವರನ್ನು ಲಕ್ಷ್ಯ ಮಾಡಿರಿ.
೧೯ ಆಸ್ಯದ ಸಭೆಗಳು ನಿಮ್ಮನ್ನು ವಂದಿಸುತ್ತವೆ. ಅಕ್ವಿಲನೂ
ಪ್ರಿಸ್ಕಿಲ್ಲಳೂ, ಅವರ ಮನೆಯಲ್ಲಿರುವ ಸಭೆಯ ಸಂಗಡ, ಕರ್ತ
೨೦ ನಲ್ಲಿ ನಿಮ್ಮನ್ನು ಬಹಳವಾಗಿ ವಂದಿಸುತ್ತಾರೆ. ಸಹೋದರರೆಲ್ಲರು
ನಿಮ್ಮನ್ನು ವಂದಿಸುತ್ತಾರೆ. ಒಬ್ಬರನ್ನೊಬ್ಬರು ಪರಿಶುದ್ಧ ಮು
ದ್ದಿನಿಂದ ವಂದಿಸಿರಿ.
೨೧ ಪೌಲನೆಂಬ ನಾನು ನನ್ನ ಸ್ವಂತ ಕೈಯಿಂದ ಮಾತುವ
೨೨ ವಂದನೆ. ಒಬ್ಬನು ಕರ್ತನಾದ ಯೇಸು ಕ್ರಿಸ್ತನನ್ನು ಪ್ರೀತಿ
೨೩ ಮಾಡದಿದ್ದರೆ, ಶಾಪವಾಗಲಿ; ನಮ್ಮ ಕರ್ತನು ಬರುತ್ತಾನೆ. ಕರ್ತ
೨೪ ನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಸಂಗಡ ಇರಲಿ. ಕ್ರಿ
ಸ್ತ ಯೇಸುವಿನಲ್ಲಿ ನನ್ನ ಪ್ರೀತಿಯು ನಿಮ್ಮೆಲ್ಲರ ಸಂಗಡ ಇರಲಿ.
ಆಮೆನ್.

---

# THE SECOND EPISTLE OF
# PAUL THE APOSTLE TO THE CORINTHIANS.

ಅಪೊಸ್ತಲನಾದ ಪೌಲನು ಕೊರಿಂಥ್ಯರಿಗೆ ಬರೆದ ಎರಡನೇ ಪತ್ರಿಕೆ.

## ೧. ಸಂಧಿ.

೧ ದೇವರ ಚಿತ್ತದಿಂದ ಯೇಸುಕ್ರಿಸ್ತನ ಅಪೊಸ್ತಲನಾದ ಪೌಲ
ನೂ, ಸಹೋದರನಾದ ತಿಮೊಥೆಯನೂ, ಕೊರಿಂಥದಲ್ಲಿರುವ ದೇ
ವರ ಸಭೆಗೂ, ಸಮಸ್ತ ಅಕಾಯದಲ್ಲಿರುವ ಪರಿಶುದ್ಧರೆಲ್ಲರಿಗೂ—
೨ ನಮ್ಮ ತಂದೆಯಾದ ದೇವರಿಂದಲೂ ಕರ್ತನಾದ ಯೇಸು ಕ್ರಿ
ಸ್ತನಿಂದಲೂ ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.



೩ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾಗಿರುವ ದೇ
ವರಿಗೆ ಸ್ತೋತ್ರವು; ಅವನು ಕನಿಕರಗಳ ತಂದೆಯೂ ಎಲ್ಲಾ ಆದ
೪ ರಣೆಯ ದೇವರೂ ಆಗಿದ್ದು, ನಾವೇ ದೇವರಿಂದ ಆದರಿಸಲ್ಪಡು
ವ ಆದರಣೆಯ ಮೂಲವಾಗಿ ಎಲ್ಲಾ ಉಪದ್ರದಲ್ಲಿ ಇರುವವರನ್ನು
ಆದರಿಸ ಶಕ್ತರಾಗುವ ಹಾಗೆ, ನಮ್ಮನ್ನು ನಮ್ಮ ಎಲ್ಲಾ ಉಪದ್ರದ
೫ ಲ್ಲಿ ಆದರಿಸುತ್ತಾನೆ. ಯಾಕಂದರೆ ಕ್ರಿಸ್ತನ ಶ್ರಮೆಗಳು ನಮ್ಮಲ್ಲಿ
ಹೆಚ್ಚುವ ಪ್ರಕಾರವೇ, ನಮ್ಮ ಆದರಣೆಯು ಕ್ರಿಸ್ತನ ಮುಖಾಂತರ
೬ ಹೆಚ್ಚುತ್ತದೆ. ಆದರೆ ನಾವು ಉಪದ್ರ ಪಟ್ಟರೆ, ನಾವು ಪಡುವ ಅದೇ
ಶ್ರಮೆಗಳ ತಾಳ್ಮೆಯಲ್ಲಿ ಬಲವಾಗಿರುವ ನಿಮ್ಮ ಆದರಣೆ ರಕ್ಷಣೆಗ
ಳಿಗೋಸ್ಕರವೇ; ಆದರಣೆ ಪಟ್ಟರೆ, ನಿಮ್ಮ ಆದರಣೆ ರಕ್ಷಣೆಗಳಿ
೭ ಗೋಸ್ಕರವೇ. ಮತ್ತು ಶ್ರಮೆಗಳಲ್ಲಿ ಪ್ಯಾಗೋ, ಹಾಗೆಯೇ ಆ
ದರಣೆಯಲ್ಲಿಯೂ ಪೌಲಂಗಾರರಾಗಿದ್ದೀರೆಂದು ತಿಳಿದಿರುವದರಿಂ
೮ ದ, ನಮ್ಮ ನಿರೀಕ್ಷೆಯು ನಿಮ್ಮ ವಿಷಯವಾಗಿ ದೃಢವಾಗಿದೆ. ಸ
ಹೋದರರೇ, ಆಸ್ಯದಲ್ಲಿ ನಮಗೆ ಉಂಟಾದ ಉಪದ್ರವನ್ನು ಕು
ರಿತು ನೀವು ಅರಿಯದಿರ ನಮಗೆ ಮನಸ್ಸಿಲ್ಲ; ಏನಂದರೆ ನಾವು
ಪ್ರಾಣ ಸಂದೇಹ ಪಡುವಷ್ಟು, ಅತ್ಯಧಿಕವಾದಂಥ, ಬಲ ವಿಾರು
೯ ವಂಥ, ಭಾರ ಪಟ್ಟೆವು. ಆದರೆ, ನಾವು ನಮ್ಮ ಮೇಲೆ ಅಲ್ಲ, ಸ
ತ್ತವರನ್ನು ಎಬ್ಬಿಸುವ ದೇವರ ಮೇಲೆ ನಂಬಿಕೆ ಇಡುತ್ತಿರುವ ಹಾ
೧೦ ಗೆ, ಮರಣದ ನಿರ್ಣಯವನ್ನು ನಮ್ಮಲ್ಲಿ ಹೊಂದಿದೆವು. ಅವನು
ಅಷ್ಟು ದೊಡ್ಡ ಮರಣದಿಂದ ನಮ್ಮನ್ನು ತಪ್ಪಿಸಿದನು, ಮತ್ತು
ತಪ್ಪಿಸುತ್ತಾನೆ; ಇನ್ನು ತಪ್ಪಿಸುವನೆಂದು, ಅವನನ್ನು ನಂಬಿದ್ದೇವೆ.
೧೧ ನೀವು ಸಹ, ಅನೇಕರ ಮುಖಾಂತರವಾಗಿ ನಮಗಾದ ಉಪಕಾರ
ಕ್ಕೋಸ್ಕರ ಅನೇಕರಿಂದ ನಮ್ಮ ವಿಷಯ ಸ್ತೋತ್ರ ಉಂಟಾಗುವ
ಹಾಗೆ, ನಮಗೋಸ್ಕರ ಬೇಡಿ ಕೊಂಡು, ಸಹಾಯ ಮಾಡುತ್ತೀ
ರಲ್ಲ?
೧೨ ಯಾಕಂದರೆ ದೇವರ ಯಥಾರ್ಥದಲ್ಲಿಯೂ ನಿಷ್ಕಪಟದ
ಲ್ಲಿಯೂ, ಮಾಂಸ ಜ್ಞಾನದಿಂದಲ್ಲ, ದೇವರ ಕೃಪೆಯಿಂದಲೇ
ಲೋಕದಲ್ಲಿ, ಮುಖ್ಯವಾಗಿ ನಿಮ್ಮ ವಿಷಯದಲ್ಲಿ, ನಡೆದು ಕೊಂ
ಡೆವೆಂಬ ನಮ್ಮ ಮನಸ್ಸಾಕ್ಷಿಯೆ ಸಾಕ್ಷಿಯೇ ನಮ್ಮ ಹೆಚ್ಚಳವಾಗಿ
೧೩ ದೆ. ಯಾಕಂದರೆ ನೀವು ಓದುವಂಥ, ಇಲ್ಲವೆ ತಿಳಿದು ಕೊಳ್ಳು
ವಂಥ, ಮಾತುಗಳನ್ನಲ್ಲದೆ, ಬೇರೆಯವುಗಳನ್ನು ನಿಮಗೆ ಬರೆ
೧೪ ಯೆವು; ಅಂತ್ಯದ ಮಟ್ಟಿಗೂ ಅವುಗಳನ್ನು ತಿಳಿದು ಕೊಳ್ಳುವಿ
ಕೆಂದು ನಿರೀಕ್ಷಿಸುತ್ತೇನೆ. ಕರ್ತನಾದ ಯೇಸುವಿನ ದಿವಸದಲ್ಲಿ
ನೀವು ನಮಗೆ ಹ್ಯಾಗೋ, ಹಾಗೆಯೇ ನಾವು ನಿಮಗೆ ಹೆಚ್ಚಳ
ವಾಗಿದ್ದೇವೆಂದು, ನಮ್ಮನ್ನು ಪೌಲಾಗಿ ತಿಳಿದು ಕೊಂಡ ಪ್ರಕಾ
ರವೇ.
೧೫ ಮತ್ತು ಈ ನಂಬಿಕೆಯಾಗಿ, ನಿಮಗೆ ಎರಡನೇ ಉಪಕಾರವಾ
ಗುವ ಹಾಗೆ, ಮೊದಲು ನಿಮ್ಮ ಹತ್ತರ ಬರಲೂ, ನಿಮ್ಮ ಬಳಿಯಿಂ
೧೬ ದ ಮಕೆದೋನ್ಯಕ್ಕೆ ಹೋಗಲೂ, ತಿರಿಗಿ ಮಕೆದೋನ್ಯದಿಂದ
ನಿಮ್ಮ ಹತ್ತರ ಬರಲೂ, ನಿಮ್ಮಿಂದ ಯೆಹೂದಕ್ಕೆ ಮುಂಕಳು
ಹಿಸಲ್ಪಡಲೂ, ಮನಸ್ಸು ಮಾಡಿದೆನು. ಹಾಗಾದರೆ, ಇದನ್ನು
ಯೋಚಿಸಿ ಹೌರತನ ನಡಿಸಿದೆನೋ? ಇಲ್ಲವೆ ಹೌದು ಹೌ
ದು, ಅಲ್ಲ ಅಲ್ಲ, ಎಂಬುವದು ನನ್ನಲ್ಲಿ ಇರುವ ಹಾಗೆ, ಯೋ
೧೭ ಚಿಸುವವುಗಳನ್ನು ಮಾಂಸದ ಪ್ರಕಾರ ಯೋಚಿಸುತ್ತೇನೋ?
ಆದರೆ ನಂಬಿಕೆಯುಳ್ಳ ದೇವರ ಆಣೆ ನಿಮಗೆ ಆದ ನಮ್ಮ ವಾ
೧೮ ಕ್ಯವು ಹೌದೂ ಅಲ್ಲವೂ ಆಗಲಿಲ್ಲ. ಯಾಕಂದರೆ ನನ್ನಿಂದಲೂ,
ಸಿಲ್ವಾನನಿಂದಲೂ, ತಿಮೊಥೆಯನಿಂದಲೂ, ನಾವು ನಿಮ್ಮಲ್ಲಿ ಸಾ
ರಿದ ದೇವರ ಮಗನಾದಂಥ, ಯೇಸು ಕ್ರಿಸ್ತನು ಹೌದೂ ಅಲ್ಲವೂ
೧೯ ಆಗಲಿಲ್ಲ; ಆದರೆ ಅವನಲ್ಲಿ ಹೌದೇ ಆಯಿತು. ಯಾಕಂದರೆ
ದೇವರ ವಾಗ್ದತ್ತಗಳೆಷ್ಟು ನಮ್ಮ ಮುಖಾಂತರದಿಂದಾಗುವ ದೇವರ
ಮಹಿಮೆಗಾಗಿ, ಅವನಲ್ಲಿ ಹೌದು, ಅವನಲ್ಲಿ ಆಮೆನ್, ಆಗಿವೆ.
೨೦ ಆದರೆ ನಮ್ಮನ್ನು ನಿಮ್ಮ ಸಂಗಡ ಕ್ರಿಸ್ತನಲ್ಲಿ ಸ್ಥಿರ ಪಡಿಸುವವನೂ
ನಮ್ಮನ್ನು ಅಭಿಷೇಕಿಸಿದವನೂ ದೇವರೇ; ನಮಗೆ ಮುದ್ರೆ ಹಾಕಿ
೨೧ ದವನೂ, ಅತ್ಯದ ಮುಂಗಡವನ್ನು ನಮ್ಮ ಹೃದಯಗಳಲ್ಲಿ ಕೊ
ಟ್ಟವನೂ, ಅವನೇ.
೨೩ ನಾನಾದರೆ, ನಿಮ್ಮನ್ನು ಕನಿಕರಿಸಿ ಇನ್ನು ಕೊರಿಂಥಕ್ಕೆ ಬರಲಿ
ಲ್ಲವೆಂದು, ನನ್ನ ಪ್ರಾಣದ ಮೇಲೆ ದೇವರನ್ನು ಸಾಕ್ಷಿಯಾಗಿ ಕ
ರೆಯುತ್ತೇನೆ. ನಿಮ್ಮ ವಿಶ್ವಾಸದ ಮೇಲೆ ಧೊರೆತನ ಮಾಡುತ್ತೇ
೨೪ ವಂತಲ್ಲ, ನಿಮ್ಮ ಸಂತೋಷಕ್ಕೆ ಸಹಾಯಕರಾಗಿದ್ದೇವೆ. ಯಾ
ಕಂದರೆ ವಿಶ್ವಾಸದಿಂದಲೇ ನಿಲ್ಲುತ್ತೀರಿ.

## ೨. ಸಂಧಿ.

೧ ಆದರೆ ಇದನ್ನು ನನ್ನಲ್ಲಿ ನಿರ್ಣಯಿಸಿ ಕೊಂಡೆನು, ಏನಂದ
೨ ರೆ ದುಃಖದಿಂದ ನಿಮ್ಮ ಬಳಿಗೆ ತಿರಿಗಿ ಬರುವದಿಲ್ಲ. ಯಾಕಂದರೆ
ನಾನು ನಿಮ್ಮನ್ನು ದುಃಖ ಪಡಿಸಿದರೆ, ನನ್ನಿಂದ ದುಃಖ ಪಡುವವ
೩ ನಲ್ಲದೆ, ಮತ್ಯಾವನು ನನ್ನನ್ನು ಆನಂದ ಪಡಿಸುವನು? ಮತ್ತು
ನಾನು ಬಂದು ಯಾರಿಂದ ಸಂತೋಷ ಪಡ ಬೇಕಾಗಿದ್ದೆನೋ, ಅ
ವರಿಂದ ದುಃಖ ಪಡದ ಹಾಗೆ, ನನ್ನ ಸಂತೋಷವು ನಿಮ್ಮೆಲ್ಲರದಾ
ಗಿದೆ ಎಂದು, ನಿಮ್ಮೆಲ್ಲರ ಮೇಲೆ ನಂಬಿಕೆ ಇಟ್ಟು, ಅದನ್ನೇ ನಿ
೪ ಮಗೆ ಬರೆದಿದ್ದೇನೆ. ಹ್ಯಾಗಂದರೆ ನೀವು ದುಃಖ ಪಡುವ ಹಾಗಲ್ಲ,
ನಾನು ನಿಮಗೆ ಹೆಚ್ಚಾಗಿ ಮಾಡುವ ಪ್ರೀತಿಯನ್ನು ತಿಳಿಕೊಳ್ಳುವ
ಹಾಗೆ, ಬಹಳ ಉಪದ್ರದಿಂದಲೂ ಹೃದಯದ ಸಂಕಟದಿಂದಲೂ,
ಬಹಳ ಕಣ್ಣೀರು ಹಾಕುತ್ತಾ ನಿಮಗೆ ಬರೆದೆನು.
೫ ಒಬ್ಬನು ದುಃಖ ಪಡಿಸಿದ್ದಾದರೆ, ನಾನು ಹೆಚ್ಚಾದ ಭಾರವಿಡ
ದ ಹಾಗೆ, ನನ್ನನ್ನಲ್ಲ, ಪೌಲಾಗಿ ನಿಮ್ಮೆಲ್ಲರನ್ನು ದುಃಖ ಪಡಿಸಿ
೬ ದ್ದಾನೆ. ಅಂಥವನಿಗೆ ಬಹು ಜನರಿಂದಾದ ಈ ಶಿಕ್ಷೆಯು ಸಾಕು.
೭ ಆದದರಿಂದ ಅದನ್ನು ಬಿಟ್ಟು, ಅಂಥವನು ಹೆಚ್ಚಾದ ದುಃಖದಿಂದ
ನುಂಗಲ್ಪಡದ ಹಾಗೆ, ನೀವು ಮನ್ನಿಸಿ ಆದರಿಸಿದರೆ, ಒಳ್ಳೇದು.
೮ ಆದದರಿಂದ ಅವನಿಗೆ ಪ್ರೀತಿಯನ್ನು ಸ್ಥಿರ ಮಾಡ ಬೇಕೆಂದು, ನಿ
೯ ಮ್ಮನ್ನು ಬೇಡಿ ಕೊಳ್ಳುತ್ತೇನೆ. ಯಾಕಂದರೆ ಎಲ್ಲಾದರಲ್ಲಿ ವಿಧೇ
ಯರಾಗಿದ್ದೀರೇನೋ, ನಿಮ್ಮ ಪರೀಕ್ಷೆಯನ್ನು ತಿಳಿಯುವ ಬಗ್ಯೆ
೧೦ ಇದಕ್ಕಾಗಿಯೇ, ಬರೆದೆನು. ಯಾರಿಗೆ ಏನಾದರೂ ಮನ್ನಿಸುತ್ತೀ
ರೋ, ನಾನು ಸಹ ಮನ್ನಿಸುತ್ತೇನೆ. ಯಾಕಂದರೆ ನಾನು ಏನಾ
ದರೂ ಮನ್ನಿಸಿದ್ದಾದರೆ, ಯಾರಿಗೆ ಮನ್ನಿಸಿದೆನೋ, ನಿಮಗೋ
೧೧ ಸ್ಕರ ಕ್ರಿಸ್ತನ ಸಮುಖದಲ್ಲಿ ಮನ್ನಿಸಿದೆನು; ಸೈತಾನನಿಂದ ನಾವು
ವಂಚಿಸಲ್ಪಡದ ಹಾಗೆಯೇ; ಯಾಕಂದರೆ ನಾವು ಅವನ ಯೋ
ಚನೆಗಳನ್ನು ಅರಿಯದವರಲ್ಲ.
೧೨ ಆದರೆ ಕ್ರಿಸ್ತನ ಸುವಾರ್ತೆಗೋಸ್ಕರ ತ್ರೋಯೆಕ್ಕೆ ಬಂದಾ
೧೩ ಗ, ಕರ್ತನಿಂದ ನನಗೆ ಬಾಗಲು ತೆರೆದಿರಲಾಗಿ, ನನ್ನ ಸಹೋದರ
ನಾದ ತೀತನನ್ನು ಕಂಡು ಕೊಳ್ಳದೆ ಇರುವದರಿಂದ, ನನ್ನ ಆತ್ಮ

ದಲ್ಲಿ ವಿಶ್ರಾಂತಿ ಇಲ್ಲದವನಾಗಿ, ಅವರಿಂದ ಅಪ್ಪಣೆ ತೆಗದು ಕೊಂ
೧೪ ಡು, ಮಕೆದೋನ್ಯಕ್ಕೆ ಹೊರಟೆನು. ಆದರೆ ಕ್ರಿಸ್ತನಲ್ಲಿ ನಮ್ಮನ್ನು
ಎಂದಿಗೂ ಜಯೋತ್ಸವ ಮಾಡಿಸಿ, ತನ್ನ ಶಿಳುವಿಕೆಯ ವಾಸನೆ
ಯನ್ನು ನಮ್ಮ ಮುಖಾಂತರ ಎಲ್ಲಾ ಸ್ಥಳಗಳಲ್ಲಿ ಪ್ರಸಿದ್ಧಿ ಮಾಡು
೧೫ ವ ದೇವರಿಗೆ ಸ್ತುತಿ. ಏನಂದರೆ ರಕ್ಷಿಸಲ್ಪಡುವವರಲ್ಲಿಯೂ ನಾಶ
ವಾಗುವವರಲ್ಲಿಯೂ ದೇವರಿಗೆ ಕ್ರಿಸ್ತನ ಸುವಾಸನೆಯಾಗಿದ್ದೇವೆ;
ಇವರಿಗೆ ಮರಣಕ್ಕಾಗಿ ಮರಣದ ವಾಸನೆ, ಅವರಿಗೆ ಜೀವಕ್ಕಾಗಿ
೧೬ ಜೀವದ ವಾಸನೆ. ಇವುಗಳಿಗೆ ಯೋಗ್ಯನು ಯಾರು? ಯಾ
೧೭ ಕಂದರೆ ದೇವರ ವಾಕ್ಯವನ್ನು ಬೆರಸುವ ಅನೇಕರ ಹಾಗಿರದೆ,
ಯಥಾರ್ಥದಿಂದಾದ ಹಾಗೆ, ದೇವರ ಕಡೆಯಿಂದಾದ ಹಾಗೆ, ದೇ
ವರ ಮುಂದೆ ಕ್ರಿಸ್ತನಲ್ಲಿ ಮಾತಾಡುತ್ತೇವೆ.

## ೩. ಸಂಧಿ.

೧ ತಿರಿಗಿ ನಮ್ಮನ್ನು ಪ್ರತಿಷ್ಠೆ ಮಾಡಿ ಕೊಳ್ಳಲಾರಂಭಿಸುತ್ತೇ
ವೋ? ಇಲ್ಲವೆ ನಿಮ್ಮ ಕಡೆಗೆ ಪ್ರತಿಷ್ಠೆ ಪತ್ರಿಕೆಗಳು, ಅಥವಾ ನಿಮ್ಮಿಂ
೨ ದ ಪ್ರತಿಷ್ಠೆ ಪತ್ರಿಕೆಗಳು ಕೆಲವರ ಹಾಗೆ ನಮಗೆ ಬೇಕೋ? ನೀವೇ
ನಮ್ಮ ಹೃದಯಗಳಲ್ಲಿ ಬರೆಯಲ್ಪಟ್ಟಿಂಥ, ಎಲ್ಲಾ ಮನುಷ್ಯ
ರಿಂದ ಓದಿ ತಿಳಿಯಲ್ಪಡುವಂಥ, ನಮ್ಮ ಪತ್ರಿಕೆಯಾಗಿದ್ದೀರಿ; ಮ
೩ ಶಿಯಿಂದಲ್ಲ, ಜೀವವುಳ್ಳ ದೇವರ ಆತ್ಮದಿಂದ, ಕಲ್ಲಿನ ಹಲಿಗೆಗಳ
ಲ್ಲಿ ಅಲ್ಲ, ಹೃದಯವೆಂಬ ಮಾಂಸದ ಹಲಿಗೆಗಳಲ್ಲಿ ಬರೆಯಲ್ಪ
ಟ್ಟಿಂಥ, ನಮ್ಮಿಂದ ಸೇವಿಸಲ್ಪಟ್ಟಿಂಥ, ಕ್ರಿಸ್ತನ ಪತ್ರಿಕೆಯಾಗಿದ್ದೀ
ರೆಂದು ಪ್ರತ್ಯಕ್ಷವಲ್ಲವೋ?
೪ ಇಂಥ ನಂಬಿಕೆ ಕ್ರಿಸ್ತನ ಮುಖಾಂತರ ದೇವರಲ್ಲಿ ನಮಗೆ ಉಂ
೫ ಟು; ನಮ್ಮಿಂದಲೇ ಎಂದು ಒಂದಾದರೂ ನೆನಸಿ ಕೊಳ್ಳ ನಮ್ಮ
ದ್ದಟ್ಟಕ್ಕೆ ನಾವೇ ಯೋಗ್ಯರಂತಲ್ಲ; ನಮ್ಮ ಯೋಗ್ಯತೆಯು
ದೇವರಿಂದಲೇ. ಅಕ್ಷರದ್ದಲ್ಲ, ಆತ್ಮದ್ದಾಗಿರುವ ಹೊಸ ಒಡಂಬಡಿ
ಕೆಯ ಸೇವಕರಾಗುವ ಹಾಗೆ ಅವನೇ ನಮ್ಮನ್ನು ಯೋಗ್ಯ
ಮಾಡಿದೆನು; ಯಾಕಂದರೆ ಅಕ್ಷರವು ಕೊಲ್ಲುತ್ತದೆ, ಆತ್ಮವು ಬ
೭ ದುಕಿಸುತ್ತದೆ. ಆದರೆ ಅಕ್ಷರಗಳಿಂದ ಕಲ್ಲುಗಳ ಮೇಲೆ ಕೆತ್ತಲ್ಪಟ್ಟಿ
ಮರಣದ ಸೇವೆಯು, ಇಸ್ರಯೇಲನ ಮಕ್ಕಳು ಮೋಶೆಯ
೮ ಮುಖವನ್ನು, ಅವನ ಮುಖದ ಇಲ್ಲದೆ ಹೋಗುವ ಮಹಿಮೆಯ
ನಿಮಿತ್ತ, ದೃಷ್ಟಿಸ ಕೂಡದ ಹಾಗೆ ಮಹಿಮೆಯುಳ್ಳದ್ದಾದರೆ,
ಆತ್ಮದ ಸೇವೆಯು ಹೆಚ್ಚಾಗಿ ಮಹಿಮೆ ಇಲ್ಲದೆ ಇರುವುದು ಹ್ಯಾ
೯ ಗೆ? ಯಾಕಂದರೆ ಶಿಕ್ಷೆಯ ನಿರ್ಣಯದ ಸೇವೆ ಮಹಿಮೆಯಾ
ಗಿದ್ದರೆ, ನೀತಿಯ ಸೇವೆ ಬಹು ಅಧಿಕವಾಗಿ ಮಹಿಮೆಯಲ್ಲಿ ಹೆ
೧೦ ಚ್ಚುವದು. ಯಾಕಂದರೆ ಈ ಪಕ್ಷದಲ್ಲಿ ಮಹಿಮೆ ಪಟ್ಟದ್ದು ಹೆ
೧೧ ಚ್ಚಾಗಿರುವ ಮಹಿಮೆಯ ನಿಮಿತ್ತ ಮಹಿಮೆ ಪಟ್ಟದ್ದಲ್ಲ. ಯಾ
ಕಂದರೆ ಇಲ್ಲದೆ ಹೋಗುವಂಥಾದ್ದು ಮಹಿಮೆಯಿಂದಿದ್ದರೆ, ನೆಲೆ
ಯಾದದ್ದು ಬಹು ಹೆಚ್ಚಾಗಿ ಮಹಿಮೆಯುಳ್ಳದ್ದು.
೧೨ ಹಾಗಾದರೆ ಇಂಥ ನಿರೀಕ್ಷೆಯುಳ್ಳವರಾಗಿ ಬಹು ಧೈರ್ಯ
೧೩ ಮಾಡುತ್ತೇವೆ. ಮತ್ತು ಇಸ್ರಯೇಲನ ಮಕ್ಕಳು ಇಲ್ಲದೆ ಹೋ
ಗುವಂಥಾದರ ಅಂತ್ಯವನ್ನು ನೋಡದ ಹಾಗೆ, ಮೋಶೆಯು ತ
ನ್ನ ಮುಖದ ಮೇಲೆ ಮುಸುಕು ಹಾಕಿ ಕೊಂಡ ಪ್ರಕಾರವಲ್ಲ.
೧೪ ಆದರೆ ಅವರ ಬುದ್ಧಿ ಕಠಿಣವಾಯಿತು; ಯಾಕಂದರೆ ಈದಿವಸದ
ವರೆಗೆ ಹಳೇ ಒಡಂಬಡಿಕೆ ಓದುವದರಲ್ಲಿ ಅದೇ ಮುಸುಕು ತೆಗೆ
೧೫ ಯಲ್ಪಡದೆ ಇರುತ್ತದೆ; ಕ್ರಿಸ್ತನಲ್ಲಿ ತೆಗದು ಹಾಕಲ್ಪಡುತ್ತದೆ. ಆದರೆ
ಈ ದಿವಸದ ವರೆಗೆ, ಮೋಶೆಯು ಓದಲ್ಪಡುವ ಸಮಯದಲ್ಲಿ,
೧೬ ಮುಸುಕು ಅವರ ಹೃದಯದ ಮೇಲೆ ಇರುವದು. ಆದರೆ ಕ
ರ್ತನ ಕಡೆಗೆ ತಿರುಗುವ ಸಮಯದಲ್ಲಿ, ಮುಸುಕು ತೆಗೆಯಲ್ಪ
೧೭ ಡುವದು. ಇದಲ್ಲದೆ ಕರ್ತನೇ ಆ ಆತ್ಮವು. ಕರ್ತನ ಆತ್ಮವು
ಎಲ್ಲಿಯೋ, ಅಲ್ಲಿ ಬಿಡಗಡೆಯು. ಆದರೆ ನಾವೆಲ್ಲರು ತೆಕೆದ
ಮುಖದಿಂದ ಕರ್ತನ ಮಹಿಮೆಯನ್ನು ಕನ್ನಡಿಯಲ್ಲಿ ನೋಡಿ,
ಆತ್ಮವಾದ ಕರ್ತನಿಂದಾದ ಹಾಗೆ, ಅದೇ ಹೋಲಿಕೆಯಾಗಿ ಮ
ಹಿಮೆಯಿಂದ ಮಹಿಮೆಗೆ ಮಾರ್ವಾಡುತ್ತೇವೆ.

## ೪. ಸಂಧಿ.

೧ ಆದದರಿಂದ ಈ ಸೇವೆಯನ್ನು ಹೊಂದಿ, ಕರುಣೆ ಪಟ್ಟ ಹಾ
ಗೆ ದಣಿಯೆವು; ಆದರೆ ನಾಚಿಕೆಯ ರಹಸ್ಯಗಳನ್ನು ಬೇಡೆಂದು
೨ ಬಿಟ್ಟು, ತಂತ್ರದಿಂದ ನಡಿಯದೆ, ದೇವರ ವಾಕ್ಯವನ್ನು ಕೆಡಿಸದೆ,
ಸತ್ಯದ ಪ್ರಕಟಣೆಯಿಂದ ಎಲ್ಲಾ ಮನುಷ್ಯರ ಮನಸ್ಸಾಕ್ಷಿಗೆ
ದೇವರ ಸನ್ನಿಧಿಯಲ್ಲಿ ನಮ್ಮನ್ನು ಪ್ರತಿಷ್ಠೆ ಮಾಡಿ ಕೊಳ್ಳು
ತ್ತೇವೆ.
೩ ಆದರೆ ನಮ್ಮ ಸುವಾರ್ತೆಯು ಮರೆಯಾಗಿದ್ದರೆ, ನಾಶವಾ
೪ ಗುವವರಿಗೆ ಮರೆಯಾಗಿದೆ; ದೇವರ ಹೋಲಿಕೆಯಾದ ಕ್ರಿಸ್ತನ
ಮಹಿಮೆಯ ಸುವಾರ್ತೆಯ ಕಾಂತಿಯು ಅವರಿಗೆ ಹೊಳೆಯದ
ಹಾಗೆ ಅವರಲ್ಲಿ ಈ ಲೋಕದ ದೇವರು ಅವಿಶ್ವಾಸಿಗಳ ಬುದ್ಧಿ
೫ ಯನ್ನು, ಕುರುಡು ಮಾಡಿದ್ದಾನೆ. ಯಾಕಂದರೆ ನಮ್ಮನ್ನು ನಾ
ವೇ ಅಲ್ಲ, ಕ್ರಿಸ್ತ ಯೇಸುವನ್ನು ಕರ್ತನೆಂದೂ, ನಮ್ಮನ್ನು ಯೇ
೬ ಸುವಿನ ನಿಮಿತ್ತ ನಿಮ್ಮ ದಾಸರೆಂದೂ, ಸಾರುತ್ತೇವೆ. ಯಾಕಂ
ದರೆ ಕತ್ತಲೆಯೊಳಗಿಂದ ಬೆಳಕನ್ನು ಪ್ರಕಾಶಿಸ ಹೇಳಿದ ದೇವರು
ತಾನೇ, ಯೇಸು ಕ್ರಿಸ್ತನ ಮುಖದಲ್ಲಿರುವ ದೇವರ ಮಹಿಮೆಯ ತಿ
ಳುವಿಕೆಯ ಬೆಳಕು ಆಗುವದಕ್ಕೆ, ನಮ್ಮ ಹೃದಯಗಳಲ್ಲಿ ಪ್ರ
ಕಾಶಿಸಿದ್ದಾನೆ.
೭ ಆದರೆ ಬಲವ ಹೆಚ್ಚುವಿಕೆ ನಮ್ಮಿಂದಲ್ಲ, ದೇವರದಾಗಿರುವ ಹಾ
ಗೆ ಈ ನಿಕ್ಷೇಪವು ಮಣ್ಣಿನ ಪಾತ್ರೆಗಳಲ್ಲಿ ನಮಗೆ ಉಂಟು. ಎಲ್ಲಾ
೮ ದರಲ್ಲಿ ಇರಿಕಿಸಲ್ಪಟ್ಟವರಾಗಿ ಇಕ್ಕಟ್ಟು ಪಡದೆ, ದಿಕ್ಕು ಕಾಣದವ
ರಾಗಿ ದಿಕ್ಕಿಲ್ಲದವರಾಗಿರದೆ, ಹಿಂಸೆ ಪಟ್ಟವರಾಗಿ ಕೈ ಬಿಡಲ್ಪಡದೆ,
೯ ಕೆಡವಲ್ಪಟ್ಟವರಾಗಿ ಕೆಡದೆ, ಯೇಸುವಿನ ಜೀವವೂ ನಮ್ಮ ಶರೀರ
ದಲ್ಲಿ ಪ್ರತ್ಯಕ್ಷವಾಗುವ ಹಾಗೆ, ಎಂದಿಗೂ ಕರ್ತನಾದ ಯೇಸು
ವಿನ ಸಾಯುವಿಕೆಯನ್ನು ಶರೀರದಲ್ಲಿ ಹೊತ್ತು ತಿರುಗುತ್ತೇವೆ.
೧೦ ಯಾಕಂದರೆ ನಮ್ಮ ಮರ್ತ್ಯವಾಂಸದಲ್ಲಿ ಯೇಸುವಿನ ಜೀವ
ವೂ ಪ್ರತ್ಯಕ್ಷವಾಗುವ ಹಾಗೆ, ಜೀವಿಸುವ ನಾವು ಎಂದಿಗೂ ಯೇ
೧೧ ಸುವಿನ ನಿಮಿತ್ತ ಮರಣಕ್ಕೆ ಒಪ್ಪಿಸಲ್ಪಡುತ್ತೇವೆ. ಹೀಗಿರಲಾಗಿ
ಮರಣವು ನಮ್ಮಲ್ಲಿ ಬಲವಾಗಿದೆ, ಆದರೆ ನಿಮ್ಮಲ್ಲಿ ಜೀವವು.
೧೩ ಇದಲ್ಲದೆ, ವಿಶ್ವಾಸಿಸಿದೆನು, ಆದದರಿಂದ ಮಾತಾಡಿದೆನು, ಎಂದು
ಬರೆದ ಪ್ರಕಾರ, ಅದೇ ವಿಶ್ವಾಸದ ಆತ್ಮವುಳ್ಳವರಾಗಿ, ನಾವೂ
೧೪ ವಿಶ್ವಾಸಿಸುತ್ತೇವೆ, ಆದದರಿಂದ ಮಾತಾಡುತ್ತೇವೆ. ಹ್ಯಾಗಂದರೆ
ಕರ್ತನಾದ ಯೇಸುವನ್ನು ಎಬ್ಬಿಸಿದವನು ನಮ್ಮನೂಡಾ ಯೇಸು
ವಿನ ಮುಖಾಂತರ ಎಬ್ಬಿಸಿ, ನಿಮ್ಮ ಸಂಗಡ ಮುಂದೆ ನಿಲ್ಲಿಸುವ
೧೫ ನೆಂದು ಬಲ್ಲೆವು. ಯಾಕಂದರೆ ಅಧಿಕವಾಗುವ ಕೃಪೆಯು ಅದೇ



ಕರ ಸ್ತೋತ್ರದಿಂದ ದೇವರ ಮಹಿಮೆಗಾಗಿ ಹೆಚ್ಚುವ ಹಾಗೆ, ಎಲ್ಲಾ
೧೬ ನಿಮಗೋಸ್ಕರವೇ. ಆದದರಿಂದ ದಣಿಯೆವು; ಆದರೆ ನಮ್ಮ
ಹೊರಗಿನ ಮನುಷ್ಯನು ನಾಶವಾದರೂ, ಒಳಗಿನವನು ದಿನದಿನ
೧೭ ಕ್ಕೆ ಹೊಸಬನಾಗುತ್ತಾನೆ. ಯಾಕಂದರೆ ಕ್ಷಣಮಾತ್ರದ ಹೌರ
ವಾದ ನಮ್ಮ ಉಪದ್ರವು ಹೆಚ್ಚಿಗಿಂತ ಹೆಚ್ಚಾದ ನಿತ್ಯ ಮಹಿಮೆ
ಯ ಭಾರವನ್ನು ನಮಗೆ ಉಂಟುಮಾಡುತ್ತದೆ; ಕಾಣುವವುಗಳನ್ನು
೧೮ ಲ್ಲ, ಕಾಣದವುಗಳನ್ನೇ ದೃಷ್ಟಿಸುತ್ತೇವಲ್ಲ? ಯಾಕಂದರೆ ಕಾ
ಣುವವುಗಳು ತಾತ್ಕಾಲಿಕವು, ಕಾಣದವುಗಳು ನಿತ್ಯವು.

## ೫. ಸಂಧಿ.

೧ ಯಾಕಂದರೆ ಗುಡಾರವಾಗಿರುವ ನಮ್ಮ ಭೂಭಾವವಾದ ಮ
ನೆಯು ಬಿಚ್ಚಲ್ಪಟ್ಟರೆ, ಕೈಕೆಲಸವಲ್ಲದ ನಿತ್ಯ ಮನೆಯಾಗಿರುವ
ದೇವರಿಂದಾದ ಕಟ್ಟುವಿಕೆಯು ಆಕಾಶಗಳಲ್ಲಿ ನಮಗುಂಟೆಂದು ಬ
೨ ಲ್ಲೆವು. ಹ್ಯಾಗಂದರೆ ಪರಲೋಕದಿಂದಿರುವ ನಮ್ಮ ನಿವಾಸವನ್ನು
ಮೇಲೆ ಹೊದ್ದು ಕೊಳ್ಳ ಅಪೇಕ್ಷಿಸಿ, ಇದರಲ್ಲಿ ಮೂಲುಗುತ್ತೇವೆ;
೩ ನಾವು ಹೊದ್ದು ಕೊಂಡು ಬತ್ತಲೆಯಲ್ಲದವರಾಗಿ ಕಾಣಿಸಲ್ಪಟ್ಟಿ
೪ ಕೆ, ಸರಿ. ಯಾಕಂದರೆ ಗುಡಾರದಲ್ಲಿರುವ ನಾವು ಭಾರ ಹೊತ್ತು
ಮೂಲುಗುತ್ತೇವೆ; ಏನಂದರೆ ವಸ್ತ್ರ ತೆಗೆಯುವದಕ್ಕಲ್ಲ, ಮ
ರ್ತ್ಯವಾದದ್ದು ಜೀವದಿಂದ ನುಂಗಲ್ಪಡುವ ಹಾಗೆ ಮೇಲೆ ಹೊ
೫ ದ್ದು ಕೊಳ್ಳುವದಕ್ಕೆ ಇಚ್ಛೈಸುತ್ತೇವೆ. ಇದಲ್ಲದೆ ಇದಕ್ಕಾಗಿ
ಯೇ ನಮ್ಮನ್ನು ಸಿದ್ಧ ಮಾಡಿದವನು, ಆತ್ಮನ ಮುಂಗಡವನ್ನು
೬ ನಮಗೆ ಕೊಟ್ಟ ದೇವರೇ. ಹೀಗಿರಲಾಗಿ ಯಾವಾಗಲೂ ಧೈರ್ಯ
ಪಟ್ಟು, ಶರೀರದಲ್ಲಿ ಸ್ವವಾಸವಾಗಿ ಕರ್ತನಿಗೆ ಪರವಾಸವಾಗಿದ್ದೇ
೭ ವೆಂದು ತಿಳಿದು, ದೃಷ್ಟಿಯಿಂದಲ್ಲ ವಿಶ್ವಾಸದಿಂದಲೇ ನಡೆದು
೮ ಕೊಳ್ಳುವವರಾಗಿದ್ದು, ಹ್ಯಾಗಾದರೂ ಧೈರ್ಯ ಪಟ್ಟು, ಶರೀರ
ಕ್ಕೆ ಪರವಾಸವಾಗಿ ಕರ್ತನ ಬಳಿಯ ಸ್ವವಾಸವಾಗ ಬಹು ಹೆ
೯ ಚ್ಚಾಗಿ ಅಪೇಕ್ಷಿಸುತ್ತೇವೆ. ಆದದರಿಂದ ಸ್ವವಾಸವಾಗಿದ್ದರೂ, ಪ
ರವಾಸವಾಗಿದ್ದರೂ, ಅವನನ್ನು ಮೆಚ್ಚಿಸುವ ಮಾನವನ್ನು ಆಶಿಸು
೧೦ ತ್ತೇವೆ. ಯಾಕಂದರೆ ಒಬ್ಬೊಬ್ಬನು ಶರೀರದಲ್ಲಿ ಆದವುಗಳ
ನ್ನು, ಒಳ್ಳೇದಾಗಲಿ ಕೆಟ್ಟದ್ದಾಗಲಿ, ಮಾಡಿದ ಪ್ರಕಾರ ಹೊಂದುವ
ಹಾಗೆ, ನಾವೆಲ್ಲರು ಕ್ರಿಸ್ತನ ನ್ಯಾಯಾಸನದ ಮುಂದೆ ಕಾಣಿಸಿ
ಕೊಳ್ಳ ಬೇಕು.
೧೧ ಹೀಗಿರುವದರಿಂದ ಕರ್ತನ ಭಯವನ್ನರಿತು, ಮನುಷ್ಯರನ್ನು
ಸಮ್ಮತಿ ಪಡಿಸುತ್ತೇವೆ; ಆದರೆ ದೇವರಿಗೆ ಪ್ರತ್ಯಕ್ಷವಾಗಿದ್ದೇವೆ; ಮ
ತ್ತು ನಿಮ್ಮ ಮನಸ್ಸಾಕ್ಷಿಗಳಲ್ಲಿಯೂ ಪ್ರತ್ಯಕ್ಷವಾಗಿದ್ದೇವೆಂದು ನಂ
೧೨ ಬುತ್ತೇನೆ. ಯಾಕಂದರೆ ತಿರಿಗಿ ನಮ್ಮನ್ನು ನಿಮಗೆ ಪ್ರತಿಷ್ಠೆ ಮಾ
ಡಿ ಕೊಳ್ಳುವದಲ್ಲ; ಆದರೆ ಹೃದಯದಿಂದಲ್ಲ, ಮುಖದಿಂದಲೇ
ಹೆಚ್ಚಳ ಪಡುವವರಿಗೆ ಎದುರಾಗಿ ನಿಮಗೆ ಮಾತು ಇರುವ ಹಾಗೆ,
ನಮಗೋಸ್ಕರ ಹೆಚ್ಚಳ ಪಡುವ ಹಾಗೆ ಅವ್ಕಾಶವನ್ನು ಕೊಡು
೧೩ ತ್ತೇನೆ. ಯಾಕಂದರೆ ನಾವು ಪರವಶವಾಗಿದ್ದರೆ, ದೇವರಿಗೆ; ಸ್ವಸ್ಥ
ಬುದ್ಧಿಯಿಂದಿದ್ದರೆ, ನಿಮಗೆ.
೧೪ ಯಾಕಂದರೆ ಕ್ರಿಸ್ತನ ಪ್ರೀತಿಯು ನಮ್ಮನ್ನು ಇರಿಕಿಸುತ್ತದೆ;
ಯಾಕಂದರೆ ಒಬ್ಬನು ಎಲ್ಲರಿಗೋಸ್ಕರ ಸತ್ತವನಾದರೆ, ಎಲ್ಲ
೧೫ ರು ಸತ್ತರು ಸರಿ; ಮತ್ತು ಬದುಕುವವರು ಇನ್ನೂ ತಮಗಲ್ಲ,
ತಮಗೋಸ್ಕರ ಸತ್ತು ಎಬ್ಬಿಸಲ್ಪಟ್ಟವನಿಗೆ ಬದುಕುವ ಹಾಗೆ,
ಅವನು ಎಲ್ಲರಿಗೋಸ್ಕರ ಸತ್ತನು ಎಂದು ನಿರ್ಣಯಿಸುತ್ತೇವೆ.
೧೬ ಹೀಗಿರುವದರಿಂದ ನಾವು ಈಗಿನಿಂದ ಯಾವನನ್ನೂ ಮಾಂಸದ
ಪ್ರಕಾರ ಅರಿಯೆವು; ಕ್ರಿಸ್ತನನ್ನು ಸಹ ಮಾಂಸದ ಪ್ರಕಾರ ಅರಿದ್ದಿ
೧೭ ರೂ, ಈಗ ಇನ್ನೂ ಅರಿಯೆವು. ಹಾಗಾದರೆ ಒಬ್ಬನು ಕ್ರಿಸ್ತನ
ಲ್ಲಿದ್ದರೆ, ಹೊಸ ಸೃಷ್ಟಿಯೇ; ಹಳೇಯವುಗಳು ಕಳೆದು ಹೋ
೧೮ ದವು; ಇಗೋ, ಎಲ್ಲಾ ಹೊಸದಾಯಿತು. ಆದರೆ ಎಲ್ಲಾ ನಮ್ಮ
ನ್ನು ಯೇಸು ಕ್ರಿಸ್ತನ ಮುಖಾಂತರ ತನಗೆ ಅನ್ಯೋನ್ಯ ಮಾ
ಡಿ, ಅನ್ಯೋನ್ಯದ ಸೇವೆಯನ್ನು ನಮಗೆ ಕೊಟ್ಟ ದೇವರಿಂದ
೧೯ ಲೇ. ಏನಂದರೆ ದೇವರು ಕ್ರಿಸ್ತನಲ್ಲಿದ್ದು, ಲೋಕವನ್ನು ತನಗೆ
ಅನ್ಯೋನ್ಯ ಮಾಡಿ, ಅವರ ಅಕ್ರಮಗಳನ್ನು ಅವರಿಗೆ ಎಣಿಸದೆ,
೨೦ ಅನ್ಯೋನ್ಯದ ಮಾತನ್ನು ನಮ್ಮಲ್ಲಿ ಇಟ್ಟಿದ್ದಾನೆ. ಹಾಗಾದರೆ
ದೇವರು ನಮ್ಮ ಮುಖಾಂತರ ಬುದ್ಧಿ ಹೇಳುವ ಪ್ರಕಾರ, ಕ್ರಿಸ್ತನಿ
ಗೋಸ್ಕರ ರಾಯಭಾರಿಗಳಾಗಿದ್ದೇವೆ: ದೇವರಿಗೆ ಅನ್ಯೋನ್ಯವಾ
೨೧ ಗಿರೆಂದು, ಕ್ರಿಸ್ತನಿಗೆ ಬದಲಾಗಿ ಬೇಡಿ ಕೊಳ್ಳುತ್ತೇವೆ. ಯಾಕಂದ
ರೆ ನಾವು ಅವನಲ್ಲಿ ದೇವರ ನೀತಿಯಾಗುವ ಹಾಗೆ, ಪಾಪವನ್ನರಿ
ಯದವನನ್ನು ನಮಗೋಸ್ಕರ ಪಾಪವಾಗ ಮಾಡಿದನು.

## ೬. ಸಂಧಿ.

೧ ಇದಲ್ಲದೆ ಅವನ ಕೂಡ ಕೆಲಸ ಮಾಡುವವರಾಗಿ, ನೀವು ದೇ
ವರ ಕೃಪೆಯನ್ನು ವ್ಯರ್ಥವಾಗಿ ಹೊಂದದ ಹಾಗೆ, ಬುದ್ಧಿ ಹೇ
೨ ಳುತ್ತೇವೆ. ಯಾಕಂದರೆ ತಕ್ಕ ಸಮಯದಲ್ಲಿ ನಿನ್ನನ್ನು ಆಲೈ
ಸಿ, ರಕ್ಷಣೆಯ ದಿನದಲ್ಲಿ ನಿನ್ನ ಸಹಾಯಕ್ಕೆ ಬಂದೆನೆಂದು ಹೇ
ಳುತ್ತಾನೆ. ಇಗೋ, ಈಗಲೇ ಒಳ್ಳೇ ತಕ್ಕ ಸಮಯವು; ಇಗೋ,
೩ ಈಗಲೇ ರಕ್ಷಣೆಯ ದಿನವು. ಸೇವೆಯು ನಿಂದೆ ಪಡದ ಹಾಗೆ,
೪ ನಾವು ಯಾವದರಲ್ಲಿಯೂ ಅಟಂಕವೇನೂ ಕೊಡದೆ, ಬಹು ತಾ
ಳ್ಮೆಯಲ್ಲಿಯೂ, ಉಪದ್ರವಗಳಲ್ಲಿಯೂ, ಸಂಕಟಗಳಲ್ಲಿಯೂ,
೫ ಇಕ್ಕಟ್ಟುಗಳಲ್ಲಿಯೂ, ಚೆಟ್ಟುಗಳಲ್ಲಿಯೂ, ಶೆಕೆಗಳಲ್ಲಿಯೂ,
ಕಲಹಗಳಲ್ಲಿಯೂ, ಕಷ್ಟಗಳಲ್ಲಿಯೂ, ಜಾಗರಗಳಲ್ಲಿಯೂ, ಉ
೬ ಪವಾಸಗಳಲ್ಲಿಯೂ, ನಿರ್ಮಲತ್ವದಲ್ಲಿಯೂ, ತಿಳುವಿಕೆಯಲ್ಲಿ
ಯೂ, ದೀರ್ಘಶಾಂತಿಯಲ್ಲಿಯೂ, ದಯೆದಲ್ಲಿಯೂ, ಪರಿ
೭ ಶುದ್ಧಾತ್ಮದಲ್ಲಿಯೂ, ಕಪಟವಿಲ್ಲದ ಪ್ರೀತಿಯಲ್ಲಿಯೂ, ಸತ್ಯದ
ವಾಕ್ಯದಲ್ಲಿಯೂ, ದೇವರ ಬಲದಲ್ಲಿಯೂ, ಎತ ಬಲ ಕೈಗಳ
೮ ನೀತಿಯ ಆಯುಧಗಳಿಂದಲೂ, ಮಾನ ಅಪಮಾನಗಳಿಂದಲೂ,
ಕೀರ್ತಿ ಅಪಕೀರ್ತಿಗಳಿಂದಲೂ, ಮೋಸಗಾರರ ಹಾಗಿದ್ದು ಸ
ತ್ಯವಂತರಾಗಿಯೂ, ಅಪರಿಚಿತರ ಹಾಗಿದ್ದು ಪರಿಚಿತರಾಗಿಯೂ,
೯ ಸಾಯುವವರ ಹಾಗಿದ್ದು, ಇಗೋ, ಬದುಕುತ್ತೇವೆ, ಶಿಕ್ಷೆ ಪಡುವವ
ರ ಹಾಗಿದ್ದು ಕೊಲ್ಲಲ್ಪಡದವರಾಗಿಯೂ, ದುಃಖ ಪಡುವವರ ಹಾ
೧೦ ಗಿದ್ದು ಎಂದಿಗೂ ಸಂತೋಷ ಪಡುವವರಾಗಿಯೂ, ದರಿದ್ರರ
ಹಾಗಿದ್ದು ಅನೇಕರಿಗೆ ಐಶ್ವರ್ಯ ಕೊಡುವವರಾಗಿಯೂ, ಏನೂ
ಇಲ್ಲದವರ ಹಾಗಿದ್ದು ಎಲ್ಲಾ ಉಂಟಾದವರಾಗಿಯೂ, ಎಲ್ಲಾದರಲ್ಲಿ
ನಮ್ಮನ್ನು ದೇವರ ಸೇವಕರೆಂದು ಪ್ರತಿಷ್ಠೆ ಮಾಡಿ ಕೊಳ್ಳುತ್ತೇವೆ.
೧೧ ನಮ್ಮ ಬಾಯಿ ನಿಮ್ಮ ಕಡೆಗೆ ತೆಕೆದನೆ, ಕೊರಿಂಥ್ಯರೇ; ನಮ್ಮ
೧೨ ಹೃದಯವು ವಿಸ್ತಾರವಾಯಿತು; ನಮ್ಮಲ್ಲಿ ನೀವು ಇಕ್ಕಟ್ಟು ಪ
೧೩ ಡುವದಿಲ್ಲ; ನಿಮ್ಮ ಕರುಳುಗಳಲ್ಲಿಯೇ ಇಕ್ಕಟ್ಟು ಪಡುತ್ತೀರಿ. ಆದ
ರೆ ಅದೇ ಪ್ರತಿ ಫಲಕ್ಕಾಗಿ, ನೀವು ಸಹ ವಿಸ್ತರಿಸಿ ಕೊಳ್ಳಿರಿ; ನನ್ನ
ಮಕ್ಕಳಿಗೆಂದು ಹೇಳುತ್ತೇನೆ.

೧೪ ಅವಿಶ್ವಾಸಿಗಳ ಕೂಡ ಇಜ್ಜೋಡು ನೊಗದಲ್ಲಿರ ಬೇಡಿರಿ. ಯಾಕಂದರೆ ನೀತಿಗೂ ಅನೀತಿಗೂ ಗೊಡವೆ ಏನು? ಬೆಳಕಿಗೆ ಕ
೧೫ ತ್ತಲೆಯ ಸಂಗತ ಅನ್ಯೋನ್ಯವೇನು? ಕ್ರಿಸ್ತನಿಗೂ ಬೆಲಿಯಾಳಿಗೂ ಒಪ್ಪಿಗೆ ಏನು? ವಿಶ್ವಾಸಿಸುವವನಿಗೆ ಅವಿಶ್ವಾಸಿಯ ಸಂಗತ ಪಾಲು ಏನು? ದೇವರ ಮಂದಿರಕ್ಕೆ ವಿಗ್ರಹಗಳ ಸಂಗತ ಒತಂಬ
೧೬ ಡಿಕೆ ಏನು? ಯಾಕಂದರೆ ನಾನು ಅವರಲ್ಲಿ ವಾಸ ಮಾಡಿ, ಸಂಚರಿಸುವೆನು; ಮತ್ತು ಅವರ ದೇವರಾಗಿರುವೆನು, ಅವರು ನನಗೆ ಪ್ರಜೆ ಯಾಗಿರುವರು, ಎಂದು ದೇವರು ಹೇಳಿರುವ ಪ್ರಕಾರ ನೀವು ಜೀ
೧೭ ವವುಳ್ಳ ದೇವರ ಮಂದಿರವಾಗಿದ್ದೀರಿ. ಆದದರಿಂದ ಕರ್ತನು ಹೇಳುವದೇನಂದರೆ, ಅವರ ಮಧ್ಯದಲ್ಲಿಂದ ಹೊರಟು ಬಂದು, ಅಗಲಿ, ಅಶುದ್ಧವಾದದ್ದನ್ನು ಮುಟ್ಟದೆ ಇರ್ರಿ; ಆಗ ನಾನು ನಿಮ್ಮನ್ನು
೧೮ ಅಂಗೀಕರಿಸುವೆನು, ಮತ್ತು ನಿಮಗೆ ತಂದೆಯಾಗಿರುವೆನು, ನೀವು ನನಗೆ ಕುಮಾರ ಕುಮಾರ್ತಿಗಳು ಆಗಿರುವಿರಿ, ಎಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ.

## ೩. ಸಂಧಿ.

೧ ಹಾಗಾದರೆ, ಪ್ರಿಯರೇ, ಈ ವಾಗ್ದತ್ತಗಳನ್ನು ಹೊಂದಿದವರಾಗಿ, ಮಾಂಸ ಆತ್ಮಗಳ ಎಲ್ಲಾ ಕಲ್ಮಷದಿಂದ ನಮ್ಮನ್ನು ಶುಚಿ ಮಾಡಿ ಕೊಂಡು, ಪರಿಶುದ್ಧತ್ವವನ್ನು ದೇವರ ಭಯದಲ್ಲಿ ಪೂರೈಸುವ.

೨ ನಮ್ಮನ್ನು ಅಂಗೀಕರಿಸಿರಿ; ನಾವು ಯಾವನಿಗೂ ಅನ್ಯಾಯ ಮಾಡಲಿಲ್ಲ, ಯಾವನಿಗೂ ನಷ್ಟ ಮಾಡಲಿಲ್ಲ, ಯಾವನಿಗೂ
೩ ಮೋಸ ಮಾಡಲಿಲ್ಲ. ಲಜ್ಜೆ ನಿರ್ಣಯಕ್ಕಾಗಿ ನಾನು ಮಾತಾಡುವದಿಲ್ಲ; ಯಾಕಂದರೆ ಕೂಡ ಸಾಯುವದಕ್ಕೂ ಕೂಡ ಬದುಕುವದಕ್ಕೂ ನಮ್ಮ ಹೃದಯಗಳಲ್ಲಿ ಇದ್ದೀರೆಂದು, ಮುಂಚೆ ಹೇಳಿ
೪ ದ್ದೇನೆ. ನಿಮ್ಮ ಕಡೆಗೆ ನನಗೆ ಬಹಳ ಧೈರ್ಯವು, ನಿಮಗೋಸ್ಕರ ನನಗೆ ಬಹಳ ಹೆಚ್ಚಳ ಉಂಟು. ಆದರಣೆಯಿಂದ ತುಂಬಿದವನಾಗಿದ್ದೇನೆ, ನಮ್ಮ ಎಲ್ಲಾ ಉಪದ್ರದಲ್ಲಿ ಸಂತೋಷದಿಂದ ಅತಿ
೫ ಪೂರಿತನಾಗಿದ್ದೇನೆ. ಹ್ಯಾಗಂದರೆ ನಾವು ಮಕೆದೋನ್ಯಕ್ಕೆ ಬಂದಾಗ, ನಮ್ಮ ಮಾಂಸಕ್ಕೆ ಏನೂ ವಿಶ್ರಾಂತಿ ಇಲ್ಲದೆ, ಎಲ್ಲಾದರಲ್ಲಿ ಉಪದ್ರ ಪಡುತ್ತಿದ್ದೆವು; ಹೊರಗೆ ಯುದ್ಧಗಳು, ಒಳಗೆ ಭಯಗಳು ಇದ್ದವು.
೬ ಆದರೆ ದೀನರನ್ನು ಆದರಿಸುವ ದೇವರು, ತೀತನು ಬಂದದರಿಂದ, ಅವನು ಬಂದದರಿಂದ ಮಾತ್ರನಲ್ಲ, ಅವನು ನಿಮ್ಮಲ್ಲಿ ಹೊಂದಿದ
೭ ಆದರಣೆಯಿಂದಲೂ, ನಮ್ಮನ್ನು ಆದರಿಸಿದನು. ಏನಂದರೆ ನಿಮ್ಮ ಅತ್ಯಾಶೆಯನ್ನೂ, ನಿಮ್ಮ ಗೋಳಾಟವನ್ನೂ, ನನ್ನ ವಿಷಯವಾದ ನಿಮ್ಮ ಆಸಕ್ತಿಯನ್ನೂ, ನಮಗೆ ತಿಳಿಸಿದನು; ಆದದ
೮ ರಿಂದ ಹೆಚ್ಚಾಗಿ ಸಂತೋಷ ಪಟ್ಟೆನು. ಹ್ಯಾಗಂದರೆ ನಾನು ಪತ್ರಿಕೆಯಿಂದ ನಿಮ್ಮನ್ನು ದುಃಖ ಪಡಿಸಿದಾಗ್ಯೂ, ಪಶ್ಚಾತ್ತಾಪ ಪಟ್ಟಿದ್ದರೂ, ಪಶ್ಚಾತ್ತಾಪ ಪಡುವದಿಲ್ಲ; ಯಾಕಂದರೆ ಆ ಪತ್ರಿಕೆ ಘಳಿಗೆ
೯ ಯಾದರೂ ನಿಮ್ಮನ್ನು ದುಃಖ ಪಡಿಸಿತೆಂದು ನೋಡುತ್ತೇನೆ. ಈಗ ನೀವು ದುಃಖ ಪಟ್ಟದರಿಂದಲ್ಲ, ಮಾನಸಾಂತರಕ್ಕೆ ದುಃಖ ಪಟ್ಟದರಿಂದ, ಸಂತೋಷ ಪಡುತ್ತೇನೆ; ಯಾಕಂದರೆ ನಮ್ಮಿಂದ ಯಾವದರಲ್ಲಿಯೂ ನಷ್ಟ ಪಡದ ಹಾಗೆ, ದೇವರಿಗೆ ಅನುಕೂಲವಾಗಿ
೧೦ ದುಃಖಪಟ್ಟಿರಿ. ಯಾಕಂದರೆ ದೇವರಿಗೆ ಅನುಕೂಲವಾದ ದುಃಖವು ರಕ್ಷಣೆಗಾಗಿ ಪಶ್ಚಾತ್ತಾಪವಿಲ್ಲದ ಮಾನಸಾಂತರವನ್ನು ಹುಟ್ಟಿಸುತ್ತದೆ; ಆದರೆ ಲೋಕದ ದುಃಖವು ಮರಣವನ್ನು ಹುಟ್ಟಿಸುತ್ತ
೧೧ ದೆ. ಹ್ಯಾಗಂದರೆ, ಇಗೋ, ನೀವು ದೇವರಿಗೆ ಅನುಕೂಲವಾದ ದುಃಖ ಪಟ್ಟದ್ದೇ, ನಿಮ್ಮಲ್ಲಿ ಎಂಥ ಜಾಗ್ರತೆಯನ್ನು, ಎಂಥ ಪ್ರತ್ಯುತ್ತರವನ್ನೂ, ಎಂಥ ಕರ್ಕಶಕೆಯನ್ನು, ಎಂಥ ಭಯವನ್ನು, ಎಂಥ ಅತ್ಯಾಶೆಯನ್ನು, ಎಂಥ ಆಸಕ್ತಿಯನ್ನು, ಎಂಥ ಪ್ರತಿದಂಡನೆಯನ್ನು, ಹುಟ್ಟಿಸಿತು! ಈ ಕಾರ್ಯದಲ್ಲಿ ನಿಮ್ಮನ್ನು ಎಲ್ಲಾ
೧೨ ವಿಷಯವಾಗಿ ನಿರ್ಮಲರೆಂದು ಸ್ಥಾಪಿಸಿ ಕೊಂಡಿದ್ದೀರಿ. ಹಾಗಾದರೆ, ನಾನು ನಿಮಗೆ ಬರೆದಿದ್ದಾಗ್ಯೂ, ಅನ್ಯಾಯ ಮಾಡಿದವನಿಗೋಸ್ಕರವಲ್ಲ, ಅನ್ಯಾಯ ಪಟ್ಟವನಿಗೋಸ್ಕರವಲ್ಲ, ನಿಮ್ಮ ನಿಮಿತ್ತವಾಗಿರುವ ನಮ್ಮ ಜಾಗ್ರತೆಯು ದೇವರ ಸನ್ನಿಧಿಯಲ್ಲಿ ನಿ
೧೩ ಮ್ಮೆದುರಿಗೆ ತೋರ ಬರುವದಕ್ಕೋಸ್ಕರ ಬರೆದೆನು.

ಇದಕ್ಕೋಸ್ಕರ ನಿಮ್ಮ ಆದರಣೆಯಲ್ಲಿ ಆದರಣೆ ಹೊಂದಿದ್ದೇನೆ; ಮತ್ತು ತೀತನ ಸಂತೋಷದಲ್ಲಿ ಅತ್ಯಧಿಕವಾದ ಸಂತೋ
೧೪ ಷ ಪಟ್ಟೆವು. ಏನಂದರೆ ಅವನ ಆತ್ಮವು ನಿಮ್ಮೆಲ್ಲರಿಂದ ಉಪಶಮನವಾಯಿತು; ಯಾಕಂದರೆ ನಾನು ಅವನಿಗೆ ನಿಮ್ಮ ವಿಷಯದಲ್ಲಿ ಹೆಚ್ಚಳ ಮಾತು ಹೇಳಿದ್ದರೆ, ನಾಚಿಕೆ ಪಡಲಿಲ್ಲ. ಆದರೆ ನಾವು ಹ್ಯಾಗೆ ಸತ್ಯದಿಂದ ನಿಮಗೆ ಎಲ್ಲಾ ಹೇಳಿದೆವೋ, ಹಾಗೆಯೇ
೧೫ ತೀತನ ಮುಂದೆ ಮಾಡಿದ ನಮ್ಮ ಹೆಚ್ಚಳವು ಸಹ ಸತ್ಯವಾಯಿತು. ಮತ್ತು ಭಯದಿಂದಲೂ, ನಡುಗುನಿಂದಲೂ, ಅವನನ್ನು
೧೬ ಅಂಗೀಕರಿಸಿದವರಾದ ನಿಮ್ಮೆಲ್ಲರ ವಿಧೇಯತ್ವವನ್ನು ಅವನು ನೆನಪು ಮಾಡಿ ಕೊಳ್ಳುವದರಿಂದ, ನಿಮ್ಮ ಮೇಲೆ ಅವನ ಕರುಳು ಹೆಚ್ಚಾಗಿ ಮರುಗುತ್ತದೆ. ಎಲ್ಲಾದರಲ್ಲಿ ನಿಮ್ಮನ್ನು ಕುರಿತು ಧೈ
೧೬ ರ್ಯವಾಗಿರುವದರಿಂದ ಸಂತೋಷ ಪಡುತ್ತೇನೆ.

## ೪. ಸಂಧಿ.

೧ ಇದಲ್ಲದೆ, ಸಹೋದರರೇ, ಮಕೆದೋನ್ಯದ ಸಭೆಗಳಲ್ಲಿ ಕೊಡಲ್ಪಟ್ಟಿರುವ ದೇವರ ಕೃಪೆಯನ್ನು ನಿಮಗೆ ತಿಳಿಸುತ್ತೇನೆ. ಏನಂ
೨ ದರೆ ಉಪದ್ರದ ಬಹಳ ಪರೀಕ್ಷೆಯಲ್ಲಿ ಅವರ ಸಂತೋಷದ ಹೆಚ್ಚುವಿಕೆಯೂ, ಅವರ ಅಗಾಧವಾದ ಬಡತನವೂ, ಅವರ ಉದಾರತ್ವದ
೩ ಐಶ್ವರ್ಯಕ್ಕಾಗಿ ಹೆಚ್ಚಿತು. ನಾನು ಸಾಕ್ಷಿಯಾಗಿ, ಅವರು, ಸಾಮರ್ಥ್ಯದ ಪ್ರಕಾರವೂ, ಸಾಮರ್ಥ್ಯ ವಿಚಾರಿಯೂ, ಸ್ವ
೪ ಚಿತ್ತದಿಂದ, ನಾವು ದಾನವನ್ನೂ ಪರಿಶುದ್ಧರಿಗಾಗಿರುವ ಸೇವೆಯ ಧರ್ಮವನ್ನೂ ತೆಗೆದು ಕೊಳ್ಳ ಬಹಳ ಬಿನ್ನಹದಿಂದ ನಮ್ಮನ್ನು
೫ ಬೇಡಿ ಕೊಂಡು, ನಾವು ಕೋರಿದ ಹಾಗಲ್ಲ, ತಮ್ಮನ್ನೇ ಪೊದಲು ಕರ್ತನಿಗೂ, ದೇವರ ಚಿತ್ತದಿಂದ ನಮಗೂ, ಕೊಟ್ಟರು. ಆದದ
೬ ರಿಂದ ನಾವು ತೀತನಿಗೆ, ಅವನು ಮುಂತೊಡಗಿದ ಪ್ರಕಾರ, ಈ ಕೃಪೆಯನ್ನು ಸಹ ನಿಮ್ಮಲ್ಲಿ ತೀರಿಸ ಬೇಕೆಂದು ಬೇಡಿ ಕೊಂಡೆವು.

ಆದರೆ ವಿಶ್ವಾಸದಲ್ಲಿಯೂ, ವಾಕ್ಯದಲ್ಲಿಯೂ, ತಿಳುವಿಕೆಯ
೭ ಲ್ಲಿಯೂ, ಎಲ್ಲಾ ಜಾಗ್ರತೆಯಲ್ಲಿಯೂ, ನಿಮ್ಮಿಂದ ನಮಗಾಗುವ ಪ್ರೀತಿಯಲ್ಲಿಯೂ, ಎಲ್ಲಾದರಲ್ಲಿ ಹೆಚ್ಚುವ ಪ್ರಕಾರ ಈ ಕೃಪೆಯ
೮ ಲ್ಲಿಯೂ ನೀವು ಹೆಚ್ಚುವ ಹಾಗೆ, ಲಜ್ಜೆಯ ಪ್ರಕಾರವಲ್ಲ, ಮತ್ತೊಬ್ಬರ ಜಾಗ್ರತೆಯನ್ನು ನೋಡಿ, ನಿಮ್ಮ ಪ್ರೀತಿಯ ಸತ್ಯವ
೯ ನ್ನು ಪರೀಕ್ಷಿಸುವದಕ್ಕೆ ಹೇಳುತ್ತೇನೆ. ಯಾಕಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯನ್ನು ತಿಳಿಯುತ್ತೀರಿ; ಏ
ನಂದರೆ ಅವನು ಐಶ್ವರ್ಯವಂತನಾಗಿದ್ದು, ನೀವು ಅವನ ಬಡತನದಿಂದ ಐಶ್ವರ್ಯವಂತರಾಗುವ ಹಾಗೆ, ನಿಮಗೋಸ್ಕರ ಬ
೧೦ ಡವನಾದನು. ಮತ್ತು ಇದರಲ್ಲಿ ಆಲೋಚನೆ ಹೇಳುತ್ತೇನೆ; ಯಾಕಂದರೆ ಹೋದ ವರುಷದಿಂದ ಮಾಡುವದನ್ನಲ್ಲದೆ, ಇಚ್ಛೈಸುವದನ್ನು ಸಹ, ಮುಂತೊಡಗಿದವರಾದ ನಿಮಗೆ ಇದು ಒಳ್ಳೇದು.
೧೧ ಆದರೆ ಇಚ್ಛೈಸುವ ಮನಸ್ಸು ಇದ್ದ ಪ್ರಕಾರವೇ, ಉಂಟಾದದ್ದರಿಂದ ಪೂರೈಸುವಿಕೆಯು ಆಗುವ ಹಾಗೆ, ಈಗ ಮಾಡುವದನ್ನು ಸಹ ಪೂರೈಸಿರಿ.

೧೨ ಯಾಕಂದರೆ ಒಬ್ಬನಿಗೆ ಸಿದ್ಧ ಮನಸ್ಸು ಉಂಟಾಗಿದ್ದರೆ, ಇ
೧೩ ಲ್ಲದ ಪ್ರಕಾರವಲ್ಲ, ಇದ್ದ ಪ್ರಕಾರವೇ ಹಿತವಾಗಿದೆ. ಯಾಕಂದರೆ ಮತ್ತೊಬ್ಬರಿಗೆ ಲಘುವೂ, ನಿಮಗೆ ಉಪದ್ರವೂ, ಆಗ ಬೇಕೆಂದ
೧೪ ಲ್ಲಿ, ಸಮತ್ವದ ಪ್ರಕಾರ, ಈಗಿನ ಕಾಲದಲ್ಲಿ ನಿಮ್ಮ ಹೆಚ್ಚುವಿಕೆ ಅ
೧೫ ವರ ಕೊರತೆಗೂ, ಸಮತ್ವವು ಆಗುವದಕ್ಕೆ, ಬಹಳ ಕೂಡಿಸಿದವನಿಗೆ ಹೆಚ್ಚು ಇರಲಿಲ್ಲ, ಸ್ವಲ್ಪ ಕೂಡಿಸಿದವನಿಗೆ ಕಡಿಮೆ ಇರಲಿಲ್ಲ, ಎಂದು ಬರೆದಿರುವ ಪ್ರಕಾರ, ಅವರ ಹೆಚ್ಚುವಿಕೆ ನಿಮ್ಮ ಕೊರತೆಗೂ, ಆಗ ಬೇಕು.

೧೬ ಆದರೆ ನಿಮಗೋಸ್ಕರ ಅದೇ ಜಾಗ್ರತೆಯನ್ನು ತೀತನ ಹೃ
೧೭ ದಯದಲ್ಲಿ ಕೊಟ್ಟ ದೇವರಿಗೆ ಸ್ತುತಿ. ಏನಂದರೆ ಅವನು ಸೂತನ್ನು ಕೇಳಿ, ಮತ್ತು ಹೆಚ್ಚು ಜಾಗ್ರತೆಯುಳ್ಳವನಾಗಿದ್ದು, ಸ್ವಯಿ
೧೮ ಚ್ಛೆಯಿಂದ ನಿಮ್ಮ ಬಳಿಗೆ ಹೋಗ ಹೊರಟನು. ಅವನ ಸಂಗತ ಸುವಾರ್ತೆಯಲ್ಲಿ ಸಕಲ ಸಭೆಗಳಿಗೆ ಹೊಗಳಲ್ಪಟುವದಲ್ಲದೆ,
೧೯ ಅದೇ ಕರ್ತನ ಮಹಿಮೆಗೋಸ್ಕರವೂ, ನಿಮ್ಮ ಸಿದ್ಧ ಮನಸ್ಸಿಗೋಸ್ಕರವೂ, ನಮ್ಮಿಂದ ಸೇವಿಸಲ್ಪಡುವ ಈ ದಾನದ ಸಂಗತ ನಮ್ಮ ಜತೆಪ್ರಯಾಣಿಕನಾಗಿ ಸಭೆಗಳಿಂದ ಆರಿಸಿ ನೇಮಿಸಲ್ಪಟ್ಟ
೨೦ ಸಹೋದರನನ್ನು ಕಳುಹಿಸಿದ್ದೇವೆ. ನಮ್ಮಿಂದ ಸೇವಿಸಲ್ಪಡುವ ಈ ಮಹಾ ದಾನದ ವಿಷಯವಾಗಿ ಯಾರೊಬ್ಬ ನಮ್ಮಲ್ಲಿ ದೋಷ ಕಾಣದ ಹಾಗೆ ಎಚ್ಚರಿಕೆಯಾಗಿದ್ದು, ಕರ್ತನ ಮುಂದೆ ಮಾತ್ರನಲ್ಲ, ಮನುಷ್ಯರ ಮುಂದೆಯೂ ಒಳ್ಳೆಯವುಗಳನ್ನು ಮುಂ
೨೧ ನೆನಪಿದೆವು. ಮತ್ತು ಬಹಳ ಕಾರ್ಯಗಳಲ್ಲಿ ಬಹಳ ಸಾರಿ ಜಾಗ್ರತೆಯುಳ್ಳವನೆಂದೂ, ಈಗ ನಿಮ್ಮ ಮೇಲೆ ಇಡುವ ಬಹಳ ನಂಬಿಕೆಗೋಸ್ಕರ ಬಹು ಹೆಚ್ಚಾಗಿ ಜಾಗ್ರತೆಯುಳ್ಳವನೆಂದೂ, ನಾವು ಪರೀಕ್ಷಿಸಿದ ನಮ್ಮ ಸಹೋದರನನ್ನು ಅವರ ಸಂಗತ ಕಳುಹಿ
೨೨ ಸಿದ್ದೇನೆ. ತೀತನನ್ನು ಕುರಿತಾದರೆ, ಅವನು ನನ್ನ ಜತೆಗಾರನೂ, ನಿಮಗಾಗಿ ಜತೆ ಕೆಲಸದವನೂ ; ನಮ್ಮ ಸಹೋದರರಾದರೆ, ಅವರು ಸಭೆಗಳ ಅಪೊಸ್ತಲರೂ, ಕ್ರಿಸ್ತನ ಮಹಿಮೆಯೂ ಆಗಿದ್ದಾರೆ.
೨೩ ಹಾಗಾದರೆ, ನಿಮ್ಮ ಪ್ರೀತಿಯೂ ನಿಮಗೋಸ್ಕರವಾದ ನಮ್ಮ ಹೆಚ್ಚಳವೂ, ಇವುಗಳ ದೃಷ್ಟಾಂತವನ್ನು ಅವರಿಗೂ ಸಭೆಗಳ ಸಮುಖದಲ್ಲಿಯೂ ತೋರಿಸಿರಿ.

## ೯. ಸಂಧಿ.

೧ ಪರಿಶುದ್ಧರಿಗೆ ಆಗುವ ಸೇವೆಯನ್ನು ಕುರಿತು ನಿಮಗೆ ಇನ್ನು ಬರೆಯುವದು ನನಗೆ ಅಗತ್ಯವಿಲ್ಲ. ಯಾಕಂದರೆ ಅಕಾಯವು ಹೋ
೨ ದ ವರುಷದಿಂದ ಸಿದ್ಧವಾಗಿದೆ ಎಂದು, ನಾನು ನಿಮಗೋಸ್ಕರ ಹೆಚ್ಚಳ ಪಟ್ಟು, ಮಕೆದೋನ್ಯರಿಗೆ ಹೇಳುವ ನಿಮ್ಮ ಸಿದ್ಧ ಮನಸ್ಸ
೩ ನ್ನು ಬಲ್ಲೆನು. ಮತ್ತು ನಿಮ್ಮಲ್ಲಿ ಉಂಟಾದ ಆಸಕ್ತಿಯು ಬಹಳ ಜನರನ್ನು ಎಬ್ಬಿಸಿತು. ಆದರೆ ನಿಮಗೋಸ್ಕರ ನಾವು ಹೇಳಿದ ಹೆಚ್ಚಳವು ಈ ಸಂಗತಿಯಲ್ಲಿ ವ್ಯರ್ಥವಾಗದ ಹಾಗೆಯೂ,
೪ ನಾನು ಹೇಳಿದ ಪ್ರಕಾರ ನೀವು ಸಿದ್ಧವಾಗಿರುವ ಹಾಗೆಯೂ, ಮಕೆದೋನ್ಯರು ನಮ್ಮ ಸಂಗತ ಬಂದು, ಒಂದು ವೇಳೆ ನಿಮ್ಮನ್ನು ಸಿದ್ಧವಿಲ್ಲದವರಾಗಿ ಕಂಡರೆ, ಈ ದೃಢವಾದ ಹೆಚ್ಚಳದಲ್ಲಿ, ನಮಗೆಂದು ಹೇಳಲೋ? ಅಲ್ಲ, ನಮಗೆ ನಾಚಿಕೆಯಾಗದ ಹಾಗೆಯೂ,
೫ ಸಹೋದರರನ್ನು ಕಳುಹಿಸಿದ್ದೇನೆ. ಹೀಗಿರಲಾಗಿ ಅವರು ನಿಮ್ಮ ಬಳ್ಳಿಗೆ ಮುಂದೆ ಹೋಗಿ, ಮುಂತಿಳಿಸಲ್ಪಟ್ಟಿರುವ ನಿಮ್ಮ ಆಶೀರ್ವಾದವನ್ನು, ಅದು ಈ ಪ್ರಕಾರ ಲೋಭದ ಹಾಗಲ್ಲ, ಆಶೀರ್ವಾದದ ಹಾಗೆ ಆಯತ್ತವಾಗುವ ಬಗ್ಯೆ, ಮುಂಚೆ ಸಿದ್ಧ ಮಾಡಬೇಕೆಂದು, ಸಹೋದರರನ್ನು ಎಚ್ಚರಿಸುವದು ಅವಶ್ಯವೆಂದೆಣಿಸಿದೆನು.

೬ ಇದು ಮಾತ್ರ—ಕೊಂಚವಾಗಿ ಬಿತ್ತುವವನು ಕೊಂಚವಾಗಿಯೇ ಕೊಯ್ಯುವನು; ಮತ್ತು ಬಹಳವಾಗಿ ಬಿತ್ತುವವನು ಬ
೭ ಹಳವಾಗಿಯೇ ಕೊಯ್ಯುವನು; ಒಬ್ಬೊಬ್ಬನು ಹೃದಯದಲ್ಲಿ ಮುಂಕೊಳ್ಳುವ ಪ್ರಕಾರವೇ, ದುಃಖದಿಂದಲಾದರೂ ಅಗತ್ಯದಿಂದಲಾದರೂ ಅಲ್ಲ; ಯಾಕಂದರೆ ಸಂತೋಷವಾಗಿ ಕೊಡುವ
೮ ವನನ್ನು ದೇವರು ಪ್ರೀತಿ ಮಾಡುತ್ತಾನೆ. ಇದಲ್ಲದೆ—ಚೆಲ್ಲಿದನು, ಬಡವರಿಗೆ ಕೊಟ್ಟನು, ಅವನ ನೀತಿಯು ಎಂದೆಂದಿಗೂ ನೆಲೆಯಾ
೯ ಗಿದೆ, ಎಂದು ಬರೆದಿರುವ ಪ್ರಕಾರ, ನೀವು ಎಲ್ಲಾದರಲ್ಲಿ ಎಂದಿಗೂ ಎಲ್ಲಾ ತೃಪ್ತಿಯುಳ್ಳವರಾಗಿ ಎಲ್ಲಾ ಸತ್ಕ್ರಿಯೆಗಾಗಿ ಹೆಚ್ಚುವ ಹಾಗೆ, ದೇವರು ಎಲ್ಲಾ ಕೃಪೆಯನ್ನು ನಿಮಗಾಗಿ ಹೆಚ್ಚಿಸ ಬಲ್ಲನು.
೧೦ ಆದರೆ ನಮ್ಮ ಮುಖಾಂತರ ದೇವರಿಗೆ ಸ್ತೋತ್ರವನ್ನು ಉಂಟುಮಾಡುವ ಎಲ್ಲಾ ಉದಾರತ್ವಕ್ಕಾಗಿ ಎಲ್ಲಾದರಲ್ಲಿ ನೀವು ಐಶ್ವ
೧೧ ರ್ಯವಂತರಾಗುವ ಹಾಗೆ, ಬಿತ್ತುವವನಿಗೆ ಬೀಜವನ್ನು ತಂದು ಕೊಡುವವನು, ಉಣ್ಣುವದಕ್ಕೆ ಕೊಟ್ಟಿಯನ್ನು ತಂದು, ನೀವು ಬಿತ್ತಿದ್ದನ್ನು ಹೇರಳ ಮಾಡಿ, ನಿಮ್ಮ ನೀತಿಯ ಬೆಳೆಗಳನ್ನು ವೃದ್ಧಿ
೧೨ ಮಾಡಲಿ. ಯಾಕಂದರೆ ಈ ಧರ್ಮದ ಸೇವೆಯು, ಪರಿಶುದ್ಧರ ಕೊರತೆಗಳನ್ನು ಪೂರೈಸುವದಲ್ಲದೆ, ದೇವರಿಗಾಗುವ ಬಹಳ
೧೩ ಸ್ತೋತ್ರಗಳಿಂದ ಸಹ ಹೆಚ್ಚುವದು. ಹ್ಯಾಗಂದರೆ ಈ ಸೇವೆಯ ಅನುಭವದಿಂದ ಕ್ರಿಸ್ತನ ಸುವಾರ್ತೆಯನ್ನು ಅರಿಕೆ ಮಾಡುವ ನಿಮ್ಮ ವಿಧೇಯತ್ವಕ್ಕೋಸ್ಕರವೂ, ಅವರಿಗೂ ಎಲ್ಲರಿಗೂ ಧ
೧೪ ರ್ಮ ಮಾಡುವ ಉದಾರತ್ವಕ್ಕೋಸ್ಕರವೂ, ನಿಮ್ಮಲ್ಲಿರುವ ಅಧಿಕವಾದ ದೇವರ ಕೃಪೆಯ ನಿಮಿತ್ತ ನಿಮ್ಮನ್ನು ಅತ್ಯಾಶೆಸುವ ಅವರು ನಿಮಗೋಸ್ಕರ ಮಾಡುವ ಪ್ರಾರ್ಥನೆಯಿಂದಲೂ,
೧೫ ದೇವರನ್ನು ಮಹಿಮೆ ಪಡಿಸುತ್ತಾರೆ. ಹೇಳಲಾರದ ಅವನ ವರಕ್ಕೋಸ್ಕರ ದೇವರಿಗೆ ಸ್ತುತಿ.

## ೧೦. ಸಂಧಿ.

೧ ಆದರೆ ಮುಖಾಮುಖಿಯಾಗಿ ನಿಮ್ಮಲ್ಲಿ ದೀನನಾಗಿಯೂ, ದೂರದಲ್ಲಿರುವಾಗ, ನಿಮ್ಮ ಮೇಲೆ ಧೈರ್ಯ ತೋರಿಸುವವನಾ
೨ ಗಿಯೂ, ಇರುವ ಪೌಲನೆಂಬ ನಾನೇ ಕ್ರಿಸ್ತನ ಶಾಂತ್ಯೆ ಸಾತ್ವಿಕತ್ವಗಳ ನಿಮಿತ್ತ ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಆದರೆ ನಮ್ಮನ್ನು ಮಾಂಸದ ಪ್ರಕಾರನಡೆದು ಕೊಳ್ಳುವವರಂತೆ ಎಣಿಸುವವರಾದ ಕೆಲವರ ಮೇಲೆ ಧೈರ್ಯವಾಗಿರ ಬೇಕೆಂದು, ನಿಶ್ಚೈಸಿ ಕೊಂ

ಡ ದೃಷ್ಟಿಯಿಂದ, ನಾನು ಬಂದು ಧೈರ್ಯ ಪಡದ ಹಾಗೆ, ಬೇ
೩ ಡಿ ಕೊಳ್ಳುತ್ತೇನೆ. ಯಾಕಂದರೆ ನಾವು ಮಾಂಸದಲ್ಲಿ ನಡೆದು
ಕೊಳ್ಳುವವರಾಗಿದ್ದರೂ, ಮಾಂಸದ ಪ್ರಕಾರ ಯುದ್ಧ ಮಾಡುವ
೪ ದಿಲ್ಲ. ಯಾಕಂದರೆ ನಮ್ಮ ಯುದ್ಧದ ಆಯುಧಗಳು ಮಾಂಸ
ದವುಗಳಲ್ಲ, ದುರ್ಗಗಳನ್ನು ಕೆಡವಿ ಹಾಕುವದಕ್ಕೆ ದೇವರಲ್ಲಿ ಬ
೫ ಲವಾಗಿವೆ. ನಾವು ಯೋಚನೆಗಳನ್ನೂ, ದೇವರ ತಿಳುವಿಕೆಗೆ ವಿ
ರೋಧವಾಗಿ ಎದ್ದು ಬರುವ ಎಲ್ಲಾ ಎತ್ತರವಾದವುಗಳನ್ನೂ ಕೆಡ
ವಿ ಹಾಕಿ, ಎಲ್ಲಾ ಬುದ್ಧಿಯನ್ನು ಕ್ರಿಸ್ತನ ವಿಧೇಯತ್ವಕ್ಕೆ ಸೆರೆ ಹಿ
ಡಿದು, ನಿಮ್ಮ ವಿಧೇಯತ್ವವು ಸಂಪೂರ್ಣವಾದಾಗ, ಎಲ್ಲಾ ಅವಿ
೬ ಧೇಯತ್ವಕ್ಕೆ ಮುಯ್ಯಿಗೆ ಮುಯ್ಯಿ ತೀರಿಸ ಸಿದ್ಧವಾಗಿದ್ದೇವೆ.
೭ ಮುಖದ ಮುಂದಿನವುಗಳನ್ನು ನೋಡಿ ಕೊಳ್ಳುತ್ತೀರೋ! ಯಾವ
ನಾದರೂ ತಾನು ಕ್ರಿಸ್ತನವನೆಂದು ನಂಬಿ ಕೊಂಡರೆ, ತಾನು ಕ್ರಿಸ್ತನ
ವನು ಹ್ಯಾಗೋ, ಹಾಗೆಯೇ ನಾವೂ ಕ್ರಿಸ್ತನವರೆಂದು, ಮತ್ತೂ
೮ ತನ್ನಲ್ಲಿ ಎಣಿಸಿ ಕೊಳ್ಳಲಿ. ಯಾಕಂದರೆ ನಿಮ್ಮನ್ನೂ ಕೆಡವಿ ಹಾಕು
ವದಕ್ಕಲ್ಲ, ಕಟ್ಟುವದಕ್ಕೆ ಕರ್ತನು ನಮಗೆ ಕೊಟ್ಟ ನಮ್ಮ ಅಧಿ
ಕಾರದ ವಿಷಯ ಸ್ವಲ್ಪ ಹೆಚ್ಚಾಗಿ ಹೆಚ್ಚಳ ಪಟ್ಟರೂ, ನಾಚಿಕೆ
೯ ಪಡೆನು; ನಾನು ಪತ್ರಿಕೆಗಳಿಂದ ನಿಮ್ಮನ್ನು ಹೆದರಿಸ ಬೇಕಾವನಾ
೧೦ ಗಿ ಕಾಣಿಸಿಕೊಳ್ಳೆನು. ಅವನ ಪತ್ರಿಕೆಗಳು ಭಾರವಾಗಿಯೂ ಬಲ
ವಾಗಿಯೂ ಅವೆ, ಸರಿ; ಆದರೆ ಶರೀರದ ಸನ್ನಿಧಿಯು ತ್ರಾಣಿಲ್ಲ
೧೧ ದ್ದೂ, ವಾಕ್ಯವು ಅಲ್ಪವಾದದ್ದೂ, ಅನ್ನುತ್ತಾನಲ್ಲ. ಇಂಥವನು,
ನಾವು ಮಾತಿನಲ್ಲಿ ಪತ್ರಿಕೆಗಳಿಂದ ದೂರದಲ್ಲಿ ಎಂಥವರಾಗಿದ್ದೇ
ವೋ, ಅಂಥವರಾಗಿಯೇ ಸಮೀಪವಾಗಿ ಕ್ರಿಯೆಯಲ್ಲಿ ಇದ್ದೇವೆಂ
೧೨ ದು, ತಿಳುಕೊಳ್ಳಲಿ. ಯಾಕಂದರೆ ತಮ್ಮನ್ನು ಪ್ರತಿಷ್ಠೆ ಮಾಡಿ
ಕೊಳ್ಳುವ ಕೆಲವರಿಗೆ ನಮ್ಮನ್ನು ಸೇರಿಸಿ ಕೊಳ್ಳುವದಕ್ಕಾದರೂ,
ಹೋಲಿಸಿ ಕೊಳ್ಳುವದಕ್ಕಾದರೂ, ನಾವು ಧೈರ್ಯವಾಗಿರುವ
ದಿಲ್ಲ; ಆದರೆ ಅವರು ತಮ್ಮಲ್ಲಿ ತಮ್ಮನ್ನು ಅಳೆದು ಕೊಂಡು, ತ
೧೩ ಮಗೆ ತಮ್ಮನ್ನು ಹೋಲಿಸಿ ಕೊಂಡು, ತಿಳಿಯದವರಾಗಿದ್ದಾರೆ. ಆ
ದರೆ ನಾವು ಅಮಿತವಾದವುಗಳ ವರಿಗೆ ಅಲ್ಲ, ನಿಮ್ಮ ಪರ್ಯಂತರ
ಕ್ಕೂ ಮುಟ್ಟುವ ಮಿತಿಯನ್ನು ದೇವರು ನಮಗೆ ಹಂಚಿದ ಕಟ್ಟಳೆ
೧೪ ಯ ಮಿತಿಯ ಪ್ರಕಾರ ಹೆಚ್ಚಳ ಪಡುವೆವು. ಹ್ಯಾಗಂದರೆ ನಿಮ್ಮ
ಪರ್ಯಂತರ ಮುಟ್ಟದವರಂತೆ ನಮ್ಮನ್ನು ನಾವೇ ಹೆಚ್ಚಾಗಿ ಉ
ದ್ದ ಮಾಡಿ ಕೊಳ್ಳುವದಿಲ್ಲ; ಯಾಕಂದರೆ ಕ್ರಿಸ್ತನ ಸುವಾರ್ತೆಯಲಿ
೧೫ ನಿಮ್ಮ ಪರ್ಯಂತರಕ್ಕೂ ಬಂದೆವು. ಮತ್ತೊಬ್ಬರ ಕಟ್ಟಳೆಗಳಲಿ
ಅಮಿತವಾಗಿ ಹೆಚ್ಚಳ ಪಡೆವು. ನಿಮ್ಮ ವಿಶ್ವಾಸವು ಹೆಚ್ಚುವಾಗ,
ನಮ್ಮ ಕಟ್ಟಳೆಯ ಪ್ರಕಾರ ಅತ್ಯಧಿಕವಾಗಿ ನಿಮ್ಮಲ್ಲಿ ಮಹಿಮೆ ಪ
೧೬ ಡಲೂ, ನಿಮ್ಮ ಆಚೆಯ ಪರ್ಯಂತರ ಸುವಾರ್ತೆ ಪ್ರಸಂಗಿಸ
ಲೂ, ಬೇಕೊಬ್ಬರ ಕಟ್ಟಳೆಯಲ್ಲಿ ಸಿದ್ಧ ಮಾಡಿದವುಗಳಿಗೋ
೧೭ ಸ್ಕರ ಹೆಚ್ಚಳ ಪಡದೆ ಇರಲೂ, ನಿರೀಕ್ಷಿಸುತ್ತೇವೆ. ಆದರೆ ಹೆಚ್ಚಳ
೧೮ ಪಡುವವನು ಕರ್ತನಲ್ಲಿ ಹೆಚ್ಚಳ ಪಡಲಿ. ಯಾಕಂದರೆ ತನ್ನನ್ನು
ಪ್ರತಿಷ್ಠೆ ಮಾಡಿ ಕೊಳ್ಳುವವನಲ್ಲ, ಕರ್ತನು ಪ್ರತಿಷ್ಠೆ ಮಾಡುವವ
ನೇ ಪರೀಕ್ಷಿತನಾಗಿದ್ದಾನೆ.

## ೧೧. ಸಂಧಿ.

೧ ನನ್ನನ್ನು ಬುದ್ಧಿಹೀನತ್ವದಲ್ಲಿ ಸ್ವಲ್ಪ ಸಹಿಸಿದರೆ, ಉತ್ತಮ; ;
ಹೌದು ನನ್ನನ್ನು ಸಹಿಸಿರಿ. ಯಾಕಂದರೆ ದಿವ್ಯ ಆಸಕ್ತಿಯಿಂದ
೨ ನಿಮ್ಮ ಮೇಲೆ ಆಸಕ್ತಿ ಪಡುತ್ತೇನೆ. ಯಾಕಂದರೆ ನಿಮ್ಮನ್ನು ಶು
ದ್ಧ ಕನ್ಯೆಯಾಗಿ ಕ್ರಿಸ್ತನೆಂಬ ಒಬ್ಬನೇ ಗಂಡನಿಗೆ ತಂದು ಕೊ
೩ ಡುವದಕ್ಕೆ ಸೇವಕ ಮಾಡಿದ್ದೇನೆ. ಆದರೆ ಸರ್ಪವು ತನ್ನ ತಂ
ತ್ರದಿಂದ ಹವ್ವಳಿಗೆ ಮೋಸ ಮಾಡಿದ ಹಾಗೆ, ನಿಮ್ಮ ಮನಸ್ಸು
ಗಳು, ಕ್ರಿಸ್ತನಿಗಾಗಿರುವ ಯಥಾರ್ಥವನ್ನು ಬಿಟ್ಟು, ಕೆಟ್ಟು ಹೋ
ದಾವೆಂದು, ಭಯ ಪಡುತ್ತೇನೆ. ಹ್ಯಾಗಂದರೆ ಬಂದವನು, ನಾವು
೪ ಸಾರದೆ ಇದ್ದ ಬೇರೆ ಯೇಸುವನ್ನು ಸಾರಿದರೆ, ಇಲ್ಲವೆ ನೀವು
ಹೊಂದದೆ ಇದ್ದ ಬೇರೆ ಆತ್ಮವನ್ನು ಹೊಂದಿದರೆ, ಇಲ್ಲವೆ ನೀವು
ಅಂಗೀಕರಿಸದೆ ಇದ್ದ ಬೇರೆ ಸುವಾರ್ತೆಯನ್ನು ಅಂಗೀಕರಿಸಿದರೆ,
೫ ಚೆನ್ನಾಗಿ ಸಹಿಸಿಕೊಳ್ಳಿರಿ. ಏನಂದರೆ ಅತಿ ಶ್ರೇಷ್ಠ ಅಪೊಸ್ತಲರಿಗಿಂತ
ನಾನು ಎಷ್ಟು ಮಾತ್ರ ಕಡಿಮೆಯಾದವನಲ್ಲವೆಂದು ನೆನಸುತ್ತೇನೆ.
೬ ನಾನು ವಾಕ್ಯದಲ್ಲಿ ಕಲಿಯದವನಾಗಿದ್ದರೂ, ತಿಳುವಿಕೆಯಲ್ಲಿ ಕಲಿ
ಯದವನಲ್ಲ; ಆದರೆ ಎಲ್ಲಾದರಲ್ಲಿ ನಿಮಗೆ ಪೂರ್ಣವಾಗಿ ಪ್ರಸಿ
೭ ದ್ಧಿಯಾಗಿದ್ದೇವೆ. ಇದಲ್ಲದೆ ನೀವು ಎತ್ತಲ್ಪಡುವ ಹಾಗೆ ನನ್ನನ್ನು
ತಗ್ಗಿಸಿ ಕೊಂಡು, ದೇವರ ಸುವಾರ್ತೆಯನ್ನು ಉಚಿತವಾಗಿ ನಿಮ
ಗೆ ಸಾರಿದ್ದರಿಂದ ಪಾಪ ಮಾಡಿದೆನೋ? ನಿಮ್ಮ ಸೇವೆಗೋಸ್ಕರ
ಸಂಬಳ ತಕ್ಕೊಂಡು, ಬೇರೆ ಸಭೆಗಳನ್ನು ಸುಲುಕೊಂಡೆನು; ಮ
ತ್ತು ನಿಮ್ಮ ಬಳಿಯಲ್ಲಿದ್ದು ಕೊರತೆ ಪಡುವವನಾಗಿರಲು, ನಾನು
೮ ಯಾವನಿಗಾದರೂ ಭಾರವಾಗಿರಲಿಲ್ಲ. ಯಾಕಂದರೆ ನನ್ನ ಕೊ
ರತೆಯನ್ನು ಮಕೆದೋನ್ಯದಿಂದ ಬಂದ ಸಹೋದರರು ಪೂರೈ
ಸಿದರು; ಮತ್ತು ಎಲ್ಲಾದರಲ್ಲಿ ನಿಮಗೆ ಭಾರವಾಗದ ಹಾಗೆ, ನನ್ನ
೯ ನ್ನು ಕಾಪಾಡಿ ಕೊಂಡೆನು, ಇನ್ನೂ ಕಾಪಾಡಿ ಕೊಳ್ಳುವೆನು.
೧೦ ಈ ಹೆಚ್ಚಳವು ಆಕಾಯದ ಶೀಮೆಗಳಲ್ಲಿ ನನಗೆ ಅಡ್ಡಿ ಮಾಡಲ್ಪ
ಡುವದಿಲ್ಲವೆಂಬುವದಕ್ಕೆ ಕ್ರಿಸ್ತನ ಸತ್ಯವು ನನ್ನಲ್ಲಿ ಇರುವದೇ
೧೧ ಸಾಕ್ಷಿ. ಯಾಕೆ? ನಿಮ್ಮನ್ನು ಪ್ರೀತಿ ಮಾಡದೆ ಇರುವದರಿಂದಲೋ!
೧೨ ದೇವರು ಬಲ್ಲನು. ಆದರೆ ಆಸ್ಪದ ಅಪೇಕ್ಷಿಸುವವರ ಆಸ್ಪದವ
ನ್ನು ತೆಗೆದು ಹಾಕ ಬೇಕೆಂದೂ, ಅವರು ಯಾವದರಲ್ಲಿ ಹೆಚ್ಚಳ
ಪಡುತ್ತಾರೋ, ಅದರಲ್ಲಿ ನಮ್ಮಂತೆ ಕಾಣಿಸುವ ಹಾಗೆಯೂ, ನಾ
ನು ಮಾತಾಡುವದನ್ನು ಇನ್ನೂ ಮಾತಾಡುವೆನು. ಯಾಕಂದರೆ ಅಂ
೧೩ ಥವರು ಸುಳ್ಳು ಅಪೊಸ್ತಲರೇ, ಕ್ರಿಸ್ತನ ಅಪೊಸ್ತಲರ ವೇಷಧಾರಿ
೧೪ ಗಳಾದ ಕಳ್ಳ ಕೆಲಸದವರೇ. ಅದು ಆಶ್ಚರ್ಯವಲ್ಲ; ಸೈತಾನ
೧೫ ನು ತಾನೇ ಬೆಳಕಿನ ದೂತನ ವೇಷ ಧರಿಸುತ್ತಾನಲ್ಲ! ಹಾಗಾದ
ರೆ, ಅವನ ಸೇವಕರು ಸಹ ನೀತಿಯ ಸೇವಕರ ವೇಷ ಧರಿಸುವ
ದು ದೊಡ್ಡದಲ್ಲ—ಅವರ ಅಂತ್ಯವು ಅವರ ಕ್ರಿಯೆಗಳ ಪ್ರಕಾರವಾ
ಗಿರುವದು.

೧೬ ತಿರಿಗಿ ಹೇಳುತ್ತೇನೆ—ನನ್ನನ್ನು ಬುದ್ಧಿಹೀನನೆಂದು ಯಾರೂ
ನೆನಸದಿರಲಿ. ಇಲ್ಲವಾದರೆ, ನಾನೂ ಸ್ವಲ್ಪವಾದರೂ ಹೆಚ್ಚಳ ಪ
ಡುವ ಹಾಗೆ, ಬುದ್ಧಿಹೀನನೆಂದಾದರೂ, ನನ್ನನ್ನು ಅಂಗೀಕರಿಸಿರಿ.
೧೭ ನಾನು ಮಾತಾಡುವವನು ಕರ್ತನಿಂದಲ್ಲ, ಬುದ್ಧಿಹೀನನ ಪ್ರಕಾರ
ಈ ಹೆಚ್ಚಳದ ದೃಷ್ಟಿಯಲ್ಲಿ ಮಾತಾಡುತ್ತೇನೆ.

೧೮ ಅನೇಕರು ಮಾಂಸದ ಪ್ರಕಾರ ಹೆಚ್ಚಳ ಪಡುವದರಿಂದ, ನಾ
೧೯ ನೂ ಹೆಚ್ಚಳ ಪಡುತ್ತೇನೆ. ಯಾಕಂದರೆ ನೀವು ಬುದ್ಧಿಶಾಲಿಗಳಾ
೨೦ ಗಿದ್ದು, ಬುದ್ಧಿಹೀನರನ್ನು ಸಂತೋಷವಾಗಿ ಸಹಿಸುತ್ತೀರಿ. ಒಬ್ಬ
ನು ನಿಮ್ಮನ್ನು ದಾಸರಾಗ ಮಾಡಿದರೆ, ಒಬ್ಬನು ನಿಮ್ಮನ್ನು ತಿಂ
ದು ಬಿಟ್ಟರೆ, ಒಬ್ಬನು ಅಪಹರಿಸಿದರೆ, ಒಬ್ಬನು ಉಬ್ಬಿ ಕೊಂಡ



ಕೆ, ಒಬ್ಬನು ನಿಮ್ಮನ್ನು ಮುಖದ ಮೇಲೆ ಬಡಿದರೆ, ಸಹಿಸುತ್ತೀರ
೨೧ ಲ್ಲ? ನಾವು ಬಲಹೀನರಾದೆವೆಂಬ ಅವಮಾನದ ಪ್ರಕಾರ ಹೇಳುತ್ತೇ
ನೆ; ಯಾವದರಲ್ಲಿ ಯಾವನಾದರೂ ಧೈರ್ಯ ಪಡುತ್ತಾನೋ
—ಬುದ್ಧಿಹೀನನಾಗಿ ಹೇಳುತ್ತೇನೆ—ನಾನು ಧೈರ್ಯ ಪಡುತ್ತೇನೆ.
೨೨ ಅವರು ಇಬ್ರೀಯರೋ? ನಾನು ಸಹ; ಅವರು ಇಸ್ರಯೇಲ್ಯ
ರೋ! ನಾನು ಸಹ; ಅವರು ಅಬ್ರಹಾಮನ ಬೀಜವೋ? ನಾನು
೨೩ ಸಹ; ಅವರು ಕ್ರಿಸ್ತನ ಸೇವಕರೋ? ನಾನು ಹೆಚ್ಚಾಗಿ, ಎಂದು
ಬುದ್ಧಿ ತಪ್ಪಿ ಹೇಳುತ್ತೇನೆ—ಕಟ್ಟುಗಳಲ್ಲಿ ಹೆಚ್ಚಾಗಿ, ಪೆಟ್ಟುಗಳಲ್ಲಿ
ಅಮಿತವಾಗಿ, ಸೆರೆಗಳಲ್ಲಿ ಹೆಚ್ಚಾಗಿ, ಮರಣಗಳಲ್ಲಿ ಅನೇಕ ಸಾರಿ
೨೪ —ಯೆಹೂದ್ಯರ ಕೈಯಿಂದ ಐದು ಸಾರಿ, ಒಂದು ಕಡಿಮೆ
೨೫ ನಾಲ್ವತ್ತು ಪೆಟ್ಟು ತಿಂದೆನು, ಮೂರು ಸಾರಿ ಬೆತ್ತದಿಂದ ಹೊಡೆ
ಯಲ್ಪಟ್ಟೆನು, ಒಂದು ಸಾರಿ ಕಲ್ಲೆಸೆಯಲ್ಪಟ್ಟೆನು, ಮೂರು ಸಾ
ರಿ ಹಡಗಿನ ನಷ್ಟದಲ್ಲಿದ್ದೆನು, ರಾತ್ರಿಯನ್ನೂ ಹಗಲನ್ನೂ ಅಗಾಧ
೨೬ ದಲ್ಲಿ ಕಳೆದೆನು; ಅನೇಕ ಸಾರಿ ಪ್ರಯಾಣಗಳಲ್ಲಿ, ನದಿಗಳ ಗಂಡಾಂ
ತರಗಳಲ್ಲಿ, ಕಳ್ಳರ ಗಂಡಾಂತರಗಳಲ್ಲಿ, ಸ್ವಜಾತಿಯಿಂದಾದ ಗಂ
ಡಾಂತರಗಳಲ್ಲಿ, ಜನಾಂಗಗಳಿಂದಾದ ಗಂಡಾಂತರಗಳಲ್ಲಿ, ಪಟ್ಟಣದೊ
ಳಗೆ ಗಂಡಾಂತರಗಳಲ್ಲಿ, ಅರಣ್ಯದೊಳಗೆ ಗಂಡಾಂತರಗಳಲ್ಲಿ, ಸ
೨೭ ಮುದ್ರದೊಳಗೆ ಗಂಡಾಂತರಗಳಲ್ಲಿ, ಸುಳ್ಳು ಸಹೋದರರೊಳಗೆ
ಗಂಡಾಂತರಗಳಲ್ಲಿ, ಕಷ್ಟದಲ್ಲಿಯೂ, ಆಯಾಸದಲ್ಲಿಯೂ, ಅ
ನೇಕ ಸಾರಿ ಜಾಗರಗಳಲ್ಲಿಯೂ, ಹಸಿವೆದಾಹಗಳಲ್ಲಿಯೂ, ಅನೇ
ಕ ಸಾರಿ ಉಪವಾಸಗಳಲ್ಲಿಯೂ, ಛಳಿಯಲ್ಲಿಯೂ, ಬತ್ತಲೆಯಲ್ಲಿ
೨೮ ಯೂ, ಇದ್ದೆನು. ಹೊರಗಿನವುಗಳ ಹೊರತು, ಎಲ್ಲಾ ಸಭೆಗಳ
ಪರಾಮರಿಕೆಯಾದ ದಿನ ದಿನದ ಸಂದೇಯು ನನಗೆ ಉಂಟು.
೨೯ ಯಾರೊಬ್ಬನು ಬಲಹೀನನಾದರೆ, ನಾನು ಬಲಹೀನನಾಗುವದಿಲ್ಲ
ವೋ? ಯಾರೊಬ್ಬನು ಅಟಂಕ ಪಟ್ಟರೆ, ನಾನು ತಾಪ ಪಡುವ
ದಿಲ್ಲವೋ?

೩೦ ಹೆಚ್ಚಳ ಪಡ ಬೇಕಾದರೆ, ನನ್ನ ಬಲಹೀನತ್ವದವುಗಳಲ್ಲಿ ಹೆ
೩೧ ಚ್ಚಳ ಪಡುವೆನು. ನಾನು ಸುಳ್ಳು ಹೇಳುವದಿಲ್ಲವೆಂದು, ನಮ್ಮ ಕ
ರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರು ಬಲ್ಲನು; ಅ
೩೨ ವನು ಎಂದೆಂದಿಗೂ ಸ್ತುತಿಸ ತಕ್ಕವನೇ. ದಮಸ್ಕದಲ್ಲಿ ಅರಸಾ
ದ ಅಕ್ಕೀತನ ಸುಬೆದಾರನು ನನ್ನನ್ನು ಹಿಡಿಯ ಬೇಕೆಂದು, ದ
೩೩ ಮಸ್ಕದವರ ಪಟ್ಟಣವನ್ನು ಕಾಯಲಾಗಿ, ಕಿಟಿಕಿಯಿಂದ ಪುಟ್ಟಿಯ
ಲ್ಲಿ ಗೋಡೆಯಿಂದ ಇಳಿಸಲ್ಪಟ್ಟು, ಅವನ ಕೈಗಳಿಗೆ ತಪ್ಪಿಸಿ
ಕೊಂಡೆನು.

## ೧೨. ಸಂಧಿ.

೧ ಹೆಚ್ಚಳ ಪಡುವದು ಹ್ಯಾಗೂ ನನಗೆ ತಕ್ಕದ್ದಲ್ಲ; ಆದರೂ
೨ ಕರ್ತನ ದರ್ಶನಗಳಿಗೂ ಪ್ರಕಟಣೆಗಳಿಗೂ ಬರುತ್ತೇನೆ. ಕ್ರಿಸ್ತ
ನಲ್ಲಿರುವ ಮನುಷ್ಯನನ್ನು ಬಲ್ಲೆನು; ಹದಿನಾಲ್ಕು ವರುಷಗಳ
ಹಿಂದೆ—ಶರೀರದಲ್ಲಿಯೋ! ನಾನರಿಯೆ; ಶರೀರದ ಹೊರಗೆ
೩ ಯೋ? ನಾನರಿಯೆ; ದೇವರು ಬಲ್ಲನು—ಅಂಥವನು ಮೂರನೇ
ಆಕಾಶದ ಪರ್ಯಂತರಕ್ಕೂ ಹಿಡಿದು ಪೈಯಲ್ಪಟ್ಟನು. ಅಂಥ
೪ ಮನುಷ್ಯನು—ಶರೀರದಲ್ಲಿಯೋ? ಶರೀರದ ಹೊರಗೆಯೋ!
ನಾನರಿಯೆ; ದೇವರು ಬಲ್ಲನು—ಅವನು ಪರದೈಸಕ್ಕೆ ಪೈಯ
ಲ್ಪಟ್ಟು, ಮನುಷ್ಯನು ಹೇಳಲಾಗದ ಅವಾಚ್ಯ ವಾಕ್ಯಗಳನ್ನು
೫ ಕೇಳಿದನೆಂದು ಬಲ್ಲೆನು. ಅಂಥವನನ್ನು ಕುರಿತು ಹೆಚ್ಚಳ ಪಡುವೆ
ನು; ನನ್ನನ್ನು ಕುರಿತಾದರೆ, ನನ್ನ ಬಲಹೀನತ್ವಗಳಲ್ಲಿಯೇ ಹೊ
೬ ರ್ತು, ಹೆಚ್ಚಳ ಪಡೆನು. ಯಾಕಂದರೆ ಹೆಚ್ಚಳ ಪಡ ನನಗೆ ಮ
ನಸ್ಸಿದ್ದರೂ, ಬುದ್ಧಿಹೀನನಾಗಿರೆನು; ಯಾಕಂದರೆ ಸತ್ಯವನ್ನು
ಹೇಳುವೆನು; ಆದರೆ ಯಾವನಾದರೂ ನನ್ನಲ್ಲಿ ಕಾಣುವದಕ್ಕಿಂ
ತಲಾದರೂ, ನನ್ನಿಂದ ಕೇಳುವದಕ್ಕಿಂತಲಾದರೂ, ಹೆಚ್ಚು ನನ್ನ
ನ್ನು ಕುರಿತು ಎಣಿಸದ ಹಾಗೆ, ಸುಮ್ಮನಿರುತ್ತೇನೆ.

೭ ಮತ್ತು ಪ್ರಕಟಣೆಗಳ ಹೆಚ್ಚುವಿಕೆಯಿಂದ ನಾನು ಅಧಿಕವಾಗಿ
ಹೆಚ್ಚಿಸಿ ಕೊಳ್ಳದ ಹಾಗೆ, ನನಗೆ ಮಾಂಸದಲ್ಲಿ ಮುಳ್ಳು ಕೊಡಲ್ಪ
ಟ್ಟಿತು—ಅದೇನಂದರೆ, ನಾನು ಅಧಿಕವಾಗಿ ಹೆಚ್ಚಿಸಿ ಕೊಳ್ಳದ
೮ ಹಾಗೆ, ನನ್ನನ್ನು ಹೊಡೆಯುವ ಸೈತಾನನ ದೂತನು. ಇದರ
ನಿಮಿತ್ತ, ಅದು ನನ್ನನ್ನು ಬಿಟ್ಟು ಹೋಗುವ ಹಾಗೆ, ಮೂರು ಸಾ
೯ ರಿ ಕರ್ತನನ್ನು ಬೇಡಿ ಕೊಂಡೆನು. ಮತ್ತು ಅವನು, ನನ್ನ ಕೃಪೆ
ಯು ನಿನಗೆ ಸಾಕು; ಯಾಕಂದರೆ ನನ್ನ ಬಲವು ಅಶಕ್ತಿಯಲ್ಲಿ
ಸಂಪೂರ್ಣವಾಗುವದು ಎಂದು, ನನಗೆ ಹೇಳಿದ್ದಾನೆ. ಹೀಗಿರು
ವದರಿಂದ ಕ್ರಿಸ್ತನ ಬಲವು ನನ್ನ ಮೇಲೆ ವಾಸವಾಗಿರುವ ಹಾಗೆ,
ನನ್ನ ಬಲಹೀನತ್ವಗಳಲ್ಲಿ ಪರಮ ಸಂತೋಷದಿಂದ ಹೆಚ್ಚಳ ಪ
೧೦ ಡುವೆನು. ಆದದರಿಂದ ಕ್ರಿಸ್ತನ ನಿಮಿತ್ತ ಬಲಹೀನತ್ವಗಳಲ್ಲಿ, ನಿಂ
ದೆಗಳಲ್ಲಿ, ಸಂಕಟಗಳಲ್ಲಿ, ಹಿಂಸೆಗಳಲ್ಲಿ, ಇಕ್ಕಟ್ಟುಗಳಲ್ಲಿ, ಸಂ
ತೋಷವಾಗಿದ್ದೇನೆ. ಯಾಕಂದರೆ ಬಲಹೀನನಾಗಿರುವಾಗಲೇ ಬ
ಲವುಳ್ಳವನಾಗಿದ್ದೇನೆ.

೧೧ ಹೆಚ್ಚಳ ಪಟ್ಟು ಬುದ್ಧಿಹೀನನಾದೆನು, ನೀವೇ ನನಗೆ ಅಗತ್ಯ
ಮಾಡಿದಿರಿ. ಹ್ಯಾಗಂದರೆ ನಿಮ್ಮಿಂದ ನಾನು ಪ್ರತಿಷ್ಠೆ ಮಾಡಲ್ಪ
ಡ ಬೇಕಾಗಿತ್ತು; ಯಾಕಂದರೆ, ನಾನು ಏನು ಇಲ್ಲದಿದ್ದರೂ, ಅತಿ
ಶ್ರೇಷ್ಠ ಅಪೊಸ್ತಲರಿಗಿಂತ ಎಷ್ಟು ಮಾತ್ರ ಕಡಿಮೆಯಾದವನಲ್ಲ
೧೨ ಅಪೊಸ್ತಲನ ಗುರುತುಗಳು ಎಲ್ಲಾ ತಾಳ್ಮೆಯಿಂದಲೂ, ಗುರು
ತುಗಳಿಂದಲೂ, ಅದ್ಭುತಗಳಿಂದಲೂ, ಬಲವಾದ ಕ್ರಿಯೆಗಳಿಂದ
೧೩ ಲೂ, ನಿಮ್ಮಲ್ಲಿ ನಡಿಸಲ್ಪಟ್ಟವಲ್ಲವೋ! ನಾನೇ ನಿಮಗೆ ಉಪದ್ರ
ಕೊಡದೆ ಇದ್ದದ್ದಲ್ಲದೆ, ಮತ್ಯಾವದರಲ್ಲಿ ಬೇರೆ ಸಭೆಗಳಿಗಂತ ಸ
೧೪ ಷ್ಟು ಪಟ್ಟಿರಿ? ಈ ಅನ್ಯಾಯವನ್ನು ನನಗೆ ಮನ್ನಿಸಿರಿ. ಇಗೋ,
ಮೂರನೇ ಸಾರಿ ನಿಮ್ಮ ಬಳಿಗೆ ಬರ ಸಿದ್ಧವಾಗಿದ್ದೇನೆ; ಮತ್ತು ನಿ
ಮಗೆ ಭಾರವಾಗಿರೆನು; ಯಾಕಂದರೆ ನಿಮ್ಮವುಗಳನ್ನಲ್ಲ, ನಿ
ಮ್ಮನ್ನೇ ಹುಡುಕುತ್ತೇನೆ. ಹ್ಯಾಗಂದರೆ ಮಕ್ಕಳು ಹೆತ್ತವರಿಗೋ
ಸ್ಕರವಲ್ಲ, ಹೆತ್ತವರು ಮಕ್ಕಳಿಗೋಸ್ಕರ, ದ್ರವ್ಯ ಇಟ್ಟು ಕೊ
೧೫ ಳ್ಳುವದೇ ತಕ್ಕದ್ದು. ಆದರೆ ನಾನು ನಿಮ್ಮನ್ನು ಹೆಚ್ಚಾಗಿ ಪ್ರೀತಿ
ಮಾಡಿದರೂ, ಕಡಿಮೆಯಾಗಿ ಪ್ರೀತಿ ಮಾಡಲ್ಪಟ್ಟಾಗ್ಯೂ, ನಿಮ್ಮ
ಪ್ರಾಣಗಳಿಗೋಸ್ಕರ ಪರಮ ಸಂತೋಷದಿಂದ ವೆಚ್ಚ ಮಾಡಿ,
೧೬ ವೆಚ್ಚವಾಗುವೆನು. ಅದಾಗಲಿ; ನಾನು ನಿಮ್ಮನ್ನು ಭಾರ ಪಡಿಸಲಿಲ್ಲ;
ಆದರೆ ತಂತ್ರವುಳ್ಳವನಾಗಿ ಕಪಟದಿಂದ ನಿಮ್ಮನ್ನು ಹಿಡಿದೆನು;
೧೭ ನಿಮ್ಮ ಬಳಿಗೆ ಕಳುಹಿಸಿದವರಲ್ಲಿ ಒಬ್ಬನ ಮುಖಾಂತರ ನಿಮ್ಮಿಂದ
ಲಾಭ ಮಾಡಿ ಕೊಂಡೆನೋ! ತೀತನಿಗೆ ಅಪ್ಪಣೆ ಕೊಟ್ಟು, ಸ
೧೮ ಹೋದರನನ್ನು ಕೂಡ ಕಳುಹಿಸಿದೆನು. ತೀತನು ನಿಮ್ಮಿಂದ ಏನಾ
ದರೂ ಲಾಭ ಮಾಡಿ ಕೊಂಡೆನೋ? ನಾವು ಅದೇ ಆತ್ಮದಲ್ಲಿ
ಯೂ, ಅದೇ ಹೆಜ್ಜೆಗಳಲ್ಲಿಯೂ ನಡಿಯಲಿಲ್ಲವೋ! ನಿಮಗೆ ನೆ
ವ ಹೇಳುತ್ತೇವೆಂದು, ತಿರಿಗಿ ನೆನಸುತ್ತೀರೋ? ದೇವರ ಮುಂದೆ

ಕ್ರಿಸ್ತನಲ್ಲಿ ಮಾಕಾರುತ್ತೇವೆ. ಆದರೆ ಎಲ್ಲಾ ನಿಮ್ಮ ಅತ್ಮವೃದ್ಧಿ
೧೦ ಕೋಸ್ಕರ, ಪ್ರಿಯರೇ. ಯಾಕಂದರೆ ಬಂದು ವೇಳೆ ನಾನು ಬಂ
ದಾಗ, ನೀವು ನನ್ನ ಮನಸ್ಸಿಗೆ ಸರಿಯಲ್ಲದವರಾಗಿ ಕಾಣಿಸೀರೆಂ
ದೂ, ನಾನು ನಿಮ್ಮ ಮನಸ್ಸಿಗೆ ಸರಿಯಲ್ಲದವನಾಗಿ ಕಾಣಿಸೇನೆಂ
ದೂ, ಬಂದು ವೇಳೆ ಝಗಳಗಳೂ, ಅಸೂಕ್ತಿಗಳೂ, ಕೋಪಗ
ಳೂ, ವಿವಾದಗಳೂ, ಜಾತಿಗಳೂ, ಗುಸುಗುಟ್ಟುಗಳೂ, ಉಬ್ಬಿಕೆ
೧೧ ಗಳೂ, ಗದ್ದಲಗಳೂ, ಅದಾವೆಂದೂ, ನನ್ನ ದೇವರು ಶಿರಿಗಿ ಬಂದ
ನನ್ನುನ್ನು ನಿಮ್ಮ ಬಳಿಯಲ್ಲಿ ತಗ್ಗಿಸ್ಯಾನೆಂದೂ, ಮುಂಚೆ ಪಾಪ
ಮಾಡಿ, ತಾವು ನಡಿಸಿದ ಅಶುದ್ಧತ್ವ ಜಾರತ್ವ ಬಂಡುತನಗಳಿಗೋ
ಸ್ಕರ ಮಾನಸಾಂತರ ಪಡದ ಅನೇಕರ ನಿಮಿತ್ತ ಸೋಳ್ಳಾಡುವೆನೆಂ
ದೂ, ಭಯ ಪಡುತ್ತೇನೆ.

## ೧೩. ಸಂಧಿ.

೧ ಈಗ ಮೂರನೇ ಸಾರಿ ನಿಮ್ಮ ಬಳ್ಳಿಗೆ ಬರುತ್ತೇನೆ. ಎರಡು
ಮೂರು ಸಾಕ್ಷಿಗಳ ಬಾಯಿಯಿಂದ ಸಂಗತಿಗಳೆಲ್ಲಾ ಸ್ಥಾಪಿಸಲ್ಪ
೨ ಡುವವು. ಮುಂಚೆ ಹೇಳ್ದಿದ್ದನ್ನು, ಸಮೀಪದಲ್ಲಿದ್ದ ಹಾಗೆ ಎರಡನೇ
ಸಾರಿ, ಮುಂಚೆ ಹೇಳುತ್ತೇನೆ. ಮತ್ತು ಮುಂಚೆ ಪಾಪ ಮಾಡಿದ
ವರಿಗೂ, ಮಿಕ್ಕಾದವಕ್ಕೆಲ್ಲರಿಗೂ, ದೂರದಲ್ಲಿದ್ದು ಈಗ ಬಕೆಯು
3 ವದೇನಂದರೆ, ನಾನು ಶಿರಿಗಿ ಬಂದರೆ, ಕನಿಕರಿಸೆನು. ನಿಮಗಾಗಿ ಬ
ಲಹೀನವಾಗಿರದೆ, ನಿಮ್ಮಲ್ಲಿ ಬಲವಾಗಿರುವ ಕ್ರಿಸ್ತನು ನನ್ನಲ್ಲಿ ಮಾ
೪ ತಾಡುತ್ತಾನೆಂಬದರ ಪರೀಕ್ಷೆಯನ್ನು ಹುಡುಕುತ್ತೀರಲ್ಲ? ಹ್ಯಾಗಂ
ದರೆ ಅವನು ಬಲಹೀನತ್ವದಿಂದ ಶಿಲುಬೆಗೆ ಹಾಕಲ್ಪಟ್ಟಾಗ್ಯೂ,
ದೇವರ ಬಲದಿಂದ ಬದುಕುತ್ತಾನೆ. ಹಾಗೆ ನಾವೂ ಅವನಲ್ಲಿ ಬಲ
ಹೀನರಾಗಿದ್ದರೂ, ದೇವರ ಬಲದಿಂದ ಅವನ ಸಂಗಡ ನಿಮಗಾಗಿ
೫ ಬದುಕುವೆವು. ವಿಶ್ವಾಸದಲ್ಲಿದ್ದೀರೇನೋ, ನಿಮ್ಮನ್ನು ಶೋಧಿಸಿ
ಕೊಳ್ಳಿರಿ; ನಿಮ್ಮನ್ನು ಪರೀಕ್ಷಿಸಿ ಕೊಳ್ಳಿರಿ. ನೀವು ಅಗದವರಲ್ಲದಿ
ದ್ದರೆ, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂದೂ, ನಿಮ್ಮನ್ನು ನೀವೇ
೬ ತಿಳುಕೊಳ್ಳುವದಿಲ್ಲವೋ? ಆದರೆ ನಾವು ಅಗದವರಲ್ಲವೆಂದು, ನೀ
ವು ತಿಳುಕೊಳ್ಳುವಿರೆಂಬದಾಗಿ ನಂಬುತ್ತೇನೆ. ಆದರೆ ನಾವು ಪರೀ
೭ ಕ್ಷಿತರೆಂದು ಕಾಣುವದಕ್ಕಲ್ಲ, ನಾವು ಅಗದವರಂತೆ ಇದ್ದರೂ, ನೀ
ವೇ ಒಳ್ಳೇದನ್ನು ಮಾಡುವದಕ್ಕೆ ನೀವು ಕೆಟ್ಟದ್ದೇನು ಮಾಡದ
ಹಾಗೆ, ದೇವರನ್ನು ಬೇಡುತ್ತೇನೆ. ಯಾಕಂದರೆ ಸತ್ಯಕ್ಕೆ ವಿ
ರೋಧವಾಗಿ ಅಲ್ಲ, ಸತ್ಯಕ್ಕೋಸ್ಕರವೇ ಏನಾದರೂ ಮಾಡ ಬ
೮ ಲ್ಲೆವು. ನಾವು ಬಲಹೀನರಾಗಿಯೂ, ನೀವು ಬಲವುಳ್ಳವರಾಗಿಯೂ
ಇರುವಾಗ, ಸಂತೋಷ ಪಡುತ್ತೇವೆ. ಇದಲ್ಲದೆ ನೀವು ಸಂಪೂ
೧೦ ರ್ಣರಾಗ ಬೇಕೆಂಬುವದನ್ನೇ ಬೇಡುತ್ತೇವೆ. ಕೆಡವಿ ಹಾಕುವದ
ಕ್ಕಲ್ಲ, ಕಟ್ಟುವದಕ್ಕೆ ದೇವರು ನನಗೆ ಕೊಟ್ಟ ಅಧಿಕಾರದ ಪ್ರಕಾ
ರ, ನಾನು ಸಮೀಪದಲ್ಲಿದ್ದು ಕಠಿಣವಾಗಿ ನಡಿಸದ ಹಾಗೆ, ದೂ
ರದಲ್ಲಿದ್ದು ಇವುಗಳನ್ನು ಬರೆಯುತ್ತೇನೆ.

೧೧ ಕಡೆಯಲ್ಲಿ ಸಹೋದರರೇ, ಸಂತೋಷ ಪಡಿರಿ; ಸಂಪೂರ್ಣ
ರಾಗಿರಿ; ಆದರಣೆ ಪಡಿರಿ; ಒಂದೇ ಮನಸ್ಸಾಗಿರ್ರಿ; ಸಮಾಧಾನವಾಗಿ
ರ್ರಿ; ಅಗ ಪ್ರೀತಿ ಸಮಾಧಾನಗಳ ದೇವರು ನಿಮ್ಮ ಸಂಗಡ ಇರುವನು.
೧೨ ಒಬ್ಬರನ್ನೊಬ್ಬರು ಪರಿಶುದ್ಧ ಮುದ್ದಿನಿಂದ ವಂದಿಸಿರಿ. ಪರಿಶು
೧೩ ದ್ಧರೆಲ್ಲರು ನಿಮ್ಮನ್ನು ವಂದಿಸುತ್ತಾರೆ. ಕರ್ತನಾದ ಯೇಸು ಕ್ರಿ
೧೪ ಸ್ತನ ಕೃಪೆಯೂ, ದೇವರ ಪ್ರೀತಿಯೂ, ಪರಿಶುದ್ಧಾತ್ಮದ ಅ
ನ್ಯೋನ್ಯವೂ, ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

---

# THE EPISTLE OF
# PAUL THE APOSTLE TO THE GALATIANS.

### ಅಪೊಸ್ತಲನಾದ ಪೌಲನು ಗಲಾತ್ಯರಿಗೆ ಬರೆದ ಪತ್ರಿಕೆ.

## ೧. ಸಂಧಿ.

೧ ಮನುಷ್ಯರಿಂದಲ್ಲ, ಮನುಷ್ಯನ ಮುಖಾಂತರವಲ್ಲ, ಯೇ
ಸು ಕ್ರಿಸ್ತನಿಂದಲೂ, ಅವನನ್ನು ಸತ್ತವರಿಗೊಳಗಿಂದ ಎಬ್ಬಿಸಿದ
೨ ತಂದೆಯಾದ ದೇವರಿಂದಲೂ, ಅಪೊಸ್ತಲಿದಾದ ಪೌಲನೂ, ನನ್ನ
ಸಂಗಡ ಇರುವ ಸಹೋದರಕ್ಕೆಲ್ಲರೂ, ಗಲಾತ್ಯದ ಸಭೆಗಳಿಗೆ—
3 ತಂದೆಯಾದ ದೇವರಿಂದಲೂ, ನಮ್ಮ ಕರ್ತನಾದ ಯೇಸು ಕ್ರಿ
೪ ಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ. ಅವ
ನು ಈಗಲಿರುವ ದುಷ್ಟ ಯುಗದೊಳಗಿಂದ ನಮ್ಮನ್ನು ಬಿಡಿಸುವದ
ಕ್ಕೆ, ದೇವರೂ ನಮ್ಮ ತಂದೆಯೂ ಆಗಿರುವವನ ಚಿತ್ತದ ಪ್ರಕಾ
೫ ರ, ನಮ್ಮ ಪಾಪಗಳಿಗೋಸ್ಕರ ತನ್ನನ್ನು ಕೊಟ್ಟನು; ಅವನಿಗೆ
ಎಂದೆಂದಿಗೂ ಮಹಿಮೆ ಆಗಲಿ. ಆಮೆನ್.

೬ ಕ್ರಿಸ್ತನ ಕೃಪೆಯಲ್ಲಿ ನಿಮ್ಮನ್ನು ಕರೆದವನಿಂದ ಬೇಗೆ ಸುವಾ
ರ್ತೆಗೆ ಇಷ್ಟು ಬೇಗ ಶಿರಿಗಿ ಕೊಳ್ಳುತ್ತೀರೆಂದು, ಆಶ್ಚರ್ಯ ಪಡು
೭ ತ್ತೇನೆ. ಅದು ಮತ್ತೊಂದೂ ಅಲ್ಲ, ನಿಮ್ಮನ್ನು ತೊಂದರೆ ಪಡಿಸಿ,
ಕ್ರಿಸ್ತನ ಸುವಾರ್ತೆಯನ್ನು ಶಿರಿಗಿಸಿ ಬಿಡ ಇಚ್ಛೈಸುವವರು ಕೆಲ
೮ ವರು ಇದ್ದಾರೆ, ಅಷ್ಟೆ. ಆದರೆ ನಾವಾದರೂ ಆಕಾಶದಿಂದ ಬಂದ
ದೂತನಾದರೂ, ನಾವು ನಿಮಗೆ ಪ್ರಸಂಗಿಸಿದ್ದೇ ಹೊರ್ತು, ಬೇ
೯ ರೆ ಸುವಾರ್ತೆ ನಿಮಗೆ ಪ್ರಸಂಗಿಸಿದರೆ, ಶಾಪವಾಗಲಿ. ನಾವು
ಮುಂಚೆ ಹೇಳ್ದಿದ ಪ್ರಕಾರ, ಈಗಲು ಶಿರಿಗಿ ಹೇಳುತ್ತೇನೆ, ನೀವು
೧೦ ಹೊಂದಿದ್ದೇ ಹೊರ್ತು, ಒಬ್ಬನು ನಿಮಗೆ ಬೇರೆ ಸುವಾರ್ತೆ
ಪ್ರಸಂಗಿಸಿದರೆ, ಶಾಪವಾಗಲಿ. ಯಾಕಂದರೆ ಈಗ ಮನುಷ್ಯರ
ನ್ನು ಸಮ್ಮತಿ ಪಡಿಸುತ್ತೇನೋ? ದೇವರನೋ? ಇಲ್ಲದೆ ಮನು
ಷ್ಯರನ್ನು ಮೆಚ್ಚಿಸ ಹುಡುಕುತ್ತೇನೋ? ಇನ್ನು ಮನುಷ್ಯರನ್ನು
ಮೆಚ್ಚಿಸಿದರೆ, ನಾನು ಕ್ರಿಸ್ತನ ದಾಸನಾಗಿರೆನು.

೧೧ ಅದರೆ ಸಹೋದರರೇ, ನನ್ನಿಂದ ಪ್ರಸಂಗಿಸಲ್ಪಟ್ಟ ಸುವಾ
ರ್ತೆಯನ್ನು ಮನುಷ್ಯನ ಪ್ರಕಾರವಲ್ಲದ್ದೆಂದು, ನಿಮಗೆ ತಿಳಿಸು
೧೨ ತ್ತೇನೆ. ಯಾಕಂದರೆ ನಾನು ಮನುಷ್ಯನಿಂದ ಅದನ್ನು ಹೊಂ
ದಲೂ ಬೋಧಿಸಲ್ಪಡಲೂ ಇಲ್ಲ, ಯೇಸು ಕ್ರಿಸ್ತನ ಪ್ರಕಟಣೆ
೧೩ ಯಿಂದಲೇ. ಹ್ಯಾಗಂದರೆ ಬಂದು ಕಾಲ ಯೆಹೂದ್ಯ ಮತದಲ್ಲಿ
೧೪ ಇದ್ದ ನನ್ನ ನಡತೆಯನ್ನು ಕೇಳ್ದಿರಿ; ಏನಂದರೆ ದೇವರ ಸಭೆಯ
ನ್ನು ವಿಪರೀತ ಇಲ್ಲದೆ ಹಿಂಸೆ ಪಡಿಸಿ, ಅದನ್ನು ಹಾಳು ಮಾಡಿ, ಪಿತೃ
ಸಂಪ್ರದಾಯಗಳಲ್ಲಿ ಅಧಿಕವಾಗಿ ಆಸಕ್ತಿ ಪಟ್ಟು, ನನ್ನ ಜಾತಿಯ
ವರಾದ ಅನೇಕ ಕಸಮವಯಸ್ಸಿನವರಿಗಿಂತ ಯೆಹೂದ್ಯ ಮತದಲ್ಲಿ
೧೫ ಹೆಚ್ಚಿದೆನು. ಆದರೆ ನನ್ನ ತಾಯಿಯ ಗರ್ಭದಿಂದ ನನ್ನನ್ನು



ಪ್ರತ್ಯೇಕಿಸಿ, ತನ್ನ ಕೃಪೆಯ ಮೂಲವಾಗಿ ಕರೆದ ದೇವರು,
೧೬ ನಾನು ಜನಾಂಗಗಳಲ್ಲಿ ಅವನನ್ನು ಪ್ರಸಂಗಿಸುವ ಹಾಗೆ, ತನ್ನ
ಮಗನನ್ನು ನನ್ನಲ್ಲಿ ಪ್ರಕಟ ಮಾಡ ಮನಸ್ಸರಿಸಿದಾಗ, ಸಂಗಡ
೧೭ ಯೇ ರಕ್ತ ಮಾಂಸಗಳ ಕೂಡ ಯೋಚನೆ ಮಾಡದೆ, ಯೆರೂ
ಸಲೇಮಿಗೆ ನನಗೆ ಮುಂಚೆ ಅಪೊಸ್ತಲರಾಗಿದ್ದವರ ಬಳ್ಳಿಗೆ ಏರಿ
ಹೋಗದೆ, ಅರಾಬ್ಯಕ್ಕೆ ಹೊರಟೆನು; ಮತ್ತು ದಮಸ್ಕಕ್ಕೆ ಶಿರಿಗಿ
ಬಂದೆನು.

೧೮ ತರುವಾಯ ಮೂರು ವರುಷಗಳ ಮೇಲೆ, ಪೇತ್ರನ ಪರಿಚಿತಿ
ಮಾಡಲಿಕ್ಕೆ ಯೆರೂಸಲೇಮಿಗೆ ಏರಿ ಹೋಗಿ, ಅವನ ಬಳ್ಳಿಯ
೧೯ ಹದಿನೈದು ದಿವಸ ವಾಸ ಮಾಡಿದೆನು. ಆದರೆ ಅಪೊಸ್ತಲರಲ್ಲಿ,
ಕರ್ತನ ತಮ್ಮನಾದ ಯಾಕೋಬನ ಹೊರ್ತು, ಬೇರೊಬ್ಬನ
೨೦ ನ್ನು ನೋಡಲಿಲ್ಲ. ನಾನು ನಿಮಗೆ ಬರೆಯುವವುಗಳನ್ನುಯ ಕುರಿತು,
ದೇವರ ಮುಂದೆ, ಇಗೋ, ಸುಳ್ಳು ಹೇಳುವದಿಲ್ಲ.

೨೧ ತರುವಾಯ ಸುರ್ಯ, ಕಿಲಿಕ್ಯ, ಶೀಮೆಗಳಿಗೆ ಬಂದೆನು. ಆದರೆ
೨೨ ಕ್ರಿಸ್ತನಲ್ಲಿರುವ ಯೆಹೂದದ ಸಭೆಗಳಿಗೆ ನನ್ನ ಮುಖದ ಗುರು
೨೩ ತು ಶಿಳಿಯದೆ ಇತ್ತು. ಮುಂಚೆ ನಮ್ಮನ್ನು ಹಿಂಸಿಸಿದವನು, ತಾ
ನು ಮುಂಚೆ ಹಾಳು ಮಾಡಿದ ವಿಶ್ವಾಸವನ್ನು ಈಗ ಪ್ರಸಂಗಿಸು
ತ್ತಾನೆಂಬುವದನ್ನು ಮಾತ್ರ ಕೇಳಿ, ನನ್ನಲ್ಲಿ ದೇವರನ್ನು ಮಹಿಮೆ
ಪಡಿಸಿದರು.

## ೨. ಸಂಧಿ.

೧ ತರುವಾಯ ಹದಿನಾಲ್ಕು ವರುಷವಾದ ಮೇಲೆ, ಬಾರ್ನಬನ
ಸಂಗಡ, ತೀತನನ್ನು ಸಹ ಕರ ಕೊಂಡು, ಶಿರಿಗಿ ಯೆರೂಸಲೇಮಿಗೆ
೨ ಏರಿ ಹೋದೆನು; ಪ್ರಕಟಣೆಯ ಪ್ರಕಾರ ಏರಿ ಹೋದೆನು; ಮತ್ತು
ನಾನು ಪಿಡುವದು, ಇಲ್ಲವೆ ಪಿಡಿದ್ದು, ವ್ಯರ್ಥವಾಗದ ಹಾಗೆ, ಅವ
ರ ಮುಂದೆ ಹೆಸರ್ಗೊಂಡವರಲ್ಲಿ ಒಬ್ಬೊಬ್ಬನ ಮುಂದೆ, ನಾನು
3 ಜನಾಂಗಗಳಲ್ಲಿ ಸಾರುವ ಸುವಾರ್ತೆಯನ್ನು ಇಟ್ಟೆನು. ಅದರೆ
ನನ್ನ ಸಂಗಡ ಇದ್ದ ತೀತನು ಸಹ ಗ್ರೀಕನಾಗಿದ್ದರೂ, ಪರಿಛೇದನೆ
೪ ಹೊಂದ ಅಗತ್ಯ ಮಾಡಲ್ಪಡಲಿಲ್ಲ; ನಮ್ಮನ್ನು ದಾಸರ ಮಾಡ
ಬೇಕೆಂದು, ಕ್ರಿಸ್ತ ಯೇಸುವಿನಲ್ಲಿ ನಮಗಿರುವ ಸ್ವತಂತ್ರವನ್ನು
ಹೊಂಚಿ ನೋಡಲಿಕ್ಕೆ ಹೊಕ್ಕ ಸುಳ್ಳು ಸಹೋದರರ ನಿಮಿತ್ತ,
೫ ಸುವಾರ್ತೆಯ ಸತ್ಯವು ನಿಮ್ಮ ಬಳ್ಳಿಯ ನೆಲೆಯಾಗಿರುವ ಹಾಗೆ,
ಅವರಿಗೆ ಝಳ್ಳಿಗೆಯಾದರೂ ಬಳ್ಳಗಾಗಿ ಸ್ಥಳ ಕೊಡಲಿಲ್ಲ. ಏನಾದ
೬ ರೂ ಇದ್ದಾಕೆಂದು ತೋರುವವರಲ್ಲಿ ಎಂಥವರಾಗಿದ್ದರೂ, ನನಗೆ
ವಿಶೇಷವೇನೂ ಇಲ್ಲ: ದೇವರು ಮನುಷ್ಯ ಮುಖದಾಕ್ಷಿಣ್ಯ ಮಾ
ಡುವದಿಲ್ಲ. ಯಾಕಂದರೆ ಹೆಸರ್ಗೊಂಡವರು ನನಗೆ ಹೆಚ್ಚೇನೂ
೭ ಇಡಲಿಲ್ಲ. ಅದನ್ನು ಬಿಟ್ಟು, ಪೇತ್ರನಿಗೆ ಪರಿಛೇದನೆಯ ಸುವಾರ್ತೆ
ಹ್ಯಾಗೋ, ಹಾಗೆಯೇ ಅಪರಿಛೇದನೆಯದು ನನಗೆ ಒಪ್ಪಿಸಲ್ಪ
ಟ್ಟಿದೆ ಎಂದು ನೋಡಿದರು. ಯಾಕಂದರೆ ಪರಿಛೇದನೆಯ ಅಪೊ
ಸ್ತಲಸನಕ್ಕಾಗಿ ಪೇತ್ರನಿಗೆ ಬಲ ಕೊಟ್ಟವನು, ನನಗೂ ಜನಾಂಗ
೮ ಳಿಗಾಗಿ ಬಲ ಕೊಟ್ಟನು. ಮತ್ತು ಸ್ತಂಭಗಳೆಂದು ಹೆಸರ್ಗೊಂಡ
ವರಾದ ಯಾಕೋಬನು, ಕೇಫನೂ, ಯೋಹಾನನೂ, ನನಗೆ
ಕೊಡಲ್ಪಟ್ಟ ಕೃಪೆಯನ್ನು ತಿಳ್ದು, ನನಗೂ ಬಾರ್ನಬನಿಗೂ,
ನಾವು ಜನಾಂಗಗಳ ಬಳ್ಳಿಗೂ, ತಾವು ಪರಿಛೇದನೆಯ ಬಳ್ಳಿಗೂ
ಹೋಗುವದಕ್ಕೆ, ಅನ್ಯೋನ್ಯಕ್ಕೆಂದು ಬಲ ಕೈಗಳನ್ನು ಕೊಟ್ಟ
೧೦ ರು. ಬಡವರನ್ನು ಜ್ಞಾಪಕ ಮಾಡಿ ಕೊಳ್ಳ ಬೇಕೆಂದು ಮಾತ್ರ ಕೇ
ಳ್ದಿದರು; ಇದನ್ನೇ ಮಾತ ಜಾಗ್ರತೆಯಾಗಿದ್ದೆನು.

೧೧ ಆದರೆ ಪೇತ್ರನು ಅಂತಿಯೋಕ್ಯಕ್ಕೆ ಬಂದಾಗ, ಮುಖಾಮು
ಖಿಯಾಗಿ ಅವನನ್ನು ಎದುರಿಸಿದೆನು; ಯಾಕಂದರೆ ಅವನು ಅ
೧೨ ಪರಾಧಕ್ಕೊಳ್ಳಗಾಗಿದ್ದನು. ಹ್ಯಾಗಂದರೆ ಯಾಕೋಬನಿಂದ ಕೆ
ಲವರು ಬರುವದಕ್ಕಿಂತ ಮುಂಚೆ ಜನಾಂಗಗಳ ಸಂಗಡ ಉಂಡನು;
ಆದರೆ ಅವರು ಬಂದ ಮೇಲೆ, ಅವನು ಪರಿಛೇದನೆಯವರಿಗೆ ಭ
೧೩ ಯ ಪಟ್ಟು, ಜಾರಿ, ತನ್ನನ್ನು ಪ್ರತ್ಯೇಕಿಸಿ ಕೊಂಡನು. ಮತ್ತು
ಮಿಕ್ಕಾದ ಯೆಹೂದ್ಯರು ಸಹ ಅವನ ಸಂಗಡ ಕಪಟಿಗಳಾದ
ರು; ಈ ಪ್ರಕಾರ ಬಾರ್ನಬನು ಸಹ ಅವರ ಕಪಟದಿಂದ ಕೂಡ
೧೪ ಎಳೆಯಲ್ಪಟ್ಟನು. ಆದರೆ ಅವರು ಸುವಾರ್ತೆಯ ಸತ್ಯವನ್ನು
ಕುರಿತು ನೆಟ್ಟಿಗೆ ನಡಿಯದೆ ಇರುವದನ್ನು ಕಂಡು, ನಾನು ಪೇತ್ರನಿ
ಗೆ ಎಲ್ಲರ ಮುಂದೆ ಹೇಳ್ದೆನೆಂದರೆ, ನೀನು ಯೆಹೂದ್ಯನಾಗಿ
ದ್ದು, ಯೆಹೂದ್ಯರ ಹಾಗಲ್ಲ, ಜನಾಂಗಗಳ ಹಾಗೆ ಬದುಕಿದರೆ,
ಜನಾಂಗಳಿಗೆ ಯೆಹೂದ್ಯರನ್ನು ಅನುಸರಿಸ ಅಗತ್ಯ ಮಾಡು
೧೫ ವದೇನು? ನಾವು ಜನಾಂಗಳವರಾದ ಪಾಪಿಷ್ಠರಲ್ಲ, ಹುಟ್ಟು ಯೆ
೧೬ ಹೂದ್ಯರಾಗಿದ್ದು, ಯೇಸು ಕ್ರಿಸ್ತನ ವಿಶ್ವಾಸದ ಮೂಲವಾಗಿ
ಅಲ್ಲದೆ, ನ್ಯಾಯಪ್ರಮಾಣದ ಕ್ರಿಯೆಗಳಿಂದ ಮನುಷ್ಯನು ನೀ
ತಿನಿರ್ಣಯ ಪಡುವದಿಲ್ಲವೆಂದು ತಿಳ್ದು, ನಾವು ನ್ಯಾಯಪ್ರ
ಮಾಣದ ಕ್ರಿಯೆಗಳಿಂದಲ್ಲ, ಕ್ರಿಸ್ತನ ವಿಶ್ವಾಸದಿಂದ ನೀತಿನಿರ್ಣ
ಯ ಪಡುವದಕ್ಕೆ ಕ್ರಿಸ್ತ ಯೇಸುವನ್ನು ವಿಶ್ವಾಸಿಸಿದೆವು; ಯಾ
ಕಂದರೆ ನ್ಯಾಯಪ್ರಮಾಣದ ಕ್ರಿಯೆಗಳಿಂದ ಯಾವ ಮಾಂಸ
೧೭ ವಾದರೂ ನೀತಿನಿರ್ಣಯ ಪಡದು. ಆದರೆ ಕ್ರಿಸ್ತನಿಂದ ನೀತಿನಿ
ರ್ಣಯ ಪಡುವ ಹಾಗೆ ಹುಡುಕುವಾಗ, ನಾವು ಪಾಪಿಷ್ಠರಾಗಿ
ಕಾಣಲ್ಪಟ್ಟೆವೆ, ಅದರಿಂದ ಕ್ರಿಸ್ತನು ಪಾಪದ ಸೇವಕನೋ? ಅಗ
೧೮ ದು. ಯಾಕಂದರೆ ನಾನು ಕಿತ್ತವುಗಳನ್ನೇ ಶಿರಿಗಿ ಕಟ್ಟಿದರೆ, ನನ್ನ
೧೯ ನ್ನು ಮೀರುವವನಾಗಿ ತೋರಿಸುತ್ತೇನೆ. ಯಾಕಂದರೆ ನಾನು ದೇ
ವರಿಗೆ ಬದುಕುವ ಹಾಗೆ, ನ್ಯಾಯಪ್ರಮಾಣದಿಂದ ನ್ಯಾಯಪ್ರ
೨೦ ಮಾಣಕ್ಕೆ ಸತ್ತೆನು. ಕ್ರಿಸ್ತನ ಸಂಗಡ ಶಿಲುಬೆಗೆ ಹಾಕಲ್ಪಟ್ಟೆನು.
ಆದರೆ ಬದುಕುತ್ತೇನೆ; ಇನ್ನು ನಾನಲ್ಲ, ಕ್ರಿಸ್ತನೇ ನನ್ನಲ್ಲಿ ಬದುಕು
ತ್ತಾನೆ; ಹೀಗಿರಲಾಗಿ ನಾನು ಈಗ ಮಾಂಸದಲ್ಲಿ ಬದುಕುವದು, ನ
ನ್ನನ್ನು ಪ್ರೀತಿ ಮಾಡಿ, ತನ್ನನ್ನು ನನಗೋಸ್ಕರ ಕೊಟ್ಟ ದೇವರ
೨೧ ಮಗನ ಮೇಲಿರುವ ವಿಶ್ವಾಸದಲ್ಲಿ ಬದುಕುತ್ತೇನೆ. ನಾನು ದೇವ
ರ ಕೃಪೆಯನ್ನು ತೆಗೆದು ಹಾಕುವದಿಲ್ಲ, ಯಾಕಂದರೆ ನ್ಯಾಯ
ಪ್ರಮಾಣದಿಂದ ನೀತಿ ಉಂಟಾದರೆ, ಕ್ರಿಸ್ತನು ಸುಮ್ಮನೆ ಸತ್ತನು.

## ೩. ಸಂಧಿ.

೧ ಓ ಬುದ್ಧಿಹೀನ ಗಲಾತ್ಯರೇ! ಸತ್ಯಕ್ಕೆ ವಿಧೇಯರಾಗದ ಹಾ
ಗೆ, ಯಾವನು ನಿಮಗೆ ಮಾಟೆ ಮಾಡಿದನು! ಯೇಸು ಕ್ರಿಸ್ತನು
ನಿಮ್ಮಲ್ಲಿ ಶಿಲುಬೆಗೆ ಹಾಕಲ್ಪಟ್ಟವನಾಗಿ ನಿಮ್ಮ ಕಣ್ಣುಗಳೆದುರಿಗೆ
೨ ಬರೆಯಲ್ಪಡಲಿಲ್ಲವೋ? ಇದನ್ನು ಮಾತ್ರ ನಿಮ್ಮಿಂದ ಕಲಿಯ
ಬೇಕೆಂದಿದ್ದೇನೆ— ನೀವು ಆತ್ಮವನ್ನು ಹೊಂದಿದ್ದು, ನ್ಯಾಯಪ್ರ
ಮಾಣದ ಕ್ರಿಯೆಗಳಿಂದಲೋ, ವಿಶ್ವಾಸದ ಕೇಳ್ವಿಕೆಯಿಂದ
3 ತೋ? ಇಷ್ಟು ಬುದ್ಧಿಹೀನರಾಗಿದ್ದೀರೋ? ಆತ್ಮದಲ್ಲಿ ಆರಂಭಿಸಿ,
೪ ಈಗ ಮಾಂಸದಲ್ಲಿ ಶೀರಿಸುತ್ತೀರೋ? ಇಂಥವುಗಳನ್ನು ನೀವು

೫ ತಾಳಿದ್ದು ವ್ಯರ್ಥವೋ? ವ್ಯರ್ಥವಾಯಿತೇನೋ. ಹಾಗಾದರೆ
ಆತ್ಮವನ್ನು ನಿಮಗೆ ತಂದು ಕೊಟ್ಟು, ನಿಮ್ಮಲ್ಲಿ ಬಲವಾದ ಕ್ರಿಯೆ
ಗಳನ್ನು ಯತ್ನೈಸುವವನು ನ್ಯಾಯಪ್ರಮಾಣದ ಕ್ರಿಯೆಗಳಿಂ
೬ ದಲೋ! ವಿಶ್ವಾಸದ ಕೇಳ್ವಿಕೆಯಿಂದಲೋ? ಹಾಗೆಯೇ ಅಬ್ರಹಾ
ಮನು ದೇವರನ್ನು ವಿಶ್ವಾಸಿಸಿದನು; ಅದು ಅವನಿಗೆ ನೀತಿ ಎಂದು
೭ ಎಣಿಸಲ್ಪಟ್ಟಿತು. ಆದದರಿಂದ ವಿಶ್ವಾಸದವರು ಇವರೇ, ಅಬ್ರ
೮ ಹಾಮನ ಮಕ್ಕಳಾಗಿದ್ದಾರೆಂದು ತಿಳಿದು ಕೊಳ್ಳಿರಿ. ಆದರೆ ವಿ
ಶ್ವಾಸದಿಂದ ದೇವರು ಜನಾಂಗಗಳನ್ನು ನೀತಿನಿರ್ಣಯ ಪಡಿಸು
ವನೆಂದು ಬರಹವು ಮುಂಚೆ ನೋಡಿ, ಅಬ್ರಹಾಮನಿಗೆ ನಿನ್ನಲ್ಲಿ
ಎಲ್ಲಾ ಜನಾಂಗಗಳು ಆಶೀರ್ವದಿಸಲ್ಪಡುವವೆಂಬ ಸುವಾರ್ತೆಯ
೯ ನ್ನು ಮುಂತಿಳಿಸಿತು. ಹೀಗಿರಲಾಗಿ ವಿಶ್ವಾಸದವರು ವಿಶ್ವಾಸಿಯಾ
೧೦ ದ ಅಬ್ರಹಾಮನ ಸಂಗಡ ಆಶೀರ್ವದಿಸಲ್ಪಡುತ್ತಾರೆ. ಯಾಕಂ
ದರೆ ನ್ಯಾಯಪ್ರಮಾಣದ ಕ್ರಿಯೆಗಳವರಲ್ಲಿ ಶಾಪಕ್ಕೊಳಗಾ
ಗಿದ್ದಾರೆ; ಹ್ಯಾಗಂದರೆ ನ್ಯಾಯಪ್ರಮಾಣದ ಪುಸ್ತಕದಲ್ಲಿ ಬರೆ
ದ ಎಲ್ಲವುಗಳಲ್ಲಿ, ಅವುಗಳನ್ನು ಮಾಡುವ ಹಾಗೆ, ನೆಲೆಯಾಗಿ
೧೧ ದ ಯಾವನಾದರೂ ಶಾಪಗ್ರಸ್ತನೆಂದು ಬರೆದದೆ. ನ್ಯಾಯಪ್ರ
ಮಾಣದಿಂದ ಒಬ್ಬನಾದರೂ ದೇವರ ಮುಂದೆ ನೀತಿನಿರ್ಣಯ
ಪಡುವದಿಲ್ಲವೆಂಬುವದು ಪ್ರಕಟವಾಗಿದೆ; ಯಾಕಂದರೆ ನೀತಿವಂತ
೧೨ ನು ವಿಶ್ವಾಸದಿಂದ ಬದುಕುವನು. ಆದರೆ ನ್ಯಾಯಪ್ರಮಾಣವು
ವಿಶ್ವಾಸದಲ್ಲ; ಅವುಗಳನ್ನು ಮಾಡುವ ಮನುಷ್ಯನು ಅವುಗಳ
೧೩ ಲ್ಲಿ ಬದುಕುವನು. ಅಬ್ರಹಾಮನ ಆಶೀರ್ವಾದವು ಕ್ರಿಸ್ತ ಯೇಸು
ವಿನಿಂದ ಜನಾಂಗಗಳ ಮೇಲೆ ಬಂದು, ನಾವು ಆತ್ಮದ ವಾಗ್ದತ್ತವ
೧೪ ನ್ನು ವಿಶ್ವಾಸದ ಮೂಲವಾಗಿ ಹೊಂದುವ ಹಾಗೆ, ಕ್ರಿಸ್ತನು ನಮ
ಗೋಸ್ಕರ ಶಾಪವಾಗಿ, ನ್ಯಾಯಪ್ರಮಾಣದ ಶಾಪದೊಳಗಿಂದ
ನಮ್ಮನ್ನು ಕೊಂಡು ಕೊಂಡನು; ಹ್ಯಾಗಂದರೆ ಮರದಲ್ಲಿ ತೂಗಾ
ಡುವವಕೆಲ್ಲರು ಶಾಪಗ್ರಸ್ಥರೆಂದು ಬರೆದದೆ.

೧೫ ಸಹೋದರರೇ, ಮನುಷ್ಯನ ಪ್ರಕಾರ ಮಾತಾಡುತ್ತೇನೆ, ಸ್ಥಿರ
ಮಾಡಲ್ಪಟ್ಟ ಒಡಂಬಡಿಕೆಯನ್ನು ಮನುಷ್ಯನದಾದರೂ ಯಾ
೧೬ ರೂ ಹೀನ ಮಾಡುವದೂ ಹೆಚ್ಚು ಮಾಡುವದೂ ಇಲ್ಲ. ಆದರೆ
ಅಬ್ರಹಾಮನಿಗೂ, ಅವನ ಬೀಜಕ್ಕೂ, ವಾಗ್ದತ್ತಗಳು ಹೇಳಲ್ಪಟ್ಟ
ವು; ಅನೇಕರನ್ನು ಕುರಿತಂತೆ ಬೀಜಗಳಿಗೂ ಎಂದಲ್ಲ, ಒಬ್ಬನ
ನ್ನು ಕುರಿತಂತೆ ನಿನ್ನ ಬೀಜಕ್ಕೂ ಎಂದು, ಹೇಳುತ್ತದೆ; ಅವನು
೧೭ ಕ್ರಿಸ್ತನೇ. ಇದನ್ನು ಹೇಳುತ್ತೇನೆ—ದೇವರಿಂದ ಕ್ರಿಸ್ತನಿಗಾಗಿ ಮೊ
ದಲು ಸ್ಥಿರ ಮಾಡಲ್ಪಟ್ಟ ಒಡಂಬಡಿಕೆಯನ್ನು ನಾನೂರ ಮೂವ
ತ್ತು ವರುಷಗಳ ಮೇಲೆ ಉಂಟಾದ ನ್ಯಾಯ ಪ್ರಮಾಣವು, ವಾ
೧೮ ಗ್ದತ್ತವನ್ನು ತೆಗೆದು ಹಾಕುವದಕ್ಕಾಗಿ, ಅಸ್ಥಿರ ಮಾಡದು. ಯಾ
ಕಂದರೆ ಬಾಧ್ಯವು ನ್ಯಾಯಪ್ರಮಾಣದಿಂದಾದರೆ, ಇನ್ನು ವಾಗ್ದ
ತ್ತದಿಂದಲ್ಲ; ಆದರೆ ಅಬ್ರಹಾಮನಿಗೆ ವಾಗ್ದತ್ತದಿಂದಲೇ ದೇವರು
೧೯ ದಯೆ ಮಾಡಿದನು. ಹಾಗಾದರೆ ನ್ಯಾಯಪ್ರಮಾಣವು ಯಾಕೆ?
ವಾಗ್ದತ್ತ ಹೊಂದಿದ ಬೀಜವು ಬರುವ ಪರ್ಯಂತರ, ದೂತರ
ಮುಖಾಂತರ ಮಧ್ಯಸ್ಥನ ಕೈಯಿಂದ ನೇಮಿಸಲ್ಪಟ್ಟು, ಮೀರಾದಿ
೨೦ ಕೆಗಳ ನಿಮಿತ್ತ ಕೇಡಿಸಲ್ಪಟ್ಟಿತ್ತು. ಆದರೆ ಮಧ್ಯಸ್ಥನು ಒಬ್ಬನವನ
೨೧ ಲ್ಲ, ಆದರೆ ದೇವರು ಒಬ್ಬನೇ. ಹಾಗಾದರೆ ನ್ಯಾಯಪ್ರಮಾಣ
ವು ದೇವರ ವಾಗ್ದತ್ತಗಳಿಗೆ ವಿರೋಧವೋ! ಆಗದು; ಬದುಕಿಸ ಬ
ಲವುಳ್ಳ ನ್ಯಾಯ ಪ್ರಮಾಣವು ಕೊಡಲ್ಪಟ್ಟಿದ್ದರೆ, ನಿಜವಾಗಿ ನ್ಯಾ
೨೨ ಯಪ್ರಮಾಣದಿಂದ ನೀತಿ ಉಂಟಾಗಿರುವದು. ಆದರೆ ಯೇಸು
ಕ್ರಿಸ್ತನ ವಿಶ್ವಾಸದಿಂದಾದ ವಾಗ್ದತ್ತವು ವಿಶ್ವಾಸಿಸುವವರಿಗೆ ಕೊಡ
ಲ್ಪಡುವ ಹಾಗೆ, ಬರಹವು ಎಲ್ಲವನ್ನು ಏಕವಾಗಿ ಪಾಪದ ಕೆಳಗೆ
೨೩ ಮುಚ್ಚಿ ಹಾಕಿತು. ಆದರೆ ವಿಶ್ವಾಸವು ಬರುವದಕ್ಕಿಂತ ಮುಂಚೆ,
ಪ್ರಕಟವಾಗಬೇಕಾದ ವಿಶ್ವಾಸಕ್ಕಾಗಿ ಮುಚ್ಚಲ್ಪಟ್ಟು, ನ್ಯಾಯಪ್ರ
೨೪ ಮಾಣದ ಕೆಳಗೆ ಕಾಯಲ್ಪಡುವವರಾಗಿದ್ದೆವು. ಹೀಗಿರಲಾಗಿ ನಾ
ವು ವಿಶ್ವಾಸದಿಂದ ನೀತಿನಿರ್ಣಯ ಪಡುವ ಹಾಗೆ, ನ್ಯಾಯಪ್ರ
೨೫ ಮಾಣವು ನಮ್ಮನ್ನು ಕ್ರಿಸ್ತನಿಗೆ ತರುವ ಉಪಾಧ್ಯಾಯಾಗಿತ್ತು. ಆ
ದರೆ ವಿಶ್ವಾಸವು ಬಂದ ಮೇಲೆ, ಇನ್ನೂ ಉಪಾಧ್ಯನ ಕೆಳಗೆ
೨೬ ಇರೆವು. ಯಾಕಂದರೆ ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದ
೨೭ ಮೂಲವಾಗಿ ಎಲ್ಲರು ದೇವರ ಮಕ್ಕಳಾಗಿದ್ದೀರಿ. ಹ್ಯಾಗಂದರೆ
ಕ್ರಿಸ್ತನಿಗಾಗಿ ಸ್ನಾನ ಹೊಂದಿದವರಲ್ಲು ಕ್ರಿಸ್ತನನ್ನು ಧರಿಸಿ ಕೊಂ
೨೮ ಡಿರಿ. ಯೆಹೂದ್ಯನೂ ಇಲ್ಲ, ಗ್ರೀಕನೂ ಇಲ್ಲ, ದಾಸನೂ ಇಲ್ಲ,
ಸ್ವತಂತ್ರನೂ ಇಲ್ಲ, ಗಂಡೂ ಇಲ್ಲ, ಹೆಣ್ಣೂ ಇಲ್ಲ; ಯಾಕಂದ
೨೯ ರೆ ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಬ್ಬನೇ ಆಗಿದ್ದೀರಿ. ಮತ್ತು
ನೀವು ಕ್ರಿಸ್ತನವರಾದರೆ, ಅಬ್ರಹಾಮನ ಬೀಜವೂ, ವಾಗ್ದತ್ತದ ಪ್ರ
ಕಾರ ಬಾಧ್ಯಸ್ಥರೂ, ಆಗಿದ್ದೀರಿ.

## ೪. ಸಂಧಿ.

೧ ಇದನ್ನು ಹೇಳುತ್ತೇನೆ—ಬಾಧ್ಯಸ್ಥನು ಬಾಲಕನಾಗಿರುವ ಕಾಲ
ವಮ್ಮು, ಎಲ್ಲಕ್ಕೆ ಅಧಿಕಾರಿಯಾಗಿದ್ದರೂ, ದಾಸನಿಗಿಂತ ಬಹೇಷ
೨ ನಲ್ಲ; ಆದರೆ ತಂದೆ ಮುಂನೇಮಿಸಿದ ಕಾಲದ ವರಿಗೆ, ಯಜಮಾ
೩ ನರಿಗೂ ಉಗ್ರಾಣದವರಿಗೂ ಒಳಗಾಗಿದ್ದಾನೆ. ಹಾಗೆಯೇ ನಾವು
ಬಾಲಕರಾಗಿರುವಾಗ, ಲೋಕದ ಸೂತ್ರಗಳಿಗೆ ದಾಸರಾಗಿ ಒಳಗಾ
೪ ಗಿದ್ದೆವು. ಆದರೆ ಕಾಲದ ಸಂಪೂರ್ಣತೆಯು ಬಂದಾಗ, ನಾವು
ಪುತ್ರಸ್ವೀಕಾರ ಹೊಂದುವ ಹಾಗೆ, ನ್ಯಾಯಪ್ರಮಾಣಕ್ಕೊಳಗಾ
೫ ದವರನ್ನು ಕೊಂಡು ಕೊಳ್ಳುವದಕ್ಕೆ, ದೇವರು ತನ್ನ ಮಗನನ್ನು
ಸ್ತ್ರೀಯಿಂದ ಹುಟ್ಟಿದವನಾಗಿಯೂ, ನ್ಯಾಯಪ್ರಮಾಣಕ್ಕೊಳ
ಗಾದವನಾಗಿಯೂ, ಕಳುಹಿಸಿದನು. ಮತ್ತು ನೀವು ಮಕ್ಕಳಾಗಿ
ರುವದರಿಂದ, ದೇವರು ತನ್ನ ಮಗನ ಆತ್ಮವನ್ನು ನಿಮ್ಮ ಹೃದ
ಯಗಳೊಳಗೆ ಕಳುಹಿಸಿದನು. ಅಬ್ಬಾ ತಂದೆಯೇ, ಎಂದು ಕೂ
೭ ಗುವಂಥಾದನ್ನೇ. ಹೀಗಿರಲಾಗಿ ನೀನು ಇನ್ನು ದಾಸನಲ್ಲ, ಮಗ
ನೇ; ಮಗನಾದರೆ, ಕ್ರಿಸ್ತನ ಮುಖಾಂತರ ದೇವರಿಗೆ ಬಾಧ್ಯಸ್ಥ
ನೂ ಆಗಿದ್ದೀ.

೮ ಆಗ ದೇವರನ್ನರಿಯದೆ, ಸ್ವಭಾವವಾಗಿ ದೇವರುಗಳಲ್ಲದವರ
೯ ನ್ನು ಸೇವಿಸಿದಿರಿ. ಆದರೆ ಈಗ ದೇವರನ್ನರಿತು, ವಿಶೇಷವಾಗಿ ದೇ
ವರಿಂದ ಅರಿಯಲ್ಪಟ್ಟು, ಮತ್ತು ಬಲಹೀನವಾದ ಬಡ ಸೂತ್ರಗಳ
ಹತ್ತರ, ಅವುಗಳನ್ನು ಮತ್ತು ತಿರಿಗಿ ಸೇವಿಸ ಬೇಕೆಂದು, ಯಾಕೆ
೧೦ ತಿರುಗಿ ಕೊಳ್ಳುತ್ತೀರಿ? ದಿವಸಗಳನ್ನೂ, ಮಾಸಗಳನ್ನೂ, ಸಮ
೧೧ ಯಗಳನ್ನೂ, ವರುಷಗಳನ್ನೂ, ಆಚರಿಸುತ್ತೀರಿ. ನಿಮ್ಮಲ್ಲಿ ಸು
ಮ್ಮನೆ ಕಷ್ಟ ಪಟ್ಟಿನೇನೋ, ನಿಮಗೋಸ್ಕರ ಭಯ ಪಡುತ್ತೇನೆ.

೧೨ ನಾನೂ ನಿಮ್ಮ ಹಾಗೆ ಇರುವದರಿಂದ ನೀವು ನನ್ನ ಹಾಗೆ ಆಗಿರಿ;
ಸಹೋದರರೇ, ನಿಮ್ಮನ್ನು ಬೇಡಿ ಕೊಳ್ಳುತ್ತೇನೆ; ನೀವು ನನಗೇ
೧೩ ನೂ ಅನ್ಯಾಯ ಮಾಡಲಿಲ್ಲ. ಆದರೆ ಮಾಂಸದ ಬಲಹೀನತ್ವ
ದಿಂದ ಮೊದಲು ನಿಮಗೆ ಸುವಾರ್ತೆ ಪ್ರಸಂಗಿಸಿದೆನೆಂದು ಬಲ್ಲಿರಿ.



೧೪ ಮತ್ತು ನನ್ನ ಮಾಂಸದಲ್ಲಿರುವ ನನ್ನ ಶೋಧನೆಯನ್ನು ನೀವು
ಹೀನೈಸಲಿಲ್ಲ, ಅಸಹಿಸಲಿಲ್ಲ, ಆದರೆ ದೇವದೂತನ ಹಾಗೆ ಕ್ರಿಸ್ತ
೧೫ ಯೇಸುವಿನ ಹಾಗೆ, ನನ್ನನ್ನು ಅಂಗೀಕರಿಸಿದಿರಿ. ಹಾಗಾದರೆ, ನಿಮಗೆ
ಇದ್ದ ಭಾಗ್ಯವು ಎಲ್ಲಿ? ಸಾಧ್ಯವಾಗಿದ್ದರೆ, ನಿಮ್ಮ ಕಣ್ಣುಗಳನ್ನು
ಕಿತ್ತು ತೆಗೆದು, ನನಗೆ ಕೊಡುತ್ತಿದ್ದಿರೆಂದು ನಿಮಗೆ ಸಾಕ್ಷಿ ಕೊಡುತ್ತೇ
೧೬ ನೆ. ಹೀಗಿರಲಾಗಿ ನಿಮಗೆ ಸತ್ಯವನ್ನು ಹೇಳುವದರಿಂದ ನಿಮ್ಮ ಶ
೧೭ ತ್ರುವಾದೆನೋ? ನಿಮ್ಮ ಮೇಲೆ ಆಸಕ್ತಿ ಪಡುತ್ತಾರೆ, ಆದರೆ ಚನ್ನಾ
ಗಿ ಅಲ್ಲ, ನೀವು ಅವರ ಮೇಲೆ ಆಸಕ್ತಿ ಪಡುವ ಹಾಗೆ, ನಿಮ್ಮನ್ನು
೧೮ ಹೊರಗೆ ಹಾಕ ಇಚ್ಛೈಸುತ್ತಾರೆ. ಆದರೆ ನಾನು ನಿಮ್ಮ ಹತ್ತರ
ಇರುವಲ್ಲಿ ಮಾತ್ರವಲ್ಲ, ಯಾವಾಗಲೂ ಒಳ್ಳೆದರಲ್ಲಿ ಆಸಕ್ತಿ ಪ
೧೯ ಡುವದು ಒಳ್ಳೇದು. ನನ್ನ ಮಕ್ಕಳೇ, ಕ್ರಿಸ್ತನು ನಿಮ್ಮಲ್ಲಿ ರೂ
ಪವಾಗುವ ಮಟ್ಟಿಗೂ ತಿರಿಗಿ ನಿಮಗೋಸ್ಕರ ಪ್ರಸವ ವೇದನೆ ಪ
೨೦ ಡುತ್ತೇನೆ. ಆದರೆ ಈಗಲೇ ನಿಮ್ಮ ಬಳಿಯಲ್ಲಿದ್ದು, ನನ್ನ ಶಬ್ದವ
ನ್ನು ಬದಲು ಮಾಡ ಇಚ್ಛೈಸೇನು; ಯಾಕಂದರೆ ನಿಮ್ಮ ವಿಷ
ಯವಾಗಿ ಮಾರ್ಗ ಕಾಣದೆ ಇದ್ದೇನೆ.

೨೧ ನ್ಯಾಯಪ್ರಮಾಣಕ್ಕೊಳಗಾಗಿರ ಮನಸ್ಸುಳ್ಳವರೇ, ನನಗೆ
೨೨ ಹೇಳಿರಿ. ನ್ಯಾಯಪ್ರಮಾಣವನ್ನು ಕೇಳುವದಿಲ್ಲವೋ? ಏನಂದರೆ
ಅಬ್ರಹಾಮನಿಗೆ ಇಬ್ಬರು ಮಕ್ಕಳಿದ್ದರು, ದಾಸಿಯಿಂದ ಒಬ್ಬ
೨೩ ನೂ, ಸ್ವತಂತ್ರಳಿಂದ ಒಬ್ಬನೂ, ಎಂದು ಬರೆದದೆ. ಆದರೆ ದಾ
ಸಿಯಿಂದಾದವನು ಮಾಂಸದ ಪ್ರಕಾರ ಹುಟ್ಟಿದನು; ಸ್ವತಂತ್ರ
೨೪ ಳಿಂದಾದವನು ವಾಗ್ದತ್ತದಿಂದಲೇ. ಇವು ಅನ್ಯಾಭಿಪ್ರಾಯವಾಗಿ
ವೆ; ಹ್ಯಾಗಂದರೆ ಅವರು ಎರಡು ಒಡಂಬಡಿಕೆಗಳಾಗಿದ್ದಾರೆ, ಸೀ
ನಾಯಿ ಪರ್ವತದಿಂದ ಬಂದು ದಾಸತ್ವಕ್ಕಾಗಿ ಹೆರುವಂಥಾದ್ದು
೨೫ ಒಂದು; ಅದು ಹಾಗರಳೇ. ಹ್ಯಾಗಂದರೆ ಹಾಗರ್ ಎಂಬುವದು,
ಅರಾಬ್ಯದಲ್ಲಿರುವ ಸೀನಾಯ ಪರ್ವತವಾಗಿದೆ; ಅದು ಈಗಿನ
ಯೆರೂಸಲೇಮಿಗೆ ಸರಿಯಾಗಿದೆ; ಅವಳು ತನ್ನ ಮಕ್ಕಳ ಸಂಗ
೨೬ ಡ ದಾಸಿಯಾಗಿದ್ದಾಳೆ. ಆದರೆ ಮೇಲಿನ ಯೆರೂಸಲೇಮು ಸ್ವ
೨೭ ತಂತ್ರಳೇ; ಅವಳು ನಮ್ಮೆಲ್ಲರ ತಾಯಿ. ಯಾಕಂದರೆ ಹೆರದ ಬಂ
ಜೆಯೇ, ಆನಂದ ಪಡು, ಪ್ರಸವ ವೇದನೆ ಪಡದವಳೇ, ಶಬ್ದ ಎತ್ತಿ
ಕೂಗು, ಯಾಕಂದರೆ ಗಂಡನು ಉಂಟಾದವಳಿಗಿಂತ ಬಿಡಲ್ಪಟ್ಟ
೨೮ ವಳಿಗೆ ಮಕ್ಕಳು ಹೆಚ್ಚು, ಎಂದು ಬರೆದದೆ. ನಾವಾದರೆ, ಸಹೋ
೨೯ ದರರೇ, ಇಸಾಕನ ಪ್ರಕಾರ ವಾಗ್ದತ್ತದ ಮಕ್ಕಳಾಗಿದ್ದೇವೆ. ಆದರೆ
ಹ್ಯಾಗೆ ಆಗಲು ಮಾಂಸದ ಪ್ರಕಾರ ಹುಟ್ಟಿದವನು ಆತ್ಮದ ಪ್ರಕಾ
೩೦ ರ ಹುಟ್ಟಿದವನನ್ನು ಹಿಂಸಿಸಿದನೋ, ಹಾಗೆಯೇ ಈಗಲೂ. ಆದ
ರೂ ಬರಹವು ಏನು ಹೇಳುತ್ತದೆ? ದಾಸಿಯನ್ನೂ ಅವಳ ಮಗನ
೩೧ ನ್ನೂ ಹೊರಗೆ ಹಾಕು; ಯಾಕಂದರೆ ದಾಸಿಯ ಮಗನು ಸ್ವತಂ
ತ್ರಳ ಮಗನ ಸಂಗಡ ಬಾಧ್ಯನಾಗನು. ಆದದರಿಂದ, ಸಹೋದ
ರರೇ, ದಾಸಿಗೆ ಅಲ್ಲ, ಸ್ವತಂತ್ರಳಿಗೆ ಮಕ್ಕಳಾಗಿದ್ದೇವೆ.

## ೫. ಸಂಧಿ.

೧ ಹೀಗಿರುವದರಿಂದ ಕ್ರಿಸ್ತನು ನಮ್ಮನ್ನು ಬಿಡುಗಡೆ ಮಾಡಿದ ಬಿ
೨ ಡುಗಡೆಯಲ್ಲಿ ನಿಂತು ಕೊಳ್ಳಿರಿ. ಮತ್ತು ತಿರಿಗಿ ದಾಸತ್ವದ ನೊ
ಗಕ್ಕೆ ಬಳಗಾಗ ಬೇಡಿರಿ. ಇಗೋ ಪೌಲನಾದ ನಾನು ನಿಮಗೆ
೩ ಹೇಳುತ್ತೇನೆ—ಪರಿಛೇದನೆ ಹೊಂದಿದರೆ, ಕ್ರಿಸ್ತನು ನಿಮಗೆ ಏನೂ
ಪ್ರಯೋಜನವಾಗುವದಿಲ್ಲ. ಆದರೆ ಪರಿಛೇದನೆ ಹೊಂದುವ ಒ
ಬ್ಬೊಬ್ಬ ಮನುಷ್ಯನಿಗೆ ನ್ಯಾಯಪ್ರಮಾಣವನ್ನೆಲ್ಲಾ ಮಾಡು
೪ ವ ಹಂಗಿನಲ್ಲಿದ್ದಾನೆಂದು, ತಿರಿಗಿ ಸಾಕ್ಷಿ ಕೊಡುತ್ತೇನೆ. ನ್ಯಾಯ
ಪ್ರಮಾಣದಿಂದ ನೀತಿ ನಿರ್ಣಯ ಪಡುವವರ್ಯಾರೋ, ಕ್ರಿಸ್ತನಿಗೆ
೫ ಬೇಕೆಯಾದಿರಿ; ಕೃಪೆಯಲ್ಲಿಂದ ಬಿದ್ದು ಹೋದಿರಿ. ಯಾಕಂದರೆ
ನಾವು ಆತ್ಮದ ಮೂಲವಾಗಿ ವಿಶ್ವಾಸದಿಂದ ನೀತಿಯ ನಿರೀಕ್ಷೆಯ
೬ ನ್ನು ಎದುರು ನೋಡುತ್ತೇವೆ. ಹ್ಯಾಗಂದರೆ ಕ್ರಿಸ್ತ ಯೇಸುವಿನಲ್ಲಿ
ಪರಛೇದನೆಯಾದರೂ, ಅಪರಿಛೇದನೆಯಾದರೂ, ಏನೂ ಉಪ
ಯೋಗಿಸುವದಿಲ್ಲ; ಆದರೆ ಪ್ರೀತಿಯಿಂದ ಯತ್ನೈಸುವ ವಿಶ್ವಾ
೭ ಸವೇ. ಚನ್ನಾಗಿ ಓಡಿದಿರಿ; ಸತ್ಯಕ್ಕೆ ಸಮ್ಮತಿ ಪಡದ ಹಾಗೆ,
೮ ಯಾರು ನಿಮಗೆ ಅಡ್ಡ ಹಾಕಿದರು? ಈ ಸಮ್ಮತಿಯು ನಿಮ್ಮನ್ನು
೯ ಕರೆದವನಿಂದ ಆದದ್ದಲ್ಲ. ಸ್ವಲ್ಪ ಹುಳಿಯು ಮುದ್ದೆಯನ್ನೆಲ್ಲಾ
೧೦ ಹುಳಿ ಮಾಡುತ್ತದೆ. ಯಾವದರಲ್ಯಾದರೂ ನಿಮಗೆ ಬೇಕೆ ಮ
ನಸ್ಸಾಗುವದಿಲ್ಲವೆಂದು, ನಾನು ಕರ್ತನಲ್ಲಿ ನಿಮ್ಮನ್ನು ಕುರಿತು
ಭರವಸವಾಗಿದ್ದೇನೆ; ಆದರೆ ನಿಮ್ಮನ್ನು ತೊಂದರೆ ಪಡಿಸುವವನು,
೧೧ ಯಾರಾಗಲಿ, ಅಜ್ಞೆಯನ್ನು ತಾಳುವನು. ನಾನಾದರೆ, ಸಹೋದ
ರರೇ, ಇನ್ನು ಪರಿಛೇದನೆಯನ್ನು ಸಾರಿದರೆ, ಇನ್ನು ಯಾಕೆ
ಹಿಂಸೆ ಪಡುತ್ತೇನೆ? ಹಾಗಾದರೆ, ಶಿಲುಬೆಯ ಎಡ ತಡೆಯು ತೆಗೆದು
೧೨ ಹಾಕಲ್ಪಟ್ಟಿರುವದು. ನಿಮ್ಮನ್ನು ಗಲಿಬಿಲಿ ಮಾಡುವವರು ಕಡಿದು
ಬಿಡಲ್ಪಟ್ಟಿರಲಿ.

೧೩ ಹ್ಯಾಗಂದರೆ, ಸಹೋದರರೇ, ನೀವು ಬಿಡುಗಡೆಗಾಗಿ ಕರೆಯ
ಲ್ಪಟ್ಟಿರಿ, ಮಾಂಸಕ್ಕೆ ಆಸ್ಪದ ಕೊಡುವ ಬಿಡುಗಡೆಯು ಮಾತ್ರ
ಬೇಡ; ಆದರೆ ಪ್ರೀತಿಯಿಂದ ಒಬ್ಬರನ್ನೊಬ್ಬರು ಸೇವಿಸಿರಿ.
೧೪ ಯಾಕಂದರೆ ನಿನ್ನ ನೆಕೆಯವನನ್ನು ನಿನ್ನ ಹಾಗೆ ಪ್ರೀತಿ ಮಾಡು
ಎಂಬ ಒಂದೇ ವಾಕ್ಯದಲ್ಲಿ ನ್ಯಾಯಪ್ರಮಾಣವೆಲ್ಲಾ ಪೂರ್ತಿ
೧೫ ಯಾಗುತ್ತದೆ. ಆದರೆ ಒಬ್ಬರನ್ನೊಬ್ಬರು ಕಚ್ಚಿ, ತಿಂದು ಬಿಟ್ಟಿ
ರೆ, ಒಬ್ಬರಿಂದೊಬ್ಬರು ಲಯವಾಗದ ಹಾಗೆ, ನೋಡಿ ಕೊಳ್ಳಿರಿ.

೧೬ ಇದನ್ನು ಹೇಳುತ್ತೇನೆ—ಆತ್ಮದಲ್ಲಿ ನಡೆದು ಕೊಳ್ಳಿರಿ, ಆಗಲು
೧೭ ಮಾಂಸದ ಆಶೆಯನ್ನು ತೀರಿಸದೆ ಇರುವಿರಿ. ಯಾಕಂದರೆ ಮಾಂ
ಸವು ಆತ್ಮಕ್ಕೆ ವಿರೋಧವಾಗಿಯೂ, ಆತ್ಮವು ಮಾಂಸಕ್ಕೆ ವಿ
ರೋಧವಾಗಿಯೂ, ಆಶಿಸುತ್ತದೆ; ನೀವು ಇಚ್ಛೈಸುವವುಗಳನ್ನು
೧೮ ಮಾಡದ ಹಾಗೆ, ಅವು ಒಂದಕ್ಕೊಂದು ವಿರೋಧವಾಗಿವೆ. ಆದ
ರೆ ನೀವು ಆತ್ಮದಿಂದ ನಡಿಸಲ್ಪಟ್ಟಿರೆ, ನ್ಯಾಯಪ್ರಮಾಣಕ್ಕೊಳ
೧೯ ಗಾಗಿರುವದಿಲ್ಲ. ಆದರೆ ಮಾಂಸದ ಕ್ರಿಯೆಗಳು ಪ್ರಕಟವಾಗಿವೆ;
೨೦ ಯಾವಂದರೆ, ವ್ಯಭಿಚಾರ, ಜಾರತ್ವ, ಅಶುದ್ಧತ್ವ, ಬಂಡುತನ,
ವಿಗ್ರಹಾರಾಧನೆ, ಶೂನ್ಯ, ವಿರೋಧಗಳು, ಜಗಳಗಳು, ಹುರುಡು
ಗಳು, ಶಿಟ್ಟುಗಳು, ವಾಗ್ವಾದಗಳು, ದ್ವೇಷಗಳು, ಮತಭೇದಗಳು,
೨೧ ಹೊಟ್ಟೆಕಿಚ್ಚುಗಳು, ಕೊಲೆಗಳು, ಅಮಲುಗಳು, ದುಂದಾತನಗ
ಳು, ಇವು ಮೊದಲಾದವುಗಳು. ಇಂಥವುಗಳನ್ನು ಮಾಡುವವ
ರು ದೇವರ ರಾಜ್ಯವನ್ನು ಬಾಧ್ಯವಾಗಿ ಹೊಂದುವದಿಲ್ಲವೆಂದು,
ಮುಂಚೆ ಹೇಳಿದ ಪ್ರಕಾರನೇ, ನಿಮಗೆ ಮುಂದಾಗಿ ಹೇಳುತ್ತೇನೆ.

೨೨ ಆದರೆ ಆತ್ಮದ ಫಲವು ಯಾವದಂದರೆ—ಪ್ರೀತಿಯು, ಸಂತೋ
ಷವು, ಸಮಾಧಾನವು, ದೀರ್ಘಶಾಂತಿಯು, ದಯೆಯು, ಒಳ್ಳೆ
೨೩ ತನವು, ವಿಶ್ವಾಸವು, ಸಾತ್ವೀಕತ್ವವು, ಮಿತಾನುಭವವು, ಇಂಥವು
೨೪ ಗಳಿಗೆ ವಿರೋಧವಾಗಿ ನ್ಯಾಯಪ್ರಮಾಣವು ಇಲ್ಲ. ಆದರೆ ಕ್ರಿಸ್ತ
ನವರು ಮಾಂಸವನ್ನು, ಇಚ್ಛೆಗಳೂ, ಆಶೆಗಳೂ ಸಹಿತವಾಗಿ, ಶಿಲು
ಬೆಗೆ ಹಾಕಿ ಇದ್ದಾರೆ.

೨೫ ಆತ್ಮದಲ್ಲಿ ಬದುಕಿದರೆ, ಆತ್ಮದಲ್ಲಿಯೂ ನಡೆದು ಕೊಳ್ಳೂವ.
೨೬ ಡಾಂಬಿಕರಾಗಿರದೆ, ಒಬ್ಬರಿಗೊಬ್ಬರು ಕೋಪವೆಬ್ಬಿಸದೆ, ಒಬ್ಬರ ಮೇಲೊಬ್ಬರು ಹೊಟ್ಟೆಕಿಚ್ಚು ಪಡದೆ ಇರೋಣ.

## ೬. ಸಂಧಿ.

೧ ಸಹೋದರರೇ, ಮನುಷ್ಯನು ಒಂದು ತಪ್ಪಿನಲ್ಲಿ ಸೊದಲು ಶಿಕ್ಕಿಕೊಂಡರೂ, ಆತ್ಮಭಾವದವರಾದ ನೀವು ಅಂಥವನನ್ನು ಸಾತ್ವೀಕತ್ವದ ಆತ್ಮದಿಂದ ನೆಟ್ಟಿಗೆ ಮಾಡಿರಿ. ನೀನು ಶೋಧನೆ ಪಡ
೨ ದ ಹಾಗೆ, ನಿನ್ನನ್ನು ನೋಡತಿಕೋ, ಒಬ್ಬೊಬ್ಬರ ಹೊರೆಗಳನ್ನು ಹೊತ್ತು, ಹೀಗೆಯೇ ಕ್ರಿಸ್ತನ ನ್ಯಾಯಪ್ರಮಾಣವನ್ನು ಪೂರೈಸಿರಿ. ಯಾಕಂದರೆ ಒಬ್ಬನು, ಏನು ಇಲ್ಲದೆ, ತಾನು ಏ
3 ನಾದರೂ ಇದ್ದೇನೆಂದು ನೆನಸಿದರೆ, ತನ್ನನ್ನು ಮೋಸಗೊಳ್ಳಿಸು
೪ ತ್ತಾನೆ. ಆದರೆ ತನ್ನ ಕ್ರಿಯೆಯನ್ನು ಒಬ್ಬೊಬ್ಬನು ಪರೀಕ್ಷಿಸಲಿ; ಆಗಲು ಬೇರೊಬ್ಬನಲ್ಲಿ ಅಲ್ಲ, ತನ್ನಲ್ಲಿ ಮಾತ್ರ ಹೆಚ್ಚಳವ
೫ ನ್ನು ಹೊಂದುವನು. ಯಾಕಂದರೆ ಒಬ್ಬೊಬ್ಬನು ಸ್ವಂತ
೬ ಹೊರೆಯನ್ನು ಹೊರುವನು. ಆದರೆ ವಾಕ್ಯದ ಉಪದೇಶ ಹೊಂದುವವನು ಉಪದೇಶಿಸುವವನಿಗೆ ಎಲ್ಲಾ ಒಳ್ಳೆಯವುಗಳಲ್ಲಿ ಪಾ
೭ ಲು ಕೊಡಲಿ. ತಪ್ಪಿ ಹೋಗ ಬೇಡಿರಿ; ದೇವರು ಹಾಸ್ಯ ಮಾಡಲ್ಪಡುವವನಲ್ಲ; ಯಾಕಂದರೆ ಮನುಷ್ಯನು ಯಾವದನ್ನು ಬಿತ್ತು
೮ ವನೋ, ಅದನ್ನೇ ಕೊಯ್ಯುವನು. ಏನಂದರೆ ತನ್ನ ಮಾಂಸಕ್ಕೆ ಬಿತ್ತುವವನು ಮಾಂಸದಿಂದ ಕೊಳೆಯುವಿಕೆಯನ್ನು ಕೊಯ್ಯುವನು; ಆದರೆ ಆತ್ಮಕ್ಕೆ ಬಿತ್ತುವವನು ಆತ್ಮದಿಂದ ನಿತ್ಯ ಜೀವವ
೯ ನ್ನು ಕೊಯ್ಯುವನು. ದಣಿಯದೆ ಒಳ್ಳೇದನ್ನು ಮಾಡೋಣ; ಯಾಕಂದರೆ ಆಯಾಸ ಪಡದಿದ್ದರೆ, ತಕ್ಕ ಕಾಲದಲ್ಲಿ ಕೊ
೧೦ ಯ್ಯುವೆವು. ಹಾಗಾದರೆ, ನಮಗೆ ಸಮಯವಿರುವ ಪ್ರಕಾರ ಎಲ್ಲರಿಗೆ, ಮುಖ್ಯವಾಗಿ ವಿಶ್ವಾಸದ ಮನೆತನದವರಿಗೆ, ಒಳ್ಳೇದನ್ನು ಮಾಡೋಣ.

೧೧ ಎಂಥ ಅಕ್ಷರಗಳಿಂದ ಸ್ವಂತ ಕೈಯಿಂದ ನಿಮಗೆ ಬರೆದಿದ್ದೇ
೧೨ ನೇ, ನೋಡತಿರಿ. ಮಾಂಸದಲ್ಲಿ ಸಮುಖ ತೋರಿಸ ಮನಸ್ಸುಳ್ಳವರಷ್ಟು ತಾವು ಕ್ರಿಸ್ತನ ಶಿಲುಬೆಗೋಸ್ಕರ ಹಿಂಸೆ ಪಡದ ಹಾಗೆ, ಮಾತ್ರ, ಪರಿಛೇದನೆ ಹೊಂದ ನಿಮಗೆ ಅಗತ್ಯ ಮಾಡುತ್ತಾರೆ.
೧೩ ಹ್ಯಾಗಂದರೆ ಪರಿಛೇದನೆ ಹೊಂದುವವರು ತಾವೇ ನ್ಯಾಯಪ್ರಮಾಣವನ್ನು ಕೈಕೊಳ್ಳುವದಿಲ್ಲ; ನಿಮ್ಮ ಮಾಂಸದಲ್ಲಿ ಹೆಚ್ಚಳ ಪಡ ಬೇಕೆಂದು, ನೀವು ಪರಿಛೇದನೆ ಹೊಂದ ಇಚ್ಛೈಸುತ್ತಾರೆ.
೧೪ ಆದರೆ ನನಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯಲ್ಲಿ ಹೊರ್ತು ಹೆಚ್ಚಳ ಪಡುವದು ಆಗದು; ಅದರಿಂದ ನನಗೆ ಲೋಕವು ಶಿಲುಬೆಗೆ ಹಾಕಲ್ಪಟ್ಟಿದೆ; ನಾನು ಲೋಕಕ್ಕೆ. ಯಾಕಂ
೧೫ ದರೆ ಕ್ರಿಸ್ತ ಯೇಸುವಿನಲ್ಲಿ ಪರಿಛೇದನೆಯಾದರೂ, ಅಪರಿಛೇದನೆಯಾದರೂ, ಏನೂ ಉಪಯೋಗಿಸುವದಿಲ್ಲ; ಆದರೆ ಹೊಸ ಸೃಷ್ಟಿಯೇ.
೧೬ ಈ ಕಟ್ಟಳೆಯಿಂದ ನಡೆದು ಕೊಳ್ಳುವವರ್ಯಾರೋ, ಅವರ ಮೇಲೆಯೂ, ದೇವರ ಇಸ್ರಯೇಲಿನ ಮೇಲೆಯೂ ಸಮಾಧಾನವೂ ಕರುಣೆಯೂ ಇರಲಿ.
೧೭ ಇನ್ನು ಮೇಲೆ ಯಾವನಾದರೂ ನನಗೆ ತೊಂದರೆ ಪಡಿಸದಿರಲಿ; ಯಾಕಂದರೆ ಕರ್ತನಾದ ಯೇಸುವಿನ ಗುರುತುಗಳನ್ನು ನನ್ನ ಶರೀರದಲ್ಲಿ ಹೊರುತ್ತೇನೆ. ಸಹೋದರರೇ, ನಮ್ಮ ಕರ್ತನಾ
೧೮ ದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಆತ್ಮದ ಸಂಗಡ ಇರಲಿ. ಆಮೆನ್.

---

# THE EPISTLE OF
# PAUL THE APOSTLE TO THE EPHESIANS.

### ಅಪೊಸ್ತಲನಾದ ಪೌಲನು ಎಫೆಸ್ಯರಿಗೆ ಬರೆದ ಪತ್ರಿಕೆ.

## ೧. ಸಂಧಿ.

೧ ದೇವರ ಚಿತ್ತದಿಂದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು ಎಫೆಸದಲ್ಲಿರುವ ಪರಿಶುದ್ಧರಾಗಿಯೂ, ಕ್ರಿಸ್ತ ಯೇಸುವಿನಲ್ಲಿ
೨ ವಿಶ್ವಾಸಿಗಳಾಗಿಯೂ, ಇರುವವರಿಗೆ—ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ, ಸಮಾಧಾನವೂ, ಆಗಲಿ.
3 ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರಿಗೆ ಸ್ತೋತ್ರವಾಗಲಿ. ಅವನು ಆತ್ಮ ಭಾವವಾದ ಸಕಲ ಆಶೀರ್ವಾದದಿಂದ, ಪರಲೋಕದವುಗಳಲ್ಲಿ ಕ್ರಿಸ್ತನಲ್ಲಿ ನಮ್ಮನ್ನು ಆಶೀರ್ವದಿ
೪ ಸಿದ್ದಾನೆ. ಹ್ಯಾಗಂದರೆ ಪ್ರಿಯವಾದವನಲ್ಲಿ, ನಮಗೆ ದಯೆ ಮಾಡಿದ ತನ್ನ ಕೃಪೆಯ ಮಹಿಮೆಯ ಸ್ತೋತ್ರಕ್ಕಾಗಿ, ನಾವು ಪ್ರೀತಿಯಲ್ಲಿ ತನ್ನ ಮುಂದೆ ಪರಿಶುದ್ಧರೂ, ನಿರ್ಮಲರೂ ಆಗಿರುವ
೫ ಹಾಗೆ, ನಮ್ಮನ್ನು ಅವನಲ್ಲಿ ಜಗದುತ್ಪತ್ತಿಗೆ ಮುಂಚೆ ಆರಿಸಿಕೊಂಡು, ತನ್ನ ಚಿತ್ತದ ಸಂಕಲ್ಪನೆಯ ಪ್ರಕಾರ, ಪುತ್ರಸ್ವೀಕಾ
೬ ರಕ್ಕಾಗಿ ತನಗೋಸ್ಕರ ನಮ್ಮನ್ನು ಯೇಸು ಕ್ರಿಸ್ತನ ಮುಖಾಂ
೭ ತರ ಮುಂನೇಮಿಸಿದ್ದಾನೆ. ಅವನಲ್ಲಿ ಅವನ ರಕ್ತದಿಂದಾದ ವಿಮೋ
೮ ಚನೆಯಾಗಿರುವ ಅಕ್ರಮಗಳ ಪರಿಹಾರವು ನಮಗುಂಟು; ಅವನ ಕೃಪೆಯ ಐಶ್ವರ್ಯದ ಪ್ರಕಾರವೇ; ಇದನ್ನು ಸಕಲ ಜ್ಞಾನದ
೯ ಲ್ಲಿಯೂ, ವಿವೇಕದಲ್ಲಿಯೂ ನಮಗಾಗಿ ಹೆಚ್ಚಿಸಿದ್ದಾನೆ. ಹ್ಯಾಗಂ
೧೦ ದರೆ ತನ್ನಲ್ಲಿ ನಿಶ್ಚಯಿಸಿ ಮಾಡಿದ ತನ್ನ ಸುಯೋಚನೆಯ ಪ್ರಕಾರ ತನ್ನ ಚಿತ್ತದ ಮರ್ಮವನ್ನು ನಮಗೆ ತಿಳಿಸಿದ್ದಾನೆ. ಅದೇ ನಂದರೆ, ಕಾಲಗಳ ಸಂಪೂರ್ಣತೆಯ ಮನೆವಾರ್ತೆಗಾಗಿ, ಪರ
೧೧ ಲೋಕದಲ್ಲಿಯೂ ಭೂಲೋಕದಲ್ಲಿಯೂ ಇರುವ ಎಲ್ಲವುಗಳನ್ನು ಕ್ರಿಸ್ತನಲ್ಲಿ ಒಪ್ಪೊಗ ಮಾಡ ಬೇಕೆಂಬುವದು. ಅವನಲ್ಲಿಯೇ ಕ್ರಿಸ್ತನಲ್ಲಿ ಮುಂಕೋರಿದವರಾದ ನಾವು, ಅವನ ಮಹಿಮೆಯ ಸ್ತೋತ್ರಕ್ಕಾಗಿರುವ ಹಾಗೆ, ತನ್ನ ಚಿತ್ತದ ಆಲೋಚನೆಯ ಪ್ರ
೧೨ ಕಾರ ಎಲ್ಲವುಗಳನ್ನು ಯೆಶ್ವೈಸುವವನ ನಿರ್ಣಯದ ಪ್ರಕಾರ ಮುಂನೇಮಿಸಲ್ಪಟ್ಟು, ಬಾಧ್ಯತೆಯನ್ನು ಸಹ ಹೊಂದಿದೆವು.
೧೩ ಅವನಲ್ಲಿ ನೀವು ಸಹ, ನಿಮ್ಮ ರಕ್ಷಣೆಯ ಸುವಾರ್ತೆಯಾದ ಸತ್ಯದ ವಾಕ್ಯವನ್ನು ಕೇಳಿ, ಅವನಲ್ಲಿ ವಿಶ್ವಾಸಿಸಿ, ವಾಗ್ದತ್ತದ ಪರಿ
೧೪ ಶುದ್ಧವಾದ ಆತ್ಮದಿಂದ ಮುದ್ರೆ ಹೊಂದಿದಿರಿ. ಇವನು ಅವನ ಮಹಿಮೆಯ ಸ್ತೋತ್ರಕ್ಕೆ ಸಂಪಾದನೆಯ ವಿಮೋಚನೆಗಾಗಿ ನಮ್ಮ ಬಾಧ್ಯತೆಯ ಮುಂಗಡವಾಗಿದ್ದಾನೆ.

೧೫ ಆದದರಿಂದ ನಾನು ಸಹ, ನೀವು ಕರ್ತನಾದ ಯೇಸುವಿನಲ್ಲಿ ಇಡುವ ವಿಶ್ವಾಸವನ್ನೂ, ಪರಿಶುದ್ಧರೆಲ್ಲರ ಮೇಲೆ ಮಾಡುವ ಪ್ರೀತಿಯನ್ನೂ ಕೇಳಿ, ನಿಮಗೋಸ್ಕರ ಬಿಡದೆ ಸ್ತೋತ್ರ ಮಾಡಿ,
೧೬ ನನ್ನ ಪ್ರಾರ್ಥನೆಗಳಲ್ಲಿ ನಿಮ್ಮನ್ನು ನೆನಸಿ ಬೇಡುವದೇನಂದರೆ, ಅವನ ಕರೆಯುವಿಕೆಯ ನಿರೀಕ್ಷೆ ಏನೆಂದೂ, ಪರಿಶುದ್ಧರಲ್ಲಿರುವ ಅವನ ಬಾಧ್ಯತೆಯ ಮಹಿಮೆಯ ಐಶ್ವರ್ಯವೇನೆಂದೂ, ವಿ
೧೭ ಶ್ವಾಸಿಸುವವರಾದ ನಮಗಾಗಿರುವ ಅವನ ಬಲದ ಅತ್ಯಧಿಕವಾದ ಮಹತ್ತು ಅವನ ಶಕ್ತಿಯ ತ್ರಾಣದ ಯತ್ನದ ಪ್ರಕಾರವಾಗಿ ಏನೆಂ
೧೮ ದೂ, ನೀವು ನೋಡುವ ಹಾಗೆ, ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರಾದ ಮಹಿಮೆಯ ತಂದೆಯು ತನ್ನನ್ನು ಕುರಿತ ತಿಳುವಿಕೆಯಲ್ಲಿರುವ ಜ್ಞಾನ ಪ್ರಕಟಣೆಗಳ ಆತ್ಮವನ್ನೂ, ನಿಮ್ಮ ಬುದ್ಧಿ
೧೯ ಯ ಕಣ್ಣುಗಳು ಬೆಳಕಾಗುವದನ್ನೂ, ನಿಮಗೆ ಕೊಡ ಬೇಕು. ಆ ಯತ್ನದಿಂದ ಅವನು ಕ್ರಿಸ್ತನಲ್ಲಿ ಯೆಶ್ವೈಸಿ, ಅವನನ್ನು ಸತ್ತವ
೨೦ ರೊಳಗಿಂದ ಎಬ್ಬಿಸಿ, ಪರಲೋಕದವುಗಳಲ್ಲಿ ತನ್ನ ಬಲಪಾರ್ಶ್ವ
೨೧ ದಲ್ಲಿ, ಸಕಲ ದೊರೆತನ, ಅಧಿಕಾರ, ಬಲ, ಬಡೆತನಗಳಿಗೂ, ಇಹ
೨೨ ದಲ್ಲಿ ಮಾತ್ರವಲ್ಲ, ಪರದಲ್ಲಿಯೂ, ಹೆಸರ್ಗೊಂಡ ಎಲ್ಲಾ ಹೆಸರಿ
೨೩ ಗೂ ಮೇಲಾಗಿ ಕಂಡ್ರಿಸಿ, ಎಲ್ಲವುಗಳನ್ನು ಅವನ ಪಾದಗಳ ಕೆಳಗೆ ಇಟ್ಟು, ಅವನ ಶರೀರವೂ, ಎಲ್ಲವನ್ನು ಎಲ್ಲವುಗಳಲ್ಲಿ ತುಂಬಿಸುವವನ ಸಂಪೂರ್ಣತೆಯೂ, ಆಗಿರುವ ಸಭೆಗೆ ಅವನನ್ನು ಎಲ್ಲಾದರ ಮೇಲೆ ತಲೆಯಾಗಿ ಕೊಟ್ಟಿದ್ದಾನೆ.

## ೨. ಸಂಧಿ.

೧ ಮತ್ತು ಅಕ್ರಮಗಳಲ್ಲಿಯೂ ಪಾಪಗಳಲ್ಲಿಯೂ ಸತ್ತವರಾಗಿ
೨ ದ್ದ ನಿಮ್ಮನ್ನು ಬದುಕಿಸಿದ್ದಾನೆ. ಇವುಗಳಲ್ಲಿ ಈ ಲೋಕದ ಬಳ್ಳಿಕೆಯ ಪ್ರಕಾರವಾಗಿ, ಅವಿಧೇಯತ್ವದ ಮಕ್ಕಳಲ್ಲಿ ಈಗ ಯೆಶ್ವೈಸುವ ಆತ್ಮವಾಗಿರುವ ಆಕಾಶದ ಅಧಿಕಾರದ ಪ್ರಭುವಿನ ಪ್ರಕಾರವಾ
3 ಗಿ, ಮುಂಚೆ ನಡೆದು ಕೊಂಡಿರಿ. ಇವರಲ್ಲಿ ನಾವೆಲ್ಲರು ಸಹ ಮಾಂಸವು, ಮನಸ್ಸು, ಇವುಗಳ ಇಚ್ಛೆಗಳನ್ನು ನಡಿಸಿ, ನಮ್ಮ ಮಾಂಸದ ಆಶೆಗಳಲ್ಲಿ ಮುಂಚೆ ಪ್ರವರ್ತಿಸಿ, ಮಿಕ್ಕಾದವರ ಹಾಗೆಯೇ
೪ ಸ್ವಭಾವದಿಂದ ಕೋಪದ ಮಕ್ಕಳಾಗಿದ್ದೆವು. ಆದರೆ ಕರುಣೆಯಲ್ಲಿ ಐಶ್ವರ್ಯವುಳ್ಳ ದೇವರು, ತಾನು ನಮಗೆ ಮಾಡಿದ ಬಹಳ
೫ ವಾದ ಪ್ರೀತಿಗೋಸ್ಕರ, ಅಕ್ರಮಗಳಲ್ಲಿ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನ ಸಂಗಡ ಬದುಕಿಸಿದ್ದಾನೆ—ಕೃಪೆಯಿಂದಲೇ ರಕ್ಷಿಸಲ್ಪಟ್ಟಿದ್ದೀರಿ—ಮತ್ತು ಕ್ರಿಸ್ತ ಯೇಸುವಿನಲ್ಲಿ ನಮ್ಮ ಮೇಲೆ ಮಾಡುವ
೬ ದಯೆದಿಂದ, ತನ್ನ ಕೃಪೆಯ ಅಧಿಕವಾದ ಐಶ್ವರ್ಯವನ್ನು ಮುಂದೆ ಬರುವ ಯುಗಗಳಲ್ಲಿ ತೋರಿಸುವ ಹಾಗೆ, ಕ್ರಿಸ್ತ ಯೇಸುವಿನಲ್ಲಿ ನಮ್ಮನ್ನು ಕೂಡ ಎಬ್ಬಿಸಿ, ಪರಲೋಕದವುಗಳಲ್ಲಿ ಕೂಡ
೭ ಕುಂಡ್ರಿಸಿದ್ದಾನೆ. ಯಾಕಂದರೆ ಕೃಪೆಯಿಂದಲೇ, ವಿಶ್ವಾಸದ ಮೂಲವಾಗಿ, ರಕ್ಷಿಸಲ್ಪಟ್ಟಿದ್ದೀರಿ; ಅದು ನಿಮ್ಮಿಂದಲ್ಲ, ದೇವರ ವರವೇ. ಯಾವನಾದರೂ ಹೆಚ್ಚಳ ಪಡದ ಹಾಗೆ, ಅದು ಕ್ರಿಯೆಗ
೮ ಳಿಂದಲ್ಲ. ಹ್ಯಾಗಂದರೆ ನಾವು ಅವುಗಳಲ್ಲಿ ನಡೆದು ಕೊಳ್ಳುವ ಹಾಗೆ, ದೇವರು ಸಿದ್ಧ ಮಾಡಿದ ಸತ್ಕ್ರಿಯೆಗಳಿಗಾಗಿ, ಯೇಸು ಕ್ರಿಸ್ತನಲ್ಲಿ ಸೃಷ್ಟಿಸಲ್ಪಟ್ಟಿಂಥ, ಅವನ ನಿರ್ಮಾಣವಾಗಿದ್ದೇವೆ.
೯ ಆದಕಾರಣ ಕೈಯಿಂದ ಮಾಂಸದಲ್ಲಿ ಆಗುವ ಪರಿಛೇದನೆ ಎಂಬುವದರಿಂದ, ಅಪರಿಛೇದನೆ ಎಂದು ಕರೆಯಲ್ಪಟ್ಟವರಾದ ನೀವು, ಮುಂಚೆ ಮಾಂಸದಲ್ಲಿ ಜನಾಂಗಗಳವರಾಗಿದ್ದೀರೆಂದೂ,
೧೦ ಆ ಕಾಲದಲ್ಲಿ ಕ್ರಿಸ್ತನಿಲ್ಲದೆಯೂ, ಇಸ್ರಯೇಲಿನ ಪಟ್ಟವಾಸಕ್ಕೆ ಪರರಾಗಿಯೂ, ವಾಗ್ದತ್ತದ ಒಡಂಬಡಿಕೆಗಳಿಗೆ ಅನ್ಯರಾಗಿಯೂ, ನಿರೀಕ್ಷೆಯಿಲ್ಲದವರಾಗಿಯೂ, ಲೋಕದಲ್ಲಿ ದೇವರಿಲ್ಲದವರಾಗಿ
೧೩ ಯೂ, ಇದ್ದಿರೆಂದು, ಜ್ಞಾಪಕ ಮಾಡಿ ಕೊಳ್ಳಿರಿ. ಆದರೆ ಈಗ, ಮುಂಚೆ ದೂರವಾಗಿದ್ದ ನೀವು, ಕ್ರಿಸ್ತ ಯೇಸುವಿನಲ್ಲಿ ಕ್ರಿಸ್ತನ ರ
೧೪ ಕ್ತದಿಂದ, ಸಮೀಪವಾದಿರಿ. ಯಾಕಂದರೆ ಅವನು ನಮ್ಮ ಸಮಾಧಾನವಾಗಿದ್ದಾನೆ; ಸಮಾಧಾನ ಮಾಡುವವನಾಗಿ, ಇಬ್ಬರಿ
೧೫ ದವರನ್ನು ತನ್ನಲ್ಲಿ ಒಬ್ಬ ಹೊಸ ಮನುಷ್ಯನಾಗ ನಿರ್ಮಿಸಿ, ತನ್ನಲ್ಲಿ ಹಗೆಯನ್ನು ಕೊಂದು, ಶಿಲುಬೆಯಿಂದ ಇಬ್ಬರನ್ನು ಒಂದು ಶರೀರದಲ್ಲಿ ದೇವರಿಗೆ ಅನ್ಯೋನ್ಯ ಮಾಡುವ ಹಾಗೆ,
೧೬ ಅವನು ಎರಡಾಗಿದ್ದದ್ದನ್ನು ಒಂದಾಗ ಮಾಡಿ, ಅಡ್ಡಿಯಾದ ನಡುಗೋಡೆಯನ್ನು ಕೆಡವಿ, ಆಜ್ಞೆಗಳಲ್ಲಿರುವ ಕಟ್ಟಳೆಗಳ ನ್ಯಾಯಪ್ರಮಾಣವಾದ ಹಗೆಯನ್ನು ತನ್ನ ಮಾಂಸದಲ್ಲಿ ತೆಗೆದು ಹಾಕಿ
೧೭ ದನು. ಮತ್ತು ಬಂದು, ದೂರವಾದ ನಿಮಗೂ, ಸಮೀಪವಾದವರಿಗೂ, ಸಮಾಧಾನವನ್ನು ಪ್ರಸಂಗಿಸಿದನು. ಏನಂದರೆ ಅವನ ಮುಖಾಂತರ ಇಬ್ಬರಾದ ನಮಗೆ ಒಂದೇ ಆತ್ಮದಲ್ಲಿ ತಂದೆಯ
೧೮ ಬಳಿಗೆ ಪ್ರವೇಶ ಉಂಟು. ಹೀಗಿರುವದರಿಂದ ಇನ್ನು ಅನ್ಯರೂ ಪರವಾಸಿಗಳೂ ಅಲ್ಲ, ಪರಿಶುದ್ಧರ ಸಂಗಡ ಪಟ್ಟವಾಸಿಗಳೂ, ದೇ
೧೯ ವರ ಮನೆತನದವರೂ ಆಗಿ, ಅಪೊಸ್ತಲರ, ಪ್ರವಾದಿಗಳ ಅಸ್ತಿವಾರದ ಮೇಲೆ ಕಟ್ಟಲ್ಪಟ್ಟವರಾಗಿದ್ದೀರಿ; ಯೇಸು ಕ್ರಿಸ್ತನು ತಾನೇ
೨೦ ಮೂಲೇ ಕಲ್ಲಾಗಿದ್ದಾನೆ. ಅವನಲ್ಲಿ ಕಟ್ಟುವಿಕೆ ಎಲ್ಲಾ ಚನ್ನಾಗಿ ಜೋಡಿಸಲ್ಪಟ್ಟು, ಕರ್ತನಲ್ಲಿ ಪರಿಶುದ್ಧ ಮಂದಿರವಾಗ ಬೆಳೆಯುತ್ತದೆ;
೨೧ ಅವನಲ್ಲಿ ನೀವೂ, ದೇವರಿಗೆ ಆತ್ಮದಿಂದ ವಾಸಸ್ಥಾನವಾಗುವ ಹಾಗೆ, ಕೂಡ ಕಟ್ಟಲ್ಪಟ್ಟಿದ್ದೀರಿ.

## ೩. ಸಂಧಿ.

೧ ಇದರ ನಿಮಿತ್ತ ಪೌಲನಾದ ನಾನು ಜನಾಂಗಗಳಾದ ನಿಮ
೨ ಗೋಸ್ಕರ ಕ್ರಿಸ್ತ ಯೇಸುವಿನ ಬಂಧನದವನು. ನಿಮಗಾಗಿ ನನಗೆ ಕೊಡಲ್ಪಟ್ಟ ದೇವರ ಕೃಪೆಯ ಮನೆವಾರ್ತೆಯನ್ನು ನೀವು ಕೇ
3 ಳಿದಿರಲ್ಲ? ಏನಂದರೆ, ನಾನು ಮುಂಚೆ ಸ್ವಲ್ಪವಾಗಿ ಬರೆದ ಪ್ರಕಾ
೪ ರ, ಪ್ರಕಟಣೆಯಿಂದ ಮರ್ಮವನ್ನು ನನಗೆ ತಿಳಿಸಿದನು. ಅದರಿಂದ ನೀವು ಓದಿ, ಕ್ರಿಸ್ತನ ಮರ್ಮದಲ್ಲಿರುವ ನನ್ನ ಗ್ರಹಿಕೆಯನ್ನು ತಿಳಿಕೊಳ್ಳ ಬಹುದು. ಆ ಮರ್ಮವು ಈಗ ಅವನ ಪರಿ
೫ ಶುದ್ಧ ಅಪೊಸ್ತಲರಿಗೂ, ಪ್ರವಾದಿಗಳಿಗೂ ಆತ್ಮದಿಂದ ಪ್ರಕಟವಾದ ಪ್ರಕಾರ, ಬೇರೆ ತಲಾಂತರಗಳಲ್ಲಿ ಮನುಷ್ಯರ ಮಕ್ಕಳಿಗೆ ತಿಳಿಸಲ್ಪಡಲಿಲ್ಲ. ಯಾವದಂದರೆ ಜನಾಂಗಗಳು ಕ್ರಿಸ್ತನಲ್ಲಿ ಏಕ ಬಾಧ್ಯ
೬ ತೆಯೂ ಏಕ ಶರೀರವೂ ಉಳ್ಳವರಾಗಿಯೂ, ಅವನ ವಾಗ್ದತ್ತದಲ್ಲಿ ಕೂಡ ಪಾಲುಗಾರರಾಗಿಯೂ, ಸುವಾರ್ತೆಯ ಮೂಲವಾ
೭ ಗಿ ಇರುವಲೆಂಬುವದೇ; ಅದಕ್ಕೆ ನಾನು, ಅವನ ಬಲದ ಯತ್ನದ ಪ್ರಕಾರ ನನಗೆ ಕೊಡಲ್ಪಟ್ಟ ದೇವರ ಕೃಪೆಯ ವರದ ಪ್ರಕಾರ, ಸೇವಕನಾದೆನು. ಅವನ ವಿಶ್ವಾಸದಿಂದ ಧೈರ್ಯವೂ, ನಿಸ್ಸಂ
೮ ಶಯವಾದ ಪ್ರವೇಶವೂ ನಮಗೆ ಉಂಟಾದ ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅವನು ಮಾಡಿದ ಅನಾದಿ ನಿರ್ಣಯದ ಪ್ರಕಾರ, ಈಗ ಪರಲೋಕದವುಗಳಲ್ಲಿರುವ ಪೊಕೆತನಗಳಿಗೂ, ಅ
೯ ಧಿಕಾರಗಳಿಗೂ, ಸಭೆಯ ಮೂಲವಾಗಿ ದೇವರ ನಾನಾ ವಿಧವಾದ

೧೧ ಜ್ಞಾನವು ತಿಳಿಯ ಬರುವ ಹಾಗೆ, ಪರಾಧಿಕಲ್ಲರಲ್ಲಿ ಕೇವಲ ಚಿಕ್ಕ
೧೨ವನಾದ ನನಗೆ ಈ ಕೃಪೆಯು ಕೊಡಲ್ಪಟ್ಟಿತೆ; ಏನಂದರೆ ಕ್ರಿಸ್ತನ
ಅಶೋಧ್ಯವಾದ ಐಶ್ವರ್ಯವನ್ನು ಜನಾಂಗಗಳಲ್ಲಿ ಪ್ರಸಂಗಿಸು
ವದೂ, ಯೇಸು ಕ್ರಿಸ್ತನ ಮುಖಾಂತರ ಸರ್ವವನ್ನು ನಿರ್ಮಿಸಿ
ದ ದೇವರಲ್ಲಿ ಯುಗಗಳಾರಭ್ಯ ಮರೆಯಾಗಿದ್ದಂಥ ಮರ್ಮದ
೧೩ ಅನ್ಯೋನ್ಯವು ಏನೆಂದು ಎಲ್ಲರಿಗೆ ತೋರಿಸುವದೂ. ಆದದರಿಂದ
ನಾನು ನಿಮಗೋಸ್ಕರ ಪಡುವ ಉಪದ್ರಗಳಲ್ಲಿ ದೂಣೆಯ ಬೇಡಿ
ಕೆಂದು ಬೇಡಿ ಕೊಳ್ಳುತ್ತೇನೆ; ಅವೇ ನಿಮ್ಮ ಮಹಿಮೆ.

೧೪ ಇದರ ನಿಮಿತ್ತ ಪರಲೋಕ ಭೂಲೋಕಗಳಲ್ಲಿ ಇರುವ ಎಲ್ಲಾ
೧೫ಕುಟುಂಬಕ್ಕೆ ಹೆಸರಿರುವಂಥ ನಮ್ಮ ಕರ್ತನಾದ ಯೇಸು ಕ್ರಿಸ್ತ
೧೬ನ ತಂದೆಗೆ ನನ್ನ ಮೊಣಕಾಲೂರಿ, ಬೇಡಿ ಕೊಳ್ಳುವದೇನಂದರೆ—
ನೀವು ಅವನ ಆತ್ಮದ ಮೂಲವಾಗಿ ಒಳ ಮನುಷ್ಯನಲ್ಲಿ ಬಲದಿಂ
೧೭ದ ತ್ರಾಣವಾಗುವ ಹಾಗೆಯೂ, ಕ್ರಿಸ್ತನು ನಿಮ್ಮ ಹೃದಯದೊಳಗಲ್ಲಿ
ವಿಶ್ವಾಸದಿಂದ ನಿವಾಸಿಸುವ ಹಾಗೆಯೂ, ನೀವು ಪ್ರೀತಿಯಲ್ಲಿ ಬೇ
ರೂರಿ ನೆಲೆಗೊಂಡು, ಅಗಲವೂ, ಉದ್ದವೂ, ಆಳವೂ, ಎತ್ತರವೂ,
೧೮ ಏನೆಂದು, ಪರಿಶುದ್ಧರೆಲ್ಲರ ಸಂಗಡ, ಗ್ರಹಿಸ ಶಕ್ತರಾಗುವ ಹಾಗೆ
ಯೂ, ದೇವರ ಸಮಸ್ತ ಸಂಪೂರ್ಣತೆಯಿಂದ ಸಂಪೂರ್ಣ
ರಾಗುವದಕ್ಕೆ, ತಿಳುವಿಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳಿದು
೧೯ ಕೊಳ್ಳುವ ಹಾಗೆಯೂ, ಅವನು ತನ್ನ ಮಹಿಮೆಯ ಐಶ್ವರ್ಯ
೨೦ದ ಪ್ರಕಾರ ನಿಮಗೆ ದಯೆ ಮಾಡ ಬೇಕು. ಮತ್ತು ನಮ್ಮಲ್ಲಿ ಯ
ತ್ನೈಸುವ ಬಲದ ಪ್ರಕಾರ, ನಾವು ಬೇಡುವದಕ್ಕಿಂತಲೂ ನೆನಸು
೨೧ವದಕ್ಕಿಂತಲೂ ಎಲ್ಲಾದರ ಮೇಲೆ ಬಹು ಹೆಚ್ಚಾಗಿ ಮಾಡ ಶಕ್ತ
ನಾಗಿರುವವನಿಗೆ, ಸಭೆಯೊಳಗೆ ಕ್ರಿಸ್ತ ಯೇಸುವಿನಲ್ಲಿ ಯುಗ
ಯುಗಾಂತರಗಳ ಎಲ್ಲಾ ತಲಾಂತರಗಳಿಗೂ ಅವನಿಗೆ ಮಹಿಮೆ
ಆಗಲಿ. ಆಮೆನ್.

## ೪. ಸಂಧಿ.

೧ ಹೀಗಿರಲಾಗಿ, ಕರ್ತನ ಬಂಧದವನಾದ ನಾನು ನಿಮ್ಮನ್ನು ಬೇ
೨ ಡಿ ಕೊಳ್ಳುವದೇನಂದರೆ—ನೀವು ಕರೆಯಲ್ಪಟ್ಟ ಕರೆಯುವಿಕೆಗೆ
3 ಯೋಗ್ಯವಾಗಿ ನಡೆದು ಕೊಂಡು, ಎಲ್ಲಾ ಮನೋದೀನತ್ವ ಸಾ
ತ್ವಿಕತ್ವಗಳಿಂದಲೂ, ದೀರ್ಘ ಶಾಂತಿಯಿಂದಲೂ, ಒಬ್ಬರ
ನೊಬ್ಬರು ಪ್ರೀತಿಯಿಂದ ಸಹಿಸಿ, ಆತ್ಮದ ಐಕ್ಯವನ್ನು ಸಮಾ
೪ ಧಾನದ ಬಂಧದಲ್ಲಿ ಕಾಪಾಡ ಜಾಗ್ರತೆ ಪಡ ಬೇಕು. ಶರೀರವೂ
ಒಂದೇ, ಆತ್ಮವೂ ಒಂದೇ—ನೀವು ನಿಮ್ಮ ಕರೆಯುವಿಕೆಯ ಒಂ
೫ದೇ ನಿರೀಕ್ಷೆಯಲ್ಲಿ ಕರೆಯಲ್ಪಟ್ಟ ಹಾಗೆಯೇ—ಕರ್ತನೂ ಒಬ್ಬ
೬ ನೇ. ವಿಶ್ವಾಸವೂ ಒಂದೇ, ಸ್ನಾನವೂ ಒಂದೇ, ಎಲ್ಲರ ತಂದೆ
ಯಾದ ದೇವರು ಒಬ್ಬನೇ; ಅವನು ಎಲ್ಲರ ಮೇಲೆಯೂ, ಎಲ್ಲ
೭ ರ ಮೂಲವಾಗಿಯೂ, ನಿಮ್ಮೆಲ್ಲರಲ್ಲಿಯೂ ಇದ್ದಾನೆ. ಆದರೆ
ನಮ್ಮಲ್ಲಿ ಒಬ್ಬೊಬ್ಬನಿಗೆ, ಕ್ರಿಸ್ತನ ವರದ ಅಳತೆಯ ಪ್ರಕಾರ,
೮ ಕೃಪೆಯು ಕೊಡಲ್ಪಟ್ಟಿತೆ. ಆದದರಿಂದ ಉನ್ನತಕ್ಕೆ ಏರಿ, ಸೆಕೆ
ಯನ್ನು ಸೆಕೆ ಹಿಡಿದು, ಮನುಷ್ಯರಿಗೆ ವರಗಳನ್ನು ಕೊಟ್ಟೆದಾನೆಂ
೯ ದು, ಹೇಳುತ್ತಾನೆ. ಆದರೆ ಏರಿದನೆಂಬುವದು, ಅವನು ಮೊದಲು
ಭೂಮಿಯ ಅಧೋ ಭಾಗಗಳಿಗೆ ಇಳಿದನಲ್ಲದೆ, ಮತ್ತೇನು!
೧೦ ಇಳಿದವನು ಸರ್ವವನ್ನು ತುಂಬಿಸುವ ಹಾಗೆ, ಎಲ್ಲಾ ಆಕಾಶ
೧೧ ಳ ಮೇಲೆ ಏರಿ ಹೋದವನೇ. ಮತ್ತು ನಾವು ಇನ್ನು ಮನುಷ್ಯ
ರ ಕಪಟದಿಂದಲೂ, ಮೋಸದ ಉಪಾಯ ಮಾಡುವ ತಂತ್ರದಿಂ
ದಲೂ, ಬೋಧನೆಯ ಎಲ್ಲಾ ಘುಳಿಗಳಿಂದ ಬಡಿಯಲ್ಪಟ್ಟು
ಹೊರಳಾಡುವ ಬಾಲಕರಾಗಿರದೆ, ಪ್ರೀತಿಯಲ್ಲಿ ಸತ್ಯವಂತರಾಗಿದ್ದು,
ಎಲ್ಲವುಗಳಲ್ಲಿ ತಲೆಯಾದ ಕ್ರಿಸ್ತನೊಳಗಾಗಿ ಬೆಳೆಯುವ ಹಾಗೆ,
೧೫ ಅವನು ಕೆಲವರನ್ನು ಅಪೊಸ್ತಲರಾಗಿಯೂ, ಕೆಲವರನ್ನು ಪ್ರವಾದಿ
ಗಳಾಗಿಯೂ, ಕೆಲವರನ್ನು ಸುವಾರ್ತಿಕರಾಗಿಯೂ, ಕೆಲವರನ್ನು
ಕುರುಬರಾಗಿಯೂ, ಬೋಧಕರಾಗಿಯೂ, ಪರಿಶುದ್ಧರ ಪೂರೈ
ಸುವಿಕೆಗೋಸ್ಕರವೂ, ಸೇವೆಯ ಕೆಲಸಕ್ಕೋಸ್ಕರವೂ, ಕ್ರಿಸ್ತನ
೧೩ ಶರೀರದ ಕಟ್ಟುವಿಕೆಗೋಸ್ಕರವೂ—ವಿಶ್ವಾಸವು, ದೇವರ ಮಗನ
ತಿಳುವಿಕೆಯು, ಇವುಗಳ ಐಕ್ಯಕ್ಕೂ, ಪೂರ್ಣ ಗಂಡಸುತನ
ಕ್ಕೂ, ಕ್ರಿಸ್ತನ ಸಂಪೂರ್ಣತೆಯ ನೀಳದ ಪ್ರಮಾಣಕ್ಕೂ ನಾವೆ
೧೪ ಲ್ಲರು ಕೂಡ ಶೇರುವ ಪರ್ಯಂತರ—ಕೊಟ್ಟಿದ್ದಾನೆ. ಅವನದೆಸೆ
ಯಿಂದ ಶರೀರವೆಲ್ಲಾ ಸಹಾಯ ಮಾಡುವ ಸಕಲ ಕೀಲುಗಳಿಂದ
೧೫ ಬಿಗಿಯಾಗಿ ಜೋಡಿಸಲ್ಪಟ್ಟು, ಒಂದೊಂದು ಅಂಗವು ತನ್ನ ಪ್ರ
೧೬ಮಾಣದ ಹಾಗೆ ಯತ್ನೈಸುವ ಪ್ರಕಾರ, ತನ್ನನ್ನು ಪ್ರೀತಿಯಲ್ಲಿ
ಹೆಚ್ಚಿಸುವದಕ್ಕೋಸ್ಕರ ಶರೀರದ ಅಭಿವೃದ್ಧಿ ಮಾಡಿ ಕೊಳ್ಳು
ತ್ತದೆ.

೧೭ ಹೀಗಿರುವದರಿಂದ ನಾನು ಕರ್ತನಲ್ಲಿ ಸಾಕ್ಷಿ ಕೊಟ್ಟು ಹೇಳುವ
ದೇನಂದರೆ, ಮಿಕ್ಕಾದ ಜನಾಂಗಗಳು ತಮ್ಮ ಬುದ್ಧಿಯ ವ್ಯರ್ಥ
ತ್ವದಲ್ಲಿ ನಡೆದು ಕೊಳ್ಳುವ ಪ್ರಕಾರ, ನೀವು ಇನ್ನು ನಡೆದು ಕೊ
೧೮ ಳ್ಳ ಬೇಡಿರಿ; ಅವರು ಬುದ್ಧಿಯಲ್ಲಿ ಕುರುಡರಾಗಿ ತಮ್ಮಲ್ಲಿರುವ ಅ
ಜ್ಞಾನದಿಂದಲೂ, ತಮ್ಮ ಹೃದಯದ ಕಾಠಿಣ್ಯದಿಂದಲೂ, ದೇವ
೧೯ ರ ಜೀವವನ್ನು ಅಗಲಿದವರಾಗಿದ್ದಾರೆ. ಅವರು ಮೊಂಡರಾಗಿದ್ದು,
ಅತ್ಯಾಶೆಯಲ್ಲಿ ಸಕಲ ಅಶುದ್ಧತ್ವವನ್ನು ನಡಿಸುವದಕ್ಕೆ ತಮ್ಮ
೨೦ ನ್ನು ಬಂಡುತನಕ್ಕೆ ಒಪ್ಪಿಸಿದ್ದಾರೆ. ಆದರೆ ನೀವು ಈ ಪ್ರಕಾರ
೨೧ ಕ್ರಿಸ್ತನನ್ನು ಕಲಿಯಲಿಲ್ಲ—ಯೇಸುವಿನಲ್ಲಿರುವ ಸತ್ಯದ ಪ್ರಕಾರ
ಅವನನ್ನು ಕೇಳಿ, ಮುಂಚಿನ ನಡತೆಯ ವಿಷಯವಾಗಿ ಮೋಸದ
೨೨ ಆಶೆಗಳ ಪ್ರಕಾರ ಕೆಟ್ಟು ಹೋದ ಹಳೇ ಮನುಷ್ಯನನ್ನು ತೆಗೆದು
೨೩ ಹಾಕಿ, ನಿಮ್ಮ ಬುದ್ಧಿಯ ಆತ್ಮದಲ್ಲಿ ಹೊಸಬರಾಗಿ, ದೇವರ ಪ್ರಕಾ
೨೪ ರ ನೀತಿಯಲ್ಲಿಯೂ ಸತ್ಯದ ಪರಿಶುದ್ಧತ್ವದಲ್ಲಿಯೂ ನಿರ್ಮಿ
ಸಲ್ಪಟ್ಟ ಹೊಸ ಮನುಷ್ಯನನ್ನು ಧರಿಸಿ ಕೊಳ್ಳ ಅವನಿಂದ ಬೋ
ಧಿಸಲ್ಪಟ್ಟಿರಲ್ಲವೋ?

೨೫ ಆದದರಿಂದ ಸುಳ್ಳನ್ನು ತಳ್ಳಿ ಬಿಟ್ಟು, ಒಬ್ಬೊಬ್ಬನು ತನ್ನ
ನೆರೆಯವನ ಸಂಗಡ ಸತ್ಯವನ್ನೇ ಮಾತಾಡಿರಿ; ಯಾಕಂದರೆ
೨೬ ಒಬ್ಬರಿಗೊಬ್ಬರು ಅಂಗಗಳಾಗಿದ್ದೇವೆ. ಕೋಪಿಸಿ ಪಾಪ ಮಾಡ ಬೇ
೨೭ ಡಿರಿ. ನಿಮ್ಮ ಕಿಟ್ಟಿನ ಮೇಲೆ ಸೂರ್ಯಕ್ಕು ಮುಣಗದಿರಲಿ. ಮತ್ತು
೨೮ ಪಿಶಾಚನಿಗೆ ಸ್ಥಳ ಕೊಡ ಬೇಡಿರಿ. ಕದ್ದವನು ಇನ್ನೂ ಕದಿಯದೆ,
ಕಷ್ಟ ಪಟ್ಟು ಅವಶ್ಯವಿದ್ದವನಿಗೆ ಏನಾದರೂ ಕೊಡುವದಕ್ಕೆ ತನಗಿ
೨೯ ರುವ ಹಾಗೆ, ಕೈಗಳಿಂದ ಒಳ್ಳೇ ಕೆಲಸ ಮಾಡಲಿ. ಯಾವ ಕೊ
ಳಕು ಮಾತಾದರೂ ಅಲ್ಲ, ಕೇಳಿದವರಿಗೆ ಕೃಪೆ ಕೊಡುವ ಹಾಗೆ,
ಪ್ರಯೋಜನವಾದ ಆತ್ಮವೃದ್ಧಿಗಾಗಿ ಒಳ್ಳೇ ಮಾತು ಇದ್ದರೆ,
೩೦ ನಿಮ್ಮ ಬಾಯಿಂದ ಹೊರಡಲಿ. ಮತ್ತು ವಿಮೋಚನೆಯ ದಿ
ವಸಕ್ಕೆಂದು ನಿಮಗೆ ಮುದ್ರೆ ಹಾಕಿದಂಥ, ದೇವರ ಪರಿಶುದ್ಧವಾ
೩೧ ದ ಆತ್ಮನನ್ನು ದುಃಖ ಪಡಿಸ ಬೇಡಿರಿ. ಎಲ್ಲಾ ಕಹಿಯೂ, ಶಿಟ್ಟೂ,
ಕೋಪವೂ, ಗದ್ದಲವೂ, ದೂಷಣೆಯೂ, ಎಲ್ಲಾ ಕಟ್ಟಿತನ ಸಹಿ



೩೨ ತವಾಗಿ, ನಿಮ್ಮಿಂದ ತೊಲಗಿಸಲ್ಪಡಲಿ. ಆದರೆ ಒಬ್ಬರಿಗೊಬ್ಬರು
ಉಪಕಾರಿಗಳೂ ಅಂತಃಕರಣವುಳ್ಳವರೂ ಆಗಿದ್ದು, ದೇವರು ಕ್ರಿ
ಸ್ತನಲ್ಲಿ ನಿಮಗೆ ಮನ್ನಿಸಿದ ಪ್ರಕಾರ, ಒಬ್ಬರಿಗೊಬ್ಬರು ಮನ್ನಿ
ಸಿರಿ.

## ೫. ಸಂಧಿ.

೧ ಹೀಗಿರುವದರಿಂದ, ಪ್ರಿಯ ಮಕ್ಕಳ ಹಾಗೆ ದೇವರನ್ನು ಅನು
೨ ಸರಿಸುವವರಾಗಿರ್ರಿ. ಮತ್ತು ಕ್ರಿಸ್ತನು ಸಹ ತನ್ನನ್ನು ಸುವಾಸನೆ
ಯಾದ ಪರಿಮಳಕ್ಕಾಗಿ ನಮಗೋಸ್ಕರ ಕಾಣಿಕೆಯಾಗಿಯೂ,
ಬಲಿಯಾಗಿಯೂ ದೇವರಿಗೆ ಒಪ್ಪಿಸಿ ಕೊಟ್ಟು, ನಮ್ಮನ್ನು ಪ್ರೀ
3 ತಿ ಮಾಡಿದ ಪ್ರಕಾರ ಪ್ರೀತಿಯಿಂದ ನಡೆದು ಕೊಳ್ಳಿರಿ. ಆದರೆ
ಪರಿಶುದ್ಧರಿಗೆ ತಕ್ಕ ಹಾಗೆ, ಜಾರತ್ವವು, ಎಲ್ಲಾ ಅಶುದ್ಧತ್ವವು,
ಲೋಭವು, ಇವುಗಳ ಹೆಸರಾದರೂ, ನಿಮ್ಮಲ್ಲಿ ಇರ ಬಾರದು.
೪ ಮತ್ತು ನೀಚತನವೂ, ಹುಚ್ಚು ಮಾತೂ, ಕುಚೋದ್ಯವೂ, ಈ
ಅಯೋಗ್ಯವಾದವುಗಳನ್ನು ಬಿಟ್ಟು, ಸ್ತೋತ್ರವನ್ನೇ ಮಾಡಿರಿ.
೫ ಯಾಕಂದರೆ ಯಾವ ಜಾರನಿಗಾಗಲಿ, ಅಶುದ್ಧನಿಗಾಗಲಿ, ವಿಗ್ರಹಾ
ರಾಧಕನಾಗಿರುವ ಲೋಭಿಗಾಗಲಿ, ಕ್ರಿಸ್ತನ ದೇವರು, ಇವರ ರಾ
೬ ಜ್ಯದಲ್ಲಿ ಬಾಧ್ಯವಿಲ್ಲವೆಂದು ಬಲ್ಲಿರಿ. ವ್ಯರ್ಥ ವಾಕ್ಯಗಳಿಂದ
ಯಾವನಾದರೂ ನಿಮಗೆ ಮೋಸ ಮಾಡದಿರಲಿ; ಯಾಕಂದರೆ
ಅಂಥವುಗಳ ನಿಮಿತ್ತ ದೇವರ ಕೋಪವು ಅವಿಧೇಯತ್ವದ ಮ
೭ ಕ್ಕಳ ಮೇಲೆ ಬರುತ್ತದೆ. ಹೀಗಿರುವದರಿಂದ ಅವರ ಸಂಗಡ ಪಾ
೮ ಲುಗಾರರಾಗದಿರ್ರಿ. ಯಾಕಂದರೆ ಮುಂಚೆ ಕತ್ತಲೆಯಾಗಿದ್ದಿರಿ, ಆ
ದರೆ ಈಗ ಕರ್ತನಲ್ಲಿ ಬೆಳಕಾಗಿದ್ದೀರಿ; ಬೆಳಕಿನ ಮಕ್ಕಳಾಗಿ ನಡೆ
೯ ದು ಕೊಳ್ಳಿರಿ. ಯಾಕಂದರೆ ಆತ್ಮದ ಫಲವು ಸಕಲ ಒಳ್ಳೇತನ
೧೦ ನೀತಿ ಸತ್ಯಗಳಲ್ಲಿ ಇರುತ್ತದೆ. ಕರ್ತನಿಗೆ ಮನೋಹರವಾದದ್ದು
೧೧ ಏನೆಂದು ಪರೀಕ್ಷಿಸಿರಿ. ಮತ್ತು ಕತ್ತಲೆಯ ನಿಷ್ಫಲವಾದ ಕ್ರಿಯೆ
ಗಳ ಸಂಗಡ ಅನ್ಯೋನ್ಯವಾಗಿರದೆ, ಅವುಗಳನ್ನು ಶಿಕ್ಷಿಸಿರಿ.
೧೨ ಯಾಕಂದರೆ ಅಂತರಂಗವಾಗಿ ಅವರಿಂದ ಮಾಡಲ್ಪಡುವವುಗಳ
೧೩ ನ್ನು ಹೇಳುವದೇ ನಾಚಿಕೆಯಾಗಿದೆ. ಆದರೆ ಶಿಕ್ಷಿಸಲ್ಪಡುವಂಥಾ
ದ್ದೆಲ್ಲಾ ಬೆಳಕಿನಿಂದ ತೋರ ಬರುವದು. ಹ್ಯಾಗಂದರೆ ತೋರ ಬ
೧೪ ರುವಂಥಾದ್ದೆಲ್ಲಾ ಬೆಳಕಾಗಿದೆ. ಆದದರಿಂದ ಎಚ್ಚರವಾಗು, ನಿದ್ದೆ
ಮಾಡುವವನೇ, ಸತ್ತವರೊಳಗಿಂದ ಏಳು; ಕ್ರಿಸ್ತನು ನಿನಗೆ ಪ್ರಕಾ
ಶವಾಗುವನೆಂದು ಹೇಳುತ್ತಾನೆ.

೧೫ ಹೀಗಿರುವದರಿಂದ, ಅಜ್ಞಾನಿಗಳ ಹಾಗಲ್ಲ, ಜ್ಞಾನಿಗಳ ಹಾಗೆ
೧೬ ಯೇ, ದಿನಗಳು ಕೆಟ್ಟವುಗಳಾಗಿರುವದರಿಂದ, ಕಾಲವನ್ನು ಕೊಂ
ಡು ಕೊಂಡು ಜಾಗ್ರತೆಯಿಂದ ನಡೆದು ಕೊಳ್ಳುವ ಹಾಗೆ, ನೋಡಿ
೧೭ ಕೊಳ್ಳಿರಿ. ಆದದರಿಂದ ಬುದ್ಧಿಯಿಲ್ಲದವರಾಗಿರದೆ, ಕರ್ತನ ಚಿ
ತ್ತವೇನೆಂದು ಗ್ರಹಿಸಿ ಕೊಳ್ಳಿರಿ. ಮತ್ತು ಹೊಟ್ಟೇಬಾಕತನಕ್ಕೆ
ಆಸ್ಪದವಾಗಿರುವ ದ್ರಾಕ್ಷೆಯ ರಸದಿಂದ ಮತ್ತರಾಗದೆ, ಆತ್ಮದಿಂ
೧೮ ದ ತುಂಬಿ ಕೊಂಡು, ಕೀರ್ತನೆಗಳಿಂದಲೂ ಗೀತಗಳಿಂದಲೂ,
ಆತ್ಮಭಾವವಾದ ಹಾಡುಗಳಿಂದಲೂ, ಒಬ್ಬರ ಸಂಗಡಲೊಬ್ಬರು
ಮಾತಾಡಿ ಕೊಂಡು, ನಿಮ್ಮ ಹೃದಯದಲ್ಲಿ ಕರ್ತನಿಗೆ ಹಾಡಿ, ಬಾ
೧೯ ರಿಸಿ, ಯಾವಾಗಲೂ, ಎಲ್ಲಾದಕ್ಕೋಸ್ಕರ, ನಮ್ಮ ಕರ್ತನಾದ
ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ
೨೦ ಮಾಡಿ, ದೇವರ ಭಯದಲ್ಲಿ ಒಬ್ಬರಿಗೊಬ್ಬರು ಅಧೀನರಾಗಿರ್ರಿ.

೨೧ ಸ್ತ್ರೀಯರೇ, ಸ್ವಂತ ಗಂಡಂದಿರಿಗೆ, ಕರ್ತನಿಗೆಂದು ಅಧೀನ
೨೨ರಾಗಿರ್ರಿ. ಯಾಕಂದರೆ ಗಂಡನು ಹೆಂಡತಿಯ ತಲೆಯಾಗಿದ್ದಾ
ನೆ—ಕ್ರಿಸ್ತನು ಸಭೆಯ ತಲೆಯಾಗಿರುವ ಪ್ರಕಾರವೇ; ಮತ್ತು ಅವ
೨೩ ನೇ ಶರೀರದ ರಕ್ಷಕನು. ಆದರೆ ಸಭೆಯು ಕ್ರಿಸ್ತನಿಗೆ ಹ್ಯಾಗೋ,
ಹಾಗೆಯೇ ಹೆಂಡತಿಯರು ಸ್ವಂತ ಗಂಡಂದಿರಿಗೆ ಎಲ್ಲಾದರಲ್ಲಿ ವಿ
ಧೇಯರಾಗಿರಲಿ.

೨೪ ಪುರುಷರೇ, ನಿಮ್ಮ ಹೆಂಡತಿಯರನ್ನು ಪ್ರೀತಿ ಮಾಡಿರಿ—ಕ್ರಿಸ್ತ
೨೫ನು ಸಭೆಯನ್ನು ಪ್ರೀತಿ ಮಾಡಿ, ಅದನ್ನು ವಾಕ್ಯದಲ್ಲಿ ನೀರಿನ
೨೬ ತೊಳೆಯುವಿಕೆಯಿಂದ ಶುಚಿಸಿ, ಪರಿಶುದ್ಧ ಮಾಡುವದಕ್ಕೂ, ಅ
ದನ್ನು ಕಳಂಕವೂ ಸುಕ್ಕೂ ಮೊದಲಾದವುಗಳಿಲ್ಲದೆ, ಪರಿಶುದ್ಧ
ವೂ ನಿರ್ಮಲವೂ ಆಗಿರುವ ಸಭೆಯನ್ನು ತನ್ನ ಮುಂದೆ ಮಹಿ
ಮೆಯುಳ್ಳದ್ದಾಗಿ ನಿಲ್ಲಿಸುವದಕ್ಕೂ, ಅದಕ್ಕೋಸ್ಕರ ತನ್ನನ್ನು
೨೭ ಕೊಟ್ಟ ಹಾಗೆಯೇ. ಸ್ವಂತ ಶರೀರಗಳ ಹಾಗೆಯೇ ಗಂಡಸರು
ತಮ್ಮ ಹೆಂಡತಿಯರನ್ನು ಪ್ರೀತಿ ಮಾಡ ತಕ್ಕದ್ದು. ತನ್ನ ಹೆಂಡತಿ
ಯನ್ನು ಪ್ರೀತಿ ಮಾಡುವವನು ತನ್ನನ್ನು ಪ್ರೀತಿ ಮಾಡುತ್ತಾನೆ.
೨೮ ಯಾಕಂದರೆ ಯಾವನಾದರೂ ತನ್ನ ಮಾಂಸವನ್ನು ಎಂದೂ ಹ
ಗೆ ಮಾಡಿದ್ದು ಇಲ್ಲ; ಆದರೆ ಅದನ್ನು ಪೋಷಿಸಿ, ಕಾಪಾಡುತ್ತಾನೆ
೩೦ —ಕರ್ತನು ಸಭೆಗೆ ಮಾಡುವ ಪ್ರಕಾರವೇ. ಯಾಕಂದರೆ ಅವನ
ಮಾಂಸದವರಾಗಿಯೂ ಅವನ ಎಲುಬಿನವರಾಗಿಯೂ ಇದ್ದು,
3೧ ಅವನ ಶರೀರದ ಅಂಗಗಳಾಗಿದ್ದೇವೆ. ಇದಕ್ಕೋಸ್ಕರ ಮನು
ಷ್ಯನು ತನ್ನ ತಂದೆ ತಾಯಿಗಳನ್ನು ಬಿಟ್ಟು, ತನ್ನ ಹೆಂಡತಿಗೆ
ಕೂಡಿ ಕೊಳ್ಳುವನು; ಮತ್ತು ಅವರಿಬ್ಬರು ಒಂದೇ ಮಾಂಸವಾಗಿ
ರುವರು.

3೨ ಈ ಮರ್ಮವು ದೊಡ್ಡದಾಗಿದೆ; ಆದರೆ ನಾನು ಕ್ರಿಸ್ತನನ್ನು
33 ಕುರಿತೂ ಸಭೆಯನ್ನು ಕುರಿತೂ ಹೇಳುತ್ತೇನೆ. ಆದರೂ ನಿನ್ನೆಲ್ಲ
ರು ಒಬ್ಬೊಬ್ಬನು ತನ್ನ ಹೆಂಡತಿಯನ್ನು ತನ್ನ ಹಾಗೆಯೇ
ಪ್ರೀತಿ ಮಾಡಲಿ; ಮತ್ತು ಹೆಂಡತಿಯು ಗಂಡನಿಗೆ ಭಯ ಪಡಲಿ.

## ೬. ಸಂಧಿ.

೧ ಮಕ್ಕಳೇ, ನಿಮ್ಮ ಹೆತ್ತವರಿಗೆ ಕರ್ತನಲ್ಲಿ ವಿಧೇಯರಾಗಿರ್ರಿ.
೨ ಯಾಕಂದರೆ ಅದು ನ್ಯಾಯವೇ. ನಿನಗೆ ಒಳ್ಳೇದಾಗುವ ಹಾಗೆ
ಯೂ, ನೀನು ಭೂಮಿಯ ಮೇಲೆ ದೀರ್ಘಾಯುಷ್ಯದವನಾ
3 ಗುವ ಹಾಗೆಯೂ, ನಿನ್ನ ತಂದೆಯನ್ನೂ ತಾಯಿಯನ್ನೂ ಸ
ನ್ಮಾನಿಸು. ಇದು ವಾಸ್ತವತ್ವವುಳ್ಳ ಮೊದಲನೇ ಆಜ್ಞೆಯಾಗಿದೆ.
೪ ಮತ್ತು, ತಂದೆಗಳೇ, ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸದೆ,
ಅವರನ್ನು ಕರ್ತನ ಶಿಕ್ಷೆಯಲ್ಲಿಯೂ ಉಪದೇಶದಲ್ಲಿಯೂ ಬೆ
ಳೆಸಿರಿ.

೫ ದಾಸರೇ, ಮಾಂಸದ ಪ್ರಕಾರವಾದ ಯಜಮಾನರಿಗೆ ಭಯ
ದಿಂದಲೂ, ನಡುಗಿನಿಂದಲೂ, ನಿಮ್ಮ ಹೃದಯಗಳ ಯಥಾರ್ಥ
೬ ದಲ್ಲಿ ಕ್ರಿಸ್ತನಿಗೆಂದು ವಿಧೇಯರಾಗಿರ್ರಿ. ಕಣ್ಣು ಸೇವೆಯಿಂದ ಮನು
೭ ಷ್ಯರನ್ನು ಮೆಚ್ಚಿಸುವವರ ಹಾಗಲ್ಲ, ಕ್ರಿಸ್ತನ ದಾಸರ ಹಾಗೆ ದೇವ
ರ ಚಿತ್ತವನ್ನು ಹೃದಯದಿಂದ ಮಾಡಿ, ಸುಚಿತ್ತದಿಂದ ಮನು
೮ ಷ್ಯರನ್ನಲ್ಲ, ಕರ್ತನನ್ನು ಸೇವಿಸಿ, ದಾಸನಾಗಲಿ, ಸ್ವತಂತ್ರನಾ
ಗಲಿ, ಒಬ್ಬೊಬ್ಬನು ಒಳ್ಳೇದೇನಾದರೂ ಮಾಡುವನೋ, ಅ
ದನ್ನು ಕರ್ತನಿಂದ ಹೊಂದುವನೆಂದು ತಿಳಿದು ಕೊಳ್ಳಿರಿ.

೯ ಮತ್ತು, ಯಜಮಾನಕ್ಕೇ, ಹೆದರಿಸುವದನ್ನು ಬಿಟ್ಟು, ನಿಮಗೂ ಯಜಮಾನನು ಪರಲೋಕದಲ್ಲಿ ಇದ್ದಾನೆಂದೂ, ಅವನ ಬಳಿಯಲ್ಲಿ ಮುಖದಾಕ್ಷಿಣ್ಯವಿಲ್ಲವೆಂದೂ ತಿಳಿದು, ಅವರಿಗೆ ಹಾಗೆಯೇ ಮಾಡಿರಿ.

೧೦ ಕಡೆಯಲ್ಲಿ, ನನ್ನ ಸಹೋದರರೇ, ಕರ್ತನಲ್ಲಿಯೂ ಅವನ
೧೧ ಶಕ್ತಿಯ ಶ್ರಾಣದಲ್ಲಿಯೂ ಬಲಗೊಳ್ಳಿರಿ. ನೀವು ಪಿಶಾಚನ ಉ
ಪಾಯಗಳಿಗೆ ಎದುರು ನಿಲ್ಲಲಿಕ್ಕೆ ಶಕ್ತರಾಗುವ ಹಾಗೆ, ದೇವರ ಸರ್ವಾ
೧೨ ಯುಧಗಳನ್ನು ಧರಿಸಿಕೊಳ್ಳಿರಿ. ಯಾಕಂದರೆ ರಕ್ತ ಮಾಂಸ
ಕ್ಕೆ ವಿರೋಧವಾಗಿ ಅಲ್ಲ, ದೊರೆತನಗಳಿಗೂ, ಅಧಿಕಾರಗಳಿಗೂ,
ಈ ಯುಗದ ಅಂಧಕಾರದ ಲೋಕಾಧಿಪತಿಗಳಿಗೂ, ಆಕಾಶಗಳಲ್ಲಿ
ರುವ ದುಷ್ಟವಾದ ಆತ್ಮಗಳಿಗೂ ವಿರೋಧವಾಗಿ, ನಮಗೆ ಹೋ
೧೩ ರಾಟ ಉಂಟು. ಆದದರಿಂದ ಕೆಟ್ಟ ದಿನದಲ್ಲಿ ಎದುರು ನಿಲ್ಲಲೂ,
ಎಲ್ಲವುಗಳನ್ನು ಜೈಸಿ ನಿಲ್ಲಲೂ, ಶಕ್ತರಾಗುವ ಹಾಗೆ, ದೇವರ ಸ
೧೪ ರ್ವಾಯುಧಗಳನ್ನು ತೆಗೆದು ಕೊಳ್ಳಿರಿ. ಹಾಗಾದರೆ ಸತ್ಯದಿಂದ
೧೫ ನಿಮ್ಮ ನಡುವನ್ನು ಕಟ್ಟಿ, ನೀತಿಯ ಕವಚವನ್ನು ತೊಟ್ಟು, ಸ
ಮಾಧಾನದ ಸುವಾರ್ತೆಯ ಸನ್ನಾಹವನ್ನು ಪಾದಗಳಿಗೆ ಮೆಟ್ಟಿ,
೧೬ ಎಲ್ಲಾದರ ಮೇಲೆ ದುಷ್ಟನ ಉರಿಬಾಣಗಳನ್ನು ಆರಿಸ ಶಕ್ಯಂಥ,
೧೭ ವಿಶ್ವಾಸದ ಗುರಾಣಿಯನ್ನು ಹಿಡಿದು, ರಕ್ಷಣೆಯ ಶಿರಸ್ತ್ರಾಣ
ವನ್ನೂ ದೇವರ ವಾಕ್ಯವಾಗಿರುವ ಆತ್ಮದ ಕತ್ತಿಯನ್ನೂ ತೆಗೆದು
೧೮ ಕೊಂಡು, ಸಕಲ ಪ್ರಾರ್ಥನೆ ವಿಜ್ಞಾಪನೆಗಳಿಂದ ಸರ್ವಕಾಲ ಆತ್ಮ
ದಲ್ಲಿ ಪ್ರಾರ್ಥಿಸಿ, ಇದಕ್ಕಾಗಿಯೇ ಸಕಲ ಪರಿಶುದ್ಧರಿಗೋಸ್ಕ
ರ ಸಕಲ ಸ್ಥಿರತ್ವದಿಂದಲೂ ವಿಜ್ಞಾಪನೆಯಿಂದಲೂ ಎಚ್ಚರವಾಗಿರಿ.
೧೯ ನನಗೋಸ್ಕರ ಸಹ ಧೈರ್ಯವಾಗಿ ನನ್ನ ಬಾಯಿ ತೆಕೆದು, ಸು
ವಾರ್ತೆಯ ಮರ್ಮವನ್ನು ತಿಳಿಸುವದಕ್ಕೆ ನನಗೆ ವಾಕ್ಯವು
ಕೊಡಲ್ಪಡುವ ಹಾಗೆಯೂ, ಯಾವದಕ್ಕೋಸ್ಕರ ಬಂಧಕದಲ್ಲಿ
೨೦ ರಾಯ ಭಾರಿಯಾಗಿದ್ದೇನೋ, ಅದರಲ್ಲಿ ಮಾತಾಡ ತಕ್ಕ ಪ್ರಕಾ
ರ ಧೈರ್ಯವಾಗಿ ಮಾತಾಡುವ ಹಾಗೆಯೂ ಬೇಡಿ ಕೊಳ್ಳಿರಿ.
೨೧ ಆದರೆ ನೀವು ನನ್ನ ವಿಷಯವಾದವುಗಳನ್ನೂ, ನಾನು ಮಾ
ಡುವದನ್ನೂ ತಿಳಿಯುವ ಹಾಗೆ, ಪ್ರಿಯ ಸಹೋದರನೂ ಕರ್ತ
ನಲ್ಲಿ ನಂಬಿಕೆಯುಳ್ಳ ಸೇವಕನೂ ಆಗಿರುವ ತುಕಿಕನು ನಿಮಗೆ ಎ
ಲ್ಲಾ ತಿಳಿಸುವನು. ನೀವು ನಮ್ಮ ಸಂಗತಿಗಳನ್ನು ತಿಳಿಯುವ ಹಾಗೆ
೨೨ ಯೂ, ಅವನು ನಿಮ್ಮ ಹೃದಯಗಳನ್ನು ಸಂತೈಸುವ ಹಾಗೆಯೂ,
ಇದೇ ಕೆಲಸಕ್ಕಾಗಿ ಅವನನ್ನು ನಿಮ್ಮ ಬಳಿಗೆ ಕಳುಹಿಸಿದ್ದೇನೆ.
೨೩ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು ಕ್ರಿಸ್ತ
ನಿಂದಲೂ ಸಮಾಧಾನವೂ, ಪ್ರೀತಿಯೂ ವಿಶ್ವಾಸದ ಸಂಗಡ ಸ
೨೪ ಹೋದರರಿಗೆ ಉಂಟಾಗಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತ
ನಲ್ಲಿ ನಿರ್ಲಯವಾದ ಪ್ರೀತಿ ಇರುವವರೆಲ್ಲರ ಸಂಗಡ ಕೃಪೆಯು
ಆಗಲಿ. ಆಮೆನ್.

---

# THE EPISTLE OF
# PAUL THE APOSTLE TO THE PHILIPPIANS.

## ಅಪೊಸ್ತಲನಾದ ಪೌಲನು ಫಿಲಿಪ್ಪಿಯರಿಗೆ ಬರೆದ ಪತ್ರಿಕೆ.

### ೧. ಸಂಧಿ.

೧ ಯೇಸು ಕ್ರಿಸ್ತನ ದಾಸರಾದ ಪೌಲನೂ ತಿಮೊಥೆಯನೂ,
ಫಿಲಿಪ್ಪಿಯಲ್ಲಿರುವಂಥ, ಕ್ರಿಸ್ತ ಯೇಸುವಿನಲ್ಲಿ ಪರಿಶುದ್ಧರಾದವರೆ
೨ ಲ್ಲರಿಗೆ, ಅಧ್ಯಕ್ಷರಿಗೂ ಸೇವಕರಿಗೂ ಸಹ—ನಮ್ಮ ತಂದೆಯಾದ
ದೇವರಿಂದಲೂ ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ
ಕೃಪೆಯೂ ಸಮಾಧಾನವೂ ಆಗಲಿ.
೩ ನಿಮ್ಮನ್ನು ಜ್ಞಾಪಕ ಮಾಡಿ ಕೊಳ್ಳುವಾಗೆಲ್ಲಾ ಸುವಾರ್ತೆಗಾಗಿ
ಮೊದಲನೇ ದಿವಸದಿಂದ ಈಗಿನ ವರಿಗೂ ನಿಮಗಿದ್ದ ಅನ್ಯೋನ್ಯ
೪ ಕ್ಕೋಸ್ಕರ ನನ್ನ ದೇವರಿಗೆ ಸ್ತೋತ್ರ ಮಾಡಿ, ಯಾವಾಗಲೂ ನಿ
೫ ಮ್ಮೆಲ್ಲರಿಗೋಸ್ಕರ ಮಾಡುವ ಎಲ್ಲಾ ವಿಜ್ಞಾಪನೆಯಲ್ಲಿ, ಸಂತೋಷ
ದಿಂದ ವಿಜ್ಞಾಪನೆ ಮಾಡುತ್ತೇನೆ. ಒಳ್ಳೇ ಕೆಲಸವನ್ನು ನಿಮ್ಮಲ್ಲಿ
ಆರಂಭಿಸಿದವನು, ಯೇಸು ಕ್ರಿಸ್ತನ ದಿನದ ಮಟ್ಟಿಗೂ, ಅದನ್ನು
೬ ಪೂರೈಸುವನೆಂಬುವದನ್ನೇ ನಂಬಿ ಕೊಂಡಿದ್ದೇನೆ. ಹ್ಯಾಗಂದರೆ
ನನ್ನ ಬಂಧಗಳಲ್ಲಿಯೂ, ಸುವಾರ್ತೆಯ ಪ್ರತ್ಯುತ್ತರದಲ್ಲಿಯೂ,
ಸ್ಥಾಪನೆಯಲ್ಲಿಯೂ, ನಾನು ನಿಮ್ಮೆಲ್ಲರನ್ನು ಕೃಪೆಯಲ್ಲಿ ನನ್ನ
ಸಂಗಡ ಪಾಲುಗಾರರೆಂದು ನನ್ನ ಹೃದಯದಲ್ಲಿ ಇಟ್ಟು ಕೊಂಡಿ
ರುವದರಿಂದ, ನಿಮ್ಮೆಲ್ಲರ ವಿಷಯದಲ್ಲಿ ಅದನ್ನೇ ನೆನಸುವದು.
೭ ನನಗೆ ನ್ಯಾಯವಾಗಿದೆ. ಯಾಕಂದರೆ ಯೇಸು ಕ್ರಿಸ್ತನ ಅಂತ್ಯ
ಕರಣಗಳಲ್ಲಿ ನಿಮ್ಮೆಲ್ಲರನ್ನು ಹ್ಯಾಗೆ ಬಯಸುತ್ತೇನೆಂಬುವದಕ್ಕೆ
ದೇವರು ನನಗೆ ಸಾಕ್ಷಿಯಾಗಿದ್ದಾನೆ.
೮ ಮತ್ತು ನೀವು ಹೆಚ್ಚು ಕಡಿಮೆಯಾದವುಗಳನ್ನು ಪರೀಕ್ಷಿಸುವದ
ಕ್ಕೆ ನಿಮ್ಮ ಪ್ರೀತಿಯು ತಿಳಿವಿಕೆಯಲ್ಲಿಯೂ ಸಕಲ ಅನುಭವದ
೯ ಲ್ಲಿಯೂ ಅಧಿಕಾಧಿಕವಾಗಿ ಹೆಚ್ಚಿ, ನೀವು ದೇವರ ಮಹಿಮೆ ಸ್ತೋ
ತ್ರಗಳಿಗಾಗಿಯೇಸು ಕ್ರಿಸ್ತನಿಂದ ಉಂಟಾಗುವ ನೀತಿಯ ಫಲಗಳಿಂದ
೧೦ ತುಂಬಿದವರಾಗಿ, ಕ್ರಿಸ್ತನ ದಿನದ ವರಿಗೆ ಕಪಟವೂ ಆಟಂಕವೂ ಇ
ಲ್ಲದವರಾಗಿರುವ ಹಾಗೆ, ಪ್ರಾರ್ಥಿಸುತ್ತೇನೆ.
೧೨ ಇದಲ್ಲನೆ, ಸಹೋದರರೇ, ನಾನು ನಿಮಗೆ ತಿಳಿಸ ಬೇಕಾದದ್ದೇ
ನಂದರೆ, ನನ್ನ ಸಂಗತಿಗಳು ಸುವಾರ್ತೆಯ ಹೆಚ್ಚಾದ ವೃದ್ಧಿಗೆ
೧೩ ಆದವು. ಹ್ಯಾಗಂದರೆ ಕ್ರಿಸ್ತನಲ್ಲಿ ನನ್ನ ಬಂಧಗಳು ಸಮಸ್ತ ಅ
ರಮನೆಯಲ್ಲಿಯೂ ಮಿಕ್ಕಾದವಲ್ಲೆಲ್ಲರಿಗೂ ಪ್ರಸಿದ್ಧಿಯಾಗಿವೆ.
೧೪ ಮತ್ತು ಕರ್ತನಲ್ಲಿರುವ ಸಹೋದರರಲ್ಲಿ ಬಹು ಜನರು ನನ್ನ
ಬಂಧಗಳಿಂದ ದೃಢ ಪಟ್ಟು, ಭಯವಿಲ್ಲದೆ ದೇವರ ವಾಕ್ಯವನ್ನು
೧೫ ಮಾತಾಡ ಹೆಚ್ಚಾಗಿ ಧೈರ್ಯವಾಗಿದ್ದಾರೆ. ಕೆಲವರು ಹೊಟ್ಟೆತಿ
ಚ್ಚಿನಿಂದಲೂ, ಜಗಳದಿಂದಲೂ, ಕೆಲವರು ಶುಚಿತ್ವದಿಂದಲೂ ಕ್ರಿ
೧೬ ಸ್ತನನ್ನು ಸಾರುತ್ತಾರೆ. ಅವನು ನನ್ನ ಬಂಧಗಳ ಮೇಲೆ ಉಪದ್ರ
ವನ್ನು ತರ ಬೇಕೆಂದು, ಶುದ್ಧವಾಗಿ ಅಲ್ಲ, ವಾಗ್ವಾದಕ್ಕೋಸ್ಕರ;
೧೭ ಇವರು, ನಾನು ಸುವಾರ್ತೆಯ ಪ್ರತ್ಯುತ್ತರಕ್ಕಾಗಿ ಇರಿಸಲ್ಪಟ್ಟಿ
ದ್ದೇನೆಂದು ತಿಳಿದು, ಪ್ರೀತಿಯಿಂದ ಕ್ರಿಸ್ತನನ್ನು ಪ್ರಸಂಗಿಸುತ್ತಾರೆ.
೧೮ ಆದರೇನು? ಹ್ಯಾಗಾದರೂ, ನೆವದಿಂದಾಗಲಿ, ಸತ್ಯದಿಂದಾಗಲಿ,
ಕ್ರಿಸ್ತನು ಪ್ರಸಂಗಿಸಲ್ಪಡುತ್ತಾನೆ. ಇದರಲ್ಲಿ ಸಂತೋಷ ಪಡುತ್ತೇ
ನೆ; ಇನ್ನೂ ಸಂತೋಷ ಪಡುವೆನು. ಯಾಕಂದರೆ ನಿಮ್ಮ ಬೆನ್ನ



ಹದಿಂದಲೂ, ಯೇಸು ಕ್ರಿಸ್ತನ ಆತ್ಮದ ಸಹಾಯದಿಂದಲೂ, ಇ
೧೯ ದು ನನ್ನ ರಕ್ಷಣೆಗೆ ಬರುವದೆಂದು ಬಲ್ಲೆನು. ನಾನು ಯಾವದರ
ಲ್ಲಿಯೂ ನಾಚಿಕೆ ಪಡೆನು, ಆದರೆ ಸಕಲ ಧೈರ್ಯದಲ್ಲಿ, ಯಾ
ವಾಗಲೂ ಆದ ಹಾಗೆ, ಈಗಲೂ, ಕ್ರಿಸ್ತನು ನನ್ನ ಶರೀರದಲ್ಲಿ ಜೀ
ವದಿಂದಾಗಲಿ, ಮರಣದಿಂದಾಗಲಿ, ಮಹಿಮೆಯನ್ನು ಹೊಂದುವ
ನೆಂಬ ನನ್ನ ಅಭಿಲಾಷೆ ನಿರೀಕ್ಷೆಗಳ ಪ್ರಕಾರವೇ.
೨೧ ಯಾಕಂದರೆ ನನಗೆ ಜೀವಿಸುವದು ಕ್ರಿಸ್ತನೇ, ಸಾಯುವದು
೨೨ ಲಾಭವೇ. ಮಾಂಸದಲ್ಲಿ ಬದುಕುವದಾದರೆ, ಇದೇ ನನಗೆ ಕೆಲಸ
ದ ಫಲವು; ಮತ್ತು ಏನು ಆರಿಸಿ ಕೊಳ್ಳ ಬೇಕೋ, ಅರಿಯೆನು.
೨೩ ಹ್ಯಾಗಂದರೆ ಈ ಎರಡರ ಇಕ್ಕಟ್ಟಿನಲ್ಲಿ ಇದ್ದೇನೆ, ಬಿಟ್ಟು ಹೋಗಿ
ಕ್ರಿಸ್ತನ ಸಂಗಡ ಇರ ನನಗೆ ಅಪೇಕ್ಷೆ ಉಂಟು; ಅದು ಬಹು ಉ
೨೪ ತ್ತಮೋತ್ತಮವೇ. ಆದರೆ ಮಾಂಸದಲ್ಲಿ ಉಳಿ ಕೊಳ್ಳುವದು ನಿ
ಮಗೋಸ್ಕರ ಹೆಚ್ಚಾಗಿ ಅವಶ್ಯವು.
೨೫ ಮತ್ತು ನಾನು ತಿರಿಗಿ ನಿಮ್ಮ ಬಳಿಗೆ ಬರುವದರಿಂದ ನನ್ನ ವಿ
ಷಯವಾದ ನಿಮ್ಮ ಹೆಚ್ಚಳ್ಳವು ಕ್ರಿಸ್ತ ಯೇಸುವಿನಲ್ಲಿ ಅಧಿಕವಾಗು
೨೬ ವ ಹಾಗೆ, ನಿಮ್ಮ ವಿಶ್ವಾಸದ ಅಭಿವೃದ್ಧಿಗಾಗಿಯೂ ಸಂತೋಷ
ಕ್ಕಾಗಿಯೂ ಉಳಿದು, ನಿಮ್ಮೆಲ್ಲರ ಸಂಗಡ ಇರುವೆನೆಂದು, ನಂಬಿ
ಕೊಂಡು ಬಲ್ಲೆನು.
೨೭ ನಾನು ಬಂದು ನಿಮ್ಮನ್ನು ನೋಡಿದರೂ, ದೂರದಲ್ಲಿದ್ದರೂ,
ಒಂದೇ ಆತ್ಮದಲ್ಲಿ ನಿಂತು ಕೊಂಡು, ಒಂದೇ ಮನಸ್ಸಿನಿಂದ ಸುವಾ
ರ್ತೆಯ ವಿಶ್ವಾಸಕ್ಕೋಸ್ಕರ ಕೂಡ ಹೋರಾಡುತ್ತೀರೆಂದೂ,
ಯಾವದರಲ್ಯಾದರೂ ಶತ್ರುಗಳಿಂದ ಹೆದರಿಸಲ್ಪಡುವದಿಲ್ಲವೆಂ
ದೂ, ನಾನು ನಿಮನ್ನು ಕುರಿತು ಕೇಳುವ ಹಾಗೆ, ಸುವಾರ್ತೆಗೆ
೨೮ ತಕ್ಕ ಪ್ರಕಾರ ಮಾತ್ರ ನಡೆದು ಕೊಳ್ಳಿರಿ. ಅದು ಅವರಿಗೆ ನಾಶನ
ಕ್ಕಾಗಿಯೂ, ನಿಮಗೆ ರಕ್ಷಣೆಗಾಗಿಯೂ, ದೇವರಿಂದಲೇ ಗುರು
೨೯ ತಾಗಿದೆ. ಯಾಕಂದರೆ ಕ್ರಿಸ್ತನಿಗೋಸ್ಕರ ಅವನಲ್ಲಿ ವಿಶ್ವಾಸವಿಡು
ವದಕ್ಕೆ ಮಾತ್ರವಲ್ಲ, ಅವನಿಗೋಸ್ಕರ ಶ್ರಮೆ ಪಡುವದಕ್ಕೂ
೩೦ ನೀವು ಕೃಪೆಯನ್ನು ಹೊಂದಿದ್ದೀರಿ. ನೀವು ನನ್ನಲ್ಲಿ ನೋಡಿದಂ
ಥ, ಈಗ ನನ್ನಲ್ಲಿ ಕೇಳುವಂಥ, ಅದೇ ಹೋರಾಟೆ ನಿಮಗುಂಟಾ
ಗಿದೆ.

### ೨. ಸಂಧಿ.

೧ ಆದರಿಂದ, ಕ್ರಿಸ್ತನಲ್ಲಿರುವ ಯಾವ ಆದರಣೆಯೂ, ಯಾ
ವ ಪ್ರೀತಿಯ ಸಂತೈಸುವಿಕೆಯೂ, ಯಾವ ಆತ್ಮದ ಅನ್ಯೋನ್ಯ
೨ ವೂ, ಯಾವ ಅಂತ್ಯಕರಣಗಳೂ ಕನಿಕರಗಳೂ ಇದ್ದರೆ, ಒಂದೇ
ಮನಸ್ಸಾಗಿ, ಒಂದೇ ಪ್ರೀತಿ ಉಂಟಾಗಿ, ಒಂದೇ ಜೀವವಾಗಿಯೂ
ಏಕ ಮನಸ್ಸುಳ್ಳವರಾಗಿಯೂ ಇದ್ದು, ನನ್ನ ಸಂತೋಷವನ್ನು
೩ ಪೂರೈಸಿರಿ. ಜಗಳದಿಂದಾಗಲಿ, ಡಂಭಾಚಾರದಿಂದಾಗಲಿ, ಏನೂ
ನಡಿಸದೆ, ದೀನ ಮನಸ್ಸಿನಿಂದ ಒಬ್ಬರನ್ನೊಬ್ಬರು ತಮಗಿಂತ
೪ ಶ್ರೇಷ್ಠರೆಂದು ಎಣಿಸಿರಿ. ಒಬ್ಬೊಬ್ಬನು ತನ್ನವುಗಳನ್ನಲ್ಲ, ಬೇ
ರೊಬ್ಬರವುಗಳನ್ನು ಸಹ ಒಬ್ಬೊಬ್ಬನು ನೋಡಲಿ.
೫ ಕ್ರಿಸ್ತ ಯೇಸುವಿನಲ್ಲಿಯೂ ಇದ್ದ ಮನಸ್ಸೇ ನಿಮ್ಮಲ್ಲಿ ಇರಲಿ.
೬ ಅವನು ದೇವರ ರೂಪದಲ್ಲಿದ್ದು, ದೇವರಿಗೆ ಸಮಾನವಾಗಿರುವದು
ಕೊಳ್ಳೆ ಎಂದು ಎಣಿಸದೆ, ದಾಸನ ರೂಪ ತಕ್ಕೊಂಡು, ಮನು
ಷ್ಯರ ಹೋಲಿಕೆಯಾದವನಾಗಿ, ತನ್ನನ್ನು ಬರಿದು ಮಾಡಿ ಕೊಂ
೮ ಡನು. ಮತ್ತು ಆಕಾರದಲ್ಲಿ ಮನುಷ್ಯನಾಗಿ ಕಾಣಲ್ಪಟ್ಟು, ಮರ
ಣದ ಪರ್ಯಂತರ, ಶಿಲುಬೆಯ ಮರಣದ ಪರ್ಯಂತರವೇ
೯ ವಿಧೇಯನಾಗಿ, ತನ್ನನ್ನು ತಗ್ಗಿಸಿ ಕೊಂಡನು. ಆದದರಿಂದ ದೇವ
೧೦ ರು ಅವನನ್ನು ಮೇಲಕ್ಕೆ ಮೇಲಾಗಿ ಎತ್ತಿ, ಯೇಸುವಿನ ಹೆಸರಿನ
ಲ್ಲಿ ಪರಲೋಕದಲ್ಲಿಯೂ ಭೂಮಿಯಲ್ಲಿಯೂ ಭೂಮಿಯ ಕೆ
೧೧ ಳಗೆಯೂ ಇರುವವರ ಮೊಣಕಾಲುಗಳೆಲ್ಲಾ ಬೊಗ್ಗಿ, ಯೇಸು
ಕ್ರಿಸ್ತನು ಕರ್ತನೆಂದು, ಎಲ್ಲಾ ನಾಲಿಗೆಗಳು ತಂದೆಯಾದ ದೇವರ
ಮಹಿಮೆಗಾಗಿ ಅರಿಕೆ ಮಾಡುವ ಹಾಗೆ, ಎಲ್ಲಾ ಹೆಸರಿನ ಮೇಲಿನ
ಹೆಸರನ್ನು ಅವನಿಗೆ ದಯೆ ಮಾಡಿದನು.
೧೨ ಆದಕಾರಣ, ನನ್ನ ಪ್ರಿಯರೇ, ಯಾವಾಗಲೂ ವಿಧೇಯರಾ
ಗಿದ್ದ ಪ್ರಕಾರ, ನಾನು ಸಮೀಪದಲ್ಲಿದ್ದಾಗ ಮಾತ್ರದ ಹಾಗೆ ಮಾ
ತ್ರವಲ್ಲ, ಬಹು ಹೆಚ್ಚಾಗಿ ಈಗ ನಾನು ದೂರದಲ್ಲಿರುವಾಗ, ಭಯ
ದಿಂದಲೂ ನಡುಗುವಿಂದಲೂ ನಿಮ್ಮ ರಕ್ಷಣೆಯನ್ನು ಉಂಟು ಮಾ
೧೩ ಡಿ ಕೊಳ್ಳಿರಿ. ಯಾಕಂದರೆ ಇಚ್ಛೈಸುವದನ್ನೂ ಯತ್ನೈಸುವ
ದನ್ನೂ ತನ್ನ ಸುಯೋಚನೆಯ ಪ್ರಕಾರ ನಿಮ್ಮಲ್ಲಿ ಯತ್ನೈಸು
೧೪ ವವನು ದೇವರೇ. ನಾನು ಸುಮ್ಮನೆ ಓಡಲಿಲ್ಲ, ಸುಮ್ಮನೆ ಕಷ್ಟ
ಪಡಲಿಲ್ಲವೆಂದು, ಕ್ರಿಸ್ತನ ದಿವಸದಲ್ಲಿ ಹೆಚ್ಚಳ್ಳ ಪಡುವದಕ್ಕೆ ಜೀವದ
೧೫ ವಾಕ್ಯವನ್ನು ಹಿಡಿದು ಕೊಂಡು, ಕೊಳಕದ ಬೆಳ್ಳಕುಗಳ್ಳ ಹಾಗೆ ಪ್ರ
ಕಾಶಿಸುವ ನೀವು, ಡೊಂಕಾದ ಮೂರ್ಖ ಸಂತತಿಯ ಮಧ್ಯದಲ್ಲಿ
೧೬ ನಿಷ್ಕಳಂಕರೂ ನಿರ್ದೋಷಿಗಳೂ ದೇವರ ನಿರ್ಮಲವಾದ ಮ
ಕ್ಕಳೂ ಆಗುವ ಹಾಗೆ, ಗುಣುಗುಟ್ಟುವಗಳೂ ತರ್ಕಗಳೂ ಇಲ್ಲದೆ,
೧೭ ಎಲ್ಲಾ ಮಾಡಿರಿ. ಇದಲ್ಲದೆ, ನಿಮ್ಮ ವಿಶ್ವಾಸದ ಬಲಿಯ ಮೇಲೆ
ಯೂ ಸೇವೆಯ ಮೇಲೆಯೂ ನಾನು ಹೊಯ್ಯಲ್ಪಟ್ಟಿರೂ, ಸಂ
ತೋಷಿಸಿ, ನಿಮ್ಮೆಲ್ಲರ ಸಂಗಡ ಸಂತೋಷಿಸುವೆನು. ಅದಕ್ಕೋಸ್ಕ
೧೮ ರವೇ ನೀವು ಸಹ ಸಂತೋಷಿಸಿ, ನನ್ನ ಸಂಗಡ ಸಂತೋಷಿಸಿರಿ.
೧೯ ಇದಲ್ಲದೆ, ನಿಮ್ಮ ಸಂಗತಿಗಳನ್ನು ತಿಳಿದು, ನಾನೂ ಮನೋ
ಸುಖ ಪಡುವ ಹಾಗೆ, ತಿಮೊಥೆಯನನ್ನು ನಿಮ್ಮ ಬಳಿಗೆ ಬೇಗ ಕ
೨೦ ಳುಹಿಸ ಕರ್ತನಾದ ಯೇಸುವಿನಲ್ಲಿ ನಿರೀಕ್ಷಿಸುತ್ತೇನೆ. ಯಾಕಂ
ದರೆ ನಿಮ್ಮ ವಿಷಯಗಳನ್ನು ನಿಜವಾಗಿ ಚಿಂತಿಸುವವನಾದ ಸಮಾ
೨೧ ನ ಮನಸ್ಸುಳ್ಳವನು ನನಗೆ ಒಬ್ಬನೂ ಇಲ್ಲ. ಎಲ್ಲರೂ ಯೇ
೨೨ ಸು ಕ್ರಿಸ್ತನವುಗಳನ್ನಲ್ಲ, ತಮ್ಮವುಗಳನ್ನೇ ಹುಡುಕುತ್ತಾರೆ. ಆದರೆ,
ಮಗನು ತಂದೆಗೆ ಮಾಡುವ ಪ್ರಕಾರ, ಅವನು ನನ್ನ ಸಂಗಡ ಸು
ವಾರ್ತೆಗೋಸ್ಕರ ಸೇವೆ ಮಾಡಿದನೆಂದು, ಅವನ ಪರೀಕ್ಷೆಯ
೨೩ ನ್ನು ಬಲ್ಲಿರಿ. ನನ್ನ ಸಂಗತಿಗಳನ್ನು ಕಂಡಾಗಲೇ, ಇವನನ್ನು ಕಳು
೨೪ ಹಿಸ ನಿರೀಕ್ಷಿಸುತ್ತೇನೆ. ಮತ್ತು ನಾನು ಸಹ ಬೇಗ ಬರುವೆನೆಂದು,
ಕರ್ತನಲ್ಲಿ ನಂಬಿ ಕೊಂಡಿದ್ದೇನೆ.
೨೫ ಆದರೆ ನನ್ನ ಸಹೋದರನೂ, ಜತೆ ಕೆಲಸದವನೂ, ಸಮ ಯು
ದ್ಧಸ್ಥನೂ, ನಿಮ್ಮ ಅಪೊಸ್ತಲನೂ, ನನ್ನ ಅವಸರಕ್ಕೆ ಸೇವಕನೂ,
ಆಗಿರುವ ಎಪಫ್ರೊದೀತನನ್ನು ನಿಮ್ಮ ಬಳಿಗೆ ಕಳುಹಿಸುವದು ಅಗ
೨೬ ತ್ಯವೆಂದು ನೆನಸಿದೆನು. ಯಾಕಂದರೆ ಅವನು ನಿಮ್ಮೆಲ್ಲರನ್ನು
ನೋಡ ಅಪೇಕ್ಷಿಸಿ, ಅವನು ಕೋಗಿಯಾಗಿರುವದನ್ನು ನೀವು ಕೇ
೨೭ ಳಿದ್ದರಿಂದ ವ್ಯಗನ ಪಟ್ಟನು. ಯಾಕಂದರೆ ಅವನು ಕೋಗದಲ್ಲಿ
ದ್ದು, ಮರಣಕ್ಕೆ ಸಮೀಪವಾದನು; ಆದರೆ ನನಗೆ ದುಃಖದ ಮೇಲೆ
೨೮ ದುಃಖ ಬಾರದ ಹಾಗೆ, ದೇವರು ಅವನನ್ನು ಕರುಣಿಸಿದನು; ಅವ
ನನ್ನು ಮಾತ್ರವಲ್ಲ, ನನ್ನನ್ನು ಸಹ ಹೀಗಿರುವದರಿಂದ ನೀವು ಅ

ವನನ್ನು ತಿರಿಗಿ ನೋಡಿ ಸಂತೋಷ ಪಡುವ ಹಾಗೆಯೂ, ನನಗೆ
ದುಃಖ ಕಡಿಮೆ ಆಗುವ ಹಾಗೆಯೂ, ಅವನನ್ನು ಅಧಿಕ ಜಾಗ್ರತೆ
೨೯ ಯಿಂದ ಕಳುಹಿಸಿದೆನು. ಹಾಗಾದರೆ, ಅವನನ್ನು ಸಕಲ ಸಂತೋ-
ಷದಿಂದ ಕರ್ತನಲ್ಲಿ ಅಂಗೀಕರಿಸಿರಿ. ಮತ್ತು ಅಂಥವರನ್ನು ಸನ್ಮಾ-
೩೦ ನಿಸಿರಿ. ಯಾಕಂದರೆ ನೀವು ನನಗೆ ಮಾಡ ತಕ್ಕ ಸೇವೆಯ ಕೊ-
ರತೆಯನ್ನು ಪೂರೈಸುವ ಹಾಗೆ, ಪ್ರಾಣದ ಆಸೆ ಬಿಟ್ಟು, ಕ್ರಿಸ್ತನ
ಕೆಲಸಕ್ಕೋಸ್ಕರ ಮರಣಕ್ಕೆ ಸಮೀಪವಾದನು.

## ೩. ಸಂಧಿ.

೧ ಕಡೆಯಲ್ಲಿ, ನನ್ನ ಸಹೋದರರೇ, ಕರ್ತನಲ್ಲಿ ಸಂತೋಷ
ಪಡಿರಿ. ಅದೇ ಮಾತುಗಳನ್ನು ನಿಮ್ಮಗೆ ಬರೆಯುವದು ನನಗೆ ತೊಂ-
ದರೆ ಅಲ್ಲ, ನಿಮ್ಮನ್ನು ಭದ್ರ ಮಾಡುವದು.

೨ ನಾಯಿಗಳಿಗೆ ಎಚ್ಚರಿಕೆಯಾಗಿರಿ; ದುಷ್ಟ ಕೆಲಸದವರಿಗೆ ಎಚ್ಚ-
೩ ರಿಕೆಯಾಗಿರಿ; ಸಂಛೇದನೆಯವರಿಗೆ ಎಚ್ಚರಿಕೆಯಾಗಿರಿ. ಯಾ-
ಕಂದರೆ ಆತ್ಮದಿಂದ ದೇವರಿಗೆ ಸೇವೆ ಮಾಡಿ, ಕ್ರಿಸ್ತ ಯೇಸುವಿನ-
ಲ್ಲಿ ಹೆಚ್ಚಳ ಪಟ್ಟು, ಮಾಂಸದಲ್ಲಿ ನಂಬಿಕೆ ಇಡದೆ ಇರುವವರಾದ
೪ ನಾವು ಪರಿಛೇದನೆಯಾಗಿದ್ದೇವೆ. ಆದಾಗ್ಯೂ ಮಾಂಸದಲ್ಲಿಯೂ
ನಂಬಿಕೆ ಇಡುವದಕ್ಕೆ ನನಗೆ ಉಂಟು. ಬೇರೆ ಯಾವನಾದರೂ
ತಾನು ಮಾಂಸದಲ್ಲಿ ನಂಬಿಕೆ ಇಡ ಬಹುದೆಂದು ನೆನಸಿದರೆ, ನಾನು
೫ ಹೆಚ್ಚಾಗಿ; ಎಂಟನೇ ದಿವಸದಲ್ಲಿ ಪರಿಛೇದನೆ ಹೊಂದಿ, ಇಸ್ರಯೇ-
ಲನ ವಂಶದವನಾಗಿ, ಬೆನ್ಯಮಿನನ ಕುಲದವನಾಗಿ, ಇಬ್ರೀಯ
ರಿಂದ ಹುಟ್ಟಿದ ಇಬ್ರೀಯನಾಗಿ, ನ್ಯಾಯಪ್ರಮಾಣದ ಪ್ರಕಾರ
೬ ಫರಿಸಾಯನಾಗಿ, ಆಸಕ್ತಿಯ ಪ್ರಕಾರ ಸಭೆಯ ಹಿಂಸಕನಾಗಿ,
ನ್ಯಾಯಪ್ರಮಾಣದಲ್ಲಿರುವ ನೀತಿಯ ಪ್ರಕಾರ ತಪ್ಪಿಲ್ಲದವನಾಗಿ
೭ ಇದ್ದೆನಲ್ಲ! ಆದರೆ ನನಗೆ ಲಾಭವಾಗಿದ್ದವುಗಳನ್ನು ಕ್ರಿಸ್ತನಿಗೋಸ್ಕ-
೮ ರ ನಷ್ಟವೆಂದೆಣಿಸಿದ್ದೇನೆ. ಹೌದು, ನಿಶ್ಚಯವಾಗಿ ನನ್ನ ಕರ್ತ-
ನಾದ ಕ್ರಿಸ್ತ ಯೇಸುವಿನ ಜ್ಞಾನದ ಹೆಚ್ಚುವಿಕೆಗೋಸ್ಕರ ಎಲ್ಲವ-
ನ್ನು ನಷ್ಟವೆಂದೆಣಿಸುತ್ತೇನೆ. ಅವನಿಗೋಸ್ಕರ ಎಲ್ಲಾದರ ನಷ್ಟ-
೯ ಪಟ್ಟೆನು. ಮತ್ತು ಕ್ರಿಸ್ತನನ್ನು ಲಾಭ ಮಾಡಿ ಕೊಳ್ಳುವ ಹಾಗೆ-
ಯೂ, ನ್ಯಾಯಪ್ರಮಾಣದಿಂದಾದ ನನ್ನ ನೀತಿಯನ್ನಲ್ಲ, ಕ್ರಿ-
ಸ್ತನ ವಿಶ್ವಾಸದಿಂದಿರುವಂಥ, ವಿಶ್ವಾಸದ ಮೂಲವಾಗಿ ದೇವರಿಂ-
ದಾಗಿರುವಂಥ, ನೀತಿಯನ್ನು ಹೊಂದಿದವನಾಗಿ, ಅವನಲ್ಲಿ ಕಾಣ-
೧೦ ಲ್ಪಡುವ ಹಾಗೆಯೂ, ಅವನನ್ನೂ, ಅವನ ಪುನರುತ್ಥಾನದ ಬಲ-
ವನ್ನೂ, ಅವನ ಶ್ರಮೆಗಳ ಅನ್ಯೋನ್ಯವನ್ನೂ, ಅವನ ಮರಣ-
೧೧ ಕ್ಕೆ ಸಾರೂಪ್ಯವಾದವನಾಗಿ, ಶಿಲ್ಪಿಯುವ ಹಾಗೆಯೂ, ಸತ್ತವರ
ಪುನರುತ್ಥಾನಕ್ಕೆ ಶೇರುವೆನೇನೋ? ಎಂದು ಎಲ್ಲವನ್ನು ಕಸವೆಂದೆ-
೧೨ ಣಿಸುತ್ತೇನೆ. ಈಗಲೇ ಹೊಂದಿದೆನು, ಇಲ್ಲವೆ ಈಗಲೇ ಸಂಪೂ-
ರ್ಣನಾಗಿದ್ದೇನೆ ಅಂತಲ್ಲ, ಆದರೆ ಯಾವದಕ್ಕೋಸ್ಕರ ಕ್ರಿಸ್ತ
ಯೇಸುವಿನಿಂದ ಹಿಡಿಯಲ್ಪಟ್ಟಿನೋ, ಅದನ್ನು ಹಿಡಿದು ಕೊಳ್ಳ-
೧೩ ಬೇಕೆಂದು ಹಿಂದಟ್ಟುತ್ತೇನೆ. ಸಹೋದರರೇ, ನಾನು ಹಿಡಿದವನೆಂ-
ದು ನನ್ನನ್ನು ನೆನಸಿ ಕೊಳ್ಳಪರಿಲ್ಲ. ಬಂಲೇ ಮಾತ್ರ—ಹಿಂದಿನ
ವುಗಳನ್ನು ಮರತು, ಮುಂದಿನವುಗಳಿಗೆ ಅಂದಿ ಕೊಳ್ಳಬೇಕೆಂದು,
೧೪ ಕ್ರಿಸ್ತ ಯೇಸುವಿನಲ್ಲಿ ದೇವರಿಂದಾದ ಮೇಗಳ ಕರೆಯುವಿಕೆಯ
ಬಹುಮಾನವನ್ನು ಗುರಿ ಇಟ್ಟು, ಹಿಂದಟ್ಟುತ್ತೇನೆ.

೧೫ ಹಾಗಾದರೆ, ಸಂಪೂರ್ಣರಾದವರಷ್ಟು ಈ ಮನಸ್ಸಾಗಿರುವ.
ಮತ್ತು ಯಾವದರಲ್ಲಿಯೂ ಬೇರೆ ಮನಸ್ಸಾಗಿದ್ದರೆ, ಅದನ್ನು
೧೬ ಸಹ ದೇವರು ನಿಮಗೆ ತಿಳಿಸುವನು. ಆದರೆ ನಾವು ಸೇರಿ ಕೊಂಡಿ-
ರುವ ಅದೇ ಪ್ರಮಾಣದಿಂದ ನಡಕೊಂಡು, ಒಂದೇ ಮನಸ್ಸಾಗಿ
೧೭ ರುವ. ಸಹೋದರರೇ, ನನ್ನನ್ನು ಕೂಡ ಅನುಸರಿಸುವರಾಗಿ,
ನಾವು ನಿಮಗೆ ಮಾದರಿಯಾಗಿರುವ ಪ್ರಕಾರ ನಡೆದು ಕೊಳ್ಳುವವ-
೧೮ ರನ್ನು ಗುರುತಿಡಿರಿ. ಯಾಕಂದರೆ ಅನೇಕರು ನಡೆದು ಕೊಳ್ಳು-
ತ್ತಾರೆ—ಅವರನ್ನು ಕುರಿತು ಕ್ರಿಸ್ತನ ಶಿಲುಬೆಯ ಶತ್ರುಗಳಾಗಿದ್ದಾ-
ರೆಂದು, ಅನೇಕಸಾರಿ ನಿಮಗೆ ಹೇಳಿದೆನು; ಮತ್ತು ಈಗ ಅಳುತ್ತಾ-
೧೯ ಹೇಳುತ್ತೇನೆ. ಅವರ ಅಂತ್ಯವು ನಾಶನವೇ; ಅವರ ದೇವರು ಹೊ-
ಟ್ಟೆಯೇ; ಅವರ ಮಹಿಮೆಯು ಅವರ ನಾಚಿಕೆಯಲ್ಲಿಯೇ; ಅ-
೨೦ ವರು ಭೂಲೋಕದವುಗಳ ಮೇಲೆ ಮನಸ್ಸಿಟ್ಟಿರುತ್ತಾರೆ. ಹ್ಯಾಗಂ-
ದರೆ, ನಮ್ಮ ಪಟ್ಟಣವಾಸವು ಪರಲೋಕದಲ್ಲಿ ಉಂಟು; ಅಲ್ಲಿಂದಲೇ
ಕರ್ತನಾದ ಯೇಸು ಕ್ರಿಸ್ತನೆಂಬ ರಕ್ಷಕನು ಬರುವದನ್ನು ಎದು-
೨೧ ರು ನೋಡುತ್ತೇವೆ. ಅವನು ತನಗೆ ಎಲ್ಲವನ್ನು ಅಧೀನ ಮಾಡ ಬ-
ಹುದಾದ ಯತ್ನದ ಪ್ರಕಾರ, ನಮ್ಮ ನೀಚತನದ ಶರೀರವನ್ನು
ತನ್ನ ಮಹಿಮೆಯ ಶರೀರಕ್ಕೆ ಸಾರೂಪ್ಯವಾಗುವ ಹಾಗೆ, ಮಾ-
ರ್ಪಡಿಸುವನು.

## ೪. ಸಂಧಿ.

೧ ಆದದರಿಂದ, ಪ್ರಿಯರೂ ಇಷ್ಟರೂ ಆದ ನನ್ನ ಸಹೋದ-
ರರೇ, ನನ್ನ ಸಂತೋಷವೂ ಕಿರೀಟವೂ ಆಗಿರುವವರೇ, ಹೀಗೆ
೨ ಕರ್ತನಲ್ಲಿ ನಿಲೆಯಾಗಿರಿ, ಪ್ರಿಯರೇ. ಕರ್ತನಲ್ಲಿ ಅದೇ ಮನ-
ಸ್ಸಾಗಿರ ಬೇಕೆಂದು, ಯುವೋದ್ಯಳನ್ನೂ ಬೇಡಿ ಕೊಳ್ಳುತ್ತೇನೆ,
೩ ಸಂತುಕೆಯನ್ನು ಬೇಡಿ ಕೊಳ್ಳುತ್ತೇನೆ. ಮತ್ತು, ನಿಜ ಜತೆಗಾರ-
ನೇ, ಅವರಿಗೆ ಸಹಾಯ ಮಾಡು, ಎಂದು ನಿನ್ನನ್ನು ಕೇಳಿ ಕೊ-
ಳ್ಳುತ್ತೇನೆ. ಅವರು ಕ್ಲೆಮೆಂತನ ಸಂಗಡಲೂ, ಮಿಕ್ಕಾದ ನನ್ನ ಜ-
ತೆ ಕೆಲಸದವರ ಸಂಗಡಲೂ ಸುವಾರ್ತೆಯಲ್ಲಿ ನನ್ನ ಕೂಡ ಕಷ್ಟ-
ಪಟ್ಟಿರು; ಅವರ ಹೆಸರುಗಳು ಜೀವದ ಪುಸ್ತಕದಲ್ಲಿ ಅವೆ.

೪ ಕರ್ತನಲ್ಲಿ ಯಾವಾಗಲೂ ಸಂತೋಷಿಸಿರಿ, ಸಂತೋಷಿಸಿರಿ,
೫ ಎಂದು ತಿರಿಗಿ ಹೇಳುತ್ತೇನೆ. ನಿಮ್ಮ ಸಾತ್ವಿಕತ್ವವು ಎಲ್ಲಾ ಮನು-
೬ ಷ್ಯರಿಗೆ ತಿಳಿಯಲ್ಪಡಲಿ; ಕರ್ತನು ಸಮೀಪವಾಗಿದ್ದಾನೆ. ಯಾವ-
ದಕ್ಕೂ ಚಿಂತೆ ಪಡ ಬೇಡಿರಿ; ಆದರೆ ಎಲ್ಲಾದರಲ್ಲಿ ಪ್ರಾರ್ಥನೆ-
ಯಿಂದಲೂ ವಿಜ್ಞಾಪನೆಯಿಂದಲೂ ನಿಮ್ಮ ಬಿನ್ನಹಗಳು ಸ್ತೋ-
೭ ತ್ರದ ಸಂಗಡ ದೇವರಿಗೆ ಅರಿಕೆಯಾಗಲಿ; ಆಗ ಎಲ್ಲಾ ಬುದ್ಧಿ-
ಯನ್ನು ಮೀರುವ ದೇವರ ಸಮಾಧಾನವು ನಿಮ್ಮ ಹೃದಯಗ-
ಳನ್ನೂ ಮನಸ್ಸುಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಪಾಡುವದು.

೮ ಕಡೆಯಲ್ಲಿ, ಸಹೋದರರೇ, ಸತ್ಯವಾದವುಗಳು ಯಾವವೋ,
ಘನವಾದವುಗಳು ಯಾವವೋ, ನ್ಯಾಯವಾದವುಗಳು ಯಾವ-
ವೋ, ಪವಿತ್ರವಾದವುಗಳು ಯಾವವೋ, ಪ್ರಿಯಕರವಾದವುಗಳು
ಯಾವವೋ, ಸುಕೀರ್ತಿಯಾದವುಗಳು ಯಾವವೋ, ಯಾವ
ಸದ್ಗುಣವಿದ್ದರೆ, ಯಾವ ಸ್ತೋತ್ರವಿದ್ದರೆ, ಅವುಗಳನ್ನೇ ಆಲೋ-
೯ ಚಿಸಿರಿ. ನೀವು ಕಲಿತು, ಗ್ರಹಿಸಿ, ಕೇಳಿ ನನ್ನಲ್ಲಿ ನೋಡಿದವುಗಳು
ಯಾವವೋ, ಅವುಗಳನ್ನೇ ಮಾಡಿರಿ; ಆಗ ಸಮಾಧಾನದ
ದೇವರು ನಿಮ್ಮ ಸಂಗಡ ಇರುವನು.

೧೦ ಆದರೆ, ಈಗಲಾದರೂ ನನ್ನ ವಿಷಯವಾಡ ನಿಮ್ಮ ಚಿಂತೆ



ಯು ತಿರಿಗಿ ಚಿಗುರಿತೆಂದು ಕರ್ತನಲ್ಲಿ ಮಹಾ ಸಂತೋಷ ಪಟ್ಟಿ-
೧೧ ನು. ಈ ಚಿಂತೆಯಲ್ಲಿ ಇದ್ದಿರಿ; ಆದರೆ ಸಮಯವಾಗವಿಲ್ಲ. ಕೊ-
ರತೆಯಿಂದ ನಾನು ಹೇಳಿದ ಹಾಗಲ್ಲ; ಯಾಕಂದರೆ ಇದ್ದ ಸ್ಥಿತಿ-
೧೨ ಯಲ್ಲಿ ತೃಪ್ತನಾಗಿರ ನಾನು ಕಲಿತಿದ್ದೇನೆ; ದೀನನಾಗಿರ ಬಲ್ಲೆನು;
ಹೆಚ್ಚಲೂ ಬಲ್ಲೆನು; ಎಲ್ಲೆಲ್ಲಿಯೂ, ಎಲ್ಲವುಗಳಲ್ಲಿಯೂ, ತೃಪ್ತಿ-
ಹೊಂದಲೂ, ಹಸಿವೆ ಪಡಲೂ, ಹೆಚ್ಚಲೂ, ಕೊರತೆ ಪಡಲೂ, ಪೂ-
೧೩ ರಿತನಾಗಿದ್ದೇನೆ; ನನ್ನನ್ನು ಬಲ ಪಡಿಸುವ ಕ್ರಿಸ್ತನಿಂದ ಎಲ್ಲಕ್ಕೆ
೧೪ ಶಕ್ತನಾಗಿದ್ದೇನೆ. ಆದಾಗ್ಯೂ ಉಪದ್ರವದಲ್ಲಿ ನನಗೆ ಸಹಾಯ ಕೊ-
ಟ್ಟು ಚೆನ್ನಾಗಿ ಮಾಡಿದಿರಿ.

೧೫ ಇದಲ್ಲದೆ, ಫಿಲಿಪ್ಪಿಯೇ, ಸುವಾರ್ತೆಯ ಆರಂಭದಲ್ಲಿ ನಾ-
ನು ಮಕೆದೋನ್ಯದಿಂದ ಹೊರಟಾಗ, ನೀವೇ ಹೊರ್ತು, ಬೇರೆ
ಯಾವ ಸಭೆಯಾದರೂ ನನಗೆ ಕೊಳ್ಳ ಕೊಡೋಣಗಳ ವಿಷ-
೧೬ ಯ ಸಹಾಯ ಮಾಡಲಿಲ್ಲವೆಂದು, ನೀವೇ ಬಲ್ಲಿರಿ. ಏನಂದರೆ ಥೆ-
ಸ್ಸಲೊನೀಕದಲ್ಲಿಯೂ ಬಂದೆರಡು ಸಾರಿ ನನ್ನ ಅವಸರಕ್ಕೆ ಕ-
೧೭ ಳುಹಿಸಿದಿರಿ. ನಾನು ದಾನವನ್ನು ಹುಡುಕಿದ ಹಾಗಲ್ಲ, ಆದರೆ ನಿ-
ಮ್ಮ ಲೆಖ್ಖಕ್ಕೆ ಹೆಚ್ಚುವ ಫಲವನ್ನು ಹುಡುಕುತ್ತೇನೆ. ಆದರೆ ಸು-
೧೮ ವಾಸನೆಯ ಪರಿಮಳವೂ, ದೇವರನ್ನು ಮೆಚ್ಚಿಸುವ ಸಮರ್ಪಕವಾ-
ದ ಬಲಿಯೂ ಆಗಿರುವ ನಿಮ್ಮುವುಗಳನ್ನು ಎಪಫ್ರೊದೀತನಿಂದ ತೆ-
ಗೆದು ಕೊಂಡು, ಎಲ್ಲಾ ಹೊಂದಿದ್ದೇನೆ, ಹೆಚ್ಚಿದ್ದೇನೆ, ತುಂಬಿದ್ದೇನೆ.

೧೯ ಆದರೆ ನನ್ನ ದೇವರು, ಕ್ರಿಸ್ತ ಯೇಸುವಿನಿಂದ ತನ್ನ ಮಹಿ-
ಮೆಯ ಐಶ್ವರ್ಯದ ಪ್ರಕಾರ, ನಿಮ್ಮ ಅವಸರವನ್ನೆಲ್ಲಾ ಪೂ-
೨೦ ರೈಸುವನು. ಇದಲ್ಲದೆ ನಮ್ಮ ತಂದೆಯಾದ ದೇವರಿಗೆ ಎಂದೆಂದಿ-
ಗೂ ಮಹಿಮೆ ಆಗಲಿ. ಆಮೆನ್.

೨೧ ಕ್ರಿಸ್ತ ಯೇಸುವಿನಲ್ಲಿರುವ ಪರಿಶುದ್ಧರೆಲ್ಲರನ್ನು ವಂದಿಸಿರಿ. ನ-
ನ್ನ ಸಂಗಡ ಇರುವ ಸಹೋದರರು ನಿಮ್ಮನ್ನು ವಂದಿಸುತ್ತಾರೆ.
೨೨ ಪರಿಶುದ್ಧರೆಲ್ಲರು, ಮುಖ್ಯವಾಗಿ ಕೈಸರನ ಮನೆಯವರು, ನಿಮ್ಮ-
೨೩ ನ್ನು ವಂದಿಸುತ್ತಾರೆ. ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃ-
ಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

---

# THE EPISTLE OF
# PAUL THE APOSTLE TO THE COLOSSIANS.

### ಅಪೊಸ್ತಲನಾದ ಪೌಲನು ಕೊಲೊಸ್ಸೆಯರಿಗೆ ಬರೆದ ಪತ್ರಿಕೆ.

## ೧. ಸಂಧಿ.

೧ ದೇವರ ಚಿತ್ತದಿಂದ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲ-
೨ ನೂ, ಸಹೋದರನಾದ ತಿಮೊಥೆಯನೂ, ಕೊಲೊಸ್ಸೆಯಲ್ಲಿರುವ
ಪರಿಶುದ್ಧರೂ ಕ್ರಿಸ್ತನಲ್ಲಿ ನಂಬಿಕೆಯುಳ್ಳ ಸಹೋದರರೂ ಆಗಿರು-
ವವರಿಗೆ—ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು
ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.

೩ ಸುವಾರ್ತೆಯ ಸತ್ಯದ ವಾಕ್ಯದಲ್ಲಿ ನೀವು ಮುಂಚೆ ಕೇಳಿ-
೪ ದಂಥ, ಪರಲೋಕದಲ್ಲಿ ನಿಮಗೆ ಇಟ್ಟಿರುವಂಥ ನಿರೀಕ್ಷೆಗೋಸ್ಕರ
ನೀವು ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸವನ್ನೂ, ಪರಿಶುದ್ಧರೆಲ್ಲ-
೫ ರಿಗೆ ಮಾಡುವ ಪ್ರೀತಿಯನ್ನೂ ಕೇಳಿ, ಎಂದಿಗೂ ನಿಮಗೋಸ್ಕರ
ಪ್ರಾರ್ಥಿಸಿ, ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾಗಿ-
೬ ರುವ ದೇವರಿಗೆ ಸ್ತೋತ್ರ ಮಾಡುತ್ತೇವೆ. ಆ ಸುವಾರ್ತೆಯು ಸ-
ಮಸ್ತ ಲೋಕದಲ್ಲಿ ಬಂದ ಹಾಗೆ, ನಿಮಗೂ ಬಂದು, ನೀವು ಸ-
ತ್ಯದಲ್ಲಿ ದೇವರ ಕೃಪೆಯನ್ನು ಕೇಳಿ ತಿಳಿದ ದಿವಸದಿಂದ ನಿಮ್ಮ-
೭ ಲ್ಲಿಯೂ ಫಲಿಸುವ ಪ್ರಕಾರ, ಫಲಿಸುತ್ತದೆ. ಹಾಗೆಯೇ ನಿಮಗೋ-
ಸ್ಕರ ಕ್ರಿಸ್ತನ ನಂಬಿಕೆಯುಳ್ಳ ಸೇವಕನಾಗಿರುವ ನಮ್ಮ ಪ್ರಿಯ-
೮ ಜತೆ ದಾಸನಾದ ಎಪಫ್ರನಿಂದಲೂ ಕಲಿತಿರಿ. ಅವನೇ ಆತ್ಮದಲ್ಲಿರು-
ವ ನಿಮ್ಮ ಪ್ರೀತಿಯನ್ನು ನಮಗೆ ತಿಳ್ಳಿಸಿದನು.

೯ ಇದರ ನಿಮಿತ್ತ ನಾವು ಸಹ ಕೇಳಿದ ದಿವಸದಿಂದ ಎಡೆಬಿಡದೆ
ನಿಮಗೋಸ್ಕರ ಪ್ರಾರ್ಥಿಸಿ, ನೀವು ಸಕಲ ಜ್ಞಾನದಲ್ಲಿಯೂ, ಆತ್ಮ-
೧೦ ವಿವೇಕದಲ್ಲಿಯೂ, ಅವನ ಚಿತ್ತದ ತಿಳುವಿಕೆಯಿಂದ ತುಂಬಲ್ಪ-
ಟ್ಟಿರುವ ಹಾಗೆಯೂ, ಸಕಲ ಸತ್ಕ್ರಿಯೆಗಳಲ್ಲಿ ಫಲ ಕೊಟ್ಟು, ದೇವ-
ರ ತಿಳುವಿಕೆಯಲ್ಲಿ ಬೆಳೆದು, ಸಂತೋಷ ಸಹಿತವಾದ ಎಲ್ಲಾ ತಾ-
೧೧ ಳ್ಮೆ ದೀರ್ಘಶಾಂತಿಗಳಿಗಾಗಿ, ಅವನ ಮಹಿಮೆಯ ತ್ರಾಣದ ಪ್ರ-
೧೨ ಕಾರ, ಎಲ್ಲಾ ಬಲದಿಂದ ಬಲಗೊಂಡು, ಬೆಳಕಿನಲ್ಲಿರುವ ಪರಿಶುದ್ಧ-
ರ ಬಾಧ್ಯತೆಯ ಭಾಗಕ್ಕಾಗಿ ನಮ್ಮನ್ನು ಸಿದ್ಧ ಮಾಡಿದ ತಂದೆಗೆ
ಸ್ತೋತ್ರ ಮಾಡಿ, ನೀವು ಕರ್ತನಿಗೆ ಯೋಗ್ಯವಾಗಿ ಸರ್ವಾನಂ-
ದಕ್ಕಾಗಿ ನಡೆದು ಕೊಳ್ಳುವ ಹಾಗೆಯೂ, ಬೇಡಿ ಕೊಳ್ಳುತ್ತೇವೆ.
೧೩ ಅವನು ಅಂಧಕಾರದ ಅಧಿಕಾರದೊಳಗಿಂದ ನಮ್ಮನ್ನು ತಪ್ಪಿಸಿ,
೧೪ ತನ್ನ ಪ್ರೀತಿಯ ಮಗನ ರಾಜ್ಯದೊಳಗೆ ತಂದಿಟ್ಟಿದ್ದಾನೆ. ಇವನ-
ಲ್ಲಿ ಅವನ ರಕ್ತದಿಂದಾಗುವ ವಿಮೋಚನೆಯಾದ ಪಾಪಗಳ ಪರಿ-
ಹಾರವು ನಮಗುಂಟು.

೧೫ ಅವನು ಅದೃಶ್ಯನಾದ ದೇವರ ಪ್ರತಿರೂಪವೂ, ಎಲ್ಲಾ ಸೃ-
೧೬ ಷ್ಟಿಯ ಚೊಚ್ಚಲವನೂ, ಆಗಿದ್ದಾನೆ. ಯಾಕಂದರೆ ಪರಲೋಕ-
ದಲ್ಲಿಯೂ, ಭೂಲೋಕದಲ್ಲಿಯೂ, ಇರುವ ದೃಶ್ಯಾದೃಶ್ಯ-
ವಾದವುಗಳೂ ಎಲ್ಲಾ ಅವನಿಂದ ಸೃಷ್ಟಿಸಲ್ಪಟ್ಟವು; ಸಿಂಹಾಸನ-
ಗಳಾಗಲಿ, ಒಡೆತನಗಳಾಗಲಿ, ದೊಕೆತನಗಳಾಗಲಿ, ಅಧಿಕಾರಗಳಾ-
ಗಲಿ, ಎಲ್ಲವುಗಳು ಅವನಿಂದಲೂ ಅವನಿಗೋಸ್ಕರವೂ ಸೃಷ್ಟಿಸ-
೧೭ ಲ್ಪಟ್ಟವು; ಮತ್ತು ಅವನು ಎಲ್ಲವುಗಳ ಮುಂಚೆ ಇದ್ದಾನೆ; ಅವ-
೧೮ ನಲ್ಲಿ ಎಲ್ಲವುಗಳು ಸ್ಥಾಪಿಸಲ್ಪಟ್ಟಿವೆ; ಮತ್ತು ಅವನು ಸಭೆ ಎಂಬ
ಶರೀರದ ತಲೆಯಾಗಿದ್ದಾನೆ; ಅವನೇ ಆದಿಯೂ, ಸತ್ತವರೊಳ-
ಗಿಂದ ಚೊಚ್ಚಲವನೂ ಆಗಿದ್ದಾನೆ; ತಾನು ಎಲ್ಲವುಗಳಲ್ಲಿ ಪ್ರಥಮ-
೧೯ ನಾಗುವ ಹಾಗೆಯೇ. ಯಾಕಂದರೆ ಅವನಲ್ಲಿ ಸಮಸ್ತ ಸಂಪೂ-
೨೦ ರ್ಣತೆಯೂ ವಾಸವಾಗಿರುವದೂ; ಅವನ ಶಿಲುಬೆಯ ರಕ್ತದಿಂ-
ದ ಸಮಾಧಾನ ಮಾಡಿ, ಅವನ ಮೂಲವಾಗಿ ಭೂಲೋಕದಲ್ಲಿರು-
ವವುಗಳಾಗಲಿ, ಪರಲೋಕದಲ್ಲಿರುವವುಗಳಾಗಲಿ, ಸರ್ವವನ್ನು
ಅವನ ಮೂಲವಾಗಿಯೇ ತನ್ನ ಸಂಗಡ ಅನ್ಯೋನ್ಯ ಮಾಡುವ-
ದೂ, ಅವನಿಗೆ ಬಗ್ಗೆದಾಗಿ ತೋಚಿತು.

೨೧ ಮತ್ತು ನೀವು ವಿಶ್ವಾಸದಲ್ಲಿ ನಿಂತು, ನೆಲೆಗೊಂಡು, ಸ್ಥಿರವಾಗಿ-
ದ್ದು, ನೀವು ಕೇಳಿದಂಥ, ಆಕಾಶದ ಕೆಳಗಿರುವ ಸರ್ವ ಸೃಷ್ಟಿಗೆ
ಸಾರಲ್ಪಟ್ಟಿಂಥ ಪೌಲನಾದ ನಾನು ಸೇವಕನಾದಂಥ ಸುವಾರ್ತೆ

೨೨ ಯ ನಿರೀಕ್ಷೆಯಿಂದ ಚಲಿಸಲ್ಪಡದಿದ್ದರೆ, ನಿಮ್ಮನ್ನು ಅವನ ಮುಂ
ದೆ ಪರಿಶುದ್ಧರಾಗಿಯೂ, ನಿರ್ಮಲರಾಗಿಯೂ, ನಿರಪರಾಧಿಗಳಾಗಿ
೨೩ ಯೂ, ನಿಲ್ಲಿಸುವ ಹಾಗೆ, ಮುಂಚೆ ಪರರಾಗಿಯೂ, ನಿಮ್ಮ ಬು
ದ್ಧಿಯಲ್ಲಿ ದುಷ್ಟ ಕ್ರಿಯೆಗಳಿಂದ ಶತ್ರುಗಳಾಗಿಯೂ, ಇದ್ದ ನಿ
ಮ್ಮನ್ನು, ಈಗಲೇ ಅವನ ಮಾಂಸದ ಶರೀರದಲ್ಲಿ, ಮರಣದ
ಮೂಲವಾಗಿ ಅನ್ಯೋನ್ಯ ಮಾಡಿದನು.

೨೪ ಈಗ ನಾನು ನಿಮ್ಮ ನಿಮಿತ್ತ ಪಡುವ ಶ್ರಮೆಗಳಲ್ಲಿ ಸಂತೋಷ
ಪಟ್ಟು, ನನ್ನ ಮಾಂಸದಲ್ಲಿ ಕ್ರಿಸ್ತನ ಉಪದ್ರವಗಳ ಶೇಷವನ್ನು ಸ
ಭೆಯಾಗಿರುವ ಅವನ ಶರೀರಕ್ಕೋಸ್ಕರ ಪೂರ್ತಿ ಮಾಡು
೨೫ ತ್ತೇನೆ. ಅದಕ್ಕೆ ನಾನು ನಿಮಗೋಸ್ಕರ, ನನಗೆ ಕೊಡಲ್ಪಟ್ಟ
ದೇವರ ಮನವಾರ್ತೆಯ ಪ್ರಕಾರ, ದೇವರ ವಾಕ್ಯವನ್ನು ಪೂರೈ
೨೬ ಸುವದಕ್ಕೆ ಸೇವಕನಾದೆನು. ಅದೇನಂದರೆ ಯುಗಗಳಾರಭ್ಯವೂ,
ತಲಾಂತರಗಳಾರಭ್ಯವೂ, ಮರೆಯಾಗಿದ್ದು, ಈಗ ಅವನ ಪರಿಶು
೨೭ ದ್ಧರಿಗೆ ಪ್ರಕಟವಾದ ಮರ್ಮವೇ. ಇವರಿಗೆ ದೇವರು ಈ ಮರ್ಮ
ದ ಮಹಿಮೆಯ ಐಶ್ವರ್ಯವು ಜನಾಂಗಗಳಲ್ಲಿ ಏನೆಂದು ತಿಳಿಸ
ಮನಸ್ಸಾಗಿದ್ದನು; ಅದು ಮಹಿಮೆಯ ನಿರೀಕ್ಷೆಯಾದಂಥ, ನಿ
೨೮ ಮ್ಮಲ್ಲಿ ಇರುವಂಥ ಕ್ರಿಸ್ತನೇ. ಅವನನ್ನು ನಾವು ಸಾರಿ, ಪ್ರತಿ ಮ
ನುಷ್ಯನಿಗೆ ಬುದ್ಧಿ ಹೇಳಿ, ಪ್ರತಿ ಮನುಷ್ಯನನ್ನು ಕ್ರಿಸ್ತ ಯೇಸು
ವಿನಲ್ಲಿ ಸಂಪೂರ್ಣನಾಗಿ ನಿಲ್ಲಿಸುವ ಹಾಗೆ, ಪ್ರತಿ ಮನುಷ್ಯನಿಗೆ
೨೯ ಸಕಲ ಜ್ಞಾನದಲ್ಲಿ ಬೋಧಿಸುತ್ತೇವೆ. ಇದಕ್ಕೋಸ್ಕರ ನನ್ನಲ್ಲಿ
ಬಲವಾಗಿ ಯತ್ನೈಸುವ ಅವನ ಯತ್ನದ ಪ್ರಕಾರ, ಹೋರಾಡಿ
ಕಷ್ಟ ಪಡುತ್ತೇನೆ.

## ೨. ಸಂಧಿ.

೧ ಹ್ಯಾಗಂಥರೆ ನಿಮಗೋಸ್ಕರವೂ, ಲಾವೊದಿಕ್ಯೆಯದಲ್ಲಿರುವ
ವರಿಗೋಸ್ಕರವೂ, ಮಾಂಸದಲ್ಲಿ ನನ್ನ ಮುಖವನ್ನು ನೋಡದವ
೨ ಕ್ಕೆಲ್ಲರಿಗೋಸ್ಕರವೂ, ತಂದೆಯಾದ ದೇವರೂ, ಜ್ಞಾನ ತಿಳಿವಿಕೆ
ಗಳ ನಿಕ್ಷೇಪಗಳೆಲ್ಲಾ ಅಡಗಿರುವ ಕ್ರಿಸ್ತನೂ, ಇವರ ಮರ್ಮವ
ನ್ನು ಅವರು ತಿಳಿಯುವದಕ್ಕೆ ವಿವೇಕದ ಪೂರ್ಣ ನಿಶ್ಚಯದ
೩ ಸಕಲ ಐಶ್ವರ್ಯಕ್ಕಾಗಿಯೂ, ಪ್ರೀತಿಯಲ್ಲಿಯೂ, ಜೋಡಿಸ
ಲ್ಪಟ್ಟು, ಅವರ ಹೃದಯಗಳು ಆದರಿಸಲ್ಪಡುವ ಹಾಗೆ, ನನಗೆ
ಎಂಥ ಹೋರಾಟ ಉಂಟೆಂದು, ನೀವು ತಿಳಿದು ಕೊಳ್ಳ ಇಚ್ಛೈಸ
೪ ುತ್ತೇನೆ. ಆದರೆ ಯಾವನಾದರೂ ಇಚ್ಛಕದ ಮಾತುಗಳಿಂದ
ನಿಮ್ಮ ಬುದ್ಧಿಯನ್ನು ಕೆಡಿಸದ ಹಾಗೆ, ಇದನ್ನು ಹೇಳುತ್ತೇನೆ.
೫ ಯಾಕಂದರೆ ಮಾಂಸದಿಂದ ದೂರವಾಗಿದ್ದರೂ, ಆತ್ಮದಿಂದ ನಿ
ಮ್ಮ ಸಂಗಡ ಇದ್ದು, ನಿಮ್ಮ ಕ್ರಮವನ್ನೂ, ನೀವು ಕ್ರಿಸ್ತನಲ್ಲಿರುವ
ವಿಶ್ವಾಸದ ದೃಢತ್ವವನ್ನೂ ನೋಡಿ, ಸಂತೋಷಿಸುತ್ತೇನೆ.
೬ ಹಾಗಾದರೆ, ನೀವು ಕರ್ತನಾದ ಕ್ರಿಸ್ತ ಯೇಸುವನ್ನು ಹೊಂದಿದ
೭ ಪ್ರಕಾರ, ಅವನಲ್ಲಿ ನಡೆದು ಕೊಳ್ಳಿರಿ. ಅವನಲ್ಲಿ ಬೇರೂರಿ, ಕಟ್ಟ
ಲ್ಪಟ್ಟು, ವಿಶ್ವಾಸದಲ್ಲಿ ಸ್ಥಿರ ಮಾಡಲ್ಪಟ್ಟು, ನೀವು ಬೋಧಿಸ
ಲ್ಪಟ್ಟ ಪ್ರಕಾರ, ಅದರಲ್ಲಿ ಸ್ತೋತ್ರ ಮಾಡಿ ಹೆಚ್ಚಿರಿ. ಕ್ರಿಸ್ತನ ಪ್ರ
ಕಾರವಲ್ಲ, ಲೋಕದ ಸೂತ್ರಗಳ ಪ್ರಕಾರವೂ, ಮನುಷ್ಯರ ಸಂ
ಪ್ರದಾಯದ ಪ್ರಕಾರವೂ, ಜ್ಞಾನಬೋಧೆಯಿಂದಲೂ ವ್ಯರ್ಥ
ಮೋಸದಿಂದಲೂ ಒಬ್ಬನಾದರೂ ನಿಮ್ಮನ್ನು ಸುಲುಕೊಳ್ಳದ
೯ ಹಾಗೆ, ನೋಡಿ ಕೊಳ್ಳಿರಿ. ಯಾಕಂದರೆ ಅವನಲ್ಲಿ ದೈವತ್ವದ ಸ
ಮಸ್ತ ಸಂಪೂರ್ಣತೆಯು ಶರೀರವಾಗಿ ವಾಸ ಮಾಡುತ್ತದೆ.
೧೦ ಮತ್ತು ಸಕಲ ದೊರೆತನಕ್ಕೂ ಅಧಿಕಾರಕ್ಕೂ ತಲೆಯಾಗಿರುವ
೧೧ ಅವನಲ್ಲಿ ಸಂಪೂರ್ಣರಾಗಿದ್ದೀರಿ. ಅವನಲ್ಲಿಯೇ ಕ್ರಿಸ್ತನ ಪರಿಛೇ
ದನೆಯಿಂದ ಮಾಂಸದ ಪಾಪಗಳ ಶರೀರವನ್ನು ತೆಗೆದು ಹಾಕು
೧೨ ವ, ಕೈ ಕೆಲಸವಲ್ಲದ ಪರಿಛೇದನೆಯಿಂದ ಪರಿಛೇದಿಸಲ್ಪಟ್ಟು, ಸ್ನಾ
ನದಲ್ಲಿ ಅವನ ಕೂಡ ಹೂಣಲ್ಪಟ್ಟು, ಅದರಲ್ಲಿ ಅವನನ್ನು ಸತ್ತ
ವರೊಳಗಿಂದ ಎಬ್ಬಿಸಿದ ದೇವರ ಯತ್ನದ ವಿಶ್ವಾಸದಿಂದ ಕೂ
೧೩ ಡ ಎಬ್ಬಿಸಲ್ಪಟ್ಟಿದ್ದೀರಿ. ಮತ್ತು ಅಕ್ರಮಗಳಲ್ಲಿಯೂ, ನಿಮ್ಮ
ಮಾಂಸದ ಅಪರಿಛೇದನೆಯಲ್ಲಿಯೂ, ಸತ್ತವರಾಗಿದ್ದ ನಿಮ್ಮನ್ನು
ಅವನ ಕೂಡ ಬದುಕಿಸಿ, ಅಕ್ರಮಗಳನ್ನೆಲ್ಲಾ ನಮಗೆ ಮನ್ನಿಸಿ, ನ
೧೪ ಮಗೆ ವಿರೋಧವಾಗಿದ್ದಂಥ, ನಮಗೆ ಎದುರಾದಂಥ ಅಜ್ಞೆಗಳ ಕೈ
ಬರಹವನ್ನು ಅಳಿಸಿ, ಅದನ್ನು ಮಧ್ಯದಿಂದ ತೆಗೆದು ಹಾಕಿ, ಅ
೧೫ ದನ್ನು ಶಿಲುಬೆಗೆ ಹಾಕಿ ಜಡಿದು, ದೊರೆತನಗಳನ್ನೂ ಅಧಿಕಾರಗಳ
ನ್ನೂ ಸುಲುಕೊಂಡು, ಬಹಿರಂಗವಾಗಿ ನೋಟ ಮಾಡಿ, ಅವುಗಳ
ಮೇಲೆ ತನ್ನಲ್ಲಿ ಜಯೋತ್ಸವ ಮಾಡಿದನು.

೧೬ ಆದದರಿಂದ, ಇನ್ನು ಯಾವನಾದರೂ ಅನ್ನಪಾನಗಳಲ್ಲಿಯಾ
ದರೂ, ಹಬ್ಬ ಅಮಾವಾಸಿ ಸಬ್ಬತುಗಳ ವಿಷಯದಲ್ಲಿಯಾಡ
೧೭ ರೂ, ನಿಮಗೆ ನ್ಯಾಯ ತೀರಿಸದಿರಲಿ. ಇವು ಮುಂದಿನವುಗಳ ನೆ
ರಳಾಗಿವೆ, ಆದರೆ ಶರೀರವು ಕ್ರಿಸ್ತನದೇ. ಮನೋದೀನತ್ವಕ್ಕೂ
೧೮ ದೂತರ ಪೂಜೆಗೂ ಮನಸ್ಸು ಕೊಡುವಂಥ, ತಾನು ನೋಡದ
ವುಗಳಲ್ಲಿ ಕಾಲು ಹಾಕುವಂಥ, ತನ್ನ ಮಾಂಸ ಬುದ್ಧಿಯಿಂದ
ಸುಮ್ಮನೆ ಉಬ್ಬಿ ಕೊಂಡಂಥ, ಕೀಲು ನಾಡಿಗಳಿಂದ ಪೋಷಣೆ
೧೯ ಹೊಂದಿ ಜೋಡಿಸಲ್ಪಟ್ಟು, ದೇವರ ಅಭಿವೃದ್ಧಿಯಿಂದ ವರ್ಧಿ
ಸುವ ಶರೀರಕ್ಕೆಲ್ಲಾ ಮೂಲವಾದ ತಲೆಯನ್ನು ಹಿಡಿದು ಕೊಳ್ಳ
ದಂಥ ಯಾವನಾದರೂ ನಿಮಗೆ ಬಹುಮಾನ ತಪ್ಪಿಸದಿರಲಿ.

೨೦ ಹಾಗಾದರೆ, ನೀವು ಲೋಕದ ಸೂತ್ರಗಳನ್ನು ಬಿಟ್ಟು, ಕ್ರಿಸ್ತ
ನ ಸಂಗಡ ಸತ್ತವರಾಗಿದ್ದರೆ, ಲೋಕದಲ್ಲಿ ಬದುಕುವವರ ಹಾಗೆ,
೨೧ ಕೈ ಹಾಕ ಬೇಡ, ರುಚಿ ನೋಡ ಬೇಡ, ಮುಟ್ಟ ಬೇಡ, ಎಂಬುವ
೨೨ ಮನುಷ್ಯರ ಕಟ್ಟಳೆ ಬೋಧನೆಗಳ ಪ್ರಕಾರ, ಅಜ್ಞೆಗಳಿಗೆ ಬಳಗಾಗಿ
ರುವದೇನು? ಇವುಗಳೆಲ್ಲಾ ಬಳಸುವದರಲ್ಲಿ ನಾಶವಾಗಿ ಹೋಗುತ್ತ
ವೆ. ಅವು ಮಾಂಸದ ತೃಪ್ತಿಗಾಗಿ ಯಾವ ಮಾನದಲ್ಲಿಯೂ,
ಅಲ್ಲ, ಇಚ್ಛಾ ಪೂಜೆಯಲ್ಲಿಯೂ, ಮನೋದೀನತ್ವದಲ್ಲಿಯೂ,
ದೇಹದಂಡನೆಯಲ್ಲಿಯೂ, ಜ್ಞಾನದ ಹೆಸರುಳ್ಳವುಗಳಾಗಿವೆ.

## ೩. ಸಂಧಿ.

೧ ಆದದರಿಂದ, ನೀವು ಕ್ರಿಸ್ತನ ಸಂಗಡ ಎಬ್ಬಿಸಲ್ಪಟ್ಟವರಾಗಿ
ದ್ದರೆ, ಮೇಲೆ ಇರುವವುಗಳನ್ನು ಹುಡುಕಿರಿ. ಅಲ್ಲಿ ಕ್ರಿಸ್ತನು ದೇವ
೨ ರ ಬಲಕಡೆಯಲ್ಲಿ ಕೂತು ಕೊಂಡಿದ್ದಾನೆ. ಭೂಲೋಕದವುಗಳನ್ನ
೩ ಲ್ಲ, ಮೇಲಿನವುಗಳನ್ನೇ ಚಿಂತಿಸಿರಿ. ಯಾಕಂದರೆ ನೀವು ಸತ್ತವ
ರಾಗಿದ್ದೀರಿ; ಮತ್ತು ನಿಮ್ಮ ಜೀವವು ಕ್ರಿಸ್ತನ ಸಂಗಡ ದೇವರಲ್ಲಿ ಅ
೪ ಡಗಿ ಅದೆ. ನಮ್ಮ ಜೀವವಾದ ಕ್ರಿಸ್ತನು ಪ್ರತ್ಯಕ್ಷವಾಗುವಾಗ್ಯೆ,
ನೀವು ಸಹ ಅವನ ಸಂಗಡ ಮಹಿಮೆಯಲ್ಲಿ ಪ್ರತ್ಯಕ್ಷವಾಗುವಿರಿ.

೫ ಆದದರಿಂದ, ಜಾರತ್ವವೂ, ಅಶುದ್ಧತ್ವವೂ, ಮೋಹವೂ,
ದುರಾಶೆಯೂ, ವಿಗ್ರಹಾರಾಧನೆಯಾಗಿರುವ ಲೋಭವೂ, ಭೂ
೬ ಮಿಯ ಮೇಲಾದ ಈ ನಿಮ್ಮ ಅಂಗಗಳನ್ನು ಕೊಲ್ಲಿರಿ. ಇವುಗಳಿ



ಗೋಸ್ಕರ ದೇವರ ಕೋಪವು ಅವಿಧೇಯತ್ವದ ಮಕ್ಕಳ ಮೇ
೭ ಲೆ ಬರುತ್ತದೆ. ನೀವು ಸಹ ಅವುಗಳಲ್ಲಿ ಬದುಕುವಾಗ, ಅವುಗಳ
೮ ಲ್ಲಿ ಒಂದು ಕಾಲ ನಡೆದು ಕೊಂಡಿರಿ. ಆದರೆ ಈಗ ನೀವು ಕೋಪ,
ಪಟ್ಟು, ಕೆಟ್ಟತನ, ದೂಷಣೆ, ನಿಮ್ಮ ಬಾಯಿಯಿಂದ ಹೊರಡುವ ಕೆ
ಟ್ಟ ಮಾತು, ಇವುಗಳನ್ನೆಲ್ಲಾ ತೆಗೆದು ಹಾಕಿರಿ.

೯ ಒಬ್ಬೊರಿಗೊಬ್ಬರು ಸುಳ್ಳು ಹೇಳಿ ಬೇಡಿರಿ; ಹಳೇ ಮನುಷ್ಯ
೧೦ ನನ್ನು ಅವನ ಕ್ರಿಯೆಗಳ ಸಂಗಡ ತೆಗೆದು ಹಾಕಿ, ಅವನನ್ನು ಸೃ
ಷ್ಟಿಸಿದವನ ಹೋಲಿಕೆಯ ಪ್ರಕಾರ ತಿಳಿವಿಕೆಗಾಗಿ ನೂತನವಾಗುವ
೧೧ ಹೊಸಬನನ್ನು ಧರಿಸಿ ಕೊಂಡಿರಲ್ಲಿ! ಅಲ್ಲಿ ಗ್ರೇಕನೂ, ಯೆಹೂದ್ಯ
ನೂ, ಪರಿಛೇದನೆಯೂ, ಅಪರಿಛೇದನೆಯೂ, ಬರ್ಬರನೂ, ಸ್ಕು
ಥನೂ, ದಾಸನೂ, ಸ್ವತಂತ್ರನೂ, ಇಲ್ಲ; ಆದರೆ ಎಲ್ಲವೂ ಎಲ್ಲ
ಕಲ್ಲಿಯೂ ಕ್ರಿಸ್ತನೇ.

೧೨ ಆದಕಾರಣ, ದೇವರು ಆರಿ ಕೊಂಡವರೂ ಪರಿಶುದ್ಧರೂ ಪ್ರಿ
ಯರೂ ಆಗಿರುವವರ ಹಾಗೆ, ಕನಿಕರಗಳ ಕರುಳುಗಳನ್ನೂ, ದ
ಯವನ್ನೂ, ದೀನ ಮನಸ್ಸನ್ನೂ, ಸಾತ್ವಿಕತ್ವವನ್ನೂ, ದೀ
೧೩ ರ್ಘಶಾಂತಿಯನ್ನೂ ಧರಿಸಿ ಕೊಂಡು, ಒಬ್ಬರನ್ನೊಬ್ಬರು ತಾ
ಳಿ ಕೊಂಡು, ಒಬ್ಬನಿಗೆ ಮತ್ತೊಬ್ಬನ ಮೇಲೆ ತಪ್ಪು ಹೊರಿಸುವ
ಕಾರಣವಿದ್ದರೆ, ಕ್ರಿಸ್ತನು ಹ್ಯಾಗೆ ನಿಮಗೆ ಮನ್ನಿಸಿದನೋ, ಹಾಗೆ
೧೪ ಯೇ ನೀವು ಒಬ್ಬರಿಗೊಬ್ಬರು ಮನ್ನಿಸಿರಿ. ಇವೆಲ್ಲವುಗಳ ಮೇ
ಲೆ ಸಂಪೂರ್ಣತೆಯ ಬಂಧವಾದ ಪ್ರೀತಿಯನ್ನು ಧರಿಸಿ ಕೊಳ್ಳಿ
೧೫ ರಿ. ಮತ್ತು ದೇವರ ಸಮಾಧಾನವು ನಿಮ್ಮ ಹೃದಯಗಳಲ್ಲಿ ಆಳ್ವಿ
ಶಿ; ಅದಕ್ಕೆ ಬಂದೇ ಶರೀರದಲ್ಲಿ ಕರೆಯಲ್ಪಟ್ಟಿರಿ. ಮತ್ತು ಕೃ
ತಜ್ಞರಾಗಿರಿ.

೧೬ ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಕಲ ಜ್ಞಾನದಿಂದ ಐಶ್ವರ್ಯ
ವಾಗಿ ವಾಸ ಮಾಡಲಿ; ಒಬ್ಬರಿಗೊಬ್ಬರು ಬೋಧಿಸುತ್ತಾ, ಬುದ್ಧಿ ಹೇ
ಳುತ್ತಾ, ಕೀರ್ತನೆಗಳಿಂದಲೂ, ಗೀತೆಗಳಿಂದಲೂ, ಆತ್ಮಭಾವಾದ
ಹಾಡುಗಳಿಂದಲೂ, ನಿಮ್ಮ ಹೃದಯದೊಳಗೆ ಕರ್ತನಿಗೆ ಇಂಪಾ
೧೭ ಗಿ ಹಾಡಿರಿ. ಮತ್ತು ನೀವು ಮಾತಿನಿಂದಾಗಲಿ, ಕ್ರಿಯೆಯಿಂದಾಗಲಿ,
ಏನು ಮಾಡಿದರೂ, ಎಲ್ಲವನ್ನು ಕರ್ತನಾದ ಯೇಸುವಿನ ಹೆಸ
ರಿನಲ್ಲಿ ಮಾಡಿ, ಅವನ ಮುಖಾಂತರ ತಂದೆಯಾದ ದೇವರನ್ನು
ಸ್ತುತಿಸಿರಿ.

೧೮ ಹೆಂಗಸರೇ, ಕರ್ತನಲ್ಲಿ ಯೋಗ್ಯವಾದ ಪ್ರಕಾರ, ಸ್ವಂತ
೧೯ ಗಂಡಂದಿರಿಗೆ ಬಳಗಾಗಿರ್ರಿ. ಗಂಡಸರೇ, ಹೆಂಡತನ್ನು ಪ್ರೀತಿ ಮಾ
ರಿ, ಅವರಿಗೆ ಕಹಿಯಾಗಿರ ಬೇಡಿರಿ.

೨೦ ಮಕ್ಕಳೇ, ಎಲ್ಲಾದರಲ್ಲಿ ಹೆತ್ತವರಿಗೆ ವಿಧೇಯರಾಗಿರ್ರಿ; ಇದೇ
೨೧ ಕರ್ತನಿಗೆ ಆನಂದಕರವಾದದ್ದು. ತಂದೆಗಳೇ, ನಿಮ್ಮ ಮಕ್ಕಳು
ಮನಗುಂದದ ಹಾಗೆ, ಅವರಿಗೆ ಕೋಪವನ್ನೆಬ್ಬಿಸ ಬೇಡಿರಿ.

೨೨ ದಾಸರೇ, ಮನುಷ್ಯರನ್ನು ಮೆಚ್ಚಿಸುವವರಾಗಿ ಕಣ್ಣು ಸೇವೆ
ಯನ್ನು ಮಾಡದೆ, ದೇವರಿಗೆ ಭಯ ಪಟ್ಟು, ಮಾನಸದ ಪ್ರಕಾರದ
ಯಜಮಾನರಾದವರಿಗೆ ಎಲ್ಲಾದರಲ್ಲಿ ಹೃದಯದ ಯಥಾರ್ಥ
೨೩ ದಿಂದ ವಿಧೇಯರಾಗಿರ್ರಿ. ಮತ್ತು ಮಾಡುವದನ್ನೆಲ್ಲಾ ಮನುಷ್ಯರಿ
೨೪ ಗೆಂದಲ್ಲ, ಕರ್ತನಿಗೆಂದು, ಹೃದಯದಿಂದ ಮಾಡಿರಿ. ಕರ್ತನಿಂ
ದ ಬಾಧ್ಯತೆಯ ಪ್ರತಿಫಲವನ್ನು ಹೊಂದುವಿಕೆಂದು ತಿಳಿದು ಕೊ
ಳ್ಳುತ್ತೀರಲ್ಲ? ಯಾಕಂದರೆ ಕರ್ತನಾದ ಕ್ರಿಸ್ತನಿಗೆ ದಾಸರಾಗಿದ್ದೀ
೨೫ ರಿ. ಆದರೆ ಅನ್ಯಾಯ ಮಾಡುವವನು ಮಾಡಿದ ಅನ್ಯಾಯದ
ಫಲವನ್ನು ಹೊಂದುವನು; ಮುಖದಾಕ್ಷಿಣ್ಯವು ಇಲ್ಲ.

## ೪. ಸಂಧಿ.

೧ ಯಜಮಾನರೇ, ನಿಮಗೂ ಪರಲೋಕದಲ್ಲಿ ಯಜಮಾನನು
ಇದ್ದಾನೆಂದು ತಿಳಿದು, ನ್ಯಾಯವಾದದ್ದನ್ನೂ ಸರಿಯಾದದ್ದ
ನ್ನೂ ದಾಸರಿಗೆ ಕೊಡಿರಿ.

೨ ಪ್ರಾರ್ಥನೆಯಲ್ಲಿ ನೆಲೆಗೊಳ್ಳಿರಿ; ಅದರಲ್ಲಿ ಸ್ತೋತ್ರ ಮಾಡಿ,
೩ ಎಚ್ಚರವಾಗಿರ್ರಿ. ನಾನು ಬಂಧಿಸಲ್ಪಟ್ಟ ಕಾರಣವಾದ ಕ್ರಿಸ್ತನ ಮ
ರ್ಮವನ್ನು ಮಾತಾಡುವದಕ್ಕೆ ದೇವರು ನಮಗೆ ವಾಕ್ಯದ ಬಾ
೪ ಗಲನ್ನು ತೆರೆಯುವ ಹಾಗೆಯೂ, ನಾನು ಮಾತಾಡ ತಕ್ಕ ಪ್ರಕಾರ
ಅದನ್ನು ಪ್ರಸಿದ್ಧಿ ಮಾಡುವ ಹಾಗೆಯೂ, ನಮಗೋಸ್ಕರ ಕೂಡ
೫ ಪ್ರಾರ್ಥಿಸಿರಿ. ಕಾಲವನ್ನು ಕೊಂಡು ಕೊಂಡು, ಹೊರಗಿನವರ ಕ
೬ ಡೆಗೆ ಜ್ಞಾನವಾಗಿ ನಡೆದು ಕೊಳ್ಳಿರಿ. ಯಾರೊಬ್ಬನಿಗೆ ಹ್ಯಾಗೆ
ಉತ್ತರ ಕೊಡ ಬೇಕೆಂದು ತಿಳಿಯುವ ಹಾಗೆ, ನಿಮ್ಮ ಮಾತು
ಯಾವಾಗಲೂ ಇಂಪಾಗಿಯೂ ಉಪ್ಪಿನಿಂದ ರುಚಿಯಾದದ್ದಾ
ಗಿಯೂ ಇರಲಿ.

೭ ನನ್ನ ಸ್ಥಿತಿಯನ್ನೆಲ್ಲಾ ಪ್ರಿಯ ಸಹೋದರನಾಗಿಯೂ, ನಂಬಿ
ಕೆಯುಳ್ಳ ಸೇವಕನಾಗಿಯೂ, ಕರ್ತನಲ್ಲಿ ಜತೆದಾಸನಾಗಿಯೂ,
೮ ಇರುವತುಕಿಕನು ನಿಮಗೆ ತಿಳಿಸುವನು. ಇವನನ್ನು, ನಿಮ್ಮ ವಿಷ
ಯಗಳನ್ನು ತಿಳಿದು, ನಿಮ್ಮ ಹೃದಯಗಳನ್ನು ಆದರಿಸುವದ
೯ ಕ್ಕಾಗಿಯೇ, ನಿಮ್ಮವನಾಗಿರುವ ನಂಬಿಕೆಯುಳ್ಳ ಪ್ರಿಯ ಸಹೋ
ದರನಾದ ಒನೆಸಿಮನ ಸಂಗಡ ನಿಮ್ಮ ಬಳಿಗೆ ಕಳುಹಿಸಿದ್ದೇನೆ.
ಇವರು ಇಲ್ಲಿ ಆಗುವವುಗಳನ್ನೆಲ್ಲಾ ನಿಮಗೆ ತಿಳಿಸುವರು.

೧೦ ನನ್ನ ಜತೆಸೆರೆಯವನಾದ ಅರಿಸ್ತಾರ್ಕನೂ, ಬಾರ್ನಬನ
ಅಳಿಯನಾದ ಮಾರ್ಕನೂ ನಿಮ್ಮನ್ನು ವಂದಿಸುತ್ತಾರೆ. ಇವನ
ನ್ನು ಕುರಿತು ಅಪ್ಪಣೆ ಹೊಂದಿದಿರಿ; ನಿಮ್ಮ ಹತ್ತರ ಬಂದರೆ, ಅ
೧೧ ವನನ್ನು ಅಂಗೀಕರಿಸಿರಿ. ಯುಸ್ತನೆಂಬ ಯೇಸುವು ಸಹ ವಂದಿಸು
ತ್ತಾನೆ. ಇವರು ಪರಿಛೇದನೆಯವರೇ; ಇವರು ಮಾತ್ರ ದೇವರ ರಾ
ಜ್ಯಕ್ಕಾಗಿ ನನ್ನ ಜತೆಕೆಲಸದವರಾಗಿದ್ದು, ನನಗೆ ಆದರಣೆಯಾಗಿ
೧೨ ದ್ದರು. ನಿಮ್ಮವನಾಗಿರುವ ಕ್ರಿಸ್ತನ ದಾಸನಾದ ಎಪಫ್ರನು ನಿಮ್ಮ
ನ್ನು ವಂದಿಸುತ್ತಾನೆ. ನೀವು ದೇವರ ಸಮಸ್ತ ಚಿತ್ತದಲ್ಲಿ ಸಂಪೂ
ರ್ಣರಾಗಿಯೂ ತುಂಬಿದವರಾಗಿಯೂ ನಿಲ್ಲ ಬೇಕೆಂದು, ಯಾ
ವಾಗಲೂ ನಿಮಗೋಸ್ಕರ ಪ್ರಾರ್ಥನೆಗಳಲ್ಲಿ ಹೋರಾಡುತ್ತಾನೆ.
೧೩ ಅವನು ನಿಮಗೋಸ್ಕರವೂ, ಲಾವೊದಿಕ್ಯೆಯದವರಿಗೋಸ್ಕರ
ವೂ, ಹಿಯರಾಪೊಲಿಯವರಿಗೋಸ್ಕರವೂ, ಬಹು ಆಸಕ್ತಿ ಪಡು
೧೪ ತ್ತಾನೆಂದು, ಅವನಿಗೆ ಸಾಕ್ಷಿ ಕೊಡುತ್ತೇನೆ. ವೈದ್ಯನಾದ ಪ್ರಿಯ
ಲೂಕನೂ, ದೇಮನೂ ನಿಮ್ಮನ್ನು ವಂದಿಸುತ್ತಾರೆ.

೧೫ ಲಾವೊದಿಕ್ಯೆಯದಲ್ಲಿರುವ ಸಹೋದರರನ್ನೂ, ನುಂಫನನ್ನೂ,
೧೬ ಅವನ ಮನೆಯಲ್ಲಿರುವ ಸಭೆಯನ್ನೂ ವಂದಿಸಿರಿ. ಮತ್ತು ಈ ಪ
ತ್ರಿಕೆಯು ನಿಮ್ಮಲ್ಲಿ ಓದಿ ಅದ ಮೇಲೆ, ಲಾವೊದಿಕ್ಯೆಯದವರ ಸ
ಭೆಯಲ್ಲಿ ಓದಲ್ಪಡುವ ಹಾಗೆಯೂ, ಲಾವೊದಿಕ್ಯೆಯದ್ದನ್ನು ನೀ
೧೭ ವು ಸಹ ಓದುವ ಹಾಗೆಯೂ, ಮಾಡಿರಿ. ಮತ್ತು ಅರ್ಕಿಪ್ಪನಿಗೆ,
ನೀನು ಕರ್ತನಲ್ಲಿ ಹೊಂದಿದ ಸೇವೆಯನ್ನು ಪೂರೈಸುವ ಹಾಗೆ
ನೋಡು, ಎಂದು ಹೇಳಿರಿ.

೧೮ ಪೌಲನೆಂಬ ನನ್ನ ಸ್ವಂತ ಕೈಯಿಂದ ವಂದನೆಯು. ನನ್ನ
ಬಂಧಗಳನ್ನು ಜ್ಞಾಪಕ ಮಾಡಿ ಕೊಳ್ಳಿರಿ. ಕೃಪೆಯು ನಿಮ್ಮ ಸಂ
ಗಡ ಇರಲಿ. ಆಮೆನ್.

# THE FIRST EPISTLE OF
# PAUL THE APOSTLE TO THE THESSALONIANS.

## ಅಪೊಸ್ತಲನಾದ ಪೌಲನು ಥೆಸ್ಸಲೊನೀಕ್ಯರಿಗೆ ಬರೆದ ಮೊದಲನೇ ಪತ್ರಿಕೆ.

### ೧. ಸಂಧಿ.

೧ ಪೌಲನೂ, ಸಿಲ್ವಾನನೂ, ತಿಮೊಥೆಯನೂ, ತಂದೆಯಾದ
ದೇವರಲ್ಲಿಯೂ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ಇರುವ
ಥೆಸ್ಸಲೊನೀಕ್ಯರ ಸಭೆಗೆ— ನಮ್ಮ ತಂದೆಯಾದ ದೇವರಿಂದಲೂ,
ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸ
ಮಾಧಾನವೂ ಆಗಲಿ.

೨ ನಮ್ಮ ಪ್ರಾರ್ಥನೆಗಳಲ್ಲಿ ನಿಮ್ಮನ್ನು ಜ್ಞಾಪಕ ಮಾಡಿ ಕೊಂ
ಡು, ಯಾವಾಗಲೂ ನಿಮ್ಮೆಲ್ಲರ ವಿಷಯ ದೇವರಿಗೆ ಸ್ತೋತ್ರ
3 ಮಾಡುತ್ತೇವೆ. ಯಾಕಂದರೆ, ಎಡೆಬಿಡದೆ, ನಿಮ್ಮ ವಿಶ್ವಾಸದ ಕೆಲ
ಸವನ್ನೂ, ಪ್ರೀತಿಯ ಕಷ್ಟವನ್ನೂ, ನಮ್ಮ ಕರ್ತನಾದ ಯೇ
ಸು ಕ್ರಿಸ್ತನಲ್ಲಿರುವ ನಿಮ್ಮ ನಿರೀಕ್ಷೆಯ ತಾಳ್ಮೆಯನ್ನೂ ನಮ್ಮ
ತಂದೆಯಾದ ದೇವರ ಮುಂದೆ ಜ್ಞಾಪಕ ಮಾಡಿ ಕೊಳ್ಳುತ್ತೇವೆ.
4 ಪ್ರಿಯ ಸಹೋದರರೇ, ದೇವರಿಂದಿರುವ ನಿಮ್ಮ ಆಯುವಿಕೆಯ
5 ನ್ನು ಬಲ್ಲೆವು. ಯಾಕಂದರೆ ನಾವು ನಿಮ್ಮಲ್ಲಿ ನಿಮಗೋಸ್ಕರ
ಎಂಥವರಾಗಿದ್ದೆವೆಂದು ನೀವು ಶಿಳ್ಳಿದ ಪ್ರಕಾರ, ನಮ್ಮ ಸುವಾರ್ತೆ
ಯು ಮಾತಿನಿಂದ ಮಾತ್ರವಲ್ಲ, ಬಲದಿಂದಲೂ ಪರಿಶುದ್ಧಾತ್ಮದಿಂದ
6 ಲೂ, ಬಹು ಭರವಸದಿಂದಲೂ, ನಿಮಗೆ ಬಂತು. ಇದಲ್ಲದೆ, ನೀ
ವು ನಮ್ಮನ್ನೂ ಕರ್ತನನ್ನೂ ಅನುಸರಿಸಿದವರಾಗಿ, ಬಹು ಉ
ಪದ್ರವದಲ್ಲಿ ವಾಕ್ಯವನ್ನು ಪರಿಶುದ್ಧಾತ್ಮದ ಸಂತೋಷದ ಸಂಗತ
7 ಅಂಗೀಕರಿಸಿದ್ದರಿಂದ, ಮಕೆದೋನ್ಯದಲ್ಲಿಯೂ, ಅಕಾಯದಲ್ಲಿ
8 ಯೂ, ವಿಶ್ವಾಸಿಸುವವರೆಲ್ಲರಿಗೆ ಮಾದರಿಯಾದಿರಿ. ಹ್ಯಾಗಂದರೆ
ನಿಮ್ಮಿಂದ ಕರ್ತನ ವಾಕ್ಯದ ಶಬ್ದವು ಮಕೆದೋನ್ಯಕ್ಕೂ ಅಕಾ
ಯಕ್ಕೂ ಬಂದದ್ದಲ್ಲದೆ, ಸಕಲ ಸ್ಥಳಗಳಲ್ಲಿ ದೇವರ ಕಡೆಗೆ ಇ
ರುವ ನಿಮ್ಮ ವಿಶ್ವಾಸವು ಪ್ರಸಿದ್ಧಿಯಾಯಿತು; ಆದದರಿಂದ ನಾ
9 ವು ಏನಾದರೂ ಹೇಳುವದಕ್ಕೆ ಅವಶ್ಯವಿಲ್ಲ. ಹ್ಯಾಗಂದರೆ ಅವ
ರೇ ನಮ್ಮನ್ನು ಕುರಿತು, ನಿಮ್ಮ ಬಳ್ಳಿಗೆ ನಮಗೆ ಎಂಥ ಪ್ರವೇಶವು
ಇತ್ತೆಂದು ನೀವು ಜೀವವುಳ್ಳ ನಿಜವಾದ ದೇವರನ್ನು ಸೇವಿಸ
10 ಲೂ, ಅವನು ಸತ್ತವರೊಳಗಿಂದ ಎಬ್ಬಿಸಿದಂಥ, ಬರುವ ಕೋಪ
ದಿಂದ ನಮ್ಮನ್ನು ರಕ್ಷಿಸುವಂಥ ಯೇಸು ಎಂಬ ಅವನ ಮಗನು
ಪರಲೋಕದಿಂದ ಬರುವದನ್ನು ಎದುರು, ನೋಡಲೂ, ವಿಗ್ರಹಗ
ಳನ್ನು ಬಿಟ್ಟು, ದೇವರ ಬಳ್ಳಿಗೆ ಹ್ಯಾಗೆ ತಿರುಗಿ ಕೊಂಡಿರೆಂದೂ, ತಿ
ಳಿಸುತ್ತಾರೆ.

### ೨. ಸಂಧಿ.

೧ ಹ್ಯಾಗಂದರೆ, ಸಹೋದರರೇ, ನಿಮ್ಮಲ್ಲಿ ಆದ ನಮ್ಮ ಪ್ರವೇ
2 ಶವು ವ್ಯರ್ಥವಾಗಿರಲಿಲ್ಲವೆಂದು, ನೀವೇ ಬಲ್ಲಿರಿ. ಆದರೆ, ನಿಮ
ಗೆ ಶಿಳ್ಳಿದ ಪ್ರಕಾರ, ಫಿಲಿಪ್ಪಿಯಲ್ಲಿ ಮೊದಲು ಶ್ರಮೆಯನ್ನೂ
ನಿಂದೆಯನ್ನೂ ಪಟ್ಟು, ನಿಮಗೆ ದೇವರ ಸುವಾರ್ತೆಯನ್ನು ಬ
ಹಳ್ಳ ಹೋರಾಟದಿಂದ ಮಾತಾಡ ನಮ್ಮ ದೇವರಲ್ಲಿ ಧೈರ್ಯ
3 ಪಟ್ಟೆವು. ಯಾಕಂದರೆ, ನಾವು ಹೇಳುವ ಬುದ್ಧಿಯು ಮೋಸ
4 ದಿಂದಲೂ ಅಶುದ್ಧತ್ವದಿಂದಲೂ ಕಪಟದಿಂದಲೂ ಅಲ್ಲ; ಆದರೆ
ಸುವಾರ್ತೆಯು ನಮಗೆ ಒಪ್ಪಿಸಲ್ಪಟ್ಟಿರುವದಕ್ಕೆ ನಾವು ದೇವರಿಂ
ದ ಪರೀಕ್ಷಿತರಾದ ಹಾಗೆಯೇ, ಮನುಷ್ಯರನ್ನಲ್ಲ, ನಮ್ಮ ಹೃದ
ಯಗಳನ್ನು ಪರೀಕ್ಷಿಸುವ ದೇವರನ್ನೇ ಮೆಚ್ಚಿಸುವವರಾಗಿ ಮಾ
5 ತಾಡುತ್ತೇವೆ. ಹ್ಯಾಗಂದರೆ, ನಿಮಗೆ ಶಿಳ್ಳಿದ ಪ್ರಕಾರ, ನಾವು ಎಂ
ದೂ ಮುಖಸ್ತೋತ್ರದ ವಾಕ್ಯವನ್ನಾಗಲಿ, ದ್ರವ್ಯಾಶೆಯ ನೆವವ
6 ನ್ನಾಗಲಿ, ಬಳಸಲಿಲ್ಲವೆಂಬುವದಕ್ಕೆ ದೇವರೇ ಸಾಕ್ಷಿ. ಮತ್ತು ನಾ
ವು ಕ್ರಿಸ್ತನ ಅಪೊಸ್ತಲರಾಗಿ ಭಾರವಾಗಿರ ಬಹುದಾಗಿದ್ದರೂ, ನಿ
ಮ್ಮಿಂದಾಗಲಿ, ಬೇರೊಬ್ಬರಿಂದಾಗಲಿ, ಮನುಷ್ಯರಿಂದ ಮಹಿಮೆ
7 ಯನ್ನು ಹುಡುಕಲಿಲ್ಲ. ದಾದಿಯು ತನ್ನ ಮಕ್ಕಳನ್ನು ಸಾಕುವ
8 ಪ್ರಕಾರ, ನಿಮ್ಮ ಮಧ್ಯದಲ್ಲಿ ಸಾಧುವಾಗಿದ್ದೆವು. ಈ ಪ್ರಕಾರ ನಿ
ಮ್ಮಲ್ಲಿ ಮಮತೆ ಇಟ್ಟು, ನೀವು ನಮಗೆ ಪ್ರಿಯರಾಗಿರುವದರಿಂದ,
ದೇವರ ಸುವಾರ್ತೆಯನ್ನು ಮಾತ್ರವಲ್ಲ, ನಮ್ಮ ಸ್ವಪ್ರಾಣಗಳ
9 ನ್ನು ಸಹ ನಿಮಗೆ ಕೊಟ್ಟು ಬಿಡ ಮನಸ್ಸಾಗಿದ್ದೆವು. ಯಾಕಂದ
ರೆ, ಸಹೋದರರೇ, ನಮ್ಮ ಕಷ್ಟವನ್ನೂ ಪ್ರಯಾಸವನ್ನೂ ಜ್ಞಾ
ಪಕ ಮಾಡಿ ಕೊಳ್ಳುತ್ತೀರಿ; ಹ್ಯಾಗಂದರೆ, ನಿಮ್ಮಲ್ಲಿ ಒಬ್ಬನಿಗಾ
ದರೂ ಭಾರವಾಗದ ಹಾಗೆ, ರಾತ್ರಿ ಹಗಲು ಕೆಲಸ ಮಾಡಿ, ದೇವರ
10 ಸುವಾರ್ತೆಯನ್ನು ನಿಮಗೆ ಪ್ರಸಂಗಿಸಿದೆವು. ವಿಶ್ವಾಸಿಸುವವರಾ
ದ ನಿಮಗೆ ಎಷ್ಟು ಪರಿಶುದ್ಧವಾಗಿಯೂ ನೀತಿಯಾಗಿಯೂ ನಿ
ರ್ಮಲವಾಗಿಯೂ ಇದ್ದೆವೆಂಬುವದಕ್ಕೆ ನೀವೂ ದೇವರೂ ಸಾ
11 ಕ್ಷಿಗಳಾಗಿದ್ದೀರಿ. ಹ್ಯಾಗಂದರೆ, ತಂದೆಯು ಸ್ವಂತ ಮಕ್ಕಳಿಗೆ
ಹ್ಯಾಗೋ, ಹಾಗೆಯೇ ನಿಮ್ಮಲ್ಲಿ ಒಬ್ಬೊಬ್ಬನಿಗೆ ನಾವು ಬುದ್ಧಿ
12 ಯನ್ನು ಹೇಳಿ, ಆದರಣೆಯನ್ನು ಕೊಟ್ಟು, ತನ್ನ ರಾಜ್ಯಕ್ಕೂ
ಮಹಿಮೆಗೂ ನಿಮ್ಮನ್ನು ಕರೆಯುವ ದೇವರಿಗೆ ತಕ್ಕ ಹಾಗೆ ನಡಿ
ಯ ಬೇಕಂತ, ಸಾಕ್ಷಿ ಕೊಟ್ಟೆವೆಂದು ಬಲ್ಲಿರಿ.

13 ಆದದರಿಂದ ನೀವು ದೇವರ ವಾಕ್ಯವನ್ನು ನಮ್ಮಿಂದ ಕೇಳಿ
ಹೊಂದಿದಾಗ, ಅದನ್ನು ಮನುಷ್ಯರ ವಾಕ್ಯವೆಂದಲ್ಲ, ಅದು ನಿ
ಜವಾಗಿರುವ ಪ್ರಕಾರ, ವಿಶ್ವಾಸಿಸುವವರಾದ ನಿಮ್ಮಲ್ಲಿ ಯೆಹ್ವೈಸು
ವ ದೇವರ ವಾಕ್ಯವೆಂದು ಅಂಗೀಕರಿಸಿದ್ದಕ್ಕೋಸ್ಕರ ನಾವು ಎ
14 ಡೆಬಿಡದೆ ಸ್ತೋತ್ರ ಮಾಡುತ್ತೇವೆ. ಯಾಕಂದರೆ, ಸಹೋದರರೇ,
ನೀವು ಕ್ರಿಸ್ತ ಯೇಸುವಿನಲ್ಲಿ ಯೆಹೂದದಲ್ಲಿರುವ ದೇವರ ಸಭೆ
ಗಳನ್ನು ಅನುಸರಿಸುವವರಾದಿರಿ. ಅವರು ಸಹ ಯೆಹೂದ್ಯರಿಂದ
ಅನುಭವಿಸಿದವುಗಳನ್ನೇ ನೀವು ಸ್ವಕುಲದವರಿಂದ ಅನುಭವಿಸಿದಿರಿ.
15 ಅವರು ಕರ್ತನಾದ ಯೇಸುವನ್ನೂ ಸ್ವಂತ ಪ್ರವಾದಿಗಳನ್ನೂ
ಕೊಂದು, ನಮ್ಮನ್ನು ಹಿಂಸಿಸಿ, ದೇವರನ್ನು ಮೆಚ್ಚಿಸದೆ, ಮನು
ಷ್ಯರೆಲ್ಲರಿಗೆ ವಿರೋಧವಾಗಿದ್ದು, ತಮ್ಮ ಪಾಪಗಳನ್ನು ಎಂದಿಗೂ
16 ಪೂರೈಸುವ ಹಾಗೆ, ನಾವು ಜನಾಂಗಗಳ ಸಂಗತಿ ಅವರು ರಕ್ಷಿಸ
ಲ್ಪಡುವದಕ್ಕಾಗಿ, ಮಾತಾಡದ ಹಾಗೆ, ಅಡ್ಡಿ ಮಾಡುತ್ತಾರೆ. ಆ
ದರೆ ಕೋಪವು ಕಡೇ ವರಿಗೂ ಅವರ ಮೇಲೆ ಬಂತು.

17 ಆದರೆ, ಸಹೋದರರೇ, ನಾವು ಹೃದಯದಿಂದಲ್ಲ, ಮುಖ
ದಿಂದಲೇ ಘಳಿಗೆಗೆ ಹೊತ್ತು ನಿಮ್ಮನ್ನು ಅಗಲಿದವರಾಗಿ, ಬಹಳ ಆ
ಶೆಯಿಂದ ನಿಮ್ಮ ಮುಖವನ್ನು ನೋಡ ಹೆಚ್ಚು ಜಾಗ್ರತೆಯಾಗಿ



18 ದ್ದೆವು. ಆದದರಿಂದ ನಾವು, ವಿಶೇಷವಾಗಿ ಪೌಲನೆಂಬ ನಾನು, ನಿ
ಮ್ಮ ಹತ್ತರ ಬರ ಒಂದೆರಡು ಸಾರಿ ಮನಸ್ಸಾಗಿದ್ದೆವು. ಆದರೆ
19 ಸೈತಾನನು ನಮ್ಮನ್ನು ಅಟಂಕಿಸಿದನು. ಯಾಕಂದರೆ ನಮ್ಮ ನಿ
ರೀಕ್ಷೆಯೂ, ಸಂತೋಷವೂ, ಹೆಚ್ಚಳದ ಕಿರೀಟವೂ ಯಾವದು?
20 ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಂದೆ ಅವನ ಬರುವಿಕೆ
ಯಲ್ಲಿ ನೀವೇ ಅಲ್ಲವೋ? ಯಾಕಂದರೆ ನೀವು ನಮ್ಮ ಮಹಿಮೆ
ಯೂ ಸಂತೋಷವೂ ಆಗಿದ್ದೀರಿ.

### ೩. ಸಂಧಿ.

೧ ಆದದರಿಂದ, ಇನ್ನೂ ತಾಳಲಾರದೆ, ಅಥೇನೆಯಲ್ಲಿ ಒಬ್ಬರಾ
ಗಿ ಬಿಡಲ್ಪಡುವದು ಒಳ್ಳೇದೆಂದೆಣಿಸಿ, ನಮ್ಮ ಸಹೋದರನೂ,
2 ದೇವರ ಸೇವಕನೂ, ಕ್ರಿಸ್ತನ ಸುವಾರ್ತೆಯಲ್ಲಿ ನಮ್ಮ ಜತೆ ಕೆಲ
ಸದವನೂ, ಆಗಿರುವ ತಿಮೊಥೆಯನನ್ನು ನಿಮ್ಮ ವಿಶ್ವಾಸದ ವಿ
ಷಯವಾಗಿ ನಿಮ್ಮನ್ನು ಸ್ಥಿರ ಪಡಿಸಿ, ನಿಮ್ಮನ್ನು ಆದರಿಸುವದಕ್ಕೆ
3 ಕಳುಹಿಸಿದೆವು—ಯಾವನಾದರೂ ಈ ಉಪದ್ರವಗಳಿಂದ ಚಂಚಲ
ವಾಗದ ಹಾಗೆಯೇ; ಯಾಕಂದರೆ ಇದಕ್ಕೆ ನೇಮಿಸಲ್ಪಟ್ಟಿದ್ದೇ
4 ವೆಂದು ನೀವೇ ಬಲ್ಲಿರಿ. ಯಾಕಂದರೆ ನಿಮ್ಮ ಹತ್ತರವಿದ್ದಾಗ, ನಾ
ವು ಉಪದ್ರ ಪಡುವದಕ್ಕಿರುತ್ತೇವೆಂದು, ನಿಮಗೆ ಮುಂದಾಗಿ ಹೇ
5 ಳಿದೆವಲ್ಲ? ಹಾಗೆಯೇ ಆಯಿತೆಂದು ಬಲ್ಲಿರಿ. ಆದದರಿಂದ, ನಾ
ನು ಸಹ ಇನ್ನೂ ತಾಳಲಾರದೆ, ಒಂದು ವೇಳೆ ಶೋಧಕನು ನಿ
ಮ್ಮನ್ನು ಶೋಧಿಸುವದರಿಂದ, ನಮ್ಮ ಕಷ್ಟವು ವ್ಯರ್ಥವಾಗದ
ಹಾಗೆ, ನಿಮ್ಮ ವಿಶ್ವಾಸವನ್ನು ಶಿಳ್ಳಿದು ಕೊಳ್ಳುವದಕ್ಕೆ ಕಳುಹಿಸಿ
ದ್ದೇನೆ.

6 ಆದರೆ ಈಗ ತಿಮೊಥೆಯನು ನಿಮ್ಮ ಕಡೆಯಿಂದ ನಮ್ಮ ಹ
ತ್ತರ ಬಂದು, ನಿಮ್ಮ ವಿಶ್ವಾಸ ಪ್ರೀತಿಗಳನ್ನೂ, ನಾವು ನಿಮ್ಮನ್ನು
ನೋಡ ಇಚ್ಛೈಸುವ ಪ್ರಕಾರ, ನೀವು ನಮ್ಮನ್ನು ನೋಡ ಇಚ್ಛೈ
7 ಸಿ, ಯಾವಾಗಲೂ ನಮಗೋಸ್ಕರ ಒಳ್ಳೇ ಜ್ಞಾಪಕ ಮಾಡಿ ಕೊ
ಳ್ಳುತ್ತೀರೆಂಬ ಒಳ್ಳೇ ಸಮಾಚಾರ ನಮಗೆ ಹೇಳಿದ ಮೇಲೆ, ಇದರ
ನಿಮಿತ್ತ, ಸಹೋದರರೇ, ನಮ್ಮ ಸಮಸ್ತ ಉಪದ್ರ ಅವಸರಗಳಲ್ಲಿ
ನಿಮ್ಮನ್ನು ಕುರಿತು ನಿಮ್ಮ ವಿಶ್ವಾಸದಿಂದ ಆದರಿಸಲ್ಪಟ್ಟಿವು.
8 ಹ್ಯಾಗಂದರೆ, ನೀವು ಕರ್ತನಲ್ಲಿ ನಿಂತರೆ, ಈಗ ಬದುಕುತ್ತೇವೆ.
9 ಯಾಕಂದರೆ ನಾವು ನಮ್ಮ ದೇವರ ಮುಂದೆ ನಿಮ್ಮ ನಿಮಿತ್ತ ಪ
ಡುವ ಎಲ್ಲಾ ಸಂತೋಷಕ್ಕಾಗಿ, ನಿಮಗೋಸ್ಕರ ದೇವರಿಗೆ ಯಾ
10 ವ ಸ್ತೋತ್ರವನ್ನು ಪ್ರತಿಯಾಗಿ ಮಾಡ ಬಹುದು. ನಿಮ್ಮ ಮು
ಖವನ್ನು ನೋಡುವದಕ್ಕೂ, ನಿಮ್ಮ ವಿಶ್ವಾಸದ ಕೊರತೆಗಳನ್ನು
ಪೂರ್ಣ ಮಾಡುವದಕ್ಕೂ, ನಾವು ರಾತ್ರಿ ಹಗಲು ಅತ್ಯಧಿಕವಾ
ಗಿ ಬೇಡಿ ಕೊಳ್ಳುತ್ತೇವೆ.

11 ನಮ್ಮ ತಂದೆಯಾದ ದೇವರು ತಾನೇ, ನಮ್ಮ ಕರ್ತನಾದ
ಯೇಸು ಕ್ರಿಸ್ತನು ಸಹ, ನಿಮ್ಮ ಕಡೆಗೆ ನಮ್ಮ ಮಾರ್ಗವನ್ನು
12 ಸರಾಗ ಮಾಡಲಿ. ಮತ್ತು ನಮ್ಮ ಕರ್ತನಾದ ಯೇಸು ಕ್ರಿಸ್ತನು
ತನ್ನ ಸಮಸ್ತ ಪರಿಶುದ್ಧರ ಸಂಗತಿ ಬರುವದರಲ್ಲಿ, ನಮ್ಮ ತಂದೆ
ಯಾದ ದೇವರ ಮುಂದೆ ನಿಮ್ಮ ಹೃದಯಗಳನ್ನು ಪರಿಶುದ್ಧತ್ವ
13 ದಲ್ಲಿ ತಪ್ಪಿಲ್ಲದೆ ಸ್ಥಿರ ಪಡಿಸುವ ಹಾಗೆ, ನಾವು ನಿಮಗೆ ಮಾಡುವ
ಪ್ರಕಾರ, ನೀವು ನಿಮ್ಮಲ್ಲಿ ಒಬ್ಬೊಬ್ಬನಿಗೂ ಎಲ್ಲರಿಗೂ ಮಾ
ಡುವ ಪ್ರೀತಿಯಲ್ಲಿ ಕರ್ತನು ನಿಮ್ಮನ್ನು ಪೂರೈಸಿ, ಹೆಚ್ಚ ಮಾ
ಡಲಿ.

### ೪. ಸಂಧಿ.

1 ಕಡೆಯಲ್ಲಿ, ಸಹೋದರರೇ, ನೀವು ಹ್ಯಾಗೆ ನಡೆದು ದೇವರ
ನ್ನು ಮೆಚ್ಚಿಸ ಬೇಕೆಂದು, ನಮ್ಮಿಂದ ಗ್ರಹಿಸಿದ ಪ್ರಕಾರ, ಇನ್ನೂ
ಹೆಚ್ಚೆಕೆಂದು ನಿಮ್ಮನ್ನು ಬೇಡಿಕೊಂಡು, ಕರ್ತನಾದ ಯೇಸುವಿ
2 ನಲ್ಲಿ ಬುದ್ಧಿ ಹೇಳುತ್ತೇವೆ. ಯಾಕಂದರೆ ಕರ್ತನಾದ ಯೇಸುವಿ
ನಿಂದ ನಿಮಗೆ ಯಾವ ಅಪ್ಪಣೆಗಳನ್ನು ಕೊಟ್ಟೆವೆಂದು, ಬಲ್ಲಿರಿ.
3 ಯಾಕಂದರೆ ಇದೇ ದೇವರ ಚಿತ್ತವು, ನೀವು ಪರಿಶುದ್ಧರಾಗುವ
4 ದೇ. ಹ್ಯಾಗಂದರೆ ಜಾರತ್ವಕ್ಕೆ ದೂರವಾಗಿರುವದು—ಒಬ್ಬೊ
ಬ್ಬನು ದೇವರನ್ನರಿಯದ ಜನಾಂಗಗಳ ಪ್ರಕಾರ ದುರಾಶೆ ಪಡದೆ,
ಪರಿಶುದ್ಧತ್ವದಲ್ಲಿಯೂ ಘನತೆಯಲ್ಲಿಯೂ ತನ್ನ ಘಟವನ್ನು
5 ಕಾಪಾಡ ಶಿಳ್ಳಿದು ಕೊಳ್ಳುವದು—ತನ್ನ ಸಹೋದರನನ್ನು ವ್ಯವ
6 ಹಾರದಲ್ಲಿ ಅತಿಕ್ರಮಿಸದೆ, ವಂಚಿಸದೆ; ಇರುವದು—ಯಾಕಂದರೆ,
ನಾವು ನಿಮಗೆ ಮುಂಚೆ ಹೇಳಿದ ಸಾಕ್ಷಿ ಕೊಟ್ಟ ಪ್ರಕಾರ, ಇವೆಲ್ಲವು
ಗಳ ನಿಮಿತ್ತ ಕರ್ತನು ಮುಯ್ಯಿಗೆ ಮುಯ್ಯಿ ತೀರಿಸುವವನಾಗಿ
7 ದ್ದಾನೆ. ಹ್ಯಾಗಂದರೆ ದೇವರು ನಮ್ಮನ್ನು ಅಶುದ್ಧತ್ವಕ್ಕೆ ಅಲ್ಲ,
8 ಪರಿಶುದ್ಧತ್ವಕ್ಕೆ ಕರೆದಿದ್ದಾನೆ. ಹೀಗಿರುವದರಿಂದ, ಅಲಕ್ಷ್ಯ ಮಾ
ಡುವವನು ಮನುಷ್ಯನನ್ನಲ್ಲ, ತನ್ನ ಪರಿಶುದ್ಧಾತ್ಮವನ್ನು ನಮಗೆ
ಕೊಟ್ಟ ದೇವರನ್ನೇ ಅಲಕ್ಷ್ಯ ಮಾಡುತ್ತಾನೆ.

9 ಆದರೆ ಸಹೋದರರ ಸ್ನೇಹದ ವಿಷಯವಾಗಿ ನಿಮಗೆ ಬರೆ
ಯುವದು ಅವಶ್ಯವಿಲ್ಲ; ಯಾಕಂದರೆ ಒಬ್ಬರನ್ನೊಬ್ಬರು ಪ್ರೀತಿ
10 ಮಾಡ ನೀವೇ ದೈವ ಬೋಧನೆ ಹೊಂದಿದವರಾಗಿದ್ದೀರಿ. ಎ
ಲ್ಲಾ ಮಕೆದೋನ್ಯದಲ್ಲಿರುವ ಎಲ್ಲಾ ಸಹೋದರರಿಗೆ ಅದನ್ನು
11 ಮಾಡುತ್ತೀರಲ್ಲ! ಆದಾಗ್ಯೂ, ಸಹೋದರರೇ, ಇನ್ನೂ ಹೆಚ್ಚ
ಬೇಕೆಂದೂ, ನೀವು ಹೊರಗಿನವರ ವಿಷಯ ಜನ್ಮಾಗಿ ನಡೆದು
ಕೊಳ್ಳುವ ಹಾಗೆಯೂ, ನಿಮಗೆ ಯಾವದರಲ್ಲಿ ಕೊರತೆ ಇಲ್ಲದ
12 ಹಾಗೆಯೂ, ನಾವು ನಿಮಗೆ ಆಜ್ಞಾಪಿಸಿದ ಪ್ರಕಾರ ಶಾಂತವಾಗಿರ
ಪ್ರಯಾಸ ಪಟ್ಟು, ಸ್ವಂತ ಕೆಲಸಗಳನ್ನು ನೋಡಿ ಕೊಂಡು, ನಿ
ಮ್ಮ ಸ್ವಂತ ಕೈಗಳಿಂದ ಕಷ್ಟ ಮಾಡ ಬೇಕೆಂದೂ, ನಿಮಗೆ ಬು
ದ್ಧಿ ಹೇಳುತ್ತೇವೆ.

13 ಇದಲ್ಲದೆ, ಸಹೋದರರೇ, ನಿರೀಕ್ಷೆಯಿಲ್ಲದ ಮಿಕ್ಕಾದವರ
ಪ್ರಕಾರ ದುಃಖ ಪಡದ ಹಾಗೆ, ನಿದ್ದೆ ಹೋದವರ ವಿಷಯ ನೀವು
14 ಅರಿಯದಿರ ನನಗೆ ಮನಸ್ಸಿಲ್ಲ. ಯಾಕಂದರೆ, ಯೇಸು ಸತ್ತು
ತಿರಿಗಿ ಎದ್ದನೆಂದು ನಾವು ನಂಬಿದರೆ, ಅದೇ ಪ್ರಕಾರ ದೇವರು
ಯೇಸುವಿನ ಮುಖಾಂತರ ನಿದ್ದೆ ಹೋದವರನ್ನು ಅವನ ಸಂಗತ
15 ಕರ ಕೊಂಡು ಬರುವನು. ಯಾಕಂದರೆ ನಾವು ಕರ್ತನ ವಾಕ್ಯ
ದಿಂದ ನಿಮಗೆ ಹೇಳುವದೇನಂದರೆ, ಬದುಕುವವರಾಗಿ ಕರ್ತನ ಬ
ರುವಿಕೆಯ ವರಿಗೆ ಉಳಿಯುವ ನಾವು ನಿದ್ದೆ ಹೋದವರಿಗಿಂತ
16 ಮುಂದಾಗುವದಿಲ್ಲ. ಯಾಕಂದರೆ, ಕರ್ತನು ತಾನೇ ಆರ್ಭಟದಿಂ
ದಲೂ, ಪ್ರಧಾನ ದೂತನ ಶಬ್ದದಿಂದಲೂ, ದೇವರ ತುತೂರಿಯಿಂ
ದಲೂ, ಪರಲೋಕದಿಂದ ಇಳಿದು ಬರುವನು; ಮತ್ತು ಕ್ರಿಸ್ತನಲ್ಲಿ
17 ಸತ್ತವರು ಮೊದಲು ಏಳುವರು; ಆ ಮೇಲೆ ಬದುಕುವವರಾಗಿ ಉ
ಳಿಯುವ ನಾವು ಅವರ ಸಂಗತ ಮೇಘಗಳಲ್ಲಿ ಕರ್ತನನ್ನು ಎ
ದುರುಗೊಳ್ಳುವದಕ್ಕೆ ಆಕಾಶಕ್ಕೆ ಎತ್ತಲ್ಪಟ್ಟು, ಹಾಗೆಯೇ ಎಂ

೧೮ ದೆಂದಿಗೂ ಕರ್ತನ ಸಂಗಡ ಇರುವೆವು. ಆದಕಾರಣ ಈ ಮಾ
ತುಗಳಿಂದ ಒಬ್ಬರನ್ನೊಬ್ಬರು ಆದರಿಸಿರಿ.

## ೫. ಸಂಧಿ.

೧ ಆದರೆ, ಸಹೋದರರೇ, ಕಾಲಗಳನ್ನೂ ಸಮಯಗಳನ್ನೂ
೨ ಕುರಿತು ನಿಮಗೆ ಬರೆಯುವದು ಅವಶ್ಯವಿಲ್ಲ. ಯಾಕಂದರೆ ಕರ್ತ
ನ ದಿನವು ಕಳ್ಳನು ರಾತ್ರಿಯಲ್ಲಿ ಬರುವ ಪ್ರಕಾರ ಬರುವದೆಂದು,
3 ನೀವೇ ಚನ್ನಾಗಿ ಬಲ್ಲಿರಿ. ಏನಂದರೆ ಸಮಾಧಾನವೂ ನಿರ್ಭಯ
ವೂ, ಎಂದು ಅವರು ಹೇಳುವಾಗಲೇ, ಗರ್ಭಿಣಿಗೆ ನೋವು ಬಂ
ದ ಹಾಗೆ, ಅವರಿಗೆ ನಾಶನವು ಥಕ್ಕನೆ ಬರುವದು; ಅವರು ತಪ್ಪಿ
೪ ಸಿ ಕೊಳ್ಳರು. ಆದರೆ, ಸಹೋದರರೇ, ಆ ದಿನವು ಕಳ್ಳನಂತೆ
ನಿಮ್ಮನ್ನು ಹಿಡಿಯುವ ಹಾಗೆ, ನೀವು ಅಂಧಕಾರದಲ್ಲಿ ಇರುವವರ
೫ ಲ್ಲ. ನೀವೆಲ್ಲರು ಬೆಳಕಿನ ಮಕ್ಕಳೂ ಹಗಲಿನ ಮಕ್ಕಳೂ ಆಗಿ
೬ ದ್ದೀರಿ. ನಾವು ರಾತ್ರಿಯವರೂ ಕತ್ತಲೆಯವರೂ ಅಲ್ಲ. ಹಾಗಾದ
ರೆ, ಮಿಕ್ಕಾದವರ ಪ್ರಕಾರ ನಿದ್ದೆ ಮಾಡದೆ, ಎಚ್ಚತ್ತು ಮಿತಿಯಾ
೭ ಗಿರುವ. ಯಾಕಂದರೆ ನಿದ್ದೆ ಮಾಡುವವರು ರಾತ್ರಿಯಲ್ಲಿ ಮಾಡು
ತ್ತಾರೆ; ಮದ್ಯ ಕುಡಿಯುವವರು ರಾತ್ರಿಯಲ್ಲಿ ಕುಡಿಯುತ್ತಾರೆ.
೮ ಆದರೆ ನಾವು ಹಗಲಿನವರಾಗಿದ್ದು, ವಿಶ್ವಾಸ ಪ್ರೀತಿಗಳ ಕವಚವ
ನ್ನೂ, ರಕ್ಷಣೆಯ ನಿರೀಕ್ಷೆಯಾದ ಶಿರಸ್ತ್ರಾಣವನ್ನೂ, ತೊಟ್ಟು
೯ ಕೊಂಡು, ಮಿತಿಯಾಗಿರುವ. ಯಾಕಂದರೆ ದೇವರು ನಮ್ಮನ್ನು
ಕೋಪಕ್ಕೆ ಅಲ್ಲ, ನಾವು ಎಚ್ಚತ್ತಿದ್ದರೂ, ನಿದ್ದೆ ಮಾಡಿದರೂ, ಅ
೧೦ ವನ ಸಂಗಡ ಬದುಕುವ ಹಾಗೆ, ನಮಗೋಸ್ಕರ ಸತ್ತ ನಮ್ಮ ಕ
ರ್ತನಾದ ಯೇಸು ಕ್ರಿಸ್ತನ ಮುಖಾಂತರ ರಕ್ಷಣೆಯನ್ನು ಸಂ
೧೧ ಪಾದಿಸುವದಕ್ಕೆ ನೇಮಿಸಿದ್ದಾನೆ. ಆದದರಿಂದ ನೀವು ಮಾಡುವ
ಪ್ರಕಾರವೇ, ಒಬ್ಬರಿಗೊಬ್ಬರು ಬುದ್ಧಿ ಹೇಳಿ, ಒಬ್ಬರಿಗೊಬ್ಬರು
ಆತ್ಮವೃದ್ಧಿ ಮಾಡಿರಿ.

೧೨ ಇದಲ್ಲದೆ, ಸಹೋದರರೇ, ನಿಮ್ಮಲ್ಲಿ ಕಷ್ಟ ಪಟ್ಟು, ಕರ್ತನ
ಲ್ಲಿ ನಿಮ್ಮ ಮುಖ್ಯಸ್ಥರಾಗಿದ್ದು, ನಿಮಗೆ ಬುದ್ಧಿ ಹೇಳುವವರನ್ನು
೧೩ ತಿಳಿದು, ಅವರ ಕೆಲಸಕ್ಕೋಸ್ಕರ ಅವರನ್ನು ಪ್ರೀತಿಯಲ್ಲಿ ಅತ್ಯ
ಧಿಕವಾಗಿ ಸನ್ಮಾನಿಸ ಬೇಕೆಂದು, ನಿಮ್ಮನ್ನು ಬೇಡಿ ಕೊಳ್ಳುತ್ತೇವೆ.
೧೪ ನಿಮ್ಮಲ್ಲಿ ಸಮಾಧಾನವಾಗಿರಿ. ಸಹೋದರರೇ, ನಾವು ನಿಮ್ಮನ್ನು
ಬೇಡಿ ಕೊಳ್ಳುವದೇನಂದರೆ, ಕ್ರಮಹೀನರಿಗೆ ಬುದ್ಧಿ ಹೇಳಿರಿ; ಮನ
ಗುಂದಿದವರನ್ನು ಸಂತೈಸಿರಿ; ಬಲಹೀನರಿಗೆ ಕೈ ಕೊಡಿರಿ; ಎಲ್ಲರ
೧೫ ಕಡೆಗೆ ದೀರ್ಘ ಶಾಂತರಾಗಿರ್ರಿ. ಕೇಡಿಗೆ ಕೇಡನ್ನು ಯಾರೂ
೧೬ ಯಾರಿಗಾದರೂ ಮಾಡದ ಹಾಗೆ, ನೋಡಿ ಕೊಳ್ಳಿರಿ. ಬಪ್ಪೊ
೧೭ ಬ್ಬರಿಗೋಸ್ಕರವೂ ಎಲ್ಲರಿಗೋಸ್ಕರವೂ ಒಳ್ಳೇದನ್ನು ಯಾ
೧೮ ವಾಗಲೂ ಹಿಂದಟ್ಟಿರಿ. ಯಾವಾಗಲೂ ಸಂತೋಷ ಪಡಿರಿ. ಎಡೆ
೧೯ ಬಿಡದೆ ಪ್ರಾರ್ಥಿಸಿರಿ. ಎಲ್ಲಾದರಲ್ಲಿ ಸ್ತೋತ್ರ ಮಾಡಿರಿ; ಯಾಕಂ
೨೦ ದರೆ ನಿಮ್ಮನ್ನು ಕುರಿತು ಕ್ರಿಸ್ತ ಯೇಸುವಿನಲ್ಲಿ ದೇವರ ಚಿತ್ತವು
೨೧ ಇದೇ. ಆತ್ಮವನ್ನು ಆರಿಸ ಬೇಡಿರಿ. ಪ್ರವಾದನೆಗಳನ್ನು ಅಸಡ್ಡೆ
೨೨ ಮಾಡ ಬೇಡಿರಿ. ಎಲ್ಲವನ್ನು ಪರೀಕ್ಷಿಸಿ, ಒಳ್ಳೇದನ್ನೇ ಹಿಡಿದು
ಕೊಳ್ಳಿರಿ. ಕೆಟ್ಟದರ ತೋರಿಕೆಗೆಲ್ಲಾ ದೂರವಾಗಿರ್ರಿ.

೨೩ ಇದಲ್ಲದೆ, ಸಮಾಧಾನದ ದೇವರು ತಾನೇ ನಿಮ್ಮನ್ನು ಸಂಪೂ
ರ್ಣವಾಗಿ ಪರಿಶುದ್ಧ ಮಾಡಲಿ; ಮತ್ತು ನಿಮ್ಮ ಪೂರ್ಣ ಆತ್ಮ
ಪ್ರಾಣ ಶರೀರಗಳು ನಮ್ಮ ಕರ್ತನಾದ ಯೇಸು ಕ್ರಿಸ್ತನ ಬ
೨೪ ರುವಿಕೆಯಲ್ಲಿ ತಪ್ಪಿಲ್ಲದ ಹಾಗೆ, ಕಾಪಾಡಲ್ಪಡಲಿ. ನಿಮ್ಮನ್ನು ಕ
ರೆಯುವವನು ನಂಬಿಕೆಯುಳ್ಳವನು; ಅವನು ಅದನ್ನು ಮಾಡು
ವನು.

೨೫ ಸಹೋದರರೇ, ನಮಗೋಸ್ಕರ ಪ್ರಾರ್ಥನೆ ಮಾಡಿರಿ. ಸ
೨೬ ಹೋದರರೆಲ್ಲರನ್ನು ಪರಿಶುದ್ಧ ಮುದ್ದಿನಿಂದ ವಂದಿಸಿರಿ. ಈ ಪ
೨೭ ತ್ರಿಕೆಯು ಪರಿಶುದ್ಧ ಸಹೋದರರೆಲ್ಲರಿಗೆ ಓದಿ ಹೇಳಲ್ಪಡ ಬೇ
೨೮ ಕೆಂದು, ನಿಮಗೆ ಕರ್ತನ ಮೇಲೆ ಆಣೆ ಇಡುತ್ತೇನೆ. ನಮ್ಮ ಕರ್ತ
ನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಸಂಗಡ ಇರಲಿ.
ಆರ್ಮೆ.

---

# THE SECOND EPISTLE OF
# PAUL THE APOSTLE TO THE THESSALONIANS.

ಅಪೊಸ್ತಲನಾದ ಪೌಲನು ಥೆಸ್ಸಲೊನೀಕ್ಯರಿಗೆ ಬರೆದ ಎರಡನೇ ಪತ್ರಿಕೆ.

## ೧. ಸಂಧಿ.

೧ ಪೌಲನೂ ಸಿಲ್ವಾನನೂ ತಿಮೊಥೆಯನೂ, ನಮ್ಮ ತಂದೆಯಾ
ದ ದೇವರಲ್ಲಿಯೂ ಕರ್ತನಾದ ಯೇಸು ಕ್ರಿಸ್ತನಲ್ಲಿಯೂ ಇ
೨ ರುವ ಥೆಸ್ಸಲೊನೀಕ್ಯರ ಸಭೆಗೆ— ನಮ್ಮ ತಂದೆಯಾದ ದೇವರಿಂ
ದಲೂ, ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆ
ಯೂ ಸಮಾಧಾನವೂ ಆಗಲಿ.

3 ಸಹೋದರರೇ, ಯಾವಾಗಲೂ ನಿಮಗೋಸ್ಕರ ದೇವರಿಗೆ
ಸ್ತೋತ್ರ ಮಾಡುವ ಹಂಗಿನಲ್ಲಿದ್ದೇವೆ; ಅದೇ ಯೋಗ್ಯವಾದ
ದ್ದು. ಯಾಕಂದರೆ ನಿಮ್ಮ ವಿಶ್ವಾಸವು ಅಧಿಕವಾಗಿ ಬೆಳೆಯುತ್ತ
ದೆ; ಮತ್ತು ನಿಮ್ಮೆಲ್ಲರಲ್ಲಿ ಅವನವನು ಒಬ್ಬೊಬ್ಬರಿಗೆ ಮಾಡುವ
೪ ಪ್ರೀತಿಯು ಅಧಿಕವಾಗುತ್ತದೆ. ಆದದರಿಂದ ನಾವೇ ನಿಮ್ಮ ಸಕಲ
ಹಿಂಸೆಗಳಲ್ಲಿಯೂ, ನೀವು ಪಡುವ ಉಪದ್ರವಗಳಲ್ಲಿಯೂ, ನಿಮಗಿ
೫ ರುವ ತಾಳ್ಮೆ ವಿಶ್ವಾಸಗಳಿಗೋಸ್ಕರ ನಿಮ್ಮ ನಿಮಿತ್ತ ದೇವರ ಸ
ಭೆಗಳಲ್ಲಿ ಹೆಚ್ಚಳ ಪಡುತ್ತೇವೆ. ಅದು ನೀವು ದೇವರ ರಾಜ್ಯದ ನಿ
ಮಿತ್ತ ಶ್ರಮೆ ಪಡುವವರಾಗಿ, ಅದಕ್ಕೆ ಯೋಗ್ಯರೆಂದೆಣಿಸಲ್ಪ
ಡುವ ಹಾಗೆ, ದೇವರ ನೀತಿಯಾದ ನ್ಯಾಯತೀರ್ಪಿಕೆಯ ದೃ
೬ ಷ್ಟಾಂತವಾಗಿದೆ. ಹ್ಯಾಗಂದರೆ, ದೇವರನ್ನರಿಯದವರಿಗೂ ನಮ್ಮ
ಕರ್ತನಾದ ಯೇಸು ಕ್ರಿಸ್ತನ ಸುವಾರ್ತೆಗೆ ವಿಧೇಯರಾಗದವರ
೭ ಗೂ, ದಂಡನೆಯನ್ನು ಕೊಡುವ ಕರ್ತನಾದ ಯೇಸುವು ತನ್ನ
ಬಲದ ದೂತರ ಸಂಗಡ ಅಗ್ನಿಜ್ವಾಲೆಯಲ್ಲಿ ಪರಲೋಕದಿಂದ
ಪ್ರತ್ಯಕ್ಷವಾಗುವಾಗ, ನಿಮ್ಮನ್ನು ಉಪದ್ರ ಪಡಿಸುವವರಿಗೆ ಉಪದ್ರ



೮ ವನ್ನೂ, ಉಪದ್ರ ಪಡುವವರಾದ ನಿಮಗೆ ನಮ್ಮ ಸಂಗಡ ವಿಶ್ರಾಂ
ತಿಯನ್ನೂ, ಪ್ರತಿಯಾಗಿ ಕೊಡುವದು ದೇವರಿಗೆ ನ್ಯಾಯವಾ
೯ ಗಿದೆ. ಅವರು ಕರ್ತನ ಮುಖದಿಂದಲೂ, ಅವನ ಶಕ್ತಿಯ ಮಹಿ
ಮೆಯಿಂದಲೂ, ನಿತ್ಯ ನಾಶನವಾದ ದಂಡನೆಯನ್ನು ಅನುಭವಿಸು
೧೦ ವರು—ಅವನು ತನ್ನ ಪರಿಶುದ್ಧರಲ್ಲಿ ಮಹಿಮೆ ಪಡುವ ಹಾಗೆಯೂ,
ನಿಮಗೆ ಆದ ನಮ್ಮ ಸಾಕ್ಷಿಯು ವಿಶ್ವಾಸಿಸಲ್ಪಟ್ಟದರಿಂದ, ವಿಶ್ವಾ
ಸಿಗಳೆಲ್ಲರಲ್ಲಿ ಆಶ್ಚರ್ಯವಂತನಾಗುವ ಹಾಗೆಯೂ, ಬರುವ ಆ
ದಿವಸದಲ್ಲಿಯೇ.

೧೧ ಇದಕ್ಕಾಗಿಯೇ ನಮ್ಮ ದೇವರಲ್ಲಿಯೂ, ಕರ್ತನಾದ ಯೇ
ಸು ಕ್ರಿಸ್ತನಲ್ಲಿಯೂ ಇರುವ ಕೃಪೆಯ ಪ್ರಕಾರ, ನಮ್ಮ ಕರ್ತ
ನಾದ ಯೇಸು ಕ್ರಿಸ್ತನ ಹೆಸರು ನಿಮ್ಮಲ್ಲಿಯೂ, ನೀವು ಅವನ
೧೨ ಲ್ಲಿಯೂ ಮಹಿಮೆ ಪಡುವದಕ್ಕೋಸ್ಕರ, ನಮ್ಮ ದೇವರು ನಿಮ್ಮ
ನ್ನು ಕರೆಯುವಿಕೆಗೆ ಯೋಗ್ಯರೆಂದೆಣಿಸಿ, ತನ್ನ ಒಳ್ಳೇತನದ
ಸಕಲ ಸುಯೋಚನೆಯನ್ನೂ ವಿಶ್ವಾಸದ ಕ್ರಿಯೆಯನ್ನೂ ಬ
ಲವಾಗಿ ಪೂರೈಸ ಬೇಕೆಂದು, ಯಾವಾಗಲೂ ನಿಮಗೋಸ್ಕರ
ಪ್ರಾರ್ಥನೆ ಮಾಡುತ್ತೇವೆ.

## ೨. ಸಂಧಿ.

೧ ಇದಲ್ಲದೆ, ಸಹೋದರರೇ, ನಮ್ಮ ಕರ್ತನಾದ ಯೇಸು ಕ್ರಿ
ಸ್ತನ ಬರುವಿಕೆಯನ್ನೂ, ಅವನ ಬಳಿಯ ನಮ್ಮ ಕೂಡುವಿಕೆಯ
೨ ನ್ನೂ ಕುರಿತು, ಕ್ರಿಸ್ತನ ದಿನವು ಸವಿಾಪವಾಯಿತಂತ, ನೀವು ಆ
ತ್ಮದಿಂದಲಾದರೂ, ವಾಕ್ಯದಿಂದಲಾದರೂ, ನಮ್ಮಿಂದ ಬಂತೆಂಬು
ವ ಪತ್ರಿಕೆಯಿಂದಲಾದರೂ, ಬೇಗ ಬುದ್ಧಿ ಕದಲಿ, ಭ್ರಮೆ ಪಡ
ಬೇಡಿರೆಂದು ನಿಮ್ಮನ್ನು ಬೇಡಿ ಕೊಳ್ಳುತ್ತೇವೆ.

3 ಯಾರಾದರೂ ಯಾವ ಪ್ರಕಾರದಲ್ಲಿಯೂ ನಿಮಗೆ ಮೋಸ
೪ ಮಾಡವಿರಲಿ. ಯಾಕಂದರೆ ಶಿರುಗಿ ಬೀಳುವಿಕೆಯು ಮೊದಲು
ಬಂದು, ದೇವರ ಮಂದಿರದಲ್ಲಿ ದೇವರೆಂದು ಕೂತು ಕೊಂಡು,
ತಾನು ದೇವರೆಂದು ತನ್ನನ್ನು ತೋರಿಸಿ ಕೊಳ್ಳುವ ಹಾಗೆ, ದೇವ
ರೆಂದು ಕರೆಯಲ್ಪಡುವಂಥ, ಅಥವಾ ಆರಾಧಿಸಲ್ಪಡುವಂಥ, ಎ
ಲ್ಲಾದರ ಮೇಲೆ ತನ್ನನ್ನು ಎತ್ತಿ ಕೊಂಡು ಎದುರಿಸುವ ನಾಶನದ
ಮಗನಾದ ಪಾಪದ ಮನುಷ್ಯನು ಪ್ರತ್ಯಕ್ಷವಾದರೆ ಹೊರ್ತಾಗಿ,
೫ ಆ ದಿವಸ ಬರುವದಿಲ್ಲ. ನಾನು ನಿಮ್ಮ ಹತ್ತರ ಇದ್ದಾಗಲೇ, ಇವುಗ
ಳನ್ನು ನಿಮಗೆ ಹೇಳಿದೆನೆಂದು ಜ್ಞಾಪಕವಿಲ್ಲವೋ! ಮತ್ತು ಅವನು
ತನ್ನ ಕಾಲದಲ್ಲಿ ಪ್ರತ್ಯಕ್ಷವಾಗುವ ಹಾಗೆ, ಈಗ ಹಿಡಿದು ಕೊಳ್ಳು
೭ ವಂಥಾದ್ದನ್ನು ಬಲ್ಲಿರಿ. ಏನಂದರೆ ಅನೀತಿಯ ಮರ್ಮವು ಈಗ
ಲೂ ಯತ್ನೈಸುತ್ತದೆ; ಹಿಡಿದು ಕೊಳ್ಳುವವನು ಮಧ್ಯದಲ್ಲಿಂದ
೮ ಹೊರಗಾಗುವ ಪರ್ಯಂತರ ಇರುವನು ಅಷ್ಟೆ. ಆಗಲೇ ಆ ಅನೀ
ತಿವಂತನು ಪ್ರತ್ಯಕ್ಷವಾಗುವನು; ಅವನನ್ನು ಕರ್ತನು ತನ್ನ ಬಾ
ಯಿಯ ಆತ್ಮದಿಂದ ಸಂಹರಿಸಿ, ತನ್ನ ಬರುವಿಕೆಯ ಪ್ರಕಾಶದಿಂದ
ಅವನನ್ನು ಲಯ ಮಾಡುವನು.

೯ ಅವನ ಬರುವಿಕೆಯು ಸೈತಾನನ ಯತ್ನದ ಪ್ರಕಾರವಾಗಿ ಸು
ಳ್ಳಿನ ಎಲ್ಲಾ ಬಲದಲ್ಲಿಯೂ, ಗುರುತುಗಳಲ್ಲಿಯೂ, ಅದ್ಭುತಗ
೧೦ ಳಲ್ಲಿಯೂ, ಅನ್ಯಾಯದ ಎಲ್ಲಾ ಮೋಸದಲ್ಲಿಯೂ, ತಮ್ಮ ರ
ಕ್ಷಣೆಗಾಗಿರುವ ಸತ್ಯದ ಪ್ರೀತಿಯನ್ನು ಅಂಗೀಕರಿಸದ ಕಾರಣ
೧೧ ನಾಶನವಾಗುವವರಲ್ಲಿ ಇರುವದು. ಆದದರಿಂದ ಸತ್ಯವನ್ನು ನಂ
೧೨ ಬದೆ, ಅನ್ಯಾಯವನ್ನು ಮೆಚ್ಚಿದವರೆಲ್ಲರು ಅಲ್ಲಿ ನಿರ್ಣಯ ಪಡು
ವ ಹಾಗೆ, ಅವರು ಸುಳ್ಳನ್ನು ನಂಬುವದಕ್ಕೆ ದೇವರು ಅವರಿಗೆ
ಬಲವಾದ ಮೋಸವನ್ನು ಕಳುಹಿಸುವನು.

೧3 ಆದರೆ, ಕರ್ತನಿಂದ ಪ್ರೀತಿ ಮಾಡಲ್ಪಟ್ಟಿರುವ ಸಹೋದರರೇ,
ದೇವರು ನಿಮ್ಮನ್ನು ಆರಂಭದಿಂದಲೇ ಆತ್ಮದ ಶುದ್ಧೀಕರಣದಿಂದ
ಲೂ, ಸತ್ಯದ ವಿಶ್ವಾಸದಿಂದಲೂ ರಕ್ಷಣೆಗಾಗಿ ಆರಿಸ ಕೊಂಡದ್ದ
ರಿಂದ ಎಂದಿಗೂ ನಿಮಗೋಸ್ಕರ ದೇವರಿಗೆ ಸ್ತೋತ್ರ ಮಾಡು
೧೪ ವ ಹಂಗಿನಲ್ಲಿದ್ದೇವೆ. ಅದಕ್ಕೆ ಅವನು ನಮ್ಮ ಕರ್ತನಾದ ಯೇ
ಸು ಕ್ರಿಸ್ತನ ಮಹಿಮೆಯನ್ನು ಸಂಪಾದಿಸುವದಕ್ಕೆ ನಮ್ಮ ಸು
ವಾರ್ತೆಯ ಮುಖಾಂತರ ನಿಮ್ಮನ್ನು ಕರೆದನು.

೧೫ ಹೀಗಿರುವದರಿಂದ, ಸಹೋದರರೇ, ನೆಲೆಗೊಳ್ಳಿರಿ; ನಮ್ಮ
ಮಾತಿನಿಂದಲಾದರೂ ಪತ್ರಿಕೆಯಿಂದಲಾದರೂ, ನೀವು ಕಲಿತು
ಕೊಂಡ ಸಂಪ್ರದಾಯಗಳನ್ನು ಕೈ ಕೊಳ್ಳಿರಿ.

೧೬ ಇದಲ್ಲದೆ, ನಮ್ಮ ಕರ್ತನಾದ ಯೇಸು ಕ್ರಿಸ್ತನು ತಾನೇ, ನ
೧೭ ಮ್ಮನ್ನು ಪ್ರೀತಿ ಮಾಡಿ, ನಿತ್ಯವಾದ ಆದರಣೆಯನ್ನೂ, ಒಳ್ಳೇ
ನಿರೀಕ್ಷೆಯನ್ನೂ, ಕೃಪೆಯಾಗಿ ಕೊಟ್ಟ ನಮ್ಮ ತಂದೆಯಾದ
ದೇವರು ಸಹ, ನಿಮ್ಮ ಹೃದಯಗಳನ್ನು ಸಂತೈಸಿ, ಎಲ್ಲಾ ಒಳ್ಳೇ
ಮಾತಿನಲ್ಲಿಯೂ ಕೆಲಸದಲ್ಲಿಯೂ ನಿಮ್ಮನ್ನು ಸ್ಥಿರ ಪಡಿಸಲಿ.

## ೩. ಸಂಧಿ.

೧ ಕಡೆಯಲ್ಲಿ, ಸಹೋದರರೇ, ನಿಮ್ಮಲ್ಲಿ ಆದ ಪ್ರಕಾರ ಕರ್ತ
೨ ನ ವಾಕ್ಯವು ಓಡಿ ಮಹಿಮೆ ಪಡುವ ಹಾಗೆಯೂ, ಅಯುಕ್ತ ದು
ಷ್ಟ ಮನುಷ್ಯರಿಗೆ ನಾವು ತಪ್ಪಿಸಲ್ಪಡುವ ಹಾಗೆಯೂ, ನಮ
ಗೋಸ್ಕರ ಪ್ರಾರ್ಥಿಸಿರಿ; ಯಾಕಂದರೆ ವಿಶ್ವಾಸವು ಎಲ್ಲರಲ್ಲಿ
3 ಇಲ್ಲ; ಆದರೆ ಕರ್ತನು ನಂಬಿಕೆಯುಳ್ಳವನು; ಅವನು ನಿಮ್ಮನ್ನು
೪ ಸ್ಥಿರ ಪಡಿಸಿ, ಕೇಡಿಗೆ ತಪ್ಪಿಸುವನು. ಇದಲ್ಲದೆ, ನಾವು ನಿಮಗೆ ಆ
ಜ್ಞಾಪಿಸುವುವುಗಳನ್ನು ಮಾಡುತ್ತೀರೆಂದೂ, ಮಾಡುವಿರೆಂದೂ, ಕ
ರ್ತನಲ್ಲಿ ನಿಮ್ಮನ್ನು ಕುರಿತು ಭರವಸವಾಗಿದ್ದೇವೆ. ಮತ್ತು ಕರ್ತ
೫ ನು ನಿಮ್ಮ ಹೃದಯಗಳನ್ನು ದೇವರ ಪ್ರೀತಿಗೂ ಕ್ರಿಸ್ತನ ತಾಳ್ಮೆ
ಗೂ ಸರಾಗ ಮಾಡಲಿ.

೬ ಇದಲ್ಲದೆ, ಸಹೋದರರೇ, ನಮ್ಮಿಂದ ಹೊಂದಿದ ಸಂಪ್ರದಾ
ಯದ ಪ್ರಕಾರವಲ್ಲ, ಅಕ್ರಮದಿಂದ ನಡೆಯುವ ಪ್ರತಿ ಸಹೋದ
ರನಿಂದ ತೊಲಗಿ ಹೋಗ ಬೇಕೆಂದು, ನಮ್ಮ ಕರ್ತನಾದ ಯೇ
7 ಸು ಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ. ಯಾಕಂದರೆ,
ನಮ್ಮನ್ನು ಹ್ಯಾಗೆ ಅನುಸರಿಸ ಬೇಕೆಂದು, ನೀವೇ ಬಲ್ಲಿರಿ. ಏನಂದ
೮ ಕೆ ನಾವು ನಿಮ್ಮಲ್ಲಿ ಕ್ರಮವಿಲ್ಲದವರಾಗಿರಲಿಲ್ಲ. ನಾವು ಒಬ್ಬನಿಂದ
ಲಾದರೂ ಕೊಟ್ಟಿಯನ್ನು ಸುಮ್ಮನೆ ತಿನ್ನಲಿಲ್ಲ; ಆದರೆ ಅಧಿಕಾರ
ವಿಲ್ಲದೆ ಇರುವದರಿಂದಲ್ಲ, ನಮ್ಮನ್ನು ಅನುಸರಿಸುವದಕ್ಕೆ ನಿಮಗೆ
೯ ನಮ್ಮನ್ನು ಮಾದರಿಯಾಗಿ ಕೊಡುವ ಹಾಗೆ, ನಿಮ್ಮಲ್ಲಿ ಒಬ್ಬನಿ
ಗೂ ಭಾರವಾಗದ ಹಾಗೆ, ಕಷ್ಟದಲ್ಲಿಯೂ ಪ್ರಯಾಸದಲ್ಲಿಯೂ
೧೦ ರಾತ್ರಿ ಹಗಲು ಕೆಲಸ ಮಾಡಿದೆವು. ಯಾಕಂದರೆ ಒಬ್ಬನು ಕೆಲ
ಸ ಮಾಡೋಲ್ಲದಿದ್ದರೆ, ಅವನು ತಿನ್ನಲೂ ಬಾರದೆಂದು, ನಿಮ್ಮ
೧೧ ಹತ್ತರವಿದ್ದಾಗ, ನಿಮಗೆ ಆಜ್ಞಾಪಿಸಿದೆವು. ಯಾಕಂದರೆ ಕೆಲವರು
ಕ್ರಮವಿಲ್ಲದೆ ನಿಮ್ಮಲ್ಲಿ ನಡೆದು, ಕೆಲಸ ಮಾಡದೆ, ಶಿರುಗಾಡುತ್ತಾ
೧೨ ಕೆಂದು ಕೇಳುತ್ತೇವೆ. ಅಂಥವರಿಗೆ, ಸಮಾಧಾನದಿಂದ ಕೆಲಸ ಮಾ

ಡಿ ಸ್ವಂತ ಕೊಟ್ಟೆಯನ್ನು ತಿನ್ನ ಬೇಕೆಂದು, ನಮ್ಮ ಕರ್ತನಾದ
೧೩ ಯೇಸು ಕ್ರಿಸ್ತನಿಂದ ಬುದ್ಧಿ ಹೇಳಿ ಅಜ್ಞಾಪಿಸುತ್ತೇವೆ. ಆದರೆ,
೧೪ ಸಹೋದರರೇ, ನೀವು ದಣಿಯದೆ ಸತ್ಕ್ರಿಯೆ ಮಾಡಿರಿ. ಪತ್ರಿಕೆ
ಯಲ್ಲಿರುವ ನಮ್ಮ ಮಾತಿಗೆ ಬಬ್ಬನು ವಿಧೇಯನಾಗದಿದ್ದರೆ, ಅವ
ನನ್ನು ಗುರುತಿಡಿರಿ; ಅವನು ನಾಚಿಕೆ ಪಡುವ ಹಾಗೆ, ಅವನ ಸಂಗ
೧೫ ಡ ಕಲೆಯ ಬೇಡಿರಿ. ಆದಾಗ್ಯೂ ಅವನನ್ನು ಶತ್ರುವೆಂದೆಣಿಸದೆ,
ಸಹೋದರನಿಗೆಂದು, ಬುದ್ಧಿ ಹೇಳಿರಿ.

೧೬ ಆದರೆ ಸಮಾಧಾನದ ಕರ್ತನು ತಾನೇ ನಿಮಗೆ ಯಾವಾ
ಗ್ಯೂ ಎಲ್ಲಾ ವಿಧದಿಂದ ಸಮಾಧಾನವನ್ನು ಕೊಡಲಿ. ಕರ್ತನು
ನಿಮ್ಮೆಲ್ಲರ ಸಂಗಡ ಇರಲಿ.

೧೭ ಪೌಲನೆಂಬ ನನ್ನ ಸ್ವಂತ ಕೈಯಿಂದ ವಂದನೆಯು, ಎಲ್ಲಾ
೧೮ ಪತ್ರಿಕೆಗಳಲ್ಲಿ ಇದೇ ಗುರುತು; ಹೀಗೆ ಬರೆಯುತ್ತೇನೆ. ನಮ್ಮ ಕ
ರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇ
ರಲಿ. ಆಮೆನ್.

---

# THE FIRST EPISTLE
# OF PAUL THE APOSTLE TO TIMOTHY.

## ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಬರೆದ ಮೊದಲನೇ ಪತ್ರಿಕೆ.

### ೧. ಸಂಧಿ.

೧ ನಮ್ಮ ರಕ್ಷಕನಾದ ದೇವರೂ, ನಮ್ಮ ನಿರೀಕ್ಷೆಯಾಗಿರುವ ಕ
ರ್ತನಾದ ಯೇಸು ಕ್ರಿಸ್ತನೂ, ಇವರ ಅಪ್ಪಣೆಯ ಪ್ರಕಾರ
೨ ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು ವಿಶ್ವಾಸದಲ್ಲಿ ನಿಜ
ಮಗನಾದ ತಿಮೊಥೆಯನಿಗೆ—ತಂದೆಯಾದ ದೇವರಿಂದಲೂ, ನ
ಮ್ಮ ಕರ್ತನಾದ ಕ್ರಿಸ್ತ ಯೇಸುವಿನಿಂದಲೂ, ಕೃಪೆಯೂ ಕರು
ಣೆಯೂ ಸಮಾಧಾನವೂ ಆಗಲಿ.

೩ ನಾನು ಮಕೆದೋನ್ಯಕ್ಕೆ ಹೊರಡುವಾಗ, ಅನ್ಯ ಬೋಧನೆ
ಹೇಳಿ ಬೇಡೆಂದೂ ವಿಶ್ವಾಸದಲ್ಲಿರುವ ದಿವ್ಯ ಕಟ್ಟುವಿಕೆಗಿಂತ ತ
೪ ರ್ಕಕ್ಕೆ ಹೆಚ್ಚಾಗಿ ಆಸ್ಪದವಾಗುವ ಕಟ್ಟು ಕಥೆಗಳನ್ನೂ, ತೀರದ
ವಂಶಾವಳಿಗಳನ್ನೂ ಲಕ್ಷಿಸ ಬೇಡೆಂದೂ, ಕೆಲವರಿಗೆ ಅಜ್ಞಾಪಿಸುವ
ದಕ್ಕೆ ಎಳೆಸದಲ್ಲಿ ನಿಲ್ಲ ಬೇಕೆಂದು ನಿನ್ನನ್ನು ಬೇಡಿ ಕೊಂಡ ಪ್ರ
೫ ಕಾರ ಮಾಡು. ಅಜ್ಞೆಯ ಪೂರ್ಣತೆ ಏನಂದರೆ, ಶುದ್ಧ ಹೃದ
ಯದಿಂದಲೂ, ಒಳ್ಳೇ ಮನಸಾಕ್ಷಿಯಿಂದಲೂ ನಿಷ್ಕಪಟವಾದ
೬ ವಿಶ್ವಾಸದಿಂದಲೂ, ಉಂಟಾಗುವ ಪ್ರೀತಿಯೇ. ಇವುಗಳಿಗೆ ಕೆಲವ
೭ ರು ತಪ್ಪಿ, ಹರಟೆ ಮಾತಿಗೆ ತಿರುಗಿದ್ದಾರೆ. ಅವರು ನ್ಯಾಯ ಶಾ
ಸ್ತ್ರಗಳಾಗಿರ ಇಚ್ಛೈಸಿ, ತಾವು ಹೇಳುವದೇನೆಂದೂ, ತಾವು ದೃಢ
೮ ಪಡಿಸುವದೇನೆಂದೂ, ತಿಳುಕೊಳ್ಳುವದಿಲ್ಲ. ಆದರೆ ನ್ಯಾಯಪ್ರಮಾ
ಣವು, ಒಬ್ಬನು ಅದನ್ನು ನ್ಯಾಯವಾಗಿ ಬಳಸಿದರೆ, ಒಳ್ಳೇದೆಂ
೯ ದು ಒಪ್ಪೆವು. ನ್ಯಾಯಪ್ರಮಾಣವು ನೀತಿವಂತನಿಗೋಸ್ಕರವಲ್ಲ,
ಅನೀತಿವಂತರೂ, ಅವಿಧೇಯರೂ, ಭಕ್ತಿಹೀನರೂ, ಪಾಪಿಷ್ಟರೂ,
ಅಪವಿತ್ರರೂ, ಅಪಭ್ರಷ್ಟರೂ, ತಂದೆ ತಾಯಿಗಳ ಕೊಲೆಗಾರರೂ,
ನರಹಿಂಸಕರೂ, ಜಾರರೂ, ಪುರುಷಸಂಗಮರೂ, ನರಹೋರ
೧೦ ರೂ, ಸುಳ್ಳುಗಾರರೂ, ಅಬದ್ಧ ಪ್ರಮಾಣಿಕರೂ, ಇವರಿಗೋಸ್ಕ
೧೧ ರವೂ, ನನಗೆ ಒಪ್ಪಿಸಲ್ಪಟ್ಟ ಭಾಗ್ಯವುಳ್ಳ ದೇವರ ಮಹಿಮೆ
ಯಾದ ಸುವಾರ್ತೆಯ ಪ್ರಕಾರವಾಗಿರುವ ಸ್ವಸ್ಥ ಬೋಧನೆಗೆ
ವಿರೋಧವಾಗಿರುವ ಬೇರೆ ಯಾವದಕ್ಕೋಸ್ಕರವೂ ಇರುತ್ತದೆಂ
ದು ತಿಳಿದು ಕೊಳ್ಳುತ್ತೇವೆ.

೧೨ ಮತ್ತು ನನ್ನನ್ನು ನಂಬಿಕೆಯುಳ್ಳವನೆಂದೆಣಿಸಿ, ಸೇವೆಯಲ್ಲಿ
ಟ್ಟು ಬಲಪಡಿಸಿದ ನಮ್ಮ ಕರ್ತನಾದ ಕ್ರಿಸ್ತ ಯೇಸುವಿಗೆ ಸ್ತೋ
೧೩ ತ್ರ ಮಾಡುತ್ತೇನೆ. ಮೊದಲು ದೂಷಕನೂ, ಹಿಂಸಕನೂ, ಬಲಾ
ತ್ಕಾರಿಯೂ ಆಗಿದ್ದೆನು; ಆದರೆ ತಿಳಿಯದೆ ಅವಿಶ್ವಾಸದಲ್ಲಿ ಮಾ
೧೪ ಡಿದ್ದರಿಂದ, ಕರುಣಿಸಲ್ಪಟ್ಟೆನು. ಮತ್ತು ನಮ್ಮ ಕರ್ತನ ಕೃಪೆ
ಯು ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸ ಪ್ರೀತಿಗಳ ಸಂಗಡ ಅ
೧೫ ತ್ಯಧಿಕವಾಯಿತು. ಎಲ್ಲಾ ಅಂಗೀಕಾರಕ್ಕೆ ಯೋಗ್ಯವಾದ ನಂ
ಬಿಕೆಯಾದ ವಾಕ್ಯವು ಇದೇ—ಕ್ರಿಸ್ತ ಯೇಸು ಪಾಪಿಗಳನ್ನು ರ
ಕ್ಷಿಸುವದಕ್ಕೆ ಲೋಕಕ್ಕೆ ಬಂದನು. ಅವರಲ್ಲಿ ಮೊದಲಿನವನು
೧೬ ನಾನೇ, ಆದರೆ ಯೇಸು ಕ್ರಿಸ್ತನು ಮೊದಲಿನವನಾದ ನನ್ನಲ್ಲಿ ಸ
ಮಸ್ತ ದೀರ್ಘಶಾಂತಿಯನ್ನು ನಿತ್ಯ ಜೀವಕ್ಕಾಗಿ ಅವನ ಮೇ
ಲೆ ವಿಶ್ವಾಸವಿಡಲಿರುವವರಿಗೆ ಮಾದರಿಯಾಗಿ ತೋರಿಸುವ ಹಾಗೆ,
೧೭ ಇದಕ್ಕೋಸ್ಕರವೇ ಕರುಣಿಸಲ್ಪಟ್ಟೆನು. ಆದರೆ ನಿತ್ಯ ಅರಸ
ನೂ, ನಿರ್ಲಯನೂ, ಅದೃಶ್ಯನೂ, ಒಬ್ಬನೇ ಜ್ಞಾನಿಯೂ,
ಆಗಿರುವ ದೇವರಿಗೆ ಯುಗ ಯುಗಾಂತರಗಳಿಗೂ ಘನವೂ ಮ
ಹಿಮೆಯೂ ಆಗಲಿ. ಆಮೆನ್.

೧೮ ಮಗನಾದ ತಿಮೊಥೆಯನೇ, ನಿನ್ನ ಮೇಲೆ ಮುಂಚೆ ಹೇಳಿದ
ಪ್ರವಾದನೆಗಳ ಪ್ರಕಾರ, ಅವುಗಳಿಂದ ಒಳ್ಳೇ ಯುದ್ಧವನ್ನು ನಡಿ
೧೯ ಸ ಬೇಕೆಂಬ ಈ ಆಜ್ಞೆಯನ್ನು ನಿನಗೆ ಒಪ್ಪಿಸುತ್ತೇನೆ. ವಿಶ್ವಾಸ
ವನ್ನೂ ಒಳ್ಳೇ ಮನಸಾಕ್ಷಿಯನ್ನೂ ಕೈ ಕೊಂಡಿರು; ಇದನ್ನು
ಕೆಲವರು ಲಕ್ಷ್ಯ ಮಾಡದೆ, ವಿಶ್ವಾಸದ ವಿಷಯದಲ್ಲಿ ಹಡಗ ನಷ್ಟ
೨೦ ಪಟ್ಟರು. ಅವರಲ್ಲಿ ಹುಮೆನಾಯನೂ, ಅಲೆಕ್ಸಾಂದ್ರನೂ, ಇದ್ದಾ
ರೆ; ಅವರು ದೂಷಿಸದಿರ ಕಲಿತು ಕೊಳ್ಳುವ ಹಾಗೆ, ಅವರನ್ನು
ಸೈತಾನನಿಗೆ ಒಪ್ಪಿಸಿದ್ದೇನೆ.

### ೨. ಸಂಧಿ.

೧ ಆದದರಿಂದ ಎಲ್ಲಾದರ ಮೊದಲು, ಬಿನ್ನಹ ಪ್ರಾರ್ಥನೆ ವಿ
ಜ್ಞಾಪನೆ ಸ್ತೋತ್ರಗಳನ್ನು, ಎಲ್ಲಾ ಮನುಷ್ಯರಿಗೋಸ್ಕರವೂ,
೨ ಅರಸರಿಗೋಸ್ಕರವೂ, ಅಧಿಕಾರದಲ್ಲಿರುವವರೆಲ್ಲರಿಗೋಸ್ಕರವೂ,
ನಾವು ಸಕಲ ಭಕ್ತಿಯಿಂದಲೂ, ಮರ್ಯಾದೆಯಿಂದಲೂ, ಶಾಂ
ತವಾಗಿಯೂ, ಸಮಾಧಾನವಾಗಿಯೂ, ಕಾಲಕ್ಷೇಪ ಮಾಡುವ ಹಾ
ಗೆ, ಮಾಡ ಬೇಕೆಂದು ಬುದ್ಧಿ ಹೇಳುತ್ತೇನೆ. ಯಾಕಂದರೆ ಸಕಲ
೩ ಮನುಷ್ಯರು ರಕ್ಷಿಸಲ್ಪಟ್ಟು, ಸತ್ಯದ ತಿಳಿವಿಕೆಗೆ ಬರ ಇಚ್ಛೈಸಿ
೪ ಸುವ ನಮ್ಮ ರಕ್ಷಕನಾದ ದೇವರ ಮುಂದೆ ಇದು ಒಳ್ಳೇದೂ ಸ
೫ ಮರ್ಪಕವೂ ಆಗಿದೆ. ಯಾಕಂದರೆ ದೇವರು ಒಬ್ಬನು; ದೇವ
ರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನು—ಮನುಷ್ಯನಾದ
೬ ಕ್ರಿಸ್ತ ಯೇಸುವೇ. ಇವನು ತನ್ನನ್ನು ಎಲ್ಲರಿಗೋಸ್ಕರ ಬಿಲಾಗಿ
ಕೊಟ್ಟಿದ್ದಾನೆ; ಇದು ತಕ್ಕ ಕಾಲಗಳಲ್ಲಿ ಸಾಕ್ಷಿಯಾಗಿರುವದು.
೭ ಅದಕ್ಕೆ ನಾನು ಸಾರುವವನಾಗಿಯೂ, ಅಪೊಸ್ತಲನಾಗಿಯೂ,



ವಿಶ್ವಾಸದಲ್ಲಿಯೂ ಸತ್ಯದಲ್ಲಿಯೂ ಜನಾಂಗಗಳ ಬೋಧಕ
ನಾಗಿಯೂ, ನೇಮಿಸಲ್ಪಟ್ಟೆನು. ಸುಳ್ಳಾಡದೆ ಕ್ರಿಸ್ತನಲ್ಲಿ ಸತ್ಯವ
ನ್ನು ಹೇಳುತ್ತೇನೆ.

೮ ಹಾಗಾದರೆ, ಗಂಡಸರು ಎಲ್ಲಾ ಸ್ಥಳಗಳಲ್ಲಿ ಕೋಪವೂ ಸಂಶ
ಯವೂ ಇಲ್ಲದೆ, ಪವಿತ್ರವಾದ ಕೈಗಳನ್ನು ಎತ್ತಿ, ಪ್ರಾರ್ಥಿಸ ಬೇ
೯ ಕೆಂದಿದ್ದೇನೆ. ಅದೇ ಪ್ರಕಾರ ಹೆಂಗಸರು ತಕ್ಕ ಉಡುಪು ಉಟ್ಟು
೧೦ ಕೊಂಡು, ಜಡೆ ಚೆನ್ನ ರತ್ನ ಅಮೂಲ್ಯ ವಸ್ತ್ರಗಳಿಂದಲ್ಲ, ಭಕ್ತಿ
ಯನ್ನು ಅರಿಕೆ ಮಾಡುವ ಹೆಂಗಸರಿಗೆ ತಕ್ಕ ಹಾಗೆ ಸತ್ಕ್ರಿಯೆಗ
ಳಿಂದಲೇ, ನಾಚಿಕೆಯೂ ಮನೋಸ್ವಸ್ಥವೂ ಉಳ್ಳವರಾಗಿ, ತ
ಮ್ಮನ್ನು ಅಲಂಕರಿಸಿ ಕೊಳ್ಳಲಿ.

೧೧ ಹೆಂಗಸು ಸಮಾಧಾನದಿಂದ ಪೂರ್ಣ ವಿಧೇಯಳಾಗಿ ಕಲಿತು
೧೨ ಕೊಳ್ಳಲಿ. ಆದರೆ ಬೋಧಿಸಲೂ, ಗಂಡನನ್ನು ಸ್ವಾಧೀನ ಮಾ
ಡಿ ಕೊಳ್ಳಲೂ ಅಲ್ಲ, ಸಮಾಧಾನದಿಂದಿರ ಬೇಕೆಂದು ಹೆಂಗಸಿಗೆ
೧೩ ಅಜ್ಞಾಪಿಸುತ್ತೇನೆ. ಯಾಕಂದರೆ ಆದಮನು ಮೊದಲು ರೂಪಿಸ
೧೪ ಲ್ಪಟ್ಟನು; ಆ ಮೇಲೆ ಹವ್ವಳು. ಮತ್ತು ಆದಮನು ಮೋಸ
ಹೋಗಲಿಲ್ಲ; ಆದರೆ ಹೆಂಗಸು ಮೋಸ ಹೋಗಿ ಮೀರುವವಳಾ
೧೫ ದಳು. ಆದರೆ ವಿಶ್ವಾಸದಲ್ಲಿಯೂ, ಪ್ರೀತಿಯಲ್ಲಿಯೂ, ಶುದ್ಧ
ತ್ವದಲ್ಲಿಯೂ, ಮನೋಸ್ವಸ್ಥ ಸಹಿತವಾಗಿ, ನೆಲೆಯಾಗಿದ್ದರೆ,
ಮಕ್ಕಳನ್ನು ಹೆರುವದರಿಂದ ರಕ್ಷಿಸಲ್ಪಡುವಳು.

### ೩. ಸಂಧಿ.

೧ ಒಬ್ಬನು ಅಧ್ಯಕ್ಷತ್ವವನ್ನು ಅಪೇಕ್ಷಿಸಿದರೆ, ಒಳ್ಳೇ ಕೆಲಸ
೨ ವನ್ನು ಅಪೇಕ್ಷಿಸುತ್ತಾನೆಂಬ ಮಾತು ನಿಜವೇ. ಹಾಗಾದರೆ, ಅಧ್ಯ
ಕ್ಷನು ದೋಷವಿಲ್ಲದವನೂ, ಒಬ್ಬಳೇ ಹೆಂಡತಿಯ ಗಂಡನೂ,
ಎಚ್ಚರಿಕೆಯುಳ್ಳವನೂ, ಮನೋಸ್ವಸ್ಥನೂ, ಮರ್ಯಾದಸ್ಥ
ನೂ, ಆತಿಥ್ಯಪ್ರಿಯನೂ, ಬೋಧಿಸ ಶಕ್ತನೂ, ಆಗಿರ ಬೇಕು.
೩ ಮದ್ಯಪಾನಿಯೂ, ಹೊಡೆದಾಡುವವನೂ, ಲೋಭಿಯೂ ಆಗಿ
ರದೆ, ಶಾಂತನೂ, ಜಗಳವಿಲ್ಲದವನೂ, ದ್ರವ್ಯಾಶೆಯಿಲ್ಲದವನೂ,
೪ ಸ್ವಂತ ಮನೆಯನ್ನು ಚನ್ನಾಗಿ ಆಳುವವನೂ, ಎಲ್ಲಾ ಘನದಿಂ
ದ ಮಕ್ಕಳನ್ನು ವಿಧೇಯರಾಗಿ ನಡಿಸುವವನೂ, ಆಗಿರ ಬೇಕು.
೫ ಯಾಕಂದರೆ, ಒಬ್ಬನು ಸ್ವಂತ ಮನೆಯನ್ನು ಆಳ ತಿಳಿಯದಿ
೬ ದ್ದರೆ, ದೇವರ ಸಭೆಯ ವಿಚಾರಣೆ ಹ್ಯಾಗೆ ಮಾಡುವನು? ಅವನು
ಒಂದು ವೇಳೆ ಗರ್ವ ಪಟ್ಟು, ಪಿಶಾಚನ ಆಜ್ಞೆಯೊಳಗೆ ಬೀಳದ
೭ ಹಾಗೆ, ಹೊಸಬನಾಗಿರ ಬಾರದು. ಮತ್ತು ಪಿಶಾಚನ ನಿಂದೆಯ
ಲ್ಲಿಯೂ ಉರುಲಿನಲ್ಲಿಯೂ ಬೀಳದ ಹಾಗೆ, ಅವನು ಹೊರಗಿನ
ವರಿಂದ ಒಳ್ಳೇ ಸಾಕ್ಷಿ ಹೊಂದಿದವನಾಗಿರ ಬೇಕು.

೮ ಅದೇ ಪ್ರಕಾರ ಸೇವಕರು ಎರಡು ನಾಲಿಗೆಯುಳ್ಳವರೂ,
೯ ಬಹಳ ದ್ರಾಕ್ಷೇರಸದ ಅಭ್ಯಾಸವುಳ್ಳವರೂ, ಲೋಭಿಗಳೂ, ಅ
೧೦ ಗಿರದೆ, ಘನವುಳ್ಳವರಾಗಿದ್ದು, ವಿಶ್ವಾಸದ ಮರ್ಮವು ಶುದ್ಧ
ಮನಸಾಕ್ಷಿಯಲ್ಲಿ ಉಂಟಾದವರಾಗಿರ ಬೇಕು. ಇವರು ಸಹ ಮೊ
ದಲು ಪರೀಕ್ಷಿಸಲ್ಪಡಲಿ; ತರುವಾಯ ನಿರಪರಾಧಿಗಳಾಗಿದ್ದರೆ, ಸೇ
೧೧ ವಕರಾಗಲಿ. ಅದೇ ಪ್ರಕಾರ ಅವರ ಹೆಂಡತಿಯರು ಚಾಡಿಗಾರ್ತಿ
ಗಳಾಗಿರದೆ, ಘನವುಳ್ಳವರೂ, ಎಚ್ಚರಿಕೆಯುಳ್ಳವರೂ, ಎಲ್ಲಾ
೧೨ ದರಲ್ಲಿ ನಂಬಿಗೆಯುಳ್ಳವರೂ, ಆಗಿರಲಿ. ಸೇವಕರು ಒಬ್ಬಳೇ
ಹೆಂಡತಿಯ ಗಂಡರೂ, ಮಕ್ಕಳನ್ನೂ ಸ್ವಂತ ಮನೆಗಳನ್ನೂ
೧೩ ಚನ್ನಾಗಿ ಆಳುವವರೂ, ಆಗಿರಲಿ. ಯಾಕಂದರೆ ಚನ್ನಾಗಿ ಸೇ
ವೆ ಮಾಡಿದವರು ತಮಗೆ ಒಳ್ಳೇ ಬಿರುದನ್ನೂ, ಕ್ರಿಸ್ತ ಯೇಸು
ವಿನಲ್ಲಿರುವ ವಿಶ್ವಾಸದಲ್ಲಿ ಬಹು ಧೈರ್ಯವನ್ನೂ, ಸಂಪಾದಿ
ಸಿ ಕೊಳ್ಳುತ್ತಾರೆ.

೧೪ ನಿನ್ನ ಹತ್ತರ ಬೇಗ ಬರುವದಕ್ಕೆ ನಿರೀಕ್ಷಿಸಿ, ನಾನು ತಡ ಮಾ
೧೫ ಡಿದರೆ, ಸತ್ಯದ ಸ್ತಂಭವೂ ಆಧಾರವೂ ಆಗಿರುವ, ಜೀವವುಳ್ಳ
ದೇವರ ಸಭೆಯಾದ, ದೇವರ ಮನೆಯಲ್ಲಿ ಹ್ಯಾಗೆ ನಡೆದು ಕೊ
ಳ್ಳ ಬೇಕೆಂದು, ನೀನು ತಿಳಿದು ಕೊಳ್ಳುವ ಹಾಗೆ, ಇವುಗಳನ್ನು
ನಿನಗೆ ಬರೆಯುತ್ತೇನೆ.

೧೬ ಭಕ್ತಿಯ ಮರ್ಮವು ಸಂದೇಹವಿಲ್ಲದೆ ದೊಡ್ಡದಾಗಿದೆ—ದೇವ
ರು ಮಾಂಸದಲ್ಲಿ ಪ್ರತ್ಯಕ್ಷವಾಗಿ, ಆತ್ಮದಲ್ಲಿ ನೀತಿನಿರ್ಣಯ ಕ
ಟ್ಟು, ದೂತರಿಗೆ ಕಾಣಿಸಿ ಕೊಂಡು, ಜನಾಂಗಗಳಲ್ಲಿ ಸಾರಲ್ಪಟ್ಟು,
ಲೋಕದಲ್ಲಿ ವಿಶ್ವಾಸಿಸಲ್ಪಟ್ಟು, ಮಹಿಮೆಯಲ್ಲಿ ಎತ್ತಲ್ಪಟ್ಟನು.

### ೪. ಸಂಧಿ.

೧ ಆದರೆ ಆತ್ಮವು ಸ್ಪಷ್ಟವಾಗಿ ಹೇಳುವದೇನಂದರೆ—ಕಡೆ ಕಾಲ
ಗಳಲ್ಲಿ ಕೆಲವರು ವಿಶ್ವಾಸದಿಂದ ತಿರುಗಿ ಬಿದ್ದು, ಮೋಸಗೊಳಿಸುವ
೨ ಆತ್ಮಗಳಿಗೂ, ದೆವ್ವಗಳ ಬೋಧನೆಗಳಿಗೂ, ಕಿವಿ ಕೊಡುವರು. ಅ
ವರು ಕಪಟದಿಂದ ಸುಳ್ಳಾಡುವವರೂ, ಸ್ವಂತ ಮನಸಾಕ್ಷಿಯಲ್ಲಿ
೩ ಬರೆ ಹಾಕಲ್ಪಟ್ಟವರೂ, ಮದುವೆಗೆ ಅಡ್ಡಿ ಮಾಡುವವರೂ, ಸತ್ಯವ
ನ್ನು ತಿಳಿದ ವಿಶ್ವಾಸಿಗಳಿಂದ ಸ್ತೋತ್ರದ ಸಂಗಡ ಅನುಭವಿಸಲ್ಪ
ಡುವದಕ್ಕೆ, ದೇವರು ಸೃಷ್ಟಿಸಿದ ಆಹಾರಗಳನ್ನು ಬಿಟ್ಟು ಬಿಡ
೪ ಬೇಕೆಂಬುವವರೂ, ಆಗಿರುವರು. ಆದರೆ ದೇವರು ಸೃಷ್ಟಿಸಿದ್ದೆ
ಲ್ಲಾ ಒಳ್ಳೇದು; ಮತ್ತು ಸ್ತೋತ್ರ ಮಾಡಿ ತೆಗೆದು ಕೊಂಡರೆ, ಏ
೫ ನಾದರೂ ಬಿಸಾಡ ತಕ್ಕದ್ದಲ್ಲ. ಯಾಕಂದರೆ ಅದು ದೇವರ ವಾ
೬ ಕ್ಯದಿಂದಲೂ ವಿಜ್ಞಾಪನೆಯಿಂದಲೂ ಶುದ್ಧವಾಗುತ್ತದೆ. ಇವುಗಳ
ನ್ನು ಸಹೋದರರಿಗೆ ಹೇಳಿ ಕೊಟ್ಟೆಯೆ, ನೀನು ಹಿಂಬಾಲಿಸಿದ ಸು
ಬೋಧನೆ ವಿಶ್ವಾಸಗಳ ವಾಕ್ಯಗಳಿಂದ ಪೋಷಿಸಲ್ಪಟ್ಟು, ಯೇ
೭ ಸು ಕ್ರಿಸ್ತನ ಒಳ್ಳೇ ಸೇವಕನಾಗಿರುವಿ. ಆದರೆ ಅಪಭ್ರಷ್ಟವಾದ
ಅಜ್ಜಿ ಕಥೆಗಳನ್ನು ತಳ್ಳಿ ಹಾಕಿ, ಭಕ್ತಿಯ ಅಭ್ಯಾಸ ಮಾಡಿಕೋ.
೮ ಯಾಕಂದರೆ, ಶರೀರದ ಅಭ್ಯಾಸವು ಕೊಂಚಕ್ಕೆ ಪ್ರಯೋಜ
ನವಾದದ್ದು. ಆದರೆ ಭಕ್ತಿಯು ಎಲ್ಲಕ್ಕೂ ಪ್ರಯೋಜನವಾಗಿದೆ.
೯ ಅದಕ್ಕೆ ಇಹ ಪರ ಜೀವಗಳ ವಾಗ್ದತ್ತವು ಉಂಟು. ಈ ವಾಕ್ಯವು
ನಂಬಿಕೆಯಾಗಿಯೂ, ಎಲ್ಲಾ ಅಂಗೀಕಾರಕ್ಕೆ ಯೋಗ್ಯವಾಗಿ
೧೦ ಯೂ, ಇರುತ್ತದೆ. ಯಾಕಂದರೆ ಮನುಷ್ಯರೆಲ್ಲರಿಗೂ, ಮುಖ್ಯ
ವಾಗಿ ವಿಶ್ವಾಸಿಸುವವರಿಗೂ, ರಕ್ಷಕನಾಗಿರುವ ಜೀವವುಳ್ಳ ದೇವ
ರಲ್ಲಿ ನಿರೀಕ್ಷಿಸಿರುವದರಿಂದ, ಅದಕ್ಕೋಸ್ಕರ ಕಷ್ಟವನ್ನೂ ನಿಂ
೧೧ ದೆಯನ್ನೂ ಪಡುತ್ತೇವೆ. ಇವುಗಳನ್ನು ಅಜ್ಞಾಪಿಸಿ ಬೋಧಿಸು.
೧೨ ನಿನ್ನ ಯೌವನವನ್ನು ಯಾರೂ ಅಲಕ್ಷ್ಯ ಮಾಡದಿರಲಿ. ಆ
ದರೆ ಮಾತಿನಲ್ಲಿಯೂ, ನಡತೆಯಲ್ಲಿಯೂ, ಪ್ರೀತಿಯಲ್ಲಿಯೂ,
ಆತ್ಮದಲ್ಲಿಯೂ, ವಿಶ್ವಾಸದಲ್ಲಿಯೂ, ನಿರ್ಮಲತ್ವದಲ್ಲಿಯೂ,
೧೩ ವಿಶ್ವಾಸಿಗಳಿಗೆ ಮಾದರಿಯಾಗಿರು. ಓದುವದರಲ್ಲಿಯೂ, ಬುದ್ಧಿ
ಹೇಳುವದರಲ್ಲಿಯೂ, ಬೋಧನೆಯಲ್ಲಿಯೂ, ನಾನು ಬರುವ

೧೪ ಪರ್ಯಂತರ ಜಾಗ್ರತೆಯಾಗಿರು. ಹಿರಿಯರ ಸಭೆಯ ಕೈಯಿ
ರುವಿಕೆಯ ಸಂಗಡ ಪ್ರವಾದನೆಯಿಂದ ನಿನಗೆ ಕೊಡಲ್ಪಟ್ಟಿಂಥ,
೧೫ ನಿನ್ನಲ್ಲಿರುವ ವರವನ್ನು ಅಲಕ್ಷ್ಯ ಮಾಡ ಬೇಡ. ನಿನ್ನ ಅಭಿವೃ
ದ್ಧಿಯು ಎಲ್ಲವುಗಳಲ್ಲಿ ತೋರುವ ಹಾಗೆ, ಇವುಗಳನ್ನು ಚಿಂತಿಸು,
೧೬ ಇವುಗಳಲ್ಲಿ ಇರು. ನಿನಗೂ ಬೋಧನೆಗೂ ನೋಡಿಕೋ; ಇವು
ಗಳಲ್ಲಿ ನೆಲೆಯಾಗಿರು. ಯಾಕಂದರೆ ಇದನ್ನು ಮಾಡಿ, ನಿನ್ನ
ನ್ನೂ, ನಿನ್ನನ್ನು ಕೇಳುವವರನ್ನೂ, ರಕ್ಷಿಸುವಿ.

## ೫. ಸಂಧಿ.

೧ ಹಿರಿಯನನ್ನು ಗದರಿಸದೆ, ಅವನಿಗೆ ತಂದೆಗೆಂದು ಬುದ್ಧಿ ಹೇ
೨ ಳು; ಕಿರಿಯರಿಗೆ ಸಹೋದರರಿಗೆಂದು; ಹಿರೇ ಹೆಂಗಸರಿಗೆ ತಾಯಿ
ಗಳಿಗೆಂದು, ಕಿರೇ ಹೆಂಗಸರಿಗೆ ಸಹೋದರಿಗಳಿಗೆಂದು, ಎಲ್ಲಾ ನಿ
೩ ರ್ಮಲತ್ವದಲ್ಲಿಯೇ. ನಿಜ ವಿಧವೆಗಳಾದ ವಿಧವೆಗಳನ್ನು ಸನ್ಮಾ
ನಿಸು.

೪ ಆದರೆ ಒಬ್ಬ ವಿಧವೆಗೆ ಮಕ್ಕಳಾಗಲಿ ಮೊಮ್ಮಕ್ಕಳಾಗಲಿ ಇ
ದ್ದರೆ, ಅವರು ಮೊದಲು ಸ್ವಂತ ಮನೆಯಲ್ಲಿ ಭಕ್ತರಾಗಿರಲೂ,
ಹೆತ್ತವರಿಗೆ ಪ್ರತ್ಯುಪಕಾರ ಮಾಡಲೂ, ಕಲಿತು ಕೊಳ್ಳಲಿ. ಯಾ
ಕಂದರೆ ದೇವರ ಮುಂದೆ ಇದೇ ಒಳ್ಳೇದಾಗಿಯೂ ಸಮರ್ಪಕ
೫ ವಾಗಿಯೂ ಅದೆ. ಆದರೆ ಒಂಟಿಗಳಾಗಿರುವ ನಿಜ ವಿಧವೆಯು
ದೇವರಲ್ಲಿ ನಿರೀಕ್ಷಿಸಿ, ರಾತ್ರಿ ಹಗಲು ಪ್ರಾರ್ಥನೆಗಳಲ್ಲಿಯೂ ಬಿ
೬ ನ್ನಹಗಳಲ್ಲಿಯೂ ನೆಲೆಯಾಗಿರುವಳು. ಆದರೆ ಭೋಗಸ್ತಳು ಬ
೭ ದುಕುವಾಗ್ಯೆ ಸತ್ತವಳಾಗಿದ್ದಾಳೆ. ಅವರು ಅಪರಾಧವಿಲ್ಲದೆ ಇರು
೮ ವ ಹಾಗೆ, ಇವುಗಳನ್ನು ಆಜ್ಞಾಪಿಸು. ಆದರೆ ಒಬ್ಬನು ಸ್ವಂತ
ಜನರಿಗೋಸ್ಕರವೂ, ಮುಖ್ಯವಾಗಿ ಮನೆಯವರಿಗೋಸ್ಕರವೂ,
ಮುಂಚಿಂತಿಸದಿದ್ದರೆ, ವಿಶ್ವಾಸವನ್ನು ಬೊಂಕಿ, ಅವಿಶ್ವಾಸಿಗಿಂತ
ಕಡೆಯಾಗಿದ್ದಾನೆ.

೯ ಅರವತ್ತು ವರುಷಕ್ಕೆ ಕಡಿಮೆಯಾಗಿರದವಳೂ, ಒಬ್ಬ ಗಂ
೧೦ ಡನ ಹೆಂಡತಿಯಾಗಿದ್ದವಳೂ, ಸತ್ಕ್ರಿಯೆಗಳಿಂದ ಹೆಸರು ಗೊಂ
ಡವಳೂ, ಮಕ್ಕಳನ್ನು ಸಾಕಿ, ಆತಿಥ್ಯ ಮಾಡಿ, ಪರಿಶುದ್ಧರ ಕಾ
ಲುಗಳನ್ನು ತೊಳೆದು, ಉಪದ್ರ ಪಡುವವರಿಗೆ ಸಹಾಯಕಳಾಗಿ,
ಎಲ್ಲಾ ಸತ್ಕ್ರಿಯೆಗಳನ್ನು ಅನುಸರಿಸಿದವಳೂ ಆಗಿದ್ದರೆ, ವಿಧವೆ
ಗಳ ಲೆಖ್ಖದಲ್ಲಿ ಸೇರಿಸಲ್ಪಡಲಿ.

೧೧ ಆದರೆ ಕಡಿಮೆ ಪ್ರಾಯದ ವಿಧವೆಗಳನ್ನು ಬೇಡೆಂದು ಬಿಡು;
ಯಾಕಂದರೆ ಅವರು ಕ್ರಿಸ್ತನಿಗೆ ವಿರೋಧವಾಗಿ ತುಂಟರಾದಾಗ,
೧೨ ಮದುವೆ ಮಾಡಿಕೊಳ್ಳಲು ಇಚ್ಛೈಸುತ್ತಾರೆ. ಮೊದಲಿನ ವಿಶ್ವಾಸ
೧೩ ವನ್ನು ಬಿಟ್ಟದರಿಂದ ಆಜ್ಞೆನಿರ್ಣಯ ಅವರಿಗೆ ಉಂಟು. ಅದಲ್ಲ
ದೆ ಅವರು ಮೈಗಳ್ಳರಾಗಿ, ಮನೆ ಮನೆ ತಿರುಗ ಕಲಿತು ಕೊಳ್ಳು
ತ್ತಾರೆ; ಮೈಗಳ್ಳರಾಗಿರುವದಲ್ಲದೆ, ಹರಟೆಯವರಾಗಿಯೂ, ಶೌಂ
ದರೆಗಾರರಾಗಿಯೂ, ಬಾರದವುಗಳನ್ನು ಮಾತಾಡುವವರಾಗಿ
೧೪ ಯೂ, ಇದ್ದಾರೆ. ಆದದರಿಂದ ಯೌವನ ಸ್ತ್ರೀಯರು ಮದು
ವೆ ಮಾಡಿ ಕೊಂಡು, ಮಕ್ಕಳನ್ನು ಹೆತ್ತು, ಮನೇಕೆಲಸ ನಡಿಸಿ,
ನಿಂದಿಸುವದಕ್ಕೆ ಯಾವ ಆಸ್ಪದವನ್ನಾದರೂ ಎದುರಾಳಿಗೆ ಕೊ
ಡದೆ ಇರ ಇಚ್ಛೈಸುತ್ತೇನೆ. ಯಾಕಂದರೆ ಈಗಲೇ ಕೆಲವರು ಸೈ
೧೫ ತಾನನ ಹಿಂದೆ ಮೋಸ ಹೋಗಿದ್ದಾರೆ. ಒಬ್ಬ ವಿಶ್ವಾಸಿಸುವವನಿ
ಗಾದರೂ ವಿಶ್ವಾಸಿಸುವವಳಿಗಾದರೂ ವಿಧವೆಯರಿದ್ದರೆ, ಸಭೆ
ಯು ಭಾರ ಪಡದೆ, ನಿಜ ವಿಧವೆಯರನ್ನು ಸಂರಕ್ಷಿಸುವ ಹಾಗೆ,
ಅವರು ಅವರನ್ನು ಸಂರಕ್ಷಿಸಲಿ.

೧೭ ಚನ್ನಾಗಿ ಅಧಿಕಾರ ನಡಿಸುವ ಹಿರಿಯರು, ಮುಖ್ಯವಾಗಿ ವಾ
ಕ್ಯದಲ್ಲಿಯೂ ಬೋಧನೆಯಲ್ಲಿಯೂ ಕಷ್ಟ ಮಾಡುವವರು, ಎ
೧೮ ರಡಪ್ಪು ಮಾನಕ್ಕೆ ತಕ್ಕವರೆಂದೆಣಿಸಲ್ಪಡಲಿ. ಯಾಕಂದರೆ ಕ
ಣ ತುಳ್ಳಿಯುವ ಎತ್ತಿನ ಬಾಯಿ ಕಟ್ಟಿ ಬಾರದೆಂದೂ, ಕೆಲಸದವ
ನು ತನ್ನ ಕೂಲಿಗೆ ಯೋಗ್ಯನೆಂದೂ, ಬರಹವು ಹೇಳುತ್ತದೆ.

೧೯ ಹಿರಿಯನಿಗೆ ವಿರೋಧವಾಗಿ, ಎರಡು ಮೂರು ಸಾಕ್ಷಿಗಳಿದ್ದರೆ
೨೦ ಹೊರ್ತು, ದೂರನ್ನು ಅಂಗೀಕರಿಸ ಬೇಡ. ಮಿಕ್ಕಾದವರು ಸಹ
ಹೆದರುವ ಹಾಗೆ, ಪಾಪ ಮಾಡುವವರನ್ನು ಎಲ್ಲರ ಮುಂದೆ ಗದರಿ
೨೧ ಸು. ದಾಕ್ಷಿಣ್ಯದಿಂದ ಏನೂ ಮಾಡದೆ, ಪಕ್ಷ ಪರಪಕ್ಷವಿಲ್ಲದೆ, ಇ
ವುಗಳನ್ನು ಕೈ ಕೊಳ್ಳ ಬೇಕೆಂದು, ದೇವರೂ, ಕರ್ತನಾದ
ಯೇಸು ಕ್ರಿಸ್ತನೂ, ಆಯ್ದಪ್ಪಟ್ಟ ದೂತರೂ, ಇವರ ಮುಂದೆ
೨೨ ನಿನಗೆ ಸಾಕ್ಷಿ ಕೊಡುತ್ತೇನೆ. ಯಾವನ ಮೇಲಾದರೂ ತ್ವರೆಯಾ
ಗಿ ಕೈಗಳನ್ನು ಇಡದೆ, ಬೇರೊಬ್ಬರ ಪಾಪಗಳಲ್ಲಿ ಪಾಲುಗಾರ
೨೩ ನಾಗದೆ ಇರು; ನಿನ್ನನ್ನು ನಿರ್ಮಲನಾಗಿ ಕಾಪಾಡಿಕೋ. ಇನ್ನು
ಮೇಲೆ ನೀರು ಕುಡಿಯದೆ, ನಿನ್ನ ಹೊಟ್ಟೆಗೋಸ್ಕರವೂ ಅನೇಕ
ಸಾರಿ ನಿನಗೆ ಆಗುವ ಬಲಹೀನತ್ವಗಳಿಗೋಸ್ಕರವೂ, ಸ್ವಲ್ಪ
ದ್ರಾಕ್ಷೇರಸವನ್ನು ತೆಗೆದುಕೋ.

೨೪ ಕೆಲವು ಮನುಷ್ಯರ ಪಾಪಗಳು ಮುಂಚೆ ಪ್ರತ್ಯಕ್ಷವಾಗಿ, ಆ
ಜ್ಞೆನಿರ್ಣಯಕ್ಕೆ ಮುಂಚೆ ಬರುತ್ತವೆ; ಕೆಲವರನ್ನು ಅವು ಹಿಂ
೨೫ ಬಾಲಿಸುತ್ತವೆ. ಅದೇ ಪ್ರಕಾರ ಒಳ್ಳೇ ಕ್ರಿಯೆಗಳು ಸಹ ಮುಂಚೆ
ಪ್ರತ್ಯಕ್ಷವಾಗಿವೆ; ಬೇರೆಯಾಗಿರುವವುಗಳು ಮರೆಯಾಗಿರಲಾರವು.

## ೬. ಸಂಧಿ.

೧ ನೊಗದ ಕೆಳಗಿರುವ ದಾಸರಪ್ಪು, ದೇವರ ಹೆಸರೂ ಉಪದೇ
ಶವೂ ದೂಷಣೆ ಪಡದ ಹಾಗೆ, ಸ್ವಂತ ಯಜಮಾನರನ್ನು ಸಕ
೨ ಲ ಮಾನಕ್ಕೆ ತಕ್ಕವರೆಂದೆಣಿಸಲಿ. ಆದರೆ ವಿಶ್ವಾಸಿಗಳಾದ ಯ
ಜಮಾನರುಳ್ಳವರು, ಅವರನ್ನು ಸಹೋದರರೆಂದು ಉದಾಸೀನ
ಮಾಡದೆ, ಅವರು ವಿಶ್ವಾಸಿಗಳೂ, ಪ್ರಿಯರೂ, ಉಪಕಾರದಲ್ಲಿ
ಪಾಲು ಹೊಂದುವವರೂ ಆಗಿರುವದರಿಂದ, ಹೆಚ್ಚಾಗಿ ಸೇವೆ ಮಾ
ಡಲಿ. ಇವುಗಳನ್ನು ಬೋಧಿಸಿ ಆಜ್ಞಾಪಿಸು.

೩ ಒಬ್ಬನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಸ್ವಸ್ಥ ವಾಕ್ಯ
೪ ಗಳಿಗೂ ಭಕ್ತಿಯ ಪ್ರಕಾರವಾದ ಉಪದೇಶಕ್ಕೂ ಒಪ್ಪದೆ, ಬೇರೆ
ಬೋಧನೆ ಹೇಳಿದರೆ, ಅಂಥವನು ಗರ್ವಿಸಿ, ಏನೂ ತಿಳಿಯದೆ,
ತರ್ಕಗಳನ್ನೂ ವಾಗ್ವಾದಗಳನ್ನೂ ಮಾಡುವ ಕೋಗದಲ್ಲಿದ್ದಾ
೫ ನೆ. ಇವುಗಳಿಂದ ಹೊಟ್ಟೆ ಕಿಚ್ಚೂ, ಝಗಳವೂ, ದೂಷಣೆಗಳೂ,
ಕೆಟ್ಟ ಸಂದೇಹಗಳೂ, ಬುದ್ಧಿ ಕೆಟ್ಟು, ಸತ್ಯವನ್ನು ಕಳೆ ಕೊಂಡು,
ಲಾಭವೇ ಭಕ್ತಿ ಎಂದು ನೆನೆಸುವ ಮನುಷ್ಯರ ವ್ಯರ್ಥ ವಾಗ್ವಾದ
೬ ಗಳೂ ಆಗುತ್ತವೆ. ಅಂಥವರಿಗೆ ದೂರವಾಗು. ಆದರೆ ತೃಪ್ತಿಯ
ಸಹಿತವಾದ ಭಕ್ತಿಯು ದೊಡ್ಡ ಲಾಭವಾಗಿದೆ. ಯಾಕಂದರೆ, ನಾವು
೭ ಲೋಕದಲ್ಲಿ ಏನೂ ತಕ್ಕೊಂಡು ಬರಲಿಲ್ಲ, ಏನೂ ತಕ್ಕೊಂಡು
೮ ಹೋಗಲಾರೆವೆಂಬುವದು ಪ್ರಕಟವಾಗಿದೆ. ಆದದರಿಂದ ನಮಗೆ ಆ
ನ್ನ ವಸ್ತ್ರವಿದ್ದರೆ, ಅದು ಸಾಕೆಂದೆಣಿಸುವ. ಆದರೆ ಐಶ್ವರ್ಯ
೯ ವಂತರಾಗ ಇಚ್ಛೈಸುವವರು ಶೋಧನೆಯಲ್ಲಿಯೂ, ಉರುಲಿನ



ಲ್ಲಿಯೂ, ಬುದ್ಧಿಯಿಲ್ಲದ ನಷ್ಟವುಳ್ಳ ಅನೇಕ ಆಶೆಗಳಲ್ಲಿಯೂ
ಬೀಳುತ್ತಾರೆ; ಅವು ಮನುಷ್ಯರನ್ನು ನಾಶನದಲ್ಲಿಯೂ ಲಯ
೧೦ ದಲ್ಲಿಯೂ ಮುಣುಗಿಸುತ್ತವೆ. ಯಾಕಂದರೆ ದ್ರವ್ಯಾಶೆಯು ಸ
ಕಲ ಕೇಡುಗಳ ಬೇರಾಗಿದೆ. ಅದನ್ನು ಕೆಲವರು ಆಶಿಸಿ ವಿಶ್ವಾಸವ
ನ್ನು ಬಿಟ್ಟು, ತಪ್ಪಿ ಹೋಗಿ, ತಮ್ಮನ್ನು ಅನೇಕ ವೇದನೆಗಳಿಂದ
ತಿವಿದು ಕೊಂಡಿದ್ದಾರೆ.

೧೧ ಆದರೆ ನೀನು, ಓ ದೇವರ ಮನುಷ್ಯನೇ, ಅವುಗಳನ್ನು ಬಿಟ್ಟು
ಹೋಗು; ನೀತಿ, ಭಕ್ತಿ, ವಿಶ್ವಾಸ, ಪ್ರೀತಿ, ತಾಳ್ಮೆ, ಸಾತ್ವಿಕತ್ವ
೧೨ ಗಳನ್ನು ಹಿಂದಟ್ಟು; ವಿಶ್ವಾಸದ ಒಳ್ಳೇ ಹೋರಾಟವನ್ನು ಹೋ
ರಾಡು; ನಿತ್ಯ ಜೀವವನ್ನು ಹಿಡಿದುಕೋ. ಅದಕ್ಕೆ ಕರೆಯಲ್ಪಟ್ಟು,
೧೩ ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಅರಿಕೆಯನ್ನು ಅರಿಕೆ ಮಾಡಿದಿ.

ಸರ್ವವನ್ನು ಬದುಕಿಸುವ ದೇವರು, ಪೊಂತ್ಯ ಪಿಲಾತನ
ಕಾಲದಲ್ಲಿ ಒಳ್ಳೇ ಅರಿಕೆಯನ್ನು ಸಾಕ್ಷಿಯಾಗಿ ಮಾಡಿದ ಕ್ರಿಸ್ತ
೧೪ ಯೇಸುವು, ಇವರ ಮುಂದೆ ನಿನಗೆ ಆಜ್ಞಾಪಿಸುವದೇನಂದರೆ— ನೀ
ನು ಆಜ್ಞೆಯನ್ನು ನಿರ್ಮಲವಾಗಿಯೂ ನಿರ್ದೋಷವಾಗಿಯೂ
ನಮ್ಮ ಕರ್ತನಾದ ಯೇಸು ಕ್ರಿಸ್ತನ ಪ್ರತ್ಯಕ್ಷತೆಯ ವರೆಗೆ ಕೈ
೧೫ ಕೊಳ್ಳ ಬೇಕು. ಅದನ್ನು ಸ್ವಂತ ಕಾಲಗಳಲ್ಲಿ ಭಾಗ್ಯವುಳ್ಳ ಏಕ
ಪ್ರಭುವು, ಅರಸುಗಳ ಅರಸನು, ಕರ್ತರ ಕರ್ತನು, ಒಬ್ಬನೇ
೧೬ ಅಮರತ್ವವುಳ್ಳವನು, ಅಪ್ರವೇಶ್ಯವಾದ ಬೆಳಕಿನಲ್ಲಿ ವಾಸ ಮಾ
ಡಿ, ಮನುಷ್ಯರಲ್ಲಿ ಯಾರಿಗೂ ಕಾಣಿಸದೆ, ಕಾಣಿಸ ಕೂಡದೆ, ಇ
ರುವವನು ತೋರಿಸುವನು. ಅವನಿಗೆ ಮಾನವೂ ನಿತ್ಯ ತ್ರಾಣವೂ
ಆಗಲಿ. ಆಮೆನ್.

೧೭ ಈಗಿನ ಲೋಕದ ಐಶ್ವರ್ಯವಂತರಿಗೆ, ಉನ್ನತವಾದವುಗಳ
ಮೇಲೆ ಮನಸ್ಸಿಡದೆ, ಅಸ್ಥಿರವಾದ ಐಶ್ವರ್ಯದಲ್ಲಿ ಅಲ್ಲ, ಐಶ್ವ
ರ್ಯವಾಗಿ ನಮಗೆ ಎಲ್ಲವನ್ನು ಅನುಭವಿಸುವದಕ್ಕೆ ದಯಪಾ
೧೮ ಲಿಸುವ ಜೀವವುಳ್ಳ ದೇವರಲ್ಲಿಯೇ ನಿರೀಕ್ಷಿಸಿ, ಉಪಕಾರಿಗಳೂ,
ಸತ್ಕ್ರಿಯೆಗಳಲ್ಲಿ ಐಶ್ವರ್ಯವಂತರೂ, ಧರ್ಮಿಷ್ಟರೂ, ಅ
ನ್ಯೋನ್ಯ ಪ್ರಿಯರೂ, ಆಗಿದ್ದು, ನಿತ್ಯ ಜೀವವನ್ನು ಹಿಡಿದು ಕೊ
೧೯ ಳ್ಳುವ ಹಾಗೆ, ಬರುವ ಕಾಲಕ್ಕಾಗಿ ತಮಗೆ ಒಳ್ಳೇ ಅಸ್ತಿವಾರವನ್ನು
ಇಟ್ಟು ಕೊಳ್ಳ ಬೇಕೆಂದು, ಆಜ್ಞಾಪಿಸು.

೨೦ ಓ ತಿಮೊಥೆಯನೇ! ನಿನಗೆ ಒಪ್ಪಿಸಲ್ಪಟ್ಟದ್ದನ್ನು ಕಾಪಾಡು.
ಅಪಭ್ರಷ್ಟವಾದ ವ್ಯರ್ಥ ಶಬ್ದಗಳಿಗೂ, ಸುಳ್ಳು ಹೆಸರುಳ್ಳ ಜ್ಞಾ
೨೧ ನದ ತರ್ಕಗಳಿಗೂ ದೂರವಾಗಿರು. ಈ ಜ್ಞಾನವನ್ನು ಕೆಲವರು
ಹೇಳಿ ಕೊಂಡು, ವಿಶ್ವಾಸದ ವಿಷಯದಲ್ಲಿ ತಪ್ಪಿದರು. ಕೃಪೆ
ಯು ನಿನ್ನ ಸಂಗಡ ಇರಲಿ. ಆಮೆನ್.

---

# THE SECOND EPISTLE
# OF PAUL THE APOSTLE TO TIMOTHY.

ಅಪೊಸ್ತಲನಾದ ಪೌಲನು ತಿಮೊಥೆಯನಿಗೆ ಬರೆದ ಎರಡನೇ ಪತ್ರಿಕೆ.

## ೧. ಸಂಧಿ.

೧ ದೇವರ ಚಿತ್ತದಿಂದ, ಕ್ರಿಸ್ತ ಯೇಸುವಿನಲ್ಲಿರುವ ಜೀವದ ವಾ
ಗ್ದತ್ತದ ಪ್ರಕಾರ, ಯೇಸು ಕ್ರಿಸ್ತನ ಅಪೊಸ್ತಲನಾದ ಪೌಲನು
೨ ಪ್ರಿಯ ಮಗನಾದ ತಿಮೊಥೆಯನಿಗೆ—ತಂದೆಯಾದ ದೇವರಿಂದ
ಲೂ, ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಿಂದಲೂ, ಕೃಪೆ
ಯೂ ಕರುಣೆಯೂ ಸಮಾಧಾನವೂ ಆಗಲಿ.

೩ ನಾನು ರಾತ್ರಿ ಹಗಲು ಮಾಡುವ ಪ್ರಾರ್ಥನೆಗಳಲ್ಲಿ ಎಡೆಬಿ
ಡದೆ ನಿನ್ನನ್ನು ನೆನಸುವದರಿಂದ, ಶುದ್ಧ ಮನಸಾಕ್ಷಿಯಾಗಿ ಹಿರಿಯರ
೪ ಕಾಲದಿಂದ ಸೇವಿಸುವ ದೇವರಿಗೆ ಸ್ತೋತ್ರ ಮಾಡುತ್ತೇನೆ. ನಿನ್ನ
ಕಣ್ಣೀರನ್ನು ನೆನಪು ಮಾಡಿ ಕೊಂಡು, ನಾನು ಸಂತೋಷ ಪೂರಿ
೫ ತನಾಗುವ ಹಾಗೆ, ನಿನ್ನನ್ನು ನೋಡ ಇಚ್ಛೈಸುತ್ತೇನೆ. ನಿನ್ನಲ್ಲಿ
ರುವ ಕಪಟವಿಲ್ಲದ ವಿಶ್ವಾಸವನ್ನು ಜ್ಞಾಪಕ ಮಾಡಿ ಕೊಳ್ಳುತ್ತೇನೆ
ನಲ್ಲ? ಅದು ಮೊದಲು ನಿನ್ನ ಅಜ್ಜಿಯಾದ ಲೋಯಿಯಲ್ಲಿ, ಮ
ತ್ತು ನಿನ್ನ ತಾಯಿಯಾದ ಯುನೀಕೆಯಲ್ಲಿ, ವಾಸವಾಗಿತ್ತು. ಅ
ದು ನಿನ್ನಲ್ಲಿ ಸಹ ಇರುತ್ತದೆಂದು ನಂಬುತ್ತೇನೆ.

೬ ಈ ಕಾರಣದಿಂದ ನನ್ನ ಕೈಯಿಡುವಿಕೆಯಿಂದ ನಿನ್ನಲ್ಲಿರುವ
ದೇವರ ವರವನ್ನು ಉರಿಯ ಮಾಡ ನಿನ್ನನ್ನು ಎಚ್ಚರಿಸುತ್ತೇನೆ.
೭ ಯಾಕಂದರೆ ದೇವರು ಹೇಡಿತನದ ಆತ್ಮವನ್ನಲ್ಲ, ಬಲ, ಪ್ರೀತಿ ಮ
ನೋಸ್ವಸ್ಥಗಳ ಆತ್ಮವನ್ನು ನಮಗೆ ಕೊಟ್ಟಿದ್ದಾನೆ. ಹೀಗಿರುವದ
ರಿಂದ ನಮ್ಮ ಕರ್ತನ ಸಾಕ್ಷಿಗೂ, ಅವನ ಬಂಧದವನಾದ ನನ
ಗೂ, ನಾಚಿಕೆ ಪಡದೆ, ದೇವರ ಬಲದಿಂದ ಸುವಾರ್ತೆಯ ಶ್ರಮೆ
೮ ಗಳಲ್ಲಿ ಪಾಲುಗಾರನಾಗಿರು. ಅವನು ನಮ್ಮನ್ನು ರಕ್ಷಿಸಿ, ನಮ್ಮ
ಕ್ರಿಯೆಗಳ ಪ್ರಕಾರವಲ್ಲ, ತನ್ನ ನಿರ್ಣಯದ ಪ್ರಕಾರವೂ, ಯು
ಗ ಕಾಲಗಳ ಮುಂಚೆ ಕ್ರಿಸ್ತ ಯೇಸುವಿನಲ್ಲಿ ನಮಗೆ ಕೊಡಲ್ಪ
೯ ಟ್ಟಿಂಥ, ಮರಣವನ್ನು ಲಯ ಮಾಡಿ, ಸುವಾರ್ತೆಯಿಂದ ಜೀವ
ವನ್ನೂ ನಿರ್ಲಯವನ್ನೂ ಬೆಳಕಿಗೆ ತಂದ, ನಮ್ಮ ರಕ್ಷಕನಾದ
ಯೇಸು ಕ್ರಿಸ್ತನ ಪ್ರತ್ಯಕ್ಷತೆಯಿಂದ ಈಗಲೇ ಪ್ರತ್ಯಕ್ಷವಾದಂಥ,
ಕೃಪೆಯ ಪ್ರಕಾರವೂ, ಪರಿಶುದ್ಧ ಕರೆಯುವಿಕೆಯಿಂದ ನಮ್ಮ
೧೦ ನ್ನು ಕರೆದಿದ್ದಾನೆ. ಆ ಸುವಾರ್ತೆಗೆ ನಾನು ಸಾರುವವನಾಗಿಯೂ,
ಅಪೊಸ್ತಲನಾಗಿಯೂ; ಜನಾಂಗಗಳ ಬೋಧಕನಾಗಿಯೂ, ನೇ
೧೧ ಮಿಸಲ್ಪಟ್ಟಿನು. ಆದಕಾರಣ ಇವುಗಳನ್ನು ಸಹಿಸುತ್ತೇನೆ; ಆದಾ
ಗ್ಯೂ ನಾಚಿಕೆಗೆ ಪಡುವದಿಲ್ಲ. ಹ್ಯಾಗಂದರೆ ನಾನು ವಿಶ್ವಾಸಿಸಿದ
ವನನ್ನು ಬಲ್ಲೆನು. ಮತ್ತು ನಾನು ಒಪ್ಪಿಸಿದ್ದನ್ನು ಆ ದಿನದ ಮ
ಟ್ಟಿಗೂ ಕಾಪಾಡ ಶಕ್ತನಾಗಿದ್ದಾನೆಂದು, ನಿಶ್ಚೈಸಿ ಕೊಂಡಿದ್ದೇನೆ.

೧೩ ಕ್ರಿಸ್ತ ಯೇಸುವಿನಲ್ಲಿರುವ ವಿಶ್ವಾಸದಲ್ಲಿಯೂ, ಪ್ರೀತಿಯಲ್ಲಿ
ಯೂ ನನ್ನಿಂದ ಕೇಳಿದ ಸ್ವಸ್ಥ ವಾಕ್ಯಗಳ ಪದ್ಧತಿಯನ್ನು ಹಿ
೧೪ ಡಿದುಕೋ. ನಿನಗೆ ಒಪ್ಪಿಸಲ್ಪಟ್ಟ ಒಳ್ಳೇ ವರವನ್ನು ನಮ್ಮಲ್ಲಿ
ವಾಸ ಮಾಡುವ ಪರಿಶುದ್ಧಾತ್ಮದ ಮೂಲವಾಗಿ ಕಾಪಾಡು.

೧೫ ಪ್ರಗೆಲ್ಲನೂ ಹೆರ್ಮೋಗೆನನೂ ಮೊದಲಾದ ಆಸ್ಯದಲ್ಲಿರುವವ
೧೬ ರೆಲ್ಲರು ನನ್ನನ್ನು ಬಿಟ್ಟು ಹೋದರೆಂಬುವದನ್ನು ಬಲ್ಲೆ. ಒನೆಸಿ
ಫೊರನ ಮನೆಗೆ ಕರ್ತನು ಕರುಣೆ ಮಾಡಲಿ; ಯಾಕಂದರೆ ಅವ
ನು ಅನೇಕ ಸಾರಿ ನನಗೆ ಉಪಶಮನ ಮಾಡಿ, ನನ್ನ ಸಂಕೋಲೆ
೧೭ ಗೋಸ್ಕರ ನಾಚಿಕೆ ಪಡದೆ, ಕೋಮದಲ್ಲಿರುವಾಗ ಅತಿ ಜಾಗ್ರತೆ
ಯಿಂದ ನನ್ನನ್ನು ಹುಡುಕಿ, ಕಂಡು ಕೊಂಡನು. ಆ ದಿನದಲ್ಲಿ ಕ
ರ್ತನಿಂದ ಕರುಣೆ ಹೊಂದುವ ಹಾಗೆ, ಕರ್ತನು ಅವನಿಗೆ ದಯ

ಪಾಲಿಸಲಿ. ಮತ್ತು ಎಫೆಸದಲ್ಲಿ ಅವನು ಎಷ್ಟು ಸೇವೆ ಮಾಡಿದನೆಂದು, ನಿನಗೆ ಚನಾಗಿ ತಿಳಿದಿದೆ.

## ೨. ಸಂಧಿ.

೧ ಆದದರಿಂದ ನೀನು, ನನ್ನ ಮಗನೇ, ಕ್ರಿಸ್ತ ಯೇಸುವಿನಲ್ಲಿರು
೨ ವ ಕೃಪೆಯಲ್ಲಿ ಬಲಗೊಳ್ಳು. ಮತ್ತು ಅನೇಕ ಸಾಕ್ಷಿಗಳ ಮು
ಖಾಂತರ ನನ್ನಿಂದ ಕೇಳಿದವುಗಳನ್ನೇ, ಬೇರೆಯವರನ್ನು ಸಹ
ಉಪದೇಶಿಸ ತಕ್ಕವರಾದ ನಂಬಿಕೆಯುಳ್ಳ ಜನರಿಗೆ ಒಪ್ಪಿಸು.
೩ ಆದದರಿಂದ ನೀನು ಯೇಸು ಕ್ರಿಸ್ತನ ಒಳ್ಳೇ ಯುದ್ಧಸ್ಥನಾಗಿ ಪ್ರ
೪ ಮೆಯನ್ನು ತಾಳಿಕೋ. ಯಾವ ದಂಡಿನವನಾದರೂ ತನ್ನನ್ನು
ದಂಡಿನಲ್ಲಿ ಸೇರಿಸಿದವನನ್ನು ಮೆಚ್ಚಿಸುವ ಹಾಗೆ, ಜೀವನದ ಕೆಲಸ
೫ ಗಳಲ್ಲಿ ಸಿಕ್ಕಿ ಕೊಳ್ಳುವದಿಲ್ಲ. ಮತ್ತು ಒಬ್ಬನು ಮಲ್ಲಯುದ್ಧ
ಮಾಡಿದರೆ, ನೇಮದ ಪ್ರಕಾರ ಯುದ್ಧ ಮಾಡದಿದ್ದರೆ, ಕಿರೀಟವ
೬ ನ್ನು ಹೊಂದನು. ಕಷ್ಟ ಮಾಡುವ ಒಕ್ಕಲಿಗನು, ಮೊದಲು ಫಲಗ
೭ ಳಲ್ಲಿ ಪಾಲು ಹೊಂದ ಬೇಕು. ನಾನು ಹೇಳುವವುಗಳನ್ನು ಆಲೋ
ಚಿಸು; ಕರ್ತನು ಎಲ್ಲವುಗಳಲ್ಲಿ ನಿನಗೆ ವಿವೇಕವನ್ನು ಕೊಡಲಿ.

೮ ನನ್ನ ಸುವಾರ್ತೆಯ ಪ್ರಕಾರ ದಾವೀದನ ಬೀಜದವನೂ, ಸ
ತ್ತವಕೊಳ್ಳಗಿಂದ ಎಬ್ಬಿಸಲ್ಪಟ್ಟವನೂ, ಆಗಿರುವ ಯೇಸು ಕ್ರಿಸ್ತ
೯ ನನ್ನು ಜ್ಞಾಪಕ ಮಾಡಿಕೋ. ಇದಕ್ಕೋಸ್ಕರ ನಾನು ದುಷ್ಕೃತ್ಯ
ದವನ ಹಾಗೆ ಬಂಧಗಳ ಪರ್ಯಂತರಕ್ಕೂ ಪ್ರಮೆ ಪಡುತ್ತೇ
೧೦ ನೆ. ಆದರೆ ದೇವರ ವಾಕ್ಯವು ಬಂಧಿಸಲ್ಪಟ್ಟಿದ್ದಲ್ಲ. ಅದಕ್ಕಾಗಿ
ಆಯಲ್ಪಟ್ಟವರಿಗೋಸ್ಕರ, ಅವರು ಸಹ ನಿತ್ಯ ಮಹಿಮೆಯ
ಸಂಗಡ ಕ್ರಿಸ್ತ ಯೇಸುವಿನಲ್ಲಿರುವ ರಕ್ಷಣೆಯನ್ನು ಹೊಂದುವ
೧೧ ಹಾಗೆ, ಎಲ್ಲವುಗಳನ್ನು ತಾಳಿ ಕೊಳ್ಳುತ್ತೇನೆ. ಈ ವಾಕ್ಯವು ನಂಬಿ
ಕೆಯಾದದ್ದು—ಏನಂದರೆ, ಅವನ ಕೂಡ ಸತ್ತರೆ, ಕೂಡ ಬದುಕು
೧೨ ವೆವು; ತಾಳಿ ಕೊಂಡರೆ, ಕೂಡ ಆಳುವೆವು; ನಾವು ಬೊಂಕಿದರೆ,
೧೩ ಅವನೂ ನಮ್ಮನ್ನು ಬೊಂಕುವನು; ನಾವು ನಂಬದಿದ್ದರೆ, ಅವನು
ನಂಬಿಕೆಯುಳ್ಳವನಾಗಿರುತ್ತಾನೆ; ತನ್ನನ್ನು ಬೊಂಕಲಾರನು.

೧೪ ಯಾವ ಪ್ರಯೋಜನಕ್ಕಲ್ಲ, ಕೇಳುವವರ ನಾಶನಕ್ಕಾಗಿ ವಾ
ಗ್ವಾದ ಮಾಡ ಬಾರದೆಂದು, ಕರ್ತನ ಮುಂದೆ ಸಾಕ್ಷಿ ಹೇಳಿ,
೧೫ ಇವುಗಳ ಜ್ಞಾಪಕ ಕೊಡು. ದೇವರಿಗೆ ಪರೀಕ್ಷಿತನಾಗಿಯೂ, ನಾ
ಚಿಕೆ ಪಡದ ಕೆಲಸದವನಾಗಿಯೂ, ಸತ್ಯದ ವಾಕ್ಯವನ್ನು ಸರಿ
ಯಾಗಿ ಭಾಗಿಸುವವನಾಗಿಯೂ, ನಿನ್ನನ್ನು ಪ್ರತಿಷ್ಠೆ ಮಾಡಿ
೧೬ ಕೊಳ್ಳ ಎಚ್ಚರಿಕೆಯಾಗಿರು. ಆದರೆ ಅಪಭ್ರಷ್ಟವಾದ ವ್ಯರ್ಥ
ಶಬ್ದಗಳಿಗೆ ದೂರವಾಗಿರು; ಯಾಕಂದರೆ ಅವು ಹೆಚ್ಚಾದ ಭಕ್ತಿಹೀ
೧೭ ನತ್ವಕ್ಕೆ ಬೆಳೆಯುತ್ತವೆ. ಮತ್ತು ಅವರ ಮಾತು ಕೊಳೆಕ ಹು
ಣ್ಣಿನ ಹಾಗೆ ತಿನ್ನುವದು—ಅಂಥವರಲ್ಲಿ ಹುಮೆನಾಯನೂ ಫಿಲೇ
೧೮ ತನೂ ಇದ್ದಾರೆ. ಇವರು ಸತ್ಯಕ್ಕೆ ತಪ್ಪಿ, ಪುನರುತ್ಥಾನವು ಆಗಿ
ಹೋಯಿತೆಂದು ಹೇಳಿ, ಕೆಲವರ ವಿಶ್ವಾಸವನ್ನು ಕೆಡವುತ್ತಾರೆ.

೧೯ ಹಾಗಾದರೂ ದೇವರ ಸ್ಥಿರವಾದ ಅಸ್ತಿವಾರವು ನಿಲ್ಲುತ್ತದೆ; ಅ
ದಕ್ಕೆ ಮುದ್ರೆಯು ಇದೇ— ಕರ್ತನು ತನ್ನವರನ್ನು ಅರಿತಿದ್ದಾನೆ;
ಮತ್ತು ಕ್ರಿಸ್ತನ ಹೆಸರನ್ನು ಹೇಳುವವರೆಲ್ಲರು ಅನ್ಯಾಯವನ್ನು
೨೦ ಬಿಟ್ಟು ಬಿಡಲಿ. ಆದರೆ ದೊಡ್ಡ ಮನೆಯಲ್ಲಿ ಬೆಳ್ಳಿ ಭಂಗಾರದ
ಪಾತ್ರೆಗಳು ಮಾತ್ರವಲ್ಲ, ಮರದವುಗಳೂ, ಮಣ್ಣಿನವುಗಳೂ, ಕೆ
೨೧ ಲವು ಮಾನಕ್ಕೂ, ಕೇಲವು ಅವಮಾನಕ್ಕೂ ಇರುವವು. ಹಾಗಾ
ದರೆ ಒಬ್ಬನು ಇವುಗಳನ್ನು ಬಿಟ್ಟು, ತನ್ನನ್ನು ಶುದ್ಧ ಮಾಡಿ
ಕೊಂಡರೆ, ಪರಿಶುದ್ಧ ಮಾಡಲ್ಪಟ್ಟಿಂಥ, ಯಜಮಾನನಿಗೆ ಪ್ರ
ಯೋಜನವಾದಂಥ, ಎಲ್ಲಾ ಒಳ್ಳೇ ಕೆಲಸಕ್ಕೆ ಸಿದ್ಧವಾದಂಥ,
ಮಾನಕ್ಕಾದಂಥ, ಪಾತ್ರೆಯಾಗಿರುವನು.

೨೨ ಆದರೆ ಯೌವನದ ಆಶೆಗಳನ್ನು ಬಿಟ್ಟು ಓಡಿ ಹೋಗಿ, ಶು
ದ್ಧ ಹೃದಯದಿಂದ ಕರ್ತನನ್ನು ಸ್ಮರಿಸುವವರ ಸಂಗಡ ನೀತಿ,
೨೩ ವಿಶ್ವಾಸ, ಪ್ರೀತಿ, ಸಮಾಧಾನಗಳನ್ನು ಹಿಂದಟ್ಟು. ಇದಲ್ಲದೆ ವಿದ್ಯ
ವಿಲ್ಲದ ಹುಚ್ಚು ತರ್ಕಗಳನ್ನು ಅವುಗಳಿಂದ ಜಗಳಗಳು ಹುಟ್ಟು
೨೪ ತ್ತವೆಂದು ತಿಳಿದು, ಬೇಡೆಂದು ಬಿಡು. ಕರ್ತನ ದಾಸನು ಝಗಳ
ವಾಡದೆ, ಎಲ್ಲರ ಕಡೆಗೆ ಶಾಂತನೂ, ಬೋಧಿಸ ಶಕ್ತನೂ, ತಾಳ್ಮೆ
೨೫ ಯುಳ್ಳವನೂ, ಆಗಿದ್ದು, ಬಂದು ವೇಳೆ ದೇವರು ಅವರಿಗೆ ಸತ್ಯ
೨೬ ದ ಅರಿಕೆಗೆ ಮಾನಸಾಂತರ ಕೊಟ್ಟಾನೆಂದೂ, ತನ್ನ ಚಿತ್ತದ ಪ್ರ
ಕಾರ ಅವರನ್ನು ಸೆರೆ ಹಿಡಿಯುವ ಪಿಶಾಚನ ಉರುಲಿನಿಂದ ತಪ್ಪಿ
ಎಚ್ಚರವಾದಾರೆಂದೂ, ಸಾತ್ವಿಕತ್ವದಲ್ಲಿ ವಿರೋಧಿಗಳನ್ನು ಉ
ಪದೇಶಿಸುವವನಾಗಿರ ಬೇಕು.

## ೩. ಸಂಧಿ.

೧ ಇದಲ್ಲದೆ ಇದನ್ನು ತಿಳಿಕೋ—ಕಡೇ ದಿನಗಳಲ್ಲಿ ಕಠಿಣವಾದ
೨ ಕಾಲಗಳು ಬರುವವು. ಹ್ಯಾಗಂದರೆ ಮನುಷ್ಯರು ಸ್ವಸ್ನೇಹದ
ವರೂ, ದ್ರವ್ಯಾಸಿಗಳೂ, ಡಾಂಭಿಕರೂ, ಗರ್ವಿಷ್ಠರೂ, ದೂಷಕ
ರೂ, ಹೆತ್ತವರಿಗೆ ಅವಿಧೇಯರೂ, ಕೃತಜ್ಞತೆಯಿಲ್ಲದವರೂ, ಅ
೩ ಪವಿತ್ರರೂ, ವಾತ್ಸಲ್ಯವಿಲ್ಲದವರೂ, ಅನ್ಯೋನ್ಯವಾಗದವರೂ,
ಚಾಡಿಗಾರರೂ, ಅಸಮ್ಯತರೂ, ಅನಾಥಗಳೂ, ಸಜ್ಜನ ಸ್ನೇಹ
೪ ವಿಲ್ಲದವರೂ, ದ್ರೋಹಿಗಳೂ, ಆತುರರೂ, ಉಬ್ಬಿಕೊಂಡವ
ರೂ, ದೇವರಿಗಿಂತ ಹೆಚ್ಚಾಗಿ ಸುಖಗಳನ್ನು ಸ್ನೇಹಿಸುವವರೂ,
೫ ಭಕ್ತಿಯ ರೂಪವುಳ್ಳವರಾಗಿ, ಅದರ ಬಲವನ್ನು ಬೊಂಕಿದವ
೬ ರೂ, ಆಗಿರುವರು; ಇಂಥವರಿಗೆ ದೂರವಾಗು. ಯಾಕಂದರೆ ಮ
ನೆಗಳಲ್ಲಿ ಹೊಕ್ಕು, ಪಾಪಗಳಿಂದ ಭರಿತರಾಗಿ, ನಾನಾ ಆಶೆಗಳಿಂದ
೭ ಪೈಯಲ್ಪಟ್ಟು, ಯಾವಾಗಲೂ ಕಲಿಯುತ್ತಾ, ಎಂದೂ ಸತ್ಯ
ದ ತಿಳುವಿಕೆಗೆ ಸೇರಲಾರದ ಹೆಂಗಸರನ್ನು ಸೆರೆ ಹಿಡಿಯುವವರು
೮ ಅಂಥವರಾಗಿದ್ದಾರೆ. ಯನ್ನನೂ ಯಂಬ್ರನೂ ಮೊಸೆಯನ್ನು
ವಿರೋಧಿಸಿದ ಮೇರೆಗೆ, ಇವರು ಸಹ ಬುದ್ಧಿ ಕೆಟ್ಟವರಾಗಿಯೂ,
ವಿಶ್ವಾಸದ ವಿಷಯ ಆಗದವರಾಗಿಯೂ, ಸತ್ಯವನ್ನು ವಿರೋ
೯ ಧಿಸುತ್ತಾರೆ. ಆದರೆ ಅವರು ಅಧಿಕವಾಗಿ ಹೆಚ್ಚರು; ಯಾಕಂದರೆ
ಅವರದು ಆದ ಪ್ರಕಾರವೇ, ಇವರ ದುರ್ಬುದ್ಧಿಯು ಎಲ್ಲರಿಗೆ
ಪ್ರಸಿದ್ಧಿಯಾಗುವದು.

೧೦ ಆದರೆ ನೀನು ನನ್ನ ಬೋಧನೆ, ನಡತೆ, ಅಭಿಪ್ರಾಯ, ವಿ
೧೧ ಶ್ವಾಸ, ದೀರ್ಘಶಾಂತಿ, ಪ್ರೀತಿ, ತಾಳ್ಮೆಗಳನ್ನೂ, ಅಂತಿಯೊ
ಕ್ಯದಲ್ಲಿಯೂ ಇಕೋನ್ಯದಲ್ಲಿಯೂ ಲುಸ್ತ್ರದಲ್ಲಿಯೂ ನಾನು
ಪಟ್ಟ ಹಿಂಸೆ ಪ್ರಮೆಗಳನ್ನೂ ಹಿಂಬಾಲಿಸಿದಿ. ಎಂಥ ಹಿಂಸೆಗಳನ್ನು
ತಾಳಿದೆನು! ಅವೆಲ್ಲವುಗಳಿಂದ ಕರ್ತನು ನನ್ನನ್ನು ತಪ್ಪಿಸಿದನು.
೧೨ ಇದಲ್ಲದೆ ಕ್ರಿಸ್ತ ಯೇಸುವಿನಲ್ಲಿ ಭಕ್ತಿಯಾಗಿ ಬದುಕ ಮನಸ್ಸು
೧೩ ಳ್ಳವರೆಲ್ಲರು ಹಿಂಸೆ ಪಡುವರು. ಆದರೆ ದುಷ್ಟ ಮನುಷ್ಯರೂ
ಮಂತ್ರಗಾರರೂ ಮೋಸಗೊಳಿಸುತ್ತಾ, ಮೋಸ ಹೋಗುತ್ತಾ
ಹೆಚ್ಚು ಹೆಚ್ಚಾಗಿ ಕೆಡುವರು.



೧೪ ಆದರೆ ನೀನು ಕಲಿತು ದೃಢವಾಗಿ ತಿಳುಕೊಂಡವುಗಳಲ್ಲಿ ನೆಲೆ
೧೫ ಯಾಗಿರು. ಯಾರಿಂದ ಕಲಿತಿ ಎಂದೂ, ಕ್ರಿಸ್ತ ಯೇಸುವಿನಲ್ಲಿರುವ
ವಿಶ್ವಾಸದಿಂದ ರಕ್ಷಣೆಗಾಗಿ ನಿನಗೆ ಜ್ಞಾನವನ್ನು ಕೊಡ ಶಕ್ತವಾ
ದ ಪರಿಶುದ್ಧ ಬರಹಗಳನ್ನು ಚಿಕ್ಕಂದಿನಿಂದ ಅರಿತಿದ್ದೀ ಎಂದೂ,
೧೬ ನಿನಗೆ ತಿಳಿಯುತ್ತದಲ್ಲ? ಬರಹವೆಲ್ಲಾ ದೈವ ಪ್ರೇರಿತವಾದದ್ದು,
ಬೋಧನೆಗೂ, ಖಂಡನೆಗೂ, ತಿದ್ದು ಪಾಟಿಗೂ, ನೀತಿಯ ಉಪ
ದೇಶಕ್ಕೂ, ದೇವರ ಮನುಷ್ಯನು ಎಲ್ಲಾ ಸತ್ಕ್ರಿಯೆಗಳಿಗೆ ಸಿದ್ಧ
ನಾಗಿ ಆಯತ್ತನಾಗುವದಕ್ಕೂ ಪ್ರಯೋಜನವಾಗಿದೆ.

## ೪. ಸಂಧಿ.

೧ ಆದದರಿಂದ ದೇವರ ಮುಂದೆಯೂ, ತನ್ನ ಪ್ರತ್ಯಕ್ಷತೆಯಲ್ಲಿ
ಯೂ, ತನ್ನ ರಾಜ್ಯದಲ್ಲಿಯೂ ಬದುಕುವವರಿಗೂ ಸತ್ತವರಿಗೂ
ನ್ಯಾಯ ತೀರಿಸಲಿರುವ ಕರ್ತನಾದ ಯೇಸು ಕ್ರಿಸ್ತನ ಮುಂದೆ
೨ ಯೂ, ನಾನು ಕೊಡುವ ಸಾಕ್ಷಿ ಏನಂದರೆ—ವಾಕ್ಯವನ್ನು ಸಾರು;
ಸುಕಾಲದಲ್ಲಿಯೂ ಅಕಾಲದಲ್ಲಿಯೂ ಎಡೆಬಿಡದೆ ಇರು; ಸಕಲ
ದೀರ್ಘಶಾಂತಿಯಿಂದಲೂ ಉಪದೇಶದಿಂದಲೂ, ಖಂಡಿಸಿ, ಗದ
೩ ರಿಸಿ, ಎಚ್ಚರಿಸು. ಯಾಕಂದರೆ ಅವರು ಸ್ವಸ್ಥ ಬೋಧನೆಯನ್ನು
ತಾಳದೆ ತೀಟೆ ಕಿವಿಗಳಾಗಿ, ಸ್ವಂತ ಇಚ್ಛೆಗಳ ಪ್ರಕಾರ ತಮಗೆ ತಾ
೪ ವೇ ಬೋಧಕರನ್ನು ಕೂಡಿಸಿ ಕೊಂಡು, ಸತ್ಯದ ಕಡೆಯಿಂದ ಕಿ
ವಿಯನ್ನು ತಿರುಗಿಸಿ, ಕಟ್ಟು ಕಥೆಗಳಿಗೆ ತಿರುಗಿ ಕೊಳ್ಳುವ ಸಮ
೫ ಯವು ಬರುವದು. ಆದರೆ ನೀನು ಎಲ್ಲವುಗಳಲ್ಲಿ ಎಚ್ಚತ್ತಿದ್ದು,
ಪ್ರಮೆ ತಾಳಿ, ಸುವಾರ್ತಿಕನ ಕೆಲಸವನ್ನು ಮಾಡಿ, ನಿನ್ನ ಸೇವೆ
ಯನ್ನು ಪೂರೈಸು.

೬ ಯಾಕಂದರೆ ಈಗಲೇ ಅರ್ಪಿಸಲ್ಪಡುತ್ತೇನೆ. ನಾನು ಬಿಟ್ಟು
೭ ಹೋಗುವ ಸಮಯ ಬಂದಿದೆ. ಒಳ್ಳೇ ಹೋರಾಟವನ್ನು ಹೋ
ರಾಡಿದ್ದೇನೆ; ಓಟವನ್ನು ತೀರಿಸಿದ್ದೇನೆ; ವಿಶ್ವಾಸವನ್ನು ಕೈಕೊಂಡಿ
೮ ದ್ದೇನೆ. ಇನ್ನು ಮೇಲೆ ನೀತಿಯ ಕಿರೀಟವು ನನಗೋಸ್ಕರ ಇ
ಟ್ಟಿದೆ; ಆ ದಿನದಲ್ಲಿ ನೀತಿಯುಳ್ಳ ನ್ಯಾಯಾಧಿಪತಿಯಾದ ಕರ್ತ
ನು ಅದನ್ನು ನನಗೆ ಕೊಡುವನು; ನನಗೆ ಮಾತ್ರವಲ್ಲ, ಅವನ ಪ್ರ
ತ್ಯಕ್ಷತೆಯನ್ನು ಪ್ರೀತಿ ಮಾಡಿರುವವರೆಲ್ಲರಿಗೂ ಸಹ.

೯ ಬೇಗ ನನ್ನ ಹತ್ತರ ಬರ ಜಾಗ್ರತೆಯಾಗಿರು. ಯಾಕಂದರೆ
೧೦ ದೇಮನು ಈಗಿನ ಲೋಕವನ್ನು ಪ್ರೀತಿ ಮಾಡಿ, ನನ್ನನ್ನು ಬಿಟ್ಟನು.
ಅವನು ಥೆಸ್ಸಲೊನೀಕಕ್ಕೂ, ಕ್ರೆಸ್ಕನು ಗಲಾತ್ಯಕ್ಕೂ, ತೀತ
೧೧ ನು ದಲ್ಮಾತ್ಯಕ್ಕೂ, ಹೊರಟು ಹೋದರು. ಲೂಕನು ಮಾತ್ರ
ನನ್ನ ಸಂಗಡ ಇದ್ದಾನೆ. ಮಾರ್ಕನನ್ನು ಕೀರಿಸಿ ಕರಕೊಂಡು
ಬಾ; ಯಾಕಂದರೆ ಅವನು ನನಗೆ ಸೇವೆಗೋಸ್ಕರ ಪ್ರಯೋಜ
೧೨ ಕನಾಗಿದ್ದಾನೆ. ತುಕಿಕನನ್ನು ಎಫೆಸಕ್ಕೆ ಕಳುಹಿಸಿದ್ದೇನೆ. ನಾನು
೧೩ ತ್ರೋಯೆದಲ್ಲಿ ಕರ್ಪನ ಹತ್ತರ ಬಿಟ್ಟು ಬಂದ ಮೇಲಂಗಿಯ
ನ್ನೂ, ಪುಸ್ತಕಗಳನ್ನೂ, ಮುಖ್ಯವಾಗಿ ತೊಗಲು ಕಾಗದಗಳ
೧೪ ನ್ನೂ, ಬರುವಾಗ, ತೆಗದು ಕೊಂಡು ಬಾ. ಕಂಚುಗಾರನಾದ ಅಲೆ
ಕ್ಸಂದ್ರನು ನನ್ನನ್ನು ಬಹಳ ತೊಂದರೆ ಪಡಿಸಿದನು. ಅವನ ಕೃ
ತ್ಯಗಳ ಹಾಗೆ, ಕರ್ತನು ಅವನಿಗೆ ಬದಲು ಕೊಡಲಿ. ಅವನಿಗೆ ನೀ
ನು ಸಹ ಎಚ್ಚರವಾಗಿರು. ಯಾಕಂದರೆ ಬಹಳವಾಗಿ ನಮ್ಮ ಮಾ
ತುಗಳನ್ನು ವಿರೋಧಿಸಿದ್ದಾನೆ.

೧೬ ನನ್ನ ಮೊದಲನೇ ಪ್ರತ್ಯುತ್ತರದಲ್ಲಿ ಯಾರೂ ನನ್ನ ಸಹಾ
ಯಕ್ಕೆ ಬರಲಿಲ್ಲ; ಎಲ್ಲರೂ ನನ್ನನ್ನು ಬಿಟ್ಟು ಹೋದರು. ಅದು
೧೭ ಅವರಿಗೆ ಎಣಿಸಲ್ಪಡದಿರಲಿ. ಆದಾಗ್ಯೂ ಕರ್ತನು ನನ್ನ ಬಳಿ
ಯ ನಿಂತು, ನನ್ನಿಂದ ಪ್ರಸಂಗವು ಪೂರೈಸಲ್ಪಡುವ ಹಾಗೆಯೂ,
ಜನಾಂಗಗಳೆಲ್ಲಾ ಕೇಳುವ ಹಾಗೆಯೂ, ನನ್ನನ್ನು ಬಲ ಪಡಿಸಿದ
೧೮ ನು; ಮತ್ತು ಸಿಂಹದ ಬಾಯಿಯಿಂದ ತಪ್ಪಿಸಲ್ಪಟ್ಟಿನು. ಮತ್ತು ಕ
ರ್ತನು ಸಕಲ ದುಷ್ಕ್ರಿಯೆಗಳಿಂದ ನನ್ನನ್ನು ತಪ್ಪಿಸಿ ಪರಲೋ
ಕದಲ್ಲಿರುವ ತನ್ನ ರಾಜ್ಯದ ವರಿಗೆ ರಕ್ಷಿಸುವನು. ಅವನಿಗೆ ಯುಗ
ಯುಗಾಂತರಗಳಿಗೂ ಮಹಿಮೆಯು ಆಗಲಿ. ಆರ್ಮೆ.

೧೯ ಪ್ರಿಸ್ಕಳನ್ನೂ ಅಕ್ವಿಲನನ್ನೂ ಒನೆಸಿಫೊರನ ಮನೆಯನ್ನೂ
೨೦ ವಂದಿಸು. ಎರಸ್ತನು ಕೊರಿಂಥದಲ್ಲಿ ನಿಂತನು. ತ್ರೊಫಿಮನನ್ನು
೨೧ ಅಸಾಖ್ಯವಾಗಿ ಮಿಲೇತದಲ್ಲಿ ಬಿಟ್ಟಿನು. ಹಿಮಕಾಲಕ್ಕೆ ಮುಂಚೆ
ಬರ ಎಚ್ಚರಿಕೆಯಾಗಿರು. ಯುಬೂಲನೂ, ಪೂದೆಯನೂ, ಲೀ
ನನೂ, ಕ್ಲಾದ್ಯಳೂ, ಸಹೋದರರೆಲ್ಲರೂ ನಿನ್ನನ್ನು ವಂದಿಸು
೨೨ ತ್ತಾರೆ. ಕರ್ತನಾದ ಯೇಸು ಕ್ರಿಸ್ತನು ನಿನ್ನ ಆತ್ಮದ ಸಂಗಡ
ಇರಲಿ. ಕೃಪೆಯು ನಿಮ್ಮ ಸಂಗಡ ಇರಲಿ. ಆರ್ಮೆ.

---

# THE EPISTLE
# OF PAUL THE APOSTLE TO TITUS.

### ಅಪೊಸ್ತಲನಾದ ಪೌಲನು ತೀತನಿಗೆ ಬರೆದ ಪತ್ರಿಕೆ.

## ೧. ಸಂಧಿ.

೧ ದೇವರು ಆದು ಕೊಂಡವರ ವಿಶ್ವಾಸದ ಪ್ರಕಾರವಾಗಿಯೂ,
ಭಕ್ತ್ಯಾನುಸಾರವಾದ ಸತ್ಯದ ತಿಳುವಿಕೆಯ ಪ್ರಕಾರವಾಗಿಯೂ,
೨ ಸುಳ್ಳಾಡದ ದೇವರು ಯುಗ ಕಾಲಗಳ ಮುಂಚೆ ವಾಗ್ದತ್ತ ಮಾಡಿ,
೩ ತಕ್ಕ ಸಮಯಗಳಲ್ಲಿ ನಮ್ಮ ರಕ್ಷಕನಾದ ದೇವರ ಅಪ್ಪಣೆಯ
ಪ್ರಕಾರ ನನಗೆ ಒಪ್ಪಿಸಲ್ಪಟ್ಟ, ತನ್ನ ವಾಕ್ಯದ ಪ್ರಸಂಗದಿಂದ ಪ್ರ
ಕಟ ಮಾಡಿದ ನಿತ್ಯ ಜೀವದ ನೀರೀಕ್ಷೆಯಾಗಿಯೂ, ಯೇಸು
೪ ಕ್ರಿಸ್ತನ ಅಪೊಸ್ತಲನೂ, ದೇವರ ದಾಸನೂ, ಆದ ಪೌಲನು ಹು
ದುವಾದ ವಿಶ್ವಾಸದ ಪ್ರಕಾರ, ನಿಜ ಮಗನಾದ ತೀತನಿಗೆ— ತಂದೆ
ಯಾದ ದೇವರಿಂದಲೂ, ನಮ್ಮ ರಕ್ಷಕನಾಗಿರುವ ಕರ್ತನಾದ
ಯೇಸು ಕ್ರಿಸ್ತನಿಂದಲೂ, ಕೃಪೆಯೂ ಕರುಣೆಯೂ, ಸಮಾಧಾ
ನವೂ ಆಗಲಿ.

೫ ನಾನು ನಿನಗೆ ಆಜ್ಞಾಪಿಸಿದ ಪ್ರಕಾರ ಮಿಕ್ಕಾದವುಗಳನ್ನು ನೆಟ್ಟಿ
ಗೆ ಮಾಡಿ, ಪಟ್ಟಣ ಪಟ್ಟಣದಲ್ಲಿ ಹಿರಿಯರನ್ನು ಇರಿಸುವದಕ್ಕೋಸ್ಕ
೬ ರ ನಿನ್ನನ್ನು ಕ್ರೇತದಲ್ಲಿ ಬಿಟ್ಟು ಬಂದೆನು. ಒಬ್ಬನು ನಿರಪರಾಧಿ
ಯೂ, ಒಬ್ಬಳೇ ಹೆಂಡತಿಯ ಗಂಡನೂ, ದುಂದುಶನದ ಅಪ
ಕೀರ್ತಿಯಿಲ್ಲದೆ, ಅವಿಧೇಯರಾಗದೆ ಇರುವ ವಿಶ್ವಾಸಿಗಳಾದ
೭ ಮಕ್ಕಳುಳ್ಳವನೂ, ಆಗಿದ್ದರೆ, ಇರಿಸು. ಯಾಕಂದರೆ ಅಧ್ಯಕ್ಷ
ನು, ದೇವರ ಬಿಗ್ರಾಣದವನಿಗೆ ತಕ್ಕ ಹಾಗೆ, ಅಪರಾಧವೂ, ಸ್ವ
ಯಿಚ್ಛೆಯೂ ಕೋಪವೂ ಇಲ್ಲದೆ, ಮದ್ಯಪಾನಿಯೂ, ಹೊತ
೮ ದಾಡುವವನೂ, ಲೋಭಿಯೂ ಆಗಿರದೆ, ಅತಿಥ್ಯಪ್ರಿಯನೂ, ಸ

ಜ್ಜನ ಪ್ರಿಯನೂ, ಮನೋಸ್ವಸ್ಥನೂ, ನೀತಿಯುಳ್ಳವನೂ, ಪ
೯ ವಿತ್ರನೂ, ಸಮ್ಯತನೂ, ಆಗಿದ್ದು, ಸ್ವಸ್ಥ ಬೋಧನೆಯಿಂದ ಬು
ದ್ಧಿ ಹೇಳಲೂ, ಎದುರಾಡುವವರನ್ನು ಖಂಡಿಸಲೂ ಸಮರ್ಥನಾಗು
ವ ಹಾಗೆ, ಉಪದೇಶಕ್ಕೆ ಅನುಸಾರವಾದ ನಂಬಿಕೆಯಾದ ವಾಕ್ಯ
ವನ್ನು ಕೈಕೊಳ್ಳ ಬೇಕು.

೧೦ ಯಾಕಂದರೆ ಅನೇಕರೂ, ಮುಖ್ಯವಾಗಿ ಪರಿಛೇದನೆಯವರೂ,
ಅವಿಧೇಯರೂ, ಹರಟೆ ಮಾತಿನವರೂ, ಮೋಸಗಾರರೂ, ಆಗಿ
೧೧ದ್ದಾರೆ. ಅವರ ಬಾಯಿಗಳನ್ನು ಮುಚ್ಚ ಬೇಕು; ಅವರು ದುರ್ಲಾ
ಭಕ್ಕೋಸ್ಕರ ಬಾರದವುಗಳನ್ನು ಬೋಧಿಸಿ, ಪೂರ್ಣ ಮನೆಗ
೧೨ಳನ್ನು ಹಾಳು ಮಾಡುತ್ತಾರೆ. ಅವರಲ್ಲಿ ಅವರ ಸ್ವಂತ ಪ್ರವಾದಿ
ಯಾಗಿರುವ ಒಬ್ಬನು ಹೇಳ್ದಿದ್ದೇನಂದರೆ, ಕ್ರೇತ್ಯರು ಯಾವಾಗ
ಲೂ ಸುಳ್ಳುಗಾರರೂ, ದುಷ್ಟ ಮೃಗಗಳೂ, ಸೋಮಾರಿಯಾ
೧೩ ದ ಹೊಟ್ಟೆಗಳೂ ಆಗಿದ್ದಾರೆ. ಈ ಸಾಕ್ಷಿಯು ಸತ್ಯವಾಗಿದೆ. ಈ
೧೪ ಕಾರಣದಿಂದ ಅವರು ವಿಶ್ವಾಸದಲ್ಲಿ ಸ್ವಸ್ಥವಾಗಿ, ಯೆಹೂದ್ಯರ
ಕಟ್ಟು ಕಥೆಗಳನ್ನೂ, ಸತ್ಯದ ಕಡೆಯಿಂದ ತಿರುಗಿಕೊಳ್ಳುವ ಮ
ನುಷ್ಯರ ಕಟ್ಟಳೆಗಳನ್ನೂ, ಲಕ್ಷ್ಯ ಮಾಡದ ಹಾಗೆ, ಅವರನ್ನು
೧೫ ಖಂಡಿತವಾಗಿ ಗದರಿಸು. ಶುದ್ಧರಿಗೆ ಎಲ್ಲಾ ಶುದ್ಧವೇ; ಆದರೆ ಕಳಂ
ಕವಾದವರಿಗೂ ಅವಿಶ್ವಾಸಿಗಳಿಗೂ ಏನೂ ಶುದ್ಧವಾಗಿರುವದಿಲ್ಲ;
೧೬ ಅವರ ಬುದ್ಧಿಯೂ ಮನಸಾಕ್ಷಿಯೂ ಕಳಂಕವಾಗಿವೆ. ಅವರು
ದೇವರನ್ನು ಬಲ್ಲೆವೆಂದು ಹೇಳಿ, ಅಸಹ್ಯರಾಗಿಯೂ, ಅವಿಧೇಯ
ರಾಗಿಯೂ, ಸಕಲ ಸತ್ಕ್ರಿಯೆಗೆ ಅಪರೀಕ್ಷಿತರಾಗಿಯೂ, ಕ್ರಿಯೆ
ಗಳಿಂದ ಅವನನ್ನು ಬೊಂಕುತ್ತಾರೆ.

## ೨. ಸಂಧಿ.

೧ ಆದರೆ ನೀನು ಸ್ವಸ್ಥ ಬೋಧನೆಗೆ ಯೋಗ್ಯವಾದವುಗಳ
೨ ನ್ನು ಮಾತಾಡು; ಏನಂದರೆ ಹಿರಿಯರು ಎಚ್ಚರಿಕೆಯುಳ್ಳವರಾ
ಗಿಯೂ, ಘನವುಳ್ಳವರಾಗಿಯೂ, ಮನೋಸ್ವಸ್ಥರಾಗಿಯೂ, ವಿ
ಶ್ವಾಸ ಪ್ರೀತಿ ತಾಳ್ಮೆಗಳಲ್ಲಿ ಆರೋಗ್ಯವುಳ್ಳವರಾಗಿಯೂ, ಇರ
೩ ಬೇಕು. ಅದೇ ಪ್ರಕಾರ ಹಿರೇ ಡೆಂಗಸರು ಪರಿಶುದ್ಧರಿಗೆ ತಕ್ಕ ನಡ
ತೆಯುಳ್ಳವರಾಗಿದ್ದು, ಚಾಡಿಗಾರ್ತಿಯರೂ, ಬಹಳ ದ್ರಾಕ್ಷೇರಸ
೪ ಕ್ಕೆ ವಶವಾದವರೂ, ಆಗಿರದೆ, ಒಳ್ಳೇದನ್ನು ಬೋಧಿಸುವವರಾ
೫ ಗಿ, ಯೌವನ ಸ್ತ್ರೀಯರಿಗೆ, ದೇವರ ವಾಕ್ಯವು ದೂಷಿಸಲ್ಪಡದ
ಹಾಗೆ, ಗಂಡಂದಿರನ್ನೂ ಮಕ್ಕಳನ್ನೂ ಪ್ರೀತಿ ಮಾಡಿ, ಮನೋ
ಸ್ವಸ್ಥರೂ, ನಿರ್ಮಲರೂ, ಒಳ್ಳೇ ಸಂಸಾರಿಗಳೂ, ಒಳ್ಳೆಯ
ವರೂ, ಸ್ವಂತ ಗಂಡಂದಿರಿಗೆ ಒಳಗಾಗುವವರೂ, ಆಗಿರುವದಕ್ಕೆ
ಬುದ್ಧಿ ಹೇಳ ಬೇಕು.

೬ ಅದೇ ಪ್ರಕಾರ ಯೌವನಸ್ಥರಿಗೆ, ಮನೋಸ್ವಸ್ಥವಾಗಿರ ಬೇ
೭ ಕೆಂದು, ಬುದ್ಧಿ ಹೇಳು. ಎಲ್ಲವುಗಳಲ್ಲಿ ನಿನ್ನನ್ನು ಸತ್ಕ್ರಿಯೆಗಳ
ಮಾದರಿಯಾಗಿ ತೋರಿಸು. ಎದುರಾಳಿಯು ನಿಮ್ಮ ಮೇಲೆ
ಯಾವ ಕೇಡನ್ನೂ ಹೇಳ್ಳ ಕೂಡದೆ ನಾಚಿಕೆ ಪಡುವ ಹಾಗೆ, ಬೋ
ಧನೆಯಲ್ಲಿ ನಿರ್ಮಲತ್ವವನ್ನೂ, ಘನತೆಯನ್ನೂ, ಯಥಾರ್ಥ
ವನ್ನೂ, ಸ್ವಸ್ಥವಾದ ತಪ್ಪಿಲ್ಲದ ವಾಕ್ಯವನ್ನೂ, ತೋರಿಸು.

೮ ದಾಸರು ಎಲ್ಲಾದರಲ್ಲಿ ನಮ್ಮ ರಕ್ಷಕನಾದ ದೇವರ ಬೋಧನೆ
ಯನ್ನು ಅಲಂಕರಿಸುವ ಹಾಗೆ, ಸ್ವಂತ ಯಜಮಾನರಿಗೆ ಒಳಗಾ
ಗಿದ್ದು, ಎಲ್ಲವುಗಳಲ್ಲಿ ಮೆಚ್ಚಿಸುವವರಾಗಿ, ಎದುರು ಮಾತಾಡದೆ,
೧೦ ಕದಿಯದೆ, ಎಲ್ಲಾ ಒಳ್ಳೇ ನಂಬಿಕೆಯನ್ನು ತೋರಿಸ ಬೇಕೆಂದು
ಬುದ್ಧಿ ಹೇಳು.

೧೧ ಯಾಕಂದರೆ ರಕ್ಷಣೆಗಾಗಿರುವ ದೇವರ ಕೃಪೆಯು ಮನು
೧೨ ಷ್ಯರೆಲ್ಲರಿಗೆ ಪ್ರಸಿದ್ಧಿಯಾಗಿ, ನಾವು ಭಕ್ತಿಹೀನತ್ವವನ್ನೂ ಲೌ
ಕಿಕ ಆಶೆಗಳನ್ನೂ ಬಿಟ್ಟು ಬಿಟ್ಟು, ಮನೋಸ್ವಸ್ಥವಾಗಿಯೂ ನೀ
ತಿಯಾಗಿಯೂ, ಭಕ್ತಿಯಾಗಿಯೂ ಈಗಿನ ಲೋಕದಲ್ಲಿ ಬದುಕಿ,
೧೩ ಭಾಗ್ಯವಾದ ನಿರೀಕ್ಷೆಯನ್ನೂ, ಮಹಾ ದೇವರೂ, ನಮ್ಮ ರಕ್ಷಕ
ನೂ ಆಗಿರುವ ಯೇಸು ಕ್ರಿಸ್ತನ ಮಹಿಮೆಯ ಪ್ರತ್ಯಕ್ಷತೆಯ
ನ್ನೂ, ಎದುರು ನೋಡುವ ಹಾಗೆ, ನಮ್ಮನ್ನು ಉಪದೇಶಿಸುತ್ತದೆ.
ಅವನು ಸಕಲ ಅನೀತಿಯಿಂದ ನಮ್ಮನ್ನು ವಿಮೋಚಿಸುವದಕ್ಕೂ,
ಸತ್ಕ್ರಿಯೆಗಳಲ್ಲಿ ಆಸಕ್ತಿಯಾಗಿರುವ ಸ್ವಂತ ಪ್ರಜೆಯನ್ನು ತನ
ಗೆ ಪರಿಶುದ್ಧ ಮಾಡುವದಕ್ಕೂ, ನಮಗೋಸ್ಕರ ತನ್ನನ್ನು ಕೊ
೧೫ ಟ್ಟನು. ಇವುಗಳನ್ನು ಮಾತಾಡಿ, ಬುದ್ಧಿ ಹೇಳ್ಳಿ, ಸಕಲ ಅಧಿಕಾರ
ದಿಂದ ಗದರಿಸು. ಯಾವನಾದರೂ ನಿನ್ನನ್ನು ಉದಾಸೀನ ಮಾ
ಡದಿರಲಿ.

## ೩. ಸಂಧಿ.

೧ ಅವರು ದೊರೆತನಗಳಿಗೂ ಅಧಿಕಾರಗಳಿಗೂ ಒಳಗಾಗಿ, ವಿಧೇ
ಯರಾಗಿಯೂ ಸಕಲ ಸತ್ಕ್ರಿಯೆಗೆ ಸಿದ್ಧರಾಗಿಯೂ ಇದ್ದು,
೨ ಯಾರನ್ನು ದೂಷಿಸದೆ, ಝಗಳವಾಡದೆ, ಸಾಧುಗಳಾಗಿದ್ದು,
ಮನುಷ್ಯರೆಲ್ಲರಿಗೆ ಸಕಲ ಸಾತ್ವಿಕತ್ವವನ್ನು ತೋರಿಸ ಬೇಕೆಂದು
೩ ಅವರಿಗೆ ಜ್ಞಾಪಕ ಕೊಡು. ಹ್ಯಾಗಂದರೆ ನಾವು ಸಹ ಪೂರ್ವದ
ಲ್ಲಿ ಬುದ್ಧಿಹೀನರೂ, ಅವಿಧೇಯರೂ, ಮಾರ್ಗ ತಪ್ಪಿದವರೂ,
ನಾನಾ ಆಶೆಭೋಗಗಳಿಗೆ ದಾಸರೂ, ಕೆಟ್ಟತನ ಹೊಟ್ಟೆಕಿಚ್ಚುಗಳ
ಲ್ಲಿ ಪ್ರವರ್ತಿಸುವವರೂ, ಅಸಹ್ಯರೂ, ಒಬ್ಬರನ್ನೊಬ್ಬರು
೪ ಹಗೆ ಮಾಡುವವರೂ, ಆಗಿದ್ದೆವು. ಆದರೆ ನಮ್ಮ ರಕ್ಷಕನಾದ ದೇ
ವರ ದಯೆಯೂ ಮನುಷ್ಯರ ಮೇಲಿರುವ ಪ್ರೀತಿಯೂ ಪ್ರಸಿದ್ಧಿ
೫ ಯಾದಾಗ, ನಾವು ಮಾಡಿದ ನೀತಿಯ ಕ್ರಿಯೆಗಳಿಂದಲ್ಲ, ತನ್ನ
ಕರುಣೆಯ ಪ್ರಕಾರವೇ, ಪುನರ್ಜನ್ಮದ ತೊಳೆಯುವಿಕೆಯಿಂದ
೬ ಲೂ, ತಾನು ನಮ್ಮ ರಕ್ಷಕನಾದ ಯೇಸು ಕ್ರಿಸ್ತನಿಂದ ಐಶ್ವ
ರ್ಯವಾಗಿ ನಮ್ಮ ಮೇಲೆ ಹೊಯಿದ ಪರಿಶುದ್ಧಾತ್ಮದ ನವೀಕ
೭ ರಣದಿಂದಲೂ, ನಾವು ಅವನ ಕೃಪೆಯಿಂದ ನೀತಿ ನಿರ್ಣಯ
ಪಟ್ಟು, ನಿತ್ಯ ಜೀವದ ನಿರೀಕ್ಷೆಯ ಪ್ರಕಾರ ಬಾಧ್ಯಸ್ಥರಾಗುವ
ಹಾಗೆ, ನಮ್ಮನ್ನು ರಕ್ಷಿಸಿದನು.

೮ ನಂಬಿಕೆಯಾದ ವಾಕ್ಯವು ಇದೇ—ದೇವರನ್ನು ವಿಶ್ವಾಸಿಸಿದ
ವರು ಸತ್ಕ್ರಿಯೆಗಳನ್ನು ನಡಿಸ ಜಾಗ್ರತೆ ಮಾಡುವ ಹಾಗೆ, ಇವು
ಗಳನ್ನೇ ನೀನು ಸ್ಥಿರವಾಗಿ ಬೋಧಿಸ ಇಚ್ಛೈಸುತ್ತೇನೆ. ಇವು ಮ
ನುಷ್ಯರಿಗೆ ಒಳ್ಳೆಯವುಗಳೂ ಪ್ರಯೋಜನವಾದವುಗಳೂ ಆಗಿ
೯ ವೆ. ಆದರೆ ಹುಚ್ಚು ಪಗ್ಗೆಗಳಿಗೂ, ವಂಶಾವಳಿಗಳಿಗೂ, ತರ್ಕ
ಗಳಿಗೂ, ನ್ಯಾಯ ಪ್ರಮಾಣದ ಝಗಳಗಳಿಗೂ ದೂರವಾಗಿ
ರು. ಯಾಕಂದರೆ ಅವು ನಿಷ್ಪ್ರಯೋಜಕವೂ ವ್ಯರ್ಥವೂ
ಆಗಿವೆ. ಪಾಷಂಡನಾದ ಮನುಷ್ಯನನ್ನು ಒಂದೆರಡು ಸಾರಿ ಬು
೧೦ ದ್ಧಿ ಹೇಳಿದ ಮೇಲೆ ತಳ್ಳಿಬಿಡು. ಇಂಥವನು ತಟ್ಟಿಬಿಟ್ಟಿ, ತ
ನಗೆ ತಾನೇ ಆಜ್ಞೆ ತೀರಿಸಿದವನಾಗಿ, ಪಾಪ ಮಾಡುತ್ತಾನೆಂದು
ತಿಳ್ಕಿದಿರು.



೧೨ ನಾನು ಅರ್ತೆಮನನ್ನಾಗಲಿ, ತುಕಿಕನನ್ನಾಗಲಿ, ನಿನ್ನ ಹತ್ತರ
ಕಳುಹಿಸಿದಾಗ, ನಿಕೊಪೋಲಿಗೆ ನನ್ನ ಬಳಿಗೆ ಬರ ಜಾಗ್ರತೆ ಪಡು;
ಯಾಕಂದರೆ ಅಲ್ಲಿ ಹಿಮಕಾಲ ಕಳೆಯ ನಿರ್ಣೈಸಿ ಕೊಂಡಿದ್ದೇ
೧೩ ನೆ. ನ್ಯಾಯ ಶಾಸ್ತ್ರಿಯಾದ ಜೇನನನ್ನೂ ಅಪೊಲ್ಲೋನನ
ನ್ನೂ, ಅವರು ಯಾವದರಲ್ಲಿಯೂ ಕೊರತೆ ಪಡದ ಹಾಗೆ, ಜಾ
೧೪ ಗ್ರತೆಯಾಗಿ ಮುಂಕಳುಹಿಸು. ಮತ್ತು ನಮ್ಮವರು ಸಹ ನಿಷ್ಫಲ
ರಾಗಿರದ ಹಾಗೆ, ಅವಶ್ಯವಾದ ಕಾರ್ಯಗಳಿಗೋಸ್ಕರ ಸತ್ಕ್ರಿ
೧೫ ಯೆಗಳನ್ನು ನಡಿಸ ಕಲಿಯಲಿ. ನನ್ನ ಸಂಗಡ ಇರುವವಕೆಲ್ಲರು ನಿನ್ನ
ನ್ನು ವಂದಿಸುತ್ತಾರೆ. ವಿಶ್ವಾಸದಲ್ಲಿ ನಮ್ಮನ್ನು ಸ್ನೇಹಿಸುವವರನ್ನು
ವಂದಿಸು. ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆರ್ಮೆ.

# THE EPISTLE OF
# PAUL THE APOSTLE TO PHILEMON.

### ಅಪೊಸ್ತಲನಾದ ಪೌಲನು ಫಿಲೇಮೊನಿಗೆ ಬರೆದ ಪತ್ರಿಕೆ.

೧ ಕ್ರಿಸ್ತ ಯೇಸುವಿನ ಬಂಧದವನಾದ ಪೌಲನೂ, ಸಹೋದರ
ನಾದ ತಿಮೊಥೆಯನೂ, ನಮ್ಮ ಪ್ರಿಯನೂ ಜತೆಕೆಲಸದವನೂ,
೨ ಆದ ಫಿಲೇಮೊನನಿಗೂ, ಪ್ರಿಯ ಅಪ್ಪಿಯಳಿಗೂ, ನಮ್ಮ ಜತೆ
ದಂಡಿನವನಾದ ಅರ್ಕಿಪ್ಪನಿಗೂ, ನಿನ್ನ ಮನೆಯಲ್ಲಿರುವ ಸಭೆ
೩ ಗೂ—ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು
ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.

೪ ನೀನು ಕರ್ತನಾದ ಯೇಸು ಕ್ರಿಸ್ತನ ಮೇಲೆಯೂ ಪರಿಶು
೫ ದ್ಧರೆಲ್ಲರ ಮೇಲೆಯೂ ಇರುವ ಪ್ರೀತಿಯನ್ನೂ ವಿಶ್ವಾಸವನ್ನೂ
ಕೇಳ್ಳಿ, ನಿನ್ನ ವಿಶ್ವಾಸದ ಅನ್ಯೋನ್ಯವು ಯೇಸು ಕ್ರಿಸ್ತನಿಗಾಗಿ
೬ ನಿಮ್ಮಲ್ಲಿರುವ ಎಲ್ಲಾ ಒಳ್ಳೇದರ ತಿಳುವಿಕೆಯಲ್ಲಿ ಬಲವಾಗಿರ ಬೇ
ಕೆಂದು, ನಾನು ನನ್ನ ಪ್ರಾರ್ಥನೆಗಳಲ್ಲಿ ಯಾವಾಗಲೂ ನಿನ್ನನ್ನು
ನೆನಪು ಮಾಡಿ, ನನ್ನ ದೇವರಿಗೆ ಸ್ತೋತ್ರ ಮಾಡುತ್ತೇನೆ. ಯಾ
೭ ಕಂದರೆ, ಸಹೋದರನೇ, ನಿನ್ನಿಂದ ಪರಿಶುದ್ಧರ ಕರುಳುಗಳು ತು
ಷ್ಟಿಯಾದದರಿಂದ ನಿನ್ನ ಪ್ರೀತಿಗೋಸ್ಕರ ನಾವು ಬಹು ಆನಂದ
ವನ್ನೂ ಆದರಣೆಯನ್ನೂ ಹೊಂದಿದ್ದೇನೆ.

೮ ಆದಕಾರಣ ಯೋಗ್ಯವಾದದ್ದನ್ನು ನಿಮಗೆ ಆಜ್ಞಾಪಿಸುವದಕ್ಕೆ
೯ ಕ್ರಿಸ್ತನಲ್ಲಿ ಬಹು ಧೈರ್ಯವಿದ್ದರೂ, ಅದನ್ನು ಬಿಟ್ಟು, ಮುದು
ಕನಾದ ಪೌಲನಂಥವನಾಗಿಯೂ, ಈಗ ಯೇಸು ಕ್ರಿಸ್ತನ ಬಂಧ
ದವನಾಗಿಯೂ ಇದ್ದು, ಪ್ರೀತಿಗೋಸ್ಕರ ಬೇಡಿ ಕೊಳ್ಳುತ್ತೇನೆ.
೧೦ ಮುಂಚೆ ನಿನಗೆ ನಿಷ್ಪ್ರಯೋಜಕನಾಗಿದ್ದು, ಈಗ ನಿನಗೂ ನ
೧೧ ನಗೂ ಪ್ರಯೋಜಕನಾಗಿರುವಂಥ, ನಾನು ತಿರಿಗಿ ಕಳುಹಿಸಿದಂಥ,
ನನ್ನ ಬಂಧಗಳಲ್ಲಿ ನಾನು ಪಡೆದ, ನನ್ನ ಮಗನಾದ ಒನೆಸಿಮನ
೧೨ ವಿಷಯ ನಿನ್ನನ್ನು ಬೇಡಿ ಕೊಳ್ಳುತ್ತೇನೆ. ನೀನು ಅವನನ್ನು ನನ್ನ
೧೩ ಕರುಳುಗಳೆಂದು ಅಂಗೀಕರಿಸು. ಅವನು ಸುವಾರ್ತೆಯ ಬಂಧಗ
ಳಲ್ಲಿ ನಿನಗೆ ಬದಲಾಗಿ ನನಗೆ ಸೇವಿಸುವ ಹಾಗೆ, ಅವನನ್ನು ನನ್ನ
೧೪ ಹತ್ತರ ಇಟ್ಟು ಕೊಳ್ಳ ಇಚ್ಛೈಸಿದೆನು. ಆದರೆ ನಿನ್ನ ಉಪಕಾರ
ವು ಅಗತ್ಯದ ಪ್ರಕಾರವಲ್ಲ, ಉಚಿತದ ಪ್ರಕಾರ ಇರುವ ಹಾಗೆ,
ನಿನ್ನ ಚಿತ್ತವಿಲ್ಲದೆ ಏನೂ ಮಾಡ ಮನಸ್ಸಿಲ್ಲದೆ ಇದ್ದೆನು.

೧೫ ಯಾಕಂದರೆ ನೀನು ಅವನನ್ನು ಇನ್ನು ದಾಸನಾಗಿ ಅಲ್ಲ,
೧೬ ದಾಸನಿಗಿಂತ ಉತ್ತಮನಾಗಿ ಮಾಂಸದಲ್ಲಿಯೂ ಕರ್ತನಲ್ಲಿಯೂ
ವಿಶೇಷವಾಗಿ ನನಗೆ, ಎಷ್ಟು ಹೆಚ್ಚಾಗಿ ನಿನಗೆ, ಪ್ರಿಯ ಸಹೋದ
ರನಾಗಿ ಎಂದೆಂದಿಗೂ ಹೊಂದುವ ಹಾಗೆ, ಅವನು ಝಳ್ಳಿಗೆ ಮಾ
೧೭ ತ್ರ ಅಗಲಿಸಲ್ಪಟ್ಟನೋ? ಆದಕಾರಣ ನೀನು ನನ್ನನ್ನು ಪಾ
ಲುಗಾರನೆಂದು ನೆನಸಿದರೆ, ಅವನನ್ನು ನಾನೇ ಎಂದು, ಅಂಗೀಕರಿ
೧೮ ಸು. ಇದಲ್ಲದೆ ಅವನು ನಿನಗೆ ಏನಾದರೂ ಅನ್ಯಾಯವನ್ನಾಗಲಿ
ಸಾಲವನ್ನಾಗಲಿ ಮಾಡಿ ಇದ್ದರೆ, ಅದನ್ನು ನನ್ನ ಲೆಖ್ಖಕ್ಕೆ ಸೇರಿ
೧೯ ಸು. ಪೌಲನಾದ ನಾನು ಸ್ವಂತ ಕೈಯಿಂದ ಬರೆದಿದ್ದೇನೆ; ನಾನೇ
ಸಲ್ಲಿಸುವೆನು. ನಿನ್ನನ್ನು ಸಹ ನನಗೆ ಕೊಡ ಹಂಗಿನಲ್ಲಿದ್ದೀ ಎಂ
೨೦ ದು ನಿನಗೆ ಹೇಳ್ಳಲೋ? ಹೌದು, ಸಹೋದರನೇ, ನಾನು ನಿನ್ನಿಂ
ದ ಕರ್ತನಲ್ಲಿ ಸಂತೋಷ ಪಡಲಿ. ನನ್ನ ಕರುಳುಗಳನ್ನು ಕರ್ತ
ನಲ್ಲಿ ಉಪಶಮನ ಮಾಡು.

೨೧ ನಾನು ಹೇಳುವದಕ್ಕಿಂತ ಹೆಚ್ಚಾದದ್ದನ್ನು ಮಾಡುವಿ ಎಂದು
೨೨ ತಿಳ್ಕಿದು, ನಿನ್ನ ವಿಧೇಯತ್ವವನ್ನು ನಂಬಿ, ನಿನಗೆ ಬರೆದಿದ್ದೇನೆ. ಮ
ತ್ತು ನನಗೆ ಬಿಡುದಿಯನ್ನು ಸಿದ್ಧ ಮಾಡು; ಯಾಕಂದರೆ ನಿಮ್ಮ
ಪ್ರಾರ್ಥನೆಗಳಿಂದ ನಾನು ನಿಮಗೆ ದಯಪಾಲಿಸಲ್ಪಡುವೆನೆಂದು
೨೩ ನೀರೀಕ್ಷಿಸುತ್ತೇನೆ. ಕ್ರಿಸ್ತ ಯೇಸುವಿನಲ್ಲಿ ನನ್ನ ಜತೆ ಕೆರೆಯವನಾದ
೨೪ ಎಪಫ್ರನೂ, ನನ್ನ ಜತೆ ಕೆಲಸದವರಾದ ಮಾರ್ಕನೂ, ಅರಿಸ್ತಾ
ರ್ಕನೂ, ದೇಮನೂ, ಲೂಕನೂ, ನಿನ್ನನ್ನು ವಂದಿಸುತ್ತಾರೆ.
೨೫ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಆತ್ಮದ
ಸಂಗಡ ಇರಲಿ. ಆರ್ಮೆ.

# THE EPISTLE OF
# PAUL THE APOSTLE TO THE HEBREWS.

### ಅಪೊಸ್ತಲನಾದ ಪೌಲನು ಇಬ್ರೀಯರಿಗೆ ಬರೆದ ಪತ್ರಿಕೆ.

## ೧. ಸಂಧಿ.

೧ ಪೂರ್ವದಲ್ಲಿ ಅನೇಕ ಭಾಗವಾಗಿಯೂ, ಅನೇಕ ವಿಧವಾಗಿ
ಯೂ, ಪ್ರವಾದಿಗಳಿಂದ ಪಿತೃಗಳ ಸಂಗಡ ಮಾತಾಡಿದ ದೇವ
ರು, ಈ ಅಂತ್ಯ ದಿವಸಗಳಲ್ಲಿ ಮಗನಿಂದ ನಮ್ಮ ಸಂಗಡ
೨ ಮಾತಾಡಿದ್ದಾನೆ. ಇವನನ್ನು ಸರ್ವಕ್ಕೆ ಬಾಧ್ಯಸ್ಥನಾಗಿ ನೇಮಿಸಿ
ದನು; ಇವನಿಂದ ಲೋಕಗಳನ್ನು ಉಂಟು ಮಾಡಿದನು; ಇವನು,
೩ ಅವನ ಮಹಿಮೆಯ ಪ್ರತಿ ಕಾಂತಿಯಾಗಿಯೂ, ಅವನ ಸ್ವಭಾ
ವದ ಪ್ರತಿ ರೂಪವಾಗಿಯೂ, ತನ್ನ ಬಲದ ವಾಕ್ಯದಿಂದ ಸರ್ವ
ಕ್ಕೆ ಆಧಾರಕನಾಗಿಯೂ ಇದ್ದು, ತನ್ನಿಂದ ತಾನೇ ನಮ್ಮ ಪಾಪ

ಗಳ ಶುದ್ಧೀಕರಣವನ್ನು ಮಾಡಿ, ಉನ್ನತವಾದವುಗಳಲ್ಲಿರುವ ಮ
೪ ಹತ್ತಿನ ಬಲಪಾರ್ಶ್ವದಲಿ ಕೂತು ಕೊಂಡನು. ಅವನು ದೂತರಿ
ಗಿಂತ ಎಷ್ಟು ಉತ್ತಮವಾದ ಹೆಸರನ್ನು ಬಾಧ್ಯವಾಗಿ ಹೊಂದಿ
ದ್ದಾನೋ, ಅವರಿಗಿಂತ ಅಷ್ಟು ಅಧಿಕನಾದನು.

೫ ಯಾಕಂದರೆ, ನೀನು ನನ್ನ ಮಗನು, ನಾನು ಈ ಹೊತ್ತು
ನಿನ್ನನ್ನು ಪಡೆದಿದ್ದೇನೆಂದೂ, ಮತ್ತು, ನಾನು ಅವನಿಗೆ ತಂದೆಯಾ
ಗಿರುವೆನು, ಅವನು ನನಗೆ ಮಗನಾಗಿರುವನೆಂದೂ, ದೂತರಲ್ಲಿ
೬ ಯಾರಿಗೆ ಎಂದಾದರೂ ಹೇಳಿದನು? ಮತ್ತು ತಿರಿಗಿ ಜೊಚ್ಚುಲವನ
ನ್ನು ಭೂಲೋಕದಲ್ಲಿ ಕರಕೊಂಡು ಬರುವಾಗ ದೇವ ದೂತರೆಲ್ಲ
೭ ರು ಅವನಿಗೆ ನಮಸ್ಕಾರ ಮಾಡಲೆಂದು ಹೇಳುತ್ತಾನೆ. ಮತ್ತು
ದೂತರನ್ನು ಕುರಿತು, ತನ್ನ ದೂತರನ್ನು ಆತ್ಮಗಳಾಗಿಯೂ,
ತನ್ನ ಊಳಿಗದವರನ್ನು ಅಗ್ನಿಜ್ವಾಲೆಯಾಗಿಯೂ, ಮಾಡು
೮ ತ್ತಾನೆಂದು ಹೇಳುತ್ತಾನೆ. ಆದರೆ ಮಗನನ್ನು ಕುರಿತು, ದೇವಲೇ,
ನಿನ್ನ ಸಿಂಹಾಸನವು ಎಂದೆಂದಿಗೂ ಇರುವದು; ನಿನ್ನ ರಾಜ್ಯದ
೯ ಕೋಲು ಸರಿಯಾದ ಕೋಲಾಗಿದೆ. ನೀನು ನೀತಿಯನ್ನು ಪ್ರೀತಿ
ಮಾಡಿ, ಅನ್ಯಾಯವನ್ನು ಹಗೆ ಮಾಡಿದಿ; ಇದರ ನಿಮಿತ್ತ, ನಿನ್ನ
ದೇವರಾದ ದೇವರು ನಿನ್ನ ಸಂಗಡಿಗರಿಗಿಂತ ಹೆಚ್ಚಾಗಿ ನಿನ್ನನ್ನು
೧೦ ಆನಂದ ತೈಲದಿಂದ ಅಭಿಷೇಕಿಸಿದ್ದಾನೆ. ಇದಲ್ಲದೆ, ಕರ್ತನೇ,
ನೀನು ಆದಿಯಲ್ಲಿ ಭೂಮಿಯ ಅಸ್ತಿವಾರವನ್ನು ಹಾಕಿದಿ; ಆಕಾ
೧೧ ಶಗಳು ನಿನ್ನ ಕೈ ಕೆಲಸಗಳಾಗಿವೆ; ಅವು ನಾಶವಾಗುವವು, ನೀನು
ನೆಲೆಯಾಗಿರುತ್ತೀ; ಅವುಗಳೆಲ್ಲಾ ವಸ್ತ್ರದ ಹಾಗೆ ಹಳೇವಾಗುವ
೧೨ ವು; ಅಂಗವಸ್ತ್ರದ ಹಾಗೆ ಅವುಗಳನ್ನು ಸುತ್ತಿ ಬಿಡುವಿ; ಆಗ ಮಾ
ರ್ಪಡುವವು; ಆದರೆ ನೀನು ಇದ್ದ ಹಾಗೆಯೇ ಇದ್ದೀ; ನಿನ್ನ
೧೩ ವರುಷಗಳು ಮುಗಿಯವು. ಆದರೆ, ನಾನು ನಿನ್ನ ಶತ್ರುಗಳನ್ನು
ನಿನ್ನ ಪಾದ ಪೀಠವಾಗಿ ಇರುವ ಪರ್ಯಂತರ, ನನ್ನ ಬಲಪಾ
ರ್ಶ್ವದಲ್ಲಿ ಕೂತು ಕೊಳ್ಳಂತ, ದೂತರಲ್ಲಿ ಯಾರಿಗೆ ಎಂದಾದ
೧೪ ರೂ ಹೇಳಿದನು? ಅವರೆಲ್ಲರು ರಕ್ಷಣೆಯನ್ನು ಬಾಧ್ಯವಾಗಿ ಹೊಂ
ದಲಿರುವವರಿಗೋಸ್ಕರ ಸೇವೆಗಾಗಿ ಕಳಿಹಿಸಲ್ಪಟ್ಟ ಊಳಿಗದ
ಆತ್ಮಗಳಾಗಿದ್ದಾರಲ್ಲವೋ?

## ೨. ಸಂಧಿ.

೧ ಆದದರಿಂದ, ಒಂದು ವೇಳೆ ಜಾರಿ ಹೋಗದ ಹಾಗೆ, ನಾವು
ಕೇಳಿದವುಗಳ ಮೇಲೆ ಅಧಿಕ ಜಾಗ್ರತೆಯಾಗಿ ಮನಸ್ಸಿಡ ತಕ್ಕದ್ದು.
೨ ಯಾಕಂದರೆ ದೂತರ ಮುಖಾಂತರ ಹೇಳಲ್ಪಟ್ಟ ವಾಕ್ಯವು ಸ್ಥಿರ
ವಾಗಿದ್ದು, ಒಂದೊಂದು ವಿಚಾರವಿಕೆಯೂ, ಅವಿಧೇಯತ್ವವೂ,
೩ ನ್ಯಾಯವಾದ ಪ್ರತಿಫಲವನ್ನು ಹೊಂದಿದ್ದಾದರೆ, ಅಷ್ಟು ದೊಡ್ಡ
ರಕ್ಷಣೆಯನ್ನು ಅಲಕ್ಷ್ಯ ಮಾಡಿದರೆ, ನಾವು ತಪ್ಪಿಸಿ ಕೊಳ್ಳುವದು
೪ ಹ್ಯಾಗೆ? ಅದು ಕರ್ತನಿಂದ ಹೇಳಲ್ಪಡಲಾರಂಭಿಸಿ, ದೇವರು ಸಹ
ಲಕ್ಷಣಗಳಿಂದಲೂ, ಅದ್ಭುತಗಳಿಂದಲೂ, ನಾನಾ ಬಲವಾದ ಕ್ರಿ
ಯೆಗಳಿಂದಲೂ ಪರಿಶುದ್ಧಾತ್ಮದ ಸ್ವಚಿತ್ತಾನುಸಾರವಾದ ಹಂಚು
ವಿಕೆಗಳಿಂದಲೂ, ಸಾಕ್ಷಿ ಕೊಡಲಾಗಿ, ಕೇಳಿದವರ ಮೂಲವಾಗಿ ನ
ಮಗೆ ಸ್ಥಾಪಿಸಲ್ಪಟ್ಟದ್ದಲ್ಲವೋ?

೫ ಯಾಕಂದರೆ ನಾವು ಹೇಳುವ ಮುಂದಿನ ಭೂಲೋಕವನ್ನು
೬ ಅವನು ದೂತರಿಗೆ ಅಧೀನ ಮಾಡಲಿಲ್ಲ. ಆದರೆ ಒಬ್ಬನು ಒಂದು
ಸ್ಥಳದಲ್ಲಿ ಸಾಕ್ಷಿಯಾಗಿ ಹೇಳುವದೇನಂದರೆ, ನೀನು ಅವನನ್ನು
ನೆನಸುವದಕ್ಕೆ, ಮನುಷ್ಯನು ಯಾರು? ಇಲ್ಲವೆ ಅವನನ್ನು ಪ
ರಾಮರಿಸುವದಕ್ಕೆ ಮನುಷ್ಯನ ಮಗನು ಯಾರು? ಅವನನ್ನು
೭ ದೂತರಿಗಿಂತ ಸ್ವಲ್ಪ ಕಡಿಮೆ ಮಾಡಿದಿ; ಮಹಿಮೆ ಮಾನಗಳ ಕಿ
ರೀಟವನ್ನು ಅವನ ಮೇಲೆ ಇಟ್ಟಿ; ನಿನ್ನ ಕೈ ಕೆಲಸಗಳ ಮೇಲೆ ಅ
ವನನ್ನು ಇರಿಸಿದಿ; ಅವನ ಪಾದಗಳ ಕೆಳಗೆ ಸಮಸ್ತವನ್ನು ಅಧೀ
ನ ಮಾಡಿದಿ. ಯಾಕಂದರೆ ಸರ್ವವನ್ನು ಅವನಿಗೆ ಅಧೀನ ಮಾ
ಡಿದ್ದರಲ್ಲಿ ಅವನಿಗೆ ಅಧೀನವಾಗದ ಒಂದನ್ನಾದರೂ ಬಿಡಲಿಲ್ಲ. ಆ
ದರೆ ಸರ್ವವು ಅವನಿಗೆ ಅಧೀನವಾದದ್ದನ್ನು ಈಗಲೇ ಕಾಣೆವು.
೮ ಆದರೆ ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ರು
ಚಿ ನೋಡುವದಕ್ಕಾಗಿ, ದೂತರಿಗಿಂತ ಸ್ವಲ್ಪ ಕಡಿಮೆ ಮಾಡಲ್ಪ
ಟ್ಟವನಾದ ಯೇಸು ಮರಣದ ಶ್ರಮೆ ಪಟ್ಟಿದ್ದಕ್ಕೋಸ್ಕರ, ಮ
೯ ಹಿಮೆ ಮಾನಗಳ ಕಿರೀಟವಿಡಲ್ಪಟ್ಟದ್ದನ್ನು ನೋಡುತ್ತೇವೆ. ಯಾ
ಕಂದರೆ ಸರ್ವವು ಯಾವನಿಗೋಸ್ಕರವೋ, ಸರ್ವವು ಯಾ
ವನಿಂದಲೋ, ಅವನಿಗೆ, ಅನೇಕ ಮಕ್ಕಳನ್ನು ಮಹಿಮೆಗೆ ಸೇರಿ
ಸುವದರಲ್ಲಿ ಅವರ ರಕ್ಷಣೆಯ ನಾಯಕನನ್ನು ಶ್ರಮೆಗಳಿಂದ
ಸಂಪೂರ್ಣ ಮಾಡುವದು, ತಕ್ಕದ್ದಾಗಿತ್ತು.

೧೧ ಯಾಕಂದರೆ ಪರಿಶುದ್ಧ ಮಾಡುವವನೂ, ಪರಿಶುದ್ಧರಾಗುವ
೧೨ ವರೂ, ಎಲ್ಲರೂ ಒಬ್ಬನಿಂದಲೇ. ಈ ಕಾರಣದಿಂದ, ಅವನು
ಅವರನ್ನು ಸಹೋದರರೆಂದು ಕರೆಯುವದಕ್ಕೆ ನಾಚಿಕೆ ಪಡದೆ,
ನಿನ್ನ ಹೆಸರನ್ನು ನನ್ನ ಸಹೋದರರಿಗೆ ಶಿಳಿಸಿ, ಸಭೆಯ ಮಧ್ಯ
೧೩ ದಲ್ಲಿ ನಿನ್ನನ್ನು ಕೀರ್ತಿಸುವೆನೆಂದೂ, ಮತ್ತು ನಾನು ಅವನಲ್ಲಿ
ನಂಬಿಕೆಯಾಗಿರುವೆನೆಂದೂ, ಮತ್ತು, ಇಗೋ, ನಾನೂ, ದೇವರು
೧೪ ನನಗೆ ಕೊಟ್ಟಿರುವ ಮಕ್ಕಳೂ, ಎಂದು ಹೇಳುತ್ತಾನೆ. ಹಾಗಾದರೆ,
ಮಕ್ಕಳು ರಕ್ತಮಾಂಸಗಳಲ್ಲಿ ಪಾಲುಗಾರರಾಗಿರುವದರಿಂದ, ಅವ
ನು ಸಹ ಅದೇ ಮೇರೆಗೆ ಮರಣದಿಂದ ಮರಣದ ಅಧಿಕಾರವುಳ್ಳ
೧೫ ವನಾದ ಪಿಶಾಚನನ್ನು ಲಯ ಮಾಡಿ, ಬದುಕುವ ಕಾಲವೆಲ್ಲಾ ಮ
ರಣಭಯದಿಂದ ದಾಸತ್ವಕ್ಕೊಳಗಾಗಿ ಇದ್ದವರನ್ನಷ್ಟು ಬಿಡಿಸು
೧೬ ವ ಹಾಗೆ, ಅವುಗಳಲ್ಲಿ ಭಾಗಸ್ತನಾದನು. ಯಾಕಂದರೆ ನಿಶ್ಚಯ
ವಾಗಿ ದೂತರನ್ನು ಸ್ವೀಕರಿಸದೆ, ಅಬ್ರಹಾಮನ ಬೀಜವನ್ನೇ ಸ್ವೀ
೧೭ ಕರಿಸುತ್ತಾನೆ. ಆದದರಿಂದ, ಜನರ ಪಾಪಗಳಿಗೋಸ್ಕರ ಶಾಂತಿ
ಮಾಡುವದಕ್ಕೆ ದೇವರ ಕಾರ್ಯಗಳಲ್ಲಿ ಕರುಣೆಯೂ, ನಂಬಿಕೆ
ಯೂ ಉಳ್ಳ ಪ್ರಧಾನ ಯಾಜಕನಾಗಿರುವ ಹಾಗೆ, ಅವನು ಎ
ಲ್ಲಾದರಲ್ಲಿ ಸಹೋದರರಿಗೆ ಸಮಾನ ಮಾಡಲ್ಪಡ ಬೇಕಾಗಿತ್ತು.
೧೮ ಯಾಕಂದರೆ ತಾನು ಶೋಧಿಸಲ್ಪಟ್ಟು, ಶ್ರಮೆ ಹೊಂದಿದ್ದರಲ್ಲಿ,
ಶೋಧಿಸಲ್ಪಡುವವರಿಗೆ ಸಹಾಯ ಮಾಡ ಬಲ್ಲನು.

## ೩. ಸಂಧಿ.

೧ ಆದದರಿಂದ, ಪರಿಶುದ್ಧ ಸಹೋದರರೇ, ಪರಲೋಕದ ಕರೆ
ಯುವಿಕೆಯ ಪಾಲುಗಾರರೇ, ನಮ್ಮ ಅರಿಕೆಯ ಅಪೊಸ್ತಲನಾಗಿ
ಯೂ, ಪ್ರಧಾನ ಯಾಜಕನಾಗಿಯೂ, ಇರುವ ಕ್ರಿಸ್ತ ಯೇಸುವ
೨ ನ್ನು ಆಲೋಚಿಸಿರಿ; ಇವನು, ಅವನ ಮುಂದೆ ಎಲ್ಲಾದರಲ್ಲಿ ಪೋಶೆ
ಇದ್ದ ಹಾಗೆಯೇ, ತನ್ನನ್ನು ಇಟ್ಟವನಿಗೆ ನಂಬಿಕೆಯುಳ್ಳವನು.
೩ ಯಾಕಂದರೆ ಮನೆಗಿಂತ ಅದನ್ನು ಕಟ್ಟಿದವನು ಎಷ್ಟು ಅಧಿಕ ಮಾನ
ವುಳ್ಳವನೋ, ಪೋಶೆಗಿಂತ ಇವನು ಅಷ್ಟು ಅಧಿಕ ಮಹಿಮೆಗೆ ಯೋ



೪ ಗ್ಯನಾದನು. ಯಾಕಂದರೆ ಬಂದೊಂದು ಮನೆ ಯಾರಿಂದಲಾದ
ರೂ ಕಟ್ಟಲ್ಪಡುವದು; ಆದರೆ ಸರ್ವವನ್ನು ಕಟ್ಟಿದವನು ದೇವ
೫ ರೇ. ಮತ್ತು ಪೋಶೆಯು ಹೇಳಲ್ಪಡತಿರುವವುಗಳಿಗೆ ಸಾಕ್ಷಿಗಾಗಿ,
೬ ಸೇವಕನಾಗಿ ತನ್ನ ಮನೆಯೆಲ್ಲಾದರಲ್ಲಿ ನಂಬಿಗಸ್ತನು. ಆದರೆ ಕ್ರಿ
ಸ್ತನು ಮಗನಾಗಿ ತನ್ನ ಮನೆಯ ಮೇಲೆ ಅಧಿಕಾರಿಯು. ಅವನ
ಮನೆಯು ನಾವೇ; ನಿರೀಕ್ಷೆಯ ಭರವಸವನ್ನೂ, ಹೆಚ್ಚಳವನ್ನೂ,
ಕಡೇ ವರಿಗೂ ಘುಟ್ಟಿಯಾಗಿ ಹಿಡಿದು ಕೊಂಡರೆ.

೭ ಆದದರಿಂದ ಪರಿಶುದ್ಧಾತ್ಮವು ಹೇಳುವ ಪ್ರಕಾರ, ಈ ಹೊತ್ತು
ಅವನ ಶಬ್ದವನ್ನು ಕೇಳಿದರೆ, ಕೋಪವನ್ನೆಬ್ಬಿಸುವದರಲ್ಲಿ, ಅರಣ್ಯ
೮ ದಲ್ಲಾದ ಶೋಧನೆಯ ದಿವಸದಲ್ಲಿ ಇದ್ದ ಹಾಗೆ, ನಿಮ್ಮ ಹೃದ
೯ ಯಗಳನ್ನು ಕಠಿಣ ಪಡಿಸ ಬೇಡಿರಿ. ಅಲ್ಲಿ ನಿಮ್ಮ ಪಿತೃಗಳು ನಾ
ಲ್ವತ್ತು ವರುಷ ನನ್ನನ್ನು ಶೋಧಿಸಿ, ನನ್ನನ್ನು ಪರೀಕ್ಷಿಸಿ, ನನ್ನ
೧೦ ಕ್ರಿಯೆಗಳನ್ನು ನೋಡಿದರು. ಆದಕಾರಣ, ನಾನು ಆ ಸಂಗತಿ
ಯಿಂದ ಬೇಸರ ಗೊಂಡು, ಯಾವಾಗಲೂ ಹೃದಯದಲ್ಲಿ ತ
ಪ್ಪುತ್ತಾರೆ; ಅವರು ನನ್ನ ಮಾರ್ಗಗಳನ್ನು ಅರಿಯರು; ಆದದ
೧೧ ರಿಂದ ನನ್ನ ವಿಶ್ರಾಂತಿಯಲ್ಲಿ ಪ್ರವೇಶಿಸಕೆಂದು, ನನ್ನ ಕೋಪದ
ಲ್ಲಿ ಆಣೆ ಇಟ್ಟೆನು, ಅಂದನು.

೧೨ ಸಹೋದರರೇ, ಜೀವವುಳ್ಳ ದೇವರನ್ನು ಬಿಟ್ಟು ಹೋಗುವಂ
ಥ ಅವಿಶ್ವಾಸವುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಒಬ್ಬನಲ್ಲಿ
೧೩ ಇರದ ಹಾಗೆ, ನೋಡಿ ಕೊಳ್ಳಿರಿ. ಆದರೆ ನಿಮ್ಮಲ್ಲಿ ಯಾರಾದ
ರೂ ಪಾಪದ ಮೋಸದಿಂದ ಕಠಿಣವಾಗದ ಹಾಗೆ, ಈ ಹೊತ್ತೆಂ
ದು ಹೇಳಲ್ಪಡುವ ಮಟ್ಟಿಗೂ, ದಿನದಿನಕ್ಕೆ ಒಬ್ಬರಿಗೊಬ್ಬರು
೧೪ ಬುದ್ಧಿ ಹೇಳುತ್ತಾ ಇರ್ರಿ. ಯಾಕಂದರೆ ನಮ್ಮ ಭರವಸದ ಆರಂಭ
ವನ್ನು ಕಡೇ ವರಿಗೂ, ನಾವು ಘುಟ್ಟಿಯಾಗಿ ಹಿಡಿದು ಕೊಂಡರೆ,
೧೫ ಕ್ರಿಸ್ತನಲ್ಲಿ ಪಾಲುಗಾರರಾಗಿರುತ್ತೇವೆ. ಈ ಹೊತ್ತು ಅವನ ಶಬ್ದವ
ನ್ನು ಕೇಳಿದರೆ, ಎಂದು ಹೇಳಲ್ಪಡುವಾಗ, ಕೋಪವೆಬ್ಬಿಸುವದರ
ಲ್ಲಿ ಆದ ಹಾಗೆ, ನಿಮ್ಮ ಹೃದಯಗಳನ್ನು ಕಠಿಣ ಪಡಿಸ ಬೇಡಿರಿ.
೧೬ ಯಾಕಂದರೆ ಕೆಲವರು ಕೇಳಿ ಕೋಪವೆಬ್ಬಿಸಿದರು. ಆದರೆ ಮೋ
೧೭ ಶೆಯ ಮುಖಾಂತರ ಐಗುಪ್ತದಿಂದ ಹೊರಟವರೆಲ್ಲರು ಅಲ್ಲ.
ಆದರೆ ನಾಲ್ವತ್ತು ವರುಷ ಯಾರಿಂದ ಬೇಸರಗೊಂಡನು? ಯಾರ
ಹೆಣಗಳು ಅರಣ್ಯದಲ್ಲಿ ಬಿದ್ದವೋ, ಆ ಪಾಪಿಷ್ಠರಿಂದಲ್ಲವೋ?
೧೮ ಮತ್ತು ತನ್ನ ವಿಶ್ರಾಂತಿಯಲ್ಲಿ ಪ್ರವೇಶಿಸಕೆಂದು, ಯಾರಿಗೆ ಆಣೆ
ಇಟ್ಟನು? ಅವಿಧೇಯರಿಗಲ್ಲವೋ? ಹಾಗಾದರೆ, ಅವಿಶ್ವಾಸದಿಂದ
ಪ್ರವೇಶಿಸಲಾರದೆ ಹೋದರೆಂದು ನೋಡುತ್ತೇವೆ.

## ೪. ಸಂಧಿ.

೧ ಆದದರಿಂದ ಅವನ ವಿಶ್ರಾಂತಿಯಲ್ಲಿ ಪ್ರವೇಶಿಸುವ ವಾಗ್ದತ್ತವು
ಇನ್ನು ಇರಲು, ನಿಮ್ಮಲ್ಲಿ ಯಾವನಾದರೂ ಹಿಂದಾದವನಾಗಿ
೨ ಹೋಗದ ಹಾಗೆ, ಭಯ ಪಡೋಣ. ಯಾಕಂದರೆ ಅವರಿಗೆ ಸು
ವಾರ್ತೆ ಪ್ರಸಂಗಿಸಲ್ಪಟ್ಟಿ ಹಾಗೆ, ನಮಗೂ ಪ್ರಸಂಗಿಸಲ್ಪಟ್ಟಿವೆ.
೩ ಆದರೆ ಕೇಳಿದ ವಾಕ್ಯವು ಕೇಳಿದವರಲ್ಲಿ ವಿಶ್ವಾಸದ ಸಂಗಡ ಕ
ಲಿಸಲ್ಪಡದ ಕಾರಣ, ಅವರಿಗೆ ಪ್ರಯೋಜನವಾಗಲಿಲ್ಲ. ವಿಶ್ವಾ
ಸಿಸಿದವರಾದ ನಾವೇ ಆ ವಿಶ್ರಾಂತಿಯಲ್ಲಿ ಪ್ರವೇಶಿಸುತ್ತೇವೆ. ಅವ
ರು ನನ್ನ ವಿಶ್ರಾಂತಿಯಲ್ಲಿ ಪ್ರವೇಶಿಸರಂತ, ನನ್ನ ಕೋಪದಲ್ಲಿ
ಆಣೆ ಇಟ್ಟೆನೆಂದು ಹೇಳಿದ ಪ್ರಕಾರವೇ. ಆದಾಗ್ಯೂ ಜಗದುತ್ಪ
೪ ತ್ತಿ ಮೊದಲುಗೊಂಡು ಕೆಲಸಗಳು ಮುಗಿಸಲ್ಪಟ್ಟಿದ್ದವು. ಮತ್ತು
ಬಂದು ಸ್ಥಳದಲ್ಲಿ ಏಳನೇ ದಿವಸವನ್ನು ಕುರಿತು ಅವನು ಹೇಳಿ
೫ ದ್ದೇನಂದರೆ, ದೇವರು ತನ್ನ ಕೆಲಸಗಳನ್ನೆಲ್ಲಾ ತೀರಿಸಿ, ಏಳನೇ ದಿವ
ಸದಲ್ಲಿ ವಿಶ್ರಮಿಸಿ ಕೊಂಡನು. ಇದಲ್ಲದೆ ಈ ಸ್ಥಳದಲ್ಲಿಯೂ ನ
೬ ನ್ನ ವಿಶ್ರಾಂತಿಯಲ್ಲಿ ಪ್ರವೇಶಿಸಕೆಂದು ಹೇಳಿದನು. ಹಾಗಾದರೆ,
ಕೆಲವರು ಅದರಲ್ಲಿ ಪ್ರವೇಶಿಸುವದು ಇನ್ನು ಇರುವದರಿಂದಲೂ,
ಮೊದಲು ಸುವಾರ್ತೆ ಕೇಳಿದವರು ಅವಿಧೇಯತ್ವದಿಂದ ಪ್ರವೇ
೭ ಶಿಸದೆ ಹೋದದರಿಂದಲೂ, ಮತ್ತು ಬಂದು ದಿವಸವನ್ನು ಗೊ
ತ್ತು ಮಾಡಿ, ಈ ಹೊತ್ತೆಂದು, ಅಷ್ಟು ಕಾಲದ ಮೇಲೆ, ದಾವೀದ
ನಲ್ಲಿ ಹೇಳುತ್ತಾನೆ. ಈ ಹೊತ್ತು ಅವನ ಶಬ್ದವನ್ನು ಕೇಳಿದರೆ,
ನಿಮ್ಮ ಹೃದಯಗಳನ್ನು ಕಠಿಣ ಪಡಿಸ ಬೇಡಿರೆಂದು ಹೇಳಲ್ಪಟ್ಟ
೮ ಪ್ರಕಾರವೇ. ಯಾಕಂದರೆ ಯೆಹೋಶುವನು ಅವರನ್ನು ವಿಶ್ರಮಿ
ಸಿ ಕೊಳ್ಳ ಮಾಡಿದ್ದರೆ, ತರುವಾಯ ಇನ್ನೊಂದು ದಿವಸವನ್ನು
೯ ಕುರಿತು ಮಾತಾಡುತ್ತಿದ್ದಿಲ್ಲ. ಆದದರಿಂದ ದೇವರ ಜನರಿಗೆ ಸಬ್ಬ
೧೦ ತಿನ ವಿಶ್ರಾಂತಿ ಇನ್ನು ಉಂಟು. ಯಾಕಂದರೆ ಅವನ ವಿಶ್ರಾಂತಿ
ಯಲ್ಲಿ ಪ್ರವೇಶಿಸಿದವನು, ದೇವರು ತನ್ನವುಗಳಿಂದ ವಿಶ್ರಮಿಸಿ
ಕೊಂಡ ಹಾಗೆ, ತಾನು ತನ್ನ ಕೆಲಸಗಳಿಂದ ವಿಶ್ರಮಿಸಿ ಕೊಂಡಿ
ದ್ದಾನೆ.

೧೧ ಆದದರಿಂದ, ಅದೇ ಅವಿಧೇಯತ್ವದ ಮಾದರಿಯ ಪ್ರಕಾರ
ಯಾರಾದರೂ ಬೀಳದ ಹಾಗೆ, ಆ ವಿಶ್ರಾಂತಿಯಲ್ಲಿ ಪ್ರವೇಶಿಸ ಜಾ
೧೨ ಗ್ರತೆ ಪಡೋಣ. ಯಾಕಂದರೆ ದೇವರ ವಾಕ್ಯವು ಜೀವವುಳ್ಳ
ದ್ದು, ಚುರುಕಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲಾದರೂ,
ಹದವಾದದ್ದು, ಪ್ರಾಣ, ಆತ್ಮ, ಕೀಲು, ಮೆದಳುಗಳ ಭೇದದ ವರಿ
ಗೂ ಸೇರುವಂಥಾದ್ದು, ಹೃದಯದ ಇಚ್ಛೆಗಳನ್ನೂ, ಆಲೋಚ
೧೩ ನೆಗಳನ್ನು ಶೋಧಿಸುವಂಥಾದ್ದು. ಮತ್ತು ಅವನ ಸಮುಖದಲ್ಲಿ
ಪ್ರತ್ಯಕ್ಷವಾಗದಿರುವ ಸೃಷ್ಟಿಯೂ ಇಲ್ಲ; ಆದರೆ ಯಾರ ಸಂಗ
ತ ನಮಗೆ ಕಾರ್ಯ ಉಂಟೋ, ಅವನ ಕಣ್ಣುಗಳಿಗೆ ಸಮಸ್ತವು
ಬೆತ್ತಲೆಯಾಗಿಯೂ, ತೆರೆದದ್ದಾಗಿಯೂ ಇದೆ.

೧೪ ಹಾಗಾದರೆ, ಆಕಾಶಗಳನ್ನು ದಾಟಿದ ದೇವರ ಮಗನಾದ
ಯೇಸುವೆಂಬ ಮಹಾ ಪ್ರಧಾನ ಯಾಜಕನು ನಮಗಿರುವದರಿಂದ,
೧೫ ನಮ್ಮ ಅರಿಕೆಯನ್ನು ಘುಟ್ಟಿಯಾಗಿ ಹಿಡಿಯೋಣ. ಯಾಕಂದ
ರೆ ನಮ್ಮ ಬಲಹೀನತ್ವಗಳಲ್ಲಿ ಕೂಡ ಚಿಂತಿಸಲಾರದ ಪ್ರಧಾನ
ಯಾಜಕನಲ್ಲ, ಪಾಪವೇ ಹೊರ್ತು, ಸಕಲ ವಿಷಯಗಳಲ್ಲಿ ನಮ್ಮ
೧೬ ಹಾಗೆಯೇ ಶೋಧಿಸಲ್ಪಟ್ಟವನು ನಮಗುಂಟು. ಆದದರಿಂದ, ನಾ
ವು ಕರುಣೆಯನ್ನು ಹೊಂದುವ ಹಾಗೆಯೂ, ತತ್ಕಾಲದ ಸಹಾ
ಯಕ್ಕಾಗಿ ಕೃಪೆ ಶಿಕ್ಕುವ ಹಾಗೆಯೂ, ಧೈರ್ಯದಿಂದ ಕೃಪೆ
ಯ ಸಿಂಹಾಸನದ ಬಳ್ಳಿಗೆ ಬರೋಣ.

## ೫. ಸಂಧಿ.

೧ ಹ್ಯಾಗಂದರೆ, ಮನುಷ್ಯರೊಳಗಿಂದ ತೆಗೆಯಲ್ಪಟ್ಟ ಒಬ್ಬೊ
ಬ್ಬ ಪ್ರಧಾನ ಯಾಜಕನು ಕಾಣಿಕೆಗಳನ್ನೂ, ಪಾಪಗಳಿಗೋ
ಸ್ಕರ ಬಲಿಗಳನ್ನೂ ಅರ್ಪಿಸುವ ಹಾಗೆ, ಮನುಷ್ಯರಿಗೋಸ್ಕರ
೨ ದೇವರ ಕಾರ್ಯಗಳಲ್ಲಿ ನೇಮಿಸಲ್ಪಡುವನು. ತಿಳಿಯದವರಿಗೂ,
ತಪ್ಪಿ ಹೋದವರಿಗೂ, ಕರುಣೆ ತೋರಿಸ ಬಲ್ಲನು. ಯಾಕಂದ
೩ ರೆ ಅವನು ಸಹ ಬಲಹೀನತ್ವದಿಂದ ಸುತ್ತಲ್ಪಟ್ಟಿದ್ದಾನೆ. ಇದರ

ನಿಮಿತ್ತ ಅವನು ಜನರಿಗಾಗಿ ಹ್ಯಾಗೋ, ಹಾಗೆಯೇ ತನಗಾಗಿ
೪ ಯೂ, ಪಾಪಗಳಿಗೋಸ್ಕರ ಅರ್ಪಿಸ ಬೇಕಾಗಿದೆ. ಮತ್ತು ಅ
ರೋನನ ಹಾಗೆ ದೇವರಿಂದ ಕರೆಯಲ್ಪಟ್ಟವನಲ್ಲದೆ, ಒಬ್ಬನಾದ
೫ ರೂ ಈ ಘನವನ್ನು ತನಗೆ ತಾನೇ ತೆಗೆದು ಕೊಳ್ಳುವದಿಲ್ಲ. ಇದೇ
ಪ್ರಕಾರ, ಕ್ರಿಸ್ತನು ಪ್ರಧಾನ ಯಾಜಕನಾಗ, ತನ್ನನ್ನು ತಾನು ಮ
ಹಿಮೆ ಪಡಿಸಿ ಕೊಳ್ಳಲಿಲ್ಲ. ಆದರೆ, ನೀನು ನನ್ನ ಮಗನು, ಈ
೬ ಹೊತ್ತು ನಿನ್ನನ್ನು ಪಡೆದಿದ್ದೇನೆಂದು ಅವರಿಗೆ ಹೇಳಿದವನೇ. ಹೀ
ಗೆಯೇ, ಇನ್ನೊಂದು ಸ್ಥಳದಲ್ಲಿಯೂ, ನೀನು ಮೆಲ್ಕೀಚೆದೆಕನ
೭ ತರದ ಪ್ರಕಾರ ಎಂದೆಂದಿಗೂ ಯಾಜಕನಾಗಿದ್ದೀ ಅನ್ನುತ್ತಾನೆ. ಇ
ವನು ತನ್ನ ಮಾಂಸದ ದಿವಸಗಳಲ್ಲಿ ತನ್ನನ್ನು ಮರಣದಿಂದ ರ
ಕ್ಷಿಸ ಸಮರ್ಥನಿಗೆ ಘಟ್ಟಿಯಾದ ಕೂಗಿನಿಂದಲೂ, ಕಣ್ಣೀರಿನಿಂದ
ಲೂ, ಪ್ರಾರ್ಥನೆಗಳನ್ನೂ, ವಿಜ್ಞಾಪನೆಗಳನ್ನೂ ಅರ್ಪಿಸಿ, ತನ್ನ
೮ ಭಯ ಭಕ್ತಿಯ ನಿಮಿತ್ತ ಕೇಳಲ್ಪಟ್ಟು, ಮಗನಾದಾಗ್ಯೂ, ತಾನು
೯ ಪಟ್ಟ ಪ್ರಮೆಗಳಿಂದ ವಿಧೇಯತ್ವವನ್ನು ಕಲಿತು ಕೊಂಡನು. ಮ
ತ್ತು ಸಂಪೂರ್ಣವಾಗಿದ್ದು, ತನಗೆ ವಿಧೇಯವಾಗುವವರೆಲ್ಲರಿಗೆ ನಿ
೧೦ ತ್ಯ ರಕ್ಷಣೆಗೆ ಕಾರಣವಾದನು. ಅವನು ಮೆಲ್ಕೀಚೆದೆಕನ ತರದ
ಪ್ರಕಾರ ಪ್ರಧಾನ ಯಾಜಕನೆಂದು ದೇವರಿಂದ ಹೆಸರ್ಗೊಂಡವನು.

೧೧ ಇವನನ್ನು ಕುರಿತು ಹೇಳುವದಕ್ಕೆ ನಮಗೆ ಬಹಳ ಮಾತು
ಉಂಟು. ಆದರೆ ನೀವು ಹೇಳುವದರಲ್ಲಿ ಮಂದರಾದದರಿಂದ, ವಿ
೧೨ ವರಿಸುವದು ಪ್ರಯಾಸವಾಗಿದೆ. ಯಾಕಂದರೆ ಈ ವೇಳೆಗೆ ನೀ
ವು ಬೋಧಕರಾಗಿರ ತಕ್ಕದ್ದಾಗಿದ್ದರೂ, ದೇವರ ವಚನಗಳ ಆ
ದಿ ಸೂತ್ರಗಳು ಯಾವದೆಂದು, ತಿರಿಗಿ ನಿಮಗೆ ಬೋಧಿಸ ಬೇಕಾ
ಗಿದೆ. ಮತ್ತು ಘಟ್ಟಿ ಆಹಾರವಲ್ಲ, ಹಾಲು ಬೇಕಾದವರಾದಿರಿ.
೧೩ ಹ್ಯಾಗಂದರೆ, ಹಾಲು ತೆಗೆದು ಕೊಳ್ಳುವ ಒಬ್ಬೊಬ್ಬನು ನೀತಿ ವಾ
೧೪ ಕ್ಯದಲ್ಲಿ ಅಪ್ರವೀಣನಾಗಿದ್ದಾನೆ, ಕೂಸಾಗಿದ್ದಾನೆ. ಆದರೆ ಬಲ್ಲೇ
ದನ್ನೂ ಕೆಟ್ಟದ್ದನ್ನೂ ಪರೀಕ್ಷಿಸುವ ಹಾಗೆ, ವಾಡಿಕೆಯಿಂದ ಜ್ಞಾ
ನೇಂದ್ರಿಯಗಳು ಅಭ್ಯಾಸಿಸಿರುವ ಸಂಪೂರ್ಣರಾದವರಿಗೆ ಘಟ್ಟಿ
ಆಹಾರವು ತಕ್ಕದ್ದಾಗಿರುವದು.

## ೬. ಸಂಧಿ.

೧ ಆದದರಿಂದ, ಕ್ರಿಸ್ತನ ಆದಿ ವಾಕ್ಯವನ್ನು ಬಿಟ್ಟು, ಸಂಪೂ
೨ ರ್ಣತ್ವಕ್ಕೆ ಹೋಗೋಣ. ಸತ್ತ ಕ್ರಿಯೆಗಳನ್ನು ಬಿಡುವ ಮಾ
ನಸಾಂತರವೂ, ದೇವರಲ್ಲಿರುವ ವಿಶ್ವಾಸವೂ, ಸ್ನಾನಗಳ ಬೋ
ಧನೆಯೂ, ಕೈಯಿಡುವಿಕೆಯೂ, ಸತ್ತವರ ಪುನರುತ್ಥಾನವೂ,
೩ ನಿತ್ಯ ನ್ಯಾಯತೀರ್ಪಿಕೆಯೂ, ಇವುಗಳ ಅಸ್ತಿವಾರವನ್ನು ತಿರಿಗಿ
ಹಾಕದೆ, ದೇವರು ಅಪ್ಪಣೆ ಕೊಟ್ಟರೆ, ಅದನ್ನು ಮಾಡುವೆವು.
೪ ಯಾಕಂದರೆ, ಒಂದು ಸಾರಿ ಬೆಳಕನ್ನು ಹೊಂದಿ, ಪರಲೋಕದ
ವರವನ್ನು ರುಚಿ ನೋಡಿ, ಪರಿಶುದ್ಧಾತ್ಮದಲ್ಲಿ ಪಾಲುಗಾರರಾಗಿ,
೫ ದೇವರ ಬಳ್ಳೇ ಮಾತನ್ನೂ, ಬರುವ ಲೋಕದ ಬಲಗಳನ್ನೂ,
೬ ರುಚಿಸೋಡಿ, ಜಾರಿಬಿದ್ದವರು, ತಮಗೆ ತಾವೇ ದೇವರ ಮಗನನ್ನು
ತಿರಿಗಿ ಶಿಲುಬೆಗೆ ಹಾಕಿ, ಅವಮಾನಕ್ಕೆ ಗುರಿಮಾಡುವದರಿಂದ, ಅ
ವರನ್ನು ತಿರಿಗಿ ಮಾನಸಾಂತರಕ್ಕೆ ಹೊಸಮಾಡುವದಕ್ಕಾಗದು.
೭ ಯಾಕಂದರೆ ತನ್ನ ಮೇಲೆ ಅನೇಕ ಸಾರಿ ಬರುವ ಮಳೆಯನ್ನು
ಕುಡಿದು, ಬೇಸಾಯ ಮಾಡಿಸುವವರಿಗೆ ತಕ್ಕ ಬೆಳೆ ಕೊಡುವ
ಭೂಮಿಯು, ದೇವರಿಂದ ಆಶೀರ್ವಾದವನ್ನು ಹೊಂದುತ್ತದೆ.
೮ ಆದರೆ ಮುಳ್ಳುಗಳನ್ನೂ, ದತ್ತೂರಿಗಳನ್ನೂ, ಬೆಳಿಸುವಂಥಾದ್ದು
ಅಸಮರ್ಪಕವಾಗಿಯೂ, ಶಾಪಕ್ಕೆ ಸಮೀಪವಾಗಿಯೂ, ಇದೆ.
ಅದರ ಅಂತ್ಯವು ಸುಡುವದೇ.

೯ ಆದರೆ, ಪ್ರಿಯರೇ, ನಾವು ಹೀಗೆ ಮಾತಾಡಿದಾಗ್ಯೂ ನಿಮ್ಮ
ನ್ನು ಕುರಿತು ಉತ್ತಮವಾದವುಗಳನ್ನೂ, ರಕ್ಷಣೆಗೆ ಸಂಮಂಧವಾ
೧೦ ದವುಗಳನ್ನೂ, ನಂಬಿಕೊಂಡಿದ್ದೇವೆ. ಯಾಕಂದರೆ, ದೇವರು ನಿ
ಮ್ಮ ಕೆಲಸವನ್ನೂ, ನೀವು ಪರಿಶುದ್ಧರಿಗೆ ಸೇವೆ ಮಾಡಿ, ಇನ್ನು
ಮಾಡುತ್ತಾ, ಅವನ ನಾಮಕ್ಕಾಗಿ ತೋರಿಸುವ ಪ್ರೀತಿಯ ಪ್ರಯಾ
೧೧ ಸವನ್ನೂ, ಮರತು ಬಿಡುವದಕ್ಕೆ ಅನ್ಯಾಯವಂತನಲ್ಲ. ಆದರೆ
ನೀವು ನೋಮಾರಿಗಳಾಗಿರದೆ, ವಿಶ್ವಾಸದಿಂದಲೂ, ತಾಳ್ಮೆಯಿಂ
ದಲೂ, ವಾಗ್ದತ್ತಗಳನ್ನು ಬಾಧ್ಯವಾಗಿ ಹೊಂದುವವರನ್ನು ಅನು
೧೨ ಸರಿಸುವವರಾಗಿರುವ ಹಾಗೆ, ನಿಮ್ಮಲ್ಲಿ ಒಬ್ಬೊಬ್ಬನು ಕಡೇ ವರ
ಗೂ ನಿರೀಕ್ಷೆಯ ಪೂರ್ಣ ನಿಶ್ಚಯಕ್ಕಾಗಿ, ಅದೇ ಜಾಗ್ರತೆಯ
ನ್ನು ತೋರಿಸ ಬೇಕೆಂದು ಅಪೇಕ್ಷಿಸುತ್ತೇವೆ.

೧೩ ಯಾಕಂದರೆ ದೇವರು ಅಬ್ರಹಾಮನಿಗೆ ವಾಗ್ದತ್ತ ಮಾಡುವಾ
ಗ, ಅಧಿಕನ ಮೇಲೆ ಆಣೆ ಇಡುವದಕ್ಕಾಗದದರಿಂದ, ತನ್ನ ಮೇ
೧೪ ಲೆ ಆಣೆ ಇಟ್ಟು ಕೊಂಡು, ನಿಶ್ಚಯವಾಗಿ ಆಶೀರ್ವದಿಸೇ, ನಿನ್ನ
ನ್ನು ಆಶೀರ್ವದಿಸುವೆನು, ಹೆಚ್ಚಿಸೇ, ನಿನ್ನನ್ನು ಹೆಚ್ಚಿಸುವೆನೆಂದು
೧೫ ಅಂದನು. ಹಾಗೆಯೇ, ಅವನು ತಾಳ್ಮೆ ಕೊಂಡು, ವಾಗ್ದತ್ತವನ್ನು
೧೬ ಹೊಂದಿದನು. ಮನುಷ್ಯರಾದರೆ, ಅಧಿಕನ ಮೇಲೆ ಆಣೆ ಇಡು
ವರು. ಮತ್ತು ಸ್ಥಿರಪಡಿಸುವದಕ್ಕೆ ಆಣೆಯು ಅವರಿಗೆ ಎಲ್ಲಾ ವಾ
೧೭ ಗ್ವಾದದ ಅಂತ್ಯವು. ಈ ವಿಷಯದಲ್ಲಿ ದೇವರು ವಾಗ್ದತ್ತದ
ಬಾಧ್ಯರಿಗೆ ತನ್ನ ಚಿತ್ತದ ನಿಶ್ಚಂಚಲತ್ವವನ್ನು ಅತ್ಯಧಿಕವಾಗಿ
೧೮ ತೋರಿಸ ಚಿತ್ತವಾಗಿದ್ದು, ದೇವರು ಯಾವವುಗಳಲ್ಲಿ ಸುಳ್ಳು ಹೇ
ಳುವದಕ್ಕಾಗದೋ, ಅಂಥ ನಿಶ್ಚಂಚಲವಾದ ಎರಡು ಕಾರ್ಯಗ
ಳಿಂದ ಮುಂದಿಟ್ಟಿರುವ ನಿರೀಕ್ಷೆಯನ್ನು ಹಿಡಿದು ಕೊಳ್ಳುವದಕ್ಕೆ,
ಓಡಿ ಬರುವ ನಮಗೆ ಬಲವಾದ ಆದರಣೆ ಉಂಟಾಗುವ ಹಾಗೆ, ಆ
೧೯ ಣೆ ಇಟ್ಟು, ನಡುವೆ ಬಂದನು. ಆ ನಿರೀಕ್ಷೆ ನಮಗೆ ಭದ್ರವಾಗಿಯೂ
ಸ್ಥಿರವಾಗಿಯೂ, ತೆರೆಯ ಒಳಗೆ ಪ್ರವೇಶಿಸುವಂಥಾದ್ದಾಗಿಯೂ,
೨೦ ಇರುವ ಪ್ರಾಣದ ಲಂಗರಿನ ಹಾಗಿದೆ. ಅಲ್ಲಿ ಯೇಸು ಮುಂದೋ
ಡುವವನಾಗಿ, ನಮ್ಮ ನಿಮಿತ್ತ ಪ್ರವೇಶಿಸಿದ್ದಾನೆ. ಅವನು ಮೆಲ್ಕೀ
ಚೆದೆಕನ ತರದ ಪ್ರಕಾರ ಎಂದೆಂದಿಗೂ ಪ್ರಧಾನ ಯಾಜಕನಾಗಿ
ದ್ದಾನೆ.

## ೭. ಸಂಧಿ.

೧ ಹ್ಯಾಗಂದರೆ, ಈ ಮೆಲ್ಕೀಚೆದೆಕನು ಸಾಲೆಮಿನ ರಾಜನಾಗಿ
ಯೂ, ಮಹೋನ್ನತನಾದ ದೇವರ ಯಾಜಕನಾಗಿಯೂ ಇದ್ದು,
ಅರಸುಗಳ ಸಂಹಾರ ಮಾಡಿ, ಬರುತ್ತಿರುವ ಅಬ್ರಹಾಮನನ್ನು ಎ
೨ ದುರುಗೊಂಡು, ಅವನನ್ನು ಆಶೀರ್ವದಿಸಿದನು. ಅವನಿಗೆ ಅಬ್ರ
ಹಾಮನು ಎಲ್ಲಾದರಲ್ಲಿ ಹತ್ತನೇ ಪಾಲನ್ನು ಹಂಚಿ ಕೊಟ್ಟನು.
ಅವನು ಹೆಸರಿನ ಅರ್ಥದ ಪ್ರಕಾರ, ಮೊದಲು ನೀತಿ ರಾಜನೂ,
ಆ ಮೇಲೆ ಸಾಲೆಮಿನ ರಾಜನೂ—ಅಂದರೆ, ಸಮಾಧಾನರಾಜನೂ
೩ —ತಂದೆ, ತಾಯಿ, ವಂಶಾವಳಿ ಇಲ್ಲದವನೂ, ದಿವಸಗಳ ಪ್ರಾರಂ
ಭವಾದರೂ, ಜೀವದ ಅಂತ್ಯವಾದರೂ ಇಲ್ಲದವನೂ, ದೇವರ



ಮಗನಿಗೆ ಸಮಾನ ಮಾಡಲ್ಪಟ್ಟವನೂ ಆಗಿದ್ದು, ಸದಾಕಾಲ
ಯಾಜಕನಾಗಿ ಇರುತ್ತಾನೆ.

೪ ಇವನು ಎಷ್ಟು ದೊಡ್ಡವನೆಂದು ನೋಡಿರಿ. ಮೂಲ ಪಿತೃವಾ
ದ ಅಬ್ರಹಾಮನೇ ಕೊಳ್ಳೆಯಲ್ಲಿ ಹತ್ತನೇ ಪಾಲನ್ನು ಅವನಿಗೆ
೫ ಕೊಟ್ಟನು. ಲೇವಿಯ ಮಕ್ಕಳಲ್ಲಿ ಯಾಜಕತ್ವವನ್ನು ಹೊಂದು
ವರಿಗೆ—ಅವರು ಅಬ್ರಹಾಮನ ತೊಡೆಯಿಂದ ಬಂದವರಾದಾ
ಗ್ಯೂ—ತಮ್ಮ ಸಹೋದರರಾಗಿರುವ ಜನರಿಂದ ನ್ಯಾಯಪ್ರಮಾ
ಣದ ಪ್ರಕಾರ ಹತ್ತರಲ್ಲೊಂದನ್ನು ತೆಗೆದು ಕೊಳ್ಳುವದಕ್ಕೆ ಕ
೬ ಟ್ಟಳೆ ಉಂಟು. ಆದರೆ ಅವರ ವಂಶಾವಳಿಯಲ್ಲಿ ಸೇರದವನು, ಅ
ಬ್ರಹಾಮನಿಂದ ಹತ್ತರಲ್ಲೊಂದನ್ನು ತೆಗೆದು ಕೊಂಡು, ವಾಗ್ದತ್ತಗ
೭ ಳುಂಟಾದವನನ್ನು ಆಶೀರ್ವದಿಸಿದನು. ಮತ್ತು ಕಿರಿಯನು ಹಿರಿ
ಯನಿಂದ ಆಶೀರ್ವದಿಸಲ್ಪಡುವನೆಂಬುವದಕ್ಕೆ ಎದುರು ಮಾತು
೮ ಏನೂ ಇಲ್ಲ. ಇದಲ್ಲದೆ, ಇಲ್ಲಿ ಸಾಯುವ ಮನುಷ್ಯರು ಹತ್ತರ
ಲ್ಲೊಂದನ್ನು ಹೊಂದುತ್ತಾರೆ; ಆದರೆ ಅಲ್ಲಿ ಜೀವಿಸುತ್ತಾನೆಂದು
೯ ಸಾಕ್ಷಿಗೊಂಡವನೇ. ಮತ್ತು ಹತ್ತರಲ್ಲೊಂದನ್ನು ಹೊಂದುವವ
ನಾದ ಲೇವಿ ಸಹ, ಅಬ್ರಹಾಮನ ಮುಖಾಂತರ ಹತ್ತರಲ್ಲೊಂದ
೧೦ ನ್ನು ಕೊಟ್ಟನೆಂದು ಹೇಳ ಬಹುದು. ಹ್ಯಾಗಂದರೆ, ಮೆಲ್ಕೀಚೆ
ದೆಕನು, ಅವನನ್ನು ಎದುರುಗೊಂಡಾಗಲೇ, ಇನ್ನು ತಂದೆಯ ತೊ
ಡೆಯಲ್ಲಿ ಇದ್ದನು.

೧೧ ಹಾಗಾದರೆ, ಯಾವದರೊಳಗಾಗಿ ಜನರು ನ್ಯಾಯಪ್ರಮಾ
ಣವನ್ನು ಹೊಂದಿತೋ, ಆ ಲೇವಿಕ ಯಾಜಕತ್ವದಿಂದ ಸಂಪೂ
ರ್ಣತ್ವ ಉಂಟಾಗಿದ್ದರೆ, ಆರೋನನ ತರದ ಪ್ರಕಾರ ಕರೆಯ
ಲ್ಪಡದೆ, ಮೆಲ್ಕೀಚೆದೆಕನ ತರದ ಪ್ರಕಾರವಾಗಿರುವ ಬೇರೆ ಯಾಜ
೧೨ ಕನು ಹುಟ್ಟುವದಕ್ಕೆ ಅಗತ್ಯವೇನು? ಯಾಕಂದರೆ ಯಾಜಕತ್ವ
ವು ಬದಲಾದರೆ, ಅವಶ್ಯವಾಗಿ ನ್ಯಾಯಪ್ರಮಾಣ ಸಹ ಬದಲಾ
೧೩ ಗುವದು. ಯಾಕಂದರೆ ಇವುಗಳು ಯಾರನ್ನು ಕುರಿತು ಹೇಳಲ್ಪ
ಟ್ಟವೆಯೋ, ಅವನು ಬೇರೆ ಕುಲಕ್ಕೆ ಸೇರಿದವನು; ಅದರಲ್ಲಿ ಒ
೧೪ ಬ್ಬನಾದರೂ ಬಲಿಪೀಠದ ಹತ್ತರ ಕಾದು ಕೊಳ್ಳಲಿಲ್ಲ. ಏನಂದ
ರೆ, ನಮ್ಮ ಕರ್ತನು ಯೆಹೂದನಿಂದ ಉದಯವಾದನೆಂಬುವ
ದು ಸ್ಪಷ್ಟವಾಗಿದೆ. ಈ ಕುಲವನ್ನು ಕುರಿತು ಮೋಶೆಯು ಯಾ
೧೫ ಜಕತ್ವದ ವಿಷಯವಾಗಿ ಒಂದೂ ಹೇಳಲಿಲ್ಲ. ಮತ್ತು ಮೆಲ್ಕೀಚೆ
ದೆಕನ ಹೋಲಿಕೆಯ ಪ್ರಕಾರ, ಬೇರೆ ಯಾಜಕನು ಎದ್ದರೆ, ಅ
೧೬ ತ್ಯಧಿಕ ಸ್ಪಷ್ಟವಾಗಿದೆ. ಹ್ಯಾಗಂದರೆ, ಅವನು ಮಾಂಸಭಾವದ
ಕಟ್ಟಳೆಯಾದ ನ್ಯಾಯಪ್ರಮಾಣದ ಪ್ರಕಾರವಲ್ಲ, ನಿರ್ಲಯಜೀ
೧೭ ವದ ಬಲದ ಪ್ರಕಾರ ಉಂಟಾಗಿದ್ದಾನೆ. ಯಾಕಂದರೆ ನೀನು ಮೆ
ಲ್ಕೀಚೆದೆಕನ ತರದ ಪ್ರಕಾರ ಎಂದೆಂದಿಗೂ ಯಾಜಕನಾಗಿದ್ದೀ
೧೮ ಎಂದು, ಸಾಕ್ಷಿ ಕೊಡುತ್ತಾನೆ. ಯಾಕಂದರೆ ಮುಂಚಿನ ಕಟ್ಟಳೆ
ಬಲಹೀನವೂ, ನಿಷ್ಪ್ರಯೋಜನವೂ, ಆಗಿರುವದರಿಂದ ತೆಗೆದು
೧೯ ಹಾಕಲ್ಪಡುವದು ಆಗುತ್ತದೆ. ಯಾಕಂದರೆ ನ್ಯಾಯಪ್ರಮಾಣ
ವು ಬಂದನ್ನೂ ಸಂಪೂರ್ಣ ಮಾಡಲಿಲ್ಲ, ಆದರೆ ಉತ್ತಮವಾದ
ನಿರೀಕ್ಷೆಯ ಪ್ರವೇಶವೇ. ಇದರಿಂದ ದೇವರ ಸಮೀಪಕ್ಕೆ ಬರು
೨೦ ತ್ತೇವೆ.

೨೦ ಮತ್ತು ಆಣೆಯಿಲ್ಲದೆ ಅಲ್ಲದಷ್ಟು ಉತ್ತಮವಾದ ಬಡಂಬಡಿ
೨೧ ಕೆಗೆ ಯೇಸು ಹೊಣೆಗಾರನಾಗಿದ್ದಾನೆ. ಯಾಕಂದರೆ ಅವರು ಆ
ಣೆಯಿಲ್ಲದೆ ಯಾಜಕರಾದರು. ಆದರೆ ಇವನು, ತನ್ನ ಸಂಗತ,
ನೀನು ಮೆಲ್ಕೀಚೆದೆಕನ ತರದ ಪ್ರಕಾರ ಎಂದೆಂದಿಗೂ ಯಾಜಕ
೨೨ ನಾಗಿದ್ದೀ ಎಂದು, ಕರ್ತನು ಆಣೆ ಇಟ್ಟು, ಪಶ್ಚಾತ್ತಾಪ ಪಡನಂತ
ಹೇಳಿದವನ ಆಣೆಯಿಂದಲೇ.

೨೩ ಮತ್ತು ಅವರು ಇರುವದಕ್ಕೆ ಮರಣದಿಂದ ತಡೆಯಲ್ಪಟ್ಟ
೨೪ ಕಾರಣ, ಅನೇಕ ಯಾಜಕರಾಗಿದ್ದರು. ಆದರೆ ಇವನು ಎಂದೆಂದಿ
ಗೂ ಇರುವದರಿಂದ, ಇವನಿಗೆ ಬದಲಾಗದ ಯಾಜಕತ್ವ ಉಂಟು.
೨೫ ಆದಕಾರಣ ತನ್ನ ಮುಖಾಂತರ ದೇವರ ಬಳಿಗೆ ಬರುವವರನ್ನು
ಸಂಪೂರ್ಣವಾಗಿ ರಕ್ಷಿಸ ಬಲ್ಲನು; ಯಾಕಂದರೆ ಅವರಿಗೋಸ್ಕ
ರ ವಿಜ್ಞಾಪನೆ ಮಾಡುವದಕ್ಕೆ ಯಾವಾಗಲೂ ಬದುಕುತ್ತಾನೆ.

೨೬ ಯಾಕಂದರೆ ಇಂಥ ಪ್ರಧಾನ ಯಾಜಕನು ನಮಗೆ ತಕ್ಕವ
ನು—ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾ
ಪಿಗಳಿಂದ ಪ್ರತ್ಯೇಕನೂ, ಆಕಾಶಗಳಿಗಿಂತ ಉನ್ನತನೂ ಆಗಿರು
೨೭ ವವನೇ. ಪ್ರಧಾನಯಾಜಕರ ಹಾಗೆ ಮುಂಚೆ ಸ್ವಂತ ಪಾಪಗಳಿ
ಗೋಸ್ಕರ, ತರುವಾಯ ಜನರ ಪಾಪಗಳಿಗೋಸ್ಕರ, ದಿನದಿನ
ಕ್ಕೆ ಬಲಿಗಳನ್ನು ಅರ್ಪಿಸುವದು ಇವನಿಗೆ ಅಗತ್ಯವಿಲ್ಲ ಯಾಕಂ
ದರೆ ತನ್ನನ್ನು ಅರ್ಪಿಸಿ, ಇದನ್ನು ಒಂದು ಸಾರಿ ಮಾಡಿದನು.
೨೮ ನ್ಯಾಯಪ್ರಮಾಣವು ಬಲಹೀನರಾದ ಮನುಷ್ಯರನ್ನು ಪ್ರಧಾನ
ಯಾಜಕರಾಗಿ ಇರಿಸುವದು. ಆದರೆ ನ್ಯಾಯಪ್ರಮಾಣದ ತರು
ವಾಯ ಉಂಟಾದ ಆಣೆಯ ವಾಕ್ಯವು ಎಂದೆಂದಿಗೂ ಸಂಪೂ
ರ್ಣ ಮಾಡಲ್ಪಟ್ಟ ಮಗನನ್ನೇ ಇರಿಸುತ್ತದೆ.

## ೮. ಸಂಧಿ.

೧ ಹೇಳಲ್ಪಟ್ಟವುಗಳಲ್ಲಿ ಒಟ್ಟರ್ಥವು ಏನಂದರೆ, ಆಕಾಶಗಳಲ್ಲಿ
ರುವ ಮಹತ್ತಿನ ಸಿಂಹಾಸನದ ಬಲಪಾರ್ಶ್ವದಲ್ಲಿ ಕೂತು ಕೊಂ
೨ ಡಿರುವವನಾಗಿಯೂ, ಪರಿಶುದ್ಧವಾದವುಗಳಲ್ಲಿ, ಮನುಷ್ಯನಲ್ಲ, ಕ
ರ್ತನು ಹಾಕಿದ ನಿಜವಾದ ಗುಡಾರದಲ್ಲಿ, ಸೇವಕನಾಗಿಯೂ,
೩ ಇರುವಂಥ ಪ್ರಧಾನ ಯಾಜಕನು ನಮಗೆ ಉಂಟು. ಯಾಕಂದರೆ
ಒಬ್ಬೊಬ್ಬ ಪ್ರಧಾನ ಯಾಜಕನು ಕಾಣಿಕೆಗಳನ್ನೂ ಬಲಿಗಳ
ನ್ನೂ, ಅರ್ಪಿಸುವದಕ್ಕೆ ಇರಿಸಲ್ಪಡುವನು. ಆದದರಿಂದ, ಅ
೪ ರ್ಪಿಸುವದಕ್ಕೆ ಇವನಿಗೂ ಏನಾದರೂ ಇರ ಬೇಕಾಗಿದೆ. ನ್ಯಾ
ಯಪ್ರಮಾಣದ ಪ್ರಕಾರ ಕಾಣಿಕೆಗಳನ್ನು ಅರ್ಪಿಸುವ ಯಾಜಕ
ರು ಇರುವದರಿಂದ, ಇವನು ಭೂಮಿಯ ಮೇಲೆ ಇದ್ದರೆ, ಯಾ
೫ ಜಕನಾಗಿರುವದಿಲ್ಲ. ಅಂಥವರು ಪರಲೋಕದವುಗಳ ಪ್ರತಿಯಲ್ಲಿ
ಯೂ, ನೆರಳಿನಲ್ಲಿಯೂ, ಆರಾಧಿಸುತ್ತಾರೆ. ಈ ಪ್ರಕಾರ, ಮೋ
ಶೆಯು ಗುಡಾರವನ್ನು ತೀರಿಸಲಾಗಿರುವಾಗ, ಪರ್ವತದ ಮೇಲೆ
ನಿನಗೆ ತೋರಿಸಲ್ಪಟ್ಟ ಮಾದರಿಯ ಹಾಗೆ ಸಮಸ್ತವನ್ನು ಮಾಡ
೬ ನೋಡೆಂದು, ದೈವೋತ್ತರ ಹೊಂದಿದನು. ಆದರೆ ಈಗ ಅವನು
ಎಷ್ಟು ಉತ್ತಮವಾದದ್ದಾಗಿಯೂ, ಉತ್ತಮವಾದ ವಾಗ್ದತ್ತಗಳಿಂ
ದ ಸ್ಥಾಪಿಸಲ್ಪಟ್ಟದ್ದಾಗಿಯೂ, ಇರುವ ಬಡಂಬಡಿಕೆಗೆ ಮಧ್ಯಸ್ಥ
ನಾಗಿದ್ದಾನೋ, ಅಷ್ಟು ಅಧಿಕ ಸೇವೆಯನ್ನು ಹೊಂದಿದ್ದಾನೆ.

೭ ಹ್ಯಾಗಂದರೆ, ಆ ಮೊದಲನೇ ಬಡಂಬಡಿಕೆ ತಪ್ಪಿಲ್ಲದ್ದಾಗಿದ್ದ
೮ ರೆ, ಎರಡನೇದಕ್ಕೆ ಸ್ಥಳ ಹುಡುಕಲ್ಪಡುತ್ತಿರಲಿಲ್ಲ. ಆದರೆ ತಪ್ಪು
ಹಿಡಿದು, ಅವರಿಗೆ ಹೇಳುವದೇನಂದರೆ, ಇಗೋ, ನಾನು ಇಸ್ರ
ಯೇಲನ ಮನೆಯ ಸಂಗಡಲೂ, ಯೆಹೂದನ ಮನೆಯ ಸಂಗ
ಡಲೂ, ಹೊಸ ಬಡಂಬಡಿಕೆಯನ್ನು ಮಾಡುವ ದಿವಸಗಳು ಬರು

೯ ತ್ತವೆಂದು ಕರ್ತನು ಹೇಳುತ್ತಾನೆ. ನಾನು ಅವರ ಪಿತೃಗಳ ಸಂ
ಗತ, ಅವರನ್ನು ಎಗುಪ್ತ್ ದೇಶದಿಂದ ಕರಕೊಂಡು ಬರುವದಕ್ಕೆ
ಅವರ ಕೈ ಹಿಡಿದ ದಿವಸದಲ್ಲಿ ಮಾಡಿದ ಒಡಂಬಡಿಕೆಯ ಪ್ರಕಾರ
ವಲ್ಲ; ಯಾಕಂದರೆ ಅವರು ನನ್ನ ಒಡಂಬಡಿಕೆಯಲ್ಲಿ ಸ್ಥಿರವಾಗಿರ
ಲಿಲ್ಲ; ಮತ್ತು ನಾನು ಅವರನ್ನು ಅಲಕ್ಷ್ಯ ಮಾಡಿದೆನೆಂದು ಕರ್ತ
೧೦ ನು ಹೇಳುತ್ತಾನೆ. ಆ ದಿವಸಗಳ ತರುವಾಯ, ನಾನು ಇಸ್ರಾಯೇ
ಲನ ಮನೆಗೆ ನಿರ್ಣಯಿಸುವ ಒಡಂಬಡಿಕೆ ಇದೇ—ನನ್ನ ನ್ಯಾ
ಯಗಳನ್ನು ಅವರ ಮನಸ್ಸಿನಲ್ಲಿ ಇರಿಸಿ, ಅವುಗಳನ್ನು ಅವರ
ಹೃದಯಗಳ ಮೇಲೆ ಬರೆಯುವೆನು; ನಾನು ಅವರಿಗೆ ದೇವರಾ
ಗಿರುವೆನು, ಅವರು ನನಗೆ ಪ್ರಜೆಯಾಗಿರುವರು, ಎಂದು ಕರ್ತನು
೧೧ ಹೇಳುತ್ತಾನೆ. ಮತ್ತು ಕರ್ತನನ್ನು ತಿಳಿಯಕೋ ಎಂದು, ಒಬ್ಬೊ
ಬ್ಬನು ತನ್ನ ನೆರೆಯನನಿಗೂ, ಒಬ್ಬೊಬ್ಬನು ತನ್ನ ಸಹೋ
ದರನಿಗೂ, ಬೋಧಿಸುವದಿಲ್ಲ. ಯಾಕಂದರೆ ಅವರಲ್ಲಿ ಚಿಕ್ಕವ
ನು ಮೊದಲುಗೊಂಡು ಅವರಲ್ಲಿ ದೊಡ್ಡವನ ಮಟ್ಟಿಗೂ, ಎಲ್ಲರು
೧೨ ನನ್ನನ್ನು ಅರಿಯುವರು; ಮತ್ತು ಅವರ ಅನ್ಯಾಯಗಳಿಗೆ ಕನಿಕ
ರ ತೋರಿಸಿ, ಅವರ ಪಾಪಗಳನ್ನೂ, ಅವರ ಅಕ್ರಮಗಳನ್ನೂ,
೧೩ ಇನ್ನು ನೆನಪು ಮಾಡಿ ಕೊಳ್ಳೆನು. ಹೊಸ ಒಡಂಬಡಿಕೆ ಎಂದು
ಹೇಳುವದರಲ್ಲಿ, ಮೊದಲನೇದನ್ನು ಹಳ್ಳೇದಾಗ ಮಾಡಿದ್ದಾನೆ. ಹ
ಳ್ಳೇದಾಗಿಯೂ, ಮುದಿಯಾಗಿಯೂ, ಇರುವಂಥದ್ದು, ಕಾಣದೆ
ಹೋಗುವದಕ್ಕೆ ಸಮೀಪವಾಗಿದೆ.

## ೯. ಸಂಧಿ.

೧ ಹಾಗಾದರೆ, ಮೊದಲನೇ ಗುಡಾರಕ್ಕೆ ಆರಾಧನೆಯ ನೇಮಗ
೨ ಳೂ, ಲೋಕಭಾವದ ಪರಿಶುದ್ಧ ಸ್ಥಳವೂ, ಇದ್ದವು. ಹ್ಯಾಗಂದರೆ,
ಗುಡಾರವು ಸಿದ್ಧ ಮಾಡಲ್ಪಟ್ಟಿತು—ಮೊದಲನೇದರಲ್ಲಿ, ದೀಪಸ್ತಂ
ಭವೂ, ಮೇಜೂ, ಸಮುಖದ ರೊಟ್ಟಿಗಳೂ, ಇದ್ದವು; ಇದು ಪ
೩ ರಿಶುದ್ಧ ಸ್ಥಳವೆಂದು ಹೇಳಲ್ಪಡುವದು. ಇದಲ್ಲದೆ, ಎರಡನೇ ತೆರೆ
ಯ ಹಿಂದೆ ಮಹಾ ಪರಿಶುದ್ಧ ಸ್ಥಳವೆಂದು ಹೇಳಲ್ಪಡುವ ಗುಡಾ
೪ ರವಿತ್ತು; ಇದರಲ್ಲಿ ಚಿನ್ನದ ಧೂಪ ಪಾತ್ರೆಯೂ, ಎಲ್ಲೆಲ್ಲಿಯೂ
ಚಿನ್ನದಿಂದ ಹೊದಿಗಿಸಲ್ಪಟ್ಟ ಒಡಂಬಡಿಕೆಯ ಪೆಟ್ಟಿಗೆಯೂ, ಇ
ದರಲ್ಲಿ ಮನ್ನವು ಇಟ್ಟಿರುವ ಚಿನ್ನದ ಪಾತ್ರೆಯೂ, ಅರೋನನ
೫ ಚಿಗಿತ ಕೋಲೂ, ಒಡಂಬಡಿಕೆಯ ಹಲಿಗೆಗಳೂ, ಇದ್ದವು. ಮತ್ತು
ಇದರ ಮೇಲೆ ಕೃಪಾಸನಕ್ಕೆ ನೆರಳು ಹಾಕುವ ಮಹಿಮೆಯು
ಳ್ಳ ಕೆರೂಬಿಗಳು ಇದ್ದವು. ಇವುಗಳನ್ನು ಕುರಿತು ಈಗ ವಿವರವಾ
ಗಿ ಹೇಳುವದಕ್ಕಿಲ್ಲ.
೬ ಮತ್ತು ಇವುಗಳು ಸಿದ್ಧ ಮಾಡಲ್ಪಟ್ಟಿರುವಾಗ, ಯಾಜಕರು
ಆರಾಧನೆಗಳನ್ನು ಪೂರೈಸುವದಕ್ಕಾಗಿ, ಮೊದಲನೇ ಗುಡಾರದಲ್ಲಿ
೭ ಯಾವಾಗಲೂ ಪ್ರವೇಶಿಸುವರು. ಆದರೆ ಎರಡನೇದರಲ್ಲಿ, ವರು
ಷಕ್ಕೆ ಒಂದು ಸಾರಿ ಪ್ರಧಾನ ಯಾಜಕನು ಒಬ್ಬನೇ; ತನಗೋ
ಸ್ಕರವೂ, ಜನರ ತಪ್ಪುಗಳಿಗೋಸ್ಕರವೂ, ಅರ್ಪಿಸುವ ರಕ್ತವಿ
೮ ಲ್ಲದೆ ಅಲ್ಲ. ಇದರಲ್ಲಿ ಮೊದಲನೇ ಗುಡಾರವು ನಿಂತಿರುವಾಗ, ಪರಿ
ಶುದ್ಧ ಸ್ಥಳಕ್ಕೆ ಹೋಗುವ ಮಾರ್ಗವು ಇನ್ನು ಪ್ರತ್ಯಕ್ಷ ಮಾಡ
ಲ್ಪಡಲಿಲ್ಲವೆಂದು, ಪರಿಶುದ್ಧಾತ್ಮನು ತಿಳಿಯ ಮಾಡಿತು. ಇರುವ
೯ ಕಾಲಕ್ಕಾಗಿ ಇದು ಸಾಮ್ಯವು. ಈಗ ಆರಾಧನೆ ಮಾಡುವವನನ್ನು
ಮನಸಾಕ್ಷಿಯ ಪ್ರಕಾರ ಸಂಪೂರ್ಣ ಮಾಡಲಾರದ ಕಾಣಿಕೆ
೧೦ ಗಳೂ, ಬಲಿಗಳೂ, ಅರ್ಪಿಸಲ್ಪಡುವವು. ಅವು ಆಹಾರಗಳಲ್ಲಿ
ಯೂ, ಪಾನಗಳಲ್ಲಿಯೂ, ಬಹುಬಹುವಾದ ಸ್ನಾನಗಳಲ್ಲಿಯೂ,
ಮಾಂಸದ ನೇಮಗಳಲ್ಲಿಯೂ, ಶಿದ್ದುಪಾಟಿನ ಕಾಲದ ವರೆಗೂ
ಅಡಗಿದ್ದವು.
೧೧ ಆದರೆ ಕ್ರಿಸ್ತನು ಆಗುವ ಒಳ್ಳೆಯವುಗಳ ಪ್ರಧಾನ ಯಾಜಕ
ನಾಗಿ ಬಂದು, ಕೈ ಕೆಲಸದ್ದು—ಅಂದರೆ, ಈ ಸೃಷ್ಟಿಯದ್ದು—ಅ
೧೨ ಗಿರದೆ, ಅಧಿಕವಾದಂಥ ಸಂಪೂರ್ಣ ತರವಾದಂಥ ಗುಡಾರದಿಂದ
ಹೋತ ಹೋರಿಗಳ ರಕ್ತದಿಂದ ಅಲ್ಲ, ಸ್ವಂತ ರಕ್ತದಿಂದಲೇ, ನಿ
ತ್ಯ ವಿಮೋಚನೆಯನ್ನು ಸಂಪಾದಿಸಿ ಕೊಂಡು, ಒಂದೇ ಸಾರಿ
೧೩ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸಿದನು. ಯಾಕಂದರೆ ಗೂಳಿ ಹೋ
ತಗಳ ರಕ್ತವೂ, ಹೊಲೆಯಾದವರ ಮೇಲೆ ಚಿಮಿಕಿಸಲ್ಪಟ್ಟ ಕಡ
ಸಿನ ಬೂದಿಯೂ, ಮಾಂಸವನ್ನು ಶುಚಿ ಮಾಡುವ ಹಾಗೆ ಪರಿಶು
೧೪ ದ್ಧ ಮಾಡಿದರೆ, ಎಷ್ಟು ಅಧಿಕವಾಗಿ ನಿತ್ಯ ಆತ್ಮದಿಂದ ತನ್ನನ್ನು
ದೇವರಿಗೆ ಕಳಂಕವಿಲ್ಲದವನಾಗಿ ಅರ್ಪಿಸಿದ ಕ್ರಿಸ್ತನ ರಕ್ತವು, ಜೀವ
ವುಳ್ಳ ದೇವರನ್ನು ಆರಾಧಿಸುವದಕ್ಕಾಗಿ, ನಿಮ್ಮ ಮನಸಾಕ್ಷಿಯ
೧೫ ನ್ನು ಸತ್ತ ಕ್ರಿಯೆಗಳಿಂದ ಶುಚಿ ಮಾಡುವದು? ಮತ್ತು ಇದರ
ನಿಮಿತ್ತ ಮೊದಲನೇ ಒಡಂಬಡಿಕೆಯ ಕಾಲದಲ್ಲಿ ನಡೆದ ಅಕ್ರಮಗ
ಳ ವಿಮೋಚನೆ ಆಗುವದಕ್ಕೋಸ್ಕರ ಮರಣ ಉಂಟಾಗಿ, ಕರೆ
ಯಲ್ಪಟ್ಟವರು ನಿತ್ಯ ಬಾಧ್ಯದ ವಾಗ್ದತ್ತವನ್ನು ಹೊಂದುವ ಹಾ
ಗೆ, ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ.
೧೬ ಯಾಕಂದರೆ ಮರಣಜಾತಕವು ಇರುವಲ್ಲಿ, ಬರೆದು ಕೊಟ್ಟವನ
೧೭ ಮರಣವು ಆಗುವದು ಅವಶ್ಯವು. ಯಾಕಂದರೆ ಮರಣಜಾತಕ
ವು ಮರಣವಾದ ಮೇಲೆ ಸ್ಥಿರವಾಗಿದೆ; ಬರೆದು ಕೊಟ್ಟವನು ಬದು
೧೮ ಕಿರುವಾಗ, ಅದಕ್ಕೆ ಎಂದಾದರೂ ಬಲವಿಲ್ಲ. ಆದದರಿಂದ ಮೊದ
೧೯ ಲನೇ ಒಡಂಬಡಿಕೆಯೂ ರಕ್ತವಿಲ್ಲದೆ ಪ್ರತಿಷ್ಠೆಯಾಗಲಿಲ್ಲ. ಹ್ಯಾ
ಗಂದರೆ, ಕಟ್ಟಳೆಗಳೆಲ್ಲಾ ನ್ಯಾಯಪ್ರಮಾಣದ ಪ್ರಕಾರ ಮೋಶೆ
ಯಿಂದ ಜನರಿಗೆಲ್ಲಾ ಹೇಳಲ್ಪಟ್ಟ ತರುವಾಯ, ಅವನು ನೀರೂ,
ಕೆಂಪಾದ ಉಣ್ಣೆಯೂ, ಹಿಸ್ಸಪ್ಪೂ, ಇವುಗಳ ಸಂಗಡ ಹೋರಿ
ಹೋತಗಳ ರಕ್ತವನ್ನು ತೆಗೆದು ಕೊಂಡು, ಪುಸ್ತಕದ ಮೇಲೆಯೂ,
೨೦ ಎಲ್ಲಾ ಜನರ ಮೇಲೆಯೂ ಚಿಮಿಕಿಸಿ, ದೇವರು ನಿಮಗೆ ಕಟ್ಟಳೆ
ಮಾಡಿದ ಒಡಂಬಡಿಕೆಯ ರಕ್ತವು ಇದೇ, ಎಂದು ಹೇಳಿದನು.
೨೧ ಇದಲ್ಲದೆ, ಗುಡಾರದ ಮೇಲೆಯೂ, ಎಲ್ಲಾ ಆರಾಧನೆಯ ಸಾ
ಮಗ್ರಿಗಳ ಮೇಲೆಯೂ ಹಾಗೆಯೇ ರಕ್ತವನ್ನು ಚಿಮಿಕಿಸಿದನು.
೨೨ ಮತ್ತು ನ್ಯಾಯ ಪ್ರಮಾಣದ ಪ್ರಕಾರ, ಸ್ವಲ್ಪ ಕಡಿಮೆಯಾಗಿ
ಸಮಸ್ತವು ರಕ್ತದಿಂದ ಶುಚಿ ಮಾಡಲ್ಪಟ್ಟವೆ; ರಕ್ತ ಚೆಲ್ಲುವಿಕೆ
ಇಲ್ಲದೆ ಪರಿಹಾರವು ಆಗುವದಿಲ್ಲ.
೨೩ ಹಾಗಾದರೆ, ಪರಲೋಕದವುಗಳ ಪ್ರತಿಗಳು ಇವುಗಳಿಂದ, ಆ
ದರೆ ಪರಲೋಕದವುಗಳು ತಾವೇ ಇವಕ್ಕಿಂತ ಉತ್ತಮವಾದ ಬ
೨೪ ಲಿಗಳಿಂದ, ಶುಚಿ ಮಾಡಲ್ಪಡುವದು ಅಗತ್ಯವು. ಯಾಕಂದರೆ
ಕ್ರಿಸ್ತನು ನಿಜವಾದವುಗಳಿಗೆ ಪ್ರತಿಗುರುತುಗಳಾದ, ಕೈ ಕೆಲಸದ, ಪ
ರಿಶುದ್ಧ ಸ್ಥಳದಲ್ಲಿ ಅಲ್ಲ, ಈಗ ನಮಗೋಸ್ಕರ ದೇವರ ಸಮು
ಖದಲ್ಲಿ ಪ್ರತ್ಯಕ್ಷವಾಗುವದಕ್ಕೆ, ಪರಲೋಕದಲ್ಲಿಯೇ ಪ್ರವೇಶಿಸಿ
೨೫ ದ್ದಾನೆ. ಆದರೆ ಪ್ರಧಾನ ಯಾಜಕನು ವರುಷಕ್ಕೆ ಅನ್ಯ
ರಕ್ತದಿಂದ ಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸುವ ಪ್ರಕಾರ, ತನ್ನನ್ನು
೨೬ ಅನೇಕ ಸಾರಿ ಅರ್ಪಿಸುವ ಹಾಗಲ್ಲ. ಹಾಗಿದ್ದರೆ ಜಗದುತ್ಪತ್ತಿ



ಮೊದಲುಗೊಂಡು ಅವನು ಅನೇಕಸಾರಿ ಶ್ರಮೆ ಪಡ ಬೇಕಾಗಿತ್ತು.
ಆದರೆ ಈಗ, ಒಂದೇ ಸಾರಿ ಯುಗಗಳ ಅಂತ್ಯದಲ್ಲಿ ತನ್ನನ್ನು
ಬಲಿಯಾಗಿ ಅರ್ಪಿಸುವದರಿಂದ, ಪಾಪ ನಿವರ್ತನೆ ಮಾಡುವದ
೨೭ ಕ್ಕೆ ಪ್ರತ್ಯಕ್ಷವಾದನು. ಮತ್ತು ಯಾವ ಪ್ರಕಾರ ಒಂದೇ ಸಾರಿ
ಸಾಯುವದೂ, ಇದರ ತರುವಾಯ ನ್ಯಾಯತೀರ್ಪಿಕೆಯೂ
೨೮ ಮನುಷ್ಯರಿಗೆ ನೇಮಕವಾಗಿದೆಯೋ, ಹಾಗೆಯೇ ಕ್ರಿಸ್ತನು, ಅ
ನೇಕರ ಪಾಪಗಳನ್ನು ಹೊತ್ತು ಕೊಳ್ಳುವದಕ್ಕೆ, ಒಂದೇ ಸಾರಿ ಅ
ರ್ಪಿಸಲ್ಪಟ್ಟು, ಎರಡನೇ ಸಾರಿ ಅವನನ್ನು ಎದುರು ನೋಡುವ
ವರಿಗೆ ಪಾಪವಿಲ್ಲದೆ ರಕ್ಷಣೆಗಾಗಿ ಕಾಣಿಸಿ ಕೊಳ್ಳುವನು.

## ೧೦. ಸಂಧಿ.

೧ ಯಾಕಂದರೆ ನ್ಯಾಯಪ್ರಮಾಣವು ಕಾರ್ಯಗಳ ಸ್ವರೂ
ಪವಲ್ಲ, ಆಗುವ ಒಳ್ಳೆಯವುಗಳ ನೆರಳು ಉಳ್ಳದ್ದಾಗಿ, ವರುಷ ವ
ರುಷಕ್ಕೆ ಯಾವಾಗಲೂ ಅರ್ಪಿಸುವ ಅದೇ ಬಲಿಗಳಿಂದ ಸೇರು
೨ ವವರನ್ನು ಎಂದಾದರೂ ಸಂಪೂರ್ಣ ಮಾಡಲಾರದು. ಇಲ್ಲದಿ
ದ್ದರೆ, ಆರಾಧನೆ ಮಾಡುವವರು ಒಂದೇ ಸಾರಿ ಶುಚಿ ಮಾಡಲ್ಪ
ಟ್ಟು, ಇನ್ನು ಪಾಪಗಳ ಭಾವನೆಯಿಲ್ಲದವರಾದದರಿಂದ, ಅವು
೩ ಅರ್ಪಿಸಲ್ಪಡುವದು ನಿಂತು ಹೋಗುತ್ತಿತ್ತಲ್ಲವೋ? ಆದರೆ ಅ
೪ ವುಗಳಲ್ಲಿ ವರುಷವರುಷಕ್ಕೆ ಪಾಪಗಳ ಜ್ಞಾಪಕ ಉಂಟು. ಯಾ
ಕಂದರೆ ಗೂಳಿ ಹೋತಗಳ ರಕ್ತವು ಪಾಪಗಳನ್ನು ಪರಿಹರಿಸಲಾ
೫ ರದು. ಆದದರಿಂದ, ಅವನು ಲೋಕದಲ್ಲಿ ಪ್ರವೇಶಿಸುವಾಗ, ಬಲಿಗ
ಳನ್ನೂ ಅರ್ಪಣೆಗಳನ್ನೂ ನೀನು ಇಚ್ಛೈಸಲಿಲ್ಲ, ಆದರೆ ನನಗೆ
೬ ಶರೀರವನ್ನು ಸಿದ್ಧ ಮಾಡಿದಿ; ಹೋಮಗಳಲ್ಲಿಯೂ ಪಾಪದ ನಿ
೭ ಮಿತ್ತವಾದವುಗಳಲ್ಲಿಯೂ ನೀನು ಸಂತೋಷ ಪಡಲಿಲ್ಲ. ಆಗ,
ಇಗೋ, ದೇವರೇ, ನಿನ್ನ ಚಿತ್ತವನ್ನು ಮಾಡ ಬರುತ್ತೇನೆ; ಪುಸ್ತ
ಕದ ಸುರಳಿಯಲ್ಲಿ ನನ್ನನ್ನು ಕುರಿತು ಬರೆದದೆ, ಎಂದು ಹೇಳಿದ
೮ ನು. ನ್ಯಾಯಪ್ರಮಾಣದ ಪ್ರಕಾರ ಅರ್ಪಿಸಲ್ಪಡುವಂಥ ಬಲಿ
ಯನ್ನೂ, ಅರ್ಪಣೆಯನ್ನೂ, ಹೋಮಗಳನ್ನೂ, ಪಾಪದ ನಿ
ಮಿತ್ತವಾದವುಗಳನ್ನೂ, ನೀನು ಇಚ್ಛೈಸಲಿಲ್ಲ, ಮೆಚ್ಚಲಿಲ್ಲವೆಂದು
೯ ಮುಂಚೆ ಹೇಳುವಾಗ, ಇಗೋ, ದೇವರೇ, ನಿನ್ನ ಚಿತ್ತವನ್ನು ಮಾ
ಡ ಬರುತ್ತೇನೆಂದು ಅನ್ನುತ್ತಾನೆ. ಎರಡನೇದನ್ನು ಸ್ಥಾಪಿಸುವದ
೧೦ ಕ್ಕೆ ಮೊದಲನೇದನ್ನು ತೆಗೆದು ಹಾಕುತ್ತಾನೆ. ಆ ಚಿತ್ತದಿಂದ
ಯೇಸು ಕ್ರಿಸ್ತನ ಶರೀರವು ಒಂದೇ ಸಾರಿ ಅರ್ಪಿಸಲ್ಪಟ್ಟದರಿಂದ,
ಪರಿಶುದ್ಧ ಮಾಡಲ್ಪಟ್ಟವರಾಗಿದ್ದೇವೆ.
೧೧ ಮತ್ತು ಬಹ್ಬೊಬ್ಬಿ ಯಾಜಕನು ದಿನದಿನಕ್ಕೆ ಸೇವೆ ಮಾ
ಡುತ್ತಾ, ಪಾಪಗಳನ್ನು ಪರಿಹರಿಸಲಾರದಂಥ ಅದೇ ಬಲಿಗಳನ್ನು
೧೨ ಅನೇಕ ಸಾರಿ ಅರ್ಪಿಸುತ್ತಾ, ನಿಲ್ಲುವನು. ಆದರೆ ಇವನು ಪಾಪಗ
ಳಿಗೋಸ್ಕರ ಒಂದೇ ಬಲಿಯನ್ನು ಅರ್ಪಿಸಿ, ಸದಾ ಕಾಲಕ್ಕೆ ದೇ
೧೩ ವರ ಬಲಪಾರ್ಶ್ವದಲ್ಲಿ ಕೂತು ಕೊಂಡು, ಇನ್ನು ಮೇಲೆ ತನ್ನ
ಶತ್ರುಗಳು ತನ್ನ ಪಾದ ಪೀಠವಾಗಿ ಇರಿಸಲ್ಪಡುವ ಪರ್ಯಂತರ
೧೪ ಎದುರು ನೋಡುತ್ತಾ ಇದ್ದಾನೆ. ಯಾಕಂದರೆ ಒಂದೇ ಅರ್ಪಣೆ
ಯಿಂದ ಪರಿಶುದ್ಧ ಮಾಡಲ್ಪಡುವವರನ್ನು ಸದಾ ಕಾಲಕ್ಕೆ ಸಂ
೧೫ ಪೂರ್ಣ ಮಾಡಿದ್ದಾನೆ. ಇದಲ್ಲದೆ ಪರಿಶುದ್ಧಾತ್ಮನು ನಮಗೆ ಸಾ
೧೬ ಕ್ಷಿ ಕೊಡುತ್ತನೆ. ಹ್ಯಾಗಂದರೆ, ಆ ದಿವಸಗಳ ತರುವಾಯ ನಾನು
ಅವರ ಸಂಗಡ ಮಾಡುವ ಒಡಂಬಡಿಕೆ ಇದೇ, ಎಂದು ಮೊದಲು
ಹೇಳಿ, ನಾನು ನನ್ನ ನ್ಯಾಯಗಳನ್ನು ಅವರ ಹೃದಯಗಳಲ್ಲಿ
೧೭ ಇರಿಸಿ, ಅವುಗಳನ್ನು ಅವರ ಮನಸ್ಸುಗಳಲ್ಲಿ ಬರೆದು, ಅವರ ಪಾ
ಪಗಳನ್ನೂ ಅವರ ಅಕ್ರಮಗಳನ್ನೂ ಇನ್ನು ನೆನಪು ಮಾಡಿ ಕೊ
೧೮ ಳ್ಳೆನೆಂದು ಕರ್ತನು ಹೇಳುತ್ತಾನೆ. ಹೀಗಿರಲಾಗಿ, ಇವುಗಳ ಪರಿ
ಹಾರವಿದ್ದಲ್ಲಿ ಇನ್ನು ಪಾಪಕ್ಕೋಸ್ಕರ ಅರ್ಪಣೆ ಇಲ್ಲವು.
೧೯ ಹಾಗಾದರೆ, ಸಹೋದರರೇ, ಯೇಸುವಿನ ರಕ್ತದ ಮೂಲವಾಗಿ,
೨೦ ಅವನು ತೆರೆಯಿಂದ—ಅಂದರೆ, ತನ್ನ ಮಾಂಸದಿಂದ—ನಮಗೆ ಪ್ರ
ತಿಷ್ಠೆ ಮಾಡಿದ ಜೀವವುಳ್ಳ ಹೊಸ ಮಾರ್ಗವಾಗಿ ಪರಿಶುದ್ಧ ಸ್ಥ
೨೧ ಳದಲ್ಲಿ ಪ್ರವೇಶಿಸುವದಕ್ಕೆ, ಧೈರ್ಯವೂ, ದೇವರ ಮನೆಯ
ಮೇಲಾಗಿರುವ ಮಹಾ ಯಾಜಕನೂ ನಮಗೆ ಉಂಟಾಗಿರುವದ
೨೨ ರಿಂದ, ಸತ್ಯವಾದ ಹೃದಯದಿಂದಲೂ ವಿಶ್ವಾಸದ ಪೂರ್ಣ
ನಿಶ್ಚಯದಿಂದಲೂ, ಕೆಟ್ಟ ಮನಸಾಕ್ಷಿಯ ಪರಿಹಾರಕ್ಕಾಗಿ ಚಿಮಿ
ಕಿಸಲ್ಪಟ್ಟು ಹೃದಯಗಳುಳ್ಳವರಾಗಿಯೂ, ನಿರ್ಮಲವಾದ ನೀ
ರಿನಿಂದ ತೊಳೆಯಲ್ಪಟ್ಟು ಶರೀರವುಳ್ಳವರಾಗಿಯೂ, ಸೇರೋ
೨೩ ಣ. ನಿರೀಕ್ಷೆಯ ಅರಿಕೆಯನ್ನು ಚಪಲವಿಲ್ಲದೆ ಹಿಡಿಯೋಣ;
೨೪ ಯಾಕಂದರೆ ವಾಗ್ದತ್ತ ಮಾಡಿದವನು ನಂಬಿಕೆಯುಳ್ಳವನು. ಮ
ತ್ತು ಪ್ರೀತಿಗೂ ಸತ್ಕ್ರಿಯೆಗಳಿಗೂ ಪ್ರೇರೇಪಿಸುವದಕ್ಕೆ ಒಬ್ಬರ
೨೫ ನ್ನೊಬ್ಬರು ಆಲೋಚಿಸೋಣ. ಕೆಲವರಿಗೆ ವಾಡಿಕೆ ಇರುವ ಪ್ರ
ಕಾರ, ನಾವು ಕೂಡಿ ಬರುವದನ್ನು ಬಿಡದೆ, ಬುದ್ಧಿ ಹೇಳೋಣ;
ಮತ್ತು ಆ ದಿನವು ಸಮೀಪಿಸುವದನ್ನು ನೀವು ನೋಡುವದ್ದು ಅ
೨೬ ಧಿಕವಾಗಿಯೇ. ಯಾಕಂದರೆ ನಾವು ಸತ್ಯದ ತಿಳುವಿಕೆಯನ್ನು
ಹೊಂದಿದ ಮೇಲೆ ಬೇಕಾಗಿ ಪಾಪ ಮಾಡಿದರೆ, ಪಾಪಗಳಿಗೋ
೨೭ ಸ್ಕರ ಬಲಿಯು ಇನ್ನು ಇರುವದಿಲ್ಲ; ಆದರೆ ನ್ಯಾಯತೀರ್ಪಿಕೆ
ಯನ್ನೂ, ವಿರೋಧಿಗಳನ್ನೂ ಭಕ್ಷಿಸಲಿರುವ ಕೋಪಾಗ್ನಿಯ
೨೮ ನ್ನೂ ಎದುರು ನೋಡುವ ಒಂದು ಭಯವೇ. ಒಬ್ಬನು ಮೋಶೆ
ಯ ನ್ಯಾಯಪ್ರಮಾಣವನ್ನು ಅಸಡ್ಡೆ ಮಾಡಿದರೆ, ಇಬ್ಬರು ಮೂ
೨೯ ವರ ಸಾಕ್ಷಿಯಿಂದ ಕನಿಕರವಿಲ್ಲದೆ ಸಾಯುವನು. ದೇವರ ಮಗ
ನನ್ನು ತುಳಿದು ಬಿಟ್ಟು, ತನ್ನನ್ನು ಪರಿಶುದ್ಧ ಮಾಡಿದ ಒಡಂಬ
ಡಿಕೆಯ ರಕ್ತವನ್ನು ಸಾಧಾರಣವೆಂದೆಣಿಸಿ, ಕೃಪೆಯ ಆತ್ಮನನ್ನು
ತಿರಸ್ಕಾರ ಮಾಡಿದವನು ಎಷ್ಟು ಅಧಿಕವಾದ ದಂಡನೆಗೆ ಪಾತ್ರ
೩೦ ನಾಗಿ ಎಣಿಸಲ್ಪಡುವನೆಂದು ನೆನಸುತ್ತೀರಿ? ಯಾಕಂದರೆ ಮು
ಯ್ಯಿಗೆ ಮುಯ್ಯಿ ಕೊಡುವದು ನನ್ನದು; ನಾನು ಬದುಲು ಕೊ
ಡುವೆನೆಂಬದಾಗಿ ಕರ್ತನು ಹೇಳುತ್ತಾನೆಂದೂ, ಮತ್ತು ಕರ್ತನು
ತನ್ನ ಜನರಿಗೆ ನ್ಯಾಯ ತೀರಿಸುವನೆಂದೂ, ಹೇಳಿದವನನ್ನು ಬ
೩೧ ಲ್ಲೆವು. ಜೀವವುಳ್ಳ ದೇವರ ಕೈಗಳಲ್ಲಿ ಬೀಳುವದು ಭಯಂಕರ
ವಾದದ್ದು.
೩೨ ಆದರೆ ಹಿಂದಿನ ದಿವಸಗಳನ್ನು ಜ್ಞಾಪಕ ಮಾಡಿ ಕೊಳ್ಳಿರಿ;
೩೩ ಅವುಗಳಲ್ಲಿ ನೀವು ಬೆಳಕನ್ನು ಹೊಂದಿದ ಮೇಲೆ, ನಿಂದೆಗಳಿಂದ
ಲೂ ಉಪದ್ರವಗಳಿಂದಲೂ ನೋಟ ಮಾಡಲ್ಪಟ್ಟವರಾಗಿಯೂ,
ಹಾಗೆಯೇ ಸಂಚರಿಸಿದವರಿಗೆ ಜತೆಗಾರರಾಗಿಯೂ, ಶ್ರಮೆಗಳ ಬ
೩೪ ಹು ಹೋರಾಟವನ್ನು ಸಹಿಸಿ ಕೊಂಡಿರಿ. ಹ್ಯಾಗಂದರೆ, ನನ್ನ
ಬಂಧಕಗಳಲ್ಲಿ ಕೂಡ ಜೆಂತಿಸಿದಿರಿ. ಪರಲೋಕದಲ್ಲಿ ಉತ್ತಮ ಸ್ಥಿ
ರವಾದ ಆಸ್ತಿ ನಮಗೆ ಉಂಟೆಂದು ತಿಳಿದು, ನಿಮ್ಮ ಆಸ್ತಿಯ ಕೊ
೩೫ ಳ್ಳಲಿಗೆ ಸಂತೋಷದಿಂದ ಒಪ್ಪಿ ಕೊಂಡಿರಿ. ಹಾಗಾದರೆ, ನಿಮ್ಮ
ಧೈರ್ಯವನ್ನು ಬಿಸಾಟು ಬಿಡ ಬೇಡಿರಿ; ಅದಕ್ಕೆ ದೊಡ್ಡ ಪ್ರತಿ

೩೬ ಫಲ ಉಂಟು. ಯಾಕಂದರೆ ದೇವರ ಚಿತ್ತವನ್ನು ಮಾಡಿ ವಾಗ್ದ
ತ್ತವನ್ನು ಸಂಪಾದಿಸುವ ಹಾಗೆ, ತಾಳ್ಮೆಯು ನಮಗೆ ಬೇಕಾಗಿದೆ.
೩೭ ನಿಶ್ಚಯವಾಗಿ ಇನ್ನು ಸ್ವಲ್ಪ ಕಾಲದಲ್ಲಿ ಬರುವವನು ಬರುವನು,
೩೮ ಅಲಸ್ಯ ಮಾಡನು. ಮತ್ತು ನೀತಿವಂತನು ವಿಶ್ವಾಸದಿಂದ ಬದು
ಕುವನು. ಆದರೆ ಹಿಂಜರಿದರೆ, ನನ್ನ ಪ್ರಾಣವು ಅವನಲ್ಲಿ ಸಂ
೩೯ ತೋಷ ಪಡುವದಿಲ್ಲ. ನಾವೋ, ನಾಶನಕ್ಕೆ ಹಿಂಜರಿಯುವವರಾಗ
ದೆ, ಪ್ರಾಣವನ್ನು ರಕ್ಷಿಸಿ ಕೊಳ್ಳುವದಕ್ಕಾಗಿ ವಿಶ್ವಾಸಿಸುವವರಾ
ಗಿದ್ದೇವೆ.

## ೧೧. ಸಂಧಿ.

೧ ವಿಶ್ವಾಸವು ನಿರೀಕ್ಷಿಸಿದವುಗಳ ನಿಶ್ಚಯವೂ, ಕಾಣದ ಕಾ
೨ ರ್ಯಗಳ ಪ್ರಮಾಣವೂ, ಆಗಿದೆ. ಇದರಿಂದ ಹಿರಿಯರು ಸಾಕ್ಷಿ
ಗೊಂಡರು.
೩ ವಿಶ್ವಾಸದಿಂದ ಕಾಣಲ್ಪಡುವವುಗಳು ತೋರುವಂಥವುಗಳಿಂ
ದ ಉಂಟು ಮಾಡಲ್ಪಡದೆ, ಲೋಕಗಳು ದೇವರ ವಾಕ್ಯದಿಂದ
ಸಿದ್ಧ ಮಾಡಲ್ಪಟ್ಟವೆಂದು ಗ್ರಹಿಸುತ್ತೇವೆ.
೪ ವಿಶ್ವಾಸದಿಂದ ಹೇಬೆಲನು ಕಾಯಿನನಿಗಿಂತ ಅಧಿಕವಾದ ಬಲಿ
ಯನ್ನು ದೇವರಿಗೆ ಅರ್ಪಿಸಿದನು; ಅದರಿಂದ ಅವನು, ದೇವರು
ಅವನ ಕಾಣಿಕೆಗಳನ್ನು ಕುರಿತು ಸಾಕ್ಷಿ ಕೊಡಲಾಗಿ, ನೀತಿವಂತನೆಂ
ದು ಸಾಕ್ಷಿಗೊಂಡನು. ಮತ್ತು ಅದರಿಂದ ಅವನು ಸತ್ತವನಾಗಿ
ದ್ದು, ಇನ್ನು ಮಾತಾಡುತ್ತಾನೆ.
೫ ವಿಶ್ವಾಸದಿಂದ ಹನೋಕನು ಮರಣವನ್ನು ನೋಡದ ಹಾಗೆ
ಎತ್ತಲ್ಪಟ್ಟನು; ದೇವರು ಅವನನ್ನು ಎತ್ತಿದ್ದರಿಂದ ಕಿಕ್ಕದೆ ಹೋ
ದನು. ಯಾಕಂದರೆ ಅವನು ಎತ್ತಲ್ಪಡುವದಕ್ಕಿಂತ ಮುಂಚೆ,
೬ ದೇವರು ಅವನಲ್ಲಿ ಮೆಚ್ಚಿದನೆಂದು ಸಾಕ್ಷಿಗೊಂಡನು. ಆದರೆ ವಿ
ಶ್ವಾಸವಿಲ್ಲದೆ ಅವನನ್ನು ಮೆಚ್ಚಿಸುವದಕ್ಕಾಗದು. ಯಾಕಂದರೆ
ದೇವರ ಬಳ್ಳಿಗೆ ಬರುವವನು, ಅವನು ಇದ್ದಾನೆಂದೂ, ಅವನನ್ನು
ಜಾಗ್ರತೆಯಾಗಿ ಹುಡುಕುವವರಿಗೆ ಫಲ ಕೊಡುವವನಾಗಿದ್ದಾನೆಂದೂ,
ವಿಶ್ವಾಸಿಸ ಬೇಕು.
೭ ವಿಶ್ವಾಸದಿಂದ ನೋಹನು ಇನ್ನು ಕಾಣದವುಗಳನ್ನು ಕುರಿತು
ದೈವೋತ್ತರವನ್ನು ಹೊಂದಿ, ಭಯಸ್ತನಾಗಿ, ತನ್ನ ಮನೆಯ
ರಕ್ಷಣೆಗೋಸ್ಕರ ನಾವೆಯನ್ನು ಸಿದ್ಧ ಮಾಡಿದನು; ಅದರಿಂದ
ಲೋಕಕ್ಕೆ ಅಜ್ಞೆ ನಿರ್ಣಯಿಸಿ, ವಿಶ್ವಾಸದ ಪ್ರಕಾರವಾದ ನೀತಿ
ಗೆ ಬಾಧ್ಯನಾದನು.
೮ ವಿಶ್ವಾಸದಿಂದ ಅಬ್ರಹಾಮನು ತಾನು ಆಸ್ತಿಯಾಗಿ ಹೊಂದ
ಲಾಗಿದ್ದ ಸ್ಥಳಕ್ಕೆ ಹೊರಡುವದಕ್ಕೆ ಕರೆಯಲ್ಪಟ್ಟಾಗ, ವಿಧೇಯ
೯ ನಾಗಿದ್ದು, ಎಲ್ಲಿಗೆ ಹೋಗುತ್ತಿದ್ದನೆಂದರಿಯದೆ, ಹೊರಟನು. ವಿ
ಶ್ವಾಸದಿಂದ ಅವನು ವಾಗ್ದತ್ತ ದೇಶದಲ್ಲಿ ಅನ್ಯ ದೇಶದಲ್ಲಿದ್ದ ಹಾ
ಗೆ ಪರವಾಸ ಮಾಡಿ, ತನ್ನ ಕೂಡ ಅದೇ ವಾಗ್ದತ್ತಕ್ಕೆ ಬಾಧ್ಯಸ್ತ
ರಾಗಿದ್ದ ಇಸಾಕನ ಸಂಗಡಲೂ, ಯಾಕೋಬನ ಸಂಗಡಲೂ ಗು
೧೦ ಡಾರಗಳಲ್ಲಿ ವಾಸ ಮಾಡಿದನು. ಯಾಕಂದರೆ ಅಸ್ತಿವಾರಗಳುಳ್ಳ
ಪಟ್ಟಣವನ್ನು ಎದುರು ನೋಡಿ ಕೊಂಡಿದ್ದನು. ಅದನ್ನು ಕಟ್ಟಿ ಉಂ
ಟು ಮಾಡುವವನು ದೇವರೇ.
೧೧ ವಿಶ್ವಾಸದಿಂದ ಸಾರಳು ತಾನೇ ವಾಗ್ದತ್ತ ಮಾಡಿದವನು ನಂ
ಬಿಕೆಯುಳ್ಳವನೆಂದು ಎಣಿಸಿದ್ದರಿಂದ, ಗರ್ಭಧರಿಸಿಕೊಳ್ಳ ಬಲವ
೧೨ ನ್ನು ಹೊಂದಿ, ತಕ್ಕ ಪ್ರಾಯ ಮೀರಿದವಳಾಗಿ ಹೆತ್ತಳು. ಆದ
ರಿಂದ ಸತ್ತ ಹಾಗಿದ್ದ ಒಬ್ಬನಿಂದಲೇ, ಆಕಾಶದ ನಕ್ಷತ್ರಗಳ
ಹಾಗೆ ಗುಂಪಾಗಿಯೂ, ಸಮುದ್ರದ ಥಡದಲ್ಲಿರುವ ಲೆಖ್ಖವಿಲ್ಲದ
ಮರಳಿನ ಹಾಗೆಯೂ ಹುಟ್ಟಿದರು.
೧೩ ಇವರೆಲ್ಲರು ವಾಗ್ದತ್ತಗಳನ್ನು ಹೊಂದದೆ, ದೂರದಿಂದ ಅವು
ಗಳನ್ನು ಕಂಡು, ನಿಶ್ಚಯಿಸಿ ಕೊಂಡು, ಅಂಗೀಕರಿಸಿ, ಭೂಮಿಯ
ಮೇಲೆ ಅನ್ಯರಾಗಿಯೂ ಪರದೇಶಸ್ಥರಾಗಿಯೂ ಇದ್ದೇವೆಂದು
ಅರಿಕೆ ಮಾಡಿ ಕೊಂಡು, ವಿಶ್ವಾಸದಲ್ಲಿ ಸತ್ತರು. ಯಾಕಂದರೆ,
೧೪ ಇಂಥವುಗಳನ್ನು ಹೇಳುವವರು ಸ್ವದೇಶವನ್ನು ಹುಡುಕುತ್ತೇವೆಂ
ದು ಕಾಣಿಸ ಮಾಡುತ್ತಾರೆ. ಮತ್ತು ಬಿಟ್ಟು ಬಂದ ದೇಶದ ಮೇಲೆ
ಜ್ಞಪ್ತಿ ಇದ್ದರೆ, ತಿರಿಗಿ ಹೋಗುವದಕ್ಕೆ ಸಮಯ ಉಂಟಾಗುತ್ತಿ
೧೫ ತ್ತು. ಆದರೆ ಈಗ ಉತ್ತಮವಾದದ್ದನ್ನು—ಅಂದರೆ, ಪರಲೋಕ
ವಾದದ್ದನ್ನು—ಅಪೇಕ್ಷಿಸುತ್ತಾರೆ; ಆದದರಿಂದ ದೇವರು ಅವರ
ದೇವರೆಂದು ಕರೆಯಲ್ಪಡುವದಕ್ಕೆ ಅವರಿಗೆ ನಾಚಿಕೆ ಪಡುವದಿಲ್ಲ.
೧೬ ಯಾಕಂದರೆ ಅವರಿಗೆ ಪಟ್ಟಣವನ್ನು ಸಿದ್ಧ ಮಾಡಿದ್ದಾನೆ.
೧೭ ವಿಶ್ವಾಸದಿಂದ ಅಬ್ರಹಾಮನು ಶೋಧಿಸಲ್ಪಟ್ಟವನಾಗಿ, ಇಸಾ
ಕನನ್ನು ಅರ್ಪಿಸಿದನು; ವಾಗ್ದತ್ತಗಳನ್ನು ಅಂಗೀಕರಿಸಿದವನು, ಏ
ಕ ಪುತ್ರನನ್ನು ಅರ್ಪಿಸಿದನು. ಅವನನ್ನು ಕುರಿತು ಇಸಾಕನಲ್ಲಿ
೧೮ ನಿನಗೆ ಬೀಜವು ಕರೆಯಲ್ಪಡುವದೆಂದು ಹೇಳಲ್ಪಟ್ಟಿತು. ದೇವರು
ಅವನನ್ನು ಸತ್ತವರೊಳಗಿಂದಲೇ ಎಬ್ಬಿಸ ಬಲ್ಲನೆಂದು ಎಣಿಸಿ
ಕೊಂಡನು. ಅದರಿಂದ ಅವನನ್ನು ಉಪಮಾನವಾಗಿ ಸಂಪಾದಿ
ಸಿದನು.
೧೯ ವಿಶ್ವಾಸದಿಂದ ಇಸಾಕನು ಆಗುವವುಗಳನ್ನು ಕುರಿತು ಯಾ
ಕೋಬನನ್ನೂ ಏಸಾವನನ್ನೂ ಆಶೀರ್ವದಿಸಿದನು.
೨೦ ವಿಶ್ವಾಸದಿಂದ ಯಾಕೋಬನು ಸಾಯುತ್ತಿರುವಾಗ, ಯೋ
ಸೆಫನ ಇಬ್ಬರು ಮಕ್ಕಳನ್ನು ಆಶೀರ್ವದಿಸಿದನು. ಮತ್ತು
ತನ್ನ ಕೋಲಿನ ಕೊನೆಯ ಮೇಲೆ ನಮಸ್ಕರಿಸಿದನು.
೨೧ ವಿಶ್ವಾಸದಿಂದ ಯೋಸೆಫನು ತೀರಿ ಹೋಗುವಾಗ, ಇಸ್ರ
ಯೇಲನ ಮಕ್ಕಳು ಹೊರಡುವದನ್ನು ಕುರಿತು ನೆನಪು ಮಾಡಿ
ಕೊಂಡು, ತನ್ನ ಎಲುಬುಗಳನ್ನು ಕುರಿತು ಅಪ್ಪಣೆ ಕೊಟ್ಟನು.
೨೩ ವಿಶ್ವಾಸದಿಂದ ಮೋಶೆ ಹುಟ್ಟಿದಾಗ, ಅವನ ಹೆತ್ತವರಿಂದ
ಮೂರು ತಿಂಗಳು ಬಚ್ಚಿಡಲ್ಪಟ್ಟನು. ಯಾಕಂದರೆ ಕೂಸು ಚ
ಲವಾದದ್ದೆಂದು ನೋಡಿದರು; ಅರಸಿನ ಕಟ್ಟಳೆಗೆ ಭಯ ಪಡಲಿಲ್ಲ.
೨೪ ವಿಶ್ವಾಸದಿಂದ ಮೋಶೆ ದೊಡ್ಡವನಾದಾಗ, ಫರೋನನ ಮಗಳ
೨೫ ಮಗನೆಂದು ಹೇಳಲ್ಪಡಲೊಲ್ಲದೆ, ಸ್ವಲ್ಪ ಕಾಲಕ್ಕಿರುವ ಪಾಪ
೨೬ ಭೋಗವನ್ನು ಹೊಂದುವದಕ್ಕಿಂತ, ದೇವರ ಜನರ ಸಂಗಡ ಕ
ಷ್ಟ ಪಡುವದನ್ನು ಆದು ಕೊಂಡು, ಐಗುಪ್ತದಲ್ಲಿರುವ ದ್ರವ್ಯಗಳಿ
ಗಿಂತ, ಕ್ರಿಸ್ತನ ನಿಂದೆಯು ಅಧಿಕ ಐಶ್ವರ್ಯವೆಂದು ಎಣಿಸಿದ
ನು; ಯಾಕಂದರೆ ಬರುವ ಪ್ರತಿಫಲವನ್ನು ಎದುರು ನೋಡಿದನು.
೨೭ ವಿಶ್ವಾಸದಿಂದ ಅರಸಿನ ಕೋಪಕ್ಕೆ ಭಯ ಪಡದೆ, ಐಗುಪ್ತವ
ನ್ನು ಬಿಟ್ಟನು. ಯಾಕಂದರೆ ಅದೃಶ್ಯನಾದವನನ್ನು ದೃಷ್ಟಿಸಿ
ದ ಹಾಗೆ ದೃಢವಾಗಿದ್ದನು. ವಿಶ್ವಾಸದಿಂದ ಚೊಚ್ಚಲು ಮಕ್ಕ
ಳನ್ನು ಸಂಹರಿಸಿದವನು ಅವರನ್ನು ಮುಟ್ಟದ ಹಾಗೆ, ಪಸ್ಕವ
ನ್ನೂ ರಕ್ತ ಚೆಲ್ಲುವಿಕೆಯನ್ನೂ ನಡಿಸಿದನು.
೨೮ ವಿಶ್ವಾಸದಿಂದ ಕೆಂಪು ಸಮುದ್ರವನ್ನು ಒಣ ಭೂಮಿಯ



ಹಾಗೆ ದಾಟಿದರು. ಐಗುಪ್ತ್ಯರು ಅದನ್ನು ಮಾಡ ಯತ್ನಿಸಿ,
ಮುಣಗಿ ಹೋದರು.
೩೦ ವಿಶ್ವಾಸದಿಂದ ಯೆರಿಕೋವಿನ ಗೋಡೆಗಳು ಏಳು ದಿವಸಗಳ
ಮಟ್ಟಿಗೂ ಬಳಿಸಲ್ಪಟ್ಟು, ಬಿದ್ದು ಹೋದವು.
೩೧ ವಿಶ್ವಾಸದಿಂದ ಸೂಳೆಯಾದ ರಹಾಬಳು ಚಾರರನ್ನು ಸ
ಮಾಧಾನವಾಗಿ ಸೇರಿಸಿದ್ದರಿಂದ, ಅವಿಧೇಯರ ಸಂಗಡ ನಾಶವಾಗ
ಲಿಲ್ಲ.
೩೨ ಮತ್ತೇನು ಹೇಳಲಿ? ಗಿದ್ಯೋನನನ್ನೂ, ಬಾರಕನನ್ನೂ, ಸಂ
ಸೋನನನ್ನೂ, ಯೆಪ್ತಾಹನನ್ನೂ, ದಾವೀದನನ್ನೂ, ಸಮುವೇಲ
ನನ್ನೂ, ಪ್ರವಾದಿಗಳನ್ನೂ ಕುರಿತು ವಿವರಿಸುವದಕ್ಕೆ ಹೊತ್ತು
೩೩ ಸಾಲದು. ಇವರು ವಿಶ್ವಾಸದಿಂದ ರಾಜ್ಯಗಳನ್ನು ಜಯಿಸಿದರು;
ನೀತಿಯನ್ನು ಮಾಡಿದರು; ವಾಗ್ದತ್ತಗಳನ್ನು ಹೊಂದಿದರು; ಸಿಂ
೩೪ ಹಗಳ ಬಾಯಿಗಳನ್ನು ಮುಚ್ಚಿದರು; ಬೆಂಕಿಯ ಬಲವನ್ನು ಆರಿ
ಸಿದರು; ಕತ್ತಿ ಬಾಯಿಗೆ ತಪ್ಪಿಸಿ ಕೊಂಡರು; ಶಕ್ತಿಹೀನರಾಗಿದ್ದು,
ಬಲಗೊಂಡರು; ಯುದ್ಧದಲ್ಲಿ ಶಕ್ತರಾದರು; ಅನ್ಯರ ದಂಡುಗಳ
೩೫ ನ್ನು ಓಡಿಸಿ ಬಿಟ್ಟರು; ಹೆಂಗಸರು ತಮ್ಮ ಸತ್ತವರನ್ನು ಪುನರು
ತ್ಥಾನದಿಂದ ಹೊಂದಿದರು; ಮತ್ತೊಬ್ಬರು ಉತ್ತಮವಾದ ಪುನ
ರುತ್ಥಾನವನ್ನು ಹೊಂದುವ ಹಾಗೆ, ಬಿಡುಗಡೆಯನ್ನೂ ಅಂಗೀಕ
೩೬ ರಿಸದೆ, ಬಾಧಿಸಲ್ಪಟ್ಟರು; ಬೇಕೊಬ್ಬರು ದೂಷಣೆಗಳನ್ನೂ,
ಚಬುಕುಗಳನ್ನೂ, ಮತ್ತು ಬಂಧಕಗಳನ್ನೂ, ಸೆರೆಯನ್ನೂ ಅನು
೩೭ ಭವಿಸಿದರು; ಕಲ್ಲೆಸೆಯಲ್ಪಟ್ಟರು; ಗರಗಸದಿಂದ ಕೊಯ್ಯಲ್ಪ
ಟ್ಟರು; ಶೋಧಿಸಲ್ಪಟ್ಟರು; ಕತ್ತಿ ಕೊಲೆಯಿಂದ ಸತ್ತರು; ಕುರಿ
ಚರ್ಮಗಳನ್ನೂ, ಮೇಕೆಯ ತೊಗಲುಗಳನ್ನೂ ಹಾಕಿ ಕೊಂ
ಡು, ತಿರುಗಾಡಿದರು; ಕೊರತೆಯಾದವರಾಗಿಯೂ, ಉಪದ್ರ ಪಡು
ವವರಾಗಿಯೂ, ಕೇಡು ಅನುಭವಿಸುವವರಾಗಿಯೂ ಇದ್ದರು;
೩೮ ಲೋಕವು ಅವರಿಗೆ ಅಪಾತ್ರವಾಗಿತ್ತು; ಅರಣ್ಯಗಳಲ್ಲಿಯೂ, ಬೆ
ಟ್ಟಗಳಲ್ಲಿಯೂ, ಗವಿಗಳಲ್ಲಿಯೂ, ಭೂಮಿಯ ಗುಹೆಗಳಲ್ಲಿಯೂ
ಅಲೆಯುವವರಾಗಿದ್ದರು.
೩೯ ಇವರೆಲ್ಲರು ವಿಶ್ವಾಸದಿಂದ ಸಾಕ್ಷಿಗೊಂಡು, ವಾಗ್ದತ್ತವನ್ನು
೪೦ ಸಂಪಾದಿಸಲಿಲ್ಲ. ಯಾಕಂದರೆ ನಾವು ಹೊರ್ತು ಅವರು ಸಂ
ಪೂರ್ಣರಾಗದ ಹಾಗೆ, ದೇವರು ನಮಗೋಸ್ಕರ ಉತ್ತಮವಾ
ದದ್ದನ್ನು ಮುಂನೇವಿಸಿ ಇದ್ದನು.

## ೧೨. ಸಂಧಿ.

೧ ಆದದರಿಂದ ಸಾಕ್ಷಿಯವರ ಅಷ್ಟು ದೊಡ್ಡ ಮೇಘವು ನಮ್ಮ
ಸುತ್ತಲಿರುವದರಿಂದ, ಸಕಲ ಭಾರವನ್ನೂ, ನಮ್ಮನ್ನು ಮುತ್ತಿ ಕೊ
ಳ್ಳುವ ಪಾಪವನ್ನೂ, ತೆಗೆದು ಹಾಕಿ, ವಿಶ್ವಾಸದ ನಾಯಕನೂ
ಪೂರೈಸುವವನೂ ಆದಂಥ ಯೇಸುವಿನ ಮೇಲೆ ಕಣ್ಣಿಟ್ಟು, ನ
ಮ್ಮ ಮುಂದೆ ಇಟ್ಟಿರುವ ಓಟವನ್ನು ತಾಳ್ಮೆಯಿಂದ ಓಡೋಣ.
೨ ಅವನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಶಿಲುಬೆ
ಯನ್ನು ತಾಳಿ ಕೊಂಡು, ನಾಚಿಕೆಯನ್ನು ಅಸಡ್ಡೆ ಮಾಡಿ, ದೇವ
೩ ರ ಸಿಂಹಾಸನದ ಬಲಪಾರ್ಶ್ವದಲ್ಲಿ ಕೂತು ಕೊಂಡಿದ್ದಾನೆ. ನೀ
ವು ನಿಮ್ಮ ಮನಸ್ಸುಗಳಲ್ಲಿ ಆಯಾಸ ಪಟ್ಟು, ದಣಿದು ಹೋಗ
ದ ಹಾಗೆ, ಪಾಪಿಗಳಿಂದ ತನಗೆ ಉಂಟಾದ ಇಂಥ ವಿರೋಧವ
ನ್ನು ತಾಳಿ ಕೊಂಡವನನ್ನು ಧ್ಯಾನಿಸಿ ಕೊಳ್ಳಿರಿ.
೪ ನೀವು ಪಾಪಕ್ಕೆ ವಿರೋಧವಾಗಿ ಹೋರಾಡಿ, ಇನ್ನು ರಕ್ತ
೫ ದ ಮಟ್ಟಿಗೂ ಎದುರಿಸಲಿಲ್ಲ. ಮತ್ತು, ನನ್ನ ಮಗನೇ, ಕರ್ತನ
ಶಿಕ್ಷೆಯನ್ನು ಅಲ್ಪವಾಗಿ ಎಣಿಸದೆ, ಅವನಿಂದ ಗದರಿಸಲ್ಪಡು
೬ ವಾಗ ಆಯಾಸ ಪಡದೆ ಇರು. ಯಾಕಂದರೆ ಕರ್ತನು ಪ್ರೀತಿ
ಮಾಡುವವನನ್ನು ಶಿಕ್ಷಿಸುತ್ತಾನೆ. ಮತ್ತು ತಾನು ಸೇರಿಸಿ ಕೊಳ್ಳುವ
ಒಬ್ಬೊಬ್ಬ ಮಗನನ್ನು ಹೊಡೆಯುತ್ತಾನೆಂದು ಮಕ್ಕಳಿಗೆ ಬುದ್ಧಿ
ಹೇಳುವ ಮೇರೆಗೆ ನಿಮಗೆ ಬೋಧಿಸಲ್ಪಟ್ಟದ್ದನ್ನು ಮರತು ಹೋ
೭ ಗಿದ್ದೀರಿ. ನೀವು ಶಿಕ್ಷೆಯನ್ನು ತಾಳಿ ಕೊಂಡರೆ, ದೇವರು ನಿಮಗೆ
ಮಕ್ಕಳಿಗೆಂದು ನಡಿಸುತ್ತಾನೆ. ತಂದೆ ಶಿಕ್ಷಿಸದ ಮಗನು ಎಲ್ಲಿ?
೮ ಮತ್ತು, ಎಲ್ಲರು ಪಾಲು ಹೊಂದುವ ಶಿಕ್ಷೆಯನ್ನು ನೀವು ಹೊಂದ
ದೆ ಇದ್ದರೆ, ಮಕ್ಕಳಲ್ಲ, ಪರ ಸ್ತ್ರೀಯಿಂದ ಹುಟ್ಟಿದವರೇ. ನಮ್ಮ
೯ ನ್ನು ಶಿಕ್ಷಿಸಿದ ನಮ್ಮ ಮಾಂಸದ ತಂದೆಗಳನ್ನು ಸನ್ಮಾನಿಸಿದೆವು.
ಹಾಗಾದರೆ, ನಾವು ಬದುಕುವ ಹಾಗೆ, ಆತ್ಮಗಳ ತಂದೆಗೆ ಒಳ ಬೀಳು
೧೦ ವದು, ಇನ್ನು ಬಹು ಅಗತ್ಯವಲ್ಲವೋ? ಯಾಕಂದರೆ ಅವರು
ಕೆಲವು ದಿವಸ ತಮಗೆ ತೋಚಿದ ಹಾಗೆ ಶಿಕ್ಷಿಸಿದರು. ಆದರೆ ಅ
ವನು, ನಾವು ಅವನ ಪರಿಶುದ್ಧತ್ವದಲ್ಲಿ ಪಾಲು ಹೊಂದುವ ಹಾಗೆ,
೧೧ ನಮ್ಮ ಪ್ರಯೋಜನಕ್ಕೋಸ್ಕರವೇ. ಎಲ್ಲಾ ಶಿಕ್ಷೆಯು ತತ್ಕಾಲ
ಕ್ಕೆ ಸಂತೋಷಕರವಾದದ್ದಲ್ಲ, ದುಃಖಕರವಾದದ್ದೆಂದು ತೋಚು
ತ್ತದೆ. ಆದರೆ ತರುವಾಯ ಅದರಿಂದ ಸಾಧಿಸಲ್ಪಟ್ಟಿರುವವರಿಗೆ ಸ
೧೨ ಮಾಧಾನವುಳ್ಳ ನೀತಿಫಲವನ್ನು ಕೊಡುವದು. ಆದಕಾರಣ ಜೋ
ಲುಬಿದ್ದ ಕೈಗಳನ್ನೂ, ಸಡ್ಲವಾದ ಮೊಣಕಾಲುಗಳನ್ನೂ ನೆಟ್ಟಗೆ
೧೩ ಮಾಡಿರಿ. ಮತ್ತು ಕುಂಟಾದದ್ದು ತಪ್ಪದೆ, ವಾಸಿಯಾಗುವ ಹಾಗೆ,
೧೪ ನಿಮ್ಮ ಕಾಲುಗಳಿಗೆ ಸರಿಯಾದ ಹಾದಿಗಳನ್ನು ಮಾಡಿರಿ. ಎಲ್ಲರ
ಸಂಗಡ ಸಮಾಧಾನವಾಗಿರುವದನ್ನು ಹಿಂದಟ್ಟಿರಿ. ಪರಿಶುದ್ಧತ್ವ
ವನ್ನು ಸಹ; ಇದು ಇಲ್ಲದೆ ಒಬ್ಬನಾದರು ಕರ್ತನನ್ನು ಕಾಣ
೧೫ ನು. ಯಾರಾದರೂ ದೇವರ ಕೃಪೆಗೆ ಹಿಂದಾಗದ ಹಾಗೆಯೂ,
ಯಾವ ಕಹಿಯಾದ ಬೇರಾಗಲಿ ಮೊಳಿತು ತೊಂದರೆ ಮಾಡುವ
ದರಿಂದ ಅನೇಕರು ಕಳಂಕವಾಗದ ಹಾಗೆಯೂ, ಯಾವ ಜಾರನಾ
೧೬ ಗಲಿ, ಒಂದೇ ಊಟಕ್ಕೋಸ್ಕರ ತನ್ನ ಚೊಚ್ಚಲುತನವನ್ನು ಕೊ
ಟ್ಟು ಬಿಟ್ಟ ಏಸಾವನ ಹಾಗೆ ಭ್ರಷ್ಟನಾಗಲಿ ಇರದ ಹಾಗೆಯೂ,
೧೭ ಚನ್ನಾಗಿ ನೋಡಿ ಕೊಳ್ಳಿರಿ. ಯಾಕಂದರೆ ತರುವಾಯ ಅವನು
ಆಶೀರ್ವಾದವನ್ನು ಬಾಧ್ಯವಾಗಿ ಹೊಂದುವದಕ್ಕೆ ಇಚ್ಛೈಸಿ,
ಅಗದವನಾದನೆಂದು ಬಲ್ಲಿರಿ; ಕಣ್ಣೀರಿಟ್ಟು ಅದನ್ನು ಜಾಗ್ರತೆಯಾ
ಗಿ ಹುಡುಕಿದಾಗ್ಯೂ, ಮಾನಸಾಂತರಕ್ಕೆ ಸ್ಥಳ ಸಿಕ್ಕಲಿಲ್ಲ.
೧೮ ಯಾಕಂದರೆ ಮುಟ್ಟಲ್ಪಡುವ ಪರ್ವತಕ್ಕೂ, ಉರಿಯುವ
ಬೆಂಕಿಗೂ, ಮೋಡಕ್ಕೂ, ಕತ್ತಲಿಗೂ, ಬಿರು ಘೂಳ್ಳಿಗೂ, ತುತೂ
೧೯ ರಿಯ ಧ್ವನಿಗೂ, ಮಾತುಗಳ ಶಬ್ದಕ್ಕೂ ನೀವು ಬರಲಿಲ್ಲ; ಅದ
ನ್ನು ಕೇಳ್ದವರು, ವಾಕ್ಯವು ತಮಗೆ ಇನ್ನು ಹೇಳ್ಪಟ್ಟರದ ಹಾಗೆ
೨೦ ಬೇಡಿ ಕೊಂಡರಲ್ಲ? ಯಾಕಂದರೆ ಮೃಗವಾದರೂ ಪರ್ವತಕ್ಕೆ
ತಗಲಿದರೆ, ಕಲ್ಲೆಸೆಯಲ್ಪಡುವದು; ಇಲ್ಲವೆ ಈಟಿಯಿಂದ ತಿವಿಯ
ಲ್ಪಡುವದು, ಎಂಬ ಕಟ್ಟಳೆಯನ್ನು ಸಹಿಸಲಾರದೆ ಹೋದರು.
೨೧ ಇದಲ್ಲದೆ, ನೋಟವು ಅಷ್ಟು ಭಯಂಕರವಾಗಿರುವದರಿಂದ, ಬ
ಹು ಭಯಸ್ತನಾಗಿ ನಡುಗುತ್ತೇನೆಂದು ಮೋಶೆಯೂ ಹೇಳಿದನು.
೨೨ ಆದರೆ ಚಿಯೋನ್ ಪರ್ವತಕ್ಕೂ, ಜೀವವುಳ್ಳ ದೇವರ ಪಟ್ಟಣ
ಕ್ಕೂ, ಪರಲೋಕದ ಯೆರೂಸಲೇಮಿಗೂ, ದೂತರ ಸಹಸ್ರ

೨೩ ಸಹಸ್ರಗಳಿಗೂ, ಪರಲೋಕದಲ್ಲಿ ಬರೆಯಲ್ಪಟ್ಟಿರುವ ಹೊಜ್ಜಲ
ವರ ಸರ್ವ ಸಂಘಕ್ಕೂ, ಸಭೆಗೂ, ಎಲ್ಲರ ನ್ಯಾಯಾಧಿಪತಿ
ಯಾಗಿರುವ ದೇವರ ಬಳಿಗೂ, ಸಂಪೂರ್ಣ ಮಾಡಲ್ಪಟ್ಟ ನೀ
೨೪ತಿವಂತರ ಆತ್ಮಗಳ ಬಳಿಗೂ, ಹೊಸ ಒಡಂಬಡಿಕೆಯ ಮಧ್ಯಸ್ಥ
ನಾದ ಯೇಸುವಿನ ಬಳಿಗೂ, ಹೇಬೆಲನ ರಕ್ತಕ್ಕಿಂತ ಉತ್ತಮವಾ
ದದ್ದನ್ನು ಮಾತಾಡುವ ಚಿಮಿಕಿಸುವ ರಕ್ತಕ್ಕೂ, ಬಂದಿದ್ದೀರಿ.

೨೫ ಮಾತಾಡುವವನನ್ನು ಅಸಡ್ಡೆ ಮಾಡದ ಹಾಗೆ, ನೋಡಿ ಕೊ
ಳ್ಳಿರಿ. ಯಾಕಂದರೆ, ಭೂಮಿಯ ಮೇಲೆ ದೈವಚಿತ್ತ ತಿಳಿಸಿದವ
ನನ್ನು ಅಸಡ್ಡೆ ಮಾಡಿದವರು ತಪ್ಪಿಸಿ ಕೊಳ್ಳದಿದ್ದರೆ, ಬಹು ಅ
ಧಿಕವಾಗಿ, ಪರಲೋಕದಿಂದ ಬಂದವನನ್ನು ಬಿಟ್ಟು ತಿರುಗುವ ನಾ
೨೬ವು. ಅವನ ಶಬ್ದವು ಆಗ ಭೂಮಿಯನ್ನು ಕದಲಿಸಿತು; ಆದರೆ
ಈಗ ಅವನು ವಾಗ್ದತ್ತ ಮಾಡಿ ಹೇಳಿದ್ದೇನಂದರೆ, ಇನ್ನು ಒಂ
ದು ಸಾರಿ ನಾನು ಭೂಮಿಯನ್ನು ಮಾತ್ರವಲ್ಲ, ಆಕಾಶವನ್ನು ಸ
೨೭ಹ ಅದರಿಸುತ್ತೇನೆ. ಇನ್ನು ಒಂದು ಸಾರಿ ಅಂಬುವದು, ಕದಲದ
ವುಗಳು ನೆಲೆಯಾಗಿರುವ ಹಾಗೆ, ಕದಲುವವುಗಳು ಮಾಡಲ್ಪಟ್ಟವು
೨೮ಗಳಾಗಿರುವದರಿಂದ ಮಾರ್ಪಡುವವೆಂದು ತೋರಿಸುತ್ತದೆ. ಆದ
ರಿಂದ ಕದಲದ ರಾಜ್ಯವನ್ನು ಹೊಂದುವ ನಾವು ವಿನಯದಿಂದ
ಲೂ ಭಯ ಭಕ್ತಿಯಿಂದಲೂ ದೇವರನ್ನು ಸಮರ್ಪಕವಾಗಿ ಆರಾ
೨೯ಧಿಸುವ ಹಾಗೆ, ಕೃಪೆಯನ್ನು ಹೊಂದಿಕೋಣ. ಯಾಕಂದರೆ
ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ.

೧೩. ಸಂಧಿ.

೧ ಸಹೋದರ ಸ್ನೇಹವು ನೆಲೆಯಾಗಿರಲಿ. ಆತಿಥ್ಯ ಮಾಡ ಮ
೨ರೆತು ಹೋಗ ಬೇಡಿರಿ. ಯಾಕಂದರೆ ಇದರಿಂದ ಕೆಲವರು ತಿಳಿ
3 ಯದೆ, ದೂತರಿಗೆ ಆತಿಥ್ಯ ಮಾಡಿದ್ದಾರೆ. ಕೂಡ ಬಂಧಿಸಲ್ಪಟ್ಟ
ಹಾಗೆ ಬಂಧಿಸಲ್ಪಟ್ಟವರನ್ನೂ, ನೀವೇ ಶರೀರದಲ್ಲಿ ಇದ್ದೀರೆಂದು,
೪ ಕೇಡು ಅನುಭವಿಸುವವರನ್ನೂ, ಜ್ಞಾಪಕ ಮಾಡಿ ಕೊಳ್ಳಿರಿ. ಮ
ದುವೆ ಎಲ್ಲರಲ್ಲಿ ಮಾನವುಳ್ಳದ್ದು, ಹಾಸಿಗೆಯು ನಿಷ್ಕಳಂಕವಾದ
ದ್ದು; ಆದರೆ ಜಾರರಿಗೂ ವ್ಯಭಿಚಾರಿಗಳಿಗೂ ದೇವರು ನ್ಯಾಯ
೫ ತೀರಿಸುವನು. ನಡತೆಯು ದ್ರವ್ಯಾಶೆಯಿಲ್ಲದ್ದಾಗಿರಲಿ. ನಿಮಗೆ
ಉಂಟಾದವುಗಳು ಸಾಕೆಂದಿರ್ರಿ; ಯಾಕಂದರೆ ನಾನು ನಿನ್ನನ್ನು
ಬಿಟ್ಟು ಬಿಡೆನೆಂದೂ, ನಿನ್ನನ್ನು ಕೈಬಿಡೆನೆಂದೂ, ಅವನು ಹೇಳಿ
೬ ದ್ದಾನೆ. ಆದಕಾರಣ ಕರ್ತನು ನನಗೆ ಸಹಾಯಕನು, ಭಯ ಪ
ಡೆನು; ಮನುಷ್ಯನು ನನಗೆ ಏನು ಮಾಡುವನು! ಎಂದು ನಾವು
ಧೈರ್ಯವಾಗಿ ಹೇಳ ಬಹುದು.

೭ ನಿಮಗೆ ದೇವರ ವಾಕ್ಯವನ್ನು ಹೇಳಿದ ನಿಮ್ಮ ಮುಖ್ಯಸ್ಥರ
ನ್ನು ಜ್ಞಾಪಕ ಮಾಡಿ ಕೊಳ್ಳಿರಿ. ಅವರ ಪ್ರವರ್ತನೆಯ ಅಂತ್ಯ
ವನ್ನು ಚನಾಗಿ ನೋಡಿ, ಅವರ ವಿಶ್ವಾಸವನ್ನು ಅನುಸರಿಸಿರಿ.
೮ ಯೇಸು ಕ್ರಿಸ್ತನು ನಿನ್ನೆ, ಈ ಹೊತ್ತು, ಎಂದೆಂದಿಗೂ ಹಾಗೆಯೇ
೯ ಇದ್ದಾನೆ. ನಾನಾ ಅನ್ಯೋಪದೇಶಗಳಿಂದ ಚಲಿಸ ಪಡದೆ ಇರ್ರಿ.
ಯಾಕಂದರೆ ಇವುಗಳಲ್ಲಿ ಅಭ್ಯಾಸಿಸಿರುವವರಿಗೆ ಪ್ರಯೋಜನ
ವಾಗದ ಊಟಗಳಿಂದಲ್ಲ, ಕೃಪೆಯಿಂದ ಹೃದಯವು ದೃಢವಾ
೧೦ಗುವದು ಒಳ್ಳೇದು. ನಮಗೆ ಬಲಿಪೀಠ ಉಂಟು; ಅದರಿಂದ ಉ
ಣ್ಣಾ, ಗುಡಾರದ ಸೇವೆ ಮಾಡುವವರಿಗೆ ಅಧಿಕಾರವಿಲ್ಲ.

೧೧ ಹ್ಯಾಗಂದರೆ, ಯಾವ ಜೀವಿಗಳ ರಕ್ತವು ಪ್ರಧಾನ ಯಾಜಕ
ನಿಂದ ಪರಿಶುದ್ಧ ಸ್ಥಳದಲ್ಲಿ ಪಾಪಕ್ಕೋಸ್ಕರ ತಕಲ್ಪಟ್ಟಿತೋ,
ಅವುಗಳ ಕಳೇಬರಗಳು ದಂಡಿನ ಹೊರಗೆ ಸುಟ್ಟು ಬಿಡಲ್ಪಟ್ಟವು.
೧೨ ಆದಕಾರಣ ಯೇಸು ಸಹ, ಜನರನ್ನು ಸ್ವಂತ ರಕ್ತದಿಂದ ಪರಿ
೧೩ಶುದ್ಧ ಮಾಡುವ ಹಾಗೆ, ಬಾಗಲ ಹೊರಗೆ ಶ್ರಮೆ ಪಟ್ಟನು. ಹೀಗಿ
ರುವದರಿಂದ ಅವನ ನಿಂದೆಯನ್ನು ಹೊತ್ತು ಕೊಂಡು, ದಂಡಿನ
೧೪ ಹೊರಗೆ ಅವನ ಬಳಿಗೆ ಹೋಗೋಣ. ಯಾಕಂದರೆ ನೆಲೆಯಾಗಿ
ರುವ ಪಟ್ಟಣವು ಇಲ್ಲಿ ನಮಗಿಲ್ಲ; ಆದರೆ ಆಗುವಂಥಾದ್ದನ್ನು ಹುಡು
೧೫ಕುತ್ತೇವೆ. ಹಾಗಾದರೆ, ಅವನ ಮುಖಾಂತರ ದೇವರಿಗೆ ಸ್ತೋತ್ರ
ದ ಬಲಿಯನ್ನು ಯಾವಾಗಲೂ ಅರ್ಪಿಸೋಣ—ಅದೇನಂದರೆ,
೧೬ ಅವನ ನಾಮಕ್ಕೆ ಅರಿಕೆ ಮಾಡುವ ತುಟಿಗಳ ಫಲವೇ. ಮತ್ತು ಸ
ತ್ಕ್ರಿಯೆಯನ್ನೂ ಧರ್ಮವನ್ನೂ ಮರತು ಹೋಗ ಬೇಡಿರಿ!
ಯಾಕಂದರೆ ಅಂಥ ಬಲಿಗಳನ್ನು ದೇವರು ಮೆಚ್ಚುತ್ತಾನೆ.

೧೭ ನಿಮ್ಮ ನಡಿಸುವವರಿಗೆ, ಅವರು ಲೆಖ್ಖ ಒಪ್ಪಿಸ ಬೇಕಾದವರಾಗಿ
ನಿಮ್ಮ ಪ್ರಾಣಗಳನ್ನು ಕುರಿತು ಎಚ್ಚತ್ತು ಇರುವದರಿಂದ, ವಿಧೇ
ಯರಾಗಿದ್ದು ಒಳ ಬೀಳ್ರಿರಿ. ಅವರು ಮೂಲುಗುವಿಕೆಯಿಂದಲ್ಲ,
ಸಂತೋಷದಿಂದ ಅದನ್ನು ಮಾಡುವ ಹಾಗೆಯೇ; ಯಾಕಂದರೆ
೧೮ ಅದು ನಿಮಗೆ ಪ್ರಯೋಜನವಿಲ್ಲ. ನಮಗೋಸ್ಕರ ಪ್ರಾರ್ಥನೆ
ಮಾಡಿರಿ. ಯಾಕಂದರೆ ಸಕಲ ವಿಷಯೆಗಳಲ್ಲಿ ಚನಾಗಿ ನಡೆದು
ಕೊಳ್ಳುವದಕ್ಕೆ ಇಚ್ಛೆಯುಳ್ಳವರಾಗಿದ್ದು, ಒಳ್ಳೇ ಮನಸಾಕ್ಷಿ ನ
೧೯ ಮಗೆ ಉಂಟೆಂದು ನಿಶ್ಚಯಿಸಿ ಕೊಂಡಿದ್ದೇವೆ. ನಾನು ಬೇಗ ನಿಮ
ಗೆ ತಿರಿಗಿ ಕೊಡಲ್ಪಡುವ ಹಾಗೆ, ಇದನ್ನು ಮಾಡ, ನಿಮ್ಮನ್ನು ಅ
ಧಿಕವಾಗಿ ಬೇಡಿ ಕೊಳ್ಳುತ್ತೇನೆ.

೨೦ ಮತ್ತು ನಿತ್ಯ ಒಡಂಬಡಿಕೆಯ ರಕ್ತದಿಂದ ಕುರಿಗಳ ದೊಡ್ಡ ಕು
ರುಬನಾಗಿರುವ ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳ್ಳ
ಗಿಂದ ತಿರಿಗಿ ಬರ ಮಾಡಿದ ಸಮಾಧಾನದ ದೇವರು, ಅವನ ಚಿತ್ತವ
೨೧ನ್ನು ಮಾಡುವ ಹಾಗೆ, ನಿಮ್ಮನ್ನು ಸಕಲ ಸತ್ಕ್ರಿಯೆಗಳಲ್ಲಿ ಸಂಪೂ
ರ್ಣರಾಗ ಮಾಡಿ, ತನ್ನ ಸಮುಖದಲ್ಲಿ ಸಮರ್ಪಕವಾದದ್ದನ್ನು
ನಿಮ್ಮಲ್ಲಿ ಯೇಸು ಕ್ರಿಸ್ತನ ಮುಖಾಂತರ ಉಂಟು ಮಾಡಲಿ. ಅವ
ನಿಗೆ ಯುಗ ಯುಗಾಂತರಗಳಿಗೂ ಮಹಿಮೆ ಆಗಲಿ. ಆಮೆನ್.

೨೨ ಮತ್ತು, ಸಹೋದರರೇ, ಬುದ್ಧಿವಾಕ್ಯವನ್ನು ಸಹಿಸಿ ಕೊಳ್ಳಿ
ರೆಂದು ನಿಮ್ಮನ್ನು ಬೇಡಿ ಕೊಳ್ಳುತ್ತೇನೆ. ಯಾಕಂದರೆ ಸಂಕ್ಷೇ
೨೩ಪವಾಗಿ ನಿಮಗೆ ಪತ್ರಿಕೆ ಬರೆದಿದ್ದೇನೆ. ಸಹೋದರನಾದ ತಿಮೊಥೆ
ಯನು ಬಿಡಿಸಲ್ಪಟ್ಟಿದ್ದಾನೆಂದು ತಿಳಿಕೊಳ್ಳಿರಿ. ಅವನು ಬೇಗ
೨೪ ಬಂದರೆ, ಅವನ ಸಂಗಡ ನಿಮ್ಮನ್ನು ನೋಡುವೆನು. ನಿಮ್ಮ ನ
ಡಿಸುವವರೆಲ್ಲರನ್ನೂ ಪರಿಶುದ್ಧರೆಲ್ಲರನ್ನೂ ವಂದಿಸಿರಿ. ಇತಾಲ್ಯ
೨೫ ದವರು ನಿಮ್ಮನ್ನು ವಂದಿಸುತ್ತಾರೆ. ಕೃಪೆಯು ನಿಮ್ಮೆಲ್ಲರ ಸಂ
ಗಡ ಇರಲಿ. ಆಮೆನ್.

# THE EPISTLE OF JAMES.

## ಯಾಕೋಬನ ಪತ್ರಿಕೆ.

### ೧. ಸಂಧಿ.

೧ ದೇವರಿಗೂ, ಕರ್ತನಾದ ಯೇಸು ಕ್ರಿಸ್ತನಿಗೂ ದಾಸನಾದ
ಯಾಕೋಬನು ಚದರಿರುವ ಹನ್ನೆರಡು ಕುಲಗಳಿಗೆ ಶುಭವಾಗಲಿ.
೨ ನನ್ನ ಸಹೋದರರೇ, ನಿಮ್ಮ ವಿಶ್ವಾಸದ ಪರಿಕ್ಷೆಯು ತಾಳ್ಮೆ



3 ಯನ್ನು ಉಂಟು ಮಾಡುತ್ತದೆಂದು ತಿಳಿದು, ನಾನಾ ಶೋಧನೆಗ
೪ ಳಲ್ಲಿ ಬಿದ್ದರೆ, ಪೂರ್ಣ ಸಂತೋಷವೆಂದೆಣಿಸಿರಿ. ಆದರೆ ನೀವು
ನಿರ್ದೋಷವಾದವರೂ ಸಂಪೂರ್ಣರೂ ಯಾವದರಲ್ಲಿಯೂ ಕಡಿಮೆ
ಇಲ್ಲದವರೂ ಆಗಿರುವ ಹಾಗೆ, ತಾಳ್ಮೆಗೆ ಸಂಪೂರ್ಣ ಕೆಲಸವಿರಲಿ.

೫ ಆದರೆ ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ,
ಹಂಗಿಸದೆ ಎಲ್ಲರಿಗೂ ಉಚಿತವಾಗಿ ಕೊಡುವ ದೇವರ ಹತ್ತರ ಬೇ
೬ ಡಿ ಕೊಳ್ಳಲಿ; ಆಗ ಅವನಿಗೆ ಕೊಡಲ್ಪಡುವದು. ಆದರೆ ಏನೂ
ಸಂದೇಹ ಪಡದೆ, ವಿಶ್ವಾಸವಾಗಿ ಬೇಡಿ ಕೊಳ್ಳಲಿ; ಯಾಕಂದರೆ
ಸಂದೇಹ ಪಡುವವನು ಘಾಳಿಯಿಂದ ಬಡಿಯಲ್ಪಟ್ಟು ಕದಲುವ
೭ ಸಮುದ್ರದ ತೆರೆಗೆ ಸಮಾನನಾಗಿದ್ದಾನೆ. ಆ ಮನುಷ್ಯನು ಕ
೮ರ್ತನಿಂದ ಏನಾದರೂ ಹೊಂದುವೆನೆಂದು ನೆನಸದಿರಲಿ. ಎರಡು
ಮನಸ್ಸುಳ್ಳವನು ತನ್ನ ಸಕಲ ಮಾರ್ಗಗಳಲ್ಲಿ ಚಂಚಲನಾಗಿ
ದ್ದಾನೆ.

೯ ದೀನನಾದ ಸಹೋದರನು ತನ್ನ ದೊಡ್ಡಸ್ತಿಕೆಯಲ್ಲಿಯೂ,
ಐಶ್ವರ್ಯವಂತನು ತನ್ನ ದೈನ್ಯದಲ್ಲಿಯೂ ಹೆಚ್ಚಳ ಪಡಲಿ.
೧೦ ಯಾಕಂದರೆ ಹುಲ್ಲಿನ ಹೂವಿನ ಹಾಗೆಯೇ ಕಳೆದು ಹೋಗುವ
೧೧ನು. ಹ್ಯಾಗಂದರೆ ಸೂರ್ಯನು ಬಿಸಿಲಿನೊಂದಿಗೆ ಎದ್ದು, ಹು
ಲ್ಲನ್ನು ಬಾಡಿಸಲಾಗಿ, ಅದರ ಹೂವು ಬಿದ್ದು, ಅದರ ಮುಖದ
ಸೌಂದರ್ಯವು ನಾಶವಾಗುವದು. ಹಾಗೆಯೇ ಐಶ್ವರ್ಯವಂತ
ನು ತನ್ನ ಹಾದಿಗಳಲ್ಲಿ ಕುಂದಿ ಹೋಗುವನು.

೧೨ ಶೋಧನೆಯನ್ನು ತಾಳಿ ಕೊಳ್ಳುವ ಮನುಷ್ಯನು ಭಾಗ್ಯವಂ
ತನು; ಯಾಕಂದರೆ ಅವನು ಪರಿಕ್ಷಿತನಾದ ಮೇಲೆ, ಕರ್ತನು
ತನ್ನನ್ನು ಪ್ರೀತಿ ಮಾಡುವವರಿಗೆ ವಾಗ್ದತ್ತ ಮಾಡಿದಂಥ ಜೀವದ
೧೩ ಕಿರೀಟವನ್ನು ಹೊಂದುವನು. ಯಾವನಾದರೂ, ಶೋಧಿಸಲ್ಪ
ಡುವಾಗ, ದೇವರಿಂದ ಶೋಧಿಸಲ್ಪಡುತ್ತೇನೆಂದು ಹೇಳದಿರಲಿ.
ಯಾಕಂದರೆ ದೇವರು ಕೆಟ್ಟದರಿಂದ ಶೋಧಿಸಲ್ಪಡದವನು; ತಾ
೧೪ನೂ ಒಬ್ಬನನ್ನೂ ಶೋಧಿಸುವದಿಲ್ಲ. ಆದರೆ ಒಬ್ಬೊಬ್ಬನು
೧೫ ಸ್ವಂತ ಇಚ್ಛೆಯಿಂದ ಎಳೆಯಲ್ಪಟ್ಟು, ಮರುಳುಗೊಂಡು, ಶೋ
ಧಿಸಲ್ಪಡುತ್ತಾನೆ. ಆ ಮೇಲೆ ಇಚ್ಛೆಯು ಗರ್ಭವನ್ನು ಧರಿಸಿ
ಕೊಂಡು, ಪಾಪವನ್ನು ಹೆರುತ್ತದೆ; ಪಾಪವು ಸಂಪೂರ್ಣವಾದ
ಮೇಲೆ, ಮರಣವನ್ನು ಹಡಿಯುತ್ತದೆ.

೧೬ ನನ್ನ ಪ್ರಿಯ ಸಹೋದರರೇ, ಮೋಸ ಹೋಗ ಬೇಡಿರಿ.
೧೭ ಎಲ್ಲಾ ಒಳ್ಳೇ ವರಗಳೂ, ಎಲ್ಲಾ ಸಂಪೂರ್ಣ ದಾನಗಳೂ ಮೇ
ಲಿನಿಂದ ಉಂಟಾಗಿ, ಬೆಳಕುಗಳ ತಂದೆಯಿಂದ ಇಳಿದು ಬರುತ್ತ
ವೆ; ಅವನಲ್ಲಿ ಮಾರ್ಪಡುವಿಕೆಯೂ, ತಿರುಗಾಟದ ನೆರಳೂ ಇಲ್ಲ.
೧೮ ಅವನ ಸೃಷ್ಟಿಗಳಲ್ಲಿ ನಾವು ಒಂದು ಪ್ರಥಮ ಫಲವಾಗಿರುವ ಹಾ
ಗೆ, ಅವನು ಮನಸ್ಸು ಮಾಡಿ, ಸತ್ಯದ ವಾಕ್ಯದಿಂದ ನಮ್ಮನ್ನು
ಪಡೆದಿದ್ದಾನೆ.

೧೯ ಆದಕಾರಣ, ನನ್ನ ಪ್ರಿಯ ಸಹೋದರರೇ, ಪ್ರತಿ ಮನುಷ್ಯ
ನು ಕೇಳುವದಕ್ಕೆ ತೀವ್ರವಾಗಿಯೂ, ಮಾತಾಡುವದಕ್ಕೆ ನಿಧಾನ
೨೦ ವಾಗಿಯೂ, ಕೋಪಕ್ಕೆ ನಿಧಾನವಾಗಿಯೂ, ಇರಲಿ. ಯಾಕಂ
ದರೆ ಮನುಷ್ಯನ ಕೋಪವು ದೇವರ ನೀತಿಯನ್ನು ನಡಿಸುವದಿಲ್ಲ.
೨೧ ಆದದರಿಂದ ಸಕಲ ಮೈಲಿಗೆಯನ್ನೂ, ಕೆಟ್ಟತನದ ಆಧಿಕ್ಯವ
ನ್ನೂ, ತೆಗೆದು ಹಾಕಿ, ನಿಮ್ಮ ಪ್ರಾಣಗಳನ್ನು ರಕ್ಷಿಸ ಸಾಮರ್ಥ್ಯ
ವುಳ್ಳ, ಒಳ್ಳೆಸಿಟ್ಟ ವಾಕ್ಯವನ್ನು ಶಾಂತಿಯಿಂದ ಅಂಗೀಕರಿಸಿರಿ.

೨೨ ಇದಲ್ಲದೆ ನಿಮ್ಮನ್ನು ನೀವೇ ಮೋಸಗೊಳ್ಳಿಸಿ ವಾಕ್ಯವನ್ನು
೨೩ ಕೇಳುವವರು ಮಾತ್ರವಲ್ಲ, ಅದನ್ನು ಮಾಡುವವರು ಆಗಿರಿ. ಯಾ
ಕಂದರೆ ಯಾವನಾದರೂ ವಾಕ್ಯವನ್ನು ಮಾಡುವವನಲ್ಲ, ಕೇ
ಳುವವನಾಗಿದ್ದರೆ, ಅವನು ತನ್ನ ಹುಟ್ಟು ಮುಖವನ್ನು ಕನ್ನಡಿ
೨೪ ಯಲ್ಲಿ ನೋಡುವ ಮನುಷ್ಯನಿಗೆ ಸಮಾನನಾಗಿದ್ದಾನೆ. ಹ್ಯಾಗಂ
ದರೆ ತನ್ನನ್ನು ನೋಡಿ, ಹೊರಟು ಹೋಗಿ, ಸಂಗಡಲೇ ವಾ
೨೫ನು ಎಂಥವನೆಂದು ಮರತು ಬಿಡುವನು. ಆದರೆ ಬಿಡುಗಡೆಯ
ಸಂಪೂರ್ಣ ನ್ಯಾಯಪ್ರಮಾಣದಲ್ಲಿ ಕಣ್ಣಿಟ್ಟು ನೋಡಿ ನೆಲೆ
ಯಾಗಿರುವವನು, ಮರೆಯುವ ಕೇಳುವವನಾಗಿರದೆ, ಕ್ರಿಯೆ ಮಾ
ಡುವವನಾಗಿರುವದರಿಂದ, ತಾನು ಮಾಡುವದರಲ್ಲಿ ಭಾಗ್ಯವಂತ
ನಾಗಿರುವನು.

೨೬ ನಿಮ್ಮಲ್ಲಿ ಯಾವನಾದರೂ ತನ್ನ ನಾಲಿಗೆಗೆ ಕಡಿವಾಣವಿಡದೆ,
ತನ್ನ ಹೃದಯವನ್ನು ಮೋಸಗೊಳ್ಳಿಸಿ, ತಾನು ಭಕ್ತನೆಂದನ್ನಿ
೨೭ಸಿ ಕೊಂಡರೆ, ಇವನ ಭಕ್ತಿಯು ವ್ಯರ್ಥ. ತಂದೆಯಾದ ದೇವರ
ಸನ್ನಿಧಿಯಲ್ಲಿ ಶುದ್ಧವೂ ನಿಷ್ಕಳಂಕವೂ ಆಗಿರುವ ಭಕ್ತಿಯು
ಇದೇ—ದಿಕ್ಕಿಲ್ಲದವರನ್ನೂ ವಿಧೆವೆಯರನ್ನೂ ಅವರ ಉಪದ್ರವ
ದಲ್ಲಿ ಪರಾಮರಿಸಿ ಲೋಕದಿಂದ ತನ್ನನ್ನು ಕಳಂಕವಿಲ್ಲದೆ ಕಾಪಾಡಿ
ಕೊಳ್ಳುವದೇ.

### ೨. ಸಂಧಿ.

೧ ನನ್ನ ಸಹೋದರರೇ, ಮಹಿಮೆಯುಳ್ಳ ನಮ್ಮ ಕರ್ತನಾಗಿ
ರುವ ಯೇಸು ಕ್ರಿಸ್ತನ ವಿಶ್ವಾಸವನ್ನು ಮುಖದಾಕ್ಷಿಣ್ಯಗಳ ಸಂ
೨ಗಡ ಇಟ್ಟು ಕೊಳ್ಳ ಬೇಡಿರಿ. ಹ್ಯಾಗಂದರೆ ಜಿನ್ನಾದ ಉಂಗರ
ಉಳ್ಳ ಮನುಷ್ಯನು ಮಿಂಚುವ ವಸ್ತ್ರವನ್ನು ಧರಿಸಿ ಕೊಂಡು
ನಿಮ್ಮ ಸಭೆಗೆ ಬರಲು, ಮತ್ತು ಬಡವನು ಮೈಲಿಗೆ ವಸ್ತ್ರವನ್ನು
3 ಧರಿಸಿ ಕೊಂಡು ಬರಲು, ನೀವು ಮಿಂಚುವ ವಸ್ತ್ರ ಧರಿಸಿ ಕೊಂಡ
ವನ ಮೇಲೆ ಲಕ್ಷ್ಯವಿಟ್ಟು, ಅವನಿಗೆ—ನೀವು ಸುಖವಾಗಿ ಇಲ್ಲಿ ಕೂ
ತು ಕೊಳ್ಳಿ! ಎಂದು ಹೇಳಿ, ಬಡವನಿಗೆ—ನೀನು ಅಲ್ಲೇ ನಿಂತು
೪ ಕೋ! ಇಲ್ಲವೇ ಇಲ್ಲಿ ನನ್ನ ಪಾದ ಪೀಠದ ಹತ್ತರ ಕೂತುಕೋ
ಅಂದರೆ ನಿಮ್ಮಲ್ಲಿ ಪಕ್ಷಪಾತ ಮಾಡಿ ಕೊಂಡು, ದುರಾಲೋಚ
೫ನೆಗಳ ನ್ಯಾಯಾಧಿಪತಿಗಳಾದಿರಲ್ಲ? ಕೇಳ್ರಿರಿ, ನನ್ನ ಪ್ರಿಯ ಸ
ಹೋದರರೇ, ದೇವರು ಈ ಲೋಕದ ಬಡವರನ್ನು ವಿಶ್ವಾಸದ
ಲ್ಲಿ ಐಶ್ವರ್ಯವಂತರಾಗಿಯೂ, ತನ್ನನ್ನು ಪ್ರೀತಿ ಮಾಡುವವ
ರಿಗೆ ವಾಗ್ದತ್ತ ಮಾಡಿದ ರಾಜ್ಯಕ್ಕೆ ಬಾಧ್ಯಸ್ಥರಾಗಿಯೂ, ಆದು
೬ ಕೊಳ್ಳಲಿಲ್ಲವೋ? ಆದರೆ ನೀವು ಬಡವನನ್ನು ಅವಮಾನ ಮಾಡಿ
ದ್ದೀರಿ. ಐಶ್ವರ್ಯವಂತರು ನಿಮ್ಮನ್ನು ಬಲಾತ್ಕರಿಸುತ್ತಾರಲ್ಲ!
3 ಅವರೇ ನಿಮ್ಮನ್ನು ನ್ಯಾಯಸ್ಥಾನಗಳಿಗೆ ಎಳೆಯುತ್ತಾರಲ್ಲ? ನಿ
ಮ್ಮ ಮೇಲೆ ಹೇಳಲ್ಪಟ್ಟ ಒಳ್ಳೇ ಹೆಸರನ್ನು ಅವರೇ ದೂಷಿಸು
೮ತ್ತಾರಲ್ಲ? ಆದರೆ, ಬರಹದ ಪ್ರಕಾರ, ನಿನ್ನ ನೆರೆಯವನನ್ನು ನಿನ್ನ
ಹಾಗೆಯೇ ಪ್ರೀತಿ ಮಾಡು ಎಂಬ ರಾಜಾಜ್ಞೆಯನ್ನು ಪೂರೈಸಿದ
೯ರೆ, ಚನಾಗಿ ಮಾಡುತ್ತೀರಿ; ಆದರೆ ಮುಖದಾಕ್ಷಿಣ್ಯ ಮಾಡಿದರೆ,
ಪಾಪ ಮಾಡುತ್ತೀರಿ. ಮತ್ತು ಮೀರಿದವರಂತೆ ನ್ಯಾಯಪ್ರಮಾಣ
ದಿಂದ ಖಂಡಿಸಲ್ಪಡುತ್ತೀರಿ.

೧೦ ಯಾಕಂದರೆ ಯಾವನಾದರೂ ಸಮಸ್ತ ನ್ಯಾಯಪ್ರಮಾಣ

ವನು೯ ಕೈ ಕೊಂಡು, ಒಂದರಲ್ಲಿ ತಪ್ಪಿದರೆ, ಸಮಸ್ತಕ್ಕೂ ಅಪ
೧೧ ರಾಧಿಯಾದನು. ಹ್ಯಾಗಂದರೆ ವ್ಯಭಿಚಾರ ಮಾಡ ಬೇಡೆಂದು
ಹೇಳಿದವನೇ, ಕೊಲ್ಲ ಬೇಡೆಂದು ಸಹ ಹೇಳಿದ್ದಾನೆ. ಹೀಗಿರಲಾಗಿ
ನೀನು ವ್ಯಭಿಚಾರ ಮಾಡದವನಾಗಿ, ಕೊಂದರೆ, ನ್ಯಾಯಪ್ರ
ಮಾಣವನ್ನು ವಿಚಾರುವವನಾದಿ.

೧೨ ಬಿಡುಗಡೆಯ ನ್ಯಾಯಪ್ರಮಾಣದಿಂದ ನ್ಯಾಯ ತೀರ್ವಿಕೆ
ಯನ್ನು ಹೊಂದಲಿರುವವರಿಗೆ ತಕ್ಕ ಹಾಗೆಯೇ ಮಾತಾಡಿರಿ; ಹಾ
೧೩ ಗೆಯೇ ಮಾತಾಡಿರಿ. ಯಾಕಂದರೆ ಕರುಣೆ ತೋರಿಸದವನಿಗೆ ನ್ಯಾ
ಯ ತೀರ್ವಿಕೆಯು ಕರುಣೆ ಇಲ್ಲದೆ ಇರುವದು; ಆದರೆ ಕರುಣೆ
ಯು ನ್ಯಾಯ ತೀರ್ವಿಕೆಯ ಮೇಲೆ ಹೆಚ್ಚಳ ಪಡುತ್ತದೆ.

೧೪ ನನ್ನ ಸಹೋದರರೇ, ಒಬ್ಬನು, ತನಗೆ ವಿಶ್ವಾಸ ಉಂಟೆಂ
ದು ಹೇಳಿ, ಕ್ರಿಯೆಗಳಿಲ್ಲದೆ ಇದ್ದರೆ, ಪ್ರಯೋಜನವೇನು? ಆ
೧೫ ವಿಶ್ವಾಸವು ಅವನನ್ನು ರಕ್ಷಿಸೀತೋ? ಆದರೆ ಸಹೋದರನಾಗಲಿ,
ಸಹೋದರಿಯಾಗಲಿ, ಬೆತ್ತಲೆಯಾಗಿಯೂ ಅನುದಿನದ ಆಹಾರ
೧೬ ದಲ್ಲಿ ಕೊರತೆ ಪಡುವವರಾಗಿಯೂ ಇರಲಾಗಿ, ನಿಮ್ಮಲ್ಲಿ ಒಬ್ಬ
ನು—ಸಮಾಧಾನವಾಗಿ ಹೋಗಿರಿ; ಬೆಂಕಿ ಕಾಸಿ ಕೊಳ್ಳಿರಿ; ತೃಪ್ತಿ
ಯಾಗಿರಿ; ಎಂದು ಅವರಿಗೆ ಹೇಳಿ, ಶರೀರಕ್ಕೆ ಅವಶ್ಯವಾದವುಗಳ
೧೭ ನ್ನು ಕೊಡದೆ ಇದ್ದರೆ, ಪ್ರಯೋಜನವೇನು? ಅದೇ ಪ್ರಕಾರ ವಿ
೧೮ ಶ್ವಾಸವು, ಕ್ರಿಯೆಗಳಿಲ್ಲದ್ದಾಗಿದ್ದರೆ, ತನ್ನಲ್ಲಿ ಸತ್ತದ್ದಾಗಿದೆ. ಆದ
ರೆ ಒಬ್ಬನು—ನಿನಗೆ ವಿಶ್ವಾಸ ಉಂಟು; ನನಗೆ ಕ್ರಿಯೆಗಳುಂಟು.
ಕ್ರಿಯೆಗಳಿಲ್ಲದೆ ನಿನ್ನ ವಿಶ್ವಾಸವನ್ನು ನನಗೆ ತೋರಿಸು; ಮತ್ತು
ನಾನು ನನ್ನ ಕ್ರಿಯೆಗಳಿಂದ ನನ್ನ ವಿಶ್ವಾಸವನ್ನು ನಿನಗೆ ತೋರಿ
೧೯ ಸುವೆನು, ಎಂದು ಹೇಳ್ಯಾನು. ದೇವರು ಒಬ್ಬನೇ ಎಂದು ನೀ
ನು ನಂಬುತ್ತೀ; ಚನ್ನಾಗಿ ಮಾಡುತ್ತೀ; ದೆವ್ವಗಳು ಸಹ ನಡುಗಿ
೨೦ ನಂಬುತ್ತವೆ. ಆದರೆ, ಓ ವ್ಯರ್ಥ ಮನುಷ್ಯನೇ! ಕ್ರಿಯೆಗಳಿಲ್ಲ
ದ ವಿಶ್ವಾಸವು ಸತ್ತದ್ದೆಂದು ತಿಳಿಯ ನಿನಗೆ ಮನಸ್ಸುಂಟೋ?

೨೧ ನಮ್ಮ ತಂದೆಯಾದ ಅಬ್ರಹಾಮನು ತನ್ನ ಮಗನಾದ ಇಸಾ
ಕನನ್ನು ಬಲಿಪೀಠದ ಮೇಲೆ ಅರ್ಪಿಸಿ, ಕ್ರಿಯೆಗಳಿಂದ ನೀತಿನಿ
೨೨ ರ್ಣಯ ಪಡಲಿಲ್ಲವೋ? ವಿಶ್ವಾಸವು ಅವನ ಕ್ರಿಯೆಗಳ ಸಂಗಡ
ಯತ್ನೈಸಿತೆಂದೂ, ಕ್ರಿಯೆಗಳಿಂದ ಅವನ ವಿಶ್ವಾಸವು ಸಂಪೂ
೨೩ ರ್ಣವಾಯಿತೆಂದೂ, ನೋಡುತ್ತೀ. ಇದಲ್ಲದೆ ಅಬ್ರಹಾಮನು
ದೇವರನ್ನು ವಿಶ್ವಾಸಿಸಿದನು; ಅದು ಅವನಿಗೆ ನೀತಿ ಎಂದು ಎಣಿ
ಸಲ್ಪಟ್ಟಿತು, ಎಂಬ ಬರಹವು ಈಡೇರಿತು. ಮತ್ತು ದೇವರ ಸ್ನೇ
೨೪ ಹಿತನೆಂದು ಕರೆಯಲ್ಪಟ್ಟನು. ಹಾಗಾದರೆ, ವಿಶ್ವಾಸ ಮಾತ್ರ
ದಿಂದಲ್ಲ, ಕ್ರಿಯೆಗಳಿಂದ ಮನುಷ್ಯನು ನೀತಿನಿರ್ಣಯ ಪಡು
ತ್ತಾನೆಂದು ನೋಡುತ್ತೀರಿ.

೨೫ ಅದೇ ಮೇಸೆಗೆ ಸೂಳೆಯಾದ ರಹಾಬಳು ಸಹಾ ದೂತರನ್ನು
ಸೇರಿಸಿ ಕೊಂಡು, ಬೇರೆ ಮಾರ್ಗದಿಂದ ಹೊರಗೆ ಕಳುಹಿಸಿ, ಕ್ರಿ
೨೬ ಯೆಗಳಿಂದ ನೀತಿನಿರ್ಣಯ ಪಡಲಿಲ್ಲವೋ? ಹ್ಯಾಗಂದರೆ, ಆತ್ಮ
ವಿಲ್ಲದ ಶರೀರವು ಹ್ಯಾಗೆ ಸತ್ತದ್ದಾಗಿದೆಯೋ, ಹಾಗೆಯೇ ಕ್ರಿ
ಯೆಗಳಿಲ್ಲದ ವಿಶ್ವಾಸವು ಸತ್ತದ್ದು.

## ೩. ಸಂಧಿ.

೧ ನನ್ನ ಸಹೋದರರೇ, ನಮಗೆ ಹೆಚ್ಚಾದ ಆಜ್ಞೆ ಆಗುವದೆಂದು
೧ ತಿಳಿದು, ಅನೇಕರು ಬೋಧಕರಾಗ ಬೇಡಿರಿ. ಯಾಕಂದರೆ ನಾವೆ
ಲ್ಲರು ಬಹಳ ತಪ್ಪುತ್ತೇವೆ; ಒಬ್ಬನು ವಾಕ್ಯದಲ್ಲಿ ತಪ್ಪದೆ ಇದ್ದ
ರೆ, ಅವನು ಶರೀರಕ್ಕೆಲ್ಲ ಕಡಿವಾಣ ಹಾಕಿ ನಡಿಸ ಸಮರ್ಥನಾ
೩ ಗಿರುವ ಸಂಪೂರ್ಣನಾದ ಮನುಷ್ಯನಾಗಿದ್ದಾನೆ. ಇಗೋ, ಅ
ವು ನಮಗೆ ವಿಶ್ವೇಯವಾಗುವ ಹಾಗೆ, ಕುದುರೆಗಳ ಬಾಯಿಗಳಲ್ಲಿ
ಕಡಿವಾಣಗಳನ್ನು ಹಾಕಿ, ಅವುಗಳ ಶರೀರವನ್ನೆಲ್ಲಾ ತಿರುಗಿಸುತ್ತೇ
೪ ವೆ. ಇಗೋ, ಅಷ್ಟು ದೊಡ್ಡವುಗಳಾಗಿದ್ದು, ಬಿರುಗಾಳಿಗಳಿಂದ
ಬೈಯಲ್ಪಡುವ ಹಡಗಗಳು ಸಹ ಬಹು ಸಣ್ಣ ಚುಕಾಣಿಯಿಂದ
೫ ನಡಿಸುವವನ ಮನಸ್ಸು ಬಂದಲ್ಲಿಗೆ ತಿರುಗಿಸಲ್ಪಡುತ್ತವೆ. ಅದೇ
ಪ್ರಕಾರ ನಾಲಿಗೆ ಸಣ್ಣ ಅಂಗವಾಗಿದೆ; ಆದರೆ ತನ್ನನ್ನು ಬಹಳವಾಗಿ
ಹೆಚ್ಚಿಸಿ ಕೊಳ್ಳುತ್ತದೆ. ಇಗೋ, ಸ್ವಲ್ಪ ಬೆಂಕಿಯು ಎಷ್ಟು ದೊ
೬ ಡ್ಡ ಅಡವಿಯನ್ನು ಹೊತ್ತಿಸುತ್ತದೆ. ನಾಲಿಗೆಯು ಸಹ ಬೆಂಕಿಯೂ
ಅನ್ಯಾಯದ ಲೋಕವೂ ಆಗಿದೆ. ಹೀಗೆ ನಾಲಿಗೆಯು ಶರೀರವನ್ನೆ
ಲ್ಲಾ ಕಳಂಕ ಮಾಡುವಂಥಾದ್ದಾಗಿಯೂ, ಜನ್ಮ ಚಕ್ರವನ್ನು ದಹಿ
ಸುವಂಥಾದ್ದಾಗಿಯೂ, ನರಕದಿಂದ ದಹಿಸಲ್ಪಡುವಂಥಾದ್ದಾಗಿ
ಯೂ, ನಮ್ಮ ಅಂಗಗಳೊಳಗೆ ಇರುತ್ತದೆ.

೭ ಯಾಕಂದರೆ ಮೃಗ, ಪಕ್ಷಿ, ಕ್ರಿಮಿ, ಜಲ ಜಂತುಗಳ ಜಾತಿಯೆ
ಲ್ಲಾ ಮನುಷ್ಯ ಜಾತಿಯಿಂದ ಸಾಧು ಮಾಡಲ್ಪಡುತ್ತವೆ, ಮತ್ತು
೮ ಸಾಧು ಮಾಡಲ್ಪಟ್ಟಿವೆ; ಆದರೆ ನಾಲಿಗೆಯನ್ನು ಮನುಷ್ಯರಲ್ಲಿ
ಯಾವನೂ ಸಾಧು ಮಾಡಲಾರನು; ಅದು ಸ್ವಾಧೀನವಾಗದ
೯ ಕೇಡು; ಮರಣಕರವಾದ ವಿಷದಿಂದ ತುಂಬಿ ಅದೆ. ಅದರಿಂದ
ತಂದೆಯಾದ ದೇವರನ್ನು ಆಶೀರ್ವದಿಸುತ್ತೇವೆ; ಅದರಿಂದಲೇ
ದೇವರ ಹೋಲಿಕೆಯ ಪ್ರಕಾರ ಹುಟ್ಟಿದ ಮನುಷ್ಯರನ್ನು ಶಪ
೧೦ ಸುತ್ತೇವೆ. ಅದೇ ಬಾಯಿಯೊಳಗಿಂದ ಆಶೀರ್ವಾದವೂ ಶಾಪವೂ
ಹೊರಡುತ್ತವೆ. ನನ್ನ ಸಹೋದರರೇ, ಇವು ಹಾಗಿರ ಬಾರದು.
೧೧ ಬುಗ್ಗೆಯು ಒಂದೇ ಬಾಯಿಯಿಂದ ಸೀಯನ್ನೂ ಕಹಿಯನ್ನೂ ಹ
೧೨ ರಿಯ ಮಾಡುವದುಂಟೇ? ನನ್ನ ಸಹೋದರರೇ, ಅಂಜೂರದ
ಮರವು ಇಪ್ಪೆ ಕಾಯಿಗಳನ್ನೂ ದ್ರಾಕ್ಷೆಯ ಬಳ್ಳಿಯು ಅಂಜೂ
ರದ ಫಲಗಳನ್ನೂ, ಫಲಿಸಲಾಗುವದೋ? ಹಾಗೆಯೇ ಯಾವ ಬು
ಗ್ಗೆಯಾದರೂ ಉಪ್ಪು ನೀರನ್ನೂ ಶೀನೀರನ್ನೂ ಕೊಡಲಾರದು.

೧೩ ನಿಮ್ಮಲ್ಲಿ ಜ್ಞಾನಿಯೂ ಬುದ್ಧಿವಂತನೂ ಯಾವನು? ಒಳ್ಳೇ
ನಡತೆಯಿಂದ ಜ್ಞಾನದ ಸಾತ್ವಿಕತ್ವದಲ್ಲಿ ತನ್ನ ಕ್ರಿಯೆಗಳನ್ನು
೧೪ ತೋರಿಸಲಿ. ಆದರೆ ಕಹಿಯಾದ ಹೊಟ್ಟೆಕಿಚ್ಚು ಜಗಳವೂ ನಿಮ್ಮ
ಹೃದಯದಲ್ಲಿದ್ದರೆ, ಸತ್ಯಕ್ಕೆ ವಿರೋಧವಾಗಿ ಹೆಚ್ಚಳ ಪಡಬೆ,
೧೫ ಸುಳ್ಳಾಡಬೆ, ಇರ್ರಿ. ಈ ಜ್ಞಾನವು ಮೇಲಿನಿಂದ ಇಳಿಯುವಂಥಾದ್ದ
ಲ್ಲ, ಭೂಮಿಗೂ ಪ್ರಾಣಭಾವಕ್ಕೂ, ದೆವ್ವಗಳಿಗೂ ಸಮ್ತುಂಥಾ
೧೬ ದದ್ದೇ. ಹ್ಯಾಗಂದರೆ ಹೊಟ್ಟೆಕಿಚ್ಚೂ ಜಗಳವೂ ಎಲ್ಲಿಯೋ,
೧೭ ಅಲ್ಲಿ ಗಲಿಬಿಲಿಯೂ ಎಲ್ಲಾ ದುಷ್ಕ್ರಿಯೆಗಳೂ ಇರುವವು. ಆದ
ರೆ ಮೇಲಿನಿಂದಾದ ಜ್ಞಾನವು ಮೊದಲು ನಿರ್ಮಲವೂ, ಆ ಮೇಲೆ
ಸಮಾಧಾನ ಶಾಂತಿ ಸಮ್ಮತಿ ಉಳ್ಳದ್ದೂ, ಕರುಣೆಯಿಂದಲೂ
ಒಳ್ಳೇ ಫಲಗಳಿಂದಲೂ ಪೂರಿತವಾದದ್ದೂ, ಮುಖದಾಕ್ಷಿಣ್ಯ ಕಪ
ಟಗಳಿಲ್ಲದ್ದೂ, ಆಗಿದೆ. ಮತ್ತು ನೀತಿಯ ಫಲವು ಸಮಾಧಾನ
೧೮ ಮಾಡುವವರಿಗೆ ಸಮಾಧಾನದಲ್ಲಿ ಬಿತ್ತಲ್ಪಡುತ್ತದೆ.



## ೪. ಸಂಧಿ.

೧ ಯುದ್ಧಗಳೂ ಜಗಳಗಳೂ ನಿಮ್ಮಲ್ಲಿ ಎಲ್ಲಿಂದ ಬರುತ್ತವೆ? ನಿ
೨ ಮ್ಮ ಅಂಗಗಳಲ್ಲಿ ಜಗಳಾಡುವ ನಿಮ್ಮ ಆಶೆಗಳಿಂದಲ್ಲವೋ? ನೀವು
ಆಶಿಸಿ, ಹೊಂದುವದಿಲ್ಲ; ಕೊಲ್ಲುತ್ತೀರಿ, ಹೊಟ್ಟೆಕಿಚ್ಚು ಪಡುತ್ತೀರಿ;
ಸಂಪಾದಿಸಲಾರಿರಿ; ಹೋರಾಡಿ ಯುದ್ಧ ಮಾಡುತ್ತೀರಿ; ನೀವು ಬೇ
೩ ಡಿ ಕೊಳ್ಳದ ಕಾರಣ, ನಿಮಗೆ ಸಿಕ್ಕುವದಿಲ್ಲ. ಬೇಡಿ ಕೊಂಡರೂ,
ನಿಮ್ಮ ಆಶೆಗಳಲ್ಲಿ ವೆಚ್ಚ ಮಾಡುವ ಹಾಗೆ, ತಪ್ಪಾಗಿ ಬೇಡಿ ಕೊ
ಳ್ಳುವ ಕಾರಣ, ನೀವು ಹೊಂದುವದಿಲ್ಲ.

೪ ಜಾರರೇ, ಜಾರೆಯರೇ, ಲೋಕದ ಸ್ನೇಹವು ದೇವರಿಗೆ ಶ
ತ್ರುತ್ವವೆಂದು ಅರಿಯರಾ? ಹಾಗಾದರೆ, ಲೋಕಕ್ಕೆ ಸ್ನೇಹಿತನಾ
೫ ಗ ಬೇಕೆಂಬುವವನು ದೇವರಿಗೆ ಶತ್ರುವಾಗಿದ್ದಾನೆ. ಇಲ್ಲವೆ, ನಮ್ಮ
ಲ್ಲಿ ವಾಸವಾಗಿರುವ ಆತ್ಮವು ಹೊಟ್ಟೆಕಿಚ್ಚಾಗಿ ಆಶೆ ಮಾಡುತ್ತದೆಂ
ದು, ಬರಹವು ಸುಮ್ಮನೆ ಹೇಳುತ್ತದೆಂಬದಾಗಿ, ನೆನಸುತ್ತೀರಾ? ಆ
ದರೆ ಅಧಿಕವಾದ ಕೃಪೆಯನ್ನು ಕೊಡುತ್ತಾನೆ. ಆದದರಿಂದ ದೇ
೬ ವರು ಗರ್ವಿಷ್ಠರನ್ನು ಎದುರಿಸಿ, ದೀನರಿಗೆ ಕೃಪೆಯನ್ನು ಕೊ
ಡುತ್ತಾನೆಂದು, ಹೇಳುತ್ತದೆ. ಹಾಗಾದರೆ, ದೇವರಿಗೆ ಒಳ ಬೀಳಿರಿ.
ವಿಶಾಚನನ್ನು ಎದುರಿಸಿರಿ; ಆಗ ನಿಮ್ಮ ಬಳಿಯಿಂದ ಓಡಿ ಹೋ
೭ ಗುವನು. ದೇವರ ಸಮೀಪಕ್ಕೆ ಬನ್ನಿರಿ; ಆಗ ನಿಮ್ಮ ಸಮೀಪಕ್ಕೆ
ಬರುವನು. ಪಾಪಿಷ್ಠರೇ, ಕೈಗಳನ್ನು ಶುಚಿ ಮಾಡಿ ಕೊಳ್ಳಿರಿ.
ಎರಡು ಮನಸ್ಸುಳ್ಳವರೇ, ಹೃದಯಗಳನ್ನು ಶುದ್ಧ ಮಾಡಿ
೮ ಕೊಳ್ಳಿರಿ. ವ್ಯಥೆ ಪಡಿರಿ, ದುಃಖ ಪಡಿರಿ, ಅಳಿರಿ; ನಿಮ್ಮ ನಗುವು
೯ ದುಃಖಕ್ಕೂ, ಸಂತೋಷವು ಕಳೆಕಳೆಗೂ, ಬದಲಾಗಲಿ. ಕರ್ತನ
ಮುಂದೆ ನಿಮ್ಮನ್ನು ತಗ್ಗಿಸಿ ಕೊಳ್ಳಿರಿ; ಆಗ ನಿಮ್ಮನ್ನು ಎತ್ತುವನು.

೧೦ ಸಹೋದರರೇ, ಒಬ್ಬರನ್ನೊಬ್ಬರು ನಿಂದಿಸ ಬೇಡಿರಿ. ಸ
ಹೋದರನನ್ನು ನಿಂದಿಸಿ, ಸಹೋದರನಿಗೆ ನ್ಯಾಯತೀರಿಸುವವ
ನು ನ್ಯಾಯಪ್ರಮಾಣವನ್ನು ನಿಂದಿಸಿ, ನ್ಯಾಯಪ್ರಮಾಣಕ್ಕೆ
ನ್ಯಾಯ ತೀರಿಸುತ್ತಾನೆ. ಆದರೆ ನೀನು ನ್ಯಾಯಪ್ರಮಾಣಕ್ಕೆ
ನ್ಯಾಯ ತೀರಿಸಿದರೆ, ನ್ಯಾಯಪ್ರಮಾಣವನ್ನು ಮಾಡುವವನಲ್ಲ,
೧೧ ಅದರ ನ್ಯಾಯಾಧಿಪತಿಯಾಗಿರುತ್ತೀ. ರಕ್ಷಿಸಲೂ ಕೆಡಿಸಲೂ ಶಕ್ತ
ನಾದ ನ್ಯಾಯಕರ್ತನು ಒಬ್ಬನೇ; ಬೇರೊಬ್ಬನಿಗೆ ನ್ಯಾಯ
ತೀರಿಸುವ ನೀನು ಯಾರು?

೧೩ ಬನ್ನಿರಿ ಈಗ, ಈ ಹೊತ್ತು, ನಾಳೆ, ಇಂಥಿಂಥ ಪಟ್ಟಣಕ್ಕೆ ಹೋ
ಗಿ, ಅಲ್ಲಿ ಒಂದು ವರುಷ ಇದ್ದು, ವ್ಯಾಪಾರ ಮಾಡಿ, ಲಾಭ
೧೪ ಮಾಡಿ ಕೊಳ್ಳೋಣ, ಅಂಬುವವರೇ, ಕೇಳಿರಿ. ನಾಳೆ ಆಗುವಂಥಾ
ದ್ದು ನಿಮಗೆ ತಿಳಿಯದು. ಯಾಕಂದರೆ ನಿಮ್ಮ ಜೀವವೇನು? ಸ್ವ
ಲ್ಪ ಹೊತ್ತು ಕಾಣಿಸಿ, ಆ ಮೇಲೆ ಕಾಣದೆ ಹೋಗುವ ಹಬೆಯಾ
೧೫ ಗಿದೆ. ಇದನ್ನು ಬಿಟ್ಟು—ಕರ್ತನ ಚಿತ್ತವಾದರೆ, ನಾವು ಬದುಕಿ,
೧೬ ಇದನ್ನೂ ಅದನ್ನೂ ಮಾಡೇವೆಂದು ಹೇಳ ಬೇಕಾಗಿತ್ತು. ಆದರೆ
ಈಗ ನಿಮ್ಮ ಡಂಭಗಳಲ್ಲಿ ಹೆಚ್ಚಳ ಪಡುತ್ತೀರಿ; ಅಂಥ ಹೆಚ್ಚಳವೆಲ್ಲಾ
೧೭ ಕೆಟ್ಟದ್ದಾಗಿದೆ. ಹಾಗಾದರೆ ಒಳ್ಳೇದನ್ನು ಮಾಡ ತಿಳಿದು ಮಾಡದ
ವನಿಗೆ ಪಾಪ ಉಂಟು.

## ೫. ಸಂಧಿ.

೧ ಬನ್ನಿರಿ ಈಗ, ಐಶ್ವರ್ಯವಂತರೇ, ನಿಮ್ಮ ಮೇಲೆ ಬರುವ
೧ ವ್ಯಥೆಗಳಿಗೋಸ್ಕರ ಅತ್ತು, ಗೋಳಾಡಿರಿ. ನಿಮ್ಮ ಐಶ್ವರ್ಯ
ವು ಕೆಟ್ಟು ಹೋಯಿತು; ನಿಮ್ಮ ವಸ್ತ್ರಗಳು ನುಸಿ ಹತ್ತಿ ಹೋದ
೩ ವು; ನಿಮ್ಮ ಚಿನ್ನವೂ ಬೆಳ್ಳಿಯೂ ತುಕ್ಕು ಹಿಡಿದು ಹೋದವು.
ಅವುಗಳ ತುಕ್ಕು ನಿಮಗೆ ಸಾಕ್ಷಿಯಾಗಿದ್ದು, ನಿಮ್ಮ ಮಾಂಸವ
ನ್ನು ಬೆಂಕಿಯ ಹಾಗೆ ತಿನ್ನುವದು. ಕಡೇ ದಿನಗಳಿಗೆ ದ್ರವ್ಯಗಳ
೪ ನ್ನು ಇಟ್ಟು ಕೊಂಡಿದ್ದೀರಿ. ಇಗೋ, ನಿಮ್ಮ ಹೊಲಗಳ ಬೈರ
ನ್ನು ಕೊಯಿದ ಕೆಲಸದವರಿಂದ ನೀವು ಮೋಸವಾಗಿ ಹಿಡಿದ
ಕೂಲಿಯು ಕೂಗುತ್ತದೆ. ಮತ್ತು ಬೈರನ್ನು ಕೊಯಿದವರ ಮೊ
೫ ರೆಗಳು ಸೈನ್ಯಗಳ ಕರ್ತನ ಕಿವಿಗಳಲ್ಲಿ ಪ್ರವೇಶಿಸಿದವು. ಭೂ
ಮಿಯ ಮೇಲೆ ಸೌಖ್ಯವೂ ಭೋಗವೂ ಉಳ್ಳವರಾಗಿ, ಕೊಲೆ
ಯ ದಿವಸವಾಯಿತೆಂದು, ನಿಮ್ಮ ಹೃದಯಗಳನ್ನು ಪೋಷಿಸಿ
೬ ದ್ದೀರಿ. ನೀತಿವಂತನಿಗೆ ಆಜ್ಞೆ ನಿರ್ಣಯಿಸಿ, ಕೊಂದು ಹಾಕಿದ್ದೀರಿ;
ಅವನು ನಿಮ್ಮನ್ನು ಎದುರಿಸುವದಿಲ್ಲ.

೭ ಹಾಗಾದರೆ, ಸಹೋದರರೇ, ಕರ್ತನ ಬರುವಿಕೆಯ ಪ
ರ್ಯಂತರ ತಾಳಿ ಕೊಳ್ಳಿರಿ. ಇಗೋ, ಬಕ್ಕಲಿಗನು ಮುಂಗಾರ
ಹಿಂಗಾರಿ ಹೊಂದುವ ಪರ್ಯಂತರ ತಾಳಿ ಕೊಂಡು, ಭೂಮಿ
೮ ಯ ಪ್ರಿಯವಾದ ಫಲಕ್ಕೋಸ್ಕರ ಕಾದು ಕೊಂಡಿರುವನು. ನೀ
ವು ಸಹ ತಾಳಿ ಕೊಂಡು, ನಿಮ್ಮ ಹೃದಯಗಳನ್ನು ದೃಢ ಪಡಿ
ಸಿರಿ; ಯಾಕಂದರೆ ಕರ್ತನ ಬರುವಿಕೆಯು ಸಮೀಪವಾಗಿದೆ.

೯ ಸಹೋದರರೇ, ನೀವು ಆಜ್ಞೆ ನಿರ್ಣಯ ಪಡದ ಹಾಗೆ, ಒ
ಬ್ಬರ ಮೇಲೊಬ್ಬರು ಗುಣುಗುಟ್ಟ ಬೇಡಿರಿ. ಇಗೋ, ನ್ಯಾ
೧೦ ಯಾಧಿಪತಿಯು ಕದಗಳ ಮುಂದೆ ನಿಂತಿದ್ದಾನೆ. ನನ್ನ ಸಹೋದ
ರರೇ, ಕರ್ತನ ಹೆಸರಿನಲ್ಲಿ ಮಾತಾಡಿದ ಪ್ರವಾದಿಗಳನ್ನು ಕ್ರಮೆ
ಯ ತಾಳ್ಮೆ ದೀರ್ಘ ಶಾಂತಿಗಳ ಮಾದರಿಯಾಗಿ ತಕ್ಕೊಳ್ಳಿರಿ.
೧೧ ಇಗೋ, ತಾಳಿ ಕೊಳ್ಳುವವರು ಭಾಗ್ಯವಂತರೆಂದು ಹೇಳುತ್ತೇವೆ;
ಯೋಬನ ತಾಳ್ಮೆಯನ್ನು ಕೇಳಿದ್ದೀರಿ; ಮತ್ತು ಕರ್ತನ ಅಂತ್ಯ
ವನ್ನು ನೋಡಿದ್ದೀರಿ; ಏನಂದರೆ ಕರ್ತನು ಬಹು ಅಂತ್ಯಕರಣ
ವೂ ಕನಿಕರವೂ ಉಳ್ಳವನಾಗಿದ್ದಾನೆ.

೧೨ ಆದರೆ ಎಲ್ಲಾದರ ಮೊದಲು, ನನ್ನ ಸಹೋದರರೇ, ಆಣೆ
ಇಡ ಬೇಡಿರಿ. ಆಕಾಶದ ಮೇಲಾಗಲಿ, ಭೂಮಿಯ ಮೇಲಾಗಲಿ,
ಬೇರೆ ಯಾವ ಆಣೆಯಾಗಲಿ, ಬೇಡ. ನೀವು ಆಜ್ಞೆಗೊಳಗಾಗದ
ಹಾಗೆ, ನೀವು ಹೌದಂದರೆ, ಹೌದಾಗಲಿ, ಅಲ್ಲವಂದರೆ, ಅಲ್ಲವಾ
ಗಲಿ.

೧೩ ನಿಮ್ಮಲ್ಲಿ ಒಬ್ಬನು ಶ್ರಮೆ ಪಡುತ್ತಾನೋ? ಪ್ರಾರ್ಥಿಸಲಿ. ಒ
೧೪ ಬ್ಬನು ಸುಖವಾಗಿದ್ದಾನೋ? ಕೀರ್ತನೆ ಹಾಡಲಿ. ನಿಮ್ಮಲ್ಲಿ ಒ
ಬ್ಬನು ರೋಗಿಷ್ಠನಾಗಿದ್ದಾನೋ? ಸಭೆಯ ಹಿರಿಯರನ್ನು ಕರೆ
ಕಳುಹಿಸಲಿ? ಅವರು ಕರ್ತನ ಹೆಸರಿನಲ್ಲಿ ಅವನಿಗೆ ಎಣ್ಣೆ ಹಚ್ಚಿ,
೧೫ ಅವನಿಗೋಸ್ಕರ ಪ್ರಾರ್ಥನೆ ಮಾಡಲಿ. ಆಗ ವಿಶ್ವಾಸದ ಪ್ರಾ
ರ್ಥನೆಯು ರೋಗಿಷ್ಠನನ್ನು ರಕ್ಷಿಸುವದು. ಮತ್ತು ಕರ್ತನು
ಅವನನ್ನು ಎಬ್ಬಿಸುವನು. ಅವನು ಪಾಪಗಳನ್ನು ಮಾಡಿದವನಾ
೧೬ ದರೆ, ಅವನಿಗೆ ಮನಿಸಲ್ಪಡುವವು. ವಾಸಿಯಾಗುವ ಹಾಗೆ, ನೀ
ವು ಒಬ್ಬರಿಗೊಬ್ಬರು ಪಾಪಗಳನ್ನು ಅರಿಕೆ ಮಾಡಿ, ಒಬ್ಬರಿ
ಗೋಸ್ಕರ ಒಬ್ಬರು ಪ್ರಾರ್ಥನೆ ಮಾಡಿರಿ. ನೀತಿವಂತನ ಚುರು
೧೭ ಕಾದ ಪ್ರಾರ್ಥನೆಯು ಬಹು ಶಕ್ತಿಯುಳ್ಳದ್ದಾಗಿದೆ. ಎಲೀಯ
ನು ನಮಗೆ ಸಮಾನವಾದ ಸ್ವಭಾವವುಳ್ಳ ಮನುಷ್ಯನಾಗಿದ್ದ

ನು; ಅವನು ಮಳೆ ಬೀಳದ ಹಾಗೆ ಪ್ರಾರ್ಥನೆ ಮಾಡಲಾಗಿ, ಮೂ
ರು ವರುಷ ಆರು ತಿಂಗಳು ಭೂಮಿಯ ಮೇಲೆ ಮಳೆ ಬೀಳಲಿಲ್ಲ.
೧೮ ಅವನು ತಿರಿಗಿ ಪ್ರಾರ್ಥಿಸಲಾಗಿ, ಆಕಾಶವು ಮಳೆಯನ್ನು ಕೊಟ್ಟಿ
ತು; ಭೂಮಿಯು ತನ್ನ ಫಲವನ್ನು ಫಲಿಸಿತು.
೧೯ ಸಹೋದರರೇ, ನಿಮ್ಮಲ್ಲಿ ಒಬ್ಬನು ಸತ್ಯ ಬಿಟು ತಪ್ಪಿ
೨೦ ಹೋಗಲಾಗಿ, ಮತ್ತೊಬ್ಬನು ಅವನನ್ನು ತಿರುಗಿಸಿದರೆ, ಪಾಪಿದ್ದ
ನನ್ನು ಅವನ ತಪ್ಪಿದ ಮಾರ್ಗದಿಂದ ತಿರುಗಿಸಿದವನು ಅವನ
ಪ್ರಾಣವನ್ನು ಮರಣದಿಂದ ರಕ್ಷಿಸಿ, ಪಾಪಗಳ ಸಮೂಹವನ್ನು
ಅಡಗಿಸುವನೆಂದು, ತಿಳಿದಿರಲಿ.

# THE FIRST EPISTLE OF PETER.

## ಪೇತ್ರನ ಮೊದಲನೇ ಪತ್ರಿಕೆ.

### ೧. ಸಂಧಿ.

೧ ಯೇಸು ಕ್ರಿಸ್ತನ ಅಪೊಸ್ತಲನಾದ ಪೇತ್ರನು ಪೊಂತದಲ್ಲಿ
ಯೂ, ಗಲಾತ್ಯದಲ್ಲಿಯೂ, ಕಪ್ಪದೋಕ್ಯದಲ್ಲಿಯೂ, ಆಸ್ಯ
೨ ದಲ್ಲಿಯೂ, ಬಿಥೂನ್ಯದಲ್ಲಿಯೂ ಚದರಿರುವಂಥ, ತಂದೆಯಾ
ದ ದೇವರ ಮುಂತಿಳಿವಿಕೆಯ ಪ್ರಕಾರ ಆತ್ಮದ ಶುದ್ಧೀಕರಣದಲ್ಲಿ
ವಿಧೇಯತ್ವಕ್ಕಾಗಿಯೂ ಯೇಸು ಕ್ರಿಸ್ತನ ರಕ್ತದ ಚಿಮಕಿಸುವಿ
ಕೆಗಾಗಿಯೂ ಆಯಲ್ಪಟ್ಟಂಥ, ಪರದೇಶಸ್ಥರಿಗೆ—ಕೃಪೆಯೂ,
ಸಮಾಧಾನವೂ, ನಿಮಗೆ ಹೆಚ್ಚಿ ಸಲ್ಪಡಲಿ.
೩ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರಿಗೆ
ಸ್ತೋತ್ರವು. ಅವನು ತನ್ನ ಅಧಿಕವಾದ ಕರುಣೆಯ ಪ್ರಕಾರ,
ಯೇಸು ಕ್ರಿಸ್ತನು ಸತ್ತವರೊಳಗಿಂದ ಹೊಂದಿದ ಪುನರುತ್ಥಾನದ
೪ ಮೂಲವಾಗಿ, ನಮ್ಮನ್ನು ಜೀವವುಳ್ಳ ನಿರೀಕ್ಷೆಗೆ, ಲಯವೂ ಕಳಂ
ಕವೂ ಕ್ಷಯವೂ ಇಲ್ಲದ ಬಾಧ್ಯತೆಗೆ, ತಿರಿಗಿ ಹುಟ್ಟಿಸಿದ್ದಾನೆ.
೫ ಅದು ಕಡೇ ಸಮಯದಲ್ಲಿ ಪ್ರಕಟವಾಗಲಿರುವ ರಕ್ಷಣೆಗೋಸ್ಕರ
ದೇವರ ಬಲದಿಂದ ವಿಶ್ವಾಸದ ಮೂಲವಾಗಿ ಕಾಪಾಡಲ್ಪಡುವ
೬ ರಾದ ನಿಮಗೆ ಪರಲೋಕದಲ್ಲಿ ಇಟ್ಟಿದೆ. ಅದರಲ್ಲಿ ನೀವು, ಇನ್ನು
ಸ್ವಲ್ಪ ಕಾಲ, ಅಗತ್ಯವಿದ್ದರೆ, ನಾನಾ ಶೋಧನೆಗಳಲ್ಲಿ ದುಃಖ ಪ
೭ ಟ್ಟಾದ್ಯೂ, ಉಲ್ಲಾಸ ಪಡುತ್ತೀರಿ; ಯಾಕಂದರೆ ಬೆಂಕಿಯಿಂದ
ಪರೀಕ್ಷಿಸಲ್ಪಡುವಂಥ, ಲಯವಾಗುವಂಥ, ಭಂಗಾರಕ್ಕಿಂತ ಬಹು
ಅಮೂಲ್ಯವಾದ ನಿಮ್ಮ ವಿಶ್ವಾಸದ ಪರೀಕ್ಷೆಯು ಸ್ತೋತ್ರ, ಘನ,
ಮಹಿಮೆಗಳುಳ್ಳದ್ದಾಗಿ ಯೇಸು ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಕಾಣಾ
೮ ಲ್ಪಡುವದು. ಅವನನ್ನು ನೋಡದೆ ಪ್ರೀತಿ ಮಾಡುತ್ತೀರಿ; ಅವನ
ನ್ನು ಈಗ ಕಾಣದೆ, ವಿಶ್ವಾಸಿಸಿ, ಹೇಳಲಾರದಂಥ, ಮಹಿಮೆಯು
೯ ಳ್ಳಂಥ, ಸಂತೋಷದಿಂದ ಉಲ್ಲಾಸ ಪಟ್ಟು, ನಿಮ್ಮ ವಿಶ್ವಾಸಕ್ಕೆ
ಅಂತ್ಯವಾದ ಪ್ರಾಣಗಳ ರಕ್ಷಣೆಯನ್ನು ಸಂಪಾದಿಸಿ ಕೊಳ್ಳು
ತ್ತೀರಿ.
೧೦ ನಿಮಗೆ ಆಗುವ ಕೃಪೆಯನ್ನು ಕುರಿತು ಪ್ರವಾದಿಸಿದ ಪ್ರವಾದಿ
ಗಳು ಆ ರಕ್ಷಣೆಯನ್ನು ಕುರಿತು ವಿಚಾರಿಸಿ, ಪರಿಶೋಧಿಸಿದ್ದಾರೆ.
೧೧ ಅವರು ಕ್ರಿಸ್ತನಿಗೆ ಬರುವ ಶ್ರಮೆಗಳನ್ನೂ, ಅವುಗಳ ತರುವಾಯ
ಬರುವ ಮಹಿಮೆಗಳನ್ನೂ, ಸಾಕ್ಷಿಯಾಗಿ ಮುಂತಿಳಿಸುವಂಥ, ಅ
ವರೊಳಗಿರುವಂಥ, ಕ್ರಿಸ್ತನ ಆತ್ಮವು ಸೂಚಿಸಿದ ಕಾಲವು ಯಾ
೧೨ ವದೋ? ಎಂಥಾದ್ದೋ? ಎಂದು ಶೋಧಿಸಿದರು. ಪರಲೋಕ
ದಿಂದ ಕಳುಹಿಸಲ್ಪಟ್ಟ ಪರಿಶುದ್ಧಾತ್ಮದಿಂದ ನಿಮಗೆ ಸುವಾರ್ತೆ
ಪ್ರಸಂಗಿಸುವವರು ಈಗ ನಿಮಗೆ ತಿಳಿಸಿದಂಥ, ದೇವ ದೂತರು
ಕಣ್ಣಿಟ್ಟು ನೋಡುವದಕ್ಕೆ ಅಪೇಕ್ಷಿಸುವಂಥ, ಕಾರ್ಯಗಳಲ್ಲಿ ಶ
ಮಗಲ್ಲ, ನಮಗೆ ಸೇವಿಸಿದರೆಂದು, ಅವರಿಗೆ ಪ್ರಕಟವಾಯಿತು.
೧೩ ಆದದರಿಂದ ನಿಮ್ಮ ಬುದ್ಧಿಯ ನಡುವನ್ನು ಕಟ್ಟಿ, ಮಿತಿಯಾ
ಗಿದ್ದು, ಯೇಸು ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ನಿಮಗೆ ತರಲ್ಪಡುವ
೧೪ ಕೃಪೆಯನ್ನು ಸಂಪೂರ್ಣವಾಗಿ ನಿರೀಕ್ಷಿಸಿರಿ. ವಿಧೇಯತ್ವದ
೧೫ ಮಕ್ಕಳಾಗಿ, ಪೂರ್ವದಲ್ಲಿ ನಿಮ್ಮ ಅಜ್ಞಾನದೊಳಗಿದ್ದ ಆಶೆಗಳ
ಗೆ ಅನುಕೂಲವಾಗದೆ, ನಿಮ್ಮನ್ನು ಕರೆದ ಪರಿಶುದ್ಧನ ಪ್ರಕಾರ, ನೀ
೧೬ ವೂ ಸಮಸ್ತ ನಡತೆಯಲ್ಲಿ ಪರಿಶುದ್ಧರಾಗಿರಿ. ಯಾಕಂದರೆ, ನಾ
ನು ಪರಿಶುದ್ಧನಾಗಿರುವದರಿಂದ, ನೀವೂ ಪರಿಶುದ್ಧರಾಗಿರಿ, ಎಂದು
ಬರೆದದೆ.
೧೭ ಮತ್ತು ಪ್ರತಿ ಮನುಷ್ಯನ ಕ್ರಿಯೆಯ ಪ್ರಕಾರ ಮುಖದಾಕ್ಷಿ
ಣ್ಯವಿಲ್ಲದೆ ನ್ಯಾಯ ತೀರಿಸುವವನನ್ನು ತಂದೆ ಎಂದು ಕರೆದರೆ,
ನಿಮ್ಮ ಪರವಾಸದ ಕಾಲವೆಲ್ಲಾ ಭಯದಿಂದ ನಡೆದು ಕೊಳ್ಳಿರಿ.
೧೮ ಯಾಕಂದರೆ ಲಯವಾಗುವ ಬೆಳ್ಳಿಯಿಂದಲೂ ಭಂಗಾರದಿಂದ
೧೯ ಲೂ ಅಲ್ಲ, ನಿರ್ಮಲವಾಗಿಯೂ ನಿಷ್ಕಳಂಕವಾಗಿಯೂ ಇರುವ
ಕುರಿಮರಿಯಾದ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಪಿತೃ
ಸಂಪ್ರದಾಯವಾದ ನಿಮ್ಮ ವ್ಯರ್ಥ ನಡತೆಯಿಂದ ಬಿಡುಗಡೆ
೨೦ ಯಾದಿರೆಂದು, ಬಲ್ಲಿರಿ. ಅವನು ಜಗದುತ್ಪತ್ತಿಗೆ ಮುಂಚೆ ಗುರು
ತಿಸಲ್ಪಟ್ಟು, ನಿಮ್ಮ ವಿಶ್ವಾಸವೂ ನಿರೀಕ್ಷೆಯೂ ದೇವರ ಮೇಲಿ
೨೧ ರುವ ಹಾಗೆ, ಅವನನ್ನು ಸತ್ತವರೊಳಗಿಂದ ಎಬ್ಬಿಸಿ, ಅವನಿಗೆ ಮ
ಹಿಮೆಯನ್ನು ಕೊಟ್ಟ ದೇವರಲ್ಲಿ ಅವನ ಮೂಲಕವಾಗಿ ವಿಶ್ವಾಸಿ
ಸುವವರಾದ ನಿಮಗೋಸ್ಕರ, ಕಡೇ ಕಾಲಗಳಲ್ಲಿ ಪ್ರತ್ಯಕ್ಷವಾದನು.
೨೨ ನಿಷ್ಕಪಟವಾದ ಸಹೋದರ ಸ್ನೇಹಕ್ಕಾಗಿ ನಿಮ್ಮ ಪ್ರಾಣ
ಗಳನ್ನು ಆತ್ಮದ ಮೂಲವಾಗಿ ಸತ್ಯದ ವಿಧೇಯತ್ವದಿಂದ ಪವಿ
ತ್ರ ಮಾಡಿ ಕೊಂಡು, ಶುದ್ಧ ಹೃದಯದಿಂದ ಒಬ್ಬರನೊಬ್ಬರು
೨೩ ಚುರುಕಾಗಿ ಪ್ರೀತಿ ಮಾಡಿರಿ. ಲಯವಾಗುವ ಬೀಜದಿಂದಲ್ಲ,
ಲಯವಾಗದ್ದರಿಂದಲೇ, ಎಂದೆಂದಿಗೂ ಇರುವ ಜೀವವುಳ್ಳ ದೇವ
೨೪ ರ ವಾಕ್ಯದ ಮೂಲಕವಾಗಿ, ತಿರಿಗಿ ಹುಟ್ಟಿದಿರಲ್ಲ? ಯಾಕಂದರೆ
ಮಾಂಸವೆಲ್ಲಾ ಹುಲ್ಲಿನ ಹಾಗಿದೆ; ಮನುಷ್ಯನ ಮಹಿಮೆಯೆಲ್ಲಾ
೨೫ ಹುಲ್ಲಿನ ಹೂವಿನ ಹಾಗಿದೆ. ಹುಲ್ಲು ಬಾಡಿ ಹೋಗುವದು; ಅದರ
ಹೂವು ಉದರಿ ಹೋಗುವದು. ಆದರೆ ಕರ್ತನ ವಾಕ್ಯವು ಎಂ
ದೆಂದಿಗೂ ಇರುತ್ತದೆ. ಅದು ನಿಮಗೆ ಪ್ರಸಂಗಿಸಲ್ಪಟ್ಟ ವಾಕ್ಯವೇ.

### ೨. ಸಂಧಿ.

೧ ಹೀಗಿರುವದರಿಂದ ಸಕಲ ಕೆಟ್ಟತನವನ್ನೂ, ಸಕಲ ಮೋಸವ
ನ್ನೂ, ಕಪಟಗಳನ್ನೂ, ಹೊಟ್ಟೆಕಿಚ್ಚುಗಳನ್ನೂ, ಸಕಲ ನಿಂದೆಗ
ಳನ್ನೂ, ತೆಗೆದು ಹಾಕಿ, ಎಳೆ ಕೂಸುಗಳಂತೆ ವಾಕ್ಯವೆಂಬ ಮೋ
ಸವಿಲ್ಲದ ಹಾಲನ್ನು, ಅದರಿಂದ ಬೆಳೆಯುವ ಹಾಗೆ, ಅಪೇಕ್ಷಿಸಿರಿ.
೩ ಕರ್ತನು ದಯವುಳ್ಳವನೆಂದು ರುಚಿ ನೋಡಿದ್ದೀರಲ್ಲ ಪೋ?
೪ ಇವನು ಮನುಷ್ಯರಿಂದ ತಳ್ಳಲ್ಪಟ್ಟು, ದೇವರ ಮುಂದೆ ಆ



೫ ಯಲ್ಪಟ್ಟ, ಅಮೂಲ್ಯವಾದ ಜೀವವುಳ್ಳ ಕಲ್ಲೆಂದು, ಅವನ ಬಳಿ
ಗೆ ಬಂದು, ನೀವು ಸಹ ಜೀವವುಳ್ಳ ಕಲ್ಲುಗಳಂತೆ ಆತ್ಮ ಭಾವವಾ
ದ ಮನೆಯಾಗಿಯೂ, ಯೇಸು ಕ್ರಿಸ್ತನ ಮುಖಾಂತರ ದೇವರಿಗೆ
ಸಮರ್ಪಕವಾದ ಆತ್ಮಭಾವವಾದ ಬಲಿಗಳನ್ನು ಅರ್ಪಿಸುವ ಪರಿ
೬ ಶುದ್ಧ ಯಾಜಕತ್ವವಾಗಿಯೂ, ಕಟ್ಟಲ್ಪಡಿರಿ. ಇದಕ್ಕೋಸ್ಕರ
ಬರಹದಲ್ಲಿ ಇರುವದೇನಂದರೆ—ಇಗೋ, ಚಿಯೋನಿನಲ್ಲಿ ಆಯ
ಲ್ಪಟ್ಟ ಅಮೂಲ್ಯವಾದ ಮೂಲೇ ಕಲ್ಲನ್ನು ಇಡುತ್ತೇನೆ. ಅದರ
೭ ಮೇಲೆ ವಿಶ್ವಾಸವಿಡುವವನು ನಾಚಿಕೆ ಪಡನು. ಹೀಗಿರುವದರಿಂದ
ವಿಶ್ವಾಸಿಸುವವರಾದ ನಿಮಗೆ ಅಮೂಲ್ಯವಾಗಿದೆ; ಆದರೆ ಅವಿಧೇ
ಯರಿಗೆ ಮನೆ ಕಟ್ಟುವವರು ತಳ್ಳಿದ ಕಲ್ಲು, ಮೂಲೇ ಕಲ್ಲೂ, ಎ
೮ ಡವುವ ಕಲ್ಲೂ, ಆಟಂಕದ ಬಂಡೆಯೂ, ಆಯಿತು. ಇವರು ವಾ
ಕ್ಯಕ್ಕೆ ವಿಧೇಯರಾಗದೆ ಎಡವುತ್ತಾರೆ. ಅದಕ್ಕಾಗಿಯೇ ನೇಮಿಸ
೯ ಲ್ಪಟ್ಟರು. ಆದರೆ ನೀವು ಆಯಲ್ಪಟ್ಟ ಸಂತತಿಯೂ, ರಾಜ
ಯಾಜಕತ್ವವೂ, ಪರಿಶುದ್ಧ ಜನಾಂಗವೂ, ಸ್ವಂತ ಪ್ರಜೆಯೂ,
ಆಗಿದ್ದು, ಕತ್ತಲೆಯೊಳಗಿಂದ ತನ್ನ ಆಶ್ಚರ್ಯವಾದ ಬೆಳಕಿಗೆ
ನಿಮ್ಮನ್ನು ಕರೆದವನ ಸದ್ಗುಣಗಳನ್ನು ಸಾರ ತಕ್ಕವರಾಗಿದ್ದೀರಿ.
೧೦ ಮುಂಚೆ ಪ್ರಜೆಯಾಗಿರದೆ, ಈಗ ದೇವರ ಪ್ರಜೆಯಾಗಿದ್ದೀರಿ;
ಮುಂಚೆ ಕರುಣಿಸಲ್ಪಟ್ಟವರಾಗಿರದೆ, ಈಗ ಕರುಣಿಸಲ್ಪಟ್ಟಿದ್ದೀರಿ.
೧೧ ಪ್ರಿಯರೇ, ನೀವು ಪರವಾಸಿಗಳೂ ಪರದೇಶಸ್ಥರೂ ಆಗಿರುವ
ದರಿಂದ, ಪ್ರಾಣಕ್ಕೆ ವಿರೋಧವಾಗಿ ಯುದ್ಧ ಮಾಡುವ ಮಾಂಸ
ಭಾವವಾದ ಆಶೆಗಳಿಗೆ ದೂರವಾಗಿರ್ರೆಂದು, ನಿಮ್ಮನ್ನು ಬೇಡಿ ಕೊ
೧೨ ಳ್ಳುತ್ತೇನೆ. ಜನಾಂಗಗಳು ನಿಮ್ಮನ್ನು ಅಕ್ರಮಕಾರರೆಂದು ಯಾವ
ದರಲ್ಲಿ ನಿಂದಿಸುತ್ತಾತೋ, ಅದರಲ್ಲಿ ಅವರು ಕಣ್ಣಿನಿಂದ ಕಂಡ ಸ
ತ್ಕ್ರಿಯೆಗಳಿಗೋಸ್ಕರ ವಿಚಾರಣೆಯ ದಿವಸದಲ್ಲಿ ದೇವರನ್ನು
ಮಹಿಮೆ ಪಡಿಸುವ ಹಾಗೆ, ಅವರೊಳಗೆ ನಿಮ್ಮ ನಡತೆ ಬಳ್ಳೇದಾ
ಗಿರಲಿ.
೧೩ ಆದದರಿಂದ ಅತಿ ಶ್ರೇಷ್ಠನಾಗಿರುವ ಅರಸನಿಗಾದರೂ, ಅಕ್ರ
ಮಕಾರರನ್ನು ಶಿಕ್ಷಿಸುವದಕ್ಕೂ, ಒಳ್ಳೇದನ್ನು ಮಾಡುವವರನ್ನು
೧೪ ಹೊಗಳುವದಕ್ಕೂ, ಅವನಿಂದ ಕಳುಹಿಸಲ್ಪಡುವವರಾದ ಅಧಿಪ
ತಿಗಳಿಗಾದರೂ, ಮನುಷ್ಯರ ಅಧಿಕಾರಕ್ಕೆಲ್ಲಾ ಕರ್ತನಿಗೋಸ್ಕ
೧೫ ರ ಒಳಗಾಗಿರಿ. ಯಾಕಂದರೆ ನೀವು ಒಳ್ಳೇದನ್ನು ಮಾಡಿ, ಬು
ದ್ಧಿಯಿಲ್ಲದ ಮನುಷ್ಯರ ಅಜ್ಞಾನದ ಬಾಯಿ ಮುಚ್ಚಬೇಕೆಂಬು
೧೬ ವದೇ ದೇವರ ಚಿತ್ತವು. ಬಿಡುಗಡೆಯವರಾಗಿದ್ದರೂ, ನಿಮ್ಮ ಬಿಡು
ಗಡೆಯನ್ನು ಕೆಟ್ಟತನದ ಮುಚ್ಚಲ ಮಾಡದೆ, ದೇವರ ದಾಸರ
೧೭ ಹಾಗೆ ಇರ್ರಿ. ಎಲ್ಲರನ್ನು ಸನ್ಮಾನಿಸಿರಿ. ಸಹೋದರ ಕೂಟವನ್ನು
ಪ್ರೀತಿ ಮಾಡಿರಿ. ದೇವರಿಗೆ ಭಯ ಪಡಿರಿ. ಅರಸನನ್ನು ಸನ್ಮಾನಿ
ಸಿರಿ.
೧೮ ಸೇವಕರೇ, ಒಳ್ಳೇಯವರೂ ಸಾತ್ವಿಕರೂ ಆಗಿರುವ ಯಜ
ಮಾನರಿಗೆ ಮಾತ್ರವಲ್ಲಾ, ಮೂರ್ಖರಿಗೂ ಸಕಲ ಭಯದಲ್ಲಿ ಒ
೧೯ ಳಗಾಗಿರಿ. ಯಾಕಂದರೆ ಯಾರಾದರೂ ಅನ್ಯಾಯವಾಗಿ ಶ್ರಮೆ
ಪಟ್ಟು, ದೇವರ ವಿಷಯವಾದ ಮನಸಾಕ್ಷಿಗೋಸ್ಕರ ದುಃಖಗಳ
ನ್ನು ಸಹಿಸಿ ಕೊಂಡರೆ, ಇದೇ ಸ್ತೋತ್ರಕ್ಕೆ ಯೋಗ್ಯವಾಗಿದೆ.
೨೦ ಹ್ಯಾಗಂದರೆ ನೀವು ಪಾಪ ಮಾಡಿ ಗುದ್ದಲ್ಪಡುವಾಗ, ತಾಳಿ ಕೊಂ
ಡರೆ, ಕೀರ್ತಿ ಏನು? ಆದರೆ ಒಳ್ಳೇದನ್ನು ಮಾಡಿ ಶ್ರಮೆ ಪಡು
ವಾಗ, ತಾಳಿ ಕೊಳ್ಳುವದು ದೇವರ ಮುಂದೆ ಸ್ತೋತ್ರಕ್ಕೆ ಯೋ
೨೧ ಗ್ಯವಾಗಿದೆ. ಯಾಕಂದರೆ ಇದಕ್ಕೋಸ್ಕರ ಕರೆಯಲ್ಪಟ್ಟಿರಿ;
ಕ್ರಿಸ್ತನು ಸಹ ನಿಮಗೋಸ್ಕರ ಶ್ರಮೆ ಪಟ್ಟು, ನೀವು ಅವನ ಹೆ
ಜ್ಜೆಗಳನ್ನು ಹಿಡಿಯುವ ಹಾಗೆ, ನಿಮಗೆ ಮಾದರಿಯನ್ನು ಶೋರಿ
೨೨ ಸಿದ್ದಾನೆ. ಅವನು ಪಾಪ ಮಾಡಲಿಲ್ಲ; ಅವನ ಬಾಯಿಯಲ್ಲಿ ಮೋಸ
೨೩ ವು ಕಾಣಿಸಲಿಲ್ಲ. ಅವನು ಬೈಯಲ್ಪಟ್ಟಾಗ, ಬೈಯಲಿಲ್ಲ;
ಶ್ರಮೆ ಪಟ್ಟಾಗ, ಬೆದರಿಸಲಿಲ್ಲ; ಆದರೆ ನೀತಿಯಾಗಿ ನ್ಯಾಯ
೨೪ ತೀರಿಸುವವನಿಗೆ ಕಾರ್ಯವನ್ನು ಒಪ್ಪಿಸಿದನು. ನಾವು ಪಾಪಗ
ಳಿಗೆ ಸತ್ತು, ನೀತಿಗೆ ಬದುಕುವ ಹಾಗೆ, ಅವನು ತಾನೇ ನಮ್ಮ ಪಾ
ಪಗಳನ್ನು ತನ್ನ ಶರೀರದಲ್ಲಿ ಮರದ ಮೇಲೆ ಹೊತ್ತು ಕೊಂಡ
೨೫ ನು. ಅವನ ಪೆಟ್ಟುಗಳಿಂದ ವಾಸಿಯಾದಿರಿ. ಹ್ಯಾಗಂದರೆ, ತಪ್ಪಿ
ಹೋದ ಕುರಿಗಳ ಹಾಗಿದ್ದಿರಿ; ಆದರೆ ಈಗ ನಿಮ್ಮ ಪ್ರಾಣಗಳ
ಕುರುಬನೂ ಅಧ್ಯಕ್ಷನೂ ಆಗಿರುವವನ ಕಡೆಗೆ ತಿರುಗಿ ಕೊಂಡಿ
ದ್ದೀರಿ.

### ೩. ಸಂಧಿ.

೧ ಅದೇ ಪ್ರಕಾರ, ಹೆಂಗಸರೇ, ಸ್ವಂತ ಗಂಡಂದಿರಿಗೆ ಒಳಗಾಗಿರಿ.
೨ ಕೆಲವರು ವಾಕ್ಯಕ್ಕೆ ವಿಧೇಯರಾಗದಿದ್ದರೂ, ನೀವು ಭಯಸ್ಥರಾ
ಗಿಯೂ ನಿರ್ಮಲರಾಗಿಯೂ ನಡೆದು ಕೊಳ್ಳುವದನ್ನು ನೋ
ಡಿ, ಹೆಂಡತಿಯರ ನಡತೆಯಿಂದ ವಾಕ್ಯವಿಲ್ಲದೆ ಸಂಪಾದಿಸಲ್ಪಡು
೩ ವ ಹಾಗೆ, ಒಳಗಾಗಿರಿ. ಕೂದಲು ಹೆಣೆಯುವದೂ, ಚಿನ್ನದ ಒ
ಡವೆಗಳನ್ನು ಇಟ್ಟು ಕೊಳ್ಳುವದೂ, ವಸ್ತ್ರಗಳನ್ನು ಧರಿಸಿ ಕೊ
೪ ಳ್ಳುವದೂ, ಈ ಹೊರಗಿನ ಅಲಂಕಾರವು ಬೇಡ, ಶಾಂತಿಯೂ ಸ
ಮಾಧಾನವೂ ಉಳ್ಳ ಆತ್ಮದ ನಿರ್ಲಯವಾದದರಲ್ಲಿರುವ ಹೃ
ದಯದ ಅಂತರಂಗವಾದ ಮನುಷ್ಯನು ನಿಮಗೆ ಇರ ಬೇಕು.
೫ ಅದೇ ದೇವರ ಮುಂದೆ ಬಹು ಬೆಲೆಯುಳ್ಳದ್ದಾಗಿದೆ. ಯಾಕಂದ
ರೆ ಪೂರ್ವದಲ್ಲಿ ದೇವರ ಮೇಲೆ ನಂಬಿಕೆ ಇಟ್ಟು ಪರಿಶುದ್ಧ ಹೆಂಗ
ಸರು ಸಹ, ಸ್ವಂತ ಗಂಡಂದಿರಿಗೆ ಒಳಗಾಗಿದ್ದು, ತಮ್ಮನ್ನು ಅದೇ
೬ ಮೇರೆಗೆ ಅಲಂಕರಿಸಿ ಕೊಂಡರು. ಹಾಗೆಯೇ ಸಾರಳು ಅಬ್ರಹಾ
ಮನನ್ನು ಯಜಮಾನನೆಂದು ಕರೆದು, ಅವನಿಗೆ ವಿಧೇಯಳಾಗಿ
ದ್ದಳು. ನೀವು ಒಳ್ಳೇದನ್ನು ಮಾಡಿ, ಯಾವ ದಿಗಿಲಿಗಾದರೂ
ಅಂಜದೆ ಇದ್ದರೆ, ಅವಳ ಮಕ್ಕಳಾಗಿದ್ದೀರಿ.
೭ ಅದೇ ಪ್ರಕಾರ, ಗಂಡಸರೇ, ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿ
ಆಗದ ಹಾಗೆ, ಜೀವದ ಕೃಪೆಗೆ ಸಮ ಬಾಧ್ಯಸ್ಥರಾಗಿ, ಜ್ಞಾನದ
ಪ್ರಕಾರ ಅವಳ ಸಂಗಡ ಬಗಶನ ಮಾಡಿ, ಬಲಹೀನ ಪಾತ್ರೆಗೆಂದು
ಹೆಂಗಸಿಗೆ ಮಾನ ಸಲ್ಲಿಸಿರಿ.
೮ ಕಡೆಯಲ್ಲಿ, ಎಲ್ಲರು ಏಕ ಮನಸ್ಸು, ಸಮಾನಾನುಭವವೂ, ಸ
ಹೋದರ ಸ್ನೇಹವೂ, ಅಂತ್ಯಕರುಣಾವೂ, ಸುಹೃದಯವೂ,
೯ ಉಳ್ಳವರಾಗಿ, ಕೇಡಿಗೆ ಕೇಡನ್ನೂ, ನಿಂದೆಗೆ ನಿಂದೆಯನ್ನೂ, ಮಾ
ಡದೆ, ಅದಕ್ಕೆ ಬದಲಾಗಿ ಆಶೀರ್ವದಿಸುವವರಾಗಿರಿ. ಆಶೀರ್ವಾ
ದಕ್ಕೆ ಬಾಧ್ಯಸ್ಥರಾಗುವ ಹಾಗೆಯೇ ಕರೆಯಲ್ಪಟ್ಟಿರೆಂದು, ತಿಳಿ
೧೦ ಯುತ್ತೀರಲ್ಲ? ಯಾಕಂದರೆ ಜೀವವನ್ನು ಪ್ರೀತಿ ಮಾಡಿ, ಒಳ್ಳೇ
ದಿವಸಗಳನ್ನು ನೋಡ ಬೇಕೆಂದಿರುವವನು ತನ್ನ ನಾಲಿಗೆಯನ್ನು
ಕೇಡಾಡದ ಹಾಗೆಯೂ, ತನ್ನ ತುಟಿಗಳನ್ನು ಮೋಸ ಮಾತಾಡ

೧೧ ದ ಹಾಗೆಯೂ ನಿಲ್ಲಿಸಿ, ಕೆಟ್ಟದ್ದರಿಂದ ತೊಲಗಿ ಹೋಗಿ, ಒಳ್ಳೇ
ದನ್ನು ಮಾತಲಿ; ಸಮಾಧಾನವನ್ನು ಹುಡುಕಿ, ಅದನ್ನು ಹಿಂದ
೧೨ ಟ್ಟಲಿ. ಯಾಕಂದರೆ ಕರ್ತನ ಕಣ್ಣುಗಳು ನೀತಿವಂತರ ಮೇಲೆ
ಯೂ, ಅವನ ಕಿವಿಗಳು ಅವರ ಪ್ರಾರ್ಥನೆಯ ಕಡೆಗೂ, ಇರು
ತ್ತವೆ; ಆದರೆ ಕರ್ತನ ಮುಖವು ಕೆಟ್ಟದ್ದನ್ನು ಮಾಡುವವರಿಗೆ
ವಿರೋಧವಾಗಿದೆ.

೧೩ ಮತ್ತು ಒಳ್ಳೇದನ್ನು ಅನುಸರಿಸುವವರಾದರೆ, ನಿಮಗೆ ಕೇ
೧೪ ಡು ಮಾಡುವವನ್ಯಾರು? ಆದರೆ ನೀತಿಗೋಸ್ಕರ ಶ್ರಮೆ ಪಟ್ಟಿ
ರೂ, ಭಾಗ್ಯವಂತರೇ—ಅವರ ಭಯಕ್ಕೆ ಅಂಜದೆ, ಕಳವಳ ಪಡ
೧೫ ದೆ, ಕರ್ತನಾದ ದೇವರನ್ನು ನಿಮ್ಮ ಹೃದಯಗಳಲ್ಲಿ ಪರಿಶುದ್ಧ
ಮಾಡಿ, ನಿಮ್ಮಲ್ಲಿರುವ ನಿರೀಕ್ಷೆಯ ಕಾರಣವನ್ನು ನಿಮ್ಮನ್ನು ಕೇ
ಳುವವರೆಲ್ಲರಿಗೆ ಯಾವಾಗಲೂ ಸಾತ್ವಿಕತ್ವದಿಂದಲೂ ಭಯದಿಂ
೧೬ ದಲೂ ಪ್ರತ್ಯುತ್ತರ ಕೊಡುವದಕ್ಕೆ ಸಿದ್ಧವಾಗಿರ್ರಿ. ಕ್ರಿಸ್ತವಲ್ಲಿರುವ
ನಿಮ್ಮ ಒಳ್ಳೇ ನಡತೆಗೆ ಕ್ಷುದ್ರ ಮಾಡುವವರು, ನೀವು ಅಕ್ರಮಕಾ
ರರೆಂದು, ನಿಂದಿಸುವದರಲ್ಲಿ ನಾಚಿಕೆ ಪಡುವ ಹಾಗೆ, ನಿಮಗೆ ಒಳ್ಳೇ
ಮನಸಾಕ್ಷಿ ಇರಲಿ.

೧೭ ಯಾಕಂದರೆ, ನೀವು ಕೆಟ್ಟದ್ದನ್ನು ಮಾಡುವವರಾಗಿ ಶ್ರಮೆ
ಪಡುವದಕ್ಕಿಂತ, ಒಳ್ಳೇದನ್ನು ಮಾಡುವವರಾಗಿ, ದೇವರ ಚಿತ್ತ
೧೮ ಕ್ಕೆ ಬೇಕಾದರೆ, ಶ್ರಮೆ ಪಡುವದು ವಾಸಿ. ಯಾಕಂದರೆ ಕ್ರಿಸ್ತನು
ಸಹ, ನಮ್ಮನ್ನು ದೇವರ ಸಮಿಪಕ್ಕೆ ಸೇರಿಸುವ ಹಾಗೆ, ನೀತಿವಂ
ತನಾಗಿದ್ದು, ಅನೀತಿವಂತರಿಗೋಸ್ಕರ ಪಾಪಗಳ ನಿಮಿತ್ತ ಬಂದು
ಸಾರಿ ಶ್ರಮೆ ಪಟ್ಟು, ಮಾಂಸದಲ್ಲಿ ಕೊಲ್ಲಲ್ಪಟ್ಟು, ಆತ್ಮದಿಂದ ಬ
೧೯ ದುಕಿಸಲ್ಪಟ್ಟನು. ಅದರಿಂದಲೇ ಅವನು ಹೋಗಿ, ಸೋಹನ ದಿವ
೨೦ ಸಗಳಲ್ಲಿ, ನಾವೆ ಕಟ್ಟುತ್ತಿರುವಾಗ, ದೇವರ ದೀರ್ಘಶಾಂತಿಯು
ಒಂದು ಸಾರಿ ಕಾದು ಕೊಂಡಿರುವಾಗ, ಮುಂಚೆ ಅವಿಧೇಯರಾ
ಗಿದ್ದಂಥ, ಶಕೆಯಲ್ಲಿರುವಂಥ, ಆತ್ಮಗಳಿಗೆ ಸಾರಿದನು. ಆ ನಾವೆ
ಯಲ್ಲಿ ಸ್ವಲ್ಪ—ಅಂದರೆ, ಎಂಟು—ಮಂದಿ ನೀರಲ್ಲಿಂದ ರಕ್ಷಿಸಲ್ಪ
೨೧ ಟ್ಟರು. ಇದಕ್ಕೆ ಪ್ರತಿ ಗುರುತಾಗಿ, ಮಾಂಸದ ಮೈಲಿಗೆಯನ್ನು ತೆ
ಗೆದು ಹಾಕುವಂಥಾದ್ದಲ್ಲ, ಒಳ್ಳೇ ಮನಸಾಕ್ಷಿಯಿಂದ ದೇವರಿಗೆ
ಮಾಡುವ ಬಿನ್ನಹವೇ, ಆಗಿರುವ ಸ್ನಾನವು ಈಗ ನಮ್ಮನ್ನು
೨೨ ಯೇಸು ಕ್ರಿಸ್ತನ ಪುನರುತ್ಥಾನದ ಮೂಲವಾಗಿ ರಕ್ಷಿಸುತ್ತದೆ. ಅ
ವನು ಪರಲೋಕಕ್ಕೆ ಹೋಗಿ, ದೇವರ ಬಲಪಾರ್ಶ್ವದಲ್ಲಿದ್ದಾನೆ.
ದೂತರೂ ಅಧಿಕಾರಗಳೂ ಬಲಗಳೂ ಅವನಿಗೆ ಒಳಗಾಗಿದ್ದಾರೆ.

## ೪. ಸಂಧಿ.

೧ ಹಾಗಾದರೆ ಕ್ರಿಸ್ತನು ನಮಗೋಸ್ಕರ ಮಾಂಸದಲ್ಲಿ ಶ್ರಮೆ ಪ
ಟ್ಟದರಿಂದ, ನೀವು ಸಹ ಅದೇ ಬುದ್ಧಿಯನ್ನು ಆಯುಧವಾಗಿ ಧ
೨ ರಿಸಿ ಕೊಳ್ಳಿರಿ. ಯಾಕಂದರೆ ಮಾಂಸದಲ್ಲಿ ಶ್ರಮೆ ಪಟ್ಟವನು ಇ
ನ್ನು ಮೇಲೆ ಮಾಂಸದಲ್ಲಿ ಉಳಿದಿರುವ ಕಾಲ ಮನುಷ್ಯರ ಆಶೆ
ಗಳಿಗಲ್ಲ, ದೇವರ ಚಿತ್ತಕ್ಕೆ ಬದುಕುವ ಹಾಗೆ, ಪಾಪವನ್ನು ಬಿಟ್ಟು,
3 ವಿಶ್ರಮಿಸಿ ಕೊಂಡಿದ್ದಾನೆ. ಯಾಕಂದರೆ ಬಂಡುತನ ಆಶೆ ಅಮ
ಲ ದುಂದೌತನ ಮಧ್ಯಪಾನಗಳಲ್ಲಿಯೂ, ಅಸಹ್ಯವಾದ ವಿಗ್ರ
ಹಾರಾಧನೆಗಳಲ್ಲಿಯೂ, ನಡೆದು, ಜನಾಂಗಗಳ ಚಿತ್ತವನ್ನು ಮಾ
೪ ಡಿದ್ದರಲ್ಲಿ ಗತಿಸಿ ಹೋದ ಜೀವದ ಕಾಲವು ನಮಗೆ ಸಾಕು. ಅದೇ
ಹೊಟ್ಟೆಬಾಕತನದ ಗಲಿಬಿಲಿಗೆ ನೀವು ಅವರ ಕೂಡ ಓಡುವದಿಲ್ಲ
೫ ವೆಂದು, ಆಶ್ಚರ್ಯ ಪಟ್ಟು ದೂಷಿಸುತ್ತಾರೆ. ಅವರು ಬದುಕುವ
ವರಿಗೂ ಸತ್ತವರಿಗೂ ನ್ಯಾಯ ತೀರಿಸ ಸಿದ್ಧವಾಗಿರುವವನಿಗೆ ಲೆ
೬ ಖ್ಖ ಬಿಪ್ಪಿಸುವರು. ಯಾಕಂದರೆ ಇದಕ್ಕೋಸ್ಕರವೇ, ಅವರು
ಮನುಷ್ಯರ ವಿಷಯವಾಗಿ ಮಾಂಸದಲ್ಲಿ ನ್ಯಾಯ ತೀರ್ವಿಕೆ
ಯನ್ನು ಹೊಂದಿ, ದೇವರ ವಿಷಯವಾಗಿ ಆತ್ಮದಲ್ಲಿ ಬದುಕುವ
ಹಾಗೆ, ಸತ್ತವರಿಗೂ ಸುವಾರ್ತೆ ಪ್ರಸಂಗಿಸಲ್ಪಟ್ಟಿತು.

೭ ಆದರೆ ಎಲ್ಲಾದರ ಅಂತ್ಯವು ಸಮಿಪಿಸಿತು; ಆದಕಾರಣ ಸ್ವ
ಸ್ಥ ಚಿತ್ತವಾಗಿ ಪ್ರಾರ್ಥನೆಗಳನ್ನು ಮಾಡುವದಕ್ಕೆ ಎಚ್ಚರಿಕೆ
೮ ಯಾಗಿರ್ರಿ. ಎಲ್ಲಾದರ ಮೊದಲು ಒಬ್ಬರಲ್ಲೊಬ್ಬರು ದೃಢ ಪ್ರೀ
ತಿ ಇದಿರಿ; ಯಾಕಂದರೆ ಪ್ರೀತಿಯು ಪಾಪಗಳ ಸಮೂಹವನ್ನು
೯ ಅಡಗಿಸುವದು. ಗುಣಗುಟ್ಟದೆ, ಒಬ್ಬರಿಗೊಬ್ಬರು ಆತಿಥ್ಯ ಮಾ
೧೦ ಡಿರಿ. ಬಹ್ಯೊಬ್ಬನು ಕೃಪೆಯ ವರವನ್ನು ಹೊಂದಿದ ಪ್ರಕಾರ
ವೇ ದೇವರ ನಾನಾ ವಿಧವಾದ ಕೃಪೆಯ ಒಳ್ಳೇ ಉಗ್ರಾಣಿಕರಾಗಿ
೧೧ ಒಬ್ಬರನ್ನೊಬ್ಬರು ಸೇವಿಸಿರಿ. ಒಬ್ಬನು ಮಾತಾಡಿದರೆ, ದೇವರ
ವಾಕ್ಯಗಳ ಪ್ರಕಾರವೇ; ಒಬ್ಬನು ಸೇವಿಸಿದರೆ, ದೇವರು ತಂದು
ಕೊಡುವ ಶಕ್ತಿಯಿಂದಾದ ಹಾಗೆ ಸೇವಿಸಲಿ; ಎಲ್ಲವುಗಳಲ್ಲಿ ದೇವರು
ಯೇಸು ಕ್ರಿಸ್ತನ ಮುಖಾಂತರ ಮಹಿಮೆ ಪಡುವ ಹಾಗೆಯೇ. ಇ
ವನಿಗೆ ಯುಗಯುಗಾಂತರಗಳ ವರೆಗೂ ಮಹಿಮೆಯೂ ತ್ರಾಣ
ವೂ ಆಗಲಿ, ಆಮೆನ್.

೧೨ ಪ್ರಿಯರೇ, ಅಪರೂಪವಾದದ್ದು ನಿಮಗೆ ಸಂಭವಿಸಿತೆಂದು,
ಶೋಧನೆಗೋಸ್ಕರ ನಿಮಗೆ ಉಂಟಾದ, ನಿಮ್ಮಲ್ಲಿರುವ ತಾಪಕ್ಕೆ,
೧೩ ಆಶ್ಚರ್ಯ ಪಡ ಬೇಡಿರಿ. ಆದರೆ ಅವನ ಮಹಿಮೆಯ ಪ್ರತ್ಯಕ್ಷ
ತೆಯಲ್ಲಿ ಉಲ್ಲಾಸದಿಂದ ಸಂತೋಷಿಸುವ ಹಾಗೆ, ಕ್ರಿಸ್ತನ ಶ್ರಮೆ
೧೪ ಗಳಲ್ಲಿ ಪಾಲು ಹೊಂದುವದರಿಂದ ಸಂತೋಷಿಸಿರಿ. ನೀವು ಕ್ರಿಸ್ತ
ನ ಹೆಸರಿನಲ್ಲಿ ನಿಂದಿಸಲ್ಪಟ್ಟಿರೆ, ಭಾಗ್ಯವಂತರೇ; ಯಾಕಂದರೆ
ಮಹಿಮೆಯ ಆತ್ಮವಾದ ದೇವರ ಆತ್ಮವು ನಿಮ್ಮಲ್ಲಿ ವಿಶ್ರಮಿಸಿ
ಕೊಳ್ಳುತ್ತದೆ; ಅವರಲ್ಲಿ ದೂಷಿಸಲ್ಪಡುತ್ತಾನೆ, ಆದರೆ ನಿಮ್ಮಲ್ಲಿ
೧೫ ಮಹಿಮೆ ಪಡುತ್ತಾನೆ. ನಿಮ್ಮಲ್ಲಿ ಯಾವನಾದರೂ, ಕೊಲೆಗಾರ
ನೂ, ಕಳ್ಳನೂ, ಅಕ್ರಮಕಾರನೂ, ಹಿರಿತನದವನೂ ಆಗಿ ಶ್ರಮೆ ಪ
೧೬ ಡದಿರಲಿ. ಆದರೆ ಕ್ರಿಸ್ತ್ಯನಾಗಿ ಶ್ರಮೆ ಪಟ್ಟರೆ, ಆ ಪಕ್ಷದಲ್ಲಿ ನಾ
೧೭ ಚಿಕೆ ಪಡಬೇಡ, ದೇವರನ್ನು ಮಹಿಮೆ ಪಡಿಸಲಿ. ಯಾಕಂದರೆ ದೇ
ವರ ಮನೆಯಿಂದ ನ್ಯಾಯತೀರ್ವಿಕೆಯು ಆರಂಭವಾಗುವ ಸ
ಮಯವಾಯಿತು. ಅದು ನಮ್ಮಿಂದ ಆರಂಭವಾದರೆ, ದೇವರ
ಸುವಾರ್ತೆಗೆ ವಿಧೇಯವಾಗದವರ ಅಂತ್ಯವು ಏನಾಗಿರುವದು?
೧೮ ಮತ್ತು ನೀತಿವಂತನು ರಕ್ಷಿಸಲ್ಪಡುವದು ಕಷ್ಟವಾದರೆ, ಭಕ್ತಿಹೀನ
೧೯ ನಾದ ಪಾಪಿಷ್ಠನು ಎಲ್ಲಿ ನಿಲ್ಲುವನು? ಹೀಗಿರುವದರಿಂದ ದೇವರ
ಚಿತ್ತಾನುಸಾರವಾಗಿ ಶ್ರಮೆ ಪಡುವವರು ಒಳ್ಳೇದನ್ನು ಮಾಡಿ,
ನಂಬಿಕೆಯುಳ್ಳ ಸೃಷ್ಟಿ ಕರ್ತನಿಗೆಂದು ತಮ್ಮ ಪ್ರಾಣಗಳನ್ನು
ಒಪ್ಪಿಸಲಿ.

## ೫. ಸಂಧಿ.

೧ ನಿಮ್ಮಲ್ಲಿರುವ ಹಿರಿಯರಿಗೆ, ಜತೆಹಿರಿಯನೂ, ಕ್ರಿಸ್ತನ ಶ್ರಮೆಗ
ಳ ಸಾಕ್ಷಿಯೂ, ಪ್ರತ್ಯಕ್ಷವಾಗುವದಕ್ಕಿರುವ ಮಹಿಮೆಯ ಪಾ
೨ ಲುಗಾರನೂ, ಆಗಿರುವ ನಾನು ಬುದ್ಧಿ ಹೇಳುವದೇನಂದರೆ—ನಿಮ್ಮ
ಲ್ಲಿರುವ ದೇವರ ಮಂದೆಯನ್ನು ಬಲಾತ್ಕಾರದಿಂದಲ್ಲ, ಮನಸ್ಸಾ



3 ಗಿಯೇ, ನೀಚ ಲಾಭಕ್ಕೋಸ್ಕರವಲ್ಲ, ಉಚಿತವಾಗಿಯೇ, ಜಾ
ಗ್ರತೆಯ ಮೇಲೆ ದೊರೆತನ ಮಾಡುವವರಾಗಿ ಅಲ್ಲ, ಮಂದೆಗೆ
೪ ಮಾದರಿಗಳಾಗಿಯೇ, ನೋಡಿ ಮೇಯಿಸಿರಿ. ಆಗ ಹಿರೇ ಕುರು
ಬನು ಪ್ರತ್ಯಕ್ಷವಾಗುವಾಗ್ಯೆ, ಮಹಿಮೆಯ ನಿರ್ಲಯವಾದ ಕಿರೀ
ಟವನ್ನು ಹೊಂದುವಿರಿ.

೫ ಅದೇ ಪ್ರಕಾರ, ಚಿಕ್ಕವರೇ, ಹಿರಿಯರಿಗೆ ಒಳಗಾಗಿರಿ. ನೀವೆ
ಲ್ಲರು ಒಬ್ಬರಿಗೊಬ್ಬರು ಒಳಗಾಗಿದ್ದು, ಮನೋದೀನತ್ವವನ್ನು
ಧರಿಸಿ ಕೊಳ್ಳಿರಿ. ಯಾಕಂದರೆ ದೇವರು ಗರ್ವಿಷ್ಠರನ್ನು ಎದು
೬ ರಿಸಿ, ದೀನರಿಗೆ ಕೃಪೆಯನ್ನು ಕೊಡುತ್ತಾನೆ. ಹೀಗಿರುವದರಿಂದ
ದೇವರು ತಕ್ಕ ಕಾಲದಲ್ಲಿ ನಿಮ್ಮನ್ನು ಹೆಚ್ಚಿಸುವ ಹಾಗೆ, ಅವನ
೭ ತ್ರಾಣವಾದ ಕೈ ಕೆಳಗೆ ನಿಮ್ಮನ್ನು ತಗ್ಗಿಸಿ ಕೊಳ್ಳಿರಿ. ನಿಮ್ಮ
ಚಿಂತೆಯನ್ನೆಲ್ಲಾ ಅವನ ಮೇಲೆ ಹಾಕಿರಿ; ಯಾಕಂದರೆ ಅವನು
ನಿಮಗೋಸ್ಕರ ಚಿಂತಿಸುತ್ತಾನೆ.

೮ ಮಿತಿಯಾಗಿರ್ರಿ; ಎಚ್ಚರಿಕೆಯಾಗಿರ್ರಿ; ಯಾಕಂದರೆ ನಿಮ್ಮ ವಿ
ರೋಧಿಯಾದ ಪಿಶಾಚನು ಗರ್ಜಿಸುವ ಸಿಂಹದ ಹಾಗೆ, ಯಾ
ರನ್ನು ನುಂಗಿ ಬಿಡಲೆಂದು ಹುಡುಕುತ್ತಾ, ತಿರುಗುತ್ತಾನೆ. ವಿಶ್ವಾ
೯ ಸದಲ್ಲಿ ದೃಢವಾಗಿದ್ದು, ಅವನನ್ನು ಎದುರಿಸಿರಿ. ಲೋಕದಲ್ಲಿರು
ವ ನಿಮ್ಮ ಸಹೋದರರ ಕೂಟದಲ್ಲಿ ಅದೇ ಶ್ರಮೆಗಳು ಪೂರ್ಣ
ವಾಗುತ್ತವೆಂದು ತಿಳಿಯುತ್ತೀರಲ್ಲ?

೧೦ ಆದರೆ ಕ್ರಿಸ್ತ ಯೇಸುವಿನಲ್ಲಿರುವ ತನ್ನ ನಿತ್ಯ ಮಹಿಮೆ
ಗೆ ನಮ್ಮನ್ನು ಕರೆದ ಸರ್ವ ಕೃಪೆಯುಳ್ಳ ದೇವರು ತಾನೇ
ಸ್ವಲ್ಪ ಕಾಲ ಶ್ರಮೆ ಪಟ್ಟು ನಿಮ್ಮನ್ನು ಸಂಪೂರ್ಣ ಮಾಡಿ, ಸ್ಥಿ
೧೧ ರ ಪಡಿಸಿ, ಬಲ ಪಡಿಸಿ, ನೆಲೆಗೊಳಿಸಲಿ. ಅವನಿಗೆ ಯುಗ ಯು
ಗಾಂತರಗಳ ವರೆಗೂ ಮಹಿಮೆಯೂ ತ್ರಾಣವೂ ಆಗಲಿ. ಆ
ಮೆನ್.

೧೨ ನಿಮಗೆ ನಂಬಿಕೆಯುಳ್ಳ ಸಹೋದರನೆಂದು ನಾನು ನೆನಸಿ
ಕೊಳ್ಳುವ ಸಿಲ್ವಾನನ ಸಂಗಡ ಸ್ವಲ್ಪವಾಗಿ ಬರೆದು, ನೀವು ನಿಂ
ತಿರುವ ದೇವರ ಸತ್ಯವಾದ ಕೃಪೆಯು ಇದೇ ಎಂದು ನಿಮಗೆ
೧೩ ಬುದ್ಧಿ ಹೇಳಿ, ಸಾಕ್ಷಿ ಕೊಟ್ಟಿದ್ದೇನೆ. ಬಾಬೆಲಿನಲ್ಲಿ ನಿಮ್ಮ ಕೂಡ
ಆಯಲ್ಪಟ್ಟ ಸಭೆಯೂ, ನನ್ನ ಮಗನಾದ ಮಾರ್ಕನೂ, ನಿ
ಮ್ಮನ್ನು ವಂದಿಸುತ್ತಾರೆ. ಪರಿಶುದ್ಧ ಮುದ್ದಿನಿಂದ ಒಬ್ಬರನ್ನೊ
ಬ್ಬರು ವಂದಿಸಿರಿ.

೧೪ ಕ್ರಿಸ್ತ ಯೇಸುವಿನಲ್ಲಿರುವ ನಿಮ್ಮೆಲ್ಲರಿಗೆ ಸಮಾಧಾನವು ಆಗಲಿ.
ಆಮೆನ್.

# THE SECOND EPISTLE OF PETER.

## ಪೇತ್ರನ ಎರಡನೇ ಪತ್ರಿಕೆ.

## ೧. ಸಂಧಿ.

೧ ಯೇಸು ಕ್ರಿಸ್ತನ ದಾಸನೂ, ಅಪೊಸ್ತಲನೂ, ಆಗಿರುವ ಸಿ
ಮೆಯೋನ್ ಪೇತ್ರನು, ನಮ್ಮ ದೇವರೂ ರಕ್ಷಕನೂ ಆಗಿರುವ
ಯೇಸು ಕ್ರಿಸ್ತನ ನೀತಿಯಿಂದ ನಮ್ಮ ಕೂಡ ಸಮ ಬೆಲೆಯುಳ್ಳ
೨ ವಿಶ್ವಾಸವನ್ನು ಹೊಂದಿದವರಿಗೆ—ದೇವರೂ, ನಮ್ಮ ಕರ್ತನಾದ
ಯೇಸೂ, ಇವರ ತಿಳುವಿಕೆಯಿಂದ ಕೃಪೆಯೂ ಸಮಾಧಾನ
ವೂ ನಿಮಗೆ ಹೆಚ್ಚಲಿ.

3 ಮಹಿಮೆ ಸದ್ಗುಣಗಳಿಂದ ನಮ್ಮನ್ನು ಕರೆದವನ ತಿಳುವಿಕೆಯ
ಮೂಲಕವಾಗಿ ಜೀವಕ್ಕೂ ಭಕ್ತಿಗೂ ಸಂಬಂಧವಾದವುಗಳೆಲ್ಲಿನ್ನಿ
ಅವನ ದಿವ್ಯ ಬಲವು ನಮಗೆ ಕೊಟ್ಟ ಪ್ರಕಾರ ಆ ಮಹಿಮೆ ಸ
೪ ದ್ಗುಣಗಳಿಂದ ಬಹು ದೊಡ್ಡವುಗಳಾದ ಅಮೂಲ್ಯವಾದ ವಾಗ್ದ
ತ್ತಗಳು, ಇವುಗಳ ಮುಖಾಂತರ, ನೀವು ಆಶೆಯಿಂದ ಲೋಕದ
ಲ್ಲಿರುವ ನಷ್ಟವನ್ನು ತಪ್ಪಿಸಿ ಕೊಂಡವರಾಗಿ, ದಿವ್ಯ ಸ್ವಭಾವದ
೫ ಲ್ಲಿ ಪಾಲುಗಾರರಾಗುವ ಹಾಗೆ, ನಮಗೆ ಕೊಡಲ್ಪಟ್ಟಿವೆ. ಇದ
ಕ್ಕೋಸ್ಕರ ಎಲ್ಲಾ ಜಾಗ್ರತೆಯನ್ನು ಮಾಡಿ ಕೊಂಡು, ನಿಮ್ಮ ವಿ
ಶ್ವಾಸಕ್ಕೆ ಸದ್ಗುಣವನ್ನೂ, ಸದ್ಗುಣಕ್ಕೆ ತಿಳುವಿಕೆಯನ್ನೂ, ತಿ
ಳುವಿಕೆಗೆ ಮಿತಾನುಭವವನ್ನೂ, ಮಿತಾನುಭವಕ್ಕೆ ತಾಳ್ಮೆಯನ್ನೂ,
೬ ತಾಳ್ಮೆಗೆ ಭಕ್ತಿಯನ್ನೂ, ಭಕ್ತಿಗೆ ಸಹೋದರ ಸ್ನೇಹವನ್ನೂ, ಸ
ಹೋದರ ಸ್ನೇಹಕ್ಕೆ ಪ್ರೀತಿಯನ್ನೂ, ಕೂಡಿಸಿರಿ. ಯಾಕಂದರೆ
ಇವುಗಳು ನಿಮಗೆ ಉಂಟಾಗಿ, ಹೆಚ್ಚಿದರೆ, ಅವು ನಿಮ್ಮನ್ನು ನಮ್ಮ
೭ ಕರ್ತನಾದ ಯೇಸು ಕ್ರಿಸ್ತನ ತಿಳುವಿಕೆಯಲ್ಲಿ ಮೈಗಳ್ಳರೂ ನಿ
ಷ್ಪ್ರಯೋಜಕರೂ ಅಲ್ಲದ ಹಾಗೆ, ಮಾಡುವವು. ಯಾಕಂದರೆ
ಇವುಗಳಿಲ್ಲದವನು ಕುರುಡನೂ, ಮೊಬ್ಬುಗಣ್ಣನೂ, ತನ್ನ ಮುಂ
ಚಿನ ಪಾಪಗಳ ಶುದ್ಧೀಕರಣವನ್ನು ಮರೆತವನೂ, ಆಗಿದ್ದಾನೆ.
೮ ಅದರಿಂದ, ಸಹೋದರರೇ, ನಿಮ್ಮ ಕರೆಯುವಿಕೆಯನ್ನೂ ಆ
ಯುವಿಕೆಯನ್ನೂ ಸ್ಥಿರ ಮಾಡುವ ಹಾಗೆ, ಹೆಚ್ಚಾಗಿ ಜಾಗ್ರತೆಯಾ
ಗಿರ್ರಿ. ಯಾಕಂದರೆ ಇವುಗಳನ್ನು ಮಾತಾಡಿದರೆ, ಎಂದಿಗೂ ಎಡವದೆ
೯ ಇರುವಿರಿ. ಯಾಕಂದರೆ ಹೀಗೆಯೇ ನಮ್ಮ ಕರ್ತನೂ ರಕ್ಷಕನೂ
ಆಗಿರುವ ಯೇಸು ಕ್ರಿಸ್ತನ ನಿತ್ಯ ರಾಜ್ಯದಲ್ಲಿ ನಿಮಗೆ ಪ್ರವೇಶವು
ಐಶ್ವರ್ಯವಾಗಿ ಕೊಡಲ್ಪಡುವದು.

೧೦ ಆದದರಿಂದ ನೀವು ತಿಳಿದವರಾಗಿ, ಈಗಿನ ಸತ್ಯದಲ್ಲಿ ಸ್ಥಿರ
ವಾಗಿದ್ದರೂ, ಇವುಗಳನ್ನು ಯಾವಾಗಲೂ ನಿಮಗೆ ಜ್ಞಾಪಕ ಮಾ
೧೧ ಡುವದರಲ್ಲಿ ಅಜಾಗ್ರತೆಯಾಗಿರೆನು. ಆದರೆ ನಾನು, ಈ ಗುಡಾರ
ದಲ್ಲಿರುವ ಮಟ್ಟಿಗೂ, ನಿಮಗೆ ಜ್ಞಾಪಕ ಮಾಡಿ ಎಚ್ಚರಿಸುವದು
ತಕ್ಕದ್ದೆಂದು, ಎಣಿಸುತ್ತೇನೆ. ಹ್ಯಾಗಂದರೆ, ನಮ್ಮ ಕರ್ತನಾದ
೧೪ ಯೇಸು ಕ್ರಿಸ್ತನೂ ನನಗೆ ತೋರಿಸಿದ ಪ್ರಕಾರ, ನನ್ನ ಗುಡಾರ
ವನ್ನು ತೆಗೆದು ಹಾಕುವ ಕಾಲವು ಬೇಗ ಬರುತ್ತದೆಂದು ಬಲ್ಲೆನು.
ನಮ್ಮ ಕರ್ತನಾದ ಯೇಸು ಕ್ರಿಸ್ತನು ಸಹ ಅದನ್ನು ನನಗೆ
೧೫ ತೋರಿಸಿದ್ದಾನೆ. ಇದಲ್ಲದೆ ನಾನು ಹೋದ ಮೇಲೆ ನೀವು ಇವು
ಗಳನ್ನು ಯಾವಾಗಲೂ ನೆನಸುವ ಹಾಗೆ, ಜಾಗ್ರತೆಯಾಗಿರುವೆನು.

೧೬ ಯಾಕಂದರೆ ಯುಕ್ತಿಯುಳ್ಳ ಕಟ್ಟು ಕಥೆಗಳನ್ನು ಅನುಸರಿ
ಸುವವರಾಗಿರದೆ, ಅವನ ಮಹತ್ತಿಗೆ ಕಣ್ಣು ಸಾಕ್ಷಿಗಳಾಗಿದ್ದು,
ನಮ್ಮ ಕರ್ತನಾದ ಯೇಸು ಕ್ರಿಸ್ತನ ಬಲವನ್ನೂ ಬರುವಿಕೆ
೧೭ ಯನ್ನೂ ನಿಮಗೆ ತಿಳಿಸಿದೆವು. ಯಾಕಂದರೆ—ಇವನೇ ನನ್ನ ಪ್ರಿ
ಯ ಮಗನು; ಇವನಲ್ಲಿ ನಾನು ಆನಂದ ಪಡುತ್ತೇನೆ, ಎಂಬುವ
ಶಬ್ದವು ಬಹು ಘನವಾದ ಮಹಿಮೆಯಿಂದ ಅವನಿಗೆ ಬಂದಾಗ,
ತಂದೆಯಾದ ದೇವರಿಂದ ಮಾನವನ್ನೂ ಮಹಿಮೆಯನ್ನೂ
೧೮ ಹೊಂದಿದನು. ಆಕಾಶದಿಂದ ಬಂದ ಆ ಶಬ್ದವನ್ನು ನಾವು, ಪರಿ
೧೯ ಶುದ್ಧ ಪರ್ವತದಲ್ಲಿ ಅವನ ಸಂಗಡ ಇದ್ದಾಗ, ಕೇಳಿದೆವು. ಮತ್ತು

ಹೆಚ್ಚಾಗಿ ಸ್ಥಿರವಾದ ಪ್ರವಾದನೆಯ ವಾಕ್ಯವು ನಮಗೆ ಉಂಟು; ದಿ
ವಸವು ಬೆಳಗುವ ಪರಿಯಂತರಕ್ಕೂ, ಉದಯ ನಕ್ಷತ್ರವು ನಿಮ್ಮು
ಹೃದಯಗಳಲ್ಲಿ ಮೂಡುವ ಪರ್ಯಂತರಕ್ಕೂ, ಇದನ್ನು
ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೇಣಿಸಿ ಲಕ್ಷ್ಯ
೨೦ ಮಾಡಿದರೆ, ಚನ್ನಾಗಿ ಮಾಡುತ್ತೀರಿ. ಯಾಕಂದರೆ ಬರಹದಲ್ಲಿ
ರುವ ಯಾವ ಪ್ರವಾದನೆಯಾದರೂ ಸ್ವಂತ ವ್ಯಾಖ್ಯಾನಕ್ಕೆ ಬ
೨೧ ರುವದಿಲ್ಲವೆಂದು, ಮೊದಲು ತಿಳಿದಿದ್ದೀರಿ. ಯಾಕಂದರೆ ಪ್ರವಾದ
ನೆಯೂ ಎಂದೂ ಮನುಷ್ಯನ ಇಚ್ಛೆಯಿಂದ ಆಗಲಿಲ್ಲ. ಆದರೆ
ದೇವರ ಪರಿಶುದ್ಧ ಮನುಷ್ಯರು, ಪರಿಶುದ್ಧಾತ್ಮದಿಂದ ಪ್ರೇರೇಪಿಸ
ಲ್ಪಟ್ಟು, ಮಾತಾಡಿದರು.

## ೨. ಸಂಧಿ.

೧ ಆದರೆ ಜನರಲ್ಲಿ ಸುಳ್ಳು ಪ್ರವಾದಿಗಳು ಇದ್ದರು; ಅದೇ ಪ್ರಕಾ
ರ ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು. ಅವರು
ನಾಶನಕರವಾದ ಮತಭೇದಗಳನ್ನು ಅಂತರಂಗವಾಗಿ ಬಳಕತಂದು,
ತಮ್ಮನ್ನು ಕೊಂಡು ಕೊಂಡ ಯಜಮಾನನನ್ನು ಬೊಂಕಿ, ತೀವ್ರ
೨ ನಾಶನನನ್ನು ತಮ್ಮ ಮೇಲೆ ಬರ ಮಾಡಿ ಕೊಳ್ಳುವರು. ಅನೇಕರು
ಅವರ ಕೇಡುಗಳನ್ನು ಅನುಸರಿಸುವರು; ಇವರ ಮುಖಾಂತರ
3 ಸತ್ಯದ ಮಾರ್ಗವು ದೂಷಿಸಲ್ಪಡುವದು. ಮತ್ತು ದ್ರವ್ಯಾಶೆ
ಯಾಗಿ ಕಲ್ಪನೆ ಮಾತುಗಳಿಂದ ನಿಮ್ಮನ್ನು ಕ್ರಯ ವಿಕ್ರಯ
ಮಾಡುವರು; ಅವರಿಗೆ ನ್ಯಾಯ ತೀರ್ಪಿಕೆಯು ಪೂರ್ವದಿಂದ
ತಡೆಯುವದಿಲ್ಲ, ಅವರ ನಾಶನವು ತೂಕಡಿಸುವದಿಲ್ಲ.

೪ ಯಾಕಂದರೆ ದೇವರು ಪಾಪ ಮಾಡಿದ ದೂತರನ್ನು ಕನಿಕರಿ
ಸದೆ, ಕತ್ತಲೆಯ ಸಂಕೋಲೆಗಳಿಂದ ನರಕದಲ್ಲಿ ತಳ್ಳಿ, ನ್ಯಾಯ
೫ ತೀರ್ಪಿಕೆಗೆ ಇಡಲ್ಪಟ್ಟವರಾಗಿ ಒಪ್ಪಿಸಿ, ಪೂರ್ವದ ಲೋಕ
ವನ್ನು ಕನಿಕರಿಸದೆ, ಭಕ್ತಿಹೀನರ ಲೋಕಕ್ಕೆ ಜಲಪ್ರಳಯವನ್ನು
ಬರ ಮಾಡಿ, ನೀತಿಯ ಪ್ರಸಂಗಿಯಾದ ನೋಹನು ಮೊದಲಾದ
ವರು ಎಂಟು ಜನರನ್ನು ಕಾಪಾಡಿ, ಮತ್ತು ಸೊಡೋಮ್ ಗಮೋ
೬ ರ ಪಟ್ಟಣಗಳನ್ನು ಬೂದಿ ಮಾಡಿ, ನಾಶನದಿಂದ ನ್ಯಾಯ ತೀರಿಸಿ,
ಇನ್ನು ಮೇಲೆ ಭಕ್ತಿಹೀನರಾಗುವವರಿಗೆ ಮಾದರಿ ಇಟ್ಟು, ನೀತಿ
ಭ್ರಷ್ಟರ ಬಂಡುತನದಲ್ಲಿ ಇರುವ ನಡೆಯಿಂದ ವ್ಯಸನ ಪಡುವ
೭ ನೀತಿವಂತನಾದ ಲೋಟನನ್ನು ತಪ್ಪಿಸಲಿಲ್ಲವೋ? ಯಾಕಂದರೆ
ಆ ನೀತಿವಂತನು ಅವರಲ್ಲಿ ವಾಸ ಮಾಡಿ, ನೋಡುವದರಿಂದಲೂ
ಕೇಳುವದರಿಂದಲೂ ದಿನ ದಿನಕ್ಕೆ ಅವರ ಅನ್ಯಾಯವಾದ ಕ್ರಿಯೆ
ಗಳ ನಿಮಿತ್ತ ತನ್ನ ನೀತಿಯುಳ್ಳ ಪ್ರಾಣವನ್ನು ಕಳವಳ ಗೊಳಿ
೮ ಸಿದನು. ಕರ್ತನು ಭಕ್ತರನ್ನು ಶೋಧನೆಯೊಳಗಿಂದ ತಪ್ಪಿಸ
ಲೂ, ದಂಡಿಸಲ್ಪಡುವ ಅನೀತಿವಂತರನ್ನು ಮುಖ್ಯವಾಗಿ ಮಾಂ
೧೦ ಸವನ್ನು ಅನುಸರಿಸಿ, ಅಶುದ್ಧತ್ವದ ಇಚ್ಛೆಯಲ್ಲಿ ನಡೆದು,
ಒಡೆತನಗಳನ್ನು ತಿರಸ್ಕರಿಸುವವರನ್ನು ನ್ಯಾಯ ತೀರ್ಪಿಕೆಯ
ದಿನಕ್ಕೆ ಇಡಲೂ, ಬಲ್ಲನು.

೧೧ ಇವರು ಸಾಹಸವೂ ಸ್ವಯಿಚ್ಛೆಯೂ ಉಳ್ಳವರಾಗಿ, ನಡು
ಗಡೆ ಮಹಿಮೆಗಳನ್ನು ದೂಷಿಸುತ್ತಾರೆ. ಶಕ್ತಿಯಲ್ಲಿಯೂ ಬಲ
ದಲ್ಲಿಯೂ ಶ್ರೇಷ್ಠರಾದ ದೂತರಾದರೂ ಅವುಗಳಿಗೆ ದೂಷಣೆ
೧೨ ಯಾದ ತೀರ್ಪಿಕೆಯನ್ನು ತರುವದಿಲ್ಲ. ಆದರೆ ಇವರು, ಹಿಡಿ
ಯಲ್ಪಡುವದಕ್ಕೂ ನಾಶವಾಗುವದಕ್ಕೂ ಹುಟ್ಟಿದ, ಸ್ವಭಾವ
ವಾದ, ಬುದ್ಧಿ ಇಲ್ಲದ, ಮೃಗಗಳ ಹಾಗೆ, ತಿಳಿಯದವುಗಳನ್ನು
ದೂಷಿಸಿ, ತಮ್ಮ ನಾಶನದಲ್ಲಿಯೇ ನಾಶವಾಗಿ ಅಪ್ಯಾಯದ
೧೩ ಸಂಬಳವನ್ನು ಹೊಂದುವರು. ಅವರು ಹಗಲಿನ ಭೋಗವನ್ನು ಸು
ಖವೆಂದೇಣಿಸಿ, ಕಳಂಕವೂ ಮಲಿನವೂ ಉಳ್ಳವರಾಗಿದ್ದು, ನಿಮ್ಮ
ಸಂಗಡ ಊಟ ಮಾಡಿ, ತಮ್ಮ ಮೋಸಗಳಲ್ಲಿ ಇಷ್ಟಾಭೋಗ
೧೪ ಮಾಡುವವರಾಗಿಯೂ, ಜಾರತ್ವದಿಂದ ತುಂಬಿದಂಥ, ಪಾಪ ಬಿ
ಡಲಾರದಂಥ, ಕಣ್ಣುಳ್ಳವರಾಗಿಯೂ, ಅಸ್ಥಿರವಾದ ಪ್ರಾಣಗಳ
ನ್ನು ಮೋಸಗೊಳಿಸುವವರಾಗಿಯೂ, ಲೋಭಗಳಲ್ಲಿ ಅಭ್ಯಾಸ
ಮಾಡಿದ ಹೃದಯವುಳ್ಳವರಾಗಿಯೂ, ಶಾಪದ ಮಕ್ಕಳಾಗಿ
೧೫ ಯೂ, ಇದ್ದು, ಸರಿಯಾದ ಹಾದಿಯನ್ನು ಬಿಟ್ಟು, ತಪ್ಪಿ ಹೋ
ಗಿ, ಬೋಸೊರನ ಮಗನಾದ ಬಿಳಾಮನ ಮಾರ್ಗವನ್ನು ಅನು
೧೬ ಸರಿಸಿದ್ದಾರೆ. ಇವನು ಅನ್ಯಾಯದ ಸಂಬಳವನ್ನು ಪ್ರೀತಿ ಮಾಡಿ
ದನು; ಆದರೆ ತನ್ನ ಅಕ್ರಮಕ್ಕೆ ಖಂಡನೆಯನ್ನು ಹೊಂದಿದನು;
ಮೂಕ ಪಶುವು ಮನುಷ್ಯ ಶಬ್ದದಿಂದ ಮಾತಾಡಿ, ಪ್ರವಾದಿಯ
೧೭ ತಪ್ಪಿದ ಬುದ್ಧಿಗೆ ಅಡ್ಡಿ ಮಾತಿತು. ಇವರು ನೀರಿಲ್ಲದ ಬುಗ್ಗೆಗ
ಳೂ, ಬಿರುಗಾಳಿ ಬಡಿಯುವ ಮೇಘಗಳೂ, ಆಗಿದ್ದಾರೆ. ಅವ
ರಿಗೋಸ್ಕರ ಕಾರ್ಗತ್ತಲು ಎಂದೆಂದಿಗೂ ಇಡಲ್ಪಟ್ಟಿರೆ.

೧೮ ಯಾಕಂದರೆ ಅವರು, ವ್ಯರ್ಥವಾದ ಗರ್ವದ ಮಾತುಗಳ
ನ್ನಾಡಿ, ಮೋಸದಲ್ಲಿ ನಡೆಯುವವರಲ್ಲಿಂದ ಚನ್ನಾಗಿ ತಪ್ಪಿಸಿ
ಕೊಂಡವರನ್ನು ಮಾಂಸದ ಆಶೆಗಳಿಂದಲೂ ಬಂಡುತನಗಳಿಂದ
೧೯ ಲೂ ಮೋಸಗೊಳಿಸುತ್ತಾರೆ. ಅವರಿಗೆ ಬಿಡುಗಡೆಯನ್ನು ವಾಗ್ದತ್ತ
ಮಾಡಿ, ತಾವೇ ಲಯಕ್ಕೆ ದಾಸರಾಗಿದ್ದಾರೆ; ಯಾಕಂದರೆ ಒಬ್ಬನು
ಯಾವದರಿಂದ ಜಯಿಸಲ್ಪಟ್ಟನೋ, ಅದಕ್ಕೆ ದಾಸನಾದನು.
೨೦ ಯಾಕಂದರೆ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು
ಕ್ರಿಸ್ತನ ತಿಳುವಿಕೆಯಿಂದ ಲೋಕದ ಕಳಂಕಗಳಿಂದ ತಪ್ಪಿಸಿ ಕೊಂ
ಡ ಮೇಲೆ, ಇವುಗಳಲ್ಲಿ ಇನ್ನೊಂದು ಸಾರಿ ಸಿಕ್ಕಿ ಕೊಂಡು,
ಜಯಿಸಲ್ಪಟ್ಟರೆ, ಅವರಿಗೆ ಮೊದಲನೇ ಸ್ಥಿತಿಗಿಂತ ಕಡೇ ಸ್ಥಿತಿ ಕೆ
೨೧ ಟ್ಟದ್ದಾಯಿತು. ಯಾಕಂದರೆ ನೀತಿಯ ಮಾರ್ಗವನ್ನು ತಿಳಿ
ದು, ಅವರಿಗೆ ಒಪ್ಪಿಸಲ್ಪಟ್ಟ ಪರಿಶುದ್ಧ ಕಟ್ಟಳೆಯಿಂದ ತಿರುಗಿ
೨೨ ಕೊಳ್ಳುವದಕ್ಕಿಂತ, ತಿಳಿಯದೆ ಇರುವದು ಅವರಿಗೆ ವಾಸಿ. ಆದರೆ—
ನಾಯಿ ತಾನು ಕಾರಿದ್ದನ್ನೂ, ತೊಳೆದ ಹಂದಿ ಕೆಸರಿನ ಹೊರಳಾ
ಟಕ್ಕೂ ತಿರುಗಿತೆಂಬ ಸತ್ಯಗಾದೆಯ ಹಾಗೆ ಅವರಿಗೆ ಸಂಭವಿಸಿತು.

## ೩. ಸಂಧಿ.

೧ ಪ್ರಿಯರೇ, ಈ ಎರಡನೇ ಪತ್ರಿಕೆಯನ್ನು ನಿಮಗೆ ಈಗ ಬರೆ
೨ ಯುತ್ತೇನೆ. ಅವುಗಳಲ್ಲಿ ಪರಿಶುದ್ಧ ಪ್ರವಾದಿಗಳಿಂದ ಮುಂಚೆ ಹೇ
ಳಲ್ಪಟ್ಟ ಮಾತುಗಳನ್ನೂ, ಕರ್ತನಾದ ರಕ್ಷಕನ ಅಪೊಸ್ತಲರಾ
ದ ನಮ್ಮ ಕಟ್ಟಳೆಯನ್ನೂ, ನೀವು ಜ್ಞಾಪಕ ಮಾಡಿ ಕೊಳ್ಳುವ
ಹಾಗೆ, ನಿಮ್ಮ ನಿಷ್ಕಪಟವಾದ ಬುದ್ಧಿಗೆ ಜ್ಞಾಪಕ ಕೊಟ್ಟು, ಎಚ್ಚ
3 ರಿಸುತ್ತೇನೆ. ಮೊದಲು ಇದನ್ನು ತಿಳಿಕೊಳ್ಳಿರಿ, ಏನಂದರೆ—ಕಡೇ
ದಿವಸಗಳಲ್ಲಿ ಸ್ವಯಿಚ್ಛೆಗಳ ಪ್ರಕಾರ ನಡೆಯುವ ಕುಚೋದ್ಯ
ಗಾರರು ಬಂದು—ಅವನ ಬರುವಿಕೆಯ ವಾಗ್ದತ್ತವು ಎಲ್ಲಿ ಅದೆ?
೪ ಯಾಕಂದರೆ ಪಿತೃಗಳು ನಿದ್ರೆ ಹೋದಂದಿನಿಂದ ಎಲ್ಲವುಗಳು,
ಸೃಷ್ಟಿಯಾರಭ್ಯ ಇದ್ದ ಹಾಗೆಯೇ, ನೆಲೆಯಾಗಿವೆ, ಎಂದು
ಹೇಳುವರು.



೫ ಯಾಕಂದರೆ ಇವರು ಬೇಕೆಂದು ಇದನ್ನು ತಿಳಿಯದೆ ಇದ್ದಾ
ಕೆ, ಏನಂದರೆ—ಪೂರ್ವದಲ್ಲಿ ದೇವರ ವಾಕ್ಯದಿಂದ ಆಕಾಶಗಳೂ
ಭೂಮಿಯೂ ನೀರಿನೊಳಗಿಂದಲೂ ನೀರಿನಿಂದಲೂ ಸ್ಥಾಪಿಸಲ್ಪಟ್ಟ
೬ ವು. ಅವುಗಳಿಂದ ಆಗಿನ ಲೋಕವು ನೀರಿನ ಪ್ರಳಯದಿಂದ ನಾಶ
೭ ನಾಯಿತು. ಆದರೆ ಈಗಿನ ಆಕಾಶಗಳೂ ಭೂಮಿಯೂ ಅದೇ
ವಾಕ್ಯದಿಂದ ಭದ್ರವಾಗಿ ಇಡಲ್ಪಟ್ಟು, ಭಕ್ತಿಹೀನ ಮನುಷ್ಯರ
ನ್ಯಾಯತೀರ್ಪಿಕೆ ನಾಶನಗಳ ದಿವಸದ ಪರ್ಯಂತರ ಬೆಂಕಿ
ಗೋಸ್ಕರ ಇಡಲ್ಪಟ್ಟಿವೆ.

೮ ಆದರೆ, ಪ್ರಿಯರೇ, ಈ ಒಂದು ಮಾತನ್ನು ನೀವು ತಿಳಿಯದೆ
ಇರ ಬಾರದು, ಏನಂದರೆ—ಕರ್ತನಲ್ಲಿ ಒಂದು ದಿವಸವು ಸಾವಿರ
ವರುಷಗಳ ಹಾಗೆಯೂ, ಸಾವಿರ ವರುಷಗಳು ಒಂದು ದಿವಸದ
೯ ಹಾಗೆಯೂ, ಅದೆ. ತಡೆದೆಂದು ಕೆಲವರು ನೆನಸುವ ಪ್ರಕಾರ, ಕ
ರ್ತನು ವಾಗ್ದತ್ತದಲ್ಲಿ ತಡಮಾಡುವದಿಲ್ಲ; ಆದರೆ ಯಾರೂ ನಾಶ
ನಾಗ ಬೇಕೆಂದು ಮನಸ್ಸಿನಲ್ಲದೆ, ಎಲ್ಲರು ಮಾನಸಾಂತರಕ್ಕೆ
ತಿರುಗ ಬೇಕೆಂದು, ಮನಸ್ಸಾಗಿ, ನಮ್ಮ ಕಡೆಗೆ ದೀರ್ಘ ಶಾಂತಿ
೧೦ ಯುಳ್ಳವನಾಗಿದ್ದಾನೆ. ಆದರೆ ಕರ್ತನ ದಿನವು ರಾತ್ರಿಕಳ್ಳನ
ಹಾಗೆ ಬರುವದು; ಅದರಲ್ಲಿ ಆಕಾಶಗಳು ಮಹಾ ಘೋಷದಿಂದ
ಇಲ್ಲದೆ ಹೋಗುವವು, ಮಹಾ ಭೂತಗಳು ಉರಿದು, ಕರಗಿ ಹೋ
ಗುವವು; ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟು ಹೋ
ಗುವವು.

೧೧ ಇವುಗಳೆಲ್ಲಾ ಕರಗಿ ಹೋಗುವದರಿಂದ, ನೀವು, ಆಕಾಶಗಳು
೧೨ ಬೆಂಕಿ ಹತ್ತಿ ಕರಗಿ ಹೋಗುವಂಥ, ಮಹಾ ಭೂತಗಳು ಉರಿದು
ಬೆಂದು ಹೋಗುವಂಥ, ದೇವರ ದಿನವು ಬರುವದನ್ನು ಕಾದು
೧೩ ಕೊಂಡು, ನಿರೀಕ್ಷಿಸಿ, ಪರಿಶುದ್ಧವಾದ ನಡತೆಗಳಲ್ಲಿಯೂ ಭಕ್ತಿಗಳ
ಲ್ಲಿಯೂ ಎಂಥವರಾಗಿರ ಬೇಕು? ಅದಕೆ ಅವನ ವಾಗ್ದತ್ತದ ಪ್ರ
ಕಾರ ನೀತಿಯು ವಾಸವಾಗಿರುವ ಹೊಸ ಆಕಾಶಗಳನ್ನೂ, ಹೊಸ
ಭೂಮಿಯನ್ನೂ ನಿರೀಕ್ಷಿಸುತ್ತೇವೆ.

೧೪ ಆದದರಿಂದ, ಪ್ರಿಯರೇ, ಇವುಗಳನ್ನು ನಿರೀಕ್ಷಿಸುವವರಾಗಿ
ಸಮಾಧಾನದಲ್ಲಿ ಅವನಿಗೆ ನಿರ್ಮಲರಾಗಿಯೂ, ನಿಷ್ಕಳಂಕರಾಗಿ
೧೫ ಯೂ ಕಾಣಲ್ಪಡುವ ಹಾಗೆ, ಜಾಗ್ರತೆಯಾಗಿರಿ. ಮತ್ತು ನಮ್ಮ
ಕರ್ತನ ದೀರ್ಘಶಾಂತಿಯನ್ನು ರಕ್ಷಣೆ ಎಂದು ಎಣಿಸಿ ಕೊ
೧೬ ಳ್ಳಿರಿ. ಅದೇ ಪ್ರಕಾರ ನಮ್ಮ ಪ್ರಿಯ ಸಹೋದರನಾದ ಪೌಲನು
ಎಲ್ಲಾ ಪತ್ರಿಕೆಗಳಲ್ಲಿಯೂ, ಇವುಗಳ ವಿಷಯವಾಗಿ ಅವುಗಳಲ್ಲಿ
ಮಾತಾಡಿ, ಅವನಿಗೆ ಕೊಡಲ್ಪಟ್ಟ ಜ್ಞಾನದ ಪ್ರಕಾರ ನಿಮಗೆ ಬರೆ
ದಿದ್ದಾನೆ; ಅವುಗಳಲ್ಲಿ ಕೆಲವು ಕಠಿಣ ಅಭಿಪ್ರಾಯಗಳು ಉಂಟು;
ಮಿಕ್ಕಾದ ಬರಹಗಳ ಹಾಗೆ ಇವುಗಳನ್ನು ಸಹ ಕಲಿಯದವರೂ
ಅಸ್ಥಿರರೂ ತಮ್ಮ ಸ್ವಂತ ನಾಶನಕ್ಕೆ ಸೊಟ್ಟಿಗೆ ಮಾಡುತ್ತಾರೆ.

೧೭ ಹಾಗಾದರೆ, ಪ್ರಿಯರೇ, ನೀವು ಮುಂತಿಳಿದವರಾಗಿದ್ದು, ನೀತಿ
ಭ್ರಷ್ಟರ ಮೋಸದಲ್ಲಿ ಕೂಡ ಎಳೆಯಲ್ಪಟ್ಟು, ಸ್ವಂತ ಸ್ಥಿರತ್ವ
೧೮ ದಲ್ಲಿಂದ ಬಿದ್ದು ಹೋಗದ ಹಾಗೆ, ಸೋಡಿ ಕೊಳ್ಳಿರಿ. ಇದಲ್ಲದೆ
ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸು ಕ್ರಿಸ್ತನ ಕೃಪೆ
ಯಲ್ಲಿಯೂ ತಿಳುವಿಕೆಯಲ್ಲಿಯೂ ಬೆಳೆಯಿರಿ. ಅವನಿಗೆ, ಈಗ
ಲೂ ಎಂದೆಂದಿಗೂ, ಮಹಿಮೆ ಆಗಲಿ. ಆಮೆನ್.

---

# THE FIRST EPISTLE OF JOHN.

## ಯೋಹಾನನ ಮೊದಲನೇ ಪತ್ರಿಕೆ.

## ೧. ಸಂಧಿ.

೧ ಆದಿಯಿಂದ ಇದ್ದದ್ದನ್ನೂ, ನಾವು ಜೀವ ವಾಕ್ಯದ ವಿಷಯವಾ
ಗಿ ಕೇಳಿದ್ದನ್ನೂ, ನಮ್ಮ ಕಣ್ಣುಗಳಿಂದ ಕಂಡದ್ದನ್ನೂ, ನೋಡಿದ್ದ
೨ ನ್ನೂ, ನಮ್ಮ ಕೈಗಳು ಮುಟ್ಟಿದ್ದನ್ನೂ, ತಿಳಿಸುತ್ತೇವೆ. ಜೀವವು
ಪ್ರತ್ಯಕ್ಷವಾಯಿತು, ಮತ್ತು ತಂದೆಯ ಹತ್ತರ ಇದ್ದು, ನಮಗೆ ಪ್ರ
ತ್ಯಕ್ಷವಾದ ನಿತ್ಯ ಜೀವವನ್ನು ಕಂಡು, ಸಾಕ್ಷಿ ಕೊಟ್ಟು, ನಿಮಗೆ ತಿಳಿ
3 ಸುತ್ತೇವೆ. ನಿಮಗೂ ನಮ್ಮ ಸಂಗಡ ಅನ್ಯೋನ್ಯವಿರುವ ಹಾಗೆ, ನಾ
ವು ಕಂಡು ಕೇಳಿದ್ದನ್ನೂ ನಿಮಗೆ ತಿಳಿಸುತ್ತೇವೆ; ಮತ್ತು ನಮಗೆ ಇರು
೪ ವ ಅನ್ಯೋನ್ಯವು ತಂದೆಯ ಸಂಗಡಲೂ, ಅವನ ಮಗನಾದ ಯೇ
ಸು ಕ್ರಿಸ್ತನ ಸಂಗಡಲೂ, ಅದೆ. ಮತ್ತು ನಿಮ್ಮ ಸಂತೋಷವು
ಸಂಪೂರ್ಣವಾಗುವ ಹಾಗೆ, ಇವುಗಳನ್ನು ನಿಮಗೆ ಬರೆಯುತ್ತೇವೆ.

೫ ಮತ್ತು ನಾವು ಅವನಿಂದ ಕೇಳಿ, ನಿಮಗೆ ತಿಳಿಸುವ ಸಂಗತಿ ಏ
ನಂದರೆ—ದೇವರು ಬೆಳಕಾಗಿದ್ದಾನೆ; ಅವನಲ್ಲಿ ಎಷ್ಟು ಮಾತ್ರವು
೬ ಕತ್ತಲೆ ಇಲ್ಲ. ಅವನ ಸಂಗಡ ನಮಗೆ ಅನ್ಯೋನ್ಯ ಉಂಟೆಂದು
ಹೇಳಿ, ಕತ್ತಲೆಯಲ್ಲಿ ನಡೆದರೆ, ಸುಳ್ಳಾಡಿ ಸತ್ಯವನ್ನು ಮಾಡದ
೭ ವರಾಗಿದ್ದೇವೆ. ಆದರೆ ಅವನು ಬೆಳಕಿನಲ್ಲಿರುವ ಪ್ರಕಾರ, ನಾವು ಬೆ
ಳಕಿನಲ್ಲಿ ನಡೆದರೆ, ಒಬ್ಬರ ಸಂಗಡ ಒಬ್ಬರು ಅನ್ಯೋನ್ಯವಾ
ಗಿದ್ದೇವೆ. ಮತ್ತು ಅವನ ಮಗನಾದ ಯೇಸು ಕ್ರಿಸ್ತನ ರಕ್ತವು ಎ
ಲ್ಲಾ ಪಾಪದಿಂದ ನಮ್ಮನ್ನು ಶುದ್ಧ ಮಾಡುವದು.

೮ ನಮಗೆ ಪಾಪವಿಲ್ಲವೆಂದು ಹೇಳಿದರೆ, ನಮ್ಮನ್ನು ನಾವೇ ಮೋ
೯ ಸಗೊಳಿಸುತ್ತೇವೆ, ಮತ್ತು ಸತ್ಯವು ನಮ್ಮಲ್ಲಿ ಇಲ್ಲ. ನಮ್ಮ
ಪಾಪಗಳನ್ನು ಅರಿಕೆ ಮಾಡಿದರೆ, ಅವನು ನಮಗೆ ಪಾಪಗಳನ್ನು
ಮನ್ನಿಸಿ, ಎಲ್ಲಾ ಅನೀತಿಯಿಂದ ನಮ್ಮನ್ನು ಶುದ್ಧ ಮಾಡುವ
೧೦ ಹಾಗೆ, ನಂಬಿಕೆಯೂ ನೀತಿಯೂ ಉಳ್ಳವನಾಗಿದ್ದಾನೆ. ನಾವು
ಪಾಪ ಮಾಡಿದವರಲ್ಲವೆಂದು ಹೇಳಿದರೆ, ಅವನನ್ನು ಸುಳ್ಳುಗಾರ
ನೆಂದು ಮಾಡುತ್ತೇವೆ; ಮತ್ತು ಅವನ ವಾಕ್ಯವು ನಮ್ಮಲ್ಲಿ ಇಲ್ಲ.

## ೨. ಸಂಧಿ.

೧ ನನ್ನ ಎಳೆ ಮಕ್ಕಳೇ, ನೀವು ಪಾಪ ಮಾಡದ ಹಾಗೆ, ಇವು
ಗಳನ್ನು ನಿಮಗೆ ಬರೆಯುತ್ತೇನೆ; ಮತ್ತು ಯಾರಾದರೂ ಪಾಪ
ಮಾಡಿದರೆ, ತಂದೆಯ ಹತ್ತರ ನಮಗೆ ನೀತಿವಂತನಾದ ಯೇಸು
೨ ಕ್ರಿಸ್ತನೆಂಬ ಕಾರ್ಯಕರ್ತನು ಇದ್ದಾನೆ. ಇವನು ನಮ್ಮ ಪಾ
ಪಗಳಿಗೋಸ್ಕರ ಶಾಂತಕರವಾದ ಬಲಿಯಾಗಿದ್ದಾನೆ; ನಮ್ಮವುಗ
ಳಿಗೋಸ್ಕರ ಮಾತ್ರವಲ್ಲ, ಸಮಸ್ತ ಲೋಕದವುಗಳಿಗೋಸ್ಕರ
ಸಹ.

3 ಮತ್ತು ಅವನ ಕಟ್ಟಳೆಗಳನ್ನು ಕೈ ಕೊಂಡರೆ, ಇದರಿಂದ ಅ
೪ ವನನ್ನು ತಿಳಿದಿದ್ದೇವೆಂದು ತಿಳುಕೊಳ್ಳುತ್ತೇವೆ. ಅವನನ್ನು ತಿಳಿದಿ
ದ್ದೇನೆಂದು ಹೇಳಿ ಕೊಂಡು, ಅವನ ಕಟ್ಟಳೆಗಳನ್ನು ಕೈ ಕೊಳ್ಳದ
೫ ವನು ಸುಳ್ಳುಗಾರನಾಗಿದ್ದಾನೆ; ಇವನಲ್ಲಿ ಸತ್ಯವು ಇಲ್ಲ. ಆದರೆ

ಯಾವನು ಅವನ ವಾಕ್ಯಗಳನ್ನು ಕೈಕೊಳ್ಳುತ್ತಾನೋ, ಅವನಲ್ಲಿ
ನಿಜವಾಗಿ ದೇವರ ಪ್ರೀತಿಯು ಸಂಪೂರ್ಣವಾಗಿದೆ. ಅವನಲ್ಲಿದ್ದೇ
೬ ವೆಂದು ಇದರಿಂದ ತಿಳುಕೊಳ್ಳುತ್ತೇವೆ. ಅವನಲ್ಲಿ ನೆಲೆಯಾಗಿರು
ತ್ತೇನೆಂದು ಹೇಳುವವನು, ಅವನು ಹ್ಯಾಗೆ ನಡೆದನೋ, ಹಾಗೆಯೇ
ತಾನು ನಡೆದು ಕೊಳ್ಳಬೇಕು.

೭ ಸಹೋದರರೇ, ಹೊಸ ಕಟ್ಟಳೆಯನ್ನಲ್ಲ, ಆದಿಯಿಂದ ನಿ
ಮಗಿದ್ದ ಹಳೇ ಕಟ್ಟಳೆಯನ್ನು ನಿಮಗೆ ಬರೆಯುತ್ತೇನೆ. ಆ ಹ
೮ ಳೇ ಕಟ್ಟಳೆಯು ನೀವು ಆದಿಯಿಂದ ಕೇಳಿದ ವಾಕ್ಯವೇ. ಮತ್ತು
ಹೊಸ ಕಟ್ಟಳೆಯನ್ನು ನಿಮಗೆ ಬರೆಯುತ್ತೇನೆ; ಅದು ಅವನಲ್ಲಿ
ಯೂ ನಿಮ್ಮಲ್ಲಿಯೂ ಸತ್ಯವಾಗಿದೆ; ಹ್ಯಾಗಂದರೆ, ಕತ್ತಲೆಯು
ಕಳೆದು ಹೋಗುತ್ತದೆ, ಸತ್ಯವಾದ ಬೆಳಕು ಈಗಲೇ ಪ್ರಕಾಶಿಸು
ತ್ತದೆ.

೯ ಬೆಳಕಿನಲ್ಲಿದ್ದೇನೆಂದು ಹೇಳಿ ಕೊಂಡು, ತನ್ನ ಸಹೋದರನ
೧೦ ನ್ನು ಹಗೆ ಮಾಡುವವನು ಈ ವರಿಗೂ ಕತ್ತಲೆಯಲ್ಲಿದ್ದಾನೆ. ತನ್ನ
ಸಹೋದರನನ್ನು ಪ್ರೀತಿ ಮಾಡುವವನು ಬೆಳಕಿನಲ್ಲಿ ನೆಲೆಯಾಗಿ
೧೧ ದ್ದಾನೆ; ಆಟಂಕವು ಅವನಲ್ಲಿ ಇಲ್ಲ. ಆದರೆ ತನ್ನ ಸಹೋದರನನ್ನು
ಹಗೆ ಮಾಡುವವನು ಕತ್ತಲೆಯಲ್ಲಿದ್ದಾನೆ; ಕತ್ತಲೆಯಲ್ಲಿ ನಡೆದು
ಕೊಳ್ಳುತ್ತಾನೆ. ಕತ್ತಲೆಯು ಅವನ ಕಣ್ಣುಗಳನ್ನು ಕಾಣದ ಹಾಗೆ
ಮಾಡಿದ್ದರಿಂದ, ತಾನು ಎಲ್ಲಿ ಹೋಗುತ್ತಾನೋ, ಅರಿಯನು.

೧೨ ಎಳೆ ಮಕ್ಕಳೇ, ನಿಮಗೆ ಬರೆಯುತ್ತೇನೆ, ಯಾಕಂದರೆ ಪಾ
೧೩ ಪಗಳು ಅವನ ಹೆಸರಿನಿಂದ ನಿಮಗೆ ಮನ್ನಿಸಲ್ಪಟ್ಟಿವೆ. ತಂದೆಗಳೇ,
ನಿಮಗೆ ಬರೆಯುತ್ತೇನೆ, ಯಾಕಂದರೆ ನೀವು ಆದಿಯಿಂದ ಇರುವ
ವನನ್ನು ತಿಳಿದಿದ್ದೀರಿ. ಯೌವನಸ್ಥರೇ, ನಿಮಗೆ ಬರೆಯುತ್ತೇನೆ.
ಯಾಕಂದರೆ ನೀವು ಕೆಟ್ಟವನನ್ನು ಜಯಿಸಿದ್ದೀರಿ. ಮಕ್ಕಳೇ, ನಿ
ಮಗೆ ಬರೆಯುತ್ತೇನೆ, ಯಾಕಂದರೆ ನೀವು ತಂದೆಯನ್ನು ತಿಳಿದಿ
೧೪ ದ್ದೀರಿ. ತಂದೆಗಳೇ, ನಿಮಗೆ ಬರೆದಿದ್ದೇನೆ, ಯಾಕಂದರೆ ನೀವು
ಆದಿಯಿಂದ ಇರುವವನನ್ನು ತಿಳಿದಿದ್ದೀರಿ. ಯೌವನಸ್ಥರೇ, ನಿಮ
ಗೆ ಬರೆದಿದ್ದೇನೆ, ಯಾಕಂದರೆ ನೀವು ಶಕ್ತರಾಗಿದ್ದೀರಿ. ದೇವರ ವಾ
ಕ್ಯವು ನಿಮ್ಮಲ್ಲಿ ನೆಲೆಯಾಗಿದೆ; ದುಷ್ಟನನ್ನು ಜಯಿಸಿದ್ದೀರಿ.
೧೫ ಲೋಕವನ್ನಾದರೂ, ಲೋಕದಲ್ಲಿರುವವುಗಳನ್ನಾದರೂ, ಪ್ರೀತಿ
ಮಾಡ ಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿ ಮಾಡಿ
೧೬ ದರೆ, ಅವನಲ್ಲಿ ತಂದೆಯ ಪ್ರೀತಿಯು ಇಲ್ಲ. ಯಾಕಂದರೆ ಮಾಂ
ಸದ ಆಶೆಯೂ, ಕಣ್ಣುಗಳ ಆಶೆಯೂ, ಬದುಕಿನ ಹಮ್ಮು
ಎಂಬ ಲೋಕದಲ್ಲಿರುವಂಥದ್ದೆಲ್ಲಾ ತಂದೆಯಿಂದಲ್ಲ, ಲೋಕದಿಂ
೧೭ ದ ಹುಟ್ಟುವದು. ಲೋಕವೂ, ಅದರ ಆಶೆಯೂ ಕಳೆದು ಹೋ
ಗುತ್ತವೆ; ಆದರೆ ದೇವರ ಚಿತ್ತವನ್ನು ಮಾಡುವವನು ಎಂದೆಂದಿ
ಗೂ ನೆಲೆಯಾಗಿರುತ್ತಾನೆ.

೧೮ ಮಕ್ಕಳೇ, ಕಡೇ ಘಳಿಗೆಯಾಗಿದೆ; ಮತ್ತು ಅಂತಿಕ್ರಿಸ್ತನು
ಬರುತ್ತಾನೆಂದು ನೀವು ಕೇಳಿದ ಪ್ರಕಾರ, ಈಗಲೇ ಅಂತಿಕ್ರಿಸ್ತರು
ಅನೇಕರು ಇದ್ದಾರೆ. ಅದರಿಂದ, ಕಡೇ ಘಳಿಗೆಯಾಗಿದೆ ಎಂದು
೧೯ ತಿಳುಕೊಳ್ಳುತ್ತೇವೆ. ಅವರು ನಮ್ಮಲ್ಲಿಂದ ಹೊರಟರು, ಆದರೆ ನ
ಮ್ಮವರಾಗಿರಲಿಲ್ಲ. ಯಾಕಂದರೆ ನಮ್ಮವರಾಗಿದ್ದರೆ, ನಮ್ಮ ಸಂಗ
ದ ನೆಲೆಯಾಗಿರುತ್ತಿದ್ದರು. ಆದರೆ, ಅವರೆಲ್ಲರು ನಮ್ಮವರಲ್ಲವೆಂ
೨೦ ದು, ಪ್ರಕಟವಾಗುವ ಹಾಗೆ, ಹೊರಟರು. ಆದರೆ ನೀವು ಪರಿಶುದ್ಧ
೨೧ ನಿಂದ ಅಭಿಷೇಕವನ್ನು ಹೊಂದಿ, ಎಲ್ಲಾ ಬಲ್ಲಿರಿ. ನೀವು ಸತ್ಯವ
ನ್ನು ಅರಿಯದೆ ಇರುವದರಿಂದಲ್ಲ, ನೀವು ಅದನ್ನೂ, ಯಾವ
ಸುಳ್ಳಾದರೂ ಸತ್ಯದಿಂದಾಗಿರುವದಿಲ್ಲವೆಂಬುವದನ್ನೂ, ಅರಿಕಿರು
೨೨ ವದರಿಂದ ನಿಮಗೆ ಬರೆದಿದ್ದೇನೆ. ಯೇಸುವು ಕ್ರಿಸ್ತನಲ್ಲವೆಂದು
ಬೊಂಕುವವನು ಹೊರತು, ಸುಳ್ಳುಗಾರನು ಯಾರು? ಇವನು
ತಂದೆಯನ್ನೂ ಮಗನನ್ನೂ ಬೊಂಕುವ ಅಂತಿಕ್ರಿಸ್ತನಾಗಿದ್ದಾನೆ.
೨೩ ಮಗನನ್ನು ಬೊಂಕುವ ಪ್ರತಿ ಮನುಷ್ಯನು ತಂದೆಯನ್ನು ಸಹ
ಹೊಂದದೆ ಇದ್ದಾನೆ. ಮಗನನ್ನು ಅರಿಕೆ ಮಾಡುವವನು ತಂದೆ
ಯನ್ನು ಸಹ ಹೊಂದಿದ್ದಾನೆ.

೨೪ ಆದದರಿಂದ ನೀವು ಆದಿಯಿಂದ ಕೇಳಿದ್ದು ನಿಮ್ಮಲ್ಲಿ ನೆಲೆಯಾ
ಗಿರಲಿ. ನೀವು ಆದಿಯಿಂದ ಕೇಳಿದ್ದು, ನಿಮ್ಮಲ್ಲಿ ನೆಲೆಯಾಗಿದ್ದರೆ,
ನೀವು ಮಗನಲ್ಲಿಯೂ ತಂದೆಯಲ್ಲಿಯೂ ನೆಲೆಯಾಗಿರುವಿರಿ.
೨೫ ಮತ್ತು ಅವನು ನಮಗೆ ವಾಗ್ದತ್ತ ಮಾಡಿದ ವಾಗ್ದತ್ತವು ಇದೇ—
೨೬ ಏನಂದರೆ, ನಿತ್ಯ ಜೀವವು. ನಿಮ್ಮನ್ನು ಮೋಸಗೊಳಿಸುವವರ
೨೭ ವಿಷಯವಾಗಿ ಇವುಗಳನ್ನು ನಿಮಗೆ ಬರೆದಿದ್ದೇನೆ. ಆದರೆ ನೀವು
ಅವನಿಂದ ಹೊಂದಿದ ಅಭಿಷೇಕವು ನಿಮ್ಮಲ್ಲಿ ನೆಲೆಯಾಗಿದೆ.
ಮತ್ತು ಯಾವನಾದರೂ ನಿಮ್ಮನ್ನು ಬೋಧಿಸುವದು ನಿಮಗೆ ಅ
ಗತ್ಯವಿಲ್ಲ; ಆದರೆ ಅದೇ ಅಭಿಷೇಕವು ಸುಳ್ಳು ಅಲ್ಲ, ಸತ್ಯವಾಗಿ
ದ್ದು, ಎಲ್ಲವುಗಳ ವಿಷಯವಾಗಿ ನಿಮಗೆ ಬೋಧಿಸುವ ಪ್ರಕಾರ,
ಅದು ನಿಮಗೆ ಬೋಧಿಸಿದ ಪ್ರಕಾರವೇ, ಅವನಲ್ಲಿ ನೆಲೆಯಾಗಿರು
ವಿರಿ.

೨೮ ಮತ್ತು ಈಗ, ಎಳೆ ಮಕ್ಕಳೇ, ಅವನು ಪ್ರತ್ಯಕ್ಷವಾಗುವಾಗ,
ನಾವು ಧೈರ್ಯವುಳ್ಳವರಾಗಿ, ಅವನ ಬರುವಿಕೆಯಲ್ಲಿ ಅವನಿಂದ
೨೯ ನಾಚಿಕೆ ಪಡದ ಹಾಗೆ, ಅವನಲ್ಲಿ ನೆಲೆಯಾಗಿರ್ರಿ. ಅವನು ನೀತಿ
ವಂತನಾಗಿದ್ದಾನೆಂದು, ನೀವು ತಿಳುಕೊಂಡಕಡೆ, ನೀತಿಯನ್ನು ಮಾ
ಡುವ ಪ್ರತಿ ಮನುಷ್ಯನು ಅವನಿಂದ ಹುಟ್ಟಿದ್ದಾನೆಂದು, ತಿಳುಕೊ
ಳ್ಳಿರಿ.

## ೩. ಸಂಧಿ.

೧ ಇಗೋ, ನಾವು ದೇವರ ಮಕ್ಕಳೆಂದು ಕರೆಯಲ್ಪಡುವ ಹಾ
ಗೆ, ತಂದೆಯು ನಮ್ಮ ಮೇಲೆ ಎಂಥ ಪ್ರೀತಿ ಇಟ್ಟಿದ್ದಾನೆ! ಅದ
ಕ್ಕೋಸ್ಕರ ಲೋಕವು ನಮ್ಮನ್ನು ಅರಿಯದು; ಯಾಕಂದರೆ
೨ ಅವನನ್ನು ಅರಿಯದೆ ಇತ್ತು. ಪ್ರಿಯರೇ, ಈಗ ದೇವರ ಮಕ್ಕ
ಳಾಗಿದ್ದೇನೆ; ಮತ್ತು ಏನಾಗಿರುವೆವೋ, ಇನ್ನೂ ಕಾಣಲಿಲ್ಲ; ಆದ
ರೆ, ಅವನು ಪ್ರತ್ಯಕ್ಷವಾಗುವಾಗ, ಅವನ ಹಾಗೆ ಇರುವೆವೆಂದು, ಬ
ಲ್ಲೆವು. ಯಾಕಂದರೆ ಅವನನ್ನು, ಇರುವ ಪ್ರಕಾರವೇ, ನೋಡು
ವೆವು.

೩ ಮತ್ತು ಅವನಲ್ಲಿ ಈ ನಿರೀಕ್ಷೆ ಇಡುವ ಪ್ರತಿ ಮನುಷ್ಯನು, ಅ
ವನು ಪವಿತ್ರವಾಗಿರುವ ಪ್ರಕಾರ ತನ್ನನ್ನು ಪವಿತ್ರ ಮಾಡಿ ಕೊಳ್ಳು
೪ ತ್ತಾನೆ. ಪಾಪವನ್ನು ಮಾಡುವ ಪ್ರತಿ ಮನುಷ್ಯನು ನ್ಯಾಯಪ್ರ
ಮಾಣವನ್ನು ಮೀರುತ್ತಾನೆ. ಪಾಪವು ನ್ಯಾಯಪ್ರಮಾಣದ
ಮೀರುವಿಕೆ ಆಗಿದೆ. ಮತ್ತು, ನಮ್ಮ ಪಾಪಗಳನ್ನು ತಕ್ಕೊಂಡು
ಹೋಗುವ ಹಾಗೆ, ಅವನು ಪ್ರತ್ಯಕ್ಷವಾದನೆಂದು, ಬಲ್ಲಿರಿ. ಅವ
೫ ನಲ್ಲಿ ಪಾಪವು ಇಲ್ಲ. ಅವನಲ್ಲಿ ನೆಲೆಯಾಗಿರುವ ಪ್ರತಿ ಮನುಷ್ಯ
ನು ಪಾಪ ಮಾಡನು. ಪಾಪ ಮಾಡುವ ಪ್ರತಿ ಮನುಷ್ಯನು ಅವ
ನನ್ನು ನೋಡಲಿಲ್ಲ, ಅರಿಯಲಿಲ್ಲ.



೬ ಎಳೆ ಮಕ್ಕಳೇ, ಯಾವನಾದರೂ ನಿಮ್ಮನ್ನು ಮೋಸಗೊಳಿ
ಸದೆ ಇರಲಿ. ಅವನು ನೀತಿವಂತನಾಗಿರುವ ಪ್ರಕಾರ, ನೀತಿಯನ್ನು
೭ ಮಾಡುವವನು ನೀತಿವಂತನಾಗಿದ್ದಾನೆ. ಪಾಪ ಮಾಡುವವನು ಪಿ
ಶಾಚನವನಾಗಿದ್ದಾನೆ; ಯಾಕಂದರೆ ಆದಿಯಿಂದ ಪಿಶಾಚನು ಪಾ
ಪ ಮಾಡುತ್ತಾನೆ. ಪಿಶಾಚನ ಕ್ರಿಯೆಗಳನ್ನು ಲಯ ಮಾಡುವದ
೮ ಕ್ಕೋಸ್ಕರವೇ ದೇವರ ಮಗನು ಪ್ರತ್ಯಕ್ಷವಾದನು. ದೇವರಿಂದ
ಹುಟ್ಟಿದ ಪ್ರತಿ ಮನುಷ್ಯನು ಪಾಪ ಮಾಡುವದಿಲ್ಲ, ಯಾಕಂದರೆ
ಅವನ ಬೀಜವು ಅವನಲ್ಲಿ ನೆಲೆಯಾಗಿದೆ. ಮತ್ತು ಅವನು, ದೇವ
೯ ರಿಂದ ಹುಟ್ಟಿದ ಕಾರಣ, ಪಾಪ ಮಾಡಲಾರನು. ಇದರಿಂದಲೇ
ದೇವರ ಮಕ್ಕಳೂ, ಪಿಶಾಚನ ಮಕ್ಕಳೂ ಪ್ರತ್ಯಕ್ಷವಾಗಿದ್ದಾರೆ.
ನೀತಿಯನ್ನು ಮಾಡದ ಪ್ರತಿ ಮನುಷ್ಯನೂ, ತನ್ನ ಸಹೋದ
ರನನ್ನು ಪ್ರೀತಿ ಮಾಡದವನೂ, ದೇವರಿಂದಾದವರಲ್ಲ.

೧೧ ಯಾಕಂದರೆ ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇ
೧೨ ಕೆಂಬುವದು ನೀವು ಆದಿಯಿಂದ ಕೇಳಿದ ಆಜ್ಞೆಯೇ. ಕಾಯಿನ
ನು ಕೆಟ್ಟವನಿಂದ ಇದ್ದು, ತನ್ನ ಸಹೋದರನನ್ನು ಕೊಂದು ಹಾ
ಕಿದ ಪ್ರಕಾರವಲ್ಲ; ಯಾಕೆ ಅವನನ್ನು ಕೊಂದು ಹಾಕಿದನು?
ತನ್ನ ಕ್ರಿಯೆಗಳು ಕೆಟ್ಟವುಗಳೂ, ತನ್ನ ಸಹೋದರನ ಕ್ರಿಯೆಗ
ಳು ನೀತಿಯುಳ್ಳವುಗಳೂ, ಆಗಿದ್ದದರಿಂದಲೇ.

೧೩ ನನ್ನ ಸಹೋದರರೇ, ಲೋಕವು ನಿಮ್ಮನ್ನು ಹಗೆ ಮಾಡಿದರೆ,
೧೪ ಆಶ್ಚರ್ಯ ಪಡ ಬೇಡಿರಿ. ನಾವು ಸಹೋದರರನ್ನು ಪ್ರೀತಿ ಮಾ
ಡುವದರಿಂದ, ಮರಣದೊಳಗಿಂದ ಹೊರಟು, ಜೀವದಲ್ಲಿ ಸೇರಿದೆ
ವೆಂದು ಬಲ್ಲೆವು. ಸಹೋದರನನ್ನು ಪ್ರೀತಿ ಮಾಡದವನು ಮರ
೧೫ ಣದಲ್ಲಿ ನೆಲೆಯಾಗಿದ್ದಾನೆ. ತನ್ನ ಸಹೋದರನನ್ನು ಹಗೆ ಮಾ
ಡುವ ಪ್ರತಿ ಮನುಷ್ಯನು ಕೊಲೆಗಾರನಾಗಿದ್ದಾನೆ. ಮತ್ತು ಕೊಲೆ
ಗಾರನಾದ ಯಾವನಿಗೂ ತನ್ನಲ್ಲಿ ನೆಲೆಯಾಗಿರುವ ನಿತ್ಯ ಜೀವ
ವಿಲ್ಲವೆಂದು ಬಲ್ಲಿರಿ.

೧೬ ಅವನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದರಿಂದ
ಲೇ ಪ್ರೀತಿಯನ್ನು ತಿಳುಕೊಂಡಿದ್ದೇವೆ. ಮತ್ತು ನಾವು ಸಹೋದ
ರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ.
೧೭ ಆದರೆ ಲೋಕದ ಬದುಕು ಉಂಟಾದವನು, ತನ್ನ ಸಹೋದರನಿ
ಗೆ ಕೊರತೆ ಇರುವದನ್ನು ನೋಡಿ, ತನ್ನ ಅಂತ್ಯಕರಣವನ್ನು
ಅವನಿಗೆ ಮುಚ್ಚಿದರೆ, ಅವನಲ್ಲಿ ದೇವರ ಪ್ರೀತಿಯು ನೆಲೆಯಾಗಿ
೧೮ ರುವದು ಹ್ಯಾಗೆ? ನನ್ನ ಎಳೆ ಮಕ್ಕಳೇ, ಮಾತಿನಿಂದಲೂ ನಾಲಿ
ಗೆಯಿಂದಲೂ ಅಲ್ಲ, ಕ್ರಿಯೆಯಿಂದಲೂ ಸತ್ಯದಿಂದಲೂ ಪ್ರೀತಿ
ಮಾಡುವ.

೧೯ ಮತ್ತು ಇದರಿಂದ, ನಾವು ಸತ್ಯದಲ್ಲಿದ್ದೇವೆಂದು ತಿಳಿದು, ಅ
ವನ ಮುಂದೆ ನಮ್ಮ ಹೃದಯಗಳನ್ನು ನಿಶ್ಚಯ ಪಡಿಸುವೆವು.
೨೦ ಹ್ಯಾಗಂದರೆ, ನಮ್ಮ ಹೃದಯವು ನಮಗೆ ಆಜ್ಞೆನಿರ್ಣಯ ತೀ
ರಿಸಿದರೆ, ದೇವರು ನಮ್ಮ ಹೃದಯಕ್ಕಿಂತ ದೊಡ್ಡವನಾಗಿದ್ದು,
೨೧ ಎಲ್ಲವುಗಳನ್ನು ತಿಳಿದಿದ್ದಾನೆ. ಪ್ರಿಯರೇ, ನಮ್ಮ ಹೃದಯವು
ನಮಗೆ ಆಜ್ಞೆನಿರ್ಣಯ ತೀರಿಸದಿದ್ದರೆ, ದೇವರ ಸನ್ನಿಧಿಯಲ್ಲಿ
ನಮಗೆ ಧೈರ್ಯ ಉಂಟು. ಮತ್ತು ಏನು ಬೇಡಿದರೂ, ಅವ
೨೨ ನಿಂದ ಹೊಂದುತ್ತೇವೆ. ಯಾಕಂದರೆ ಅವನ ಕಟ್ಟಳೆಗಳನ್ನು ಕೈ
ಕೊಂಡು, ಅವನ ಮುಂದೆ ಹಿತವಾದವುಗಳನ್ನು ಮಾಡುತ್ತೇವೆ.
೨೩ ಅವನ ಕಟ್ಟಳೆಯು ಇದೇ—ಅವನ ಮಗನಾಗಿರುವ ಯೇಸು ಕ್ರಿ
ಸ್ತನ ಹೆಸರನಲ್ಲಿ ವಿಶ್ವಾಸವಿಟ್ಟು, ಅವನು ನಮಗೆ ಕಟ್ಟಳೆ ಕೊಟ್ಟ
ಪ್ರಕಾರ ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡ ಬೇಕೆಂಬುವ
೨೪ ದೇ. ಮತ್ತು ಅವನ ಕಟ್ಟಳೆಗಳನ್ನು ಕೈಕೊಳ್ಳುವವನು ಅವನ
ಲ್ಲಿಯೂ, ಅವನು ಇವನಲ್ಲಿಯೂ, ನೆಲೆಯಾಗಿದ್ದಾನೆ. ಮತ್ತು
ಅವನು ನಮ್ಮಲ್ಲಿ ನೆಲೆಯಾಗಿದ್ದಾನೆಂದು, ಅವನು ನಮಗೆ ಕೊಟ್ಟ
ಆತ್ಮದಿಂದಲೇ ತಿಳುಕೊಳ್ಳುತ್ತೇವೆ.

## ೪. ಸಂಧಿ.

೧ ಪ್ರಿಯರೇ, ಎಲ್ಲಾ ಆತ್ಮಗಳನ್ನು ನಂಬ ಬೇಡಿರಿ; ಆದರೆ, ಅವು
ದೇವರಿಂದಿದ್ದಾವೋ? ಏನೋ? ಆತ್ಮಗಳನ್ನು ಪರೀಕ್ಷಿಸಿರಿ. ಯಾಕಂ
ದರೆ ಅನೇಕ ಸುಳ್ಳು ಪ್ರವಾದಿಗಳು ಲೋಕದಲ್ಲಿ ಹೊರಟಿದ್ದಾರೆ.
೨ ಇದರಿಂದ ದೇವರ ಆತ್ಮವನ್ನು ತಿಳುಕೊಳ್ಳಿರಿ—ಯೇಸು ಕ್ರಿಸ್ತನು
ಮಾಂಸದಲ್ಲಿ ಬಂದನೆಂದು ಅರಿಕೆ ಮಾಡುವ ಪ್ರತಿ ಆತ್ಮವು ದೇವ
3 ರಿಂದಾದದ್ದು. ಮತ್ತು, ಯೇಸು ಕ್ರಿಸ್ತನು ಮಾಂಸದಲ್ಲಿ ಬಂದ
ನೆಂದು, ಅರಿಕೆ ಮಾಡದ ಪ್ರತಿ ಆತ್ಮವು ದೇವರಿಂದಾದದ್ದಲ್ಲ, ಅಂ
ತಿ ಕ್ರಿಸ್ತನದಾಗಿದೆ; ಅದು ಬರುತ್ತದೆಂದು ಕೇಳಿದ್ದೀರಿ; ಮತ್ತು ಈ
ಗ ಲೋಕದಲ್ಲಿ ಅದೆ. ಎಳೆ ಮಕ್ಕಳೇ, ನೀವು ದೇವರಿಂದಾದವರಾ
೪ ಗಿದ್ದೀರಿ. ಮತ್ತು ಅವರನ್ನು ಜಯಿಸಿದ್ದೀರಿ. ಯಾಕಂದರೆ ಲೋ
ಕದಲ್ಲಿ ಇರುವವನಿಗಿಂತ ನಿಮ್ಮಲ್ಲಿ ಇರುವವನು ದೊಡ್ಡವನಾಗಿ
೫ ದ್ದಾನೆ. ಅವರು ಲೋಕದವರಾಗಿದ್ದಾರೆ; ಇದರ ನಿಮಿತ್ತ ಲೋಕ
ದವುಗಳನ್ನು ಮಾತಾಡುತ್ತಾರೆ; ಮತ್ತು ಲೋಕವು ಅವರನ್ನು
೬ ಕೇಳುತ್ತದೆ. ನಾವು ದೇವರಿಂದಾದವರಾಗಿದ್ದೇವೆ. ದೇವರನ್ನು ತಿಳಿ
ದು ಕೊಳ್ಳುವವನು ನಮ್ಮನ್ನು ಕೇಳುತ್ತಾನೆ. ದೇವರಿಂದಲ್ಲದವನು
ನಮ್ಮನ್ನು ಕೇಳುವದಿಲ್ಲ. ಇದರಿಂದ ಸತ್ಯದ ಆತ್ಮವನ್ನೂ, ಮೋ
ಸದ ಆತ್ಮವನ್ನೂ, ತಿಳುಕೊಳ್ಳುತ್ತೇವೆ.

೭ ಪ್ರಿಯರೇ, ಒಬ್ಬರನ್ನೊಬ್ಬರು ಪ್ರೀತಿ ಮಾಡುವ. ಯಾ
ಕಂದರೆ ಪ್ರೀತಿಯು ದೇವರಿಂದಾಗಿದೆ; ಮತ್ತು ಪ್ರೀತಿ ಮಾಡುವ
ಪ್ರತಿ ಮನುಷ್ಯನು ದೇವರಿಂದ ಹುಟ್ಟಿದವನಾಗಿ, ದೇವರನ್ನು ತಿ
೮ ಳುಕೊಳ್ಳುತ್ತಾನೆ. ಪ್ರೀತಿ ಮಾಡದವನು ದೇವರನ್ನು ತಿಳಿದವನ
ಲ್ಲ; ಯಾಕಂದರೆ ದೇವರು ಪ್ರೀತಿಯಾಗಿದ್ದಾನೆ. ಇದರಿಂದ ದೇ
ವರ ಪ್ರೀತಿ ನಮ್ಮಲ್ಲಿ ಪ್ರಕಟವಾಯಿತು—ದೇವರು ತನ್ನ ಒಬ್ಬನೇ
ಹುಟ್ಟಿದ ಮಗನನ್ನು, ಅವನ ಮೂಲವಾಗಿ ನಾವು ಬದುಕುವ ಹಾ
೧೦ ಗೆ, ಲೋಕಕ್ಕೆ ಕಳುಹಿಸಿದ್ದರಿಂದಲೇ. ಇದರಲ್ಲಿ ಪ್ರೀತಿ ಉಂಟು;
ನಾವು ದೇವರನ್ನು ಪ್ರೀತಿ ಮಾಡಿದ್ದರಲ್ಲಿ ಅಲ್ಲ; ಅವನು ನಮ್ಮನ್ನು
ಪ್ರೀತಿ ಮಾಡಿ, ತನ್ನ ಮಗನನ್ನು ನಮ್ಮ ಪಾಪಗಳ ನಿಮಿತ್ತ ಶಾಂ
೧೧ ತಕರವಾದ ಬಲಿಯಾಗಿ ಕಳುಹಿಸಿದ್ದರಲ್ಲಿಯೇ. ಪ್ರಿಯರೇ, ದೇವ
ರು ಹೀಗೆ ನಮ್ಮನ್ನು ಪ್ರೀತಿ ಮಾಡಿದ್ದರೆ, ನಾವು ಸಹ ಒಬ್ಬರ
ನ್ನೊಬ್ಬರು ಪ್ರೀತಿ ಮಾಡುವ ಹಂಗಿನಲ್ಲಿದ್ದೇವೆ. ಯಾವನಾದರೂ
೧೨ ಎಂದಿಗೂ ದೇವರನ್ನು ನೋಡಲಿಲ್ಲ. ನಾವು ಒಬ್ಬರನ್ನೊಬ್ಬರು
ಪ್ರೀತಿ ಮಾಡಿದರೆ, ದೇವರು ನಮ್ಮಲ್ಲಿ ನೆಲೆಯಾಗಿರುತ್ತಾನೆ; ಮ
ತ್ತು ಅವನ ಪ್ರೀತಿಯು ನಮ್ಮಲ್ಲಿ ಸಂಪೂರ್ಣವಾಗಿದೆ. ಅವನು
೧೩ ತನ್ನ ಆತ್ಮದಲ್ಲಿ ನಮಗೆ ಪಾಲನ್ನು ಕೊಟ್ಟದರಿಂದಲೇ, ನಾವು ಅ
ವನಲ್ಲಿಯೂ, ಅವನು ನಮ್ಮಲ್ಲಿಯೂ, ನೆಲೆಯಾಗಿರುತ್ತೇವೆಂದು
ತಿಳುಕೊಳ್ಳುತ್ತೇವೆ.

೧೪ ಮತ್ತು ತಂದೆಯು ಮಗನನ್ನು ಲೋಕಕ್ಕೆ ರಕ್ಷಕನಾಗಿ ಕಳು

೧೫ ಹಿಸಿದನೆಂದು, ನಾವು ನೋಡಿ ಸಾಕ್ಷಿ ಕೊಡುತ್ತೇವೆ. ಯೇಸುವು
ದೇವರ ಮಗನಾಗಿದ್ದಾನೆಂದು, ಅರಿಕೆ ಮಾಡುವವನ್ಯಾವನೋ, ಅ
ವನಲ್ಲಿ ದೇವರು ನೆಲೆಯಾಗಿರುತ್ತಾನೆ; ಅವನು ಸಹ ದೇವರಲ್ಲಿ
೧೬ ನೆಲೆಯಾಗಿರುತ್ತಾನೆ. ಮತ್ತು ನಮ್ಮ ಮೇಲಿರುವ ದೇವರ ಪ್ರೀತಿ
ಯನ್ನು ನಾವು ಅರಿತು, ವಿಶ್ವಾಸಿಸಿದ್ದೇವೆ. ದೇವರು ಪ್ರೀತಿಯಾ
ಗಿದ್ದಾನೆ. ಮತ್ತು ಪ್ರೀತಿಯಲ್ಲಿ ನೆಲೆಯಾಗಿರುವವನು ದೇವರಲ್ಲಿ ನೆ
ಲೆಯಾಗಿರುತ್ತಾನೆ; ಅವನಲ್ಲಿಯೂ ದೇವರು ನೆಲೆಯಾಗಿರುತ್ತಾನೆ.
೧೭ ನ್ಯಾಯ ತೀರ್ಪಿಕೆಯ ದಿವಸದಲ್ಲಿ ನಮಗೆ ಧೈರ್ಯ ಉಂಟಾ
ಗುವ ಹಾಗೆ, ಇದರಿಂದ ಪ್ರೀತಿಯು ನಮ್ಮಲ್ಲಿ ಸಂಪೂರ್ಣವಾ
ಗಿದೆ. ಯಾಕಂದರೆ ಅವನು ಹ್ಯಾಗೋ, ಹಾಗೆಯೇ ನಾವು ಈ
೧೮ ಲೋಕದಲ್ಲಿ ಇದ್ದೇವೆ. ಪ್ರೀತಿಯಲ್ಲಿ ಭಯವಿಲ್ಲ. ಸಂಪೂರ್ಣ
ವಾದ ಪ್ರೀತಿಯು ಭಯವನ್ನು ಹೊರಗೆ ಹಾಕುತ್ತದೆ. ಯಾಕಂದ
ರೆ ಭಯವು ವೇದನೆಯುಳ್ಳದ್ದು; ಭಯ ಪಡುವವನು ಪ್ರೀತಿಯ
೧೯ ಲ್ಲಿ ಸಂಪೂರ್ಣವಾಗಿರುವವನಲ್ಲ. ಅವನು ಮೊದಲು ನಮ್ಮನ್ನು
ಪ್ರೀತಿ ಮಾಡಿದ್ದರಿಂದ, ನಾವು ಅವನನ್ನು ಪ್ರೀತಿ ಮಾಡುತ್ತೇವೆ.

೨೦ ಒಬ್ಬನು ದೇವರನ್ನು ಪ್ರೀತಿ ಮಾಡುತ್ತೇನೆಂದು ಹೇಳಿ, ತನ್ನ ಸ
ಹೋದರನನ್ನು ಹಗೆಮಾಡಿದರೆ,ಸುಳ್ಳುಗಾರನಾಗಿದ್ದಾನೆ.ಹ್ಯಾಗಂ
ದರೆ ತಾನು ಕಂಡ ತನ್ನ ಸಹೋದರನನ್ನು ಪ್ರೀತಿ ಮಾಡದವನು, ತಾ
ನು ಕಾಣದ ದೇವರನ್ನು ಹ್ಯಾಗೆ ಪ್ರೀತಿ ಮಾಡ ಬಲ್ಲನು? ಮತ್ತು
೨೧ ದೇವರನ್ನು ಪ್ರೀತಿ ಮಾಡುವವನು ತನ್ನ ಸಹೋದರನನ್ನು ಪ್ರೀತಿ
ಮಾಡ ಬೇಕೆಂಬ ಈ ಕಟ್ಟಳೆಯನ್ನು ಅವನಿಂದ ಹೊಂದಿದ್ದೇವೆ.

## ೫. ಸಂಧಿ.

೧ ಯೇಸುವು ಕ್ರಿಸ್ತನೆಂದು ವಿಶ್ವಾಸಿಸುವ ಪ್ರತಿ ಮನುಷ್ಯನು
ದೇವರಿಂದ ಹುಟ್ಟಿದ್ದಾನೆ. ಹುಟ್ಟಿಸಿದವನನ್ನು ಪ್ರೀತಿ ಮಾಡುವ
ಪ್ರತಿ ಮನುಷ್ಯನು ಅವನಿಂದ ಹುಟ್ಟಿದವನನ್ನು ಸಹ ಪ್ರೀತಿ ಮಾ
೨ ಡುತ್ತಾನೆ. ನಾವು ದೇವರನ್ನು ಪ್ರೀತಿ ಮಾಡಿ, ಅವನ ಕಟ್ಟಳೆಗಳ
ನ್ನು ಕೈ ಕೊಂಡರೆ, ದೇವರ ಮಕ್ಕಳನ್ನು ಪ್ರೀತಿ ಮಾಡುತ್ತೇ
೩ ವೆಂದು ತಿಳುಕೊಳ್ಳುತ್ತೇವೆ. ಯಾಕಂದರೆ ಅವನ ಕಟ್ಟಳೆಗಳನ್ನು
ಕೈ ಕೊಳ್ಳುವದೇ ದೇವರ ಪ್ರೀತಿಯಾಗಿದೆ. ಮತ್ತು ಅವನ ಕಟ್ಟ
೪ ಳೆಗಳು ಭಾರವಾದವುಗಳಲ್ಲ. ಯಾಕಂದರೆ ದೇವರಿಂದ ಹುಟ್ಟಿದ್ದೆ
ಲ್ಲಾ ಲೋಕವನ್ನು ಜಯಿಸುತ್ತದೆ. ಮತ್ತು ನಮ್ಮ ವಿಶ್ವಾಸವೇ
೫ ಲೋಕವನ್ನು ಜಯಿಸಿದ ಜಯವಾಗಿದೆ. ಯೇಸುವು ದೇವರ
ಮಗನಾಗಿದ್ದಾನೆಂದು ವಿಶ್ವಾಸಿಸುವವನಲ್ಲದೆ, ಮತ್ಯಾವನು ಲೋ
ಕವನ್ನು ಜಯಿಸುವವನಾಗಿದ್ದಾನೆ.

೬ ಇವನೇ ನೀರಿನಿಂದಲೂ ರಕ್ತದಿಂದಲೂ ಬಂದವನು; ಯಾವ
ನಂದರೆ—ಕ್ರಿಸ್ತನಾದ ಯೇಸು. ನೀರಿನಿಂದ ಮಾತ್ರವಲ್ಲ, ನೀರಿ
ನಿಂದಲೂ ರಕ್ತದಿಂದಲೂ. ಮತ್ತು ಆತ್ಮವೇ ಸಾಕ್ಷಿ ಕೊಡುವಂ
೭ ಥಾದ್ದು; ಯಾಕಂದರೆ ಆತ್ಮವು ಸತ್ಯವಾಗಿದೆ. ಯಾಕಂದರೆ ಪ
ರಲೋಕದಲ್ಲಿ ಸಾಕ್ಷಿ ಕೊಡುವವರು ಮೂವರು ಇದ್ದಾರೆ,—ತಂದೆ
ಯೂ, ವಾಕ್ಯವೂ, ಪರಿಶುದ್ಧಾತ್ಮವೂ; ಮೂವರಾದ ಇವರು
೮ ಒಂದಾಗಿದ್ದಾರೆ. ಮತ್ತು ಭೂಮಿಯಲ್ಲಿ ಸಾಕ್ಷಿ ಕೊಡುವವರು
ಮೂವರು ಇದ್ದಾರೆ,—ಆತ್ಮವೂ, ನೀರೂ, ರಕ್ತವೂ; ಈ ಮೂವ
ರು ಒಂದಕ್ಕಾಗಿದ್ದಾರೆ.
೯ ನಾವು ಮನುಷ್ಯರ ಸಾಕ್ಷಿಯನ್ನು ಅಂಗೀಕರಿಸಿದರೆ, ದೇವರ
ಸಾಕ್ಷಿಯು ಅದಕ್ಕಿಂತ ದೊಡ್ಡದು. ಯಾಕಂದರೆ ಇದೇ ದೇವ
೧೦ ರ ಸಾಕ್ಷಿಯಾಗಿದೆ—ತನ್ನ ಮಗನನ್ನು ಕುರಿತು ಕೊಟ್ಟಿದ್ದೇ. ದೇ
ವರ ಮಗನಲ್ಲಿ ವಿಶ್ವಾಸವಿಡುವವನು ತನ್ನಲ್ಲಿ ಸಾಕ್ಷಿ ಉಂಟಾದ
ವನಾಗಿದ್ದಾನೆ; ದೇವರನ್ನು ವಿಶ್ವಾಸಿಸದವನು, ದೇವರು ತನ್ನ ಮ
ಗನನ್ನು ಕುರಿತು ಕೊಟ್ಟ ಸಾಕ್ಷಿಯಲ್ಲಿ ವಿಶ್ವಾಸವಿಡದ ಕಾರಣ,
೧೧ ಅವನನ್ನು ಸುಳ್ಳುಗಾರನಾಗ ಮಾಡಿದ್ದಾನೆ. ಆ ಸಾಕ್ಷಿ ಏನಂದರೆ,
ದೇವರು ನಮಗೆ ನಿತ್ಯ ಜೀವವನ್ನು ಕೊಟ್ಟಿದ್ದಾನೆ; ಮತ್ತು ಈ
೧೨ ಜೀವವು ಅವನ ಮಗನಲ್ಲಿ ಉಂಟು, ಎಂಬುವದೇ. ಮಗನನ್ನು
ಹೊಂದಿದವನು ಜೀವವನ್ನು ಹೊಂದಿದ್ದಾನೆ. ದೇವರ ಮಗನನ್ನು
ಹೊಂದದವನು ಜೀವವನ್ನು ಹೊಂದಿದವನಲ್ಲ.

೧೩ ನಿತ್ಯ ಜೀವವು ನಿಮಗುಂಟೆಂದು, ನೀವು ತಿಳಿಯುವ ಹಾಗೆ
ಯೂ, ದೇವರ ಮಗನ ಹೆಸರಿನಲ್ಲಿ ವಿಶ್ವಾಸವಿಡುವ ಹಾಗೆಯೂ,
ದೇವರ ಮಗನ ಹೆಸರಿನಲ್ಲಿ ವಿಶ್ವಾಸಿಸುವವರಾದ ನಿಮಗೆ ಇವುಗ
೧೪ ಳನ್ನು ಬರೆದಿದ್ದೇನೆ. ಮತ್ತು ಅವನ ಕಡೆಗೆ ನಮಗಿರುವ ಧೈ
ರ್ಯವು ಏನಂದರೆ—ಅವನ ಚಿತ್ತದ ಪ್ರಕಾರ ಯಾವದನ್ನಾದ
೧೫ ರೂ ಬೇಡಿ ಕೊಂಡರೆ, ನಮಗೆ ಕಿವಿ ಕೊಡುತ್ತಾನೆ. ಮತ್ತು ನಾವು
ಯಾವದನ್ನಾದರೂ ಬೇಡಿ ಕೊಂಡರೆ, ನಮಗೆ ಕಿವಿ ಕೊಡುತ್ತಾ
ನೆಂದು, ನಾವು ತಿಳುಕೊಂಡರೆ, ಅವನಿಂದ ಬೇಡಿ ಕೊಂಡ ಬಿನ್ನ
ಹಗಳನ್ನು ಹೊಂದಿದ್ದೇವೆಂದು, ಬಲ್ಲೆವು.

೧೬ ಒಬ್ಬನು ತನ್ನ ಸಹೋದರನು ಮರಣಕ್ಕೆ ಪಾತ್ರವಾಗದ ಪಾಪ
ಮಾಡುವದನ್ನು ಕಂಡರೆ, ಬೇಡಿ ಕೊಳ್ಳಲಿ. ಆಗ ಮರಣಕ್ಕೆ ಪಾತ್ರ
ವಾಗದ ಪಾಪ ಮಾಡುವವರಿಗೋಸ್ಕರ ಅವನಿಗೆ ಜೀವವನ್ನು ಕೊಡು
ವನು. ಮರಣಕ್ಕೆ ಪಾತ್ರವಾದ ಪಾಪ ಉಂಟು ಅದಕ್ಕೋಸ್ಕರ ಪ್ರಾ
ರ್ಥಿಸ ಬೇಕೆಂದು, ನಾನು ಹೇಳುವದಿಲ್ಲ. ಎಲ್ಲಾ ಅನೀತಿಯು ಪಾಪ
೧೭ ವಾಗಿದೆ; ಮತ್ತು ಮರಣಕ್ಕೆ ಪಾತ್ರವಾಗದ ಪಾಪ ಉಂಟು.

೧೮ ದೇವರಿಂದ ಹುಟ್ಟಿದ ಪ್ರತಿ ಮನುಷ್ಯನು ಪಾಪ ಮಾಡನೆಂದು,
ಬಲ್ಲೆವು. ಆದರೆ ದೇವರಿಂದ ಹುಟ್ಟಿದವನು ತನ್ನನ್ನು ಕಾಪಾಡಿ
ಕೊಳ್ಳುತ್ತಾನೆ. ದುಷ್ಟನು ಅವನನ್ನು ಮುಟ್ಟುವದಿಲ್ಲ. ದೇವರಿಂ
ದಾದವರಾಗಿದ್ದೇವೆಂದೂ, ಲೋಕವೆಲ್ಲಾ ದುಷ್ಟನಲ್ಲಿ ಇರುತ್ತದೆಂ
೧೯ ದೂ, ಬಲ್ಲೆವು. ಆದರೆ ದೇವರ ಮಗನು ಬಂದು, ಸತ್ಯವಾದವ
ನನ್ನು ತಿಳುಕೊಳ್ಳುವ ಹಾಗೆ, ವಿವೇಕವನ್ನು ನಮಗೆ ಕೊಟ್ಟಿದ್ದಾ
ನೆಂದೂ, ಅವನ ಮಗನಾದ ಯೇಸು ಕ್ರಿಸ್ತನೆಂಬ ಸತ್ಯವಾದವನ
ಲ್ಲಿ ಇರುತ್ತೇವೆಂದೂ, ಬಲ್ಲೆವು. ಇವನೇ ಸತ್ಯ ದೇವರೂ, ನಿತ್ಯ
ಜೀವವೂ, ಆಗಿದ್ದಾನೆ.
೨೦ ಎಳೆ ಮಕ್ಕಳೇ, ವಿಗ್ರಹಗಳಿಗೆ ದೂರವಾಗಿರ ನೋಡಿ ಕೊಳ್ಳಿ
ರಿ. ಆಮೆನ್.

# THE SECOND EPISTLE OF JOHN.

### ಯೋಹಾನನ ಎರಡನೇ ಪತ್ರಿಕೆ.

೧ ಹಿರಿಯನು—ನಮ್ಮಲ್ಲಿ ನೆಲೆಯಾಗಿರುವಂಥ, ಎಂದೆಂದಿಗೂ ನ
ಮ್ಮ ಸಂಗಡ ಇರುವಂಥ, ಸತ್ಯಕ್ಕೋಸ್ಕರ, ನಾನು ಮಾತ್ರವಲ್ಲ,



ಸತ್ಯವನ್ನು ತಿಳಿದವಕೆಲ್ಲರೂ, ಸತ್ಯದಲ್ಲಿ ಪ್ರೀತಿ ಮಾಡುವ, ಆ
೨ ಯಲ್ಪಟ್ಟ, ದೊರೆಸಾನಿಗೂ, ಅವಳ ಮಕ್ಕಳಿಗೂ, ಬರೆಯುವ
ದು—ತಂದೆಯಾದ ದೇವರಿಂದಲೂ, ತಂದೆಯ ಮಗನಾಗಿರುವ
3 ಕರ್ತನಾದ ಯೇಸು ಕ್ರಿಸ್ತನಿಂದಲೂ, ಕೃಪೆಯೂ ಕರುಣೆ
ಯೂ ಸಮಾಧಾನವೂ ಸತ್ಯದಲ್ಲಿಯೂ ಪ್ರೀತಿಯಲ್ಲಿಯೂ
ನಿನ್ನು ಸಂಗಡ ಇರಲಿ.

೪ ನಾವು ತಂದೆಯಿಂದ ಕಟ್ಟಳೆ ಹೊಂದಿದ ಪ್ರಕಾರ ಸತ್ಯದಲ್ಲಿ
ನಡೆದು ಕೊಳ್ಳುವವರನ್ನು ನಿನ್ನ ಮಕ್ಕಳಲ್ಲಿ ಕಂಡು ಕೊಂಡು,
೫ ಅತಿ ಸಂತೋಷ ಪಟ್ಟೆನು. ಮತ್ತು ಈಗ, ದೊರೆಸಾನಿಯೇ, ನಿ
ನಗೆ ಹೊಸ ಕಟ್ಟಳೆಯ ಹಾಗಲ್ಲ, ಆದಿಯಿಂದ ನಮಗಿದ್ದ ಕಟ್ಟ
ಳೆಯನ್ನು ಬರೆದು, ನಾವು ಒಬ್ಬರನ್ನೊಬ್ಬರು ಪ್ರೀತಿ ಮಾಡ
೬ ಬೇಕೆಂದು ನಿನ್ನನ್ನು ಬೇಡಿ ಕೊಳ್ಳುತ್ತೇನೆ. ಇದೇ ಪ್ರೀತಿ—ನಾವು
ಅವನ ಕಟ್ಟಳೆಗಳ ಪ್ರಕಾರ ನಡೆದು ಕೊಳ್ಳುವದೇ; ಅದರಲ್ಲಿ ನಡೆ
ದು ಕೊಳ್ಳ ಬೇಕೆಂದು, ನೀವು ಆದಿಯಿಂದ ಕೇಳಿದ ಪ್ರಕಾರ,
ಇದೇ ಕಟ್ಟಳೆ.

೭ ಯಾಕಂದರೆ, ಯೇಸು ಕ್ರಿಸ್ತನು ಮಾಂಸದಲ್ಲಿ ಬಂದನೆಂದು,
ಅರಿಕೆ ಮಾಡಿದ ಅನೇಕ ಮೋಸಗಾರರು ಲೋಕದಲ್ಲಿ ಪ್ರವೇಶಿಸಿ
ದ್ದಾರೆ; ಇವನೇ ಮೋಸಗಾರನೂ ಅಂತಿಕ್ರಿಸ್ತನೂ ಆಗಿದ್ದಾನೆ.
೮ ನಾವು ಕಷ್ಟ ಮಾಡಿದವುಗಳನ್ನು ಕಳ ಕೊಳ್ಳದೆ, ಪೂರ್ಣ
ಪ್ರತಿಫಲ ತಕ್ಕೊಳ್ಳುವ ಹಾಗೆ, ನಿಮ್ಮನ್ನು ನೀವೇ ನೋಡಿ ಕೊ
೯ ಳ್ಳಿರಿ. ಕ್ರಿಸ್ತನ ಬೋಧನೆಯಲ್ಲಿ ನೆಲೆಯಾಗಿರದೆ, ಮೀರುವ ಪ್ರತಿ
ಮನುಷ್ಯನು ದೇವರನ್ನು ಹೊಂದದೆ ಇದ್ದಾನೆ. ಕ್ರಿಸ್ತನ ಬೋ
ಧನೆಯಲ್ಲಿ ನೆಲೆಯಾಗಿರುವವನೇ ತಂದೆಯನ್ನೂ ಮಗನನ್ನೂ
೧೦ ಹೊಂದಿದ್ದಾನೆ. ಒಬ್ಬನು ಈ ಬೋಧನೆಯನ್ನು ತಾರದೆ ನಿಮ್ಮ
ಬಳಿಗೆ ಬಂದರೆ, ಅವನನ್ನು ಮನೆಯಲ್ಲಿ ಅಂಗೀಕರಿಸ ಬೇಡಿರಿ.
೧೧ ಅವನಿಗೆ ಶುಭವಾಗಲಿ ಎಂದು ಹೇಳ ಬೇಡಿರಿ. ಯಾಕಂದರೆ ಅವ
ನಿಗೆ ಶುಭವಾಗಲಿ ಎಂದು ಹೇಳುವವನು ಅವನ ದುಷ್ಟ ಕ್ರಿಯೆಗ
ಳಲ್ಲಿ ಪಾಲುಗಾರನಾಗಿದ್ದಾನೆ.

೧೨ ನಿಮಗೆ ಬರೆಯುವದಕ್ಕೆ ನನಗೆ ಬಹಳ ಉಂಟು; ಆದರೆ ಕಾ
ಗದದಿಂದಲೂ ಮಸಿಯಿಂದಲೂ ಬರೆಯ ಮನಸ್ಸಿಲ್ಲದೆ, ನಮ್ಮ
ಸಂತೋಷವು ಸಂಪೂರ್ಣವಾಗುವ ಹಾಗೆ, ನಿಮ್ಮ ಬಳಿಗೆ ಬಂ
ದು, ಮುಖಾಮುಖಿಯಾಗಿ ಮಾತಾಡ ನಿರೀಕ್ಷಿಸುತ್ತೇನೆ.
೧೩ ಆಯಲ್ಪಟ್ಟ ನಿನ್ನ ಸಹೋದರಿಯ ಮಕ್ಕಳು ನಿನ್ನನ್ನು
ವಂದಿಸುತ್ತಾರೆ. ಆಮೆನ್.

# THE THIRD EPISTLE OF JOHN.

### ಯೋಹಾನನ ಮೂರನೇ ಪತ್ರಿಕೆ.

೧ ನಾನು ಸತ್ಯದಲ್ಲಿ ಪ್ರೀತಿ ಮಾಡುವ ಪ್ರಿಯ ಗಾಯನಿಗೆ ಹಿರಿ
ಯನು ಬರೆಯುವದು.

೨ ಪ್ರಿಯನೇ, ನಿನ್ನ ಆತ್ಮವು ಸುಖವಾಗಿರುವ ಪ್ರಕಾರ, ನೀನು
ಸುಖವಾಗಿಯೂ ಸ್ವಸ್ಥವಾಗಿಯೂ ಇರ ಬೇಕೆಂದು, ಎಲ್ಲಾದರ
3 ಮೇಲೆ ಅಪೇಕ್ಷಿಸುತ್ತೇನೆ. ಯಾಕಂದರೆ ಸಹೋದರರು ಬಂದು,
ನೀನು ಸತ್ಯದಲ್ಲಿ ಹ್ಯಾಗೆ ನಡೆದು ಕೊಳ್ಳುತ್ತೀ ಎಂದು, ನಿನ್ನ
೪ ಸತ್ಯಕ್ಕೆ ಸಾಕ್ಷಿ ಕೊಡುವಾಗ, ಅತಿ ಸಂತೋಷ ಪಟ್ಟೆನು. ನನ್ನ
ಮಕ್ಕಳು ಸತ್ಯದಲ್ಲಿ ನಡೆದು ಕೊಳ್ಳುತ್ತಾರೆಂದು ಕೇಳುವದಕ್ಕಿಂ
ತ, ಅಧಿಕ ಸಂತೋಷವು ನನಗಿಲ್ಲ.

೫ ಪ್ರಿಯನೇ, ಸಹೋದರರಿಗೂ ಪರದೇಶಸ್ಥರಿಗೂ ಮಾಡುವದನ್ನು
೬ ನಂಬಿಕೆಯಾಗಿ ಮಾಡುತ್ತೀ. ಅವರು ಸಭೆಯ ಮುಂದೆ ನಿನ್ನ ಪ್ರೀತಿಗೆ
ಸಾಕ್ಷಿ ಕೊಟ್ಟರು. ಅವರನ್ನು ದೇವರಿಗೆ ಯೋಗ್ಯವಾದ ಪ್ರಕಾರ
೭ ಮುಂಕಳುಹಿಸಿದರೆ, ಚನಾಗಿ ಮಾಡುವಿ. ಯಾಕಂದರೆ ಅವರು,
ಜನಾಂಗಗಳಿಂದ ಏನೂ ತಕ್ಕೊಳ್ಳದೆ, ಅವನ ನಾಮಕ್ಕೋಸ್ಕ
೮ ರ ಹೊರಟರು. ಆದದರಿಂದ, ನಾವು ಸತ್ಯಕ್ಕೆ ಜತೆ ಕೆಲಸದವರಾ
ಗುವ ಹಾಗೆ, ಅಂಥವರನ್ನು ಅಂಗೀಕರಿಸುವ ಹಂಗಿನಲ್ಲಿದ್ದೇವೆ.

೯ ಸಭೆಗೆ ಬರೆವೆನು; ಆದರೆ ಅವರಲ್ಲಿ ಮೊದಲಿನವನಾಗ ಬೇಕೆಂ
ಬ ದಿಯೋತ್ರೆಫನು ನಮ್ಮನ್ನು ಅಂಗೀಕರಿಸುವದಿಲ್ಲ. ಆದದರಿಂ
ದ, ನಾನು ಬಂದರೆ, ನಮ್ಮನ್ನು ಕುರಿತು ಅವನು ಮಾಡುವ ಕೆಲ
ಸಗಳನ್ನು ನೆನಪು ಮಾಡಿ ಕೊಳ್ಳುವೆನು. ಏನಂದರೆ, ನಮ್ಮನ್ನು
ಕುರಿತು ಕೆಟ್ಟ ಮಾತುಗಳನ್ನು ಹರಟುತ್ತಾನೆ; ಮತ್ತು, ಅದು ಸಾ
ಲದೆಂದು, ತಾನು ಸಹೋದರರನ್ನು ಅಂಗೀಕರಿಸದೆ, ಅಂಗೀಕರಿಸ
ಮನಸ್ಸುಳ್ಳವರಿಗೆ ಅಡ್ಡಿ ಮಾಡಿ, ಸಭೆಯಿಂದ ಹೊರಗೆ ಹಾಕು
೧೦ ತ್ತಾನೆ. ಪ್ರಿಯನೇ, ಕೆಟ್ಟದ್ದನ್ನಲ್ಲ, ಒಳ್ಳೇದನ್ನೇ ಅನುಸರಿಸು. ಒ
ಳ್ಳೇದನ್ನು ಮಾಡುವವನು ದೇವರಿಂದಾದವನಾಗಿದ್ದಾನೆ; ಆದರೆ
ಕೆಟ್ಟದ್ದನ್ನು ಮಾಡುವವನು ದೇವರನ್ನು ನೋಡಿದವನಲ್ಲ.

೧೨ ದೇಮೇತ್ರಿಯನು ಎಲ್ಲರಿಂದ, ಸತ್ಯದಿಂದ ಸಹ, ಸಾಕ್ಷಿ ಹೊಂ
ದಿದ್ದಾನೆ: ನಾವು ಸಹ ಸಾಕ್ಷಿ ಕೊಡುತ್ತೇವೆ; ನಮ್ಮ ಸಾಕ್ಷಿಯು
ಸತ್ಯವೆಂದು ಬಲ್ಲಿರಿ.

೧೩ ಬರೆಯುವದಕ್ಕೆ ನನಗೆ ಬಹಳ ಇತ್ತು; ಆದರೆ ಮಸಿ ಲೇಖ
೧೪ ಣಿಗಳಿಂದ ನಿನಗೆ ಬರೆಯ ಮನಸ್ಸಿಲ್ಲ. ಆದರೆ ಬೇಗ ನಿನ್ನನ್ನು
ನೋಡ ನಿರೀಕ್ಷಿಸುತ್ತೇನೆ; ಆಗ ಮುಖಾಮುಖಿಯಾಗಿ ಮಾತಾಡು
ವೆವು. ನಿನಗೆ ಸಮಾಧಾನವು ಆಗಲಿ. ಸ್ನೇಹಿತರು ನಿನ್ನನ್ನು ವಂ
ದಿಸುತ್ತಾರೆ. ಸ್ನೇಹಿತರನ್ನು ಹೆಸರೆಸರಾಗಿ ವಂದಿಸು.

# THE EPISTLE OF JUDE.

### ಯೂದನ ಪತ್ರಿಕೆ.

೧ ಯೇಸು ಕ್ರಿಸ್ತನ ದಾಸನೂ, ಯಾಕೋಬನ ಸಹೋದರ
ನೂ, ಆಗಿರುವ ಯೂದನು ತಂದೆಯಾದ ದೇವರಲ್ಲಿ ಪರಿಶುದ್ಧ
ಮಾಡಲ್ಪಟ್ಟಿಂಥ, ಯೇಸು ಕ್ರಿಸ್ತನಲ್ಲಿ ಕಾಪಾಡಲ್ಪಟ್ಟಿಂಥ, ಕರೆ
೨ ಯಲ್ಪಟ್ಟವರಿಗೆ—ಕರುಣೆಯೂ, ಸಮಾಧಾನವೂ, ಪ್ರೀತಿಯೂ,
ನಿಮಗೆ ಹೆಚ್ಚಿ ಸಲ್ಪಡಲಿ.

3 ಪ್ರಿಯರೇ, ಹುರುವಾದ ರಕ್ಷಣೆಯ ವಿಷಯವಾಗಿ ನಾನು ನಿ
ಮಗೆ ಬರೆಯ ಪೂರ್ಣ ಜಾಗ್ರತೆ ಮಾತಲಾಗಿ, ಒಂದು ಸಾರಿ ಪ
ರಿಶುದ್ಧರಿಗೆ ಒಪ್ಪಿಸಲ್ಪಟ್ಟ ವಿಶ್ವಾಸಕ್ಕೋಸ್ಕರ ಹೋರಾಡ ಬೇ
ಕೆಂದು, ನಿಮಗೆ ಬುದ್ಧಿ ಹೇಳಿ ಬರೆಯುವದಕ್ಕೆ ನನಗೆ ಅಗತ್ಯವಾ
೪ ಯಿತು. ಯಾಕಂದರೆ ಪೂರ್ವದಲ್ಲಿ ಈ ಆಜ್ಞೆನಿರ್ಣಯಕ್ಕೆ

ಮುಂಬರೆಯಲ್ಪಟ್ಟ ಭಕ್ತಿಹೀನರಾದ ಕೆಲವು ಮನುಷ್ಯರು ನಮ್ಮ
ದೇವರ ಕೃಪೆಯನ್ನು ಬಂಡುತನಕ್ಕೆ ಮಾರ್ಪಡಿಸುವವರಾಗಿ
ಯೂ, ಒಬ್ಬನೇ ಯಜಮಾನನಾದ ದೇವರನ್ನೂ, ನಮ್ಮ ಕ
ರ್ತನಾದ ಯೇಸು ಕ್ರಿಸ್ತನನ್ನೂ ಹೊಂಕುವವರಾಗಿಯೂ, ಗೋ
ಪ್ಯವಾಗಿ ಹೊಕ್ಕಿದ್ದಾರೆ.

೫ ಆದರೆ, ನೀವು ಒಂದು ಸಾರಿ ತಿಳಿದಾಗ್ಯೂ, ಇದನ್ನು ನಿಮಗೆ
ಜ್ಞಾಪಕ ಮಾಡ ಮನಸ್ಸಾಗಿದ್ದೇನೆ. ಏನಂದರೆ—ಕರ್ತನು ಜನ
ರನ್ನು ಐಗುಪ್ತ ದೇಶದಿಂದ ತಪ್ಪಿಸಿ, ಆ ಮೇಲೆ ವಿಶ್ವಾಸಿಸದವರ
೬ ನ್ನು ನಾಶನ ಮಾಡಿದನು. ಮತ್ತು, ತಮ್ಮ ಆದಿ ಸ್ಥಿತಿಯನ್ನು ಕಾ
ಪಾಡದೆ, ಸ್ವಂತ ವಾಸಸ್ಥಾನವನ್ನು ಬಿಟ್ಟು ದೂತರನ್ನು ದೊಡ್ಡ
ದಿನದ ನ್ಯಾಯ ತೀರ್ವಿಕೆಗೆ ನಿತ್ಯ ಬಂಧನಗಳಲ್ಲಿ ಅಂಧಕಾರದ
೭ ಕೆಳಗೆ ಇಟ್ಟಿದ್ದಾನೆ. ಹೀಗೆ ಸೊದೋಮೂ, ಗಮೋರವೂ, ಇವು
ಗಳ ಸುತ್ತಲಿರುವ ಪಟ್ಟಣಗಳೂ, ಇವರಿಗೆ ಸಮಾನ ರೀತಿಯಿಂದ
ಕೇವಲ ಜಾರರಾಗಿ, ಬೇರೆ ಮಾಂಸಕ್ಕೆ ಕೂಡಿ ಕೊಂಡು, ನಿತ್ಯ
ಅಗ್ನಿಯ ಶಿಕ್ಷೆಯನ್ನು ಅನುಭವಿಸಿ, ಮಾದರಿಯಾಗಿ ಎದುರಿಗೆ
ಇಡಲ್ಪಟ್ಟವೆ.

೮ ಹೀಗೆಯೇ ಇವರು ಸಹ, ಸ್ವಚ್ಛಾವಸ್ಥೆಯವರಾಗಿ, ಮಾಂಸ
ವನ್ನು ಮಲಿನ ಮಾಡಿ, ಬಪೆತನವನ್ನು ಅಲಕ್ಷ್ಯ ಮಾಡಿ, ಮಹಿ
೯ ಮೆಗಳನ್ನು ದೂಷಿಸುತ್ತಾರೆ. ಆದರೆ ಪ್ರಧಾನ ದೂತನಾದ ಮಿಕ
ಯೇಲನು ಪಿಶಾಚನ ಸಂಗಡ ವ್ಯಾಜ್ಯವಾಡಿ, ಮೋಸೆಯ ಶರೀರ
ಕ್ಕೋಸ್ಕರ ತರ್ಕಿಸುವಾಗ, ದೂಷಣೆಯ ನಿರ್ಣಯವನ್ನು
ತರಿಸ ಧೈರ್ಯ ಪಡದೆ—ಕರ್ತನು ನಿನ್ನನ್ನು ಗದರಿಸಲಿ, ಅಂದ
೧೦ ನು. ಆದರೆ ಇವರು, ತಿಳ್ಳಿಯದವುಗಳನ್ನು ದೂಷಿಸಿ, ಸ್ವಭಾವ
ದಿಂದ ಬುದ್ಧಿಯಿಲ್ಲದ ಮೃಗಗಳ ಹಾಗೆ ತಿಳ್ಳಿದವುಗಳಲ್ಲಿ ಕೆಟ್ಟು
೧೧ ಹೋಗುತ್ತಾರೆ. ಅವರಿಗೆ ಅಯ್ಯೋ! ಯಾಕಂದರೆ ಕಾಯಿನನ
ಮಾರ್ಗದಲ್ಲಿ ನಡೆದು, ಬಿಳ್ಳಾಮನ ಸಂಬಳದ ಮೋಸದಲ್ಲಿ ಮು
ಣುಗಿ, ಕೋರಹನ ವಿವಾದದಲ್ಲಿ ನಾಶವಾದರು.

೧೨ ಇವರು ನಿಮ್ಮ ಸಂಗಡ ಊಟ ಮಾಡಿ, ನಿರ್ಭಯವಾಗಿ ತಮ್ಮನ್ನು
ಪೋಷಿಸಿ ಕೊಂಡು, ನಿಮ್ಮ ಪ್ರೀತಿ ಭೋಜನಗಳಲ್ಲಿ ಕಳಂಕಗಳಾಗಿ
ದ್ದು, ಘಾಳಿಗಳಿಂದ ಬಡಿಯಲ್ಪಡುವ ನೀರಿಲ್ಲದ ಮೇಘಗಳೂ
ಬಾಡಿದ ಹಣ್ಣುಳ್ಳ, ನಿಷ್ಫಲವಾದ, ಎರಡನೇ ಸಾರಿ ಸತ್ತ, ಬೇ
೧೩ ರೊಂದಿಗೆ ಕೀಳ್ಪಟ್ಟ, ಮರಗಳೂ, ಸ್ವಂತ ನಾಚಿಕೆ ಎಂಬ ನೊ
ರೆಯನ್ನು ಕಾರುವ ಸಮುದ್ರದ ಹುಚ್ಚ ತೆರೆಗಳೂ, ಅಲೆಯುವ
ನಕ್ಷತ್ರಗಳೂ, ಆಗಿದ್ದಾರೆ. ಅವರಿಗೋಸ್ಕರ ಕಾರ್ಗತ್ತಲು ಎಂದೆಂ
ದಿಗೂ ಇಡಲ್ಪಟ್ಟಿದೆ.

೧೪ ಇವರನ್ನು ಕುರಿತು ಆದಮನಿಂದ ಏಳನೆಯವನಾದ ಹನೋ
ಕನು ಪ್ರವಾದಿಸಿ, ಹೇಳಿದ್ದೇನಂದರೆ—ಇಗೋ, ಕರ್ತನು ಎಲ್ಲರಿಗೆ
೧೫ ನ್ಯಾಯ ತೀರಿಸುವದಕ್ಕೂ, ಭಕ್ತಿಹೀನರೆಲ್ಲರಿಗೆ, ಅವರು ಮಾಡಿ
ದ ಎಲ್ಲಾ ಭಕ್ತಿಹೀನ ಕ್ರಿಯೆಗಳಿಗೋಸ್ಕರವೂ, ಭಕ್ತಿಹೀನರಾ
ದ ಪಾಪಿಷ್ಠರು ಅವನಿಗೆ ವಿರೋಧವಾಗಿ ಆಡಿದ ಎಲ್ಲಾ ಕಠಿಣವಾದ
ಮಾತುಗಳಿಗೋಸ್ಕರವೂ, ಖಂಡಿಸುವದಕ್ಕೂ, ಅಯುತಾಯು
೧೬ ತ ಪರಿಶುದ್ಧರ ಸಂಗಡ ಬರುತ್ತಾನೆ. ಇವರು ಗುಣುಗುಟ್ಟುವವರೂ,
ಅಸಂತುಷ್ಟರೂ, ತಮ್ಮ ಆಶೆಗಳ ಪ್ರಕಾರ ನಡೆಯುವವರೂ, ಆ
ಗಿದ್ದಾರೆ; ಅವರ ಬಾಯಿಯು ಉಬ್ಬಿದ ಮಾತುಗಳನ್ನು ಆಡು
ತ್ತದೆ; ಲಾಭಕ್ಕೋಸ್ಕರ ಮುಖದಾಕ್ಷಿಣ್ಯವನ್ನು ಮಾಡುತ್ತಾರೆ.

೧೭ ಆದರೆ, ಪ್ರಿಯರೇ, ನೀವು ನಮ್ಮ ಕರ್ತನಾದ ಯೇಸು ಕ್ರಿ
ಸ್ತನ ಅಪೊಸ್ತಲರು ಮುಂಚೆ ಹೇಳಿದ ಮಾತುಗಳನ್ನು ನೆನಪು
೧೮ ಮಾಡಿ ಕೊಳ್ಳಿರಿ. ಏನಂದರೆ, ಕಡೇ ಕಾಲದಲ್ಲಿ ತಮ್ಮ ಭಕ್ತಿಹೀ
ನವಾದ ಆಶೆಗಳ ಪ್ರಕಾರ ನಡೆದು ಕೊಳ್ಳುವ ಕಿಚೆಯೋದ್ಯಗಾರ
೧೯ ರು ಇರುವರೆಂದು, ನಿಮಗೆ ಹೇಳಿದರು. ತಮ್ಮನ್ನು ಬೇರೆ ಮಾ
ಡಿ ಕೊಳ್ಳುವವರೂ, ಪ್ರಾಣಭಾವದವರೂ, ಆತ್ಮವಿಲ್ಲದವರೂ,
ಇವರೇ.

೨೦ ಆದರೆ, ಪ್ರಿಯರೇ, ನೀವು ನಿಮ್ಮ ಅತಿ ಪರಿಶುದ್ಧವಾದ ವಿಶ್ವಾ
ಸದ ಮೇಲೆ ನಿಮ್ಮನ್ನು ಕಟ್ಟಿ ಕೊಂಡು, ಪರಿಶುದ್ಧಾತ್ಮದಲ್ಲಿ ಪ್ರಾ
೨೧ ರ್ಥಿಸಿ, ನಿತ್ಯ ಜೀವಕ್ಕೆ ನಮ್ಮ ಕರ್ತನಾದ ಯೇಸು ಕ್ರಿಸ್ತನ
ಕೃಪೆಯನ್ನು ಎದುರು ನೋಡುತ್ತಾ, ದೇವರ ಪ್ರೀತಿಯಲ್ಲಿ ನಿ
೨೨ ಮ್ಮನ್ನು ಕಾಪಾಡಿ ಕೊಳ್ಳಿರಿ. ಮತ್ತು ತಾರತಮ್ಯ ನೋಡಿ, ಕೆ
೨೩ ಲವರನ್ನು ಕರುಣಿಸಿರಿ; ಕೆಲವರನ್ನು ಬೆಂಕಿಯೊಳಗಿಂದ ಎಳೆದು,
ಭಯದಿಂದ ರಕ್ಷಿಸಿರಿ. ಮಾಂಸದಿಂದ ಮೈಲಿಗೆಯಾದ ಅಂಗಿ
ಯನ್ನು ಸಹ ಹಗೆ ಮಾಡಿರಿ.

೨೪ ಬೀಳದ ಹಾಗೆ ನಿಮ್ಮನ್ನು ಕಾಪಾಡಿ, ಉಲ್ಲಾಸದಿಂದ ತನ್ನ
ಮಹಿಮೆಯ ಸಮುಖದಲ್ಲಿ ನಿರ್ಮಲರಾಗಿ ನಿಲ್ಲಿಸ ಶಕ್ತನಾದ,
೨೫ ನಮ್ಮ ರಕ್ಷಕನಾದ, ಒಬ್ಬನೇ ಜ್ಞಾನಿಯಾಗಿರುವ ದೇವರಿಗೆ, ಈ
ಗಲೂ ಸರ್ವ ಯುಗಗಳ ವರಿಗೂ ಮಹಿಮೆಯೂ, ಘನತೆಯೂ,
ತ್ರಾಣವೂ, ಅಧಿಕಾರವೂ ಆಗಲಿ. ಆಮೆನ್.

# THE REVELATION.

## ಯೋಹಾನನ ಪ್ರಕಟಣೆ.

### ೧. ಸಂಧಿ.

೧ ಯೇಸು ಕ್ರಿಸ್ತನ ಪ್ರಕಟಣೆಯು. ಇದನ್ನು ದೇವರು, ತ್ವರೆ
ಯಿಂದ ಆಗ ಬೇಕಾದವುಗಳನ್ನು ತನ್ನ ದಾಸರಿಗೆ ತೋರಿಸುವ
ಬಗ್ಯೆ, ಅವನಿಗೆ ಕೊಟ್ಟನು. ಅವನು ತನ್ನ ದೂತನ ಮುಖಾಂತ
ರ ತನ್ನ ದಾಸನಾದ ಯೋಹಾನನಿಗೆ ಅದನ್ನು ಕಳುಹಿಸಿ ಸೂ
೨ ಚಿಸಿದನು. ಇವನು ದೇವರ ವಾಕ್ಯಕ್ಕೂ ಯೇಸು ಕ್ರಿಸ್ತನ ಸಾ
೩ ಕ್ಷಿಗೂ ತಾನು ನೋಡಿದವುಗಳೆಲ್ಲಕ್ಕೂ ಸಾಕ್ಷಿ ಕೊಟ್ಟನು. ಈ
ಪ್ರವಾದನೆಯ ವಾಕ್ಯಗಳನ್ನು ಓದುವವನೂ, ಕೇಳುವವರೂ, ಅ
ದರಲ್ಲಿ ಬರೆದಿರುವವುಗಳನ್ನು ಕೈ ಕೊಳ್ಳುವವರೂ, ಭಾಗ್ಯವಂತ
ರು. ಯಾಕಂದರೆ ಕಾಲವು ಸಮೀಪವಾಗಿದೆ.

೪ ಯೋಹಾನನು ಆಸ್ಯದಲ್ಲಿರುವ ಏಳು ಸಭೆಗಳಿಗೆ—ಇರುವವ
ನೂ ಇದ್ದವನೂ ಬರುವವನೂ ಆಗಿರುವವನಿಂದಲೂ, ಅವನ
೫ ಸಿಂಹಾಸನದ ಮುಂದೆ ಇರುವ ಏಳು ಆತ್ಮಗಳಿಂದಲೂ, ನಂಬಿಕೆ
ಯಾದ ಸಾಕ್ಷಿಯೂ ಸತ್ಯವಚನಿಯಾದ ಚೊಚ್ಚಲವನೂ ಭೂ
ರಾಜರ ಒಡೆಯನೂ ಆಗಿರುವ ಯೇಸು ಕ್ರಿಸ್ತನಿಂದಲೂ, ನಿಮಗೆ
ಕೃಪೆಯೂ ಸಮಾಧಾನವೂ ಆಗಲಿ.

೬ ನಮ್ಮನ್ನು ಪ್ರೀತಿ ಮಾಡಿ, ತನ್ನ ರಕ್ತದಲ್ಲಿ ನಮ್ಮನ್ನು ನಮ್ಮ
ಪಾಪಗಳಿಂದ ತೊಳೆದು, ನಮ್ಮನ್ನು ತನ್ನ ತಂದೆಯಾದ ದೇವರಿ



ಗೆ ಅರಸರನ್ನೂ ಯಾಜಕರನ್ನೂ ಮಾಡಿದ್ದಾನೆ. ಅವನಿಗೆ ಯು
ಗ ಯುಗಾಂತರಗಳ ವರಿಗೂ ಮಹಿಮೆಯೂ ತ್ರಾಣವೂ ಆಗಲಿ.
ಆಮೆನ್.

೭ ಇಗೋ, ಮೇಘಗಳಲ್ಲಿ ಬರುತ್ತಾನೆ. ಎಲ್ಲಾ ಕಣ್ಣುಗಳೂ ಅವ
ನನ್ನು ನೋಡುವವು; ಅವನನ್ನು ತಿವಿದವರು ಸಹ. ಭೂಮಿಯ
ಸಕಲ ಕುಲಗಳು ಅವನ ನಿಮಿತ್ತ ಬಡುಕೊಳ್ಳುವರು. ಹೌದು,
ಆಮೆನ್.

೮ ನಾನು ಅಕಾರವೂ ಓಕಾರವೂ ಆದಿಯೂ ಅಂತ್ಯವೂ, ಆಗಿ
ದ್ದೇನೆಂದು, ಇರುವವನೂ ಇದ್ದವನೂ ಬರುವವನೂ ಆಗಿರುವ
ಸರ್ವಶಕ್ತನಾದ ಕರ್ತನು ಹೇಳುತ್ತಾನೆ.

೯ ನಿಮ್ಮ ಸಹೋದರನೂ, ಉಪದ್ರವದಲ್ಲಿಯೂ ಯೇಸು ಕ್ರಿಸ್ತ
ನ ರಾಜ್ಯದಲ್ಲಿಯೂ ತಾಳ್ಮೆಯಲ್ಲಿಯೂ ಕೂಡ ಪಾಲುಗಾರ
ನೂ, ಆಗಿರುವ ಯೋಹಾನನೆಂಬ ನಾನು ದೇವರ ವಾಕ್ಯದ ನಿ
ಮಿತ್ತವೂ, ಯೇಸು ಕ್ರಿಸ್ತನ ಸಾಕ್ಷಿಯ ನಿಮಿತ್ತವೂ ಪಾತ್ಮೊಸ್
೧೦ ದ್ವೀಪದಲ್ಲಿ ಇದ್ದೆನು. ಕರ್ತನ ದಿನದಲ್ಲಿ ಆತ್ಮದಲ್ಲಿ ಇದ್ದು, ನನ್ನ
೧೧ ಹಿಂದೆ ತುತೂರಿಯ ಹಾಗೆ ದೊಡ್ಡ ಶಬ್ದವನ್ನು ಕೇಳಿದೆನು. ಏನೇ
ನಂದರೆ—ನಾನು ಅಕಾರವೂ ಓಕಾರವೂ, ಮೊದಲಿನವನೂ ಕಡೆ
ಯವನೂ, ಆಗಿದ್ದೇನೆ. ನೀನು ನೋಡುವದನ್ನು ಪುಸ್ತಕದಲ್ಲಿ
ಬರೆದು, ಆಸ್ಯದಲ್ಲಿರುವ ಎಫೆಸ, ಸ್ಮುರ್ನ, ಪೆರ್ಗಮ, ಥುವ
ತೈರ, ಸಾರ್ದಿ, ಫಿಲದೆಲ್ಫ್ಯ, ಲವೊದಿಕೈಯ, ಎಂಬ ಏಳು ಸ
ಭೆಗಳಿಗೆ ಕಳುಹಿಸು.

೧೨ ನನ್ನ ಸಂಗಡ ಮಾತಾಡಿದ ಶಬ್ದವನ್ನು ನೋಡುವದಕ್ಕೆ ತಿರು
೧೩ ಗಿ ಕೊಂಡೆನು; ತಿರುಗಲು, ಏಳು ಚಿನ್ನದ ದೀಪಸ್ತಂಭಗಳನ್ನೂ,
ಆ ಏಳು ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯನ ಮಗನಿಗೆ ಸ
ಮಾನವಾದವನನ್ನೂ, ಕಂಡೆನು. ಅವನು ನಿಲುವಂಗಿಯನ್ನು
೧೪ ತೊಟ್ಟು, ಎದೆಗೆ ಹೊಂದಟ್ಟಿಯನ್ನು ಕಟ್ಟಿ ಕೊಂಡಿದ್ದನು. ಅವ
ನ ತಲೆಯೂ ಕೂದಲುಗಳೂ ಬಿಳ್ಳೀ ಉಣ್ಣೆಯಂತೆ, ಹಿಮದಂತೆ,
೧೫ ಬಿಳ್ಳುಪಾಗಿದ್ದವು; ಅವನ ಕಣ್ಣುಗಳು ಬೆಂಕಿಯ ಉರಿಯಂತೆ
ಯೂ, ಅವನ ಪಾದಗಳು ಕೊಲುಮೆಯಲ್ಲಿ ಕಾಸಲ್ಪಟ್ಟ ಬಿಳ್ಳೀ
ಹಿತ್ತಾಳ್ಳಿಯಂತೆಯೂ, ಅವನ ಶಬ್ದವು ಅನೇಕ ನೀರುಗಳ ಶಬ್ದ
೧೬ ದಂತೆಯೂ, ಇದ್ದವು. ಅವನ ಬಲಗೈಯಲ್ಲಿ ಏಳು ನಕ್ಷತ್ರಗಳು
ಇದ್ದವು. ಅವನ ಬಾಯಿಯೊಳಗಿಂದ ಹದವಾದ ಇಬ್ಬಾಯಿ
ಕತ್ತಿಯು ಹೊರಟಿತು. ಅವನ ಮುಖವು ತನ್ನ ಬಲದಿಂದ ಪ್ರಕಾ
ಶಿಸುವ ಸೂರ್ಯನ ಹಾಗಿತ್ತು.

೧೭ ಅವನನ್ನು ಕಂಡಾಗಲೇ, ಸತ್ತವನ ಹಾಗೆ ಅವನ ಪಾದಗಳ
ಮುಂದೆ ಬಿದ್ದೆನು. ಆಗ ತನ್ನ ಬಲಗೈಯನ್ನು ನನ್ನ ಮೇಲೆ
ಇಟ್ಟು, ನನಗೆ ಹೇಳಿದ್ದೇನಂದರೆ—ಅಂಜ ಬೇಡ; ನಾನು ಮೊದಲಿ
೧೮ ನವನೂ, ಕಡೆಯವನೂ ಬದುಕುವವನೂ, ಆಗಿದ್ದೇನೆ. ಸತ್ತಿದ್ದೆ
ನು, ಮತ್ತು, ಇಗೋ, ಯುಗ ಯುಗಾಂತರಗಳ ವರಿಗೂ ಬದು
ಕುವವನಾಗಿದ್ದೇನೆ. ಆಮೆನ್. ಮತ್ತು ಪಾತಾಳ ಮರಣಗಳ ಬೀ
೧೯ ಗದ ಕೈಗಳು ನನಗುಂಟು. ಕಂಡವುಗಳನ್ನೂ, ಇರುವವುಗಳನ್ನೂ,
ಇವುಗಳ ತರುವಾಯ ಆಗುವವುಗಳನ್ನೂ, ನನ್ನ ಬಲಗೈಯಲ್ಲಿ
೨೦ ನೀನು ಕಂಡ ಏಳು ನಕ್ಷತ್ರಗಳ ಮರ್ಮವನ್ನೂ, ಏಳು ಚಿನ್ನದ
ದೀಪಸ್ತಂಭಗಳನ್ನೂ, ಬರೆ. ಆ ಏಳು ನಕ್ಷತ್ರಗಳು, ಏಳು ಸಭೆಗಳ
ದೂತರು; ನೀನು ಕಂಡ ಏಳು ದೀಪಸ್ತಂಭಗಳು ಏಳು ಸಭೆಗಳು.

### ೨. ಸಂಧಿ.

೧ ಎಫೆಸದಲ್ಲಿರುವ ಸಭೆಯ ದೂತನಿಗೆ ಬರೆ—ಏಳು ನಕ್ಷತ್ರಗಳ
ನ್ನು ತನ್ನ ಬಲಗೈಯಲ್ಲಿ ಹಿಡು ಕೊಂಡು, ಏಳು ಚಿನ್ನದ ದೀಪ
ಸ್ತಂಭಗಳ ಮಧ್ಯದಲ್ಲಿ ಸಂಚರಿಸುವವನು ಹೇಳುವದೇನಂದರೆ
೨ —ನಿನ್ನ ಕ್ರಿಯೆಗಳನ್ನೂ, ನಿನ್ನ ಕಷ್ಟವನ್ನೂ, ನಿನ್ನ ತಾಳ್ಮೆಯ
ನ್ನೂ, ನೀನು ದುಷ್ಟರನ್ನು ಸಹಿಸಲಾರದೆ ಇರುವದನ್ನೂ ಬಲ್ಲೆ
೩ ನು. ಅಪೊಸ್ತಲರಾಗಿರದೆ, ತಾವು ಅಪೊಸ್ತಲರೆಂದು ಅನ್ನಿಸಿ ಕೊಂ
ಡವರನ್ನು ಶೋಧಿಸಿ, ಅವರು ಸುಳ್ಳುಗಾರರೆಂದು ಕಂಡಿ. ನೀನು
ಸಹಿಸಿ ಕೊಂಡು, ತಾಳ್ಮೆಯುಳ್ಳವನಾಗಿ, ನನ್ನ ಹೆಸರಿನ ನಿಮಿತ್ತ
೪ ಕಷ್ಟ ಪಟ್ಟು, ದಣಿಯಲಿಲ್ಲ. ಆದರೆ ನೀನು ಮೊದಲಿನ ಪ್ರೀತಿ
ಯನ್ನು ಬಿಟ್ಟು ಬಿಟ್ಟಿದ್ದೀ, ಎಂಬುವದು ನಿನ್ನ ಮೇಲೆ ನನಗುಂ
೫ ಟು. ಹಾಗಾದರೆ, ಎಲ್ಲಿಂದ ಬಿದ್ದು ಹೋದಿ ಎಂದು ಜ್ಞಾಪಕ
ಮಾಡಿ ಕೊಂಡು, ಮಾನಸಾಂತರ ಪಟ್ಟು, ಮೊದಲಿನ ಕ್ರಿಯೆಗ
ಳನ್ನು ಮಾಡು. ಇಲ್ಲದಿದ್ದರೆ, ನೀನು ಮಾನಸಾಂತರ ಪಡದೆ ಇ
ದ್ದರೆ, ನಿನಗೆ ಬೇಗ ಬಂದು, ನಿನ್ನ ದೀಪಸ್ತಂಭವನ್ನು ಅದರ ಸ್ಥ
೬ ಳದಿಂದ ತೊಲಗಿಸುವೆನು. ಆದರೆ ಇದು ನಿನಗುಂಟು. ಏನಂದರೆ—
ನಿಕೊಲಾಯಿತರ ಕ್ರಿಯೆಗಳನ್ನು ಹಗೆ ಮಾಡುತ್ತೀ; ಅವುಗಳನ್ನು
೭ ನಾನೂ ಹಗೆ ಮಾಡುತ್ತೇನೆ. ಕಿವಿಯುಳ್ಳವನು ಆತ್ಮವು ಸಭೆಗಳ
ಗೆ ಹೇಳುವದನ್ನು ಕೇಳಲಿ. ಜಯಿಸುವವನ್ಯಾವನೋ, ಅವನಿಗೆ
ದೇವರ ಪರದೈಸಿನ ಮಧ್ಯದಲ್ಲಿರುವ ಜೀವ ವೃಕ್ಷದಿಂದ ಉಣ್ಣ
ಕೊಡುವೆನು.

೮ ಮತ್ತು ಸ್ಮುರ್ನದಲ್ಲಿರುವ ಸಭೆಯ ದೂತನಿಗೆ ಬರೆ—ಮೊದ
ಲಿನವನೂ, ಕಡೆಯವನೂ, ಸತ್ತವನಾಗಿದ್ದು ಬದುಕುವನೂ, ಹೇ
೯ ಳುವದೇನಂದರೆ—ನಿನ್ನ ಕ್ರಿಯೆಗಳನ್ನೂ ಉಪದ್ರವನ್ನೂ, ಐಶ್ವ
ರ್ಯವಂತನಾಗಿರುವ ನಿನ್ನ ಬಡತನವನ್ನೂ, ಯೆಹೂದ್ಯರ
ಲ್ಲಿ, ಸೈತಾನನ ಸಭೆಯವರಾಗಿದ್ದು, ತಮ್ಮನ್ನು ಯೆಹೂದ್ಯರ
೧೦ ನ್ನಿಸಿ ಕೊಳ್ಳುವವರ ದೂಷಣೆಯನ್ನೂ ಬಲ್ಲೆನು. ನಿನಗೆ ಬರು
ವ ಶ್ರಮೆಗಳಿಗೋಸ್ಕರ ಏನೂ ಭಯ ಪಡ ಬೇಡ. ಇಗೋ, ನೀ
ವು ಶೋಧಿಸಲ್ಪಡುವ ಹಾಗೆ ಪಿಶಾಚನು ನಿಮ್ಮಲ್ಲಿ ಕೆಲವರನ್ನು
ಕೆರೆಯಲ್ಲಿ ಹಾಕುವನು. ಆಗ ಹತ್ತು ದಿನಗಳ ಉಪದ್ರವು ನಿಮಗೆ
ಇರುವದು. ಮರಣದ ಪರ್ಯಂತರ ನಂಬಿಕೆಯಾಗಿರು; ಆಗ
೧೧ ಜೀವದ ಕಿರೀಟವನ್ನು ನಿನಗೆ ಕೊಡುವೆನು. ಕಿವಿಯುಳ್ಳವನು ಆ
ತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ. ಜಯಿಸುವವನು ಎರ
ಡನೇ ಮರಣದಿಂದ ನಷ್ಟ ಪಡುವದಿಲ್ಲ.

೧೨ ಮತ್ತು ಪೆರ್ಗಮದಲ್ಲಿರುವ ಸಭೆಯ ದೂತನಿಗೆ ಬರೆ—ಹದ
ವಾದ ಇಬ್ಬಾಯಿ ಕತ್ತಿ ಉಂಟಾದವನು ಹೇಳುವದೇನಂದರೆ—
೧೩ ನಿನ್ನ ಕ್ರಿಯೆಗಳನ್ನೂ, ಸೈತಾನನ ಸಿಂಹಾಸನವಿರುವಲ್ಲಿ ನೀನು
ವಾಸವಾಗಿರುವದನ್ನೂ, ನೀನು ನನ್ನ ಹೆಸರನ್ನು ಹಿಡಿದು ಕೊಂ
ಡು, ನಿಮ್ಮಲ್ಲಿಯೂ ಸೈತಾನನು ವಾಸವಾಗಿರುವಲ್ಲಿಯೂ ಕೊಲ್ಲ
ಲ್ಪಟ್ಟ ನಂಬಿಕೆಯುಳ್ಳ ನನ್ನ ಸಾಕ್ಷಿಯಾದ ಅಂತಿಪನ ದಿನಗಳ
ಲ್ಲಿ ಸಹ ನನ್ನ ವಿಶ್ವಾಸವನ್ನು ಬೊಂಕದೆ ಇದ್ದದ್ದನ್ನೂ, ಬಲ್ಲೆ
೧೪ ನು. ಆದರೆ ನಿನ್ನ ಮೇಲೆ ಕೆಲವು ನನಗುಂಟು, ಏನಂದರೆ—ವಿಗ್ರ
ಹ ಬಲಿಗಳನ್ನು ಉಣ್ಣುವ ಹಾಗೆಯೂ, ಜಾರತ್ವ ಮಾಡುವ ಹಾ

ಗೆಯೂ ಇಸ್ರಯೇಲನ ಮಕ್ಕಳ ಮುಂದೆ ಆಟಂಕವನ್ನು ಹಾಕುವ
ದಕ್ಕೆ ಬಾಲಾಕನಿಗೆ ಬೋಧಿಸಿದ ಬಿಳಾಮನ ಬೋಧನೆಯನ್ನು
೧೫ ಕೈ ಕೊಳ್ಳುವವರು ಅಲ್ಲಿ ನಿನಗೆ ಇದ್ದಾರೆ. ಅದೇ ಪ್ರಕಾರ ನಿಕೊ
ಲಾಯಿತರ ಬೋಧನೆಯನ್ನು ಕೈ ಕೊಳ್ಳುವವರು ಸಹ ನಿನಗೆ
೧೬ ಇದ್ದಾರೆ. ಅದನ್ನು ಹಗೆ ಮಾಡುತ್ತೇನೆ. ಮಾನಸಾಂತರ ಪಡು;
ಇಲ್ಲದಿದ್ದರೆ, ನಿನಗೆ ಬೇಗ ಬಂದು, ನನ್ನ ಬಾಯಿಯ ಕತ್ತಿಯಿಂದ
೧೭ ಅವರ ಸಂಗಡ ಯುದ್ಧ ಮಾಡುವೆನು. ಕಿವಿಯುಳ್ಳವನು, ಆತ್ಮ
ವು ಸಭೆಗಳಿಗೆ ಹೇಳುವದನ್ನು ಕೇಳಲಿ. ಜಯಿಸುವವನ್ಯಾವನೋ,
ಅವನಿಗೆ ಬಚ್ಚಿಟ್ಟ ಮನ್ನವದಲ್ಲಿ ಉಣ್ಣಾ ಕೊಡುವೆನು. ಮತ್ತು ಬಿಳೀ
ಕಲ್ಲನ್ನೂ, ಕಲ್ಲಿನ ಮೇಲೆ ಬರೆದ ಹೊಸ ಹೆಸರನ್ನೂ, ಅವನಿಗೆ
ಕೊಡುವೆನು. ಆ ಹೆಸರು, ಹೊಂದಿದವನಿಗೆ ಹೊರ್ತು, ಮತ್ಯಾ
ರಿಗೂ ತಿಳಿಯದು.

೧೮ ಮತ್ತು ಥುವತ್ಯೈರದಲ್ಲಿರುವ ಸಭೆಯ ದೂತನಿಗೆ ಬರೆ—ಬೆಂಕಿ
ಯ ಉರಿಯ ಹಾಗಿರುವ ಕಣ್ಣುಗಳೂ, ಬಿಳೀ ಹಿತ್ತಾಳೆಯ ಹಾ
ಗಿರುವ ಪಾದಗಳೂ, ಉಳ್ಳ ದೇವರ ಮಗನು ಹೇಳುವದೇನಂದ
೧೯ ರೆ—ನಿನ್ನ ಕ್ರಿಯೆಗಳನ್ನೂ, ಪ್ರೀತಿಯನ್ನೂ, ಸೇವೆಯನ್ನೂ, ವಿ
ಶ್ವಾಸವನ್ನೂ, ತಾಳ್ಮೆಯನ್ನೂ, ಮೊದಲಿನವುಗಳಿಗಿಂತ ಹೆಚ್ಚಾ
೨೦ ಗಿರುವ ನಿನ್ನ ಕಡೇ ಕ್ರಿಯೆಗಳನ್ನೂ, ಬಲ್ಲೆನು. ಆದರೆ ನಿನ್ನ
ಮೇಲೆ ಕೆಲವು ನನಗುಂಟು; ಏನಂದರೆ—ತಾನು ಪ್ರವಾದಿ ಸ್ತ್ರೀ ಅ
ನ್ನಿಸಿ ಕೊಳ್ಳುವ ಯೆಜೆಬೆಲೆಂಬ ಆ ಹೆಂಗಸನ್ನು ನನ್ನ ದಾಸರಿಗೆ
ಜಾರತ್ವ ಮಾಡುವ ಹಾಗೆಯೂ, ವಿಗ್ರಹ ಬಲಿಗಳನ್ನು ಉಣ್ಣುವ
೨೧ ಹಾಗೆಯೂ, ಬೋಧಿಸಿ, ಮೋಸ ಮಾಡ ಗೊಡಿಸುತ್ತಿರ; ತನ್ನ
ಜಾರತ್ವವನ್ನು ಬಿಟ್ಟು, ಮಾನಸಾಂತರ ಪಡುವ ಹಾಗೆ, ಅವಳಿಗೆ
೨೨ ಕಾಲವನ್ನು ಕೊಟ್ಟೆನು; ಆದರೆ ಮಾನಸಾಂತರ ಪಡಲಿಲ್ಲ. ಇಗೋ,
ನಾನು ಅವಳನ್ನು ಒಂದು ಮಂಚದಲ್ಲಿಯೂ, ಅವಳ ಸಂಗಡ
ವ್ಯಭಿಚಾರ ಮಾಡುವವರನ್ನು, ಅವರ ಕ್ರಿಯೆಗಳನ್ನು ಬಿಟ್ಟು
ಮಾನಸಾಂತರ ಪಡದೆ ಹೋದರೆ, ಮಹಾ ಉಪದ್ರವದಲ್ಲಿಯೂ
೨೩ ಹಾಕುತ್ತೇನೆ. ಮತ್ತು ಅವಳ ಮಕ್ಕಳನ್ನು ಕೊಂದೇ ಕೊಲ್ಲುವೆ
ನು. ಆಗ ಅಂತರಿಂದ್ರಿಯಗಳನ್ನೂ ಹೃದಯಗಳನ್ನೂ ಶೋ
ಧಿಸುವವನು ನಾನೇ ಎಂದು ಸಕಲ ಸಭೆಗಳು ತಿಳ್ಕಯುವವು. ಮ
ತ್ತು ನಿಮ್ಮಲ್ಲಿ ಒಬ್ಬೊಬ್ಬನಿಗೆ ನಿಮ್ಮ ಕ್ರಿಯೆಗಳ ಪ್ರಕಾರವೇ
೨೪ ಕೊಡುವೆನು. ಇದಲ್ಲದೆ ನಿಮಗೂ, ಈ ಬೋಧನೆಯನ್ನು ಕೈ
ಕೊಳ್ಳದೆ, ಸೈತಾನನ ಅಗಾಧಗಳೆಂದು, ಅವರು ಹೇಳುವವುಗಳ
ನ್ನು ತಿಳಿಯದೆ, ಥುವತ್ಯೈರದಲ್ಲಿ ಇರುವ ಮಿಕ್ಕಾದವರಿಗೂ, ನಾ
ನು ಹೇಳುವದೇನಂದರೆ—ಬೇರೆ ಭಾರವನ್ನು ನಿಮ್ಮ ಮೇಲೆ ಹಾಕೆ
೨೫ ನು. ಆದರೆ ನಿಮಗುಂಟಾದದ್ದನ್ನು ನಾನು ಬರುವ ಪರ್ಯಂತ
೨೬ ರ ಹಿಡಿದು ಕೊಳ್ಳಿರಿ. ಮತ್ತು ಜಯಿಸಿ, ಅಂತ್ಯದ ಪರ್ಯಂತ
ರ ನನ್ನ ಕ್ರಿಯೆಗಳನ್ನು ಕೈ ಕೊಳ್ಳುವವನಿಗೆ ಜನಾಂಗಗಳ ಮೇ
೨೭ ಲೆ ಅಧಿಕಾರವನ್ನು ಕೊಡುವೆನು. ನಾನೂ ನನ್ನ ತಂದೆಯಿಂದ
ಹೊಂದಿದ ಮೇರೆಗೆ, ಅವನು ಕುಂಬಾರನ ಪಾತ್ರೆಗಳು ಒಡೆಯ
ಲ್ಪಡುವ ಪ್ರಕಾರ, ಕಬ್ಬಿಣದ ಕೋಲಿನಿಂದ ಅವರನ್ನು ಆಳುವ
೨೮ ನು. ಮತ್ತು ಉದಯ ನಕ್ಷತ್ರವನ್ನು ಅವನಿಗೆ ಕೊಡುವೆನು. ಕಿ
೨೯ ವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದನ್ನು ಕೇಳಲಿ.

## ೩. ಸಂಧಿ.

೧ ಮತ್ತು ಸಾರ್ದಿಯಲ್ಲಿರುವ ಸಭೆಯ ದೂತನಿಗೆ ಬರೆ—ದೇವ
ರ ಏಳು ಆತ್ಮಗಳೂ ಏಳು ನಕ್ಷತ್ರಗಳೂ ಉಂಟಾದವನು ಹೇಳು
ವದೇನಂದರೆ—ನಿನ್ನ ಕ್ರಿಯೆಗಳನ್ನೂ, ನೀನು ಬದುಕುತ್ತೀ ಎಂ
ದು ಹೆಸರನ್ನು ಹೊಂದಿ, ಸತ್ತವನಾಗಿದ್ದೀ ಎಂಬುವದನ್ನೂ, ಬ
ಲ್ಲೆನು. ೨ ಎಚ್ಚರಿಕೆಯಾಗಿರು; ಸಾಯಲಾಗಿರುವ ಉಳಿದವುಗಳನ್ನು
ದೃಢ ಪಡಿಸು. ಯಾಕಂದರೆ ನಿನ್ನ ಕ್ರಿಯೆಗಳು ದೇವರ ಸನ್ನಿ
೩ ಧಿಯಲ್ಲಿ ಸಂಪೂರ್ಣವಾದವುಗಳೆಂದು ನಾನು ಕಾಣಲಿಲ್ಲ. ಆದ
ದರಿಂದ, ನೀನು ಹ್ಯಾಗೆ ಹೊಂದಿ ಕೇಳ್ದಿ ಎಂದು ಜ್ಞಾಪಕ
ಮಾಡಿ ಕೊಂಡು, ಕೈ ಕೊಂಡು, ಮಾನಸಾಂತರ ಪಡು. ನೀನು
ಎಚ್ಚರಿಕೆಯಾಗದಿದ್ದರೆ, ಕಳ್ಳನಂತೆ ನಿನ್ನ ಮೇಲೆ ಬರುವೆನು.
ಮತ್ತು ಯಾವ ಘಳಿಗೆಯಲ್ಲಿ ನಿನ್ನ ಮೇಲೆ ಬರುವೆನೋ, ಅರಿ
೪ ಯದೆ ಇರುವಿ. ತಮ್ಮ ವಸ್ತ್ರಗಳನ್ನು ಕಳಂಕ ಮಾಡಿ ಕೊಳ್ಳದ
ಕೆಲವು ಮಂದಿ ಸಾರ್ದಿಯಲ್ಲಿಯೂ ನಿನಗಿದ್ದಾರೆ. ಅವರು ಪಾ
ತ್ರರಾಗಿರುವದರಿಂದ, ನನ್ನ ಸಂಗಡ ಬಿಳೀ ವಸ್ತ್ರಗಳಲ್ಲಿ ಸಂಚರಿ
ಸುವರು. ೫ ಜಯಿಸುವವನ್ಯಾವನೋ, ಅವನು ಬಿಳೀ ವಸ್ತ್ರಗಳ
ನ್ನು ಧರಿಸಿ ಕೊಳ್ಳುವನು; ಮತ್ತು ಅವನ ಹೆಸರನ್ನು ಜೀವದ ಪು
ಸ್ತಕದಿಂದ ಅಳಿಸೆನು; ಮತ್ತು ಅವನ ಹೆಸರನ್ನು ನನ್ನ ತಂದೆಯ
ಸನ್ನಿಧಿಯಲ್ಲಿಯೂ ಅವನ ದೂತರ ಸನ್ನಿಧಿಯಲ್ಲಿಯೂ ಅರಿಕೆ
೬ ಮಾಡುವೆನು. ಕಿವಿಯುಳ್ಳವನು ಆತ್ಮವು ಸಭೆಗಳಿಗೆ ಹೇಳುವದ
ನ್ನು ಕೇಳಲಿ.

೭ ಮತ್ತು ಫಿಲದೆಲ್ಫ್ಯದಲ್ಲಿರುವ ಸಭೆಯ ದೂತನಿಗೆ ಬರೆ—ಪರಿ
ಶುದ್ಧನೂ, ಸತ್ಯವಂತನೂ, ದಾವೀದನ ಬೀಗದ ಕೈ ಉಂಟಾದ
ವನೂ, ಯಾರೂ ಮುಚ್ಚದ ಹಾಗೆ ತೆರೆಯುವವನೂ, ಯಾರೂ
ತೆರೆಯದ ಹಾಗೆ ಮುಚ್ಚುವವನೂ, ಆಗಿರುವವನು ಹೇಳುವದೇ
ನಂದರೆ—ನಿನ್ನ ಕ್ರಿಯೆಗಳನ್ನು ಬಲ್ಲೆನು. ಇಗೋ, ಯಾರೂ
ಮುಚ್ಚಲಾರದ ತೆರೆದಿರುವ ಬಾಗಲನ್ನು ನಿನ್ನ ಮುಂದೆ ಇರಿಸಿದ್ದೇ
ನೆ. ಯಾಕಂದರೆ ಸ್ವಲ್ಪ ಬಲ ಉಂಟಾದವನಾಗಿ, ನೀನು ನನ್ನ
೮ ವಾಕ್ಯವನ್ನು ಕೈ ಕೊಂಡು, ನನ್ನ ಹೆಸರನ್ನು ಬೊಂಕಲಿಲ್ಲ. ಇ
ಗೋ, ಯೆಹೂದ್ಯರಾಗಿರದೆ, ತಾವು ಯೆಹೂದ್ಯರನ್ನಿಸಿ ಕೊಂ
ಡು, ಸುಳ್ಳು ಹೇಳುವವರಾದ ಸೈತಾನನ ಸಭೆಯವರನ್ನು ಒಪ್ಪಿ
ಸುತ್ತೇನೆ. ಇಗೋ, ಅವರು ಬಂದು, ನಿನ್ನ ಪಾದಗಳ ಮುಂದೆ
ನಮಸ್ಕರಿಸಿ, ನಾನು ನಿನ್ನನ್ನು ಪ್ರೀತಿ ಮಾಡಿದೆನೆಂದು ತಿಳ್ಕುಕೊ
೯ ಳ್ಳುವಹಾಗೆ, ಮಾಡುವೆನು. ೧೦ ನೀನು ನನ್ನ ತಾಳ್ಮೆಯ ವಾಕ್ಯವನ್ನು
ಕೈ ಕೊಂಡದರಿಂದ, ನಾನು ಸಹ ಭೂನಿವಾಸಿಗಳನ್ನು ಶೋಧಿಸು
ವದಕ್ಕೆ ಸಮಸ್ತ ಭೂಮಿಯ ಮೇಲೆ ಬರಲಾಗಿರುವ ಶೋಧನೆ
೧೧ ಯ ಘಳಿಗೆಯಿಂದ ನಿನ್ನನ್ನು ತಪ್ಪಿಸಿ ಕಾಪಾಡುವೆನು. ಇಗೋ,
ಬೇಗ ಬರುತ್ತೇನೆ. ಯಾರಾದರೂ ನಿನ್ನ ಕಿರೀಟವನ್ನು ತಕ್ಕೊ
೧೨ ಳ್ಳದ ಹಾಗೆ, ನಿನಗುಂಟಾದದ್ದನ್ನು ಹಿಡಿದುಕೋ. ಜಯಿಸುವವ
ನ್ಯಾವನೋ, ಅವನನ್ನು ನನ್ನ ದೇವರ ಮಂದಿರದಲ್ಲಿ ಸ್ತಂಭವಾಗಿ
ಇಡುವೆನು. ಅವನು ಅಲ್ಲಿಂದ ಇನ್ನು ಮೇಲೆ ಹೊರಟು ಹೋಗ
ನು. ಮತ್ತು ನನ್ನ ದೇವರ ಹೆಸರನ್ನೂ, ನನ್ನ ದೇವರ ಬಳಿಯಿಂ
ದ ಪರಲೋಕದಿಂದಿಳಿದು ಬರುವ ಹೊಸ ಯೆರೂಸಲೇಮೆಂಬ
ನನ್ನ ದೇವರ ಪಟ್ಟಣದ ಹೆಸರನ್ನೂ, ನನ್ನ ಹೊಸ ಹೆಸರನ್ನೂ,
೧೩ ಅವನ ಮೇಲೆ ಬರೆಯುವೆನು. ಕಿವಿಯುಳ್ಳವನು ಆತ್ಮವು ಸಭೆಗ
ಳಿಗೆ ಹೇಳುವದನ್ನು ಕೇಳಲಿ.



೧೪ ಮತ್ತು ಲಾವೊದಿಕ್ಯೆಯದವರ ಸಭೆಯ ದೂತನಿಗೆ ಬರೆ—ಆ
ಮೆನ್ ಎಂಬವನೂ, ನಂಬಿಕೆಯೂ ಸತ್ಯವೂ ಉಳ್ಳ ಸಾಕ್ಷಿ
ಯೂ, ದೇವರ ಸೃಷ್ಟಿಯ ಆದಿಯೂ ಆಗಿರುವವನು ಹೇಳು
ವದೇನಂದರೆ—ನಿನ್ನ ಕ್ರಿಯೆಗಳನ್ನೂ, ನೀನು ತಂದಲ್ಲ ಬಿಸಿಯು
೧೫ ಲ್ಲ ಎಂಬುವದನ್ನೂ, ಬಲ್ಲೆನು. ನೀನು ತಂಪಾದರೂ ಬಿಸಿಯಾ
ದರೂ ಇದ್ದರೆ, ಒಳ್ಳೇದು. ಹಾಗಾದರೆ, ನೀನು ತಂಪೂ ಬಿಸಿ
ಯೂ ಅಲ್ಲದೆ, ಉಗುರು ಬೆಚ್ಚಗೆ ಆಗಿರುವದರಿಂದ, ನಿನ್ನನ್ನು
೧೬ ನನ್ನ ಬಾಯಿಯಿಂದ ಕಾರುವೆನು. ಹ್ಯಾಗಂದರೆ ಐಶ್ವರ್ಯ
ವಂತನೂ, ದ್ರವ್ಯಸ್ಥನೂ, ಏನೂ ಕಡಿಮೆ ಇಲ್ಲದವನೂ, ಆಗಿ
ದ್ದೇನೆ, ಅಂದು ಕೊಂಡು, ನೀನು ಸಂಕಟವುಳ್ಳವನೂ, ಕರುಣೆಗೆ
ತಕ್ಕವನೂ, ಬಡವನೂ, ಕುರುಡನೂ, ಬೆತ್ತಲೆಯಾದವನೂ ಆ
೧೭ ಗಿದ್ದೀ ಎಂದು ಅರಿಯೆ. ನೀನು ಐಶ್ವರ್ಯವಂತನಾಗುವ ಹಾ
ಗೆ, ಬೆಂಕಿಯಲ್ಲಿ ಶೋಧಿಸಿದ ಭಂಗಾರವನ್ನೂ ನಿನ್ನ ಬೆತ್ತಲೆತನ
ದ ನಾಚಿಕೆಯು ಕಾಣದ ಹಾಗೆ, ನಿನಗೆ ಧರಿಸಿಕೊಳ್ಳುವದಕ್ಕೆ ಬಿಳೀ
ವಸ್ತ್ರಗಳನ್ನೂ, ನನ್ನಿಂದ ಕೊಂಡು ಕೊಂಡು, ನೀನು ನೋಡುವ
ಹಾಗೆ ನಿನ್ನ ಕಣ್ಣುಗಳಿಗೆ ಅಂಜನವನ್ನು ಹಚ್ಚ ಬೇಕೆಂದು, ನಿನಗೆ
೧೮ ಆಲೋಚನೆ ಹೇಳುತ್ತೇನೆ. ನಾನು ಸ್ನೇಹಿಸುವವರನ್ನಷ್ಟು ಖಂಡಿ
ಸಿ ಶಿಕ್ಷಿಸುತ್ತೇನೆ. ಆದದರಿಂದ ಆಸಕ್ತಿ ಪಟ್ಟು, ಮಾನಸಾಂತರ
೧೯ ಪಡು. ಇಗೋ, ಬಾಗಲಿನ ಹತ್ತರ ನಿಂತು ಕೊಂಡು, ತಟ್ಟುತ್ತೇನೆ.
ಯಾವನಾದರೂ ನನ್ನ ಶಬ್ದವನ್ನು ಕೇಳಿ, ಬಾಗಲನ್ನು ತೆರೆದರೆ,
ನಾನು ಅವನ ಬಳಿಗೆ ಪ್ರವೇಶಿಸಿ, ಅವನ ಸಂಗಡ ಉಣ್ಣುವೆನು; ಅವ
೨೦ ನು ನನ್ನ ಸಂಗಡ ಉಣ್ಣುವನು. ಜಯಿಸುವವನ್ಯಾವನೋ, ಅ
ವನಿಗೆ ನನ್ನ ಸಂಗಡ ನನ್ನ ಸಿಂಹಾಸನದಲ್ಲಿ ಕೂರ್ರ ಕೊಡುವೆನು;
ನಾನು ಸಹ ಜಯಿಸಿ, ನನ್ನ ತಂದೆಯ ಸಂಗಡ ಅವನ ಸಿಂಹಾಸ
೨೧ ನದಲ್ಲಿ ಕೂತು ಕೊಂಡ ಹಾಗೆಯೇ. ಕಿವಿಯುಳ್ಳವನು ಆತ್ಮವು
ಸಭೆಗಳಿಗೆ ಹೇಳುವದನ್ನು ಕೇಳಲಿ.

## ೪. ಸಂಧಿ.

೧ ಇವುಗಳಾದ ತರುವಾಯ ನಾನು ನೋಡಲಾಗಿ, ಇಗೋ, ಪ
ರಲೋಕದಲ್ಲಿ ತೆರೆದಿರುವ ಬಾಗಲು; ಮತ್ತು ನನ್ನ ಸಂಗಡ ಮಾ
ತಾಡುವ ತುತೂರಿಯ ಹಾಗೆ ನಾನು ಕೇಳ್ದಿದ ಮೊದಲನೇ ಶಬ್ದವು
—ಇಲ್ಲಿಗೆ ಏರಿ ಬಾ, ಇವುಗಳ ತರುವಾಯ ಆಗ ಬೇಕಾದವುಗಳನ್ನು
ನಿನಗೆ ತೋರಿಸುವೆನು, ಅಂದಿತು.

೨ ಸಂಗಡಲೇ ಆತ್ಮದಲ್ಲಿದ್ದೆನು; ಮತ್ತು, ಇಗೋ, ಪರಲೋಕದಲ್ಲಿ
ಸಿಂಹಾಸನವಿತ್ತು, ಮತ್ತು ಸಿಂಹಾಸನದ ಮೇಲೆ ಕೂತು ಕೊಳ್ಳು
3 ವವನು ಇದ್ದನು. ಕೂತು ಕೊಳ್ಳುವವನು ನೋಟಕ್ಕೆ ವಜ್ರ ಅ
ಕ್ಕೀಕ ಕಲ್ಲುಗಳಿಗೆ ಸಮಾನವಾಗಿದ್ದನು; ಮತ್ತು ಸಿಂಹಾಸನದ
ಸುತ್ತಲು ನೋಟಕ್ಕೆ ಪಚ್ಚೇ ಕಲ್ಲಿಗೆ ಸಮಾನವಾದ ಮಳೆ ಬಿಲ್ಲು
೪ ಇತ್ತು; ಮತ್ತು ಸಿಂಹಾಸನದ ಸುತ್ತಲು ಇಪ್ಪತ್ತು ನಾಲ್ಕು ಸಿಂ
ಹಾಸನಗಳು ಇದ್ದವು; ಮತ್ತು ಬಿಳೀ ವಸ್ತ್ರಗಳನ್ನು ಧರಿಸಿ ಕೊಂ
ಡು, ಸಿಂಹಾಸನಗಳ ಮೇಲೆ ಕೂತು ಕೊಂಡಿರುವ ಇಪ್ಪತ್ತು ನಾ
ಲ್ಕು ಹಿರಿಯರನ್ನು ಕಂಡೆನು; ಅವರು ತಮ್ಮ ತಲೆಗಳ ಮೇಲೆ
೫ ಜೆನ್ನಿದ ಕಿರೀಟಗಳು ಉಂಟಾದವರಾಗಿದ್ದರು. ಮತ್ತು ಸಿಂಹಾಸ
ನದಿಂದ ಮಿಂಚುಗಳೂ ಗುಡುಗುಗಳೂ ಶಬ್ದಗಳೂ ಹೊರಟವು;
ಮತ್ತು ಏಳು ಬೆಂಕಿಯ ದೀವಗಳು ಸಿಂಹಾಸನದ ಮುಂದೆ ಉರಿ
೬ ದವು. ಇವು ದೇವರ ಏಳು ಆತ್ಮಗಳಾಗಿವೆ. ಸಿಂಹಾಸನದ ಮುಂ
ದೆ ಸ್ಫಟಿಕಕ್ಕೆ ಸಮಾನವಾದ ಗಾಜಿನ ಸಮುದ್ರವು; ಸಿಂಹಾಸನ
ದ ಮಧ್ಯದಲ್ಲಿಯೂ ಸುತ್ತಲೂ ಹಿಂದೆ ಮುಂದೆ ಕಣ್ಣುಗಳಿಂದ
೭ ತುಂಬಿರುವ ನಾಲ್ಕು ಜೀವಿಗಳು. ಮೊದಲನೇ ಜೀವಿಯು ಸಿಂಹ
ಕ್ಕೆ ಸಮಾನವಾದದ್ದು; ಎರಡನೇ ಜೀವಿಯು ಕರುವಿಗೆ ಸಮಾನ
ವಾದದ್ದು; ಮೂರನೇ ಜೀವಿಯು ಮನುಷ್ಯನ ಹಾಗೆ ಮುಖವು
ಳ್ಳದ್ದು; ನಾಲ್ಕನೇ ಜೀವಿಯು ಹಾರುವ ಹದ್ದಿಗೆ ಸಮಾನವಾ
ದದ್ದು.

೮ ಮತ್ತು ನಾಲ್ಕು ಜೀವಿಗಳು, ಒಂದೊಂದು ಆರಾರು ಕೆಕ್ಕೆಗ
ಳುಳ್ಳದ್ದಾಗಿ, ಸುತ್ತಲೂ ಒಳಗೆಯೂ ಕಣ್ಣುಗಳಿಂದ ತುಂಬಿದ್ದಾಗಿ,
ರಾತ್ರಿ ಹಗಲು ವಿಶ್ರಾಂತಿಯಾಗದೆ ಹೇಳುವದೇನಂದರೆ—ಇದ್ದವ
ನೂ ಇರುವವನೂ ಬರುವವನೂ ಆಗಿರುವಂಥ, ಸರ್ವ ಶಕ್ತನಾದ
ದೇವರಾಗಿರುವಂಥ, ಕರ್ತನು ಪರಿಶುದ್ಧನು, ಪರಿಶುದ್ಧನು, ಪರಿಶು
೯ ದ್ಧನು. ಮತ್ತು ಆ ಜೀವಿಗಳು ಯುಗ ಯುಗಾಂತರಗಳ ವರಿಗೂ
ಬದುಕುವಂಥ, ಸಿಂಹಾಸನದ ಮೇಲೆ ಕೂತು ಕೊಳ್ಳುವವನಿಗೆ ಮ
೧೦ ಹಿಮೆಯನ್ನೂ ಘನವನ್ನೂ ಸ್ತೋತ್ರವನ್ನೂ ಕೊಡಲಾಗಿ, ಇ
ಪ್ಪತ್ತು ನಾಲ್ಕು ಹಿರಿಯರು ಸಿಂಹಾಸನದ ಮೇಲೆ ಕೂತು ಕೊಂ
ಡವನ ಮುಂದೆ ಬಿದ್ದು, ಯುಗ ಯುಗಾಂತರಗಳ ವರಿಗೂ ಬದು
ಕುವವನಿಗೆ ನಮಸ್ಕರಿಸಿ, ತಮ್ಮ ಕಿರೀಟಗಳನ್ನು ಸಿಂಹಾಸನದ
೧೧ ಮುಂದೆ ಹಾಕಿ, ಹೇಳುವದೇನಂದರೆ—ಕರ್ತನೇ, ನೀನು ಮಹಿಮೆ
ಯನ್ನೂ ಘನವನ್ನೂ ಬಲವನ್ನೂ ಹೊಂದ ಯೋಗ್ಯನಾಗಿ
ದ್ದೀ; ಯಾಕಂದರೆ ನೀನು ಎಲ್ಲವುಗಳನ್ನು ಸೃಷ್ಟಿಸಿದಿ, ನಿನ್ನ
ಚಿತ್ತದಿಂದ ಅವು ಉಂಟಾಗಿವೆ, ಮತ್ತು ಸೃಷ್ಟಿಸಲ್ಪಟ್ಟವು.

## ೫. ಸಂಧಿ.

೧ ಮತ್ತು ಸಿಂಹಾಸನದ ಮೇಲೆ ಕೂತು ಕೊಂಡವನ ಬಲಗೈ
ಯಲ್ಲಿ ಒಳಗೆಯೂ ಹಿಂದೆಯೂ ಬರೆದದ್ದಾಗಿಯೂ, ಏಳು ಮು
ದ್ರೆಗಳಿಂದ ಮುದ್ರಿತವಾಗಿಯೂ, ಇರುವ ಸುರಳಿಯನ್ನು ಕಂಡೆ
೨ ನು. ಮತ್ತು ಈ ಸುರಳಿಯನ್ನು ತೆರೆಯಲೂ, ಅದರ ಮುದ್ರೆಗ
ಳನ್ನು ಒಡೆಯಲೂ, ಯೋಗ್ಯನು ಯಾವನು? ಎಂದು ದೊಡ್ಡ
3 ಶಬ್ದದಿಂದ ಸಾರುವ ಬಲಿಷ್ಠ ದೂತನನ್ನು ಕಂಡೆನು. ಮತ್ತು ಪ
ರಲೋಕದಲ್ಲಿಯೂ ಭೂಲೋಕದಲ್ಲಿಯೂ ಭೂಲೋಕದ ಕೆಳ
ಗೂ ಆ ಸುರಳಿಯನ್ನು ತೆರೆಯಲಾದರೂ, ಅದನ್ನು ನೋಡಲಾ
೪ ದರೂ, ಯಾರಿಂದಲೂ ಆಗಲಿಲ್ಲ. ಮತ್ತು ಆ ಸುರಳಿಯನ್ನು
ತೆರೆದು ಓದುವದಕ್ಕೂ, ಅದನ್ನು ನೋಡುವದಕ್ಕೂ, ಯೋ
ಗ್ಯನಾದ ಯಾವನಾದರೂ ಶಿಕ್ಕದ ಕಾರಣ, ನಾನು ಬಹಳವಾಗಿ
೫ ಅತ್ತೆನು. ಆಗ ಹಿರಿಯರಲ್ಲಿ ಒಬ್ಬನು ನನಗೆ ಹೇಳ್ದದ್ದೇನಂದರೆ—
ಅಳ ಬೇಡ; ಇಗೋ, ಯೆಹೂದನ ಕುಲದ ಸಿಂಹವು ದಾವೀ
ದನ ಬೇರೂ ಆಗಿರುವವನು ಆ ಸುರಳಿಯನ್ನು ತೆರೆಯುವದ
ಕ್ಕೂ, ಅದರ ಏಳು ಮುದ್ರೆಗಳನ್ನು ಒಡೆಯುವದಕ್ಕೂ, ಜಯಿ
ಸಿದ್ದಾನೆ.

೬ ಮತ್ತು ನಾನು ನೋಡಲಾಗಿ, ಇಗೋ, ಸಿಂಹಾಸನದ, ನಾಲ್ಕು
ಜೀವಿಗಳ ಮಧ್ಯದಲ್ಲಿಯೂ, ಹಿರಿಯರ ಮಧ್ಯದಲ್ಲಿಯೂ, ಕು
ರಿಮರಿಯು ಕೊಯ್ಯಲ್ಪಟ್ಟಂತೆ, ನಿಂತು ಕೊಂಡಿತು. ಅದಕ್ಕೆ
ಏಳು ಕೊಂಬುಗಳೂ ಏಳು ಕಣ್ಣುಗಳೂ ಇದ್ದವು; ಅವು ಸಕಲ

೭ ಭೂಮಿಗೆ ಕಳುಹಿಸಲ್ಪಟ್ಟ ದೇವರ ಏಳು ಆತ್ಮಗಳಾಗಿವೆ. ಅದು ಬಂದು, ಸಿಂಹಾಸನದ ಮೇಲೆ ಕೂತು ಕೊಂಡವನ ಬಲಗೈಯಿಂದ ಸುರಳಿಯನ್ನು ತೆಗದು ಕೊಂಡಿತು.

೮ ಸುರಳಿಯನ್ನು ತೆಗೆದಾಗ, ನಾಲ್ಕು ಜೀವಿಗಳೂ ಇಪ್ಪತ್ತು ನಾಲ್ಕು ಹಿರಿಯರೂ, ಬಒಬ್ಬಿನ್ನು ವೀಣೆಗಳನ್ನೂ, ಪರಿಶುದ್ಧರ ಪ್ರಾರ್ಥನೆಗಳಾದ ಧೂಪದಿಂದ ತುಂಬಿರುವ ಚಿನ್ನದ ಪಾತ್ರೆಗಳನ್ನೂ, ಹಿಡು ಕೊಂಡವರಾಗಿ, ಕುರಿಮರಿಯ ಮುಂದೆ ಬಿದ್ದು,
೯ ಹೊಸ ಹಾಡನ್ನು ಹಾಡುತ್ತಾ ಹೇಳುವದೇನಂದರೆ—ನೀನು ಸುರಳಿಯನ್ನು ತೆಗೆದು, ಅದರ ಮುದ್ರೆಗಳನ್ನು ಬಿಡೆಯುವದಕ್ಕೆ ಯೋಗ್ಯವಾಗಿದ್ದೀ; ಯಾಕಂದರೆ ನೀನು ಕೊಲ್ಲಲ್ಪಟ್ಟೆ, ನಿನ್ನ ರಕ್ತದಿಂದ ನಮ್ಮನ್ನು ಸಕಲ ಕುಲ, ಭಾಷೆ, ಪ್ರಜೆ, ಜನಾಂಗಗಳೊ
೧೦ ಳಗಿಂದ ದೇವರಿಗೆ ಕೊಂಡು ಕೊಂಡಿ. ನಮ್ಮ ದೇವರಿಗೆ ನಮ್ಮನ್ನು ಅರಸರನ್ನೂ ಯಾಜಕರನ್ನೂ ಮಾಡಿದಿ; ಮತ್ತು ಭೂಮಿಯ ಮೇಲೆ ಆಳುವೆವು.

೧೧ ಮತ್ತು ನೋಡಲಾಗಿ, ಸಿಂಹಾಸನದ, ಜೀವಿಗಳ, ಹಿರಿಯರ, ಸುತ್ತಲು ಅನೇಕ ದೂತರ ಶಬ್ದವನ್ನು ಕೇಳಿದೆನು; ಅವರ ಲೆಕ್ಕವು ಅಯುತಗಳ ಅಯುತಗಳೂ, ಸಹಸ್ರಗಳ ಸಹಸ್ರಗಳೂ, ಆಗಿ
೧೨ ತ್ತು. ಅವರು ದೊಡ್ಡ ಶಬ್ದದಿಂದ ಹೇಳಿದ್ದು—ಕೊಲ್ಲಲ್ಪಟ್ಟ ಕುರಿಮರಿಯು ಬಲ, ಐಶ್ವರ್ಯ, ಜ್ಞಾನ, ಶಕ್ತಿ, ಘನ, ಮಹಿಮೆ,
೧೩ ಸ್ತೋತ್ರಗಳನ್ನು ಹೊಂದ ಯೋಗ್ಯವಾಗಿದೆ. ಮತ್ತು ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ, ಭೂಲೋಕದ ಕೆಳಗೂ, ಸಮುದ್ರದ ಮೇಲೆಯೂ, ಅವುಗಳೊಳಗೂ, ಇರುವ ಸೃಷ್ಟಿಗಳೆಲ್ಲಾ ಸಿಂಹಾಸನದ ಮೇಲೆ ಕೂತು ಕೊಂಡವನಿಗೂ, ಕುರಿಮರಿಗೂ, ಸ್ತೋತ್ರ, ಘನ, ಮಹಿಮೆ, ತ್ರಾಣ, ಯುಗ ಯುಗಾಂತರಗಳ ವರಿಗೂ ಉಂಟಾಗಲಿ, ಎಂದು ಹೇಳುವದನ್ನು ಕೇಳಿದೆನು.
೧೪ ಮತ್ತು ನಾಲ್ಕು ಜೀವಿಗಳು, ಆಮೆನ್ ಅಂದವು. ಮತ್ತು ಇಪ್ಪತ್ತು ನಾಲ್ಕು ಹಿರಿಯರು ಬಿದ್ದು, ಯುಗ ಯುಗಾಂತರಗಳ ವರಿಗೂ ಬದುಕುವವನಿಗೆ ನಮಸ್ಕರಿಸಿದರು.

## ೬. ಸಂಧಿ.

೧ ಮತ್ತು ಕುರಿಮರಿಯು ಮುದ್ರೆಗಳಲ್ಲಿ ಒಂದು ಬಿಡೆಯುವದನ್ನು ನಾನು ನೋಡಲಾಗಿ, ನಾಲ್ಕು ಜೀವಿಗಳಲ್ಲಿ ಒಂದು, ಗುಡಿಗಿನ ಶಬ್ದದ ಹಾಗೆ, ಬಂದು ನೋಡು, ಎಂದು ಹೇಳುವದನ್ನು ಕೇಳಿದೆ
೨ ನು. ಮತ್ತು ನಾನು ನೋಡಲಾಗಿ, ಇಗೋ, ಬಿಳೀ ಕುದುರೆಯು; ಅದರ ಮೇಲೆ ಕೂತು ಕೊಂಡವನಿಗೆ ಬಿಲ್ಲು ಇತ್ತು; ಕಿರೀಟವು ಅವನಿಗೆ ಕೊಡಲ್ಪಟ್ಟಿತು; ಮತ್ತು ಅವನು ಜಯಿಸುವವನಾಗಿಯೂ, ಜಯಿಸುವ ಹಾಗೆಯೂ, ಹೊರಟನು.

೩ ಎರಡನೇ ಮುದ್ರೆಯನ್ನು ಬಿಡೆದಾಗ, ಎರಡನೇ ಜೀವಿಯು,
೪ ಬಂದು ನೋಡು, ಎಂದು ಹೇಳುವದನ್ನು ಕೇಳಿದೆನು. ಆಗ ಕೆಂಪಾದ ಬೇರೆ ಕುದುರೆ ಹೊರಟಿತು; ಅದರ ಮೇಲೆ ಕೂತು ಕೊಂಡವನಿಗೆ, ಒಬ್ಬರನ್ನೊಬ್ಬರು ಕೊಲ್ಲುವ ಹಾಗೆ, ಭೂಮಿಯಿಂದ ಸಮಾಧಾನವನ್ನು ತೆಗೆಯುವ ಅಧಿಕಾರವು ಕೊಡಲ್ಪಟ್ಟಿತು; ಮತ್ತು ದೊಡ್ಡ ಕತ್ತಿ ಅವನಿಗೆ ಕೊಡಲ್ಪಟ್ಟಿತು.

೫ ಮೂರನೇ ಮುದ್ರೆಯನ್ನು ಬಿಡೆದಾಗ, ಮೂರನೇ ಜೀವಿಯು, ಬಂದು ನೋಡು, ಎಂದು ಹೇಳುವದನ್ನು ಕೇಳಿದೆನು. ಮತ್ತು ನೋಡಲಾಗಿ, ಇಗೋ, ಕರೀ ಕುದುರೆಯು; ಅದರ ಮೇಲೆ ಕೂ
೬ ತು ಕೊಂಡವನ ಕೈಯಲ್ಲಿ ತ್ರಾಸು ಇತ್ತು. ಆಗ ನಾಲ್ಕು ಜೀವಿಗಳ ಮಧ್ಯದಲ್ಲಿ ಶಬ್ದವನ್ನು ಕೇಳಿದೆನು; ಏನಂದರೆ, ಚೆನಾರಿಗೆ ಸೇರು ಗೋಧಿಯು; ಚೆನಾರಿಗೆ ಮೂರು ಸೇರು ಜವೆ ಗೋಧಿಯು; ಎಣ್ಣೆಯನ್ನೂ ದ್ರಾಕ್ಷೇ ರಸವನ್ನೂ ಕೆಡಿಸ ಬೇಡ.

೭ ನಾಲ್ಕನೇ ಮುದ್ರೆಯನ್ನು ಬಿಡೆದಾಗ, ಬಂದು ನೋಡು, ಎಂ
೮ ದು ಹೇಳುವ ನಾಲ್ಕನೇ ಜೀವಿಯ ಶಬ್ದವನ್ನು ಕೇಳಿದೆನು. ಪುತ್ತು ನೋಡಲಾಗಿ, ಇಗೋ, ವಿವರ್ಣವಾದ ಕುದುರೆಯು; ಅದರ ಮೇಲೆ ಕೂತವನ ಹೆಸರು ಮರಣವು; ಮತ್ತು ಪಾತಾಳವು ಅವನನ್ನು ಹಿಂಬಾಲಿಸಿತು; ಮತ್ತು ಅವರಿಗೆ ಭೂಮಿಯ ಕಾಲುಭಾಗದ ಮೇಲೆ ಕತ್ತಿಯಿಂದಲೂ, ಹಶಿವೆಯಿಂದಲೂ, ಮರಣದಿಂದಲೂ, ಭೂಮಿಯ ಮೃಗಗಳಿಂದಲೂ, ಕೊಲ್ಲುವ ಅಧಿಕಾರವು ಕೊಡಲ್ಪಟ್ಟಿತು.

೯ ಐದನೇ ಮುದ್ರೆಯನ್ನು ಬಿಡೆದಾಗ, ದೇವರ ವಾಕ್ಯಕ್ಕೋಸ್ಕರವೂ, ಅವರು ಹಿಡುಕೊಂಡ ಸಾಕ್ಷಿಗೋಸ್ಕರವೂ, ಕೊಲ್ಲಲ್ಪಟ್ಟವರ ಪ್ರಾಣಗಳನ್ನು ಬಲಿಪೀಠದ ಕೆಳಗೆ ಕಂಡೆನು. ಅವರು
೧೦ ದೊಡ್ಡ ಶಬ್ದದಿಂದ ಕೂಗಿ ಹೇಳಿದ್ದು, ಪರಿಶುದ್ಧನೂ, ಸತ್ಯವಂತನೂ ಆಗಿರುವ ಯಜಮಾನನೇ! ನೀನು ನಮ್ಮ ರಕ್ತಕ್ಕೋಸ್ಕರ ಭೂನಿವಾಸಿಗಳಿಗೆ ನ್ಯಾಯವನ್ನೂ ಮುಯ್ಯಿಗೆ ಮುಯ್ಯನ್ನೂ ತೀರಿಸದೆ ಇರುವದು ಎಷ್ಟು ಮಟ್ಟಿಗೂ?
೧೧ ಆಗ ಅವರಲ್ಲಿ ಒಬ್ಬೊಬ್ಬನಿಗೆ ಬಿಳೀ ಅಂಗಿಗಳು ಕೊಡಲ್ಪಟ್ಟವು; ಮತ್ತು ಅವರ ಹಾಗೆಯೇ ಕೊಲ್ಲಲ್ಪಟ್ಟುವದಕ್ಕಿರುವ ಅವರ ಸಹೋದರರೂ ಜತೆದಾಸರೂ ಸಂಪೂರ್ಣವಾಗುವ ಪರ್ಯಂತರ, ಇನ್ನು ಸ್ವಲ್ಪ ಕಾಲ ವಿಶ್ರಾಂತಿಯಾಗಿರ ಬೇಕೆಂದು, ಅವರಿಗೆ ಹೇಳಲ್ಪಟ್ಟಿತು.

೧೨ ಮತ್ತು ಆರನೇ ಮುದ್ರೆಯನ್ನು ಬಿಡೆದಾಗ, ನೋಡಿದೆನು; ಆಗ, ಇಗೋ, ಮಹಾ ಭೂಕಂಪ ಉಂಟಾಯಿತು; ಸೂರ್ಯನು ಕೂದಲಿನ ಗೋಣಿಯ ಹಾಗೆ ಕಪ್ಪಾದನು; ಚಂದ್ರನು ರಕ್ತದ
೧೩ ಹಾಗೆ ಆದನು. ಮತ್ತು ಬಿರು ಘೂಳಿಯಿಂದ ಅಲ್ಲಾಡುವ ಅತ್ತಿಮರವು ತನ್ನ ಕಾಯಿಗಳನ್ನು ಉದರಿಸುವ ಪ್ರಕಾರ, ಆಕಾಶದ ನಕ್ಷ
೧೪ ತ್ರಗಳು ಭೂಮಿಯ ಮೇಲೆ ಬಿದ್ದವು. ಮತ್ತು ಆಕಾಶವು ಸುತ್ತಲ್ಪಡುವ ಸುರಳಿಯ ಹಾಗೆ ಹೋಗಿ ಬಿಟ್ಟಿತು; ಮತ್ತು ಪರ್ವತಗಳೂ ದ್ವೀಪಗಳೂ ಎಲ್ಲಾ ತಮ್ಮ ಸ್ಥಳಗಳಿಂದ ತೊಲಗಿ ಹೋದ
೧೫ ವು. ಮತ್ತು ಭೂರಾಜರೂ, ದೊಡ್ಡ ದೊರೆಗಳೂ, ಐಶ್ವರ್ಯವಂತರೂ, ಸಹಸ್ರಾಧಿಪತಿಗಳೂ, ಪರಾಕ್ರಮಕಾಲಿಗಳೂ, ಎಲ್ಲಾ ದಾಸರೂ, ಸ್ವತಂತ್ರರೂ, ಬೆಟ್ಟಗಳ ಗವಿಗಳಲ್ಲಿಯೂ ಗುಡ್ಡಗಳ
೧೬ ಲ್ಲಿಯೂ ಅಡಗಿ ಕೊಂಡು, ಬೆಟ್ಟಗಳಿಗೂ ಗುಡ್ಡಗಳಿಗೂ ಹೇಳುವದೇನಂದರೆ—ನಮ್ಮ ಮೇಲೆ ಬೀಳಿರಿ, ಸಿಂಹಾಸನದ ಮೇಲೆ ಕೂತು ಕೊಂಡವನ ಮುಖಕ್ಕೂ, ಕುರಿಮರಿಯ ಕೋಪಕ್ಕೂ, ನಮ್ಮನ್ನು
೧೭ ಮರೆ ಮಾಡಿರಿ. ಯಾಕಂದರೆ ಅವನ ಕೋಪದ ಮಹಾ ದಿನವು ಬಂತು, ಮತ್ತು ನಿಲ್ಲ ಶಕ್ತನು ಯಾರು?



## ೭. ಸಂಧಿ.

೧ ಇವುಗಳ ತರುವಾಯ ಭೂಮಿಯ ನಾಲ್ಕು ದಿಕ್ಕುಗಳಲ್ಲಿ ನಿಂತು ಕೊಂಡಿರುವ ನಾಲ್ಕು ದೂತರನ್ನು ಕಂಡೆನು; ಅವರು ಭೂಮಿಯಲ್ಯಾದರೂ, ಸಮುದ್ರದಲ್ಯಾದರೂ, ಯಾವ ಮರದ ಮೇಲಾದರೂ, ಘೂಳಿಯು ಬೀಸದ ಹಾಗೆ, ಭೂಮಿಯ ನಾಲ್ಕು ಘೂಳಿಗಳನ್ನು ಹಿಡಿಯುತ್ತಿದ್ದರು.

೨ ಮತ್ತು ಜೀವವುಳ್ಳ ದೇವರ ಮುದ್ರೆ ಉಂಟಾಗಿ, ಸೂರ್ಯೋದಯದಿಂದ ಏರಿ ಬರುವ ಬೇರೊಬ್ಬ ದೂತನನ್ನು ಕಂಡೆನು. ಇವನು ಭೂಮಿಯನ್ನೂ ಸಮುದ್ರವನ್ನೂ ಕೆಡಿಸುವ ಅಧಿಕಾರವನ್ನು ಹೊಂದಿದ ನಾಲ್ಕು ದೂತರಿಗೆ ಮಹಾ ಶಬ್ದಿಂ
3 ದ ಕೂಗಿ ಹೇಳಿದ್ದೇನಂದರೆ, ನಾವು ನಮ್ಮ ದೇವರ ದಾಸರಿಗೆ ಅವರ ಹಣೆಗಳ ಮೇಲೆ ಮುದ್ರೆ ಹಾಕುವ ಪರ್ಯಂತರ ಭೂಮಿಯನ್ನಾದರೂ, ಸಮುದ್ರವನ್ನಾದರೂ, ಮರಗಳನ್ನಾದರೂ, ಕೆಡಿಸ ಬೇಡಿರಿ.

೪ ಮತ್ತು ಮುದ್ರೆ ಹೊಂದಿದವರ ಲೆಕ್ಕವನ್ನು ಕೇಳಿದೆನು—ಇಸ್ರಯೇಲ ಮಕ್ಕಳ ಎಲ್ಲಾ ಕುಲಗಳಲ್ಲಿ ಮುದ್ರೆ ಹೊಂದಿದವರು ನೂ
೫ ರ ನಾಲ್ವತ್ತು ನಾಲ್ಕು ಸಾವಿರ. ಯೆಹೂದನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ರೂಬೆನನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಗಾದನ ಕುಲದಲ್ಲಿ ಮು
೬ ದ್ರೆ ಹೊಂದಿದವರು ಹನ್ನೆರಡು ಸಾವಿರ. ಆಸೇರನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ನೆಪ್ತಲೀಮನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಮನಸ್ಸೆಯ ಕುಲ
೭ ದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಸಿಮೆಯೋನನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಲೇವಿಯ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಇಸ್ಸಕಾರನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ.
೮ ಜೆಬುಲೋನನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಯೋಸೆಫನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ. ಬೆನ್ಯಮಿನನ ಕುಲದಲ್ಲಿ ಮುದ್ರೆ ಹೊಂದಿದವರು ಹನ್ನೆರಡು ಸಾವಿರ.

೯ ಇವುಗಳ ತರುವಾಯ ನಾನು ನೋಡಲಾಗಿ, ಇಗೋ, ಸಮಸ್ತ ಜನಾಂಗ, ಕುಲ, ಪ್ರಜೆ, ಭಾಷೆಗಳೊಳಗಿಂದ ಯಾರೂ ಎಣಿಸಲಾರದ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಕುರಿಮರಿಯ ಮುಂದೆಯೂ ನಿಂತಿತು. ಅವರು ಬಿಳೀ ಅಂಗಿಗಳನ್ನು
೧೦ ಕೊಟ್ಟು ಕೊಂಡವರಾಗಿ, ತಮ್ಮ ಕೈಗಳಲ್ಲಿ ಖರ್ಜೂರದ ಕೊಂಬೆಗಳನ್ನು ಹಿಡುಕೊಂಡು, ಮಹಾ ಶಬ್ದದಿಂದ ಕೂಗಿ ಹೇಳಿದ್ದೇನಂದರೆ, ಸಿಂಹಾಸನದಲ್ಲಿ ಕೂತು ಕೊಂಡಿರುವ ನಮ್ಮ ದೇವರಿ
೧೧ ಗೂ, ಕುರಿಮರಿಗೂ ರಕ್ಷಣೆಯು. ಮತ್ತು ಸಿಂಹಾಸನದ, ಹಿರಿಯರ ನಾಲ್ಕು ಜೀವಿಗಳ, ಸುತ್ತಲು ದೂತಕೆಲ್ಲರು ನಿಂತು, ಸಿಂ
೧೨ ಹಾಸನದ ಮುಂದೆ ಪೋರೆ ಕೆಳಗಾಗಿ ಬಿದ್ದು, ದೇವರಿಗೆ ನಮಸ್ಕರಿಸಿ, ಹೇಳಿದ್ದೇನಂದರೆ, ಆಮೆನ್, ನಮ್ಮ ದೇವರಿಗೆ ಸ್ತೋತ್ರವು, ಮಹಿಮೆಯು, ಜ್ಞಾನವು, ಸ್ತುತಿಯು, ಘನವು, ಬಲವು, ಶಕ್ತಿಯು ಯುಗಯುಗಾಂತರಗಳ ವರಿಗೂ ಉಂಟಾಗಲಿ. ಆಮೆನ್.

೧೩ ಆಗ ಹಿರಿಯರಲ್ಲಿ ಒಬ್ಬನು ಉತ್ತರ ಕೊಟ್ಟು, ಬಿಳೀ ಅಂ
೧೪ ಗಿಗಳನ್ನು ಕೊಟ್ಟು ಕೊಂಡ ಇವರು ಯಾರು? ಎಲ್ಲಿಂದ ಬಂದಿದ್ದಾರೆ? ಎಂದು ನನಗೆ ಹೇಳಿದನು. ಆಗ ಅವನಿಗೆ, ಕರ್ತನೇ, ನೀನು ಬಲ್ಲೆ, ಅಂದೆನು. ಮತ್ತು ಅವನು ನನಗೆ ಹೇಳಿದ್ದು, ಇವರು ಮಹಾ ಉಪದ್ರವದೊಳಗಿಂದ ಬಂದವರಾಗಿದ್ದಾರೆ; ಕುರಿಮರಿಯ ರಕ್ತದಲ್ಲಿ ತಮ್ಮ ಅಂಗಿಗಳನ್ನು ಒಗೆದು ಬಿಳುಪು ಮಾಡಿದ್ದಾ
೧೫ ರೆ. ಆದಕಾರಣ ಅವರು ದೇವರ ಸಿಂಹಾಸನದ ಮುಂದೆ ಇದ್ದು, ಅವನ ಮಂದಿರದಲ್ಲಿ ರಾತ್ರಿ ಹಗಲು ಅವನನ್ನು ಸೇವಿಸುತ್ತಾರೆ. ಮತ್ತು ಸಿಂಹಾಸನದ ಮೇಲೆ ಕೂತವನು ಅವರ ಮೇಲೆ ತನ್ನ
೧೬ ಗುಡಾರ ಹಾಕಿ ಕೊಳ್ಳುವನು. ಇನ್ನು ಮೇಲೆ ಅವರಿಗೆ ಹಶಿವೆಯಾದರೂ ದಾಹವಾದರೂ ಆಗದೆ, ಸೂರ್ಯನ ಬಿಸಿಲಾದರೂ
೧೭ ಯಾವ ಕಾವಾದರೂ ತಗಲದೆ ಇರುವದು. ಯಾಕಂದರೆ ಸಿಂಹಾಸನದ ಮಧ್ಯದಲ್ಲಿರುವ ಕುರಿಮರಿಯು ಅವರನ್ನು ಮೇಯಿಸಿ, ಜೀವವುಳ್ಳ ನೀರು ಬುಗ್ಗೆಗಳಿಗೆ ನಡಿಸುವದು; ಮತ್ತು ದೇವರು ಕಣ್ಣೀಕೆಲ್ಲಾ ಅವರ ಕಣ್ಣುಗಳಿಂದ ಒರಸುವನು.

## ೮. ಸಂಧಿ.

೧ ಮತ್ತು ಏಳನೇ ಮುದ್ರೆಯನ್ನು ಬಿಡೆದಾಗ, ಪರಲೋಕದಲ್ಲಿ ಹೆಚ್ಚು ಕಡಿಮೆ ಅರ್ಧ ತಾಸು ನಿಶ್ಶಬ್ದವಾಯಿತು.

೨ ಆಗ ದೇವರ ಮುಂದೆ ನಿಂತಿರುವ ಏಳು ದೂತರನ್ನು ಕಂಡೆನು;
3 ಮತ್ತು ಅವನಿಗೆ ಏಳು ತುತೂರಿಗಳು ಕೊಡಲ್ಪಟ್ಟವು. ಮತ್ತು ಬೇರೊಬ್ಬ ದೂತನು ಬಂದು, ಚಿನ್ನದ ಧೂಪಾರ್ತಿಯನ್ನು ಹಿಡಿದು ಕೊಂಡು, ಧೂಪ ಪೀಠದ ಹತ್ತರ ನಿಂತನು. ಮತ್ತು ಪರಿಶುದ್ಧರೆಲ್ಲರ ಪ್ರಾರ್ಥನೆಗಳ ಸಂಗಡ ಸಿಂಹಾಸನದ ಮುಂದಿರುವ ಚಿನ್ನದ ಧೂಪ ಪೀಠದ ಮೇಲೆ ಇಡುವದಕ್ಕೆ ಅವನಿಗೆ ಬಹಳ
೪ ಧೂಪ ಕೊಡಲ್ಪಟ್ಟಿತು. ಆಗ ಧೂಪದ ಹೊಗೆಯೂ ಪರಿಶುದ್ಧರ ಪ್ರಾರ್ಥನೆಗಳ ಸಂಗಡ ದೂತನ ಕೈಯೊಳಗಿಂದ ದೇವರ
೫ ಮುಂದೆ ಏರಿ ಬಂತು. ಮತ್ತು ದೂತನು ಧೂಪಾರ್ತಿಯನ್ನು ತೆಗೆದು, ಧೂಪ ಪೀಠದ ಬೆಂಕಿಯಿಂದ ಅದನ್ನು ತುಂಬಿಸಿ, ಭೂಮಿಗೆ ಬಿಸಾಟನು. ಆಗ ಶಬ್ದಗಳೂ, ಗುಡುಗುಗಳೂ, ಮಿಂಚುಗಳೂ, ಭೂಕಂಪವೂ, ಉಂಟಾದವು.

೬ ಮತ್ತು ಏಳು ತುತೂರಿಗಳು ಉಂಟಾದ ಏಳು ದೂತರು ಉ
7 ದುವದಕ್ಕೆ ತಮ್ಮನ್ನು ಸಿದ್ಧ ಮಾಡಿ ಕೊಂಡರು. ಮೊದಲನೇ ದೂತನು ಊದಲಾಗಿ, ರಕ್ತದಿಂದ ಕಲಿಸಿದ ಕಲ್ಮಳೆಯೂ ಬೆಂಕಿಯೂ ಉಂಟಾಗಿ, ಭೂಮಿಗೆ ಹಾಕಲ್ಪಟ್ಟವು. ಆಗ ಮರಗಳಲ್ಲಿ ಮೂರನೇ ಭಾಗವು ಬೆಂದು ಹೋಯಿತು; ಮತ್ತು ಹಸಿ ಹುಲ್ಲೆಲ್ಲಾ ಬೆಂದು ಹೋಯಿತು.

೮ ಎರಡನೇ ದೂತನು ಊದಲಾಗಿ, ಬೆಂಕಿ ಉರಿಯುವ ದೊಡ್ಡ ಬೆಟ್ಟದ ಹಾಗೆ ಇರುವಂಥಾದ್ದು ಸಮುದ್ರದಲ್ಲಿ ಹಾಕಲ್ಪಟ್ಟಿತು. ಆಗ ಸಮುದ್ರದ ಮೂರನೇ ಭಾಗವು ರಕ್ತವಾಯಿತು. ಮತ್ತು
9 ಸಮುದ್ರದಲ್ಲಿರುವ ಪ್ರಾಣವುಳ್ಳ ಜಂತುಗಳ ಮೂರನೇ ಭಾಗವು ಸತ್ತಿತು. ಹಡಗಗಳ ಮೂರನೇ ಭಾಗವು ನಾಶವಾಯಿತು.

೧೦ ಮೂರನೇ ದೂತನು ಊದಲಾಗಿ, ಆಕಾಶದಿಂದ ದೀಪದಂತೆ ಉರಿಯುವ ದೊಡ್ಡ ನಕ್ಷತ್ರವು ಬಿತ್ತು; ಅದು ನದಿಗಳ ಮೂರನೇ ಭಾಗದ ಮೇಲೆಯೂ ನೀರು ಬುಗ್ಗೆಗಳ ಮೇಲೆಯೂ ಬಿತ್ತು.

೧೧ ಆ ನಕ್ಷತ್ರದ ಹೆಸರು ಮಾಚಿಪತ್ರ ಎಂದು ಹೇಳಲ್ಪಡುತ್ತದೆ. ಮತ್ತು ನೀರುಗಳ ಮೂರನೇ ಭಾಗವು ಮಾಚಿಪತ್ರಿಯಾಯಿತು; ಅವು ಕಹಿಯೆಂದ ಕಾರಣ ಆ ನೀರುಗಳಿಂದ ಮನುಷ್ಯರಲ್ಲಿ ಅನೇಕರು ಸತ್ತರು.

೧೨ ನಾಲ್ಕನೇ ದೂತನು ಉದಲಾಗಿ, ಸೂರ್ಯನ ಮೂರನೇ ಭಾಗವೂ, ಚಂದ್ರನ ಮೂರನೇ ಭಾಗವೂ, ನಕ್ಷತ್ರಗಳ ಮೂರನೇ ಭಾಗವೂ, ಹೊಡೆಯಲ್ಪಟ್ಟವು. ಇದರಿಂದ ಅವುಗಳ ಮೂರನೇ ಭಾಗವು ಕತ್ತಲಾಗಿ, ಹಗಲು ಅದರ ಮೂರನೇ ಭಾಗದವರೆಗಂತರ ಪ್ರಕಾಶಿಸಲಿಲ್ಲ; ರಾತ್ರಿಯು ಹಾಗೆಯೇ.

೧೩ ಮತ್ತು ನೋಡಲಾಗಿ, ಮಧ್ಯಾಕಾಶದಲ್ಲಿ ಹಾರುವ ದೂತನನ್ನು ಕೇಳಿದೆನು. ಅವನು ಮಹಾ ಶಬ್ದದಿಂದ ಹೇಳ್ದೇನಂದರೆ, ಉದಲಿರುವ ಮೂರು ದೂತರ ಮಿಕ್ಕಾದ ತುತೂರಿಯ ಧ್ವನಿಗಳಿಗೋಸ್ಕರ ಭೂನಿವಾಸಿಗಳಿಗೆ ಅಯ್ಯೋ! ಅಯ್ಯೋ! ಅಯ್ಯೋ!

## ೯. ಸಂಧಿ.

೧ ಮತ್ತು ಐದನೇ ದೂತನು ಉದಲಾಗಿ, ಆಕಾಶದಿಂದ ಭೂಮಿಯ ಮೇಲೆ ಬಿದ್ದ ನಕ್ಷತ್ರವನ್ನು ಕಂಡೆನು; ಮತ್ತು ಅವನಿಗೆ ಅ
೬ ಗಾಧದ ಗುಂಡಿಯ ಬೀಗದ ಕೈ ಕೊಡಲ್ಪಟ್ಟಿತು. ಅಗಾಧದ ಗುಂಡಿಯನ್ನು ತೆರೆದನು; ಮತ್ತು ಗುಂಡಿಯೊಳಗಿಂದ ದೊಡ್ಡ ಕೊಲುಮೆಯ ಹೊಗೆಯ ಹಾಗೆ ಹೊಗೆ ಏರಿತು; ಮತ್ತು ಸೂರ್ಯನೂ ಆಕಾಶವೂ ಗುಂಡಿಯ ಹೊಗೆಯಿಂದ ಕತ್ತಲಾದವು.
3 ಆ ಹೊಗೆಯೊಳಗಿಂದ ಮಿಡತೆಗಳು ಭೂಮಿಯ ಮೇಲೆ ಬಂದವು; ಮತ್ತು ಭೂಮಿಯಲ್ಲಿರುವ ಜೇಳುಗಳಿಗೆ ಇರುವ ಅಧಿಕಾರದ
೪ ಪ್ರಕಾರ ಅವುಗಳಿಗೆ ಅಧಿಕಾರವು ಕೊಡಲ್ಪಟ್ಟಿತು. ಭೂಮಿಯ ಹುಲ್ಲನ್ನಾದರೂ, ಹಸುರಾದ ಯಾವದನ್ನಾದರೂ, ಯಾವ ಮರವನ್ನಾದರೂ, ಕೆಡಿಸದೆ, ತಮ್ಮ ಹಣೆಗಳಲ್ಲಿ ದೇವರ ಮುದ್ರೆ ಇಲ್ಲದ ಮನುಷ್ಯರನ್ನು ಮಾತ್ರ ಕೆಡಿಸ ಬೇಕೆಂದು, ಅವುಗಳಿಗೆ
೫ ಹೇಳಲ್ಪಟ್ಟಿತು. ಮತ್ತು ಇವರನ್ನೂ ಕೊಲ್ಲುವ ಹಾಗಲ್ಲ, ಐದು ತಿಂಗಳು ಪೀಡಿಸುವ ಹಾಗೆ ಮಾತ್ರ, ಅವುಗಳಿಗೆ ಕೊಡಲ್ಪಟ್ಟಿತು; ಮತ್ತು ಅವುಗಳ ಪೀಡೆಯು ಮನುಷ್ಯನನ್ನು ಹೊಡೆಯುವ
೬ ಜೇಳಿನ ಪೀಡೆಯ ಹಾಗಿತ್ತು. ಆ ದಿನಗಳಲ್ಲಿ ಮನುಷ್ಯರು ಮರಣವನ್ನು ಹುಡುಕಿ, ಅದನ್ನು ಕಾಣದೆ ಇರುವರು. ಸಾಯುವದಕ್ಕೆ ಆಶಿಸುವರು; ಆದರೆ ಮರಣವು ಅವರ ಕಡೆಯಿಂದ ಓಡಿ ಹೋಗುವದು.

೭ ಮತ್ತು ಆ ಮಿಡತೆಗಳ ರೂಪಗಳು ಯುದ್ಧಕ್ಕೆ ಸಿದ್ಧವಾದ ಕುದುರೆಗಳಿಗೆ ಸಮಾನವಾಗಿ, ಅವುಗಳ ತಲೆಗಳ ಮೇಲೆ ಚಿನ್ನಕ್ಕೆ ಸಮಾನವಾದ ಕಿರೀಟಗಳ ಹಾಗೆ, ಅವುಗಳ ಮುಖಗಳು ಮನು
೮ ಷ್ಯರ ಮುಖಗಳ ಹಾಗೆ, ಅವುಗಳ ಕೂದಲು ಹೆಂಗಸರ ಕೂದಲಿನ ಹಾಗೆ, ಅವುಗಳ ಹಲ್ಲುಗಳು ಸಿಂಹಗಳ ಹಲ್ಲುಗಳ ಹಾಗೆ, ಇ
೯ ದ್ದವು. ಕಬ್ಬಿಣದ ಕವಚಗಳ ಹಾಗೆ ಅವುಗಳಿಗೆ ಕವಚಗಳಿದ್ದವು; ಅವುಗಳ ಕೆಕ್ಕೆಗಳ ಶಬ್ದವು ಯುದ್ಧಕ್ಕೆ ಓಡುವ ಅನೇಕ ಕುದು
೧೦ ರೆಗಳಿರುವ ರಥಗಳ ಶಬ್ದದ ಹಾಗಿತ್ತು. ಮತ್ತು ಜೇಳುಗಳಂತೆ ಅವುಗಳಿಗೆ ಬಾಲಗಳೂ, ಅವುಗಳ ಬಾಲಗಳಲ್ಲಿ ಕೊಂಡಿಗಳೂ, ಉಂಟು; ಮನುಷ್ಯರನ್ನು ಐದು ತಿಂಗಳು ಪೀಡಿಸುವದಕ್ಕೆ ಅವುಗಳಿ
೧೧ ಗೆ ಅಧಿಕಾರವು ಉಂಟು. ಮತ್ತು ಅಗಾಧದ ದೂತನು ಅವುಗಳಿಗೆ ಅರಸನಾಗಿದ್ದಾನೆ; ಇವನಿಗೆ ಇಬ್ರೀಯ ಮಾತಿನಲ್ಲಿ ಅಬದ್ದೋನನೂ, ಗ್ರೀಕ ಮಾತಿನಲ್ಲಿ ಅಪೊಲ್ಲುಯೋನನೂ, ಎಂಬ ಹೆಸರು.
೧೨ ಮೊದಲನೇ ಅಯ್ಯೋ ಆಗಿ ಹೋಯಿತು; ಇಗೋ, ಇನ್ನು ಎರಡು ಅಯ್ಯೋ ಇವುಗಳ ತರುವಾಯ ಬರುತ್ತವೆ.

೧೩ ಆರನೇ ದೂತನು ಉದಲಾಗಿ, ದೇವರ ಮುಂದಿರುವ ಚಿನ್ನದ ಧೂಪಪೀಠದ ನಾಲ್ಕು ಕೊಂಬುಗಳಿಂದ ಒಂದು ಶಬ್ದವನ್ನು
೧೪ ಕೇಳಿದೆನು; ಅದು ತುತೂರಿ ಹಿಡಿದ ಆರನೇ ದೂತನಿಗೆ, ಪ್ರಾತು ಎಂಬ ದೊಡ್ಡ ನದಿಯಲ್ಲಿ ಕಟ್ಟಿರುವ ನಾಲ್ಕು ದೂತರನ್ನು ಬಿಡಿ
೧೫ ಸು, ಎಂದು ಹೇಳಿತು. ಆಗ, ಮನುಷ್ಯರ ಮೂರನೇ ಭಾಗವನ್ನು ಕೊಲ್ಲುವ ಹಾಗೆ, ತಾಸು, ದಿನ, ತಿಂಗಳು, ವರುಷಗಳಿಗೂ ಸಿ
೧೬ ದ್ಧವಾದ ನಾಲ್ಕು ದೂತರು ಬಿಡುಗಡೆಯಾದರು; ಮತ್ತು ಕುದುರೆ ಸೈನ್ಯದ ಲೆಖ್ಖವು ಇಪ್ಪತ್ತು ಕೋಟಿಯು, ಅವರ ಲೆಖ್ಖವನ್ನು ಕೇಳಿದೆನು.

೧೭ ಈ ಮೇರೆಗೆ ನೋಟದಲ್ಲಿ ಕುದುರೆಗಳನ್ನೂ, ಅವುಗಳ ಮೇಲೆ ಕೂತು ಕೊಂಡವರನ್ನೂ, ಕಂಡೆನು. ಅವರಿಗೆ ಬೆಂಕಿಯೂ ನೀಲವೂ ಗಂಧಕವೂ ಆಗಿರುವ ಕವಚಗಳಿದ್ದವು; ಕುದುರೆಗಳ ತಲೆಗಳು ಸಿಂಹಗಳ ತಲೆಗಳ ಹಾಗಿದ್ದವು; ಅವುಗಳ ಬಾಯಿಗಳೊಳಗಿಂದ ಬೆಂಕಿಯೂ ಹೊಗೆಯೂ ಗಂಧಕವೂ ಹೊರಡುತ್ತಾ ಇದ್ದವು.
೧೮ ಅವುಗಳ ಬಾಯಿಗಳೊಳಗಿಂದ ಹೊರಡುವ ಬೆಂಕಿ, ಹೊಗೆ, ಗಂಧಕ, ಈ ಮೂರರಿಂದ ಮನುಷ್ಯರ ಮೂರನೇ ಭಾಗವು ಕೊಲ್ಲ
೧೯ ಲ್ಪಟ್ಟಿತು. ಯಾಕಂದರೆ ಅವುಗಳ ಅಧಿಕಾರವು ಅವುಗಳ ಬಾಯಿಯಲ್ಲಿಯೂ ಅವುಗಳ ಬಾಲಗಳಲ್ಲಿಯೂ ಅದೆ. ಯಾಕಂದರೆ ಅವುಗಳ ಬಾಲಗಳು ಸರ್ಪಗಳಿಗೆ ಸಮಾನವಾಗಿದ್ದು, ತಲೆಯುಳ್ಳವುಗಳಾಗಿವೆ; ಅವುಗಳಿಂದ ಕೆಡಿಸುತ್ತವೆ.

೨೦ ಮತ್ತು ಈ ಬಾಧೆಗಳಿಂದ ಕೊಲ್ಲಲ್ಪಡದೆ ಉಳಿದ ಮನುಷ್ಯರು, ದೆವ್ವಗಳಿಗೂ, ನೋಡಲೂ ಕೇಳಲೂ ನಡೆಯಲೂ ಅರಿಯದ ಚಿನ್ನ, ಬೆಳ್ಳಿ, ಹಿತ್ತಾಳಿ, ಕಲ್ಲು, ಮರಗಳ ಬೊಂಬೆಗಳಿಗೂ, ನ
೨೧ ಮಸ್ಕರಿಸದ ಹಾಗೆ, ಮಾನಸಾಂತರ ಪಡಲಿಲ್ಲ. ಮತ್ತು ತಮ್ಮ ಕೊಲೆಗಳನ್ನೂ, ತಮ್ಮ ತಂತ್ರಗಳನ್ನೂ, ತಮ್ಮ ಜಾರತ್ವಗಳನ್ನೂ, ತಮ್ಮ ಕಳ್ಳತನಗಳನ್ನೂ ಬಿಟ್ಟು ಮಾನಸಾಂತರ ಪಡಲಿಲ್ಲ.

## ೧೦. ಸಂಧಿ.

೧ ಮತ್ತು ಪರಲೋಕದಿಂದಿಳಿದು ಬರುವ ಬೇರೊಬ್ಬ ಬಲಿಷ್ಠ ದೂತನನ್ನು ಕಂಡೆನು. ಅವನು ಮೇಘವನ್ನು ಸುತ್ತಿ ಕೊಂಡಿದ್ದನು; ಅವನ ತಲೆಯ ಮೇಲೆ ಮಳೆ ಬಿಲ್ಲು ಇತ್ತು. ಅವನ ಮುಖವು ಸೂರ್ಯನ ಹಾಗೆ, ಅವನ ಕಾಲುಗಳು ಬೆಂಕಿಯ ಸ್ತಂಭಗಳ ಹಾಗಿದ್ದವು. ಅವನ ಕೈಯಲ್ಲಿ ತೆಗೆದಿರುವ ಒಂದು ಸಣ್ಣ ಸುರಳಿ ಇತ್ತು; ಅವನು ಬಲಗಾಲನ್ನು ಸಮುದ್ರದ ಮೇಲೆಯೂ, ಎ
೩ ಡಗಾಲನ್ನು ಭೂಮಿಯ ಮೇಲೆಯೂ ಇಟ್ಟು, ಸಿಂಹವು ಗರ್ಜಿ
೪ ಸುವ ಪ್ರಕಾರ ಮಹಾ ಶಬ್ದದಿಂದ ಕೂಗಿದನು. ಕೂಗಿದಾಗ, ಏಳು ಗುಡುಗುಗಳು ತಮ್ಮ ಶಬ್ದಗಳನ್ನು ಕೊಟ್ಟವು. ಮತ್ತು ಆ ಏಳು ಗುಡುಗುಗಳು ತಮ್ಮ ಶಬ್ದಗಳನ್ನು ಕೊಟ್ಟಾಗಲೇ, ಬರೆಯಬೇಕೆಂದಿದ್ದೆನು. ಆಗ, ಆ ಏಳು ಗುಡುಗುಗಳು ನುಡಿದವುಗಳನ್ನು ಬರೆಯದೆ, ಅವುಗಳಿಗೆ ಮುದ್ರೆ ಹಾಕು, ಎಂದು ನನಗೆ ಹೇಳುವ ಪರಲೋಕದಿಂದಾದ ಶಬ್ದವನ್ನು ಕೇಳಿದೆನು.



೫ ಮತ್ತು ಸಮುದ್ರದ ಮೇಲೆಯೂ ಭೂಮಿಯ ಮೇಲೆಯೂ ನಿಂತಿರುವಂಥ, ನಾನು ಕಂಡ ದೂತನು ತನ್ನ ಬಲಗೈಯನ್ನು ಆ
೬ ಕಾಶಕ್ಕೆ ಎತ್ತಿ, ಆಕಾಶವನ್ನೂ, ಅದರಲ್ಲಿ ಇರುವವುಗಳನ್ನೂ, ಭೂಮಿಯನ್ನೂ, ಅದರಲ್ಲಿ ಇರುವವುಗಳನ್ನೂ, ಸಮುದ್ರವನ್ನೂ, ಅದರಲ್ಲಿ ಇರುವವುಗಳನ್ನೂ, ಸೃಷ್ಟಿಸಿ, ಯುಗಯುಗಾಂತರಗ
೭ ಳ ವರೆಗೂ ಬದುಕುವವನ ಮೇಲೆ ಆಣೆ ಇಟ್ಟು, ಇನ್ನು ಮೇಲೆ ಕಾಲವು ಇರದು; ಆದರೆ ಏಳನೇ ದೂತನ ಶಬ್ದದ ದಿನಗಳಲ್ಲಿ, ಅವನು ಊದುವದಕ್ಕಿರುವ ಸಮಯದಲ್ಲಿ, ತನ್ನ ದಾಸರಾದ ಪ್ರವಾದಿಗಳಿಗೆ ಸುವಾರ್ತೆಯಾಗಿ ಹೇಳಿದ ಪ್ರಕಾರ ದೇವರ ಮರ್ಮವು ಸಂಪೂರ್ಣವಾಗುವದು, ಅಂದನು.

೮ ಮತ್ತು ನಾನು ಕೇಳಿದ, ಪರಲೋಕದಿಂದಾದ ಶಬ್ದವು ತಿರಿಗಿ ನನ್ನ ಸಂಗಡ ಮಾತಾಡಿ, ಹೇಳ್ದೇನಂದರೆ, ಹೋಗಿ, ಸಮುದ್ರದ ಮೇಲೆಯೂ ಭೂಮಿಯ ಮೇಲೆಯೂ ನಿಂತಿರುವ ದೂತನ ಕೈಯಲ್ಲಿ ಇರುವಂಥ ತೆರೆದಿರುವ ಸುರಳಿಯನ್ನು ತೆಗೆದುಕೋ.
೯ ಆಗ ದೂತನ ಹತ್ತರ ಹೋಗಿ, ಆ ಸಣ್ಣ ಸುರಳಿಯನ್ನು ನನಗೆ ಕೊಡು, ಅಂದೆನು. ಅವನು ನನಗೆ, ಅದನ್ನು ತೆಗೆದು ಕೊಂಡು, ತಿಂದು ಬಿಡು; ಅದು ನಿನ್ನ ಹೊಟ್ಟೆ ಕಹಿ ಮಾಡುವದು, ಆದರೆ ನಿನ್ನ ಬಾಯಿಯಲ್ಲಿ ಜೇನಿನಂತೆ ಶೀಯಾಗಿರುವದು, ಅಂದನು.
೧೦ ಆಗ ದೂತನ ಕೈಯಿಂದ ಆ ಸಣ್ಣ ಸುರಳಿಯನ್ನು ತೆಗೆದು ಕೊಂಡು, ತಿಂದು ಬಿಟ್ಟೆನು. ಅದು ನನ್ನ ಬಾಯಿಯಲ್ಲಿ ಜೇನಿನಂತೆ ಶೀಯಾಗಿತ್ತು; ಅದನ್ನು ತಿಂದ ಮೇಲೆ ನನ್ನ ಹೊಟ್ಟೆ ಕ
೧೧ ಹಿಯಾಯಿತು. ಆಗ, ನೀನು ತಿರಿಗಿ ಅನೇಕ ಪ್ರಜೆಗಳನ್ನೂ, ಜನಾಂಗಗಳನ್ನೂ, ಭಾಷೆಗಳನ್ನೂ, ಅರಸರನ್ನೂ ಕುರಿತು ಪ್ರವಾದಿಸ ಬೇಕೆಂದು, ನನಗೆ ಹೇಳಿದನು.

## ೧೧. ಸಂಧಿ.

೧ ಆಗ ನನಗೆ ಕೋಲಿಗೆ ಸಮಾನವಾದ ಬೆತ್ತವು ಕೊಡಲ್ಪಟ್ಟಿತು; ಮತ್ತು, ಹೇಳ್ದೇನಂದರೆ, ಎದ್ದು, ದೇವರ ಮಂದಿರವನ್ನೂ, ಬಲಿಪೀಠವನ್ನೂ, ಅದರಲ್ಲಿ ಆರಾಧಿಸುವವರನ್ನೂ, ಅಳತೆ ಮಾ
೨ ಡು. ಮತ್ತು ಮಂದಿರದ ಹೊರಗಿರುವ ಅಂಗಳವನ್ನು ಅಳತೆ ಮಾಡದೆ, ಬಿಟ್ಟು ಬಿಡು; ಯಾಕಂದರೆ ಅದು ಜನಾಂಗಗಳಿಗೆ ಕೊಡಲ್ಪಟ್ಟಿದೆ; ಅವರು ನಾಲ್ವತ್ತೆರಡು ತಿಂಗಳು ಪರಿಶುದ್ಧ ಪಟ್ಣವನ್ನು ತುಳಿಯುವರು.

3 ಆಗ ನನ್ನ ಇಬ್ಬರು ಸಾಕ್ಷಿಗಳಿಗೆ, ಗೋಣಿ ವಸ್ತ್ರಗಳನ್ನು ಹಾಕಿ ಕೊಂಡು, ಸಾವಿರದ ಇನ್ನೂರ ಅರವತ್ತು ದಿನ ಪ್ರವಾದಿಸ
೪ ಕೊಡುವೆನು. ಭೂಮಿಯ ದೇವರ ಮುಂದೆ ನಿಂತಿರುವ ಎರಡು
೫ ಇವೇ ಮರಗಳೂ, ಎರಡು ದೀಪಗಳೂ, ಇವರೇ. ಯಾರಾದರೂ ಅವರಿಗೆ ಕೇಡು ಮಾಡ ಬೇಕೆಂದಿದ್ದರೆ, ಅವರ ಬಾಯಿಯೊಳಗಿಂದ ಬೆಂಕಿಯು ಹೊರಟು, ಅವರ ಶತ್ರುಗಳನ್ನು ತಿಂದು ಬಿ
೬ ಡುವದು. ಯಾರಾದರೂ ಅವರಿಗೆ ಕೇಡು ಮಾಡ ಬೇಕೆಂದಿದ್ದರೆ, ಅವನು ಹೀಗೆಯೇ ಕೊಲ್ಲಲ್ಪಡ ಬೇಕು. ಇವರಿಗೆ, ತಮ್ಮ ಪ್ರವಾದನೆಯ ದಿವಸಗಳಲ್ಲಿ ಮಳೆ ಸುರಿಯದಹಾಗೆ, ಆಕಾಶವನ್ನು ಮುಚ್ಚುವದಕ್ಕೆ ಅಧಿಕಾರ ಉಂಟು; ನೀರುಗಳನ್ನು ರಕ್ತ ಮಾಡುವದಕ್ಕೂ, ಅವರಿಗೆ ಮನಸ್ಸು ಬಂದಷ್ಟು ಸಾರಿ ಭೂಮಿಯನ್ನು ಸಕಲ ಬಾಧೆಗಳಿಂದ ಬಡಿಯುವದಕ್ಕೂ, ಅಧಿಕಾರ ಉಂಟು.

೭ ಮತ್ತು ತಮ್ಮ ಸಾಕ್ಷಿಯನ್ನು ಮುಗಿಸಿದಾಗ, ಅಗಾಧದೊಳಗಿಂದ ಏರಿ ಬರುವ ಮೃಗವು ಅವರ ಸಂಗಡ ಯುದ್ಧ ಮಾಡಿ,
೮ ಅವರನ್ನು ಜಯಿಸಿ, ಅವರನ್ನು ಕೊಲ್ಲುವದು. ಮತ್ತು ಅವರ ಹೆಣಗಳು ಆತ್ಯಾರ್ಥವಾಗಿ ಸೊದೋಮೂ, ಐಗುಪ್ತವೂ ಎಂದು ಕರೆಯಲ್ಪಟ್ಟ ಮಹಾ ಪಟ್ಣದ ಬೀದಿಯಲ್ಲಿ, ನಮ್ಮ ಕರ್ತನು ಶಿಲುಬೆಗೆ ಹಾಕಲ್ಪಟ್ಟಲ್ಲಿಯೇ, ಇರುವವು.

೯ ಮತ್ತು ಪ್ರಜೆ, ಕುಲ, ಭಾಷೆ, ಜನಾಂಗಗಳಲ್ಲಿ ಇರುವವರು ಅವರ ಹೆಣಗಳನ್ನು ಮೂರು ವರೆ ದಿವಸ ನೋಡುವರು; ಮತ್ತು ಅ
೧೦ ವರ ಹೆಣಗಳನ್ನು ಸಮಾಧಿಯಲ್ಲಿ ಇಡ ಗೊಡಿಸರು. ಈ ಇಬ್ಬರು ಪ್ರವಾದಿಗಳು ಭೂಮಿಯ ಮೇಲೆ ವಾಸಮಾಡುವವರನ್ನು ಪೀಡಿಸಿದ್ದರಿಂದ, ಭೂಮಿಯ ಮೇಲೆ ವಾಸ ಮಾಡುವವರು ಅವರ ಮೇಲೆ ಸಂತೋಷಿಸಿ, ಆನಂದ ಪಟ್ಟು, ಒಬ್ಬರಿಗೊಬ್ಬರು ಉಡುಗೆರೆಗಳನ್ನು ಕಳುಹಿಸುವರು.

೧೧ ಮತ್ತು ಆ ಮೂರು ವರೆ ದಿವಸಗಳ ತರುವಾಯ ದೇವರಿಂದ ಜೀವದ ಆತ್ಮವು ಅವರೊಳಗೆ ಬಂತು; ಮತ್ತು ಅವರು ಕಾಲೂರಿ ನಿಂತರು. ಆಗ ಅವರನ್ನು ನೋಡುವವರ ಮೇಲೆ ಮಹಾ ಭಯವು ಬಿತ್ತು. ಮತ್ತು, ಇಲ್ಲಿಗೆ ಏರಿ ಬನ್ನಿರಿ, ಎಂದು ತಮಗೆ ಹೇಳ
೧೨ ವ, ಪರಲೋಕದಿಂದಾದ, ಮಹಾ ಶಬ್ದವನ್ನು ಕೇಳಿ, ಮೇಘದಲ್ಲಿ
೧೩ ಪರಲೋಕಕ್ಕೆ ಏರಿ ಹೋದರು. ಮತ್ತು ಅವರ ಶತ್ರುಗಳು ಅವರನ್ನು ನೋಡಿದರು. ಅದೇ ತಾಸಿನಲ್ಲಿ ಮಹಾ ಭೂಕಂಪ ಉಂಟಾಗಿ, ಪಟ್ಣದ ಹತ್ತನೇ ಪಾಲು ಬಿದ್ದು, ಭೂಕಂಪದಿಂದ ಏಳು ಸಾವಿರ ಮಂದಿ ಕೊಲ್ಲಲ್ಪಟ್ಟರು; ಮಿಕ್ಕಾದವರು ಭಯಸ್ಥರಾಗಿ,
೧೪ ಪರಲೋಕದ ದೇವರಿಗೆ ಮಹಿಮೆಯನ್ನು ಕೊಟ್ಟರು. ಎರಡನೇ ಅಯ್ಯೋ ಆಗಿ ಹೋಯಿತು; ಇಗೋ, ಮೂರನೇ ಅಯ್ಯೋ ಬೇಗ ಬರುತ್ತದೆ.

೧೫ ಏಳನೇ ದೂತನು ಉದಲಾಗಿ, ಪರಲೋಕದಲ್ಲಿ ಮಹಾ ಶಬ್ದಗಳು ಉಂಟಾಗಿ ಹೇಳ್ದೇನಂದರೆ, ಲೋಕದ ರಾಜ್ಯಗಳು ನಮ್ಮ ಕರ್ತನಿಗೂ ಅವನ ಕ್ರಿಸ್ತನಿಗೂ ಉಂಟಾದವು; ಅವನು ಯುಗ
೧೬ ಯುಗಾಂತರಗಳ ವರೆಗೂ ಆಳುವನು. ಆಗ ದೇವರ ಮುಂದೆ ತಮ್ಮ ಸಿಂಹಾಸನಗಳ ಮೇಲೆ ಕೂತು ಕೊಂಡಿರುವ ಇಪ್ಪತ್ತು
೧೭ ನಾಲ್ಕು ಹಿರಿಯರು ಅಡ್ಡ ಬಿದ್ದು, ದೇವರಿಗೆ ನಮಸ್ಕರಿಸಿ, ಹೇಳ್ದೇನಂದರೆ, ಇದ್ದವನೂ ಇರುವವನೂ ಬರುವವನೂ ಆಗಿರುವ ಸರ್ವಶಕ್ತನಾದ ದೇವರಾಗಿರುವ ಕರ್ತನೇ, ನಿನಗೆ ಸ್ತೋತ್ರ ಮಾಡುತ್ತೇವೆ; ಯಾಕಂದರೆ ನೀನು ನಿನ್ನ ಮಹಾ ಬಲವನ್ನು ತೆ
೧೮ ಗೆದು ಕೊಂಡು, ಆಳ್ವಿ ಕೊಂಡಿದ್ದೀ. ಜನಾಂಗಗಳು ಕೋಪಿಸಿ ಕೊಂಡವು; ಮತ್ತು ನಿನ್ನ ಕೋಪವೂ,—ಸತ್ತವರಿಗೆ ನ್ಯಾಯ ತೀರಿಸುವದಕ್ಕೂ, ನಿನ್ನ ದಾಸರಾದ ಪ್ರವಾದಿಗಳಿಗೂ ಪರಿಶುದ್ಧರಿಗೂ ನಿನ್ನ ಹೆಸರಿಗೆ ಭಯ ಪಡುವ ಹಿರಿ ಕಿರಿಯರಿಗೂ ಪ್ರತಿ ಫಲವನ್ನು ಕೊಡುವದಕ್ಕೂ, ಭೂಮಿ ಕೆಡಿಸುವವರನ್ನೂ ಕೆಡಿಸುವದಕ್ಕೂ, ಸಮಯವೂ—ಬಂದವೆ.

೧೯ ಮತ್ತು ಪರಲೋಕದಲ್ಲಿ ದೇವರ ಮಂದಿರವು ತೆಗೆಯಲ್ಪಟ್ಟು, ಅವನ ಒಡಂಬಡಿಕೆಯ ಪೆಟ್ಟಿಗೆಯು ಅವನ ಮಂದಿರದಲ್ಲಿ ಕಾಣಿಸಿತು. ಮತ್ತು ಮಿಂಚುಗಳೂ, ಶಬ್ದಗಳೂ, ಗುಡುಗುಗಳೂ, ಭೂಕಂಪವೂ, ದೊಡ್ಡ ಕಲ್ಮಳೆಯೂ, ಉಂಟಾದವು.

## ೧೯. ಸಂಧಿ.

೧ ಆಗ ಪರಲೋಕದಲ್ಲಿ ದೊಡ್ಡ ಗುರುತು ಕಾಣಿಸಿತು, ಏನಂದರೆ—ಸೂರ್ಯನನ್ನು ಹೊದ್ದು ಕೊಂಡಿರುವ ಸ್ತ್ರೀಯು. ಅವಳ
ಪಾದಗಳ ಕೆಳಗೆ ಚಂದ್ರನು; ಅವಳ ತಲೆಯ ಮೇಲೆ ಹನ್ನೆರಡು
೨ ನಕ್ಷತ್ರಗಳ ಕಿರೀಟವು. ಅವಳು ಗರ್ಭಿಣಿಯಾಗಿ, ವೇದನೆ ಪಟ್ಟು,
ಹೆರುವ ನೋವಿನಲ್ಲಿ ಇರುವವಳಾಗಿ, ಕೂಗಿದಳು.
೩ ಮತ್ತು ಬೇರೆ ಗುರುತು ಪರಲೋಕದಲ್ಲಿ ಕಾಣಿಸಿತು. ಇಗೋ,
ಏಳು ತಲೆಗಳೂ, ಹತ್ತು ಕೊಂಬುಗಳೂ, ಅದರ ತಲೆಗಳ ಮೇಲೆ
೪ ಏಳು ಕಿರೀಟಗಳೂ, ಉಳ್ಳ ಕೆಂಪಾದ ದೊಡ್ಡ ಗಡಸರ್ಪವು; ಅ
ದರ ಬಾಲವು ಆಕಾಶದ ನಕ್ಷತ್ರಗಳಲ್ಲಿ ಮೂರನೇ ಭಾಗವನ್ನು ಎ
ಳೆ ಕೊಂಡು, ಭೂಮಿಗೆ ಹಾಕಿತು. ಆ ಗಡಸರ್ಪವು, ಹೆರುವದ
ಕ್ಕೆ ಇರುವ ಸ್ತ್ರೀಯ ಮುಂದೆ, ಹೆತ್ತಾಗಲೇ ಅವಳ ಕೂಸನ್ನು
೫ ತಿಂದು ಬಿಡ ಬೇಕೆಂದು, ನಿಂತು ಕೊಂಡಿತು. ಆಗ ಅವಳು ಜನಾಂ
ಗಗಳನ್ನೆಲ್ಲಾ ಕಬ್ಬಿಣದ ಕೋಲಿನಿಂದ ಆಳುವದಕ್ಕಿರುವ ಗಂಡು
ಮಸುವನ್ನು ಹೆತ್ತಳು; ಮತ್ತು ಅವಳ ಕೂಸು ದೇವರ ಬಳಿಗೂ
೬ ಅವನ ಸಿಂಹಾಸನದ ಬಳಿಗೂ ಛಕ್ಕನೆ ಎತ್ತಲ್ಪಟ್ಟಿತು. ಮತ್ತು
ಆ ಸ್ತ್ರೀಯು ಅರಣ್ಯಕ್ಕೆ ಓಡಿ ಹೋದಳು. ಅಲ್ಲಿ ಅವರು ಅವ
ಳನ್ನು ಸಾವಿರದ ಇನ್ನೂರ ಅರವತ್ತು ದಿವಸ ಪೋಷಿಸುವ ಹಾ
ಗೆ, ದೇವರಿಂದ ಸಿದ್ಧ ಮಾಡಲ್ಪಟ್ಟ ಸ್ಥಳವು ಅವಳಿಗೆ ಉಂಟು.
೭ ಮತ್ತು ಪರಲೋಕದಲ್ಲಿ ಯುದ್ಧ ಉಂಟಾಗಿ, ಮಿಕಯೇಲನೂ
ಅವನ ದೂತರೂ ಗಡಸರ್ಪದ ಸಂಗಡ ಯುದ್ಧ ಮಾಡಿದರು.
೮ ಮತ್ತು ಗಡಸರ್ಪವೂ ಅದರ ದೂತರೂ ಯುದ್ಧ ಮಾಡಿ, ಗೆಲ್ಲ
ಲಿಲ್ಲ; ಮತ್ತು ಪರಲೋಕದಲ್ಲಿ ಇನ್ನು ಅವರಿಗೆ ಸ್ಥಳ ಶಿಕ್ಕದೆ ಹೋ
೯ ಯಿತು. ಆಗ ಸಮಸ್ತ ಜಗತ್ತನ್ನು ಮೋಸಗೊಳಿಸುವ ಪಿಶಾಚ
ನೂ ಸೈತಾನನೂ ಎಂಬ ಹೆಸರುಳ್ಳ, ಹಳೆ ಹಾವು ಆಗಿರುವ
ದೊಡ್ಡ ಗಡಸರ್ಪವು ಹೊರದಿಸಲ್ಪಟ್ಟು, ಭೂಮಿಗೆ ಹಾಕಲ್ಪ
ಟ್ಟಿತು. ಮತ್ತು ಅವನ ದೂತರು ಅವನ ಸಂಗಡ ಹಾಕಲ್ಪಟ್ಟರು.
೧೦ ಮತ್ತು ಪರಲೋಕದಲ್ಲಿ ದೊಡ್ಡ ಶಬ್ದವನ್ನು ಕೇಳಿದೆನು; ಏನಂ
ದರೆ—ಈಗ ರಕ್ಷಣೆಯೂ, ಬಲವೂ, ನಮ್ಮ ದೇವರ ರಾಜ್ಯವೂ,
ಅವನ ಕ್ರಿಸ್ತನ ಅಧಿಕಾರವೂ, ಉಂಟಾದವು; ಯಾಕಂದರೆ ನಮ್ಮ
ಸಹೋದರರ ಮೇಲೆ ದೇವರ ಮುಂದೆ ರಾತ್ರಿ ಹಗಲು ಚಾಡಿ ಹೇ
ಳುವಂಥ ನಮ್ಮ ಸಹೋದರರ ಚಾಡಿಗಾರನು ಕೆಳಗೆ ಹಾಕಲ್ಪಟ್ಟಿ
೧೧ ದ್ದಾನೆ. ಮತ್ತು ಅವರು ಮರಣದ ಪರ್ಯಂತರಕಕ್ಕೂ ತಮ್ಮ
ಪ್ರಾಣವನ್ನು ಪ್ರೀತಿ ಮಾಡದೆ, ಕುರಿಮರಿಯ ರಕ್ತದಿಂದಲೂ
ತಮ್ಮ ಸಾಕ್ಷಿಯ ವಾಕ್ಯದಿಂದಲೂ ಅವನನ್ನು ಜಯಿಸಿದರು.
೧೨ ಆದದರಿಂದ, ಪರಲೋಕಗಳೇ, ಅವುಗಳಲ್ಲಿ ವಾಸವಾಗಿರುವವರೇ,
ಆನಂದ ಪಡಿರಿ! ಭೂಮಿಯಲ್ಲಿಯೂ ಸಮುದ್ರದಲ್ಲಿಯೂ ವಾ
ಸ ಮಾಡುವವರಿಗೆ ಅಯ್ಯೋ; ಯಾಕಂದರೆ ಪಿಶಾಚನು, ತನಗೆ
ಸಮಯವು ಸ್ವಲ್ಪವೇ ಎಂದು ತಿಳಿದು, ಮಹಾ ಉಗ್ರವುಳ್ಳವ
ನಾಗಿ, ನಿಮ್ಮ ಬಳಿಗೆ ಇಳಿದು ಬಂದಿದ್ದಾನೆ.
೧೩ ಮತ್ತು ಗಡಸರ್ಪವು ತಾನು ಭೂಮಿಗೆ ಹಾಕಲ್ಪಟ್ಟಿರುವದನ್ನು
ಕಂಡಾಗ, ಆ ಗಂಡು ಕೂಸು ಹೆತ್ತ ಸ್ತ್ರೀಯನ್ನು ಹಿಂದಟ್ಟಿತು.
೧೪ ಆಗ, ಸಮಯವೂ, ಸಮಯಗಳೂ, ಅರ್ಧ ಸಮಯವೂ, ಇ
ವುಗಳ ಪರ್ಯಂತರ ಹಾವಿನ ಮುಖಕ್ಕೆ ದೂರವಾಗಿ ಪೋಷಿಸ
ಲ್ಪಡ ತಕ್ಕ, ಅರಣ್ಯದಲ್ಲಿರುವ, ಅವಳ ಸ್ಥಳಕ್ಕೆ ಹಾರುವ ಹಾಗೆ,
೧೫ ದೊಡ್ಡ ಹದ್ದಿನ ಎರಡು ರೆಕ್ಕೆಗಳು ಸ್ತ್ರೀಗೆ ಕೊಡಲ್ಪಟ್ಟವು. ಮ
ತ್ತು ಹಾವು, ಇವಳನ್ನು ಬಹುಕೊಂಡು ಹೋಗ ಮಾಡುವದಕ್ಕೆ,
ತನ್ನ ಬಾಯಿಯಿಂದ ನದಿಯಂತೆ ನೀರನ್ನು ಸ್ತ್ರೀಯ ಹಿಂದೆ ಕಾ
೧೬ ರಿತು. ಮತ್ತು ಭೂಮಿಯು ಸ್ತ್ರೀಗೆ ಸಹಾಯ ಮಾಡಿತು; ಮತ್ತು
ಭೂಮಿಯು ತನ್ನ ಬಾಯಿಯನ್ನು ತೆರೆದು, ಗಡಸರ್ಪವು ತನ್ನ
ಬಾಯಿಯೊಳಗಿಂದ ಕಾರಿದ ನದಿಯನ್ನು ಕುಡಿದು ಬಿಟ್ಟಿತು.
೧೭ ಮತ್ತು ಗಡಸರ್ಪವು ಸ್ತ್ರೀಯ ಮೇಲೆ ಕೋಪ ಮಾಡಿ, ದೇವರ
ಕಟ್ಟಳೆಗಳನ್ನು ಕೈ ಕೊಂಡು, ಯೇಸು ಕ್ರಿಸ್ತನ ಸಾಕ್ಷಿ ಉಂಟಾ
ದವರಾದ ಅವಳ ಬೀಜದಲ್ಲಿ ಉಳಿದವರ ಸಂಗಡ ಯುದ್ಧ ಮಾ
ಡುವದಕ್ಕೆ ಹೊರಟಿತು.

## ೧೪. ಸಂಧಿ.

೧ ಆಗ ಸಮುದ್ರದ ಮರಳಿನ ಮೇಲೆ ನಿಂತು, ಏಳು ತಲೆಗಳೂ,
ಹತ್ತು ಕೊಂಬುಗಳೂ, ತನ್ನ ಕೊಂಬುಗಳ ಮೇಲೆ ಹತ್ತು ಕಿರೀಟ
ಗಳೂ, ತನ್ನ ತಲೆಗಳ ಮೇಲೆ ದೂಷಣೆಯ ಹೆಸರೂ ಉಳ್ಳ
ಮೃಗವು ಸಮುದ್ರದೊಳಗಿಂದ ಏರಿ ಬರುವದನ್ನು ಕಂಡೆನು.
೨ ನಾನು ಕಂಡ ಮೃಗವು ಚಿರತೆಗೆ ಸಮಾನವಾಗಿತ್ತು. ಅದರ ಕಾ
ಲುಗಳು ಕರಡಿಯ ಕಾಲುಗಳ ಹಾಗೆಯೂ, ಅದರ ಬಾಯಿ ಸಿಂ
ಹದ ಬಾಯಿಯ ಹಾಗೆಯೂ, ಇದ್ದವು; ಅದಕ್ಕೆ ಗಡಸರ್ಪವು
ತನ್ನ ಬಲವನ್ನೂ, ಸಿಂಹಾಸನವನ್ನೂ, ಮಹಾ ಅಧಿಕಾರವನ್ನೂ,
೩ ಕೊಟ್ಟಿತು. ಮತ್ತು, ಮರಣ ಘಾಯವಾದ ಹಾಗೆ, ಅದರ ತಲೆ
ಗಳಲ್ಲಿ ಒಂದನ್ನು ಕಂಡೆನು. ಮತ್ತು ಮರಣಕರವಾದ ಅದರ
ಘಾಯವು ವಾಸಿಯಾಯಿತು. ಆಗ ಸಮಸ್ತ ಭೂಮಿಯು ಆ
೪ ಮೃಗದ ಹಿಂದೆ ಆಶ್ಚರ್ಯ ಪಟ್ಟಿತು. ಮತ್ತು ಮೃಗಕ್ಕೆ ಅಧಿ
ಕಾರವನ್ನು ಕೊಟ್ಟ ಗಡಸರ್ಪಕ್ಕೆ ನಮಸ್ಕರಿಸಿದರು; ಮತ್ತು
ಮೃಗಕ್ಕೆ ಸಹ ನಮಸ್ಕರಿಸಿ—ಮೃಗಕ್ಕೆ ಸಮಾನವಾದವನು
ಯಾರು? ಅದರ ಸಂಗಡ ಯುದ್ಧ ಮಾಡ ಶಕ್ತನು ಯಾರು?
೫ ಅಂದನು. ಮತ್ತು ದೊಡ್ಡ ಮಾತುಗಳನ್ನೂ ದೂಷಣೆಗಳನ್ನೂ
ಆಡುವ ಬಾಯಿ ಅದಕ್ಕೆ ಕೊಡಲ್ಪಟ್ಟಿತು. ಮತ್ತು ನಾಲ್ವತ್ತೆರ
ಡು ತಿಂಗಳು ನಡಿಸುವ ಅಧಿಕಾರವು ಅದಕ್ಕೆ ಕೊಡಲ್ಪಟ್ಟಿತು.
೬ ಆಗ ಅದು, ದೇವರ ಹೆಸರನ್ನೂ, ಅವನ ಗುಡಾರವನ್ನೂ,
ಪರಲೋಕದಲ್ಲಿ ವಾಸವಾಗಿರುವವರನ್ನು, ದೂಷಿಸುವದಕ್ಕೆ,
ದೇವರಿಗೆ ವಿರೋಧವಾದ ದೂಷಣೆಗೆ ತನ್ನ ಬಾಯಿಯನ್ನು ತೆ
೭ ರೆಯಿತು. ಮತ್ತು ಪರಿಶುದ್ಧರ ಸಂಗಡ ಯುದ್ಧ ಮಾಡುವದ
ಕ್ಕೂ, ಅವರನ್ನು ಜಯಿಸುವದಕ್ಕೂ, ಅದಕ್ಕೆ ಕೊಡಲ್ಪಟ್ಟಿತು;
ಮತ್ತು ಸಕಲ ಕುಲ, ಭಾಷೆ, ಜನಾಂಗಗಳ ಮೇಲೆ ಅಧಿಕಾರವು ಅ
ದಕ್ಕೆ ಕೊಡಲ್ಪಟ್ಟಿತು. ಮತ್ತು ಜಗದುತ್ಪತ್ತಿ ಮೊದಲುಗೊಂಡು
ಕೊಲ್ಲಲ್ಪಟ್ಟ ಕುರಿಮರಿಯ ಜೀವದ ಪುಸ್ತಕದಲ್ಲಿ ಹೆಸರಾಗಿ ಬರೆ
೮ ಯಲ್ಪಡದ ಭೂನಿವಾಸಿಗಳೆಲ್ಲರು ಅದಕ್ಕೆ ನಮಸ್ಕರಿಸುವರು. ಕಿ
೯ ವಿಯುಳ್ಳವನು ಯಾವನೋ, ಅವನು ಕೇಳಲಿ. ಯಾವನಾದರೂ
ಸೆರೆ ಹಿಡಿದರೆ, ಸೆರೆಯಲ್ಲಿ ಬೀಳುವನು; ಯಾವನಾದರೂ ಕತ್ತಿ
ಯಿಂದ ಕೊಂದರೆ, ಅವನು ಕತ್ತಿಯಿಂದ ಕೊಲ್ಲಲ್ಪಡ ಬೇಕು;
ಇದರಲ್ಲಿ ಪರಿಶುದ್ಧರ ತಾಳ್ಮೆಯೂ ವಿಶ್ವಾಸವೂ ಉಂಟು.
೧೦ ಆಗ ಭೂಮಿಯೊಳಗಿಂದ ಏರಿ ಬರುವ ಬೇರೆ ಮೃಗವನ್ನು



ಕಂಡೆನು ಅದಕ್ಕೆ ಟಗರಿಗೆ ಸಮಾನವಾದ ಎರಡು ಕೊಂಬುಗಳು
೧೧ ಇದ್ದವು; ಗಡಸರ್ಪದ ಹಾಗೆ ಮಾತಾಡಿತು. ಅದು ಮೊದಲನೇ
ಮೃಗದ ಸಮಸ್ತ ಅಧಿಕಾರವನ್ನು ಅದರ ಸನ್ನಿಧಿಯಲ್ಲಿ ನಡಿಸಿ,
ಭೂಮಿಯೂ ಅದರ ನಿವಾಸಿಗಳೂ ಆ ಮರಣದ ಘಾಯ ವಾ
ಸಿಯಾದ ಮೊದಲನೇ ಮೃಗಕ್ಕೆ ನಮಸ್ಕರಿಸುವ ಹಾಗೆ ಮಾ
೧೨ ಡುತ್ತದೆ. ಅದು ದೊಡ್ಡ ಗುರುತುಗಳನ್ನು ನಡಿಸಿ, ಬೆಂಕಿಯನ್ನು
೧೩ ಮನುಷ್ಯರ ಮುಂದೆ ಆಕಾಶದಿಂದ ಇಳಿಯ ಮಾಡುತ್ತದೆ. ಮ
ತ್ತು ಮೊದಲನೇ ಮೃಗದ ಸನ್ನಿಧಿಯಲ್ಲಿ ನಡಿಸುವದಕ್ಕೆ ತನಗೆ
ಕೊಡಲ್ಪಟ್ಟ ಗುರುತುಗಳಿಂದ ಭೂನಿವಾಸಿಗಳನ್ನು ಮೋಸಗೊಳಿ
ಸಿ, ಕತ್ತಿಯಿಂದ ಘಾಯವಾಗಿ ಬದುಕಿದ ಮೃಗಕ್ಕೆ ವಿಗ್ರಹವ
೧೪ ನ್ನು ಮಾಡ ಬೇಕೆಂದು, ಭೂನಿವಾಸಿಗಳಿಗೆ ಹೇಳುತ್ತದೆ. ಮತ್ತು
ಮೃಗದ ವಿಗ್ರಹವು ಮಾತಾಡುವ ಹಾಗೆಯೂ, ಮೃಗದ ವಿಗ್ರ
ಹಕ್ಕೆ ನಮಸ್ಕರಿಸುವವರನ್ನಿಟ್ಟು ಕೊಲ್ಲಿಸುವ ಹಾಗೆಯೂ, ಮೃ
ಗದ ವಿಗ್ರಹಕ್ಕೆ ಆತ್ಮವನ್ನು ಕೊಡುವದಕ್ಕೆ ಅದಕ್ಕೆ ಕೊಡಲ್ಪ
೧೫ ಟ್ಟಿತು. ಮತ್ತು ಹಿರಿಕಿರಿಯರೂ, ಐಶ್ವರ್ಯವಂತರೂ, ಬಡವ
ರೂ, ಸ್ವತಂತ್ರರೂ, ದಾಸರೂ, ಎಲ್ಲರು ತಮ್ಮ ಬಲಗೈಯ
ಮೇಲಾಗಲಿ, ತಮ್ಮ ಹಣೆಗಳ ಮೇಲಾಗಲಿ, ಮುದ್ರೆಯನ್ನು ಮಾ
೧೬ ಡಿಸಿ ಕೊಳ್ಳುವ ಹಾಗೆಯೂ, ಮುದ್ರೆಯಾಗಲಿ, ಮೃಗದ ಹೆಸ
ರಾಗಲಿ, ಅದರ ಹೆಸರಿನ ಲೆಖ್ಖವಾಗಲಿ, ಉಂಟಾದವನು ಹೊರ್ತು,
ಮತ್ಯಾರೂ ಕ್ರಯ ವಿಕ್ರಯ ಮಾಡದ ಹಾಗೆಯೂ, ಮಾಡು
೧೭ ತ್ತದೆ. ಇಲ್ಲಿ ಜ್ಞಾನ ಉಂಟು. ಬುದ್ಧಿಯುಂಟಾದವನು ಮೃಗದ ಲೆ
ಖ್ಖವನ್ನು ಎಣಿಸಲಿ; ಯಾಕಂದರೆ ಅದು ಮನುಷ್ಯನ ಲೆಖ್ಖವಾಗಿ
ದೆ; ಅದರ ಲೆಖ್ಖವು ಆರು ನೂರ ಅರವತ್ತಾರು.

## ೧೪. ಸಂಧಿ.

೧ ಮತ್ತು ನೋಡಲಾಗಿ, ಇಗೋ, ಚೆಯೋನ್ ಪರ್ವತದ ಮೇ
ಲೆ ನಿಂತು ಕೊಂಡ ಕುರಿಮರಿಯೂ, ಅವನ ಸಂಗಡ ಅವನ ತಂದೆ
ಯ ಹೆಸರು ತಮ್ಮ ಹಣೆಗಳ ಮೇಲೆ ಬರೆದಿರುವ ನೂರ ನಾಲ್ವ
೨ ತ್ತು ನಾಲ್ಕು ಸಾವಿರ ಮಂದಿಯೂ. ಮತ್ತು ಅನೇಕ ನೀರುಗಳ
ಶಬ್ದದ ಹಾಗೆಯೂ, ದೊಡ್ಡ ಗುಡುಗಿನ ಶಬ್ದದ ಹಾಗೆಯೂ,
ಪರಲೋಕದಿಂದಾದ ಶಬ್ದವನ್ನು ಕೇಳಿದೆನು; ಮತ್ತು ತಮ್ಮ ವೀ
೩ ಣೆಗಳನ್ನು ನುಡಿಸುವ ವೀಣೆಗಾರರ ಶಬ್ದವನ್ನು ಕೇಳಿದೆನು. ಅವ
ರು ಸಿಂಹಾಸನದ ಮುಂದೆಯೂ, ನಾಲ್ಕು ಜೀವಿಗಳ ಹಿರಿಯರ
ಮುಂದೆಯೂ, ಹೊಸ ರಾಗದಂತೆ ಹಾಡುತ್ತಾರೆ. ಆ ರಾಗವನ್ನು,
ಭೂಮಿಯಿಂದ ಕೊಂಡು ಕೊಳ್ಳಲ್ಪಟ್ಟವರಾದ ನೂರ ನಾಲ್ವ
ತ್ತು ನಾಲ್ಕು ಸಾವಿರ ಮಂದಿ ಹೊರ್ತಾಗಿ, ಯಾರೂ ಕಲಿಯ
೪ ಲಾರರು. ಸ್ತ್ರೀಯರ ಸಂಗಡ ಕಳಂಕವಾಗದವರು ಇವರೇ; ಯಾ
ಕಂದರೆ ಕನ್ಯಾಭಾವವಾಗಿದ್ದಾರೆ. ಕುರಿಮರಿಯನ್ನು, ಎಲ್ಲಿ ಹೋ
ದಾಗ್ಯೂ, ಹಿಂಬಾಲಿಸುವವರು ಇವರೇ. ಇವರು ದೇವರಿಗೂ ಕು
ರಿಮರಿಗೂ ಪ್ರಥಮ ಫಲವಾಗಿ, ಮನುಷ್ಯರಿಂದ ಕೊಂಡು ಕೊಳ್ಳ
೫ ಲ್ಪಟ್ಟರು. ಅವರ ಬಾಯಿಯಲ್ಲಿ ಮೋಸವು ಶಿಕ್ಕಲಿಲ್ಲ; ಹ್ಯಾ
ಗಂದರೆ ಅವರು ದೇವರ ಸಿಂಹಾಸನದ ಮುಂದೆ ನಿಷ್ಕಳಂಕರಾ
ಗಿದ್ದಾರೆ.
೬ ಮತ್ತು ಆಕಾಶ ಮಧ್ಯದಲ್ಲಿ ಹಾರುವ ಬೇರೊಬ್ಬ ದೂತನ
ನ್ನು ಕಂಡೆನು. ಭೂನಿವಾಸಿಗಳಲ್ಲಿಯೂ, ಸಕಲ ಜನಾಂಗ, ಕುಲ,
ಭಾಷೆ, ಪ್ರಜೆಗಳಲ್ಲಿಯೂ, ಪ್ರಸಂಗಿಸುವದಕ್ಕೆ ನಿತ್ಯವಾದ ಸು
೭ ವಾರ್ತೆಯು ಅವನಿಗೆ ಇತ್ತು. ಅವನು ಮಹಾ ಶಬ್ದದಿಂದ—ದೇವ
ರಿಗೆ ಭಯ ಪಡಿರಿ, ಅವನಿಗೆ ಮಹಿಮೆಯನ್ನು ಕೊಡಿರಿ; ಯಾಕಂ
ದರೆ ಅವನ ನ್ಯಾಯತೀರ್ವಿಕೆಯ ಘಳಿಗೆ ಬಂತು. ಆಕಾಶ
ನ್ನೂ, ಭೂಮಿಯನ್ನೂ, ಸಮುದ್ರವನ್ನೂ, ನೀರುಗಳ ಬುಗ್ಗೆಗ
ಳನ್ನೂ ಮಾಡಿ ನಿರ್ಮಿಸಿದವನಿಗೆ ನಮಸ್ಕರಿಸಿರಿ, ಅಂದನು.
೮ ಬೇರೊಬ್ಬ ದೂತನು ಅವನನ್ನು ಹಿಂಬಾಲಿಸಿ—ಬಿತ್ತು, ಬಿತ್ತು,
ಮಹಾ ಪಟ್ಟಣವಾದ ಬಾಬೆಲು; ಯಾಕಂದರೆ ತನ್ನ ಜಾರತ್ವದ ಉ
ಗ್ರದ ದ್ರಾಕ್ಷೇರಸವನ್ನು ಜನಾಂಗಗಳಿಗೆಲ್ಲಾ ಕುಡಿಸಿತು, ಅಂದನು.
೯ ಮೂರನೇ ದೂತನು ಅವರನ್ನು ಹಿಂಬಾಲಿಸಿ, ಮಹಾ ಶಬ್ದ
ದಿಂದ ಹೇಳಿದ್ದು, ಯಾವನಾದರೂ ಮೃಗಕ್ಕೂ ಅದರ ವಿಗ್ರಹ
ಕ್ಕೂ ನಮಸ್ಕರಿಸಿ, ತನ್ನ ಹಣೆಯ ಮೇಲಾದರೂ, ತನ್ನ ಕೈ
೧೦ ಯ ಮೇಲಾದರೂ, ಮುದ್ರೆ ಹೊಂದಿದರೆ, ಅವನು ದೇವರ ಉ
ಗ್ರದ ಚಾತ್ರೆಯಲ್ಲಿ ಬೆರಕೆಯಿಲ್ಲದೆ ಹೊಯಿದ ದೇವರ ಉಗ್ರದ
ದ್ರಾಕ್ಷೇರಸವನ್ನು ಕುಡಿದು, ಪರಿಶುದ್ಧ ದೂತರ ಮುಂದೆಯೂ,
ಕುರಿಮರಿಯ ಮುಂದೆಯೂ, ಬೆಂಕಿ ಗಂಧಕಗಳಿಂದ ಪೀಡಿಸಲ್ಪ
೧೧ ಡುವನು. ಮತ್ತು ಅವರ ಪೀಡೆಯ ಹೊಗೆಯು ಎಂದೆಂದಿಗೂ
ಏರುವದು; ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸುವವ
ರಿಗೂ, ಅದರ ಹೆಸರಿನ ಮುದ್ರೆಯನ್ನು ಹೊಂದುವವರಿಗೂ ರಾ
೧೨ ತ್ರಿ ಹಗಲು ಉಪಶಮನವಾಗದು. ಇಲ್ಲಿ ಪರಿಶುದ್ಧರ ತಾಳ್ಮೆ ಉಂ
ಟು; ಇಲ್ಲಿ ದೇವರ ಕಟ್ಟಳೆಗಳನ್ನೂ, ಯೇಸುವಿನ ವಿಶ್ವಾಸವ
ನ್ನೂ, ಕೈ ಕೊಳ್ಳುವವರು ಇದ್ದಾರೆ.
೧೩ ಮತ್ತು ಪರಲೋಕದಿಂದಾದ ಶಬ್ದವನ್ನು ಕೇಳಿದೆನು. ಅದು
ನನಗೆ ಹೇಳಿದ್ದೇನಂದರೆ, ಬರೆ—ಇನ್ನು ಮೇಲೆ ಕರ್ತನಲ್ಲಿ ಸಾ
ಯುವ ಮರಣಸ್ಥರು ಭಾಗ್ಯವಂತರು; ಹೌದು, ಅವರು ತಮ್ಮ
ಕಷ್ಟಗಳಿಂದ ವಿಶ್ರಾಂತಿಯಾಗುವರೆಂದು, ಆತ್ಮವು ಹೇಳುತ್ತದೆ;
ಮತ್ತು ಅವರ ಕ್ರಿಯೆಗಳು ಅವರನ್ನು ಹಿಂಬಾಲಿಸುವವು.
೧೪ ಮತ್ತು ನೋಡಲಾಗಿ, ಇಗೋ, ಬೆಳ್ಳೀ ಮೇಘವು; ಮತ್ತು
ಮೇಘದ ಮೇಲೆ ಮನುಷ್ಯನ ಮಗನಿಗೆ ಸಮಾನವಾಗಿ, ತನ್ನ
ತಲೆಯ ಮೇಲೆ ಚಿನ್ನದ ಕಿರೀಟವೂ, ತನ್ನ ಕೈಯಲ್ಲಿ ಹದವಾ
೧೫ ದ ಕುಡುಗೋಲೂ, ಉಳ್ಳವನಾಗಿ ಕೂತು ಕೊಂಡವನು. ಮತ್ತು
ಬೇರೆ ದೂತನು ಮಂದಿರದೊಳಗಿಂದ ಹೊರಟು ಬಂದು, ಮೇ
ಘದ ಮೇಲೆ ಕೂತು ಕೊಂಡವನಿಗೆ ಮಹಾ ಶಬ್ದದಿಂದ ಕೂಗಿ—
ನಿನ್ನ ಕುಡುಗೋಲನ್ನು ಹಾಕಿ, ಕೊಯಿ; ಯಾಕಂದರೆ ಕೊ
ಯ್ಯುವದಕ್ಕೆ ಕಾಲ ನಿನಗೆ ಬಂತು; ಭೂಮಿಯ ಬೆಳೆ ಬೆಳೆದು
೧೬ ಬಣಗಿದೆ, ಅಂದನು. ಆಗ ಮೇಘದ ಮೇಲೆ ಕೂತು ಕೊಂಡವ
ನು ತನ್ನ ಕುಡುಗೋಲನ್ನು ಭೂಮಿಯ ಮೇಲೆ ಹಾಕಿದನು. ಮ
ತ್ತು ಭೂಮಿಯ ಬೆಳೆ ಕೊಯ್ಯಲ್ಪಟ್ಟಿತು.
೧೭ ಮತ್ತೊಬ್ಬ ದೂತನು ಪರಲೋಕದಲ್ಲಿರುವ ಮಂದಿರದೊಳ
ಗಿಂದ ಹೊರಟು ಬಂದನು. ಅವನಿಗೂ ಹದವಾದ ಕುಡುಗೋಲು
ಇತ್ತು. ಮತ್ತು ಬೆಂಕಿಯ ಮೇಲೆ ಅಧಿಕಾರ ಉಂಟಾದ ಇನ್ನೊ
ಬ್ಬ ದೂತನು ಬಲಿಷ್ಠತೆಯಿಂದ ಹೊರಟು ಬಂದು, ದೊಡ್ಡ ಧ್ವ
ನಿಯಿಂದ ಕೂಗಿ, ಆ ಹದವಾದ ಕುಡುಗೋಲುಂಟಾದವನಿಗೆ—ನಿ
ನ್ನ ಹದವಾದ ಕುಡುಗೋಲನ್ನು ಹಾಕಿ, ಭೂಮಿಯ ದ್ರಾಕ್ಷೇ
ಗೊಂಚಲುಗಳನ್ನು ಕೊಯಿ; ಯಾಕಂದರೆ ಅದರ ಫಲಗಳು

೧೯ ಮಾಗಿವೆ, ಅಂದನು. ಆಗ ದೂತನು ತನ್ನ ಕುಡುಗೋಲನ್ನು ಭೂಮಿಗೆ ಹಾಕಿ, ಭೂಮಿಯ ದ್ರಾಕ್ಷೇ ಬಳ್ಳಿಯನ್ನು ಕೊಯ್ದು, ದೇವರ ಉಗ್ರದ ದೊಡ್ಡ ದ್ರಾಕ್ಷೇ ತೊಟ್ಟಿಯಲ್ಲಿ ಹಾಕಿದನು.
೨೦ ಆ ದ್ರಾಕ್ಷೇ ತೊಟ್ಟಿ ಪಟ್ಟಣದ ಹೊರಗೆ ತುಳಿಯಲ್ಪಟ್ಟಿತು. ಮತ್ತು ನಾವಿರದ ಆರು ನೂರು ಸ್ತಾದ್ಯಗಳಷ್ಟು ದೂರದಲ್ಲಿ ಕುದುರೆ ಕಡಿವಾಣಗಳ ಮಟ್ಟಿಗೂ ದ್ರಾಕ್ಷೇ ತೊಟ್ಟಿಯಿಂದ ರಕ್ತವು ಹೊರಟಿತು.

## ೧೫. ಸಂಧಿ.

೧ ಇದಲ್ಲದೆ ಪರಲೋಕದಲ್ಲಿ ದೊಡ್ಡ ಆಶ್ಚರ್ಯವಾದ ಮತ್ತೊಂದು ಗುರುತನ್ನು ಕಂಡೆನು; ಏನಂದರೆ, ದೇವರ ಉಗ್ರವನ್ನು ತೀರಿಸುವಂಥ ಏಳು ಕಡೇ ಬಾಧೆಗಳನ್ನು ಇಟ್ಟು ಕೊಂಡ ಏಳು ದೂತರು.
೨ ಮತ್ತು ಬೆಂಕಿ ಕಲತ ಗಾಜಿನ ಸಮುದ್ರವನ್ನೂ, ಮೃಗವು, ಅದರ ವಿಗ್ರಹವು, ಅದರ ಮುದ್ರೆಯು, ಅದರ ಹೆಸರಿನ ಲೆಖ್ಖವು, ಇವುಗಳನ್ನು ಜಯಿಸಿದವರು ದೇವರ ವೀಣೆಗಳನ್ನು ಹಿಡುಕೊಂಡು, ಆ ಗಾಜಿನ ಸಮುದ್ರದ ಮೇಲೆ ನಿಂತಿರುವದನ್ನೂ, ಕಂಡೆನು.
೩ ಅವರು ದೇವರ ದಾಸನಾದ ಮೋಶೆಯ ಹಾಡನ್ನೂ, ಕುರಿಮರಿಯ ಹಾಡನ್ನೂ ಹಾಡಿ, ಹೇಳುವದೇನಂದರೆ, ಸರ್ವ ಶಕ್ತನಾದ ಕರ್ತನಾಗಿರುವ ದೇವರೇ, ನಿನ್ನ ಕ್ರಿಯೆಗಳು ದೊಡ್ಡವುಗಳೂ
೪ ಆಶ್ಚರ್ಯವಾದವುಗಳೂ ಆಗಿವೆ. ಪರಿಶುದ್ಧರ ಅರಸನೇ, ನಿನ್ನ ಮಾರ್ಗಗಳು ನೀತಿಯೂ ಸತ್ಯವೂ ಆದವುಗಳೇ. ಕರ್ತನೇ, ನಿನಗೆ ಭಯ ಪಡದೆ, ನಿನ್ನ ಹೆಸರನ್ನು ಮಹಿಮೆ ಪಡಿಸದೆ ಇರುವವನ್ಯಾರು? ಯಾಕಂದರೆ ನೀನೊಬ್ಬನೇ ಪರಿಶುದ್ಧನು. ನಿನ್ನ ನ್ಯಾಯಗಳು ಪ್ರಕಟವಾದದರಿಂದ, ಜನಾಂಗಗಳೆಲ್ಲಾ ಬಂದು, ನಿನ್ನ ಮುಂದೆ ನಮಸ್ಕರಿಸುವರು.
೫ ಇವುಗಳ ತರುವಾಯ ನಾನು ನೋಡಲಾಗಿ, ಇಗೋ, ಪರಲೋಕದಲ್ಲಿ ಸಾಕ್ಷಿಯ ಗುಡಾರದ ಮಂದಿರವು ತೆರೆಯಲ್ಪಟ್ಟಿ
೬ ತು. ಮತ್ತು ಏಳು ಬಾಧೆಗಳನ್ನು ಹಿಡುಕೊಂಡ ಏಳು ದೂತರು, ಪವಿತ್ರವಾದ ಮಿಂಚುವ ನಾರು ವಸ್ತ್ರಗಳನ್ನುಟ್ಟುಕೊಂಡು, ಹೊಂದಟ್ಟಿಗಳನ್ನು ಎದೆಗಳಿಗೆ ಕಟ್ಟಿ ಕೊಂಡು, ಮಂದಿರದೊಳಗಿಂದ ಹೊ
೭ ರಟು ಬಂದರು. ಮತ್ತು ನಾಲ್ಕು ಜೀವಿಗಳಲ್ಲಿ ಒಂದು, ಯುಗಯುಗಾಂತರಗಳ ವರಿಗೂ ಬದುಕುವ ದೇವರ ಉಗ್ರದಿಂದ ತುಂಬಿರುವ ಏಳು ಚಿನ್ನದ ಪಾತ್ರೆಗಳನ್ನು ಏಳು ದೂತರಿಗೆ ಕೊಟ್ಟಿ
೮ ತು. ಆಗ ದೇವರ ಮಹಿಮೆಯಿಂದಲೂ, ಅವನ ಬಲದಿಂದಲೂ, ಮಂದಿರವು ಹೊಗೆ ತುಂಬಿತು; ಮತ್ತು ಏಳು ದೂತರ ಏಳು ಬಾಧೆಗಳು ತೀರುವ ಪರ್ಯಂತರ ಯಾರೂ ಮಂದಿರದಲ್ಲಿ ಪ್ರವೇಶಿಸ ಕೂಡದೆ ಇತ್ತು.

## ೧೬. ಸಂಧಿ.

೧ ಮತ್ತು ಆ ಏಳು ದೂತರಿಗೆ, ನೀವು ಹೋಗಿ, ದೇವರ ಉಗ್ರದ ಪಾತ್ರೆಗಳನ್ನು ಭೂಮಿಯ ಮೇಲೆ ಹೊಯ್ಯರಿ, ಎಂದು ಹೇಳುವಂಥ, ಮಂದಿರದಿಂದಾದ, ಮಹಾ ಶಬ್ದವನ್ನು ಕೇಳಿದೆನು.
೨ ಆಗ ಮೊದಲನೆಯವನು ಹೊರಟು ಹೋಗಿ, ತನ್ನ ಪಾತ್ರೆಯನ್ನು ಭೂಮಿಯ ಮೇಲೆ ಹೊಯಿದನು. ಆಗ ಮೃಗದ ಮುದ್ರೆ ಹೊಂದಿದವರಾಗಿ, ಅದರ ವಿಗ್ರಹಕ್ಕೆ ನಮಸ್ಕರಿಸುವ ಮನುಷ್ಯರಿಗೆ ಕೆಟ್ಟ ಕೊಳೆತ ಹುಣ್ಣು ಉಂಟಾಯಿತು.
೩ ಮತ್ತು ಎರಡನೇ ದೂತನು ತನ್ನ ಪಾತ್ರೆಯನ್ನು ಸಮುದ್ರದಲ್ಲಿ ಹೊಯಿದನು. ಅದು ಸತ್ತವನ ರಕ್ತದಂಥೆ ರಕ್ತವಾಯಿತು; ಮತ್ತು ಸಮುದ್ರದಲ್ಲಿ ಬದುಕುವ ಪ್ರಾಣಿಗಳೆಲ್ಲಾ ಸತ್ತು ಹೋದವು.
೪ ಮತ್ತು ಮೂರನೇ ದೂತನು ತನ್ನ ಪಾತ್ರೆಯನ್ನು ನದಿಗಳಲ್ಲಿಯೂ ನೀರು ಬುಗ್ಗೆಗಳಲ್ಲಿಯೂ ಹೊಯಿದನು. ಅವು ರಕ್ತವಾದವು. ಮತ್ತು ನೀರುಗಳ ದೂತನು—ಇರುವವನೂ ಇದ್ದವನೂ
೫ ಪರಿಶುದ್ಧನೂ ಆಗಿರುವ ಕರ್ತನೇ, ನೀನು ಈ ನ್ಯಾಯಗಳನ್ನು ತೀರಿಸಿದ್ದರಿಂದ ನೀತಿವಂತನಾಗಿದ್ದೀ; ಯಾಕಂದರೆ ಪರಿಶುದ್ಧರ ಪ್ರವಾದಿಗಳ ರಕ್ತವನ್ನು ಚೆಲ್ಲಿದ್ದಾರೆ; ಮತ್ತು ರಕ್ತವನ್ನು ಅವರಿಗೆ
೬ ಕುಡಿಯ ಕೊಟ್ಟಿದ್ದೀ; ಅದಕ್ಕೆ ಪಾತ್ರರಾಗಿದ್ದಾರೆ, ಎಂದು ಹೇಳುವದನ್ನು ಕೇಳಿದೆನು. ಮತ್ತೊಬ್ಬನು ಬಲಿಪೀಠದೊಳಗಿಂದ, ಹೌದು, ಸರ್ವಶಕ್ತನಾಗಿರುವ ಕರ್ತನಾದ ದೇವರೇ, ನಿನ್ನ ನ್ಯಾಯ ತೀರ್ವಿಕೆಗಳು ಸತ್ಯವೂ ನೀತಿಯೂ ಆದವುಗಳೇ, ಎಂದು ಹೇಳುವದನ್ನು ಕೇಳಿದೆನು.
೮ ನಾಲ್ಕನೇ ದೂತನು ತನ್ನ ಪಾತ್ರೆಯನ್ನು ಸೂರ್ಯನ ಮೇಲೆ ಹೊಯಿದನು. ಮತ್ತು ಬೆಂಕಿಯಿಂದ ಮನುಷ್ಯರನ್ನು
೯ ಸುಡ ಅವನಿಗೆ ಕೊಡಲ್ಪಟ್ಟಿತು. ಆಗ ಮನುಷ್ಯರು ದೊಡ್ಡ ಕಾವಿನಿಂದ ಸುಡಲ್ಪಟ್ಟು, ಈ ಬಾಧೆಗಳ ಮೇಲೆ ಅಧಿಕಾರ ಉಂಟಾದ ದೇವರ ಹೆಸರನ್ನು ದೂಷಿಸಿ, ಅವನಿಗೆ ಮಹಿಮೆ ಕೊಡುವದಕ್ಕೆ ಮಾನಸಾಂತರ ಪಡಲಿಲ್ಲ.
೧೦ ಐದನೇ ದೂತನು ತನ್ನ ಪಾತ್ರೆಯನ್ನು ಮೃಗದ ಸಿಂಹಾಸನದ ಮೇಲೆ ಹೊಯಿದನು. ಆಗ ಅದರ ರಾಜ್ಯವು ಕತ್ತಲಾಯಿ
೧೧ ತು; ಮತ್ತು ಅವರು ಕಷ್ಟದ ನಿಮಿತ್ತ ತಮ್ಮ ನಾಲಿಗೆಗಳನ್ನು ಕಚ್ಚಿ ಕೊಂಡು, ತಮ್ಮ ಕಷ್ಟಗಳ ನಿಮಿತ್ತವೂ ತಮ್ಮ ಹುಣ್ಣುಗಳ ನಿಮಿತ್ತವೂ ಪರಲೋಕದ ದೇವರನ್ನು ದೂಷಿಸಿ, ತಮ್ಮ ಕ್ರಿಯೆಗಳನ್ನು ಬಿಟ್ಟು ಮಾನಸಾಂತರ ಪಡಲಿಲ್ಲ.
೧೨ ಆರನೇ ದೂತನು ತನ್ನ ಪಾತ್ರೆಯನ್ನು ಫ್ರಾತು ಎಂಬ ಮಹಾ ನದಿಯ ಮೇಲೆ ಹೊಯಿದನು. ಆಗ ಸೂರ್ಯೋದಯದಿಂದ ಬರುವ ಅರಸರ ಮಾರ್ಗವು ಸಿದ್ಧವಾಗುವ ಹಾಗೆ, ಅ
೧೩ ದರ ನೀರು ಬತ್ತಿ ಹೋಯಿತು. ಆಗ ಗಡಸರ್ಪದ ಬಾಯಿಯೊಳಗಿಂದಲೂ, ಮೃಗದ ಬಾಯಿಯೊಳಗಿಂದಲೂ, ಸುಳ್ಳು ಪ್ರವಾದಿಯ ಬಾಯಿಯೊಳಗಿಂದಲೂ, ಕಪ್ಪೆಗಳಿಗೆ ಸಮಾನವಾಗಿರುವ ಮೂರು ಅಶುದ್ಧವಾದ ಆತ್ಮಗಳನ್ನು ಕಂಡೆನು. ಇ
೧೪ ವು ಅದ್ಭುತಗಳನ್ನು ಮಾಡುವ ದೆವ್ವಗಳ ಆತ್ಮಗಳೇ. ಇವು, ಸರ್ವಶಕ್ತನಾದ ದೇವರ ಮಹಾ ದಿನದ ಯುದ್ಧಕ್ಕೆ ಅವರನ್ನು ಕೂಡಿಸುವದಕ್ಕೋಸ್ಕರ, ಸಮಸ್ತ ಭೂಲೋಕದ ಅರಸುಗಳ
೧೫ ಬಳಿಗೆ ಹೊರಡುತ್ತವೆ. ಇಗೋ, ಕಳ್ಳನಂತೆ ಬರುತ್ತೇನೆ. ಎಚ್ಚರವಾಗಿದ್ದು, ಅವನು ಬೆತ್ತಲೆಯಾಗಿ ಸಂಚರಿಸದ ಹಾಗೆಯೂ, ಅವನ ನಾಚಿಕೆಯನ್ನು ಅವರು ಕಾಣದ ಹಾಗೆಯೂ, ತನ್ನ ವಸ್ತ್ರ
೧೬ ಗಳನ್ನು ಕಾಪಾಡಿ ಕೊಳ್ಳುವವನು ಭಾಗ್ಯವಂತನು. ಆಗ ಅವನು ಅವರನ್ನು ಇಬ್ರೀಯ ಮಾತಿನಲ್ಲಿ ಅರ್ಮಗೆದ್ದೋನೆಂದು ಕರೆಯಲ್ಪಟ್ಟ ಸ್ಥಳಕ್ಕೆ ಕೂಡ ಕರೆದನು.



೧೭ ಏಳನೇ ದೂತನು ತನ್ನ ಪಾತ್ರೆಯನ್ನು ಆಕಾಶದಲ್ಲಿ ಹೊಯಿದನು. ಮತ್ತು ಪರಲೋಕದ ಮಂದಿರದೊಳಗಿಂದ, ಸಿಂಹಾಸನದ ಕಡೆಯಿಂದ, ಆಯಿತು ಎಂದು ಒಂದು ಶಬ್ದವು ಹೊರಟಿ
೧೮ ತು. ಮತ್ತು ಶಬ್ದಗಳೂ ಗುಡುಗುಗಳೂ ಮಿಂಚುಗಳೂ ಉಂಟಾದವು. ಮತ್ತು ದೊಡ್ಡ ಭೂಕಂಪ ಉಂಟಾಯಿತು. ಅಷ್ಟು ದೊಡ್ಡ ಭೂಕಂಪವು ಮನುಷ್ಯರು ಭೂಮಿಯ ಮೇಲೆ ಇದ್ದಾರಭ್ಯ
೧೯ ಉಂಟಾಗಲಿಲ್ಲ. ಮಹಾ ಪಟ್ಟಣವು ಮೂರು ಭಾಗವಾಯಿತು. ಮತ್ತು ಜನಾಂಗಗಳ ಪಟ್ಟಣಗಳು ಬಿದ್ದವು. ಮತ್ತು, ಅದಕ್ಕೆ ದೇವರ ಉಗ್ರ ಕೋಪವೆಂಬ ದ್ರಾಕ್ಷೇರಸದ ಪಾತ್ರೆಯನ್ನು ಕೊಡ ಬೇಕೆಂದು, ದೊಡ್ಡ ಬಾಬೆಲು ದೇವರ ಮುಂದೆ ಜ್ಞಾಪಕವಾಯಿತು.
೨೦ ಆಗ ದ್ವೀಪಗಳೆಲ್ಲಾ ಓಡಿ ಹೋಗಿ, ಪರ್ವತಗಳು ಕಾಣದೆ ಹೋ
೨೧ ದವು. ಮತ್ತು ಹೆಚ್ಚು ಕಡಿಮೆ ತಲಾಂತ ಭಾರವಾದ ದೊಡ್ಡ ಕಲ್ಲುಗಳೆಯು ಆಕಾಶದಿಂದ ಮನುಷ್ಯರ ಮೇಲೆ ಬಿತ್ತು. ಈ ಕಲ್ಲುಗಳೆಯ ಬಾಧೆಗೋಸ್ಕರ, ಅದರ ಬಾಧೆ ಮಹಾ ದೊಡ್ಡದಾಗಿರುವದರಿಂದ, ಮನುಷ್ಯರು ದೇವರನ್ನು ದೂಷಿಸಿದರು.

## ೧೭. ಸಂಧಿ.

೧ ಆಗ ಏಳು ಪಾತ್ರೆಗಳನ್ನು ಹಿಡಿದು ಕೊಂಡ ಏಳು ದೂತರಲ್ಲಿ ಒಬ್ಬನು ಬಂದು, ನನ್ನ ಸಂಗಡ ಮಾತಾಡಿ, ಇಲ್ಲಿ ಬಾ, ಅನೇಕ ನೀರುಗಳ ಮೇಲೆ ಕೂತು ಕೊಂಡ ದೊಡ್ಡ ಜಾರೆಯ ನ್ಯಾಯ
೨ ತೀರ್ವಿಕೆಯನ್ನು ನಿನಗೆ ತೋರಿಸುವೆನು, ಎಂದು ನನಗೆ ಹೇಳಿದನು. ಅವಳ ಸಂಗಡ ಭೂರಾಜರು ಜಾರತ್ವ ಮಾಡಿ, ಅವಳ ಜಾ
೩ ರತ್ವದ ದ್ರಾಕ್ಷೇರಸದಿಂದ ಭೂನಿವಾಸಿಗಳು ಮತ್ತರಾದರು.
ಆಗ ಅವನು ಆತ್ಮದಲ್ಲಿ ನನ್ನನ್ನು ಅರಣ್ಯಕ್ಕೆ ಕರಕೊಂಡು ಹೋದನು. ಆಗ, ದೂಷಣೆಯ ಹೆಸರುಗಳಿಂದ ತುಂಬಿ, ಏಳು
೪ ತಲೆಗಳೂ ಹತ್ತು ಕೊಂಬುಗಳೂ ಉಂಟಾದ, ಲಾಲಿ ಬಣ್ಣದ ಮೃಗದ ಮೇಲೆ ಕೂತು ಕೊಂಡ ಸ್ತ್ರೀಯನ್ನು ಕಂಡೆನು. ಮತ್ತೂ ಸ್ತ್ರೀಯು ರಕ್ತಾಂಬರವನ್ನೂ, ಲಾಲಿ ಬಣ್ಣದ ವಸ್ತ್ರವನ್ನೂ, ಉಟ್ಟು ಕೊಂಡು, ಚಿನ್ನ ರತ್ನ ಮುತ್ತುಗಳಿಂದ ಅಲಂಕರಿಸಲ್ಪಟ್ಟು, ತನ್ನ ಜಾರತ್ವದ ಅಸಹ್ಯಗಳಿಂದಲೂ, ಅಶುದ್ಧತ್ವದಿಂದಲೂ, ತುಂಬಿರುವ ಚಿನ್ನದ ಪಾತ್ರೆಯನ್ನು ಕೈಯಲ್ಲಿ ಹಿಡಿದು
೫ ಕೊಂಡಿದ್ದಳು. ಅವಳ ಹಣೆಯ ಮೇಲೆ, ಮರ್ಮವೂ, ಜಾರತ್ವಗಳಿಗೂ, ಭೂಮಿಯ ಅಸಹ್ಯಗಳಿಗೂ ತಾಯಿಯಾದ ದೊಡ್ಡ ಬಾಬೆಲೂ, ಎಂಬ ಹೆಸರು ಬರೆದಿತ್ತು. ಮತ್ತು ಆ ಸ್ತ್ರೀಯು
೬ ಪರಿಶುದ್ಧರ ರಕ್ತದಿಂದಲೂ ಯೇಸುವಿನ ಸಾಕ್ಷಿಗಳ ರಕ್ತದಿಂದಲೂ ಮತ್ತಳಾಗಿರುವದನ್ನು ಕಂಡೆನು. ಅವಳನ್ನು ಕಂಡು, ಮಹಾ ಆಶ್ಚರ್ಯದಿಂದ ಆಶ್ಚರ್ಯ ಪಟ್ಟೆನು.
೭ ಆಗ ದೂತನು ನನಗೆ ಹೇಳಿದ್ದು, ಯಾಕೆ ಆಶ್ಚರ್ಯ ಪಟ್ಟೆ? ಆ ಸ್ತ್ರೀಯು ಮರ್ಮವನ್ನೂ, ಅವಳನ್ನು ಹೊತ್ತು ಕೊಳ್ಳುವಂಥ ಏಳು ತಲೆಗಳೂ ಹತ್ತು ಕೊಂಬುಗಳೂ ಉಂಟಾದ ಮೃಗದ
೮ ಮರ್ಮವನ್ನೂ, ನಾನು ನಿನಗೆ ಹೇಳುತ್ತೇನೆ. ನೀನು ಕಂಡ ಮೃಗವು ಇತ್ತು; ಈಗ ಇಲ್ಲ; ಅಗಾಧದೊಳಗಿಂದ ಎದ್ದು ಬಂದು, ನಾಶನಕ್ಕೆ ಹೋಗುವದಕ್ಕೆ ಇರುತ್ತದೆ. ಮತ್ತು ಇದ್ದಂಥ, ಇದ್ದರೂ ಇಲ್ಲದಂಥ, ಮೃಗವನ್ನು ನೋಡಿ, ಜೀವದ ಪುಸ್ತಕದಲ್ಲಿ ಜಗದುತ್ಪತ್ತಿ ಮೊದಲುಗೊಂಡು ಹೆಸರು ಬರೆಯಲ್ಪಟ್ಟ ಭೂ
೯ ನಿವಾಸಿಗಳು ಆಶ್ಚರ್ಯ ಪಡುವರು. ಇಲ್ಲಿಯೇ ಜ್ಞಾನವುಳ್ಳ ಬುದ್ಧಿಯು. ಆ ಏಳು ತಲೆಗಳು, ಸ್ತ್ರೀಯು ಕೂತುಕೊಂಡಿರುವ
೧೦ ಏಳು ಬೆಟ್ಟಗಳಾಗಿವೆ. ಮತ್ತು ಏಳು ಅರಸರು ಇದ್ದಾರೆ. ಐದು ಮಂದಿ ಬಿದ್ದರು; ಒಬ್ಬನು ಇದ್ದಾನೆ; ಮತ್ತೊಬ್ಬನು ಇನ್ನು ಬರಲಿಲ್ಲ. ಅವನು ಬಂದಾಗ, ಸ್ವಲ್ಪ ಕಾಲ ಇರ ಬೇಕು. ಮತ್ತು ಇ
೧೧ ದ್ದಂಥ, ಇಲ್ಲದಂಥ, ಮೃಗವು ತಾನೇ ಎಂಟನೇದಾಗಿಯೂ, ಆ ಏಳರಲ್ಲಿ ಬಂದಾಗಿಯೂ ಇದ್ದು, ನಾಶನಕ್ಕೆ ಹೋಗುತ್ತದೆ. ಮ
೧೨ ತ್ತು ನೀನು ಕಂಡ ಹತ್ತು ಕೊಂಬುಗಳು, ಹತ್ತು ಮಂದಿ ಅರಸರು. ಅವರು ರಾಜ್ಯವನ್ನು ಇನ್ನೂ ಹೊಂದಲಿಲ್ಲ, ಆದರೆ ಮೃಗದ ಸಂಗಡ ಒಂದು ತಾಸು ಅರಸರಾಗಿ ಅಧಿಕಾರ ಹೊಂದುತ್ತಾ
೧೩ ರೆ. ಇವರು ಏಕ ಮನಸ್ಸುಳ್ಳವರಾಗಿದ್ದಾರೆ; ತಮ್ಮ ಬಲವನ್ನೂ
೧೪ ಅಧಿಕಾರವನ್ನೂ ಮೃಗಕ್ಕೆ ಒಪ್ಪಿಸಿ ಕೊಡುವರು. ಇವರು ಕುರಿಮರಿಯ ಸಂಗಡ ಯುದ್ಧ ಮಾಡುವರು; ಮತ್ತು ಕುರಿಮರಿಯು ಅವರನ್ನು ಜಯಿಸುವದು. ಯಾಕಂದರೆ ಅವನು ಕರ್ತರ ಕರ್ತನೂ, ಅರಸರ ಅರಸನೂ, ಆಗಿದ್ದಾನೆ. ಮತ್ತು ಅವನ ಸಂಗಡ ಇರುವವರು ಕರೆಯಲ್ಪಟ್ಟವರೂ, ಆಯಲ್ಪಟ್ಟವರೂ, ನಂಬಿಕೆಯುಳ್ಳವರೂ, ಆಗಿದ್ದಾರೆ.
೧೫ ಮತ್ತು ಅವನು ನನಗೆ ಹೇಳಿದ್ದು, ಜಾರೆಯು ಕೂತು ಕೊಂಡಲ್ಲಿ ನೀನು ಕಂಡ ನೀರುಗಳು, ಪ್ರಜೆಗಳೂ, ಸಮೂಹಗಳೂ, ಜ
೧೬ ನಾಂಗಗಳೂ, ಭಾಷೆಗಳೂ, ಆಗಿವೆ. ಮತ್ತು ಮೃಗದ ಮೇಲೆ ನೀನು ಕಂಡ ಹತ್ತು ಕೊಂಬುಗಳಾದ ಇವರು, ಜಾರೆಯನ್ನು ಹಗೆ ಮಾಡಿ, ಅವಳನ್ನು ಹಾಳೂ ಬೆತ್ತಲೆಯೂ ಮಾಡಿ, ಅವಳ ಮಾಂಸವನ್ನು ತಿಂದು, ಅವಳನ್ನು ಬೆಂಕಿಯಿಂದ ಸುಟ್ಟು ಬಿಡು
೧೭ ವರು. ಯಾಕಂದರೆ, ದೇವರ ವಚನಗಳು ಈಡೇರುವ ಪರ್ಯಂತರ, ಏಕ ಮನಸ್ಸಾಗಿದ್ದು, ತಮ್ಮ ರಾಜ್ಯವನ್ನು ಮೃಗಕ್ಕೆ ಕೊಟ್ಟು, ಅವನ ಆಲೋಚನೆಯನ್ನು ನಡಿಸುವ ಹಾಗೆ, ದೇವರು
೧೮ ಅವರ ಹೃದಯಗಳನ್ನು ಪ್ರೇರೇಪಿಸಿದ್ದಾನೆ. ಮತ್ತು ನೀನು ಕಂಡ ಸ್ತ್ರೀಯು, ಭೂರಾಜರ ಮೇಲೆ ರಾಜತ್ವವನ್ನು ಹೊಂದಿದ ಆ ಮಹಾ ಪಟ್ಟಣವಾಗಿದ್ದಾಳೆ.

## ೧೯. ಸಂಧಿ.

೧ ಇವುಗಳ ತರುವಾಯ, ಮಹಾ ಅಧಿಕಾರವುಳ್ಳ ಮತ್ತೊಬ್ಬ ದೂತನು ಪರಲೋಕದಿಂದಿಳಿಯುವದನ್ನು ಕಂಡೆನು; ಮತ್ತು ಅ
೨ ವನ ಮಹಿಮೆಯಿಂದ ಭೂಮಿಯು ಬೆಳಕಾಯಿತು. ಅವನು ಘಟ್ಟಿಯಾಗಿ ಕೂಗಿ, ಮಹಾ ಶಬ್ದದಿಂದ—ಬಿತ್ತು, ಬಿತ್ತು, ದೊಡ್ಡ ಬಾಬೆಲು; ಅದು ದೆವ್ವಗಳ ನಿವಾಸವು, ಸಕಲ ಅಶುದ್ಧಾತ್ಮಗಳ ಸೆರೆಯೂ, ಅಶುದ್ಧವೂ ಅಸಹ್ಯವೂ ಆಗಿರುವ ಸಕಲ ಪಕ್ಷಿಗಳ ಸೆರೆ
೩ ಯೂ, ಆಯಿತು. ಯಾಕಂದರೆ ಅವಳ ಜಾರತ್ವದ ಉಗ್ರದ ದ್ರಾಕ್ಷೇರಸದಲ್ಲಿ ಎಲ್ಲಾ ಜನಾಂಗಗಳು ಕುಡಿದವೆ; ಭೂರಾಜರು ಅವಳ ಸಂಗಡ ಜಾರತ್ವ ಮಾಡಿದರು; ಭೂಮಿಯ ವರ್ತಕರು ಅವಳ ವೈಭವದ ಬಲದಿಂದ ಐಶ್ವರ್ಯವಂತರಾದರು, ಅಂದನು.
೪ ಮತ್ತು ಪರಲೋಕದಿಂದಾದ ಮತ್ತೊಂದು ಶಬ್ದವನ್ನು ಕೇಳಿದೆನು; ಏನಂದರೆ, ನನ್ನ ಜನರೇ, ಅವಳ ಪಾಪಗಳಲ್ಲಿ ಪಾಲುಗಾರರಾಗದ ಹಾಗೆಯೂ, ಅವಳ ಬಾಧೆಗಳಲ್ಲಿ ಪಾಲು ಹೊಂದದ

೫ ಹಾಗೆಯೂ, ಅವಳೊಳಗಿಂದ ಹೊರಟು ಬನ್ನಿರಿ. ಯಾಕಂದರೆ
ಅವಳ ಪಾಪಗಳೂ ಆಕಾಶದ ಮಟ್ಟಿಗೂ ಮುಟ್ಟಿವೆ. ಅವಳ ಅ
೬ ನ್ಯಾಯಗಳನ್ನು ದೇವರು ಜ್ಞಾಪಕ ಮಾಡಿ ಕೊಂಡಿದ್ದಾನೆ. ಅವ
ಳು ನಿಮಗೆ ಕೊಟ್ಟ ಪ್ರಕಾರ ಅವಳಿಗೆ ಕೊಟ್ಟು, ಅವಳ ಕ್ರಿಯೆಗ
ಳ ಪ್ರಕಾರ ಅವಳಿಗೆ ಎರಕಪಟ್ಟು ಹೆಚ್ಚು ಮಾಡಿರಿ. ಅವಳು ಕಲಸಿ
೭ ದ ಪಾತ್ರೆಯಲ್ಲಿ ಅವಳಿಗೆ ಎರಕಪಟ್ಟು ಕಲಸಿ ಕೊಡಿರಿ. ಅವಳು ತ
ನ್ನನ್ನು ಎಷ್ಟು ಮಹಿಮೆ ಪಡಿಸಿ ಕೊಂಡು, ವೈಭವವಾಗಿ ಬದುಕಿ
ದಳೋ, ಅಷ್ಟು ಪೀಡೆಯನ್ನೂ ದುಃಖವನ್ನೂ ಅವಳಿಗೆ ಕೊಡಿ
ರಿ; ಯಾಕಂದರೆ ಅವಳು ತನ್ನ ಹೃದಯದಲ್ಲಿ—ರಾಣಿಯಾಗಿ
ಕೂತು ಕೊಳ್ಳುತ್ತೇನೆ; ನಾನು ವೆಧವೆ ಅಲ್ಲ; ದುಃಖವನ್ನು ಕಾಣ
೮ ವದಿಲ್ಲ, ಅಂದು ಕೊಳ್ಳುತ್ತಾಳೆ. ಇದಕ್ಕೋಸ್ಕರ ಅವಳ ಬಾಧೆ
ಗಳಾದ ಮರಣವೂ ದುಃಖವೂ ಬಾರವೂ ಬಂದೇ ದಿನದಲ್ಲಿ ಬರು
ವವು. ಬೆಂಕಿಯಿಂದ ಸುಟ್ಟು ಬಿಡಲ್ಪಡುವಳು. ಯಾಕಂದರೆ ಅ
ವಳಿಗೆ ನ್ಯಾಯ ತೀರಿಸುವ ದೇವರಾದ ಕರ್ತನು ಶಕ್ತನೇ.

೯ ಅವಳ ಸಂಗಡ ಜಾರತ್ವವನ್ನೂ ವೈಭವವನ್ನೂ ನಡಿಸಿದ
೧೦ ಭೂರಾಜರು, ಅವಳ ಸುಡುವಿಕೆಯ ಹೊಗೆಯನ್ನು ನೋಡುವಾ
ಗ, ಅವಳಿಗೋಸ್ಕರ ಗೋಳಾಡಿ, ಬರು ಕೊಂಡು, ಅವಳ ಪೀಡೆಯ
ಭಯದಿಂದ ದೂರದಲ್ಲಿ ನಿಂತು ಕೊಂಡು—ಅಯ್ಯೋ, ಅ
ಯ್ಯೋ, ಮಹಾ ಪಟ್ಟಣವಾದ ಬಾಬೆಲೇ! ಬಲವಾದ ಪಟ್ಟಣವೇ!
ಒಂದು ಘಳಿಗೆಯಲ್ಲಿ ನಿನ್ನ ನ್ಯಾಯ ತೀರ್ವಿಕೆಯು ಬಂತಲ್ಲ?
ಅನ್ನುತ್ತಾತೆ.

೧೧ ಮತ್ತು ಭೂಮಿಯ ವರ್ತಕರು ಅವಳಿಗೋಸ್ಕರ ಅತ್ತು,
ಗೋಳಾಡುವರು; ಯಾಕಂದರೆ ಅವರ ಸರಕನ್ನು ಯಾರೂ ಇ
೧೨ ನ್ನು ಕೊಂಡು ಕೊಳ್ಳುವದಿಲ್ಲ. ಆ ಸರಕು ಏನಂದರೆ, ಚಿನ್ನ,
ಬೆಳ್ಳಿ, ರತ್ನಕಲ್ಲು, ಮುತ್ತುಗಳು, ನಾರು ಮಡಿ, ರಕ್ತಾಂಬರಗಳು,
ಕೇಶಿಮೆ, ಲಾಬಿಬಣ್ಣ, ಸಕಲವಾದ ಅಗರುಮರವು, ಸಕಲ ವಿಧವಾ
ದ ಜಂತದ ಸಾಮಗ್ರಿಗಳು, ಬಹು ಬೆಲೆಯುಳ್ಳ ಮರ, ಹಿತ್ತಾಳಿ,
ಕಬ್ಬಿಣ, ಬೆಳ್ಳೀ ಕಲ್ಲುಗಳಿಂದುಂಟಾದ ಸಕಲ ವಿಧವಾದ ಸಾಮ
೧೩ ಗ್ರಿಗಳು, ಲವಂಗ ಚಕ್ಕೆ, ಧೂಪಗಳು, ರಕ್ತಬೋಳ, ಸಾಂಬ್ರಾ
ಣಿ, ದ್ರಾಕ್ಷೇರಸ, ಎಣ್ಣೆ, ನಯವಾದ ಹಿಟ್ಟು, ಗೋಧಿ, ದನಗ
ಳು, ಕುರಿಗಳು, ಕುದುರೆಗಳು, ರಥಗಳು, ಮನುಷ್ಯರ ಶರೀರಗಳು,
೧೪ ಪ್ರಾಣಗಳು. ನಿನ್ನ ಪ್ರಾಣವು ಆಶಿಸಿದ ಹಣ್ಣುಗಳು ನಿನ್ನನ್ನು
ಬಿಟ್ಟು ಹೋದವು; ರಮ್ಯವಾಗಿ ಪ್ರಕಾಶವಾಗಿ ಇರುವವುಗಳೆಲ್ಲಾ
ನಿನ್ನನ್ನು ಬಿಟ್ಟು ಹೋದವು; ಅವು ನಿನಗೆ ಇನ್ನು ಶಿಕ್ಕುವದಿಲ್ಲ.

೧೫ ಅವಳಿಂದ ಐಶ್ವರ್ಯವಂತರಾದ ಈ ಸರಕುಗಳ ವರ್ತಕ
ರು ಅವಳ ಪೀಡೆಯ ಭಯದಿಂದ ದೂರದಲ್ಲಿ ನಿಂತು ಕೊಂಡು,
೧೬ ಅತ್ತು, ಗೋಳಾಡಿ—ಅಯ್ಯೋ, ಅಯ್ಯೋ, ಮಹಾ ಪಟ್ಟಣವೇ,
ನಾರುಮಡಿ, ರಕ್ತಾಂಬರ, ಲಾಬಿ ಬಣ್ಣಗಳನ್ನು ಹಾಕಿ ಕೊಂಡು, ಚಿ
ನ್ನ, ರತ್ನ, ಕಲ್ಲು, ಮುತ್ತುಗಳಿಂದ ಅಲಂಕರಿಸಿ ಕೊಂಡವಳೇ, ಇ
ಷ್ಟು ಐಶ್ವರ್ಯವು ಬಂದೇ ಘಳಿಗೆಯಲ್ಲಿ ಹಾಳಾಯಿತಲ್ಲ?
ಅನ್ನುವರು.

೧೭ ಮತ್ತು ಹಡಗದ ಯಜಮಾನರೆಲ್ಲರೂ, ಹಡಗಗಳಲ್ಲಿರುವ ಸ
ಮೂಹಗಳೆಲ್ಲವೂ, ನಾವಿಕರೂ, ಸಮುದ್ರದ ಮೇಲೆ ಕೆಲಸವನ್ನು
೧೮ ನಡಿಸುವವರೆಲ್ಲರೂ, ದೂರದಲ್ಲಿ ನಿಂತು ಕೊಂಡು, ಅವಳ ಸುಡು
ವಿಕೆಯ ಹೊಗೆಯನ್ನು ನೋಡಿ, ಕೂಗಿ—ಈ ಮಹಾ ಪಟ್ಟಣಕ್ಕೆ
೧೯ ಸಮಾನವಾದದ್ದು ಯಾವದು? ಅಂದರು. ಮತ್ತು ತಮ್ಮ ತಲೆಗ
ಳ ಮೇಲೆ ಮಣ್ಣು ಹಾಕಿ ಕೊಂಡು, ಅತ್ತು, ಗೋಳಾಡಿ, ಕೂಗಿ—
ಅಯ್ಯೋ, ಅಯ್ಯೋ, ಸಮುದ್ರದಲ್ಲಿ ಹಡಗಗಳುಂಟಾದವಕೆ
ಲ್ಲರಿಗೆ ತನ್ನ ಘನತೆಯಿಂದ ಐಶ್ವರ್ಯವನ್ನು ಉಂಟು ಮಾಡಿ
ದ ಮಹಾ ಪಟ್ಟಣವು ಒಂದೇ ಘಳಿಗೆಯಲ್ಲಿ ಹಾಳಾಯಿತಲ್ಲ? ಅಂ
೨೦ ದರು. ಪರಲೋಕವೇ, ಪರಿಶುದ್ಧ ಅಪೊಸ್ತಲರೇ, ಪ್ರವಾದಿಗಳೇ,
ಅವಳಿಗೋಸ್ಕರ ಆನಂದ ಪಡಿರಿ, ಯಾಕಂದರೆ ದೇವರು ನಿಮ್ಮ
ನ್ಯಾಯವನ್ನು ಅವಳ ಮೇಲೆ ತೀರಿಸಿದ್ದಾನೆ.

೨೧ ಆಗ ಒಬ್ಬ ಬಲಿಷ್ಠ ದೂತನು ಬೀಸುವ ಕಲ್ಲಿನಂತಿರುವ ದೊ
ಡ್ಡ ಕಲ್ಲನ್ನು ಎತ್ತಿ, ಸಮುದ್ರದಲ್ಲಿ ಹಾಕಿ, ಹೇಳಿದ್ದು—ಹೀಗೆಯೇ
ಮಹಾ ಪಟ್ಟಣವಾದ ಬಾಬೆಲು ಬೀಸಿ ಹಾಕಲ್ಪಟ್ಟು, ಇನ್ನು ಮೇಲೆ
೨೨ ಕಾಣದೆ ಹೋಗುವದು. ಮತ್ತು ವೀಣೆಗಾರರ ಸಂಗೀತಗಾರರ
ಮೇಳಗಾರರ ತುತೂರಿಯವರ ಶಬ್ದವು ಇನ್ನು ಮೇಲೆ ನಿನ್ನಲ್ಲಿ
ಕೇಳಿಸುವದಿಲ್ಲ; ಮತ್ತು ಯಾವ ಶಿಲ್ಪದ ಯಾವ ಶಿಲ್ಪಿಯಾದ
ರೂ ಇನ್ನು ಮೇಲೆ ನಿನ್ನಲ್ಲಿ ಕಾಣಿಸುವದಿಲ್ಲ. ಬೀಸುವ ಕಲ್ಲಿನ ಶ
೨೩ ಬ್ದವು ನಿನ್ನಲ್ಲಿ ಇನ್ನು ಕೇಳಿಸುವದಿಲ್ಲ. ದೀಪದ ಬೆಳಕು ನಿನ್ನಲ್ಲಿ
ಇನ್ನು ಪ್ರಕಾಶಿಸುವದಿಲ್ಲ. ಮದಲಿಂಗ ಮದಲಗಿತ್ತಿಯರ ಶಬ್ದವು
ನಿನ್ನಲ್ಲಿ ಇನ್ನು ಕೇಳಿಸುವದಿಲ್ಲ; ಯಾಕಂದರೆ ನಿನ್ನ ವರ್ತಕರು
ಭೂಮಿಯಲ್ಲಿ ಬಹು ಪ್ರೊಡ್ಡವರಾಗಿದ್ದರು; ನಿನ್ನ ಮಾತುಗಳಿಂದ
೨೪ ಜನಾಂಗಗಳೆಲ್ಲಾ ಮೋಸ ಹೋದವು. ಮತ್ತು ಪ್ರವಾದಿಗಳು, ಪರಿ
ಶುದ್ಧರು, ಭೂಮಿಯ ಮೇಲೆ ಕೊಲ್ಲಲ್ಪಟ್ಟವರೆಲ್ಲರು, ಇವರ ರಕ್ತ
ವು ಅದರಲ್ಲಿ ಕಾಣಿಸಿತು.

## ೧೯. ಸಂಧಿ.

೧ ಇವುಗಳ ತರುವಾಯ ಪರಲೋಕದಲ್ಲಿ ದೊಡ್ಡ ಗುಂಪಿನ ಮ
ಹಾ ಶಬ್ದವನ್ನು ಕೇಳಿದೆನು. ಏನಂದರೆ—ಹಲ್ಲೆಲೂಯಾ, ನಮ್ಮ
ದೇವರಾದ ಕರ್ತನಿಗೆ ರಕ್ಷಣೆಯು, ಮಹಿಮೆಯು, ಘನವು, ಬಲ
೨ ವು ಆಗಲಿ. ಯಾಕಂದರೆ ಅವನ ನ್ಯಾಯತೀರ್ವಿಕೆಗಳು ಸತ್ಯ
ವೂ ನೀತಿಯೂ ಆಗಿವೆ; ಹ್ಯಾಗಂದರೆ ಭೂಮಿಯನ್ನು ತನ್ನ
ಜಾರತ್ವದಿಂದ ಕೆಡಿಸಿದ ದೊಡ್ಡ ಜಾರಕೆಗೆ ಅವನು ನ್ಯಾಯತೀರಿಸಿ,
ತನ್ನ ದಾಸರ ರಕ್ತಕ್ಕೋಸ್ಕರ ಅವಳಿಗೆ ಮುಯ್ಯಿಗೆ ಮುಯ್ಯಿ
೩ ತೀರಿಸಿದ್ದಾನೆ. ಮತ್ತು ಎರಡನೇ ಸಾರಿ, ಹಲ್ಲೆಲೂಯಾ, ಅಂದರು.
೪ ಮತ್ತು ಅವಳ ಹೊಗೆಯು ಎಂದೆಂದಿಗೂ ಏರುತ್ತದೆ. ಮತ್ತು ಇ
ಪ್ಪತ್ತು ನಾಲ್ಕು ಹಿರಿಯರೂ ನಾಲ್ಕು ಜೀವಿಗಳೂ ಅಡ್ಡ ಬಿದ್ದು,
ಸಿಂಹಾಸನದ ಮೇಲೆ ಕೂತು ಕೊಂಡಿರುವ ದೇವರಿಗೆ, ಆಮೆನ್,
೫ ಹಲ್ಲೆಲೂಯಾ, ಎಂದು ನಮಸ್ಕರಿಸಿದರು. ಮತ್ತು ಸಿಂಹಾಸನ
ದೊಳಗಿಂದ ಹೊರಟಿ ಶಬ್ದವು, ದೇವರ ದಾಸರೆಲ್ಲರೇ, ಅವನಿಗೆ
ಭಯ ಪಡುವವರಾದ ಹಿರಿ ಕಿರಿಯರೇ, ನಮ್ಮ ದೇವರನ್ನು ಹೊ
ಗಳಿರಿ, ಎಂದು ಹೇಳಿತು.

೬ ಮತ್ತು ದೊಡ್ಡ ಸಮೂಹದ ಶಬ್ದದ ಹಾಗೆಯೂ, ಅನೇಕ
ನೀರುಗಳ ಶಬ್ದದ ಹಾಗೆಯೂ, ಬಲವುಳ್ಳ ಗುಡುಗುಗಳ ಶಬ್ದದ
ಹಾಗೆಯೂ,—ಹಲ್ಲೆಲೂಯಾ, ಸರ್ವ ಶಕ್ತನಾದ ದೇವರಾಗಿರುವ
೭ ಕರ್ತನು ಆಳುತ್ತಾನೆ; ಸಂತೋಷಿಸಿ, ಹರ್ಷಿಸಿ, ಅವನಿಗೆ ಮಹಿ
ಮೆಯನ್ನು ಕೊಡೋಣ; ಯಾಕಂದರೆ ಕುರಿಮರಿಯ ಮದುವೆ
ಯು ಬಂತು; ಅವನ ಹೆಂಡತಿಯು ತನ್ನನ್ನು ಸಿದ್ಧ ಮಾಡಿ ಕೊಂ



೮ ಡಿದ್ದಾಳೆ ಎಂದು ಹೇಳುವದನ್ನು ಕೇಳಿದೆನು. ಮತ್ತು ಪವಿತ್ರವೂ
ಪ್ರಕಾಶವೂ ಆದ ನಾರು ಮಡಿಯು ಧರಿಸಿಕೊಳ್ಳುವದಕ್ಕೆ ಅವಳಿಗೆ
ಕೊಡಲ್ಪಟ್ಟಿತು. ಆ ನಾರುಮಡಿ ಏನಂದರೆ, ಪರಿಶುದ್ಧರ ನೀತಿಗಳು.
೯ ಆಗಲವನು ಕುರಿಮರಿಯ ಮದುವೆಯ ಔತನಕ್ಕೆ ಕರೆಯಲ್ಪಟ್ಟ
ವರು ಭಾಗ್ಯವಂತರೆಂದು ಬರೆ, ಎಂದು ನನಗೆ ಹೇಳಿ, ಮತ್ತು,
ಇವೇ ದೇವರ ಸತ್ಯ ವಾಕ್ಯಗಳಾಗಿವೆ, ಎಂದು ನನಗೆ ಹೇಳಿದನು.
೧೦ ಆಗ ಅವನಿಗೆ ನಮಸ್ಕರಿಸುವದಕ್ಕೆ ಅವನ ಪಾದಗಳ ಮುಂದೆ
ಬಿದ್ದೆನು. ಮತ್ತು ಅವನು, ಬೇಡವೇ ಬೇಡ; ನಿನಗೂ, ಯೇಸುವಿ
ನ ಸಾಕ್ಷಿಯನ್ನು ಹೊಂದಿದ ನಿನ್ನ ಸಹೋದರರಿಗೂ, ಜಶೆದಾ
ಸನಾಗಿದ್ದೇನೆ. ದೇವರಿಗೆ ನಮಸ್ಕರಿಸು; ಯಾಕಂದರೆ ಯೇಸುವಿ
ನ ಸಾಕ್ಷಿಯು ಪ್ರವಾದನೆಯ ಆತ್ಮವಾಗಿದೆ, ಎಂದು ನನಗೆ ಹೇಳಿ
ದನು.

೧೧ ಮತ್ತು ಪರಲೋಕವು ತೆರೆದಿರುವದನ್ನು ಕಂಡೆನು, ಇಗೋ,
ಬಿಳೀ ಕುದುರೆಯು; ಅದರ ಮೇಲೆ ಕೂತವನಿಗೆ ನಂಬಿಕೆಯುಳ್ಳ
ವನೂ ಸತ್ಯವಂತನೂ ಎಂಬ ಹೆಸರು. ಅವನು ನೀತಿಯಿಂದ
೧೨ ನ್ಯಾಯ ತೀರಿಸಿ, ಯುದ್ಧ ಮಾಡುತ್ತಾನೆ. ಅವನ ಕಣ್ಣುಗಳು
ಬೆಂಕಿಯ ಉರಿಯಂತೆಯೂ, ಅವನ ತಲೆಯ ಮೇಲೆ ಅನೇಕ
ಕಿರೀಟಗಳೂ, ತಾನು ಹೊತುಕ ಯಾರೂ ಅರಿಯದಂಥ, ಬರೆ
೧೩ ಯಲ್ಪಟ್ಟ ಹೆಸರು ಅವನಿಗೆ ಉಂಟು. ಅವನು ರಕ್ತದಲ್ಲಿ ಅದ್ದಿದ
ವಸ್ತ್ರವನ್ನು ಧರಿಸಿ ಕೊಂಡಿದ್ದಾನೆ. ಅವನ ಹೆಸರು ದೇವರ ವಾಕ್ಯ
೧೪ ವೆಂದು ಕರೆಯಲ್ಪಡುತ್ತದೆ. ಮತ್ತು ಪರಲೋಕದಲ್ಲಿರುವ ಸೈ
ನ್ಯಗಳು ಬಿಳೀ ಕುದುರೆಗಳ ಮೇಲೆ ಕೂತು ಕೊಂಡು, ಪವಿತ್ರವಾ
ದ ಬಿಳೀ ನಾರುಮಡಿಯನ್ನು ಧರಿಸಿ ಕೊಂಡು, ಅವನನ್ನು ಹಿಂ
೧೫ ಬಾಲಿಸಿದವು. ಮತ್ತು ಅದರಿಂದ ಜನಾಂಗಗಳನ್ನು ಕಡಿಯುವ
ಹಾಗೆ, ಅವನ ಬಾಯಿಯೊಳಗಿಂದ ಹದವಾದ ಕತ್ತಿ ಹೊರಡು
ತ್ತದೆ; ಮತ್ತು ಅವನು ಅವುಗಳನ್ನು ಕಬ್ಬಿಣದ ಗದೆಯಿಂದ ಆ
ಳುವನು. ಅವನೇ ಸರ್ವಶಕ್ತನಾದ ದೇವರ ಉಗ್ರ ಕೋಪದ
೧೬ ದ್ರಾಕ್ಷೇರಸದ ತೊಟ್ಟಿಯನ್ನು ತುಳಿಯುವನು. ಮತ್ತು ಅವನ
ವಸ್ತ್ರದ ಮೇಲೆಯೂ, ಅವನ ಸೊಂಟದ ಮೇಲೆಯೂ, ಅರಸ
ರ ಅರಸನೂ ಕರ್ತರ ಕರ್ತನೂ, ಎಂದು ಬರೆದ ಹೆಸರು ಅವ
ನಿಗೆ ಉಂಟು.

೧೭ ಆಗ ಸೂರ್ಯನಲ್ಲಿ ನಿಂತು ಕೊಂಡಿರುವ ಒಬ್ಬ ದೂತನ
ನ್ನು ಕಂಡೆನು; ಅವನು ಮಹಾ ಶಬ್ದದಿಂದ ಕೂಗಿ, ಆಕಾಶ ಮಧ್ಯ
ದಲ್ಲಿ ಹಾರುವ ಸಕಲ ಹಕ್ಕಿಗಳಿಗೆ, ಮಹಾ ದೇವರ ಔತನಕ್ಕೆ
೧೮ ಕೂಡಿ ಕೊಂಡು, ಅರಸರ ಮಾಂಸಗಳನ್ನೂ, ಸಹಸ್ರಾಧಿಪತಿಗಳ
ಮಾಂಸಗಳನ್ನೂ, ಬಲಿಷ್ಠರ ಮಾಂಸಗಳನ್ನೂ, ಕುದುರೆಗಳ
ಮಾಂಸಗಳನ್ನೂ, ಅವುಗಳ ಮೇಲೆ ಕೂತು ಕೊಂಡವರ ಮಾಂ
ಸಗಳನ್ನೂ, ಸ್ವತಂತ್ರರೂ ದಾಸರೂ ಹಿರಿ ಕಿರಿಯರೂ ಆಗಿರು
ವ ಎಲ್ಲರ ಮಾಂಸಗಳನ್ನೂ, ತಿನ್ನುವದಕ್ಕೆ ಬನ್ನಿರಿ, ಅಂದನು.

೧೯ ಮತ್ತು ಮೃಗವೂ, ಭೂರಾಜರೂ, ಅವರ ಸೈನ್ಯಗಳೂ,
ಕುದುರೆಯ ಮೇಲೆ ಕೂತು ಕೊಂಡವನ ಸಂಗಡಲೂ, ಅವನ ಸೈ
೨೦ ನ್ಯದ ಸಂಗಡಲೂ, ಯುದ್ಧ ಮಾಡುವದಕ್ಕೆ ಕೂಡಿ ಕೊಂಡಿರು
ವದನ್ನು ಕಂಡೆನು. ಮತ್ತು ಮೃಗವೂ, ಅದರ ಮುಂದೆ ಮಾಡಿ
ದ ಗುರುತುಗಳಿಂದ ಮೃಗದ ಮುದ್ರೆಯನ್ನು ಹೊಂದಿದವರ
ನ್ನೂ, ಅದರ ವಿಗ್ರಹಕ್ಕೆ ನಮಸ್ಕರಿಸುವವರನ್ನೂ ಮೋಸಗೊ
ಳಿಸಿದ ಸುಳ್ಳು ಪ್ರವಾದಿಯೂ, ಕೂಡ ಹಿಡಿಯಲ್ಪಟ್ಟು, ಈ ಇ
ಬ್ಬರು ಜೀವಿತರಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆ
೨೧ ಯಲ್ಲಿ ಹಾಕಲ್ಪಟ್ಟರು. ಮತ್ತು ಉಳಿದವರು ಕುದುರೆಯ ಮೇಲೆ
ಕೂತು ಕೊಂಡವನ ಬಾಯಿಯೊಳಗಿಂದ ಹೊರಡುವ ಕತ್ತಿಯಿಂ
ದ ಕೊಲ್ಲಲ್ಪಟ್ಟರು. ಮತ್ತು ಅವರ ಮಾಂಸಗಳಿಂದ ಹಕ್ಕಿಗಳೆ
ಲ್ಲಾ ತೃಪ್ತಿ ಹೊಂದಿದವು.

## ೨೦. ಸಂಧಿ.

೧ ಮತ್ತು ಅಗಾಧದ ಬೀಗದ ಕೈಯನ್ನೂ, ದೊಡ್ಡ ಸಂಕೋ
ಲೆಯನ್ನೂ, ತನ್ನ ಕೈಯಲ್ಲಿ ಹಿಡಿದು ಕೊಂಡ ದೂತನು ಪರ
೨ ಲೋಕದಿಂದ ಇಳಿದು ಬರುವದನ್ನು ಕಂಡೆನು. ಅವನು ಪಿಶಾ
ಚನೂ ಸೈತಾನನೂ ಆಗಿರುವ ಹಳೇ ಹಾವು ಆದ ಗರುಸರ್ಪವ
೩ ನ್ನು ಹಿಡಿದು, ಸಾವಿರ ವರುಷ ಅದನ್ನು ಕಟ್ಟಿ, ಅದನ್ನು ಅಗಾಧ
ದಲ್ಲಿ ಹಾಕಿ, ಅದನ್ನು ಮುಚ್ಚಿ, ಆ ಸಾವಿರ ವರುಷ ತೀರುವ ವ
ರ್ಯಂತರ ಜನಾಂಗಗಳನ್ನು ಇನ್ನು ಮೋಸಗೊಳಿಸದ ಹಾಗೆ,
ಅದರ ಮೇಲೆ ಮುದ್ರೆ ಹಾಕಿದನು. ಇವುಗಳ ತರುವಾಯ ಅದು
ಸ್ವಲ್ಪ ಕಾಲ ಬಿಡಿಸಲ್ಪಡ ಬೇಕು.

೪ ಮತ್ತು ಸಿಂಹಾಸನಗಳನ್ನು ಕಂಡೆನು; ಅವುಗಳ ಮೇಲೆ ಕೂತು
ಕೊಂಡಿದ್ದರು. ಮತ್ತು ನ್ಯಾಯತೀರ್ವಿಕೆ ಅವರಿಗೆ ಕೊಡಲ್ಪಟ್ಟಿ
ತು. ಮತ್ತು ಯೇಸುವಿನ ಸಾಕ್ಷಿಗೋಸ್ಕರವೂ, ದೇವರ ವಾಕ್ಯಾ
ಕ್ಕೋಸ್ಕರವೂ, ತಲೇ ಕಡಿದವರ ಪ್ರಾಣಗಳನ್ನೂ, ಮೃಗ
ಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸದೆ, ತಮ್ಮ ಹಣೆಯಲ್ಲಿ
ಯೂ ತಮ್ಮ ಕೈಯ ಮೇಲೆಯೂ ಮುದ್ರೆ ಹೊಂದದವರನ್ನೂ,
ಕಂಡೆನು. ಅವರು ಬದುಕಿ, ಕ್ರಿಸ್ತನ ಸಂಗಡ ಸಾವಿರ ವರುಷ ಆ
ಳಿದರು. ಆದರೆ ಮಿಕ್ಕಾದ ಸತ್ತವರು, ಆ ಸಾವಿರ ವರುಷ ಮು
೫ ಗಿಯುವ ವರಿಗೂ, ತಿರಿಗಿ ಬದುಕಲಿಲ್ಲ. ಇದೇ ಮೊದಲನೇ ಪುನ
ರುತ್ಥಾನವು. ಮೊದಲನೇ ಪುನರುತ್ಥಾನದಲ್ಲಿ ಪಾಲು ಹೊಂದುವವ
೬ ನು ಭಾಗ್ಯವಂತನೂ ಪರಿಶುದ್ಧನೂ ಆಗಿದ್ದಾನೆ. ಅಂಥವರ ಮೇ
ಲೆ ಎರಡನೇ ಮರಣಕ್ಕೆ ಅಧಿಕಾರವಿಲ್ಲ. ಅವರು ದೇವರಿಗೂ ಕ್ರಿ
ಸ್ತನಿಗೂ ಯಾಜಕರಾಗಿ, ಅವನ ಸಂಗಡ ಸಾವಿರ ವರುಷ ಆ
ಳುವರು.

೭ ಆ ಸಾವಿರ ವರುಷ ಮುಗಿದಾಗ, ಸೈತಾನನು ತನ್ನ ಕೆರೆಯೊ
೮ ಳಗಿಂದ ಬಿಡಿಸಲ್ಪಟ್ಟು, ಭೂಮಿಯ ನಾಲ್ಕು ದಿಕ್ಕುಗಳಲ್ಲಿರುವ,
ಗೋಗ್ ಮಗೋಗ್ ಎಂಬುವಂಥ, ಲೆಖ್ಖಕ್ಕೆ ಸಮುದ್ರದ ಮರಳಿ
ನ ಹಾಗೆ ಇರುವಂಥ, ಜನಾಂಗಗಳನ್ನು ಮೋಸಗೊಳಿಸಿ, ಅವರ
ನ್ನು ಯುದ್ಧಕ್ಕೆ ಕೂಡಿಸುವದಕ್ಕೆ ಹೊರಟು ಹೋಗುವನು.
೯ ಮತ್ತು ಅವರು ಭೂಮಿಯ ಬೈಲಿಗೆ ಏರಿ ಹೋಗಿ, ಪರಿಶುದ್ಧರ
ದಂಡನ್ನೂ, ಪ್ರಿಯವಾದ ಪಟ್ಟಣವನ್ನೂ, ಮುತ್ತಿ ಕೊಂಡರು. ಆಗ
ದೇವರ ಬಳಿಯಿಂದ ಬೆಂಕಿಯು ಪರಲೋಕದೊಳಗಿಂದ ಇಳಿದು,
೧೦ ಅವರನ್ನು ತಿಂದು ಬಿಟ್ಟಿತು. ಮತ್ತು ಅವರನ್ನು ಮೋಸಗೊಳಿಸಿ
ದ ಪಿಶಾಚನು, ಮೃಗವೂ ಸುಳ್ಳು ಪ್ರವಾದಿಯೂ ಇರುವ, ಬೆಂ
ಕಿ ಗಂಧಕಗಳ ಕೆರೆಯಲ್ಲಿ ಹಾಕಲ್ಪಟ್ಟನು. ಮತ್ತು ಎಂದೆಂದಿಗೂ
ರಾತ್ರಿ ಹಗಲು ಪೀಡಿಸಲ್ಪಡುವರು.

೧೧ ಆಗ ದೊಡ್ಡ ಬಿಳೀ ಸಿಂಹಾಸನವನ್ನೂ, ಅದರ ಮೇಲೆ ಕೂ
ತು ಕೊಂಡವನನ್ನೂ, ಕಂಡೆನು. ಅವನ ಸಮುಖದಿಂದ ಭೂಮಿ
ಯೂ ಆಕಾಶವೂ ಓಡಿ ಹೋಗಿ, ಅವುಗಳಿಗೆ ಸ್ಥಳವು ಶಿಕ್ಕಲಿಲ್ಲ.
೧೨ ಮತ್ತು ಹಿರಿ ಕಿರಿಯರಾದ ಸತ್ತವರು ದೇವರ ಮುಂದೆ ನಿಂತಿರುವ

ದನ್ನು ಕಂಡೆನು. ಪುಸ್ತಕಗಳು ತೆಕೆಯಲ್ಪಟ್ಟವು. ಮತ್ತೊಂದು
ಪುಸ್ತಕವು ತೆಕೆಯಲ್ಪಟ್ಟಿತು; ಅದು ಜೀವದ ಪುಸ್ತಕವು. ಆಗ ಆ
ಪುಸ್ತಕಗಳಲ್ಲಿ ಬರೆದವುಗಳಿಂದ ಸತ್ತವರಿಗೆ ಅವರ ಕ್ರಿಯೆಗಳ ಪ್ರ
೧೩ ಕಾರ ನ್ಯಾಯ ತೀರಿಸಲ್ಪಟ್ಟಿತು. ಸಮುದ್ರವು ಅದರೊಳಗಿರುವ
ಸತ್ತವರನ್ನು ಒಪ್ಪಿಸಿತು. ಮರಣವೂ ಪಾತಾಳವೂ ಅವುಗಳೊ
ಳಗಿರುವ ಸತ್ತವರನ್ನು ಒಪ್ಪಿಸಿದವು. ಆಗ ಎಲ್ಲರಿಗೆ ಅವರವರ
೧೪ ಕ್ರಿಯೆಗಳ ಪ್ರಕಾರ ನ್ಯಾಯತೀರಿಸಲ್ಪಟ್ಟಿತು. ಆಗ ಮರಣವೂ
ಪಾತಾಳವೂ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟವು. ಇದು ಎರ
ಡನೇ ಮರಣವು. ಮತ್ತು ಯಾವನಾದರೂ ಜೀವದ ಪುಸ್ತಕದ
ಲ್ಲಿ ಬರೆಯಲ್ಪಟ್ಟವನಾಗಿ ಕಾಣಿಸದಿದ್ದರೆ, ಬೆಂಕಿಯ ಕೆರೆಯಲ್ಲಿ
ಹಾಕಲ್ಪಟ್ಟನು.

## ೨೧. ಸಂಧಿ.

೧ ಮತ್ತು ಹೊಸ ಆಕಾಶವನ್ನೂ, ಹೊಸ ಭೂಮಿಯನ್ನೂ ಕಂ
ಡೆನು; ಯಾಕಂದರೆ ಮೊದಲನೇ ಆಕಾಶವೂ ಮೊದಲನೇ ಭೂ
೨ ಮಿಯೂ ಇಲ್ಲದೆ ಹೋದವು. ಸಮುದ್ರವು ಇನ್ನು ಮೇಲೆ ಇಲ್ಲ.
ಮತ್ತು ಯೋಹಾನನೆಂಬ ನಾನು ಪರಿಶುದ್ಧ ಪಟ್ಟಣವಾದ ಹೊಸ
ಯೆರೂಸಲೇಮನು, ತನ್ನ ಗಂಡನಿಗೋಸ್ಕರ ಅಲಂಕರಿಸಲ್ಪಟ್ಟ ಮ
ದಲಗಿತ್ತಿಯಂತೆ ಸಿದ್ಧವಾಗಿ, ದೇವರ ಕಡೆಯಿಂದ, ಪರಲೋಕದೊ
೩ ಳಗಿಂದ, ಇಳಿದು, ಬರುವದನ್ನು ಕಂಡೆನು. ಮತ್ತು ಪರಲೋಕ
ದಿಂದಾದ ಮಹಾ ಶಬ್ದವನ್ನು ಕೇಳಿದೆನು; ಏನಂದರೆ—ಇಗೋ,
ದೇವರ ಗುಡಾರವು ಮನುಷ್ಯರ ಸಂಗಡ ಅದೆ. ಅವನು ಅವರ
ಸಂಗಡ ವಾಸ ಮಾಡುವನು. ಅವರು ಅವನ ಪ್ರಜೆಯಾಗಿರುವರು.
ದೇವರು ತಾನೇ ಅವರ ದೇವರಾಗಿ, ಅವರ ಸಂಗಡ ಇರುವನು.
೪ ಮತ್ತು ದೇವರು ಕಣ್ಣೀರೆಲ್ಲಾ ಅವರ ಕಣ್ಣುಗಳಿಂದ ಒರಸುವನು.
ಮತ್ತು ಮರಣವು ಇನ್ನೂ ಇರುವದಿಲ್ಲ. ಗೋಳಾಟವೂ ಅಳುವಿ
ಕೆಯೂ ಕಷ್ಟವೂ ಇನ್ನೂ ಇರುವದಿಲ್ಲ; ಯಾಕಂದರೆ ಮೊದಲಿ
ನವುಗಳು ಹೋದವು.

೫ ಮತ್ತು ಸಿಂಹಾಸನದ ಮೇಲೆ ಕೂತು ಕೊಂಡವನು, ಇಗೋ,
ಎಲ್ಲಾ ಹೊಸದಾಗಿ ಮಾಡುತ್ತೇನೆ, ಅಂದನು. ಮತ್ತು ನನಗೆ, ಬರೆ;
ಯಾಕಂದರೆ ಈ ವಾಕ್ಯಗಳು ಸತ್ಯವೂ ನಂಬಿಕೆಯೂ ಆಗಿ
೬ ವೆ, ಅಂದನು. ಇನ್ನು ನನಗೆ ಹೇಳಿದ್ದು, ಆಯಿತು; ನಾನು ಅಕಾ
ರವೂ ಓ ಕಾರವೂ, ಆದಿಯೂ ಅಂತ್ಯವೂ, ಆಗಿದ್ದೇನೆ. ನಾನು
ದಾಹಗೊಂಡವನಿಗೆ ಜೀವದ ನೀರಿನ ಬುಗ್ಗೆಯಿಂದ ಉಚಿತವಾಗಿ
೭ ಕೊಡುವೆನು. ಜಯಿಸುವವನು ಎಲ್ಲವುಗಳನ್ನು ಬಾಧ್ಯವಾಗಿ
ಹೊಂದುವನು; ಮತ್ತು ನಾನು ಅವನಿಗೆ ದೇವರಾಗಿರುವೆನು; ಅವ
ನು ನನಗೆ ಮಗನಾಗಿರುವನು; ಆದರೆ ಅಂಜುವವರಿಗೂ, ಅವಿಶ್ವಾ
೮ ಸಿಗಳಿಗೂ, ಅಪಭ್ರಷ್ಟರಿಗೂ, ಕೊಲೆಗಾರರಿಗೂ, ಜಾರರಿಗೂ,
ಕೂನ್ಯಗಾರರಿಗೂ, ವಿಗ್ರಹಾರಾಧಕರಿಗೂ, ಸುಳ್ಳುಗಾರರೆಲ್ಲರಿಗೂ
—ಬೆಂಕಿ ಗಂಧಕಗಳಿಂದ ಉರಿಯುವ ಕೆರೆಯಲ್ಲಿ ಅವರಿಗೆ ಪಾಲು
ಉಂಟು. ಇದು ಎರಡನೇ ಮರಣವು.

೯ ಮತ್ತು ಏಳು ಕಡೇ ಬಾಧೆಗಳಿಂದ ತುಂಬಿದ ಏಳು ಪಾತ್ರೆಗಳ
ನ್ನು ಹಿಡಿದ ಏಳು ದೂತರಲ್ಲಿ ಒಬ್ಬನು ನನ್ನ ಬಳಿಗೆ ಬಂದು,
ನನ್ನ ಸಂಗಡ ಮಾತಾಡಿ, ಬಾ, ಕುರಿಮರಿಯ ಹೆಂಡತಿಯಾದ
೧೦ ಮದಲಗಿತ್ತಿಯನ್ನು ನಿನಗೆ ತೋರಿಸುತ್ತೇನೆ, ಅಂದನು. ಆಗ ಆ
ತ್ಮದಲ್ಲಿ ನನ್ನನ್ನು ಎತ್ತರವಾದ ದೊಡ್ಡ ಬೆಟ್ಟಕ್ಕೆ ಕರಕೊಂಡು
ಹೋಗಿ, ಪರಲೋಕದೊಳಗಿಂದ, ದೇವರ ಕಡೆಯಿಂದ, ಇಳಿದು
ಬರುವ ಪರಿಶುದ್ಧ ಯೆರೂಸಲೇಮೆಂಬ ಮಹಾ ಪಟ್ಟಣವನ್ನು ನನಗೆ
೧೧ ತೋರಿಸಿದನು. ಅದಕ್ಕೆ ದೇವರ ಮಹಿಮೆಯು ಇತ್ತು. ಮತ್ತು
ಅದರ ಬೆಳಕು ಥಳಥಳಿಸುವ ವಜ್ರದಂತಿರುವ ಬಹು ಬೆಲೆಯು
೧೨ ಳ್ಳ ಕಲ್ಲಿಗೆ ಸಮಾನವಾಗಿತ್ತು. ಅದಕ್ಕೆ ಎತ್ತರವಾದ ದೊಡ್ಡ
ಗೋಡೆಯು; ಅದಕ್ಕೆ ಹನ್ನೆರಡು ಬಾಗಲುಗಳೂ, ಬಾಗಲುಗಳಲ್ಲಿ
ಹನ್ನೆರಡು ದೂತರೂ, ಇಸ್ರಯೇಲನ ಮಕ್ಕಳ ಹನ್ನೆರಡು ಕುಲ
ದವುಗಳಾದ, ಮೇಲೆ ಬರೆಯಲ್ಪಟ್ಟ ಹೆಸರುಗಳೂ, ಉಂಟು.
೧೩ ಪೂರ್ವದಲ್ಲಿ ಮೂರು ಬಾಗಲುಗಳು; ಉತ್ತರದಲ್ಲಿ ಮೂರು ಬಾ
ಗಲುಗಳು; ದಕ್ಷಿಣದಲ್ಲಿ ಮೂರು ಬಾಗಲುಗಳು; ಪಶ್ಚಿಮದಲ್ಲಿ
೧೪ ಮೂರು ಬಾಗಲುಗಳು. ಮತ್ತು ಪಟ್ಟಣದ ಗೋಡೆಗೆ ಹನ್ನೆರಡು ಅಸ್ತಿ
ವಾರಗಳು. ಅವುಗಳಲ್ಲಿ ಕುರಿಮರಿಯ ಹನ್ನೆರಡು ಅಪೊಸ್ತಲರ
ಹೆಸರುಗಳು.

೧೫ ಮತ್ತು ನನ್ನ ಸಂಗಡ ಮಾತಾಡುವವನಿಗೆ, ಪಟ್ಟಣವನ್ನೂ, ಅದರ
ಬಾಗಲುಗಳನ್ನೂ, ಅದರ ಗೋಡೆಯನ್ನೂ, ಅಳತೆ ಮಾಡುವ
೧೬ ದಕ್ಕೆ ಚಿನ್ನದ ಕೋಲು ಇತ್ತು. ಆ ಪಟ್ಟಣವು ಚೌಕವಾಗಿದೆ;
ಅದರ ಉದ್ದವು ಅಗಲದಷ್ಟು ಇರುವದು. ಮತ್ತು ಅವನು ಕೋ
ಲಿನಿಂದ ಪಟ್ಟಣವನ್ನು ಅಳತೆ ಮಾಡಿ, ಹನ್ನೆರಡು ಸಾವಿರ ಸ್ತಾದ್ಯ
ಗಳೆಂದು ತಿಳಿದನು. ಅದರ ಉದ್ದವೂ ಅಗಲವೂ ಎತ್ತರವೂ
೧೭ ಸಮವಾಗಿದೆ. ಮತ್ತು ಅದರ ಗೋಡೆಯನ್ನು ಅಳತೆ ಮಾಡಿ,
ದೂತನಾದ ಮನುಷ್ಯನ ಅಳತೆಯಿಂದ ನೂರ ನಾಲ್ವತ್ತು ನಾ
ಲ್ಕು ಮೊಳಗಳೆಂದು ತಿಳಿದನು.

೧೮ ಮತ್ತು ಅದರ ಗೋಡೆಯ ಶಿಲ್ಪ ಕೆಲಸವು ವಜ್ರದ್ದು; ಮತ್ತು
ಪಟ್ಟಣವು ಶುದ್ಧವಾದ ಗಾಜಿಗೆ ಸಮಾನವಾದ ಶುದ್ಧ ಭಂಗಾರವು.
೧೯ ಮತ್ತು ಪಟ್ಟಣದ ಗೋಡೆಯ ಅಸ್ತಿವಾರಗಳು ಬೆಲೆಯುಳ್ಳ ಸಕಲ
ವಿಧವಾದ ಕಲ್ಲಿನಿಂದ ಅಲಂಕರಿಸಲ್ಪಟ್ಟವುಗಳು. ಮೊದಲನೇ ಅಸ್ತಿ
ವಾರವು ವಜ್ರವು; ಎರಡನೇದು ನೀಲವು; ಮೂರನೇದು ಕೆಂಪು;
೨೦ ನಾಲ್ಕನೇದು ಪಚ್ಚೆಯು; ಐದನೇದು ಸಲೀಮ; ಆರನೇದು ಅ
ಕ್ಕೀಕ; ಏಳನೇದು ಪುಷ್ಯರಾಗ; ಎಂಟನೇದು ಬೆರುಲ್ಲ; ಒಂಭತ್ತ
ನೇದು ತಲುಕುಪಡಿಕ; ಹತ್ತನೇದು ವೈಡೂರ್ಯ; ಹನ್ನೊಂದ
೨೧ ನೇದು ಗೋಮೇಧಿಕ; ಹನ್ನೆರಡನೇದು ಸುಗಂಧಿ. ಮತ್ತು ಹನ್ನೆ
ರಡು ಬಾಗಲುಗಳು ಹನ್ನೆರಡು ಮುತ್ತುಗಳಾಗಿ, ಒಂದೊಂದು ಬಾ
ಗಲು ಒಂದೊಂದು ಮುತ್ತಿನಿಂದ ಉಂಟಾಗಿದೆ. ಪಟ್ಟಣದ ಬೀದಿ
ಯು ಥಳಥಳಿಸುವ ಗಾಜಿನಂತಿರುವ ಶುದ್ಧ ಭಂಗಾರವು.

೨೨ ಅದರಲ್ಲಿ ಮಂದಿರವನ್ನು ಕಾಣಲಿಲ್ಲ. ಯಾಕಂದರೆ ಸರ್ವ
ಶಕ್ತನಾದ ದೇವರಾಗಿರುವ ಕರ್ತನೂ ಕುರಿಮರಿಯೂ ಅದರ
೨೩ ಮಂದಿರವಾಗಿದ್ದಾರೆ. ಮತ್ತು ಪಟ್ಟಣಕ್ಕೆ, ಅದರಲ್ಲಿ ಪ್ರಕಾಶಿಸುವದ
ಕ್ಕೋಸ್ಕರ, ಸೂರ್ಯನಾದರೂ ಚಂದ್ರನಾದರೂ ಅಗತ್ಯವಿ
ಲ್ಲ. ಯಾಕಂದರೆ ದೇವರ ಮಹಿಮೆಯು ಅದಕ್ಕೆ ಬೆಳಕು ಮಾ
೨೪ ಡಿತು; ಕುರಿಮರಿಯೇ ಅದರ ದೀಪವು. ಮತ್ತು ರಕ್ಷಿಸಲ್ಪಡುವವ
ರ ಜನಾಂಗಗಳು ಅದರ ಬೆಳಕಿನಲ್ಲಿ ಸಂಚರಿಸುವರು. ಭೂರಾಜ
ರು ತಮ್ಮ ಮಹಿಮೆಯನ್ನೂ ಘನವನ್ನೂ ಅದರೊಳಗೆ ತರು
೨೫ ವರು. ಮತ್ತು ಅದರ ಬಾಗಲುಗಳು ದಿನವೆಲ್ಲಾ ಮುಚ್ಚಲ್ಪಡದೆ
೨೬ ಇರುವವು; ಯಾಕಂದರೆ ಅಲ್ಲಿ ರಾತ್ರಿಯು ಇರುವದಿಲ್ಲ. ಮತ್ತು



ಜನಾಂಗಗಳ ಮಹಿಮೆಯನ್ನೂ ಘನವನ್ನೂ ಅದರೊಳಗೆ ತ
೨೭ ರುವರು. ಮತ್ತು, ಕುರಿಮರಿಯ ಜೀವದ ಪುಸ್ತಕದಲ್ಲಿ ಬರೆಯ
ಲ್ಪಟ್ಟವರಲ್ಲದೆ, ಹೊಲೆ ಮಾಡುವಂಥ ಅಸಹ್ಯವನ್ನೂ ಸುಳ್ಳ
ನ್ನೂ ಮಾಡುವಂಥ ಒಂದಾದರೂ ಅದರೊಳಗೆ ಸೇರುವದಿಲ್ಲ.

## ೨೨. ಸಂಧಿ.

೧ ಮತ್ತು ದೇವರು, ಕುರಿಮರಿಯೂ, ಇವರ ಸಿಂಹಾಸನದೊಳ
ಗಿಂದ ಹೊರಡುವ ಪವಿತ್ರವಾದಂಥ, ಸ್ಫಟಿಕದ ಹಾಗೆ ಪ್ರಕಾಶವಾ
೨ ದಂಥ ಜೀವದ ನೀರಿನ ನದಿಯನ್ನು ನನಗೆ ತೋರಿಸಿದನು. ಅದ
ರ ಬೀದಿಯ ಮಧ್ಯದಲ್ಲಿಯೂ, ನದಿಯ ಈಚೆ ಆಚೆಯಲ್ಲಿ
೩ ಯೂ, ಜೀವಗಳು ತಿಂಗಳಿಗೆ ತನ್ನ ಫಲವನ್ನು ಕೊಟ್ಟು, ಹನ್ನೆರಡು
ವಿಧವಾದ ಫಲಗಳನ್ನು ಫಲಿಸುವ ಜೀವದ ಮರವು ಇತ್ತು. ಆ ಮ
ರದ ಎಲೆಗಳು ಜನಾಂಗಗಳನ್ನು ಸ್ವಸ್ಥ ಮಾಡುವದಕ್ಕಾಗಿವೆ.
೪ ಮತ್ತು ಯಾವ ಶಾಪವಾದರೂ ಇನ್ನು ಇರುವದೇ ಇಲ್ಲ. ಮತ್ತು
ದೇವರು, ಕುರಿಮರಿಯು, ಇವರ ಸಿಂಹಾಸನವು ಅದರೊಳಗಿರುವ
೫ ದು; ಅವನ ದಾಸರು ಅವನನ್ನು ಸೇವಿಸುವರು; ಅವನ ಮುಖವ
ನ್ನು ನೋಡುವರು; ಅವನ ಹೆಸರು ಅವರ ಹಣೆಗಳ ಮೇಲಿರುವ
೬ ದು. ರಾತ್ರಿಯು ಅಲ್ಲಿ ಇರುವದಿಲ್ಲ, ಮತ್ತು ದೀಪವೂ ಸೂ
ರ್ಯನ ಬೆಳಕೂ ಅವರಿಗೆ ಅಗತ್ಯವಿಲ್ಲ; ಯಾಕಂದರೆ ಕರ್ತ
ನಾದ ದೇವರು ಅವರಿಗೆ ಬೆಳಕು ಕೊಡುತ್ತಾನೆ. ಯುಗ ಯು
ಗಾಂತರಗಳ ವರಿಗೂ ಆಳುವರು.

೭ ಮತ್ತು ಅವನು ನನಗೆ ಹೇಳಿದ್ದು, ಈ ವಾಕ್ಯಗಳು ನಂಬಿಕೆ
ಯೂ ಸತ್ಯವೂ ಆಗಿವೆ. ಮತ್ತು ಪರಿಶುದ್ಧ ಪ್ರವಾದಿಗಳ ದೇವ
ರಾಗಿರುವ ಕರ್ತನು, ತ್ವರೆಯಾಗಿ ಆಗ ಬೇಕಾದವುಗಳನ್ನು ತ
೮ ನ್ನ ದಾಸರಿಗೆ ತೋರಿಸುವದಕ್ಕೆ, ತನ್ನ ದೂತನನ್ನು ಕಳುಹಿಸಿ
ದ್ದಾನೆ. ಇಗೋ, ಬೇಗ ಬರುತ್ತೇನೆ. ಈ ಪುಸ್ತಕದ ಪ್ರವಾದನೆ
ಯ ವಾಕ್ಯಗಳನ್ನು ಕೈ ಕೊಳ್ಳುವವನು ಭಾಗ್ಯವಂತನು.

೯ ಯೋಹಾನನೆಂಬ ನಾನು ಇವುಗಳನ್ನು ನೋಡಿ ಕೇಳಿದೆನು.
ಅವುಗಳನ್ನು ಕೇಳಿ ನೋಡಿದ ಮೇಲೆ, ಅವುಗಳನ್ನು ನನಗೆ ತೋ
೧೦ ರಿಸಿದ ದೂತನ ಪಾದಗಳ ಮುಂದೆ ನಮಸ್ಕರಿಸುವದಕ್ಕೆ ಬಿದ್ದೆ
ನು. ಆಗ ಅವನು ನನಗೆ ಹೇಳಿದ್ದು, ಬೇಡವೇ ಬೇಡ; ಯಾಕಂ
ದರೆ ನಿನಗೂ ನಿನ್ನ ಸಹೋದರರಾದ ಪ್ರವಾದಿಗಳಿಗೂ, ಈ ಪು
೧೧ ಸ್ತಕದ ವಾಕ್ಯಗಳನ್ನು ಕೈ ಕೊಳ್ಳುವವರಿಗೂ, ಜತೆದಾಸನಾಗಿ
ದ್ದೇನೆ. ದೇವರಿಗೆ ನಮಸ್ಕರಿಸು. ಮತ್ತು ನನಗೆ ಹೇಳಿದ್ದು, ಈ
ಪುಸ್ತಕದ ಪ್ರವಾದನೆಯ ವಾಕ್ಯಗಳಿಗೆ ಮುದ್ರೆ ಹಾಕ ಬೇಡ.
೧೨ ಯಾಕಂದರೆ ಸಮಯವು ಸಮೀಪವಾಗಿದೆ. ಅನ್ಯಾಯ ಮಾ
ಡುವವನು ಇನ್ನೂ ಅನ್ಯಾಯ ಮಾಡಲಿ. ಮೈಲಿಗೆಯವನು ಇ
ನ್ನೂ ಮೈಲಿಗೆಯಾಗಿರಲಿ. ನೀತಿವಂತನು ಇನ್ನೂ ನೀತಿವಂತನಾ
ಗಿರಲಿ. ಪರಿಶುದ್ಧನು ಇನ್ನೂ ಪರಿಶುದ್ಧನಾಗಿರಲಿ.

೧೩ ಇಗೋ, ಬೇಗ ಬರುತ್ತೇನೆ; ಮತ್ತು ಒಬ್ಬೊಬ್ಬನಿಗೆ ಅವನ
ವನ ಕ್ರಿಯೆಯು ಇರುವ ಪ್ರಕಾರವೇ ಕೊಡುವದಕ್ಕೆ, ನನ್ನ ಪ್ರ
೧೪ ತಿಫಲವು ನನ್ನ ಸಂಗಡ ಇರುತ್ತದೆ. ನಾನು ಅಕಾರವೂ ಓ ಕಾರ
ವೂ, ಆದಿಯೂ ಅಂತ್ಯವೂ, ಮೊದಲನೆಯವನೂ ಕಡೆಯವ
೧೫ ನೂ, ಆಗಿದ್ದೇನೆ. ಜೀವದ ಮರದ ಮೇಲೆ ಅವರಿಗೆ ಅಧಿಕಾರವು
ಇರುವ ಹಾಗೆಯೂ, ಬಾಗಲುಗಳಿಂದ ಪಟ್ಟಣದಲ್ಲಿ ಪ್ರವೇಶಿಸುವ
ಹಾಗೆಯೂ, ಅವನ ಕಟ್ಟಳೆಗಳನ್ನು ಮಾಡುವವರು ಭಾಗ್ಯವಂತ
೧೬ ರು. ಆದರೆ ನಾಯಿಗಳೂ, ಕೂನ್ಯಗಾರರೂ, ಜಾರರೂ, ಕೊಲೆ
ಗಾರರೂ, ವಿಗ್ರಹಾರಾಧಕರೂ, ಸುಳ್ಳನ್ನು ಪ್ರೀತಿ ಮಾಡಿ ನಡಿಸುವ
೧೭ ವರೆಲ್ಲರೂ, ಹೊರಗೆ ಇದ್ದಾರೆ. ಸಭೆಗಳಲ್ಲಿ ಇವುಗಳ ಸಾಕ್ಷಿಯ
ನ್ನು ನಿಮಗೆ ಹೇಳುವ ಬಗ್ಯೆ, ಯೇಸುವೆಂಬ ನಾನು ನನ್ನ ದೂತ
ನನ್ನು ಕಳುಹಿಸಿದ್ದೇನೆ. ನಾನು ದಾವೀದನ ಬೇರೂ, ಸಂತತಿ
೧೮ ಯೂ, ಉದಯದ ಪ್ರಕಾಶವಾದ ನಕ್ಷತ್ರವೂ, ಆಗಿದ್ದೇನೆ. ಆತ್ಮ
ವೂ ಮದಲಗಿತ್ತಿಯೂ, ಬಾ, ಅನ್ನುತ್ತಾರೆ. ಕೇಳುವವನು, ಬಾ,
ಅನ್ನಲಿ. ದಾಹವುಳ್ಳವನು ಬರಲಿ. ಬೇಕಾದವನು ಜೀವದ ನೀರ
ನ್ನು ಉಚಿತವಾಗಿ ತಕ್ಕೊಳ್ಳಲಿ.

೧೯ ಈ ಪುಸ್ತಕದ ಪ್ರವಾದನೆಯ ವಾಕ್ಯಗಳನ್ನು ಕೇಳುವ ಪ್ರತಿ
ಮನುಷ್ಯನಿಗೆ ನಾನು ಸಾಕ್ಷಿ ಹೇಳುವದೇನಂದರೆ, ಒಬ್ಬನು ಇ
ವುಗಳಿಗೆ ಹೆಚ್ಚು ಮಾತು ಕೂಡಿಸಿದರೆ, ದೇವರು ಈ ಪುಸ್ತಕದಲ್ಲಿ
೨೦ ಬರೆದಿರುವ ಬಾಧೆಗಳನ್ನು ಅವನ ಮೇಲೆ ಕೂಡಿಸಿಡುವನು. ಮತ್ತು
ಒಬ್ಬನು ಈ ಪ್ರವಾದನೆಯ ಪುಸ್ತಕದ ವಾಕ್ಯಗಳಿಂದ ಏನಾದ
ರೂ ತೆಗೆದು ಹಾಕಿದರೆ, ದೇವರು ಜೀವದ ಪುಸ್ತಕದಿಂದಲೂ,
ಪರಿಶುದ್ಧ ಪಟ್ಟಣದಿಂದಲೂ, ಈ ಪುಸ್ತಕದಲ್ಲಿ ಬರೆದಿರುವವುಗಳಿಂದ
ಲೂ, ಅವನ ಪಾಲನ್ನು ತೆಗೆದು ಹಾಕುವನು.

೨೦ ಇವುಗಳಿಗೆ ಸಾಕ್ಷಿಯಾದವನು ಹೇಳುತ್ತಾನೆ—ಹೌದು, ಬೇ
ಗ ಬರುತ್ತೇನೆ; ಆಮೆನ್. ಹೌದು, ಕರ್ತನಾದ ಯೇಸುವೇ,
ಬಾ.

೨೧ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲ
ರ ಸಂಗಡ ಇರಲಿ. ಆಮೆನ್.

---

ಸಂಪೂರ್ಣವು.